
ಸಾರ್ಥ
ಶ್ರೀ ಏಕನಾಥೀ ಭಾಗವತ
(ಪ್ರಥಮ ಖಂಡ)



ಅನುವಾದಕರು :
ಹ.ಭ.ಪ. ಕೃಷ್ಣಾಜೀ ಡೋಂಗ್ರಪ್ಪ
ಜ್ಞಾನಮೋತೆ, ಕೊಪ್ಪಳ

ಪ್ರಕಾಶಕರು : ಶ್ರೀಸಂತ ವಾಙ್ಮಯ ಸೇವಾ ಸಮಿತಿ, ಕೊಪ್ಪಳ

॥ ಶ್ರೀ ಪಾಂಡುರಂಗ ಪ್ರಸನ್ನ ॥

ಜಯ ಜಯ ರಾಮ ಕೃಷ್ಣ ಹರಿ



ಸುಂದರ ತೇ ಧ್ಯಾನ ಚಂದ್ರಭಾಗೇ ತಟೀ ।
ಪುಂಡಲಿಕಾಪಾಠೀ ಉಭೇ ಅಸೇ ॥

- ಏ.ಮಹಾರಾಜ

ಸಾರ್ಥ
ಶ್ರೀಏಕನಾಥೀ ಭಾಗವತ

ಪ್ರಥಮ ಖಂಡ

-: ಅನುವಾದಕರು :-

ಹ. ಭ. ಪ. ಕೃಷ್ಣಾಜೀ ಡೋಂಗ್ರಪ್ಪ ಜ್ಞಾನಮೋಠೆ,
ಕೊಪ್ಪಳ

ಅರ್ಪಣೆ

ಪರಬ್ರಹ್ಮಲಿಂಗ, ಸರ್ವಾಂತರ್ಯಾಮೀ, ಭಕ್ತವತ್ಸಲ ಶ್ರೀಪಾಂಡುರಂಗನ ದಿವ್ಯ ಕೃಪೆಯಿಂದ, ಶ್ರೀಗುರುದೇವ ದತ್ತಾತ್ರೇಯರ ಅನುಗ್ರಹಿತ ಶ್ರೀಸದ್ಗುರು ಜನಾರ್ದನ ಸ್ವಾಮಿಗಳವರ ಪರಮಶ್ರೇಷ್ಠ ಶಿಷ್ಯರಾದ ಶ್ರೀಸಂತ ಏಕನಾಥ ಮಹಾರಾಜರ ಕಾರುಣ್ಯ ಮನೋಭಾವ ಕಾರಣದಿಂದ, ಜಗದ್ಗುರು ಶ್ರೀಸಂತ ತುಕಾರಾಮ ಮಹಾರಾಜರ ವಿದ್ಯಾವಂಶ ಪೀಠಸ್ಥರಾದ ಚೈತನ್ಯ ಶ್ರೀಗುರುವರ್ಯ ಹ.ಭ.ಪ. ದಾದಾ ಸಾಹೇಬ ತಾತ್ಯಾಸಾಹೇಬ ವಾಸಕರ ಮಹಾರಾಜರ ಶುಭಾಶೀರ್ವಾದದಿಂದ ಚೈತನ್ಯ ಶ್ರೀಗುರು ಹ.ಭ.ಪ. ಗೋಪಾಲ ಮಹಾರಾಜ ಊರ್ಫ್ ಅಣ್ಣಾಸಾಹೇಬ ಭಾವು ಸಾಹೇಬ ವಾಸಕರ ಮಹಾರಾಜ ಪಂಢರಪೂರ ಇವರ ಮಹಾ ಸಾನಿಧ್ಯದಲ್ಲಿ ಈ ಸಾರ್ಥ ಶ್ರೀಏಕನಾಥಿ ಭಾಗವತ ಗ್ರಂಥವನ್ನು ಜನತಾ ಜನಾರ್ದನರಿಗೆ ಅನನ್ಯ ಮನೋಭಾವದಿಂದ ಸಮರ್ಪಿಸಲಾಗಿದೆ.

ಸಂತ ಚರಣ ಸೇವಕರ ಸೇವಕ,

ಕೃಷ್ಣಾಜೀ ಡೋಂಗ್ರಪ್ಪ ಜ್ಞಾನಮೋತೆ,
ಕೊಪ್ಪಳ

ಪ್ರಸ್ತಾವನೆ

ಜಗತ್ತಿನಲ್ಲಿ ಆಗಾಗ ಧರ್ಮದ ಗ್ಲಾನಿಯಾಗುತ್ತಿರುವುದು. ಜನರು ವಿಷಯಾಂಧರಾಗಿ ಧರ್ಮ ಬೋಧೆಯುಕ್ತ ವೇದಶಾಸ್ತ್ರ ಪುರಾಣಗಳನ್ನು ತಿರಸ್ಕರಿಸುತ್ತ ''ನಾನು ನನ್ನದು'' ಎಂಬ ಅಹಂಕಾರ ಮಮಕಾರಗಳಲ್ಲಿ ಸದಾ ತೊಡಗಿ ಕೇವಲ ದುಃಖಕ್ಕೆ ಗುರಿಯಾಗುತ್ತಿರುವರು. ಆತ್ಮಕಲ್ಯಾಣಕಾರಕ ಸರ್ವ ಸಾಧನೆಗಳು ಲೋಪವಾಗಿ ನಿಜಸುಖವು ಹೇಳಹೆಸರಿಲ್ಲದಂತೆ ಆಗುವುದು. ಮಾನವ ಜನ್ಮದ ಸಾರ್ಥಕತೆ ಯಾವುದರಲ್ಲಿದೆ ಎಂಬುವುದು ತಿಳಿಯದಂತಾಗುವುದು. ಎಲ್ಲಿ ನೋಡಿದರೂ ಜನರು ಕಾಮಕ್ರೋಧಾದಿ ಅರಿಷಡ್ವೈರಿಗಳ ಕಾಟಕ್ಕೆ ತುತ್ತಾಗಿ ಅಧೋಗತಿಗೆ ಪ್ರಾಪ್ತರಾಗುತ್ತಿರುವ ಇಂತಹ ದುರ್ಧರ ಪ್ರಸಂಗದಲ್ಲಿ ಕರುಣಾಳು ದಯಾಘನನಾದ ಪರಮಾತ್ಮನು ಸಂತರೂಪದಿಂದ ಜಗತ್ತಿನಲ್ಲಿ ಅವತರಿಸಿ ಮನುಷ್ಯರಿಗೆ ಅತ್ಯಾವಶ್ಯಕವಾದ ಭಕ್ತಿ ಜ್ಞಾನ ವೈರಾಗ್ಯಗಳ ಸಾಧನೆಗಳನ್ನು ಸ್ವತಃ ಆಚರಿಸಿ,ಭಜನೆ, ಕೀರ್ತನೆ, ಪ್ರವಚನಗಳಿಂದ ಸನ್ಮಾರ್ಗಗಳನ್ನು ತೋರಿಸಿಕೊಡುತ್ತಿರುವನು.

ಮಹಾರಾಷ್ಟ್ರದ ಪೈಠಣ ಕ್ಷೇತ್ರದಲ್ಲಿ ಋಗ್ವೇದಿ ಬ್ರಾಹ್ಮಣ, ಕುಲಕರ್ಣಿ ಮನೆತನದಲ್ಲಿ ಮಹಾಭಗವದ್ಭಕ್ತರಾಗಿ ಭಾನುದಾಸರು ಉದಯರಾದರು. ಇವರು ಸೂರ್ಯೋಪಾಸಕರೂ, ಶ್ರೀಪಾಂಡುರಂಗನ ಅನನ್ಯ ಭಕ್ತರೂ ಆಗಿದ್ದರು. ಇವರಿಗೆ ಬ್ರಾಹ್ಮಣ ವೇಶದಲ್ಲಿ ಸೂರ್ಯನಾರಾಯಣನು ಪ್ರತ್ಯಕ್ಷ ದರ್ಶನ ನೀಡಿದ್ದನು. ಕರ್ನಾಟಕದ ವಿಜಯನಗರದ ರಾಜನು ತನ್ನ ಭಕ್ತಿ ಭಾವ ಬಲದಿಂದ ಪಂಢರಪೂರ ಕ್ಷೇತ್ರದ ಶ್ರೀವಿಠ್ಠಲ ಮೂರ್ತಿಯನ್ನು ತನ್ನ ರಾಜಧಾನಿಗೆ ತಂದು ಪ್ರತಿಷ್ಠಾಪಿಸಿದ್ದನು. ಅನೇಕ ಭಕ್ತರ ಅಪೇಕ್ಷೆ ಮೇರೆಗೆ ಭಾನುದಾಸರು ವಿಜಯ ನಗರಕ್ಕೆ ಹೋಗಿ ತಮ್ಮ ದೃಢ ಭಾವಬಲದಿಂದ ಶ್ರೀವಿಠ್ಠಲಮೂರ್ತಿಯನ್ನು ಪುನಃ ಪಂಢರಪೂರಕ್ಕೆ ತಂದು ಮಹಾಕೀರ್ತಿಗೆ ಪ್ರಾಪ್ತರಾದರು.

ಶ್ರೀ ಸಂತ ಭಾನುದಾಸರ ಸುಪುತ್ರ, ಚಕ್ರಪಾಣೀ, ಚಕ್ರಪಾಣಿಯ ಸುಪುತ್ರ, ಸೂರ್ಯನಾರಾಯಣನು. ಸೂರ್ಯನಾರಾಯಣನಿಗೆ ರುಕ್ಮಿಣಿಬಾಯಿ ಎಂಬ ಪತಿವ್ರತಾ ಧರ್ಮಪತ್ನಿ ಇದ್ದಳು. ಇವರ ಪವಿತ್ರ ಗರ್ಭದಲ್ಲಿ ಶಾಲಿವಾಹನಶಕೆ ೧೪೫೫ರಲ್ಲಿ ನಮ್ಮ ಕಥಾನಾಯಕ ಶ್ರೀ ಸಂತ ಏಕನಾಥ ಮಹಾರಾಜರ ಜನ್ಮವಾಯಿತು. ಇವರು ಮೂಲಾ ನಕ್ಷತ್ರದಲ್ಲಿ ಜನ್ಮಧರಿಸಿದ ಕಾರಣದಿಂದ ತಮ್ಮ ಮಾತಾಪಿತೃಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡರು. ಇವರ ಎಲ್ಲ ಆಗು ಹೋಗುಗಳನ್ನು ಅಜ್ಜ-ಅಜ್ಜಿಯರು ಬಲುಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು.

ಕುಟುಂಬದಲ್ಲಿ ಪರಂಪರೆಯಿಂದ ನಡೆದು ಬಂದ ಪಾರಮಾರ್ಥಿಕ ಜೀವನವು ಏಕನಾಥರ ಅಂಗದಲ್ಲಿ ಸಹಜವಾಗಿ ನಟ್ಟಿಕೊಂಡಿತು. ಇವರು ಬಾಲ್ಯದಲ್ಲಿಯೇ ಈಶ್ವರ ಭಕ್ತಿಯಲ್ಲಿ ತಲ್ಲೀನರಾಗುತ್ತಿದ್ದರು. ಸತತವಾಗಿ ಇವರ ಅಧ್ಯಾತ್ಮ ಚಿಂತನೆ, ಸಾಧು ಸಜ್ಜನರಲ್ಲಿ ಪಾರಮಾರ್ಥಿಕ ಚರ್ಚೆ ಅಗಾಧವಾಗಿತ್ತು. ಊರಲ್ಲಿ ಎಲ್ಲಿಯಾದರೂ ಕೀರ್ತನೆ, ಪ್ರವಚನೆ ಪುರಾಣ ಶಾಸ್ತ್ರಗಳು ನಡೆಯುತ್ತಿದ್ದರೆ ಅಲ್ಲಿ ಕೂಡಲೇ ಭಾಗವಹಿಸುತ್ತ ಏಕಾಗ್ರಚಿತ್ತದಿಂದ ಶ್ರವಣ ಮಾಡುತ್ತಿದ್ದರು. ಪಾರಮಾರ್ಥಿಕ ಶಾಸ್ತ್ರ ಜ್ಞಾನವನ್ನು ಕರಗತ ಮಾಡಿಕೊಳ್ಳುವ ಉತ್ಕಟ ಹಂಬಲ ಇವರದಾಗಿತ್ತು.

ಒಂದು ದಿನ ಶಿವಮಂದಿರದಲ್ಲಿ ''ಶ್ರೀಗುರು''ವಿಷಯವಾಗಿ ಪ್ರವಚನವು ಅತ್ಯಂತ ರಸಾಳವಾಗಿತ್ತು. ಇದರಲ್ಲಿ ಸದ್ಗುರುವಿನ ಅನುಗ್ರಹವಿಲ್ಲದೇ ಜೀವದ ಕಲ್ಯಾಣವಾಗುವುದಿಲ್ಲ. ಸದ್ಗುರುವಿನ ಸೇವೆ ಇಲ್ಲದೆ ಅವರ ಅನುಗ್ರಹವಾಗುವುದಿಲ್ಲ ಎಂಬ ವಿಷಯದಲ್ಲಿ ಸವಿಸ್ತಾರವಾದ ವಾಣಿಯನ್ನು ಏಕಾಗ್ರತೆಯಿಂದ ಶ್ರವಣದ ನಂತರ ಏಕನಾಥರು ಅಲ್ಲಿಂದ ಮನೆಗೆ ಹೋಗದೇ ''ನನಗೆ ಸದ್ಗುರುಗಳು ಎಂದು ಪ್ರಾಪ್ತರಾದಾರು?'' ಎಂಬ ಒಂದೇ ಚಿಂತನೆಯಲ್ಲಿ ಅಲ್ಲಿಯೇ ಮಂದಿರದಲ್ಲಿ ಉಳಿದುಕೊಂಡರು. ಇವರಲ್ಲಿ ಗುರುಗಳಿಗಾಗಿ ಇರುವ ಏಕನಿಷ್ಠೆ ಕಂಡು ಮಹಾದೇವರು ಅವರ ಸ್ವಪ್ನದಲ್ಲಿ ''ದೇವಗಿರಿ ರಾಜಧಾನಿಯ ಕಿಲ್ಲೆದಾರರಾಗಿರುವ ಶ್ರೀಜನಾರ್ದನಸ್ವಾಮಿಗಳವರು ನಿನಗೆ ಯೋಗ್ಯ ಗುರುಗಳಾಗಿರುವರು. ಅಲ್ಲಿಗೆ ಪಾದಾರ್ಪಣೆ ಮಾಡು'' ಎಂದು ಸಂದೇಶವಾಯಿತು. ಸ್ವಪ್ನದಿಂದ ಎಚ್ಚೆತ್ತಕೂಡಲೇ ಏಕನಾಥರು ದೇವಗಿರಿಗೆ ಹಗಲು ರಾತ್ರಿಯನ್ನದೇ ಹಸಿವೆ ನೀರಡಿಕೆಯನ್ನದೇ ಪಾದಚಾರಿಯಾಗಿ ಮುಂದೆ ಸಾಗುತ್ತ ಕೊನೆಗೆ ಶ್ರೀಜನಾರ್ದನಸ್ವಾಮಿಯವರಲ್ಲಿ ಬಂದು ಮುಟ್ಟಿಕೊಂಡರು. ಶ್ರೀಜನಾರ್ದನಸ್ವಾಮಿಯವರ ಅಧ್ಯಾತ್ಮಿಕ ತೇಜವನ್ನು ಪ್ರತ್ಯಕ್ಷ ಕಂಡು ಬಹಳ ಪುಳಕಿತರಾಗಿ ಏಕನಾಥರು ಸ್ವಾಮಿಗಳವರ ಪಾದಗಳಿಗೆ ದೀರ್ಘ

ದಂಡವತ ನಮಸ್ಕಾರಗಳನ್ನು ಹಾಕಿ ಸದ್ಗದಿತ ಅಂತಃಕರಣದಿಂದ ಕೈಜೋಡಿಸಿ ಅವರ ಮುಂದೆ ನಿಂತುಕೊಂಡರು. ಶ್ರೀಜನಾರ್ದನ ಸ್ವಾಮಿಗಳವರು ಈ ಬಾಲಕನ ತೇಜ, ಮುಮುಕ್ಷು ಸ್ಥಿತಿ ಕಂಡು ಬೆರಗಾದರು. ಏಕನಾಥರಿಗೆ ಮಾತೃ ವಾತ್ಸಲ್ಯದಿಂದ :- ಬಾಳಾ, ನೀನಾರು? ಇಲ್ಲಿಗೇಕೆ ಬಂದಿರುವೆ? ನಿನಗೆ ಏನು ಬೇಕಾಗಿದೆ? ಎಂದು ಕುಶಲ ಪ್ರಶ್ನೆ ಮಾಡಿದರು. ಏಕನಾಥರು ತ್ರಿಕರ್ಣ ಪೂರ್ವಕವಾಗಿ ''ಸ್ವಾಮೀ ನನಗೆ ನಿಮ್ಮ ಕೃಪಾಪ್ರಸಾದ'' ಬೇಕಾಗಿದೆ ಎಂದು ಅತ್ಯಂತ ಕಳಕಳಿಯ ವಿನಮ್ರ ಭಾವದಿಂದ ನುಡಿದರು. ಆಗ ಸ್ವಾಮಿಗಳು ; ಬಾಳಾ, ಪರಮಾರ್ಥವು ಹುಡುಗರ ಆಟವಲ್ಲ. ಬಹಳ ಕಷ್ಟಪಡಬೇಕಾಗುವುದು. ಅನೇಕ ವರ್ಷ ನೀನು ಇಲ್ಲಿಯೇ ಇರಬೇಕಾಗುವುದು ಎಂದು ನುಡಿಯುವುದೊಂದೇ ತಡ ಕೂಡಲೇ ಏಕನಾಥರು ಅತ್ಯಂತ ಪ್ರೇಮದಿಂದ ಅದಕ್ಕೆ ಒಪ್ಪಿಕೊಂಡು ಪುನಃ ಪುನಃ ನಮಸ್ಕರಿಸಿದರು.

ಈಗ ಏಕನಾಥರು ಜನಾರ್ದನ ಸ್ವಾಮಿಯವರಲ್ಲಿಯೇ ವಾಸಮಾಡಿ ಅವರ ಸರ್ವ ಕಾರ್ಯಗಳಿಗೆ ಸಹಕರಿಸುತ್ತ ಸದಾ ಸೇವೆಯಲ್ಲಿ ಮನಃಪೂರ್ವಕ ತನ್ಮಯರಾಗುತ್ತಿದ್ದರು. ಮನೆಯ ಎಲ್ಲ ಕೆಲಸಗಳು, ಸ್ವಾಮಿಯವರ ಲೆಕ್ಕ ಪತ್ರ ಬರೆಯುವುದು ಇತ್ಯಾದಿ ಒಂದೂ ಬಿಡದೇ ಅವಿಶ್ರಾಂತವಾಗಿ ಅವರ ಸೇವೆಯಲ್ಲಿ ಇವರು ತತ್ಪರರಾಗುತ್ತಿದ್ದರು. ಯಾವತ್ತೂ ಸೇವೆಗಳನ್ನು ಅತ್ಯಂತ ಶುದ್ಧ ರೀತಿಯಲ್ಲಿ ಮನಸಾ ಪ್ರೇಮದಿಂದ ಮಾಡುತ್ತಿದ್ದರು. ಸ್ವಾಮಿಯವರು ಬಹಿರ್ದೆಶೆಗೆ ಹೋಗುವ ಸ್ಥಾನವನ್ನೂ ಸಹ ಸ್ವಚ್ಛಗೊಳಿಸಿ ಅಲ್ಲಿ ರಂಗೋಲಿ ಹಾಕುತ್ತಿದ್ದರು. ಅಂದಮೇಲೆ ಇವರ ಸೇವೆಯ ಮಹತ್ವವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಆಗುವುದು. ಈ ರೀತಿ ಗೃಹ-ಕಚೇರಿಯ ಸೇವೆಯಲ್ಲದೇ ಯುದ್ಧ ತರಬೇತಿಯನ್ನೂ ಪಡೆದುಕೊಂಡಿದ್ದರು. ಇವರ ಏಕನಿಷ್ಠೆಯ ಪರಿಶುದ್ಧ ಸೇವೆಯಿಂದ ಜನಾರ್ದನಸ್ವಾಮಿಯವರು ಪೂರ್ಣ ಪ್ರಸನ್ನರಾದರು.

ಒಂದು ದಿನ ಏಕನಾಥರು ಎಲ್ಲೋ ಬಿಡಿಕಾಸು ತಪ್ಪಿರುವ ಲೆಕ್ಕ ಶೋಧನೆ ಮಾಡಲಾರಂಭಿಸಿದರು. ಏನು ಮಾಡಿದರೂ ಆ ತಪ್ಪಿದ ಲೆಕ್ಕ ಸಿಗಲಾರದ್ದಕ್ಕೆ ರಾತ್ರಿ ಅನ್ನ ನೀರೂ ಸಹ ಸೇವಿಸದೇ ಅದೇ ಲೆಕ್ಕದ ಶೋಧನೆ ಬಲು ಏಕಾಗ್ರತೆಯಿಂದ ಮಾಡುತ್ತಿರಲು ಮಧ್ಯರಾತ್ರಿಯಲ್ಲಿ ಒಮ್ಮಿಂದೊಮ್ಮೆಲೆ ತಪ್ಪಿದ ಲೆಕ್ಕ ದೊರಕುತ್ತಲೇ ಏಕನಾಥರಿಗೆ ಹಿಡಿಸಲಾರದ ಆನಂದವಾಗಿ ಕೈಚಪ್ಪಾಳೆ ತಟ್ಟುತ್ತ ಕುಣಿದಾಡಿಬಿಟ್ಟರು. ಆಗ ಸಮೀಪದಲ್ಲಿ ಮಲಗಿದ್ದ ಜನಾರ್ದನಸ್ವಾಮಿಗಳವರು ಎಚ್ಚೆತ್ತು ಏಕನಾಥರಿಗೆ ಏನಾಯಿತು ? ಎಂದು ಪ್ರಶ್ನಿಸಿದರು. ಆಗ ಏಕನಾಥರು ಆದ ಸರ್ವ ಸಮಾಚಾರವನ್ನು ಸ್ವಾಮಿಯವರಿಗೆ ನಿವೇದಿಸಿದರು. ಈಗಾಗಲೇ ಸೇವೆಗೆ ಅರ್ಪಿಸಿಕೊಂಡ ಏಕನಾಥರಿಗೆ ಹನ್ನೆರಡು ವರ್ಷಗಳು ಗತಿಸಿದ್ದವು. ಈಗ ಏಕನಾಥನಿಗೆ ಅನುಗ್ರಹಿಸಬೇಕೆಂಬ ಉದ್ದೇಶದಿಂದ ಸ್ವಾಮಿಯವರು ಹೀಗೆ ನುಡಿದರು :ಏಕನಾಥಾ, ನೀನು ಬಿಡಿಕಾಸಿಗಾಗಿ ಇಷ್ಟೊಂದು ಶ್ರಮಪಟ್ಟು ಪರಿಪೂರ್ಣ ಏಕಾಗ್ರತೆಯಿಂದ ಆದ ತಪ್ಪು ಕಂಡು ಹಿಡಿದೆ. ಇದೇ ರೀತಿಯಲ್ಲಿ ಇನ್ನು ನೀನು ನಿನ್ನ ಆತ್ಮಶೋಧೆಯನ್ನುಮಾಡು ಎಂದು ಅನುಗ್ರಹಿಸಿ ಆತನಿಗೆ ಶ್ರೀಗುರುದತ್ತಾತ್ರೇಯರ ಸಾಕ್ಷಾತ್‌ದರ್ಶನ ಮಾಡಿಸಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಲು ''ಶೂಲಭಂಜನ'' ನಾಮದ ಪರ್ವತಕ್ಕೆ ಕಳುಹಿಸಿ ಆತ್ಮ ಸಾಕ್ಷಾತ್ಕಾರವಾಗದೇ ಹಿಂದಿರುಗಬೇಡ ಎಂದು ಆಜ್ಞಾಪಿಸಿದರು.

ಬ್ರಹ್ಮದೇವ-ಅತ್ರಿಮುನಿ-ದತ್ತಾತ್ರೇಯ-ಜನಾರ್ದನಸ್ವಾಮಿ ಈ ಶ್ರೇಷ್ಠ ಗುರುಪರಂಪರೆಯ ಸದ್ಗುರುಗಳ ದಿವ್ಯ ಅನುಗ್ರಹ ಪಡೆದು ಏಕನಾಥರು ಧ್ಯಾನಕ್ಕೆ ಅತಿಯೋಗ್ಯವಾಗಿರುವ ಪ್ರಶಾಂತ ಸ್ಥಾನವಾದ ''ಶೂಲಭಂಜನ'' ಪರ್ವತಕ್ಕೆ ಪಾದಾರ್ಪಣೆ ಮಾಡಿ ಅಲ್ಲಿ ಚಿಕ್ಕ ಪರ್ಣಕುಟೀರ ಕಟ್ಟಿಕೊಂಡು ಸದ್ಗುರುಗಳು ಮಾರ್ಗದರ್ಶನ ಮಾಡಿದ ರೀತಿಯಲ್ಲಿ ಆತ್ಮಧ್ಯಾನ ಆರಂಭಿಸಿದರು. ಧ್ಯಾನವು ಸಿದ್ಧಿಗೊಂಡು ಅವರಿಗೆ ಸಮಾಧಿ ಹತ್ತುತ್ತಿತ್ತು. ಅಲ್ಲಿ ಬಹುದಿನಗಳಿಂದ ವಾಸವಾಗಿದ್ದ ಮಹಾಭಯಂಕರ ಕಾಳಿಂಗ ಸರ್ಪವು ಏಕನಾಥರು ಧ್ಯಾನಸ್ಥರಾದಾಗ ಅವರನ್ನು ಕಚ್ಚಲು ಧಾವಿಸಿ ಬಂದಿತು. ಆದರೆ ಏಕನಾಥರ ದರ್ಶನವಾಗುತ್ತಲೇ ಅದರ ದುಷ್ಟ ಬುದ್ಧಿಯು ನಷ್ಟವಾಗಿ ದಯಾಭರಿತ ಅಂತಃಕರಣದಿಂದ ಏಕನಾಥರ ಶರೀರವನ್ನು ಸುತ್ತಿಕೊಂಡು ತನ್ನ ವಿಶಾಲ ಹೆಡೆಯನ್ನು ಅವರ ಶಿರದ ಮೇಲೆ ಛತ್ರಿಯಂತೆ ಹಿಡಿದು ಸೇವೆ ಮಾಡಲಾರಂಭಿಸಿತು. ಏಕನಾಥರು ಸಮಾಧಿಯಿಂದ ಎಚ್ಚರಾಗುತ್ತಲೇ ಕೂಡಲೇ ಅಲ್ಲಿರದೇ ತನ್ನ ಸ್ಥಳಕ್ಕೆ ಹೋಗುತ್ತಿತ್ತು. ಇದು ಅದರ ನಿತ್ಯ ನೇಮವೇ ಆಗಿಬಿಟ್ಟಿತು.

ಏಕನಾಥರ ಧ್ಯಾನಸಾಧನೆಯು ಪೂರ್ಣ ಸಿದ್ಧಿಗೊಂಡು ಅವರಿಗೆ ನಿರ್ಗುಣ ಆತ್ಮಸಾಕ್ಷಾತ್ಕಾರವಾಯಿತಲ್ಲದೇ ಸಗುಣ ಮೂರ್ತಿ ಶ್ರೀಕೃಷ್ಣಪರಮಾತ್ಮನು ತನ್ನ ಶಂಖ, ಚಕ್ರ, ಗದಾ, ಪದ್ಮದೊಂದಿಗೆ ಚತುರ್ಭುಜನಾಗಿ ದಿವ್ಯ ದರ್ಶನವನ್ನು ಕೊಟ್ಟು ಏಕನಾಥರಿಗೆ ಆಲಿಂಗಿಸಿ ಅನುಗ್ರಹಿಸಿದನು. ''ಆತ್ಮಸಾಕ್ಷಾತ್ಕಾರವಾಗದೇ ಹಿಂದಿರುಗಬೇಡ'' ಎಂಬ ಸದ್ಗುರುಗಳ ಆಜ್ಞೆ ಪರಿಪೂರ್ಣ ಪಾಲಿಸಿ ತಮಗಾದ ದಿವ್ಯದರ್ಶನವನ್ನು ನಿವೇದಿಸಲು ಏಕನಾಥರು ತಮ್ಮ ಸದ್ಗುರು ಜನಾರ್ದನಸ್ವಾಮಿಯವರಲ್ಲಿ ಆಗಮಿಸಿದರು. ಏಕನಾಥರು ಪೂರ್ಣ ಅವಸ್ಥೆಗೆ ಮುಟ್ಟಿದ್ದನ್ನು ಕಂಡ ಜನಾರ್ದನಸ್ವಾಮಿಯವರಿಗೆ ಬಹು ಸಂತೋಷವಾಯಿತು. ಇನ್ನು ಜಗತ್ತಿನ ಜನರ ವರ್ತನೆಯ ಅನುಭವ ಪಡೆಯುವುದಕ್ಕಾಗಿ ಹಾಗೂ ಸರ್ವ ಪವಿತ್ರ ಸ್ಥಾನಗಳ ಮಠ, ಮಂದಿರ, ಮಹಾತ್ಮರ ದರ್ಶನ ಲಾಭಕ್ಕಾಗಿ ಜನಾರ್ದನ ಸ್ವಾಮಿಗಳು ಏಕನಾಥರ ಜೊತೆ ತೀರ್ಥಯಾತ್ರೆ ಆರಂಭಿಸಿ ಉತ್ತರ ಭಾಗದ ನಾಸಿಕ, ತ್ರ್ಯಂಬಕೇಶ್ವರ,

ಕಾಶೀ ಇತ್ಯಾದಿ ಪುಣ್ಯ ಕ್ಷೇತ್ರಗಳ ದರ್ಶನ ಮಾಡಿಸಿದರು. ಏಕನಾಥರು ದಾರಿಯಲ್ಲಿ ಸದ್ಗುರು ಜೊತೆಯಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳ ಚರ್ಚೆ ಮಾಡುತ್ತ ಹಾಗೂ ಇದನ್ನು ಸಾಧಿಸಿದ ಹಿಂದಿನ ಅನೇಕ ಸತ್ಪುರುಷರ ದಿವ್ಯ ಚರಿತ್ರೆ ಶ್ರವಣ ಮಾಡುತ್ತ ಆನಂದದಿಂದ ತೀರ್ಥಯಾತ್ರೆ ಮಾಡುತ್ತಿದ್ದರು. ದಾರಿಯಲ್ಲಿಯೇ ಜನಾರ್ದನಸ್ವಾಮಿಗಳು ಏಕನಾಥರಿಗೆ ಚತುಃಶ್ಲೋಕೀ ಭಾಗವತವನ್ನು ಮರಾಠೀ ಭಾಷೆಯಲ್ಲಿ ರಚಿಸಲು ಆಜ್ಞೆ ಮಾಡಿದರು. ನಂತರ ಸಿದ್ಧಗೊಂಡ ಭಾಗವತವನ್ನು ಅಲ್ಲಿನ ಮಠ ಮಂದಿರಗಳಲ್ಲಿ ಜನರನ್ನು ಸೇರಿಸಿ ಏಕನಾಥರಿಂದ ಪ್ರವಚನ ಮಾಡಿಸಲು ಕೂಡಿದ ಎಲ್ಲ ಶ್ರೋತೃಗಳು ಏಕನಾಥರ ರಸಾಳ ಮಂಜುಳ ಪ್ರಾಸಾದಿಕ ವಾಣಿಯನ್ನು ಕೇಳಿ ಬೆರಗಾಗುತ್ತ ಸನ್ಮಾರ್ಗಕ್ಕೆ ಹತ್ತಿಕೊಳ್ಳುತ್ತಿದ್ದರು. ಈ ರೀತಿ ಏಕನಾಥರ ಉಪದೇಶದಿಂದ ಜಗತ್ತಿನ ಜನರು ಪಾವನರಾಗುತ್ತಿದ್ದರು.

ಒಂದು ದಿನ ಸದ್ಗುರು ಜನಾರ್ದನ ಸ್ವಾಮಿಗಳು ಏಕನಾಥರಿಗೆ ಹೀಗೆ ಆಜ್ಞಾಪಿಸಿದರು :ನಾನು ಇನ್ನು ನನ್ನ ಸ್ಥಳಕ್ಕೆ ಹೋಗುವೆ. ಇಂದಿನಿಂದ ನೀನೊಬ್ಬನೇ ಜನತಾ ಜನಾರ್ದನ ಎಂಬ ಭಾವದಿಂದ ಉಳಿದ ತೀರ್ಥಕ್ಷೇತ್ರಗಳ ದರ್ಶನ ಪಡೆಯುತ್ತ ಬದರೀಕಾಶ್ರಮದವರೆಗೂ ಹೋಗಿ ಅಲ್ಲಿಂದ ದಕ್ಷಿಣಭಾಗದ ರಾಮೇಶ್ವರದವರೆಗೂ ತೀರ್ಥಯಾತ್ರೆ ಮಾಡು. ಇದರಿಂದ ನಿನಗೆ ವಿವಿಧ ಭಾಗದ ವಿವಿಧ ಜನರ ಕರ್ಮ ಧರ್ಮಗಳ ಸ್ಪಷ್ಟ ಅನುಭವ ದೊರಕುವುದು. ನಿನ್ನಿಂದ ಜಗತ್ತಿನ ಕಲ್ಯಾಣವಾಗುವುದೆಂದು ಆಶೀರ್ವದಿಸಿದರು. ಸದ್ಗುರುಗಳ ಆಜ್ಞೆಯನ್ನು ಶಿರಸಾ ವಂದಿಸಿ ಏಕನಾಥರು ಮುಂದಿನ ತೀರ್ಥಯಾತ್ರೆಗೆ ಪ್ರಯಾಣಿಸಿದರು. ಹೋದಲ್ಲೆಲ್ಲ ಭಾಗವತ ಧರ್ಮದ ಪತಾಕೆಯನ್ನು ನಾಲ್ಕೂ ಕಡೆ ಹಾರಿಸಿದರು. ಎಲ್ಲ ತೀರ್ಥಯಾತ್ರೆಗಳನ್ನು ಪೂರ್ಣಗೊಳಿಸಿ ಕೊನೆಗೆ ತಮ್ಮ ಜನ್ಮಸ್ಥಾನವಾದ ಪೈಠಣಕ್ಕೆ ಆಗಮಿಸಿದರು.

ಏಕನಾಥರ ಅನೇಕ ವರ್ಷಗಳ ವಿಯೋಗದಿಂದ ಅಜ್ಜ ಅಜ್ಜಿಯರು ಸದಾ ದಾರಿ ಕಾಯುತ್ತ ಚಿಂತಾಗ್ರಸ್ಥರಾಗಿದ್ದರು. ಅಂತೂ ಕೊನೆಯಲ್ಲಿ ಏಕನಾಥರ ಭೇಟಿಯಿಂದ ಅವರ ಅಂತಃಕರಣವು ತುಂಬಿ ಹರಿಯಿತು. ಏಕನಾಥರಿಗೆ ಬಿಗಿಯಾಗಿ ಅಪ್ಪಿಕೊಂಡು ಗಳಗಳನೇ ಅತ್ತರು. ಏಕನಾಥರ ದಿವ್ಯ ತೇಜಃಪುಂಜ ಶರೀರವನ್ನು ನೋಡಿ ಆನಂದ ಪುಳಕಿತರಾದರು. ಇಷ್ಟರಲ್ಲಿ ಸದ್ಗುರು ಜನಾರ್ದನಸ್ವಾಮಿಯವರಿಂದ ''ನೀನು ಪೈಠಣದಲ್ಲಿದ್ದುಕೊಂಡೇ ಜಗತ್ತಿನ ಉದ್ಧಾರ ಮಾಡು'' ಎಂಬ ಪತ್ರವು ಏಕನಾಥರ ಕೈ ಸೇರಿತು. ಆಗ ಅದನ್ನು ಶಿರಸಾ ಮಾನ್ಯ ಮಾಡಿ ಅದರಂತೆ ನಡೆದುಕೊಂಡರು. ಮುಂದೆ ಸದ್ಗುರುಗಳ ಆಜ್ಞೆಯಂತೆ ಸತ್ಕುಲ ಸಂಪನ್ನಳೂ, ಸುಲಕ್ಷಣೆಯೂ, ಸದ್ಗುಣೆಯೂ ಆದ ಗಿರಿಜಾಬಾಯಿಯನ್ನು ಲಗ್ನವಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ಪ್ರಪಂಚ - ಪಾರಮಾರ್ಥವನ್ನು ಹೇಗೆ ಸಾಧಿಸಬೇಕೆಂಬ ಮಾರ್ಗದರ್ಶನಕ್ಕೆ ಕಾರಣರಾದರು. ಮನೆಯಲ್ಲಿ ನಡೆದು ಬಂದ ಕುಲಕರ್ಣಿ ವೃತ್ತಿ ಇತ್ತು. ಇದನ್ನು ನಡೆಸುತ್ತಲೇ ಪಾರಮಾರ್ಥಿಕ ನಿತ್ಯ ನೇಮವನ್ನು ತಪ್ಪದೇ ಆಚರಿಸುತ್ತಿದ್ದರು. ಪ್ರತಿನಿತ್ಯ ಪೂಜಾ ಸಮಾರಂಭ, ಅತಿಥಿ ಸಂತರ್ಪಣೆ, ಸಾಯಂಕಾಲ ಪ್ರವಚನೆ, ರಾತ್ರಿ ಕೀರ್ತನೆ ಇವು ಅವ್ಯಾಹತವಾಗಿ ಸಾಗುತ್ತಿದ್ದವು. ಇವರ ಮಧುರ ರಸಾಳ ವಾಣಿ ಶ್ರವಣ ಮಾಡಲು ಊರಿನ ಹಾಗೂ ಅಕ್ಕಪಕ್ಕದ ಶ್ರೋತೃಗಳು ಪಾಮರರಿಂದ ಪಂಡಿತರವರೆಗೆ ಧಾವಿಸಿ ಬಂದು ಶ್ರವಣದ ಆನಂದ ಪಡೆದು ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳುತ್ತಿದ್ದರು. ಹೀಗಿದ್ದರೂ ಪೈಠಣದ ಕೆಲವು ಬ್ರಾಹ್ಮಣರು ಇವರನ್ನು ದ್ವೇಷ ಭಾವದಿಂದ ಕಾಣುತ್ತ ಸದಾ ಪೀಡಿಸುತ್ತಿದ್ದರು. ಆದರೂ ಏಕನಾಥ ಮಹಾರಾಜರು ಸರ್ವರನ್ನೂ ಸಮಾನವಾಗಿ ಹರಿರೂಪದಿಂದಲೇ ಕಾಣುತ್ತಿದ್ದರು.

ಏಕನಾಥ ಮಹಾರಾಜರು ಶ್ರೀಗುರು ದತ್ತಾತ್ರೇಯರ ಆಜ್ಞೆಯಂತೆ ಭಾಗವತದ ಹನ್ನೊಂದನೆಯ ಸ್ಕಂಧಕ್ಕೆ ಭಾಷ್ಯ ಬರೆಯಲು ಆರಂಭಿಸಿದರು. ಪ್ರಾಕೃತ ಮರಾಠೀ ಭಾಷೆಯಲ್ಲಿ ಭಾಗವತವನ್ನು ಸುಂದರ ಶೈಲಿಯಲ್ಲಿ ಐದು ಅಧ್ಯಾಯಗಳನ್ನು ಪೂರ್ಣಗೊಳಿಸಿದರು. ಈ ಸಮಾಚಾರವು ಕರ್ಣೋಪಕರ್ಣವಾಗಿ ಕಾಶೀ ಪೀಠಾಧಿಕಾರಿ ಗುರುಗಳಿಗೆ ತಿಳಿಯಿತು. ಅವರು ಪರಮ ಪವಿತ್ರವಾದ ಸಂಸ್ಕೃತ ಭಾಷೆಯಲ್ಲಿದ್ದ ಭಾಗವತ ಗ್ರಂಥಕ್ಕೆ ಪ್ರಾಕೃತ ಮರಾಠೀ ಭಾಷೆಯಲ್ಲಿ ಬರೆಯುವುದು ಮಹಾಪರಾಧ. ಅವರನ್ನು ದಂಡಿಸಲೇಬೇಕೆಂದು ಏಕನಾಥ ಮಹಾರಾಜರಿಗೆ ಕಾಶಿಗೆ ಬರಲು ಆಮಂತ್ರಿಸಿದರು. ಕಾಶೀ ಪೀಠಾಧಿಕಾರಿಗಳ ಆಜ್ಞೆಯನ್ನು ಶಿರಸಾ ವಹಿಸಿ ಏಕನಾಥ ಮಹಾರಾಜರು ತಾವು ಬರೆದ ಭಾಗವತ ಪ್ರತಿಯೊಂದಿಗೆ ಕಾಶೀ ಪ್ರಯಾಣವನ್ನು ಪಾದಯಾತ್ರೆಯಿಂದ ಭಜನೆಯೊಂದಿಗೆ ಆರಂಭಿಸಿದರು. ಸತ್ಸಂಗದ ಲಾಭ ಪಡೆಯಲು ಸಾವಿರಾರು ಸಾಧಕ ಭಕ್ತರು ಇವರ ಜೊತೆಯಲ್ಲಿ ಹೊರಟರು. ದಾರಿಯುದ್ದಕ್ಕೂ ಅಲ್ಲಲ್ಲಿ ಅನುಕೂಲ ಸ್ಥಳಗಳಲ್ಲಿ ವಸತಿ ಮಾಡುತ್ತ ಸಾಯಂಕಾಲ ಪ್ರವಚನ ರಾತ್ರಿ ಕೀರ್ತನೆ ಕಾರ್ಯಕ್ರಮ ನಡೆಸುತ್ತ ಸರ್ವರನ್ನು ಶ್ರವಣಾನಂದದಿಂದ ತೃಪ್ತಪಡಿಸುತ್ತಿದ್ದರು ಏಕನಾಥ ಮಹಾರಾಜರು. ಹೀಗೆ ನಾಮ ಸಾಧನೆಯೊಂದಿಗೆ ಸಾಮೂಹಿಕವಾಗಿ ಕಾಶೀಯಾತ್ರೆಗೆ ನಡೆಯುವ ಈ ದಿಂಡಿಯಿಂದ ಅಕ್ಕಪಕ್ಕದ ಗ್ರಾಮಸ್ಥರೂ ಕೂಡ ಇದರ ಲಾಭ ಪಡೆದುಕೊಂಡು ಆನಂದಿಸುತ್ತಿದ್ದರು. ಈ ರೀತಿ ಆನಂದದಿಂದ ಕಾಶೀ ಕ್ಷೇತ್ರ ತಲುಪಿದರು. ಎಲ್ಲರೂ ಪವಿತ್ರ ಗಂಗಾ ಸ್ನಾನ ಮಾಡಿ ಶ್ರೀವಿಶ್ವೇಶ್ವರನ ದರ್ಶನ ಪಡೆದು ಯಾತ್ರೆಯ ಸಾರ್ಥಕತೆ ಪಡೆದರು.

ಇತ್ತ ಕಾಶೀ ಧರ್ಮಾಧಿಕಾರಿಯವರು ಶ್ರೀ ಏಕನಾಥ ಮಹಾರಾಜರಿಗೆ ತಮ್ಮ ಮಠಕ್ಕೆ ಕರೆಯಿಸಿಕೊಂಡು ತುಂಬಿದ ಸಭೆಯಲ್ಲಿ ವಿಶೇಷವಾಗಿ ಯಾವ ಚರ್ಚೆಗೆ ಇಳಿಯದೇ ತಮ್ಮ ಅಧಿಕಾರದ ದರ್ಪದಿಂದ ''ಸಂಸ್ಕೃತ ಭಾಷೆಯ ಭಾಗವತ ಗ್ರಂಥವನ್ನು ಪ್ರಾಕೃತ ಮರಾಠೀ ಭಾಷೆಯಲ್ಲಿ ಬರೆದದ್ದು ಮಹಾಪರಾಧ. ಬರೆದ ಈ ಪ್ರತಿಗಳನ್ನು ಗಂಗಾ ನದಿಯಲ್ಲಿ ಚೆಲ್ಲಿ ಬಿಡಿರಿ'' ಎಂದು ಆಜ್ಞಾಪಿಸಿ ಅಲ್ಲಿಂದ ಕೂಡಲೇ ನಿರ್ಗಮಿಸಿದರು. ಸಭೆಯಲ್ಲಿ ಕೂಡಿದ ಅನೇಕರಿಗೆ ಇವರ ಡಾಂಭಿಕ, ಸರ್ವಾಧಿಕಾರ ಹಿಡಿಸಲಿಲ್ಲ. ಆದರೆ ಅವರ ಅಧಿಕಾರಕ್ಕೆ ಪ್ರತಿಯಾಗಿ ಏನೂ ಮಾಡುವಂತಿದ್ದಿಲ್ಲ. ಆಜ್ಞೆಯಾಗುವುದೊಂದೇ ತಡ ಅವರ ದುಷ್ಟಶಿಷ್ಯರು ಮಣಕರ್ಣಿಕಾ ಘಾಟಕ್ಕೆ ಬಂದು ಅಲ್ಲಿ ಗಂಗಾನದಿಯಲ್ಲಿ ಬರೆದಿರುವ ಭಾಗವತ ಗ್ರಂಥ ಪ್ರತಿಗಳನ್ನು ಎಲ್ಲರೂ ನೋಡುತ್ತಿದ್ದಂತೆಯೇ ಒಗೆದು ಬಿಟ್ಟರು. ಆಗ ತಕ್ಷಣ ಗಂಗಾಮಾತೆಯು ಪ್ರತ್ಯಕ್ಷಳಾಗಿ ತನ್ನ ರತ್ನ ಜಡಿತ ಕಂಕಣಗಳುಳ್ಳ ಹಸ್ತಗಳಿಂದ ಎತ್ತಿ ಹಿಡಿದಳು. ಈ ಅದ್ಭುತ ಚಮತ್ಕಾರವನ್ನು ಪ್ರತ್ಯಕ್ಷವಾಗಿ ಕಂಡ ಸರ್ವರೂ ಒಂದೇ ಧ್ವನಿಯಿಂದ ''ಜಯ ಗಂಗಾಮಾತೆ '' ಎಂಬ ಘೋಷದಿಂದ ಕುಣಿದಾಡಿದರು. ಒಬ್ಬ ಸಾತ್ತ್ವಿಕ ಭಕ್ತನು ನದಿಯಲ್ಲಿ ಇಳಿದು ಗಂಗಾಮಾತೆಯ ಹಸ್ತದಿಂದ ಈ ಪವಿತ್ರ ಗ್ರಂಥವನ್ನು ಸ್ವೀಕರಿಸಿ ಏಕನಾಥ ಮಹಾರಾಜರಿಗೆ ಅರ್ಪಿಸಿದನು. ಇದರಿಂದ ಗರ್ವಿಷ್ಠ ಬ್ರಾಹ್ಮಣರ, ಅಧಿಕಾರಿಯ ಮುಖಗಳು ಕಪ್ಪಾದವು. ಆದ ತಪ್ಪಿಗೆ ಪ್ರಾಯಶ್ಚಿತ್ತ ಪಟ್ಟರು. ಎಲ್ಲರೂ ಏಕನಾಥ ಮಹಾರಾಜರಿಗೆ ಆದ ತಪ್ಪಿಗೆ ಕ್ಷಮೆಯಾಚಿಸಿ ಉಳಿದ ಭಾಗವತ ಗ್ರಂಥವನ್ನು ಕಾಶಿಯಲ್ಲಿಯೇ ಪೂರ್ಣಗೊಳಿಸಿರೆಂದು ವಿನಂತಿಸಿಕೊಂಡರು. ಇವರ ವಿನಂತಿಯನ್ನು ಮನಸಾ ಒಪ್ಪಿಕೊಂಡು ಏಕನಾಥ ಮಹಾರಾಜರು ಕಾಶಿಯಲ್ಲಿಯೇ ಈ ಪವಿತ್ರ ಗ್ರಂಥದ ಬರೆವಣಿಗೆ ಆರಂಭಿಸಿ ಕಾರ್ತಿಕ ಶುದ್ಧ ಪೌರ್ಣಿಮೆ ಸೋಮವಾರ ದಿನದಂದು ಹದಿನೆಂಟು ಸಾವಿರ ಓವಿಗಳುಳ್ಳ ಮೂವತ್ತೊಂದು ಅಧ್ಯಾಯಗಳನ್ನು ಪೂರ್ಣಗೊಳಿಸಿದರು. ಆಗ ಅಲ್ಲಿನ ಸರ್ವ ಭಕ್ತ ಮಂಡಳಿ, ಪಂಡಿತರ ಸಮೂಹ, ಗುರುಗಳು ಹೀಗೆ ಎಲ್ಲರೂ ಕೂಡಿ ಬಹು ಆದರ ಭಾವದಿಂದ ಬರೆದ ಗ್ರಂಥವನ್ನು ಪೂಜಿಸಿ ಅದನ್ನು ಆನೆಯ ಮೇಲೆ ಮೆರವಣಿಗೆ ಮಾಡಿ ಗೌರವಿಸಿದರು. ಇದರಿಂದ ಸರ್ವರಿಗೂ ಬಹಳ ಆನಂದವಾಯಿತು. ಅಲ್ಲಿಂದ ಏಕನಾಥ ಮಹಾರಾಜರು ಭಜನ ದಿಂಡಿ ಯಾತ್ರೆಯೊಂದಿಗೆ ಪೈಠಣಕ್ಕೆ ಬಂದು ಪುನಃ ತಮ್ಮ ನಿತ್ಯ ಸೇವೆಯಲ್ಲಿ ತೊಡಗಿಕೊಂಡರು.

ಪೈಠಣಕ್ಕೆ ಬಂದಮೇಲೆ ಏಕನಾಥ ಮಹಾರಾಜರು ಪ್ರತಿನಿತ್ಯ ಸಾಯಂಕಾಲ ಭಾಗವತ ಗ್ರಂಥದ ಪ್ರವಚನೆ ಆರಂಭಿಸಿದರು. ಇದನ್ನು ಶ್ರವಣ ಮಾಡಲು ಊರಿನ ಹಾಗೂ ಅಕ್ಕಪಕ್ಕ ಊರಿನ ಭಕ್ತ ಭಾವಿಕರು ತಂಡೋಪತಂಡವಾಗಿ ಬರಹತ್ತಿದರು. ಪ್ರತಿಯೊಬ್ಬರ ಹೃದಯಕ್ಕೂ ಮುಟ್ಟಿಕೊಳ್ಳುವಂತೆ ಸರಳ ಶೈಲಿಯಲ್ಲಿ ಎಷ್ಟು ಕೇಳಿದರೂ ತೃಪ್ತಿಯಾಗದಂತೆ ಅಮೃತಕ್ಕೂ ಮೀರಿಸುವ ಏಕನಾಥರ ರಸಾಳ ವಾಣಿಯನ್ನು ಶ್ರವಣ ಮಾಡಿ ಎಲ್ಲರೂ ಆನಂದಿತರಾಗುತ್ತಿದ್ದರು. ರಾತ್ರಿ ಕಾಲೊಳಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಕೀರ್ತನ ರಂಗದಲ್ಲಿ ಕುಣಿಯುತ್ತ ಹಾವಭಾವಗಳೊಂದಿಗೆ ನವರಸಯುಕ್ತ ನಿರೂಪಣೆ ಮಾಡುತ್ತಿದ್ದರು. ಇವರ ಸುಶ್ರಾವ್ಯ ಕೀರ್ತನೆ ಕೇಳಿ ಶ್ರೋತೃಗಳೆಲ್ಲರೂ ಮಂತ್ರಮುಗ್ಧರಾಗುತ್ತಿದ್ದರು. ತಮ್ಮಲ್ಲಿರುವ ಅಜ್ಞಾನದಿಂದ ದೂರ ಸರಿಯುತ್ತ ಸನ್ಮಾರ್ಗಕ್ಕೆ ಹತ್ತಿಕೊಳ್ಳುತ್ತ ತಮ್ಮ ಜೀವನವನ್ನು ಅಧ್ಯಾತ್ಮ ಸಾಧನೆಯಿಂದ ಸಾರ್ಥಕ ಮಾಡಿಕೊಳ್ಳಲಾರಂಭಿಸಿದರು. ಏಕನಾಥ ಮಹಾರಾಜರ ಸದಾಚಾರ, ಸದ್ವಿಚಾರ, ಸದ್ಭಾವಕಂಡು ಶಿಷ್ಟರು ಇವರನ್ನು ಪೂಜ್ಯ ಭಾವದಿಂದ ಕಾಣುತ್ತಿದ್ದರೆ , ಕೆಲವು ದುಷ್ಟ ಬ್ರಾಹ್ಮಣರು, ಇವರ ಕೀರ್ತಿ ಸಹಿಸದೇ ಇವರನ್ನು ಸದಾ ಮತ್ಸರ ಬುದ್ಧಿಯಿಂದ ಕಾಣುತ್ತಿದ್ದರು.ಏನಾದರೂ ಮಾಡಿ ಏಕನಾಥರನ್ನು ಅಪಮಾನಗೊಳಿಸಿ ಅವರ ಕೀರ್ತಿಗೆ ಭಂಗ ತರುವ ಚಿಂತನೆ ಮಾಡುತ್ತಿದ್ದರು.

ಒಂದು ದಿನ ಈ ಚಾಂಡಾಳ ಚೌಕಿ ಮೇಳವು ಒಬ್ಬ ದುಷ್ಟ ಯವನನನ್ನು ತಮ್ಮಲ್ಲಿ ಬರಮಾಡಿಕೊಂಡು ಆತನಿಗೆ ಹಣದ ಆಶೆ ತೋರಿಸಿ ''ಏನಾದರೂ ಮಾಡು, ಏಕನಾಥನಿಗೆ ಕ್ರೋಧ ಬರುವಂತೆ ಹೋರಾಡು'' ಎಂದು ಹೇಳಿ ಆತನಿಗೆ ಹುರಿದುಂಬಿಸಿ ಉಪಾಯ ಸೂಚಿಸಿದರು. ಆ ದುಷ್ಟಯವನನು ಇವರ ಮಾತಿಗೆ, ಹಣದ ಆಶೆಗೆ ಮೋಸ ಹೋಗಿ ಈ ಕಾರ್ಯಕ್ಕೆ ತತ್ಪರನಾದನು. ಏಕನಾಥ ಮಹಾರಾಜರು ಪ್ರತಿನಿತ್ಯ ಮುಂಜಾನೆ ಗೋದಾವರಿ ನದಿಗೆ ಸ್ನಾನಕ್ಕಾಗಿ ಹೋಗಿ ಬರುತ್ತಿದ್ದರು. ಇವರು ಸ್ನಾನ ಮಾಡಿ ಬರುವ ಮಾರ್ಗದಲ್ಲಿ ಎತ್ತರ ಸ್ಥಾನದಲ್ಲಿ ಆ ಯವನನು ಕುಳಿತುಕೊಂಡು ತನ್ನ ಮುಖದಲ್ಲಿ ತಾಂಬೂಲ ತುಂಬಿ ಕೊಂಡು ತನ್ನ ಕೆಳಗೆ ಏಕನಾಥರು ಬರುತ್ತಲೇ ಅವರ ಮೇಲೆ ಮುಖದಲ್ಲಿನ ಎಲ್ಲ ತಾಂಬೂಲವನ್ನು ಪಿಚಕಾರಿಯಂತೆ ಉಗುಳಿ ಬಿಟ್ಟನು. ಆದ ಈ ಘಟನೆಯಿಂದ ಏಕನಾಥ ಮಹಾರಾಜರು ಯಾವ ವಿಕಾರ ತಾಳದೇ ಶಾಂತ ಸ್ವಭಾವದಿಂದ ನಸುನಕ್ಕು ಮೈಲಿಗೆ ಆದ ಶರೀರವನ್ನು ತೊಳೆಯಲು ಪುನಃ ನದಿಗೆ ಹೋಗಿ ಸ್ನಾನ ಮಾಡಿಕೊಂಡು ಬರುತ್ತಿರುವಾಗ್ಗೆ ಪುನಃ ಆ ಯವನನು ಅದೇ ರೀತಿಯಲ್ಲಿ ತನ್ನ ಮುಖದಲ್ಲಿನ ತಾಂಬೂಲವನ್ನು ಅವರ ಮೇಲೆ ಉಗುಳಿದನು. ಹೀಗೆ ಈ ದುಷ್ಟ ಯವನನು ೨೧ ಸಾರೆ ಉಗುಳುತ್ತಲೇ ಸಾಗಿದನು. ಏಕನಾಥ ಮಹಾರಾಜರು ತಮ್ಮ ಶಾಂತತೆಯನ್ನು ಭಂಗಗೊಳಿಸದೇ ಹಸನ್ಮುಖಿಯಾಗಿಯೇ ಪದೇ ಪದೇ ಸ್ನಾನ ಮಾಡುತ್ತಲೇ ಬರುತ್ತಿದ್ದರು. ಕೊನೆಗೆ ಆ ಯವನನ ಮುಖವು ತಾಂಬೂಲದಲ್ಲಿನ ಸುಣ್ಣ, ತಂಬಾಕುಗಳ ಪರಿಣಾಮ ದಿಂದ ಹುಣ್ಣಾಗಿ ಬಲು ಪೀಡೆಯಾಯಿತು. ತನ್ನ ಹೇಯ ಕರ್ಮಕ್ಕಾಗಿ ಹೇಸಿಗೆಯಾಯಿತು. ಮನಸ್ಸಿಗೆ ಪ್ರಾಯಶ್ಚಿತ್ತವಾಯಿತು. ಮನದಲ್ಲಿ ಹೀಗೆ ವಿಚಾರಿಸಿದನು; ಅರೇ, ನಾನು ಎಲ್ಲಿಯಾದರೂ ಉಗುಳುವ ಕಾಲಕ್ಕೆ ಯಾರಿಗಾದರೂ ಒಂದು ಹನಿ ತಾಂಬೂಲ ಸಿಡಿದರೆ ಅವರು

ಕ್ರೋಧಕ್ಕೆ ಒಳಗಾಗಿ ನನ್ನಲ್ಲಿ ಜಗಳವಾಡಲು ಬರುತ್ತಿದ್ದರು. ಇವರು ಎಂತಹ ಮಹಾತ್ಮರಿರಬೇಕು? ನಾನು ಅದೆಷ್ಟೋ ಸಾರೆ ಆವರ ಶರೀರ ತುಂಬ ಮನಸಾ ಉಗುಳಿದರೂ ಸ್ವಲ್ಪವೂ ಕ್ರೋಧ ತಾಳದೇ ನನ್ನತ್ತ ಹಸನ್ಮುಖದಿಂದ ನೋಡುತ್ತ ತಮ್ಮಲ್ಲಿನ ಶಾಂತತೆ ಭಂಗಗೊಳಿಸಲಿಲ್ಲ. ಇವರಿಗೆ ಶರಣಾಗಿ ಕ್ಷಮೆ ಕೇಳಬೇಕೆಂದು ಬಯಸಿ ಒಮ್ಮಿಂದೊಮ್ಮೆಲೆ ಕೆಳಗೆ ಬಂದು ಏಕನಾಥ ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು.ತನ್ನ ಎರಡೂ ಕೈಗಳನ್ನು ಜೋಡಿಸಿ ಗದ್ಗದ ಕಂಠದಿಂದ ಕಣ್ಣೀರಿ ಡುತ್ತ ''ಮಹಾರಾಜರೇ ನನ್ನಿಂದ ಅಕ್ಷಮ್ಯ ಅಪರಾಧವಾಯಿತು. ದುಷ್ಟ ಬ್ರಾಹ್ಮಣರ ಮಾತು ಕೇಳಿ ಹಣದಾಶೆಗೆ ನಾನು ಇಂತಹ ನೀಚ ಕಾರ್ಯ ಮಾಡಿದೆ. ನನ್ನನ್ನು ಕ್ಷಮಿಸಿ ಉದ್ಧರಿಸಿರಿ'' ಎಂದು ಅತ್ಯಂತ ಕಳಕಳಿಯಿಂದ ವಿನಂತಿಸಹತ್ತಿದನು. ಈತನ ಈ ಸ್ಥಿತಿ ಕಂಡು ಏಕನಾಥ ಮಹಾರಾಜರಿಗೆ ಬಹು ಕಳವಳ ಹಾಗೂ ಸಂತೋಷವಾಗಿ ''ಏಳು ಯವನಾ, ನಿನ್ನಿಂದ ಯಾವ ಅಪರಾಧವಾಗಿಲ್ಲ. ನಿನ್ನ ಈ ಕೃತ್ಯದಿಂದ ನನಗೆ ಬಹು ಉಪಕಾರವಾಗಿದೆ. ನೋಡು, ಇಂದು ಏಕಾದಶೀ ಪರ್ವಕಾಲ. ನಿನ್ನಿಂದ ನನಗೆ ಎಂದೂ ಸಾಧಿಸದ ೨೧ ಸಾರೆ ಗೋದಾವರೀ ತೀರ್ಥದ ಸ್ನಾನ ಲಾಭವಾಯಿತು'' ಎಂದು ಆತನಿಗೆ ಸಮಾಧಾನ ಹೇಳಿ ತಮ್ಮ ಕೃಪಾದೃಷ್ಟಿಯಿಂದ ಪ್ರಸಾದ ಕೊಟ್ಟು ಉದ್ಧರಿಸಿದರು.

ಯವನ ಅಂಗಾವರಿ ಥುಂಕಿಲಾ ।
ಪ್ರಸಾದ ದೇವೋನಿ ಮುಕ್ತ ಕೇಲಾ ॥

ಈ ಘಟನೆಯನ್ನು ದೂರಿನಿಂದ ಪ್ರತ್ಯಕ್ಷ ಕಂಡ ಆ ದುಷ್ಟ ಬ್ರಾಹ್ಮಣರಿಗೆ ಮುಖಭಂಗವಾಯಿತಾದರೂ ಅವರ ಮತ್ಸರ ಬುದ್ಧಿಯು ಪುನಃ ಇಮ್ಮಡಿಯಾಯಿತು. ಹೇಗಾದರೂ ಮಾಡಿ ಮರು ಪ್ರಯತ್ನದಿಂದ ಏಕನಾಥನಿಗೆ ಕ್ರೋಧಕ್ಕೆ ಒಳಪಡಿಸಬೇಕೆಂದು ಹಠ ತೊಟ್ಟರು. ಒಂದು ದಿನ ಈ ಮೇಳವು ಇದೇ ವಿಚಾರದಲ್ಲಿ ಒಂದೆಡೆ ಕುಳಿತುಕೊಂಡಿರಲು ಆಗ ಅಲ್ಲಿ ಒಬ್ಬ ಬಡ ಬ್ರಾಹ್ಮಣನು ಬಂದು ನನ್ನ ಮಗಳ ಮದುವೆಗೆ ಎರಡು ನೂರು ರೂಪಾಯಿಗಳನ್ನು ಸಹಾಯ ಮಾಡಿರಿ ಎಂದು ದೀನತೆಯಿಂದ ಅವರ ಚರಣಗಳಿಗೆ ಬಿದ್ದು ಬೇಡಿಕೊಂಡನು. ಇದೊಂದು ಉತ್ತಮ ಸಂಧಿ ದೊರಕಿತು ಎಂದುಕೊಂಡು ಆ ಬ್ರಾಹ್ಮಣರು ನೀನು ನಮ್ಮದೊಂದು ಮಾತು ನಡೆಸಿಕೊಟ್ಟರೆ ನಾವು ನಿನಗೆ ತಪ್ಪದೇ ಎರಡು ನೂರು ರೂಪಾಯಿಗಳನ್ನು ಕೊಡುತ್ತೇವೆ ಎಂದರು. ಆಗ ಆ ಬಡ ಬ್ರಾಹ್ಮಣನು ಅದು ಏನೇ ಇರಲಿ ನಾನು ನಿಮ್ಮ ಮಾತು ನಡೆಸಿಕೊಡುವೆ ಎಂದು ವಚನಕೊಟ್ಟನು. ಆಗ ಅವರು ಇಲ್ಲಿ ಏಕನಾಥ ಎಂಬ ಒಬ್ಬ ಬ್ರಾಹ್ಮಣನಿದ್ದಾನೆ. ಆತನಿಗೆ ನೀನು ಹೇಗಾದರೂ ಪ್ರಯತ್ನಿಸಿ ಕ್ರೋಧವು ಉಂಟಾಗುವಂತೆ ಮಾಡಿದರೆ ಸಾಕು, ಕೂಡಲೇ ನಾವು ನಿನ್ನ ಇಚ್ಛೆ ಪೂರೈಸುತ್ತೇವೆ ಎಂದರು. ಆಗ ಆ ಬ್ರಾಹ್ಮಣನು ಇದೇನು ಮಹಾ ! ತಕ್ಷಣ ಆತನಿಗೆ ಕ್ರೋಧ ಹುಟ್ಟಿಸುವೆ ಎಂದು ಹೇಳಿ ಏಕನಾಥ ಮಹಾರಾಜರ ಮನೆಗೆ ಧಾವಿಸಿ ಬಂದು ವಿಚಾರಿಸಿದನು. ಆಗ ಮಹಾರಾಜರು ದೇವರ ಮನೆಯಲ್ಲಿ ಪೂಜೆಯಲ್ಲಿ ನಿರತರಾಗಿರುವುದು ತಿಳಿಯಿತು. ಆಗ ಆತನು ತೊಟ್ಟಿದ್ದ ಪಾದರಕ್ಷೆ ಸಮೇತ ದಢದಢ ಸಾಗಿ ದೇವರ ಮನೆ ಪ್ರವೇಶಿಸಿ ಅಲ್ಲಿ ಪೂಜೆಯಲ್ಲಿ ತೊಡಗಿರುವ ಏಕನಾಥ ಮಹಾರಾಜರ ತೊಡೆಯ ಮೇಲೆ ಹೋಗಿ ಕುಳಿತುಕೊಂಡನು. ಆಗ ಏಕನಾಥ ಮಹಾರಾಜರು ತಮ್ಮ ಶಾಂತ ಸ್ವಭಾವದಿಂದ ಆ ಬಡ ಬ್ರಾಹ್ಮಣನಿಗೆ ಕರುಣಾ ದೃಷ್ಟಿಯಿಂದ ನೋಡುತ್ತ ತನ್ನ ಧರ್ಮಪತ್ನಿಗೆ ಕರೆದು ಇಲ್ಲಿ ನೋಡು, ಈ ಬ್ರಾಹ್ಮಣ ದೇವನಿಗೆ ನಮ್ಮ ಭೇಟಿಯ ಎಷ್ಟೊಂದು ಆತುರತೆ ಇರಬಹುದು? ಕಾಲೊಳಗಿನ ಪಾದರಕ್ಷೆಗಳನ್ನು ತೆಗೆಯದೇ ಧಾವಿಸಿ ಬಂದಿರುವನು. ಇವರಿಗೆ ಸ್ನಾನದ ವ್ಯವಸ್ಥೆ ಮಾಡು. ಪೂಜೆಯ ನಂತರ ಭೋಜನ ಮಾಡಿಸೋಣ ಎಂದು ಹೇಳಿ ಆತನ ಪಾದರಕ್ಷೆಗಳನ್ನು ಮಹಾರಾಜರು ತಮ್ಮ ಕೈಗಳಿಂದ ತೆಗೆದು ಅದಕ್ಕೆ ವಂದಿಸಿ ಹೊರಗೆ ಇಟ್ಟರು. ಇದರಿಂದ ಈ ಬ್ರಾಹ್ಮಣನು ಮನನೊಂದು ತೆಪ್ಪಗಾದನು. ಸ್ನಾನ, ಪೂಜೆಯ ನಂತರ ಏಕನಾಥ ಮಹಾರಾಜರು ಬ್ರಾಹ್ಮಣರ ಭೋಜನ ಪಂಕ್ತಿಯಲ್ಲಿ ಅತಿಥಿಯಾಗಿ ಬಂದ ಈ ಬಡಬ್ರಾಹ್ಮಣನನ್ನು ತಮ್ಮ ಮಗ್ಗುಲಿಗೆ ಕುಳ್ಳಿರಿಸಿಕೊಂಡರು. ಈ ಬಡ ಬ್ರಾಹ್ಮಣನು ಮಗಳ ಮದುವೆಗೆ ಬೇಕಾಗಿರುವ ಎರಡು ನೂರು ರೂಪಾಯಿಗಳ ಪ್ರಾಪ್ತಿ ಕೈತಪ್ಪಿತಲ್ಲವೆಂದು ಬಹು ಚಿಂತೆಗೆ ಒಳಗಾದನು. ಏನಾದರೂ ಆಗಲಿ ಏಕನಾಥರಿಗೆ ಸಿಟ್ಟಿಗೆ ತರಿಸಲೇಬೇಕೆಂದು ದೀರ್ಘ ಆಲೋಚನೆಯಲ್ಲಿದ್ದನು. ಗಿರಿಜಾಬಾಯಿಯು ಏಕನಾಥರಿಗೆ ಭೋಜನ ಬಡಿಸುತ್ತಿರಲು ಆಗ ಆತನು ಮೇಲಕ್ಕೆದ್ದು ದಿಢೀರನೆ ಗಿರಜಾಬಾಯಿಯ ಬೆನ್ನಿಗೆ ಅವಿಚಿಕೊಂಡು ಆಕೆಯ ಮರ್ಯಾದೆ ಸ್ಥಾನಗಳಿಗೆ ತನ್ನ ಕೈಗಳನ್ನು ಇಟ್ಟನು. ಇದನ್ನು ಕಂಡ ಏಕನಾಥ ಮಹಾರಾಜರು ತಮ್ಮ ಧರ್ಮಪತ್ನಿಗೆ ; ನೋಡು, ನೋಡು, ಈತನು ಚಿಕ್ಕ ಬಾಲಕನಂತೆ ನಿನಗೆ ತೆಕ್ಕೆ ಬಿದ್ದಿರುವನು, ಜೋಕೆ, ಆತನನ್ನು ಕೆಡುವಬೇಡ ಎಂದರು. ಆಗ ಗಿರಿಜಾಬಾಯಿಯು, ಸ್ವಾಮೀ ನೀವೇನೂ ಯೋಚಿಸದಿರಿ. ನನಗೆ ನನ್ನ ಹರಿಪಂತ ಬಾಲಕ ಹೀಗೆಯೇ ಬೆನ್ನಿಗೆ ತೆಕ್ಕೆ ಬೀಳುತ್ತಿರುತ್ತಾನೆ. ಆತನಿಗೆ ಸಾಂಭಾಳಿಸುವಂತೆಯೇ ಈತನನ್ನು ಸಾಂಭಾಳಿಸುವೆ ಎಂದು ಉತ್ತರಿಸುವುದೊಂದೇ ತಡ ಈ ಬಡ ಬ್ರಾಹ್ಮಣನಿಗೆ ತನ್ನ ಹೇಯ ಕೃತ್ಯಕ್ಕಾಗಿ ಅತ್ಯಂತ ಪ್ರಾಯಶ್ಚಿತ್ತವಾಗಿ ಏಕನಾಥ ಮಹಾರಾಜರಿಗೂ ಗಿರಿಜಾಬಾಯಿಗೂ ಸಾಷ್ಟಾಂಗ ನಮಸ್ಕಾರ ಹಾಕಿ ಬಿಕ್ಕಿ ಬಿಕ್ಕಿ ಅಳ ಹತ್ತಿದನು. ಆಗ ಮಹಾರಾಜರು ಏನಾಯಿತು? ಹೀಗೇಕೇ ಅಳುತ್ತಿರುವೆ? ನಮ್ಮಿಂದ ಯಾವ ಅಪರಾಧವಾಯಿತು? ಸಂಕೋಚ

ಪಡದೇ ತಿಳಿಸೆಂದರು. ಆಗ ಆತನು ಮಹಾರಾಜರೇ, ನಾನು ಕೇವಲ ಬಡಬ್ರಾಹ್ಮಣನು. ನನ್ನ ಮಗಳ ಮದುವೆಗೆ ಎರಡು ನೂರು ರೂಪಾಯಿಗಳು ಬೇಕಾಗಿದ್ದವು. ಅಲ್ಲಿ ನೋಡಿರಿ ದೂರದಲ್ಲಿ ಕುಳಿತಿರುವ ಆ ದುಷ್ಟರ ಮಾತು ಕೇಳಿ ನಾನು ನಿಮಗೆ ನೀವು ಕೋಪಿಸ ಲೆಂದೇ ಇಂತಹ ಹೀನ ಕೃತ್ಯಗಳನ್ನು ಮಾಡಿದೆ. ಇದು ನನ್ನ ಅಕ್ಷಮ್ಯ ಅಪರಾಧವಾಗಿದೆ. ದಯ ಮಾಡಿ ನನ್ನನ್ನು ಕ್ಷಮಿಸಿರಿ ಎಂದು ಪುನಃ ಪುನಃ ನಮಸ್ಕರಿಸುತ್ತ ಬಹಳ ರೋಧಿಸಹತ್ತಿದನು. ಆಗ ಮಹಾರಾಜರು ಆತನಿಗೆ ಸಂತೈಸುತ್ತ ಹೇ ಬ್ರಾಹ್ಮಣನೇ, ಈ ವಿಷಯ ವನ್ನು ನನಗೆ ಮೊದಲೇ ಏಕೆ ತಿಳಿಸಲಿಲ್ಲ? ನನ್ನ ಶಾಂತ ಸ್ವಭಾವವು ನಿನಗೆ ಅಡ್ಡಿಯಾಯಿಯತಲ್ಲ? ಆಗಲಿ, ಆದದ್ದು ಆಗಿ ಹೋಯಿತು. ಇದು ತೆಗೆದುಕೋ ಎರಡು ನೂರು ರೂಪಾಯಿಗಳನ್ನು, ಇಷ್ಟರಿಂದಲೇ ನಿನ್ನ ಮಗಳ ಮದುವೆ ಮುಗಿಯಲಿಕ್ಕಿಲ್ಲ, ಹೊರಗೆ ನಡೆ ನಾನು ಸಿಟ್ಟಿಗೆ ಬಂದು ನಿನಗೆ ಪುನಃ ಎರಡು ನೂರು ರೂಪಾಯಿಗಳನ್ನು ಕೊಡಿಸುವೆ ಎಂದು ಆತನ ಜೊತೆಗೆ ಬಂದು ದೂರದಲ್ಲಿ ಕುಳಿತು ನೋಡುತ್ತಿರುವ ಆ ದುಷ್ಟ ಬ್ರಾಹ್ಮಣರ ಎದುರಿಗೆ ಏಕನಾಥ ಮಹಾರಾಜರು ಬಹಳ ಕ್ರೋಧವನ್ನು ಪ್ರದರ್ಶಿಸಿ ಅವರಿಂದ ಪುನಃ ಎರಡು ನೂರು ರೂಪಾಯಿಗಳನ್ನು ಕೊಡಿಸಿ ಆದರದಿಂದ ಆ ಬ್ರಾಹ್ಮಣನಿಗೆ ಬೀಳ್ಕೊಟ್ಟರು.

ಸದ್ಗುರು ಸೇವೆಯಿಂದ ಹಿಡಿದು ಇಲ್ಲಿಯವರೆಗೆ ಏಕನಾಥ ಮಹಾರಾಜರ ಏಕನಿಷ್ಠೆಯ, ಕೃಷ್ಣಾರ್ಪಣೆಯ ಅಖಂಡ ಸೇವೆ,ನಿಷ್ಕಾಮ ಭಕ್ತಿಯ ಋಣವು ಪರಮಾತ್ಮನಿಗೆ ತುಂಬಾ ಭಾರವಾಯಿತು. ಈ ಸೇವೆಯ ಋಣ ತೀರಿಸಲು ದ್ವಾರಕಾಧೀಶನಾದ ಶ್ರೀಕೃಷ್ಣ ಪರಮಾತ್ಮನು ಅನಾಥ ಬ್ರಾಹ್ಮಣನ ವೇಷ ಧರಿಸಿ ಶ್ರೀಖಂಡ್ಯಾನಾಮದಿಂದ ಏಕನಾಥ ಮಹಾರಾಜರ ಮನೆಗೆ ಬಂದನು. ಆಗ ಮಹಾರಾಜರು ಕುಶಲಪ್ರಶ್ನೆ ಮಾಡಲು ನನಗೆ ಯಾರೂ ದಿಕ್ಕಿಲ್ಲ. ತಂದೆ-ತಾಯಿಗಳಿಲ್ಲ, ಬಂಧು-ಬಳಗವಿಲ್ಲ. ಎಲ್ಲಿಯಾದರೂ ಸೇವೆ ಮಾಡಿ ಬದುಕಬೇಕೆಂದು ಬಹಳ ಕಡೆ ತಿರುಗಾಡಿದೆ. ಆದರೆ ಎಲ್ಲಿಯೂ ನನಗೆ ಸರಿಬೀಳಲಿಲ್ಲ. ನಿಮ್ಮ ಹೆಸರು ಕೇಳಿ ಬಹಳ ಆಶೆಪಟ್ಟು ನಿಮ್ಮಲ್ಲಿಗೆ ಸೇವೆಗಾಗಿ ಬಂದಿರುವೆ. ನನಗೇನೂ ಸಂಬಳ ಬೇಕಿಲ್ಲ. ಊಟ, ಬಟ್ಟೆ ಕೊಟ್ಟರೆ ಸಾಕು. ತಾವು ಹೇಳಿದ ಯಾವುದೇ ಕೆಲಸವಾಗಲಿ ನಾನು ಮಾಡಲು ಸಿದ್ಧ ಎಂದು ವಿನಮ್ರಭಾವದಿಂದ ನುಡಿದಾಗ ಏಕನಾಥ ಮಹಾರಾಜರು ಸಂತೋಷ ದಿಂದ ಒಪ್ಪಿಕೊಂಡು ಆತನನ್ನು ಮನೆ ಕೆಲಸಕ್ಕೆ ಇಟ್ಟುಕೊಂಡರು. ಶ್ರೀಖಂಡ್ಯಾನು ಬೆಳಿಗ್ಗೆ ಎದ್ದು ಮನೆಯ ಕಸಗೂಡಿಸಿ ಏಕನಾಥ ಮಹಾರಾಜರ ಸ್ನಾನ ಪೂಜೆಗೆ ಎಲ್ಲ ಸಿದ್ಧತೆ ಮಾಡುತ್ತ ಹೂವು, ತುಳಸಿ ಸಂಗ್ರಹಿಸಿ ಗಂಧವನ್ನು ತೇಯ್ದು ಎಲ್ಲ ದೃಷ್ಟಿಯಿಂದ ಹಸನ್ಮುಖದಿಂದ ಸಹಕಾರ ನೀಡುತ್ತಿದ್ದನು. ತದನಂತರ ಅಡುಗೆಯ ಸಿದ್ಧತೆಗೆ ಬೇಕಾಗುವ ಎಲ್ಲ ಸಾಹಿತ್ಯಗಳನ್ನು ಸರಿಪಡಿಸಿ ಮುಖ್ಯವಾಗಿ ಕಾವಡಿಯಿಂದ ನದಿ ನೀರುತುಂಬಿಕೊಂಡು ಮನೆಯಲ್ಲಿನ ದೊಡ್ಡ ಹೌಜು ತುಂಬಿಸುತ್ತಿದ್ದನು. ಪ್ರತಿನಿತ್ಯ ಅತಿಥಿ ಸತ್ಕಾರ, ಭೋಜನಕ್ಕೆ ಬಡಿಸುವುದು, ಎಂಜಲ ಎಲೆಗಳನ್ನು ತೆಗೆಯುವುದು ಹೀಗೆ ಒಂದಲ್ಲ ಎರಡಲ್ಲ ಎಲ್ಲ ಕಾರ್ಯಗಳನ್ನೂ ಕೂಡ ನೀಚ- ಉಚ್ಚವೆನ್ನದೇ, ಹಗಲು -ರಾತ್ರಿ ಎನ್ನದೇ ಹರ್ಷಯುಕ್ತ ಅಂತಃಕರಣದಿಂದ ನಿರಾಲಸ್ಯದಿಂದ ಸೇವೆ ಮಾಡುತ್ತಿದ್ದನು. ಒಟ್ಟಿನಲ್ಲಿ ಈತನ ಸೇವೆ ಕಂಡು ಏಕನಾಥ ಮಹಾರಾಜರು ಗಿರಿಜಾಬಾಯಿಯವರು ಹರ್ಷಚಕಿತರಾಗಿ ಬಹಳ ಕೌತುಕ ಪಡುತ್ತಿದ್ದರು.

ಪ್ರವಚನ, ಕೀರ್ತನೆಯಲ್ಲಿ ಜನರಿಗೆ ಬೋಧಿಸುವ ಪ್ರಸಂಗದಲ್ಲಿ ಏಕನಾಥ ಮಹಾರಾಜರು "ಸರ್ವಭೂತಗಳಲ್ಲಿಯೂ ಭಗವದ್‌ಭಾವವನ್ನಿಡಬೇಕು" ಎಂದು ವಿಶೇಷವಾಗಿ ಒತ್ತಿ ಹೇಳುತ್ತಿದ್ದರು. ಈ ಭಾವವನ್ನು ಸ್ವತಃ ತಮ್ಮ ಅಂಗದಲ್ಲಿ ಪರಿಪೂರ್ಣ ವಾಗಿ ಧರಿಸಿದ್ದರು. ಒಂದು ದಿನ ಬೇಸಿಗೆಯ ಮಧ್ಯಾಹ್ನ ಸಮಯ ಏಕನಾಥ ಮಹಾರಾಜರು ನದಿ ಸ್ನಾನ ಮುಗಿಸಿ ಬರುತ್ತಿರಲು ದಾರಿಯಲ್ಲಿ ಕಾದ ಉಸುಕಿನ ತಾಪ ತಾಳದೇ ಒಬ್ಬ ಮಾದಿಗನ ಚಿಕ್ಕ ಬಾಲಕನು ಜೋರಾಗಿ ಅಳುತ್ತಿದ್ದನು. ಈ ಬಾಲಕನತ್ತ ಯಾರ ಗಮನವೂ ಸೆಳೆಯಲಿಲ್ಲ. ಏಕನಾಥ ಮಹಾರಾಜರು ದಯಾ ಅಂತಃಕರಣದಿಂದ ಆ ಬಾಲಕನ್ನು ಮೇಲೆತ್ತಿಕೊಂಡು ಆತನನ್ನು ಸಂತೈಸುತ್ತ ಮಾದಿಗರ ಓಣಿಗೆ ಬಂದು ತಂದೆ-ತಾಯಿಗಳವರಿಗೆ ಪ್ರೀತಿಯಿಂದ ಒಪ್ಪಿಸಿದರು. ಇದನ್ನು ಕಂಡ ವರ್ಣಾಭಿಮಾನೀ, ಕರ್ಮಾಭಿಮಾನೀ ಬ್ರಾಹ್ಮಣರು ಏಕನಾಥರನ್ನು ಮನಬಂದಂತೆ ಹೀಯಾಳಿಸಿದರು. ಆದರೆ ಅವರತ್ತ ಮಹಾರಾಜರು ಗಮನವನ್ನೇ ಕೊಡಲಿಲ್ಲ.

ಒಂದು ದಿನ ಪಿತೃಶ್ರಾದ್ಧಸಮಯದಲ್ಲಿ ಏಕನಾಥ ಮಹಾರಾಜರು ಬೆಳಿಗ್ಗೆಯಿಂದಲೇ ಅಡುಗೆಯ ಸಿದ್ಧತೆ ನಡೆಸಿದ್ದರು. ನಸುಕಿನಲ್ಲಿ ಬೀದಿ ಕಸಗೂಡಿಸಲು ಮಾದಿಗರ ಕುಟುಂಬ ಒಂದು ನಾಥರ ಮನೆಯ ಅಂಗಳಕ್ಕೆ ಬಂದಾಗ ಒಳಗಿನಿಂದ ಬರುವ ಘಮಘಮಾಟ ರುಚಿಕರ ಪದಾರ್ಥಗಳ ಸುವಾಸನೆ ಕಂಡು ಬೆರಗಾಗಿ ಇಂತಹ ಭಾರೀ ಭೋಜನ ನಮಗೆ ಎಂದು ದೊರಕಬೇಕು? ಎಂದು ಹೆಂಡತಿಯು ಗಂಡನಿಗೆ ಪ್ರಶ್ನಿಸಿದಳು. ಜೊತೆಗಿದ್ದ ಚಿಕ್ಕ ಬಾಲಕನು ನನಗೆ ಇಂತಹ ಊಟವು ಬೇಕೇ ಬೇಕೆಂದು ಹಠ ಹಿಡಿದನು. ಆದರೆ ಗಂಡನು ಹೀಗೆ ಹೇಳಹತ್ತಿದನು, ಹೇ, ನಾವು ಮಾದಿಗರು, ಇಂತಹ ರುಚಿಕಟ್ಟಾದ ಬ್ರಾಹ್ಮಣರ ಭೋಜನ ನಮಗೆಂದು ದೊರಕಬೇಕು? ನಾವು ದುರ್ದೈವಿಗಳು ನಮ್ಮ ಪಾಲಿಗೆ ಅದೇ ಸಂಗಟಿ ಸಾರು ಎಂದು ಖಿನ್ನನಾಗಿ ನುಡಿಯುತ್ತ ಅವರನ್ನು ಮುಂದಾಗಲು ತಿಳಿಸಿದನು. ಆದರೆ ಆ ಬಾಲಕನು ನನಗೆ ಈ ಊಟ ಬೇಕೆಬೇಕೆಂದು ಜೋರು ಜೋರಾಗಿ ಅಳುತ್ತ ಅಲ್ಲಿಯೇ ಕುಳಿತುಬಿಟ್ಟನು. ಇದನ್ನೆಲ್ಲ ಕಂಡ ಏಕನಾಥ ಮಹಾರಾಜರು ಬೇಗನೆ ಅವರತ್ತ ಬಂದು "ನೀವು ಏನೂ ವ್ಯಥೆ ಪಡುವ ಕಾರಣವಿಲ್ಲ.

ಅಡುಗೆ ಸಿದ್ಧವಾಗುತ್ತಿದೆ. ನೀವು ಯಥೇಚ್ಛವಾಗಿ ಭೋಜನ ಮಾಡುವಿರಂತೆ'' ಎಂದು ಹೇಳಿ ತಕ್ಷಣ ಈ ವಿಷಯವನ್ನು ಧರ್ಮಪತ್ನಿ ಗಿರಿಜಾಬಾಯಿಯವರಿಗೆ ತಿಳಿಸಿದರು. ಆಗ ಆ ಸಾಧ್ವಿಯು ವಿನಮ್ರಭಾವದಿಂದ ಈಗ ಈ ಮೂವರು ಭೋಜನ ಮಾಡಿ ತಮ್ಮವರಿಗೆ ತಿಳಿಸಿದಾಗ ಉಳಿದೆಲ್ಲರಿಗೂ ಖೇದವಾಗುವುದು ಸಹಜವಾಗಿದೆ. ಕಾರಣ ಅವರ ಸರ್ವ ಸಮಾಜಕ್ಕೆ ಊಟಕ್ಕೆ ಆಮಂತ್ರಿಸಿರಿ. ಎಲ್ಲವನ್ನು ಬಡಿಸಿ ಬ್ರಾಹ್ಮಣರಿಗಾಗಿ ಮಡಿಯಿಂದ ಪುನಃ ಪಾಕ ಸಿದ್ಧಗೊಳಿಸುವೆ ಎಂದಾಗ ನಾಥರಿಗೆ ಇದು ಪೂರ್ಣ ಒಪ್ಪಿಗೆಯಾಗಿ ಅದರಂತೆ ನೆರವೇರಿಸಿದರು. ಮಾದಿಗ ಸಮಾಜವೆಲ್ಲವೂ ಎಂದೂ ಕಂಡರಿಯದ ಸುಗ್ರಾಸ ಭೋಜನವನ್ನು ಅತ್ಯಂತ ಸಂತೋಷದಿಂದ ಭುಂಜಿಸಿ ತೃಪ್ತರಾಗಿ ನಾಥರನ್ನು ಹರಿಸುತ್ತ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಇತ್ತ ಈ ಸಮಾಚಾರ ತಿಳಿದ ಬ್ರಾಹ್ಮಣ ಸಮಾಜಕ್ಕೆ ತಡೆಯಲಾರದ ಕೋಪವು ಉಂಟಾಯಿತು. ಈ ಏಕನಾಥನು ಬಲು ಭ್ರಷ್ಟನು, ಹೀನನು, ಅನಾಚಾರಿಯು. ಈ ಚಾಂಡಾಲನ ಮುಖ ಕೂಡ ನಾವು ನೋಡಕೂಡದು. ಭೋಜನಕ್ಕೆ ನಮಗೆ ಆಮಂತ್ರಿಸಿ ನಮಗಿಂತ ಮೊದಲೇ ಈ ಭ್ರಷ್ಟ ಮಾದಿಗರಿಗೆ ಬಡಿಸಿರುವುದು ಅಕ್ಷಮ್ಯ ಅಪರಾಧ ಎಂದು ಮನಬಂದಂತೆ ಹೀಯಾಳಿಸುತ್ತ ಏಕನಾಥರ ಮನೆಗೆ ಭೋಜನಕ್ಕೆ ಯಾರೂ ಹೋಗಕೂಡದು ಎಂದು ಆಜ್ಞೆ ಹೊರಡಿಸಿದರು.

ಇತ್ತ ಶ್ರೀಖಂಡ್ಯಾನ ಸಹಕಾರ ಇದ್ದ ಮೇಲೆ ಕೇಳುವುದೇನು? ತಕ್ಷಣ ಬ್ರಾಹ್ಮಣರ ಭೋಜನದ ಸಮಯದ ಒಳಗಾಗಿಯೇ ಮರು ಅಡುಗೆಯು ಮೊದಲಿನಕ್ಕಿಂತಲೂ ಸುಗ್ರಾಸವಾಗಿ ಸಿದ್ಧವಾಯಿತು. ಆದರೆ ಯಾವ ಬ್ರಾಹ್ಮಣನೂ ಮನೆಗೆ ಬರಲಿಲ್ಲ. ಪಿತೃಶ್ರಾದ್ಧದ ಇಂತಹ ಪರ್ವಕಾಲದಲ್ಲಿ ಬ್ರಾಹ್ಮಣರಾರೂ ಬಾರದ್ದಕ್ಕೆ ಏಕನಾಥ ಮಹಾರಾಜರಿಗೆ ಸಂಕಟ ಸಮಯ ಒದಗಿದಂತಾಯಿತು. ಆಗ ಶ್ರೀಖಂಡ್ಯಾ ಮಹಾರಾಜರತ್ತ ಬಂದು ಸ್ವಾಮೀ, ತಾವುಯಾವ ಚಿಂತೆಯನ್ನೂ ಮಾಡಬೇಡಿರಿ. ಬ್ರಾಹ್ಮಣರು ಭೋಜನಕ್ಕೆ ಬಾರದ್ದಕ್ಕೆ ಏನಾಯಿತು? ಅವರ ಪಿತೃಗಳು ಹಾಗೂ ನಿಮ್ಮ ಪಿತೃಗಳೂ ಕೂಡ ಭೋಜನಕ್ಕೆ ಆಗಮಿಸುವರು ನಿಶ್ಚಿಂತರಾಗಿರಿ ಎಂದು ಹೇಳುತ್ತ ಎಲೆಗಳನ್ನು ಬಡಿಸುತ್ತಲೇ ಎಲ್ಲ ಪಿತೃದೇವತೆಗಳು ಎಲೆಯ ಮೇಲೆ ಆಸೀನರಾಗಿ ಬಹಳ ಸಂತೋಷದಿಂದ ತಮಗೆ ಬೇಕಾದ ಪದಾರ್ಥಗಳನ್ನು ಭುಂಜಿಸುತ್ತ ತೃಪ್ತರಾದರು. ಎಲ್ಲರಿಗೂ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ಬೀಳ್ಕೊಡುತ್ತಿರಲು ಇದನ್ನು ಎಲ್ಲ ಬ್ರಾಹ್ಮಣರು ಪ್ರತ್ಯಕ್ಷ ಕಂಡು ಮ್ಲಾನ ಮುಖರಾಗಿ ಏಕನಾಥ ಮಹಾರಾಜರ ಯೋಗ್ಯತೆ ಕಂಡು ಪಶ್ಚಾತ್ತಾಪಪಟ್ಟರು. ಸಹಸ್ರ ಬ್ರಾಹ್ಮಣರಿಗೆ ಸಿದ್ಧಮಾಡಿದ ಉಳಿದ ಭೋಜನವನ್ನು ಊರಿನವರಿಗೆ ಹಂಚಿ ಅಂದಿನ ಕಾರ್ಯಕ್ರಮ ಪೂರ್ಣಗೊಳಿಸಲಾಯಿತು.

ಮರುದಿನ ಬ್ರಾಹ್ಮಣರು ಸಭೆ ಸೇರಿಸಿದಾಗ ಕೆಲವರು ಏಕನಾಥ ಮಹಾರಾಜರ ಗುಣಗಾನ ಮಾಡಿದರೆ ಇನ್ನುಳಿದವರು ಕ್ರಿಯಾಕರ್ಮ ಭ್ರಷ್ಟನಿಗೆ ಪ್ರಾಯಶ್ಚಿತ್ತ ಮಾಡಿ ಶುದ್ಧೀಕರಿಸಬೇಕೆಂದರು. ಕೂಡಿದ ಸಭೆಗೆ ಏಕನಾಥರನ್ನು ಕರೆಯಿಸಿ ನೀನು ಮಾಡಿದ ತಪ್ಪಿಗೆ ಶಿಕ್ಷೆಯಾಗಲೇಬೇಕು. ನದಿಗೆ ನಡೆಯಿರಿ ನಾವು ನಿಮಗೆ ಶಾಸ್ತ್ರೋಕ್ತವಾಗಿ ಶುದ್ಧೀಕರಣ ಮಾಡುತ್ತೇವೆ ಎಂದು ಹೇಳಿದಾಗ ನಾಥರು ಅದಕ್ಕೆ ಒಪ್ಪಿಕೊಂಡರು. ಕೂಡಲೇ ಎಲ್ಲರೂ ಗೋದಾವರೀ ನದಿಗೆ ಬಂದು ನಾಥರಿಗೆ ಸ್ನಾನ ಮಾಡಿಸಿ, ಶರೀರಕ್ಕೆ ಗೋಮೂತ್ರ ಸಿಂಪಡಿಸಿ ಮಣ್ಣು ಹಚ್ಚಿ ಮಂತ್ರದೊಂದಿಗೆ ಸ್ನಾನ ಮಾಡಿಸುತ್ತಿರಲು ಅಲ್ಲಿ ದಿಢೀರನೇ ಒಬ್ಬ ಮಹಾಕುಷ್ಠರೋಗಿಯು ಏಕನಾಥ ಮಹಾರಾಜರು ಎಲ್ಲಿದ್ದಾರೆ? ಎಂದು ಪ್ರಶ್ನಿಸಿದನು. ಆಗ ಅಲ್ಲಿನ ಪ್ರಮುಖ ಬ್ರಾಹ್ಮಣರು ಕಾರಣ ಕೇಳಲು ಆತನು ಹೀಗೆಂದನು; ನಾನು ಮಹಾಕುಷ್ಠರೋಗಿಯು. ಈ ರೋಗ ಪರಿಹಾರಕ್ಕಾಗಿ ತ್ರ್ಯಂಬಕೇಶ್ವರದಲ್ಲಿ ಅನೇಕ ವರ್ಷಗಳಿಂದ ಅನುಷ್ಠಾನ ಮಾಡುತ್ತಿರಲು ನನಗೆ ಮಹಾದೇವರು ಸ್ವಪ್ನದಲ್ಲಿ ದರ್ಶನಕೊಟ್ಟು ಪೈಠಣದಲ್ಲಿ ಏಕನಾಥ ಎಂಬ ಮಹಾಭಗವದ್ಭಕ್ತ ಇರುವನು. ಆತನು ಮಾದಿಗರಿಗೆ ಭೋಜನ ಮಾಡಿಸಿರುವನು. ಅದರಲ್ಲಿನ ಒಬ್ಬ ಮಾದಿಗ ಭೋಜನದ ಪುಣ್ಯವನ್ನು ನಿನಗೆ ಧಾರೆ ಎರೆದರೆ ನಿನ್ನ ಕುಷ್ಠರೋಗವು ಪೂರ್ಣ ಗುಣವಾಗುವುದು ಎಂದು ತಿಳಿಸಿದ್ದಕ್ಕೆ ನಾನು ಇಲ್ಲಿಗೆ ಧಾವಿಸಿ ಬಂದಿರುವೆನು. ಅವರು ಎಲ್ಲಿದ್ದಾರೆ? ತೋರಿಸಿರಿ ಎಂದನು. ಅಲ್ಲಿದ್ದ ಎಲ್ಲ ಬ್ರಾಹ್ಮಣರಿಗೆ ಈ ವಚನಗಳನ್ನು ಕೇಳಿ ದಿಗ್ಭ್ರಮೆ ಉಂಟಾಯಿತು. ಅರೇ ನಾವು ಏಕನಾಥನಿಗೆ ಕರ್ಮಭ್ರಷ್ಟನೆಂದು ಪ್ರಾಯಶ್ಚಿತ್ತ ಕೊಟ್ಟು ಶುದ್ಧೀಕರಣ ಮಾಡುತ್ತಿದ್ದೇವೆ. ಮಾದಿಗರಿಗೆ ಭೋಜನ ಕೊಟ್ಟಿದ್ದು ಪುಣ್ಯವಾಗಲು ಸಾಧ್ಯವೇ ಇಲ್ಲ. ಇದೆಲ್ಲ ಸುಳ್ಳು ಸುಳ್ಳು ಎಂದರು. ಅವರಲ್ಲಿಯೇ ಕೆಲವರು ಏಕೆ ಹೀಗೆ ಹಂಬಲಿಸುವಿರಿ. ಪ್ರತ್ಯಕ್ಷವಾಗಿ ಕಂಡು ಪ್ರಮಾಣಿಸೋಣ ಎಂದು ಹೇಳುತ್ತ ಆತನಿಗೆ ಏಕನಾಥರನ್ನು ತೋರಿಸಿದರು. ಕೂಡಲೇ ಆತನು ಧಾವಿಸಿ ಬಂದು ನಾಥರ ಚರಣಗಳಿಗೆ ಬಿದ್ದು ಒಬ್ಬ ಮಾದಿಗನ ಭೋಜನದ ಪುಣ್ಯವನ್ನು ನನಗೆ ನೀಡಿರಿ ಎಂದು ಬಹಳ ಕನಿಕರದಿಂದ ಬೇಡಿಕೊಂಡನು. ಆಗ ಏಕನಾಥರು ತಡಮಾಡದೇ ಆಗಲಿ ಎಂದು ಒಪ್ಪಿಕೊಂಡು ಆತನು ಹೇಳಿದಂತೆ ಪುಣ್ಯವನ್ನು ಧಾರೆ ಎರೆದರು. ಏನಾಶ್ಚರ್ಯ! ತಕ್ಷಣವೇ ಸರ್ವರ ಸಮಕ್ಷಮದಲ್ಲಿಯೇ ಆ ಕುಷ್ಠರೋಗಿಯು ಸುಂದರ ದೇಹ ಕಾಂತಿಯುಳ್ಳವನಾದನು. ಇದನ್ನು ಕಣ್ಣಾರೆ ಕಂಡ ಸರ್ವ ಬ್ರಾಹ್ಮಣರು ಚಕಿತರಾದರು. ಏಕನಾಥರು ಸಾಮಾನ್ಯ ಮನುಷ್ಯರಲ್ಲ. ಜಗತ್ಕಲ್ಯಾಣಕ್ಕಾಗಿ ಬಂದ ದೇವರ ಅವತಾರಿಯಾಗಿದ್ದಾನೆ ಎಂದು ತಿಳಿದು ಮೌನವಾಗಿ ತಮ್ಮ ತಮ್ಮ ಮನೆಗಳಿಗೆ ನಡೆದರು.

ಒಂದು ದಿನ ಸಂತಶ್ರೇಷ್ಠ ಶ್ರೀಜ್ಞಾನೇಶ್ವರ ಮಹಾರಾಜರು ಏಕನಾಥರ ಸ್ವಪ್ನದಲ್ಲಿ ಆಗಮಿಸಿ ''ಅಜಾನವೃಕ್ಷದ ಬೇರುಗಳು ನನ್ನ ಕಂಠಕ್ಕೆ ಬಿಗಿದುಕೊಂಡಿವೆ, ಬೇಗನೇ ಆಳಂದಿಗೆ ಬಂದು ಆ ಬೇರುಗಳನ್ನು ತೆಗೆಯಬೇಕು'' ಎಂದು ಆಜ್ಞಾಪಿಸಿದರು. ಬೆಳಿಗ್ಗೆ ಆದ ಸ್ವಪ್ನದಿಂದ ಗಡಬಡಿಸಿ ಎದ್ದು ಕೆಲವು ಭಕ್ತರೊಂದಿಗೆ ಆಳಂದಿಗೆ ಪ್ರಯಾಣಿಸಿದರು. ದಾರಿ ಉದ್ದಕ್ಕೂ ಇವರ ಪ್ರತಿನಿತ್ಯದ ಭಜನೆ, ಪ್ರವಚನೆ, ಕೀರ್ತನೆ ನಡೆಯುತ್ತಲೇ ಇದ್ದವು. ಕೊನೆಗೆ ಆಳಂದಿಗೆ ಬಂದು ಸೇರಿದಾಗ ದುಷ್ಟರ ದಾಳಿಗೆ ತುತ್ತಾಗಿ ಆಗ ಆಳಂದಿ ಗ್ರಾಮವು ವಿಧ್ವಂಸಗೊಂಡಿತ್ತು. ಬಹು ಶ್ರಮಪಟ್ಟು ಶ್ರೀಜ್ಞಾನೇಶ್ವರರ ಸಮಾಧಿ ಶೋಧಿಸಿ ಒಳಪ್ರವೇಶಿಸಿ ಸಿದ್ಧಾಸನದಲ್ಲಿ ಕುಳಿತಿರುವ ದಿವ್ಯ ತೇಜಃಪುಂಜ ಶ್ರೀಜ್ಞಾನೇಶ್ವರ ಮಹಾರಾಜರನ್ನು ಪ್ರತ್ಯಕ್ಷ ದರ್ಶನ ಪಡೆದು ಅತ್ಯಂತ ಆನಂದ ಪುಳಕಿತರಾಗಿ ಗದ್ಗದಕಂಠದಿಂದ ಮಾಉಲಿಯವರ ಚರಣಗಳಿಗೆ ವಂದಿಸಿದರು. ಕಂಠಕ್ಕೆ ಬಿಗಿದುಕೊಂಡಿರುವ ಅಜಾನವೃಕ್ಷದ ಬೇರುಗಳನ್ನು ಕಿತ್ತೊಗೆದರು. ಆಗ ಶ್ರೀಜ್ಞಾನೇಶ್ವರ ಮಹಾರಾಜರು ಏಕನಾಥರಿಗೆ ''ನನ್ನ ಜ್ಞಾನೇಶ್ವರೀ ಗ್ರಂಥವು ಜನರ ದುರ್ಲಕ್ಷದಿಂದ ಬಹಳ ಪಾಠಭೇದವಾಗಿದೆ. ತಪ್ಪುಗಳನ್ನೆಲ್ಲ ಸರಿಪಡಿಸಿ ಶುದ್ಧ ಜ್ಞಾನೇಶ್ವರೀ ಪ್ರತಿ ಸಿದ್ಧಗೊಳಿಸಿರಿ'' ಎಂದು ಹೇಳುತ್ತಲೇ ನಾಥರು ನಿಮ್ಮ ಆಜ್ಞೆ ಅವಶ್ಯ ಪಾಲಿಸುವೆ ಎಂದು ಹೇಳುತ್ತ ಅವರ ದಿವ್ಯ ಆಶೀರ್ವಾದವನ್ನು ಪಡೆದರು. ಪೈಠಣಕ್ಕೆ ಬರುತ್ತಲೇ ನಾಲ್ಕೂ ಕಡೆಯಿಂದ ಜ್ಞಾನೇಶ್ವರೀ ಹಸ್ತಪ್ರತಿಗಳನ್ನು ತರಿಸಿಕೊಂಡು ಎಲ್ಲವನ್ನೂ ಶೋಧಿಸಿ ತಪ್ಪುಗಳನ್ನೆಲ್ಲವನ್ನೂ ಬಹುಶ್ರಮಪಟ್ಟು ಶುದ್ಧೀಕರಿಸಿದರು. ಭಕ್ತ ಸಮಾಜಕ್ಕೆ ಶುದ್ಧ ಪ್ರತಿಯಿಂದ ಬಹಳ ಸಂತೋಷವಾಗಿ ಬಹು ಉಪಯೋಗವಾಯಿತು.

ಶ್ರೀಸಂತ ಏಕನಾಥ ಮಹಾರಾಜರು ತಮ್ಮ ಜೀವಿತ ಸಮಯವನ್ನೆಲ್ಲ ಲೋಕ ಕಲ್ಯಾಣಕ್ಕಾಗಿಯೇ ವಿನಿಯೋಗಿಸಿ ಭಕ್ತಿ ಜ್ಞಾನ ವೈರಾಗ್ಯಗಳನ್ನು ತಮ್ಮ ಸದಾಚಾರ ವರ್ತನೆಯಿಂದ, ಕೀರ್ತನ ಪ್ರವಚನಗಳ ಮುಖಾಂತರ ತಮ್ಮ ರಸಾಳ ಮಂಜುಳ ವಾಣಿಯಿಂದ ನವರಸಭರಿತವಾಗಿ ಬೋಧಿಸಿ ಅನೇಕರಿಗೆ ಸನ್ಮಾರ್ಗಕ್ಕೆ ಹಚ್ಚಿದರು. ತಮ್ಮ ಬಂದ ಕಾರ್ಯ ತೃಪ್ತಿಕರವಾಗಿ ಪೂರ್ಣಗೊಂಡಿದ್ದಕ್ಕೆ ಒಂದು ದಿನ ತಮ್ಮ ದೇಹವನ್ನು ತ್ಯಜಿಸಿದರು. ಆಗ ಇವರ ಶವಸಂಸ್ಕಾರಕ್ಕಾಗಿ ಪೈಠಣದ ಸರ್ವ ಬ್ರಾಹ್ಮಣ ಮಂಡಳಿಯವರು ಕೂಡಿದರು. ನಾಥರ ಪಾರ್ಥೀವ ಶರೀರವನ್ನು ತಮ್ಮ ಹೆಗಲಿಗೆ ಎತ್ತುವ ಪ್ರಸಂಗದಲ್ಲಿ ಒಬ್ಬ ನಿಂದಕ ಬ್ರಾಹ್ಮಣನು ಏಕನಾಥರು ಎಷ್ಟೋ ಪ್ರವಚನೆ ಕೀರ್ತನೆಗಳಲ್ಲಿ ವೈಷ್ಣವರು ಕಾಲನನ್ನು ಜಯಿಸುವರು ಎಂದು ಹೇಳುತ್ತಿದ್ದರು. ಆದರೆ ಇಂದು ತಾವೇ ನಮ್ಮ ಹೆಗಲಿಗೆ ಸ್ಮಶಾನ ಯಾತ್ರೆಗೆ ಬಂದು ಬಿಟ್ಟರು ಎಂದು ಗೇಲಿ ಮಾಡುತ್ತಲೇ ಏಕನಾಥ ಮಹಾರಾಜರು ಕೂಡಲೇ ಎದ್ದು ಕುಳಿತರು. ಎಲ್ಲರೂ ಚಕಿತರಾಗಿ ಯಾವ ಉಪಾಯ ಕಾಣದೇ ತಮ್ಮ ತಮ್ಮ ಮನೆಗೆ ಮರಳಿದರು. ಪುನಃ ಏಕನಾಥ ಮಹಾರಾಜರು ಕೆಲವು ದಿನಗಳ ನಂತರ ತಮ್ಮ ದೇಹ ತ್ಯಜಿಸಿದರು. ಆಗ ಕೂಡಿದ ಎಲ್ಲ ಬ್ರಾಹ್ಮಣರು ಪರಸ್ಪರವಾಗಿ ಏನೂ ಮಾತನಾಡದಂತೆ ಪ್ರತಿಬಂಧಿಸಿದರು. ಸ್ಮಶಾನಯಾತ್ರೆ ಸುರಕ್ಷಿತವಾಗಿ ನಡೆಯಿತು. ದಾರಿಯಲ್ಲಿ ಮದುವೆಯಾದ ಒಬ್ಬ ಮದುಮಗಳು ತನ್ನ ಪತಿಗೃಹಕ್ಕೆ ಮನೆಯಿಂದ ಪಾದಾರ್ಪಣೆ ಮಾಡುವ ಸಮಯಕ್ಕೆ ಈ ಪ್ರೇತಯಾತ್ರೆಯು ಆ ಮನೆಯ ಸಮೀಪ ಬರುತ್ತಲೇ ಆಕೆಯ ಅಜ್ಜಿಯು ಅಪಶಕುನ ಆದದ್ದಕ್ಕೆ ಬಹಳ ಖೇದಪಟ್ಟು ''ಇಷ್ಟೆಲ್ಲ ಭಜನೆ ಕೀರ್ತನೆ ಮಾಡುವ ಏಕನಾಥರು ಕೊನೆಗೆ ಸತ್ತು ಬಿಟ್ಟರೇ, ಸತ್ತರೆ ಸಾಯಲಿ, ಇಂದೇ ಸತ್ತು ನಮ್ಮ ಶುಭ ಕಾರ್ಯಕ್ಕೆ ಅಡ್ಡಿಪಡಿಸಿದರಲ್ಲ? ಎಂದು ನೊಂದು ನುಡಿಯುತ್ತಲೇ ಏಕನಾಥ ಮಹಾರಾಜರು ಅವರ ಮನೆಯ ಮುಂದೆಯೇ ಎದ್ದು ಕುಳಿತು ''ಹೇ ಅಜ್ಜಿ, ನಾನು ಸತ್ತಿಲ್ಲ ಬದುಕಿರುವೆನು. ಅಪಶಕುನದ ಭಯಬಿಟ್ಟು ನಿನ್ನ ಮೊಮ್ಮಗಳಿಗೆ ಪತಿಗೃಹಕ್ಕೆ ಕಳಿಸು'' ಎಂದು ನುಡಿದರು. ಆಗ ಬ್ರಾಹ್ಮಣರೆಲ್ಲರೂ ಕೂಡಿ ಇದೇನು? ಈ ರೀತಿ ನಾಥರು ಮೇಲಿಂದ ಮೇಲೆ ಸತ್ತವರು ಬದುಕುತ್ತ ಬಂದರೆ ನಾವು ಎಷ್ಟು ಸಾರೆ ನಮ್ಮ ಮನೆ ಮಾರಿನ ಕಾರ್ಯ ಬಿಟ್ಟು ಈ ತೊಂದರೆ ಭೋಗಿಸಬೇಕೆಂದು ನುಡಿಯುತ್ತಿರಲು ಆಗ ನಾಥರು ''ನೀವೇನು ಚಿಂತೆ ಮಾಡಬೇಡಿರಿ ಮುಂದಿನ ಸಲ ನಾನೇ ನನ್ನ ವ್ಯವಸ್ಥೆ ಮಾಡಿಕೊಳ್ಳುವೆ ತಾವು ಬರುವ ಶ್ರಮ ಪಡೆಯಬೇಡಿರಿ'' ಎಂದು ಆಶ್ವಾಸನೆ ಕೊಟ್ಟರು. ಯಾರಿಗೂ ಏನೂ ತೋಚದೇ ಬಂದ ದಾರಿ ಹಿಡಿದು ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರು.

ಶಾಲಿವಾಹನಶಕೆ ೧೫೨೧ ನೇ ವಿಜಯನಾಮ ಸಂವತ್ಸರದ ಫಾಲ್ಗುಣ ವದ್ಯ ಷಷ್ಠಿ ರವಿವಾರದಂದು ಶ್ರೀಸಂತ ಏಕನಾಥ ಮಹಾರಾಜರು ಪ್ರಾತಃಕಾಲದಲ್ಲಿ ಎದ್ದು ತಮ್ಮ ದಿನನಿತ್ಯದಂತೆ ಪೂಜೆ ಪುನಸ್ಕಾರಗಳನ್ನು ಪೂರ್ಣಗೊಳಿಸಿ ತಮ್ಮ ಭಕ್ತ ಸಮೂಹ ಭಜನೆಯ ದಿಂಡಿಯೊಂದಿಗೆ ಗೋದಾವರಿ ನದಿ ತೀರಕ್ಕೆ ಆಗಮಿಸಿ ಎಲ್ಲರ ದೇಹಭಾವವು ಇಲ್ಲದಾಗುವಂತೆ ಭಜನೆರಂಗದಲ್ಲಿ ತನ್ಮಯರಾಗಿ ಮಧ್ಯಾಹ್ನ ಸರಿಯಾಗಿ ಹನ್ನೆರಡು ಗಂಟೆಗೆ ವೀಣಾ ಸಮೇತರಾಗಿ ತುಂಬಿದ ಗೋದಾವರಿ ನದಿಯಲ್ಲಿ ಇಳಿದು ಎಲ್ಲರನ್ನೂ ಪ್ರಾರ್ಥಿಸುತ್ತ ಸುಖವಾಗಿ ಜಲಸಮಾಧಿ ಸ್ವೀಕರಿಸಿದರು. ಜಲದಲ್ಲಿ ತಮ್ಮ ಶರೀರವನ್ನು ಜಲಸ್ವರೂಪವನ್ನಾಗಿ ಮಾಡಿ ಬಿಟ್ಟರು. ಇದನ್ನು ಪ್ರತ್ಯಕ್ಷ ಕಂಡ ಭಕ್ತ ಸಮೂಹದ ಎಲ್ಲರೂ ದೊಡ್ಡ ಧ್ವನಿಯಿಂದ ಜಯಜಯಕಾರ ಮಾಡಿ ಪುಷ್ಪವೃಷ್ಟಿ ಮಾಡಿದರು. ಕೆಲವು ಸಮಯದ ನಂತರ ಏಕನಾಥ ಮಹಾರಾಜರ ವೀಣೆಯು ತೇಲುತ್ತ ಬಂದು ಭಕ್ತರ ಕೈ ಸೇರಿತು. ಇದೇ ಅವರ ಪ್ರಸಾದವೆಂದು ತಿಳಿದು ಎಲ್ಲರೂ ತೃಪ್ತರಾದರು.

ಫಾಲ್ಗುಣ ಬಹುಳ ಷಷ್ಠಿಯ ದಿವಸವು ಮಹಾಪರ್ವಕಾಳವಾಗಿರುವುದು. ಕಾರಣ, ಇದೇ ಮುಹೂರ್ತಕ್ಕೆ ಅನೇಕ ಪರ್ವಕಾಳಗಳು ಕೂಡಿರುವುವು. ಅಂದು ಏಕನಾಥ ಮಹಾರಾಜರ ಸದ್ಗುರುಗಳಾದ ಶ್ರೀಜನಾರ್ದನಸ್ವಾಮಿಯವರ ಜನ್ಮ ದಿನ. ಇದೇ ಮುಹೂರ್ತದಲ್ಲಿ ಅವರಿಗೆ ಸದ್ಗುರುಗಳಾದ ಶ್ರೀದತ್ತಾತ್ರೇಯರ ಉಪದೇಶವಾಯಿತು. ಕೊನೆಗೆ ಇದೇ ಮುಹೂರ್ತದಲ್ಲಿ ಅವರು ತಮ್ಮ ಶರೀರವನ್ನು ತ್ಯಜಿಸಿದರು. ಇದೇ ಮುಹೂರ್ತಕ್ಕೆ ಸದ್ಗುರು ಜನಾರ್ದನಸ್ವಾಮಿಗಳವರು ಏಕನಾಥ ಮಹಾರಾಜರಿಗೆ ಉಪದೇಶ ನೀಡಿದರು. ಕೊನೆಗೆ ಶ್ರೀ ಸಂತ ಏಕನಾಥ ಮಹಾರಾಜರು ಇದೇ ಶುಭ ಮುಹೂರ್ತದಲ್ಲಿ ತಮ್ಮ ಶರೀರವನ್ನು ತ್ಯಜಿಸಿದರು. ಏಕನಾಥ ಷಷ್ಠಿಯ ಈ ಪ್ರಸಿದ್ಧ ಮುಹೂರ್ತ ಸಾಧಿಸಿ ಪೈಠಣ ಕ್ಷೇತ್ರದಲ್ಲಿ ದೊಡ್ಡ ಜಾತ್ರೆಯು ನೆರವೇರುವುದು. ಈಗಲೂ ಲಕ್ಷ ಗಟ್ಟಲೇ ಭಕ್ತ ಮಂಡಳಿಯವರು ಪೈಠಣ ಕ್ಷೇತ್ರಕ್ಕೆ ಆಗಮಿಸಿ ಅಖಂಡ ನಾಮದ ಉತ್ಸವ ನೆರವೇರಿಸಿ ಪುನೀತರಾಗುತ್ತಿರುವರು. ಪೈಠಣ ಕ್ಷೇತ್ರದ ಏಕನಾಥರ ವಾಡೆಯಲ್ಲಿ ಈಗಲೂ ಶ್ರೀಖಂಡ್ಯಾ ತುಂಬಿಸುತ್ತಿರುವ ನೀರಿನ ಹೌಜು, ತೇಯ್ದ ಗಂಧದ ಸಾಣೇಕಲ್ಲು, ಅವರು ಅದೃಶ್ಯರಾದ ಕಂಭ, ಪೂಜಿಸಿದ ಶ್ರೀಪಾಂಡುರಂಗ ಮೂರ್ತಿ ಹೀಗೆ ಅನೇಕ ಮಹತ್ವ ವಸ್ತುಗಳ ದರ್ಶನ ಪಡೆಯಬಹುದು. ಇಲ್ಲಿಯ ಪಾರಮಾರ್ಥಿಕ ಕಾರ್ಯಕ್ರಮಗಳನ್ನು ಅವರ ವಂಶಜರು ನಡೆಸುತ್ತ ಬಂದಿರುವರು. ಪಂಢರೀ ವಾರಕರೀಯವರು ಒಂದು ಸಲವಾದರೂ ಈ ಪೈಠಣ ಯಾತ್ರೆ ಮಾಡಬೇಕೆಂದು ಪ್ರತೀತಿ ಇದೆ.

ಶ್ರೀಸಂತ ಏಕನಾಥ ಮಹಾರಾಜರು ತಮ್ಮ ಜೀವಿತ ಕಾಲವನ್ನು ಜಗತ್ಕಲ್ಯಾಣಕ್ಕಾಗಿ ವಿನಿಯೋಗಿಸಿ ಕೊನೆಗೆ ಗ್ರಂಥಗಳ ರೂಪದಿಂದ ಪ್ರತ್ಯಕ್ಷವಾಗಿ ಉಳಿದುಕೊಂಡಿರುವರು. ಇವರು ತಮ್ಮ ಪ್ರಾಸಾದಿಕ ವಾಣಿಯಿಂದ ಅನೇಕ ಗ್ರಂಥಗಳನ್ನು ನಿರ್ಮಿಸಿದರು. ಚತುಃಶ್ಲೋಕಿ ಭಾಗವತ, ಹಸ್ತಾಮಲಕ, ಏಕಾದಶಸ್ಕಂಧ ಭಾಗವತ, ರುಕ್ಮಿಣಿ ಸ್ವಯಂವರ, ಚಿರಂಜೀವ ಪದ, ಆನಂದ ಲಹರೀ, ಸ್ವಾತ್ಮಸುಖ, ಶುಕಾಷ್ಟಕ, ಹರಿಪಾಠ ಅಲ್ಲದೇ ಅನೇಕ ರೂಪಕಗಳ ಸಾವಿರಾರು ಅಭಂಗಗಳನ್ನು ಬರೆದು ತಮ್ಮ ಆಯುಷ್ಯದ ಕೊನೆಯಲ್ಲಿ ಪ್ರಭು ಶ್ರೀರಾಮಚಂದ್ರನ ಆಜ್ಞೆಯಂತೆ ೪೦ ಸಾವಿರ ಓವೀಗಳುಳ್ಳ ಬೃಹತ್ ಪ್ರಮಾಣದ ರಾಮಾಯಣವನ್ನು ವಾಲ್ಮೀಕಿ ರಾಮಾಯಣದ ಆಧಾರದಿಂದ ಮರಾಠೀ ಪ್ರಾಕೃತ ಭಾಷೆಯಲ್ಲಿ ಬಲು ಸುಂದರವಾಗಿ ನಿರ್ಮಿಸಿದರು. ಆಯುಷ್ಯದ ಕೊನೆಯಲ್ಲಿ ಇನ್ನೂ ಉಳಿದ ಸ್ವಲ್ಪ ಭಾಗವನ್ನು ತಮ್ಮಲ್ಲಿರುವ 'ಗಾವಬಾ' ಶಿಷ್ಯನು ಇದನ್ನು ಪೂರ್ಣಗೊಳಿಸಿದನು.

ಈ ಎಲ್ಲ ಗ್ರಂಥಗಳಲ್ಲಿ ಅವರ ಏಕನಾಥೀ ಭಾಗವತ ಗ್ರಂಥವು ಅಗ್ರಸ್ಥಾನ ಪಡೆದಿರುವುದು. ಜಗದ್ಗುರು ಶ್ರೀ ಸಂತ ತುಕಾರಾಮ ಮಹಾರಾಜರು ಈ ಗ್ರಂಥವನ್ನು ಭಾಂಡಾರ ಪರ್ವತದಲ್ಲಿ ಒಂದು ಸಾವಿರ ಪಾರಾಯಣ ಮಾಡಬೇಕಾದರೆ ಈ ಭಾಗವತ ಗ್ರಂಥದ ಮಹಿಮೆ ಎಷ್ಟೆಂದು ವರ್ಣಿಸಬೇಕು? ''ತುಕಾಮ್ಹಣೇ ಭಾಗವತ। ಕೇಲೇ ಶೃತ ಸಕಳಾ'' ಎಂದು ಈ ಗ್ರಂಥವನ್ನು ಸ್ತುತಿಸಿರುವರು. ಪಾರಮಾರ್ಥಿಕ ಮಂದಿರಕ್ಕೆ ಈ ಭಾಗವತ ಗ್ರಂಥವು ಕಂಭದಂತೆ ಆಧಾರವಾಗಿದೆ ಎಂದು ಸಂತರು ಸ್ತುತಿಸಿರುವರು ''ಖಾಂಬ ದಿಲಾ ಭಾಗವತ'' ಎಂದು ಕೊಂಡಾಡಿರುವರು. ಈ ಗ್ರಂಥದ ಶ್ರೇಷ್ಠತೆಗೆ ಇನ್ನೊಂದು ಮಹತ್ವದ ಕಾರಣವಿದೆ. ಸರ್ವ ವೇದಗಳ ಮತಿತಾರ್ಥವು ಶ್ರೀಮದ್ ಭಗವದ್ಗೀತೆಯಾಗಿದೆ. ಭಗವದ್‌ಗೀತೆಯ ಮತಿತಾರ್ಥವು ಶ್ರೀಜ್ಞಾನೇಶ್ವರೀ ಗ್ರಂಥವಾಗಿದೆ. ಈ ಜ್ಞಾನೇಶ್ವರೀಯ ಮತಿತಾರ್ಥವು ಶ್ರೀಏಕನಾಥೀ ಭಾಗವತ ಗ್ರಂಥವಾಗಿದೆ. ಇಷ್ಟೊಂದು ಈ ಗ್ರಂಥದ ವೈಭವವಾಗಿದೆ.

ಇಂತಹ ಸರ್ವಶ್ರೇಷ್ಠವಾಗಿರುವ ಅದ್ಭುತ ಗ್ರಂಥವು ನಿರ್ಮಾಣಗೊಂಡು ಐದು ನೂರು ವರ್ಷಗಳಾಗುತ್ತಿದ್ದರೂ ಇದು ಕೇವಲ ಮರಾಠೀ ಭಾಷೆ ಬಲ್ಲವರಿಗೆ ಮಾತ್ರ ಉಪಯೋಗವಾಗಿರುವುದು. ಕರ್ನಾಟಕದ ಕನ್ನಡ ವಾರಕರೀ ಮಂಡಳಿಯವರಿಗೆ, ಸಾಧಕ ಭಕ್ತರಿಗೆ ಈ ಗ್ರಂಥದ ವಾಸನೆಯೂ ಕೂಡ ಬಡೆದಿರುವುದಿಲ್ಲ. ಭಾಷೆಯ ಇದೊಂದು ದೊಡ್ಡ ಕೊರತೆಯಾದ ಸ್ಥಿತಿಯನ್ನು ಶ್ರೀಸಂತ ಏಕನಾಥ ಮಹಾರಾಜರಿಗೆ ಮನದಟ್ಟಾಗಿ ಹೇಗಾದರೂ ಮಾಡಿ ಈ ಭಾವಿಕ ಕನ್ನಡಿಗರಿಗೆ ಈ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಮುದ್ರಿಸಿ ಮುಟ್ಟಿಸಬೇಕೆಂಬ ಸತ್ಯ ಸಂಕಲ್ಪ ಮಾಡಿ ಈ ಕಾರ್ಯ ಪೂರ್ಣಗೊಳ್ಳಲು ತಾವೇ ಮುಂದಾಗಿ ನನಗೆ ಕೇವಲ ನಿಮಿತ್ತ ಮಾಡಿ ಭಾಗವತ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಲು ಕಾರಣೀಭೂತರಾದರು.

ಈ ಮಹತ್ವಪೂರ್ಣ ಕಾರ್ಯ ಆರಂಭಿಸಲು ಆಪ್ತ ಸ್ನೇಹಿತರೊಂದಿಗೆ ೧೫ ಜನರು ಎರಡು ಕಾರುಗಳಲ್ಲಿ ಪ್ರಯಾಣಿಸಿ ಪೈಠಣ ಕ್ಷೇತ್ರಕ್ಕೆ ಹೊರಟೆವು. ದಾರಿಯಲ್ಲಿ ಪ್ರಥಮವಾಗಿ ಶ್ರೀಭಕ್ತ ಪುಂಡಲೀಕ, ಪರಬ್ರಹ್ಮ ಶ್ರೀಪಾಂಡುರಂಗ ಇವರ ದರ್ಶನ ಆಶೀರ್ವಾದ ಪಡೆದು ಅಲ್ಲಿಂದ ಸಾಸವಾಡ, ಆಳಂದಿ, ದೇಹೂ, ತ್ರ್ಯಂಬಕೇಶ್ವರ ಕ್ಷೇತ್ರಗಳಲ್ಲಿ ಪೂಜೆಗಳನ್ನು ಸಲ್ಲಿಸಿ ಆಶೀರ್ವಾದಗಳನ್ನು ಪಡೆಯಲಾಯಿತು. ಶ್ರೀಶಾಲಿವಾಹನಶಕೆ ೧೯೨೩ ನೇ ವೃಷನಾಮ ಸಂವತ್ಸರದ ಫಾಲ್ಗುಣ ನಾಮ ಸಂವತ್ಸರದ ಫಾಲ್ಗುಣ ಬಹುಳ ಪಂಚಮಿ ದಿನದಂದು ಪೈಠಣ ಕ್ಷೇತ್ರ ತಲುಪಿ ಅಲ್ಲಿನ ಏಕನಾಥ ಮಹಾರಾಜರ ಮುಖ್ಯ ವಂಶಜರಾದ ಶ್ರೀಗುರು ಹ.ಭ.ಪ. ರಾವಸಾಹೇಬ ಗೋಸಾವಿ ಇವರನ್ನು ಕಂಡು ನಾಳೆ ದಿನದ ಪರ್ವಕಾಲದಲ್ಲಿ ಏಕನಾಥ ಮಹಾರಾಜರ ದಿವ್ಯ ಸನ್ನಿಧಿಯಲ್ಲಿ ತಮ್ಮಿಂದ ಪೂಜೆ ಪಡೆದು ಕನ್ನಡ ಭಾಷೆಯಲ್ಲಿ ಸಾರ್ಥ ಶ್ರೀ ಏಕನಾಥೀ ಭಾಗವತ ಬರೆಯುವ ಕಾರ್ಯ ಆರಂಭಿಸುವ ನಮ್ಮ ಹೃದ್ಗತ ತಿಳಿಸಿದಾಗ ಅವರು ತುಂಬಾ ಸಂತೋಷಪಟ್ಟು ಬಹು ದಿನಗಳ ನಮ್ಮ ಇಚ್ಛೆ ಈಡೇರಿತು ಎಂದು ಉದ್ಗಾರ ತೆಗೆದರು. ಮರುದಿನ ಏಕನಾಥ

ಷಷ್ಠಿಯ ಶುಭಮುಹೂರ್ತದಲ್ಲಿ ಅಂದರೆ ಫಾಲ್ಗುಣ ಬ.೬ ಬುಧವಾರ ತಾ. ೩-೪-೨೦೦೨ ರಂದು ಅವರು ಸ್ವತಃ ನಮ್ಮನ್ನು ಕರೆದುಕೊಂಡು ಶ್ರೀಖಂಡ್ಯಾರೂಪದ ಶ್ರೀಪಾಂಡುರಂಗನು ಯಾವ ಕಂಭದಲ್ಲಿ ಅದೃಶ್ಯನಾಗಿದ್ದನೋ ಮತ್ತು ಯಾವ ಕಂಭದ ಆಶ್ರಯದಿಂದ ಶ್ರೀ ಸಂತ ಏಕನಾಥ ಮಹಾರಾಜರು ಏಕನಾಥೀ ಭಾಗವತ ಗ್ರಂಥವನ್ನು ಬರೆದರೋ ಆ ಪವಿತ್ರ ಸ್ಥಳದಲ್ಲಿ ನನಗೆ ಸ್ಥಾನವನ್ನು ಕೊಟ್ಟರು. ಆಗ ಅಲ್ಲಿ ಏಕನಾಥ ಷಷ್ಠಿಯ ಯಾತ್ರೆಗೆ ಆಗಮಿಸಿರುವ ನಮ್ಮ ಸದ್ಗುರುಗಳಾದ ಹ.ಭ.ಪ. ಗೋಪಾಲ ಮಹಾರಾಜ ವಾಸಕರ ಹಾಗೂ ಹ.ಭ.ಪ. ಶ್ರೀಗುರು ರಾವಸಾಹೇಬ ಗೋಸಾವಿ ಇವರ ಅಮೃತಹಸ್ತದಿಂದ ಗ್ರಂಥವನ್ನು ಪೂಜಿಸಿ ಅಲ್ಲಿಯೇ ಆರಂಭದ ೧೧ ಓವೀಗಳನ್ನು ಕನ್ನಡದಲ್ಲಿ ಬರೆಯಲಾಯಿತು. ಭಕ್ತರಿಗೆ ದರ್ಶನದ ತೊಂದರೆಯಾಗುತ್ತಿರಲು ಆಗ ಮಹಾರಾಜರು ನಮಗೆ ಅಲ್ಲಿನ ಮುಖ್ಯ ದೈವತ ಶ್ರೀಪಾಂಡುರಂಗನ ಗರ್ಭಗುಡಿಯಲ್ಲಿ ಬರೆಯಲು ಸ್ಥಾನವನ್ನು ದಯಪಾಲಿಸಿದರು. ಇದರಿಂದ ಅತಿಯಾದ ಸಂತೋಷದಿಂದ ಅಲ್ಲಿಯೇ ೧೧ ಓವೀಗಳ ಅರ್ಥ ಕನ್ನಡ ಭಾಷೆಯಲ್ಲಿ ಬರೆದು ಬಂದ ಕಾರ್ಯ ಪೂರ್ಣ ಯಶ ಪಡೆದ ಕಾರಣ ಸರ್ವರಿಗೂ ಬಹು ಸಂತೋಷವಾಯಿತು. ಕೊನೆಯಲ್ಲಿ ಈ ಕಾರ್ಯದಿಂದ ಆನಂದ ಪುಳಕಿತರಾದ ಶ್ರೀಗುರು ಹ.ಭ.ಪ. ರಾವಸಾಹೇಬ ಇವರು ನನಗೆ ಜಗಿದಪ್ಪಿಕೊಂಡು ಆಲಿಂಗನ ಸುಖಕೊಟ್ಟು ಮನಃಪೂರ್ವಕವಾಗಿ ಹಿಡಿದ ಕಾರ್ಯ ಪೂರ್ಣಗೊಳಿಸಲು ಆಶೀರ್ವಾದ ನೀಡಿದರು. ಇದರಿಂದ ನಾವೆಲ್ಲರೂ ಪರಿಪೂರ್ಣ ತೃಪ್ತರಾಗಿ ಮರಳಿ ಕೊಪ್ಪಳಕ್ಕೆ ಬರುವ ದಾರಿಯಲ್ಲಿ ಪುಣ್ಯ ಕ್ಷೇತ್ರಗಳ ದರ್ಶನ ಆಶೀರ್ವಾದ ಪಡೆದುಕೊಂಡೆವು. ಶ್ರೀ ಸಂತ ಏಕನಾಥ ಮಹಾರಾಜರಿಗೆ ಸಾಕ್ಷಾತ್ಕಾರವಾದ ಮಹಾಪವಿತ್ರ ಸ್ಥಳ ''ಶೂಲಭಂಜನ'' ಪರ್ವತ,ಸಂತಶ್ರೇಷ್ಠ ಜ್ಞಾನೇಶ್ವರ ಮಹಾರಾಜರು ಶ್ರೀಜ್ಞಾನೇಶ್ವರೀ ಗ್ರಂಥ ಬರೆದ ಪುಣ್ಯ ಸ್ಥಳ ನೇವಾಸೀ, ಸಂತ ನಿಳೋಬರಾಯರ ಸ್ಥಾನ ಪಿಂಪಳನೇರ, ಶಿವೂರ, ವಾಸೀ ಕ್ಷೇತ್ರಗಳಿಗೆ ಹೋಗಿ ಅಲ್ಲಿ ಪೂಜೆಯೊಂದಿಗೆ ದರ್ಶನ ಆಶೀರ್ವಾದ ಪಡೆಯಲಾಯಿತು. ಕೊಪ್ಪಳಕ್ಕೆ ಬಂದು ಅಲ್ಲಿ ಯಾತ್ರೆಯ ಸಂತರ್ಪಣೆ ಮಾಡಿ ಮರುದಿನದಿಂದಲೇ ಹಗಲು ರಾತ್ರಿಯನ್ನದೇ ಏಕಾಗ್ರಚಿತ್ತದಿಂದ ಭಾಗವತ ಬರೆಯುವ ಸೇವೆ ಆರಂಭಗೊಂಡಿತು. ಸರ್ವರ ಆಶೀರ್ವಾದದ ಫಲವಾಗಿ ೧೫೦೦ ಶ್ಲೋಕಗಳುಳ್ಳ ೧೮೦೦೦ ಓವೀಗಳ ಬೃಹತ್ ಗ್ರಂಥವು ೩-೪ ವರ್ಷಗಳಲ್ಲಿ ಪೂರ್ಣಗೊಂಡಿತು. ಶ್ರೀ ಸಂತ ಏಕನಾಥ ಮಹಾರಾಜರು ಕಾರ್ತಿಕ ಮಾಸದ ಪೌರ್ಣಿಮೆಯ ದಿನದಂದು ಕಾಶೀ ಕ್ಷೇತ್ರದಲ್ಲಿ ಈ ಗ್ರಂಥವನ್ನು ಪೂರ್ಣಗೊಳಿಸಿರುವ ಆದರ್ಶ ಇಟ್ಟುಕೊಂಡು ಶಾಲಿವಾಹನಶಕೆ ೧೯೨೭ ನೇ ಪಾರ್ಥಿವನಾಮ ಸಂವತ್ಸರದ ಕಾರ್ತಿಕ ಶುದ್ಧ ಪೌರ್ಣಿಮೆಯ ದಿನದಂದು (ತಾ. ೧೬-೧೧-೨೦೦೫) ಶ್ರೀ ಕ್ಷೇತ್ರ ಪಂಢರಪೂರದ ಶ್ರೀ ಮಾಉಲೀ ಮಂಟಪದಲ್ಲಿ ಚೈತನ್ಯ ಶ್ರೀಸದ್ಗುರು ಹ.ಭ.ಪ. ಗೋಪಾಲ ಮಹಾರಾಜ ವಾಸಕರ ಇವರ ಅಮೃತ ಹಸ್ತದಿಂದ ಗ್ರಂಥವನ್ನು ಪೂಜಿಸಿ ಕೊನೆಯ ಹನ್ನೊಂದು ಓವೀಗಳನ್ನು ಅವರ ದಿವ್ಯ ಸನ್ನಿಧಿಯಲ್ಲಿ ಬರೆದು ಈ ಪವಿತ್ರ ಗ್ರಂಥವನ್ನು ಪೂರ್ಣಗೊಳಿಸಲಾಯಿತು.

ಏಕನಾಥೀ ಭಾಗವತದ ಎಲ್ಲ ಅಧ್ಯಾಯಗಳ ಶ್ಲೋಕ, ಓವೀ, ಅರ್ಥ ಬರೆದಿದ್ದನ್ನು ಮೂಲ ಗ್ರಂಥ ಆಧಾರದಿಂದ ತಪ್ಪು ತಡಿಗಳನ್ನು ಹ.ಭ.ಪ.ಪಾಂಡುರಂಗರಾವ ದತ್ತೋಬರಾವ ಮಹೇಂದ್ರಕರ, ನಿವೃತ್ತ ಶಿಕ್ಷಕರು, ಗದಗ ಇವರು ಸರಿಪಡಿಸಿ ಡಿ.ಟಿ.ಪಿ.ಯಲ್ಲಿ ಆಗಿರುವ ಎಲ್ಲ ಅಧ್ಯಾಯಗಳ ಅಕ್ಷರ ದೋಷಗಳನ್ನು ಹಗಲು ರಾತ್ರಿಯನ್ನದೇ ಅತ್ಯಂತ ಏಕಾಗ್ರತೆಯಿಂದ ಶ್ರಮವಹಿಸಿ ತಿದ್ದಿ ಶುದ್ಧಗೊಳಿಸಿದರು. ಈ ಕಾರ್ಯವನ್ನು ಪೂರ್ಣಗೊಳಿಸಲು ೩-೪ ವರ್ಷಗಳೇ ಬೇಕಾದವು. ಈ ಪವಿತ್ರ ಸೇವೆಗಾಗಿ ಅವರು ಮನೆಮಾರಿನ ಚಿಂತೆ ಮಾಡದೇ ಪ್ರಕೃತಿಯತ್ತ ಲಕ್ಷ ಕೊಡದೇ ಏಕನಿಷ್ಠೆಯಿಂದ ನನ್ನ ಬಲಗೈಯಾಗಿ ಸೇವೆ ಸಲ್ಲಿಸಿ ನನಗೆ ಬಹಳ ಸಂತೋಷ ಪಡಿಸಿರುವರು. ಇವರ ಈ ಕಾರ್ಯಕ್ಕೆ ಹ.ಭ.ಪ.ಗೋಪಾಲಕೃಷ್ಣರಾವ ಶಂಕ್ರಪ್ಪ ಘಟಕೆ, ಕೊಪ್ಪಳ ಇವರೂ ಸಹ ಅಕ್ಷರದೋಷ ಸರಿಪಡಿಸಲು ಪೂರ್ಣವಾಗಿ ಸಹಕರಿಸಿದರು. ಆಗಾಗ ವೇಳೆ ಸಿಕ್ಕಾಗ ಹ.ಭ.ಪ.ನರಸಪ್ಪ ಯಮನಪ್ಪ ಹಡಪದ, ಕೊಪ್ಪಳ, ಹ.ಭ.ಪ. ತುಕಾರಾಮ ಡೋಂಗರಿಬಾ ಜ್ಞಾನಮೋತೆ, ಕೊಪ್ಪಳ, ಶ್ರೀಯುತ ರಾಮಚಂದ್ರ ತುಳಜಾರಾಮ ಬೋಂದಾಡೆ, ಕೊಪ್ಪಳ ಹಾಗೂ ಕುಮಾರೀ ದ್ರೌಪತಿ ಡೋಂಗರಿಬಾ ಜ್ಞಾನಮೋತೆ, ಕೊಪ್ಪಳ ಇವರೂ ಕೂಡ ಅಲ್ಪ ಸ್ವಲ್ಪ ಮಟ್ಟಿಗೆ ಸಹಕಾರ ನೀಡಿರುವರು. ಡಿ.ಟಿ.ಪಿ.ಯ ಈ ಕಾರ್ಯವನ್ನು ಕಂಪ್ಯೂಟೆಕ್ ಡಾಟಾ ಪೋರ್ಸ್, ಕೊಪ್ಪಳ ಇದರ ಮಾಲೀಕರಾದ ಶ್ರೀಯುತ ಮಲ್ಲಿಕಾರ್ಜುನ ಮುದಿಯಪ್ಪ ಕೊತಬಾಳ (ಡಿ.ಸಿ. ಎಸ್.) ಇವರು ಯೋಗ್ಯದರದಲ್ಲಿ ಅತ್ಯಂತ ಶ್ರದ್ಧೆಯಿಂದ ನೆರವೇರಿಸಿಕೊಟ್ಟರು. ಇವರ ಮಾರ್ಗದರ್ಶನದಲ್ಲಿ ಶ್ರೀಯುತ ರಮೇಶ ಮಲ್ಲಪ್ಪ ತುಪ್ಪದ, ಕೊಪ್ಪಳ ಇವರು ಅಚ್ಚುಕಟ್ಟಾಗಿ ಸುಂದರವಾಗಿ ಭಾಗವತದ ಎಲ್ಲ ಅಧ್ಯಾಯಗಳ ಅಕ್ಷರಜೋಡಣೆ ಯೋಗ್ಯದರದಲ್ಲಿ ನಡೆಸಿಕೊಟ್ಟರು. ಈ ಭಾಗವತ ಗ್ರಂಥವು ಸುಂದರವಾಗಿ ಹೊರಬರಲಿಕ್ಕೆ ಇವರೀರ್ವರೂ ಸಹ ಕಾರಣರಾದರು. ನಿಕಿತಾ ಪ್ರಿಂಟರ್ಸ್ ಮಾಲೀಕರಾದ ಶ್ರೀಯುತ ಬಿ.ಎಸ್.ನಾರಾಯಣರಾವ್ ಅಪ್ಪಕರ್ ಮತ್ತು ಮಕ್ಕಳು (ಬುಕ್ಕಾಪಟ್ಟಣ) ಇವರು ಈ ಗ್ರಂಥಗಳನ್ನು ವಿಶೇಷ ಸುಂದರವಾಗಿ, ಸುಭದ್ರವಾಗಿ ಯಾವ ಲಾಭವನ್ನೂ ಸ್ವೀಕರಿಸದೆ ಸರ್ವದೃಷ್ಟಿಯಿಂದ ಮುದ್ರಿಸಿ ಸಿದ್ಧಗೊಳಿಸಿಕೊಟ್ಟು ಮಹದುಪಕಾರವನ್ನು ಮಾಡಿರುವರು. ಈ ಗ್ರಂಥಗಳಿಗಾಗಿ ಇವರು ಪರಿಶ್ರಮದೊಂದಿಗೆ ನಿಷ್ಕಾಮ ಸೇವೆ ಸಲ್ಲಿಸುವುದಲ್ಲದೇ ತಮ್ಮ ಉದಾರ ಅಂತಃಕರಣದಿಂದ ಇಪ್ಪತ್ತು ಸಾವಿರ ರೂಪಾಯಿಗಳನ್ನು ದಾನವಾಗಿ ಸಮರ್ಪಿಸಿರುವರು. ಇವರೆಲ್ಲರಿಗೂ ಹೃತ್ಪೂರ್ವಕವಾಗಿ ಧನ್ಯವಾದಗಳೊಂದಿಗೆ ಕೃತಜ್ಞತೆಯನ್ನು ಸಲ್ಲಿಸುವೆನು.

ಈ ಏಕನಾಥೀ ಭಾಗವತವು ಬೃಹತ್ ಪ್ರಮಾಣದ ಗ್ರಂಥವಾಗಿದ್ದು ಇದರ ಬೆಲೆ ಅಂದಾಜು ರೂ. ೪೫೦-೦೦ ಆಗುತ್ತಲಿದ್ದು, ಸಾಮಾನ್ಯರಿಗೆ ಈ ಗ್ರಂಥದ ಪರಿಚಯವಿಲ್ಲದ ಒಂದನೇ ಕಾರಣವಾದರೆ, ದುಬಾರಿಯಾದ ಎರಡನೇ ಕಾರಣವಾಯಿತು. ಹೀಗಾಗಿ ಸರ್ವಸಾಮಾನ್ಯರಿಗೂ ಈ ಗ್ರಂಥ ದೊರಕಬೇಕೆಂಬ ಸದುದ್ದೇಶದಿಂದ ಗ್ರಂಥದ ಬೆಲೆಯನ್ನು ತುಂಬಾ ಕಡಿಮೆ ಮಾಡಿ ಎರಡೂ ಖಂಡಗಳ ಗ್ರಂಥದ ಬೆಲೆ ಕೇವಲ ರೂ.೧೫೦-೦೦ ಇಟ್ಟು ಕೊರತೆ ಬೀಳುವ ಪ್ರತಿ ಗ್ರಂಥಗಳಿಗೆ ರೂ. ೩೦೦-೦೦ನ್ನು ದಾನಿಗಳ ಸಹಕಾರದಿಂದ ತುಂಬಿಕೊಳ್ಳಲಾಯಿತು. ಈ ಕಾರ್ಯಕ್ಕಾಗಿ ಕರ್ನಾಟಕದ ಎಲ್ಲ ಪ್ರಮುಖ ಭಾಗಗಳಿಗೆ ಹೋಗಬೇಕಾದ ಪ್ರಸಂಗದಲ್ಲಿ ಬೆಂಗಳೂರಿನ ಸನ್ಮಾನ್ಯ ಶ್ರೀ ರಾಮಚಂದ್ರಸಾ ಲಕ್ಷ್ಮಣಸಾ ಖೋಡೆ ಇವರು ೨-೩ ತಿಂಗಳವರೆಗೆ ಉಚಿತವಾಗಿ ಒಂದು ಉತ್ತಮ ಕಾರನ್ನು ಚಾಲಕನ ಸಮೇತವಾಗಿ ಕೊಟ್ಟು ಸಹಕರಿಸಿದರು. ಮೊದಲೇ ಹಣ ತುಂಬಿ ಗ್ರಂಥಗಳನ್ನು ಸಿದ್ಧಗೊಳಿಸಲು ನಮ್ಮಲ್ಲಿ ಹಣದ ಅನುಕೂಲತೆ ಇಲ್ಲದ್ದಕ್ಕೆ ಕರ್ನಾಟಕದ ಪ್ರತಿಯೊಂದು ಭಾಗದ ಪ್ರಮುಖರಿಗೆ ರಶೀದಿ ಬುಕ್‌ಗಳನ್ನು ಕೊಟ್ಟು ದೇಣಿಗೆ ಸಮೇತವಾಗಿ ಬೇಕಾದ ಗ್ರಂಥಗಳಿಗೆ ಹಣ ಸಂಗ್ರಹಿಸಲು ತಿಳಿಸಲಾಯಿತು. ಎಲ್ಲರೂ ತಮ್ಮ ತಮ್ಮ ಭಾಗಗಳಲ್ಲಿ ಸಂಚರಿಸಿ ಹಣ ಸಂಗ್ರಹಿಸಿ ನಮಗೆ ಮುಟ್ಟಿಸಲು ೪-೬ ತಿಂಗಳುಗಳು ಗತಿಸಿದವು. ತದನಂತರ ನಮಗೆ ಮುದ್ರಣಾಲಯಕ್ಕೆ ಹೋಗಲು ಅನುಕೂಲವಾಯಿತು.

ಅನೇಕರು ಏಕನಾಥೀ ಭಾಗವತದ ಗ್ರಂಥಕ್ಕೆ ಕೊರತೆ ಬೀಳುವ ಹಣವನ್ನು ಯಥಾಶಕ್ತಿ ದಾನವಾಗಿ ಸಂಗ್ರಹಿಸಿ ಕಳಿಸಿದರು. ಈ ಸತ್ಪಾತ್ರ ದಾನ ವಿಷಯಕ್ಕೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದ ಭಾವಸಾರ ಕ್ಷತ್ರಿಯ ಸಮಾಜದ ಕಾರ್ಯಕರ್ತರು ಅತ್ಯಂತ ಶ್ರದ್ಧೆಯಿಂದ, ಸ್ಫೂರ್ತಿಯಿಂದ ಈ ಸುಸಂಧಿಯನ್ನು ಸಾಧಿಸಿ ಶ್ರೀಮಂತ ದಾನಿಯವರಿಂದ ಎರಡು ಲಕ್ಷಕ್ಕೂ ಮೀರಿ ಹಣ ಸಂಗ್ರಹಿಸಿ ಕರ್ನಾಟಕದಲ್ಲಿಯೇ ಈ ನಮ್ಮ ಕಾರ್ಯದಲ್ಲಿ ಪ್ರಥಮ ಸ್ಥಾನಕ್ಕೆ ಏರಿ ದಾಖಲೆ ನಿರ್ಮಿಸಿದರು. ಹ.ಭ.ಪ. ನಾಗೇಂದ್ರ ರಾವ ನರಸಿಂಗರಾವ ಲೋಖಂಡೆ, ಬೆಂಗಳೂರು ಇವರು ಬಹು ಪರಿಶ್ರಮದ ಕಾರ್ಯವಾದ ಈ ಬೃಹತ್ ಗ್ರಂಥದ ವರ್ಣಾನು ಕ್ರಮಣಿಕೆಯನ್ನು ಅದರ ಸಂಪೂರ್ಣ ಭಾರ ಹೊತ್ತು ಸುಂದರವಾಗಿ ಸಿದ್ಧಗೊಳಿಸಿ ಕೊಟ್ಟಿರುವರು. ಇವರಿಗೆ ಶ್ರೀಯುತ ಹರೀಶ್ ರಾಮಕೃಷ್ಣ ಚಂದಾವರ, ಬೆಂಗಳೂರು, ಹ.ಭ.ಪ. ಭಾಸ್ಕರ ಕೃಷ್ಣಮೂರ್ತಿ ಢಗೆ, ಬೆಂಗಳೂರು ಹಾಗೂ ಚಂದಾವರ ಪ್ರಿಂಟರ್ಸ್ ಪ್ರಮುಖರು, ಬೆಂಗಳೂರು ಇವರು ಡಿ.ಟಿ.ಪಿ.ಸೇವೆಯನ್ನು ಶ್ರದ್ಧಾಪೂರ್ವಕವಾಗಿ ಶ್ರಮವಹಿಸಿ ಸಹಕಾರ ನೀಡಿರುವರು. ಗ್ರಂಥಗಳ ಪ್ರಚಾರಾರ್ಥವಾಗಿ ಶ್ರೀಯುತ ತಾರಾನಾಥ ತಿಪ್ಪಣ್ಣಾ ಜಾಧವ, ಬೆಂಗಳೂರು ಇವರು ೨೦,೦೦೦ ಪ್ರಚಾರ ಪತ್ರಿಕೆಗಳನ್ನು ಉಚಿತವಾಗಿ ತಯಾರಿಸಿ ಕೊಟ್ಟಿರುವರು. ಶ್ರೀಯುತ ವೆಂಕಟೇಶ್ವರರಾವ ಮಾತಾಡೆ, ರೇಣುಕಾ ಪಬ್ಲಿಸಿಟಿ, ಲಕ್ಷ್ಮೇಶ್ವರ ಇವರು ಈ ಕಾರ್ಯಕ್ಕಾಗಿ ೨೫೦ ರಶೀದಿ ಬುಕ್‌ಗಳನ್ನು ಉಚಿತವಾಗಿ ಮಾಡಿಸಿಕೊಟ್ಟರಲ್ಲದೇ, ಕೆಲವು ಭಾಗಗಳಲ್ಲಿ ನಮ್ಮ ಜೊತೆಗೆ ಇದ್ದು ಅನೇಕ ಕಡೆಗಳಿಂದ ವಸೂಲಿ ಕಾರ್ಯವನ್ನೂ ಸಹ ತಮ್ಮ ಸಂಗಡಿಗರ ಸಹಕಾರದಿಂದ ನೆರವೇರಿಸಿ ಸಹಕರಿಸಿರುವರು. ಶ್ರೀಯುತ ಮಾರ್ಕಂಡೇಶ್ವರರಾವ ಡೋಂಗ್ರಪ್ಪ ಜ್ಞಾನಮೋತೆ, (ಎಂ.ಕಾಂ.) ಬೆಂಗಳೂರು ಇವರು ಕರ್ನಾಟಕ ದಾದ್ಯಂತ ಮುಖ್ಯ ಮುಖ್ಯ ಭಾಗಗಳಲ್ಲಿ ಪತ್ರಿಕೆಗಳೊಂದಿಗೆ ರಶೀದಿ ಬುಕ್‌ಗಳನ್ನು ಹಂಚಲು ನಮ್ಮ ಜೊತೆಯಲ್ಲಿ ಸಹಕರಿಸಿ ಲೆಕ್ಕ ಪತ್ರ ಶೋಧಿಸಿ ಸರಿಪಡಿಸುವ ಮಹತ್ವದ ಸೇವೆ ಸಲ್ಲಿಸಿರುವರು. ಒಟ್ಟಿನಲ್ಲಿ ಈ ಗ್ರಂಥ ಸಿದ್ಧಗೊಂಡು ಯಶ ಸಂಪಾದಿಸಲು ಅನೇಕರು ತಮ್ಮ ತಮ್ಮ ಶಕ್ತಿ ಮೀರಿ ಸೇವೆ ಸಲ್ಲಿಸಿರುವರು. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಯಾವುದೇ ರೀತಿಯಲ್ಲಿ ಈ ಏಕನಾಥೀ ಭಾಗವತ ಗ್ರಂಥಕ್ಕೆ ಸಹಾಯ ಸಹಕಾರ ನೀಡಿರುವ ಸರ್ವರಿಗೂ ಭಕ್ತಕಾಮ ಕಲ್ಪದ್ರುಮ ಶ್ರೀಪಾಂಡುರಂಗನು ಆಯುರಾರೋಗ್ಯ ಕೊಟ್ಟು ಸಕಲ ಸನ್ಮಂಗಲಗಳನ್ನು ನೀಡಲೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಪ್ರಕೃತಿಯ ಪ್ರತಿಕೂಲತೆಯ ನನ್ನ ಈ ಎಪ್ಪತ್ತರ ಮುಪ್ಪಾವಸ್ಥೆಯಲ್ಲಿ ಸಾಹಿತ್ಯದ ಸಾರ ಅರಿಯದ, ಮಂದಮತಿಯಾದ ನನ್ನಿಂದ ಯಾವ ಜನ್ಮದ ಪುಣ್ಯದ ಫಲವೋ ಏನೋ, ಶ್ರೀ ಸಂತ ಏಕನಾಥ ಮಹಾರಾಜರು ನನ್ನಿಂದ ಇಂತಹ ಅದ್ಭುತ ಸೇವೆಯನ್ನು ತಮ್ಮ ಶಕ್ತಿಯಿಂದಲೇ ಸ್ವೀಕರಿಸಿರುವರು. ಅವರ ಕೃಪೆಯ ನೆರಳಿನಲ್ಲಿಯೇ ಈ ಗ್ರಂಥವು ಸಿದ್ಧಗೊಂಡಿರುವುದು. ತಮಗೆ ತಿಳಿಯುವಂತೆ, ಸಂತೋಷವಾಗುವಂತೆ ವಾಕ್ಯರಚನೆಗಳಿದ್ದರೆ ಅವು ಎಲ್ಲವೂ ನಾಥರ ಕೃಪೆಯೇ ಹೊರತು ನನ್ನದೇನೂ ಅದರಲ್ಲಿರುವುದಿಲ್ಲ. ಅಕಸ್ಮಾತ್ತಾಗಿ ಎಲ್ಲಿಯಾದರೂ ತಪ್ಪಾಗಿದ್ದರೆ ಅದು ಪೂರ್ಣ ನನ್ನ ಅಜ್ಞಾನದ ಹೊಣೆಯಾಗಿರುವುದು. ಶ್ರೋತೃಗಳು ಇದನ್ನು ಸಹಿಸಿಕೊಳ್ಳಬೇಕಾಗಿ ನಮ್ರವಾಗಿ ವಿನಂತಿಸುತ್ತೇನೆ. ಒಟ್ಟಿನಲ್ಲಿ ಈ ಗ್ರಂಥದಲ್ಲಿ ಏನಾದರೂ ಹೆಚ್ಚಾಗಿದ್ದರೆ ಅದನ್ನು ತೆಗೆದು ಬಿಡಿರಿ, ಕಡಿಮೆ ಕಂಡರೆ ಪೂರ್ಣಗೊಳಿಸಿರಿ ಎಂದು ನನ್ನ ವಿಶೇಷ ವಿನಂತಿಯಾಗಿರುವುದು.

ತರೀ ನ್ಯೂನ ತೇ ಪುರತೇ । ಅಧಿಕ ತೇ ಸರತೇ ।
ಕರೂನಿ ಘೇಯಾವೇ ಹೇ ತುಮತೇ । ವಿನವಿತು ಅಸೇ ॥

ಸಾರ್ಥ ಶ್ರೀಏಕನಾಥೀ ಭಾಗವತ ಗ್ರಂಥವನ್ನು ಪ್ರಾಪ್ತಮಾಡಿಕೊಂಡವರು ಅದನ್ನು ಮೂಲೆಗುಂಪು ಮಾಡದೇ ಪವಿತ್ರ ಸ್ಥಾನದಲ್ಲಿ ಸ್ಥಾಪಿಸಿ ಪೂಜೆಯೊಂದಿಗೆ ಪ್ರತಿನಿತ್ಯವೂ ಯಥಾಶಕ್ತಿ ಯಥಾವಕಾಶ ಶ್ಲೋಕ, ಓವೀ, ಅರ್ಥಸಮೇತವಾಗಿ ಪಾರಾಯಣ

ಮಾಡಬೇಕು. ಈ ಗ್ರಂಥ ಪೂರ್ಣವಾಗಿ ಅವಲೋಕನೆ ಮಾಡಿದಾಗ ಮಾತ್ರ ತಮ್ಮ ಜೀವನಕ್ಕೆ ಬೇಕಾಗಿರುವ ಸಾಧನೆಗಳು ಅವಶ್ಯಕವಾಗಿ ತೋರುವುವು. ಸಿಕ್ಕ ಸಿಕ್ಕ ಕಡೆ ಅಲ್ಪಸ್ವಲ್ಪ ನೋಡುತ್ತ, ಓದುತ್ತ ಹೋದರೆ ಯಾವುದೂ ಏನೂ ತಿಳಿಯದಂತಾಗಿ ಗ್ರಂಥಕ್ಕಾಗಿ ಉದಾಸೀನತೆ ಉಂಟಾಗುವುದು. ಹೀಗೆ ಮಾಡದೇ ಈ ಗ್ರಂಥದಿಂದ ನನ್ನ ಉದ್ಧಾರವು ನಿಶ್ಚಿತವೆಂಬ ಪೂಜ್ಯ ಭಾವದಿಂದ ದೃಢವಾದ ಶ್ರದ್ಧೆಯಿಂದ ನಿತ್ಯವೂ ತಪ್ಪದೇ ಪಾರಾಯಣ ಮಾಡುತ್ತಿರಲು ಶ್ರೀಪಾಂಡುರಂಗನ ಆಣೆಯಿಟ್ಟು ಹೇಳುವೆ, ಅವರ ಉದ್ಧಾರವು ತಪ್ಪದೇ ಆಗುವುದು. ಇದು ಶ್ರೀಸಂತ ಏಕನಾಥ ಮಹಾರಾಜರ ಆಶೀರ್ವಾದವಾಗಿರುವುದು. ಇವರ ಪೂರ್ಣ ಕೃಪೆಯಿಂದಲೇ ನಮ್ಮ ಭಾಗ್ಯದ ಕಾರಣವಾಗಿ ದೊರೆತ ಈ ಗ್ರಂಥದ ಸದುಪಯೋಗ ಮಾಡಿಕೊಂಡರೆ ಮಾತ್ರ ಈ ಸಾರ್ಥ ಏಕನಾಥೀ ಭಾಗವತ ಗ್ರಂಥದ ನಿರ್ಮಾಣವು ಸಾರ್ಥಕತೆಯಾಗುವುದು. ಇಂತಹ ಸದ್ಬುದ್ಧಿಯು ಗ್ರಂಥ ಪ್ರಾಪ್ತ ಮಾಡಿಕೊಂಡ ಸಾಧಕರಿಗೆ ಉಂಟಾಗಲಿ ಎಂದು ಮನಸಾ ಹಾರೈಸುತ್ತೇನೆ. ಪವಿತ್ರಸ್ಥಾನಗಳಾದ ಮಂದಿರಗಳಲ್ಲಿ ಉತ್ತಮ ವಾಚಕರಿಂದ ಈ ಗ್ರಂಥವನ್ನು ಶ್ರವಣ ಮಾಡಿದರೆ, ಶ್ರವಣ ಮಾತ್ರದಿಂದ ಸರ್ವರ ಉದ್ಧಾರವಾಗುವುದರಲ್ಲಿ ಯಾವ ಸಂದೇಹವಿರುವುದಿಲ್ಲ.

ಈ ಸಾರ್ಥ ಏಕನಾಥೀ ಭಾಗವತ ಗ್ರಂಥದಲ್ಲಿ ಅತ್ಯಂತ ಮಹತ್ವಪೂರ್ಣ ಅನೇಕ ಪ್ರಕರಣಗಳಿರುವುವು. ಇವುಗಳ ಶ್ರವಣ ಮಾತ್ರದಿಂದ ಅಂತಃಕರಣವು ಪರಿವರ್ತನೆಯಾಗುವುದು. ಯದು ಅವಧೂತ ಸಂವಾದದಲ್ಲಿ ಇಪ್ಪತ್ನಾಲ್ಕು ಗುರುಗಳ ಲಕ್ಷಣಗಳಿಂದ ಸರಳವಾಗಿ ಮನಸ್ಸಿಗೆ ಶಿಕ್ಷಣ ದೊರೆಯುವುದು. ಧನದಿಂದ ಹದಿನೈದು ಅನರ್ಥಗಳ ಶ್ರವಣದಿಂದ ಸಹಜವಾಗಿಯೇ ಧನಲೋಭವು ನಾಶವಾಗುವುದು. ಭಿಕ್ಷುಗೀತೆಯ ಶ್ರವಣದಿಂದ ಪರಪೀಡೆಯ ಸಹನಶಕ್ತಿಯು ನಿಶ್ಚಿತವಾಗಿ ಬೆಳೆಯುವುದು. ಕ್ರೋಧವು ನಾಶ ವಾಗುವುದು. ಶಾಂತಿಯು ಸ್ಥಿರವಾಗುವುದು. ಪುರುರವಾನ ಐಲಗೀತೆಯ ಶ್ರವಣದಿಂದ ಪರಸ್ತ್ರೀ ಹವ್ಯಾಸವು ತಾನೇ ತಾನಾಗಿ ಲೋಪಗೊಳ್ಳುವುದು. ಕುಲಕ್ಷಯದ ಶ್ರವಣದಿಂದ ಯಾರ ಅಗಲುವಿಕೆಯಿಂದಲೂ ಮನಸ್ಸಿಗೆ ಯಾವ ತಾಪವೂ ಆಗಲಾರದು. ಹೀಗೆ ಈ ಗ್ರಂಥದ ಶ್ರವಣ ಮಾತ್ರದಿಂದ ಸಹಜವಾಗಿ ಸದ್ಗುಣಗಳ ಸಂಗ್ರಹವು ಸಾಧಿಸಿ ದುರ್ಗುಣಗಳ ನಾಶವಾಗುವುದು. ಹೀಗೆ ಅನೇಕ ಪ್ರಕರಣಗಳಿರುವುವು. ಪರೀಕ್ಷಿತಿ ಮಹಾರಾಜನು ಈ ಭಾಗವತ ಗ್ರಂಥದ ಕೇವಲ ಶ್ರವಣಮಾತ್ರದಿಂದ ಒಂದೇ ವಾರದಲ್ಲಿ ಜೀವನ್ಮುಕ್ತನಾದ ಪ್ರಸಂಗ ನೋಡಿದರೆ ಇದರ ಮಹತ್ವವು ಎಷ್ಟೆಂದು ಸಹಜವಾಗಿಯೇ ಮನವರಿಕೆಯಾಗುವುದು. ಆದ್ದರಿಂದ ಸರ್ವಭಾವಿಕರು ಈ ಗ್ರಂಥದ ಶ್ರವಣ ಮಾಡಿ ಪುನೀತರಾಗಬೇಕೆಂಬುವುದೇ ಇದರ ಮುಖ್ಯ ಉದ್ದೇಶವಾಗಿದೆ. ಮುಗ್ಧ ಭಾವಿಕ ರಾಗಲಿ ಅಥವಾ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಕ್ಷಣಿಕ ಸುಖಕ್ಕೆ ಸದಾ ಬೆನ್ನು ಹತ್ತಿರುವ ವಿಷಯೀ ಸಂಸಾರಿಕ ಜನರಾಗಲಿ ಈ ಗ್ರಂಥದ ಶ್ರವಣ ಪಠಣೆಯಿಂದ ಅವರು ಹರಿಭಕ್ತರಾಗುವರು ಮತ್ತು ಬಹು ಜನರು ಪರಿಪೂರ್ಣವಾಗಿ ಸನ್ಮಾರ್ಗಕ್ಕೆ ಹತ್ತುವರು.

ಭಾಳೇಭೋಳೇ ವಿಷಯೀ ಜನ । ಯಾಚೇ ಕರಿತಾ ಶ್ರವಣ ಪಠಣ ।
ತೇ ಹರಿಭಕ್ತ ಹೋತಿ ಜಾಣ । ಸನ್ಮಾರ್ಗೀ ಪೂರ್ಣ ಬಹುತ ಹೋತೀ ॥ಅ.೩೧-೫೩೭॥

ಇಷ್ಟೊಂದು ಪರಮಾದ್ಭುತ ಪವಿತ್ರ ಪ್ರಾಸಾದಿಕ ಈ ಗ್ರಂಥಕ್ಕೆ ಪ್ರತಿಯೊಬ್ಬರೂ ಮನಗಂಡು ಮಾನ್ಯತೆಕೊಟ್ಟು ಇದರ ಸದುಪಯೋಗ ಪಡೆದು ತಮ್ಮ ಮನುಷ್ಯ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂಬುದೇ ಶ್ರೀ ಸಂತ ಏಕನಾಥ ಮಹಾರಾಜರ ಅತ್ಯಂತ ಕಳಕಳಿಯ ಮನೋಭಾವವಾಗಿದೆ.

ಶ್ರೀಸಂತ ಏಕನಾಥ ಮಹಾರಾಜರ ವಂಶಜರಾದ ಶ್ರೀಗುರು ಹ.ಭ.ಪ. ರಾವಸಾಹೇಬ ಗೋಸಾವಿ ಪೈಠಣ ಇವರು ''ಅಭಿಪ್ರಾಯ'' ಬರೆದು ಕೊಟ್ಟು ಈ ಗ್ರಂಥವನ್ನು ಮನಮೆಚ್ಚುವಂತೆ ಶೃಂಗರಿಸಿದ್ದಾರೆ. ಚೈತನ್ಯ ಶ್ರೀಸದ್ಗುರು ಹ.ಭ.ಪ. ದಾದಾಸಾಹೇಬ ತಾತ್ಯಾಸಾಹೇಬ ವಾಸಕರ ಮಹಾರಾಜ ಪಂಢರಪೂರ ಇವರು ''ಹೃದ್ಗತ'' ಬರೆದುಕೊಟ್ಟು ಈ ಗ್ರಂಥದ ಘನತೆಗೆ ಮೆರಗು ನೀಡಿ ಮಹದುಪಕಾರ ಮಾಡಿರುವರು. ಇವರುಗಳ ಪಾದಪಂಕಜಗಳಿಗೆ ನನ್ನ ದೀರ್ಘದಂಡವತ ನಮಸ್ಕಾರಗಳನ್ನು ಸಲ್ಲಿಸಿ ಸದಾವಕಾಲ ನನ್ನ ಮೇಲೆ ಆಶೀರ್ವಾದವಿರಲಿ ಎಂದು ಸ್ತುತಿಸುತ್ತ ಇಲ್ಲಿಗೆ ನನ್ನ ಅಲ್ಪಮತಿಯ ಪ್ರಸ್ತಾವನೆಯನ್ನು ಪೂರ್ಣ ಗೊಳಿಸುವೆ.

ಸಂತ ಚರಣ ಸೇವಕರ ಸೇವಕ,
ಕೃಷ್ಣಾಜೀ ಡೋಂಗ್ರಪ್ಪ ಜ್ಞಾನಮೋರೆ,ಕೊಪ್ಪಳ.

॥ ಶ್ರೀ ಏಕನಾಥ ಮಹಾರಾಜ ಸು-ಪ್ರಸನ್ನ ॥



ಶ್ರೀ ಸಂತ ಏಕನಾಥ ಮಹಾರಾಜ :- ಕಾರ್ಯ ಮತ್ತು ಜೀವನ ಚರಿತ್ರೆ
ಭಾನುದಾಸಾಚೀ ಕುಳೀ ಮಹಾವಿಷ್ಣು ಚಾ ಅವತಾರ :- ಶ್ರೀ ಸಂತ ಏಕನಾಥ ಮಹಾರಾಜ

ಶ್ರೀಮಧುಸೂದನ ಬುವಾ ರಂಗನಾಥಬುವಾ ಗೋಸಾವೀ
ತಥಾ ರಾವಸಾಹೇಬ ಮಹಾರಾಜ ನಾಥವಂಶಜ, ಪೈಠಣ

ಬಾಲ್ಯತ್ವ :-

ಶ್ರೀ ಸಂತ ಏಕನಾಥ ಮಹಾರಾಜರ ಜನ್ಮವು ಶಕೆ ೧೪೫೫ ರಲ್ಲಿ ಶ್ರೀಸಂತ ಭಾನುದಾಸ ಮಹಾರಾಜ ಇವರ ಕುಲದಲ್ಲಿ ಶ್ರೀಸೂರ್ಯನಾರಾಯಣ ಹಾಗೂ ಸೌ.ಮಾತಾ ರುಕ್ಮಿಣೀ ಇವರ ಗರ್ಭದಲ್ಲಿ ಆಯಿತು.

ತಯಾ ಸೂರ್ಯಪ್ರಭಾ ಪ್ರತಾಪಕಿರಣೀ । ಮಾತೇ ಪ್ರಸವಲೀ ರುಕ್ಮಿಣೀ ।
ಮ್ಹಣೌನಿ ರಖುಮಾಈ ಜನನೀ । ಆಮ್ಹಾ ಲಾಗುನಿ ಸಾಚಚಿ ।।೧ (೧೩೫)

ನಾಥರ ಜನ್ಮವು ಮೂಲಾ ನಕ್ಷತ್ರದಲ್ಲಿ ಆದಕಾರಣ ಮಾತಾಪಿತರ ಸೌಖ್ಯವು ಇವರಿಗೆ ಲಭಿಸಲಿಲ್ಲ. ಅಜ್ಜ ಶ್ರೀಚಕ್ರಪಾಣೀ ಮಹಾರಾಜರು ಇವರನ್ನು ಸಾಂಭಾಳಿಸಿದರು.

ಏಕನಾಥ ಮಹಾರಾಜರು ಬಾಲ್ಯದಿಂದಲೇ ಬುದ್ಧಿಮಾನ ಮತ್ತು ಶ್ರದ್ಧಾವಾನರಾಗಿದ್ದರು. ಇವರಿಗೆ ಬಾಲ್ಯದಿಂದಲೇ ಸ್ನಾನಸಂಧ್ಯಾ ಮಾಡುವುದು, ಹರಿಭಜನೆ ಮಾಡುವುದು, ದೇವರ ಪೂಜೆ ಮಾಡುವುದು, ಶಾಸ್ತ್ರಗಳ ಶ್ರವಣ ಮಾಡುವುದು ಪ್ರಿಯವಾಗಿತ್ತು. ಇವರಲ್ಲಿ ನಿರಭಿಮಾನತ್ವ ಹಾಗೂ ಶಾಂತಿ ಈ ಎರಡು ಅಲೌಕಿಕ ಗುಣಗಳು ಬಾಲ್ಯದಿಂದಲೇ ಎದ್ದು ಕಾಣುತ್ತಿದ್ದವು. ನಾಥರ ಮುಂಜಿಯು ಆರನೆಯ ವರ್ಷದಲ್ಲಿ ಆಯಿತು. ''ಸಂಧ್ಯಾ ವೈಶ್ವದೇವ, ರುದ್ರ, ಪವಮಾನ'' ಇವುಗಳನ್ನು ಇವರು ಬಾಲ್ಯದಲ್ಲಿಯೇ ಪಾಠ ಮಾಡಿದರು. ಬ್ರಾಹ್ಮಣ ಧರ್ಮದಂತೆ ಶುಚಿರ್ಭೂತತನವು ಇವರಲ್ಲಿ ಮೂರ್ತಿಮಂತವಾಗಿ ತೋರುತ್ತಿತ್ತು.

ಗುರುಪದೇಶ :-

ಒಂದು ದಿನ ಮನೆಯಲ್ಲಿ ಯಾರಿಗೂ ಹೇಳದೆ ನಾಥ ಮಹಾರಾಜರು ಗುರುವಿನ ಶೋಧಾರ್ಥವಾಗಿ ಹೊರಟರು. ಗುರುವಾರ ಬೆಳಿಗ್ಗೆ ಅವರು ದೇವಗಿರಿ (ದೌಲತಾಬಾದ) ಕ್ಷೇತ್ರಕ್ಕೆ ಮುಟ್ಟಿದರು. ಅಲ್ಲಿ ಹೋದ ನಂತರ ಜನಾರ್ದನಸ್ವಾಮಿಗಳ ಹಾಗೂ ನಾಥರ ಸಂವಾದವಾಯಿತು. ''ಬ್ರಿದಾವಲೀ'' ನಾಮದ ಅಭಂಗವಲ್ಲಿಯಲ್ಲಿ ಈ ಸಂವಾದದ ವರ್ಣನೆಯು ನೋಡಲು ದೊರಕುವುದು. ಈ ಗ್ರಂಥಕ್ಕೆ ನಾಥರ ಸಾಂಪ್ರದಾಯದಲ್ಲಿ ಅನನ್ಯ ಸಾಧಾರಣ ಮಹತ್ವವಾಗಿರುವುದು. ಯಥಾವಕಾಶದಲ್ಲಿ ನಾಥರಿಗೆ ಶ್ರೀಜನಾರ್ದನಸ್ವಾಮಿಗಳ ಉಪದೇಶವಾಯಿತು. ಅಂದು ನಾಥರ ದತ್ತಾತ್ರೇಯ-ಜನಾರ್ದನ-ಏಕನಾಥ ಹೀಗೆ ತ್ರಯೀ ನಿರ್ಮಾಣವಾಯಿತು.

ಸಂಸಾರದಲ್ಲಿದ್ದು ಅದನ್ನು ಜಯಿಸುವ ನಿಜಗುಹ್ಯವು ನಾಥರಿಗೆ ಪ್ರಾಪ್ತವಾಯಿತು. ಜನಾರ್ದನಸ್ವಾಮಿಯವರು ತಮಗೆ ಯಾವುದನ್ನು ಕಲಿಸಿದರೆಂದು ಹೇಳುವಾಗ ನಾಥ ಮಹಾರಾಜರು ಹೇಳುವರು.

ಹೇಚಿ ಶಿಕವಿಲೇ ಜನಾರ್ದನೇ । ಸರ್ವಭೂತಿ ಮಜಚಿ ಪಾಹಣೇ ।
ಪ್ರಕೃತಿ ಗುಣಾಚೇ ಲಕ್ಷಣೇ । ಸರ್ವಥಾ ಆಪಣೇ ನ ಮಾನಾವೀ ॥ ಏ.ಭಾ.೩೧/೫೧೯

ಹೀಗೆ ಶಿಕ್ಷಣವು ಪೂರ್ಣವಾದ ನಂತರ ಯೋಗ್ಯವೇಳೆಯಲ್ಲಿ ಗುರುಪ್ರಸಾದದಿಂದ ಅವರಿಗೆ ಪರಮಗುರು ಶ್ರೀದತ್ತಾತ್ರೇಯರ ಸಗುಣ ಸಾಕ್ಷಾತ್ಕಾರವಾಯಿತು. ತದನಂತರ ನಾಥರು ಗುರುಗಳ ಸಮೇತರಾಗಿ ತೀರ್ಥಯಾತ್ರೆ ಆರಂಭಿಸಿದರು. ತದನಂತರ ನಾಥರ ಯೋಗ್ಯತೆ ಕಂಡು ಶ್ರೀಕ್ಷೇತ್ರ ತ್ರ್ಯಂಬಕೇಶ್ವರದಲ್ಲಿ ಶ್ರೀಜನಾರ್ದನಸ್ವಾಮಿಯವರು ನಾಥರಿಂದ ಚತುಃಶ್ಲೋಕೀ ಭಾಗವತಕ್ಕೆ ಭಾಷ್ಯೆ ಬರೆಯಿಸಿದರು. ಇದು ನಾಥರ ಸರ್ವಪ್ರಥಮ ಗ್ರಂಥವಾಗಿರುವುದು. ತದನಂತರ ನಾಥರು ತೀರ್ಥಯಾತ್ರೆ ಪೂರ್ಣಗೊಳಿಸಿದರು. ತದನಂತರ ಅವರ ವಿವಾಹವು ಗಿರಿಜಾಬಾಈ ಇವರಲ್ಲಿ ಸಂಪನ್ನವಾಯಿತು. ಸುಲಕ್ಷಣ, ಗುಣವತೀ, ಪತಿವ್ರತಾ ಧರ್ಮ ಪಾಲಿಸುವ ಇಂತಹ ಗಿರಿಜಾಬಾಈಯು ನಾಥರೊಂದಿಗೆ ಸಂಸಾರ ಮಾಡುತ್ತ ಪರಮಾರ್ಥ ಸಾಧಿಸಿದಳು. ಕೆಲವು ವರ್ಷಗಳ ನಂತರ ನಾಥರಿಗೆ ಗಂಡು ಮಗು ಆಯಿತು. ಆ ಮಗುವಿನ ಹೆಸರನ್ನು ''ಹರಿ'' ಎಂದು ಇಡಲಾಯಿತು. ಕಾಶಿಗೆ ಹೋಗಿ ಆತನು ಅಧ್ಯಯನ ಮಾಡಿದನು. ನಂತರ ಆತನಿಗೆ ಪಂಡಿತ ಎಂಬ ಈ ಪದವಿಯು ಪ್ರಾಪ್ತವಾಯಿತು. ಆದ್ದರಿಂದ ಅವರಿಗೆ ಸರ್ವರೂ ''ಹರಿಪಂಡಿತ'' ಎಂದು ಕರೆಯುತ್ತಿದ್ದರು.

ನಾಥರ ವಿಠ್ಠಲಭಕ್ತಿ :-

ನಾಥರ ಮುತ್ತಜ್ಜ ಭಾನುದಾಸ ಮಹಾರಾಜರಿಂದ ನಡೆದು ಬಂದ ವಿಠ್ಠಲ ಭಕ್ತಿಯಲ್ಲಿ ಇವರೂ ಕೂಡ ತನ್ಮಯರಾದರು. ವಿಠ್ಠಲಭಕ್ತಿಯಲ್ಲಿ ಭಾಗವತ ಧರ್ಮದ ಸರ್ವ ತತ್ವಗಳು ಸಾಕಾರವಾಗಿರುವುವು. ಕರ್ನಾಟಕದ ಪಾಂಡುರಂಗನು ಭಾನುದಾಸ ಮಹಾರಾಜರಿಂದ ಯಾವ ಪ್ರಕಾರವಾಗಿ ಪಂಢರಪೂರದಲ್ಲಿ ವಿರಾಜಮಾನನಾದನೋ, ಅದೇ ಪ್ರಕಾರವಾಗಿ ಕರ್ನಾಟಕದಿಂದ ಪೈಠಣಕ್ಕೆ ನಾಥರತ್ತ ಪಂಚಧಾತುವಿನ ಪಾಂಡುರಂಗನು ವಿರಾಜಮಾನನಾದನು. ಆತನಿಗೆ ನಾಥರು ಬೆಣ್ಣೆ ಕಲ್ಲು ಸಕ್ಕರೆ ನೈವೇದ್ಯ ಮಾಡಿ ಆತನಿಗೆ ''ವಿಜಯೀ ಪಾಂಡುರಂಗ'' ಎಂದು ಹೆಸರಿಟ್ಟರು. ಆಗ ಪಾಂಡುರಂಗನು ಬೆಣ್ಣೆಯನ್ನು ಸೇವಿಸಿ ಹಸ್ತವನ್ನು ನೀಟಾಗಿಟ್ಟನು ಮತ್ತು ಆ ಕ್ಷಣಕ್ಕೆ ಇಟ್ಟಂಗಿಯ ಮೇಲೆ

'ದಾಸ ಮಲಾ ಜೇವೂ ಘಾಲ ವಾ...ನ್'

ಹೀಗೆ ಸ್ವಯಂಭೂ ಅಕ್ಷರಗಳು ಮೂಡಿದವು. ಯಾವ ಪ್ರಕಾರವಾಗಿ ಪಂಢರಿಯ ಪಾಂಡುರಂಗನ ನಿತ್ಯ ಉಪಚಾರ ಇದೆಯೋ, ಅದೇ ಪ್ರಕಾರವಾಗಿ ಇಲ್ಲಿಯೂ ಕೂಡ ವಿಜಯೀ ಪಾಂಡುರಂಗನ ಉಪಚಾರಗಳು ಪೈಠಣದಲ್ಲಿ ನಡೆಯುತ್ತಿವೆ.

ನಾಥರ ಗ್ರಂಥ ಸಂಪತ್ತು :-

ನಾಥರ ಭಗವದ್ಭಕ್ತಿ ಸಂಬಂಧವಾಗಿ, ಶಮದಮಾದಿ ಗುಣ ಸಂಬಂಧವಾಗಿ ಮತ್ತು ಸಮದೃಷ್ಟಿ ಸಂಬಂಧವಾಗಿ ಅನೇಕ ಕಥೆಗಳು ಸರ್ವರಿಗೂ ತಿಳಿದಿರುತ್ತವೆ. ನಾಥರು ಅನೇಕ ಸ್ಫುಟಗಳನ್ನು ರಚಿಸಿದರು. ಅವುಗಳಲ್ಲಿ ಹಸ್ತಾಮಲಕ, ಆನಂದಲಹರೀ, ಸ್ವಾತ್ಮಸುಖ, ಶುಕಾಷ್ಟಕ, ಚಿರಂಜೀವ ಪದ, ಅಭಂಗಗಳ ಗಾಥಾ (ಅಭಂಗ ೪೦೦೫) ಇತ್ಯಾದಿ ಗ್ರಂಥಗಳ ಸಂಪತ್ತನ್ನು ನಾಥರು ಸ್ವಧರ್ಮ ಕರ್ಮಾಚರಣೆ ಸಾಂಭಾಳಿಸುತ್ತ ಕೂಡಿಟ್ಟರು.

ಶ್ರೀಮದ್ ಭಾಗವತದ ಹನ್ನೊಂದನೆಯ ಸ್ಕಂಧಕ್ಕೆ ನಾಥರು ಭಾಷ್ಯ ಬರೆಯಲು ಶ್ರೀಕ್ಷೇತ್ರ ಪೈಠಣದಲ್ಲಿ ಆರಂಭಿಸಿದರು. ಐದು ಅಧ್ಯಾಯಗಳು ಪೂರ್ಣಗೊಂಡಾಗ ಉಳಿದ ಅಧ್ಯಾಯಗಳನ್ನು ಕಾಶೀ ಕ್ಷೇತ್ರದಲ್ಲಿ ಪೂರ್ಣಗೊಳಿಸಿದರು. ಕಾಶಿಯಲ್ಲಿನ ಕೆಲವು ಪಂಡಿತರಿಗೆ ಭಾಗವತದಂತಹ ಪವಿತ್ರ ಗ್ರಂಥಕ್ಕೆ ಪ್ರಾಕೃತ ಭಾಷೆಯ ಸಂಪರ್ಕವಾಗಿದ್ದಕ್ಕೆ ಅವರಿಗೆ ಕ್ರೋಧ ಉಂಟಾಯಿತು. ಆದ್ದರಿಂದ ಆ ಏಕನಾಥೀ ಭಾಗವತ ಗ್ರಂಥವನ್ನು ಪಂಡಿತರು ಗಂಗಾನದಿಯಲ್ಲಿ ಒಗೆದುಬಿಟ್ಟರು. ಗಂಗೆಯು ಅದನ್ನು ತೇಲಿಸಿ ನಾಥರ ಸ್ವಾಧೀನ ಮಾಡಿದಳು. ಆಗ ಪಂಡಿತರಿಗೆ ನಾಥರ ಯೋಗ್ಯತೆಯು ತಿಳಿಯಿತು. ಆಗ ಆನೆಯ ಮೇಲೆ ಭಾಗವತ ಗ್ರಂಥದ ದೊಡ್ಡ ಮೆರವಣಿಗೆ ಮಾಡಲಾಯಿತು.

'ಸಂಸ್ಕೃತ ಭಾಷಾ ದೇವೇ ಕೇಲಿ । ಆಣಿ ಪ್ರಾಕೃತ ಕಾಯ ಚೋರಾಪಾಸೂನಿ ಆಲೀ ।'

ಪ್ರಸ್ಥಾನತ್ರಯಿಯಲ್ಲಿ ಸಮಾವೇಶಗೊಂಡಿರುವ ಏಕನಾಥೀ ಭಾಗವತವು ಸರ್ವ ಸಾಧಕರಿಗಾಗಿ, ಭಕ್ತರಿಗಾಗಿ, ಚಿಂತನೀಯ, ಅನುಕರಣೀಯ ಹಾಗೂ ಮನುಷ್ಯಜನ್ಮದ ಸಾರ್ಥಕ, ಆತ್ಮಸ್ವರೂಪದ ಪ್ರಾಪ್ತಿ ಸಾಧಿಸಲು ಪ್ರೇರಕವಾಗಿದೆ.

ಶ್ರೀಕೃಷ್ಣ ದರ್ಶನ :-

ದ್ವಾರಕೇಚೀ ಮೂರ್ತಿ ಏಕನಾಥಾ ಘರೀ ।
ಪಾಣೀ ವಾಹೇ ಹರಿ ಕಾವಡೀನೇ ॥

॥ ಸಂತ ನಿಳೋಬಾ ॥

ಶ್ರೀ ವಿಠ್ಠಲನು ಬ್ರಾಹ್ಮಣನ ರೂಪ ಧರಿಸಿ ನಾಥರ ಮನೆಯಲ್ಲಿ ಶ್ರೀಖಂಡ್ಯಾ ಹೆಸರಿನಿಂದ ೧೨ ವರ್ಷಗಳವರೆಗೆ ಹೌಜಿನಲ್ಲಿ ನೀರು ತುಂಬುವ ಸೇವೆ ಮಾಡಿದನು. ಅದರಂತೆಯೇ ಶ್ರೀಕೃಷ್ಣನು ೧೨ ವರ್ಷಗಳವರೆಗೆ ನೀರು ಹೊತ್ತನು. ನಂತರ

ಉದ್ಧವನೂ ಕೂಡ ೧೨ ವರ್ಷ ಹೀಗೆಯೇ ನೀರು ತುಂಬಿಸುವ ಸೇವೆ ಮಾಡಿದನು. ಹೀಗೆ ಒಟ್ಟಿಗೆ ೩೬ ವರ್ಷಗಳವರೆಗೆ ಭಗವಂತನು ನಾಥರ ಮನೆಯಲ್ಲಿ ಸೇವೆ ಮಾಡಿದನು.

ಕಾವಡೀನೆ ಪಾಣೀ ಜ್ಯಾಸೀ ಚಕ್ರಪಾಣೀ ವಾಹೇ ।
ಅನನ್ಯಭಕ್ತೀ ಭಾವೇ ನಿಳಾ ವಂದಿ ತ್ಯಾಚೀ ಪಾಯೇ ।

॥ ಸಂತ ನಿಳೋಬಾ ॥

ನಾಥರು ಭಾಗವತದಲ್ಲಿ ವರ್ಣನೆ ಮಾಡಿದ ಪ್ರಕಾರ :-

ಅಗಾಧ ಭಗವಂತಾಚಾ ಮಹಿಮಾ । ತ್ಯಾಚ್ಯಾಪಾರ ನಾಹೀ ಜನ್ಮಕರ್ಮಾ ।
ತ್ಯಾಚಾ ಅನುಷ್ಟುಪ ಹಾ ಮಹಿಮಾ । ತುಜ ಮ್ಯಾ ನರೋತ್ತಮಾ ನಿರೂಪಿಲಾ ಯೇಥೇ ॥

ಏ. ಭಾ. ೪/೨೮೫

ಪ್ರಥಮದಲ್ಲಿ ಕೃಷ್ಣದರ್ಶನ ದೃಷ್ಟಾಂತದಂತೆ ನಾಥರಿಗೆ ವಚನ ಬದ್ಧರನ್ನಾಗಿ ಮಾಡಿ ಭಗವಂತನು ತನ್ನ ಕಾರ್ಯ ಮುಗಿಸಿ ಅದೃಶ್ಯನಾಗುತ್ತಿದ್ದನು. ಆಗ ನಾಥರು ಭಗವಂತನ ಕೈ ಹಿಡಿದು ನನಗೆ ವಚನಮುಕ್ತನನ್ನಾಗಿ ಮಾಡಿ ಸಗುಣ ರೂಪದಲ್ಲಿ ದರ್ಶನ ನೀಡಿರಿ ಎಂದು ವಿನಂತಿಸಿದರು. ಅದರಂತೆ ಭಗವಂತನು ನಾಥರಿಗೆ ಸಗುಣ ರೂಪದಲ್ಲಿ ದರ್ಶನ ಕೊಟ್ಟು ''ರುಕ್ಮಿಣಿ ಸ್ವಯಂವರ'' ಗ್ರಂಥವನ್ನು ಬರೆಯಿಸಿದನು.

ತದನಂತರ ಜ್ಞಾನೇಶ್ವರ ಮಾಉಲಿಯವರ ಕಂಠಕ್ಕೆ ಅಜಾನವೃಕ್ಷದ ಬೇರು ಹತ್ತಿಕೊಂಡಿರುವ ನಿಮಿತ್ತ ಸಾಧಿಸಿ ಪಾಠಾಂತರದಲ್ಲಿ ಶುದ್ಧ-ಅಶುದ್ಧವಾಗಿರುವ ಜ್ಞಾನೇಶ್ವರೀಯನ್ನು ಶುದ್ಧವನ್ನಾಗಿ ಮಾಡಿಸಿಕೊಂಡರು. ಈ ಕಾರ್ಯವನ್ನು ನಾಥರು ಶಕೆ ೧೫೦೬ ರಲ್ಲಿ ಪೂರ್ಣಗೊಳಿಸಿದರು.

ಭಾವಾರ್ಥ ರಾಮಾಯಣ

ಆಯುಷ್ಯದ ಕೊನೆಯವರೆಗೂ ನಾಥರ ಲೇಖನ ಕಾರ್ಯವು ನಡೆದೇ ಇತ್ತು. ಭಾವಾರ್ಥ ರಾಮಾಯಣದ ಲೇಖನವು ತಮ್ಮ ನಿರ್ಯಾಣದ ಸಮಯದಲ್ಲಿನ ಮುಹೂರ್ತ ಸಾಧಿಸುವುದಕ್ಕಾಗಿ ಅದು ಅಪೂರ್ಣಗೊಂಡಿತು. ಇದರ ಪೂರ್ಣತೆಮಾಡುವ ಕಾರ್ಯವನ್ನು ಅವರು ''ಗಾವಬಾ'' ಕಡೆ ಒಪ್ಪಿಸಿದರು. ನಿಜವಾಗಿ ನೋಡಿದರೆ ನಿತ್ಯ ಸಿಹಿ ತಿನ್ನುವ ನಿಮಿತ್ತದಿಂದ ಬಂದಿರುವ ಮೂಕನಾಗಿರುವ ಹಾಗೂ ಅಶಿಕ್ಷಿತನಾಗಿರುವ ಗಾವಬಾ ನಾಥರ ಸಂಗತಿಯಲ್ಲಿದ್ದ ಕಾರಣ ಇಂತಹ ದೊಡ್ಡ ಕಾರ್ಯವನ್ನು ಆತನಿಂದ ನಾಥರೇ ಮಾಡಿಸಿಕೊಂಡರು.

ನಾಥರ ಮೊಮ್ಮಗ ಮುಕ್ತೇಶ್ವರರು ಗಾವಬಾನ ವರ್ಣನೆಯನ್ನು ತಮ್ಮ ಆರತಿಯಲ್ಲಿ ಮಾಡಿರುವರು. ''ಕೋಣ್ಯಾ ಮುಕ್ಯಾ ಹಾತೀ ರಾಮಾಯಣ ವದವೀ''

ನಾಥರ ನಿಜಧಾಮಗಮನ :-

ನಾಥರ ಇಚ್ಛಿತ ಕಾರ್ಯಗಳು ಬಹುತೇಕವಾಗಿ ಪೂರ್ಣವಾಗಿದ್ದಕ್ಕೆ ಅವರು ದೇಹತ್ಯಾಗ ಮಾಡುವುದನ್ನು ನಿಶ್ಚಯಿಸಿದರು. ಅದಕ್ಕಾಗಿ ಅವರು ಫಾಲ್ಗುಣ ಬಹುಳ ಷಷ್ಠೀ ತಿಥಿಯನ್ನು ನೇಮಿಸಿಕೊಂಡರು.

''ಬಾಳಪಣೀ ಕೋಣಾ ಡಂಕೋ ಆಲಾ ಕಾಳ ।
ಅಕರಾ ದಿವಸ ಕಾಳ ಕೋಣೀ ಥಾಂಬವಿಲಾ ॥''

ಹೀಗೆ ಮುಕ್ತೇಶ್ವರರ ವರ್ಣನೆಯಂತೆ ಫಾಲ್ಗುಣ ಬ.೬ ಶಕೆ ೧೫೨೧ ವಿಜಯ ಸಂವತ್ಸರದಲ್ಲಿ ಬೆಳಿಗ್ಗೆ ವಿಜಯೀ ಪಾಂಡುರಂಗನಿಗೆ ಅಭಿಷೇಕ ಮಾಡಿ ನಾಥ ಮಹಾರಾಜರು ಜನಸಮುದಾಯ ಸಹ ನದಿ ತೀರಕ್ಕೆ ಭಜನದಿಂಡಿಯೊಂದಿಗೆ ಹೊರಟು ಅಲ್ಲಿ ನಾಥರು

''ಅವಘೇಚಿ ತ್ರೈಲೋಕ್ಯ ಆನಂದಾಚಿ ಆತಾ ।
ಚರಣೀ ಜಗನ್ನಾಥಾ ಚಿತ್ತ ಠೇಲೇ ॥

ಏ. ಗಾಥಾ

ಈ ಅಭಂಗದ ಮೇಲೆ ಕೀರ್ತನೆಯನ್ನು ಮಾಡಿದರು. ಆ ಸಮಯದಲ್ಲಿ ಅವರಿಗೆ ''ಅವಘೇಚಿ ತ್ರೈಲೋಕ್ಯ ಆನಂದಾಚಿ ಆತಾ'' ಹೀಗೆ ವೃತ್ತಿ ನಿರ್ಮಾಣವಾಯಿತು. ಕೀರ್ತನವು ಪೂರ್ಣಗೊಂಡಾಗ ಸಾವಿರಾರು ಜನರ ಸಮಕ್ಷಮದಲ್ಲಿ ನಾಥರು ಗೋದಾವರಿಯ ನದಿಯಲ್ಲಿ ಪ್ರವೇಶ ಮಾಡಿದರು. ನಾಭಿಸ್ಥಾನದವರೆಗೆ ನೀರಿನಲ್ಲಿ ಪ್ರವೇಶಿಸಿ ತಮ್ಮ ಶರೀರವನ್ನು ಪಂಚತತ್ವದಲ್ಲಿ ವಿಲೀನಗೊಳಿಸಿದರು. ತಕ್ಷಣ ಜನಸಾಗರವು ಸಿಡಿದೆದ್ದಿತು, ಸ್ವರ್ಗದಿಂದ ಪುಷ್ಪವೃಷ್ಟಿಯಾಯಿತು. ತದನಂತರ ಅವರ ಚಿರಂಜೀವಿ ಹರಿಪಂಡಿತರು ಅವರ ದೇಹದ ಮೇಲೆ ಮಂತ್ರಾಗ್ನಿ ಸಂಸ್ಕಾರ ಮಾಡಿದರು.

ಸಮಾಧಿಸ್ತ ಅಶ್ವತ್ಥ ರುಪೇ ಜಯಾಲಾ ।
ಮುಥಾಪಾಮರಾಲಾಗೀ ತಾರಾವಯಾಲಾ ॥

ನಿರಾಕಾರ ಆಕಾರ ಹೋಊನಿ ಯಥಾರ್ಥಾ ।
ನಮಸ್ಕಾರ ಮಾಝಾ ಶ್ರೀಸದ್ಗುರು ಏಕನಾಥಾ ॥

ಈ ಮೇಲಿನ ಅಭಂಗದಂತೆ ದಹನ ರಕ್ಷೆಯಲ್ಲಿ ತುಳಶಿಯ ಹಾಗೂ ಅಶ್ವತ್ಥ ವೃಕ್ಷದ ಅಗಿಗಳು ಹುಟ್ಟಿಕೊಂಡವು.

ಕೃಷ್ಣ ತುಳಸೀ ರೋಪಾಸೀ ಮಧ್ಯೇ ಏಕ ಪಿಂಪಳಾಸೀ ।
ಇತುಕೇ ದೇಖತಾ ತ್ಯಾಸೀ ನವಲ ಆಶ್ಚರ್ಯಾಸೀ ವರ್ಣಿತೀ ॥
(ಕೆ.ಕೃತನಾಥ ಚರಿತ್ರೆ ಅ.೩೧. ಓ.೬೫)

ಈ ತುಳಸೀ ಹಾಗೂ ಅಶ್ವತ್ಥ ಗಿಡಗಳಲ್ಲಿಯೇ ಹರಿಪಂಡಿತನು ನಾಥರ ಸಮಾಧಿ ಕಟ್ಟಿದನು.

ಶರಣ ಶರಣ ಏಕನಾಥಾ । ಪಾಯೀ ಮಾಥಾ ಠೇವಿಲಾ ॥
- ತುಕಾರಾಮ ಮಹಾರಾಜ

ಅಭಿಪ್ರಾಯ

''ಏಕಾಜನಾರ್ದನಾಚೀ ವಿನಂತೀ । ಯೇಊನ ಮನುಷ್ಯದೇಹಾಪ್ರತೀ ।
ಕರೂನಿಯಾ ಭಗವತ್‌ಭಕ್ತೀ ನಿಜಾತ್ಮಪ್ರಾಪ್ತಿ ಸಾಧಾವೀ ॥ ಏ.ಭಾ.

ಹ.ಭ.ಪ. ಶ್ರೀಕೃಷ್ಣಾಜೀ ಡೋಂಗರೇ ಅಪ್ಪಾ ಜ್ಞಾನಮೋತೆ, ಕೊಪ್ಪಳ, ಕರ್ನಾಟಕ

ಇವರು ಶ್ರೀಏಕನಾಥೀ ಭಾಗವತವನ್ನು ಕನ್ನಡ ಭಾಷೆಯಲ್ಲಿ ಭಾಷಾಂತರವನ್ನು ಮಾಡಿ ವಾಚಕರಿಗೆ ಕೊಟ್ಟ ಇದೊಂದು ನಿಧಿಯಾಗಿರುವುದು. ಈ ಕಾರ್ಯವನ್ನು ಇವರು (ಏಕನಾಥ ಷಷ್ಠೀ) ಫಾಲ್ಗುಣ ಬ.೬ಯ ಶುಭಮುಹೂರ್ತದಲ್ಲಿ ಪೈಠಣದಲ್ಲಿ ಪುರಾಣ ಕಂಭದ ಆಶ್ರಯದಲ್ಲಿ ಆರಂಭಿಸಿದರು. ಆದ್ದರಿಂದ ಈ ಕಾರ್ಯಕ್ಕೆ ಶ್ರೀಏಕನಾಥರ ಆಶೀರ್ವಾದವಿದೆ. ಇದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಇವರ ಕೈಯಿಂದ ಹೀಗೆಯೇ ಸಂತಸೇವೆಯು ನೆರವೇರಲಿ ಹಾಗೂ ಇವರಿಗೆ ದೀರ್ಘಾಯುಷ್ಯವು ಲಭಿಸಲಿ. ಇದೇ ಶ್ರೀ ಏಕನಾಥರ ಚರಣಗಳಲ್ಲಿ ಪ್ರಾರ್ಥನೆಯನ್ನು ಮಾಡುವೆ.

ಶ್ರೀ ಮಧುಸೂದನ ರಂಗನಾಥಬುವಾ ಗೋಸಾವಿ
ನಾಥ ವಂಶಜ, ಪೈಠಣ
ಭ್ರಮಣ ಧ್ವನಿ :- ೯೮೨೨೭ ೯೬೬೦೫
ಫೋನ್ : (೦೨೪೩೧) ೨೨೪೧೨೧

॥ ಶ್ರೀಪಾಂಡುರಂಗ ಪ್ರಸನ್ನ ॥



ಭವಸಾಗರದಲ್ಲಿ ಮುಳುಗುತ್ತಿರುವ ಅಸಂಖ್ಯ ಜೀವಿಗಳ ವಿಷಯದಲ್ಲಿ ಅಪಾರವಾದ ಕರುಣೆಯಿಂದಲೇ ಅವರ ತರುಣೋಪಾಯಕ್ಕಾಗಿ ಮಹರ್ಷಿ ವೇದವ್ಯಾಸರು ಶ್ರೀಮದ್ ಭಾಗವತ ಪುರಾಣದ ನಿರ್ಮಾಣ ಮಾಡಿದರು. ವ್ಯಾಸರ ಪ್ರತ್ಯುತ್ಪನ್ನ ಬುದ್ಧಿಯು ಅಪಾರವಾಗಿದೆ. ''ನಮೋಸ್ತು ತೇ ವ್ಯಾಸ ವಿಶಾಲ ಬುದ್ಧೇ'' ಎಂದು ಶ್ರೀವ್ಯಾಸರಿಗೆ ವಂದನೆ ಮಾಡಲಾಗಿದೆ. ವ್ಯಾಸರ ವಿಷಯಕ್ಕೆ ಸುಭಾಷಿತರು ಬಹಳಷ್ಟು ವರ್ಣಿಸಿರುವರು.

ಅಚತುರ್ವದನೋ ಬ್ರಹ್ಮಾ ದ್ವಿಬಾಹೋರಯಿ ಹರಿಃ ।
ಅಭಾಲ ಲೋಚನಃ ಶಂಭುರ್ಭಗವಾನ್ ಬಾದರಾಯಣಃ ॥

ನಾಲ್ಕು ಮುಖಗಳಿಲ್ಲದಿದ್ದರೂ ಕೂಡ ವ್ಯಾಸರು ಬ್ರಹ್ಮದೇವರಾಗಿದ್ದಾರೆ. ಎರಡೇ ಕೈಗಳಿದ್ದರೂ ಸಹ ವಿಷ್ಣೂ ಆಗಿದ್ದಾರೆ. ತ್ರಿಲೋಚನರಲ್ಲ, ಆದರೂ ಸಾಕ್ಷಾತ್ ಶಂಕರರಾಗಿದ್ದಾರೆ. ಬ್ರಹ್ಮದೇವನು ಅಪಾರವಾಗಿ ಸೃಷ್ಟಿಯನ್ನು ನಿರ್ಮಿಸಿದನು. ಅದರಂತೆ ವ್ಯಾಸರು ಅಪಾರವಾಗಿ ವಾಙ್ಮಯ ನಿರ್ಮಾಣ ಮಾಡಿರುವರು. ಇವರು ಸ್ಪರ್ಶ ಮಾಡದೇ ಇರುವ ಒಂದೂ ವಿಷಯವಿರುವುದಿಲ್ಲ. ''ವ್ಯಾಸೋಚ್ಛಿಷ್ಟಮ್ ಜಗತ್ ಸರ್ವಮ್'' ಎಂದು ಇದಕ್ಕಾಗಿಯೇ ಹೇಳುವರು. ವಿಷ್ಣುವಿನಂತೆ ವ್ಯಾಸರು ಪರಮಾರ್ಥದಲ್ಲಿ ಜೀವಿಗಳ ರಕ್ಷಣೆ ಮಾಡಿರುವರು ಮತ್ತು ಶಂಕರನು ಯಾವ ಪ್ರಕಾರವಾಗಿ ಸಂಹಾರಕನಾಗಿರುವನೋ, ಅದರಂತೆಯೇ ಪರಮಾರ್ಥದಲ್ಲಿನ ತ್ಯಾಜ್ಯಗಳನ್ನೆಲ್ಲ ಸಂಹಾರ ಮಾಡುತ್ತಿರುವರು. ವ್ಯಾಸರಕ್ಕಿಂತ ಮೊದಲು ಅನೇಕ ಋಷಿಮುನಿಗಳಾಗಿದ್ದರು, ಆದರೆ ಅವರ ವಾಙ್ಮಯ ನಿರ್ಮಾಣವು ''ಆತ್ಮಾಭಿಮುಖ''ವಾಗಿತ್ತು. ಆದರೆ ವ್ಯಾಸರು ''ಲೋಕಾಭಿಮುಖ''ವಾಗಿ ನಿರ್ಮಾಣ ಮಾಡಿದರು. ಪೂರ್ವದ ಋಷಿಮುನಿಗಳವರು ಸ್ವಹಿತದ ವಿಚಾರ ಮಾಡಿದರು. ಆದರೆ ವ್ಯಾಸರು ಜಗದೋದ್ಧಾರದ ಉದ್ದೇಶಗಳನ್ನು ತಮ್ಮ ಕಣ್ಮುಂದೆ ಇಟ್ಟುಕೊಂಡರು. ಕಲಿಯುಗದಲ್ಲಿನ ಸಾಧನೆಗಳ ವಿಮುಖ ಮತ್ತು ವಿಷಯಾಸಕ್ತ ಜೀವಿಗಳ ಅಪಾರವಾದ ಕರುಣೆಯಿಂದ ವ್ಯಾಸರು ಮಾಡಿರುವ ವಾಙ್ಮಯ ರಚನೆ ಎಂದರೆ ಭವಸಿಂಧು ತಾರಕ ನೌಕೆಯಾಗಿರುವುದು. ಭೋಳ್ಯಾಭಾವಿಕ ಜೀವಿಗಳ ತರುಣೋಪಾಯದ ಸುಲಭ ಉಪಾಯವೆಂದರೆ ''ಶ್ರೀಮದ್ ಭಾಗವತ'' ಇದನ್ನು ವ್ಯಾಸರು ಸರ್ವರಿಗೂ ಮುಟ್ಟುವಂತೆ ಮಾಡಿರುವರು.

ತುಕಾ ಮ್ಹಣೇ ಭಾಗವತ । ಕೇಲೇ ಶ್ರುತ ಸಕಳಾ ॥

''ಶ್ರೀಮದ್ ಭಾಗವತ'' ಇದು ಭಕ್ತಿ ಪ್ರಧಾನವಾಗಿರುವುದು. ಇತರ ಸಾಧನೆಗಳಿಗಿಂತ ಭಕ್ತಿಯು ಶ್ರೇಷ್ಠ ಮತ್ತು ಫಲದಾಯಕ ಸಾಧನೆಯಾಗಿರುವುದು. ಮಹರ್ಷಿ ನಾರದರು ಹೇಳುವರು: ''ಅನ್ಯಸ್ಮಾತ್ ಸೌಲಭ್ಯಂ ಭಕ್ತಿ'' ಆದ್ದರಿಂದ ಭಕ್ತಿಯು ಕಠಿಣವಾಗಿರುವುದಿಲ್ಲ. ಇದು ಫಲಪ್ರದವಾಗಿರುವುದು. ನಾರದರು ಇದೇ ಭಕ್ತಿಮಾರ್ಗದ ದಿಶೆಯನ್ನು ವ್ಯಾಸರಿಗೆ ತೋರಿಸಿಕೊಟ್ಟರು ಮತ್ತು ಅವರಿಂದ ''ಶ್ರೀಮದ್ ಭಾಗವತ''ದಂತಹ ಅಮೌಲ್ಯ ಗ್ರಂಥವನ್ನು ಜಗತ್ತಿನ ಉದ್ಧಾರಕ್ಕಾಗಿ ನಿರ್ಮಾಣ ಮಾಡಿಸಿದರು.

ಯುಗಯುಗಗಳಲ್ಲಿ ''ಭಕ್ತಾ ರಾಖೇ ಪಾಯಾಪಾಶೀ । ದುರ್ಜನಾಸೀ ಸಂಹಾರಿ ॥'' ಈ ಉದ್ದೇಶದಿಂದ ಅವತಾರಕ್ಕೆ ಬಂದ ಭಗವಾನ ವಿಷ್ಣುವಿನ ಲೀಲೆಯು ಈ ಗ್ರಂಥದಲ್ಲಿ ವಿಸ್ತಾರವಾಗಿ ವರ್ಣಿಸಿರುವುದು. ಭಾಗವತದ ದಶಮಸ್ಕಂಧವೆಂದರೆ ಭಕ್ತಿಪ್ರೇಮದ ಆವಿಷ್ಕಾರ ಮತ್ತು ಲೋಕೋತ್ತರ ಕೀರ್ತಿಯ ದೃಷ್ಟಾ ಪ್ರಶಾಸಳ ಭಗವಾನ ಶ್ರೀಕೃಷ್ಣನ ಬಾಲಲೀಲೆಯಿಂದ ತುಂಬಿತುಳುಕುತ್ತಿರುವ ಭಾಗವತದ ತಿರುಳೇ ಆಗಿರುವುದು. ಆದರೆ ಏಕಾದಶಸ್ಕಂಧವೆಂದರೆ ಭಾಗವತದ ಫಲವೇ ಆಗಿರುವುದು. ಭಗವಾನ ಶ್ರೀಕೃಷ್ಣನ ಜೀವನದಲ್ಲಿನ ಮಹತ್ವಪೂರ್ಣ ಉಪದೇಶವೆಂದು ಈ ಸ್ಕಂಧದತ್ತ ಅಧಿಕವಾಗಿ ಜಿಜ್ಞಾಸೆಯಿಂದ ಹಾಗೂ

ಅಧಿಕ ಪ್ರೀತಿಯಿಂದ ಕಾಣಬೇಕಾಗುವುದು.

ಅರ್ಜುನನಿಗೆ ಶ್ರೀಕೃಷ್ಣನು ಗೀತೆಯ ಉಪದೇಶ ಮಾಡಿದನು. ಆದರೆ ಆ ಉಪದೇಶದ ಧ್ಯೇಯವು ಅರ್ಜುನನ ಮೋಹ ನಷ್ಟಗೊಳಿಸಲು ಮತ್ತು ಆತನಿಗೆ ಯುದ್ಧಕ್ಕಾಗಿ ಪ್ರವೃತ್ತಗೊಳಿಸಲು ಇದಾಗಿತ್ತು. ಭಗವಂತನು ಅದನ್ನು ಸಾಧ್ಯಗೊಳಿಸಿದನು. ''ಕರಿಷ್ಯೇ ವಚನಂ ತವ'' ಈ ಅರ್ಜುನನ ಉದ್ಗಾರದಿಂದ ಇದು ಸ್ಪಷ್ಟವಾಗುವುದು. ಯುದ್ಧದ ಪಾರ್ಶ್ವಭೂಮಿ, ಶಾಂತಸ್ಥಿತಿ ಇದ್ದಿಲ್ಲ. ಅರ್ಜುನನ ಮೋಹ ನಾಶ ಮಾಡುವ ಈ ಉದ್ದೇಶವಾಗಿತ್ತು. ಆದ್ದರಿಂದ ಗೀತೆಯಲ್ಲಿನ ಉಪದೇಶವು ಪರಿಣಾಮಕಾರಕ ವಾಗಿದ್ದರೂ ಕೂಡ ಗಡಿಬಿಡಿ ತ್ವರಿತವಾದಂತೆ ಭಾಸವಾಗುತ್ತದೆ. ಆದರೆ ಭಾಗವತವು ಹಾಗಾಗಿರುವುದಿಲ್ಲ. ಕೇವಲ ಜಗತ್ತಿನ ಕಲ್ಯಾಣ, ಸಾಮಾನ್ಯ ಜನರ ಉದ್ಧಾರ ಇದೇ ಉದ್ದೇಶವನ್ನು ಕಣ್ಮುಂದೆ ಇಟ್ಟುಕೊಂಡು ಪರಮಭಕ್ತ ಉದ್ಧವನಿಗೆ ಭಗವಂತನು ಭಾಗವತದ ರಹಸ್ಯವನ್ನು ಹೇಳಿರುವನು ಹಾಗೂ ಈ ಯಾವ ಭಾಗವತ ಧರ್ಮವನ್ನು ಜನಸಾಮಾನ್ಯರಲ್ಲಿ ಪ್ರಚಾರಗೊಳಿಸಲು ಬದ್ರಿಕಾಶ್ರಮಕ್ಕೆ ಹೋಗಲು ತಿಳಿಸಿದನು. ಭಾಗವತದ ಹನ್ನೊಂದನೆಯ ಸ್ಕಂಧವು ಜ್ಞಾನ ಪ್ರಧಾನವಾಗಿದ್ದರೂ ಕೂಡ ಅದರಲ್ಲಿ ಮೂಲಭೂತ ಭಕ್ತಿಸಾಧನೆಯ ಮಹತ್ವವನ್ನು ವರ್ಣಿಸಿರುವುದು. ಉದ್ಧವನಂತಹ ಜಿಜ್ಞಾಸು ಭಕ್ತನು ಅತ್ಯಂತ ಕಳಕಳಿಯಿಂದ ಮಾಡಿರುವ ಭವತರಣೋಪಾಯದ ಪ್ರಶ್ನೆಗಳು ಮತ್ತು ಭಗವಾನ ಶ್ರೀಕೃಷ್ಣನೂ ಸಹ ಅಷ್ಟೇ ಕರುಣೆಯಿಂದ ಮಾಡಿರುವ ವಿವೇಚನೆಗಳಿಂದಲೇ ಈ ಸ್ಕಂಧವು ಅತ್ಯಂತ ಸುಗಂಧಯುಕ್ತ ಪುಷ್ಪಗಳಿಂದ ತುಂಬಿತುಳುಕಿದಂತಾಗಿರುವುದು.

ಕದಾಚಿತ್ ಈ ಕಾರಣದಿಂದಲೇ ನಾಥರಾಯರು ತಮ್ಮ ವಾಙ್ಮಯ ನಿರ್ಮಿಸಲು ಏಕಾದಶ ಸ್ಕಂಧವನ್ನು ಆರಿಸಿಕೊಂಡಿರಬಹುದು. ವ್ಯಾಸರಂತೆಯೇ ನಾಥರ ಈ ವಾಙ್ಮಯ ಕಾರ್ಯವು ಕಲಿಯುಗದಲ್ಲಿನ ಆಸಕ್ತ ಜೀವಿಗಳಿಗೆ ಭವತರಣಕಾರಕವಾಗಿರುವುದು.

ವಾರಕರೀ ಸಾಂಪ್ರದಾಯದಲ್ಲಿ ಉಪಲಬ್ಧವಾಗಿರುವ ಸಂತ ವಾಙ್ಮಯದಲ್ಲಿ ನಾಥರಷ್ಟು ರಚನೆಯನ್ನು ಯಾರೂ ಮಾಡಿರುವುದಿಲ್ಲ. ನಾಥರಾಯರ ಕಾಲದಲ್ಲಿ ಮಹಾರಾಷ್ಟ್ರದ ರಾಜಕೀಯ ಪರಿಸ್ಥಿತಿಯು ಬಹಳಷ್ಟು ಪ್ರತಿಕೂಲವಾಗಿತ್ತು. ಜ್ಞಾನೋಬಾರಾಯರ ಅವತಾರ ಸಮಾಪ್ತಿವರೆಗೂ ಅಲ್ಲಿ ಮುಸಲ್ಮಾನ ಸತ್ತೆಯು ಪ್ರಸ್ಥಾಪಿತವಾಗಿರಲಿಲ್ಲ. ಆದರೆ ಮಾಊಲಿಯವರ ಅವತಾರ ಸಮಾಪ್ತಿ ಮತ್ತು ದೇವಗಿರಿಯ ಧ್ವಂಸದ ಈ ಘಟನೆಯು ಸ್ವಲ್ಪಮಟ್ಟಿಗೆ ಒಂದೇ ವೇಳೆಗೆ ನಡೆದವು. ಜ್ಞಾನೋಬಾರಾಯರ ನಂತರ ಅವರ ಸಮಕಾಲೀನ ಸಂತ ಶ್ರೀ ನಾಮದೇವರಾಯರು ಭಕ್ತಿಯ ಶ್ರೇಷ್ಠತೆಯನ್ನು ಯಶಸ್ವಿಯಾಗಿ ಸಾಂಭಾಳಿಸಿದರು. ನಾಮದೇವರಾಯರು ಪಂಢರೀರಾಯನ ಚರಣಗಳಲ್ಲಿ ವಿಲೀನರಾದ ನಂತರ ಎರಡು ನೂರು ವರ್ಷಗಳ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಯಾವುದೇ ಸಂತರ ಉದಯವಾಗಲಿಲ್ಲ. ಇದು ನಮ್ಮ ರಾಷ್ಟ್ರದ ದುರ್ದೈವವೇ ಸರಿ. ಮಹಾರಾಷ್ಟ್ರದಲ್ಲಿ ನಾಥರ ಕಾಲಕ್ಕೆ ರಾಜಕೀಯ ಪರಿಸ್ಥಿತಿಯು ಮೊಗಲರ ಸತ್ತೆಯಿಂದ ಸ್ಥಿರವಾಗಿತ್ತು. ಅವರು ಮಾಡಿರುವ ಸನಾತನ ಧರ್ಮದ ದುರ್ದಶೆ, ದೇವ - ದೇವತೆಗಳ ವಿಟಂಬನೆ ಮತ್ತು ಧರ್ಮಾಂತರದ ಬಲತ್ಕಾರಗಳಿಂದ ಸರ್ವ ಹಿಂದೂ ಸಮಾಜವು ತಮ್ಮ ಶಕ್ತಿಯನ್ನು ಕಳೆದುಕೊಂಡು ಕುಳಿತುಕೊಂಡಿತ್ತು. ಇಂತಹ ಈ ಪ್ರತಿಕೂಲ ಪರಿಸ್ಥಿತಿಯಲ್ಲಿ ಭಾನುದಾಸರ ಕುಲದಲ್ಲಿ ನಾಥರಾಯರು ಅವತರಿಸಿದರು. ನಾಥರಾಯರೆಂದರೆ ಪ್ರತ್ಯಕ್ಷ ವಿಷ್ಣುವಿನ ಅವತಾರವು. ಸದ್ಗುರು ಜನಾರ್ದನಸ್ವಾಮೀ ಮತ್ತು ದತ್ತಾತ್ರೇಯರ ಪೂರ್ಣಕೃಪೆಯು ಅವರಿಗೆ ಲಭಿಸಿತ್ತು. ತಮ್ಮ ರಸಾಳ ವಾಙ್ಮಯದಿಂದ ನಾಥರು ಬಳಲಿಕೊಂಡಿದ್ದ ಮರಾಠೀ ಮನಕ್ಕೆ ಆಸರೆ ನೀಡಿದರು, ಸಮಾಜಕ್ಕೆ ಒಂದು ದಿಶೆಯನ್ನು ತೋರಿಸಿಕೊಟ್ಟರು.

ನಾಥರ ಕಾಲದಲ್ಲಿ ಮರಾಠೀ ಭಾಷೆಯಲ್ಲಿ ಗ್ರಂಥ ರಚನೆ ಮಾಡುವ ಈ ಮಾತು ಕಡಿಮೆತನವೆಂದು ತಿಳಿಯಲ್ಪಡುತ್ತಿತ್ತು. ಮರಾಠಿಯಲ್ಲಿ ರಚಿಸುವವರನ್ನು ತಿರಸ್ಕರಿಸಲ್ಪಡುತ್ತಿತ್ತು. ಜ್ಞಾನೋಬರಾಯರ ಕಾಲದಲ್ಲಿ ಮರಾಠಿಯಲ್ಲಿ ಗ್ರಂಥ ರಚನೆ ಮಾಡಿ ಅಧ್ಯಾತ್ಮ ಜ್ಞಾನವನ್ನು ಸಾಮಾನ್ಯರವರೆಗೆ ಮುಟ್ಟಿಸುವ ಮಹಾಕಾರ್ಯವು ನಡೆಯುತ್ತಿತ್ತು. ಆದರೆ ಈ ಕಾಲದ ಸಂಸ್ಕೃತ ಪಂಡಿತರಿಂದ ಮರಾಠಿಯ ಉಪೇಕ್ಷೆಯು ಆಗುತ್ತಲೇ ಇತ್ತು. ಸಂಸ್ಕೃತ ಗ್ರಂಥಗಳಿಗೆ ಪ್ರಾಕೃತ ಭಾಷೆಯಲ್ಲಿ ಭಾಷಾಂತರಿಸುವುದು ಇದು ಅಕ್ಷಮ್ಯ ಅಪರಾಧವೆಂದು ತಿಳಿಯುತ್ತಿದ್ದರು. ಆದರೆ ನಾಥರಾಯರು ಇಂತಹ ಮಾತುಗಳಿಗೆ ತಮ್ಮ ಲಕ್ಷವನ್ನು ಕೊಡಲೇ ಇಲ್ಲ. ಸಂಸ್ಕೃತ ಭಾಷೆಯು ನಾಥರಿಗೆ ಪೂರ್ಣವಾಗಿ ಪ್ರಾಪ್ತವಾಗಿತ್ತು. ಸಂಸ್ಕೃತದಲ್ಲಿ ಅವರ ಪ್ರೀತಿಯೂ ಇತ್ತು. ಇವರ ಬಾಲ್ಯದಲ್ಲಿ ಸಂಸ್ಕೃತ ಕಲಿಸುವ ಶಾಸ್ತ್ರಿಯು ನನ್ನಲ್ಲಿರುವ ಬಂಡವಾಳವು ಮುಗಿಯಿತು, ನನಗಿಂತಲೂ ಅಧಿಕ ಜ್ಞಾನವಿರುವ ಸದ್ಗುರುವಿಗೆ ಶರಣಾಗಲು ಆದೇಶ ನೀಡಿದರು. ಇದನ್ನು ನೋಡಿದರೆ ನಾಥರಾಯರಲ್ಲಿರುವ ಸಂಸ್ಕೃತ ಪ್ರಭುತ್ವವು ಎಷ್ಟೆಂಬುದು ಮನವರಿಕೆಯಾಗುವುದು. ಒಂದು ದಿನ ಶಿವಾಲಯದಲ್ಲಿ ಪ್ರಾಪ್ತವಾದ ಆದೇಶದಂತೆ ಶ್ರೀನಾಥರಾಯರು ಜನಾರ್ದನಸ್ವಾಮಿಯವರಿಗೆ ಶರಣಾದರು.

ಆ ಕಾಲದಲ್ಲಿ ಸಂಸ್ಕೃತ ಪಂಡಿತರು ಮರಾಠಿಯ ಅವಹೇಳನೆ ಮಾಡುತ್ತಿದ್ದರೂ ಕೂಡ ನಾಥರು ಸಂಸ್ಕೃತ ಭಾಷೆಯ ನಿಂದೆಯಾಗಲಿ ಅಥವಾ ಅಪಮಾನವನ್ನು ಎಲ್ಲಿಯೂ ಮಾಡಲಿಲ್ಲ. ಏಕೆಂದರೆ ಪರಮಾರ್ಥದಲ್ಲಿ ಭಾಷೆಯ ವಿಷಯವು ಗೌಣವಾಗಿರುವುದು. ನಾಥರಾಯರು ಹೀಗೆ ಹೇಳುವರು :

ಸಂಸ್ಕೃತ ವಂದ್ಯ ಪ್ರಾಕೃತ ನಿಂದ್ಯ । ಹೇ ಬೋಲ ಕಾಯ ಹೋತೀ ಶುದ್ಧ ।

ಹಾಹೀ ಅಭಿಮಾನ ವಾದ । ಅಹಂತಾ ಬಂಧ ಪರಮಾರ್ಥೀ ॥ಅರ್ಥ॥೧೦೩೨॥

(ಅರ್ಥ :- ಸಂಸ್ಕೃತ ಭಾಷೆಯು ವಂದ್ಯ ಮತ್ತು ಪ್ರಾಕೃತ ಭಾಷೆಯು ನಿಂದ್ಯ, ಹೀಗೆ ಹೇಳುವಿಕೆಯು ಯೋಗ್ಯವೇ? ಈ ವಾದವು ಅಭಿಮಾನದಿಂದ ನಿರ್ಮಾಣವಾಗುವುದು. ಅಹಂಕಾರವು ಇದು ಪರಮಾರ್ಥದಲ್ಲಿನ ಬಂಧನೆಯಾಗಿರುವುದು.)

ಇಂದಿನ ದಿನಗಳಲ್ಲಿ ಯಾವ ಪ್ರಕಾರವಾಗಿ ಇಂಗ್ಲೀಷ ಭಾಷೆಯ ಪ್ರಖರವಾದ ತೇಜದಿಂದ ಮಹಾ ಮಹಾ ವಿದ್ವಾನರು ಮರಾಠೀ ಭಾಷೆಯ ಉಪೇಕ್ಷೆ ಮಾಡುತ್ತಿರುವುದು ತೋರುವುದೋ, ಅದೇ ಪ್ರಕಾರವಾಗಿ ಆ ಕಾಲದಲ್ಲಿ ಸಂಸ್ಕೃತದ ಪ್ರಭಾವದಿಂದ ಮರಾಠೀ ಭಾಷೆಯ ಕುತ್ತಿಗೆಯನ್ನು ಹಿಚುಕಲ್ಪಡುತ್ತಿತ್ತು. ಆ ಕಾಲದಲ್ಲಿ ಪ್ರಾಪ್ತವಾದ ವಾಙ್ಮಯಕ್ಕೆ ಮರಾಠೀ ಭಾಷೆಯಲ್ಲಿ ವಿಶೇಷವಾಗಿ ಗ್ರಂಥ ರಚನೆಯಾಗುತ್ತಿದ್ದಿಲ್ಲ. ಹೀಗೆ ಕಂಡುಬರುವುದು. ಭಾಷೆ- ಇತಿಹಾಸ ಸಂಶೋಧನೆಯ ಪರಿಶ್ರಮದಿಂದ ಇಂದು ಸಂತ ವಾಙ್ಮಯಕ್ಕೆ ಮಹತ್ವ ಕೊಟ್ಟದ್ದರೂ ಮುಕುಂದರಾಜನ "ವಿವೇಕಸಿಂಧೂ" ಎಂಬ ಗ್ರಂಥ ಬಿಟ್ಟರೆ ಶ್ರೀಜ್ಞಾನೇಶ್ವರ ಮಹಾರಾಜ ಹಾಗೂ ಅವರ ಸಮಕಾಲೀನ ಸಂತರ ಮಾತ್ರ ವಾಙ್ಮಯವು ಉಪಲಬ್ಧವಿದೆ. ತದನಂತರ ನಾಥರಾಯರವರೆಗೆ ನಡುವಿನ ನೂರಾ ಎಪ್ಪತ್ತೈದರಿಂದ ಎರಡು ನೂರು ವರ್ಷಗಳವರೆಗೆ ಯಾವ ಸಂತರಿಂದಲೂ ಸಂತ ವಾಙ್ಮಯವು ನಿರ್ಮಾಣ ವಾಗಿರುವುದು ಉಪಲಬ್ಧವಿಲ್ಲ. ಜ್ಞಾನೋಬರಾಯ, ನಾಮದೇವರಾಯ ಹಾಗೂ ಆ ಕಾಲದ ಸಂತರ ವಾಙ್ಮಯವು ಇವೇ ಮರಾಠಿಯಲ್ಲಿನ ಪ್ರಮುಖ ಗ್ರಂಥಗಳಾಗಿರುವುವು. ಆ ಕಾಲದಲ್ಲಿ ಮುದ್ರಣ ಕಲೆಯು ಅಸ್ತಿತ್ವದಲ್ಲಿರಲಿಲ್ಲ. ಹಸ್ತಲಿಖಿತ ಗ್ರಂಥಗಳ ಪ್ರತಿಗಳನ್ನು ತಯಾರಿಸುವುದು ಬಹಳ ಕಠಿಣ ಕಾರ್ಯವಾಗಿತ್ತು. ಆದ್ದರಿಂದ ಬಹುಸಂಖ್ಯೆಯಲ್ಲಿ ಜನರು ಸಂತ ವಾಙ್ಮಯದಿಂದ ವಂಚಿತರಾಗಿದ್ದರು. ಸುದೈವದಿಂದ ಇಂದು ಮುದ್ರಣ ಕಲೆಯ ಪ್ರಗತಿಯು ತಂತ್ರಜ್ಞಾನದಿಂದ ಬಹು ಶೀಘ್ರವಾಗಿ ಹಾಗೂ ಆ ಕಾಲದ ತುಲನೆಯಿಂದ ಕಡಿಮೆ ಖರ್ಚಿನಲ್ಲಿ ಗ್ರಂಥದ ಪ್ರತಿಗಳು ಸಿದ್ಧವಾಗುವುವು. ಇಂದು ಅಸಂಖ್ಯ ವಾಚಕರು ಇದರ ಲಾಭವನ್ನು ಪಡೆಯುವಂತಾಗಿರುವುದು. ಆದರೆ ಆ ಕಾಲದಲ್ಲಿ ಈ ಮಾತು ಅಶಕ್ಯವಾಗಿತ್ತು. ಪೂರ್ವಕಾಲದಲ್ಲಿ ಸಂಸ್ಕೃತ ಹಸ್ತಲಿಖಿತ ಗ್ರಂಥಗಳು ಸಾಕಷ್ಟು ದೊರಕುತ್ತಿದ್ದವು. ಆದ್ದರಿಂದ ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಎಷ್ಟೋ ಶಬ್ದಗಳನ್ನು ಇಂದು ಬಳಸುವಿಕೆ ಇರುವುದಿಲ್ಲ. ಎಷ್ಟೋ ಶಬ್ದಗಳ ಮೂಲರೂಪವು ಬಹಳಷ್ಟು ಬದಲಾಯಿಸಿಬಿಟ್ಟವೆ. ಇಂದಿನ ನಮ್ಮ ಭಾಷೆಯು ಹೇಗಾಗಿದೆ ಎಂಬುವುದು ಅಭ್ಯಾಸ ಮಾಡುವವರಿಗೆ ನಾಥರಾಯರ ಗ್ರಂಥದಿಂದ ಸಾಕಷ್ಟು ಲಾಭವಾದೀತು.

ಜ್ಞಾನೇಶ್ವರ ಮಹಾರಾಜರ ವಿಚಾರಗಳ ಪ್ರಭಾವವು ನಾಥರಾಯರಲ್ಲಿ ಬೀರಿರುವುದಲ್ಲದೇ ಎಷ್ಟೋ ಕಡೆಗಳಲ್ಲಿ ಅವರ ಓವೀಗಳು ತಂತೋತಂತವಾಗಿ ಕೂಡಿಕೊಳ್ಳುತ್ತವೆ. ಜ್ಞಾನೇಶ್ವರೀಯಲ್ಲಿ ಐದನೆಯ ಅಧ್ಯಾಯದ ಕೊನೆಯಲ್ಲಿ ಮಾಉಲಿಯವರು ಒಂದು ವಿಚಾರವನ್ನು ಮಂಡಿಸಿರುವರು.

ಏರ್ಹ್ವೀ ತರೀ ಅವಧಾರಾ । ಜೋ ದಾವಿಲಾ ತುಮ್ಹಿ ಅನುಸಾರಾ ।
ತೋ ಪವ್ಹಣ್ಯಾಹೂನಿ ಪಾಯ ಉತಾರಾ । ಸೋಹಪಾ ಜೈಸಾ ॥೧೬೫॥

ತೈಸಾ ಸಾಂಖ್ಯಾಹೂನಿ ಪ್ರಾಂಜಳಾ । ಆಮ್ಹಾ ಸಾರಿಖಿಯಾ ಅಭೋಳಾ ।
ಏಥ ಆಹಾತಿ ಪರಿ ಕಾಂಹೀ ಕಾಳಾ । ತೋ ಸಾಹೋ ಯೇ ವರ ॥೧೬೬॥

ನಾಥರಾಯರು ಭಾಗವತದಲ್ಲಿನ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಇದೇ ವಿಷಯವನ್ನು ಮಂಡಿಸಿರುವರು.

ಪವ್ಹಣಿಯಾಪರಿಸ ಪಾಯಉತಾರಾ । ಅಬಳೀ ಉತರಿಜೇ ಭವಸಾಗರಾ ।
ತೈಸಾ ಸಾಧಕಾಲಾಗೀ ಸೋಪಾರಾ । ಉಪಾವ ಪುಢಾರಾ ಹರಿ ಸಾಂಗೇ ॥೭೩೭॥

ಭಾಗವತದ ಇಪ್ಪತ್ತೊಂಭತ್ತನೆಯ ಅಧ್ಯಾಯದಲ್ಲಿ ಇದೇ ಅನುವಾದವು ದೊರಕುವುದು.

ಪವ್ಹಣಿಯಾಪರಿಸ ಪಾಯಉತಾರಾ । ಸ್ತ್ರಿಯಾ ಬಾಳಾ ಅತಿಸೋಪಾರಾ ।
ತೈಶಿಯಾ ಉಪಾಯಪ್ರಕಾರಾ । ಶಾರ್ಙ್ಗಧರಾ ಸಾಂಗಿಜೇ ॥೪೪॥

ಏಕನಾಥೀ ಭಾಗವತ ವ್ಯತಿರಿಕ್ತವಾಗಿ ಭಾವಾರ್ಥ ರಾಮಾಯಣ, ರುಕ್ಮಿಣೀ ಸ್ವಯಂವರ, ಹಸ್ತಾಮಲಕ, ಆನಂದ ಲಹರೀ, ಚಿರಂಜೀವ ಪದ ಹೀಗೆ ಅನೇಕ ಗ್ರಂಥಗಳನ್ನು ನಾಥರಾಯರು ಬರೆದಿರುವರು. ಭಾರುಡದ ಈ ಪ್ರಕಾರವನ್ನು ಪ್ರಥಮ ವಾಗಿ ನಾಥರಾಯರೇ ಪ್ರಾರಂಭಿಸಿದರು. ಅವರ ಅಭಂಗಗಳಲ್ಲಿ ರಸಾಳ ಮಾಧುರ್ಯವಿರುವುದು. ಕೆಲವು ಸ್ಫುಟ ಅಭಂಗಗಳೂ ಕೂಡ ಸೇರಿಕೊಂಡಿರುವುವು.

ವಾರಕರೀ ಸಾಂಪ್ರದಾಯಗಳಲ್ಲಿ (ಜ್ಞಾನೇಶ್ವರೀ, ತುಕಾರಾಮ ಗಾಥಾ ಹಾಗೂ ಶ್ರೀಮದ್‌ಭಾಗವತ ಈ ಮೂರು ಗ್ರಂಥಗಳಿಗೆ ಪ್ರಸ್ಥಾನತ್ರಯೀ ಎಂದು ಮನ್ನಿಸಲಾಗಿರುವುದು.) ಈ ಪ್ರಸ್ಥಾನತ್ರಯೀಗಳು ಅಖಿಲ ಸಮಾಜಕ್ಕೆ ಧರ್ಮದ ಧೈರ್ಯ ಹಾಗೂ ಭಕ್ತಿಯ ಭಾವವನ್ನು ಕೊಟ್ಟು ಎಲ್ಲರಿಗೂ ತೀರಿಸಲು ಬಾರದ ಋಣಿಯನ್ನಾಗಿ ಮಾಡಿವೆ.

ನಾಥರಾಯರ ವಾಙ್ಮಯ ಕುರಿತು ಬರೆಯುವಷ್ಟು ಪ್ರಗಲ್ಭತೆ ಹಾಗೂ ಅಭ್ಯಾಸವು ನನ್ನಲ್ಲಿಲ್ಲ. ಪ್ರಸ್ತಾವನೆಯ ರೂಪ

ದಿಂದ ಮನದಲ್ಲಿ ಬಂದ ವಿಚಾರವನ್ನು ಅವರ ಕೃಪೆಯಿಂದಲೇ ವ್ಯಕ್ತಗೊಳಿಸುವ ಪ್ರಯತ್ನ ಮಾಡಿದೆ.

ತರೀ ವಿಶ್ವ ಪ್ರಗಟತಿಯಾ ಗಭಸ್ತೀ । ಕಾಯ ಹಾತಿವೇನ ನ ಕೀಜೇ ಆರತೀ? ।
ಕಾ ಚುಳೋದಕೇ ಅಪಾಂಪತೀ । ಅರ್ಘ್ಯ ನೇದಿಜೇ ॥

ಇದುವೇ ಬರೆಯುವ ಹಿಂದಿನ ಭಾವನೆಯಾಗಿದೆ. ನಾಥರಾಯರ ಚರಣಗಳಲ್ಲಿ ನತಮಸ್ತಕನಾಗುವುದೊಂದೇ ನಮ್ಮ ಕಾರ್ಯವಾಗಿದೆ.

ಶರಣ ಶರಣ ಏಕನಾಥಾ । ಚರಣೀ ಮಾಥಾ ಠೇವಿಲಾ ॥

ಹೃದ್ಗತ

ಸಂತರು ಭಾಷೆಯ ಬಂಧನೆಗಳನ್ನು ಎಂದೂ ಪಾಲಿಸಿರುವುದಿಲ್ಲ. ಜನರತ್ತ ವಿಚಾರ, ಭಾವನೆ ಮುಟ್ಟಿಸುವ ಅದೇ ಭಾಷೆಯು ಸಂತರ ತತ್ವವಾಗಿತ್ತು. ಭಾಗವತದಂತಹ ಗ್ರಂಥವು ಕನ್ನಡ ಭಾಷೆಯಲ್ಲಿ ರೂಪಾಂತರವಾಗುತ್ತಿರುವುದು ಇದು ಕನ್ನಡ ಭಾಷೆಯ ವಾರಕರೀಗಳವರಿಗೆ ಪರ್ವಕಾಲವಾಗಿದೆ. ವಾಸ್ತವಿಕವಾಗಿ ಈ ಕಾರ್ಯವು ಇದಕ್ಕಿಂತ ಮುಂಚೆಯೇ ಆಗಬೇಕಾಗಿತ್ತು. ಆದರೆ, ಯಾವುದೇ ಕಾರ್ಯಕ್ಕೆ ತಕ್ಕ ವೇಳೆ ಬರಬೇಕಾಗುವುದು. ಈ ಸಮಯದಲ್ಲಿ ಭಾಗವತ ಗ್ರಂಥವು ಕನ್ನಡದಲ್ಲಿ ರೂಪಾಂತರ ವಾಗಬೇಕೆಂಬ ಈಶ್ವರ ಸಂಕೇತ ಇದ್ದ ಕಾರಣದಿಂದಲೇ ಈಗ ಈ ಕಾರ್ಯವು ಸಾಧಿಸಿರುವುದು.

ಮರಾಠೀ ಸಂತರ ಸಂಪೂರ್ಣ ವಾಙ್ಮಯವು (ಅಪವಾದ ಬಿಟ್ಟು) ಮರಾಠೀ ಭಾಷೆಯಲ್ಲಿಯೇ ಇರುವುದು. ಈ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆಯುವುದು ಹಾಗೂ ಅಭಂಗಗಳ ಅಥವಾ ಗ್ರಂಥಗಳ ಮತಿತಾರ್ಥವನ್ನು ಕನ್ನಡ ಭಾಷೆಯಲ್ಲಿ ಸ್ಪಷ್ಟೀಕರಣ ಮಾಡುವುದು ಈಗಿನ ಮಹತ್ವದ ಅವಶ್ಯಕತೆಯಾಗಿರುವುದು. ಹ.ಭ.ಪ. ಕೃಷ್ಣಾಜೀ ಜ್ಞಾನಮೋಠೆ ಇವರು ಇದಕ್ಕಿಂತಲೂ ಮುನ್ನ ಕೆಲವು ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ರೂಪಾಂತರ ಮಾಡಿರುವರು. ಈ ಭಾಗವತದ ಕನ್ನಡ ರೂಪಾಂತರ ನಂತರ ಅವರು ಉಳಿದ ಗ್ರಂಥಗಳಿಗೂ ಕೂಡ ಕನ್ನಡದಲ್ಲಿ ರೂಪಾಂತರ ಮಾಡುವ ಕಾರ್ಯವನ್ನು ಶಕ್ಯವಾದಂತೆ ಮಾಡುತ್ತಿರಬೇಕು. ಇರಲಿ.

ನಾಥರಾಯರ ಚರಣಗಳಲ್ಲಿ ವಿನಮ್ರನಾಗಿ ಮಸ್ತಕವನ್ನಿಟ್ಟು ಇಷ್ಟೇ ಹೇಳುವೆನು

ಶರಣ ಶರಣ ಏಕನಾಥಾ । ಚರಣೀ ಮಾಥಾ ಠೇವಿಲಾ ।೧॥ ನಕಾ ಪಾಹೂ ಗುಣದೋಷ ।

ಝಾಲೋ ದಾಸ ಪಾಯಾಂಚಾ ।೨॥ ಆತಾ ತುಮ್ಹೀ ನುಪೇಕ್ಷಿತಾ । ನಾಹೀ ಸತ್ತಾ ಆಪುಲಿಯಾ ।೩॥

ತುಕಾ ಮ್ಹಣೇ ಭಾಗವತ । ಕೇಲೇ ಶ್ರುತ ಸಕಳಾ ।೪॥

– ಹ.ಭ.ಪ. ವಿಠ್ಠಲರಾವ ತಾತ್ಯಾಸಾಹೇಬ ವಾಸಕರ
ಶ್ರೀಕ್ಷೇತ್ರ ಪಂಢರಪೂರ

ವಿಷಯಾನುಕ್ರಮಣಿಕೆ

ಒಂದನೆಯ ಅಧ್ಯಾಯ

ಗ್ರಂಥಾರಂಭದ ನಮನ	೧
ಗಣೇಶ ನಮನ	೨-೧೬
ಸರಸ್ವತೀ ನಮನ	೧೭-೩೪
ಸಂತ ನಮನ	೩೫-೫೬
ಏಕನಾಥೀ ಭಾಗವತ - ರಚನಾ ಪ್ರಸಂಗ	೫೭-೬೮
ಕುಲದೇವತಾ ಏಕವೀರನ ನಮನ	೬೯-೭೮
ಸದ್ಗುರು ಜನಾರ್ದನ ನಮನ	೭೯-೯೯
ಏಕನಾಥೀ ಭಾಗವತ - ಪ್ರಸ್ತಾವನೆ	೧೦೦-೧೧೫
ಟೀಕಾಕಾರ ಹಾಗೂ ಪೂರ್ವಕವಿಗಳಿಗೆ ನಮನ	೧೧೬-೧೨೨
ಸಂಸ್ಕೃತ ಹಾಗೂ ಪ್ರಾಕೃತ	೧೨೩-೧೩೦
ಪೂರ್ವಜರ ನಮನ	೧೩೧-೧೩೬
ವೈಷ್ಣವ ಕುಲದ ನಮನ	೧೩೭-೧೩೮
ಗೋತ್ರ, ಪೂರ್ವಜ ನಮನ	೧೩೯-೧೪೦
ಭೂತಮಾತ್ರರಿಗೆ ನಮನ	೧೪೧
ದತ್ತಾತ್ರೇಯ ನಮನ	೧೪೨-೧೪೩
ಭಾಗವತ ಪುರಾಣ	೧೪೪-೧೫೮
ಪರೀಕ್ಷಿತೀ	೧೫೯-೧೬೫
ಬ್ರಾಹ್ಮಣ	೧೬೬-೧೭೦
ಭಾಗವತ ನಮನ ಹಾಗೂ ಸಂತರ ಸಂತೋಷ	೧೭೧-೧೭೯
ಏಕನಾಥೀ ಭಾಗವತ - ಗ್ರಂಥ ಪ್ರಸ್ತಾವನೆ	೧೮೦-೧೮೬
ಕೃಷ್ಣ ಮಹಿಮಾ	೧೮೭-೧೯೬
ಏಕಾದಶಸ್ಕಂಧ- ತಾತ್ಪರ್ಯ	೧೯೭-೨೦೧
ಕೌರವಕುಲನಿರ್ದಳಣ	೨೦೨-೨೧೯
ಯಾದವಕುಲನಿರ್ದಳಣ	೨೨೦-೨೩೭
ಕೃಷ್ಣ ಮಹಿಮಾ	೨೩೮-೨೬೬
ಯಾದವಕುಲನಿರ್ದಳಣ	೨೬೭-೨೮೮
ಕೃಷ್ಣ ಸ್ವರೂಪ ವರ್ಣನೆ	೨೮೯-೨೯೬
ಕೃಷ್ಣ ಮಹಿಮೆ	೨೯೭-೩೦೦
ಯಾದವಕುಲನಿರ್ದಳಣ	೩೦೧-೩೦೯
ಶ್ರೀಕೃಷ್ಣನು ಪಿಂಡಾರಕಕ್ಕೆ ಕಳಿಸಿದ ಮುನೀ	೩೧೦-೩೩೬
ಯಾದವಕುಲನಿರ್ದಳಣ	೩೩೭-೩೯೬
ಎರಡನೆಯ ಅಧ್ಯಾಯದ ಪ್ರಸ್ತಾವನೆ	೩೯೭-೩೯೯

ಎರಡನೆಯ ಅಧ್ಯಾಯ

ಜನಾರ್ದನ ನಮನ	೧-೧೩
ಎರಡನೆಯ ಅಧ್ಯಾಯದ ಪ್ರಸಂಗ	೧೪-೨೦
ಶುಕ	೨೧-೨೨
ನಾರದ	೨೩-೨೮
ಅಭಕ್ತರ ಗತೀ	೨೯-೩೫
ನಾರದ	೩೬-೪೨
ವಸುದೇವಕೃತ ನಾರದಸ್ತುತೀ	೪೩-೭೮
ಭಾಗವತ ಧರ್ಮದ ನಿರೂಪಣೆಗೆ ವಸುದೇವನ ನಾರದರಿಗೆ ವಿನಂತಿ	೭೯-೧೦೨
ಭಾಗವತಧರ್ಮದ ನಿರೂಪಣೆಯ ಪ್ರಸಂಗ	೧೦೩-೧೦೯
ಭಾಗವತಧರ್ಮ ಮಹಿಮೆ	೧೧೦-೧೧೭
ನಾರದಕೃತ ವಸುದೇವಸ್ತುತೀ	೧೧೮-೧೨೩
(ನಾರದನ) ಸ್ಮರಣೆ-ವಿಸ್ಮರಣೆ	೧೨೪-೧೨೮
(ಜೀರ್ಣ) ಭಾಗವತಧರ್ಮದ ಇತಿಹಾಸ	೧೨೯-೨೧೪
ವಿದೇಹಕೃತ ಆರ್ಷಭಸ್ತುತೀ	೨೧೫-೨೨೩
ನರದೇಹ	೨೨೪-೨೩೯
ಭಕ್ತಭೇಟಿಯ ಲಾಭ	೨೪೦-೨೪೮
ವಿದೇಹನ ಆರ್ಷಭರಿಗೆ ವಿನಂತೀ	೨೪೯-೨೭೪
ಭಾಗವತಧರ್ಮನಿರೂಪಣೆಯ ಪ್ರಸಂಗ	೨೭೫-೨೭೯
ವಿದೇಹನ ಪ್ರಶ್ನೆ	೨೮೦-೨೮೩
ದೇಹಬುದ್ಧಿ (ಅಹಂತಾ)	೨೮೪-೨೯೨
ವಿಷಯ	೨೯೩-೨೯೭
ಭಕ್ತಿ - ಅರ್ಪಣಭಕ್ತಿ	೨೯೮-೩೦೨
ಭಕ್ತಿ ಮತ್ತು ಸಂಸಾರ ಭಯ	೩೦೩-೩೦೮
ಭಾಗವತ ಧರ್ಮದ ಮಹಿಮೆ	೩೦೯-೩೧೭
ಭಾಗವತ ಮಹಿಮೆ	೩೧೮-೩೨೯
ಭಕ್ತೀ-ವಿಧಿನಿಷೇಧ	೩೩೦-೩೪೫
ಅರ್ಪಣಭಕ್ತೀ	೩೪೬-೩೫೦
ಭಕ್ತಿ-ಮಾನಸಿಕ ಅರ್ಪಣ ಭಕ್ತಿ	೩೫೧-೩೬೧
ಭಕ್ತಿ- ಇಂದ್ರಿಯ ಕರ್ಮಗಳ ಅರ್ಪಣೆ	೩೬೨-೩೯೩
ಭಕ್ತಿ-''ಬ್ರಹ್ಮಾಹಮಸ್ಮಿ''-ಅಭಿಮಾನ ಅರ್ಪಣೆ	೩೯೪-೪೧೭
ಭಕ್ತಿ-ಮನ-ಚಿತ್ತ ಅರ್ಪಣೆ	೪೧೮-೪೨೨
ತಾಟಸ್ಥ್ಯ ಹಾಗೂ ಸಮಾಧಿ	೪೨೩-೪೩೦
ಪರಮಸಮಾಧಿ - ಬುದ್ಧಿಯ ಬ್ರಹ್ಮಾರ್ಪಣೆ	೪೩೧-೪೩೮
ಭಕ್ತಿ-ಕಾಯಿಕ ಕರ್ಮಾರ್ಪಣೆ	೪೩೯-೪೫೩
ಮಾಯಾ	೪೫೪-೪೬೨
ಭಕ್ತಿಯಿಂದ ಮಾಯಾ ನಿವೃತ್ತಿ	೪೬೩-೪೭೩
ಅಭಕ್ತರ ಗತಿ (ಅಭಕ್ತರಿಗೆ ದುಃಖ)	೪೭೪-೪೭೮
ಗುರುಮಹಿಮಾ	೪೭೯-೫೦೭
ಸಂಸಾರಮಿಥ್ಯಾತ್ವ	೫೦೮-೫೧೩
ಮನನಿರೋಧನ	೫೧೪-೫೨೩

ಭಕ್ತಿ-ಶ್ರವಣ-ಮನನ-ಭಕ್ತಿ ೫೨೪-೫೩೬
ಕೀರ್ತನ ಭಕ್ತಿ ೫೩೭-೫೪೬
ನಾಮಸ್ಮರಣೆ ಭಕ್ತಿ ೫೪೭-೫೫೩
ಭಕ್ತಿಯಿಂದ ಮೋಕ್ಷ ೫೫೪-೫೫೬
ಭಕ್ತರ ಆತ್ಮಸಾಕ್ಷಾತ್ಕಾರ ೫೫೭-೫೬೭
ಭಕ್ತರ ಬ್ರಹ್ಮಾನಂದ ೫೬೮-೫೭೯
ಅದ್ವೈತಾನುಭವ-ಸರ್ವತ್ರ ಬ್ರಹ್ಮಭಾವ ೫೮೦-೬೦೨
ಭಕ್ತಿಯಿಂದ ಭಗವತ್ಪ್ರಾಪ್ತೀ ೬೦೩-೬೧೭
ಭಕ್ತಿನಿರೂಪಣೆಯ ಉಪಸಂಹಾರ ೬೧೮-೬೨೪
ಭಕ್ತಲಕ್ಷಣನಿರೂಪಣೆ ೬೨೫-೬೩೪
ಭಕ್ತರ ಲಕ್ಷಣೆಗಳು ೬೩೫-೬೩೯
ಉತ್ತಮಭಕ್ತ ಲಕ್ಷಣ ನಿರೂಪಣೆಯ
ಪ್ರಸಂಗ ೬೪೦-೬೪೯
ಮಧ್ಯಮ ಭಕ್ತನು ೬೫೦-೬೫೨
ಪ್ರಾಕೃತ ಭಕ್ತನು ೬೫೩-೬೫೫
ವಿಷಯೀ ಅನಾಸಕ್ತ- ಉತ್ತಮ ಭಕ್ತನು ೬೫೬-೬೬೩
ಸಂಸಾರಭ್ರಮನಿರಾಸ- ಉತ್ತಮ ಭಕ್ತನು ೬೬೪-೬೭೨
ಇಂದ್ರಿಯಕ್ಲೇಶನಿರ್ಮುಕ್ತಿ ೬೭೩-೬೭೯
ಅಹಂತಾನಿರ್ಮುಕ್ತಿ ೬೮೦-೬೯೧
ನಿಷ್ಕಾಮತಾ - ಉತ್ತಮ ಭಕ್ತನು ೬೯೨-೬೯೯
ನಿರಹಂಕಾರತಾ - ಉತ್ತಮ ಭಕ್ತನು ೭೦೦-೭೨೧
ದೇವನು ಭಕ್ತನ ರಕ್ಷಣೆ ಮಾಡುವನು ೭೨೨-೭೨೭
ಅದ್ವೈತಭಕ್ತಿ - ಉತ್ತಮಭಕ್ತಿ ೭೨೮-೭೪೨
ನಿರಪೇಕ್ಷತಾ - ಉತ್ತಮ ಭಕ್ತನು ೭೪೩-೭೬೧
ಭಕ್ತರ ತಾಪನಿವೃತ್ತೀ ೭೬೨-೭೭೦
ಲಕ್ಷಣಗಳ ಸಾರಸ್ಥಿತಿ - ಉತ್ತಮ ಭಕ್ತನು ೭೭೧-೭೯೨
ಎರಡನೆಯ ಅಧ್ಯಾಯದ ಉಪಸಂಹಾರ ೭೯೩-೮೦೦

ಮೂರನೆಯ ಅಧ್ಯಾಯ

ಸದ್ಗುರು ಜನಾರ್ದನ ನಮನ ೧-೧೫
ಎರಡನೆಯ ಅಧ್ಯಾಯನ
ಸಿಂಹಾವಲೋಕನೆ ೧೬-೧೭
ಮೂರನೆಯ ಅಧ್ಯಾಯನ ಪ್ರಸ್ತಾಪ ೧೮-೨೨
ಮಾಯಾ ನಿರೂಪಣೆಯ
ವಿದೇಹನ ವಿನಂತೀ ೨೩-೩೦
ಮಾಯಾ ನಿರೂಪಣೆ ೩೧-೭೨
ಸೃಷ್ಟಿಯ ಉತ್ಪತ್ತೀ ೭೩-೮೫
ಸೃಷ್ಟಿಯ ಸ್ಥಿತಿ ೮೬-೧೪೯
ಸೃಷ್ಟಿ ಪ್ರಳಯ ೧೫೦-೨೦೦
ಮಾಯಾವಿಂದಾನಕಾರ್ಯ ೨೦೧-೨೦೯
ಮಾಯಾಸ್ವರೂಪ ೨೧೦-೨೧೮
ಮಾಯಾ-ತರಣೋಪಾಯದ ವಿದೇಹನ
ವಿನಂತಿ ೨೧೯-೨೨೭
ವೈರಾಗ್ಯದಿಂದ ಮಾಯಾತರಣ ೨೨೮-೨೩೨
ಸ್ತ್ರೀಕಾಮದಿಂದ ಮಾಯಾಬಾಧೆ ೨೩೩-೨೪೪
ಧನಲೋಭದಿಂದ ಮಾಯಾಬಾಧೆ ೨೪೫-೨೫೭
ಇಹಲೋಕ ಮತ್ತು ಸ್ವರ್ಗ ಇವು ನಶ್ವರ, ೨೫೮-೨೬೨
ಸ್ವರ್ಗದ ದುಃಖ ೨೬೩-೨೬೭
ವಿಷಯ (ದುಃಖದಾಯಕ) ೨೬೮-೨೭೧
ಗುರುಭಕ್ತಿಯಿಂದ ವೈರಾಗ್ಯ
ಮತ್ತು ಮೋಕ್ಷ ೨೭೨-೨೭೪
ಗುರುಲಕ್ಷಣಗಳು ೨೭೫-೨೮೪
ಸದ್ಗುರು ಲಕ್ಷಣಗಳು ೨೮೫-೨೮೮
ಗುರುಬ್ರಹ್ಮಜ್ಞಾನೀ ಅಲ್ಲಿ ಶಿಷ್ಯನ ಚಿತ್ತವು ೨೮೯-೨೯೫
ಸದ್ಗುರು ಲಕ್ಷಣಗಳು ೨೯೬-೩೨೪
ಮಾಯಿಕ ಶಿಷ್ಯ ೩೨೫-೩೨೯
ಅಮಾಯಿಕ ಶಿಷ್ಯ (ಸಚ್ಛಿಷ್ಯ) ೩೩೦-೩೪೮
ಭಾಗವತ ಧರ್ಮವನ್ನು ಗುರುವಿನಲ್ಲಿ ಕಲೆ ೩೪೯-೩೫೦
ಸತ್ಸಂಗ-ಅಸತ್ಸಂಗ ೩೫೧-೩೫೪
ಪ್ರಶ್ರಯ (ವಿನಯ) ೩೫೫-೩೫೮
ದಯಾ ೩೫೯-೩೬೫
ಮೈತ್ರಿ ೩೬೬-೩೬೮
ಭಾವ (ಶ್ರದ್ಧೆ) ೩೬೯-೩೭೭
ಶುಚಿತಾ ೩೭೮-೩೯೯
ತಪಸ್ಸು ೪೦೦-೪೦೨
ತಿತಿಕ್ಷಾ (ದ್ವಂದ್ವ ಸಹಿಷ್ಣುತೆ) ೪೦೩-೪೧೪
ಮೌನ ೪೧೫-೪೨೭
ಆರ್ಜವ ೪೨೮-೪೩೩
ಬ್ರಹ್ಮಚರ್ಯ ೪೩೪-೪೪೯
ಅಹಿಂಸೆ ೪೫೦-೪೬೨
ದ್ವಂದ್ವಸಾಮ್ಯ ೪೬೩-೪೭೬
ಅದ್ವೈತಬೋಧೆ- ಪರಬ್ರಹ್ಮಪ್ರಾಪ್ತೀ ೪೭೭-೪೯೧
ಅನ್ನ-ಅಚ್ಛಾದನೆ (ಸಾಧಕರ) ೪೯೨-೫೦೨
ಭಕ್ತಿಶಾಸ್ತ್ರ (ಭಾಗವತಶಾಸ್ತ್ರ) ೫೦೩-೫೧೫
ವಿಷಯನಿವೃತ್ತಿಗಾಗಿ ಶಾಸ್ತ್ರನೇಮ ೫೧೬-೫೩೭
ಭಕ್ತಿಯಿಂದ ಮೋಕ್ಷಪ್ರಾಪ್ತಿ ೫೩೮-೫೪೩
ಭಕ್ತಿಯಿಂದ ಧ್ಯಾನ ಹತ್ತುವುದು ೫೪೪-೫೫೨
ಕೃಷ್ಣಾರ್ಪಣೆ -ಬ್ರಹ್ಮಾರ್ಪಣೆ-ಧ್ಯಾನ ೫೫೩-೫೬೬
ಪೂಜ್ಯಸ್ಥಾನಗಳು ೫೬೭-೫೮೨
ಭಕ್ತರ ಪರಮಾನಂದದ ಲಕ್ಷಣಗಳು ೫೮೩-೬೦೬
ಶಿಷ್ಯನ ಪರಮಾನಂದದಿಂದ ಗುರುವಿಗೆ ೬೦೭-೬೧೪
ಭಾಗವತ ಧರ್ಮದಿಂದ ಮಾಯಾತರಣ ೬೧೫-೬೨೩
ಬ್ರಹ್ಮಸ್ವರೂಪ ನಿರೂಪಣದ ವಿದೇಹನ ೬೨೪-೬೨೮
ಬ್ರಹ್ಮಸ್ವರೂಪ ನಿರೂಪಣೆ ೬೨೯-೬೮೬
ಬ್ರಹ್ಮ-ಸೃಷ್ಟೀ-ಐಕ್ಯ (ಅದ್ವೈತಾನುಭವ) ೬೮೭-೬೯೧
ಮಾಯೆಯ ಶಕ್ತೀ ೬೯೨-೬೯೮
ಅದ್ವೈತ -ದ್ವೈತ ೬೯೯-೭೩೬
ಭಕ್ತಿಯಿಂದ ನಿರ್ವಿಕಾರಸ್ವರೂಪ ಪ್ರಾಪ್ತೀ ೭೩೭-೭೫೩
ಕರ್ಮಯೋಗ ನಿರೂಪಣಕ್ಕಾಗಿ ವಿದೇಹನ ೭೫೪-೭೫೮
ಕರ್ಮಯೋಗ ನಿರೂಪಣೆ ೭೫೯-೮೦೨
ಆಗಮವಿಧಿಪೂಜಾವಿಧಾನ ೮೦೩-೮೪೬
ಪೂಜೆಯ ಸ್ಥಾನಗಳು ೮೪೭-೮೬೫

ನಾಲ್ಕನೆಯ ಅಧ್ಯಾಯದ ಪ್ರಸ್ತಾಪ ೮೬೬-೮೭೩

ನಾಲ್ಕನೆಯ ಅಧ್ಯಾಯ

ಬ್ರಹ್ಮಸ್ವರೂಪ - ಜನಾರ್ದನ ನಮನ	೧-೧೯
ಭಾಗವತ ಮಹಿಮೆ	೨೦-೨೧
ಗುರುಸ್ತೋತ್ರದಲ್ಲಿ ಬ್ರಹ್ಮಾನಂದವು	೨೨-೨೪
ಅವತಾರ ನಿರೂಪಣೆಗಾಗಿ	
ವಿದೇಹನ ವಿನಂತಿ	೨೫-೩೪
ಅವತಾರ ನಿರೂಪಣೆಯ ಪ್ರಸ್ತಾಪ -	
ಅವತಾರ ಗುಣ	೩೫-೪೩
ಪುರುಷಾವತಾರ	೪೪-೬೫
ನಾರಾಯಣಾವತಾರ	೬೬-೧೯೯
ವಿಘ್ನಗಳು ಮತ್ತು ಭಕ್ತೀ	೨೦೦-೨೦೭
ಹಂಸಾವತಾರ	೨೦೮
ದತ್ತಾವತಾರ	೨೦೯-೨೧೦
ಸನತ್ಕುಮಾರಾವತಾರ	೨೧೧
ಋಷಭಾವತಾರ	೨೧೨-೨೧೩
ಹಯಗ್ರೀವಾವತಾರ	೨೧೪-೨೧೫
ಮತ್ಸ್ಯಾವತಾರ	೨೧೬
ಕಮಠಾವತಾರ	೨೧೭
ಶ್ವೇತವರಾಹಾವತಾರ	೨೧೮
ಗಜೇಂದ್ರಮೋಕ್ಷಾವತಾರ	೨೧೯
ಬಾಲಮುಕುಂದಾವತಾರ -	
ವಟಪತ್ರಶಾಯೀ- ಅವತಾರ	೨೨೦
ಆರ್ತಿ ಹರಣ - ಅವತಾರ	೨೨೧-೨೨೪
ಇಂದ್ರಬ್ರಹ್ಮಹತ್ಯಾಮೋಚನ - ಅವತಾರ	೨೨೫-೨೨೬
ಮುರಾರಿ- ಅವತಾರ	೨೨೭-೨೨೮
ನರಕೇಸರೀ- ಅವತಾರ	೨೨೯-೨೩೧
ಮೋಹಿನೀ - ಅವತಾರ	೨೩೨-೨೩೪
ಕುಮಾರವತಾರ	೨೩೫-೨೩೬
ವಾಮನಾವತಾರ	೨೩೭-೨೪೦
ಪರಶುರಾಮಾವತಾರ	೨೪೧-೨೪೪
ರಾಮಾವತಾರ	೨೪೫-೨೫೪
ಕೃಷ್ಣಾವತಾರ	೨೫೫-೨೭೧
ಬೌದ್ಧಾವತಾರ	೨೭೨-೨೭೭
ಕಲಿಯುಗದ ರಾಜರು	೨೭೮-೨೮೦
ಕಲ್ಕೀ- ಅವತಾರ	೨೮೧-೨೮೩
ಅವತಾರ ವರ್ಣನೆಯ ಉಪಸಂಹಾರ	೨೮೪-೨೯೨
ಐದನೆಯ ಅಧ್ಯಾಯದ ಪ್ರಸ್ತಾಪ	೨೯೩-೨೯೬

ಐದನೆಯ ಅಧ್ಯಾಯ

ಈಶ್ವರ ನಮನ	೧-೧೭
ಸಂತಮಹಿಮೆ	೧೮-೨೨
ಭಕ್ತೀ	೨೩-೨೮
ಅಹಂತಾ	೨೯-೩೨
ಐದನೆಯ ಅಧ್ಯಾಯದ ಪ್ರಸ್ತಾಪ	೩೩-೩೫
ಅಭಕ್ತಗತಿವಿನ್ಯಾಸಕ್ಕಾಗಿ ವಿದೇಹನ ವಿನಂತಿ	೩೬-೪೩
ಅಭಕ್ತಗತಿ	೪೪
ವರ್ಣ ಮತ್ತು ಆಶ್ರಮ	೪೫-೫೧
ಅಭಕ್ತ ಜ್ಞಾನಾಭಿಮಾನಿ	೫೨-೬೩
ಜ್ಞಾನೀ ಅಭಿಮಾನೀ ಮತ್ತು ಅಜ್ಞಾನೀ	
ಭಾವಿಕ	೬೪-೮೧
ಜ್ಞಾನಾಭಿಮಾನದ ಪರಿಣಾಮ	
(ಸುಖಾಭಿಲಾಷಾ) ಕಾಮಕ್ರೋಧ	೮೨-೯೪
ಜ್ಞಾನಾಭಿಮಾನದ ಕಾಮಕ್ರೋಧದ	
ಪರಿಣಾಮ	೯೫-೧೧೦
ಜ್ಞಾನಾಭಿಮಾನದ ಸ್ತ್ರೀಕಾಮವೃತ್ತೀ	೧೧೧-೧೩೭
ಜ್ಞಾನಾಭಿಮಾನದ ಯಜ್ಞದ	
ಖಟಾಟೋಪ	೧೩೮-೧೪೮
ಜ್ಞಾನಾಭಿಮಾನದ ಧನಮದ	೧೪೯-೧೭೨
ಜ್ಞಾನಾಭಿಮಾನೀಕೃತ ಸಾಧುನಿಂದಾ	೧೭೩-೧೯೧
ಈಶ್ವರ	೧೯೨-೨೦೫
ವಿಷಯವಾಸನಾ	೨೦೬-೨೧೩
ವಿಷಯನಿವೃತ್ತಿ ಇದು ವೇದದ ಶಿಕ್ಷಣ	೨೧೪-೨೪೦
ಧನದ ವಿನಿಯೋಗ	೨೪೧-೨೫೭
ಮದ್ಯ-ಮಾಂಸ-ಸ್ತ್ರೀ ಮತ್ತು ವೇದ :	೨೫೮-೨೮೦
ದ್ವೇಷ	೨೮೧-೨೮೨
ಅಜ್ಞಾನಿ ಹಾಗೂ ಸಜ್ಞಾನಿ	೨೮೩
ವಿಷಯೀ ಜ್ಞಾನಾಭಿಮಾನೀ	೨೮೪
ಕಾಮ್ಯಕರ್ಮಕರ್ತೆ ಅಭಕ್ತ	೨೮೫-೩೦೦
ಅಭಕ್ತರ ವರ್ಣನೆ (ಪರಿಣಾಮ)	೩೦೧-೩೦೪
ಯುಗಯುಗಗಳಲ್ಲಿನ ಭಕ್ತಿ ವಿಧಾನ	
ಕುರಿತು ವಿದೇಹನ ವಿನಂತಿ	೩೦೫-೩೧೦
ಯುಗಯುಗಗಳಲ್ಲಿನ ಭಕ್ತಿವಿಧಾನದ	
ಪ್ರಸ್ತಾಪ	೩೧೧-೩೧೫
ಕೃತಯುಗದ ಭಕ್ತಿವಿಧಾನ	೩೧೬-೩೨೩
ತ್ರೇತಾಯುಗದ ಭಕ್ತಿವಿಧಾನ	೩೨೪-೩೩೦
ದ್ವಾಪರಯುಗದಲ್ಲಿಯ ಭಕ್ತಿವಿಧಾನ	೩೩೧-೩೪೧
ಸಗುಣ ಮೂರ್ತಿಪೂಜೆ	೩೪೨-೩೪೫
ನಾಮಸ್ಮರಣೆ (ಕಲಿಯುಗದ ಭಕ್ತಿವಿಧಾನ)	೩೪೬-೩೬೪
ಚರಣ ವಂದನೆ (ಕಲಿಯುಗದ ಭಕ್ತಿವಿಧಾನ)	೩೬೫-೩೮೨
ಸೇವಾಭಕ್ತೀ (ಕಲಿಯುಗದ ಭಕ್ತಿ ವಿಧಾನ)	೩೮೩-೩೯೧
ಭಾವ (ಕಲಿಯುಗದ ಭಕ್ತಿ ವಿಧಾನ)	೩೯೨-೪೦೧
ಕಲಿಯುಗ ಮಹಿಮೆ- ಭಕ್ತಿಯಿಂದ	
ನಾಲ್ಕು ಮುಕ್ತಿ	೪೦೨-೪೩೦
ದ್ರವಿಡದೇಶ ಮತ್ತು ಭಕ್ತೀ	೪೩೧-೪೩೮
ಭಕ್ತಿಯಿಂದ ಋಣತ್ರಯ ಮುಕ್ತತೆ	೪೩೯-೪೭೦
ಭಕ್ತರಿಗೆ ಕರ್ಮಬಂಧನೆಯು ಇಲ್ಲ	೪೭೧-೪೮೫
ನರ್ವಾಷಭರ ಭಕ್ತಿ ನಿರೂಪಣೆಯಿಂದ	
ವಿದೇಹನಿಗೆ ಪರಮಾನಂದ ಹಾಗೂ	

ನವಾರ್ಷಭರಿಗೆ ಸತ್ಕಾರಪೂರ್ವಕವಾಗಿ
ಬೀಳ್ಕೊಡುಗೆ ೪೮೬-೪೯೫
ನಾರದರು ನಿರೋಪಿಸಿದ ವಸುದೇವ
ದೇವಕಿಯರ ಭಾಗ್ಯ ೪೯೬-೫೨೨
ಕೃಷ್ಣವಿರೋಧದಿಂದಲೂ ಮೋಕ್ಷ ೫೨೩-೫೩೦
ಕೃಷ್ಣ ಮಹಿಮೆ ೫೩೧-೫೪೮
ಪಂಚಾಧ್ಯಾಯದ ಮಹಿಮೆ ೫೪೯-೫೬೫
ಆರನೆಯ ಅಧ್ಯಾಯದ ಪ್ರಸಂಗತೆ ೫೬೬-೫೮೬

ಆರನೆಯ ಅಧ್ಯಾಯ

ಜನಾರ್ದನ ನಮನ ೧-೧೯
ಐದನೆಯ ಅಧ್ಯಾಯದ ಸಿಂಹಾವಲೋಕನೆ ೨೦-೨೩
ಕೃಷ್ಣದರ್ಶನಕ್ಕೆ ದೇವತೆಗಳು ದ್ವಾರಕೆಗೆ ೨೪-೪೫
ಕೃಷ್ಣ ಮಹಿಮೆ ೪೬-೫೧
ದ್ವಾರಕೆಯ ವರ್ಣನೆ ೫೨-೫೪
ಕೃಷ್ಣದರ್ಶನದ ಉತ್ಸುಕತೆ ೫೫-೬೨
ಕೃಷ್ಣನ ಮೇಲೆ ದೇವತೆಗಳ ಪುಷ್ಪವೃಷ್ಟಿ ೬೩-೬೫
(ದೇವತೆಗಳು ಮಾಡಿದ ಕೃಷ್ಣಸ್ತುತೀ) ೬೬-೨೩೯
ಮುಮುಕ್ಷುಗಳವರ ಚರಣ ಚಿಂತನೆ ಭಕ್ತಿ ೬೬-೭೦
ದೇವತೆಗಳು ಮಾಡಿದ ಶ್ರೀಕೃಷ್ಣಸ್ತುತಿ ೭೧-೮೪
ಭಕ್ತಿಯ ಮಹಿಮೆ - ಶ್ರವಣ ಭಕ್ತಿ ೮೫-೧೦೯
ಚರಣಸ್ತವನ ೧೧೦-೧೧೬
ಚತುರ್ವ್ಯೂಹ ಪೂಜೆ ೧೧೭-೧೨೧
ಯಜ್ಞಸಾಧನೆ ೧೨೨-೧೨೫
ಯೋಗಾಭ್ಯಾಸ ಸಾಧನೆ ೧೨೬-೧೩೦
ಚರಣಭಕ್ತೀ ೧೩೧-೧೩೨
ಅಧ್ಯಾತ್ಮ ವಿಚಾರಸಾಧನೆ ೧೩೩-೧೩೭
ವನಮಾಲಾರ್ಪಣೆ ೧೩೮-೧೪೨
ವನಮಾಲೆಯ ಸವತಿಮತ್ಸರ ೧೪೩-೧೪೯
ಪಾದಪೂಜೆ ೧೫೦-೧೬೫
ಕೃಷ್ಣನ ಸರ್ವ ನಿಯಂತೃತ್ವ ೧೬೬-೧೭೩
ಜಗತ್ತಿನ ಉತ್ಪತ್ತಿ -ಸ್ಥಿತಿ-ಸಂಹಾರಕರ್ತಾ
ಶ್ರೀಕೃಷ್ಣ ೧೭೪-೧೯೭
ನಿಜಬೋಧೆಯಿಂದ ಆಭೋಕ್ತೃತ್ವ ೧೯೮-೨೩೧
ಕೀರ್ತಿಶ್ರವಣ ಮತ್ತು
ಚರಣತೀರ್ಥ ಸೇವನೆ ೨೩೨-೨೩೯
ನಿಜಧಾಮಕ್ಕೆ ಬರಲು ಕೃಷ್ಣನಿಗೆ
ದೇವತೆಗಳವರ ವಿನಂತಿ ೨೪೦-೨೬೨
(ನಿಜಧಾಮಕ್ಕೆ ಬರಲು ಕೃಷ್ಣನ ಒಪ್ಪಿಗೆ) ೨೬೩-೨೮೦
ಶ್ರೀಕೃಷ್ಣ ಮಹಿಮೆ ೨೬೩-೨೬೬
ಯಾದವಕುಲನಾಶದ ಶ್ರೀಕೃಷ್ಣನ ಸಂಕಲ್ಪ ೨೬೭-೨೭೪
ನಿಜಧಾಮಕ್ಕೆ ಹೋಗಲು ಶ್ರೀಕೃಷ್ಣನ
ಆಶ್ವಾಸನೆಯಿಂದ ದೇವತೆಗಳವರಿಗೆ
ಆನಂದ ೨೭೫-೨೮೦
ದ್ವಾರಕೆಯಲ್ಲಿ ಮಹೋತ್ಪಾತಗಳು ೨೮೧-೨೯೨
ಕೃಷ್ಣನು ಯಾದವರಿಗೆ ಪ್ರಭಾಸಕ್ಕೆ
ಕಳಿಸುವುದು ೨೯೩-೩೧೬
ಕೃಷ್ಣನು ಯಾದವರಿಗೆ ಪ್ರಭಾಸಕ್ಕೆ
ಏಕೆ ಕಳಿಸಿದನು? ೩೧೭-೩೨೦
ಉದ್ಧವನು ಕೃಷ್ಣನಿಗೆ ವಿನಂತಿ
ಹಾಗೂ ಸ್ತುತೀ ೩೨೧-೩೩೧
ಶ್ರೀಕೃಷ್ಣ ವಿರಹಕ್ಕಾಗಿ ಉದ್ಧವನ ತಾಪ ೩೩೨-೩೫೦
ಕೃಷ್ಣನಿಗೆ ಉದ್ಧವನ ವಿನಂತಿ ಹಾಗೂ ಸ್ತುತೀ ೩೫೧-೩೫೪
ಕೃಷ್ಣ - ಉದ್ಧವ -ಸೌಹಾರ್ದ ೩೫೫-೩೬೬
ಶ್ರೀಕೃಷ್ಣನಿಗಾಗಿ ಉದ್ಧವನ ವಿರಹತಾಪ ೩೬೭-೩೮೦
ಕೃಷ್ಣನಿಗೆ ಉದ್ಧವನ ವಿನಂತಿಹಾಗೂ ಸ್ತುತೀ ೩೮೧-೪೧೧
ಏಳನೆಯ ಅಧ್ಯಾಯದ ಗೊತ್ತುವಳಿ ೪೧೨-೪೨೯

ಏಳನೆಯ ಅಧ್ಯಾಯ

ಜನಾರ್ದನ ನಮನ ೧-೫
ಏಳನೆಯ ಅಧ್ಯಾಯನ ಉಪೋದ್‌ಘಾತ ೬-೨೧
(ಭವಿಷ್ಯಮಾಣ)ಕಲಿಯುಗ ೨೨-೨೮
ಈಶ್ವರರೂಪನಾಗಲು ನಿರಹಂಕಾರ,
ವೈರಾಗ್ಯ ಅವಶ್ಯ ೨೯-೩೫
ಧ್ಯಾನದಿಂದ ಈಶ್ವರಪ್ರಾಪ್ತಿ ೩೬-೪೮
ಸಂಸಾರ ಮಾಯಿಕ ೪೯-೫೬
ದ್ವೈತದಿಂದ ಅನರ್ಥ ೫೭-೬೧
ಕರ್ಮವಿಚಾರ ೬೨-೭೦
ಕರ್ಮವಿಚಾರ (ಶ್ರೀಧರಮತದಂತೆ) ೭೧-೮೨
ವಿಷಯ ಸೇವನೆ ೮೩-೮೮
ವಿಷಯತ್ಯಾಗದ ಉಪಾಯ ೮೯-೧೦೧
ಭಕ್ತರಿಗೆ ವಿಘ್ನಗಳು ಬಾಧಿಸುವುದಿಲ್ಲ ೧೦೨-೧೦೮
ಬ್ರಹ್ಮಾನುಭವದಲ್ಲಿ ಕರ್ಮಬಾಧೆ
ಇರುವುದಿಲ್ಲ ೧೦೯-೧೧೪
ಜ್ಞಾನಿಯರಿಂದ ವಿಷಯಾಚರಣೆ
ಆಗುವುದಿಲ್ಲ ೧೧೫-೧೧೯
ಜ್ಞಾನಿಯರಿಂದ ಕರ್ಮಗಳು ಪೂರ್ವ
ಪ್ರಾರಬ್ಧಾನುಸಾರ ೧೨೦-೧೩೧
ನಿರಭಿಮಾನದ ಲಕ್ಷಣಗಳು ೧೩೨-೧೫೮
ವಿಷಯತ್ಯಾಗದ ಕಠಿಣತ್ವ ೧೫೯-೧೭೨
ವಿಷಯತ್ಯಾಗದ ಪರಮಾರ್ಥದ
ಉಪಾಯವನ್ನು ಹೇಳಲು ಉದ್ಧವನ
ಶ್ರೀಕೃಷ್ಣನಿಗೆ ವಿನಂತಿ ೧೭೩-೨೦೫
ವಿವೇಕ ವೈರಾಗ್ಯದಿಂದ ತನ್ನನ್ನು ತಾನೇ
ಉದ್ಧರಿಸಿ ಕೊಳ್ಳಬೇಕೆಂದು
ಶ್ರೀಕೃಷ್ಣನ ಉತ್ತರ ೨೦೬-೨೫೩
ಯದು- ಅವಧೂತ ಸಂವಾದ-
ಉಪೋದ್‌ಘಾತ ೨೫೪-೩೧೮
ಅವಧೂತರ ಗುರು ಅದರ ನಿಜಾನಂದ
ಕಾರಣ ೩೧೯-೩೫೧

ಗುರುಲಕ್ಷಣನಿರೂಪಣೆಯ ಪ್ರಸ್ತಾಪ	೩೫೨-೩೫೯
ಪೃಥ್ವಿಯ ಗುರುಲಕ್ಷಣಗಳು	೩೬೦-೪೦೬
ವಾಯುವಿನ ಗುರುಲಕ್ಷಣಗಳು	೪೦೭-೪೩೧
ಆಕಾಶದ ಗುರುಲಕ್ಷಣಗಳು	೪೩೨-೪೫೮
ನೀರಿನ ಗುರುಲಕ್ಷಣಗಳು	೪೫೯-೪೮೫
ಅಗ್ನಿಯ ಗುರುಲಕ್ಷಣಗಳು	೪೮೬-೫೧೦
ಹಿಮಾಂಶೂದ ಗುರುಲಕ್ಷಣಗಳು	೫೧೧-೫೧೬
ಕಾಲಗತೀ	೫೧೭-೫೩೧
ಗಭಸ್ತಿಯ ಗುರುಲಕ್ಷಣಗಳು	೫೩೨-೫೪೪
ಕಪೋತದ ಗುರುಲಕ್ಷಣಗಳು	೫೪೫-೬೩೯
ವಿಷಯ,ನರದೇಹ, ಭಕ್ತೀ	೬೪೦-೬೫೦

ಎಂಟನೆಯ ಅಧ್ಯಾಯ

ಸದ್ಗುರು ಜನಾರ್ದನ ನಮನ	೧-೧೨
ಏಳನೆಯ ಅಧ್ಯಾಯದ ಸಿಂಹಾವಲೋಕನೆ ಮತ್ತು ಎಂಟನೆಯ ಅಧ್ಯಾಯದ ಉಪೋದ್‌ಘಾತ	೧೩-೧೬
ವಿಷಯಗಳ ಆಸ್ಥೆ	೧೭-೨೩
ಅಜಗರದ ಗುರುಲಕ್ಷಣಗಳು	೨೪-೪೦
ಸಮುದ್ರದ ಗುರುಲಕ್ಷಣಗಳು	೪೧-೬೮
ಪತಂಗದ ಗುರುಲಕ್ಷಣಗಳು	೬೯-೯೦
ಜೇನುನೊಣದ ಗುರುಲಕ್ಷಣಗಳು	೯೧-೧೧೭
ಮದ್ದಾನೆಯ ಗುರುಲಕ್ಷಣಗಳು	೧೧೮-೧೪೩
ಅರ್ಥಸಂಗ್ರಹದ ಬಾಧೆ	೧೪೪-೧೫೭
ಮೃಗದ ಗುರುಲಕ್ಷಣಗಳು	೧೫೮-೧೬೯
ಮೀನದ ಗುರುಲಕ್ಷಣಗಳು	೧೭೦-೧೮೭
ವೇಶ್ಯೆಯ ಗುರುಲಕ್ಷಣಗಳು	೧೮೮-೩೦೬
ಆಶೆಯ ದುಃಖ	೩೦೭-೩೧೩
ನಿರಾಶೆಯ ಸುಖ	೩೧೪-೩೩೧

ಒಂಭತ್ತನೆಯ ಅಧ್ಯಾಯ

ಸದ್ಗುರು ಜನಾರ್ದನ ನಮನ	೧-೧೭
ಎಂಟನೆಯ ಅಧ್ಯಾಯದ ಸಿಂಹಾವಲೋಕನೆ	೧೮-೨೧
ಕುರರಿ (ಗಿಡುಗಪಕ್ಷಿ)ಯ ಗುರುಲಕ್ಷಣಗಳು	೨೨-೫೬
ಬಾಲಕನ ಗುರುಲಕ್ಷಣಗಳು	೫೭-೮೫
ಕುಮಾರಿಯ ಗುರುಲಕ್ಷಣಗಳು	೮೬-೧೧೪
ಬಾಣ ತಯಾರಿಸುವವನ ಗುರುಲಕ್ಷಣಗಳು	೧೧೫-೧೫೮
ಸರ್ಪದ ಗುರುಲಕ್ಷಣಗಳು	೧೫೯-೧೭೭
ಜೇಡರಹುಳದ ಗುರುಲಕ್ಷಣಗಳು	೧೭೮-೨೩೫
ಭಿಂಗುರಟಿ (ಕಣಜದಹುಳ) ದಿಂದ ಗುರುಲಕ್ಷಣಗಳು	೨೩೬-೨೪೬
ನರದೇಹದ ಗುರುಲಕ್ಷಣಗಳು	೨೪೭-೩೮೮
ಅನೇಕ ಗುರುಗಳ ಅವಶ್ಯಕತೆ	೩೮೯-೪೧೫
ಸದ್ಗುರು ಜನಾರ್ದನ ಮಹಿಮೆ	೪೧೬-೪೫೬
ಶ್ರೋತೃಗಳ ಸಂತೋಷ, ಏಕನಾಥರ ಕೌತುಕ	೪೫೭-೪೬೬
ಒಂಬತ್ತನೆಯ ಅಧ್ಯಾಯದ ಉಪಸಂಹಾರ	೪೬೭-೪೮೬
ಹತ್ತನೆಯ ಅಧ್ಯಾಯದ ಪ್ರಸಂಗ	೪೮೭-೪೯೧
ಸಂಸ್ಕೃತ - ಪ್ರಾಕೃತ	೪೯೨-೫೦೦
ಭಾಗವತ ಮಹಿಮೆ	೫೦೧-೫೦೨
ನಿಂದೆ	೫೦೩-೫೦೫
ಶ್ರೋತೃಗಳವರಿಗೆ ವಿನಂತಿ	೫೦೬-೫೦೭

ಹತ್ತನೆಯ ಅಧ್ಯಾಯ

ಧನ್ವಂತರೀರೂಪ ಜನಾರ್ದನರಿಗೆ ನಮನ	೧-೩೯
ಹತ್ತನೆಯ ಅಧ್ಯಾಯದ ಪ್ರಸ್ತಾಪ	೪೦-೪೩
ಕರ್ಮವಿಚಾರ	೪೪-೭೩
ವಿಷಯಾಸಕ್ತಿಯ ಪರಿಣಾಮ	೭೪-೯೦
ಸಾಧನೆ (ದ್ವೈತನಿರಸನೆ, ನಿಜಸ್ವರೂಪ, ಚಿತ್ತಶುದ್ಧೀ)	೯೧-೧೪೪
ಶಿಷ್ಯರ ಲಕ್ಷಣಗಳು	೧೪೫-೨೪೦
ನಿರ್ಮಮತೆ ಹೇಗೆ ಪ್ರಾಪ್ತವಾಗುವುದು?	೨೪೧-೨೫೨
ವಿದೇಹತೆ ಮತ್ತು ಅದ್ವೈತತೆ ಹೇಗೆ ಪ್ರಾಪ್ತವಾಗುವುವು?	೨೫೩-೩೨೪
ಬ್ರಹ್ಮವಿದ್ಯೆ ಹೇಗೆ ಪ್ರಾಪ್ತವಾಗುವುದು?	೩೨೫-೩೪೪
ಬ್ರಹ್ಮಜ್ಞಾನದ ಫಲ	೩೪೫-೩೭೮
ಮೀಮಾಂಸಕ ಮತ ಖಂಡನೆ, ಅದ್ವೈತಮತ ಮಂಡನೆ	೩೭೯-೬೭೦
ಮೀಮಾಂಸಕ ಮತ ಖಂಡನೆ, ಮತಮತಾಂತರಗಳು	೬೭೧-೭೦೬
ಬದ್ಧಮುಕ್ತ ವ್ಯವಸ್ಥೆ ಯಾವುದರಿಂದ?	೭೦೭-೭೨೭
ಬದ್ಧಮುಕ್ತರ ಲಕ್ಷಣಗಳನ್ನು ಸಂಪೂರ್ಣ ಹೇಳುವಿಕೆಗಾಗಿ	೭೨೮-೭೫೨
ಹನ್ನೊಂದನೆಯ ಅಧ್ಯಾಯದ ಪ್ರಸ್ತಾಪ	೭೫೩-೭೬೫

ಹನ್ನೊಂದನೆಯ ಅಧ್ಯಾಯ

ಸದ್ಗುರು ಜನಾರ್ದನ ನಮನ	೧-೨೦
ಹನ್ನೊಂದನೆಯ ಅಧ್ಯಾಯದ ಗುಣಾನುವಾದ	೨೧-೨೮
ಬದ್ಧಮುಕ್ತ ಅವಸ್ಥೆ	೨೯-೧೦೬
ಬಂಧಮೋಕ್ಷದ ಸ್ಥಿತೀ	೧೦೭-೧೫೨
ಜೀವೇಶ್ವರರ ವಿಲಕ್ಷಣತೆ	೧೫೩-೨೧೩
ಜೀವದ ಬದ್ಧಮುಕ್ತತೆ	೨೧೪-೨೪೮
ಕೇವಲಮುಕ್ತ ಲಕ್ಷಣಗಳು	೨೪೯-೫೦೮
ಶಾಸ್ತ್ರಜ್ಞಾನೀ ಪಂಡಿತ	೫೦೯-೬೦೨
ನಾಮಕೀರ್ತನ	೬೦೩-೬೩೪

ವಿವೇಕಪ್ರಶಸ್ತಿ ೬೩೫-೬೩೮
ಜಿಜ್ಞಾಸಾ ೬೩೯-೬೪೫
ಭಕ್ತಿ ನಿರೂಪಣೆ ೬೪೬-೭೮೨
ಸತ್ಸಂಗತಿಯಿಂದ ಭಕ್ತಿಪ್ರಾಪ್ತಿ ೭೮೩-೭೯೨
ಕೃಷ್ಣನಿಗೆ ಸಾಧು ಲಕ್ಷಣ ತಿಳಿಸಲು
ಉದ್ಧವನ ವಿನಂತಿ ೭೯೩-೮೨೨
ಸಾಧು ಲಕ್ಷಣಗಳು ೮೨೩-೧೧೮೫
ಪ್ರತಿಮೆ ಪೂಜೆ ೧೧೮೬-೧೨೩೪
ಶ್ರವಣಭಕ್ತಿಯ ಲಕ್ಷಣಗಳು ೧೨೩೫-೧೨೫೫
ಪರ್ವಪಾಲನೆ ಭಕ್ತಿಯ ಲಕ್ಷಣಗಳು ೧೨೫೬-೧೨೮೧
ದೇವಾಲಯ ಮೂರ್ತಿಪ್ರತಿಷ್ಠಾ ೧೨೮೨-೧೩೨೬
ಹನ್ನೊಂದು ಪೂಜಾಸ್ಥಾನಗಳು ೧೩೨೭-೧೩೩೦
ಪೂಜಾವಿಧಾನ ೧೩೩೧-೧೪೫೬
ಮೂರ್ತಿ ಧ್ಯಾನ ೧೪೫೭-೧೫೦೩
ಭಕ್ತಿಪ್ರಾಪ್ತಿಯ ಸಾಧನೆ ೧೫೦೪-೧೫೪೯
ಭಕ್ತೀ-ಪೂರ್ವಪುಣ್ಯಸಂಚಿತದ ಫಲ ೧೫೫೦-೧೫೬೪
ಹನ್ನೆರಡನೆಯ ಅಧ್ಯಾಯದ ಪ್ರಸ್ತಾಪ ೧೫೬೫-೧೫೮೧

ಹನ್ನೆರಡನೆಯ ಅಧ್ಯಾಯ

ಸದ್ಗುರು ನಮನ ೧-೧೭
ಹನ್ನೆರಡನೆಯ ಅಧ್ಯಾಯದ ಗೊತ್ತುವಳೀ ೧೮-೨೩
ಸತ್ಸಂಗ ಹಾಗೂ ಇತರ ಸಾಧನೆಗಳು ೨೪-೨೧೪
ಮೋಕ್ಷ ಪ್ರಾಪ್ತಿಗಾಗಿ ವೈದಿಕ
ಕರ್ಮಗಳು ಗೌಣ ೨೧೫-೨೩೨
ಶರಣಾಗತಿಯಿಂದ ಅವಿದ್ಯಾನಿರಸನೆ ೨೩೩-೨೪೧
ಈಶ್ವರ ಮತ್ತು ಹೃದಯಸ್ಥ ೨೪೨-೨೭೦
ಜೀವಾತ್ಮಾ ಹಾಗೂ ಪರಮಾತ್ಮ ೨೭೧-೩೧೦
ಪ್ರಾಣ ಮತ್ತು ವಾಣೀ ೩೧೧-೩೩೩
ಸ್ವರವರ್ಣಮಂಡನೆ ೩೩೪-೩೪೧
ಸೋಹಂ ಹಂಸದ ಸಾಧನೆ ೩೪೨-೩೬೦
ಪ್ರಾಣ ಮತ್ತು ವಾಣೀ ೩೬೧-೩೬೮
ಇಂದ್ರಿಯ ಪ್ರವೃತ್ತೀ ೩೬೯-೩೭೪
ಸಂಸಾರ ಮತ್ತು ಈಶ್ವರ ಇವುಗಳ ಅಭಿನತ್ವ ೩೭೫-೪೨೦
ಸಂಸಾರ ವಿಸ್ತಾರವು ಇದು
ಮಾಯೆಯ ಆಭಾಸವು ೪೨೧-೪೬೮
ಸಂಸಾರ ನಿವೃತ್ತಿ, ಗುರುಭಕ್ತೀ ಹಾಗೂ
ಗುರುಭಕ್ತಿ, ಈಶ್ವರ ಪ್ರಾಪ್ತಿ ೪೬೯-೬೧೮
ಹನ್ನೆರಡನೆಯ ಅಧ್ಯಾಯದ ಉಪಸಂಹಾರ ೬೧೯-೬೨೬
ಹದಿಮೂರನೆಯ ಅಧ್ಯಾಯನ ಪ್ರಸ್ತಾಪ ೬೨೭-೬೨೮

ಹದಿಮೂರನೆಯ ಅಧ್ಯಾಯ

ಜನಾರ್ದನ ನಮನ ೧-೧೮
ಹದಿಮೂರನೆಯ ಅಧ್ಯಾಯದ ಪ್ರಸಂಗ ೧೯-೩೦
ಗುಣಗಳು ಹಾಗೂ ಆತ್ಮಾ ೩೧-೩೫
ಸತ್ವಗುಣದಿಂದ ಸದ್ವಿದ್ಯಾಪ್ರಾಪ್ತಿ ೩೬-೫೯
ಸತ್ವವೃದ್ಧಿಯ ಕಾರಣಗಳು ೬೦-೧೧೮
ತಮೋಗುಣ ವೃದ್ಧಿಯ ಕಾರಣಗಳು ೧೧೯-೧೩೦
ರಜೋಗುಣ ವೃದ್ಧಿಯ ಕಾರಣಗಳು ೧೩೧-೧೫೧
ಮೂರೂ ಗುಣಗಳ
ಸರ್ವಸಾಧಾರಣ ಚಿನ್ಹೆಗಳು ೧೫೨-೧೫೯
ಸಾತ್ವಿಕ ಸೇವನೆಯ ಗುಣ ೧೬೦-೧೭೩
ಭಕ್ತಿಯಿಂದ ಅವಿದ್ಯಾ ನಿರಸನೆ ೧೭೪-೧೮೫
ದೇಹ- ಅಹಂತೆ, ತ್ರಿಗುಣ ಇವು
ಜ್ಞಾನದಿಂದ ನಾಶ ೧೮೬-೧೯೭
ದೇಹಾತ್ಮ ಭಾವದಿಂದ
ರಜೋಗುಣದ ಉದ್ಭವ ೧೯೮-೨೪೬
ವಿಷಯತ್ಯಾಗದ ಉಪಾಯ ೨೪೭-೨೬೫
ಹಂಸದ ಇತಿಹಾಸ ನಿರೂಪಣೆ ೨೬೬-೨೯೯
ಹಂಸಗೀತಾ ಪ್ರಸ್ತಾಪ ೩೦೦-೩೦೬
ನಿತ್ಯಾನಿತ್ಯ ವಿವೇಕಜ್ಞಾನ ೩೦೭-೩೩೨
ಆತ್ಮ ಜ್ಞಾನ (ನಿಜಜ್ಞಾನ) ೩೩೩-೩೫೯
ಭಕ್ತಿಯಿಂದ ವಿಷಯ ತ್ಯಾಗ ೩೬೦-೩೭೩
ವಿಷಯ ಬಂಧನೆಯು ಹೇಗಾಗುವುದು? ೩೭೪-೩೮೫
ನಿರಭಿಮಾನದಿಂದ ಈಶ್ವರಪ್ರಾಪ್ತಿ ೩೮೬-೩೯೦
ಜೀವದ ಮೂರು ಅವಸ್ಥೆಗಳಲ್ಲಿ ಸಾಕ್ಷಿತ್ವ ೩೯೧-೪೦೧
ಅಹಂಮಮತಾಭಿಮಾನದಿಂದ
ಸಂಸಾರಬಂಧನೆಯು ೪೦೨-೪೧೩
ಗುರುಕೃಪೆ, ವೈರಾಗ್ಯದಿಂದ
ವಿಷಯವೃತ್ತಿ ತಡೆಯಬೇಕು ೪೧೪-೪೨೮
ಅಹಂತಾಬಂಧ ೪೨೯-೪೩೯
ಅಭಿಮಾನ ತ್ಯಜಿಸುವ ಉಪಾಯ,
ಸಾಧನೆಯ ಫಲ ೪೪೦-೪೪೭
ಜ್ಞಾನಾಭಿಮಾನ, ಭೇದಭಾನ,
ದೇಹಾಭಿಮಾನ ೪೪೮-೪೫೮
ವೇದ ೪೫೯-೪೭೬
ಜೀವದ ಮೂರು ಅವಸ್ಥೆಗಳಲ್ಲಿ ಸಾಕ್ಷಿತ್ವ ೪೮೦-೫೦೦
ಸಂಸಾರಬಂಧನದ ಕಾರಣ ಹಾಗೂ ನಿರಾಸೆ ೫೦೧-೫೨೯
ಭಜನಸ್ಥಾನ ಸುಗಮ ೫೩೦-೫೪೨
ಸಂಸಾರದ ಮಿಥ್ಯೆತ್ವ ೫೪೩-೫೫೭
ಭಕ್ತಿಯಿಂದ ಆತ್ಮಾನುಭವದ ಪ್ರಾಪ್ತಿ ೫೫೮-೫೬೬
ಆತ್ಮಾನುಭವಪರಿಣಾಮ ೫೬೭-೫೮೬
ಜ್ಞಾನಿಯ ವರ್ತನೆಯ ಸ್ಥಿತಿ ೫೮೭-೬೩೮
ಅದೃಷ್ಟ ೬೩೯-೬೫೫
ಬ್ರಹ್ಮಸ್ಥಿತಿಯ ಲಕ್ಷಣಗಳು ೬೫೬ -೭೧೦
ಹಂಸಗೀತಸ್ವರೂಪ ೭೧೧-೭೨೦
ಹಂಸಸ್ವರೂಪದ ವರ್ಣನೆ ೭೨೧-೭೩೬
ಹಂಸಗೀತೆಯ ಉಪಸಂಹಾರ ೭೩೭-೭೫೮
ಏಕಾದಶಸ್ಕಂಧಪ್ರಶಸ್ತಿ ೭೫೯-೭೮೧

ಹದಿನಾಲ್ಕನೆಯ ಅಧ್ಯಾಯ

ಸದ್ಗುರು ಜನಾರ್ದನ ನಮನ	೧-೧೭
ಮರಾಠೀ ಭಾಷೆ	೧೮-೨೧
ಏಕನಾಥೀಭಾಗವತ ಗ್ರಂಥದ ಕರ್ತವ್ಯ	೨೨-೨೫
ಹದಿಮೂರನೆಯ ಅಧ್ಯಾಯದ	
ಸಿಂಹಾವಲೋಕನೆ	೨೬-೨೭
ಮೋಕ್ಷದ ಶ್ರೇಷ್ಠ ಸಾಧನೆ	೨೮-೩೯
ವೇದೋಪದೇಶ ಪರಂಪರೆ	೪೦-೫೨
ಪ್ರಕೃತಿಸ್ವಭಾವಾನುರೂಪ ಮತಗಳು	೫೩-೬೦
ಮಾಯೆಯಿಂದ ಸಾಧನಭಿನ್ನತೆ	೬೧-೬೩
ನಾನಾ ಸಾಧನೆಗಳು	೬೪-೭೬
ಭಕ್ತಿವಿರಹಿತ ಸಾಧನೆಗಳು ದುಃಖರೂಪ	೭೭-೮೨
ಭಕ್ತಿಯ ಸ್ಥಿತಿ	೮೩-೧೦೨
ಭಕ್ತರ ಅಕಿಂಚನತ್ವ	೧೦೩-೧೧೩
ಭಕ್ತರ ಸುಖಸಂಪನ್ನತೆ	೧೧೪-೧೩೪
ಭಕ್ತರಲ್ಲಿ ಈಶ್ವರನ ಪ್ರೀತಿ	೧೩೫-೧೬೧
ಭಕ್ತಲಕ್ಷಣ - ನಿರಪೇಕ್ಷತಾ	೧೬೨-೧೬೬
ಭಕ್ತಲಕ್ಷಣ- ಮನನ	೧೬೭-೧೬೯
ಭಕ್ತಲಕ್ಷಣ- ಶಾಂತೀ	೧೭೦-೧೭೨
ಭಕ್ತ ಲಕ್ಷಣ- ಸಮತೆ	೧೭೩-೧೭೬
ಭಕ್ತ ಲಕ್ಷಣ- ನಿರ್ವೈರತೆ	೧೭೭-೧೭೯
ಭಕ್ತ ಮಹಿಮೆಯ ಪಂಚಲಕ್ಷಣಗಳು	೧೮೦-೧೯೧
ಭಕ್ತಲಕ್ಷಣ- ಅಕಿಂಚನತ್ವ	೧೯೨-೧೯೩
ಭಕ್ತ ಲಕ್ಷಣ- ಮಹಂತಸ್ಥಿತಿ	೧೯೪-೧೯೭
ಮಹಂತಸ್ಥಿತಿ ಭಕ್ತಿಯ ಪರಿಣಾಮ	೧೯೮-೨೦೩
ಭಕ್ತರ ಸಾಧನೆಗಳು	೨೦೪-೨೧೪
ಭಕ್ತಿಯಿಂದ ಸುಖಪ್ರಾಪ್ತಿ	೨೧೫-೨೧೯
ಭಕ್ತರಿಗೆ ವಿಷಯಗಳು ಬಾಧಿಸುವುದಿಲ್ಲ	೨೨೦-೨೩೬
ಭಕ್ತಿಯ ಮಹಿಮೆ	೨೩೭-೨೫೦
ಭಕ್ತಿ ಹಾಗೂ ಇತರ ಸಾಧನೆಗಳು	೨೫೧-೨೬೩
ಭಕ್ತಿಯ ಮಹಿಮೆ	೨೬೪-೩೦೬
ಭಕ್ತಿಯ ಲಕ್ಷಣಗಳು	೩೦೭-೩೧೪
ಭಕ್ತರ ಚಿನ್ಹೆಗಳ ಲಕ್ಷಣಗಳು	೩೧೫-೩೩೫
ಭಕ್ತಿಯಿಂದ ಚಿತ್ತಶುದ್ಧಿ - ಅವಿದ್ಯಾನಾಶ	೩೩೬-೩೪೧
ಭಕ್ತಿಯಿಂದ ಜ್ಞಾನಪ್ರಾಪ್ತಿ	೩೪೨-೩೪೭
ಧ್ಯಾನ	೩೪೮-೩೫೮
ಧ್ಯಾನದಲ್ಲಿ ಬಾಧೆ	೩೫೯-೩೯೪
ಧ್ಯಾನಕ್ಕಾಗಿ ಆಸನಗಳು	೩೯೫-೪೧೪
ಆಸನ ಸಾಧ್ಯತೆ - ಯೋಗಾಭ್ಯಾಸ	೪೧೫-೪೩೦
ಪ್ರಾಣಾಯಾಮ ಹಾಗೂ ಯೋಗಯುಕ್ತ	
ನಿರ್ಗುಣ ಭಜನೆ	೪೩೧-೪೬೨
ಸಗುಣ ಧ್ಯಾನ	೪೬೩-೫೧೨
ಧ್ಯಾನದ ಪರಿಣಾಮ	೫೧೩-೫೩೬
ಹದಿನಾಲ್ಕನೆಯ ಅಧ್ಯಾಯದ	
ಉಪಸಂಹಾರ	೫೩೭-೫೪೮

ಹದಿನೈದನೆಯ ಅಧ್ಯಾಯ

ಜನಾರ್ದನ ನಮನ	೧-೯
ಭಾಗವತ ಪುರಾಣ	೧೦-೨೫
ಹದಿನಾಲ್ಕನೆಯ ಅಧ್ಯಾಯದ	
ಸಿಂಹಾವಲೋಕನೆ	೨೬-೨೯
ಹದಿನೈದನೆಯ ಅಧ್ಯಾಯದ ಪ್ರಸ್ತಾಪ	೩೦-೩೧
ಸಿದ್ಧಿನಿರೂಪಣೆಯ ಪ್ರಸ್ತಾಪ	೩೨-೩೮
ಅಷ್ಟಮಹಾಸಿದ್ಧಿ	೩೯-೪೦
ಇತರ ಹತ್ತು ಗುಣಹೇತುಸಿದ್ಧಿಗಳು	೪೧
ಅಷ್ಟಮಹಾಸಿದ್ಧಿಗಳು	೪೨-೪೮
ಇತರ ಹತ್ತು ಗುಣಹೇತು ಸಿದ್ಧಿಗಳು	೪೯-೫೯
ಕ್ಷುದ್ರ ಪಂಚಸಿದ್ಧಿಗಳ ಪ್ರಾಪ್ತಿಯ ಸಾಧನೆ	೬೦-೬೪
ಅಷ್ಟಮಹಾಸಿದ್ಧಿಗಳ ಪ್ರಾಪ್ತಿಯ ಸಾಧನೆ	೬೫-೧೦೫
ಹತ್ತು ಗುಣಹೇತು ಸಿದ್ಧಿಗಳ	
ಪ್ರಾಪ್ತಿಯ ಸಾಧನೆ	೧೦೬-೧೫೦
ಕ್ಷುದ್ರ ಪಂಚಸಿದ್ಧಿಗಳ ಪ್ರಾಪ್ತಿಯ ಸಾಧನೆ	೧೫೧-೧೭೭
ಭಕ್ತಿಯಿಂದ ಸರ್ವ ಸಿದ್ಧಿಗಳ ಪ್ರಾಪ್ತಿ	೧೭೮-೧೮೫
ಸಿದ್ಧಿಗಳಿಂದಾಗುವ ಬಾಧೆ	೧೮೬-೧೯೮
ಸಿದ್ಧಿಗಳ ಪ್ರಾಪ್ತಿಯ ಅನ್ಯಸಾಧನೆಗಳು	೧೯೯-೨೧೪
ಭಕ್ತಿಯಿಂದ ಸಿದ್ಧಿಗಳ ಪ್ರಾಪ್ತಿ	೨೧೫-೨೨೦
ಈಶ್ವರನ ಪ್ರಭುತ್ವದ	
ಶಕ್ತಿ - ಈಶ್ವರ ಸ್ವರೂಪ	೨೨೧-೨೩೦
ಸಿದ್ಧಿಗಳು ಈಶ್ವರಪ್ರಾಪ್ತಿಗೆ ವಿಘ್ನತೆ	೨೩೧-೨೩೬
ಸಿದ್ಧಿನಿರೂಪಣೆಯ ಉಪಸಂಹಾರ	೨೩೭-೨೪೬
ಜನಾರ್ದನ ಮಹಿಮೆ	೨೪೭-೨೫೦

★★★

ಶ್ರೀ ಕೃಷ್ಣಾಷ್ಟಕ ಸ್ತೋತ್ರಂ

ವಸುದೇವ ಸುತಂ ದೇವಂ ಕಂಸಚಾಣೂರ ಮರ್ದನಮ್ ।
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ ॥ ೧ ॥

ಅತಸೀಪುಷ್ಪಸಂಕಾಶಂ ಹಾರನೂಪುರ ಶೋಭಿತಮ್ ।
ರತ್ನಕಂಕಣ ಕೇಯೂರಂ ಕೃಷ್ಣಂ ವಂದೇ ಜಗದ್ಗುರುಮ್ ॥ ೨ ॥

ಕುಟಿಲಾಲಕ ಸಂಯುಕ್ತಂ ಪೂರ್ಣಚಂದ್ರನಿಭಾನನಮ್ ।
ವಿಲಸತ್ಕುಂಡಲಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಮ್ ॥ ೩ ॥

ಮಂದಾರ ಗಂಧ ಸಂಯುಕ್ತಂ ಚಾರುಹಾಸಂ ಚತುರ್ಭುಜಮ್ ।
ಬರ್ಹಿಪಿಂಛಾವ ಚೂಡಾಂಗಂ ಕೃಷ್ಣಂ ವಂದೇ ಜಗದ್ಗುರುಮ್ ॥ ೪ ॥

ಉತ್ಫುಲ್ಲಪದ್ಮಪತ್ರಾಕ್ಷಂ ನೀಲಜೀಮೂತಸನ್ನಿಭಮ್ ।
ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರುಮ್ ॥ ೫ ॥

ರುಕ್ಮಿಣೀ ಕೇಳಿ ಸಂಯುಕ್ತಂ ಪೀತಾಂಬರ ಸುಶೋಭಿತಮ್ ।
ಅವಾಪ್ತತುಲಸೀ ಗಂಧಂ ಕೃಷ್ಣಂ ವಂದೇ ಜಗದ್ಗುರುಮ್ ॥ ೬ ॥

ಗೋಪಿಕಾನಾಂ ಕುಚದ್ವಂದ್ವಂ ಕುಂಕುಮಾಂಕಿತ ವಕ್ಷಸಮ್ ।
ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಮ್ ॥ ೭ ॥

ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾ ವಿರಾಜಿತಮ್ ।
ಶಂಖ ಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಮ್ ॥ ೮ ॥

ಕೃಷ್ಣಾಷ್ಟಕಮಿದಂ ಪುಣ್ಯಂ ಪ್ರಾತರುತ್ಥಾಯ ಯಃಪಠೇತ್ ।
ಕೋಟಿಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥

ಶ್ರೀಪಾಂಡುರಂಗ ಪ್ರಸನ್ನ



ಏಕಾಜನಾರ್ದನೀ ಪೂಜಿಲೇ । ತೇ ವಿಟೇವರೀ ದೇಖಿಲೇ ॥


ಶ್ರೀಸಂತ ಏಕನಾಥ ಮಹಾರಾಜರು ಪ್ರತಿನಿತ್ಯ ಪೂಜಿಸಿದ ವಿಜಯೀ ಪಾಂಡುರಂಗ

ಶ್ರೀಗುರು ದತ್ತಾತ್ರೇಯ ನಮಃ



ಕಲಿಯುಗೀ ತಾರಕ । ಸ್ವಾಮೀ ದತ್ತರಾಜ ಏಕ ।
ತ್ಯಾಚೇ ನಾಮ ನಿತ್ಯ ಗಾವೇ । ಭವಸಿಂಧೂಸಿ ತರಾವೇ ॥

ಶ್ರೀ ಸದ್ಗುರು ಜನಾರ್ದನಸ್ವಾಮಿ



ಓಂ ನಮೋ ಜೀ ಜನಾರ್ದನಾ । ನಾಹೀ ಭವ ಅಭವ ಭಾವನಾ ।
ನ ದೇಖೋನಿ ಮೀತೂಪಣಾ । ನಮನ ಶ್ರೀ ಚರಣಾ ಸದ್ಗುರುರಾಯಾ ॥

ಶ್ರೀ ಸಂತ ಏಕನಾಥ ಮಹಾರಾಜ



ಶರಣ ಶರಣ ಏಕನಾಥಾ । ಚರಣೆ ಮಾಥಾ ಠೇವಿಲಾ ॥

ಶ್ರೀ ರಾವ ಸಾಹೇಬ ಮಹಾರಾಜ (ನಾಥ ವಂಶಜರು) ಪೈಠಣ



ಬ್ರಹ್ಮಾಂಡಭರೀ ಕೀರ್ತಿ ಸಂತಾಂಚಾ ಮಹಿಮಾ ।
ವರ್ಣಾವಯಾ ಆಮ್ಹಾ ಮತಿ ಥೋಡೀ ॥

ಶ್ರೀ ಸಂತ ಸದ್ಗುರು ಶಂಕರಸ್ವಾಮಿ ಲಾಖೇ, ಶಿವೂರಕರ ಮಹಾರಾಜ



ಸದ್ಗುರು ಸ್ವಾಮೀಚಾ ಮಹಿಮಾ ಅಗಾಧ ।
ವಚನೇಚಿ ಬೋಧ ಕರೀ ಶಿಷ್ಯಾ ॥

ಶ್ರೀ ಚೈತನ್ಯ ಸದ್ಗುರು ಹ.ಭ.ಪ. ತಾತ್ಯಾಸಾಹೇಬ
ವಾಸಕರ ಮಹಾರಾಜ



ಸದ್ಗುರುಚೇ ಚರಣೀ ಠೇವಿಲಾ ಮಸ್ತಕ ।
ದೇಊನಿಯಾ ಹಸ್ತಕ ಉಠವಿಲೇ ॥

ಶ್ರೀ ಚೈತನ್ಯ ಸದ್ಗುರು ಹ.ಭ.ಪ. ದಾದಾಸಾಹೇಬ
ವಾಸಕರ ಮಹಾರಾಜ



ಸದ್ಗುರುನೇ ಮಜ ಆಶೀರ್ವಾದ ದಿಲಾ ।
ಹರುಷ ಭರಲಾ ಹೃದಯೀ ಮಾಝ್ಯಾ ॥

ಸಾರ್ಥ ಶ್ರೀಏಕನಾಥೀ ಭಾಗವತ

ಮೊದಲನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಸರಸ್ವತ್ಯೈ ನಮಃ ॥ ಶ್ರೀಗುರುಭ್ಯೋ ನಮಃ ॥ ಶ್ರೀದತ್ತಾತ್ರೇಯಾಯ ನಮಃ ॥
ಶ್ರೀರುಕ್ಮಿಣೀಪಾಂಡುರಂಗಾಭ್ಯಾಂ ನಮಃ ॥

ಓಂ ನಮೋ ಜೀ ಜನಾರ್ದನಾ । ನಾಹೀ ಭವಅಭವಭಾವನಾ । ನ ದೇಖೋನಿ ಮೀತೂಪಣಾ । ನಮನ ಶ್ರೀ ಚರಣಾ ಸದ್ಗುರುರಾಯಾ ।೧॥ ನಮನ ಶ್ರೀ ಏಕದಂತಾ । ಏಕಪಣೇ ತೂಚಿ ಆತಾ । ಏಕೀ ದಾವಿಸೀ ಅನೇಕತಾ । ಪರೀ ಏಕಾತ್ಮತಾ ನ ಮೋಡೇ ।೨॥ ತುಜಮಾಜೀ ವಾಸು ಚರಾಚರಾ । ಮ್ಹಣೌನಿ ಬೋಲಿಜೇ ಲಂಬೋದರಾ । ಯಾಲಾಗೀ ಸಕಳಾಂಚಾ ಸೋಯರಾ । ಸಾಚೋಕಾರಾ ತೂ ಹೋಸೀ ।೩॥ ತುಜ ದೇಖೇ ಜೋ ನರು । ತ್ಯಾಸೀ ಸುಖಾಚಾ ಹೋಯ ಸಂಸಾರು । ಯಾಲಾಗೀ ವಿಘ್ನಹರು । ನಾಮಾದರು ತುಜ ಸಾಜೇ ।೪॥ ಹರುಷ ತೇ ವದನ ಗಣರಾಜಾ । ಚಾರ್ಹೀ ಪುರುಷಾರ್ಥ ತ್ಯಾಚಿ ಚಾರ್ಹೀ ಭುಜಾ । ಪ್ರಕಾಶಿಯಾ ಪ್ರಕಾಶೀ ವೋಜಾ । ತೋ ಝಳಕತ ತುಝಾ ನಿಜದಂತು ।೫॥ ಪೂರ್ವಉತ್ತರ ಮೀಮಾಂಸಾ ದೋನೀ । ಲಾಗಲಿಯಾ ಶ್ರವಣಸ್ಥಾನೀ । ನಿಃಶಬ್ದಾದಿ ವಾಚಾ ವದನೀ । ಕರ ಜೋಡೂನಿ ಉಭಿಯಾ ।೬॥ ಏಕೇಚಿ ಕಾಳೀ ಸಕಳ ಸೃಷ್ಟೀ । ಆಪುಲೇಪಣೇ ದೇಖತ ಉಠೀ। ತೇಚಿ ತುಝೀ ದೇಖಣೇ ದೃಷ್ಟೀ । ಸುಖ ಸಂತುಷ್ಟೀ ವಿನಾಯಕಾ ।೭॥ ಸುಖಾಚೇ ಪೇಲಲೇ ದೋಂದ । ನಾಭೀ ಆವರ್ತಲಾ ಆನಂದ । ಬೋಧಾಚಾ ಮಿರವೇ ನಾಗಬಂದ । ದಿಸೇ ಸನ್ನಿಧ ಸಾಜಿರಾ ।೮॥ ಶುದ್ಧ ಸತ್ವಚಾ ಶುಕ್ಲಾಂಬರ । ಕಾಸೇ ಕಸಿಲಾ ಮನೋಹರ । ಸುವರ್ಣವರ್ಣ ಅಲಂಕಾರ । ತುಝೇನಿ ಸಾಚಾರ ಶೋಭತೀ ।೯॥ ಪ್ರಕೃತಿ ಪುರುಷ ಚರಣ ದೋನೀ । ತಳೀ ಘಾಲಿಸೀ ವೋಜಾವುನೀ । ತಯಾವರೀ ಸಹಜಾಸನೀ । ಪೂರ್ಣಪಣೇ ಮಿರವಸೀ ।೧೦॥ ತುಝೀ ಅಣುಮಾತ್ರ ಝಾಲಿಯಾ ಭೇಟೀ । ಶೋಧಿತಾ ವಿಘ್ನ ನ ಪಡೆ ದೃಷ್ಟೀ । ತೋಡಿಸೀ ಸಂಸಾರಫಾಂಸೋಟೀ । ತೋಚಿ ತುಝೇ ಮುಷ್ಟೀ ನಿಜಪರಶು ।೧೧॥

ಓಂಕಾರ ಸ್ವರೂಪರಾದ ಶ್ರೀ ಜನಾರ್ದನಸ್ವಾಮಿಯವರಿಗೆ ನಮಸ್ಕಾರಗಳು. ಹೇ ಸದ್ಗುರು ಜನಾರ್ದನರೇ, ನಿಮ್ಮ ಸ್ವರೂಪದಲ್ಲಿ ಆದಿ ಅಂತ್ಯದ ಕಲ್ಪನೆಯೇ ಸಂಭವಿಸುವುದಿಲ್ಲ. ಹೀಗಿರುವ ನಿಮ್ಮ ಚರಣಗಳಲ್ಲಿ ನಾನು ನೀನೆಂಬ ಭಾವವನ್ನು ಬಿಟ್ಟು (ತರಂಗ ಸಾಗರವತ್) ನಮಸ್ಕರಿಸುವೆನು ।೧॥ ಶ್ರೀಏಕದಂತಾ ಗಜಾನನಾ, ನಿನಗೂ ನಾನು ನಮಸ್ಕರಿಸುವೆನು. ಸಾಂಪ್ರತು, ನೀನೇ ಏಕಾತ್ಮತೆಯಿಂದ ಒಂದರಲ್ಲಿಯೇ ಅನೇಕತ್ವವನ್ನು ತೋರಿಸುತ್ತಿರುವೆ. ಆದಾಗ್ಯೂ ಅದ್ವೈತವು ಇಲ್ಲದಾಗಿಲ್ಲ ।೨॥ ನಿನ್ನಲ್ಲಿ ಎಲ್ಲ ಚರಾಚರಗಳ ವಾಸವಿದೆ. ಆದ್ದರಿಂದಲೇ ನಿನಗೆ "ಲಂಬೋದರ " ಎನ್ನುವರು. ಅದಕ್ಕಾಗಿ ಎಲ್ಲರ ನಿಜವಾದ ಬಂಧು ನೀನೇ ಆಗಿರುವೆ ।೩॥ ಯಾವ ಪುರುಷನು ನಿನ್ನ ದರ್ಶನವನ್ನು ಪಡೆಯುವನೋ ಅವನ ಸಂಸಾರವು ಸುಖಮಯವಾಗುವುದು. ಆದ್ದರಿಂದಲೇ ನಿನಗೆ ವಿಘ್ನಹರ್ತಾ ಎಂಬ ಉತ್ಕೃಷ್ಟವಾದ ನಾಮವು ಶೋಭಿಸುವುದು ।೪॥ ಹೇ, ಗಣರಾಜನೇ, ಆನಂದವೇ ನಿನ್ನ ಮುಖವಾಗಿರುವುದು. ನಾಲ್ಕು ಪುರುಷಾರ್ಥಗಳೇ ನಿನ್ನ ನಾಲ್ಕು ಕೈಗಳಾಗಿರುವುವು ಮತ್ತು ಪ್ರಕಾಶವಂತರಿಗೆ ಪ್ರಕಾಶವನ್ನು ಕೊಡುವ ನಿನ್ನ ನಿಜದಂತವು ಝಳಪಿಸುತ್ತಿರುವುದು ।೫॥ ಪೂರ್ವ ಮೀಮಾಂಸ ಮತ್ತು ಉತ್ತರ ಮೀಮಾಂಸ ಈ ಎರಡೂ ನಿನ್ನ ಕಿವಿಗಳಿಗೆ ಹತ್ತಿಕೊಂಡಿವೆ. ನಿನ್ನ ಮುಖದಲ್ಲಿ ಪರಾ, ಪಶ್ಯಂತಿ, ಮಧ್ಯಮಾ ಮತ್ತು ವೈಖರೀ ಎಂಬ ನಾಲ್ಕು ವಾಣಿಗಳು ಕೈ ಮುಗಿದುಕೊಂಡು ನಿಂತಿರುವುವು ।೬॥ ಹೇ, ವಿನಾಯಕನೇ, ಎಲ್ಲ ಸೃಷ್ಟಿಯು ಏಕಕಾಲಕ್ಕೆ ಆತ್ಮರೂಪದಿಂದ ತೋರುತ್ತಿದೆ. ಇದುವೇ ನಿನ್ನ ದಿವ್ಯವಾದ ಹಾಗೂ ಸುಖ ಸಂತೋಷ ಕೊಡುವ ದೃಷ್ಟಿಯಾಗಿರುವುದು ।೭॥ ಸುಖದ ಹೊಟ್ಟೆಯು ಬೆಳೆದಿರುವುದು. ಹೊಕ್ಕಳದಲ್ಲಿ ಆನಂದವು ತುಂಬಿರುವುದು. ಮತ್ತು ಬೋಧ ಸ್ವರೂಪವಾದ ನಾಗಬಂದ ಉಡುದಾರವು ಹೊಕ್ಕಳದಡಿಯಲ್ಲಿ ಶೋಭಾಯಮಾನವಾಗಿ ಕಂಗೊಳಿಸುತ್ತಿರುವುದು ।೮॥ ಶುದ್ಧ ಸತ್ವದ ಸುಂದರವಾದ ಶುಭ್ರ ವಸ್ತ್ರವನ್ನು ನೀನು ತೊಟ್ಟಿರುವೆ. ಶರೀರ ಮೇಲಿನ ಬಂಗಾರದ ಆಭರಣಗಳು ನಿನ್ನ ಶರೀರದಿಂದಲೇ ಶೋಭೆಗೊಂಡಿರುವುವು ।೯॥ ಪ್ರಕೃತಿ ಪುರುಷಗಳೆರಡು ನಿನ್ನ ಎರಡು ಚರಣಗಳಾಗಿರುವುವು. ಒಂದನ್ನು ಮಡಚಿ ಇನ್ನೊಂದನ್ನು ಕೆಳಗಿಟ್ಟು ಸಹಜಾಸನದಲ್ಲಿ ನೀನು ಪೂರ್ಣತ್ವದಿಂದ ಶೋಭಿಸುವೆ ।೧೦॥ ನಿನ್ನ ದರ್ಶನವು ಕ್ಷಣಮಾತ್ರವಾದರೂ ಸಾಕು, ವಿಘ್ನಗಳು ಶೋಧಿಸಿದರೂ ದೃಷ್ಟಿಗೆ ಬೀಳಲಾರವು. ಸಂಸಾರದ ಪಾಶವನ್ನು ಮುರಿಯುವಂತಹ ಪರಶು ನಿನ್ನ ಕೈಯಲ್ಲಿರುವುದು ।೧೧॥

ಭಾವೇ ಭಕ್ತ ಜೋ ಆವಡೇ । ತ್ಯಾಚೇ ಉಗವಿಸೀ ಭವಸಾಂಕಡೇ । ವೋಢೂನಿ ಕಾಢಿಸೀ ಆಪಣಾಕಡೇ । ನಿಜನಿವಾಡೇ ಅಂಕುಶೇ ॥೧೨॥ ಸಾಚ ನಿರಪೇಕ್ಷ ಜೋ ನಿಃಶೇಖ । ತ್ಯಾಚೇ ತೂಚಿ ವಾಢವಿಸೀ ಸುಖ । ದೇಊನಿ ಹರಿಖಾಚೇ ಮೋದಕ । ನಿವವಿಸೀ ದೇಖ ನಿಜಹಸ್ತೆ ॥೧೩॥ ಸೂಕ್ಷ್ಮಾಹೂನಿ ಸೂಕ್ಷ್ಮ ಸಾನ । ತ್ಯಾಮಾಜೇ ತುಝೇ ಅಧಿಷ್ಠಾನ । ಯಾಲಾಗೀ ಮೂಷಕವಾಹನ । ನಾಮಾಭಿಧಾನ ತುಜ ಸಾಜೇ ॥೧೪॥ ಪಾಹತಾ ನರು ನಾ ಕುಂಜರು । ವ್ಯಕ್ತಾವ್ಯಕ್ತಾಸೀ ಪರು । ಐಸಾ ಜಾಣೋನಿ ನಿರ್ವಿಕಾರು । ನಮನಾದರು ಗ್ರಂಥಾರ್ಥೀ ॥೧೫॥ ಐಶಿಯಾ ಜೀ ಗಣನಾಥಾ । ಮೀಪಣೇ ಕೈಚಾ ನಮಿತಾ । ಅಕರ್ತಾಚಿ ಜಾಹಲಾ ಕರ್ತಾ । ಗ್ರಂಥಕಥಾವಿಸ್ತಾರಾ ॥೧೬॥ ಆತಾ ನಮೂ ಸರಸ್ವತೀ । ಜೇ ಸಾರಾಸಾರವಿವೇಕಮೂರ್ತೀ । ಚೇತನಾರೂಪೇ ಇಂದ್ರಿಯವೃತ್ತೀ । ಜೇ ಚಾಳಿತೀ ಸರ್ವದಾ ॥೧೭॥ ಜೇ ವಾಚೇಚೀ ವಾಚಕ । ಜೇ ಬುದ್ಧೀಚೀ ದ್ಯೋತಕ । ಜೇ ಪ್ರಕಾಶಾ ಪ್ರಕಾಶಕ । ಸ್ವಯೇ ದೇಖ ಸ್ವಪ್ರಭ ॥೧೮॥ ತೇ ಶಿವಾಂಗೀ ಶಕ್ತಿ ಉಠೀ । ಜೈಸೀ ಡೋಳ್ಯಾಮಾಜೀ ದಿಠೀ । ಕಿಂವಾ ಸುರಸತ್ವೇ ದಾವೀ ಪುಷ್ಟೀ । ಫಳಪಣೇ ಪೋಟೀ ಫಳಾಚ್ಯಾ ॥೧೯॥ ಜೈಸಾ ಸಾಖರೇ ಅಂಗೀ ಸ್ವಾದು । ಕೀ ಸುಮನಾಮಾಜೀ ಮಕರಂದು । ತೈಸಾ ಶಿವಶಕ್ತಿ ಸಂಬಂಧು । ಅನಾದಿಸಿದ್ಧ ಅತರ್ಕ್ಯ ॥೨೦॥ ತೇ ಅನಿರ್ವಾಚ್ಯ ನಿಜಗೋಡೀ । ಚಹೂ ವಾಚಾಮಾಜೀ ವಾಡೀ । ಮ್ಹಣೋನಿ ವಾಗೀಶ್ವರೀ ರೋಕಡೀ । ಗ್ರಂಥಾರ್ಥೀ ಚೋಖಡೀ ಚವೀ ದಾವೀ ॥೨೧॥ ಸಾರಾಸಾರ ನಿವಡಿತೀ ಜನೀ । ತ್ಯಾ ಹಂಸಾವರೀ ಹಂಸವಾಹಿನೀ । ಬೈಸಲೀ ಸಹಜಾಸನೀ । ಅಗಮ್ಯಪಣೇ ಅಗೋಚರು ॥೨೨॥ ತೇ ಪರಮಹಂಸೀ ಆರೂಢ । ತಿಸೀ ವಿವೇಕಹಂಸ ಜಾಣತೀ ದೃಢ । ಜವಳೀ ಅಸತಾ ನ ದೇಖತೀ ಮೂಢ । ಅಭಾಗ್ಯ ದೃಢ ಅತಿಮಂದ ॥೨೩॥ ತಿಚೇ ನಿರ್ಧಾರಿತಾ ರೂಪ । ಅರೂಪಾಚೇ ವಿಶ್ವರೂಪ । ತೇ ಆಪುಲೇಪಣೇ ಅಮೂಪ । ಕಥಾ ಅನುರೂಪ ಬೋಲವೀ ॥೨೪॥ ಹಾ ಬೋಲು ಭಲಾ ಝಾಲಾ । ಮ್ಹಣೋನಿ ಬೋಲೇಂಚಿ ಸ್ತವಿಲಾ । ತೈಸಾ ಸ್ತುತಿಭಾವೋ ಉಪಜಲಾ । ಬೋಲೀ ಬೋಲಾ ಗೌರವೀ ॥೨೫॥ ತೇ ವಾಗ್ವಿಲಾಸ ಪರಮೇಶ್ವರೀ । ಸರ್ವಾಂಗದೇಖಣೀ ಸುಂದರೀ । ರಾಹೋನಿ ಸಬಾಹ್ಯ ಅಂಭ್ಯತರೀ । ಗ್ರಂಥಾರ್ಥಕುಸರೀ ವದವೀ ಸ್ವಯೇ ॥೨೬॥

ಅನನ್ಯ ಭಾವದ ಭಕ್ತನು ನಿನಗೆ ಬಹಳ ಪ್ರಿಯನು. ನೀನು ಅವನಿಗೆ ಭವಸಂಕಟದಿಂದ ಮುಕ್ತನನ್ನಾಗಿ ಮಾಡುವೆ. ನಿನ್ನ ಬೋಧರೂಪ ಅಂಕುಶದಿಂದ ನೀನು ಅವನನ್ನು ನಿನ್ನತ್ತ ಎಳೆದುಕೊಳ್ಳುವೆ. ॥೧೨॥ ಯಾವನು ನಿಜವಾಗಿಯೂ ನಿರಪೇಕ್ಷನಿರುವನೋ ಅವನ ಸುಖವನ್ನು ನೀನೇ ಬೆಳೆಸುವೆ. ಅವನಿಗೆ ನೀನು ನಿನ್ನ ಹಸ್ತದಿಂದಲೇ ಹರ್ಷರೂಪ ಮೋದಕವನ್ನು ಕೊಟ್ಟು ತೃಪ್ತಿಗೊಳಿಸುವೆ. ॥೧೩॥ ಸೂಕ್ಷ್ಮಕ್ಕಿಂತಲೂ ಅತ್ಯಂತ ಸೂಕ್ಷ್ಮ ವಸ್ತುಗಳಲ್ಲಿ ನಿನ್ನ ಅಧಿಷ್ಠಾನವಿರುವುದು. ಆದ್ದರಿಂದ ನಿನಗೆ ಮೂಷಕವಾಹನಾ ಎಂಬ ನಾಮವು ಶೋಭಿಸುವುದು. ॥೧೪॥ ವಿಚಾರಿಸಿ ನೋಡಿದರೆ ನೀನು ಮನುಷ್ಯನೂ ಅಲ್ಲ, ಆನೆಯೂ ಅಲ್ಲ. ವ್ಯಕ್ತ ಅವ್ಯಕ್ತಗಳಿಗಿಂತ ನೀನು ಭಿನ್ನನಾಗಿರುವೆ. ಹೀಗೆ ನಿರ್ವಿಕಾರನಾದ ನಿನಗೆ ಈ ಗ್ರಂಥವು ನಿರ್ವಿಘ್ನವಾಗಿ ಪೂರ್ಣಗೊಳ್ಳಲಿ ಎಂದು ನಾನು ಪರಮಾದರದಿಂದ ನಮಿಸುವೆನು ॥೧೫॥ ಹೀಗಿರುವ ಗಜಾನನನಿಗೆ ನಾನು ಎಂದು ನಮಸ್ಕಾರವನ್ನು ಮಾಡುವವನು ಎಲ್ಲಿಯವನು? ಏಕೆಂದರೆ ಮೂಲತಃ ಅಕರ್ತನೇ ಈ ಗ್ರಂಥಕಥೆಯ ವಿಸ್ತಾರಕರ್ತನಾಗಿರುವನು ॥೧೬॥ ಈಗ ಸಾರಾಸಾರ ವಿಚಾರದ ಕೇವಲ ಮೂರ್ತಿಯೇ ಆಗಿರುವ ಹಾಗೂ ಚೈತನ್ಯರೂಪದಿಂದ ಸದಾ ಸರ್ವದಾ ಇಂದ್ರಿಯ ವೃತ್ತಿಗಳಿಗೆ ಚಾಲನೆ ನೀಡುವ ಶ್ರೀಸರಸ್ವತಿಗೆ ನಾನು ನಮಸ್ಕರಿಸುವೆನು ॥೧೭॥ ನಾಲಿಗೆಯಿಂದ ನುಡಿಸುವವಳು, ಬುದ್ಧಿಗೆ ಬೋಧಿಸುವವಳು ಮತ್ತು ಪ್ರಕಾಶಕ್ಕೆ ಪ್ರಕಾಶವನ್ನು ಕೊಡುವವಳು ಹೀಗೆ ಸ್ವತಃ ಸ್ವಯಮ್‌ಪ್ರಕಾಶಳಾಗಿರುವಳು ॥೧೮॥ ಈಕೆಯೇ ಕಣ್ಣುಗಳಲ್ಲಿಯ ದೃಷ್ಟಿಯಂತೆ, ಫಳಗಳಲ್ಲಿಯ ರಸಪುಷ್ಟಿಯಂತೆ ಶಿವನ ಅಂಗದಲ್ಲಿ ಶಕ್ತಿರೂಪದಿಂದ ಇರುವಳು ॥೧೯॥ ಅದರಂತೆಯೇ ಸಕ್ಕರೆಯಲ್ಲಿನ ಸಿಹಿಯಂತೆ ಅಥವಾ ಪುಷ್ಪಗಳಲ್ಲಿನ ಮಕರಂದದಂತೆ ಶಿವನ ಮತ್ತು ಶಕ್ತಿಯ ಸಂಬಂಧವು ಅನಾದಿಸಿದ್ಧವಾಗಿದ್ದು ಅತರ್ಕ್ಯವಾಗಿರುವುದು ॥೨೦॥ ವಾಣಿಯಿಂದ ವರ್ಣಿಸಲು ಶಕ್ಯವಿಲ್ಲದ ಆತ್ಮಸ್ವರೂಪದ ಮಧುರತ್ವವು ನಾಲ್ಕೂ ವಾಣಿಗಳಲ್ಲಿ ಶ್ರೇಷ್ಠತ್ವದಿಂದ ತುಂಬಿರುವುದು. ಆದ್ದರಿಂದ ವಾಣಿಯ ದೇವತೆಯಾದ ಸರಸ್ವತಿಯು ಗ್ರಂಥಾರ್ಥದ ಉತ್ತಮ ರುಚಿಯನ್ನು ತೋರಿಸಿಕೊಡುವಳು ॥೨೧॥ ಜಗತ್ತಿನಲ್ಲಿ ಸಾರಾಸಾರವನ್ನು ಬೇರ್ಪಡಿಸುವುದು ಹಂಸಪಕ್ಷಿಯಾಗಿದ್ದು ಆ ಹಂಸದ ಮೇಲೆಯೇ ಈ ಹಂಸವಾಹಿನಿ ದೇವತೆಯು ಅತರ್ಕ್ಯ ಹಾಗೂ ಅಗಮ್ಯ ಹೀಗೆ ಸಹಜಾಸನವನ್ನು ಹಾಕಿ ಕುಳಿತಿರುವಳು ॥೨೨॥ ಪರಮಹಂಸದ ಮೇಲೆ ಆರೂಢಳಾಗಿರುವ ಈಕೆಗೆ ವಿವೇಕ ಹಂಸಗಳು ಮಾತ್ರ ದೃಢವಾಗಿ ಅರಿತುಕೊಳ್ಳುವುವು. ಆದರೆ, ಮೂರ್ಖರು, ಅತ್ಯಂತ ಜಡಜೀವಿಗಳು, ಅಭಾಗ್ಯರು ಇವರಿಗೆ ಮಾತ್ರ ಈಕೆಯು ಅತಿ ಸಮೀಪವಿದ್ದರೂ ಕಾಣಿಸಲಾರಳು ॥೨೩॥ ಈಕೆಯ ಸ್ವರೂಪದ ವಿಚಾರ ಮಾಡಲು ನಿರಾಕಾರ ಹಾಗೂ ವಿಶ್ವಾಕಾರವು ಈಕೆಯೇ ಆಗಿರುವಳೆಂದು ಕಂಡುಬರುವುದು. ಈಕೆಯೇ ತಾನೇ ತಾನಾಗಿ ಅನುಪಮ್ಯ ಕಥಾನುಸಂಧಾನವನ್ನು ಹೇಳಿಸುವಳು ॥೨೪॥ ''ಈ ಹೇಳಿಕೆಯು ಉತ್ತಮವಾಯಿತು'' ಹೀಗೆ ಹೇಳಿಕೆಯೇ ಹೇಳುವಂತೆ ಮನದಲ್ಲಿ ಉತ್ಪನ್ನವಾದ ಸ್ತುತಿಭಾವವು ವಾಣಿಯಿಂದಲೇ ವಾಣಿಯ ಗೌರವವಾಗುವುದು ಎಂದು ತಿಳಿಯಬೇಕು ॥೨೫॥ ಈ ವಾಗ್ವಿಲಾಸರೂಪಳಾದ ಪರಮೇಶ್ವರಿಯು ಸರ್ವಾಂಗ ಸುಂದರಿ ಸರಸ್ವತಿದೇವಿಯು ನನ್ನ ಅಂತರ್ಬಾಹ್ಯವಾಗಿ ಇದ್ದುಕೊಂಡು ಸ್ವತಃ ಗ್ರಂಥದ ಸುಂದರ ಅರ್ಥವನ್ನು ಹೇಳಿಸುವಳು ॥೨೬॥

ತೇ ಸದಾ ಸಂತುಷ್ಟ ಸಹಜ । ಮ್ಹಣೋನಿ ನಿರೂಪಣಾ ಚಢಲೇ ಭೋಜ । ಪರೀ ವಕ್ತೇಪಣಾಚಾ ಪುಂಜ । ಮೀಪಣೇ ಮಜ ಯೇವೋಚ ನೇದೀ ।೨೭।। ವಾಗ್ದೇವತೇಚೀ ಸ್ತುತೀ । ವಾಚಾಚಿ ಜಾಹಲೀ ವದತೀ । ತೇಥೇ ದ್ವೈತಾಚಿಯೇ ಸಂಪತ್ತೀ । ಉಮಸ ಚಿತ್ತೀ ಉಮಸೇನಾ ।೨೮।। ತಿಣೇ ಬೋಲ ಬೋಲಣೇ ಮೋಡಿಲೇ । ಸಮೂಳ ಮೌನಾತೇ ತೋಡಿಲೇ । ತ್ಯಾವರೀ ನಿರೂಪಣ ಘಡಿಲೇ । ನ ಬೋಲಣೇ ಬೋಲೇ ಬೋಲವೀ ।೨೯।। ತಿಸೀ ಸೇವಕಪಣೇ ದುಸರಾ । ಹೋಊನಿ ನಿಘೇ ನಮಸ್ಕಾರಾ । ತಂವ ಮೀಪಣೇಸೀ ಪರಾ । ನಿಜ ನಿರ್ಧಾರಾ ಪಾರುಷೇ ।೩೦।। ಜೇಥೇ ಮೀಪಣಾಚಾ ಅಭಾವೋ । ತೇಥೇ ತೂಪಣಾ ಕೈಚಾ ಠಾವೋ । ಯಾಹೀವರೀ ಕರೀ ನಿರ್ವಾಹೋ । ಅಗಮ್ಯ ಭಾವೋ ನಿರೂಪಣೇ ।।೩೧।। ಜೈಶಾ ಸಾಗರಾವರೀ ಸಾಗರೀ । ಚಾಲತೀ ಲಹರೀಚಿಯಾ ಲಹರೀ । ತೈಸೇ ಶಬ್ದ ಸ್ವರೂಪಾಕಾರೀ । ಸ್ವರೂಪಾವರೀ ಶೋಭತೀ ।।೩೨।। ಜೈಶಾ ಸಾಖರೇಚಿಯಾ ಕಣಿಕಾ । ಗೋಡಿಯೇ ಭಿನ್ನ ನವ್ಹತೀ ದೇಖಾ । ತೈಸೇ ನಿರೂಪಣ ಯೇ ರಸಾಳಸುಖಾ । ಬ್ರಹ್ಮರಸೇ ದೇಖಾ ರಸವೃತ್ತಿ ।೩೩।। ತೇಥೇ ಮೀಪಣೇಶೀ ಸರಸ್ವತೀ । ಬೈಸವಿಲೇ ಏಕಾ ತಾಟೇ ರಸವೃತ್ತೀ । ತೇಣೇ ಅಭಿನ್ನಶೇಷ ದೇಊನಿ ತೃಪ್ತೀ । ತೇ ಹೇ ಉದ್ಗಾರ ಯೇತೀ ಕಥೇಚೇ ।೩೪।। ಆತಾ ವಂದೂ ತೇ ಸಜ್ಜನ । ಜೇ ಕಾ ಆನಂದಚಿದ್ಘನ । ವರ್ಷತಾತೀ ಸ್ವಾನಂದ ಜೀವನ । ಸಂತಪ್ತ ಜನ ನಿವವಾವಯಾ ।೩೫।। ತೇ ಚೈತನ್ಯಾಚೇ ಅಳಂಕಾರ । ಕೀ ಬ್ರಹ್ಮವಿದ್ಯೇಚೇ ಶೃಂಗಾರ । ಕೀ ಈಶ್ವರಾಚೇ ಮನೋಹರ । ನಿಜ ಮಂದಿರ ನಿವಾಸಾ ।೩೬।। ತೇ ಅಧಿಷ್ಠಾನಾ ಅಧಿವಾಸು । ಕೀ ಸುಖಾಸಹೀ ಸೋಲ್ಹಾಸು । ವಿಶ್ರಾಂತೀಸೀ ವಿಶ್ವಾಸು । ನಿಜ ರಹಿವಾಸು ಕರಾವಯಾ ।೩೭।। ಕೀ ತೇ ಭೂತದಯಾರ್ಣವ । ಕೀ ಮಾಹೇರಾ ಆಲೀ ಕಣವ । ನಾ ತೇ ನಿರ್ಗುಣಾಚೇ ಅವೇವ । ನಿಜಗೌರವ ಸ್ವಾನಂದಾ ।೩೮।। ನಾ ತೇ ಡೋಳ್ಯಾಂತೀಲ ದೃಷ್ಟೀ । ಕೀ ತಿಚೀ ಹೀ ದೇಖಣೀ ಪುಷ್ಟೀ । ಕೀ ಸಂತುಷ್ಟೀಸೀ ತುಷ್ಟೀ । ಚರಣಾಂಗುಷ್ಠೀ ಜಯಾಂಚೇ ।೩೯।। ತೇ ಪಾಹತೀ ಜಯಾ ಕಡೇ । ತ್ಯಾಂಚೇ ಉಗವೇ ಭವಸಾಂಕಡೇ । ಪರಬ್ರಹ್ಮ ಡೋಳಿಯಾಪುಢೇ । ನಿಜನಿವಾಡೇ ಉಲ್ಹಾಸೇ ।೪೦।। ತೇಥೇ ಸಾಧನ ಚತುಷ್ಟಾಯಸಾಯಾಸ । ನ ಪಾಹತಿ ಶಾಸ್ತ್ರಚಾತುರ್ಯವಿಲಾಸ । ಏಕ ಧರಿಲಾ ಪುರೇ ವಿಶ್ವಾಸ । ಸ್ವಯೇ ಪ್ರಕಾಶ ತೇ ಕರಿತೀ ।೪೧।।

ಈಕೆಯು ಸದಾ ಸರ್ವಕಾಲದಲ್ಲಿಯೂ ಸ್ವಭಾವಸಿದ್ಧ ಪ್ರಸನ್ನಳಾಗಿಯೇ ಇರುವಳು. ಆದ್ದರಿಂದಲೇ ಈ ನಿರೂಪಣಕ್ಕೆ ರಂಗು ಏರಿರುವುದು. ಆದಾಗ್ಯೂ, ಈಕೆಯು ನನಗೆ ವಕ್ತೃತ್ವದ ಅಭಿಮಾನವನ್ನು ಬರಗೊಡಲೇ ಇಲ್ಲ ।೨೭।। ಈ ವಾಗ್ದೇವತೆಯ ಸ್ತುತಿಯನ್ನು ವಾಣಿಯಿಂದಲೇ ಮಾಡಲಾಯಿತು. ಆದ್ದರಿಂದ ದ್ವೈತದ ಸಾಮಗ್ರಿಯು ಚಿತ್ತದಲ್ಲಿ ಬರಲು ಅವಕಾಶವೇ ಇಲ್ಲದಾಯಿತು ।೨೮।। ಈಕೆಯು ಮಾತುಗಳನ್ನು ಮತ್ತು ಮಾತನಾಡುವುದನ್ನು ಮುರಿದು ಹಾಕಿದಳು. ಹಾಗೆಯೇ ಮೌನವನ್ನೂ ಸಹ ಸಮೂಲವಾಗಿ ತುಂಡರಿಸಿದಳು. ಆದರೂ ಸಹ ಪುನಃ ನಿರೂಪಣವನ್ನು ಸಿದ್ಧಪಡಿಸಿ ಹೇಳಲು ಅಶಕ್ಯವಾದದ್ದನ್ನು ಶಬ್ದಗಳಿಂದ ಹೇಳಿಸಿದಳು. ।೨೯।। ಈ ಪ್ರಕಾರದ ಸರಸ್ವತಿದೇವಿಯನ್ನು ನಾನು ಸೇವಕತನದಿಂದ ಬೇರೆಯಾಗಿ ನಮಸ್ಕರಿಸಲು ಹೋದೆನು. ಆಗ ನಾನೆಂಬುವುದರ ಜೊತೆಯಲ್ಲಿ ಪರಾವಾಣಿಯೂ ಇಲ್ಲದಾಯಿತು ।೩೦।। ಎಲ್ಲಿ ನಾನೆಂಬುವುದೇ ಇಲ್ಲದಾಗಲು ಅಲ್ಲಿ ನೀನೆಂಬುವುದಕ್ಕೆ ಎಲ್ಲಿಯ ಅವಕಾಶ? ಹೀಗಿದ್ದರೂ ಈ ವಿಷಯ ಪ್ರತಿಪಾದನೆಯಲ್ಲಿ ಅತರ್ಕ್ಯ ಪ್ರಸಾದವು ತುಂಬಿ ಪೂರ್ಣಗೊಳಿಸುವುದು ।೩೧।। ಸಮುದ್ರದಲ್ಲಿ ತೆರೆಗಳ ಮೇಲೆ ತೆರೆಗಳು ಉಕ್ಕಿ ಹರಿಯುವಂತೆ ಇಲ್ಲಿ ಆತ್ಮಸ್ವರೂಪದಲ್ಲಿ ಸ್ವರೂಪಾಕಾರವು ಶಬ್ದರೂಪವಾಗಿ ಲಹರೀಗಳ ಮೇಲೆ ಲಹರೀಗಳಿಂದ ಸುಶೋಭಿಸುತ್ತಿದೆ ।೩೨।। ಸಕ್ಕರೆಯ ಕಣಗಳು ಸಿಹಿಯಿಂದ ಭಿನ್ನವಾಗಿರುವುದಿಲ್ಲ. ಅದರಂತೆಯೇ ನಿರೂಪಣದ ಶಬ್ದಗಳು ಬ್ರಹ್ಮರಸದಿಂದ ತುಂಬಿಕೊಂಡಿರುವುದರಿಂದ ಬ್ರಹ್ಮಸುಖದ ರಸಕ್ಕಿಂತ ಭಿನ್ನವಾಗಿರುವುದಿಲ್ಲ ।೩೩।। ಬ್ರಹ್ಮಾನಂದದ ರಸವೃತ್ತಿಯಲ್ಲಿ ನಾನೆಂಬುವ ಜೊತೆಯಲ್ಲಿ ಸರಸ್ವತಿಯನ್ನು ಸಹ ಒಂದೇ ತಾಟಿನಲ್ಲಿ ಕೂಡಿಸಲಾಗಿದೆ. ಇದರಿಂದ ಅಭಿನ್ನಭಾವದ ಶೇಷದಿಂದ ತೃಪ್ತಿಯ ಡರಕೆಗಳು ಬಂದಿದ್ದರಿಂದಲೇ ಈ ಕಥೆಯ ಉದ್ಗಾರವು ಹೊರ ಹೊಮ್ಮುತ್ತಿದೆ ।೩೪।। ಈಗ ಸಂತಪ್ತ ಜನರನ್ನು ಶಾಂತಗೊಳಿಸಲು ಸ್ವಾನಂದ ಜೀವನದ ಮಳೆಗರೆಯುವ, ಚಿದಾನಂದದ ಕೇವಲ ಮೋಡವಾಗಿರುವ ಸಜ್ಜನರನ್ನು ವಂದಿಸುವೆನು ।೩೫।। ಇವರು ಚೈತನ್ಯದ ಅಲಂಕಾರವಾಗಿರುವರು, ಬ್ರಹ್ಮವಿದ್ಯೆಯಿಂದ ಶೃಂಗಾರಗೊಂಡಿರುವರು. ಈಶ್ವರನಿಗೆ ವಾಸಿಸಲು ಮನೋಹರವಾದ ಮಂದಿರವೇ ಆಗಿರುವರು ।೩೬।। ಇವರು ಬ್ರಹ್ಮ ವಸ್ತುವಿನ ನಿವಾಸಸ್ಥಾನವಾಗಿರುವರು. ಅಥವಾ ಸುಖದ ಪರಿಪೂರ್ಣ ಉಲ್ಹಾಸರಾಗಿರುವರು. ಹಾಗೂ ವಿಶ್ರಾಂತಿಗೆ ವಾಸಿಸಲು ಪೂರ್ಣ ಭರವಸೆಯ ಸ್ಥಳವಾಗಿರುವರು ।೩೭।। ಇವರು ಭೂತದಯೆಯ ಸಾಗರರಾಗಿರುವರು. ಕರುಣೆಯ ತವರುಮನೆಯಾಗಿರುವರು. ಹಾಗೂ ಸ್ವಾನಂದವನ್ನು ಗೌರವಿಸುವ ನಿರ್ಗುಣದ ಸಗುಣ ಅವಯವಗಳಾಗಿರುವರು ।೩೮।। ಇವರು ನೇತ್ರಗಳಲ್ಲಿನ ದೃಷ್ಟಿಯಾಗಿರುವರು. ಆ ದೃಷ್ಟಿಯಿಂದ ನೋಡುವ ಪುಷ್ಟಿಯಾಗಿರುವರು. ಇದಲ್ಲದೇ ಇವರ ಚರಣಾಂಗುಷ್ಟಿಯಲ್ಲಿ ಸಂತೋಷಕ್ಕೂ ತುಷ್ಟಿಯು ದೊರೆಯುವುದು ।೩೯।। ಹೀಗಿರುವ ಇವರು ಯಾರತ್ತ ನೋಡುವರೋ, ಅವರ ಭವಸಂಕಟಗಳು ದೂರಾಗುವುವು ಮತ್ತು ಅವರ ಕಣ್ಣುಗಳಲ್ಲಿ ಪರಬ್ರಹ್ಮವು ತನ್ನಷ್ಟಕ್ಕೆ ತಾನೇ ಪ್ರಕಟವಾಗುವುದು ।೪೦।। ಇವರು ಸಾಧನ ಚತುಷ್ಟಯದ ಸಾಹಸವನ್ನು ಅಥವಾ ಶಾಸ್ತ್ರ ಚಾತುರ್ಯದ ವಿಲಾಸವನ್ನು ನೋಡಲಾರರು. ಇವರಲ್ಲಿ ಒಂದೇ ಒಂದು ವಿಶ್ವಾಸವನ್ನು ಇಟ್ಟರೆ ಸಾಕು, ಇವರು ತಾವಾಗಿಯೇ ಜ್ಞಾನಪ್ರಕಾಶಕರನ್ನಾಗಿ ಮಾಡುವರು ।೪೧।।

ತೇ ಜಗಾಮಾಜೀ ಸದಾ ಅಸತೀ । ಜೀವಮಾತ್ರಾತೇ ದಿಸತೀ । ಪರೀ ವಿಕಲ್ಪೇಂಚಿ ಠಕಿಜತೀ । ನಾಹೀ ಮ್ಹಣತೀ ನಾಸ್ತಿಕ್ಯೇ ॥೪೨॥ ಮಾತಿಯೇಚಾ ದ್ರೋಣ ಕೇಲಾ । ತೋ ಕೌಳಿಕಾ ಭಾವೋ ಫಳಲಾ । ಮ್ಹಣೌನಿ ವಿಶ್ವಾಸೇವೀಣ ನಾಡಲಾ । ಜಗು ಠಕಲಾ ವಿಕಲ್ಪೇ ॥೪೩॥ಏಕಾಏಕೀ ವಿಶ್ವಾಸತಾ । ತರೀ ವಾಣೀ ನಾಹೀ ನಿಜಸತ್ತಾ । ತ್ಯಾಂಚೇ ಚರಣೀ ಭಾವಾರ್ಥತಾ । ಠೇವಿತಾ ಮಾಥಾ ವಿಶ್ವಾಸೇ ॥೪೪॥ ತೇ ನಮಸ್ಕಾರಿತಾ ಆವಶ್ಯಕ । ಕರೂನ ಠಾಕತೀ ಏಕ । ಪರೀ ಏಕಪಣೇ ಸೇವಕ । ತ್ಯಾಂಚಾಚಿ ದೇಖ ಸ್ವಯೇ ಹೋಆವೇ ॥೪೫॥ ತ್ಯಾಂಚಿಯಾ ಸೇವೇಚಿಯೇ ಗೋಡೀ । ಬ್ರಹ್ಮ ಸುಖಾಚೀ ಉಪಮಾ ಥೋಡೀ। ಜೇ ಭಜತೀ ಅನನ್ಯ ಆವಡೀ । ತೇ ಜಾಣತೀ ಗಾಢೀ ನಿಜಚವೀ ॥೪೬॥ ತೇ ಪ್ರಕೃತೀಸೀ ಪರ । ಪ್ರಕೃತಿರೂಪೀ ತೇ ಅವಿಕಾರ । ಆಕಾರ-ವಿಕಾರ-ವ್ಯವಹಾರ । ತ್ಯಾಂಚೇನಿ ಸಾಚಾರ ಬಾಧೀನಾ ॥೪೭॥ ತೇ ಭೋಗಾವರೀ ನ ವಿಟತೀ । ತ್ಯಾಗಾವರೀ ನ ಉಠತೀ । ಆಪುಲಿಯೇ ಸಹಜಸ್ಥಿತೀ । ಸ್ವಯೇ ವರ್ತತೀ ಸರ್ವದಾ ॥೪೮॥ ತೇ ಜ್ಞಾತೇಪಣಾ ನ ಮಿರವಿತೀ । ಪಿಸೇಪಣ ನ ದಾವಿತೀ । ಸ್ವರೂಪಪ್ರಾಪ್ತಿಅಭಿಮಾನ ವಿಸ್ಮೃತೀ । ಗಿಳೂನಿ ವರ್ತತೀ ನಿಜಾಂಗೇ ॥೪೯॥ ಪ್ರೇಮಾ ಅಂಗೀಂಚಿ ಜಿರಾಲಾ । ವಿಸ್ಮಯೋ ಯೇವೋಂಚಿ ವಿಸರಲಾ । ಪ್ರಪಂಚುಪರಮಾರ್ಥು ಏಕು ಜಾಹಲಾ । ಹಾಹೀ ಠೇಲಾ ವಿಭಾಗು ॥೫೦॥ ಸ್ಮರಣ ವಿಸ್ಮರಣೇಶೀ ಗೇಲೇ । ದೇಹ ದೇಹೀಂಚ ಹಾರಪಲೇ । ಆಂತುಬಾಹೇರಪಣ ಗೇಲೇ । ಗೇಲೇ ಠೇಲೇ ಸ್ಮರೇನಾ ॥೫೧॥ ಸ್ವಪ್ನ ಜಾಗೃತೀ ಜಾಗತಾ ಗೇಲೀ । ಸುಷುಪ್ತಿ ಸಾಕ್ಷಿತ್ವೇಸೀ ಬುಡಾಲೀ । ಉನ್ಮನೀಹೀ ವೇಡಾವಲೀ । ತುರ್ಯಾ ಠೇಲೀ ತಟಸ್ಥ ॥೫೨॥ ದೃಶ್ಯ ದ್ರಷ್ಟೇನಶೀ ಗೇಲೇ । ದರ್ಶನ ಏಕಲೇಪಣೇ ನಿಮಾಲೇ । ತೇ ನಿಮಣೇಪಣಹೀ ವಿರಾಲೇ । ವಿರವಿತೇ ನೇಲೇ ವಿರಣೇನಿಶೀ ॥೫೩॥ ಜ್ಞಾನ ಅಜ್ಞಾನಾತೇ ಘೇಊನಿ ಗೇಲೇ । ತಂವ ಜ್ಞಾತೇಪಣಹೀ ಬುಡಾಲೇ । ವಿಜ್ಞಾನ ಅಂಗೀ ಘಡಲೇ । ಪರೀ ನವೇ ಜಡಲೇ ಹೇ ನ ಮನೀ ॥೫೪॥ ಯಾಪರೀ ಜೇ ನಿಜಸಜ್ಜನ । ತಿಹೀ ವ್ಹಾವೇ ಸಾವಧಾನ । ದ್ಯಾವೇ ಮಜ ಅವಧಾನ । ಹೇ ವಿಜ್ಞಾಪನ ಬಾಳತ್ವೇ ॥೫೫॥

ಇವರು ಯಾವಾಗಲೂ ಜಗತ್ತಿನ ಜನರಲ್ಲಿಯೇ ಇರುವರು. ಪ್ರತಿಯೊಬ್ಬರ ಕಣ್ಣಿಗೂ ಬೀಳುವರು. ಆದಾಗ್ಯೂ ವಿಕಲ್ಪದಿಂದ ಮನುಷ್ಯರು ಮೋಸಕ್ಕೆ ಬಲಿಯಾಗುವರು ಮತ್ತು ನಾಸ್ತಿಕ ಭಾವದಿಂದ "ಇವರು ಇಲ್ಲ" ಎಂದು ಹೇಳುವರು ॥೪೨॥ ದ್ರೋಣಾಚಾರ್ಯರ ಮೂರ್ತಿಯನ್ನು ಮಣ್ಣಿನಿಂದ ತಯಾರಿಸಿ, ಅದನ್ನೇ ಗುರುಭಾವದಿಂದ ಭಜಿಸಿದ ಆ ಏಕಲವ್ಯನು ಧನುರ್ವಿದ್ಯೆಯನ್ನು ಪ್ರಾಪ್ತ ಮಾಡಿಕೊಂಡನು. ಹೀಗಿದ್ದರೂ ಈ ಜಗತ್ತಿನ ಜನರು ಅವಿಶ್ವಾಸದಿಂದ ಮೋಸ ಹೋಗಿ ಕೇವಲ ವಿಕಲ್ಪಗಳಿಂದ ಜಾರಿಹೋದರು॥೪೩॥ಶುದ್ಧ ಮನಸ್ಸಿನಿಂದ ಒಮ್ಮಿಂದೊಮ್ಮೆಲೆ ಅವರಲ್ಲಿ ವಿಶ್ವಾಸವಿಟ್ಟು ಹಾಗೆಯೇ ಭಕ್ತಿ ಭಾವದಿಂದ ನಿಶ್ಚಯಪೂರ್ವಕವಾಗಿ ಅವರ ಚರಣಗಳಲ್ಲಿ ಮಸ್ತಕವನ್ನಿಟ್ಟರೆ ಆತ್ಮಾನುಭವಕ್ಕೆ ಕೊರತೆ ಬೀಳಲಾರದು ॥೪೪॥ ಅವರಿಗೆ ಪ್ರೇಮಪೂರ್ವಕ ಅವಶ್ಯವಾಗಿ ನಮಸ್ಕರಿಸಿದರೆ ಅವರು ತಮ್ಮಲ್ಲಿ ಐಕ್ಯಗೊಳಿಸುವರು. ಆದರೆ ಐಕ್ಯರೂಪದಿಂದ ಅವರದೇ, ಸೇವಕರಾಗಿ ಇರಬೇಕಾಗುವುದು ॥೪೫॥ ಅವರ ಸೇವೆಯಿಂದ ಸಿಗುವ ಆನಂದಕ್ಕೆ ಬ್ರಹ್ಮಸುಖದ ಉಪಮೆಯು ಚಿಕ್ಕದಾಗುವುದು. ಇವರ ಉಪಾಸನೆಯನ್ನು ಯಾರು ಅನನ್ಯ, ಭಕ್ತಿಯಿಂದ ಮಾಡುವರೋ, ಅವರು ಆತ್ಮಸುಖದ ನಿಜವಾದ ಆನಂದದ ಸವಿಯನ್ನು ಸೇವಿಸುವರು ॥೪೬॥ ಇವರು ಪ್ರಕೃತಿಯ ಹೊರತಾಗಿರುವರು, ಪ್ರಕೃತಿರೂಪದಲ್ಲಿದ್ದರೂ ಇವರು ಅವಿಕೃತರಾಗಿರುವರು. ಪ್ರಕೃತಿಯ ಆಕಾರ, ವಿಕಾರ ಹಾಗೂ ವ್ಯವಹಾರಗಳ ಬಾಧೆಯು ಇವರಿಂದ ಆಗುವುದಿಲ್ಲ ॥೪೭॥ ಇವರು ಭೋಗದ ಬೇಸರಿಕೆ ಮಾಡಿಕೊಳ್ಳುವುದಿಲ್ಲ. ಅಥವಾ ತ್ಯಾಗದ ವ್ಯರ್ಥ ಸ್ತುತಿಯನ್ನು ಪ್ರಚಾರಗೊಳಿಸುವುದಿಲ್ಲ. ತಮ್ಮ ಸಹಜ ಸ್ಥಿತಿಯಲ್ಲಿಯೇ ಅವರು ನಿರಂತರವಾಗಿ ವರ್ತಿಸುತ್ತಿರುವರು ॥೪೮॥ ಇವರು ಜ್ಞಾನದ ಅಹಂಕಾರದಿಂದ ಮೆರೆಯುವುದಿಲ್ಲ. ಅಥವಾ ಹುಚ್ಚುತನವನ್ನು ಸಹ ತೋರಿಸುವುದಿಲ್ಲ. ಇವರು ಸ್ವರೂಪ ಪ್ರಾಪ್ತಿಯ ಗರ್ವವನ್ನು ಹಾಗೂ ವಿಸ್ಮರಣೆಯನ್ನು ನುಂಗಿ ಸಹಜಸ್ಥಿತಿಯಲ್ಲಿ ವರ್ತಿಸುವರು ॥೪೯॥ ಆತ್ಮ ಸಾಕ್ಷಾತ್ಕಾರದ ವೇಳೆಯಲ್ಲಿ ಉದ್ಭವಗೊಳ್ಳುವ ಪ್ರೇಮದ ಲಹರಿಗಳು ಶರೀರದಲ್ಲಿಯೇ ಜೀರ್ಣಗೊಂಡವು. ಮತ್ತು ಆಗಾಗುವ ವಿಲಕ್ಷಣವಾದ ಆನಂದದಿಂದ ಉಂಟಾಗುವ ಆಶ್ಚರ್ಯವು ಮರೆತು ಹೋಯಿತು. ಪ್ರಪಂಚ ಪಾರಮಾರ್ಥಗಳೆರಡೂ ಒಂದಾದವು. ಆದರೆ, ಹೀಗಾಗಿರುವುದನ್ನು ಸಹ ಇವರ ಲಕ್ಷದಲ್ಲಿ ಉಳಿಯಲಿಲ್ಲ॥೫೦॥ ಸ್ಮರಣವು ವಿಸ್ಮರಣೆಯ ಜೊತೆಯಲ್ಲಿ ಹೊರಟು ಹೋಯಿತು. ದೇಹವು ದೇಹದಲ್ಲಿಯೇ ಇಲ್ಲದಾಯಿತು. ಅಂತರಬಾಹ್ಯಗಳು ಓಡಿ ಹೋದವು. ಆದರೆ ಹೋದವೋ, ಇರುವವೋ ಇವು ಸಹ ಇವರ ಸ್ಮರಣೆಯಲ್ಲಿರುವುದಿಲ್ಲ ॥೫೧॥ ಸ್ವರೂಪ ಜಾಗೃತಿಯಿಂದ ಸ್ವಪ್ನ ಮತ್ತು ಜಾಗ್ರತೆ ಇವು ಸಹ ಇಲ್ಲದಾದವು. ಸಾಕ್ಷಿತ್ವವು ಸಹ ಸುಷುಪ್ತಿಯು ಮುಳುಗಿ ಹೋಯಿತು. ಉನ್ಮನೀ ಅವಸ್ಥೆಯು ತಿಳಿಯದಂತಾಗಿ ತುರ್ಯಾವಸ್ಥೆಯು ತಟಸ್ಥವಾಯಿತು ॥೫೨॥ ದೃಶ್ಯವು ದೃಷ್ಟಾವು ಸಹ ಹೊರಟು ಹೋಯಿತು. ಏಕತ್ವದಿಂದ ದರ್ಶನವು ಇಲ್ಲದಾಯಿತು. ಮತ್ತು ಕೊನೆಯಲ್ಲಿ ಇಲ್ಲತನವೂ ಕರಗಿ ಹೋಯಿತು. ಈ ಕರಗುವ, ಕರಗಿಸುವ ಜ್ಞಾನವೂ ಸಹ ಲಯಗೊಂಡಿತು ॥೫೩॥ ಜ್ಞಾನವು ಅಜ್ಞಾನವನ್ನು ತೆಗೆದುಕೊಂಡು ಹೋಯಿತು. ಆಗ ನಾನು ಜ್ಞಾನಿ ಎಂಬುವುದು ಸಹ ಉಳಿಯಲಿಲ್ಲ. ವಿಜ್ಞಾನವು ಅಂಗದಲ್ಲಿಯೇ ಅಂಟಿಕೊಂಡಿತು. ಆದರೆ ಇದು ಹೊಸದಾಗಿ ಆಯಿತೆಂದು ತಿಳಿಯುವಂತಿಲ್ಲ ॥೫೪॥ ಈ ಪ್ರಕಾರದ ಸಂತ ಸಜ್ಜನರು ಈಗ ನನ್ನ ಪರಿಸ್ಥಿತಿಯನ್ನು ಅರಿತು ನನ್ನತ್ತ ಲಕ್ಷವನ್ನು ಕೊಡಬೇಕು. ಇದು ನನ್ನ ಬಾಲಕತನದ ವಿಜ್ಞಾಪನೆಯಾಗಿರುವುದು ॥೫೫॥

ಸೂರ್ಯ ಸದಾ ಪ್ರಕಾಶಘನ । ಅಗ್ನಿ ಸದಾ ದೇದೀಪ್ಯಮಾನ । ತೈಸೇ ಸಂತ ಸದಾ ಸಾವಧಾನ । ದ್ಯಾವೇ ಅವಧಾನ ಹೇ ಬಾಲತ್ವ ಮಾಝೇ ।।೪೬।। ತಂವ ಸಂತಸಜ್ಜನೀ ಏಕ ವೇಳಾ । ಥೋರ ಕರೂನಿಯಾ ಸೋಹಳಾ । ಆಜ್ಞಾ ಪಿಲೇ ವೇಳೋವೇಳಾ । ಗ್ರಂಥ ಕರವಿಲಾ ಪ್ರಾಕೃತ ।।೪೭।। ಏಕಾಂತೀ ಆಣಿ ಲೋಕಾಂತೀ । ಥೋರ ಸಾಕ್ಷೇಪ ಕೇಲಾ ಸಂತೀ । ತರೀ ಸಾಂಗಾ ಜೇ ಮಜಪ್ರತೀ । ಕೋಣ ಗ್ರಂಥೀ ಪ್ರವರ್ತೋ ।।೪೮।। ಪುರಾಣಿ ಶ್ರೇಷ್ಠ ಭಾಗವತ । ತ್ಯಾಹೀಮಾಜೀ ಉದ್ಧವಗೀತ । ತುವಾ ಪ್ರವರ್ತಾವೇ ತೇಥ । ವಕ್ತಾ ಭಗವಂತ ತುಜ ಸಾಹ್ಯ ।।೪೯।। ಆಮ್ಹಾಸೀ ಪಾಹಿಜೇ ಜ್ಞಾನಕಥಾ । ವರೀ ತುಜಸಾರಿಖಾ ರಸಾಳ ವಕ್ತಾ । ತರೀ ಸ್ತುತಿ ಸಾಂಡೂನಿ ಆತಾ । ನಿರೂಪಣ ತತ್ತ್ವತಾ ಚಾಲವೀ ।।೫೦। ತುಜ ಸಂತಸ್ತವನೀ ಉತ್ಸಾವೋ । ಹಾ ತಂವ ಕಳಲಾ ಭಾವೋ । ತರೀ ಕಥೇಚಾ ಲವಲಾಹೋ । ನಿಜನಿರ್ವಾಹೋ ಉಪಪಾದೀ ।।೫೧।। ಯಾ ಸಂತಾಂಚೇ ಕೃಪಾವಚನೇ । ಏಕಾಏಕೀ ಆನಂದಲೋ ಮನೇ । ತೇಣೇ ವಾಕ್ಯಪಸಾಯದಾನೇ । ಸ್ವಾನಂದಘನೇ ಉಲ್ಹಾಸೇ ।।೫೨।। ಜೈಸಾ ಮೇಘಾಂಚೇನಿ ಗರ್ಜನೇ । ಮಯೂರ ಉಪಮೋ ಪಾಹೇ ಗಗನೇ । ನಾನಾ ನವೇನಿ ಜೀವನೇ । ಜೇವೀ ಚಾತಕ ಮನೇ ಉಲ್ಹಾಸೇ ।।೫೩।। ಕಾ ದೇಖೋನಿ ಚಂದ್ರಕರ । ಡೋಲೋ ಲಾಗೇ ಚಕೋರ । ತೈಸೇ ಸಂತವದನೀಚೆ ಉತ್ತರ । ಆಲೇ ಥೋರ ಸುಖಾವಿತ ।।೫೪।। ಥೋರ ಸುಖಾಚಾ ಕೇಲೋ ಸ್ವಾಮೀ । ತುಮಚೇ ಪುರತೇ ಕರಾಲ ತುಮ್ಹೀ । ತರೀ ವಾಯಾಂಚಿ ಕಾ ಮೀಪಣೇ ಮೀ । ಮನೋಧರ್ಮೀ ವಳಂಗೇಜೋ ।।೫೫।। ಪರೀ ಸಮರ್ಥಾಂಚೀ ಆಜ್ಞಾ । ದಾಸಾ ನ ಕರಾವೇ ಅವಜ್ಞಾ । ತರೀ ಸಾಂಗಿತಲೀ ಜೇ ಸಂಜ್ಞಾ । ತೇ ಕರೀನ ಆಜ್ಞಾ ಸ್ವಾಮೀಚೀ ।।೫೬।। ಪರೀ ತುಮ್ಹೀ ಏಕ ಕರಾವೇ । ಅಖಂಡ ಅವಧಾನ ಮಜ ದ್ಯಾವೇ । ತೇಣೇ ದಿಠಿವೇನಿ ಆಘವೇ । ಪಾವೇಲ ಸ್ವಭಾವೇ ನಿಜಸಿದ್ಧೀ ।।೫೭।। ಅಗಾ ತುಝಿಯಾ ಮನಾಮಾಜೀ ಮನ । ಶಬ್ದೀ ಠೇವಿಲೇಸೇ ಅನುಸಂಧಾನ । ಯಾಲಾಗೀ ನಿಜನಿರೂಪಣ । ಚಾಲವೀ ಜಾಣ ಸವೇಗೆ ।।೫೮।। ಆತಾ ವಂದೂ ಕುಳದೇವತಾ । ಜೇ ಏಕಾಏಕೀ ಏಕನಾಥಾ । ತೇ ಏಕೀವಾಂಚೂನ ಸರ್ವಥಾ । ಆಣಿಕ ಕಥಾ ಕರೂ ನೇದೀ ।।೫೯।।

ಸೂರ್ಯನು ಸದಾ ಸರ್ವದಾ ಪ್ರಕಾಶಘನವಾಗಿರುವನು. ಅಗ್ನಿಯು ಸದಾ ಸರ್ವದಾ ತೇಜಸ್ವಿಯಾಗಿರುವುದು. ಅದರಂತೆಯೇ ಸಂತರು ಸದಾ ಸರ್ವದಾ ಸಾವಧಾನರಾಗಿಯೇ ಇರುವರು. ಅವರು ಈಗ ಲಕ್ಷವನ್ನು ಕೊಡಬೇಕು ಎಂಬ ನನ್ನ ಹೇಳಿಕೆಯು ಚಿಕ್ಕ ಬಾಲಕನ ಮಾತಾಗಿರುವುದು ।।೪೬।। ಇದನ್ನು ಕೇಳಿ ಸಂತ ಸಜ್ಜನರು ಒಮ್ಮಿಂದೊಮ್ಮೆಲೆ ಗೌರವದಿಂದ ಪುನಃ ಪುನಃ ಆಜ್ಞಾಪಿಸಿದರು ಹಾಗೂ ಈ ಗ್ರಂಥವನ್ನು ಪ್ರಾಕೃತ ಭಾಷೆಯಲ್ಲಿ ಮಾಡಿಸಿದರು ।।೪೭।। ಏಕಾಂತದಲ್ಲಿ ಲೋಕಾಂತದಲ್ಲಿಯೂ ಸಹ ಈ ಗ್ರಂಥವನ್ನು ತಯಾರಿಸಲು ಸಂತರು ಬಹಳ ಆಗ್ರಹಪಡಿಸಿದರು. ಆಗ ನಾನು ಹೀಗೆ ಕೇಳಿದೆನು, ಮಹಾರಾಜರೇ, ಯಾವ ಗ್ರಂಥವನ್ನು ಆರಂಭಿಸಲಿ? ಇದನ್ನು ನನಗೆ ತಿಳಿಸಿರಿ।।೪೮।।ಸಂತರು ಹೀಗೆ ಹೇಳಿದರು. ಪುರಾಣಗಳಲ್ಲಿ ಭಾಗವತವು ಶ್ರೇಷ್ಠವಾಗಿರುವುದು. ಅದರಲ್ಲಿಯೂ "ಉದ್ಧವ ಗೀತಾ" ಅತ್ಯಂತ ಶ್ರೇಷ್ಠವಾಗಿರುವುದು. ಆದ್ದರಿಂದ ಇದನ್ನೇ ನೀನು ಬರೆಯಲು ಆರಂಭಿಸು. ವಕ್ತಾ ಶ್ರೀಕೃಷ್ಣ ಭಗವಂತನು ನಿನಗೆ ಸಹಕರಿಸುವನು ।।೪೯।। ನಮಗೆ ಜ್ಞಾನಕಥೆಯ ಮೇಲೆ ಬಲು ಪ್ರೀತಿ. ಅದರಲ್ಲಿ ನಿನ್ನಂತಹ ರಸಾಳ ವಕ್ತಾ ಇದ್ದಮೇಲೆ ಇನ್ನೇನು? ಈಗ ನಮ್ಮನ್ನು ಸ್ತುತಿಸುವುದನ್ನು ಬಿಟ್ಟು ಮುಖ್ಯವಾಗಿ ವಿಷಯ ಪ್ರತಿಪಾದನೆಯನ್ನು ಆರಂಭಿಸು ।।೫೦।। ಸಂತಸ್ತುತಿ ಮಾಡುವುದಕ್ಕೆ ನಿನಗೆ ಬಹಳ ಸ್ಫೂರ್ತಿ ಇದೆ. ಇದು ನಮಗೆ ತಿಳಿದಿದೆ. ಈಗ ಕಥೆಯನ್ನು ಆರಂಭಿಸಿ ವಿಷಯವನ್ನು ಮುಂದುವರೆಸು ।।೫೧।। ಈ ಸಂತರ ಕೃಪಾ ವಚನದಿಂದ ಒಮ್ಮಿಂದೊಮ್ಮೆಲೆ ಮನಸ್ಸಿಗೆ ಆನಂದವಾಯಿತು. ಈ ಪ್ರಸಾದ ವಾಣಿಯಿಂದ ಅಂತಃಕರಣವು ಸ್ವಾನಂದದಿಂದ ತುಂಬಿ ತುಳುಕಿತು ।।೫೨।। ಮೇಘದ ಗರ್ಜನೆಯಿಂದ ನವಿಲಿಗೆ ಆಗುವ ಆನಂದವು ಆಕಾಶದಲ್ಲಿ ಹಿಡಿಸಲಾರದಂತಾಗುವುದು. ಅಥವಾ ಮೇಘದ ಹೊಸ ಜಲವನ್ನು ಕಂಡು ಚಾತಕ ಪಕ್ಷಿಯು ಮನದಲ್ಲಿ ಆನಂದಿಸುವಂತೆ ।।೫೩।। ಅಥವಾ ಚಂದ್ರನ ಕಿರಣಗಳನ್ನು ಕಂಡು ಚಕೋರ ಪಕ್ಷಿಯು ಆನಂದದಿಂದ ಲೋಲಾಡುವಂತೆ ಸಂತಮುಖದ ಉತ್ತರವು ನನಗೆ ಅತ್ಯಂತ ಸುಖವನ್ನು ನೀಡಿತು ।।೫೪।। ಹೇ, ಸ್ವಾಮಿಗಳವರೇ, ನೀವು ನಿಜವಾಗಿಯೂ ನನ್ನನ್ನು ಆನಂದಗೊಳಿಸಿದಿರಿ. ನಿಮ್ಮದಾದ ಈ ಕಾರ್ಯವನ್ನು ನೀವೇ ಪೂರ್ಣ ಮಾಡಿಸಿಕೊಳ್ಳಿರಿ. ಅಂದಮೇಲೆ ''ನಾನು'' ಎಂಬುವ ಮನೋಧರ್ಮಕ್ಕೆ ವ್ಯರ್ಥವಾಗಿ ನಾನೇಕೆ ವಶನಾಗಲಿ? ।।೫೫।। ಆದರೆ, ಸಮರ್ಥರ ಆಜ್ಞೆಯನ್ನು ದಾಸನಿಗೆ ಉಲ್ಲಂಘಿಸಲು ಬಾರದು. ಆದ್ದರಿಂದ ಯಾವ ಸೇವೆಯನ್ನು ನೀವು ತೋರಿಸಿರುವಿರೋ ಅದನ್ನೇ ಸ್ವಾಮಿಯ ಆಜ್ಞೆ ಎಂದು ನಾನು ಪಾಲಿಸುವೆನು ।।೫೬।। ಆದರೆ, ನೀವು ಒಂದನ್ನು ಮಾತ್ರ ಮಾಡಬೇಕು. ಏನೆಂದರೆ, ನನ್ನತ್ತ ತಮ್ಮ ಸದಾ ಲಕ್ಷವಿರಲಿ. ಅಂದರೆ, ಈ ನಿಮ್ಮ ಕೃಪಾದೃಷ್ಟಿಯಿಂದ ಸಹಜವಾಗಿಯೇ ಈ ಕಾರ್ಯವು ಪೂರ್ಣಗೊಳ್ಳುವುದು ।।೫೭।। ಆಗ ಸಂತರು ಹೀಗೆ ಹೇಳಿದರು. ಅರೇ, ನಾವೀಗ ನಿನ್ನ ಮನದಲ್ಲಿ ನಮ್ಮ ಮನವನ್ನಿಟ್ಟು ಶಬ್ದಗಳಲ್ಲಿ ಅನುಸಂಧಾನವನ್ನಿಟ್ಟಿದ್ದೇವೆ. ಆದ ಕಾರಣ ನಿನ್ನ ವಿಷಯವನ್ನು ಈಗ ಬೇಗನೇ ಆರಂಭಿಸು ।।೫೮।। ಈಗ ಕುಲದೇವತೆಯನ್ನು ನಮಸ್ಕರಿಸುವೆನು. ಈ ದೇವತೆಯು ಐಕ್ಯರೂಪದಲ್ಲಿ ಏಕನಾಥನಲ್ಲಿಯೇ ಇರುವುದರಿಂದ ಐಕ್ಯದ ಹೊರತಾದ ಬೇರೆ ಮಾತುಗಳನ್ನು ಆಡಿಸಿಕೊಡುವುದೇ ಇಲ್ಲ ।।೫೯।।

ಏಕ ರೂಪ ದಾವಿಲೇ ಮನೀ । ತಂವ ಏಕಚಿ ದಿಸೇ ಜನೀ ವನೀ । ಏಕಚಿ ಕಾನೀ ವದನೀ । ಏಕಪಣೇ "ಏಕವೀರಾ" ॥೭೦॥ ತೇ ಶಿವಶಕ್ತಿ ರೂಪೇ ದೋನೀ । ನೇಊನ ಮಿರವೇ ಏಕಪಣೇ । ಏಕಪಣೇ ಜಾಲೀ ಗುರ್ವಿಣೀ । ಪ್ರಸವೇ ಏಕಪಣೆ ಏಕವೀರಾ ॥೭೧॥ ತೇ ಏಕರೂಪೇ ಏಕವೀರಾ । ಪ್ರಸವಲೀ ಬೋಧ - ಫರಶಧರಾ । ಜಯಾಚಾ ಕಾದರಾರಾ । ಮಹಾವೀರಾ ಅಭಿಮಾನಿಯಾ ॥೭೨॥ ತೇಣೇ ಉಪಜೋನಿ ನಿವಟಲೀ ಮಾಯಾ । ಆಜ್ಞಾ ಪಾಳೂನಿ ಸುಖ ದೇ ಪಿತಯಾ । ಮ್ಹಣೋನಿ ತೋ ಜಾಹಲಾ ವಿಜಯಾ । ಲವಲಾಹ್ಯಾ ದಿಗ್ಮಂಡಳೀ ॥೭೩॥ ಜೋ ವಾಸನಾಸಹಸ್ರಬಾಹೋ । ಛೇದಿಲಾ ಸಹಸ್ರಾರ್ಜುನ -ಅಹಂಭಾವೋ । ಸ್ವರಾಜ್ಯ ಕರೂನಿಯಾ ಪಹಾ ಹೋ । ಅರ್ಪೀ ಸ್ವಯಮೇವೋ ಸ್ವಜಾತಿಯಾ ॥೭೪॥ ತೇಣೇ ಮಾರೂನಿ ಮಾತಾ ಜೇವವಿಲೀ । ತೇಚಿ ಕುಳದೇವತಾ ಆಮ್ಹಾ ಜಾಹಲೀ । ಪರೀ ಸ್ವನಾವೇ ಖ್ಯಾತಿ ಕೇಲೀ । ಏಕಾತ್ಮತಾ ಬೋಲೀ ಏಕನಾಥಾ ॥೭೫॥ ತೇ ಜೈಪಾಸೋನಿ ನಿವಟಲೀ । ತೈಪಾಸೋನಿ ಪಕೃತಿ ಪಾಲಟಲೀ । ರಾಗತ್ಯಾಗೇ ಶಾಂತ ಝಾಲೀ । ನಿಜಮಾಉಲೀ ಜಗದಂಬಾ ॥೭೬॥ ತಯಾ ವೋಸಂಗಾ ಘೇಊನ । ಥೋರ ದಿಧಲೇ ಆಶ್ವಾಸನ । ವಿಷಮ ಸಂಕಟೀ ಸಮಾಧಾನ । ಸ್ವನಾಮಸ್ಮರಣ ಕೇಲಿಯಾ ॥೭೭॥ ತೇ ಜಯ ಜಯ ಜಗದಂಬಾ । "ಉದೋ" ಮ್ಹಣೇ ಗ್ರಂಥಾರಂಭಾ । ಮತೀಮಾಜೀ ಸ್ವಯಂಭಾ । ಯೋಗಗರ್ಭಾ ಪ್ರಗಟಲೀ ॥೭೮॥ ಆತಾ ವಂದೂ ಜನಾರ್ದನು । ಜೋ ಭವಗಜಪಂಚಾನನು । ಜನೀ ವಿಜನೀ ಸಮಾನು । ಸದಾ ಸಂಪೂರ್ಣು ಸಮತ್ವೇ ॥೭೯॥ ಜ್ಯಾಚೇನಿ ಕೃಪಾಪಾಂಗೇ । ದೇಹೀ ನ ದೇಖಿಜೀ ದೇಹಾಂಗೇ । ಸಂಸಾರ ಟವಾಳ ವೇಗೇ । ಕೇಲೇ ವಾಉಗೇ ಭವಸ್ವಪ್ನ ॥೮೦॥ ಜಯಾಚೇನಿ ಕೃಪಾಕಟಾಕ್ಷೇ । ಅಲಕ್ಷ್ಯ ಲಕ್ಷ್ಯೇವೀಣ ಲಕ್ಷೇ । ಸಾಕ್ಷೀ ವಿಸರಲೀ ಸಾಕ್ಷೇ । ನಿಜಪಕ್ಷೇ ಗುರುತ್ವೇ ॥೮೧॥ ತೇಣೇ ಜೀವೇವೀಣ ಜೀವವಿಲೇ । ಮೃತ್ಯೂವೀಣ ಮರಣಚಿ ಮಾರಿಲೇ । ದೃಷ್ಟಿ ಘೇಊನಿ ದಾಖವಿಲೇ । ದೇಖಣೇ ಕೇಲೇ ಸರ್ವಾಂಗ ॥೮೨॥ ದೇಹೀ ದೇಹ ವಿದೇಹ ಕೇಲೇ । ಶೇಖೀ ವಿದೇಹಪಣ ತೇಹೀ ನೇಲೇ । ನೇಲೇಪಣಹೀ ಹಾರಪಲೇ । ಉರೀ ಉರಲೇ ಉರ್ವರಿತ ॥೮೩॥

ಈಕೆಯು ಮನಸ್ಸಿಗೆ ಒಂದೇ ಸ್ವರೂಪವನ್ನು ತೋರಿಸಿಕೊಟ್ಟಿರುವಳು. ಆದ್ದರಿಂದ ಜನರಲ್ಲಿ, ವನದಲ್ಲಿ, ಎಲ್ಲೆಲ್ಲಿಯೂ ಒಂದೇ ಕಾಣಿಸುತ್ತಿದೆ. ಕಿವಿಯಲ್ಲಿ ಮತ್ತು ಮುಖದಲ್ಲಿ ಏಕತ್ವದಿಂದ ಈಕೆಯು "ಏಕವೀರಾ" (ರೇಣುಕಾ) ದೇವಿಯೇ ಏಕತ್ವದಿಂದ ವಾಸ ಮಾಡಿರುವಳು ॥೭೦॥ ಈಕೆಯೇ ಶಿವ ಮತ್ತು ಶಕ್ತಿ ಎಂಬ ಎರಡೂ ಸ್ವರೂಪವನ್ನು ಸ್ವೀಕರಿಸಿ ಏಕತ್ವದಿಂದ ಮೆರೆಯುತ್ತಿರುವಳು. ಏಕತ್ವದಿಂದಲೇ ಈ ಏಕವೀರಾ ಗರ್ಭವತಿಯಾಗಿ ಏಕತ್ವದಿಂದಲೇ ಒಬ್ಬ ವೀರನನ್ನು ಹಡೆದಳು ॥೭೧॥ ಈ ಐಕ್ಯರೂಪಿ ಏಕವೀರಾ ಅಂದರೆ ರೇಣುಕಾದೇವಿಯು ಬೋಧರೂಪ ಪರಶುರಾಮನಿಗೆ ಜನ್ಮ ಕೊಟ್ಟಳು. ಆಗ ಮಹಾ ಮಹಾ ಅಭಿಮಾನಿ ಮಹಾವೀರರಿಗೆ ಈತನ ಭಯ ಉಂಟಾಗಹತ್ತಿತು ॥೭೨॥ ಈತನು ಜನ್ಮಧರಿಸಿ ತಂದೆಯ ಆಜ್ಞೆಯನ್ನು ಪಾಲಿಸುವುದಕ್ಕಾಗಿ ಮಾಯೆಯ ವಧೆ ಮಾಡಿದನು. ಆದ್ದರಿಂದ ಈತನು ಭೂಲೋಕದಲ್ಲಿ ಸದಾ ವಿಜಯಿಯಾದನು ॥೭೩॥ ವಾಸನಾರೂಪದಿಂದ ಕೂಡಿದ ಸಹಸ್ರಬಾಹು ಅಹಂಕಾರ ರೂಪ ಸಹಸ್ರಾರ್ಜುನನನ್ನು ಈತನು ವಧಿಸಿದನು ಮತ್ತು ಅವರ ರಾಜ್ಯಗಳನ್ನು ಸ್ವಾಧೀನಪಡಿಸಿ ಸ್ವಜಾತಿಯರಾದ ಬ್ರಾಹ್ಮಣರಿಗೆ ಅರ್ಪಿಸಿದನು ॥೭೪॥ ಈತನು ತಾಯಿಯನ್ನು ಕೊಂದು ಪುನಃ ಜೀವಂತಗೊಳಿಸಿದನು. ಈಕೆಯೇ ನಮ್ಮ ಕುಲದೇವತೆಯಾದಳು. ಈಕೆಯು ತನ್ನದೇ ಆದ ಹೆಸರಿನಿಂದ ನಮ್ಮನ್ನು ಪ್ರಸಿದ್ಧಗೊಳಿಸಿದಳು. ಏಕವೀರಾ, ಏಕನಾಥಾ ಈ ಎರಡೂ ಒಂದೇ ಅರ್ಥದ ಶಬ್ದಗಳಾಗಿವೆ ॥೭೫॥ ಈಕೆಯನ್ನು ಕೊಂದ ನಂತರವೇ ಈಕೆಯ ಪ್ರಕೃತಿಯಲ್ಲಿ ಬದಲಾವಣೆಯಾಯಿತು. ಹಾಗೂ ಈ ತಾಯಿಯಾದ ಜಗದಂಬೆಯು ಕ್ರೋಧವನ್ನು ತ್ಯಾಗ ಮಾಡಿ ಶಾಂತಳಾದಳು ॥೭೬॥ ಈಕೆಯು ನನ್ನನ್ನು ತನ್ನ ತೊಡೆಯ ಮೇಲೆ ಕೂಡ್ರಿಸಿಕೊಂಡು ಬಹು ದೊಡ್ಡ ಆಶ್ವಾಸನೆಯನ್ನು ಕೊಟ್ಟಿರುವಳು. ಎಷ್ಟೇ ಸಂಕಟಗಳು ಬರಲಿ ತನ್ನ ನಾಮಸ್ಮರಣೆಯನ್ನು ಮಾಡಿದಾಕ್ಷಣವೇ ಸಮಾಧಾನವು ದೊರೆಯುವುದು ॥೭೭॥ ಈ ಜಗದಂಬೆಯ ಜಯ ಜಯಕಾರವನ್ನು ಮಾಡುವುದಕ್ಕಾಗಿ ಗ್ರಂಥದ ಆರಂಭದಲ್ಲಿಯೇ "ಉದೋ, ಉದೋ" ಎನ್ನುವೆನು. ಈಕೆಯೇ ನನ್ನ ಬುದ್ಧಿಯಲ್ಲಿ ಯೋಗರೂಪ ಗರ್ಭವನ್ನಿಟ್ಟು ಸ್ವತಃ ಪ್ರಕಟಳಾಗಿರುವಳು ॥೭೮॥ ಈಗ ಯಾವ ಸಂಸಾರರೂಪ ಆನೆಗೆ ಸಿಂಹನಾಗಿರುವ, ಏಕಾಂತದಲ್ಲಿ ಹಾಗೂ ಲೋಕಾಂತದಲ್ಲಿ ಸಮಾನನಾಗಿರುವ, ಸಮದೃಷ್ಟಿಯಿಂದ ಸದಾ ಸರ್ವದಾ ಸಂಪೂರ್ಣನಾಗಿರುವ ನನ್ನ ಗುರುಗಳಾದ ಜನಾರ್ದನರಿಗೆ ನಮಸ್ಕರಿಸುವೆನು ॥೭೯॥ ಯಾರ ಕೃಪಾ ಪ್ರಸಾದದಿಂದ ದೇಹದಲ್ಲಿದ್ದರೂ ದೇಹಾಂಗಗಳು ಕಾಣುವುದಿಲ್ಲ. ಮತ್ತು ಸಂಸಾರದ ಸುಂಟರಗಾಳಿಯು ನೋಡು ನೋಡುತ್ತಿದ್ದಂತೆಯೇ ಸ್ವಪ್ನವತ್ ಮಾಯವಾಗುವುದು ॥೮೦॥ ಇವರ ಕೃಪಾಕಟಾಕ್ಷದಿಂದ ದೃಷ್ಟಿ ಇಲ್ಲದೇ, ಅದೃಷ್ಟವು ತೋರುವುದು. ಅಲಕ್ಷ್ಯ ವಸ್ತುಗಳು ಲಕ್ಷವಿಲ್ಲದೇ ತೋರುವುವು. ಹಾಗೂ ಅವರ ಮಹಾತ್ಮೆಯಿಂದ ಸಾಕ್ಷಿಯು ಸಾಕ್ಷ ವಸ್ತುಗಳನ್ನು ಮರೆಯುವುದು ॥೮೧॥ ಇವರು ಜೀವವಿಲ್ಲದೇ ಜೀವಂತ ಮಾಡಿದರು. ಮತ್ತು ಮರಣವಿಲ್ಲದೇ ಮರಣಕ್ಕೆ ಹೊಡೆದು ಹಾಕಿದರು. ದೃಷ್ಟಿಯನ್ನು ತೆಗೆದುಕೊಂಡು ತೋರಿಸಿ ಸರ್ವಾಂಗಕ್ಕೂ ನೋಡುವಂತೆ ಮಾಡಿದರು ॥೮೨॥ ದೇಹದಲ್ಲಿಯೇ ದೇಹಕ್ಕೆ ವಿದೇಹಿ ಮಾಡಿದರು. ಕೊನೆಗೆ ವಿದೇಹಸ್ಥಿತಿಯನ್ನೂ ಒಯ್ದರು. ಇನ್ನು ಒಯ್ದದ್ದು ಸಹ ಇಲ್ಲದಂತೆ ಮಾಡಿದರು. ಆಗ ಅಬಾಧಿತ ವಸ್ತು ಮಾತ್ರ ಉಳಿದುಕೊಂಡಿತು ॥೮೩॥

ಅಭಾವೋ ಭಾವೇಶೀ ಗೇಲಾ । ಸಂದೇಹ ನಿಃಸಂದೇಹೇಶೀ ನಿಮಾಲಾ । ವಿಸ್ಮಯೋ ವಿಸ್ಮಯೀ ಬುಡಾಲಾ । ವೇಡಾವಲಾ ಸ್ವಾನಂದು ॥೮೪॥ ತೇಥ ಆವಡೀ ಹೋಯ ಭಕ್ತು । ತಂವ ದೇವ್ರೋಚಿ ಭಕ್ತಪಣಾ ಆಂತು । ಮಗ ಭಜ್ಯಭಜನಾಂಚಾ ಅಂತು । ದಾವೀ ಉಪ್ರಾಂತು ಸ್ವಲೀಲಾ ॥೮೫॥ ನಮನ ನಮನೇಶೀ ನೇಲೇ । ನಮಿತೇ ನೇಣೋ ಕಾಯ ಜಾಹಲೇ । ನಮ್ಯಚಿ ಅಂಗೀ ಘಡಲೇ । ಘಡಲೇ ಮೋಡಲೇ ಮೋಡೂನಿ ॥೮೬॥ ದೃಶ್ಯ ದೃಷ್ಟಾ ಜಾಣ । ದೋಹೀಸ ಏಕಚಿ ಮರಣ । ದರ್ಶನಹೀ ಜಾಹಲೇ ಕ್ಷೀಣ । ದೇಖಣೇಪಣ ಗಿಳೂನಿ ॥೮೭॥ ಆತಾ ದೇವ್ರೋಚಿ ಆಘವಾ । ತೇಥೇ ಭಕ್ತು ನ ಯೇ ಭಕ್ತಭಾವಾ । ತಂವ ದೇವ್ರೋಹೀ ಮುಕಲಾ ದೇವಾ । ದೇವಸ್ವಭಾವಾ ವಿಸರೋನಿ ॥೮೮॥ ದೇವ್ರೋ ದೇವಪಣೇ ದಾಟಲಾ । ಭಕ್ತು ಭಕ್ತಪಣೇ ಆಟಲಾ । ದೋಹಿಂಚಾಹೀ ಅಂತು ಆಲಾ । ಅಭೇದ ಜಾಹಲಾ ಅನಂತು ॥೮೯॥ ಅತ್ಯಾಗು ತ್ಯಾಗೇಶೀ ವಿರಾಲಾ । ಅಭೋಗು ಭೋಗೇಶೀ ಉಡಾಲಾ । ಅಯೋಗು ಯೋಗೇಶೀ ಬುಡಾಲಾ । ಯೋಗ್ಯತೇಚಾ ಗೇಲಾ ಅಹಂಭಾವೋ ॥೯೦॥ ಐಶಿಯಾಹೀವರೀ ಅಧಿಕ ಸೋಸೂ । ಸಾಯುಜ್ಯಾಮಾಜೀ ಹೋತಸೇ ದಾಸೂ । ತೇಥೀಲ ಸುಖಾಚಾ ಸೌರಸು । ಅತಿ ಅವಿನಾಶು ಅಗೋಚರು ॥೯೧॥ ಶಿವೇ ಶಿವ್ರೂಚಿ ಯಜಿಜೇ । ಹೇ ಐಶಿಯೇ ಅವಸ್ಥೇಸಿ ಸಾಜೇ । ಏರ್ಹವೀ ಬೋಲಚಿ ಬೋಲಿಜೇ । ಪರಿ ನ ಪವಿಜೇ ನಿಜಭಜನ ॥೯೨॥ ಯೇ ಅಭಿನ್ನ ಸುಖಸೇವೇಆಂತು । ನಾರದ ಆನಂದೇ ನಾಚತ ಗಾತು । ಶುಕಸನಕಾದಿಕ ಸಮಸ್ತ । ಜಾಲೇ ನಿಜಭಕ್ತು ಯೇಣೇಂಚಿ ಸುಖೇ ॥೯೩॥ ಸಾಗರೀ ಭರೇ ಭರತೇ । ತೇ ಭರತೇ ಭರೇ ತರಿಯಾಂತೇ । ತೈಸೇ ದೇವೇಂಚಿ ದೇವಪಣೆ ಯೇಥೇ । ಕೇಲೇ ಮಾತೇ ನಿಜಭಕ್ತ ॥೯೪॥ ಸಾಗರ ಸರಿತಾ ಜೀವನ ಏಕ । ಪರೀ ಮಿಳಣೆ ಭಜನ ದಿಸೇ ಅಧಿಕ । ತೈಸೇ ಏಕಪಣೇಂಚಿ ದೇಖ । ಭಜನಸುಖ ಉಲ್ಹಾಸೇ ॥೯೫॥ ವಾಮ ಸವ್ಯ ದೋನೀ ಭಾಗ । ಪರೀ ದೋ ನಾಮೀ ಏಕಚಿ ಅಂಗ । ತೈಸಾ ದೇವಭಕ್ತವಿಭಾಗ । ದೇವಪಣೆ ಸಾಂಗ ಆಭಾಸೇ ॥೯೬॥ ತೇವೀ ಆಪುಲೇಪಣಾಚೇನಿ ಮಾನೇ । ಭಕ್ತ ಕೇಲೋ ಜನಾರ್ದನೇ । ಪರೀ ಕಾಯಾವಾಚಾಮನೇ । ವರ್ತವಿಜೇ ತೇಣೇ ಸರ್ವಾರ್ಥೀ ॥೯೭॥

ಭಾವ ಸಮೇತವಾಗಿ ಅಭಾವವು ಇಲ್ಲದಾಯಿತು. ನಿಃಸಂದೇಹ ಸಮೇತವಾಗಿ ಸಂದೇಹವು ಹೊರಟು ಹೋಯಿತು. ವಿಸ್ಮಯವು ವಿಸ್ಮಯದಲ್ಲಿಯೇ ಮುಳುಗಿತು. ಹಾಗೆಯೇ ಸ್ವಾನಂದವು ಹುಚ್ಚಾಯಿತು ॥೮೪॥ ನಾನು ಪ್ರೀತಿಯಿಂದ ಭಕ್ತನಾದೆನು. ಆ ಭಕ್ತತನದ ಒಳಗೆ ದೇವರೇ ಇದ್ದದ್ದು ಗೋಚರಿಸಿತು. ಆಗ ಭಜ್ಯ - ಭಜಕ ಮತ್ತು ಭಜನ ಇವುಗಳ ಪರಿಣಾಮವು ಅಂತ್ಯಗೊಂಡಂತೆ ಕಾಣಹತ್ತಿತು. ಇದು ಅವರ ಅಮರ್ಯಾದ ಸ್ವಲೀಲೆಯಾಗಿರುವುದು ॥೮೫॥ ನಮಸ್ಕಾರವು ನಮಸ್ಕಾರವನ್ನೇ ತೆಗೆದುಕೊಂಡು ಹೋಯಿತು. ನಮಸ್ಕರಿಸುವವರು ಎಲ್ಲಿಗೆ ಹೋದರೆಂಬುವುದು ತಿಳಿಯದಂತಾಯಿತು. ಯಾರಿಗೆ ನಮಸ್ಕರಿಸಬೇಕೋ ಆ ವಸ್ತು ತಾನೇ ಆದಮೇಲೆ ಉಳಿದ ಎಲ್ಲ ಭಾವಗಳು ಕರಗಿ ಹೋದವು ॥೮೬॥ ದೃಶ್ಯ ಮತ್ತು ದೃಷ್ಟಾ ಈ ಇಬ್ಬರಿಗೂ ಒಮ್ಮೆಲೇ ಮರಣವಾಯಿತು. ಮತ್ತು ನೋಡುವತನವನ್ನು ನುಂಗಿ ದರ್ಶನವೂ ಇಲ್ಲದಾಯಿತು ॥೮೭॥ ಈಗ ಎಲ್ಲಿ ನೋಡಿದರೂ ಅಲ್ಲಿ ದೇವಸ್ವರೂಪವೇ ನಿರ್ಮಾಣಗೊಂಡಿತು. ಇದರಿಂದ ಭಕ್ತನು ತನ್ನ ಭಕ್ತಭಾವವನ್ನು ಮರೆತನು. ಆಗ ದೇವರೂ ಸಹ ದೇವ ಸ್ವಭಾವವನ್ನು ಮರೆತು ದೇವತ್ವಕ್ಕೆ ಹೊರತಾದನು ॥೮೮॥ ದೇವತ್ವದಿಂದ ಸರ್ವತ್ರದಲ್ಲಿ ದೇವರೇ ತುಂಬಿಕೊಂಡನು. ಆದ್ದರಿಂದ ಭಕ್ತತನದಿಂದ ಭಕ್ತನು ಇಲ್ಲದಂತಾದನು. ಈ ಎರಡೂ ಭಾವಗಳು ಇಲ್ಲದಾಗಿ ಅಭೇದ ಭಾವದಲ್ಲಿ ಅನಂತ ಸ್ವರೂಪ ಮಾತ್ರ ಉಳಿದುಕೊಂಡಿತು ॥೮೯॥ ಅತ್ಯಾಗಸಮೇತವಾಗಿ ತ್ಯಾಗವು ಲಯಗೊಂಡಿತು. ಭೋಗದೊಡನೆ ಅಭೋಗವು ಸಹ ಹಾರಿ ಹೋಯಿತು. ಯೋಗದೊಂದಿಗೆ ಅಯೋಗವು ಮುಳುಗಿಹೋಯಿತು. ಮತ್ತು ಯೋಗ್ಯತೆಯ ಅಹಂಭಾವವು ಇಲ್ಲದಾಯಿತು ॥೯೦॥ ಇದರಲ್ಲಿ ಪುನಃ ವಿಶೇಷವೇನೆಂದರೆ, ಸಾಯುಜ್ಯ ಸ್ಥಿತಿಯಲ್ಲಿ ಈತನು ದಾಸನಾಗಿರುವನು. ಅಲ್ಲಿಯ ಆನಂದವು ಅತ್ಯಂತ ಅವಿನಾಶ ಹಾಗೂ ಅತರ್ಕ್ಯವಾಗಿರುವುದು ॥೯೧॥ "ಶಿವೋ ಭೂತ್ವಾ ಶಿವಂ ಯಜೇತ್" ಅಂದರೆ, ಶಿವನಾಗಿ ಶಿವನನ್ನು ಪೂಜಿಸಬೇಕು. ಇದು ಈ ಅವಸ್ಥೆ ಇದ್ದರೆ ಮಾತ್ರ ಶೋಭಿಸುವುದು. ಇಲ್ಲದಿದ್ದರೆ, ಹೇಳುವುದು ಕೇವಲ ಹೇಳಿಕೆಯಾಗುವುದು. ಇದರಿಂದ ಸ್ವಸ್ವರೂಪದ ಭಜನೆ ಅಂದರೆ ಪ್ರಾಪ್ತಿಯಾಗಲಾರದು ॥೯೨॥ ಈ ಅಭೇದಭಾವದ ಸೇವೆಯ ಸುಖದಲ್ಲಿ ನಾರದರು ಆನಂದದಿಂದ ಗಾನ ಮಾಡುವರು, ನರ್ತಿಸುವರು. ಶುಕಸನಕಾದಿಕರೆಲ್ಲರೂ ಸ್ವಸ್ವರೂಪದ ಭಕ್ತರಾದರು. ಇವರು ಇದೇ ಸುಖದಿಂದ ನಿಜಭಕ್ತರಾದರು ॥೯೩॥ ಸಾಗರಕ್ಕೆ ಮಹಾಪೂರವು ಬಂತೆಂದರೆ, ಅದೇ ನೀರಿನಿಂದ ಬರಿದಾಗಿದ್ದು, ತೆಗ್ಗುಗಳು ತುಂಬುವವು. ಇದೇ ಪ್ರಕಾರವಾಗಿ ದೇವರೇ ನನಗೆ ತನ್ನ ದೇವತ್ವವನ್ನು ಕೊಟ್ಟು ನಿಜಭಕ್ತನನ್ನಾಗಿ ಮಾಡಿರುವನು ॥೯೪॥ ಸಮುದ್ರ ಹಾಗೂ ನದಿಗಳ ನೀರನ್ನು ನೋಡಲು ಅವು ಒಂದೇ ಆಗಿರುವುವು. ಆದರೆ ಅವು ಒಂದರಲ್ಲಿ ಒಂದು ಕೂಡುವ ಸಂಗಮದಲ್ಲಿ ವಿಶೇಷವಾಗಿ ಶೋಭೆಯು ಕಂಗೊಳಿಸುವುದು. ಅದರಂತೆ ಪರಮೇಶ್ವರನಲ್ಲಿ ಐಕ್ಯರೂಪದಿಂದ ಭಜನೆಯನ್ನು ಮಾಡಿದರೆ ಆ ಭಜನೆಯ ಸುಖವು ಇಮ್ಮಡಿಯಾಗುವುದು ॥೯೫॥ ಎಡ ಮತ್ತು ಬಲ ಹೀಗೆ ಶರೀರದ ಎರಡು ಭಾಗಗಳಿವೆ. ಈ ಎರಡೂ ಶಬ್ದಗಳ ಅರ್ಥವು ಒಂದೇ ಶರೀರದ್ದಾಗಿರುವುದು. ಅದರಂತೆಯೇ ದೇವ ಮತ್ತು ಭಕ್ತ ಹೀಗೆ ಭೇದ ಭಾಸವಾದರೂ ದೇವತ್ವದಲ್ಲಿ ಇಬ್ಬರ ಐಕ್ಯತ್ವವೇ ಅನುಭವಕ್ಕೆ ಬರುವುದು ॥೯೬॥ ಅದರಂತೆ ಗುರು ಜನಾರ್ದನರು ತಮ್ಮ ಸ್ವರೂಪದ ಮಾನವನ್ನು ನನಗೆ ಕೊಟ್ಟು, ಅದರಂತೆ ಅದ್ವೈತ ಭಕ್ತನನ್ನಾಗಿ ಮಾಡಿರುವರು. ಹಾಗೆಯೇ ಕಾಯಾ ವಾಚಾ ಮನಸ್ಸಿಗೆ ಪ್ರೇರಣೆ ನೀಡಿ ನನಗೆ ಯಾವಾಗಲೂ ಇವರೇ ಇದರಂತೆಯೇ ನಡೆಸುವರು ॥೯೭॥

ತೋ ಮುಖಾಚೇ ಜಾಲಾ ನಿಜಮುಖ । ದೃಷ್ಟೀತೇ ಪ್ರಕಟೇ ಸನ್ಮುಖ । ತೋಚಿ ವಿವೇಕೇಕರೂನ ದೇಖ । ಕರವೀ ಲೇಖ ಗ್ರಂಥಾರ್ಥೀ ॥೯೮॥ ಪರೀ ನವಲ ತ್ಯಾಚೇ ಲಾಘವ । ಅಭಂಗೀ ಘಾತಲೇ ಮಾಝೇ ನಾವ । ಶೇಖೀ ನಾವಾಚಾ ನಿಜಭಾವ । ಉರಾವಯಾ ಠಾವ ನುರವೀಚ ॥೯೯॥ ಯಾ ವಚನಾರ್ಥಾ ಸಂತೋಷಲಾ । ಮ್ಹಣೇ ಕೀ ಭಲಾ ಭಲಾ । ನಿಜಭಾವಿಕು ತೂಂಚಿ ಸಂಚಲಾ । ಪ್ರಗಟ ಕೇಲಾ ಗುಹ್ಯಾರ್ಥು ॥೧೦೦॥ ಹೇ ಸ್ತುತಿ ಕೀ ನಿರೂಪಣ । ಗ್ರಂಥಪೀಠ ಕೀ ಬ್ರಹ್ಮಜ್ಞಾನ । ಸಾಹಿತ್ಯ ಕೀ ಸಮಾಧಾನ । ಸಂಜ್ಞಾ ಹೀ ಜಾಣ ಕಳೇನಾ ॥೧೦೧॥ ತುಝಾ ಸಬೋಲುಚಿ ಏಕಏಕು । ಸೋಲಿವ ವಿವೇಕಾಚಾ ವಿವೇಕು । ತೋ ಸಂತೋಷಾಸೀ ಸಂತೋಖು । ಆತ್ಯಂತಿಕು ಉಪಜವೀ ॥೧೦೨॥ ತುಝೇನಿ ಮುಖೇ ಜೇ ಜೇ ನಿಘೇ । ತೇ ಸಂತಹೃದಯೀ ಸಾಚಚೇ ಲಾಗೇ । ಮುಮುಕ್ಷು ಸಾರಂಗಾಂಚೀ ಪಾಲಿಂಗೇ। ರುಂಜೀ ನಿಜಾಂಗೇ ಕರಿತೀಲ ॥೧೦೩॥ ಗ್ರಂಥಾರಂಭು ಪಡಲಾ ಚೋಖ । ಮುಕ್ತ ಮುಮುಕ್ಷು ಇತರ ಲೋಕ । ಶ್ರವಣಮಾತ್ರೇಂಚಿ ದೇಖ । ನಿಜಾತ್ಮಸುಖ ಪಾವತೀ ॥೧೦೪॥ ಯೇಣೇ ವಚನಾಮೃತತುಷಾರೇ । ಗ್ರಂಥಭೂಮಿಕಾ ವಿವೇಕಾಂಕುರೇ । ಅಂಕುರಲೀ ಏಕಸರೇ । ಫಳಭಾರೇ ಸಫಲಿತ ॥೧೦೫॥ ಕೀ ನಿರ್ಜೀವಾ ಜೀವು ಆಲಾ । ನಾ ತರೀ ಸಿದ್ಧಾ ಸಿದ್ಧಿಲಾಭು ಜಾಲಾ । ಕೀ ನಿಜ ವೈಭವೇ ಆಪುಲಾ । ಪ್ರಿಯೋ ಮೀನಲಾ ಪತಿವ್ರತೇ ॥೧೦೬॥ ತೈಸೇನಿ ಹರುಷಾನಂದೇ । ಜೇ ಜೇ ಮ್ಹಣತಲೇ ಸ್ವಾನಂದೇ । ತುಮಚೇನಿ ಪಾದಪ್ರಸಾದೇ । ಕರೀನ ವಿನೋದೇ ಗ್ರಂಥಾರ್ಥೂ ॥೧೦೭॥ ಶ್ರೀರಾಮಪ್ರತಾಪದೃಷ್ಟೀ । ಶಿಳಾ ತರತೀ ಸಾಗರಾಪೋಟೀ । ಕೀ ವಸಿಷ್ಠವಚನಾಸಾಠೀ । ತಪೇ, ಶಾಟೀ, ರವಿಮಂಡಳೀ ॥೧೦೮॥ ಕೀ ಯಾಜ್ಞವಲ್ಕೀಚ್ಯಾ ಮಂತ್ರಾಕ್ಷತಾ । ಶುಷ್ಕಕಾಷ್ಠಾಂಸ ಪಲ್ಲವತಾ । ಕೀ ಧರ್ಮೇ ಶ್ವಾನು ಸರತಾ । ಕೇಲಾ ಸರ್ವಥಾ ಸ್ವರ್ಗಲೋಕೀ ॥೧೦೯॥ ತೈಸೇ ಮಾಝೇನಿ ನಾವೇ । ಗ್ರಂಥ ಹೋತಿ ಸುಹಾವೇ । ಆಜ್ಞಾಪ್ರತಾಪಗೌರವೇ । ಗುರುವೈಭವೇ ಸಾರ್ಥಕು ॥೧೧೦॥ ಘಟಿತ ಏಕಾ ಆಣಿ ಏಕಾದಶೇ । ರಾಶೀ - ನಕ್ಷತ್ರ ಏಕಚಿ ಅಸೇ । ತ್ಯಾ ಏಕಾಮಾಜೀ ಜೈ ಪೂರ್ಣ ದಿಸೇ । ತೈ ದಶದಶಾಂಶೇ ಚಢೇ ಅಧಿಕ ॥೧೧೧॥ ಮಾಗಾ ಪುಢಾ ಏಕ ಏಕ ಕೀಜೇ । ತ್ಯಾ ನಾವ ಏಕಾದಶು ಮ್ಹಣಿಜೇ । ತರೀ ಏಕಾ ಏಕಪಣಚಿ ಸಹಜೇ । ಆಲೇ ನಿಜವೋಜೇ ಗ್ರಂಥಾರ್ಥೇ ॥೧೧೨॥

ಇವರೇ ನನ್ನ ಮುಖದ ಮುಖವಾಗಿರುವರು. ಇವರೇ ನನ್ನ ಕಣ್ಮುಂದೆ ಮೂರ್ತಿಮಂತವಾಗಿ ಬಂದು ನಿಲ್ಲುವರು. ಮತ್ತು ಇವರೇ ವಿವೇಕವನ್ನು ಕೊಟ್ಟು ಗ್ರಂಥದ ಅರ್ಥವನ್ನು ಬರೆಯಿಸುತ್ತಿರುವರು ॥೯೮॥ ಆದರೆ, ಇವರ ಕೌತಕವು ವಿಲಕ್ಷಣವಾಗಿದೆ. ಏಕೆಂದರೆ, ಇವರು ನನ್ನ ಹೆಸರನ್ನು ಅಭಂಗದಲ್ಲಿ ಹಾಕಿರುವರು. ಕೊನೆಗೆ ಹೆಸರಿನ ಅಭಿಮಾನವನ್ನು ಉಳಿಯಲು ಸ್ಥಳಾವಕಾಶ ಸಹ ಮಾಡಿಕೊಡಲಿಲ್ಲ ॥೯೯॥ ಈ ಭಾಷಣವನ್ನು ಕೇಳಿ ಇವರಿಗೆ ಸಂತೋಷವಾಗಿ ಹೀಗೆ ಹೇಳಿದರು. ಭಲೇ ಭಲೇ ಶಹಬ್ಬಾಸ್ !! ನಿಜವಾಗಿಯೂ ನೀನು ನಿಜಭಕ್ತಿಯ ಮೂರ್ತಿಯೇ ಆಗಿರುವಿ. ಆದ್ದರಿಂದಲೇ ಇಂತಹ ಗುಹ್ಯಾರ್ಥವು ನಿನ್ನ ಮುಖದಿಂದ ಹೊರಬೀಳುತ್ತಿದೆ ॥೧೦೦॥ ಇದು ಸ್ತುತಿಯೋ, ವಿಷಯ ಪ್ರತಿಪಾದನೆಯೋ? ಇದು ಗ್ರಂಥದ ಪ್ರಸ್ತಾವನೆಯೋ, ಬ್ರಹ್ಮಜ್ಞಾನವೋ? ಇದು ಸಾಹಿತ್ಯ ಶಾಸ್ತ್ರವೋ, ಸಮಾಧಾನವೋ? ಇದೇನೆಂಬುವುದೇ ತಿಳಿಯುತ್ತಿಲ್ಲ ॥೧೦೧॥ ನಿನ್ನ ಒಂದೊಂದೇ ಶಬ್ದಗಳು ವಿವೇಕದ ವಿವೇಕವಾಗಿವೆ. ಇವು ಸಂತೋಷಕ್ಕೂ ಸಹ ಅಪರಿಮಿತವಾದ ಸಂತೋಷವನ್ನು ಉತ್ಪನ್ನಗೊಳಿಸುವುವು ॥೧೦೨॥ ನಿನ್ನ ಮುಖದಿಂದ ಏನೇನು ಹೊರಡುವುದೋ, ಅದೆಲ್ಲವೂ ಸಂತರ ಹೃದಯಕ್ಕೆ ಸರಿಯಾಗಿ ಒಪ್ಪಿಗೆಯಾಗುವುದು. ಮುಮುಕ್ಷುರೂಪ ಭೃಂಗಗಳ ಸಮೂಹವು ಈ ಶಬ್ದಗಳಲ್ಲಿ ಸದಾ ಗುಂಯ್ಗುಡುತ್ತಿರುವುವು ॥೧೦೩॥ ಗ್ರಂಥದ ಆರಂಭವು ಸುಂದರವಾಗಿ ಸಿದ್ಧಗೊಂಡಿದ್ದಕ್ಕೆ ಮುಕ್ತ, ಮುಮುಕ್ಷು, ಸಾಧಕ ಹಾಗೂ ಬದ್ಧರೆಲ್ಲರೂ ಕೇವಲ ಶ್ರವಣಮಾತ್ರದಿಂದ ಸ್ವರೂಪ ಸುಖದ ಅನುಭವವನ್ನು ಪಡೆದುಕೊಳ್ಳುವರು ॥೧೦೪॥ ಈ ವಚನಾಮೃತದ ಹನಿಗಳಿಂದ ಗ್ರಂಥರೂಪ ಭೂಮಿಯು ವಿವೇಕದ ಅಂಕುರಗಳಿಂದ ತುಂಬಿಕೊಂಡಿತು ಮತ್ತು ಇವುಗಳಿಗೆ ಫಲಗಳು ಹುಟ್ಟಿ ಸುಫಲಿತವಾಯಿತು ॥೧೦೫॥ ಅಥವಾ ನಿರ್ಜೀವಕ್ಕೆ ಜೀವವು ಬಂದಂತೆ, ಇಲ್ಲವೇ, ಸಿದ್ಧಿಗೆ ಸಿದ್ಧಿಗಳು ಪ್ರಾಪ್ತವಾದಂತೆ. ಹಾಗೆಯೇ ಪತಿವ್ರತೆಗೆ ಸಕಲ ವೈಭವದೊಂದಿಗೆ ಪತಿಯ ಪ್ರಾಪ್ತಿಯಾದಂತೆ ॥೧೦೬॥ ಈ ಪ್ರಕಾರದ ಭಾಷಣ ಕೇಳಿ ನಾನು ಹರ್ಷಭರಿತನಾಗಿ ಅತಿಶಯ ಆನಂದದಿಂದ ಹೀಗೆ ಹೇಳಿದೆನು; ಮಹಾರಾಜರೇ, ಒಳ್ಳೆಯದು. ನಿಮ್ಮ ಪಾದಪ್ರಸಾದ ಬಲದಿಂದ ಗ್ರಂಥದ ಅರ್ಥವನ್ನುಸಹಜವಾಗಿಯೇ ಸಂತೋಷದಿಂದ ಬರೆಯುವೆನು ॥೧೦೭॥ ಸೇತುಬಂಧನದ ಪ್ರಸಂಗದಲ್ಲಿ ಶ್ರೀರಾಮಚಂದ್ರನ ಕೇವಲ ದೃಷ್ಟಿ ಪ್ರತಾಪದಿಂದ ಸಮುದ್ರದ ಮೇಲೆ ಶಿಲೆಗಳು ತೇಲಿದವು ಅಥವಾ ವಸಿಷ್ಠರ ಆಜ್ಞೆ ಮೇರೆಗೆ ಅವರ ಶೆಲ್ಲೆಯೇ ಸೂರ್ಯ ಮಂಡಳದಲ್ಲಿ ಪ್ರಕಾಶಮಾನವಾಯಿತು ॥೧೦೮॥ ಯಾಜ್ಞವಲ್ಕ್ಯ ಋಷಿಗಳ ಮಂತ್ರಾಕ್ಷತೆಯಿಂದ ಒಣಗಿದ ಕಾಷ್ಟಕ್ಕೆ ಉತ್ತಮ ಎಲೆಗಳು ಹುಟ್ಟಿದವು. ಧರ್ಮರಾಜನು ನಾಯಿಯನ್ನು ಸಹ ಸ್ವರ್ಗವಾಸಕ್ಕೆ ಅರ್ಹಗೊಳಿಸಿದನು ॥೧೦೯॥ ಇದರಂತೆಯೇ ನನ್ನ ಹೆಸರಿನಿಂದ ಈ ಗ್ರಂಥವು ಪ್ರಸಿದ್ಧವಾಗಬೇಕಾದರೆ, ಇದು ಗುರುಗಳ ಆಜ್ಞೆಯ ಪ್ರತಾಪವಾಗಿರುವುದು. ಹಾಗೆಯೇ ಇದು ಅವರ ವೈಭವದ ದ್ಯೋತಕವಾಗಿರುವುದು ॥೧೧೦॥ ಏಕಾ (ಏಕನಾಥ) ಹಾಗೂ ಏಕಾದಶ ಇವುಗಳ ಮೊದಲಿನ ಅಕ್ಷರದಿಂದ ಘಟಿತಾರ್ಥ ನೋಡಿದರೆ ರಾಶಿ ನಕ್ಷತ್ರ ಒಂದೇ ಇರುವುವು. ಒಂದರಲ್ಲಿಯೇ ಪೂರ್ಣ ಕಂಡರೆ ಅದರ ಬೆಲೆಯು ಹತ್ತು ಪಟ್ಟು ಹೆಚ್ಚಾಗುವುದು ॥೧೧೧॥ ಒಂದರ ಮುಂದೆ ಒಂದು ಬರೆದರೆ ಅದಕ್ಕೆ ಹನ್ನೊಂದು ಎನ್ನುವರು. ಆದ್ದರಿಂದ ಒಂದಕ್ಕೆ ಒಂದೇತನದಿಂದ ಗ್ರಂಥಕ್ಕೆ ಅರ್ಥ ಬರೆಯಲು ಸಹಜವಾಗಿಯೇ ಸ್ಫೂರ್ತಿಯು ಒದಗಿತು ॥೧೧೨॥

ತೇಥೇ ದೇಖಣೇಂಚಿ ಕರೂನಿ ದೇಖಣೇ । ಅವಘೇಂಚಿ ನಿರ್ಧಾರೂನಿ ಮನೇ । ತ್ಯಾವರೀ ಏಕಾಜನಾರ್ದನೇ । ಟೀಕಾಕರಣೇ ಸಾರ್ಥಕ ॥೧೧೩॥ ಪಾಹೋನಿ ದಶಮಾಚಾ ಪ್ರಾಂತು । ಏಕಾದಶಾಚ್ಯಾ ಉದಯಾಅಂತು । ಏಕಾದಶಾವರೀ ಜಗನ್ನಾಥು । ಗ್ರಂಥಾರ್ಥು ಆರಂಭೀ ॥೧೧೪॥ ಮ್ಹಣೌನಿ ಏಕಾದಶಾಚೀ ಟೀಕಾ । ಏಕಾದಶೀಸ ಕರೀ ಏಕಾ । ತೇ ಏಕಪಣಾಚಿಯಾ ಸುಖಾ । ಫಳೇಲ ದೇಖಾ ಏಕತ್ವೇ ॥೧೧೫॥ ಆತಾ ವಂದೂ ಮಹಾ ಕವೀ । ವ್ಯಾಸ ವಾಲ್ಮೀಕ ಭಾರ್ಗವೀ । ಜಯಾತೇ ಉಶನಾ ಕವೀ । ಪುರಾಣ ಗೌರವೀ ಬೋಲಿಜೇ ॥೧೧೬॥ ತಿಹೀ ಆಪುಲಿಯೇ ವ್ಯುತ್ಪತ್ತೀ । ವಾಢವಾವೀ ಮಾಝೀ ಮತೀ । ಹೇಚಿ ಕರಿತಸೇ ವಿನಂತೀ । ಗ್ರಂಥ ಸಮಾಪ್ತೀ ನ್ಯಾವಯಾ ॥೧೧೭॥ ವಂದೂ ಆಚಾರ್ಯ ಶಂಕರು । ಜೋ ಗ್ರಂಥಾರ್ಥವಿವೇಕಚತುರೂ । ಸಾರೂನಿ ಕರ್ಮಠತೇಚಾ ವಿಚಾರೂ । ಪ್ರಬೋಧದಿನಕರೂ ಪ್ರಕಾಶಿಲಾ ॥೧೧೮॥ ಆತಾ ವಂದೂ ಶ್ರೀಧರ । ಜೋ ಭಾಗವತ ವಾಖ್ಯಾತಾ ಸಧರ । ಜಯಾಚೀ ಟೀಕಾ ಪಾಹತಾ ಅಪಾರ । ಅರ್ಥ ಸಾಚಾರ ಪೈ ಅಸೇ ॥೧೧೯॥ ಇತರಹೀ ಟೀಕಾಕಾರ । ಕಾವ್ಯಕರ್ತೇ ವಿವೇಕಚತುರ । ತ್ಯಾಂಚೇ ಚರಣೀ ನಮಸ್ಕಾರ । ಗ್ರಂಥಾ ಸಾದರ ತಿಹೀ ಹೋಆವೇ ॥೧೨೦॥ ವಂದೂ ಪ್ರಾಕೃತ ಕವೀಶ್ವರ । ನಿವೃತ್ತಿ ಪ್ರಮುಖ ಜ್ಞಾನೇಶ್ವರ । ನಾಮದೇವ ಚಾಂಗದೇವ ವಟೇಶ್ವರ । ಜ್ಯಾಂಚೇ ಭಾಗ್ಯ ಥೋರ ಗುರುಕೃಪಾ ॥೧೨೧॥ ಜಯಾಂಚೇ ಗ್ರಂಥ ಪಾಹತಾ । ಜ್ಞಾನ ಹೋಯ ಪ್ರಾಕೃತಾ । ತೇಯಾಂಚೇ ಚರಣೀ ಮಾಥಾ । ನಿಜಾತ್ಮತಾ ನಿಜಭಾವೇ ॥೧೨೨॥ ಸಂಸ್ಕೃತ ಗ್ರಂಥಕರ್ತೇ ತೇ ಮಹಾಕವೀ । ಮಾ ಪ್ರಾಕೃತಿ ಕಾಯ ಉಣೇವೀ । ನವೀ ಜುನೀ ಮ್ಹಣಾವೀ । ಕೈಸೇನಿ ಕೇವೀ ಸುವರ್ಣಸುಮನೇ ॥೧೨೩॥ ಕಪಿಲೇಚೆ ಮ್ಹಣಾವೇ ಕ್ಷೀರ । ಮಾ ಇತರಾಂಚೇ ತೇ ಕಾಯ ನೀರ । ವರ್ಣಸ್ವಾದೇ ಏಕಚಿ ಮಧುರ । ದಿಸೇ ಸಾಚಾರ ಸಾರಿಖೇ ॥೧೨೪॥ ಜೇ ಪಾವಿಜೇ ಸಂಸ್ಕೃತ ಅರ್ಥೇ । ತೇಚಿ ಲಾಭೇ ಪ್ರಾಕೃತೇ । ತರೀ ನ ಮನಾವಯಾ ಯೇಥೇ । ವಿಷಮಚಿ ತೇ ಕಾಯೀ ॥೧೨೫॥ ಕಾ ನಿರಂಜನೀ ಬಸಲಾ ರಾವೋ । ತರೀ ತೋಚಿ ಸೇವಕಾ ಪಾವನ ಠಾವೋ । ತೇಥೇ ಸೇವೇಸಿ ನ ವಚತಾ ಪಾಹಾ ಹೋ । ದಂಡೀ ರಾವೋ ನಿಜಭೃತ್ಯಾ ॥೧೨೬॥ ಕಾ ದುಬಳೀ ಆಣಿ ಸಮರ್ಥ । ದೋಹೀಂಸ ರಾಯೇ ಘಾತಲೇ ಹಾತ । ತರೀ ದೋಘೀಸಿಹೀ ತೇಥ । ಸಹಜೇ ಹೋತ ಸಮಸಾಮ್ಯ ॥೧೨೭॥

ಆದ್ದರಿಂದ ದೃಷ್ಟಿಯನ್ನೇ ದರ್ಶನಕ್ಕೆ ಸಾಧನೆ ಮಾಡಿ ಮನಸ್ಸಿನಿಂದ ಎಲ್ಲವನ್ನು ನಿಶ್ಚಯಗೊಳಿಸಿ ತದನಂತರವೇ ಏಕಾಜನಾರ್ದನನು ಅರ್ಥ ಬರೆಯಲು ಯೋಗ್ಯನಾದನು ॥೧೧೩॥ ಹತ್ತನೆಯ ಸ್ಕಂಧದ ಕೊನೆಯ ಭಾಗವು ಹನ್ನೊಂದನೆಯ ಸ್ಕಂಧದ ಆರಂಭವಾಗಿರುವುದು. ಇದನ್ನರಿತು ಶ್ರೀಕೃಷ್ಣನು ಈ ಹನ್ನೊಂದನೆಯ ಸ್ಕಂಧದ ಮೇಲೆ ನಿರೂಪಣೆಯನ್ನು ಮಾಡಹತ್ತಿದನು ॥೧೧೪॥ ಆದ್ದರಿಂದ ಹನ್ನೊಂದನೆಯ ಸ್ಕಂಧದ ಈ ಟೀಕೆಯನ್ನು ಈ ಹನ್ನೊಂದದ ಏಕನಾಥನು ಬರೆಯುವನು. ಆದ ಕಾರಣ ಒಂದನ್ನು ಆರಂಭಿಸಲು ಒಂದೇತನದ ಸುಖವು ಒಂದತ್ವದಿಂದ ಪ್ರಾಪ್ತವಾಯಿತು ॥೧೧೫॥ ಈಗ ಯಾರನ್ನು ಪುರಾಣಗಳಲ್ಲಿ "ಉಶನಾ" ಕವಿಗಳೆಂದು ಗೌರವಿಸಿದೆಯೋ, ಅಂತಹ ವ್ಯಾಸ, ವಾಲ್ಮೀಕ, ಭಾರ್ಗವ ಈ ಮಹಾಕವಿಗಳಿಗೆ ನಾನು ವಂದಿಸುವೆನು ॥೧೧೬॥ ಅವರು ತಮ್ಮ ಜ್ಞಾನದಿಂದ ನನ್ನ ಬುದ್ಧಿಯನ್ನು ವೃದ್ಧಿಗೊಳಿಸಬೇಕು ಹಾಗೂ ನನ್ನ ಗ್ರಂಥವನ್ನು ಪೂರ್ಣಗೊಳಿಸಬೇಕು. ಹೀಗೆಂದು ನಾನು ಅವರಿಗೆ ವಿನಂತಿಸುವೆನು ॥೧೧೭॥ ಹಾಗೆಯೇ ಗ್ರಂಥಗಳ ಅರ್ಥ ಮಾಡುವುದರಲ್ಲಿ ಮಹಾ ಚತುರರಾದ ಶಂಕರಾಚಾರ್ಯರಿಗೆ ನಮಸ್ಕರಿಸುವೆನು. ಏಕೆಂದರೆ ಇವರು ಕರ್ಮಠತನದ ವಿಚಾರವನ್ನು ಬದಿಗೊತ್ತಿ ಜ್ಞಾನಸೂರ್ಯನ ಪ್ರಕಾಶವನ್ನು ಭೂಮಿಯಲ್ಲಿ ಬೆಳಗಿಸಿದರು ॥೧೧೮॥ ಯಾರ ಟೀಕೆಯಲ್ಲಿ ಅಪಾರವಾದ ಅರ್ಥ ತುಂಬಿದೆಯೋ, ಅಂತಹ ಭಾಗವತ ಟೀಕಾಕಾರರಾದ ಶ್ರೀಧರರಿಗೆ ನಾನೀಗ ವಂದಿಸುವೆನು ॥೧೧೯॥ ಇದಲ್ಲದೇ ಇತರ ಎಲ್ಲ ಟೀಕಾಕಾರರಿಗೆ, ಕಾವ್ಯಕರ್ತರಿಗೆ, ಅವರೆಲ್ಲರ ಚರಣಗಳಲ್ಲಿ ನಮಸ್ಕರಿಸಿ ಈಗ ಗ್ರಂಥ ಶ್ರವಣ ಮಾಡುವವರನ್ನು ಸಾವಧಾನರಾಗಿರಿ ಎಂದು ವಿನಂತಿಸುವೆನು ॥೧೨೦॥ ಗುರುಕೃಪೆಯ ಭಾಗ್ಯವು ಶ್ರೇಷ್ಠವಾಗಿರುವ ಪ್ರಾಕೃತ ಕವಿಗರಿಷ್ಠರಾದ ನಿವೃತ್ತಿನಾಥ ಪ್ರಮುಖರನ್ನು, ಜ್ಞಾನೇಶ್ವರರನ್ನು, ನಾಮದೇವ, ಚಾಂಗದೇವರನ್ನು ನಾನೀಗ ವಂದಿಸುವೆನು ॥೧೨೧॥ ಇವರ ಗ್ರಂಥದ ಅವಲೋಕನ ಮಾಡಿದರೆ ಪ್ರಾಕೃತ ಜನರಿಗೂ ಜ್ಞಾನ ಪ್ರಾಪ್ತವಾಗುವುದು. ಇವರ ಚರಣಗಳಲ್ಲಿ ಏಕಾತ್ಮ ಭಾವದಿಂದ ಹಾಗೂ ಅನನ್ಯ ಭಕ್ತಿಭಾವದಿಂದ ಮಸ್ತಕವನ್ನಿಡುವೆನು ॥೧೨೨॥ ಸಂಸ್ಕೃತ ಗ್ರಂಥಕರ್ತರಿಗೆ ಮಹಾಕವಿ ಎನ್ನುವುದು ಮತ್ತು ಪ್ರಾಕೃತ ಗ್ರಂಥಕರ್ತರಿಗೆ ಲಘುಕವಿ ಎಂದು ಪರಿಗಣಿಸುವುದು ಯೋಗ್ಯವೇ? ಬಂಗಾರದ ಹೂವುಗಳಿಗೆ ಇದು ಹೊಸದು ಇದು ಹಳೆಯದು ಎಂದು ಹೇಳಲು ಬರುವುದೆ? ॥೧೨೩॥ ಕಪಿಲಾ ಆಕಳದ್ದು ಮಾತ್ರ ಹಾಲು, ಹಾಗಾದರೆ ಇತರ ಆಕಳದ್ದು ನೀರೇ? ನಿಜವಾಗಿಯೂ ಎರಡೂ ಪ್ರಕಾರದ ಹಾಲು ಬಣ್ಣದಿಂದ, ಮಧುರತ್ವದಿಂದ ಒಂದೇ ಆಗಿರುವುದು ॥೧೨೪॥ ಅದರಂತೆಯೇ ಸಂಸ್ಕೃತ ಭಾಷೆಯಿಂದ ತಿಳಿಯುವುದೇ ಪ್ರಾಕೃತ ಭಾಷೆಯಿಂದ ತಿಳಿಯುತ್ತದೆ. ಹಾಗಾದಲ್ಲಿ ಈ ಮರಾಠಿ ಭಾಷೆಗೆ ಮನ್ನಿಸಲಾಗದ್ದಕ್ಕೆ ಯಾವ ಅಡಚಣೆ ಇದೆ? ॥೧೨೫॥ ರಾಜನು ಅರಣ್ಯಕ್ಕೆ ಹೋಗಿ ಕುಳಿತುಕೊಳ್ಳಲು ಅವನ ಸೇವಕನಿಗೂ ಅದೇ ಸ್ಥಾನವು ಪವಿತ್ರವು. ಒಂದು ವೇಳೆ ಸೇವಕನು ರಾಜನ ಸೇವೆಗೆ ಅಲ್ಲಿಗೆ ಹೋಗದಿದ್ದರೆ ರಾಜನಿಂದ ದಂಡಕ್ಕೆ ಗುರಿಯಾಗಬೇಕಾಗುವುದು ॥೧೨೬॥ ಅಥವಾ ರಾಜನು ಒಬ್ಬ ಬಡ ಕನ್ಯೆಯನ್ನು ಇನ್ನೊಬ್ಬ ಶ್ರೀಮಂತ ಕನ್ಯೆಯನ್ನು ಹೀಗೆ ಇಬ್ಬರನ್ನು ಮದುವೆಯಾಗಲು ಇಬ್ಬರ ಅಧಿಕಾರವು ಸಹಜವಾಗಿಯೇ ಒಂದೇ ಆಗುವುದು ॥೧೨೭॥

ದೇಶಭಾಷಾವೈಭವೇ । ಪ್ರಪಂಚ ಪದಾರ್ಥೀ ಪಾಲಟಲೀ ನಾವೇ । ಪರೀ ರಾಮಕೃಷ್ಣಾದಿನಾಮಾ ನವ್ಹೇ । ಭಾಷಾವೈಭವೇ ಪಾಲಟು ॥೧೨೮॥ ಸಂಸ್ಕೃತ ವಾಣೀ ದೇವೇ ಕೇಲೀ । ತರೀ ಪ್ರಾಕೃತ ಕಾಯ ಚೋರಾಪಾಸೋನಿ ಜಾಲೀ । ಅಸೋತು ಯಾ ಅಭಿಮಾನಭುಲೀ । ವೃಥಾ ಬೋಲೀ ಕಾಯ ಕಾಜ ॥೧೨೯॥ ಆತಾ ಸಂಸ್ಕೃತಾ ಕಿಂವಾ ಪ್ರಾಕೃತಾ । ಭಾಷಾ ಝಾಲೀ ಜೇ ಹರಿಕಥಾ । ತೇ ಪಾವನಚಿ ತತ್ವತಾ । ಸತ್ಯ ಸರ್ವಥಾ ಮಾನಲೀ ॥೧೩೦॥ ವಂದೂ "ಭಾನುದಾಸ "ಆತಾ । ಜೋ ಕಾ ಪಿತಾಮಹಾಚಾ ಪಿತಾ । ಜ್ಯಾಚೇನಿ ವಂಶ ಭಗವಂತಾ । ಝಾಲಾ ಸರ್ವಥಾ ಪ್ರಿಯಕರ ॥೧೩೧॥ ಜೇಣೇ ಬಾಳಪಣೇ ಆಕಳಿಲಾ ಭಾನು । ಸ್ವಯೇ ಜಾಹಲಾ ಚಿದ್ಭಾನು । ಜೆಂತೋನಿ ಮಾನಾಭಿಮಾನು । ಭಗವತ್ಪಾವನು ಸ್ವಯೇ ಝಾಲಾ ॥೧೩೨॥ ಜಯಾಚೀ ಪದಬಂದಪ್ರಾಪ್ತಿ । ಪಾಹೋ ಆಲೀ ಶ್ರೀ ವಿಠ್ಠಲಮೂರ್ತಿ । ಕಾನೀ ಕುಂಡಲೇ ಜಗಜ್ಜ್ಯೋತಿ । ಕರಿತಾ ರಾತೀ ದೇಖಿಲಾ ॥೧೩೩॥ ತಯಾ ಭಾನುದಾಸಾಚಾ "ಚಕ್ರಪಾಣಿ" । ತಯಾಚಾಹೀ ಸುತ ಸುಲಕ್ಷಣೀ । ತಯಾ "ಸೂರ್ಯ" ನಾಮ ಠೇಊನಿ। ನಿಜೇ ನಿಜ ಹೋಊನಿ ಭಾನುದಾಸ ಠೇಲಾ॥೧೩೪॥ ತಯಾ ಸೂರ್ಯಪ್ರಭಾ ಪ್ರತಾಪಕಿರಣೀ। ಮಾತೇ ಪ್ರಸವಲೀ ರುಕ್ಮಿಣೀ । ಮ್ಹಣೌನಿ ರಖುಮಾಈ ಜನನೀ । ಆಮ್ಹಾಲಾಗೂನಿ ಸಾಚಚಿ ॥೧೩೫॥ ಹೇ ಗ್ರಂಥಾರಂಭಾ ಕಾಳಾ । ವಂದಿಲೀ ಪೂರ್ವಜಮಾಳಾ । ಧನ್ಯ ನಿಜಭಾಗ್ಯಾಚೀ ಲೀಳಾ । ಆಲೋ ವೈಷ್ಣವಕುಳಾ ಜನ್ಮೋನಿ ॥೧೩೬॥ ತೇ ವೈಷ್ಣವ ಕುಳೀ ಕುಳನಾಯಕ । ನಾರದ ಪ್ರಹ್ಲಾದ ಸನಕಾದಿಕ । ಉದ್ಧವ ಅಕ್ರೂರ ಶ್ರೀ ಶುಕ । ವಸಿಷ್ಠಾದಿಕ ನಿಜ ಭಕ್ತಾ ॥೧೩೭॥ ತೇ ವೈಷ್ಣವ ಸಕಳ । ಗ್ರಂಥಾರ್ಥೀ ಅವಧಾನಶೀಳ । ಮ್ಹಣೌನಿ ವೈಷ್ಣವಕುಳಮಾಳ । ವಂದಿಲೀ ಸಕಳ ಗ್ರಂಥಾರ್ಥೀ ॥೧೩೮॥ ಉಪಜಲೋ ಜ್ಯಾಚಿಯಾ ಗೋತ್ರಾ । ನಮನ ತ್ಯಾ ವಿಶ್ವಾಮಿತ್ರಾ । ಜೋ ಕಾ ಪ್ರತಿಸೃಷ್ಟೀಚಾ ಧಾತಾ । ಗಾಯತ್ರಿಮಂತ್ರಾ ಮಹತ್ತ್ವ ॥೧೩೯॥ ಜೋ ಉಪನಿಷದ್ವಿವೇಕೀ । ತೋ ವಂದಿಲಾ ಯಾಜ್ಞವಲ್ಕೀ । ಜೋ ಕವಿಕರ್ತವ್ಯಾತೇ ಪೋಖೀ । ಕೃಪಾಪಿಯೂಖೀ ವರ್ಷೋನಿ॥೧೪೦॥ ನಮನ ಭೂತಮಾತ್ರಾ ಅಶೇಖಾ । ತೇಣೇ ವಿಶ್ವಂಭರೂ ಜಾಹಲಾ ಸಖಾ । ಮ್ಹಣೌನಿ ಗ್ರಂಥಾರಂಭು ದೇಖಾ । ಆಲಾ ನೇಟಕಾ ಸಮತಾ ॥೧೪೧॥ ಆತಾ ನಮೂ ದತ್ತಾತ್ರೇಯಾ । ಜೋಕಾ ಆಚಾರ್ಯಾಂಚಾ ಆಚಾರ್ಯಾ । ತೇಣೇ ಪ್ರವರ್ತವಿಲೇ ಗ್ರಂಥಕಾರ್ಯಾ । ಅರ್ಥವಾವಯಾ ನಿಜಬೋಧು ॥೧೪೨॥

ಆಯಾ ದೇಶಭಾಷೆಯಂತೆ ಪ್ರಾಪಂಚಿಕ ವಸ್ತುಗಳ ಹೆಸರುಗಳು ಬದಲಾಗುತ್ತವೆ. ಆದರೆ ರಾಮಕೃಷ್ಣಾದಿ ಹೆಸರುಗಳು ಭಾಷಾಭಿನ್ನಗಳಲ್ಲಿ ಬದಲಾವಣೆಯಾಗುವುದಿಲ್ಲ ॥೧೨೮॥ ಸಂಸ್ಕೃತ ಭಾಷೆಯನ್ನು ದೇವರು ನಿರ್ಮಿಸಿದನು. ಆದರೆ ಮರಾಠಿ ಭಾಷೆಯು ಕಳ್ಳರಿಂದ ಹುಟ್ಟಿದೆಯೇ? ಇವೆಲ್ಲ ಅಭಿಮಾನದ ಭ್ರಮೆಯು ಒಂದು ಬದಿಗಿರಲಿ. ಸುಮ್ಮನೇ ವ್ಯರ್ಥವಾದ ಮಾತುಗಳಿಂದ ಯಾವ ಪ್ರಯೋಜನ? ॥೧೨೯॥ ತಾತ್ಪರ್ಯ ಸಂಸ್ಕೃತ ಭಾಷೆಯಲ್ಲಿರಲಿ ಅಥವಾ ಮರಾಠಿ ಭಾಷೆಯಲ್ಲಿರಲಿ ಹರಿಕಥೆಯು ಪಾವನವಾಗಿಯೇ ಇರುವುದು. ಇದನ್ನು ಎಲ್ಲರೂ ಮನ್ನಿಸಬೇಕಾಗುವುದು ॥೧೩೦॥ ಈಗ ನನ್ನ ಅಜ್ಜನ ತಂದೆಯಾದ "ಭಾನುದಾಸ" ಇವರಿಗೆ ನಾನು ವಂದಿಸುವೆನು. ಏಕೆಂದರೆ, ಇವರಿಂದಲೇ ನಮ್ಮ ವಂಶವು ಭಗವಂತನಿಗೆ ಸಂಪೂರ್ಣವಾಗಿ ಪ್ರಿಯವಾಗಿರುವುದು ॥೧೩೧॥ ಇವರು ಬಾಲ್ಯದಲ್ಲಿಯೇ ಸೂರ್ಯದೇವರನ್ನು ಸ್ವಾಧೀನ ಪಡಿಸಿಕೊಂಡರು. ಹಾಗೂ ಸ್ವತಃ ಚಿತ್‌ಸೂರ್ಯರಾದರು. ಹಾಗೆಯೇ ಮಾನಾಭಿಮಾನಗಳನ್ನು ತ್ಯಜಿಸಿ ಸ್ವತಃ ಭಗವಂತನಿಂದ ಪಾವನರಾದರು ॥೧೩೨॥ ಇವರ ಪದಬಂಧ ಪ್ರಾಪ್ತಿಯನ್ನು ಕಾಣಲು ಪ್ರತ್ಯಕ್ಷವಾಗಿ ಶ್ರೀ ವಿಠ್ಠಲನ ಮೂರ್ತಿಯೇ ಬಂದಿತು. ಕಿವಿಗಳಲ್ಲಿನ ದೇದೀಪ್ಯಮಾನವಾದ ಕುಂಡಲಗಳು ಹೊಳೆಯುತ್ತಿದ್ದರಿಂದ ಅವು ರಾತ್ರಿಯಲ್ಲಿಯೇ ದೃಷ್ಟಿಗೆ ಗೋಚರಿಸಿದವು ॥೧೩೩॥ ಈ ಭಾನುದಾಸರ ಪುತ್ರನು ಚಕ್ರಪಾಣಿಯು ಈತನಿಗೂ ಸುಲಕ್ಷಣನಾದ ಒಬ್ಬ ಪುತ್ರನು ಜನಿಸಿದನು. ಈತನ ಹೆಸರು "ಸೂರ್ಯ"ಎಂದು ಭಾನುದಾಸರು ಹೆಸರಿಟ್ಟರು ॥೧೩೪॥ ಯಾವ ಈ ಸೂರ್ಯತೇಜದ ಕಿರಣಗಳಿಂದ ರುಕ್ಮಿಣೀಯು ನನಗೆ ಜನ್ಮಕೊಟ್ಟಳು. ಆದ್ದರಿಂದ "ರಖುಮಾಈ" ಯು ನನ್ನ ನಿಜವಾದ ಮಾತೆಯಾದಳು ॥೧೩೫॥ ಈ ಗ್ರಂಥಾರಂಭದಲ್ಲಿ ಪೂರ್ವಜರ ಮಾಲಿಕೆಗೆ ನಾನು ಅಭಿವಂದಿಸಿದೆನು. ಇಂತಹ ವೈಷ್ಣವ ಕುಲದಲ್ಲಿ ನಾನು ಜನ್ಮಕ್ಕೆ ಬಂದದ್ದು ನನ್ನ ಬಹು ದೊಡ್ಡ ಭಾಗ್ಯವಾಗಿರುವುದು ॥೧೩೬॥ ಈ ವೈಷ್ಣವರ ಕುಲದಲ್ಲಿಯೇ ನಾರದ, ಪ್ರಹ್ಲಾದ, ಸನಕಾದಿಕ, ಉದ್ಧವ, ಅಕ್ರೂರ, ಶ್ರೀಶುಕ, ವಸಿಷ್ಠ ಇತ್ಯಾದಿ ಇವರು ಪರಮೇಶ್ವರನ ಮಹಾ ಮಹಾ ಭಕ್ತರಾಗಿ ಸರ್ವ ಜಗತ್ತಿಗೆ ಭೂಷಣಕ್ಕೆ ಭೂಷಣರಾದರು ॥೧೩೭॥ ಈ ಎಲ್ಲ ವೈಷ್ಣವರು ಈ ಗ್ರಂಥದತ್ತ ಲಕ್ಷಕೊಡುವವರಿದ್ದಾರೆ. ಆದ್ದರಿಂದ ಈ ಎಲ್ಲ ವೈಷ್ಣವರ ವಂಶ ಮಾಲಿಕೆಗೆ ನಾನು ಗ್ರಂಥಾರಂಭದಲ್ಲಿ ವಂದಿಸುವೆನು ॥೧೩೮॥ ಈಗ ನಾನು ಯಾವ ಗೋತ್ರದಲ್ಲಿ ಜನಿಸಿರುವೆನೋ, ಆ ವಿಶ್ವಾಮಿತ್ರನಿಗೆ ನಮಸ್ಕರಿಸುವೆನು. ಇವರು ಪ್ರತಿಸೃಷ್ಟಿ ಮಾಡುವ ಕೇವಲ ಬ್ರಹ್ಮದೇವರಾಗಿದ್ದು ಗಾಯಿತ್ರಿ ಮಂತ್ರಕ್ಕೆ ಇವರಿಂದಲೇ ಮಹತ್ವ ಉಂಟಾಯಿತು ॥೧೩೯॥ ಉಪನಿಷತ್‌ಗಳ ವಿವೇಚನೆ ಮಾಡುವ ಯೋಗ್ಯತೆಯುಳ್ಳ ಯಾಜ್ಞವಲ್ಕ್ಯರಿಗೂ ವಂದಿಸುವೆನು. ಇವರು ಕೃಪಾಮೃತದ ಮಳೆಗರೆದು ಕವಿಯ ಕರ್ತವ್ಯಕ್ಕೆ ಪುಷ್ಟಿಯನ್ನು ನೀಡುವರು ॥೧೪೦॥ ಈಗ ಎಲ್ಲ ಪ್ರಾಣಿಮಾತ್ರರಿಗೂ ನಮಸ್ಕರಿಸುವೆನು. ಏಕೆಂದರೆ ಇವರಿಂದಲೇ ಪರಮೇಶ್ವರನಲ್ಲಿ ಸಖ್ಯವು ಸಾಧಿಸಿತು. ಮತ್ತು ಈ ಗ್ರಂಥಾರಂಭವು ಉತ್ತಮ ರೀತಿಯಲ್ಲಿ ಪೂರ್ಣಗೊಂಡಿತು ॥೧೪೧॥ ಈಗ ನನ್ನ ಗುರುಗಳ ಗುರುಗಳಾದ ಹಾಗೂ ತನ್ನ ಬೋಧೆಯನ್ನು ವಿಸ್ತರಿಸುವ ಉದ್ದೇಶದಿಂದ ಈ ಗ್ರಂಥವನ್ನು ಬರೆಯಲು ಸ್ಫೂರ್ತಿ ಕೊಟ್ಟ ದತ್ತಾತ್ರೇಯರಿಗೆ ನಮಸ್ಕರಿಸುವೆನು ॥೧೪೨॥

ತೋ ಶಬ್ದಾತೇ ದಾವಿತು । ಅರ್ಥು ಅರ್ಥೇ ಪ್ರಕಾಶಿತು । ಮಗ ವಕ್ತೇಪಣಾಚೇ ಮಾತು । ಸ್ವಯೇ ವದವಿತು ಯಥಾರ್ಥ ॥೧೪೩॥ ತೋ ಮ್ಹಣೇ ಶ್ರೀಭಾಗವತ । ತೇ ಭಗವಂತಾಚೇ ಹೃದ್ಗತ । ತ್ಯಾಸೀಚಿ ಹೋಯ ಪ್ರಾಪ್ತ । ಜ್ಯಾಚೇ ನಿರಂತರ ಚಿತ್ತ ಭಗವಂತೀ ॥೧೪೪॥ ತೇ ಹೇ ಜ್ಞಾನ ಕಲ್ಪಾದೀ। ''ಚತುಃಶ್ಲೋಕ'' ಪದಬಂಧೀ । ಉಪದೇಶಿಲಾ ಸದ್ಬುದ್ಧೀ । ನಿಜಾತ್ಮ ಬೋಧೀ ವಿಧಾತಾ ॥೧೪೫॥ ನವಲ ತಯಾಚಾ ಸದ್ಭಾವೋ । ಶಬ್ದ ಮಾತ್ರೇ ಝಾಲಾ ಅನುಭವೋ । ಬಾಪ ಸದ್ಗುರು ಕೃಪಾ ಪಹಾ ಹೋ । ಕೇಲಾ ನಿಃಸಂದೇಹೋ ಪರಮೇಷ್ಠೀ ॥೧೪೬॥ ತೋ ಚತುಃಶ್ಲೋಕೀಂಚಾ ಬೋಧು।ಗುರುಮಾರ್ಗೇ ಆಲಾ ಶುದ್ಧು। ತೇಣೇ ಉಪದೇಶಿಲಾ ನಾರದು । ಅತಿಪ್ರಬುದ್ಧು ಭಾವಾರ್ಥೀ ॥೧೪೭॥ ತೇಣೇ ನಾರದು ನಿವಾಲಾ। ಅವಘಾ ಅರ್ಥಮಯಚಿ ಝಾಲಾ। ಪೂರ್ಣ ಪರಮಾನಂದೇ ಧಾಲಾ । ನಾಚೋ ಲಾಗಲಾ ನಿಜಬೋಧೇ ॥೧೪೮॥ ತೋ ಬ್ರಹ್ಮವೀಣಾ ವಾಹತು । ಬ್ರಹ್ಮಪದೇ ಗೀತೀ ಗಾತು । ತೇಣೇ ಬ್ರಹ್ಮಾನಂದೇ ನಾಚತು।ವಿಚರೇ ಡುಲ್ಲತು ಭೂತಳೀ ॥೧೪೯॥ ತೋ ಆಲಾ ಸರಸ್ವತೀತೀರಾ । ತಂವ ದೇಖಿಲೇ ವ್ಯಾಸಋಷೀಶ್ವರಾ । ಜೋ ಸಂಶಯಾಚಿಯಾ ಪೂರಾ । ಅತಿದುರ್ಧರಾಮಾಜೀ ಪಡಿಲಾ ॥೧೫೦॥ ವೇದಾರ್ಥ ಸಕಳ ಪುರಾಣ । ವ್ಯಾಸೇ ಕೇಲೇ ನಿರ್ಮಾಣ । ಪರೀ ತೋ ನ ಪವೇಚಿ ಆಪಣ । ನಿಜಸಮಾಧಾನ ಸ್ವಹಿತಾಚೇ ॥೧೫೧॥ ತೋ ಸಂಶಯಸಮುದ್ರಾಆಂತು । ಪಡೋನಿ ಹೋತಾ ಬುಡತು । ತೇಥೇ ಪಾವಲಾ ಬ್ರಹ್ಮಸುತು । "ನಾಭೀ" ಮ್ಹಣತು ಕೃಪಾಳೂ ॥೧೫೨॥ ತೇಣೇ ಏಕಾಂತೀ ನೇಊನಿ ದೇಖ । ವ್ಯಾಸಾಸಿ ಕೇಲೇ ಏಕಮುಖ । ಮಗ ದಾವಿಲೇ ಚಾರ್ಹೀ ಶ್ಲೋಕ । ಭವಮೋಚಕ ನಿರ್ದುಷ್ಟ ॥೧೫೩॥ ತೇ ಸೂರ್ಯಾತೇ ನ ದಾಖವುನೀ । ಗಗನಾತೇಹೀ ಚೋರುನೀ । ಕಾನಾತೇ ಪರತೇ ಸಾರೂನೀ । ಶೇಲಾ ಉಪದೇಶುನೀ ನಿಜಬೋಧು ॥೧೫೪॥ ತೇ ನಾರದಾಚೇ ವಚನ । ಕರೀತ ಸಂಶಯಾಚೇ ದಹನ । ತಂವ ವ್ಯಾಸಾಸಿ ಸಮಾಧಾನ । ಸ್ವಸುಖೇ ಪೂರ್ಣ ಹೋ ಸರಲೇ ॥೧೫೫॥ ಮಗ ಶ್ರೀ ವ್ಯಾಸೇ ಆಪಣ । ಭಾಗವತ ದಶಲಕ್ಷಣ । ಶುಕಾಸಿ ಉಪದೇಶಿಲೇ ಜಾಣ । ನಿಜಬೋಧೇ ಪೂರ್ಣ ಸಾರ್ಥಕ ॥೧೫೬॥ ತೇಣೇ ಶುಕಹೀ ಸುಖಾವಲಾ । ಪರಮಾನಂದೇ ನಿವಾಲಾ । ಮಗ ಸಮಾಧಿಸ್ಥ ರಾಹಿಲಾ । ನಿಶ್ಚಳ ಶೇಲಾ ನಿಜಶಾಂತೀ ॥೧೫೭॥

ಇವರೇ ಶಬ್ದಗಳನ್ನು ತೋರಿಸುವರು. ಅರ್ಥದಿಂದ ಅರ್ಥಗಳನ್ನು ಮನದಲ್ಲಿ ತುಂಬುವರು. ಹಾಗೂ ವಕ್ತೃತ್ವವನ್ನು ಸ್ವತಃ ಕೊಟ್ಟು ನನ್ನಿಂದ ನುಡಿಸುವರು ॥೧೪೩॥ ಇವರು ಹೇಳುವುದೇನೆಂದರೆ, ಶ್ರೀಮದ್‌ಭಾಗವತವು ಭಗವಂತನ ಹೃದ್ಗತವಾಗಿರುವುದು. ಯಾರ ಚಿತ್ತವು ನಿರಂತರವಾಗಿ ಭಗವಂತನಲ್ಲಿರುವುದೋ ಅವರಿಗೆ ಮಾತ್ರ ಇದು ಪ್ರಾಪ್ತವಾಗುವುದು ॥೧೪೪॥ ಇದು ಕಲ್ಪಕ್ಕಿಂತಲೂ ಪೂರ್ವದ ಜ್ಞಾನವಾಗಿರುವುದು. ಭಗವಂತನು ನಿಜಾತ್ಮ ಬೋಧೆಯನ್ನು ಮಾಡುವುದಕ್ಕಾಗಿ ಬುದ್ಧಿಮಾನ್ ಬ್ರಹ್ಮದೇವನಿಗೆ ನಾಲ್ಕು ಶ್ಲೋಕಗಳಿಂದ ಉಪದೇಶಿಸಿದನು ॥೧೪೫॥ ಈತನ ಸದ್ಭಾವವು ಆಶ್ಚರ್ಯಚಕಿತವಾಗಿದೆ. ಏಕೆಂದರೆ, ಶಬ್ದಮಾತ್ರದಿಂದಲೇ ಈತನಿಗೆ ಅನುಭವಕ್ಕೆ ಬಂದಿತು. ಸದ್ಗುರು ಕೃಪೆಯ ಮಹತ್ವವನ್ನು ಏನೆಂದು ಹೇಳಬೇಕು? ಈತನು ಬ್ರಹ್ಮದೇವನಿಗೆ ತತ್ಕಾಲದಲ್ಲಿಯೇ ನಿಃಸಂದೇಹನನ್ನಾಗಿ ಮಾಡಿದನು॥೧೪೬॥ ಇದೇ ನಾಲ್ಕು ಶ್ಲೋಕದ ಉಪದೇಶವು ಇದ್ದಕ್ಕಿದ್ದಂತೆಯೇ ನಡೆದು ಬಂದಿರುವುದು. ಇದನ್ನು ಬ್ರಹ್ಮದೇವನು ತನ್ನ ಮಾನಸ ಪುತ್ರನಾದ ಅತ್ಯಂತ ಬುದ್ಧಿಮಾನ್,ಭಕ್ತಿಮಾನ್ ನಾರದರಿಗೆ ಉಪದೇಶಿಸಿದನು ॥೧೪೭॥ ಇದರಿಂದ ನಾರದರು ತೃಪ್ತರಾಗಿ ನಖಶಿಖಾಂತರವರೆಗೂ ಅರ್ಥಮಯರಾದರು ಹಾಗೂ ಪೂರ್ಣ ಪರಮಾನಂದದಿಂದ ತೃಪ್ತರಾಗಿ ಕುಣಿಯಲಾರಂಭಿಸಿದರು ॥೧೪೮॥ ಇವರು ಬ್ರಹ್ಮವೀಣೆಯನ್ನು ಹೆಗಲಿಗೆ ಹಾಕಿಕೊಂಡು ಬ್ರಹ್ಮವನ್ನು ಅನುಲಕ್ಷಿಸಿ ಗಾನವನ್ನು ಮಾಡುತ್ತ ಮಾಡುತ್ತ ಬ್ರಹ್ಮಾನಂದದ ಭರದಲ್ಲಿ ಕುಣಿಯುತ್ತ, ಡೋಲಾಯಿಸುತ್ತ ಭೂಲೋಕಕ್ಕೆ ಆಗಮಿಸಿದರು. ॥೧೪೯॥ ಸರಸ್ವತೀ ನದೀದಂಡೆಯ ಮೇಲೆ ಇಳಿದುಕೊಳ್ಳಲು ಅಲ್ಲಿ ವ್ಯಾಸ ಮಹರ್ಷಿಗಳು ದೃಷ್ಟಿಗೆ ಗೋಚರಿಸಿದರು. ಇವರು ಅತ್ಯಂತ ದುರ್ಧರವಾದ ಸಂಶಯದ ಪೂರದಲ್ಲಿ ಬಿದ್ದು ಗೋಳಾಡುತ್ತಿದ್ದರು. ॥೧೫೦॥ ವ್ಯಾಸರು ವೇದಾರ್ಥಯುಕ್ತ ಎಲ್ಲ ಪುರಾಣಗಳನ್ನು ರಚಿಸಿದರು. ಆದರೆ ಅವರಿಗೆ ಸ್ವಂತಕ್ಕೆ ಬೇಕಾಗುವ ಸಮಾಧಾನವು ಸಿಗಲಿಲ್ಲ ॥೧೫೧॥ ಇವರು ಸಂಶಯದ ಸಾಗರದಲ್ಲಿ ಬಿದ್ದು ಮುಳುಗುತ್ತಿದ್ದರು. ಇಷ್ಟರಲ್ಲಿಯೇ ಕೃಪಾವಂತ ನಾರದಮುನಿಗಳು ಬಂದು ಇವರಿಗೆ "ಹೆದರಬೇಡಿರಿ" ಎಂದು ಆಶ್ವಾಸನೆ ನೀಡಿದರು. ॥೧೫೨॥ ನಾರದರು ವ್ಯಾಸರಿಗೆ ಏಕಾಂತದಲ್ಲಿ ಏಕಮುಖರನ್ನಾಗಿ ಮಾಡಿದರು. ಆಗ ಸಂಸಾರಭೇದಕಗಳಾದ ಉತ್ತಮವಾದ ನಾಲ್ಕು ಶ್ಲೋಕಗಳನ್ನು ಇವರಿಗೆ ಉಪದೇಶಿಸಿದರು ॥೧೫೩॥ ಇವರು ಇದನ್ನು ಸೂರ್ಯನಿಗೂ ತೋರಿಸದೇ, ಆಕಾಶಕ್ಕೂ ಕದ್ದು, ಕಿವಿಯಿಂದಲೂ ದೂರವಿದ್ದು, ಆತ್ಮಬೋಧೆಯ ಉಪದೇಶವನ್ನು ಮಾಡಿದರು ॥೧೫೪॥ ಹೀಗೆ ನಾರದರ ಉಪದೇಶದಿಂದ ವ್ಯಾಸರ ಸಂಶಯಗಳು ಸುಟ್ಟು ಹೋದವು. ಆಗ ಇವರ ಮನಸ್ಸಿಗೆ ಸ್ವಸುಖದ ಸಮಾಧಾನವು ಪ್ರಾಪ್ತವಾಯಿತು ॥೧೫೫॥ ತದನಂತರ ವ್ಯಾಸರು ಸ್ವತಃ ದಶಲಕ್ಷಣಯುಕ್ತ ಭಾಗವತವನ್ನು ಶುಕನಿಗೆ ಉಪದೇಶ ನೀಡಿ ತಮ್ಮ ಆತ್ಮಬೋಧೆಯ ಪೂರ್ಣ ಸಾರ್ಥಕ ಮಾಡಿಕೊಂಡರು ॥೧೫೬॥ ಇದರಿಂದ ಶುಕನಿಗೂ ಆನಂದವಾಯಿತು. ಪರಮಾನಂದದಿಂದ ತೃಪ್ತನಾದನು. ಆಗ ಈತನು ಸಮಾಧಿಸ್ಥನಾಗಿ ಆತ್ಮಶಾಂತಿಯಲ್ಲಿಯೇ ನಿಶ್ಚಲನಾಗಿ ನಿಮಗ್ನನಾದನು ॥೧೫೭॥

ತೇಥೇ ಸ್ವಭಾವೇಂಚಿ ಜಾಣಾ । ಸಮಾಧಿ ಆಲೀ ಸಮಾಧಾನಾ । ಮಗ ಪರೀಕ್ಷಿತೀಚಿಯಾ ಬ್ರಹ್ಮಜ್ಞಾನಾ । ಅವಚಟೇ ಜಾಣಾ ತೋ ಆಲಾ ॥೧೫೮॥ ಪಹಾವಯಾ ಪರೀಕ್ಷಿತೀಚಾ ಅಧಿಕಾರೂ । ತಂವ ಕಲೀಸಿ ಕೇಲಾ ತೇಣೇ ಮಾರೂ । ತರೀ ಧರ್ಮಾಹೂನಿ ದಿಸೇ ಥೋರೂ । ಅಧಿಕಾರೂ ಪೈ ಯಾಚಾ ॥೧೫೯॥ ಕೃಷ್ಣ ಅಸತಾ ಧರ್ಮ ಜಿಯಾಲಾ । ಪಾಠೀ ಕಲಿಭೇಣೇ ತೋ ಪಳಾಲಾ । ಪರೀ ಹಾ ಕಲಿ ನಿಗ್ರಹೂನಿ ಠೇಲಾ । ಧರ್ಮಾಹೂನಿ ಭಲಾ ಧೈರ್ಯೇ ಅಧಿಕ ॥೧೬೦॥ ಅರ್ಜುನವೀರ್ಯಪರಂಪರಾ ನಿರ್ವ್ಯಂಗ । ಸುಭದ್ರಾ ಮತಾಮಹೀಚೇ ಗರ್ಭಲಿಂಗ । ತೋ ಅಧಿಕಾರರತ್ನ ಉಪಲಿಂಗ । ಜ್ಯಾಸೀ ರಕ್ಷಿತಾ ಶ್ರೀರಂಗ ಗರ್ಭೀ ಝಾಲಾ ॥೧೬೧॥ ಗರ್ಭೀಂಚ ಅಸತಾ ಜ್ಯಾಚಾ ಭೇಣೇ । ಸ್ಪರ್ಶೂ ನ ಶಕೆ ಶಸ್ತ್ರ ದ್ರೌಣ್ಯ । ತ್ಯಾಚಾ ಅಧಿಕಾರ ಪೂರ್ಣ । ಸಾಂಗಾವಯಾ ಕೋಣ ಸಮರ್ಥ ॥೧೬೨॥ ಜೇಣೇ ರಕ್ಷಿಲೇ ಗರ್ಭಾಪ್ರತೀ । ತಯಾ ಪರೀಕ್ಷೀ ಸರ್ವಾಭೂತೀ । ಯಾಲಾಗೀ ನಾವೇ ಪರೀಕ್ಷಿತೀ । ಅಗಾಧ ಸ್ಥಿತಿ ನಾವಾಂಚೀ ॥೧೬೩॥ ತೋ ಅಭಿಮನ್ಯೂಚಾ ಪರೀಕ್ಷಿತೀ । ಉಪಜಲಾ ಪಾವನ ಕರೀತ ಕ್ಷಿತೀ । ಜ್ಯಾಚೇನಿ ಭಾಗವತಾಚೀ ಖ್ಯಾತೀ । ಘಾತಲೀ ತ್ರಿಜಗತೀ ಪರಮಾರ್ಥಪವ್ಹೇ ॥೧೬೪॥ ಅಂಗಿ ವೈರಗ್ಯವಿವೇಕು । ಬ್ರಹ್ಮಾಲಾಗೀ ತ್ಯಕ್ತೋದಕು। ತಯಾ ದೇಖೋನಿ ಶ್ರೀಶುಕು । ಅತ್ಯಂತಿಕು ಸುಖಾವಲಾ ॥೧೬೫॥ ಬಾಪ ಕೋಪು ಬ್ರಾಹ್ಮಣಾಚಾ । ಶಾಪೇ ಅಧಿಕಾರೂ ಬ್ರಹ್ಮಜ್ಞಾನಾಚಾ । ತಯಾಂಚ್ಯಾ ಚರಣೀ ಕಾಯಾವಾಚಾ । ನಿಜಭಾವಾಚಾ ನಮಸ್ಕಾರು ॥೧೬೬॥ ಬ್ರಹ್ಮಾ ಹೂನಿ ಬ್ರಾಹ್ಮಣ ಥೋರೂ । ಹೇ ಮೀಚ ಕಾಯ ಘಾರ ಕರೂ । ಪರೀ ಹೃದಯೀ ಅದ್ಯಾಪಿ ಶ್ರೀಧರೂ । ಚರಣಾಲಂಕಾರೂ ಮಿರವಿತು ॥೧೬೭॥ ಮ್ಹಣೋನಿ ಬ್ರಹ್ಮಾಚಾ ದೇವೋ ಬ್ರಾಹ್ಮಣು । ಹಾ ಸತ್ಯಸತ್ಯ ಮಾಝಾ ಪಣು । ಯಾಲಾಗೀ ವೇದರೂಪೇ ನಾರಾಯಣು । ಉದರಾ ಯೇಊನು ವಾಢಲಾ ॥೧೬೮॥ ಮ್ಹಣೋನಿ ಬ್ರಾಹ್ಮಣ ಭೂದೇವ । ಹೇ ಬ್ರಹ್ಮೀಚೇ ನಿಜಾವೇವ । ಯೇಥೇ ನ ಭಜತೀ ತೇ ಮಂದದೈವ । ಅತಿ ನಿದೈವ ಅಭಾಗ್ಯ ॥೧೬೯॥ ಬ್ರಾಹ್ಮಣಪ್ರತಾಪಾಚಾ ನವಲಾವೋ । ತಿಹೀ ಆಜ್ಞಾಧಾರಕು ಕೇಲಾ ದೇವೋ । ಪ್ರತಿಮಾಪ್ರತಿಷ್ಠೇಸಿ ಪಹಾ ಹೋ । ಪ್ರಕಟೇ ಆವಿರ್ಭಾವೋ ಮಂತ್ರಮಾತ್ರೆ ॥೧೭೦॥

ಇದರಿಂದ ಸಮಾಧಿಗೂ ಸಹ ಸಹಜವಾದ ಸಮಾಧಾನವು ಸಿಕ್ಕಿತು. ಆಗ ಇದೇ ಅವಸ್ಥೆಯಲ್ಲಿ ಪರೀಕ್ಷಿತಿಗೆ ಬ್ರಹ್ಮಜ್ಞಾನವನ್ನು ಬೋಧಿಸಲು ಅಕಸ್ಮಾತ್ತಾಗಿ ಬಂದರು ॥೧೫೮॥ ಪರೀಕ್ಷಿತನ ಅಧಿಕಾರವು ಎಷ್ಟೆಂದರೆ, ಈತನು ಕಲಿಯನ್ನೇ ಕಟ್ಟಿಹಾಕಿದನು. ಈತನ ಅಧಿಕಾರವು ಧರ್ಮರಾಜನಕ್ಕಿಂತಲೂ ಅಧಿಕವಾಗಿರುವುದೆಂದು ಅನುಭವಕ್ಕೆ ಬರುವುದು ॥೧೫೯॥ ಕಾರಣವೇನೆಂದರೆ, ಶ್ರೀಕೃಷ್ಣನು ಭೂಲೋಕದಲ್ಲಿ ಇರುವವರೆಗೆ ಮಾತ್ರ ಧರ್ಮರಾಜನು ಇದ್ದನು. ಶ್ರೀಕೃಷ್ಣನು ನಿಜಧಾಮಕ್ಕೆ ಹೋದ ನಂತರ ಈತನು ಕಲಿಯ ಭಯದಿಂದ ಓಡಿ ಹೋದನು. ಆದರೆ, ಪರೀಕ್ಷಿತಿಯು ಕಲಿಯನ್ನು ಬಂಧಿಸಿ ರಾಜ್ಯವಾಳಿದನು. ಆದ್ದರಿಂದ ಈತನು ಧರ್ಮರಾಜನಕ್ಕಿಂತಲೂ ಅಧಿಕ ಧೈರ್ಯವಂತನು ॥೧೬೦॥ ಈತನು ಅರ್ಜುನನ ನಿರ್ವ್ಯಂಗ ವೀರ್ಯ ಪರಂಪರೆಯಿಂದ ಹುಟ್ಟಿದವನು. ಸುಭದ್ರೆಯ ಮೊಮ್ಮಗನಾಗಿದ್ದನು. ಈತನ ಪಿಂಡವೆಂದರೆ ಅಧಿಕಾರದ ಕೇವಲ ರತ್ನವಾಗಿತ್ತು. ಏಕೆಂದರೆ ಸಾಕ್ಷಾತ್ ಶ್ರೀಕೃಷ್ಣನೇ ಈತನನ್ನು ಗರ್ಭದಲ್ಲಿಯೇ ಸಂರಕ್ಷಿಸಿದನು ॥೧೬೧॥ ಈತನು ಗರ್ಭದಲ್ಲಿರುವಾಗಲೇ, ಈತನ ಭಯದಿಂದ ಅಶ್ವತ್ಥಾಮನ ಶಸ್ತ್ರವು ಒಳಗೆ ಪ್ರವೇಶ ಮಾಡಲು ಸಾಧ್ಯವಾಗಲಿಲ್ಲ. ಈತನ ಸಂಪೂರ್ಣ ಅಧಿಕಾರವನ್ನು ವರ್ಣಿಸುವ ಸಮರ್ಥರು ಯಾರಿರುವರು? ॥೧೬೨॥ ಗರ್ಭದಲ್ಲಿ ತನ್ನನ್ನು ರಕ್ಷಿಸುವ ಪರಮೇಶ್ವರನು ಪ್ರತಿಯೊಂದು ಪ್ರಾಣಿಮಾತ್ರರಲ್ಲಿ ಇರುವುದನ್ನು ಈತನು ಪರೀಕ್ಷಿಸುತ್ತಿದ್ದನು. ಆದ್ದರಿಂದಲೇ ಈತನ ಹೆಸರು ಪರೀಕ್ಷಿತ ಎಂದಿಡಲಾಯಿತು. ಈ ಹೆಸರಿನ ಮಹಿಮೆಯು ಅದೆಷ್ಟು ಅಗಾಧವಾಗಿದೆ, ನೋಡಿರಿ. ॥೧೬೩॥ ಅಭಿಮನ್ಯುವಿನ ಪುತ್ರ ಪರೀಕ್ಷಿತನು ಪೃಥ್ವಿಯ ಉದ್ಧಾರಕ್ಕಾಗಿಯೇ ಜನ್ಮಕ್ಕೆ ಬಂದಿದ್ದನು. ಈತನಿಂದಲೇ ತ್ರಿಭುವನಕ್ಕೆ ಶ್ರೀಮದ್‌ಭಾಗವತದ ಪರಮಾರ್ಥ ರೂಪ ಅರವಟ್ಟಿಗೆ ನಿರ್ಮಾಣವಾದದ್ದು ಪ್ರಸಿದ್ಧವಾಗಿದೆ ॥೧೬೪॥ ಇವರ ಅಂಗದಲ್ಲಿ ವೈರಾಗ್ಯ ವಿವೇಕ ತುಂಬಿಕೊಂಡಿತ್ತು. ಬ್ರಹ್ಮಪ್ರಾಪ್ತಿಗಾಗಿ ಸರ್ವ ವಿಷಯಗಳಿಗೂ ನೀರು ಬಿಟ್ಟಿದ್ದರು. ಇಂತಹ ಪರೀಕ್ಷಿತನಿಗೆ ಕಂಡು ಶ್ರೀಶುಕನಿಗೆ ಅತ್ಯಂತ ಆನಂದವಾಯಿತು ॥೧೬೫॥ ಬ್ರಾಹ್ಮಣರ ಕೋಪವು ಬಹಳ ವಿಚಿತ್ರವಾಗಿದೆ. ಇವರು ಶಾಪದ ನೆಪದಿಂದ ಪರೀಕ್ಷಿತನಿಗೆ ಬ್ರಹ್ಮಜ್ಞಾನದ ಅಧಿಕಾರವನ್ನು ಕೊಟ್ಟರು. ಇಂಥವರ ಚರಣಗಳಲ್ಲಿ ಕಾಯಾವಾಚಾಮನಸ್ಸಿನಿಂದ ಭಕ್ತಿಭಾವದಿಂದ ನಮಸ್ಕರಿಸುವೆನು ॥೧೬೬॥ ಬ್ರಹ್ಮದೇವರಕ್ಕಿಂತಲೂ ಬ್ರಾಹ್ಮಣರು ದೊಡ್ಡವರು. ಈ ವಿಷಯಕ್ಕೆ ನಾನೇ ಹೆಚ್ಚಾಗಿ ಏನೆಂದು ವರ್ಣಿಸಲಿ? ಏಕೆಂದರೆ, ಶ್ರೀ ವಿಷ್ಣುಪರಮಾತ್ಮನು ಈಗಲೂ ಶ್ರೀವತ್ಸಲಾಂಛನವನ್ನು ತನ್ನ ಹೃದಯದಲ್ಲಿ ಮೆರೆಯಿಸುತ್ತಿರುವನು ॥೧೬೭॥ ಆದ್ದರಿಂದ ಬ್ರಾಹ್ಮಣರು ಬ್ರಹ್ಮದೇವನ ದೇವರಾಗಿರುವರು. ಈ ನನ್ನ ಸಿದ್ಧಾಂತವು ಸಂಪೂರ್ಣವಾಗಿ ಸತ್ಯಸತ್ಯವಾಗಿರುವುದು. ಆದ್ದರಿಂದಲೇ ನಾರಾಯಣನು ವೇದರೂಪದಿಂದ ಬ್ರಾಹ್ಮಣರ ಹೊಟ್ಟೆಯಲ್ಲಿ ಬಂದು ವೃದ್ಧಿಯಾಗುವನು ॥೧೬೮॥ ಆದ್ದರಿಂದ ಬ್ರಾಹ್ಮಣರು ಭೂಲೋಕದ ದೇವತೆಗಳಾಗಿರುವರು. ಇವರು ಸಾಕ್ಷಾತ್ ಪರಬ್ರಹ್ಮದ ಅವಯವಗಳಾಗಿರುವರು. ಹೀಗಿದ್ದರೂ ಇವರನ್ನು ಯಾರು ಭಜಿಸುವುದಿಲ್ಲವೋ ಅವರು ಮಂದಭಾಗ್ಯರು, ಅತೀ ದುರ್ದೈವಿಗಳು ॥೧೬೯॥ ಬ್ರಾಹ್ಮಣರ ಸಾಮರ್ಥ್ಯವು ವಿಶೇಷವಾಗಿ ವಿಲಕ್ಷಣವಾಗಿರುವುದು. ಅವರು ದೇವರನ್ನು ತಮ್ಮ ಆಜ್ಞಾಧಾರಕನನ್ನಾಗಿ ಮಾಡಿಟ್ಟಿರುವರು. ಅಹೋ! ಮೂರ್ತಿಯ ಪ್ರತಿಷ್ಠಾಪನೆಯಲ್ಲಿ ಅವರ ಕೇವಲ ಮಂತ್ರದಿಂದಲೇ ಅಲ್ಲಿ ದೇವಾಂಶವು ಪ್ರಕಟವಾಗುವುದು ॥೧೭೦॥

ತಂವ ಸಂತ ಮ್ಹಣತೀ ಕಾಯ ಪಹಾವೇ । ಜೇ ಸ್ತವನೀ ರಚಿಸೀ ಭಾವೇ । ತೇಥೇ ಪ್ರಮೇಯ ಕಾಢಿಸೀ ನಿತ್ಯ ನವೇ । ಸಾಹಿತ್ಯಲಾಘವೇ ಸಾಚಾರ ।।೧೭೧।। ಗಣೇಶು ಆಣಿ ಸರಸ್ವತೀ । ಬೈಸವಿಲೀ ಬ್ರಹ್ಮ ಪಂಕ್ತೀ । ತೈಶೀಚ ಸಂತಸ್ತವನೀ ಸ್ತುತೀ । ಐಕ್ಯವೃತ್ತೀ ವದಲಾಸೀ ।।೧೭೨।। ಪಾಠಿ ಕುಲ ಆಣಿ ಕುಲದೈವತಾ। ಸ್ತವನೀ ವದಲಾಸೀ ಜೇ ಕಥಾ । ತೇ ಐಕಲಾಂಚಿ ಚಿತ್ತ ಚಿಂತಾ । ವಿಸರೇ ಸರ್ವಥಾ ಶ್ರವಣೇಂಚಿ ।।೧೭೩।। ಜೋ ಸದ್ಭಾವೋ ಸಂತಚರಣೀ । ತೋಚಿ ಭಾವೋ ಬ್ರಾಹ್ಮಣೀ । ಸುಖೀ ಕೇಲೇ ಗುರುಸ್ತವನೀ । ಧನ್ಯ ವಾಣೀ ಪೈ ತುಝೀ ।।೧೭೪।। ತರೀ ತುಝೇನಿ ಮುಖೇ ಶ್ರೀ ಜನಾರ್ದನ । ಸ್ವಯೇ ವದತಾಹೇ ಆಪಣ । ಹೇ ಬೋಲತಾಂಚಿ ಖೂಣ । ಕಳಲೀ ಸಂಪೂರ್ಣ ಆವಘ್ಯಾಸೀ ।।೧೭೫।। ಚಢತ ಪ್ರಮೇಯಾಚೇ ಭರತೇ । ತೇ ನಾವೇಕ ಆವರೋನಿ ಚಿತ್ತೇ । ಪುಢೀಲ ಕಥಾನಿರೂಪಣಾತೇ । ಕರೀ ನಿಶ್ಚಿತೇ ಆರೋಹಣ ।।೧೭೬।। ವಿಸರಲೋ ಹೋತೋ ಹಾ ಭಾವೋ। ಪರೀ ಭಲಾ ದಿಧಲಾ ಆಠವೋ । ಯಾಚಿಲಾಗೀ ಸದ್ಭಾವೋ । ತುಮಚೇ ಚರಣೀ ಪಹಾ ಹೋ ಠೇವಿಲಾ ।।೧೭೭।। ಉಣೇ ದೇಖಾಲ ಜೇ ಜೇ ಜೇಥೇ । ತೇ ತೇ ಕರಾವೇ ಪುರತೇ । ಸಜ್ಜನಾಮಾಜೀ ಸರತೇ । ಕರಾವೇ ಮಾತೇ ಗ್ರಂಥಾರ್ಥಸಿದ್ಧೀ ।।೧೭೮।। ತೇ ಮ್ಹಣತೀ ಭಲಾ ರೇ ಭಲಾ ನೇಟಕಾ । ಬರವೀ ಹೀ ಆಯಾ ಆಲೀ ಗ್ರಂಥಪೀಠಿಕಾ। ಆತಾ ಸಂಸ್ಕೃತಾವರೀ ಟೀಕಾ । ಕವಿಪೋಷಕಾ ವದೇ ವಹಿಲಾ ।।೧೭೯।। ಯಾಚಿ ಬೋಲಾವರೀ ಮಾಝಾ ಭಾವೋ । ಠೇವೂನಿ ಪಾವಲೋ ಪಾಯಾಂಚಾ ಠಾವೋ । ತರೀ ಆಜ್ಞೆಸಾರಿಖಾ ಪ್ರಸ್ತಾವೋ । ಕರೀನ ಪಾಹಾ ಹೋ ಕಥೇಚಾ ।।೧೮೦।। ತರೀ ನೈಮಿಷಾರಣ್ಯಾಆಂತು । ಶೌನಕಾದಿಕಾ ಪ್ರತಿ ಮಾತು । ಸೂತ ಅಸೇ ಸಾಂಗತು । ಗತ ಕಥಾರ್ಥು ಅನ್ವಯೋ ।।೧೮೧।। ಮಾಗೆ ದಹಾವೇ ಸ್ಕಂಧೀ ಜಾಣ । ಕಥಾ ಜಾಲೀ ನವ - ಲಕ್ಷಣ । ಆತಾ ಮೋಕ್ಷಾಚೇ ಉಪಲಕ್ಷಣ । ಸಾಂಗೇ ಶ್ರೀಕೃಷ್ಣ ಏಕಾದಶೀ ।।೧೮೨।। ಜೋ ಚಿದಾಕಾಶೀಚಾ ಪೂರ್ಣಚಂದ್ರ । ಜೋ ಯೋಗಜ್ಞಾನನರೇಂದ್ರ । ತೋ ಬೋಲತಾ ಝಾಲಾ ಶುಕ ಯೋಗೀಂದ್ರ । ಪರಿಸತಾ ನರೇಂದ್ರ ಪರೀಕ್ಷಿತೀ ।।೧೮೩।। ತಂವ ಪರೀಕ್ಷಿತೀ ಮ್ಹಣೇ ಸ್ವಾಮೀ । ಯಾಚಿಲಾಗೀ ತ್ಯಕ್ತೋದಕ ಮೀ । ತೇಚಿ ಕೃಪಾ ಕೇಲೀ ತುಮ್ಹೀ । ತರೀ ಧನ್ಯ ಆಮ್ಹೀ ನಿಜಭಾಗ್ಯೆ ।।೧೮೪।। ಅಗಾ ಹೇ ಸಾಚಾರ ಮೋಕ್ಷಕಥಾ ಜ್ಯಾಂಶಿ ಮೋಕ್ಷಾಚೀ ಅವಸ್ಥಾ । ತಿಹೀ ಪಾವ ದೇಊನಿ ಮನಾಚೇ ಮಾಥಾ । ರಿಘಾವೇ ಸರ್ವಥಾ ಶ್ರವಣಾದರೀ ।।೧೮೫।।

ಆಗ ಸಂತರು ಹೇಳಿದರು; ಏನು ಹೇಳಬೇಕು? ನೀನು ಭಕ್ತಿಯಿಂದ ಮಾಡುವ ಸ್ತುತಿಗಳಲ್ಲಿ ನಿಜವಾಗಿಯೂ ಸಾಹಿತ್ಯದ ಮತ್ತು ಚಾತುರ್ಯದ ಹೊಸ ಹೊಸ ಸಿದ್ಧಾಂತಗಳು ಗೋಚರಿಸುತ್ತಿವೆ ।।೧೭೧।। ಗಣಪತೀ ಮತ್ತು ಸರಸ್ವತೀ ಇವರನ್ನು ನೀನು ಬ್ರಹ್ಮಪಂಕ್ತಿಯಲ್ಲಿ ಕೂಡ್ರಿಸಿದೆ. ಅದರಂತೆ ಸಂತಸ್ತುತಿಯಲ್ಲಿ ಸ್ತುತಿರೂಪದಿಂದ ಏಕಾತ್ಮತೆಯನ್ನು ಪ್ರಕಟಗೊಳಿಸಿದೆ ।।೧೭೨।। ತದನಂತರ ಕುಲ ಮತ್ತು ಕುಲದೇವತೆಯರ ವರ್ಣನೆಯಲ್ಲಿ ಹೇಳಿರುವ ಕಥೆಯ ಶ್ರವಣಮಾತ್ರದಿಂದಲೇ ಚಿತ್ತಕ್ಕೆ ಚಿಂತೆಯು ಮರೆತು ಹೋಗುವುದು ।।೧೭೩।। ಸಂತರ ಚರಣಗಳಲ್ಲಿ ಇಟ್ಟ ಸದ್ಭಾವನೆಯನ್ನೇ ಬ್ರಾಹ್ಮಣರಲ್ಲಿ ಇಟ್ಟಿರುವೆ. ಗುರುಸ್ತುತಿಯಿಂದಲೂ ನೀನು ಸಂತರಿಗೆ ಸಂತೋಷಗೊಳಿಸಿರುವೆ. ಆದ್ದರಿಂದ ನಿನ್ನ ವಾಣಿಯು ಧನ್ಯವಾಗಿದೆ ।।೧೭೪।। ನಿನ್ನ ಮುಖದಿಂದ ನಿನ್ನ ಗುರು ಜನಾರ್ದನರು ಸ್ವತಃ ಅವರೇ ಹೇಳುತ್ತಿರುವರು. ಈ ರಹಸ್ಯವು ನಮಗೆ ಅರ್ಥವಾಗಿದೆ ।।೧೭೫।। ನಿನಗೆ ಪ್ರೇಮದ ಪೂರವು ಉಕ್ಕೇರುತ್ತಿದೆ. ಅದನ್ನು ನೀನು ವಿವೇಕದಿಂದ ಆವರಿಸಿಕೊಂಡು ಮುಂದಿನ ಕಥೆಯನ್ನು ಹೇಳಲಿಕ್ಕೆ ನಿಶ್ಚಯಿಸಿ ಆರಂಭಿಸು ।।೧೭೬।। ಹೋ! ಇದನ್ನು ನಾನು ಮರೆತುಬಿಟ್ಟಿದ್ದೆನು. ತಾವು ನೆನಪಿಸಿ ಒಳ್ಳೆಯದನ್ನು ಮಾಡಿದಿರಿ. ಅದಕ್ಕಾಗಿಯೇ ನಾನು ನಿಮ್ಮ ಚರಣಗಳಲ್ಲಿ ಪೂರ್ಣ ವಿಶ್ವಾಸವಿಟ್ಟಿರುವೆನು ।।೧೭೭।। ಎಲ್ಲಿ ಏನೇನು ಕೊರತೆ ಬೀಳುವುದೋ ಅಲ್ಲಿ ನೀವು ಪೂರ್ಣಗೊಳಿಸಿರಿ. ಈ ಗ್ರಂಥಾರ್ಥವನ್ನು ಸಿದ್ಧಿಗೊಳಿಸಿ ಸಜ್ಜನರಲ್ಲಿ ನನಗೆ ಮಾನ್ಯತೆ ಕೊಡಿಸಿರಿ ।।೧೭೮।। ಆಗ ಸಂತರು ಹೇಳಿದರು; ಭಲೇ ರೇ ಭಲೇ ! ಸರಿಯಾಗಿ ಹೇಳಿದೆ. ಕವಿಪೋಷಕನೇ ಈಗ ಕೇಳು, ನಿನ್ನ ಗ್ರಂಥದ ಸಂದರ್ಭವು ಸರಿಯಾಗಬೇಕಾದರೆ ಈಗ ಸಂಸ್ಕೃತ ಭಾಷೆಗೆ ಟೀಕೆಯನ್ನು ಬರೆಯಲು ಆರಂಭಿಸು ।।೧೭೯।। ಈ ನಿಮ್ಮ ನುಡಿಗಾಗಿಯೇ ನಾನು ನಿಮ್ಮ ಚರಣಗಳನ್ನು ಭಕ್ತಿಯಿಂದ ಹಿಡಿದಿರುವೆನು. ಈಗ ತಮ್ಮ ಆಜ್ಞೆಯಂತೆ ಕಥೆಯನ್ನು ಹೇಳುವೆ, ನೋಡಿರಿ ।।೧೮೦।। ಈಗ ನೈಮಿಷಾರಣ್ಯದಲ್ಲಿ ಸೂತಮುನಿಗಳು, ಶೌನಕಾದಿಗಳವರಿಗೆ ಹಿಂದಿನ ಕಥೆಯ ಸಂದರ್ಭವನ್ನು ಈ ರೀತಿಯಾಗಿ ಹೇಳುತ್ತಿದ್ದಾರೆ ।।೧೮೧।। ಹಿಂದೆ ಹತ್ತನೆಯ ಸ್ಕಂಧದಲ್ಲಿ (ಸಗ - ವಿಸಗ - ಸ್ಥಾನ ಇತ್ಯಾದಿ) ಒಂಭತ್ತು ಲಕ್ಷಣಯುಕ್ತ ಕಥೆಯನ್ನು ಹೇಳಿದರು. ಈಗ ಹನ್ನೊಂದನೆಯ ಸ್ಕಂಧದಲ್ಲಿ ಶ್ರೀಕೃಷ್ಣನು ಮೋಕ್ಷದ ಉಪಲಕ್ಷಣಗಳನ್ನು ಹೇಳುವನು ।।೧೮೨।। ಯಾವ ಚಿದಾಕಾಶದ ಪೂರ್ಣಚಂದ್ರನಾಗಿರುವ, ಯೋಗಜ್ಞಾನದ ಕೇವಲ ಮುಕುಟಮಣಿಯಾಗಿರುವ ಶುಕಯೋಗೀಂದ್ರರು ಹೇಳಹತ್ತಿದರು. ಆಗ ಅದರ ಶ್ರವಣ ಮಾಡುವವರು ಪರೀಕ್ಷಿತ ರಾಜನಾಗಿದ್ದನು ।।೧೮೩।। ಈತನು ಹೇಳಿದನು; ಹೇ, ಸ್ವಾಮೀ ಮಹಾರಾಜರೇ, ಇದಕ್ಕಾಗಿಯೇ ನಾನು ಎಲ್ಲದಕ್ಕೂ ನೀರನ್ನು ಹಣಿಸಿರುವೆನು. ಅದನ್ನು ಪ್ರಾಪ್ತಮಾಡಿಕೊಡುವುದರಲ್ಲಿ ನೀವು ಕೃಪೆ ತೋರಿದಿರಿ. ಈಗ ನನ್ನ ಭಾಗ್ಯಕ್ಕೆ ಅಂತಪಾರವೇ ಇಲ್ಲ ।।೧೮೪।। ಈ ಮೋಕ್ಷದ ಕಥೆಯು ನಿಜವಾಗಿಯೂ ಅಗಾಧವಾಗಿದೆ. ಯಾರಿಗೆ ಮೋಕ್ಷದ ಅಪೇಕ್ಷೆ ಇರುವುದೋ, ಅವರು ಮನಸ್ಸಿನ ಮಸ್ತಕದ ಮೇಲೆ ಕಾಲುಕೊಟ್ಟು ಅತ್ಯಂತ ಆದರದಿಂದ ಶ್ರವಣಕ್ಕಾಗಿ ಸಿದ್ಧರಾಗಬೇಕು ।।೧೮೫।।

ಭೀತರೀ ನೇಊನಿಯಾ ಕಾನ । ಕಾನೀ ದ್ಯಾವೇ ನಿಜಮನ । ಅವಧಾನಾ ಕರೂನಿ ಸಾವಧಾನ । ಕಥಾನುಸಂಧಾನ ಧರಾವೇ ॥೧೮೬॥ ಬಹುತೀ ಅವತಾರೀ ಅವತರಲಾ ದೇವೋ । ಪರೀ ಯಾ ಅವತಾರೀಂಚಾ ನವಲಾವೋ । ದೇವಾ ನ ಕಳೇ ಅಭಿಪ್ರಾವೋ । ಅಗಮ್ಯ ಪಹಾ ಹೋ ಹರಿಲೀಲಾ ॥೧೮೭॥ ಉಪಜತಾಂಚಿ ಮಾಯೆವೇಗಳಾ । ವಾಢಿನ್ನಲಾ ಸ್ವಯೇ ಸ್ವಲೀಳಾ । ಬಾಳಪಣೇ ಮುಕ್ತೀಚಾ ಸೋಹಳಾ । ಪೂತನಾದಿ ಸಕಳಾ ನಿಜಾಂಗೇ ಅರ್ಪೀ ॥೧೮೮॥ ಮಾಯೇಸಿ ದಾವಿಲೇ ವಿಶ್ವರೂಪ । ಗೋವಳಾ ದಾವಿಲೇ ವೈಕುಂಠದೀಪ । ಪರೀ ಗೋವಳೀಪಣಾಚೇ ರೂಪ । ನೇದೀಚ ಅಲ್ಪ ಪಾಲಟೋ ॥೧೮೯॥ ಬಾಳ ಬಳಿಯಾಂತೇ ಮಾರೀ । ಅಚಾಟ ಕೃತ್ಯೇ ಜಗಾದೇಖತಾ ಕರೀ । ಪರೀ ಬಾಳಪಣಾಬಾಹೇರೀ । ತಿಳಭರೀ ನವ್ಹೇಚಿ ॥೧೯೦॥ ಬ್ರಹ್ಮ ಆಣಿ ಚೋರೀ ಕರೀ । ದೇವೋ ಆಣಿ ವ್ಯಭಿಚಾರೀ । ಪುತ್ರ ಕಲತ್ರ ಆಣಿ ಬ್ರಹ್ಮಚಾರೀ । ಹೇಹೀ ಪರೀ ದಾಖವಿಲೀ ॥೧೯೧॥ ಅಧರ್ಮೇ ವಾಢವಿಲಾ ಧರ್ಮು । ಅಕರ್ಮೇ ತಾರಿಲೇ ಕರ್ಮು । ಅನೇಮೇ ನೇಮಿಲಾ ನೇಮು । ಅತಿ ನಿಃಸೀಮ ನಿರ್ದುಷ್ಟ ॥೧೯೨॥ ತೇಣೇ ಸಂಗೇಚಿ ಸೋಡಿಲಾ ಸಂಗು । ಭೋಗೇ ವಾಢವಿಲಾ ಯೋಗು । ತ್ಯಾಗೇವೀಣ ಕೇಲಾ ತ್ಯಾಗು । ಅತಿ ಅವ್ಯಂಗು ನಿರ್ದೋಷ ॥೧೯೩॥ ಕರ್ಮಠಾ ಹೊಆವಯಾ ಬೋಧು । ಕರ್ಮಜಾಡ್ಯಾಚೇ ತೋಡಿಲೇ ಭೇದು । ಭೋಗಾಮಾಜೀ ಮೋಕ್ಷಪದು । ದಾವಿಲೇ ವಿಶದು ಪ್ರಕಟ ಕರೂನಿ ॥೧೯೪॥ ಭಕ್ತಿ ಭುಕ್ತಿ ಮುಕ್ತಿ । ತಿನ್ಹೀ ಕೇಲೀ ಏಕೇ ಪಂಕ್ತೀ । ಕಾಯ ವಾನೂ ಯಾಚೀ ಖ್ಯಾತಿ । ಖಾಊನಿ ಮಾತಿ ವಿಶ್ವರೂಪ ದಾವೀ ॥೧೯೫॥ ತ್ಯಾಚಿಯಾ ಪರಮಚರಿತ್ರಾ । ತುಜ ಸಾಂಗೇನ ಪರಮಪವಿತ್ರಾ । ಪರೀ ನಿಜಭೋಧಾಚಾ ಖರಾ । ಯಾ ಅವತಾರೀ ಪುರಾ ಪವಾಡಾ ಕೇಲಾ ॥೧೯೬॥ ಏಕಾದಶಾಚ್ಯಾ ತಾತ್ಪರ್ಯಾರ್ಥೀ । ಸಂಕ್ಷೇಪೇ ವಿಸ್ತರೇ ಮುಕ್ತಿ । ಬೋಲಲಲೀಸೇ ಆದ್ಯಂತೀ । ಪರಮಾತ್ಮಸ್ಥಿತಿ ನಿಜಬೋಧೇ ॥೧೯೭॥ ತೇಥೇ ನಾರದೇ ವಸುದೇವಾಪ್ರತೀ । ಸಂವಾದೂನಿ ನಿಮಿ - ಜಾಯಂತೀ । ಸಾಂಗೀತಲೀ ಕಥಾಸಂಗತೀ । "ಸಂಕ್ಷೇಪಸ್ಥಿತಿ" ಯಾ ನಾಮ ॥ ೧೯೮॥ ತೇಚಿ ಉದ್ಧವಾಚೀ ಪರಮಪ್ರೀತಿ । ನಾನಾ ದೃಷ್ಟಾಂತೇ ಉಪಪತ್ತಿ । ಸ್ವಮುಖೇ ಬೋಲಿಲಾ ಶ್ರೀಪತಿ । ತೇ ಕಥಾ ನಿಶ್ಚಿತೀ "ಸವಿಸ್ತಾರ" ॥೧೯೯॥ ದಶಮೀ "ನಿರೋಧ" ಲಕ್ಷಣ । ಮಾಗಾ ಕೇಲೇ ನಿರೂಪಣ । ಜೇಥೇ ಧರಾಭಾರ ಅಧರ್ಮಜನ । ನಿರ್ದಳೀ ಶ್ರೀಕೃಷ್ಣ ನಾನಾಯುಕ್ತಿ ॥೨೦೦॥

ಕಿವಿಗಳನ್ನು ಅಂತರ್ಮುಖಿಗೊಳಿಸಿ ಅಲ್ಲಿ ತನ್ನ ಮನವನ್ನಿಡಬೇಕು ಮತ್ತು ಲಕ್ಷಕ್ಕೆ ಎಚ್ಚರಗೊಳಿಸಿ ಕಥೆಯ ಅನುಸಂಧಾನವನ್ನು ಹಿಡಿಯಬೇಕು ॥೧೮೬॥ ದೇವರು ಅನೇಕ ಯುಗಗಳಲ್ಲಿ ಅನೇಕ ಅವತಾರಗಳನ್ನು ಧರಿಸಿರುವನು. ಆದರೆ ಶ್ರೀಕೃಷ್ಣನ ಅವತಾರದಲ್ಲಿನ ಚಮತ್ಕಾರಗಳು ಬಹು ವಿಶೇಷವಾಗಿವೆ. ಅಹೋ! ಶ್ರೀಹರಿಯ ಲೀಲೆಗಳು ಅತರ್ಕ್ಯವಾಗಿರುವುವು. ಇವುಗಳ ರಹಸ್ಯವು ದೇವತೆಗಳಿಗೂ ತಿಳಿಯಲಾರದು ॥೧೮೭॥ ಈತನು ಹುಟ್ಟಿದಾಕ್ಷಣವೇ ತನ್ನ ತಾಯೀಯಿಂದ ಬೇರೆಯಾದನು. ತಾನೇ ತನ್ನ ಲೀಲೆಯಿಂದಲೇ ಬೆಳೆದನು. ಈತನು ಬಾಲ್ಯದಲ್ಲಿಯೇ ಪೂತನಾದಿಕರಿಗೆ ಸ್ವತಃ ಮುಕ್ತಿಯ ವೈಭವವನ್ನು ಭೋಗಿಸಲು ಕೊಟ್ಟನು ॥೧೮೮॥ ತಾಯಿಗೆ ವಿಶ್ವರೂಪವನ್ನು ತೋರಿಸಿದನು. ಗೋಪಾಲಕರಿಗೆ ವೈಕುಂಠದ ಭೇಟಿ ಮಾಡಿಸಿದನು. ಹೀಗಿದ್ದರೂ ಗೌಳಿಗತನದ ಸ್ವರೂಪವನ್ನು ಯತ್‌ಕಿಂಚಿತವೂ ಬದಲಾಯಿಸಲಿಲ್ಲ ॥೧೮೯॥ ಬಾಲಕನಾಗಿರುವಾಗಲೇ ಬಹು ಬಲಾಢ್ಯರನ್ನು ವಧಿಸಿದನು. ಜಗತ್ತಿನ ಜನರಲ್ಲಿಯೇ ಅಚಾಟ ಕಾರ್ಯಗಳನ್ನು ಮಾಡಿ ತೋರಿಸಿದನು. ಹೀಗಿದ್ದರೂ ಬಾಲ್ಯದಿಂದ ತಿಲಮಾತ್ರವೂ ಹೊರಗಾಗಲಿಲ್ಲ ॥೧೯೦॥ ತಾನು ಸಾಕ್ಷಾತ್ ಪರಬ್ರಹ್ಮನಾಗಿದ್ದರೂ ಕಳ್ಳತನ ಮಾಡಿದನು. ದೇವನಾಗಿದ್ದರೂ ವ್ಯಭಿಚಾರ ಮಾಡಿದನು. ಹೆಂಡರು ಮಕ್ಕಳಿದ್ದರೂ ಬ್ರಹ್ಮಚಾರಿಯಾಗಿ ತೋರಿಸಿದನು ॥೧೯೧॥ ಅಧರ್ಮದಿಂದ ಧರ್ಮವನ್ನು ಬೆಳೆಸಿದನು. ಅಕರ್ಮದಿಂದ ಕರ್ಮವನ್ನು ಉದ್ಧರಿಸಿದನು. ನಿಯಮಗಳಿಲ್ಲದೇ ಅತ್ಯಂತ ದುರ್ಧರವಾದ ನಿಯಮಗಳ ಪಾಲನೆ ಮಾಡಿದನು ॥೧೯೨॥ ಈತನು ಸಂಗದಿಂದಲೇ ನಿಃಸಂಗತ್ವವನ್ನು ಸಂಪಾದಿಸಿದನು. ಭೋಗದಿಂದಲೇ ಯೋಗವನ್ನು ಬೆಳೆಸಿದನು. ತ್ಯಾಗವಿಲ್ಲದೇ ಅತ್ಯಂತ ಅವ್ಯಂಗವಾದ ಮತ್ತು ನಿರ್ದೋಷವಾದ ತ್ಯಾಗ ಮಾಡಿದನು ॥೧೯೩॥ ಕರ್ಮಠರಿಗೆ ಬೋಧವಾಗಬೇಕೆಂದು ಕರ್ಮಜಾಡ್ಯದ ಭೇದವನ್ನು ಮುರಿದು ಹಾಕಿದನು. ಮತ್ತು ಭೋಗದಲ್ಲಿ ಮೋಕ್ಷಪದ ಪ್ರಕಟಮಾಡಿದನು ॥೧೯೪॥ (ಭಕ್ತಿ, ಭುಕ್ತಿ ಮತ್ತು ಮುಕ್ತಿ ಇವು ಮೂರನ್ನೂ ಒಂದೇ ಪಂಕ್ತಿಯಲ್ಲಿ ಕೂಡ್ರಿಸಿದನು) ಅಹೋ! ಈತನ ಖ್ಯಾತಿಯನ್ನು ಏನೆಂದು ವರ್ಣಿಸಬೇಕು? ಈತನು ಮಣ್ಣನ್ನು ತಿಂದು ವಿಶ್ವರೂಪವನ್ನು ತೋರಿಸಿದನು ॥೧೯೫॥ ಹೀಗಿರುವ ಶ್ರೀಕೃಷ್ಣನ ಉತ್ತಮ ಹಾಗೂ ಪರಮ ಪವಿತ್ರವಾದ ಚರಿತ್ರೆಯನ್ನು ನಾನು ನಿನಗೆ ಹೇಳುವೆನು. ನಿಜವಾಗಿಯೂ ಈ ಅವತಾರದಲ್ಲಿಯೇ ಆತ್ಮಬೋಧೆಯ ಪೂರ್ಣ ವಿಸ್ತಾರ ಮಾಡಲಾಗಿದೆ. ಇದರಲ್ಲಿ ಯಾವ ಸಂಶಯವಿಲ್ಲ ॥೧೯೬॥ ಹನ್ನೊಂದನೆಯ ಸ್ಕಂಧದ ತಾತ್ಪರ್ಯದ ಆದಿ, ಅಂತ್ಯದಲ್ಲಿ ನಿಜಬೋಧೆಯನ್ನು ಕೆಲವುಕಡೆ ವಿಸ್ತಾರದಿಂದ ಇನ್ನು ಕೆಲವು ಕಡೆ ಸಂಕ್ಷಿಪ್ತವಾಗಿ ಪರಮಾತ್ಮ ಸ್ಥಿತಿಯನ್ನು ಹೇಳಲಾಗಿದೆ ॥೧೯೭॥ ಇಲ್ಲಿ ನಾರದರು ವಸುದೇವನಿಗೆ ನಿಮಿ - ಜಾಯಂತ ಸಂವಾದ ರೂಪದಲ್ಲಿ ಕಥಾಸಂಗತಿಯನ್ನು ಹೇಳಿದರು. ಇದು "ಸಂಕ್ಷೇಪ ಸ್ಥಿತಿ" ಯಾಗಿರುವುದು ॥೧೯೮॥ ಮತ್ತು ಶ್ರೀಕೃಷ್ಣನು ಉದ್ಧವನಲ್ಲಿ ಅತಿಶಯವಾಗಿ ಪ್ರೇಮವಿರುವುದರಿಂದ ಅನೇಕ ಪ್ರಕಾರದ ದೃಷ್ಟಾಂತಗಳಿಂದ ವಿಸ್ತಾರಮಾಡಿ ಸ್ವಮುಖದಿಂದ ಹೇಳಿದ ಜ್ಞಾನಕಥೆಯು "ವಿಸ್ತಾರಸ್ಥಿತಿ" ಯಾಗಿರುವುದು ॥೧೯೯॥ ದಶಮಸ್ಕಂಧದಲ್ಲಿ ಮೊದಲು ನಿರೋಧ ಲಕ್ಷಣಗಳನ್ನು ಹೇಳಿದೆ. ಅದರಲ್ಲಿ ಶ್ರೀಕೃಷ್ಣನು ಅನೇಕ ಯುಕ್ತಿಗಳಿಂದ ಅಧರ್ಮಿಜನರನ್ನು ಸಂಹಾರ ಮಾಡಿ ಭೂಭಾರವನ್ನು ಇಳಿಸಿದನು ॥೨೦೦॥

ಜ್ಯಾಂಚೇನಿ ಅಧರ್ಮಭಾರೇ ಕ್ಷಿತಿ । ಸದಾ ಆಕ್ರಂದತ ಹೋತೀ । ಜಿಚ್ಯಾ ಸಾಹ್ಯಾಲಾಗೀ ಶ್ರೀಪತಿ । ಪೂರ್ಣಬ್ರಹ್ಮಸ್ಥಿತಿ ಅವತರಲಾ ॥೨೦೧॥ ದುಷ್ಟ ದೈತ್ಯ ಆಣಿ ದಾನವ। ಧರಾಭಾರ ರಾಜೇ ಸರ್ವ । ವಧಿತಾ ಝಾಲಾ ಶ್ರೀಕೃಷ್ಣದೇವ । ತೋ ಗತಕಥಾಭಾವ ಶುಕ ಸಾಂಗೇ ॥೨೦೨॥

ಶ್ರೀ ಬಾದರಾಯಣಿರುವಾಚ :-

ಕೃತ್ವಾ ದೈತ್ಯವಧಂ ಕೃಷ್ಣಃ ಸರಾಮೋ ಯದುಭಿರ್ವೃತಃ । ಭುವೋಽವತಾರಯದ್ಭಾರಂ ಜವಿಷ್ಠಂ ಜನಯನ್ಕಲಿಮ್ ॥೧॥

ಅರ್ಥ:- ಶುಕಮುನಿಗಳು ಹೇಳಿದರು: ಬಲರಾಮ ಮತ್ತು ಯಾದವರೊಂದಿಗೆ ಶ್ರೀಕೃಷ್ಣನು ಪೂತನಾ, ಕಂಸ, ಶಿಶುಪಾಲ ಇತ್ಯಾದಿ ದೈತ್ಯರನ್ನು ಕೊಂದು ಹಾಗೂ ಕೌರವ - ಪಾಂಡವರಾದಿ ಇತರ ರಾಜರಲ್ಲಿ ಪರಸ್ಪರ ಭಯಂಕರ ಕಲಹವನ್ನು ನಿರ್ಮಿಸಿ ಭೂಭಾರವನ್ನು ಹಗುರಗೊಳಿಸಿದನು.

ಪೂರ್ಣಬ್ರಹ್ಮ ಸ್ವಯೇ ಶ್ರೀಕೃಷ್ಣ । ಬಳೀ ಬಳಿರಾಮ ಲೋಕರಮಣ । ನಿಧಡೇ ಯಾದವ ಮೇಳವೂನಿ ಜಾಣ । ದೈತ್ಯನಿರ್ದಳಣ ಶ್ರೀಕೃಷ್ಣೇ ಕೇಲೇ ॥೨೦೩॥ ಜೇ ಯಾದವಾಂಸಿ ನ ಯೇತ ವಧೀ । ತೇಥೇ ಶ್ರೀಕೃಷ್ಣ ಕರೀ ಬುದ್ಧಿ । ಸಖೇ ಸ್ವಜನ ಸ್ವಗೋತ್ರಮಧೀ । ಕಲಹ ಉತ್ಪಾದೀ ಅತಿಘೋರ ॥೨೦೪॥ ಉತರಾವಯಾ ಧರಾಭಾರ । ಕಲಹಮಿಸೇ ಶಾರಂಗಧರ । ಮಾರವೀ ಕೌರವಭಾರ । ಪಾಂಡುಕುಮಾರ ಕ್ಷೋಭವೂನಿ ॥೨೦೫॥

ಯೇ ಕೋಪಿತಾಃ ಸುಬಹು ಪಾಂಡುಸುತಾಃ ಸಪತ್ನೈರ್ದುರ್ದ್ಯೂತಹೇಲನಕಚಗ್ರಹಣಾದಿಭಿಸ್ತಾನ್ ।
ಕೃತ್ವಾ ನಿಮಿತ್ತಮಿತರೇತರತಃ ಸಮೇತಾನ್ ಹತ್ವಾ ನೃಪಾನ್ ನಿರಹರತ್ಕ್ಷಿತಿಭಾರಮೀಶಃ ॥೨॥

ಅರ್ಥ :- ಪಾಂಡವರ ಹುಟ್ಟು ಶತ್ರುಗಳಾದ ಕೌರವರು ಕಪಟ ಜೂಜಾಟದಿಂದ ದ್ರೌಪತಿಯ ಜಡೆ ಎಳೆಯುವುದು ಇತ್ಯಾದಿ ಅಪರಾಧಗಳನ್ನು ಮಾಡಿ ಪಾಂಡವರಿಗೆ ಕ್ರೋಧ ತಂದರು. ಇವರನ್ನು ನಿಮಿತ್ತ ಮಾಡಿ ಪರಸ್ಪರ ಕೂಡಿದ ರಾಜರನ್ನು ಯುದ್ಧದಲ್ಲಿ ಕೊಂದು ಶ್ರೀಕೃಷ್ಣನು ಭೂಭಾರವನ್ನು ಹಗುರಗೊಳಿಸಿದನು.

ದುಷ್ಟ ಅಕರ್ಮಿ ಅತಿಘೋರ । ಜ್ಯಾಂಚೀ ಸೇನಾ ಧರಾಭಾರ । ತೇ ವಧಾರ್ಥ ಕರಾವಯಾ ಏಕತ್ರ । ಕಲಹಾಚೇ ಸೂತ್ರ ಉಪಜವೀ ಕೃಷ್ಣ ॥೨೦೬॥ ಯೇಣೇ ಶ್ರೀಕೃಷ್ಣಸಂಕಲ್ಪೋದ್ದೇಶೇ । ಹೋ ಸರಲೇ ಕಪಟಫಾಂಸೇ । ತೇಣೇ ಕಪಟೇ ಬಾಂಧೂನ ಕೈಸೇ । ವಧವೀ ಅನಾಯಾಸೇ ಕೌರವಭಾರ ॥೨೦೭॥ ಜಗೀ ದ್ಯೂತ ಖೇಳಿಜೇ ದುಷ್ಟೇ । ತೇಹೀ ಆರಂಭಿಲೇ ಕಪಟೇ । ಧರ್ಮಾವರೀ ಫಾಂಸೇ ಖೋಟೇ । ಘಾಲಿತೀ ಹಟೇ ದುರ್ಬುದ್ಧಿ ॥೨೦೮॥ ಬಾಳೆಭೋಳೇ ಅಜ್ಞಾನ ಜನೀ । ತೇಹೀ ಗಾಂಜಿತೀ ನಾ ಧರ್ಮಪತ್ನೀ । ತೇ ಸಾಚಚಿ ಧರ್ಮಾಚೀ ಮಾನಿನೀ । ಆಣಿಲೀ ಬಾಂಧೋನೀ ಸಭೇಮಾಜೀ ॥೨೦೯॥ ದುಃಶಾಸನೇ ಧರಿಲೇ ವೇಣೀಕಚ । ತೇಣೇಂಚಿ ವಾಢಲೀ ಕಚಕಚ । ತೇ ಕರ್ಮ ತ್ಯಾಚೇ ತ್ಯಾಸೀಚ । ಭಂವಲೇ ಸಾಚ ತ್ಯಾಭೋವತೇ ॥೨೧೦॥

ಅಧರ್ಮದ ಭಾರದಿಂದ ಪೃಥ್ವಿದೇವಿಯು ಸದಾ ಆಕ್ರೋಶ ಮಾಡುತ್ತಿದ್ದಳು. ಈಕೆಯ ಸಹಾಯಕ್ಕಾಗಿ ಪೂರ್ಣಬ್ರಹ್ಮ ಭಗವಾನನು ಶ್ರೀಕೃಷ್ಣ ರೂಪದಲ್ಲಿ ಅವತರಿಸಿದನು ॥೨೦೧॥ ಭೂಭಾರರಾಗಿದ್ದ ದುಷ್ಟ ದೈತ್ಯ ಹಾಗೂ ದಾನವ ರಾಜರನ್ನು ಶ್ರೀಕೃಷ್ಣದೇವನು ವಧಿಸಿದನು. ಈ ಹಿಂದಿನ ಕಥೆಯ ಸಾರಾಂಶವನ್ನು ಶ್ರೀಶುಕರು ಮುಂದೆ ಹೇಳುತ್ತಿದ್ದಾರೆ ॥೨೦೨॥

ಪೂರ್ಣಬ್ರಹ್ಮನಾದ ಪರಮೇಶ್ವರನು ಶ್ರೀಕೃಷ್ಣರೂಪವನ್ನು ಧರಿಸಿ ಮೃತ್ಯುಲೋಕದಲ್ಲಿ ಅವತರಿಸಿದನು. ಬಲರಾಮನ ಜೊತೆಗೂಡಿ ಯಾದವರನ್ನು ಕೂಡಿಸಿದನು ಮತ್ತು ದೈತ್ಯರ ವಧೆ ಮಾಡಿದನು ॥೨೦೩॥ ಯಾದವರಿಂದ ಕೊಲ್ಲಲಾರದ ಬಲಾಢ್ಯರಾಜರನ್ನು ಪರಸ್ಪರ ಸಂಬಂಧದಿಂದ ಮತ್ತು ಮಹಾಯುಕ್ತಿಯಿಂದ ಪರಸ್ಪರರಲ್ಲಿ ಕಲಹ ಹಚ್ಚಿಸಿದನು ॥೨೦೪॥ ಮತ್ತು ಪೃಥ್ವಿಯ ಭಾರವನ್ನು ಇಳಿಸುವುದಕ್ಕಾಗಿ ಪಾಂಡವರಿಗೆ ಕೋಪ ಹುಟ್ಟಿಸುವಂತೆ ಮಾಡಿ ಕಲಹದ ನಿಮಿತ್ತದಿಂದ ಅವರ ಕೈಯಿಂದಲೇ ಕೌರವರ ನಾಶ ಮಾಡಿಸಿದನು ॥೨೦೫॥

ಘೋರಕರ್ಮ ಮಾಡುವ ದುಷ್ಟರ ಸೇನೆಯು ಭೂಮಿಗೆ ಭಾರವಾಗಿರುವುದು. ಇವರ ಸಂಹಾರ ಮಾಡುವುದಕ್ಕಾಗಿ ಎಲ್ಲರನ್ನೂ ಒಂದೆಡೆ ಕೂಡಿಸಿ ಭೂಮಿಯ ಭಾರವನ್ನು ಇಳಿಸಬೇಕೆಂದು ಶ್ರೀಕೃಷ್ಣನು ಕಲಹದ ನಿಮಿತ್ತವನ್ನು ನಿರ್ಮಿಸಿದನು ॥೨೦೬॥ ಶ್ರೀಕೃಷ್ಣನ ಈ ಸಂಕಲ್ಪಾನುಸಾರವಾಗಿಯೇ ಕಪಟದ ಜಾಲಗಳು ನಿರ್ಮಾಣವಾದವು. ಅದೇ ಕಪಟತನದಿಂದ ಕೌರವರ ಸಮುದಾಯವನ್ನು ಅನಾಯಾಸವಾಗಿ ಕೊಲ್ಲಲ್ಪಟ್ಟಿತು ॥೨೦೭॥ ಜಗತ್ತಿನಲ್ಲಿ ಜೂಜಾಟವನ್ನು ದುಷ್ಟ ಜನರು ಆಡುತ್ತಿರುವರು. ಅದರಲ್ಲಿ ಈ ಜೂಜಿನ ಆರಂಭವು ಕಪಟತನದಿಂದಾಯಿತು. ಯಾವ ಈ ಕೌರವರು ತಿಳಿದೂ ತಿಳಿದೂ ಧರ್ಮರಾಜನ ಮೇಲೆ ಕಪಟದ ಜಾಲಗಳನ್ನು ಒಗೆದರು ॥೨೦೮॥ ಸಾದಾ, ಭೋಳೆ ಹಾಗೂ ಒರಟು ಜನರು ಸಹ ಧರ್ಮಪತ್ನಿಯನ್ನು ಪೀಡಿಸುವುದಿಲ್ಲ. ಆದರೆ ದ್ರೌಪತಿಯು ಕೇವಲ ಧರ್ಮದ ಪತ್ನಿಯಾಗಿದ್ದಳು. ಈಕೆಗೆ ಕೌರವರು ಸಭೆಯಲ್ಲಿ ಕಟ್ಟಿ ತಂದರು ॥೨೦೯॥ ದುಃಶಾಸನನು ಈಕೆಯ ಜಡೆಯನ್ನು ಹಿಡಿದೆಳೆದನು. ಇದರಿಂದ ಸಂಘರ್ಷವು ಬೆಳೆಯಿತು. ನಿಜವಾಗಿಯೂ ಇದರ ಈ ಕರ್ಮವೇ ಇವರಿಗೆ ಹಾನಿಯುಂಟು ಮಾಡಿತು ॥೨೧೦॥

ವನೀ ಕೋಣೀ ಕೋಣಾ ನಾಗವೀ । ತೋ ನಾಗೋವಾ ರಾಜಾ ಆಣವೀ । ಸಭೇಸಿ ರಾಜಾ ಉಗಾಣವೀ । ತೈ ಮೃತ್ಯೂಚೀ ಪದವೀ ಮಸ್ತಕಾ ಆಲೀ ।೨೧೧॥ ಅನ್ಯಾಯೇವೀಣ ನಾಗವೀ ರಾವೋ । ತೈ ಧಾಂವಣೆಯಾ ಧಾಂವೇ ದೇವೋ । ದ್ರೌಪದೀವಸ್ತ್ರಹರಣ ಪಾಹಾ ಹೋ । ಹಾ ಮುಖ್ಯ ಅನ್ಯಾವೋ ಕೌರವಾ ।೨೧೨॥ ಅಗ್ನಿದಾನೇ ಗರದಾನೇ । ಧನದಾರಾ ಅಪಹಾರಣೇ । ಘಾಲಾ ಘಾಲೂನಿ ಮಾರಣೇ । ಶಸ್ತ್ರಪಾಣೀ ಹೋಣೇ ವಧಾರ್ಥ ।೨೧೩॥ ಅವಜ್ಞಾ ಆಣಿ ಹೇಳಣ। ದುರುಕ್ತೀ ಜೇ ಧರ್ಮಛಳಣ। ಹೇಂಚಿ ನಿಮಿತ್ತಾಸೀ ಕಾರಣ। ಕೇಲೇ ಸಂಪೂರ್ಣ ಶ್ರೀಕೃಷ್ಣೇ।೨೧೪॥ ಪತಿವ್ರತೇಚೇ ವಸ್ತ್ರಹರಣ । ತೇಣೇ ತತ್ಕಾಳ ಪಾವೇ ಮರಣ। ಹೇಂಚಿ ಕಲಹಾಚೇ ಕಾರಣ। ಕುಳನಿರ್ದಳಣ ಯೇಣೇ ಕರ್ಮೇ।೨೧೫॥ ಐಸಾ ಜೋ ಧರ್ಮಾಚಾ ವಿರೋಧೀ । ತ್ಯಾಸೀ ದೇವೋ ಅವಶ್ಯ ವಧೀ । ಯಾಲಾಗೀ ಪಾಂಡವಾಂಚಿಯೇ ಬುದ್ಧೀ। ಅತ್ಯುಗ್ರ ತ್ರಿಶುದ್ಧೀ ಉಪಜವೀ ಕೋಪು।।೨೧೬।। ಭೂಭಾರಹರಣ ಚರಿತ್ರ। ಸಖೇ - ಸ್ವಜನ - ಸುಹೃದ - ಸ್ವಗೋತ್ರ। ಶಾಸ್ತ್ರವಿವೇಕೀ ಅತಿಪವಿತ್ರ। ತ್ಯಾಮಾಜೀ ವಿಚಿತ್ರ ಉಪಜವೀ ಕಲಹೋ।೨೧೭॥ ಧರಾಭಾರ ಹರಾವಯಾ ಗೋವಿಂದು। ಕಳವಳಿಯಾಚೇ ಸಖೇ ಬಂಧು। ಕರವಿಲಾ ತೇಥ ಗೋತ್ರವಧು। ಸಾಹ್ಯ ಸಂಬಂಧು ರಾಜಭಾರೇಸಿ।೨೧೮॥

ಭೂಭಾರರಾಜಪೃತನಾ ಯದುಭಿರ್ನಿರಸ್ಯ ಗುಪ್ತೈಃಸ್ವಬಾಹುಭಿರಚಿಂತಯದಪ್ರಮೇಯಃ ।
ಮನ್ಯೇಽವನೇರ್ನನು ಗತೋಽಪ್ಯಗತಂ ಹಿ ಭಾರಂ ಯದ್ಯಾದವಂ ಕುಲಮಹೋ ಅವಿಷಹ್ಯಮಾಸ್ತೇ ।೧೬॥

ಅರ್ಥ: ಪ್ರತ್ಯಕ್ಷ, ಅನುಮಾನ,ಶಬ್ದ ಇತ್ಯಾದಿ ಯಾವ ಪ್ರಮಾಣಕ್ಕೂ ವಿಷಯನಾಗಲಾರದ ಭಗವಾನ ಶ್ರೀಕೃಷ್ಣನು ಭಾರಭೂತರಾದ ರಾಜಸೈನ್ಯದ ನಾಶ ಮಾಡಿ ಮನದಲ್ಲಿ ಹೀಗೆ ವಿಚಾರಿಸಿದನು.ತನ್ನ ಬಾಹು ಬಲದಿಂದ ರಕ್ಷಿತರಾದ ಯಾದವರಿಂದ ಭೂಮಿಗೆ ಭಾರಭೂತವಾಗಿದೆ. ಈಗ ಭೂಭಾರವು ಇಳಿದಿದ್ದರೂ ಸಂಪೂರ್ಣವಾಗಿ ಇಳಿಸಿದೆ ಎಂದು ನನಗೆ ಅನಿಸುವುದಿಲ್ಲ. ಏಕೆಂದರೆ ಪ್ರಸಿದ್ಧವಾದ ಯಾದವ ಕುಲವು ಇನ್ನೂ ಭೂಲೋಕದಲ್ಲಿಯೇ ಇದೆ.

ಐಸೇ ಪಕ್ಷಪಾತೀ ರಾಜೇ ಅಪಾರ । ಅಮಿತ ಸೇನಾ ಧರಾಭಾರ । ಮಾರವಿಲೇ ಅಧರ್ಮಕರ । ಮಿಷಾಂತರ ಕಲಹಾ ಚೇ ।೨೧೯॥ ಪೃಥ್ವೀಚೇ ಅಧರ್ಮಸೇನಾಸಂಭಾರ। ಶೋಧಶೋಧೂನಿ ರಾಜೇ ಮಾರಿಲೇ ಅಪಾರ। ತರ್ಹೀ ಉತರಲಾ ಧರಾಭಾರ। ಹೇ ಶಾರಂಗಧರ ನ ಮನೀಚಿ।೨೨೦॥ ಯಾದವ ಕರೂನ ಅತುರ್ಬಳ। ನಾನಾ ದುಷ್ಟ ದಮಿಲೇ ಸಕಳ। ಪರೀ ಯಾದವ ಝಾಲೇ ಅತಿಪ್ರಬಳ। ಹೇ ನ ಮನೀಚ ಕೇವಳ ಶ್ರೀಕೃಷ್ಣ।೨೨೧॥ ನಷ್ಟತಾ ಯಾದವಾಂಚೇ ನಿದಾನ। ನುತರೇ ಧರಾಭಾರ ಸಂಪೂರ್ಣ। ಐಸೇ ಮಾನಿತಾ ಝಾಲಾ ಶ್ರೀಕೃಷ್ಣ। ಕುಲನಿರ್ದಳಣ ಕೋ ಚಿಂತೀ।೨೨೨॥

ಅರಣ್ಯದಲ್ಲಿ ಕಳ್ಳನು ಯಾರನ್ನಾದರೂ ಸುಲಿಗೆ ಮಾಡಿದರೆ ರಾಜನು ಅವನಿಗೆ ಹಿಡಿದು ದಂಡಿಸುವನು. ಒಂದು ವೇಳೆ ತುಂಬಿದ ಸಭೆಯಲ್ಲಿ ರಾಜನೇ ಸುಲಿಗೆ ಮಾಡಲು ಹೊರಟರೆ ಅವನಿಗೆ ಮರಣವೇ ಒದಗಿಬಂತೆನ್ನಬೇಕು ।೨೧೧॥ ಅನ್ಯಾಯವಿಲ್ಲದೇ ರಾಜನೇ ಲೂಟಿ ಮಾಡಲು ಹೊರಟರೆ ಅಲ್ಲಿ ದೇವರು ಧಾವಿಸುವನು. ದ್ರೌಪದಿಯ ವಸ್ತ್ರಹರಣವು ಇದೇ ಕೌರವರ ಮುಖ್ಯವಾದ ಅನ್ಯಾಯವಾಗಿತ್ತು ।೨೧೨॥ ಬೆಂಕಿ ಹಚ್ಚುವುದು, ವಿಷಹಾಕಿ ಕೊಲ್ಲುವುದು, ದ್ರವ್ಯವನ್ನು ಹಾಗೂ ಸ್ತ್ರೀಯನ್ನು ಅಪಹರಿಸುವುದು, ಹೊಡೆದು ಕೊಲ್ಲುವುದು, ಕೊಲ್ಲುವುದಕ್ಕಾಗಿ ಕೈಯಲ್ಲಿ ಶಸ್ತ್ರ ಧರಿಸುವುದು ।೨೧೩॥ ಆಜ್ಞಾಭಂಗ, ಅಪಮಾನ, ದುರುಕ್ತಿ, ಧರ್ಮವಿರೋಧ ಇವೆಲ್ಲವನ್ನೂ ಶ್ರೀಕೃಷ್ಣನು ನಿಮಿತ್ತಕ್ಕೆ ಕಾರಣ ಮಾಡಿದನು ।೨೧೪॥ ಪತಿವ್ರತೆಯ ವಸ್ತ್ರಾಹರಣದಿಂದ ತತ್ಕಾಲದಲ್ಲಿ ಮರಣವಾಗುವುದು. ಇದುವೇ ಕಲಹದ ಕಾರಣವಾಯಿತು ಮತ್ತು ಇದೇ ಕಾರಣದಿಂದ ಸಂಪೂರ್ಣ ಕುಲದ ಧ್ವಂಸವಾಯಿತು ।೨೧೫॥ ಈ ಪ್ರಕಾರವಾಗಿ ಧರ್ಮದ ವಿರೋಧ ಮಾಡುವವರಿಗೆ ದೇವರು ನಿಶ್ಚಿತವಾಗಿ ವಧಿಸುವನು. ಆದ್ದರಿಂದ ಈತನು ಪಾಂಡವರ ಮನದಲ್ಲಿ ಅತ್ಯಂತ ಭಯಂಕರವಾದ ಕ್ರೋಧವನ್ನು ಹುಟ್ಟಿಸಿದನು ।೨೧೬॥ ಪರಮಾತ್ಮನಿಗೆ ಭೂಮಿಯ ಭಾರವನ್ನು ಹಗುರಗೊಳಿಸಬೇಕಾಗಿತ್ತು. ಆದ್ದರಿಂದ ಈತನು ಆಪ್ತೇಷ್ಟರಲ್ಲಿ, ಇಷ್ಟಮಿತ್ರರಲ್ಲಿ, ಅಣ್ಣತಮ್ಮಂದಿರಲ್ಲಿ, ಶಾಸ್ತ್ರ ತಿಳಿದವರಲ್ಲಿ ಹೀಗೆ ಪವಿತ್ರ ಜನರಲ್ಲಿಯೂ ವಿಚಿತ್ರವಾದ ಕಲಹವನ್ನು ನಿರ್ಮಿಸಿದನು ।೨೧೭॥ ಪೃಥ್ವಿಯ ಭಾರವನ್ನು ಇಳಿಸುವುದಕ್ಕಾಗಿ ಶ್ರೀಕೃಷ್ಣನು ಕಳಕಳಿಯ ಸ್ನೇಹಿತ ಬಂಧುಗಳನ್ನು, ಸಹಾಯಕ್ಕೆ ಬಂದ ರಾಜರ ಸೈನ್ಯವನ್ನು ನಾಶಗೊಳಿಸಿ ಗೋತ್ರವಧೆ ಮಾಡಿಸಿದನು ।೨೧೮॥

ದುಷ್ಟರನ್ನು ಬೆಂಬಲಿಸುವವರನ್ನು ಮತ್ತು ಅಧರ್ಮಾಚರಣೆ ಮಾಡುವವರನ್ನು ಹಾಗೂ ಕೇವಲ ಭೂಮಿಗೆ ಭಾರವಾದ ಅಸಂಖ್ಯಾತ ರಾಜರನ್ನು ಹಾಗೂ ಅವರ ಸೈನ್ಯವನ್ನು ಸಂಹರಿಸಲಾಯಿತು. ಕಲಹವು ಕೇವಲ ನಿಮಿತ್ತಮಾತ್ರವಾಗಿತ್ತು ।೨೧೯॥ ಭೂಲೋಕದಲ್ಲಿ ಅಧರ್ಮಾಚರಣೆಯ ರಾಜರನ್ನು ಮತ್ತು ಅವರ ಸೈನ್ಯವನ್ನು ಶೋಧಿಸಿ, ಶೋಧಿಸಿ ಸಂಹರಿಸಲಾಯಿತು. ಆದರೂ ಸಹ ಪೃಥ್ವಿಯ ಭಾರವು ಕಡಿಮೆಯಾಗಿದೆ ಎಂದು ಶ್ರೀಕೃಷ್ಣನಿಗೆ ಅನಿಸಲಿಲ್ಲ ।೨೨೦॥ ಯಾದವರನ್ನು ಬಾಲಾಢ್ಯಗೊಳಿಸಿ ಅಸಂಖ್ಯಾತ ದುಷ್ಟರನ್ನು ಸಂಹರಿಸಿದನು. ಆದರೆ ಈ ಯಾದವರು ಈಗ ಅವಿಚಾರಗಳಿಂದ ತಲೆಭಾರರಾದದ್ದು ಶ್ರೀಕೃಷ್ಣನಿಗೆ ಯೋಗ್ಯವೆನಿಸಲಿಲ್ಲ ।೨೨೧॥ ಆದ್ದರಿಂದ ಯಾದವರ ಸಮೂಲ ನಾಶವಾಗದೇ ಪೃಥ್ವಿಯ ಭಾರವು ಕಡಿಮೆಯಾಗಲು ಶಕ್ಯವಿಲ್ಲ ಎಂದು ಶ್ರೀಕೃಷ್ಣನು ಮನದಲ್ಲಿ ಅರಿತುಕೊಂಡು, ಈ ಯಾದವ ಕುಲವು ಹೇಗೆ ನಷ್ಟಗೊಳಿಸಬೇಕೆಂದು ಚಿಂತನೆ ನಡೆಸಿದನು ।೨೨೨॥

ಅಗ್ನಿ ಕರ್ಪೂರ ಖಾವೂನಿ ವಾಢೇ। ಕಾಪುರಾಂತೀ ಅಗ್ನಿ ಹೀ ಉಡೇ। ತೈಸೇ ಯಾದವಾಂಚೇ ಅತಿಗಾಢೇ। ಆಲೇ ರೋಕಡೇ ನಿದಾನ।೨೨೩॥ ಕೇಳಿ ಫಳೇ ತಂವ ವಾಢೇ ವಾಢೀ। ಫಳಪಾಕೇ ಮಾಳೀ ಝಾಡ ತೋಡೀ । ತೈಶೀ ಯಾದವಕುಳಾಚೀ ಶೀಗಗಾಢೀ । ಚಢೇ ರೋಕಡೀ ಮರಾಣಾರ್ಥ ।೨೨೪॥ ಫಳ ಪರಿಪಾಕೇ ಪರಿಮಳೀ । ತೇ ಫೇಉೂನ ಜಾಯ ಮಾಳೀ । ತೈಶೀ ಸ್ವಕುಳಫಳೇ ವನಮಾಳೀ । ನ್ಯಾವಯಾ ತತ್ಕಾಳೀ ಸ್ವಯೇ ಇಚ್ಛೀ ।೨೨೫॥ ಅನಂತಬಾಹು ಪ್ರತಾಪೇ । ಯಾದವ ವಾಢಲೇ ಶ್ರೀ ಕೃಷ್ಣಕೃಪೇ । ತೋಚಿ ನಿಧಾನಾಚೇನಿ ಸಂಕಲ್ಪೇ । ಕಾಳರೂಪೇ ಕ್ಷೋಭಲಾ ।೨೨೬॥ ಅತುರ್ಬಳ ಅತಿಪ್ರಬಳ । ವಾಢಲೇ ಜೇ ಯಾದವಕುಳ । ತೇ ವೀರ ದೇಖೋನಿ ಸಕಳ । ಅಸಹ್ಯ ಕೇವಳ ಶ್ರೀಕೃಷ್ಣಾಸೀ ।೨೨೭॥

ನೈವಾನ್ಯತಃಪರಿಭವೋಽಸ್ಯ ಭವೇತ್ ಕಥಂಚಿನ್ಮತ್ಸಂಶ್ರಯಸ್ಯ ವಿಭವೋನ್ನಹನಸ್ಯ ನಿತ್ಯಮ್ ।
ಅಂತಃಕಲಿಂ ಯದುಕುಲಸ್ಯ ವಿಧಾಯ ವೇಣುಸ್ತಂಬಸ್ಯ ವಹ್ನಿಮಿವ ಶಾಂತಿಮುಪೈಮಿ ಧಾಮ ॥೪॥

ಅರ್ಥ:- ಯಾದವ ಕುಲದಲ್ಲಿ ಸರ್ವರೂ ಉನ್ಮತ್ತರಾಗಿರುವರು. ಆದ್ದರಿಂದ ಇವರ ಸಂಹಾರವನ್ನು ನನಗೆ ಮಾಡಬೇಕಾಗಿದೆ. ಯಾವ ಪ್ರಕಾರವಾಗಿ ಬಿದುರಿನ ಗುಂಪಿನಲ್ಲಿ ಪರಸ್ಪರ ತಿಕ್ಕಾಟದಿಂದ ಅಗ್ನಿಯು ಹುಟ್ಟಿ ಎಲ್ಲವನ್ನೂ ಸುಟ್ಟು ಹಾಕುವಂತೆ, ನಾನೂ ಸಹ ಯಾದವ ಕುಲದಲ್ಲಿ ಪರಸ್ಪರರಿಂದ ಕಲಹ ಅಗ್ನಿ ಹುಟ್ಟಿಸಿ ಅವರನ್ನು ಸಂಹರಿಸಿ, ಶಾಂತನಾಗಿ ತದನಂತರ ನಾನು ವೈಕುಂಠಧಾಮಕ್ಕೆ ಸೇರುವೆ.

ಮಜ ಗೇಲಿಯಾ ನಿಜಧಾಮಾ । ಹೇಚಿ ಪ್ರವರ್ತತೀ ಅಧರ್ಮಾ । ಶ್ರಿಯೋನ್ನತ ಅತಿಗರ್ವ ಮಹಿಮಾ । ಮುಖ್ಯ ಅಕರ್ಮಾ ನಿಜಹೇತು ।೨೨೮॥ ಹೇ ಮದ್ಬಳೇ ಅತಿಪ್ರಬಳ । ಅತಿರಥೀ ಝಾಲೇ ಸಕಳ । ಯಾಂಸಿ ಅಪ್ರತಿಮಲ್ಲ ದಿಗ್ಮಂಡಳ । ಯಾಂತೇ ದಮಿತಾ ಕೇವಳ ಮೀ ಏಕು ।೨೨೯॥ ಹೇ ನಾಟೋಪತಿ ಇಂದ್ರಾದಿ ದೇವಾ। ದೈತ್ಯ-ರಾಕ್ಷಸಾ ಕಾ ದಾನವಾ । ಶೇಖೀ ನಿರ್ದಾಳಾವಯಾ ಯಾದವಾ । ಮಾಗುತೇ ಮಜ ತೇಂವ್ಹಾ ಪಡೇಲ ಯೇಣೇ ।೨೩೦॥ ತರೀ ಆತಾಂಚಿ ಆಪುಲೆ ದಿಠೀ । ಕುಳ ಬಾಂಧೂ ಕಾಳಗಾಂಠೀ । ಐಸಾ ವಿಚಾರ ಜಗಜೇಠೀ। ನಿಶ್ಚಯೇ ಪೋಟೀ ದೃಢ ಕೇಲಾ।೨೩೧॥ ಯದುವಂಶ-ವಂಶಜಾಳೀ । ವಾಢಲೀ ಶ್ರೀಕೃಷ್ಣ ಕೃಪಾಜಳೀ। ತೇಥೇ ಅವಕೃಪೇಚಿ ಇಂಗಳೀ । ಋಷಿಶಾಪಮೇಳೀ ಕಪಟೇ ಪಡಲೀ ।೨೩೨॥ ತೇ ಮುಳೀ ಪೇಟಲೀ ಶ್ರೀಕೃಷ್ಣಸಂಕಲ್ಪೇ। ಧಡಾಡಲೀ ಬ್ರಹ್ಮಶಾಪೇ । ತೇ ಸ್ವಜನವಿರೋಧರೂಪೇ । ಕಾಳಾಗ್ನಿ ಕೋಪೇ ನಾಶೀಲ ।೨೩೩॥ ಐಸೇ ಯಾದವಕುಳ ನಿರ್ದಳಣ । ಕರೂನಿಯಾ ಸ್ವಯೇ ಶ್ರೀಕೃಷ್ಣ । ನಿರಸೂನಿ ನಿಜಧಾಮಾ ಗಮನ । ಸ್ವಲೀಲಾ ಆಪಣ ಕರೂ ಇಚ್ಛೀ ।೨೩೪॥

ಕರ್ಪೂರಕ್ಕೆ ಅಗ್ನಿ ಹಚ್ಚಲು ಅಗ್ನಿಯು ಕರ್ಪೂರಕ್ಕೆ ಸುಡುತ್ತ ಸ್ವತಃ ತಾನು ಹೆಚ್ಚಿಗೆ ಪ್ರಜ್ವಲಿಸುವುದು. ಆದರೆ, ಕರ್ಪೂರವು ಮುಗಿದನಂತರ ಅಗ್ನಿಯು ಶಾಂತವಾಗುವುದು. ಅದರಂತೆ ದುಷ್ಟರ ಸಂಹಾರಕ್ಕಾಗಿ ಶ್ರೀಕೃಷ್ಣನು ಯಾದವರ ಸಾಮರ್ಥ್ಯವನ್ನು ಬೆಳೆಸಿದ್ದನು. ಈ ಕಾರ್ಯವು ಮುಗಿಯುತ್ತಲೇ ಅವರ ಮರಣವು ನಿಶ್ಚಿತವಾಗಿ ಬಂದು ನಿಂತಿದೆ ।೨೨೩॥ ಬಾಳೆಯು ಪುಷ್ಪವಾಗಿ ಬೆಳೆದು ಫಲಕೊಟ್ಟ ಮೇಲೆ ಆ ಬಾಳೆಯನ್ನು ಬೆಳೆಸಿದ ತೋಟಗಾರನೇ ಅದನ್ನು ಮುರಿದು ಹಾಕುವನು. ಅದರಂತೆ ಯಾದವ ಕುಲವು ಇಷ್ಟೊಂದು ಬೆಳೆದು ಪುಷ್ಪಗೊಂಡಿದ್ದು ಮರಣಕ್ಕಾಗಿಯೇ ।೨೨೪॥ ತೋಟದಲ್ಲಿ ಫಲಗಳು ಮಾಗಿ ಸುಗಂಧ ಬೀರಲು, ತೋಟಿಗನು ಅವುಗಳನ್ನು ಬಜಾರಕ್ಕೆ ಒಯ್ಯುವನು. ಅದರಂತೆಯೇ ತನ್ನ ಕುಲದ ಫಲಗಳನ್ನು ತಾನೇ ಒಯ್ಯಬೇಕೆಂಬ ವಿಚಾರವು ಶ್ರೀಕೃಷ್ಣನ ಮನದಲ್ಲಿ ನಿರ್ಮಾಣವಾಯಿತು ।೨೨೫॥ ಶ್ರೀಕೃಷ್ಣನ ಕೃಪೆಯಿಂದಲೇ ಯಾದವರು ಇಷ್ಟೊಂದು ಬಲಾಢ್ಯರಾಗಿದ್ದರು. ಆದರೆ, ಈಗ ಅದೇ ಕೃಷ್ಣನು ಇವರನ್ನು ನಾಶಗೊಳಿಸಲು ಕಾಲರೂಪದಿಂದ ಕ್ಷುಬ್ಧನಾಗಿರುವನು ।೨೨೬॥ ಯಾದವರ ಕುಲವು ಅತ್ಯಂತ ಪ್ರಬಲವಾಗಿತ್ತು. ಇವರನ್ನು ಮೀರಿಸುವ ಬಲಾಢ್ಯರೇ ಇರಲಿಲ್ಲ. ಈ ಎಲ್ಲ ವೀರರನ್ನು ಕಂಡು ಶ್ರೀಕೃಷ್ಣನು ಕೇವಲ ಅಸಹ್ಯಪಟ್ಟನು ।೨೨೭॥

ನಾನು ನಿಜಧಾಮಕ್ಕೆ ಹೋದೆನೆಂದರೆ, ಇದೇ ಯಾದವರು ಅಧರ್ಮಿಗಳಾಗುವರು ಸಂಪತ್ತಿನಿಂದ ಹುಟ್ಟುವ ಗರ್ವದ ಮಹಿಮೆಯು ಭಯಂಕರ ವಿಚಿತ್ರವಾಗಿದೆ. ಧನದ ಮದವೇ ಸರ್ವ ದುರಾಚಾರಗಳ ಪ್ರಮುಖ ಕಾರಣವಾಗಿರುವುದು।೨೨೮॥ ಇವರು ನನ್ನ ಬಲದಿಂದಲೇ ಅತ್ಯಂತ ಬಲಾಢ್ಯರಾಗಿರುವರು. ಇವರನ್ನು ಎದುರುಸುವವರು ಈ ಭೂಮಂಡಲದಲ್ಲಿ ಯಾರೂ ಉಳಿದಿರುವುದಿಲ್ಲ. ಇವರ ಗರ್ವವನ್ನು ನಾನು ಮಾತ್ರ ಇಳಿಸಬಲ್ಲೆ।೨೨೯॥ ಇಂದ್ರಾದಿ ದೇವತೆಗಳು, ದೈತ್ಯರು, ರಾಕ್ಷಸರು, ದಾನವರು ಇತ್ಯಾದಿಕರಿಂದಲೂ ಇವರು ಯಾರಿಗೂ ಬಗ್ಗಲಾರರು. ಆದ್ದರಿಂದ ಇವರನ್ನು ನಾಶಗೊಳಿಸಲು ನನಗೆ ಪುನಃ ಅವತಾರಕ್ಕೆ ಬರಬೇಕಾಗುವುದು।೨೩೦॥ ಆದ್ದರಿಂದ ಈಗಲೇ ನನ್ನ ಕಣ್ಮುಂದೆಯೇ ನನ್ನ ಎಲ್ಲ ಕುಲವನ್ನು ಕಾಲನ ಮುಖದಲ್ಲಿ ಕೊಡಬೇಕೆಂದು ಶ್ರೀಕೃಷ್ಣನು ಮನದಲ್ಲಿ ವಿಚಾರಿಸಿ ಯಾದವರ ಮರಣದ ದೃಢ ನಿರ್ಧಾರವನ್ನು ಮಾಡಿದನು।೨೩೧॥ ಯದುವಂಶ ಸಮೂಹವು ಶ್ರೀ ಕೃಷ್ಣ ಕೃಪೆಯಿಂದಲೇ ಬೆಳೆದಿತ್ತು. ಆದರೆ ಯಾದವರ ಕಪಟ ಆಚರಣೆಯಿಂದ ಇವರಿಗೆ ಋಷಿಗಳ ಶಾಪವಾಗಿ ಭಗವಂತನ ಅವಕೃಪೆಯ ಬೆಂಕಿಕಿಡಿಯು ಅದರಲ್ಲಿ ಬಿದ್ದಿತು।೨೩೨॥ ಶ್ರೀ ಕೃಷ್ಣನ ಸಂಕಲ್ಪದಂತೆ ಆ ಬೆಂಕಿಕಿಡಿಯಿಂದ ಸಮೂಲವಾಗಿ ಉರಿ ಹತ್ತಿಕೊಂಡಿತು. ಬ್ರಾಹ್ಮಣರ ಶಾಪದಿಂದ ಆ ಅಗ್ನಿಯು ಭಡಕಾಯಿಸಿತು. ಅದೀಗ ಸ್ವಜನರ ವಿರೋಧರೂಪದಿಂದ ಮತ್ತು ಕಾಳಾಗ್ನಿಯ ಕೋಪದಿಂದ ಸರ್ವರ ನಾಶಕ್ಕೆ ಕಾರಣವಾಗುವುದು।೨೩೩॥ ಈ ಪ್ರಕಾರವಾಗಿ ಯಾದವ ಕುಲದ ಸಂಹಾರಮಾಡಿ ಶ್ರೀ ಕೃಷ್ಣನು ತನ್ನ ನಿಜಧಾಮಕ್ಕೆ ಹೋಗುವ ಇಚ್ಚೆ ಮಾಡಿದನು।೨೩೪॥

ಏವಂ ವ್ಯವಸಿತೋ ರಾಜನ್ ಸತ್ಯ ಸಂಕಲ್ಪ ಈಶ್ವರಃ । ಶಾಪವ್ಯಾಜೇನ ವಿಪ್ರಾಣಾಂ ಸಂಜಹೇ ಸ್ವಕುಲಂ ವಿಭುಃ॥೮॥

ಅರ್ಥ:- ಹೇ ಪರೀಕ್ಷಿತ ರಾಜನೇ, ಈ ಪ್ರಕಾರವಾಗಿ ದೃಢ ನಿಶ್ಚಯನಾಗಿರುವ ಸತ್ಯ ಸಂಕಲ್ಪ ಶ್ರೀಕೃಷ್ಣನು ಬ್ರಾಹ್ಮಣರ ಶಾಪದ ನಿಮಿತ್ತ ಮಾಡಿ ತನ್ನ ಕುಲವನ್ನು ಸಂಹರಿಸಿದನು.

ಯಾಪರೀ ಆಪುಲೇ ಕುಳ। ನಾಸೂ ಆದರಿಲೇ ತತ್ಕಾಳ। ಹಾಚಿ ವಿಚಾರೂ ಅಢಳ। ಕೇಲಾ ಸಮೂಳ ಕುಳಕ್ಷಯಾರ್ಥ॥೭೩೫॥ ಹೇಚಿ ಕಾರ್ಯ ಹೋಯ ಕೈಸೇ । ತೇ ವಿಚಾರಿಜೇ ಜಗದೀಶೇ। ಬ್ರಹ್ಮಶಾಪಾಚೇನಿ ಮಿಸೇ। ಕುಳ ಅನಾಯಾಸೇ ನಾಸೇಲ॥೭೩೬॥ ಇತಕೇ ಹೇ ಜೈ ಸಿದ್ಧೀ ಜಾಯ । ತೈ ಸರಲೇ ಅವತಾರಕೃತ ಕಾರ್ಯ। ಮಗ ಸ್ವಧಾಮಾ ಯದುವರ್ಯ । ಜಾವೋ ಪಾಹೇ ಸ್ವಲೀಲಾ॥೭೩೭॥ ಲೀಲಾವಿಗ್ರಹೀ ಸುಂದರಪೂರ್ಣ । ಗುಣಕರ್ಮಕ್ರಿಯಾ ಅತಿಪಾವನ। ಜಗದುದ್ಧಾರೀ ಶ್ರೀಕೃಷ್ಣ। ಬ್ರಹ್ಮಪರಿಪೂರ್ಣ ಪೂರ್ಣಾವತಾರ॥೭೩೮॥

ಸ್ವಮೂರ್ತ್ಯಾ ಲೋಕಲಾವಣ್ಯನಿರ್ಮುಕ್ತ್ಯಾ ಲೋಚನಂ ನೃಣಾಮ್ ।
ಗೀರ್ಭಿಸ್ತಾಃ ಸ್ಮರತಾಂ ಚಿತ್ತಂ ಪದೈಸ್ತಾನೀಕ್ಷತಾಂ ಕ್ರಿಯಾಃ॥೯॥

ಅರ್ಥ: ಶ್ರೀಕೃಷ್ಣನು ಎಲ್ಲ ಲಾವಣ್ಯಗಳ ನಿಧಿ. ಈತನ ಲಾವಣ್ಯದಿಂದಲೇ ಜನರು ಸುಂದರರಾಗಿರುತ್ತಾರೆ. ಎಲ್ಲ ವಸ್ತುಗಳಿಂದಲೂ ನಮ್ಮ ನೋಟವನ್ನು ಸೆಳೆದು ತನ್ನತ್ತ ಆಕರ್ಷಿಸುವಷ್ಟು ಸುಂದರನಾಗಿದ್ದಾನೆ. ಶ್ರೀಕೃಷ್ಣನು ಭೂಮಿಯಲ್ಲಿದ್ದಾಗ ಎಲ್ಲರ ದೃಷ್ಟಿಯನ್ನು ಆತ ಸೆಳೆದನು.ಕೃಷ್ಣ ಮಾತನಾಡಿದಾಗ ಆತನನ್ನು ಸ್ಮರಿಸುವ ಎಲ್ಲರ ಮನಸ್ಸಿಗೆ ಆತನ ಮಾತುಗಳು ಆಕರ್ಷಿಸಿದವು. ಶ್ರೀಕೃಷ್ಣನ ಹೆಜ್ಜೆ ಗುರುತುಗಳನ್ನು ಕಂಡ ಜನರು ಆತನ ಬಗ್ಗೆ ಆಸಕ್ತಿ ತಾಳಿ ಅವನ ಅನುಯಾಯಿಗಳಾಗಿ ತಮ್ಮ ಶರೀರದ ಚಟುವಟಿಕೆಗಳನ್ನು ಅವನಿಗೆ ಅರ್ಪಿಸ ಬಯಸಿದರು.

ಜೇ ಸಕಳ ಮಂಗಳಾ ಮಂಗಳ ಪೂರ್ಣ। ತೋ ಕಾ ಗೋಕುಳೀ ಕಾಮಿನೀ ರಮಣ। ಮೋಕ್ಷಾಚೇ ತಾರೂ ಸ್ವಯೇ ಶ್ರೀಕೃಷ್ಣ । ಜ್ಯಾಚೇ ಬರವೇಪಣ ಅಲೌಕಿಕ॥೭೩೯॥ಜೋ ಭಕ್ತ ಕಾಮಕಲ್ಪದ್ರುಮ । ಮನೋಹರ ಮೇಘಶ್ಯಾಮ। ಜ್ಯಾಚೇ ತ್ರಿಲೋಕಿ ದಾಟುಗೆ ನಾಮ । ಸ್ವಯೇ ಪುರುಷೋತ್ತಮ ಶೋಭತು॥೭೪೦॥ ಶ್ರೀಕೃಷ್ಣಾಚಿಯಾ ಸೌಂದರ್ಯಾ ಪುಢೇ। ಲಕ್ಷ್ಮೀ ಭುಲೋನಿ ಝಾಲೀ ವೇಡೇ। ಮದನ ಪೋಟಾ ಆಲೇ ಬಾಪುಡೇ। ತೇಥ ಕೋಣೇಕಡೇ ಇಂದ್ರಚಂದ್ರ॥೭೪೧॥ ಜ್ಯಾಚೇ ತ್ರೈಲೋಕ್ಯಪಾವನ ನಾಮ। ಜೋ ಕರೀ ಅಸುರಾಂತೇ ಭಸ್ಮ। ತೋ ಬೋಲಿಜೇ ಅವಾಪ್ತಕಾಮ । ಭಕ್ತಾ ಸುಗಮ ಸರ್ವದಾ॥೭೪೨॥ ತ್ರಿಲೋಕೀಚೆ ಬರವೇಪಣ। ಭುಲೋನಿ ಕೃಷ್ಣಾಪಾಶೀ ಆಲೇ ಜಾಣ । ನಾ ಕೃಷ್ಣಲೇಶೇ ಬರವೇಪಣ । ಶೋಭೇ ಸಂಪೂರ್ಣ ತಿಹೀ ಲೋಕೀ॥೭೪೩॥

ಈ ಪ್ರಕಾರವಾಗಿ ವಿಚಾರಿಸಿ ಶ್ರೀ ಕೃಷ್ಣನು ತನ್ನ ಕುಲದ ಸಮೂಲವಾಗಿ, ಸತ್ವರದಿಂದ ನಾಶಮಾಡುವ ದೃಢ ನಿರ್ಧಾರವನ್ನು ಮಾಡಿದನು ।೭೩೫॥ ಆದರೆ ಈ ಕಾರ್ಯವು ಸಹಜವಾಗಿ ಹೇಗಾಗಬೇಕೆಂಬುವುದನ್ನು ಸಹ ಈತನು ವಿಚಾರಿಸಿದನು. ಬ್ರಹ್ಮಶಾಪದ ನಿಮಿತ್ತದಿಂದ ನನ್ನ ಕುಲವು ಅನಾಯಾಸವಾಗಿ ನಾಶ ಹೊಂದಬಹುದು ।೭೩೬॥ ಇಷ್ಟು ಕಾರ್ಯವಾದರೆ ಸಾಕು ನನ್ನ ಅವತಾರ ಕಾರ್ಯವು ಮುಗಿದಂತೆಯೇ ಎಂದು ತಿಳಿದು ಪೂರ್ಣಾವತಾರನಾದ ಭಗವಾನನು ತನ್ನ ಲೀಲೆಯಿಂದ ಸ್ವಧಾಮಕ್ಕೆ ಹೋಗುವ ಸಂಕಲ್ಪವನ್ನು ಮಾಡಹತ್ತಿದನು ।೭೩೭॥ ಶ್ರೀಕೃಷ್ಣನು ಲೀಲಾವಿಗ್ರಹಿ ಅಂದರೆ ಸ್ವತಃ ಇಚ್ಛಾನುಸಾರವಾಗಿ ದೇಹ ಧರಿಸುವವನು. ಹಾಗೂ ಅತಿಶಯವಾಗಿ ಸುಂದರನು. ಈತನ ಗುಣ, ಕರ್ಮ, ಕ್ರಿಯೆಗಳು ಅತ್ಯಂತ ಪವಿತ್ರವಾಗಿದ್ದವು. ಈತನು ಪರಿಪೂರ್ಣ ಬ್ರಹ್ಮನು, ಪೂರ್ಣಾವತಾರಿಯು ಹಾಗೂ ಜಗತ್ತಿನ ಉದ್ಧಾರ ಮಾಡುವವನಾಗಿದ್ದನು ।೭೩೮॥

ಯಾವ ಸರ್ವ ಮಂಗಲಗಳ ಪೂರ್ಣ ಮಂಗಲನು ಗೋಕುಳ ಸ್ತ್ರೀಯರ ನೇತ್ರಗಳಿಗೆ ರಮಮಾಣ ಮಾಡುವ ಶ್ರೀ ಕೃಷ್ಣನು ಸಂಸಾರ ಸಾಗರದಿಂದ ಪಾರಾಗಲು ಇಚ್ಛಿಸುವವರನ್ನು ಪಾರುಮಾಡಿ ಅವರಿಗೆ ಮೋಕ್ಷಕ್ಕೆ ಮುಟ್ಟಿಸುವ ಹಡಗನಾಗಿರುವನು. ಈತನ ಸೌಂದರ್ಯವು ಅಲೌಕಿಕವು ।೭೩೯॥ ಭಕ್ತರ ಕಾಮನೆಗಳನ್ನು ಪೂರ್ಣ ಮಾಡುವ ಮೇಘದಂತೆ ನೀಲಕಾಂತಿಯಿಂದ ಮನೋಹರನಾಗಿ ತೋರುವ ಮೂರು ಲೋಕಗಳಲ್ಲಿಯೂ ಈತನ ನಾಮವು ಪ್ರಸಿದ್ಧವಾಗಿರುವ ಈ ಘನಶ್ಯಾಮ ಪುರುಷೋತ್ತಮನು ಅತಿಯಾಗಿ ಶೋಭಿಸುವನು ।೭೪೦॥ ಶ್ರೀಕೃಷ್ಣನ ಅಲೌಕಿಕ ಸೌಂದರ್ಯವನ್ನು ಕಂಡು ಲಕ್ಷ್ಮಿಯು ಭುಲಾಯಿಸಿ ಹುಚ್ಚಿಯಾದಳು. ಪಾಪ! ಮದನನು ಸಹ ಈತನ ಹೊಟ್ಟೆಯಲ್ಲಿ ಹುಟ್ಟಿದನು. ಅಂದಮೇಲೆ ಇಂದ್ರ, ಚಂದ್ರರ ಯಾವ ಕಥೆ? ।೭೪೧॥ ಈತನ ನಾಮವು ಮೂರು ಲೋಕಗಳಿಗೂ ಪಾವನಗೊಳಿಸುವುದು. ಈತನು ಅಸುರರನ್ನು ಭಸ್ಮಗೊಳಿಸುವನು. ಈತನಿಗೆ ಪೂರ್ಣಕಾಮು ಎಂದು ಹೇಳಲ್ಪಟ್ಟಿದೆ. ಈತನು ಭಕ್ತರಿಗೆ ಸದಾ ಸುಲಭನು ।೭೪೨॥ ಮೂರು ಲೋಕಗಳ ಸರ್ವ ಸೌಂದರ್ಯಗಳು ಶ್ರೀಕೃಷ್ಣನಿಗೆ ಭುಲಾಯಿಸಿ ಈತನಲ್ಲಿಯೇ ಸೇರಿಕೊಂಡಿವೆ ಅಥವಾ ಮೂರು ಲೋಕದ ಸೌಂದರ್ಯಗಳು ಭಗವಂತನ ಸೌಂದರ್ಯದ ಅಂಶದಿಂದ ಶೋಭಿಸುತ್ತಿವೆ. ಎಲ್ಲ ಸೌಂದರ್ಯಗಳ ಅಧಿಷ್ಠಾನವು ಭಗವಂತನೇ ಆಗಿರುವನು ।೭೪೩॥

ಜೋ ಸಕಲ ಸೌಂದರ್ಯಾಚೀ ಶೋಭಾ । ಜೋ ಲಾವಣ್ಯಾಚಾ ಅತಿವಾಲಭಾ । ಜ್ಯಾಚಿಯಾ ಅಂಗಸಂಗಪ್ರಭಾ । ಆಣಿಲೀ ಶೋಭಾ ಜಗಾಸೀ।।೨೪೪।। ಜೋ ಹರಿಖಾಚಾ ಸೋಲೀವ ಹರಿಖ । ಕೀ ಸುಖ ಸುಖಾವತೇ ಪರಮಸುಖ । ಜ್ಯಾಚೇನಿ ವಿಶ್ರಾಂತೀಸಿ ದೇಖ। ಹೋಯ ಆತ್ಯಂತಿಕ ವಿಸಾಂವಾ।।೨೪೫।। ತೋ ಅಮೂರ್ತ ಮೂರ್ತಿಧಾರಣ। ಕೀ ಸಕಲಲೋಕಲಾವಣ್ಯ । ಶೋಭಾ ಶೋಭವೀ ಶ್ರೀಕೃಷ್ಣ । ಸೌಭಾಗ್ಯ ಸಂಪೂರ್ಣ ಸಾಜಿರಾ।।೨೪೬।। ಘೃತ ಥಿಜಲೇ ಕೀ ವಿಘುರಲೇ । ಪರೀ ಘೃತಪಣಾ ನಾಹೀ ಮುಕಲೇ। ತೇವೀ ಅಮೂರ್ತ ಮೂರ್ತೀ ಮುಸಾವಲೇ। ಪರೀ ತೇ ಸಂಚಲೇ ಪರಬ್ರಹ್ಮ।।೨೪೭।। ತಯಾಸಿ ದೇಖಿಲಿಯಾಚಿ ಪುರೇ । ದೇಖಾದೇಖೀ ದೇಖಣೇಚಿ ಸರೇ। ಪಹಾಣೇ ಪಾಹಾತೇನಿಸೀ ಮಾಘಾರೇ । ಲಾಜೋನಿ ವೋಸರೇ ಸಲಜ್ಜ।।೨೪೮।। ದೃಷ್ಟೀ ಧಾಲೀ ದೇ ಢೇಂಕರ । ಆಪಣ ಆಪುಲೇ ಶೇಜಾರ । ಹೋವೋನಿಯಾ ಪರಾತ್ಪರ । ಸುಖಾವೇ ಸಾಚಾರ ಶ್ರೀಕೃಷ್ಣರೂಪೀ।।೨೪೯।। ಶ್ರೀಕೃಷ್ಣಾಚೀ ಚಾಖಿಲ್ಯಾ ಗೋಡೀ । ರಸಸ್ವಾದು ರಸನಾ ಸೋಡೀ । ಜಾಯೇ ಚಾಖಣೇಪಣಾಚೀ ಆವಡೀ । ಚಾಖತೇ ದವಡೀ ಚಾಖೋನಿ।।೨೫೦।। ನವಲ ತೇಥೀಚೆ ಗೋಡಪಣ । ಅಮೃತಹೀ ಫಿಕೇ ಕೇಲೇ ಜಾಣ । ಯಾಪರೀ ರಸನಾ ಆಪಣ । ಹರಿರಸೀ ಸಂಪೂರ್ಣ ಸುಖಾವೇ।।೨೫೧।। ಲಾಗತಾ ಶ್ರೀಕೃಷ್ಣಸುವಾವೋ । ಅವಘಾ ಸಂಸಾರುಚಿ ಹೋಯ ವಾವೋ । ಸೇವಿತಾ ಶ್ರೀಕೃಷ್ಣಸುಗಂಧವಾವೋ । ಘ್ರಾಣಾಸಿ ಪಹಾವೋ ಆನ ನಾವಡೇ।।೨೫೨।। ವಾಸು ಸುವಾಸು ಸುಮನ । ಘ್ರೇಯ ಘ್ರಾತಾ ಆಣಿ ಘ್ರಾಣ । ಕೃಷ್ಣ ಮಕರಂದೇ ಜಾಣ । ವಿಶ್ರಾಮಾ ಸಂಪೂರ್ಣ ಸ್ವಯೇ ಯೇತೀ ।।೨೫೩।। ಜಯಾಚೇನಿ ಅಂಗಸ್ಪರ್ಶೇ । ದೇಹ-ದೇಹೀ-ದೇಹಪಣ ನಾಸೇ । ಅಂಗಚಿ ಅಂಗಾತೇ ಕೈಸೇ । ವಿಸರೇ ಆಪೈಸೇ ದೇಹಬುದ್ಧಿ।।೨೫೪।। ಕಠಿಣಾಚೇ ಕಠಿಣಪಣ ಗೇಲೇ। ಮೃದೂಚೇ ಮೃದುಪಣಹೀ ನೇಲೇ । ಕೃಷ್ಣಸ್ಪರ್ಶೇ ಐಸೇ ಕೇಲೇ। ಸ್ಪರ್ಶಾಚೇ ಶೇಲೇ ಸ್ಪರ್ಶತ್ವ।।೨೫೫।। ತಯಾಚೇನಿ ಪಠಣೇ ವಾಚಾ। ಠಾವೋ ವಾಚ್ಯವಾಚಕಾಂಚಾ । ನೇತಿಶಬ್ದೇ ಪ್ರಸೋನಿ ಸಾಚಾ । ಕರೀ ಶಬ್ದಾ ಚಾ ನಿಃಶಬ್ದು ।।೨೫೬।। ಬೋಲು ಬೋಲಣೇಂಚಿ ಶೇಲೇ। ಬೋಲತೇ ನೇಣೋ ಕಾಯ ಝಾಲೇ। ಕೃಷ್ಣಶಬ್ದೇ ಐಸೇ ಕೇಲೇ। ವಾಚ್ಯಾನೇ ನೇಲೇ ವಾಚಿಕ।।೨೫೭।। ಚಿತ್ತ ಚಿಂತಿತಾಂಚ ಪಾಯೇ। ಚಿತ್ತಪಣಾ ವಿಸರೋನಿ ಜಾಯೇ। ಮಗ ನಿಶ್ಚಿತಪಣೇ ಪಾಹೇ। ಕೃಷ್ಣಚರಣೇ ರಾಹೇ ನಿವಾಂತ।।೨೫೮।।

ಈತನು ಎಲ್ಲ ಸೌಂದರ್ಯಗಳಿಂದ ಶೋಭೆಯಾಗಿರುವನು. ಲಾವಣ್ಯದ ರಾಶಿಯೇ ಆಗಿರುವನು. ಈತನ ಅಂಗಸಂಗದ ಪ್ರಭೆಯಿಂದ ಜಗತ್ತಿಗೆ ಶೋಭೆಯು ಬಂದಿರುವುದು ।।೨೪೪।। ಈತನು ಆನಂದದ ಆನಂದನಾಗಿರುವನು. ಸುಖಕ್ಕೆ ಅತ್ಯಂತ ಸುಖ ಕೊಡುವ ಪರಮ ಸುಖನಾಗಿರುವನು. ಈತನಿಂದಲೇ ವಿಶ್ರಾಂತಿಗೂ ವಿಶ್ರಾಂತಿಯು ದೊರೆಯುವುದು।।೨೪೫।। ಈತನು ನಿರಾಕಾರನಾಗಿದ್ದರೂ ಆಕಾರಕ್ಕೆ ಬಂದಿರುವನು. ತ್ರೈಲೋಕ್ಯದ ಲಾವಣ್ಯವೇ ಈತನಲ್ಲಿ ತುಂಬಿಕೊಂಡಿರುವ ಶ್ರೀಕೃಷ್ಣನು ಶೋಭೆಗೆ ಶೋಭೆಯನ್ನು ತಂದು ಕೊಡುವವನಾಗಿರುವನು ।।೨೪೬।। ಯಾವ ಪ್ರಕಾರವಾಗಿ ತುಪ್ಪವು ಹೆಪ್ಪುಗಟ್ಟಿರಲಿ, ಅಥವಾ ಕರಗಿ ನೀರಾಗಿರಲಿ, ಅದರಲ್ಲಿಯ ತುಪ್ಪವು ಇಲ್ಲದಾಗುವುದಿಲ್ಲ. ಅದರಂತೆ ನಿರಾಕಾರ ಸ್ವರೂಪವು ಸಾಕಾರವಾದರೂ ಪರಬ್ರಹ್ಮ ಸ್ವರೂಪವು ಕೂಡಿಕೊಂಡೇ ಇರುವುದು ।।೨೪೭।। ಈತನಿಗೆ ಕೇವಲ ನೋಡಿದರೆ ಸಾಕು, ಆ ಕ್ಷಣವೇ ಜೀವದ ನೋಡುವಿಕೆಯು ಮುಗಿದುಹೋಗುವುದು. ಆ ಪರಬ್ರಹ್ಮನ ಸಾಕ್ಷಾತ್ಕಾರವಾದಕ್ಷಣವೇ ನೋಡುವ ದೃಷ್ಟಿಗೆ ಲಜ್ಜೆಯಾಗಿ ವಿಷಯದಿಂದ ಮರಳುವುದು. ತನ್ನ ಸ್ವರೂಪದಲ್ಲಿ ಸ್ಥಿರವಾಗುವುದು ।।೨೪೮।। ಹೊಟ್ಟೆ ತುಂಬ ಉಂಡ ಮೇಲೆ ಢರಕೆಗಳು ಬರುವುವು. ಅದರಂತೆ ಈಶ್ವರನ ರೂಪವನ್ನು ನೋಡಿ ಜೀವಕ್ಕೆ ತೃಪ್ತಿಯಾಗುವುದು ಮತ್ತು ಈ ಜೀವವು ಶ್ರೀಕೃಷ್ಣನ ರೂಪದಲ್ಲಿ ಕೂಡಿಕೊಳ್ಳುವುದು ।।೨೪೯।। ಶ್ರೀಕೃಷ್ಣ ಸ್ವರೂಪದ ಅಲೌಕಿಕ ಆನಂದವು ಒಂದು ಸಲ ಪ್ರಾಪ್ತವಾದಲ್ಲಿ ರಸನೇಂದ್ರಿಯವು ಸಿಕ್ಕಿರುವ ಈ ರಸಸ್ವಾದವನ್ನು ಬಿಟ್ಟು ಬೇರೆ ಯಾವ ವಿಷಯಗಳ ಸ್ವಾದವನ್ನು ಸ್ವೀಕರಿಸಲು ಮರಳುವುದಿಲ್ಲ ।।೨೫೦।। ಭಗವಂತನ ಸ್ವರೂಪದ ಮಾಧುರ್ಯವು ಬಹು ವಿಲಕ್ಷಣವಾಗಿದೆ. ಈ ಮಾಧುರ್ಯದಿಂದ ಅಮೃತವೂ ಸಪ್ಪಗಾಗುವುದು. ಈ ಪ್ರಕಾರವಾಗಿ ನಾಲಿಗೆಯು ಹರಿರಸದಲ್ಲಿ ಪರಿಪೂರ್ಣವಾಗಿ ಸುಖಿಯಾಗುವುದು ।।೨೫೧।। ಶ್ರೀಕೃಷ್ಣನ ಪ್ರೇಮದ ಗಾಳಿಯು ಅನುಭವಕ್ಕೆ ಬಂದಾಕ್ಷಣವೇ ಸಂಸಾರವು ಅಸಾರವಾಗಿ ಸಪ್ಪಗಾಗುವುದು. ಆಗ ಶ್ರೀಕೃಷ್ಣನ ಪ್ರೇಮದ ವಿನಃ ಬೇರೆ ಯಾವುದೂ ಪ್ರಿಯವಾಗುವುದಿಲ್ಲ ।।೨೫೨।। ಮೂಸಿಸುವುದು, ಮೂಗು, ಸುಗಂಧ ಈ ತ್ರಿಪುಟಿಯು ಶ್ರೀಕೃಷ್ಣನ ಪರಾಗದಲ್ಲಿ ತನ್ನಷ್ಟಕ್ಕೆ ತಾನೇ ಪೂರ್ಣ ವಿಶ್ರಾಂತಿಯನ್ನು ಹೊಂದುವುದು ।।೨೫೩।। ಈತನ ಅಂಗಸ್ಪರ್ಶದಿಂದ ದೇಹ, ದೇಹೀ, ದೇಹತ್ವ ಇವೆಲ್ಲವೂ ಇಲ್ಲದಾಗುವುವು. ದೇಹಬುದ್ಧಿಯು ಸಂಪೂರ್ಣವಾಗಿ ಮರೆತುಹೋಗುವುದು ।।೨೫೪।। ಕಠಿಣ ಪದಾರ್ಥಗಳ ಕಾಠಿಣ್ಯವು ಕಾಣದಾಯಿತು. ಮೃದುವಿನ ಮೃದತ್ವವು ಮಾಯವಾಯಿತು. ಅದರಂತೆ ಸ್ಪರ್ಶದ ಸ್ಪರ್ಶತ್ವವೂ ಸವೆದು ಹೋಯಿತು. ಕೃಷ್ಣಸ್ಪರ್ಶದಿಂದ ಹೀಗಾಯಿತು ।।೨೫೫।। ಶ್ರೀಕೃಷ್ಣನ ನಾಮದ ಉಚ್ಚಾರದಿಂದ ''ನೇತಿ ನೇತಿ'' ಇತ್ಯಾದಿ ಶಬ್ದಗಳಿಂದ ವಾಚ್ಯಾರ್ಥ ವಾಚಕ ಶಬ್ದಗಳ ಆಧಾರವು ಇಲ್ಲದಾಗಿ ವಾಗಿಂದ್ರಿಯ ಶಬ್ದಕ್ಕೆ ನಿಃಶಬ್ದವಾಯಿತು ।।೨೫೬।। ಶಬ್ದವು ಹೇಳುವುದನ್ನೇ ನಿಲ್ಲಿಸಿತು. ಹೇಳುವವನು ಏನಾದನೆಂಬುವುದು ತಿಳಿಯಲಾರದಂತಾಯಿತು. ಕೃಷ್ಣನಾಮದಿಂದ ವ್ಯಾಚ್ಯ ವಾಚಕ ಭೇದವು ಇಲ್ಲದಾಯಿತು ।।೨೫೭।। ಶ್ರೀಕೃಷ್ಣನ ಪ್ರೇಮದ ಚರಣಗಳ ಚಿಂತನೆಯನ್ನು ಮಾಡಲು ಚಿತ್ತವು ತನ್ನ ಚಿತ್ತತ್ವವನ್ನು ಮರೆಯುವುದು ಮತ್ತು ಇತರ ಎಲ್ಲ ವಿಷಯಗಳ ಚಿಂತನೆಯನ್ನು ಬಿಟ್ಟು ಶ್ರೀಕೃಷ್ಣನ ಮಂಗಲ ಚರಣಗಳಲ್ಲಿ ಲೀನವಾಗುವುದು ।।೨೫೮।।

ಚಿತ್ತ ಚಿಂತಾ ಚಿಂತನ। ತಿಹೀಚೀ ನುರೇ ಆಠವಣ । ಚಿಂತಿತಾಂಚಿ ಶ್ರೀಕೃಷ್ಣಚರಣ । ಬ್ರಹ್ಮಪರಿಪೂರ್ಣ ನಿಜಚಿತ್ತ।।೨೫೯।। ನವಲ ತಯಾಚಾ ಪದಕ್ರಮ । ಪಾಹತಾ ಪಾರುಷೇ ಕರ್ಮಾಕರ್ಮ। ಮಗ ಕರ್ಮ ಕರ್ತಾ ಕ್ರಿಯಾಭ್ರಮ । ಕರೀ ನಿಭ್ರಮ ಪದರಾಜೇ।।೨೬೦।। ಪಹಾತಾ ಪಾಉಲಾಂಚಾ ಮಾಗ । ತುಟತೀ ಕರ್ಮಾಕರ್ಮಾಚೇ ಲಾಗ। ಕರ್ಮಾಚೇ ಮುಖ್ಯ ಮಾಯಾ ಅಂಗ । ತಿಚಾ ವಿಭಾಗ ಉರೋ ನೇದಿ।।೨೬೧।। ಗಾಈಮಾಗೀಲ ಕೃಷ್ಣಪಾಉಲೇ । ಪಾಹತಾ ಕರ್ಮ ಕರ್ತೇನಿಸೀ ಗೇಲೇ । ಅಕರ್ಮ ಮ್ಹಣಹೇ ನಾಹೀ ಉರಲೇ । ಐಸೇ ಕರ್ಮ ಕೇಲೇ ನಿಷ್ಕರ್ಮ।।೨೬೨।। ಜಯಾಚೇನಿ ಕೀರ್ತಿಶ್ರವಣೇ। ಶ್ರೋತಾ ನುರೇಶ್ರೋ ತೇಪಣೇ। ವಕ್ತಾಪಾರುಷೇ ವಕ್ತೇಪಣೇ। ಶ್ರವಣೇ ಪಾವಣೇ ಪರಬ್ರಹ್ಮ।।೨೬೩।।

ಆಚ್ಛಿದ್ಯಕೀರ್ತಿಂ ಸುಶ್ಲೋಕಾಂ ವಿತತ್ಯ ಹ್ಯಂಜಸಾ ನು ಕೌ । ತಮೋನಯಾ ತರಿಷ್ಯಂತೀತ್ಯಗಾತ್ ಸ್ವಂ ಪದಮೀಶ್ವರಃ ।।೭।।

ಅರ್ಥ:- ಈ ರೀತಿಯಲ್ಲಿ ಶ್ರೀಕೃಷ್ಣನು ಬಹು ಸುಲಭವಾಗಿ ತನ್ನ ಮಹಿಮೆಗಳನ್ನು ಹರಡಿದನು. ಅವು ಜಗತ್ತಿನಾದ್ಯಂತ ಮಹೋನ್ನತ ಸಾರಭೂತ ವೇದಶ್ಲೋಕಗಳಿಂದ ಗಾನ ಮಾಡಲ್ಪಡುತ್ತವೆ. ಆ ಮಹಿಮೆಗಳ ಶ್ರವಣ, ಕೀರ್ತನ ಮಾತ್ರದಿಂದಲೇ ಮುಂದೆ ಜನಿಸುವ ಬದ್ಧಾತ್ಮರು ತಮ್ಮ ಅಜ್ಞಾನದ ಅಂಧಕಾರವನ್ನು ದಾಟುವರೆಂದು ಶ್ರೀಕೃಷ್ಣನು ಭಾವಿಸಿದನು. ಈ ವ್ಯವಸ್ಥೆಯಿಂದ ಸಂತೃಪ್ತನಾದ ಭಗವಂತನು ತಾನು ಹೋಗಲು ಇಚ್ಛಿಸಿದ ಸ್ಥಳಕ್ಕೆ ಹಿಂತಿರುಗಿದನು.

ಯಾಪರೀ ಉದಾರಕೀರ್ತಿ । ಥೋರ ಕೇಲೀ ಅವತಾರಖ್ಯಾತೀ । ಜೇಣೇ ಜಡ ಜೀವ ಉದ್ಧರತೀ । ಶ್ರವಣೇ ತ್ರಿಜಗತೀ ಪಾವನ ಹೋಯೇ ।।೨೬೪।। ಸ್ವಧಾಮಾ ಗೇಲಿಯಾ ಚಕ್ರಧರೂ । ಮಾಗಾ ತರಾವಯಾ ಸಂಸಾರು । ಕೃಷ್ಣಕೀರ್ತಿ ಸುಗಮ ತಾರೂ । ಠೇವೂನ ಶ್ರೀಧರು ಸ್ವಯೇ ಗೇಲಾ ।।೨೬೫।। ನವಲ ತ್ಯಾ ತಾರುವಾಚೀ ಸ್ಥಿತೀ । ಬುಡವೂ ನೇಣೇ ಕಲ್ಪಾಂತೀ । ಶ್ರವಣೇ ತರಲೇ ನೇಣೋ ಕಿತೀ । ಪುಢೇ ಹೀ ತರಲೇ ಶ್ರದ್ಧಾಳೂ ।। ೨೬೬।। ಶ್ರೀಕೃಷ್ಣಕೀರ್ತೀಚೇ ತಾರೂ । ಘಾಲಿತಾ ಆಟೇ ಭವಸಾಗರು । ತೇಥೇ ಕೋರಡ್ಯಾ ಪಾಉಲೀ ಉತಾರೂ । ಶ್ರವಣಾರ್ಥೀ ನರು ಸ್ವಯೇ ಲಾಹೇ ।।೨೬೭।। ಜೇ ಕೃಷ್ಣಕೀರ್ತಿ ಕರಿತೀ ಪಠಣ । ತ್ಯಾಂಚ್ಯಾ ಸಂಸಾರಾಸಿ ಪಡೇ ಶೂನ್ಯ । ಕೀರ್ತಿವಂತ ತೇ ಅತಿಪಾವನ । ತ್ಯಾಂತೇ ಸುರಗಣ ವಂದಿತೀ ।।೨೬೮।। ಆದರೇ ಪಢತಾ ಶ್ರೀಕೃಷ್ಣಕೀರ್ತಿ। ಪಾಯಾ ಲಾಗತೀ ಚಾರೀ ಮುಕ್ತಿ । ತ್ಯಾಂಚೇನಿ ಪಾವನ ತ್ರಿಜಗತೀ । ಪರಮನಿವೃತ್ತಿ ಹರಿನಾಮೇ ।।೨೬೯।।

ಚಿತ್ತ, ಚಿಂತೆ ಮತ್ತು ಚಿಂತನೆ ಈ ಮೂರರ ನೆನಪೇ ಇರುವುದಿಲ್ಲ. ಮತ್ತು ನಿಶ್ಚಿತವಾಗಿ ಶ್ರೀಕೃಷ್ಣ ಚರಣಗಳಲ್ಲಿ ವಿರಮಿಸುವುದು ।೨೫೯।। ಈತನ ಭೂಮಿಯಲ್ಲಿ ಮೂಡಿದ ಪಾದಗಳು ಆಶ್ಚರ್ಯಕಾರಕವಾಗಿವೆ. ಇವುಗಳನ್ನು ಕಂಡಾಕ್ಷಣಕ್ಕೆ ಕರ್ಮಾಕರ್ಮಗಳು ಇಲ್ಲದಾಗುವುವು ಮತ್ತು ಕರ್ಮ, ಕರ್ತಾ ಮತ್ತು ಕ್ರಿಯೆಗಳೆಂಬ ಭ್ರಮೆಯು ಈತನ ಚರಣರಜದಿಂದ ನಿಭ್ರಮವಾಗುವುದು ।೨೬೦।।

ಈತನ ಚರಣಗಳ ಹೆಜ್ಜೆಗುರುತು ನೋಡಿದಾಕ್ಷಣ ಕರ್ಮಾಕರ್ಮಗಳ ಬಂಧನೆಗಳು ಮುರಿದು ಬೀಳುವುವು. ಏಕೆಂದರೆ ಕರ್ಮದ ಮುಖ್ಯ ಅಂಗವು ಮಾಯೆಯಾಗಿರುವುದು. ಈ ಮಾಯೆಯ ಅಲ್ಪಾಂಶವೂ ಇರಲು ಶಕ್ಯವೇ ಇಲ್ಲ ।೨೬೧।। ಆಕುಳಗಳ ಹಿಂದೆ ಮೂಡಿದ ಶ್ರೀಕೃಷ್ಣನ ಸುಕುಮಾರ ಪಾದಗಳನ್ನು ಕಂಡಕೂಡಲೇ ನಾನು ಕರ್ತನು ಎಂಬ ಅಭಿಮಾನ ಸಹ ಕರ್ಮವು ನಿವೃತ್ತವಾಗುವುದು. ನಂತರ ಅಕರ್ಮದ ಹೆಸರೇ ಉಳಿಯುವುದಿಲ್ಲ. ಈ ಪ್ರಕಾರವಾಗಿ ಈ ಚರಣಗಳು ಕರ್ಮಕ್ಕೆ ನಿಷ್ಕರ್ಮ ಮಾಡುವುವು ।೨೬೨।। ಈತನ ಕೀರ್ತಿಯ ಶ್ರವಣ ಮಾಡುವುದರಿಂದ ಶ್ರೋತೃಗಳ ಶ್ರೋತೃತ್ವವು ಉಳಿಯುವುದಿಲ್ಲ. ಮತ್ತು ವಕ್ತಾನ ವಕ್ತಾತನವು ಸಹ ನಿಲ್ಲುವುದಿಲ್ಲ. ಕೇವಲ ಶ್ರವಣದಿಂದಲೇ ಪರಬ್ರಹ್ಮನ ಪ್ರಾಪ್ತಿಯಾಗುವದು ।೨೬೩।।

ಈ ಪ್ರಕಾರವಾಗಿ ಉದಾರ ಕೀರ್ತಿ ಇರುವ ಶ್ರೀಕೃಷ್ಣನು ಅವತಾರದ ದೊಡ್ಡ ಖ್ಯಾತಿ ಮಾಡಿದನು. ಈ ಕಾರಣದಿಂದ ಜಡಜೀವಿಗಳ ಉದ್ಧಾರವಾಯಿತು. ಮತ್ತು ಶ್ರವಣದಿಂದ ತ್ರಿಭುವನವು ಪಾವನವಾಗಹತ್ತಿತು ।೨೬೪।। ತನ್ನ ನಂತರ ತನ್ನ ಭಕ್ತರಿಗೆ ಸಂಸಾರದಿಂದ ಪಾರಾಗಲು ಕೃಷ್ಣಕೀರ್ತಿ ಎಂಬ ಸುಲಭವಾದ ದೋಣಿಯನ್ನು ಇಟ್ಟು ಶ್ರೀಕೃಷ್ಣನು ನಿಜಧಾಮಕ್ಕೆ ಹೋದನು ।೨೬೫।। ಈ ದೋಣಿಯು ಅಲೌಕಿಕವಾಗಿದೆ. ಈ ದೋಣಿಗೆ ಕಲ್ಪಾಂತಕ್ಕೂ ಯಾರನ್ನೂ ಮುಳುಗಿಸಲು ಬರುವುದಿಲ್ಲ. ಈ ಕೃಷ್ಣಕೀರ್ತಿಯ ಶ್ರವಣದಿಂದ ಇಲ್ಲಿಯವರೆಗೆ ಅದೆಷ್ಟೋ ಶ್ರದ್ಧಾವಂತರು ಉದ್ಧಾರರಾದರು. ಮುಂದೆ ಅದೆಷ್ಟು ಜನರು ಉದ್ಧಾರರಾಗುವರೋ ತಿಳಿಯದು ।೨೬೬।। ಶ್ರೀಕೃಷ್ಣಕೀರ್ತಿ ರೂಪ ದೋಣಿಯನ್ನು ಭವಸಾಗರದಲ್ಲಿ ಹಾಕಲು ಆ ಭವಸಾಗರವೇ ಒಣಗಿ ಹೋಗುವುದು. ಆಗ ಶ್ರವಣಾರ್ಥ ಪ್ರವಾಸಿ ಪುರುಷನು ಬರಿಗಾಲಿನಿಂದ ಸ್ವತಃ ಇದನ್ನು ದಾಟುವನು ।೨೬೭।। ಶ್ರೀ ಕೃಷ್ಣಕೀರ್ತಿಯನ್ನು ಭಕ್ತಿ ಭಾವದಿಂದ ಹಾಡುವವರಿಗೆ, ಪಠಣ ಮಾಡುವವರಿಗೆ, ಅವರ ಸಂಸಾರದ ಎಲ್ಲ ದುಃಖಗಳು ಕೊನೆಗೊಂಡು ಅವರು ಅತೀ ಪಾವನರು, ಕೀರ್ತಿವಂತರಾಗುವರು. ಇವರಿಗೆ ದೇವತೆಗಳು ವಂದಿಸುವರು ।೨೬೮।। ಆದರದಿಂದ ಶ್ರೀಕೃಷ್ಣಕೀರ್ತಿಗಳನ್ನು ಪಠಿಸಿದರೆ, ನಾಲ್ಕು ಮುಕ್ತಿಗಳು ಕಾಲಿಗೆ ಬೀಳುವುವು) ಇವರಿಂದ ತ್ರಿಭುವನವು ಪಾವನವಾಗುವುದು. ಹರಿನಾಮದಿಂದ ಪರಮಾನಂದದ ಪ್ರಾಪ್ತಿಯಾಗುವುದು ।೨೬೯।।

ಶ್ರೀಕೃಷ್ಣಕೀರ್ತಿನಾಮಾಕ್ಷರೆ । ರಿಘತಾಂಚಿ ಶ್ರವಣದ್ವಾರೇ । ಭೀತರೀಲ ತಮ ಏಕಸರೇ । ನಿಘೇ ಬಾಹೇರೇ ಗಜಬಜೋನಿ ।೨೭೦॥ ತಂವ ಕೃಷ್ಣಕೀರ್ತಿಕಥಾಗಜರೀ । ತಮಾಸಿ ಠಾವೋ ನುರೇಚಿ ಬಾಹೇರೀ । ಧಾಕೇಂಚಿ ನಿಮೇ ಸಪರಿವಾರೀ । ಕೃಷ್ಣಕೀರ್ತಿಮಾರ್ಘಾರೀ ಪರಮಾನಂದು ।೨೭೧॥ ಶ್ರೀಕೃಷ್ಣಕೀರ್ತಿಪ್ರತಾಪಪ್ರಕಾಶೇ । ಸಂಸಾರ ಕೃಷ್ಣಮಯ ದಿಸೇ । ಕೀರ್ತಿ ಕೀರ್ತಿಮಂತಾಐಸೇ । ದೇ ಅನಾಯಾಸೇ ನಿಜಸುಖ ।೨೭೨॥ ಜೋ ದೇಖಿಲಿಯಾ ದೇಖಣೇ ಸರೇ । ಜೋ ಚಾಖಿಲಿಯಾ ಚಾಖಣೇ ಪುರೇ । ಜೋ ಐಕಿಲಿಯಾ ಐಕಣೇ ವೋಸರೇ । ಜೋ ಚಿಂತಿತಾ ನುರೇ ಚಿತ್ತವೃತ್ತಿ ।೨೭೩॥ ಜ್ಯಾಸೀ ಝಾಲಿಯಾ ಭೇಟೀ । ಭೇಟೀಸೀ ನ ಪಡೇ ತುಟೀ । ಜ್ಯಾಸಿ ಬೋಲತಾ ಗೋಠೀ । ಪಡೇ ಮಿಠೀ ಪರಮಾರ್ಥೀ ।೨೭೪॥ ಜ್ಯಾಸಿ ದಿಧಲಿಯಾ ಖೇಂವ । ಖೇಂವಾಚಿ ಪುರೇ ಹಾಂವ । ಜ್ಯಾಚೇ ಘೇತಾಂಚಿ ನಾವ । ನಾಸೇ ಸರ್ವ ಮಹಾಭಯ ।।೨೭೫।। ತೋ ಸತ್ಯಸಂಕಲ್ಪ ಈಶ್ವರು । ಸ್ವಲೀಲಾ ಸರ್ವೇಶ್ವರು । ಸ್ವಪದಾಸಿ ಶಾರ್ಙ್ಗಧರು । ಅತಿಸತ್ವರು ನಿಘಾಲಾ।೨೭೬॥

ರಾಜೋವಾಚ:-

ಬ್ರಹ್ಮಣ್ಯಾನಾಂ ವದಾನ್ಯಾನಂ ನಿತ್ಯಂ ವೃದ್ಧೋಪಸೇವಿನಾಮ್ ।
ವಿಪ್ರಶಾಪಃ ಕಥಮಭೂದ್ ವೃಷ್ಣೀನಾಂ ಕೃಷ್ಣಚೇತಸಾಮ್ ।೮॥

ಅರ್ಥ: ಪರೀಕ್ಷಿತ ರಾಜನು ಕೇಳಿದನು-ಸದಾ ಬ್ರಾಹ್ಮಣರನ್ನು ಗೌರವಿಸುವವರಿಗೆ, ಉದಾರಿಗಳಿಗೆ,ವೃದ್ಧರನ್ನು ಮತ್ತು ಶ್ರೇಷ್ಠ ವ್ಯಕ್ತಿಗಳನ್ನು ಸೇವೆಮಾಡ ಬಯಸುವವರಿಗೆ ಹಾಗೂ ಶ್ರೀಕೃಷ್ಣನ ಚಿಂತನೆಯಲ್ಲಿ ಸಂಪೂರ್ಣ ಮಗ್ನರಾದ ಯದುವಂಶಿಗಳವರಿಗೆ ಬ್ರಾಹ್ಮಣರು ಹೇಗೆ ಶಾಪ ಕೊಟ್ಟರು?

ಆದರೇ ಪುಸೇ ಪರೀಕ್ಷಿತೀ । ಯಾದವ ವಿನೀತ ವಿಪ್ರಭಕ್ತೀ । ತ್ಯಾಂಸಿ ಶಾಪು ಘಡೇ ಕೈಶಿಯಾ ರೀತೀ । ಸಾಂಗ ತೇ ಮಜಪ್ರತೀ ಶುಕಯೋಗೀಂದ್ರಾ ।೨೭೭॥ ಯಾದವ ದಾನೇ ಅತಿಉದಾರ । ರಾಜೇ ಹೋಊನಿ ಪರಮ ಪವಿತ್ರ । ಬ್ರಾಹ್ಮಣಸೇವೇ ತತ್ಪರ । ಆಜ್ಞಾಧರ ಕೃಷ್ಣಾಚೇ ।೨೭೮॥ ಯಾದವ ಸದಾ ಕೃಷ್ಣಯೋಗೇಸೀ । ನಿತ್ಯ ಸಾಧು ಯಾದವಾಪಾಸೀ । ತೇಥೇಚಿ ವಸೇ ನಾರದ ಋಷೀ । ಶಾಪು ಯಾದವಾಂಸೀ ಘಡೇ ಕೈಸಾ ।೨೭೯॥ ದಕ್ಷ ಶಾಪ ನ ಬಾಧೀ ಕೃಷ್ಣಾಪಾಸೀ । ಮ್ಹಣೌನಿ ನಾರದ ವಸೇ ದ್ವಾರಕೇಸೀ । ತೋಚಿ ಶ್ರೀಕೃಷ್ಣ ಅಸತಾ ಅಂಗೇಸಿ । ಶಾಪು ಯಾದವಾಂಸೀ ಘಡೇ ಕೈಸಾ ।೨೮೦॥

ಶ್ರೀಕೃಷ್ಣಕೀರ್ತಿಗಳ ನಾಮವು ಶ್ರವಣದ್ವಾರದಿಂದ ಅಂತರಂಗದಲ್ಲಿ ಪ್ರವೇಶಿಸಿದಾಕ್ಷಣವೇ ಒಳಗಿನ ಅಜ್ಞಾನವು ಕೂಡಲೇ ಗಡಬಡಿಸಿ ಹೊರಬೀಳುವುದು ।೨೭೦॥ ಶ್ರೀಕೃಷ್ಣಕೀರ್ತಿಯ ಕಥೆಗಳ ಮಹಾಗರ್ಜನೆಯು ಹೊರಗೆ ನಡೆಯುತ್ತಿರಲು ಅಜ್ಞಾನ ಅಂಧಃಕಾರಗಳಿಗೆ ಹೊರಗೆ ಹೋಗಲು ಸ್ಥಳವೇ ಸಿಗುವುದಿಲ್ಲ. ಆಗ ಅವು ಭಯಪಟ್ಟು ಸಪರಿವಾರದೊಂದಿಗೆ ಇದ್ದಲ್ಲಿಯೇ ಲಯಗೊಂಡವು ।೨೭೧॥ ಶ್ರೀಕೃಷ್ಣಕೀರ್ತಿಯ ಪ್ರತಾಪದಿಂದ ಸಂಸಾರವು ಕೃಷ್ಣಮಯವಾಗಿ ತೋರುವುದು. ಕೃಷ್ಣಕೀರ್ತಿಯಿಂದ ಭಕ್ತನು ಕೀರ್ತಿವಂತನಾಗುವನು ಮತ್ತು ಈತನಿಗೆ ನಿಜಸುಖವು ಅನಾಯಾಸವಾಗಿ ದೊರೆಯುವುದು ।೨೭೨॥ ಶ್ರೀಕೃಷ್ಣನನ್ನು ನೋಡಿದರೆ, ನೋಡುವತನವು ಮುಗಿಯುವುದು. ಈತನ ಮಾಧುರ್ಯವನ್ನು ಸೇವಿದರೆ, ಸೇವನೆಯು ಸಹ ಮುಗಿಯುವುದು. ಈತನ ಶ್ರವಣವನ್ನು ಮಾಡಿದರೆ, ಕೇಳುವಿಕೆಯೇ ಮುಗಿಯುವುದು. ಈತಣ ಚಿಂತನೆಯನ್ನು ಮಾಡಿದರೆ, ಚಿತ್ತದ ವೃತ್ತಿಯೇ ಮುಗಿಯುವುದು ।೨೭೩॥ ಈತನ ಭೇಟಿಯಾಯಿತೆಂದರೆ, ಜನ್ಮಜನ್ಮಕ್ಕೂ ಯಾವಾಗಲೂ ಪುನಃ ವಿಯೋಗವಾಗುವುದಿಲ್ಲ. ಈತನಲ್ಲಿ ಮಾತನಾಡಿಸಿದರೆ ಪಾರಮಾರ್ಥವು ಅಪ್ಪಿಕೊಳ್ಳುವುದು ।೨೭೪॥ ಈತನನ್ನು ಆಲಿಂಗಿಸಿದರೆ, ಆಲಿಂಗನದ ಅಪೇಕ್ಷೆಯೇ ಪೂರ್ಣಗೊಳ್ಳುವುದು. ಈತನ ನಾಮಸ್ಮರಣೆಯನ್ನು ಮಾಡಿದರೆ , ಎಲ್ಲ ಪ್ರಕಾರದ ಮಹಾಭಯಗಳು ಇಲ್ಲದಾಗುವುವು ।೨೭೫॥ ಹೀಗಿರುವ ಸತ್ಯ ಸಂಕಲ್ಪನಾದ ಈಶ್ವರನು, ಸರ್ವೇಶ್ವರನಾದ ಶಾರಂಗಧರನು ಸ್ವಲೀಲೆಯಿಂದ ಬಹು ಆತುರತೆಯಿಂದ ನಿಜಧಾಮಕ್ಕೆ ಹೋಗಲು ತತ್ಪರನಾದನು ॥೨೭೬॥

ಪರೀಕ್ಷಿತ ರಾಜನು ಅತ್ಯಂತ ವಿನಮ್ರಭಾವದಿಂದ ಕೇಳಿದನು. ಹೇ ಶುಕಯೋಗೀಂದ್ರನೇ, ಯಾದವರು ಬ್ರಾಹ್ಮಣರ ಭಕ್ತಿಯನ್ನು ವಿನಯಪೂರ್ವಕವಾಗಿ ಮಾಡುತ್ತಿದ್ದರು. ಹೀಗಿರಲು ಅವರಿಗೆ ಶಾಪವು ಹೇಗಾಯಿತು? ಇದನ್ನು ನೀವು ನನಗೆ ತಿಳಿಸಿ ಹೇಳಿರಿ ।೨೭೭॥ ಯಾದವರು ದಾನಧರ್ಮಗಳನ್ನು ಉದಾರಬುದ್ಧಿಯಿಂದ ಮಾಡುತ್ತಿದ್ದರು. ಪರಮ ಪವಿತ್ರರಾಗಿದ್ದರು ಬ್ರಾಹ್ಮಣ ಜನರ ಸೇವೆಯನ್ನು ಆಸಕ್ತಿಯಿಂದ ಮಾಡುತ್ತಿದ್ದರು. ಶ್ರೀಕೃಷ್ಣನ ಆಜ್ಞೆಯಂತೆ ನಡೆಯುತ್ತಿದ್ದರು ।೨೭೮॥ ಯಾದವರಿಗೆ ಪ್ರತ್ಯಕ್ಷವಾಗಿ ಶ್ರೀಕೃಷ್ಣ ಸಂಗತಿಯು ಲಾಭವಾಗಿತ್ತು. ಹಾಗೆಯೇ ಯಾದವರಲ್ಲಿ ಸತತವಾಗಿ ಸಾಧು ಸಂತರ ಸಂಗತಿ ಇತ್ತು. ನಾರದ ಋಷಿಗಳು ಅಲ್ಲಿ ಸದಾ ವಾಸವಾಗಿದ್ದರು. ಹೀಗಿದ್ದರೂ ಯಾದವರಿಗೆ ಶಾಪವು ಹೇಗೆ ತಟ್ಟಿತು? ।೨೭೯॥ ದಕ್ಷನು ಕೊಟ್ಟ ಶಾಪವು ಶ್ರೀಕೃಷ್ಣನ ಸನ್ನಿಧಿಯಿಂದ ಬಾಧಿಸಲಾರದೆಂದು ನಾರದರು ದ್ವಾರಕೆಯಲ್ಲಿ ವಸತಿ ಹೂಡಿದ್ದರು. ಇದಲ್ಲದೇ ಶ್ರೀಕೃಷ್ಣನು ಸ್ವತಃ ಇಲ್ಲಿರಲು ಯಾದವರಿಗೆ ಶಾಪವು ಹೇಗೆ ಉಂಟಾಯಿತು? ।೨೮೦॥

ಯನ್ನಿಮಿತ್ತ: ಸ ವೈ ಶಾಪೋ ಯಾದೃಶೋ ದ್ವಿಜಸತ್ತಮ । ಕಥಮೇಕಾತ್ಮ ನಾಂ ಭೇದ ಏತತ್ ಸರ್ವಂ ವದಸ್ವ ಮೇ ॥೯॥

ಅರ್ಥ: ಈ ಶಾಪವು ಇವರಿಗೆ ಯಾವಕಾರಣದಿಂದಾಯಿತು ? ಅದು ಯಾವ ಪ್ರಕಾರದ್ದಾಗಿತ್ತು? ಅಲ್ಲದೇ ಯಾವಾಗಲೂ ಒಂದೇ ಮನಸ್ಸಿನವರಾದ ಯಾದವರಲ್ಲಿ ಕಲಹ ಹೇಗಾಯಿತು? ನನಗೆ ಹೇಳಿರಿ.

ಶಾಪಾಸಿ ಮೂಳ ಮುಖ್ಯ ಸಂತಾಪು । ಕೈಸೇನಿ ಬ್ರಾಹ್ಮಣಾ ಆಲಾ ಕೋಪು । ಕೋಣೇಪರೀಚಾ ದಿಧಲಾ ಶಾಪು । ಸಂಕ್ಷೇಪರೂಪು ಸಾಂಗಾವಾ ।೨೮೧॥ ಯಾದವ ಸಮಸ್ತ ಸಖೇ ಬಂಧು । ಯಾಂಸಿ ಪ್ರತಿಪಾಳೀ ಸ್ವಯೇ ಗೋವಿಂದು । ಏಕಾತ್ಮತಾ ಸ್ವಗೋತ್ರಸಂಬಂಧು । ತ್ಯಾಮಾಜೀ ಯುದ್ಧಭೇದು ಘಡೇ ಕೈಸಾ ।೨೮೨॥ ''ಆತ್ಮಾ ವೈ ಪುತ್ರ ನಾಮಾಸಿ''। ಹೇ ಶ್ರುತಿ ಪ್ರಮಾಣ ಸರ್ವಾಸೀ । ಯೇಥೇ ಶಾಪ ಬಾಧೀ ಕೃಷ್ಣಾತ್ಮ ಜಾಂಸೀ । ಕೇವೀ ಆಲೇ ಯಾಸೀ ಸತ್ಯತ್ವ ।೨೮೩॥ ಕೃಷ್ಣ ಸಂಕಲ್ಪ ಕುಳನಾಶನ । ತೋಚಿ ಬ್ರಹ್ಮಶಾಪಾಸೀ ಕಾರಣ । ಯಾಲಾಗೀ ಬಾಧಕ ಜಾಣ । ಹೋಯ ಸಂಪೂರ್ಣ ಯಾದವಾ ।೨೮೪॥ ಸೃಷ್ಟಿ ಸ್ರಜೀ ಪಾಳೀ ಸಂಹಾರೀ । ಹೇ ಕೃಷ್ಣ ಸಂಕಲ್ಪಮಾತ್ರೇ ಕರೀ । ತೋ ಯದುಕುಳನಿಧನ ನಿರ್ಧಾರೀ । ತ್ಯಾಚೀ ಅವತಾರಥೋರೀ ಶುಕ ಸಾಂಗೇ ।೨೮೫॥

ಶ್ರೀ ಶುಕ ಉವಾಚ :-

ಭಿಭ್ರದ್ ವಪು: ಸಕಲಸುಂದರ ಸನ್ನಿವೇಶಂ ಕರ್ಮಾಚರನ್ ಭುವಿ ಸುಮಂಗಲಮಾಪ್ತಕಾಮ: ।
ಆಸ್ಥಾಯ ಧಾಮ ರಮಮಾಣ ಉದಾರಕೀರ್ತಿ: ಸಂಹರ್ತುಮೈಚ್ಛತ ಕುಲಂ ಸ್ಥಿತಕೃತ್ಯ ಶೇಷ: ।೧೦॥

ಅರ್ಥ :- ಶುಕಮುನಿಗಳು ಹೇಳಿದರು - ಸಕಲ ಸುಂದರ ವಸ್ತುಗಳ ಸಂಗಮ ಶರೀರನಾದ ಕೃಷ್ಣನು, ಈಗಾಗಲೇ ತನ್ನ ಎಲ್ಲ ಅಪೇಕ್ಷೆಗಳನ್ನು ಪೂರೈಸಿಕೊಂಡಿದ್ದರೂ, ಭೂಮಿಯ ಮೇಲಿದ್ದಾಗ ಯಾವ ಕಾರ್ಯ ಮಾಡಬೇಕಾಗಿಲ್ಲದಿದ್ದರೂ ಅತ್ಯಂತ ಮಂಗಳಕರ ಚಟುವಟಿಕೆಗಳನ್ನು ಕರ್ತವ್ಯದ ದೃಷ್ಟಿಯಿಂದ ನಿರ್ವಹಿಸಿದನು. ಯಾರ ಮಹಿಮೆಯು ಸ್ವಯಮ್ ಅದ್ಭುತವಾದುದೋ ಆ ಪ್ರಭುವು ತನ್ನ ಧಾಮದಲ್ಲಿದ್ದು ಸಂತೋಷಪಡುತ್ತ ಈಗ ತನ್ನ ವಂಶವನ್ನು ನಾಶ ಮಾಡಬಯಸಿದನು. ಮಾಡಬೇಕಾದ ತನ್ನ ಕರ್ತವ್ಯದ ಸ್ವಲ್ಪಭಾಗ ಆತನಿಗೆ ಇನ್ನೂ ಉಳಿದಿತ್ತು.

ಕರ್ಮಾಣಿ ಪುಣ್ಯನಿವಹಾನಿ ಸುಮಂಗಲಾನಿ ಗಾಯಜ್ಜಗತ್ಕಲಿಮಲಾಪಹರಾಣಿ ಕೃತ್ವಾ ।
ಕಾಲಾತ್ಮನಾ ನಿವಸಿತಾ ಯದುದೇವಗೇಹೇ ಪಿಂಡಾರಕಂ ಸಮಗಮನ್ ಮುನಯೋ ನಿಸೃಷ್ಟಾ: ।೧೧॥

ಅರ್ಥ:- ಭಗವಾನ ಶ್ರೀಕೃಷ್ಣನು ಪರಮ ಮಂಗಲಮಯ ಪುಣ್ಯಕಾರಕ ಕರ್ಮಗಳನ್ನು ಮಾಡಿದನು. ಇವುಗಳ ಗಾನವನ್ನು ಮಾಡಿದರೆ, ಜನರ ಎಲ್ಲ ಕಲ್ಮಷಗಳು ನಷ್ಟವಾಗುವುವು. ಈಗ ಭಗವಾನ ಶ್ರೀಕೃಷ್ಣನು ಉಗ್ರಸೇನನ ರಾಜಧಾನಿ ದ್ವಾರಕಾನಗರದ ವಸುದೇವನ ಮನೆಯಲ್ಲಿ ಕಾಲರೂಪನಾಗಿ ಯದುವಂಶವನ್ನು ಸಂಹರಿಸಲು ವಾಸಮಾಡಿದ್ದನು. ಶ್ರೀಕೃಷ್ಣನು ಎಲ್ಲ ವಿಧಿಗಳು ಮುಗಿದಬಳಿಕ ಮುನಿಗಳನ್ನೆಲ್ಲ ಆದರಪೂರ್ವಕವಾಗಿ ಬೀಳ್ಕೊಟ್ಟನು. ಅನಂತರ ಅವರೆಲ್ಲರೂ ಪಿಂಡಾರಕವೆಂಬ ಪುಣ್ಯ ಕ್ಷೇತ್ರಕ್ಕೆ ಹೋದರು.

ರಾಯಾಸೀ ಮ್ಹಣೇ ಶ್ರೀಶುಕು । ಕರ್ತಾ ಕರವಿತಾ ಶ್ರೀಕೃಷ್ಣ ಏಕು । ತೋ ಶಾಪಾರ್ಥ ಆತ್ಯಂತಿಕು । ಆತ್ಮಜಾ ಅವಿವೇಕು ಉಪಜವೀ ಸ್ವಯೇ ।೨೮೬॥

ಶಾಪದ ಮೂಲ ಕಾರಣವೆಂದರೆ, ಕ್ರೋಧ, ಸಂತಾಪಗಳಾಗಿರುವುವು. ಬ್ರಾಹ್ಮಣರಿಗೆ ಈ ಕ್ರೋಧವು ಬರಲು ಯಾವ ಕಾರಣವಾಯಿತು? ಇವರು ಯಾವ ಪ್ರಕಾರದ ಶಾಪವನ್ನು ಕೊಟ್ಟರು? ಇದನ್ನು ನನಗೆ ಸಂಕ್ಷಿಪ್ತವಾಗಿ ತಿಳಿಸಿರಿ ।೨೮೧॥ ಯಾದವರಾದರೂ ಒಡಹುಟ್ಟಿದ ಅಣ್ಣತಮ್ಮಂದಿರಾಗಿದ್ದರು. ಮತ್ತು ಸಾಕ್ಷಾತ್ ಶ್ರೀಕೃಷ್ಣನು ಇವರ ಪಾಲಕನಾಗಿದ್ದನು. ಈ ಒಂದೇ ಗೋತ್ರದ ಆಪ್ತರ ಮತವು ಯಾವಾಗಲೂ ಒಂದೇಯಾಗಿತ್ತು. ಅವರಲ್ಲಿ ವಿರೋಧವು ಎಂದೂ ಸುಳಿಯಲಿಲ್ಲ. ಹೀಗಿದ್ದಮೇಲೆ ಅವರವರಲ್ಲಿ ಯುದ್ಧದ ಪ್ರಸಂಗವು ಏಕೆ ಒದಗಿತು? ।೨೮೨॥

''ಆತ್ಮವೇ ಪುತ್ರನು'' ಎಂಬ ಶ್ರುತಿವಚನವು ಎಲ್ಲರಿಗೂ ಪ್ರಮಾಣವಾಗಿದೆ. ಹೀಗಿರಲು ಶ್ರೀಕೃಷ್ಣನ ವಂಶಕ್ಕೆ ಈ ಶಾಪವು ಹೇಗೆ ಹತ್ತಿತು? ಮತ್ತು ಹೇಗೆ ನಿಜವಾಯಿತು? ।೨೮೩॥ ಸ್ವಕುಲದ ನಾಶಮಾಡಬೇಕೆಂಬುವುದು ಶ್ರೀಕೃಷ್ಣನ ಸಂಕಲ್ಪವಾಗಿತ್ತು. ಇದೇ ಬ್ರಹ್ಮಶಾಪದ ನಿಮಿತ್ತದಿಂದ ಸರ್ವ ಯಾದವರಿಗೆ ಬಾಧಕವಾಯಿತು ।೨೮೪॥ ತನ್ನ ಸಂಕಲ್ಪ ಮಾತ್ರದಿಂದ ಶ್ರೀಕೃಷ್ಣನು ಸೃಷ್ಟಿಯ ಉತ್ಪತ್ತಿ, ಸ್ಥಿತಿ ಮತ್ತು ಲಯಗಳನ್ನು ಮಾಡುವವನು. ಈತನೇ ಯಾದವ ಕುಲದ ನಾಶಮಾಡುವ ನಿಶ್ಚಯ ಮಾಡಿದ್ದಾನೆ. ಹೀಗೆ ಈತನ ಅವತಾರದ ಮಹಿಮೆಯನ್ನು ಶ್ರೀಶುಕನು ಹೇಳುತ್ತಿದ್ದಾನೆ ।೨೮೫॥

ಶುಕಾಚಾರ್ಯರು ಹೇಳಿದರು- ಹೇ, ಪರೀಕ್ಷಿತಿ ರಾಜನೇ, ಶ್ರೀಕೃಷ್ಣನೇ ಎಲ್ಲವನ್ನು ಮಾಡುವವನು, ಮಾಡಿಸುವವನಾಗಿರುವನು. ಈತನು ಸ್ವತ: ಶಾಪಕ್ಕಾಗಿ ತನ್ನ ವಂಶದಲ್ಲಿ ಅತ್ಯಂತ ಅವಿವೇಕವನ್ನು ಉತ್ಪನ್ನಗೊಳಿಸಿರುವನು ।೨೮೬॥

ಸ್ವಯೇ ಜಾವಯಾ ನಿಜಧಾಮಾ । ಥೋರ ಆವಡೀ ಪುರುಷೋತ್ತಮಾ । ಯಾಲಾಗೀ ಅವಶೇಷಕರ್ಮಾ । ಮೇಘಶ್ಯಾಮಾ ಲವಲಾಹೋ ।।೨೮೭।। ಕೇಂವಾ ಹೋಈಲ ಕುಲಕ್ಷಯೋ । ಹೇಚಿ ಮನೀ ಧರೀ ದೇವೋ । ತೋ ದೇವಾಚಾಚೀ ಭಾವೋ। ಶಾಪಾಸಿ ಪಹಾ ಹೋ ದೃಢ ಮೂಳ ।।೨೮೮।। ಜೋ ಕುಲಕ್ಷಯೋ ಚಿಂತೀ । ತ್ಯಾ ಕೃಷ್ಣಾಚೀ ಸುಂದರಮೂರ್ತಿ । ಶುಕ ಸಾಂಗೇ ಪರೀಕ್ಷಿತಿಪ್ರತಿ । ಸ್ವಾನಂದಸ್ಥಿತಿ ಉಲ್ಹಾಸೇ ।।೨೮೯।। ಸಕಲ ಸೌಂದರ್ಯಾ ಅಧಿವಾಸು । ಧರೋನಿ ಮನೋಹರ ನಟವೇಷು । ಲಾವಣ್ಯ ಕಲಾವಿನ್ಯಾಸು । ಆಣೀ ಜಗದೀಶು ನಿಜಾಂಗೇ ।।೨೯೦।। ನವಲ ಸೌಂದರ್ಯಾ ಬೀಕ ಉಠೀ । ಸರ್ವಾಂಗೀ ಗುಂತಲ್ಯಾ ಜನದಿಠೀ । ಕೃಷ್ಣಸ್ವರೂಪೀ ಪಡೇ ಮಿಠೀ । ಹೋತ ಲುಲುಬಟೀ ಡೋಳ್ಯಾ ।।೨೯೧।। ಜೈಸೀ ಗುಳೀ ಮಾಶೀವರೀ ಮಾಶೀ । ತೇವೀ ದಿಠೀವರೀ ದಿಠೀ ಕೃಷ್ಣರೂಪಾಸೀ । ಸರ್ವಾಂಗೀ ವೇಢೋನಿ ಚೌಪಾಸೀ । ಅಹರ್ನಿಶೀ ನೋಸಂಡಿತೀ ।।೨೯೨।। ನಯನ ಲಾಂಚಾವಲೇ ಲೋಭಾ । ದೃಷ್ಟೀಸಿ ನಿಘಾಲಿಯಾ ಜಿಭಾ । ಯಾಪರೀ ಶ್ರೀಕೃಷ್ಣಶೋಭಾ । ಸ್ವಾನಂದಗಾಭಾ ಸಾಕಾರ ।।೨೯೩।। ತೋ ಶ್ರೀಕೃಷ್ಣ ದೇಖಿಲಾ ಜ್ಯಾದಿಠೀ । ತೇ   ಪರತೋನಿ ಮಾಗುತೀ ನುಠೀ। ಅಧಿಕಾಧಿಕ ಘಾಲೀ ಮಿಠೀ । ದೇಖೇ ಸಕಳ ಸೃಷ್ಟೀ ಶ್ರೀಕೃಷ್ಣು ।।೨೯೪।। ಐಶೀ ಡೋಳ್ಯಾ ಆವಡೀ । ಮ್ಹಣೌನಿ ಕಾಮಿನೀ ವರಪಡೀ । ಯಾಲಾಗೀ ಗೋಪಿಕಾ ಗೋಡೀ । ಅತಿಗಾಢೀ ಗೋವಿಂದೀ ।।೨೯೫।। ಕೃಷ್ಣ ಅತಿಸುಂದರ ಮನೋರಮು । ಮ್ಹಣಾಲ ಅಸೇಲ ತ್ಯಾಸಿ ವಿಷಯಧರ್ಮು । ತರೀ ತೋ ಅವಾಪ್ತಕಳಕಾಮು । ಆತ್ಮಾರಾಮ ಶ್ರೀಕೃಷ್ಣ ।।೨೯೬।। ಕೃಷ್ಣ ಅವಾಪ್ತ ಸಕಳಕಾಮು । ತ್ಯಾಸೀ ಕಾ ದ್ವಾರಕಾ ಗೃಹಾಶ್ರಮು । ಸ್ತ್ರೀಯಾ ಪುತ್ರ ರಾಜ್ಯಸಂಭ್ರಮು । ವಿಷಯಕಾಮು ಕಾ ಭೋಗೀ ।।೨೯೭।। ಚಹೂ ಆಶ್ರಮಾ ಪ್ರಕಾಶಕು । ತ್ರಿಲೋಕೀ ಕೃಷ್ಣ ಗೃಹಸ್ಥ ಏಕು । ತೋಚಿ ಬ್ರಹ್ಮಚಾರೀ ನೈಷ್ಠಿಕು । ಅತಿನೇಟಕು ಸನ್ಯಾಸೀ ।।೨೯೮।। ಕೃಷ್ಣದೇಹೀ ನಾಹೀ ದೈವಬಳ । ಲೀಲಾವಿಗ್ರಹೀ ಚಿತ್ಕಲ್ಲೋಳ । ತ್ಯಾಚೀ ಸರ್ವ ಕರ್ಮೇ ಪಾವನಶೀಳ । ಉದ್ಧರೀ ಸಕಳ ಶ್ರವಣೇ ಕಥನೇ ।।೨೯೯।। ಕೃಷ್ಣಕರ್ಮಾಚೇ ಕರೀ ಜೋ ಸ್ಮರಣ । ತೇ ಕರ್ಮ ತೋಡೀ ಕರ್ಮಬಂಧನ । ಐಸೇ ಉದಾರ ಕರ್ಮಾಚರಣ । ಆಚರಲಾ ಶ್ರೀಕೃಷ್ಣ ದೀನೋದ್ಧರಣಾ ।।೩೦೦।।

ಭಗವಾನ ಶ್ರೀಕೃಷ್ಣನಿಗೆ ನಿಜಧಾಮಕ್ಕೆ ಹೋಗುವ ಅತಿಶಯವಾಗಿ ತೀವ್ರ ಇಚ್ಛೆಯಾಗಿತ್ತು. ಆದ್ದರಿಂದ ಉಳಿದ ಈ ಕಾರ್ಯವನ್ನು ಬೇಗನೇ ಮುಗಿಸುವುದಕ್ಕಾಗಿ ತ್ವರೆ ಮಾಡಹತ್ತಿದನು ।।೨೮೭।। ಈ ನನ್ನ ಕುಲದ ಕ್ಷಯವು ಎಂದಾದೀತು? ಎಂಬ ಈ ವಿಚಾರವು ದೇವನ ಮನದಲ್ಲಿ ಬರುತ್ತಿತ್ತು. ಈ ದೇವನ ಈ ಉದ್ದೇಶವೇ ಬ್ರಾಹ್ಮಣರ ಶಾಪಕ್ಕೆ ಮೂಲ ಕಾರಣವಾಯಿತು ।।೨೮೮।। ಈತನು ಮನಃಪೂರ್ವಕವಾಗಿ ತನ್ನ ಕುಲದ ಕ್ಷಯಕ್ಕಾಗಿ ಚಿಂತಿಸುತ್ತಿದ್ದನು. ಈ ಭಗವಾನ ಶ್ರೀಕೃಷ್ಣನ ಸುಂದರ ಮೂರ್ತಿಯ ವರ್ಣನೆಯನ್ನು ಶುಕಾಚಾರ್ಯರು ಪರೀಕ್ಷಿತಿಗೆ ಹೇಳಹತ್ತಿದರು. ಇದರಿಂದ ಇವರ ಸ್ವಾನಂದಸ್ಥಿತಿಗೆ ಸ್ಫೂರ್ತಿಯು ತುಂಬಿತು ।।೨೮೯।। ಎಲ್ಲ ಸೌಂದರ್ಯಗಳ ಕೇವಲ ಅಧಿಷ್ಠಾನವಾಗಿರುವ ಮನೋಹರವಾದ, ಸುಶೋಭಿತವಾದ ವೇಶವನ್ನು ಶ್ರೀಕೃಷ್ಣನು ಧರಿಸಿದ್ದನು. ಈ ಜಗದೀಶ್ವರನು ತನ್ನ ಅಂಗದಲ್ಲಿ ಎಲ್ಲ ಲಾವಣ್ಯದ ಸಂಗ್ರಹ ಮಾಡಿದ್ದನು ।।೨೯೦।। ಅಲೌಕಿಕವಾದ ಈತನ ಸೌಂದರ್ಯವು ಎಂತಹ ಚಮತ್ಕಾರವಾಗಿದ್ದನ್ನು ಹೇಗೆ ವರ್ಣಿಸಬೇಕು? ಈತನ ಪ್ರತಿಯೊಂದು ಅವಯವಗಳ ಮೇಲೆ ಜನರ ದೃಷ್ಟಿಯು ನಟ್ಟಿಕೊಂಡಿತ್ತು. ಕೃಷ್ಣನ ರೂಪವು ಎಷ್ಟೊಂದು ಆಕರ್ಷಕವಾಗಿತ್ತೆಂದರೆ, ಎಷ್ಟು ಸಲ ನೋಡಿದರೂ ತೃಪ್ತಿಯಾಗುತ್ತಿದ್ದಿಲ್ಲ ।।೨೯೧।। ಬೆಲ್ಲಕ್ಕೆ ನೊಣಗಳ ಮೇಲೆ ನೊಣಗಳು ಕೂಡುವಂತೆ, ಕೃಷ್ಣನ ರೂಪಕ್ಕೆ ಜನರ ಕಣ್ಣುಗಳು ಕೂಡಿಕೊಂಡಿದ್ದವು. ಇವು ನಾಲ್ಕೂ ಕಡೆಯಿಂದಲೂ ಸರ್ವಾಂಗಕ್ಕೆ ಮುತ್ತಿಕೊಂಡಿದ್ದವು. ಅಹೋ ರಾತ್ರಿ ಇವು ಆತನನ್ನು ಬಿಡುತ್ತಿದ್ದಿಲ್ಲ ।।೨೯೨।। ಕಣ್ಣುಗಳು ಆ ದರ್ಶನಕ್ಕಾಗಿ ಮೋಹಗೊಂಡಿದ್ದವು ಎಲ್ಲರ ಕಣ್ಣುಗಳಿಗೂ ಸೇವಿಸುವ ನಾಲಿಗೆಗಳೇ ಹುಟ್ಟಿಕೊಂಡವು. ಈಪ್ರಕಾರವಾಗಿ ಶ್ರೀಕೃಷ್ಣಮೂರ್ತಿಯ ಶೋಭೆಯು ಸ್ವಾನಂದದ ಸಾಕಾರದ ಕೇಂದ್ರ ಬಿಂದುಯಾಗಿತ್ತು ।।೨೯೩।। ಯಾರು ಶ್ರೀಕೃಷ್ಣನನ್ನು ಯಾವ ಕಣ್ಣುಗಳಿಂದ ನೋಡುವರೋ, ಅವರ ಕಣ್ಣುಗಳು ಅಲ್ಲಿಂದ ಹಿಂದಕ್ಕೆ ತಿರುಗುವುದೇ ಇಲ್ಲ. ಆ ರೂಪಕ್ಕೆ ಇನ್ನೂ ಹೆಚ್ಚಾಗಿಯೇ ಅಂಟಿಕೊಳ್ಳುವುವು. ಆದ್ದರಿಂದ ಸರ್ವಸೃಷ್ಟಿಯಲ್ಲಿ ಶ್ರೀಕೃಷ್ಣನ ರೂಪವು ಅಲೌಕಿಕವಾಗಿರುವುದು ।।೨೯೪।। ಜನರ ಕಣ್ಣುಗಳಲ್ಲಿ ಶ್ರೀಕೃಷ್ಣನು ಇಷ್ಟೊಂದು ಪ್ರಿಯನಾಗಿರುವುದರಿಂದ ಸ್ತ್ರೀಯರು ಈತನಲ್ಲಿ ಲುಬ್ಧರಾಗುತ್ತಿದ್ದರು. ಹಾಗೆಯೇ ಗೋಪಿಕೆಯರಿಗೆ ಗೋವಿಂದನಲ್ಲಿ ಅತಿಶಯವಾದ ಪ್ರೀತಿ ಇತ್ತು ।।೨೯೫।। ಶ್ರೀಕೃಷ್ಣನು ಅತಿಶಯವಾಗಿ ಸುಂದರನಾಗಿದ್ದನು. ಹೀಗಿದ್ದ ಮೇಲೆ ಈತನು ವಿಷಯಾಸಕ್ತನಿರಬಹುದೆಂಬುವುದು ಸರಿಯಲ್ಲ. ಏಕೆಂದರೆ ಈತನು ಪೂರ್ಣಕಾಮನು, ನಿರಿಚ್ಛನು ಹಾಗೂ ಕೇವಲ ಆತ್ಮಾರಾಮನಾಗಿದ್ದನು ।।೨೯೬।। ಅಹೋ! ಈ ಭಗವಾನ ಶ್ರೀಕೃಷ್ಣನು ಪೂರ್ಣಕಾಮನಾಗಿರಲು, ಈತನಿಗೆ ದ್ವಾರಕೆಯ ಗ್ರಹಸ್ಥಾಶ್ರಮ ಎಲ್ಲಿಯದು? ಹೆಂಡರ, ಮಕ್ಕಳ, ರಾಜ್ಯಲೋಭದ ವಿಷಯಗಳ ಇಚ್ಛೆ ಹೇಗೆ ಇರಲು ಸಾಧ್ಯ? ।।೨೯೭।। ಶ್ರೀಕೃಷ್ಣನು ನಾಲ್ಕು ಆಶ್ರಮದ ಪ್ರಕಾಶಕನಾಗಿರುವನು. ತ್ರೈಲೋಕ್ಯದಲ್ಲಿ ಒಬ್ಬ ಗ್ರಹಸ್ಥನೆಂದರೆ ಈತನೇ. ಈತನೇ ನೈಷ್ಠಿಕ ಬ್ರಹ್ಮಚಾರಿಯು. ಪರಮಹಂಸ ಸನ್ಯಾಸಿಯು ಈತನೇ ।।೨೯೮।। ಶ್ರೀಕೃಷ್ಣನ ದೇಹದಲ್ಲಿ ಪ್ರಾರಬ್ಧದ ಪ್ರಾಧಾನ್ಯತೆಯು ಇದ್ದಿಲ್ಲ. ಈತನು ''ಲೀಲಾ ವಿಗ್ರಹೀ'' ಶುದ್ಧ ಚೈತನ್ಯದ ಸಾಗರದಲ್ಲಿನ ತೆರೆಯಂತೆ ಈತನ ದೇಹವು ದಿವ್ಯವಾಗಿತ್ತು. ಈತನ ಎಲ್ಲ ಕರ್ಮಗಳು ಪುಣ್ಯಶಾಲಿ. ಈತನ ಈ ಕರ್ಮಗಳ ಶ್ರವಣ, ಕಥನೆಗಳಿಂದ ಸರ್ವರ ಉದ್ಧಾರವು ।।೨೯೯।। ಶ್ರೀಕೃಷ್ಣ ಕರ್ಮಗಳ ಸ್ಮರಣೆಯನ್ನು ಮಾಡುವವರ ಕರ್ಮಗಳು ಜೀವದ ಕರ್ಮಬಂಧನಗಳನ್ನು ಮುರಿದು ಹಾಕುವುವು. ಶ್ರೀಕೃಷ್ಣನು ದೀನೋದ್ಧಾರಕ್ಕಾಗಿ ಅಂತಹ ಕರ್ಮಗಳನ್ನು ಆಚರಿಸಿದನು ।।೩೦೦।।

ಶ್ರೀಕೃಷ್ಣ ಅಸೇಲ ಸಕಾಮ । ಮ್ಹಣಾಲ ಯಾಲಾಗೀ ಆಚರೇ ಕರ್ಮ । ಜ್ಯಾಚೇ ನಾಮ ನಿರ್ದಳೀ ಸರ್ವ ಕಾಮ । ತೋ ಸ್ವಯೇ ಸಕಾಮ ಘಡೇ ಕೇವೀ ॥೩೦೧॥ ಶ್ರೀಕೃಷ್ಣಾಚಾ ಸ್ಮರತಾ ಕಾಮ । ಸ್ವಯೇ ಸನ್ಯಾಸೀ ಹೋತೀ ನಿಷ್ಕಾಮ । ಸಕಾಮಾಂಚಾ ನಿರ್ದಳೇ ಕಾಮ । ಐಸೇ ಉದಾರ ಕರ್ಮ ಆಚರಲಾ ॥೩೦೨॥ ತೇಣೇ ಅವಾಪ್ತಸಕಳಕಾಮೇ । ಐಸೀ ಆಚರಲಾ ಅಗಾಧ ಕರ್ಮೇ । ಮಾನವ ತಾರಾವಯಾ ಮನೋಧರ್ಮೇ । ಕೀರ್ತಿ ಮೇಘಶ್ಯಾಮೇ ವಿಸ್ತಾರಿಲೀ ॥೩೦೩॥ ಕೈಸೇ ಕರ್ಮ ಸುಮಂಗಳು । ಕಾನೀ ಪಡತಾಂಚಿ ಅಳುಮಾಳು । ನಾಸೋನಿಯಾ ಕರ್ಮಮಳು । ಜಾತೀ ತಾತ್ಕಾಳು ಶ್ರವಣಾದರೇ ॥೩೦೪॥ ಶ್ರವಣೇ ಉಪಜೇ ಸದ್ಭಾವೋ । ಸದ್ಭಾವೇ ಪ್ರಕಟೇ ದೇವೋ । ತೇಣೇ ನಿರ್ದಳೇ ಅಹಂಭಾವೋ । ಐಸೀ ಉದಾರ ಪಹಾ ಪೋ ಹರಿಕೀರ್ತಿ ॥೩೦೫॥ ಶ್ರೀಕೃಷ್ಣಕೀರ್ತೀಚೇ ಸ್ಮರಣ । ಕಾ ಕರಿತಾ ಶ್ರವಣಪಠಣ । ಮಾಗೇ ಉದ್ಧರಲೇ ಬಹುಸಾಲ ಜನ । ಪುಢೇ ಭವಿಷ್ಯಮಾಣ ಉದ್ಧರತೀ ॥೩೦೬॥ ಜರೀ ಕೇಲಿಯಾ ಹೋತೀ ಪುಣ್ಯರಾಶೀ । ತರೀ ಅವಧಾನ ಹೋಯೇ ಹರಿಕಥೇಸೀ । ಯೇರ್ಹವೀ ಐಕತಾ ಯೇರಾಂಸೀ । ಲಾಗೇ ಅನಾಯಾಸೀ ಅತಿನಿದ್ರಾ ॥೩೦೭॥ ಜೇ ಹರಿಕಥೇಸೀ ಸಾದರ । ತ್ಯಾಂಚ್ಯಾ ಪುಣ್ಯಾ ನಾಹೀ ಪಾರ । ಕೃಷ್ಣೇ ಸುಗಮೋಪಾವ ಕೇಲಾ ಥೋರ । ದೀನೋದ್ಧಾರ ಹರಿಕೀರ್ತನೇ ॥೩೦೮॥ ಕೃಷ್ಣಕೀರ್ತನೇ ಗರ್ಜತಾ ಗೋರೀ । ಲಾಜಿಲ್ಯಾ ಪ್ರಾಯಶ್ಚಿತ್ತಾಂಚಿಯಾ ಕೋಟೀ । ಉತರಲ್ಯಾ ತೀರ್ಥಾಂಚಿಯಾ ಉಟೀ । ನಾಮಾಸಾಠೀ ನಿಜಮೋಕ್ಷು ॥೩೦೯॥ ಐಸಾ ನಿಜಕೀರ್ತಿಉದಾರು । ಪೂರ್ಣಬ್ರಹ್ಮ ಸಾರಂಗಧರು । ಲೀಲಾವಿಗ್ರಹೀ ಸರ್ವೇಶ್ವರು । ಪೂರ್ಣಾವತಾರು ಯದುವಂಶೀ ॥೩೧೦॥ ಉತರಲಾ ಧರಾಭಾರ ಯೇಥ । ಸತ್ಯ ನ ಮನೀ ಶ್ರೀಕೃಷ್ಣನಾಥ । ಯಾದವ ಉರಲೇ ಅತಿಅದ್ಭುತ । ತೇಹೀ ಸಮಸ್ತ ನಿರ್ದಳಾವೇ ॥೩೧೧॥ ಯೇ ಅವತಾರೀ ಹೃಷೀಕೇಶೀ । ಮ್ಹಣೇ ಹೇಚ ಕೃತ್ಯ ಉರಲೇ ಆಮ್ಹಾಸೀ । ನಿರ್ದಳೋನಿ ನಿಜವಂಶಾಸೀ । ನಿಜಧಾಮಾಸೀ ನಿಘಾವೇ ॥೩೧೨॥ ತೋ ಯಾದವಾಮಾಜೀ ಮಾಧವ । ಕಾಲಾತ್ಮಾ ದೇವಾಧಿದೇವ । ಜಾಣೋನಿ ಭವಿಷ್ಯಾಚಾ ಭಾವ । ಕಾಯ ಅಪೂರ್ವ ಕರಿತಾ ಝಾಲಾ ॥೩೧೩॥ ನಾರದಾದಿ ಮುನಿಗಣ । ತ್ಯಾಂಸಿ ಪಾಚಾರೂನಿ ಆಪಣ । ಕರೂ ಸಾಂಗೇ ಶೀಘ್ರ ಗಮನ । ಸ್ವಯೇ ಶ್ರೀಕೃಷ್ಣ ಸಾಕ್ಷೇಪೇ ॥೩೧೪॥

ಭಗವಾನ ಶ್ರೀಕೃಷ್ಣನು ಸಕಾಮನಾಗಿ ಈ ಎಲ್ಲ ಕರ್ಮಗಳನ್ನು ಆಚರಿಸಿದನು ಎಂದು ಯಾರಾದರೂ ಹೇಳಬಹುದು, ಆದರೆ ಯಾರ ನಾಮವು ಸರ್ವಕಾಮಗಳನ್ನು ನಾಶ ಮಾಡುತ್ತಿರುವಾಗ್ಗೆ ಈತನು ಸ್ವತಃ ಸಕಾಮನಾಗಿರಲು ಹೇಗೆ ಸಾಧ್ಯ? ॥೩೦೧॥ ಶ್ರೀಕೃಷ್ಣನ ಲೀಲೆಗಳನ್ನು ಸ್ಮರಿಸಿದರೆ,ಸನ್ಯಾಸಿಗಳು ಸಹ ನಿಷ್ಕಾಮರಾಗುವರು ಮತ್ತು ಸಕಾಮಿಗಳ ಕಾಮನೆಗಳು ನಿವೃತ್ತವಾಗುವುವು ಹೀಗೆ ಉದಾರ,ಅಲೌಕಿಕ ಚರಿತ್ರೆಯನ್ನು ಈತನು ಆಚರಿಸಿದನು ॥೩೦೨॥ ಈ ಮೇಘಶ್ಯಾಮನು ತನ್ನ ಅಗಾಧವಾದ ಕರ್ಮಗಳಿಂದ ಮಾನವರ ಉದ್ಧಾರಕ್ಕಾಗಿ ತನ್ನ ಕೀರ್ತಿಯನ್ನು ಈ ಲೋಕದಲ್ಲಿ ವಿಸ್ತರಿಸಿದನು ॥೩೦೩॥ ಭಗವಂತನ ಸುಮಂಗಲ ಕರ್ಮಗಳನ್ನು ಯಾರು ಅಣುಮಾತ್ರ ಆದರದಿಂದ ಶ್ರವಣ ಮಾಡುವರೋ ಅವರ ಕರ್ಮಫಲಗಳು ಇಲ್ಲದಾಗುವುವು ॥೩೦೪॥ ಈತನ ಕರ್ಮಗಳ ಶ್ರವಣದಿಂದ ಶ್ರೋತೃಗಳ ಮನದಲ್ಲಿ ಸದ್ಭಾವನೆಗಳು ಉದಯವಾಗುವುವು. ಈ ಸದ್ಭಾವನೆಗಳಿಂದ ದೇವರು ಪ್ರಕಟನಾಗುವನು ಮತ್ತು ಅಹಂಕಾರವು ಇಲ್ಲದಾಗುವುದು . ಹೀಗೆ ಶ್ರೀಹರಿಯ ಕೀರ್ತಿಯು ಅಗಾಧವಾಗಿದೆ ॥೩೦೫॥ ಶ್ರೀಕೃಷ್ಣನ ಮಂಗಲಮಯ ಸ್ಮರಣ,ಶ್ರವಣ,ಪಠಣಗಳಿಂದ ಅನೇಕರು ಉದ್ಧಾರರಾಗಿರುವರು. ಇನ್ನು ಮುಂದೆಯೂ ಉದ್ಧಾರರಾಗುವರು ॥೩೦೬॥ ಪೂರ್ವಜನ್ಮಗಳಲ್ಲಿ ಅನೇಕ ಪುಣ್ಯಗಳನ್ನು ಮಾಡಿದ್ದರೆ ಮಾತ್ರ ಹರಿಕಥೆಯಲ್ಲಿ ಲಕ್ಷವು ಕೂಡಿಕೊಳ್ಳುವುದು . ಇಲ್ಲದಿದ್ದರೆ ಹರಿಕಥೆಯನ್ನು ಕೇಳುತ್ತಲೇ ನಿದ್ರೆಯು ಆವರಿಸುವುದು ॥೩೦೭॥ ಯಾರಿಗೆ ಹರಿಕಥೆಯಲ್ಲಿ ಆದರವಿದೆಯೋ ಅವರ ಪುಣ್ಯಕ್ಕೆ ಪಾರವೇ ಇಲ್ಲ. ಕೀರ್ತನೆಯಿಂದ ದೀನರ ಉದ್ಧಾರವಾಗಬೇಕೆಂದು ಶ್ರೀಕೃಷ್ಣನು ಈ ಸುಲಭ ಉಪಾಯವನ್ನು ಮಾಡಿಟ್ಟಿರುವನು ॥೩೦೮॥ ಹರಿಕೀರ್ತನೆಯ ಗರ್ಜನೆಯಿಂದ ಪ್ರಾಯಶ್ಚಿತ್ತಗಳ ಸಮುದಾಯವು ನಾಚಿಕೆಪಡುವುವು. ತೀರ್ಥಗಳ ಹಿರಿಮೆಯು ಕಿರಿದಾಗುವುದು. (ಕೇವಲ ಭಕ್ತಿಯುಕ್ತ ನಾಮದಿಂದ ಮುಕ್ತಿಯು ಪ್ರಾಪ್ತವಾಗುವುದು) ॥೩೦೯॥ ಹೀಗೆ ತನ್ನ ಕೀರ್ತಿಯಿಂದ ಉದಾರನಾಗಿರುವ ಶ್ರೀಕೃಷ್ಣನು ಪರಬ್ರಹ್ಮ ಸರ್ವೇಶ್ವರನಾಗಿದ್ದರೂ ಲೀಲಾ ಶರೀರವನ್ನು ಧರಿಸಿ ಯದುವಂಶದಲ್ಲಿ ಪೂರ್ಣಾವತಾರನಾದನು ॥೩೧೦॥ ಇಲ್ಲಿಯವರೆಗೆ ಪೃಥ್ವಿಯ ಭಾರವು ಇಳಿದಿದೆ ಎಂದು ಶ್ರೀಕೃಷ್ಣನಿಗೆ ಅನಿಸುತ್ತಿಲ್ಲ. ಕಾರಣ, ಅತ್ಯಂತ ಪ್ರಬಲರಾದ ಯಾದವರು ಉಳಿದಿದ್ದರು. ಇವರಿಗೆಲ್ಲರಿಗೂ ನಾಶಗೊಳಿಸಬೇಕೆಂದನು ॥೩೧೧॥ ಈ ಅವತಾರದಲ್ಲಿ ಯಾದವರ ನಾಶದ ಕಾರ್ಯ ಮಾತ್ರ ಉಳಿದಿದೆ. ಈ ತನ್ನ ವಂಶವನ್ನು ಇಲ್ಲದಂತೆ ಮಾಡಿ ತಾನು ನಿಜಧಾಮಕ್ಕೆ ಹೋಗಬೇಕೆಂದು ಶ್ರೀಕೃಷ್ಣನು ಹೇಳಿದನು ॥೩೧೨॥ ಹೀಗಿರುವ ಸಂಕಲ್ಪದಿಂದಲೇ ಯಾದವ ವಂಶದಲ್ಲಿನ ಕಾಲರೂಪವು ಮುಂದಿನ ಭವಿಷ್ಯವನ್ನು ತಿಳಿದು ಯಾವ ಅಪೂರ್ವ ಘಟನೆಯನ್ನು ಉದ್ಭವಿಸಿತು ಎಂಬುವುದನ್ನು ಈಗ ಕೇಳಿರಿ ॥೩೧೩॥ ನಾರದಾದೀ ಮುನಿಗಳಿಗೆಲ್ಲರಿಗೂ ಕರೆಯಿಸಿಕೊಂಡು ಮಂಗಲಕಾರ್ಯವು ಮುಗಿದನಂತರ ಶ್ರೀಕೃಷ್ಣನು ಆಗ್ರಹದಿಂದ ಇಲ್ಲಿಂದ ಶೀಘ್ರವಾಗಿ ಹೊರಡಲು ಹೇಳಿದನು ॥೩೧೪॥

ಜ್ಯಾಪಾಸೂನಿ ಸಂತ ದೂರೀ ಗೇಲೇ । ತೇಥೇ ಅನರ್ಥಾಚೇ ಕೇಲೇ ಚಾಲೇ । ಹೇ ಯಾದವನಿಧಾನಾಲಾಗೀ ವಹಿಲೇ । ಲಾಘವ ಕೇಲೇ ಶ್ರೀಕೃಷ್ಣೇ ॥೩೧೫॥ ಭಕ್ತ ಸಂತ ಸಾಧು ಜ್ಯಾಪಾಸೀ । ತೇಥೇ ರಿಘು ನಾಹೀ ಅನರ್ಥಾಸೀ । ಜಾಣೇ ಹೇ ಸ್ವಯೇ ಹೃಷೀಕೇಶೀ । ಯೇರಾ ಕೋಣಾಸೀ ಕಳೇನಾ ॥೩೧೬॥ ಜೇಥೇ ಸಂತಾಂಚಾ ಸಮುದಾವೋ । ತೇಥೇ ಜನ್ಮ ಮರಣಾ ಅಭಾವೋ । ಹಾ ಶ್ರೀಕೃಷ್ಣಚಿ ಜಾಣೇ ಭಾವೋ । ತೋ ಕರೀ ಉಪಾವೋ ಬ್ರಹ್ಮಶಾಪಾರ್ಥ ॥೩೧೭॥ ಜೇಥೂನಿ ಸಂತ ಗೇಲೇ ದುರೀ । ತೇಥೇ ಸದ್ಯಚಿ ಅನರ್ಥು ವಾಜೇ ಶಿರೀ । ಹೇ ಜಾಣೋನಿಯಾ ಶ್ರೀಹರಿ । ದ್ವಾರಕೆಬಾಹೇರೀ ಋಷಿ ಘಾಲೀ ॥೩೧೮॥ ಋಷಿ ಜಾತ ಹೋತೇ ಸ್ವಾಶ್ರಮಾಸೀ । ತ್ಯಾಂತೇ ಲಾಘವೀ ಹೃಷಿಕೇಶೀ । ತೀರ್ಥಮಿಷೆ ಸಮಸ್ತಾಂಸೀ । ಪಿಂಡಾರಕಾಸೀ ಸ್ವಯೇ ಧಾಡೀ ॥೩೧೯॥ ಪಿಂಡಾರಕಾ ಮುನಿಗಣ । ಶ್ರೀಕೃಷ್ಣೇ ಧಾಡಿಲೇ ಕೋಣ ಕೋಣ । ಜ್ಯಾಂಚೇ ಕರಿತಾಂಚಿ ಸ್ಮರಣ । ಕಳಿಕಾಳ ಆಪಣ ಭಯೇ ಕಾಂಪೇ ॥೩೨೦॥

ವಿಶ್ವಾಮಿತ್ರೋಽಸಿತಃ ಕಣ್ವೋ ದುರ್ವಾಸಾ ಭೃಗುರಂಗಿರಾಃ । ಕಶ್ಯಪೋ ವಾಮದೇವೋಽತ್ರಿರ್ವಸಿಷ್ಠೋ ನಾರದಾದಯಃ॥೧೨॥

ಅರ್ಥ: ವಿಶ್ವಾಮಿತ್ರ, ಅಸಿತ, ಕಣ್ವ, ದುರ್ವಾಸ, ಭೃಗೂ, ಅಂಗೀರಾ, ಕಶ್ಯಪ, ವಾಮದೇವ, ಅತ್ರೀ, ವಸಿಷ್ಠ ಮತ್ತು ನಾರದ ಇತ್ಯಾದಿ ಮಹಾನ್ ಋಷಿಗಳು ದ್ವಾರಕೆಯ ಹತ್ತಿರದ ಪಿಂಡಾರಕ ಕ್ಷೇತ್ರದಲ್ಲಿ ಬಂದು ಉಳಿದರು.

ಜೇ ತಪಸ್ತೇಜೇ ದೇದಿಪ್ಯಮಾನ । ಜೇ ಪೂರ್ಣಜ್ಞಾನೇ ಜ್ಞಾನಘನ । ಜ್ಯಾತೇ ಸದಾ ವಂದೀ ಶ್ರೀಕೃಷ್ಣ । ತೇ ಋಷೀಶ್ವರ ಜಾಣ ನಿಘಾಲೇ ॥೩೨೧॥ ಜೇ ಗಾಯತ್ರೀಮಂತ್ರಾಸಾಠೀ । ಕರೂ ಶಕೆ ಪ್ರತಿಸೃಷ್ಟೀ । ಜೋ ವಿಶ್ವಾಮಿತ್ರ ಮಹಾಹಟೀ । ತೋಹೀ ಉಠಾಉಠೀ ನಿಘಾಲಾ ॥೩೨೨॥ ಜೇಥ ನ ಬಾಧೀ ಉಷ್ಣಶೀತ । ತೇ ಆಶ್ರಮೀ ವಸೇ ಅಸಿತ । ಜ್ಯಾಚೇನಿ ನಾಮೇ ದ್ವಂದ್ವೇ ಪಳತ । ತೋಹೀ ತ್ವರಿತ ನಿಘಾಲಾ ॥೩೨೩॥ ಜೋ ಸೂರ್ಯಾಸಿ ರೀಘೋನಿ ಶರಣ । ಅಶ್ವಾಚೇ ಕರ್ಣೀ ಬೈಸೋನ ಆಪಣ । ಪೂರ್ಣ ಕೇಲೇ ವೇದಪಠಣ । ತೋ ಕಣ್ವಹೀ ಜಾಣ ನಿಘಾಲಾ ॥೩೨೪॥ ಜೋ ದುರ್ವಾಸ ಅತ್ಯಾಹಾರೀ । ಆಹಾರ ಸೇವೂನಿ ನಿರಾಹಾರೀ । ತೋಹೀ ದ್ವಾರಕೇಬಾಹೇರೀ । ತ್ವರೇಕರೂನಿ ನಿಘಲಾ ॥೩೨೫॥ ಭೃಗೂಚಾ ಶ್ರೀಚರಣ । ಹೃದಯೀ ವಾಹೇ ನಾರಾಯಣ । ಮಿರವೀ ಶ್ರೀವತ್ಸ ಭೂಷಣ । ತೋ ಭೃಗುಹೀ ಜಾಣ ನಿಘಾಲಾ ॥೩೨೬॥ ಅಂಗಿರಾ ಸ್ವಯೇ ಸದ್ಬುದ್ಧಿ ಸೃಷ್ಟೀ । ಬೃಹಸ್ಪತಿ ಜನ್ಮಲಾ ಜ್ಯಾಚೇ ಪೋಟೀ । ಜೋ ಪರಮಗುರು ದೇವಾಂಚ್ಯಾ ಮುಕುಟೀ । ತೋಹೀ ಉಠೀ ಗಮನಾರ್ಥ ॥೩೨೭॥

ಏಕೆಂದರೆ, ಎಲ್ಲಿಂದ ಸಂತರು ದೂರ ಹೋಗುವರೋ, ಅಲ್ಲಿ ಅನರ್ಥವು ನಿರ್ಮಾಣಗೊಳ್ಳುವುದು. ಆದ್ದರಿಂದ ಶ್ರೀಕೃಷ್ಣನು ಯಾದವರ ನಾಶಕ್ಕಾಗಿ ಈ ನಿಮಿತ್ತವನ್ನು ಪ್ರಥಮವಾಗಿ ಯೋಜಿಸಿದನು ॥೩೧೫॥ ಭಕ್ತರು, ಸಂತರು ,ಸಾಧುಗಳು ಎಲ್ಲಿರುವರೋ, ಅಲ್ಲಿ ಅನರ್ಥವು ಸಂಭವಿಸುವುದೇ ಇಲ್ಲ. ಈ ರಹಸ್ಯವು ಶ್ರೀಕೃಷ್ಣನಿಗೆ ಮಾತ್ರ ತಿಳಿದಿತ್ತು. ಇತರ ಯಾರಿಗೂ ತಿಳಿಯಲಾರದು ॥೩೧೬॥ ಸಂತ ಸಮುದಾಯವು ಇದ್ದಲ್ಲಿ ಜನ್ಮ ಮರಣಗಳ ಅಭಾವ ಉಂಟಾಗುವುದು. ಈ ವಿಷಯವು ಶ್ರೀಕೃಷ್ಣನಿಗೆ ತಿಳಿದಿದ್ದರಿಂದ ಯಾದವರಿಗೆ ಬ್ರಾಹ್ಮಣರ ಶಾಪವು ಒದಗಲು ಪ್ರಥಮವಾಗಿ ಸಂತರಿಗೆ ದೂರು ಮಾಡುವ ಉಪಾಯ ಮಾಡಿದನು. ॥೩೧೭॥ ಎಲ್ಲಿಂದ ಸಂತರು ದೂರ ಹೋಗುವರೋ, ಅಲ್ಲಿ ಅನರ್ಥವು ತತ್ಕಾಲದಲ್ಲಿ ಒದಗುವುದು. ಇದನ್ನರಿತ ಶ್ರೀಕೃಷ್ಣನು ಋಷಿ ಮಂಡಳಿಯವರಿಗೆ ದ್ವಾರಕೆಯ ಹೊರಗೆ ಹಾಕಿದನು ॥೩೧೮॥ ಋಷಿಗಳೆಲ್ಲರೂ ತಮ್ಮ ತಮ್ಮ ಆಶ್ರಮಗಳಿಗೆ ಹೋಗುವವರಿದ್ದರು. ಆದರೆ, ಈ ಲೀಲಾಧಾರೀ ಶ್ರೀಕೃಷ್ಣನು ಎಲ್ಲರನ್ನೂ ಪಿಂಡಾರಕಕ್ಕೆ ಕಳುಹಿಸಿದನು ॥೩೧೯॥ ಯಾರನ್ನು ಸ್ಮರಿಸಿದ ಮಾತ್ರಕ್ಕೆ ಸ್ವತಃ ಕಲಿಕಾಲನು ಭಯಪಟ್ಟು ನಡುಗಬೇಕೋ ಅಂತಹ ಋಷಿಗಳವರನ್ನು ಶ್ರೀಕೃಷ್ಣನು ಪಿಂಡಾರಕ ತೀರ್ಥಕ್ಕೆ ಕಳುಹಿಸಿಕೊಟ್ಟನು. ಅವರು ಯಾರು ಯಾರು ಎಂಬುವುದು ಈಗ ಕೇಳಿರಿ ॥೩೨೦॥

ತಮ್ಮ ತಪಸ್ಸಿನಿಂದ ದೇದಿಪ್ಯಮಾನರಾದ, ಪೂರ್ಣ ಜ್ಞಾನಸಂಪನ್ನರಾದ ಶ್ರೀಕೃಷ್ಣನಿಂದ ನಿರಂತರ ವಂದಿಸಿಕೊಳ್ಳುವವರಾದ ಶ್ರೇಷ್ಠ ಋಷೀಶ್ವರರು ಪಿಂಡಾರಕ ತೀರ್ಥಕ್ಕೆ ಹೋಗಲು ಹೊರಟರು ॥೩೨೧॥ ಗಾಯತ್ರಿ ಮಂತ್ರದ ಆಧಾರದಿಂದ ಪ್ರತಿಸೃಷ್ಟಿ ನಿರ್ಮಿಸುವ ಸಮರ್ಥರಾದ, ದೃಢ ನಿಶ್ಚಯದ ವಿಶ್ವಾಮಿತ್ರನೂ ಸಹ ಹೊರಟನು ॥೩೨೨॥ ಶೀತ ಉಷ್ಣಗಳ ಬಾಧೆಯಾಗದ ಆಶ್ರಮದಲ್ಲಿ ಇರುವವರು, ಮತ್ತು ಯಾರ ಹೆಸರನ್ನು ಕೇಳಿದಾಕ್ಷಣವೇ ದ್ವಂದ್ವಗಳು ಇಲ್ಲದಾಗುವುವು ಅಂತಹ ಅಸಿತ ಮುನಿಗಳು ತ್ವರಿತವಾಗಿ ಹೊರಟರು ॥೩೨೩॥ ಸೂರ್ಯನಿಗೆ ಶರಣಾಗಿ ಆತನ ಕುದುರೆಯ ಕಿವಿಯ ಹತ್ತಿರ ಆರೂಢನಾಗಿ ವೇದಪಠಣ ಮಾಡಿದಂತಹ ಕಣ್ವಋಷಿಗಳು ಸಹ ಹೊರಟರು. ॥೩೨೪॥ ಅತ್ಯಾಹಾರೀ ಇದ್ದರೂ ನಿರಾಹಾರೀ ಎಂದೆನಿಸಿಕೊಂಡ ಪ್ರಸಿದ್ಧರಾದ ದುರ್ವಾಸಋಷಿಗಳು ಸಹ ದ್ವಾರಕೆಯ ಹೊರಗೆ ಲಗುಬಗೆಯಿಂದ ಹೊರಟರು ॥೩೨೫॥ ಯಾವ ಚರಣದ ಚಿನ್ಹೆಯನ್ನು ಶ್ರೀವತ್ಸಭೂಷಣವನ್ನಾಗಿ ಮಾಡಿ ಸಾಕ್ಷಾತ್ ನಾರಾಯಣನು ತನ್ನ ಹೃದಯದಲ್ಲಿ ಧರಿಸಿರುವನು ಇಂತಹ ಭೃಗುಋಷಿಯೂ ಹೊರಹೋಗಲು ಸಿದ್ಧರಾದರು ॥೩೨೬॥ ಅಂಗಿರಾಋಷಿಗಳೆಂದರೆ ಸೃಷ್ಟಿಯಲ್ಲಿಯೇ ಬುದ್ಧಿಮಾನರು ಇವರ ಉದರದಲ್ಲಿ ದೇವಗುರು ಬೃಹಸ್ಪತೀ ಜನಿಸಿದರು. ಇವರೂ ಸಹ ಹೋಗಲು ಹೊರಟರು ॥೩೨೭॥

ಕಶ್ಯಪಾಚೀ ನವಲಗೋಠೀ । ಸುರ ನರ ಕಿನ್ನರ ಜನ್ಮಲೇ ಪೋಟೀ । ಯಾಲಾಗೀ ಹೇ ಕಶ್ಯಪೀ ಸೃಷ್ಟೀ । ತೋಹೀ
ಕಶ್ಯಪು ಉಠೀ ನಿಜಗಮನೀ ।೧.೨೮॥ ಮುಕ್ತಾ ಮಾಜೀ ಶ್ರೇಷ್ಠ ಭಾವೋ । ವೇದೀ ವಾಖಾಣಿಲಾ ವಾಮದೇವೋ
। ತೋಹೀ ದ್ವಾರಕಾಹೂನಿ ಪಹಾ ಹೋ । ಸ್ವಯಮೇವೋ ನಿಘಾಲಾ ।೧.೨೯॥ ಅತ್ರೀಚೀ ನವಲ ಪರೀ । ತೀನೀ
ದೇವ ಜನ್ಮಲೇ ಉದರೀ । ಶ್ರೀದತ್ತ ವಂದಿಜೇ ಯೋಗೇಶ್ವರೀ । ಹೇ ಅಗಾಧ ಥೋರೀ ಅನಸೂಯೇಚೀ ।೧.೩೦॥
ತೋ ಸ್ವಯೇ ಅತ್ರಿ ಋಷೀಶ್ವರ । ಶ್ರೀಕೃಷ್ಣ ಆಜ್ಞಾ ತತ್ಪರ । ಪಿಂಡಾರಕಾ ಅತಿಸತ್ವರ । ಪ್ರಯಾಣ ಶೀಘ್ರ ತೇಣೇ
ಕೇಲೇ ।೧.೩೧॥ ಜೋ ಶ್ರೀರಾಮಾಚಾ ಸದ್ಗುರು । ಬ್ರಹ್ಮಜ್ಞಾನೇ ಅತಿ ಉದಾರು । ಜ್ಯಾಚೇ ಶಾಟೀಚಾ ಪ್ರತಾಪ
ಥೋರು । ಜಿಂಕಿಲಾ ದಿನಕರು ತಪಸ್ತೇಜೇ ।೧.೩೨॥ ಐಸಾ ಜೋ ವಸಿಷ್ಠ ಮಹಾಮುನೀ । ತೋಹೀ ಕೃಷ್ಣಸಂಜ್ಞಾ
ಮಾನುನೀ । ನಿಘಾಲಾ ದ್ವಾರಕೆಹುನೀ । ಶೀಘ್ರ ಗಮನೀ ಪಿಂಡಾರಕಾ ।೧.೩೩॥ ಆಣಿ ದೇವರ್ಷಿ ನಾರದು । ತ್ಯಾಚಾಹೀ
ಅಗಾಧ ಬೋಧು । ಜ್ಯಾಸೀ ಸರ್ವದಾ ಪರಮಾನಂದು । ಅತಿ ಆಲ್ಹಾದು ಹರಿಕೀರ್ತನೀ ।೧.೩೪॥ ಬ್ರಹ್ಮವೀಣಾ
ಸ್ವಯೇ ವಾತು । ಬ್ರಹ್ಮಪದೇ ಗೀತ ಗಾತು । ಬ್ರಹ್ಮಾನಂದೇ ನಾಚತು । ನಿಘೇ ಡುಲ್ಲತು ಪಿಂಡಾರಕಾ ।೧.೩೫॥
ಇತ್ಯಾದಿ ಹೇ ಮುನಿವರು । ಶ್ರೇಷ್ಠ ಶ್ರೇಷ್ಠ ಋಷೀಶ್ವರು । ಶಿಷ್ಯಸಮುದಾಯೇ ಸಹಪರಿವಾರು । ಮಿಳಾಲೇ ಅಪಾರೂ
ಪಿಂಡಾರಕೀ ।೧.೩೬॥ ಏವಂ ಪಿಂಡಾರಕೀ ಋಷಿ ಸರ್ವ । ಶಾಪಾನುಗ್ರಹೀ ಮಹಾನುಭಾವ । ಮಿಳಾಲೇ ಕೃಷ್ಣವೈಭವ
। ಅತಿಅಪೂರ್ವ ವರ್ಣಿತೀ ।೧.೩೭॥ ಬಾಪ ಲಾಘವೀ ವನಮಾಳೀ । ಕುಲಕ್ಷಯೋ ಘಡಾವಯಾ ತತ್ಕಾಳೀ ।
ಕುಮರೀ ಋಷೀಶ್ವರಾಂಸಿ ರಾಂಡೋಳೀ । ಕಪಟ ಮೇಳೀ ಮಾಂಡಿಲೀ ।೧.೩೮॥ ನಿಂದಾ ಅವಜ್ಞಾ ಹೇಳಣ ।
ಕರಿತಾ ಬ್ರಾಹ್ಮಣಾಂಸಿ ಛಳಣ । ಜೇಥ ಬ್ರಹ್ಮದ್ವೇಷ ವಾಢೇ ಪೂರ್ಣ । ಕುಳಕ್ಷಯೋ ಜಾಣ ತೇ ಠಾಯಿ ।೧.೩೯॥
ಬ್ರಾಹ್ಮಣಾಂಚ್ಯಾ ಕೋಪಾಪುಢೇ । ಕುಳ ಕಾಯಸೇ ಬಾಪುಡೇ । ಮಹಾದೇವಾಚೇ ಲಿಂಗ ಝಡೇ । ಇಂದ್ರಪದವೀ
ಪಡೇ ಸಮುದ್ರೀ ।೧.೪೦॥ ತೋ ಸಮುದ್ರಹೀ ಕೇಲಾ ಕ್ಷಾರ । ಐಸಾ ದ್ವಿಜಕೋಪ ಅತಿದುರ್ಧರ । ಹೇ ಏಕಏಕಾಚೇ
ಚರಿತ್ರ । ತೇ ಋಷಿ ಸಮಗ್ರ ಮಿಳಾಲೇ ತೇಥೇ ।೧.೪೧॥ ಧರಾತಳೀ ಬ್ರಹ್ಮ ಬ್ರಾಹ್ಮಣ । ತ್ಯಾಂಚೇ ವಚನ ಪರಮ
ಪ್ರಮಾಣ । ಹೇ ಸತ್ಯ ಕರಾವಯಾ ಶ್ರೀಕೃಷ್ಣ । ಕುಳನಿರ್ದಳಣ ಸ್ವಯೇ ದಾವೀ ।೧.೪೨॥

ಕಶ್ಯಪರ ಚರಿತ್ರೆಯು ಮಾತ್ರ ಬಹು ವಿಚಿತ್ರವಾಗಿದೆ. ಇವರ ಹೊಟ್ಟೆಯಲ್ಲಿ ಸುರ,ನರ,ಕಿನ್ನರರು ಹುಟ್ಟಿದರು. ಆದ್ದರಿಂದ ಈ "ಸೃಷ್ಟಿಗೆ
ಕಶ್ಯಪಸೃಷ್ಟಿ" ಎಂದು ಹೇಳುತ್ತಾರೆ. ಈ ಕಶ್ಯಪಋಷಿಗಳು ಸಹ ಪ್ರಯಾಣ ಬೆಳೆಸಿದರು ।೧.೨೮॥ ಸರ್ವ ಮುಕ್ತರಲ್ಲಿ ಶ್ರೇಷ್ಠ ಯೋಗ್ಯತೆ ಇರುವ
ಹೀಗೆ ವೇದದಲ್ಲಿಯೂ ಸಹ ವರ್ಣಿಸಿರುವ ವಾಮದೇವರು ಸಹ ದ್ವಾರಕೆಯಿಂದ ಸ್ವತಃ ಹೊರಟರು ।೧.೨೯॥ ಯಾರ ಉದರದಲ್ಲಿ ಮೂರೂ
ದೇವತೆಗಳು ದತ್ತಾತ್ರೇಯ ರೂಪದಲ್ಲಿ ಜನಿಸಿದರು ಮತ್ತು ಈ ದತ್ತಾತ್ರೇಯನಿಗೆ ಮಹಾ ಮಹಾ ಯೋಗಿಗಳು ಸಹ ವಂದಿಸುವರು. ಇದು
ತಾಯೀ ಅನುಸೂಯಾಳ ಮಹಾಭಾಗ್ಯವಾಗಿರುವುದು ।೧.೩೦॥ ಈಕೆಯ ಪತಿ ಅತ್ರಿಋಷಿಗಳು ಶ್ರೀಕೃಷ್ಣನ ಆಜ್ಞೆಯನ್ನು ಮನ್ನಿಸಿ ತ್ವರಿತವಾಗಿ
ಪಿಂಡಾರಕಕ್ಕೆ ಪ್ರಯಾಣವನ್ನು ಮಾಡಿದರು ।೧.೩೧॥ ಶ್ರೀರಾಮಚಂದ್ರನ ಗುರುಗಳಾಗಿರುವ, ಬ್ರಹ್ಮಜ್ಞಾನದಿಂದ ಅತಿಉದಾರರಾದ, ಇವರ
ಶೆಲ್ಲೆಯ ಪ್ರತಾಪವು ಹೇಗಿತ್ತೆಂದರೆ ಅದರ ಪ್ರಕಾಶದಿಂದ ಸೂರ್ಯನ ತೇಜವು ಸಹ ಮಂದಾಯಿತು ।೧.೩೨॥ ಹೀಗಿರುವ ಯಾವ
ವಸಿಷ್ಠಋಷಿಗಳು ಸಹ ಶ್ರೀಕೃಷ್ಣನ ಸೂಚನೆಯನ್ನು ಮಾನ್ಯ ಮಾಡಿ ದ್ವಾರಕೆಯನ್ನು ಬಿಟ್ಟು ಬೇಗನೇ ಪಿಂಡಾರಕಕ್ಕೆ ಹೊರಟರು ।೧.೩೩॥
ಇದರಂತೆಯೇ ದೇವರ್ಷಿಯಾದ ನಾರದರು ಇವರ ಜ್ಞಾನವು ಅಗಾಧವು ನಾರಾಯಣ ನಾರಾಯಣ ಎಂಬ ನಾಮದಿಂದ ಇವರು ಯಾವಾಗಲೂ
ಪರಮಾನಂದದಲ್ಲಿ ಮಗ್ನರಾಗಿರುವರು ಮತ್ತು ಹರಿಕೀರ್ತನೆಯಲ್ಲಿ ಇವರು ಅತಿ ಉಲ್ಹಾಸಿತರಾಗಿರುವರು ।೧.೩೪॥ ಇವರು ಹೆಗಲ ಮೇಲೆ
ಬ್ರಹ್ಮವೀಣೆಯನ್ನು ಧರಿಸಿ, ಬ್ರಹ್ಮಪದಗಳನ್ನು ಹಾಡುತ್ತ, ಹಾಡುತ್ತ ಬ್ರಹ್ಮಾನಂದದಿಂದ ಕುಣಿಯುತ್ತ, ಡೋಲಾಯಿಸುತ್ತ ಪಿಂಡಾರಕದತ್ತ
ನಡೆದರು ।೧.೩೫॥ ಹೀಗೆ ಸರ್ವ ಮುನಿಶ್ರೇಷ್ಠರು, ಮಹಾ ಮಹಾ ಋಷಿವರ್ಯರು ಸಪರಿವಾರಸಹ ಪಿಂಡಾರಕದಲ್ಲಿ ಅಪರಂಪಾರವಾಗಿ
ಒಂದು ಗೂಡಿದರು ।೧.೩೬॥ ತೊಂದರೆ ಕೊಟ್ಟರೆ ಶಾಪವನ್ನು ಕೊಡುವ ಮತ್ತು ಜ್ಞಾನಭಕ್ತಿಯಿಂದ ಪ್ರಸನ್ನಗೊಳಿಸಿದರೆ ಅನುಗ್ರಹಿಸುವ,
ಹೀಗೆ ಶಾಪಾನುಗ್ರಹ ಸಮರ್ಥರಾದ ಸರ್ವ ಮುನಿಗಳು, ಋಷಿಗಳು ಈ ಕ್ಷೇತ್ರದಲ್ಲಿ ಶ್ರೀಕೃಷ್ಣನ ಅದ್ಭುತ ವೈಭವದ ವರ್ಣನೆಯನ್ನು
ಮಾಡಹತ್ತಿದರು ।೧.೩೭॥ ಕಪಟ ನಾಟಕ ಸೂತ್ರಧಾರೀ ಶ್ರೀಕೃಷ್ಣನು ತಕ್ಷಣವೇ ಕುಲಕ್ಷಯಕ್ಕಾಗಿ ತನ್ನ ಹುಡುಗರ ಕಪಟ ಸಮೂಹವನ್ನು
ಕೂಡಿಸಿ ಮಹಾ ಮಹಾ ಋಷಿಗಳಿಗೆ ಕುಚೇಷ್ಟಿಸಲು ಗುರಿಪಡಿಸಿದನು ।೧.೩೮॥ ನಿಂದೆ, ಅಪಮಾನ, ತಿರಸ್ಕಾರ ಅಥವಾ ಕಪಟಾಚಾರ ಇವುಗಳನ್ನು
ಎಸಗಿದರೆ ಬ್ರಾಹ್ಮಣರ ಪೂರ್ಣ ದ್ವೇಷದ ಘಟನೆಯಾಗುವುದು. ಇದರಿಂದ ನಿಶ್ಚಿತವಾಗಿ ಕುಲಕ್ಷಯವಾಗುವುದು ।೧.೩೯॥ ಬ್ರಾಹ್ಮಣರ
ಕೋಪದಿಂದ ಮಹಾದೇವರ ಲಿಂಗವು ಉದುರಿತು. ಇಂದ್ರನ ಸರ್ವ ಸಂಪತ್ತು ಸಮುದ್ರ ಪಾಲಾಯಿತು. ಅಂದಮೇಲೆ ಯಾದವರ ಕುಲಕ್ಷಯದ
ಯಾವ ಕಥೆ? ।೧.೪೦॥ ಸಂಪೂರ್ಣ ಸಮುದ್ರವನ್ನು ಉಪ್ಪಾಗಿ ಮಾಡಿದ ಬ್ರಾಹ್ಮಣರ ಕ್ರೋಧವು ಅತಿ ದುರ್ಧರವಾಗಿದೆ. ಹೀಗೆ ಒಬ್ಬೊಬ್ಬರ
ಚರಿತ್ರೆಯಾಗಿದೆ. ಆದರೆ, ಇಲ್ಲಿ ಎಲ್ಲ ಋಷಿಗಳು ಸೇರಿದ್ದಾರೆ ।೧.೪೧॥ ಬ್ರಾಹ್ಮಣರು ಭೂಲೋಕದ ಬ್ರಹ್ಮದೇವರಾಗಿರುವರು. ಅವರ
ವಚನಗಳು ಪರಮ ಪ್ರಮಾಣವಾಗಿರುವುವು. ಇದನ್ನು ಸತ್ಯ ಮಾಡಿ ತೋರಿಸುವುದಕ್ಕಾಗಿಯೇ ಶ್ರೀಕೃಷ್ಣನು ತನ್ನ ಕುಲದ ಸಂಹಾರ ಮಾಡಿಸಿದನು
।೧.೪೨॥

ಕ್ರೀಡನ್ತಸ್ತಾನುಪವ್ರಜ್ಯ ಕುಮಾರಾ ಯದುನಂದನಾಃ । ಉಪಸಂಗೃಹ್ಯ ಪಪ್ರಚ್ಛುರವಿನೀತಾ ವಿನೀತವತ್ ॥೧೩॥

ಅರ್ಥ:- ಸ್ವಭಾವದಿಂದ ಉನ್ಮತ್ತರಾದ ಯಾದವ ತರುಣರೆಲ್ಲರೂ ಕ್ರೀಡಿಸುತ್ತ, ಈ ಯಾವ ಜ್ಞಾನ ಸಂಪನ್ನರಾದ ಬ್ರಾಹ್ಮಣರಲ್ಲಿ ಬಂದು ನಮ್ರತೆಯ ಕಪಟ ಭಾವದಿಂದ ವಂದಿಸಿ, ವಿಚಾರಿಸಿದರು.

ಯದುನಂದನ ಸಮಸ್ತ । ಕ್ರೀಡಾಕಂದುಕ ಝೇಲಿತ । ಏಕಮೇಕಾಂತೇ ಹಾಣಿತ । ಠಕವೂನ ಪಳತ ಪರಸ್ಪರೇ ॥೩೪೩॥ ಐಸೇ ನಾನಾ ಕ್ರೀಡಾವಿಹಾರ । ಕರೀತ ಆಲೇ ಯದುಕುಮಾರ । ಅಂಗೀ ಶ್ರೀಮದ ಅಪಾರ । ಔದ್ಧತ್ಯೇ ಘೋರ ಉನ್ಮತ್ತ ॥೩೪೪॥ ಅತೀತ-ಅನಾಗತ-ಜ್ಞಾನವಂತ । ಋಷೀಶ್ವರ ಮೀನಲೇ ಸಮಸ್ತ । ಜ್ಯಾಂಚೇ ವಚನ ಯಥಾರ್ಥಭೂತ । ತ್ಯಾಂಸಿಹೀ ನಿಶ್ಚಿತ ಠಕೂ ಆಮ್ಹೀ ॥೩೪೫॥ ಜೈ ಅಘಡತೇ ಯೇಊನಿ ಪಡೇ । ತೈ ಯಾಂಚೇ ವಚನ ಕೈಸೇ ಘಡೇ । ಮ್ಹಣೋನಿ ಋಷೀಶ್ವರಾಪುಢೇ । ಮಾಂಡಿಲೇ ಕುಡೇ ಯದುಕುಮರೀ ॥೩೪೬॥

ತೇ ವೇಷಯಿತ್ವಾ ಸ್ತ್ರೀವೇಷೈಃ ಸಾಂಬಂ ಜಾಂಬವತೀಸುತಮ್ । ಏಷಾ ಪೃಚ್ಛತಿ ವೋ ವಿಪ್ರಾ ಅಂತರ್ವತ್ನ್ಯಸಿತೇಕ್ಷಣಾ ॥೧೪॥

ಅರ್ಥ :- ಯಾದವರು ಜಾಂಬವತಿಯ ಪುತ್ರನಾದ ಸಾಂಬನನ್ನು ಸ್ತ್ರೀವೇಶ ಧರಿಸಿ, ವಿಚಾರಿಸಿದರು- ಹೇ ಪೂಜ್ಯ ಬ್ರಾಹ್ಮಣರೇ, ಈ ಸುಂದರಿಯು ಗರ್ಭವತಿಯಾಗಿರುವಳು, ಈಕೆಯು ತನಗೆ ಹುಟ್ಟುವ ಕೂಸು ಗಂಡಾಗುವುದೋ ಅಥವಾ ಹೆಣ್ಣೋ ಎಂದು ಕೇಳುವಳು.

ಪಹಿಲೇಚ ಶ್ರೀಮದೇ ಉದ್ಧಟ । ತ್ಯಾವರೀ ಮಾಂಡಿಲೇ ಕಪಟ । ಸಾಂಬಾಸ ದೇಊನಿ ಸ್ತ್ರೀನಟ । ಅತಿವರಿಷ್ಠ ಬಾಣಲಾ ॥೩೪೭॥ ತೋ ಶ್ಯಾಮಸುಂದರ ಡೋಳಸು । ಅಂಗಾ ಶೋಭಲಾ ಸ್ತ್ರೀವೇಷು । ಪ್ರಮದಾವೈಭವವಿಲಾಸು । ದಾವೀ ವಿನ್ಯಾಸು ಸಲಜ್ಜ ॥೩೪೮॥ ನಯನೀ ಸೋಗಯಾಚೇ ಕಾಜಳ । ವ್ಯಂಕಟ ಕಟಾಕ್ಷ ಅತಿಚಪಲ । ಸುಂದರ ಸುಕುಮಾರ ವೇಲ್ಹಾಳ । ಚಾಲೇ ನಿಶ್ಚಳ ಹಂಸಗತೀ ॥೩೪೯॥ ವಸ್ತ್ರೇ ಬಾಂಧೋನಿಯಾ ಉದರ । ನಾವೇಕ ಕೇಲೇ ಥೋರ । ತೇಣೇ ತೇ ಗರೋದರ । ದಿಸೇ ಸಾಚಾರ ಇತರಾಂಸೀ ॥೩೫೦॥ ಹಾತ ಘಾಲೂನಿ ಸಖಿಯಾಂಚ್ಯಾ ಖಾಂದೀ । ಚಾಲತಾ ಉದರ ಹಾಲೋ ನೇದೀ । ವಿಸಾಂವಾ ಘೇತ ಪದೋಪದೀ । ಯೇತಾ ಋಷಿವೃಂದೀ ದೇಖಿಲೀ ॥೩೫೧॥ ಐಸಾ ಸ್ತ್ರೀವೇಷ ದಾಖವೂನಿ । ನಾವೇಕ ಅಂತರೇ ರಾಹೋನಿ । ಇತರ ಋಷೀಜವಳೀ ಯೇಊನಿ । ಲೋಟಾಂಗಣೇ ಘಾಲಿತೀ ॥೩೫೨॥ ಪೂರ್ವಶ್ಲೋಕೀಚಾ ಶ್ಲೋಕಾರ್ಥ ತೇಥ । ವ್ಯಾಖ್ಯಾನ ನವ್ಹೇಚ ಸಮಸ್ತ । ಯಾಲಾಗೀ ತೇಂಚಿ ಯೇಥ । ವಾಖಾಣಿಜೇತ ಕಥಾನ್ವಯೇ ॥೩೫೩॥

ಈ ಯಾದವ ಪುತ್ರರು ಚೆಂಡಿನ ಆಟವನ್ನು ಆಡುತ್ತ, ಚೆಂಡನ್ನು ಮೇಲಿಂದ ಮೇಲೆ ಹೊಡೆಯುತ್ತ, ಒಬ್ಬರಿಗೊಬ್ಬರು ಚೆಂಡಿನಿಂದ ಹೊಡೆಯುತ್ತ, ಪೈಮರೆತು ಓಡುತ್ತಿದ್ದರು ॥೩೪೩॥ ಈ ರೀತಿಯಲ್ಲಿ ನಾನಾ ಪ್ರಕಾರವಾಗಿ ತಮಾಷೆಗಳನ್ನು ಮಾಡುತ್ತ ಯಾದವರ ಪುತ್ರರು ಪಿಂಡಾರಕಕ್ಕೆ ಬಂದರು. ಇವರೆಲ್ಲರ ಮನದಲ್ಲಿ ತಮ್ಮ ಶ್ರೀಮಂತಿಕೆಯ ಮದವೇರಿ, ಬಹಳ ಸೊಕ್ಕಿಗೆ ಬಂದಿದ್ದರು ॥೩೪೪॥ ಇವರು ಹೀಗೆ ವಿಚಾರಿಸಿದರು:- ಇಲ್ಲಿ ಭೂತ, ಭವಿಷ್ಯ ಬಲ್ಲಿದ ಅನೇಕ ಮಹರ್ಷಿಗಳು ಕೂಡಿರುವರು. ಇವರ ವಚನಗಳು ಸತ್ಯವಾಗುವುವು ಎಂದು ಹೇಳುವರು. ಆದ್ದರಿಂದ ನಾವು ಇವರಿಗೆ ನಿಶ್ಚಿತವಾಗಿ ಮೋಸ ಮಾಡೋಣ ॥೩೪೫॥ ಏಕೆಂದರೆ, ಯಾವುದು ಎಂದೂ ಆಗಲು ಸಾಧ್ಯವಿಲ್ಲವೋ, ಅಂತಹ ಘಟನೆಯು ಇವರ ಮಾತಿನಿಂದ ಆಗುವುದು ಹೇಗೆ ಸಾಧ್ಯ? ಹೀಗೆ ವಿಚಾರ ಮಾಡಿ ಯಾವ ಈ ಮಹಾ ಮಹಾ ಋಷಿಗಳವರಲ್ಲಿ ಯಾದವ ತರುಣರು ಒಂದು ಕಪಟ ಕಾರ್ಯ ಹಮ್ಮಿಕೊಂಡರು ॥೩೪೬॥

ಮೊದಲೇ ಸಂಪತ್ತಿನ ಮದದಿಂದ ಧುಂದರಾಗಿದ್ದರು. ಈ ಅವಸ್ಥೆಯಲ್ಲಿಯೇ ಪುನಃ ಕಪಟಾಚಾರಣೆಯನ್ನು ಆರಂಭಿಸಿದರು. ಜಾಂಬವಂತಿಯ ಪುತ್ರನಾದ ಸಾಂಬನಿಗೆ ಸ್ತ್ರೀವೇಶವನ್ನು ತೊಡಿಸಿ, ಬಹಳಷ್ಟು ಕಳೆತುಂಬಿ ಶೋಭಿಸುವಂತೆ ಮಾಡಿದರು ॥೩೪೭॥ ಸಾಂಬನು ಶ್ಯಾಮಸುಂದರನಾಗಿದ್ದನು. ಕಣ್ಣುಗಳು ಮೂಲತಃ ಕಪ್ಪಾಗಿ ಸುಂದರವಾಗಿದ್ದವು. ಈತನಲ್ಲಿ ತರುಣ ಸ್ತ್ರೀಯ ಹಾವಭಾವದ ಕಲಾ ಕೌಶಲ್ಯವಿತ್ತು. ಇದರಿಂದ ಈತನಿಗೆ ಸ್ತ್ರೀ ವೇಶವು ಬಹಳ ಸುಂದರವಾಗಿ ಕಾಣಿಸಹತ್ತಿತು. ಈತನು ನಾಚುತ್ತ, ನಾಚುತ್ತ ನಿಂತನು ॥೩೪೮॥ ಈತನು ಕಣ್ಣುಗಳಿಗೆ ಕಾಡಿಗೆ ಹಚ್ಚಿದ್ದನು. ಆಗಾಗ ಕಣ್ಣುಗಳನ್ನು ಹೊರಳಿಸುತ್ತಿದ್ದನು. ದೃಷ್ಟಿಯು ಅತಿಚಪಲವಾಗಿತ್ತು. ಈತನು ಮೊದಲೇ ಸುಂದರನೂ, ನಾಜೂಕನೂ ಆಗಿದ್ದನು. ಈಗ ಈತನು ಹಂಸಗತಿಯಲ್ಲಿ ಮೆಲ್ಲಮೆಲ್ಲನೇ ನಡೆಯಹತ್ತಿದನು ॥೩೪೯॥ ಹೊಟ್ಟೆಯ ಮೇಲೆ ಬಟ್ಟೆಯನ್ನು ಕಟ್ಟಿ ಅದನ್ನು ಚೆನ್ನಾಗಿ ಬೆಳೆಸಿದ್ದರು. ನೋಡುವವರ ಕಣ್ಣಿಗೆ ಈತನು ನಿಜವಾಗಿಯೂ ಗರ್ಭಿಣಿ ಸ್ತ್ರೀಯಂತೆಯೇ ಕಾಣಿಸುತ್ತಿದ್ದನು ॥೩೫೦॥ ಸಾಂಬನು ಸ್ತ್ರೀ ವೇಶದ ಸಖಿಯರ ಹೆಗಲಮೇಲೆ ಕೈ ಇಟ್ಟು ತನ್ನ ಉದರವನ್ನು ಅಲ್ಲಾಡಿಸದೇ ಆಗಾಗ ನಡೆಯದಾಗದಂತೆ ನಟಿಸಿ ಅಲ್ಲಲ್ಲಿ ಕುಳಿತುಕೊಂಡು ವಿಶ್ರಾಂತಿಸುತ್ತ ತಮ್ಮತ್ತ ನಡೆಯುತ್ತ ಬರುತ್ತಿರುವ ಸ್ತ್ರೀರೂಪದ ಪುರುಷನನ್ನು ಋಷಿಗಳು ನೋಡಿದರು. ॥೩೫೧॥ ಹೀಗೆ ಸ್ತ್ರೀವೇಶವನ್ನು ತೋರಿಸಿ ಸಾಂಬನು ಋಷಿಗಳಿಂದ ಸ್ವಲ್ಪ ಅಂತರದಲ್ಲಿ ನಿಂತುಕೊಂಡನು. ಇತರ ಸ್ತ್ರೀವೇಶದ ಕಪಟ ಯಾದವರು ಋಷಿಗಳ ಹತ್ತಿರ ಬಂದು ಅವರಿಗೆ ಲೋಟಾಂಗಣವನ್ನು ಹಾಕಿದರು ॥೩೫೨॥ ಇಲ್ಲಿ ಮೊದಲಿನ ಶ್ಲೋಕದ ಅರ್ಥವನ್ನು ಪೂರ್ಣವಾಗಿ ವ್ಯಾಖ್ಯಾನಿಸಲಿಲ್ಲದಕ್ಕೆ ಕಥೆಯ ಸಂದರ್ಭದಿಂದ ಅದನ್ನೇ ಇಲ್ಲಿ ವರ್ಣಿಸಿದೆ ॥೩೫೩॥

ಭಳಾಚೇನಿ ಮಿಷೇ ಜಾಣಾ । ಋಷೀಂಸಿ ಕರಿತೀ ಪ್ರದಕ್ಷಿಣಾ । ಅತ್ಯಾದರೇ ಲಾಗತೀ ಚರಣಾ । ಮ್ಹಣತೀ ದರ್ಶನಾ ಆಮ್ಹೀ ಆಲೋ ।೫೪॥ ಐಸೇ ಯದುಕುಮಾರ ಸಮಸ್ತ । ಅವಿನೀತ ಪರೀ ವಿನೀತವತ । ಕರ ಜೋಡೋನಿ ರಾಹಿಲೇ ತೇಥ । ಮೃದು ವಿನವೀತ ಮುನೀಶ್ವರಾ ।೫೫॥ ಸ್ವಾಮೀ ಪೈಲ ಹೇ ಜೇ ಸುಂದರ । ತುಮಚ್ಯಾ ವಚನೀ ಭಾವಾರ್ಥ ಥೋರ । ಆಸನ್ನ ಪ್ರಸವ ಗರೋದರ । ಸ್ವಯೇ ಸುಕುಮಾರ ಪುಸೋ ಲಾಜೇ ।೫೬॥

ಪ್ರಷ್ಟುಂ ವಿಲಜ್ಜತೀ ಸಾಕ್ಷಾತ್ ಪ್ರಬ್ರೂತಾಮೋಘದರ್ಶನಾಃ । ಪ್ರಸೋಷ್ಯಂತೀ ಪುತ್ರಕಾಮಾ ಕಿಂಸ್ವಿತ್ ಸಂಜನಯಿಷ್ಯತಿ ।೧೫॥

ಅರ್ಥ: ತಮಗೆ ಸಮಕ್ಷಮವಾಗಿ ಕೇಳಲು ಈಕೆಯು ನಾಚುತ್ತಿದ್ದಾಳೆ. ನಿಮ್ಮ ಜ್ಞಾನವು ಅಗಾಧವಾಗಿದೆ. ಈಕೆಗೆ ಗಂಡುಮಗುವಿನ ಇಚ್ಛೆಯು ಬಹಳಿದೆ. ಪ್ರಸೂತವಾಗುವ ಸಮಯವೂ ಸಮೀಪಿಸಿದೆ. ಆದ್ದರಿಂದ ಈಕೆಗೆ ಏನು ಹುಟ್ಟುವುದೆಂಬುವುದನ್ನು ಹೇಳಿರಿ.

ಸ್ವಯೇ ಯೇಊನ ತುಮ್ಹಾ ಪ್ರತೀ । ತಿಚೇನಿ ನ ಬೋಲವೇ ನಿಶ್ಚಿತೀ । ಯಾಲಾಗೀ ಆಮ್ಹಾ ಹಾತೀ । ಸೇವೇಸಿ ವಿನಂತೀ ಕರವಿಲೀ ।೫೭॥ ತುಮ್ಹಿ ಸತ್ಯದರ್ಶೀ ಸಾಚಾರ । ಅಮೋಘವೀರ್ಯ ತುಮಚೇ ಉತ್ತರ । ಶಿರೀ ವಂದಿತೀ ಹರಿಹರ । ಜ್ಞಾನೇ ಉದಾರ ತುಮ್ಹೀ ಸರ್ವ ।೫೮॥ ಯಾಲಾಗೀ ಹೇ ಗರ್ಭವತೀ । ಸಾದರೇ ಅಸೇ ಪುಸತೀ । ಪುತ್ರಕಾಮ ಅಸೇ ವಾಂಛಿತೀ । ಕಾಯ ನಿಶ್ಚಿತೀ ಪ್ರಸವೇಲ ।೫೯॥ ಐಸೇ ಕಪಟಾಚೇನಿ ವಾಲಭೇ । ವಿನೀತ ಕರ ಜೋಡೂನಿ ಉಭೇ । ತೈಶೀಂಚ ಫಳೇ ಭಾವಗರ್ಭೇ । ಛಳಣಲೋಭೇ ಪಾವತೀ ।೬೦॥ ಕರ್ಮ ಜಾಣೋನಿಯಾ ಕುಡೇ । ನಾರದು ನಾಚೇ ಋಷೀಪುಢೇ । ಮುನಿ ಮ್ಹಣೇ ಯಾದವಾಂಚೇ ಗಾಢೇ । ನಿಧನ ರೋಕಡೇ ವಾಢವಲೇ ।೬೧॥ ಮುಂಗಿಯೇ ನಿಘಾಲಿಯೇ ಪಾಂಖ । ತಿಸೀ ಮರಣ ಯೇ ಅಚೂಕ । ತೇವೀ ಬ್ರಾಹ್ಮಣ ಛಳಣೇ ದೇಖ । ಆವಶ್ಯಕ ಕುಳನಾಶ ।೬೨॥ ಶಾಪೀತ ಆಲಿಯಾ ದ್ವಿಜಜನ । ತ್ಯಾಂಸೀ ಸದ್ಭಾವೇ ಕರಾವೇ ನಮನ । ಮಾರೂ ಆಲಿಯಾ ಬ್ರಾಹ್ಮಣ । ಮಸ್ತಕ ಆಪಣ ವೋಢವಾವೇ ।೬೩॥ ತ್ಯಾ ಬ್ರಾಹ್ಮಣಾಂಸಿ ಛಳಣ । ತೇ ಜಾಣಾವೇ ವಿಷಭಕ್ಷಣ । ವಿಷೇ ನಿಮೇ ಭಕ್ಷಿತ್ಯಾಚಾ ಪ್ರಾಣ । ಕುಳನಿರ್ದಳಣ ದ್ವಿಜಛಳಣೇ ।೬೪॥ ಅವಿದ್ಯ ಸುವಿದ್ಯ ನ ಮ್ಹಣತಾ ಜಾಣ । ಧರಾತಳೀ ಬ್ರಹ್ಮ ಬ್ರಾಹ್ಮಣ । ತ್ಯಾಂಚೇ ಕರೂ ಜಾತಾ ಛಳಣ । ಕುಳನಿರ್ದಳಣ ಆವಶ್ಯಕ ।೬೫॥

ಏವಂ ಪ್ರಲಬ್ಧಾ ಮುನಯಸ್ತಾನೂಚುಃ ಕುಪಿತಾ ನೃಪ । ಜನಯಿಷ್ಯತಿ ವೋ ಮಂದಾ ಮುಷಲಂ ಕುಲನಾಶನಮ್ ।೧೬॥

ಅರ್ಥ: ಹೇ ರಾಜನೇ, ಈ ವಂಚನೆಯಿಂದ ಅಪಮಾನಿತರಾದ ಮುನಿಗಳು ಕೋಪಗೊಂಡು ಬಾಲಕರನ್ನು ಕುರಿತು "ಹೇ ಮೂರ್ಖರೇ, ಆಕೆ ಒಂದು ಕಬ್ಬಿಣದ ಒಣಕೆಗೆ ಜನ್ಮ ನೀಡುತ್ತಾಳೆ. ಅದು ನಿಮ್ಮ ಇಡೀ ವಂಶವನ್ನು ನಾಶಮಾಡುತ್ತದೆ" ಎಂದು ಹೇಳಿದರು.

ಕಪಟತನದ ಅತಿಆದರಭಾವದಿಂದ ಇವರು ಪ್ರದಕ್ಷಣೆಯನ್ನು ಹಾಕಿದರು ಅವರ ಚರಣಗಳ ಮೇಲೆ ಮಸ್ತಕವನ್ನಿಟ್ಟರು ಮತ್ತು ತಮ್ಮ ದರ್ಶನಕ್ಕಾಗಿ ನಾವೆಲ್ಲರೂ ಬಂದಿದ್ದೇವೆ ಎಂದರು ।೫೪॥ ಈ ಪ್ರಕಾರವಾಗಿ ಎಲ್ಲ ಯಾದವರು ಮನದಲ್ಲಿ ನಮ್ರತೆ ಇಲ್ಲದೇ ತೋರಿಕೆಯ ನಮ್ರಭಾವದಿಂದ ಋಷಿಗಳವರ ಮುಂದೆ ನಿಂತುಕೊಂಡು ಮೃದುವಾದ ಸ್ವರದಿಂದ ವಿನಂತಿಸಿದರು ।೫೫॥ ಹೇ ಸ್ವಾಮಿಗಳವರೇ, ಅಗೋ ಅಲ್ಲಿ ನಿಂತಿರುವ ಸುಂದರ ಸ್ತ್ರೀಯಳಿಗೆ ನಿಮ್ಮ ವಚನಗಳಲ್ಲಿ ತುಂಬಾ ಶ್ರದ್ಧೆ ಇದೆ. ಈಕೆಯು ಗರ್ಭವತಿಯಾಗಿ ದಿನಗಳು ತುಂಬಿವೆ, ಈ ಸುಂದರಿಯು ತಮ್ಮಲ್ಲಿ ಸ್ವತಃ ವಿಚಾರಿಸಲು ನಾಚುತ್ತಿದ್ದಾಳೆ ।೫೬॥

ನಿಜವಾಗಿ ಈಕೆಯೇ ನಿಮ್ಮಲ್ಲಿ ಬಂದು ಕೇಳಬಹುದಾಗಿತ್ತು. ಆದರೆ ಈಕೆಗೆ ಮಾತನಾಡಲು ಆಗುತ್ತಿಲ್ಲ. ಆದ್ದರಿಂದ ನಮ್ಮಿಂದ ನಿಮ್ಮಲ್ಲಿಗೆ ವಿನಂತಿಸುತ್ತಿದ್ದಾಳೆ ।೫೭॥ ನೀವು ಸತ್ಯದರ್ಶಿಗಳಾಗಿರುವಿರಿ. ನಿಮ್ಮ ವಚನಗಳು ಎಂದೂ ಅಸತ್ಯವಾಗಲಾರವು. ಹರಿಹರರು ನಿಮ್ಮನ್ನು ವಂದಿಸುವರು. ನೀವೆಲ್ಲರೂ ಜ್ಞಾನದಿಂದ ಮಹಾನ್‌ರಾಗಿರುವಿರಿ ।೫೮॥ ಆದ್ದರಿಂದ ಈ ಗರ್ಭವತಿ ಸ್ತ್ರೀಯಳು ಪುತ್ರನ ಅಪೇಕ್ಷೆಯಿಂದ ನಿಮ್ಮನ್ನು ಪರಮ ಆದರ ಭಾವದಿಂದ ಪ್ರಶ್ನೆಯನ್ನು ಕೇಳುತ್ತಿದ್ದಾಳೆ. ನಿಜವಾಗಿ ಈಕೆಗೆ ಏನು ಜನಿಸುತ್ತದೆ? ಕೃಪೆಮಾಡಿ ಹೇಳಿರಿ ।೫೯॥ ಈ ಪ್ರಕಾರವಾಗಿ ಋಷಿಮುನಿಗಳವರಲ್ಲಿ ಕಪಟಾಚರಣೆಯ ಲೋಭದಿಂದ ನಮ್ರತೆ ತಾಳಿ ಕೈಜೋಡಿಸಿ ಕೇಳಿದರು. ಆಗ ಇವರಿಗೆ ತಮ್ಮ ದುಷ್ಟ ಇಚ್ಛೆಯ ಪ್ರಕಾರವೇ ದುಷ್ಟ ಫಲವನ್ನು ಭೋಗಿಸಬೇಕಾಯಿತು ।೬೦॥ ಈ ಕಪಟವನ್ನರಿತ ನಾರದ ಮುನಿಗಳು ಋಷಿಗಳ ಎದುರಿನಲ್ಲಿ ಕುಣಿಯಲಾರಂಭಿಸಿದರು. ಈಗ ಯಾದವರ ಮರಣವು ಸಮೀಪಿಸಿತು ಎಂದು ಹೇಳಿಕೊಂಡರು ।೬೧॥ ಇರುವೆಗೆ ರೆಕ್ಕೆಗಳು ಹುಟ್ಟಿತೆಂದರೆ ಅದಕ್ಕೆ ಮರಣವು ತಪ್ಪುವುದಿಲ್ಲ. ಅದರಂತೆ ಕಪಟತನದಿಂದ ಬ್ರಹ್ಮಶಾಪಕ್ಕೆ ಅವಶ್ಯವಾಗಿ ಕುಲಕ್ಷಯವಾಗುವುದು. ।೬೨॥ ಬ್ರಾಹ್ಮಣರು ಅಪಶಬ್ದಗಳನ್ನು ನುಡಿಯುತ್ತ ಶಾಪಕೊಡಲು ಮುಂದೆ ಬರಲು, ಅವರಿಗೆ ಸದ್ಭಾವನೆಯಿಂದ ವಂದಿಸಬೇಕು ಇವರು ಹೊಡೆಯಲು ಮುಂದಾದರೆ, ಅವರಲ್ಲಿ ಶಿರವನ್ನು ಬಗ್ಗಿಸಬೇಕು ।೬೩॥ ಹೀಗಿರಲು ಈ ಬ್ರಾಹ್ಮಣ ಮಂಡಳಿಯವರಲ್ಲಿ ಕಪಟಾಚರಣೆ ಮಾಡುವುದೆಂದರೆ ವಿಷಭಕ್ಷಣೆ ಅಲ್ಲವೆ? ವಿಷ ತಿಂದವನು ಸಾಯುವಂತೆ ಬ್ರಾಹ್ಮಣರಲ್ಲಿ ಕಪಟ ಮಾಡುವವರ ಕುಲಕ್ಷಯವಾಗುವದು।೬೪॥ ಬ್ರಾಹ್ಮಣರು ವಿದ್ವಾನರಾಗಿರಲಿ ಅಥವಾ ಅವಿದ್ವಾನರಾಗಿರಲಿ ಇವರಲ್ಲಿ ಭೇದವನ್ನು ತರದೇ ಭೂಲೋಕದ ಬ್ರಹ್ಮರೆಂದು ಮನ್ನಿಸಬೇಕು. ಇದನ್ನು ಬಿಟ್ಟು ಅವರನ್ನು ಪೀಡಿಸಿ ಕಾಡಿಸಲು ಹೋದರೆ ಕುಲಕ್ಷಯವು ನಿಶ್ಚಿತವಾಗಿ ಆಗುವುದು ।೬೫॥

ಐಕೇ ಪರೀಕ್ಷಿತಿ ನೃಪವರಾ । ಯಾಪರೀ ಯಾದವ ಕುಮರಾ । ನಿಧನಾಚಾ ಭರಲಾ ವಾರಾ । ತೇಣೇ ತೇ ಋಷೀಶ್ವರಾ ಛಳೂ ಗೇಲೇ ।೧೬೬॥ ಕಪಟ ಜಾಣೋನಿಯಾ ಸಾಚಾರ । ಘೋರ ಕೋಪಲೇ ಋಷೀಶ್ವರ । ಮಗ ತಿಹೀ ಕಾಯ ವಾಗ್ವಜ್ರ । ಅತಿಅನಿವಾರ ಸೋಡಿಲೇ ।೧೬೭॥ ಅರೇ ಹೇ ಪ್ರಸವೇಲ ಜೇ ಬಾಳ । ತೇ ಹೋಈಲ ಸಕಳಕುಳಾ ಕಾಳ । ನಿಖಿಳ ಲೋಹಾಚೇ ಮುಸಳ । ದೇಖಾಲ ಸಕಳ ಮಂದಭಾಗ್ಯೇ ।೧೬೮॥

ತಚ್ಛೃತ್ವಾತೇಽತಿಸಂತ್ರಸ್ತಾ ವಿಮುಚ್ಯ ಸಹಸಹೋದರಮ್ । ಸಾಂಬಸ್ಯ ದದೃಶುಸ್ತಸ್ಮಿನ್ ಮುಸಲಂ ಕುಲನಾಶನಮ್ ।೧೭॥

ಅರ್ಥ: ಮುನಿಗಳ ಶಾಪವನ್ನು ಕೇಳಿ ಗಾಬರಿಯಾದ ಬಾಲಕರು ಸಾಂಬನ ಮುಚ್ಚಿದ ಹೊಟ್ಟೆಯನ್ನು ತಕ್ಷಣ ತೆರೆದು ನೋಡಲು,ನಿಜವಾಗಿಯೂ ಅಲ್ಲಿ ಕಬ್ಬಿಣದ ಒನಿಕೆ ಇದ್ದುದ್ದನ್ನು ಕಂಡರು.

ಐಕೂನಿ ಶಾಪಾಚೇ ಉತ್ತರ । ಭಯಭೀತ ಝಾಲೇ ಕುಮರ । ಸೋಡೂನಿ ಸಾಂಬಾಚೇ ಉದರ । ಅತಿಸತ್ವರ ಪಾಹತೀ ।೧೬೯॥ ತಂವ ತೇ ಲೋಹಮಯ ಮುಸಳ । ದೇಖತೇ ಝಾಲೇ ತತ್ಕಾಳ । ಮಗ ಭಯಭೀತ ವಿವ್ಹಳ । ಏಕಾಏಕೀ ಸಕಳ ದಚಕೋನಿ ಠೇಲೇ ।೧೭೦॥ ನಾಸಾವೇ ಯಾದವಕುಳ । ಐಸಾ ಶ್ರೀಕೃಷ್ಣಸಂಕಲ್ಪ ಸಬಳ । ತೋಚಿ ಝಾಲಾ ಲೋಹಾಚೇ ಮುಸಳ । ಜಾಣ ತಾತ್ಕಾಳ ಋಷಿವಾಕ್ಯೇ ।೧೭೧॥ ಜೇ ಜೇ ಬ್ರಾಹ್ಮಣಾಚೇ ವಚನ । ತೇ ತೇ ಅನ್ಯಥಾ ಹೋ ನೇದೀ ಶ್ರೀಕೃಷ್ಣ । ಬ್ರಾಹ್ಮಣಾಚೇ ಜೇ ವದೇ ವದನ । ತೇ ಶ್ರೀಕೃಷ್ಣ ಸ್ವಯೇ ಸತ್ಯತ್ವಾ ಆಣೇ ।೧೭೨॥ ದೇಖೋನಿ ಋಷೀಶ್ವರಾಂಚಾ ಕೋಪ । ಐಕೋನಿ ಕುಲಕ್ಷಯಾಚಾ ಶಾಪ । ಯದುಕುಮರಾ ಅತಿಸಂತಾಪ । ಭಯೇ ಕಂಪ ಸೂಟಲಾ ।೧೭೩॥

ಕಿಂ ಕೃತಂ ಮಂದಭಾಗ್ಯೈರ್ನಃ ಕಿಂ ವದಿಷ್ಯಂತಿ ನೋ ಜನಾಃ । ಇತಿ ವಿಹ್ವಲಿತಾ ಗೇಹಾನಾದಾಯ ಮುಸಲಂ ಯಯುಃ ।೧೮॥

ಅರ್ಥ: ಯಾದವ ಕುಮಾರರಿಗೆ ಪಶ್ಚಾತ್ತಾಪವಾಯಿತು. ಅಯೋ! ಅಭಾಗ್ಯರಾದ ನಾವು ಏನೋ ಮಾಡಿಬಿಟ್ಟೆವು! ಈಗ ನಮಗೆ ನಮ್ಮವರು ಏನೆಂದಾರು ! ಹೀಗೆ ಹೇಳುತ್ತ ಅತಿಶಯ ವ್ಯಾಕುಲರಾಗಿ ಈ ಎಲ್ಲ ಯಾದವ ಕುಮಾರರು ಮನೆಗೆ ಹೊರಟುಹೋದರು.

ಆಮ್ಹೀ ಮಂದಭಾಗ್ಯೇ ಕರಂಟೇ । ಋಷೀಶ್ವರು ಕೋಪವಿಲೇ ಶಠೇ । ನಿಜಘಾತಾ ಝಾಲೋ ಪೈಠೇ । ಕುಳಕ್ಷಯೋ ಕಪಟೇ ಜೋಡಿಲಾ ಆಮ್ಹೀ ।೧೭೪॥ ಕಾಯ ಮ್ಹಣತೀ ನಗರಜನ । ಕಾ ಛಳೂ ಗೇಲೇ ಹೇ ಬ್ರಾಹ್ಮಣ । ಚಿಂತಾಕ್ರಾಂತ ಮ್ಲಾನವದನ । ಮುಸಳ ಘೇಊನ ಘರಾ ಆಲೇ ।೧೭೫॥

ತಚ್ಚೋಪನೀಯ ಸದಸೀ ಪರಿಮ್ಲಾನಮುಖಶ್ರಿಯಃ । ರಾಜ್ಞ ಆವೇದಯಾಂಚಕ್ರುಃ ಸರ್ವ ಯಾದವ ಸನ್ನಿಧೌ ।೧೯॥

ಅರ್ಥ :- ಸಂಪೂರ್ಣವಾಗಿ ಕಳಾಹೀನರಾಗಿದ್ದ ಆ ಯದುಕುಮಾರರು ಆ ಒನಿಕೆಯನ್ನು ರಾಜಸಭೆಗೆ ತಂದರು. ಅಲ್ಲಿದ್ದ ಯಾದವರ ಮುಂದೆ ಉಗ್ರಸೇನ ಮಹಾರಾಜನಿಗೆ ಏನು ನಡೆಯಿತೆಂಬುದನ್ನು ಹೇಳಿದರು.

ಹೇ ಪರೀಕ್ಷಿತ ರಾಜನೇ, ಕೇಳು ಈ ಪ್ರಕಾರವಾಗಿ ಈ ಯಾದವರ ಅಂಗದಲ್ಲಿ ಮೃತ್ಯುವಿನ ಗಾಳಿಯು ಪ್ರವೇಶಿದಂತೆ ತೋರುತ್ತಿದೆ. ಆದ್ದರಿಂದಲೇ ಇವರು ಈ ಋಷಿಗಳವರನ್ನು ಪೀಡಿಸಲು ಹೊರಟರು ।೧೬೬॥ ಯಾದವರ ಮನದಲ್ಲಿನ ಕಪಟವನ್ನರಿತು ಋಷಿಗಳು ಬಹಳ ಕೋಪಗೊಂಡರು. ಹಾಗೂ ವಜ್ರಪ್ರಾಯ ಕಟು ನುಡಿಗಳನ್ನು ನುಡಿದರು ।೧೬೭॥ ಎಲವೋ ಮೂಢರೇ, ಈಕೆಯ ಹೊಟ್ಟೆಯಲ್ಲಿ ಹುಟ್ಟುವ ಕೂಸಿನಿಂದ ನಿಮ್ಮ ಸರ್ವ ಕುಲದ ನಾಶವಾಗುವುದು. ನೀವೆಲ್ಲರೂ ದುರ್ದೈವಿಗಳು. ಗಟ್ಟಿಯಾದ ಕಬ್ಬಿಣದ ಒನಿಕೆ ನೀವು ಈಕೆಯ ಹೊಟ್ಟೆಯಿಂದ ಕಾಣುವಿರಿ ।೧೬೮॥

ಈ ಶಾಪವಾಣಿಯನ್ನು ಕೇಳಿ, ಯಾದವ ಕುಮಾರರು ಭಯಭೀತರಾದರು ಮತ್ತು ಕೂಡಲೇ ಸಾಂಬನ ಹೊಟ್ಟೆಯ ಮೇಲಿನ ವಸ್ತ್ರಗಳನ್ನು ತೆಗೆದು ನೋಡಿದರು ।೧೬೯॥ ಆಗ ಅಲ್ಲಿ ಅವರಿಗೆ ಕಬ್ಬಿಣದ ಒನಿಕೆಯು ಕಾಣಿಸಿಕೊಂಡಿತು. ಇದನ್ನು ಕಂಡಾಕ್ಷಣವೇ ಎಲ್ಲರೂ ಗಾಬರಿಯಾಗಿ ಬಹಳ ಖಿನ್ನರಾದರು. ನಿಂತನಿಂತಲ್ಲಿಯೇ ಬೆಚ್ಚಿಬಿದ್ದರು ।೧೭೦॥ ಯಾದವ ಕುಲದ ನಾಶವಾಗಬೇಕೆಂಬುದು ಶ್ರೀಕೃಷ್ಣನ ದೃಢಸಂಕಲ್ಪವಾಗಿತ್ತು. ಈತನೇ ಋಷಿವಾಕ್ಯದಂತೆ ಕಬ್ಬಿಣದ ಒನಿಕೆಯಾದನೋ ಏನೋ ಎನ್ನುವಂತಿತ್ತು ।೧೭೧॥
ಬ್ರಾಹ್ಮಣರ ವಾಕ್ಯವನ್ನು ಶ್ರೀಕೃಷ್ಣನು ಎಂದೂ ಹುಸಿಗೊಳಿಸುವುದಿಲ್ಲ. ಬ್ರಾಹ್ಮಣರ ಮುಖದಿಂದ ಹೊರಟ ಶಬ್ದಗಳನ್ನು ಸ್ವತಃ ಶ್ರೀಕೃಷ್ಣನು ಸತ್ಯವನ್ನಾಗಿ ಮಾಡುವನು ।೧೭೨॥ ಈ ಮಹಾ ಮಹಾ ಋಷಿಗಳ ಕ್ರೋಧವನ್ನು ಕಂಡು ಹಾಗೂ ತಮ್ಮ ಕುಲಕ್ಷಯದ ಶಾಪವನ್ನು ಕೇಳಿ ಯಾದವ ಕುಮಾರರು ಅತಿಶಯವಾಗಿ ಖೇದಗೊಂಡರು. ಮತ್ತು ಇವರಿಗೆ ಭಯದಿಂದ ನಡುಕು ಹುಟ್ಟಿತು ।೧೭೩॥

ಅಭಾಗ್ಯರಾದ ನಾವು ಕಪಟತನದಿಂದ ಋಷಿಗಳ ಮನದಲ್ಲಿ ಕ್ರೋಧವನ್ನು ತಂದೆವು. ನಮ್ಮ ನಾಶಕ್ಕೆ ನಾವೇ ಕಾರಣರಾದೆವು. ನಮಗೆ ಕುಲಕ್ಷಯವು ಪ್ರಾಪ್ತವಾಯಿತು ।೧೭೪॥ ಇದನ್ನೆಲ್ಲ ಕೇಳಿ ನಮ್ಮ ನಗರ ನಿವಾಸಿಗಳು ನಮಗೆ ಏನೆನ್ನುವರೋ! ಇವರು ಬ್ರಾಹ್ಮಣರಲ್ಲಿ ಕಪಟತನವನ್ನು ಮಾಡಲು ಏಕೆ ಹೋಗಬೇಕಾಗಿತ್ತು? ಎಂದು ಜನರು ಕೇಳದೇ ಇರಲಾರರು ಎಂದು ತಿಳಿದು ಬಹಳ ಚಿಂತಾಕ್ರಾಂತರಾಗಿ ಮ್ಲಾನಮುಖದಿಂದ ಎಲ್ಲರೂ ಆ ಒನಿಕೆಯನ್ನು ತೆಗೆದುಕೊಂಡು ಮನೆಗೆ ಬಂದರು ।೧೭೫॥

ಸಭೇಸಿ ವಸುದೇವ ಉಗ್ರಸೇನ । ಬಳರಾಮ ಆಣಿ ಅನಿರುದ್ಧ ಪ್ರದ್ಯುಮ್ನ । ಯಾದವ ಬೈಸಲೇ ಸಂಪೂರ್ಣ । ಏಕಲಾ ಶ್ರೀಕೃಷ್ಣ ತೇಥ ನಾಹೀ ।೩೭೬॥ ಸಭೇ ಸಾಂಬಾದಿ ಆಲೇ ಸಕಳ । ಪುಢಾ ಠೇವೂನಿ ಲೋಹಮುಸಳ । ಶಾಪು ಸಾಂಗಿತಲಾ ಸಮೂಳ । ಮುಖಕಮಳ ಅತಿಮ್ಲಾನ ।೩೭೭॥

ಶ್ರುತ್ವಾಮೋಘಂ ವಿಪ್ರಶಾಪಂ ದೃಷ್ಟ್ವಾ ಚ ಮುಷಲಂ ನೃಪ । ವಿಸ್ಮಿತಾ ಭಯಸಂತ್ರಸ್ತಾ ಬಭೂವುರ್ದ್ವಾರಕೌಕಸಃ ।೨೦॥

ಅರ್ಥ :- ಹೇ ಪರೀಕ್ಷಿತ ರಾಜನೇ, ದ್ವಾರಕೆಯ ನಿವಾಸಿಗಳು ಎಂದಿಗೂ ವಿಫಲವಾಗದ ಬ್ರಾಹ್ಮಣರ ಶಾಪವನ್ನು ಕೇಳಿ, ಆ ಒನಿಕೆಯನ್ನು ಕಂಡಾಗ ಆಶ್ಚರ್ಯಗೊಂಡು ಭಯಗ್ರಸ್ತರಾದರು.

ಐಕೂನ ದ್ವಿಜಾಂಚಾ ಪರಮ ಕೋಪು । ಯಾದವಾ ಸುಟಲಾ ಭಯಕಂಪು । ಮಿಥ್ಯಾ ನವ್ಹೇ ಬ್ರಹ್ಮಶಾಪು । ಭಯೇ ಸಂತಾಪು ಸರ್ವಾಸೀ ।೩೭೮॥ ಪ್ರತ್ಯಕ್ಷ ದೇಖೋನಿ ಮುಸಳ । ಥೋರ ಸುಟಲೀ ಖಳಬಳ । ನಗರ ನಾಗರಿಕಾ ಹಲಕಲ್ಲೋಳ । ಯಾದವಕುಳ ಉರೇ ಕೈಸೇನೀ ।೩೭೯॥ ಐಕ ರಾಯಾ ಪರೀಕ್ಷಿತೀ । ಸಬಳ ಭವಿಷ್ಯಾಚೀ ಗತೀ । ವೃತ್ತಾಂತು ಶ್ರೀಕೃಷ್ಣಾ ನ ಸಾಂಗತೀ । ವಿಚಾರ ಆಪಮತೀ ತಿಹೀ ಕೇಲಾ ।೩೮೦॥

ತಚ್ಚೂರ್ಣಯಿತ್ವಾ ಮುಷಲಂ ಯದುರಾಜಃ ಸ ಆಹುಕಃ । ಸಮುದ್ರಸಲಿಲೇ ಪ್ರಾಸ್ಯಲ್ಲೋಹಂ ಚಾಸ್ಯಾವಶೇಷಿತಮ್ ।೨೧॥

ಅರ್ಥ :- ಈ ಒನಿಕೆಯನ್ನು ಪುಡಿ ಪುಡಿ ಮಾಡಿಸಿ, ಕೊನೆಗೆ ಉಳಿದ ಲೋಹದ ಮುದ್ದೆಯನ್ನು ಉಗ್ರಸೇನ ರಾಜನು ತಾನೇ ಅದನ್ನು ಸಾಗರದ ನೀರಿಗೆ ಬಿಸಾಡಿದನು.

ಆಹುಕ ರಾಜಾ ಉಗ್ರಸೇನ । ತೇಣೇ ಲಾವೂನಿ ಲೋಹಘಣ । ಮುಸಳ ಕರೋನಿಯಾ ಚೂರ್ಣ । ಸಮುದ್ರಿ ಜಾಣ ಘಾಲವಿಲೇ ।೩೮೧॥ ತ್ಯಾ ಮುಸಳಾಚಾ ಮಧ್ಯಕವಳ । ಚೂರ್ಣ ನವ್ಹೇಚ ಅತಿಪ್ರಬಳ । ಉರಲಾ ವಜ್ರಪ್ರಾಯ ಕೇವಳ । ತೋ ಸಮುದ್ರೀ ತತ್ಕಾಳ ಝುಗಾರಿಲಾ ।೩೮೨॥

ಕಶ್ಚಿನ್ಮತ್ಸ್ಯೋಽಗ್ರಸೀಲ್ಲೋಹಂ ಚೂರ್ಣಾನಿ ತರಲೈಸ್ತತಃ । ಉಹ್ಯಮಾನಾನಿ ವೇಲಾಯಾಂ ಲಗ್ನಾನ್ಯಾಸನ್ ಕಿಲೈರಕಾಃ ।೨೨॥
ಮತ್ಸ್ಯೋ ಗೃಹಿತೋ ಮತ್ಸ್ಯಘ್ನೈರ್ಜಾಲನಾಸ್ಯೈಃ ಸಹಾರ್ಣವೇ । ತಸ್ಯೋದರಗತಂ ಲೋಹಂ ಸಶಲ್ಯೇಲುಬ್ಧಕೋಽಕರೋತ್ ।೨೩॥

ಅರ್ಥ :- ಒಂದು ಮೀನು ಆ ಲೋಹದ ಮುದ್ದೆಯನ್ನು ನುಂಗಿತು. ಆ ಲೋಹದ ಪುಡಿಗಳನ್ನು ಅಲೆಗಳು ಪುನಃ ದಡಕ್ಕೆ ತಂದು ಬಿಟ್ಟವು. ಅವು ತೀರದ ನೆಲದಲ್ಲಿ ನಾಟಿ ಅಲ್ಲಿ ದೊಡ್ಡ ದಟ್ಟವಾದ ಜೊತ್ತದ ಮೆಳೆ ಬೆಳೆಯಿತು ।೨೨॥ ಆ ಮೀನು ಇತರ ಮೀನುಗಳೊಂದಿಗೆ ಮೀನುಗಾರನ ಬಲೆಯಲ್ಲಿ ಸಿಕ್ಕಿಕೊಂಡಿತು. ಆ ಬೇಟೆಗಾರ ಜರಾ, ಮೀನಿನ ಹೊಟ್ಟೆಯಲ್ಲಿದ್ದ ಆ ಲೋಹದ ಮುದ್ದೆಯನ್ನು ಹೊರತೆಗೆದು ತನ್ನ ಬಾಣದ ತುದಿಗೆ ಜೋಡಿಸಿದನು. ।೨೩॥

ಸಮುದ್ರ ಲಾಟಾಂಚೇ ಕಲ್ಲೋಳ । ತೇಣೇ ತೇ ಲೋಹಚೂರ್ಣ ಸಕಳ । ಪ್ರಭಾಸೀ ಲಾಗೋನಿ ಪ್ರಬಳ । ಉಠಿಲೇ ತತ್ಕಾಳ ಯೇರಿಕಾರೂಪೇ ।೩೮೩॥

ರಾಜಸಭೆಯಲ್ಲಿ ವಸುದೇವ, ಉಗ್ರಸೇನ, ಬಲರಾಮ, ಅನಿರುದ್ಧ ಪ್ರದ್ಯುಮ್ನ ಇತ್ಯಾದಿ ಪ್ರಮುಖರಿದ್ದರು. ಆದರೆ ಶ್ರೀಕೃಷ್ಣನು ಮಾತ್ರ ಅಲ್ಲಿರಲಿಲ್ಲ ।೩೭೬॥ ಆಗ ಮ್ಲಾನವದನಗಳಿಂದ ಸಾಂಬ ಸಹ ಎಲ್ಲ ಯಾದವ ಕುಮಾರರು ಅಲ್ಲಿಗೆ ಬಂದು ತಂದಿದ್ದ ಕಬ್ಬಿಣದ ಒನಿಕೆಯನ್ನು ಅವರ ಮುಂದಿಟ್ಟು ಶಾಪದ ಸರ್ವ ವೃತ್ತಾಂತವನ್ನು ಸವಿಸ್ತಾರವಾಗಿ ಕಥನ ಮಾಡಿದರು. ।೩೭೭॥

ಬ್ರಾಹ್ಮಣರು ಕ್ರೋಧದಿಂದ ಕೊಟ್ಟ ಈ ಉಗ್ರಶಾಪವನ್ನು ಕೇಳಿ ಸರ್ವ ಯಾದವರಿಗೆ ಭಯದಿಂದ ನಡುಕು ಹುಟ್ಟಿತು. ಬ್ರಾಹ್ಮಣರ ಶಾಪವು ಎಂದೂ ಸುಳ್ಳಾಗಲಾರದೆಂದು ತಿಳಿದು ಎಲ್ಲರಿಗೂ ಬಹಳ ವಿಷಾದವಾಯಿತು ।೩೭೮॥ ಒನಿಕೆಯನ್ನು ಪ್ರತ್ಯಕ್ಷವಾಗಿ ಕಂಡಾಕ್ಷಣವೇ ಎಲ್ಲರೂ ಅತಿಶಯ ಕ್ಷೋಭೆಗೊಂಡರು. ಈಗ ಯಾದವ ಕುಲವು ಹೇಗೆ ಉಳಿದೀತು? ಎಂದು ಸರ್ವ ನಾಗರೀಕರಲ್ಲಿ ಒಂದೇ ಪ್ರಕಾರವಾಗಿ ಗೊಂದಲ, ಆಕ್ರೋಶ ತುಂಬಿಕೊಂಡಿತು ।೩೭೯॥ ರಾಜಾ ಪರೀಕ್ಷಿತಿಯೇ ಕೇಳು, ಭವಿಷ್ಯದ ಗತಿಯು ಬಲು ಬಲಿಷ್ಠವಾಗಿರುವುದು. ಕಾರಣ, ಈ ವೃತ್ತಾಂತವನ್ನು ಇವರಾರೂ ಶ್ರೀಕೃಷ್ಣನಿಗೆ ತಿಳಿಯಗೊಡಲಿಲ್ಲ. ತಮ್ಮ ತಮ್ಮಲ್ಲಿಯೇ ವಿಚಾರಗಳನ್ನು ನಡೆಸಿದರು ।೩೮೦॥

ಯಾದವ ರಾಜನಾದ ಉಗ್ರಸೇನನು ಉಕ್ಕಿನ ಗನ್ನಿನಿಂದ ಆ ಒನಿಕೆಯನ್ನು ಚೂರ್ಣಗೊಳಿಸಿ ಅದನ್ನು ಸಮುದ್ರದಲ್ಲಿ ಒಗೆಸಿದನು ।೩೮೧॥ ಆದರೆ ಮುಸಲದ ಮಧ್ಯಭಾಗವು ಅತ್ಯಂತ ಕಠಿಣವಾಗಿತ್ತು. ಅದು ಏನು ಮಾಡಿದರೂ ಚೂರ್ಣವಾಗಲಿಲ್ಲ. ವಜ್ರದಂತೆ ಕಠಿಣವಾಗಿತ್ತು. ಅದಕ್ಕಾಗಿ ಅದನ್ನು ಇದ್ದಕಿದ್ದಂತೆಯೇ ಲಗುಬಗೆಯಿಂದ ಸಮುದ್ರದಲ್ಲಿ ದೂರ ಬಿಸಾಡಿದರು ।೩೮೨॥

ಸಮುದ್ರದ ತೆರೆಗಳು ಒಗೆದ ಎಲ್ಲ ಚೂರ್ಣವನ್ನು ಪ್ರಭಾಸ ತೀರ್ಥದ ದಂಡೆಗೆ ತಂದು ಬಿಟ್ಟವು. ಕೂಡಲೇ ಅಲ್ಲಿ ಭಯಂಕರ ಸ್ವರೂಪದ ದಟ್ಟವಾದ ನೀರಿನ ಪಾಚಿಗಳು ಬೆಳೆದು ನಿಂತವು ।೩೮೩॥

ಲೋಹಕವಳು ಮೀನ ಗಿಳೀ । ತ್ಯಾ ಮೀನಾತೇ ಸಮುದ್ರಜಳೀ । ಅನ್ಯತ್ರ ಮತ್ಸ್ಯಸಹಿತ ಜಾಳೀ । ಮತ್ಸ್ಯಘ್ನ ಆಕಳೀ ನಿಜಲಾಘವೇ ।।೩೮೪।। ತೋ ಮತ್ಸ್ಯ ಮತ್ಸ್ಯಘ್ನ ವಿದಾರೀ । ತಂವ ಲೋಹ ನಿಘೇ ತ್ಯಾಚೇ ಉದರೀ । ದೇಖೋನಿ ಹರಿಖಲಾ ತೋ ಭಾರೀ । ಹೇ ಆಂತುಡೇ ಕರೀ ತೋ ಸಭಾಗ್ಯ ।।೩೮೫।। ಮತ್ಸ್ಯೋದರೀಚೇ ಲೋಹ ಜಾಣ । ತ್ಯಾಚೇ ಅಚೂಕ ಸಂಧಾನ । ಅಗಾಧ ಪಾರಧೀ ಸಾಧೇ ಪೂರ್ಣ । ಯಾಲಾಗೀ ತೋ ಬಾಣ ಲುಬ್ಧಕೇ ಕೇಲಾ ।।೩೮೬।।

ಭಗವಾನ ಜ್ಞಾತಸರ್ವಾರ್ಥ ಈಶ್ವರೋಽಪಿ ತದನ್ಯಥಾ । ಕರ್ತುಂ ನೈಚ್ಛದ್ವಿಪ್ರಶಾಪಂ ಕಾಲರೂಪ್ಯನ್ವಮೋದತ ।।೮೪।।

ಅರ್ಥ :- ಶ್ರೀಕೃಷ್ಣನು ಎಲ್ಲವನ್ನೂ ತಿಳಿದಿದ್ದನು. ಈ ಶಾಪವನ್ನೂ ಹುಸಿಗೊಳಿಸಲು ಸಾಧ್ಯವಿತ್ತು. ಆದರೆ ಈತನು ಹಾಗೆ ಮಾಡಲಿಲ್ಲ. ಅಲ್ಲದೇ ಆ ಬ್ರಾಹ್ಮಣರ ಶಾಪಕ್ಕೆ ಅನುಮೋದಿಸಿದನು. ಏಕೆಂದರೆ ಈತನು ಸ್ವತಃ ಕಾಲರೂಪಿ ಸಂಹಾರಕನಾಗಿದ್ದನು. ಇದು ಆತನಿಗೆ ಇಷ್ಟವಾಗಿತ್ತು.

ಕೋಣೀ ನ ಸಾಂಗತಾ ಹೇ ಪೇಖಣೇ । ಜಾಣಿತಲೇ ಸರ್ವಜ್ಞೇ ಶ್ರೀಕೃಷ್ಣೇ । ಪರೀ ದ್ವಿಜಶಾಪು ಅನ್ಯಥಾ ಕರಣೇ । ಹೇ ನಿಜಮನೇ ಸ್ಪರ್ಶೇನಾ ।।೩೮೭।। ಮೃತ್ಯುಕಾಲ ಹೇ ನಷ್ಟೇಲ ತ್ಯಾಸೀ । ಪಾಲಟವೇನಾ ದ್ವಿಜಶಾಪಾಸೀ । ಜೋ ನಿಮಾಲ್ಯಾ ಆಣೀ ಗುರುಪುತ್ರಾಸೀ । ಕೃಷ್ಣ ಕಳಿಕಳಾಸೀ ನಿಯಂತಾ ।।೩೮೮।। ಪಾಡೂನಿ ಕಳಿಕಳಾಚೇ ದಾಂತ । ದೇವಕೀಚೇ ಗತಗರ್ಭ ಆಣೀತ । ಈಶ್ವರಾ ಈಶ್ವರೂ ಶ್ರೀಕೃಷ್ಣನಾಥ । ಜಾಣೇ ಸರ್ವಾರ್ಥನಿಜಸಿದ್ಧೀ ।।೩೮೯।। ನಿದ್ರಾ ನ ಮೋಡಿತಾ ತಿಳಭರೀ । ಮಥುರಾ ಆಣಿಲೀ ದ್ವಾರಕೆ ಭೀತರೀ । ಶ್ರೀಕೃಷ್ಣ ಕಾಯ ಏಕ ನ ಕರೀ । ತೋ ಹೀ ಮಮತಾ ನ ಧರೀ ಕುಳಾಚೀ ।।೩೯೦।। ನಿಜಕುಳಕ್ಷಯೋ ಜರ್ಹೀ ಆಲಾ । ತರ್ಹೀ ಅನ್ಯಥಾ ನ ಕರೀ ಬ್ರಾಹ್ಮಣಬೋಲಾ । ಬ್ರಾಹ್ಮಣೇ ಪಾಂಪರಾ ಜರೀ ಹಾಣಿತಲಾ । ತೋ ಹೃದಯೀ ಧರಿಲಾ ಪದಾಂಕು ।।೩೯೧।। ತೇಚಿ ಶ್ರೀವತ್ಸಲಾಂಛನ । ಸಕಳ ಭೂಷಣಾ ಭೂಷಣ । ಹೃದಯೀ ಮಿರವೀ ಶ್ರೀಕೃಷ್ಣ । ಯಾಲಾಗೀ ಪೂರ್ಣ ಬ್ರಹ್ಮಣ್ಯದೇವೋ ।।೩೯೨।। ಶ್ರೀಕೃಷ್ಣ ಶಿರೀ ವಂದೀ ಬ್ರಾಹ್ಮಣ । ಅನ್ಯಥಾ ನ ಕರೀ ಬ್ರಾಹ್ಮಣವಚನ । ಯಾಲಾಗಿ ''ಬ್ರಹ್ಮಣ್ಯದೇವೋ'' ಪೂರ್ಣ । ವೇದ ಬಂದೀಜನ ವರ್ಣಿತೀ ।।೩೯೩।। ಬ್ರಾಹ್ಮಣರೂಪ ಸ್ವಯೇ ಶ್ರೀಹರೀ । ಯಾಲಾಗೀ ಬ್ರಾಹ್ಮಣಾಂಚಾ ಕೈವಾರೀ । ಕುಳಕ್ಷಯೋ ಜಾಹಲಾ ಜರೀ । ತರೀ ದ್ವಿಜಾವರೀ ಕ್ಷೋಭೇನಾ ।।೩೯೪।।

ಮತ್ತು ಒಗೆದ ತುಂಡು ಒಂದು ಮೀನು ನುಂಗಿತು. ಬೇಟೆಗಾರನು ಮೀನಿನ ಜಾಳಿಗೆಯನ್ನು ಸಮುದ್ರದಲ್ಲಿ ಬಿಟ್ಟು ಜಾಳಿಗೆಯನ್ನು ಹೊರಗೆಳೆಯಲು ಇತರ ಮೀನುಗಳ ಜೊತೆಯಲ್ಲಿ ಕಬ್ಬಿಣ ನುಂಗಿದ ಮೀನವೂ ಸಹ ಸಿಕ್ಕಿಕೊಂಡಿತು ।।೩೮೪।। ಆಗ ಬೇಟೆಗಾರನು ಆ ಮೀನವನ್ನು ಕೊಯ್ಯಲು ಅದರ ಹೊಟ್ಟೆಯಲ್ಲಿ ಕಬ್ಬಿಣದ ತುಂಡು ಹೊರಟಿತು. ಇದನ್ನು ಕಂಡ ಬೇಟೆಗಾರನಿಗೆ ಬಹಳ ಸಂತೋಷವಾಯಿತು. ಏಕೆಂದರೆ ಇದು ಭಾಗ್ಯಶಾಲಿಗಳಿಗೆ ಮಾತ್ರ ಸಿಗುವುದು ।।೩೮೫।। ಮೀನಿನ ಹೊಟ್ಟೆಯಲ್ಲಿನ ಕಬ್ಬಿಣದಿಂದ ಗುರಿಯು ತಪ್ಪುವುದಿಲ್ಲ. ಇದರಿಂದ ಅಸಾಧ್ಯ ಬೇಟೆಯು ಸಾಧ್ಯವಾಗುವುದು. ಆದ್ದರಿಂದ ಇವನು ಅದನ್ನು ಬಾಣವನ್ನಾಗಿ ಮಾಡಿಕೊಂಡನು ।।೩೮೬।।

ಉಗ್ರಸೇನನು ಆ ಕಬ್ಬಿಣದ ಒನಿಕೆಯನ್ನು ಚೂರ್ಣಗೊಳಿಸಿ ಅದನ್ನು ಸಮುದ್ರದಲ್ಲಿ ಬೀಸಾಡಿದ ಸಮಾಚಾರವನ್ನು ಶ್ರೀಕೃಷ್ಣನಿಗೆ ಯಾರೂ ತಿಳಿಸಲಿಲ್ಲ. ಆದರೆ, ಸರ್ವಜ್ಞನಾದ ಶ್ರೀಕೃಷ್ಣನು ಈ ವಿಷಯವನ್ನು ಎಂದೋ ತಿಳಿದಿದ್ದನು. ಬ್ರಾಹ್ಮಣರ ವಚನವನ್ನು ಮಿಥ್ಯೆಗೊಳಿಸುವ ವಿಚಾರವು ಶ್ರೀಕೃಷ್ಣನ ಮನದಲ್ಲಿದ್ದಿಲ್ಲ ।।೩೮೭।। ಬ್ರಾಹ್ಮಣರ ಶಾಪವನ್ನು ಬದಲಾಯಿಸುವ ಸಾಮರ್ಥ್ಯವು ಶ್ರೀಕೃಷ್ಣನಲ್ಲಿಯೂ ಇರುವುದಿಲ್ಲವೆಂದು ಯಾರಾದರೂ ಹೇಳಿದರೆ ಅದು ತಪ್ಪಾಗುವುದು. ಏಕೆಂದರೆ, ಈತನು ಮೃತ ಗುರುಪುತ್ರನನ್ನು ತಂದು ಕೊಟ್ಟನು. ಕಲಿಕಾಲಕ್ಕೆ ನಿಯಂತ್ರಿಸುವ ಶ್ರೀಕೃಷ್ಣನಿಗೆ ಈ ಶಾಪವನ್ನು ಹುಸಿಗೊಳಿಸುವುದು ಅಶಕ್ಯವಾಗಿದ್ದಿಲ್ಲ ।।೩೮೮।। ಕಲಿಕಾಲನ ಹಲ್ಲುಗಳನ್ನು ಮುರಿದು ದೇವಕಿಯ ಮೃತ ಪುತ್ರರನ್ನು ಸಹ ತಂದುಕೊಟ್ಟನು. ಶ್ರೀಕೃಷ್ಣನು ಈಶ್ವರನ ಈಶ್ವರನಾಗಿರುವನು. ಈತನಿಗೆ ಅಶಕ್ಯವಾದ ಯಾವುದೂ ಇರುವುದಿಲ್ಲ. ತನ್ನ ಸ್ವಾಭಾವಿಕ ಸಿದ್ಧಿಯಿಂದ ಈತನು ಎಲ್ಲವನ್ನೂ ಅರಿತಿದ್ದನು ।।೩೮೯।। ಮಲಗಿದವರ ನಿದ್ರೆಯನ್ನು ತಿಲಮಾತ್ರವೂ ಭಂಗಗೊಳಿಸದೇ, ಎಲ್ಲರನ್ನೂ ಮಥುರೆಯಿಂದ ದ್ವಾರಕೆಗೆ ತಂದನು. ಈತನಿಗೆ ಅಶಕ್ಯವೆನ್ನುವುದು ಎಲ್ಲಿಯದು? ತನ್ನ ಕುಲದ ಮಮತೆಯನ್ನು ಅಣು ಮಾತ್ರವೂ ಧರಿಸಲಿಲ್ಲ ।।೩೯೦।। ಈಗ ಈತನು ತನ್ನ ಕುಲದ ನಾಶವಾಗುವ ಪ್ರಸಂಗವು ಒದಗಿದರೂ ಈತನು ಬ್ರಾಹ್ಮಣರ ವಚನವನ್ನು ಅಸತ್ಯಗೊಳಿಸಲಿಲ್ಲ. ಈತನು ಬ್ರಾಹ್ಮಣರ ಪಾದಪ್ರಹಾರವನ್ನು ಶ್ರೀವತ್ಸಲಾಂಛನ ರೂಪದಿಂದ ತನ್ನ ಹೃದಯದಲ್ಲಿ ಈಗಲೂ ಧರಿಸಿರುವನು ।।೩೯೧।। ಈ ಶ್ರೀವತ್ಸಲಾಂಛನವು ಸರ್ವ ಭೂಷಣಗಳಿಗೆ ಭೂಷಣವಾಗಿ ಮೆರೆಯುತ್ತಿದೆ. ಆದ್ದರಿಂದ ಈತನು ಪೂರ್ಣಬ್ರಹ್ಮ ಪರಮಾತ್ಮನಾಗಿರುವನು ।।೩೯೨।। ಶ್ರೀಕೃಷ್ಣನು ಸ್ವತಃ ಬ್ರಾಹ್ಮಣರಿಗೆ ವಂದಿಸುವನು. ಅವರ ವಚನಗಳನ್ನು ಎಂದೂ ಮಿಥ್ಯೆಗೊಳಿಸಲಾರನು. ಆದ್ದರಿಂದ ಈತನಿಗೆ ''ಪೂರ್ಣಬ್ರಹ್ಮಣ್ಯ ದೇವ'' ಎಂದು ವೇದವು ಸ್ತುತಿ ಪಾಠಕವಾಗಿ ಸ್ತುತಿಸುತ್ತಿದೆ ।।೩೯೩।। ಶ್ರೀಕೃಷ್ಣನು ಸ್ವತಃ ಬ್ರಾಹ್ಮಣ ಸ್ವರೂಪನಾಗಿದ್ದನು. ಆದ್ದರಿಂದ ಈತನು ಬ್ರಾಹ್ಮಣರ ಸಹಾಯಕನಾಗಿರುವನು. ಕುಲಕ್ಷಯವಾದರೂ ಈತನು ಬ್ರಾಹ್ಮಣರಲ್ಲಿ ಕೋಪಿಸಲಿಲ್ಲ ।।೩೯೪।।

ಐಕೋನಿ ಬ್ರಾಹ್ಮಣಾಂಚಾ ಶಾಪು । ನ ಧರೀ ಮೋಹಾಚಾ ಖಟಾಟೋಪು । ಮ್ಹಣೇ ಸಿದ್ಧೀ ಗೇಲಾ ಕೃತಸಂಕಲ್ಪು । ಕುಲಕ್ಷಯಾನುರೂಪ ಸಂತೋಷೇ ।೯೫॥ ಯಾಪರೀ ಶ್ರೀಗೋವಿಂದು । ಕಾಳರೂಪೀ ಮಾನೀ ಆನಂದು । ಕುಳಕ್ಷಯಾಚಾ ಕ್ಷಿತಿಬಾಧು । ಅಲ್ಪಹೀ ಸಂಬಂಧು ಧರೀನಾ ।೯೬॥ ಪೂರ್ಣ ಸಂತೋಷ ಶ್ರೀಕೃಷ್ಣನಾಥಾ । ಪುಢೀಲ ಅಧ್ಯಾಯೀ ಜ್ಞಾನಕಥಾ । ಅತಿರಸಾಳ ಸ್ವಾನಂದತಾ । ಅವಧಾನ ಶ್ರೋತಾ ಮಜ ದ್ಯಾವೇ ।೯೭॥ ಜೇಥೇ ನಾರದ ಆಣಿ ವಸುದೇವಾ । ಸಂವಾದ ಹೋಈಲ ಸುಹಾವಾ । ಜನಕ ಆಣಿ ಆರ್ಷಭದೇವಾ । ಪ್ರಶ್ನೋತ್ತರೀ ಜೇವಾ ಸ್ವಾನಂದು ದಾಟೇ ।೯೮॥ ಹೇ ರಸಾಳ ಬ್ರಹ್ಮಜ್ಞಾನಮಾತು । ಚಾಖಿವೀನ ನಿಜಪರಮಾರ್ಥು । ಏಕಾಜನಾರ್ದನಾ ವಿನವಿತು । ಶ್ರೋತೇ ಕೃಪಾ ಕರಿತು ಅರ್ಥಾವಬೋಧೆ ।೯೯॥

ಇತಿ ಶ್ರೀಮದ್‌ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಪರಮಹಂಸಸಂಹಿತಾಯಾಂ ಏಕಾಕರ -
ಟೀಕಾಯಾಂ ವಿಪ್ರಶಾಪೋ ನಾಮ ಪ್ರಥಮೋಽಧ್ಯಾಯಃ ॥೧॥

॥ ಶ್ರೀಕೃಷ್ಣಾರ್ಪಣಮಸ್ತು ॥

ಬ್ರಾಹ್ಮಣರ ಶಾಪವನ್ನು ಕೇಳಿ ಶ್ರೀಕೃಷ್ಣನು ಮೋಹದಲ್ಲಿ ಬೀಳಲಿಲ್ಲ. ತದ್ವಿರುದ್ಧವಾಗಿ ಕುಲಕ್ಷಯ ವಿಷಯಕ್ಕೆ ತನ್ನ ಸಂಕಲ್ಪವು ಈಡೇರಿತೆಂದು ಸಂತೋಷಪಟ್ಟನು ।೯೫॥ ಈ ಪ್ರಕಾರವಾಗಿ ಕಾಲರೂಪ ಶ್ರೀಕೃಷ್ಣನು ಇದಕ್ಕಾಗಿ ಆನಂದಪಟ್ಟನು. ಮುಂದಾಗುವ ಕುಲಕ್ಷಯ ವಿಷಯಕ್ಕೆ ಈತನ ಮನದಲ್ಲಿ ಕಿಂಚಿತ್ತಾದರೂ ಖೇದವಾಗಲಿಲ್ಲ ।೯೬॥ ಈಗ ಮುಂದಿನ ಅಧ್ಯಾಯದಲ್ಲಿ ಅತ್ಯಂತ ರಸಾಳವಾದ ನಿಜಾನಂದರೂಪ ಜ್ಞಾನಕಥೆಯನ್ನು ನಾನು ಹೇಳುವೆನು. ಆದ್ದರಿಂದ ಶ್ರೋತೃಗಳು ಈ ಕಥೆಯಲ್ಲಿ ಆದರದಿಂದ ಲಕ್ಷಕೊಡಬೇಕು ।೯೭॥ ಅದರಲ್ಲಿ ನಾರದ ಮತ್ತು ವಸುದೇವ ಇವರ ಸುಂದರವಾದ ಸಂವಾದವಾಗುವುದು. ಜನಕ ಮತ್ತು ಆರ್ಷಭದೇವ ಇವರ ಪ್ರಶ್ನೋತ್ತರಗಳನ್ನು ಕೇಳಿ ಜೀವವು ಸ್ವಾನಂದಭರಿತವಾಗುವುದು ।೯೮॥ ಈ ಬ್ರಹ್ಮಜ್ಞಾನದ ಕಥೆಯು ಅತ್ಯಂತ ರಸಾಳವಾಗಿದೆ. ಇದನ್ನು ನಾನು ಶ್ರೋತೃಗಳವರಿಗೆ ಪಾರಮಾರ್ಥರೂಪದಿಂದ ಚೀಪಿಸುವೆನು. ಈ ಕಥೆಯ ಅರ್ಥ ಮಾಡಿಕೊಳ್ಳುವ ಕೃಪೆಯನ್ನು ಶ್ರೋತೃಗಳು ಮಾಡಬೇಕು ಎಂದು ಜನಾರ್ದನಸ್ವಾಮಿಯ ಶಿಷ್ಯನಾದ ಏಕನಾಥನ ಎಲ್ಲರಲ್ಲಿಯೂ ನಮ್ರ ವಿನಂತಿಯಾಗಿರುವುದು ।೯೯॥

ಇತಿ ಶ್ರೀಮದ್ಭಾಗವತ ಮಹಾಪುರಾಣದ ಏಕಾದಶಸ್ಕಂಧದ ಪರಮಹಂಸ ಸಂಹಿತೆಯ ಏಕನಾಥ ಮಹಾರಾಜರ ಭಾಷ್ಯೆಯ
ವಿಪ್ರಶಾಪೋನಾಮದ ಮೊದಲನೆಯ ಅಧ್ಯಾಯ ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಎರಡನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಗೋಪಾಲಕೃಷ್ಣಾಯ ನಮಃ ॥ ಜಯ ಜಯ ದೇವಾಧಿದೇವಾ । ಭೋಗಿಸೀ ಗುರುತ್ವೇ ಸುಹಾವಾ । ವಿಶ್ವೀ ವಿಶ್ವಾತ್ಮಾ ಯೇ ಸದ್ಭಾವಾ । ತೂ ಕೃಪೇನೇ ಜೇಂವ್ಹಾ ಅವಲೋಕಿಸೀ ॥೧॥ ತೇ ವಿಶ್ವೀ ಜೋ ವಿಶ್ವವಾಸೀ । ತ್ಯಾತೇ ವಿಶ್ವಾಸೀ ಮ್ಹಣಸೀ । ತೇಣೇ ವಿಶ್ವಾಸೇ ಪ್ರಸನ್ನ ಹೋಸೀ । ತೈ ಪಾಯಾಪಾಶೀ ಪ್ರವೇಶು ॥೨॥ ತ್ಯಾ ಚರಣಾರವಿಂದಕೃಪಾದೃಷ್ಟೀ । ಅಹಂ ಸೋಽಹಂ ಸುಟಲ್ಯಾ ಗಾಂಠೀ । ಏಕಸರೇ ತುಝ್ಯಾ ಪೋಟೀ । ಉಠಾಉಠೀ ಪ್ರವೇಶಲೋ ॥೩॥ ಯಾಲಾಗೀ ತೂ ನಿಜಾತ್ಮಮಾಯೇ । ಯಾ ಹೇತೂ ಜಂವ ಪಾಹೋ ಜಾಯೇ । ತಂವ ಬಾಪಪಣ ತುಜಮಾಜೀ ಆಹೇ । ಅಭಿನವ ಕಾಯೇ ಸಾಂಗಾವೇ ॥೪॥ ಯೇಥ ಮಾತಾಪಿತಾ ದೋಂನೀ । ವೇಗಳೀ ಅಸತೀ ಜನೀ । ತೇ ದೋಂನೀ ಏಕ ಕರೋನೀ । ಏಕಾ ಜನಾರ್ದನೀ ನಿಜತಾನ್ಹೇ ॥೫॥ ಆತಾ ಉಭಯಸ್ನೇಹೇ ಸ್ನೇಹಾಳಾ । ವಾಢವಿಸೀ ಮಜ ಬಾಳಾ । ಪರೀ ನಿತ್ಯ ನವಾ ಸೋಹಳಾ । ಸಂಭ್ರಮ ಆಗಳಾ ನಿಜಬೋಧಾಚಾ ॥೬॥ ಶಿವ ಶಕ್ತಿ ಗಣೇಶು । ವಿಶ್ವ ವಿಷ್ಣು ಚಂಡಾಂಶು । ಐಸಾ ಅಲಂಕಾರ ಬಹುವಸು । ನಿಜವಿಲಾಸು ಲೇವವಿಶೀ ॥೭॥ ಯಾಪರೀ ಮಜ ನಿಜಬಾಳಾ । ಲೇಣೇ ಲೇವವಿಶೀ ಸ್ವಲೀಳಾ । ಆಣಿ ಲೇಈಲೇಪಣಾಚಾ ಸೋಹಳಾ । ಪಹಾಶೀ ವೇಳೋವೇಳಾ ಕೃಪಾದೃಷ್ಟೀ ॥೮॥ ಬಾಳಕಾ ಲೇವವಿಜೇ ಲೇಣೇ । ತಯಾಚೇ ಸುಖ ತೇ ಕಾಯ ಜಾಣೇ । ತೋ ಸೋಹಳಾ ಮಾತೇನೇ ಭೋಗಣೇ । ತೇವೀ ಜನಾರ್ದನೇ ಭೋಗಿಜೇ ಸುಖ ॥೯॥ ಆಪುಲ್ಯಾ ಚಿದ್ರತ್ನಾಂಚ್ಯಾ ಗಾಂಠೀ । ಆವಡೀ ಘಾಲಿಶೀ ಮಾಝ್ಯಾ ಕಂಠೀ । ಯಾಲಾಗೀ ಮಜ ಪಾಠೋವಾಠೀ । ನಿಜಾತ್ಮದೃಷ್ಟೀ ಸವೇ ಧಾವೇ ॥೧೦॥ ಸಮರ್ಥ ಜಯಾಚಾ ಜನಕು । ತ್ಯಾಸ ಮಾನಿತೀ ಸಕಳ ಲೋಕು । ಏಕಾ ಜನಾರ್ದನೀ ಏಕು । ಅಮಾನ್ಯ ಅಧಿಕು ಮಾನ್ಯ ಕೀಜೇ ॥೧೧॥

ಹೇ ದೇವಾಧಿದೇವನೇ, ನಿನಗೆ ಜಯಜಯಕಾರವು ನೀನು ಗುರುತ್ವದ ಯೋಗದಿಂದ ನನ್ನ ಅಪೇಕ್ಷೆಯನ್ನು ಪೂರ್ಣಗೊಳಿಸುವೆ. ನೀನು ನನ್ನನ್ನು ಕೃಪಾದೃಷ್ಟಿಯಿಂದ ಅವಲೋಕಿಸಿದರೆ ಸಾಕು, ವಿಶ್ವದಲ್ಲಿ ವಿಶ್ವಾತ್ಮನು ವ್ಯಾಪಿಸಿರುವನೆಂಬ ಅನುಭವವಾಗುವುದು ॥೧॥ ಈ ವಿಶ್ವದಲ್ಲಿರುವ ಜಗನ್ನಾಥನಲ್ಲಿ ವಿಶ್ವಾಸವಿಡಬೇಕೆಂದು ನೀನು ಹೇಳುವೆ. ಅದರಂತೆ ನಡೆದರೆ ನೀನು ಪ್ರಸನ್ನನಾಗುವೆ. ಆಗ ನಿನ್ನ ಚರಣಗಳಲ್ಲಿ ಪ್ರವೇಶ ದೊರೆಯುವುದು ॥೨॥ ಈ ನಿನ್ನ ಚರಣಾರವಿಂದ ಕೃಪಾದೃಷ್ಟಿಯಿಂದ ಅಹಂ ಸೋಽಹಂ ಎಂಬ ತೊಡಕು ಬಿಚ್ಚಿ ತಕ್ಷಣವಾಗಿ ನಿನ್ನ ಹೊಟ್ಟೆಯಲ್ಲಿ ಪ್ರವೇಶಿಸಿದೆನು ॥೩॥ ನೀನು ನನ್ನ ಜನನಿಯಾಗಿರುವೆ. ಈ ಭಾವನೆಯಿಂದ ನಿನ್ನತ್ತ ನೋಡಲು ಜನಕನೂ ನೀನೇ ಆಗುವೆ. ಇದಕ್ಕಿಂತಲೂ ಆಶ್ಚರ್ಯಕಾರಕವನ್ನು ಏನೆಂದು ಹೇಳಲಿ? ॥೪॥ ಈ ಲೋಕದಲ್ಲಿ ಮಾತಾ ಪಿತೃಗಳು ಬೇರೆ ಬೇರೆಯಾಗಿ ಇರುವರು. ಆದರೆ ಇವರಿಬ್ಬರೂ ಏಕಾ ಜನಾರ್ದನರಲ್ಲಿ ಐಕ್ಯರೂಪವಾಗಿ ಅವರ ಕೂಸು ನಾನಾಗಿರುವೆನು ॥೫॥ ಆದ್ದರಿಂದ ಈ ನಿಮ್ಮ ಇಬ್ಬರ ಪ್ರೇಮವನ್ನು ಒಂದುಗೂಡಿಸಿ ಈ ಕೂಸನ್ನು ಬೆಳೆಸಿರಿ ಮತ್ತು ಪ್ರತಿನಿತ್ಯವೂ ಆತ್ಮಬೋಧೆಯ ಹೊಸ ಹೊಸ ವೈಭವವನ್ನು ತೋರಿಸುತ್ತಾ ನಡೆಯಿರಿ ॥೬॥ ಶಿವ, ಶಕ್ತಿ, ಗಣೇಶ ಹಾಗೆಯೇ ವಿಶ್ವ, ವಿಷ್ಣು, ಚಂಡಾಂಶು. ಈ ಎಲ್ಲ ರೂಪಗಳ ಅಲಂಕಾರಗಳನ್ನು ನೀವು ಸ್ವತಃ ನಿಮ್ಮ ಹಸ್ತಗಳಿಂದ ನನಗೆ ತೊಡಿಸಿರುವಿರಿ ॥೭॥ ಈ ಪ್ರಕಾರವಾಗಿ ನೀವು ನಿಮ್ಮ ಪ್ರೇಮಕ್ಕಾಗಿ ಅಲಂಕಾರಗಳಿಂದ ಭೂಷಣಗೊಳಿಸಿರುವಿರಿ ಮತ್ತು ಈ ಸೌಂದರ್ಯವನ್ನು ನೀವೇ ಮೇಲಿಂದ ಮೇಲೆ ಕೃಪಾದೃಷ್ಟಿಯಿಂದ ನೋಡುತ್ತಿರುವಿರಿ ॥೮॥ ಚಿಕ್ಕ ಬಾಲಕನ ಶರೀರಕ್ಕೆ ಒಡವೆ ಭೂಷಣಗಳನ್ನು ತೊಡಿಸಿರುವುದು ನಿಜ . ಆದರೆ, ಅದರ ಶೋಭೆ ,ಸುಖವು ಆ ಚಿಕ್ಕ ಬಾಲಕನಿಗೆ ಹೇಗೆ ತಿಳಿದೀತು? ಆ ಅಲಂಕಾರವನ್ನು ಕಂಡ ಅದರ ತಾಯಿಗೆ ಸುಖವು ಲಭಿಸುವುದು. ಅದರಂತೆ ನನ್ನಿಂದ ಗ್ರಂಥವನ್ನು ನುಡಿಯಿಸಿ ಈ ಸುಖವನ್ನು ತಾವೇ ಭೋಗಿಸಬೇಕಾಗುವುದು ॥೯॥ ತಮ್ಮ ಚಿದ್ರತ್ನದ ಮಾಲೆಯನ್ನು ನನ್ನ ಕೊರಳಲ್ಲಿ ನೀವೇ ಪ್ರೀತಿಯಿಂದ ಹಾಕಿ, ಅದರ ರಕ್ಷಣೆಗಾಗಿ ನಿಜಾತ್ಮದೃಷ್ಟಿಯಿಂದ ನನ್ನ ಹಿಂದೆಯೇ ಧಾವಿಸುತ್ತಿರುವಿರಿ ॥೧೦॥ ತಂದೆಯು ಶ್ರೀಮಂತನಾಗಿದ್ದರೆ, ಆತನ ಬಾಲಕನಿಗೆ ಎಲ್ಲರೂ ಮಾನ್ಯಮಾಡುವರು. ಅದರಂತೆ ಏಕಾ ಜನಾರ್ದನರು ಈ ಏಕನಾಥನಿಗೆ ನನ್ನವರು ಎಂದರು. ಆದ್ದರಿಂದಲೇ, ಅಮಾನ್ಯನಾಗಿದ್ದರೂ ನಾನು ಈಗ ಹೆಚ್ಚಾದ ಮಾನ್ಯತೆಗೆ ಪಾತ್ರನಾಗಿರುವೆನು ॥೧೧॥

ಬಾಳಕ ಸ್ವಯೇ ಬೋಲೋ ನೇಣೇ । ತ್ಯಾಸೀ ಮಾತಾ ಶಿಕವೀ ವಚನೇ । ತೈಶೀ ಗ್ರಂಥಕಥಾಕಥನೇ । ಸ್ವಯೇ ಜನಾರ್ದನೇ ಬೋಲವಿಜೇ ॥೧೨॥ ತೇಣೇ ನವಲ ಕೇಲೇ ಯೇಥ । ಮೂರ್ಖಾಹಾತೀ ಶ್ರೀಭಾಗವತ । ಶೇಖೀ ಬೋಲವಿಲೇ ಪ್ರಾಕೃತ । ಏಕಾದಶಾರ್ಥ ದೇಶಭಾಷಾ ॥೧೩॥ ಪರಿಸೋನಿ ಪ್ರಥಮ ಅಧ್ಯಾವೋ । ಉಗಾಚಿ ರಾಹಿಲಾ ಕುರುರಾವೋ । ಪುಢೇ ಕಥಾಕಥನೀ ಠಾವೋ । ಕಾಂಹೀ ಅಭಿಪ್ರಾವೋ ದಿಸೇನಾ ॥೧೪॥ ಆಪಣ ಕರಾವಾ ಪ್ರಶ್ನ । ತಂವ ಹಾ ಸಾಂಗೇಲ ಕೃಷ್ಣನಿಧನ । ಯಾಲಾಗೀ ರಾಜಾ ಮೌನ । ಠೇಲಾ ಧರೂನ ನಿವಾಂತ ॥೧೫॥ ಜಾಣೋನಿ ತ್ಯಾಚಾ ಅಭಿಪ್ರಾವೋ । ಬೋಲತಾ ಜಾಹಲಾ ಶುಕದೇವೋ । ತೋ ಮ್ಹಣೇ ಮೋಕ್ಷಾಚಾ ಪ್ರಸ್ತಾವೋ । ತೋ ಹಾ ಅಧ್ಯಾವೋ ಪರೀಕ್ಷಿತಿ ॥೧೬॥ ಹಾ ಏಕಾದಶ ಅಲೋಕಿಕ । ಶ್ಲೋಕಾಹೂನ ಶ್ಲೋಕ ಅಧಿಕ । ಪದೋಪದೀ ಮುಕ್ತಿಸುಖ । ಲಗಟಲೇ ದೇಖ ನಿಜಸಾಧಕಾ ॥೧೭॥ ಐಸೇ ಐಕತಾಂಚಿ ವಚನ । ರಾಜಾ ಜಾಹಲಾ ಸಾವಧಾನ । ಮುಕ್ತಿಸುಖೀ ಆವಡೀ ಗಹನ । ಅವಧಾನೇ ಕಾನ ಸರ್ವಾಂಗ ಕೇಲೇ ॥೧೮॥ ಐಸೇ ದೇಖೋನ ಪರೀಕ್ಷಿತೀ । ಶುಕ ಸುಖಾವೇ ಅತ್ಯಂತ ಚಿತ್ತೀ । ತೋ ಮ್ಹಣೇ ಅವಧಾನಮೂರ್ತೀ । ಐಕ ನಿಶ್ಚಿತೀ ಗುಹ್ಯ ಜ್ಞಾನ ॥೧೯॥ ದ್ವಿತೀಯಾಧ್ಯಾಯೀ ನಿರೂಪಣ । ನಾರದ-ವಸುದೇವಸಂವಾದ ಜಾಣ । ನಿಮಿಜಾಯಂತಾಚೇ ಪ್ರಶ್ನ । ಮುಖ್ಯ ಲಕ್ಷಣ ಭಾಗವತಧರ್ಮ ॥೨೦॥

ಶ್ರೀಶುಕ ಉವಾಚ:-

ಗೋವಿಂದಭುಜಗುಪ್ತಾಯಾಂ ದ್ವಾರವತ್ಯಾಂ ಕುರೂದ್ವಹ । ಅವಾತ್ಸೀನ್ನಾರದೋಽಭೀಕ್ಷ್ಣಂ ಕೃಷ್ಣೋಪಾಸನಲಾಲಸಃ ॥೧॥

ಅರ್ಥ: ಶುಕಮುನಿಗಳು ಹೇಳಿದರು:- ಹೇ ಕುರುಶ್ರೇಷ್ಠನೇ, ಶ್ರೀಕೃಷ್ಣ ಪೂಜಾ ನಿರತರಾಗಿರಲು ಕಾತರರಾದ ನಾರದ ಮುನಿಗಳು, ಸದಾ ಗೋವಿಂದನ ಬಾಹುಗಳಿಂದ ರಕ್ಷಿತವಾದ ದ್ವಾರಕೆಯಲ್ಲಿ ಕೆಲಕಾಲ ವಾಸಮಾಡಿದರು.

ಜೋ ಮುಕ್ತಾಮಾಜೀ ಅಗ್ರಣೀ । ಜೋ ಬ್ರಹ್ಮಚಾರಿಯಾ ಶಿರೋಮಣೀ । ಯೋಗೀ ವಂದಿತೀ ಮುಕುಟಸ್ಥಾನೀ । ಜೋ ಭಕ್ತಮಂಡಣೀ ಅತಿಶ್ರೇಷ್ಠ ॥೨೧॥ ಜೋ ಬ್ರಹ್ಮರಸಾಚಾ ಸಮುದ್ರ । ಜೋ ನಿಜಬೋಧಾಚಾ ಪೂರ್ಣಚಂದ್ರ । ತೋ ಬೋಲತಾ ಝಾಲಾ ಶುಕ ಯೋಗೀಂದ್ರ । ಶ್ರೋತಾ ನರೇಂದ್ರ ಕುರುವಂಶೀಚಾ ॥೨೨॥ ತೋ ಮ್ಹಣೇ ವ್ಯಾಸಾಚಾ ಜೋ ನಿಜಗುರು । ಆಣಿ ಮಾಝಾಹೀ ಪರಮಗುರು । ನಾರದ ಮಾಹಾಮುನೀಶ್ವರು । ತ್ಯಾಸೀ ಅತಿ ಆದರು ಶ್ರೀಕೃಷ್ಣಭಜನೀ ॥೨೩॥

ಚಿಕ್ಕ ಬಾಲಕನಿಗೆ ಮಾತನಾಡುವುದು ತಿಳಿಯುವುದಿಲ್ಲ. ಆದ್ದರಿಂದ ತಾಯಿಯೇ ಆ ಬಾಲಕನಿಗೆ ಮಾತನಾಡಿಸಲು ಕಲಿಸುವಳು. ಅದರಂತೆ ಈ ಗ್ರಂಥದಲ್ಲಿನ ಕಥೆಗಳನ್ನು ಗುರುಗಳಾದ ಜನಾರ್ದನರು ಸ್ವತಃ ನನ್ನಿಂದ ಹೇಳಿಸುತ್ತಿರುವರು ॥೧೨॥ ಇವರು ಎಂತಹ ಚಮತ್ಕಾರವನ್ನು ಮಾಡಿರುವರು ನೋಡಿರಿ. ಶ್ರೀಭಾಗವತದ ಹನ್ನೊಂದನೆಯ ಸ್ಕಂಧದ ಅರ್ಥವನ್ನು, ಪ್ರಾಕೃತವಾದ ಮರಾಠೀ ಭಾಷೆಯಲ್ಲಿ ನನ್ನಂತಹ ಮೂರ್ಖನಿಂದ ಹೇಳಿಸುವರು ॥೧೩॥ ಮೊದಲನೆಯ ಅಧ್ಯಾಯವನ್ನು ಶ್ರವಣ ಮಾಡಿ ಪರೀಕ್ಷಿತ ರಾಜನು ಸುಮ್ಮನೇ ಕುಳಿತನು. ಮುಂದಿನ ಕಥೆಯ ಭಾಗವನ್ನು ಕೇಳುವ ತವಕವು ಆತನ ಮನದಲ್ಲಿ ಇರಲಿಲ್ಲ ॥೧೪॥ ಕಾರಣ, ಈಗ ತಾನು ಪ್ರಶ್ನೆ ಮಾಡಿ ಕೇಳಿದರೆ ಇವರು ಮುಂದಿನ ಭಾಗದಲ್ಲಿ ಶ್ರೀಕೃಷ್ಣನಿಧನವನ್ನು ಹೇಳುವರು ಎಂದು ತಿಳಿದು ರಾಜನು ಮೌನನಾಗಿಯೇ ಕುಳಿತುಕೊಂಡನು ॥೧೫॥ ಈತನ ಮನದಲ್ಲಿನ ಈ ಭಾವವನ್ನು ಅರಿತು ಶುಕಾಚಾರ್ಯರು ಹೀಗೆ ಹೇಳಿದರು:- ಹೇ ಪರೀಕ್ಷಿತ ರಾಜನೇ, ಈಗ ಎರಡನೆಯ ಅಧ್ಯಾಯವು ಕೇವಲ ಮೋಕ್ಷದ ವಿವರಣೆಯಾಗಿದೆ ಎಂದು ತಿಳಿ ॥೧೬॥ ಈ ಹನ್ನೊಂದನೆಯ ಸ್ಕಂಧವು ಎಲ್ಲಕ್ಕಿಂತಲೂ ದೊಡ್ಡದಾಗಿ ಅಲೌಕಿಕವಾಗಿದೆ. ಇದರಲ್ಲಿ ಒಂದಕ್ಕಿಂತಲೂ ಒಂದು ವಿಶೇಷವಾಗಿ ರಸವತ್ತಾದ ಶ್ಲೋಕಗಳಿದ್ದು ಆತ್ಮ ಸಾಧನೆಯನ್ನು ಮಾಡುವವರಿಗೆ ಮುಕ್ತಿ ಸುಖವು ಹೆಚ್ಚೆ ಹೆಚ್ಚಿಗೆ ದೊರಕುವುದು ॥೧೭॥ ಹೀಗೆ ಕೇಳಿದಾಕ್ಷಣವೇ ರಾಜನು ಕೂಡಲೇ ಎಚ್ಚರಗೊಂಡನು. ಏಕೆಂದರೆ ಈತನಿಗೆ ಮೋಕ್ಷ ಸುಖದಲ್ಲಿ ಅತ್ಯಂತ ಪ್ರೀತಿ ಇತ್ತು. ಆದ್ದರಿಂದ ಈತನು ಸರ್ವಾಂಗವನ್ನು ಕಿವಿಗಳನ್ನಾಗಿ ಮಾಡಿದನು ॥೧೮॥ ಇದನ್ನು ನೋಡಿ ಶುಕಾಚಾರ್ಯರಿಗೆ ಬಹಳ ಸಂತೋಷವಾಯಿತು. ಹೀಗೆ ಹೇಳಿದರು:- ನೀನೀಗ ಅವಧಾನದ ಮೂರ್ತಿಯೇ ಆಗಿರುವೆ. ಆದ್ದರಿಂದ ಅಂತಃಕರಣಗಳನ್ನು ಸ್ವಸ್ಥಗೊಳಿಸಿ ಗುಹ್ಯ ಜ್ಞಾನವನ್ನು ಆಲಿಸು ॥೧೯॥ ಎರಡನೆಯ ಅಧ್ಯಾಯದಲ್ಲಿ ನಾರದ-ವಸುದೇವರ ಸಂವಾದ ನಿರೂಪಣೆವಿರುವುದು ಮತ್ತು ಇದರಲ್ಲಿ ಮುಖ್ಯವಾಗಿ ಭಾಗವತ ಧರ್ಮದ ಲಕ್ಷಣಗಳನ್ನು ನಿಮಿಜಯಂತರ ಪ್ರಶ್ನೋತ್ತರದಿಂದ ವಿವರಿಸಿರುವುದು ॥೨೦॥

ಮುಕ್ತರಲ್ಲಿ ಅಗ್ರಗಣ್ಯರಾದ ಬ್ರಹ್ಮಚಾರಿಗಳ ಶಿರೋಮಣಿಯಾದ ಯೋಗಿಗಳವರಿಂದ ಶಿರಸಾ ವಂದಿಸಿಕೊಳ್ಳುವವರಾದ ಮತ್ತು ಭಕ್ತಮಂಡಳಿಯವರಲ್ಲಿ ಅತ್ಯಂತ ಶ್ರೇಷ್ಠರಾದ ॥೨೧॥ ಬ್ರಹ್ಮರಸದ ಸಮುದ್ರರಾದ, ಮತ್ತು ಆತ್ಮಬೋಧೆಯ ಪೂರ್ಣಚಂದ್ರರಾದ ಶುಕಯೋಗೀಂದ್ರರು ಹೇಳಲಾರಂಭಿಸಿದರು ಮತ್ತು ಕುರುವಂಶದ ರಾಜಾಧಿರಾಜ ಪರೀಕ್ಷಿತನು ಕೇಳುತ್ತಿದ್ದನು ॥೨೨॥ ಶುಕಾಚಾರ್ಯರು ಹೇಳಿದರು :- ವ್ಯಾಸಮುನಿಗಳ ಸಾಕ್ಷಾತ್ ಗುರುಗಳಾದ ಹಾಗೂ ನನ್ನ ಪರಮಗುರುಗಳಾದ ಮಹಾಮುನೀಶ್ವರರಾದ ನಾರದರಿಗೆ ಶ್ರೀಕೃಷ್ಣ ಭಜನೆಯಲ್ಲಿ ಅತ್ಯಂತ ಪ್ರೇಮವಿತ್ತು ॥೨೩॥

ದ್ವಾರಕೇಹೂನಿ ಸ್ವಯೇ ಶ್ರೀಕೃಷ್ಣ । ಪಿಂಡಾರಕಾ ಪಾಠವೀ ಮುನಿಗಣ । ತೇಥೂನಿ ನಾರದ ಆಪಣ । ದ್ವಾರಕೇಸೀ ಜಾಣ ಪುನಃ ಪುನಃ ಯೇತು ।।೨೪।। ಹೋ ಕಾ ಜೇ ದ್ವಾರಕೇಆಂತ । ನ ರಿಘೇ ಭಯ ಕಾಳಕೃತ । ಜೇಥ ಸ್ವಯೇ ಶ್ರೀಕೃಷ್ಣನಾಥ । ಅಸೇ ನಾಂದತ ನಿಜಸಾಮರ್ಥ್ಯೇ ।।೨೫।। ದಕ್ಷ ಶಾಪು ನಾರದಾಸೀ ಪಾಹೀ । ಮುಹೂರ್ತ ರಾಹೋ ನಯೇ ಏಕೇ ಠಾಯೀ । ತೋ ಶಾಪು ಹರಿಕೀರ್ತನೀ ನಾಹೀ । ಯಾಲಾಗೀ ತೋ ಪಾಹೀ ಕೀರ್ತನನಿಷ್ಠ ।।೨೬।। ಜ್ಯಾಚೀ ಗಾಈಜೇ ಕೀರ್ತನೀ ಕೀರ್ತೀ । ತೋ ದ್ವಾರಕೇಸೀ ವಸೇ ಸ್ವಯೇ ಶ್ರೀಪತೀ । ತೇಥೇ ಶಾಪಬಾಧೇಚಿ ನ ಚಲೇ ಪ್ರಾಪ್ತೀ । ಯಾಲಾಗೀ ನಿತ್ಯವಸ್ತೀ ನಾರದಾಸಿ ತೇಥೇ ।।೨೭।। ನಾರದಾಸೀ ಪೂರ್ಣ ಬ್ರಹ್ಮಜ್ಞಾನ । ತ್ಯಾಸೀ ಕಾ ಕೃಷ್ಣಮೂರ್ತೀಚೇ ಧ್ಯಾನ । ಶ್ರೀಕೃಷ್ಣ ದೇಹೋ ಚೈತನ್ಯಘನ । ಯಾಲಾಗೀ ಶ್ರೀಕೃಷ್ಣಭಜನ ನಾರದಾ ಪಢಿಯೇ ।।೨೮।। ಯಾಪರೀ ಕೃಷ್ಣಭಜನ । ಮುಕ್ತಾಂಸೀ ಪಢಿಯೇ ಪೂರ್ಣ । ತ್ಯಾಸೀ ನ ಭಜೇ ಅಭಾಗೀ ಕೋಣ । ತೇಚಿ ನಿರೂಪಣ ಶುಕ ಸಾಂಗೇ ।।೨೯।।

ಕೋ ನು ರಾಜನ್ನಿಂದ್ರಿಯವಾನ್ಮುಕುಂದಚರಣಾಂಬುಜಮ್ । ನ ಭಜೇತ್ಸರ್ವತೋಮೃತ್ಯುರೂಪಾಸ್ಯಮಮರೋತ್ತಮೈಃ ।।೨।।

ಅರ್ಥ: ಹೇ ರಾಜನೇ, ಇಂದ್ರಿಯನ್ನೊಳಗೊಂಡ ಭಜನೆಯಿಂದಲೇ ಅಧಿಕಾರವು ಪ್ರಾಪ್ತವಾಗುವುದು. ಶ್ರೀಕೃಷ್ಣನ ಭಜನೆಯನ್ನು ಇಂದ್ರಾದಿ ಶ್ರೇಷ್ಠ ದೇವತೆಗಳು ಮಾಡುವರು. ಹೀಗಿರಲು, ಇಲ್ಲಿ ಎಲ್ಲರೂ ಮೃತ್ಯು ಮುಖದಲ್ಲಿ ಬೀಳುವವರು. ಇವರಲ್ಲಿ ಯಾರು ಭಜಿಸಲಿಕ್ಕಿಲ್ಲ?

ಐಕೇ ಬಾಪಾ ನೃಪವರ್ಯಾ । ಯೇಊನಿ ಉತ್ತಮಾ ದೇಹಾ ಯಾ । ಜೋ ನ ಭಜೇ ಶ್ರೀಕೃಷ್ಣರಾಯಾ । ತೋ ಗಿಳಿಲಾ ಮಾಯಾ ಅತಿದುಃಖೇ ।।೩೦।। ಜ್ಯಾ ಭಗವಂತಾಲಾಗುನೀ । ಮಾಥಾ ಧರೂನಿ ಪಾಯವಣೀ । ಸದಾಶಿವ ಬೈಸಲಾ ಆತ್ಮಧ್ಯಾನೀ । ಮಹಾಶ್ಮಶಾನೀ ನಿಜವಸ್ತೀ ।।೩೧।। ಪೋಟಾ ಆಲಾ ಚತುರಾನನ । ಇತರಾಂಚಾ ಪಾಡು ತೋ ಕೋಣ । ದೇಹಾ ಯೇವೋನಿ ನಾರಾಯಣ । ನ ಭಜೇ ತೋ ಪೂರ್ಣ ಮೃತ್ಯುಗ್ರಸ್ತ ।।೩೨।। ತ್ಯಜೂನಿ ಪರಮಾತ್ಮಾ ಪೂರ್ಣ । ನಾನಾ ಸಾಧನೇ ಶಿಣತೀ ಜನ । ತ್ಯಾಸೀ ಸರ್ವಥಾ ದೃಢಬಂಧನ । ನ ಚುಕೇ ಜಾಣ ಅನಿವಾರ ।।೩೩।। ಸಾಂಡೂನಿ ಶ್ರೀಕೃಷ್ಣಚರಣ । ಇಂದ್ರಾದಿ ದೇವಾಂಚೇ ಕರಿತಾ ಭಜನ । ತೇ ದೇವ ಮೃತ್ಯುಗ್ರಸ್ತಪೂರ್ಣ । ಮಾ ಭಜತ್ಯಾಚೇ ಮರಣ ಕೋಣ ವಾರೀ ।।೩೪।। ಅಸೋನಿ ಇಂದ್ರಿಯಪಾಟವ ಪೂರ್ಣ । ಜೋ ನ ಭಜೇ ಶ್ರೀಕೃಷ್ಣಚರಣ । ತ್ಯಾಸೀ ಸರ್ವತ್ರ ಬಾಧೀ ಮರಣ । ಕ್ಷಣಕ್ಷಣ ನಿರ್ದಾಳೀ ।।೩೫।।

ಶ್ರೀಕೃಷ್ಣನು ತಾನು ಸ್ವತಃ ಎಲ್ಲ ಮುನಿಜನರಿಗೆ ದ್ವಾರಕೆಯಿಂದ ಪಿಂಡಾರಕಕ್ಕೆ ಕಳುಹಿಸಿಕೊಟ್ಟನು. ಆದರೆ ನಾರದರು ಮಾತ್ರ ಅಲ್ಲಿಂದ ದ್ವಾರಕೆಗೆ ಮೇಲಿಂದ ಮೇಲೆ ಬರುತ್ತಲೇ ಇದ್ದರು ।।೨೪।। ದ್ವಾರಕೆಯಲ್ಲಿ ಕಾಲಕೃತ ಭಯವು ಪ್ರವೇಶವಾಗುತ್ತಿದ್ದಿಲ್ಲ, ಏಕೆಂದರೆ, ಅಲ್ಲಿ ಶ್ರೀಕೃಷ್ಣನು ಸ್ವಸಾಮರ್ಥ್ಯದಿಂದ ಸ್ವತಃ ವಾಸಿಸಿದ್ದನು ।।೨೫।। ನಾರದರಿಗೆ ದಕ್ಷ ಶಾಪದಿಂದ ಒಂದೇ ಸ್ಥಾನದಲ್ಲಿ ಸ್ಥಿರವಾಗಿ ಇರುವಂತಿದ್ದಿಲ್ಲ. ಆದರೆ, ಈ ಶಾಪವು ಹರಿಕೀರ್ತನೆಯಲ್ಲಿ ನಡೆಯುತ್ತಿದ್ದಿಲ್ಲ. ಆದ್ದರಿಂದ ನಾರದರು ಯಾವಾಗಲೂ ಹರಿಕೀರ್ತನೆಯಲ್ಲಿ ಮಗ್ನರಾಗಿರುತ್ತಿದ್ದರು ।।೨೬।। ಯಾರ ಕೀರ್ತಿಯನ್ನು ಹಾಡಿ ಹೊಗಳಬೇಕೋ, ಆ ಲಕ್ಷ್ಮೀಪತಿ ಶ್ರೀಕೃಷ್ಣನು ಸ್ವತಃ ದ್ವಾರಕೆಯಲ್ಲಿದ್ದನು. ಆದ್ದರಿಂದ ಅಲ್ಲಿ ಶಾಪದ ಬಾಧೆಯು ಆಗುತ್ತಿಲ್ಲದ್ದಕ್ಕೆ ನಾರದರು ದ್ವಾರಕೆಯಲ್ಲಿ ಸದಾ ವಾಸಿಸುತ್ತಿದ್ದರು ।।೨೭।। ನಾರದರಿಗೆ ಪೂರ್ಣವಾಗಿ ಬ್ರಹ್ಮಜ್ಞಾನವಾಗಿತ್ತು. ಆದರೆ ಇವರಿಗೆ ಸಗುಣವಾದ ಶ್ರೀಕೃಷ್ಣಮೂರ್ತಿಯ ಧ್ಯಾನವು ಏಕೆ ಪ್ರಿಯವಾಗಿತ್ತು? ಶ್ರೀಕೃಷ್ಣನು ದೇಹಧಾರಿಯಾಗಿದ್ದರೂ ಆತನ ದೇಹವು ಕೇವಲ ಚೈತನ್ಯಘನವಾಗಿತ್ತು. ಆದ್ದರಿಂದಲೇ ಶ್ರೀಕೃಷ್ಣನ ಭಜನೆಯು ನಾರದರಿಗೆ ಅತ್ಯಂತ ಪ್ರಿಯವಾಗಿತ್ತು ।।೨೮।। ಈ ಪ್ರಕಾರವಾಗಿ ಶ್ರೀಕೃಷ್ಣನ ಭಜನೆಯು ಮುಕ್ತರಿಗೂ ಪ್ರಿಯವಾಗಿರುವುದು. ಈತನನ್ನು ಭಜಿಸದ ಅಭಾಗಿಗಳು ಯಾರಿರಬಹುದು? ಈ ನಿರೂಪಣೆಯನ್ನು ಶುಕಾಚಾರ್ಯರು ಮಾಡುತ್ತಿದ್ದಾರೆ ।।೨೯।।

ಹೇ ರಾಜಶ್ರೇಷ್ಠ ಅಪ್ಪಾಜೀಯೇ, ಕೇಳು, ಈ ಉತ್ತಮ ದೇಹಕ್ಕೆ ಬಂದು ಶ್ರೀಕೃಷ್ಣನಲ್ಲಿ ಯಾರು ಭಜಿಸುವುದಿಲ್ಲವೋ, ಅವರಿಗೆ ಮಾಯಾ ಘೋರ ದುಃಖಿಗಳು ನುಂಗಿವೆ ಎಂದು ತಿಳಿಯಬೇಕು ।।೩೦।। ಯಾವ ಭಗವಂತನ ಚರಣತೀರ್ಥವನ್ನು ತನ್ನ ಮಸ್ತಕದಲ್ಲಿ ಧರಿಸಿ ಸದಾಶಿವನು ಮಹಾ ಶ್ಮಶಾನದಲ್ಲಿ ವಸತಿಯನ್ನು ಮಾಡಿ ಆತ್ಮಧ್ಯಾನದಲ್ಲಿ ಕುಳಿತಿರುವನು ।।೩೧।। ಬ್ರಹ್ಮದೇವನೇ ಈತನ ಹೊಟ್ಟೆಯಲ್ಲಿ ಹುಟ್ಟಿರುವನು. ಅಂದಮೇಲೆ ಇತರರ ಯಾವ ಕಥೆ? ನರದೇಹಕ್ಕೆ ಬಂದು ನಾರಾಯಣನ ಭಜನೆಯನ್ನು ಮಾಡದವರು ಪೂರ್ಣವಾಗಿ ಮೃತ್ಯುಗ್ರಸ್ತರಾಗುವರು ।।೩೨।। ಶ್ರೀಕೃಷ್ಣಪರಮಾತ್ಮನನ್ನು ಬಿಟ್ಟು ನಾನಾ ಸಾಧನೆಗಳ ಕ್ಲೇಶದಲ್ಲಿ ಯಾರು ಬೀಳುವರೋ, ಅವರ ದೃಢ ಸಂಸಾರ ಬಂಧನವು ತಪ್ಪಲಾರದು ।।೩೩।। ಶ್ರೀಕೃಷ್ಣನ ಚರಣಗಳನ್ನು ಬಿಟ್ಟು ಇಂದ್ರಾದಿ ದೇವತೆಗಳನ್ನು ಹಲವರು ಭಜಿಸುವರು. ಆದರೆ ಆ ದೇವತೆಗಳು ಮೃತ್ಯುಗ್ರಸ್ತರಾಗಿರುವರು. ಹೀಗಿರಲು ಇವರನ್ನು ಭಜಿಸುವವರ ಮರಣವನ್ನು ಯಾರು ಹೇಗೆ ತಪ್ಪಿಸುವರು? ।।೩೪।। ಎಲ್ಲ ಇಂದ್ರಿಯಗಳು ಅನುಕೂಲವಿದ್ದರೂ ಶ್ರೀಕೃಷ್ಣಚರಣದ ಭಜನೆಯನ್ನು ಮಾಡದಿದ್ದರೆ ಅವರು ಎಲ್ಲಿಗೆ ಹೋದರೂ ಮರಣವು ತಪ್ಪದು. ಈ ಮರಣವು ಅವರಿಗೆ ಕ್ಷಣಕ್ಷಣಕ್ಕೂ ಕಷ್ಟಕ್ಕೆ ಗುರಿಪಡಿಸುವುದು ।।೩೫।।

ತೋ ನಾರದ ಮಹಾಮುನೀಶ್ವರು । ಮುಕ್ತ ಹೋಊನಿ ಭಜನತತ್ಪರು । ದ್ವಾರಕೇ ವಸೇ ನಿರಂತರು । ಶ್ರೀಕೃಷ್ಣೀ ಥೋರು ಅತಿ ಪ್ರೀತಿ ತಯಾ ॥೩೬॥

ತಮೇಕದಾ ದೇವರ್ಷಿ ವಸುದೇವೋ ಗೃಹಾಗತಮ್ । ಅರ್ಚಿತಂ ಸುಖಮಾಸೀನಮಭಿವಾದ್ಯೇದಮಬ್ರವೀತ್ ॥೩॥

ಅರ್ಥ: ಒಂದು ದಿನ ದೇವರ್ಷಿಗಳಾದ ನಾರದರು ವಸುದೇವನ ಮನೆಗೆ ಬಂದರು. ವಸುದೇವನು ನಾರದರನ್ನು ಸೂಕ್ತ ಪೂಜಾವಿಧಿಗಳಿಂದ ಸತ್ಕರಿಸಿ ಸುಖಾಸನದಲ್ಲಿ ಕುಳ್ಳಿರಿಸಿ, ಗೌರವಪೂರ್ವಕ ನಮಸ್ಕರಿಸಿ ಹೀಗೆ ಹೇಳಿದನು.

ಧನ್ಯ ಧನ್ಯ ತೋ ನಾರದು । ಜ್ಯಾಸೀ ಸರ್ವೀ ಸರ್ವತ್ರ ಗೋವಿಂದು । ಸರ್ವದಾ ಹರಿನಾಮಾಚಾ ಛಂದು । ತೇಣೇ ಪರಮಾನಂದು ಸದೋದಿತ ॥೩೭॥ ಜೋ ಶ್ರೀಕೃಷ್ಣಾಚಾ ಆವಡತಾ । ಜ್ಯಾಸೀ ಶ್ರೀಕೃಷ್ಣ ಆವಡೇ ಸರ್ವಥಾ । ಜ್ಯಾಚೇನಿ ಸಂಗೇ ತತ್ತ್ವತಾ । ನಿತ್ಯಮುಕ್ತತಾ ಜಡಜೀವಾ ॥೩೮॥ ತೋ ನಾರದು ಏಕೇ ವೇಳಾ । ಸ್ವಾನಂದಾಚಿಯಾ ಸ್ವಲೀಳಾ । ಆಲಾ ವಸುದೇವಾಚಿಯಾ ರಾಉಳಾ । ತೇಣೇ ದೇಖೋನಿ ಡೋಳಾ ಹರಿಖಲಾ ॥೩೯॥ ಕೇಲೇ ಸಾಷ್ಟಾಂಗ ನಮನ । ಬೈಸೋ ಘಾತಲೇ ವರಾಸನ । ಬ್ರಹ್ಮಸದ್ಭಾವೇ ಪೂಜನ । ಶ್ರದ್ಧಾ ಸಂಪೂರ್ಣ ಮಾಂಡಿಲೇ ॥೪೦॥ ನಾರದ ತೋಚಿ ನಾರಾಯಣ । ಯೇಣೇ ವಿಶ್ವಾಸೇಕರೂನಿ ಜಾಣ । ಹೇಮಪಾತ್ರೀ ಚರಣಕ್ಷಾಳಣ । ಮಧುಪರ್ಕವಿಧಿಪೂರ್ಣ ಪೂಜಾ ಕೇಲೀ ॥೪೧॥ ಪೂಜಾ ಕರೋನಿ ಸಾವಧಾನೀ । ವಸುದೇವ ಬೈಸೋನಿ ಸುಖಾಸನೀ । ಹೃದಯೀ ಅತ್ಯಂತ ಸುಖಾವೋನೀ । ಕಾಯ ಆಹ್ಲಾದೋನೀ ಬೋಲತ ॥೪೨॥

ವಸುದೇವ ಉವಾಚ:-

ಭಗವನ್ ಭವತೋ ಯಾತ್ರಾ ಸ್ವಸ್ತಯೇ ಸರ್ವದೇಹಿನಾಮ್ । ಕೃಪಣಾನಾಂ ಯಥಾ ಪಿತ್ರೋರುತ್ತಮಶ್ಲೋಕವರ್ತ್ಮನಾಮ್ ॥೪॥

ಅರ್ಥ:- ವಸುದೇವನು ಹೇಳಿದನು:- ಹೇ ಮುನಿಗಳವರೇ, ತಂದೆತಾಯಿಯವರ ಆಗಮನದಿಂದ ಮಕ್ಕಳಿಗೆ, ಭಗವದ್ಭಕ್ತರ ಆಗಮನದಿಂದ ದೀನಜನರಿಗೆ ಆಗುವ ಸುಖದಂತೆ ತಮ್ಮ ಆಗಮನವು ಸರ್ವಜೀವಿಗಳ ಕಲ್ಯಾಣಕಾರಕವಾಗಿರುವುದು.

ಸ್ವಲೀಲಾ ಕೃಪಾ ಕೇಲೀ ತುಮ್ಹೀ । ತೇಣೇ ಪರಮ ಸಭಾಗ್ಯ ಜಾಹಲೋ ಜೇ ಮೀ । ತುಮಚೇನಿ ಆಗಮನೇ ಆಮ್ಹೀ । ಕೃತಕೃತ್ಯ ಸ್ವಾಮೀ ಸನ್ನಿಧಿಮಾತ್ರೆ ॥೪೩॥ ಚುಕಲಿಯಾ ನಿಜಜನನೀ । ಬಾಳಕ ದೀನ ದಿಸೇ ಜನೀ । ತ್ಯಾಸೀ ಮಾತೇಚ್ಯಾ ಆಗಮನೀ । ಸಂತೋಷ ಮನೀ ನಿರ್ಭರ ॥೪೪॥ ತ್ಯಾಹೂನಿ ಶ್ರೇಷ್ಠ ತುಮಚೀ ಯಾತ್ರಾ । ನಿತ್ಯ ಸುಖದಾತೀ ಭೂತಮಾತ್ರಾ । ಸ್ವಲೀಲಾ ತುಮ್ಹೀ ಮಹೀ ವಿಚರಾ । ದೀನೋದ್ಧಾರಾಲಾಗುನೀ ॥೪೫॥ ಮಾತೇಚ್ಯಾ ಆಗಮನೀ ನಿಜಬಾಳಾ । ದೃಷ್ಟಿ ಉತ್ಸಂಗೀ ನಿತ್ಯ ನವಾ ಸೋಹಳಾ । ತುಮಚೀ ಯಾತ್ರಾ ದೀನಾ ಸಕಳಾ । ಭೋಗವೀ ಸ್ವಲೀಳಾ ನಿಜಾತ್ಮಸುಖ ॥೪೬॥

ಯಾವ ಈ ನಾರದ ಮಹಾಮುನಿಗಳು ಮುಕ್ತರಾಗಿದ್ದರೂ ಭಜನೆಯಲ್ಲಿ ನಿರಂತರವಾಗಿ ತತ್ಪರರಾಗಿದ್ದರು. ಇವರು ಸದಾ ಸರ್ವದಾ ದ್ವಾರಕೆಯಲ್ಲಿಯೇ ಇರುತ್ತಿದ್ದರು. ಶ್ರೀಕೃಷ್ಣನಲ್ಲಿ ಅತ್ಯಂತ ಪ್ರೇಮವು ಇವರದಾಗಿತ್ತು ॥೩೬॥

ಆಹಾಹಾ!! ಈ ನಾರದರು ಧನ್ಯಧನ್ಯರು. ಇವರಿಗೆ ಎಲ್ಲೆಲ್ಲಿಯೂ ಶ್ರೀಕೃಷ್ಣನೇ ಕಾಣುವನು. ಇವರಿಗೆ ಸದಾ ಸರ್ವದಾ ಹರಿನಾಮದ ಆಸಕ್ತಿ ತುಂಬಿಕೊಂಡಿತ್ತು. ಪರಮಾನಂದದಲ್ಲಿಯೇ ಯಾವಾಗಲೂ ನಿಮಗ್ನರಾಗಿರುತ್ತಿದ್ದರು ॥೩೭॥ ಯಾರು ಶ್ರೀಕೃಷ್ಣನಿಗೆ ಪ್ರಿಯರೋ, ಯಾರು ಶ್ರೀಕೃಷ್ಣನನ್ನು ಪೂರ್ಣವಾಗಿ ಪ್ರೀತಿಸುವರೋ, ಅವರ ಸಂಗತಿಯಿಂದ ಜಡಜೀವಿಗಳಿಗೆ ಮುಕ್ತಿಯು ಪ್ರಾಪ್ತವಾಗುವುದು ॥೩೮॥ ನಾರದರು ಒಂದು ದಿನ ತಮ್ಮ ಆನಂದದ ಭರದಲ್ಲಿ ಸಹಜವಾಗಿ ವಸುದೇವನ ಮನೆಗೆ ಆಗಮಿಸಿದರು. ಇವರನ್ನು ಕಂಡಾಕ್ಷಣವೇ ವಸುದೇವನಿಗೆ ಬಹಳ ಆನಂದವಾಯಿತು ॥೩೯॥ ಈತನು ನಾರದರಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಉಚ್ಚಾಸನದಲ್ಲಿ ಕುಳ್ಳಿರಿಸಿದನು ಮತ್ತು ಪ್ರತ್ಯಕ್ಷ ಪರಬ್ರಹ್ಮನು ನನ್ನ ಮನೆಗೆ ಬಂದನು ಎಂಬ ಶ್ರದ್ಧಾಭಕ್ತಿಯಿಂದ ಪೂಜಿಸಲು ಆರಂಭಿಸಿದನು ॥೪೦॥ ನಾರದರೇ ನಾರಾಯಣನು ಎಂಬ ದೃಢವಿಶ್ವಾಸದಿಂದ ಈತನು ಇವರ ಪೂಜೆಯನ್ನು ಮಾಡಿದನು. ಸುವರ್ಣ ಪಾತ್ರೆಯಲ್ಲಿ ಅವರ ಚರಣಗಳನ್ನು ತೊಳೆದು ಮಧುಪರ್ಕವಿಧಿಯಿಂದ ಯಥಾಸಾಂಗ ಪೂಜೆಗೈದನು ॥೪೧॥ ಈ ಪ್ರಕಾರವಾಗಿ ಪ್ರೇಮದಿಂದ ಪೂಜೆಯನ್ನು ಮುಗಿಸಿ, ವಸುದೇವನು ತನ್ನ ಆಸನದಲ್ಲಿ ಕುಳಿತುಕೊಂಡನು. ಮತ್ತು ಅಂತಃಕರಣಪೂರ್ವಕವಾಗಿ, ಅತ್ಯಂತ ಆನಂದ ಭರಿತನಾಗಿ ಹೇಳಹತ್ತಿದನು ॥೪೨॥

ತಾವು ಇಂದು ಇಲ್ಲಿಗೆ ಸಹಜವಾಗಿ ಬರುವ ಕೃಪೆಯನ್ನು ಮಾಡಿದ್ದರಿಂದ ನಾನು ಪರಮ ಭಾಗ್ಯಶಾಲಿಯಾದೆನು. ನಿಮ್ಮ ಸಾನಿಧ್ಯ ಮಾತ್ರದಿಂದ ನಾವು ಕೃತಕೃತ್ಯರಾದೆವು ॥೪೩॥ ತಾಯಿಯನ್ನು ಕಳೆದುಕೊಂಡ ಬಾಲಕನು ಜನರಲ್ಲಿ ದೀನನಾಗುವನು. ಆದರೆ ತಾಯಿಯು ಬಂದಳೆಂದರೆ ಆ ಬಾಲಕನ ಮನದಲ್ಲಿ ಆನಂದವು ಓಡಿಸದಂತಾಗುವುದು ॥೪೪॥ ಇದಕ್ಕಿಂತಲೂ ನಿಮ್ಮ ಆಗಮನವು ಅಧಿಕ ಶ್ರೇಷ್ಠವಾಗಿರುವುದು. ಕಾರಣ, ನೀವು ಪ್ರಾಣಿಮಾತ್ರರಿಗೆ ನಿತ್ಯಸುಖವನ್ನು ಕೊಡುವಿರಿ. ತಾವು ದೀನರ ಉದ್ಧಾರಕ್ಕಾಗಿಯೇ ಲೀಲಾ ಮಾತ್ರರಾಗಿ ಭೂಮಂಡಲದಲ್ಲಿ ಸಂಚರಿಸುವಿರಿ ॥೪೫॥ ತಾಯಿಯು ಬಂದದ್ದನ್ನು ಕಂಡ ಬಾಲಕನಿಗೆ ಕ್ಷಣಿಕವಾದ ಐಹಿಕ ಸುಖವಾಗುವುದು. ಆದರೆ ನಿಮ್ಮ ಆಗಮನದಿಂದ ನಿತ್ಯವಾದ, ಶಾಶ್ವತಸುಖವು ದೊರೆಯುತ್ತದೆ. ಪರಾತ್ಪರ ಚಿನ್ಮಾತ್ರ ಚಿತ್ಸುಖವನ್ನು ಭೋಗಿಸಲು ದೊರೆಯುತ್ತದೆ ॥೪೬॥

ಮಾತಾ ಸುಖ ದೇ ತೇ ನಶ್ವರ । ತುಮಚ್ಯಾ ಆಗಮನೀ ಅನಶ್ವರ । ನಿತ್ಯ ಚಿತ್ಸುಖ ಚಿನ್ಮಾತ್ರ । ಪರಾತ್ಪರ ಭೋಗಾವಯಾ ।।೪೭।। ತುಮ್ಹೀ ಭಾಗವತಧರ್ಮಮಾರ್ಗಗಾಮೀ । ತ್ಯೆಂಚಿ ತುಮಚೀ ಭೇಟೀ ಲಾಹೋ ಆಮ್ಹೀ । ಜೈ ಪುಣ್ಯಕೋಟೀ ನಿಷ್ಕಾಮೀ । ಪ್ರಯಾಗಸಂಗಮೀ ಕೇಲಿಯಾ ।।೪೮।। ನಾರದಾ ತೂ ಭಗವದ್ರೂಪ । ತುಝೀ ಭೇಟೀ ಕರೀ ನಿಷ್ಪಾಪ । ತುವಾ ಕೃಪಾ ಕೇಲಿಯಾ ಅಲ್ಪ । ಸ್ವಯೇ ಚಿತ್ಸ್ವರೂಪ ಠಸಾವೇ ।।೪೯।। ತುಝೇನಿ ಭಕ್ತೀಸೀ ಮಹಿಮಾ ಅಮೂಪ । ತುಝೇನಿ ವಾಢಲಾ ಭಕ್ತಿಪ್ರತಾಪ । ತುಝೇನಿ ಭಕ್ತಿ ಭಗವದ್ರೂಪ । ತೂ ಚಿತ್ಸ್ವರೂಪ ನಿಜನಿಷ್ಠಾ ।।೫೦।। ತೂ ಭಕ್ತಿಪ್ರಕಾಶಕು ದಿವಟಾ । ಕೀ ಭಕ್ತಿಮಾರ್ಗೀಚಾ ಮಾರ್ಗದ್ರಷ್ಟಾ । ನಾರದಾ ತುಝಾ ಉಪಕಾರ ಮೋಠಾ । ಭಕ್ತೀಚ್ಯಾ ಪೇಠಾ ವಸವಿಲ್ಯಾ ತುವಾ ।।೫೧।। ಮುಖ್ಯ ಭಾಗವತ ಶಾಸ್ತ್ರ ಪೂರ್ಣ । ತುವಾ ವ್ಯಾಸಾಸೀ ಉಪದೇಶೂನ । ಪ್ರಗಟ ಕರವಿಲೇ ದಶಲಕ್ಷಣ । ದೀನ ಜನ ಉದ್ಧರಾವಯಾ ।।೫೨।। ನಾರದಾ ತೂ ದೇವಾಸಮಾನ । ಹೇಹೀ ಉಪಮಾ ದಿಸೇ ಗೌಣ । ತೇಚಿ ವಿಷಯೀ ನಿರೂಪಣ । ವಸುದೇವ ಆಪಣ ನಿರೂಪೀ ।।೫೩।।

ಭೂತಾನಾಂ ದೇವಚರಿತಂ ದುಃಖಾಯ ಚ ಸುಖಾಯ ಚ । ಸುಖಾಯೈವ ಹಿ ಸಾಧೂನಾಂ ತ್ವಾದೃಶಾಮಚ್ಯುತಾತ್ಮನಾಮ್ ।।೫।।

ಅರ್ಥ:- ದೇವತೆಗಳ ಕಾರ್ಯಗಳು ಜೀವಿಗಳ ಸುಖದುಃಖ ಎರಡಕ್ಕೂ ಕಾರಣವಾಗುತ್ತವೆ. ಆದರೆ ಅಚ್ಯುತನಾದ ಪ್ರಭುವನ್ನು ತಮ್ಮ ಆತ್ಮ ಎಂದೇ ಅಂಗೀಕರಿಸಿರುವ ನಿಮ್ಮಂತಹ ಮಹರ್ಷಿಗಳ ಕಾರ್ಯಗಳು ಎಲ್ಲ ಜೀವಿಗಳಿಗೂ ಸುಖವನ್ನು ಮಾತ್ರ ನೀಡುತ್ತವೆ.

ದೇವಾಪಾಸೂನಿ ಭೂತಸೃಷ್ಟೀ ; ಸುಖದುಃಖೇ ಶಿಣೇ ಪೋಟೀ । ಅತಿವೃಷ್ಟೀ ಕಾ ಅನಾವೃಷ್ಟೀ । ಭೂತಕೋಟೀ ಆಕಾಂತು ।।೫೪।। ತ್ಯಾ ದೇವಾಪರೀಸ ಸಾಧು ಅಧಿಕ । ಹೇ ಸಾಚಚಿ ಮಜ ಮಾನಲೇ ದೇಖ । ದೇವಚರಿತೇ ಉಠೀ ಸುಖದುಃಖ । ಸಾಧು ನಿರ್ದೋಖ ಸುಖದಾತೇ ।।೫೫।। ತ್ಯಾಹೀಮಾಜೀ ತುಜಸಾರಿಖಾ । ಜೋಡಲ್ಯಾ ಕೃಪಾಳೂ ನಿಜಾತ್ಮಸಖಾ । ತೈ ಪೇಠ ಫಿಕೇ ಪರಮಾರ್ಥಸುಖಾ । ಹಾ ಮಹಿಮಾ ಲೋಕಾ ಕದಾ ನ ಕಳೇಚಿ ।।೫೬।। ದಿಧಲ್ಯಾ ಸುಖಾಸೀ ಮಾಗುತೀ । ಚ್ಯುತೀ ಹೋ ನೇಣೇ ಕಲ್ಪಾಂತೀ । ತೇ ಅಚ್ಯುತಾತ್ಮಸ್ಥಿತೀ । ತುಜಪಾಶೀ ನಿಶ್ಚಿತೀ ನಾರದಾ ।।೫೭।। ತುಝಿಯೇ ಮಹಿಮೇಪಾಸೀ । ಮುದಲ ದೇವೋ ನ ಯೇ ತುಕಾಸೀ । ತೇಹೀ ಸಾಂಗೇನ ಮೀ ತುಜಪಾಸೀ । ಯಥಾರ್ಥೇಸೀ ನಾರದಾ ।।೫೮।। ದೇವಾಚಾ ಅವತಾರ ಹೋಯೇ । ದಾಸಾ ಸುಖ ದೈತ್ಯಾ ಭಯೇ । ತೇಥಹೀ ಐಸೇ ವಿಷಮ ಆಹೇ । ಹೇ ನ ಸಮಾಯೇ ತುಜಮಾಜೀ ।।೫೯।।

ತಾಯೀ ಕೊಟ್ಟ ಸುಖವು ನಶ್ವರವಾಗಿರುತ್ತದೆ. ನಿಮ್ಮ ಆಗಮನದಿಂದಾಗುವ ಸುಖವು ಶಾಶ್ವತವಾಗಿರುವುದು. ಚಿನ್ಮಾತ್ರ ಚಿತ್ಸುಖ ಭೋಗಿಸಲು ದೊರೆಯುವುದು ।।೪೭।। ನೀವು ಭಗವಂತನ ಮಾರ್ಗದಲ್ಲಿ ನಡೆಯುತ್ತೀರಿ. ನಾವು ಪ್ರಯಾಗ ಸಂಗಮದಲ್ಲಿ ನಿಷ್ಕಾಮ ಬುದ್ಧಿಯಿಂದ ಕೋಟಿ ಪುಣ್ಯಗಳನ್ನು ಮಾಡಿದರೆ ಮಾತ್ರ ನಿಮ್ಮ ಭೇಟಿಯಾಗುವುದು ।।೪೮।। ನಾರದನೇ, ನೀನು ಭಗವಂತನ ಸ್ವರೂಪನಾಗಿರುವೆ. ನಿನ್ನ ಭೇಟಿಯು ಮನುಷ್ಯನಿಗೆ ನಿಷ್ಪಾಪನನ್ನಾಗಿ ಮಾಡುವುದು. ನೀನು ಅಲ್ಪವಾಗಿ ಕೃಪೆ ಮಾಡಿದರೆ ಸಾಕು, ಅಂತಃಕರಣದಲ್ಲಿ ಚಿತ್ಸ್ವರೂಪವು ನಟ್ಟಿಕೊಳ್ಳುವುದು ।।೪೯।। ನಿನ್ನಿಂದಲೇ ಭಕ್ತಿಗೆ ಮಹಾ ಮಹಿಮೆಯು ಬೆಳೆಯಿತು. ನಿನ್ನಿಂದಲೇ ಭಕ್ತಿಯ ಸಾಮರ್ಥ್ಯವು ಪ್ರಸಾರಗೊಂಡಿತು. ನಿನ್ನಿಂದಲೇ ಭಕ್ತಿಯು ಭಗವತ್ಸ್ವರೂಪವಾಯಿತು. ನೀನು ನಿನ್ನ ಆತ್ಮನಿಷ್ಠೆಯ ಯೋಗದಿಂದ ಚಿತ್ಸ್ವರೂಪನಾಗಿರುವೆ ।।೫೦।। ನೀನು ಭಕ್ತಿಮಾರ್ಗವನ್ನು ಬೆಳಗಿಸುವ ಜ್ಯೋತಿಯಾಗಿರುವೆ. ಹೇ ನಾರದನೇ, ನಿನ್ನ ಉಪಕಾರವು ಬಹು ದೊಡ್ಡದಾಗಿದೆ. ಏಕೆಂದರೆ, ನೀನು ಭಕ್ತಿಯ ಬಜಾರವನ್ನೇ ಸ್ಥಾಪಿಸಿರುವೆ ।।೫೧।। ಶ್ರೇಷ್ಠವಾದ, ಪರಿಪೂರ್ಣವಾದ ಭಾಗವತ ಶಾಸ್ತ್ರವನ್ನು ವ್ಯಾಸರಿಗೆ ನೀನೇ ಉಪದೇಶವನ್ನು ಮಾಡಿ ದೀನ ಜನರ ಉದ್ಧಾರಕ್ಕಾಗಿ ದಶಲಕ್ಷಣಗಳನ್ನು ಪ್ರಕಟಗೊಳಿಸಿದೆ ।।೫೨।। ಹೇ ನಾರದನೇ, ದೇವರ ಸಮಾನನು ನೀನು ಈ ಉಪಮೆಯು ಸಹ ಗೌಣವೇ ಆಗಿದೆ. ಹೀಗೆ ತನ್ನ ಅಭಿಪ್ರಾಯವನ್ನು ವಸುದೇವನು ಹೇಳಿದನು ।।೫೩।।

ದೇವತೆಗಳಿಂದ ಜೀವಸೃಷ್ಟಿಗೆ ಸುಖ ಮತ್ತು ದುಃಖಗಳು ಪ್ರಾಪ್ತವಾಗಿ ಅವುಗಳಿಗೆ ಯಾತನೆಗಳನ್ನು ಭೋಗಿಸಬೇಕಾಗುವುದು. ಅತಿವೃಷ್ಟಿ ಅಥವಾ ಅನಾವೃಷ್ಟಿಗಳಿಂದ ಪ್ರಾಣಿಗಳಲ್ಲಿ ದುಃಖವು ಉಕ್ಕೇರುವುದು ।।೫೪।। ಆದ್ದರಿಂದ ಈ ದೇವತೆಗಳಿಗಿಂತ ಸಾಧುಗಳು ಶ್ರೇಷ್ಠರಾಗಿರುವರು. ನಿಜವಾಗಿಯೂ ನನಗೆ ಹೀಗೆಯೇ ಅನಿಸುತ್ತದೆ. ಕಾರಣ, ದೇವರ ಕಾರ್ಯದಿಂದ ದುಃಖ ಮಿಶ್ರಿತ ಸುಖದ ಉತ್ಪನ್ನವಾಗುವುದು. ಆದರೆ ಸಾಧುಗಳು ದುಃಖಲೇಶ ರಹಿತ ಸುಖವನ್ನು ಕೊಡುವವರಾಗಿರುವರು ।।೫೫।। ಅದರಲ್ಲಿಯೇ, ನಿನ್ನಂತಹ ಕೃಪಾಳೂ, ನಿಜಾತ್ಮಸಖನು ಪ್ರಾಪ್ತನಾದರೆ ವಿಚಾರಿಸುವುದೇನು? ಪರಮಾರ್ಥದ ಸಂತೆಯು ತುಂಬಿ ತುಳುಕುವುದು ।।೫೬।। ಪುನಃ ವಿಶೇಷವೇನೆಂದರೆ, ಈ ಸುಖವು ಒಮ್ಮೆ ಸಿಕ್ಕಿತೆಂದರೆ, ಕಲ್ಪಾಂತಕ್ಕೂ ನಾಶವಾಗುವುದಿಲ್ಲ. ಅಚ್ಯುತಾತ್ಮ ಸ್ಥಿತಿಯ ನಾರದನೇ, ನಿಶ್ಚಿತವಾಗಿಯೂ ನಿನ್ನಲ್ಲಿ ಹೀಗೆಯೇ ಇರುವುದು ।।೫೭।। ನಿನ್ನ ಮಹಿಮೆಯ ಎದುರಿನಲ್ಲಿ ಮುಖ್ಯವಾಗಿ ದೇವರೂ ಸಹ ಸಮವಾಗಲಾರನು. ಹೇ ನಾರದನೇ, ಅದು ಹೇಗೆ? ಎಂಬುದನ್ನು ನಾನು ಯಥಾರ್ಥವಾಗಿ ಹೇಳುವೆನು ।।೫೮।। ದೇವರ ಅವತಾರವಾಯಿತೆಂದರೆ, ಆತನ ದಾಸರಿಗೆ ಸುಖವಾಗಿ, ದೈತ್ಯರಿಗೆ ಭಯ ಉಂಟಾಗುವುದು. ಹೀಗೆ ಆತನಲ್ಲಿ ಭೇದವಿರುವುದು ।।೫೯।।

ತೂ ದೇವಾಂಚಾ ಆಪ್ತ ಹೋಸೀ । ದೈತ್ಯಹೀ ವಿಶ್ವಾಸತೀ ತುಜಪಾಸೀ । ರಾವಣ ತುಜ ನೇಊನಿ ಏಕಾಂತಾಸೀ । ನಿಜಗುಹ್ಯಾಸೀ ಸ್ವಯೇ ಸಾಂಗೇ ॥೬೦॥ ದೇವ ರಾವಣೇ ಘಾತಲೇ ಬಂದೀ । ತೋ ರಾವಣ ತುಝೇ ಚರಣ ವಂದೀ । ಶೇಖೀ ರಾಮಾಚಾ ಆಪ್ತ ತೂ ತ್ರಿಶುದ್ಧೀ । ವಿಷಮ ತುಜಮಧೀ ಅಸೇನಾ ॥೬೧॥ ಜರಾಸಂಧು ಕೃಷ್ಣಾಚಾ ವೈರೀ । ತುಝೀ ಚಾಲ ತ್ಯಾಚಾ ಘರೀ । ಆಣಿ ಕೃಷ್ಣಾಚೇ ಸಭೇಮಾಝಾರೀ । ಆಪ್ತತ್ವೇ ಥೋರೀ ಪೈ ತುಝೀ ॥೬೨॥ ನಾಮ ಘೇವೋ ನೇದೀ ದೇವಾಚೇ । ಹೇ ಬಿರುದ ಹಿರಣ್ಯಕಶಿಪೂಚೇ । ತ್ಯಾಸೀ ಕೀರ್ತನ ತುಝೇ ರುಚೇ । ವಿಷಮತ್ವ ಸಾಚೇ ತುಜ ನಾಹೀ ॥೬೩॥ ಲಾಂಚುಗೀ ಬುದ್ಧಿ ಸದಾ ದೇವಾಸೀ । ತೈಶೀ ನಾಹೀ ತುಮ್ಹಾ ಸಾಧೂಂಸೀ । ಏಕ ತ್ಯಾಹೀ ಅಭಿಪ್ರಾಯಾಸೀ । ಯಥಾರ್ಥೇಸೀ ಸಾಂಗೇನ ॥೬೪॥

ಭಜಂತಿ ಯೇ ಯಥಾ ದೇವಾನ್ ದೇವಾ ಅಪಿ ತಥೈವ ತಾನ್ । ಛಾಯೇವ ಕರ್ಮಸಚಿವಾಃ ಸಾಧವೋ ದೀನವತ್ಸಲಾಃ ॥೬॥

ಅರ್ಥ :- ಮನುಷ್ಯರು ದೇವತೆಗಳನ್ನು ಯಾವ ಪ್ರಕಾರವಾಗಿ ಭಜಿಸುವರೋ, ಅದರಂತೆಯೇ ದೇವತೆಗಳು ಪರಛಾಯಾವತ್ ಆ ಭಕ್ತರಿಗೆ ಫಲ ಕೊಡುವುವು. ದೇವತೆಗಳು ಕರ್ಮದ ಅಧೀನರಾಗಿರುವರು. ಆದರೆ ಸತ್ಪುರುಷರು ದೀನವತ್ಸಲರಾಗಿರುವರು.

ಜೇ ಜೈಸೇ ದೇವ ಯಾಗೀ ಯಜಿಜತೀ । ತೈಸತೈಸೀ ಫಳೇ ದೇವ ದೇತೀ । ನ ಭಜತ್ಯಾಂತೇ ವಿಘ್ನೇ ಸೂಚಿತೀ । ಐಸೀ ಗತೀ ದೇವಾಂಚೀ ॥೬೫॥ ಜೈಸಜೈಸಾ ಪುರುಷ ವೇಶೇ । ತೈಸತೈಸೀ ಛಾಯಾ ನಟೇ । ತೇವೀ ಭಜನೇ ದೇವ ಪ್ರಸನ್ನ ಮೋಕೇ । ಯೇರವೀ ಉಫರಾಟೇ ವಿಘ್ನ ಕರಿತೀ ॥೬೬॥ ಜಂವ ಜಂವ ಸೂರ್ಯ ಪ್ರಕಾಶತ ಅಸೇ । ತಂವ ತಂವ ಛಾಯಾ ಸರಿಸೀ ದಿಸೇ । ನಿಜಕರ್ಮೇ ದೇವಹೀ ತೈಸೇ । ಕರ್ಮವಶೇ ಪ್ರಸನ್ನ ॥೬೭॥ ಸೂರ್ಯಅಸ್ತಮಾನೀ ಛಾಯಾ ನಾಸೇ । ಅಭಜನೇ ದೇವ ಕ್ಷೋಭತೀ ತೈಸೇ । ಏವಂ ಲಾಂಚುಗೇ ದೇವ ಐಸೇ । ತೂಹೀ ಅನಾಯಾಸೇ ಜಾಣಸೀ ॥೬೮॥ ಇತರ ದೇವಾಂಚೀ ಕಥಾ ಕೋಣ । ಥೋರಲಾ ದೇವ ಲಾಂಚುಗಾ ಪೂರ್ಣ । ತೋಹೀ ನ ಭೇಟೇ ಜೀವ ಘೇತಲ್ಯಾವಿಣ । ಭೇಟಲ್ಯಾಚೇ ಆಪಣ ಗರ್ಭವಾಸ ಸೋಸೀ ॥೬೯॥ ತ್ಯಾಚೇ ಜೀವೇ ಸರ್ವಸ್ವೇ ಭಜನ । ಕೇಲ್ಯಾ ನಿಜಾಂಗ ದೇಊನಿ ಹೋಯೇ ಪ್ರಸನ್ನ । ಪರೀ ನ ಭಜತ್ಯಾಚ್ಯಾ ಘರಾ ಜಾಣ । ವಿಸರೋನಿ ಆಪಣ ಕದಾ ನ ವಚೇ ॥೭೦॥ ತೈಸೀ ನವ್ಹೇ ತುಮಚೀ ಬುದ್ಧೀ । ದೀನದಯಾಳ ತ್ರಿಶುದ್ಧೀ । ತೂ ತಂವ ಕೇವಳ ಕೃಪಾನಿಧೀ । ಏಕ ತೋ ವಿಧೀ ಸಾಂಗೇನ ॥೭೧॥

ನೀನು ದೇವರಿಗೂ ಆಪ್ತನಾಗುವೆ, ದೈತ್ಯರ ವಿಶ್ವಾಸವನ್ನೂ ಪಡೆಯುವೆ. ರಾವಣನು ನಿನ್ನನ್ನು ಏಕಾಂತದಲ್ಲಿ ಕರೆದು ತನ್ನ ಹೃದಯದಲ್ಲಿನ ಹಿತಗುಪಗಳನ್ನು ಹೇಳುತ್ತಿದ್ದನು ॥೬೦॥ ಈ ರಾವಣನು ದೇವತೆಗಳನ್ನು ಬಂಧಿಖಾನೆಯಲ್ಲಿಟ್ಟಿದ್ದನು. ಆದರೆ ಆತನೇ ನಿನ್ನ ಚರಣಗಳಿಗೆ ವಂದಿಸುತ್ತಿದ್ದನು. ಕೊನೆಗೆ ನೀನು ರಾಮನ ನಿಜವಾದ ಮಿತ್ರನಾಗಿಯೇ ಇರುತ್ತಿದ್ದಿಯೇ! ಒಟ್ಟಿನಲ್ಲಿ ನಿನ್ನಲ್ಲಿ ವಿಷಮತೆಯು ಇಲ್ಲವೇ ಇಲ್ಲ ॥೬೧॥ ಜರಾಸಂಧನು ಕೃಷ್ಣನ ವೈರಿಯಾಗಿದ್ದನು. ಆದರೆ ನೀನು ಆತನ ಮನೆಯಲ್ಲಿ ಹೋಗಿ ಬರುವುದನ್ನು ಮಾಡುತ್ತಿದ್ದಿ ಮತ್ತು ಕೃಷ್ಣನ ಸಭೆಯಲ್ಲಿ ನೀನೇ ಆತನ ಮುಖ್ಯ ಆಪ್ತನಾಗಿರುವೆ ॥೬೨॥ ದೇವರ ಹೆಸರು ಉಚ್ಚರಿಸುವಂತಿಲ್ಲ. ಇದು ಹಿರಣ್ಯಕಶ್ಯಪುನ ಬಿರುದಾವಳಿಯಾಗಿತ್ತು. ಆದರೆ ಆತನಿಗೆ ನಿನ್ನ ಕೀರ್ತನದಲ್ಲಿ ಮನಸಾ ಪ್ರೇಮವಿತ್ತು. ಆದ್ದರಿಂದ ನಿಜವಾಗಿಯೂ ನಿಮ್ಮಲ್ಲಿ ಭೇದಭಾವವು ಇರುವುದೇ ಇಲ್ಲ ॥೬೩॥ ದೇವತೆಗಳ ಬುದ್ಧಿಯು ದುರಾಸೆಗಳಿಂದ ಕೂಡಿರುತ್ತದೆ. ಹಾಗೆ ನಿಮ್ಮ ಸಾಧುಗಳ ಬುದ್ಧಿಯು ಇರುವುದಿಲ್ಲ. ಅದು ಹೇಗೆಂಬುದು ಸಹ ಯಥಾರ್ಥವಾಗಿ ನಾನು ಹೇಳುವೆ, ಕೇಳಿರಿ ॥೬೪॥

ಯಾರು ಯಾವಪ್ರಕಾರವಾಗಿ ಯಜ್ಞಗಳಿಂದ ದೇವತೆಗಳಿಗೆ ತೃಪ್ತಿಪಡಿಸುವರೋ, ಅವರಿಗೆ ದೇವತೆಗಳವರು ಆ ರೀತಿಯಾಗಿ ಫಲ ಕೊಡುವರು ಮತ್ತು ತಮ್ಮನ್ನು ಭಜಿಸಲಾರದವರಿಗೆ ವಿಘ್ನಗಳನ್ನು ತಂದೊಡ್ಡುವರು. ಇದು ದೇವತೆಗಳ ಸ್ವಭಾವವಾಗಿರುವುದು ॥೬೫॥ ಮನುಷ್ಯನು ಹೊರಳುವಂತೆ ಅವರ ನೆರಳು ಅದರಂತೆಯೇ ಹೊರಳುವುದು. ಇದೇ ಪ್ರಕಾರವಾಗಿ ದೇವತೆಗಳವರಿಗೆ ಭಜಿಸಿದರೆ ಪ್ರಸನ್ನರಾಗುವರು, ಬಿಟ್ಟರೆ ವಿಘ್ನಗಳನ್ನುಂಟುಮಾಡುವರು ॥೬೬॥ ಪ್ರಾತಃಕಾಲದಲ್ಲಿ ಸೂರ್ಯನು ಮೇಲೇರಿದಂತೆ ನೆರಳು ಸಹ ಅದರಂತೆ ಸಮೀಪವಾಗುತ್ತದೆ. ತದ್ವತ್ ಅವರವರ ಕರ್ಮತಕ್ಕಂತೆ ದೇವರು ಸಹ ಪ್ರಸನ್ನನಾಗುವನು ॥೬೭॥ ಸೂರ್ಯನು ಅಸ್ತನಾಗಲು ನೆರಳು ಇಲ್ಲದಾಗುವುದು. ಅದರಂತೆ ತನ್ನನ್ನು ಭಜಿಸದಿದ್ದರೆ ದೇವರು ಕ್ಷುಬ್ಧನಾಗುವನು. ಈ ಪ್ರಕಾರವಾಗಿ ದೇವರು ಸ್ವಾರ್ಥಿಯಾಗಿರುವನು, ಇದು ತಮಗೂ ಗೊತ್ತಿದೆ ॥೬೮॥ ಇತರ ದೇವತೆಗಳ ಯಾವ ಕಥೆ? ಎಲ್ಲರಕ್ಕಿಂತಲೂ ದೊಡ್ಡವನಾಗಿರುವ ದೇವನೂ ಸಹ ಹೀಗೆಯೇ ಇರುವನು. ಈತನು ಸಹ ಜೀವವನ್ನು ತೆಗೆದುಕೊಳ್ಳದ ಹೊರತು ಭೇಟಿಯೇ ಆಗುವುದಿಲ್ಲ ಮತ್ತು ಭೇಟಿಯಾದವರ ಗರ್ಭವಾಸವನ್ನು ತಾನೇ ಭೋಗಿಸುವನು ॥೬೯॥ ಜೀವ ಭಾವದಿಂದ ಭಜಿಸಿದವರಿಗೆ ತಾನು ತನ್ನ ನಿಜಾಂಗವನ್ನು ಕೊಟ್ಟು ಪ್ರಸನ್ನನಾಗುವನು. ಆದರೆ ತನ್ನನು ಯಾರು ಭಜಿಸಲಾರರೋ ಎಂದಿಗೂ ಅವರ ಮನೆಗೆ ತಪ್ಪಿಯೂ ಹೋಗಲಾರನು ॥೭೦॥ ಹೀಗೆ ನಿಮ್ಮ ಸಂತರ ಬುದ್ಧಿಯು ಇರುವುದಿಲ್ಲ. ನೀನು ಮಾತ್ರ ದೀನರಲ್ಲಿ ದಯೆ ತೋರಿಸುವವನಿರುವೆ. ನೀನು ಕೇವಲ ಕೃಪೆಯ ನಿಧಿಯಾಗಿರುವೆ. ಅದು ಹೇಗೆಂದು ಹೇಳುವೆ ಕೇಳು ॥೭೧॥

ತುವಾ ವ್ಯಾಸ ದೇಖೋನಿ ಸಜ್ಞಾನ । ಉಪದೇಶಿಲೇ ಗುಹ್ಯಜ್ಞಾನ । ಧ್ರುವ ಬಾಳಕ ಅಜ್ಞಾನ । ಮ್ಹಣೋನಿ ಜಾಣ ನುಪೇಕ್ಷಿಸೀ ॥೭೨॥ ಪ್ರಹ್ಲಾದ ಉಪದೇಶಿಲಾ ಜೇವ್ಹಾ । ದೈತ್ಯಪುತ್ರ ನ ಮ್ಹಣಸೀ ತೇವ್ಹಾ । ತುಝಿಯಾ ಕೃಪೇಚಾ ಹೇಲಾವಾ । ತೋ ನಿಜವಿಸಾಂವಾ ದೀನಾಂಸೀ ॥೭೩॥ ಕೇವಳ ವಾಟಪಾಡಾ ದೇಖ । ಭಜನೇವೀಣ ಏಕಾಏಕ । ಮಹಾಕವಿ ಕೇಲಾ ವಾಲ್ಮೀಕ । ಅಮರ ಆವಶ್ಯಕ ವಂದಿತೀ ತ್ಯಾಸೀ ॥೭೪॥ ದೇಖೋನಿ ಜ್ಯಾಚಿಯಾ ಗ್ರಂಥಾಸೀ । ಸುಖ ವೋಸಂಡೇ ಸದಾಶಿವಾಸೀ । ಐಸಾ ತೂ ಕೃಪಾಳೂ ಹೋಸೀ । ಅನಾಥಾಸೀ ಕುವಾಂಸಾ ॥೭೫॥ ವರಿವರೀ ದಾವಿಸೀ ಮಿಣಧಾ ಕೋಪ । ಕೋಪೋನಿ ಸಾಂಡವಿಶೀ ತ್ಯಾಚೇ ಪಾಪ । ಶೇಖೀ ಸಾಯುಜ್ಯಾಚೇ ದೀಪ । ದಾವಿಶೀ ಸದ್ರೂಪ ದಯಾಳುವಾ ॥೭೬॥ ತುಮ್ಹೀ ಅಚ್ಯುತಾತ್ಮೇ ನಿಜನಿರ್ಧಾರೀ । ಮ್ಹಣೌನಿ ದೇವೋ ತುಮಚಾ ಆಜ್ಞಾಧಾರೀ । ತುಮ್ಹಿ ಮ್ಹಣಾಲ ತ್ಯಾತೇ ಉದ್ಧರೀ । ಯೇರ್ಹವೀ ಹಾತೀ ನ ಧರೀ ಆನಾತೇ ॥೭೭॥ ಐಸಾ ತೂ ದೀನದೀಕ್ಷಾಗುರು । ಬ್ರಹ್ಮಜ್ಞಾನೇ ಅತಿಉದಾರು । ತರೀ ಪುಸೇನ ತೋ ವಿಚಾರು । ನಿಜನಿರ್ಧಾರು ಸಾಂಗಾವಾ ॥೭೮॥

ಬ್ರಹ್ಮಂಸ್ತಥಾಪಿ ಪೃಚ್ಛಾಮೋ ಧರ್ಮಾನ್ ಭಾಗವತಾಂಸ್ತವ ।
ಯಾನ್ ಶ್ರುತ್ವಾ ಶ್ರದ್ಧಯಾ ಮರ್ತ್ಯೋಃಮುಚ್ಯತೇ ಸರ್ವತೋಭಯಾತ್ ॥೭॥

ಅರ್ಥ :- ಬ್ರಹ್ಮ ಸ್ವರೂಪನೇ, ನಿಮ್ಮ ಶುಭ ಆಗಮನದಿಂದ ಮತ್ತು ಶುಭ ದರ್ಶನದಿಂದ ನಾನು ಕೃತಕೃತ್ಯನಾದೆನು. ಧರ್ಮಸಾಧನೆಯ ಸಂಬಂಧವಾಗಿ ನಾನು ಪ್ರಶ್ನೆಯನ್ನು ಕೇಳುವೆನು. ಇದನ್ನು ಶ್ರವಣ ಮಾಡಿದವರು ಸಂಸಾರದ ಸರ್ವ ಭಯಗಳಿಂದ ಮುಕ್ತರಾಗುವರು.

ಆದರೇ ಮ್ಹಣೇ ದೇವಋಷೀ । ಆಜಿ ಸಕಳ ಪುಣ್ಯೇ ಆಲೀ ಫಳಾಸೀ । ಮಾಯಬಾಪ ತೂ ಘರಾ ಆಲಾಸೀ । ನಿಜಸುಖಾಸೀದಾಯಕ ॥೭೯॥ ಕೃಪಾ ಕೇಲೀ ಮಾಗೀಲ ಶಿಷ್ಯಾ । ತೇಚಿ ಕೃಪೇಚಾ ಘಾಲೀ ಠಸಾ । ಮಜ ತುಝಾ ಪೂರ್ಣ ಭರವಸಾ । ಸೋಡವೀ ಭವಪಾಶಾಪಾಸೂನಿ ॥೮೦॥ ತುಝೇನಿ ದರ್ಶನೇ ಕೃತಕೃತ್ಯತಾ । ಜರ್ಹೀ ಮಜ ಜಾಲೀ ತತ್ತ್ವತಾ । ತರ್ಹೀ ಭಾಗವತಧರ್ಮಕಥಾ । ಕೃಪೇನೇ ತತ್ತ್ವತಾ ಸಾಂಗಾವೀ ॥೮೧॥ ಐಸೇ ಸಾಂಗಾವೇ ಭಾಗವತಧರ್ಮ । ಜೇಣೇ ನಿರಸೇ ಕರ್ಮಾಕರ್ಮ । ಶ್ರದ್ಧೇನೆ ಐಕತಾ ಪರಮ। ಜನ್ಮ ಮರಣ ಹಾರಪೇ ॥೮೨॥ ಭವಭಯ ಅತಿದಾರುಣ । ತ್ಯಾ ಭಯಾಚೇ ಮಾಯಾ ನಿಜಕಾರಣ । ತಿಚೇ ಸಮೂಳ ಹೋಯ ನಿರ್ದಳಣ । ಐಸೇ ಧರ್ಮ ಕೃಪೇನೇ ಸಾಂಗಾವೇ ॥೮೩॥

ನೀನು ಸಜ್ಞಾನರಾದ ವ್ಯಾಸರನ್ನು ಕಂಡು ಅವರಿಗೆ ಗುಹ್ಯಜ್ಞಾನವನ್ನು ಉಪದೇಶಿಸಿದೆ. ಆದರೆ ಧ್ರುವ ಬಾಲಕನು ಅಜ್ಞಾನಿ ಎಂದು ಆತನನ್ನು ಉಪೇಕ್ಷೆ ಮಾಡಲಿಲ್ಲ ॥೭೨॥ ಈತನು ದೈತ್ಯನ ಮಗನು ಎಂದು ತಿಳಿದು ನೀನು ಯಾವ ವಿಚಾರವನ್ನು ಮಾಡದೇ ಪ್ರಹ್ಲಾದನಿಗೆ ಉಪದೇಶ ಮಾಡಿದೆ. ನಿನ್ನ ಕೃಪೆಯ ಲಹರಿಯು ದೀನಜನರ ವಿಶ್ರಾಂತಿಸ್ಥಾನವಾಗಿರುವುದು ॥೭೩॥ ವಾಲ್ಯಾ ಕೋಳಿ ಕೇವಲ ದಾರಿಬಡಕನಾಗಿದ್ದನು. ಭಜನೆ,ಪೂಜನೆ ಏನೂ ಅರಿಯದವನು. ಆತನಿಗೆ ನೀನು ರಾಮನಾಮದ ಉಪದೇಶವನ್ನು ನೀಡಿ ಆತನನ್ನು ಮಾಹಾಕವಿ ವಾಲ್ಮೀಕನನ್ನಾಗಿ ಮಾಡಿದೆ. ಆತನಿಗೆ ದೇವರೂ ಸಹ ವಂದಿಸುವರು ॥೭೪॥ ಈತನ ಗ್ರಂಥವನ್ನು ಅವಲೋಕಿಸಿದ ಮಹಾದೇವರಿಗೂ ಆನಂದವು ಉಕ್ಕೇರಿತು. ಹೀಗೆ ನೀನು ಕೃಪಾವಂತನಾಗಿ ಅನಾಥರಿಗೆ ವಿಶ್ರಾಂತಿಸ್ಥಾನನಾಗಿರುವೆ ॥೭೫॥ ನೀನು ಮೇಲ್ನೋಟಕ್ಕೆ ಕೋಪಿಸಿದಂತೆ ಕಾಣುವೆ. ಆದರೆ ನೀನು ಯಾರಲ್ಲಿ ಕೋಪಿಸುವಿಯೋ ಅವರ ಪಾಪವನ್ನು ನಿವಾರಿಸುವೆ ಮತ್ತು ಕೊನೆಯಲ್ಲಿ ಹೇ ದಯಾಘನನೇ, ಆತನಿಗೆ ಸಾಯುಜ್ಯದ ದೀಪವನ್ನು ಬೆಳಗಿಸಿ ಸದ್ರೂಪವನ್ನು ತೋರಿಸುವೆ ॥೭೬॥ ನೀವು ನಿಜವಾಗಿಯೂ ಅಚ್ಯುತಾತ್ಮರಾಗಿರುವಿರಿ. ಆದ್ದರಿಂದ ದೇವರೂ ಸಹ ನಿಮ್ಮ ಆಜ್ಞಾಧಾರಕನಾಗಿರುವನು. ನೀವು ಉದ್ಧರಿಸಿರಿ ಎಂದು ಯಾರಿಗೆ ತೋರಿಸುವಿರೋ, ಅವರನ್ನು ಉದ್ಧರಿಸುವನು.ಬೇರೆಯವರಿಗೆ ತನ್ನ ಕೈಗಳಿಂದಲೂ ಮುಟ್ಟುವುದಿಲ್ಲ ॥೭೭॥ ಈ ಪ್ರಕಾರವಾಗಿ ದೀನರಿಗೆ ಪರಮಾರ್ಥದ ದೀಕ್ಷೆಯನ್ನು ಕೊಡುವ ಗುರು ನೀನಾಗಿರುವೆ. ಬ್ರಹ್ಮಜ್ಞಾನದಿಂದ ಅತ್ಯಂತ ಉದಾರನಾಗಿರುವೆ. ಅದಕ್ಕಾಗಿ ಈಗ ನಾನೊಂದು ಪ್ರಶ್ನೆಯನ್ನು ಕೇಳುವೆನು. ಅದನ್ನು ಸರಿಯಾಗಿ ತಿಳಿಸು ॥೭೮॥

ಪುನಃ ಹೇಳಿದನು, ಹೇ ದೇವರ್ಷಿಯೇ, ಇಂದು ನನ್ನ ಎಲ್ಲ ಪುಣ್ಯಗಳು ಫಲದ್ರೂಪವಾದವು. ಏಕೆಂದರೆ, ಆತ್ಮಸುಖವನ್ನು ಕೊಡುವ ತಾಯೀತಂದೆಯಾದ ನೀನು ನಮ್ಮ ಮನೆಗೆ ಬಂದಿರುವೆ ॥೭೯॥ ಹಿಂದಿನ ಶಿಷ್ಯರಿಗೆ ನೀನು ಯಾವ ಪ್ರಕಾರವಾಗಿ ಕೃಪೆಯನ್ನು ಮಾಡಿರುವಿಯೋ, ಅದರಂತೆಯೇ ನನ್ನ ಮೇಲೆ ಕೃಪೆ ಮಾಡಿ ನನ್ನನ್ನೂ ಸಂಸಾರಪಾಶದಿಂದ ಬಿಡಿಸು. ನಿನ್ನ ಮೇಲೆ ನನ್ನ ಪೂರ್ಣ ವಿಶ್ವಾಸವಿರುವುದು ॥೮೦॥ ನೀನು ನಿನ್ನ ದರ್ಶನದಿಂದ ನನಗೆ ನಿಜವಾಗಿಯೂ ಕೃತಕೃತ್ಯನನ್ನಾಗಿ ಮಾಡಿದೆ. ಆದ್ದರಿಂದ ಈಗ ನೀನು ಅದೇ ಕೃಪೆಯಿಂದ ಯಥಾರ್ಥ ರೀತಿಯಲ್ಲಿ ನನಗೆ ಭಾಗವತಧರ್ಮವನ್ನು ಹೇಳು ॥೮೧॥ ಈ ಭಾಗವತಧರ್ಮದಿಂದ ಕರ್ಮಾಕರ್ಮಗಳು ಲಯವಾಗುವಂತೆ ಮತ್ತು ಶ್ರದ್ಧೆಯಿಂದ ಶ್ರವಣ ಮಾತ್ರ ಜನ್ಮಮರಣಗಳ ಮುಕ್ತತೆಯಾಗುವಂತೆ ಹೇಳು ॥೮೨॥ ಸಂಸಾರದ ಭಯವು ಬಹು ದಾರುಣವಾಗಿದೆ. ಇದರ ಮೂಲಕಾರಣ ಮಾಯೆಯಾಗಿದೆ. ಈ ಮಾಯೆಯು ಸಮೂಲವಾಗಿ ಇಲ್ಲದಂತೆ ಮಾಡುವ ಧರ್ಮವನ್ನು ನನಗೆ ಕೃಪೆ ಮಾಡಿ ಹೇಳಿರಿ ॥೮೩॥

ಮಜ ನಾಹೀ ಅಧಿಕಾರ ಪೂರ್ಣ । ಐಸೇ ವಿಚಾರಾಲ ಲಕ್ಷಣ । ತೇ ವಿಷಯೀಚೀ ಹೇ ವಿನವಣ । ಸಾವಧಾನ ಅವಧಾರೀ ॥೮೪॥

ಅಹಂ ಕಿಲ ಪುರಾನಂತಂ ಪ್ರಜಾರ್ಥೋ ಭುವಿ ಮುಕ್ತಿದಮ್ ।
ಅಪೂಜಯಂ ನ ಮೋಕ್ಷಾಯ ಮೋಹಿತೋ ದೇವಮಾಯಯಾ ॥೮॥

ಅರ್ಥ: ಹಿಂದಿನ ಜನ್ಮದಲ್ಲಿ ನಾನು ಮುಕ್ತಿಯನ್ನು ಕೊಡುವ ದೇವರ ಆರಾಧನೆಯನ್ನು ಮಾಡಿದ್ದೇನು. ಆದರೆ ನನಗೆ ಮುಕ್ತಿಯಾಗಬೇಕೆಂಬ ಇಚ್ಛೆಯು ಇದ್ದಿಲ್ಲ. ಆತನು ನನಗೆ ಪುತ್ರರೂಪದಿಂದ ಪ್ರಾಪ್ತನಾಗಬೇಕೆಂಬ ಉದ್ದೇಶವು ನನ್ನ ಆರಾಧನೆಯದ್ದಾಗಿತ್ತು. ಆ ವೇಳೆಯಲ್ಲಿ ನಾನು ಭಗವಂತನ ಲೀಲೆಯಿಂದ ಮುಗ್ಧನಾಗಿದ್ದೆನು.

ಮಜ ಅಧಿಕಾರು ನಾಹೀ ಪೂರ್ಣ । ಹೇ ಮೀಹೀ ಜಾಣತೋ ಆಪಣ । ಮಾಗೇ ಮ್ಯಾ ಕೇಲೇ ಭಗವದ್ಭಜನ । ತೇ ತೂ ಕಥನ ಅವಧಾರೀ ॥೮೫॥ ಮ್ಯಾ ಪೂರ್ವೀ ಆರಾಧಿಲೇ ದೇವರಾಯಾ । ತೇ ಭಜನ ಮಮತಾ ನೇಲೇ ವಾಯಾ । ಪ್ರಲೋಭವಿಲೋ ದೇವಮಾಯಾ । ಪುತ್ರಸ್ನೇಹಾಲಾಗೂನಿ ॥೮೬॥ ಮಜ ದೇವ ತುಷ್ಟಲಾ ಪ್ರಸನ್ನಪಣೇ । ಮಾಗಸೀ ತೇ ದೇಈನ ಮ್ಹಣೇ । ತೇಥೇ ಮಾಯೇನೇ ಠಕಿಲೇ ಮಜಕಾರಣೇ । ಮಾಝಾ ಪುತ್ರ ಹೋಣೇ ಮೀ ಮಾಗೇ ॥೮೭॥ ತೋ ಹಾ ಮಾಝಾ ಪುತ್ರ ಶ್ರೀಕೃಷ್ಣ । ಪರೀ ಮಜ ನ ಸಾಂಗೇ ಬ್ರಹ್ಮಜ್ಞಾನ । ತೋಚಿ ವಂದೀ ಮಾಝೇ ಚರಣ । ಮ್ಹಣೇ ಬಾಳಕ ಪೂರ್ಣ ಮೀ ತುಝೇ ॥೮೮॥ ಯಾಪರೀ ಶ್ರೀಕೃಷ್ಣಾಪಾಸೀ । ಜ್ಞಾನಪ್ರಾಪ್ತಿ ನವ್ಹೇ ಆಮ್ಹಾಸೀ । ಕೃಷ್ಣ ಪರಮಾತ್ಮ ಹೃಷೀಕೇಶೀ । ಹೇ ನಿಶ್ಚಯೇಸೀ ಮೀ ಜಾಣೇ ॥೮೯॥ ಶ್ರೀಕೃಷ್ಣ ಜನ್ಮಲಾ ಮಾಝಿಯಾ ಕುಶೀ । ಮ್ಹಣೌನಿ ಶ್ರದ್ಧಾ ಆಹೇ ಮಜಪಾಶೀ । ತೇಣೇಚಿ ತೂ ತುಷ್ಟಲಾಸೀ । ದೇವಋಷೀ ತರೀ ನಿಜಕೃಪೇಸೀ ಉದ್ಧರೀ ॥೯೦॥ ಜೇ ಮಾಯೇನೇ ಠಕಿಲೋ ವಾಡೇಕೋಡೇ । ತೇ ಮಾಯಾ ಸಮೂಳ ಝಡೇ। ಐಸೇ ಸಾಂಗಿಜೇ ರೋಕಡೇ । ಬಹು ಬೋಲೋನಿ ಪುಢೇ ಕಾಯ ಕಾಜ॥೯೧॥

ಯಯಾ ವಿಚಿತ್ರವ್ಯಸನಾದ್ ಭವದ್ಭಿರ್ವಿಶ್ವತೋಭಯಾತ್ । ಮುಚ್ಯೇಮ ಹ್ಯಂಜಸೈವಾದ್ಧಾ ತಥಾ ನಃ ಶಾಧಿ ಸುವ್ರತ ॥೯॥

ಅರ್ಥ :- ಹೇ ನಾರದನೇ, ನಾನು ಈ ಜನ್ಮ ಮರಣರೂಪ ಭಯಾನಕ ಸಂಸಾರದಿಂದ ಮುಕ್ತನಾಗುವಂತೆ ನನಗೆ ಉಪದೇಶಿಸು. ಈ ಪ್ರಕಾರವಾಗಿ ಭಾಗವತಧರ್ಮದ ಉಪದೇಶವನ್ನು ಮಾಡು.

ಮಾಯಾಜಲೇ ಭವಸಾಗರು । ಭರಲಾ ಅಸೇ ಅತಿದುಸ್ತರು । ತ್ಯಾಚಾ ಉತರಾವಯಾ ಪೈಲಪಾರು । ಹೋಯ ತೂ ತಾರೂ ಮುನಿರಾಯಾ ॥೯೨॥ ಯಾಚೇ ಸಕಳ ಜಳ ಕ್ಷಾರ । ಮಾಜೀ ಸಾವಜೇ ಅನಿವಾರ । ಏಕಏಕೇ ಚರಾಚರ । ಗಿಳಿಲೇ ಸಾಚಾರ ನಿಜಶಕ್ತಿ ॥೯೩॥

ಇದನ್ನು ಕೇಳಲು ನನಗೆ ಪೂರ್ಣ ಅಧಿಕಾರವು ಇಲ್ಲವೆಂದು ನೀವು ಹೇಳಬಹುದು. ಅದಕ್ಕಾಗಿ ಆದದ್ದನ್ನು ಹೇಳುವೆ, ಕೇಳಿರಿ ॥೮೪॥

ಹೀಗೆ ಕೇಳುವುದು ನನಗೆ ಪೂರ್ಣ ಅಧಿಕಾರವಿಲ್ಲ ಎಂದು ನನ್ನದು ನನಗೆ ತಿಳಿಯುತ್ತದೆ. ಆದರೆ ನಾನು ಹಿಂದಿನ ಜನ್ಮದಲ್ಲಿ ಭಗವದ್ಭಜನೆಯನ್ನು ಮಾಡಿರುವೆನು. ಅದನ್ನು ನೀನು ಕೇಳು ॥೮೫॥ ನಾನೂ ಸಹ ಪೂರ್ವದಲ್ಲಿ ದೇವಾಧಿದೇವನ ಆರಾಧನೆಯನ್ನು ಮಾಡಿದೆನು. ಆದರೆ, ಆ ಭಜನೆಯು ಮಮತೆಯಿಂದ ವ್ಯರ್ಥ ಹೋಯಿತು. ದೇವರ ಮಾಯೆಯಿಂದ ನಾನು ಪುತ್ರಪ್ರೇಮಿಯಾಗಿ ಅತಿಯಾಗಿ ಭುಲಾಯಿಸಿದೆನು ॥೮೬॥ ದೇವರು ಸಂತೋಷದಿಂದ ನನ್ನಲ್ಲಿ ಪ್ರಸನ್ನನಾಗಿ "ನೀನು ಬೇಕಾದ ವರವನ್ನು ಕೇಳು, ಕೊಡುವೆ" ಎಂದನು. ಆಗ ನಾನು ಮಾಯೆಯ ಮೋಸಕ್ಕೆ ಒಳಗಾಗಿ "ನನಗೆ ನೀನೇ ಮಗನಾಗು" ಎಂದು ಬೇಡಿಕೊಂಡೆನು ॥೮೭॥ ಅದೇ ನನ್ನ ಮಗನು ಶ್ರೀಕೃಷ್ಣನಾಗಿರುವನು. ಆದರೂ ಆತನು ನನಗೆ ಬ್ರಹ್ಮಜ್ಞಾನವನ್ನು ಹೇಳಲಾರನು. ಅದಲ್ಲದೇ ನನ್ನ ಚರಣಗಳಲ್ಲಿ ವಂದಿಸಿ ನಾನು ನಿನ್ನ ಮಗನು ಎಂದು ಹೇಳುವನು ॥೮೮॥ ಆದ್ದರಿಂದ ಶ್ರೀಕೃಷ್ಣನಿಂದ ನನಗೆ ಬ್ರಹ್ಮಜ್ಞಾನ ಪ್ರಾಪ್ತಿಯಾಗುವುದಿಲ್ಲ. ನಿಜವಾಗಿಯೂ ಈ ಹೃಷಿಕೇಶಿ ಶ್ರೀಕೃಷ್ಣನು ಪರಮಾತ್ಮನಿರುವುದು ನನಗೆ ತಿಳಿದಿದೆ ॥೮೯॥ ಶ್ರೀಕೃಷ್ಣನು ನನ್ನ ಹೊಟ್ಟೆಯಲ್ಲಿ ಜನ್ಮಕ್ಕೆ ಬಂದನು. ಆದ್ದರಿಂದಲೇ ನನಗೆ ಶ್ರದ್ಧೆಯಿರುವುದು. ಇದರಿಂದಲೇ ನೀನು ನನ್ನ ಮೇಲೆ ಸಂತುಷ್ಟನಾಗಿರುವೆ. ಈಗ ಅದೇ ಕೃಪೆಯಿಂದ ನನ್ನನ್ನು ಉದ್ಧರಿಸು ॥೯೦॥ ಯಾವ ಮಾಯೆಯ ಮರುವಿನಲ್ಲಿ ನಾವು ಮೋಸ ಹೋಗಿರುವೆವೋ, ಆ ಮಾಯೆಯು ಸಮೂಲವಾಗಿ ಝಾಡಿಸಿ ಹೋಗುವಂತೆ ಪ್ರತ್ಯಕ್ಷವಾದ ಜ್ಞಾನವನ್ನು ಹೇಳು. ಇದಕ್ಕಿಂತಲೂ ಹೆಚ್ಚಾಗಿ ನಾನೇನು ಹೇಳಲಿ? ॥೯೧॥

ಈ ಮಾಯಾ ಜಲದಿಂದ ಭವಸಾಗರವು ತುಂಬಿ ಅತಿ ಭಯಂಕರವಾಗಿದೆ. ಇದನ್ನು ದಾಟಿ ಹೋಗುವುದು ಅತ್ಯಂತ ಕಠಿಣವಾಗಿದೆ. ಹೇ ಮುನಿರಾಯನೇ, ಇದನ್ನು ಪಾರಾಗಲು ನೀನು ದೋಣಿಯಾಗು ॥೯೨॥ ಇದರ ಜಲವು ಎಲ್ಲವೂ ಉಪ್ಪಾಗಿದೆ ಮತ್ತು ಇದರಲ್ಲಿ ಅನಿವಾರ್ಯವಾಗಿ ಪ್ರಚಂಡವಾದ ಜಲಚರಗಳಿರುವುವು. ಇವು ಒಂದಕ್ಕಿಂತ ಒಂದು ಪ್ರಬಲವಾಗಿ ತಮ್ಮ ಬಲದಿಂದ ಈ ಚರಾಚರವನ್ನೇ ನುಂಗಿಬಿಟ್ಟಿವೆ ॥೯೩॥

ಲಾಟಾಂವರೀ ಅಚಾಟ ಲಾಟಾ । ಮೋಹಾಚಿಯಾ ಅತಿದುರ್ಘಟಾ। ಆದಳತೀ ಅವಿವೇಕತಟಾ । ಧೈರ್ಯಾಚಿಯಾ ಕಾಂತಾ ಪಾಡಿತ ॥೯೪॥ ಅಹಂ - ಕುವಾವ್ಯೋ ವಾಜತಾ ಥೋರು । ಅವಘಾಚಿ ಖವಳೇ ಸಾಗರು । ಮೀ - ಮಾರ್ಝೇನಿ ಗಜರೇ ಘೋರು । ಅತಿದುರ್ಧರು ಗರ್ಜತ ॥೯೫॥ ನಾನಾ ವಾಸನಾಂಚಾ ವಳಸಾ । ಪಾಹೇ ಪಾ ಭಂವತಾಹೇ ಕೈಸಾ । ಯೇಥ ತರಾವಯಾ ಧಿಂವಸಾ । ನವ್ಹೇ ಸಹಸಾ ಸುರನರಾ ॥೯೬॥ ಕ್ರೋಧಾಚೇ ಪ್ರಬಳ ಭರತೇ । ಭರೀ ದ್ವೇಷಾಚಿಯಾ ತರಿಯಾಂತೇ । ಅಸೂಯಾತಿರಸ್ಕಾರಾಂಚೀ ತೇಥೇ । ಚಿಡಾಣೇ ಉತೇ ಅನಿವಾರ ॥೯೭॥ ಕಾಮಪರ್ವತಾಚೀ ಶಿಖರೇ । ವಿಷಮೇ ಭಾಸತೀ ಅಪಾರೇ । ಆಶೇ ಇಚ್ಛೇಚೀ ವರೀ ಥೋರೇ । ಝಾಡೇ ವಿಷಯಾಂಕುರೇ ವಾಢಲೀ ॥೯೮॥ ಸಂಕಲ್ಪವಿಕಲ್ಪಾಂಚೇ ಮೀನ । ನಿಂದೇಚ್ಯಾ ಸುಸರೀ ದಾರುಣ । ಬ್ರಹ್ಮದ್ವೇಷಾಚೇ ನಕ್ರ ಪೂರ್ಣ । ಸಾಗರೀ ಜಾಣ ತಳಪತೀ ॥೯೯॥ ಎವಢಾಹೀ ಹಾ ಭವಸಾಗರು । ಶೋಷಿತಾ ತೂ ಅಗಸ್ತೀ ಸಾಚಾರು । ತುರ್ಝೇನಿ ಭವಾಬ್ಧಿಪೈಲಪಾರು । ಪಾವ್ಯೋ ಹಾ ನಿರ್ಧಾರು ಜಾಹಲಾ ಆಮ್ಹಾ ॥೧೦೦॥ ಯಾಚಾ ವಿಶ್ವತೋಭಯ ಹೇಲಾವಾ । ತೋ ಆಮ್ಹಾ ನ ಬಾಧೀ ತುಮಚ್ಯಾ ಕಣವಾ । ಅಪ್ರಯಾಸೇ ನಾರದದೇವಾ । ಮರಣಾರ್ಣವಾ ಮಜ ತಾರೀ ॥೧೦೧॥ ಪಾಯೀ ಉತರೂನ ಭವಸಾಗರು । ಸಾಕ್ಷಾತ ಪಾವೇ ಪರಪಾರು । ಐಸಾ ಭಾಗವತಧರ್ಮವಿಚಾರು । ತೋ ನಿಜನಿರ್ಧಾರು ಪ್ರಬೋಧೀ ॥೧೦೨॥ ಐಕೋನಿ ವಸುದೇವಾಚೀ ಉಕ್ತೀ । ನಾರದ ಸುಖಾವಲಾ ಚಿತ್ತೀ । ತೋಚಿ ಅಭಿಪ್ರಾವ್ಯೋ ಪರೀಕ್ಷಿತೀ । ಶುಕ ಸ್ವಮುಖೇ ಸ್ಥಿತಿ ಸಾಂಗತ ॥೧೦೩॥

ಶ್ರೀಶುಕ ಉವಾಚ :-

ರಾಜನ್ನೇವಂ ಕೃತ ಪ್ರಶ್ನೋ ವಸುದೇವೇನ ಧೀಮತಾ । ಪ್ರೀತಸ್ತಮಾಹ ದೇವರ್ಷಿರ್ಹರೇಃ ಸಂಸ್ಮಾರಿತೋ ಗುಣೈಃ ॥೧೦॥

ಅರ್ಥ :- ಶುಕಮುನಿಗಳು ನುಡಿದರು - ಮಹಾರಾಜ, ಧೀಮಂತನಾದ ವಸುದೇವನು ಕೇಳಿದ ಪ್ರಶ್ನೆಯಿಂದ ದೇವರ್ಷಿ ನಾರದರಿಗೆ ಸಂತೋಷವಾಯಿತು. ಅವು ಶ್ರೀಹರಿಯ ದಿವ್ಯಗುಣಗಳನ್ನು ಸೂಚಿಸುತ್ತಾ ನಾರದರಿಗೆ ಭಗವಾನ ಶ್ರೀಕೃಷ್ಣನ ಸ್ಮರಣೆಯನ್ನುಂಟು ಮಾಡಿದವು. ಆದ್ದರಿಂದ ನಾರದರು ವಸುದೇವನಿಗೆ ಹೀಗೆ ಹೇಳಿದರು.

ಸಾಂಗತಾ ವಸುದೇವಾಚಾ ಪ್ರಶ್ನ । ಶ್ರೀಶುಕ ಜಾಹಲಾ ಸ್ವಾನಂದಪೂರ್ಣ । ನಾರದು ವೋಳಲಾ ಚೈತನ್ಯ ಘನ । ಚಿತ್ಸುಖಜೀವನ ಮುಮುಕ್ಷಾ ॥೧೦೪॥ ಶ್ರೀಶುಕ ಮ್ಹಣೇ ನರದೇವಾ । ಭಾವ್ಯೋ ಮೀನಲಾ ನಾರದಾಚ್ಯಾ ಭಾವಾ । ಐಕೋನಿ ಪ್ರಶ್ನಸುಹಾವಾ । ತೋ ಮ್ಹಣೇ ವಸುದೇವಾ ಧನ್ಯ ವಾಣೀ ॥೧೦೫॥

ಮೋಹವೆಂಬ ತೆರೆಗಳು ಒಂದರಮೇಲೊಂದು ಅತಿ ದುರ್ಧರವಾಗಿ ಏರಿಬರುವುವು ಮತ್ತು ಅವಿವೇಕ ಎಂಬ ದಡಕ್ಕೆ ಅಪ್ಪಳಿಸುವುವು. ಧೈರ್ಯದ ಅಂಚನ್ನು ಒಡೆದು ಬೀಳಿಸುವುವು ॥೯೪॥ ಅಹಂಕಾರ ಎಂಬ ಬಿರುಗಾಳಿಯು ಭರ್, ಭರ್, ಎಂದು ಬೀಸುವುದು. ಇದರಿಂದ ಸಂಪೂರ್ಣ ಸಾಗರವು ಉಕ್ಕೇರುವುದು. ಆಗ ನಾನು - ನನ್ನದು ಎಂಬ ದೊಡ್ಡ ಧ್ವನಿಯಿಂದ ಗರ್ಜಿಸುವುದು ॥೯೫॥ ಅದರಂತೆ ನಾನಾ ಪ್ರಕಾರದ ವಾಸನೆಗಳೆಂಬ ತಿರುಗಣೆಗಳು ಗರ ಗರ ಗರ ಎಂದು ಹೇಗೆ ತಿರುಗುತ್ತಿವೆ, ನೋಡಿರಿ. ಇದರಿಂದ ಈ ಸಾಗರವನ್ನು ದಾಟಿ ಹೋಗಲು ಸುರನರರಿಗೆ ಸಾಹಸ ಧೈರ್ಯವು ಸಾಲುವುದಿಲ್ಲ ॥೯೬॥ ದ್ವೇಷ ಎಂಬ ತೆಗ್ಗುಗಳಲ್ಲಿ ಕ್ರೋಧ ಎಂಬ ಜಲವು ತುಂಬುತ್ತಿರುತ್ತದೆ. ಅಸೂಯೆ ತಿರಸ್ಕಾರಗಳೆಂಬ ಬುರುಗು ಹಬ್ಬಿಕೊಂಡಿದೆ ॥೯೭॥ ಕಾಮವೆಂಬ ಅಸಂಖ್ಯಾತ ಪರ್ವತಗಳು ಚಿಕ್ಕ ದೊಡ್ಡ ರೂಪಗಳಿಂದ ಕಾಣಿಸುತ್ತಿವೆ. ಅವುಗಳಲ್ಲಿ ಇಚ್ಛೆ ಎಂಬ ದೊಡ್ಡ ದೊಡ್ಡ ಗಿಡಮರಗಳು ವಿಷಯಾಂಕುರಗಳಿಂದ ಬೆಳೆದು ನಿಂತಿವೆ ॥೯೮॥ ಈ ಸಮುದ್ರದಲ್ಲಿ ಸಂಕಲ್ಪ ವಿಕಲ್ಪಗಳೆಂಬ ಮೀನುಗಳಿವೆ. ನಿಂದೆ ಎಂಬ ಮೊಸಳೆಗಳಿವೆ. ಬ್ರಹ್ಮದ್ವೇಷ ರೂಪ ಸೊಕ್ಕೇರಿದ ನಕ್ರಗಳು ಓಡಾಡುತ್ತಿವೆ ॥೯೯॥ ಸಂಸಾರ ಸಮುದ್ರವು ಇಷ್ಟೊಂದು ಪ್ರಚಂಡವಾಗಿರುವುದು. ಆದರೂ ಸಹ ಅದನ್ನೆಲ್ಲ ಬರಿದು ಮಾಡುವ ಪ್ರತಿ ಅಗಸ್ತ್ಯ ನೀನಾಗಿರುವೆ. ಆದ್ದರಿಂದ ನಿನ್ನ ಸಹಾಯದಿಂದ ಈ ಸಮುದ್ರವನ್ನು ದಾಟಿ ಹೋಗುವ ಭರವಸೆಯು ನಮಗಿದೆ ॥೧೦೦॥ ಇದರ ತೆರೆಗಳ ಭಯವು ಸರ್ವ ಬ್ರಹ್ಮಾಂಡಕ್ಕಿದೆ. ಆದರೆ, ನಿನ್ನ ಕೃಪೆಯಿಂದ ನಮಗೆ ಬಾಧಕವಾಗಲಾರದು. ಅದಕ್ಕಾಗಿ ನಾರದದೇವರೇ, ಹೇ ದಯಾನಿಧಿಯೇ, ನೀವು ಈ ಜನ್ಮಮರಣ ರೂಪ ಸಂಸಾರ ಸಾಗರದಿಂದ ಅನಾಯಾಸವಾಗಿ ನಮ್ಮನ್ನು ಉದ್ಧರಿಸಿರಿ ॥೧೦೧॥ ಈ ಭವಸಾಗರವನ್ನು ಪ್ರತ್ಯಕ್ಷವಾಗಿ ಕಾಲು ನಡಿಗೆಯಿಂದ ದಾಟುವಂತೆ ನಮಗೆ ಭಾಗವತಧರ್ಮದ ವಿಚಾರಗಳನ್ನು ಹೇಳಿರಿ ॥೧೦೨॥ ಈ ಪ್ರಕಾರದ ವಸುದೇವನ ಭಾಷಣವನ್ನು ಆಲಿಸಿ, ನಾರದರ ಮನಸ್ಸಿಗೆ ಪರಮ ಸಂತೋಷವಾಯಿತು. ಅದೇ ಆತನ ಆನಂದ ಸ್ಥಿತಿಯನ್ನು ಶುಕಾಚಾರ್ಯರು ತಮ್ಮ ಮುಖದಿಂದ ಪರೀಕ್ಷಿತ ರಾಜನಿಗೆ ಹೇಳುವರು ॥೧೦೩॥

ಈ ಪ್ರಕಾರದ ವಸುದೇವನ ಪ್ರಶ್ನೆಯನ್ನು ಹೇಳುವಾಗ್ಗೆ ಶುಕಾಚಾರ್ಯರಿಗೆ ಸ್ವಾನಂದ ಪೂರವು ಬಂದಿತು. ನಾರದರು ಚೈತನ್ಯರೂಪ ಮೋಡವಾಗಿ ಮುಮುಕ್ಷುಗಳವರಲ್ಲಿ ಚಿತ್ಸುಖದ ಮಳೆಗರೆದರು ॥೧೦೪॥ ಶ್ರೀಶುಕಾಚಾರ್ಯರು ಹೇಳುವರು:- ಹೇ ರಾಜನೇ, ಈ ಪ್ರಕಾರದ ತನಗೆ ಪ್ರಿಯವಾಗಿರುವ ಪ್ರಶ್ನೆಯನ್ನು ಕೇಳಿದ್ದಕ್ಕೆ ನಾರದರ ಮನಸ್ಸಿಗೆ ತುಂಬಾ ಸಂತೋಷವಾಗಿ ಹೀಗೆ ಹೇಳಿದರು:- ಹೇ ವಸುದೇವನೇ, ನಿನ್ನ ವಾಣಿಯು ಧನ್ಯವಾಗಿದೆ ॥೧೦೫॥

ಪರಿಸಿತಾ ಹಾ ತುಝಾ ಪ್ರಶ್ನ । ಚಿತ್ಸುಖೇ ಪ್ರಗಟೇ ನಾರಾಯಣ । ಐಸೇ ಬೋಲತಾ ನಾರದ ಜಾಣ । ಸ್ವಾನಂದೇ ಪೂರ್ಣ ವೋಸಂಡಲಾ ॥೧೦೬॥ ರೋಮಾಂಚ ಉಚಲಲೇ ಅಂಗೀ । ಸ್ವೇದ ದಾಟಲಾ ಸರ್ವಾಂಗೀ । ಆನಂದಾಶ್ರು ಚಾಲಿಲೇ ವೇಗಿ । ಸ್ವಾನಂದರಂಗೀ ಡುಲ್ಲತು ॥೧೦೭॥ ಸಪ್ರೇಮ ಮೀನಲಿಯಾ ಶ್ರೋತಾ । ಜ್ಹೈ ಪೂರ್ಣ ಸುಖಾವೇನಾ ವಕ್ತಾ । ತ್ಯೈ ತೋ ಜಾಣಾವಾ ಅವಘಾ ರಿತಾ । ಕಥಾಸಾರಾಮೃತಾ ಚವೀ ನೇಣೇ ॥೧೦೮॥ ಐಕತಾ ವಸುದೇವಾಚಾ ಪ್ರಶ್ನ । ನಾರದ ಸುಖಾವೇ ಪೂರ್ಣ । ಮಗ ಸ್ವಾನಂದಗಿರೀ ಗರ್ಜೋನ । ಕಾಯ ಕಾಯ ಬೋಲತ ॥೧೦೯॥

ನಾರದ ಉವಾಚ :-

ಸಮ್ಯಗೇತದ್ ವ್ಯವಸಿತಂ ಭವತಾ ಸಾತ್ವತರ್ಷಭ । ಯತ್ ಪೃಚ್ಛಸೇ ಭಾಗವತಾನ್ ಧರ್ಮಾಂಸ್ತ್ವಂ ವಿಶ್ವಭಾವನಾನ್ ॥೧೧॥

ಅರ್ಥ:- ನಾರದರು ನುಡಿದರು- ಹೇ ಯದುವಂಶ ಶಿರೋಮಣಿಯೇ, ನಿನ್ನ ಈ ನಿಶ್ಚಯವು ಅತಿಶಯವಾಗಿ ಉತ್ತಮವಾಗಿರುವುದು. ಕಾರಣ ಇದು ಭಾಗವತ ಧರ್ಮ ಸಂಬಂಧವಾಗಿರುವುದು. ಸಂಪೂರ್ಣ ವಿಶ್ವಕ್ಕೆ ಜೀವನದಾನವನ್ನು ಕೊಡುವಂತಹದ್ದಾಗಿದೆ. ಪವಿತ್ರ ಮಾಡುವಂತಹದ್ದಾಗಿದೆ.

ನಾರದ ಮ್ಹಣೇ ಸಾತ್ವತಶ್ರೇಷ್ಠಾ । ವಸುದೇವಾ ಪರಮಾರ್ಥನಿಷ್ಠಾ । ಧನ್ಯ ಧನ್ಯ ತುಝೀ ಉತ್ಕಂಠಾ । ತೂ ಭಾವಾರ್ಥೀ ಮೋಠಾ ಭಾಗವತಧರ್ಮೀ ॥೧೧೦॥ ಜ್ಯಾಚೇನಿ ಧರ್ಮಾಚೇ ಪ್ರಶ್ನೋತ್ತರೇ । ಹೇ ವಿಶ್ವ ಅವಘೇಂಚಿ ಉದ್ಧರೇ । ಹೇ ವಿಚಾರಿಲಾ ತುವಾ ಬರೇ । ನಿಜನಿರ್ಧಾರೇ ಶ್ರೀಕೃಷ್ಣಜನಕಾ ॥೧೧೧॥ ತುಝೇನಿ ಪ್ರಶ್ನೋತ್ತರೇ ಜಾಣ । ಸಾಧಕ ನಿಸ್ತರತೀ ಸಂಪೂರ್ಣ । ಸಾಧಕಾಂಚೇ ನವಲ ಕೋಣ । ಮಹಾಪಾಪೀ ಪಾವನ ಯೇಣೇ ಹೋತೀ ॥೧೧೨॥

ಶ್ರುತೋಽನುಪಠಿತೋ ಧ್ಯಾತ ಆದೃತೋ ವಾನುಮೋದಿತಃ । ಸಧ್ಯಃಪ್ರನಾತಿ ಸದ್ಧರ್ಮೋ ದೇವವಿಶ್ವದ್ರುಹೋಽಪಿ ಹಿ ॥೧೨॥

ಅರ್ಥ :- ನಾರದರು ನುಡಿದರು - ಹೇ ವಸುದೇವನೇ, ಈ ಭಾಗವತಧರ್ಮವು ಎಂತಹದ್ದೆಂದರೆ, ಇದನ್ನು ಕಿವಿಯಿಂದ ಕೇಳಿದರೆ, ವಾಣಿಯಿಂದ ಉಚ್ಚರಿಸಿದರೆ, ಚಿತ್ತದಿಂದ ಸ್ಮರಿಸಿದರೆ, ಹೃದಯದಿಂದ ಸ್ವೀಕರಿಸಿದರೆ, ಇದರ ಪಾಲನೆಯನ್ನು ಮಾಡಿದರೆ, ಅಥವಾ ಇದಕ್ಕೆ ಅನುಮೋದಿಸಿದರೆ ಸಾಕು, ಮನುಷ್ಯನು ಆ ಕ್ಷಣಕ್ಕೆ ಪವಿತ್ರನಾಗುವನು. ದೇವ, ವಿಶ್ವದ್ರೋಹಿಯು ಸಹ ಪವಿತ್ರನಾಗುವನು.

ಭಾಗವತಧರ್ಮಾಚೇನಿ ಗುಣೇ । ಏಕ ಉದ್ಧರತೀ ಶ್ರವಣೇ । ಏಕ ತರತೀ ಪಠಣೇ । ಏಕ ನಿಸ್ತರತೀ ಧ್ಯಾನೇ ಸಂಸಾರಪಾಶ ॥೧೧೩॥ ಏಕ ಶ್ರೋತಯಾ ವಕ್ತಯಾಂತೇ । ದೇಖೋನಿ ಸುಖಾವತೀ ನಿಜಚಿತ್ತೇ । ಸದ್ಭಾವೇ ಭಲೇ ಮ್ಹಣತೀ ತ್ಯಾಂತೇ । ತೇಹೀ ತರತೀ ಯೇಥೇ ಭಾಗವತಧರ್ಮೇ ॥೧೧೪॥

ಈ ನಿನ್ನ ಪ್ರಶ್ನೆಯನ್ನು ಕೇಳಿ ಚಿದಾನಂದ ರೂಪದಿಂದ ನಾರಾಯಣನೇ ಪ್ರಕಟನಾಗಿರುವನು. ಹೀಗೆ ಹೇಳುತ್ತ ಹೇಳುತ್ತ, ನಾರದರು ಆತ್ಮಾನಂದದಲ್ಲಿ ಮುಳುಗಿದರು ॥೧೦೬॥ ಅವರ ಶರೀರದಲ್ಲಿ ರೋಮಾಂಚನವಾಯಿತು. ಅಂಗವೆಲ್ಲ ಬೆವರುಗೊಂಡಿತು. ನೇತ್ರಗಳಿಂದ ಆನಂದಾಶ್ರುಗಳು ಹರಿಯಹತ್ತಿದವು ಮತ್ತು ಸ್ವಾನಂದದ ರಂಗಿನಲ್ಲಿ ನಾರದರು ಡೋಲಾಯಿಸಹತ್ತಿದರು ॥೧೦೭॥ ಪ್ರೇಮಯುಕ್ತ ಶ್ರೋತೃ ದೊರೆತಾಗ ವಕ್ತಾನಿಗೆ ಪೂರ್ಣ ಆನಂದವಾಗದಿದ್ದರೆ, ಆತನಿಗೆ ಕಥಾಮೃತದ ರುಚಿಯೇ ತಿಳಿದಿಲ್ಲ ಹಾಗೂ ಆತನು ಕೇವಲ ಶುಷ್ಕನಾಗಿರುವನೆಂದು ತಿಳಿಯಬೇಕು ॥೧೦೮॥ ವಸುದೇವನ ಪ್ರಶ್ನೆಯನ್ನು ಕೇಳುತ್ತಲೇ ನಾರದರಿಗೆ ಅತ್ಯಂತ ಆನಂದವಾಯಿತು ಮತ್ತು ಅದೇ ಆನಂದಯುಕ್ತ ವಾಣಿಯಿಂದ ಗರ್ಜಿಸುತ್ತಾ ವಸುದೇವನಿಗೆ ಏನೆಂದು ಹೇಳಲಾರಂಭಿಸಿದರು ಎಂಬುದು ಕೇಳಿರಿ ॥೧೦೯॥

ನಾರದರು ನುಡಿದರು :- ಹೇ, ಯಾದವ ಶ್ರೇಷ್ಠನೇ, ಹೇ ಪರಮಾರ್ಥನಿಷ್ಠ ವಸುದೇವನೇ, ನಿನ್ನ ಉತ್ಕಂಠವು ನಿಜವಾಗಿಯೂ ಧನ್ಯವಾಗಿದೆ. ಭಾಗವತ ಧರ್ಮದಲ್ಲಿ ನಿನ್ನ ಬಹುದೊಡ್ಡ ಭಕ್ತಿ ಇರುವುದು. ಇದರಲ್ಲಿ ಅನುಮಾನವೇ ಇಲ್ಲ ॥೧೧೦॥ ಹೇ ಕೃಷ್ಣಜನಕನೇ, ಈ ಧರ್ಮದ ಪ್ರಶ್ನೋತ್ತರದಿಂದ ಈ ಸಂಪೂರ್ಣ ವಿಶ್ವದ ಉದ್ಧಾರವಾಗುವುದು. ಇಂತಹ ಧರ್ಮದ ಪ್ರಶ್ನೆಯನ್ನು ಕೇಳಿರುವುದು ಬಹಳ ಉತ್ತಮವಾಯಿತು ॥೧೧೧॥ ನಿನ್ನ ಪ್ರಶ್ನೋತ್ತರದ ಯೋಗದಿಂದ ಸಾಧಕರು ಉದ್ಧಾರರಾಗುವಲ್ಲಿ ಏನಾಶ್ಚರ್ಯವಿದೆ? ಇದರಿಂದ ಮಹಾಪಾಪಿಗಳು ಸಹ ಉದ್ಧಾರರಾಗುವರು ॥೧೧೨॥

ಭಾಗವತ ಧರ್ಮವೇ ಹೀಗಿರುವುದು. ಇದರ ಶ್ರವಣದಿಂದ ಅನೇಕರು ಉದ್ಧಾರರಾಗುವರು, ಕೆಲವರು ಅದರ ಪಠಣೆಯಿಂದ ಉದ್ಧಾರರಾಗುವರು. ಇನ್ನು ಹಲವರು ಅದರ ಚಿಂತನೆಯಿಂದ ಸಂಸಾರ ಪಾಶದಿಂದ ಮುಕ್ತರಾಗುವರು ॥೧೧೩॥ ಯಾರಾದರೂ ಶ್ರೋತೃಗಳಿಗೆ, ವಕ್ತಾನಿಗೆ ನೋಡಿ ಮನದಲ್ಲಿ ಆನಂದಭರಿತರಾಗಿ ಸದ್ಭಾವನೆಯಿಂದ ಅವರಿಗೆ, ''ಭಲೇ ಭಲೇ'' ಎಂದು ಹೊಗಳಿದರೂ, ಅವರೂ ಸಹ ಈ ಭಾಗವತ ಧರ್ಮದಿಂದ ಉದ್ಧಾರರಾಗುವರು ॥೧೧೪॥

ಹೇ ನವಲ ನವ್ಹೇ ಭಾಗವತಧರ್ಮಾ । ಜೋಕಾ ದೇವದ್ರೋಹೀ ದುರಾತ್ಮಾ । ಅಥವಾ ವಿಶ್ವದ್ರೋಹೀ ದುಷ್ಟಾತ್ಮಾ । ತೋಹೀ ತರೇ ಹಾ ಮಹಿಮಾ ಭಾಗವತಧರ್ಮೀ ।।೧೧೫।। ಹೃದಯೀ ಧರಿತಾ ಭಾಗವತಧರ್ಮ । ಅಕರ್ಮ್ಯಾಚೇ ನಿರ್ದಳೀ ಕರ್ಮ । ಅಧರ್ಮ್ಯಾಚೇ ನಿರ್ದಳೀ ಧರ್ಮ । ದೇ ಉತ್ತಮೋತ್ತಮಪದಪ್ರಾಪ್ತೀ ।।೧೧೬।। ಜೇಥ ರಿಘಾಲೇ ಭಾಗವತಧರ್ಮ । ತೇಥ ನಿರ್ದಳೇ ಕರ್ಮಾಕರ್ಮವಿಕರ್ಮ । ನಿಂದಾ ದ್ವೇಷ ಕ್ರೋಧ ಅಧರ್ಮ । ಅವಿದ್ಯೇಚೇ ನಾಮ ಉರೋ ನೇದೀ ।।೧೧೭।। ತೇ ಭಾಗವತಧರ್ಮೀ ಅತ್ಯಾದರ । ಶ್ರದ್ಧೇನೆ ಕೇಲಾ ಪ್ರಶ್ನ ತುವಾ ಥೋರ । ನಿಜಭಾಗ್ಯೇ ತೂ ಅತಿ ಉದಾರ । ಪರಮ ಪವಿತ್ರ ವಸುದೇವಾ ।।೧೧೮।। ತುರ್ಝೇ ವಾನೂ ಪವಿತ್ರಗುಣ । ತರೀ ಪೋಟಾ ಆಲಾ ಶ್ರೀಕೃಷ್ಣ । ಜಯಾಚೇನಿ ನಾಮೇ ಆಮ್ಹೀ ಜಾಣ । ಪರಮ ಪಾವನ ಜಗದ್ವಂದ್ಯ ।।೧೧೯।। ತೋ ಸ್ವಯೇ ಶ್ರೀಕೃಷ್ಣನಾಥ । ನಿತ್ಯ ವಸೇ ತುರ್ಝಿಯಾ ಘರಾಂತ । ತುರ್ಝಿಯಾ ಐಸಾ ಭಾಗ್ಯವಂತ । ನ ದಿಸೇ ಯೇಥ ಮಜ ಪಾಹತಾ ।।೧೨೦।। ವಸುದೇವಾ ತುರ್ಝಿಯಾ ನಾಮತಾ । ''ವಾಸುದೇವ'' ಮ್ಹಣತೀ ಅನಂತಾ । ತೇ ವಾಸುದೇವ ನಾಮ ಸ್ಮರತಾ । ಪರಮಪಾವನತಾ ಜಗದ್ವಂದ್ಯಾ ।।೧೨೧।।

ತ್ವಯಾ ಪರಮಕಲ್ಯಾಣಃ ಪುಣ್ಯಶ್ರವಣಕೀರ್ತನಃ । ಸ್ಮರಿತೋ ಭಗವಾನದ್ಯ ದೇವೋ ನಾರಾಯಣೋ ಮಮ ।।೧೩।।

ಅರ್ಥ: ಈತನ ಗುಣ,ಲೀಲೆ ಮತ್ತು ನಾಮ ಇತ್ಯಾದಿಗಳ ಶ್ರವಣ,ಕೀರ್ತನೆಗಳು ಪತಿತರನ್ನು ಸಹ ಪಾವನಗೊಳಿಸುವುವು. ಈ ಪರಮ ಕಲ್ಯಾಣಕರ ಸ್ವರೂಪವು ನನ್ನ ಆರಾಧ್ಯ ದೈವ ನಾರಾಯಣನ ಸ್ಮರಣೆಯನ್ನು ನೀವು ತಂದು ಕೊಟ್ಟಿರಿ.

ಜ್ಯಾಚೇನಿ ಶ್ರವಣೇ ವಾಢೇ ಪುಣ್ಯ । ಜ್ಯಾಚೇನಿ ನಾಮೇ ಝುಡೇ ಭವಬಂಧನ । ತೋ ಸದ್ಯ ಸ್ಮರವಿಲಾ ತುವಾ ನಾರಾಯಣ । ತುರ್ಝೀ ವಾಚಾ ಕಲ್ಯಾಣ ವಸುದೇವಾ ।।೧೨೨।। ತುರ್ಝಾ ಆಜಿ ಐಕತಾಚಿ ಪ್ರಶ್ನ । ಪೂರ್ಣ ಪ್ರಗಟಲಾ ನಾರಾಯಣ । ಮಜ ತುರ್ಝಾ ಹಾ ಉಪಕಾರ ಪೂರ್ಣ । ತೂ ಪರಮ ಕಲ್ಯಾಣ ವಸುದೇವಾ ।।೧೨೩।। ಆಶಂಕಾ ।। ಐಕೋನಿ ನಾರದಾಚೇ ವಚನ । ಝಣೇ ವಿಕಲ್ಪ ಧರೀಲ ಮನ । ಯಾಸೀ ಪೂರ್ವೀ ಹೋತೇ ವಿಸ್ಮರಣ । ಆತಾ ಜಾಹಲೇ ಸ್ಮರಣ ವಸುದೇವಪ್ರಶ್ನೇ ।।೧೨೪।। ಜ್ಯಾಂಚೇ ಐಸೀ ವಿಕಲ್ಪಯುಕ್ತೀ । ತೇ ಜಾಣಾವೇ ನಿಜಾತ್ಮಘಾತೀ । ತೇಹೀ ಅರ್ಥಿಚೇ ಉಪಪತ್ತೀ । ಐಕ ನಿಶ್ಚಿತೀ ಶುಕ ಸಾಂಗೇ ।।೧೨೫।। ಅಗ್ನಿಕುಂಡಾಮಾಜೀ ಸ್ವಯಂಭ ಅಸೇ । ತೋ ಘೃತಾವದಾನೇ ಅತಿಪ್ರಕಾಶೇ । ತೇವೀ ಸಪ್ರೇಮ ಪ್ರಶ್ನವಶೇ । ಸುಖ ಉಲ್ಹಾಸೇ ಮುಕ್ತಾಂಚೇ ।।೧೨೬।।

ಇದರಲ್ಲಿಯೂ ಮಹಾ ಆಶ್ಚರ್ಯವೇನಿಲ್ಲ. ಏಕೆಂದರೆ, ದೇವ ದ್ರೋಹಿಯಾದ ದುರಾತ್ಮನು, ಸಂಪೂರ್ಣ ವಿಶ್ವದ ದ್ರೋಹ ಮಾಡುವ ದುಷ್ಟನೂ ಸಹ ಈ ಭಾಗವತ ಧರ್ಮದಿಂದ ಉದ್ಧಾರನಾಗುವನು. ಹೀಗೆ ಇದರ ಮಹಿಮೆಯಾಗಿರುವುದು ।।೧೧೫।। ಈ ಭಾಗವತ ಧರ್ಮವನ್ನು ಹೃದಯದಲ್ಲಿ ಧರಿಸಿದರೆ, ಅವರ ಅಕರ್ಮದ ಕರ್ಮವು ನಾಶವಾಗುವುದು ಮತ್ತು ಅಧರ್ಮದ ಧರ್ಮವನ್ನು ಕೊನೆಗೊಳಿಸಿ ಅವರಿಗೆ ಉತ್ತಮ ಪದವಿಯು ಪ್ರಾಪ್ತವಾಗುವುದು ।।೧೧೬।। ಭಾಗವತ ಧರ್ಮವು ಪ್ರವೇಶವಾದಲ್ಲಿ ಕರ್ಮಾಕರ್ಮಗಳು ಲಯಗೊಳ್ಳುವುವು. ನಿಂದೆ, ದ್ವೇಷ, ಕ್ರೋಧ, ಅವಿದ್ಯೆ ಇವು ಹೇಳ ಹೆಸರಿಲ್ಲದಂತಾಗುವುವು ।।೧೧೭।। ಹೀಗಿರುವ ಈ ಭಾಗವತ ಧರ್ಮದ ಸಂಬಂಧವಾಗಿ ನೀನು ಅತಿ ಆದರದಿಂದ, ಭಕ್ತಿ ಭಾವದಿಂದ, ಗೂಢವಾದ ಪ್ರಶ್ನೆಯನ್ನು ಮಾಡಿರುವೆ. ಆದ್ದರಿಂದ ವಸುದೇವನೇ, ನೀನು ಮಹಾ ಪವಿತ್ರನಾಗಿರುವೆ ಹಾಗೂ ಅತ್ಯಂತ ಉದಾರ ಭಾಗ್ಯಶಾಲಿಯಾಗಿರುವೆ ।।೧೧೮।। ನಿನ್ನ ಪವಿತ್ರತೆಯ ವರ್ಣನೆಯನ್ನು ಎಷ್ಟೆಂದು ಮಾಡಬೇಕು? ಯಾರ ನಾಮದಿಂದ ನಾವು ಪಾವನರಾಗಿ, ಜಗದ್ವಂದ್ಯರಾಗಿರುವೆವೋ, ಆ ಶ್ರೀಕೃಷ್ಣನು ಪ್ರತ್ಯಕ್ಷವಾಗಿ ನಿನ್ನ ಉದರದಲ್ಲಿ ಜನಿಸಿರುವನು ।।೧೧೯।। ಆ ಕೃಷ್ಣನು ನಿನ್ನ ಮನೆಯಲ್ಲಿ ನಿತ್ಯವಾಸ ಮಾಡಿದ್ದಾನೆ. ಇದರಿಂದ ನಿನ್ನಂತಹ ಭಾಗ್ಯಶಾಲಿಯು ನನಗೆ ಬೇರೆ ಯಾರೂ ಕಾಣಿಸುವುದಿಲ್ಲ ।।೧೨೦।। ಹೇ ವಸುದೇವನೇ, ನಿನ್ನ ಹೆಸರಿನಿಂದಲೇ ಈ ಅನಂತನಿಗೆ ''ವಾಸುದೇವ'' ಎಂದು ಹೇಳುವರು. ಈ ವಾಸುದೇವನ ಸ್ಮರಣೆಯಿಂದ ಪ್ರಾಣಿಯು ಅತ್ಯಂತ ಪಾವನನಾಗುವನು ।।೧೨೧।।

ಯಾರ ಗುಣಾನುವಾದದಿಂದ ಪುಣ್ಯವು ಬೆಳೆಯುವುದೋ , ಯಾರ ನಾಮದಿಂದ ಸಂಸಾರ ಬಂಧನವು ಮುರಿಯುವುದೋ, ಅಂತಹ ನಾರಾಯಣನ ಸ್ಮರಣೆಯನ್ನು ನೀನು ನನಗೆ ತಂದುಕೊಟ್ಟಿರುವೆ. ಅದಕ್ಕಾಗಿ ನಿನ್ನ ವಾಣಿಗೆ ಕಲ್ಯಾಣವಾಗಲಿ ।।೧೨೨।। ಇಂದು ನನಗೆ ಈ ನಿನ್ನ ಪ್ರಶ್ನೆಯನ್ನು ಕೇಳಿ ಹೃದಯದಲ್ಲಿ ನಾರಾಯಣನು ಪೂರ್ಣವಾಗಿ ಪ್ರಕಟನಾದನು. ಇದು ನೀನು ನನ್ನ ಮೇಲೇ ಮಾಡಿದ ಉಪಕಾರವಾಗಿರುವುದು. ಅದಕ್ಕಾಗಿ ವಸುದೇವನೇ, ನಿನಗೆ ಕೋಟಿ ಕೋಟಿ ಕಲ್ಯಾಣವಾಗಲಿ ।।೧೨೩।। ನಾರದರ ಭಾಷಣವನ್ನು ಕೇಳಿ ಕೆಲವರಿಗೆ ಅಕಸ್ಮಾತ್ತವಾಗಿ ವಿಕಲ್ಪವು ಹೀಗೆ ಬರಬಹುದು. ಈ ಹಿಂದೆ ನಾರದರಿಗೆ ನಾರಾಯಣನ ವಿಸ್ಮರಣೆಯಾಗಿತ್ತು. ಈಗ ವಸುದೇವನ ಪ್ರಶ್ನೆಯಿಂದ ಸ್ಮರಣೆಯಾಯಿತು ।।೧೨೪।। ಆದರೆ ಯಾರಾದರೂ ಹೀಗೆ ವಿಕಲ್ಪ ತರ್ಕವನ್ನು ಮಾಡಿದರೆ, ಆತ್ಮಘಾತಕವಾಗುವುದೆಂದು ತಿಳಿಯಿರಿ. ಈ ವಿಷಯಕ್ಕೆ ಶುಕಮುನಿಗಳು ಬಿಚ್ಚಿ ಹೇಳುವರು ಕೇಳಿರಿ ।।೧೨೫।। ಅಗ್ನಿಕುಂಡದಲ್ಲಿ ಅಗ್ನಿಯು ಸ್ವಯಂಭೂವಾಗಿ ಇದ್ದೇ ಇರುತ್ತದೆ. ಅದರಲ್ಲಿ ತುಪ್ಪವನ್ನು ಹಾಕಲು ಅದು ಹೆಚ್ಚಾಗಿ ಪ್ರಜ್ವಲಿಸುವುದು. ಅದರಂತೆಯೇ ಪ್ರೇಮಯುಕ್ತ ಪ್ರಶ್ನೆಯಿಂದ ಮುಕ್ತರ ಸುಖವು ಅಧಿಕವಾಗುವುದು ।।೧೨೬।।

ಸಪ್ರೇಮ ಭಾವಾರ್ಥೀ ಮೀನಲಾ ಶ್ರೋತಾ । ಮುಕ್ತಹೀ ಉಲ್ಹಾಸೇ ಸಾಂಗೇ ಕಥಾ । ತೇಥೀಲ ಸುಖಾಚೀ ಸುಖಸ್ವಾದುತಾ । ಜಾಣೇ ಜಾಣತಾ ಸವರ್ಮ ॥೧೨೭॥ ಯಾಲಾಗೀ ಮುಕ್ತ ಮುಮುಕ್ಷು ವಿಷಯೀ ಜನ । ಭಾಗವತಧರ್ಮೇ ನಿವತೀ ಸಂಪೂರ್ಣ । ತೋಚಿ ವಸುದೇವೇ ಕೇಲಾ ಪ್ರಶ್ನ । ತೇಣೇ ನಾರದ ಪೂರ್ಣಸುಖಾವಲಾ ॥೧೨೮॥ ಜೇ ಕಾ ಪೂರ್ವಪರಂಪರಾಗತ । ಜೀರ್ಣ ಭಾಗವತಧರ್ಮ ಯೇಥ । ಸಾಂಗಾವಯಾ ನಾರದಮುನಿ ನಿಶ್ಚಿತ । ಉಪಪಾದಿತ ಇತಿಹಾಸು ॥೧೨೯॥

ಅತ್ರಾಪ್ಯುದಾಹರಂತೀಮಮಿತಿ ಹಾಸಂ ಪುರಾತನಮ್ । ಆರ್ಷಭಾಣಾಂ ಚ ಸಂವಾದಂ ವಿದೇಹಸ್ಯ ಮಹಾತ್ಮನಃ ॥೧೪॥

ಅರ್ಥ: ಪೂರ್ವದಲ್ಲಿ ಜನಕ ಮತ್ತು ಆರ್ಷಭ ಋಷಭಪುತ್ರ, ಇವರಿಂದ ನಡೆದಿದ್ದ ಭಾಗವತಧರ್ಮ ವಿಷಯದ ಸಂವಾದದ ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ.

ಯೇಚ ಅರ್ಥೀ ವಿದೇಹಾಚಾ ಪ್ರಶ್ನ । ಸಂವಾದತೀ ಆರ್ಷಭ ನವಜಣ । ತೇ ಭಾಗವತಧರ್ಮ ಜೀರ್ಣ । ಇತಿಹಾಸ ಸಂಪೂರ್ಣ ಸಾಂಗೇನ ಐಕ ॥೧೩೦॥ ಆರ್ಷಭ ಕೋಣ ಮ್ಹಣಸೀ ಮುಳೀ । ತ್ಯಾಂಚೀ ಸಾಂಗೇನ ವಂಶಾವಳೀ । ಜನ್ಮ ಜಯಾಂಚಾ ಸುಕುಳೀ । ನವಾಮಾಜೀ ಜಾಹಲೀ ಬ್ರಹ್ಮನಿಷ್ಠಾ ॥೧೩೧॥

ಪ್ರಿಯವ್ರತೋ ನಾಮ ಸುತೋ ಮನೋಃ ಸ್ವಾಯಂಭುವಸ್ಯ ಯಃ । ತಸ್ಯಾಗ್ನೀಧ್ರಸ್ತತೋ ನಾಭಿರ್ಋಷಭಸ್ತತ್ಸುತಃ ಸ್ಮೃತಃ ॥೧೫॥

ಅರ್ಥ: ಸ್ವಾಯಂಭುವ ಮನುವಿಗೆ ಮಹಾರಾಜ ಪ್ರಿಯವ್ರತನೆಂಬ ಮಗನಿದ್ದನು. ಪ್ರಿಯವ್ರತನ ಮಕ್ಕಳಲ್ಲಿ ಆಗ್ನೀಧ್ರ ಒಬ್ಬ. ಅವನಿಗೆ ನಾಭಿಯು ಹುಟ್ಟಿದನು. ನಾಭಿಯ ಮಗ ಋಷಭದೇವ.

ಸ್ವಾಯಂಭುವ ಮನೂಚಾ ಸೂತು । ಜಾಣ ನಾಮೇ ''ಪ್ರಿಯವ್ರತು'' । ತ್ಯಾಚ್ಯಾ ''ಆಗ್ನೀಧ್ರ'' ವಿಖ್ಯಾತು । ''ನಾಭೀ'' ತ್ಯಾಚಾ ಸೂತು ಸೂರ್ಯವಂಶೀ ॥೧೩೨॥ ತ್ಯಾ ನಾಭೀಪಾಸೂನಿ ಜ್ಞಾನವಿಲಾಸು । ''ವೃಷಭ'' ಜನ್ಮಲಾ ವಾಸುದೇವಾಂಶು । ಮೋಕ್ಷಧರ್ಮಾಚಾ ಪ್ರಕಾಶು । ಜಗೀ ಸಾವಕಾಶು ವಿಸ್ತಾರಿಲಾ ॥೧೩೩॥

ತಮಾಹುರ್ವಾಸುದೇವಾಂಶಂ ಮೋಕ್ಷಧರ್ಮವಿವಕ್ಷಯಾ । ಅವತೀರ್ಣಂ ಸುತಶತಂ ತಸ್ಯಾಸೀದ್ವೇದಪಾರಗಮ್ ॥೧೬॥

ಅರ್ಥ:- ಋಷಭದೇವನನ್ನು ಶಾಸ್ತ್ರದಲ್ಲಿ ಭಗವಾನ್ ವಾಸುದೇವನ ಅಂಶಿಸಂಭೂತನು ಎಂದು ಹೇಳಿದೆ. ಮೋಕ್ಷ ಧರ್ಮದ ಉಪದೇಶ ಪ್ರಚಾರಕ್ಕಾಗಿ ಈತನ ಅವತಾರವಾಗಿತ್ತು. ಈತನಿಗೆ ನೂರು ಮಕ್ಕಳಿದ್ದರು ಮತ್ತು ಇವರೆಲ್ಲರೂ ವೇದಪಾರಾಂಗತರಿದ್ದರು.

ವೃಷಭ ವಾಸುದೇವಾಚಾ ಅಂಶು । ಯೇ ಲೋಕೀ ಮೋಕ್ಷಧರ್ಮವಿಶ್ವಾಸು । ಪ್ರವರ್ತಾವಯಾ ಜಗದೀಶು । ಹಾ ಅಂಶಾಂಶು ಅವತಾರ ॥೧೩೪॥ ತ್ಯಾಚೇ ಪಂಚಮಸ್ಕಂಧೀ ಚರಿತ್ರ । ಸಾಂಗಿತಲೇ ಸವಿಸ್ತರ । ತ್ಯಾಸೀ ಜಾಹಲೇ ಶತ ಪುತ್ರ । ವೇದಶಾಸ್ತ್ರಸಂಪನ್ನ ॥೧೩೫॥ ತ್ಯಾಹೀಮಾಜೀ ಜೇಷ್ಠಪುತ್ರ । ಅತಿಶಯೇ ಪರಮ ಪವಿತ್ರ । ಐಕ ತ್ಯಾಚೇ ಚರಿತ್ರ । ಅತಿವಿಚಿತ್ರ ಸಾಂಗೇನ ॥೧೩೬॥

ಶ್ರೋತೃ ಭಕ್ತಿಭಾವದಲ್ಲಿ ತಲ್ಲೀನನಾದರೆ, ಮುಕ್ತನು ಸಹ ಅಧಿಕವಾದ ಉಲ್ಹಾಸದಿಂದ ಕಥೆಯನ್ನು ಹೇಳುವನು. ಈ ಸುಖದ ರುಚಿಯು ತಿಳಿದವರಿಗೆ ಮಾತ್ರ ತಿಳಿಯುವುದು ॥೧೨೭॥ ಆದ್ದರಿಂದ ಮುಕ್ತರು, ಮುಮುಕ್ಷುಗಳು ಮತ್ತು ವಿಷಯೀಗಳು ಸಹ ಈ ಭಾಗವತಧರ್ಮದಿಂದ ಪೂರ್ಣ ಶಾಂತಿಯನ್ನು ಹೊಂದುವರು. ಇದೇ ಪ್ರಶ್ನೆಯನ್ನು ವಸುದೇವನು ಕೇಳಿದ್ದಕ್ಕೆ ನಾರದರಿಗೆ ಪರಮಾನಂದವಾಯಿತು ॥೧೨೮॥ ಮತ್ತು ಪೂರ್ವಪರಂಪರಾಗತ, ಪ್ರಾಚೀನವಾದ ಭಾಗವತಧರ್ಮವನ್ನು ಸಪ್ರಮಾಣವಾಗಿ ಹೇಳುವ ಉದ್ದೇಶದಿಂದ ನಾರದಮುನಿಗಳು ಹಿಂದಿನ ಇತಿಹಾಸವನ್ನು ಹೇಳಲಿಕ್ಕೆ ಆರಂಭಿಸಿದರು ॥೧೨೯॥

ಮೇಲಿನ ಪ್ರಶ್ನೆಯಂತೆಯೇ ಜನಕ ಮಹಾರಾಜನ ಪ್ರಶ್ನೆಯಾಗಿತ್ತು. ಇದರ ಉತ್ತರವನ್ನು ಒಂಬತ್ತು ಆರ್ಷಭರು ಉತ್ತರಿಸಿದ್ದರು ನಾರದರು ನುಡಿದರು. ಆ ಭಾಗವತಧರ್ಮದ ಪ್ರಾಚೀನ ಇತಿಹಾಸವನ್ನು ಸಂಪೂರ್ಣವಾಗಿ ಹೇಳುವೆ, ಕೇಳು ॥೧೩೦॥ ಪ್ರಥಮವಾಗಿ ನೀನೀಗ ಆರ್ಷಭ ಯಾರು? ಎಂದು ಕೇಳಬಹುದು. ಅದಕ್ಕಾಗಿ ನಾನು ಅವರ ವಂಶಾವಳಿಯನ್ನು ಹೇಳುವೆ. ಅವರ ಜನ್ಮವು ಉತ್ತಮ ಕುಲದಲ್ಲಾಯಿತು. ಈ ಒಂಬತ್ತು ಮಹಾತ್ಮರಲ್ಲಿಯೂ ಬ್ರಹ್ಮನಿಷ್ಠೆಯು ಉತ್ಪನ್ನವಾಗಿತ್ತು ॥೧೩೧॥

ಸ್ವಾಯಂಭೂವ ಮನುವಿನ ಪುತ್ರನು. ಈತನ ಹೆಸರು ಪ್ರಿಯವ್ರತ ಎಂದಾಗಿತ್ತು. ಈತನ ಪುತ್ರನು ಆಗ್ನಿಧ್ರ ಹೆಸರಿನಿಂದ ಪ್ರಖ್ಯಾತನಾದನು. ಸೂರ್ಯವಂಶದವನಾದ ಈತನ ಪುತ್ರನ ಹೆಸರು ''ನಾಭಿ'' ಎಂದಾಗಿತ್ತು ॥೧೩೨॥ ಈ ನಾಭಿಯಿಂದ ಕೇವಲ ಜ್ಞಾನದ ವಿಲಾಸನಾದ ''ಋಷಭ'' ನು ಜನ್ಮಕ್ಕೆ ಬಂದನು. ಈತನು ವಾಸುದೇವನ ಅಂಶಾವತಾರನಾಗಿ ಜಗತ್ತಿನಲ್ಲಿ ಮೋಕ್ಷಧರ್ಮದ ಪ್ರಕಾಶವನ್ನು ಸರ್ವತ್ರ ಪ್ರಸರಿಸಿದನು ॥೧೩೩॥

ವೃಷಭನು ವಾಸುದೇವನ ಅಂಶನಾಗಿದ್ದನು. ಭೂಲೋಕದಲ್ಲೆಲ್ಲ ಮೋಕ್ಷಧರ್ಮದಲ್ಲಿ ಶ್ರದ್ಧೆಯು ಬೆಳೆಯಬೇಕೆಂದು ಈ ಭಗವಂತನ ಅಂಶಂಶು ಅವತಾರವಾಯಿತು ॥೧೩೪॥ ಐದನೆಯ ಸ್ಕಂಧದಲ್ಲಿ ಈತನ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿದೆ. ಈತನಿಗೆ ವೇದಶಾಸ್ತ್ರಸಂಪನ್ನರಾದ ನೂರು ಪುತ್ರರಾದರು ॥೧೩೫॥ ಇವರಲ್ಲಿ ಎಲ್ಲರಕ್ಕಿಂತ ಹಿರಿಯ ಪುತ್ರನು ಅತಿಶಯವಾಗಿ ಪವಿತ್ರನಾಗಿದ್ದನು. ಈತನ ಅಲೌಕಿಕವಾದ ಚರಿತ್ರೆಯನ್ನು ಹೇಳುವೆ, ಕೇಳು ॥೧೩೬॥

ತೇಷಾಂ ವೈ ಭರತೋ ಜ್ಯೇಷ್ಠೋ ನಾರಾಯಣಪರಾಯಣಃ ।
ವಿಖ್ಯಾತಂ ವರ್ಷಮೇತದ್ ಯನ್ನಾಮ್ನಾ ಭಾರತಮದ್ಭುತಮ್ ॥೧೭॥

ಅರ್ಥ:- ಅವರಲ್ಲಿ ಸರ್ವಶ್ರೇಷ್ಠ ರಾಜರ್ಷಿ ಭರತನಾಗಿದ್ದನು. ಈತನು ನಾರಾಯಣನ ಪರಮ ಭಕ್ತನಾಗಿದ್ದನು. ಪೂರ್ವದಲ್ಲಿ ಈ ಭೂಮಿಯ ಹೆಸರು ಅಜನಾಭ ವರ್ಷ ಎಂದು ಇತ್ತು. ಆದರೆ ಈ ಭರತ ರಾಜನಿಂದಲೇ ಭಾರತವರ್ಷವೆಂದು ಈಗಲೂ ಪ್ರಸಿದ್ಧವಾಗಿದೆ ಇದೊಂದು ಅಲೌಕಿಕ ಸ್ಥಾನವಾಗಿದೆ.

ಜೋ ಜೇಷ್ಠಪುತ್ರ ''ಭರತ'' ಜಾಣ । ತೋ ನಾರಾಯಣಪರಾಯಣ । ಅದ್ಯಾಪಿ ''ಭರತವರ್ಷ'' ಉಚ್ಚಾರಣ । ತ್ಯಾಚೇನಿ ನಾವೇ ಜಾಣ ವಿಖ್ಯಾತ ॥೧೩೭॥ ಜೋ ಮನಸಾ - ವಾಚಾ - ಕರ್ಮಣಾ । ಅಖಂಡ ಭಜೇ ನಾರಾಯಣಾ । ಅಸತಾಹೀ ರಾಜ್ಯಧರ್ಮೀ ಜಾಣಾ । ಜೋ ಆತ್ಮಖೂಣಾ ನ ಚುಕೇ ॥೧೩೮॥ ಜೇವೀ ಮಾರ್ಗೀ ಚಾಲತಾ । ಪಾಉಲೇ ವಕ್ರೇಹೀ ಟಾಕಿತಾ । ದೈವವಶೇ ಅಡಖಳತಾ । ಆಶ್ರಯೋ ತತ್ತ್ವತಾ ಭೂಮಿಕಾಚಿ ॥೧೩೯॥ ತೇವೀಂಚಿ ತಯಾಸೀ ಅಸತಾ । ರಾಜ್ಯಧರ್ಮ ಚಾಳಿತಾ । ಯಥೋಚಿತ ಕರ್ಮ ಆಚರತಾ । ನಿಜೀ ನಿಜಾತ್ಮತಾ ಪಾಲಟೇನಾ ॥೧೪೦॥ ಯಾ ನಾವ ಬೋಲಿಜೇ ''ಅಖಂಡಸ್ಥಿತೀ'' । ಜೇ ಪಾಲಟೇನಾ ಕಲ್ಪಾಂತೀ । ಜೇಥ ಅಸತಾ ಸುಖೀ ಹೋತೀ । ಪುನರಾವೃತ್ತಿ ಅಸೇನಾ ॥೧೪೧॥ ಐಸೇ ಕರೀ ಸದಾಚರಣ । ಆಣಿ ನಾರಾಯಣಪರಾಯಣ । ಆಈಕ ತ್ಯಾಂಚೇಹೀ ವಾಖ್ಯಾನ । ವಿಶದ ಕರೂನ ಸಾಂಗೇನ ॥೧೪೨॥ ನರಾಂಚಾ ಸಮುದಾಯ ಗಹನ । ತ್ಯಾಸೀ ''ನಾರ'' ಮ್ಹಣತೀ ಜಾಣ । ತ್ಯಾಚೇ ''ಅಯನ'' ಮ್ಹಣಜೇ ಸ್ಥಾನ । ಮ್ಹಣೌನಿ ಮ್ಹಣತೀ ''ನಾರಾಯಣ'' ಆತ್ಮಯಾಸೀ ॥೧೪೩॥ ತ್ಯಾಚ್ಯಾ ಠಾಯೀ ಪಾರಾಯಣ । ಮ್ಹಣಜೇ ಅನನ್ಯತ್ವೇ ಶರಣ । ನಿವಟೂನಿಯಾ ಆಪುಲೇ ಅಹಂಪಣ । ತದ್ರೂಪೇ ಜಾಣ ರಾಹಿಲಾ ॥೧೪೪॥ ಐಸಾ ತೋ ವೃಷಭಾಚಾ ಪುತ್ರ । ಜಯಾಸೀ ನಾಂವ ''ಭರತ'' । ಜ್ಯಾಂಚ್ಯಾ ನಾಮಾಚೀ ಕೀರ್ತಿ ವಿಚಿತ್ರ । ಪರಮ ಪವಿತ್ರ ಜಗಾಮಾಜೀ ॥೧೪೫॥ ತೋ ಭರತು ರಾಹಿಲಾ ಯೇ ಭೂಮಿಕೇಸೀ । ಮ್ಹಣೌನಿ ''ಭಾರತವರ್ಷ'' ಮ್ಹಣತೀ ಯಾಸೀ । ಸಕಳ ಕರ್ಮಾರಂಭೀ ಕರಿತಾ ಸಂಕಲ್ಪಾಸೀ । ಜ್ಯಾಚಿಯಾ ನಾಮಾಸೀ ಸ್ಮರತಾತಿ ॥೧೪೬॥ ಐಸಾ ಆತ್ಮಾರಾಮ ಜರ್ಹೀ ಝಾಲಾ । ತರ್ಹೀ ವಿಷಯ ಸಂಗ ನವ್ಹೇ ಭಲಾ । ಯಾಲಾಗೀ ತ್ಯಾಂಚಾ ವೃತ್ತಾಂತು ಪುಢಿಲಾ । ಸಾಂಗೇನ ಸಕಳಾ ಆಈಕೇ ॥೧೪೭॥ ನಾಮೇ ಖ್ಯಾತೀ ಕೇಲೀ ಉದಂಡ । ಯಾಲಾಗೀ ತ್ಯಾಂತೇ ಮ್ಹಣತೀ ''ಭರತಖಂಡ'' । ಆಣೀಕಹೀ ಪ್ರತಾಪ ಪ್ರಚಂಡ । ತ್ಯಾಚಾ ವಿತಂಡ ತೋ ಐಕಾ ॥೧೪೮॥

ಈ ಜೇಷ್ಠಪುತ್ರನ ಹೆಸರು ''ಭರತ'' ಎಂದಿತ್ತು. ಈತನು ನಾರಾಯಣನ ಪರಮ ಭಕ್ತನಾಗಿದ್ದನು. ಈತನಿಂದಲೇ ''ಭರತವರ್ಷ'' ಎಂದು ಈ ಭರತಖಂಡಕ್ಕೆ ಹೇಳುವರು. ಇಂದಿಗೂ ಈತನ ಹೆಸರಿನಿಂದಲೇ ಪ್ರಸಿದ್ಧವಾಗಿದೆ ॥೧೩೭॥ ಈತನು ಮನಸ್ಸಿನಿಂದ, ವಾಣಿಯಿಂದ ಮತ್ತು ಕರ್ಮದಿಂದ ನಾರಾಯಣನನ್ನು ಅಖಂಡವಾಗಿ ಭಜಿಸುತ್ತಿದ್ದನು. ಈತನು ರಾಜ್ಯಕಾರಭಾರವನ್ನು ನಡೆಸುತ್ತಿದ್ದರೂ ಆತ್ಮಲಕ್ಷವನ್ನು ತಪ್ಪುತ್ತಿದ್ದಿಲ್ಲ ॥೧೩೮॥ ದಾರಿಯಲ್ಲಿ ಅಡ್ಡತಿಡ್ಡ ನಡೆಯುತ್ತಿದ್ದರೆ ಅಥವಾ ಕಾಲು ಮುಗ್ಗರಿಸಿದರೆ ನಡೆಯುವವನಿಗೆ ಭೂಮಿಯೇ ಆಶ್ರಯವಾಗಿರುವುದು ॥೧೩೯॥ ಇದರಂತೆಯೇ ಭರತನು ರಾಜ್ಯಕಾರಭಾರವನ್ನು ಮಾಡುತ್ತಿದ್ದನು ಮತ್ತು ಯಥೋಚಿತ ಕರ್ಮಗಳನ್ನು ಮಾಡುತ್ತಿದ್ದರೂ ಆತ್ಮ ನಿಷ್ಠೆಯಲ್ಲಿ ತಪ್ಪುತ್ತಿದ್ದಿಲ್ಲ ॥೧೪೦॥ ಈ ಸ್ಥಿತಿಗೆ ಮಾತ್ರ ''ಅಖಂಡ ಸ್ಥಿತಿ'' ಎಂದು ಕರೆಯುವರು. ಯಾವುದು ಕಲ್ಪಾಂತಕ್ಕೂ ಬದಲಾಗುವುದಿಲ್ಲವೋ ಮತ್ತು ಯಾವ ಸ್ಥಿತಿಯಿಂದ ಇರಲು ಮನುಷ್ಯನು ಅತ್ಯಂತ ಸುಖಿಯಾಗುವನೋ, ಈತನಿಗೆ ಪುನರ್ಜನ್ಮವನ್ನು ತೆಗೆದುಕೊಳ್ಳಬೇಕಾಗಿಲ್ಲ ॥೧೪೧॥ ಈ ಪ್ರಕಾರವಾಗಿ ಭರತನು ಸದಾಚರಣೆಗಳನ್ನು ಆಚರಿಸುತ್ತ ನಾರಾಯಣಪರಾಯಣನಾಗಿದ್ದನು. ಇದನ್ನು ಸವಿಸ್ತಾರವಾಗಿ ಹೇಳುವೆ,ಕೇಳು ॥೧೪೨॥ ನರರ ದೊಡ್ಡ ಸಮೂಹಕ್ಕೆ ''ನಾರ'' ಎಂದು ಹೇಳುವರು. ಈ ನಾರರ ಜೀವಸಮುದಾಯದ ಆತ್ಮಕ್ಕೆ ''ಅಯನ'' ಎನ್ನುವರು. ಆದ್ದರಿಂದ ಎಲ್ಲರಲ್ಲಿಯೂ ಅಧಿಷ್ಠಾನನಾಗಿರುವುದರಿಂದ ಆತನಿಗೆ ''ನಾರಾಯಣ'' ಎಂದು ಹೇಳುವರು ॥೧೪೩॥ ನಾರಾಯಣನಲ್ಲಿ ಭರತನು ಪರಾಯಣ ಅಂದರೆ ಅನನ್ಯ ಶರಣನಾಗಿದ್ದನು. ತನ್ನ ಅಹಂಕಾರವನ್ನು ನಾಶಗೊಳಿಸಿ, ತದ್ರೂಪನಾಗಿದ್ದನು ॥೧೪೪॥ ಹೀಗೆ ವೃಷಭನ ಪುತ್ರ ಭರತನ ಪವಿತ್ರತೆಯ ಕೀರ್ತಿಯು ಸಂಪೂರ್ಣ ಜಗತ್ತಿನಲ್ಲಿ ದುಮುದುಮಿಸಿಕೊಂಡಿತ್ತು ॥೧೪೫॥ ಭರತನು ಈ ಭೂಮಿಯನ್ನು ಆಳಿದ್ದಕ್ಕಾಗಿ ಈ ದೇಶಕ್ಕೆ ''ಭಾರತವರ್ಷ'' ಎಂದು ಹೇಳುವರು. ಪ್ರತಿಯೊಂದು ವೈದಿಕ ಕರ್ಮಾರಂಭದಲ್ಲಿ ಸಂಕಲ್ಪ ಹೇಳುವಾಗ್ಗೆ ಈತನ ಹೆಸರನ್ನು ಉಚ್ಚರಿಸುವರು ॥೧೪೬॥ ಆದರೆ, ಈ ರೀತಿಯಾಗಿ ಸ್ವತಃ ಆತ್ಮಸ್ವರೂಪನಾದರೂ ಸಹ ಈತನಿಗೆ ವಿಷಯ ಸಂಗವು ಯೋಗ್ಯವೆನಿಸಲಾರದು. ಇದನ್ನು ತಿಳಿಸುವುದಕ್ಕಾಗಿ ನಾನು ಮುಂದಿನ ಚರಿತ್ರೆಯನ್ನು ಎಲ್ಲರಿಗೂ ತಿಳಿಸುವೆ, ಕೇಳಿರಿ ॥೧೪೭॥ ಹೆಸರಿನಿಂದಲೇ ಈತನು ಬಹಳಷ್ಟು ಪ್ರಸಿದ್ಧಿಗೊಳಿಸಿದನು. ಆದ್ದರಿಂದಲೇ ಇದಕ್ಕೆ ''ಭರತಖಂಡ'' ಎಂದು ಹೇಳುವರು. ಆದರೆ, ಇದಕ್ಕಿಂತಲೂ ಈತನ ಪ್ರತಾಪವು ಪ್ರಚಂಡ ಹಾಗೂ ಲೋಕವಿಲಕ್ಷಣವಾಗಿರುವುದನ್ನು ಹೇಳುವೆ,ಕೇಳು ॥೧೪೮॥

ಸ ಭುಕ್ತಭೋಗಾಂ ತ್ಯಕ್ತ್ವೇಮಾಂ ನಿರ್ಗತಸ್ತಪಸಾ ಹರಿಮ್ । ಉಪಾಸೀನಸ್ತತ್ಪದವೀ ತಿಭೇ ವೈ ಜನ್ಮಭಿಸ್ತ್ರಿಭಿಃ ॥೧೮॥

ಅರ್ಥ: ರಾಜರ್ಷಿ ಭರತನು ಸಂಪೂರ್ಣ ಪೃಥ್ವಿಯ ರಾಜ್ಯಭೋಗವನ್ನು ಭೋಗಿಸಿದನು. ಆದರೆ, ಕೊನೆಗೆ ರಾಜ್ಯವನ್ನು ತ್ಯಜಿಸಿ ವನಸೇರಿದನು. ಅಲ್ಲಿ ಈತನು ತಪಶ್ಚರ್ಯದ ಆಧಾರದಿಂದ ಭಗವಂತನ ಉಪಾಸನೆಯನ್ನು ಮಾಡಿದನು. ಮೂರು ಜನ್ಮದ ನಂತರ ಈತನಿಗೆ ಭಗವಂತನ ಪ್ರಾಪ್ತಿಯಾಯಿತು.

ತೇಣೇ ದಿಗ್ಮಂಡಲ ಜಿಂತಿಲೇ । ಸಮುದ್ರವಲಯಾಂಕಿತ ರಾಜ್ಯ ಕೇಲೇ । ನಾನಾವಿಧ ಭೋಗ ಭೋಗಿಲೇ । ಜೇ ನಾಹೀ ದೇಖಿಲೇ ಸುರವರೀ ॥೧೪೯॥ ಅನುಕೂಳ ಸ್ತ್ರಿಯಾ ಪುತ್ರ । ಅನುಕೂಳ ಮಂತ್ರೀ ಪವಿತ್ರ । ಅನುಕೂಳ ರಾಜ್ಯ ಸರ್ವತ್ರ । ತೇ ತ್ಯಾಗಿಲೇ ವಿಚಿತ್ರ ನಾನಾಭೋಗ ॥೧೫೦॥ ಐಸೇ ಭೋಗ ಭೋಗಿಲಿಯಾಪಾಠೀ । ಸಾಂಡೂನಿ ವಲಯಾಂಕಿತ ರಾಜ್ಯಸೃಷ್ಟೀ । ಸ್ವಯೇ ನಿಘಾಲಾ ಜಗಜೇಠೀ । ಸ್ವಹಿತದೃಷ್ಟೀ ಹರಿಭಜನೀ ॥೧೫೧॥ ಜೇ ರಾಜ್ಯವೈಭವ ಭೋಗಿತೀ । ತ್ಯಾಂಸೀ ಕದಾ ನವ್ಹೇ ಗಾ ವಿರಕ್ತೀ । ಭರತೇ ಕೇಲೀ ನವಲಖ್ಯಾತೀ । ಸೇವಿಲಾ ಶ್ರೀಪತೀ ಭೋಗತ್ಯಾಗೇ ॥೧೫೨॥ ತೋ ತೇಣೇಂಚಿ ಜನ್ಮೇ ಜಾಣ । ಹೋಆವಾ ಮೋಕ್ಷಾಸೀ ಆರೋಹಣ । ಪರೀ ಜಾಹಲೇ ಜನ್ಮಾಂತರಕಾರಣ । ತೇಹೀ ವಿಂದಾಣ ಸಾಂಗೇನ ॥೧೫೩॥ ಸನ್ನಿಹಿತಪ್ರಸೂತಿಕಾಳೀ । ಮೃಗೀ ಘಳ ಪ್ರಾಶಿತಾ ಜಳೀ । ಐಕೋನಿ ಪಂಚಾನನಾಚೀ ಆರೋಳೀ । ಉಡಾಲೀ ತತ್ಕಾಳೀ ಅತಿಸತ್ರಾಣೇ ॥೧೫೪॥ ಧಾಕೇ ಗರ್ಭ ತಿಚಾ ಪಡತಾ ಜಳೀ । ಭರತ ಸ್ನಾನ ಕರೀ ತೇ ಕಾಳೀ । ದೇಖೋನಿ ಕೃಪಾಳು ಕಳವಳೀ । ಕಾಢೀ ತತ್ಕಾಳೀ ದಯಾಳುತ್ವೇ ॥೧೫೫॥ ಮೃಗೀ ನ ಯೇಚಿ ಪರತೋನ । ಮಾತೃಹೀನ ಹೇ ಅತಿದೀನ । ಭರತ ಪಾಳೀ ಭೂತದಯೇನ । ಮೃಗಮಮತಾ ಪೂರ್ಣ ವಾಢಲೀ ॥೧೫೬॥ ಸ್ನಾನ ಸಂಧ್ಯಾ ಅನುಷ್ಠಾನ । ಕರಿತಾ ಮೃಗ ಆಠವೇ ಕ್ಷಣಕ್ಷಣ । ಆರಂಭಿಲ್ಯಾ ಜಪಧ್ಯಾನ । ಮೃಗಮಯ ಮನ ಭರತಾಚೇ ॥೧೫೭॥ ಆಸನೀ ಭೋಜನೀ ಶಯನೀ । ಮೃಗ ಆಠವೇ ಕ್ಷಣಕ್ಷಣೀ । ಮೃಗ ನ ದೇಖತಾ ನಯನೀ । ಉಠೇ ಗಜಬಜೋನಿ ಧ್ಯಾನ ತ್ಯಾಗೇ ॥೧೫೮॥ ಮಮತಾ ಬೈಸಲೀ ಮೃಗಾಪಾಶೀ । ಮೃಗ ವನಾ ಗೇಲಾ ಸ್ವಇಚ್ಛೇಸೀ । ತ್ಯಾಚಾ ಖೇದು ಕರಿತಾ ಭರತಾಸೀ। ಕಾಳ ಆಕರ್ಷೀ ದೇಹಾತೇ ॥೧೫೯॥ ಯಾಲಾಗೀ ಸಾಚಚಿ ಜಾಣ । ಮಮತೇಪಾಶೀ ಅಸೇ ಮರಣ । ಜೋ ನಿರ್ಮಮ ಸಂಪೂರ್ಣ । ತ್ಯಾಸೀ ಜನ್ಮಮರಣ ಸ್ಪರ್ಶೇನಾ ॥೧೬೦॥

ಈತನು ಸರ್ವದಿಶೆಗಳಲ್ಲಿ ಪಾದಾರ್ಪಣ ಮಾಡಿ ಸಮುದ್ರವಲಯಾಂಕಿತ ಪೃಥ್ವಿಯ ರಾಜ್ಯವಾಳಿದನು. ಮಹಾ ಮಹಾ ದೇವತೆಗಳಿಗೂ ಭೋಗಿಸಲಿಕ್ಕೆ ಸಿಗದಂತಹ ಭೋಗವಿಲಾಸದ ಸುಖವನ್ನು ಉಪಭೋಗಿಸಿದನು ॥೧೪೯॥ ಈತನಿಗೆ ಸ್ತ್ರೀಯರು,ಪುತ್ರರು ಅನುಕೂಲರಾಗಿದ್ದರು. ಪವಿತ್ರ ಮಂತ್ರಿಗಳೂ ಅನುಕೂಲರಾಗಿದ್ದರು ಹಾಗೂ ಸರ್ವ ರಾಷ್ಟ್ರಗಳು ಅನುಕೂಲವಾಗಿದ್ದವು. ಹೀಗಿದ್ದರೂ ಈತನು ನಾನಾ ಪ್ರಕಾರದ ದಿವ್ಯ ಭೋಗಗಳನ್ನು ತ್ಯಾಗಮಾಡಿದನು ॥೧೫೦॥ ಈ ಪ್ರಕಾರದ ಸರ್ವ ಭೋಗಗಳನ್ನು ಭೋಗಿಸಿದನಂತರ ಸಮುದ್ರವಲಯಾಂಕಿತ ಸರ್ವ ರಾಜ್ಯವನ್ನು ತ್ಯಜಿಸಿ, ಸ್ವಹಿತದಲ್ಲಿ ದೃಷ್ಟಿ ಇಟ್ಟು ಹರಿಭಜನೆಗಾಗಿ ಹೊರಹೊಂಟನು ॥೧೫೧॥ ರಾಜ ಭೋಗದ ವೈಭವವನ್ನು ಭೋಗಿಸುವವರಿಗೆ ವೈರಾಗ್ಯವು ಎಂದೂ ಬರುವುದಿಲ್ಲ. ಆದರೆ ಭರತನು ಬಹು ಚಮತ್ಕಾರವನ್ನೇ ಮಾಡಿದನು. ಈತನು ಸರ್ವ ಭೋಗಗಳನ್ನು ತ್ಯಾಗಮಾಡಿ ಲಕ್ಷ್ಮೀಪತಿಯ ಸೇವೆಯನ್ನು ಮಾಡಹತ್ತಿದನು ॥೧೫೨॥ ಈತನು ನಿಜವಾಗಿಯೂ ಇದೇ ಜನ್ಮದಲ್ಲಿ ಮೋಕ್ಷವನ್ನು ಪಡೆಯಬೇಕಾಗಿತ್ತು. ಆದರೆ, ಈತನಿಗೆ ಜನ್ಮಾಂತರವನ್ನು ಸ್ವೀಕರಿಸಬೇಕಾಯಿತು. ಅದರ ಕಾರಣವನ್ನು ಹೇಳುವೆ ॥೧೫೩॥ ಒಂದು ಹೆಣ್ಣು ಜಿಂಕೆಯು ತುಂಬಾ ಗರ್ಭಿಣಿಯಾಗಿ ಪ್ರಸೂತಿ ಕಾಲವು ಅತಿಸಮೀಪ ಬಂದಾಗ್ಗೆ, ನದಿಯ ನೀರಿನಲ್ಲಿ ನಿಂತು ನೀರನ್ನು ಕುಡಿಯುತ್ತಿತ್ತು. ಇಷ್ಟರಲ್ಲಿಯೇ ಅದಕ್ಕೆ ಹುಲಿಯ ಘನಗರ್ಜನೆಯನ್ನು ಕೇಳಿ ತಕ್ಷಣ ಹಾರಿ ಓಡಿ ಹೋಯಿತು ॥೧೫೪॥ ಆದರೆ, ಹಾರಿಹೋಗುವಕಾಲಕ್ಕೆ ಭಯದ ಕಾರಣದಿಂದ ಅದರ ಗರ್ಭವು ಒಮ್ಮೆಲೆ ಆ ನೀರಿನಲ್ಲಿ ಬಿದ್ದಿತು. ಆಗ ಸಮೀಪದಲ್ಲಿ ಭರತನು ಸ್ನಾನವನ್ನು ಮಾಡುತ್ತಿದ್ದನು. ಇದನ್ನು ಕಂಡ ಕೋಮಲ ಹೃದಯದ ಭರತನು ದಯಾಭರಿತನಾಗಿ ಆದನ್ನು ಕೂಡಲೇ ನೀರಿನಿಂದ ಹೊರಗೆ ತಂದನು ॥೧೫೫॥ ಹೋದ ಜಿಂಕೆಯು ಪುನಃ ಹಿಂತಿರುಗಿ ಬರಲೇ ಇಲ್ಲ. ಆದ್ದರಿಂದ ಆ ಜಿಂಕೆಮರಿಯು ತಾಯಿ ಇಲ್ಲದೇ ಅತಿದೀನವಾಯಿತು. ಆಗ ಭೂತದಯೆಗೆ ಪ್ರೇರಿತನಾಗಿ, ಭರತನು ಈ ಜಿಂಕೆಮರಿಯ ಪ್ರತಿಪಾಲನೆಯನ್ನು ಮಾಡಹತ್ತಿದನು. ಇದರಿಂದ ಮೃಗದ ಮಮತೆಯು ಬೆಳೆಯುತ್ತ ನಡೆಯಿತು ॥೧೫೬॥ ಭರತನು ಸ್ನಾನ,ಸಂಧ್ಯಾ,ಅನುಷ್ಠಾನಗಳನ್ನು ಮಾಡುತ್ತಿರಲು ಕ್ಷಣಕ್ಷಣಕ್ಕೂ ಆ ಜಿಂಕೆಯ ಸ್ಮರಣೆಯನ್ನು ಮಾಡುತ್ತಿದ್ದನು. ಜಪ ಧ್ಯಾನಗಳನ್ನು ಆರಂಭಿಸಲು ಆತನ ಧ್ಯಾನದಲ್ಲಿ ಜಿಂಕೆಯೇ ಎದ್ದು ಕಾಣುತ್ತಿತ್ತು. ಹೀಗೆ ಈತನು ಮೃಗಮಯನಾದನು ॥೧೫೭॥ ಕುಳಿತುಕೊಂಡಾಗ್ಗೆ, ಊಟದಕಾಲಕ್ಕೆ,ಮಲಗುವಾಗ್ಗೆ ಮೇಲಿಂದ ಮೇಲೆ ಮೃಗದ ನೆನಪಾಗುತ್ತಿತ್ತು. ಆ ಜಿಂಕೆಯು ಕಣ್ಣಿನಿಂದ ಕೊಂಚ ದೂರಾದರೆ,ಧ್ಯಾನವನ್ನು ಬಿಟ್ಟು ಗಡಬಡಿಸುತ್ತ ಏಳುತ್ತಿದ್ದನು ॥೧೫೮॥ ಈ ಪ್ರಕಾರವಾಗಿ ಈತನು ಮೃಗದ ಮೇಲೆ ಮಮತೆಯನ್ನಿಟ್ಟನು. ಒಂದು ಸಾರೆ ಈ ಮೃಗವು ಸ್ವೇಚ್ಛೆಯಾಗಿ ಅರಣ್ಯದಲ್ಲಿ ಹೊರಟು ಹೋಯಿತು. ಇದರಿಂದ ಭರತನಿಗೆ ಅತ್ಯಂತ ಖೇದವಾಯಿತು. ಅದೇ ದುಃಖದ ಸಮಯದಲ್ಲಿ ಆತನಿಗೆ ಮೃತ್ಯು ಒದಗಿಬಂದಿತು ॥೧೫೯॥ ಆದ್ದರಿಂದ, ಮಮತೆಯಲ್ಲಿ ಮೃತ್ಯು ನಿಶ್ಚಿತ ಎಂದು ತಿಳಿಯಬೇಕು. ಮಮತೆಯಿಂದ ದೂರ ಇರುವವರಿಗೆ ಜನ್ಮಮರಣದ ಸ್ಪರ್ಶ ಸಹ ಆಗುವುದಿಲ್ಲ ॥೧೬೦॥

ಭರತ ತಪಿಯಾ ಘೋರ ಅಂಗೇ । ತೇಥ ಕಾಳ ಕೈಸೇನಿ ರಿಘೇ । ಮಮತಾಸಂಧೀ ಪಾಹೋನಿ ವೇಗೇ । ಮೃತ್ಯು ತದ್ಯೋಗೇ ಪಾವಲಾ ॥೧೬೧॥ ದೇಹಾಸೀ ಯೇತಾ ಮರಣ । ಭರತಾಸೀ ಮೃಗಾಚೇ ಧ್ಯಾನ । ತೇಣೇ ಮೃಗಜನ್ಮ ಪಾವೇ ಆಪಣ । ಜನ್ಮಾಂತರಕಾರಣ ಜಾಹಲೇ ಐಸೇ ॥೧೬೨॥ ಕೃಪೇನೇ ಕೇಲಾ ಜೋ ಸಂಗು । ತೋಚಿ ಯೋಗಿಯಾ ಯೋಗಭಂಗು । ಯಾಲಾಗೀ ಜೋ ನಿಃಸಂಗು । ತೋ ಅಭಂಗು ಸಾಧಕ ॥೧೬೩॥ ಮೃಗಾಚೇನಿ ಸ್ಮರಣೇ ನಿಮಾಲಾ । ಯಾಲಾಗಿ ತೋ ಮೃಗಜನ್ಮ ಪಾವಲಾ । ಜೋ ಕೃಷ್ಣಸ್ಮರಣೇ ನಿಮಾಲಾ । ತೋ ಕೃಷ್ಣಚಿ ಜಾಲಾ ದೇಹಾಂತೀ ॥೧೬೪॥ ಅಂತಕಾಳೀ ಜೇ ಮತೀ । ತೇಚಿ ಪ್ರಾಣಿಯಾಂಸೀ ಜಾಣ ಗತೀ । ಯಾಲಾಗೀ ಶ್ರೀಕೃಷ್ಣ ಚಿತ್ತೀ । ಅಹೋರಾತೀ ಸ್ಮರಾವಾ ॥೧೬೫॥ ಪರೀ ಮೃಗದೇಹೀ ಜಾಣ । ಭರತಾಸೀ ಶ್ರೀಕೃಷ್ಣಸ್ಮರಣ । ಪೂರ್ವೀ ಕೇಲೇ ಜೇ ಅನುಷ್ಠಾನ । ತೇ ಅಂತರ ಜಾಣ ಕದಾ ನೇದೀ ॥೧೬೬॥ ಮಾಗುತಾ ತಿಸರೇ ಜನ್ಮೀ ಪಾಹೇ । ತೋ "ಜಡಭರತ" ನಾಮ ಲಾಹೇ । ತೇಥೇ ತೋ ನಿರ್ಮಮತ್ವೇ ರಾಹೇ । ತೇಣೇ ಹೋಯ ನಿತ್ಯಮುಕ್ತ ॥೧೬೭॥ ಬಹುತಾ ಜನ್ಮೀಚೀ ಉಣೀವೀ । ಯೇಣೇ ಜನ್ಮೀ ಕಾಢಿಲೀ ಬರವೀ । ನಿಜಾತ್ಮಾ ಆಕಳೋನಿ ಜೀವೀ । ಪರಬ್ರಹ್ಮಪದವೀ ಪಾವಲಾ ॥೧೬೮॥ ಋಷಭಪುತ್ರಉತ್ಪತ್ತೀ । ಶತಬಂಧು ಜಾಣ ನಿಶ್ಚಿತೀ । ತ್ಯಾಂತ ಹೇ ಜೇಷ್ಠಾಚೀ ಸ್ಥಿತೀ । ಉರಲ್ಯಾಂಚೀ ಗತೀ ತೇ ಐಕಾ ॥೧೬೯॥

ತೇಷಾಂ ನವ ನವದ್ವೀಪಪತಯೋಽಸ್ಯ ಸಮಂತತಃ । ಕರ್ಮತಂತ್ರಪ್ರಣೇತಾರ ಏಕಾಶೀತಿರ್ದ್ವಿಜಾತಯಃ ॥೧೯॥

ಅರ್ಥ: ಋಷಭದೇವನ ಉಳಿದ ಮಕ್ಕಳಲ್ಲಿ ಒಂಬತ್ತು ಜನರು ಭರತ ವರ್ಷದ ಒಂಬತ್ತು ದ್ವೀಪಗಳನ್ನು ಆಳುತ್ತಾ ಸಮಸ್ತ ಭೂಮಂಡಲದ ಮೇಲೆ ಸಂಪೂರ್ಣ ಪ್ರಭುತ್ವವನ್ನು ಸ್ಥಾಪಿಸಿದರು. ಎಂಬತ್ತೊಂದು ಜನರು ಬ್ರಾಹ್ಮಣರಾಗಿ, ಕರ್ಮಕಾಂಡದಲ್ಲಿ ಉಕ್ತವಾದ ಯಜ್ಞಾಚರಣೆಗಳಿಗೆ ನೆರವಾದರು.

ನವ ನವಖಂಡಾಪ್ರತೀ । ತೇ ಕೇಲೇ ಖಂಡಾಧಿಪತೀ । ಏಕ್ಯಾಂಶೀ ಜಣಾಂಚೀ ಸ್ಥಿತೀ । ಕರ್ಮಮಾರ್ಗೀ ಹೋತೀ ಪ್ರವರ್ತಕ ॥೧೭೦॥ ಉರಲೇ ಜೇ ನವ ಜಣ । ಸಕಳ ಭಾಗ್ಯಾಚೇ ಭೂಷಣ । ಬ್ರಹ್ಮಜ್ಞಾನಾಚೇ ಅಧಿಷ್ಠಾನ । ಐಕ ಲಕ್ಷಣ ತಯಾಂಚೇ ॥೧೭೧॥

ನವಾಭವನ್ ಮಹಾಭಾಗಾ ಮುನಯೋ ಹ್ಯರ್ಥಶಂಸಿನಃ । ಶ್ರಮಣಾ ವಾತರಸನಾ ಆತ್ಮ ವಿದ್ಯಾವಿಶಾರದಾಃ ॥೨೦॥

ಅರ್ಥ: ಉಳಿದವರು ಒಂಬತ್ತು ಬಂಧುಗಳು ಸನ್ಯಾಸಿಗಳಾದರು. ಇವರು ಮಹಾಭಾಗ್ಯವಂತರಾಗಿದ್ದರು. ಇವರು ಅತ್ಯಂತ ಪರಿಶ್ರಮದಿಂದ ಆತ್ಮ ವಿದ್ಯೆಯನ್ನು ಸಂಪಾದಿಸಿದರು, ನಿಪುಣರಾದರು. ಇವರು ಯಾವಾಗಲೂ ದಿಗಂಬರರಾಗಿರುತ್ತಿದ್ದರು ಮತ್ತು ಅಧಿಕಾರಿಗಳವರಿಗೆ ಪಾರಮಾರ್ಥಿಕ ಉಪದೇಶ ಮಾಡುತ್ತಿದ್ದರು

ಭರತನು ಸ್ವತಃ ಮಹಾ ತಪಸ್ವಿಯಾಗಿದ್ದನು. ಹೀಗಿರಲು ಅಲ್ಲಿ ಮೃತ್ಯು ಹೇಗೆ ಆವರಿಸಿತು? ಹೀಗೆ ಕೇಳಿದರೆ, ಮಮತೆಯ ಸಂಧಿಯನ್ನು ಸಾಧಿಸಿ ಮೃತ್ಯು ಆತನನ್ನು ಸೆರೆಹಿಡಿಯಿತು ॥೧೬೧॥ ದೇಹಕ್ಕೆ ಮರಣವು ಒದಗಿಬಂದ ಸಮಯದಲ್ಲಿ ಭರತನಿಗೆ ಮೃಗದ ಧ್ಯಾಸವು ಹತ್ತಿತ್ತು. ಆದ್ದರಿಂದ ಆತನಿಗೆ ಮುಂದಿನ ಜನ್ಮವು ಜಿಂಕೆಯಾಗಿ ಪ್ರಾಪ್ತವಾಯಿತು. ಈ ಪ್ರಕಾರವಾಗಿ ಈತನಿಗೆ ಪುನರ್ಜನ್ಮದ ಕಾರಣವಾಯಿತು ॥೧೬೨॥ ಕೃಪೆಯಿಂದಲೇ ಆಗಲೀ ಸಂಗದಿಂದ ಯೋಗಿಗಳ ಯೋಗಭಂಗಕ್ಕೆ ಕಾರಣವಾಗುವುದು. ಆದ್ದರಿಂದ ನಿಃಸಂಗವಾಗಿ ಇರುವವರೇ ಭಂಗಗೊಳ್ಳದ ಸಾಧಕರಾಗಿರುವವರು ॥೧೬೩॥ ಜಿಂಕೆಯ ಸ್ಮರಣೆಯನ್ನು ಮಾಡುತ್ತ ಮಾಡುತ್ತ ಭರತನು ಮರಣ ಹೊಂದಿದನು. ಆದ್ದರಿಂದಲೇ ಈತನು ಜಿಂಕೆಯ ಜನ್ಮಕ್ಕೆ ಹೋದನು. ಯಾರು ಕೃಷ್ಣಸ್ಮರಣೆಯನ್ನು ಮಾಡುತ್ತ ಮರಣ ಹೊಂದುವರೋ, ಅವರು ಮೃತ್ಯು ನಂತರ ಕೃಷ್ಣಸ್ವರೂಪರಾಗುವರು ॥೧೬೪॥ ಅಂತ್ಯಕಾಲದಲ್ಲಿ ಪ್ರಾಣಿಗಳ ಬುದ್ಧಿಯಲ್ಲಿ ಯಾವುದು ಹೇಗೆ ಇರುವುದೋ, ಅದರಂತೆಯೇ ಅವರಿಗೆ ಗತಿಯು ದೊರಕುವುದು. ಆದ್ದರಿಂದ ಮನದಲ್ಲಿ ಹಗಲು ರಾತ್ರಿ ಶ್ರೀಕೃಷ್ಣನ ಸ್ಮರಣೆಯನ್ನು ಮಾಡಬೇಕು ॥೧೬೫॥ ಭರತನು ಜಿಂಕೆಯಾದನು ನಿಜ. ಆದರೆ ಆ ಮೃಗದ ಜನ್ಮದಲ್ಲಿಯೂ ಸಹ ಶ್ರೀ ಕೃಷ್ಣನ ಸ್ಮರಣೆಯಾಗುತ್ತಿತ್ತು. ಏಕೆಂದರೆ, ಪೂರ್ವಜನ್ಮದಲ್ಲಿ ಮಾಡಿದ ಅನುಷ್ಠಾನವು ಎಂದಿಗೂ ವ್ಯರ್ಥವಾಗಲಾರದು. ಇದು ಖಂಡಿತ ಎಂದು ತಿಳಿಯಬೇಕು ॥೧೬೬॥ ಇದಾದ ನಂತರ ಮುಂದಿನ ಜನ್ಮದಲ್ಲಿ ಈತನು "ಜಡಭರತ" ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದನು. ಅಲ್ಲಿ ಈತನು ಮಾಯಾಪಾಶದಿಂದ ಸಂಪೂರ್ಣವಾಗಿ ಅಲಿಪ್ತನಾಗಿದ್ದರಿಂದ ನಿತ್ಯಮುಕ್ತನಾಗಿ ಕುಳಿತುಕೊಂಡನು ॥೧೬೭॥ ಹಿಂದಿನ ಅನೇಕ ಜನ್ಮಗಳಲ್ಲಿ ಸಾಧಿಸಬೇಕಾಗಿದ್ದ ಹಲವು ಕೊರತೆಗಳನ್ನು ಈತನು ಈ ಜನ್ಮದಲ್ಲಿ ಪೂರ್ಣಗೊಳಿಸಿದನು. ಈತನು ತನ್ನ ಜೀವಭಾವವನ್ನು ಆತ್ಮಸ್ವರೂಪದಲ್ಲಿ ಲೀನಗೊಳಿಸಿ ಬ್ರಹ್ಮಪದವಿಯನ್ನು ಪ್ರಾಪ್ತಮಾಡಿಕೊಂಡನು ॥೧೬೮॥ ಈ ಪ್ರಕಾರವಾಗಿ ವೃಷಭನಿಗೆ ಆದ ನೂರು ಪುತ್ರರಲ್ಲಿ ಜೇಷ್ಠಪುತ್ರನ ಸ್ಥಿತಿಯನ್ನು ಹೇಳಲಾಯಿತು. ಈಗ ಇನ್ನುಳಿದವರ ವರ್ತಮಾನವನ್ನು ಕೇಳಿರಿ ॥೧೬೯॥

ಉಳಿದವರಲ್ಲಿ ಒಂಭತ್ತು ಜನ ಮಕ್ಕಳು ಪ್ರತಿಯೊಂದು ಖಂಡದ ಅಧಿಪತಿಯರಾಗಿ ನವಖಂಡವನ್ನು ಆಳುತ್ತಿದ್ದರು. ಎಂಬತ್ತೊಂದು ಜನ ಮಕ್ಕಳು ಕರ್ಮಮಾರ್ಗದ ಪ್ರವರ್ತಕರಾದರು ॥೧೭೦॥ ಇನ್ನುಳಿದ ಒಂಭತ್ತು ಜನರಾದ ಇವರು ಸರ್ವ ಭಾಗ್ಯದ ಭೂಷಣರಾಗಿ ಬ್ರಹ್ಮಜ್ಞಾನದಿಂದ ಕೇವಲ ಅಧಿಷ್ಠಾನರಾದರು. ಅವರ ಲಕ್ಷಣಗಳನ್ನು ಹೇಳುವೆ, ಕೇಳಿರಿ ॥೧೭೧॥

ಋಷಭಕುಳೀ ಕುಳದೀಪ । ಸ್ನೇಹಸೂತ್ರೇವೀಣ ದೇದೀಪ್ಯ । ನವಹೀ ಜಣ ಸ್ವಯೇ ಸದ್ರೂಪ । ಸಾಯುಜ್ಯಸ್ವರೂಪಪ್ರಕಾಶಕ ॥೧೭೨॥ ಆತ್ಮಾಭ್ಯಾಸೀ ಪರಿಶ್ರಮ । ಕರೂನ ನಿರಸಿಲೇ ಕರ್ಮಾಕರ್ಮ । ಯಾಲಾಗೀ ತೇ ಅಕೃತಾಶ್ರಮ । ನಿಜನಿಭ್ರಮ ಸ್ವಯೇ ಜಾಹಲೇ ॥೧೭೩॥ ಶಾಬ್ದ ಬೋಧೇ ಸದೋದಿತ । ಬ್ರಹ್ಮಜ್ಞಾನಪಾರಂಗತ । ಶಿಷ್ಯಪ್ರಬೋಧೀ ಸಮರ್ಥ । ಪರಮಾದ್ಭುತ ಅತಿದಕ್ಷ ॥೧೭೪॥ ತೇ ಬ್ರಹ್ಮವಿದ್ಯೇಚೇ ಚಾಲತೇ ಡಿಂಬ। ತ್ಯಾಂಚೇ ಅವೇವ ತೇ ಬ್ರಹ್ಮಕೋಂಬ। ತೇ ವಿದ್ಯೇಚೇ ಪೂರ್ಣಬಿಂಬ। ಸ್ವಯೇ ಸ್ವಯಂಭ ಪರಬ್ರಹ್ಮ ॥೧೭೫॥ ದಶದಿಶಾ ಏಕೂಚಿ ದೋರಾ । ಭರೂನಿ ಪಾಂಘುರುಣೆ ಮುನೀಶ್ವರಾ । ವಾರಾ ವಳೂನ ಕಡದೋರಾ । ಬಾಂಧಿಲಾ ಪುರಾ ಗ್ರಂಥೀರೂಪ ॥೧೭೬॥ ಆಕಾಶಾಚ್ಯಾ ಠಾಯೀ । ಅಂಬರತ್ವ ಕೇಲೇ ತಿಹೀ । ತೇ ಚಿದಂಬರ ಪಾಹೀ । ಏಕಚಿ ನವಾಹೀ ಪಾಂಘರೂಣ ॥೧೭೭॥ ಪ್ರಾಣಾಪಾನ ವಳೂನಿ ದೋನ್ಹೀ । ಗಾಂಠೀ ಕೇಲೀ ನಾಭೀಚಾ ಠಾಯೀ। ತಂವ ಜೀವಗ್ರಂಥೀ ಸುಟಲೀ ಪಾಹೀ। ತೇಚಿ ನವಾಹೀ ಬ್ರಹ್ಮಸೂತ್ರ॥೧೭೮॥ ಐಸೇ ಪರಬ್ರಹ್ಮವೈಭವೇ । ನಿಡಾರಲೇ ನಿಜಾನುಭವೇ । ತ್ಯಾಂಚೀ ಸಾಂಗೇನ ಮೀ ನಾಂವೇ । ಯಥಾಗೌರವೇ ತೇ ಐಕ ॥೧೭೯॥ ಜ್ಯಾಂಚೇ ನಾಮ ಐಕತಾ । ಕಾಂಪತ ಕಾಳ ಪಳೇ ಮಾಗುತಾ । ಸಂಸಾರ ನುಘವೀ ಮಾಥಾ । ನಾಮ ಸ್ಮರತಾ ಜಯಾಂಚೇ ॥೧೮೦॥ ತ್ಯಾಂಚಿಯಾ ನಾಮಾಂಚೀ ಕೀರ್ತೀ । ಆಈಕ ಸಾಂಗೇನ ಪರೀಕ್ಷಿತೀ । ಜ್ಯಾಂಚೇನಿ ನಾಮೇ ಆತುಡೇ ಮುಕ್ತೀ । ಜಾಣ ನಿಶ್ಚಿತೀ ಭಾವಿಕಾ ॥೧೮೧॥

ಕವಿರ್ಹವಿರಂತರೀಕ್ಷಃ ಪ್ರಬುದ್ಧಃ ಪಿಪ್ಪಲಾಯನಃ । ಆವಿರ್ಹೋತ್ರೋಽಥ ದ್ರುಮಿಲಶ್ಚಮಸಃ ಕರಭಾಜನಃ ॥೨೧॥

ಅರ್ಥ: ಕವೀ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿರ್ಹೋತ್ರಂ, ದ್ರುಮಿಲ, ಚಮಸ ಮತ್ತು ಕರಭಾಜನ ಹೀಗೆ ಇವರ ಹೆಸರುಗಳಿದ್ದವು.

ಕವಿ ಹರಿ ಅಂತರಿಕ್ಷ । ಪ್ರಬುದ್ಧ ಪಿಪ್ಪಲಾಯನ ದೇಖ । ಆವಿರ್ಹೋತ್ರ ದ್ರುಮಿಲ ಸುಟಂಕ । ಚಮಸ ನಿರ್ದೋಷ ಕರಭಾಜನ ॥೧೮೨॥ ಏವಂ ನವಹೀ ನಾವೇ ಜಾಣ । ಯಾಂಚೇ ಕರಿತಾ ನಾಮಸ್ಮರಣ । ಸಕಳ ಪಾಪಾ ನಿರ್ದಳಣ । ಹೇ ಮಹಿಮಾ ಪೂರ್ಣ ತಯಾಂಚೀ ॥೧೮೩॥ ತ್ಯಾಂಚೀ ಪರಮಹಂಸಿಸ್ಥಿತೀ । ಸಾಂಗೇನ ಮೀ ತುಜಪ್ರತೀ । ಜ್ಯಾಂಚೇನಿ ಪಾವನ ಹೋಯ ಕ್ಷಿತೀ । ತ್ಯಾ ಯಾ ನವ ಮೂರ್ತೀ ಪುಣ್ಯ ಪೂಜ್ಯ ॥೧೮೪॥

ಏತೇ ವೈ ಭಗವದ್ರೂಪಂ ವಿಶ್ವಂ ಸದಸದಾತ್ಮಕಮ್ । ಆತ್ಮನೋಽವ್ಯತಿರೇಕೇಣ ಪಶ್ಯಂತೋ ವ್ಯಚರನ್ಮಹೀಮ್ ॥೨೨॥

ಅರ್ಥ: ಸಕಲ ಸ್ಥೂಲ-ಸೂಕ್ಷ್ಮ ವಸ್ತುಗಳು ಭಗವಂತನ ಸ್ವರೂಪವೆಂದು, ಆತ್ಮವಲ್ಲದ ಬೇರೆಯಲ್ಲ ಎಂದೂ ಇಡೀ ವಿಶ್ವವನ್ನು ನೋಡುತ್ತ ಆ ಮುನಿಗಳು ಭೂಮಂಡಲದಲ್ಲಿ ಸಂಚಾರ ಮಾಡುತ್ತಿದ್ದರು.

ಈ ಒಂಭತ್ತು ಬಂಧುಗಳು ತೈಲಬತ್ತಿ ಇಲ್ಲದೇ ಪ್ರಕಾಶಿಸುವ ದೀಪಕರಾಗಿದ್ದರು. ಸಚ್ಚಿದಾನಂದ ಸ್ವರೂಪರಾಗಿ ಸಾಧಕರಿಗೆ ಸಾಯುಜ್ಯ ಸ್ವರೂಪದ ಪ್ರಕಾಶಕರಾಗಿದ್ದರು ॥೧೭೨॥ ಇವರು ಆತ್ಮಾಭ್ಯಾಸದಲ್ಲಿ ಪರಿಶ್ರಮವಹಿಸಿ, ಕರ್ಮಾಕರ್ಮಗಳನ್ನು ಶೂನ್ಯಗೊಳಿಸಿದ್ದರು. ಆದ್ದರಿಂದ ಇವರು ಭ್ರಮರಹಿತರಾಗಿ ಯಾವ ಆಶ್ರಮವನ್ನೂ ಸ್ವೀಕರಿಸದೇ ಇದ್ದರು ॥೧೭೩॥ ಇವರು ಶಬ್ದಜ್ಞಾನದಲ್ಲಿ ನಿಪುಣರಾಗಿದ್ದರು ಮತ್ತು ಬ್ರಹ್ಮಜ್ಞಾನಪಾರಂಗತರಾಗಿ ಶಿಷ್ಯ ಪ್ರಬೋಧ ವಿಷಯದಲ್ಲಿ ಸಮರ್ಥರಾಗಿದ್ದರು. ಹಾಗೂ ಪರಮಾದ್ಭುತ , ಅತ್ಯಂತ ದಕ್ಷರಾಗಿದ್ದರು ॥೧೭೪॥ ಇವರು ಬ್ರಹ್ಮವಿದ್ಯೆಯ ನಡೆಯುವ, ನುಡಿಯುವ ಮೂರ್ತಿಯಾಗಿದ್ದರು ಮತ್ತು ಇವರ ಅವಯವಗಳು ಪರಬ್ರಹ್ಮಕ್ಕೆ ಮೂಡಿದ ಅಂಕುರಗಳಾಗಿದ್ದವು. ಇವರು ವಿದ್ಯೆಯ ಪೂರ್ಣಬಿಂಬರಾಗಿ ಸ್ವತಃ ಸಿದ್ಧ ಪರಬ್ರಹ್ಮಸ್ವರೂಪರಾಗಿದ್ದರು ॥೧೭೫॥ ಈ ಮುನೀಶ್ವರರು ದಶದಿಶೆಗಳೆಂಬ ಒಂದೇ ದಾರದ ಹೊದಿಕೆಯನ್ನು ಮಾಡಿಕೊಂಡರು. ಗಾಳಿಯನ್ನು ಗಟ್ಟಿಯಾಗಿ ಹುರಿಮಾಡಿ ಗ್ರಂಥೀರೂಪ ಒಂದೇ ಉಡದಾರವನ್ನು ಕಟ್ಟಿದರು ॥೧೭೬॥ ಆಕಾಶವನ್ನೇ ವಸ್ತ್ರವನ್ನಾಗಿ ಮಾಡಿದರು. ಈ ಒಂಬತ್ತು ಮಹಿಮರು ಚಿದಾಕಾಶದ ಒಂದೇ ಹೊದಿಕೆಯನ್ನಾಗಿ ಮಾಡಿದರು ॥೧೭೭॥ ಪ್ರಾಣ, ಅಪಾನ ಈ ಎರಡೂ ವಾಯುವನ್ನು ಹುರಿ ಮಾಡಿ ನಾಭಿಯಲ್ಲಿ ಅದರ ಗಂಟನ್ನು ಹಾಕಿದರು. ಆಗ ನಾನು ಜೀವನು ಎಂಬ ಕಗ್ಗಂಟು ಬಿಚ್ಚಿಹೋಯಿತು ಮತ್ತು ಇದುವೇ ಈ ಒಂಬತ್ತು ಮಹಿಮರ ಜನಿವಾರವಾಗಿತ್ತು ॥೧೭೮॥ ಈ ಪ್ರಕಾರವಾಗಿ ಪರಬ್ರಹ್ಮದ ವೈಭವದಿಂದ, ಆತ್ಮಸಾಕ್ಷಾತ್ಕಾರದಿಂದ ಇವರು ಪೂರ್ಣ ಪರಿಪಕ್ವರಾಗಿದ್ದರು. ಈಗ ಈ ಒಂಬತ್ತು ಮಹಿಮರ ನಾಮಾಂಕಿತಗಳನ್ನು ಗೌರವದಿಂದ ಹೇಳುವೆ, ಕೇಳಿರಿ ॥೧೭೯॥ ಇವರ ನಾಮಗಳನ್ನು ಕೇಳಿದಾಕ್ಷಣವೇ, ಕಾಲನು ನಡುಗುತ್ತ ಓಂದಕ್ಕೆ ಓಡುವನು. ಇವರ ನಾಮಗಳನ್ನು ಸ್ಮರಿಸಿದರೆ ಸಂಸಾರವು ತನ್ನ ಮಸ್ತಕವನ್ನು ಮೇಲೆತ್ತುವುದಿಲ್ಲ ॥೧೮೦॥ ಹೇ ಪರೀಕ್ಷಿತಿಯೇ, ಇವರ ನಾಮಗಳನ್ನು ಉಚ್ಚರಿಸಿದರೆ, ಭಾವಿಕರಿಗೆ ನಿಶ್ಚಿಯವಾಗಿ ಮುಕ್ತಿಯು ದೊರೆಯುವುದು. ಇವರ ನಾಮದ ಕೀರ್ತಿಯನ್ನು ನಿನಗೆ ಹೇಳುವೆ, ಕೇಳು ॥೧೮೧॥

ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿರ್ಹೋತ್ರ, ದ್ರುಮಿಲ, ಚಮಸ ಮತ್ತು ಕರಭಾಜನ ॥೧೮೨॥ ಈ ಪ್ರಕಾರವಾಗಿ ಈ ಒಂಬತ್ತು ಮಹಿಮರ ಒಂಬತ್ತು ಹೆಸರುಗಳಾಗಿದ್ದವು. ಯಾವ ಈ ನಾಮಗಳ ಸ್ಮರಣೆಯನ್ನು ಮಾಡಿದರೆ, ಸರ್ವಪಾಪಗಳು ನಾಶವಾಗುವುವು. ಹೀಗೆ ಇವರ ಮಹಿಮೆಯಾಗಿರುವುದು ॥೧೮೩॥ ಇವರ ಪರಮಹಂಸಸ್ಥಿತಿಯನ್ನು ನಾನು ನೀನಗೆ ಹೇಳುವೆ. ಸರ್ವ ಪೃಥ್ವಿಯು ಇವರಿಂದ ಪಾವನವಾಗುವಷ್ಟು ಪುಣ್ಯ ಪೂಜ್ಯರು ಇವರಾಗಿದ್ದರು ॥೧೮೪॥

ತೇ ವೇಗಳೇ ದಿಸತೀ ನವಾಂಕ । ಪರೀ ಭಗವದ್ರೂಪೇ ಅವಘೇ ಏಕ । ಸಂತಾಸಂತ ಜನ ಅನೇಕ । ಆಪಣಾಸಗಟ ದೇಖ ಏಕತ್ವೇ ಪಾಹತೀ ॥೧೮೫॥ ತ್ಯಾಂಸೀ ತಂವ ಅಸಂತತಾ । ಉರಲೀ ನಾಹೀ ಸರ್ವಥಾ । ಸಂತ ಮ್ಹಣಾವಯಾ ಪುರತಾ । ಭೇದು ನ ಯೇ ಹಾತಾ ಚಿನ್ಮಯತ್ವೇ ॥೧೮೬॥ ಜಗ ಪರಿಪೂರ್ಣ ಭಗವಂತೇ । ಆಪಣ ವೇಗಳಾ ನುರೇ ತೇಥೇ । ತಂವ ಭಗವದ್ರೂಪ ಸಮಸ್ತೇ । ಭೂತೇ ಮಹಾಭೂತೇ ಸ್ವಯೇ ದೇಖೇ ॥೧೮೭॥ ಹೇಹೀ ದೇಖತೇ ದೇಖಣೇ । ತೇಹೀ ಸ್ವಯೇ ಆಪಣ ಹೋಣೇ । ಹೋಣೇ ನ ಹೋಣೇ ಯೇಣೇ ಜಾಣೇ । ಹೀ ಗಿಳೂನಿ ಲಕ್ಷಣೇ ವಿಚರತೀ ಮಹೀ ॥೧೮೮॥

ಅವ್ಯಾಹತೇಷ್ಟಗತಯಃ ಸುರಸಿದ್ಧಸಾಧ್ಯಗಂಧರ್ವಯಕ್ಷನರಕಿನ್ನರನಾಗಲೋಕಾನ್ ।
ಮುಕ್ತಾಶ್ಚರಂತಿ ಮುನಿಚಾರಣಭೂತನಾಥವಿದ್ಯಾಧರದ್ವಿಜಗವಾಂ ಭುವನಾನಿ ಕಾಮಮ್ ॥೨೩॥

ಅರ್ಥ:- ನವ ಯೋಗೀಂದ್ರರು ಮುಕ್ತಾತ್ಮರು,ಸುರ,ಸಿದ್ಧಿ,ಸಾಧ್ಯ,ಗಂಧರ್ವ,ಯಕ್ಷ,ನರ,ಕಿನ್ನರ ಮತ್ತು ನಾಗಲೋಕಗಳಲ್ಲಿ ತಮಗಿಷ್ಟ ಬಂದಂತೆ ಧಾರಾಳವಾಗಿ ಸಂಚರಿಸುತ್ತಿದ್ದರು. ಯಾವ ಲೌಕಿಕ ಶಕ್ತಿಯೂ ಅವರ ಅನಿರ್ಬಂಧಿತ ಚಲನೆಯನ್ನು ತಡೆಯಲಾರದು ತಮಗೆ ಅಪೇಕ್ಷೆಯಾದಂತೆ ಅವರು ಮುನಿಗಳು,ಚಾರಣರು,ಭೂತನಾಥರು,ವಿದ್ಯಾಧರರು,ಬ್ರಾಹ್ಮಣರು ಮತ್ತು ಗೋವುಗಳ ಲೋಕಗಳಲ್ಲಿ ಸಂಚರಿಸಬಲ್ಲರು.

ವೈಕುಂಠ ಕೈಲಾಸ ಸುರಸಿದ್ಧಸ್ಥಾನೇ । ಸಪ್ತಪಾತಾಳಾದಿ ಗಮನೇ । ಏವಂ ಶ್ಲೋಕೋಕ್ತ ಚವದಾ ಭುವನೇ । ಸ್ವಇಚ್ಛಾ ವಿಚರಣೇ ಕಾಮನಾರಹಿತ ॥೧೮೯॥ ತ್ಯಾಂಸೀ ಜೀವೀ ನಾಹೀ ವಿಷಯಾಸಕ್ತೀ । ಯಾಲಾಗೀ ಖುಂಟೇನಾ ತ್ಯಾಂಚೀ ಗತೀ । ಇಚ್ಛಾಮಾತ್ರೇ ಗಮನಶಕ್ತೀ । ಸುಖೇ ವಿಚರತೀ ನಿಷ್ಕಾಮ ॥೧೯೦॥

ತ ಏಕದಾ ನಿಮೇಃಸತ್ರಮುಪಜಗ್ಮುರ್ಯದೃಚ್ಛಯಾ । ವಿತಾಯಮಾನಮೃಷಿಭಿರಜನಾಭೇ ಮಹಾತ್ಮನಃ ॥೨೪॥

ಅರ್ಥ:- ಒಮ್ಮೆ ಅಜನಾಭದಲ್ಲಿ (ಭೂಮಿಗೆ ಮೊದಲಿದ್ದ ಹೆಸರು) ಮಹಾರಾಜ ನಿಮಿಯು ಮಹಾತ್ಮರಾದ ಋಷಿಗಳ ನಿರ್ದೇಶನದಲ್ಲಿ ಒಂದು ಯಜ್ಞ ಮಾಡುತ್ತಿದ್ದನು. ನವ ಯೋಗೀಂದ್ರರು ಅಲ್ಲಿಗೆ ಬಂದರು.

ಜೇಥೇ ಮನಾಚಾ ಪ್ರವೇಶು ನಾಹೀ । ತ್ಯಾಂಚೀ ಪಾಯವಾಟ ತೇ ಠಾಯೀ । ಐಸೇ ಸ್ವಇಚ್ಛಾ ವಿಚರತಾ ಮಹೀ । ಆಲೇ ತೇ ಪಾಹೀ ಕರ್ಮಭೂಮೀಸೀ ॥೧೯೧॥ ಮಹೀ ವಿಚರತಾ ವಿತಂಡ । ಪಾತಲೇ ''ಅಜನಾಭ'' ಖಂಡ। ತಂವ ವಿದೇಹಾಚಾ ಯಾಗ ಪ್ರಚಂಡ । ಮೀನಲೇ ಉದಂಡ ಋಷೀಶ್ವರ ॥೧೯೨॥ ಯಾಗ ವೇದೋಕ್ತ ವಿಧೀನಿಕಾ । ಕುಂಡಮಂಡಪ ವೇದಿಕಾ । ಆಪೋ ಸಾಧೋನಿ ನೇಟಕಾ । ವಿಧಾನ ಪೀಠಿಕಾ ಅತಿಶುದ್ಧ ॥೧೯೩॥

ಈ ಒಂಬತ್ತು ಮಹಿಮರು ದೇಹದಿಂದ ಬೇರೆ ಬೇರೆಯಾಗಿ ಕಾಣುತ್ತಿದ್ದರೂ, ಭಗವತ್ಸ್ವರೂಪದಿಂದ ಒಂದೇ ಆಗಿದ್ದರು. ಶಿಷ್ಟರಿರಲಿ, ಅಥವಾ ದುಷ್ಟರಿರಲಿ, ಎಲ್ಲರನ್ನೂ ತಮ್ಮಂತೆಯೇ ಕಂಡು ಒಂದೇ ಸ್ವರೂಪದಿಂದ ಕಾಣುತ್ತಿದ್ದರು ॥೧೮೫॥ ಕಾರಣ, ಇವರಿಗೆ ಅಸಾಧುತ್ವ ಎಂಬುದು ಎಲ್ಲಿಯೂ ಇಲ್ಲದಾಗಿ ಎಲ್ಲವೂ ಚಿನ್ಮಯವಾಗಿರುವುದಕ್ಕೆ "ಸಂತ" ಎಂದು ಹೇಳುವಷ್ಟು ಭೇದವೂ ಇವರಲ್ಲಿ ಉಳಿಯಲಿಲ್ಲ ॥೧೮೬॥ ಸಂಪೂರ್ಣವಾಗಿ ಜಗತ್ತಿನಲ್ಲಿ ಭಗವಂತನೇ ತುಂಬಿಕೊಂಡಿರುವುದರಿಂದ ತಾವು ಸಹಿತ ಆತನಿಂದ ಬೇರೆಯಾಗಲು ಶಕ್ಯವೇ ಇಲ್ಲ ಎಂದು ಅರಿತುಕೊಂಡು ಇವರು ಎಲ್ಲ ಭೂತಗಳಲ್ಲಿ, ಪಂಚ ಮಹಾಭೂತಗಳಲ್ಲಿ ಭಗವತ್ಸ್ವರೂಪವನ್ನೇ ಕಾಣುತ್ತಿದ್ದರು ॥೧೮೭॥ ಹೀಗೆ ನೋಡುವುದು, ನೋಡುವ ಎಲ್ಲ ವಸ್ತುಗಳು ತಾವೇ ಆಗಿರುವರು. ಆಗುವುದು, ಆಗಲಾರದ್ದು, ಬರುವುದು, ಹೋಗುವುದು ಇವುಗಳ ಎಲ್ಲ ಲಕ್ಷಣಗಳನ್ನು ನುಂಗಿ ಇವರು ಜಗತ್ತಿನಲ್ಲಿ ವಿಚರಿಸುತ್ತಿರುವರು ॥೧೮೮॥

ವೈಕುಂಠ,ಕೈಲಾಸ ಹಾಗೆಯೇ ದೇವರು ಸಿದ್ಧರು, ಸಾಧ್ಯರು, ಗಂಧರ್ವರು, ಯಕ್ಷರು, ನರರು, ನಾಗ, ಮುನಿ, ಚಾರಣ, ಭೂತನಾಥ, ವಿದ್ಯಾಧರ, ದ್ವಿಜ, ಗೋವು ಇತ್ಯಾದಿಗಳ ಸ್ಥಾನಗಳು ಅಂದರೆ ಸಪ್ತ ಸ್ವರ್ಗ, ಸಪ್ತಪಾತಾಳ ಹೀಗೆ ಶ್ಲೋಕದಲ್ಲಿ ಹೇಳಿದಂತೆ ಹದಿನಾಲ್ಕು ಲೋಕಗಳನ್ನು ಇವರು ನಿರಿಚ್ಛೆಯಿಂದ ಸುಖವಾಗಿ ತಿರುಗುತ್ತಿದ್ದರು ॥೧೮೯॥ ಇವರ ಮನದಲ್ಲಿ ವಿಷಯಾಸಕ್ತಿ ಇಲ್ಲದ್ದಕ್ಕೆ ಇವರ ಗತಿಯು ಎಲ್ಲಿಯೂ ಕುಂಠಿತಗೊಳ್ಳುತ್ತಿದ್ದಿಲ್ಲ. ಸ್ವೇಚ್ಛೆಯಂತೆ ಬೇಕಾದಲ್ಲಿ ತಿರುಗಾಡುವ ಸಾಮರ್ಥ್ಯವು ಅವರಲ್ಲಿದ್ದು ನಿಷ್ಕಾಮವಾಗಿ ಆನಂದದಿಂದ ವಿಚರಿಸುತ್ತಿದ್ದರು ॥೧೯೦॥

ಯಾವ ಸ್ಥಳದಲ್ಲಿ ಮನವು ಸಹ ಪ್ರವೇಶವಾಗುವುದಿಲ್ಲವೋ, ಅಲ್ಲಿ ಇವರು ಪಾದಚಾರಿಯಾಗಿ ಹೋಗುತ್ತಿದ್ದರು. ಈಪ್ರಕಾರ ಇವರು ಇಚ್ಛಾಗಮನರಾಗಿ ಜಗತ್ತಿನಲ್ಲಿ ತಿರುಗುತ್ತ,ತಿರುಗುತ್ತ ಒಮ್ಮೆ ಕರ್ಮಭೂಮಿಯ ಮೇಲೆ ಬಂದರು ॥೧೯೧॥ ಅಲ್ಲಿ ಸ್ವಇಚ್ಛೆಯಿಂದ ಪೃಥ್ವಿಯಲ್ಲಿನ ''ಅಜನಾಭ'' (ಭಾರತ ವರ್ಷ)ಕ್ಕೆ ಬಂದು ಮುಟ್ಟಿದರು. ಆಗ ಅಲ್ಲಿ ಜನಕ ಮಹಾರಾಜನ ಯಜ್ಞವು ಪ್ರಾರಂಭಗೊಂಡಿದ್ದು ಅಸಂಖ್ಯಾತ ಮಹಾ ಮಹಾ ಮುನಿಗಳು ಕೂಡಿದ್ದರು ॥೧೯೨॥ ಈ ಯಜ್ಞವು ವೇದೋಕ್ತ ವಿಧಿಯಿಂದ ಶಾಸ್ತ್ರೋಕ್ತವಾಗಿ ನೆರವೇರಿತ್ತು. ಕುಂಡ, ಮಂಟಪ, ವೇದಿಕಾ, ದಿಶಾಸಾಧನ, ಅನುಷ್ಠಾನ ಪೀಠಿಕಾ ಹೀಗೆ ಎಲ್ಲವನ್ನು ಸಾಧಿಸಿ ಪವಿತ್ರ ರೀತಿಯಲ್ಲಿ ನಡೆದಿತ್ತು ॥೧೯೩॥

ಸ್ರುಕ್-ಸ್ರುವಾ-ತ್ರಿಸಂಧಾನೇ । ವಿಸ್ತಾರೂನಿ ಪರಿಸ್ತರಣೇ । ಅಖಂಡ ವಸುಧಾರಾ ದಂಡಾಪ್ರಮಾಣೇ । ಋಷಿಮಂಡಣೇ ಹೋಮ ಕರಿತೀ ।।೧೯೪।। ಹೋಮ ಹೋತಾ ಸಂಪೂರ್ಣ । ಪೂರ್ಣಾಹುತೀಸಮಯೀ ಜಾಣ । ಯೇತಾ ದೇಖಿಲೇ ನವಹೀ ಜಣ । ದೇದಿಪ್ಯಮಾನ ನಿಜತೇಜೇ ।।೧೯೫।।

ತಾನ್ ದೃಷ್ಟ್ವಾ ಸೂರ್ಯಸಂಕಾಶಾನ್ ಮಹಾಭಾಗವತಾನ್ ನೃಪ ।
ಯಜಮಾನೋಽಗ್ನಯೋ ವಿಪ್ರಾಃ ಸರ್ವ ಏವೋಪತಸ್ಥಿರೇ ।।೨೫।।

ಅರ್ಥ: ನನ್ನ ಪ್ರೀತಿಯ ರಾಜನೇ, ಉಜ್ವಲಕಾಂತಿಯಿಂದ ಸೂರ್ಯನೊಡನೆ ಸ್ಪರ್ಧಿಸುತ್ತಿದ್ದ ಆ ಪರಿಶುದ್ಧ ಭಗವದ್ಭಕ್ತರನ್ನು ನೋಡಿ, ಅಲ್ಲಿದ್ದ ಪ್ರತಿಯೊಬ್ಬರೂ ಯಾಗಕರ್ತೃ, ಬ್ರಾಹ್ಮಣರು ಮತ್ತು ಯಾಗಾಗ್ನಿಗಳೂ ಕೂಡ ಗೌರವದಿಂದ ಎದ್ದು ನಿಂತರು.

ಅಮಿತ ಸೂರ್ಯಾಚಿಯಾ ಕೋಟೀ । ಹಾರಪತೀ ನಖತೇಜಾಂಗುಷ್ಠೀ । ತೋ ಭಗವಂತ ಜಿಹೀ ಧರಿಲಾ ಪೋಟೀ । ತ್ಯಾಂಚೀ ತೇಜಾಚೀ ಗೋಷ್ಟೀ ಅಲೋಲಿಕ ।।೧೯೬।। ತ್ಯಾಂಚಿಯಾ ಅಂಗಪ್ರಭಾ । ಸೂರ್ಯ ಲೋಪತಾಹೇ ಉಭಾ । ಜಿ ಹೀ ಪ್ರಭೇಸೀ ಆಣಿಲೀ ಶೋಭಾ । ಚೈತನ್ಯಗಾಭಾ ಸಾಕಾರ ।।೧೯೭।। ತೇ ಭಗವದ್ಭಾವವೈಭವ । ಭಗವಂತಾಚೇ ನಿಜಗೌರವ । ಭಕ್ತೀಚೇ ಭಾಗ ಜೇ ನವ । ತೇ ಹೇ ಜಾಣ ಸರ್ವ ಮೂರ್ತಿಮಂತ ।।೧೯೮।। ನವಖಂಡ ಪೃಥ್ವೀಚೇ ಅಲಂಕಾರ । ನವನಿಧೀಚೇ ನಿಜಸಾರ । ನವರತ್ನಾಂಚೇಹೀ ನಿಜಭಾಂಡಾರ । ತೇ ಹೇ ಸಾಕಾರ ನವಹೀ ಜಣ ।।೧೯೯।। ಕೀ ತೇ ನವಹೀ ನಾರಾಯಣ । ಸ್ವಯೇ ಪ್ರಗಟಲೇ ಆಪಣ । ನವಹೀ ನೃಸಿಂಹ ಜಾಣ । ದೇದೀಪ್ಯಮಾನ ಪೈ ಆಲೇ ।।೨೦೦।। ಆವ್ಹಾನಿಲೇ ತಿನ್ಹೀ ಅಗ್ನೀ । ಉಭೇ ಠೇಲೇ ತ್ಯಾಂತೇ ದೇಖೋನೀ । ತೇ ಹೇ ಭಾಗವತೀ ದೇಖಿಲೇ ನಯನೀ । ಇತರಾಲಾಗುನೀ ದಿಸೇನಾ ।।೨೦೧।। ಯೇತಾ ದೇಖೋನಿ ತೇಜೋಮೂರ್ತೀ । ಋತ್ವಿಜ ಆಚಾರ್ಯ ಉಭೇ ಠಾಕತೀ । ಸಾಉಮಾ ಧಾಂವೇ ವಿದೇಹನೃಪತೀ । ಸ್ವಾನಂದ ವೃತ್ತೀ ಸನ್ಮಾನೀ ।।೨೦೨।। ಸವೇಗ ಘಾಲೀ ಲೋಟಾಂಗಣ । ಮುಗುಟ ಕಾಢೋನಿ ಆಪಣ । ಮಸ್ತಕೀ ವಂದೂನಿಯಾ ಚರಣ । ಪೂರ್ಣಾದರೇ ಜಾಣ ಆಣಿತಾ ಝಾಲಾ ।।೨೦೩।।

ವಿದೇಹಸ್ತಾನಭಿಪ್ರೇತ್ಯ ನಾರಾಯಣಪರಾಯಣಾನ್ । ಪ್ರೀತಃ ಸಂಪೂಜಯಾಂ ಚಕ್ರ ಆಸಿನಸ್ಥಾನ್ ಯಥಾರ್ಹತಃ ।।೨೬।।

ಅರ್ಥ :- ವಿದೇಹ ರಾಜನಾದ ನಿಮಿಯು ಆ ನವಯೋಗೇಂದ್ರರು ಭಗವಂತನ ಶ್ರೇಷ್ಠ ಭಕ್ತರೆಂಬುವನ್ನು ಅರ್ಥಮಾಡಿಕೊಂಡನು. ಶುಭಕರವಾದ ಅವರ ಆಗಮನದಿಂದ ಆನಂದಿತನಾಗಿ, ಅವರಿಗೆ ಉಚಿತವಾದ ಆಸನಗಳನ್ನು ನೀಡಿ ಸೂಕ್ತವಾದ ರೀತಿಯಲ್ಲಿ ದೇವರಿಗೆ ಹೇಗೋ ಹಾಗೆ ಪೂಜೆಯನ್ನು ಸಲ್ಲಿಸಿದನು.

ಸ್ರುಕ್, ಸ್ರುವಾ ಇತ್ಯಾದಿ ಯಜ್ಞ ಪಾತ್ರೆಗಳು, ಮೂರುಸ್ಥಳದಲ್ಲಿ ಜೋಡಿಸಿದ ದರ್ಭೆಯ ಹಗ್ಗಗಳು, ದರ್ಭೆಯ ಪರಿಸ್ತರಣೆಗಳನ್ನು ಪ್ರಸರಿಸಿ ಅಖಂಡವಾಗಿ ''ವಸುಧಾರಾ'' ಅಂದರೆ ತುಪ್ಪದ ಧಾರೆಯನ್ನು ಹಿಡಿದು ಋಷಿಗಳು ಹೋಮ ಮಾಡುತ್ತಿದ್ದರು ।।೧೯೪।। ಈ ಹೋಮವು ಪೂರ್ಣಗೊಂಡು ಪೂರ್ಣಾಹುತಿಯ ವೇಳೆಯು ಬಂದಿತ್ತು. ಆಗ ಈ ಒಂಬತ್ತು ಯೋಗೇಂದ್ರರು ತೇಜದಿಂದ ದೇದೀಪ್ಯಮಾನರಾಗಿ ಆಗಮಿಸುತ್ತಿರುವುದು ದೃಷ್ಟಿಗೆ ಗೋಚರಿಸಿತು ।।೧೯೫।।

ಯಾರ ಅಂಗುಷ್ಠನಖ ತೇಜದಲ್ಲಿ ಕೋಟ್ಯಾವಧಿ ಸೂರ್ಯರ ತೇಜವು ಲೋಪವಾಗುವುದೋ, ಯಾರು ಭಗವಂತನನ್ನು ತಮ್ಮ ಹೃದಯದಲ್ಲಿ ಸದಾ ಧರಿಸಿರುವರೋ, ಅವರ ತೇಜವು ಎಷ್ಟೊಂದು ಅಲೌಕಿಕವಾಗಿದೆ ಎಂದು ಹೇಗೆ ಹೇಳಬೇಕು? ।।೧೯೬।। ಇವರ ಅಂಗಕಾಂತಿಯ ಎದುರಿಗೆ ಸೂರ್ಯನೂ ಮಂದಾಗುತ್ತಿದ್ದನು. ತಮ್ಮ ಅಂಗಕಾಂತಿಯಿಂದ ಪ್ರಭೆಗೆ ಶೋಭೆಯನ್ನು ತಂದುಕೊಡುವಂತಹ ಈ ಒಂಭತ್ತು ಮಹಿಮರು ಚೈತನ್ಯದ ಖಣಿಯಾಗಿದ್ದರು ।।೧೯೭।। ಈ ಒಂಭತ್ತು ಮಹಿಮರು ಭಗವದ್ಭಾವದ ವೈಭವರಾಗಿ, ಭಗವಂತನ ಗೌರವಸ್ಥಾನರಾಗಿದ್ದರು. ಇವರು ನವವಿಧ ಭಕ್ತಿಯ ಮೂರ್ತಿಮಂತ ಮೂರ್ತಿಯೇ ಆಗಿದ್ದರು ।।೧೯೮।। ಇವರು ನವಖಂಡ ಪೃಥ್ವಿಯ ಅಲಂಕಾರರಾಗಿ ನವನಿಧಿಯ ನಿಜಸಾರರಾಗಿದ್ದರು. ಹಾಗೂ ನವರತ್ನದ ನಿಜಭಂಡಾರವು ಸಾಕಾರಗೊಂಡಿವೆ ಎಂಬುವಂತೆ ಈ ಒಂಭತ್ತು ಮಹಿಮರಾಗಿದ್ದರು ।।೧೯೯।। ಅಥವಾ ಒಂಬತ್ತು ನಾರಾಯಣರು ಇಲ್ಲಿ ಸ್ವತಃ ಪ್ರಗಟರಾಗಿರುವರೋ, ಅಥವಾ ಒಂಬತ್ತು ನೃಸಿಂಹರು ಇಲ್ಲಿ ದೇದೀಪ್ಯಮಾನ ರೂಪದಿಂದ ಬಂದರೋ ಎನ್ನುವಂತಿತ್ತು ।।೨೦೦।। ಅಲ್ಲಿ ಅಗ್ನಿಕುಂಡದಲ್ಲಿ ದಕ್ಷಿಣಾಗ್ನಿ, ಗೋಪತ್ಯಾಗ್ನಿ ಮತ್ತು ಆಹವನಿಯಾಗ್ನಿ ಹೀಗೆ ಮೂರು ಅಗ್ನಿಗಳಿಗೆ ಆವಾಹನ ಮಾಡಿದ್ದರು. ಈ ಮೂರೂ ಅಗ್ನಿಗಳು ಇವರನ್ನು ಕಂಡಾಕ್ಷಣವೇ ಎದ್ದು ನಿಂತವು. ಇವರನ್ನು ಈ ಒಂಬತ್ತು ಭಾಗವತರು ಮಾತ್ರ ನೋಡಿದರು. ಇತರ ಋಷಿಗಳವರಿಗೆ ಯಾರಿಗೂ ಈ ಅಗ್ನಿಗಳು ಕಾಣಿಸಲಿಲ್ಲ ।।೨೦೧।। ಹೀಗಿರುವ ತೇಜಃಪುಂಜ ಮೂರ್ತಿಗಳವರನ್ನು ಕಂಡು ಋತ್ವಿಜರು ಮತ್ತು ಆಚಾರ್ಯರು ಎದ್ದು ನಿಂತರು. ಜನಕರಾಜನು ಮಾತ್ರ ಧಾವಿಸುತ್ತಾ ಇವರನ್ನು ಸ್ವಾಗತಿಸಿದನು. ಹಾಗೂ ಇವರನ್ನು ಸ್ವಾನಂದಪೂರ್ವಕವಾಗಿ ಸತ್ಕರಿಸಿದನು ।।೨೦೨।। ಈತನು ತಕ್ಷಣವೇ ಅವರ ಚರಣಗಳಿಗೆ ಲೋಟಾಂಗಣ ಹಾಕಿ ನಮಸ್ಕರಿಸಿದನು. ಹಾಗೂ ತನ್ನ ಕಿರೀಟವನ್ನು ತೆಗೆದು ಮಸ್ತಕದಿಂದ ಚರಣಗಳಿಗೆ ವಂದಿಸಿದನು ಮತ್ತು ಭಾರೀ ಸತ್ಕಾರದೊಂದಿಗೆ ಅವರನ್ನು ಯಜ್ಞ ಮಂಟಪಕ್ಕೆ ತಂದನು ।।೨೦೩।।

ತ್ಯಾಂತೇ ಜಾಣೋನಿ ಭಗವತ್ಪರ । ವಿದೇಹಾ ಆಹ್ಲಾದ ಥೋರ । ತ್ಯಾಂಚೀ ಪೂಜೇಸೀ ಅತ್ಯಾದರ । ಸ್ವಯೇ ಸಾದರ ಪೈ ರ್ಝಾಲಾ ॥೨೦೪॥ ಶ್ರದ್ಧಾಯುಕ್ತ ಚರಣಕ್ಷಾಲನ । ಧೂಪ ದೀಪ ಸುಮನ ಚಂದನ । ಪೂಜಾ ಮಧುಪರ್ಕವಿಧಾನ । ಕೇಲೇ ಸಂಪೂರ್ಣ ಯಥಾಯೋಗ್ಯ ॥೨೦೫॥

ತಾನ್ ರೋಚಮಾನಾನ್ ಸ್ವರುಚಾ ಬ್ರಹ್ಮಪುತ್ರೋಪಮಾನ್ ನವ । ಪ್ರಪಚ್ಛ ಪರಮಪ್ರೀತಃ ಪ್ರಶ್ರಯಾವನತೋ ನೃಪಃ ॥೨೭॥

ಅರ್ಥ :- ನವ ಯೋಗೇಂದ್ರರು ತಮ್ಮ ಉಜ್ವಲ ಕಾಂತಿಯಿಂದ ಬೆಳಗುತ್ತ ಬ್ರಹ್ಮನ ಪುತ್ರರಾದ ಸನಕಾದಿಕ ಕುಮಾರರಂತೆ ಕಾಣಿಸಿದರು. ರಾಜನು ಪರಮ ಸಂತೋಷದಿಂದ ಅವರಿಗೆ ವಿನಯದಿಂದ ತಲೆಬಾಗಿ ನಮಸ್ಕರಿಸಿದನು. ಆ ಮೇಲೆ ಆ ಮಹಾತ್ಮರನ್ನು ಕುರಿತು ಕೆಲವು ಪ್ರಶ್ನೆಗಳನ್ನು ಕೇಳಲು ಮುಂದಾದನು.

ನಿಜಾಂಗೀಚ್ಯಾ ನಿಜಪ್ರಭಾ । ಅಂಗಾಸೀ ಆಣಿಲೀ ಶೋಭಾ । ಕಾಯ ಬ್ರಹ್ಮವಿದ್ಯೇಚಾ ಗಾಭಾ । ಶೋಭೇ ನವಪ್ರಭಾ ಶೋಭಾಯಮಾನ ॥೨೦೬॥ ನಿಜಹೃದಯೀಚೇ ಬ್ರಹ್ಮಜ್ಞಾನ । ಪರಿಪಾಕೇ ಪ್ರಕಾಶಲೇ ಪೂರ್ಣ । ತೇಚಿ ನಿಜಾಂಗಾ ಮಂಡಣ । ಇತರ ಭೂಷಣ ತ್ಯಾ ನಾಹೀ ॥೨೦೭॥ ಮುಗುಟ ಕುಂಡಲೇ ಕಂಕಣ । ಮೂರ್ಖಾ ಅಂಗೀ ಬಾಣಲೀ ಪೂರ್ಣ । ತೇ ಶೋಭಾ ಲೋಪೂನಿ ಮೂರ್ಖಪಣ । ಬಾಹೇರ ಸಂಪೂರ್ಣ ಪ್ರಕಾಶೇ ॥೨೦೮॥ ತೈಸೇ ನವ್ಹತೀ ಹೇ ಜ್ಞಾನಘನ । ಬ್ರಹ್ಮಪೂರ್ಣತ್ವೇ ವಿರಾಜಮಾನ । ತೇಂಚಿ ತ್ಯಾಂಸೀ ನಿಜಾಂಗಾ ಮಂಡಣ । ಇತರ ಭೂಷಣ ತ್ಯಾ ನಾಹೀ ॥೨೦೯॥ ಬ್ರಹ್ಮಾನುಭವೇ ಪೂರ್ಣತ್ವ ಪೂರ್ಣ । ಇಂದ್ರಿಯದ್ವಾರಾ ವಿರಾಜಮಾನ । ತೇ ತ್ಯಾಂಸೀ ನಿಜಶಾಂತಿಭೂಷಣ । ಮುಗುಟ ಕಂಕಣೇ ತೇ ತುಚ್ಛ ॥೨೧೦॥ ಮಾಗಾ ವಾಖಾಣಿಲೇ ಸನಕಾದಿಕ । ತ್ಯಾ ಸಮಾನ ಕೀ ಅಧಿಕ । ಐಸಾ ವಿಚಾರಿತಾ ಪರಿಪಾಕ । ತ್ಯಾ ಯಾ ವೇಗಳೀಕ ದಿಸೇನಾ ॥೨೧೧॥ ತ್ಯಾಂಚಿ ಯಾಂಚೀ ಏಕ ಗತೀ । ತ್ಯಾಂಚೀ ಯಾಂಚೀ ಏಕ ಸ್ಥಿತೀ । ತ್ಯಾಂಚೀ ಯಾಂಚೀ ಏಕ ಶಾಂತೀ । ಭೇದು ನಿಶ್ಚಿತೀ ಅಸೇನಾ ॥೨೧೨॥ ತ್ಯಾಂಚ್ಯಾಐಸೇ ಹೇ ಸಖೇ ಬಂಧು । ತ್ಯಾಂಚ್ಯಾಐಸಾ ಸಮಾನ ಬೋಧು । ತ್ಯಾಂಚ್ಯಾಐಸಾ ಹಾ ಅನುವಾದು । ಸರ್ವಥಾ ಭೇದು ಅಸೇನಾ ॥೨೧೩॥ ತೇ ಚೌಘೇ ಹೇ ನವ ಜಣ । ಅವಘ್ಯಾ ಏಕಚಿ ಬ್ರಹ್ಮಜ್ಞಾನ । ತ್ಯಾಂಚೀ ಯಾಂಚೀ ಶಾಂತೀ ಸಮಾನ । ಹೇ ವಿದೇಹಾಸೀ ಪೂರ್ಣ ಕಳೂ ಸರಲೇ ॥೨೧೪॥ ಐಸೇ ಪರಿಪೂರ್ಣತ್ವ ಜಾಣೋನೀ । ರಾಜಾ ಸುಖಾವೇ ಸ್ಥಿತಿ ದೇಖೋನೀ । ಮಗ ಅತಿವಿನೀತ ಹೋಊನಿ । ಮೃದುಮಂಜುಳ ವಚನೀ ವಿನವೀತ ॥೨೧೫॥

ಇವರು ಭಗತ್ಪರರಾಗಿದ್ದನ್ನು ಕಂಡು ಜನಕನಿಗೆ ಅತಿಶಯ ಆಹ್ಲಾದವಾಯಿತು ಮತ್ತು ತಾನು ಸ್ವತಃ ಪೂಜೆ ಮಾಡುವ ವ್ಯವಸ್ಥೆಯನ್ನು ಅತಿ ಆದರದಿಂದ ಮಾಡಿದನು ॥೨೦೪॥ ಪರಮ ಶ್ರದ್ಧೆಯಿಂದ ಈತನು ಇವರ ಚರಣಗಳನ್ನು ತೊಳೆದನು. ಹಾಗೂ ಧೂಪ, ದೀಪ, ಗಂಧ, ಪುಷ್ಪ ಇತ್ಯಾದಿ ಸರ್ವ ಸಾಹಿತ್ಯ ಸಹ ಮಧುಪರ್ಕ ವಿಧಾನದಿಂದ ಅವರ ಯಥಾಸಾಂಗ ಪೂಜೆಗೈದನು ॥೨೦೫॥

ನಿಜಾಂಗದ ಸ್ವಯಂಭೂ ತೇಜದಿಂದ ಅವರ ಶರೀರದ ಶೋಭೆಯು ಎದ್ದು ಕಾಣುತ್ತಿತ್ತು. ಅವರ ದೇಹವು ವಿಲಕ್ಷಣ ತೇಜದಿಂದ ಶೋಭಾಯಮಾನವಾಗಿ ಬ್ರಹ್ಮವಿದ್ಯೆಯ ಖಣಿಯಾಗಿತ್ತು ॥೨೦೬॥ ಇವರ ಹೃದಯದ ಬ್ರಹ್ಮಜ್ಞಾನವು ಪರಿಪಕ್ವವಾಗಿ ಪ್ರಕಾಶಮಾನವಾಗಿತ್ತು. ಮತ್ತು ಇದುವೇ ಅವರ ಅಂಗಕ್ಕೆ ಭೂಷಣವಾಗಿತ್ತು. ಇತರ ಯಾವ ಭೂಷಣಗಳು ಇವರಿಗಿದ್ದಿಲ್ಲ ॥೨೦೭॥ ಕಿರೀಟ, ಕುಂಡಲ, ಕಂಕಣಗಳು ಮೂರ್ಖನ ಶರೀರದಲ್ಲಿ ಬೇಕಾದಷ್ಟು ಇದ್ದರೂ ಆ ಅಲಂಕಾರಗಳ ಎಲ್ಲ ಶೋಭೆಯು ಇಲ್ಲದಾಗಿ ಆತನ ಅಂಗದಿಂದ ಮೂರ್ಖತನವೇ ಮಾತ್ರ ಪ್ರಕಟವಾಗುವುದು ॥೨೦೮॥ ಈ ಜ್ಞಾನಘನರು ಹೀಗಿದ್ದಿಲ್ಲ. ಇವರು ಪೂರ್ಣ ಬ್ರಹ್ಮತ್ವದಿಂದ ಶೋಭಿಸುತ್ತಿದ್ದರು. ಇದೇ ಇವರ ಶರೀರದ ಭೂಷಣಗಳಾಗಿದ್ದವು. ಇತರ ಯಾವ ಭೂಷಣಗಳು ಇವರಿಗಿದ್ದಿಲ್ಲ ॥೨೦೯॥ ಇವರು ಬ್ರಹ್ಮಾನುಭವದಿಂದ ಪೂರ್ಣರಾಗಿದ್ದು ಆ ಅನುಭವಗಳು ಇಂದ್ರಿಯಗಳ ದ್ವಾರದಿಂದ ಹೊರಹೊಮ್ಮುತ್ತಿದ್ದವು. ಪೂರ್ಣಾನುಭವದಿಂದ ಬಂದ ಶಾಂತಿಯು ಇವರ ನಿಜ ಭೂಷಣವಾಗಿತ್ತು. ಇದರ ಎದುರಿಗೆ ಕಿರೀಟ ಕುಂಡಲಗಳು ತುಚ್ಛವಾಗುವುವು ॥೨೧೦॥ ಪೂರ್ವದಲ್ಲಿ ಸನಕಾದಿಕರ ವರ್ಣನೆಯನ್ನು ಮಾಡಿರುವುದು. ಅವರ ಸರಿಸಮಾನರು ಇವರಾಗಿರುವರೋ, ಅಥವಾ ಅಧಿಕರಾಗಿರುವರು? ಹೀಗೆ ವಿಚಾರಿಸಲು, ಅವರಲ್ಲಿ ಇವರಲ್ಲಿ ಸ್ವಲ್ಪವೂ ಭೇದವಿಲ್ಲವೆಂದು ತಿಳಿಯಬೇಕು ॥೨೧೧॥ ಅವರ, ಇವರ ಗತಿಯು ಒಂದೇ ಆಗಿರುವುದು. ಅವರ, ಇವರ ಸ್ಥಿತಿಯು ಒಂದೇ ಆಗಿರುವುದು. ಮತ್ತು ಅವರ, ಇವರ ಶಾಂತಿಯು ಒಂದೇ ಆಗಿರುವುದು. ನಿಜವಾಗಿಯೂ ಭೇದ ಎಂಬುದು ಏನೂ ಇಲ್ಲ ॥೨೧೨॥ ಅವರಂತೆ ಇವರೂ ಒಡಹುಟ್ಟಿದ ಅಣ್ಣತಮ್ಮಂದಿರಾಗಿರುವರು. ಅವರಂತೆ ಇವರಿಗೂ ಅದೇ ಬೋಧವು ಸಮಾನವಾಗಿರುವುದು. ಎಲ್ಲ ನಡತೆಗಳು, ಎಲ್ಲ ರೀತಿಗಳು, ಎಲ್ಲ ಆಚರಣೆಗಳು ಅವರಂತೆಯೇ ಇದೆ. ಭೇದವಂತೂ ಇಲ್ಲವೇ ಇಲ್ಲ ॥೨೧೩॥ ಅವರು ನಾಲ್ಕು ಮಹಿಮರು. ಇವರು ಒಂಬತ್ತು ಮಹಿಮರು. ಆದರೆ ಎಲ್ಲರ ಬ್ರಹ್ಮಜ್ಞಾನವು ಒಂದೇ ಆಗಿರುವುದು. ಅವರಲ್ಲಿ, ಇವರಲ್ಲಿ ಶಾಂತಿಯು ಪೂರ್ಣವಾಗಿ ಸಮವಾಗಿರುವುದು. ಹೀಗೆ ಜನಕರಾಜನಿಗೆ ಪರಿಪೂರ್ಣವಾಗಿ ತಿಳಿಯಿತು ॥೨೧೪॥ ಹೀಗಿರುವ ಇವರ ಪೂರ್ಣ ಸ್ಥಿತಿಯನ್ನು ಕಂಡು ರಾಜನಿಗೆ ಅತಿಶಯವಾಗಿ ಸಂತೋಷವಾಯಿತು. ತದನಂತರ ಈತನು ಅತ್ಯಂತ ನಮ್ರನಾಗಿ ಮೃದು ಮಂಜುಳ ವಾಣಿಯಿಂದ ಅವರಲ್ಲಿ ವಿನಂತಿ ಮಾಡಿಕೊಂಡನು ॥೨೧೫॥

ವಿದೇಹ ಉವಾಚ :-

ಮನ್ಯೇ ಭಗವತಃ ಸಾಕ್ಷಾತ್ ಪಾರ್ಷದಾನ್ ವೋ ಮಧುದ್ವಿಷಃ । ವಿಷ್ಣೋರ್ಭೂತಾನಿ ಲೋಕಾನಾಂ ಪಾವನಾಯ ಚರಂತಿ ಹಿ ।೨೮॥

ಅರ್ಥ:- ವಿದೇಹ ರಾಜನು ಹೇಳಿದನು - ಹೇ ಭಗವನ್, ತಾವು ಭಗವಂತನ ಪ್ರತ್ಯಕ್ಷ ಅನುಚರರಾಗಿರುವಿರಿ. ತಮ್ಮಂತಹ ವಿಷ್ಣು ಭಕ್ತರು ಜನರ ಕಲ್ಯಾಣಕ್ಕಾಗಿ ಸರ್ವತ್ರ ಸಂಚಾರ ಮಾಡುವರು ಎಂದು ನಾನು ತಿಳಿದಿದ್ದೇನೆ.

ಸಾರ್ವಭೌಮ ಚಕ್ರವರ್ತೀ । ದೇಹೀ ಅಸೋನಿ ವಿದೇಹಸ್ಥಿತೀ । ತೋ ಜನಕು ಆರ್ಷಭಾಪ್ರತೀ । ಅತಿಪ್ರೀತೀ ವಿನವಿತು ।೨೧೬॥ ತ್ಯಾಂಚ್ಯಾ ಭೆಟೀಸವೇ ಉಲತಲೇ ಸುಖ । ವಿದೇಹಾಸೀ ದೇಹೇವೀಣ ಹರಿಖ । ತೇಣೇ ಹರಿಖೇಕರೂನಿಯಾ ದೇಖ । ಪ್ರೀತಿಪೂರ್ವಕ ವಿನವಿತು ।೨೧೭॥ ತುಮಚೇ ಸಾಮರ್ಥ್ಯ ಪಾಹತಾ ಯೇಥ । ತುಮ್ಹೀ ಈಶ್ವರರೂಪ ಸಮಸ್ತ । ದೇಹಭಾವೇ ತರೀ ಭಗವದ್ಭಕ್ತ । ಜೈಸೇ ಪಾರ್ಷದ ಹರೀಚೇ ।೨೧೮॥ ದೇವೋ ಆಪುಲಾ ಆಪಣ ಭಕ್ತು । ಐಸಾ ಜೋ ಕಾ ಉಪನಿಷದರ್ಥು । ತೋ ಸಾಚ ಕರೂನಿ ವೇದಾರ್ಥು । ನಿಜಪರಮಾರ್ಥು ಅನುಭವಾ ।೨೧೯॥ ''ಶಿವ ಹೋಊನಿ ಶಿವು ಯಜಿಜೇ'' । ಹೇ ಲಕ್ಷಣ ತುಮ್ಹಾಸೀಚ ಸಾಜೇ । ಯೇರೀ ಹೇ ಬೋಲಚಿ ಬೋಲಿಜೇ । ಪರೀ ಬೋಲತೇ ವೋಜೇ ಅರ್ಥ ನ ಲಭೇ ।೨೨೦॥ ವಿಷ್ಣೂನೇ ಸೃಷ್ಟೀ ಜೇ ಜೇ ಸ್ರಜಣೇ । ತೇ ತೇ ತುಮ್ಹೀ ಪವಿತ್ರ ಕರಣೇ । ಮಹೀ ವಿಚರಾಯಾಚೀ ಕಾರಣೇ । ಕೃಪಾಳೂಪಣೇ ದೀನೋದ್ಧಾರಾ ।೨೨೧॥ ತುಮ್ಹೀ ವಿಚರಾ ವಿಶ್ವಕಣವಾ । ಪರೀ ಭೇಟೀ ಹೋಯ ಪ್ರಾಪ್ತಿ ತೇವ್ಹಾ । ಆಜಿ ಲಾಧಲೋ ತುಮಚೀ ಸೇವಾ । ಉದ್ಭಟ ದೈವಾಥಿಲೋ ಮೀ ।೨೨೨॥ ಆಜಿ ಮಾಝೇ ಧನ್ಯ ದೈವ । ಆಜಿ ಮಾಝೇ ಧನ್ಯ ವೈಭವ । ಆಜಿ ಧನ್ಯ ಮೀ ಸರ್ವೀ ಸರ್ವ । ಹೇ ಚರಣ ಅಪೂರ್ವ ಪಾವಲೋ ।೨೨೩॥

ದುರ್ಲಭೋ ಮಾನುಷೋ ದೇಹೋ ದೇಹಿನಾಂ ಕ್ಷಣಭಂಗುರಃ । ತತ್ರಾಪಿ ದುರ್ಲಭಂ ಮನ್ಯೇ ವೈಕುಂಠಪ್ರಿಯದರ್ಶನಂ ।೨೯॥

ಅರ್ಥ:- ಮನುಷ್ಯ ಶರೀರವು ಪ್ರಾಪ್ತವಾಗುವುದು ದುರ್ಲಭವು. ಈ ಶರೀರವು ಪ್ರಾಪ್ತವಾದರೂ ಇದು ಕ್ಷಣಭಂಗುರವಾಗಿರುವುದು. ಈ ಮನುಷ್ಯ ಶರೀರವನ್ನು ಪಡೆದರೂ ವೈಕುಂಠನಾಥನಿಗೆ ಪ್ರಿಯರಾದ ಅತ್ಯಂತ ಶುದ್ಧ ಭಕ್ತರ ದರ್ಶನವು ಅತಿ ದುರ್ಲಭವು.

ಸಕಲ ದೇಹಾಮಾಜೀ ಪಹಾ ಹೋ । ಅತಿದುರ್ಲಭ ಮನುಷ್ಯದೇಹೋ । ತ್ಯಾಚಿಯಾ ಪ್ರಾಪ್ತೀಚಾ ಸಂಭವೋ । ತೋ ಅಭಿಪ್ರಾವೋ ಅತಿದುರ್ಗಮ ।೨೨೪॥ ಸುಕೃತದುಷ್ಕೃತ ಸಮಾನ ಸಮೀ । ತೈ ಪಾವಿಜೇ ಕರ್ಮಭೂಮೀ । ತೇಚಿ ಜೈ ಪಡೇ ವಿಷಮೀ । ತೈ ಸ್ವರ್ಗಗಾಮೀ ಕಾ ನರಕೀ ।೨೨೫॥

ಸಾರ್ವಭೌಮ ಚಕ್ರವರ್ತಿಯಾದ ಮತ್ತು ದೇಹದಲ್ಲಿದ್ದರೂ ವಿದೇಹಸ್ಥಿತಿಯಲ್ಲಿರುವ ಜನಕ ಮಹಾರಾಜನು ಈ ಋಷಭಪುತ್ರರಿಗೆ ಅತಿಪ್ರೇಮದಿಂದ ವಿನಂತಿಸಿದನು ।೨೧೬॥ ಇವರ ಭೇಟಿಯಿಂದ ಜನಕನಿಗೆ ಆನಂದವು ಉಕ್ಕೇರಿತು. ಈ ವಿದೇಹನಿಗೆ ದೇಹವಿಲ್ಲದೇ ಸಂತೋಷವಾಯಿತು ಮತ್ತು ಈ ಸುಖಸಂತೋಷದ ಭರದಲ್ಲಿ ಈತನು ಅವರನ್ನು ಪ್ರೇಮಪೂರ್ವಕವಾಗಿ ವಿನಂತಿಸಿದನು ।೨೧೭॥ ರಾಜನು ಹೇಳಿದನು:- ಇಲ್ಲಿ ನಿಮ್ಮ ಸಾಮರ್ಥ್ಯವನ್ನು ನೋಡಿದರೆ, ನೀವೆಲ್ಲರೂ ಈಶ್ವರಸ್ವರೂಪರಾಗಿರುವಿರಿ. ದೇಹಭಾವದಿಂದ ನೋಡಿದರೆ, ನೀವು ಭಗವಂತನ ಭಕ್ತರಾಗಿರುವಿರಿ. ಶ್ರೀಹರಿಯ ಪ್ರಭಾವಳಿಯ ಸೇವಕರಾಗಿರುವಿರಿ ।೨೧೮॥ ಉಪನಿಷತ್‌ದಲ್ಲಿ ಹೀಗೆ ವರ್ಣಿಸಿದೆ. ದೇವನು ತಾನೇ ತನ್ನ ಭಕ್ತನಾಗಿರುವನು. ಇದು ನಿಮ್ಮಲ್ಲಿ ಮಾತ್ರ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವುದು ।೨೧೯॥ ''ಶಿವನಾಗಿ ಶಿವನ ಪೂಜೆಯನ್ನು ಮಾಡಬೇಕು'' ಈ ಉಪನಿಷತ್ತಿನ ರಹಸ್ಯ ಲಕ್ಷಣವು ನಿಮ್ಮಲ್ಲಿ ಮಾತ್ರ ಶೋಭೆಗೊಂಡಿರುವುದು. ಇತರರು ಇದನ್ನು ಮುಖದಿಂದ ನುಡಿಯುತ್ತಾರೆ. ಆದರೆ ಇವರ ನುಡಿಯಲ್ಲಿ ಯಾವ ಅರ್ಥವೂ ಇರುವುದಿಲ್ಲ ।೨೨೦॥ ಶ್ರೀವಿಷ್ಣು ಸೃಷ್ಟಿಯಲ್ಲಿ ಯಾವ ಯಾವುದನ್ನು ಸೃಷ್ಟಿಸುವನೋ, ಅವುಗಳನ್ನು ಪವಿತ್ರಗೊಳಿಸಲು ಕೇವಲ ದೀನರ ಉದ್ಧಾರಕ್ಕಾಗಿ ನೀವು ಕೃಪೆದೋರಿ ಪೃಥ್ವಿಯಲ್ಲಿ ಸಂಚರಿಸುತ್ತಿರುವಿರಿ ।೨೨೧॥ ನೀವು ಜಗತ್ತಿನ ಕಲ್ಯಾಣಕ್ಕಾಗಿ ಸಂಚರಿಸುತ್ತಿರುವಿರಿ. ಆದರೆ, ಭಾಗ್ಯವು ಉದಯಕ್ಕೆ ಬಂದವರಿಗೆ ಮಾತ್ರ ನಿಮ್ಮ ಭೇಟಿಯಾಗುವುದು. ಇಂದು ನಿಮ್ಮ ಸೇವೆಯು ನನಗೆ ಲಭಿಸಿತು. ಆದ್ದರಿಂದ ನಾನು ನಿಜವಾಗಿಯೂ ಮಹಾಭಾಗ್ಯವಂತನಾಗಿರುವೆನು ।೨೨೨॥ ನನ್ನ ಭಾಗ್ಯವು ಧನ್ಯವಾಯಿತು. ನನ್ನ ವೈಭವವು ಧನ್ಯವಾಯಿತು. ಇಂದು ನನಗೆ ನಿಮ್ಮ ಅಪೂರ್ವ ಚರಣಗಳು ದೊರೆತಿದ್ದಕ್ಕೆ ನಾನು ಸರ್ವತೋಪರಿ ಧನ್ಯನಾಗಿರುವೆನು ।೨೨೩॥

ಅಹೋ! ಇದನ್ನು ಕೇಳಿ ತಿಳಿಯಿರಿ. ಸರ್ವ ದೇಹಗಳಲ್ಲಿ ಮನುಷ್ಯ ದೇಹವು ಅತ್ಯಂತ ದುರ್ಲಭವಾಗಿರುವುದು. ಇದು ಪ್ರಾಪ್ತವಾಗಬೇಕಾದರೆ ಅತ್ಯಂತ ಕಠಿಣವಾಗಿರುವುದು ।೨೨೪॥ ಪುಣ್ಯ ಮತ್ತು ಪಾಪ ಇವು ಎರಡೂ ಸರಿಸಮಾನವಾದಾಗ್ಗೆ ಈ ನರದೇಹವು ಪ್ರಾಪ್ತವಾಗುವುದು. ಪುಣ್ಯ, ಪಾಪಗಳಲ್ಲಿ ಹೆಚ್ಚುಕಡಿಮೆಯಾಯಿತೆಂದರೆ, ಸ್ವರ್ಗಕ್ಕೆ ಹೋಗಬೇಕಾಗುವುದು, ಇಲ್ಲವೇ ನರಕಕ್ಕೆ ಹೋಗಬೇಕಾಗುವುದು ।೨೨೫॥

ಸಮಾನ ಕರ್ಮೀ ನರದೇಹ ಜೋಡೇ । ತರೀ ಸಮಸ್ತಾ ಸಮಬುದ್ಧಿ ನ ಘಡೇ । ತ್ಯಾ ಸಮಾಮಾಜೀ ವಿಷಮ ಗಾಢೇ । ಜೇಣೇ ಪಡೇ ತೇ ಐಕಾ ।೨೨೬॥ ಪಾಪಾಚಾ ಏಕು ಮಹಾಚಿರಾ । ಪುಣ್ಯೇ ಜೋಖಿಣೇ ಚಾರಾಚುರಾ । ಸಮಾನ ಆಲಿಯಾ ತುಳಾಭಾರಾ । ಯೇಣೇ ಜನ್ಮೇ ನರಾ ದೃಢ ಪಾಪಬುದ್ಧೀ ।೨೨೭॥ ವಾಳೂ ಆಣಿ ಸುವರ್ಣ । ಜೋಖಿತಾ ಝಾಲ್ಯಾಹೀ ಸಮಾನ । ಸೋನಿಯಾಲಾಗೀ ವೇಂಚಿತಿ ಧನ । ವಾಳೂ ತೇ ಜಾಣ ನ ಘೇತೀ ಫುಕಟ ।೨೨೮॥ ಏಕಾಚೇ ಪುಣ್ಯ ಅತ್ಯಂತ ಥೋರ । ಪಾಪ ಲಹಾನಸಹಾನ ಏಕತ್ರ ।ಕರೂನಿ ಜೋಖಿತಾ ತುಳಾಭಾರ।ಸಮಾನ ಸಾಚಾರ ಜೈ ಹೋಯ ।೨೨೯॥ ಐಸೇನಿ ಕರ್ಮೇ ಜೇ ಜನ್ಮತೀ । ತ್ಯಾಂಸೀ ಪುಣ್ಯಾವರೀ ಅತಿಪ್ರೀತೀ । ಪುಣ್ಯ ಪಾಪ ದೋನೀ ಝಡತೀ । ತೈ ನಿತ್ಯಮುಕ್ತಿ ಪಾವಿಜೇ ।೨೩೦॥ ಐಸಾ ಅತಿಸೂಕ್ಷ್ಮ ಸಂಕಟೀ । ಮನುಷ್ಯದೇಹೀ ಹೋಯ ಭೇಟೀ । ತೇಥೇಹೀ ಅಭಿಮಾನ ಅತಿ ಉಠೀ । ಧನ ದಾರಾದಿಠೀ ವಿಷಯಾಂಚ್ಯಾ ।೨೩೧॥ ಮನುಷ್ಯದೇಹೀಚೇನಿ ಆಯುಷ್ಯೇ । ವಿಷಯೀ ಸಾಯಾಸ ಕರಿತೀ ಕೈಸೇ । ಅಮೃತ ದೇಊನಿ ಘೇ ಜೈಸೇ । ತಾನ್ಹೇ ಸಾವಕಾತೇ ಮೃಗಜಳ ।೨೩೨॥ ಗಂಧರ್ವನಗರೀಂಚೇ ಠಾಣೇ । ಘೇತಲೀ ದೇಊನಿ ಚಿಂತಾಮಣೀ । ತೈಶೀ ಲಟಿಕಿಯಾಲಾಗೀ ಆಟಣೀ । ವಿಷಯಸಾಧನೀ ನರದೇಹಾ ।೨೩೩॥ ತೋಡೂನಿ ಕಲ್ಪತರೂಂಚೇ ಉದ್ಯಾನ । ಸಾಯಾಸೀ ತೇ ವಾಹೋನಿ ರಾನ । ತೇಥೇ ಸಾಕ್ಷೇಪೇ ಪೇರಿಲೀ ಜಾಣ । ಆಣೂನಿ ಆಪಣ ವಿಜಯಾ ಜೈಶೀ ।೨೩೪॥ ತೈಸೇ ನರದೇಹ ಯೇಊನಿ ನರಾ । ಕರಿತಿ ಆಯುಷ್ಯಾಚಾ ಮಾತೇರಾ । ಪೂರ್ಣ ವ್ಯವಸಾವೋ ಶಿಶ್ನೋದರಾ । ಉಪಹಾಸ ನಿದ್ರಾ ಕಾ ನಿಂದಾ ।೨೩೫॥ ನಿತ್ಯ ಪ್ರಪಂಚಾಚೀ ಕಟಕಟ । ಸದಾ ವಿಷಯಾಂಚೀ ಖಟಪಟ । ಕದಾ ಆರಾಯಿಲ್ಯಾ ಚೋಖಟ । ಸ್ವೇಚ್ಛಾ ಸಾರೀಪಾಟ ಖೇಳಣೇ ।೨೩೬॥ ನಾನಾ ವಿನೋದ ಟವಾಳೀ । ನಿತ್ಯ ವಿಷಯಾಂಚೀ ವಾಚಾಳೀ । ತ್ಯಾಸೀ ಜಪತಾ ರಾಮನಾಮಾವಳೀ । ಪಡೇ ದಾಂತಖಿಳೀ ಅಸಂಭಾವ್ಯ ।೨೩೭॥ ಘರಾ ಆಲೀ ಕಾಮಧೇನು । ದವಡಿತೀ ನ ಪೋಸವೇ ಮ್ಹಣೂನು । ತೇವಿ ಶ್ರೀರಾಮನಾಮ ನುಚ್ಚಾರೂನು । ನಾಡಲಾ ಜನು ನರದೇಹೀ ।೨೩೮॥ ಕರಿತಾ ನರದೇಹೀ ಅಹಂಕಾರ । ತಂವ ತೋ ದೇಹಚಿ ಕ್ಷಣಭಂಗುರ । ದೇಹೀ ದೇಹವಂತಾ ಭಾಗ್ಯ ಥೋರ । ಜೈ ಭಗೆತ್ವರ ಭೇಟತೀ ।೨೩೯॥ ಜ್ಯಾಂಸೀ ಭಗವದ್ಭಕ್ತೀಚೀ ಅತಿ ಗೋಡೀ । ತ್ಯಾಂವರೀ

ಕರ್ಮವು ಸಮಾನವಾದರೆ ಮಾತ್ರ ನರದೇಹವು ಪ್ರಾಪ್ತವಾಗುವುದು. ಆದರೆ ಸರ್ವರ ಬುದ್ಧಿಯು ಒಂದೇ ಸಮಾನವಾಗಿರುವುದಿಲ್ಲ, ಏಕೆಂದರೆ ಈ ಸಾಮ್ಯದಲ್ಲಿ ವಿಷಮತೆ ಸೇರಿಕೊಳ್ಳುವುದು ಹೇಳುವೆ ಕೇಳಿರಿ ।೨೨೬॥ ಪಾಪದ ಒಂದು ದೊಡ್ಡ ಗಂಟನ್ನು ತೆಗೆದುಕೊಂಡು ಒಂದು ಪರಡಿಯಲ್ಲಿ ಹಾಕಿ, ಅದರ ಸರಿಸಮಾನ ತೂಕಕ್ಕಾಗಿ ಸಣ್ಣಪುಟ್ಟ ಪುಣ್ಯಗಳನ್ನು ಇನ್ನೊಂದು ಪರಡಿಯಲ್ಲಿ ಹಾಕಿ ಸರಿ ತೂಕಮಾಡಿಕೊಂಡ ಮನುಷ್ಯನಿಗೆ ಪಾಪ ಬುದ್ಧಿಯಲ್ಲಿ ಮನಸ್ಸಾಗುವುದು ।೨೨೭॥ ಬಂಗಾರ ಮತ್ತು ಉಸುಕನ್ನು ಸರಿ ತೂಕ ಮಾಡಲು ಆ ಬಂಗಾರವನ್ನು ಹಣಕೊಟ್ಟು ಖರೀದಿಸುವರು, ಆದರೆ ಉಸುಕನ್ನು ಪುಕ್ಕಟೆಯಾಗಿಯೂ ತೆಗೆದುಕೊಳ್ಳುವುದಿಲ್ಲ ।೨೨೮॥ ಅದರಂತೆ ಒಬ್ಬ ಮನುಷ್ಯನ ಪುಣ್ಯವು ಬಹಳಿರುವುದು. ಸಣ್ಣಪುಟ್ಟ ಪಾಪಗಳಿಂದ ಪರಡಿಯಲ್ಲಿ ಹಾಕಿ ತೂಗಲು ಎರಡೂ ಸಮವಾಗುವವು ।೨೨೯॥ ಈ ಪ್ರಕಾರ ಕರ್ಮದಿಂದ ಜನ್ಮಕ್ಕೆ ಬಂದ ಇವರಿಗೆ ಪುಣ್ಯಕರ್ಮಗಳಲ್ಲಿ ಅತಿಪ್ರೀತಿ ಇರುತ್ತದೆ. ಪುಣ್ಯ ಮತ್ತು ಪಾಪ ಇವೆರಡೂ ಇಲ್ಲದಾಗಲು ಆಗ ಮಾತ್ರ ನಿತ್ಯಮುಕ್ತಿಯು ದೊರೆಯುವುದು ।೨೩೦॥ ಹೀಗೆ ಬಹಳ ಸಂಕಟಗಳಿಂದ ಮನುಷ್ಯ ದೇಹವು ಸಿಗುತ್ತದೆ, ಆದರೆ ಇಲ್ಲಿ ಕನಕ,ಕಾಂತಾ ರೂಪದಿಂದ ವಿಷಯಗಳ ಅತಿಶಯ ಅಭಿಮಾನವು ಉಂಟಾಗುವುದು ।೨೩೧॥ ನೀರಡಿಸಿದವರು ತಮ್ಮಲ್ಲಿದ್ದ ಅಮೃತವನ್ನು ಕೊಟ್ಟು ಮೃಗಜಲವನ್ನು ಕೊಂಡಂತೆ, ಈ ಮನುಷ್ಯ ದೇಹದ ಅಮೌಲ್ಯ ಆಯುಷ್ಯವನ್ನು ವಿಷಯಗಳಿಗಾಗಿ ಪರಿಶ್ರಮಿಸುತ್ತಲೇ ಇರುವರು ।೨೩೨॥ ತಮ್ಮಲ್ಲಿರುವ ಚಿಂತಾಮಣಿಯನ್ನು ಕೊಟ್ಟು ಆಕಾಶದಲ್ಲಿನ ಗಂಧರ್ವನಗರ, ಅಂದರೆ ಬಿಳಿಮೋಡಗಳನ್ನು ಖರೀದಿಸಿದಂತೆ, ಅಸತ್ಯವಾದ ಈ ವಿಷಯ ಸಾಧನೆಗಳಿಗಾಗಿ ಈ ನರದೇಹವನ್ನು ಹಾಳು ಮಾಡಿಕೊಳ್ಳುವರು ।೨೩೩॥ ಕಲ್ಪತರುವಿನ ತೋಟವನ್ನು ಕೆಲಸಕ್ಕೆ ಬಾರದ ಅರಣ್ಯವೆಂದು ತಿಳಿದು ಅದನ್ನು ಕಿತ್ತು ದೂರ ಎಸೆದು ಅಲ್ಲಿ ಗಾಂಜಾ, ಆಫೀಮ ಗಿಡಗಳನ್ನು ಬೆಳೆಸಿದಂತೆ ।೨೩೪॥ ಜೀವಿಗಳು ನರದೇಹಕ್ಕೆ ಬಂದು ತಮ್ಮ ಆಯುಷ್ಯವನ್ನು ನಾಶಮಾಡಿಕೊಳ್ಳುವರು. ಶಿಶ್ನೋದರಪರಾಯಣರಾಗಿ ದಿನಗಳೆಲ್ಲ ಕಳೆಯುವರು. ಉಪಹಾಸ, ಚೇಷ್ಟೆ, ನಿಂದೆ ಅಥವಾ ನಿದ್ರೆ ಇವೇ ಇವರ ಉದ್ಯೋಗಗಳಾಗಿರುವುವು ।೨೩೫॥ ಪ್ರತಿನಿತ್ಯವೂ ಪ್ರಪಂಚದ್ದೇ ಕಟಕಟಿಯು, ವಿಷಯಗಳ ಖಟಪಟಿಯು. ಅದರಲ್ಲಿ ವೇಳೆಯನ್ನು ಸಾಧಿಸಿ ಕೃತ್ರಿಮ ಆಟಗಳನ್ನು ಆಡುವುದು ।೨೩೬॥ ವಿವಿಧ ತಮಾಷೆಗಳನ್ನು ಮಾಡುವುದು, ಯಾವಾಗಲೂ ವಿಷಯಗಳನ್ನೇ ಬಡಬಡಿಸುವುದು, ಇಂಥವರಿಗೆ ರಾಮನಾಮವನ್ನು ಜಪಿಸಬೇಕೆಂದರೆ, ಬಾಯಿಯೇ ಬಂದಾಗುವುದು ।೨೩೭॥ ಕಾಮಧೇನು ಮನೆಗೆ ಬಂದರೆ ಅದನ್ನು ಜೋಪಾನ ಮಾಡುವುದು ಆಗುವುದಿಲ್ಲವೆಂದು ಅದನ್ನು ಹೊಡೆದು ಹೊರ ದೂಡುವಂತೆ, ಶ್ರೀರಾಮನ ಜಪವನ್ನು ಮಾಡದಿದ್ದರೆ, ನರದೇಹಕ್ಕೆ ಬಂದದ್ದು ಪುಕ್ಕಟ್ಟೆ ಹೋಗುವುದು ।೨೩೮॥ ಈ ದೇಹದ ಅಹಂಕಾರವನ್ನು ಧರಿಸಿಕೊಂಡರೆ, ಇದು ಮೂಲತಃ ಕ್ಷಣಭಂಗುರವಾಗಿರುವುದು. ಇಲ್ಲಿ ಭಗವಂತನಲ್ಲಿ ಏಕರೂಪರಾಗಿರುವ ಪ್ರೇಮಿ ಭಕ್ತರ ಭೇಟಿಯಾಗುವುದು ಪರಮ ಭಾಗ್ಯದ ಲಕ್ಷಣವಾಗಿರುವುದು ।೨೩೯॥

ಭಗವಂತಾಚೀ ಆವಡೀ । ತ್ಯಾಂಚೀ ಭೇಟೀ ತೈ ಹೋಯ ರೋಕಡೀ । ಜೈ ಪುಣ್ಯಾಚ್ಯಾ ಕೋಡೀ ತಿಷ್ಠತೀ ॥೨೪೦॥ ಜ್ಯಾಂಚಿಯಾ ಆವಡೀಚ್ಯಾ ಲೋಭಾ । ಭಗವಂತು ಪಾಲಟೇ ಆಲಾ ಗರ್ಭಾ । ದಶಾವತಾರಾಂಚೀ ಶೋಭಾ । ಜಾಹಲೀ ಪದ್ಮನಾಭಾ ಜ್ಯಾಂಚೇನಿ ॥೨೪೧॥ ಐಸೇ ಕೃಷ್ಣಕೃಪಾಸಮಾರಂಭೇ । ಜೇ ಭಗವಂತಾಚೇ ವಾಲಭೇ । ತ್ಯಾಂಚೀ ಭೇಟೀ ತೈಂಚಿ ಲಾಭೇ । ಜೈ ಭಾಗ್ಯೇ ಸುಲಭೇ ಪೈಹೋತೀ ॥೨೪೨॥ ನಿಷ್ಕಾಮತಾ ನಿಜದೃಷ್ಟೀ । ಅನಂತ ಪುಣ್ಯಕೋಟ್ಯಾನುಕೋಟೀ । ರೋಕಡ್ಯಾ ಲಾಭತೀ ಪಾಠೋವಾಠೀ । ತೈ ಹೋಯ ಭೇಟೀ ಹರಿಪ್ರಿಯಾಂಚೀ ॥೨೪೩॥ ವ್ಯಾಘ್ರಸಿಂಹಾಂಚೇ ದೂಧ ಜೋಡೇ । ಚಂದ್ರಾಮೃತಹೀ ಹಾತಾ ಚಢೇ । ಪರೀ ಹರಿಪ್ರಿಯಾಂಚೀ ಭೇಟೀ ನಾತುಡೇ । ದುರ್ಲಭ ಭಾಗ್ಯ ಗಾಢೇ ಮನುಷ್ಯಾ ॥೨೪೪॥ ವ್ಯಾಘ್ರಸಿಂಹದುಧಾಸಾಠೀ । ಅತಿಸಬಳತಾ ಜೋಡೇ ಪುಷ್ಟೀ । ಪರೀ ಜನ್ಮಮರಣಾಂಚೀ ತುಟೀ । ದುಧಾಸಾಠೀ ಕದಾ ನವ್ಹೇ ॥೨೪೫॥ ಮ್ಹಣತೀ ಚಂದ್ರಾಮೃತ ಜೋ ಆರೋಗೀ । ತೋ ಹೋಯ ನಿತ್ಯ ನಿರೋಗೀ । ಮುಖ್ಯ ಚಂದ್ರಚಿ ಕ್ಷಯರೋಗೀ । ತ್ಯಾಚೇ ಅಮೃತ ನಿರೋಗೀ ಕರೀ ಕೇವೀ ॥೨೪೬॥ ವ್ಯಾಘ್ರಸಿಂಹದುಗ್ಧಾಚೇ ಶಕ್ತೀ । ಪ್ರಾಣೇ ಜೈ ಅಜರಾಮರ ಹೋತೀ । ತೈ ತೇಣೇ ದುಗ್ಧೇ ಜ್ಯಾಂಚೀ ಉತ್ಪತ್ತೀ । ತೇ ಕಾ ಮರತೀ ವ್ಯಾಘ್ರಸಿಂಹ ॥೨೪೭॥ ಜೈ ಹರಿಭಕ್ತಾಂಚೀ ಭೇಟೀ ಘಡೇ । ತೈ ನ ಬಾಧೀ ಸಂಸಾರಸಾಂಕಡೇ । ಜನ್ಮಮರಣ ಸಮೂಳೀ ಉಡೇ । ತ್ಯಾಂಚೀ ಭೇಟೀ ಆತುಡೇ ಅತಿಭಾಗ್ಯೇ ॥೨೪೮॥ ಆಜಿ ಮೀ ಭಾಗ್ಯೇ ಸಮಾನ ಪೂರ್ಣ । ಲಾಧಲೋ ತುಮಚೇ ದರ್ಶನ । ತರೀ "ಆತ್ಯಂತಿಕ ಕ್ಷೇಮ" ಕೋಣ । ತೇ ಕೃಪಾ ಕರೂನ ಮಜ ಸಾಂಗಾ ॥೨೪೯॥

ಅತ ಆತ್ಯಂತಿಕಂ ಕ್ಷೇಮಂ ಪೃಚ್ಛಾಮೋ ಭವತೋಽನಘಾಃ । ಸಂಸಾರೇಽಸ್ಮಿನ್ ಕ್ಷಣಾರ್ಧೋಽಪಿ ಸತ್ಸಂಗಃ ಶೇವಧಿರ್ನೃಣಾಮ್ ॥೩೦॥

ಅರ್ಥ:- ಆದ್ದರಿಂದ, ಹೇ ಪಾಪರಹಿತರೇ, ಅತ್ಯುನ್ನತವಾದ ಒಳಿತು ಯಾವುದೆಂದು ದಯವಿಟ್ಟು ನನಗೆ ಹೇಳಿ. ಜನನ - ಮರಣಗಳಿಂದ ತುಂಬಿದ ಈ ಜಗತ್ತಿನಲ್ಲಿ ಶುದ್ಧ ಭಕ್ತರೊಂದಿಗೆ ಅರೆಕ್ಷಣ ಸಹವಾಸ ಮಾಡಿದರೂ ಅದು ಅಮೂಲ್ಯವಾದ ನಿಧಿಯೇ ಆಗುತ್ತದೆ.

ಮ್ಹಣೋ ತುಮ್ಹೀ ನಿಷ್ಪಾಪ ನಿರ್ಮಳ । ತಂವ ತುಮಚೇನಿ ದರ್ಶನೇ ತತ್ಕಾಳ । ನಾಸತೀ ಸಕಳ ಕಲಿಮಳ । ಐಸೇ ನಿಜನಿರ್ಮಳ ತುಮ್ಹೀ ಸರ್ವ ॥೨೫೦॥ ಸ್ನಾನ ಕೇಲಿಯಾ ಗಂಗಾ । ಪವಿತ್ರ ಕರೀ ಸಕಳ ಜಗಾ । ತೇ ಗಂಗಾಹೀ ನಿಜಪಾಪಭಂಗಾ । ತುಮಚೇ ಚರಣಸಂಗಾ ವಾಂಛೀತ ॥೨೫೧॥

ಭಗವದ್ಭಕ್ತಿಯಲ್ಲಿ ಅತ್ಯಂತ ಪ್ರೇಮವು ಇದ್ದರೆ, ಅವರಲ್ಲಿ ಭಗವಂತನ ಪ್ರೇಮವೂ ಅತ್ಯಂತವಾಗಿರುವುದು. ಇಂತಹ ಭಗವದ್ಭಕ್ತರ ಪ್ರತ್ಯಕ್ಷ ಭೇಟಿಯಾಗಬೇಕಾದರೆ, ಕೋಟ್ಯಾವಧಿ ಪುಣ್ಯಗಳು ಬಂದು ನಿಲ್ಲಬೇಕಾಗುವುದು ॥೨೪೦॥ ಇವರ ಪ್ರೇಮದ ಲೋಭದಿಂದಲೇ ಭಗವಂತನು ತನ್ನ ನಿಜನಿರ್ಗುಣ ರೂಪವನ್ನು ಬದಲಾಯಿಸಿ ಜನ್ಮ ಧರಿಸಿದನು. ಇದೇ ಕಾರಣದಿಂದ ಪದ್ಮನಾಭನಿಗೆ ದಶಾವತಾರದ ಶೋಭೆಯು ಪ್ರಾಪ್ತವಾಯಿತು ॥೨೪೧॥ ಕೃಷ್ಣಕೃಪೆಯ ಬಲದಿಂದಲೇ ಆತನ ಪ್ರಿಯಭಕ್ತರಾಗುವರು. ಅಂಥವರ ಭೇಟೀಯಾಗಬೇಕಾದರೆ, ಭಾಗ್ಯದ ಉದಯವಾಗಬೇಕಾಗುವುದು ॥೨೪೨॥ ಮನದಲ್ಲಿ ನಿಷ್ಕಾಮತೆ ಇರಬೇಕು, ಆತ್ಮಸ್ವರೂಪದಲ್ಲಿ ದೃಷ್ಟಿ ಇರಬೇಕು ಮತ್ತು ಕೋಟ್ಯಾನುಕೋಟೀ ಪುಣ್ಯಗಳು ಬೆನ್ನುಹತ್ತಿ ಮುಂದೆ ಬಂದು ನಿಲ್ಲಬೇಕು. ಆಗ ಮಾತ್ರ ಹರಿಪ್ರಿಯರ ಭೇಟಿಯಾಗುವುದು ॥೨೪೩॥ ಹುಲಿಯ ಅಥವಾ ಸಿಂಹದ ಹಾಲು ಸಿಗಬಹುದು. ಚಂದ್ರಾಮೃತವೂ ಸಹ ಕೈಗೆ ಹತ್ತಬಹುದು. ಆದರೆ ಹರಿಪ್ರಿಯರ ಭೇಟಿಯು ಮಾತ್ರ ಆಗಲಾರದು. ಅದಕ್ಕಾಗಿ ದುರ್ಲಭವಾದ ಮಹಾ ಭಾಗ್ಯವು ಬೇಕಾಗುವುದು ॥೨೪೪॥ ಹುಲಿಯ ಅಥವಾ ಸಿಂಹದ ಹಾಲಿನಿಂದ ಮನುಷ್ಯನು ಪ್ರಬಲನು ಹಾಗೂ ಪುಷ್ಟನಾಗಬಹುದು. ಆದರೆ, ಆ ಹಾಲಿನಿಂದ ಜನ್ಮಮರಣಗಳು ಮಾತ್ರ ತಪ್ಪಲಾರವು ॥೨೪೫॥ ಚಂದ್ರಾಮೃತವನ್ನು ಸೇವಿಸಿದವರು ನಿತ್ಯ ನಿರೋಗಿ ಆಗುವರೆಂದು ಹೇಳುವರು. ಆದರೆ ಮೊದಲೇ ಚಂದ್ರನು ಕ್ಷಯರೋಗಿಯಾಗಿರುವನು. ಹಾಗಾದಲ್ಲಿ ಆತನ ಅಮೃತವು ಇನ್ನೊಬ್ಬರನ್ನು ನಿರೋಗಿಯನ್ನಾಗಿ ಮಾಡಲು ಹೇಗೆ ಸಾಧ್ಯ? ॥೨೪೬॥ ಹುಲಿಯ ಮತ್ತು ಸಿಂಹದ ಹಾಲಿನಿಂದ ಪ್ರಾಣಿಗಳು ಅಜರಾಮರವಾಗಿದ್ದರೆ, ಅದೇ ಹಾಲಿನಿಂದ ಉತ್ಪನ್ನಗೊಳ್ಳುವ ಆ ಹುಲಿ, ಸಿಂಹಗಳು ಏಕೆ ಸಾಯುತ್ತವೆ? ॥೨೪೭॥ ಆದ್ದರಿಂದ, ಹರಿಭಕ್ತರ ಭೇಟಿಯಾಯಿತೆಂದರೆ, ಆಗ ಸಂಸಾರದ ಸಂಕಟಗಳು ಸರಿದು ಹೋಗುವುವು. ಜನ್ಮಮರಣಗಳು ಸಮೂಲವಾಗಿ ಇಲ್ಲದಾಗುವುವು. ಅದಕ್ಕಾಗಿ ಅವರ ಭೇಟಿಯಾಗಲು ಅತ್ಯಂತ ಮಹಾಭಾಗ್ಯವು ಬೇಕಾಗುವುದು ॥೨೪೮॥ ಇಂದು ಈ ಎಲ್ಲ ಭಾಗ್ಯಗಳು ನನ್ನ ಪಾಲಿಗೆ ಬಂದಿರುವುವು. ಕಾರಣ ನನಗೆ ನಿಮ್ಮ ದರ್ಶನವು ಲಭಿಸಿತು. ಆದ್ದರಿಂದ ''ಅತ್ಯಂತಿಕ ಕ್ಷೇಮ'' ಎಂದರೆ ಏನು? ಇದನ್ನು ಕೃಪೆಮಾಡಿ ನನಗೆ ಹೇಳಿರಿ ॥೨೪೯॥

ತಮಗೆ ನಿಷ್ಪಾಪರು,ನಿರ್ಮಲರು ಎಂದು ಹೇಳಬೇಕೆಂದರೆ, ನಿಮ್ಮ ದರ್ಶನಮಾತ್ರದಿಂದ ಸರ್ವ ಕಲಿಮಲವು ತತ್ಕಾಲದಲ್ಲಿ ಲಯಹೊಂದುವುದು. ಹೀಗೆ ನೀವೆಲ್ಲರೂ ನಿಜವಾದ ಪವಿತ್ರರೂ,ಪಾವನರೂ ಆಗಿರುವಿರಿ ॥೨೫೦॥ ಸ್ನಾನಮಾತ್ರದಿಂದ ಗಂಗೆಯು ಸರ್ವ ಪಾಪಗಳನ್ನು ನಾಶಗೊಳಿಸುವಳು . ಆದರೆ ಆ ಗಂಗೆಯು ತನಗೆ ಒದಗಿದ ಸರ್ವ ಪಾಪಗಳನ್ನು ನಾಶಗೊಳಿಸಲು ಸ್ವತಃ ತಮ್ಮ ಚರಣಗಳ ಸಂಗದ ಇಚ್ಛೆ ಮಾಡುವಳು ॥೨೫೧॥

ತುಮಚೀ ದರ್ಶನಸಂಗ - ಚಿದ್ಗಂಗಾ । ಅತ್ಯಂತ ದಾಟುಗೀ ಮಾಜೀ ಜಗಾ । ದರ್ಶನಮಾತ್ರೇ ನೇ ಭವ ಭಂಗಾ । ಜನ್ಮ ಮರಣ ಪೈ ಗಾ ಮಗ ಕೈಚೇ ॥೨೫೨॥ ತೇಥೇ ಕಾಯಸಾ ಗಂಗೇಚಾ ಪಡಿಪಾಡು । ನಾಹೀ ತೀರ್ಥಮಹಿಮೇಸೀ ಪವಾಡು । ತೀರ್ಥಾ ಭವದೋಷ ಅವಘಡು । ತ್ಯಾಂಚಾ ಕರೀ ನಿವಾಡು ದೃಷ್ಟಿಸಂಗೇ ॥೨೫೩॥ ಐಸೀ ಪವಿತ್ರತಾ ಪ್ರಬಳ । ದೃಷ್ಟಿಉತ್ಸಂಗೀ ವಾಢವಾ ಸಕಳ । ಆಜಿ ಝಾಲೋ ಮೀ ಅತಿನಿರ್ಮಳ । ತುಮ್ಹೀ ದೀನದಯಾಳ ಮೀನಲೇತಿ ॥೨೫೪॥ ಐಸೇ ಪವಿತ್ರ ಆಣಿ ಕೃಪಾಮೂರ್ತಿ । ಭಾಗ್ಯೇ ಲಾಧಲೋ ಹೇ ಸಂಗತೀ । ಸತ್ಸಂಗಾಚೀ ನಿಜಖ್ಯಾತೀ । ಸಾಂಗತಾ ಶ್ರುತಿ ಮೌನಾವಲ್ಯಾ ॥೨೫೫॥ ಬ್ರಹ್ಮ ನಿರ್ಧರ್ಮ ನೇಣೇ ನಿಜಧರ್ಮಾ । ಸಾಧುಮುಖೇ ಬ್ರಹ್ಮತ್ವ ಯೇ ಬ್ರಹ್ಮಾ । ತ್ಯಾ ಸತ್ಸಂಗಾಚಾ ಮಹಿಮಾ । ಅತಿಗರಿಮಾ ನಿರುಪಮ ॥೨೫೬॥ ಸತ್ಸಂಗ ಮ್ಹಣೋ ನಿಧೀಸಮಾನ । ನಿಧಿ ಜೋಡಲ್ಯಾ ಹಾರಪೇ ಜಾಣ । ಸತ್ಸಂಗಾಚೇ ಮಹಿಮಾನ । ಸಾಧಕಾ ಸಂಪೂರ್ಣ ಸದ್ರೂಪ ಕರೀ ॥೨೫೭॥ ನಿಧಿ ಸಾಂಪಡಲಿಯಾ ಸಾಂಗ । ಅತ್ಯಂತ ವಾಢೇ ವಿಷಯಭೋಗ । ತೈಸಾ ನವ್ಹೇ ಜೀ ಸತ್ಸಂಗ । ನಿರ್ವಿಕ್ಷಯೇ ಚಾಂಗ ಸುಖದಾತಾ ॥೨೫೮॥ ಇಂದ್ರಿಯಾವೀಣ ಸ್ವಾನಂದು । ವಿಷಯಾವೀಣ ಪರಮಾನಂದು । ಐಸಾ ಕರಿತೀ ನಿಜಬೋಧು । ಅಗಾಧ ಸಾಧು ನಿಜಮಹಿಮಾ ॥೨೫೯॥ ನಿಮಿಷಾರ್ಧ ಹೋತಾ ಸತ್ಸಂಗ । ತೇಣೇ ಸಂಗೇ ಹೋಯ ಭವಭಂಗ । ಯಾಲಾಗೀ ಸತ್ಸಂಗಾಚೇ ಭಾಗ್ಯ । ಸಾಧಕ ಸಭಾಗ್ಯ ಜಾಣತೀ ॥೨೬೦॥ ಸಂತಚರಣೀ ಜ್ಯಾಂಚಾ ಭಾವೋ । ಭಾವೇ ತುಷ್ಟತೀ ಸಂತ ಸ್ವಯಮೇವೋ । ಸಂತಸನ್ನಿಧಿಮಾತ್ರೇ ಪಹಾವೋ । ಸಂಸಾರ ವಾವೋ ಸ್ವಯೇ ಹೋಯ ॥೨೬೧॥ ನಾನಾ ವಿಕಾರ ವಿಷಯವಿಧೀ । ಸಂಸಾರು ಸಬಳತ್ವೇ ಬಾಧೀ । ತ್ಯಾ ಸಂಸಾರಾಚೀ ಅವಧೀ । ಜಾಣ ತ್ರಿಶುದ್ಧೀ ಸತ್ಸಂಗ ॥೨೬೨॥ ದೀಪಾಚಿಯೇ ಸಂಗಪ್ರಾಪ್ತೀ । ನಿಃಶೇಷ ಕಾಪುರತ್ವಾಚೀ ಶಾಂತೀ । ತೇವೀ ಝಾಲಿಯಾ ಸತ್ಸಂಗತೀ । ಸಂಸಾರನಿವೃತ್ತಿ ಕ್ಷಣಾರ್ಧೇ ॥೨೬೩॥ ತೇ ತುಮಚೀ ಸತ್ಸಂಗತೀ । ಭಾಗ್ಯೇ ಪಾವಲೋ ಅವಚಿತೀ । "ಆತ್ಯಂತಿಕ ಕ್ಷೇಮ" ಕೈಸಾ ರೀತೀ । ಪ್ರಾಣೀ ಪಾವತೀ ತೇ ಸಾಂಗಾ ॥೨೬೪॥ ಆತ್ಯಂತಿಕ ಕ್ಷೇಮಾಚೇ ವರ್ಮ । ಜರೀ ಮ್ಹಣಾಲ ಭಾಗವತಧರ್ಮ । ತ್ಯಾ ಧರ್ಮಾಚಾ ಅನುಕ್ರಮ । ಸಾಂಗ ಸುಗಮ ಸಾಂಗಾ ಜೀ ॥೨೬೫॥

ನಿಮ್ಮ ದರ್ಶನದ ಲಾಭವೇ ಚಿತ್ಸ್ವರೂಪ ಗಂಗೆಯಾಗಿದೆ. ಇದು ಜಗತ್ತಿನಲ್ಲಿ ಅತ್ಯಂತ ಸಮರ್ಥವಾಗಿದೆ. ಕೇವಲ ದರ್ಶನ ಮಾತ್ರದಿಂದಲೇ ಸಂಸಾರವು ಭಂಗವಾಗುವುದು. ಅಂದಮೇಲೆ ಜನ್ಮ ಮರಣಗಳು ಎಲ್ಲಿಯವು? ॥೨೫೨॥ ಈ ತಮ್ಮ ದರ್ಶನದ ಮುಂದೆ ಗಂಗೆಯ ಯಾವ ಪಾಡು? ತೀರ್ಥಗಳ ಮಹಿಮೆಗಳು ಸಹ ಪ್ರತಿಷ್ಠೆಗೊಳ್ಳಲಾರವು. ತೀರ್ಥಗಳಿಂದ ಸಂಸಾರದ ದೋಷಗಳು ಸರಿಯಲಾರವು. ತಮ್ಮ ದೃಷ್ಟಿಸಂಗ ಮಾತ್ರದಿಂದ ಸಂಸಾರದ ನಾಶವಾಗುವುದು ॥೨೫೩॥ ಈ ಪ್ರಕಾರವಾಗಿ ತಾವು ಅತ್ಯಂತ ಪವಿತ್ರತೆಯನ್ನು ತಮ್ಮ ಕೃಪಾದೃಷ್ಟಿ ಮಾತ್ರದಿಂದ ಬೆಳೆಸುವಿರಿ. ನಾನು ಮಾತ್ರ ಇಂದು ಅತ್ಯಂತ ಪ್ರವಿತ್ರನಾಗಿರುವೆನು. ಏಕೆಂದರೆ, ದೀನದಯಾಳುಗಳಾದ ತಾವು ನನಗೆ ದೊರಕಿರುವಿರಿ ॥೨೫೪॥ ಇಂತಹ ಪವಿತ್ರರಾದ, ಕೃಪಾಮೂರ್ತಿಗಳಾದ ನಿಮ್ಮ ಸಂಗತಿಯು ನನಗೆ ನನ್ನ ಭಾಗ್ಯದಿಂದಲೇ ಪ್ರಾಪ್ತವಾಯಿತು. ಸತ್ಸಂಗತಿಯ ಮಹಿಮೆಯನ್ನು ವರ್ಣಿಸಲು ಶ್ರುತಿಯು ಸಹ ಮೌನವಾಗುವುದು ॥೨೫೫॥ ಬ್ರಹ್ಮನು ಸ್ವತಃ ನಿಜಧರ್ಮವನ್ನು ತಿಳಿದಿದ್ದಿಲ್ಲ. ಸಾಧು ಮುಖದಿಂದಲೇ ಬ್ರಹ್ಮನಿಗೆ ಬ್ರಹ್ಮತ್ವವು ಪ್ರಾಪ್ತಿವಾಯಿತು. ಈ ಸತ್ಸಂಗತಿಯ ಮಹಿಮೆಯು ಬಹು ಗರಿಷ್ಠವಾಗಿದೆ, ನಿರುಪಮವಾಗಿದೆ ॥೨೫೬॥ ಸತ್ಸಂಗತಿಯನ್ನು ದ್ರವ್ಯದ ನಿಧಿಗೆ ಹೋಲಿಸಿದರೆ, ಸಿಕ್ಕ ದ್ರವ್ಯವು ಕಳೆದು ಹೋಗುವುದು. ಆದರೆ ಸತ್ಸಂಗತಿಯ ಮಹಿಮೆಯು ಹೇಗಿದೆ ಎಂದರೆ, ಸಾಧಕರಿಗೆ ಸಂಪೂರ್ಣವಾಗಿ ಸದ್ರೂಪರನ್ನಾಗಿ ಮಾಡುವುದು ॥೨೫೭॥ ದ್ರವ್ಯದ ಉತ್ತಮ ನಿಧಿಯು ದೊರೆಯಿತೆಂದರೆ, ಅದರಿಂದ ವಿಷಯ ಭೋಗಗಳು ಬೆಳೆಯುವುವು. ಆದರೆ, ಮಹಾರಾಜರೇ, ಸತ್ಸಂಗವು ಮಾತ್ರ ಹಾಗಿರುವುದಿಲ್ಲ. ಅದು ನಿರ್ವಿಷಯವಾಗಿ ಅತಿಶಯ ಸುಖವನ್ನು ಕೊಡುವಂತಹದ್ದಾಗಿದೆ ॥೨೫೮॥ ಇಂದ್ರಿಯಗಳಿಲ್ಲದೇ ಸ್ವಾನಂದವು ಮತ್ತು ವಿಷಯಗಳಿಲ್ಲದೇ ಪರಮಾನಂದವು ಪ್ರಾಪ್ತವಾಗುವುದು. ಹೀಗೆ ಸಾಧುಗಳ ಬೋಧೆಯಾಗಿರುವುದು. ಆದ್ದರಿಂದ ಸಾಧುಗಳ ಮಹಿಮೆಯು ಅಗಾಧವಾಗಿದೆ ॥೨೫೯॥ ಸತ್ಸಂಗವನ್ನು ಅರ್ಧ ನಿಮಿಷ ಸಾಧಿಸಿದರೆ ಸಾಕು, ಅದರಿಂದ ಸಂಸಾರದ ಭಂಗವಾಗುವುದು. ಆದ್ದರಿಂದ ಸತ್ಸಂಗತಿಯ ಭಾಗ್ಯವನ್ನು ಭಾಗ್ಯವಂತರಾದ ಸಾಧಕರು ಮಾತ್ರ ಅರಿಯುವರು ॥೨೬೦॥ ಸಂತರ ಚರಣಗಳಲ್ಲಿ ಭಾವವನ್ನಿಟ್ಟವರಿಗೆ ಸಂತರು ಅವರಲ್ಲಿ ಈ ಭಾವದಿಂದಲೇ ಸ್ವತಃ ಸಂತುಷ್ಟರಾಗುವರು. ಸಂತರ ಕೇವಲ ಸನ್ನಿಧಿ ಮಾತ್ರದಿಂದಲೇ ಸಂಸಾರವು ತನ್ನಷ್ಟಕ್ಕೆ ತಾನೇ ಇಲ್ಲದಾಗುವುದು ॥೨೬೧॥ ನಾನಾ ಪ್ರಕಾರದ ವಿಕಾರಗಳು, ವಿಷಯಗಳ ವಿಸ್ತಾರಗಳು ಹೀಗೆ ಅನೇಕ ರೀತಿಯಲ್ಲಿ ಸಂಸಾರವು ತೀವ್ರವಾಗಿ ಬಾಧಿಸುವುದು. ಈ ಸಂಸಾರದ ಬಾಧೆಯನ್ನು ನಾಶಗೊಳಿಸಲು ಸತ್ಸಂಗವೇ ರಾಮಬಾಣ ಉಪಾಯವಾಗಿರುವುದು ॥೨೬೨॥ ದೀಪದ ಸಂಗತಿಯಾಯಿತೆಂದರೆ ಕರ್ಪೂರದ ಕರ್ಪೂರತ್ವವು ಉಳಿಯಲಾರದು. ಅದರಂತೆ ಸತ್ಸಂಗತಿಯು ಪ್ರಾಪ್ತವಾದರೆ ಕ್ಷಣಾರ್ಧದಲ್ಲಿ ಸಂಸಾರದ, ಅಂದರೆ ಜನ್ಮ ಮರಣದ ನಿವೃತ್ತಿಯಾಗುವುದು ॥೨೬೩॥ ಇಂತಹ ಈ ನಿಮ್ಮ ಸಂಗತಿಯು ಇಂದು ನನಗೆ ಸುದೈವದಿಂದ ಆಕಸ್ಮಿಕವಾಗಿ ದೊರೆತಿರುವುದು. ಆದ್ದರಿಂದ ''ಆತ್ಯಂತಿಕ ಕ್ಷೇಮ'' ಅಂದರೆ ಪ್ರಾಣಿಗಳಿಗೆ ಶಾಶ್ವತ ಕಲ್ಯಾಣವು ಯಾವುದರಿಂದ ದೊರಕುವುದು? ಇದನ್ನು ಹೇಳಿರಿ ॥೨೬೪॥ ಭಾಗವತಧರ್ಮವೇ ಆತ್ಯಂತಿಕ ಕ್ಷೇಮದ ಮರ್ಮ ಎಂದಾದರೆ, ಮಹಾರಾಜರೇ, ಆ ಧರ್ಮದ ಅನುಕ್ರಮವನ್ನು ಸುಗಮಗೊಳಿಸಿ ನನಗೆ ತಿಳಿಸಿ ಹೇಳಿರಿ ॥೨೬೫॥

ಧರ್ಮಾನ್ ಭಾಗವತಾನ್ ಬ್ರೂತ ಯದಿ ನಃ ಶ್ರುತಯೇ ಕ್ಷಮಮ್ ।
ಯೈಃ ಪ್ರಸನ್ನ ಪ್ರಪನ್ನಾಯ ದಾಸ್ಯತ್ಯಾತ್ಮಾನಮಪ್ಯಜಃ ।೩೧॥

ಅರ್ಥ: ನಾವು ಶ್ರವಣ ಮಾಡಲಿಕ್ಕೆ ಅಧಿಕಾರಿಯಾಗಿದ್ದರೆ ಮಾತ್ರ ಕೃಪೆಮಾಡಿ ಭಾಗವತ ಧರ್ಮದ ಉಪದೇಶವನ್ನು ಮಾಡಿರಿ. ಕಾರಣ, ಜನ್ಮಾದಿ ವಿಕಾರರಹಿತ ಏಕರಸ ಭಗವಾನ ಶ್ರೀಕೃಷ್ಣನು ಪ್ರಸನ್ನನಾಗಿ ಆ ಧರ್ಮವನ್ನು ಪಾಲನೆ ಮಾಡುವ ಶರಣಾಗತ ಭಕ್ತರಿಗೆ ತನ್ನ ಸ್ವರೂಪದ ಸಮರ್ಪಣಾ ಮಾಡುವನು.

ಪರಿಸಾವಯಾ ಭಾಗವತಧರ್ಮೀ । ಶ್ರವಣಾಧಿಕಾರೀ ಅಸೋ ಜರೀ ಆಮ್ಹೀ । ತರೀ ಕೃಪಾ ಕರೂನಿ ತುಮ್ಹೀ । ಸಾಂಗಾವೇ ಸ್ವಾಮೀ ಸಕಳ ಧರ್ಮ ।೨೬೬॥ ನವಲ ಯಾ ಧರ್ಮಾಚೀ ಖ್ಯಾತೀ । ಸಪ್ರೇಮ ಆದರಿತಾ ಪ್ರೀತೀ । ತೇಣೇ ತುಷ್ಟೋನಿಯಾ ಶ್ರೀಪತೀ । ದೇ ಸೇವಕಾ ಹಾತೀ ಆಪಣಿಯಾ ।೨೬೭॥ ''ಅಜನ್ಮಾ''ಯಾ ನಾಮಾಚೀ ಖ್ಯಾತೀ । ವೇದಶಾಸ್ತ್ರೀ ಮಿರವೀ ಶ್ರೀಪತಿ । ತೋ ಭಾಗವತ ಧರ್ಮಾಚಿಯಾ ಪ್ರೀತೀ । ಸೋಶೀ ಜನ್ಮಪಂಕ್ತೀ ಭಕ್ತಾಂಚಿಯಾ ।೨೬೮॥ ಏವಂ ಭಾಗವತಧರ್ಮೀ ಜಾಣ । ಜೋ ಕೋಣೀ ಅನನ್ಯ ಶರಣ । ತ್ಯಾಸೀ ತುಷ್ಟೋನಿಯಾ ನಾರಾಯಣ । ನಿಜಾತ್ಮತಾ ಪೂರ್ಣ ಸ್ವಯೇ ದೇತು ।೨೬೯॥ ಭಾಗವತಧರ್ಮಶ್ರವಣಾರ್ಥ । ಮಜ ಅಧಿಕಾರೂ ಜರೀ ನಸೇಲ ಯೇಥ । ತರೀ ಮೀ ಅನನ್ಯ ಶರಣಾಗತ । ಆಣಿ ತುಮ್ಹೀ ಸಮಸ್ತ ಕೃಪಾಳೂ ।೨೭೦॥ ಭೂತದಯೇಚಿ ನಿಡಾರಲೇಪಣ । ತುಮಚ್ಯಾ ಠಾಯೀ ವೋಸಂಡೇ ಪೂರ್ಣ । ತುಮ್ಹೀ ಧಯಾನಿಧಿ ಸಂಪೂರ್ಣ । ದಿನೋದ್ಧರಣ ತುಮಚೇನೀ ।೨೭೧॥ ತೇಥ ತುಮಚೀ ಕೃಪಾ ಪೂರ್ಣ । ತೇಥ ನ ರಾಹೇ ಜನ್ಮಮರಣ । ಸರ್ವಾಧಿಕಾರ ಸಂಪೂರ್ಣ । ಸಹಜ ಆಪಣ ವೋಳಂಗೇ ।೨೭೨॥ ತಂವ ತುಮಚೇ ಕೃಪೇಪರತೇ । ಆನ ಸಾಮರ್ಥ್ಯ ನಾಹೀ ಯೇಥೇ । ಐಸೇ ಜಾಣೋನಿಯಾ ನಿಶ್ಚಿತೇ । ಶರಣ ತುಮ್ಹಾತೇ ಮೀ ಆಲೋ ।೨೭೩॥ ಕಾಯಸೀ ಜ್ಞಾತೇಪಣಾಚೀ ಲಾಜ । ಯೇಥೇ ತುಮಚೇ ಕೃಪೇ ಮಾಝೇ ಕಾಜ । ಐಸೇ ವಿದೇಹೇ ಪ್ರಾರ್ಥೂನಿ ದ್ವಿಜ । ಚರಣರಜ ವಂದಿಲೇ ।೨೭೪॥ ಐಕೋನಿ ವಿದೇಹಾಚಾ ನಮ್ರ ಪ್ರಶ್ನ । ಸಂತೋಷಲೇ ನವಹೀ ಜಣ । ತೇಂಚಿ ಶ್ರೀಮುಖೇ ನಾರದ ಆಪಣ । ಕರೀ ನಿರೂಪಣ ವಸುದೇವಾ ।೨೭೫॥

ನಾರದ ಉವಾಚ :-

ಏವಂ ತೇ ನಿಮಿನಾ ಪೃಷ್ಟಾ ವಸುದೇವ ಮಹತ್ತಮಾಃ ।
ಪ್ರತಿಪೂಜ್ಯಾಬ್ರುವನ್ ಪ್ರೀತ್ಯಾ ಸಸದಸ್ಯರ್ತ್ವಿಜಂ ನೃಪಂ ।೩೨॥

ಅರ್ಥ: ನಾರದರು ನುಡಿದರು, ಹೇ ವಸುದೇವನೇ, ರಾಜಾ ನಿಮಿಯು ಆ ಭಾಗವತ ಪ್ರೇಮಿ ಸಂತರಿಗೆ ಈ ಪ್ರಶ್ನೆಯನ್ನು ಕೇಳಲು, ಆಗ ಅವರು ಅತೀವ ಪ್ರೇಮದಿಂದ ಅವರ ಮತ್ತು ಅವರು ಕೇಳಿದ ಪ್ರಶ್ನೆಗೆ ಮಹತ್ತರವಾಗಿ ಸನ್ಮಾನಿಸಿದರು. ಹಾಗೆಯೇ ಅಲ್ಲಿ ನೆರೆದ ಋಷಿ ಸಮೂಹದಲ್ಲಿ ನಿಮಿರಾಜನಿಗೆ ಹೇಳಿದರು.

ಭಾಗವತ ಧರ್ಮವನ್ನು ಶ್ರವಣ ಮಾಡುವ ಅಧಿಕಾರವು ನಮ್ಮಲ್ಲಿದ್ದರೆ ಮಾತ್ರ ಹೇ,ಸ್ವಾಮಿಗಳವರೇ, ಆ ಭಾಗವತ ಧರ್ಮವನ್ನು ಸಂಪೂರ್ಣವಾಗಿ ಹೇಳಿರಿ ।೨೬೬॥ ಈ ಭಾಗವತ ಧರ್ಮದ ಖ್ಯಾತಿಯು ವಿಲಕ್ಷಣವಾಗಿದೆ. ಇದನ್ನು ನಾವು ಪ್ರೇಮದಿಂದ ಸ್ವೀಕರಿಸಿದರೆ, ಶ್ರೀಪತಿಯು ಸ್ವತಃ ಸಂತುಷ್ಟನಾಗಿ ತಾನು ಸೇವಕರ ಸ್ವಾಧೀನನಾಗುವನು ।೨೬೭॥ ಶ್ರೀಕೃಷ್ಣನು ''ಅಜನ್ಮ'' ನೆಂದು ವೇದಶಾಸ್ತ್ರಗಳಲ್ಲಿ ಖ್ಯಾತಿ ಪಡೆದಿರುವನು. ಆದರೆ ಆತನೇ ಭಾಗವತ ಧರ್ಮದ ಪ್ರೇಮಕ್ಕಾಗಿ ಭಕ್ತರ ಅನೇಕ ಜನ್ಮಗಳನ್ನು ಸೋಸುವನು ।೨೬೮॥ ಹೀಗೆ ಭಾಗವತ ಧರ್ಮಕ್ಕೆ ಯಾರು ಅನನ್ಯಭಾವದಿಂದ ಶರಣಾಗುವರೋ, ಅವರಿಗೆ ನಾರಾಯಣನು ಪ್ರಸನ್ನನಾಗಿ ತನ್ನ ಸ್ವರೂಪವನ್ನು ಸಮರ್ಪಿಸುವನು ।೨೬೯॥ ಈಗ ಭಾಗವತ ಧರ್ಮವನ್ನು ಶ್ರವಣ ಮಾಡಲಿಕ್ಕೆ ಅಧಿಕಾರವು ನನ್ನಲ್ಲಿರದಿದ್ದರೂ, ನಾನು ಮಾತ್ರ ತಮ್ಮನ್ನು ನಿಜವಾಗಿಯೂ ಅನನ್ಯ ಭಾವದಿಂದ ಶರಣಾಗಿರುವೆನು. ಮೇಲಾಗಿ ತಾವೆಲ್ಲರೂ ಬಹು ಕೃಪಾವಂತರಾಗಿರುವಿರಿ ।೨೭೦॥ ತಮ್ಮಲ್ಲಿ ಭೂತದಯೆಯು ಪರಿಪಕ್ವವಾಗಿರುವುದು. ತಾವು ದಯಾಸಾಗರರಾಗಿರುವಿರಿ. ತಮ್ಮಿಂದಲೇ ದೀನರ ಉದ್ಧಾರವಾಗುವುದು ।೨೭೧॥ ತಮ್ಮ ಪೂರ್ಣ ಕೃಪೆ ಇರುವಲ್ಲಿ ಜನ್ಮಮರಣವು ಹೆಸರಿಗೂ ಸಹ ಉಳಿಯಲಾರದು. ಸರ್ವ ಪ್ರಕಾರದ ಅಧಿಕಾರವು ಸಹಜವಾಗಿ ಪ್ರಾಪ್ತವಾಗುವುದು ।೨೭೨॥ ನಿಮ್ಮ ಕೃಪೆಯಲ್ಲಿರುವ ಸಾಮರ್ಥ್ಯವು ಬೇರೆ ಯಾವುದರಲ್ಲಿಯೂ ಇರುವುದಿಲ್ಲ. ಹೀಗೆ ನಿಶ್ಚಯಪೂರ್ವಕವಾಗಿ ನಾನು ಅರಿತುಕೊಂಡು ತಮಗೆ ಶರಣು ಬಂದಿರುವೆನು ।೨೭೩॥ ನಾನು ಜ್ಞಾನಿ ಎಂಬ ಲಜ್ಜೆಯ ಯಾವ ಕೆಲಸವಿದೆ?,ಕಾರಣ ಎಲ್ಲವೂ ನಿಮ್ಮ ಕೃಪೆಯಿಂದಲೇ ನನ್ನ ಕಾರ್ಯವಾಗಬೇಕಾಗಿದೆ. ಹೀಗೆ ಜನಕರಾಜನು ಪ್ರಾರ್ಥನೆಯನ್ನು ಮಾಡಿ ಆ ಬ್ರಾಹ್ಮಣರ ಪಾದಧೂಳಿಯನ್ನು ಶಿರಸಾ ವಂದಿಸಿದನು ।೨೭೪॥ ಜನಕರಾಜನ ಈ ನಮ್ರ ಪ್ರಶ್ನೆಗಳನ್ನು ಕೇಳಿ ಈ ಒಂಬತ್ತು ಮಹಿಮರು ಸಂತುಷ್ಟರಾದರು. ಇದೇ ಮಾತನ್ನು ನಾರದರು ಸ್ವಮುಖದಿಂದ ವಸುದೇವನಿಗೆ ನಿರೂಪಿಸಿದರು ।೨೭೫॥

ಜೋ ಜಗಾಚೀ ಸ್ಥಿತಿ ಗತಿ ಜಾಣತಾ । ಜೋ ಹರಿಹರಾಂಚಾ ಪಢಿಯಂತಾ । ಜೋ ನಿಜಾತ್ಮ ಜ್ಞಾನೇ ಪುರತಾ । ತೋ ಝೂಲಾ ಬೋಲತಾ ನಾರದು ॥೭೭೬॥ ನಾರದ ಮ್ಹಣೇ ವಸುದೇವಾ । ವಿದೇಹೇ ಪ್ರಶ್ನ ಕೇಲಾ ಬರವಾ । ತೇಣೇ ಪರಮಾನಂದು ತೇವ್ಹಾ । ತ್ಯಾ ಮಹಾನುಭಾವಾ ಉಲಥಲಾ ॥೭೭೭॥ ಸಂತೋಷೋನಿ ನವಹೀ ಮೂರ್ತಿ । ಧನ್ಯ ಧನ್ಯ ವಿದೇಹಾ ಮ್ಹಣತೀ । ಋತ್ವಿಜಹೀ ಸಾದರ ಪರಮಾರ್ಥೀ । ಸದಸ್ಯ ಶ್ರವಣಾರ್ಥೀ ಅತಿತತ್ಪರ ॥೭೭೮॥ ಐಸೇ ದೇಊನಿ ಅನುಮೋದನ । ಬೋಲತೇ ಜಾಹಲೇ ನವಹೀ ಜಣ । ತೇಚಿ ಕಥೇಚೇ ನಿಜಲಕ್ಷಣ । ನವ ಪ್ರಶ್ನ ವಿದೇಹಾಚೇ ॥೭೭೯॥ ಭಾಗವತಧರ್ಮ ಭಗವದ್ಭಕ್ತ । ಮಾಯಾ ಕೈಸೀ ಅಸೇ ನಾಂದತ । ತಿಚಾ ತರಣೋಪಾವ ಯೇಥ । ಕೇವೀ ಪಾವತ ಅಜ್ಞಾನೀ ॥೭೮೦॥ ಯೇಥ ಕೈಸೇ ಅಸೇ ಪರಬ್ರಹ್ಮ । ಕಾಸಯಾ ನಾಂವ ಮ್ಹಣಿಜೇ ಕರ್ಮ । ಅವತಾರಚರಿತ್ರಸಂಖ್ಯಾಪರಮ । ಅಭಕ್ತಾ ಅಧಮಗತಿ ಕೈಶೀ ॥೭೮೧॥ ಕೋಣೇ ಯುಗೀ ಕೈಸಾ ಧರ್ಮ । ಸಾಂಗಾವಾ ಜೇ ಉತ್ತಮೋತ್ತಮ । ಐಸೇ ನವ ಪ್ರಶ್ನೆ ಪರಮ । ಜನಕ ಸವರ್ಮ ಪುಸೇಲ ॥೭೮೨॥ ಐಸೇ ವಿದೇಹಾಚೇ ಪ್ರಶ್ನ । ಅನುಕ್ರಮೇ ನವಹೀ ಜಣ । ಉತ್ತರ ದೇತೀ ಆಪಣ । ತಯಾಂತ ಪ್ರಥಮ ಪ್ರಶ್ನ ಕವಿ ಸಾಂಗೇ ॥೭೮೩॥

ಶ್ರೀಕವಿರುವಾಚ:-

ಮನ್ಯೇಽಕುತಶ್ಚಿದ್ಭಯಮಚ್ಯುತಸ್ಯ ಪಾದಾಂಬುಜೋಪಾಸನಮತ್ರ ನಿತ್ಯಮ್ ।
ಉದ್ವಿಗ್ನಬುದ್ಧೇರಸದಾತ್ಮಭಾವಾದ್ ವಿಶ್ವಾತ್ಮನಾ ಯತ್ರ ನಿವರ್ತತೇ ಭೀಃ ॥೩೩॥

ಅರ್ಥ: ಕವಿಯು ಹೇಳಿದನು- ರಾಜನ್, ಭಕ್ತಗಣರ ಹೃದಯದಲ್ಲಿಂದ ಎಂದೂ ದೂರಾಗದ ಭಗವಂತನ ಚರಣ ಕಮಲಗಳ ಉಪಾಸನೆಯು ಈ ಸಂಸಾರದಲ್ಲಿ ಪರಮ ಕಲ್ಯಾಣಕಾರಕ, ಅತ್ಯಂತಿಕ ಕ್ಷೇಮಕಾರಕವಾಗಿದೆ ಮತ್ತು ಭಯಶೂನ್ಯವಾಗಿದೆ. ಹೀಗೆ ನನ್ನ ನಿಶ್ಚಿತ ಮತವಿರುವುದು. ತುಚ್ಛ ಗೃಹಾದಿ, ಅಸತ್ ಪದಾರ್ಥಗಳಲ್ಲಿ ಅಹಂಕಾರ, ಮಮಕಾರ ನಿರ್ಮಾಣಗೊಂಡಿರುವುದರಿಂದ ಇವರ ಚಿತ್ತ ವೃತ್ತಿಯು ಉದ್ವಿಗ್ನಗೊಂಡಿರುವುದಕ್ಕೆ ಈ ಉಪಾಸನೆಯ ಅನುಷ್ಠಾನದಿಂದ ಇವರ ಭಯವು ಸಹ ದೂರಾಗುವುದು.

ರಾಯೇ ಪುಶಿಲೇ ''ಆತ್ಯಂತಿಕ ಕ್ಷೇಮ'' । ತದರ್ಥೀ ಕವಿ ಜ್ಞಾತಾ ಪರಮ । ತೊ ಆತ್ಯಂತಿಕ ಕ್ಷೇಮಾಚೇ ವರ್ಮ । ಭಾಗವತಧರ್ಮ ಪ್ರತಿಪಾದೀ ॥೭೮೪॥ ಐಕ ರಾಯಾ ನವಲಪರೀ । ಆಪುಲಾ ಸಂಕಲ್ಪ ಆಪಣಾ ವೈರೀ । ದೇಹಬುದ್ಧೀ ವಾಢವೂನಿ ಶರೀರೀ । ಅತಿದೃಢ ಕರೀ ಭವಭಯಾ ॥೭೮೫॥ ಜಯಾಪಾಶೀ ದೇಹಬುದ್ಧೀ । ತ್ಯಾಸೀ ಸುಖ ನಾಹೀ ತ್ರಿಶುದ್ಧೀ । ತೇ ಬುಡಾಲೇ ದ್ವಂದ್ವಸಂಧೀ । ಆಧಿವ್ಯಾಧಿಮಹಾರ್ಣವೀ ॥೭೮೬॥

ಜಗತ್ತಿನ ಸ್ಥಿತಿಗತಿಗಳನ್ನು ಬಲ್ಲವರು, ಹರಿಹರರ ಪ್ರೀತಿಗೆ ಪಾತ್ರರಾದವರು ಮತ್ತು ನಿಜಜ್ಞಾನದಿಂದ ಪರಿಪೂರ್ಣರಾದ ನಾರದರು ವಸುದೇವನಿಗೆ ಹೀಗೆ ಹೇಳಿದರು ॥೭೭೬॥ ಹೇ ವಸುದೇವನೇ, ಜನಕರಾಜನು ಈ ಪ್ರಕಾರವಾಗಿ ಮಾರ್ಮಿಕ ಪ್ರಶ್ನೆಗಳನ್ನು ಕೇಳಲು ಆಗ ಆ ಮಹಾನುಭಾವರಿಗೆ ಅತ್ಯಂತ ಸಂತೋಷವಾಯಿತು. ॥೭೭೭॥ ಈ ಒಂಬತ್ತು ಮಹಾತ್ಮರು ಆನಂದಪಟ್ಟು ಜನಕರಾಜನಿಗೆ ಧನ್ಯ, ಧನ್ಯ ಎಂದರು. ಯಜ್ಞದಲ್ಲಿನ ಋಷಿಮಂಡಳಿಯವರಿಗೂ, ಸಭೆಯಲ್ಲಿ ಸೇರಿದ ಸದಸ್ಯರೆಲ್ಲರಿಗೂ ಪಾರಮಾರ್ಥಿಕ ಶ್ರವಣಕ್ಕಾಗಿ ಉತ್ಸುಕತೆ ನಿರ್ಮಾಣವಾಯಿತು ॥೭೭೮॥ ಇವರಿಗೆಲ್ಲರನ್ನೂ ಅನುಮೋದಿಸಿ ಈ ಒಂಬತ್ತು ಸಂತರು ಹೇಳಲಿಕ್ಕೆ ಪ್ರಾರಂಭಿಸಿದರು. ಜನಕನ ಒಂಬತ್ತು ಪ್ರಶ್ನೆಗಳು ಈ ಕಥೆಯ ಪ್ರಧಾನ ವಿಷಯವಾಗಿರುವುದು ॥೭೭೯॥ ''ಭಾಗವತ ಧರ್ಮ'' ಹೇಗಿರುವುದು?, ''ಭಗವದ್ಭಕ್ತರು'' ಹೇಗಿರುವರು?, ''ಮಾಯಾ'' ಹೇಗೆ ಆಟವಾಡುವುದು? ಇದರಿಂದ ಅಜ್ಞ ಜೀವಿಗಳಿಗೆ ತರುಣೋಪಾಯ ಯಾವುದು? ॥೭೮೦॥ ''ಪರಬ್ರಹ್ಮವು'' ಹೇಗಿರುವುದು? ಯಾವುದಕ್ಕೆ ನಾವು ''ಕರ್ಮ'' ಎನ್ನಬೇಕು ?, ''ಅವತಾರ ಚರಿತ್ರೆಯ'' ಸಂಖ್ಯೆ ಎಷ್ಟು?, ''ಅಭಕ್ತರಿಗೆ ಅಧೋಗತಿ'' ಏಕಾಗುತ್ತದೆ? ॥೭೮೧॥ ''ಯಾವ ಯುಗದಲ್ಲಿ ಯಾವಧರ್ಮ''? ಇವುಗಳನ್ನು ಉತ್ತಮ ರೀತಿಯಲ್ಲಿ ನಿರೂಪಿಸಿರಿ. ಹೀಗೆ ಮಹಾ ಮಾರ್ಮಿಕವಾದ ಒಂಬತ್ತು ಪ್ರಶ್ನೆಗಳನ್ನು ಜನಕರಾಜನು ಕೇಳಿದನು ॥೭೮೨॥ ಈ ಪ್ರಕಾರವಾಗಿ ಜನಕನ ಒಂಬತ್ತು ಪ್ರಶ್ನೆಗಳಿದ್ದವು. ಈ ಒಂಬತ್ತು ಮಹಿನೀಯರು ಅನುಕ್ರಮವಾಗಿ ಇವುಗಳ ಉತ್ತರವನ್ನು ಕೊಟ್ಟರು. ಅವುಗಳಲ್ಲಿನ ಪ್ರಥಮ ಪ್ರಶ್ನೆಗೆ ಕವಿಯು ಉತ್ತರಿಸುವನು ॥೭೮೩॥

ರಾಜನು ''ಆತ್ಯಂತಿಕ ಕ್ಷೇಮ'' ಅಂದರೆ ಅತ್ಯಂತ ಕಲ್ಯಾಣ ಯಾವುದರಲ್ಲಿದೆ ಎಂದು ಕೇಳಿದ ಈ ವಿಷಯಕ್ಕೆ ಕವಿಯು ಪರಮ ಜ್ಞಾನಿಯಾಗಿದ್ದನು. ಆತನು ಆತ್ಯಂತಿಕ ಕ್ಷೇಮದ ಮರ್ಮವೆಂದರೆ ''ಭಾಗವತಧರ್ಮ''ದ ಪ್ರತಿಪಾದನೆಯನ್ನು ಮಾಡಲಾರಂಭಿಸಿದನು ॥೭೮೪॥ ಕವಿಯು ಹೇಳಿದನು :- ಹೇ ರಾಜನೇ, ಈ ಒಂದು ಚಮತ್ಕಾರವನ್ನು ಲಕ್ಷದಲ್ಲಿಡು. ಏನೆಂದರೆ, ತನ್ನದೇ ಆದ ಸಂಕಲ್ಪವು ತನಗೆ ವೈರಿಯಾಗುವುದು. ಇದುವೇ ಶರೀರದಲ್ಲಿ ದೇಹಬುದ್ಧಿಯನ್ನು ಬೆಳೆಸಿ, ಸಂಸಾರದ ಭಾರವನ್ನು ಅಧಿಕಾಧಿಕವಾಗಿ ದೃಢಗೊಳಿಸುತ್ತಿರುವುದು ॥೭೮೫॥ ದೇಹಬುದ್ಧಿ ಇರುವ ವ್ಯಕ್ತಿಗೆ ಸುಖವೆಂಬುದು ಇಲ್ಲವೇ ಇಲ್ಲ. ಲೋಕದ ಜನರು ಸುಖ - ದುಃಖ, ಶೀತ - ಉಷ್ಣ ಇತ್ಯಾದಿ ದ್ವಂದ್ವಗಳ ಸಂಧಿಯಲ್ಲಿ ಮತ್ತು ಆದಿವ್ಯಾಧಿಯ ಮಹಾಸಾಗರದಲ್ಲಿ ಮುಳುಗಿ ಹೋಗುವರು ॥೭೮೬॥

ಜೇ ದೇಹಬುದ್ಧೀಪಾಶೀ । ಸಕಳ ದುಃಖಾಂಚಿಯಾ ರಾಶೀ । ಮಹಾಭಯಾಚೀ ಭೂತೇ ಚೌಪಾಶೀ । ಅಹರ್ನಿಶೀ ಝೋಂಬತೀ ॥೨೮೭॥ ದೇಹ ಬುದ್ಧೀಚಿಯಾನರಾ । ಘೋರ ಚಿಂತೇಚಾ ಅಡದರಾ । ಸಂಕಲ್ಪವಿಕಲ್ಪಾಂಚಾ ಮಾರಾ । ಮಮತಾದ್ವಾರಾ । ಅನಿವಾರ ॥೨೮೮॥ ದೇಹಬುದ್ಧೀಮಾಜೀ ಸುಖ । ಅಣುಮಾತ್ರ ನಾಹೀ ದೇಖ । ಸುಖ ಮಾನಿತೀ ತೇ ಮಹಾಮೂರ್ಖ । ದುಃಖಜನಕ ದೇಹಬುದ್ಧೀ ॥೨೮೯॥ ದೀಪಾಚೇ ಮಿಳಣೀಪಾಶೀ । ಕೇವಳ ದುಃಖ ಪತಂಗಾಸೀ । ತರೀ ಆಲಿಂಗೂ ಧಾಂವೇ ತ್ಯಾಸೀ । ತೇವೀ ವಿಷಯಾಂಸೀ ದೇಹಬುದ್ಧೀ ॥೨೯೦॥ ಐಶೀ ಅಸಂತ ದೇಹಬುದ್ಧೀ ಕುಡೀ । ವಾಢವೀ ವಿಷಯಾಂಚೀ ಗೋಡೀ । ತೇಥೇ ಮಹಾಭಯಾಚೀ ಜೋಡೀ । ಜನ್ಮ ಮರಣಕೋಡೀ ಅನಿವಾರ ॥೨೯೧॥ ಎವಢಾ ಅನಿವಾರ ಸಂತಾಪ । ದೇಹಬುದ್ಧೀಪಾಶೀ ಮಹಾಪಾಪ । ಜಾಣೋನಿ ಧರೀ ಜೋ ಅನುತಾಪ । ವಿಷಯೀ ಅಲ್ಪ ಗುಂತೇನಾ ॥೨೯೨॥ ಧರಿತಾ ವಿಷಯಾಂಚೀ ಗೋಡೀ । ಭೋಗಾವ್ಯಾ ಜನ್ಮ ಮರಣಕೋಡೀ । ಯೇಣೇ ಭಯೇ ವಿಷಯ ವೋಸಂಡೀ । ಇಂದ್ರಿಯಾಂತೇ ಕೋಂಡೀ ಅತಿನೇಮೇ ॥೨೯೩॥ ಇಂದ್ರಿಯೇ ಕೋಂಡಿತಾ ನ ಕೋಂಡತೀ । ವಿಷಯ ಸಾಂಡಿತಾ ನ ಸಾಂಡತೀ । ಪುಢತಪುಢತೀ ಬಾಂಧೂ ಯೇತೀ । ಯಾಲಾಗೀ ಹರಿಭಕ್ತೀ ದ್ಯೋತಿಲೀ ವೇದೇ ॥೨೯೪॥ ಇಂದ್ರಿಯೇ ಕೋಂಡಾವೀ ನ ಲಗತೀ । ಸಹಜೇ ರಾಹೇ ವಿಷಯಾಸಕ್ತೀ । ಎವಢೇ ಸಾಮರ್ಥ್ಯ ಹರಿಭಕ್ತೀ । ಜಾಣ ನಿಶ್ಚಿತೀ ನೃಪವರ್ಯಾ ॥೨೯೫॥ ಯೋಗಿ ಇಂದ್ರಿಯೇ ಕೋಂಡಿತೀ । ತೀ ಭಕ್ತ ಲಾವಿತೀ ಭಗವದ್ಭಕ್ತೀ । ಯೋಗೀ ವಿಷಯ ಜೇ ತ್ಯಾಗಿತೀ । ತೇ ಭಕ್ತ ಅರ್ಪಿತೀ ಭಗವಂತೀ ॥೨೯೬॥ ಯೋಗೀ ವಿಷಯ ತ್ಯಾಗಿತೀ । ತ್ಯಾಗಿತಾ ದೇಹ ದುಃಖೀ ಹೋತೀ । ಭಕ್ತ ಭಗವಂತೀ ಅರ್ಪಿತೀ । ತೇಣೇ ಹೋತೀ ನಿತ್ಯಮುಕ್ತ ॥೨೯೭॥ ಹೇ ನಪ್ಡೇ ಮ್ಹಣತೀ ವಿಕಲ್ಪಕ । ಯಾಚಿಲಾಗೀ ಯೇಥೇ ದೇಖ । ''ಕಾಯೇನ ವಾಚಾ'' ಹಾ ಶ್ಲೋಕ । ಅರ್ಪಣದ್ಯೋತಕ ಬೋಲಿಜೇಲಾ ॥೨೯೮॥ ದಾರಾ ಸುತ ಗೃಹ ಪ್ರಾಣ । ಕರಾವೇ ಭಗವಂತಾಸೀ ಅರ್ಪಣ । ಹೇ ಭಾಗವತ ಧರ್ಮ ಪೂರ್ಣ । ಮುಖ್ಯತ್ವೇ ''ಭಜನ'' ಯಾ ನಾವ ॥೨೯೯॥ ಅಕರಾಹೀ ಇಂದ್ರಿಯವೃತ್ತೀ । ಕೈಶಾ ಲಾವಾವ್ಯಾ ಭಗವದ್ಭಕ್ತೀ । ಐಕ ರಾಯಾ ತುಜಪ್ರತೀ । ಸಂಕ್ಷೇಪಸ್ಥಿತೀ ಸಾಂಗೇನ ॥೩೦೦॥

ಕಾರಣ,ದೇಹಬುದ್ಧಿಯಲ್ಲಿ ದುಃಖದ ರಾಶಿಯೇ ತುಂಬಿರುವುದು. ಇವರಿಗೆ ಹಗಲು ರಾತ್ರಿಯಲ್ಲಿ ನಾಲ್ಕೂ ದಿಕ್ಕಿನಿಂದ ಮಹಾಭಯದ ಭೂತಗಳು ಅಪ್ಪಿಕೊಂಡಿರುವುವು ॥೨೮೭॥ ''ಈ ದೇಹವೇ ನಾನು'' ಎಂದು ಮನ್ನಿಸುವ ಮಾನವನಿಗೆ ಚಿಂತೆಯ ಮಹಾಭಯವು ಇರುವುದು. ಇದಲ್ಲದೇ ಮಮತೆಯ ಮುಖಾಂತರ ಸಂಕಲ್ಪ ವಿಕಲ್ಪಗಳ ಹೊಡೆತವು ಸತತವಾಗಿ ಇರುವುವು ॥೨೮೮॥ ದೇಹಬುದ್ಧಿಯಲ್ಲಿ ಅಣುಮಾತ್ರವೂ ಸುಖವಿರುವುದಿಲ್ಲ. ಹೀಗಿದ್ದರೂ ಇದಕ್ಕೆ ಸುಖವೆನ್ನುವರು ಮಹಾಮೂರ್ಖರಾಗಿರುವರು. ದೇಹಬುದ್ಧಿಯು ದುಃಖ ಜನಕವಾಗಿದೆ ॥೨೮೯॥ ದೀಪದ ಸಂಗತಿಯಿಂದ ಪತಂಗಕ್ಕೆ ಕೇವಲ ದುಃಖವೇ ದೊರಕುವುದು. ಆದರೂ ಅದು ಅದಕ್ಕೆ ಅಪ್ಪಿಕೊಳ್ಳಲು ಧಾವಿಸುತ್ತಿರುವುದು. ಅದರಂತೆಯೇ ದೇಹಬುದ್ಧಿಯು ವಿಷಯಗಳತ್ತ ಧಾವಿಸುವುದು ॥೨೯೦॥ ಈ ಪ್ರಕಾರವಾಗಿ ದೇಹಬುದ್ಧಿಯು ಅತಿಕೆಡಕಾಗಿದೆ. ಇದು ವಿಷಯದ ರುಚಿಯನ್ನು ಬೆಳೆಸುವುದು. ಇದರಿಂದಲೇ ಮಹಾಭಯವು ಉತ್ಪನ್ನವಾಗಿ ಜನ್ಮ ಮರಣಗಳಲ್ಲಿ ಸುತ್ತಾಡುವುದು ಅನಿವಾರ್ಯವಾಗುವುದು ॥೨೯೧॥ ದೇಹಬುದ್ಧಿಯಲ್ಲಿ ಇಷ್ಟೊಂದು ಅಪರಿಹಾರ್ಯ ಸಂತಾಪವಿದೆ, ಮಹಾಪಾತಕವಿದೆ. ಇದನ್ನು ತಿಳಿದವರು ಮಾತ್ರ ಅನುತಾಪವನ್ನು ಧರಿಸಿ ವಿಷಯಗಳಲ್ಲಿ ತಿಲಮಾತ್ರವೂ ಸ್ಪಂದಿಸುವುದಿಲ್ಲ ॥೨೯೨॥ ವಿಷಯಗಳಲ್ಲಿ ಸುಖದ ಭಾವವನ್ನು ಧರಿಸಿದರೆ, ಕೋಟ್ಯಾವಧಿ ಜನ್ಮ ಮರಣಗಳನ್ನು ಭೋಗಿಸಬೇಕಾಗುವುದು. ಈ ಭಯದಿಂದ ಸಾಧಕರು ವಿಷಯಗಳನ್ನು ತ್ಯಜಿಸುವರು, ಅತ್ಯಂತಿಕ ನಿಯಮಗಳಿಂದ ಇಂದ್ರಿಯಗಳನ್ನು ಬಂಧಿಸುವರು ॥೨೯೩॥ ಆದರೆ ಈ ಇಂದ್ರಿಯಗಳನ್ನು ಬಂಧಿಸಲು ಹೋದರೆ, ಬಂಧನಕ್ಕೆ ಒಳಗಾಗುವುದಿಲ್ಲ, ವಿಷಯಗಳನ್ನು ಬಿಡಬೇಕೆಂದರೆ, ಬಿಡುವುದು ಆಗುವುದಿಲ್ಲ. ಪುನಃ ಪುನಃ ಬಾಧಿಸುತ್ತಲೇ ಇರುವುವು. ಅದಕ್ಕಾಗಿಯೇ, ವೇದವು ಹರಿಭಕ್ತಿಯನ್ನು ಪ್ರಕಟಿಸಿರುವುದು ॥೨೯೪॥ ಈ ಹರಿಭಕ್ತಿಗೆ ಇಂದ್ರಿಯಗಳ ಬಂಧನವು ಬೇಕಾಗಿಲ್ಲ. ವಿಷಯಾಸಕ್ತಿಯು ತನ್ನಷ್ಟಕ್ಕೆ ತಾನೇ ನಿಲ್ಲುವುದು. ಹೇ ನೃಪವರ್ಯನೇ, ಇಂತಹ ಅದ್ಭುತ ಸಾಮರ್ಥ್ಯವು ಈ ಹರಿಭಕ್ತಿಯಲ್ಲಿದೆ. ಇದನ್ನು ನೀನು ನಿಶ್ಚಿತವಾಗಿ ತಿಳಿದುಕೋ ॥೨೯೫॥ ಯೋಗಿ ಜನರು ಇಂದ್ರಿಯಗಳನ್ನು ಬಂಧಿಸುವರು. ಆದರೆ ಭಕ್ತಜನರು ಆ ಇಂದ್ರಿಯಗಳಿಗೆ ಭಗವಂತನ ಭಕ್ತಿಗೆ ಹಚ್ಚುವರು. ಯೋಗಿಗಳು ವಿಷಯಗಳನ್ನು ತ್ಯಜಿಸುವರು. ಆದರೆ ಭಕ್ತರು ಆ ವಿಷಯಗಳನ್ನು ಭಗವಂತನಿಗೆ ಅರ್ಪಿಸುವರು ॥೨೯೬॥ ಯೋಗಿಗಳು ವಿಷಯಗಳನ್ನು ತ್ಯಾಗ ಮಾಡುವರು. ಆದರೆ ಈ ತ್ಯಾಗದಿಂದ ದೇಹಕ್ಕೆ ದುಃಖವಾಗುವುದು. ಭಕ್ತರು ಅದೇ ವಿಷಯಗಳನ್ನು ದೇವರಿಗೆ ಅರ್ಪಿಸುವುದರಿಂದ ಇವರು ನಿತ್ಯಮುಕ್ತರಾಗುವರು ॥೨೯೭॥ ಯಾರಾದರೂ ವಿಕಲ್ಪ ಜನರು ಇದು ಶಕ್ಯವಿಲ್ಲವೆಂದು ಹೇಳುವರು. ಅದಕ್ಕಾಗಿ ಇಲ್ಲಿ ''ಕಾಯೇನ ವಾಚಾ'' ಎಂಬ ಕೃಷ್ಣಾರ್ಪಣದ್ಯೋತಕ ಶ್ಲೋಕವನ್ನು ಹೇಳಲಾಗಿದೆ ॥೨೯೮॥ ಮನೆಮಾರು, ಸತಿಸುತರು ಮತ್ತು ತನ್ನ ಪ್ರಾಣವನ್ನು ಸಹ ಭಗವಂತನಿಗೆ ಅರ್ಪಿಸಬೇಕು. ಇದುವೇ ಪೂರ್ಣವಾದ ''ಭಾಗವತಧರ್ಮವು''. ಮತ್ತು ಇದರ ಹೆಸರೇ ''ಮುಖ್ಯ ಭಜನ''ವು ॥೨೯೯॥ ಈಗ ಹನ್ನೊಂದು ಇಂದ್ರಿಯಗಳ ವೃತ್ತಿಯನ್ನು ಭಗವಂತನಲ್ಲಿ ಹೇಗೇ ಹಚ್ಚಬೇಕೆಂಬುದನ್ನು ಹೇ ರಾಜನೇ, ಸಂಕ್ಷಿಪ್ತವಾಗಿ ಹೇಳುವೆ, ಕೇಳು ॥೩೦೦॥

''ಮನೇ'' ಕರಾವೇ ಹರೀಚೇ ಧ್ಯಾನ । ''ಶ್ರವಣೇ'' ಕರಾವೇ ಕೀರ್ತಿಶ್ರವಣ । ''ಜಿವ್ಹೇನೆ'' ಕರಾವೇ ನಾಮಸ್ಮರಣ । ಹರಿಕೀರ್ತನ ಅಹರ್ನಿಶೀ ।।೩೦೧।। ''ಕರೀ'' ಕರಾವೇ ಹರಿಪೂಜನ । ''ಚರಣೀ'' ದೇವಾಲಯಗಮನ । "ಘ್ರಾಣೀ" ತುಲಸೀ ಆವೋದಗ್ರಹಣ । ಜಿಹೀ ಹರಿಚರಣ ಪೂಜಿಲೇ ।।೩೦೨।। ನಿತ್ಯ ನಿರ್ಮಾಲ್ಯ ಮಿರವೇ ಶಿರೀ । ಚರಣತೀರ್ಥೇ ಅಭ್ಯಂತರೀ । ಹರಿಪ್ರಸಾದ ಜ್ಯಾಚೇ ಉದರೀ । ತ್ಯಾ ದೇಖೋನಿ ದುರೀ ಭವಭಯ ಪಳೇ ।।೩೦೩।। ವಾಢತೇನಿ ಸದ್ಭಾವೇ ಜಾಣ । ಚಢತೇನಿ ಪ್ರೇಮೇ ಪೂರ್ಣ । ಅಂಖಂಡ ಜ್ಯಾಸೀ ಶ್ರೀಕೃಷ್ಣಭಜನ । ತ್ಯಾಸೀ ಭವಬಂಧನ ಅಸೇನಾ ।।೩೦೪।। ಸಕಲ ಭಯಾಮಾಜೀ ಘೋರ । ಭವ ಭಯ ಅತಿದುರ್ಧರ । ತೇಹೀ ಹರೀಭಕ್ತೀಸಮೋರ । ಬಾಪುಡೇ ಕಿಂಕರ ಕೇವೀ ರಾಹೇ ।।೩೦೫।। ಕರಿತಾ ರಾಮಕೃಷ್ಣಸ್ಮರಣ । ಉಠೋನಿ ಪಳೇ ಜನ್ಮಮರಣ । ತೇಥೇ ಭವಭಯಾಚೇ ತೋಂಡ ಕೋಣ । ಧೈರ್ಯಪಣ ಧರಾವಯಾ ।।೩೦೬।। ಜೇಥೇ ಹರಿಚರಣಭಜನ ಪ್ರೀತೀ । ತೇಥೇ ಭವಭಯಾಚೀ ನಿವೃತ್ತೀ । ಪರಮ ನಿರ್ಭಯ ಭಗವದ್ಭಕ್ತೀ । ಆಮುಚ್ಯಾ ಮತೀ ನಿಜನಿಶ್ಚಯೋ ।।೩೦೭।। ಕೃತನಿಶ್ಚಯೋ ಆಮುಚಾ ಜಾಣ । ಯೇಥೇ ಸಾಕ್ಷೀ ವೇದ-ಶಾಸ್ತ್ರಪುರಾಣ । ಸರ್ವಾತ್ಮನಾ ಭಗವದ್ಭಜನ । ನಿರ್ಭಯಸ್ಥಾನ ಸರ್ವಾಸೀ ।।೩೦೮।। ಅಸೋ ವೇದ ಶಾಸ್ತ್ರ ಪುರಾಣ । ಸ್ವಮುಖೇ ಬೋಲಿಲಾ ಶ್ರೀಕೃಷ್ಣ । ಮೀ ಸರ್ವಥಾ ಭಕ್ತಿಆಧೀನ । ಭಕ್ತಿಪ್ರಧಾನ ಭಗವದ್ವಾಕ್ಯ ।।೩೦೯।। ಉಭವೂನಿಯಾ ಚಾರಿ ಬಾಹ್ಯಾ । ನಿಜಾತ್ಮಪ್ರಾಪ್ತೀಚ್ಯಾ ಉಪಾಯಾ । "ಭಕ್ತ್ಯಾಹಮೇಕಯಾ ಗ್ರಾಹ್ಯಃ" । ಬೋಲಿಲಾ ಲವಲಾಹ್ಯಾ ಶ್ರೀಕೃಷ್ಣ ।।೩೧೦।।

ಯೇ ವೈ ಭಗವತಾ ಪ್ರೋಕ್ತಾ ಉಪಾಯಾ ಹ್ಯಾತ್ಮ ಲಬ್ಧಯೇ । ಅಂಜಃ ಪುಂಸಾಮವಿದುಷಾಂ ವಿದ್ಧಿ ಭಾಗವತಾನ್ ಹಿ ತಾನ್ ।।೩೪।।

ಅರ್ಥ:- ಭಗವಂತನು ಸಾದಾ - ಸೀದಾ ಪುರುಷರಿಗಾಗಿ ಸಹಜವಾಗಿ ತಮ್ಮ ಪ್ರಾಪ್ತಿಯಾಗುವ ಉದ್ದೇಶಕ್ಕಾಗಿ ಹೇಳಿರುವ ಉಪಾಯವೇ ಭಾಗವತಧರ್ಮವಾಗಿದೆ.

ನ ಕರಿತಾ ವೇದಶಾಸ್ತ್ರವ್ಯುತ್ಪತ್ತೀ । ಐಶಿಯಾ ಅಜ್ಞಾನಾ ನಿಜಾತ್ಮಪ್ರಾಪ್ತೀ । ಸುಗಮ ಜೋಡೇ ಬ್ರಹ್ಮಸ್ಥಿತೀ । ಯಾಲಾಗೀ ಹರಿಭಕ್ತೀ ಪ್ರಕಾಶಿಲೀ ದೇವೇ ।।೩೧೧।। ನ ಕರಿತಾ ವೇದಶಾಸ್ತ್ರಪಠಣ । ಜಡ ಮೂಢ ಮ್ಹಣಾಲ ತರಲೇ ಕೋಣ । ಉನ್ಮತ್ತಗಜೇಂದ್ರ ಉದ್ಧರಣ । ಗರ್ಭಸಂರಕ್ಷಣ ಪರೀಕ್ಷಿತೀಚೇ ।।೩೧೨।।

''ಮನಸ್ಸಿನಿಂದ'' ಹರಿಯ ಧ್ಯಾನವನ್ನು ಮಾಡಬೇಕು. ''ಕಿವಿಯಿಂದ'' ಹರಿಯ ಕೀರ್ತಿಯನ್ನು ಕೇಳಬೇಕು. ''ನಾಲಿಗೆಯಿಂದ'' ಹರಿಯ ನಾಮಸ್ಮರಣೆಯನ್ನು ಮಾಡಬೇಕು. ಮತ್ತು ಹಗಲು ರಾತ್ರಿ ಹರಿಯ ಕೀರ್ತನದಲ್ಲಿಯೇ ಮಗ್ನರಾಗಬೇಕು ।।೩೦೧।। ''ಕೈಗಳಿಂದ'' ಹರಿಯನ್ನು ಪೂಜಿಸಬೇಕು. ''ಕಾಲುಗಳಿಂದ'' ದೇವಾಲಯಕ್ಕೆ ಹೋಗಬೇಕು. ''ಮೂಗಿನಿಂದ'' ನಿರ್ಮಾಲ್ಯ ತುಳಸಿಯ ಆಮೋದವನ್ನು ಗ್ರಹಿಸಬೇಕು ।।೩೦೨।। ಪ್ರತಿನಿತ್ಯ ದೇವರ ನಿರ್ಮಾಲ್ಯವನ್ನು ಮಸ್ತಕದಲ್ಲಿ ಧರಿಸಬೇಕು ಮತ್ತು ಚರಣ ತೀರ್ಥವನ್ನು ಹರಿಪ್ರಸಾದವನ್ನು ಉದರಕ್ಕೆ ಸೇರಿಸಬೇಕು. ಇದನ್ನು ಕಂಡು ಸಂಸಾರ ಭಯವು ದೂರ ಓಡುವುದು ।।೩೦೩।। ಬೆಳೆಯುತ್ತಿರುವ ಸದ್ಭಾವನೆಯಿಂದ ಏರುತ್ತಿರುವ ಪ್ರೇಮದಿಂದ ಅಖಂಡವಾಗಿ ಶ್ರೀಕೃಷ್ಣನ ಭಜನೆಯನ್ನು ಸಾಧಿಸುವವರಿಗೆ ಸಂಸಾರದ ಬಂಧನವು ಉಳಿಯಲಾರದು ।।೩೦೪।। ಸರ್ವ ಭಯಗಳಲ್ಲಿ ಭವಭಯವು ಅತಿದುರ್ಧರವಾಗಿದೆ. ಪಾಪ! ಇದು ಸಹ ಹರಿಭಕ್ತಿಯ ಎದುರಿಗೆ ಕಿಂಕರವಾದಾಗ ಎದುರಿಗೆ ಬಂದು ಹೇಗೆ ನಿಲ್ಲಬೇಕು ? ।।೩೦೫।। ರಾಮಕೃಷ್ಣ ಸ್ಮರಣೆ ಮಾಡುವುದರಿಂದ ಜನ್ಮ ಮರಣವು ಎದ್ದು ಓಡಿಹೋಗುವುದು. ಆಗ ಧೈರ್ಯಮಾಡಿ ಎದುರಿಗೆ ನಿಲ್ಲಲು ಸಂಸಾರಕ್ಕೆ ಮುಖ ಎಲ್ಲಿದೆ? ।।೩೦೬।। ಹರಿಚರಣ ಭಜನೆಯಲ್ಲಿ ಪ್ರೀತಿ ಇದ್ದರೆ ಸಂಸಾರಭಯದ ನಿವೃತ್ತಿಯಾಗುವುದು. ಈ ಪ್ರಕಾರವಾಗಿ ಹರಿಭಕ್ತಿಯು ಪರಮ ನಿರ್ಭಯವಾಗಿರುವುದು. ಹೀಗೆ ನಮ್ಮ ಬುದ್ಧಿಯ ನಿಶ್ಚಯವಾಗಿದೆ ।।೩೦೭।। ಇದೇ ನಮ್ಮ ಕೃತನಿಶ್ಚಯವೆಂದು ನೀನು ನಿಶ್ಚಿತವಾಗಿ ತಿಳಿ ಮತ್ತು ಇದಕ್ಕೆ ವೇದ, ಶಾಸ್ತ್ರ, ಪುರಾಣಗಳ ಸಾಕ್ಷಿ ಇರುವುದು. ತಾತ್ಪರ್ಯವೇನೆಂದರೆ, ಸರ್ವ ಪ್ರಾಣಿಗಳಿಗೆ ಸರ್ವದೃಷ್ಟಿಯಿಂದ ಭಗವದ್ಭಜನೆಯೇ ನಿರ್ಭಯ ಸ್ಥಾನವಾಗಿರುವುದು ।।೩೦೮।। ವೇದ, ಶಾಸ್ತ್ರ, ಪುರಾಣಗಳ ಮಾತಿರಲಿ, ಪ್ರತ್ಯಕ್ಷವಾಗಿ ಶ್ರೀಕೃಷ್ಣನು ತನ್ನ ಮುಖದಿಂದಲೇ ''ನಾನು ಸರ್ವಥಾ ಭಕ್ತಿಯ ಅಧೀನನು'' ಎಂದು ಇದನ್ನೇ ಹೇಳಿರುವನು ।।೩೦೯।। ಇಷ್ಟೇ ಅಲ್ಲ ಶ್ರೀಕೃಷ್ಣನು ಪ್ರತ್ಯಕ್ಷವಾಗಿ ತನ್ನ ನಾಲ್ಕು ಕೈಗಳನ್ನು ಎತ್ತಿ ನಿಜಾತ್ಮಪ್ರಾಪ್ತಿಯ ಉಪಾಯವನ್ನು ಹೇಳಿರುವನು. ''ಭಕ್ತ್ಯಾಹಮೇಕಯಾ ಗ್ರಾಹ್ಯ'' ಅಂದರೆ ಭಕ್ತಿಯ ಒಂದರಿಂದಲೇ ನಾನು ವಶನಾಗುವೆ ಎಂದು ತೀವ್ರವಾಗಿ ಹೇಳಿರುವನು ।।೩೧೦।।

ವೇದಶಾಸ್ತ್ರಗಳನ್ನು ಅಧ್ಯಯನ ಮಾಡಲಾಗದ ಅಜ್ಞಾನಿ ಜೀವಿಗಳಿಗಾಗಿ ಪರಮೇಶ್ವರ ಪ್ರಾಪ್ತಿಯು ಸುಗಮವಾಗಿ, ಅವರಿಗೆ ಬ್ರಹ್ಮಸ್ವರೂಪರಾಗಲು ದೇವರೇ ಹರಿಭಕ್ತಿಯನ್ನು ಪ್ರಕಟಿಸಿರುವನು ।।೩೧೧।। ವೇದಶಾಸ್ತ್ರಗಳನ್ನು ಪಠಿಸದ ಜಡ ಮೂಢರಲ್ಲಿ ಯಾರು ಉದ್ಧರಿಸಿರುವರು? ಎಂದು ಕೇಳಿದರೆ, ಉನ್ಮತ್ತನಾದ ಗಜೇಂದ್ರನ ಉದ್ಧಾರವಾಗಿದೆ. ಗರ್ಭದಲ್ಲಿಯೇ ಪರೀಕ್ಷಿತಿಯ ರಕ್ಷಣೆಯಾಗಿದೆ ।।೩೧೨।।

ಅಂಬರೀಷಗರ್ಭ ನಿವಾರಣ । ಕರಾವಯಾ ಭಕ್ತೀಚ ಕಾರಣ । ''ಅಹಂಭಕ್ತಪರಾಧೀನಃ'' । ಸ್ವಮುಖೇ ನಾರಾಯಣ ಬೋಲಿಲಾ ।೩೧೩॥ ವನಚರ ವಾನರ ನೇಣೋ ಕಿತೀ । ಉದ್ಧರಲೇ ಭಗವದ್ಭಕ್ತೀ । ಅಸ್ವಲೇ ತಾರಾವಯಾ ನಿಶ್ಚಿತೀ । ವಿವರೀ ಜಾಂಬವತೀ ಭಕ್ತೀಸ್ತವ ವರಿಲೀ ।೩೧೪॥ ಜಾಣ ಪಾ ಅವಿವೇಕೀ ಕೇವಳ । ಗೌಳೀ ಗೋಧನೇ ಗೋಪಾಳ । ತೇಹೀ ಉದ್ಧರಿಲೇ ಸಕಳ । ಶ್ರೀಕೃಷ್ಣಸಖೇ ಪ್ರಬಳ ಅನನ್ಯ ಪ್ರೀತೀ ।೩೧೫॥ ಶಾಸ್ತ್ರವಿರುದ್ಧ ಅವಿವೇಕಸ್ಥಿತೀ । ಜಾರಭಾವೇ ಶ್ರೀಕೃಷ್ಣಪ್ರೀತೀ । ಗೋಪೀ ಉದ್ಧರಿಲ್ಯಾ ನೇಣೋ ಕಿತೀ । ಅನನ್ಯಭಕ್ತಿಸಖ್ಯತ್ವೇ ।೩೧೬॥ ನ ಕರಿತಾ ನಾನಾ ವ್ಯುತ್ಪತ್ತೀ । ಸುಗಮೋಪಾಯೇ ಬ್ರಹ್ಮ ಪ್ರಾಪ್ತೀ । ಅಬಳೇ ತರಾವಯಾ ನಿಶ್ಚಿತೀ । ಭಗವಂತೇ ನಿಜಭಕ್ತಿ ಪ್ರಗಟ ಕೇಲೀ ।೩೧೭॥ ತೇ ಹೇ ರಾಯಾ ಭಾಗವತ ಜಾಣ । ಮುಖ್ಯತ್ವೇ ಭಕ್ತಿಪ್ರಧಾನ । ಭಾವೇ ಕರಿತಾ ಭಗವದ್ಭಜನ । ಅಜ್ಞಾನ ಜನ ಉದ್ಧರತೀ ।೩೧೮॥ ಹೇ ಭಾಗವತ ನವ್ಹೇ ನವ್ಹೇ । ಅಜ್ಞಾನಾಲಾಗೀ ನಿಜಪವ್ಹೇ । ಭವಾಬ್ಧಿ ತರಾವಯಾ ಭಜನಭಾವೇ । ಮಹಾನಾವ ದೇವೇ ನಿರ್ಮಾಣ ಕೇಲೀ ।೩೧೯॥ ಭಾಗವತಾಚೇ ಮಹಾನಾವೇ । ಜೇ ರಿಘಾಲೇ ಭಜನಭಾವೇ । ತ್ಯಾಂಸೀ ಭವಭಯಾಚೇ ಹೇಲಾವೇ । ಭಜನ ಸ್ವಭಾವೇ ನ ಲಾಗತೀ ।೩೨೦॥ ಸ್ತ್ರೀ ಶೂದ್ರಾದಿ ಆಘವೇ । ಘಾಲೂನಿಯಾ ಯೇ ನಾವೇ । ಏಕೇಚ ಖೇಪೇ ಸ್ವಯೇ ನ್ಯಾವೇ । ಭಜನಭಾವೇ ಪರತೀರಾ ।೩೨೧॥ ಜೇ ಆವಲಿತಾ ಭಾವಬಳೇ । ತೋಡೀ ಕರ್ಮಾಕರ್ಮಕ್ರೂರಜಳೇ । ಸ್ವಬೋಧಾಚೇನಿ ಪಾಣೇಢಾಳೇ । ಕಾಢಿತೀ ಏಕ ವೇಳೇ ನಿಜಾತ್ಮತೀರಾ ।೩೨೨॥ ವೈರಾಗ್ಯಾಚೇ ನಿಜನಾವಾಡೇ । ಅಢಳ ಬಸಲೇ ಚಹೂಕಡೇ । ವಿಷಯಾಂಚೇ ಆದಳ ರೋಕಡೇ । ಚುಕವೂನಿ ಧಡಪುಡೇ ಕಾಢಿತೀ ಕಾಂಠಾ ।೩೨೩॥ ಸಂಚಿತಕ್ರಿಯಮಾಣಾಂಚ್ಯಾ ಲಾಟಾ । ಮೋಡೋನಿ ಲಾವಿತೀ ನೀಟ ವಾಟಾ । ವೇಂಚೂನಿ ಪ್ರಾರಬ್ಧಾಚಾ ಸಾಂಠಾ । ನಿಜಾತ್ಮತಟಾ ಕಾಢಿತೀ ।೩೨೪॥ ತೇಥ ಗುರುವಚನ ಸಾಚೋಕಾರೇ । ಸಾಂಭಾಳೀತ ಉಣೇಪುರೇ । ಭೂತದಯೇಚೇನಿ ದೋರೇ । ನಿಜನಿರ್ಧಾರೇ ವೋಢಿತೀ ।೩೨೫॥ ತಂವ ಏಕಾಏಕೀ ಏಕಸರೀ । ಕಾಢಿಲೀ ಪರಾತ್ಪರತೀರೀ । ತಂವ ಪ್ರತ್ಯಾವೃತ್ತೀ ಯೇರಝಾರೀ । ಆತ್ಮಸಾಕ್ಷಾತ್ಕಾರೀ ಖುಂಟಲೀ ।೩೨೬॥ ಯೇಥ ಧರಿಲಾ ಪುರೇ ಭಾವೋ । ತೈ ಬುಡಣೇಚಿ ಹೋಯ ವಾವೋ । ಮಗ ಟಾಕಾವೋ ಜೋ ಠಾವೋ । ತೋ ಸ್ವಯಮೇವೋ ಆಪಣ ಹೋಯ ।೩೨೭॥

ಅಂಬರೀಷನ ಗರ್ಭವಾಸ ತಪ್ಪುವುದಕ್ಕೆ ಈ ಹರಿಭಕ್ತಿಯು ಕಾರಣವಾಯಿತು. ''ಅಹಂ ಭಕ್ತಿ ಪರಾಧೀನಃ'' (ನಾನು ಭಕ್ತರ ಆಧೀನನು) ಹೀಗೆ ಸ್ವಮುಖದಿಂದ ನಾರಾಯಣನು ನುಡಿದಿರುವನು ।೩೧೩॥ ಈ ಭಗವದ್ಭಕ್ತಿಯಿಂದ ವನಚರರಾದ ಅದೆಷ್ಟೋ ವಾನರರು ಉದ್ಧಾರರಾದರೋ ಯಾರು ಬಲ್ಲರು? ಕರಡಿ ಕುಲದ ಉದ್ಧಾರವಾಗಬೇಕೆಂದು ಭಗವಾನನು ಜಾಂಬವಂತಿಯನ್ನು ಒರಿಸಿದ್ದು ಭಕ್ತಿಯೇ ಕಾರಣವಾಗಿದೆ ।೩೧೪॥ ವಿಚಾರಿಸಿ ನೋಡಿರಿ, ಕೇವಲ ಅವಿವೇಕಿಯರಾದ ಗೌಳಿಯರು, ಗೋವುಗಳು ಹಾಗೂ ಗೋಪಾಲರು. ಇವರೆಲ್ಲರೂ ಶ್ರೀಕೃಷ್ಣನ ಸಂಗಡಿಗರಾಗಿ ಪ್ರಬಲವಾದ ಅನನ್ಯ ಪ್ರೀತಿಯಿಂದಲೇ ಉದ್ಧಾರರಾದರು ।೩೧೫॥ ಶಾಸ್ತ್ರವಿರುದ್ಧವಾಗಿ, ಅವಿವೇಕತನದ ಜಾರಬುದ್ಧಿಯಿಂದ ಶ್ರೀಕೃಷ್ಣನನ್ನು ಅತ್ಯಂತ ಪ್ರೇಮ ಮಾಡಿದಕ್ಕೆ ಗೋಪಿಯರು ಉದ್ಧಾರರಾದ ಗಣಿತವೇ ಇಲ್ಲ ।೩೧೬॥ ನಾನಾ ಪ್ರಕಾರದ ಶಾಸ್ತ್ರ ಇತ್ಯಾದಿ ಏನೂ ಓದದೇ ಸುಲಭ ಉಪಾಯದಿಂದ ಬ್ರಹ್ಮಪ್ರಾಪ್ತಿಯಾಗಬೇಕು ಮತ್ತು ದುರ್ಬಲರು ಸಹ ನಿಶ್ಚಿತವಾಗಿ ಉದ್ಧಾರರಾಗಬೇಕೆಂದು ಭಗವಾನನು ತನ್ನ ಭಕ್ತಿಯನ್ನು ಪ್ರಕಟಿಸಿರುವನು ।೩೧೭॥ ಹೇ ರಾಜನೇ, ಇದೇ ಆ ಭಾಗವತವು ಇದರಲ್ಲಿ ಭಕ್ತಿಯೇ ಪ್ರಧಾನವಾಗಿರುವುದು. ಶುದ್ಧ ಭಾವದಿಂದ ಭಗವದ್ಭಜನೆಯನ್ನು ಮಾಡಲು ಅಜ್ಞಾನಿಯಾದರೂ ಉದ್ಧರಿಸುವರು ।೩೧೮॥ ಇದು ಬರೀ ಭಾಗವತವು ಅಲ್ಲವೇ ಅಲ್ಲ. ಇದು ದೀನ, ಅಜ್ಞಾನ ಜನರಿಗಾಗಿ ಕಟ್ಟಿದ ಅರವಟ್ಟಿಗೆಯಾಗಿದೆ ಮತ್ತು ಭಜನೆಯ ಭಾವದಿಂದ ಭಾಗವತರೂಪ ಮಹಾನೌಕೆಯನ್ನು ದೇವರು ನಿರ್ಮಿಸಿರುವನು ।೩೧೯॥ ಈ ಭಾಗವತದ ಮಹಾ ನೌಕೆಯಲ್ಲಿ ಕುಳಿತು ಹೊರಟರೆ, ಅವರ ಭಜನ ಸ್ವಭಾವದಿಂದ ಸಂಸಾರ ಭಯಕ್ಕಾಗಿ ಎಡತಾಕುವದು ಆಗುವುದಿಲ್ಲ ।೩೨೦॥ ಈ ನೌಕೆಯಲ್ಲಿ ಸ್ತ್ರೀ ಶೂದ್ರಾದಿಕರೆಲ್ಲರನ್ನು ಕೂಡಿಸಿ ಒಂದೇ ವೇಳೆಯಲ್ಲಿ ಭಜನಭಾವದಿಂದ ಆ ಕಡೆಯ ದಂಡೆಯನ್ನು ಸೇರಲು ಸಾಧ್ಯವಾಗುವುದು ।೩೨೧॥ ಈ ನೌಕೆಯನ್ನು ಭಾವಬಲದಿಂದ ಹುಟ್ಟುಹಾಕಲು ಕರ್ಮಾಕರ್ಮರೂಪ ಕ್ರೂರ ಜಲವು ಹಿಂದಾಗುತ್ತ ನಿಜಬೋಧದ ಪ್ರವಾಹದಿಶೆಯಿಂದ ಒಂದೇ ಸಮಯಕ್ಕೆ ಆಚೆಯ ದಂಡೆಗೆ ಹೋಗಿ ಮುಟ್ಟುವರು ।೩೨೨॥ ವೈರಾಗ್ಯರೂಪ ಅಂಬಿಗರು ನಾಲ್ಕು ದಿಶೆಗಳಲ್ಲಿ ಕುಳಿತುಕೊಂಡು ವಿಷಯಗಳೆಂಬ ದೊಡ್ಡ ದೊಡ್ಡ ಕಲ್ಲುಬಂಡೆಗಳನ್ನು ತಪ್ಪಿಸುತ್ತ ಆಚೆದಂಡೆಯನ್ನು ತಲುಪಿಸುವರು ।೩೨೩॥ ಮತ್ತು ಇವರು ಸಂಚಿತ ಕ್ರಿಯಾಮಾಣಗಳೆಂಬ ತೆರೆಗಳಿಂದ ತಪ್ಪಿಸುತ್ತ ನೇರವಾದ ಮಾರ್ಗಕ್ಕೆ ಹಚ್ಚುವರು ಮತ್ತು ಕೂಡಿರುವ ಪ್ರಾರಬ್ಧವನ್ನು ಮುಗಿಸಿ ಆತ್ಮಸ್ವರೂಪವೆಂಬ ಆಚೆಯ ದಡಕ್ಕೆ ಮುಟ್ಟಿಸುವರು ।೩೨೪॥ ಇದರಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ, ಗುರುವಚನವು ಸಾಂಭಾಳಿಸುವುದು ನೌಕೆಯು ದಂಡೆಗೆ ಹತ್ತಲು ಭೂತದಯೆ ಎಂಬ ಹಗ್ಗದಿಂದ ಆತ್ಮನಿರ್ಧಾರದಿಂದ ಜಗ್ಗುವರು ।೩೨೫॥ ಆಗ ಆ ನೌಕೆಯು ಸಪಾಟವಾದ ಪರಾತ್ಪರ ಎಂಬ ದಂಡೆಗೆ ಹತ್ತುವುದು. ಎಲ್ಲರನ್ನೂ ಒಮ್ಮೆಲೇ ಆಚೆಯ ದಡಕ್ಕೆ ಇಳಿಸುವರು. ಆಗ ಆತ್ಮಸಾಕ್ಷಾತ್ಕಾರವಾಗಿ ಪುನಾರವೃತ್ತಿಯು ಇಲ್ಲದಾಗಿ ಬರು ಹೋಗುವ ಪಾಳಿಯು ತಪ್ಪುವುದು ।೩೨೬॥ ಪ್ರೇಮಭಾವ ಒಂದನ್ನೇ ಹಿಡಿದರೆ ಸಾಕು, ಆಗ ''ಮುಳುಗಿದನು'' ಎನ್ನುವ ಮಾತು ಸುಳ್ಳಾಗುವುದು ಹಾಗೂ ತಾನು ಎಲ್ಲಿಗೆ ಹೋಗಿ ಮುಟ್ಟಬೇಕೋ ಆ ಸ್ಥಾನವು ತಾನೇ ಆಗುವನು ।೩೨೭॥

ಇಲ್ಲಿ ಈಸುಬೀಳದೇ ದಾಟುವರು

ಯೇಥ ಪವ್ಹಣಯಾವೀಣ ತರಣೇ । ಪ್ರಯಾಸೇವೀಣ ಪ್ರಾಪ್ತೀ ಘೇಣೇ । ಸುಖೋಪಾಯೇ ಬ್ರಹ್ಮ ಪಾವಣೇ । ಯಾಲಾಗೀ ನಾರಾಯಣೇ ಪ್ರಕಾಶಿಲೀ ಭಕ್ತೀ ।।೨೮।। ಭಾಗವತಧರ್ಮಾಚಿಯೇ ಸ್ಥಿತೀ । ಭಾಳೀ ಭೋಳೀ ಭವಾಬ್ಧಿ ತರತೀ । ಸುಖೋಪಾಯೇ ಬ್ರಹ್ಮಪ್ರಾಪ್ತಿ । ತೇಚೀ ಶ್ಲೋಕಾರ್ಥೀ ವಿಶದ ಸಾಂಗೇ ।।೨೯।।

ಯಾನಾಸ್ಥಾಯ ನರೋ ರಾಜನ್ ನ ಪ್ರಮಾದ್ಯೇತ ಕರ್ಹಿಚಿತ್ । ಧಾವನ್ ನಿಮೀಲ್ಯ ವಾ ನೇತ್ರೇ ನ ಸ್ಖಲೇನ್ನ ಪತೇದಿಹ ।।೩೫।।

ಅರ್ಥ:- ರಾಜನೇ, ಈ ಭಾಗವತ ಧರ್ಮದ ಆಚರಣೆಯಿಂದ ನಡೆಯುವ ಮನುಷ್ಯನು ಇಹಜೀವನದಲ್ಲಿ ಎಂದೂ ಮುಗ್ಗರಿಸುವುದಿಲ್ಲ. ಕಣ್ಣುಗಳನ್ನು ಕಟ್ಟಿಕೊಂಡು ಓಡಿದರೂ ಮುಗ್ಗರಿಸಿ ಬೀಳುವುದಿಲ್ಲ.

ಜೋ ಶ್ರುತಿಸ್ಮೃತೀ ನೇಣತಾ । ಭಾವೇ ಭಜೇ ಭಗವತ್ಪಥಾ । ತ್ಯಾಸೀ ವಿಧಿನಿಷೇಧಭಾಧಕತಾ । ಸ್ವಪ್ನೀಹೀ ಸರ್ವಥಾ ಪ್ರಮಾದು ನ ಘಡೇ ।।೩೦।। ಸದ್ಭಾವೇಸೀ ಸಪ್ರೇಮ । ಆಚರಿತಾ ಭಾಗವತಧರ್ಮ । ಬಾಂಧೂ ನ ಶಕೇ ಕರ್ಮಾಕರ್ಮ । ಭಾವೇ ಪುರುಷೋತ್ತಮ ಸಂತುಷ್ಟ ಸದಾ ।।೩೧।। ಶ್ರುತಿಸ್ಮೃತಿ ಹೇ ದೋನ್ಹೀ ಡೋಳೇ । ಯೇಣೇವೀಣ ಜೇ ಆಂಧಳೇ । ತೇಹೀ ಹರಿಭಜನೀ ಧಾವತಾ ಭಾವಬಳೇ । ಪಡೇ ನಾ ಆಡಖಳೇ ಸಪ್ರೇಮ ಯೋಗೇ ।।೩೨।। ಪ್ರೇಮೇವೀಣ ಶ್ರುತಿಸ್ಮೃತಿಜ್ಞಾನ । ಪ್ರೇಮೇವೀಣ ಧ್ಯಾನಪೂಜನ । ಪ್ರೇಮೇವೀಣ ಶ್ರವಣಕೀರ್ತನ । ವೃಥಾ ಜಾಣ ನೃಪನಾಥಾ ।।೩೩।। ಮಾತಾ ದೇಖೋನಿ ಪ್ರೇಮಭಾವೇ । ಬಾಲಕ ಡೋಳೇ ಝಾಂಕೂನಿ ಧಾಂವೇ । ತೇ ಧಾಂವೇಸವೇ ಝೇಂಪಾವೇ । ಅತಿಸದ್ಭಾವೇ ನಿಜಮಾತಾ ।।೩೪।। ತೈಸಾ ಸಪ್ರೇಮ ಜೋ ಭಜೇ ಭಕ್ತು । ತ್ಯಾ ಭಜನಾಸವೇ ಭಗವಂತು । ಭುಲಲಾ ಚಾಲೇ ಸ್ವಾನಂದಯುಕ್ತು । ಸ್ವಯೇ ಸಾಂಭಾಳಿತು ಪದೋಪದೀ ।।೩೫।। ಐಸೇ ಆಚರಿತಾ ಭಾಗವತಧರ್ಮ । ಬಾಧೂ ನ ಶಕೆ ಕರ್ಮಾಕರ್ಮ । ಕರ್ಮಾಸೀ ಜ್ಯಾಚೀ ಆಜ್ಞಾ ನೇಮ । ತೋ ಪುರುಷೋತ್ತಮ ಭಜನಾಮಾಜೀ ।।೩೬।। ಐಸಾ ಭಾಗವತಧರ್ಮೇ ಗೋವಿಂದು । ತುಷ್ಟಲಾ ಚಾಲೇ ಸ್ವಾನಂದಕಂದು । ತೇಥೇ ಕೇವೀ ರಿಘೇ ವಿಧಿನಿಷೇಧು । ಭಕ್ತಾ ಪ್ರಮಾದು ಕದಾ ನ ಬಾಧೀ ।।೩೭।। ಜೇವೀ ಕಾ ಸ್ವಾಮೀಚಿಯಾ ಬಾಳಾ । ಅವರೋಧು ನ ಕರವೇ ದ್ವಾರಪಾಳಾ । ತೇವೀ ಭಾಗವತಧರ್ಮಭಜನಶೀಳಾ । ಕರ್ಮಾರ್ಗಳಾ ಬಾಧೂ ನ ಶಕೇ ।।೩೮।। ಜ್ಯಾಸೀ ಭಗವದ್ಭಜನೀ ವಿಶ್ವಾಸು । ವಿಧಿನಿಷೇಧು ತ್ಯಾಚಾ ದಾಸು । ದೇಖೋನಿ ನಿಜಭಜನವಿಲಾಸು । ಸ್ವಯೇ ಜಗನ್ನಿವಾಸು ಸುಖಾವೇ ।।೩೯।।

ಮತ್ತು ಯಾವ ಪ್ರಯಾಸವಿಲ್ಲದೇ ಪ್ರಾಪ್ತಿ ಮಾಡಿಕೊಳ್ಳುವರು. ಅರ್ಥಾತ್ ಸುಖೋಪಾಯದಿಂದಲೇ ಬ್ರಹ್ಮಪ್ರಾಪ್ತಿಯಾಗಬೇಕೆಂಬ ಉದ್ದೇಶದಿಂದಲೇ ನಾರಾಯಣನು ಭಕ್ತಿಯನ್ನು ಪ್ರಕಟಿಸಿರುವನು ।।೨೮।। ಇಲ್ಲಿ ಭಾಳೇಭೋಳೇ ಜನರು ಸಹ ಈ ಸಂಸಾರ ಸಮುದ್ರವನ್ನು ದಾಟಿಹೋಗುವಂತಹ ಸ್ಥಿತಿಯು ಭಾಗವತಧರ್ಮದ್ದಾಗಿದೆ. ಈಗ ಸುಲಭ ರೀತಿಯಲ್ಲಿ ಬ್ರಹ್ಮಪ್ರಾಪ್ತಿಯು ಹೇಗಾಗುವುದೆಂಬುದನ್ನು ಶ್ಲೋಕಾರ್ಥದಲ್ಲಿ ಸ್ಪಷ್ಟವಾಗಿ ಹೇಳುವರು ।।೨೯।।

ಶ್ರುತಿಸ್ಮೃತೀಗಳನ್ನು ತಿಳಿಯಲಾರದವರು ಕೇವಲ ಭಕ್ತಿಭಾವದಿಂದ ಭಾಗವತ ಧರ್ಮವನ್ನು ಅನುಸರಿಸಿದರೆ, ವಿಧಿನಿಷೇಧಗಳ ಬಾಧೆಯಾಗುವುದಿಲ್ಲ ಮತ್ತು ಇವರಿಗೆ ಸ್ವಪ್ನದಲ್ಲಿಯೂ ಪ್ರಮಾದಗಳು ಸಂಭವಿಸುವುದಿಲ್ಲ ।।೩೦।। ಸಪ್ರೇಮದಿಂದ, ಸದ್ಭಾವನೆಯಿಂದ ಭಾಗವತ ಧರ್ಮದ ಆಚರಣೆಯನ್ನು ಮಾಡುವವರಿಗೆ ಕರ್ಮಾಕರ್ಮಗಳು ಬಾಧಿಸಲಾರವು. ಇವರ ಭಕ್ತಿಯಿಂದಲೇ ಪುರುಷೋತ್ತಮನು ಸದಾ ಸರ್ವದಾ ಸಂತುಷ್ಟನಾಗಿರುವನು ।।೩೧।। ಶ್ರುತಿ ಮತ್ತು ಸ್ಮೃತೀ ಇವು ಎರಡು ಕಣ್ಣುಗಳಾಗಿರುವುವು. ಇವುಗಳನ್ನು ಅರಿಯದ ಕುರುಡರು ಸಹ ಭಾವಬಲದಿಂದ ಹರಿಭಜನೆಯಲ್ಲಿ ಧಾವಿಸುತ್ತಿರಲು ಅವರು ಎಲ್ಲಿಯೂ ಮುಗ್ಗರಿಸಿ ಬೀಳುವುದಿಲ್ಲ ।।೩೨।। ಹೇ ರಾಜನೇ, ಪ್ರೇಮವಿಲ್ಲದ ಶ್ರುತಿ ಸ್ಮೃತೀಯ ಜ್ಞಾನವು, ಪ್ರೇಮವಿಲ್ಲದ ಧ್ಯಾನ ಪೂಜೆಯು, ಪ್ರೇಮವಿಲ್ಲದ ಶ್ರವಣ,ಕೀರ್ತನೆಯು ಇವೆಲ್ಲವೂ ವ್ಯರ್ಥವೆಂದು ಚೆನ್ನಾಗಿ ತಿಳಿದುಕೋ ।।೩೩।। ತಾಯಿಯನ್ನು ಕಂಡಾಕ್ಷಣವೇ ಚಿಕ್ಕ ಬಾಲಕನು ಪ್ರೇಮದಿಂದ ಆಕೆಯತ್ತ ಕಣ್ಣುಮುಚ್ಚಿ ಧಾವಿಸುವನು. ಆಗ ಅಷ್ಟೇ ಪ್ರೇಮ ಭಾವದಿಂದ ತಾಯಿಯು ಅವನತ್ತ ಧಾವಿಸಿ ಅವನನ್ನು ಅಪ್ಪಿಕೊಳ್ಳುವಳು ।।೩೪।। ಅದರಂತೆಯೇ, ಯಾವ ಭಕ್ತನು ಸಪ್ರೇಮವಾಗಿ ಭಗವಂತನನ್ನು ಭಜಿಸುವನೋ, ಭಗವಂತನು ಇಂತಹ ಭಜನೆಗೆ ಭುಲಾಯಿಸಿ ಸ್ವಾನಂದದಿಂದ ಭಜಿಸುವವರ ಸಂಗಡವೇ ನಡೆಯುತ್ತ, ಮೇಲಿಂದ ಮೇಲೆ ಆತನನ್ನು ಸಾಂಭಾಳಿಸುವನು ।।೩೫।। ಈ ಪ್ರಕಾರವಾಗಿ ಭಕ್ತನು ಭಾಗವತಧರ್ಮವನ್ನು ಆಚರಿಸುತ್ತಿರಲು ಆತನಿಗೆ ಕರ್ಮಾಕರ್ಮಗಳು ಬಾಧಿಸಲು ಶಕ್ಯವೇ ಇಲ್ಲ. ಏಕೆಂದರೆ ಯಾವ ಕರ್ಮಕ್ಕೆ ಆಜ್ಞಾಪಿಸಿ, ನಿಯಮವನ್ನು ಹಾಕಿಕೊಟ್ಟ ಪುರುಷೋತ್ತಮನೇ ಆ ಭಕ್ತನ ಭಜನೆಯಲ್ಲಿರುವನು ।।೩೬।। ಈ ಪ್ರಕಾರವಾಗಿ ಸ್ವಾನಂದಕಂದನಾದ ಗೋವಿಂದನು ಭಾಗವತಧರ್ಮದಿಂದ ಸಂತುಷ್ಟನಾಗಿ ಭಕ್ತರ ಜೊತೆ ನಡೆಯುತ್ತಿರಲು ಅಲ್ಲಿ ವಿಧಿನಿಷೇಧಗಳ ಪ್ರವೇಶವಾದರೂ ಹೇಗಾಗುವುದು? ಆದ್ದರಿಂದ ಭಕ್ತನಿಗೆ ಪ್ರಮಾದ ಬಾಧೆಯು ಎಂದೂ ಆಗುವುದಿಲ್ಲ ।।೩೭।। ಸೇವಕನಾಗಿರುವ ದ್ವಾರಪಾಲಕನು ತನ್ನ ಸ್ವಾಮಿಯ ಬಾಲಕನಿಗೆ ತಡೆಹಿಡಿಯಲಾರನು. ಅದರಂತೆ ಭಾಗವತಧರ್ಮದಿಂದ ಭಜನೆಯನ್ನು ಮಾಡುವ ಭಕ್ತನಿಗೆ ಕರ್ಮದ ಪ್ರತಿಬಂಧವಾಗಲಾರದು ।।೩೮।। ಯಾರಿಗೆ ಭಗವದ್ಭಜನೆಯಲ್ಲಿ ವಿಶ್ವಾಸವಿದೆಯೋ, ಅವರಿಗೆ ವಿಧಿನಿಷೇಧಗಳು ದಾಸರಾಗುವುವು. ಈತನ ಭಜನೆವಿಲಾಸವನ್ನು ಕಂಡು ಸ್ವತಃ ಜಗನ್ನಿವಾಸನು ಸಂತುಷ್ಟನಾಗುವನು ।।೩೯।।

ಭಾಗವತಧರ್ಮೇ ರಾಹೇ ಕರ್ಮ । ತಂವ ತಂವ ಸುಖಾವೇ ಪುರುಷೋತ್ತಮ । ಸಪ್ರೇಮಭಕ್ತಾ ಬಾಧೀ ಕರ್ಮ । ಹಾ ವೃಥಾ ಭ್ರಮ ಭ್ರಾಂತಾಸೀ ।೩೪೦॥ ಕರ್ಮ ಕರೂ ಪಾವೇ ಪ್ರಮಾದು । ತಂವ ಪ್ರಮಾದೀ ಪ್ರಗಟೇ ಗೋವಿಂದು । ಯಾಲಾಗೀ ವಿಧಿನಿಷೇಧು । ನ ಶಕತೀ ಬಾಧೂ ಹರಿಭಕ್ತಾ ।೩೪೧॥ ಅಜಾಮಿಳಾ ಕರ್ಮಬಾಧ । ಯಮಪಾಶೀ ಬಾಂಧಿತಾ ಸುಬದ್ಧ । ತೇಥೇ ಪ್ರಗಟೋನಿ ಗೋವಿಂದ । ಕೇಲಾ ಅತಿಶುದ್ಧ ನಾಮಮಾತ್ರೇ ।೩೪೨॥ ಸ್ವಧರ್ಮ - ಕರ್ಮ ಹೇಚ ದೋನೀ । ನಿಜಸತ್ತಾ ಭೋಯೀ ಕರೂನೀ । ಜೋ ಪಹುಡೇ ಭಜನಸುಖಾಸನೀ । ತೋ ಪಡೇ ತೈ ದಂಡಣೇ ಸ್ವಧರ್ಮ - ಕರ್ಮಾ।೩೪೩॥ ಭಜನಪ್ರತಾಪಸತ್ತಾಲಕ್ಷಣೇ । ಸ್ವಧರ್ಮಕರ್ಮಾ ಐಸೇ ದಂಡಣೇ । ವರ್ಣಾಶ್ರಮಾಂಚಾ ಠಾವೋ ಪುಸಣೇ । ಹೋಳೀ ಕರಣೇ ಕರ್ಮಾಚೀ ।೩೪೪॥ ಏವಂ ಭಾಗವತಧರ್ಮೀ ಜೇ ಸೇವಕ । ಸ್ವಧರ್ಮಕರ್ಮ ತ್ಯಾಂಚೇ ರಂಕ । ತೇ ರಾಹೋ ನ ಶಕೇ ತ್ಯಾಸನ್ಮುಖ । ಮಾ ಕೇವೀ ಬಾಧಕ ಹೋ ಶಕೇಲ ।೩೪೫॥ ಕೈಸೇ ಕೈಸೇ ಭಾಗವತಧರ್ಮ । ಕೇವೀ ಭಗವಂತೀ ಅರ್ಪೇ ಕರ್ಮ । ಅತಿಗುಹ್ಯ ಉತ್ತಮೋತ್ತಮ । ನಿಜಭಜನವರ್ಮ ಐಕ ರಾಯಾ ।೩೪೬॥

ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾನುಸೃತಸ್ವಭಾವಾತ್ ।
ಕರೋತಿ ಯದ್ ಯತ್ ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯೇತ್ತತ್ ।೩೬॥

ಅರ್ಥ: ಬದ್ಧ ಜೀವನದಲ್ಲಿ ಗಳಿಸಿದ ನಿರ್ದಿಷ್ಟ ಸ್ವಭಾವದಿಂದಾಗಿ, ದೇಹ, ಮಾತು, ಮನಸ್ಸುಗಳಿಂದಲೂ, ಇಂದ್ರಿಯಗಳು, ಬುದ್ಧಿ ಅಥವಾ ಶುದ್ಧೀಕೃತ ಪ್ರಜ್ಞೆಯಿಂದಲೂ ವ್ಯಕ್ತಿಯು ತಾನು ಮಾಡಿದುದೆಲ್ಲವನ್ನು ''ಇದು ನಾರಾಯಣನ ಪ್ರೀತ್ಯರ್ಥವಾಗಿ'' ಎಂದು ಭಾವಿಸಿ ಭಗವಂತನಿಗೆ ಅರ್ಪಿಸಬೇಕು.

ಹೇತುಕ ಅಥವಾ ಅಹೇತುಕ । ವೈದಿಕ ಲೌಕಿಕ ಸ್ವಾಭಾವಿಕ । ಭಗವಂತೀ ಅರ್ಪೇ ಸಕಳಿಕ । ಯಾ ನಾವ ದೇಖ ''ಭಾಗವತಧರ್ಮ'' ।೩೪೭॥ ಉದಕೀ ತರಂಗ ಅತಿಚಪಳ । ಜಿಕಡೇ ಜಾಯ ತಿಕಡೇ ಜಳ । ತೈಸೇ ಭಕ್ತಾಂಚೇ ಕರ್ಮ ಸಕಳ । ಅರ್ಪೇ ತತ್ಕಾಳ ಭಗವಂತೀ ।೩೪೮॥ ಯೇ ಶ್ಲೋಕೀಚೇ ವ್ಯಾಖ್ಯಾನ । ಪಹಿಲೇ ಮಾನಸಿಕ ಅರ್ಪಣ । ಪಾಠೀ ಇಂದ್ರಿಯೇ ಬುದ್ಧಿ ಅಭಿಮಾನ । ಕಾಯಿಕ ಜಾಣ ಶ್ಲೋಕಾನ್ವಯೇ ।೩೪೯॥ ಭಾಗವತಧರ್ಮಾಚೀ ನಿಜಸ್ಥಿತೀ । ಮನ ಬುದ್ಧಿ ಚಿತ್ತ ಅಹಂಕೃತೀ । ಆದಿಕರೂನಿ ಇಂದ್ರಿಯವೃತ್ತೀ । ಭಗವಂತೀ ಅರ್ಪಿತೀ ತೇ ಐಕ ।೩೫೦॥

ಭಾಗವತಧರ್ಮದ ಕರ್ಮವನ್ನು ಮಾಡುತ್ತಿದ್ದಂತೆ ಕ್ರಮೇಣವಾಗಿ ಪಾಪಗಳು ನಷ್ಟವಾಗಿ ಪುರುಷೋತ್ತಮನು ಸಂತುಷ್ಟನಾಗುವನು. ಹೀಗಿರಲು ಭಕ್ತನಿಗೆ ಕರ್ಮವು ಬಾಧಿಸುವುದೆಂದು ಹೇಳುವಿಕೆಯು ಅಜ್ಞಾನಿಗಳ ಭ್ರಮೆಯಾಗಿರುವುದು ।೩೪೦॥ ಭಕ್ತನಿಗೆ ಕರ್ಮಗಳು ಪ್ರಮಾದದಲ್ಲಿ ತಳ್ಳಿದರೆ, ಆ ಪ್ರಮಾದದಲ್ಲಿಯೇ ಭಗವಂತನು ಪ್ರಕಟವಾಗುವನು. ಆದ್ದರಿಂದ ಹರಿಭಕ್ತನಿಗೆ ಕರ್ಮದ ವಿಧಿನಿಷೇಧಗಳು ಬಾಧಿಸುವುದಿಲ್ಲ ।೩೪೧॥ ಅಜಾಮಿಳನಿಗೆ ಆತನ ಕರ್ಮಗಳು ಬಾಧಕವಾದವು. ಯಮಪಾಶದಲ್ಲಿ ಆತನು ಕಟ್ಟಲ್ಪಟ್ಟನು. ಇಷ್ಟರಲ್ಲಿಯೇ ಕೇವಲ ನಾರಾಯಣ ನಾಮದಿಂದ ಭಗವಂತನು ಪ್ರಕಟನಾಗಿ ಆತನನ್ನು ಪಾವನಗೊಳಿಸಿದನು ।೩೪೨॥ ಸ್ವಧರ್ಮ ಮತ್ತು ಕರ್ಮ ಇವರಿಬ್ಬರನ್ನು ಭಕ್ತನು ತನ್ನ ಸತ್ತೆಯಿಂದ ಪಲ್ಲಕ್ಕಿ ಹೊರುವವರನ್ನಾಗಿ ಮಾಡಿ ತಾನು ಭಜನರೂಪ ಪಲ್ಲಕ್ಕಿಯಲ್ಲಿ ಶಯನ ಮಾಡುವನು. ಅದು ಬಿದ್ದರೆ ಸ್ವಧರ್ಮಕರ್ಮಗಳಿಗೆ ದಂಡತೆತ್ತಬೇಕಾಗುವುದು ।೩೪೩॥ ಹೀಗೆ ಭಜನಪ್ರತಾಪದಿಂದ ಸ್ವಧರ್ಮಕರ್ಮಗಳಿಗೆ ದಂಡಿಸಲು ಸಾಧ್ಯವಾಗುವುದು. ವರ್ಣಾಶ್ರಮದ ಸ್ಥಾನವನ್ನೇ ಒರೆಸಿ ಒಗೆದು ಕರ್ಮದ ಹೋಳಿಯನ್ನೇ ಮಾಡಲು ಸಾಧ್ಯವಾಗುವುದು ।೩೪೪। ತಾತ್ಪರ್ಯ, ಈ ಪ್ರಕಾರವಾಗಿ ಭಾಗವತಧರ್ಮದ ಸೇವನೆ ಮಾಡುವವರಿಗೆ ಸ್ವಧರ್ಮ ಕರ್ಮಗಳು ಅವರ ದೀನ ದಾಸರಾಗುವುವು. ಭಕ್ತರ ಎದುರಿನಲ್ಲಿ ನಿಲ್ಲುವ ಸಾಮರ್ಥ್ಯವು ಇವುಗಳಿಗೆ ಇರುವುದಿಲ್ಲ. ಅಂದಮೇಲೆ ಭಕ್ತರಿಗೆ ಇವು ಹೇಗೆ ಬಾಧಕವಾಗುವುವು? ।೩೪೫॥ ಭಾಗವತಧರ್ಮವು ಯಾವ ಯಾವ ಪ್ರಕಾರಗಳಾಗಿವೆ, ಭಗವಂತನಲ್ಲಿ ಕರ್ಮಗಳು ಹೇಗೆ ಅರ್ಪಣೆಯಾಗುವುವು? ಹೇ ರಾಜನ್, ಇದು ಅತಿಗುಹ್ಯವಾದ ನಿಜಭಜನೆಯ ಮರ್ಮವಾದ ವಿಷಯವಾಗಿದೆ. ಇದನ್ನು ಹೇಳುವೆ ಕೇಳು ।೩೪೬॥

ಕಾರಣವಾಗಿರಲಿ, ಅಥವಾ ಕಾರಣವಿಲ್ಲದಾಗಿರಲಿ. ವೈದಿಕವಾಗಿರಲಿ, ಲೌಕಿಕವಾಗಿರಲಿ, ಸ್ವಾಭಾವಿಕವಾಗಿರಲಿ ಈ ಎಲ್ಲ ಕರ್ಮಗಳನ್ನು ಭಗವಂತನಲ್ಲಿ ಅರ್ಪಣೆ ಮಾಡಬೇಕು. ಇದಕ್ಕೆ ಮಾತ್ರ ''ಭಾಗವತ ಧರ್ಮ'' ಎನ್ನುವರು. ಇದನ್ನು ನೀನು ಲಕ್ಷದಲ್ಲಿಡು ।೩೪೭॥ ನೀರಿನಲ್ಲಿಯ ತೆರೆಯು ಅತಿಚಪಲವಾಗಿರುವುದು. ಆದರೆ ಅದು ಎಲ್ಲಿ ಹೋದರೂ ನೀರಿನಲ್ಲಿಯೇ ಕೂಡಿರುವುದು. ಅದರಂತೆ ಭಕ್ತನ ಎಲ್ಲ ಕರ್ಮಗಳು ಭಗವಂತನಲ್ಲಿ ಅರ್ಪಣೆಯಾಗುವುದು. ಅರ್ಥಾತ್ ಭಗದ್ರೂಪವೇ ಆಗುವುದು ।೩೪೮॥ ಈ ಶ್ಲೋಕದ ವ್ಯಾಖ್ಯಾನದಲ್ಲಿ ಪ್ರಥಮತಃ ಮಾನಸಿಕ ಕರ್ಮದ ಅರ್ಪಣೆಯನ್ನು ಹೇಳಿದೆ. ನಂತರ ಇಂದ್ರಿಯಗಳು, ಬುದ್ಧಿ ಅಹಂಕಾರ ಇತ್ಯಾದಿ ಕರ್ಮಗಳ ಮತ್ತು ಕೊನೆಯಲ್ಲಿ ಕಾಯಿಕ ಕರ್ಮದ ಅರ್ಪಣೆ, ಹೀಗೆ ಶ್ಲೋಕದ ಅನುಸಾರವಾಗಿ ಹೇಳಿದೆ ।೩೪೯॥ ಭಾಗವತ ಧರ್ಮದ ನಿಜವಾದ ಸ್ಥಿತಿ ಎಂದರೆ, ಮನ, ಬುದ್ಧಿ, ಚಿತ್ತ, ಅಹಂಕಾರ ಮೊದಲು ಮಾಡಿ ಇಂದ್ರಿಯ ವೃತ್ತಿ ಇರುವುದು. ಇವೆಲ್ಲವೂ ಭಗವಂತನಿಗೆ ಅರ್ಪಣೆಯಾಗಬೇಕು. ಅದು ಹೇಗೆಂಬುದು ಕೇಳು ।೩೫೦॥

ಬಾಧೂ ನ ಶಕೇ ಸ್ವಧರ್ಮಕರ್ಮ । ಐಕ ರಾಯಾ ತ್ಯಾಚೇ ವರ್ಮ । ಮನೀ ಪ್ರಗಟಲಾ ಪುರುಷೋತ್ತಮ । ಅತಿನಿಃಸೀಮ ನಿಜಬೋಧೇ ।೩೫೧॥ ಮ್ಹಣೋನಿ ಸಂಕಲ್ಪ ವಿಕಲ್ಪ । ಅವಘೇ ಜಾಹಲೇ ಭಗವದ್ರೂಪ । ಯಾಲಾಗಿ ಭಕ್ತ ನಿತ್ಯ ನಿಷ್ಪಾಪ । ಸತ್ಯಸಂಕಲ್ಪ ಹರಿದಾಸ ।೩೫೨॥ ಜೇವೀ ಬುದ್ಧಿ ಬಳಾಂಚಾ ಖೇಳ । ರಾಜಾ ಪ್ರಧಾನ ಗಜದಳ । ಅವಘೇ ಕಾಷ್ಟಚಿ ಕೇವಳ । ತೇವೀ ಸಂಕಲ್ಪ ಸಕಳ ಭಗವದ್ರೂಪ ।೩೫೩॥ ಜೋ ಜೋ ಸಂಕಲ್ಪ ಕಾಮೀ ಕಾಮು । ತೋ ತೋ ಹೋಯ ಆತ್ಮಾರಾಮು । ತೇಥ ಭಜನಾಚಾ ಸಂಭ್ರಮು । ಅತಿನಿಃಸೀಮು ಸ್ವಯೇ ವಾಢೇ ।೩೫೪॥ ಜಾಗೃತಿ ಸುಷುಪ್ತೀ ಸ್ವಪ್ನ । ತಿಹೀ ಅವಸ್ಥಾ ಹೋಯ ಭಜನ । ತೇಥ ಅಖಂಡ ಅನುಸಂಧಾನ । ನಿಜಬೋಧೇ ಪೂರ್ಣ ಠಸಾವಲೇ ಅಂಗೀ ।೩೫೫॥ ಮನಾ ಹೋತಾ ಸಮಾಧಾನ । ಸಮಾಧಾನೇ ಅಧಿಕ ಭಜನ । ಪೂರ್ಣ ಬಾಣಲೇ ಅನುಸಂಧಾನ । ಧೇಯ - ಧಾತಾ - ಧ್ಯಾನ ಸಮರಸೇ ಭಜೇ ।೩೫೬॥ ತುರ್ಯಾ ಸಾಕ್ಷೀ ಉನ್ಮನೀ । ಯಾಹೀ ಲಾವಿಲ್ಯಾ ಭಗದ್ಭಜನೀ । ಜಂವವರೀ ಅವಸ್ಥಾಪಣೇ । ಆಪಆಪಣೇ ಮುಕಲ್ಯಾ ನಾಹೀ ।೩೫೭॥ ಐಸಾ ಭಾವನೇವೀಣ ಉಪಜೇ ಭಾವೋ । ತೋ ತೋ ತತ್ಕಾಳ ಹೋಯ ದೇವೋ । ಮಗ ಅರ್ಪಣಾಚಾ ನವಲಾವೋ । ನ ಅರ್ಪಿತಾ ಪಹಾ ಹೋ ಸ್ವಯೇ ಹೋಯ ।೩೫೮॥ ಸ್ವರೂಪೇ ಮಿಥ್ಯಾ ಕೇಲೇ ಸ್ವಪ್ನ । ಜಾಗೃತೀ ಸೋಲೂನಿ ಕಾಢಿಲೇ ಜ್ಞಾನ । ನಿವಡೋನಿ ಸುಷುಪ್ತಿ ಸುಖಸಮಾಧಾನ । ತಿಹೀತೇ ಪೂರ್ಣ ಏಕತ್ರ ಕೇಲೇ ।೩೫೯॥ ತಯೇ ಸ್ವರೂಪೀ ಸಗಳೇ ಮನ । ಸ್ವಯೇಚಿ ಕರೀ ನಿಜಾತ್ಮಾರ್ಪಣ । ತೇಥೀಚೇ ಸುಖಸಮಾಧಾನ । ಭಕ್ತ ಸಜ್ಞಾನ ಜಾಣತೀ ಸ್ವಯೇ ।೩೬೦॥ ಯಾಪರೀ ಮಾನಸಿಕ ಜಾಣ । ಸಹಜ ಸ್ವರೂಪೀ ಹೋಯ ಅರ್ಪಣ । ಆತಾ ಇಂದ್ರಿಯಾಂಚೇ ಸಮರ್ಪಣ । ಹೋಯ ತೇ ಲಕ್ಷಣ ಐಕ ರಾಯಾ ।೩೬೧॥ ದೀಪು ಲಾವಿಜೇ ಗೃಹಾಭೀತರೀ । ತೋಚಿ ಪ್ರಕಾಶೇ ಗವಾಕ್ಷದ್ವಾರೀ । ತೇವೀ ಮನೀ ಪ್ರಗಟಲಾ ಶ್ರೀಹರಿ । ತೋಚಿ ಇಂದ್ರಿಯಾಂತರೀ ಭಜನಾನಂದು ।೩೬೨॥ ತೇಚಿ ಇಂದ್ರಿಯವ್ಯಾಪಾರ । ಸಾಂಗಿಜತೀ ಸವಿಸ್ತರ । ಸ್ವಾಭಾವಿಕ ಇಂದ್ರಿಯ ವ್ಯವಹಾರ । ಭಜನತತ್ಪರ ಪರಬ್ರಹ್ಮೀ ।೩೬೩॥ ಜಂವ ದೃಷ್ಟಿ ದೇಖೇ ದೃಶ್ಯಾತೇ । ತಂವ ದೇವೋಚಿ ದಿಸೇ ತೇಥೇ । ಯಾಪರೀ ದೃಶ್ಯದರ್ಶನಾತೇ । ಅರ್ಪೀ ಭಜನಸತ್ತೇ ದೃಷ್ಟೀಚಾ ವಿಷಯೋ ।೩೬೪॥

ಹೇ ರಾಜನೇ, ಭಕ್ತನಿಗೆ ಸ್ವಧರ್ಮ ಕರ್ಮಗಳು ಹೇಗೆ ಬಾಧಿಸದು ಎಂಬುವ ಮರ್ಮವನ್ನು ಹೇಳುವೆ, ಕೇಳು. ಅತಿ ನಿಸ್ಸೀಮವಾದ ಆತ್ಮಬೋಧೆಯಿಂದ ಮನದಲ್ಲಿಯೇ ಪುರುಷೋತ್ತಮನು ಪ್ರಕಟನಾಗುವನು ।೩೫೧॥ ಆದ್ದರಿಂದ ಸಂಕಲ್ಪ ವಿಕಲ್ಪಗಳೆಲ್ಲವೂ ಭಗವದ್ರೂಪವಾಗುವುವು ಮತ್ತು ಈ ಯೋಗದಿಂದ ಭಕ್ತನು ನಿಷ್ಪಾಪನಾಗಿಯೇ ಇರುವನು. ಈತನು ಸಹ ಹರಿಯಂತೆ ಸತ್ಯಸಂಕಲ್ಪಿಯಾಗುವನು ।೩೫೨॥ ಪಗಡೆ ಆಟದಲ್ಲಿ ಆಟಿಕೆಗಳು ರಾಜಾ, ಪ್ರಧಾನಿ, ಆನೆ, ಕಾಲದಳ ಹೀಗೆ ಎಲ್ಲವು ಇರುವುವು. ಆದರೆ ಇವೆಲ್ಲವು ಕಟ್ಟಿಗೆಯಿಂದಲೇ ತಯಾರಿಸಿರುವುವು. ಅದರಂತೆ ಭಗವಂತನ ಭಕ್ತರ ಸಂಕಲ್ಪಗಳೆಲ್ಲವೂ ಭಗವದ್ರೂಪವೇ ಆಗುವುವು ।೩೫೩॥ ಈತನ ಸಂಕಲ್ಪವು ಯಾವ ಯಾವ ವಿಷಯದ ಇಚ್ಛೆಯನ್ನು ಮಾಡುವುದೋ, ಆಯಾ ವಿಷಯಗಳು ಆತ್ಮಾರಾಮರೂಪವಾಗುವುವು. ಆದ್ದರಿಂದ ಭಜನೆಯ ಸಂಭ್ರಮವು ತನ್ನಿಂದತಾನೇ ಅತಿಶಯವಾಗಿ ಬೆಳೆಯುವುದು ।೩೫೪॥ ಜಾಗೃತೆಯಲ್ಲಿ ಸ್ವಪ್ನದಲ್ಲಿ ಮತ್ತು ಸುಷುಪ್ತಿಯಲ್ಲಿ ಹೀಗೆ ಮೂರು ಅವಸ್ಥೆಗಳಲ್ಲಿ ಭಜನೆಯಾಗುತ್ತಿರುವುದು ಮತ್ತು ಅಂಗದಲ್ಲಿ ಆತ್ಮಬೋಧೆಯು ಪೂರ್ಣವಾಗಿ ನಟ್ಟಿಕೊಂಡಿರುವುದರಿಂದ ಅದರ ಅನುಸಂಧಾನವು ಅಖಂಡವಾಗಿರುವುದು ।೩೫೫॥ ಮನಸ್ಸಿಗೆ ಸಮಾಧಾನವು ಪ್ರಾಪ್ತವಾಯಿತೆಂದರೆ, ಆ ಯೋಗದಿಂದ ಭಜನವೂ ಅಧಿಕವಾಗಿಯೇ ಬೆಳೆಯುತ್ತ ನಡೆಯುವುದು. ಅನುಸಂಧಾನವು ಪೂರ್ಣವಾಗಿ ನಾಟಿಕೊಂಡಿರುವುದರಿಂದ ಧೇಯ, ಧ್ಯಾತಾ, ಧ್ಯಾನ ಇವು ಒಂದೇ ರೂಪವಾಗಿ ಭಜನೆಯು ನಡೆಯುವುದು ।೩೫೬॥ ತುರ್ಯಾ, ಸಾಕ್ಷಿ ಮತ್ತು ಉನ್ಮನೀ ಇವು ಮೂರು ಎಲ್ಲಿಯವರೆಗೆ ತಮ್ಮಿಂದ ದೂರವಾಗಿಲ್ಲವೋ, ಅಲ್ಲಿಯವರೆಗೂ ಅವುಗಳಿಗೆ ಭಕ್ತರು ಭಗದ್ಭಜನೆಯಲ್ಲಿ ಹಚ್ಚುವರು ।೩೫೭॥ ಈ ಪ್ರಕಾರವಾಗಿ ಭಾವನೆ ಇಲ್ಲದೇ ಭಾವನೆಯು ಉತ್ಪನ್ನವಾಗುವುದು. ಅದು ತತ್ಕಾಲದಲ್ಲಿ ದೇವಸ್ವರೂಪವಾಗುವುದು. ಆಗ ಅರ್ಪಣೆಯ ಯಾವ ಆಶ್ಚರ್ಯ? ಅರ್ಪಿಸದೇ ತಾನೇ ಅದು ಭಗವದರ್ಪಣೆಯಾಗುವುದು ।೩೫೮॥ ಇವರು ಸ್ವರೂಪಾನುಭವದಿಂದ ಸ್ವಪ್ನವನ್ನು ಮಿಥ್ಯೆಗೊಳಿಸುವರು. ಜಾಗೃತಿಯನ್ನು ಸುಲಿದು ಜ್ಞಾನವನ್ನು ಹೊರಗೆ ತೆಗೆಯುವರು. ಸುಷುಪ್ತಿಯ ಸುಖಸಮಾಧಾನವನ್ನು ಶೋಧಿಸಿ ಅದನ್ನು ಪೂರ್ಣವಾಗಿ ಏಕತ್ರಗೊಳಿಸುವರು ।೩೫೯॥ ಇಂತಹ ಸ್ವರೂಪದಲ್ಲಿ ಸ್ವತಃ ಮನವೇ ಆತ್ಮಾರ್ಪಣೆಯನ್ನು ಮಾಡುವುದು. ಇಂತಹ ಸ್ಥಿತಿಯ ಸುಖಸಮಾಧಾನವು ಸಜ್ಞಾನ ಭಕ್ತನೇ ಬಲ್ಲವನಾಗಿರುವನು ।೩೬೦॥ ಈ ಪ್ರಕಾರವಾಗಿ ಮಾನಸಿಕ ವ್ಯಾಪಾರವು ಸ್ವರೂಪದಲ್ಲಿ ಸಹಜವಾಗಿ ಅರ್ಪಣೆಯಾಗುವುದು. ಹೀಗೆ ನೀನು ತಿಳಿ. ಈಗ ಇಂದ್ರಿಯಗಳ ಸಮರ್ಪಣೆಯು ಹೇಗಾಗುವುದೆಂಬುದರ ಲಕ್ಷಣವನ್ನು ಕೇಳು ।೩೬೧॥ ಮನೆಯಲ್ಲಿ ದೀಪವನ್ನು ಹಚ್ಚಿದರೆ ಅದರ ಬೆಳಕು ಖಿಡಕೀಗಳಿಂದ ಹೊರಬೀಳುವುದು. ತದ್ವತ್ ಮನದಲ್ಲಿ ಶ್ರೀಹರಿಯು ಪ್ರಕಟನಾದನೆಂದರೆ, ಅದೇ ಇಂದ್ರಿಯಗಳಲ್ಲಿ ಭಜನಾನಂದ ರೂಪದಲ್ಲಿ ಪ್ರಕಟವಾಗುವುದು ।೩೬೨॥ ಈ ಇಂದ್ರಿಯಗಳ ವ್ಯಾಪಾರವನ್ನು ಸವಿಸ್ತಾರವಾಗಿ ಹೇಳುವೆ ,ಕೇಳು. ಸ್ವಾಭಾವಿಕ ಇಂದ್ರಿಯ ವ್ಯಾಪಾರಗಳು ಪರಬ್ರಹ್ಮಸ್ವರೂಪದಲ್ಲಿ ಭಜನರೂಪವಾಗುವುವು ।೩೬೩॥ ದೃಷ್ಟಿಯ ದೃಶ್ಯ ಪದಾರ್ಥಗಳನ್ನು ನೋಡಲು ಅದಕ್ಕೆ ಆಗ ದೇವರೇ ಕಾಣುವನು. ಈ ಪ್ರಕಾರವಾಗಿ ಭಜನೆಯ ಬಲದಿಂದ ದೃಶ್ಯ ದರ್ಶನ ಸಹ ದೃಷ್ಟಿಯ ವಿಷಯವು ಭಗವಂತನಿಗೆ ಅರ್ಪಣೆಯಾಗುವುದು ।೩೬೪॥

ದೃಶ್ಯ ದ್ರಷ್ಟಾ ಆಣಿ ದೃಷ್ಟೀ । ದೇಖತಾ ತಿನ್ಹೀ ಏಕವಟೀ । ಸಹಜೇ ಬ್ರಹ್ಮಾರ್ಪಣ ತೇ ದೃಷ್ಟೀ । ಭಕ್ತ ಜಗಜೇಠೀ ಯಾಪರೀ ಅರ್ಪೀ ।।೩೬೫।। ದೃಶ್ಯ ಪ್ರಕಾಶೀ ದೃಶ್ಯಪಣೇ । ತೇಚಿ ದೃಷ್ಟೀಮಾಜೀ ಹೋಯ ದೇಖಣೇ । ಐಸೇನಿ ಅಭಿನ್ನಪಣೇ । ದರ್ಶನಾರ್ಪಣೇ ಭಜತೀ ಭಕ್ತ ।।೩೬೬।। ಹೇ ಏಕಪಣೇ ತೀನಹೀ ಭಾಗ । ತಿನ್ಹೀಮಾಜೀ ಏಕ ಅಂಗ । ಐಸೇ ಜೇ ದೇಖಣೇ ಚಾಂಗ । ತ್ಯಾಚಿ ಅರ್ಪಣೇ ಸಾಂಗ ಸಹಜೇ ಅರ್ಪೀ ।।೩೬೭।। ನಾನಾ ಪದಾರ್ಥ ಪ್ರಾಂಜಳೇ । ನೀಚ ನವೇ ದೇಖತೀ ಡೋಳೇ । ಪರೀ ಅರ್ಪಣಾಚೇ ಸೋಹಳೇ । ನಿಜಾತ್ಮ ಮೇಳೇ ಅರ್ಪಿತೀ ಸ್ವಯೇ ।।೩೬೮।। ಯಾಪರೀ ದೃಷ್ಟೀಚೇ ದರ್ಶನ । ಭಕ್ತ ಕರಿತೀ ಬ್ರಹ್ಮಾರ್ಪಣ । ಆತಾ ಶ್ರವಣಾಚೇ ಅರ್ಪಣ । ಅರ್ಪೀ ತೇ ಲಕ್ಷಣ ಐಕ ರಾಯಾ ।।೩೬೯।। ಜೋ ಬೋಲಾತೇ ಬೋಲವಿತಾ । ತೋಚಿ ಶ್ರವಣೀ ಝಾಲಾ ಶ್ರೋತಾ । ತೋಚಿ ಅರ್ಥಾವಬೋಧು ಜಾಣತಾ । ತೇಥೇ ಬ್ರಹ್ಮಾರ್ಪಣತಾ ಸಹಜೇಚಿ ।।೩೭೦।। ಶಬ್ದು ಶಬ್ದತ್ವೇ ಜಂವ ಉಠೀ । ತಂವ ಶಬ್ದವಿತಾ ಪ್ರಗಟೇ ಪಾಠೀಪೋಟೀ । ತೇಣೇ ಅಕೃತ್ರಿಮ ಭಜನ ಉಠೀ । ಬ್ರಹ್ಮಾರ್ಪಣಮಿಠೀ ಶ್ರವಣೀ ಪಡೇ ।।೩೭೧।। ಶಬ್ದ ಬೋಲಾಸವೇ ಅರ್ಥವಾಢೀ । ತಂವ ಶಬ್ದವಿತಾ ಘೇ ಶಬ್ದಾರ್ಥಗೋಡೀ । ತೇಣೇ ಹರಿಭಜನೀ ಆವಡೀ । ಸ್ವಯೇ ಉಠೀ ಗಾಢೀ ಶ್ರವಣಾರ್ಪಣೇಸೀ ।।೩೭೨।। ಶಬ್ದ ಜಂವ ಕಾನೀ ಪಡೇ । ತಂವ ಶಬ್ದಾರ್ಥೇ ಭಜನ ವಾಢೇ । ಬೋಲವಿತ್ಯಾಚ್ಯಾ ಅಂಗಾ ಘಡೇ । ಅರ್ಪಣ ಉಘಡೇ ಕರಿತಾಂಚಿ ।।೩೭೩।। ಬೋಲಾಸೀ ಜೋ ಬೋಲಾವಿತಾ । ತ್ಯಾಸೀ ದೃಢ ಕೇಲೀ ಏಕಾತ್ಮತಾ । ತೇ ಭಜನ ಚಢೇ ಶ್ರವಣಾಚ್ಯಾ ಹಾತಾ । ಬ್ರಹ್ಮಾರ್ಪಣತಾ ನಿಜಯೋಗೇ ।।೩೭೪।। ಸದ್ಗುರುವಚನ ಪಡತಾ ಕಾನೀ। ಮನಾಚೇ ಮನಪಣ ವಿರೇ ಮನೀ । ತೇಚಿ ಶ್ರವಣ ಬ್ರಹ್ಮಾರ್ಪಣೀ । ಭಗವದ್ಭಜನೀ ಸಾರ್ಥಕತಾ ।।೩೭೫।। ಶ್ರವಣೇಂಚಿ ಯಾಪರೀ ಶ್ರವಣ । ಕರಿತಾ ಉಠಿಲೇ ಬ್ರಹ್ಮಾರ್ಪಣ । ಹೇತುರಹಿತ ಭಗವದ್ಭಜನ । ಸ್ವಭಾವೇ ಜಾಣ ಸ್ವಯೇ ಹೋತ ।।೩೭೬।। ಭಜನೇ ತುಷ್ಟಲಾ ಜಗನ್ನಿವಾಸ । ಹೋಯ ವಾಸಾಚಾ ನಿಜವಾಸ । ಮಗ ಘ್ರಾಣದ್ವಾರಾ ಪರೇಶ । ಭೋಗಿ ಸುವಾಸ ಬ್ರಹ್ಮಾರ್ಪಣೇಸೀ ।।೩೭೭।। ಜೋ ಸುಮನಾ ಸುಮನಪಣ ಜೋಡೀ । ತೋ ಘ್ರಾಣಾಚೇಹೀ ಘ್ರಾಣ ಹೋಯ ಆವಡೀ । ಮಗ ನಾನಾ ಸುವಾಸಪರವಡೀ । ಬ್ರಹ್ಮಾರ್ಪಣ ಪ್ರೌಢೀ ನಿಜಭೋಗ ಅರ್ಪೀ ।।೩೭೮।।

ದೃಶ್ಯ, ದೃಷ್ಟಾ ಮತ್ತು ದರ್ಶನ ಈ ಮೂರನ್ನೂ ಒಂದೇ ರೂಪದಲ್ಲಿ ನೋಡುತ್ತ ಹೋದರೆ, ದೃಷ್ಟಿಯು ಸಹಜವಾಗಿ ಬ್ರಹ್ಮರೂಪವಾಗುವುದು. ಈ ಪ್ರಕಾರವಾಗಿ ಭಕ್ತಶ್ರೇಷ್ಠರು ದೃಷ್ಟಿಯ ಅರ್ಪಣೆಯನ್ನು ಮಾಡುವರು ।।೩೬೫।। ದೃಶ್ಯಕ್ಕೆ ದೃಶ್ಯತನದಿಂದ ಯಾವ ಸತ್ತೆಯು ಪ್ರಕಟಿಸುವುದೋ, ಅದೇ ದೃಷ್ಟಿಯಲ್ಲಿ ದರ್ಶನವಾಗುವುದು. ಹೀಗೆ ಅಭಿನ್ನವಾಗಿ ದರ್ಶನಾರ್ಪಣೆಯನ್ನು ಮಾಡಿ ಭಕ್ತಜನರು ಭಜನೆಯನ್ನು ಮಾಡುವರು ।।೩೬೬।। ಇದರಲ್ಲಿ ಮೂರು ಭಾಗಗಳಿರುವುವು ಮತ್ತು ಮೂರರಲ್ಲಿಯೂ ಒಂದೇ ಸ್ವರೂಪವಿರುವುದು ।।೩೬೭।। ಕಣ್ಣುಗಳು ನಿತ್ಯದಲ್ಲಿ ನಾನಾ ಪ್ರಕಾರದ ಹೊಸ ಹೊಸ ಪದಾರ್ಥಗಳನ್ನು ಕಾಣುವುವು. ಆದರೆ ಭಕ್ತರಿಗೆ ಇವೆಲ್ಲವೂ ಆತ್ಮರೂಪವಾಗಿಯೇ ಕಾಣುವುವು ಮತ್ತು ಈ ಪ್ರಕಾರವಾಗಿ ದೃಷ್ಟಿಯು ಅರ್ಪಣೆಯ ಸುಖವನ್ನು ಭೋಗಿಸುವುದು ।।೩೬೮।। ಈ ಪ್ರಕಾರವಾಗಿ ದೃಷ್ಟಿಯ ದರ್ಶನವನ್ನು ಭಕ್ತರು ಬ್ರಹ್ಮಾರ್ಪಣವನ್ನು ಮಾಡುವರು. ಈಗ ಹೇ ರಾಜನೇ, ''ಶ್ರವಣದ ಅರ್ಪಣೆ' ಬ್ರಹ್ಮನಲ್ಲಿ ಹೇಗೆ ಸಮರ್ಪಿಸುವರು ಎಂಬುದನ್ನು ಹೇಳುವೆ, ಕೇಳು ।।೩೬೯।। ಯಾರು ಶಬ್ದವನ್ನು ನುಡಿಸುವನೋ ಆತನೇ ಕಿವಿಯಲ್ಲಿ ಕೇಳುವವನಾಗಿ ಕುಳಿತಿರುವನು ಮತ್ತು ಆತನೇ ಅರ್ಥದ ಜ್ಞಾನವನ್ನು ಅರಿಯುವವನಾಗಿರುವನು. ಅರ್ಥಾತ್ ಇಲ್ಲಿ ಶ್ರವಣದ ಬ್ರಹ್ಮಾರ್ಪಣೆಯಾಗಿರುವುದು ।।೩೭೦।।ಶಬ್ದವು ಶಬ್ದರೂಪದಲ್ಲಿ ಹೊರಡುವಷ್ಟರಲ್ಲಿಯೇ ಶಬ್ದವನ್ನು ನುಡಿಸುವವನಾಗಿ ಕೂಡಲೇ ಪ್ರಕಟನಾಗಿರುವನು. ಆದ್ದರಿಂದ ಈ ಭಜನೆಯು ಅಕೃತ್ರಿಮತನದಿಂದ ಉತ್ಪನ್ನವಾಗುವುದು ಮತ್ತು ಶ್ರವಣದಲ್ಲಿ ಬ್ರಹ್ಮಾರ್ಪಣದ ಕೂಡುವಿಕೆಯು ಸಹಜವಾಗಿ ಕೂಡುವುದು ।।೩೭೧।। ಶಬ್ದದ ಉಚ್ಚಾರ ಆದಾಕ್ಷಣವೇ ಅದರ ಜೊತೆಯಲ್ಲಿಯೇ ಅರ್ಥವು ಬೆಳೆದು ನಿಲ್ಲುವುದು. ಅಷ್ಟರಲ್ಲಿ ಶಬ್ದವನ್ನು ನುಡಿಸುವವನೇ ಶಬ್ದಾರ್ಥದ ಸವಿಯನ್ನು ಗ್ರಹಿಸುವನು ಮತ್ತು ಇದರಿಂದ ಶ್ರವಣಾರ್ಪಣೆಯಿಂದಲೇ ಹರಿಭಜನೆಯಲ್ಲಿ ಅತ್ಯಂತ ಪ್ರೇಮವು ಉತ್ಪನ್ನವಾಗುವುದು ।।೩೭೨।। ಶಬ್ದವು ಕಿವಿಯಲ್ಲಿ ಬೀಳುವುದೊಂದೇ ತಡ, ಅದೇ ಶಬ್ದಾರ್ಥದಿಂದ ಭಜನೆಯು ಬೆಳೆಯುವುದು ಮತ್ತು ಈ ಯೋಗದಿಂದ ಶಬ್ದದ ಪ್ರವರ್ತಕನಿಗೆ ಸ್ಪಷ್ಟವಾಗಿ ಅರ್ಪಣೆಯಾಗುವುದು ।।೩೭೩।। ಶಬ್ದಕ್ಕೆ ನುಡಿಸುವವನಲ್ಲಿ ಏಕಾತ್ಮತೆಯನ್ನು ದೃಢಪಡಿಸಿದರೆ ಸಾಕು, ಆ ಭಜನೆಯು ಶ್ರವಣದ ಹಸ್ತಕ್ಕೆ ಸಿಲುಕುವುದು. ಹಾಗೂ ಬ್ರಹ್ಮಾರ್ಪಣೆಯು ಸಹಜವಾಗಿ ಸಾಧಿಸುವುದು ।।೩೭೪।। ಸದ್ಗುರುಗಳ ವಚನಗಳು ಕಿವಿಯಲ್ಲಿ ಬಿದ್ದಾಕ್ಷಣವೇ ಮನದಲ್ಲಿ ಮನತನವು ಮನದಲ್ಲಿಯೇ ಲಯವಾಗುವುದು. ಅದೇ ಶ್ರವಣವು ಬ್ರಹ್ಮಾರ್ಪಣವಾಗಿ ಭಗವದ್ಭಜನೆಯಿಂದ ಸಾರ್ಥಕವಾಗುವುದು. ।।೩೭೫।। ಈ ಪ್ರಕಾರವಾಗಿ ಶ್ರವಣದಿಂದಲೇ ಶ್ರವಣವನ್ನು ಮಾಡಿದರೆ ಬ್ರಹ್ಮಾರ್ಪಣತೆಯು ಪ್ರಾಪ್ತವಾಗಿ ತನ್ನಷ್ಟಕ್ಕೆ ತಾನೇ ಅಹೇತುಕ ಭಗವದ್ಭಜನೆಯಾಗುವುದು ।।೩೭೬।। ಭಜನೆಯಲ್ಲಿ ಸಂತುಷ್ಟನಾಗಿರುವ ಜಗನ್ನಿವಾಸನು ವಾಸನೆಯಲ್ಲಿನ ವಾಸನೆಯಾಗಿರುವನು ಮತ್ತು ಈ ಭಗವಂತನು ನಾಸಿಕದ್ವಾರಾ ಬ್ರಹ್ಮಾರ್ಪಣೆಯಿಂದ ಸುವಾಸನೆಯನ್ನು ಗ್ರಹಣ ಮಾಡುವನು ।।೩೭೭।। ಯಾರು ಪುಷ್ಪಕ್ಕೆ ಪುಷ್ಪತನವನ್ನು ಕೊಡುವನೋ ಆತನೇ ನಾಸಿಕದ ನಾಸಿಕನಾಗಿ ಇರುವನು ಮತ್ತು ಅನೇಕ ಪ್ರಕಾರದ ಸುವಾಸನೆಯ ಘಮಘಮಿಸುವಿಕೆಯನ್ನು ಬ್ರಹ್ಮಾರ್ಪಣದ ಹಿರಿಮೆಯಿಂದ ಭೋಗಿಸುವನು ।।೩೭೮।।

ವಾಸಾಚಾ ಅವಕಾಶ ಹೋಯ ಆಪಣ । ಘ್ರಾಣೇ ಗ್ರಾಹಕಪಣೇ ಜಾಣ । ಜೋ ಭೋಗುಚಿ ಸ್ವಯೇ ಸಂಪೂರ್ಣ । ಕೃಷ್ಣಾರ್ಪಣ ಸಹಜ ಹೋತು ॥೩೭೯॥ ರಸನಾ ರಸ ಸೇವೂ ಜಾಯೇ । ತಂವ ರಸಸ್ವಾದು ದೇವಚಿ ಹೋಯೇ । ಮಗ ರಸನೇಮಾಜೀ ಯೇಊನಿ ರಾಹೇ । ಬ್ರಹ್ಮಾರ್ಪಣೇ ಪಾಹೇ ರಸಭೋಗವೃತ್ತೀ ॥೩೮೦॥ ಜೇ ಜೇ ರಸನಾ ಸೇವೀ ಗೋಡೀ । ತೇ ತೇ ಹರಿರೂಪೇ ಧಡಪುಡೀ । ಸ್ವಾದಾ ಯೇಊನಿ ರೋಕಡೀ । ಬ್ರಹ್ಮಾರ್ಪಣಪರವಡೀ ನಿಜಭೋಗ ಅರ್ಪೀ ॥೩೮೧॥ ರಸ ರಸನಾ ರಸಸ್ವಾದು । ತ್ರಿವಿಧಭೇದೇ ನಿಜಅಭೇದು । ರಸಸೇವನೀ ಪರಮಾನಂದು। ಸ್ವಾನಂದಕಂದು ವೋಸಂಡೇ ॥೩೮೨॥ ಕಟು ಮಧುರ ನಾನಾ ರಸ । ರಸನಾ ಸೇವೀ ಸಾವಕಾಶ । ಪರೀ ತೋ ಅವಘಾ ಬ್ರಹ್ಮರಸ । ಸ್ವಾದೀ ಸುರಸ ಪರಮಾನಂದು ॥೩೮೩॥ ಯಾಪರೀ ರಸೀ ರಸನಾ । ಭೋಗೇ ರತಲೀ ಕೃಷ್ಣಾರ್ಪಣಾ । ಆತಾ ಸ್ಪರ್ಶವಿಷಯರಚನಾ । ಅರ್ಪೇ ಬ್ರಹ್ಮಾರ್ಪಣಾ ತೇ ಐಕ ರಾಯಾ ॥೩೮೪॥ ಸ್ಪರ್ಶ ಘೇಇಜೇ ನಿಜದೇಹೀ । ತಂವ ದೇಹಿಂಚ ಪ್ರಗಟೇ ವಿದೇಹೀ । ಮಗ ಸ್ಪರ್ಶೀ ಜೇ ಜೇ ಕಾಂಹೀ । ತೋ ತೋ ಭೋಗು ಪಾಹೀ ಬ್ರಹ್ಮಾರ್ಪಣೇ ಉಠೀ ॥೩೮೫॥ ಸ್ಪರ್ಶಾಸ್ಪರ್ಶೇ ಜೇ ಸ್ಪರ್ಶಿಜೇ । ತಂವ ಸ್ಪರ್ಶಾವಯಾ ನಾಡಳೇ ದುಜೇ । ತೇಣೇ ಏಕಾಪಣಾಚೇನಿ ವ್ಯಾಜೇ । ಕೃಷ್ಣಾರ್ಪಣವೋಜೇ ಭಜನ ಪ್ರಗಟೇ ॥೩೮೬॥ ತೇಥ ಜೋ ಜೋ ಘೇಇಜೇ ಪದಾರ್ಥು । ತೋ ತೋ ಪದಾರ್ಥು ಹೋಯ ಸಮರ್ಥು । ತೇಣೇಂಚಿ ಭಜನೇ ಪರಮಾರ್ಥು । ನಿಜಸ್ವಾರ್ಥು ನಿಜಭಕ್ತಾ ॥೩೮೭॥ ದ್ಯಾವಯಾ ಕಾಂಹೀ ದೇವಾ ಜಾಯೇ । ತಂವ ದೇತಾ ಭಜನ ಕೈಸೇ ಹೋಯೇ । ದೇತೇ ಘೇತೇ ದಾನ ಸ್ವಯೇ । ದೇವೋಚಿ ಹೋಯೇ ನಿಜಾಂಗೇ ॥೩೮೮॥ ಜೇಉತೇ ಜೇಉತೇ ಚಾಲವೀ ಪಾಯೇ । ತೋ ತೋ ಮಾರ್ಗು ದೇವೋಚಿ ಹೋಯೇ । ಮಗ ಪಾಉಲಾಪಾಉಲೀ ಪಾಹೇ । ನಿಜಭಜನ ಹೋಯೇ ಬ್ರಹ್ಮಾರ್ಪಣೇಶೀ ॥೩೮೯॥ ಚರಣಾ ಚರಣಾ ನಿಜಗತೀ । ತೋಚಿ ನಿಜಾಂಗೇ ಕ್ಷಿತೀಚೀ ಕ್ಷಿತಿ । ಚಾಲತಾ ತೈಶಿಯಾ ಯುಕ್ತೀ । ಸಹಜ ಬ್ರಹ್ಮಸ್ಥಿತಿ ನಿಜಕರ್ಮೇ ಅರ್ಪೀ ॥೩೯೦॥ ಬೋಲ ಬೋಲವಿತಿಯಾ ವದನೀ ಭೇಟೀ । ಬೋಲಣೇ ಲಾಜೇ ತ್ಯಾಚಿಯಾ ದೃಷ್ಟೀ । ತೇ ಲಾಜ ಗಿಳೂನ ಬೋಲಣೇ ಉಠೀ । ನಿಜಭಜನಪುಷ್ಟೀ ಬ್ರಹ್ಮಾರ್ಪಣೇಸೀ ॥೩೯೧॥

ನಾಸಿಕದಲ್ಲಿನ ಪೊಳ್ಳಾದ ಭಾಗವನ್ನು ಗ್ರಾಹಕತನದಿಂದ ತಾನೇ ಆಗಿರುವುದರಿಂದ ಆ ಭಾಗವು ಸಹಜವಾಗಿಯೇ ಕೃಷ್ಣಾರ್ಪಣೆಯಾಗುವುದು ॥೩೭೯॥ (ಈಗ ರಸ ವಿಷಯಕ್ಕೆ ಹೇಳುವರು) ನಾಲಿಗೆಯು ರಸ ಗ್ರಹಣ ಮಾಡಲು ಹೋದಾಗ ದೇವನು ಸ್ವತಃ ತಾನೇ ರಸಸ್ವಾದನಾಗುವನು. ಆದ್ದರಿಂದ ರಸದಲ್ಲಿನ ರಸೋಪಭೋಗದ ವೃತ್ತಿಯು ಬ್ರಹ್ಮಾರ್ಪಣತ್ವದಿಂದ ಬಂದಿರುವುದು ॥೩೮೦॥ ನಾಲಿಗೆಯು ಯಾವ ಯಾವ ಸ್ವಾದವನ್ನು ಗ್ರಹಣ ಮಾಡುವುದೋ, ಅವೆಲ್ಲವೂ ಹರಿರೂಪವಾಗಿ ಪೂರ್ಣ ಮಧುರತ್ವವಾಗುವುದು. ಈ ಪ್ರಕಾರವಾಗಿ ನಾಲಿಗೆಯು ತನ್ನ ರಸಾನುಭವವನ್ನು ಬ್ರಹ್ಮಾರ್ಪಣೆಗೊಳಿಸುವುದು ॥೩೮೧॥ ರಸ, ರಸನೆ, ಮತ್ತು ರಸಸ್ವಾದ ಈ ಮೂರರ ನಿಜಸ್ವರೂಪದಲ್ಲಿ ಅಭೇದವೇ ಇರುವುದು. ಈ ರೀತಿಯಲ್ಲಿ ರಸ ಸೇವನೆಯನ್ನು ಮಾಡುವುದರಿಂದ ಸ್ವಾನಂದದ ಕಂದನು ಇಂದ್ರಿಯ ದ್ವಾರದಿಂದ ಹೊರಗೆ ಬರುವನು. ಅರ್ಥಾತ್ ಈ ರೀತಿಯಲ್ಲಿ ರಸಸೇವನೆಯಿಂದ ಪರಮಾನಂದವು ಸಾಕ್ಷಾತ್ಕಾರವಾಗುವುದು ॥೩೮೨॥ ಕಹಿ ಮಧುರ ಇತ್ಯಾದಿ ಅನೇಕ ರಸಗಳಿರುವುವು. ಅವುಗಳನ್ನು ನಾಲಿಗೆಯು ಸಾವಕಾಶವಾಗಿ ಸೇವಿಸುವುದು. ಆದರೆ ಅದೆಲ್ಲವೂ ''ಬ್ರಹ್ಮರಸ'' ಇರುವುದರಿಂದ ಅದರ ಸ್ವಾದದಲ್ಲಿ ಸುರಸವಾದ ಪರಮಾನಂದವೇ ಪ್ರಕಟವಾಗುವುದು ॥೩೮೩॥ ಈ ಪ್ರಕಾರವಾಗಿ ನಾಲಿಗೆಯೂ ರಸಭೋಗದಿಂದ ಕೃಷ್ಣಾರ್ಪಣದಲ್ಲಿಯೇ ರತವಾಗುವುದು. ಈಗ ಹೇ ರಾಜನೇ, ಸ್ಪರ್ಶ ವಿಷಯದ ವ್ಯವಸ್ಥೆಯನ್ನು ಬ್ರಹ್ಮಾರ್ಪಣದಲ್ಲಿ ಹೇಗಾಗುತ್ತದೆ ಎಂಬುದನ್ನು ಕೇಳು ॥೩೮೪॥ ತನ್ನ ದೇಹದಿಂದ ಸ್ಪರ್ಶಿಸಲು ಹೋದಾಗ್ಗೆ, ಆ ದೇಹದಲ್ಲಿ ವಿದೇಹಿಯಾದ ಪರಮಾತ್ಮನೇ ಪ್ರಕಟನಾಗುವನು, ಆದ್ದರಿಂದ ಯಾವ ಯಾವ ಪದಾರ್ಥಗಳನ್ನು ಸ್ಪರ್ಶಿಸಲು ಹೋದರೆ, ಆಯಾ ಸ್ಪರ್ಶಭೋಗವು ಬ್ರಹ್ಮಾರ್ಪಣೆಯಿಂದಲೇ ಎದ್ದು ನಿಲ್ಲುವುದು ॥೩೮೫॥ ಸ್ಪರ್ಶಾಸ್ಪರ್ಶದಿಂದ ಅಂದರೆ ತ್ವಚೆಯಿಂದ ಯಾವುದಕ್ಕಾದರೂ ಸ್ಪರ್ಶಿಸಬೇಕಾದರೆ ಅಲ್ಲಿ ಸ್ಪರ್ಶಿಸಲು ಬೇರೆ ಏನೂ ಬೇಕಾಗಿರುವುದಿಲ್ಲ. ಆ ಯಾವ ಐಕ್ಯರೂಪದಿಂದ ಕೃಷ್ಣಾರ್ಪಣೆಯರೂಪ ಭಜನವೇ ಪ್ರಕಟವಾಗುವುದು ॥೩೮೬॥ ಆಗ ಯಾವ ಯಾವ ಪದಾರ್ಥಗಳನ್ನು ತೆಗೆದುಕೊಂಡರೆ, ಆ ಯಾವ ಎಲ್ಲ ಪದಾರ್ಥಗಳೂ ಸರ್ವಸತ್ತಾಧೀಶನಾದ ಪರಮಾತ್ಮನೇ ಆಗಿರುವನು ಮತ್ತು ಈ ರೀತಿಯ ಭಜನೆಯಿಂದ ನಿಜಭಕ್ತರ ಸ್ವಾರ್ಥವಾದ ಪಾರಮಾರ್ಥವು ತಾನಾಗಿಯೇ ಒದಗುವುದು ॥೩೮೭॥ ಹಸ್ತದಿಂದ ದೇವರಿಗೆ ಏನಾದರೂ ಕೊಡಲು ಹೋದರೆ, ಆ ಕೊಡುವುದರಲ್ಲಿಯೇ ಭಜನೆಯು ಹೇಗೆ ಸಾಧಿಸುವುದು, ನೋಡಿರಿ ಕೊಡುವವನು, ತೆಗೆದುಕೊಳ್ಳುವವನು ಮತ್ತು ದಾನವು ಇವು ಮೂರರಲ್ಲಿಯೂ ಸ್ವತಃ ದೇವನೇ ಇರುವನು ॥೩೮೮॥ ಭಕ್ತರು ಯಾವ ಯಾವ ಸ್ಥಳಗಳಲ್ಲಿ ಕಾಲುಗಳಿಂದ ನಡೆಯುವರೋ, ಆ ಎಲ್ಲ ಮಾರ್ಗಗಳು ದೇವರು ಸ್ವತಃ ತಾನೇ ಆಗಿರುವನು ಆದ್ದರಿಂದ ಪ್ರತಿ ಹೆಜ್ಜೆ ಹೆಜ್ಜೆಗೂ ಬ್ರಹ್ಮಾರ್ಪಣತ್ವದಿಂದ ನಿಜ ಭಜನೆಯು ಸಾಧಿಸುವುದು ॥೩೮೯॥ ಚರಣಗಳ ಗತಿಗೆ ಯಾರಿಂದ ಚಾಲನೆಯು ದೊರಕುವುದೋ, ಆತನೇ ಪೃಥ್ವಿಯ ಧಾರಣ ಶಕ್ತಿಯಾಗಿರುವನು. ಹೀಗೆ ಯುಕ್ತಿಯನ್ನು ಧರಿಸಿ ನಡೆಯುತ್ತಿರಲು ನಡೆಯುವ ಕರ್ಮವು ಸಹಜವಾಗಿ ಬ್ರಹ್ಮಸ್ಥಿತಿಗೆ ಮುಟ್ಟುವುದು ॥೩೯೦॥ ಮಾತುಗಳು ಮತ್ತು ಮಾತುಗಳನ್ನು ನುಡಿಸುವವನು ಇವರ ಭೇಟಿಯು ಮುಖದಲ್ಲಾಗುವುದು. ಆತನನ್ನು ನೋಡಿ ಮಾತಿಗೆ ನಾಚಿಕೆಯಾಗಿ, ಈ ನಾಚಿಕೆಯನ್ನು ನುಂಗಿ ಮಾತುಗಳು ಪ್ರಕಟವಾಗುವುವು. ಇದರಿಂದ ಬ್ರಹ್ಮಾರ್ಪಣೆಯೊಂದಿಗೆ ನಿಜ ಭಜನೆಯು ಬೆಳೆಯುತ್ತಿರುವುದು ॥೩೯೧॥

ಶಬ್ದ ಮಾವಳೇ ನಿಃಶಬ್ದೀ । ನಿಃಶಬ್ದ ಬೋಲಿಜೇ ಶಬ್ದೀ । ತೋಚಿ ಅರ್ಪಣಾಚಾ ವಿಧೀ । ಜಾಣ ತ್ರಿಶುದ್ಧಿ ಸಮರ್ಪಿತೇನಿಶೀ ।।೯೨।। ಬೋಲು ಬೋಲವಿತಾ ಬೋಲಾಆಂತು । ತೋ ಬೋಲು ಅರ್ಪಣೇಸೀಂಚ ಯೇತು । ಐಸಾ ಶಬ್ದೇಂಚಿ ಭಜನಾರ್ಥು । ಪ್ರಕಟೇ ಪರಮಾರ್ಥು ಬ್ರಹ್ಮಾರ್ಪಣೇಸೀ ।।೯೩।। ಐಸಾ ಮನೇ - ಕರ್ಮೇ - ವಚನೇ । ಜೋ ದೃಢಾವಲಾ ಭಗದ್ಭಜನೇ । ತೇಚಿ ಭಜನ ಅಭಿಮಾನೇ । ನಿಜನಿರ್ವಾಣೇ ದೃಢ ಧರೀ ।।೯೪।। ತರಂಗಸಮುದ್ರಾಆಂತೌತಾ । ಮ್ಹಣೇ ಮಾಝೇನಿ ಮೇಘು ತತ್ತ್ವತಾ । ಜಗಾತೇ ನಿವವಿತಾ ಜೇವವಿತಾ । ತೃಷಾ ಹರಿತಾ ಚಾತಕಾಂಚೀ ।।೯೫।। ಮಾಝೇನಿ ಸಸ್ಯೇ ಪಿಕತೀ । ಮಾಝೇನಿ ಸರಿತಾ ಉಸಳತೀ । ಮಾಗುತೀ ಮಜಮಾಜೀ ಮಿಳತೀ । ಸಮರಸತೀ ಸಿಂಧುತ್ವೇ ।।೯೬।। ತೇವೀ ಮುಳೀಂಚೇ ಪೂರ್ಣಪಣ । ಪಾವೋನಿ ಭಜೇ ಅಭಿಮಾನ । ತ್ಯಾಚೇ ಭಜನಾಚೇ ಲಕ್ಷಣ । ಸಾವಧಾನ ಅವಧಾರೀ ।।೯೭।। ಮ್ಹಣೇ ಮೀ ಸಕಲಲೋಕಕರ್ತಾ । ಕರ್ಮ ಕರೋನಿ ಅಕರ್ತಾ । ಮೀ ಸರ್ವಭೋಗಭೋಕ್ತಾ । ನಿತ್ಯ ಅಭೋಕ್ತಾ ಮೀ ಏಕು ।।೯೮।। ಸಕಳ ಲೋಕೀ ಮಾಝೀ ಸತ್ತಾ । ಸಕಳೀ ಸಕಳಾಂಚಾ ನಿಯಂತಾ । ಸಕಳಾ ಸಕಳತ್ವೇ ಮೀ ಪ್ರಕಾಶಿತಾ । ಹೋಯ ಮೀ ಶಾಸ್ತಾ ಸಕಳಿಕಾಂಚಾ ।।೯೯।। ಸಕಳಾ ಭೂತೀ ಮೀ ಏಕು । ಮೀಚಿ ವ್ಯಾಪ್ಯ ವ್ಯಾಪಕು । ಜನಿತಾ ಜನಯಿತಾ ಜನಕು । ನ ಹೋನಿ ಅನೇಕು ಜಗದ್ರೂಪ ಮೀ ।।೧೦೦।। ಮೀ ದೇವಾಂಚಾ ಆದಿದೇವೋ । ದೇವೀ ದೇವಪಣಾ ಮಾಝಾಚಿ ಭಾವೋ । ವ್ಯಯಾಮಾಜೀ ಮೀ ಅಜ ಅವ್ಯಯೋ । ಅಕ್ಷರೀ ಅಕ್ಷರಭಾವೋ ಮಾಝೇನಿ ಅಂಗೇ ।।೧೦೧।। ಈಶ್ವರೀ ಜೇ ಜೇ ಸತ್ತಾ । ತೇ ತೇ ಮಾಝೀ ಸಾಮರ್ಥ್ಯತಾ । ಭಗವಂತೀ ಭಗವಂತತಾ । ಜಾಣ ತತ್ತ್ವತಾ ಮಾಝೇನಿ ।।೧೦೨।। ಮೀ ಆಪರೂಪೀ ಆಪು । ಮೀ ಪ್ರಕೃತಿಪುರುಷಾಂಚಾ ಬಾಪು । ಸೃಷ್ಟಿರಚನೇಚಾ ಸಂಕಲ್ಪು । ನಿರ್ವಿಕಲ್ಪು ಪೈ ಮಾಝಾ ।।೧೦೩।। ಮೀ ಆದೀಚೇ ಅನಾದಿ ಆದೀ । ಮೀ ಸಮಾಧೀಚೇ ನಿಜಸಮಾಧೀ । ನಿಜಶುದ್ಧೀಸೀ ಮಾಝೇನಿ ಶುದ್ಧೀ । ಯಾಪರೀ ತ್ರಿಶುದ್ಧೀ ಅಭಿಮಾನಾರ್ಪಣ ।।೧೦೪।। ಮೀ ಅಜನ್ಮಾ ನ ಜನ್ಮೋನಿ ಜನ್ಮೇ । ಮೀ ಅಕರ್ಮಾ ನ ಕರೋನಿ ಕರೀ ಕರ್ಮೇ । ಮಾಝೇನಿ ಯೋಗೇ ಪುರುಷೋತ್ತಮೇ । ಪಾವಿಜೇ ಮಹಿಮೇ ಉತ್ತಮತ್ವಾಚೇ ।।೧೦೫।।

ನಿಃಶಬ್ದದಲ್ಲಿ ಶಬ್ದವು ಲಯಗೊಳ್ಳುವುದು. ನಿಃಶಬ್ದ ವಸ್ತುವೇ ಶಬ್ದದಿಂದ ಹೇಳಲ್ಪಡುವುದು. ಅರ್ಪಣಕರ್ತನ ಸಮೇತವಾಗಿ ನಿಜವಾದ ಅರ್ಪಣೆಯ ವಿಧಿಯು ಇದೇ ಆಗಿದೆ ಎಂದು ತಿಳಿ ।।೯೨।। ಮಾತುಗಳನ್ನು ಆಡಿಸುವವನು ಆ ಮಾತಿನ ಒಳಗೆ ಇರುವನೆಂದು ತಿಳಿದುಕೊಂಡರೆ, ಆ ಮಾತುಗಳು ಕೃಷ್ಣಾರ್ಪಣೆಯಿಂದಲೇ ಏಳುವುವು. ಹೀಗೆ ಶಬ್ದರೂಪದಿಂದ ಭಜನೆಯಾಗಿ ಬ್ರಹ್ಮಾರ್ಪಣೆ ಸಹ ಪಾರಮಾರ್ಥವು ಪ್ರಕಟವಾಗುವುದು ।।೯೩।। ಈ ಪ್ರಕಾರವಾಗಿ ಮನಸ್ಸಿನಿಂದ, ಕರ್ಮದಿಂದ ಮತ್ತು ವಚನದಿಂದ ಭಗವದ್ಭಜನೆಯಲ್ಲಿ ದೃಢಪಡಿಸಿದರೆ, ಅದೇ ಭಜನೆಯು ಅಭಿಮಾನದಿಂದ ದೃಢವಾಗಿ ಹಿಡಿದಿರುತ್ತದೆ ।।೯೪।। ಸಮುದ್ರದಲ್ಲಿನ ತೆರೆಯು ಹೀಗೆನ್ನುವುದು. ನಿಜವಾಗಿ ನೋಡಿದರೆ, ಜಗತ್ತಿಗೆ ನೀರಿನಿಂದ ಶಾಂತಗೊಳಿಸುವ, ರಕ್ಷಿಸುವ ಮತ್ತು ಚಾತಕಪಕ್ಷಿಯ ತೃಷೆಯನ್ನು ನೀಗಿಸುವ, ಮೇಘವು ನನ್ನಿಂದಲೇ ನಿರ್ಮಾಣಗೊಂಡಿದೆ ।।೯೫।। ನನ್ನಿಂದಲೇ ಧಾನ್ಯಗಳು ಬೆಳೆಯುವುವು, ನನ್ನಿಂದಲೇ ನದಿಗಳು ತುಂಬಿ ಹರಿಯುವುವು, ಪುನಃ ಈ ಸಮುದ್ರದಲ್ಲಿ ಐಕ್ಯವಾಗಿ ನನ್ನನ್ನೆ ಕೂಡುವುವು ।।೯೬।। ಈ ನ್ಯಾಯದಂತೆ ಭಗವದ್ಭಕ್ತನು ಆ ಮೂಲದ ಪೂರ್ಣತ್ವವನ್ನು ಕಂಡು ಆ ಪೂರ್ಣತ್ವದ ಅಭಿಮಾನದಿಂದ ಭಜಿಸುವನು. ಆ ಭಜನೆಯ ಲಕ್ಷಣವನ್ನು ಚಿತ್ತ ಕೊಟ್ಟು ಕೇಳು ।।೯೭।। ಆತನು ಹೀಗೆ ಹೇಳುವನು, ತ್ರಿಭುವನದ ಕರ್ತನಾದ ಆತನೇ ನಾನಾಗಿರುವೆನು. ಕರ್ಮಗಳನ್ನು ಮಾಡಿ ಅಕರ್ತನು ಮತ್ತು ಸರ್ವ ಪ್ರಕಾರದ ಭೋಗಗಳನ್ನು ಭೋಗಿಸಿ ಅಭೋಕ್ತನು ಹೀಗಿರುವ ಆತನೇ ನಾನಾಗಿರುವೆನು ।।೯೮।। ಎಲ್ಲ ಲೋಕಗಳಲ್ಲಿ ನನ್ನದೇ ಅಧಿಕಾರವಿರುವುದು. ಎಲ್ಲದರಲ್ಲಿಯೂ ಎಲ್ಲರ ನಿಯಂತನು ನಾನೇ ಆಗಿರುವೆನು. ಎಲ್ಲರನ್ನೂ ಎಲ್ಲ ರೀತಿಯಲ್ಲಿ ನಾನೇ ಪ್ರಕಾಶಿಸುವೆನು. ಹಾಗೆಯೇ ಎಲ್ಲರನ್ನು ದಂಡಿಸುವವನು ನಾನೇ ।।೯೯।। ಸರ್ವ ಪ್ರಾಣಿಗಳಲ್ಲಿ ನಾನೊಬ್ಬನೇ ಇರುವೆನು. ವ್ಯಾಪ್ಯ ಮತ್ತು ವ್ಯಾಪಕವು ನಾನೇ ಆಗಿರುವೆನು. ಉತ್ಪನ್ನವಾಗುವ ಮತ್ತು ಉತ್ಪನ್ನಕರ್ತನು ನಾನೇ. ಏಕತ್ವವನ್ನು ಮುರಿಯದೇ ಜಗದ್ರೂಪನಾಗುವವನು ನಾನೇ ।।೧೦೦।। ದೇವರ ಆದಿದೇವನು ನಾನೇ. ದೇವರಲ್ಲಿ ದೇವತ್ವವಿರುವುದು. ಅದು ನನ್ನದೇ ಭಾವವಾಗಿರುವುದು. ವಿನಾಶೀ ಪದಾರ್ಥಗಳಲ್ಲಿ ನಾನು ಅವ್ಯಯ ಹಾಗೂ ಅಜನಾಗಿರುವೆನು. ಅಕ್ಷರದಲ್ಲಿ ಅಕ್ಷರ ಧರ್ಮ ತೋರುವುದು ನನ್ನಿಂದಲೇ ।।೧೦೧।। ಈಶ್ವರನಲ್ಲಿ ಯಾವ ಯಾವ ಅಧಿಕಾರವಿದೆಯೋ, ಅವೆಲ್ಲವೂ ನನ್ನ ಸಾಮರ್ಥ್ಯವಾಗಿದೆ. ಭಗವಂತನಲ್ಲಿ ಭಗವಂತತನವು ಯಾವುದಿದೆಯೋ, ಅದು ನಿಜವಾಗಿಯೂ ನನ್ನಿಂದಲೇ ।।೧೦೨।। ಜಲರೂಪದಲ್ಲಿ ರಸರೂಪವು ನಾನು. ಪ್ರಕೃತಿ ಪುರುಷರ ಜನಕನು ನಾನು. ಸೃಷ್ಟಿ ರಚನೆಯ ಸಂಕಲ್ಪವು ನನ್ನದಾಗಿದೆ. ಆದರೆ ವಸ್ತುತಃ ನಾನು ನಿರ್ವಿಕಲ್ಪನಾಗಿರುವೆನು ।।೧೦೩।। ಎಲ್ಲ ಕಾರಣಗಳ ಆದಿ ಕಾರಣನು ನಾನು. ಸಮಾಧಿಯ ಮೂಲ ಸಮಾಧಿಯು ನಾನು. ಆತ್ಮಶುದ್ಧಿಗೆ ಶುದ್ಧಿಯು ಪ್ರಾಪ್ತವಾದದ್ದು ನನ್ನಿಂದಲೇ. ಅಭಿಮಾನದ ಕೃಷ್ಣಾರ್ಪಣೆಯು ವಸ್ತುತಃ ಈ ಪ್ರಕಾರವಾಗಿ ಆಗುವುದು ।।೧೦೪।। ನಾನು ಅಜನ್ಮನಾಗಿದ್ದು ಜನ್ಮಧರಿಸದೇ ಜನ್ಮವನ್ನು ಧರಿಸುವೆನು. ನಾನು ಅಕರ್ಮನಾಗಿದ್ದು ಕರ್ಮವನ್ನು ಮಾಡದೇ ಕರ್ಮವನ್ನು ಮಾಡುವೆನು. ಪುರುಷೋತ್ತಮನಿಗೆ ಉತ್ತಮತ್ವವು ನನ್ನಿಂದಲೇ ಪ್ರಾಪ್ತವಾಗಿದೆ ।।೧೦೫।।

ಸಚ್ಛಬ್ದೇ ಮಾಝೀ ಅಂಗ । ಚಿಚ್ಛಬ್ದೇ ಮೀಚಿ ಚಾಂಗ । ನ ಹೋನಿಯಾ ತಿನ್ಹೀ ಭಾಗ । ಆನಂದ ನಿರ್ವ್ಯಂಗ ತೋಚಿ ಮೀ ।।೪೦೬।। ಮಾಝೇನಿ ಸೂರ್ಯದೃಷ್ಟಿ ಡೋಳಸ । ಮಜಮಾಜೀ ಚಿದಾಕಾಶಾಚಾ ಅವಕಾಶ । ಮಾಝೇನಿ ಅಂಗೇ ಜಗನ್ನಿವಾಸ । ಸಾವಕಾಶ ನಾಂದತು ।।೪೦೭।। ಅಜಾ ಅಜಪಣೇ ಮೀ ಅಜ । ನಿಃಶೇಷ ನಿರ್ಬೀಜಾ ಮೀ ಬೀಜ । ಮಾಝೇನಿ ನಿಜಾಂಗೇ ನಿಜ । ನಿಜಭೋಜ ಸ್ವಯೇ ನಾಚೇ ।।೪೦೮।। ಅಧಿಷ್ಠಾನಾ ಮಜಮಾಜೀ ಅಧಿವಾಸು । ಮೀ ಜಗದೀಶಾಚಾ ಪೂರ್ಣ ಈಶು । ಮೀ ಪರಮ ಪುರುಷಾಚಾಹೀ ಪುರುಷು । ಪರೇಶಾ ಪರೇಶು ಮೀಚ ಸ್ವಯೇ ।।೪೦೯।। ಅಸಂತ ಮಾಝೇನಿ ಸಂತ ಹೋಯೇ । ಅಚಿತ್ ಮಾಝೇನಿ ಚಿದತ್ವ ಲಾಹೇ । ನಿಜಾನಂದಾಸೀಹೀ ಪಾಹೇ । ಆನಂದು ನಿರ್ವಾಹೇ ಮಾಝೇನಿ ।।೪೧೦।। ಮೀ ಸಕಳ ಸಿದ್ಧೀಂಚೀ ನಿಜಸಿದ್ಧೀ । ಮೀ ಸರ್ವಾಂಗದೇಖಣೀ ಬುದ್ಧೀಚೀ ಬುದ್ಧೀ । ಮೋಕ್ಷ ಮ್ಹಣಣೇ ತೋಹೀ ಉಪಾಧೀ । ಜಾಣ ತ್ರಿಶುದ್ಧೀ ಮಾಝೇನಿ ।।೪೧೧।। ಮೀ ಸಾಚಾರ ನಿಜಧರ್ಮ । ಮಜಮಾಜೀ ಬ್ರಹ್ಮ ವಿಸರೇ ಕರ್ಮ । ಬ್ರಹ್ಮಸಮಾಧೀಚೇ ಪರಬ್ರಹ್ಮ । ನಿಜನಿಃಸೀಮ ಮೀಚ ಮೀ ।।೪೧೨।। ಹರಿ - ಹರ - ಬ್ರಹ್ಮಾ ನಿಜನಿರ್ಧಾರೀ । ಹೇಹೀ ಮಾಝೇ ಅಂಶಾಂಶಧಾರೀ । ಮೀ ದಶಾವತಾರಾಂಚಾ ಅವತಾರೀ । ಮಾಝೀ ನಿಜಥೋರೀ ಮೀಹೀ ನೇಣೇ ।।೪೧೩।। ಐಸಿಯಾ ನಾನಾ ವಿವಂಚನಾ । ಅಭಿಮಾನೇ ಭಜೇ ಭಗವದ್ಭಜನಾ । ''ಬ್ರಹ್ಮಾಹಮಸ್ಮಿ'' ದೃಢ ಭಾವನಾ । ಆಪಣ ಆಪಣಾ ಪೂರ್ಣತ್ವೇ ಅರ್ಪೀ ।।೪೧೪।। ಜೀವ ಘಾಲೂನಿ ಪೂರ್ಣತ್ವಾಆಂತು । ಜೇ ಜೇ ಅಭಿಮಾನ ಕಲ್ಪಿತು । ತೇ ತೇ ಸಾಚಚೀ ಸ್ವಯೇ ಹೋತು । ತೇಹೀ ಪೂರ್ಣತ್ವ ಅರ್ಪಿತು ನಿಜಪೂರ್ಣತ್ವೀ ।।೪೧೫।। ಬ್ರಹ್ಮಹಮಸ್ಮಿ ನುಸಧೇ ವಚನ । ಯೇ ಅಹಂತೇ ನಾಮ ಭಗವದ್ಭಜನ । ಮಾ ಹಾ ತಂವ ತದ್ರೂಪ ಹೋಊನ । ಭಜೇ ಅಭಿಮಾನ ಬ್ರಹ್ಮಾರ್ಪಣೇಸೀ ।।೪೧೬।। ಸಾಂಡೂನಿ ದೇಹಬುದ್ಧೀಚಾ ಕೇರು । ಭಜನೇ ಉರಿಲಾ ಅಹಂಕಾರು । ತೋ ಅಪರೋಕ್ಷ ನಿಜಸಾಕ್ಷಾತ್ಕಾರು । ಪಾವೂನಿ ಪೂರ್ಣ ನಿರ್ಧಾರು ಪೂರ್ಣತ್ವೇ ವರ್ತೇ ।।೪೧೭।। ಮ್ಹಣೌನಿ ಮನನಾ ಮೀಚಿ ಮನನ । ಸ್ಮರಣಾ ಮೀಚಿ ನಿತ್ಯ ಸ್ಮರಣ । ಚಿತ್ತಾಸೀ ಮೀ ನಿಜಚಿಂತನ । ಚಿಂತ್ಯಧರ್ಮೇವೀಣ ಸರ್ವದಾ ।।೪೧೮।।

''ಸತ್'' ಶಬ್ದದಿಂದ ನನ್ನದೇ ಅಂಗದ ಬೋಧೆಯಾಗುವುದು. ''ಚಿತ್'' ಶಬ್ದದಿಂದ ಮಾತ್ರ ಸ್ಪಷ್ಟವಾಗಿ ನಾನೇ ಇರುವೆನು, ಸತ್ ಚಿತ್ ಮತ್ತು ಆನಂದ ಇವು ಮೂರು ಭಿನ್ನ ಧರ್ಮಗಳಾಗದೇ, ನಿರ್ವ್ಯಂಗವಾದ ಆನಂದವು ನಾನೇ ಇರುವೆನು ।।೪೦೬।। ನನ್ನಿಂದಲೇ ಸೂರ್ಯನ ದೃಷ್ಟಿಗೆ ಕಾಣಿಸುವುದು. ನನ್ನಲ್ಲಿಯೇ ಚಿದಾಕಾಶದ ಅವಕಾಶವಿರುವುದು. ಜಗನ್ನಿವಾಸನು ನನ್ನಿಂದಲೇ ಜಗತ್ತಿನಲ್ಲಿ ಆನಂದದಿಂದ ವರ್ತಿಸುವನು ।।೪೦೭।। ನಾನು ಅಜನು, ನನ್ನ ಅಜತ್ವದಿಂದ ಮಾಯೆಗೆ ಅಜತ್ವವು ಪ್ರಾಪ್ತಿಯಾಗಿರುವುದು, ನಿಃಶೇಷ, ನಿರ್ಬಿಜ ಪದಾರ್ಥಗಳ ಬೀಜವು ನಾನಾಗಿರುವೆನು. ನನ್ನ ಸ್ವರೂಪದಿಂದಲೇ ಆತ್ಮಸ್ವರೂಪದಲ್ಲಿ ಪ್ರಕಟವಾಗಿ ನರ್ತಿಸುತ್ತಿರುವೆನು ।।೪೦೮।। ಅಧಿಷ್ಠಾನದ ವಾಸ್ತವ್ಯವು ನನ್ನಲ್ಲಿಯೇ ಇರುವುದು. ಜಗದೀಶ್ವರನ ಪೂರ್ಣ ಈಶ್ವರನು ನಾನಾಗಿರುವೆನು. ಪರಮ ಪುರುಷನ ಪುರುಷನು ನಾನೇ ಮತ್ತು ಪರೇಶನ ಪರೇಶನು ಸ್ವತಃ ನಾನೇ ಇರುವೆನು ।।೪೦೯।। ಅಸತ್ ವಸ್ತುಗಳು ನನ್ನಿಂದಲೇ ಸತ್‌ಸ್ವರೂಪವಾಗುವುವು. ಅಚಿತ್ ಎಂದರೆ ಜಡ ವಸ್ತುಗಳಿಗೆ ನನ್ನಿಂದಲೇ ಸಚೇತನತ್ವವು ದೊರೆತಿರುವುದು. ನಿಜಾನಂದಕ್ಕೆ ನನ್ನಿಂದಲೇ ಆನಂದತ್ವವು ಪ್ರಾಪ್ತವಾಗಿರುವುದು ।।೪೧೦।। ನಾನೇ ಸರ್ವಸಿದ್ಧಿಗಳ ಮೂಲ ಸಿದ್ಧಿಯಾಗಿರುವೆನು. ಬುದ್ಧಿಯ ಸರ್ವಾಂಗ ಅವಲೋಕನದ ಬುದ್ಧಿಯು ನಾನೇ. ಮೋಕ್ಷ ಎಂಬುದು ಉಪಾಧಿ ಎಂದು ನನ್ನಿಂದಲೇ ಸಿದ್ಧವಾಯಿತು ।।೪೧೧।। ಸತ್ಯವಾದ ಧರ್ಮವು ನಾನಾಗಿರುವೆನು. ನನ್ನಲ್ಲಿ ಬ್ರಹ್ಮವು ಕರ್ಮವನ್ನು ಮರೆತುಬಿಡುವುದು, ಬ್ರಹ್ಮ ಸಮಾಧಿಯ ಪರಮಾವಧಿಯಾಗಿರುವ ಪರಬ್ರಹ್ಮವು ನಾನೇ ಆಗಿರುವೆನು ।।೪೧೨।। ಬ್ರಹ್ಮಾ, ವಿಷ್ಣು, ಮಹೇಶ್ವರ ಇವರು ನಿಜವಾಗಿಯೂ ನನ್ನ ಅಂಶದ ಅಂಶಧಾರಣೆಯನ್ನು ಮಾಡಿದವರಾಗಿದ್ದಾರೆ. ನಾನೇ ದಶಾವತಾರದ ಅವತಾರೀಯಾಗಿರುವೆನು. ನನ್ನ ಸತ್ಯವಾದ ಹಿರಿಮೆಯು ನನಗೂ ಸಹ ತಿಳಿಯಲಾರದು ।।೪೧೩।। ಈ ಪ್ರಕಾರವಾಗಿ ವಿಚಾರಗಳ ಅಭಿಮಾನದಿಂದ ಆ ಭಕ್ತನು ಭಗವದ್ಭಜನೆಯನ್ನು ಮಾಡುವನು ಮತ್ತು ''ಅಹಂ ಬ್ರಹ್ಮಾಸ್ಮಿ'' ಅಂದರೆ ನಾನು ಬ್ರಹ್ಮನಿದ್ದೇನೆ, ಈ ದೃಢ ಭಾವನೆಯಿಂದ ತಾನೇ ತನ್ನನ್ನು ಪೂರ್ಣತ್ವದಿಂದ ಸಮರ್ಪಿಸುವನು ।।೪೧೪।। ಪೂರ್ಣತ್ವದಲ್ಲಿ ಜೀವನವನ್ನು ಹಾಕಿ ಅಭಿಮಾನವು ಯಾವ ಯಾವ ಕಲ್ಪನೆಗಳನ್ನು ಮಾಡುವುದೋ ಅದೆಲ್ಲವೂ ನಿಜವಾಗಿ ಸ್ವತಃ ತಾನೇ ಆಗಿರುವನು. ಮತ್ತು ಆ ಪೂರ್ಣತ್ವವನ್ನು ತನ್ನ ಮೂಲದ ಪೂರ್ಣತ್ವದಲ್ಲಿ ಅರ್ಪಿಸುವನು ।।೪೧೫।। ''ಬ್ರಹ್ಮಾಹಮಸ್ಮಿ'' ಹೀಗೆ ಕೇವಲ ವಚನವಾಗಿರುವುದು. ಈ ಅಹಂಗೆ ಭಗವದ್ಭಜನೆ ಎನ್ನುವರು. ಆದರೆ ಈತನು ಮಾತ್ರ ತದ್ರೂಪನಾಗಿ ಮತ್ತು ಅಭಿಮಾನವನ್ನು ಬ್ರಹ್ಮಾರ್ಪಣೆ ಮಾಡಿ ಭಜನೆಯನ್ನು ಮಾಡುತ್ತಿರುವನು ।।೪೧೬।। ದೇಹಬುದ್ಧಿಯ ಕಸವನ್ನು ಬಳೆದು, ಆಗಾಗುವ ಭಜನೆಯಿಂದ ಏಳುವ ಅಹಂಕಾರವೇ ಅಪರೋಕ್ಷ ಆತ್ಮಸ್ವರೂಪ ಸಾಕ್ಷಾತ್ಕಾರವಾಗಿರುವುದು. ಹೀಗೆ ಪೂರ್ಣವಾದ ನಿರ್ಧಾರವನ್ನು ಕಂಡು ಈತನು ಪೂರ್ಣತ್ವದಿಂದ ನಡೆಯುವನು ।।೪೧೭।। ಆದ್ದರಿಂದ ಮನದ ಮನವು ನಾನೇ. ಸ್ಮರಣೆಯ ನಿತ್ಯಸ್ಮರಣೆಯು ನಾನೇ. ಚಿತ್ತಕ್ಕೆ ಚಿಂತನಧರ್ಮವಿಲ್ಲದೇ, ಆಗುವ ಆತ್ಮ ಚಿಂತನವು ನಾನೇ ಆಗಿರುವೆನು ।।೪೧೮।।

ಜ್ಯಾಚೀ ಸಹಸಾ ಪ್ರಾಪ್ತಿ ನವ್ಹೇ । ತೇ ನಿಜಚಿತ್ತೇಂಚಿ ಚಿಂತಾವೇ । ತಂವ ಅಪ್ರಾಪ್ತಿೇಚೀ ಪ್ರಾಪ್ತಿ ಪಾವೇ । ಚಿತ್ತ ನಿಜಾನುಭವೇ ಸಹಜ ಭಜತಾ ॥೪೧೯॥ ತೇಂವ್ಹಾ ನಿಶ್ಚಿತೇ ಜೇ ಜೇ ಚಿಂತೀ ಚಿತ್ತ । ತೇ ತೇ ಸ್ವಯೇಂಚಿ ಹೋಯ ಸಮಸ್ತ । ಯಾ ಪ್ರತೀತೀ ಚಿತ್ತ ಭಜತ । ಬ್ರಹ್ಮಾರ್ಪಣಯುಕ್ತ ನಿಜಬೋಧೇ ॥೪೨೦॥ ನಾಥಿಲೇ ಚಿಂತೀ ತೇ ''ಅತಿಚಿಂತಾ'' । ಆಥಿಲೇ ಚಿಂತೀ ತೇ ''ನಿಶ್ಚಿಂತತಾ'' । ಆಥೀ ನಾಥೀ ಸಾಂಡಿಲೀ ಚಿಂತಾ । ಸಹಜೇ ನ ಭಜತಾ ಭಜನ ಹೋಯೇ ॥೪೨೧॥ ಚಿತ್ತ ಚಿಂತ್ಯ ಆಣಿ ಚಿಂತನ । ಯಾಪರೀ ತಿಹೀಸ ಜಾಹಲೇ ಸಮಾಧಾನ । ತೇ ಸಮಾಧಾನಹೀ ಕೃಷ್ಣಾರ್ಪಣ । ಸಹಜೇ ಸಂಪೂರ್ಣ ಸ್ವಯೇ ಹೋಯೇ ॥೪೨೨॥ ಐಸಿಯಾ ಭಗವದ್ಭಜನವಿಧೀ । ಭಜನಶೀಲ ಝಾಲೀ ಬುದ್ಧೀ । ತೈ ಸಕಳ ಕರ್ಮೀ ಸಮಾಧೀ । ಜಾಣ ತ್ರಿಶುದ್ಧೀ ಸ್ವಯೇ ಝಾಲೀ ॥೪೨೩॥ ಕರ್ಮಾಚರಣೀ ಸಮಾಧೀ । ಏಕ ಮ್ಹಣತೀ ನ ಘಢೇ ಕಧೀ । ತೇ ಪಾವಲೇ ನಾಹೀ ನಿಜಾತ್ಮಬೋಧೀ । ಜಾಣ ತ್ರಿಶುದ್ಧೀ ವಿದೇಹಾ ॥೪೨೪॥ ತಾಟಸ್ಥ್ಯಾ ನಾವ ಸಮಾಧೀ । ಮ್ಹಣೇ ತ್ಯಾಚೀ ಠಕಲೀ ಬುದ್ಧೀ । ತೇ ಸಮಾಧೀ ನವ್ಹೇ ತ್ರಿಶುದ್ಧೀ । ಜಾಣಾವೀ ನುಸಧೀ ಮೂರ್ಚ್ಛಾ ಆಲೀ ॥೪೨೫॥ ತಾಟಸ್ಥ್ಯಾಪಾಸೂನಿ ಉಠಿಲಾ । ತೈ ತೋ ಸಮಾಧೀಸ ಮುಕಲಾ । ತೇವ್ಹಾ ಏಕದೇಶೀ ಭಾವೋ ಆಲಾ । ಮಂದಹೀ ಯಾ ಬೋಲಾ ನ ಮಾನಿತೀ ಸತ್ಯ ॥೪೨೬॥ ಸಮಾಧೀ ಆಣಿ ಏಕದೇಶೀ । ಬೋಲತಾ ಬೋಲಣೇ ಯೇ ಲಾಜೇಸೀ । ಸತ್ಯ ಮಾನೀ ತೇ ಶಬ್ದಪಿಶೀ । ಶುದ್ಧಸ್ವರೂಪಾಸೀ ಅನೋಳಖ ॥೪೨೭॥ ಯೇಥೇ ಪ್ರಾಚೀನ ಅತಿಸಮರ್ಥ । ತೇ ಮೂರ್ಚ್ಛಾ ಆಣೋನಿ ಕರೀ ತಟಸ್ಥ। ವಾಂಚೂನಿ ಚಾಲತೇ ಬೋಲತೇ ಸಮಾಧಿಸ್ಥ। ಜಾಣ ಪಾ ನಿಶ್ಚಿತ ವಸಿಷ್ಠಾದಿಕ॥೪೨೮॥ ಪಾಹೇಪಾ ದೇವರ್ಷಿ ನಾರದು । ವಿನೋದೇ ನ ಮೋಡೇ ಸಮಾಧಿಬೋಧು। ಯಾಜ್ಞವಲ್ಕ್ಯಾಚಾ ಸಮಾಧಿಸಂಬಂಧು । ಋಷಿಪ್ರಸಿದ್ಧು ಪರೀಕ್ಷಾ ಕೇಲೀ॥೪೨೯॥ ಸ್ವರೂಪ ದೇಖೋನಿ ಮೂರ್ಚ್ಛಿತ ಜಾಹಲಾ। ತೋ ಆಪಣಿಯಾ ಆಪಣ ತರಲಾ। ಸ್ವಯೇ ತರೂನಿ ಜನ ಉದ್ಧರಿಲಾ। ತೋ ಬೋಧು ಪ್ರಕಾಶಿಲಾ ಶುಕವಾಮದೇವೀ॥೪೩೦॥ ಯಾಲಾಗೀ ಸಮಾಧಿ ಆಣಿ ವ್ಯುತ್ಥಾನ। ಯಾ ದೋನೀ ಅವಸ್ಥಾಸಹಿತ ಜಾಣ। ಬುದ್ಧೀ ಹೋಯೇ ಬ್ರಹ್ಮಾರ್ಪಣ।ಅಖಂಡತ್ವೇ ಪೂರ್ಣ ಪರಮಸಮಾಧಿ।॥೪೩೧॥

ಯಾವುದು ಸಹಸಾ ಪ್ರಾಪ್ತಿಯಾಗುವುದಿಲ್ಲವೋ ಅದನ್ನು ನಿಜ ಚಿತ್ತದಿಂದ ಚಿಂತಿಸಬೇಕು. ಈ ಪ್ರಕಾರವಾಗಿ ಚಿತ್ತವು ಸ್ವಾನುಭವದಿಂದ ಭಜಿಸಲು ಅಪ್ರಾಪ್ತ ಎಂದು ಭಾವಿಸಿದ್ದದ್ದು ಪ್ರಾಪ್ತವಾಗುವುದು ॥೪೧೯॥ ಆಗ ಚಿತ್ತವು ನಿಶ್ಚಯಪೂರ್ವಕವಾಗಿ ಏನೇನು ಚಿಂತಿಸುವುದೋ ಅದೆಲ್ಲವೂ ಸ್ವತಃ ತಾನೇ ಆಗುವವು. ಈ ಪ್ರತೀತಿಯಿಂದ ಚಿತ್ತವು ನಿಜಬೋಧೆಯಿಂದ ಕೂಡಿಕೊಂಡು ಭಜಿಸುವುದು ॥೪೨೦॥ ಇಲ್ಲದ್ದು ಚಿಂತಿಸುವುದು ಅದು ''ಅತಿಚಿಂತಾ'' ಮತ್ತು ಇದ್ದದ್ದು ಚಿಂತಿಸುವುದು ಅದು ''ನಿಶ್ಚಿಂತಿತಾ'' ಆಗಿರುವುದು. ಆದರೆ, ಇದೆ ಮತ್ತು ಇಲ್ಲ ಈ ಎರಡೂ ಭಾವನೆಯ ಚಿಂತನೆಯನ್ನು ಬಿಟ್ಟುಕೊಟ್ಟರೆ, ಭಜಿಸದೇ ಭಜನೆಯಾಗುವುದು ॥೪೨೧॥ ಚಿತ್ತ, ಚಿಂತ್ಯ ಮತ್ತು ಚಿಂತನೆ ಈ ಮೂರಕ್ಕೂ ಸಮಾಧಾನವಾದಲ್ಲಿ ಆ ಸಮಾಧಾನವೂ ಸಹ ಸಹಜವಾಗಿ ಪೂರ್ಣ ಕೃಷ್ಣಾರ್ಪಣೆಯಾಗುವುದು ॥೪೨೨॥ ಹೀಗೆ ಭಗವದ್ಭಜನೆಯ ವಿಧಿಯಿಂದ ಬುದ್ಧಿಯು ಭಜನಶೀಲವಾಯಿತೆಂದರೆ, ಎಲ್ಲ ಕರ್ಮಗಳಲ್ಲಿಯೂ ನಿಶ್ಚಯಪೂರ್ವಕವಾಗಿ ತನ್ನಷ್ಟಕ್ಕೆ ತಾನೇ ಸಮಾಧಿಯು ಪ್ರಾಪ್ತವಾಗುವುದು ॥೪೨೩॥ ಕೆಲವರು ಹೀಗೆ ಹೇಳುವರು: ''ಕರ್ಮಾಚರಣೆಯಲ್ಲಿ ಸಮಾಧಿಯು ಎಂದೂ ಸಂಭವಿಸುವುದಿಲ್ಲ'' ಆದರೆ ಹೇ ಜನಕರಾಜನೇ, ಇವರಿಗೆ ಆತ್ಮಸ್ವರೂಪದ ಬೋಧವು ಆಗಿರುವುದೇ ಇಲ್ಲವೆಂದು ಖಚಿತವಾಗಿ ನೀನು ತಿಳಿ ॥೪೨೪॥ ಯಾರು ತಟಸ್ಥತನಕ್ಕೆ ''ಸಮಾಧಿ'' ಎಂದು ಹೆಸರಿಡುವರೋ, ಅವರ ಬುದ್ಧಿಯು ತಪ್ಪಿದೆ ಎಂದು ತಿಳಿಯಬೇಕು. ಕಾರಣ, ಅದು ನಿಜವಾಗಿಯೂ ''ಸಮಾಧಿ'' ಅಲ್ಲವೇ ಅಲ್ಲ. ಕೇವಲ ''ಮೂರ್ಚ್ಛೆ'' ಯಾಗಿರುವುದೆಂದು ತಿಳಿಯಬೇಕು ॥೪೨೫॥ ತಟಸ್ಥಾವಸ್ಥೆಯಿಂದ ಎದ್ದವನು ಸಮಾಧಿಯನ್ನು ಕಳೆದುಕೊಂಡನು ಮತ್ತು ಈತನಿಗೆ ಏಕದೇಶಿಯ ಭಾವವು ಬಂದಿತು. ಎನ್ನುವ ಈ ಮಾತು ಮಂದಮತಿಯೂ ಸಹ ಸತ್ಯವೆಂದು ತಿಳಿಯಲಾರನು ॥೪೨೬॥ ಸಮಾಧಿ ಮತ್ತು ಏಕದೇಶಿ ಹೀಗೆ ಹೇಳುವುದು ಸಹ ಲಜ್ಜಾಸ್ಪದವಾಗಿದೆ. ಹೀಗಿದ್ದರೂ ಕೆಲವರು ಇದನ್ನು ನಿಜವೆನ್ನುವರು. ಇವರು ಕೇವಲ ಶಬ್ದ ಪಂಡಿತರಾಗಿರುವರು. ಇವರಿಗೆ ಶುದ್ಧ ಸ್ವರೂಪದ ಪರಿಚಯವೇ ಇಲ್ಲವೆಂದು ಅರಿಯಬೇಕು ॥೪೨೭॥ ಇಲ್ಲಿ ಪ್ರಾಚೀನ ಎಂದರೆ ಪ್ರಾರಬ್ಧವು ಅತಿಬಲಿಷ್ಠವಾಗಿರುವುದರಿಂದ ಅದು ಮೂರ್ಚ್ಛೆಯನ್ನು ತರಿಸಿ ನಿಚೇಷ್ಟೆಯನ್ನಾಗಿ ಮಾಡುವುದು. ವಿಚಾರಿಸಿ ನೋಡಿದರೆ ನಡೆಯುತ್ತಾ, ಮಾತನಾಡುತ್ತಾ ಸಮಾಧಿಸ್ಥರೆಂದರೆ ವಸಿಷ್ಠಾದಿಕರಾಗಿರುವರು ॥೪೨೮॥ ದೇವರ್ಷಿಯಾದ ನಾರದನನ್ನು ನೋಡಿರಿ, ಆತ ವಿನೋದ ಕರ್ಮಗಳಲ್ಲಿಯೂ ಸಮಾಧಿಯು ಎಂದೂ ಭಂಗವಾಗುವುದಿಲ್ಲ. ಯಾಜ್ಞವಲ್ಕ್ಯರ ಸಮಾಧಿ ವಿಷಯಕ್ಕೆ ಪ್ರಸಿದ್ಧ ಋಷಿಗಳು ಪರೀಕ್ಷಿಸಿ ಸಹ ನೋಡಿದರು ॥೪೨೯॥ ಸ್ವರೂಪವನ್ನು ಕಂಡು ಮೂರ್ಚ್ಛಿತನಾಗುವನು. ತಾನು ಮಾತ್ರ ಉದ್ಧಾರನಾಗುವನು. ಆದರೆ, ತಾನು ಸ್ವತಃ ಉದ್ಧಾರನಾಗಿ ಇತರರನ್ನು ಉದ್ಧರಿಸುವ ಈ ಜ್ಞಾನವನ್ನೂ ಶುಕವಾಮದೇವಾದಿಕರು ಪ್ರಕಟ ಮಾಡಿದರು ॥೪೩೦॥ ಅದಕ್ಕಾಗಿಯೇ ಸಮಾಧಿ ಮತ್ತು ವ್ಯುತ್ಥಾನ ಈ ಎರಡೂ ಅವಸ್ಥೆಯೊಂದಿಗೆ ಬುದ್ಧಿಯ ಬ್ರಹ್ಮಾರ್ಪಣೆಯಾಗುವುದು. ಇದೇ ಅಖಂಡವಾದ ಮತ್ತು ಪರಿಪೂರ್ಣವಾದ ಸಮಾಧಿಯಾಗಿರುವುದು ॥೪೩೧॥

ಅರ್ಜುನಾ ದೇಊನಿ ನಿಜಸಮಾಧೀ।ಸವೇಂಚಿ ಘಾತಲಾ ಮಹಾಯುದ್ಧೀ। ಪರಿ ತೋ ಕೃಷ್ಣ ಕೃಪಾನಿಧೀ । ತಾಟಸ್ಥ್ಯ ತ್ರಿಶುದ್ಧೀ ನೇದೀಚ ಸ್ಪರ್ಶೇ।।೪೩೨।। ಸಕಳ ಕರ್ಮೀ ಸಮಾಧೀ। ಹೇ ಸದ್ಗುರೂಚಿ ಬೋಧೀ ಬುದ್ಧೀ। ತರೀ ಯುದ್ಧೀಹೀ ತ್ರಿಶುದ್ಧೀ। ನಿಜಸಮಾಧೀ ನ ಮೋಡೇ।।೪೩೩।। ಬುದ್ಧೀ ಆಕಳಲೇ ಪರಬ್ರಹ್ಮ । ತ್ಯೆ ಅಹೈತುಕ ಚಾಲೇ ಕರ್ಮ। ಹೇಚಿ ಬುದ್ಧೀಚೇ ಅರ್ಪಣ ಪರಮ। ಇತರ ತೋ ಭ್ರಮ ಅನುಮಾನಜ್ಞಾನ ।।೪೩೪।। ಸ್ವರೂಪೀ ದೃಷ್ಟೀ ನಿರವಧೀ । ಅನವಚ್ಛಿನ್ನ ಸಮಾನಬುದ್ಧೀ। ಕರ್ಮಾಕರ್ಮೀ ಅಜ್ಞಾನ ನ ಬಾಧೀ । ''ಪರಮಸಮಾಧೀ'' ತಿಯೇ ನಾವ ।।೪೩೫।। ನಿಃಶೇಷ ಗೇಲಿಯಾ ದೇಹಬುದ್ಧೀ। ಸ್ವರೂಪಪಣೇ ಫುಂಜ ನ ಬಾಧೀ । ಕರ್ಮಾಕರ್ಮೀ ಅಜ್ಞಾನ ನ ಬಾಧೀ । ತೇ ''ಪರಮಸಮಾಧೀ'' ನಿರ್ದುಷ್ಟ।।೪೩೬।। ತೇ ಸ್ವರೂಪೀ ನಿರವಧೀ । ಭಜನಶೀಳ ಝಾಲೀ ಬುದ್ಧೀ । ತೇ ಸಕಳ ಕರ್ಮೀ ಸಮಾಧೀ । ನಿಜಾರ್ಪಣವಿಧೀ ಸ್ವಯೇ ಜಾಹಲೀ।।೪೩೭।। ಜೇಥೇ ಶಮಲೀ ಮನಾಚೀ ಆಧೀ । ತೇ ಜಾಣಾವೀ ''ಪರಮ ಸಮಾಧೀ'' । ಸಮಾಧೀ ಘೇಣೇ ತೇ ದೇಹ ಬುದ್ಧೀ । ಕಾಷ್ಠ ತೇ ತ್ರಿಶುದ್ಧೀ ಮೂರ್ಚ್ಛಿತ ಪ್ರಾಯ ।।೪೩೮।। ಮನಾಸೀ ಠಾಉಕೇ ನಸೇ । ಇಂದ್ರಿಯೀ ವ್ಯಾಪಾರು ತರೀ ದಿಸೇ । ಕರ್ಮ ನಿಪಜೇ ಜೇ ಐಸೇ। ತೇ ಜಾಣಿಜೇ ಆಪೈಸೇ ''ಕಾಯಿಕ'' ।।೪೩೯।। ಶ್ವಾಸೋಚ್ಛ್ವಾಸಾಂಚೇ ಪರಿಚಾರ । ಕಾ ನಿಮೇಷೋನ್ಮೇಷಾಂಚೇ ವ್ಯಾಪಾರ । ತೇ ಹೀ ನಾರಾಯಣಪರ । ಕೇಲೇ ಸಾಚಾರ ನಿಜಸ್ವಭಾವೇ।।೪೪೦।। ತರೀ ದೇಹಗೇಹವರ್ಣಾಶ್ರಮೇ । ಸ್ವಭಾಗಾ ಆಲೀ ಜೇ ಜೇ ಕರ್ಮೇ । ತೀ ತೀ ಆಚರೋನಿ ನಿಜಧರ್ಮೇ। ಪೂರ್ವಾನುಕ್ರಮೇ ಅನಹಂಕೃತೀ।।೪೪೧।। ಸಾಕರೇಚೇ ಕಾರಲೇ ಪ್ರೌಢ। ತೇ ದೇಠೂ - ಕಾಂಟೇನಶೀ ಸರ್ವಹೀ ಗೋಡ । ತೇ ಇಂದ್ರಿಯಕರ್ಮಗೂಢ। ಸ್ವಾದಿಷ್ಟ ಸದ್ರೃಢ ಬ್ರಹ್ಮಾರ್ಪಣೇ ಬ್ರಹ್ಮೀ।।೪೪೨।। ಕರ್ಮಕಲಾಪು ಆಘವಾ। ಆಚರೋನಿ ಆಣೇ ಗೌರವಾ। ಪರೀ ಕರ್ತೇಪಣಾಚಿಯಾ ಗಾಂವಾ । ಅಹಂಭಾವಾ ಸ್ಪರ್ಶೇನಾ।।೪೪೩।। ಮಜಪಾಸೂನ ಝಾಲೇ ಸತ್ಕರ್ಮ। ಮಾಝಾ ಆಚಾರ ಅತಿ ಉತ್ತಮ। ಮ್ಯಾ ನಿರಸಿಲೇ ಮರಣಜನ್ಮ । ಹಾ ಸ್ವಭಾವೇ ದೇಹಧರ್ಮ ಉಠೋಚಿ ನೇಣೇ ।।೪೪೪।। ದೇಹಸಂಗೇ ತರೀ ವರ್ತಣೇ। ಪರೀ ದೇಹಧರ್ಮ ಧರೂ ನೇಣೇ। ದೇಹಸ್ವಭಾವ ಲಕ್ಷಣೇ । ಬ್ರಹ್ಮಾರ್ಪಣೇ ವಿಚರತೀ।।೪೪೫।।

ಶ್ರೀಕೃಷ್ಣನು ಅರ್ಜುನನಿಗೆ ಆತ್ಮಸಮಾಧಿಯನ್ನು ಕೊಟ್ಟು ಕೂಡಲೇ ಘೋರ ಯುದ್ಧದಲ್ಲಿ ನೂಕಿದನು. ಆದರೆ ಆ ಕರುಣಾನಿಧಿ ಶ್ರೀಕೃಷ್ಣನು ಆತನಿಗೆ ತಟಸ್ಥಾವಸ್ಥೆಯ ಸ್ಪರ್ಶಸಹ ಮಾಡಿಕೊಡಲಿಲ್ಲ।।೪೩೨।। ಸರ್ವ ಪ್ರಕಾರದ ಕರ್ಮದಲ್ಲಿಯೂ ಸಹ ಸಮಾಧಿ ಇರಬೇಕಾದ ಜ್ಞಾನವನ್ನೂ ಒಬ್ಬ ಸದ್ಗುರು ಮಾತ್ರ ಬುದ್ಧಿಗೆ ಕೊಡಬಲ್ಲನು. ಆದ್ದರಿಂದ ನಿಜವಾಗಿಯೂ ಯುದ್ಧದಂತಹ ಘೋರ ಕರ್ಮದಲ್ಲಿಯೂ ಸಹ ಆತ್ಮ ಸಮಾಧಿಯು ಭಂಗವಾಗಲಿಲ್ಲ।।೪೩೩।। ಬುದ್ಧಿಯಿಂದ ಪರಬ್ರಹ್ಮವನ್ನು ಗ್ರಹಣ ಮಾಡಿದರೆ, ಯಾವುದೇ ಕರ್ಮಗಳಾಗಿರಲಿ ಅಹೇತುಕತನದಿಂದ ನಡೆಯುವುವು. ಇದೇ ನಿಜವಾದ ಬುದ್ಧಿಯ ಅರ್ಪಣೆಯಾಗಿದೆ. ಇತರ ಅನುಮಾನದ ಜ್ಞಾನವು ಕೇವಲ ಭ್ರಮೆಯಾಗಿದೆ।।೪೩೪।। ಸ್ವರೂಪದಲ್ಲಿ ಪರಾಕಾಷ್ಠವಾದ ತನ್ಮಯ ದೃಷ್ಟಿ ಹಾಗೂ ಎಂದೂ ತುಂಡಾಗದ ಸರ್ವತ್ರ ಸಮಬುದ್ಧಿ ಇದ್ದವರಿಗೆ ಕರ್ಮಾಕರ್ಮಗಳಲ್ಲಿ ಅಜ್ಞಾನದ ಬಾಧೆಯಾಗುವುದಿಲ್ಲ. ಈ ಸ್ಥಿತಿಯ ಹೆಸರೇ ''ಪರಮ ಸಮಾಧಿ'' ಯಾಗಿರುವುದು ।।೪೩೫।। ದೇಹಬುದ್ಧಿಯು ನಿಃಶೇಷವಾಗಿ ನಾಶವಾಗಲು ಸ್ವರೂಪಾನುಭವದಿಂದ ಅಹಂಕಾರದ ಬಾಧೆಯಾಗುವುದಿಲ್ಲ ಮತ್ತು ಕರ್ಮಾಕರ್ಮಗಳಲ್ಲಿ ಅಜ್ಞಾನದ ಬಾಧೆಯಾಗುವುದಿಲ್ಲ. ಇದೇ ನಿರ್ದೋಷಿ ''ಪರಮ ಸಮಾಧಿ'' ಯಾಗಿರುವುದು ।।೪೩೬।। ಸದಾ ಸರ್ವಕಾಲದಲ್ಲಿ ಸ್ವಸ್ವರೂಪದಲ್ಲಿ ಬುದ್ಧಿಯು ಭಜನಶೀಲವಾಗಲು, ಆಗ ಯಾವುದೇ ಕರ್ಮದಲ್ಲಿ ಅದು ತಾನೇ ಕೃಷ್ಣಾರ್ಪಣೆಯಾಗುವುದು ।।೪೩೭।। ಮನದ ತಳಮಳವು ಸಂಪೂರ್ಣವಾಗಿ ಶಾಂತವಾಗುವ ಸ್ಥಿತಿಯ ಹೆಸರು ''ಪರಮ ಸಮಾಧಿ'' ಯಾಗಿರುವುದು. ದೇಹಬುದ್ಧಿಯನ್ನು ತ್ಯಜಿಸದೇ ಪ್ರಾಣವಾಯುವನ್ನು ನಿರೋಧಿಸಿ ಸಮಾಧಿಯನ್ನು ಹಚ್ಚುವವರು ಕಾಷ್ಠದಂತೆ ಜಡ ಅಂದರೆ ಮೂರ್ಛಾವಸ್ಥೆ ಎಂದು ನಿಶ್ಚಯವಾಗಿ ತಿಳಿಯಬೇಕು.।।೪೩೮।। ಮನಸ್ಸಿಗೆ ಯಾವುದೂ ಅರುವು ಇಲ್ಲ ಆದರೆ ಇಂದ್ರಿಯಗಳ ವ್ಯಾಪಾರವು ನಡೆದಿರುವುದು ತೋರುವುದು. ಈ ಪ್ರಕಾರವಾಗಿ ನಡೆಯುವ ಕಾರ್ಯಗಳೆಲ್ಲವೂ ಅವು ಸಹಜವಾಗಿ ಕಾಯಕ ಅಂದರೆ ದೇಹದ ಕರ್ಮಗಳಾಗಿವೆ ಎಂದು ತಿಳಿಯಬೇಕು।।೪೩೯।। ಉಸಿರಾಟದ ಚಾಲನೆಯು ಅಥವಾ ನೇತ್ರಗಳ ತೆರೆಯುವ, ಮುಚ್ಚುವ ಕಾರ್ಯವು, ಇವು ಸಹಿತವಾಗಿ ಈತನು ನಿಜವಾಗಿಯೂ ನಾರಾಯಣಪರವನ್ನಾಗಿ ಮಾಡಿರುವನು.।।೪೪೦।। ವರ್ಣಾಶ್ರಮದಲ್ಲಿ, ಗೃಹಾದಿಕ ದೇಹಾದಿಕವಾಗಿ ತನ್ನ ಪಾಲಿಗೆ ಬಂದ ಪ್ರತಿಯೊಂದು ಕರ್ಮಗಳನ್ನು ಕೇವಲ ಕರ್ತವ್ಯ ಬುದ್ಧಿಯಿಂದ ಮತ್ತು ಈ ಹಿಂದೆ ಹೇಳಿದಂತೆ ಅಭಿಮಾನ ರಹಿತನಾಗಿ ಮಾಡುತ್ತಿರುವನು.।।೪೪೧।। ಸಕ್ಕರೆಯಿಂದ ತಯಾರಿಸಿದ ದೊಡ್ಡ ಹಗಲಕಾಯಿಯ ತುಂಬು ಮೇಲೆ ನಡುವೆ ಹೀಗೆ ಎಲ್ಲ ಕಡೆಯಲ್ಲಿಯೂ ಸಿಹಿಯೇ ಇರುವುದು. ಅದರಂತೆ ಸಂಪೂರ್ಣ ಇಂದ್ರಿಯಗಳ ಕರ್ಮವು ಬ್ರಹ್ಮಾರ್ಪಣೆಯಿಂದ ಬ್ರಹ್ಮರೂಪವಾಗುವುದು ।।೪೪೨।। ಒಟ್ಟಿನಲ್ಲಿ ಆತನು ಎಲ್ಲ ಕರ್ಮಗಳನ್ನು ಆಚರಿಸಿ ಅವುಗಳನ್ನು ಗೌರವಿಸುವನು. ಆದರೆ ಕರ್ತೃತ್ವದ ಅಭಿಮಾನದ ಊರಿಗೆ ಹೆಜ್ಜೆ ಸಹ ಇಡಲಾರನು।।೪೪೩।। ನನ್ನಿಂದ ಸತ್ಕರ್ಮವು ಸಾಧಿಸಿತು ನನ್ನ ಆಚರಣೆಯು ಅತ್ಯಂತ ಉತ್ತಮವಾಗಿದೆ ನಾನು ಜನ್ಮಮರಣಗಳನ್ನೂ ದೂರೀಕರಿಸಿರುವೆನು ಎಂಬ ಈ ಸ್ವಾಭಾವಿಕ ದೇಹಧರ್ಮವು ಆತನಲ್ಲಿ ಎಂದೂ ಏಳುವುದಿಲ್ಲ।।೪೪೪।। ದೇಹಸಂಗದಿಂದ ನಡೆಯುತ್ತಿರುವನು, ಆದರೆ ದೇಹಧರ್ಮವನ್ನು ಮಾತ್ರ ಹಿಡಿಯುವುದಿಲ್ಲ. ಆತನ ದೇಹಸ್ವಭಾವದ ಎಲ್ಲ ಲಕ್ಷಣಗಳು ಬ್ರಹ್ಮಾರ್ಪಣೆಯಿಂದಲೇ ನಡೆಯುತ್ತಿರುವುವು.।।೪೪೫।।

ದೇಹಧರ್ಮಾಚಾ ನುರೇ ಫಾಂಟಾ। ಜ್ಞಾನಗರ್ವಾಚಾ ನ ಚಢೇಚಿ ತಾಠಾ। ಯಾಲಾಗೀ ಸಹಜ ಭಜನಾಮಾಜಿವಟಾ। ಝಾಲಾ ತೋ ಪೈಠಾ ಅನಹಂಕೃತೀ॥೪೪೬॥ ತ್ಯಾಪಾಸೂನಿ ಜೇ ಜೇ ನಿಪಜೇ। ತೇ ತೇ ದೇವೋ ಮ್ಹಣೇ ಮಾಝೇ ಖಾಜೇ। ಯಾಲಾಗೀ ಬ್ರಹ್ಮಾರ್ಪಣವೋಜೇ। ತ್ಯಾಚೇ ಸ್ವಭಾವ ಸಹಜೇ ನಾರ್ಪಿತಾ ಅರ್ಪಿತೀ॥೪೪೭॥ ಪರಿಸಾಚೇ ಕಸವಟೀವರ್ತೆ । ಜೇ ಜೇ ಲಾಗೇ ತೇ ತೇ ಸಾಡೇಪಂಧರೇ। ತೇವೀ ನಿಪಜೇ ಜೇ ಜೇ ಶರಿರೇ। ತೇ ತೇ ಖರೇ ಪರಬ್ರಹ್ಮ॥೪೪೮॥ ತ್ಯಾಚಾ ಖೇಳೂ ತೇಚಿ ಮಹಾಪೂಜನ। ತ್ಯಾಚೇ ಬಡಬಡ ತೇಚಿ ಪ್ರಿಯ ಸ್ತವನ। ತ್ಯಾಚೇ ಸ್ವಭಾವೀ ಸ್ವಾನಂದಪೂರ್ಣ। ಶ್ರೀನಾರಾಯಣ ಸುಖಾವೇ॥೪೪೯॥ ತೋ ಜೇಉತೀ ವಾಸ ಪಾಹೇ। ಆವಡೀ ದೇವೋ ತೇಉತಾ ರಾಹೇ। ಮಗ ಪಾಹೇ ಅಥವಾ ನ ಪಾಹೇ। ತರೀ ದೇವೋಚಿ ಸ್ವಯೇ ಸ್ವಭಾವೇ ದಿಸೇ॥೪೫೦॥ ತಯಾಸೀ ಚಾಲತಾ ಮಾರ್ಗೇ। ತೋ ಮಾಗುಣ ಹೋಇಜೇ ಶ್ರೀರಂಗೇ। ತೋ ದೇವಾಚಿಯಾ ದೋಂದಾವರೀ ವೇಗೇ। ಚಾಲೇ ಸರ್ವಾಂಗೇ ಡುಲ್ಲತ॥೪೫೧॥ ಜೇ ಜೇ ಕರ್ಮ ಸ್ವಾಭಾವಿಕ। ತೇ ತೇ ಬ್ರಹ್ಮಾರ್ಪಣ ಅಹೇತುಕ। ಯಾ ನಾಂವ ಭಜನ ನಿರ್ದೋಖ। "ಭಾಗವತಧರ್ಮ" ದೇಖ ಯಾ ನಾಂವ॥೪೫೨॥ ಸ್ವಾಭಾವಿಕ ಜೇ ವರ್ತನ। ತೇ ಸಹಜೇ ಹೋಯ ಬ್ರಹ್ಮಾರ್ಪಣ। ಯಾ ನಾಂವ ಶುದ್ಧ ಆರಾಧನ। ಭಾಗವತಧರ್ಮ ಪೂರ್ಣ ಜಾಣ ರಾಯಾ॥೪೫೩॥ ಯಾಪರೀ ಭಗವದ್ಭಜನಪಥಾ। ಭಯ ನಾಹೀ ಗಾ ಸರ್ವಥಾ। "ಅಭಯ" ಪುಶಿಲೇ ನೃಪನಾಥಾ। ತೇ ಜಾಣ ತತ್ತ್ವತಾ ಭಜನೇ ಹೋಯ॥೪೫೪॥ ಯೇಥೇ ಭಯಾಚೇ ಕಾರಣ। ರಾಯಾ ತೂ ಮ್ಹಣಶೀಲ ಕೋಣ। ತೇಹೀ ಸಾಂಗೋ ಸಾವಧಾನ। ಐಕ ಶ್ರವಣ ಸೌಭಾಗ್ಯನಿಧೀ॥೪೫೫॥

ಭಯಂ ದ್ವಿತೀಯಾಭಿನಿವೇಶತಃ ಸ್ಯಾದೀಶಾದಪೇತಸ್ಯ ವಿಪರ್ಯಯೋ ಸ್ಮೃತಿಃ।
ತನ್ಮಾಯಯಾತೋ ಬುಧ ಆಭಜೇತ್ತಂ ಭಕ್ತ್ಯೈಕಯೇಶಂ ಗುರುದೇವ ತಾತ್ಮಾ ॥೩೭॥

ಅರ್ಥ: ಈಶ್ವರನನ್ನು ಮನ್ನಿಸದ ಪುರುಷನಿಗೆ ಮಾಯೆಯಿಂದ ತನ್ನ ಸ್ವರೂಪದ ವಿಸ್ಮೃತಿಯಾಗುವುದು. ಇದರಿಂದ ನಾನು ದೇವನು,ನಾನು ಮನುಷ್ಯನು ಹೀಗೇಂದು ಭ್ರಮೆಯಾಗುವುದು. ಈ ದೇಹದಲ್ಲಿ ಅನ್ಯ ವಸ್ತುವಿನೊಂದಿಗೆ ತನ್ಮಯತೆವಾದ್ದರಿಂದ ವಾರ್ಧಕ್ಯ ಮೃತ್ಯು,ರೋಗ ಇತ್ಯಾದಿ ಅನೇಕ ಪ್ರಕಾರದ ಭಯ ನಿರ್ಮಾಣವಾಗುವುದು. ಅದಕ್ಕಾಗಿ ತಮ್ಮ ಗುರುಗಳಿಗೆ ಆರಾಧ್ಯದೈವ,ಪರಮ ಪ್ರಿಯಕರ ಎಂದು ಭಾವಿಸಿ ಅನನ್ಯ ಭಕ್ತಿಯಿಂದ ಈಶ್ವರಭಾವದಿಂದ ಭಜಿಸಬೇಕು.

ಆತ್ಮಾ ಪೂರ್ಣತ್ವೇ ಸರ್ವತ್ರ ಏಕ । ತೇಥ ಜೋ ಮ್ಹಣೇ ಮೀ ವೇಗಳಾ ದೇಖ । ತೇಚಿ ಅಜ್ಞಾನ ಭಯ ಜನಕ । ದುಃಖದಾಯಕ ಅತಿದ್ವಂದ್ವೇ॥೪೫೬॥

ದೇಹಧರ್ಮದ ಅಂಕುರವು ಅವರಲ್ಲಿ ಉದ್ಭವಿಸುವುದಿಲ್ಲ.ಜ್ಞಾನಗರ್ವದ ಡೌಲು ಅವರಲ್ಲಿ ಬೆಳೆಯುವುದಿಲ್ಲ. ಆದ್ದರಿಂದ ಸಹಜ ಭಜನೆಯಲ್ಲಿ ಇವರು ಅನಹಂಕೃತಿಯಿಂದಲೇ ಯಾವಾಗಲೂ ನಡೆಯುತ್ತಿರುವರು.॥೪೪೬॥ ಆತನಿಂದ ಹುಟ್ಟುವ ಪದಾರ್ಥಗಳೆಲ್ಲವೂ ನನ್ನ ರುಚಿಯಾದ ಖಾದ್ಯವಾಗಿರುವುವು ಎಂದು ದೇವನು ಹೇಳುವನು. ಈ ಪ್ರಕಾರವಾಗಿ ಬ್ರಹ್ಮಾರ್ಪಣೆಯಿಂದ ಅಂತಹ ಭಕ್ತರ ಎಲ್ಲ ಸ್ವಭಾವಗಳು ಅರ್ಪಿಸದೇ ಸಹಜವಾಗಿ ಅರ್ಪಿಸಲ್ಪಡುವುವು॥೪೪೭॥ ಪರಿಸಮಣಿಯ ಪರೀಕ್ಷೆಗಾಗಿ ಸ್ಪರ್ಶಿಸುವ ಕಬ್ಬಿಣಗಳೆಲ್ಲವೂ ಪರಿಪೂರ್ಣ ಶುದ್ಧ ಬಂಗಾರವೇ ಆಗುವುವು. ಅದರಂತೆಯೇ ಇವರ ಶರೀರದಿಂದ ನಡೆಯುವ ಕರ್ಮಗಳೆಲ್ಲವೂ ನಿಜವಾಗಿಯೂ ಅವು ಪರಬ್ರಹ್ಮವಾಗಿರುವುವು॥೪೪೮॥ ಇವರ ಆಟಗಳು ದೇವರ ಪೂಜೆಯಾಗಿರುವುದು. ಇವರ ಬಡಬಡಿಸುವಿಕೆಯು ದೇವರಸ್ತವನೆಯಾಗಿರುವುದು ಅದರಂತೆ ಈತನು ಸ್ವಾಭಾವಿಕ ಕರ್ಮಗಳಿಂದ ಸ್ವಾನಂದಪೂರ್ಣನಾಗಿ ಸುಖಿಯಾಗಿರುವನು॥೪೪೯॥ ಈತನು ಯಾವ ದಾರಿಯತ್ತ ನೋಡುವನೋ ಆ ದಾರಿಯಲ್ಲಿ ದೇವನು ಆನಂದವಾಗಿ ನಿಂತಿರುವನು. ಆಗ ಈತನು ಆ ದೇವನನ್ನು ನೋಡಿರಲಿ ಅಥವಾ ನೋಡದಿರಲಿ ಈತನಿಗೆ ಮಾತ್ರ ಸ್ವಾಭಾವಿಕವಾಗಿಯೇ ದೇವರೇ ಕಾಣುವನು॥೪೫೦॥ ಈತನು ಯಾವ ಮಾರ್ಗದಿಂದ ನಡೆಯುವನೋ ಆ ಮಾರ್ಗವನ್ನು ಶ್ರೀರಂಗನು ತಾನೇ ಆಗುವನು. ಅರ್ಥಾತ್ ಈತನು ದೇವರ ಹೊಟ್ಟೆಯ ಮೇಲೇ ಸರ್ವಾಂಗದಿಂದ ಸುಖವಾಗಿ ಮೋಜಿನಿಂದ ನಡೆದಾಡುವನು॥೪೫೧॥ ಈತನಿಂದ ಸ್ವಾಭಾವಿಕವಾಗಿ ನಡೆಯುವ ಕರ್ಮಗಳೆಲ್ಲವೂ ಅಹೇತುಕದಿಂದ ಬ್ರಹ್ಮಾರ್ಪಣೆಯೇ ಆಗುವುದು. ಇದರ ನಾಮವೇ "ಭಜನೆ" ಯಾಗಿದೆ ಮತ್ತು ಶುದ್ಧವಾದ "ಭಾಗವತ ಧರ್ಮ" ವಾಗಿದೆ॥೪೫೨॥ ಸ್ವಾಭಾವಿಕವಾಗಿ ಆಗುವ ಎಲ್ಲ ವರ್ತನೆಗಳು ಸಹಜವಾಗಿಯೇ ಬ್ರಹ್ಮಾರ್ಪಣೆಯಾಗುವುವು. ಇದರ ನಾಮವೇ ಶುದ್ಧವಾದ "ಆರಾಧನೆ" ಯಾಗಿದೆ. ಹೇ ಜನಕರಾಜನೇ, ಪೂರ್ಣವಾದ "ಭಾಗವತ ಧರ್ಮ" ವು ಇದೇ ಎಂದು ತಿಳಿದುಕೋ॥೪೫೩॥ ಅರೇ ಈ ಪ್ರಕಾರದ ಭಗವದ್ಭಜನೆಯ ಮಾರ್ಗದಲ್ಲಿ ಯಾವಾಗಲೂ ಯಾವ ಭಯವೂ ಇರುವುದಿಲ್ಲ. ಹೇ ನೃಪನಾಥನೇ, ನೀನು "ಅಭಯ" ವಿಷಯಕ್ಕೆ ವಿಚಾರಿಸಿರುವಿ. ಅದು ಇಂತಹ ಭಜನೆಯಿಂದಲೇ ನಿಶ್ಚಯವಾಗಿ ಪ್ರಾಪ್ತವಾಗುವುದು॥೪೫೪॥ ಹೇ ರಾಜನೇ, ಇದರಲ್ಲಿ ಭಯದ ಕಾರಣಗಳು ಯಾವುವು? ಹೀಗೆ ನೀನು ಕೇಳಬಹುದಾಗಿದೆ. ಅದನ್ನು ಸಹ ಹೇಳುವೆನು. ಹೇ ಶ್ರವಣ ಸೌಭಾಗ್ಯನಿಧಿಯೇ ಸಾವಧಾನ ಮನಸ್ಸಿನಿಂದ ಶ್ರವಣವನ್ನು ಮಾಡು॥೪೫೫॥

ಆತ್ಮವು ಪೂರ್ಣತ್ವದಿಂದ ಸರ್ವತ್ರವೂ ಒಂದೇ ಇರುವುದು. ತಥಾಪಿ "ಅದರಿಂದ ನಾನು ಭಿನ್ನನಾಗಿರುವೆ" ಎಂದು ಹೇಳುವುದೇ ಭಯಜನಕ ಅಜ್ಞಾನವಾಗಿದೆ. ಅದರಲ್ಲಿ ದ್ವಂದ್ವ ಭಾವವು ಹುಟ್ಟುವುದರಿಂದ ಅದು ಅತ್ಯಂತ ದುಃಖದಾಯಕವಾಗಿರುವುದು॥೪೫೬॥

ಭಯಾಚೇ ಮೂಳ ದೃಢ ಅಜ್ಞಾನ । ತ್ಯಾಚೇ ನಿವರ್ತಕ ಮುಖ್ಯ ಜ್ಞಾನ । ತೇಥ ಕಾ ಲಾಗಲೇ ಭಗವದ್ಭಜನ । ಐಸಾ ಜ್ಞಾನಾಭಿಮಾನ ಪಂಡಿತಾ ॥೪೫೭॥ ಐಕ ರಾಯ ಯೇಚಿ ಅರ್ಥೀ। ಜ್ಞಾನಾಸೀ ಕಾರಣ ಮುಖ್ಯ ಭಕ್ತೀ । ಹಾ ಕೃತನಿಶ್ಚಯೋ ಆಮುಚ್ಯಾ ಮತೀ। ತೇಹೀ ಉಪಪತ್ತೀ ಅವಧಾರೀ॥೪೫೮॥ ಅಜ್ಞಾನಾಚೇ ಮೂಳ ಮಾಯಾ। ಜೇ ಬ್ರಹ್ಮಾದಿಕಾ ನ ಯೇ ಆಯಾ। ಗುಣಮಯೀ ಲಾಗಲಿ ಪ್ರಾಣಿಯಾ । ಜಾಣ ತೇ ರಾಯಾ ಅತಿ ದುಸ್ತರ ॥೪೫೯॥ ತ್ಯಾ ಮಾಯೇಚೇ ಮುಖ್ಯ ಲಕ್ಷಣ । ಸ್ವಸ್ವರೂಪಾಚೇ ಆವರಣ । ದ್ವೈತಾಚೇ ಜೇ ಸ್ಫುರೇ ಸ್ಫುರಣ। "ಮೂಳಮಾಯಾ" ಜಾಣ ತಿಚೇ ನಾಂವ ॥೪೬೦॥ ಬ್ರಹ್ಮ ಅದ್ವಯತ್ವೇ ಪರಿಪೂರ್ಣ। ತೇ ಸ್ವರೂಪೀ ಸ್ಫುರೇ ಜೇ ಮೀಪಣ। ತೇಚಿ ಮಾಯೇಚೇ ಜನ್ಮಸ್ಥಾನ। ನಿಶ್ಚಯೇ ಜಾಣ ನೃಪನಾಥಾ॥೪೬೧॥ ತೇ ಮಾಯೇಚ್ಯಾ ನಿಜಪೋಟೀ। ಭಯಶೋಕ ದುಃಖಾಂಚಿಯಾ ಕೋಟೀ। ಬ್ರಹ್ಮಾಶಿವಾದೀಚೇ ಲಾಗೇ ಪಾಠೀ । ಇತರಾಂಚೀ ಗೋಠೀ ತೇ ಕೋಣ ॥೪೬೨॥ ತೇ ಮಹಾಮಾಯೇಚೀ ನಿವೃತ್ತೀ । ಕರಾವಯಾ ದಾಟುಗೀ ಭವವದ್ಭಕ್ತೀ । ಸ್ವಯೇ ಶ್ರೀಕೃಷ್ಣ ಯೇಚಿ ಅರ್ಥೀ । ಬೋಲಿಲಾ ಅರ್ಜುನಾಪ್ರತೀ ಗೀತೇಮಾಜೀ ॥೪೬೩॥ (ಭಗವದ್ಗೀತಾ ಶ್ಲೋಕಾರ್ಥ.ಅ.೭ ಶ್ಲೋಕ ೧೪) ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ॥ ಮಾಯಾ ಮ್ಹಣಿಜೇ ಭಗವಚ್ಛಕ್ತೀ । ಭಗವದ್ಭಜನೇ ತಿಚೀ ನಿವೃತ್ತೀ । ಆನ ಉಪಾಯ ತೇಥೇ ನ ಚಲತೀ । ಭಕ್ತ ಸುಖೇ ತರತೀ ಹರಿಮಾಯಾ ॥೪೬೪॥ ಹರೀಚೀ ಮಾಯಾ ಹರಿಭಜನೇ । ಹರಿಭಕ್ತೀ ಸುಖೇಚಿ ತರಣೇ । ಹೇ ನಿಜಗುಹ್ಯ ಅರ್ಜುನಾಚೇನಿ ಕಾರಣೇ । ಸ್ವಯೇ ಶ್ರೀಕೃಷ್ಣೇ ಸಾಂಗಿತಲೇ ॥೪೬೫॥ ಮಾಯೇಚೀ ಹೇಚಿ ನಿಜಪುಷ್ಟೀ । ಸ್ವರೂಪೀ ವಿಮುಖ ಕರೀ ದೃಷ್ಟೀ । ದ್ವೈತಭಾವೇ ಅತ್ಯಂತ ಲಾಠೀ । ಭ್ರಮಾಚೀ ತ್ರಿಪುಟೀ ವಾಢವೀ ಸದಾ ॥೪೬೬॥ ಭಯಾಚೇ ಜನಕ ದ್ವೈತಭಾನ । ದ್ವೈತಜನಕ ಮಾಯಾ ಜಾಣ । ಮಾಯಾನಿವರ್ತಕ ಬ್ರಹ್ಮಜ್ಞಾನ । ಹೇ ಸಂತ ಸಜ್ಞಾನ ಬೋಲತೀ ॥೪೬೭॥ ಐಸೇ ಶ್ರೇಷ್ಠ ಬ್ರಹ್ಮಜ್ಞಾನ । ತೇ ಭಕ್ತೀಚೇ ಪೋಸಣೇ ಜಾಣ । ನ ಕರಿತಾ ಭಗವದ್ಭಜನ । ಬ್ರಹ್ಮಜ್ಞಾನ ಕದಾ ನುಪಜೇ ॥೪೬೮॥ ಜರೀ ಜಾಹಲೇ ವೇದಶಾಸ್ತ್ರಸಂಪನ್ನ । ತಿಹೀ ನ ಕರಿತಾ ಭಗವದ್ಭಜನ । ಮಾಯಾನಿವರ್ತಕ ಬ್ರಹ್ಮಜ್ಞಾನ । ತಯಾಂಸೀಹೀ ಜಾಣ ಕದಾ ನುಪಜೇ ॥೪೬೯॥ ಶಬ್ದಜ್ಞಾನಾಚೇ ವ್ಯುತ್ಪತ್ತೀ । ದಾಟುಗೀ ಹೋಯ ಲೌಕಿಕ ಸ್ಥಿತೀ । ಮಾಯಾನಿವರ್ತಕ ಜ್ಞಾನಪ್ರಾಪ್ತೀ । ನ ಕರಿತಾ ಹರಿಭಕ್ತಿ ಕದಾ ನುಪಜೇ॥೪೭೦॥ ಹರಿಗುಣಾಂಚೇ ರಸಾಳ

ದೃಢವಾದ ಅಜ್ಞಾನವೇ ಭಯದ ಮೂಲವಾಗಿದೆ ಮತ್ತು ಜ್ಞಾನವು ಮುಖ್ಯವಾಗಿ ಈ ಅಜ್ಞಾನದ ನಿವರ್ತಕವಾಗಿದೆ. ಅಂದಮೇಲೆ ಭಗದ್ಭಜನೆಯು ಏಕೆ ಬೇಕು? ಹೀಗೆ ಪಂಡಿತರ ಜ್ಞಾನಾಭಿಮಾನವಾಗಿರುವುದು॥೪೫೭॥ ಅದಕ್ಕಾಗಿ ಹೇ ರಾಜನೇ, ನಿನಗೆ ಹೇಳುವೆ ಕೇಳು ಜ್ಞಾನಕ್ಕೆ ಮುಖ್ಯ ಕಾರಣವು ಭಕ್ತಿಯಾಗಿರುವುದು. ಹೀಗೆ ನಮ್ಮ ಬಲವಾದ ಸಿದ್ಧಾಂತವಾಗಿರುವುದು. ಇದಕ್ಕೂ ಕಾರಣವಿದೆ ಕೇಳು॥೪೫೮॥ ಬ್ರಹ್ಮಾದಿಕರಿಗೂ ಆವರಿಸಲಾಗದ ಮಾಯೆಯೇ ಅಜ್ಞಾನದ ಮೂಲವಾಗಿರುವುದು. ಇದು ತ್ರಿಗುಣಾತ್ಮಕವಾಗಿದ್ದು ಪ್ರಾಣಿಗಳ ಬೆನ್ನು ಹತ್ತಿರುವುದು ಮತ್ತು ಇದು ಅತ್ಯಂತ ದುಸ್ತರವಾಗಿರುವುದು ಹೀಗೆ ನೀನು ತಿಳಿ॥೪೫೯॥ ಸ್ವಸ್ವರೂಪವನ್ನು ಮುಚ್ಚಿ ಹಾಕುವುದೇ ಮಾಯೆಯ ಮುಖ್ಯ ಲಕ್ಷಣವಾಗಿರುವುದು. ದ್ವೈತದ ಸ್ಫುರಣೆಯಾಗುವುದೇ "ಮೂಲಮಾಯಾ" ಎಂದು ಹೆಸರಾಗಿರುವುದು॥೪೬೦॥ ಬ್ರಹ್ಮವು ಅದ್ವೈತತ್ವದಿಂದ ಪರಿಪೂರ್ಣವಾಗಿರುವುದು. ಹೇ ರಾಜನೇ ಈ ಅದ್ವೈತ ಸ್ವರೂಪದಲ್ಲಿ "ನಾನು" ಎಂದು ಉತ್ಪನ್ನವಾಗುವುದೇ ನಿಜವಾದ ಮಾಯೆಯ ಜನ್ಮಸ್ಥಾವಾಗಿರುವುದು. ಇದನ್ನು ನೀನು ತಿಳಿ॥೪೬೧॥ ಈ ಮಾಯೆಯ ಉದರದಲ್ಲಿ ಭಯ,ಶೋಕ,ಮತ್ತು ದುಃಖ ಇವು ರಾಶಿರಾಶಿಯಾಗಿ ತುಂಬಿರುವುವು. ಬ್ರಹ್ಮದೇವರು, ಮಹಾದೇವರಂಥವರಿಗೂ ಸಹ ಇದು ಬೆನ್ನು ಹತ್ತಿರುವುದು. ಅಂದಮೇಲೆ ಇತರರ ಯಾವ ಪಾಡು? ॥೪೬೨॥ ಈ ಮಾಯೆಯನ್ನು ನಿವೃತ್ತಗೊಳಿಸಲು ಭಗವದ್ಭಕ್ತಿಯೊಂದೇ ಸಮರ್ಥವಾಗಿರುವುದು. ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಇದನ್ನೇ ಹೇಳಿರುವನು॥೪೬೩॥ "ಮಾಮೇವಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ"(ಇದರ ಅರ್ಥ) ಮಾಯಾ ಅಂದರೆ ಇದೊಂದು ಭಗವಂತನ ಶಕ್ತಿಯಾಗಿದೆ. ಇದರ ನಿವೃತ್ತಿಯಾಗಬೇಕಾದರೇ ಭಗವದ್ಭಜನೆಯೇ ಬೇಕಾಗುವುದು. ಇಲ್ಲಿ ಇತರ ಉಪಾಯಗಳು ನಡೆಯವುದಿಲ್ಲ. ಭಗವಂತನ ಭಕ್ತರು ಮಾತ್ರ ಹರಿಯ ಮಾಯೆಯಿಂದ ಸುಖವಾಗಿ ಪಾರಾಗುವರು॥೪೬೪॥ ಹರಿಭಕ್ತರು ಹರಿಭಜನೆಯಿಂದ ಹರಿಮಾಯೆಯನ್ನು ಸುಖವಾಗಿ ಪಾರಾಗುವರು. ಈ ತನ್ನ ಅಂತಃಕರಣದ ಗುಟ್ಟನ್ನು ಶ್ರೀಕೃಷ್ಣನು ಅರ್ಜುನನಿಗಾಗಿ ಪ್ರಕಟಿಸಿದನು॥೪೬೫॥ ಜೀವದ ದೃಷ್ಟಿಯನ್ನು ಸ್ವರೂಪದಿಂದ ವಿಮುಖಗೊಳಿಸುವುದೇ ಮಾಯೆಯ ಅಂಗದ ದೊಡ್ಡ ಗುಣವಾಗಿದೆ ಮತ್ತು ದ್ವೈತಭಾವದಿಂದ ಬಲಾಢ್ಯವಾಗಿ ಸದಾ ಸರ್ವಕಾಲದಲ್ಲಿ ಭ್ರಮೆಯ ತ್ರಿಪುಟಿ ಅಂದರೆ ದೃಶ್ಯ,ದರ್ಶನ,ದೃಷ್ಟಾ ಇವುಗಳ ಭಾವನೆಯನ್ನು ಬೆಳೆಸುತ್ತದೆ॥೪೬೬॥ ದ್ವೈತದ ಭಾವನೆಯು ಭಯದ ಜನಕವಾಗಿದೆ ಮತ್ತು ಮಾಯೆಯು ದ್ವೈತದ ಜನನೀಯಾಗಿದೆ ಹೀಗೆ ನೀನು ತಿಳಿ. ಇಂತಹ ಮಾಯೆಯ ನಿವರ್ತಕವು ಬ್ರಹ್ಮಜ್ಞಾನವಾಗಿದೆ ಎಂದು ಜ್ಞಾನಸಂಪನ್ನರಾದ ಸಾಧು ಸಂತರು ಹೇಳುವರು॥೪೬೭॥ ಇಂತಹ ಶ್ರೇಷ್ಠವಾದ ಬ್ರಹ್ಮಜ್ಞಾನವು ಭಕ್ತಿಯ ಸಾಕಿದ ಕೂಸಾಗಿರುವುದು. ಇದನ್ನು ಲಕ್ಷದಲ್ಲಿಡು ಭಗವದ್ಭಜನೆಯನ್ನು ಮಾಡದಿದ್ದಲ್ಲಿ ಬ್ರಹ್ಮಜ್ಞಾನವು ಎಂದೂ ಪ್ರಾಪ್ತವಾಗುವುದಿಲ್ಲ॥೪೬೮॥ ವೇದಶಾಸ್ತ್ರ ಸಂಪನ್ನರಾಗಿ ಅವರು ಭಗವದ್ಭಜನೆಯನ್ನು ಮಾಡದಿದ್ದರೆ ಮಾಯೆಯನ್ನು ಸೋಲಿಸುವ ಬ್ರಹ್ಮಜ್ಞಾನವು ಅವರಿಗೆ ಎಂದೂ ಪ್ರಾಪ್ತವಾಗಲಾರದು॥೪೬೯॥ ಶಬ್ದಜ್ಞಾನದ ವ್ಯುತ್ಪತ್ತಿಯು ಲೌಕಿಕವನ್ನು ಬೆಳೆಸಲು ಸಮರ್ಥವಾಗಿದೆ. ಆದರೆ ಮಾಯೆನ್ನು ನಿವೃತ್ತಿಗೊಳಿಸುವ ಜ್ಞಾನವು ಮಾತ್ರ ಹರಿಭಕ್ತಿಯ ಹೊರತಾಗಿ ಎಂದಿಗೂ ಪ್ರಾಪ್ತವಾಗಲಾರದು॥೪೭೦॥

ಕಹಾಣೇ । ತೇ ಬ್ರಹ್ಮಜ್ಞಾನಾಚೀ ನಿಜಜನನೀ। ಹರಿನಾಮಾಚೇನಿ ಗರ್ಜನೀ। ಜೀವ ಘೇಊನಿ ಮಾಯಾ ಪಳೇ।।೪೭೧।। ಮಾಯಾ ಪಳತಾ ಪಳೋ ನ ಲಾಹೇ। ಹರಿನಾಮಧಾಕೇ ವಿರೋನಿ ಜಾಯೇ । ಯಾಲಾಗೀ ಹರಿಮಾಯಾ ಪಾಹೇ । ಬಾಧೂ ನ ಲಾಹೇ ಹರಿಭಕ್ತಾ ।।೪೭೨।। ನಾಮಾಚೀ ಪರಮ ದುರ್ಧರ ಗತೀ । ಮಾಯಾ ಸಾಹೋ ನ ಶಕೇ ನಿಜಭಕ್ತೀ । ಹರಿಭಕ್ತ ಮಾಯಾ ಸುಖೇ ತರತೀ । ಯಾಲಾಗೀ ಶ್ರೀಪತೀ ಬೋಲಿಲಾ ಸ್ವಯೇ ।।೪೭೩।। ಸಾಯುಜ್ಯಾದಿ ಚಾರೀ ಮುಕ್ತೀ । ಅಂಕೀ ವಾಢವೀ ಭಗವದ್ಭಕ್ತೀ । ತೇ ನ ಕರಿತಾ ಅನನ್ಯಗತೀ । ಶಾಸ್ತ್ರಜ್ಞಾ ಮುಕ್ತೀ ನ ಘಡೇ ಕದಾ।।೪೭೪।। ಹರಿಭಜನೀ ಜೇ ವಿಮುಖ । ತ್ಯಾಂಸೀ ಸದಾ ದ್ವೈತ ಸನ್ಮುಖ । ಮಹಾಭಯೇಸೀ ದುಃಖದಾಯಕ । ಪ್ರಪಂಚು ದೇಖ ದೃಢ ವಾಢೇ।।೪೭೫।।ಜೇವೀ ಏಕಾಏಕೀ ದಿಗ್‌ಭ್ರಮು ಪಡೇ । ತೋ ಪೂರ್ವ ಮ್ಹಣೇ ಪಶ್ಚಿಮೇಕಡೇ । ತೈಸೀ ವಸ್ತು ವಿಮುಖೇ ವಾಢೇ । ಅತಿಗಾಢೇ ಮಿಥ್ಯಾ ದ್ವೈತ ।।೪೭೬।। ದ್ವೈತಾಚಿಯೇ ಭೇದವಿಹಿರೇ । ಸುಟತೀ ಸಂಕಲ್ಪ ವಿಕಲ್ಪಾಂಚೇ ಝುರೇ । ತೇಥ ಜನ್ಮ ಮರಣಾಂಚೇನಿ ಪೂರೇ । ಬುಡೇ ಏಕಸರೇ ಬ್ರಹ್ಮಾಂಡಗೋಳ।।೪೭೭।। ಜನ್ಮಮರಣಾಂಚಿಯಾ ವೋಢೀ । ನಾನಾ ದುಃಖಾಚಿಯಾ ಕೋಡೀ । ಅಭಕ್ತ ಸೋಶಿತೀ ಸಾಂಕಡೀ । ಹರಿಭಕ್ತಾಂತೇ ವೋಢೀ ಸ್ವಪ್ನೀ ಹೀ ನ ಲಗೇ।।೪೭೮।। ಭಕ್ತೀಚೇ ಅಗಾಧ ಮಹಿಮಾನ । ತೇಥೇ ರಿಘೇನಾ ಭವಬಂಧನ। ತೇ ಕರಾವಯಾ ಭಗವದ್ಭಜನ । ಸದ್ಗುರು ಚರಣ ಸೇವಾವೇ ।।೪೭೯।। ನಿಜಶಿಷ್ಯಾಚೇ ಮರಣಚಿಂತಾ । ಸ್ವಯೇ ನಿವಾರೀ ಜೋ ವಸ್ತುತಾ। ತೋಚಿ ಸದ್ಗುರು ತತ್ತ್ವತಾ । ಯೇರ ತೇ ಗುರುತಾ ಮಂತ್ರತಂತ್ರೋಪದೇಶೇ।।೪೮೦।। ಮಂತ್ರತಂತ್ರ ಉಪದೇಶಿತೇ । ಘರೋಘರೀ ಗುರು ಆಹೇತ ಆಇತೇ । ಜೋ ಶಿಷ್ಯಾಸೀ ಮೇಳವೀ ಸದ್ವಸ್ತುತೇ । ಸದ್ಗುರು ತ್ಯಾತೇ ಶ್ರೀಕೃಷ್ಣ ಮಾನೀ।।೪೮೧।। ಗುರು ದೇವೋ ಗುರು ಮಾತಾ ಪಿತಾ । ಗುರು ಆತ್ಮಾ ಈಶ್ವರ ವಸ್ತುತಾ। ಗುರು ಪರಮಾತ್ಮಾ ಸರ್ವಥಾ। ಗುರು ತತ್ತ್ವತಾ ಪರಬ್ರಹ್ಮ ।।೪೮೨।। ಗುರುಚೇ ಉಪಮೇಸಮಾನ । ಪಾಹತಾ ಜಗೀ ನ ದಿಸೇ ಆನ। ಅಗಾಧ ಗುರೂಚೇ ಮಹಿಮಾನ। ತೋ ಭಾಗ್ಯೇವೀಣ ಭೇಟೇನಾ।।೪೮೩।। ನಿಷ್ಕಾಮ ಪುಣ್ಯಾಚಿಯಾ ಕೋಡೀ । ಅಗಾಧ ವೈರಾಗ್ಯ ಜೋಡೇ ಜೋಡೀ । ನಿತ್ಯಾನಿತ್ಯ ವಿವೇಕ ಆವಡೀ । ತೈ ಪಾವಿಜೇ ರೋಕಡೀ ಸದ್ಗುರುಕೃಪಾ।।೪೮೪।। ಸದ್ಗುರುಕೃಪಾ ಹಾತೀ ಚಢೇ। ತೇಥೇ ಭಕ್ತೀಚೇ

ಹರಿಗುಣದ ರಸಾಳ ಕಥೆಯೇ ಬ್ರಹ್ಮಜ್ಞಾನದ ನಿಜವಾದ ಜನನೀಯಾಗಿದೆ. ಹರಿನಾಮದ ಗರ್ಜನೆಯನ್ನು ಮಾಡಲು ಮಾಯೆಯು ತನ್ನ ಜೀವವನ್ನು ಹಿಡಿದುಕೊಂಡು ಓಡುವುದು ।।೪೭೧।। ಈ ಮಾಯೆಯು ಓಡಲು ಹೋದರೆ, ಓಡಲಿಕ್ಕೂ ಬಾರದಾಗುವುದು. ಕಾರಣ ಹರಿನಾಮ ಭಯದಿಂದ ಇದು ಇದ್ದಲ್ಲಿಯೇ ಕರಗಿ ಹೋಗುವುದು. ಆದ್ದರಿಂದ ಈ ಹರಿಯ ಮಾಯೆಯು ಹರಿಭಕ್ತರಿಗೆ ಬಾಧಿಸಲಾರದು।।೪೭೨।। ಹರಿಭಕ್ತಿಯ ಶಕ್ತಿಯು ವಿಲಕ್ಷಣವಾಗಿದೆ. ಇದರ ಎದುರಿಗೆ ಮಾಯೆಯ ಬಲವು ನಡೆಯಲಾರದು. ಆದ್ದರಿಂದ ಹರಿಭಕ್ತರು ಮಾಯೆಯಿಂದ ಸುಖವಾಗಿ ಪಾರಾಗುವರು. ಹೀಗೆ ಪ್ರತ್ಯಕ್ಷವಾಗಿ ಶ್ರೀಪತಿಯು ಹೇಳಿರುವನು।।೪೭೩।। ಸಲೋಕತಾ, ಸಮೀಪತಾ, ಸ್ವರೂಪತಾ ಮತ್ತು ಸಾಯಜ್ಯತಾ ಈ ನಾಲ್ಕು ಮುಕ್ತಿಗಳಿಗೆ ಹರಿಭಕ್ತಿಯು ತನ್ನ ತೊಡೆಯ ಮೇಲೆ ಬೆಳೆಸುವುದು. ಇಂತಹ ಭಕ್ತಿಯನ್ನು ಅನನ್ಯ ಭಾವದಿಂದ ಮಾಡದಿದ್ದರೆ, ಶಾಸ್ತ್ರಜ್ಞ ಜನರಿಗೆ ಮುಕ್ತಿಯು ಎಂದೂ ದೊರೆಯಲಾರದು।।೪೭೪।। ಹರಿಭಜನೆಗೆ ವಿಮುಖರಾದವರ ಎದುರಿನಲ್ಲಿ ದ್ವೈತವು ಸದಾ ಸರ್ವಕಾಲದಲ್ಲಿ ನಿಂತಿರುವುದು. ಅವರಲ್ಲಿ ಮಹಾಭಯ ಸಮೇತವಾಗಿ ದುಃಖದಾಯಕ ಪ್ರಪಂಚವು ದೃಢವಾಗಿ ಬೆಳೆಯುತ್ತಿರುವುದು ।।೪೭೫।। ಏಕಾಏಕೀ ದಿಗ್‌ಭ್ರಮೆಯಾದ ಮನುಷ್ಯನು ಪಶ್ಚಿಮದಿಕ್ಕಿಗೆ ಪೂರ್ವವೆಂದು ಹೇಳುವನು. ಅದರಂತೆ ಪರಬ್ರಹ್ಮಕ್ಕೆ ವಿಮುಖರಾದರೆ, ಮಿಥ್ಯೆಯಾದ ದ್ವೈತವು ಬಹು ಬಲಿಷ್ಠವಾಗುವುದು ।।೪೭೬।। ದ್ವೈತದ ಭೇದರೂಪ ಬಾವಿಯಲ್ಲಿ ಸಂಕಲ್ಪ ವಿಕಲ್ಪಗಳ ಶಿಲೆಗಳು ಹುಟ್ಟುವುವು ಮತ್ತು ಜನ್ಮ ಮರಣದ ಪೂರವು ಬಂದೊದಗಿದಾಗ ಅದರಲ್ಲಿ ಇಡೀ ಬ್ರಹ್ಮಾಂಡ ಗೋಲವು ಮುಳುಗಿ ಹೋಗುವುದು ।।೪೭೭।। ಜನ್ಮ ಮರಣದ ಜಗ್ಗಾಟದಿಂದ ನಾನಾ ಪ್ರಕಾರದ ದುಃಖದ ರಾಶಿಯನ್ನು ಮತ್ತು ಮೇಲಿಂದ ಮೇಲೆ ಸಂಕಟಗಳನ್ನು ಅಭಕ್ತ ಜನರು ಸೋಸುತ್ತಿರುವರು. ಇಂತಹ ಜಗ್ಗಾಟವು ಹರಿಭಕ್ತರಿಗೆ ಸ್ವಪ್ನದಲ್ಲಿಯೂ ಸಹ ಒದಗುವುದಿಲ್ಲ ।।೪೭೮।। ಭಕ್ತಿಯ ಮಹಿಮೆಯು ಅಗಾಧವಾಗಿದೆ. ಇದರಲ್ಲಿ ಸಂಸಾರ ಬಂಧನವು ಸೇರಲಾರದು. ಇಂತಹ ಈ ಭಗವದ್ಭಜನೆಯನ್ನು ಸಾಧಿಸುವುದಕ್ಕಾಗಿ ಸದ್ಗುರುಗಳ ಚರಣ ಸೇವೆಯನ್ನು ಮಾಡಬೇಕಾಗುವುದು ।।೪೭೯।। ತನ್ನ ಶಿಷ್ಯನ ಮರಣ ಚಿಂತನೆಯನ್ನು ಸ್ವತಃ ಯಾರು ನಿವಾರಿಸುವನೋ ಆತನೇ ನಿಜವಾದ ಸದ್ಗುರುವಾಗಿರುವನು. ಹೀಗಿರದ ಇತರ ಪ್ರಕಾರದ ಗುರುಗಳು ಕೇವಲ ಮಂತ್ರತಂತ್ರ ಉಪದೇಶಕರಾಗಿರುವರೆಂದು ತಿಳಿಯಬೇಕು।।೪೮೦।। ಈ ಪ್ರಕಾರದ ಮಂತ್ರ ತಂತ್ರದ ಉಪದೇಶವನ್ನು ಮಾಡುವ ಗುರುಗಳು ಮನೆ ಮನೆಗೂ ಇರುವರು. ಆದರೆ ಶಿಷ್ಯನಿಗೆ ಸದ್‌ವಸ್ತುವಿನ ಪ್ರಾಪ್ತ ಮಾಡಿಕೊಡುವವರಿಗೆ ಮಾತ್ರ ಸದ್ಗುರು ಎಂದು ಶ್ರೀಕೃಷ್ಣನು ಮನ್ನಿಸುವನು।।೪೮೧।। ಗುರುವೇ ದೇವರು, ಗುರುವೇ ಮಾತಾಪಿತರು, ಗುರುವೇ ಆತ್ಮನು, ಗುರುವೇ ಈಶ್ವರನು, ಗುರುವೇ ಸರ್ವಥೈವ ಪರಮಾತ್ಮನಾಗಿರುವನು. ತಾತ್ವಿಕ ದೃಷ್ಟಿಯಿಂದ ನೋಡಿದರೆ ಗುರು ಪರಬ್ರಹ್ಮನಾಗಿರುವನು।।೪೮೨।। ಜಗತ್ತಿನಲ್ಲಿ ಗುರುವಿನ ಉಪಮೆ ಸಮಾನಕ್ಕಾಗಿ ಇತರ ಯಾವುದನ್ನು ಹುಡುಕಿದರೂ ಸಿಗುವುದಿಲ್ಲ. ಹೀಗೆ ಗುರುವಿನ ಮಹಿಮೆಯು ಅಗಾಧವಾಗಿದೆ. ಭಾಗ್ಯವಿಲ್ಲದೇ ಅವರ ಭೇಟಿಯು ಆಗುವುದೇ ಇಲ್ಲ।।೪೮೩।। ರಾಶಿರಾಶಿಯಾಗಿ ನಿಷ್ಕಾಮ ಪುಣ್ಯವಿರಬೇಕು ಮತ್ತು ಅದಕ್ಕೆ ನಿಃಸೀಮವಾದ ವೈರಾಗ್ಯ ಜೋಡಿವಿರಬೇಕು ಹಾಗೆಯೇ ನಿತ್ಯಾನಿತ್ಯವಿವೇಕದ ಅಭಿಲಾಷೆವಿರಬೇಕು. ಆಗ ಮಾತ್ರ ಸದ್ಗುರುಗಳು ಕೃಪೆಯು ರೋಖಡಿಯಾಗಿ ದೊರೆಯುವುದು ।।೪೮೪।।

ಭಾಂಡಾರ ಉಘಡೇ। ತೇವ್ಹಾ ಕಳಿಕಾಳ ಪಳೇ ಪುಢೇ। ಕಾಯಸೇ ಬಾಪುಡೇ ಭವಭಯ।।೪೮೫।। ಗುರೂತೇ ಮ್ಹಣೋ ಮಾತಾಪಿತಾ । ತೇ ಏಕಜನ್ಮೀ ಸರ್ವಥಾ। ಹಾ ಸನಾತನ ತತ್ತ್ವತಾ। ಜಾಣ ಪಾ ವಸ್ತು ತಾ ಮಾಯಬಾಪು।।೪೮೬।। ಅಧೋದ್ವಾರೇ ಉಪಜವಿತಾ। ತೇ ಲೌಕಿಕೀ ಮಾತಾಪಿತಾ। ಅಧೋದ್ವಾರಾ ಆತಳೋ ನೇದಿತಾ । ತೇ ಸದ್ಗುರು ಪಿತಾ ಸತ್ಯತ್ವೇ ಶಿಷ್ಯಾ।।೪೮೭।। ಗುರೂತೇ ಮ್ಹಣೋ ಕುಳದೇವತಾ। ತಿಚೀ ಕುಳಕರ್ಮೀಂಚ ಪೂಜ್ಯತಾ। ಹಾ ಸರ್ವ ಕಾಮೀ ಅಕರ್ತಾ । ಪೂಜ್ಯ ಸರ್ವಥಾ ಸರ್ವಾರ್ಥೀ ।।೪೮೮।। ಗುರು ಮ್ಹಣೋ ದೇವಾಸಮಾನ। ತಂವ ದೇವಾಸೀ ಯಾಚೇನಿ ದೇವಪಣ। ಮಗ ತ್ಯಾ ಸದ್ಗುರೂಸಮಾನ। ದೇವಹೀ ಜಾಣ ತುಕೇನಾ।।೪೮೯।। ಗುರು ಬ್ರಹ್ಮ ದೋನೀ ಸಮಾನ। ಹೇಹೀ ಉಪಮಾ ಕಿಂಚಿತ ನ್ಯೂನ। ಗುರುವಾಕ್ಯೇ ಬ್ರಹ್ಮಾ ಬ್ರಹ್ಮಪಣ। ತೇ ಸದ್ಗುರೂಸಮಾನ ಅದ್ವಯತ್ವೇ।।೪೯೦।। ಯಾಲಾಗೀ ಅಗಾಧ ಗುರುಗರಿಮಾ। ಉಪಮಾ ನಾಹೀ ನಿರುಪಮಾ। ಬ್ರಹ್ಮೀ ಬ್ರಹ್ಮತ್ವ-ಪ್ರಮಾಣ-ಪ್ರಮಾ। ಹೇ ವಾಕ್ಯಮಹಿಮಾ ಗುರೂಚೀ।।೪೯೧।। ಬ್ರಹ್ಮ ಸರ್ವಾಚೇ ಪ್ರಕಾಶಕ। ಸದ್ಗುರು ತಯಾಚಾಹೀ ಪ್ರಕಾಶಕ। ಏವಂ ಗರೂಹೂನಿ ಅಧಿಕ। ನಾಹೀ ಆಣಿ ಪೂಜ್ಯತ್ವೇ।।೪೯೨।। ಯಾಲಾಗೀ ಗುರೂತೇ ಮನುಷ್ಯಬುದ್ಧೀ। ಪಾಹೋ ನಯೇ ಗಾ ತ್ರಿಶುದ್ಧೀ । ಐಶಿಯೇ ಭಾವಾರ್ಥಬುದ್ಧೀ । ಸಹಜೇ ಚಿತ್ತಶುದ್ಧೀ ಸಚ್ಛಿಷ್ಯಾ।।೪೯೩।। ಜ್ಯಾಂಚಾ ಗುರುಚರಣೀ ನಿಃಸೀಮ ಭಾವೋ । ತ್ಯಾಂಚಾ ಮನೋರಥ ಪುರವೀ ದೇವೋ । ಗುರುಆಜ್ಞಾ ದೇವೋ ಪಾಳೀ ಪಹಾ ಹೋ। ಗುರುವಾಕ್ಯೇ ಸ್ವಯಮೇವೋ ಜಡ ಮೂಢ ತಾರೀ।।೪೯೪।। ಬ್ರಹ್ಮಭಾವೇ ಜೇ ಗುರುಸೇವಕ। ದೇವೋ ತ್ಯಾಂಚಾ ಆಜ್ಞಾಧಾರಕ। ತ್ಯಾಂಸೀ ನಿತ್ಯ ಪುರವೀ ನಿಜಾತ್ಮಸುಖ। ಹೇ ಗುರುಮರ್ಯಾದಾ ದೇಖ ನುಲ್ಲಂಘೀ ದೇವೋ।।೪೯೫।। ದೇವೋ ಗುರುಆಜ್ಞಾ ಸ್ವಯೇ ಮಾನೀ । ತಂವ ಗುರು ದೇವಾಸೀ ಪೂಜ್ಯತ್ವ ಆಣೀ। ಏವಂ ಉಭಯತಾ ಅಭಿನ್ನಪಣೀ । ಭಾವಾರ್ಥಿಯಾಲಾಗೋನೀ ತಾರಕ।।೪೯೬।। ಸದ್ಭಾವೋ ನಾಹೀ ಅಭ್ಯಂತರೀ। ಬಾಹ್ಯ ಭಕ್ತಿ ಭಾವೇಂಚಿ ಕರೀ । ತೇ ಭಾವಾನುಸಾರೇ ಸಂಸಾರೀ । ನಾನಾಪರೀ ಸ್ವಯೇ ಠಕತೀ।।೪೯೭।। ಠಕಲೇ ತೇ ಮನುಷ್ಯಗತೀ। ಠಕಲೇ ತೇ ನಿಜಸ್ವಾರ್ಥೀ । ಠಕಲೇ ತೇ ಬ್ರಹ್ಮಾಪ್ರಾಪ್ತೀ । ದಂಭೇ ಹರಿಭಕ್ತೀ ಕದಾ ನುಪಜೇ।।೪೯೮।। ಯೇಥ ಭಾವೇವೀಣ ತತ್ತ್ವತಾ। ಪರಮಾರ್ಥು

ಸದ್ಗುರು ಕೃಪೆಯು ಕೈಗೆ ಬಂದರೆ, ಭಕ್ತಿಯ ಭಾಂಡಾರವು ತೆರೆಯುವುದು. ಆಗ ಇದನ್ನು ಕಂಡು ಕಲಿಕಾಲವು ಓಡಲಾರಂಭಿಸುವದು. ಅಲ್ಲಿ ಭವಭಯವೆಂಬ ಬಡಪ್ರಾಣಿಯು ಏನು ಮಾಡೀತು? ।।೪೮೫।। ಗುರುವಿಗೆ ತಾಯಿತಂದೆ ಎನ್ನಬೇಕೆಂದರೆ, ಪಾಪ! ಇವರು ಒಂದೇ ಜನ್ಮಕ್ಕೆ ಮಾತ್ರ ಆಗಿರುವರು. ಆದ್ದರಿಂದ ಗುರು ನಿಜವಾಗಿಯೂ ಜನ್ಮಜನ್ಮದ ತಾಯಿತಂದೆಯಾಗಿರುವರು।।೪೮೬।। ಅಧೋದ್ವಾರದಿಂದ ಜನ್ಮ ಕೊಡುವವರು ತಾಯಿತಂದೆಯವರು. ಆದರೆ, ಅಧೋದ್ವಾರದ ಸ್ಪರ್ಶ ಆಗಗೊಡದಂತೆ ಅಂದರೆ ಗರ್ಭವಾಸವನ್ನು ತಪ್ಪಿಸುವವರು ಸದ್ಗುರುಗಳು. ಇವರೇ ಶಿಷ್ಯನ ನಿಜವಾದ ತಾಯಿತಂದೆಯಾಗಿರುವರು।।೪೮೭।। ಗುರುವಿಗೆ ಕುಲದೇವತೆ ಎನ್ನಬೇಕೆಂದರೆ, ಈಕೆಯ ಪೂಜ್ಯತೆಯು ಕೇವಲ ಕುಲಧರ್ಮದ ಕರ್ಮಗಳಲ್ಲಿಯೇ ಇರುವುದು. ಗುರು ಸರ್ವ ಕರ್ಮಗಳಲ್ಲಿ ಅಕರ್ತನಾಗಿರುವುದರಿಂದ ಸದಾ ಸರ್ವಕಾಲದಲ್ಲಿ ಸರ್ವೋಪರಿ ಪೂಜ್ಯನಾಗಿರುವನು ।।೪೮೮।। ಗುರುವಿಗೆ ದೇವರ ಸಮಾನನು ಎನ್ನಬೇಕೆಂದರೆ, ದೇವರಿಗೆ ದೇವತ್ವವು ಇವರಿಂದಲೇ ಬಂದಿರುವುದು. ಆದ್ದರಿಂದ ಗುರುವಿಗೆ ದೇವರ ತುಲನೆಯು ಹತ್ತುವುದಿಲ್ಲ. ಇದನ್ನು ಲಕ್ಷದಲ್ಲಿರಲಿ ।।೪೮೯।। ಗುರು ಮತ್ತು ಬ್ರಹ್ಮ ಈ ಎರಡೂ ಸಮಾನವು ಎಂದು ಹೇಳಿದರೆ ಈ ಉಪಮೆಯು ಸಹ ಕಿಂಚಿತ್ ನ್ಯೂನ್ಯವಾಗುವದು. ಏಕೆಂದರೆ ಬ್ರಹ್ಮಕ್ಕೆ ಬ್ರಹ್ಮತ್ವವು ಗುರುವಾಕ್ಯದಿಂದಲೇ ಬಂದಿರುವುದು. ಅದ್ವಯತ್ವದಿಂದ ಮಾತ್ರ ಬ್ರಹ್ಮವು ಗುರುಸಮಾನವಾಗುವುದು ।।೪೯೦।। ಆದ್ದರಿಂದ ಗುರುಗಳ ಮಹಿಮೆಯು ಅಗಾಧವಾಗಿದೆ. ಇದಕ್ಕೆ ಸಮಾನವಾದ ಉಪಮೆಯೇ ಇಲ್ಲ. ನಿರುಪಮವಾಗಿದೆ. ಬ್ರಹ್ಮದಲ್ಲಿ ಬ್ರಹ್ಮತ್ವ - ಪ್ರಮಾಣ - ಪ್ರಮಾ - ಪ್ರಮೇಯ ಇತ್ಯಾದಿ ವಾಕ್ಯ ಮಹಿಮೆಯು ಗುರುವಿನಿಂದಾಗಿದೆ।।೪೯೧।। ಬ್ರಹ್ಮವು ಎಲ್ಲರ ಪ್ರಕಾಶಕವಾಗಿದೆ ಆದರೆ, ಸದ್ಗುರುಗಳು ಬ್ರಹ್ಮದ ಪ್ರಕಾಶಕರಾಗಿರುವರು. ಆದ್ದರಿಂದ ಗುರುವಿಗಿಂತ ಅಧಿಕ ಪೂಜ್ಯರು ಬೇರೆ ಯಾರೂ ಇರುವುದಿಲ್ಲ।।೪೯೨।। ಆದ್ದರಿಂದ ಹೇ ರಾಜನೇ ಗುರುವಿಗೆ ಮನುಷ್ಯ ಭಾವನೆಯಿಂದ ಎಂದೂ ನೋಡಬಾರದು. ಈ ಭಾವಾರ್ಥ ಬುದ್ಧಿಯಿಂದ ಇದ್ದರೆ ಮಾತ್ರ ಸತ್ ಶಿಷ್ಯನಿಗೆ ಸಹಜವಾಗಿ ಚಿತ್ತಶುದ್ಧಿಯಾಗುವುದು ।।೪೯೩।। ಗುರುಚರಣಗಳಲ್ಲಿ ನಿಃಸೀಮ ಭಕ್ತಿ ಇದ್ದವರಿಗೆ ಅವರ ಮನೋರಥಗಳನ್ನು ದೇವರು ಪೂರ್ಣಗೊಳಿಸುವನು. ಏಕೆಂದರೆ ಗುರುಗಳ ಆಜ್ಞೆಯನ್ನು ದೇವರು ಸಹ ಪಾಲಿಸುವನು. ಗುರುವಿನ ವಾಕ್ಯದಿಂದ ಜಡ ಮೂಢರನ್ನು ದೇವರು ಉದ್ಧರಿಸುವನು।।೪೯೪।। ಬ್ರಹ್ಮಭಾವದಿಂದ ಗುರುಗಳ ಸೇವೆಯನ್ನು ಮಾಡುವವರ ಆಜ್ಞಾಧಾರಕನು ದೇವನಾಗುವನು ಮತ್ತು ಇವರಿಗೆ ನಿಜಸ್ವರೂಪ ಸುಖವನ್ನು ಸದಾ ಸರ್ವದಾ ಪೂರೈಸುವನು. ಹೀಗೆ ಈ ಗುರುಮರ್ಯಾದೆಯನ್ನು ದೇವರು ಸಹ ಉಲ್ಲಂಘಿಸುವುದಿಲ್ಲ ।।೪೯೫।। ಗುರುವಿನ ಆಜ್ಞೆಯನ್ನು ದೇವರು ಮನ್ನಿಸುವನು. ಗುರುಗಳು ಸಹ ದೇವರಿಗೆ ಪೂಜ್ಯತೆಯ ಸ್ಥಾನಕ್ಕೆ ಏರಿಸುವರು. ಆದ್ದರಿಂದ ಈ ಉಭಯರನ್ನು ಅಭಿನ್ನಭಾವನೆಯಿಂದ ಭಜಿಸುವ ಜನರಿಗೆ ತಾರಕವಾಗುವುದು ।।೪೯೬।। ಅಂತಃಕರಣದಲ್ಲಿ ಸದ್ಭಾವನೆಯು ಇಲ್ಲದೇ ಬಾಹ್ಯವಾಗಿ ಭಕ್ತಿಯ ನಟನೆ ಮಾಡುವವರು, ತಮ್ಮ ಭಾವನೆಯ ಅನುಸಾರವಾಗಿ ಸಂಸಾರದಲ್ಲಿ ನಾನಾ ಪ್ರಕಾರದ ದುಃಖಗಳನ್ನು ಭೋಗಿಸುವರು।।೪೯೭।। ಇವರು ಮನುಷ್ಯ ಜನ್ಮಕ್ಕೆ ವಂಚಿತರಾದರು, ಆತ್ಮತತ್ತ್ವದಿಂದಲೂ ವಂಚಿತರಾದರು ಮತ್ತು ಬ್ರಹ್ಮಪ್ರಾಪ್ತಿಯಿಂದಲೂ ವಂಚಿತರಾದರು. ಡಾಂಭಿಕತನದಿಂದ ಹರಿಭಕ್ತಿಯು ಎಂದೂ ಹುಟ್ಟಲಾರದು।।೪೯೮।।

ನ ಯೇ ಹಾತಾ। ಸಕಳ ಸಾಧನಾಂಚೇ ಮಾಥಾ। ಜಾಣ ತತ್ತ್ವತಾ ಸದ್ಭಾವೋ।೪೯೯॥ ಕೋರಡಿಯೇ ಖಾಂಬೀ ಧರಿತಾ ಸದ್ಭಾವೋ। ತೇಥೇಚಿ ಪ್ರಗಟೇ ದೇವಾಧಿದೇವೋ। ಮಾ ಸದ್ಗುರು ತಂವ ತೋ ಪಹಾ ವೋ। ಸ್ವಯೇ ಸ್ವಯಮೇವೋ ಪರಬ್ರಹ್ಮ।೫೦೦॥ ಯಾಲಾಗೀ ಗುರುಭಜನಾಪರತಾ। ಭಜಾವಯಾ ಮಾರ್ಗು ನಾಹೀ ಆಯತಾ। ಜ್ಞಾನ-ಭಕ್ತಿ ಜೇ ತತ್ತ್ವತಾ। ತೇ ಜಾಣ ಸರ್ವಥಾ ಸದ್ಗುರುಭಕ್ತಿ।೫೦೧॥ ಗುರೂಹೂನಿ ಶ್ರೇಷ್ಠ ಬ್ರಹ್ಮ। ಮ್ಹಣತಾ ಗುರುತ್ವಾ ಆಲಾ ಕನಿಷ್ಠ ಧರ್ಮು। ಐಸಾ ಭಾವ ಧರಿತಾ ವಿಷಮು। ಬ್ರಹ್ಮಸಾಮ್ಯ ಶಿಷ್ಯಾ ನುಪಜೇ।೫೦೨॥ ಆಮ್ಹಾ ಸದ್ಗುರು ತೋಚಿ ಪರಬ್ರಹ್ಮ। ಐಸಾ ನಿತ್ಯ ನಿಜಭಾವ ಸಪ್ರೇಮ। ಹೇಚಿ ಗುರುಸೇವಾ ಉತ್ತಮೋತ್ತಮ। ಶಿಷ್ಯ ಪರಬ್ರಹ್ಮ ಸ್ವಯೇ ಹೋಯೇ।೫೦೩॥ ಐಶಿಯೇ ಗುರುಸೇವೇ ಆಂತ। ಪ್ರಹ್ಲಾದ ಝಾಲಾ ದ್ವಂದ್ವಾತೀತ। ನಾರದ ಸ್ವಾನಂದೇ ಗಾತ ನಾಚತ। ಬ್ರಹ್ಮಸಾಮ್ಯೇ ವಿಚರತ ಸುರಾಸುರಸ್ಥಾನೇ।೫೦೪॥ ಐಸೀಚಿ ಗುರುಸೇವಾ ಕರಿತಾ। ಚುಕಲೀ ಅಂಬರೀಷಾಚೀ ಗರ್ಭವ್ಯಥಾ। ತೇ ಗರ್ಭ ಜಾಹಲಾ ದೇವೋಚಿ ಸಾಹತಾ। ಭಕ್ತಾ ಭವವ್ಯಥಾ ಬಾಧೋ ನೇದೀ।೫೦೫॥ ಐಶಿಯಾ ಅಭಿನ್ನ ಭಾವನಾ। ಸುಬುದ್ಧೀ ಭಜತೀ ಗುರುಚರಣಾ। ತೇ ಪಢಿಯಂತೇ ಜನಾರ್ದನಾ। ತ್ಯಾಂಸೀ ಭವಭಾವನಾ ಶಿವೋ ನೇದೀ।೫೦೬॥ ಗುರು ಬ್ರಹ್ಮ ದೋನಿ ಏಕ। ಶಿಷ್ಯಹೀ ಅಸೇ ತದಾತ್ಮಕ। ಜೇ ಭೇದೇ ಮಾನಿತೀ ವೇಗಳಿಕ। ತೇಹೀ ಮಾಯಿಕ ಕವಿ ಸಾಂಗೇ।೫೦೭॥

ಅವಿದ್ಯಮಾನೋಽಪ್ಯವಭಾತಿ ಹಿ ದ್ವಯೋ ಧ್ಯಾತುರ್ಧಿಯಾ ಸ್ವಪ್ನಮನೋರಥೌ ಯಥಾ।
ತತ್ ಕರ್ಮಸಂಕಲ್ಪವಿಕಲ್ಪಕಂ ಮನೋ ಬುಧೋ ನಿರುಂಧ್ಯಾದಭಯಂ ತತಃ ಸ್ಯಾತ್।೩೮॥

ಅರ್ಥ: ಹೇ ರಾಜನೇ, ಭಗವಂತನಲ್ಲದ ಮತ್ತು ಆತ್ಮವಲ್ಲದ ಯಾವ ವಸ್ತುವೂ ಇಲ್ಲ. ಆದರೆ ಬೇರೆ ಏನೂ ಇರದಿದ್ದರೂ ಅದರ ಚಿಂತನೆಯನ್ನು ಮಾಡಿದ್ದರಿಂದ ಅವು ವಿಷಯಗಳಾಗಿ ಭಾಸಿಸುವುವು. ವಿಷಯಗಳು ವಸ್ತುತಃ ಇರುವುದಿಲ್ಲ. ತಥಾಪಿ ಸ್ವಪ್ನ ಅಥವಾ ಮನೋರಥದಂತೆ ಮನೋಮಾತ್ರ, ಅದರಂತೆ ವಿಷಯ ಚಿಂತನೆಯನ್ನು ಮಾಡುವ ಪುರುಷನ ಸಂಕಲ್ಪದಿಂದಲೇ ವಿಷಯಗಳು ಭಾಸಿಸುವುವು. ಆದ್ದರಿಂದ ಕರ್ಮಾಧಿಗಳ ಸಂಕಲ್ಪವಿಕಲ್ಪಗಳನ್ನು ಮಾಡುವ ಮನಸ್ಸಿನ ವಿರೋಧವನ್ನು ಮಾಡಬೇಕು. ಈ ಪ್ರಕಾರವಾಗಿ ಅನನ್ಯ ಭಕ್ತಿಯಿಂದ ಭಜನೆ ಮಾಡುವುದರಿಂದ ಅಭಯಪದದ ಅಂದರೆ ಭಗವಂತನ ಪ್ರಾಪ್ತಿಯಾಗುವುದು.

ಪುರುಷಾಂಸೀ ಜೋ ಪ್ರಪಂಚು ದಿಸೇ। ತೋ ನಸತಾಂಚಿ ಮಿಥ್ಯಾ ಆಭಾಸೇ। ಜೇವೀ ಕಾ ಏಕಲಾ ನಿದ್ರಾವಶೇ। ಸ್ವಪ್ನೀ ನಿಜಮಾನಸೇ ಜಗ ಕಲ್ಪೀ।೫೦೮॥ ಅಸೋನಿ ನಿದ್ರಾವಶ ದಿಸೇ ಸ್ವಪ್ನ। ಜೋ ಜಾಗಾ ಹೋವೋನಿ ಆಪಣ। ಕರೂ ಬೈಸೇ ಮನೋರಥಧ್ಯಾನ। ತೋ ನಸತೇಂಚಿ ಜನ ವನ ಏಕತ್ವೀ ದೇಖೇ।೫೦೯॥ ಹೋ ಕಾ ಘಾಲೋನಿ ಆಸನ। ಜೋ ಕರೀ ಮೂರ್ತಿಚಿಂತನ। ತ್ಯಾಸೀ ಧ್ಯೇಯ-ಧ್ಯಾತಾ-ಉಪಚಾರಧ್ಯಾನ।

ಇಲ್ಲಿ ಶುದ್ಧ ಭಾವವಿಲ್ಲದೇ ಪರಮಾರ್ಥವು ಎಂದೂ ಕೈಗೆ ಹತ್ತಲಾರದು. ಎಲ್ಲ ಸಾಧನೆಗಳಲ್ಲಿ ಸದ್ಭಾವನೆ ಒಂದೇ ಶ್ರೇಷ್ಠ ಸಾಧನೆಯಾಗಿರುವುದು ಇದನ್ನು ನೀನು ಲಕ್ಷದಲ್ಲಿಡು।೪೯೯॥ ಒಣ ಕಂಬದಲ್ಲಿ ಸದ್ಭಾವನೆಯನ್ನು ಧರಿಸಿದ್ದಕ್ಕೆ ಕೂಡಲೇ ಅಲ್ಲಿ ದೇವಾಧಿದೇವನು ಪ್ರಕಟನಾದನು ಆದರೆ, ಸದ್ಗುರುಗಳಾದವರು ಸ್ವತಃ ಪ್ರತ್ಯಕ್ಷವಾಗಿ ಪರಬ್ರಹ್ಮರಾಗಿರುವರು।೫೦೦॥ ಆದ್ದರಿಂದ ಗುರುಭಜನೆಯನ್ನು ಬಿಟ್ಟು ಭಜಿಸಲು ಅನ್ಯ ಸುಲಭವಾದ ಮಾರ್ಗವೇ ಇಲ್ಲ. ಜ್ಞಾನ, ಭಕ್ತಿ ಎಂದು ಹೇಳುವುದೆಲ್ಲವೂ ಅದು ಸದ್ಗುರುವಿನ ಭಕ್ತಿಯೇ ಆಗಿರುವುದು।೫೦೧॥ ಸದ್ಗುರುವಿಗಿಂತ ಬ್ರಹ್ಮವು ಶ್ರೇಷ್ಠವೆಂದು ಹೇಳಿದರೆ, ಗುರುತ್ವಕ್ಕೆ ನ್ಯೂನ್ಯತೆಯುಂಟಾಗುವುದು. ಹೀಗೆ ವಿಷಮ ಭಾವನೆಯನ್ನು ಮಾಡಿದರೆ ಶಿಷ್ಯನಲ್ಲಿ ಬ್ರಹ್ಮ ಸಾಮ್ಯವು ಉದ್ಭವಿಸಲಾರದು।೫೦೨॥ ನಮಗೆ ಸದ್ಗುರುವೇ ಪರಬ್ರಹ್ಮವೆಂದು ಸಪ್ರೇಮವಾಗಿ ನಿಜವಾದ ಭಾವವನ್ನು ಧರಿಸಿದರೆ, ಅದುವೇ ಉತ್ತಮೋತ್ತಮ ಗುರುಸೇವೆಯಾಗಿರುವುದು. ಈ ಪ್ರಕಾರದ ಸೇವೆಯಿಂದ ಶಿಷ್ಯನು ಸ್ವತಃ ಪರಬ್ರಹ್ಮನಾಗುವನು।೫೦೩॥ ಇದೇ ರೀತಿಯಲ್ಲಿ ಪ್ರಹ್ಲಾದನು ಗುರುಸೇವೆಯಿಂದ ದ್ವಂದ್ವಾತೀತನಾದನು ಮತ್ತು ನಾರದನು ಪರಬ್ರಹ್ಮನಲ್ಲಿ ಐಕ್ಯನಾಗಿ ನಿಜಾನಂದದಿಂದ ನರ್ತಿಸುತ್ತ ದೇವದಾನವರ ಸ್ಥಾನಗಳಲ್ಲಿ ವಿಚರಿಸುತ್ತಿರುವನು।೫೦೪॥ ಹೀಗೆಯೇ ಗುರುಸೇವೆಯನ್ನು ಮಾಡುತ್ತಿರಲು ಅಂಬರೀಷನ ಗರ್ಭವ್ಯಥೆಯು ತಪ್ಪಿತು. ಈತನ ಗರ್ಭವಾಸವನ್ನು ದೇವರು ಸೋಸಿಸಿದನು. ತನ್ನ ಭಕ್ತರಿಗೆ ದೇವರು ಸಂಸಾರದ ಬಾಧೆ ಬಾರದಂತೆ ಮಾಡುವನು।೫೦೫॥ ಈ ರೀತಿಯಲ್ಲಿ ಅಭಿನ್ನ ಭಾವನೆಯಿಂದ ಸುಬುದ್ಧಿವಂತರು ಗುರುಚರಣಗಳನ್ನು ಭಜಿಸುವರು. ಇವರು ಜನಾರ್ದನನಿಗೆ ಪ್ರಿಯರಾಗುವರು. ಇವರಿಗೆ ಈತನು ಸಂಸಾರ ಭಾವನೆಗೆ ಸ್ಪರ್ಶಿಸಲು ಬಿಡುವುದಿಲ್ಲ।೫೦೬॥ ಗುರು ಮತ್ತು ಬ್ರಹ್ಮ ಇವೆರಡೂ ಒಂದೇ ಆಗಿವೆ. ಹಾಗೆಯೇ ಶಿಷ್ಯನೂ ತದಾತ್ಮಕನಾಗಿರುವನು. ಯಾರಾದರೂ ಭೇದಭಾವದಿಂದ ಭಿನ್ನತೆಯನ್ನು ಭಾವಿಸಿದರೆ, ಅದು ಮಾಯಿಕವಾಗುವುದೆಂದು ಕವಿ ಹೇಳುವನು।೫೦೭॥

ಯಾರೋ ಒಬ್ಬ ಮನುಷ್ಯನು ಮಲಗಿಕೊಂಡಿರಲು ಸ್ವಪ್ನದಲ್ಲಿ ಜಗತ್ತಿನ ಕಲ್ಪನೆಗಳನ್ನು ಮಾಡುವನು. ಅದರಂತೆ ಕಾಣಿಸುವ ಪ್ರಪಂಚವು ನಿಜವಾಗಿರದೇ ಮಿಥ್ಯಾ ಭಾಸವಾಗುವುದು।೫೦೮॥ ಮನುಷ್ಯನು ನಿದ್ರಿಸುತ್ತಿರಲು ಅವನಿಗೆ ಸ್ವಪ್ನಗಳು ಬೀಳುವುವು. ಅವನು ಎಚ್ಚರಾದ ಮೇಲೆ ಮನೋರಥ ಚಿಂತನೆ ಮಾಡುತ್ತ ಕುಳಿತಿರುವನು. ಅಲ್ಲಿ ತಾನೊಬ್ಬನೇ ಇದ್ದರೂ ಅವನಿಗೆ ಇಲ್ಲದ ಜನ, ವನ ಕಾಣಿಸುವುವು।೫೦೯॥

ನಸತೇಂಚ ಜಾಣ ಕಲ್ಪಿತ ಭಾಸೇ॥೫೧೦॥ ಜೇವೀ ಧನಲೋಭ್ಯಾಚೇ ಹಾರಪೇ ಧನ। ಪರೀ ವಾಸನಾ ನ ಸಾಂಡೀ ಧನಧ್ಯಾನ। ಧನಾತೇ ಆಠವಿತಾ ಮನ । ಧನಲೋಭೇ ಪೂರ್ಣ ಪಿಸೇ ಹೋಯೇ॥೫೧೧॥ ಮನ ಸ್ವಯೇ ಜರೀ ನವ್ಹೇ ಧನ। ತರೀ ಧನಕೋಶ ಆಠವೀ ಮನ। ತಂವ ಸ್ಮೃತೀ ವಳಘೇ ವನ। ವ್ಯಾಮೋಹೇ ಪೂರ್ಣ ಪಿಸೇ ಹೋಯ ॥೫೧೨॥ ತೇವೀ ವ್ಯಾಮೋಹಾಚೇ ಪೂರ್ಣ ಭರಿತ। ಮಿಥ್ಯಾ ಭಾಸೇ ದೇಹಾದಿ ದ್ವೈತ। ತೇ ಅಹಂಭಾವೇ ಮಾನಿತಾ ಆಪ್ತ। ಭವಭಯ ನಿಶ್ಚಿತ ಆದಳೇ ಅಂಗೀ॥೫೧೩॥ ಭವಭಯಾಚೇ ಕಾರಣ। ಮನಃಕಲ್ಪನಾ ಮುಖ್ಯ ಜಾಣ। ತ್ಯಾ ಮನಾಚೇ ಕರಾವಯಾ ನಿರೋಧನ। ಸದ್ಗುರುವಚನ ನಿಜನಿಷ್ಠಾ॥೫೧೪॥ ಹೇ ಜಾಣೋನಿ ಸಚ್ಛಿಷ್ಯ ಜ್ಞಾತೇ। ಗುರುವಾಕ್ಯೇ ವಿಶ್ವಾಸಯುಕ್ತೇ। ವಿವೇಕವೈರಾಗ್ಯಚೇನಿ ಹಾತೇ। ನಿಜಮನಾತೇ ಆಕಳಿತೀ॥೫೧೫॥ ತೇಚಿ ಆಕಳತೀ ಹಾತವಟೀ। ಸಂಕ್ಷೇಪೇ ರಾಯಾ ಸಾಂಗೇನ ಗೋಷ್ಟೀ। ಸದ್ಗುರುವಾಕ್ಯ ಪರಿಪಾಟೀ। ಜೇ ಮನಾತೇ ಥಾಪಟೀ ನಿಜಬೋಧೇ॥೫೧೬॥ ಚಂಚಳತ್ವೇ ವಿಷಯಧ್ಯಾನ। ಕರಿತಾ ದೇಖೇ ಜೇ ಜೇ ಮನ । ತೇ ತೇ ಹೋಯ ಬ್ರಹ್ಮಾರ್ಪಣ । ಸದ್ಗುರುವಚನ ನಿಜನಿಷ್ಠಾ॥೫೧೭॥ ಧರೂನಿಯಾ ವಿಷಯಸ್ವಾರ್ಥ ಮನೇ ಜೋ ಜೋ ಘೇಇಜೇ ಅರ್ಥ। ತೋ ತೋ ಹೋಯ ಪರಮಾರ್ಥ। ಹಾ ಅನುಗ್ರಹೋ ಸಮರ್ಥ ಗುರುಕೃಪೇಚಾ॥೫೧೮॥ ಜೋ ಭುಈಭೇಣೇ ಪಳೋ ಜಾಯೇ। ತೋ ಜೇಥೇ ಪಳೇ ತೇಥೇ ಭೂ ಯೇ। ಮಗ ಯೇಣೇಜಾಣೇ ಸ್ವಯೇ ರಾಹೇ। ಠಾಯೀ ಠಾಯೇ ಪಾಂಗುಳಲಾ॥೫೧೯॥ ತೈಸೇ ಮನಾಸೀ ಲಾವಿಜೇ ವರ್ಮ। ಜೇ ಜೇ ದೇಖೇ ತೇಚಿ ಬ್ರಹ್ಮ। ಜೇ ಜೇ ಕರೂ ಬೈಸೇ ಕರ್ಮ। ತೇಥ ಪುರುಷೋತ್ತಮ ಸ್ವಯೇ ಪ್ರಗಟೇ॥೫೨೦॥ ಏವಂ ಇಂದ್ರಿಯವೃತ್ತಿ ಉಲ್ಲಾಳೇ। ಮೋಡಿಲೇ ಗುರುವಾಕ್ಯಪ್ರತೀತಿಬಳೇ। ನಿಜಾಧಿಷ್ಠಾನಮೇಳೇ। ಕಳಾಸತೀ ಯೇಕೇ ವೇಳೇ ಅಕಂಡ ಕುಲುಪ॥೫೨೧॥ ಐಸೇ ನೇಮಿತಾ ಬಾಹ್ಯ ಕರ್ಮ। ಮನಾಚಾ ಮೋಡೇ ದ್ವೈತಭ್ರಮ। ತಂದ ಬಾಹ್ಯ ಪರಬ್ರಹ್ಮ। ಪೂರ್ಣ ಚಿದ್ವ್ಯೋಮ ಕೋಂದಾಟೇ॥೫೨೨॥ ಐಸೇ ಭಜನೇ ಮನ ನೇಮಿತಾ ಸ್ವಯೇ। ನ ರಿಘೇ ಕಲ್ಪಾಂತಕಾಳಭಯೇ। ಭಕ್ತ ಹೋಊನಿಯಾ ನಿರ್ಭಯೇ। ವಿಚರತೀ ಸ್ವಯೇ ನಿಃಶಂಕ॥೫೨೩॥

ಹೇ ಅಗಾಧ ನಿಷ್ಠಾ ಪರಿಪೂರ್ಣ। ಭೋಳ್ಯಾಭಾಳ್ಯಾ ನ ಟಕೇ ಜಾಣ। ಯಾಲಾಗೀ ಸುಗಮ ಸಾಧನ। ಸಾಂಗೇನ ಆನ

ಅಥವಾ ಒಬ್ಬನು ಆಸನವನ್ನು ಹಾಕಿ ಮೂರ್ತಿಯ ಧ್ಯಾನವನ್ನು ಮಾಡುವನು. ಆತನಿಗೆ ಧ್ಯೇಯ, ಧ್ಯಾತಾ, ಧ್ಯಾನ ಉಪಚಾರ ಇತ್ಯಾದಿಗಳು ಏನೂ ಇರದೇ ಕಲ್ಪಿತವಾಗಿ ಭಾಸವಾಗುವುವು ॥೫೧೦॥ ಒಬ್ಬ ಧನಲೋಭಿಯ ಧನವು ಕಳೆದು ಹೋಗಲು ಅವನ ವಾಸನೆಯು ಧನದ ಧ್ಯಾನವನ್ನು ಬಿಡುವುದಿಲ್ಲ. ಈತನ ಮನವು ಧನದ ಸ್ಮರಣೆಯನ್ನು ಮಾಡುತ್ತಾ ಮಾಡುತ್ತಾ ಧನಲೋಭದಿಂದ ಪೂರ್ಣ ಹುಚ್ಚನಾಗುವುದು ॥೫೧೧॥ ಮನಸ್ಸಾದರೂ ಸ್ವತಃ ತಾನು ಧನವಲ್ಲ, ಆದರೂ ಅದು ಧನದ ಖಜಾನೆಯ ಸ್ಮರಣೆ ಮಾಡುವುದು. ಇದರಿಂದ ಸ್ಮೃತಿಯು ಲೋಪವಾಗಿ ಮೋಹದಿಂದ ಪೂರ್ಣ ಹುಚ್ಚನಾಗುವುದು ॥೫೧೨॥ ಅದರಂತೆ ಮನವು ಮೋಹಗ್ರಸ್ಥವಾದರೆ, ಮಿಥ್ಯೆಯಾದ ದೇಹಾದಿ ದ್ವೈತವು ಭಾಸವಾಗುವುದು. ಅದು ಅಹಂಭಾವದಿಂದ ನಿಜವೆನಿಸಲು ಸಂಸಾರದ ಭಯವು ಅಂಗಕ್ಕೆ ತಪ್ಪದೇ ಅಪ್ಪಳಿಸುವುದು ॥೫೧೩॥ ಭವಭಯದ ಮುಖ್ಯ ಕಾರಣವು ತನ್ನ ಮನಸ್ಸಿನ ಕಲ್ಪನೆಯಾಗಿರುವುದು. ಇದು ಲಕ್ಷದಲ್ಲಿರಲಿ. ಈ ಮನಸ್ಸಿನ ನಿರೋಧ ಮಾಡಲು ಸದ್ಗುರುವಿನ ವಚನಗಳಲ್ಲಿ ದೃಢವಾದ ನಿಷ್ಠೆ ಇರಬೇಕು॥೫೧೪॥ ಇದನ್ನು ಜ್ಞಾತಾ ಸಚ್ಛಿಷ್ಯನು ಲಕ್ಷದಲ್ಲಿಟ್ಟು ಗುರುವಾಕ್ಯಗಳಲ್ಲಿ ವಿಶ್ವಾಸವನ್ನಿಟ್ಟು ವಿವೇಕ ಮತ್ತು ವೈರಾಗ್ಯದ ಬಲದಿಂದ ತನ್ನ ಮನಸ್ಸನ್ನು ನಿಗ್ರಹಿಸಿಕೊಳ್ಳುವನು ॥೫೧೫॥ ಹೇ ರಾಜನೇ, ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳುವ ಕುಶಲತೆಯನ್ನು ನಿನಗೆ ಸಂಕ್ಷಿಪ್ತವಾಗಿ ಹೇಳುವೆ. ಗುರುವಾಕ್ಯಗಳು ಆತ್ಮ ಬೋಧೆಯಿಂದ ಮನಸ್ಸನ್ನು ಜಾಗ್ರತೆಗೊಳಿಸುವುವು ॥೫೧೬॥ ಸದ್ಗುರುಗಳಲ್ಲಿ ಮತ್ತು ಅವರ ವಚನಗಳಲ್ಲಿ ದೃಢವಾದ ನಿಷ್ಠ ಇಡುವುದರಿಂದ ಚಂಚಲತ್ವದಿಂದ ಮನವು ವಿಷಯಗಳ ಚಿಂತನೆಯನ್ನು ಮಾಡುವುದನ್ನು ಕಂಡರೆ ಅವೆಲ್ಲವೂ ಬ್ರಹ್ಮವೇ ಆಗುವುವು ॥೫೧೭॥ ವಿಷಯಗಳ ಸ್ವಾರ್ಥದಿಂದ ಮನಸ್ಸು ಯಾವ ಯಾವ ಪದಾರ್ಥಗಳನ್ನು ಸ್ವೀಕರಿಸುವುದೋ ಅವೆಲ್ಲವೂ ಪರಮಾರ್ಥ ರೂಪವೇ ಆಗುವುವು. ಹೀಗೆ ಗುರುಕೃಪೆಯ ಅನುಗ್ರಹದ ಸಾಮರ್ಥ್ಯವಾಗಿರುವುದು॥೫೧೮॥ ಭೂಮಿಗೆ ಭಯಪಟ್ಟು ಓಡಲು ಆರಂಭಿಸಿದರೆ, ಅವನಿಗೆ ಎಲ್ಲಿ ಹೋದರು ಅಲ್ಲಿ ಭೂಮಿಯೇ ಭೇಟಿಯಾಗುವುದು, ಹೀಗಾದಾಗ ಹೋಗುವುದು, ಬರುವುದು ತನ್ನಿಂದ ತಾನೇ ಬಂದಾಗುವುದು ಮತ್ತು ಅವನು ಒಂದೇ ಸ್ಥಳದಲ್ಲಿ ನಿಲ್ಲುವನು॥೫೧೯॥ ಈ ಪ್ರಕಾರವಾಗಿ ಮನಸ್ಸಿಗೆ ಒಂದು ಮರ್ಮವನ್ನು ತೋರಿಸಿಕೊಡಬೇಕು. ಅದು ಯಾವುದೆಂದರೆ "ಅದು ಯಾವ ಯಾವುದನ್ನು ನೋಡುವುದೋ ಅದೆಲ್ಲವೂ ಬ್ರಹ್ಮವು" ಎಂದು ನಿಶ್ಚಯಿಸಬೇಕು. ಹೀಗೆ ಮಾಡಿದ್ದಾದರೆ, ಮನಸ್ಸು ಯಾವುದೇ ಕರ್ಮವನ್ನು ಮಾಡಲಿ, ಅಲ್ಲಿ ಪುರುಷೋತ್ತಮನು ಸಹಜವಾಗಿ ಪ್ರಕಟನಾಗುವನು ॥೫೨೦॥ ಈ ಪ್ರಕಾರದ ಗುರುಪದೇಶದ ಅನುಭವ ಪ್ರಭಾವದಿಂದ ಇಂದ್ರಿಯ ವೃತ್ತಿಯ ಸೆಳೆತವು ಇಲ್ಲದಾಗುವುದು ಮತ್ತು ಬ್ರಹ್ಮ ರೂಪ ಅಧಿಷ್ಠಾನಕ್ಕೆ ಐಕ್ಯವಾಗಿ ಬಾಹ್ಯವೃತ್ತಿಗೆ ಅಖಂಡವಾಗಿ ಬೀಗಹಾಕಿದಂತಾಗುವುದು ॥೫೨೧॥ ಈ ರೀತಿಯಲ್ಲಿ ಬಾಹ್ಯ ಮರ್ಕಗಳನ್ನು ನಿಯಂತ್ರಣಗೊಳಿಸಲು ಮನದ ದ್ವೈತ ಭ್ರಮವು ಮುರಿಯುವುದು ಮತ್ತು ಹೊರಗೂ ಸಹ ಬ್ರಹ್ಮಸ್ವರೂಪ ಚಿದಾಕಾಶವು ಸವತ್ರವೂ ತುಂಬಿಕೊಂಡಿರುವುದು ॥೫೨೨॥ ಈ ಪ್ರಕಾರದ ಭಜನೆಯಿಂದ ಮನಸ್ಸಿನ ನಿರೋಧವನ್ನು ಮಾಡಿದ ಭಕ್ತನಿಗೆ ಕಲ್ಪಾಂತಕಾಲದ ಭಯವು ಸಹ ಇರಲಾರದು. ನಿರ್ಭಯನಾಗಿ ಸುಖವಾಗಿ ತಿರುಗುತ್ತಿರುವನು॥೫೨೩॥

ತೇ ಐಕ।೫೨೪॥

ಶೃಣ್ವನ್ ಸುಭದ್ರಾಣಿ ರಥಾಂಗಪಣೇರ್ಜನ್ಮಾನಿ ಕರ್ಮಾಣಿ ಚ ಯಾನಿ ಲೋಕೇ।
ಗೀತಾನಿ ನಾಮಾನಿ ತದರ್ಥಕಾನಿ ಗಾಯನ್ ವಿಲಜ್ಜೋ ವಿಚರೇದಸಂಗಃ।೩೯॥

ಅರ್ಥ: ಜಗತ್ತಿನಲ್ಲಿ ಪರಮೇಶ್ವರನ ಜನ್ಮದ ಮತ್ತು ಲೀಲೆಗಳ ಅನೇಕ ಮಂಗಲಮಯ ಕಥೆಗಳು ಪ್ರಸಿದ್ಧವಾಗಿವೆ. ಇವುಗಳನ್ನು ಜನರಿಗೆ ಹೇಳಬೇಕು. ಈ ಗುಣಗಳ ಲೀಲೆಗಳ ಸ್ಮರಣೆಮಾಡುವುದಕ್ಕಾಗಿ ಭಗವಂತನ ಅನೇಕ ನಾಮಗಳು ಪ್ರಸಿದ್ಧವಾಗಿವೆ. ನಾಚಿಕೆ, ಸಂಕೋಚಗಳನ್ನು ಬಿಟ್ಟು ಈ ಲೀಲೆಗಳ ಗಾಯನವನ್ನು ಮಾಡಬೇಕು. ಯಾವ ವ್ಯಕ್ತಿಯನ್ನು,ವಸ್ತುವನ್ನು ಮತ್ತು ಸ್ಥಾನವನ್ನು ಇವುಗಳ ಆಸಕ್ತಿಯನ್ನು ಹಿಡಿಯದೇ ನಡೆಯುತ್ತಾ ಇರಬೇಕು.

ತರಾವಯಾ ಭಾಳೇಭೋಳೇ ಜನ । ಮುಖ್ಯ ಚಿತ್ತ ಶುದ್ಧೀಚ ಕಾರಣ । ಜನ್ಮಕರ್ಮ ಹರೀಚೇ ಗುಣ। ಕರಾವೇ ಶ್ರವಣ ಅತ್ಯಾದರೇ ।೫೨೫॥ ಚುಕಲ್ಯಾ ಪುತ್ರಾಚೀ ಶುದ್ಧಿ ವಾರ್ತಾ । ಜೇಣೇ ಸಾದರೇ ಐಕೇ ಮಾತಾ। ತೇಣೇ ಸಾದರೇ ಹರಿಕಥಾ । ಸಾರ್ಥಕತಾ ಪರಿಸಾವೀ ।೫೨೬॥ ಹರೀಚೇ ಜನ್ಮಕರ್ಮೇ ಅನಂತ ಗುಣ । ಮ್ಹಣಾಲ ತ್ಯಾಂಚೇ ನವ್ಹೇಲ ಶ್ರವಣ । ಲೋಕಪ್ರಸಿದ್ಧ ಜೇ ಜೇ ಪುರಾಣ । ತೇ ಶ್ರದ್ಧಾ ಸಂಪೂರ್ಣ ಐಕಾವೇ ।೫೨೭॥ ಬಹು ದೇವ ಬೋಲಿಲೇ ಪುರಾಣೇ । ತೇಹೀ ಲಾಗತೀ ಜ್ಯಾಚೇ ಚರಣೇ । ತೋ ಸಮರ್ಥ ಚಕ್ರಪಾಣೇ । ಜೋ ವೇದಪುರಾಣೇ ವಂದಿಜೇ ।೫೨೮॥ ತ್ಯಾಚೀ ಜೇ ಜೇ ಜನ್ಮೇ ಅತಿಅದ್ಭುತ । ಜೇ ಜೇ ಕರ್ಮೇ । ಪರಮಾರ್ಥಯುಕ್ತ। ಸ್ವಮುಖೇ ಬೋಲಿಲಾ ಭಗವಂತ । ತೀ ತೀ ಜ್ಞಾನಾರ್ಥ ಪರಿಸಾವೀ ।೫೨೯॥ ಜೇ ಜೇ ಕೇಲೇ ಪುರಾಣಶ್ರವಣ। ತೇ ತೇ ವ್ಯರ್ಥ ಹೋಯ ಮನನೇವೀಣ । ಯಾಲಾಗೀ ಶ್ರವಣ-ಮನನ । ಸಾವಧಾನ ಕರಾವೇ।೫೩೦॥ ಮೋಲೇ ಘೇತಲೀ ಜೇ ಗಾಯೇ । ದುಭತೇ ಖಾತಾ ವಿಷಯ ಹೋಯೇ । ತೇಚಿ ದಾನ ದೇತಾ ಲವಲಾಹೇ । ದುಭತೀ ಹೋಯೇ ಪರಮಾಮೃತೇ ।೫೩೧॥ ತೇವೀ ಕೇಲೇ ಜೇ ಶ್ರವಣ । ತೇ ಮನನೇ ಪರಮ ಪಾವನ । ತೇಚಿ ಉಪೇಕ್ಷಿತಾ ಜಾಣ । ಪರಿಪಾಕೀ ಪೂರ್ಣ ವಾಂಝ ಹೋಯ ।೫೩೨॥ ಹರಿನಾಮ ಪಡತಾ ಶ್ರವಣೀ । ಏಕಾ ಗಳೋನಿ ಜಾಯೇ ವದನೀ । ಏಕಾ ಯೇ ಕಾನೀಚೇ ತೇ ಕಾನೀ । ಜಾಯ ನಿಘೋನಿ ಹರಿನಾಮ ।೫೩೩॥ ಹರಿನಾಮ ಪಡತಾ ಶ್ರವಣೇ । ಜ್ಯಾಚೇ ರಿಘೇ ಅಂತಃಕರಣೇ । ಸಕಳ ಪಾಪ ಹೋವೋನಿ ಧುಣೇ । ಹರಿಚರಣೇ ತೋ ವಿನಟೇ ।೫೩೪॥ ಯಾಪರೀ ಶ್ರವಣೇ ಶ್ರದ್ಧಾ । ಮನನಯುಕ್ತ ಕರಿತಾ ಸದಾ । ತೈ ವಿಕಲ್ಪ ಬಾಧೀನಾ ಕದಾ । ವೃತ್ತಿ ಶುದ್ಧಾ ಸ್ವಯೇ ಹೋಯೇ ।೫೩೫॥

ಐಸೇ ಮನನಯುಕ್ತ ಶ್ರವಣ । ಕರಿತಾ ವೋಸಂಡೇ ಹರ್ಷ ಪೂರ್ಣ । ತೇಣೇ ಹರ್ಷೇ ಹರಿಕೀರ್ತನ। ಕರೀ ಆಪಣ

ಆದರೆ, ಈ ಅಗಾಧವಾದ ನಿಷ್ಠೆಯು ಭಾಳೇ ಭೋಳೇ ಭಾವಿಕರಿಗೆ ಪೂರ್ಣವಾಗಿ ಸಾಧಿಸುವುದಿಲ್ಲ. ಅದಕ್ಕಾಗಿ ಬೇರೆ ಇನ್ನೊಂದು ಸುಲಭವಾದ ಸಾಧನೆಯನ್ನು ಹೇಳುವೆ ಕೇಳು।೫೨೪॥

ಭಾಳೇ ಭೋಳೇ ಭಾವಿಕ ಜನರು ಉದ್ಧರಿಸಬೇಕಾದರೆ, ಚಿತ್ತಶುದ್ಧಿಯೇ ಮುಖ್ಯ ಕಾರಣವಾಗಿರುವುದು. ಹರಿಯ ಜನ್ಮ ಆತನ ಕರ್ಮಗಳು ಮತ್ತು ಆತನ ಗುಣಗಳು, ಇವುಗಳನ್ನು ಅತ್ಯಾದರದಿಂದ ಶ್ರವಣ ಮಾಡಬೇಕು ।೫೨೫॥ ತಪ್ಪಿಸಿಕೊಂಡ ಪುತ್ರನ ಸಿಕ್ಕ ವಾರ್ತೆಯನ್ನು ತಾಯಿಯು ಅದೆಷ್ಟು ಆದರಯುಕ್ತವಾಗಿ ಕೇಳುವಳೋ, ಅಷ್ಟೇ ಆದರದಿಂದ ಜೀವದ ಸಾರ್ಥಕತೆಯನ್ನು ಮಾಡುವ ಹರಿಕಥೆಯ ಶ್ರವಣವನ್ನು ಮಾಡಬೇಕು ।೫೨೬॥ ಹರಿಯ ಜನ್ಮ ಕರ್ಮಗಳು ಮತ್ತು ಗುಣಗಳು ಅನಂತವಾಗಿವೆ. ಅವುಗಳೆಲ್ಲವನ್ನು ಕೇಳಲು ಹೇಗೆ ಸಾಧ್ಯ? ಎಂದಾದರೆ ಲೋಕಪ್ರಸಿದ್ಧ ಪುರಾಣಗಳಿರುವುವು. ಅವುಗಳನ್ನಾದರೂ ಶ್ರದ್ಧೆಯಿಂದ ಕೇಳಬೇಕು ।೫೨೭॥ ಪುರಾಣಗಳಲ್ಲಿ ಬಹಳಷ್ಟು ದೇವರುಗಳ ಚರಿತ್ರೆ ಇವೆ. ಆ ಎಲ್ಲ ದೇವರುಗಳು ವೇದ ಪುರಾಣಗಳು ವಂದಿಸುವ ಸಮರ್ಥ ಚಕ್ರಪಾಣಿಯಾದ ಶ್ರೀಕೃಷ್ಣನ ಚರಣಗಳಿಗೆ ವಂದಿಸುವುವು ।೫೨೮॥ ಈತನ ಅದ್ಭುತವಾದ ಜನ್ಮ ಚರಿತ್ರೆಗಳು ಪರಮಾರ್ಥಯುಕ್ತ ಅನೇಕ ಕರ್ಮಗಳು ಮತ್ತು ತಾನು ಸ್ವಮುಖದಿಂದ ಹೇಳಿರುವುದನ್ನು ಜ್ಞಾನಪ್ರಾಪ್ತಿಗಾಗಿ ಶ್ರವಣವನ್ನು ಮಾಡಬೇಕು ।೫೨೯॥ ಒಟ್ಟಿನಲ್ಲಿ ಕೇಳಿದ ಚರಿತ್ರೆ ಪುರಾಣಗಳನ್ನು ಮನನ ಮಾಡಬೇಕು. ಇಲ್ಲವಾದರೆ ಶ್ರವಣ ವ್ಯರ್ಥವಾಗುವುದು. ಅದಕ್ಕಾಗಿ ಮಾಡಿದ ಶ್ರವಣವನ್ನು ಸರಿಯಾಗಿ ಮನನ ಮಾಡಬೇಕು ।೫೩೦॥ ಹಣ ಕೊಟ್ಟು ಗೋವು ಒಂದನ್ನು ಖರೀದಿಸಿ ಅದರ ಉಪಯೋಗವನ್ನು ತಾನು ಸ್ವತಃ ಮಾಡಿಕೊಂಡರೆ ಅದು ವಿಷಯ ಭೋಗವಾಗುವುದು. ಅದನ್ನೇ ದಾನ ಮಾಡಿದರೆ, ಅದು ಪರಮಾಮೃತ ಅಂದರೆ ಮೋಕ್ಷವನ್ನು ಕೊಡುವುದು ।೫೩೧॥ ಅದರಂತೆ ಮಾಡಿದ ಶ್ರವಣವು ಮನನದಿಂದಲೇ ಪಾವನವಾಗುವುದು. ಇಲ್ಲಿ ಶ್ರವಣದ ಉಪೇಕ್ಷೆ ಮಾಡಿದರೆ ಅದು ನಿಃಷ್ಫಲವಾಗಿ ಪರಿಣಮಿಸುವುದು ।೫೩೨॥ ಹರಿನಾಮವು ಕಿವಿಯಲ್ಲಿ ಬಿದ್ದರೆ ಕೆಲವರ ಬಾಯಿಯಿಂದ ಹೊರಬೀಳುವುದು. ಇನ್ನು ಕೆಲವರ ಶ್ರವಣವು ಒಂದು ಕಿವಿಯಲ್ಲಿ ಸೇರಿ ಇನ್ನೊಂದು ಕಿವಿಯಿಂದ ಹೊರಟು ಹೋಗುವುದು ।೫೩೩॥ ಹೀಗಾಗದೇ ಹರಿಯ ನಾಮವು ಕಿವಿಯಲ್ಲಿ ಬಿದ್ದಾಕ್ಷಣವೇ ಅದು ಅಂತಃಕರಣದಲ್ಲಿ ಸೇರಿದರೆ, ಅವರ ಎಲ್ಲ ಪಾಪಗಳು ತೊಳೆದು ಹೋಗಿ ಹರಿಚರಣಗಳಲ್ಲಿ ಕೂಡಿಕೊಳ್ಳುವುದು ।೫೩೪॥ ಅದಕ್ಕಾಗಿ ಯಾವಾಗಲೂ ಶ್ರವಣದಲ್ಲಿ ಮನನ ಮಾಡುವ ಶ್ರದ್ಧೆ ಇಡಬೇಕು. ಇದರಿಂದ ವಿಕಲ್ಪದ ಬಾಧೆಯು ಎಂದೂ ಆಗುವುದಿಲ್ಲ ಮತ್ತು ಚಿತ್ತವೃತ್ತಿಯು ತನ್ನಿಂದ ತಾನೇ ಶುದ್ಧಿಯಾಗುವುದು ।೫೩೫॥

ಸ್ವಾನಂದೇ।೫೩೬॥ ಹರಿಚರಿತ್ರೇ ಅಗಾಧ। ಜ್ಞಾನಮುದ್ರಾ-ಪದಬಂಧ। ಕೀರ್ತನೀ ಗಾತಾ ವಿಶದ। ಪರಮಾನಂದ
ವೋಸಂಡೇ।।೫೩೭॥ ವಾನಿತೀ ಅಜನ್ಮಯಾಚೀ ಜನ್ಮೇ। ವಾನಿತೀ ಅಕರ್ಮಿಯಾಚೀ ಕರ್ಮೇ। ಸ್ಮರತೀ
ಅನಾಮಿಯಾಚೀ ನಾಮೇ। ಅತಿಸಪ್ರೇಮೇ ಡುಲ್ಲತ।೫೩೮॥ ಸಾಧಾವಯಾ ನಿಜಕಾಜ। ಸಾಂಡೂನಿ ಲೌಕಿಕಾಚೀ
ಲಾಜ। ಕೀರ್ತನೀ ನಾಚತೀ ಭೋಜ। ಅತಿನಿರ್ಲಜ್ಜ ನಿಃಶಂಕ।೫೩೯॥ ಕೀರ್ತನೇ ನಿರ್ದಳಿಲೇ ದೋಷ । ಜಪ ತಪ
ಠೇಲೇ ನಿರಾಸ। ಯಮಲೋಕ ಪಡಿಲಾ ವೋಸ। ತೀರ್ಥಾಚೀ ಆಸ ನಿರಾಸ ಝಾಲೀ।೫೪೦॥ ಯಮನಿಯಮಾ
ಪಡತೀ ಉಪವಾಸ। ಮರೋ ಟೇಕಲೇ ಯೋಗಾಭ್ಯಾಸ । ಕೀರ್ತನಗಜರೇ ಹೃಷೀಕೇಶ । ನಿರ್ದಾಳೀ ದೋಷ
ನಾಮಮಾತ್ರೇ।।೫೪೧॥ ಕೀರ್ತನಾಚಾ ಘಡಘಡಾಟ। ಆನಂದ ಕೋಂದಲಾ ಉದ್ಭಟ। ಹರುಷೇ ಡೋಲೇ
ವೈಕುಂಠಪೀಠ। ತೇಣೇ ಸುಖೇ ನೀಲಕಂಠ ತಾಂಡವ ನಾಚೇ ನಾಚತು।೫೪೨॥ ಯಾಪರೀ ಹರಿಕೀರ್ತನ। ದೇತ
ಪರಮ ಸಮಾಧಾನ। ಹಾ ಭಕ್ತಿ-ರಾಜಮಾರ್ಗ ಪೂರ್ಣ। ಯೇ ಮಾರ್ಗೀ ಸ್ವಯೇ ರಕ್ಷಣ ಚಕ್ರಪಾಣಿ
ಕರ್ತಾ।೫೪೩॥ ಚಕ್ರ ಘೇಊನಿ ಭಕ್ತಾಂಚೇ ಠಾಯೀ। ಮ್ಹಣೇ ತುಝೇ ಕಾರ್ಯ ಕಾಯೀ। ಮಜ ಜಗೀ ವೈರೀಚಿ
ನಾಹೀ । ಭಕ್ತದ್ವೇಷೀ ಪಾಹೀ ನಿಜಶಸ್ತ್ರೇ ನಾಶೀ।।೫೪೪॥ ಚಕ್ರೇ ಅಭಿಮಾನಾಚಾ ಕರೀ ಚೇಂದಾ ।
ಮೋಹಮಮತಾ ಛೇದೀ ಗದಾ । ಶಂಖೇ ಉದ್ಬೋಧೀ ನಿಜಬೋಧಾ। ನಿಜಕಮಳೇ ಸದಾ ನಿಜಭಕ್ತ ಪೂಜೀ
।೫೪೫॥ ಜೇಥೇ ಚಕ್ರಪಾಣೇ ರಕ್ಷಿತಾ। ತೇಥೇ ನ ರಿಘೇ ಭವಭಯಾಚೀ ಕಥಾ ವಾರ್ತಾ। ಯಾಪರೀ ಕೀರ್ತಿವಂತಾ।
ಹರಿ ಸರ್ವಥಾ ಸ್ವಯೇ ರಕ್ಷೀ ।೫೪೬॥ ಜ್ಯಾಂಸೀ ನ ಕರವೇ ಕಥಾಶ್ರವಣ। ಅಥವಾ ನ ಟಕೇ ಹರಿಕೀರ್ತನ। ತಿಹೀ
ಕರಾವೇ ನಾಮಸ್ಮರಣ। "ರಾಮ - ಕೃಷ್ಣ - ಗೋವಿಂದ" ।೫೪೭॥ "ಅಚ್ಯುತ" ನಾಮಾಚೀ ನಿಜಖ್ಯಾತೀ । ಚೇವಲ್ಯಾ
ಕಲ್ಪಾಂತೀ ಹೋ ನೇದೀ ಚ್ಯುತೀ । ತ್ಯಾ ನಾಮಾತೇ ಜೇ ನಿತ್ಯ ಸ್ಮರತೀ। ತೇ ಜಾಣ ನಿಶ್ಚಿತೀ ಅಚ್ಯುತಾವತಾರ।೫೪೮॥
ರಾಮಕೃಷ್ಣಾದಿ ನಾಮಶ್ರೇಣೀ । ಅಖಂಡೇ ಗರ್ಜೇ ಜ್ಯಾಂಚೀ ವಾಣೀ। ತ್ಯಾಂಸೀ ತೀರ್ಥೇ ಯೇತೀ ಲೋಟಾಂಗಣೀ
। ಸುರವರ ಚರಣೀ ಲಾಗತೀ ಸ್ವಯೇ।೫೪೯॥
ಬಾಪ ನಾಮಾಚೇ ನಿಜತೇಜ। ಯಮ ವಂದೀ ಚರಣರಜ। ನಾಮಾಪಾಶೀ ಅಧೋಕ್ಷಜ। ಚತುರ್ಭುಜ ಸ್ವಯೇ

ಈ ಪ್ರಕಾರದ ಮನನಯುಕ್ತ ಶ್ರವಣದಿಂದ ಪೂರ್ಣಾನಂದವು ಉಕ್ಕಿಬರುವುದು ಮತ್ತು ಈ ಆನಂದದ ಭರದಲ್ಲಿ ಹರಿಕೀರ್ತನೆಯನ್ನು ಮಾಡಲಾರಂಭಿಸುವನು ।೫೩೬॥ ಜ್ಞಾನಮುದ್ರೆಯಿಂದ, ಪದಬಂಧಯುಕ್ತವಾಗಿ ಹರಿಯ ಅಗಾಧ ಚರಿತ್ರೆಗಳನ್ನು ಕೀರ್ತನೆಯಲ್ಲಿ ಹಾಡಿ ಹೊಗಳಿ ಅದರ ವಿವೇಚನೆ ಮಾಡಲು ಪರಮಾನಂದವು ತುಂಬಿ ತುಳುಕುವುದು ।೫೩೭॥ ಇವರು ಜನ್ಮರಹಿತನ ಜನ್ಮದ ವರ್ಣನೆ ಮಾಡುವರು ಕರ್ಮರಹಿತನ ಕರ್ಮಗಳನ್ನು ಅಂದರೆ ಆತನ ಲೀಲೆಗಳನ್ನು ವರ್ಣಿಸುವರು ಮತ್ತು ಯಾರಿಗೆ ನಾಮವಿಲ್ಲವೋ ಆತನ ನಾಮ ಸಂಕೀರ್ತನೆಗಳನ್ನು ಮಾಡುತ್ತಾ ಪ್ರೇಮದ ಭರದಲ್ಲಿ ಲೋಲಾಡುವರು ।೫೩೮॥ ಸ್ವಹಿತವನ್ನು ಸಾಧಿಸುವುದಕ್ಕಾಗಿ ಲೌಕಿಕದ ಲಜ್ಜೆಯನ್ನು ಬಿಟ್ಟು ಹರಿಕೀರ್ತನೆಯಲ್ಲಿ ಪ್ರೇಮದಿಂದ ಅತ್ಯಂತ ನಿರ್ಲಜ್ಜನಾಗಿ ನಿಃಶಂಕನಾಗಿ ನರ್ತಿಸುವನು ।೫೩೯॥ ಇಂತಹ ಕೀರ್ತನಯೋಗದಿಂದ ದೋಷಗಳು ನಾಶವಾದವು. ಜಪ ತಪಗಳು ಸುಮ್ಮನಾದವು. ಯಮಲೋಕವು ಬರಿದಾಯಿತು ಮತ್ತು ತೀರ್ಥಗಳ ಆಶೆಗಳೆಲ್ಲವೂ ನಿರಾಶವಾದವು ।೫೪೦॥ ಯಮನಿಯಮಗಳಿಗೆ ಉಪವಾಸವಿಟ್ಟವು. ಯೋಗಾಭ್ಯಾಸಕ್ಕೆ ಸಾಯುವ ಪ್ರಸಂಗ ಒದಗಿತು. ಕೀರ್ತನದ ಗರ್ಜನೆಯಾಗುತ್ತಿರಲು, ಶ್ರೀಕೃಷ್ಣ ಪರಮಾತ್ಮನು ಈ ನಾಮಮಾತ್ರದಿಂದಲೇ ಎಲ್ಲ ದೋಷಗಳನ್ನು ಇಲ್ಲದಾಗಿ ಮಾಡುವನು ।೫೪೧॥ ಕೀರ್ತನದ ಘಡಘಡಾಟವು ಆರಂಭವಾಗಲು ಎಲ್ಲೆಲ್ಲಿಯೂ ಆನಂದವು ತುಂಬಿ ತುಳುಕುವುದು. ಆಗ ವಿಷ್ಣುವು ಸಹ ಆನಂದದಿಂದ ಡೋಲಾಯಿಸುವನು ಹಾಗೂ ಆ ಆನಂದದಲ್ಲಿ ಭಗವಾನ ಶಂಕರನು ತಾಂಡವನೃತ್ಯ ಮಾಡುವನು ।೫೪೨॥ ಈ ಪ್ರಕಾರವಾಗಿ ಈ ಹರಿಕೀರ್ತನೆಯು ಮನಸ್ಸಿಗೆ ಅತ್ಯಂತ ಸಮಾಧಾನವನ್ನು ಕೊಡುವುದು. ಇದು ಭಕ್ತಿಯ ರಾಜಮಾರ್ಗವಾಗಿರುವುದು. ಈ ಮಾರ್ಗದಲ್ಲಿ ಸ್ವತಃ ಚಕ್ರಪಾಣಿಯು ಸಂರಕ್ಷಣೆಯನ್ನು ಮಾಡುವನು ।೫೪೩॥ ಈತನು ಚಕ್ರವನ್ನು ಧರಿಸಿ ಅದಕ್ಕೆ ಕೇಳುವನು. ಭಕ್ತರಲ್ಲಿ ನಿನ್ನ ಉಪಯೋಗವೇನಿದೆ? ನನಗಂತು ಜನಗತ್ತಿನಲ್ಲಿ ಶತ್ರುಗಳಾರೂ ಇರುವುದಿಲ್ಲ. ಆದರೆ ಭಕ್ತರನ್ನು ದ್ವೇಷಿಸುವವರಿಗೆ ನಾನು ಶಸ್ತ್ರದಿಂದ ನಾಶಮಾಡುವೆನು ।೫೪೪॥ ಚಕ್ರದಿಂದ ಅಭಿಮಾನವನ್ನು ಚೂರು ಚೂರು ಮಾಡುವೆನು. ಗದೆಯಿಂದ ಮೋಹಮಮತೆಯನ್ನು ಸೀಳಿ ಹಾಕುವೆನು. ಶಂಖದಿಂದ ಆತ್ಮಬೋಧೆಯನ್ನು ಜಾಗ್ರತೆಗೊಳಿಸುವೆನು ಮತ್ತು ಕಮಲದಿಂದ ಸದಾವಕಾಲದಲ್ಲಿ ನನ್ನ ಭಕ್ತರ ಪೂಜೆ ಮಾಡುವೆನು ।೫೪೫॥ ಈ ಪ್ರಕಾರವಾಗಿ ಚಕ್ರಪಾಣಿಯೇ ಸಂರಕ್ಷಿಸುತ್ತಿರಲು ಅಲ್ಲಿ ಭವಭಯದ ವಾರ್ತೆಯೂ ಸಹ ಇರುವುದಿಲ್ಲ. ಶ್ರೀಹರಿಯು ತನ್ನ ಕೀರ್ತಿಯ ಗುಣಗಾನ ಮಾಡುವವರನ್ನು ಯಾವಾಗಲೂ ಸಂರಕ್ಷಿಸುತ್ತಿರುವನು।೫೪೬॥ ಯಾರಿಗೆ ಹರಿಕಥೆಯ ಶ್ರವಣವನ್ನು ಮಾಡುವುದಾಗುವುದಿಲ್ಲವೋ ಮತ್ತು ಯಾರಿಗೆ ಹರಿಕೀರ್ತನೆಯನ್ನು ಮಾಡಲು ಬರುವುದಿಲ್ಲವೋ ಅವರು "ರಾಮ - ಕೃಷ್ಣ - ಗೋವಿಂದ" ಎಂದು ನಾಮಸ್ಮರಣೆ ಮಾಡಬೇಕು। ೫೪೭॥ "ಅಚ್ಯುತ" ಎಂಬ ನಾಮದ ನಿಜಖ್ಯಾತಿಯು ಹೇಗಿದೆ ಎಂದರೆ, ಇದನ್ನು ಗರ್ಜಿಸಲು ಕಲ್ಪಾಂತಕ್ಕೂ "ಚ್ಯುತಿ" ಅಂದರೆ ಅಧೋಗತಿಯಾಗುವುದಿಲ್ಲ. ನಿರಂತರವಾಗಿ ಈ ನಾಮದ ಸ್ಮರಣೆಯನ್ನು ಮಾಡುವವರು, ನಿಜವಾಗಿಯೂ ಅವರು ಅಚ್ಯುತನ ಅವತಾರಿಯಾಗಿರುವರು ।೫೪೮॥ ಯಾರು ತಮ್ಮ ವಾಣಿಯಿಂದ ರಾಮಕೃಷ್ಣರ ಜಪವನ್ನು ಅಖಂಡವಾಗಿ ಜಪಿಸುವರೋ, ಅವರ ಚರಣಗಳಲ್ಲಿ ತೀರ್ಥಗಳು ಲೋಟಾಂಗಣವನ್ನು ಹಾಕುವುವು ಮತ್ತು ಸುರವರರು ಸಹ ಚರಣಗಳಿಗೆ ವಂದಿಸುವರು।೫೪೯॥

ತಿಷ್ಠೀ ।೫೫೦॥ ನಾಮಾಚೇನಿ ಪಡಿಪಾಡೇ। ಕಾಯಿಸೇ ಭವಭಯ ಬಾಪುಡೇ। ಕಳಿಕಾಳಾಚೇ ತೋಂಡ ಕೋಣೇಕಡೇ। ನಾಮಾಪುಢೇ ರಿಘಾವಯಾ।೫೫೧॥ ಜೆವಢೀ ನಾಮಾಚೀ ಶಕ್ತೀ । ತೆವಢೇ ಪಾಪ ನಾಹೀ ತ್ರಿಜಗತೀ । ನಾಮಾಪಾಶೀ ಚಾರೀ ಮುಕ್ತೀ। ಜಾಣ ನಿಶ್ಚಿತೀ ವಿದೇಹಾ।೫೫೨॥ ಐಕ ತಾಯಾ ಸಾವಧಾನ । ನಾಮಾಪರತೇ ಸುಗಮ ಸಾಧನ । ಸರ್ವಥಾ ನಾಹೀ ನಾಹೀ ಆನ। ನಿಶ್ಚಯ ಜಾಣ ನೇಮಸ್ತ।೫೫೩॥ ಜನ್ಮ - ನಾಮ - ಕರ್ಮೇ ಶ್ರೀಧರ । ಶ್ರವಣೇ ಉದ್ಧರತೀ ಪಾಮರ। ಯಾಲಾಗೀ ಹರಿಲೀಲಾ ಸುಭದ್ರ। ಶಾಸ್ತ್ರಜ್ಞನರ ವರ್ಣಿತೀ।೫೫೪॥ ಐಸಾ ಬಾಣಲ್ಯಾ ಭಕ್ತಿಯೋಗ। ನ ಧರೀ ಜಾಣಪಣಾಚಾ ಫೂಗ। ತ್ಯಜ್ಯೂನಿ ಅಹಂಮಮತಾಪಾಂಗ। ವಿಚರತೀ ನಿಃಸಂಗ ಹರಿಕೀರ್ತನೇ।೫೫೫॥ ಕರಿತಾ ಶ್ರವಣ ಸ್ಮರಣ ಕೀರ್ತಿ। ತೇಣೇ ವಾಢೇ ಸಪ್ರೇಮ ಭಕ್ತಿ । ಭಕ್ತ ವಿಸರೇ ದೇಹಸ್ಫೂರ್ತಿ। ಐಕ ತೇಹೀ ಸ್ಥಿತಿ ಸಾಂಗೇನ ರಾಯಾ।೫೫೬॥

ಏವಂವ್ರತಃ ಸ್ವಪ್ರಿಯನಾಮಕೀರ್ತ್ಯಾ ಜಾತಾನುರಾಗೋ ದ್ರುತಚಿತ್ತ ಉಚ್ಚೈಃ।
ಹಸತ್ಯಥೋ ರೋದಿತಿ ರೌತಿಗಾಯತ್ಯುನ್ಮಾದವನ್ನೃತ್ಯತಿ ಲೋಕಬಾಹ್ಯಃ॥೪೦॥

ಅರ್ಥ:- ಈ ಪ್ರಕಾರವಾಗಿ ಯಾರು ತನ್ನ ಪ್ರಿಯತಮ ದೇವರ ಭಕ್ತಿಯಲ್ಲಿ ತನ್ಮಯನಾದಲ್ಲಿ ಆತನ ಹೃದಯದಲ್ಲಿನ ಪ್ರೇಮವು ಅನೇಕ ರೀತಿಯಲ್ಲಿ ಪ್ರಕಟವಾಗುವುದು. ಆತನ ಚಿತ್ತವು ದ್ರವಿಸುವುದು. ಸರ್ವಸಾಮಾನ್ಯರ ಮನುಷ್ಯರಕ್ಕಿಂತ ಆತನ ಜೀವನವು ಬದಲಾಗಿರುತ್ತದೆ. ಭಗವಂತನ ಅಲೌಕಿಕ ಪ್ರೇಮದಲ್ಲಿ ಆತನು ಕೆಲವೊಮ್ಮೆ ಗಹಗಹಿಸಿ ನಗುವನು, ಅತಿಶಯ ಪ್ರೇಮದಿಂದ ಕೆಲವೊಮ್ಮೆ ಅಳಹತ್ತುವನು. ಭಗವಂತನಿಗೆ ಭೇಟಿಯಾಗುವ ಇಚ್ಛೆಯಾದಾಕ್ಷಣವೇ ಆತನು ಗಟ್ಟಿಯಾಗಿ ಕೂಗುತ್ತ ಕರೆಯುವನು, ಮತ್ತು ಕೆಲವೊಮ್ಮೆ ಮಧುರವಾದ ಸ್ವರದಿಂದ ಆತನಿಗಾಗಿ ಗಾನ ಮಾಡುವನು. ತನ್ನ ಪ್ರಭುವಿಗೆ ಸಗುಣ ರೂಪದಲ್ಲಿ ಕಣ್ಮುಂದೆ ನೋಡುವನು ಮತ್ತು ಆತನಿಗೆ ಆನಂದ ಕೊಡಲು ತಾನು ಆನಂದದಿಂದ ಕುಣಿಯುವನು.

ಹರಿನಾಮಗುಣಕೀರ್ತನಕೀರ್ತೀ । ಅಖಂಡ ಆವಡೇ ಜಾಗೃತೀ। ಸ್ವಪ್ನೀಹೀ ತೇಚಿ ಸ್ಥಿತೀ। ದೃಢ ಹರಿಭಕ್ತೀ ಠಸಾವೇ।೫೫೭॥ ಐಶಿಯಾಪರೀ ಭಕ್ತಿಯುಕ್ತ । ದೃಢತರ ಜಾಹಲೇ ಜ್ಯಾಚೇ ವ್ರತ। ತಂವ ತಂವ ಹೋಯ ಆದ್ರಚಿತ್ತ। ಪ್ರೇಮಾ ಅದ್ಭುತ ಹರಿನಾಮ ಕೀರ್ತೀ।೫೫೮॥ ಆತ್ಮಾ ಪರಮ ಪ್ರಿಯ ಹರೀ । ತ್ಯಾಚೇ ನಾಮಕೀರ್ತೀಚಾ ಹರ್ಷ ಭಾರೀ । ನಿತ್ಯ ನವೀ ಆವಡ ವರೀ। ಸಬಾಹ್ಯಾಭ್ಯಂತರೀ ಹರಿ ಪ್ರಗಟೇ।೫೫೯॥ ಚುಕಲ್ಯಾ ನ್ಯಾಯಪೂತಾ ಸಂಕಟೀ। ಏಕಾಕೀ ಬಹುಕಾಳೇ ಜಾಹಲೀ ಭೇಟೀ। ತೇಣೇ ವೋರಡೇ ಘಾಲೋನಿ ಮಿಠೀ । ಕಾಲೇ ಜೇವೀ ಪೋಟೀ ಅನಿವಾರ ರುದನ।೫೬೦॥
ತೇವೀ ಜೇವಶಿವಾ ಆವಚಟೀ । ಭಕ್ತೀ ಚೇ ಪೇಠೇ ಜಾಹಲೀ ಭೇಟೀ । ಆತ್ಮಸಾಕ್ಷಾತ್ಕಾರೇ ಪಡೇ ಮಿಠೀ । ತೇ

ಈ ನಾಮದ ತೇಜವು ಎಷ್ಟೆಂದು ವಿಲಕ್ಷಣವಾಗಿದೆ ಎಂದರೆ ಈ ನಾಮಧಾರಕರ ಪಾದಧೂಳಿಯನ್ನು ಯಮನು ಸಹ ಮಸ್ತಕಕ್ಕೆ ಧರಿಸುವನು. ಈ ನಾಮದ ಹತ್ತಿರವೇ ಚತುರ್ಭುಜ ಶ್ರೀಕೃಷ್ಣನು ಸದಾ ನಿಂತಿರುವನು. ।೫೫೦॥ ಈ ನಾಮದ ಪ್ರಭಾವದೆದುರಿಗೆ ನಿಂತು ಮುಖ ತೋರಿಸುವ ಸಾಮರ್ಥ್ಯವು ಕಲಿಕಾಲನಿಗಿಲ್ಲದಿರಲು, ಆ ಬಡಪಾಯಿ ಭವಭಯವು ಏನು ಮಾಡಿತು? ।೫೫೧॥ ನಾಮದಲ್ಲಿರುವ ಶಕ್ತಿಗೆ ಮೂರು ಲೋಕದಲ್ಲಿನ ಎಲ್ಲ ಪಾಪಗಳು ಸಮವಾಗಲಾರವು. ಹೇ ಜನಕ ರಾಜನೇ, ನಾಮದಲ್ಲಿ ನಿಜವಾಗಿಯೂ ನಾಲ್ಕು ಮುಕ್ತಿಗಳಿರುವುವು. ಇದನ್ನು ನೀನು ಲಕ್ಷದಲ್ಲಿಡು ।೫೫೨॥ ಹೇ ರಾಜನೇ, ಸರಿಯಾಗಿ ಲಕ್ಷಕೊಟ್ಟು ಕೇಳು ನಾಮಕ್ಕಿಂತಲೂ ಸುಗಮವಾದ ಅನ್ಯ ಸಾಧನೆಗಳು ಇಲ್ಲವೇ ಇಲ್ಲ. ಇದನ್ನು ನೀನು ನಿಶ್ಚಿತವಾಗಿ ತಿಳಿದುಕೋ ।೫೫೩॥ ಶ್ರೀಧರನ ನಾಮಸ್ಮರಣೆ, ಜನ್ಮ ಹಾಗೂ ಕರ್ಮಗಳ ಕಥಾ ಶ್ರವಣ ಇವು ಸಾಧಿಸಿದರೆ ಸಾಕು, ಪಾಮರರೂ ಸಹ ಉದ್ಧಾರರಾಗುವರು. ಆದ್ದರಿಂದ ಶಾಸ್ತ್ರಬಲ್ಲವರು ಹರಿಲೀಲೆಯು ಕಲ್ಯಾಣಕಾರಕವೆಂದು ತಿಳಿದು ಅದನ್ನೇ ವರ್ಣಿಸುವರು ।೫೫೪॥ ಹೀಗೆ ಈ ಭಕ್ತಿಯೋಗವನ್ನು ಯಾರು ತಮ್ಮ ಅಂತಃಕರಣದಲ್ಲಿ ದೃಢವಾಗಿ ಧರಿಸುವರೋ, ಅವರಿಗೆ ಜ್ಞಾನದ ಗರ್ವವಾಗುವುದಿಲ್ಲ. ಅಹಂ ಮಮತೆಯ ಕಕ್ಕುಲತೆಯನ್ನು ಬಿಟ್ಟು ನಿಃಸಂಗದಿಂದ ಹರಿಕೀರ್ತನೆಯನ್ನು ಮಾಡುತ್ತಾ ಸಂಚರಿಸುವರು।೫೫೫॥ ಹರಿಕೀರ್ತನೆಯ ಶ್ರವಣವನ್ನು ಮತ್ತು ಹರಿನಾಮದ ಸ್ಮರಣೆಯನ್ನು ಮಾಡುವುದರಿಂದ ಸಪ್ರೇಮ ಭಕ್ತಿಯು ಬೆಳೆಯುವುದು ಮತ್ತು ಭಕ್ತನಿಗೆ ದೇಹದ ಭಾನವೇ ಇರುವುದಿಲ್ಲ. ಹೇ ರಾಜನೇ, ಆ ಸ್ಥಿತಿಯನ್ನು ಹೇಳುವೆ ಕೇಳು।೫೫೬॥

ಹರಿನಾಮದ ಮತ್ತು ಹರಿಕೀರ್ತಿಯ ವರ್ಣನೆಯು ಜಾಗೃತಿಯಲ್ಲಿ ನಿರಂತರವಾಗಿ ಪ್ರಿಯವಾದಂತೆ ಸ್ವಪ್ನದಲ್ಲಿಯೂ ಅದೇ ಸ್ಥಿತಿಯು ಉಂಟಾದರೆ ಆಗ ಮಾತ್ರ ಹರಿಭಕ್ತಿಯು ಉತ್ತಮವಾಗಿ ನಾಟಿಕೊಂಡಿದೆ ಎಂದು ತಿಳಿಯಬೇಕು ।೫೫೭॥ ಈ ರೀತಿಯಲ್ಲಿ ಭಕ್ತಿಯುಕ್ತವಾಗಿ ಯಾರ ವ್ರತವು ದೃಢವಾದರೆ ಆತನ ಚಿತ್ತವು ಹೆಚ್ಚಾಗಿ ದ್ರವಿಸುವುದು. ಹರಿನಾಮ ಕೀರ್ತನ ವಿಷಯದಲ್ಲಿ ಪ್ರೇಮವು ಅದ್ಭುತವಾಗಿ ಬೆಳೆಯುವುದು ।೫೫೮॥ ಪರಮ ಪ್ರಿಯವಾದ ಆತ್ಮವೇ ಹರಿಯು ಆತನ ನಾಮ ಕೀರ್ತನೆಯ ಅತ್ಯಂತ ಹರುಷವಾಗಿ ಮತ್ತು ನಿತ್ಯ ನೂತನವಾಗಿ ಪ್ರೇಮ ಇರುವುದರಿಂದ ಆತನಿಗೆ ಒಳ ಹೊರಗೆ ಹರಿಯೇ ಪ್ರಕಟನಾಗುವನು ।೫೫೯॥ ಒಬ್ಬ ತಾಯಿಯು ಮಗನನ್ನು ಕಳೆದುಕೊಂಡು ಸಂಕಟಪಡುತ್ತಿರಲು, ಬಹಳ ದಿನಗಳ ನಂತರ ಆಕಸ್ಮಿಕವಾಗಿ ಆ ಮಗನ ಭೇಟಿಯಾಯಿತೆಂದರೆ ಆಗ ಆ ತಾಯಿಯು ಜೋರಾಗಿ ಒದರುತ್ತ, ಆ ಮಗನನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳುವಳು ।೫೬೦॥

ಸಂಧೀಮಾಜೀ ಉಠೀ ಅನಿವಾರ ರುದನ।॥೫೬೧॥ ಪರಮಾತ್ಮ ಯಾಸೀ ಆಲಿಂಗನ । ತೇಣೇ ಅನಿವಾರ ಸ್ಫುಂದನ । ರೋಮಾಂಚಿತ ರುದನ । ಸಪ್ರೇಮ ಪೂರ್ಣ ಉಸಾಸೋನಿ ಕರೀ ।॥೫೬೨॥ ಸವೇಂಚಿ ಗದಗದೋನಿ ಹಾಂಸೇ । ಮಾನೀ ಮಜಮಾಜೀಚ ಮೀ ಅಸೇ। ಚುಕಲೋ ಭೇಟಲೋ ಹೇ ಐಸೇ। ದೇಖೋನಿ ಆಪುಲೇ ಪಿಸೇ ಹಾಂಸೋಂಚಿ ಲಾಗೇ।॥೫೬೩॥ ಮೀ ಅಖಂಡತ್ವೇ ಸ್ವಯೇ ಸಂಚಲೋ । ಅಭೇದಪೂರ್ಣತ್ವೇ ಅನಾದಿ ರಚಲೋ । ತೋ ಮೀ ಅವ್ಯಯೋ ಮ್ಹಣೇ ಜಾಹಲೋ ಮೇಲೋ । ಯೇಣೇ ಆಠವೇ ಡೋಲಡೋಲೋ ಹಾಂಸೋಂಚಿ ಲಾಗೇ ।॥೫೬೪॥ ಪಳತಾ ದೋರಾಚ್ಯಾ ಸರ್ಪಾಭೇಣ। ಪಡೇ ಅಡಖಳೇ ಭಯೇ ಪೂರ್ಣ। ತೋಚ ದೋರಾತೇ ವೊಳಖೋನ । ಆಪಣಿಯಾ ಆಪಣ ಸ್ವಯೇ ಹಾಂಸೇ ।॥೫೬೫॥ ತೇವೀ ಸಂಸಾರಾಚಾ ಅಭಾವೋ। ದೇಹಭಾವ ಸಮೂಳ ವಾವೋ। ತೇಥೇ ನಾಥಿಲೀ ಮಮತಾ ಅಹಂಭಾವೋ । ಮಜ ಹೋತಾ ಪಹಾ ವೋ ಮ್ಹಣೂನಿ ಹಾಂಸೇ।॥೫೬೬॥ ಬಾಪ ಗುರುವಾಕ್ಯ ನಿಜನಿರ್ವಾಹೋ । ದೇಹಿ ಅಸತಾ ವಿದೇಹಭಾವೋ। ಮಾಝೇ ಚಾರಿ ದೇಹ ಝಾಲೇ ವಾವೋ । ಯೇಣೇ ಅನುಭವೇ ಪಹಾ ವೋ ಗರ್ಜೋ ಲಾಗೇ।॥೫೬೭॥ ಮ್ಹಣೇ ಧನ್ಯ ಧನ್ಯ ಭಗದ್ಭಕ್ತೀ। ಜಿಣೇ ಮಿಥ್ಯಾ ಕೇಲ್ಯಾ ಚಾರೀ ಮುಕ್ತೀ । ಮೀ ಪರಮಾತ್ಮ ನಿಜನಿಶ್ಚಿತೀ । ಯೇಣೇ ಉಲ್ಹಾಸೇ ತ್ರಿಜಗತೀ ಗರ್ಜವೀ ಗಜರೇ।॥೫೬೮॥ ಧನ್ಯ ಭಗವಂತಾಚೇ ನಾಮ। ನಾಮೇ ಕೇಲೋ ನಿತ್ಯ ನಿಷ್ಕಾಮ । ಸಮೂಳ ಮಿಥ್ಯಾ ಭವಭ್ರಮ। ಗರ್ಜೋನಿ ನಿಃಸೀಮ ಹಾಕ ಫೋಡೀ ।॥೫೬೯॥ ಆತಾ ದುಜೇ ನಾಹೀತ ತ್ರಿಲೋಕೀ। ದಿಸೇ ತೇ ತೇ ಮೀಚ ಮೀ ಕೀ । ಮೀಚ ಮೀ ತೋ ಏಕಾಕೀ । ಯೇಣೇ ವಾಕ್ಯೇ ಅಲೋಕಿಕೀ ಹಾಕ ಫೋಡೀ ।॥೫೭೦॥ ದುರ್ಧರ ಭವಬಂಧ ಜ್ಯಾಚೇನಿ। ನಿಃಶೇಷ ಗೇಲಾ ಹಾರಪೋನಿ। ತ್ಯಾ ಸದ್ಗುರೂಚ್ಯಾ ನಿಜಸ್ತವನೀ । ಗರ್ಜವೀ ವಾಣೀ ಅಲೋಕಿಕ ।॥೫೭೧॥ ಮ್ಹಣೇ ಸಂಸಾರ ಝಾಲಾ ವಾವೋ । ಜನ್ಮ ಮರಣಾಂಚಾ ಅಭಾವೋ । ಕಳಿಕಾಳಾಸೀ ನಾಹೀ ಠಾವೋ । ಮ್ಹಣೋನಿಯಾ ಪಹಾ ಹೋ ಹಾಕ ಫೋಡೀ ।॥೫೭೨॥ ಐಸಾ ಹಾಕಾವರೀ ಹಾಕಾ । ಫೋಡೂ ಲಾಗೇ ಅಲೋಕಿಕಾ । ಸವೇಂಚಿ ಗಾಯೇ ನಿಜಾತ್ಮ ಸುಖಾ। ಸ್ವಾನಂದೇ ದೇಖಾ ಡುಲ್ಲತು ।॥೫೭೩॥ ಪರಮ ಸಖ್ಯಾಚೀ ಗೋಡ ಕಥಾ । ತೃಪ್ತೀ ನ ಬಾಣೇ ಸ್ವಯೇ ಸಾಂಗತಾ । ತೇವೀ ನಿಜಾನುಭವೇ ಹರಿ ಗಾತಾ। ಧಣೀ ಸರ್ವಥಾ ಪುರೇನಾ ।॥೫೭೪॥
ತ್ಯಾಚೇ ಗಾಣೇ ಐಕತಾ । ಸುಖರೂಪ ಹೋಯ ಸಜ್ಞಾನ ಶ್ರೋತಾ । ಮುಮುಕ್ಷು ಹೋಯ ಪರಮಾವಸ್ಥಾ ।

ಅದರಂತೆ ಭಕ್ತಿಯ ಬಜಾರದಲ್ಲಿ ಜೀವ ಶಿವರ ಭೇಟಿಯಾಗಿ ಆತ್ಮ ಸಾಕ್ಷಾತ್ಕಾರದಿಂದ ಅಪ್ಪಿಕೊಂಡಾಗ ಅನಿವಾರ್ಯವಾಗಿ ಅಳು ಬರುವುದು ।॥೫೬೧॥ ಪರಮಾತ್ಮನಿಗೆ ಆಲಂಗಿಸುವುದರಿಂದ ಬಿಕ್ಕಿ ಬಿಕ್ಕಿ ಅಳುವನು ಮತ್ತು ಪ್ರೇಮದಿಂದ ಪೂರ್ಣನಾಗಿ ರೋಮಾಂಚನವಾಗಿ ಪುನಃ ಜೋರಾಗಿ ನಿಟ್ಟುಸಿರು ಬಿಡುವನು ।॥೫೬೨॥ ಪುನಃ ತಕ್ಷಣ ಗಹಗಹಿಸಿ ನಗಲಾರಂಭಿಸುವನು. ಹಾಗೆಯೇ, ಹೀಗೆ ಹೇಳುವನು ಅಹೋ! ನಾನು ಪರಮಾತ್ಮನಲ್ಲಿಯೇ ಇರುವೇನಲ್ಲ, ತಪ್ಪಿಸಿಕೊಂಡೆನು, ಕೂಡಿಕೊಂಡೆನು ಎನ್ನುವುದು ನನ್ನದೇ ಹುಚ್ಚುತನವಾಗಿದೆ. ಹೀಗೆ ಮನದಲ್ಲಿ ತಂದು ಪುನಃ ನಗುವನು।॥೫೬೩॥ ನಾನು ಮಾತ್ರ ಅಖಂಡವಾಗಿ ಎಲ್ಲೆಲ್ಲಿಯೂ ತುಂಬಿರುವೆನು. ಪೂರ್ಣ ಅಭೇದದಿಂದ ನಾನು ಅನಾದಿಯಾಗಿರುವೆನು, ಹಾಗೆಯೇ ಇರುವೆನು. ಈ ಪ್ರಕಾರವಾಗಿ ನಾನು ಅವ್ಯಯನಾಗಿರುವುದರಿಂದ ಹುಟ್ಟಿದೆ, ಸತ್ತು ಹೋದೆ ಎಂದು ಹೇಳುತ್ತಿದ್ದೆ. ಹೀಗೆ ಸ್ಮರಿಸುತ್ತಾ ಡೋಲಾಯಿಸುತ್ತಾ ನಗುತ್ತಿರುವನು ।॥೫೬೪॥ ಒಬ್ಬನು ಹಗ್ಗಕ್ಕೆ ಹಾವು ಎಂದು ತಿಳಿದು ಬಲು ಬೆದರಿ ಓಡಿ ಹೋಗುವಾಗ್ಗೆ, ಅದೇ ಹಗ್ಗವು ಕಾಲಿಗೆ ತೊಡಕಿ ಬೀಳುವನು ಆಗ ಅವನೇ ತಪ್ಪಾಗಿ ತಿಳಿದ ಹಾವನ್ನು ಹಗ್ಗವೆಂದು ಅರಿತಾಗ ತನ್ನಷ್ಟಕ್ಕೆ ತಾನೇ ನಗಲಾರಂಭಿಸುವನು ।॥೫೬೫॥ ತದ್ವತ್ ಈ ಸಂಸಾರವು ಮಿಥ್ಯೆಯಾಗಿದ್ದು, ದೇಹಭಾವವು ಸಮೂಲವಾಗಿ ಸುಳ್ಳಾಗಿರುವುದು. ಹೀಗಿದ್ದರೂ ನನಗೆ ಇಲ್ಲದ ಅಹಂ ಮಮತೆ ಭಾವವು ಇತ್ತಲ್ಲ? ಎಂದು ಸ್ಮರಿಸಿ ನಗುವನು ।॥೫೬೬॥ ಗುರುವಾಕ್ಯವು ಧನ್ಯವಾಗಿದೆ. ಇದುವೇ ನನಗೆತಾರಕವಾಯಿತು. ದೇಹದಲ್ಲಿದ್ದರೂ ನಾನು ವಿದೇಹಿಯಾದೆ. ನನ್ನ ನಾಲ್ಕು ದೇಹಗಳು ಸುಳ್ಳಾದವು. ಹೀಗೆ ಅನುಭವದ ಉದ್ಗಾರದಿಂದ ಗರ್ಜಿಸುವನು ।॥೫೬೭॥ ಮತ್ತು ಹೀಗೆ ಹೇಳುವನು ಈ ಭಗದ್ಭಕ್ತಿಯು ಧನ್ಯ ಧನ್ಯವಾಗಿದೆ. ಇದು ನಾಲ್ಕು ಮುಕ್ತಿಗಳನ್ನು ಮಿಥ್ಯೆಗೊಳಿಸಿತು ನಾನೇ ಪರಮಾತ್ಮನು ಎಂದು ನಿಶ್ಚಯವಾಯಿತು. ಹೀಗೆ ಮಾಡಿದ ಉಲ್ಹಾಸದ ಗರ್ಜನೆಯು ಮೂರು ಲೋಕಗಳನ್ನು ತುಂಬಿಕೊಂಡಿತು ।॥೫೬೮॥ ಭಗವಂತನ ನಾಮವು ಧನ್ಯವು. ಈ ನಾಮವು ನನ್ನನ್ನು ನಿತ್ಯ ನಿಷ್ಕಾಮವನ್ನಾಗಿ ಮಾಡಿತು. ಭವಭಯವು ಸಮೂಲವಾಗಿ ಮಿಥ್ಯೆಯಾಗಿದೆ ಎಂದು ನಿಶ್ಚಯವಾಯಿತು. ಈ ಪ್ರಕಾರವಾಗಿ ಒದರುತ್ತ, ಜೋರಾಗಿ ಗರ್ಜಿಸುವನು ।॥೫೬೯॥ ಈಗ ತ್ರಿಭುವನದಲ್ಲಿ ಬೇರೆ ಏನೂ ಇರುವುದಿಲ್ಲ ಕಾಣುವುದೆಲ್ಲವೂ ನಾನೇ ಆಗಿರುವೆನು. ಪ್ರತಿಯೊಂದರಲ್ಲಿಯೂ ನಾನೇ ಇರುವೆನು ಎಂದು ದೊಡ್ಡ ಧ್ವನಿಯಿಂದ ಗರ್ಜಿಸಿ ಹೇಳುವನು ।॥೫೭೦॥ ಯಾರಿಂದ ಈ ದುರ್ಧರವಾದ ಭವಬಂಧನವು ಇಲ್ಲದಾಯಿತೋ ಆ ಸದ್ಗುರುವಿನ ಸ್ತವನೆಯಲ್ಲಿಯೇ ತನ್ನ ಅಲೌಕಿಕ ವಾಣಿಯಿಂದ ಗರ್ಜಿಸುವನು ।॥೫೭೧॥ ಅಹೋ! ಈ ಸಂಸಾರವು ಮಿಥ್ಯೆಯಾಯಿತು, ಜನ್ಮ ಮರಣವು ಇಲ್ಲದಾಯಿತು, ಕಲಿಕಾಲನ ಸ್ಥಾನವೇ ಒರೆಸಿ ಹೋಯಿತು ಹೀಗೆ ಗರ್ಜಿಸುತ್ತ ಹೇಳುವನು ।॥೫೭೨॥ ಈ ಪ್ರಕಾರವಾಗಿ ಮೇಲಿಂದ ಮೇಲೆ ಅಪೂರ್ವ ರೀತಿಯಲ್ಲಿ ಗರ್ಜಿಸುವನು ತಕ್ಷಣವೇ ಆತ್ಮ ಸುಖದ ಗಾನಗಳನ್ನು ಹಾಡುವನು ಮತ್ತು ಸ್ವಾನಂದದಿಂದ ತೂಗಾಡುತ್ತಿರುವನು ।॥೫೭೩॥ ತನಗೆ ಪ್ರಿಯನಾದವನ ಮಧುರ ಕಥೆಗಳನ್ನು ಸ್ವತಃ ಎಷ್ಟು ಹೇಳಿದರೂ ತೃಪ್ತಿಯಾಗುವುದಿಲ್ಲ. ಅದರಂತೆ ಆತ್ಮಬೋಧೆಯಿಂದ ಹರಿಯನ್ನು ಎಷ್ಟು ಕೊಂಡಾಡಿದರೂ ಸಾಕಾಗುವುದೇ ಇಲ್ಲ ।॥೫೭೪॥

ಜರಿ ತೋ ಅವಚಿತಾ ಗಾವೋ ಲಾಗೇ ।।೫೭೫।। ಗಾತಾ ಪದೋಪದೀ ನಿಜಸುಖ । ಕೋಂದಾಟೇ ಅಧಿಕಾಧಿಕ । ವೋಸಂಡತಾ ಪರಮ ಹರಿಖ । ಸ್ವಾನಂದೇ ಅಲೋಕಿಕ ನಾಚೋ ಲಾಗೇ ।।೫೭೬।। ಸಾರೂನಿ ದುಜೇಪಣಾಚೇ ಕಾಜ । ನಿರಸೋನಿ ಲೌಕಿಕಾಚೀ ಲಾಜ । ಅಹಂಭಾವೇವಿಣ ಸಹಜ । ಆನಂದಾಚೇ ಭೋಜೇ ಅಲೋಲಿಕ ನಾಚೇ ।।೫೭೭।। ಜೋ ಮೋಲೇ ಮದಿರಾ ಖಾಯೇ । ತೋ ಮದಿರಾನಂದೇ ನಾಚೇ ಗಾಯೇ । ಜೇಣೇ ಬ್ರಹ್ಮಾನಂದು ಸೇವಿಲಾ ಆಹೇ। ತೋ ಕೇವೀ ರಾಹೇ ಆವರಲಾ ।।೫೭೮।। ಯಾಲಾಗಿ ತೋ ಲೋಕಬಾಹ್ಯತಾ । ಸ್ವಯೇ ನಾಚೇ ಬ್ರಹ್ಮ ಉನ್ಮಾದತಾ । ಲೋಕ ಮಾನಿತೀ ತಯಾ ಪಿಶಾಚತಾ । ಹಾ ಬೋಧು ಪಂಡಿತಾ ಸಹಜಾ ನ ಕಳೇ ।।೫೭೯।। ತ್ಯಾಚಿಯಾ ನಿಜಬೋಧಾಚೀ ಕಥಾ । ಐಕ ಸಾಂಗೇನ ನೃಪನಾಥಾ । ಏಕ ಭಗವಂತಾವಾಂಚೂನ ಸರ್ವಥಾ। ತ್ಯಾಸೀ ಲೌಕಿಕತಾ ದಿಸೇನಾ ।।೫೮೦।।

ಖಂ ವಾಯುಮಗ್ನಿಂ ಸಲಿಲಂ ಮಹೀಂಚ ಜ್ಯೋತೀಂಷಿ ಸತ್ವಾನಿ ದಿಶೋ ದ್ರುಮಾದೀನ್।
ಸರಿತ್ಸಮುದ್ರಾಂಶ್ಚ ಹರೇಃ ಶರೀರಂ ಯತ್‌ಕಿಂಚ ಭೂತಂ ಪ್ರಣಮೇದನನ್ಯಃ।।೪೧।।

ಅರ್ಥ: ಹೇ ರಾಜಾ, ಆಕಾಶ, ವಾಯು, ಅಗ್ನಿ, ಪೃಥ್ವಿ, ಗ್ರಹ, ನಕ್ಷತ್ರ, ಪ್ರಾಣೀ, ದಿಶಾ, ವೃಕ್ಷ, ವನಸ್ಪತೀ, ನದೀ,ಸಮುದ್ರ ಹೀಗೆ ಎಲ್ಲವೂ ಭಗವಂತನ ಶರೀರವಾಗಿವೆ. ಎಲ್ಲ ರೂಪಗಳಲ್ಲಿ ಸ್ವಯಮ್ ಭಗವಂತನು ಪ್ರಕಟಿಸಿರುವನು. ಹೀಗೆ ತಿಳಿದು ಆತನ ಎದುರಿನಲ್ಲಿ ನಿರ್ಗುಣವಾಗಲಿ ಅಥವಾ ಸಗುಣವಾಗಲಿ ಒಟ್ಟಿಗೆ ಏನೇ ಇರಲಿ ಅದಕ್ಕೆ ಆತನು ಅನನ್ಯ ಭಾವದಿಂದ ಭಗವಂತನು ಎಂದು ಪ್ರಣಾಮ ಮಾಡುವನು.

ಬ್ರಹ್ಮ ಉನ್ಮಾದಪರಮಾನಂದೇ । ಜಂವ ಜಂವ ಪಾಹೇ ಸ್ವಾನಂದ ಬೋಧೇ । ತಂವ ತಂವ ಚರಾಚರ ಪೂರ್ಣಾನಂದೇ । ದೇಖೇ ಸ್ವಾನಂದಕಂದೇ ದುಮದುಮಿತ ।।೫೮೧।। ಪೃಥ್ವಿ ಆಪ ತೇಜ ವಾಯು ನಭ । ದೇಖೇ ಹರಿರೂಪ ಸ್ವಯಂಭ । ಭೂತಾ ಮಹಾಭೂತಾಂಚೇ ಡಿಂಭ । ನ ದೇಖೇ ಬಿನ್ನ ಕೋಂಭ ಅಭಿನ್ನತ್ವೇ ।।೫೮೨।। ಜೇವೀ ನ ಮೇಳವಿತಾ ಮೇಳಾ । ಪಾಹತಾ ಜೈಸಾ ಕೇಳೀಚಾ ಕಳಾ । ಸ್ವಯೇ ವಿಕಾಸೇ ಫಳಾ ದಳಾ । ತೇವೀ ವಸ್ತು ಹೇ ಪಾಂಚಾಲಾ ಭೂತ ಭೌತಿಕಾತ್ಮಕ ।।೫೮೩।। ಜೇವೀ ಕಾಂತೋನಿಯಾ ರಂಧ್ರಸಳೇ । ಸ್ಫಟೀಕದೀಪಗೃಹ - ಅಂಗಮೇಳೇ । ಚಿತ್ರಾರಿಲೀ ಅಶ್ವಗಜದಳೇ । ತೀ ಭಾಸತೀ ಸೋಜ್ವಳೇ ಆಂತುಲೇನಿ ದೀಪೇ।।೫೮೪।। ತೇವೀ ಸೋಮಸೂರ್ಯಾದಿ ತೇಜಶಕ್ತೀ । ಕಾ ವನ್ಹಿ ನಕ್ಷತ್ರೇ ಜೇ ಲಖಲಖಿತೀ । ಜನನಯನಾದಿ ನಿಜದೀಪ್ತೀ । ದೇಖೇ ಆತ್ಮಜ್ಯೋತೀ ಸತೇಜ ।।೫೮೫।।
ಯುಕ್ತಿ ಮೇಳವಿತಾ ದ್ರವ್ಯಾಂತರ । ಅಗ್ನಿ ಪರೀ ಭಾಸೇ ಪುಷ್ಪಾಕಾರ । ತೇವೀ ವಸ್ತು ಸ್ವಲೀಲಾ ಸಾಚಾರ ।

ಇವರ ಹರಿಗುಣ ಗಾಯನವನ್ನು ಕೇಳಿ ಜ್ಞಾನೀ ಶ್ರೋತೃಗಳು ಸುಖರೂಪರಾಗುವರು. ಮುಮುಕ್ಷುಗಳವರಿಗೆ ಈತನ ಹರಿಗುಣ ಗಾಯನವನ್ನು ಕೇಳಿ ಪ್ರೇಮವು ಉಕ್ಕೇರುವುದು ।।೫೭೫।। ಈ ಪ್ರಕಾರವಾಗಿ ಈತನು ಹಾಡುತ್ತಿರಲು ನಿಜಸುಖವು ಮೇಲಿಂದ ಮೇಲೆ ತುಂಬಿ ತುಳುಕುವುದು. ಮತ್ತು ಹರುಷವು ಹೃದಯದಲ್ಲಿ ಹಿಡಿಸಲಾರದಂತಾಗುವುದು. ಆದ್ದರಿಂದ ಈತನು ನಿಜಾನಂದದಿಂದ ಅಲೌಕಿಕವಾಗಿ ನರ್ತಿಸುತ್ತಿರುವನು ।।೫೭೬।। ಭೇದಭಾವದ ಕಾರ್ಯಗಳನ್ನು ಬದಿಗಿಟ್ಟು ಲೌಕಿಕ ಲಜ್ಜೆಯನ್ನು ಬಿಟ್ಟುಕೊಟ್ಟು ಈತನು ಅಹಂಭಾವವಿಲ್ಲದೇ ಸಹಜಾನಂದದಿಂದ ಬಹಳ ಚಮತ್ಕಾರವಾಗಿ ಕುಣಿಯುವನು ।।೫೭೭।। ಖರೀದಿಸಿ ಮದ್ಯಪಾನ ಮಾಡಿದವರು ಅದರ ನಿಶೆಯಲ್ಲಿ ಹಾಡುವರು, ಕುಣಿಯುವರು ಹಾಗಾದರೆ ಬ್ರಹ್ಮಾನಂದ ರಸವನ್ನು ಸೇವಿಸಿದವನು ಹಾಡದೇ, ಕುಣಿಯದೇ ಇರಲು ಸಾಧ್ಯವೇ? ।।೫೭೮।। ಆದ್ದರಿಂದ ಬ್ರಹ್ಮಾನಂದದ ಉನ್ಮಾದದಲ್ಲಿ ಲೌಕಿಕವನ್ನು ಬಿಟ್ಟು ಅವರು ಸ್ವತಃ ಹಾಡುವರು, ಕುಣಿಯುವರು ಜನರು ಇವರನ್ನು ಹುಚ್ಚರು ಎನ್ನುವರು. ಈ ಸ್ಥಿತಿಯ ಮರ್ಮವು ಪಂಡಿತರಿಗೂ ಸಹ ತಿಳಿಯುವುದಿಲ್ಲ ।।೫೭೯।। ಹೇ ರಾಜನೇ, ಇವರಿಗೆ ಒಬ್ಬ ಭಗವಂತನ ಹೊರತಾಗಿ ಅನ್ಯ ಲೋಕಾಚಾರವು ಕಾಣಿಸುವುದೇ ಇಲ್ಲ. ಇವರ ನಿಜಬೋಧೆಯ ಕಥೆಯನ್ನು ಹೇಳುವೆ, ಕೇಳು ।।೫೮೦।।

ಸ್ವಾನಂದದ ಬೋಧೆಯಿಂದ ಮತ್ತು ಬ್ರಹ್ಮೋನ್ಮಾದದ ಪರಮಾನಂದದಲ್ಲಿ ಈತನು ಚರಾಚರಗಳಲ್ಲಿ ಯಾವ ಯಾವುದನ್ನು ನೋಡುವನೋ, ಅವೆಲ್ಲವೂ ಪೂರ್ಣಾನಂದದಿಂದ ಮತ್ತು ಸ್ವಾನಂದದಿಂದ ತುಂಬಿ ತುಳುಕ್ಕುತ್ತಿರುವಂತೆ ಕಾಣುವನು ।।೫೮೧।। ಪೃಥ್ವಿ, ಆಪ, ತೇಜ, ವಾಯು, ಆಕಾಶ ಇವೆಲ್ಲವೂ ಈತನಿಗೆ ಸಾಕ್ಷಾತ್ ಹರಿಸ್ವರೂಪವಾಗಿಯೇ ಕಾಣುವವು. ಭೂತಗಳ ಅಥವಾ ಮಹಾಭೂತಗಳ ಪ್ರತಿಭೆಯ ವಿಭಿನ್ನ ಅಂಕುರಗಳು ಈತನಿಗೆ ಅಭಿನ್ನವಾಗಿ ಏಕರೂಪವಾಗಿಯೇ ಕಾಣಿಸುವುವು ।।೫೮೨।। ಯಾವ ಪ್ರಕಾರವಾಗಿ ಬೇರೆ ಯಾವುದೂ ಇರದ ಬಾಳೆಯ ಗಿಡವು ಖಂಬ, ಎಲೆ ಮತ್ತು ಫಲ ಈ ರೂಪದಿಂದಲೇ ವಿಕಾಸವಾಗುವುದು. ಹೇ ಪರೀಕ್ಷಿತಿ ರಾಜನೇ, ಅದರಂತೆ ಪರಬ್ರಹ್ಮವು ಭೂತ ಭೌತಿಕಾತ್ಮಕ ರೂಪದಿಂದ ಪ್ರಕಟವಾಗುವುದು ।।೫೮೩।। ಅಥವಾ ಸ್ಫಟಿಕ ಗೃಹದ ಗೋಡೆಯ ಮೇಲೆ ಕೊರೆಯುವ ಸಾಮಾಗ್ರಿಯಿಂದ ಆನೆ, ಕುದುರೆ, ಸೈನ್ಯ ಇತ್ಯಾದಿ ಕೊರೆದು ತಯಾರಿಸಿದ ಚಿತ್ರಗಳು ಒಳಗಿನ ಬೆಳಕಿನಿಂದ ಅವು ನಿಜವೆನ್ನುವಂತೆ ಕಾಣುವುವು ।।೫೮೪।। ಅದರಂತೆ ತೇಜಃಪುಂಜರಾದ ಸೂರ್ಯಚಂದ್ರಾದಿಕರು ಮತ್ತು ಲಖಲಖಿಸುವ ಅಗ್ನಿ, ನಕ್ಷತ್ರಗಳು ಇವುಗಳಲ್ಲಿನ ತೇಜದ ಹೊಳಪು ಮತ್ತು ಪ್ರಾಣಿಗಳ ನೇತ್ರಗಳಲ್ಲಿನ ತೇಜವು ಈ ಎಲ್ಲವೂ ಆತ್ಮ ಜ್ಯೋತಿಯಿಂದಲೇ ಸತೇಜವಾಗಿ ಕಾಣುವುವು ।।೫೮೫।।

ರವಿಚಂದ್ರಾಕಾರ ನಾನಾತ್ವೇ ಭಾಸೇ ।೫೮೬॥ ಪೃಥ್ವೀ ಗಂಧು ರೂಪೇ ಸ್ವಯೇ ಅಸೇ । ತೋ ಗಂಧುಕಸ್ತೂರ್ಯಾದಿಕೀ ಭಾಸೇ । ತೇವೀ ಭಗವತ್ಸತ್ತಾ ಸರ್ವತ್ರ ಅಸೇ । ಪರೀ ಸಾತ್ತ್ವಿಕೀ ದಿಸೇ ಅತಿಪ್ರಗಟ ।೫೮೭॥ ಯಾಲಾಗೀ ಸಾತ್ತ್ವಿಕಾಠಾಯೀ ಸತ್ತ್ವ । ತೇಥ ದೇಖೇ ಭಗವತ್ತತ್ತ್ವ । ಸತ್ತ್ವೀ ಸತ್ತ್ವವಂತಾ ಮಹತ್ತ್ವ । ಅತಿ ಮಾನ್ಯತ್ವ ಹರಿರೂಪೇ ।೫೮೮॥ ಪೃಥ್ವೀಸೀ ಜಳಾವರಣ ಆಹೇ। ತೇಚಿ ಚತುಃಸಮುದ್ರ ನಾಂವ ಲಾಹೇ । ತೈಸೇ ದೇವಾಚೇಚಿ ಅಂಗ ಪಾಹೇ । ದಿಶಾತ್ವೇ ವಾಚ್ಯ ಹೋಯೇ ದಶದಿಶಾ ।೫೮೯॥ ಪೂರ್ವಪಶ್ಚಿಮಾದಿ ಯೋಗ। ದಶದಿಶಾಂಚೇ ದಿಗ್ವಿಭಾಗ । ತೇಹೀ ದೇವಾಚೇಚಿ ಅಂಗ । ತದ್ರೂಪ ಶ್ರೀರಂಗ ಸ್ವಯೇ ಭಾಸೇ ।೫೯೦॥ ತೃಣ ದೂರ್ವಾ ದರ್ಭ ದ್ರುಮ । ದೇಖೋನಿ ಮ್ಹಣೇ ಹೇಹೀ ಹರೀಚೇ ರೋಮ । ಅನೋಳಖಾ ಹೇ ಅತಿವಿಷಮ । ನಿಜಾಂಗೀ ಸರ್ವ ಸಮ ಹರಿರೂಪ ಪಾಹತಾ ।೫೯೧॥ ಜೈಶಾ ಆಪುಲ್ಯಾ ಅಂಗೋಳಿಯಾ । ಗಣಿತಾ ದಿಸತೀ ವೇಗಳಾಲಿಯಾ । ಪರೀ ಅಸತೀ ಲಾಗಲಿಯಾ । ಸ್ವಯೇ ಸಗಳಿಯಾ ಅಖಂಡ ಅಂಗೀ ।೫೯೨॥ ತೇವೀ ವನ - ವಲ್ಲೀ - ದರ್ಭ - ದಾಂಗ । ದೇಖೋನಿ ಮ್ಹಣೇ ಹೇ ಹರೀಚೇ ಅಂಗ । ಅನನ್ಯಭಾವೇ ಲಗಬಗ । ಭಿನ್ನಭಾಗ ದೇಖೇನಾ ।೫೯೩॥ ಮ್ಹಣೇ ದುರ್ವಾ - ದ್ರುಮ - ವನ - ವಲ್ಲೀ । ಹೇಚೀ ಅನಂತ ಕೋಟೀ ರೋಮಾವಳೀ । ಹರಿಚೇನಿ ಅಂಗೇ ಅಸೇ ವಾಢಲೀ । ತ್ಯಾ ನಿಜಶೋಭಲೀ ಹರಿರೂಪತ್ವೇ।೫೯೪॥ ಜೇವೀ ವಟಾಚ್ಯಾ ಪಾರಂಬಿಯಾ । ಲೋಂಬೋನಿ ವಾಢತೀ ವೇಗಳಾಲಿಯಾ। ತ್ಯಾಹೀ ವಟರೂಪೇ ಸಂಚಲಿಯಾ। ವಟತ್ವಾ ಮುಕಲಿಯಾ ಮ್ಹಣೋ ನಯೇ।೫೯೫॥ ತೇವೀ ಚೈತನ್ಯಪಾಸೋನಿ ವೋಘ । ನಿಘಾಲೇ ಸರಿತಾರೂಪ ಅನೇಗ । ತೇಹೀ ಚೈತನ್ಯಘನ ಚಾಂಗ । ಚಿದ್ರೂಪೇ ಸಾಂಗ ಸದಾ ವಾಹತೀ ।೫೯೬॥ ಹೋಕಾ ಚಂದ್ರಬಿಂಬೀ ಅಮೃತ ಜೈಸೇ। ಬಿಂಬೀ ಬಿಂಬರೂಪ ಹೋಊನಿ ಅಸೇ । ತೇವೀ ಭಗವಂತೀ ಸಂಸಾರು ಭಾಸೇ । ಭಜನವಿಶ್ವಾಸೇ ಭಗವದ್ರೂಪ।೫೯೭॥ ಐಸೇ ವೇಗವೇಗಳೇ ಭಾಗ । ಪಾಹತಾ ಉಲ್ಹಾಸೇ ಜಂವ ಚಾಂಗ। ತಂವ ಅವಘೇ ಉಘಡೇ ಜಗ। ದೇವೋಚಿ ಸಾಂಗ ಸ್ವಯೇ ಝಾಲಾ।೫೯೮॥ ಯಾಲಾಗೀ ಸರ್ವ ಭೂತಾಂಚೇ ಠಾಯೀ । ಅನನ್ಯ ಶರಣ ಕೈಸಾ ಪಾಹೀ । ಲವಣ ಜೈಸೇ ಸಾಗರಾ ಪಾಹೀ । ಠಾಯೀ ಠಾಯೀ ಜಡೋನಿ ಠಾಕೇ।೫೯೯॥

ತೇಥ ಮುಂಗೀಹೀ ದೇಖೋನಿ ಜಾಣ । ಹರಿರೂಪೀ ವಂದೀ ಆಪಣ । ಮಶಕಾಸಹೀ ಅನನ್ಯ ಶರಣ । ಘಾಲೀ

ಸುಡುವ ಮದ್ದಿನ ವಸ್ತುಗಳಲ್ಲಿ ಯುಕ್ತಿಯಿಂದ ದಿನಸುಗಳ ಮಿಶ್ರಿತವಿರುವುದು. ಅದರಲ್ಲಿ ಅಗ್ನಿಯು ಪುಷ್ಪಾಕಾರವಾಗಿ ತೋರುವುದು. ಅದರಂತೆ ಪರಬ್ರಹ್ಮವು ತನ್ನ ಲೀಲೆಯಿಂದ ಸೂರ್ಯಚಂದ್ರಾಕಾರವಾಗಿ ನಾನಾ ರೀತಿಯಲ್ಲಿ ಕಾಣುವುದು ।೫೮೬॥ ಪೃಥ್ವಿಯು ಸ್ವತಃ ಸಿದ್ಧ ಗಂಧರೂಪವಾಗಿದೆ. ಆದರೆ ಆ ಸುಗಂಧವು ಕಸ್ತೂರಿ ಇತ್ಯಾದಿ ಪದಾರ್ಥಗಳಿಂದ ಪ್ರಕಟವಾಗುವುದು. ಅದರಂತೆ ಭಗವಂತನ ಸತ್ತೆಯು ಸರ್ವತ್ರವಾಗಿರುವುದು. ಆದರೆ ಸಾತ್ವಿಕಗಳಲ್ಲಿ ಅತಿಶಯವಾಗಿ ಸ್ಪಷ್ಟವಾಗಿ ತೋರುವುದು ।೫೮೭॥ ಆದ್ದರಿಂದ ಸಾತ್ವಿಕರಲ್ಲಿರುವ ಸತ್ವಗುಣವು ಅದು ಭಗವಂತನ ತತ್ವವೆಂದು ತಿಳಿಯಬೇಕು. ಸತ್ವ ವೃತ್ತಿಯ ಜನರಲ್ಲಿ ಸತ್ವತನದಿಂದಲೇ ಮಹತ್ವವು ಮತ್ತು ಹರಿರೂಪದಿಂದ ಮಾನ್ಯತೆಯು ಪ್ರಾಪ್ತವಾಗುವುದು ।೫೮೮॥ ಪೃಥ್ವಿಯ ಸುತ್ತಲೂ ಜಲವು ಆವೃತ್ತಿಗೊಂಡಿದೆ. ಅದಕ್ಕೆ ಚತುಃ ಸಮುದ್ರವೆನ್ನುವರು. ಅದರಂತೆ ದಶದಿಶೆಗಳಲ್ಲಿರುವ ದೇವರದೇ ಅಂಗಕ್ಕೆ "ದಿಕ್ಕು" ಎಂದು ಕರೆಯುವರು ।೫೮೯॥ ಪೂರ್ವ, ಪಶ್ಚಿಮ ಇತ್ಯಾದಿ ದಿಕ್ಕುಗಳು ಇವು ದಶದಿಶೆಯ ಭಾಗವಾಗಿರುವುವು. ಇವೆಲ್ಲವೂ ದೇವರ ಅಂಗವಾಗಿವೆ. ಈ ರೂಪದಿಂದ ಶ್ರೀರಂಗನು ಮೂರ್ತಿಮಂತನಾಗಿ ಭಾಸಿಸುವನು ।೫೯೦॥ ಹುಲ್ಲು, ದುರ್ವಾ, ಧರ್ಭೆ, ಮರಗಳು ಇತ್ಯಾದಿ ಕಂಡು ಇವು ಸಹ ಹರಿಯ ರೋಮಗಳೆಂದು ಈತನು ಹೇಳುವನು. ತನ್ನ ಅಂಗದಲ್ಲಿ ಸರ್ವತ್ರವೂ ಹರಿರೂಪವು ಸಮವಾಗಿದ್ದರೂ ಅರಿಯದವರು ಎಲ್ಲವನ್ನು ವಿಷಮವಾಗಿ ಕಾಣುವರು ।೫೯೧॥ ತನ್ನ ಬೆರಳುಗಳನ್ನು ಎಣಿಸಲು ಅವು ಭಿನ್ನ ಭಿನ್ನವಾಗಿ ಕಾಣುವುವು. ಆದರೆ ಅವು ಎಲ್ಲವೂ ಮೂಲದಲ್ಲಿಯೇ ತನ್ನ ಒಂದೇ ಅಂಗಕ್ಕೆ ಹತ್ತಿಕೊಂಡಿರುವುವು ।೫೯೨॥ ಅದರಂತೆ ವನ, ಬಳ್ಳಿಗಳು, ದರ್ಭೆ, ಅರಣ್ಯ ಇತ್ಯಾದಿ ಎಲ್ಲವನ್ನು ಕಂಡು ಇವೆಲ್ಲವೂ ಹರಿಯ ಸ್ವರೂಪವೇ ಆಗಿವೆ ಎಂದು ಈತನು ಹೇಳುವನು. ಈ ಎಲ್ಲವನ್ನು ಈತನು ಐಕ್ಯಭಾವದಿಂದ ಕಾಣುವನು. ಯಾವವು ಬೇರೆ ಬೇರೆಯಾಗಿ ಕಾಣುವುದಿಲ್ಲ ।೫೯೩॥ ದುರ್ವವೇ ಇರಲಿ ಗಿಡಗಂಟೀಗಳೇ ಆಗಿರಲಿ ಅರಣ್ಯವಾಗಿರಲಿ ಇವೆಲ್ಲ ಅನಂತ ಕೋಟಿ ರೋಮಗಳು ಹರಿಯ ಅಂಗದಲ್ಲಿ ಬೆಳೆದಿವೆ. ಇವುಗಳಿಗೆ ಹರಿಯಿಂದಲೇ ಶೋಭೆಯು ಬಂದಿದೆ ಎಂದು ಈತನು ಹೇಳುವನು ।೫೯೪॥ ವಟವೃಕ್ಷದ ಟೊಂಗೆಗಳಿಗೆ ಬಿಟ್ಟ ಬೇರುಗಳು ಜೋತಾಡುತ್ತಾ ಬೇರೆ ಬೇರೆಯಾಗಿ ಬೆಳೆಯುತ್ತವೆ. ಆದರೆ ಇವು ವಟವೃಕ್ಷದಲ್ಲಿಯೇ ಇರುವುವು. ಇವು ವಟವೃಕ್ಷದಿಂದ ಬೇರೆಯಾಗಿವೆ ಎಂದು ಹೇಳಲು ಬರುವುದಿಲ್ಲ ।೫೯೫॥ ಅದರಂತೆ ಚೈತನ್ಯದಿಂದ ನದಿರೂಪವಾಗಿ ಅನೇಕ ಪ್ರೋಘಗಗಳು ಹೊರಟಿರುವುವು. ಅವುಗಳಲ್ಲಿ ಓತಪ್ರೋತವಾಗಿ ಚೈತನ್ಯವೇ ತುಂಬಿರುವುದು ಮತ್ತು ಆ ಚಿದ್ರೂಪದಿಂದಲೇ ಅವು ನಿರಂತರವಾಗಿ ಹರಿಯುವುವು ।೫೯೬॥ ಅಥವಾ ಚಂದ್ರಬಿಂಬದಲ್ಲಿನ ಅಮೃತವು ಬಿಂಬದಲ್ಲಿ ಬಿಂಬರೂಪವಾಗಿಯೇ ಇರುವುದು. ಅದರಂತೆ ಭಗವಂತನಲ್ಲಿ ಸಂಸಾರವು ಭಾಸವಾಗುವುದು. ಅದು ಭಜನ ವಿಶ್ವಾಸದಿಂದ ಭಗವದ್ರೂಪವಾಗಿರುವುದು ।೫೯೭॥ ಈ ಪ್ರಕಾರವಾಗಿ ಸೃಷ್ಟಿಯಲ್ಲಿನ ಬೇರೆ ಬೇರೆ ಭಾಗಗಳನ್ನು ನೋಡುತ್ತಿರಲು ಉಲ್ಹಾಸವು ಬೆಳೆಯುತ್ತಿರುವುದು ಮತ್ತು ಎಲ್ಲ ಕಡೆಯಲ್ಲಿಯೂ ದೇವರೇ ಪೂರ್ಣತ್ವದಿಂದ ನಟಿಸಿರುವನು ಎಂದು ಈತನ ಅನುಭವಕ್ಕೆ ಬರುವುದು ।೫೯೮॥ ಸಮುದ್ರದಲ್ಲಿ ಲವಣವು ಸರ್ವಾಂಶದಿಂದ ಲೀನವಾಗುವಂತೆ ಈತನು ಸರ್ವಪ್ರಾಣಿ ಮಾತ್ರರಲ್ಲಿ ಲೀನನಾಗುವನು ।೫೯೯॥

ಲೋಟಾಂಗಣ ಭಗವದ್ರೂಪೇ ॥೬೦೦॥ ಗೋ - ಖರ - ಚಾಂಡಾಳ - ಶ್ವಾನ । ಅತಿನಿಂದ್ಯ ತೇ ಹೀನ ಜನ। ತೇ ಭಗವದ್ರೂಪ ದೇಖೋನಿ ಪೂರ್ಣ। ಘಾಲೀ ಲೋಟಾಂಗಣ ಅನನ್ಯಭಾವೇ॥೬೦೧॥ ಹರಿರೂಪೇ ದೇಖೇ ಪಾಷಾಣ। ಭಗವದ್ರೂಪೇ ವಂದೀ ತೃಣ । ಜಂಗಮಸ್ಥಾವರಾದಿಕಾ ಶರಣ । ಘಾಲೀ ಲೋಟಾಂಗಣ ಚಿದೈಕ್ಯಭಾವೇ ॥೬೦೨॥ ಕರಿತಾ ಹರಿನಾಮಸ್ಮರಣಕೀರ್ತಿ। ಏಕಾಏಕೀ ಏವಢೀ ಪ್ರಾಪ್ತೀ। ಝಾಲೀ ಮ್ಹಣಸೀ ಕೈಶಾ ರೀತೀ। ಐಕೇ ನೃಪತೀ ತೋ ಭಾವೋ॥೬೦೩॥ ಕರಿತಾ ಪೂಜಾವಿಧಿವಿಧಾನ । ಕಾ ಶ್ರವಣ ಸ್ಮರಣ ಕೀರ್ತನ। ಸರ್ವದಾ ಚಿದೈಕ್ಯಭಾವನಾ ಪೂರ್ಣ। "ಪೂರ್ಣ ಪ್ರಾಪ್ತಿ" ಜಾಣ ತ್ಯಾಚೇಚಿ ವರೀ॥೬೦೪॥

ಭಕ್ತಿಃಪರೇಶಾನುಭವೋ ವಿರಕ್ತಿರನ್ಯತ್ರ ಚೈಷತ್ರಿಕ ಏಕಕಾಲಃ।
ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯುಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಮ್॥೪೨॥

ಅರ್ಥ:- ಭೋಜನ ಮಾಡುವವರಿಗೆ ಪ್ರತಿ ತುತ್ತಿಗೂ ತುಷ್ಟೀ, ಪುಷ್ಟೀ ಮತ್ತು ಕ್ಷುಧಾನಿವೃತ್ತೀ ಈ ಮೂರು ಒಂದೇ ಕಾಲಕ್ಕೆ ಪ್ರಾಪ್ತವಾಗುವುವು. ಅದರಂತೆ ಮನುಷ್ಯನು ಭಗವಂತನಿಗೆ ಶರಣಾಗಲು ಮತ್ತು ಭಜನೆಯನ್ನು ಮಾಡಲು ಆತನಿಗೆ ಭಜನೆಯ ಪ್ರತಿಕ್ಷಣಕ್ಕೂ ಭಗವಂತನ ಪ್ರೇಮ, ಭಗವಂತನ ಅನುಭವ ಮತ್ತು ಇತರ ವಸ್ತುಗಳಲ್ಲಿ ವೈರಾಗ್ಯ ಇವು ಮೂರು ಏಕಕಾಲಕ್ಕೆ ಪ್ರಾಪ್ತವಾಗುವುವು.

ಆಇಕೇ ವಿದೇಹಾ ಚಕ್ರವರ್ತಿ। ಐಶೀ ಜೇಥೇ ಭಗವದ್ಭಕ್ತೀ। ತೀಪಾಶೀ ವಿಷಯವಿರಕ್ತೀ। ಯೇ ಧಾಂವತೀ ಗೋವತ್ಸನ್ಯಾಯೇ ॥೬೦೫॥ ಹೇ ಅಸೋ ಜೇವೀ ಜಾವಳೀ ಫಳೇ । ಹೋ ನೇಣೇ ಯೇರಯೇರಾ ವೇಗಳೇ। ತೇವೀ ಭಕ್ತಿ ವಿರಕ್ತಿ ಏಕೇ ಕಾಳೇ । ಭಕ್ತ ತೇಣೇ ಬಳೇ ಬಳಿಷ್ಟ ಹೋತೀ ॥೬೦೬॥ ಜೇಥ ಭಕ್ತಿ ಆಣಿ ವಿರಕ್ತೀ । ನಾಂದೋ ಲಾಗತೀ ಸಹಜಸ್ಥಿತೀ । ತೇಥೇಚಿ ಪೂರ್ಣಪ್ರಾಪ್ತೀ । ದಾಸೀಚ್ಯಾ ಸ್ಥಿತೀ ಸರ್ವದಾ ರಾಬೇ ॥೬೦೭॥ ಯಾಪರೀ ಭಗವದ್ಭಕ್ತೀ । ಪೂರ್ಣ ದಾಟುಗೀ ತ್ರಿಜಗತೀ । ಭಕ್ತಾಘರೀ ನಾಂದೇ ಪ್ರಾಪ್ತೀ । ಭಕ್ತಿವಿರಕ್ತಿನಿಜ ಯೋಗೇ ॥೬೦೮॥ ಭಕ್ತಿವಿರಕ್ತಿ ಅನುಭವಪ್ರಾಪ್ತೀ । ತಿನ್ಹೀ ಏಕೇ ಕಾಳೇ ಹೋತೀ । ಐಕ ರಾಯಾ ತೇಹೀ ಸ್ಥಿತೀ । ವಿಶದೋಕ್ತೀ ಸಾಂಗೇನ ॥೬೦೯॥ ಜೈಸೀ ಕೀಜೇ ಭಗವದ್ಭಕ್ತೀ । ತೈಸೀಚ ಹೋಯ ವಿಷಯವಿರಕ್ತೀ । ತದನುಸಾರೇ ಅನುಭವಸ್ಥಿತೀ । ತೀ ಭಕ್ತ ಪಾವತೀ ತೇಚಿ ಕ್ಷಣೇ ॥೬೧೦॥ ಜೇವೀ ಕಾ ಭುಕೇಲಿಯಾಪಾಶೀ । ತಾಟ ವಾಢಿಲೇ ಷಡ್ರಸೀ । ತೋ ಪುಷ್ಟೀ ತುಷ್ಟೀ ಕ್ಷುಧಾನಾಶಾಸೀ । ಜೇವೀ ಗ್ರಾಸೋಗ್ರಾಸೀ ಸ್ವಯೇಚಿ ಪಾವೇ॥೬೧೧॥ ಜಿತುಕಾ ಜಿತುಕಾ ಘೇಈಜೇ ಗ್ರಾಸ । ತಿತುಕಾ ತಿತುಕಾ ಕ್ಷುಧೇಚಾ ನಾಶ । ತಿತುಕಾಚಿ ಪುಷ್ಟಿವಿನ್ಯಾಸ । ಸುಖೋಲ್ಲಾಸ

ಈ ಸ್ವರೂಪದಲ್ಲಿ ಈತನು ಇರುವೆಯನ್ನು ಕಂಡು ಅದು ಸಹ ಹರಿರೂಪವೇ ಎಂದು ಭಾವಿಸಿ ಅದಕ್ಕೆ ವಂದಿಸುವನು. ಇಷ್ಟೇ ಏಕೆ? ಸೊಣವನ್ನು ಸಹ ಅದು ಭಗವಂತನ ಸ್ವರೂಪವೆಂದು ಭಾವಿಸಿ ಅದಕ್ಕೆ ಅನನ್ಯ ಭಾವದಿಂದ ಶರಣಾಗಿ ಲೋಟಾಂಗಣವನ್ನು ಹಾಕುವನು ॥೬೦೦॥ ಆಕಳವಾಗಿರಲಿ, ಕತ್ತೆಯಾಗಿರಲಿ, ಚಾಂಡಾಳನಾಗಿರಲಿ ಅಥವಾ ನಾಯಿಯಾಗಿರಲಿ ಮತ್ತು ಜನರಲ್ಲಿ ಅತ್ಯಂತ ನಿಂದ್ಯರಾದ ಕನಿಷ್ಠದವರಾಗಿರಲಿ ಎಲ್ಲರನ್ನೂ ಪೂರ್ಣವಾಗಿ ಭಗದ್ರೂಪವೆಂದು ತಿಳಿದು ಅನನ್ಯ ಭಾವದಿಂದ ಲೋಟಾಂಗಣವನ್ನು ಹಾಕುವನು ॥೬೦೧॥ ಕಲ್ಲಿಗೂ ಸಹ ಹರಿರೂಪವೆಂದು ತಿಳಿಯುವನು, ಹುಲ್ಲಿಗೂ ಭಗವದ್ರೂಪವೆಂದು ವಂದಿಸುವನು. ಸ್ಥಾವರಜಂಗಮಾದಿ ಎಲ್ಲವನ್ನು ಚಿದೈಕ್ಯ ಭಾವದಿಂದ ಲೋಟಾಂಗಣವನ್ನು ಹಾಕುವನು ॥೬೦೨॥ ಹರಿನಾಮ ಸ್ಮರಣೆಯ ಮಹಿಮೆಯಿಂದ ಇಷ್ಟೊಂದು ಲಾಭವು ಹೇಗಾಗುವುದೆಂದು ಕೇಳಿದರೆ, ಹೇ ರಾಜನೇ, ಅದರಲ್ಲಿಯ ಮರ್ಮವನ್ನು ಹೇಳುವೆ, ಕೇಳು ॥೬೦೩॥ ವಿಧಿಪೂರ್ವಕವಾಗಿ ಪೂಜಾ ವಿಧಾನ ಅಥವಾ ಶ್ರವಣ, ಸ್ಮರಣ ಮತ್ತು ಕೀರ್ತನೆಯನ್ನು ಮಾಡುತ್ತಿರಲು ಆತನ ಸರ್ವಕಾಲವು ಪೂರ್ಣವಾಗಿ "ಚಿದೈಕ್ಯ ಭಾವನೆ" ಯಾಗಿ ಇರುವುದು. ಈತನಿಗೆ ಮಾತ್ರ "ಪೂರ್ಣಪ್ರಾಪ್ತಿ" ಸಾಧ್ಯವಾಗುವುದೆಂದು ನೀನು ತಿಳಿ ॥೬೦೪॥

ಹೇ ಚಕ್ರವರ್ತೀ ಜನಕರಾಜನೇ ಕೇಳು, ಹೀಗೆ ಎಲ್ಲಿ ಭಗವದ್ಭಕ್ತಿಯು ಇರುವುದೋ ಅಲ್ಲಿ ಗೋವತ್ಸನ್ಯಾಯದಂತೆ ವಿಷಯ ವಿರಕ್ತಿಯು ಧಾವಿಸಿ ಬರುವುದು ॥೬೦೫॥ ಇದು ಇರಲಿ, ಜೋಡು ಫಲಗಳು ಅಂಟಿಸಿಕೊಂಡು ಹುಟ್ಟಿದರೆ ಅವು ಒಂದಕ್ಕೊಂದು ಬಿಡುವುದಿಲ್ಲ. ಅದರಂತೆ ಭಕ್ತಿ ಮತ್ತು ವಿರಕ್ತಿ ಇವು ಒಮ್ಮೆಲೇ ಹುಟ್ಟುವುವು ಮತ್ತು ಇದರ ಸಾಮರ್ಥ್ಯದಿಂದಲೇ ಭಕ್ತನು ಸಮರ್ಥನಾಗುವನು॥೬೦೬॥ ಭಕ್ತಿ ಮತ್ತು ವಿರಕ್ತಿ ಇವೆರಡೂ ಸಹಜಸ್ಥಿತಿಯಲ್ಲಿ ಮುನ್ನಡೆಯಲು ಅಲ್ಲಿಯೇ ಪೂರ್ಣಪ್ರಾಪ್ತಿಯು ಸದಾ ಸರ್ವಕಾಲದಲ್ಲಿ ದಾಸಿಯಾಗಿ ಸೇವೆ ಮಾಡುವುದು॥೬೦೭॥ ಈ ಪ್ರಕಾರವಾಗಿ ಈ ಭಗವದ್ಭಕ್ತಿಯು ಮೂರು ಲೋಕಗಳಲ್ಲಿಯೇ ಅತಿಸಮರ್ಥವಾಗಿದೆ. ಭಕ್ತಿ ಮತ್ತು ವಿರಕ್ತಿಯು ಕೂಡಿರುವ ಭಕ್ತರ ಮನೆಯಲ್ಲಿ ಪ್ರಾಪ್ತಿಯು ಸಹ ಸೇವೆ ಮಾಡುವುದು ॥೬೦೮॥ ಭಕ್ತಿ, ವಿರಕ್ತಿ ಮತ್ತು ಅನುಭವ ಪ್ರಾಪ್ತಿ ಇವು ಮೂರು ಒಂದೇ ಸಮಯಕ್ಕೆ ಹೇಗೆ ಹುಟ್ಟುವುವು ಎಂಬುದನ್ನು ಸಹ ಈಗ ನಿನಗೆ ವಿಸ್ತಾರವಾಗಿ ತಿಳಿಸುವೆ ॥೬೦೯॥ ನಾವು ಹೇಗೆ ಹೇಗೆ ಭಕ್ತಿಯನ್ನು ಮಾಡುತ್ತೇವೆಯೋ ಅದರಂತೆ ವಿಷಯಗಳಲ್ಲಿ ವಿರಕ್ತಿ ಹುಟ್ಟುತ್ತಾ ಸಾಗುವುದು ಮತ್ತು ತದನುಸಾರವಾಗಿ ಅನುಭವ ಸ್ಥಿತಿಯು ಸಹ ಭಕ್ತನಿಗೆ ಅದೇ ಸಮಯಕ್ಕೆ ಪ್ರಾಪ್ತವಾಗುವುದು ॥೬೧೦॥ ಹಸಿದ ಮನುಷ್ಯನಿಗೆ ಷಡ್ರಸ ಅನ್ನದ ತಾಟನ್ನು ಬಡಿಸಲು ಆತನಿಗೆ ಪ್ರತಿಯೊಂದು ತುತ್ತಿಗೂ ಪುಷ್ಟೀ, ತುಷ್ಟೀ ಮತ್ತು ಕ್ಷುಧಾನಾಶವು ಸಹಜವಾಗಿ ಲಭಿಸುವುವು ॥೬೧೧॥

ತಿತುಕಾಚಿ ॥೬೧೨॥ ಪುಷ್ಟೀ, ತುಷ್ಟೀ ಕ್ಷುಧಾನಾಶನೀ । ಜೇವೀ ಏಕೇ ಕಾಳೇ ಯೇತೀ ತಿನೀ । ಭೋಕ್ತಾ ಪಾವೇ ಸ್ವಯೇ ಭೋಜನೀ । ತೇವೀ ಭಗದ್ಭಜನೀ ಭಕ್ತ್ಯಾದಿ ತ್ರಿಕು ॥೬೧೩॥ ಸದ್ಭಾವೇ ಕರಿತಾ ಭಗವದ್ಭಕ್ತೀ । ಭಕ್ತಿ - ವಿರಕ್ತಿ - ಭಗತ್ಪ್ರಾಪ್ತೀ । ತಿನೀ ಏಕೇ ಕಾಳೇ ಹೋತಿ । ಐಶಿಯಾ ಯುಕ್ತೀ ಜಾಣಿಜೇ ರಾಯಾ॥೬೧೪॥ "ಭಕ್ತಿ" ಮ್ಹಣಿಜೇ ಸರ್ವ ಭೂತೀ । ಸಪ್ರೇಮ ಭಜನಯುಕ್ತೀ । "ಪ್ರಾಪ್ತಿ" ಮಣಿಜೇ ಅಪರೋಕ್ಷ ಸ್ಥಿತೀ । ಭಗವತ್ಸ್ಫೂರ್ತೀ ಅನಿವಾರ ॥೬೧೫॥ "ವಿರಕ್ತಿ" ಮ್ಹಣಿಜೇ ಐಶೀ ಪಹಾ ಹೋ । ಸ್ತ್ರೀ ಪುತ್ರಾದೇಹಾದಿ ಅಹಂಭಾವೋ । ಸಮೂಳ ಜೇಥೇ ಹೋಯ ವಾವೋ । ವಿರಕ್ತಿ ನಿರ್ವಾಹೋ ಯಾ ನಾಂವ ರಾಯಾ॥೬೧೬॥ ಯಾಪರೀ ಭಜನಾಚೇ ಪೋಟೀ । ಭಕ್ತಿ - ವಿರಕ್ತಿ - ಪ್ರಾಪ್ತಿ ತ್ರಿಪುಟೀ । ಐಕ್ಯ ಭಾವೇ ಸದ್ಭಕ್ತಾ ಉಠೀ । ಹರಿಭಜನದಿಠೀ ಏಕೇಚಿ ಕಾಳೀ ॥೬೧೭॥ ಯಾಲಾಗೀ ರಾಯಾ ನಿಜಹಿತಾರ್ಥೀ । ಆದರೇ ಕರಾವೀ ಹರಿಭಕ್ತೀ । ತೇಣೇ ಅವಶ್ಯ ಭಗವತ್ಪ್ರಾಪ್ತೀ । ಉಪಸಂಹಾರಾರ್ಥೀ ಕವಿ ಸಾಂಗೇ॥೬೧೮॥

ಇತ್ಯಚ್ಯುತಾಂಘ್ರಿಂ ಭಜತೋಽನುವೃತ್ತ್ಯಾ ಭಕ್ತಿರ್ವಿರಕ್ತಿರ್ಭಗವತ್ಪ್ರಬೋಧಃ।
ಭವಂತಿ ವೈ ಭಾಗವತಸ್ಯ ರಾಜಂಸ್ತತಃ ಪರಾಂ ಶಾಂತಿಮುಪೈತಿ ಸಾಕ್ಷಾತ್ ॥೪೩॥

ಅರ್ಥ: ಪ್ರಿಯ ಮಹಾರಾಜಾ, ಅಚ್ಯುತನ ಚರಣಕಮಲಗಳನ್ನು ನಿರಂತರ ಪರಿಶ್ರಮದಿಂದ ಪೂಜಿಸುವ ಭಕ್ತನು ಅಚಲವಾದ ಭಕ್ತಿ, ವಿರಕ್ತಿ ಮತ್ತು ಭಗವದರಿವಿನ ಅನುಭವವನ್ನು ಸಾಧಿಸುತ್ತಾನೆ ಈ ರೀತಿಯಾಗಿ ಭಗವದ್ಭಕ್ತನು ಪರಮೋನ್ನತ ಆಧ್ಯಾತ್ಮಿಕ ಶಾಂತಿಯನ್ನು ಪಡೆಯುತ್ತಾನೆ.

ಯಾಪರೀ ಅನನ್ಯ ಭಕ್ತೀ । ಜೇ ಸರ್ವದಾ ಸರ್ವಭೂತೀ ಕರಿತೀ । ತೇ ಭಕ್ತೀ- ವಿರಕ್ತೀ- ಭಗವತ್ಪ್ರಾಪ್ತೀ । ಸಹಜೇ ಪಾವತೀ ಅನಾಯಾಸೇ॥೬೧೯॥ ರಾಯಾ ಹರಿಭಕ್ತಿ ದಿವ್ಯಾಂಜನ । ತೇ ಲೇಊನಿ ಭಕ್ತ ಸಜ್ಜನ । ಸಾಧಿತೀ ಭಗವನ್ನಿಧಾನ । ನಿಜಭಜನಮಹಾಯೋಗೇ ॥೬೨೦॥ ಕರಿತಾ ಐಕ್ಯಭಾವೇ ನಿಜಭಕ್ತೀ । ಉತ್ಕೃಷ್ಟ ಉಪಜೇ ಪೂರ್ಣ ಶಾಂತೀ । ತೇಣೇ ಹೋಯೇ ಅಸತಾಂಚೀ ನಿವೃತ್ತೀ । ಭಕ್ತಾ ''ಪೂರ್ಣಪ್ರಾಪ್ತಿ'' ಪರಮಾನಂದೇ ॥೬೨೧॥ ಯಾಲಾಗೀ ಧನ್ಯ ಭಗವದ್ಭಕ್ತ । ಇಂದ್ರಿಯೀ ವರ್ತತಾ ವಿಷಯೀ ವಿರಕ್ತ । ದೇಹೀ ಅಸೋನಿ ದೇಹಾತೀತ । ನಿತ್ಯ ಮುಕ್ತ ಹರಿಭಜನೇ ॥೬೨೨॥ ಭಾವೇ ಕರಿತಾ ಭಗವದ್ಭಕ್ತೀ । ಭಕ್ತ ಮುಕ್ತೀಹೀ ನ ವಾಂಛಿತೀ । ತರೀ ತ್ಯಾಪಾಶೀ ಚಾರೀ ಮುಕ್ತೀ । ದಾಸ್ಯ ಕರಿತೀ ಸರ್ವದಾ ॥೬೨೩॥
ಹಾ ಭಗವಂತಾಚಾ ನಿಜಮಹಿಮಾ । ಅನುಪಮ ನಾಹೀ ಉಪಮಾ । ಭಾವೇ ಭಜೋನಿ ಪುರುಷೋತ್ತಮಾ ।

ಎಷ್ಟೆಷ್ಟು ತುತ್ತುಗಳನ್ನು ಸ್ವೀಕರಿಸುವನೋ, ಅಷ್ಟಷ್ಟೇ ಕ್ಷುಧೆಯ ನಾಶವಾಗುವುದು ಮತ್ತು ಹೊಟ್ಟೆಯು ತುಂಬುತ್ತ ಬಂದಂತೆ ಸುಖ ಮತ್ತು ಸಮಾಧಾನವು ಬೆಳೆಯುತ್ತಾ ನಡೆಯುವುದು ॥೬೧೨॥ ಹೀಗೆ ಪುಷ್ಟೀ, ತುಷ್ಟೀ ಮತ್ತು ಕ್ಷುಧಾನಾಶ ಇವು ಊಟ ಮಾಡುವವನಿಗೆ ಒಂದೇ ಸಮಯಕ್ಕೆ ಒದಗುವಂತೆ ಭಗವದ್ಭಜನೆಯಲ್ಲಿ ಭಕ್ತಿಯ ತ್ರಿಕುಟಿಯು ಅಂದರೆ ಭಕ್ತಿ, ವಿರಕ್ತಿ ಅನುಭವ ಪ್ರಾಪ್ತಿ ಇವು ಮೂರು ಏಕಕಾಲಕ್ಕೆ ಉತ್ಪನ್ನವಾಗುವುವು ॥೬೧೩॥ ಹೇ ರಾಜನೇ ಸದ್ಭಾವನೆಯಿಂದ ಭಕ್ತಿಯನ್ನು ಮಾಡಲು ಭಕ್ತಿ, ವಿರಕ್ತಿ ಮತ್ತು ಭಗವತ್ಪ್ರಾಪ್ತಿ ಇವು ಮೂರು ಮೇಲಿನ ನ್ಯಾಯದಂತೆ ಏಕಕಾಲಕ್ಕೆ ದೊರಕುವುವು ಹೀಗೆ ನೀನು ತಿಳಿ ॥೬೧೪॥ "ಭಕ್ತಿ" ಎಂದರೆ ಸರ್ವಪ್ರಾಣಿಗಳಲ್ಲಿ ಸಪ್ರೇಮ ಭಾವನೆ ಇಡುವುದು ಮತ್ತು "ಪ್ರಾಪ್ತಿ" ಎಂದರೆ ಅಪರೋಕ್ಷ ಸಾಕ್ಷಾತ್ಕಾರವು ಅರ್ಥಾತ್ ಭಗವದ್ರೂಪದ ಅನಿವಾರ ಸ್ಫೂರ್ತಿಯಾಗಿರುವುದು॥೬೧೫॥ ಈಗ ವಿರಕ್ತಿ ಎಂದರೆ ಹೀಗಿದೆ. ನನ್ನ ಭಾರ್ಯೆ, ನನ್ನ ಪುತ್ರ, ನನ್ನ ಶರೀರ ಇತ್ಯಾದಿ ಮಮಕಾರ ಅಹಂಕಾರಗಳೆಲ್ಲವೂ ಮಿಥ್ಯೆಯಾದರೆ ಮಾತ್ರ ಅದಕ್ಕೆ ವಿರಕ್ತಿ ಎಂದು ಹೇಳಬೇಕು. ರಾಜನೇ, ಇದನ್ನು ನೀನು ತಿಳಿ ॥೬೧೬॥ ಈ ಪ್ರಕಾರವಾಗಿ ಭಜನೆಯ ಉದರದಲ್ಲಿ ಭಕ್ತಿ, ವಿರಕ್ತಿ ಮತ್ತು ಭಗವತ್ಪ್ರಾಪ್ತಿ ಈ ತ್ರಿಪುಟಿಯು ಐಕ್ಯಭಾವದಿಂದ ಸದ್ಭಕ್ತನಲ್ಲಿ ಭಜನೆ ದೃಷ್ಟಿಯಿಂದ ಏಕಕಾಲಕ್ಕೆ ಉತ್ಪನ್ನವಾಗುವುವು ॥೬೧೭॥ ಅದಕ್ಕಾಗಿ ರಾಜನೇ, ಸ್ವಹಿತಕ್ಕಾಗಿ ಅವಶ್ಯವಾಗಿ ಹರಿಭಕ್ತಿಯನ್ನು ಮಾಡಬೇಕು. ಯಾವುದರಿಂದ ತಾನಾಗಿಯೇ ಭಗವತ್ಪ್ರಾಪ್ತಿಯಾಗುವುದೋ ಅಂತಹ ಉಪಸಂಹಾರಕ್ಕಾಗಿ ಕವಿಯು ಮುಂದೆ ಹೇಳುವನು ॥೬೧೮॥

ಈ ಪ್ರಕಾರವಾಗಿ ಯಾರು ಸದಾ ಸರ್ವಕಾಲದಲ್ಲಿ ಸರ್ವಭೂತ ಮಾತ್ರರಲ್ಲಿ ಅನನ್ಯ ಭಕ್ತಿಯನ್ನು ಮಾಡುವರೋ ಅದರಿಂದ ಭಕ್ತಿ, ವಿರಕ್ತಿ ಮತ್ತು ಭಗವತ್ಪ್ರಾಪ್ತಿಯನ್ನು ಅನಾಯಾಸವಾಗಿ ದೊರಕಿಸಿಕೊಳ್ಳುವರು ॥೬೧೯॥ ಹೇ ರಾಜನೇ, ಹರಿಭಕ್ತಿಯು ಒಂದು ಉತ್ತಮ ಪ್ರಕಾರದ ಅಂಜನವಾಗಿದೆ. ಈ ಅಂಜನವನ್ನು ಸದ್ಭಕ್ತನು ತನ್ನ ನೇತ್ರದಲ್ಲಿ ಹಾಕಿಕೊಂಡು ತನ್ನ ಭಜನರೂಪ ಮಹಾಯೋಗದಿಂದ ಭಗವತ್ಸ್ವರೂಪದಿಂದ ನಿಧಿಯನ್ನು ತನ್ನದಾಗಿ ಮಾಡಿಕೊಳ್ಳುವನು ॥೬೨೦॥ ಐಕ್ಯ ಭಾವದಿಂದ ನಿಜಭಕ್ತಿಯನ್ನು ಮಾಡಿದರೆ, ಸರ್ವೋತ್ಕೃಷ್ಟ ಪೂರ್ಣ ಶಾಂತಿಯು ಪ್ರಾಪ್ತವಾಗುವುದು ಮತ್ತು ಇದರಿಂದ ಅಸತ್ ವಸ್ತುವಿನ ನಿವೃತ್ತಿಯಾಗಿ ಭಕ್ತರಿಗೆ ಬ್ರಹ್ಮಾನಂದರೂಪ ಭಗವಂತನ ಪೂರ್ಣ ಪ್ರಾಪ್ತಿಯಾಗುವುದು ॥೬೨೧॥ ಆದ್ದರಿಂದ ಭಗವದ್ಭಕ್ತರು ಧನ್ಯರು. ಇವರು ಸರ್ವೇಂದ್ರಿಯಗಳಿಂದ ವ್ಯವಹರಿಸುತ್ತಿದ್ದರೂ ವಿಷಯಗಳ ವಿಷಯದಲ್ಲಿ ವಿರಕ್ತರಾಗಿರುವರು. ಇವರು ದೇಹಧಾರಿಯಾಗಿದ್ದರೂ ವಿದೇಹಿಯಾಗಿರುವರು ಮತ್ತು ಹರಿಭಜನೆಯಿಂದ ನಿತ್ಯಮುಕ್ತರಾಗಿರುವರು ॥೬೨೨॥ ಭಕ್ತರು ಏಕನಿಷ್ಠೆಯಿಂದ ಭಗವದ್ಭಕ್ತಿಯನ್ನು ಮಾಡುವರು. ಈ ಪ್ರೇಮವು ಎಷ್ಟೊಂದು ಅಲೌಕಿಕವಾಗಿದೆ ಎಂದರೆ, ಇದರಿಂದ ಇವರು ಮುಕ್ತಿಯನ್ನು ಸಹ ಇಚ್ಛೆಪಡುವುದಿಲ್ಲ. ಆದರೂ ಅವರಲ್ಲಿ ನಾಲ್ಕೂ ಮುಕ್ತಿಗಳು ಸೇವೆ ಮಾಡುತ್ತಿರುವುವು॥೬೨೩॥

ಪರಮಾತ್ಮ ಗರಿಮಾ ಪಾವಲೇ ॥೭೪॥ ಅಗಾಧ ಭಗವಂತಾಚೀ ಭಕ್ತೀ । ಭಕ್ತಾಂಚೀ ಉತ್ಕೃಷ್ಟ ಪ್ರಾಪ್ತಿ । ಐಕತಾ ವಿದೇಹಚಕ್ರವರ್ತೀ । ಆಶ್ಚರ್ಯೇ ಚಿತ್ತೀ ಚಮತ್ಕಾರಲಾ ॥೭೫॥ ಮ್ಹಣೇ ಧನ್ಯ ಧನ್ಯ ಭಗವದ್ಭಜನ । ಹರಿಖೇ ಕವೀಸ ಲೋಟಾಂಗಣ । ಘಾಲಿತಾ ಚಾಲಿಲೇ ಸ್ಫುಂದನ । ರೋಮಾಂಚಿತ ನಯನ ಅಶ್ರುಪೂರ್ಣ ಜಾಹಲೇ ॥೭೬॥ ಆನಂದಸ್ವೇದೇ ಕಾಂಪತ। ನಾವೇಕ ರಾಹಿಲಾ ತಟಸ್ಥ । ಸವೇಂಚಿ ಜಾಹಲಾ ಸಾವಚಿತ್ತ । ಮ್ಹಣೇ ಋಷಿಣೇ ಮಹಂತ ನ ಪುಸತಾ ಜಾತೀ ॥೭೭॥ ಐಶಿಯಾ ಅತಿಕಾಕುಲತೀ । ನೇತ್ರ ಉಘಡೋನಿ ಪಾಹೇ ನೃಪತೀ । ಬೈಸಲೀ ದೇಖೋನಿ ಮುನಿಪಂಕ್ತೀ । ಅತಿಶಯೇ ಚಿತ್ತೀ ಸುಖಾವಲಾ ॥೭೮॥ ತೇಣೇ ಸಂತೋಷೇ ಡೋಲತ । ಮ್ಹಣೇ "ಪೂರ್ಣಪ್ರಾಪ್ತ" ಭಗವದ್ಭಕ್ತ । ಜಗೀ ಕೈಸೇ ಕೈಸೇ ವಿಚರತ । ತೀ ಚಿನ್ಹೇ ಸಮಸ್ತ ಪುಸೋ ಪಾಹೋ ॥೭೯॥

ರಾಜೋವಾಚ:-

ಅಥ ಭಾಗವತಂ ಬ್ರೂತ ಯದ್ಧರ್ಮೋ ಯಾದೃಶೋ ನೃಣಾಮ್ ।
ಯಥಾ ಚರತಿ ಯದ್ ಬ್ರೂತೇ ಯೈರ್ಲಿಂಗೈರ್ಭಗವತ್ಪ್ರಿಯಃ ॥೪೪॥

ಅರ್ಥ: ನಿಮಿರಾಜನು ವಿಚಾರಿಸಿದನು, ಹೇ ಯೋಗೀಶ್ವರರೇ, ಈಗ ಕೃಪೆಮಾಡಿ ಭಗವದ್ಭಕ್ತರ ಲಕ್ಷಣಗಳನ್ನು ವರ್ಣಿಸಿ ಹೇಳಿರಿ, ಅವರ ಧರ್ಮ ಯಾವುದು? ಅವರ ಸ್ವಭಾವವು ಹೇಗಿರುವುದು? ಇವರ ಲೋಕದ ಜನರಲ್ಲಿ ವ್ಯವಹರಿಸುತ್ತಿರಲು ಹೇಗೆ ಆಚರಿಸುವರು? ಏನು ಹೇಳುವರು? ಯಾವ ಲಕ್ಷಣಗಳಿಂದ ಭಗವಂತನಿಗೆ ಪ್ರಿಯರಾಗುವರು?

ಭಕ್ತಾ ಪೂರ್ಣಪ್ರಾಪ್ತಿ ಸುಗಮ । ಐಕತಾ ರಾಜಾ ನಿವಾಲಾ ಪರಮ । ತೋ ಭಕ್ತಚಿನ್ಹಾನುಕ್ರಮ । ಸಮೂಳ ಸವರ್ಮ ಪೂಸತ ॥೮೦॥ ವಿದೇಹ ಮ್ಹಣೇ ಸ್ವಾಮೀ ಮುನೀ । ಪೂರ್ಣ ಪ್ರಾಪ್ತಿ ಆಕಳೋನಿ । ತೇ ಭಕ್ತ ಕೈಸೇ ವರ್ತತೀ ಜನೀ । ತೀ ಲಕ್ಷಣೇ ಶ್ರವಣೀ ಲೇವವಾ ಮಜ ॥೮೧॥ ಭಕ್ತಲಕ್ಷಣಭೂಷಣ । ತೇಣೇ ಮಂಡಿತ ಕರಾ ಶ್ರವಣ । ಸಾವಧ ಐಕತಾ ಸಂಪೂರ್ಣ । ಹೋಇಜೇ ಆಪಣ ಭಗವತ್ಪ್ರಿಯ ॥೮೨॥ ತ್ಯಾಂಚಾ ಕೋಣ ಧರ್ಮ ಕೋಣ ಕರ್ಮ । ಕೈಸೇ ವರ್ತತೀ ಭಕ್ತೋತ್ತಮ । ಹೃದಯೀಧರೋನಿ ಪುರುಷೋತ್ತಮ । ತ್ಯಾಂಚೇ ಬೋಲತೇ ವರ್ಮ ತೇ ಕೈಸೇ ॥೮೩॥ ಕೋಣೇಪರೀ ಕೈಶಾ ಸ್ಥಿತೀ । ಹರಿಭಕ್ತ ಹರೀಸ ಪ್ರಿಯ ಹೋತೀ । ಐಶಿಯಾ ಲಕ್ಷಣಾಂಚಿಯಾ ಪಂಕ್ತೀ। ಸಮೂಳ ಮಜಪ್ರತೀಸಾಂಗಿಜೇ ಸ್ವಾಮೀ॥೮೪॥ ವಿದೇಹಾಚ್ಯಾಪ್ರಶ್ನಾವರೀ । ಸಂತೋಷಿಜೇ ಮುನೀಶ್ವರೀ । ಕವಿಧಾಕುಟಾ ಜೋ ಕಾ ಹರೀ । ತೋ ಬೋಲಾವಯಾ ವೈಖರೀ ಸರಸಾವಲಾ ॥೮೫॥

ಹರಿರುವಾಚ:-

ಈ ಭಗವದ್ಭಕ್ತರ ಮಹಿಮೆಯು ಅನುಪಮ್ಯವಾಗಿದೆ. ಇದಕ್ಕೆ ಯಾವ ಉಪಮೆಯನ್ನು ಕೊಡುವುದು ಆಗುವುದಿಲ್ಲ. ಇವರು ಅತ್ಯಂತ ಪ್ರೇಮದಿಂದ ಪುರುಷೋತ್ತಮನ ಭಜನೆಯನ್ನು ಮಾಡಿ ಅವರು ಶ್ರೇಷ್ಠವಾದ ಪರಮಪದಕ್ಕೆ ಮುಟ್ಟುವರು ॥೭೪॥ ಈ ಪ್ರಕಾರದ ಭಗವಂತನ ಶ್ರೇಷ್ಠ ಭಕ್ತಿಯನ್ನು ಮತ್ತು ಭಕ್ತರಿಗಾಗುವ ಭಗವಂತನ ಪ್ರಾಪ್ತಿಯನ್ನು ಕೇಳಿ ಜನಕ ಚಕ್ರವರ್ತಿಯು ಬಹಳ ಆಶ್ಚರ್ಯಚಕಿತನಾದನು. ॥೭೫॥ ಧನ್ಯ, ಧನ್ಯ ಭಗವದ್ಭಕ್ತರು ಎಂದು ಆನಂದದಿಂದ ಋಷಿಗಳವರಿಗೆ ಲೋಟಾಂಗಣವನ್ನು ಹಾಕಲಾರಂಭಿಸಿದನು. ಕಂಠವು ಬಿಗಿಯಿತು, ಬಿಕ್ಕುವುದು ಆವರಿಸದಾಯಿತು, ಸರ್ವಾಂಗಕ್ಕೂ ರೋಮಾಂಚನವಾಯಿತು. ನೇತ್ರಗಳು ಅಶ್ರುಗಳಿಂದ ತುಂಬಿಕೊಂಡವು ॥೭೬॥ ಈತನ ಶರೀರಕ್ಕೆ ಬೆವರು ಹುಟ್ಟಿತು ಮತ್ತು ಆನಂದದಿಂದ ಶರೀರವು ಕಂಪಿಸಹತ್ತಿತು. ಆದರೂ ಕೂಡಲೇ ದೇಹಭಾನಕ್ಕೆ ಬಂದನು. ಕಾರಣ ಪ್ರಶ್ನಿಸುವುದು ಬಿಟ್ಟರೆ ಋಷಿಗಳು ಹೊರಟು ಹೋದಾರು ಎಂದು ಆತನಿಗೆ ಅನಿಸಿತು ॥೭೭॥ ಹೀಗೆ ಅತ್ಯಂತ ಕಳಕಳಿಯಿಂದ ರಾಜನು ಕಣ್ಣುಗಳನ್ನು ತೆರೆದು ನೋಡಿದಾಗ್ಗೆ ಋಷಿಮಂಡಳಿಯವರು ಕುಳಿತಿದ್ದರು. ಇವರನ್ನು ಕಂಡು ಮನಸ್ಸಿಗೆ ಅತ್ಯಂತ ಆನಂದವಾಯಿತು ॥೭೮॥ ಆ ಆನಂದದ ಭರದಲ್ಲಿ ಹೀಗೆ ವಿಚಾರಿಸಿದನು. ಯಾರಿಗೆ ಪೂರ್ಣಪ್ರಾಪ್ತಿಯಾಗಿದೆಯೋ, ಅಂತಹ ಭಗವದ್ಭಕ್ತರು ಜಗತ್ತಿನಲ್ಲಿ ಯಾವ ಪ್ರಕಾರವಾಗಿ ನಡೆದುಕೊಳ್ಳುವರು ಎಂಬ ಸಂಪೂರ್ಣ ಲಕ್ಷಣಗಳನ್ನು ಕೇಳಬೇಕೆಂದನು ॥೭೯॥

ಭಕ್ತನಿಗೆ ಪೂರ್ಣಪ್ರಾಪ್ತಿಯಾಗುವುದು ಸುಗಮವಾಗಿರುವುದನ್ನು ಕೇಳಿ ರಾಜನಿಗೆಗ ಅತಿಶಯವಾಗಿ ಸಂತೋಷವಾಯಿತು. ಆದ್ದರಿಂದ ಆತನು ಭಕ್ತರ ಲಕ್ಷಣಗಳ ಅನುಕ್ರಮ ಮತ್ತು ಸಮೂಲವಾದ ಮರ್ಮವನ್ನು ಕೇಳಲು ಸಿದ್ಧನಾದನು ॥೮೦॥ ಜನಕರಾಜನು ಕೇಳಿದನು, ಹೇ ಮುನಿಸ್ವಾಮಿಯವರೇ, ಪೂರ್ಣಪ್ರಾಪ್ತಿಯನ್ನು ಮಾಡಿಕೊಂಡ ಭಗದ್ಭಕ್ತರು ಜಗತ್ತಿನಲ್ಲಿ ಹೇಗೆ ವರ್ತಿಸುವರು? ಅವರ ಸಂಪೂರ್ಣ ಲಕ್ಷಣಗಳನ್ನು ನನ್ನ ಕಿವಿಗಳಿಗೆ ಹಾಕಿ ಅವುಗಳನ್ನು ನ ಅಲಂಕರಿಸಿರಿ ॥೮೧॥ ಭಕ್ತರ ಲಕ್ಷಣಗಳು ಇವು ಒಂದು ಪ್ರಕಾರದ ಅಲಂಕಾರಗಳಾಗಿವೆ. ಅವುಗಳನ್ನು ತೊಡಿಸಿ ನನ್ನ ಕಿವಿಗಳನ್ನು ಭೂಷಣಯುಕ್ತವನ್ನಾಗಿ ಮಾಡಿರಿ. ಈ ಎಲ್ಲ ಲಕ್ಷಣಗಳನ್ನು ಲಕ್ಷಕೊಟ್ಟು ಶ್ರವಣ ಮಾಡಿ ನಾವುಸಹ ಭಗವಂತನಿಗೆ ಪ್ರಿಯರಾಗುವೆವು ॥೮೨॥ ಅವರ ಧರ್ಮ ಯಾವುದು? ಅವರ ಕರ್ಮಗಳು ಹೇಗಿರುವುವು? ಅಂತಃಕರಣದಲ್ಲಿ ಪುರುಷೋತ್ತಮನನ್ನು ಧರಿಸಿ, ಅವರು ಹೇಗೆ ವರ್ತಿಸುವರು? ಅವರ ಮಾತನಾಡುವ ಶೈಲಿಯು ಹೇಗಿರುವುದು? ॥೮೩॥ ಯಾವ ಸ್ಥಿತಿಯಿಂದ ಮತ್ತು ಯಾವ ರೀತಿಯಿಂದ ಹರಿಭಕ್ತರು ಹರಿಗೆ ಪ್ರಿಯರಾಗುವರು? ಹೇ ಸ್ವಾಮಿಯೇ, ಇಂತಹ ಲಕ್ಷಣಗಳ ಎಲ್ಲ ಮಾಲಿಕೆಗಳನ್ನು ನನಗೆ ತಿಳಿಸಿ ಹೇಳಿರಿ॥೮೪॥ ಈ ಜನಕರಾಜನ ಪ್ರಶ್ನೆಯನ್ನು ಕೇಳಿ ಆ ಎಲ್ಲ ಮುನೀಶ್ವರರಿಗೆ ಬಹಳ ಸಂತೋಷವಾಯಿತು. ಮತ್ತು ಕವಿಯ ತಮ್ಮನಾದ ಹರಿ ಎಂಬುವಾತನು ಈ ಪ್ರಶ್ನೆಗೆ ಉತ್ತರಿಸಲು ಮುಂದಾದನು ॥೮೫॥

ಸರ್ವಭೂತೇಷು ಯಃ ಪಶ್ಯೇದ್ ಭಗವದ್ಭಾವಮಾತ್ಮನಃ । ಭೂತಾನಿ ಭಗವತ್ಯಾತ್ಮನ್ಯೇಷ ಭಾಗವತೋತ್ತಮಃ ॥೪೫॥

ಅರ್ಥ:- ಹರಿ ಹೇಳಿದನು: ಹೇ ರಾಜಾ, ಆತ್ಮಸ್ವರೂಪ ಭಗವಾನನು ಸರ್ವಪ್ರಾಣಿಗಳಲ್ಲಿ ಆತ್ಮರೂಪದಿಂದ, ನಿಯಂತಾರೂಪದಿಂದ ಸ್ಥಿತನಾಗಿದ್ದಾನೆ.ಯಾರು ಸರ್ವತ್ರವೂ ಪರಿಪೂರ್ಣವಾಗಿ ಭಗವಂತನ ಸತ್ತೆಯನ್ನು ಕಾಣುವರೋ ಮತ್ತು ಸಮಸ್ತ ಪ್ರಾಣಿ, ಪದಾರ್ಥಗಳಲ್ಲಿ ಆತ್ಮಸ್ವರೂಪ ಭಗವಂತನನ್ನು ಕಾಣುವರೋ,ಹೀಗೆ ಯಾರ ಅನುಭವವಾಗಿದೆಯೋ, ಅವರ ದೃಷ್ಟಿಯು ಸಿದ್ಧವಾಗಿದೆ. ಭಗವಂತನ ಪರಮ ಪ್ರಿಯರೆಂದು ತಿಳಿಯಬೇಕು.

ಹರಿ ಮ್ಹಣೇ ರಾಯಾಪ್ರತೀ । ಅಮಿತ ಭಕ್ತಲಕ್ಷಣ ಸ್ಥಿತೀ । ಏಕ ದಿಗಂಬರತ್ವೇ ವರ್ತತೀ । ಏಕ ಸ್ವಾಶ್ರಮ ಸ್ಥಿತೀ ನಿಜಾಚಾರೇ ॥೬೩೬॥ ಏಕ ಸದಾ ಪಡಲೇ ಅಸತೀ । ಏಕಾಂಚೀ ತೇ ಉನ್ಮಾದಸ್ಥಿತೀ । ಏಕ ಸದಾ ಗಾತೀ ನಾಚತೀ । ಏಕ ತೇ ಹೋತೀ ಅಬೋಲಣೇ ॥೬೩೭॥ ಏಕ ಗರ್ಜತೀ ಹರಿನಾಮೇ । ಏಕ ನಿರ್ದಾಳಿತೀ ನಿಜಕರ್ಮೇ । ಏಕ ಭೂತದಯಾಳೂ ದಾನಧರ್ಮೇ । ಏಕ ಭಜನನೇಮೇ ರಾಹತೀ ॥೬೩೮॥ ಐಶಾ ಅನಂತ ಭಕ್ತಸ್ಥಿತೀ । ಸಾಂಗತಾ ಸಾಂಗಾವಯಾ ನಾಕಳೇ ವೃತ್ತೀ । ತ್ಯಾಮಾಜೀ ಮುಖ್ಯ ಸಂಕಲಿತೀ । ರಾಯಾ ತುಜಪ್ರತೀ ಸಾಂಗೇನ ॥೬೩೯॥ ಪೂರ್ಣಪ್ರಾಪ್ತೀಚಾ ಮುಖ್ಯ ಠಾವೋ । ಸರ್ವಾ ಭೂತೀ ಭಗವದ್ಭಾವೋ । ಹಾಚಿ ಪೂರ್ಣಭಕ್ತೀಚಾ ನಿಜಗೌರವೋ । ತೋಚಿ ಅಭಿಪ್ರಾವೋ ಹರಿ ಸಾಂಗೇ ॥೬೪೦॥ ಸರ್ವ ಭೂತೀ ಮೀ ಭಗವಂತ । ಸರ್ವ ಭೂತೇ ಮಜಆಂತ । ಭೂತೀ ಭೂತಾತ್ಮಾ ಮೀಚಿ ಸಮಸ್ತ । ಮೀಚಿ ಮೀ ಯೇಥ ಪರಮಾತ್ಮಾ ॥೬೪೧॥ ಐಸೇ ಜೇ ಪೂರ್ಣತ್ವಾಚೇ ಮೀಪಣ । ತೇಣೇ ವಾಢೇ ಆತ್ಮಾಭಿಮಾನ । ಸಹಜೇ ನಿಜನಿರಭಿಮಾನ । ತೇ ಶುದ್ಧ ಲಕ್ಷಣ ಐಕ ರಾಯಾ ॥೬೪೨॥ ಶುದ್ಧ ಭಕ್ತಾಂಚೇ ನಿಜಲಕ್ಷಣ । ಪ್ರತ್ಯಗಾತ್ಮಯಾಜೇ ಜೇ ಮೀಪಣ । ತೇಹೀ ಮಾನೂನಿಯಾ ಗೌಣ । ಭಾವನಾ ಪೂರ್ಣ ತ್ಯಾಂಚೀ ಐಸೀ ॥೬೪೩॥ ಸರ್ವಾ ಭೂತೀ ಭಗವಂತ । ಭೂತೇ ಭಗವಂತೀ ವರ್ತತ । ಭೂತೀ ಭೂತಾತ್ಮಾ ತೋಚಿ ಸಮಸ್ತ । ಮೀ ಮ್ಹಣಣೇ ತೇಥ ಮೀಪಣಾ ನ ಯೇ ॥೬೪೪॥ ಸರ್ವ ಭೂತೀ ಭಗವಂತ ಪಾಹೀ । ಭೂತೇ ಭಗವಂತಾಚೇ ಠಾಯೀ । ಹೇ ಅವಘೇ ದೇಖೇ ಜೋ ಸ್ವದೇಹೀ । ಸ್ವರೂಪ ಪಾಹೀ ಸ್ವಯೇ ಹೋಯ ॥೬೪೫॥ ತೋ ಭಕ್ತಾಮಾಜೀ ಅತಿಶ್ರೇಷ್ಠ । ತೋ ಭಾಗವತಾಮಾಜೀ ವರಿಷ್ಠ । ತ್ಯಾಸಿ ಉತ್ತಮತ್ವಾಚಾ ಪಟ । ಅವತಾರ ಶ್ರೇಷ್ಠ ಮಾನಿತೀ ॥೬೪೬॥ ತೋ ಯೋಗಿಯಾಮಾಜೀ ಅಗ್ರಗಣೀ । ತೋ ಜ್ಞಾನಿಯಾಂಚಾ ಶಿರೋಮಣೀ । ತೋ ಸಿದ್ಧಾಮಾಜೀ ಮುಗುಟಮಣೀ । ಹೇ ಚಕ್ರಪಾಣೀ ಬೋಲಿಲಾ ॥೬೪೭॥ ಜೈಸಾ ಘೃತಾಚಿಯಾ ಕಣಿಕಾ । ಘೃತೇಸೀ ನವ್ಹತೀ ಆಣಿಕಾ । ತೇವೀ ಭೂತೇ ಭೌತಿಕೇ ವ್ಯಾಪಕಾ । ಭಿನ್ನ ದೇಖಾ

ಹರಿ ಹೇಳಿದನು:- ಹೇ ರಾಜನೇ, ಭಕ್ತಲಕ್ಷಣಗಳ ಪ್ರಕಾರವು ಅನೇಕವಿರುವುವು. ಕೆಲವರು ದಿಗಂಬರರಾಗಿರುವರು, ಕೆಲವರು ತಮ್ಮ ಆಶ್ರಮಧರ್ಮವನ್ನು ಪಾಲಿಸುತ್ತ ತಮ್ಮದೇ ಆದ ಆಚಾರಗಳಿಂದ ವರ್ತಿಸುವರು ॥೬೩೬॥ ಇನ್ನು ಕೆಲವರು ಸದಾ ಸರ್ವಕಾಲದಲ್ಲಿ ಸ್ವಸ್ಥವಾಗಿ ಮಲಗಿಕೊಂಡೆ ಇರುವರು. ಕೆಲವರು ಉನ್ಮತ್ತರಂತೆ ವರ್ತಿಸುವರು ಮತ್ತು ಕೆಲವರು ಯಾವಾಗಲೂ ಹರಿಗುಣಗಾನ ಮಾಡುತ್ತಾ ನರ್ತಿಸುವರು. ಆದರೆ ಕೆಲವರು ಮೌನರಾಗಿರುವರು ॥೬೩೭॥ ಕೆಲವರು ಹರಿನಾಮದ ಘೋಷವನ್ನು ಮಾಡುತ್ತಿರುವರು. ಕೆಲವರು ಎಲ್ಲ ಕರ್ಮಗಳನ್ನು ತ್ಯಜಿಸುವರು.ಕೆಲವರು ಪ್ರಾಣಿ ಮಾತ್ರರಲ್ಲಿ ದಯಾವಂತರಾಗಿ ದಾನಧರ್ಮಗಳನ್ನು ಮಾಡುತ್ತಿರುವರು. ಇನ್ನು ಕೆಲವರು ಭಜನೆಯ ನೇಮಗಳನ್ನು ಹಿಡಿದಿರುವರು ॥೬೩೮॥ ಹೀಗೆ ಭಕ್ತರ ಸ್ಥಿತಿಗಳು ಅನೇಕವಾಗಿವೆ.ಅವುಗಳೆಲ್ಲವನ್ನೂ ಹೇಳಲು ಶಕ್ಯವಿಲ್ಲ. ಆದ್ದರಿಂದ ಹೇ ರಾಜನೇ, ಅವುಗಳಲ್ಲಿನ ಮುಖ್ಯವಾದವುಗಳನ್ನು ಸಂಕ್ಷಿಪ್ತವಾಗಿ ನಿನಗೆ ಹೇಳುವೆ ॥೬೩೯॥ ಸರ್ವ ಭೂತ ಮಾತ್ರರಲ್ಲಿ ಭಗವಂತನು ತುಂಬಿರುವನು ಎಂದು ಕಾಣುವುದೇ ಪೂರ್ಣಪ್ರಾಪ್ತಿಯ ಮುಖ್ಯ ಸ್ವರೂಪವಾಗಿದೆ ಮತ್ತು ಇದೇ ಅವರ ಸಾಧನೆಯಾಗಿದೆ. ಇದೇ ಭಕ್ತಿಯ ನಿಜಗೌರವವಾಗಿದೆ. ಈ ತನ್ನ ಅಭಿಪ್ರಾಯವನ್ನು ಹರಿಯು ಹೇಳಿದನು ॥೬೪೦॥ ನಾನೇ ಭಗವತ್ಸ್ವರೂಪನಾಗಿದ್ದು, ಸರ್ವಭೂತಗಳಲ್ಲಿ ನಾನೇ ವ್ಯಾಪಿಸಿರುವೆನು. ನನ್ನಲ್ಲಿಯೇ ಸರ್ವಭೂತಗಳಿರುವುವು ಮತ್ತು ಎಲ್ಲ ಭೂತಗಳಲ್ಲಿನ ಭೂತಾತ್ಮಾ ನಾನೇ,ಪರಮಾತ್ಮನು ನಾನೇ ಇರುವೆನು ॥೬೪೧॥ ಹೀಗೆ ಪೂರ್ಣತ್ವದ ಅಭಿಮಾನದಿಂದ ಆತ್ಮಾಭಿಮಾನವು ಬೆಳೆಯುವುದು ಮತ್ತು ದೇಹದ ಅಭಿಮಾನವು ಅನಾಯಾಸವಾಗಿ ನಿವೃತ್ತಿಯಾಗುವುದು. ಹೇ ರಾಜನೇ, ಈ ಶುದ್ಧವಾದ ಲಕ್ಷಣವನ್ನು ಈಗ ನೀನು ಕೇಳು ॥೬೪೨॥ ಪ್ರತ್ಯಗಾತ್ಮಾಕ್ಕೆ ನಾನು ಎಂದು ತಿಳಿಯುವುದು ಶುದ್ಧವಾದ ಭಕ್ತರ ನಿರ್ದೋಷ ಲಕ್ಷಣವಾಗಿದೆ. ಆದರೆ ಅದಕ್ಕೂ ಗೌಣವೆಂದು ಭಾವಿಸುವುದೇ ಅವರ ಪೂರ್ಣ ಭಾವನೆಯಾಗಿದೆ ॥೬೪೩॥ ಸರ್ವ ಪ್ರಾಣಿ ಮಾತ್ರರಲ್ಲಿ ಭಗವಂತನಿರುವನು ಮತ್ತು ಸರ್ವಪ್ರಾಣಿಗಳು ಭಗವಂತನಿಂದ ವರ್ತಿಸುವುವು. ಪ್ರಾಣಿಮಾತ್ರರಲ್ಲಿರುವ ಯಾವ ಪರಮಾತ್ಮನು ನಾನೇ ಆಗಿರುವೆನು.ಹೀಗೆ ಹೇಳಿದರೆ "ನಾನು" ಎನ್ನುವ ದೋಷವು ಹತ್ತಲಾರದು ॥೬೪೪॥ ಸರ್ವ ಪ್ರಾಣಿ ಮಾತ್ರರಲ್ಲಿ ಭಗವಂತನಿರುವನು ಮತ್ತು ಭಗವಂತನಲ್ಲಿ ಸರ್ವ ಪ್ರಾಣಿ ಮಾತ್ರರಿರುವುವು ಹೀಗೆ ಭಾವಿಸುತ್ತ ಎಲ್ಲವನ್ನು ತನ್ನ ದೇಹದಲ್ಲಿಯೇ ಕಾಣುವವನು ತಾನು ಸ್ವಸ್ವರೂಪನಾಗುವನು ॥೬೪೫॥ ಈತನೇ ಭಕ್ತರಲ್ಲಿ ಅತ್ಯಂತ ಶ್ರೇಷ್ಠನು. ಈತನೇ ಭಾಗವತರಲ್ಲಿ ವರಿಷ್ಠನು. ಈತನನ್ನೇ ಉತ್ತಮವಾದ ಮಾನಕೊಟ್ಟು ಶ್ರೇಷ್ಠ ಅವತಾರ ಪುರುಷ ಎಂದು ತಿಳಿಯುವರು ॥೬೪೬॥ ಈತನೇ ಯೋಗಿಗಳವರಲ್ಲಿ ಅಗ್ರಗಣಿಯು, ಈತನೇ ಜ್ಞಾನಿಗಳವರಲ್ಲಿ ಶಿರೋಮಣಿಯು,ಮತ್ತು ಸಿದ್ಧರಲ್ಲಿ ಈತನೇ ಮುಗುಟಮಣಿಯು.ಹೀಗೆ ಸ್ವತಃ ಶ್ರೀಕೃಷ್ಣನು ಹೇಳಿರುವನು ॥೬೪೭॥

ಕದಾ ನವ್ಹತೀ ॥೬೪೮॥ ಹೇ ''ಉತ್ತಮ'' ಭಕ್ತಾಂಚೀ ನಿಜಸ್ಥಿತೀ । ರಾಯಾ ಜಾಣಾವೀ ಸುನಿಶ್ಚಿತೀ । ಆತಾ ''ಮಧ್ಯಮ'' ಭಕ್ತ ಕೈಸೇ ಭಜತೀ । ತ್ಯಾಂಚೀ ಭಜನಗತೀ ಐಕ ರಾಯಾ ॥೬೪೯॥

ಈಶ್ವರೇ ತದಧೀನೇಷು ಬಾಲಿಶೇಷು ದ್ವಿಷತ್ಸು ಚ । ಪ್ರೇಮಮೈತ್ರಿಕೃಪೋಪಕ್ಷಾ ಯಃ ಕರೋತಿ ಸ ಮಧ್ಯಮಃ ॥೫೬॥

ಅರ್ಥ: ಭಗವಂತನಲ್ಲಿ ಪ್ರೇಮವು ಆತನ ಭಕ್ತರಲ್ಲಿ ಮೈತ್ರಿಯು, ದುಃಖಿ ಅಜ್ಞಾನಿಗಳವರಲ್ಲಿ ಕೃಪೆ ಮತ್ತು ಭಗವಂತನ ದ್ವೇಷ ಮಾಡುವವರ ಉಪೇಕ್ಷೆ ಮಾಡುವುದು ಈತನ ಮಧ್ಯಮ ಭಾಗವತನಾಗಿರುವನು.

ಈಶ್ವರ ಮಾನೀ ಉತ್ತಮೋತ್ತಮ । ತದ್ಭಕ್ತ ಮಾನೀ ಮಧ್ಯಮ । ಅಜ್ಞಾನ ತೇ ಮಾನೋ ಅಧಮ । ದ್ವೇಷಿ ತೇ ಪರಮ ಪಾಪೀ ಮಾನೀ ॥೬೫೦॥ ಈಶ್ವರೀ ''ಪ್ರೇಮ'' ಪವಿತ್ರ । ಭಕ್ತಾಂಸೀ ''ಮೈತ್ರೀ'' ಮಾತ್ರ । ಅಜ್ಞಾನೀ ತೋ ಕೃಪಾಪಾತ್ರ । ''ಉಪೇಕ್ಷಾ'' ನಿರಂತರ ದ್ವೇಷಿಯಾಂಚೀ ॥೬೫೧॥ ಹೇ ಮಧ್ಯಮ ಭಕ್ತಾಂಚೀ ಭಕ್ತೀ । ತಾಯಾ ಜಾಣ ಐಸಿಯಾ ರೀತೀ । ಆತಾ "ಪ್ರಾಕೃತ" ಭಕ್ತಾಂಚೀ ಸ್ಥಿತೀ । ತೇಹೀ ತುಜಪ್ರತೀ ಸಾಂಗೇನ ॥೬೫೨॥

ಅರ್ಚಾಯಾಮೇವ ಹರಯೇ ಪೂಜಾಂಯಃಶ್ರದ್ಧಯೇಹತೇ । ನ ತದ್ಭಕ್ತೇಷು ಚಾನ್ಯೇಷು ಸ ಭಕ್ತಃ ಪ್ರಾಕೃತಃ ಸ್ಮೃತಃ ॥೫೭॥

ಅರ್ಥ: ಹರಿಯ ಮೂರ್ತಿ ಪೂಜೆಯನ್ನು ಶ್ರದ್ಧೆಯಿಂದ ಮಾಡುವನು. ಆದರೆ, ಹರಿಭಕ್ತರಲ್ಲಿ ಅಥವಾ ಅನ್ಯ ಭೂತಮಾತ್ರರಲ್ಲಿ ಅವನ ಭಕ್ತಿಯು ಇರುವುದೇ ಇಲ್ಲ. ಈತನು ಪ್ರಾಕೃತ ಭಕ್ತನಾಗಿರುವನು.

ಪಾಷಾಣಪ್ರತಿಮಾ ಹಾಚಿ ದೇವೋ । ತೇಥೇಚಿ ಜ್ಯಾಚಾ ಪೂರ್ಣ ಭಾವೋ । ಭಕ್ತ-ಸಂತ-ಸಜ್ಜನಾಸೀ ಪಹಾ ವೋ । ಅಣುಮಾತ್ರ ದೇಹೋ ಲವೋ ನೇದೀ ॥೬೫೩॥ ತೇ ಕಾಯೀ ಸಾಧಾರಣ ಜನ । ತ್ಯಾಚೀ ವಾರ್ತಾ ಪುಸೇ ಕೋಣ । ತ್ಯಾಂಸೀ ಸ್ವಪ್ನೀಹೀ ನಾಹೀ ಸನ್ಮಾನ । ಯಾಪರೀ ಭಜನ ಪ್ರಾಕೃತಾಚೇ ॥೬೫೪॥ ಐಸಿಯಾ ಸ್ಥಿತೀ ಜೋ ಜಡ ಭಕ್ತು । ತೋ ಜಾಣಾವಾ ಮುಖ್ಯ "ಪ್ರಾಕೃತು" । ಪ್ರತಿಮಾಭಂಗೇ ಅಂತು । ಮಾನೀ ನಿಶ್ಚಿತು ದೇವಾಚಾ ॥೬೫೫॥ ಯಾಪರೀ ತ್ರಿವಿಧ ಭಕ್ತ । ಸಾಂಗಿತಲೇ ಭಜನಯುಕ್ತ । ಪರೀ ಉತ್ತಮಾಂಚೀ ಲಕ್ಷಣೇ ಅದ್ಭುತ । ತೀ ಸಾಂಗಾವಯಾ ಚಿತ್ತ ಉದಿತ ಮಾಝೇ ॥೬೫೬॥

ಗೃಹೀತ್ವಾಪೀಂದ್ರಿಯೈರರ್ಥಾನ್ಯೋ ನ ದ್ವೇಷಿ ನ ಹೃಷ್ಯತಿ ।
ವಿಷ್ಣೋರ್ಮಾಯಾಮಿದಂ ಪಶ್ಯನ್ ಸ ವೈ ಭಾಗವತೋತ್ತಮಃ ॥೫೮॥

ಅರ್ಥ:- ಇಂದ್ರಿಯಗಳು ತಮ್ಮ ವಿಷಯಗಳೊಂದಿಗೆ ಸಂಪರ್ಕಗೊಳ್ಳುತ್ತಿರುವಾಗಲೂ ಇಡೀ ಜಗತ್ತು ವಿಷ್ಣುವಿನ ಮಾಯಾಶಕ್ತಿಯಾಗಿದೆ ಎಂದು ನೋಡುವವನು ದ್ವೇಷಿಸುವುದೂ ಇಲ್ಲ, ಹರ್ಷಿಸುವುದೂ ಇಲ್ಲ. ಅವನು ನಿಜವಾಗಿಯೂ ಭಕ್ತರಲ್ಲೆಲ್ಲ ಅತ್ಯಂತ ಶ್ರೇಷ್ಠನು.

ಇಂದ್ರಿಯೇ ವಿಷಯಾಂತೇ ಸೇವಿತೀ । ಪರೀ ಸುಖದುಃಖ ನುಮಟೇ ಚಿತ್ತೀ । ವಿಷಯ ಮಿಥ್ಯಾತ್ವೇ ದೇಖತೀ

ತುಪ್ಪದ ಕಣಗಳು ತುಪ್ಪದಿಂದ ಭಿನ್ನವಾಗಿರುವುದಿಲ್ಲ. ಅದರಂತೆ ಪಂಚಭೂತಗಳಿಂದ ಮತ್ತು ಭೌತಿಕ ಪದಾರ್ಥಗಳಿಂದ ಪ್ರಾಣಿಗಳ ಶರೀರಾದಿಕಗಳಿಂದ ಇವು ಸರ್ವವ್ಯಾಪಕ ಪರಮಾತ್ಮನಿಂದ ಎಂದೂ ಭಿನ್ನವಾಗುವುದಿಲ್ಲ ॥೬೪೮॥ ಹೇ ರಾಜನೇ, ''ಉತ್ತಮ'' ಭಕ್ತನ ಸ್ಥಿತಿಯು ಈ ಭಾವನೆಯಿಂದ ಕೂಡಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ. ಈಗ ''ಮಧ್ಯಮ'' ಭಕ್ತನು ಹೇಗೆ ಭಜಿಸುವನು ಮತ್ತು ಆತನ ಭಜನೆಯ ಪದ್ಧತಿ ಹೇಗೆ? ಇದನ್ನು ಸಹ ಕೇಳು ॥೬೪೯॥

ಈಶ್ವರನು ಉತ್ತಮೋತ್ತಮನು, ಆತನ ಭಕ್ತರು ಮಧ್ಯಮರು, ಅಜ್ಞಾನಿಗಳು, ಅಧಮರು ಮತ್ತು ದ್ವೇಷಿಗಳು, ಪರಮ ಪಾಪಿಗಳು ಹೀಗೆ ಈತನು ತಿಳಿಯುವನು ॥೬೫೦॥ ಈಶ್ವರನಲ್ಲಿ ಮಾತ್ರ ಈತನ ಪವಿತ್ರ ಪ್ರೇಮವಿರುವುದು. ಭಕ್ತರಲ್ಲಿ ಸ್ನೇಹ ಮಾತ್ರ ಇರುವುದು. ಅಜ್ಞಾನಿಗಳವರಲ್ಲಿ ಕೃಪೆದೋರುವನು ಮತ್ತು ಭೂತ ದ್ವೇಷಿಯವರನ್ನು ನಿರಂತರವಾಗಿ ಉಪೇಕ್ಷಿಸುವನು ॥೬೫೧॥ ಹೇ ರಾಜನೇ, ಮಧ್ಯಮ ಭಕ್ತರ ಭಕ್ತಿಯು ಈ ಪ್ರಕಾರವಾಗಿರುವುದು. ಇದನ್ನು ಲಕ್ಷದಲ್ಲಿಡು. ಈಗ ಪ್ರಾಕೃತ ಭಕ್ತರ ಸ್ಥಿತಿಯು ಹೇಗಿರುವುದನ್ನು ಸಹ ನಿನಗೆ ಹೇಳುವೆ ॥೬೫೨॥

ಕಲ್ಲಿನ ಮೂರ್ತಿಯು ಇದೇ ದೇವರು ಎಂದು ತಿಳಿದು ಅದರಲ್ಲಿಯೇ ಈತನ ಸರ್ವ ಭಕ್ತಿ ಇರುವುದು. ಆದರೆ ಭಕ್ತರಿಗೆ, ಸಂತರಿಗೆ ಸಜ್ಜನರಿಗೆ ಈತನು ಅಣುಮಾತ್ರವೂ ದೇಹದಿಂದ ಬಗ್ಗುವುದಿಲ್ಲ ॥೬೫೩॥ ಹೀಗಿರುವಾಗ್ಗೆ ಸಾಧಾರಣ ಜನರ ಯಾವ ಲೆಕ್ಕ? ಇವರನ್ನು ಯಾರು ಕೇಳಬೇಕು? ಇವರಿಗೆ ಈತನ ಸ್ವಪ್ನದಲ್ಲಿಯೂ ಸಹ ಎಂದೂ ಸನ್ಮಾನವು ದೊರಕದು. ಈ ಪ್ರಕಾರವಾಗಿ ಪ್ರಾಕೃತ ಭಜನೆಯಾಗಿರುವುದು ॥೬೫೪॥ ಹೀಗೆ ಅಜ್ಞಾನ ಸ್ಥಿತಿಯಲ್ಲಿನ ಭಕ್ತನು ನಿಜವಾಗಿ ಈತನೇ ''ಪ್ರಾಕೃತ'' ಭಕ್ತನಾಗಿರುವನು. ತನ್ನ ಕಲ್ಲಿನ ಮೂರ್ತಿಯು ಭಂಗವಾದರೆ, ದೇವರ ಅಂತ್ಯವಾಯಿತೆಂದು ತಿಳಿಯುವನು! ॥೬೫೫॥ ಈ ರೀತಿಯಾಗಿ ಮೂರೂ ಪ್ರಕಾರದ ಭಜನೆ ಮಾಡುವವರನ್ನು ನಿನಗೆ ತಿಳಿಸಿರುವೆನು. ಆದರೆ ಉತ್ತಮ ಭಕ್ತನ ಲಕ್ಷಣಗಳು ಕೇವಲ ಅಪೂರ್ವವಾಗಿರುವುವು. ಅದನ್ನು ಹೇಳಲು ನನ್ನ ಮನವು ಉತ್ಸುಕತೆಯಿಂದ ತುಂಬಿಕೊಂಡಿದೆ ॥೬೫೬॥

। ತೇ ಜಾಣ ನಿಶ್ಚಿತೀ ಉತ್ತಮ ಭಕ್ತ ॥೬೫೭॥ ಮೃಗಜಳೀ ಜೇಣೇ ಕೇಲೇ ಸ್ನಾನ । ತೋ ನಾಹತಾ ಕೋರಡಾಚಿ ಜಾಣ । ತೇವೀ ಭೋಗೀ ಜ್ಯಾಂಸೀ ಅಭೋಕ್ತೇಪಣ । ತೇ ಭಕ್ತ ಪೂರ್ಣ ಉತ್ತಮೋತ್ತಮ ॥೬೫೮॥ ''ಉತ್ತಮ ಭಕ್ತ ವಿಷಯ ಸೇವಿತೀ'' । ಹಾ ಬೋಲು ರೂಢಲಾ ಪ್ರಾಕೃತಾಪ್ರತೀ । ತ್ಯಾಂಸೀ ವಿಷಯೀ ನಾಹೀ ವಿಷಯಸ್ಫೂರ್ತೀ । ತ್ಯಾಗಿತೀ ಭೋಗಿತೀ ದೋನೀ ಮಿಥ್ಯಾ ॥೬೫೯॥ ಸ್ವಪ್ನೀಚೇ ಕೇಳೇ ರಾಯಭೋಗೇ । ಜಾಗಾ ಹೋಊನಿ ಖಾವೋ ಮಾಗೇ । ತೇಣೇ ಹಾತು ಮಾಖೇ ನಾ ತೋಂಡೀ ಲಾಗೇ । ತೇವೀ ವಿಷಯಸಂಗೇ ಹರಿಭಕ್ತ ॥೬೬೦॥ ಯೇಥವರೀ ಮಿಥ್ಯಾ ವಿಷಯಭಾನ । ತರೀ ಸೇವಾವಯಾ ತ್ಯಾಂಸೀ ಕಾಯ ಕಾರಣ । ಯೇಥ ಪ್ರಾರಬ್ಧ ಬಳೀ ಪೂರ್ಣ । ತೇ ಅವಶ್ಯ ಜಾಣ ಭೋಗವೀ ॥೬೬೧॥ ಪರೀ ಮೀ-ಏಕ ವಿಷಯಭೋಕ್ತಾ । ಹೀ ಸ್ವಪ್ನೀಹೀ ತ್ಯಾಸ ನುಮಟೇ ಕಥಾ । ಯಾಲಾಗೀ ಉತ್ತಮ ಭಾಗವತತಾ । ತ್ಯಾಸೀಚ ತತ್ತ್ವತಾ ಬಾಣಲೀ ॥೬೬೨॥ ಯಾಪರೀ ವಿಷಯಾಸಕ್ತೀ । ವರ್ತಿಜೇ ಉತ್ತಮ ಭಕ್ತೀ । ಯಹೂನಿ ಅಗಾಧ ಸ್ಥಿತೀ । ಸಾಂಗೇನ ತುಜಪ್ರತೀ ತೇ ಐಕ ॥೬೬೩॥

ದೇಹೇಂದ್ರಿಯ ಪ್ರಾಣಮನೋಧಿಯಾಂ ಯೋ ಜನ್ಮಾಪ್ಯಯಕ್ಷುದ್ಭಯತರ್ಷಕೃಚ್ಛ್ರೈಃ ।
ಸಂಸಾರಧರ್ಮೈರವಿಮುಹ್ಯಮಾನಃ ಸ್ಮೃತ್ಯಾ ಹರೇರ್ಭಾಗವತಪ್ರಧಾನಃ ॥೪೯॥

ಅರ್ಥ:- ಜನ್ಮ ಮೃತ್ಯು, ಹಸಿವೆನೀರಡಿಕೆ, ಶ್ರಮ - ಕಷ್ಟ, ಭಯ ಮತ್ತು ತೃಷ್ಣಾ ಇವು ಸಂಸಾರದ ಧರ್ಮವಾಗಿರುವುವು. ಇವು ಕ್ರಮವಾಗಿ ಶರೀರ, ಪ್ರಾಣ, ಇಂದ್ರಿಯ, ಮನ ಮತ್ತು ಬುದ್ಧಿ ಇವುಗಳಿಗೆ ಪ್ರಾಪ್ತವಾಗುವುವು. ಯಾವ ಪುರುಷನು ಭಗವಂತನ ಪ್ರೇಮದಲ್ಲಿ ಎಷ್ಟೊಂದು ತನ್ಮಯನಾಗಿರುವನೆಂದರೆ ಸಂಸಾರಿಕ ಧರ್ಮವು ಬೇಕಾದಷ್ಟು ಬಾರಿ ಬಂದು ಹೋದರೂ ಅದರಲ್ಲಿ ಮೋಹಿತನಾಗುವುದಿಲ್ಲ. ಪರಾಭೂತನಾಗುವುದಿಲ್ಲ. ಈತನೇ ಉತ್ತಮ ಭಾಗವತನು.

ದೇಹ-ಇಂದ್ರಿಯ-ಮನ-ಬುದ್ಧಿ-ಪ್ರಾಣ । ಹೇಚಿ ಬಂಧಾಚೇ ಪಂಚಾಯತನ । ಕ್ಷುಧಾ ತೃಷಾ ಭಯ ಕ್ಲೇಶ ಪೂರ್ಣ । ಜನ್ಮ ಮರಣ ಇತ್ಯಾದಿ ॥೬೬೪॥ ಯಾ ಪಾಂಚಾ ಸ್ಥಾನೀ ಅಪಾರ ಶ್ರಮ । ಯಾ ನಾಂವ ಮ್ಹಣಿಜೇ ''ಸಂಸಾರಧರ್ಮ'' । ನಿಜಭಕ್ತಾ ಪ್ರಸನ್ನ ಆತ್ಮಾರಾಮ । ತ್ಯಾಂಸೀ ಭವಭ್ರಮ ಸ್ವಪ್ನೀಹೀ ನಾಹೀ ॥೬೬೫॥ ಕ್ಷುಧಾ ಲಾಗಲಿಯಾ ದಾರುಣ । ಅನ್ನ ಅಕಾಂಕ್ಷೀ ಪೀಡೇ ಪ್ರಾಣ । ಭಕ್ತಾ ಕ್ಷುಧೇಚೀ ನವ್ಹೇ ಆಠವಣ । ಐಸೇ ಅಗಾಧ ಸ್ಮರಣ ಹರೀಚೇ ॥೬೬೬॥
ಭಾವೇ ಕರಿತಾ ಭಗವದ್ಭಕ್ತೀ । ಕ್ಷುಧೇತೃಷೇಚೀ ನವ್ಹೇ ಸ್ಫೂರ್ತೀ । ಏವಢೀ ಪಾವಲೇ ಅಗಾಧ ಪ್ರಾಪ್ತೀ । ತೇ

ಇಂದ್ರಿಯಗಳು ವಿಷಯಗಳ ಸೇವನೆ ಮಾಡುತ್ತಿರುವುವು, ಆದರೂ ಈತನ ಚಿತ್ತದಲ್ಲಿ ಸುಖದುಃಖಗಳು ಉತ್ಪನ್ನವಾಗುವುದಿಲ್ಲ. ಕಾರಣವೇನೆಂದರೆ ಈತನು ವಿಷಯಗಳು ಮಿಥ್ಯೆ ಎಂದು ಅರಿತಿರುವನು. ಈತನೇ ನಿಜವಾಗಿ "ಉತ್ತಮ" ಭಕ್ತನು ॥೬೫೭॥ ಮೃಗಜಲದಲ್ಲಿ ಸ್ನಾನ ಮಾಡಿದವನ ಶರೀರವು ತೋಯದೇ, ಇದ್ದಂತೆಯೇ ಇರುವುದು. ಅದರಂತೆ ಈತನು ಭೋಗಗಳನ್ನು ಭೋಗಿಸುವಾಗ್ಗೆ ಅಲಿಪ್ತನಾಗಿ ಅಭೋಕ್ತನಾಗಿರುವನು. ಈತನೇ ಪೂರ್ಣ ಮತ್ತು ಉತ್ತಮೋತ್ತಮ ಭಕ್ತನು ॥೬೫೮॥ ಉತ್ತಮ ಭಕ್ತರೂ ವಿಷಯ ಸೇವನೆಯನ್ನು ಮಾಡುವರು ಎಂದು ಜನರು ಹೇಳಿಕೊಳ್ಳುವರು. ಇದು ಅವರ ತಪ್ಪು ತಿಳುವಳಿಕೆಯಾಗಿರುವುದು. ಏಕೆಂದರೆ ಭಕ್ತರಿಗೆ ವಿಷಯಗಳಲ್ಲಿ ವಿಷಯ ಸ್ಫೂರ್ತಿಯೇ ಇರುವುದಿಲ್ಲ. ಇವರ ತ್ಯಾಗ ಭೋಗಗಳೆರಡೂ ಮಿಥ್ಯೆಯಾಗಿರುವುವು ॥೬೫೯॥ ಸ್ವಪ್ನದಲ್ಲಿ ತಿಂದ ಬಾಳೆಯ ಹಣ್ಣು ಬಹಳ ರುಚಿಯಾಗಿದೆ ಎಂದು ಎಚ್ಚರಾದ ಮೇಲೆ ಅದೇ ಹಣ್ಣನ್ನು ಕೇಳಿದರೆ, ಅದು ಕೈಗೂ ಹತ್ತದೇ ಬಾಯಿಗೂ ಬೀಳುವುದಿಲ್ಲ. ಅದರಂತೆ ವಿಷಯ ಸಂಗದಲ್ಲಿ ಹರಿಭಕ್ತರು ಅಲಿಪ್ತರಾಗಿರುವರು ॥೬೬೦॥ ವಿಷಯಭಾನವು ಇಷ್ಟೊಂದು ಮಿಥ್ಯೆಯಾಗಿರಲು ಅದನ್ನು ಅವರು ಸೇವನೆಯಾದರೂ ಏಕೆ ಮಾಡಬೇಕು? ಹೀಗೆ ಕೇಳಿದರೆ, ಅದಕ್ಕೆ ಕಾರಣವೂ ಹೀಗಿದೆ. ಪ್ರಾರಬ್ಧ ಕರ್ಮವು ಬಲುಬಲಿಷ್ಠವಾಗಿರುವುದು. ಇದರಿಂದಲೇ ಇವರಿಗೆ ವಿಷಯಗಳ ಸೇವನೆಯ ಕಾರಣವಾಗಿರುವುದು ॥೬೬೧॥ ಹೀಗಿರಲು ನಾನು ಒಬ್ಬ ವಿಷಯ ಭೋಕ್ತನು ಎಂಬುವುದು ಈತನ ಸ್ವಪ್ನದಲ್ಲಿಯೂ ಬರಲಾರದು. ಆದ್ದರಿಂದಲೇ ಉತ್ತಮ ಭಾಗವತನು ಎಂಬ ಮಾತು ಈತನಿಗೆ ಮಾತ್ರ ಸಲ್ಲುತ್ತದೆ ॥೬೬೨॥ ಈ ಪ್ರಕಾರವಾಗಿ ವಿಷಯ ಸೇವನೆಯಲ್ಲಿ ಉತ್ತಮ ಭಕ್ತರು ನಡೆದುಕೊಳ್ಳುವರು. ಈಗ ಇದಕ್ಕಿಂತಲೂ ಒಂದು ಅಗಾಧವಾದ ಸ್ಥಿತಿಯು ಇದೆ, ಅದನ್ನು ಸಹ ನಿನಗೆ ತಿಳಿಸುವೆ ॥೬೬೩॥

ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ ಮತ್ತು ಪ್ರಾಣ ಇವೇ ಬಂಧನದ ಐದು ಸ್ಥಾನಗಳಾಗಿವೆ. ಅವುಗಳಲ್ಲಿ ಕ್ಷುಧಾ, ತೃಷೆ, ಭಯ, ಕ್ಲೇಶ, ಜನ್ಮ, ಮರಣ ಇತ್ಯಾದಿ ತುಂಬಿರುವುವು ॥೬೬೪॥ ಈ ಐದರಲ್ಲಿಯೂ ಅಪಾರ ಕಷ್ಟಗಳಿರುವುವು. ಇದರ ಹೆಸರೇ "ಸಂಸಾರ ಧರ್ಮ" ವಾಗಿದೆ. ಆದರೆ ಆತ್ಮಾರಾಮನು ತನ್ನ ಭಕ್ತರಲ್ಲಿ ಸದಾ ಸರ್ವದಾ ಪ್ರಸನ್ನನಾಗಿರುವುದರಿಂದ ಇವರಿಗೆ ಭವಭ್ರಮವು ಸ್ವಪ್ನದಲ್ಲಿಯೂ ಇರದು ॥೬೬೫॥ ದಾರುಣವಾದ ಹಸಿವೆಯಾಯಿತೆಂದರೆ ಅನ್ನದ ಇಚ್ಛೆಯಿಂದ ಪ್ರಾಣವು ವ್ಯಾಕುಲವಾಗುವುದು. ಆದರೆ ಹರಿಭಕ್ತರು ಹರಿಸ್ಮರಣೆಯಲ್ಲಿ ಅಗಾಧವಾಗಿ ತಲ್ಲೀನರಾದದ್ದಕ್ಕೆ ಇವರಿಗೆ ಹಸಿವು ನೀರಡಿಕೆಯ ಸ್ಮರಣವು ಸಹ ಆಗುವುದಿಲ್ಲ ॥೬೬೬॥

ಭವಭಯೇ ನಿಶ್ಚಿತೀ ಡಂಡಳತೀನಾ ॥೬೭॥ ಮನಾಮಾಜೀ ಭವಭಯಭರಣೀ । ತೇ ಮನ ರಾತಲೇ ಹರಿಚರಣೀ । ಆತಾ ಭಯಾತೇ ತೇಥ ಕೋಣ ಮಾನೀ । ಮನ ಮನಪಣೇ ಅಸೇನಾ ॥೬೮॥ ಮನೀ ಸ್ಫುರೇ ದ್ವೈತಾಚೀ ಸ್ಫೂರ್ತೀ । ತೇಥ ಭವಭಯಾಚೀ ದೃಢ ಸ್ಥಿತೀ । ತೇ ಮನೀ ಜಾಹಲೀ ಹರೀಚೀ ವಸ್ತೀ । ಯಾಲಾಗೀ ಭವಭಯನಿವೃತ್ತೀ ದ್ವೈತೇಸೀ ॥೬೯॥ ದೇಹಬುದ್ಧೀಮಾಜೀ ಜಾಣಾ । ನಾನಾ ಪರೀ ಉಠತೀ ತೃಷ್ಣಾ । ತೇ ಬುದ್ಧಿ ನಿಶ್ಚಯೇ ಹರೀಚ್ಯಾ ಸ್ಮರಣಾ । ಕರಿತಾ ಪರಿಪೂರ್ಣಾ ವಿನಟಲೀ ಸ್ವಯೇ ॥೭೦॥ ಜೇಥೇ ಜೇ ಜೇ ಸ್ಫುರೇ ತೃಷ್ಣಾಸ್ಫುರಣ । ತೇಥೇ ಸ್ವಯೇ ಪ್ರಗಟೇ ನಾರಾಯಣ । ತೇವ್ಹಾ ತೃಷ್ಣಾ ಹೋಯ ವಿತೃಷ್ಣ । ವಿರೇ ಸಂಪೂರ್ಣ ಪೂರ್ಣಾಮಾಜೀ ॥೭೧॥ ಯಾಪರೀ ಗಾ ತೃಷ್ಣಾರಹಿತ । ಹರಿಸ್ಮರಣೇ ಭಗವದ್ಭಕ್ತ । ಇಂದ್ರಿಯಕ್ಲೇಶಾ ಭಕ್ತ ಅಲಿಪ್ತ । ತೋಹೀ ವೃತ್ತಾಂತ ಐಕ ರಾಯಾ ॥೭೨॥ ಮುಖ್ಯ ಕಷ್ಟಾಚೇ ಅಧಿಷ್ಠಾನ । ಇಂದ್ರಿಯಕರ್ಮೀ ರಾಯಾ ಜಾಣ । ತೇ ಇಂದ್ರಿಯಕರ್ಮೀ ಬ್ರಹ್ಮಸ್ಫುರಣ । ಹರಿಭಕ್ತಾ ಪೂರ್ಣ ಹರಿಭಜನೇ ॥೭೩॥ ದೃಷ್ಟೀನೇ ಘೇಊ ಜಾತಾ "ದರ್ಶನ" । ದೃಶ್ಯಮಾತ್ರೀ ಪ್ರಗಟೇ ನಾರಾಯಣ । ಶ್ರವಣೇ "ಶಬ್ದ" ಘೇತಾ ಜಾಣ । ಶಬ್ದಾರ್ಥೀ ಪೂರ್ಣ ವಿರಾಜೇ ವಸ್ತು ॥೭೪॥ ಘ್ರಾಣೇ ಘೇತಾ ನಾನಾ "ವಾಸು" । ವಾಸಾವಬೋಧೇ ಪ್ರಗಟೇ ಪರೇಶು । ರಸನಾ ಸೇವೀ ಜೋ ಜೋ "ರಸು" । ರಸೀ ಬ್ರಹ್ಮರಸು ನಿಜಸ್ವಾದೇ ಪ್ರಗಟೇ ॥೭೫॥ ದೇಹೀ ಲಾಗತಾ ಶೀತ-ಉಷ್ಣ । ಅಥವಾ ಕಾ ಮೃದು-ಕಠಿಣ । ತೇಥೇ "ಸ್ಪರ್ಶ" ಜ್ಞಾನೇ ಜಾಣ । ಚಿನ್ಮಾತ್ರ ಪೂರ್ಣ ಪ್ರಗಟೇ ಸ್ವಯೇ ॥೭೬॥ ಆತಾ ಕರ್ಮೇಂದ್ರಿಯಪ್ರವರ್ತೀ । ತೇಥಹೀ ಸ್ಫುರೇ ಬ್ರಹ್ಮಸ್ಫೂರ್ತೀ । ಘೇಣೇ ದೇಣೇ ಗಮನಸ್ಥಿತೀ । ಇಂದ್ರಿಯಾ ಗತೀ ಆತ್ಮಾರಾಮೇ ॥೭೭॥ ಐಸೇ ಕರಿತಾ ಇಂದ್ರಿಯೇ ಕಷ್ಟ । ತೇ ಕಷ್ಟೀ ಹೋಯ ನಿಜಸುಖ ಪ್ರಗಟ । ತೇಣೇ ಇಂದ್ರಿಯಾ ವಿಶ್ರಾಂತಿ ಚೋಖಟ । ಪಿಕಲೀ ಸ್ವಾನಂದಪೇಠ ಹರಿಭಕ್ತಾ ॥೭೮॥ ಜೇಣೇ ಇಂದ್ರಿಯಾ ಕಷ್ಟ ಹೋತೀ । ತೇಣೇಂಚಿ ಇಂದ್ರಿಯಾ ಇಂದ್ರಿಯಾ ಸುಖಪ್ರಾಪ್ತೀ । ಹೇ ಭಗವದ್ಭಜನೀ ನಿಜಯುಕ್ತೀ । ಭೋಗಿಜೇ ಹರಿಭಕ್ತೀ ಹರೀಚೇನಿ ಸ್ಮರಣೇ ॥೭೯॥

ಜನ್ಮ ಆಣಿ ಮರಣ । ಹೇ ದೇಹಾಚೇ ಮಾಥಾ ಜಾಣ । ಭಕ್ತ ದೇಹೀ ವಿದೇಹೀ ಪೂರ್ಣ । ಧ್ಯಾತಾ ಹರಿಚರಣ

ಅಂತಃಕರಣದಿಂದ ಭಗವದ್ಭಕ್ತಿಯನ್ನು ಮಾಡುವವರಿಗೆ ಹಸಿವೆ, ನೀರಡಿಕೆಗಳ ಸ್ಮರಣವಾಗುವುದಿಲ್ಲ. ಇಂತಹ ಮಹಾನ್ ಪ್ರಾಪ್ತಿಯು ಇವರಿಗೆ ದೊರಕಿರುವುದು, ಇವರು ನಿಜವಾಗಿಯೂ ಸಂಸಾರ ಭಯಕ್ಕೆ ಭಯಪಡುವುದೇ ಇಲ್ಲ ॥೬೭॥ ಸಂಸಾರದ ಭಯವು ಮನಸ್ಸಿಗೆ ಇರುವುದು. ಆದರೆ ಇವರ ಮನಸ್ಸು ಹರಿಚರಣಗಳಲ್ಲಿ ರಮಿಸಿರುವುದು. ಅಂದಮೇಲೆ ಈ ಭಯಕ್ಕೆ ಯಾರು ಮನ್ನಿಸಬೇಕು? ಮನಸ್ಸಿಗೆ ತನ್ನ ಮನೋ ಧರ್ಮವೇ ಉಳಿಯುವುದಿಲ್ಲ ॥೬೮॥ ಮನಸ್ಸಿನಲ್ಲಿ ದ್ವೈತಭಾವವು ಹುಟ್ಟಿದರೆ, ಅದರಿಂದ ಸಂಸಾರ ಭಯವು ಬೆಳೆಯುತ್ತ ಸಾಗುವುದು. ಇಂತಹ ಮನಸ್ಸಿನಲ್ಲಿ ಭಗವಂತನ ವಾಸವಾಗಿದ್ದರಿಂದ ದ್ವೈತಭಾವವು ಇಲ್ಲದಾಗಿ ಭವಭಯದ ನಿವೃತ್ತಿಯು ಸಹಜವಾಗಿ ಆಗುವುದು ॥೬೯॥ ದೇಹಬುದ್ಧಿಯಲ್ಲಿ ನಾನಾ ಪ್ರಕಾರದ ತೃಷ್ಣೆ ಅಂದರೆ ವಾಸನೆಗಳು ಹುಟ್ಟುವುವು. ಆದರೆ, ಅದೇ ಬುದ್ಧಿಯು ನಿಶ್ಚಯವಾಗಿ ಹರಿಸ್ಮರಣೆ ಮಾಡಲು, ಅಲ್ಲಿಯೇ ಪೂರ್ಣ ಒಂದಾಗುವುದು ॥೭೦॥ ಆಗ ಸ್ಫುರಣವಾಗುವ ಆ ಬುದ್ಧಿಯಲ್ಲಿ ನಾರಾಯಣನು ಪ್ರಗಟನಾಗುವನು. ಆದ್ದರಿಂದ ತೃಷ್ಣೆಯು ವಿತೃಷ್ಣೆಯಾಗಿ ಪೂರ್ಣತ್ವದಲ್ಲಿ ಕರಗಿ ಹೋಗುವುದು ॥೭೧॥ ಈ ರೀತಿಯಲ್ಲಿ ಹರಿಭಕ್ತರು ಹರಿಸ್ಮರಣೆಯಿಂದ ತೃಷ್ಣಾರಹಿತ ರಾಗುವರು. ಇದರಿಂದ ಇವರು ಇಂದ್ರಿಯಗಳ ಕ್ಲೇಶದಿಂದ ಅಲಿಪ್ತರಾಗುವರು. ರಾಜಾ, ಈ ಪ್ರಕಾರವನ್ನು ಕೇಳು ॥೭೨॥ ಕಷ್ಟಗಳಾಗುವ ಮುಖ್ಯ ಕಾರಣವು ಇಂದ್ರಿಯ ಕರ್ಮಗಳಲ್ಲಿರುತ್ತದೆ. ಈ ಇಂದ್ರಿಯ ಕರ್ಮಗಳಲ್ಲಿ ಹರಿಭಕ್ತರಿಗೆ ಹರಿಭಜನೆಯ ಯೋಗದಿಂದ ಪೂರ್ಣ ಬ್ರಹ್ಮಸ್ಫುರಣವಾಗುವುದು ॥೭೩॥ ನೋಡುವ ದೃಷ್ಟಿಯಿಂದ ಯಾವ ಯಾವ "ದೃಶ್ಯ" ವು ತೋರುವುದೋ ಆಯಾ ದೃಶ್ಯ ಪದಾರ್ಥಗಳಲ್ಲಿ ನಾರಾಯಣನೇ ಪ್ರಗಟನಾಗುವನು. ಕಿವಿಯಿಂದ "ಶಬ್ದ" ವನ್ನು ಕೇಳುತ್ತಿರಲು ಆ ಶಬ್ದದ ಧ್ವನಿಯಲ್ಲಿ ಮತ್ತು ಅರ್ಥದಲ್ಲಿ ಪೂರ್ಣ ಬ್ರಹ್ಮವೇ ವಿರಾಜಮಾನವಾಗಿರುವುದು ॥೭೪॥ ಮೂಗಿನಿಂದ ಅನೇಕ ಪ್ರಕಾರದ "ಗಂಧ" ಅಂದರೆ ವಾಸನೆಯನ್ನು ತೆಗೆದುಕೊಳ್ಳುತ್ತಿರುವಾಗ್ಗೆ, ಆ ವಾಸನೆಯ ಜ್ಞಾನದಲ್ಲಿ ಪರಮೇಶ್ವರನು ಪ್ರಕಟನಾಗುವನು. ಅದರಂತೆ ನಾಲಿಗೆಯು ಯಾವ ಯಾವ "ರಸ" ವನ್ನು ಸೇವಿಸುವುದೋ ಆಯಾ ರಸಗಳಲ್ಲಿ ಸ್ವಾದರೂಪದಿಂದ ಬ್ರಹ್ಮರಸವು ಪ್ರಗಟವಾಗುವುದು ॥೭೫॥ ದೇಹಕ್ಕೆ ಶೀತ- ಉಷ್ಣ ಅಥವಾ ಮೃದು-ಕಠಿಣ ತಾಗಿದರೆ, ಆ "ಸ್ಪರ್ಶ" ಜ್ಞಾನದಿಂದ ಅವುಗಳಲ್ಲಿನ ಮೂಲವಾದ ಪೂರ್ಣ ಚಿತ್ಸ್ವರೂಪವೇ ಪ್ರಗಟವಾಗುವುದು ॥೭೬॥ ಈಗ ಹಸ್ತಪಾದಾದಿ ಕರ್ಮೇಂದ್ರಿಯ ಪ್ರವೃತ್ತಿಯಲ್ಲಿ ಈ ಬ್ರಹ್ಮದ ಸ್ಫೂರ್ತಿಯೇ ಸ್ಫುರಣವಾಗುತ್ತಿರುವುದರಿಂದ ಕೊಡುವ, ತೆಗೆದುಕೊಳ್ಳುವ ಅಥವಾ ಹೋಗು, ಬರುವ ಇತ್ಯಾದಿ ಇಂದ್ರಿಯಗಳ ಚಲನೆಗಳನ್ನು ಆತ್ಮಾರಾಮನೇ ಮಾಡುತ್ತಿರುವನು. ಹೀಗೆ ಇವರಿಗೆ ಅನುಭವವಾಗುವುದು ॥೭೭॥ ಈ ಪ್ರಕಾರವಾಗಿ ಇಂದ್ರಿಯಗಳು ಕಷ್ಟಪಡುತ್ತಿರಲು ಆ ಕಷ್ಟಗಳಲ್ಲಿಯೇ ಆತ್ಮಸುಖವು ಪ್ರಕಟವಾಗುವುದು. ಇದರಿಂದ ಇಂದ್ರಿಯಗಳಿಗೆ ಉತ್ತಮ ವಾದ ವಿಶ್ರಾಂತಿಯು ದೊರೆಯುವುದು. ಈ ಪ್ರಕಾರವಾಗಿ ಹರಿಭಕ್ತರ ಪಾಲಿಗೆ ಸ್ವಾನಂದದ ಬಜಾರವೇ ತೆರೆದಿರುವುದು ॥೭೮॥ ಇಂದ್ರಿಯ ಗಳಿಗೆ ಯಾವುದರಿಂದ ಕಷ್ಟಗಳು ಒದಗುವುವೋ, ಅವುಗಳಿಂದಲೇ ಈ ಇಂದ್ರಿಯಗಳಿಗೆ ಸುಖವಾಗುವುದು. ಇದು ಭಗವದ್ಭನೆಯಲ್ಲಿನ ನಿಜ ಯುಕ್ತಿಯಾಗಿರುವುದು. ಈ ಪ್ರಕಾರವಾಗಿ ಹರಿಭಕ್ತರು ಹರಿಸ್ಮರಣೆಯಿಂದ ನಿತ್ಯ ಮುಕ್ತಿಯನ್ನು ಭೋಗಿಸುತ್ತಿರುವರು ॥೭೯॥

ಹರಿರೂಪ ಜಾಹಲೇ ॥೬೮೦॥ ಯಾಲಾಗೀ ದೇಹಾಂಚೀ ಅಹಂತಾ । ಕದಾ ನುಪಜೇ ಭಗವದ್ಭಕ್ತಾ । ತೇ ಭಕ್ತಪೂರ್ಣತೇಚೀ ಕಥಾ । ಐಕ ನೃಪನಾಥಾ ಸಾಂಗೇನ ॥೬೮೧॥ ದೇಹ ಧರಿಲ್ಯಾ ಪಂಚಾನನೇ । ಭಕ್ತ ನ ಡಂಡಳೀ ಜೀವೇ ಪ್ರಾಣೇ । ವಂಧ್ಯಾಪುತ್ರ ಸುಳೀ ದೇಣೇ । ದೇಹಾಚೇ ಮರಣೇ ತೇವೀ ದೇಖೇ ॥೬೮೨॥ ಛಾಯಾ ಪಾಲಖೀ ಬೈಸಾವೀ । ಐಸೇ ಕೋಣೇ ಚಿಂತೀನಾ ಜೀವೀ । ತೈಶೀ ದೇಹಾಸೀ ಪದವೀ ಯಾವೀ । ಹಾ ನುಠೀ ಸದ್ಭಾವೀ ಲೋಭ ಭಕ್ತಾ ॥೬೮೩॥ ದೇಹಾಸೀ ಆಲಿಯಾ ನಾನಾ ವಿಪತ್ತೀ । ಭಕ್ತಾ ಖೇದೂ ನುಮಟೇ ಚಿತ್ತೀ । ಜೇವೀ ಆಕಾಶ ಶ್ರಸ್ತ್ರಘಾತೀ । ನ ಯೇ ಕಾಕುಳತೀ ತೈಸೇ ತೇ ॥೬೮೪॥ ಜನನೀಜಠರೀ ದೇಹೋ ಜನ್ಮಲಾ । ಭಕ್ತು ನ ಮ್ಹಣೇ ಮೀ ಜನ್ಮಾ ಆಲಾ। ರವಿ ಥಿಲ್ಲರೀ ಪ್ರತಿಬಿಂಬಲಾ । ಥಿಲ್ಲರ ಮೀ ಜಾಹಲಾ ಕದಾ ನ ಮ್ಹಣೇ ॥೬೮೫॥ ಸಾಯಂಪಾತಃ ಸೂರ್ಯ ಪ್ರಕಾಶೇ । ಅಭ್ರೀ ಗಂಧರ್ವನಗರ ಆಭಾಸೇ । ದೇಹ ಪ್ರತಿಪಾಳೀ ಅದೃಷ್ಟ ತೈಸೇ । ಮ್ಯಾ ಕೇಲೆ ಐಸೇ ಸ್ಫುರೇನಾ ॥೬೮೬॥ ಭಕ್ತದೇಹಾಸೀ ಯೇತಾ ಮರಣ । ಹೇತುರಹಿತ ಹರೀಚೇ ಸ್ಮರಣ । ಯಾಲಾಗೀ ದೇಹ ನಿಮಾಲ್ಯಾ ಆಪಣ । ನ ಮರತಾ ಪೂರ್ಣ ಪೂರ್ಣತ್ವೇ ಉರೇ ॥೬೮೭॥ ಥಿಲ್ಲರಾ ಸಮೂಳ ನಾಶು ಝಾಲಾ । ತರೀ ರವಿ ನ ಮ್ಹಣೇ ನಿಮಾಲಾ । ತೇವೀ ದೇಹೋ ಗೇಲಿಯಾ ಭಕ್ತ ಉರಲಾ । ಸದ್ರೂಪೇ ಸಂಚಲಾ ಹರಿಸ್ಮರಣೇ ॥೬೮೮॥ ಆಧೀ ಕಾಯ ಸರ್ಪು ಮಾರಾವಾ । ಮಗ ದೋರಾತೇ ದೋರು ಕರಾವಾ । ತೋ ನ ಪಾಲಟ ತಾ ನಿಜಗೌರವಾ । ದೋರೂಚಿ ಅಥವಾ ದೋರರೂಪೇ ॥೬೮೯॥ ತೇವೀ ಹರಿಭಕ್ತಾ ದೇಹಾಚಾ ಅಭಾವೋ । ಮಾ ಕಾಳ ಕವಣಾ ಘಾಲೀಲ ಘಾವೋ । ಆತಾ ಆಮ್ಹೀ ತೇ ಆಮ್ಹೀಚ ಆಹೋ । ತೇ ಆಮ್ಹೀಪಣಹೀ ವಾವೋ ಆಮುಚೇನಿ ಆಮ್ಹಾ ॥೬೯೦॥ ಇತ್ಯಾದಿ ಸಂಸಾರದೇಹಧರ್ಮ । ಜ್ಯಾಸೀ ಸ್ಪರ್ಶೇ ನ ಶಕೇ ಕರ್ಮಾಕರ್ಮ । ಮೋಹೇ ನವ್ಹೇಚಿ ಭವಭ್ರಮ । ತೋ ಭಕ್ತೋತ್ತಮ ಪ್ರಧಾನತ್ವೇ ॥೬೯೧॥ ರಾಯಾ ಆಣಿಕಹೀ ಏಕ ಖೂಣ । ತುಜ ಮೀ ಸಾಂಗೇನ ಸಂಪೂರ್ಣ । ಜ್ಯಾಚಾ ಕಾಮ ಹೋಯ ನಾರಾಯಣ । ತೇ ಭಕ್ತಲಕ್ಷಣ ಅವಧಾರೀ ॥೬೯೨॥

ನ ಕಾಮಕರ್ಮಬೀಜಾನಾಂ ಯಸ್ಯ ಚೇತಸೀ ಸಂಭವಃ ।

ಜನ್ಮ ಮತ್ತು ಮರಣ ಇವು ದೇಹದ ಹಣೆಗೆ ಹತ್ತಿಕೊಂಡಿರುವುವು, ಆದರೆ ಭಕ್ತನು ದೇಹದಲ್ಲಿದ್ದರೂ ಪೂರ್ಣವಾಗಿ ವಿದೇಹಿಯಾಗಿರುವನು, ಕಾರಣ ಹರಿಚರಣಗಳ ಧ್ಯಾನವನ್ನು ಮಾಡುತ್ತ ಮಾಡುತ್ತ ಈತನು ಹರಿರೂಪವೇ ಆಗುವನು ॥೬೮೦॥ ಆದ್ದರಿಂದ ಹರಿಭಕ್ತರಿಗೆ ದೇಹದ ಅಹಂಕಾರವು ಎಂದೂ ಹುಟ್ಟುವುದಿಲ್ಲ. ಹೇ ನೃಪನಾಥನೇ, ಈ ಭಕ್ತರ ಪೂರ್ಣತ್ವವನ್ನು ವರ್ಣಿಸುವೆ, ಕೇಳು ॥೬೮೧॥ ದೇಹಕ್ಕೆ ಹುಲಿಯು ಹಿಡಿದರೂ ಭಕ್ತನಾದವನು ಮನದಲ್ಲಿ ಎಂದೂ ಅಸ್ಥಿರನಾಗದೇ ಭಯಪಡುವುದಿಲ್ಲ. ಬಂಜೆಯ ಮಗನಿಗೆ ಶೂಲಕ್ಕೇರಿಸಿದಂತೆ, ಈ ದೇಹದ ಮರಣವೆಂದು ಈತನು ತಿಳಿದಿರುವನು ॥೬೮೨॥ ಪಾಲಖಿಯಲ್ಲಿ ತನ್ನ ನೆರಳು ಕುಳಿತು ಮೆರೆಯಬೇಕೆಂದು ಯಾರ ಮನದಲ್ಲಿಯೂ ಎಂದೂ ಹುಟ್ಟುವುದಿಲ್ಲ. ಅದರಂತೆ ದೇಹಕ್ಕೆ ದೊಡ್ಡ ಪದವಿ ಅಂದರೆ ಮಾನ, ಸನ್ಮಾನಗಳು ಪ್ರಾಪ್ತವಾಗಬೇಕೆಂಬ ಲೋಭವು ಭಕ್ತರಿಗೆ ಸ್ವಭಾವತಃ ಹುಟ್ಟುವುದಿಲ್ಲ ॥೬೮೩॥ ಅಥವಾ ದೇಹಕ್ಕೆ ಬೇಕಾದಷ್ಟು ವಿಪತ್ತುಗಳು ಒದಗಲಿ,ಭಕ್ತರ ಮನದಲ್ಲಿ ಈ ವಿಷಯಕ್ಕೆ ಯಾವ ಖೇದವೂ ಆಗುವುದಿಲ್ಲ. ಆಕಾಶಕ್ಕೆ ಶಸ್ತ್ರಘಾತದಿಂದ ಗಾಯವಾಗುವುದಿಲ್ಲ. ಈ ಪ್ರಕಾರ ಇವರಿರುವರು ॥೬೮೪॥ ಸೂರ್ಯನು ಚಿಕ್ಕ ಹೊಂಡದಲ್ಲಿ ಪ್ರತಿಬಿಂಬನಾಗುವನು. ಆದರೆ ಸೂರ್ಯನು ಬಿಂಬಿತ ಹೊಂಡವು ನಾನೇ ಎಂದು ಹೇಳಲಾರನು. ಅದರಂತೆ ಮಾತೆಯ ಉದರದಿಂದ ದೇಹವು ಜನ್ಮಕ್ಕೆ ಬರಲು "ನಾನು ಜನ್ಮಕ್ಕೆ ಬಂದೆನು" ಎಂದು ಭಕ್ತನು ಅನ್ನಲಾರನು ॥೬೮೫॥ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಸೂರ್ಯನು ಪ್ರಕಾಶಿಸುವನು. ಈ ಪ್ರಕಾಶದಿಂದ ಮೋಡಗಳಲ್ಲಿ ಗಂಧರ್ವ ನಗರವು ಭಾಸವಾಗುವುದು.(ಈ ನಗರವನ್ನು ನಾನು ಹುಟ್ಟಿಸಿದೆ ಎಂದು ಸೂರ್ಯನು ಹೇಳುವುದಿಲ್ಲ.) ಅದರಂತೆ ಅದೃಷ್ಟವು ದೇಹವನ್ನು ಸಾಂಭಾಳಿಸುವುದು. ಇದನ್ನು ನಾನು ರಕ್ಷಿಸುವೆ ಎಂದು ಈತನ ಮನದಲ್ಲಿ ಬರುವುದಿಲ್ಲ ॥೬೮೬॥ ಭಕ್ತನ ದೇಹಕ್ಕೆ ಮರಣ ಪ್ರಾಪ್ತವಾದರೂ ಆತನಿಗೆ ಹೇತುರಹಿತ ಹರಿಸ್ಮರಣೆಯು ಇರುವುದು. ಇದರಿಂದ ದೇಹವು ಬಿದ್ದು ಹೋದರೂ ತಾನು ಸಾಯದೇ ಪೂರ್ಣತ್ವದ ಯೋಗದಿಂದ ಪೂರ್ಣನಾಗಿಯೇ ಉಳಿಯುವುದು ॥೬೮೭॥ ಚಿಕ್ಕದಾದ ನಿಂತನೀರಿನ ಹೊಂಡವು ಬತ್ತಿ ಹೋಗಲು ಸೂರ್ಯನು ಅಲ್ಲಿ "ನಾನಿಲ್ಲನಾದೆ" ಎಂದು ತಿಳಿಯಲಾರನು.ತದ್ವತ್ ದೇಹವು ಹೋದರೂ ಭಕ್ತನು ಹರಿಸ್ಮರಣೆಯ ಯೋಗದಿಂದ ಸದ್ರೂಪನಾಗಿ ವಿಶ್ವದಲ್ಲಿ ಹೊಂದಿಕೊಳ್ಳುವನು ॥೬೮೮॥ ಹಗ್ಗದಲ್ಲಿ ಸರ್ಪದ ಭಾಸವಾಗಿ ಮೊದಲು ಅದನ್ನು ಹೊಡೆದು ಆಮೇಲೆ ಆ ಹಗ್ಗಕ್ಕೆ ಹಗ್ಗವನ್ನಾಗಿ ಮಾಡಬೇಕಾಗಿದೆಯೇ? ಇಲ್ಲ. ತನ್ನ ಮೂಲಸ್ವರೂಪದಿಂದ ಹಗ್ಗವು ಬದಲಾಗದೇ ಹಗ್ಗವಾಗಿಯೇ ಅಖಂಡವಾಗಿ ಇರುವುದು ॥೬೮೯॥ ಅದರಂತೆ ಭಕ್ತರಿಗೆ ದೇಹದ ಭಾವವಿರುವುದಿಲ್ಲ. ಆದ್ದರಿಂದ ಕಾಲನು ಯಾರ ಮೇಲೆ ಪ್ರಹಾರ ಮಾಡಬೇಕು? ಈಗ ನಾವೇ ನಾವಾಗಿರುವೆವು ಅಂದರೆ ಬ್ರಹ್ಮರೂಪರಾಗಿರುವೆವು ಮತ್ತು ಈ ಬ್ರಹ್ಮತ್ವದಿಂದ ದೇಹಕ್ಕೆ ನಾನು ಎನ್ನುವುದು ವ್ಯರ್ಥವಾಯಿತು ॥೬೯೦॥ ಈ ಪ್ರಕಾರವಾಗಿ ಸಂಸಾರದಲ್ಲಿನ ದೇಹಧರ್ಮವು ಮತ್ತು ಕರ್ಮಾಕರ್ಮವು ಈತನಿಗೆ ಮುಟ್ಟುವುದೇ ಇಲ್ಲ. ಮೋಹದಿಂದ ಈತನಿಗೆ ಭವಭ್ರಮವು ಆಗುವುದಿಲ್ಲ. ಈತನೇ ಮುಖ್ಯವಾಗಿ "ಭಕ್ತೋತ್ತಮ" ನಾಗಿರುವನು ॥೬೯೧॥ ರಾಜನೇ, ನಿನಗೆ ಇನ್ನೊಂದು ರಹಸ್ಯವನ್ನು ಹೇಳುವೆನು. ಈತನ ಕಾಮವೂ ಸಹ ನಾರಾಯಣನಾಗಿರುವನು. ಇಂತಹ ಭಕ್ತ ಲಕ್ಷಣವನ್ನು ಕೇಳು ॥೬೯೨॥

ವಾಸುದೇವೈಕನಿಲಯಃ ಸ ವೈ ಭಾಗವತೋತ್ತಮಃ ।।೪೦।।

ಅರ್ಥ: ಯಾರ ಮನದಲ್ಲಿ ವಿಷಯ ಭೋಗದ ಇಚ್ಛೆ, ಕರ್ಮಪ್ರವೃತ್ತೀ ಮತ್ತು ವಾಸನೆಯ ಬೀಜ ಉದಯವಾಗುವುದಿಲ್ಲವೋ ಮತ್ತು ಯಾರು ಏಕಮಾತ್ರ ಭಗವಾನ ವಾಸುದೇವನಲ್ಲಿ ನಿವಾಸ ಮಾಡುವನೋ, ಆತನೇ ಉತ್ತಮ ಭಗವದ್ಭಕ್ತನು.

ಹೃದಯೀ ಚಿಂತಿತಾ ಆತ್ಮಾರಾಮ । ತದ್ರೂಪ ಜಾಹಲಾ ಹೃದಯೀಚಾ ಕಾಮ । ತ್ಯಾಸೀ ಸರ್ವ ಕರ್ಮೀ ಪುರುಷೋತ್ತಮ । ದೇವದೇವೋತ್ತಮ ತುಷ್ಟೋನಿ ಪ್ರಗಟೇ ।।೯೩।। ತೇಥೇ ಜ್ಯಾ ಜ್ಯಾ ವಾಸನಾ ಹೃದಯವಾಸೀ । ತ್ಯಾಹೀ ಪಕಡಲ್ಯಾ ಹರಿಸುಖಾಸೀ । ಏವಂ ವಾಸನಾ ಜಡಲ್ಯಾ ಹರಿರೂಪಾಶೀ । ಹರಿ ಆಶ್ರಯೋ ತ್ಯಾಂಸೀ ದೃಢ ಜಾಹಲಾ ।।೯೪।। ತೇಥ ಜೋ ಜೋ ಭಕ್ತಾಂಸೀ ಕಾಮು । ತೋ ತೋ ಹೋಯ ಆತ್ಮಾರಾಮು । ವಾಸನೇಚಾ ನಿಜಸಂಭ್ರಮು । ಪುರುಷೋತ್ತಮು ಸ್ವಯೇ ಹೋಯೇ ।।೯೫।। ಜಗೀ ಹರಿಭಕ್ತಿ ಉತ್ತಮೋತ್ತಮ । ಭಕ್ತ ಕಾಮೇಚಿ ಕರೀ ನಿಷ್ಕಾಮ । ಚಾಳಿತಾ ವಾಸನಾ-ಅನುಕ್ರಮ । ನಿರ್ವಾಸನ ಬ್ರಹ್ಮ ಪ್ರಕಾಶೇ ಸ್ವಯೇ ।।೯೬।। ಗ್ರಾಸೋಗ್ರಾಸೀ ರಾಮಸ್ಮರಣ । ತೇ ಅನ್ನಚಿ ಹೋಯ ಬ್ರಹ್ಮ ಪೂರ್ಣ। ಭಕ್ತ ಭೋಗೀ ಮುಕ್ತಪಣ । ಯಾ ರೀತೀ ಜಾಣ ವಿದೇಹಾ ।।೯೭।। ಐಸಾ ಜೋ ನಿಷ್ಕಾಮನಿಷ್ಠ । ತೋಚಿ ಭಾಗವತಾಮಾಜೀ ಶ್ರೇಷ್ಠ । ತ್ಯಾಸೀಚ ಪ್ರಧಾನತ್ವಪಟ । ಜಾಣ ತೋ ವರಿಷ್ಠ ಉತ್ತಮತ್ವೇ ।।೯೮।। ಉತ್ತಮ ಭಕ್ತ ಕೈಸೇ ವಿಚರತೀ । ತ್ಯಾ ಭಕ್ತಾಂಚೀ ವಿಚರಣಸ್ಥಿತೀ । ತೇ ಸಾಂಗಿತಲೀ ರಾಯಾ ತುಜಪ್ರತೀ । ಯಥಾನಿಗುತೀ ತೀ ಶ್ಲೋಕೀ ।।೯೯।। ಉತ್ತಮ ಭಕ್ತ ಕೋಣೇ ಲಿಂಗೇಸೀ । ಆವಡತೇ ಜಾಹಲೇ ಭಗವಂತಾಸೀ । ತೇ ಲಕ್ಷಣ ಸಾಂಗಾವಯಾಸೀ । ಅತಿಉಲ್ಹಾಸೀ ಹರಿ ಬೋಲೇ ।।೨೦೦।।

ನ ಯಸ್ಯ ಜನ್ಮಕರ್ಮಾಭ್ಯಾಂ ನ ವರ್ಣಾಶ್ರಮಜಾತಿಭಿಃ । ಸಜ್ಜತೇಽಸ್ಮಿನ್ನಹಂಭಾವೋ ದೇಹೇ ವೈ ಸ ಹರೇಃ ಪ್ರಿಯಃ ।।೪೧।।

ಅರ್ಥ:- ಈ ಶರೀರದಲ್ಲಿ ಉತ್ತಮ ಕುಲದಜನ್ಮ,ತಪಸ್ಸುಗಳಾದಿ ಕರ್ಮಗಳಲ್ಲಿ,ವರ್ಣ, ಆಶ್ರಮ, ಜಾತಿ ಇವುಗಳ ಅಹಂಭಾವವನ್ನು ಇಡಲಾರದ ಭಕ್ತನು ಭಗವಂತನಿಗೆ ಪ್ರಿಯನಾಗುವನು.

ಪ್ರಾಕೃತಾ ದೇಹೀ ದೇಹಾಭಿಮಾನ । ತೇಣೇ ಗುರುಕೃಪಾ ಕರಿತಾ ಭಜನ । ಪಾಲಟೇ ಅಭಿಮಾನಾಚೇ ಚಿನ್ಹ । ಅಹಂ ನಾರಾಯಣಭಾವನಾಯುಕ್ತ ।।೨೦೧।। "ಅಹಂ ದೇಹ" ಹೇ ಸಮೂಳ ಮಿಥ್ಯಾ । "ಅಹಂ ನಾರಾಯಣ" ಹೇ ಸತ್ಯ ತತ್ತ್ವತಾ । ಐಶೀ ಭಾವನಾ ದೃಢ ಭಾವಿತಾ । ತೇ ಭಾವನಾ ಆಂತೌತಾ ಅಭಿಮಾನ ವಿರೇ ।।೨೦೨।। ಅಭಿಮಾನ ಹರಿಚರಣೀ ಲೀನ । ತೇವ್ಹಾ ಭಕ್ತ ಹೋಯ ನಿರಾಭಿಮಾನ । ತೇಚಿ ನಿರಹಂತೇಚೇ ಲಕ್ಷಣ । ಹರಿ

ಅಂತಃಕರಣದಲ್ಲಿ ಆತ್ಮಾರಾಮನ ಚಿಂತನೆಯನ್ನು ಮಾಡುತ್ತ ಮಾಡುತ್ತ ಹೃದಯದಲ್ಲಿ ಕಾಮವು ಆತ್ಮಾರಾಮನಾಗುವುದು. ಆತನಿಗೆ ದೇವಾಧಿದೇವ ಪುರುಷೋತ್ತಮನು ಸಂತುಷ್ಟನಾಗಿ ಸರ್ವ ಕರ್ಮಗಳಲ್ಲಿ ಪ್ರಕಟನಾಗುವನು ।।೯೩।। ಆಗ ಹೃದಯದಲ್ಲಿನ ವಾಸನೆಗಳೆಲ್ಲವೂ ಹರಿಸುಖಕ್ಕೆ ಅಂಟಿಕೊಂಡಿರುವುವು. ಈ ಪ್ರಕಾರವಾಗಿ ಎಲ್ಲ ವಾಸನೆಗಳಿಗೆ ಹರಿರೂಪವು ಕೂಡಿಕೊಂಡಿರುವುದರಿಂದ ಈತನಿಗೆ ಹರಿಯೇ ದೃಢವಾಗಿ ಆಶ್ರಯನಾಗಿರುವನು ।।೯೪।। ಆಗ ಭಕ್ತನ ಯಾವ ಯಾವ ಕಾಮವು (ವಿಷಯಾಭಿಲಾಷೆಯು) ಇರುವುದೋ, ಅದೆಲ್ಲವೂ ಆತ್ಮಾರಾಮನೇ ಆಗುವನು. ನಿಜಸಂಭ್ರಮದ ವಾಸನೆಗಳನ್ನೆಲ್ಲ ಪುರುಷೋತ್ತಮನೇ ಆಗುವನು ।।೯೫।। ಜಗತ್ತಿನಲ್ಲಿ ಹರಿಭಕ್ತಿಯು ಉತ್ತಮದಲ್ಲಿ ಉತ್ತಮವಾಗಿರುವುದು. ಇದು ಭಕ್ತರಿಗೆ ಕಾಮದಿಂದ ನಿಷ್ಕಾಮ ಮಾಡುವುದು. ಒಂದರಮೇಲೊಂದು ಹುಟ್ಟುವ ವಾಸನೆಗಳ ಅನುಕ್ರಮವನ್ನು ಏಕಾಗ್ರಚಿತ್ತದಿಂದ ನೋಡುತ್ತಿರಲು ನಿರ್ವಾಸನಾ ಬ್ರಹ್ಮವು ಸಹಜವಾಗಿ ತಾನಾಗುವನು. ಹೀಗೆ ಅಲೌಕಿಕ ಅನುಭವ ವಾಗುವುದು ।।೯೬।। ತುತ್ತುತುತ್ತಿಗೆ ರಾಮನ [illegible]ರಣೆಯನ್ನು ಮಾಡಿದರೆ, ಸೇವಿಸುವ ಅನ್ನವು ಪೂರ್ಣ ಬ್ರಹ್ಮವಾಗುವುದು. ಹೇ ಜನಕರಾಜನೇ, ಈ ರೀತಿಯಲ್ಲಿ ಭಕ್ತನು ವಿಷಯದಲ್ಲಿ ಮುಕ್ತಿಸ್ಥಿತಿಯನ್ನು ಅನುಭವಿಸುವನು ।।೯೭।। ಹೀಗೆ ನಿಷ್ಕಾಮನಿಷ್ಠರಾಗಿರುವವರೇ ಭಾಗವತರಲ್ಲಿ ಶ್ರೇಷ್ಠರು. ಇವರಿಗೆ ಪ್ರಧಾನವಾದ ಮಾನ ಕೊಡಲು ಯೋಗ್ಯರು. ಇವರು ತಮ್ಮ ಉತ್ತಮತ್ವದಿಂದಲೇ ಶ್ರೇಷ್ಠರಾಗಿರುವರೆಂದು ತಿಳಿ ।।೯೮।। ಹೇ ರಾಜನೇ, ಉತ್ತಮ ಭಕ್ತರು ಹೇಗೆ ವರ್ತಿಸುವರೆಂಬ ವರ್ತನೆಯ ಸ್ಥಿತಿಯನ್ನು ನಿನಗೆ ಮೂರು ಶ್ಲೋಕಗಳಿಂದ ಹೇಳಲಾಯಿತು ।।೯೯।। ಇದಾದನಂತರ ಉತ್ತಮ ಭಕ್ತನು ಯಾವ ಗುಣಗಳಿಂದ ಭಗವಂತನಿಗೆ ಪ್ರಿಯನಾಗುವನು ಎಂಬ ಆ ಲಕ್ಷಣಗಳನ್ನು ಹೇಳುವುದಕ್ಕಾಗಿ ಹರಿಯು ಅತ್ಯಂತ ಉಲ್ಹಾಸದಿಂದ ಹೇಳಹತ್ತಿದನು ।।೨೦೦।।

ಸಾಮಾನ್ಯ ಜನರಲ್ಲಿ ದೇಹಾತ್ಮಭಾವವು ಇರುವುದು. ಇವರು ಗುರುಕೃಪೆಯನ್ನು ಸಂಪಾದಿಸಿ ಭಜನೆಗೆ ಹತ್ತಲು ಇವರ ಅಭಿಮಾನದ ಸ್ವರೂಪವೂ "ನಾನು ಸ್ವತಃ ನಾರಾಯಣ ರೂಪನು" ಎಂಬ ಭಾವನೆಯಲ್ಲಿ ಬದಲಾಗುವುದು ।।೨೦೧।। "ನಾನು ದೇಹ" ಈ ಭಾವನೆಯು ಸಮೂಲವಾಗಿ ಮಿಥ್ಯೆಯಾಗಿದೆ. ವಸ್ತುತಃ "ನಾನು ನಾರಾಯಣ" ಇದೇ ನಿಜವಾಗಿರುವುದು. ಇಂತಹ ಭಾವನೆಯ ಅಭ್ಯಾಸವು ದೃಢವಾಗಲು ಆ ಭಾವನೆಯಲ್ಲಿಯೇ ಅಭಿಮಾನವು ಕರಗಿ ಹೋಗುವುದು ।।೨೦೨।।

ಸಂಪೂರ್ಣ ಸಾಂಗತ ॥೨೦೩॥ ನಿರಹಂಕಾರಾಚೀ ಲಕ್ಷಣೇ । ತೋ ಜನ್ಮೋನಿ ಮೀ ಜನ್ಮಲೋ ನ ಮ್ಹಣೇ । ಸುವರ್ಣಾಚೇ ಕೇಲೇ ಶುನೇ । ತರೀ ಸೋನೇ ಶ್ವಾನ ಹೋ ನೇಣೇ ತದಾಕಾರೇ ಅಸತಾ ॥೨೦೪॥ ತೇವೀ ಜನ್ಮಾದಿ ಅಹಂಭಾವೋ । ಉತ್ತಮ ಭಕ್ತಾ ನಾಹೀ ಪಹಾ ಹೋ । ಕರ್ಮಕ್ರಿಯೇಚಾ ನಿರ್ವಾಹೋ । "ಅಹಂಕರ್ತಾ" ಸ್ವಯಮೇವೋ ಮಾನೀನಾ ॥೨೦೫॥ ತೋ ಕರ್ಮ ಕರೀ ಪರೀ ನ ಮ್ಹಣೇ "ಮೀ ಕರ್ತಾ" । ಜೇವೀ ಗಗನೀ ಅಸೋನಿ ಸವಿತಾ । ಅಗ್ನಿ ಉಪಜವೀ ಸೂರ್ಯಕಾಂತಾ । ತೇವೀ ಕರೋನಿ ಅಕರ್ತಾ ನಿಜಾತ್ಮದೃಷ್ಟೀ ॥೨೦೬॥ ಸೂರ್ಯೇ ಸೂರ್ಯಕಾಂತೀ ಅಗ್ನಿಸಂಗ । ತೇಣೇ ಹೋತು ಯಾಗ ಕಾ ದಾಘ । ತೇ ಬಾಧೂ ನ ಶಕೇ ಸೂರ್ಯಾಚೇ ಅಂಗ । ತೇವೀ ಹಾ ಚಾಂಗ ಕರೂನಿ ಅಕರ್ತಾ ॥೨೦೭॥ ಅಚೇತನ ಲೋಹ ಚುಂಬಕೇ ಚಳೇ । ಲೋಹಕರ್ಮೇ ಚುಂಬಕ ನ ಮೈಳೇ । ತೇವೀ ಹಾ ಕರ್ಮೇ ಕರೂನಿ ಸಕಳೇ । ಅನಹಂಕೃತಿಬಳೇ ಅಕರ್ತಾ ॥೨೦೮॥ ದೇಹೀಚೀ ಕರ್ಮೇ ಅದೃಷ್ಟೀ ಹೋತೀ । ಮೀ ಕರ್ತಾ ಮ್ಹಣತಾ ತೀ ಬಾಧತೀ । ಭಕ್ತಾ ಸರ್ವ ಕರ್ಮೀ ಅನಹಂಕೃತೀ । ಪರಮಾತ್ಮಪ್ರತೀತೀ । ಭಜನಯೋಗೇ ॥೨೦೯॥ ಏವಂ ದೇಹೀಚೇ ಕರ್ಮೇ ನಿಪಜತಾ । ಪೂರ್ಣಪ್ರತೀತೀ ಭಕ್ತ ಅಕರ್ತಾ । ಕರ್ಮಾಕರ್ಮಾಚೀ ಅವಸ್ಥಾ । ನೇಘೇ ತೋ ಮಾಥಾ ಅನಹಂಕೃತೀ ॥೨೧೦॥ ಜರೀ ಜಾಹಲಾ ಉತ್ತಮ ವರ್ಣ । ತರೀ ತೋ ನ ಮ್ಹಣೇ "ಮೀ ಬ್ರಾಹ್ಮಣ" । ಸ್ಫಟಿಕ ಕುಂಕುಮೇ ದಿಸೇ ರಕ್ತವರ್ಣ । "ಮೀ ಲೋಹಿವಾ ಪೂರ್ಣ" ಸ್ಫಟಿಕ ನ ಮ್ಹಣೇ ॥೨೧೧॥ ಜ್ಯಾಸೀ ನಾಹೀ ದೇಹಾಭಿಮಾನ । ತೋ ಹಾತೀ ನ ಧರೀ ದೇಹಾಚಾ ವರ್ಣ । ತೈಸಾಚಿ ಆಶ್ರಮಾಭಿಮಾನ । ಭಕ್ತ ಸಜ್ಞಾನ ನ ಧರೀ ಕದಾ ॥೨೧೨॥ ಅಂಗಿ ಬಾಣಲಾ ಸನ್ಯಾಸು । ಪರೀ ತೋ ನ ಮ್ಹಣೇ ಮೀ ಪರಮಹಂಸು । ಜೇವೀ ನಟಾಅಂಗೀ ರಾಜವಿಲಾಸು । ತೋ ರಾಜುಲ್ಹಾಸು ನಟ ನ ಮಾನೀ ॥೨೧೩॥ ತೇವೀ ಆಶ್ರಮಾದಿ ಅವಸ್ಥಾ । ಭಕ್ತ ನ ಧರೀಚ ಸರ್ವಥಾ । ತೈಶೀಚ ಜಾತೀಚೀಹೀ ಕಥಾ । ನ ಘೇ ಮಾಥಾ ಭಕ್ತೋತ್ತಮ ॥೨೧೪॥ ಜಾತಿ ಉಂಚ ನೀಚ ಅಸಂಖ್ಯ । ಪರೀ ತೋ ನ ಮ್ಹಣೇ ಹೇ ಮಾಝೀಚಿ ಏಕ । ಜೇವೀ ಗಂಗಾತೀರೀ ಗಾಂವ ಅನೇಕ । ಪರೀ ಗಂಗಾ ಮಾಝಾ ಏಕ ಗಾಂವ ನ ಮ್ಹಣೇ ॥೨೧೫॥
ತೇವೀ ಜನ್ಮ-ಕರ್ಮ-ವರ್ಣಾಶ್ರಮ-ಜಾತೀ । ಪೂರ್ಣ ಭಕ್ತ ಹಾತೀ ನ ಧರತೀ । ಚಹೂ ದೇಹಾಂಚೀ ಅಹಂಕೃತೀ

ದೇಹಾಭಿಮಾನವು ಹರಿಚರಣಗಳಲ್ಲಿ ಲೀನವಾದಲ್ಲಿ ಭಕ್ತನು ನಿರಾಭಿಮಾನಿಯಾಗುವನು. ಈ ನಿರಹಂತದ ಲಕ್ಷಣವನ್ನು ಹರಿಯು ಪೂರ್ಣವಾಗಿ ಹೇಳುತ್ತಿರುವನು. ॥೨೦೩॥ ನಿರಹಂಕಾರದ ಲಕ್ಷಣಗಳು ಹೀಗಿವೆ. ಈತನು ಜನ್ಮ ಧರಿಸಿದರೂ ನಾನು ಹುಟ್ಟಿದೆ ಎಂದು ಹೇಳವುದಿಲ್ಲ. ಬಂಗಾರದಿಂದ ನಾಯಿಯನ್ನು ಮಾಡಲು, ಬಂಗಾರವು ನಾಯಿಯ ಆಕಾರದಲ್ಲಿದರೂ ನಾಯಿಯಾಗುವುದೇ ಇಲ್ಲ ॥೨೦೪॥ ಇದರಂತೆ ಜನ್ಮಾದಿಕಗಳ ಅಹಂಭಾವವು ಉತ್ತಮ ಭಕ್ತನಿಗಿರುವುದಿಲ್ಲ. ಈತನ ಕರ್ಮಕ್ರಿಯೆಗಳ ನಿತ್ಯಕ್ರಮವನ್ನು ನಡೆಸುವನು. ಆದರೆ ಅದರ "ಕರ್ತನು" ನಾನು, ಹೀಗೆ ಮಾತ್ರ ಹೇಳಲಾರನು ॥೨೦೫॥ ಸೂರ್ಯನು ಆಕಾಶದಲ್ಲಿದ್ದರೂ ಭೂಮಿಯಲ್ಲಿ ಸೂರ್ಯ ಮಣಿಯಿಂದ ಅಗ್ನಿಯನ್ನು ಹುಟ್ಟಿಸುವನು. ಅದರಂತೆ ಭಕ್ತನು ಎಲ್ಲ ಕರ್ಮಗಳನ್ನು ಮಾಡಿಯೂ ಆತ್ಮದೃಷ್ಟಿಯಿಂದ ಅಕರ್ತನಾಗಿರುವನು ॥೨೦೬॥ ಸೂರ್ಯನಿಂದ ಸೂರ್ಯಮಣಿ ಸಂಪರ್ಕಹೊಂದಿ ಅಗ್ನಿಯು ಉತ್ಪನ್ನವಾಗುವುದು. ಆ ಅಗ್ನಿಯಿಂದ ಯಜ್ಞಯಾಗಗಳಾಗಲಿ, ಇಲ್ಲವೇ ದಾವಾಗ್ನಿಯಾಗಿ ಪ್ರಜ್ವಲಿಸಲಿ, ಇದು ಸೂರ್ಯನ ಅಂಗವನ್ನು ಸುಡುವುದಿಲ್ಲ. ಇದರಂತೆ ಈತನು ಸಹ ಎಲ್ಲವನ್ನು ಮಾಡಿ ಶುದ್ಧ ಅಕರ್ತನಾಗಿರುವನು ॥೨೦೭॥ ಜಡ, ಅಚೇತನವಾದ ಕಬ್ಬಿಣವು ಲೋಹಚುಂಬಕದಿಂದ ಅಲುಗಾಡುವುದು. ಆದರೆ, ಈ ಚಲನೆಯಿಂದ ಲೋಹಚುಂಬಕಕ್ಕೆ ಯಾವುದೇ ಬಾಧೆಯಾಗಲಾರದು. ಅದು ಕ್ರಿಯಾವಾನವಾಗಲಾರದು. ಅದರಂತೆ ಈತನು ಸಹ ಸರ್ವ ಕರ್ಮಗಳನ್ನು ಮಾಡಿ ನಿರಾಭಿಮಾನದ ಬಲದಿಂದ ಅಕರ್ತನಾಗಿರುವನು ॥೨೦೮॥ ದೇಹದ ಕರ್ಮಗಳು ಪ್ರಾರಬ್ಧದಿಂದಾಗುತ್ತಿರುವುವು. ಅವುಗಳ ಕರ್ತನು "ನಾನು" ಎಂದರೆ ಅವು ಬಾಧಕವಾಗುವುವು. ಆದರೆ ಭಜನೆಯ ಯೋಗದಿಂದ, ಪರಮಾತ್ಮನ ಪ್ರತೀತಿಯಿಂದ ಸರ್ವ ಕರ್ಮಗಳಲ್ಲಿ ಭಕ್ತನು ನಿರಹಂಕಾರನಾಗಿಯೇ ಇರುವನು ॥೨೦೯॥ ಈ ಪ್ರಕಾರವಾಗಿ ದೇಹದ ಕರ್ಮಗಳು ನಡೆಯುತ್ತಿರಲು ಪೂರ್ಣ ಪ್ರತೀತಿಯಿಂದ ಅಂದರೆ ಪೂರ್ಣತ್ವದ ಅನುಭವದಿಂದ ಭಕ್ತನು ಅಕರ್ತನಾಗಿಯೇ ಇರುವನು. ಈತನು ಸ್ವಾಭಾವಿಕವಾಗಿ ನಿರಹಂಕೃತಿಯಿಂದ ಕರ್ಮಾಕರ್ಮಗಳ ಭಾರವನ್ನು ತಲೆಯಮೇಲೆ ಹೊರುವುದೇ ಇಲ್ಲ ॥೨೧೦॥ ತನ್ನ ಜನ್ಮವು ಉತ್ತಮ ಕುಲದಲ್ಲಾಗಿದ್ದರೂ "ನಾನು ಬ್ರಾಹ್ಮಣ" ಎಂದು ಈತನು ಹೇಳುವುದಿಲ್ಲ. ಕುಂಕುಮದಲ್ಲಿಟ್ಟ ಸ್ಫಟಿಕ ಮಣಿಯು ಕೆಂಪು ವರ್ಣವಾಗಿ ತೋರುವುದು. ಆದರೆ ಆ ಸ್ಫಟಿಕವು ನಾನು ಕೆಂಪಗಿದ್ದೇನೆ ಎಂದು ಹೇಳುವುದಿಲ್ಲ ॥೨೧೧॥ ದೇಹದ ಅಭಿಮಾನ ಇಲ್ಲದವನು ದೇಹದ ವರ್ಣವನ್ನು ಹಿಡಿದುಕೊಳ್ಳುವುದಿಲ್ಲ. ಅದರಂತೆ ಜ್ಞಾನಸಂಪನ್ನ ಭಕ್ತನು ಆಶ್ರಮದ ಅಭಿಮಾನವನ್ನು ಎಂದೂ ಹಿಡಿಯುವುದಿಲ್ಲ ॥೨೧೨॥ ಈತನು ದೇಹದಿಂದ ಸನ್ಯಾಸ ಆಶ್ರಮದಲ್ಲಿದ್ದರೂ ನಾನು "ಪರಮಹಂಸನು" ಎಂದು ಹೇಳಲಾರನು. ನಾಟಕದಲ್ಲಿ ನಟನ ಶರೀರದ ಮೇಲೆ ರಾಜನ ಪೋಷಾಕಗಳಿರಲು, ಆಗ ಆ ನಟನು "ನಾನು ರಾಜನಾದೆ" ಎಂದು ತಿಳಿಯುವುದಿಲ್ಲ ॥೨೧೩॥ ಅದರಂತೆ ಭಕ್ತನು ಆಶ್ರಮಾದಿ ಅವಸ್ಥೆಯ ಅಭಿಮಾನವನ್ನು ಹಿಡಿಯುವುದಿಲ್ಲ. ಹಾಗೆಯೇ ಉತ್ತಮ ಭಕ್ತನು ಜಾತಿಯ ಭಾರವನ್ನು ತಲೆಯ ಮೇಲೆ ಹೊರುವುದಿಲ್ಲ ॥೨೧೪॥ ಉಚ್ಚ, ನೀಚ ಹೀಗೆ ಅನೇಕ ಜಾತಿಗಳಿವೆ. ಆದರೆ ಅವುಗಳಲ್ಲಿ ಇಂತಹದ್ದೊಂದು ಜಾತಿಯು "ನನ್ನದು" ಎಂದು ಈತನು ಹೇಳುವುದಿಲ್ಲ. ಯಾವ ಪ್ರಕಾರವಾಗಿ ಗಂಗಾನದಿಯ ದಡಗುಂಟ ಅನೇಕ ಗ್ರಾಮ, ಪಟ್ಟಣಗಳಿದ್ದರೂ ಅವುಗಳಲ್ಲಿ ಒಂದನ್ನೂ ಗಂಗೆಯು "ನನ್ನದು" ಎಂದು ಹೇಳುವುದಿಲ್ಲ ॥೨೧೫॥

। ಸ್ವಪ್ನೀಹೀ ನ ಧರಿತೀ ಹರಿಭಕ್ತ ।।೨೧೬।। ಆಶಂಕಾ।। ತರೀ ಕಾಯ ವರ್ಣಾಶ್ರಮಜಾತೀ । ಭಕ್ತ ನಿಃಶೇಷ ಸಾಂಡಿತೀ । ತ್ಯಾಂತ ಅಸೋನಿ ನಾಹೀ ಅಹಂಕೃತೀ । ತೇ ಹೇ ಉಪಪತ್ತಿ ಬೋಲಿಲೋ ರಾಯಾ ।।೨೧೭।। ತೋ ಜೇವ್ಹಾ ಪಾವೇ ಜನ್ಮಪ್ರಾಪ್ತೀ । ತೇವ್ಹಾ ತ್ಯಾಸವೇ ನಾಹೀ ವರ್ಣಾಶ್ರಮ - ಜಾತೀ । ಜನ್ಮ ಅಭಿಮಾನೇ ಮಾಥಾ ಘೇತೀ । ಹೇ ಕುಳಗೋತ-ಜಾತೀ ಪೈ ಮಾಝೀ ।।೨೧೮।। ಐಸಾ ನಾಥಿಲ್ಯಾ ಅಹಂಕೃತೀ । ಬ್ರಹ್ಮಾದಿಕ ಗುಂತಲೇ ಠಾತೀ । ವಾಢವಿತಾ ವರ್ಣಾಶ್ರಮ ಜಾತೀ । ಸಜ್ಞಾನ ಗುಂತತೀ ನಿಜಾಭಿಮಾನೇ ।।೨೧೯।। ಐಶೀ ಅಹಂತೇಚೀ ಅತಿದುರ್ಧರ ಗತೀ । ಬ್ರಹ್ಮಾದಿಕಾ ನವ್ಹೇ ನಿವೃತ್ತೀ । ಸೋಡೂ ನೇಣೇ ಗಾ ಕಲ್ಪಾಂತೀ । ಸಜ್ಞಾನ ಠಕೀಜೇತೀ ನಿಜಾಭಿಮಾನೇ ।।೨೨೦।। ಯೇಥೇ ಭಕ್ತಾಂಚ್ಯಾ ಭಾವಿಕ ಸ್ಥಿತೀ । ಅಭಿಮಾನ ತುಟೇ ಭಗವದ್ಭಕ್ತೀ । ತೇ ನಿರಭಿಮಾನ ಭಕ್ತಸ್ಥಿತೀ । ರಾಯಾ ತುಜಪ್ರತೀ ದಾವಿಲೀ ಸ್ವಯೇ ।।೨೨೧।। ಸಮೂಳ ದೇಹಾಭಿಮಾನ ಝಡೇ । ತೋ ದೇಹೀಚಿ ದೇವಾಸೀ ಆವಡೇ । ತೇ ಭಕ್ತ ಜಾಣ ವಾಡೇಕೋಡೇ । ಲಳೇವಾಡೇ ಹರೀಚೇ ।।೨೨೨।। ತೇ ಜೇಜೇ ಮಾಗತೀ ಕೌತುಕೇ । ತೇ ದೇವೋಚೀ ಹೋಯ ತಿತುಕೇ । ತ್ಯಾಂಚೇನಿ ಪರಮ ಸಂತೋಖೇ । ದೇವ ಸುಖಾವಲಾ ಸುಖೇ ದೋಂದಿಲ ಹೋಯೇ ।।೨೨೩।। ತೋ ಜಿಕಡೇ ಜಿಕಡೇ ಜಾಯೇ । ದೇವ ನಿಜಾಂಗೇ ತೇಉತಾ ಠಾಯೇ । ಭಕ್ತ ಜೇಉತೀ ವಾಸ ಪಾಹೇ । ದೇವ ತೇ ತೇ ಹೋಯ ಪದಾರ್ಥ ।।೨೨೪।। ತ್ಯಾಸೀ ಝಣೀ ಕೋಣಾಚೀ ದೃಷ್ಟೀ ಲಾಗೇ । ಯಾಲಾಗೀ ದೇವೋ ತ್ಯಾ ಪುಢೇ ಮಾಗೇ । ತ್ಯಾಸಭೋವತಾ ಸರ್ವಾಂಗೇ । ಭಕ್ತೀಚೇನಿ ಪಾಂಗೇ ಭುಲಲಾ ಚಾಲೇ ।।೨೨೫।। ನಿರಭಿಮಾನಾಚೇನಿ ನಾಂವೇ । ದೇವ ನಿಜಾಂಗೇ ಕರೀ ಆಘವೇ । ಜೇವೀ ಕಾ ತಾನ್ಹ್ಯಾಚೇನಿ ಜೇವೇ । ಜಿವೇ ಭಾವೇ ನಿಜಜನನೀ ।।೨೨೬।। ಏವಂ ರಾಖಿತಾ ನಿಜಭಕ್ತಾಂಸೀ । ತರೀ ದೇವ ಧಾಕೇ ನಿಜಮಾನಸೀ । ಜರೀ ಹಾ ಮಜಸೀ ಆಲಾ ಐಕ್ಯಾಸೀ । ತರೀ ಹೇ ಪ್ರೀತಿ ಕೋಣಾಸೀ ಮಗ ಕರಾವೀ ।।೨೨೭।। ಕೋಣಾಸೀ ಪಾಹೋ ಕೃಪಾದೃಷ್ಟೀ । ಕೋಣಾಪೇ ಸಾಂಗೋ ನಿಜಗೋಷ್ಟೀ । ಕೋಣಾಸೀ ಖೇವೇ ದೇವೋ ಮಿಠೀ । ಐಶೀ ಆವಡೀ ಮೋಠೀ ಪ್ರೇಮಾಚೀ ।।೨೨೮।।

ಯಾ ಕಾಕುಳತೀ ಶ್ರೀಅನಂತು । ಐಕ್ಯಭಾವೇ ಕರೀ ನಿಜಭಕ್ತು । ಮಗ ದೇವೋ ಭಕ್ತ ದೋಹೀ ಆಂತು । ದೇವೋಚಿ

ಅದರಂತೆ ಪೂರ್ಣ ಭಕ್ತರು ಜನ್ಮ, ಕರ್ಮ, ವರ್ಣಾಶ್ರಮ,ಜಾತಿ ಇವುಗಳ ಅಭಿಮಾನವನ್ನು ಹಿಡಿಯುವುದಿಲ್ಲ. ಇವರು ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ ಎಂಬ ನಾಲ್ಕು ದೇಹದ ಅಭಿಮಾನವನ್ನು ಸ್ವಪ್ನದಲ್ಲಿಯೂ ಹಿಡಿಯುವುದಿಲ್ಲ ।।೨೧೬।। (ಸಂಶಯ) ಭಕ್ತರಾದವರು ವರ್ಣಾಶ್ರಮ,ಜಾತಿ ಎಲ್ಲವನ್ನು ಬಿಟ್ಟುಬಿಡುವರೇ? (ಉತ್ತರ) ಹಾಗೇನಿಲ್ಲ, ಅವರು ಅವುಗಳಲ್ಲಿದ್ದು ಅವುಗಳ ಅಹಂಕಾರವನ್ನು ಧರಿಸುವುದಿಲ್ಲ. ಹೀಗಿರುವ ಅವರ ಪ್ರತಿಪಾದನೆಯನ್ನು ನಿನಗೆ ತಿಳಿಸಿದೆ ।।೨೧೭।। ಜೀವವು ಜನ್ಮಕ್ಕೆ ಬರಲು ಅದರ ಜೊತೆಯಲ್ಲಿಯೇ ವರ್ಣಾಶ್ರಮ, ಜಾತಿ ಇತ್ಯಾದಿ ಯಾವುದೂ ಬಂದಿರುವುದಿಲ್ಲ. ಹೀಗಿರಲು ಜನ್ಮಾಭಿಮಾನದಿಂದ ಕುಲ, ಗೋತ್ರ, ಜಾತಿ ಇವು ನನ್ನವು ಎಂದು ತನ್ನ ತಲೆಯ ಮೇಲೆ ಹೊರುವರು ।।೨೧೮।। ಹೀಗೆ ಇಲ್ಲದ ಅಭಿಮಾನದಿಂದ ಬ್ರಹ್ಮಾದಿಕರು ಸಹ ಸಿಲುಕಿಕೊಳ್ಳುವರು. ವರ್ಣಾಶ್ರಮ ಧರ್ಮಗಳನ್ನು ಮತ್ತು ಜಾತಿಗಳನ್ನು ಬೆಳೆಸಿ ಮಹಾ ಮಹಾ ವಿದ್ವಾಂಸರೂ ಸಹ ತಮ್ಮ ತಮ್ಮ ಅಭಿಮಾನಗಳಲ್ಲಿ ಸಿಕ್ಕಿಕೊಂಡಿರುವರು ।।೨೧೯।। ಅಹಂಕಾರದ ಇಷ್ಟೊಂದು ಬಲಿಷ್ಠವಾದ ದುರ್ಧರ ಗತಿಯಾಗಿರುವುದು. ಬ್ರಹ್ಮಾದಿಕರಿಗೂ ಇದರಿಂದ ನಿವೃತ್ತಿಯಾಗಿರುವುದಿಲ್ಲ. ಕಲ್ಪಾಂತದವರೆಗೂ ಇವರಿಗೆ ಇದರಿಂದ ಬಿಡುಗಡೆಯಾಗಲಾರದು. ಘಟಾನುಘಟೀ ಜ್ಞಾನಸಂಪನ್ನರೂ ಸಹ ಸ್ವಾಭಿಮಾನದಿಂದ ಮೋಸಕ್ಕೆ ಒಳಗಾಗುವರು ।।೨೨೦।। ಆದರೆ, ಇಲ್ಲಿ ಭಕ್ತರ ಭಾವಿಕಸ್ಥಿತಿಯಲ್ಲಿ ಭಗವದ್ಭಕ್ತಿಯಿಂದ ಅಭಿಮಾನವು ಇಲ್ಲದಾಗುವುದು. ಹೇ ರಾಜನೇ, ಈ ಭಕ್ತಿಯ ನಿರಾಭಿಮಾನ ಸ್ಥಿತಿಯನ್ನು ನಿನಗೆ ತೋರಿಸಿಕೊಟ್ಟಿರುವೆ ।।೨೨೧।। ಯಾರ ದೇಹಾಭಿಮಾನವು ಸಂಪೂರ್ಣವಾಗಿ ಉದುರಿ ಹೋಗಿರುವುದೋ, ಅವರ ದೇಹವು ದೇವರಿಗೆ ಪ್ರಿಯವಾಗುವುದು. ಹೀಗೆ ಭಕ್ತರು ಮಾತ್ರ ದೇವರಿಗೆ ಅತ್ಯಂತ ಸಲಿಗೆಯ ಪ್ರೇಮಕ್ಕೆ ಪಾತ್ರರಾಗುವರು. ಇದನ್ನು ಲಕ್ಷದಲ್ಲಿಡು ।।೨೨೨।। ಇವರು ಏನೇನು ಕೌತುಕದಿಂದ ಕೇಳುವರೋ, ಅಲಲ್ಲಿ ದೇವರು ಸ್ವತಃ ಕೊಡಲು ನಿಂತಿರುವನು. ಇವರು ಯಾವುದರ ಇಚ್ಛೆ ಮಾಡುವರೋ, ಅವುಗಳನ್ನು ದೇವರು ತಾನೇ ಆಗುವನು. ಇವರ ಪರಮ ಸಂತೋಷದಿಂದ ದೇವನು ಸಹ ಸುಖಿ,ಸಂತುಷ್ಟ ಮತ್ತು ಪುಷ್ಟಿಯಾಗುವನು ।।೨೨೩।। ಭಕ್ತನು ಎಲ್ಲೆಲ್ಲಿ ಹೋಗುವನೋ, ಅಲ್ಲಲ್ಲಿ ದೇವರು ಸ್ವತಃ ನಿಂತಿರುವನು. ಭಕ್ತನು ಯಾವುದನ್ನು ಇಚ್ಛಿಸುವನೋ ಅಥವಾ ಯಾವ ಯಾವ ಪದಾರ್ಥಗಳನ್ನು ನೋಡುವನೋ ಆಯಾ ಪದಾರ್ಥಗಳನ್ನು ದೇವರೇ ಆಗುವನು ।।೨೨೪।। ಈತನಿಗೆ ಕದಾಚಿತ್ ದೃಷ್ಟಿಯಾದೀತೆಂದು ದೇವರು ಆತನ ಹಿಂದೆ, ಮುಂದೆ, ಸುತ್ತಲೂ ಸರ್ವಾಂಗದಿಂದಿರುವನು. ಇವರ ಭಕ್ತಿಗೆ ಭುಲಾಯಿಸಿ ಇವರ ಸಂಗಡವೇ ನಡೆಯುವನು ।।೨೨೫।। ತಾಯಿಯು ತನ್ನ ಕೂಸಿನ ಪ್ರೇಮಕ್ಕಾಗಿ ಜೀವಭಾವದಿಂದ ಸೇವೆಯನ್ನು ಮಾಡುವಂತೆ ಭಕ್ತರ ನಿರಾಭಿಮಾನಕ್ಕಾಗಿ ದೇವರು ಸ್ವತಃ ಆತನ ಎಲ್ಲವನ್ನು ಮಾಡುವನು ।।೨೨೬।। ಈ ಪ್ರಕಾರವಾಗಿ ದೇವರು ತನ್ನ ಭಕ್ತರ ಸಂರಕ್ಷಣೆಯನ್ನು ಮಾಡುತ್ತಿರಲು ಆತನ ಮನದಲ್ಲಿ ಒಂದು ಅಂಜಿಕೆ ಹುಟ್ಟುವುದು. ಅದೇನಂದರೆ ಈ ಭಕ್ತನು ನನ್ನಲ್ಲಿ ಐಕ್ಯನಾದರೆ,ನಾನು ಯಾರನ್ನು ಪ್ರೀತಿಸಲಿ? ।।೨೨೭।। ಯಾರನ್ನು ಕೃಪಾದೃಷ್ಟಿಯಿಂದ ನೋಡಲಿ? ಗುಟ್ಟಾದ ಮಾತುಗಳನ್ನು ಯಾರಲ್ಲಿ ನುಡಿಯಲಿ? ನನ್ನ ನಾಲ್ಕು ಭುಜಗಳಿಂದ ಯಾರನ್ನು ಆಲಿಂಗಿಸಲಿ? ಹೀಗೆ ದೇವರ ಪ್ರೇಮದ ಅಪೇಕ್ಷೆಯು ಬಹು ವಿಲಕ್ಷಣವಾಗಿರುವುದು ।।೨೨೮।।

ನಾಂದತು ಸ್ವಾನಂದೇ ॥೭೨೯॥ ಏವಂ ಆಪುಲೀ ಆಪಣ ಭಕ್ತೀ । ಕರೀತಸೇ ಅನನ್ಯಪ್ರೀತೀ । ಹೇಚಿ ನಿರೂಪಣ ವೇದಾಂತೀ । "ಅದ್ವೈತಭಕ್ತಿ" ಯಾ ನಾಂವ ॥೭೩೦॥ ತ್ಯಾಸೀ ಚಹೂ ಭುಜೀ ಆಲಿಂಗಿತಾ । ಹಾಂವ ನ ಬಾಣೇಚಿ ಭಗವಂತಾ । ಮಗ ರಿಘೋನಿಯಾ ಆಂತೌತಾ । ಪರಮಾರ್ಥತಾ ಆಲಿಂಗೀ ॥೭೩೧॥ ಐಸೇ ಖೇವಾಚೇ ಮಿಸ ಕರೀ । ತೇಣೇ ಭಕ್ತ ಆಣೀ ಆಪಣಾಭೀತರೀ । ಮಗ ಆಪಣ ತ್ಯಾ ಆಂತಬಾಹೇರೀ । ಅತಿಪ್ರೀತೀವರೀ ಕೋಂದಾಟೇ ॥೭೩೨॥ ನವಲ ಆವಡೀಚಾ ನಿರ್ವಾಹೋ । ಝಗೇ ಯಾಸೀ ಲಾಗೇ ಕಾಳಾಚಾ ಘಾವೋ । ಯಾಲಾಗೀ ನಿಜಭಕ್ತಾಂಚಾ ದೇಹೋ । ದೇವಾಧಿದೇವೋ ಸ್ವಯೇ ಹೋಯೇ ॥೭೩೩॥ ಐಸಾ ಜೋ ಪಢಿಯಂತಾ ಪರಮ । ತೋ ಭಾಗವತಾಮಾಜೀ ಉತ್ತಮೋತ್ತಮ । ಯಾಪರೀ ಭಾಗವತಧರ್ಮ । ಪುರುಷೋತ್ತಮ ವಶ್ಯ ಕರೀ ॥೭೩೪॥ ಐಶೀಯಾ ಉತ್ತಮ ಭಕ್ತಾ । ಭೇದಾಚೀ ಸಮೂಳ ನುರೇ ವಾರ್ತಾ । ಹೇಚಿ ಅಭೇಧ ಭಕ್ತಕಥಾ । ಐಕ ನೃಪನಾಥಾ ಸಾಂಗೇನ ॥೭೩೫॥

ನ ಯಸ್ಯ ಸ್ವಃ ಪರ ಇತಿ ವಿತ್ತೇಷ್ವಾತ್ಮನಿ ವಾ ಭಿದಾ । ಸರ್ವಭೂತ ಸಮಃ ಶಾಂತಃ ಸ ವೈ ಭಾಗವತೋತ್ತಮಃ ॥೫೨॥

ಅರ್ಥ:- ಯಾರು ಧನ,ಸಂಪತ್ತು ಅಥವಾ ಶರೀರ ಇತ್ಯಾದಿಗಳಲ್ಲಿ ಇದು ನನ್ನದು, ಅದು ನಿನ್ನದು ಎಂಬ ಭೇದಭಾವವನ್ನಿಡುವುದಿಲ್ಲ ಮತ್ತು ಸರ್ವ ಪದಾರ್ಥಗಳಲ್ಲಿ ಸ್ವರೂಪದಿಂದ ಪರಮಾತ್ಮನನ್ನು ಕಾಣುವನು ಮತ್ತು ಸಮಭಾವವನ್ನು ಇಡುವನು. ಯಾವುದೇ ಘಟನೆಯಿಂದ ಅಥವಾ ಸಂಕಲ್ಪಗಳಿಂದ ಈತನು ಅಶಾಂತನಾಗದೇ ಶಾಂತಾಗಿರುವನು. ಈತನು ಭಗವಂತನ ಉತ್ತಮ ಭಕ್ತನು.

ಅದ್ವೈತಭಜನಾಚೇ ವೋಜೇ । ಮೀ ಮಾಝೇ ತೂ ಆಣಿ ತುಝೇ । ಜ್ಯಾಸೀ ನುರೇಚಿ ಸಹಜ ನಿಜೇ । ತೋ ಭಕ್ತ ಮಾನಿಜೇ ಉತ್ತಮತ್ವೇ ॥೭೩೬॥ ಯಾಪರೀ ಜ್ಯಾಚೇ ಚಿತ್ತಾಚೇ ಠಾಯೀ । ಭೇದು ನಿಃಶೇಷ ಉರಲಾ ನಾಹೀ । ತೇಥ ಮಾಝೇ ತುಝೇ ಹೇ ಕಾಂಹೀ । ತೇ ನಿಮಾಲೇ ಪಾಹೀ ಜೇಥೀಚ್ಯಾ ತೇಥೇ ॥೭೩೭॥ ಜೇವೀ ಅಗ್ನೀಶೀ ಜೇ ಜೇ ಟೇಕೇ । ತೇ ತೇ ಅಗ್ನೀಚಿ ಹೋಊನಿ ಠಾಕೇ । ತೇವೀ ಅಭೇದಭಕ್ತ ಜೇ ಜೇ ದೇಖೇ । ತೇ ತೇ ಯಥಾಸುಖೇ ಸ್ವಸ್ವರೂಪ ಹೋಯೇ ॥೭೩೮॥ ನಿಜವಿತ್ತ ಆಣೇಕಪಾಶೀ ದೇತಾ । ಆವಾಂಕೂ ನುಪಜೇ ತ್ಯಾಚಿಯಾ ಚಿತ್ತಾ । ನ ದೇಖೇ ಪಾರಕೇಪಣಾಚೀ ವಾರ್ತಾ । ವಿಕಲ್ಪ ಘಾಲಿತಾ ತರೀ ಉಪಜೇನಾ ॥೭೩೯॥ ಡಾವೇ ಹಾತೀಚೇ ಪದಾರ್ಥಾ । ಉಜವೇ ಹಾತೀ ಸ್ವಯೇ ದೇತಾ । ಯೇಥೇ ಕೋಣ ದೇತಾ ಕೋಣ ಘೇತಾ । ತೇವೀ ಏಕಾತ್ಮತಾ ಸರ್ವಭೂತೀ ॥೭೪೦॥
ಆಪಣಾಸಕಟ ಸರ್ವ ದೇಹೀ । ಭಕ್ತಾ ಭಗವಂತಾವಾಂಚೂನಿ ನಾಹೀ । ಯಾಲಾಗೀ ಶಾಂತೀ ತ್ಯಾಚೇ ಠಾಯೀ ।

ಈ ಕಕ್ಕುಲತೆಗಾಗಿ ಆತನಿಗೆ ಶ್ರೀಅನಂತನು ಐಕ್ಯಭಾವದಿಂದ ತನ್ನ ಭಕ್ತನನ್ನಾಗಿ ಉಳಿಸಿ ಕೊಳ್ಳುವನು. ದೇವರು ಮತ್ತು ಭಕ್ತನು ಈ ಎರಡರಲ್ಲಿಯೂ ದೇವರು ತಾನೇ ಸ್ವಾನಂದದಿಂದ ವ್ಯವಹರಿಸುವನು ॥೭೨೯॥ ಈ ಪ್ರಕಾರವಾಗಿ ದೇವನು ಅನನ್ಯ ಪ್ರೀತಿಯಿಂದ ತನ್ನ ಭಕ್ತಿಯನ್ನು ತಾನೇ ಮಾಡುತ್ತಿರುವನು. ಇದನ್ನೇ ! ವೇದಾಂತದಲ್ಲಿ ನಿರೂಪಿಸಿರುವುದು ಮತ್ತು ಇದರ ಹೆಸರೇ "ಅದ್ವೈತ ಭಕ್ತಿ" ಯಾಗಿರುವುದು ॥೭೩೦॥ ಇಂತಹ ಭಕ್ತನಿಗೆ ನಾಲ್ಕು ಭುಜಗಳಿಂದ ಆಲಿಂಗಿಸುತ್ತಿರಲು ದೇವರಿಗೆ ತೃಪ್ತಿಯಾಗದೇ ಆತನ ಒಳಗೆ ಸೇರಿ ಪರಮಾರ್ಥತಃ ಆಲಂಗಿಸುವನು ॥೭೩೧॥ ಈ ಪ್ರಕಾರವಾಗಿ ಆಲಿಂಗನದ ನಿಮಿತ್ತ ಮಾಡಿ ಭಕ್ತನನ್ನು ತನ್ನಲ್ಲಿ ಆಕರ್ಷಿಸುವನು. ತದನಂತರ ಆತನ ಒಳ ಹೊರಗೆ ತಾನೇ ಅತ್ಯಂತ ಪ್ರೇಮದಿಂದ ತುಂಬಿಕೊಂಡಿರುವನು ॥೭೩೨॥ ದೇವರ ಪ್ರೇಮದ ಸ್ವರೂಪವು ಬಹಳ ಚಮತ್ಕಾರದ್ದಾಗಿದೆ. ಭಕ್ತನಿಗೆ ಕಾಲನ ಹೊಡೆತವು ಬೀಳಬಾರದೆಂದು ದೇವಾಧಿ ದೇವನು ತನ್ನ ಭಕ್ತನ ದೇಹವನ್ನು ತಾನೇ ಆಗುವನು ॥೭೩೩॥ ಹೀಗೆ ಯಾವನು ದೇವನ ಅತ್ಯಂತ ಪ್ರೀತಿಗೆ ಪಾತ್ರನಾಗಿರುವನೋ, ಅವನೇ ಭಾಗವತರಲ್ಲಿ "ಉತ್ತಮೋತ್ತಮನು". ಈ ಪ್ರಕಾರದ ಭಾಗವತಧರ್ಮವು ಪುರುಷೋತ್ತಮನನ್ನು ವಶಮಾಡಿಕೊಳ್ಳುವುದು ॥೭೩೪॥ ಇಂತಹ ಉತ್ತಮ ಭಕ್ತನಿಗೆ ಭೇದದ ವಾರ್ತೆಯೇ ಉಳಿಯುವುದಿಲ್ಲ. ಹೇ ರಾಜನೇ, ಇದೇ ಭಕ್ತಿಯ ಅಭೇದಭಾವದ ಕಥೆಯನ್ನು ನಿನಗೆ ಹೇಳುವೆ ॥೭೩೫॥

ಅದ್ವೈತ ಭಜನೆಯ ಯೋಗದಿಂದ ನಾನು ಮತ್ತು ನನ್ನದು ಅಥವಾ ನೀನು ಮತ್ತು ನಿನ್ನದು, ಇದು ಆತನಲ್ಲಿ ಸ್ವಲ್ಪವೂ ಉಳಿಯುವುದಿಲ್ಲ. ಈತನನ್ನೇ "ಉತ್ತಮ ಭಕ್ತ" ಎಂದು ಮನ್ನಿಸಬೇಕು ॥೭೩೬॥ ಈ ರೀತಿಯಿಂದ ಆತನ ಚಿತ್ತದಲ್ಲಿ ಭೇಧವು ಮೂಲತಃ ಉಳಿಯುವುದಿಲ್ಲ ಅಲ್ಲಿ ನನ್ನ,ನಿನ್ನ ಎಂಬುವದು ಏನೂ ಇರುವುದಿಲ್ಲ. ಅವು ಇದ್ದಲ್ಲಿಯೇ ಇಲ್ಲದಾಗುವುವು ॥೭೩೭॥ ಅಗ್ನಿಯಲ್ಲಿ ಯಾವ ಯಾವ ಪದಾರ್ಥಗಳು ಬಂದು ಸೇರುವುವೋ, ಅವೆಲ್ಲವೂ ಅಗ್ನಿಯೇ ಆಗುವುವು. ಅದರಂತೆ ಅಭೇದನಾದ ಭಕ್ತನು ಯಾವುದನ್ನು ನೋಡುವನೋ, ಅವುಗಳೆಲ್ಲವೂ ಸ್ವಾಭಾವಿಕವಾಗಿ ಆತ್ಮಸ್ವರೂಪವಾಗುವುವು ॥೭೩೮॥ ತನ್ನ ದ್ರವ್ಯವನ್ನು ಬೇರೆಯವರಲ್ಲಿ ಕೊಡುವಾಗ್ಗ್ಯೆ, ಈತನ ಚಿತ್ತದಲ್ಲಿ ಅನುಮಾನವು ಬರುವುದಿಲ್ಲ. ಇವನು ಬೇರೆಯವನು ಎಂಬ ವಾರ್ತೆಯೂ ಈತನಲ್ಲಿ ಇರುವುದಿಲ್ಲ ಮತ್ತು ಯಾರಾದರೂ ವಿಕಲ್ಪಗೊಳಿಸಿದರೂ ಈತನ ಮನವು ಮನ್ನಿಸುವುದಿಲ್ಲ ॥೭೩೯॥ ಎಡಗೈಯಲ್ಲಿನ ಪದಾರ್ಥವನ್ನು ಬಲಗೈಗೆ ಕೊಡಲು, ಕೊಟ್ಟವನು ಯಾರು? ತೆಗೆದುಕೊಂಡವನು ಯಾರು ಒಬ್ಬನೇ. ಅದರಂತೆ ಸರ್ವಪ್ರಾಣಿಗಳಲ್ಲಿ ಈತನು ಏಕಾತ್ಮತೆಯಿಂದಿರುವನು ॥೭೪೦॥

ಸ್ವಾನಂದೇ ಪಾಹೀ ನಿಃಶಂಕ ನಾಂದೇ ।।೭೪೧।। ಐಶಿಯಾ ನಿಜಸಮಶಾಂತೀ । ಭಗವದ್ಭಕ್ತ ಕ್ರೀಡಾ ಕರಿತೀ । ಯಾಲಾಗೀ ಉತ್ತಮತ್ವಾಚೀ ಪ್ರಾಪ್ತಿ । ಸುನಿಶ್ಚಿತೀ ಪಾವಲೇ ।।೭೪೨।। ಹರಿಭಕಾಂಚೀ "ನಿರಪೇಕ್ಷತಾ" । ಐಕ ಸಾಂಗೇನ ನೃಪನಾಥಾ । ಉತ್ತಮ ಭಕ್ತಾಂಚೀ ಸಾಂಗತಾ ಕಥಾ । ಅತಿಉಲ್ಹಾಸತಾ ಹರೀಸೀ ।।೭೪೩।। ನಿರಪೇಕ್ಷ ತೋ ಮುಖ್ಯ "ಭಕ್ತ" । ನಿರಪೇಕ್ಷ ತೋ ಅತಿ "ವಿರಕ್ತ" । ನಿರಪೇಕ್ಷ ತೋ "ನಿತ್ಯಮುಕ್ತ" । ಸತ್ಯ ಭಗವಂತ ನಿರಪೇಕ್ಷೀ ।।೭೪೪।।

ತ್ರಿಭುವನವಿಭವಹೇತವೇಽಪ್ಯಕುಂಠಸ್ಮೃತಿರಜಿತಾತ್ಮಸುರಾದಿಭಿರ್ವಿಮೃಗ್ಯಾತ್ ।
ನ ಚಲತಿ ಭಗವತ್ಪದಾರವಿಂದಾಲ್ಲವನಿಮಿಷಾರ್ಧಮಪಿ ಯಃ ಸ ವೈಷ್ಣವಾಗ್ರ್ಯಃ ।।೬೩।।

ಅರ್ಥ: ತ್ರಿಭುವನ ರಾಜ್ಯಕ್ಕಾಗಿಯೂ ಯಾರು ಕ್ಷಣಾರ್ಧಸಹಿತ ಭಗವತ್‌ಚರಣಗಳ ಭಜನೆಯನ್ನು ಬಿಡಲಾರನೋ, ಆತನೇ ಶ್ರೇಷ್ಠ ವೈಷ್ಣವನು. ಭಗವಂತನ ಚರಣಬಿಟ್ಟು ಯಾವುದೇ ಸಾರವಾಗಿರುವುದಿಲ್ಲವೆಂಬುದು ಈತನು ತಿಳಿದಿರುವನು. ದೇವಾದಿಕರಿಗೂ ದುರ್ಲಭವಾದ ಹರಿಯಲ್ಲಿ ಈತನ ಸರ್ವಭಾವವಿರುವುದು. ಹರಿಯನ್ನು ಸರ್ವದೇವತೆಗಳು ಚಿಂತಿಸುವರು. ಹರಿಚರಣ ಹೊರತಾಗಿ ಎಲ್ಲವೂ ತುಚ್ಛವಾಗಿರುವುವು. ಇದನ್ನು ಯಾವಾಗಲೂ ಅರಿತವನು ಹರಿಚರಣಗಳಿಂದ ಕದಲುವುದಿಲ್ಲ.

ಸಪ್ರೇಮಭಾವೇ ಕರಿತಾ ಭಕ್ತೀ । ಹರಿಚರಣೀ ಠೇವಿಲೀ ಚಿತ್ತವೃತ್ತೀ । ನಿಜಸ್ವಾರ್ಥಾಚಿಯೇ ಸ್ಥಿತೀ । ಅತಿಪ್ರೀತೀ ನಿಜನಿಷ್ಠಾ ।।೭೪೫।। ತೇಥೇ ತ್ರಿಲೋಕೀಚ್ಯಾ ಸಕಲ ಸಂಪತ್ತೀ । ಕರ ಜೋಡೂನಿ ವರೂ ಪ್ರಾರ್ಥಿತೀ । ತರೀ ಕ್ಷಣಾರ್ಧ ನ ಕಾಢೀ ಚಿತ್ತವೃತ್ತೀ । ಭಕ್ತ ಪರಮಾರ್ಥೀ ಅತಿಲೋಭೀ ।।೭೪೬।। ಕ್ಷಣಾರ್ಧ ಚಿತ್ತವೃತ್ತೀ ಕಾಢಿತಾ । ತ್ರಿಭುವನವಿಭವ ಯೇ ಹಾತಾ । ಎವಢಿಯಾ ಸಾಂಡೂನಿ ಸ್ವಾರ್ಥಾ । ಮ್ಹಣಾಲ ಹರಿಭಕ್ತಾ ಲಾಭ ಕೋಣ ।।೭೪೭।। ಹರಿಚರಣೀ ಅಪರೋಕ್ಷಸ್ಥಿತೀ । ತೇಥೀಲ ಕ್ಷಣಾರ್ಧಾಚೀ ಜೇ ಪ್ರಾಪ್ತೀ । ತ್ಯಾಪುಢೇ ತ್ರಿಭುವನ - ವಿಭವ - ಸಂಪತ್ತೀ । ಭಕ್ತ ಮಾನಿತೀ ತೃಣಪ್ರಾಯ ।।೭೪೮।। ಸಕಳ ಜಗಾಚಾ ಸೃಜಿತಾ । ಬ್ರಹ್ಮಾ ಪಿತಾಮಹೋ ತತ್ತ್ವತಾ । ತ್ರೈಲೋಕ್ಯರಾಜ್ಯಸಮರ್ಥತಾ । ವ್ರೋಳಗೇ ವಸ್ತುತಾ ಅಂಗಣೀ ಜ್ಯಾಚೇ ।।೭೪೯।। ತ್ರಿಭುವನ ವೈಭವಾಚೇ ಮಾಥಾ । ಬ್ರಹ್ಮಪದಾಚೀ ಸಮರ್ಥತಾ । ತೋ ಬ್ರಹ್ಮಾ ಹೀ ನಿಜಸ್ವಾರ್ಥಾ । ಹೋಯ ಗಿವಸಿತಾ ಹರಿಚರಣ ।।೭೫೦।। ತ್ಯಾಗೋನಿ ಬ್ರಹ್ಮವೈಭವಸಂಪತ್ತೀ । ಬ್ರಹ್ಮಾ ಬೈಸೋನಿ ಏಕಾಂತೀ । ಅಹರ್ನಿಶೀ ಹರಿಚರಣ ಚಿಂತೀ । ತರೀ ತ್ಯಾ ಪ್ರಾಪ್ತಿ ಸಹಸಾ ನವ್ಹೇ ।।೭೫೧।।
ಸಹಸಾ ನ ಪವೇ ಹರಿಚರಣ । ಯಾಲಾಗೀ ಬ್ರಹ್ಮಾ ಸಾಭಿಮಾನ । ತೇಣೇ ಅಭಿಮಾನೇಂಚಿ ಜಾಣ । ನೇಲೀ

ತನ್ನ ಸಮೇತವಾಗಿ ಸರ್ವ ದೇಹಗಳಲ್ಲಿಯೂ ಭಕ್ತರಿಗೆ ಭಗವಂತನ ಹೊರತಾಗಿ ಬೇರೆ ಏನೂ ಕಾಣಿಸುವುದಿಲ್ಲ. ಆದ್ದರಿಂದ ಆತನಲ್ಲಿ ಶಾಂತಿಯು ನಿಃಶಂಕೆಯಿಂದ ವ್ಯವಹರಿಸುವುದು ।।೭೪೧।। ಹೀಗೆ ತನ್ನದೇ ಆದ ಸಮದೃಷ್ಟಿರೂಪ ಶಾಂತಿಯಲ್ಲಿ ಭಗವದ್ಭಕ್ತನು ಕ್ರೀಡಿಸುತ್ತಿರುವನು. ಆದ್ದರಿಂದ ಈತನಿಗೆ ನಿಜವಾಗಿಯೂ ಉತ್ತಮತ್ವವು ಪ್ರಾಪ್ತಿಯಾಗುವುದು ।।೭೪೨।। ಹೇ ರಾಜನೇ, ಈಗ ಹರಿಭಕ್ತರ ನಿರಪೇಕ್ಷತಾ ಹೇಳುವೆ ಕೇಳು, ಉತ್ತಮ ಭಕ್ತರ ಕಥೆ ಹೇಳಲು ಹರಿಗೆ ಅತ್ಯಂತ ಉಲ್ಹಾಸವಾಗಿರುವುದು ।।೭೪೩।। (ಹರಿ ಹೇಳುವನು) ನಿರಪೇಕ್ಷೆಯಿಂದ ಇರುವವನೇ "ಮುಖ್ಯಭಕ್ತ" ನಾಗಿರುವನು. ನಿರಪೇಕ್ಷೆಯೇ ನಿಜವಾದ "ವಿರಕ್ತಿ" ಯಾಗಿರುವುದು ಮತ್ತು ನಿರಪೇಕ್ಷೆಯೇ "ನಿತ್ಯಮುಕ್ತ" ವಾಗಿರುವುದು. ಕಾರಣ, ದೇವರು ನಿಜವಾಗಿಯೂ ನಿರಪೇಕ್ಷನೇ ಇರುವನು ।।೭೪೪।।

ತನ್ನ ನಿಜವಾದ ಸ್ವಾರ್ಥವನ್ನು ಸಾಧಿಸುವ ಅವಸ್ಥೆಯಲ್ಲಿ ಸಪ್ರೇಮ ಭಕ್ತಿಯನ್ನು ಆಚರಿಸುತ್ತಿರಲು ಅತ್ಯಂತ ಪ್ರೀತಿಯಿಂದ ಮತ್ತು ನಿಜನಿಷ್ಠೆಯಿಂದ ಭಕ್ತನು ತನ್ನ ಎಲ್ಲ ವೃತ್ತಿಗಳನ್ನು ಹರಿಚರಣಗಳಲ್ಲಿ ಅರ್ಪಿಸುವನು ।।೭೪೫।। ಆಗ ತ್ರೈಲೋಕ್ಯದ ಸಂಪತ್ತು ಕೈಜೋಡಿಸಿ ಪ್ರಾರ್ಥಿಸಿ ಈತನನ್ನು ವರಿಸಲು ಬಂದರೂ ಸಹ ಭಕ್ತನು ತನ್ನ ಚಿತ್ತವೃತ್ತಿಯನ್ನು ಅರ್ಧಕ್ಷಣ ಸಹಿತವಾಗಿ ಹರಿಚರಣದಿಂದ ಅಗಲಿಸಲಾರನು. ಇಷ್ಟೊಂದು ಈತನಿಗೆ ಪರಮಾರ್ಥದ ಲೋಭವಾಗಿರುವುದು ।।೭೪೬।। ಈತನು ಅರ್ಧಕ್ಷಣ ಚಿತ್ತವೃತ್ತಿಯನ್ನು ಅಲ್ಲಿಂದ ತೆಗೆದರೆ, ಮೂರು ಲೋಕಗಳ ಸಂಪತ್ತು ಈತನ ಕೈಸೇರುವುದಾದರೆ ಇಂತಹ ಸ್ವಾರ್ಥತ್ಯಾಗದಿಂದ ಹರಿಭಕ್ತರಿಗೆ ಆಗುವ ಲಾಭವಾದರೂ ಯಾವುದು ? ಹೀಗೆ ಕೇಳಿದರೆ, ಹೇಳುವೆ, ಕೇಳು ।।೭೪೭।। ಹರಿ ಚರಣಗಳಲ್ಲಿ ರತನಾದವನಿಗೆ ಆಗುವ ಸಾಕ್ಷಾತ್ಕಾರದಲ್ಲಿನ ಅರ್ಧಕ್ಷಣದ ಲಾಭದ ಎದುರಿನಲ್ಲಿ ಈ ತ್ರಿಲೋಕದ ಸಂಪತ್ತು ಭಕ್ತರಿಗೆ ತೃಣಪ್ರಾಯವಾಗಿ ತೋರುವುದು ।।೭೪೮।। ಸರ್ವ ಜಗತ್ತನ್ನು ಸೃಷ್ಟಿಸುವ ಪಿತಾಮಹ ಬ್ರಹ್ಮದೇವರು. ತ್ರಿಲೋಕದ ಐಶ್ವರ್ಯವು ವಸ್ತುತಃ ಆತನ ಅಂಗಳದಲ್ಲಿಯೇ ಉರುಳಾಡುತ್ತಿರುವುದು ।।೭೪೯।। ತ್ರಿಲೋಕದ ವೈಭವಕ್ಕಿಂತಲೂ ಬ್ರಹ್ಮದೇವನ ಪದವಿಯು ಬಹಳ ದೊಡ್ಡದಾಗಿರುವುದು. ಇಂತಹ ಬ್ರಹ್ಮದೇವನು ಸಹ ತನ್ನ ಸುಖಸ್ವಾರ್ಥಕ್ಕಾಗಿ ಹರಿಚರಣಗಳನ್ನು ಹುಡುಕುತ್ತಿರುವನು ।।೭೫೦।। ಬ್ರಹ್ಮಲೋಕದ ವೈಭವಸಂಪತ್ತುಗಳನ್ನು ತ್ಯಜಿಸಿ ಬ್ರಹ್ಮದೇವರು ಸಹ ಏಕಾಂತದಲ್ಲಿ ಕುಳಿತು ಹಗಲು ರಾತ್ರಿ ಹರಿಚರಣಗಳ ಧ್ಯಾನವನ್ನು ಮಾಡುತ್ತಿರುವನು. ಆದರೂ ಆತನಿಗೆ ಸಹಸಾ ಪ್ರಾಪ್ತಿಯಾಗುವುದಿಲ್ಲ ।।೭೫೧।।

ಚೋರೂನ ಗೋಪಾಲ - ವತ್ಸೇ ॥೭೫೨॥ ತೇಥೇ ನ ಕಷ್ಟತಾ ಆಪಣ । ಮೋಡತಾ ಕೃಷ್ಣಪಣ । ಗೋಪಾಲ - ವತ್ಸೇ ಜಾಹಲಾ ಸಂಪೂರ್ಣ । ಪೂರ್ಣತ್ವೇ ಪೂರ್ಣ ಸ್ವಲೀಲಾ ॥೭೫೩॥ ಅಗಾಧ ಹರಿಲೀಲಾ ಪೂರ್ಣ । ಪಾಹತಾ ವೇಡಾವಲೇ ಬ್ರಹ್ಮಪಣ । ತೇವ್ಹಾ ಸಾಂಡೋನಿ ಪದಾಭಿಮಾನ । ಅನನ್ಯಶರಣ ಹರಿಚರಣೇ ॥೭೫೪॥ ಕೈಲಾಸರಾಣಾ ಶೂಲಪಾಣೀ । ಬ್ರಹ್ಮಾ ಲಾಗೇ ಜ್ಯಾಚೇ ಚರಣೀ । ತೋಹೀ ನಿಜರಾಜ್ಯ ಸಾಂಡೋನೀ ।ಮಹಾಶ್ಮಶಾನೀ ಹರಿಚರಣ ಚಿಂತೀ ॥೭೫೫॥ ಕೌಪೀನಭಸ್ಮಜಟಾಧಾರೀ । ಚರಣೋದಕ ಧರೋನಿ ಶಿರೀ । ಹರಿಚರಣ ಹೃದಯಾಮಾಝಾರೀ । ಶಿವ ನಿರಂತರೀ ಚಿಂತಿತ ॥೭೫೬॥ ಏವಂ ಬ್ರಹ್ಮಾ ಆಣಿ ಶಂಕರ । ಚರಣಾಂಚೇ ನ ಪವತೀ ಪಾರ । ತೇಥೇ ತ್ರೈಲೋಕ್ಯವೈಭವ ಥೋರ । ಮಾನೀ ತೋ ಪಾಮರ ಅತಿಮಂದಭಾಗ್ಯ ॥೭೫೭॥ ಹರಿಚರಣಕ್ಷಣಾರ್ಧಪ್ರಾಪ್ತೀ । ತ್ರೈಲೋಕ್ಯರಾಜ್ಯಸಂಪತ್ತೀ । ಭಕ್ತ ಓವಾಳೂನಿ ಸಾಂಡಿತೀ । ಜಾಣ ನಿಶ್ಚಿತೀ ನಿಂಬಲೋಣ ॥೭೫೮॥ ಹರಿಚರಣಸಾರಾಮೃತಗೋಡೀ । ಕ್ಷಣಾರ್ಧ ಜೈ ಜೋಡೇ ಜೋಡೀ । ತೇ ತ್ರೈಲೋಕ್ಯವೈಭವಾಚ್ಯಾ ಕೋಡೀ । ಕರೀ ಕುರವಂಡೀ ನಿಜಭಕ್ತ ಭಾವೇ ॥೭೫೯॥ ಏವಂ ಹರಿಚರಣಾಪರತೇ । ಸಾರಾಮೃತ ನಾಹೀ ಯೇಥೇ । ಯಾಲಾಗೀ ಚಿತ್ತೇ ವಿತ್ತೇ ಜೀವಿತೇ । ಜಡಲೇ ಸುನಿಶ್ಚಿತೇ ಚರಣಾರವಿಂದೀ ॥೭೬೦॥ ನಿಮಿಷಾರ್ಧ ತ್ರುಟೀ ಲವ ಕ್ಷಣ । ಜೇ ನ ಸೋಡಿತೀ ಹರಿಚರಣ । ತೈ ವೈಷ್ಣವಾಮಾಜೀ ಅಗ್ರಗಣ । ರಾಯಾ ತೇ ಜಾಣ "ಉತ್ತಮ ಭಕ್ತ" ॥೭೬೧॥ ಜೇ ತ್ರಿಭುವನವಿಭವಭೋಗ ಭೋಗಿತೀ । ತೇಹೀ ಪಾವಲೇ ಅನುತಾಪವೃತ್ತೀ । ತ್ಯಾಂಚಾ ತಾಪಾಚೀ ನಿಜನಿವೃತ್ತೀ । ಹರಿಚರಣಪ್ರಾಪ್ತಿ ತೇ ಐಕ ॥೭೬೨॥

ಭಗವತ ಉರುವಿಕ್ರಮಾಂಘ್ರಿಶಾಖಾನಖಮಣಿಚಂದ್ರಿಕಯಾ ನಿರಸ್ತತಾಪೇ ।
ಹೃದಿ ಕಥಮುಪಸೀದತಾಂ ಪುನಃ ಸ ಪ್ರಭವತಿ ಚಂದ್ರ ಇವೋದಿತೇಽರ್ಕತಾಪಃ ॥೪೪॥

ಅರ್ಥ: ಭೌತಿಕ ತಾಪ ಕ್ರಿಯೆಗಳ ಬೆಂಕಿಯು ಭಗವಂತನನ್ನು ಪೂಜಿಸುವವರ ಹೃದಯಗಳನ್ನು ಹಿಂದಿನಂತೆಯೇ ಸುಡುವುದುಂಟೇ? ಭಗವಂತನ ಚರಣಕಮಲಗಳು ಅಸಂಖ್ಯಾತ ಸಾಹಸಗಳುನ್ನು ಸಾಧಿಸಿವೆ. ಅವನ ಸುಂದರವಾದ ಕಾಲುಗುರುಗಳು ಅಮೂಲ್ಯ ರತ್ನಗಳನ್ನು ಹೋಲುತ್ತವೆ. ಆ ಉಗುರುಗಳಿಂದ ಹೊರಹುಮ್ಮುವ ದಿವ್ಯಕಾಂತಿಯು ತಂಪಾದ ಬೆಳದಿಂಗಳನ್ನು ಹೋಲುತ್ತದೆ. ಏಕೆಂದರೆ ಅದು ಚಂದ್ರನ ತಂಪಾದ ಬೆಳದಿಂಗಳು ಸೂರ್ಯನಿಂದ ತಾಪವನ್ನು ಹೋಗಲಾಡಿಸುವಂತೆ,ಶುದ್ಧ ಭಕ್ತನ ಹೃದಯದಲ್ಲಿರುವ ವೇದನೆಯನ್ನು ಒಡನೆಯೇ ಪರಿಹರಿಸುತ್ತದೆ.

ಥೋರ ಹರಿಚರಣಾಚಾ ಪರಾಕ್ರಮ । ಪದೇ ತ್ರೈಲೋಕ್ಯ ಆವರೀ ತ್ರಿವಿಕ್ರಮ । ಬ್ರಹ್ಮಾಂಡ ಭೇದೋನಿ

ಬ್ರಹ್ಮದೇವನಿಗೆ ಹರಿಚರಣಗಳ ಪ್ರಾಪ್ತಿಯಾಗದ್ದಕ್ಕೆ ಆತನು ಅಭಿಮಾನಿಯಾದನು ಮತ್ತು ಈ ಅಭಿಮಾನದಿಂದಲೇ ಈತನು ಗೋಕುಲದಲ್ಲಿನ ಗೋವು,ಗೋಪಾಲಕರನ್ನು ಕದ್ದು ಒಯ್ದನು. ಇದನ್ನು ಲಕ್ಷದಲ್ಲಿಡು ॥೭೫೨॥ ಆ ವೇಳೆಯಲ್ಲಿ ತಾನು ಯಾವ ಕಷ್ಟಪಡದೇ ಮತ್ತು ಕೃಷ್ಣತನವನ್ನು ಬಿಡದೇ ಪೂರ್ಣತ್ವದಿಂದ ತನ್ನ ಲೀಲೆಯಿಂದ ಯಾವತ್ತು ಗೋವು,ಗೋಪಾಲರು ತಾನೇ ಸ್ವತಃ ಆದನು ॥೭೫೩॥ ಈ ಅದ್ಭುತವಾದ ಲೀಲೆಯನ್ನು ಕಂಡು ಬ್ರಹ್ಮದೇವನು ಹುಚ್ಚನಾದನು. ಆಗ ತಾನು ತನ್ನ ಬ್ರಹ್ಮಪದವಿಯ ಅಭಿಮಾನವನ್ನು ಬಿಟ್ಟು ಅನನ್ಯ ಭಾವದಿಂದ ಹರಿಚರಣಗಳಿಗೆ ಶರಣಾದನು ॥೭೫೪॥ ಬ್ರಹ್ಮದೇವರಿಂದಲೂ ನಮಸ್ಕರಿಸಿಕೊಳ್ಳುವ ಕೈಲಾಸಪತಿ ಶ್ರೀಶಂಕರನು ತನ್ನ ಕೈಲಾಸದ ರಾಜ್ಯವನ್ನು ಬಿಟ್ಟು ಮಹಾಸ್ಮಶಾನದಲ್ಲಿ ಕುಳಿತು ಹರಿಚರಣಗಳ ಧ್ಯಾನವನ್ನು ಮಾಡುತ್ತಿರುವನು ॥೭೫೫॥ ಕೌಪೀನಧಾರಿಯು ಸರ್ವಾಂಗಕ್ಕೆ ಭಸ್ಮವನ್ನು ಧರಿಸಿ,ತಲೆಯಲ್ಲಿ ಜಟಾಧಾರಿಯಾಗಿ ಹರಿಚರಣದ ತೀರ್ಥವನ್ನು(ಗಂಗಾ) ಶಿರದಲ್ಲಿ ಧರಿಸಿ, ತನ್ನ ಹೃದಯದಲ್ಲಿ ನಿರಂತರವಾಗಿ ಹರಿಚರಣಗಳ ಚಿಂತನೆ ಮಾಡುವನು ॥೭೫೬॥ ಈ ಪ್ರಕಾರವಾಗಿ ಬ್ರಹ್ಮದೇವರಿಗೂ ಮತ್ತು ಶಂಕರ ಇವರಿಗೂ ಹರಿಚರಣದ ಸ್ಥಾನವು ಹತ್ತುವುದಿಲ್ಲ. ಅಂದಮೇಲೆ ತ್ರೈಲೋಕ್ಯದ ವೈಭವವು ದೊಡ್ಡದೆಂದು ತಿಳಿಯುವವನು ಪಾಮರನಾಗಿರುವನು ಮತ್ತು ಅತ್ಯಂತ ಹತಭಾಗಿಯಾಗಿರುವನೆಂದು ತಿಳಿಯಬೇಕು ॥೭೫೭॥ ಹರಿಚರಣಗಳ ಕ್ಷಣಾರ್ಧ ಪ್ರಾಪ್ತಿಯ ಮುಂದೆ ಭಕ್ತರು ತ್ರಿಲೋಕದ ರಾಜ್ಯಸಂಪತ್ತುಗಳನ್ನು ನಿವಾಳಿಸಿ ಒಗೆಯುವರು. ಇದನ್ನು ಲಕ್ಷದಲ್ಲಿಡು ॥೭೫೮॥ ಹರಿಚರಣಸಾರಾಮೃತದ ಆನಂದವು ಒಂದು ಕ್ಷಣಾರ್ಧಮಾತ್ರ ದೊರೆತರೂ ಆ ಲಾಭದ ಮೇಲಿಂದ ನಿಜಭಕ್ತರು ತ್ರೈಲೋಕ್ಯ ವೈಭವದ ರಾಶಿ ರಾಶಿ ಸುಖವನ್ನು ಮನಃಪೂರ್ವಕವಾಗಿ ನಿವಾಳಿಸಿ ಒಗೆಯುವರು ॥೭೫೯॥ ತಾತ್ಪರ್ಯವೇನೆಂದರೆ, ಈ ಲೋಕದಲ್ಲಿ ಹರಿಚರಣಕ್ಕಿಂತಲೂ ಮಿಗಿಲಾದ ಅನ್ಯ ಸಾರಾಮೃತವು ಯಾವುದೂ ಇರುವುದಿಲ್ಲ. ಆದ್ದರಿಂದ ತನು,ಮನ,ಧನದಿಂದ ಇವರು ಚರಣಾರವಿಂದದಲ್ಲಿ ನಿಶ್ಚಿಯಪೂರ್ವಕವಾಗಿ ಅಂಟಿಸಿಕೊಂಡಿರುವರು ॥೭೬೦॥ ಹೇ ರಾಜನೇ, ಕಣ್ಣಿನ ರೆಪ್ಪೆಯು ಹೊಡೆಯುವಷ್ಟು ಅಥವಾ ಲಟಿಕೆ ಬಾರಿಸುವ ಹೊತ್ತಿನಷ್ಟು ಸಹ ಹರಿಯಚರಣವನ್ನು ಯಾವಾತನು ಬಿಡುವುದಿಲ್ಲವೋ, ಆತನೇ ವೈಷ್ಣವರಲ್ಲಿ ಅಗ್ರಗಣಿಯು ಮತ್ತು ಉತ್ತಮ ಭಕ್ತನಾಗಿರುವನು. ಇದನ್ನು ನೀನು ಲಕ್ಷದಲ್ಲಿಡು ॥೭೬೧॥ ತ್ರೈಲೋಕ್ಯದ ವೈಭವದ ಸುಖವನ್ನು ಭೋಗಿಸುವ ಇವರಿಗೂ ಅನುತಾಪವು ಹುಟ್ಟುತ್ತಿರುತ್ತದೆ. ಇವರಿಗೆ ಆಗುವ ತಾಪದ ನಿವೃತ್ತಿಗೆ ಹರಿಚರಣ ಪ್ರಾಪ್ತಿ ಒಂದೇ ಉಪಾಯ ಸಾಧನೆಯಾಗಿರುವುದು. ಅದು ಹೇಗೆಂಬುವುದು ಹೇಳುವೆ, ಕೇಳು ॥೭೬೨॥

ಪದದ್ರುಮ । ವಾಢಲಾ ಪರಮಸಾಮರ್ಥ್ಯೇ ॥೭೬೩॥ ತೇ ಪದದ್ರುಮೀಚಿಯಾ ದಶಶಾಖಾ । ತ್ಯಾಚೀ ದಶಧಾ ದಶಾಂಗುಲಿಕಾ । ಅಗ್ರೀ ಅಗ್ರಫಳಚಂದ್ರಿಕಾ । ನಖಮಣಿ ದೇಖಾ ಲಖಲಖಿತ ॥೭೬೪॥ ತೇ ನಖಚಂದ್ರಿಕೇಚೇ ಚಂದ್ರಕಾಂತ । ಚರಣಚಂದ್ರಾಮೃತೇ ನಿತ್ಯ ಸ್ರವತ । ಭಕ್ತಚಕೋರ ತೇ ಸೇವಿತ । ಸ್ವಾನಂದೇ ತೃಪ್ತ ಸರ್ವದಾ ॥೭೬೫॥ ತ್ಯಾಂಸೀ ಕಾಮಾದೀ ತ್ರಿವಿಧತಾಪಪ್ರಾಪ್ತೀ । ಸರ್ವಥಾ ಬಾಧೂ ನ ಶಕೇ ಪುಢತೀ । ಜೇವೀ ಸೂರ್ಯಾಚೀ ಸಂತಪ್ತ ದೀಪ್ತೀ । ಚಂದ್ರಬಿಂಬಾಆಂತೌತೀ । ಕದಾ ನ ರಿಘೇ ॥೭೬೬॥ ಜೇ ಹರಿಚರಣಚಂದ್ರ-ಚಕೋರ । ಸ್ವಪ್ನೀಹೀ ಸಂಸಾರತಾಪ ನ ಯೇ ತ್ಯಾಸಮೋರ । ಐಸಾ ಚರಣಮಹಿಮಾ ಅಪಾರ । ಹರಿ ಮುನೀಶ್ವರ ಹರ್ಷೇ ವರ್ಣೀ ॥೭೬೭॥ "ದೇಹೇ ವೈ ಸ ಹರೇಃ ಪ್ರಿಯಃ" । ಯೇಣೇ ಶ್ಲೋಕೇ ಗಾ ವಿದೇಹ್ಯಾ । ದಾವಿಲೀ ಭಕ್ತಿಲಿಂಗಕ್ರಿಯಾ । ಜಾಣ ತೂ ರಾಯಾ ಸುನಿಶ್ಚಿತ ॥೭೬೮॥ "ನ ಯಸ್ಯ ಸ್ವಃ ಪರ ಇತಿ" । ಯೇಣೇ ತ್ಯಾಚೀ ಧರ್ಮಸ್ಥಿತೀ । ರಾಯಾ ಸಾಂಗಿತಲೀ ತುಜಪ್ರತೀ । ಯಥಾನಿಗುತೀ ಯಥಾರ್ಥ ॥೭೬೯॥ "ಯಾದೃಶ" ಮ್ಹಣಜೇ ಕೈಸೇ ಅಸತೀ । ಭಗವದ್ಭಜನೇ ಸ್ವಾನಂದತೃಪ್ತಿ । ತ್ರಿವಿಧ ತಾಪಾಂಚೀ ನಿವೃತ್ತೀ । ಕರೋನಿ ಅಸತೀ ಹರಿಭಕ್ತ ॥೭೭೦॥ ಆತಾ ತ್ಯಾಂಚೀ ಬೋಲತೀ ಪರೀ । ನಾಮೇ ಗರ್ಜತೀ ನಿರಂತರೀ । ತೇಚಿ ತೇ ಸಂಕ್ಷೇಪಾಕಾರೀ । ಉಪಸಂಹಾರೀ ಹರಿ ಸಾಂಗೇ ॥೭೭೧॥ ಸಕಳ ಲಕ್ಷಣಾಂಚೀ ಸಾರಸ್ಥಿತೀ । ಪ್ರೇಮಳಾಚೀ ಪರಮಪ್ರೀತೀ । ಉಲ್ಲಂಘೂ ನ ಶಕೇ ಶ್ರೀಪ್ರತೀ । ತೇಹೀ ಶ್ಲೋಕಾರ್ಥೀ ಹರಿ ಸಾಂಗೇ ॥೭೭೨॥

ವಿಸೃಜತಿ ಹೃದಯಂ ನ ಯಸ್ಯ ಸಾಕ್ಷಾದ್ಧರಿರವಶಾಭಿಹಿತೋಽಪ್ಯಘೌಘನಾಶಃ ।
ಪ್ರಣಯರಶನಯಾ ಧೃತಾಂಘ್ರಿಪದ್ಮಃ ಸ ಭವತಿ ಭಾಗವತ ಪ್ರಧಾನ ಉಕ್ತಃ ॥೫೫॥

ಅರ್ಥ:- ಸ್ವತಃ ಸಾಕ್ಷಾತ್ ಹರಿಯೇ ಯಾರ ಹೃದಯವನ್ನು ಎಂದೂ ಬಿಡಲಾರನೋ, ಆತನು ಭಾಗವತ ಧರ್ಮದಲ್ಲಿ ಶ್ರೇಷ್ಠನು. ಈ ಹರಿಯು ಹೇಗಿರುವನೆಂದರೆ, ಕೇವಲ ನಾಮದ ಉಚ್ಚಾರವನ್ನು ಮಾಡುವುದರಿಂದಲೇ ಭಕ್ತರ ಪಾಪಗಳನ್ನು ನಾಶಮಾಡುವನು. ಆತನ ಚರಣಗಳು ಪ್ರೀತಿ ಎಂಬ ಹಗ್ಗದಿಂದ ಭಕ್ತರ ಹೃದಯದಲ್ಲಿ ಬಿಗಿಯಾಗಿ ಕಟ್ಟಲ್ಪಟ್ಟಿರುವುವು. ಆದ್ದರಿಂದ ಅವರ ಹೃದಯವನ್ನು ಬಿಟ್ಟಿರಲಾರನು.

ಅವಚಟೇ ತೋಂಡಾ ಆಲ್ಯಾ "ಹರೀ" । ಸಕಳ ಪಾತಕೇ ಸಂಹಾರೀ । ತೇ ಹರಿನಾಮ ನಿರಂತರೀ । ಜೇ ನಿಜಗಜರೀ ಗರ್ಜತೀ ॥೭೭೩॥
ಐಸೇ ಜಾಂಚೇ ಚಿಹ್ನೇವರೀ । ನಾಮ ನಾಚೇ ನಿರಂತರೀ । ತೇ ಧನ್ಯ ಧನ್ಯ ಸಂಸಾರೀ । ಸ್ವಾನಂದೇ ಹರಿ ಗರ್ಜತು

ಹರಿಚರಣಗಳ ಪರಾಕ್ರಮವು ಬಹು ದೊಡ್ಡದಾಗಿರುವುದು. ಆ ಶ್ರೀಹರಿ ತ್ರಿವಿಕ್ರಮನು ತನ್ನ ಪಾದಗಳಿಂದ ತ್ರೈಲೋಕ್ಯವನ್ನೇ ಆಕ್ರಮಿಸಿದನು. ಆ ಚರಣ ವೃಕ್ಷವು ತನ್ನ ಅದ್ಭುತ ಪರಾಕ್ರಮದಿಂದ ಬ್ರಹ್ಮಾಂಡವನ್ನು ಭೇದಿಸಿ ದಾಟಿತು ॥೭೬೩॥ ಆ ಪಾದವೃಕ್ಷದ ಹತ್ತು ಶಾಖೆಗಳು, ಅಂದರೆ ಎರಡು ಪಾದಗಳ ಹತ್ತು ಬೆರಳುಗಳಾಗಿರುವುವು. ಶಾಖೆಯ ಅಗ್ರಭಾಗದಲ್ಲಿ ಫಲಗಳು ಶೋಭಿಸುವಂತೆ ಬೆರಳುಗಳ ಅಗ್ರಭಾಗವಾದ ನಖಮಣಿಚಂದ್ರಿಕೆಗಳು ಶೋಭಿಸುವುವು ॥೭೬೪॥ ಆ ನಖರೂಪ ಚಂದ್ರಿಕೆಯ ಚಂದ್ರಕಾಂತ ಮಣಿಗಳ, ಚರಣರೂಪ ಚಂದ್ರಾಮೃತದ ಯೋಗದಿಂದ ನಿತ್ಯವೂ ಸ್ರವಿಸುತ್ತಿರುವುದು ಮತ್ತು ಆ ಅಮೃತವನ್ನು ಭಕ್ತರೂಪ ಚಕೋರಗಳು ಸೇವಿಸಿ ಸರ್ವಕಾಲದಲ್ಲಿ ಸ್ವಾನಂದದಿಂದ ತೃಪ್ತವಾಗುವುವು ॥೭೬೫॥ ಸೂರ್ಯನ ಪ್ರಖರದೀಪ್ತಿಯು ಚಂದ್ರಬಿಂಬದಲ್ಲಿ ಎಂದೂ ಕೊಡದಂತೆ, ಭಕ್ತರಿಗೆ ಕಾಮಾದಿಕ ತ್ರಿವಿಧತಾಪಗಳ ಬಾಧೆಯು ಎಂದೂ ಆಗುವುದಿಲ್ಲ ॥೭೬೬॥ ಯಾವ ಹರಿಚರಣರೂಪ ಚಂದ್ರನ, ಚಕೋರಗಳಿಗೆ ಸಂಸಾರದ ತಾಪವು ಸ್ವಪ್ನದಲ್ಲಿಯೂ ಆಗುವುದಿಲ್ಲ. ಈ ಪ್ರಕಾರದ ಹರಿಚರಣಗಳ ಮಹಿಮೆಯನ್ನು ಹರಿ ಎಂಬ ಮುನೀಶ್ವರನು ಹರ್ಷಭರಿತನಾಗಿ ವರ್ಣಿಸಿದರು ॥೭೬೭॥ "ದೇಹೇ ವೈ ಸ ಹರೇಃ ಪ್ರಿಯಃ" ಎಂಬ ೫೧ನೇ ಶ್ಲೋಕದಿಂದ ಭಕ್ತರ ಲಕ್ಷಣಗಳನ್ನು ಮತ್ತು ಅವರ ಕ್ರಿಯೆಗಳನ್ನು ನಿಶ್ಚಿತವಾಗಿ ತೋರಿಸಿಕೊಟ್ಟನು ॥೭೬೮॥ ಹಾಗೆಯೇ "ನ ಯಸ್ಯ ಸ್ವ ಪರ ಇತಿ" ಎಂಬ ೫೨ ನೇ ಶ್ಲೋಕದಿಂದ ಅವರ ಧರ್ಮಸ್ಥಿತಿಯನ್ನು ಯಥಾತಥಾ ರೀತಿಯಲ್ಲಿ ಹೇ ರಾಜನೇ, ನಿನಗೆ ತಿಳಿಸಿರುವೆನು ॥೭೬೯॥ "ಯಾದೃಶ" ಎಂದರೆ, ಅವರು ಹೇಗೆ ಇರುವರು?, ಹೇಗೆ ನಡೆದುಕೊಳ್ಳುವರು? ಎಂಬ ನಿನ್ನ ೪೪ನೇ ಶ್ಲೋಕದ ಪ್ರಶ್ನೆಗೆ ಉತ್ತರಿಸಿದೆ. ಭಗವದ್ಭಜನೆಯಿಂದ ಮತ್ತು ಆತ್ಮಾನಂದದಿಂದ ತೃಪ್ತರಾಗಿರುವರು, ಹೀಗಿರುವ ಹರಿಭಕ್ತರು ತ್ರಿವಿಧತಾಪಗಳಿಂದ ನಿವೃತ್ತಿಯಾಗಿ ಶಾಂತವಾಗಿರುವರು. ಇದನ್ನೆಲ್ಲ ಹೇಳಿದೆನು ॥೭೭೦॥ ಈಗ ಕೊನೆಯದಾಗಿ ಅವರ ಮಾತನಾಡುವ ಪದ್ಧತಿಯನ್ನು ಮತ್ತು ನಿರಂತರವಾಗಿ ನಡೆಯುವ ನಾಮಗರ್ಜನೆಯು ಹೇಗಿರುವುದೆಂಬುದನ್ನು-ಸಂಕ್ಷಿಪ್ತವಾಗಿ ಹರಿಋಷಿಯು ಹೇಳುತ್ತಿರುವುದು ॥೭೭೧॥ ಪ್ರೇಮಳ ಭಕ್ತರ ನಿಸ್ಸೀಮ ಪ್ರೇಮವೇ ಸರ್ವ ಲಕ್ಷಣಗಳಲ್ಲಿ ಮುಖ್ಯಸ್ಥಿತಿಯಾಗಿರುವುದು. ಇದರ ಉಲ್ಲಂಘನೆಯನ್ನು ಶ್ರೀಪತಿಗೂ ಮಾಡಲು ಬರುವುದಿಲ್ಲ. ಇದರ ವರ್ಣನೆಯನ್ನು ಸಹ ಈಗ ಮುಂದಿನ ಉಪಸಂಹಾರಾತ್ಮಕ ಶ್ಲೋಕದಲ್ಲಿ ಹರಿಯು ಹೇಳುತ್ತಿರುವನು ॥೭೭೨॥

ಬಾಯಿಗೆ ತಪ್ಪಿ ಹರಿನಾಮವು ಬಂದರೂ ಸಹ ಅದು ಸರ್ವ ಪಾಪಗಳನ್ನು ನಾಶಮಾಡುವುದು. ಹೀಗಿರುವ ಈ ಹರಿನಾಮವನ್ನು ಭಕ್ತಜನರು ನಿರಂತರವಾಗಿ ಗರ್ಜಿಸುತ್ತಿರುವರು ॥೭೭೩॥

॥೭೭॥ ಸಪ್ರೇಮ ಸದ್ಭಾವೇ ಸಂಪೂರ್ಣ । ನಿತ್ಯ ಕರಿತಾ ನಾಮಸ್ಮರಣ । ವೃತ್ತಿ ಪಾಲಟತೀ ಆಪಣ । ತೇಹೀ ಲಕ್ಷಣ ಐಕ ರಾಯಾ ॥೭೭೫॥ನಾಮಾಸರಿಸಾಚ ಹರೀ । ರಿಘೇ ಹೃದಯಾಮಾಝಾರೀ । ತೇಣೇ ಧಾಕೇ ಅಭ್ಯಂತರೀ । ಹೋ ಲಾಗೇ ಪುರೀ ಹೃದಯಶುದ್ಧೀ ॥೭೭೬॥ ತೇವ್ಹಾ ಪ್ರಪಂಚ ಸಾಂಡೋನಿ "ವಾಸನಾ" । ಜಡೋನಿ ಠಾಕೇ ಜನಾರ್ದನಾ । "ಅಹಂ" ಕಾರು ಸಾಂಡೋನಿ ಅಹಂಪಣಾ । "ಸೋಹಂ" ಸದನಾಮಾಜೀ ರಿಘೇ ॥೭೭೭॥ "ಚಿತ್ತ" ವಿಸರೋನಿ ಚಿತ್ತಾ । ಜಡೋನಿ ಠಾಕೇ ಭಗವಂತಾ । "ಮನಾಚೀ" ಮೋಡಲೀ ಮನೋಗತತಾ । ಸಂಕಲ್ಪ ವಿಕಲ್ಪತಾ ಕರೂ ವಿಸರೇ ॥೭೭೮॥ ಕೃತನಿಷ್ಠಯೇಸಿ "ಬುದ್ಧೀ" । ಹೋಊನಿ ಠಾಕೇ ಸಮಾಧೀ । ಐಶೀ ದೇಖೋನಿ ಹೃದಯಶುದ್ಧೀ । ತೆಥೋನಿ ತ್ರಿಶುದ್ಧೀ ನ ರಿಘೇ ಹರೀ ॥೭೭೯॥ ಹರಿನಾಮಪ್ರೇಮಪ್ರೀತೀವರೀ । ಹೃದಯೀ ರಿಗಾಲಾ ಜೋ ಹರೀ । ತೋ ನಿಘೋ ವಿಸರೇ ಬಾಹೇರೀ । ಭಕ್ತಪ್ರೀತಿಕರೀ ಕೃಪಾಳೂ ॥೭೮೦॥ ಭಕ್ತೇ ಪ್ರಣಯಪ್ರೀತಿಚೀ ದೋರೀ । ತೇಣೇ ಚರಣ ಧರೋನಿ ನಿರ್ಧಾರೀ । ನಿಜಹೃದಯೀ ಬಾಂಧಿಲಾ ಹರೀ । ತೋ ಕೈಶಾಪರೀ ನಿಘೇಲ ॥೭೮೧॥ ಭಗವಂತ ಮಹಾ ಅತುರ್ಬಳೀ । ಅದಟ ದೈತ್ಯಾಂಚೇ ನಿರ್ದಳೀ । ತೋ ಕೋಂಡಿಲಾ ಹೃದಯಕಮಳೀ । ಹೇ ಗೋಷ್ಟೀ ಸಮೂಳೀ ಮಿಥ್ಯಾ ಮ್ಹಣತೀ ॥೭೮೨॥ ಜೋ ಶುಷ್ಕ ಕಾಷ್ಠ ಸ್ವಯೇ ಕೋರೀ । ತೋ ಕೋವಳ್ಯಾ ಕುಮಳಾಮಾಝಾರೀ । ಭ್ರಮರ ಗುಂತಲಾ ಪ್ರೀತೀವರೀ । ಕೇಸರ ಮಾಝಾರೀ ಕುಚಂಬೋ ನೇದೀ ॥೭೮೩॥ ತೇವೀ ಭಕ್ತಾಚಿಯಾ ಪ್ರೇಮಪ್ರೀತೀ । ಹೃದಯೀ ಕೋಂಡಿಲಾ ಶ್ರೀಪತೀ । ತೇಥ ಖುಂಟಲ್ಯಾ ಸಾಮರ್ಥ್ಯಶಕ್ತೀ । ಭಾವಾರ್ಥಾಪ್ರತೀ ಬಳ ನ ಚಲೇ ॥೭೮೪॥ ಬಾಳ ಪಾಲವೀ ಘಾಲೀ ಪಿಳಾ । ತೇಣೇ ಬಾಪ ರಾಹೇ ಥೋಕಲಾ । ತರೀ ಕಾಯ ನಿರ್ಬಳ ಜಾಹಲಾ । ನಾ ತೋ ಸ್ನೇಹೇ ಭುಲಲಾ ಢಳೇನಾ ॥೭೮೫॥ ತೇವೀ ನಿಜಭಕ್ತ ಲಳೇವಾಡ । ತ್ಯಾಂಚೇ ಪ್ರೇಮ ಅತ್ಯಂತ ಗೋಡ । ನಿಘಾವಯಾಚೇ ವಿಸರೋನಿ । ಚಾಡ । ಹೃದಯೀ ಸುರವಾಡ ಹರಿ ಮಾನೀ ॥೭೮೬॥ ಐಸೇ ಜ್ಯಾಚೇ ಅಂತಃಕರಣ । ಹರಿ ನ ಸಾಂಡೀ ಸ್ವಯೇ ಆಪಣ । ತೈಸೇಚಿ ಹರೀಚೇ ಶ್ರೀಚರಣ । ಜೋ ಸಾಂಡೀನಾ ಪೂರ್ಣ ಪ್ರೇಮಭಾವೇ ॥೭೮೭॥

ಹರೀಚೇ ಠಾಯೀ ಪ್ರೀತಿ ಜ್ಯಾ ಜೈಶೀ । ಹರೀಚೇ ಪ್ರೀತಿ ತ್ಯಾ ತೈಸೀ । ಜೇ ಅನನ್ಯ ಹರೀಪಾಶೀ । ಹರಿ ತ್ಯಾಂಸೀ

ಇಂತಹ ನಾಮವು ಯಾರ ನಾಲಿಗೆಯಲ್ಲಿ ನಿರಂತರವಾಗಿ ನರ್ತಿಸುವುದೋ ಮತ್ತು ಯಾರು ಸ್ವಾನಂದದಿಂದ ಹರಿನಾಮದ ಗರ್ಜನೆಯನ್ನು ಮಾಡುವರೋ, ಅವರು ಸಂಸಾರದಲ್ಲಿ ಅತ್ಯಂತ ಧನ್ಯರು ॥೭೭॥ಪೂರ್ಣಪ್ರೇಮದಿಂದ ಮತ್ತು ಸದ್ಭಾವನೆಯಿಂದ ನಿತ್ಯವೂ ನಾಮಸ್ಮರಣೆಯನ್ನು ಮಾಡಲು, ಅವರು ತಮ್ಮ ಪ್ಪಕ್ಕೆ ತಾವೇ ಬದಲಾಗುವರು. ಇದರ ಲಕ್ಷಣವನ್ನು ಹೇಳುವೆ, ಕೇಳು ॥೭೭೫॥ ನಾಮದ ಜೊತೆಯಲ್ಲಿಯೇ ಶ್ರೀಹರಿಯು ಹೃದಯದಲ್ಲಿ ಸೇರುವನು. ಈತನ ಭಯದಿಂದ ಒಳಗಿನ ಹೃದಯ ಶುದ್ಧಿಯು ಆಗಲಾರಂಭಿಸುವುದು ॥೭೭೬॥ ಆಗ "ವಾಸನೆ" ಯು ಪ್ರಪಂಚವನ್ನು ಬಿಟ್ಟು ಜನಾರ್ದನನನ್ನು ಹಿಡಿದುಕೊಳ್ಳುವುದು ಮತ್ತು ಅಹಂಕಾರವು "ಅಹಂ" ತನವನ್ನು ಬಿಟ್ಟು "ಸೋಹಂ" ಎಂಬ ಭಾವನೆಯಲ್ಲಿ ಸೇರುವುದು ॥೭೭೭॥ "ಚಿತ್ತ" ವು ಚಿತ್ತಕ್ಕೆ ಮರೆತು ಭಗವಂತನಲ್ಲಿ ಕೂಡಿಕೊಳ್ಳುವುದು. "ಮನ" ವು ತನ್ನ ಮನೋಧರ್ಮವನ್ನು ಬಿಟ್ಟು ಸಂಕಲ್ಪ ವಿಕಲ್ಪಗಳನ್ನು ಮಾಡುವುದನ್ನು ಮರೆಯುವುದು ॥೭೭೮॥ "ಬುದ್ಧಿ" ಯು ಕೃತನಿಶ್ಚಿತದಿಂದ ಸಮಾಧಿರೂಪವಾಗಿಯೇ ಇರುವುದು. ಹೀಗೆ ಹೃದಯ ಶುದ್ಧಿಯಾದುದನ್ನು ಕಂಡು ಹರಿಯು ನಿಜವಾಗಿಯೂ ಹೊರಗೆ ಹೋಗಲಾರನು ॥೭೭೯॥ ಹರಿನಾಮಪ್ರೇಮಪ್ರೀತಿಯಿಂದ ಯಾರ ಹೃದಯದಲ್ಲಿ ಹರಿಯು ಸೇರಿಕೊಳ್ಳುವನೋ, ಆತನು ಭಕ್ತಿಪ್ರೀತಿ ಕಾರಣದಿಂದ ಹೊರಗೆ ಹೋಗುವುದನ್ನು ಮರತೇಬಿಡುವನು ॥೭೮೦॥ ಭಕ್ತನು ಪ್ರಣಯಪ್ರೇಮದ ಹಗ್ಗವನ್ನಾಗಿ ಮಾಡಿ ಹರಿಚರಣವನ್ನು ಹಿಡಿದು ತನ್ನ ಹೃದಯದಲ್ಲಿ ಬಿಗಿಯಾಗಿ ಕಟ್ಟಿರುವನು. ಹೀಗಿರಲು ಆತನು ಅಲ್ಲಿಂದ ಹೊರಗೆ ಹೋಗುವುದಾದರು ಹೇಗೆ? ॥೭೮೧॥ ಆದರೆ, ಭಗವಂತನು ಅತ್ಯಂತ ಬಲಶಾಲಿಯು. ಈತನು ಬಲಿಷ್ಠ ದೈತ್ಯರ ಸಂಹಾರ ಮಾಡಿರುವನು. ಇಂತಹ ಈ ಮಹಾಬಲಿಷ್ಠನಾದ ಹರಿಯ ಹೃದಯ ಕಮಲದಲ್ಲಿ ಸಿಕ್ಕಿಕೊಳ್ಳನೆಂಬ ಈ ಮಾತು ಪೂರ್ಣವಾಗಿ ಮಿಥ್ಯೆಯಾಗಿದೆ ಎಂದು ಯಾರಾದರೂ ಹೇಳಬಹುದು ॥೭೮೨॥ ಹಾಗಾದರೆ ನೋಡಿರಿ, ಯಾವ ಭ್ರಮರವು ಒಣಗಿದ ಕಟ್ಟಿಗೆಯನ್ನು ಸಹ ಕೊರೆಯುವುದೋ ಅದು ಆ ಕೋಮಲ ಕಮಲದ ಹೂವಿನಲ್ಲಿ ಪ್ರೇಮಕ್ಕಾಗಿ ಸಿಕ್ಕಿಕೊಂಡಿರುವುದು. ಅದರಲ್ಲಿ ಒಂದು ಕುಸುಮಕ್ಕೂ ಅದು ಧಕ್ಕೆ ತರುವುದಿಲ್ಲ ॥೭೮೩॥ ಅದರಂತೆ ಭಕ್ತನ ಪ್ರೇಮಾತಿಶಯದಿಂದ ಹೃದಯದಲ್ಲಿ ಶ್ರೀಹರಿಯು ಸಿಕ್ಕಿಕೊಳ್ಳುವನು. ಅಲ್ಲಿ ಆತನ ಸರ್ವ ಶಕ್ತಿಯು, ಪರಾಕ್ರಮವು ಕುಂಠಿತವಾಗುವುದು. ಕಾರಣ ಭಾವಾರ್ಥ(ಪ್ರೇಮದ) ಮುಂದೆ ಬಲವುನಡೆಯಲಾರದು ॥೭೮೪॥ ಚಿಕ್ಕ ಬಾಲಕನು ತನ್ನ ತಂದೆಯ ಧೋತರ ಅಂಚನ್ನು ಸುಳಿಸುತ್ತಿ ಹಿಡಿಯುವನು. ಆದ್ದರಿಂದ ಹೋಗುವ ತಂದೆ ನಿಲ್ಲುವನು. ಹಾಗಾದರೆ ಆತನು ತನ್ನ ಮಗನಕ್ಕಿಂತಲೂ ಬಲಹೀನನೇ? ಅಲ್ಲ, ಆತನು ಪ್ರೇಮದಿಂದ ಭುಲಾಯಿಸಿದಕ್ಕೆ ಆತನಿಗೆ ಅಲುಗಾಡಲೂ ಸಹ ಆಗುವುದಿಲ್ಲ ॥೭೮೫॥ ಅದರಂತೆ ಲಡಿವಾಳ ನಿಜಭಕ್ತನ ಪ್ರೇಮವು ಅತ್ಯಂತ ಮಧುರವಾಗಿರುವುದು. ಆದ್ದರಿಂದ ಅಲ್ಲಿಂದ ಹೊರಗೆ ಹೊರಡುವ ಮಾತನ್ನು ಮರೆತು ಶ್ರೀಹರಿಯು ಆತನ ಹೃದಯದಲ್ಲಿಯೇ ಆನಂದವಾಗಿ ಇರುವನು ॥೭೮೬॥ ಹೀಗೆ ಯಾರ ಹೃದಯವಿರುವುದೋ ಆತನಿಗೆ ಶ್ರೀಹರಿಯು ತಾನಾಗಿಯೇ ಎಂದೂ ಬಿಡಲಾರನು. ಅದರಂತೆಯೇ ಭಕ್ತನು ಸಹ ಪೂರ್ಣ ಪ್ರೇಮದಿಂದ ಹರಿಯಚರಣಗಳನ್ನು ಬಿಡಲಾರನು ॥೭೮೭॥

ಅನನ್ಯ ಸದಾ ।।೭೮೮।। ಐಸೇ ಜೇ ಹರಿಚರಣೀ ಅನನ್ಯ । ತೇಚಿ ಭಕ್ತಾ ಮಾಜೀ ಪ್ರಧಾನ । ವೈಷ್ಣವಾಂತ ತೇ ಅಗ್ರಗಣ । ರಾಯಾ ತೇ ಜಾಣ ಭಗವತೋತ್ತಮ ।।೭೮೯।। ಗೌಣ ಕರೂನಿ ಚಾರೀ ಮುಕ್ತೀ । ಜಗೀ ಶ್ರೇಷ್ಠ ಭಗವದ್ಭಕ್ತೀ । ತ್ಯಾ ಉತ್ತಮ ಭಕ್ತಾಂಚೀ ಸ್ಥಿತೀ । ಸಂಕ್ಷೇಪೇ ತುಜಪ್ರತೀ ಬೋಲಿಲೋ ರಾಯಾ ।।೭೯೦।। ಪೂರ್ಣ ಭಕ್ತೀಚೇ ನಿರೂಪಣ । ಸಾಂಗತಾ ವೇದಾ ಪಡಲೇ ಮೌನ । ಸಹಸ್ರಮುಖಾಚೀ ಜಿವ್ಹಾ ಪೂರ್ಣ । ಥಕೋನಿ ಜಾಣ ಥೋಂಟಾವೇ ।।೭೯೧।। ತೇ ಭಕ್ತೀಚೀ ಏಕಾಂಶತಾ । ತುಜ ಮ್ಯಾ ಸಾಂಗಿತಲೀ ಹೇ ಕಥಾ । ಯಾವರೀ ಪರಿಪೂರ್ಣತಾ । ರಾಯಾ ಸ್ವಭಾವತಾ ತೂ ಜಾಣಶೀ ।।೭೯೨।। ಹರೀಸಾರಿಖಾ ರಸಾಳ ವಕ್ತಾ । ಸಾಂಗತಾ ಉತ್ತಮಭಕ್ತಕಥಾ । ತಟಸ್ಥ ಪಡಿಲೇ ಸಮಸ್ತಾ । ಭಕ್ತಭಾವಾರ್ಥತಾ ಐಕೋನಿ ।।೭೯೩।। ತಂವ ರಾವೋ ರೋಮಾಂಚಿತ ಜಾಹಲಾ । ರೋಮಮೂಳೀ ಸ್ವೇದ ಆಲಾ । ಶ್ರವಣಸುಖೇ ಲಾಂಚಾವಲಾ । ಡೋಲೋ ಲಾಗಲಾ ಸ್ವಾನಂದೇ ।।೭೯೪।। ಪೂರ್ಣ ಸಂತೋಷೋನಿ ಮನೀ । ಮ್ಹಣೇ ಭಲೇ ಕೇಲೇ ಮುನೀ । ಥೋರ ನಿಮಾಲೋ ನಿರೂಪಣೀ । ಶ್ರವಣಾಚೀ ಧಣೀ ತರೀ ನ ಪುರೇ ।।೭೯೫।। ಐಕೋನಿ ಹರೀಚೇ ವಚನ । ರಾಜಾ ಮ್ಹಣೇ ಹೇ ಅವಘೇ ಜಣ । ಅಪರೋಕ್ಷ ಜ್ಞಾನೇ ಜ್ಞಾನಸಂಪನ್ನ । ವಕ್ತೇ ಪೂರ್ಣ ಅವಘೇಹೀ ।।೭೯೬।। ಭಿನ್ನ ಭಿನ್ನ ಕರೋನಿ ಪ್ರಶ್ನ । ಆಕರ್ಣೂ ಅವಘ್ಯಾಂಚೇ ವಚನ । ಐಶಿಯಾ ಶ್ರದ್ಧಾ ರಾಜಾ ಪೂರ್ಣ । ಅನುಪಮ ಪ್ರಶ್ನ ಪೈ ಕರೀಲ ।।೭೯೭।। ರಾಯಾಸೀ ಕಥೇಚೀ ಪೂರ್ಣ ಚಾಡ । ಪುಢಾ ಪ್ರಶ್ನ ಕರೀಲ ಗೋಡ । ಜೇ ಐಕತಾಂಚಿ ಪುರೇ ಕೋಡ । ಶ್ರೋತೇ ವಾಡ ಸುಖಾವತೀ ।।೭೯೮।। ತ್ಯಾ ಪ್ರಶ್ನಾಚೇ ಗುಹ್ಯ ಜ್ಞಾನ । ಶ್ರವಣೇ ಪಾವವೀನ ಸಂಪೂರ್ಣ । ವದನೀ ವಕ್ತಾ ಶ್ರೀಜನಾರ್ದನ । ಯಥಾರ್ಥ ಪೂರ್ಣ ಅರ್ಥವೀ ।।೭೯೯।। ಪಾವಾ ನಾನಾ ಮಧುರ ಧ್ವನೀ ಗಾಜೇ । ಪರಿ ತೋ ವಾಜವಿತ್ಯಾಚೇನಿ ವಾಜೇ । ತೇವೀ ಏಕಾ ಜನಾರ್ದನೀ ಸಾಚೇ । ಗ್ರಂಥಾರ್ಥವೋಜೇ ಕವಿ ಕರ್ತಾ ।।೮೦೦।।

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ನಿಮಿಜಾಯಂತಸಂವಾದೇ ಏಕಾಕಾರಟೀಕಾಯಾಂ

ಹರಿ ಚರಣಗಳಲ್ಲಿ ಯಾರ ಪ್ರೀತಿಯು ಹೇಗಿರುವುದೋ ಹಾಗೇಯೇ ಹರಿಯ ಪ್ರೀತಿಯು ಆ ಭಕ್ತನಲ್ಲಿ ಇರುವುದು. ಹರಿಯಲ್ಲಿ ಯಾರು ಅನನ್ಯವಾಗಿರುವರೋ ಅವರಲ್ಲಿ ಹರಿಯು ಅನನ್ಯವಾಗಿರುವನು ।।೭೮೮।। ಈ ಪ್ರಕಾರವಾಗಿ ಯಾರು ಹರಿ ಚರಣಗಳಲ್ಲಿ ಅನನ್ಯ ಭಕ್ತಿಯನ್ನು ಧರಿಸಿರುವರೋ, ಅವರೇ ಭಕ್ತರಲ್ಲಿ ಶ್ರೇಷ್ಠರು. ರಾಜನೇ, ವೈಷ್ಣವರಲ್ಲಿ ಅವರೇ ಅಗ್ರಗಣ್ಯರು ಮತ್ತು ಭಾಗವತರಲ್ಲಿ ಉತ್ತಮ ಭಾಗವತರು ಇವರೇ. ಇದನ್ನು ಲಕ್ಷದಲ್ಲಿಡು ।।೭೮೯।। ಈ ಪ್ರಕಾರವಾಗಿ ನಾಲ್ಕು ಮುಕ್ತಿಗಳನ್ನು ಗೌಣ ಮಾಡಿ ಜಗತ್ತಿನಲ್ಲಿ ಭಗವದ್ಭಕ್ತಿಯ ಆಶ್ರಯ ಮಾಡುವನೋ, ಆ ಉತ್ತಮ ಭಕ್ತನ ಸ್ಥಿತಿಯನ್ನು ನಿನಗೆ ಸಂಕ್ಷಿಪ್ತವಾಗಿ ತಿಳಿಸಿರುವೆನು ।।೭೯೦।। ಭಕ್ತಿಯ ಪೂರ್ಣ ನಿರೂಪಣ ಮಾಡುವಲ್ಲಿ ವೇದವು ಸಹ ಮೌನವಾಯಿತು. ಸಹಸ್ರಮುಖಿ ಶೇಷನ ನಾಲಿಗೆಗಳು ಸಹ ಭಕ್ತಿಯ ವರ್ಣನೆ ಮಾಡುವಾಗ್ಗ ದಣಿದುಕೊಂಡವು ।।೭೯೧।। ಹೇ ರಾಜನೇ, ನಿನಗೆ ನಾನು ಇಲ್ಲಿಯವರೆಗೆ ಹೇಳಿದ ಕಥೆಯು, ಈಭಕ್ತಿಯಲ್ಲಿನ ಒಂದು ಅಂಶಮಾತ್ರ ಆಗಿರುವುದು. ಇದರ ಆಧಾರದಿಂದ ನಿನಗೆ ಭಕ್ತಿಯ ಪೂರ್ಣ ಭಾವವು ಸಹಜವಾಗಿ ನಿನ್ನ ಲಕ್ಷಕ್ಕೆ ಬರುವುದು ।।೭೯೨।। ಹರಿಯುಪಿಯಂತಹ ರಸಾಳ ವಕ್ತಾನು ಉತ್ತಮ ಭಕ್ತರ ಕಥೆಯನ್ನು ಹೇಳುತ್ತಿರಲು, ಭಕ್ತಭಾವಾರ್ಥತೆಯನ್ನು ಕೇಳಿ ಎಲ್ಲರೂ ಪರಿಪೂರ್ಣ ತಟಸ್ಥರಾದರು ।।೭೯೩।। ರಾಜನ ಬಗ್ಗೆ ಏನೆಂದು ಹೇಳಬೇಕು? ಈತನ ಸರ್ವಾಂಗದಲ್ಲಿ ರೋಮಾಂಚನವಾಯಿತು ಮತ್ತು ಪ್ರತಿಯೊಂದು ರೋಮಗಳಿಂದ ಬೆವರು ಹುಟ್ಟಿತು. ಶ್ರವಣಸುಖದಲ್ಲಿ ತನ್ಮಯನಾಗಿ ಈತನು ಆತ್ಮಾನಂದದಿಂದ ಲೋಲಾಡಿದನು ।।೭೯೪।। ಮನದಲ್ಲಿ ಅತ್ಯಂತ ಸಂತೋಷಪಟ್ಟು ರಾಜನು ಹೇಳಿದನು. ಹೇ ಮುನಿವರ್ಯರೇ, ನೀವು ಬಹಳ ಒಳ್ಳೆಯದನ್ನು ಮಾಡಿದಿರಿ. ನಿಮ್ಮ ನಿರೂಪಣೆಯನ್ನು ಕೇಳಿ ಮನಸ್ಸಿಗೆ ಬಹಳ ಸಮಾಧಾನವಾಯಿತು. ಆದರೆ ಇಷ್ಟರಿಂದಲೇ ನನಗೆ ಕೇಳುವ ತೃಪ್ತಿಯು ದೊರೆತ್ತಿಲ್ಲ ।।೭೯೫।। ಇಲ್ಲಿಯವರೆಗೆ ಹರಿಮುನೀಶ್ವರನ ಭಾಷಣವನ್ನು ಕೇಳಿ ಮನಸ್ಸಿನಲ್ಲಿ ಅಂದುಕೊಂಡನು. ಈ ಎಲ್ಲ ಮುನಿಗಳು ಆತ್ಮಾನುಭವಜ್ಞಾನದಿಂದ ಪರಿಪೂರ್ಣರಾಗಿರುವರು. ಇಷ್ಟೇ ಅಲ್ಲ ಇವರೆಲ್ಲರೂ ಉತ್ತಮ ವಕ್ತಾಗಳಿರುವರು ।।೭೯೬।। ಆದ್ದರಿಂದ ಇವರಿಗೆ ಭಿನ್ನ ಭಿನ್ನವಾದ ಪ್ರಶ್ನೆಗಳನ್ನು ಕೇಳಿ ಎಲ್ಲರ ಭಾಷಣಗಳನ್ನು ಕೇಳೋಣ. ಹೀಗೆ ಪೂರ್ಣ ಶ್ರದ್ಧೆಯಿಂದ ಈ ರಾಜನು ಇನ್ನು ಮುಂದೆ ಅನುಪಮ್ಯವಾದ ಪ್ರಶ್ನೆಗಳನ್ನು ಮಾಡುವವನಿರುವನು ।।೭೯೭।। ರಾಜನಿಗೆ ಕಥೆ ಕೇಳುವ ಅತ್ಯಂತ ಪ್ರೀತಿ ಇರುವುದರಿಂದ ಮುಂದೀತನು ಉತ್ತಮವಾದ ಪ್ರಶ್ನೆಗಳನ್ನು ಕೇಳುವನು. ಇವುಗಳನ್ನು ಕೇಳುತ್ತಲೇ ಇಚ್ಛೆಯು ತೃಪ್ತವಾಗಿ ಶ್ರೋತೃಗಳಿಗೆ ಬಹಳ ಸಂತೋಷವಾಗುವುದು ।।೭೯೮।। ಆ ಪ್ರಶ್ನೆಗಳಲ್ಲಿನ ಗೂಢವಾದ ಜ್ಞಾನವನ್ನು ನಾನೂ ಸಹ ಎಲ್ಲರನ್ನೂ ಕೇಳಿಸುವೆ. ಸಂಪೂರ್ಣವಾದ ಅರ್ಥದಿಂದ ಯಥಾ ತಥ್ಯ ರೀತಿಯಲ್ಲಿ ಶ್ರೀಜನಾರ್ದನರೇ ನನ್ನ ಮುಖದಿಂದ ಹೇಳಿಸುವವರಿದ್ದಾರೆ ।।೭೯೯।। ಮುರಲಿಯಿಂದ ಅನೇಕ ಪ್ರಕಾರಗಳ ಧ್ವನಿಗಳು ಹೊರಡುವವು. ಆದರೆ ಈ ಕೌಶಲ್ಯವು ಮುರಲಿಯನ್ನು ನುಡಿಸುವವನದ್ದಾಗಿರುವುದು. ಅದರಂತೆ ಜನಾರ್ದನರ ಕೃಪೆಯಿಂದ “ಏಕಾ” ಈ ಕವಿಯು ಮತ್ತು ಗ್ರಂಥಕರ್ತನು ಮುಂದೆ ಬರುವನು ।।೮೦೦।।

ದ್ವಿತೀಯೋಽಧ್ಯಾಯಃ ॥೨॥

॥ ಶ್ರೀಕೃಷ್ಣಾರ್ಪಣಮಸ್ತು ॥

ಇತಿ ಶ್ರೀಮದ್ಭಾಗವತ ಮಹಾಪುರಾಣದ ಏಕಾದಶಸ್ಕಂಧದ ನಿಮಿಜಾಯಂತ ಸಂವಾದದ ಶ್ರೀಏಕನಾಥ ಮಹಾರಾಜರ ಭಾಷ್ಯಯ
ಎರಡನೇ ಅಧ್ಯಾಯ ಸಂಪೂರ್ಣ

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಮೂರನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಜೀ ಶ್ರೀಗುರುರಾಯಾ । ಮ್ಹಣೋನಿ ಸದ್ಭಾವೇ ಲಾಗೇ ಪಾಯಾ । ತಂವ ಮೀಪಣ ಗೇಲೇ ವಾಯಾ । ಘೇಊನಿಯಾ ತೂಪಣಾ ॥೧॥ ನವಲ ಪಾಯಾಂಚೇ ಕಠಿಣಪಣ । ವಜ್ರೇ ನ ತುಟೇ ಲಿಂಗದೇಹ ಜಾಣ । ತ್ಯಾಚೇಹೀ ಕೇಲೇ ಚೂರ್ಣ । ಅವಲೀಳಾ ಚರಣ ಲಾಗತಾ ॥೨॥ ಪಾಯೀ ಲಾಗತಾಂಚಿ ಬಳೀ । ತೋ ತ್ವಾ ಘಾತಲಾ ಪಾತಾಳೀ । ಪಾಯೀ ಲವಣಾಸುರಾ ಖಂದಳೀ । ಅತುರ್ಬಳೀ ನಿರ್ದಾಳಿತಾ ॥೩॥ ಪಾಯ ಅತಿಶಯೇಸೀ ತಿಖ । ಕಾಳಿಯಾಸೀ ಲಾಗತಾ ದೇಖ । ತ್ಯಾಚೇ ಶೋಷೋನಿಯಾ ವಿಖ । ಕೇಲಾ ನಿರ್ವಿಖ ನಿಃಶೇಷ ॥೪॥ ಪಾಯ ಅತಿಶಯ ದಾರುಣ । ಶಕಟಾಸೀ ಲಾಗತಾ ಜಾಣ । ತ್ಯಾಚೇ ತುಟಲೇ ಗುಣಬಂಧನ । ಗಮನಾಗಮನ ಖುಂಟಲೇ ॥೫॥ ಪಾಯಾಂಚಾ ಧಾಕ ಸಬಳಾ । ಪಾಯೇ ಉದ್ಧರಿಲೇ ಅಹಲ್ಯಾ ಶಿಳಾ । ಪಾಯ ನೃಗೇ ದೇಖಿತಾ ಡೋಳಾ । ಥಿತ್ಯಾ ಮುಕಲಾ ಸಂಸಾರಾ ॥೬॥ ಆವಡೀ ಪಾಯ ಚಿಂತಿತೀ ದಾಸ । ತ್ಯಾಂಚಾ ಮನುಷ್ಯಧರ್ಮಾ ಹೋಯ ನಾಶ । ಪಾಯೇ ಯಮಲೋಕ ಪಾಡೀಲಾ ವೋಸ । ಪಾಯೇ ಜೀವಾಸ ಜೀವಘಾತ ॥೭॥ ಪಾಯವಣೀ ಶಿರೀ ಧರಿಲೇ ಶಿವೇ । ತೋ ಜಗಾತೇ ಘೇತು ಉಠಿಲಾ ಜೀವೇ । ತ್ಯಾಸೀ ರಾಖ ಲಾವಿಲೀ ಜೀವೇಭಾವೇ । ಶೇಖೀ ನಾಗವಾ ಭಂವೇ ಶ್ಮಶಾನೀ ॥೮॥ ಐಸೇ ಪಾಯಾಂಚೇ ಕರಣೇ । ಶಿವಾಸೀ ಉರೋ ನೇದೀ ಶಿವಪಣೇ । ಮಾ ಜೀವಾಸೀ ಕೈಂಚೇ ಜೀವೇ ಜಿಣೇ । ಹೇ ಮಾನಿತೇ ಮಾನಣೇ ಉರೋ ನೇದೀ ॥೯॥ ಐಸಾ ಜಾಣೋನಿಯಾ ಭಾವೋ । ಏಕಾ ಏಕಪಣೇ ಠೇಲಾ ಠಾವೋ । ತೇಥೇಹೀ ಪಾಯಾಂಚಾ ನವಲಾವೋ । ಕೇಲಾ ಏಕಪಣಾ ವಾವೋ ವಂದನಮಾತ್ರೇ ॥೧೦॥

ಹೇ ಚಿತ್‌ಸ್ವರೂಪ ಸದ್ಗುರುವೇ, ನಿನಗೆ ನಮಸ್ಕಾರಗಳು. ಹೀಗೆಂದು ಸದ್ಭಾವನೆಯಿಂದ ಚರಣಕ್ಕೆ ಬೀಳಲು ನೀನೆಂಬುವುದನ್ನು ಸ್ವೀಕರಿಸಿ, ನಾನೆಂಬುವುದನ್ನು ಇಲ್ಲದಂತಾಗಿ ಮಾಡಿದೆ ॥೧॥ ನಿಮ್ಮ ಚರಣಗಳ ಕಾಠಿಣ್ಯವು ಎಂತಹ ಚಮತ್ಕಾರವಾಗಿದೆ? ಲಿಂಗದೇಹವು ವಜ್ರದಿಂದಲೂ ಒಡೆಯುವುದಿಲ್ಲ. ಆದರೆ, ಅದಕ್ಕೆ ನಿನ್ನ ಚರಣ ಮುಟ್ಟುತ್ತಲೇ ಸಹಜ ಲೀಲೆಯಿಂದ ಅದನ್ನು ಚೂರ್ಣಗೊಳಿಸಿದೆ ॥೨॥ ಬಲಿರಾಜನು ಚರಣಕ್ಕೆ ಬಿದ್ದನು. ಆದರೆ ಅದೇ ಚರಣವು ಆತನಿಗೆ ಪಾತಾಳಕ್ಕೆ ಮುಟ್ಟಿಸಿತು. ಮಹಾ ಬಲಾಢ್ಯನಾದ ಲವಣಾಸುರನನ್ನು ಸಹ ನೀನು ನಿನ್ನ ಚರಣಗಳಿಂದಲೇ ನಾಶಗೊಳಿಸಿದೆ ॥೩॥ ನಿಮ್ಮ ಚರಣಗಳು ನಿಜವಾಗಿಯೂ ಬಹು ತೀಕ್ಷ್ಣವಾಗಿವೆ. ಇವು ಕಾಲಿಯಾ ಸರ್ಪಕ್ಕೆ ಬಡೆಯುತ್ತಲೇ, ಅವು ಅದರ ಸರ್ಪ ವಿಷವನ್ನು ಶೋಷಿಸಿ ಅದಕ್ಕೆ ಪೂರ್ಣವಾಗಿ ನಿರ್ವಿಷವನ್ನಾಗಿ ಮಾಡಿದವು ॥೪॥ ನಿಮ್ಮ ಚರಣಗಳು ಬಲು ಕಠಿಣವಾಗಿವೆ. ಅವು ಶಕಟಾಸುರನನ್ನು ತಗಲುತ್ತಲೇ ಆತನ ಪಾಶಬಂಧವು ಮುರಿದು ಬಿದ್ದು, ಗಮನಾಗಮನವು ನಿಂತುಹೋಯಿತು ॥೫॥ ಮಹಾ ಮಹಾ ಬಲಿಷ್ಠರಿಗೂ ನಿನ್ನ ಚರಣ ಭಯವಿರುವುದು. ಅಹಲ್ಯೆಯು ಶಿಲೆಯಾಗಿ ಬಿದ್ದಿದ್ದಳು. ಆಕೆಯ ಉದ್ಧಾರವನ್ನು ನಿನ್ನ ಚರಣಗಳೇ ಮಾಡಿದವು. ದಾನಶೂರ ನೃಗರಾಜನು (ಬ್ರಾಹ್ಮಣರ ಶಾಪದಿಂದ ಓತಿಕಾಟನಾಗಿದ್ದನು) ಶ್ರೀಕೃಷ್ಣನ ಚರಣ ದರ್ಶನದಿಂದ ಆತನು ಮಿಥ್ಯೆಯಾದ ಸಂಸಾರದಿಂದ ಅಂದರೆ ಜನ್ಮಮರಣದಿಂದ ಬಿಡುಗಡೆಯಾದನು ॥೬॥ ಯಾವ ದಾಸನು ನಿನ್ನ ಚರಣಗಳನ್ನು ಪ್ರೇಮದಿಂದ ಚಿಂತಿಸುವನೋ ಆತನ ಮನುಷ್ಯಧರ್ಮವೇ ಇಲ್ಲದಾಗುವುದು. ಈ ಚರಣಗಳಿಂದಲೇ ಯಮಲೋಕವು ಹಾಳುಬಿದ್ದಿರುವುದು ಮತ್ತು ಈ ಚರಣಗಳು ಜೀವಿಗಳ ಜೀವಭಾವವನ್ನೇ ನಾಶಗೊಳಿಸುವುವು ॥೭॥ ನಿನ್ನ ಚರಣ ತೀರ್ಥವನ್ನು ಶಂಕರನು ಮಸ್ತಕದಲ್ಲಿ ಧರಿಸಿದನು. ಈತನು ಜಗತ್ತಿನ ಪ್ರಾಣಗಳನ್ನೇ ತೆಗೆದುಕೊಳ್ಳುವನು. ಅದರ ಸುಟ್ಟಬೂದಿಯನ್ನು ಮೈತುಂಬ ಪ್ರೀತಿಯಿಂದ ಹಚ್ಚಿಕೊಂಡು ಕೊನೆಗೆ ದಿಗಂಬರನಾಗಿ ಸ್ಮಶಾನದಲ್ಲಿ ತಿರುಗುತ್ತಿರುವನು ॥೮॥ ಹೀಗೆ ಈ ಚರಣಗಳ ಕೃತಿಯಾಗಿದೆ. ಇವು ಶಿವನ ಶಿವತ್ವವನ್ನು ಉಳಿಸುವುದಿಲ್ಲ. ಹಾಗಾದಲ್ಲಿ ಜೀವಕ್ಕೆ ಜೀವತ್ವದಿಂದ ಇರಲು ಹೇಗೆ ಬಿಡುವುವು? ಈ ಪ್ರಕಾರವಾಗಿ ಜೀವ, ಶಿವವನ್ನು ಮನ್ನಿಸುವಿಕೆ ಹಾಗೂ ಮನ್ನಿಸುವವರನ್ನು ಉಳಿಸಿಕೊಡುವುದಿಲ್ಲ ॥೯॥ ನಾನು ಏಕನಾಥನು ಇದೇ ಏಕಭಾವವನ್ನು ಮನದಲ್ಲಿ ತಂದು ಚರಣಗಳಿಗೆ ವಂದಿಸಿದಾಕ್ಷಣವೇ ಚಮತ್ಕಾರವಾಗಿ ನನ್ನ ಏಕತ್ವವನ್ನೂ ಸಹ ಇಲ್ಲದಂತೆ ಮಾಡಿದವು ॥೧೦॥

ತೇಥೇ ಕವಣೇ ಕವಣಾಸೀ ವಾನಣೇ । ಕವಣೇ ಕವಣಾಸೀ ವಿನವಿಣೇ । ಕವಣೇ ಕವಣಾಸೀ ದೇಣೇ ಘೇಣೇ । ಮೀ ತೂಂಚೇ ಜಿಣೇ ಜೀವೇ ಗೇಲೇ ।।೧೧।। ತೇವ್ಹಾ ದೇವ ಆಣಿ ಭಕ್ತು । ಜಾಹಲಾಸೀ ಮಾ ತೂಂಚಿ ತೂ । ತೇಥೇ ಮೀಪಣಾಚೀ ಮಾತು । ಕೋಣೇ ಕೋಣಾಂತು ಮಿರವಾವೀ ।।೧೨।। ಐಶಿಯಾ ಪದೀ ವಾಊನಿ ತತ್ತ್ವತಾ । ಕರವಿತೋಸೀ ಗ್ರಂಥಕಥಾ । ತೇವ್ಹಾ ಮಾರ್ಝೇನಿ ನಾವೇ ಕವಿ ಕರ್ತಾ । ತೂಂಚಿ ವಸ್ತುತಾ ಸದ್ಗುರುರಾಯಾ ।।೧೩।। ಮಾರ್ಝೇ ನಾಮರೂಪ ಆಘವೇ ಏಕ । ತೇಹೀ ಜನಾರ್ದನು ಝಾಲಾ ದೇಖ । ಐಸೇ ಏಕಪಣಾಚೇ ಕೌತುಕ । ಅತ್ಯಂತಿಕ ಶ್ರೀಜನಾರ್ದನಾ ।।೧೪।। ತೇಣೇ ಕೌತುಕೇಚೇ ಆತಾ । ಮಾರ್ಝೇನಿ ನಾವೇ ಕವಿ ಕರ್ತಾ । ಹೋಊನಿ ಸ್ವಯೇ ರಚೀ ಗ್ರಂಥಾ । ಯಥಾರ್ಥತಾ ನಿಜಬೋಧೇ ।।೧೫।। ತೇಥೇ ದ್ವಿತಿಯಾಧ್ಯಾಯಾಚೇ ಅಂತೀ । ದುಸ್ತರ ಮಾಯಾ ಉತ್ತಮ-ಭಕ್ತೀ । ನಿರಸೋನಿಯಾ ಭಜನಸ್ಥಿತೀ । ಭಗವತ್ಪ್ರಾಪ್ತೀ ಪಾವಲೇ ।।೧೬।। ಕೈಶೀ ದುಸ್ತರ ಹರೀಚೀ ಮಾಯಾ । ಪುಸಾವಯಾ ಸಾದರತಾ ಝಾಲೀ ರಾಯಾ । ಅತ್ಯಾದರೇಕರೋನಿಯಾ । ಮ್ಹಣೇ ಮುನಿವರ್ಯಾ ಅವಧಾರೀ ।।೧೭।।

ರಾಜೋವಾಚ:-

ಪರಸ್ಯ ವಿಷ್ಣೋರೀಶಸ್ಯ ಮಾಯಿನಾಮಪಿ ಮೋಹಿನೀಮ್ ।
ಮಾಯಾಂ ವೇದಿತುಮಿಚ್ಛಾಮೋ ಭಗವಂತೋ ಬ್ರುವಂತು ನಃ ।।೧।।

ಅರ್ಥ:- ರಾಜನು ನುಡಿದನು: ಪರಮ ಪುರುಷನಾದ ಶ್ರೀವಿಷ್ಣುವಿನ ಮಾಯಾ ಶಕ್ತಿಯು ಮಹಾಯೋಗಿಗಳನ್ನೂ ಮರುಳು ಮಾಡಿಬಿಡುತ್ತದೆ. ಅಂತಹ ಮಾಯಾ ಶಕ್ತಿಯನ್ನು ಕುರಿತು ನಾವು ಈಗ ತಿಳಿಯಬಯಸುತ್ತೇವೆ. ನನ್ನ ಪ್ರಭುಗಳೇ, ಈ ವಿಷಯವನ್ನು ಕುರಿತು ದಯವಿಟ್ಟು ನಮಗೆ ಹೇಳಿ.

ತೃತೀಯಾಧ್ಯಾಯೀ ನಿರೂಪಣ । ರಾಜಾ ಕರೀಲ ಚಾರೀ ಪ್ರಶ್ನ । ''ಮಾಯಾ'' ಆಣಿ ತಿಚೇ ''ತರಣ'' । ''ಬ್ರಹ್ಮ'' ತೇ ಕೋಣ ''ಕರ್ಮ'' ತೇ ಕೈಸೇ ।।೧೮।। ತೇಥೇ ಪ್ರಥಮ ಮಾಯೇಚಾ ಪ್ರಶ್ನ । ರಾಯೇ ಪುಶಿಲಾ ಆಪಣ । ತೇಚಿ ಅರ್ಥೀಚೇ ನಿರೂಪಣ । ಮಾಯೇಚೇ ಲಕ್ಷಣ ರಾಜಾ ಬೋಲೇ ।।೧೯।। ಸುರಾಮಾಜೀ ಶ್ರೇಷ್ಠ ಹೃಷೀಕೇಶೀ । ಬ್ರಹ್ಮಾದಿ ಶಿವು ವಂದಿತೀ ಜ್ಯಾಸೀ । ತ್ಯಾ ವಿಷ್ಣೂಚೀ ಮಾಯಾ ಕೈಸೀ । ಜೇ ಮಾಯಿಕಾಂಸೀ ವ್ಯಾಮೋಹೀ ।।೨೦।। ಕೈಶೀ ಮಾಯಿಕಾ ಮಾಯಾ ಮೋಹೀ ಯೇಥೇ । ಬ್ರಹ್ಮಾ ಶಿವು ಮಾನಿತೀ ಚಿತ್ತೇ । ಆಮ್ಹೀ ಪೂರ್ಣ ಮಾಯೇಚೇ ನಿಯಂತೇ । ಶೇಖಿ ಮಾಯಾ ತಯಾಂತೇ ನಿಜಮೋಹೇ ಮೋಹೀ ।।೨೧।।

ಹೀಗಾದಲ್ಲಿ ಈಗ ಯಾರು ಯಾರ ವರ್ಣನೆ ಅಥವಾ ಸ್ತವನೆಯನ್ನು ಮಾಡಬೇಕು? ಯಾರು ಯಾರನ್ನು ವಿನಂತಿಸಿಕೊಳ್ಳಬೇಕು? ಯಾರು ಯಾರಿಗೆ ಕೊಡಬೇಕು? ಯಾರಿಂದ ಪಡೆಯಬೇಕು? ಕಾರಣ ನಾನು ಮತ್ತು ನೀನೆಂಬ ಇವರ ಆಯುಷ್ಯವೇ ಮುಗಿದು ಹೋಗಿದೆ ।।೧೧।। ಆಗ ದೇವನು ಮತ್ತು ಭಕ್ತನು ನಿನ್ನದು ನೀನೇ ಆದೆಯಲ್ಲ? ಅಂದಮೇಲೇ ನಾನು ಎಂಬುವ ಮಾತಾದರೂ ಯಾರು ಯಾರಲ್ಲಿ ಮೆರೆಯಿಸಬೇಕು? ।।೧೨।। ಇಂತಹ ಪದಕ್ಕೆ ನೀನು ನನ್ನನ್ನು ಏರಿಸಿ, ನೀನೇ ಗ್ರಂಥ ನಿರೂಪಣವನ್ನು ನನ್ನಿಂದ ಮಾಡಿಸುತ್ತಿರುವೆ. ಅದಕ್ಕಾಗಿ ಹೇ ಸದ್ಗುರುರಾಯನೇ, ಈಗ ಗ್ರಂಥದ ಕವಿ,ಕರ್ತಾ ನನ್ನ ಹೆಸರಿನಿಂದ ನೀನೇ ಆಗಿರುವೆ ।।೧೩।। ನನ್ನ ನಾಮವು ಮತ್ತು ರೂಪವು ಎಲ್ಲವೂ ಒಂದೇ ಆಗಿದೆ ಮತ್ತು ಅವುಗಳು ಜನಾರ್ದನವಾಗಿಯೇ ಆಗಿರುವುವು. ಈ ಪ್ರಕಾರವಾಗಿ ಜನಾರ್ದನರಿಗೆ ಐಕ್ಯತ್ವದ ದೊಡ್ಡ ಕೌತುಕವಿದೆ ।।೧೪।। ಈ ಕೌತುಕದಿಂದಲೇ ಈಗ ನನ್ನ ಹೆಸರಿನಿಂದ ಕವಿ-ಕರ್ತಾನಾಗಿ ಯಥಾರ್ಥ ಆತ್ಮಬೋಧಯುಕ್ತವಾದ ಗ್ರಂಥದ ರಚನೆಯನ್ನು ಸ್ವತಃ ತಾನೇ ಮಾಡುತ್ತಿರುವನು ।।೧೫।। ಈ ಹಿಂದೆ ಎರಡನೆಯ ಅಧ್ಯಾಯದ ಕೊನೆಯಲ್ಲಿ (ಉತ್ತಮ ಭಕ್ತನು ಭಜನಸ್ಥಿತಿಯಿಂದ ದುಸ್ತರವಾದ ಮಾಯೆಯ ನಾಶಮಾಡಿ ಭಗವತ್ಪ್ರಾಪ್ತಿಯನ್ನು ಮಾಡಿಕೊಳ್ಳುವನು (ಎಂದು ಹೇಳಿದೆ) ।।೧೬।। ಅಂದಮೇಲೆ ಹರಿಯ ಮಾಯೆಯು ದುಸ್ತರವು ಎಂತಹದ್ದು? ಇದನ್ನು ಕೇಳುವ ಅಭಿಲಾಷೆಯು ರಾಜನಿಗಾಯಿತು. ಆದ್ದರಿಂದ ಬಹಳ ಆದರದಿಂದ ಈತನು ಹೇಳಿದನು:- ಹೇ ಮುನೀಶ್ವರರೇ, ಕೇಳಿರಿ।।೧೭।।

(ಮಾಯೆಯು ಹೇಗಿರುವುದು? ಇದರ ತರಣೋಪಾಯವು ಯಾವುದು? ಬ್ರಹ್ಮವೆಂದರೆ ಏನು? ಮತ್ತು ಕರ್ಮ ಹೇಗಿರುವುದು? ಈ ನಾಲ್ಕು ಪ್ರಶ್ನೆಗಳನ್ನು ರಾಜನು ಕೇಳುವನು.) ಇದರ ನಿರೂಪಣೆಯು ಈ ಮೂರನೆಯ ಅಧ್ಯಾಯದಲ್ಲಿರುವುದು ।।೧೮।। ಇವುಗಳಲ್ಲಿ ಮೊದಲನೆಯದಾಗಿ ಮಾಯೆಯ ಪ್ರಶ್ನೆಯನ್ನು ರಾಜನು ತಾನಾಗಿಯೇ ಕೇಳಿದನು. ಇದರ ಸ್ಪಷ್ಟೀಕರಣ ಮಾಡುವುದಕ್ಕಾಗಿ ರಾಜನು ಮಾಯೆಯ ಲಕ್ಷಣ ಬಗ್ಗೆ ಹೇಳಿದನು ।।೧೯।। ಬ್ರಹ್ಮದೇವನು, ಶಂಕರನು ಮೊದಲು ಮಾಡಿ ವಂದಿಸಿಕೊಳ್ಳುವ ಶ್ರೀವಿಷ್ಣು ಸರ್ವದೇವರಲ್ಲಿ ಶ್ರೇಷ್ಠನು. ಈ ವಿಷ್ಣುವಿನ ಮಾಯೆಯು, ಮಾಯಿಕರಿಗೂ ಮೋಹಿಸುವ ಆ ಮಾಯೆಯು ಹೇಗಿರುವುದು? ।।೨೦।। ಇಲ್ಲಿ ಮಾಯಿಕರಿಗೆ ಮಾಯಾ ಹೇಗೆ ಮೋಹಕ್ಕೆ ಬೀಳಿಸುವುದು? ಎಂದು ಕೇಳಿದರೆ, ಬ್ರಹ್ಮದೇವನು ಮತ್ತು ಶಂಕರನು ಇವರು ತಮ್ಮ ಮನದಲ್ಲಿ ''ನಾವು ಮಾಯೆಯನ್ನು ನಿಯಂತ್ರಿಸಿದ್ದೇವೆ'' ಎಂದು ತಿಳಿದಿರುವರು. ಆದರೆ ಅವರಿಗೂ ಈ ಮಾಯೆಯು ತನ್ನ ಮೋಹದಿಂದ ಮೋಸಗೊಳಿಸಿತು ।।೨೧।।

ಬ್ರಹ್ಮಾ ಮೋಹಿಲಾ ಶಿವಾಚೇ ಲಗ್ನೀ । ವೀರ್ಯ ದ್ರವೇ ಪಾರ್ವತೀ ದೇಖೋನೀ । ಮಹಾದೇವೋ ಮಹಾಜ್ಞಾನೀ । ದೇಖತಾಂಚಿ ಮೋಹೀನೀ ನಿಜವೀರ್ಯ ದ್ರವಲೇ ।೨೨॥ ಜೇ ಸಜ್ಞಾನಾ ಛಳೀ ಲವಲಾಹ್ಯಾ । ಜೀತೇ ಶ್ರುತಿ ಮ್ಹಣತೀ ''ಅಜಯಾ'' । ತೇ ಹರೀಚೀ ದುರ್ಧರ ಮಾಯಾ । ವಿವಂಚೂನಿಯಾ ಮಜ ಸಾಂಗಾ ।೨೩॥ ಮ್ಹಣಾಲ ದುರ್ಧರ ಮಾಯೇಚೀ ಬಾಧಕತಾ । ತೇ ಬಾಧೂ ನ ಶಕೇ ಅನನ್ಯ ಭಕ್ತಾ । ತುವಾಂಹೀ ಭಜಾವೇ ಭಗವಂತಾ । ಮಿಥ್ಯಾ ಮಾಯೇಚೀ ಕಥಾ ಕಾ ಪುಸಶೀ ।೨೪॥ ತೇಚೀ ಅರ್ಥೀಚೇ ನಿರೂಪಣ । ರಾಜಾ ಸಾಕ್ಷೇಪೇಸೀ ಆಪಣ । ಮುನೀಚೇ ಐಕಾವಯಾ ಗುಹ್ಯ ಜ್ಞಾನ । ವಿದಗ್ಧ ಪ್ರಶ್ನ ಆದರೇ ಪುಸತು ।೨೫॥

ನಾನುತೃಪ್ಯೇ ಜುಷನ್‌ಯುಷ್ಮದ್ವಚೋ ಹರಿಕಥಾಮೃತಮ್ ।
ಸಂಸಾರತಾಪನಿಸ್ತಪ್ತೋ ಮರ್ತ್ಯಸ್ತತ್ತಾಪಭೇಷಜಮ್ ।೨॥

ಅರ್ಥ: ನಾನೊಬ್ಬ ಮೃತ್ಯುವಿನ ಶಿಖರನಾಗಿರುವ ಮನುಷ್ಯನಾಗಿರುವೆ. ಅನೇಕ ದಿನಗಳಿಂದ ಸಂಸಾರ ತಾಪಗಳಿಂದ ಬೆಂದು ಹೋಗಿರುವೆನು. ನೀವು ಭಾಗವತ ಕಥಾಮೃತವನ್ನು ಹೇಳುತ್ತಿರುವಿರಿ. ಈ ನನ್ನ ತಾಪವನ್ನು ಪರಿಹರಿಸುವ ಔಷಧವಾಗಿದೆ ಎಂದು ತಿಳಿದು ನಾನು ನಿಮ್ಮ ಅಮೃತವಾಣಿಯನ್ನು ಸೇವಿಸುತ್ತ ಇನ್ನೂ ಅತೃಪ್ತನಾಗಿರುವೆ. ಕೃಪೆದೋರಿ ಇನ್ನೂ ಭಾಗವತ ಕಥಾಮೃತದ ಕಥನವನ್ನು ಮಾಡಿರಿ.

ಸೇವಿತಾ ತುಮಚೇ ವಚನಾಮೃತ । ಪುರೇ ನ ಮ್ಹಣೇ ಮಾಝೇ ''ಚಿತ್ತ'' । ಆಸ್ವಾದಿತಾ ಶಬ್ದೀ ಶಬ್ದಾರ್ಥ । ''ಶ್ರವಣ'' ಕ್ಷುಧಾರ್ಥ ಅಧಿಕ ಜಾಹಲೇ ।೨೬॥ ಅದ್ಭುತ ಕಥಾ ಅತಿಸುರಸ । ಶ್ರವಣೇ ಶ್ರವಣಾ ಅಧಿಕ ಸೋಸ । ''ರಸನಾ'' ಮ್ಹಣೇ ಹಾ ಅತಿಗೋಡ ರಸ । ''ಡೋಳ್ಯಾ'' ಉಲ್ಹಾಸ ಹೇ ಅಪೂರ್ವ ರೂಪ ।೨೭॥ ''ಘ್ರಾಣ'' ಮ್ಹಣೇ ಹಾ ನಿಜಗಂಧು । ಸುಮನೀ ಸುಮನಾ ಅತಿಸುಗಂಧು । ''ವಾಚಾ'' ಮ್ಹಣೇ ಹಾ ಶಬ್ದು । ಪರಮಾನಂದು ಅನುವಾದೇ ।೨೮॥ ನವಲ ನಿರೂಪಣಾಚಾ ಯಾವಾ । ''ಭುಜಾ'' ಸ್ಫುರಣ ಯೇ ದ್ಯಾವಯಾ ಖೇವಾ । ಆಲಿಂಗನ ಜೀವೀಚ್ಯಾ ಜೀವಾ । ನಿಜಸದ್ಭಾವಾ ಹೋತಸೇ ।೨೯॥ ತುಮಚ್ಯಾ ಕಥಾ ಸುನಿಶ್ಚಿತೀ । ದಿವ್ಯೌಷಧಿ ಭವರೋಗ ಛೇದಿತೀ । ತ್ರಿವಿಧ ತಾಪಾಂಚೀ ನಿವೃತ್ತೀ । ಜಡ ಮೂಢ ಪ್ರಾಕೃತೀ ಐಕತಾ ಭಾವೇ ।೩೦॥ ರಾಜಾ ಪರಮಾರ್ಥೀ ಸಾಕಾಂಕ್ಷ । ದೇಖೋನಿ ಸಾರ್ಥಕ ಕಥೇಚೇ ಲಕ್ಷ । ಹರಿಧಾಕುಟಾ ''ಅಂತರಿಕ್ಷ''। ನಿರೂಪಣೀ ದಕ್ಷ ಬೋಲತಾ ಝಾಲಾ ।೩೧॥

ಶಂಕರನ ಲಗ್ನ ಸಮಯದಲ್ಲಿ ಪಾರ್ವತೀಯನ್ನು ಕಂಡು ಬ್ರಹ್ಮದೇವನಿಗೆ ಮೋಹವು ಉತ್ಪನ್ನವಾಗಿ ಅವನ ವೀರ್ಯವು ದ್ರವಿಸಿತು. ಮಹಾದೇವರು ಮಾತ್ರ ಮಹಾ ಜ್ಞಾನಿಯಾಗಿದ್ದರು. ಆದರೆ ಮೋಹಿನಿಯನ್ನು ನೋಡುತ್ತಲೇ ಅವರ ವೀರ್ಯವೂ ಸಹ ದ್ರವಿಸಿತು ।೨೨॥ ಹೀಗೆ ಸಜ್ಞಾನರಿಗೆ ಸಹ ಪೀಡಿಸುವ,ಶ್ರುತಿ ಇದಕ್ಕೆ ''ಅಜಯಾ'' ಎಂದು ಹೇಳುವ, ಈ ಹರಿಯ ದುಸ್ತರವಾದ ಮಾಯೆಯ ಬಗ್ಗೆ ನನಗೆ ವಿವೇಚನೆ ಮಾಡಿ ತಿಳಿಸಿರಿ ।೨೩॥ ಮಾಯೆಯ ಬಾಧೆಯು ಅತಿದುರ್ಧರವಾಗಿದೆ. ಆದರೆ ಆ ಮಾಯೆಯು ಅನನ್ಯ ಭಕ್ತರಿಗೆ ಬಾಧಿಸುವುದಿಲ್ಲ. ನೀನೂ ಸಹ ಭಗವಂತನಿಗೆ ಭಜಿಸು, ಮಾಯೆಯ ಕಥೆಯೇ ಮುಗಿಯುವುದು. ಅಂದಮೇಲೆ ಮಾಯೆಯ ಮಾತನ್ನು ವ್ಯರ್ಥವಾಗಿ ಏಕೆ ಕೇಳಬೇಕು? ಹೀಗೆ ನೀವು ಹೇಳಬಹುದು. ।೨೪॥ ಈ ಪ್ರಕಾರದ ಅರ್ಥದಿಂದಲೇ ರಾಜನು ಕೇಳುತ್ತಿರುವನು. ಮುನಿವರರಿಂದ ಗುಟ್ಟಾದ ಜ್ಞಾನವನ್ನು ಕೇಳುವುದಕ್ಕಾಗಿಯೇ ಜನಕರಾಜನು ಅತ್ಯಂತ ಅಕ್ಕರೆಯಿಂದ ಈ ಸುಂದರವಾದ ಪ್ರಶ್ನೆಯನ್ನು ವಿಚಾರಿಸಿದನು ।೨೫॥

ರಾಜನು ಹೇಳಿದನು :- ನಿಮ್ಮ ಅಮೃತಮಯ ಮಧುರ ಭಾಷಣವನ್ನು ಕೇಳುತ್ತಿರಲು ನನ್ನ ಚಿತ್ತಕ್ಕೆ ಸಾಕು ಅನಿಸುತ್ತಿಲ್ಲ. ಶಬ್ದಾರ್ಥದ ರಸಸ್ವಾದವನ್ನು ಗ್ರಹಣ ಮಾಡುತ್ತಿರಲು ''ಕಿವಿ''ಯು ಇನ್ನೂ ಹೆಚ್ಚಾಗಿಯೇ ಹಸಿದುಕೊಂಡಿದೆ ।೨೬॥ ನಿಮ್ಮ ಭಾಷಣವು ಅತ್ಯಂತ ಅದ್ಭುತ ಹಾಗೂ ಸುರಸವಾಗಿರುವುದರಿಂದ ಇದನ್ನು ಕೇಳಲು ಕಿವಿಗಳಿಗೆ ಅಧಿಕವಾಗಿಯೇ ಉತ್ಸುಕತೆ ಹುಟ್ಟಿರುವುದು. ''ನಾಲಿಗೆ'' ಯು ಈ ರಸವು ಅತಿಶಯವಾಗಿ ಮಧುರವಾಗಿದೆ ಎಂದು ಹೇಳಿದರೆ ''ಕಣ್ಣುಗಳು'' ಈ ಅಪೂರ್ವವಾದ ಸ್ವರೂಪವನ್ನು ಕಂಡು ಉಲ್ಹಾಸಗೊಂಡಿವೆ ।೨೭॥ ''ಮೂಗು'' ಇದೇ ನಿಜವಾದ ಸುಗಂಧವಾಗಿದೆ, ಇದರಿಂದಲೇ ಸುಮನಕ್ಕೆ ಸುಗಂಧವಿದೆ ಎಂದು ಹೇಳುವುದು. ''ವಾಚಾ'' ಹೇಳುವುದು. ಈ ಶಬ್ದಗಳು ಪರಮಾನಂದದ ಅನುವಾದ ಮಾಡುತ್ತಲಿವೆ ।೨೮॥ ಈ ನಿರೂಪಣೆಯ ಓಘವು ಬಹು ವಿಲಕ್ಷಣವಾಗಿದೆ. ಇದಕ್ಕೆ ಆಲಿಂಗಿಸಲು ಬಾಹುಗಳಿಗೆ ಸ್ಫುರಣವಾಗುತ್ತಿದೆ. ''ಜೀವವು'' ಸದ್ಭಾವನೆಯಿಂದ ಆತ್ಮಕ್ಕೆ ಅಪ್ಪಿ ಕೊಳ್ಳುತ್ತಿದೆ ।೨೯॥ ನಿಜವಾಗಿಯೂ ನಿಮ್ಮ ಈ ಕಥೆಯು ದಿವ್ಯವಾದ ಔಷಧವಾಗಿರುವುದು. ಇದು ಸಂಸಾರ ರೋಗವನ್ನು ನಾಶಗೊಳಿಸುವುದು. ಜಡ, ಮೂಢ, ಪ್ರಾಕೃತರು ಇದನ್ನು ಶ್ರದ್ಧೆಯಿಂದ ಶ್ರವಣ ಮಾಡಲು, ಅವರ ತ್ರಿವಿಧ ತಾಪಗಳ ನಾಶವಾಗುವುದು ।೩೦॥ರಾಜನಿಗೆ ಪರಮಾರ್ಥದ ಬಲು ಪ್ರೀತಿ ಇರುವುದನ್ನು ಮತ್ತು ಕಥೆಗಾಗಿ ಆತನ ಒಂದೇಸವನೆ ಲಕ್ಷ ಹತ್ತಿರುವುದನ್ನು ಕಂಡು ನಿರೂಪಿಸುವುದರಲ್ಲಿ ಕುಶಲನಾಗಿರುವ ಹರಿಯ ತಮ್ಮನಾದ ''ಅಂತರಿಕ್ಷ'' ಯೋಗಿಯು ಹೇಳಲಿಕ್ಕೆ ಆರಂಭಿಸಿದನು।೩೧॥

ಅಂತರಿಕ್ಷ ಉವಾಚ:-

ಏಭಿರ್ಭೂತಾನಿ ಭೂತಾತ್ಮಾ ಮಹಾಭೂತೈರ್ಮಹಾಭುಜ । ಸಸರ್ಜೋಚ್ಚಾವಚಾನಾದ್ಯ: ಸ್ವಮಾತ್ರಾತ್ಮ ಪ್ರಸಿದ್ಧಯೇ ।।೩।।

ಅರ್ಥ:- ಅಂತರಿಕ್ಷ ನುಡಿದರು- ಹೇ ರಾಜಾ, ಭಗವಂತನ ಮಾಯೆಯ ಸ್ವರೂಪವು ಅನಿರ್ವಚನಿಯವಾಗಿದೆ. ಆದ್ದರಿಂದ ಅದರ ಕಾರ್ಯದ್ವಾರಾ ಅದರ ನಿರೂಪಣೆಯಾಗುವುದು. ಆದಿ ಪುರುಷ ಪರಮಾತ್ಮನು ಯಾವ ಶಕ್ತಿಯಿಂದ ಸಂಪೂರ್ಣ ಭೂತಗಳ ಕಾರಣನಾದನು, ಮತ್ತು ಅವುಗಳ ವಿಷಯ ಭೋಗ ಹಾಗೂ ಮೋಕ್ಷದ ಸಿದ್ಧಿಗಾಗಿ ತಥಾ ತಮ್ಮ ಉಪಾಸಕರ ಉತ್ಕೃಷ್ಟ ಸಿದ್ಧಿಗಾಗಿ ಸ್ವನಿರ್ಮಿತ ಪಂಚ ಮಹಾಭೂತಗಳಿಂದ ನಾನಾ ಪ್ರಕಾರವಾದ ದೇವ, ಮನುಷ್ಯ, ಇತ್ಯಾದಿ ಶರೀರಗಳ ಸೃಷ್ಟಿಯನ್ನು ಮಾಡುವುದಕ್ಕೆ ಮಾಯಾ ಎನ್ನುವರು.

ಅಂತರಿಕ್ಷ ಮ್ಹಣೇ ರಾಯಾ । ತುವಾ ಪುಶಿಲೀ ಹರೀಚೀ ಮಾಯಾ । ತೋ ಪ್ರಶ್ನಚಿ ಗೇಲಾ ವಾಯಾ । ಬೋಲಣೇ ನ ಯೇ ಆಯಾ ಬೋಲಕ್ಯಾಚೇ ।।೩೨।। ವಂಧ್ಯಾಪುತ್ರಾಚಾ ಜನ್ಮ ಕಾಲ । ರಾಯೇ ಆಣವಿಲಾ ತತ್ಕಾಲ । ರಾಶಿನಕ್ಷತ್ರ - ಜಾತಿ - ಕುಲ । ಸಾಂಗೋ ಜಾತಾ ವಿಕಲವಾಚಾ ಹೋಯ ।।೩೩।। ಮೃಗಜಳಾಚೀ ಪವ್ಹೇ ಬರವೀ । ಗಂಧರ್ವನಗರೀ ಘಾಲಾವೀ । ವಾರಾ ವಳೂನಿ ಸೂತ್ರ ಸ್ವಭಾವೀ । ವಾತೀ ಲಾವಾವೀ ಖದ್ಯೋತ ತೇಜೇ ।।೩೪।। ನಿಜಚ್ಛಾಯೇಚೇ ಶಿರ ಫೋಡಾ । ಆಕಾಶಾಚೀ ತ್ವಚಾ ಕಾಢಾ । ಶಿಂಪೀ ಆಂಧಾರೂ ಖಿರವಡಾ । ಬಾಗುಲಾಚಾ ರಾಂಡವಡಾ ನಿಜಶಸ್ತ್ರೇ ಕೀಜೇ ।।೩೫।। ವಾಂಝೇಚೇ ಸುನೇ ಪುತ್ರ ಝಾಲಾ । ತೇಥ ಭೀಷ್ಮಸ್ತ್ರಿಯೇಸೀ ಪಾನ್ಹಾ ಆಲಾ । ತೇಣೇ ಪಯಃಪಾನೇ ತೋ ಮಾತಲಾ । ಘರಭಂಗು ಕೇಲಾ ದಿಗಂಬರಾಚಾ ।।೩೬।। ಜಾತೀ ಲಹಾನ ದಳಾವಾ ವಾರಾ । ಅಶ್ವಶೃಂಗೇ ಆಕಾಶ ಚಿರಾ । ನಪುಂಸಕಾಚೀ ನಾತೊಂಡೇ ಘರಾ । ಸುರ್ಯೋದಯೀ ಅಂಧಾರಾ ಲಪೋ ಆಲೀ ।।೩೭।। ಗುಂಜೇಚೇ ನಿಜತೇಜೇ ದಿವೀ । ಹನುಮಂತಲಗ್ನೀ ಲಾವಾವೀ । ಯಾ ಸೋಹಳಿಯಾಲಾಗೀ ವಿಕಾವೀ । ವೋಸಗಾಂವಿ ನಿಜಛಾಯಾ ।।೩೮।। ಆಕಾಶಾಚೀ ಸುಮನೇ । ಸುವಾಸೇ ಕೀ ವಾಸಹೀನೇ । ಹೇ ವಿವಂಚಿತೀ ಜೇ ದೇಖಣೇ । ತೇ ಮಾಯೇಚೇ ಸಾಂಗಣೇ ಸಾಂಗೋತ ಸುಖೇ ।।೩೯।। ಏವಂ ಮಾಯೇಚೇ ಜೇ ಬೋಲಣೇ । ತೇ ಸಾಂಗತಾಂಚಿ ಲಾಜಿರವಾಣೇ । ನುಪಜತ್ಯಾಚೇ ಶ್ರಾದ್ಧ ಕರಣೇ । ತೈಶೀ ಸಾಂಗಣೇ ಮಹಾಮಾಯಾ ।।೪೦।। ''ಮಾಯಾ'' ಮ್ಹಣವೀ ಯೇಣೇ ಭಾವೇ । ಜೇ ಮೀ ಕದಾ ವಿದ್ಯಮಾನ ನವ್ಹೇ । ಯಾಲಾಗೀ ''ಅವಿದ್ಯಾ'' ಯೇಣೇ ನಾವೇ । ವೇದಾನುಭವೇ ಗರ್ಜತೀ ಶಾಸ್ತ್ರೇ ।।೪೧।। ಭ್ರಮ ತೋ ಮಾಯೇಚೇ ನಿಜಮೂಳ । ಭ್ರಾಂತಿ ಹೇಚಿ ಫೂಲ ಸೋಜ್ಜ್ವಳ । ಭುಲೀ ತೇ ಇಚೇ ಸಾಜುಕ ಫಳ । ವಿಷಯ ರಸಾಳ ಸದಾ ಫಳಿತ ।।೪೨।।

ಅಂತರಿಕ್ಷನು ಹೇಳಿದನು:- ಹೇ ರಾಜನೇ, ನೀನೇನೋ ಹರಿಮಾಯಾ ಕುರಿತು ವಿಚಾರಿಸಿರುವೆ ನಿಜ, ಆದರೆ ಈ ನಿನ್ನ ಪ್ರಶ್ನೆಯೇ, ವ್ಯರ್ಥ ಹೋಯಿತು. ಕಾರಣ ಮಾಯೆಯ ಸಂಬಂಧವಾಗಿ ಹೇಳುವುದು ಎಂದರೆ, ಇದು ಮಹಾ ಮಹಾ ವಕ್ತಾಗಳವರ ಶಕ್ತಿಯ ಬಾಹೇರವಾಗಿದೆ।।೩೨।। ಒಂದುವೇಳೆ ಒಬ್ಬ ರಾಜನು, ಬಂಜೆಯ ಮಗನ ಜನ್ಮ ಕಾಲವನ್ನು ಬೇಗನೇ ತರಿಸಿ, ಮತ್ತು ಈ ಪುತ್ರನ ರಾಶಿ, ನಕ್ಷತ್ರ, ಜಾತಿ, ಕುಲ ಇತ್ಯಾದಿ ಯಾರಾದರೂ ಹೇಳಹತ್ತಿದರೆ, ಅವನ ಹೇಳುವಿಕೆ ಎಲ್ಲವೂ ವ್ಯರ್ಥವಾಗುವುದು ।।೩೩।। ಅಥವಾ ಗಂಧರ್ವ ನಗರದಲ್ಲಿ (ಮೋಡಗಳಲ್ಲಿ) ಮೃಗಜಳದ ಉತ್ತಮವಾದ ಒಂದು ಅರವಟ್ಟಿಗೆಯನ್ನು ಕಟ್ಟಬೇಕು. ಅಥವಾ ಗಾಳಿಯ ಬತ್ತಿಯನ್ನು ಉತ್ತಮವಾಗಿ ಹೊಸೆದು, ಬೆಂಕಿ ಹುಳದ ತೇಜದಿಂದ ಅದನ್ನು ಬೆಳಗಿಸಬೇಕು ।।೩೪।। ಅಥವಾ ತನ್ನ ನೆರಳಿನ ಮಸ್ತಕವನ್ನು ತುಂಡರಿಸಬೇಕು. ಆಕಾಶದ ಚರ್ಮವನ್ನು ಸುಲಿಯಬೇಕು. ಕಪ್ಪೆಚಿಪ್ಪು ತನ್ನ ಬೆಳಕಿನಿಂದ ಎಲ್ಲ ಕತ್ತಲೆಯ ಓಡಿಸಬೇಕು. ಬೆದರು ಗೊಂಬೆಯನ್ನು ತನ್ನ ಕೈಯಲ್ಲಿನ ಶಸ್ತ್ರದಿಂದ ಶಿರಚ್ಛೇದನ ಮಾಡಿ ಅದರ ಹೆಂಡತಿಯನ್ನು ವಿಧವೆಗೊಳಿಸಬೇಕು ।।೩೫।। ಬಂಜೆಯ ಸೊಸೆಗೆ ಪುತ್ರನು ಹುಟ್ಟಿದನು. ಆಗ ಭೀಷ್ಮಾಚಾರ್ಯರ ಹೆಂಡತಿಯ ಸ್ತನಗಳಲ್ಲಿ ಹಾಲು ಬಂದವು. ಮತ್ತು ಈ ಹಾಲನ್ನು ಕುಡಿದು ಸೊಕ್ಕಿಗೆ ಬಂದು ಆ ಕೂಸು, ನಾನು ದಿಗಂಬರನ ಮನೆಯನ್ನು ವಿಧ್ವಂಸಗೊಳಿಸಿದೆನು ಎಂದಿತು ।।೩೬।। ಅಥವಾ ಬೀಸುವಕಲ್ಲಿನಲ್ಲಿ ಗಾಳಿಯನ್ನು ಹಾಕಿ ಸಣ್ಣಾಗುವಂತೆ ಬೀಸಬೇಕು. ಕುದುರೆಯ ಕೊಂಬಿನಿಂದ ಆಕಾಶವನ್ನು ಸೀಳಬೇಕು. ನಪುಂಸಕನ ಮೊಮ್ಮಕ್ಕಳು ಸೂರ್ಯೋದಯ ನಂತರ ಕತ್ತಲಲ್ಲಿ ಅಡಗಿಕೊಳ್ಳಲು ಬರಬೇಕು ।।೩೭।। ಅಥವಾ ಗುಲಗಂಜಿಯ ತೇಜದಿಂದ ಹನುಮಂತನ ಲಗ್ನದಲ್ಲಿ ದೀಪವನ್ನು ಹಚ್ಚಬೇಕು. ಮತ್ತು ಈ ಲಗ್ನವನ್ನು ನೆರವೇರಿಸಲು ಖರ್ಚಿಗಾಗಿ ಹಾಳು ಊರಿನಲ್ಲಿ ತನ್ನ ನೆರಳನ್ನು ಮಾರಾಟಮಾಡಬೇಕು ।।೩೮।। ಅಥವಾ ಆಕಾಶದ ಪುಷ್ಪವು ಸುಗಂಧವಾಗಿದೆಯೋ, ಅಥವಾ ವಾಸನೆ ಹೀನವಾಗಿದೆಯೋ ಎಂಬ ವಿಚಾರವನ್ನು ಯಾವ ಜ್ಞಾನಿ ಪುರುಷನು ಮಾಡುವನೋ, ಅವನೇ ಬೇಕಾದರೆ ಮಾಯೆಯ ವಿವೇಚನೆಯನ್ನು ಸುಖವಾಗಿ ಮಾಡಲಿ ।।೩೯।। ಒಟ್ಟಿನಲ್ಲಿ ಏನೆಂದರೆ, ಮಾಯೆಯ ಸಂಬಂಧವಾಗಿ ಹೇಳಲು ಆರಂಭಿಸುತ್ತಲೇ ವಕ್ತಾನಿಗೆ ನಾಚಿಕೆಯಾಗುವುದು. ಇದು ಜನ್ಮಕ್ಕೆ ಬಾರದವನ ಶ್ರಾದ್ಧವನ್ನು ಮಾಡಿದಂತೆ ಇರುವುದು ।।೪೦।। ನನಗೆ ಅಸ್ತಿತ್ವವು ಎಂದೂ ಇಲ್ಲ ಈ ಅರ್ಥದಿಂದಲೇ ತನಗೆ ''ಮಾಯಾ'' ಎಂದು ಹೇಳಿಸಿಕೊಳ್ಳುವುದು . ಮತ್ತು ''ಅವಿದ್ಯೆ'' ಎಂದು ವೇದಗಳ ಆಧಾರದಿಂದ ಶಾಸ್ತ್ರಗಳು ಗರ್ಜಿಸಿ ಹೇಳುವುವು ।।೪೧।। ''ಭ್ರಮ'' ಇದೇ ಮಾಯೆಯ ಮೂಲವಾಗಿರುವುದು (ಬೇರು) ಭ್ರಾಂತಿಯು ಅದರ ಹೂವಾಗಿರುವುದು. ವಿಷಯರೂಪ ರಸವತ್ತಾದ ಫಲಗಳಿಂದ ತುಂಬಿಕೊಂಡಿರುವುದು ''ಮರುವೆ'' (ಭೂಲ) ಇದರ ಸ್ವಾದಿಷ್ಟ ಫಲವಾಗಿದೆ ।।೪೨।।

ಹೇ ನಸತೇನಿ ರೂಪೇ ರೂಪಾ ಆಲೀ । ಸತ್ಯಾಸತ್ಯೇ ಗರೋದರ ಜಾಹಲೀ । ತೇಥೇ ಅಸತ್ಯಾಚೀ ಪಿಲೀ । ಸ್ವಯೇ ವ್ಯಾಲೀ ಅಸಂಖ್ಯ ।।೪೩।। ವಾಸನಾವಿಷಯಗುಣೇ । ಗುಂಫಿಲೀ ಮಿರವೇ ವೇಣೇ । ಮೀಪಣಾಚ್ಯಾ ತರುಣಪಣೇ । ಮದನಮೋಹಿನೀ ಚಮಕೇ ।।೪೪।। ಮೃಗಜಳೀಚ್ಯಾ ಮುಕ್ತಾಫಳೀ । ಮಸ್ತಕೀ ಬಾಣಲೀ ಜಾಳೀ । ಗಗನಾಚ್ಯಾ ಚಾಂಪೇಕಳೀ । ಮಿರವೇ ವೇಲ್ಹಾಳೀ ಅತಿಸೌಂದರ್ಯೆ ।।೪೫।। ರಜ್ಜುಸರ್ಪಮಾಥ್ಯಾಚಾ ಮಣೀ । ಕಾಢೂನಿ ಲೇಇಲೀ ತೇ ಲೇಣೀ । ಶುಕ್ತಿಕಾರಜತ-ಪೈಂಜಣೀ । ಚಾಲೇ ರುಣಝುಣೇ ಖಳಖಳತ ।।೪೬।। ಶಶವಿಷಾಣ ಪಾದುಕಾ । ಲೇಊನಿ ತೇ ಚಾಲೇ ದೇಖಾ । ತಿಸೀ ತೋ ''ಅಹಂಕಾರು'' ಸಖಾ । ಅತಿನೇಟಕಾ ಜ್ಯೇಷ್ಠಪುತ್ರ ।।೪೭।। ಕುಳವಿಸ್ತಾರಾಲಾಗೀ ಪಾಹೀ । ''ಮಮತಾ'' ವ್ಯಾಲೀ ಠಾಯೀ ಠಾಯೀ । ''ಮೋಹೋ'' ಉಪಜವೂನಿ ದೇಹೀ । ಘರಜಾಂವಯೀ ತ್ಯಾ ಕೇಲಾ ।।೪೮।। ಅಹಂಮೋಹಮಮತಾಯೋಗೇ । ಜಗ ವಿಸ್ತಾರಲೇ ಅಂಗೇ । ಸ್ಥೂಳ ಸಬಳ ಪ್ರಯೋಗೇ । ಮಮತಾ ನಿಜಅಂಗೇ ವಾಢವೀ ।।೪೯।। ಸಂಕಲ್ಪವಿಕಲ್ಪಾಂಚೀ ಕಾಂಕಣೇ । ಬಾಣೋನಿ ''ಮನ'' ದಿಧಲೇ ಆಂದಣೇ । ಘಾಲೋನಿ ತ್ರಿಗುಣಾಚೇ ಠಾಣೇ । ಮಾಯಾ ಪೂರ್ಣಪಣೇ ಥೋರಾವೇ ।।೫೦।। ಐಶೀ ಮಿಥ್ಯಾ ಮೂಳಮಾಯಾ । ವಾಢಲೀ ದಿಸೇ ರಾಯಾ । ತೇ ಕೈಸೇನಿ ಯೇ ಆಯಾ । ಸಾಂಗಾವಯಾ ಅನಿರೂಪ್ಯ ।।೫೧।। ಸಂತ ಮ್ಹಣೋ ತರೀ ತೇ ನಾಸೇ । ''ಅಸಂತ'' ಮ್ಹಣೋ ತರೀ ಆಭಾಸೇ । ಆಧೀ ಅಸೇ ಪಾಠೀ ನಾಸೇ । ಐಸೀಹೀ ನಸೇ ನಿಜಾಂಗೇ ।।೫೨।। ಜೈಸೇ ಮೃಗಜಳಾಚೇ ಜ್ಞಾನ । ದಿಸೇ ತರೀ ತೇ ಮಿಥ್ಯಾ ಪೂರ್ಣ । ತೈಸೇ ಆಭಾಸೇ ಭವಭಾನ । ತೇ ಮಾಯಾ ಜಾಣ ನೃಪನಾಥಾ ।।೫೩।। ಶ್ರುತಿಶಾಸ್ತ್ರ ಮಯಾಮಾಗ । ಪುಸತಾ ಆರೋಗಿತೀ ಮೂಗ । ಮಾಯೇಸೀ ಸಾಚಾಚೇ ಅಂಗ । ಪಾಹತಾ ಚಾಂಗ ದಿಸೇನಾ ।।೫೪।। ಮೃಗಜಳಾಚೀ ಮಹಾನದೀ । ಕೋಣ ಗಿರಿವರ ಉದ್ಭೋಧೀ । ಹೇ ಸಾಂಗಾವಯಾ ನಾಕಳೇ ಬುದ್ಧೀ । ತೇವೀ ಮಾಯಾಸಿದ್ಧೀ ಅನಿರ್ವಾಚ್ಯ ।।೫೫।। ಆರಸಾ ಕಾಯ ಪ್ರತಿಬಿಂಬ ಅಸೇ । ಜೋ ಪಾಹೇ ತೋಚಿ ಆಭಾಸೇ । ತೇವೀ ಆಪುಲೇನಿ ಸಂಕಲ್ಪವಶೇ । ಮಾಯಾ ಉಲ್ಹಾಸೇ ನಸತೀಚಿ ।।೫೬।।

ಇದು ಇಲ್ಲದ ರೂಪದಿಂದಲೇ ಸ್ವರೂಪಕ್ಕೆ ಬಂದಿರುವುದು. ಸತ್ಯಾಸತ್ಯದಿಂದ ಗರ್ಭಿಣಿಯಾದಳು ಮತ್ತು ಅಸತ್ಯದ ಅಸಂಖ್ಯ ಕೂಸುಗಳನ್ನು ಹಡೆದಳು ।।೪೩।। ವಾಸನೆಯ ವಿಷಯರೂಪ ದಾರದಿಂದ ಕಟ್ಟಿದ ಜಡೆಯನ್ನು ತಿದ್ದಿಕೊಂಡು ಈಕೆಯು ಮೆರೆಯುತ್ತಿರುವಳು ಮತ್ತು ನಾನೆಂಬ ಅಹಂಕಾರದ ತಾರುಣ್ಯದಿಂದ ಬುಸುಗುಡುತ್ತ ಈ ಮದನ ಮೋಹಿನಿಯು ಮಿಂಚುತ್ತಿರುವಳು ।।೪೪।। ಮೃಗಜಳದಲ್ಲಿನ ಮುತ್ತಿನ ಪೆಂಡಿಯನ್ನು ಪೋಣಿಸಿಕೊಂಡು ತನ್ನ ಮಸ್ತಕದಲ್ಲಿ ಧರಿಸಿರುವಳು. ಆಕಾಶದಲ್ಲಿನ ಚಾಂಪೇಕಲಿ ಪುಷ್ಪವನ್ನು ಧರಿಸಿ ಬಲು ಸೌಂದರ್ಯದಿಂದ ಈ ಲಾವಣ್ಯವತಿಯು ಮೆರೆಯುತ್ತಿರುವಳು ।।೪೫।। ಈಕೆಯು ಹಗ್ಗದಲ್ಲಿ ಭಾಸವಾದ ಸರ್ಪದ ಮಣಿಯನ್ನು ತೆಗೆದುಕೊಂಡು ಅಲಂಕಾರವನ್ನು ತಯಾರಿಸಿ ಶರೀರದ ಮೇಲೆ ಧರಿಸಿದಳು ಕಪ್ಪೆಚಿಪ್ಪಿನಲ್ಲಿ ಭಾಸವಾದ ಬೆಳ್ಳಿಯ ಪೈಜಣವನ್ನು ಕಾಲುಗಳಲ್ಲಿ ತೊಟ್ಟು ಝುಮ್,ಝುಮ್ ಎಂದು ಬಾರಿಸುತ್ತ ನಡೆಯುತ್ತಿರುವಳು ।।೪೬।। ಮೊಲದ ಕೊಂಬಿನ ಪಾದುಕೆ ಹಾಕಿಕೊಂಡು ಈಕೆಯು ನಡೆಯುತ್ತಿರುವಳು. ''ಅಹಂಕಾರ'' ವು ಈಕೆಯ ಅತಿ ಸುಂದರನಾದ ಜೇಷ್ಠ ಪುತ್ರನು ಮತ್ತು ಇವನು ಈಕೆಯ ಜೀವ ಪ್ರಾಣನಾಗಿರುವನು ।।೪೭।। ತನ್ನ ವಂಶವು ಬೆಳೆಯಬೇಕೆಂದು ಈಕೆಯು ಅಲ್ಲಲ್ಲಿ ಮಮತಾ ರೂಪ ಕನ್ಯೆಗಳನ್ನು ಹಡೆದಳು ಮತ್ತು ದೇಹದಲ್ಲಿ ''ಮೋಹ'' ವನ್ನು ಉತ್ಪನ್ನಗೊಳಿಸಿ ಆತನಿಗೆ ಮನೆ ಅಳಿಯನನ್ನಾಗಿ ಇಟ್ಟುಕೊಂಡಳು ।।೪೮।। ಈ ಅಹಂ,ಮಮತೆ, ಮೋಹಗಳ ಯೋಗದಿಂದ ಜಗವು ತನ್ನಷ್ಟಕ್ಕೆ ತಾನೇ ವಿಸ್ತಾರಗೊಂಡಿತು. ಬಲವಾದ ಪ್ರಯೋಗಗಳಿಂದ ಮಮತೆಯು ತನ್ನಂಗದಿಂದ ಬೆಳೆಸುವಳು ।।೪೯।। ಸಂಕಲ್ಪವಿಕಲ್ಪರೂಪದ ಬಳೆಗಳನ್ನು ತೊಟ್ಟು ಮನವನ್ನು ಮಮತೆಗೆ ಕಾಣಿಕೆಯನ್ನಾಗಿ ಕೊಟ್ಟಳು. ತ್ರಿಗುಣಗಳ ಸ್ಥಾನವನ್ನು ಸ್ಥಾಪಿಸಿ ಮಾಯೆಯು ಪೂರ್ಣವಾಗಿ ವೃದ್ಧಿಯಾದಳು ।।೫೦।। ಹೇ ರಾಜನೇ, ಹೀಗೆ ಈ ಮೂಲಮಾಯೆಯು ಮಿಥ್ಯೆಯಾಗಿದ್ದರೂ, ಬೆಳೆದಿದ್ದು ಕಾಣುವುದು. ಇದು ಯಾವ ರೀತಿಯಿಂದ ನಮ್ಮ ಸ್ವಾಧೀನವಾಗುವುದೆಂದು ಹೇಳುವುದು ಅಶಕ್ಯವು ।।೫೧।। ಇದಕ್ಕೆ ''ಸತ್'' ಸತ್ಯವೆನ್ನಬೇಕೆಂದರೆ, ಜ್ಞಾನವಾದಾಕ್ಷಣವೇ ಇಲ್ಲದಾಗುವುದು. ''ಅಸತ್'' ಮಿಥ್ಯೆ ಎಂದು ಹೇಳಬೇಕೆಂದರೆ, ನಿಜವೆನ್ನುವಂತೆ ಭಾಸವಾಗುವುದು. ಇರಲಿ, ಮೊದಲು ಇರುವುದು ಮತ್ತು ಆಮೇಲೆ ಇಲ್ಲದಾಗುವುದು ಎಂದು ಹೇಳಬೇಕೆಂದರೆ, ಹಾಗೆಯೂ ಇಲ್ಲ ।।೫೨।। ಮೃಗಜಲದ ಜ್ಞಾನವು ಜ್ಞಾನವೇ? ಮೃಗಜಲವು ಕಾಣುವುದು, ಆದರೆ ಅದು ಪೂರ್ಣಮಿಥ್ಯೆಯಾಗಿರುವುದು. ಅದರಂತೆಯೇ ಹೇ ನೃಪನಾಥಾ, ಸಂಸಾರದ ಅಸ್ತಿತ್ವದ ಭಾಸವಾಗುವುದೇ ''ಮಾಯಾ'' ಎಂದು ತಿಳಿ, ಲಕ್ಷದಲ್ಲಿರಲಿ ।।೫೩।। ಮಾಯೆಯ ವಿಳಾಸವನ್ನು ವೇದಶಾಸ್ತ್ರಗಳಿಗೆ ಕೇಳಿದರೆ, ಅವು ಬಾಯಿ ಮುಚ್ಚಿಕೊಂಡು ಸುಮ್ಮನಾಗುವುವು. ಮಾಯೆಯ ಸ್ವರೂಪವು ನಿಜವೇ? ಎಂದು ಸರಿಯಾಗಿ ನೋಡಲು, ಹಾಗೆ ಅದು ಎಂದೂ ಕಾಣುವುದಿಲ್ಲ. ।।೫೪।। ಮೃಗಜಲದ ನದಿಯು ಯಾವ ಪರ್ವತದಿಂದ ಉದ್ಭವವಾಯಿತು? ಇದನ್ನು ಉತ್ತರಿಸಲು ಬುದ್ಧಿಗೆ ಹೊಳೆಯುವುದಿಲ್ಲ. ಅದರಂತೆ ಮಾಯೆಯ ನಿಜವಾದ ಸತ್ಯ ಲಕ್ಷಣಗಳನ್ನು ಹೇಳುವುದು ವಾಣಿಗೆ ಅಶಕ್ಯವು ।।೫೫।। ಕನ್ನಡಿಯಲ್ಲಿ ಪ್ರತಿಬಿಂಬವು ಇರುವುದೇ? ಇಲ್ಲ. ಆದರೆ ಅದರಲ್ಲಿ ಯಾರೇ ನೋಡಲಿ, ಅವರ ಪ್ರತಿಬಿಂಬವು ಕಾಣಿಸುವುದು. ಅದರಂತೆ ತನ್ನ ಸಂಕಲ್ಪದಂತೆ ಇಲ್ಲದ ಮಾಯೆಯು ಭಾಸವಾಗುವುದು ।।೫೬।।

ರಜ್ಜು ಸರ್ಪ ಜೇಂ ಧರಿಲಾ । ತ್ಯಾಚೇ ಕೌತುಕ ಪಾಹೋ ಚಲಾ । ಐಸೇ ಬೋಲತೀ ಜೇ ಬೋಲಾ । ತೇ ಮಾಯೇಚಾ ಸೋಹಳಾ ಸಾಂಗೋತ ಸುಖೇಂ ॥೫೭॥ ಉಡವೋ ಜಾತಾ ಆಪುಲೀ ಛಾಯಾ । ಸರ್ವಥಾ ನ ಉಡವೇ ಜ್ಯಾಚೀ ತಯಾ । ತೇವೀ ತರತಾ ದುಸ್ತರ ಮಾಯಾ । ಜಾಣ ರಾಯಾ ನಿಶ್ಚಿತೀ ॥೫೮॥ ಅಗ್ನಿಸಂಕಲ್ಪು ಸೂರ್ಯಾ ನಸೇ । ಶೇಖೀ ಸೂರ್ಯಕಾಂತೀಹೀ ನ ದಿಸೇ । ತಳೀ ಧರಿಲೇನಿ ಕಾಪುಸೇ । ಅಗ್ನಿ ಪ್ರಕಾಶೇ ತದ್ಯೋಗೇ ॥೫೯॥ ತೇವೀ ಶುದ್ಧ ಬ್ರಹ್ಮೀ ಸಂಕಲ್ಪು ನಾಹೀ । ಶೇಖೀ ನ ದಿಸೇ ಕೇವಳ ದೇಹೀ । ಮಾಝಾರೀ ವಾಸನೇಚ್ಯಾ ಠಾಯೀ । ದೇಹಾಭಿಮಾನೇ ಪಾಹೀ ಸಂಸಾರು ಭಾಸೇ ॥೬೦॥ ಜಾಗೃತಿದೇಹಾಚಾ ವಿಸರು ಪಡೇ । ಸವೇಂಚಿ ಸ್ವಪ್ನ ದೇಹ ದುಜೇ ಜೋಡೇ । ತೇಣೇ ಮಿಥ್ಯಾ ಪ್ರಪಂಚ ವಾಢೇ । ಸ್ವಪ್ನೀ ಸ್ವಪ್ನ ಕುಡೇ ಕದಾ ನ ಮನೇ ॥೬೧॥ ಸುಷುಪ್ತೀ ದೇಹಾಚಾ ಅಸಂಭವೋ । ತೇಥ ನಾಹೀ ಭವಭಾವೋ । ಜನ್ಮ ಮರಣ ತೇಹೀ ವಾವೋ । ಸಂಸಾರಸಂಭವೋ ದೇಹಾಭಿಮಾನೇ ॥೬೨॥ ತೇವಿ ಆತ್ಮತ್ವಾಚಾ ವಿಸರೂ । ತೇಣೇ ಮೀ ದೇಹ ಹಾ ಅಹಂಕಾರೂ । ತೇಣೇ ಅಹಂಕಾರೇ ಸಂಸಾರೂ । ಅತಿದುಸ್ತರೂ ಘೋರಾವೇ ॥೬೩॥ ಜೇವೀ ಮೃಗಜಳೀ ಮಿಥ್ಯಾ ಭಾಸೇ । ತೇವೀ ಬ್ರಹ್ಮೀ ಪ್ರಪಂಚು ನಸೇ । ತೋ ನಿರಸಾವಯಾ ಕೈಸೇ । ಸಾಧನಪಿಸೇ ಪಿಶಾಚಾ ॥೬೪॥ ದೋನಿಚ ಅಕ್ಷರೇ ''ಮಾಯಾ'' । ಜಂವ ಗೇಲೋ ಸಾಂಗಾವಯಾ । ತಂವ ಶ್ಲೋಕಾರ್ಥ ದುರೀ ಠೇಲಾ ರಾಯಾ । ವಾಢಲಾ ವಾಯಾ ಗ್ರಂಥು ಸ್ವೈರಾ ॥೬೫॥ ಮಾಯಾ ಪಾಹೋ ಜಾತಾ ಹರ್ಷೇ । ಸಜ್ಞಾನಹೀ ಝಾಲೇ ಪಿಸೇ । ನಾವಾರೂಪಾಂಚಿಯೇ ಭಡಸೇ । ಕಲ್ಪನಾವಶೇ ಮಾಯಾ ವಾಢೇ ॥೬೬॥ ಮಾಯೇಚೇ ಮುಖ್ಯ ಲಕ್ಷಣ । ರಾಯಾ ತುಜ ಮೀ ಸಾಂಗೇನ ಖೂಣ । ಆಪಲೀ ಕಲ್ಪನಾ ಸಂಪೂರ್ಣ । ತೇ ಮಾಯಾ ಜಾಣ ನೃಪವರ್ಯಾ ॥೬೭॥ ನಿಜಹೃದಯೀಂಚೀ ನಿಜಆಶಾ । ತೇಚಿ ಮಾಯಾ ಗಾ ಮುಖ್ಯ ಕ್ಷಿತೀಶಾ । ಜೋ ಸರ್ವಥಾ ನಿತ್ಯ ನಿರಾಶಾ । ತೋ ಪೂಜ್ಯ ಜಗದೀಶಾ ಪೂರ್ಣತ್ವೇ ॥೬೮॥ ಆತಾ ಕಾಂಹೀ ಏಕ ತುಝಾ ಪ್ರಶ್ನೀ । ಮಾಯಾ ಸಾಂಗೋ ಉಪಲಕ್ಷಣೀ । ಸರ್ಗಸ್ಥಿತ್ಯಂತಕಾರಿಣೀ । ತ್ರಿವಿಧಗುಣೀ ವಿಭಾಗೇ ॥೬೯॥ ಜೇವೀ ಸೂರ್ಯಾಸೀ ಸಂಕಲ್ಪು ನಸೇ । ತರೀ ನಸತಾ ತ್ಯಾಚ್ಯಾ ಠಾಯೀ ದಿಸೇ । ಜೇಂವಾ ಕಾ ನಿಜಕಿರಣವಶೇ । ಅಗ್ನಿ ಪ್ರಕಾಶೇ ಸೂರ್ಯಕಾಂತೀ ॥೭೦॥ ತೇವೀ ಶುದ್ಧಸ್ವರೂಪೀ ಪಾಹೀ । ಸಂಕಲ್ಪಮಾತ್ರ ಕಾಂಹೀ ನಾಹೀ । ನಸತಚೀ ದಿಸೇ ತೇ ಠಾಯೀ । ತೇ ಜಾಣ ವಿದೇಹೀ ''ಮೂಳಮಾಯಾ'' ॥೭೧॥

'ಹಗ್ಗದ ಸರ್ಪವನ್ನು ಹಿಡಿದಿರುವರು, ಅದರ ಕೌತುಕವನ್ನು ನೋಡೋಣ ಬನ್ನಿರಿ'' ಎಂದು ಹೇಳುವವರೇ, ಬೇಕಾದರೆ ಅವರೇ ಮಾಯೆಯ ಹೊಡ್ಡಸ್ತಿಕೆಯನ್ನು ಸುಖವಾಗಿ ಹೇಳಲಿ ॥೫೭॥ ತನ್ನ ನೆರಳನ್ನು ಹಾರಿಸಬೇಕೆಂದು ಒಬ್ಬನು ತಾನೇ ಸ್ವತಃ ಎಷ್ಟೇ ಪ್ರಯತ್ನಿಸಲಿ ಎಂದೂ ಆ ನೆರಳು ಹಾರಲಾರದು. ಹೇ ರಾಜನೇ, ಅದರಂತೆಯೇ ಮಾಯೆಯನ್ನು ಗೆಲ್ಲುವುದು ದುಸ್ತರವಾಗಿದೆ ॥೫೮॥ ಅಗ್ನಿಯನ್ನು ಹುಟ್ಟಿಸಬೇಕೆಂದು ಸೂರ್ಯನ ಸಂಕಲ್ಪವು ಇರುವುದಿಲ್ಲ. ಹಾಗೆಯೇ ಸೂರ್ಯಕಾಂತಕ್ಕೂ ಇದೆ ಎಂದು ತೋರುವುದಿಲ್ಲ. ಆದರೆ, ಕೆಳಗೆ ಹಿಡಿದಿರುವ ಅರಳೆಗೆ ಅಗ್ನಿಯು ಹತ್ತಿಕೊಳ್ಳುವುದು ॥೫೯॥ ಅದರಂತೆ ಶುದ್ಧ ಬ್ರಹ್ಮದಲ್ಲಿ ಸಂಕಲ್ಪವಿರುವುದಿಲ್ಲ. ಅದರಂತೆ ಕೇವಲ ದೇಹದಲ್ಲಿ ಇದೆ ಎಂದು ತೋರುವುದಿಲ್ಲ. ವಾಸನೆಯಲ್ಲಿ ಮಾತ್ರ ದೇಹಾಭಿಮಾನದಿಂದ ಸಂಸಾರವು ಭಾಸವಾಗುವುದು ॥೬೦॥ ಜಾಗೃತ ದೇಹದ ಮರುವು ಆದಾಕ್ಷಣವೇ ಸ್ವಪ್ನ ದೇಹವು ಪ್ರಾಪ್ತವಾಗುವುದು. ಇದರಿಂದ ಮಿಥ್ಯೆಯಾದ ಸ್ವಪ್ನ ಪ್ರಪಂಚವು ಬೆಳೆಯುವುದು. ಸ್ವಪ್ನದಲ್ಲಿ ಸ್ವಪ್ನವು ಸುಳ್ಳು ಎಂದು ಎಂದೂ ಅನಿಸುವುದಿಲ್ಲ ॥೬೧॥ ಸುಷುಪ್ತಿಯಲ್ಲಿ ದೇಹದ ಅಸಂಭವವಿರುವುದು. ಆದ್ದರಿಂದ ಅಲ್ಲಿ ಸಂಸಾರದ ಅಸ್ತಿತ್ವವು ಇರುವುದಿಲ್ಲ. ಅಲ್ಲಿ ಜನ್ಮ ಮರಣವೂ ಸುಳ್ಳಾಗಿರುವುವು. ಸಂಸಾರದ ಅಂದರೆ, ಜನ್ಮ ಮರಣದ ಸಂಭವವು ದೇಹಾಭಿಮಾನದಿಂದಲೇ ಇರುವುದು ॥೬೨॥ ಅದರಂತೆ ಆತ್ಮತ್ವದ ವಿಸ್ಮರಣವಾಯಿತೆಂದರೆ, ಅದರಿಂದ ''ಈ ದೇಹವು ನಾನು'' ಎಂಬ ಅಹಂಕಾರವು ಹುಟ್ಟುವುದು. ಈ ಅಹಂಕಾರವೇ ದುಸ್ತರವಾದ ಸಂಸಾರವನ್ನು ಬೆಳೆಸುವುದು ॥೬೩॥ ಮೃಗಜಲದಲ್ಲಿನ ಮೀನುಗಳು ಹೇಗೆ ಅಸತ್ಯವೋ, ಅದರಂತೆ ಬ್ರಹ್ಮನಲ್ಲಿ ಈ ಪ್ರಪಂಚವು ಇಲ್ಲವೇ ಇಲ್ಲ. ಅಂದಮೇಲೆ ಅದನ್ನು ಇಲ್ಲದಂತೆ ಮಾಡುವ ಸಾಧನದ ಹುಚ್ಚು ಎಂತಹದ್ದು? ಇದು ಹುಚ್ಚನಿಗೆ ಮಾತ್ರ ಬಡಿದುಕೊಳ್ಳುವುದು ॥೬೪॥ ಹೇ ರಾಜನೇ, ''ಮಾಯಾ'' ಈ ಎರಡೇ ಅಕ್ಷರಗಳ ವಿವರ ಹೇಳಲು ಹೋದರೆ, ಶ್ಲೋಕದ ಅರ್ಥವು ದೂರ ಉಳಿಯಿತು. ಮತ್ತು ಗ್ರಂಥದ ವಿಸ್ತಾರ ಮಾತ್ರ ವ್ಯರ್ಥವಾಗಿ ಬೆಳೆಯಿತು ॥೬೫॥ ಸಜ್ಞಾನ ಪುರುಷರೂ ಸಹ ಮಾಯೆಯನ್ನು ನೋಡಲು ಹೋಗಿ ಹುಚ್ಚರಾಗಿಬಿಡುವರು. ನಾಮರೂಪಗಳ ಭರದಲ್ಲಿ ಕಲ್ಪನಾವಶಾತ್ ಮಾಯೆಯು ಬೆಳೆಯುವುದು ॥೬೬॥ ಹೇ ರಾಜನೇ, ಮಾಯೆಯ ಸ್ವರೂಪದ ಮುಖ್ಯ ಚಿನ್ಹೆಯನ್ನು ನಿನಗೆ ಹೇಳುವೆ. ಏನೆಂದರೆ, ತನ್ನ ಕಲ್ಪನೆಯ ಭರದಾಟವು ಇದೇ ಮಾಯಾ ಎಂದು ನೀನು ತಿಳಿದುಕೋ ॥೬೭॥ ಹೇ ರಾಜನೇ, ತನ್ನ ಹೃದಯದಲ್ಲಿನ ಆಶೆಯೇ ಮುಖ್ಯವಾಗಿ ಮಾಯೆಯಾಗಿರುವುದು. ಯಾರು ನಿತ್ಯದಲ್ಲಿಯೂ ಸರ್ವತೋಪರಿಯಾಗಿ ನಿರಿಚ್ಛನಾಗಿರುವನೋ, ಆತನೇ ಪೂರ್ಣತ್ವದಿಂದ ಜಗದೀಶನಿಗೆ ಪೂಜ್ಯನಾಗುವನು ॥೬೮॥ ಈಗ ನೀನು ಯಾವ ಉದ್ದೇಶದಿಂದ ಪ್ರಶ್ನೆಯನ್ನು ಮಾಡಿರುವಿಯೋ, ಅದಕ್ಕಾಗಿ ಆ ಮಾಯೆಯ ಕೆಲವು ಉಪಲಕ್ಷಣಗಳಿಂದ ಹೇಳುವೆ, ಕೇಳು. ಉತ್ಪತ್ತಿ, ಸ್ಥಿತಿ ಮತ್ತು ಲಯ ಮಾಡುವ ಈ ಮಾಯೆಯು ಮೂರುಗುಣಗಳಿಂದ ವಿಭಾಗಿಸಲ್ಪಡುವುದು ॥೬೯॥ ಸೂರ್ಯನಿಗೆ ಅಗ್ನಿ ವಿಷಯದಲ್ಲಿ ಯಾವ ಸಂಕಲ್ಪವು ಇರುವುದಿಲ್ಲ. ಆದರೂ ಆ ಸೂರ್ಯನು ತನ್ನ ಕಿರಣಗಳಿಂದ ಸೂರ್ಯಕಾಂತ ಕಾರಣವಾಗಿ ಅಗ್ನಿಯನ್ನು ಹುಟ್ಟಿಸಲು, ಆತನು ಅದರಲ್ಲಿರುವಂತೆ ತೋರುವನು ॥೭೦॥ ಅದರಂತೆ ಶುದ್ಧ ಸ್ವರೂಪದಲ್ಲಿ ಯಾವ ಸಂಕಲ್ಪಗಳೂ ಇಲ್ಲ. ಇಲ್ಲದಿದ್ದರೂ ಕಾಣುವುದು. ಹೇ ಜನಕರಾಜನೇ, ಇದುವೇ ''ಮೂಲಮಾಯಾ'' ಎಂದು ತಿಳಿ ॥೭೧॥

ಸ್ವರೂಪ ನಿರ್ವಿಕಲ್ಪ ಪೂರ್ಣ । ತೇಥ ''ಮೀ'' ಮ್ಹಣಾವಯಾ ಮ್ಹಣತೇ ಕೋಣ । ಐಸೇಹೀ ಠಾಯೀ ಸ್ಫುರೇ ಮೀಪಣ । ತೇ ಮುಖ್ಯತ್ವೇ ಜಾಣ ''ಮೂಳಮಾಯಾ'' ॥೭೨॥ ತಯಾ ಮೀಪಣಾಚ್ಯಾ ಪೋಟೀ । ಮ್ಹಣೇ ಮಜಚಿ ಮ್ಯಾ ಪಹಾವೇ ದಿಠೀ । ಮಜಸೀ ಮ್ಯಾ ಸಾಂಗಾವ್ಯಾ ಗೋಠೀ । ಅತ್ಯಾದರೇ ಭೇಟೀ ಮಾಝೀ ಮಜ ಹೋಆವೀ ॥೭೩॥ ಮಜ ಮಾಝೀ ಅತಿಪ್ರೀತೀ । ಮಾಝೀ ಮಜ ಹೋಆವೀ ರತೀ । ಮಾಝ್ಯಾಚಿ ಮ್ಯಾ ಘೇಊನಿ ಯುಕ್ತೀ । ಮಜ ಮಾಝೀ ಪ್ರಾಪ್ತಿ ಮದ್‌ಬೋಧೇ ವ್ಹಾವೀ ॥೭೪॥ ಮ್ಹಣೇ ಮಜ ಮಿಯಾ ಆಲಿಂಗಾವೇ । ಮಜ ಮಿಯಾಂಚಿ ಸಂಭೋಗಾವೇ । ಮಜ ಮಿಯಾಂಚಿ ಸಂಯೋಗಾವೇ । ನಿಯೋಗಾವೇ ಸ್ವಾಮಿ ಸೇವಕತ್ವೇ ಸರ್ವದಾ ॥೭೫॥ ಐಕೇ ಅಜಾನುಬಾಹೋ ನೃಪನಾಥಾ । ಐಸೇ ಆಠವಲೇ ಭಗವಂತಾ । ತೋ ಆಠವೋ ಜಾಲಾ ಸ್ರಜಿತಾ । ಮಹಾಭೂತಾ ಭೌತಿಕಾ ॥೭೬॥ ಚಾರೀ ವರ್ಣ ಚಾರೀ ಖಾಣೀ । ಚಾರೀ ಯುಗೇ ಚಾರೀ ವಾಣೀ । ಚಾರೀ ಪುರುಷಾರ್ಥ ಚಹೂ ಲಕ್ಷಣೀ । ಮುಕ್ತೀಚೀ ಮಾಂಡಣೀ ಮಾಂಡಲೀ ಚತುರ್ಧಾ ॥೭೭॥ ಉಭಾರೂನಿ ತಿನ್ಹೀ ಗುಣ । ಆಠವೋ ರಚೀ ತ್ರಿಭುವನ । ತೇಣೇ ಮಾಂಡೂನಿ ತ್ರಿಪುಟಿವಿಂದಾನ । ಕರ್ಮಹೀ ಸಂಪೂರ್ಣ ತ್ರಿಧಾ ಕೇಲೇ ॥೭೮॥ ಏವಂ ಏಕಪಣೀ ಬಹುಪಣ । ರೂಪಾ ಆಣೀ ಮೂಳೀಂಚೀ ಆಠವಣ । ಪರೀ ಬಹುಪಣೀ ಏಕಪಣ । ಅಖಂಡತ್ವೇ ಪೂರ್ಣ ತೇ ಕದಾ ನ ಭಂಗೇ ॥೭೯॥ ಜೇ ಜೇ ಕುಂಭಾರ ಭಾಂಡೀ ಕರೀ । ಆಕಾಶ ಸಹಜೇಂಚಿ ತ್ಯಾಭೀತರೀ । ತೇವೀ ಮಹಾಭೂತೇ ಭೌತಿಕಾಕಾರೀ । ಸಮನ್ವಯೇ ಹರಿ ಸರ್ವದಾ ಸರ್ವೀ ॥೮೦॥ ರಾಯಾ ಜಾಣ ಯೇಚಿ ಅರ್ಥೀ । ಬೋಲಿಲೇ ಉಪನಿಷದಾಪ್ರತೀ । ''ಏಕಾಕೀ ನ ರಮತೇ'' ಯಾ ಶ್ರುತೀ । ದ್ವೈತಾಚೀ ಸ್ಫೂರ್ತಿ ಭಗವಂತೀ ಸ್ಫುರಲೀ ॥೮೧॥ ಕಿಂಬಹುನಾ ಏಕಪಣೇ ಸಮಸ್ತೇ । ರೂಪಾ ಆಲೀ ಮಹಾಭೂತೇ । ತೀಚಿ ''ಹರೀಚೀ ಮಾಯಾ'' ಯೇಥೇ । ಜಾಣ ನಿಶ್ಚಿತೇ ನೃಪನಾಥಾ ॥೮೨॥ ಭೂತ - ಭೌತಿಕ ಸ್ಫುರೇ ಜೇ ಸ್ಫೂರ್ತೀ । ತೇ ಪ್ರಕಾಶೂ ನ ಶಕೇ ಮಾಯಾ ಸ್ವಶಕ್ತೀ । ಮಾಯಾಪ್ರಕಾಶಕು ಚಿನ್ಮೂರ್ತೀ । ಅಖಂಡತ್ವೇ ಭೂತಾಕೃತೀ ಪ್ರವೇಶಲಾ ಭಾಸೇ ॥೮೩॥ ಮುಖ್ಯ ಮಾಯೇಚೇ ನಿಜಲಕ್ಷಣ । ಪ್ರಕಾಶೀ ಪರಮಾತ್ಮಾ ಚಿದ್ಘನ । ತೋಚಿ ಭೂತೀ ಭೂತಾತ್ಮಾ ಆಪಣ । ಪ್ರವೇಶಲೇಪಣ ನಸೋನಿ ದಾವೀ ॥೮೪॥

ಸ್ವರೂಪವು ಪೂರ್ಣವಾಗಿ ನಿರ್ವಿಕಲ್ಪವಾಗಿರುವುದು. ಅಲ್ಲಿ ''ನಾನು'' ಎನ್ನಲಿಕ್ಕೆ ಹೇಳುವವರು ಯಾರು? ಇಂತಹ ಸ್ಥಿತಿಯಲ್ಲಿಯೂ ಯಾವುದು ''ನಾನೆಂಬುವುದನ್ನು'' ಸ್ಫುರಣಗೊಳ್ಳುವುದೋ, ಅದೇ ಮುಖ್ಯವಾಗಿ ''ಮೂಲಮಾಯಾ'' ಎಂದು ತಿಳಿದುಕೋ ॥೭೨॥ ಆ ಮೂಲವಾದ ನಾನೆಂಬುವುದರ ಹೊಟ್ಟೆಯಲ್ಲಿ ''ನಾನೇ ನನಗೆ ದೃಷ್ಟಿಯಿಂದ ನೋಡಬೇಕು. ನನ್ನಲ್ಲಿಯೇ ನಾನೇ ಮಾತನಾಡಿಸಬೇಕು. ಬಹಳ ಆದರದಿಂದ ನನಗೆ ನಾನೇ ಭೇಟಿಯಾಗಬೇಕು'' ಹೀಗೆ ಹೇಳುವನು ॥೭೩॥ ನನಗೆ ನನ್ನದೇ ಅತ್ಯಂತ ಪ್ರೀತಿ ಇರುವುದು. ನಾನು ನನ್ನಲ್ಲಿಯೇ ರಮಮಾಣನಾಗಬೇಕು. ನಾನು ನನ್ನದೇ ಯುಕ್ತಿಗಳನ್ನು ಪ್ರಯೋಗಿಸಿ, ನನ್ನದೇ ಬೋಧದಿಂದ ನನಗೆ ನನ್ನ ಪ್ರಾಪ್ತಿಯಾಗಬೇಕು ॥೭೪॥ ನಾನೇ ನನ್ನನ್ನು ಆಲಿಂಗಿಸಬೇಕು, ನನ್ನ ಉಪಭೋಗವನ್ನು ನಾನೇ ಭೋಗಿಸಬೇಕು, ನನಗೆ ನಾನೇ ದೊರೆಯಬೇಕು. ಸ್ವಾಮಿಸೇವಕ ನ್ಯಾಯದಂತೆ ಯಾವಾಗಲೂ ನಾನೇ ನನ್ನ ನಿಯಂತ್ರಣವನ್ನು ಮಾಡಬೇಕು ॥೭೫॥ ಅಜಾನುಬಾಹೋ, ನೃಪಶ್ರೇಷ್ಠನೇ, ಹೀಗೆ ಭಗವಂತನಿಗೆ ಸ್ಮರಣೆಯಾಯಿತು ಮತ್ತು ಈ ಸ್ಮರಣೆಯೇ ಪಂಚಭೂತಗಳನ್ನು ಮತ್ತು ಭೌತಿಕಗಳನ್ನು ನಿರ್ಮಾಣಗೊಳಿಸಿತು ॥೭೬॥ ನಾಲ್ಕು ವರ್ಣಗಳು, ನಾಲ್ಕು ಖಾಣಿಗಳು, ನಾಲ್ಕು ಯುಗಗಳು, ನಾಲ್ಕು ವಾಣಿಗಳು, ನಾಲ್ಕು ಪುರುಷಾರ್ಥಗಳು, ಮತ್ತು ನಾಲ್ಕು ಲಕ್ಷಣಗಳಿಂದ ನಾಲ್ಕು ಮುಕ್ತಿಗಳ ನಾಲ್ಕು ಪ್ರಕಾರದ ಮಂಡನೆಯನ್ನು ಈ ಸ್ಮರಣೆಯೇ ಮಾಡಿರುವುದು ॥೭೭॥ ಈ ಸ್ಮರಣೆಯೇ ಮೂರೂ ಗುಣಗಳನ್ನು ಹುಟ್ಟಿಸಿ, ತ್ರೈಲೋಕ್ಯದ ರಚನೆಯನ್ನು ಮಾಡಿತು. ಇದುವೇ, ಜ್ಞಾನ, ಜ್ಞಾತಾ ಮತ್ತು ಜ್ಞೇಯ ಎಂಬ ತ್ರಿಪುಟಿಯ ಕಾರ್ಯವನ್ನು ತಯಾರಿಸಿ ಎಲ್ಲ ಕರ್ಮಗಳನ್ನೂ ಮೂರು ಪ್ರಕಾರಗಳಾಗಿ ಮಾಡಿತು ॥೭೮॥ ಈ ಪ್ರಕಾರವಾಗಿ ಮೂಲದ ಸ್ಮರಣೆಯೇ ಏಕತ್ವದಲ್ಲಿ ಅನೇಕ ರೂಪಗಳನ್ನು ಮಾಡಿರುವುದು. ಆದರೆ ಆ ಅನೇಕತ್ವದಲ್ಲಿ ಇರುವ ಏಕತ್ವವು ಪೂರ್ಣತ್ವದಿಂದ ಅಖಂಡವಾಗಿರುವುದು ॥೭೯॥ ಕುಂಬಾರನು ತಯಾರಿಸಿದ ಭಿನ್ನ ಭಿನ್ನ ಆಕೃತಿಯಲ್ಲಿನ ಮಡಿಕೆಗಳಲ್ಲಿ ಆಕಾಶವು ತನ್ನಿಂದ ತಾನೇ ಸೇರಿರುವುದು. ಅದರಂತೆ ಪಂಚಮಹಾಭೂತಗಳಿಂದ ತಯಾರಿಸಿದ ಭೌತಿಕ ಶರೀರಗಳಲ್ಲಿ ಶ್ರೀಹರಿಯು ನಿರಂತರವಾಗಿ ಅಂತರ್ಬಾಹ್ಯದಿಂದ ತುಂಬಿರುವನು ॥೮೦॥ ಅದಕ್ಕಾಗಿ ಹೇ ರಾಜನೇ, ''ಏಕಾಕಿ ನ ರಮತೆ'' (ಒಬ್ಬನೇ ಇರಲು ರಮಿಸದು) ಎಂಬ ಶ್ರುತಿ ನುಡಿಯಂತೆ ಭಗವಂತನಲ್ಲಿ ದ್ವೈತದ ಸ್ಫೂರ್ತಿಯಾಯಿತೆಂದು ಉಪನಿಷತ್‌ದಲ್ಲಿ ಹೇಳಿರುವುದು ॥೮೧॥ ಅಥವಾ ಹೇ ನೃಪನಾಥನೇ, ಐಕ್ಯರೂಪದಿಂದಲೇ ಎಲ್ಲ ಮಹಾಭೂತಗಳು ಆಕಾರಕ್ಕೆ ಬಂದಿರುವುವು. ಇದೇ ''ಹರಿಮಾಯಾ'' ಆಗಿರುವುದೆಂದು ನಿಶ್ಚಯವಾಗಿ ತಿಳಿ ॥೮೨॥ ಆದರೆ, ಭೂತಭೌತಿಕಾದಿಗಳಲ್ಲಿ ಸ್ಫೂರ್ತಿ ಸ್ಫುರಣವಾಗುವುದಕ್ಕೆ ಈ ಮಾಯೆಯು ಮಾತ್ರ ಸ್ವಸತ್ತೆಯಿಂದ ಪ್ರಕಾಶಿಸಲು ಸಾಧ್ಯವಿಲ್ಲ. ಅದಕ್ಕಾಗಿ ಮಾಯೆಯ ಪ್ರಕಾಶವು ಚಿನ್ಮೂರ್ತಿ ಪರಮಾತ್ಮನೇ ಸರ್ವ ಭೂತಾಕೃತಿಯಲ್ಲಿ ಪ್ರವಿಷ್ಟನಾಗಿರುವನು ॥೮೩॥ ಆ ಚಿತ್‌ಘನ ಪರಮಾತ್ಮನೇ ಮಾಯೆಯ ಮುಖ್ಯ ಲಕ್ಷಣಗಳನ್ನು ಪ್ರಕಾಶಗೊಳಿಸುವನು ಮತ್ತು ಅದೇ ಭೂತಾತ್ಮನು ಭೂತಗಳಲ್ಲಿ ವಾಸ್ತವಿಕವಾಗಿ ಇಲ್ಲದ ಪ್ರವೇಶತನವನ್ನು ತೋರಿಸುವನು ॥೮೪॥

ಏವಂ ಸೃಷ್ಟಾನಿ ಭೂತಾನಿ ಪ್ರವಿಷ್ಟಃ ಪಂಚದಾತುಭಿಃ ।
ಏಕಧಾ ದಶಧಾತ್ಮಾನಂ ವಿಭಜನ್ ಜುಷತೇ ಗುಣಾನ್ ॥೪॥

ಅರ್ಥ: ಈ ಪ್ರಕಾರವಾಗಿ ಪಂಚಮಹಾಭೂತಗಳ ಮುಖಾಂತರವಾಗಿ ನಿರ್ಮಿಸಿದ ಪ್ರಾಣಿಗಳ ಶರೀರದಲ್ಲಿ ಪರಮಾತ್ಮನು ಅಂತರ್ಯಾಮಿ ರೂಪದಿಂದ ಪ್ರವೇಶ ಮಾಡಿದನು. ಮನಸ್ಸಿನ ರೂಪದಿಂದ ಮತ್ತು ಹತ್ತು ಇಂದ್ರಿಯಗಳಲ್ಲಿ ವಿಭಾಗಿಸಿ, ಅವುಗಳ ಮುಖಾಂತರ ವಿಷಯದ ಭೋಗವನ್ನು ಭೋಗಿಸಹತ್ತಿದನು.

ಐಶೀ ಸ್ರಜಿಲೀ ಭೂತೇ ಮಹಾಭೂತೇ । ಜೀ ಜಡ ಮೂಢ ಅಚೇತೇ । ತ್ಯಾಂಸೀ ವರ್ತಾವಯಾ ವ್ಯಾಪಾರಾರ್ಥೇ । ವಿಭಾಗೀ ಆಪಣಾತೇ ತತ್ರ ವೇಶೀ ॥೫೫॥ ಪಂಚಧಾ ಪಂಚಮಾಹಾಭೂತೇ । ತೇ ಕಾರ್ಯಕ್ಷಮ ವ್ಹಾವಯಾ ಯೇಥೇ । ಪಂಚಧಾ ವಿಭಾಗೇ ಶ್ರೀಅನಂತೇ । ಪ್ರವೇಶಿಜೇ ತೇಥೇ ತೇ ಐಕ ರಾಯಾ ॥೫೬॥ ''ಗಂಧ'' ರೂಪೇ ಪೈ ಪೃಥ್ವೀತೇ । ಪ್ರವೇಶೋನಿ ಶ್ರೀಅನಂತೇ । ಪೂರ್ಣ ಕ್ಷಮಾ ಆಣೋನಿ ತೀತೇ । ಚರಾಚರಭೂತೇ ವಾಹವೀ ಸ್ವಯೇ ॥೫೭॥ ಪೃಥ್ವೀ ಪ್ರವೇಶಲಾ ಭಗವಂತು । ಯಾಲಾಗೀ ತೇ ಆವರಣ - ಜಳಾಂತು । ಉರಲೀಸೇ ನ ವಿರತು । ಜಾಣ ನಿಶ್ಚಿತು ಮಿಥಿಲೇಶಾ ॥೫೮॥ ಧರಾ ಧರೀ ಧರಾಧರ । ಯಾಲಾಗೀ ವಿರವೂ ನ ಶಕೇ ಸಮುದ್ರ । ಧರಾಧರೇ ಪೃಥ್ವೀ ಸಧರ । ಭೂತಭಾರ ತೇಣೇ ವಾಹೇ ॥೫೯॥ ''ಸ್ವಾದ'' ರೂಪೇ ಉದಕಾಂತೇ । ಪ್ರವೇಶೋನಿ ಶ್ರೀಅನಂತೆ । ದ್ರವತ್ವೇ ರಾಹೋನಿಯಾ ತೇಥೇ । ಜೀವನೇ ಭೂತೇ ಜೀವವೀ ಸದಾ ॥೬೦॥ ಜೀವನೀ ಪ್ರವೇಶೇ ಜಗಜ್ಜೀವನ । ಯಾಕಾರಣೇ ಆವರಣ ತೇಚೀ ಜಾಣ । ನ ಶೋಷಿತಾ ಉರೇ ಜೀವನ । ಹೇ ಲಾಘವ ಪೂರ್ಣ ಹರೀಚೇ ॥೬೧॥ ತೇಜಾಚೇ ಠಾಯೀ ಹೋಊನಿ "ರೂಪ" । ಪ್ರವೇಶಲಾ ಹರಿ ಸದ್ರೂಪ । ಯಾಲಾಗೀ ನಯನೀ ತೇಜ ಅಮೂಪ । ಜಠರೀ ದೇದೀಪ್ಯ ಜಠರಾಗ್ನಿ ಜಾಹಲಾ ॥೬೨॥ ರೂಪಯೋಗೇ ಲವಲಾಹೀ । ಹರಿ ಪ್ರವೇಶೇ ತೇಜಾಚ್ಯಾ ಠಾಯೀ । ತೇ ಆವರಣ - ವಾಯೂಮಾಜೀ ಪಾಹೀ । ನ ಮಾವಳೇ ಕಾಂಹೀ ಯಾಲಾಗೀ ರಾಯಾ ॥೬೩॥ ವಾಯುಮಾಜೀ ''ಸ್ಪರ್ಶ'' ಯೋಗೇ । ಪ್ರವೇಶು ಕೀಜೇ ಶ್ರೀರಂಗೇ । ಯಾಲಾಗೀ ಪ್ರಾಣಯೋಗೇ । ವರ್ತತೀ ಅಂಗೇ ಅನೇಕ ಜೀವ ॥೬೪॥ ವಾಯೂಚ್ಯಾ ಠಾಯೀ ಹೃಷೀಕೇಶ । ಸ್ಪರ್ಶರೂಪೇ ಕರೀ ಪ್ರವೇಶ । ಯಾಲಾಗೀ ವಾಯೂಚಾ ಗ್ರಾಸ । ಸರ್ವಥಾ ಆಕಾಶ ಕರೂನ ಶಕೇ ॥೬೫॥ ''ಶಬ್ದ'' ಗುಣೇ ಹೃಷೀಕೇಶ । ಆಕಾಶೀ ಕರೀ ಪ್ರವೇಶ । ಯಾಲಾಗೀ ಭೂತಾಂಸೀ ಅವಕಾಶ । ಸಾವಕಾಶ ವರ್ತಾವಯಾ ॥೬೬॥ ಶಬ್ದ ಗುಣೇ ಗಗನೀ । ಪ್ರವೇಶಲಾ ಚಕ್ರಪಾಣೀ । ಯಾಲಾಗೀ ತೇ ನಿಜಕಾರಣೀ । ಲೀನ ಹೋಊನಿ ಜಾಊ ನ ಶಕೇ ॥೬೭॥

ಈ ಪ್ರಕಾರವಾಗಿ ಜಡ,ಮೂಢ ಮತ್ತು ಅಚೇತನ ಹೀಗೆ ಪಂಚಮಹಾಭೂತಗಳಲ್ಲಿ ಪ್ರಾಣಿಮಾತ್ರರನ್ನು ಉತ್ಪನ್ನ ಮಾಡಿದನು ಮತ್ತು ಅವರಿಗೆ ತಮ್ಮ ತಮ್ಮ ಕರ್ಮಗಳನ್ನು ಮಾಡುವುದಕ್ಕಾಗಿ ತಾನು ಪ್ರವೇಶಿಸಿ ತನ್ನನ್ನು ಸಹ ವಿಭಾಗಿಸಿಕೊಂಡನು ॥೫೫॥ ಐದು ಪ್ರಕಾರಗಳ ಪಂಚಮಹಾಭೂತಗಳು ತಮ್ಮ ತಮ್ಮ ಕಾರ್ಯಗಳಲ್ಲಿ ತತ್ಪರರನ್ನಾಗಿ ಮಾಡಲು ಹೇ ರಾಜನೇ, ಶ್ರೀಅನಂತನು ತಾನೇ ಐದು ಸ್ವರೂಪಗಳಿಂದ ಅವುಗಳಲ್ಲಿ ಪ್ರವೇಶಿಸಿದನು. ಅದು ಹೇಗೆಂಬುದು ಹೇಳುವೆ,ಕೇಳು ॥೫೬॥ ಶ್ರೀಅನಂತನು ''ಗಂಧ'' ರೂಪದಿಂದ ಪೃಥ್ವಿಯಲ್ಲಿ ಪ್ರವೇಶಿಸಿ, ಅದರಲ್ಲಿ ಪೂರ್ಣ ಕ್ಷಮೆಯನ್ನು ಉತ್ಪನ್ನಗೊಳಿಸಿ, ಅದಕ್ಕೆ ಸಹಜವಾಗಿ ಪ್ರಾಣಿಮಾತ್ರರ ಭಾರವನ್ನು ಸಹಿಸಲು ಸಮರ್ಥಗೊಳಿಸಿದನು ॥೫೭॥ ಹೇ ಮಿಥಿಲಾಧಿಪತಿಯೇ, ಪೃಥ್ವಿಯಲ್ಲಿ ಭಗವಂತನು ಪ್ರವೇಶಿಸಿರುವುದರಿಂದ ಸುತ್ತುವರಿದ ಜಲದಲ್ಲಿ ಕರಗದೇ ಭೂಮಿಯು ತಾನು ಇದ್ದಂತೆಯೇ ಇರುವುದು ॥೫೮॥ ಶೇಷರೂಪ ಭಗವಾನನು ಪೃಥಿಯನ್ನು ಹೊರುವನು. ಅದಕ್ಕಾಗಿ ಇದಕ್ಕೆ ಸಮುದ್ರವು ಕರಗಿಸಲಾರದು. ಶೇಷನಿಂದಲೇ ಪೃಥ್ವಿಯು ಸದೃಢವಾಗಿರುವುದು. ಆದ್ದರಿಂದಲೇ ಈಕೆಯು ಪ್ರಾಣಿಮಾತ್ರರ ಭಾರವನ್ನು ಸಹಿಸುವಳು ॥೫೯॥ ''ಸ್ವಾದ'' ಎಂದರೆ ರಸರೂಪದಿಂದ ಶ್ರೀಅನಂತನು ಉದಕದಲ್ಲಿ ಪ್ರವೇಶಿಸಿ ಅಲ್ಲಿ ದ್ರವರೂಪದಿಂದ ಇದ್ದು ಜಲದಿಂದ ಎಲ್ಲ ಪ್ರಾಣಿಗಳನ್ನು ನಿರಂತರವಾಗಿ ಸಂರಕ್ಷಿಸುವನು ॥೬೦॥ ಜಗಜ್ಜೀವನನೇ ಜೀವನದಲ್ಲಿ (ನೀರಿನಲ್ಲಿ) ಪ್ರವೇಶಿಸಿರುವನು. ಆದ್ದರಿಂದಲೇ ಜಲವು ಆವರೋಣದಕ ತೇಜದಿಂದ ಶೋಷಣೆಯಾಗದೇ ಇದ್ದಂತೆ ಇರುವುದು. ಇದು ಶ್ರೀಹರಿಯ ಅದೆಂತಹ ಕೌತುಕವು? ॥೬೧॥ ಸದ್ರೂಪನಾದ ಶ್ರೀಹರಿಯು ತೇಜದಲ್ಲಿ ''ರೂಪ'' ನಾಗಿ ಇದ್ದಾನೆ. ಆದ್ದರಿಂದ ನೇತ್ರಗಳಲ್ಲಿ ವಿಲಕ್ಷಣವಾದ ತೇಜವು ತೋರುವುದು. ಹಾಗೆಯೇ ಉದರದಲ್ಲಿನ ಪ್ರದೀಪ್ತ ಜಠರಾಗ್ನಿಯು ಆತನೇ ಆಗಿರುವನು ॥೬೨॥ ತೇಜದಲ್ಲಿ ಶ್ರೀಹರಿಯು ರೂಪಗುಣದಿಂದ ಪ್ರವೇಶನಾಗಿದ್ದಾನೆ. ಆದ್ದಂರಿಂದ ಆವರಣವಾಯುವಿನಲ್ಲಿ ಮುಳುಗಿ ಹೋಗುವುದಿಲ್ಲ ॥೬೩॥ ''ಸ್ಪರ್ಶ'' ಗುಣದಿಂದ ಭಗವಾನನು ವಾಯುವಿನಲ್ಲಿ ಪ್ರವೇಶಿಸಿದ್ದಾನೆ. ಆದ್ದರಿಂದ ಪ್ರಾಣದ ಯೋಗದಿಂದ ಅನೇಕ ಜೀವಿಗಳು ಸಶರೀರವಾಗಿ ವ್ಯವಹರಿಸುತ್ತಿರುವುವು ॥೬೪॥ ಸ್ಪರ್ಶರೂಪದಿಂದ ವಾಯುವಿನಲ್ಲಿ ಭಗವಂತನು ಪ್ರವೇಶಿಸುವನು. ಆದ್ದರಿಂದಲೇ ಆಕಾಶವು ವಾಯುವಿನ ಗ್ರಾಸ ಮಾಡಲು ಸಾಧ್ಯವಿಲ್ಲ ॥೬೫॥ ''ಶಬ್ದ'' ಗುಣದಿಂದ ಶ್ರೀಹರಿಯು ಆಕಾಶದಲ್ಲಿ ಪ್ರವೇಶನಾಗಿದ್ದಾನೆ. ಆದ್ದರಿಂದಲೇ ಪ್ರಾಣಿಗಳಿಗೆ ಬೇಕಾಗುವಷ್ಟು ಸ್ಥಳಾವಕಾಶವು ದೊರೆಯಿತು ॥೬೬॥ ಶಬ್ದಗುಣದಿಂದ ಚಕ್ರಪಾಣಿಯು ಆಕಾಶದಲ್ಲಿ ಪ್ರವೇಶಿಸಿರುವುದರಿಂದ ತನ್ನ ಮಹತ್ತತ್ವದಲ್ಲಿ ಅದು ಲಯಗೊಳ್ಳುವುದಿಲ್ಲ ॥೬೭॥

ಮಹಾಭೂತೀ ನಿರಂತರ । ಸ್ವಾಭಾವಿಕ ನಿತ್ಯ ವೈರ । ಯೇರಾಂತೇ ಗ್ರಾಸಾವಯಾ ಯೇರ । ಅತಿತತ್ಪರ ಸರ್ವದಾ ॥೯೮॥ ಜಳ ವಿರವೂ ಪಾಹೇ ಪೃಥ್ವೀತೇ । ತೇಜ ಶೋಷೂಪಾಹೇ ಜಳಾತೇ । ವಾಯು ಪ್ರಾಶೂ ಧಾಂವೇ ತೇಜಾತೇ । ಆಕಾಶ ವಾಯೂತೇ ಗಿಳೂ ಪಾಹೇ ॥೯೯॥ ತೇಥ ಪ್ರವೇಶೋನಿ ಶ್ರೀಧರ । ತ್ಯಾಂತೇ ಕರೋನಿಯಾ ನಿರ್ವೈರ । ತೇಚಿ ಯೇರಾಮಾಜೀ ಯೇರ । ಉಲ್ಹಾಸೇ ಥೋರ ನಾಂದವೀ ॥೧೦೦॥ ಏವಂ ಪಂಚಭೂತಾ ಸಾಕಾರತಾ । ಆಕಾರಲೀ ಭೂತಾಕಾರತಾ । ತೇಥೇ ಜೀವರೂಪೇ ವರ್ತವಿತಾ । ಜಾಹಲಾ ಪೈ ತತ್ತ್ವತಾ ಪ್ರಕೃತಿಯೋಗೇ ॥೧೦೧॥ ತ್ಯಾಸೀ ಬ್ರಹ್ಮಾಂಡೀ ''ಪುರುಷ'' ಹೇ ನಾವ । ಪಿಂಡೀ ತ್ಯಾತೇ ಮ್ಹಣತೀ ''ಜೀವ'' । ಹಾ ಮಾಯೇಚಾ ನಿಜಸ್ವಭಾವ । ಪ್ರತಿಬಿಂಬಲಾ ದೇವ ಜೀವಶಿವರೂಪೇ ॥೧೦೨॥ ಶಿವೀ ಜೇ ''ಯೋಗಮಾಯಾ'' ವಿಖ್ಯಾತೀ । ಜೀವೀ ತೀತೇ ''ಅವಿದ್ಯಾ'' ಮ್ಹಣತೀ । ಹೇಚಿ ಮಾಯೇಚೀ ಮುಖ್ಯತ್ವೇ ಭ್ರಾಂತೀ । ಸ್ವಪ್ನಸ್ಥಿತೀ ಸಂಸಾರೂ ॥೧೦೩॥ ಜ್ಯಾತೇ ಮ್ಹಣತೀ ''ದೀರ್ಘಸ್ವಪ್ನ'' । ತೋ ಹಾ ಮಾಯಾವೀ ಸಂಸಾರ ಸಂಪೂರ್ಣ । ನಿದ್ರೇಮಾಜೀ ದಿಸೇ ಜೇ ಭಾನ । ತೇ ಜೀವಾಚೇ ಸ್ವಪ್ನ ಅವಿದ್ಯಾಯೋಗೇ ॥೧೦೪॥ ಯೇಥ ಜಾಗಾ ಜಾಹಲ್ಯಾ ಮಿಥ್ಯಾ ಸ್ವಪ್ನ । ಬೋಧ ಜಾಹಲಿಯಾ ಮಿಥ್ಯಾ ಭವಮಾನ । ಹೇ ಅವಘೇ ಮಾಯೇಚೇ ವಿಂದಾನ । ರಾಯಾ ತೂ ಜಾಣ ನಿಶ್ಚಿತ ॥೧೦೫॥ ಆತಾ ಜೀವಾಚಿ ವಿಷಯಾವಸ್ಥಾ । ವಿಷಯರಸೀ ವಿಷಯಭೋಕ್ತಾ । ಏಕಧಾ ದಶಧಾ ವಿಭಾಗತಾ । ಆ ಈಕ ನೃಪನಾಥಾ ಸಾಂಗೇನ ॥೧೦೬॥ ಏಕಧಾ ಭಾಗೇ ಅಂತಃಕರಣ । ಸ್ವಯೇ ಝಾಲಾ ಜನಾರ್ದನ । ಮನ - ಬುದ್ಧಿ - ಚಿತ್ತ ಅಹಂಸ್ಫುರಣ । ಚತುರ್ಧಾ ಜಾಣ ವಿಭಾಗೇ ॥೧೦೭॥ ಜೀವ ಆಪಲ್ಯಾ ಪರಿಪೂರ್ಣತಾ । ''ಅಹಂ'' ಮ್ಹಣೇ ನಿಜಾತ್ಮಸತ್ತಾ । ತೇಥ ಮಾಯೇಚೀ ಅತಿಲಾಘವತಾ । ದೇಹಾತ್ಮತಾ ದೃಢ ಕೇಲೀ ॥೧೦೮॥ ಅಹಂಕಾರು ವಾಢವಿತಾ ದೇಹಾತ್ಮತಾ । ವಿಸರೇ ಅಪುಲೀ ಚಿದ್ರೂಪತಾ । ತೋ ವಿಸರೂ ವಾಢವೀ ವಿಷಯಚಿಂತಾ । ತೇಚಿ ''ಚಿತ್ತ'' ತತ್ತ್ವತಾ ಮಹಾಮಾಯಾ ॥೧೦೯॥ ದೇಹಅಹಂತಾ ಅತಿಚಪಳ । ತೀತೇಚ ಮ್ಹಣತೀ ''ಮನ'' ಚಂಚಳ । ನಾನಾ ಸಂಕಲ್ಪ ವಿಕಲ್ಪ ಜಾಳ । ವಾಢವೀ ಪ್ರಬಳ ಭಯಶೋಕ - ದುಃಖ ॥೧೧೦॥ ದೇಹ ಅಹಂತೇಚೇ ಶಹಾಣಪಣ । ತಿಯೇ ನಾವ ಗಾ ''ಬುದ್ಧಿ'' ಜಾಣ । ತೇ ಬುದ್ಧೀನೇ ನಿಶ್ಚಯ ಕೇಲಾ ಪೂರ್ಣ । ಆಮ್ಹಾ ಜನ್ಮ ಮರಣ ಅನಿವಾರ ॥೧೧೧॥

ಪಂಚಭೂತಗಳಲ್ಲಿ ನೋಡಲು ಹೋದರೆ, ಪರಸ್ಪರರಲ್ಲಿ ನಿತ್ಯವೂ ವೈರವೇ ಇರುವುದು. ಒಂದು ಇನ್ನೊಂದನ್ನು ನುಂಗಲು ಯಾವಾಗಲೂ ಪೂರ್ಣ ತಯಾರಿಯಲ್ಲಿರುವುವು ॥೯೮॥ ನೀರು ಪೃಥ್ವಿಯನ್ನು ಕರಗಿಸಲು ಹವಣಿಸುವುದು ಮತ್ತು ನೀರಿಗೆ ಅಗ್ನಿಯು ಒಣಗಿಸಲು ಹವಣಿಸುವುದು. ತೇಜಕ್ಕೆ ಅಂದರೆ ಅಗ್ನಿಗೆ ವಾಯುವು ನುಂಗಲು ಹವಣಿಸುವುದು. ಆಕಾಶವು ವಾಯುವನ್ನು ನುಂಗಲು ಹವಣಿಸುವುದು ॥೯೯॥ ಹೀಗಿದ್ದರೂ ಶ್ರೀಧರನು ಇವರೆಲ್ಲರಲ್ಲಿ ಪ್ರವೇಶಿಸಿ, ಅವರನ್ನು ನಿರ್ವೈರನ್ನಾಗಿ ಮಾಡಿ ಒಬ್ಬರಿಗೊಬ್ಬರು ಬಹಳ ಆನಂದವಾಗಿ ವರ್ತಿಸುವಂತೆ ಮಾಡಿರುವನು ॥೧೦೦॥ ಈ ಪ್ರಕಾರವಾಗಿ ಪಂಚಭೂತಗಳಿಗೆ ಆಕಾರಗಳು ಹುಟ್ಟಿ ಅವುಗಳಿಂದ ಪ್ರಾಣಿಗಳ ಶರೀರಗಳು ಸಿದ್ಧವಾದವು. ಮತ್ತು ಅವುಗಳಲ್ಲಿ ಭಗವಾನನು ಮಾಯೆಯ ಯೋಗದಿಂದ ಜೀವರೂಪದಿಂದ ಪ್ರವೇಶನಾಗಿ ಅವುಗಳಲ್ಲಿ ವ್ಯವಹರಿಸುತ್ತಿರುವನು ॥೧೦೧॥ ಈತನಿಗೆ ಬ್ರಹ್ಮಾಂಡದಲ್ಲಿ ''ಪುರುಷ'' ನೆಂದು ಮತ್ತು ಪಿಂಡದಲ್ಲಿ ಅಂದರೆ ದೇಹಗಳಲ್ಲಿ ''ಜೀವ''ನೆಂದು ಕರೆಯುವರು. ದೇವನೇ ಜೀವಶಿವ ರೂಪದಿಂದ ದೇಹದಲ್ಲಿ ಪ್ರತಿಬಿಂಬನಾದನು. ಇದು ಮಾಯೆಯ ನಿಜಸ್ವಭಾವವಾಗಿರುವುದು ॥೧೦೨॥ ಜೀವಶಿವರಲ್ಲಿ ''ಯೋಗಮಾಯಾ'' ಎಂಬುವುದು ಪ್ರಸಿದ್ಧವಾಗಿರುವುದು. ಇದಕ್ಕೇನೇ ಜೀವದಲ್ಲಿ ''ಅವಿದ್ಯಾ'' ಎಂದು ಹೇಳುವರು. ಮುಖ್ಯವಾಗಿ ಮಾಯೆಯ ಭ್ರಾಂತಿಯು ಇದೇ ಆಗಿರುವುದು. ಸ್ವಪ್ನಪ್ರಮಾಣದಂತೆ ಸಂಸಾರವು ಈ ಮಾಯೆಯಿಂದಲೇ ಭಾಸವಾಗುವುದು ॥೧೦೩॥ ಯಾವುದಕ್ಕೆ ಈಶ್ವರನ ''ದೀರ್ಘ ಸ್ವಪ್ನ'' ಎಂದು ಹೇಳುವುದೇ ಈ ಮಾಯೆಯಿಂದ ಭಾಸವಾಗುವ ಜಗದ್ರೂಪ ಸಂಸಾರವಾಗಿರುವುದು. ಮತ್ತು ನಿದ್ರೆಯಲ್ಲಿ ಅವಿದ್ಯೆಯಿಂದ ತೋರುವ, ಅದು ಜೀವದ ಸ್ವಪ್ನವಾಗಿರುವುದು ॥೧೦೪॥ ಎಚ್ಚರಾದ ಕೂಡಲೇ ಸ್ವಪ್ನವು ಮಿಥ್ಯೆಯಾಗುವುದು. ಆತ್ಮಸಾಕ್ಷಾತ್ಕಾರವಾಯಿತೆಂದರೆ ಸಂಸಾರದ ಭಾನವು ಮಿಥ್ಯೆಯಾಗುವುದು. ಹೇ ರಾಜನೇ, ಇವೆಲ್ಲವೂ ಮಾಯಾಕಾರ್ಯವಾಗಿವೆ. ಇದನ್ನು ಲಕ್ಷದಲ್ಲಿಡು ॥೧೦೫॥ ಹೇ ನೃಪನಾಥನೇ, ಈಗ ಜೀವದ ವಿಷಯಾವಸ್ಥೆಯನ್ನು ಹೇಳುವೆನು. ಅದು ತನ್ನ ಒಂದೇ ಪ್ರಕಾರದ ಮತ್ತು ಹತ್ತು ಪ್ರಕಾರದ ವಿಭಾಗಗಳನ್ನು ಮಾಡಿ, ವಿಷಯ ಭೋಕ್ತನು ಹೇಗಾಗುವನೆಂಬುದನ್ನು ಹೇಳುವೆ, ಕೇಳು ॥೧೦೬॥ ಈ ಜನಾರ್ದನನು ಏಕಭಾಗರೂಪ ಅಂದರೆ ಅಂತಃಕರಣನಾದನು ಮತ್ತು ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ ಈ ನಾಲ್ಕು ವಿಭಾಗಗಳಲ್ಲಿ ಪುನಃ ಹಂಚಲ್ಪಟ್ಟನು ॥೧೦೭॥ ಜೀವನು ತನ್ನ ಪರಿಪೂರ್ಣತ್ವದಿಂದ ಮತ್ತು ನಿಜಾತ್ಮಸತ್ತೆಯಿಂದ ''ಅಹಂ'' ಎಂದೆನ್ನುವನು. ಆದರೆ ಅಲ್ಲಿ ಮಾಯೆಯು ಮೋಸಗೊಳಿಸಿ ''ದೇಹೋಽಹಂ'' ಅಂದರೆ ಮೂರುವರೆ ಮೊಳದ ದೇಹವೇ ನಾನು ಎಂಬುದಾಗಿ ದೃಢಗೊಳಿಸಿತು ॥೧೦೮॥ ಅಹಂಕಾರದಿಂದ ದೇಹಾತ್ಮಭಾವವು ಬೆಳೆದು ಜೀವನು ತನ್ನ ಚಿದ್ರೂಪತೆಯನ್ನು ಮರೆಯುವನು. ಈ ಮರುವು ವಿಷಯಗಳ ಚಿಂತನೆಯನ್ನು ಬೆಳೆಸುವುದು. ಇದೇ ''ಚಿತ್ತ'' ವಾಗಿರುವುದು ॥೧೦೯॥ ದೇಹದ ಅಹಂತತೆ ಅತ್ಯಂತ ಚಪಲವಾಗಿರುವುದು. ಇದಕ್ಕೇನೇ ಚಂಚಲ ''ಮನ'' ಎನ್ನುವರು. ಇದೇ ಅನೇಕ ಪ್ರಕಾರಗಳ ಸಂಕಲ್ಪ ವಿಕಲ್ಪಗಳ ಜಾಳಿಗೆ ಬೆಳೆಸಿ, ಮಹಾಭಯ, ಶೋಕ ಮತ್ತು ದುಃಖಗಳನ್ನು ಉತ್ಪನ್ನಗೊಳಿಸುವುದು ॥೧೧೦॥ ದೇಹ - ಅಹಂತೆಯ ಚತುರತನಕ್ಕೆ ''ಬುದ್ಧಿ'' ಎಂದು ಹೆಸರು. ತನಗೆ ಜನ್ಮ ಮರಣಗಳು ಅನಿವಾರ್ಯವಾಗಿದೆ, ಎಂದು ಈ ಬುದ್ಧಿಯೇ ಪೂರ್ಣವಾಗಿ ನಿಶ್ಚಯವನ್ನು ಮಾಡಿದೆ ॥೧೧೧॥

ಏವಂ ದೇಹಾಭಿಮಾನಾಚೇ ಮಾಥಾ । ಚಿತ್ತ ಚತುಷ್ಟಯ ಅವಸ್ಥಾ । ಮುಖ್ಯ ಸಂಸಾರಾಚಾ ಕರ್ತಾ । ಜಾಣ ತತ್ತ್ವತಾ ದೇಹಾಭಿಮಾನು ॥೧೧೨॥ ಅಹಂಕಾರ ಧರೀ ಸೋಹಂಪಣ । ತೈ ಚಿತ್ತೀ ಪ್ರಗಟೇ ಚೈತನ್ಯಘನ । ತೇವ್ಹಾ ಮನಹೀ ಹೋಯ ಉನ್ಮನ । ಬುದ್ಧೀಚಾ ನಿಶ್ಚಯೋ ಪೂರ್ಣ ಪರಬ್ರಹ್ಮೀ ॥೧೧೩॥ ಸಮೂಳ ಮಾವಳಲ್ಯಾ ಅಭಿಮಾನ । ಕೈಚೀ ಬುದ್ಧಿ ಕೈಚೇ ಮನ । ಬುಡೇ ಚಿತ್ತಾಚೇ ಚಿತ್ತಪಣ । ಬ್ರಹ್ಮ ಪರಿಪೂರ್ಣ ಕೋಂದಾಟೇ ॥೧೧೪॥ ''ಏಕಧಾ'' ವಿಭಾಗ ಅಂತಃಕರಣ । ತ್ಯಾಚೇ ಉಣಖೂಣ ನಿಜಲಕ್ಷಣ । ರಾಯಾ ಸಾಂಗಿತಲೇ ಸಂಪೂರ್ಣ । ಆತಾ ''ದಶಧಾ'' ಲಕ್ಷಣ ತೇ ಐಕ ॥೧೧೫॥ ದಶಧಾ ಇಂದ್ರಿಯೇ ಅಚೇತನ । ತಯಾಂತೇ ಚೇತವಿತಾ ನಾರಾಯಣ । ದಶಧಾರೂಪೇ ಪ್ರವೇಶೋನ । ಇಂದ್ರಿಯವರ್ತನ ವರ್ತವೀ ॥೧೧೬॥ ದೃಷ್ಟಿ ಮಾಜೀ ಝಾಲಾ ''ದೇಖಣೇ'' । ದೃಶ್ಯ ಪ್ರಕಾಶೀ ದೃಶ್ಯಪಣೇ । ಐಸೇನಿ ಪ್ರಕಾಶಕ ಪಣೇ । ದೃಶ್ಯಾ ಭರಣೇ ದಾಖವೀ ॥೧೧೭॥ ಶ್ರವಣೀ ಝಾಲಾ ತೋ ''ಐಕಣೇ'' । ಶಬ್ದ ಪ್ರಕಾಶೀ ಶಬ್ದ ಲಕ್ಷಣೇ । ಮಗ ಅರ್ಥಾವಬೋಧಕಪಣೇ । ಶಬ್ದ ವಿಂದಾನೇ ಐಕವೀ ॥೧೧೮॥ ರಸೀ ''ರಸಸ್ವಾದು'' ನಾರಾಯಣ । ರಸನೇ ತೋಚಿ ರಸಸ್ವಾದನ । ಯಾಪರೀ ನಾನಾರಸಸೇವನ । ಕರವೀ ಜನಾರ್ದನ ಜನಾಮಾಜೀ ॥೧೧೯॥ ಸುಮನೀ ಶ್ರೀಹರಿ ''ಸುಗಂಧ'' । ಘ್ರಾಣೀ ತೋಚಿ ಜಾಣೇ ಗಂಧಾವಬೋಧ । ಯಾಪರೀ ಸುಮನಮಕರಂದ । ಭೋಗವೀ ಗೋವಿಂದ ನಿಜಾಂಗಯೋಗೇ ॥೧೨೦॥ ಶೀತ - ಉಷ್ಣ - ಮೃದು - ಕಠಿಣ । ''ಸ್ಪರ್ಶ'' ಪ್ರಕಾಶಿತಾ ನಾರಾಯಣ । ತ್ವಚೇಮಾಜೀ ತೋಚಿ ಸ್ಪರ್ಶಜ್ಞ । ಯಾಪರೀ ಜಗಜೀವನ ಭೋಗವೀ ಸ್ಪರ್ಶ ॥೧೨೧॥ ವಾಚೇಚಾ ''ವಾಚಕು'' ಕಮಳಾಪತೀ । ತೋಚಿ ಪ್ರಕಾಶೀ ಶಬ್ದ ಪಂಕ್ತೀ । ನಾನಾ ಶಬ್ದಾರ್ಥವ್ಯುತ್ಪತ್ತೀ । ವದವೀ ನಿಶ್ಚಿತೀ ವಾಚಾಳಪಣೇ ॥೧೨೨॥ ಕರಾಂಚ್ಯಾ ಠಾಯೀ ''ದೇತೀ ಘೇತೀ'' । ಅಕರ್ತೇನಿ ಕರ್ತವ್ಯಶಕ್ತೀ । ಚರಣಾ ಆಚರಣೇ ನಿಗುತೀ । ''ಗಮನಸ್ಥಿತೀ ಗೋವಿಂದೇ'' ॥೧೨೩॥ ಉಪಸ್ಥ ಸುಖಾಚೀ ''ಸುಖಪ್ರಾಪ್ತೀ'' । ತೇಣೇ ಸುಖೇ ಸುಖಾವೇ ಶ್ರೀಪತೀ । ಸ್ತ್ರೀಪುರುಷ ಮೈಥುನವ್ಯುತ್ಪತ್ತೀ । ಪ್ರಕಾಶೀ ಅತಿಪ್ರೀತೀ ಪುರುಷೋತ್ತಮು ॥೧೨೪॥

ಈ ಪ್ರಕಾರವಾಗಿ ದೇಹಾಭಿಮಾನದ ಮಸ್ತಕದ ಮೇಲೆ ''ಚಿತ್ತ ಚತುಷ್ಟಯ''ಗಳಲ್ಲಿ ಈ ಅವಸ್ಥೆಗಳಿರುವುವು. ನಿಜವಾಗಿಯೂ ಸಂಸಾರದ ಕರ್ತೃ ದೇಹಾಭಿಮಾನವೇ ಆಗಿರುವುದು. ಇದನ್ನು ಲಕ್ಷದಲ್ಲಿಡು ॥೧೧೨॥ ''ಅಹಂ'' ಕಾರವು ಎಂದು ''ಸೋಹಂ'' ಭಾವವನ್ನು ಧರಿಸುವುದೋ, ಆಗಲೇ ಚಿತ್ತವು ''ಚೈತನ್ಯ''ವಾಗುವುದು. ಮನವು ''ಉನ್ಮನ''ವಾಗುವುದು ಮತ್ತು ಬುದ್ಧಿಯ ನಿಶ್ಚಯವು ಪೂರ್ಣ ಪರಬ್ರಹ್ಮನಲ್ಲಿ ಲೀನವಾಗುವುದು ॥೧೧೩॥ ಸಮೂಲವಾಗಿ ಅಭಿಮಾನವೇ ಇಲ್ಲದಾಗಲೂ ಬುದ್ಧಿ ಎಲ್ಲಿಯದು? ಮನವಾದರೂ ಎಲ್ಲಿಯದು? ಚಿತ್ತದ ಚಿತ್ತತನವೇ ಮುಳುಗಿ ಹೋಗಿ ಎಲ್ಲೆಲ್ಲಿಯೂ ಪರಬ್ರಹ್ಮವೇ ತುಂಬಿಕೊಂಡಿರುವುದು ॥೧೧೪॥ ಹೇ ರಾಜನೇ, ಅಂತಃಕರಣರೂಪ ''ಏಕಧಾ'' ವಿಭಾಗದ ಎಲ್ಲ ಲಕ್ಷಣಗಳನ್ನು ನಿನಗೆ ಹೇಳಿದೆನು. ಈಗ ''ದಶಧಾ'' ಲಕ್ಷಣಗಳನ್ನು ಹೇಳುವೆ, ಕೇಳು ॥೧೧೫॥ ಹತ್ತು ಪ್ರಕಾರದ ಇಂದ್ರಿಯಗಳು ಅಚೇತನವಾಗಿರುವುವು. ಅವುಗಳ ಚೇತನವನ್ನು ಕೊಡುವವನು ನಾರಾಯಣನಾಗಿರುವನು. ಈತನು ಭಿನ್ನ ಭಿನ್ನ ಹತ್ತು ರೂಪಗಳಿಂದ ಅವುಗಳಲ್ಲಿ ಪ್ರವೇಶಿಸಿ, ಆಯಾ ಇಂದ್ರಿಯಗಳಿಂದ ಅವುಗಳ ಕಾರ್ಯಗಳನ್ನು ಮಾಡಿಸುವನು ॥೧೧೬॥ ಕಣ್ಣುಗಳಲ್ಲಿ ಈತನು ಕಾಣುವ ಶಕ್ತಿಯಾಗಿ ದೃಶ್ಯಗಳಿಗೆ ದೃಶ್ಯತನದಿಂದ ಪ್ರಕಾಶಿಸುವನು. ಹೀಗೆ ಪ್ರಕಾಶಕ ಧರ್ಮದಿಂದ ಈತನು ದೃಶ್ಯದ ಸೌಂದರ್ಯವನ್ನು ತೋರಿಸುವನು ॥೧೧೭॥ ಕಿವಿಗಳಲ್ಲಿ "ಕೇಳುವಿಕೆ" ಈತನೇ ಆಗಿರುವನು. ಶಬ್ದಗಳ ರೂಪದಲ್ಲಿ ಈತನೇ ಶಬ್ದಗಳನ್ನು ವ್ಯಕ್ತಗೊಳಿಸುವನು. ತದನಂತರ ಅರ್ಥಜ್ಞನಾಗಿ ಶಬ್ದದ ರಚನೆಗಳನ್ನು ಈತನೇ ಕೇಳಿಸುವನು ॥೧೧೮॥ ರಸಗಳಲ್ಲಿ ''ರಸದ ರುಚಿ'' ನಾರಾಯಣನಾಗಿರುವನು. ನಾಲಿಗೆಗೆ ರುಚಿಯನ್ನು ತೋರಿಸುವವನು ಈತನೇ ಆಗಿರುವನು. ಈ ಪ್ರಕಾರವಾಗಿ ಜನಾರ್ದನನು ಜನರಲ್ಲಿ ಅನೇಕ ಪ್ರಕಾರದ ರಸಗಳ ಸೇವನೆ ಮಾಡಿಸುವನು ॥೧೧೯॥ ಪುಷ್ಪಗಳಲ್ಲಿನ ''ಸುಗಂಧ'' ವಾಗಿ ಇರುವುದು ಆ ಶ್ರೀಹರಿಯೇ ಆಗಿರುವನು ಮತ್ತು ಮೂಗಿನಲ್ಲಿ ಗಂಧಜ್ಞಾನವನ್ನು ತಿಳಿಸುವವನು ಈತನೇ ಆಗಿರುವನು. ಈ ಪ್ರಕಾರವಾಗಿ ಶ್ರೀಹರಿಯು ತನ್ನದೇ ಸ್ವರೂಪದಿಂದ ಪುಷ್ಪಗಳಲ್ಲಿನ ಮಕರಂದವನ್ನು ಜೀವನಿಗೆ ಭೋಗಿಸಲು ಕೊಡುವನು ॥೧೨೦॥ ಶೀತ - ಉಷ್ಣ - ಮೃದು - ಕಠಿಣ ಇವು ಸ್ಪರ್ಶದ ನಾಲ್ಕು ಗುಣಗಳಾಗಿವೆ. ಇವುಗಳಿಗೆ ನಾರಾಯಣನೇ ಪ್ರಕಾಶಗೊಳಿಸುವನು. ತ್ವಚೆಯಲ್ಲಿ ''ಸ್ಪರ್ಶ'' ಅರಿಯುವನು ನಾರಾಯಣನೇ ಆಗಿರುವನು. ಈ ರೀತಿಯಲ್ಲಿ ಜಗಜ್ಜೀವನನು ಸ್ಪರ್ಶದ ಸುಖವನ್ನು ಭೋಗಿಸುವನು ॥೧೨೧॥ ವಾಣಿಗೆ ''ನುಡಿಸುವವನು'' ಕಮಲಾಪತಿಯೇ. ಈತನೇ ಶಬ್ದ ಮಾಲಿಕೆಯನ್ನು ವ್ಯಕ್ತಗೊಳಿಸುವನು ಮತ್ತು ನಾನಾ ಪ್ರಕಾರಗಳ ಶಬ್ದಾರ್ಥ ವ್ಯುತ್ಪತ್ತಿಯನ್ನು ಜೀವ ಮುಖಾಂತರ ವಾಚಾಳತನದಿಂದ ಈತನೇ ನುಡಿಸುವನು ॥೧೨೨॥ ಹಸ್ತದಿಂದ ''ಕೊಡುವ, ತೆಗೆದುಕೊಳ್ಳುವ'' ಕಾರ್ಯದ ಶಕ್ತಿಯು ಈ ಅಕರ್ತನದ್ದೇ ಆಗಿರುವುದು. ಹಾಗೆಯೇ ಕಾಲುಗಳಿಂದ ''ನಡೆಯುವುದು'' ನಡೆದಿರುವುದು ಸಹ ಈ ಗೋವಿಂದನಿಂದಲೇ ॥೧೨೩॥ ಕರ್ಮೇಂದ್ರಿಯಗಳಲ್ಲಿನ ನಾಲ್ಕನೆಯದಾದ ಉಪಸ್ಥದಿಂದ ಆಗುವ ''ಸುಖಪ್ರಾಪ್ತಿ''ಯು ಈ ಶ್ರೀಪತಿಯಿಂದಲೇ ಆಗುವುದು. ಈ ಸುಖದಿಂದ ಭಗವಂತನೇ ಸುಖಿಯಾಗುವನು. ಸ್ತ್ರೀ ಪುರುಷರ ಮೈಥುನ ಸುಖವನ್ನು ಆ ಪುರುಷೋತ್ತಮನು ಪ್ರೀತಿಯಿಂದ ಪ್ರಕಾಶಗೊಳಿಸುವನು ॥೧೨೪॥

ಗುದಾಚೇ ಠಾಯೀ ಜೇ ಕಾ ''ಕ್ಷರಣ'' । ತೇಹೀ ಅಕ್ಷರೇ ಹೋಯ ಜಾಣ । ಯಾಪರೀ ನಿಜಾತ್ಮಾ ಪರಿಪೂರ್ಣ । ದಶಧಾ ಆಪಣ ವಿಭಾಗಲಾ ದೇಹೀ ।।೧೨೫।। ಯಾಪರೀ ಗಾ ದೇಹಯೋಗೇ । ವಿಲಾಸೇ ವಿಷಯಸಂಭೋಗೇ । ಭೋಗ್ಯ ಭೋಕ್ತಾ ಉಭಯ ಭಾಗೇ । ಪ್ರಕಾಶೂನಿ ಅಂಗೇ ಸ್ವಯೇ ಭೋಗೀ ।।೧೨೬।। ಜೇವೀ ಸಾಳಈಚ್ಯಾ ರುಖಾ । ಸಾಳಈಚಿ ಬೀಜ ದೇಖಾ । ಸಾಳಈಚಿ ಶಾಖೋಪಶಾಖಾ । ನ ವಿಕಾರತಾ ಅಸಕಾ ವೃಕ್ಷ ಹೋಯೇ ।।೧೨೭।। ಜೇವೀ ಕಾ ಊಂಸ ಬೀಜೀ ಪಡೇ । ತೋ ಬಾಹೇರ ಊಂಸಪಣೇಚಿ ವಾಢೇ । ಜರೀ ಭಿನ್ನ ಭಿನ್ನ ಕಾಂಡೇ ಚಡೇ । ತರೀ ಮಾಗೇ ಪುಢೇ ರಸ ಏಕು ।।೧೨೮।। ತೇವೀ ವಿಷಯ ಆಣಿ ಕರಣೇ । ಪ್ರಕಾಶೂನಿ ಏಕಪಣೇ । ಮಗ ವಿಷಯರಸ ಸೇವಣೇ । ಜೀವಪಣೇ ಸ್ವಯೇ ಸೇವೀ ।।೧೨೯।।

ಗುಣೈರ್ಗುಣಾನ್ ಸ ಭುಂಜಾನ ಆತ್ಮಪ್ರದ್ಯೋತಿತೈಃ ಪ್ರಭು । ಮನ್ಯಮಾನ ಇದಂ ಸೃಷ್ಟಮಾತ್ಮಾನಮಿಹ ಸಜ್ಜತೇ ।೫॥

ಅರ್ಥ :- ಅಭಿಮಾನಿಯಾದ ದೇಹವು ಜೀವ ಅಂತರ್ಯಾಮಿ ಮುಖಾಂತರ ಇಂದ್ರಿಯಗಳ ಆಧಾರದಿಂದ ವಿಷಯಗಳ ಭೋಗವನ್ನು ಪಡೆಯುತ್ತಾನೆ. ಈ ಪಂಚಭೂತಗಳಿಂದ ನಿರ್ಮಾಣಗೊಂಡ ಶರೀರಕ್ಕೆ ಆತ್ಮವೆಂದು ಭಾವಿಸಿ ಅದರಲ್ಲಿ ಆಸಕ್ತನಾಗಿ ಸಿಲುಕಿಕೊಳ್ಳುವನು.

ಇಂದ್ರಿಯಾ ಆಣಿ ವಿಷಯಾಂಸೀ । ಸಹಜೇ ಅಂತರ್ಯಾಮೀ ಪ್ರಕಾಶೀ । ಜೀವ ಸೇವೂನಿ ತ್ಯಾ ವಿಷಯಾಂಸೀ । ಪಾವೇ ಆಸಕ್ತೀಸೀ ಅಹಂಭಾವೇ ।।೧೩೦।। ಮ್ಹಣೇ ಹೇ ವಿಷಯ ಕೈಸೇ ಗೋಡ । ಮಾಝ್ಯಾ ದೇಹಾಚೇ ಪುರೇ ಕೋಡ । ತಂವ ಇಂದ್ರಿಯಾಂಚೀ ಖವಳೇ ಚಾಡ । ವಿಷಯ ವಾಢ ಭೋಗಾವಯಾ ।।೧೩೧।। ಇಂದ್ರಿಯಾ ವಿಷಯಾಂಚೀ ಆಸಕ್ತೀ । ದೇಹಾಭಿಮಾನೇ ವಾಢೇ ವೃತ್ತೀ । ಮಾವಳೋನಿ ಮೂಳೀಂಚೀ ಸ್ಫೂರ್ತೀ । ಮೋಹಮಮತಾಸ್ಥಿತೀ ದೃಢ ವಾಢೇ ।।೧೩೨।। ಮಗ ಮೀ ಮ್ಹಣೇ ದೇಹಾತೇ । ದೇಹಸಂಬಂಧೀ ಜೇ ತೇ ಆಪ್ತೇ । ವಿಷಯಾಂಚಿಯೇ ಲೋಲುಪತೇ । ಉಸಂತು ಚಿತ್ತೇ ಅಸೇನಾ ।।೧೩೩।। ಪ್ರಕೃತಿಸ್ವಭಾವೇ ಕರ್ಮ ಜಾಹಲೇ । ತೇ ತೇ ಮ್ಯಾ ಕೇಲೇ । ದೇಹಅಹಂತೇಚೇ ನಾಥಿಲೇ । ಕಾವಿರೇ ಚಢಲೇ ಅನಿವಾರ ।।೧೩೪।। ದೇಹಅಹಂತಾ ಅತಿಉದ್ಭಟ । ತೇಥೇ ಮೋಹಮಮತಾ ಅತಿದುರ್ಘಟ । ತೇಣೇ ಜನ್ಮ ಮರಣಾಂಚೀ ವಾಟ । ಘಡಘಡಾಟ ಪ್ರವಾಹೇ ।।೧೩೫।।

ಕರ್ಮಾಣಿ ಕರ್ಮಭಿಃ ಕುರ್ವನ್ ಸನಿಮಿತ್ತಾನಿ ದೇಹಭೃತ್ । ತತ್ತ್ಕರ್ಮಫಲಂ ಗೃಹ್ಣನ್ ಭ್ರಮತೀಹ ಸುಖೇತರಮ್ ।।೬।।

ಅರ್ಥ: ಕರ್ಮೇಂದ್ರಿಯಗಳಿಂದ ವಾಸನಾಸಹ ಕರ್ಮಮಾಡುವ ಮತ್ತು ಪಾಪಪುಣ್ಯ ಕರ್ಮಗಳ ದುಃಖ ಸುಖಗಳ ಫಲ ಭೋಗಿಸುವ ದೇಹಧಾರಿ ಜೀವನು ಈ ಸಂಸಾರದಲ್ಲಿ ಭ್ರಮಣ ಮಾಡುತ್ತಿರುವನು. ಇದರಿಂದ ಇವನು ಮುಕ್ತನಾಗುವುದಿಲ್ಲ.

ಗುದದಲ್ಲಿ ''ಮಲವಿಸರ್ಜನೆ'' ಯ ಕ್ಷರಣಧರ್ಮವು ಸಹ ಅಕ್ಷರನಾದ ಪರಮಾತ್ಮನ ಸತ್ತೆಯಿಂದಲೇ ನಡೆಯುವುದು. ಇದನ್ನು ಲಕ್ಷದಲ್ಲಿಡು. ಈ ಪ್ರಕಾರವಾಗಿ ಪರಿಪೂರ್ಣನಾದ ನಿಜಾತ್ಮನು ಪ್ರಾಣಿಗಳ ದೇಹದಲ್ಲಿ ಹತ್ತು ಪ್ರಕಾರಗಳಿಂದ ವಿಭಾಗಿಸಿರುವನು ।।೧೨೫।। ಈ ಪ್ರಕಾರವಾಗಿ ಈತನು ದೇಹದಲ್ಲಿ ವಿಷಯ ಭೋಗಗಳನ್ನು ಭೋಗಿಸಿ ವಿಲಾಸಗೊಳ್ಳುವನು ಮತ್ತು ಭೋಗ್ಯ ಹಾಗೂ ಭೋಕ್ತಾ ಎರಡೂ ರೀತಿಯಿಂದ ತಾನೇ ವ್ಯಕ್ತನಾಗಿ ಎಲ್ಲವನ್ನೂ ತಾನೇ ಭೋಗಿಸುವನು ।।೧೨೬।।ಭತ್ತದ ಗಿಡಕ್ಕೆ ಭತ್ತದ್ದೇ ಬೀಜ, ಭತ್ತದ್ದೇ ಶಾಖೋಪಶಾಖೆಗಳು ನಿರ್ಮಾಣವಾಗಿ ಎಲ್ಲೆಲ್ಲಿಯೂ ಅನ್ಯ ವಿಕಾರವಾಗದೇ ಎಲ್ಲವೂ ಭತ್ತದ ಗಿಡವೇ ಆಗುವುದು ।।೧೨೭।। ಕಬ್ಬಿನ ಬೀಜ ರೂಪ ಕಾಂಡವನ್ನು ಭೂಮಿಯಲ್ಲಿ ಬಿತ್ತಲು, ಅದು ಕಬ್ಬಿನ ರೂಪದಿಂದಲೇ ಬೆಳೆಯುವುದು. ಅದರ ಕಾಂಡಗಳು ಬೇರೆ ಬೇರೆಯಾಗಿ ಕಾಣುವುವು. ಆದರೆ ಅದರಲ್ಲಿ ಕೆಳಗಿನಿಂದ ಮೇಲಿನವರೆಗೂ ಇರುವ ರಸವು ಒಂದೇ ಆಗಿರುವುದು ।।೧೨೮।। ಅದರಂತೆ, ವಿಷಯ ಮತ್ತು ಇಂದ್ರಿಯಗಳು, ಈ ಎರಡರಲ್ಲಿಯೂ ಪರಮಾತ್ಮನು ಏಕತ್ವದಿಂದಲೇ ಪ್ರಕಾಶಗೊಳಿಸುವನು ಮತ್ತು ವಿಷಯಗಳ ರುಚಿಯನ್ನು ಜೀವ ಮುಖಾಂತರ ತಾನೇ ಸ್ವೀಕರಿಸುವನು ।।೧೨೯।।

ಇಂದ್ರಿಯಗಳಿಗೆ ವಿಷಯಗಳಿಗೆ ಅಂತರ್ಯಾಮಿ, ಹೃದಯಸ್ಥನು ಸ್ವಾಭಾವಿಕವಾಗಿ ಪ್ರಕಾಶಗೊಳಿಸುವನು. ಆದರೆ ಜೀವವು ಈ ವಿಷಯಗಳನ್ನು ಸೇವಿಸಿ, ಅಹಂಭಾವದಿಂದ ಅವುಗಳಲ್ಲಿ ಆಸಕ್ತಹೊಂದುವುದು ।।೧೩೦।। ಮತ್ತು ಹೀಗೆ ಹೇಳುವುದು:- ಆಹಾಹಾ! ಈ ವಿಷಯಗಳು ಎಷ್ಟು ಮಧುರವಾಗಿರುವುವು! ಇವು ನನ್ನ ದೇಹದ ಇಚ್ಛೆಗಳನ್ನೆಲ್ಲ ಪೂರೈಸುವುವು. ಹೀಗೆ ಹೇಳುತ್ತಿರುವುದರಿಂದ ಇಂದ್ರಿಯಗಳಿಗೆ ಅಧಿಕವಾಗಿಯೇ ವಿಷಯ ಭೋಗಗಳನ್ನು ಭೋಗಿಸುವ ಇಚ್ಛೆ ಬೆಳೆಯುವುದು ।।೧೩೧।। ದೇಹಾಭಿಮಾನದಿಂದ ಇಂದ್ರಿಯಗಳ ವಿಷಯಾಸ್ತಕಿಯು ಬೆಳೆಯುತ್ತಲೇ ನಡೆಯುವುದು ಮತ್ತು ತನ್ನ ಮೂಲದ ಆತ್ಮಸ್ಫೂರ್ತಿಯು ಲಯವಾಗಿ ಮೋಹ ಮತ್ತು ಮಮತೆಯು ದೃಢವಾಗಿ ಬೆಳೆಯುವುವು ।।೧೩೨।। ಆಗ ಇವನು ಈ ದೇಹಕ್ಕೆ ''ನಾನು'' ಎನ್ನುವನು ಮತ್ತು ದೇಹದ ಸಂಬಂಧವಾದ ಎಲ್ಲರನ್ನು ನನ್ನ ಆಪ್ತರು ಎನ್ನುವನು. ವಿಷಯಗಳ ಲೋಲುಪತೆಯಿಂದ ಆತನ ಚಿತ್ತಕ್ಕೆ ಕ್ಷಣಹೊತ್ತು ಸಹ ಬಿಡುವು ಇರುವುದಿಲ್ಲ ।।೧೩೩।। ಪ್ರಕೃತಿ ಸ್ವಭಾವದಿಂದ ಆಗುವ ಕರ್ಮಗಳೆಲ್ಲವನ್ನು ನಾನೇ ಮಾಡಿರುವೆನು ಎಂದು ಇವನು ಹೇಳುವನು. ಆದ್ದರಿಂದಲೇ ಇಲ್ಲದ ದೇಹಂಕಾರದ ಭಯಂಕರವಾದ ಕೋಲಾಹಲವು ಗಂಭೀರವಾಗುವುದು ।।೧೩೪।। ದೇಹಂಕಾರವು ಪ್ರಬಲವಾದಲ್ಲಿ ಮೋಹ ಮತ್ತು ಮಮತೆಯು ಅನಾವರವಾಗುವುವು. ಇದರಿಂದಲೇ ಜನ್ಮ ಮರಣಗಳ ಹಾದಿಯು ಧಡ ಧಡವೆಂದು ಆರಂಭವಾಗುವುದು ।।೧೩೫।।

ಮನಿ ಧರೋನಿ ವಿಷಯಕಾಮು । ಕರ್ಮೇಂದ್ರಿಯೀ ಕರಿತಾ ಕರ್ಮ । ತೇಥೇ ನಿಜಪತೀ ಧರ್ಮಾಧರ್ಮ । ಬಾಧಕ ಪರಮ ಪುರುಷಾತೇ ॥೧೩೬॥ ಕಲ್ಪಿಲಾ ಫಳಭೋಗ ಘಡೇ । ತ್ಯಾಸಾರಿಖೇ ದೇಹ ಧರಣೇ ಪಡೇ । ದೇಹ ದೇಹಾಚೀ ಖಾಣೀ ಉಘಡೇ । ಮರಣಹೀ ವಾಢೇ ತೈಸೇಂಚಿ ॥೧೩೭॥ ಫಳಾಶಾ ಕರ್ಮ ಅತಿದಾರುಣ । ಅಮರಾ ಆಣೀ ಅಮಿತ ಮರಣ । ಅಜನ್ಮ್ಯಾ ಅಂಗೀ ಜನ್ಮ ಪೂರ್ಣ । ಪುನಃ ಪುನಃ ಜಾಣ ಆದಳತೀ ॥೧೩೮॥ ಏವಂ ಸ್ವರ್ಗ ಆಣಿ ಸಂಸಾರಾ । ಜನ್ಮ ಮರಣಾಂಚ್ಯಾ ಯೇರಝಾರಾ । ನಾನಾ ಯೋನಿ ಅಪಾರಾ । ನಿಜಕರ್ಮದ್ವಾರಾ ಸ್ವಯೇ ಭೋಗೀ ॥೧೩೯॥ ಡೋಳೇ ಬಾಂಧೋನಿ ಜುಂಪಿಲಾ ಘಾಣಾ । ತೇಲಿಯಾಚಾ ಢೋರು ಜಾಣಾ । ಕರಕರೀತು ಪರಿಭ್ರಮಣಾ । ಅವಿಶ್ರಮ ಜಾಣಾ ಭೋವತಸೇ ॥೧೪೦॥ ತೇವೀ ಬಾಂಧೋನಿ ಜ್ಞಾನಾಚೇ ಡೋಳೇ । ಭೋಗೂ ಜಾತಾ ನಿಜಕರ್ಮಫಳೇ । ತಂವ ಜನ್ಮ ಮರಣಾಂಚೇ ಸೋಹಳೇ । ಭೋಗೀ ಆಗಳೇ ಅನಿವಾರ ॥೧೪೧॥ ಉದೋಅಸ್ತಾಂಚೇನಿ ಪ್ರಮಾಣೇ । ಜೈಸೇ ಸೂರ್ಯಾಸೀ ಪಡೇ ಭಂವಣೇ । ತೈಶೀ ಹೀ ಜನ್ಮ ಮರಣೇ । ಅತಿದಾರುಣೇ ಸ್ವಯೇ ಸೋಶೀ ॥೧೪೨॥ ಶಿಣಶಿಣೋ ಜಂವ ಜನ್ಮ ಕಂಠೀ । ಸವೇಂಚ ಮರಣ ಯೇ ತ್ಯಾಪಾಠೀ । ಜೈಸೀ ಜಾವಳೀ ಫಳೇ ಏಕ ದೇಠೀ । ತೈಶಾ ಜನ್ಮ ಮರಣಕೋಟೀ ಭೋಗೀ ಸ್ವಯೇ ॥೧೪೩॥

ಇತ್ಥಂ ಕರ್ಮಗತೀರ್ಗಚ್ಛನ್ ಬಹ್ವಭದ್ರವಹಾಃ ಪುಮಾನ್ । ಆಭೂತಸಂಪ್ಲವಾತ್ ಸರ್ಗಪ್ರಲಯಾವಶ್ನುತೇಽವಶಃ ॥೮॥

ಅರ್ಥ:- ಹೀಗೆ ಬದ್ಧ ಜೀವಿಯು ಜನನ ಮರಣಗಳ ಪುನರಾವರ್ತನೆಯನ್ನು ಅನುಭವಿಸುವುದು ಅನಿವಾರ್ಯವಾಗುತ್ತದೆ. ಸ್ವಕರ್ಮಗಳ ಪ್ರತಿಫಲಗಳ ಒತ್ತಡಕ್ಕೆ ಸಿಲುಕಿ ಸೃಷ್ಟಿಯ ಆದಿಯಿಂದ ವಿಶ್ವಪ್ರಳಯದವರೆಗೆ ದುಃಖಿಪಡುತ್ತಾ, ಒಂದು ಅಮಂಗಳ ಸನ್ನಿವೇಶದಿಂದ ಮತ್ತೊಂದಕ್ಕೆ ಅಲೆದಾಡುತ್ತಿರುತ್ತಾನೆ.

ಹೋತಾ ಪೂರ್ಣತ್ವೇ ಜೋ ಸ್ವತಂತ್ರ । ತೋ ಝಾಲಾ ಕರ್ಮಪರತಂತ್ರ । ನಾನಾಕರ್ಮಗತಿಪಾತ್ರ । ದುಃಖಸುಖಕ್ಷೇತ್ರ ಸದಾ ವಾಹೇ ॥೧೪೪॥ ಮಾನೋನಿ ವಿಷಯಾಂಚೇ ಸುಖ । ದೇಖತದೇಖತಾ ಘೇತಲೇ ವಿಖ । ತ್ಯಾಚೇ ಅಗಣಿತ ಅಸುಖ । ಜನ್ಮಕೋಟೀ ದುಃಖ ಸೋಶಿತಾ ನ ಸರೇ ॥೧೪೫॥ ದುಃಖಾವರೀ ದುಃಖಾಂಚೇ ಆವರ್ತ । ಮೋಹಶೋಕಾಂಚೇ ಗರ್ತೀ ಪಡತ । ಅತಿಯಾತನೇಮಾಜೀ ಬುಡತ । ಸದಾ ಉಕಡತ ಕಾಳಾಗ್ನೀ ॥೧೪೬॥ ಐಸೇ ಸೋಶಿತಾ ದುಃಖಶೋಕ । ಪುಢೇ ಅವಚಿತಾ ಏಕಾಏಕ । ಮಹಾ ಪ್ರಳಯಾಚಾ ಭಡಕಾ ದೇಖ । ನಿಕಟ ಸನ್ಮುಖ ಅಂಗೀ ವಾಜೇ ॥೧೪೭॥

ಮನದಲ್ಲಿ ವಿಷಯಗಳ ಇಚ್ಛೆಯನ್ನು ಧರಿಸಿ ಕರ್ಮೇಂದ್ರಿಯಗಳಿಂದ ಕರ್ಮಗಳನ್ನು ಮಾಡಲು ಅಲ್ಲಿ ಧರ್ಮ, ಅಧರ್ಮಗಳು ಉದ್ಭವಿಸುವುವು. ಮತ್ತು ಇವುಗಳೇ ಜೀವಕ್ಕೆ ಅತಿಶಯವಾಗಿ ಬಾಧಿಸುವುವು ॥೧೩೬॥ ಇಚ್ಛಿಸಿದ ಫಲದ ಭೋಗವು ದೊರಕಿತೆಂದರೆ, ಅದರಂತೆ ದೇಹವನ್ನು ಧರಿಸಬೇಕಾಗುವುದು. ಈ ದೇಹದಿಂದಲೇ ಇನ್ನೊಂದು ಜನ್ಮಕ್ಕೆ ಕಾರಣವಾಗಿ ನಾನಾ ವಿಧ ಜನ್ಮಗಳನ್ನು ಧರಿಸಬೇಕಾಗುವುದು. ಅದರಂತೆ ಮರಣಗಳನ್ನು ಭೋಗಿಸಬೇಕಾಗುವುದು ॥೧೩೭॥ ಫಲಾಪೇಕ್ಷೆಯಿಂದ ಮಾಡಿದ ಕರ್ಮಗಳು ಭಯಂಕರವಾಗಿರುವುವು. ಇವು ಅಮರರಿಗೂ ಮರಣವನ್ನುಂಟು ಮಾಡುವುವು! ಮತ್ತು ಜನ್ಮ ರಹಿತನಿಗೆ ಪುನಃ ಪುನಃ ಜನ್ಮ ಧರಿಸುವಂತೆ ಮಾಡುವುವು ॥೧೩೮॥ ಈ ಪ್ರಕಾರವಾಗಿ ಸ್ವರ್ಗ ಮತ್ತು ಈ ಸಂಸಾರದಲ್ಲಿ ಜನ್ಮಮರಣಗಳ ಸುತ್ತು ಶುರುವಾಗುವುದು ಮತ್ತು ತನ್ನ ಕರ್ಮದಯೋಗದಿಂದ ನಾನಾ ಪ್ರಕಾರಗಳ ಯೋನಿಗಳಲ್ಲಿ ದೇಹ ಪ್ರಾಪ್ತವಾಗುವುದು ॥೧೩೯॥ ಗಾಣಿಗೇರನ ಎತ್ತಿಗೆ ಕಣ್ಣುಗಳನ್ನು ಕಟ್ಟಿ ಹೊಡೆಯುತ್ತಿರಲು, ಅದು ಒಂದೇ ಸವನೇ ಕರ ಕರ ಕರ ಎಂದು ಕರಗುಡುತ್ತ ತಿರುಗುತ್ತಲೇ ಇರಬೇಕಾಗುವುದು ॥೧೪೦॥ ಅದರಂತೇ ಜ್ಞಾನದ ಕಣ್ಣುಗಳನ್ನು ಕಟ್ಟಿ ತನ್ನ ಕರ್ಮಗಳ ಫಲವನ್ನು ಭೋಗಿಸುತ್ತ ಇದರಿಂದ ಜನ್ಮಮರಣದ ಕ್ರಿಯೆಗಳನ್ನು ಅಸಂಖ್ಯ ಮತ್ತು ಅನಿವಾರ್ಯವಾಗಿ ಸಹಿಸಬೇಕಾಗುವುದು ॥೧೪೧॥ ಉದಯಾಸ್ತಗಳನ್ನು ಅನುಸರಿಸಿ ಸೂರ್ಯನಿಗೆ ತಿರುಗಲೇ ಬೇಕಾಗುವುದು. ಅದರಂತೆ ಅತ್ಯಂತ ಭಯಂಕರವಾದ ಜನ್ಮಮರಣಗಳನ್ನು ಜೀವವು ಸ್ವತಃ ಶೋಷಣೆ ಪಡುತ್ತಿರುವುದು ॥೧೪೨॥ ಬಹು ಪರಿಶ್ರಮದಿಂದ ಜೀವವು ಜನ್ಮಕ್ಕೆ ಬರುವುದು. ಆಗಲೇ ಮರಣವು ಅದರ ಬೆನ್ನು ಹಿಂದೆಯೇ ಬೆನ್ನುಹತ್ತಿರುವುದು. ಎರಡು ಫಲಗಳು ಅಂಟಿಕೊಂಡು ಜೋಡಾಗಿಯೇ ಹುಟ್ಟಿಕೊಂಡಂತೆ ಜೀವವು ಕೂಡಿದ ಜನ್ಮಮರಣಗಳನ್ನು ಕೋಟಿ ಕೋಟಿ ಸಾರೆ ಅನುಭವಿಸುವುದು ॥೧೪೩॥

ಪೂರ್ಣವಾಗಿ ಸ್ವತಂತ್ರನಾಗಿದ್ದವನು ಈಗ ಕರ್ಮಪರತಂತ್ರನಾಗಿರುವನು ಮತ್ತು ಹೀಗಾಗಿರುವುದರಿಂದ ನಾನಾ ಕರ್ಮಗಳ ಗತಿಗೆ ಪಾತ್ರನಾಗಿ ನಿರಂತರವಾಗಿ ಸುಖದುಃಖಗಳನ್ನು ಭೋಗಿಸುತ್ತಿರುವನು ॥೧೪೪॥ ವಿಷಯಗಳಿಗೆ ಸುಖವೆಂದು ಭಾವಿಸಿ ತಿಳಿದುತಿಳಿದೂ ವಿಷವನ್ನು ಸೇವಿಸಿದಂತಾಗಿ, ಅಗಣಿತ ದುಃಖಕ್ಕೆ ಪಾತ್ರನಾದನು. ಕೋಟ್ಯಾವಧಿ ಜನ್ಮಗಳನ್ನು ಧರಿಸಿ, ದುಃಖಗಳನ್ನು ಸಹಿಸುತ್ತಿದ್ದು ಅದಕ್ಕೆ ಕೊನೆಯೇ ಇಲ್ಲದಾಗಿದೆ ॥೧೪೫॥ ಜೀವನು ಮೋಹ ಮತ್ತು ಶೋಕಗಳ ಮಡುವಿನಲ್ಲಿ ದುಃಖದ ಮೇಲೆ ದುಃಖ ಒದಗಿ ಉರುಳಿಬೀಳುವನು ಮತ್ತು ಅತ್ಯಂತ ಯಾತನೆಯಲ್ಲಿ ಮುಳುಗಿ ಸದಾಸರ್ವಕಾಲದಲ್ಲಿ ಕಾಲಾಗ್ನಿಯಿಂದ ಕುದಿಯುತ್ತಿರುವನು ॥೧೪೬॥ ಈ ಪ್ರಕಾರವಾಗಿ ದುಃಖ ಶೋಕಗಳನ್ನು ಸೋಸಿಸುತ್ತಿರಲು, ಮುಂದೆ ಮಹಾಪ್ರಳಯದ ಜ್ವಾಲೆಯು ಏಳುವುದು. ಅದರಿಂದ ಅವನೆದುರು ಭಯಂಕರವಾದ ಧ್ವನಿಯು ಹೊರಡುವುದು ॥೧೪೭॥

ತೇಥೇ ಮಾಗೇ ನ ವಚೇ ಕಾಢಿಲಾ ಪಾವೋ । ಪುಢೇ ನಿಘಾವಯಾ ನಾಹೀವಾವೋ । ನಿಜಕರ್ಮೇ ಬಾಂಧಿಲಾ ಪಹಾ ವೋ । ಪ್ರಳಯಾಚಾ ಘಾವೋ ಮಸ್ತಕೀ ವಾಜೇ ॥೧೪೮॥ ಉತ್ಪತ್ತಿಸ್ಥಿತಿಪ್ರಕರಣ । ತುಜ ಸಾಂಗಿತಲೇ ಸಂಪೂರ್ಣ । ಆತಾ ಪ್ರಳಯಾಚೇ ಲಕ್ಷಣ । ಸಾವಧಾನ ಅವಧಾರೀ ॥೧೪೯॥

ಧಾತೂಪಪ್ಲವ ಆಸನ್ನೇ ವ್ಯಕ್ತಂ ದ್ರವ್ಯಗುಣಾತ್ಮಕಮ್ । ಅನಾದಿನಿಧನಃ ಕಾಲೋ ಹ್ಯವ್ಯಕ್ತಾಯಾಪಕರ್ಷತಿ ॥೮॥

ಅರ್ಥ: ಭೌತಿಕ ಧಾತುಗಳ ನಾಶವು ಸನ್ನಿಹಿತವಾದಾಗ, ಭಗವಂತನು ಕಾಲರೂಪಿಯಾಗಿ ಜಡ ಮತ್ತು ಸೂಕ್ಷ್ಮ ರೂಪದಲ್ಲಿರುವ ವ್ಯಕ್ತ ಬ್ರಹ್ಮಾಂಡವನ್ನು ಹಿಂದಕ್ಕೆ ಸೆಳೆದುಕೊಳ್ಳುತ್ತಾನೆ. ಆಗ ಸಮಸ್ತ ಬ್ರಹ್ಮಾಂಡವೂ ಅವ್ಯಕ್ತದಲ್ಲಿ ಲೀನವಾಗುತ್ತದೆ.

ಸೂರ್ಯೋದಯೇಸೀ ದಿವಸಸ್ಥಿತೀ । ಲೋಟಲ್ಯಾ ಅವಶ್ಯ ಪಾವೇ ರಾತೀ । ತೇವೀ ಝಾಲಿಯಾ ಉತ್ಪತ್ತಿಸ್ಥಿತೀ । ಪ್ರಳಯಾಚೇ ಪ್ರಾಪ್ತೀ ಅವಶ್ಯ ಪಾವೇ ॥೧೫೦॥ ಏವಂ ಪಾವಲ್ಯಾ ಪ್ರಳಯವೇಳು । ಖವಳೇ ಅನಾದಿನಿಧನಕಾಳು । ತೋ ಮಹಾಭೂತೇಂಸೀ ಭೂಗೋಳು । ನಾಶಾರ್ಥ ಪ್ರಬಳು ಪ್ರತಾಪ ಮಾಂಡೀ ॥೧೫೧॥ ತೇಥ ಜೇ ಜೇ ಸ್ಥೂಳಾಕಾರೇ ವ್ಯಕ್ತ । ತೇ ತೇ ಕರೂ ಲಾಗೇ ಅವ್ಯಕ್ತ । ಜೇವೀ ಪೇರಿಲೇ ಪಿಕೋನಿ ಶೇತ । ಸ್ವಯೇ ವಾಳತ ಉಷ್ಣಕಾಳೀ ॥೧೫೨॥ ತೃಣಾದಿ ನಾನಾ ಬೀಜೇ ಕ್ಷಿತೀ । ಸ್ವಭಾವೇ ವಾರ್ಷಿಯೇ ವಿರೂಢತೀ । ತೇಚಿ ಶಾರದಿಯೇ ನಾನಾವ್ಯಕ್ತೀ । ಸಫಳಿತೇ ಹೋತೀ ಸುಪುಷ್ಪ ॥೧೫೩॥ ತೇಚಿ ಗ್ರೀಷ್ಮಾಚ್ಯಾ ಅಂತೀ । ಫಳಮೂಳ ಮೋಡೋನಿ ವ್ಯಕ್ತೀ । ಬೀಜೇ ಲೀನ ಹೋತೀ ಕ್ಷಿತೀ । ತೈಶೀ ಕಾಳಗತೀ ಸಂಸಾರಾ ॥೧೫೪॥ ಜೇವೀ ವಸಂತಾಚೇ ಐಲೀಕಡೀ । ವೃಕ್ಷಾಂಸೀ ಹೋಯ ಪಾನಝಡೀ । ತೇವೀ ಬ್ರಹ್ಮಾದಿಕಾಂಚೀ ಪರವಡೀ । ಕಾಳ ಝೋಡಿ ನಿಜಸತ್ತಾ ॥೧೫೫॥ ಜೇವೀ ಕಾ ವಾಳಲಿಯಾ ಶೇತ । ಕೃಷಿವಳು ಮಳೂ ಲಾಗೇ ಸಮಸ್ತ । ತೇವೀ ವ್ಯಕ್ತಾಚೇ ಅವ್ಯಕ್ತ । ಕಾಳ ತ್ವರಿತ ಕರೂ ಲಾಗೇ ॥೧೫೬॥ ತೇಚ ಅವ್ಯಕ್ತ ಕರಿತೀ ಸ್ಥಿತೀ । ರಾಯಾ ಸಾಂಗೇನ ತುಜಪ್ರತೀ । ಕಾಳಾಚೇ ಕ್ಷೋಭಕ ಶಕ್ತೀ । ಪ್ರಳಯಾಚೇ ಪ್ರಾಪ್ತೀಪೂರ್ವೀ ಪಾವೇ ॥೧೫೭॥

ಶತವರ್ಷಾ ಹ್ಯನಾವೃಷ್ಟಿರ್ಭವಿಷ್ಯತ್ಯುಲ್ಬಣಾ ಭುವಿ । ತತ್ಕಾಲೋಪಚಿತೋಷ್ಣಾರ್ಕೋ ಲೋಕಾಂಸ್ತ್ರೀನ್ ಪ್ರತಪಿಷ್ಯತಿ ॥೯॥

ಅರ್ಥ: ವಿಶ್ವಪ್ರಳಯವು ಸನ್ನಿಹಿತವಾದಾಗ ನೂರು ವರ್ಷ ಮಳೆಯಾಗದೇ ಭೀಕರ ಕ್ಷಾಮವು ತಲೆದೋರುವುದು ,ನೂರು ವರ್ಷಗಳ ಕಾಲ ಸೂರ್ಯನ ತಾಪವು ಕ್ರಮೇಣ ಹೆಚ್ಚಾಗುತ್ತಾ ಹೋಗುತ್ತದೆ. ಆದರ ತಾಪಜ್ವಾಲೆಯಿಂದ ಮೂರು ಲೋಕಗಳೂ ತಪಿಸಲಾರಂಭಿಸುತ್ತವೆ.

ಕಾಳಕ್ಷೋಭಾಚಿಯೇ ದೃಷ್ಟಿ । ಶತವರ್ಷೇ ಅನಾವೃಷ್ಟೀ । ತೇಣೇ ಅತ್ಯುಲ್ಬಣೇ ಆಟೇ ಸೃಷ್ಟೀ । ಪೃಥ್ವೀಚ್ಯಾ ಪೋಟೀ ಕಾಂಹೀ ನುರೇ ॥೧೫೮॥

ಇಲ್ಲಿ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಲು ಬಾರದು, ಹಾಗೆಯೇ ಮುಂದಿಡಲೂ ಅವಕಾಶವಿರದು. ತನ್ನ ಕರ್ಮಗಳಿಂದ ಇವನು ಬಲವಾಗಿ ಕಟ್ಟಲ್ಪಟ್ಟಿರುವನು ಮತ್ತು ಪ್ರಳಯದ ಹೊಡೆತವು ಅವನ ಮಸ್ತಕದ ಮೇಲೆ ಬೀಳುವುದು ॥೧೪೮॥ ಇಲ್ಲಿಯವರೆಗೆ ಉತ್ಪತ್ತಿ ಮತ್ತು ಸ್ಥಿತಿಗಳ ಸಂಪೂರ್ಣ ಪ್ರಕರಣವನ್ನು ನಿನಗೆ ಹೇಳಿರುವೆನು. ಈಗ ಪ್ರಳಯದ ಲಕ್ಷಣಗಳನ್ನು ಹೇಳುವೆನು ಲಕ್ಷಕೊಟ್ಟು ಕೇಳು ॥೧೪೯॥

ಸೂರ್ಯೋದಯವಾಗಿ ದಿವಸವು ಮುಗಿಯಿತೆಂದರೆ, ರಾತ್ರಿಯು ತಡವಿಲ್ಲದೇ ಬರುವುದು. ಅದರಂತೆ ಉತ್ಪತ್ತಿ ಮತ್ತು ಸ್ಥಿತೀ ಮುಗಿಯಿತೆಂದರೆ ಪ್ರಳಯವು ನಿಶ್ಚಿತವಾಗಿ ಆಗುವುದು ॥೧೫೦॥ ಹೀಗೆ ಪ್ರಳಯ ಕಾಲವು ಸಮೀಪಿಸಿದಾಗ ಅನಾದಿ ಕಾಳವು ಕ್ಷುಬ್ಧಗೊಳ್ಳುವುದು ಮತ್ತು ಅದು ಮಹಾಭೂತಗಳ ಸಮೇತವಾಗಿ ಪೃಥ್ವಿಯನ್ನು ನಾಶಗೊಳಿಸಲು ಭಯಂಕರವಾದ ಪ್ರತಾಪ ಆರಂಭಿಸುವುದು ॥೧೫೧॥ ಬಿತ್ತಿದ ಹೊಲವು ಬೆಳೆಯಿತೆಂದರೆ ಬೇಸಿಗೆಯಲ್ಲಿ ತಾನಾಗಿಯೇ ಒಣಗುವುದು. ಅದರಂತೆ ಸೃಷ್ಟಿಯಲ್ಲಿ ಸ್ಥೂಲಾಕಾರದಿಂದ ಕಾಣುವ ವ್ಯಕ್ತ ವಸ್ತುಗಳನ್ನೆಲ್ಲ ಅವ್ಯಕ್ತಗೊಳಿಸುವುದು ॥೧೫೨॥ ಹುಲ್ಲು ಇತ್ಯಾದಿ ನಾನಾ ಪ್ರಕಾರದ ಬೀಜಗಳು ಭೂಮಿಯ ಮೇಲೆ ಬಿದ್ದಿರುವುವು. ಅವು ಮಳೆಗಾಲದಲ್ಲಿ ತಾನಾಗಿಯೇ ಹುಟ್ಟುವುವು. ಇವೇ ಶರದ್‌ಋತುವಿನಲ್ಲಿ ಅನೇಕ ರೂಪಗಳಲ್ಲಿ ಫಲದ್ರೂಪವಾಗಿ ಪುಷ್ಪವಾಗುವುವು ॥೧೫೩॥ ಗ್ರೀಷ್ಮಋತುವಿನ ಕೊನೆಯಲ್ಲಿ ಇವುಗಳ ಫಲಗಳು, ಬೇರು ಸಹಿತವಾಗಿ ಅದೃಶ್ಯವಾಗುವುವು ಮತ್ತು ಇವುಗಳ ಬೀಜಗಳು ಭೂಮಿಯಲ್ಲಿ ಲೀನಗೊಳ್ಳುವುವು. ಇದರಂತೆಯೇ ಸಂಸಾರದ ಕಾಲಗತಿಯಾಗಿರುವುದು ॥೧೫೪॥ ವಸಂತಋತುವಿನ ಪೂರ್ವದಲ್ಲಿ ಮರಗಳ ಎಲೆಗಳು ಉದುರುವುವು. ಇದರಂತೆಯೇ ಬ್ರಹ್ಮಾದಿಕರ ಪ್ರಕಾರವಾಗಿರುವುದು. ಕಾಳವು ಅವರನ್ನು ಸಹ ತನ್ನ ಸತ್ತೆಯಿಂದ ನಷ್ಟಗೊಳಿಸುವುದು ॥೧೫೫॥ ಒಕ್ಕಲಿಗನು ಒಣಗಿದ ಹೊಲದ ಎಲ್ಲ ಬೆಳೆಯನ್ನು ಒಕ್ಕುವಂತೆ, ಕಾಳನು ವ್ಯಕ್ತವಾಗಿರುವ ಜಗತ್ತನ್ನು ಲಗುಬಗೆಯಿಂದ ಅವ್ಯಕ್ತಗೊಳಿಸುವನು ॥೧೫೬॥ ಹೇ ರಾಜನೇ, ಈ ಅವ್ಯಕ್ತಗೊಳಿಸುವ ಸ್ಥಿತಿ, ರೀತಿಗಳನ್ನು ನಿನಗೆ ಹೇಳುವೆ. ಕಾಳದ ಕ್ಷೋಭಗೊಳಿಸುವ ಶಕ್ತಿಯು ಪ್ರಳಯದ ಪೂರ್ವವೇ ಪ್ರಕಟವಾಗುವುದು ॥೧೫೭॥

ಕಾಳಶಕ್ತಿಯು ಕ್ಷುಬ್ಧಗೊಳ್ಳಲು ನೂರುವರ್ಷಕಾಲ ಮಳೆಯಾಗದೇ, ಅದರಿಂದ ಮಹಾಸಂಕಟ ಒದಗಿ ಸೃಷ್ಟಿಯ ಸಂಹಾರವಾಗುವುದು. ಪೃಥ್ವಿಯ ಮೇಲೆ ಆಗ ಏನೂ ಉಳಿಯುವುದಿಲ್ಲ ॥೧೫೮॥

ಪ್ರಾಣಿಮಾತ್ರ ನಿಮಾಲೇ ದೇಖ । ವನೇ ವಾಳೂನಿ ಜಾಹಲೀ ರಾಖ । ಬಿಂದುಮಾತ್ರ ನ ಮಿಳೇ ಉದಕ । ಯಾಪರೀ ಲೋಕ ಆಟಿಲೇ ಕಾಳೇ ॥೧೫೯॥ ತಂವ ದ್ವಾದಶಾದಿತ್ಯಮೇಳಾ । ಮಂಡಳೀ ಝಾಲಾ ಏಕವೇಳಾ । ತೇಥೀಂಚ್ಯಾ ಕಿರಣೀ ಪ್ರಬಳಾ । ತ್ರೈಲೋಕ್ಯಾ ಸಕಳಾ ಸಂತಪ್ತ ಕೇಲೇ ॥೧೬೦॥ ಯೇತೀ ಉಷ್ಣಾಚಿಯಾ ಆಹ್ಯಾ । ಹೋತೀ ಪರ್ವತಾಂಚ್ಯಾ ಲಾಹ್ಯಾ । ತೇಣೇ ಧರಾತಳ ಲವಲಾಹ್ಯಾ । ಭಸ್ಮ ಝಾಲೇ ರಾಯಾ ಮಹಾಉಷ್ಣೇ ॥೧೬೧॥

ಪಾತಾಲತಲಮಾರಭ್ಯ ಸಂಕರ್ಷಣಮುಖಾನಲಃ । ದಹನ್ನೂರ್ಧ್ವಶಿಖೋ ವಿಷ್ವಗ್ ವರ್ಧತೇ ವಾಯುನೇರಿತಃ ॥೧೦॥

ಅರ್ಥ:- ಶೇಷನ ಮುಖದಿಂದ ಹೊರಹೊಮ್ಮಿ, ಪಾತಾಳಲೋಕದಿಂದ ಆರಂಭವಾಗುವ ಅಗ್ನಿಯು ಉಲ್ಬಣಿಸುತ್ತದೆ. ವಾಯುವಿನಿಂದ ಪ್ರಚೋದಿತವಾಗಿ ಅದರ ಜ್ವಾಲೆಗಳು ಊರ್ಧ್ವಮುಖವಾಗಿ ಚಿಮ್ಮುತ್ತವೆ. ಎಲ್ಲ ದಿಕ್ಕುಗಳಲ್ಲಿ ಎದುರಾದುದೆಲ್ಲವನ್ನೂ ಅದು ದಹಿಸುತ್ತಾ ಹೋಗುತ್ತದೆ.

ಉಷ್ಣೇ ತಾಪಲೇ ಪೃಥ್ವೀತಳ । ಪೋಳಲೇ ಶೇಷಫಣಾಮಂಡಳ । ತೈ ಸಹಸ್ರಮುಖೇ ವಿಷಾನಳ । ಅಗ್ನಿಕಲ್ಲೋಳ ವಮಿತಾ ಝಾಲಾ ॥೧೬೨॥ ಪಾತಾಳತಳೀಹೂನಿ ದೇಖಾ । ಊರ್ಧ್ವಮುಖ ಅಗ್ನಿಶಿಖಾ । ಜಾಳೀತಚಿ ತಿಹೀ ಲೋಕಾ । ಉಠಿಲಾ ಭಡಕಾ ಅನಿವಾರ ॥೧೬೩॥ ಕ್ಷೋಭೇ ದಿಧಲಾ ಫೂತ್ಕಾರಾ । ಸಹಸ್ರಮುಖೇ ಸುಟಲಾ ವಾರಾ । ತೋ ಸಾಹ್ಯ ಝಾಲಾ ತ್ಯಾ ವೈಶ್ವಾನರಾ । ಜಾಳೀತ ದಿಗಂತರಾ ವಾಢಲಾ ವಣವಾ ॥೧೬೪॥

ಸಾಂವರ್ತಕೋ ಮೇಘಗಣೋ ವರ್ಷತಿ ಸ್ಮ ಶತಂ ಸಮಾಃ । ಧಾರಾಭಿರ್ಹಸ್ತಿಹಸ್ತಾಭಿರ್ಲೀಯತೇ ಸಲಿಲೇ ವಿರಾಟ್ ॥೧೧॥

ಅರ್ಥ: ಸಂವರ್ತಕವೆಂಬ ಮೇಘ ಸಮೂಹಗಳು ನೂರುವರ್ಷಗಳಕಾಲ ಧಾರಾಕಾರವಾಗಿ ಮಳೆಗರೆಯುತ್ತವೆ. ಆನೆಯ ಸೊಂಡಿಲಿನ ಗಾತ್ರದ ಮಳೆಹನಿಗಳು ಪ್ರವಾಹದಂತೆ ಸುರಿಯುತ್ತವೆ. ಈ ಪ್ರಳಯ ವರ್ಷವು ಸಮಸ್ತ ಬ್ರಹ್ಮಾಂಡವನ್ನೇ ನೀರಿನಲ್ಲಿ ಮುಳಿಗಿಸಿಬಿಡುತ್ತದೆ.

ಸ್ವರ್ಗ ಆಣಿ ಪಾತಾಳತಳಾ । ಕವಳೂನಿ ಉಠಿಲ್ಯಾ ಅಗ್ನಿಜ್ವಾಳಾ । ತಂವ ಪ್ರಳಯಕರ್ತ್ಯಾ ಮೇಘಮಾಳಾ । ಕ್ಷೋಭಲ್ಯಾ ತ್ಯಾ ಕಾಳಾ ಅತಿದುರ್ಧರಾ ॥೧೬೫॥ ಮ್ಹಣಾಲ ತೇಥ ಮೋಠಮೋಠೇ । ವರ್ಷೋ ಲಾಗಲೇ ಥೇಂಬುಟೇ । ತೈಸೇ ನವ್ಹೇ ಗಾ ಕಡಕಡಾಟೇ । ಏಕೀ ಧಾರ ಸುಟೇ ಅನಿವಾರ ॥೧೬೬॥ ಇತರ ಪರ್ಜನ್ಯಾಚ್ಯಾ ಧಾರಾ । ತ್ಯಾ ತೈಶಾ ನವ್ಹತೀ ನೃಪವರಾ । ಐಕ ಪ್ರಮಾಣಾಚ್ಯಾ ನಿರ್ಧಾರಾ । ತೋ ಸಮಯೋ ಮಹಾವೀರಾ ಅತಿದುಸ್ತರ ॥೧೬೭॥ ಜೈಸೀ ಕಾ ಮದಗಜಾಚೀ ಸೋಂಡ । ತೈಶಾ ಧಾರಾ ಅತಿಪ್ರಚಂಡ । ಶತ ವರ್ಷೇವರೀ ಅಖಂಡ । ಪರ್ಜನ್ಯ ವಿತಂಡ ಪೈ ವರ್ಷೇ ॥೧೬೮॥

ಪ್ರಾಣಿಗಳೆಲ್ಲವೂ ಸತ್ತುಹೋಗುವುವು. ಅರಣ್ಯಗಳು ಸುಟ್ಟು ಬೂದಿಯಾಗುವುವು. ಒಂದು ಹನಿ ನೀರು ಸಹ ಸಿಗದಾಗುವುದು. ಈ ಪ್ರಕಾರವಾಗಿ ಕಾಲವು ಎಲ್ಲ ಜನರ ಸಂಹಾರ ಮಾಡುವುದು ॥೧೫೯॥ ಇಷ್ಟರಲ್ಲಿ ಹನ್ನೆರಡು ಸೂರ್ಯರ ಸಮುದಾಯವು ಆಕಾಶ ಮಂಡಲದಲ್ಲಿ ಒಂದುಗೂಡಿದಾಗ, ಅವುಗಳ ಪ್ರಖರವಾದ ಕಿರಣಗಳಿಂದ ಮೂರು ಲೋಕಗಳೂ ಸಂತಪ್ತವಾಗುವುವು ॥೧೬೦॥ ಬಿಸಿಲಿನ ಭಯಂಕರ ತಾಪದಿಂದ ಪರ್ವತಗಳು ಸುಟ್ಟು ಅರಳಾಗಿ ಹಾರುವುವು ಮತ್ತು ಹೇ ರಾಜನೇ, ಭಯಂಕರವಾದ ಈ ಅಗ್ನಿತಾಪದಿಂದ ಭೂಮಂಡಲವು ಬಲು ಬೇಗ ಭಸ್ಮವಾಗಿಬಿಡುವುದು ॥೧೬೧॥

ಈ ಉಷ್ಣತೆಯಿಂದ ಪೃಥ್ವಿತಳವು ಕಾಯುವುದು. ಆದರಿಂದ ಶೇಷನ ಹೆಡೆಯ ಸಮೂಹವು ಸುಡಹತ್ತುವುವು. ಆಗ ಶೇಷನು ತನ್ನ ಸಹಸ್ರಮುಖಗಳಿಂದ ವಿಷದ ಅಗ್ನಿಜ್ವಾಲೆಯನ್ನು ವಾಂತಿಮಾಡಿಕೊಳ್ಳುವನು ॥೧೬೨॥ ಈ ಅಗ್ನಿಜ್ವಾಲೆಯು ನಿಜವಾಗಿಯೂ ಪಾತಾಳದ ಕೆಳಗಿನಿಂದ ಮೇಲ್ಗಡೆ ಹತ್ತಿಕೊಂಡು ತ್ರಿಭುವನಕ್ಕೂ ಸುಡುತ್ತ ಸಾಗುವುದು. ಆಗ ಅನಿವಾರ್ಯವಾಗಿ ಜ್ವಾಲೆಗಳು ಭಡಕಾಯಿಸುವುವು ॥೧೬೩॥ ಶೇಷನು ಅತಿಕೋಪದಿಂದ ಫೂತ್ಕಾರ ಮಾಡುವನು. ಆದರಿಂದ ಪ್ರಚಂಡವಾದ ವಾಯುವು ಉತ್ಪನ್ನವಾಗಿ, ಅಗ್ನಿಗೆ ಸಹಾಯವಾಗಿ ದಶದಿಕ್ಕುಗಳನ್ನು ದಹಿಸುತ್ತ ಇನ್ನೂ ಅತ್ಯಧಿಕವಾಗಿಯೇ ಪ್ರಜ್ವಲಿಸುವುದು ॥೧೬೪॥

ಸ್ವರ್ಗದಿಂದ ಹಿಡಿದು ಪಾತಾಳದವರೆಗೂ ಈ ಅಗ್ನಿಯಜ್ವಾಲೆಗಳು ಏಳುವುವು. ಆಗ ಪ್ರಳಯಕರ್ತ ಮೇಘಪಂಕ್ತಿಯು ಸಹ ಈ ಪ್ರಸಂಗದಲ್ಲಿ ಕ್ಷುಬ್ಧಗೊಳ್ಳುವುದು ॥೧೬೫॥ ಆಗ ಮಳೆಯು ದೊಡ್ಡ ದೊಡ್ಡ ಹನಿಗಳಿಂದ ಕೂಡಿರಬಹುದೆಂದು ತಿಳಿಯ ಬೇಡಿರಿ. ಅತಿ ದೊಡ್ಡ ಕಡಕಡಾಟ ಗರ್ಜನೆಯಾಗಿ ಒಂದೇ ಸವನೆ ಪ್ರಚಂಡವಾದ ಒನಕೆಯ ಗಾತ್ರದಷ್ಟು (ಮುಸಲಧಾರಾ) ಮಳೆಯು ಸುರಿಯುವುದು ॥೧೬೬॥ ಹೇ ರಾಜನೇ, ಇತರ ಮಳೆಗಳಂತೆ ಈ ಮಳೆಯು ಇರದೇ, ಅದರ ಪ್ರಮಾಣವು ಹೇಗೆ ಎಷ್ಟಿರುವುದೆಂಬುದು ಹೇಳುವೆ ಕೇಳು. ಹೇ ವೀರಶ್ರೇಷ್ಠನೇ, ನಿಜವಾಗಿಯೂ ಈ ಪ್ರಸಂಗವು ಅತ್ಯಂತ ಕಠಿಣವಾಗಿರುವುದು ॥೧೬೭॥ ಮದವೇರಿದ ಆನೆಯ ಸೊಂಡಿಲಿನ ಗಾತ್ರದಷ್ಟು ಈ ಪ್ರಳಯ ಮೇಘದ ಧಾರೆಗಳು ಅತ್ಯಂತ ಪ್ರಚಂಡವಾಗಿರುವುವು ಮತ್ತು ಇಂತಹ ಮಳೆಯು ಅಖಂಡವಾಗಿ ಒಂದು ನೂರು ವರ್ಷಗಳ ಕಾಲ ಧುಮಧುಮಿಸುತ್ತ ಸುರಿಯುವುದು ॥೧೬೮॥

ವಿಜು ನಿಜತೇಜೇ ನಭ ಜಾಳೀ । ಕಡಕಡಾಟೇ ದೇ ಆರೋಳೀ । ಕಾಳಾಚೀ ಬೈಸೇ ದಾಂತ ಖಿಳೀ । ಐಸಾ ಪ್ರಲಯಕಾಳೀ ಮೇಘ ಖವಳೇ ॥೧೭೯॥ ತೇಣೇ ಉಲಥಲೇ ಜಳ ಸೈಂಘ । ಜೇಥೋನಿ ವರ್ಷತ ಹೋತೇ ಮೇಘ । ತ್ಯಾಂತೇಹೀ ವಿರವೂನಿ ಸಾಂಗ । ಜಳಮಯ ಚಾಂಗ ತ್ರೈಲೋಕ್ಯ ಝಾಲೇ ॥೧೮೦॥ ಅನಿವಾರ ವರ್ಷತಾ ವೇಗ । ಜೇಥೇ ಮೇಘಾಂಚೇಹೀ ವಿರೇ ಅಂಗ । ಯಾ ನಾವ ''ಸಾಂವರ್ತಕ'' ಮೇಘ । ಅತಿಅಮೋಘ ವರ್ಷಾವೋ ॥೧೮೧॥ ತೀರ್ಥ ಕ್ಷೇತ್ರ ಪವಿತ್ರೋದಕ । ಸರಿತಾ ಸಮುದ್ರ ಝಾಲೇ ಏಕ । ಹಾರಪಲೇ ಚಂದ್ರಸೂರ್ಯಾದಿಕ । ತಿನೀ ಲೋಕ ಬುಡಾಲೇ ॥೧೮೨॥ ಐಶಿಯಾ ಏಕಾರ್ಣವಾಚೇ ಠಾಯೀ । ವಿರಾಟ ವಿರಾಲಾ ಗಾ ಪಾಹೀ । ಸಾಕಾರ ಉರೇ ಐಸೇ ಕಾಂಹೀ । ಉರಲೇ ನಾಹೀ ನೃಪನಾಥಾ ॥೧೮೩॥

ತತೋ ವಿರಾಜಮುತ್ಸೃಜ್ಯ ವೈರಾಜಃ ನೃಪ । ಅವ್ಯಕ್ತಂ ವಿಶತೇ ಸೂಕ್ಷ್ಮಂ ನಿರಿಂಧನ ಇವಾನಲಃ ॥೧೨॥

ಅರ್ಥ :- ಹೇ ರಾಜನೇ, ಆಗ ಇಂಧನವಿಲ್ಲದೇ ಅಗ್ನಿಯು ಆರಿಹೋಗುವಂತೆ ವಿರಾಟ ಪುರುಷ ಬ್ರಹ್ಮನು ತನ್ನ ಬ್ರಹ್ಮಾಂಡ ಶರೀರವನ್ನು ಬಿಟ್ಟು ಸೂಕ್ಷ್ಮ ರೂಪವನ್ನು ಧರಿಸಿ ಅವ್ಯಕ್ತದಲ್ಲಿ ಲೀನನಾಗುವನು. ಇದು ಭಗವಂತನ ಮಾಯೆಯಾಗಿರುವುದು.

ಪ್ರಳಯಕಾಳೀ ಅತಿಗಹಿಂಸು । ಅಗಾಧ ಉಸಳೇ ಜಳೋಲ್ಹಾಸು । ಸ್ಥೂಳಾಚಾ ಕರಿತಾ ನಾಶು । ವಿರೇ ನಿಃಶೇಷು ವಿರಾಟು ॥೧೮೪॥ ವಿರಾಟಾಚಾ ವೈರಾಜ ಪುರುಷು । ತೋ ಅವ್ಯಕ್ತೀ ಕರೀ ಪ್ರವೇಶು । ಜೇವೀ ಇಂಧನನಾಶೇ ಹುತಾಶು । ಕರೀ ರಹಿವಾಸು ನಿಜಕಾರಣೇ ॥೧೮೫॥ ಜೇ ಬ್ರಹ್ಮಲೋಕ ನಿವಾಸೀ ಹೋತೀ । ತ್ಯಾಂಸೀ ಮಹಾಪ್ರಳಯಾಚೇ ಅಂತೀ । ಬ್ರಹ್ಮಾ ಸವೇ ಸರ್ವಾಂಸೀ ''ಕ್ರಮಮುಕ್ತೀ'' । ಐಸೇ ಸ್ಮೃತಿಶ್ರುತೀಂಚೇ ದೃಢ ವಾಕ್ಯ ॥೧೮೬॥ ''ವೈರಾಜ - ಪುರುಷ'' ನಾಮ ವದಂತೀ । ಹಿರಣ್ಯಗರ್ಭಾತೇ ಮ್ಹಣತೀ । ತ್ಯಾಸೀ ಪ್ರಳಯೀ ಪ್ರವೇಶು ಅವ್ಯಕ್ತೀ । ತೈ ಇತರಾಂಚೀ ಗತಿ ಶ್ರುತಿವಾಕ್ಯ ಕೈಸೀ ॥೧೮೭॥ ವಿದೇಹೇ ಪುಶಿಲೀ ಮಾಯೇಚೀ ಸ್ಥಿತೀ । ತೇ ಮಾಯೇಚೀ ಐಶೀ ದುರ್ಧರ ಶಕ್ತೀ । ಜೇ ನ ಕರಿತೀ ಭಗವದ್ಭಕ್ತೀ । ತ್ಯಾ ಬ್ರಹ್ಮಾ ಸವೇ ಮುಕ್ತೀ ಘಡೋ ನೇದೀ ॥೧೮೮॥ ಜಾಲಿಯಾ ಬ್ರಹ್ಮಸದನಪ್ರಾಪ್ತೀ । ನ ಕರಿತಾ ಭಗವದ್ಭಕ್ತೀ । ಅತಿಶಯೇ ದುರ್ಲಭ ಮುಕ್ತೀ । ಭಕ್ತಿಪಾಶೀ ಮುಕ್ತೀ ದಾಸೀ ಜೈಸೀ ॥೧೮೯॥ ನ ಕರಿತಾ ಭಗವದ್ಭಜನ । ಬ್ರಹ್ಮಾಸೀಹೀ ಮುಕ್ತಿ ನವ್ಹೇ ಜಾಣ । ಮಾ ಇತರಾಂಚಾ ಜ್ಞಾನಾಭಿಮಾನ । ಪುಸೇ ಕೋಣ ಪರಮಾರ್ಥೀ ॥೧೯೦॥

ಮಿಂಚುಗಳು ತಮ್ಮ ತೇಜದಿಂದ ಆಕಾಶವೆಲ್ಲವನ್ನೂ ಸುಟ್ಟುಹಾಕುವುವು. ಇವುಗಳ ಕಡಕಡಾಟದ ಗರ್ಜನೆಯಿಂದ ಕಾಲನು ಬಲು ಬೆದರಿ ಬಾಯಿ ಮುಚ್ಚಿಕೊಳ್ಳುವನು ॥೧೭೯॥ ಇದರಿಂದ ಅಪಾರವಾಗಿ ಜಲಸಂಚಯವಾಗುವುದು. ಅದು ಎಷ್ಟೆಂದರೆ ಎಲ್ಲಿಂದ ಮೇಘವು ಮಳೆಗರೆಯುವುದೋ, ಅದನ್ನೇ ಜಲವು ನುಂಗಿ ಮೂರು ಲೋಕಗಳೂ ಜಲಮಯವಾಗುವುವು ॥೧೮೦॥ ಅನಿವಾರ್ಯವಾದ ಈ ವೃಷ್ಟಿಯ ಯೋಗದಿಂದ ಮೇಘದ ಅಂಗವೇ ಕರಗಿ ಹೋಗುವುದು, ಅಂತಹ ಮೇಘಕ್ಕೆ ''ಸಾಂವರ್ತಕ ಮೇಘ''ವೆಂದು ಹೇಳುವರು. ಇದರ ವೃಷ್ಟಿಯು ಅತ್ಯಂತ ಅದ್ಭುತವಾಗಿರುವುದು ॥೧೮೧॥ ಆಗ ತೀರ್ಥಗಳು, ಕ್ಷೇತ್ರಗಳು, ಪವಿತ್ರೋದಕಗಳು, ನದಿಗಳು, ಸಮುದ್ರಗಳು ಇವೆಲ್ಲವೂ ಒಂದೇ ಆಗಿಬಿಡುವುವು. ಚಂದ್ರಸೂರ್ಯಾದಿಕ ಸಮೇತವಾಗಿ ಮೂರೂ ಲೋಕಗಳು ಈ ಜಲದಲ್ಲಿ ಮುಳುಗಿಬಿಡುವುವು ॥೧೮೨॥ ಅರೇ, ಇಂತಹ ಐಕ್ಯ ಸಮುದ್ರದಲ್ಲಿ ಪರಮೇಶ್ವರನ ವಿರಾಟ್ ದೇಹಸಹಿತವಾಗಿ ಕರಗಿ ಹೋಗುವುದು. ಹೇ ರಾಜನೇ, ಇಲ್ಲಿ ನೋಡು, ಆಗ ಆಕಾರವುಳ್ಳ ಯಾವ ಪದಾರ್ಥವೂ ಯಾವುದೊಂದೂ ಉಳಿಯುವುದಿಲ್ಲ ॥೧೮೩॥

ಪ್ರಳಯಕಾಲದಲ್ಲಿ ಮಹಾಭಯಂಕರ ಮತ್ತು ಪ್ರಚಂಡವಾದ ನೀರಿನ ಪ್ರವಾಹವು ಉಕ್ಕೇರುವುದು. ಮತ್ತು ಅದು ಸಂಪೂರ್ಣವಾಗಿ ದೃಶ್ಯ ಪದಾರ್ಥಗಳ ನಾಶಮಾಡಿಬಿಡುವುದು. ಆಗ ವಿರಾಟ್ ಪುರುಷನ ಶರೀರವು ಸಹ ನಿಃಶೇಷವಾಗಿ ಕರಗಿಬಿಡುವುದು ॥೧೮೪॥ ಕಟ್ಟಿಗೆ (ಉರುವಲು) ಮುಗಿಯಿತೆಂದರೆ ಅಗ್ನಿಯು ಹೇಗೆ ತನ್ನ ಪೂರ್ವಸ್ವರೂಪದಲ್ಲಿ ಹೋಗುವುದೋ, ಅದರಂತೆ ವಿರಾಟ್ ಶರೀರದ ಅಭಿಮಾನಿ ''ವೈರಾಜ'' ಪುರುಷನು ಅವ್ಯಕ್ತದಲ್ಲಿ ಪ್ರವೇಶಿಸುವನು ॥೧೮೫॥ ಬ್ರಹ್ಮಲೋಕದಲ್ಲಿ ಇರುವರೆಲ್ಲರಿಗೂ ಪ್ರಳಯಕಾಲದ ಕೊನೆಯಲ್ಲಿ ಬ್ರಹ್ಮದೇವನ ಜೊತೆಯಲ್ಲಿ ಕ್ರಮವಾಗಿ ಮುಕ್ತಿಯು ದೊರೆಯುವುದು. ಹೀಗೆ ಶ್ರುತಿಸ್ಮೃತಿಗಳ ನಿಶ್ಚಿತ ವಾಕ್ಯಗಳಿರುವವು ॥೧೮೬॥ ''ವೈರಾಜಪುರುಷ'' ನೆಂಬುವವನೇ ''ಹಿರಣ್ಯಗರ್ಭ''ನಾಗಿರುವನು. ಈತನಿಗೂ ಸಹ ಪ್ರಳಯಕಾಲದಲ್ಲಿ ಅವ್ಯಕ್ತದೊಳಗೆ ಪ್ರವೇಶ ಮಾಡಬೇಕಾಗುವುದು. ಹಾಗಾದರೆ, ಬ್ರಹ್ಮದೇವನ ಜೊತೆಯಲ್ಲಿ ಅಲ್ಲಿಯ ದೇವತೆಗಳಿಗೆ ಮುಕ್ತಿಯಾಗುವುದೆಂದು ಶ್ರುತಿಗಳು ಸಾರಿವೆ. ಈ ವಿಚಾರದ ಬಗ್ಗೆ ಏನೆಂದು ಹೇಗೆ ತಿಳಿಯಬೇಕು? ॥೧೮೭॥ ಅಂತರಿಕ್ಷನು ಹೇಳುವನು, ಜನಕರಾಜನು ಮಾಯೆಯ ಸ್ವರೂಪವನ್ನು ಕೇಳಿದನು. ಈ ಮಾಯೆಯ ಶಕ್ತಿಯು ಅತ್ಯಂತ ದುರ್ಧರವಾಗಿರುವುದು. ಭಗವದ್ಭಕ್ತಿಯನ್ನು ಮಾಡದಿದ್ದರೆ, ಬ್ರಹ್ಮದೇವನ ಜೊತೆಯಲ್ಲಿಯೂ ಮುಕ್ತಿಯು ದೊರೆಯದು ॥೧೮೮॥ ಬ್ರಹ್ಮಲೋಕದ ಪ್ರಾಪ್ತಿಯಾದರೂ ಸಹ ಭಗವದ್ಭಕ್ತಿಯನ್ನು ಆಚರಿಸದಿದ್ದರೆ, ಅವರಿಗೆ ಮುಕ್ತಿಯು ಅತ್ಯಂತ ದುರ್ಲಭವಾಗಿರುವುದು. ಭಕ್ತರಲ್ಲಿ ಮಾತ್ರ ಮುಕ್ತಿಯು ದಾಸಿಯಂತೆ ಇರುವುದು ॥೧೮೯॥ ಅಹೋ, ಭಗವದ್ಭಜನೆಯನ್ನು ಮಾಡದಿದ್ದರೆ ಬ್ರಹ್ಮದೇವನಿಗೂ ಮುಕ್ತಿಯು ದೊರೆಯದು. ಹೀಗಿರುವಾಗ್ಗೆ ಪರಮಾರ್ಥದಲ್ಲಿ ಇತರರ ಜ್ಞಾನಾಭಿಮಾನಗಳಿಗೆ ಕೇಳುವವರಾರು? ॥೧೯೦॥

ಜ್ಯಾಸೀ ಜೇಥ ಪದಾಭಿಮಾನ । ತ್ಯಾಸೀ ತೇಂಚಿ ದೃಢ ಬಂಧನ । ಯಾಲಾಗೀ ದುರ್ಲಭಪಣ । ಮೋಕ್ಷಾಸೀ ಜಾಣ ತಿಹೀ ಲೋಕೀ ॥೧೮೧॥ ಸಾಂಡೋನಿಯಾ ಪದಾಭಿಮಾನ । ಅಂಗೇ ಸದಾಶಿವೂ ಆಪಣ । ನಿತ್ಯ ವಸವೀ ಮಹಾತ್ಮಶಾನ । ಭಗವದ್ಭಜನೀ ನಿಜನಿಷ್ಠಾ ॥೧೮೨॥ ಯಾಲಾಗೀ ಜ್ಯಾಂಸೀ ಬ್ರಹ್ಮಲೋಕಪದಪ್ರಾಪ್ತೀ । ತೇಥಹೀ ಜೇ ಕರಿತೀ ಭಗವದ್ಭಕ್ತೀ । ತ್ಯಾಂಸೀಚ ಪ್ರಳಯಾಚ್ಯಾ ಅಂತೀ । ಪರಮಮುಕ್ತೀ ನೃಪವರ್ಯಾ ॥೧೮೩॥ ಬ್ರಹ್ಮಲೋಕೀ ಜ್ಯಾ ನಾಹೀ ಹರಿಭಕ್ತೀ । ತೇಹೀ ಪಾವತೀ ಪುನರಾವೃತ್ತೀ । ಐಶೀ ಮಾಯೇಚಿ ದುರ್ಧರ ಶಕ್ತೀ । ನ ಕರಿತಾ ಭಕ್ತೀ, ಮುಕ್ತಿ ಕೈಂಚೀ ॥೧೮೪॥ ಯೇಚಿ ಅರ್ಥೀ ಬ್ರಹ್ಮಾಚೇ ವಚನ । ದೋ ಶ್ಲೋಕೀ ಬೋಲಿಲಾ ಆಪಣ । ಜ್ಞಾನಾಭಿಮಾನಿಯಾ ಪತನ । ಭಕ್ತಾ ಭವಬಂಧನ ಕದಾ ನ ಬಾಧೀ ॥೧೮೫॥

ಬ್ರಹ್ಮಾದಿಕೃತಗರ್ಭಸ್ತುತಿ ಶ್ಲೋಕಾ:-

ಯೇಽನ್ಯೇಽರವಿಂದಾಕ್ಷ ವಿಮುಕ್ತಮಾನಿನಿಸ್ತ್ವಯ್ಯಸ್ತಭಾವಾದವಿಶುದ್ಧ ಬುದ್ಧಯಃ ।
ಆರುಹ್ಯಾ ಕೃಚ್ಛ್ರೇಣ ಪರಂ ಪದಂ ತತಃ ಪತಂತ್ಯಧೋಽನಾ ಹೃತಯುಷ್ಮದಂಘ್ರಯಃ ॥೧॥

ತಥಾ ನ ತೇ ಮಾಧವ ತಾವಕಾಃ ಕ್ವಚಿದ್ಭ್ರಶ್ಯಂತಿ ಮಾರ್ಗಾತ್ತ್ವಯಿಬದ್ಧಸೌಹೃದಾಃ ।
ತ್ವಯಾಭಿಗುಪ್ತಾ ವಿಚರಂತಿ ನಿರ್ಭಯಾ ವಿನಾಯಕಾನೀಕಪಮೂರ್ಧಸು ಪ್ರಭುಃ ॥೨॥

ನ ಕರಿತಾ ಭಗವದ್ಭಕ್ತೀ । ಸಜ್ಞಾನಾಹೀ ನಾತುಡೇ ಮುಕ್ತೀ । ತೇಚಿ ಅರ್ಥೀಚ್ಯಾ ದೃಷ್ಟಾಂತೀ । ಬ್ರಹ್ಮಾಚೀ ಉಕ್ತೀ ದಾವಿಲೀ ಯೇಥೇ ॥೧೮೬॥ ಜನ್ಮಾ ಮಾಜೀ ಬ್ರಾಹ್ಮಣಪಣ । ತೇಹೀ ವೇದಶಾಸ್ತ್ರಸಂಪನ್ನ । ನ ಕರಿತಾ ಭಗವದ್ಭಜನ । ಅಚೂಕ ಪತನ ತಯಾಸೀ ॥೧೮೭॥ ಭಕ್ತಾ ಸರ್ವಾಭೂತೀ ಭಗವದ್ಭಾವೋ । ತೇಥ ವಿಘ್ನಾಂಸೀ ನಾಹೀ ಠಾವೋ । ತಯಾ ಅಪಾವಚಿ ಹೋಯ ಉಪಾವೋ । ಭಾವಾರ್ಥಾ ದೇವೋ ಸದಾ ಸಾಹ್ಯ ॥೧೮೮॥ ಭಕ್ತೀವೀಣ ಮುಕ್ತೀಚಾ ಸೋಸು । ಕರಿತಾ ಪ್ರಯತ್ನ ಪಡೇ ವೋಸು । ಅಸೋ ಹೇ ವೈರಾಜಪುರುಷು । ಕರೀ ಪ್ರವೇಶು ಅವ್ಯಕ್ತೀ ॥೧೮೯॥ ಅವ್ಯಕ್ತೀ ವೈರಾಜಾಚಾ ಪ್ರವೇಶು । ಹೋತಾಂಚಿ ಮಹಾಭೂತವಿಲಾಸು । ಹೋಲಾಗೇ ಭೂತಾ ಹ್ರಾಸು । ತೋ ಅನುಪ್ರವೇಶು ಐಕ ರಾಯಾ ॥೧೯೦॥

ವಾಯುನಾ ಹೃತಗಂಧಾ ಭೂಃ ಸಲಿಲತ್ವಾಯ ಕಲ್ಪತೇ । ಸಲಿಲಂ ತದ್ಧೃತರಸಂ ಜ್ಯೋತಿಷ್ಟ್ವಾಯೋಪಕಲ್ಪತೇ ॥೩॥
ಹೃತರೂಪಂ ತು ತಮಸಾ ವಾಯೌ ಜ್ಯೋತಿಃ ಪ್ರಲೀಯತೇ । ಹೃತಸ್ಪರ್ಶೋಽವಕಾಶೇನ ವಾಯುರ್ನಭಸಿ ಲೀಯತೇ ॥

ಅರ್ಥ :- ವಾಯು, ಗಂಧ ಮತ್ತು ರಸ ಇವುಗಳ ಹರಣ ಮಾಡುವ, ಇದು ಪ್ರಸಿದ್ಧವಾಗಿರುವುದು. ಪ್ರಳಯವಾಯುವು ಪೃಥ್ವಿಯಲ್ಲಿನ ಗಂಧದ ಹರಣ ಮಾಡುವುದರಿಂದ ಅದರಲ್ಲಿಯ ವಿಶೇಷವು ನಷ್ಟವಾಗಿ ಅದು ಜಲದಲ್ಲಿ ನಷ್ಟವಾಗುವುದು. ಅದರಂತೆ ಜಲದಲ್ಲಿನ ರಸದ ಹರಣವಾದ್ದರಿಂದ ತೇಜದಲ್ಲಿ ಲೀನವಾಗುವುದು.

ಯಾರಿಗೆ ಯಾವ ಪದವಿಯ ಅಭಿಮಾನವಿರುವುದೋ, ಆತನಿಗೆ ಅದೇ ದೃಢವಾದ ಬಂಧನವಾಗುವುದು. ಆದ್ದರಿಂದ ಈ ತ್ರಿಭುವನದಲ್ಲಿ ಮೋಕ್ಷವು ದುರ್ಲಭವಾಗಿರುವುದು ॥೧೮೧॥ ಇದಕ್ಕಾಗಿಯೇ, ಶಂಕರನು ತನ್ನ ಕೈಲಾಸ ಪದವಿಯ ಅಭಿಮಾನವನ್ನು ಬಿಟ್ಟು ಮಹಾಸ್ಮಶಾನದಲ್ಲಿ ಅಂದರೆ, ಕಾಶೀಕ್ಷೇತ್ರದಲ್ಲಿ ಹಗಲು ರಾತ್ರಿ ಭಗವದ್ಭಜನೆಯಲ್ಲಿ ನಿಜ ನಿಷ್ಠೆಯಿಂದ ನಿರತನಾಗಿರುವನು ॥೧೮೨॥ ಆದ್ದರಿಂದ ಹೇ ನೃಪನಾಥನೇ, ಬ್ರಹ್ಮಲೋಕವು ಪ್ರಾಪ್ತವಾಗಿದ್ದರೂ ಸಹ ಅಲ್ಲಿಯೂ ಭಗವದ್ಭಕ್ತಿ ಮಾಡುವವರಿಗೆ ಮಾತ್ರ ಪ್ರಳಯದ ಅಂತ್ಯದಲ್ಲಿ ಪರಮ ಮುಕ್ತಿಯು ದೊರೆಯುವುದು ॥೧೮೩॥ ಬ್ರಹ್ಮಲೋಕದಲ್ಲಿದ್ದೂ ಹರಿಭಕ್ತಿಯನ್ನು ಮಾಡಲಾಗದವರು ಪುನರಾವೃತ್ತಿಯ ತಿರುಗುಣಿಯಲ್ಲಿ ಬೀಳುವರು. ಹೀಗೆ ಮಾಯೆಯ ಶಕ್ತಿಯು ಬಲು ದುರ್ಧರವಾಗಿರುವುದು. ತಾತ್ಪರ್ಯವೇನೆಂದರೆ ಭಕ್ತಿಯನ್ನು ಮಾಡದವನಿಗೆ ಮುಕ್ತಿಯು ಎಲ್ಲಿಯದು? ॥೧೮೪॥ ಇದೇ ಅರ್ಥದಲ್ಲಿ ಬ್ರಹ್ಮದೇವನ ವಚನವು (ಭಾಗವತದಲ್ಲಿ) ಎರಡು ಶ್ಲೋಕಗಳಲ್ಲಿರುವುದು. ಜ್ಞಾನಾಭಿಮಾನಿಗಳವರಿಗೆ ಪತನವಾಗುವುದು ಮತ್ತು ಭಕ್ತರಿಗೆ ಸಂಸಾರ ಬಂಧನವು ಎಂದೂ ಬಾಧಿಸಲಾರದು. ಹೀಗೆ ಇದರ ಭಾವಾರ್ಥವಾಗಿದೆ ॥೧೮೫॥

ಭಗವದ್ಭಕ್ತಿಯನ್ನು ಮಾಡದ ಜ್ಞಾನಿಗಳವರಿಗೂ ಮುಕ್ತಿಯು ದೊರೆಯಲಾರದು. ಇದೇ ಅರ್ಥದ ದೃಷ್ಟಾಂತಕ್ಕಾಗಿ ಬ್ರಹ್ಮದೇವನ ಭಾಷಣವನ್ನು ಮೇಲಿನ ಎರಡು ಶ್ಲೋಕಗಳಲ್ಲಿ ಕೊಟ್ಟಿದೆ ॥೧೮೬॥ ಬ್ರಾಹ್ಮಣ ಜನ್ಮವನ್ನು ಪಡೆದವರಾಗಿ, ಅದರಲ್ಲಿಯೂ ವೇದಶಾಸ್ತ್ರಸಂಪನ್ನರಾಗಿದ್ದರೂ ಭಗವದ್ಭಕ್ತಿಯನ್ನು ಮಾಡದಿದ್ದರೆ, ಅವರಿಗೆ ತಪ್ಪದೇ ಪತನವಾಗುವುದು ॥೧೮೭॥ ಭಕ್ತರಲ್ಲಿ ಸರ್ವಪ್ರಾಣಿ ಮಾತ್ರರಲ್ಲಿ ಭಗವದ್ಭಾವನೆಯೇ ಇರುವುದು. ಆದ್ದರಿಂದ ವಿಘ್ನಗಳಿಗೆ ಇಲ್ಲಿ ಸ್ಥಳವೇದೊರಕುವುದಿಲ್ಲ. ಕಾರಣ ವಿಘ್ನವೆಂದರೆ ಅಪಾಯವು ಆದರೆ ಅದೇ ಇವರಿಗೆ ಉಪಾಯವಾಗುವುದು. ಏಕೆಂದರೆ ಭಾವಿಕರಿಗೆ ದೇವರು ಸದಾಪಕಾಲದಲ್ಲಿ ಸಹಾಯ್ಯನಾಗಿರುವನು ॥೧೮೮॥ ಭಕ್ತಿಯನ್ನು ಬಿಟ್ಟು ಮುಕ್ತಿಯ ಅಪೇಕ್ಷೆಪಟ್ಟು ಪ್ರಯತ್ನಿಸಿದರೆ, ಅದು ನಿಷ್ಫಲವಾಗುವುದು. ಇದು ಇರಲಿ, ಈಗ ಆರಂಭಗೊಂಡಿರುವ ಪ್ರಳಯ ವಿಷಯಕ್ಕೆ ಹೇಳೋಣ. ವೈರಾಜಪುರುಷನು ಸಹ ಅವ್ಯಕ್ತದಲ್ಲಿ ಪ್ರವೇಶಿಸುವನು ॥೧೮೯॥ ವೈರಾಜನ ಪ್ರವೇಶವು ಅವ್ಯಕ್ತದಲ್ಲಾದಕ್ಷಣವೇ ಮಹಾಭೂತವಿಲಾಸ (ವಿನಾಶ) ಆರಂಭಗೊಳ್ಳುವುದು ಮತ್ತು ಭೂತಗಳ ಹ್ರಾಸವಾಗಹತ್ತುವುದು. ಹೇ ರಾಜನೇ, ಅವುಗಳ "ಅನುಪ್ರವೇಶ" ಅಂದರೆ ಒಂದರಲ್ಲಿ ಇನ್ನೊಂದು ಯಾವ ಅನುಕ್ರಮದಿಂದ ಲಯವಾಗುವುದೆಂಬುದನ್ನು ಹೇಳುವೆ, ಕೇಳು ॥೧೯೦॥

ಪ್ರಳಯವಾಯೂಚಾ ಕ್ಷೋಭಕ ಕ್ರೋಧು । ತೇಣೇ ಪೃಥ್ವೀಚಾ ಹರಿಲಾ ಗಂಧು । ತಂವ ತೇಹೀ ವಿರೋನಿಯಾ ಪ್ರಸಿದ್ಧು । ಏಕವದು ಜಳ ಜಾಹಲೇ ।।೧೯೧।। ಕ್ಷೋಭಲಾ ವಾಯು ಅಸಮಸಾಹಸ । ತೋ ಹರೀ ಜಳಾಚಾ ಜಳರಸ । ತೇವ್ಹಾ ಜಳಾಚಾ ಹೋಯಹ್ರಾಸ । ಸಾವಕಾಶ ಪ್ರಳಯಮಹಾತೇಜೀ ।।೧೯೨।। ತ್ಯಾ ತೇಜಾಚಾ ನಿಜಸಂಭ್ರಮು । ವಾಯುಬಳೇ ಗ್ರಾಸೀತ ತಮು । ತೇವ್ಹಾ ಪ್ರಳಯವಾಯು ಪರಮು । ಭರೋನಿ ವ್ಯೋಮು ಕೋಂದಾಟೇ ।।೧೯೩।। ತ್ಯಾ ಪ್ರಳಯವಾಯೂಚಾ ಸ್ಪರ್ಶ । ಚಪಳತೇಸೀ ಸರ್ವ ಗ್ರಾಸ । ಕರೂನಿ ಠಾಕೇ ಅವಕಾಶ । ತೇವ್ಹಾ ವಾಯೂತೇ ಆಕಾಶ ನಿಃಶೇಷ ಗ್ರಾಸೀ ।।೧೯೪।।

ಕಾಲಾತ್ಮನಾ ಹೃತಗುಣಂ ನಭ ಆತ್ಮನಿ ಲೀಯತೇ ।।೧೪।।
ಇಂದ್ರಿಯಾಣಿ ಮನೋಬುದ್ಧಿಃ ಸಹ ವೈಕಾರಿಕೈರ್ನೃಪ । ಪ್ರವಿಶಂತಿ ಹ್ಯಹಂಕಾರಂ ಸ್ವಗುಣೈರಹಮಾತ್ಮನಿ ।।೧೫।।

ಅರ್ಥ:- ತಮವು ರೂಪವನ್ನು ಮುಚ್ಚುವುದು, ಇದು ಪ್ರಸಿದ್ಧವಾಗಿದೆ. ಪ್ರಳಯಕಾಲದ ತಮವು ರೂಪದ ನಾಶ ಮಾಡಲು, ತೇಜವು ವಾಯುವಿನಲ್ಲಿ ಲೀನವಾಗುವುದು. ವಾಯುವಿನ ಕಾರಣವಾದ ಆಕಾಶವು ವಾಯುವಿನ ಸ್ಪರ್ಶಗುಣ ಹರಣ ಮಾಡುವುದರಿಂದ ಅದು ಆಕಾಶದಲ್ಲಿ ಲೀನವಾಗುವುದು. ಶಬ್ದದಿಂದ ಕಾಲನ ನಾಶವಾಗುವುದು. ಕಾಲರೂಪಿ ಆತ್ಮನು ಅಂದರೆ, ಈಶ್ವರನು ಈತನ ಗುಣದ ಹರಣ ಮಾಡಿರುವನು. ಹೀಗೆ ಆಕಾಶವು ತಾಮಸ ಅಹಂಕಾರದಲ್ಲಿ ಲೀನವಾಗುವುದು ।।೧೪।। ಇಂದ್ರಿಯಗಳು ಮತ್ತು ಬುದ್ಧಿ ರಾಜಸ ಅಹಂಕಾರದಲ್ಲಿ ಮತ್ತು ಮನವು ವೈಚಾರಿಕ ದೇಹ ಸಮೇತವಾಗಿ ಸಾತ್ವಿಕ ಅಹಂಕಾರದಲ್ಲಿ ಲೀನವಾಗುವುದು. ಈ ಪ್ರಕಾರವಾಗಿ ತನ್ನ ತ್ರಿವಿಧ ಕಾರ್ಯಸಹ ಅಹಂಕಾರವು ಮಹಾತತ್ವದಲ್ಲಿ ಲೀನವಾಗುವುದು. ಮತ್ತು ಕೊನೆಯಲ್ಲಿ ಆ ಮಹಾನ ಆತ್ಮವೂ ಪ್ರಕೃತಿಯಲ್ಲಿ ಲೀನವಾಗುವುದು. ಹೀಗೆ ತಿಳಿಯಬೇಕು.

ಆಕಾಶಾಚಾ ಜೋ ಶಬ್ದಗುಣ । ತೋ ಪ್ರಳಯಕಾಳು ಗಿಳೀ ಸಂಪೂರ್ಣ । ತಂವ ಕ್ಷೋಭಲಾ ತಾಮಸಾಭಿಮಾನ । ತೋ ಕರೀ ಪ್ರಾಶನ ಗಗನಾಚೇ ।।೧೯೫।। ದಶ ಇಂದ್ರಿಯಾಚಾ ಗೋಂದಳಾ । ರಾಜಸಾಭಿಮಾನೀ ರಿಘಾಲಾ । ಚಿತ್ತಚತುಷ್ಟಯಾಚಾ ಮೇಳಾ । ತೋ ಹೀ ಪ್ರವೇಶಲಾ ಸಾತ್ತ್ವಿಕಾಭಿಮಾನೀ ।।೧೯೬।। ಇಂದ್ರಿಯ ಅಧಿಷ್ಠಾತ್ರೀ ದೈವತೇ । ತೀಹೀ ಮಿಳೋನಿಯಾ ಸಮಸ್ತೇ । ಪ್ರವೇಶಲೀ ಸಾತ್ತ್ವಿಕಾತೇ । ಜಾಣ ನಿಶ್ಚಿತೇ ನೃಪನಾಥಾ ।।೧೯೭।। ತೇ ತಿನೀ ಅಹಂಕಾರ ತ್ರಿಗುಣೇಸೀ । ಪ್ರವೇಶತೀ ಮಹತತ್ತ್ವಾಸೀ । ಮಹತ್ತತ್ತ್ವ ಮಿಳೇ ಮಾಯೇಸೀ । ಜೇವೀ ಕನ್ಯಾ ಸಂತತೀಸೀ ಮಾಹೇರಾ ಯೇ ।।೧೯೮।। ಜೇವೀ ಕುಕಡೀಚೀ ಪಿಲೀ । ಕುಕಡೀ ಪಾಂಖಾತಳೀ ಘಾಲೀ । ಮಗ ತೇ ಸ್ವಯೇ ದಿಸೇ ಏಕಲೀ । ತೇವೀ ಮಾಯಾ ಉರಲೀ ಕಲ್ಪಾಂತೀ ।।೧೯೯।। ಏವಂ ಉತ್ಪತ್ತಿಸ್ಥಿತಿಪ್ರಳಯಾಂತ । ತ್ರಿವಿಧ ಭಾಗೇ ದಾವಿಲೀ ಯೇಥ । ತೇ ಗುಣಮಯೀ ಮಾಯಾ ನಿಶ್ಚಿತ । ಮಿಥ್ಯಾಭೂತ ಆಭಾಸೇ ।।೨೦೦।। ಜೇವೀ ಲೇಕುರೇ ಖೇಳತಾ ಖೇಳಾಸೀ । ದಿವಸಾ ಮ್ಹಣತೀ ಜಾಹಲೀ ನಿಶೀ । ತೇವೀಂಚಿ ಪೂರ್ಣಸ್ವರೂಪಾಪಾಶೀ । ದೇಖತೀ ಮಾಯೇಸೀ ತ್ರಿವಿಧ ಕಲ್ಪನಾ ।।೨೦೧।।

ಪ್ರಳಯವಾಯುವಿನ ಕ್ಷೋಭಕ ಕ್ರೋಧವು ಪೃಥ್ವಿಯ ಗಂಧವನ್ನು ಹರಣಮಾಡುವುದು. ಆಗ ಪೃಥ್ವಿಯು ಕರಗಿ ಎಲ್ಲೆಲ್ಲಿಯೂ ನೀರೇ ನೀರಾಗಿರುವುದು ।।೧೯೧।। ತದನಂತರ ವಾಯುವಿನ ಭಯಂಕರ ಕ್ಷೋಭವಾಗಿ ಜಲದಲ್ಲಿನ ರಸವಿಲ್ಲದಂತೆ ಮಾಡುವುದು. ಈ ಕಾರಣವಾಗಿ ಪ್ರಳಯದ ಮಹಾತೇಜದಲ್ಲಿ ಜಲದ ಹ್ರಾಸವು ಮೆಲ್ಲಮೆಲ್ಲನೇ ಆಗುವುದು ।।೧೯೨।। ಆ ತೇಜದ ಅಂಗಗುಣವನ್ನು, ವಾಯುಬಲದಿಂದ ತಮ ಅಂದರೆ ಅಂಧಃಕಾರವು ಗ್ರಾಸಮಾಡಿ ಬಿಡುವುದು. ಆಗ ಆಕಾಶದಲ್ಲಿ ಪ್ರಳಯವಾಯುವು ತುಂಬಿಕೊಂಡಿರುವುದು ।।೧೯೩।। ಆ ಪ್ರಳಯವಾಯುವಿನ ಸ್ಪರ್ಶಗುಣ ಮತ್ತು ಚಪಲತೆಯನ್ನು ಆಕಾಶವು ಸ್ವಾಹಾ ಮಾಡಿಬಿಡುವುದು. ಅರ್ಥಾತ್ ಒಟ್ಟಿನಲ್ಲಿ ಆಕಾಶದಲ್ಲಿ ವಾಯುವಿನ ಲಯವಾಗುವುದು ।।೧೯೪।।

ಆಕಾಶದ ಯಾವ ಶಬ್ದಗುಣವನ್ನು ಪ್ರಳಯಕಾಲನು ಸಂಪೂರ್ಣವಾಗಿ ನುಂಗಿಬಿಡುವನು. ಆಗ ತಾಮಸ ಅಭಿಮಾನವು ಕ್ಷುಬ್ಧಗೊಂಡು ಎಲ್ಲ ಆಕಾಶವನ್ನು ಕುಡಿದುಬಿಡುವುದು ।।೧೯೫।। ದಶೇಂದ್ರಿಯಗಳ ಸಮುದಾಯವು ರಾಜಸ ಅಹಂಕಾರದಲ್ಲಿ ಹೊಕ್ಕಿಕೊಳ್ಳುವುದು ಮತ್ತು ಚಿತ್ತಚತುಷ್ಟಯದ ಕೂಟವು ಸಾತ್ವಿಕ ಅಹಂಕಾರದಲ್ಲಿ ಪ್ರವೇಶವಾಗುವುದು ।।೧೯೬।। ಹೇ ರಾಜಶ್ರೇಷ್ಠನೇ, ಇಂದ್ರಿಯಗಳು ಅಧಿಷ್ಠಾನ ದೈವತಗಳು ಇವರೆಲ್ಲರೂ ಕೂಡಿಕೊಂಡು ಸಾತ್ವಿಕ ಅಹಂಕಾರದಲ್ಲಿ ಪ್ರವೇಶಿಸುವರು. ಹೀಗೆ ತಿಳಿ ।।೧೯೭।। ಈ ಮೂರೂ ಅಹಂಕಾರಗಳು ತ್ರಿಗುಣಗಳೊಂದಿಗೆ ಮಹತ್‌ತತ್ತ್ವದಲ್ಲಿ ಪ್ರವೇಶಗೊಳ್ಳುವುವು. ಮನೆಮಗಳು ತನ್ನ ಮಕ್ಕಳೊಂದಿಗೆ ತವರು ಮನೆಗೆ ಬರುವಂತೆ ಮಹತ್‌ತತ್ವವೂ ಸಹ ಮಾಯೆಯನ್ನು ಕೂಡಿಕೊಳ್ಳುವುದು ।।೧೯೮।। ಹೆಣ್ಣು ಕೋಳಿಯು ತನ್ನ ಮರಿಗಳನ್ನು ತನ್ನ ರೆಕ್ಕೆಯ ಒಳಗೆ ಬಚ್ಚಿಟ್ಟುಕೊಂಡು, ಆಗ ಅದು ಸ್ವತಃ ಒಂದೇ ಇರುವಂತೆ ತೋರುವುದು. ಅದರಂತೆ ಮಾಯೆಯು ಕಲ್ಪಾಂತದಲ್ಲಿ ಒಂದೇ ಉಳಿಯುವುದು ।।೧೯೯।। ಈ ಪ್ರಕಾರವಾಗಿ ಉತ್ಪತ್ತಿ, ಸ್ಥಿತಿ, ಪ್ರಳಯದವರೆಗೆ ಮಾಯೆಯ ಮೂರು ಪ್ರಕಾರಗಳನ್ನು ತೋರಿಸಿಕೊಡಲಾಯಿತು. ಹೀಗೆ ಈ ತ್ರಿಗುಣಾತ್ಮಕ ಮಾಯೆಯು ಮಿಥ್ಯೆಯಾಗಿದ್ದರೂ ಭಾಸವಾಗುವುದು ।।೨೦೦।। ಚಿಕ್ಕ ಬಾಲಕರು ಆಟಗಳನ್ನು ಆಡುತ್ತಿರಲು, ಹಗಲಿನಲ್ಲಿಯೇ ಅವರು ರಾತ್ರಿಯಾಯಿತು ಎನ್ನುವರು. ಅದರಂತೆ ಪೂರ್ಣವಾಗಿರುವ ಸ್ವರೂಪದಲ್ಲಿ ವಿವಿಧ ಕಲ್ಪನೆಗಳನ್ನು ಮಾಡುವರು ।।೨೦೧।।

ಏಷಾ ಮಾಯಾ ಭಗವತಃ ಸರ್ಗಸ್ಥಿತ್ಯಂತಕಾರಿಣೀ । ತ್ರಿವರ್ಣಾ ವರ್ಣಿತಾಸ್ಮಾಭಿಃ ಕಿಂ ಭೂಯಃ ಶ್ರೋತುಮಿಚ್ಛಸೀ ।೧೬॥

ಅರ್ಥ :- ಈ ಸೃಷ್ಟೀ, ಸ್ಥಿತೀ ಮತ್ತು ಸಂಹಾರ ಮಾಡುವ ತ್ರಿಗುಣಾತ್ಮಕ ಮಾಯವಾಗಿರುವುದು. ನಾವು ಇದರ ವರ್ಣನೆಯನ್ನು ಮಾಡಿದೆವು. ಈಗ ಮತ್ತೇನು ಕೇಳುವ ಇಚ್ಛೆ ಇದೆ?

ಉತ್ತಮ ಮಧ್ಯಮ ಅಧಮ ಜನ । ತಿನ್ಹಿ ಅವಸ್ಥಾ ತ್ರಿಭುವನ । ತ್ರಿವಿಧ ಕರ್ಮೇ ತೀನ ಗುಣ । ಹೇ ಜಾಣ ವಿಂದಾನ ಮಾಯೇಚೇ ।೨೦೨॥ ಧ್ಯೇಯ ಧ್ಯಾತಾ ಆಣಿ ಧ್ಯಾನ । ಪೂಜ್ಯ ಪೂಜಕ ಪೂಜನ । ಜ್ಞೇಯ ಜ್ಞಾತಾ ಆಣಿ ಜ್ಞಾನ । ಹೇ ಹೀ ತ್ರಿಪುಟೀ ಪೂರ್ಣ ಮಾಯೇಚೀ ।।೨೦೩॥ ದೃಶ್ಯ ದೃಷ್ಟಾ ಆಣಿ ದರ್ಶನ । ಕರ್ಮ ಕರ್ತಾ ಕ್ರಿಯಾಚರಣ । ಭೋಗ್ಯ ಭೋಕ್ತಾ ಭೋಜನ । ಹೇ ತ್ರಿಪುಟೀ ಜಾಣ ಮಾಯೇಚೀ ।।೨೦೪॥ ಶಬ್ದ ಶ್ರೋತಾ ಆಣಿ ಶ್ರವಣ । ಘ್ರೇಯ ಘ್ರಾತಾ ಆಣಿ ಘ್ರಾಣ। ರಸ ರಸನಾ ರಸಸ್ವಾದನ । ಹೇ ತ್ರಿಪುಟೀ ಜಾಣ ಮಾಯೇಚೀ ।೨೦೫॥ ಕರ ಕ್ರಿಯಾ ಆಣಿ ಕರ್ತಾ । ಚರಣ ಚಾಲ ಚಾಲತಾ । ಬೋಲ ಬೋಲಣೇ ಬೋಲತಾ । ಹೇ ತ್ರಿವಿಧಾವಸ್ಥಾ ಮಾಯೇಚೀ ।।೨೦೬॥ ಅಹಂ ಸೋಹಂ ಜಡಮೂಢತಾ । ಸಾಧಕ ಸಾಧನ ಸಾಧ್ಯತಾ । ದೇವೀ ದೇವೋ ಪರಿವಾರದೇವತಾ । ಹೇಹೀ ತ್ರಿವಿಧತಾ ಮಾಯೇಚಿ ।೨೦೭॥ ದೇಹ ದೇಹಿ ದೇಹಾಭಿಮಾನ । ಭವ ಭಯ ಭವಬಂಧನ । ಮುಕ್ತ ಮುಮುಕ್ಷು ಅಜ್ಞಾನ । ಹೇಹೀ ವಿಂದಾನ ಮಾಯೇಚೇ ।೨೦೮॥ ಸುಖ ದುಃಖ ಜಡತ್ವ ಪೂರ್ಣ । ಆಧೀ ಸಮಾಧೀ ವ್ಯುತ್ಥಾನ । ಉತ್ಪತ್ತಿ ಸ್ಥಿತಿ ನಿಧನ । ಇಂಹೀ ಲಕ್ಷಣೇ ಸಂಪೂರ್ಣ ಮಾಯಾ ವಿಲಾಸೇ ।೨೦೯॥ ನಭೀ ನೀಳಿಯಾ ಪೂರ್ಣ ಭಾಸೇ । ಶೇಖೀ ನೀಳಿಮೇಚಾ ಲೇಶಹೀ ನಸೇ । ತೇವೀ ಸ್ವರೂಪೀ ಮಾಯಾ ಆಭಾಸೇ । ಮಿಥ್ಯಾವೇಶೇ ಮಾಯಿಕ ।೨೧೦॥ ಜೇವೀ ಪ್ರತ್ಯಕ್ಷ ದಿಸೇ ಮೃಗಜಳ । ಪರೀ ತೇ ನಿದಾಘಚಿ ಕೇವಳ । ತೇವೀ ಸ್ವರೂಪೀ ಮಾಯಾ ಪ್ರಬಳ । ಮುಳೀ ನಿರ್ಮೂಳ ಆಭಾಸೇ ।೨೧೧॥ ಹೇ ಮಿಥ್ಯಾ ಮಾಯಾ ಕಲ್ಪನಾವತೇ । ಪ್ರಬಳ ಬಳೇ ಭಾಸಲೀ ದಿಸೇ । ನಾಸೂ ಜಾತಾ ನಾಶಿಜೇ ಐಸೇ । ಸತ್ಯತ್ವೇ ನಸೇ ನಿಜಾಂಗ ।।೨೧೨॥ ನಾವರೂಪಾಚಿಯಾ ಭಡಸೇ । ಬ್ರಹ್ಮಾದಿಕ ಕೇಲೇ ಪಿಸೇ । ಮಿಥ್ಯಾ ತ್ರಿಪುಟೀ ವಿನ್ಯಾಸೇ । ಜ್ಯಾ ಬಾಂಧಿಲೇ ದಿಸೇ ತ್ರೈಲೋಕ್ಯ ।೨೧೩॥ ಜೇವೀ ರೂಪಾಸವೇ ದಿಸೇ ಛಾಯಾ । ನಾಶಿತಾ ನಾತುಡೇ ನಾಶಾವಯಾ । ತೇವೀ ಸ್ವರೂಪೀ ಮಿಥ್ಯಾ ಮಾಯಾ । ಅತಿದುರ್ಜಯಾ ದೇವಾಂಸೀ ।೨೧೪॥

ಈ ಲೋಕದಲ್ಲಿ ಉತ್ತಮ, ಮಧ್ಯಮ ಮತ್ತು ಅಧಮ ಹೀಗೆ ಮೂರು ಪ್ರಕಾರಗಳ ಜನರು, ಜಾಗೃತೀ, ಸ್ವಪ್ನ, ಸುಷುಪ್ತೀ ಹೀಗೆ ಮೂರು ಅವಸ್ಥೆಗಳು, ಸ್ವರ್ಗ, ಮೃತ್ಯು ಮತ್ತು ಪಾತಾಳ ಇವು ಮೂರು ಲೋಕಗಳು, ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣ ಇವು ಮೂರು ಪ್ರಕಾರದ ಕರ್ಮಗಳು, ಸತ್ವ, ರಜ, ತಮ ಇವು ಮೂರು ಗುಣಗಳು, ಇವೆಲ್ಲವೂ ಮಾಯೆಯ ಕಾರ್ಯವೇ ಆಗಿವೆ ।೨೦೨॥ ಧ್ಯೇಯ, ಧ್ಯಾತಾ, ಧ್ಯಾನ, ಹಾಗೆಯೇ ಪೂಜ್ಯ, ಪೂಜಕ, ಪೂಜನ, ಮತ್ತು ಜ್ಞೇಯ, ಜ್ಞಾತಾ, ಜ್ಞಾನ ಈ ತ್ರಿಪುಟಿಗಳೆಲ್ಲವೂ ಮಾಯೆಯದ್ದಾಗಿರುವವು ।೨೦೩॥ ದೃಶ್ಯ, ದೃಷ್ಟಾ, ದರ್ಶನ, ಹಾಗೆಯೇ ಕರ್ಮ, ಕರ್ತಾ, ಕ್ರಿಯಾಚರಣ ಮತ್ತು ಭೋಗ್ಯ, ಭೋಕ್ತಾ, ಮತ್ತು ಭೋಜನ ಈ ತ್ರಿಪುಟಿಗಳು ಮಾಯೆಯದ್ದಾಗಿವೆ ।೨೦೪॥ ಶಬ್ದ, ಶ್ರೋತಾ, ಶ್ರವಣ ಹಾಗೆಯೇ ಘ್ರೇಯ, ಘ್ರಾತಾ ಮತ್ತು ಘ್ರಾಣ ಮತ್ತು ರಸ, ರಸನಾ, ಮತ್ತು ರಸಸ್ವಾದ ಇವು ಸಹ ಮಾಯೆಯ ತ್ರಿಪುಟಿಗಳಾಗಿವೆ ।೨೦೫॥ ಕರ, ಕ್ರಿಯಾ ಮತ್ತು ಕರ್ತಾ ಹಾಗೆಯೇ ಚರಣ, ಚಾಲನೆ, ಚಲಿಸುವವ ಮತ್ತು ಮಾತು, ಮಾತನಾಡುವಿಕೆ ಮತ್ತು ಮಾತನಾಡುವವನು ಈ ಮೂರು ಅವಸ್ಥೆಗಳೂ ಸಹ ಮಾಯೆಯದ್ದಾಗಿವೆ ।೨೦೬॥ ಅಹಂ ಸೋಹಂ ಮತ್ತು ಜಡಮೂಢತೆ; ಸಾಧಕ, ಸಾಧನೆ ಮತ್ತು ಸಾಧ್ಯತೆ; ದೇವೀ, ದೇವ ಮತ್ತು ಪರಿವಾರದೇವತೆ; ಈ ಮೂರು ಪ್ರಕಾರಗಳು ಮಾಯೆಯದ್ದಾಗಿವೆ ।೨೦೭॥ ದೇಹ, ದೇಹೀ ಮತ್ತು ದೇಹಾಭಿಮಾನ; ಭವ, ಭವಭಯ ಮತ್ತು ಭವಬಂಧನ; ಮುಕ್ತ, ಮುಮುಕ್ಷು ಮತ್ತು ಅಜ್ಞಾನಿ ಇವುಗಳ ಘಟನೆಗಳು ಮಾಯೆಯಿಂದ ಆಗುವುವು ।೨೦೮॥ ಸುಖ, ದುಃಖ ಮತ್ತು ಜಡತ್ವ; ಆಧಿ, ಸಮಾಧಿ ಮತ್ತು ವ್ಯುತ್ಥಾನ; ಉತ್ಪತ್ತಿ, ಸ್ಥಿತಿ ಮತ್ತು ಮೃತ್ಯು. ಈ ಎಲ್ಲ ಲಕ್ಷಣಗಳಿಂದ ಮಾಯೆಯೇ ವಿಕಾಸಹೊಂದುವುದು ।೨೦೯॥ ಆಕಾಶದಲ್ಲಿ ಎಲ್ಲೆಲ್ಲಿಯೂ ನೀಲಿ ಬಣ್ಣವಿದ್ದಂತೆ ಭಾಸವಾಗುವುದು; ಆದರೆ ಅಲ್ಲಿ ನೀಲಿ ಬಣ್ಣದ ಲವಲೇಶವೂ ಇರುವುದಿಲ್ಲ. ಅದರಂತೆ ಆತ್ಮಸ್ವರೂಪದಲ್ಲಿ ಮಾಯೆಯು ಮಿಥ್ಯಾಸ್ವರೂಪದಿಂದ ಭಾಸವಾಗುವುದು ।೨೧೦॥ ಯಾವ ಪ್ರಕಾರವಾಗಿ ಮೃಗಜಲವು ಪ್ರತ್ಯಕ್ಷವಾಗಿ ತೋರುವುದು. ಆದರೆ ಅದು ಮಾತ್ರ ರಸರಹಿತ ಕೇವಲ ಬಿಸಿಲೇ ಆಗಿರುವುದು. ಅದರಂತೆ ಸ್ವರೂಪದಲ್ಲಿ ಈ ಮಾಯೆಯು ಪ್ರಬಲವಾದಂತೆ ತೋರುವುದು. ಆದರೆ ಮೊದಲೇ ಏನೂ ಇಲ್ಲದಿದ್ದರೂ ಸುಮ್ಮನೇ ಭಾಸವಾಗುವುದು ।೨೧೧॥ ಈ ಮಾಯೆಯು ಮಿಥ್ಯೆಯಾಗಿರುವುದು. ಆದರೆ ಕಲ್ಪನೆಗಳಿಂದ ಇದು ಪ್ರಬಲವಾದಂತೆ ಭಾಸವಾಗುವುದು. ಇದರ ನಾಶ ಮಾಡಬೇಕೆಂದರೆ ಇದಕ್ಕೆ ನಿಜವಾದ ಸ್ವರೂಪವೇ ಇರುವುದಿಲ್ಲ ।೨೧೨॥ ಆದಾಗ್ಯೂ, ನಾಮರೂಪದ ಹೊರಗಿನ ಡೌಲಿನಿಂದ ಈ ಮಾಯೆಯು ಬ್ರಹ್ಮಾದಿಕರಿಗೂ ಹುಚ್ಚರನ್ನಾಗಿ ಮಾಡಿಬಿಟ್ಟಿದೆ. ಈಕೆಯೇ ಮಿಥ್ಯೆಯಾದ ತ್ರಿಪುಟಿಗಳ ವಿಸ್ತಾರದಿಂದ ತ್ರೈಲೋಕ್ಯವನ್ನು ಬಂಧನದಲ್ಲಿ ಸಿಲುಕಿಸಿದ್ದು ತೋರುತ್ತಿದೆ ।೨೧೩॥ ದೀಪದ ಜೊತೆಯಲ್ಲಿ ಅದರ ನೆರಳು ತೋರುವುದು. ಈ ನೆರಳಿನ ನಾಶವನ್ನು ಮಾಡಲು ಹೊರಟರೆ ಅದು ಕೈಗೆ ಸಿಕ್ಕುವುದೇ ಇಲ್ಲ. ಅದರಂತೆ ಸ್ವಸ್ವರೂಪದಲ್ಲಿ ಈ ಮಾಯೆಯು ಮಿಥ್ಯೆಯಾಗಿದ್ದು ದೇವತೆಗಳಿಗೂ ಅದರ ನಾಶ ಮಾಡುವುದು ಕಠಿಣವಾಗಿದೆ ।೨೧೪॥

ಜೇವೀ ದೇಹಾಸವೇ ಮಿಥ್ಯಾ ಛಾಯಾ । ತೇವೀ ಬ್ರಹ್ಮೀ ಮಿಥ್ಯಾ ಮಾಯಾ । ಕಲ್ಪನಾಯೋಗೇ ವಾಢಲೀ ವಾಯಾ । ಯಾಲಾಗೀ "ಅಜಯಾ" ವೇದಶಾಸ್ತ್ರೇ ಮ್ಹಣತೀ ॥೨೧೫॥ ರಾಯಾ ಕಲ್ಪನಾ ವಾಢೇ ಜೇ ಠಾಯೀ । ತೇಚಿ ಮಾಯೇಚೇ ದೃಢ ಮೂಳ ಪಾಹೀ । ಜೋ ನಿರ್ವಿಕಲ್ಪ ನಿಜದೇಹೀ । ತ್ಯಾಸೀ ಮಾಯಾ ನಾಹೀ ತಿಹೀ ಲೋಕೀ ॥೨೧೬॥ ಕಲ್ಪಿತೀ ಕಲ್ಪನಾ ಜೇ ರಾಯಾ । ತೇಚಿ ಜಾಣ ಮುಖ್ಯ ಮಾಯಾ । ಆಣೀಕ ರೂಪಕೇ ಸಾಂಗಾವಯಾ । ನಾತುಡೇ ಮಾಯಾ ನಿರೂಪಣೀ ॥೨೧೭॥ ತೇಚಿ ತ್ರಿವಿಧ ಮುಖ್ಯ ಲಕ್ಷಣೀ । ಮಾಯಾ ಸಾಂಗಿತಲೀ ವಿವಂಚೋನೀ । ಆತಾ ಕೋಣ್ಯಾ ಅರ್ಥೀಚೇ ಶ್ರವಣೀ । ಆತ್ಯಾದರು ಮನೀ ವರ್ತೇ ರಾಯಾ ॥೨೧೮॥ ಮಾಯ ದುಸ್ತರ ದಾರುಣ । ಐಕೂನಿ ಋತ್ವಿಜ ಬ್ರಾಹ್ಮಣ । ಥರಾರಲೇ ಸಭಾಜನ । ರಾಜಾಹೀ ಪೂರ್ಣ ವಿಸ್ಮಿತ ಜಾಹಲಾ ॥೨೧೯॥ ನವಲ ಮಾಯೇಚೇ ರೂಪಕ । ನಾತೂ ನ ಶಕತೀಚ ಜ್ಞಾತೇ ಲೋಕ । ಜಿಯಾ ಗೋವಿಲೇ ಬ್ರಹ್ಮಾದಿಕ । ಇತರಾಂಚಾ ದೇಖ ಪಾಡು ಕೋಣ ॥೨೨೦॥ ಮಾಯಾ ಆಕ್ರಮೂನಿ ಶಿವಾಸೀ । ತೋಹೀ ಆಣಿಲಾ ಜೀವತ್ವಾಸೀ । ತೇ ಮಾಯಾ ತರವೇ ದೀನಾಸೀ । ತೋ ಉಪಾವೋ ಯಾಸೀ ಪುಸೋ ಪಾ ॥೨೨೧॥ ಸುಖೋಪಾಯೇ ದೀನ ಜನ । ದುಸ್ತರ ಮಾಯಾ ತರತೀ ಪೂರ್ಣ । ತದರ್ಥೀ ರಾಜಾ ಆಪಣ । ಅತ್ಯಾದರೇ ಪ್ರಶ್ನ ಶ್ರದ್ಧೇನೇ ಪುಸೇ ॥೨೨೨॥

ರಾಜೋವಾಚ:-

ಯಥೈತಾಮೈಶ್ವರೀಂ ಮಾಯಾಂ ದುಸ್ತರಾಮಕೃತಾತ್ಮಭಿಃ ।
ತರಂತ್ಯಂಜಃ ಸ್ಥೂಲಧಿಯೋ ಮಹರ್ಷ ಇದಮುಚ್ಯತಾಮ್ ॥೧೭॥

ಅರ್ಥ:- ಜನಕರಾಜನು ಪ್ರಶ್ನಿಸಿದನು; "ಸ್ಥೂಲವಾದ ಈ ಶರೀರವೇ ನಾನು" ಎಂಬ ದೃಢಭಾವ ಇದ್ದವರು, ಈ ಈಶ್ವರನ ದುಸ್ತರವಾದ ಮಾಯೆಯನ್ನು ಅನಾಯಾಸವಾಗಿ ಹೇಗೆ ದಾಟಬೇಕು? ಇದನ್ನು ಕೃಪೆ ಮಾಡಿ ಹೇಳಿರಿ.

ಅತಿ ದುಸ್ತರ ಹರಿಚೀ ಮಾಯಾ । ಆಇಕೋನಿ ಹಾಂಸೇ ಆಲೇ ರಾಯಾ । ಲಟಕೀಚ ಪರೀ ದೇಹಾಭಿಮಾನಿಯಾ । ಬಾಧಾವಯಾ ದೃಢ ಜಾಹಲೀ ॥೨೨೩॥ ಮಾಯಾ ದುಸ್ತರ ಶಾಸ್ತ್ರಪ್ರಸಿದ್ಧೀ । ತೇಥ ಬಾಳೇಭೋಳೇ ಸ್ಥೂಳಬುದ್ಧೀ । ಸುಖೇ ತರತೀ ಕೋಣೇ ವಿಧೀ । ತೋ ಸಾಂಗ ತ್ರಿಶುದ್ಧೀ ಉಪಾವೋ ॥೨೨೪॥ ಜ್ಯಾಸೀ ವಶ್ಯ ನಾಹೀ ನಿಜಮನ । ಆಣಿ ಭವಾಬ್ಧಿ ತರಾವಯಾ ಭಾವ ಪೂರ್ಣ । ಐಸೇ ಭೋಳೇ ಭಾವಿಕ ಜನ । ತ್ಯಾಂಸೀ ಮಾಯಾತರಣ ಸುಗಮ ಸಾಂಗಾ ॥೨೨೫॥

ದೇಹದ ಜೊತೆಯಲ್ಲಿ ಅದರ ಛಾಯೆಯು ಮಿಥ್ಯೆಯಾಗಿರುವಂತೆ, ಬ್ರಹ್ಮದಲ್ಲಿ ಈ ಮಾಯೆಯು ಮಿಥ್ಯೆಯಾಗಿರುವುದು. ಇದು ಕಲ್ಪನೆಗಳ ಯೋಗದಿಂದಲೇ ಬೆಳೆದಿರುವುದು. ಹಾಗೆಂದು ಇದಕ್ಕೆ "ಅಜಯಾ" ಅಂದರೆ ಗೆಲ್ಲಲು ದುಸ್ತರವು ಎಂದು ವೇದಶಾಸ್ತ್ರಗಳು ಹೇಳುವುವು ॥೨೧೫॥ ಹೇ ರಾಜನೇ, ಎಲ್ಲಿ ಕಲ್ಪನೆಗಳು ಬೆಳೆಯುವುವೋ, ಅಲ್ಲಿಯೇ ಮಾಯೆಯ ದೃಢವಾದ ಬೇರು ಬಿಟ್ಟಿದೆ ಎಂದು ತಿಳಿ. ಯಾರು ತನ್ನ ದೇಹದಿಂದ ನಿರ್ವಿಕಲ್ಪನಾಗಿರುವನೋ, ಆತನಿಗೆ ಮಾಯೆಯು ಮೂರು ಲೋಕಗಳಲ್ಲಿಯೂ ಎಲ್ಲಿಯೂ ಇರುವುದಿಲ್ಲ ॥೨೧೬॥ ರಾಜನೇ, ಕಲ್ಪನೆಗಳನ್ನು ಮಾಡುವುದೇ ಮುಖ್ಯವಾದ ಮಾಯೆಯಾಗಿರುವುದು. ಇದನ್ನು ಲಕ್ಷದಲ್ಲಿಡು. ಮಾಯೆಯ ನಿರೂಪಣೆಯನ್ನು ಮಾಡಲು ಇದಕ್ಕಿಂತಲೂ ಬೇರೆ ರೂಪಕವು ಸಿಗುವುದೇ ಇಲ್ಲ ॥೨೧೭॥ ತ್ರಿವಿಧ ಲಕ್ಷಣಗಳಿಂದ ಕೂಡಿರುವ ಮಾಯೆಯನ್ನು ನಿನಗೆ ವಿಸ್ತಾರಪೂರ್ವಕವಾಗಿ ತಿಳಿಸಲಾಯಿತು. ರಾಜನೇ, ಈಗ ಪುನಃ ಏನು ಕೇಳಬೇಕೆಂಬ ನಿನ್ನ ಮನಸ್ಸಿನ ಬಯಕೆವಿರುವುದು? ॥೨೧೮॥ ಮಾಯೆಯು ಭಯಂಕರವಾಗಿದ್ದು, ಇದರಿಂದ ಪಾರಾಗುವುದು ಅತ್ಯಂತ ಕಠಿಣವಾಗಿರುವುದು. ಇದನ್ನು ಕೇಳಿ ಋತ್ವಿಜರು, ಬ್ರಾಹ್ಮಣರು ಮತ್ತು ಸಭೆಯಲ್ಲಿನ ಸಮಸ್ತ ಜನರು ನಡುಗಿದರು. ರಾಜನಿಗೂ ಅತಿಶಯವಾಗಿ ಆಶ್ಚರ್ಯವಾಯಿತು ॥೨೧೯॥ ಮಾಯೆಯ ಸ್ವರೂಪವು ಮಹಾ ಅದ್ಭುತವಾಗಿದೆ. ಜ್ಞಾನಿಗಳೂ ಇದರ ನಿವಾರಣೆ ಮಾಡಲು ಸಮರ್ಥ್ಯರಿಲ್ಲ. ಇದರ ಬಲೆಯಲ್ಲಿ ಬ್ರಹ್ಮದೇವರಂಥವರು ಸಿಕ್ಕಿಕೊಂಡಿರುವರು. ಅಲ್ಲಿ ಇತರರ ಯಾವ ಪಾಡು? ॥೨೨೦॥ ಈ ಮಾಯೆಯು ಶಿವನಿಗೂ ಆಕರ್ಷಿಸಿ, ಆತನಿಗೆ ಜೀವದಶೆಗೆ ತಂದಿತು. ಇಂತಹ ಈ ಮಾಯೆಯು ಸಾಮಾನ್ಯ, ದೀನ ಜನರಿಗೂ ಪಾರಾಗಲು ಸಾಧ್ಯವಾಗಬೇಕು. ಅಂತಹ ಉಪಾಯವನ್ನು ಇವರಲ್ಲಿ ಕೇಳಬೇಕು ॥೨೨೧॥ ದೀನ ದುರ್ಬಲರಾದ ಜನರು ಸಹ ಈ ದುಸ್ತರವಾದ ಮಾಯೆಯನ್ನು ಸುಲಭೋಪಾಯಗಳಿಂದ ಪೂರ್ಣವಾಗಿ ಪಾರಾಗುವ, ಈ ಅರ್ಥದಲ್ಲಿ ರಾಜನು ಅವರಿಗೆ ಅಗತ್ಯಪೂರ್ವಕವಾಗಿ ಅತ್ಯಂತ ಭಕ್ತಿಭಾವಗಳಿಂದ ಪ್ರಶ್ನೆಯನ್ನು ಕೇಳಿದನು ॥೨೨೨॥

ಹರಿಯ ಮಾಯೆಯು ಅತ್ಯಂತ ದುಸ್ತರವಾಗಿರುವುದನ್ನು ಕೇಳಿ ರಾಜನಿಗೆ ನಗೆಯು ಬಂದಿತು. ಇದು ನಿಜವಾಗಿಯೂ ಸುಳ್ಳಾಗಿದ್ದರೂ ಸಹ ದೇಹಾಭಿಮಾನಿಗಳಿಗೆ ಬಾಧಿಸಲು ಸಮರ್ಥವಾಗಿದೆ ॥೨೨೩॥ ಮಾಯೆಯು ದುಸ್ತರವಾಗಿದೆ ಎಂದು ಶಾಸ್ತ್ರ ಪ್ರಸಿದ್ಧವೇ ಆಗಿರುವುದು. ಆದರೆ, ಸಾಧಾ, ಭೋಳೇ ಮತ್ತು ಮಂದಬುದ್ಧಿಯ ಜನರಿಗೆ ಯಾವ ನಿಶ್ಚಿತ ಉಪಾಯಗಳಿಂದ ಮಾಯೆಯಿಂದ ಪಾರಾಗುವುದನ್ನು ಹೇಳಿರಿ ॥೨೨೪॥ ಯಾರಿಗೆ ತಮ್ಮ ಮನವು ವಶವಾಗಿರುವುದಿಲ್ಲ. ಆದರೆ ಈ ಸಂಸಾರದಿಂದ ಪಾರಾಗುವ ದೃಢವಾದ ಭಾವವಿರುವುದು. ಹೀಗಿರುವ ಭೋಳೇ ಭಾವಿಕ ಜನರಿಗೆ, ಈ ಮಾಯೆಯಿಂದ ಪಾರಾಗುವ ಸುಲಭವಾದ ಯಾವ ಉಪಾಯಗಳಿವೆ, ಅದನ್ನು ಹೇಳಿರಿ ॥೨೨೫॥

ಮಾಗಾ ಕವೀ ಬೋಲಿಲಾ ಸಂಕಲಿತೀ । ''ತನ್ಮಯಯಾऽತೋ ಬುಧ ಆಭಜೇತಿ'' । ಗುರು - ಬ್ರಹ್ಮ ಅಭೇದಸ್ಥಿತೀ । ಕರಿತಾ ಭಕ್ತೀ ಮಾಯಾ ತರಿಜೇ ।೨೨೬॥ ತೇ ಭಕ್ತೀಚೇ ಸ್ಪಷ್ಟ ಲಕ್ಷಣ । ವಿಶದ ಹೋಆವಯಾ ಶ್ರವಣ । ಪುಢತೀ ಮಾಯೇಚೇ ತರಣ । ಪುಸಾವಯಾ ಕಾರಣ ಮುಖ್ಯ ಹೇಚಿ ।೨೨೭॥ ತೋ ಮಾಯಾ ತರಣೋ ಪಾಯ ವಿಧೀ । ಸುಗಮ ಸಾಂಗಾವಯಾ ತ್ರಿಶುದ್ಧೀ । ಅಂತರಿಕ್ಷಾ ಧಾಕುಟಾ ಸುಬುದ್ಧೀ । ''ಪ್ರಬುದ್ಧ'' ಪ್ರಜ್ಞಾನಿಧೀ ಬೋಲತಾ ಜಾಹಲಾ ।೨೨೮॥

ಪ್ರಬುದ್ಧ ಉವಾಚ:-

ಕರ್ಮಾಣ್ಯಾರಭಮಣಾನಾಂ ದುಃಖಿಹತ್ಯೈ ಸುಖಾಯ ಚ । ಪಶ್ಯೇತ್ ಪಾಕವಿಪರ್ಯಾಸಂ ಮಿಥುನೀಚಾರಿಣಾಂ ನೃಣಾಮ್ ।೧೮॥

ಅರ್ಥ:- ಪ್ರಬುದ್ಧನು ನುಡಿದನು: ಬದ್ಧಾತ್ಮರು ಮಾನವ ಸಮಾಜದಲ್ಲಿ ಸ್ತ್ರೀ ಪುರುಷರ ಪಾತ್ರಗಳನ್ನು ತಳೆದು ಕಾಮ ಸಂಬಂಧದಲ್ಲಿ ಒಂದುಗೂಡುತ್ತಾರೆ. ಹೀಗೆ ಅವರು ತಮ್ಮ ದುಃಖವನ್ನು ನಿವಾರಿಸಲು ಹಾಗೂ ಅಪರಿಮಿತವಾಗಿ ಸಂತೋಷವನ್ನು ವೃದ್ಧಿಸಿಕೊಳ್ಳಲು ಒಂದೇ ಸಮನೆ ಲೌಕಿಕವಾದ ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತಾರೆ. ಆದರೆ ಅವರು ಅನಿವಾರ್ಯವಾಗಿ ತೀರಾ ತದ್ವಿರುದ್ಧವಾದ ಫಲಗಳನ್ನೇ ಪಡೆಯುತ್ತಾರೆ ಎನ್ನುವುದು ನಾವು ಕಾಣಬಹುದು. ಅಂದರೆ, ಅವರ ಸುಖವು ಅನಿವಾರ್ಯವಾಗಿ ಕಡ್ಮೆಯಾಗುತ್ತದೆ. ದುಃಖವು ಹೆಚ್ಚಾಗುತ್ತಲೇ ಹೋಗುತ್ತದೆ.

ಮುಖ್ಯ ಮಾಯೇಚೇ ತರಣ । ಪ್ರಬುದ್ಧಚಿ ಜಾಣೇ ಪೂರ್ಣ । ಪ್ರಬುದ್ಧ ಜಾಹಲಿಯಾ ಆಪಣ । ಮಾಯೆಚೇ ವಿಂದಾನ ನ ತರತಾ ತರತೀ ।೨೨೯॥ ಮನೀ ವಿಷಯಾಚಾ ಛಂದು । ತೋ ಕೇವಳ ಮಾಹಾಬಾಧು । ವಿಷಯತ್ಯಾಗೀ ತೋ ಪ್ರಬುದ್ಧು । ತೋಚಿ ವಿಶದು ಭಾವೋ ಆಇಕಾ ।೨೩೦॥ ವಿಷಯೀ ಲೋಭಲೇ ಅತ್ಯಂತ ಮನ । ತೇಥ ನವ್ಹತಾ ವೈರಾಗ್ಯ ಪೂರ್ಣ । ಕದಾ ನವ್ಹೇ ಮಾಯೇಚೇ ತರಣ । ವೈರಾಗ್ಯಾರ್ಥ ಜಾಣ ವಿಷಯ ನಿಂದೀ ।೨೩೧॥ ಕೇವಳ ನಶ್ವರ ವಿಷಯ ದೇಖ । ತೇಚಿ ಮಾನಿತೀ ಪರಮ ಸುಖ । ತೇ ಸುಖಚಿ ದುಃಖದಾಯಕ । ಸ್ತ್ರೀಕಾಮೇ ಮುಖ್ಯ ಮಾಯಾ ಬಾಧೇ ।೨೩೨॥ ವೇಂಚೂನಿ ಧನಾಚಿಯಾ ಗಾಂಠೀ । ಸುಖಾರ್ಥೀ ಸ್ತ್ರೀ ಬೈಸವಿಲೀ ಪಾಟೀ । ತೇಚಿ ಭೋಗವೀ ದುಃಖಕೋಟೀ । ಜಗೀ ಮಾಯಾ ಲಾಠೀ ಸ್ತ್ರೀಕಾಮೇ ।೨೩೩॥ ಸ್ತ್ರೀಕಾಮೇ ಪ್ರಪಂಚು ಸಬಳ । ಸ್ತ್ರೀಕಾಮೇ ದುಃಖ ಪ್ರಬಳ । ಸ್ತ್ರೀಕಾಮೇ ಮಾಯೇಸಿ ಬಳ । ಸ್ತ್ರೀ ಕಾಮೇ ಸಕಳ ಮೋಹಿಲೇ ಜಗ ।೨೩೪॥ ಆವಡೀ ಸ್ತ್ರೀ ಬೈಸವಿತಾ ಪಾಟೀ । ತೇ ಪ್ರಪಂಚಾಚ್ಯಾ ವಾಢವೀ ಕೋಟೀ । ಮಹಾಮೋಹಾಚ್ಯಾ ಪಾಡೂನಿ ಗಾಂಠೀ । ದುಃಖಸಾಗರೀ ಲೋಟೀ ಸ್ತ್ರೀಕಾಮು ।೨೩೫॥

ಈ ಮೊದಲು ಕವಿ ಅವರು ಸಂಕ್ಷಿಪ್ತವಾಗಿ ಹೇಳಿರುವರು. ಅದು ''ತನ್ಮಯಯಾऽ ತೋಬುಧ ಆಭಜೇತಿ'' ಗುರು ಮತ್ತು ಬ್ರಹ್ಮ ಏಕರೂಪವಾಗಿರುವರು ಎಂದು ಹೀಗೆ ಅಭೇದ ಭಾವದಿಂದ ಭಕ್ತಿಯನ್ನು ಮಾಡಿದರೆ ಮಾಯೆಯಿಂದ ಪಾರಾಗಲು ಬರುವುದು ।೨೨೬॥ ಆ ಭಕ್ತಿಯ ಸ್ಪಷ್ಟವಾದ ಲಕ್ಷಣಗಳು ತಿಳಿಯಬೇಕು ಮತ್ತು ಮಾಯೆಯ ತರಣೋಪಾಯವು ಸಹ ವಿಸ್ತಾರವಾಗಬೇಕು. ಇದಕ್ಕಾಗಿಯೇ ಪ್ರಶ್ನೆಯನ್ನು ಕೇಳಲು ಮುಖ್ಯ ಕಾರಣವಾಗಿರುವುದು ।೨೨೭॥ ಇದೇ ಮಾಯೆಯ ತರಣೋಪಾಯದ ನಿಶ್ಚಯಪೂರ್ವಕವಾಗಿ ಸುಗಮ ಸಾಧನೆಗಳನ್ನು ಹೇಳುವುದಕ್ಕಾಗಿ ಅಂತರಿಕ್ಷನ ತಮ್ಮನಾದ ಬುದ್ಧಿವಾನ "ಪ್ರಬುದ್ಧ" ನು ಉತ್ತರಿಸಲಾರಂಭಿಸಿದನು ।೨೨೮॥

ಪ್ರಬುದ್ಧ ಎಂದರೆ ಜ್ಞಾನಿಯು, ಈತನಿಗೆ ಮಾತ್ರ ಮಾಯೆಯಿಂದ ಪಾರಾಗುವುದು ಪೂರ್ಣವಾಗಿ ತಿಳಿದಿರುವುದು. ನಾವು ಸಹ ಪ್ರಬುದ್ಧ ಅಂದರೆ ಜ್ಞಾನಸಂಪನ್ನರಾಗಲು ಮಾಯೆಯ ಹಿಡಿತದಿಂದ ಬಿಡುಗಡೆಯಾಗದ್ದನ್ನು ಬಿಡುಗಡೆಯಾಗಲು ಸಾಧ್ಯವಾಗುವುದು ।೨೨೯॥ ಮನದಲ್ಲಿ ವಿಷಯಗಳ ಲಾಲಸೆ ಪೂರ್ಣವಾಗಿ ಇರುವುದೇ ಮುಖ್ಯವಾದ ಬಂಧನವಾಗಿರುವುದು. ಆದ್ದರಿಂದ ಯಾರು ವಿಷಯಾಸಕ್ತಿಯನ್ನು ತ್ಯಜಿಸುವನೋ, ಆತನೇ ಪ್ರಬುದ್ಧ ಅಂದರೆ ಜ್ಞಾನಿಯು. ಇದೇ ತಾತ್ಪರ್ಯವನ್ನು ಈಗ ಸ್ಪಷ್ಟವಾಗಿ ಹೇಳುವೆ, ಕೇಳಿರಿ ।೨೩೦॥ ವಿಷಯಗಳಲ್ಲಿ ಮನವು ಅತ್ಯಂತ ಲುಬ್ಧವಾಗಿರುವಿಕೆ ಮತ್ತು ಪೂರ್ಣವಾಗಿ ವೈರಾಗ್ಯವಿಲ್ಲದಿರುವಿಕೆ. ಹೀಗಾದರೆ ಮಾಯೆಯಿಂದ ಬಿಡುಗಡೆಯಾಗಲಾರದು. ಅದಕ್ಕಾಗಿ ವೈರಾಗ್ಯದತ್ತ ಚಿತ್ತವು ಹೊರಳಬೇಕೆಂಬ ಉದ್ದೇಶದಿಂದ ವಿಷಯಗಳ ನಿಂದನೆ ಮಾಡುವರು ।೨೩೧॥ ವಿಷಯವು ಕೇವಲ ನಾಶಿವಂತವಾಗಿರುವುದು. ಆದರೂ ಮೂರ್ಖರು ಇದನ್ನೇ ಮಹಾಸುಖವೆನ್ನುವರು. ಆದರೆ ಈ ಸುಖವೇ ದುಃಖದಾಯಕವಾಗಿರುವುದು. ವಿಶೇಷವಾಗಿ ಸ್ತ್ರೀ ವಿಷಯದ ಇಚ್ಛೆಯಿಂದಲೇ ಮಾಯೆಯು ಬೆನ್ನು ಹತ್ತುವುದು ।೨೩೨॥ ತನ್ನ ಕೈಯಲ್ಲಿನ ದುಡ್ಡು ಖರ್ಚಿಸಿ ಸುಖಕ್ಕಾಗಿ ಸ್ತ್ರೀಯಳನ್ನು ಮನೆಗೆ ತಂದು ಯಜಮಾನಿಯನ್ನಾಗಿ ಮಾಡುವರು. ಆದರೆ ಅದೇ ಸ್ತ್ರೀಯಳು ಕೋಟ್ಯಾವಧಿ ದುಃಖಗಳನ್ನು ಭೋಗಿಸಲು ಹಚ್ಚುವಳು. ಜಗತ್ತಿನಲ್ಲಿ ಸ್ತ್ರೀ ಅಭಿಲಾಷೆಯಿಂದಲೇ ಮಾಯೆಗೆ ಬಲವು ಬರುವುದು।೨೩೩॥ ಸ್ತ್ರೀ ಕಾಮನೆಯಿಂದ ಪ್ರಪಂಚವು ಬಲಿಯುವುದು. ಸ್ತ್ರೀ ಕಾಮದಿಂದ ಮಹಾ ದುಃಖವು ಪ್ರಾಪ್ತವಾಗುವುದು. ಸ್ತ್ರೀ ಕಾಮನೆಯಿಂದ ಮಾಯೆಯು ಪುಷ್ಟಗೊಳ್ಳುವುದು. ಒಟ್ಟಿನಲ್ಲಿ ಸ್ತ್ರೀಕಾಮನೆಯಿಂದಲೇ ಸಂಪೂರ್ಣ ಜಗತ್ತು ಮೋಹಗೊಂಡಿರುವುದು ।೨೩೪॥ ಬಲು ಪ್ರೀತಿಯಿಂದ ಸ್ತ್ರೀಯಳನ್ನು ಮಣೆಯ ಮೇಲೆ ಕೂಡ್ರಿಸಲು, ಆಕೆಯು ಸಂಸಾರದ ವಿಸ್ತಾರವನ್ನು ಕೋಟಿ ಕೋಟಿ ಸಂಖ್ಯೆಯಲ್ಲಿ ಬೆಳೆಸುವಳು. ಸ್ತ್ರೀ ಕಾಮವೇ ಮಹಾ ಮೋಹದ ಜೋಡುಗೂಡಿಸಿ ದುಃಖಸಾಗರದಲ್ಲಿ ನೂಕುವುದು ।೨೩೫॥

ಜೇ ನವಮಾಸ ವಾಹೇ ಉದರಾಂತ । ತೇ ಮಾತಾ ಕರೂನಿ ಅನಾಪ್ತ । ಸ್ತ್ರಿಯೇಸೀ ಮಾನಿತೀ ಅತಿಆಪ್ತ । ಐಶೀ ಮಾಯಾ ಸಮರ್ಥ ಸ್ತ್ರೀಕಾಮೇ ।೨೩೬॥ ಜೇ ತೋಂಡೀಚೇ ಪೋಟೀಚೇ ಖಾವವಿತ । ಜೇ ಸದಾ ಸೋಶೀ ನರಕಮೂತ । ತೇ ಮಾತೇಹೂನಿ ಸ್ತ್ರೀ ಆಪ್ತ । ಜಾಹಲೀ ಜಗಾಂತ ಮಾಯಾಮೋಹೇ ।೨೩೭॥ ಸ್ತ್ರೀಯಾ ಮೇಳವಿತಾ ಅಸಂಖ್ಯ ಮಿಳತೀ । ಪರೀ ಮಾತಾ ನ ಮಿಳೇ ತ್ರಿಜಗತೀ । ಐಸೇ ಜೇ ಸಜ್ಞಾನ ಜಾಣತೀ । ತೇಹೀ ಆಪ್ತ ಮಾನಿತೀ ಸ್ತ್ರೀಯೇತೇ ।೨೩೮॥ ಮಾತೇತೇ ಭಜತಾ ಭುಕ್ತಿ ಮುಕ್ತೀ । ಸ್ತ್ರೀಯೇತೇ ಭಜತಾ ನರಕಪ್ರಾಪ್ತೀ । ಐಸೇ ತೇ ಶಾಸ್ತ್ರಜ್ಞ ಜಾಣತೀ । ತೇಹೀ ಮಾತಾ ಉಪೇಕ್ಷಿತೀ ಸ್ತ್ರಿಕಾಮೇ ।೨೩೯॥ ಏವಂ ಸ್ತ್ರೀಕಾಮಾಚಿಯಾ ವ್ಯಾಪ್ತೀ । ಮಾಯಾ ವ್ಯಾಪಿಲೀ ತ್ರಿಜಗತೀ । ಸಜ್ಞಾನಹೀ ಪಾಡಲೇ ಭ್ರಾಂತೀ । ಸ್ತ್ರೀಕಾಮಾಸಕ್ತೀ ಮಹಾಮಾಯಾ ।೨೪೦॥ ಮಾನೂನಿ ವಿಷಯಾಂಚೇ ಸುಖ । ಕಾಮ್ಯ ಕರ್ಮ ಕರಿತಾ ದೇಖ । ತೇಣೇ ಅತಿದುಃಖೀ ಹೋತೀ ಲೋಕ । ದುಃಖದಾಯಕ ಕಾಮ್ಯಕರ್ಮ ।೨೪೧॥ ಕಾಮಿನೀಕಾಮೇ ಗೃಹಾಸಕ್ತೀ । ಪ್ರಾಣೀ ಪ್ರಾಣಾಂತೇ ಸ್ವಯೇ ಶಿಣವಿತೀ । ತ್ಯಾ ಶ್ರಮಾಚೀ ನಿದಾನಸ್ಥಿತೀ । ಸಾಂಗೇನ ತುಜಪ್ರತೀ ರಾಜಾಧಿರಾಜಾ ।೨೪೨॥ ನಿರ್ಮಳ ಜಳೇ ಭಿಂತೀ ಧುತಾ । ಜಳಾಚೀಚ ನಾಸೇ ನಿರ್ಮಳತಾ । ಹಾತ ಮಾಖತೀ ಧುತಲೇ ಮ್ಹಣತಾ । ಭಿಂತೀಹೀ ತತ್ತ್ವತಾ ನಿದಳ ಕೇಲೀ ।೨೪೩॥ ತೇವೀ ವಿಷಯಾಂಚೇನಿ ಸುಖೇ ಸುಖ । ನ ಪಾವತೀಚ ಬ್ರಹ್ಮಾದಿಕ । ವಿಷಯಾಚಾ ಜೇ ಮಾನಿತೀ ಹರಿಖ । ತೇ ಪರಮಮೂರ್ಖ ಪಶುದೇಹೀ ।೨೪೪॥

ನಿತ್ಯಾರ್ತಿದೇನ ವಿತ್ತೇನ ದುರ್ಲಭೇನಾತ್ಮಮೃತ್ಯುನಾ । ಗೃಹಾಪತ್ಯಾಪ್ತಪಶುಭಿಃ ಕಾ ಪ್ರೀತಿಃ ಸಾಧಿತೈಶ್ಚಲೈಃ ।೧೯॥

ಅರ್ಥ:- ಧನವು ದಿನದಿನಕ್ಕೆ ದುಃಖವನ್ನು ನಿರ್ಮಿಸಿವುದು. ಧನಗಳಿಸುವುದೂ ಕಠಿಣ ಕಾರ್ಯವಾಗಿರುವುದು. ಇದನ್ನು ಯಾವುದೇ ಪ್ರಕಾರದಿಂದಾಗಲೀ ಪ್ರಾಪ್ತಿ ಮಾಡಿಕೊಂಡರೂ ಆತ್ಮ ಹಿತವು ಸಾಧಿಸಲಾರದು. ಯಾರು ಈ ಚಕ್ರದಲ್ಲಿ ಬೀಳುವರೋ, ಅವರು ಜೀವನದ ನಿಜವಾದ ಆನಂದವನ್ನು ಮರೆಯುವರು. ಈ ಪ್ರಕಾರವಾಗಿ ಗೃಹ ಪುತ್ರ, ಸ್ವಜನ, ಪಶುಧನ ಇತ್ಯಾದಿ ಅನಿತ್ಯ ಮತ್ತು ನಾಶಿವಂತವಾಗಿರುವುವು. ಇದರಲ್ಲಿ ರಮಿಸಿದವನಿಗೆ ಸುಖ ಶಾಂತಿಯು ಹೇಗೆ ದೊರಕೀತು?

ರಾತಿದಿವಸು ನಿಜನಿಕಟೇ । ಮರಣೇಸೀ ಘೇತಾ ಝುಟೇ । ಕವಡೀಚೇ ಪ್ರಾಪ್ತೀ ನ ಭೇಟೇ । ಪ್ರಾಣಾಂತಕಷ್ಟೇ ದ್ರವ್ಯ ಜೋಡೇ ।೨೪೫॥ ಏವಂ ಕಷ್ಟೇ ಜೋಡಲೇ ಧನ । ತೇ ಮಹಾದುಃಖಾಚೇ ಜನ್ಮಸ್ಥಾನ । ಅರ್ಥ ಅನರ್ಥಾಚೇ ಅಧಿಷ್ಠಾನ । ನಿಜಾತ್ಮಮರಣ ನಿಜಮೂಳ ।೨೪೬॥ ದ್ರವ್ಯ ನಸತಾ ಉಪಾಯೇ ಶಿಣವೀ । ಜಾಹಲಿಯಾ ಸಂರಕ್ಷಣೇ ಆಧೀ ಲಾವೀ । ರಾತ್ರಿದಿವಸ ಹೃದ್ರೋಗ ಜೀವೀ । ಅವಿಶ್ವಾಸೇ ನಾಂದವೀ ಧನಲೋಭು ।೨೪೭॥

ಒಂಭತ್ತು ತಿಂಗಳವರೆಗೆ ಹೊಟ್ಟೆಯಲ್ಲಿ ಹೊತ್ತು ಹೆತ್ತ ತಾಯಿಯನ್ನು ಸಂಬಂಧವಿಲ್ಲದಂತೆ ಮಾಡಿ ಹೆಂಡತಿಯನ್ನು ಪರಮ ಆಪ್ತಳೆಂದು ತಿಳಿಯುವರು. ಈ ಪ್ರಕಾರವಾಗಿ ಈ ಮಾಯೆಯು ಸ್ತ್ರೀಕಾಮನೆಯಿಂದ ಪ್ರಬಲವಾಗುವುದು ।೨೩೬॥ ತಾನು ಹೊಟ್ಟೆಗೆ ತಿನ್ನದೇ, ಬಾಯಿಯ ತುತ್ತು ಇಟ್ಟು, ಸದಾವಕಾಲ ಮಲಮೂತ್ರಗಳನ್ನು ಬಳೆದ ಆ ತಾಯಿಗಿಂತ ಈ ಹೆಂಡತಿಯು ಮಾಯೆಯ ಯೋಗದಿಂದ ಜಗತ್ತಿನಲ್ಲಿ ಆಪ್ತಳಾಗಿ ಕುಳಿತಿರುವಳು ।೨೩೭॥ ಕೂಡಿಸಲು ಹೋದರೆ ಹೆಂಡಂದಿರನ್ನು ಸಾವಿರಾರು ಕೂಡಿಸಬಹುದು. ಆದರೆ ತಾಯಿ ಮಾತ್ರ ಮೂರು ಲೋಕಗಳಲ್ಲಿಯೂ ಸಿಗಲಾರಳು. ಇದನ್ನು ತಿಳಿದ ಜ್ಞಾನಿಯೂ ಸಹ ಹೆಂಡತಿಗೆ ಪರಮ ಆಪ್ತಳು ಎನ್ನುವನು ।೨೩೮॥ ತಾಯಿಯ ಸೇವೆಯನ್ನು ಮಾಡಿದರೆ, ಭುಕ್ತಿ ಮತ್ತು ಮುಕ್ತಿ ದೊರೆಯುವುದು. ಆದರೆ ಹೆಂಡತಿಯ ಸೇವೆಯನ್ನು ಮಾಡಿದರೆ ನರಕಪ್ರಾಪ್ತಿಯಾಗುವುದು. ಇದನ್ನು ತಿಳಿದ ಶಾಸ್ತ್ರಜ್ಞನು ಸಹ ಸ್ತ್ರೀಕಾಮನೆಯಿಂದ ತಾಯಿಯನ್ನು ತಿರಸ್ಕರಿಸುವನು ।೨೩೯॥ ಹೀಗೆ ಒಟ್ಟಿನಲ್ಲಿ ಸ್ತ್ರೀಕಾಮನೆಯ ವ್ಯಾಪ್ತಿಯಿಂದ ಮಾಯೆಯು ತ್ರಿಭುವನದಲ್ಲಿ ವಿಸ್ತಾರಗೊಂಡಿರುವುದು. ಇದು ಜ್ಞಾನಸಂಪನ್ನರಿಗೂ ಭ್ರಾಂತಿಯಲ್ಲಿ ನೂಕಿರುವುದು. ನಿಜವಾಗಿಯೂ ಸ್ತ್ರೀ ಕಾಮಾಸಕ್ತಿಯೇ ಮಹಾಮಾಯೆಯಾಗಿರುವುದು ।೨೪೦॥ ಇಲ್ಲಿ ನೋಡಿರಿ, ವಿಷಯಗಳಿಗೆ ಸುಖವೆಂದು ಭಾವಿಸಿ ಕಾಮ್ಯಕರ್ಮಗಳನ್ನು ಮಾಡಿದವರು ಅತ್ಯಂತ ದುಃಖಿಯಾಗುವರು. ಕಾರಣ ಕಾಮ್ಯಕರ್ಮವು ದುಃಖದಾಯಕವಾಗಿರುವುದು ।೨೪೧॥ ಸ್ತ್ರೀಕಾಮನೆಯಿಂದ ಗೃಹಾಸಕ್ತಿಯು ಬೆಳೆಯುವುದು ಮತ್ತು ಗೃಹಾಸಕ್ತಿಯಿಂದ ಪ್ರಾಣಿಗಳು ತಾವಾಗಿಯೇ ಜೀವಕ್ಕೆ ಕಷ್ಟಗೊಳಿಸುವರು. ಹೇ ರಾಜಧಿರಾಜನೇ, ಈ ಕಷ್ಟದಿಂದ ಕೊನೆಯಲ್ಲಿ ಯಾವ ಸ್ಥಿತಿಯಾಗುವುದೆಂಬುದನ್ನು ನಿನಗೆ ಹೇಳುವೆ ।೨೪೨॥ ನಿರ್ಮಲ ಜಲದಿಂದ ಮಣ್ಣಿನ ಗೋಡೆಯನ್ನು ತೊಳೆಯಲು ಹೊರಟರೆ, ನೀರು ರಾಡಿಯಾಗುವುದು, ತನ್ನ ಕೈಗಳು ಕೆಸರಾಗುವುವು ಮತ್ತು ನೀಟಾಗಿದ್ದ ಗೋಡೆಯು ಉರುಟಾಗುವುದು ।೨೪೩॥ ಅದರಂತೆ ಬ್ರಹ್ಮಾದಿಕರಿಗೂ ಸಹ ವಿಷಯದ ಸುಖದಿಂದ ಸುಖವು ಲಭಿಸಲಾರದು. ಹೀಗಿರುವ ವಿಷಯಗಳಿಗೆ ಆನಂದವೆಂದು ತಿಳಿಯುವವರು ಮಹಾಮೂರ್ಖರು ಅಥವಾ ಪಶುಸಮಾನರು ।೨೪೪॥

ಹಗಲೂ ರಾತ್ರಿ ಸಾಯುವವರೆಗೂ ಅದೆಷ್ಟೋ ಕಷ್ಟಪಟ್ಟರೂ ಕವಡಿಯಷ್ಟು ಸಹ ಪ್ರಾಪ್ತಿಯಾಗದು. ಹಣಗಳಿಸಲು ಪ್ರಾಣಾಂತಿಕ ಕಷ್ಟಪಡಬೇಕಾಗುವುದು ।೨೪೫॥ ಈ ಪ್ರಕಾರವಾಗಿ ಕಷ್ಟದಿಂದ ಹಣಗಳಿಸಿದರೂ ಅದು ಮಹಾದುಃಖದ ಜನ್ಮಸ್ಥಾನವಾಗಿರುವುದು. ದ್ರವ್ಯವು ಅನರ್ಥದ ಮೂಲವಾಗಿರುವುದು. ನಮ್ಮ ಸರ್ವನಾಶಕ್ಕೆ ಹಣವೇ ಮೂಲ ಕಾರಣವಾಗಿರುವುದು ।೨೪೬॥ ಹಣವಿಲ್ಲದಿದ್ದರೆ ಅದನ್ನು ಗಳಿಸಲು ಶ್ರಮಪಡಬೇಕಾಗುವುದು. ದುಡ್ಡು ಕೂಡಲು ಅದರ ರಕ್ಷಣೆಯ ಚಿಂತೆಯು ಬೆನ್ನು ಹತ್ತುವುದು. ಹಗಲು ರಾತ್ರಿ ಜೀವಕ್ಕೆ ಹೃದ್ರೋಗವೇ ಒದಗುವುದು. ದ್ರವ್ಯಲೋಭವು ಅವಿಶ್ವಾಸದಿಂದ ವರ್ತಿಸಲು ಕಾರಣವಾಗುವುದು ।೨೪೭॥

ಮಾಯಬಾಪಾಂಶೀ ಚೋರಿ ಕರವೀ । ಸ್ತ್ರೀಪುತ್ರಾಂಸೀ ಕಲಹೋ ಲಾವೀ । ಸಹೃದಾಂತೇ ದೂರಿ ದೂರಾವೀ । ಹೇ ದ್ರವ್ಯಾಚೀ ಪದವೀ ಸ್ವಾಭಾವಿಕ ।೨೪೮॥ ದ್ರವ್ಯಾಪಾಶೀ ಆಧಿ ವ್ಯಾಧೀ । ದ್ರವ್ಯಾಪಾಶೀ ದುಷ್ಟಬುದ್ಧೀ । ದ್ರವ್ಯಾಪಾಶೀ ಸಲೋಭ ಕ್ರೋಧೀ । ಅಸತ್ಯ ನಿರವಧೀ ದ್ರವ್ಯಾಪಾಶೀ ।೨೪೯॥ ದ್ರವ್ಯಾಪಾಶೀ ಅತಿವಿಕಲ್ಪ । ದ್ರವ್ಯಾಪಾಶೀ ವಸೇ ಪಾಪ । ದ್ರವ್ಯಾಪಾಶೀ ಅತಿಸಂತಾಪ । ಪೂರ್ಣ ದುಃಖರೂಪ ತೇ ದ್ರವ್ಯ ।೨೫೦॥ ಹೇ ದಾನ ತ್ಯಾಗಿತಾ ಫಳ ಗೋಮಟೇ । ಲೋಭಿಯಾ ನರಕಾ ನೇ ಹಟೇತಟೇ । ದ್ರವ್ಯಐಸೇ ಗಾ ವೋಖಟೇ । ಆನ ನ ಭೇಟೇ ತಿಹೀ ಲೋಕೀ ।೨೫೧॥ ನಳಿಯಾ ಚಣೆಯಾಂಚೇ ಆಶಾ । ವಾನರೇ ಮುಠೀ ಧರಣೇ ತೋಂಚಿ ಫಾಂಸಾ । ತೇವಿ ದ್ರವ್ಯದಾರಾಭಿಲಾಷಾ। ನರದೇಹದಶಾ ಅಧಃಪಾತೀ ।೨೫೨॥ ದ್ರವ್ಯ ಸಹಸಾ ನ ಮಿಳೇ ಪಾಹೀ । ಮಿಳೇ ತರೀ ಅನೀತಿ ಅಪಾಯೀ । ಯಾಲಾಗೀ ದ್ರವ್ಯಾಚಾ ಠಾಯೀ । ಸುಖ ನಾಹೀ ತ್ರಿಶುದ್ಧೀ ।೨೫೩॥ ಧನ ವೇಂಚೋನಿ ಫಾಡೋವಾಡೇ । ಘರ ಕರಿತೀ ವಾಡೇಕೋಡೇ । ತೇ ಅಧ್ರುವತ್ವೇ ಸವೇಂಚಿ ಪಡೇ । ಥಿತೇ ದ್ರವ್ಯ ಬುಡೇ ಆಯುಷ್ಯೇಸೀ ।೨೫೪॥ ಕರೂನಿ ಆಯುಷ್ಯಾಚಾ ಮಾತೇರಾ । ಮುದ್ದಲಸಿಂಚನೇ ಜೋಡಿಲೇ ಪುತ್ರಾ । ತ್ಯಾ ಪುತ್ರಾಚ್ಯಾ ಮರಣದ್ವಾರಾ । ದುಃಖದುರ್ಧರಾಮಾಜೀ ಬುಡತೀ ।೨೫೫॥ ಪ್ರಪಂಚೀಚೇ ಸುಹೃದ ಸಮಸ್ತ । ಜಂವ ಸ್ವಾರ್ಥ ತಂವ ಹೋತೀ ಆಪ್ತ । ಸ್ವಾರ್ಥವಿರೋಧೇ ತೇ ಅನಾಪ್ತ । ಹೋಊನಿ ಘಾತ ಸ್ವಹದಾ ಕರಿತೀ ।೨೫೬॥ ಕರೋನಿಯಾ ಅತಿಹವ್ಯಾಸು। ಮೇಳವಿತೀ ನಾನಾ ಪಶು । ತ್ಯಾಂಚಾ ಸವೇಂಚಿ ಹೋಯ ನಾಶು । ತೇಣೇ ದುಃಖೇ ತ್ರಾಸು ಗೃಹಸ್ಥಾಂಸೀ ।೨೫೭॥ ನಿಜದೇಹೋಚಿ ನಶ್ವರ ಯೇಥ । ತ್ಯಾಸೀ ಪ್ರಪಂಚ ನವ್ಹೇ ಗಾ ಶಾಶ್ವತ । ಅವಘೇ ಜಗಚಿ ಕಾಳಗ್ರಸ್ತ । ಇಹಲೋಕೀ ಸಮಸ್ತ ಠಕಿಲೇ ವಿಷಯೀ ।೨೫೮॥ ಮನುಷ್ಯದೇಹೋ ಕರ್ಮಭೂಮೀ ಪ್ರಾಪ್ತ । ತೋ ಲೋಕ ಮ್ಹಣತೀ "ಕರ್ಮಜಿತ" । ಹಾ ಜೈಸಾ ನಶ್ವರ ಯೇಥ । ತೈಸಾಚ ನಿಶ್ಚಿತ ನಶ್ವರ ಸ್ವರ್ಗು ।೨೫೯॥

ಏವಂ ಲೋಕಂ ಪರಂ ವಿದ್ಯಾನಶ್ವರಂ ಕರ್ಮನಿರ್ಮಿತಮ್ । ಸತುಲ್ಯಾತಿಶಯಧ್ವಂಸಂ ಯಥಾ ಮಂಡಲವರ್ತಿನಾಮ್ ।೨೦॥

ಅರ್ಥ :- ಧಾರ್ಮಿಕ ಕಾರ್ಯಗಳನ್ನು ಹಾಗೂ ಯಜ್ಞಗಳನ್ನು ಆಚರಿಸಿ ಮುಂದಿನ ಜನ್ಮದಲ್ಲಿ ಸಾಧಿಸುವ ಸ್ವರ್ಗಲೋಕದಲ್ಲಿಯೂ ವ್ಯಕ್ತಿಯು ಶಾಶ್ವತ ಸುಖವನ್ನು ಪಡೆಯಲಾರನು. ಭೌತಿಕ ಸ್ವರ್ಗದಲ್ಲಿಯೂ ಸಮಾನರ ವೈರ ಮತ್ತು ವರಿಷ್ಠರ ಈರ್ಷೆಯಿಂದ ಜೀವಿಯು ಕ್ಷೋಭೆಗೆ ಒಳಗಾಗುತ್ತಾನೆ. ವ್ಯಕ್ತಿಯ ಪುಣ್ಯವು ತೀರಿಹೋಗುತ್ತಿದ್ದಂತೆಯೇ ಸ್ವರ್ಗವಾಸಕ್ಕೆ ಚ್ಯುತಿ ಬರುತ್ತದೆ. ಸ್ವರ್ಗವಾಸಿಗಳು ತಮ್ಮ ಸ್ವರ್ಗ ಜೀವನಕ್ಕೆ ಎಂದು ನಾಶ ಒದಗುತ್ತದೆಯೋ ಎಂಬ ನಿರೀಕ್ಷೆಯಲ್ಲಿಯೇ ಭಯಭೀತರಾಗುತ್ತಾರೆ. ಹೀಗೆ ಅವರು ಸಾಮಾನ್ಯ ಪ್ರಜೆಗಳಿಂದ ಅಸೂಯಾ ಮಿಶ್ರಿತ ಮೆಚ್ಚುಗೆಯನ್ನು ಪಡೆದರೂ ಶತ್ರುರಾಜರಿಂದ ಸದಾ ಪೀಡನೆಗೆ ಒಳಗಾಗಿ ನಿಜವಾದ ಸುಖವನ್ನು ಎಂದೂ ಅನುಭವಿಸಲಾಗದ ರಾಜರನ್ನು ಹೋಲುತ್ತಾರೆ.

ತಾಯಿತಂದೆಗಳವರಿಗೆ ಕಳ್ಳತನ ಮಾಡಲು ಕಲಿಸುವುದು. ಸ್ತ್ರೀ ಪುತ್ರರಲ್ಲಿ ಕಲಹ ಆರಂಭಿಸುವುದು ಮತ್ತು ಇಷ್ಟಮಿತ್ರರನ್ನು ದೂರೀಕರಿಸುವುದು. ಹೀಗೆ ಹಣದ ಸ್ವಾಭಾವಿಕ ಗುಣವಾಗಿರುವುದು ।೨೪೮॥ ಹಣದಲ್ಲಿ ಆಧಿವ್ಯಾಧಿಯು, ಹಣದಲ್ಲಿ ದುಷ್ಟಬುದ್ಧಿಯು, ಹಣದಲ್ಲಿ ಲೋಭ ಮತ್ತು ಕ್ರೋಧವಿರುವುದು. ಹಣದಲ್ಲಿ ಸಾಕಷ್ಟು ಅಸತ್ಯವು ತುಂಬಿರುವುದು ।೨೪೯॥ ಹಣದಲ್ಲಿ ಅತಿಶಯವಾಗಿ ವಿಕಲ್ಪಗಳಿರುವುವು. ಹಣದಲ್ಲಿ ಪಾತಕಗಳ ವಸತಿ ಇರುವುದು. ಹಣದಲ್ಲಿ ಬಹಳಷ್ಟು ಸಂತಾಪವು ತುಂಬಿರುವುದು. ತಾತ್ಪರ್ಯವೇನೆಂದರೆ, ಹಣವು ಪೂರ್ಣವಾಗಿ ದುಃಖರೂಪವಾಗಿರುವುದು ।೨೫೦॥ ಇದೇ ಹಣವನ್ನು ದಾನಧರ್ಮಗಳಲ್ಲಿ ವಿನಿಯೋಗಿಸಿದರೆ ಉತ್ತಮ ಫಲವು ದೊರಕುವುದು. ಆದರೆ, ಹಣದ ಲೋಭಿಗೆ ಬಲಾತ್ಕಾರವಾಗಿ ನರಕಕ್ಕೆ ಒಯ್ಯುವುದು. ಈ ಹಣಕ್ಕಿಂತಲೂ ಕೆಟ್ಟ ವಸ್ತು ಈ ಮೂರು ಲೋಕಗಳಲ್ಲಿ ಇನ್ನೊಂದು ಇಲ್ಲ ।೨೫೧॥ ಮಂಗವು ಕಡಲೆಯ ಆಶೆಯಿಂದ ಬಲೆಯ ಹತ್ತಿರ ಬಂದು ಅದರ ನಲಿಕೆಯನ್ನು ಮುಷ್ಟಿಯಿಂದ ಹಿಡಿಯಲು ಅದರಲ್ಲಿ ಸಿಕ್ಕಿಕೊಳ್ಳುವುದು. ಅದರಂತೆ, ಕನಕ ಕಾಂತೆಯ ಅಭಿಲಾಷೆಯಿಂದ ನರದೇಹಕ್ಕೆ ಅಧೋಗತಿಯ ದಶೆಯು ಇರುವುದು ।೨೫೨॥ ಇಲ್ಲಿ ನೋಡಿರಿ; ಮೊದಲೇ ಹಣವು ತಕ್ಷಣವಾಗಿ ಕೂಡುವುದಿಲ್ಲ. ಒಂದು ವೇಳೆ ಕೂಡಿದರೆ, ಅದು ಅನೀತಿಯ ಮಾರ್ಗಕ್ಕೆ ನಮ್ಮನ್ನು ಹಚ್ಚುವುದು. ಆದ್ದರಿಂದಲೇ ಹಣದಲ್ಲಿ ನಿಜವಾಗಿಯೂ ಸುಖವು ಇರುವುದಿಲ್ಲ ।೨೫೩॥ ಬೇಕಾದಷ್ಟು ಹಣ ಖರ್ಚಿಸಿ, ಬಹಳ ಪ್ರೀತಿಯಿಂದ ಮನೆಯನ್ನು ಕಟ್ಟುವರು. ಆದರೆ ಅದು ಗಟ್ಟಿಯಾಗಿ ಇಲ್ಲದ್ದಕ್ಕೆ ಕೂಡಲೇ ಬಿದ್ದು ಹೋಗಿ ಹಣವನ್ನು ಅದರ ಸಂಗಡ ಆಯುಷ್ಯವೂ ವ್ಯರ್ಥವಾಗಿ ಹೊರಟುಹೋಗುವುದು ।೨೫೪॥ ತನ್ನ ಆಯುಷ್ಯವನ್ನು ವಿಧ್ವಂಸಗೊಳಿಸಿ, ಅಗಣಿತ ಹಣ ಖರ್ಚಿನಿಂದ ಪುತ್ರ ಪ್ರಾಪ್ತಿ ಮಾಡಿಕೊಂಡವನಿಗೆ, ಆ ಪುತ್ರನು ನಿಧನನಾದರೆ, ತಡೆಯಲಾರದ ದುಃಖದಲ್ಲಿ ಮುಳುಗುವನು ।೨೫೫॥ ಪ್ರಪಂಚದಲ್ಲಿ ಎಲ್ಲ ಸ್ನೇಹಿತರು ತಮ್ಮ ಸ್ವಾರ್ಥವನ್ನೇ ಸಾಧಿಸುತ್ತಿರುವರು. ಹಾಗೂ ಸ್ನೇಹಿತರಾಗಿಯೇ ಇರುವರು. ಅದೇ ಸ್ವಾರ್ಥಕ್ಕೆ ವಿರೋಧ ಉಂಟಾಗಲು, ಆ ಸ್ನೇಹಿತರೆ ಶತ್ರುಗಳಾಗಿ ಕೊಲ್ಲಲು ಹಿಂಜರಿಯುವುದಿಲ್ಲ ।೨೫೬॥ ಅತಿಶಯ ಪ್ರೀತಿಯಿಂದ ಆಕಳು, ಕುದುರೆ ಇತ್ಯಾದಿ ನಾನಾ ಪ್ರಕಾರದ ಪಶುಗಳನ್ನು ಸಾಕುವರು. ಅವು ಸತ್ತರೆ, ಈ ಗೃಹಸ್ಥನಿಗೆ ದುಃಖದಿಂದ ತ್ರಾಸಾಗುವುದು ।೨೫೭॥ ತನ್ನ ದೇಹವೇ ಅಶಾಶ್ವತವಾಗಿರಲು, ತಾನು ರಚಿಸಿದ ಪ್ರಪಂಚವಾದರೂ ಶಾಶ್ವತವಾಗಿ ಹೇಗೆ ಎಲ್ಲಿಂದ ಇರಬೇಕು? ಸರ್ವ ಜಗತ್ತನ್ನೇ ಕಾಲನು ಗ್ರಾಸಿಸಿರುವನು. ಇದನ್ನರಿಯದೇ, ಈ ಲೋಕದ ಜನರೆಲ್ಲರೂ ವಿಷಯಗಳಿಂದ ಮೋಸಕ್ಕೆ ಬಲಿಯಾಗುವರು ।೨೫೮॥ ಮನುಷ್ಯ ದೇಹವು ಕರ್ಮಭೂಮಿಯಲ್ಲಿ ಪ್ರಾಪ್ತವಾಗಿರುವುದು. ಇಲ್ಲಿ ಯಜ್ಞಯಾಗಾದಿಕ ಕರ್ಮಗಳನ್ನು ಮಾಡಿ ಸ್ವರ್ಗಲೋಕ ಪಡೆದೆನೆಂಬುವರು. ಆದರೆ, ಆ ಸ್ವರ್ಗವು ಇಹಲೋಕದಂತೆಯೇ ನಶ್ವರವಾಗಿರುವುದು ।೨೫೯॥

ಮನೀಧರೋನಿ ವಿಷಯಭೋಗ । ಇಹಲೋಕೀ ಕರಿತೀ ಯಾಗ । ಪುಣ್ಯ ಜೋಡೋನಿಯಾ ಸಾಂಗ । ಪಾವತೀ ಸ್ವರ್ಗ ನಿಜಪುಣ್ಯಯೋಗೇ ।।೨೬೦।। ಸ್ವರ್ಗಸುಖಾ ಇಂದ್ರ ಅಧಿಪತೀ । ತೋಹೀ ಪತನಾರ್ಥ ಧಾಕೇ ಚಿತ್ತೀ । ವಿಘ್ನೇ ಸೂಚೀ ತಾಪಸಾಂಪ್ರತೀ । ಸ್ವರ್ಗಸ್ಥಿತಿ ಅಪಾಯೀ ।।೨೬೧।। ಯಾಪರೀ ನಿಜಪುಣ್ಯೇ ಸ್ವರ್ಗಪ್ರಾಪ್ತೀ । ತ್ಯಾ ಲೋಕಾತೇ "ಪುಣ್ಯಜಿತ" ಮ್ಹಣತೀ । ತೇಹೀ ಪುಣ್ಯಕ್ಷಯೇ ಕ್ಷಯಾ ಜಾತೀ । ತೇಣೇ ಧಾಕೇ ಧಾಕತೀ ಸ್ವರ್ಗಸ್ಥ ಶ್ರೇಷ್ಠ ।।೨೬೨।। ಗಾಂಠೀ ಪುಣ್ಯ ಅಸತಾ ಚೋಖ । ಸ್ವರ್ಗಭೋಗೀ ಅಸೇಲ ಸುಖ । ಹೇಹೀ ವಾರ್ತಾ ಸಮೂಳ ಲಟಿಕ । ಸ್ವರ್ಗೀಚೇ ದುಃಖ ಐಕ ರಾಯಾ ।।೨೬೩।। ಸಮಾನ ಪುಣ್ಯೇ ಸಮಪದಪ್ರಾಪ್ತೀ । ತ್ಯಾಂಸೀ ಸ್ಪರ್ಧಾಕಲಹೋ ಕರಿತೀ । ಆಪಣಾಹೂನಿ ಜ್ಯಾ ಅಧಿಕ ಸ್ಥಿತೀ । ತ್ಯಾಂಚಾ ದ್ವೇಷ ಚಿತ್ತೀ ಅಹರ್ನಿಶೀ ।।೨೬೪।। ಜೈಸೇ ರಾಜೇ ಮಂಡಳವರ್ತೀ । ರಾಜ್ಯಲೋಭೇ ಕಲಹೋ ಕರಿತೀ । ತೈಶೀ ಸ್ವರ್ಗಸ್ಥಾ ಕಲಹಸ್ಥಿತೀ । ದ್ವೇಷೇ ಹೋತೀ ಅತಿದುಃಖೀ ।।೨೬೫।। ಪತನ ಭಯೇ ಕಲಹ - ದ್ವೇಷ ವೋಢೀ । ಕ್ಷಯಾತೇ ಪಾವೇ ಪುಣ್ಯಜೋಡೀ । ಅಧೋಮುಖ ಪಡತೀ ಬುಡೀ । ಯಾಜ್ಞಿಕೇ ಬಾಪುಡೀ ಚರಫಡತೀ ।।೨೬೬।। ಏವಂ ಸ್ವರ್ಗಸುಖಉಲ್ಹಾಸು । ಮಾನಿತೀ ತೇ ಕೇವಳ ಪಶು । ಪ್ರತ್ಯಕ್ಷ ತೇಥ ದ್ವೇಷ ನಾಶು । ಅಸಮಸಾಹಸು ನಿತ್ಯ ಕಲಹೋ ।।೨೬೭।। ಸೇವಿಲಾಚಿ ವಿಷಯೋ ನಿತ್ಯ ಸೇವಿತೀ । ಪರೀ ಕದಾ ನವ್ಹೇ ಮಾನಸೀ ತೃಪ್ತೀ । ತರೀ ಮಿಥ್ಯಾ ಮ್ಹಣೌನಿ ನೇಣತೀ । ಹೇ ಮೋಹಕ ಶಕ್ತೀ ಮಾಯೇಚೀ ।।೨೬೮।। ಜೈಸೇ ವೇಶ್ಯೇಚೇ ಸುಖ ಸಾಜಣೇ । ವಿತ್ತ ಘೇಊನಿ ವೋಸಂಡಣೇ । ತೇವೀ ವಿಷಯಾಚಾ ಸಂಗು ಧರಣೇ । ತಂವ ತಂವ ಹೋಣೇ ಅತಿದುಃಖೀ ।।೨೬೯।। ಯಾಲಾಗೀ ಉಭಯಭೋಗಉಪಾಯಾ । ಜೇ ಜೇ ಪ್ರವರ್ತಲೇಗಾ ರಾಯಾ । ತೇ ತೇ ಜಾಣ ಠಕಿಲೇ ಮಾಯಾ । ಥಿತೇ ಗೇಲೇ ವಾಯಾ ಉತ್ತಮ ಆಯುಷ್ಯ ।।೨೭೦।। ಕರ್ಮಭೂಮೀ ನರದೇಹ ಪ್ರಾಪ್ತ । ಹೇ ಪೂರ್ಣ ನಿಜಭಾಗ್ಯಾಚೇ ಮಥಿತ । ದೇವ ನರದೇಹ ವಾಂಛಿತ । ತೇ ದೇವ ಕೇಲೇ ವ್ಯರ್ಥ ವಿಷಯಾರ್ಥೀ ।।೨೭೧।। ಏವಂ ವಿಷಯಾಚೀ ಆಸಕ್ತೀ । ಮಾಯಾ ಠಕಿಲೇ ನೇಣೋ ಕಿತೀ । ಯಾಲಾಗೀ ವಿಷಯಾಚೇ ವಿರಕ್ತೀ । ಕರಾವೀ ಗುರುಭಕ್ತೀ ತೇಚಿ ಸಾಂಗೋ ।।೨೭೨।।

ಮನದಲ್ಲಿ ವಿಷಯ ಭೋಗದ ಇಚ್ಛೆಯನ್ನು ಹಿಡಿದು ಈ ಜಗತ್ತಿನಲ್ಲಿ ಯಜ್ಞಗಳನ್ನು ಮಾಡುವವರು ಮತ್ತು ಸಂಪೂರ್ಣವಾಗಿ ಪುಣ್ಯ ಸಂಪಾದನೆಯನ್ನು ಮಾಡಿ ಈ ಯೋಗದಿಂದ ಸ್ವರ್ಗವನ್ನು ಸೇರುವವರು ।।೨೬೦।। ಸ್ವರ್ಗಸುಖದ ಅಧಿಪತಿ ಇಂದ್ರನಿರುವನು. ಆದರೆ, ಅವನೂ ನಾನು ಪತನನಾಗುವೆನೆಂದು ಮನದಲ್ಲಿ ಭಯಪಡುತ್ತಿರುವನು. ತಪಸ್ವಿಗಳವರಿಗೆ ವಿಘ್ನಗಳನ್ನೊಡ್ಡುವನು. ಒಟ್ಟಿನಲ್ಲಿ ಸ್ವರ್ಗದಲ್ಲಿನ ಸ್ಥಿತಿಗತಿಯು ಅಪಾಯಕಾರಕವೇ ಆಗಿರುವುದು ।।೨೬೧।। ಈ ಪ್ರಕಾರವಾಗಿ ತಮ್ಮ ಪುಣ್ಯದಿಂದ ಸ್ವರ್ಗಪ್ರಾಪ್ತಿಯಾಗುವುದು. ಆದ್ದರಿಂದಲೇ ಈ ಲೋಕಕ್ಕೆ ಪುಣ್ಯಜೀತ ''ಲೋಕ'' ಎನ್ನುವರು. ಆದರೆ ಪುಣ್ಯವು ಕ್ಷಯವಾಗಲು ಅವರು ಕ್ಷಯವಾಗುವರು. ಆದ್ದರಿಂದ ಸ್ವರ್ಗಲೋಕದ ಶ್ರೇಷ್ಠ ಪುಣ್ಯವಂತರಿಗೂ ಈ ಭಯವು ಕಾಡುತ್ತಿರುವುದು ।।೨೬೨।। ಉತ್ತಮ ಪುಣ್ಯ ಇದ್ದರೆ ಸ್ವರ್ಗದಲ್ಲಿನ ಭೋಗದಲ್ಲಿ ಮಹಾಸುಖವಿದೆ ಎನ್ನಬಹುದು ಈ ಮಾತು ಸಹ ಸಂಪೂರ್ಣ ಸುಳ್ಳಾಗಿದೆ. ಹೇ ರಾಜನೇ, ಆ ಸ್ವರ್ಗದ ದುಃಖವನ್ನು ಹೇಳುವೆ, ಕೇಳು ।।೨೬೩।। ಸರಿಸಮಾನವಾದ ಪುಣ್ಯ ಇರುವವರಿಗೆ ಸರಿಸಮಾನವಾದ ಪದವಿಯ ಪ್ರಾಪ್ತಿಯಾಗುವುದು. ಹೀಗಾಗಲು ಅವರವರಲ್ಲಿಯೇ ಸ್ಪರ್ಧೆ, ಕಲಹ ಉಂಟಾಗುವುದು. ಮತ್ತು ತಮಗಿಂತಲೂ ಅಧಿಕವಾದ ಪದವಿಯನ್ನು ಪ್ರಾಪ್ತಮಾಡಿಕೊಂಡವರಲ್ಲಿ ಹಗಲು ರಾತ್ರಿ ದ್ವೇಷ ಮಾಡುವರು ।।೨೬೪।। ಈ ಲೋಕದಲ್ಲಿ ಮಾಂಡಲೀಕ ರಾಜರು ರಾಜ್ಯಲೋಭದಿಂದ ಕಲಹ ಮಾಡುವಂತೆ ಸ್ವರ್ಗಲೋಕದಲ್ಲಿರುವವರೂ ಈ ಪ್ರಕಾರದ ಕಲಹ ಮಾಡುತ್ತಿರುವರು ಮತ್ತು ಈ ದ್ವೇಷ ಭಾವನೆಯಿಂದ ಇವರು ಅತ್ಯಂತ ದುಃಖಿಗಳಾಗಿರುವರು ।।೨೬೫।। ತಮ್ಮ ಪತನದ ಭಯದಿಂದ ಕಲಹ ದ್ವೇಷ ಸಾಧಿಸುವರು. ಇದರಿಂದ ಇವರ ಪುಣ್ಯವು ಕ್ಷೀಣಗೊಳ್ಳುವುದು. ಪಾಪ! ಈ ಯಾಜ್ಞಿಕರು ಆಗ ಒದ್ದಾಡುತ್ತ ಅಧೋಮುಖರಾಗಿ ಕೆಳಗೆ ಬೀಳುವರು (ಭೂಮಿಯಲ್ಲಿ ಜನಿಸುವರು) ।।೨೬೬।। ಒಟ್ಟಿನಲ್ಲಿ ಸ್ವರ್ಗಸುಖದಲ್ಲಿ ಆನಂದವಿದೆ ಎಂದು ಭಾವಿಸುವವರು ಕೇವಲ ಪಶುಸಮಾನರು. ಏಕೆಂದರೆ ಅಲ್ಲಿ ದ್ವೇಷ, ನಾಶ ಮತ್ತು ಕಲಹ ಇವು ಪ್ರತಿನಿತ್ಯ ನಡೆದಿರುವುದು ।।೨೬೭।। ಇವರು ಸ್ವರ್ಗದಲ್ಲಿ ಸೇವಿಸುತ್ತಿರುವ ವಿಷಯ ಸುಖವನ್ನೇ ನಿತ್ಯವೂ ಸೇವಿಸುತ್ತಿರುವರು. ಆದರೆ ಅವರ ಮನದಲ್ಲಿ ಆಸೆಯು ಎಂದೂ ತೃಪ್ತಿಯಾಗುವುದೇ ಇಲ್ಲ. ಹೀಗಾದರೂ ಇದು ಮಿಥ್ಯೆಯಾಗಿದೆ ಎಂದು ಇವರಿಗೆ ತಿಳಿಯುವುದಿಲ್ಲ. ಇದು ಮಾಯೆಯ ಮೋಹಕ ಶಕ್ತಿಯಾಗಿರುವುದು ।।೨೬೮।। ಸೂಳೆಯ ಸುಖವು ಎಂತಹದ್ದು ಎಂದರೆ ಆಕೆಯು ಎಲ್ಲ ಹಣ ಕಸೆದುಕೊಂಡು ಕೊನೆಗೆ ಹೊರ ದಬ್ಬುವಳು. ಅದರಂತೆ ವಿಷಯಸುಖಕ್ಕೆ ಅಂಟಿಕೊಂಡಿರುವವರು ಅಧಿಕಾಧಿಕವಾಗಿಯೇ ದುಃಖ ಮಾತ್ರ ಪಡೆಯಬೇಕಾಗುವುದು ।।೨೬೯।। ಆದ್ದರಿಂದ ಹೇ ರಾಜನೇ, ಈ ಎರಡೂ ಲೋಕಗಳಲ್ಲಿ ಸಿಗುವ ಭೋಗಗಳಿಗಾಗಿ ಸಾಧನೆಯಲ್ಲಿ ನಿರತರಾದವರೆಲ್ಲರೂ ಮಾಯೆಯ ಬಲೆಯಲ್ಲಿ ಸಿಲುಕಿರುವರು ಮತ್ತು ಅವರ ಉತ್ತಮವಾದ ಆಯುಷ್ಯವು ವ್ಯರ್ಥ ಹೋಯಿತೆಂದು ತಿಳಿ ।।೨೭೦।। ಈ ಕರ್ಮಭೂಮಿಯಲ್ಲಿ ನರದೇಹವು ಪ್ರಾಪ್ತವಾಗುವಿಕೆಯು ಅವರ ಭಾಗ್ಯದ ಪೂರ್ಣಸಾರವಾಗಿರುವುದು. ದೇವತೆಗಳು ಸಹ ನರದೇಹದ ಇಚ್ಛೆಯನ್ನು ಮಾಡುವರು. ಆದರೆ ಆ ದೇವತೆಗಳು ಸಹ ವಿಷಯಸುಖದ ನಾದದಲ್ಲಿ ವ್ಯರ್ಥ ಹೋಗುವರು ।।೨೭೧।। ಈ ರೀತಿಯಲ್ಲಿ ವಿಷಯಾಸಕ್ತಿಯ ಕಾರಣದಿಂದ ಮಾಯೆಯು ಅದೆಷ್ಟು ಜನರನ್ನು ಮೋಸಗೊಳಿಸಿದೆಯೋ ತಿಳಿಯದು. ಆದ್ದರಿಂದಲೇ ವಿಷಯದಲ್ಲಿ ವಿರಕ್ತಿ ಹುಟ್ಟಲು ಗುರುಭಕ್ತಿಯನ್ನು ಮಾಡಬೇಕಾಗುವುದು. ಅದನ್ನೇ ಈಗ ಹೇಳುವೆ ।।೨೭೨।।

ತಸ್ಮಾದ್ಗುರುಂ ಪ್ರಪದ್ಯೇತ ಜಿಜ್ಞಾಸುಃ ಶ್ರೇಯ ಉತ್ತಮಮ್ ।
ಶಾಬ್ದೇ ಪರೇ ಚ ನಿಷ್ಣಾತಂ ಬ್ರಹ್ಮಣ್ಯುಪಶಮಾಶ್ರಯಮ್ ॥೨೧॥

ಅರ್ಥ:- ಆದ್ದರಿಂದ ನಿಜಸುಖವನ್ನು ತೀವ್ರವಾಗಿ ಬಯಸುವವರು ಸದ್ಗುರುಗಳಿಗೆ ಶರಣಾಗಬೇಕು. ದೀಕ್ಷೆಯನ್ನು ಪಡೆದು ಅವರನ್ನು ಆಶ್ರಯಿಸಬೇಕು. ಸಾವಧಾನವಾಗಿ ವಿಚಾರ ಮಾಡುವ ಮೂಲಕ ಶಾಸ್ತ್ರಗಳ ಸಿದ್ಧಾಂತಗಳನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವುದು ಮತ್ತು ಈ ಸಿದ್ಧಾಂತಗಳನ್ನು ಇತರರಿಗೆ ಮನದಟ್ಟು ಮಾಡಿಕೊಡುವ ಸಾಮರ್ಥ್ಯವನ್ನು ಹೊಂದಿರುವುದು ಸದ್ಗುರುಗಳ ಅರ್ಹತೆಯಾಗಿದೆ. ಸಕಲ ಲೌಕಿಕ ವಿಷಯಗಳನ್ನು ದೂರವಿರಿಸಿ ಭಗವಂತನಲ್ಲಿ ಆಶ್ರಯ ಪಡೆದಿರುವ ಅಂತಹ ಮಹಾ ಪುರುಷರೇ ಸದ್ಗುರುಗಳೆಂದು ತಿಳಿಯಬೇಕು .

ಜಾಣೋನಿ ವಿಷಯಾಂಚೇ ನಶ್ವರಪಣ । ಪಾವಾವಯಾಲಾಗೀ ಬ್ರಹ್ಮ ಪೂರ್ಣ । ಸದ್ಗುರೂಸೀ ಅನನ್ಯಶರಣ । ರಿಘಾವೇ ಸಂಪೂರ್ಣ ಶ್ರದ್ಧಾಯುಕ್ತ ॥೨೭೩॥ ಸದ್ಗುರುವಚನಮಾತ್ರೆ ಮಾಯಾ । ತರೇನ ಹಾ ನಿಶ್ಚಯೋ ರಾಯಾ । ಯೇಣೇ ಸದ್ಭಾವೇ ಲಾಗತೋ ಪಾಯಾ । ಪಾವಾವಯಾ ನಿಜಸ್ವಾರ್ಥು ॥೨೭೪॥ ''ಗುರು'' ಐಸೇ ಜೇ ಮ್ಹಣಣೇ । ತೇಹೀ ಆಹೇ ಬಹುಸಾಲಪಣೇ । ಏಕ ರಾಯಾ ತೀ ಲಕ್ಷಣೇ । ತುಜ ಕಾರಣೇ ಸಾಂಗೇನ ॥೨೭೫॥ ಏಕ ವೇದಾಧ್ಯಯನ ಗುರೂ । ಏಕ ವಾಖ್ಯಾನದಾನೀ ಉದಾರೂ । ಏಕ ಜೋತಿಷ್ಯಜ್ಞಾನೀ ಗಂಭೀರೂ । ಪರೀ ತೇ ಸದ್ಗುರು ನ ಮ್ಹಣತೀ ಜ್ಞಾತೇ ॥೨೭೬॥ ಏಕ ಆಗ ಮೋಕ್ತ ಮಂತ್ರ ಉಪಾಸಿತೀ । ಜಪ ಕರಾವಾ ವಿಧಾನಯುಕ್ತೀ । ಮಗ ಕೈ ಹೋಈಲ ನಿಜಪ್ರಾಪ್ತೀ । ಹೇ ನಕಳೇ ನಿಶ್ಚಿತೀ ಗುರುಶಿಷ್ಯಾ ॥೨೭೭॥ ಏಕ ವಾಯುಧಾರಣಾ ಲಾವಿತೀ । ಏಕ ನಾನಾ ಲಕ್ಷೇ ದಾವಿತೀ । ಏಕ ಹಠಯೋಗೇ ಗೋವಿತೀ । ಏಕ ಬೈಸವಿತೀ ಮಹಾಮುದ್ರಾ ॥೨೭೮॥ ಏಕ ಬ್ರಹ್ಮಾನುವಾದೇ ಚೋಖಟು । ತತ್ತ್ವನಿರೂಪಣೇ ಉದ್ಭಟು । ವೈರಾಗ್ಯಬೋಲಿಕಾ ವರಿಷ್ಠೂ । ಉಪಜವೀ ವಿಟು ಉಭಯಭೋಗಾಂಚಾ ॥೨೭೯॥ ಕೈಸೇ ನಿರೂಪೀ ಶುದ್ಧ ಬ್ರಹ್ಮ । ಐಕೋನಿ ಸಾತ್ತ್ವಿಕಾ ಯೇತ ಪ್ರೇಮ । ಪರೀ ನಿಜಹೃದಯೀಚಾ ಭ್ರಮ । ನಿರಸೇ ತೇ ವರ್ಮ ನೇಣೇಚಿ ॥೨೮೦॥ ಜೇವೀ ಗುಳ-ಉಂಸಾಂಚಾ ಘಾಣಾ । ತೋಂಡೀಚಾ ರಸು ಭರೇ ಭಾಣಾ । ಶಬ್ದ ಚೋಪಟೇ ಭರೋನಿ ವದನಾ । ಕರೀ ಪರಿಭ್ರಮಣಾ ಕರಕರಿತು ॥೨೮೧॥ ಐಸಾ ಜೋ ಕಾ ಶಬ್ದಜ್ಞಾನೀ । ಉತ್ತಮ ವ್ಯಾಖ್ಯಾತಾ ಜ್ಞಾನಗುಣೀ । ತೋ ಜನ ರಂಜವೀ ನಿರೂಪಣೀ । ಸ್ವಯೇ ಕೋರಡೇಪಣೇ ಕರಕರಿತು ॥೨೮೨॥ ಯೋಗಕ್ಷೇಮ ಚಾಲೇ ಗೋಮಟಾ । ಲೌಕಿಕೀ ಥೋರ ಪ್ರತಿಷ್ಠಾ । ತೇಥೇ ನಿಜಪ್ರಾಪ್ತೀಚೀ ಉತ್ಕಂಠಾ । ನ ವಚೇ ವರಿಷ್ಠಾ ಶಿಷ್ಯಾಂಚೀ ॥೨೮೩॥

ವಿಷಯ ಸುಖವು ಕ್ಷಣಿಕವಾಗಿದೆ ಎಂದು ಅರಿತು ಪೂರ್ಣ ಬ್ರಹ್ಮದ ಪ್ರಾಪ್ತಿಗಾಗಿ ಪೂರ್ಣ ಶ್ರದ್ಧೆಯಿಂದ, ಅನನ್ಯ ಭಾವದಿಂದ ಸದ್ಗುರುವಿಗೆ ಶರಣಾಗಬೇಕು ॥೨೭೩॥ ಹೇ ರಾಜನೇ, ಕೇವಲ ಸದ್ಗುರುವಿನ ವಚನೋಕ್ತಿಯಿಂದ ನಾನು ಈ ಮಾಯೆಯನ್ನು ಗೆಲ್ಲುವೆನು ಎಂಬ ನಿಶ್ಚಯದಿಂದ ಏಕನಿಷ್ಠವಾದ ಭಕ್ತಿಯನ್ನು ಧರಿಸಿ, ಮುಮುಕ್ಷು ತನ್ನ ಇಷ್ಟಪ್ರಾಪ್ತಿಗಾಗಿ ಗುರುವಿನ ಚರಣಗಳನ್ನು ಹಿಡಿಯುವನು ॥೨೭೪॥ ''ಗುರು'' ಎನ್ನುವುದರಲ್ಲಿಯೂ ಅನೇಕ ಪ್ರಕಾರಗಳಿವೆ. ಹೇ ರಾಜನೇ, ಈ ಪ್ರಕಾರಗಳೆಲ್ಲವನ್ನೂ ನಿನಗೆ ಹೇಳುವೆನು, ಕೇಳು ॥೨೭೫॥ ಕೆಲವರು ವೇದಾಧ್ಯಯನ ಹೇಳುವ ಗುರುಗಳಾಗಿರುವರು. ಕೆಲವರು ಭಾಷಣ ಮಾಡುವುದರಲ್ಲಿ ನಿಷ್ಣಾತರಿರುವರು. ಕೆಲವರು ಜೋತಿಷ್ಯ ಜ್ಞಾನದಲ್ಲಿ ನಿಪುಣರಾಗಿರುವರು ಆದರೆ, ತಿಳಿದವರು ಇವರಿಗೆ ಗುರು ಎನ್ನುವುದಿಲ್ಲ ॥೨೭೬॥ ಕೆಲವರು ಆಗಮೋಕ್ತ ಮಂತ್ರಗಳ ಉಪಾಸಕರಿರುವರು. ಇವರು ಶಿಷ್ಯನಿಗೆ ಮಂತ್ರವನ್ನು ಕೊಟ್ಟು ಅದರ ವಿಧಿಪೂರ್ವಕವಾಗಿ ಜಪಿಸಲು ಹೇಳುವರು. ಆದರೆ ಇದರಿಂದ ಆತ್ಮಾನುಭವದ ಪ್ರಾಪ್ತಿಯು ಎಂದಾಗಬೇಕು? ಇದು ಈ ಗುರುಶಿಷ್ಯರಿಬ್ಬರಿಗೂ ತಿಳಿಯುವುದಿಲ್ಲ ॥೨೭೭॥ ಕೆಲವರು ವಾಯುಧಾರಣೆ (ಪ್ರಾಣಾಯಾಮ ಇತ್ಯಾದಿ) ಗಳನ್ನು ಕಲಿಸುವರು. ಕೆಲವರು ಅನೇಕ ಪ್ರಕಾರಗಳ ಧ್ಯಾನಗಳನ್ನು ತೋರಿಸಿಕೊಡುವರು. ಕೆಲವರು ಹಠಯೋಗದ ಹುಚ್ಚು ಹಿಡಿಸುವರು. ಕೆಲವರು ಭೂಚರೀ, ಖೇಚರೀ, ಷಣ್ಮುಖೀ, ಶಾಂಭವೀ ಇತ್ಯಾದಿ ಮುದ್ರೆಗಳನ್ನು ಹಚ್ಚಿ ಕೂಡ್ರಿಸುವರು ॥೨೭೮॥ ಕೆಲವರು ಬ್ರಹ್ಮ ಸಂವಾದಗಳಲ್ಲಿ ನುರಿತವರಾಗಿರುವರು, ಕೆಲವರು ತತ್ವಗಳ ನಿರೂಪಣೆಯಲ್ಲಿ ಸಹಾಸಿಗಳಾಗಿರುವರು. ಕೆಲವರು ವೈರಾಗ್ಯದ ವಿವರಣೆ ವರ್ಣಿಸಲು ಬಲು ವರಿಷ್ಠರು. ಇವರ ಭಾಷಣ ಕೇಳಿದರೆ ಉಭಯ ಭೋಗಗಳ ಹೇಸಿಕೆಯಾಗುವುದು ॥೨೭೯॥ ಶುದ್ಧ ಬ್ರಹ್ಮದ ನಿರೂಪಣೆಯನ್ನು ಅತಿ ಉತ್ತಮವಾಗಿ ಮಾಡುವರು. ಇದನ್ನು ಕೇಳುವ ಸಾತ್ವಿಕ ಮನುಷ್ಯನಿಗೆ ಪ್ರೇಮ ಉಂಟಾಗುವುದು. ಆದರೆ, ಹೇಳುವವನಿಗೆ ತನಗಿರುವ ಅಂತಃಕರಣದ ಭ್ರಮೆಯು ಹೇಗೆ ಹೋದಿತೆಂಬುದು ಮಾತ್ರ ತಿಳಿಯದು ॥೨೮೦॥ ಬೆಲ್ಲವನ್ನು ತಯಾರಿಸಲು ಹಾಕಿದ ಕಬ್ಬಿನ ಗಾಣವು ತನ್ನ ಮುಖದಿಂದ ಕಬ್ಬಿನ ರಸವನ್ನು ಕೆಳಗಿರುವ ಪಾತ್ರೆಯಲ್ಲಿ ತುಂಬುತ್ತಿರುವುದು. ತಾನು ಮಾತ್ರ ಕಬ್ಬಿನ ಸಿಪ್ಪೆಗಳನ್ನು ಮುಖದಲ್ಲಿ ಹಿಡಿದು ಕರಕರವೆಂದು ಶಬ್ದ ಮಾಡುತ್ತ ತಿರುಗುತ್ತಿರುವುದು ॥೨೮೧॥ ಅದರಂತೆ ಕೇವಲ ಶಬ್ದಜ್ಞಾನಿಯು ಈ ಜ್ಞಾನದ ನಿರೂಪಣೆಯನ್ನು ಉತ್ತಮವಾಗಿ ಮಾಡುವನು. ಇವನು ತನ್ನ ವಕ್ತೃತ್ವದಿಂದ ಜನರ ಮನೋರಂಜನೆಯನ್ನು ಚೆನ್ನಾಗಿಯೇ ಮಾಡುವನು. ಆದರೆ ತಾನು ಮಾತ್ರ ಶುಷ್ಕ (ಬರಿದಾಗಿ) ಇದ್ದು ಕೇವಲ ಬಡಬಡಿಸುತ್ತಿರುವನು ॥೨೮೨॥ ಅವನ ಯೋಗಕ್ಷೇಮವು ಯಥಾಸ್ಥಿತಿ ನಡೆದಿರುವುದು. ಇವನಿಗೆ ಬೇಕಾಗಿರುವ ಪ್ರತಿಷ್ಠೆಯೂ ದೊರಕುವುದು ಆದರೆ ಈತನಿಂದ ವರಿಷ್ಠನಾದ ಶಿಷ್ಯನಿಗೆ ಆತ್ಮಪ್ರಾಪ್ತಿಯ ತೀವ್ರ ಅಪೇಕ್ಷೆಯು ಮಾತ್ರ ಪೂರ್ಣವಾಗುವುದಿಲ್ಲ ॥೨೮೩॥

ಜೇವೀ ಅಮೃತ ಮ್ಹಣತಾ । ಚವೀ ನ ಲಭೇ ಗಾ ಸರ್ವಥಾ । ತೇವೀ ಶಾಬ್ದಿಕ ಜ್ಞಾನಯೋಗ್ಯತಾ । ಅನುಭವವಾರ್ತಾ ಸ್ವಯೇ ನುಪಜೇ ।೧೮೪।। ಜೇಣೇ ಸ್ವಯೇ ಚಾಖಿಲೀ ನಾಹೀ ಚವೀ । ತೋ ದುಜಯಾತೇ ಗೋಡೀ ಕೇವೀ ಲಾವೀ । ಯಾಲಾಗೀ ಜೋ ಪೂರ್ಣಾನುಭವೀ । ತೋ ತಾರೀ ಸದ್ಭಾವೇ ಸಚ್ಛಿಷ್ಯಾಸೀ ।೧೮೫।। ಏವಂ ಗುರುಪಣಾಚೀ ವದಂತೀ । ಅಸೇ ಬಹುಪಣೇ ನಾಂದತೀ । ಜೋ ಕರೀ ಅಪರೋಕ್ಷ ಪ್ರಾಪ್ತೀ । ತ್ಯಾತೇ ಮ್ಹಣತೀ ಸದ್ಗುರುಸ್ವಾಮೀ ।೧೮೬।। ಜ್ಯಾಚೇನಿ ವಾಕ್ಯೇ ಅಸಂತತಾ । ನಿಃಶೇಷ ಮಾವಳೇ ತತ್ತ್ವತಾ । ತ್ಯಾಸೀಚಿ ಗಾ ಸದ್ಗುರುತಾ । ವೇದಶಾಸ್ತ್ರಾರ್ಥಾ ಪ್ರತಿಪಾದ್ಯ ।೧೮೭।। ಜೇ ಉಪದೇಶಿತೀ ಮಂತ್ರತಂತ್ರ । ತೇಹೀ ಪೂಜ್ಯತ್ವೇ ಅತಿಸಧರ । ಜೇಥೇ ನುರೇ ಪೂಜ್ಯ ಪೂಜಕತಾವಿಚಾರ । ತೋಚಿ ಸಾಚಾರ ಸದ್ಗುರುಸ್ವಾಮೀ ।೧೮೮।। ಏಕಾಚೇ ಶುದ್ಧ ಬ್ರಹ್ಮಜ್ಞಾನ । ವಸ್ತು ದೇಖೋನಿ ವಿರಾಲೇ ಮನ । ಮಾವಳಲೇ ದ್ವೈತಾಚೇ ಭಾನ । ಪಡಿಲೇ ಮೌನ ಚಹೂ ವಾಚಾ ।೧೮೯।। ಇಂದ್ರಿಯೇ ಟಂವಕಾರಿಲೀ ಸಮಸ್ತ । ಪ್ರಾಣ ಪಾಂಗುಳಲಾ ಜೇಥೀಂಚಾ ತೇಥ । ವಸ್ತು ದೇಖೋನಿಯಾ ಪರಮಾದ್ಭುತ । ಪಡಲೇ ತಾಟಸ್ಥ್ಯ ದೇಹಭಾವಾ ।೧೯೦।। ಐಸಾ ಜೋ ಆತ್ಮಾನುಭವೀ । ತ್ಯಾತೇ ಸದ್ಭಾವೇ ಶಿಷ್ಯ ವಿನವೀ । ತಂವ ತೋ ಪುಸೇ ನಾ ಸಮಜಾವೀ । ತಾಟಸ್ಥ್ಯಭಾವೀ ಅಬೋಲಣಾ ।೧೯೧।। ಏಕಾ ಅನುಭವಾ ಆಲೇ ಬ್ರಹ್ಮ । ಫಿಟಲಾ ಬಾಧ್ಯಬಾಧಕತೇಚಾ ಭ್ರಮ । ಮೋಡಲೇ ದ್ವೈತಭಾವಾಚೇ ಕರ್ಮ । ಜಗೀ ವಿಷಮ ಅಸೇನಾ ।೧೯೨।। ಪರೀ ಅಚುಂಬಿತ ವರ್ತಣೇ । ಅಘಟಮಾನ ಕರ್ಮ ಕರಣೇ । ಅತ್ಯಂತ ಉಗ್ರತಾ ಮಿರವಣೇ । ದುರ್ಧರಪಣೇ ಭಯಾನಕು ।೧೯೩।। ಆಪಣ ಆಪಣಿಯಾ ಮಾಜೀ ಹಸತ । ಧ್ವನಿತೇ ಬೋಲೇ ಪರಮಾರ್ಥ । ತೇಥೇ ಬೋಧೇನಾ ಶಿಷ್ಯಾಚೇ ಚಿತ್ತ । ಪಡೇ ದುಶ್ಚಿತ್ತ ತೇ ಠಾಯೀ ।೧೯೪।। ಐಸಾ ಜೋ ವರ್ತೇ ಬ್ರಹ್ಮಜ್ಞಾನೀ । ತ್ಯಾಚೇ ಬ್ರಹ್ಮಸ್ಥಿತೀ ನ ಮನೇ ಜನೀ । ಮಾ ಕೋಣ ಜಾಣಿಲ ಭಾವ ಧರೋನೀ । ಬೋಧಾಲಾಗೋನೀ ತ್ಯಾಪಾಶೀ ।೧೯೫।। ಆತಾ ಸದ್ಗುರೂಚೀ ಜೇ ನಿಜಲಕ್ಷಣೇ । ರಾಯಾ ಸಾಂಗೇನ ತುಜಕಾರಣೇ । ಜೇ ಐಕತಾ ಅಂತಃಕರಣೇ । ಸುಖೀ ಹೋಣೇ ಸದ್ಭಾವೇ ।೧೯೬।। ತರೀ ಜೋ ಕಾಯಾವಾಚಾಮನೇ । ಅತಿಕೃಪಾಳೂ ದೀನಾಕಾರಣೇ । ತೋಡೀ ಶಿಷ್ಯಾಚೇ ಭವಬಂಧನೇ । ಉತರವೀ ಶಾಣೇ ಅಹಂಕಾರಾಚೇ ।೧೯೭।।

''ಅಮೃತ'' ಎಂದು ಕೇವಲ ಶಬ್ದದಿಂದ ನುಡಿದರೆ ಅದರ ರುಚಿಯು ತಿಳಿಯಲಾರದು. ಅದರಂತೆ ಶಾಬ್ದಿಕ ಜ್ಞಾನದಿಂದ ಅನುಭವದ ವಾರ್ತೆಯೂ ಸಹ ಸ್ವತಃಕ್ಕೆ ಲಭಿಸದು ।೧೮೪।। ತಾನು ಸ್ವತಃ ರುಚಿಯನ್ನು ಅರಿಯದವನು ಅದರ ರುಚಿಯನ್ನು ಇತರರಿಗೆ ಹೇಗೆ ಹಚ್ಚುವನು? ಆದ್ದರಿಂದ ಪೂರ್ಣಾನುಭವಿಯು ಮಾತ್ರ ಸದ್ಭಾವನೆಯಿಂದ ಶಿಷ್ಯನ ಉದ್ಧಾರ ಮಾಡುವನು ।೧೮೫।। ಈ ಪ್ರಕಾರವಾಗಿ ಗುರುವಿನಂತೆ ತೋರುವವರು ಅನೇಕ ರೀತಿಯಲ್ಲಿರುವರು. ಆದರೆ ಅಪರೋಕ್ಷಾನುಭವದ ಪ್ರಾಪ್ತಿಯನ್ನು ಶಿಷ್ಯನಿಗೆ ಮಾಡಿಕೊಡುವವನಿಗೆ ಮಾತ್ರ ''ಸದ್ಗುರುಸ್ವಾಮೀ'' ಎನ್ನುವರು ।೧೮೬।। ಯಾರ ವಚನಗಳಿಂದ ''ಅಸತ್'' ''ಜಗದ್ಭಾಸ'' ಇವು ಸಂಪೂರ್ಣವಾಗಿ ಲಯವಾಗಿ ಮತ್ತು ''ಸತ್'' (ಸ್ವರೂಪಾನುಭವವು) ಉದಯಕ್ಕೆ ಬರುವುದೋ ಅವರಿಗೆ ಮಾತ್ರ ವೇದಶಾಸ್ತ್ರಗಳು ಸದ್ಗುರು ಎಂದು ಹೇಳಿವೆ ।೧೮೭।। ಕೆಲವರು ಮಂತ್ರತಂತ್ರಗಳ ಉಪದೇಶವನ್ನು ಮಾಡುವರು. ಇವರು ಸಹ ಪೂಜ್ಯತ್ವದಿಂದ ದೊಡ್ಡವರಾಗಿರುವರು. ಆದರೆ, ಯಾರಲ್ಲಿ ಪೂಜ್ಯ ಮತ್ತು ಪೂಜಕ ಈ ಭೇದವು ಇರುವುದಿಲ್ಲವೋ ಅವರೇ ನಿಜವಾಗಿಯೂ ''ಸದ್ಗುರುಸ್ವಾಮೀ'' ಹೌದು ।೧೮೮।। ಯಾರೋ ಒಬ್ಬರ ಬ್ರಹ್ಮಜ್ಞಾನವು ಶುದ್ಧವಾಗಿರುವುದು. ಬ್ರಹ್ಮಸ್ವರೂಪವನ್ನು ಕಂಡು ಅತನ ಮನವು ಕರಗಿಹೋಗುವುದು. ದ್ವೈತದ ಭಾವವು ಅಸ್ತಗೊಂಡು ನಾಲ್ಕೂ ವಾಣಿಗಳು ಮೌನವಾಗುವುವು ।೧೮೯।। ಆತನ ಎಲ್ಲ ಇಂದ್ರಿಯಗಳು ತಟಸ್ಥಗೊಳ್ಳುವುವು. ಪ್ರಾಣವು ಇದ್ದಲ್ಲಿಯೇ ಕುಂಠಿತವಾಗುವುದು. ಪರಮಾದ್ಭುತ ಪರಬ್ರಹ್ಮ ವಸ್ತುವನ್ನು ಕಾಣುತ್ತಲೇ ದೇಹಭಾವಕ್ಕೆ ತಟಸ್ಥತನವು ಬರುವುದು ।೧೯೦।। ಹೀಗಿರುವ ಆತ್ಮಾನುಭವಿಗೆ ಶಿಷ್ಯನು ಭಕ್ತಿಭಾವದಿಂದ ವಿನಂತಿಸುವನು. ಆದರೆ ಆತನು ಶಿಷ್ಯನಿಗೆ ಏನೆಂದು ವಿಚಾರಿಸಲಾರನು, ಅಥವಾ ಯಾವ ತಿಳಿವಳಿಕೆಯನ್ನು ಕೊಡಲಾರನು ತಟಸ್ಥಭಾವದಿಂದ ಮೌನನಾಗಿಯೇ ಇರುವನು ।೧೯೧।। ಯಾರೋ ಒಬ್ಬರಿಗೆ ಬ್ರಹ್ಮದ ಅನುಭವವು ಬಂದಿರುವುದು. ಬಾಧ್ಯಬಾಧಕದ ಭ್ರಮವು ಸಹ ಹೋಗಿರುವುದು. ದ್ವೈತಭಾವನೆಯ ಕರ್ಮಗಳೂ ಮುರಿದಿರುವುವು. ಜಗತ್ತಿನಲ್ಲಿ ಆತನಿಗೆ ಭಿನ್ನಭಾವವು ಎಲ್ಲಿಯೂ ಇರುವುದಿಲ್ಲ ।೧೯೨।। ಆದರೆ ಆತನ ವರ್ತನೆಯು ವಿಚಿತ್ರವಾಗಿ ಗರ್ವಿಷ್ಠನಂತೆ ತೋರುವುದು. ಇವನು ಏನಾದರೂ ಅಘಟಿತ ಕಾರ್ಯಗಳನ್ನು ಮಾಡುವನು. ಹಾಗೆಯೇ ಅತಿ ಉಗ್ರನಂತಾಗಿ ತೋರುವನು. ಭಯದಿಂದ ಈತನಲ್ಲಿ ಯಾರೂ ಹೋಗಲಾರರು ।೧೯೩।। ಈತನು ತನ್ನಲ್ಲಿ ತಾನೇ ನಗುವನು ಪರಮಾರ್ಥವನ್ನು ಧ್ವನಿತಾರ್ಥದಿಂದ ಹೇಳುವನು ಆದರೆ ಇದರಿಂದ ಶಿಷ್ಯನಿಗೆ ಯಾವ ಬೋಧೆಯೂ ಆಗಲಾರದು. ಹಾಗೂ ಮನದಲ್ಲಿ ಮನೋದುಶ್ಚಿತ್ತ ಉಂಟಾಗುವುದು ।೧೯೪।। ಈ ಪ್ರಕಾರವಾಗಿ ಬ್ರಹ್ಮಜ್ಞಾನಿಯು ವರ್ತಿಸಿದರೆ, ಆತನ ಬ್ರಹ್ಮಸ್ಥಿತಿಯು ಜನರಿಗೆ ಅರ್ಥವಾಗುವುದಿಲ್ಲ. ಹೀಗಾದರೆ ಜ್ಞಾನಪ್ರಾಪ್ತಿಗಾಗಿ ಭಕ್ತಿಯಿಂದ ಈತನಲ್ಲಿ ಯಾರು ಹೋಗಬೇಕು? ।೧೯೫।। ಹೇ ರಾಜನೇ, ಈಗ ಸದ್ಗುರುವಿನ ನಿಜವಾದ ಲಕ್ಷಣಗಳನ್ನು ನಿನಗೆ ಹೇಳುವೆ,ಕೇಳು ನೀನು ಇದನ್ನು ಅಂತಃಕರಣಪೂರ್ವಕವಾಗಿ ಶ್ರದ್ಧೆಯಿಂದ ಶ್ರವಣ ಮಾಡಿದರೆ ನೀನು ಸುಖಿಯಾಗುವಿ ।೧೯೬।। ಕಾಯಾ ವಾಚಾ ಮನದಿಂದ ದೀನ ಜನರಲ್ಲಿ ಅತ್ಯಂತ ಕೃಪೆದೋರುವವರು, ಶಿಷ್ಯನ ಸಂಸಾರ ಬಂಧನಗಳನ್ನು ಮುರಿದುಬಿಡುವವರು ಮತ್ತು ಅಹಂಕಾರದ ಸ್ಥಾನವನ್ನು ಎತ್ತಿಹಾಕುವವರು ।೧೯೭।।

ಜೋ ಶಬ್ದಜ್ಞಾನೇ ಪಾರಂಗತು । ಬ್ರಹ್ಮಾನಂದೇ ಸದಾ ಡುಲ್ಲತು । ಶಿಷ್ಯಪ್ರಬೋಧನೀ ಸಮರ್ಥು । ಯಥೋಚಿತು ನಿಜಭಾವೇ ॥೨೯೮॥ ಜ್ಯಾಚಾ ಜೈಸಾ ಜೈಸಾ ಭಾವೋ । ತೈಸಾ ತೈಸಾ ಕರೀ ಅನುಭವೋ । ತರೀ ಗುರುತ್ವಾಚಾ ಅಹಂಭಾವೋ । ಅಣುಮಾತ್ರ ಪಹಾ ಹೋ ಧರೀನಾ ॥೨೯೯॥ ಶಿಷ್ಯಾಪಾಸೂನಿ ಸೇವಾ ಘೇಣೇ । ಹೇ ಸ್ವಪ್ನೀಹೀ ನ ಸ್ಮರೇ ಮನೇ । ಶಿಷ್ಯಾಚೀ ಸೇವಾ ಸ್ವಯೇ ಕರಣೇ । ಪೂಜ್ಯತ್ವೇ ಪಾಹಣೇ ನಿಜಶಿಷ್ಯಾ ॥೩೦೦॥ ಶಿಷ್ಯ ದೇಖಾವಾ ಪುತ್ರಾಸಮಾನ । ಹೇ ಸ್ಮೃತಿವಾಕ್ಯ ಅಸೇ ಪ್ರಮಾಣ । ದೃಷ್ಟೀ ದೇಖೋ ನೇಣೇ ಗೌಣ । ಶಿಷ್ಯಾ ದೇಖೇ ಪೂರ್ಣ ಬ್ರಹ್ಮತ್ವೇ ॥೩೦೧॥ ಶಿಷ್ಯ ಸೇವಾ ಕರೀ ನಿಜಭಾವಾರ್ಥೇ । ಪರೀ ತೋ ಸೇವಕ ನ ಮ್ಹಣೇ ತ್ಯಾತೇ । ಜ್ಯಾಸೀ ಭಗವದ್ರೂಪ ಸರ್ವ ಭೂತೇ । ಶಿಷ್ಯ ವೇಗಳಾ ತೇಥೇ ಸೇವಕತ್ವೇ ನುರೇ ॥೩೦೨॥ ಐಸಾ ಮೀ ಏಕ ಮಹಾಯೋಗೀ । ಹೇಹೀ ನ ಮಿರವೀ ತೋ ಜಗೀ । ಗುರುತ್ವಾಚಾ ತಾಠಾ ಅಂಗೀ । ಸರ್ವಥಾ ಶಿಗೀ ಲಾಗೋ ನೇದೀ ॥೩೦೩॥ ಆಪುಲ್ಯಾ ಯೋಗಕ್ಷೇಮಾಚೇ ಸಾಂಕಡೇ । ಸ್ವಪ್ನೀಹೀ ನ ಘಾಲೀ ಶಿಷ್ಯಾಕಡೇ । ಶಿಷ್ಯಸಂಕಟ ಅತಿಗಾಢೇ । ನಿವಾರೀ ರೋಕಡೇ ನಿಜಾಂಗೇ ಜೋ ॥೩೦೪॥ ಮೀ ಏಕ ಅಕರ್ತಾ ನಿಜಾತ್ಮಯೋಗೀ । ಮ್ಹಣೌನಿ ವಿಷಯಾಂತೇ ನ ಭೋಗೀ । ಅಥವಾ ವಿಷಯೋ ನಿಃಶೇಷ ತ್ಯಾಗೀ । ಹಾಹೀ ಆಗ್ರಹೋ ಅಂಗೀ ಅಸೇನಾ ॥೩೦೫॥ ತೋ ವಿಷಯ ಭೋಗೀ ನಾ ಸ್ವಯೇ ತ್ಯಾಗೀ । ತೋ ಅದೃಷ್ಟಾಚ್ಯಾ ನಿಜವಿಭಾಗೀ । ಲಾವೂನಿಯಾ ದೇಹಾಚ್ಯಾ ಅಂಗೀ । ಪರಬ್ರಹ್ಮಯೋಗೀ ವಿಚರತ ॥೩೦೬॥ ದೇಹ ದೈವೇ ಪಾಲಖೀಮಾಜೀ ಚಢೇ । ಅಥವಾ ವಿಷ್ಠೇಮಾಜೀ ಪಡೇ । ತೇ ದೋಹೀಚೇ ಸುಖದುಃಖ ತ್ಯಾಕಡೇ । ಮೀ ಮ್ಹಣೋನಿ ಪುಢೇ ಕದಾ ನ ರಿಘೇ ॥೩೦೭॥ ದೇಹೀ ಅಸೋನಿ ನಾಹೀ ಅಹಂಕೃತೀ । ಗೇಹೀ ಅಸೋನಿ ನಾಹೀ ಗೃಹಾಸಕ್ತೀ । ಶೇಖೀ ಲೋಕಾಮಾಜೀ ಲೌಕಿಕಸ್ಥಿತೀ । ಸುಖೇ ವರ್ತತೀ ಲೋಕಾಸರಿಸೇ ॥೩೦೮॥ ತ್ಯಾಸೀ ಸ್ತ್ರೀ ಮ್ಹಣೇ ಮಾಝಾ ಭರ್ತಾ । ಪುತ್ರ ಮ್ಹಣೇ ಮಾಝಾ ಪಿತಾ । ಶಿಷ್ಯ ಮ್ಹಣತೀ ಗುರು ತತ್ತ್ವತಾ । ತೋ ತ್ಯಾಂಹೂನಿ ಪರತಾ ತ್ಯಾಮಾಜೀ ವರ್ತೇ ॥೩೦೯॥ ಐಶಿಯಾ ಪೂರ್ಣಪ್ರತೀತೀ । ಆಚರೋನಿ ದಾವೀ ಭಕ್ತೀ । ಹರಿ ಭಜಾವಾ ಸರ್ವಾ ಭೂತೀ । ಹೇಚ ಶಿಷ್ಯಾಪ್ರತೀ ಉಪದೇಶೀ ॥೩೧೦॥

ಹಾಗೆಯೇ ಶಬ್ದಜ್ಞಾನದಲ್ಲಿ ಪೂರ್ಣ ಪಾರಾಂಗತರು, ಸರ್ವಕಾಲದಲ್ಲಿಯೂ ಬ್ರಹ್ಮಾನಂದದಲ್ಲಿ ಲೋಲಾಡುವವರು ಮತ್ತು ಶಿಷ್ಯನಿಗೆ ಅವನ ಭಕ್ತಿಭಾವಕ್ಕೆ ಅನುಸರಿಸಿ ಯಥೋಚಿತ ಬೋಧ ಮಾಡಲು ಸಮರ್ಥರಾಗಿರುವರು ॥೨೯೮॥ ಯಾರಿಗೆ ಹೇಗೆ ಭಾವವಿರುವುದೋ ಹಾಗೆಯೇ ಅವರಿಗೆ ಅನುಭವವನ್ನು ಕೊಡುವರು. ಆದರೆ ಮನದಲ್ಲಿ ಗುರುತ್ವದ ಅಹಂಭಾವವನ್ನು ಅಣುಮಾತ್ರಕ್ಕೂ ಹಿಡಿಯುವುದಿಲ್ಲ ॥೨೯೯॥ ಶಿಷ್ಯನಿಂದ ಸೇವೆಯನ್ನು ಸ್ವೀಕರಿಸಬೇಕೆಂಬ ಭಾವವು ಇವರ ಸ್ವಪ್ನದಲ್ಲಿಯೂ ಸ್ಮರಿಸುವುದಿಲ್ಲ. ಇಷ್ಟೇ ಅಲ್ಲ ಇವರು ಶಿಷ್ಯನ ಸೇವೆಯನ್ನು ತಾವು ಸ್ವತಃ ಮಾಡುವರು ಮತ್ತು ಶಿಷ್ಯನಿಗೆ ಪೂಜ್ಯಭಾವದಿಂದ ಕಾಣುವರು ॥೩೦೦॥ ಶಿಷ್ಯನನ್ನು ಪುತ್ರಸಮಾನವಾಗಿ ಕಾಣಬೇಕೆಂದು ಸ್ಮೃತಿವಾಕ್ಯಗಳ ಪ್ರಮಾಣವಿರುವುದು. ಇದನ್ನು ಅನುಸರಿಸುತ್ತ ಶಿಷ್ಯನನ್ನು ಗೌಣ ದೃಷ್ಟಿಯಿಂದ ಕಾಣದೇ ಬ್ರಹ್ಮಭಾವದಿಂದ ನೋಡುವರು ॥೩೦೧॥ ಶಿಷ್ಯನು ತಾನು ಗುರುಭಕ್ತಿಯಿಂದ ಸೇವೆಯನ್ನು ಮಾಡುವನು. ಆದರೆ ಇವರು ಆತನನ್ನು ಸೇವಕನೆಂದು ತಿಳಿಯುವುದಿಲ್ಲ. ಇವರಿಗೆ ಸರ್ವಭೂತಗಳಲ್ಲಿ ಭಗವದ್ಭಾವವಿರುವುದು. ಅಂದಮೇಲೆ ಶಿಷ್ಯನು ಸೇವಕನಾಗಿ ಹೇಗೆ ಬೇರೆ ಉಳಿಯಲು ಸಾಧ್ಯ? ॥೩೦೨॥ ಇದಲ್ಲದೇ ತಾನೊಬ್ಬ ಈ ಪ್ರಕಾರದ ದೊಡ್ಡ ಯೋಗಿ ಎಂದು ಜಗತ್ತಿನಲ್ಲಿ ಮೆರೆಯುವುದಿಲ್ಲ. ಗುರುತ್ವದ ಅಹಂಕಾರವನ್ನು ಎಂದೂ ಬರಗೊಡುವುದಿಲ್ಲ ॥೩೦೩॥ ತನ್ನ ಜೀವನದಲ್ಲಿನ ಸಂಕಟಗಳನ್ನು ಶಿಷ್ಯನ ಮೇಲೆ ಸ್ವಪ್ನದಲ್ಲಿಯೂ ಹಾಕುವುದಿಲ್ಲ. ಇದಲ್ಲದೇ ಶಿಷ್ಯನ ಸಂಕಟಗಳನ್ನು ತಾನು ಸ್ವತಃ ತತ್ಕಾಲದಲ್ಲಿ ನಿವಾರಿಸುವನು. ॥೩೦೪॥ ನಾನೊಬ್ಬ ಅಕರ್ತನು ನಿಜಾತ್ಮಯೋಗೀಯಾಗಿರುವೆನು ಎಂದು ತಿಳಿದು ವಿಷಯಗಳನ್ನು ಭೋಗಿಸುವುದಿಲ್ಲ. ಅಥವಾ ವಿಷಯಗಳನ್ನು ಸಂಪೂರ್ಣವಾಗಿ ತ್ಯಜಿಸುವ ಆಗ್ರಹ ಹಿಡಿಯುವುದಿಲ್ಲ ॥೩೦೫॥ ಈತನು ವಿಷಯಗಳನ್ನು ಭೋಗಿಸುವುದೂ ಇಲ್ಲ, ಮತ್ತು ತ್ಯಜಿಸುವುದೂ ಇಲ್ಲ. ಈತನು ಪ್ರಾರಬ್ಧಾನುಸಾರವಾಗಿ ಬಂದ ಎಲ್ಲ ಭೋಗಗಳನ್ನು ದೇಹದಕಡೆ ಹಚ್ಚಿ ತಾನು ಪರಬ್ರಹ್ಮಯೋಗದಲ್ಲಿ ಮಗ್ನನಾಗಿರುವನು ॥೩೦೬॥ ದೈವಯೋಗದಿಂದ ದೇಹವು ಪಾಲಖಿಯಲ್ಲಿ ಏರಿ ಮೆರೆಯಲಿ, ಅಥವಾ ನರಕದಲ್ಲಿ ಬೀಳಲಿ, ಆದರೆ ಎರಡರಲ್ಲಿಯೂ ಸುಖದುಃಖಗಳನ್ನು ನಾನು ಭೋಗಿಸುವೆನೆಂಬುವ ಭಾವವಿರುವುದಿಲ್ಲ ॥೩೦೭॥ ದೇಹದಲ್ಲಿದ್ದರೂ ದೇಹಂಕಾರವಿರುವುದಿಲ್ಲ ಮತ್ತು ಮನೆಯಲ್ಲಿದ್ದರೂ ಮನೆಯ ಲೋಭವಿರುವುದಿಲ್ಲ . ಕೊನೆಯಲ್ಲಿ ಲೋಕದ ಜನರಲ್ಲಿ ಲೋಕರೀತಿಯಂತೆಯೇ ವರ್ತಿಸುವನು ॥೩೦೮॥ ಈತನಿಗೆ ಹೆಂಡತಿಯು ನನ್ನ ಪತಿ ಎನ್ನುವಳು, ಪುತ್ರನು ನನ್ನ ತಂದೆ ಎನ್ನುವನು ಮತ್ತು ಶಿಷ್ಯರು ಇವರು ನಮ್ಮ ಗುರುಗಳು ಎನ್ನುವರು. ಆದರೆ ಈತನು ಎಲ್ಲರಲ್ಲಿಯೂ ಬೇರೆಯಾಗಿಯೇ ವರ್ತಿಸುವನು ॥೩೦೯॥ ಹೀಗೆ ಪೂರ್ಣಾನುಭವದಿಂದ ವರ್ತಿಸುತ್ತ ಭಕ್ತಿಯನ್ನು ಆಚರಿಸಿ ತೋರಿಸುವನು. (ಸರ್ವ ಭೂತಮಾತ್ರರಲ್ಲಿ ಹರಿಯನ್ನೇ ಕಾಣಬೇಕು. ಆತನ ಭಜನೆಯನ್ನು ಮಾಡಬೇಕು. ಹೀಗೆಂದು ಈತನು ತನ್ನ ಶಿಷ್ಯರಿಗೆ ಬೋಧಿಸುವನು ॥೩೧೦॥)

ಹೀ ಸದ್ಗುರೂಚಿ ನಿಜಲಕ್ಷಣೇ । ಪಂಡಿತಾ ನ ಕಳತೀ ಜ್ಞಾತೇಪಣೇ । ಪೂರ್ಣಾನುಭವೀ ಜಾಣತೀ ಖುಣೇ । ಇತರಾಂಚೇ ಜಾಣಣೇ ಪಾಂಗುಳೇ ತೇಥ ।೩೧೧॥ ತ್ಯಾಚೇ ಗುರುತ್ವಾಚೀ ವೋಳಖಣ । ಅಂಗೀ ನಿಜಶಾಂತಿ ಪೂರ್ಣ । ಹೇ ಸದ್ಗುರುತ್ವಾಚೇ ಲಕ್ಷಣ । ಮುಖ್ಯ ಭೂಷಣ ಹೇಚಿ ರಾಯಾ ।೩೧೨॥ ಜಗೀ ಶಾಂತಿ ಜಾಲೀ ಪರದೇಶೀ । ಕೋಠೇಹೀ ಠಾವೋ ನ ಮಿಳೇ ತಿಶೀ । ತೇ ಆಲೀ ಸದ್ಗುರುಪಾಯಾಪಾಶೀ । ಸುಖವಾಸಾಸೀ ವಸಾವಯಾ ।೩೧೩॥ ಯಾಪರೀ ಸದ್ಗುರುಪಾಶೀ ಶಾಂತೀ । ಸ್ವಯೇ ಆಲೀ ಸುಖವಾಸವಸ್ತೀ । ಜೇವೀ ಕಾ ಮೋಹರಾಆಂತೌತೀ । ಸ್ವಾನಂದೇ ಕ್ರೀಡತೀ ಕನ್ಯಾ ಜೈಶೀ ।೩೧೪॥ ಜಾಣೋನಿ ವೇದಶಾಸ್ತ್ರ ನಿಶ್ಚಿತೀ । ಜೋ ನ ಮಿರವೀ ಗಾ ವ್ಯುತ್ಪತ್ತೀ । ಜ್ಯಾಸೀ ಅಪರೋಕ್ಷೀ ಪೂರ್ಣ ಶಾಂತೀ । ತೋ ಸದ್ಗುರುಮೂರ್ತಿ ನಿಶ್ಚಯೇ ರಾಯಾ ।೩೧೫॥ ಝಣೇ ಶ್ರೋತೇ ಕೋಪತೀ ಯೇಥ । ಮ್ಹಣತೀಲ ಗ್ರಂಥ ವಾಢವಿಲಾ ವ್ಯರ್ಥ । ''ನಿಷ್ಣಾತ'' ಯಾ ಪದಾಚಾ ಅರ್ಥ । ಕಾಢಿತಾ ತೇಥ ಸ್ಫುರಲಾ ಹೋ ।೩೧೬॥ ಹೇ ಮಾಝೀ ಗಾಂಠೀಚೀ ನವ್ಹೇ ಯುಕ್ತೀ । ಸದ್ಗುರು ಆಪಣ ಆಪಲೀ ಸ್ಥಿತೀ । ಬೋಲವೀತಸೇ ಗ್ರಂಥಾರ್ಥೀ । ಪದಪದಾರ್ಥೀ ಸಾಧೂನಿ ।೩೧೭॥ ತರೀ ಸದ್ಗುರೂಚೀ ಲಕ್ಷಣೇ । ನ ವರ್ಣವತೀ ಅಗಾಧಪಣೇ । ವೇದ ವೇಡಾವಲೇ ಮುಕೇಪಣೇ । ತೇಥೇ ಮಾಝೀ ಬೋಲಣೇ ಸರೇ ಕೇವೀ ।೩೧೮॥ ಯೇಥ ಆಶ್ಚರ್ಯ ಕೈಸೇ ದೇಖಾ । ಶ್ರೀಭಾಗವತ ದೇಶಭಾಖಾ । ಪರಮಾರ್ಥು ಸಾಧಿಲಾ ನೇಟಕಾ । ತುಷ್ಟಲಾ ನಿಜಸಖಾ ಜನಾರ್ದನಸ್ವಾಮೀ ।೩೧೯॥ ಏಕಾ ಜನಾರ್ದನಾ ಶರಣ । ತ್ಯಾಚೀ ಜೈ ಹೋಯ ಕೃಪಾ ಪರಿಪೂರ್ಣ । ತ್ಯಾ ದೇಹೀ ಅಸತಾ ದೇಹಬಂಧನ । ನಾತಳೇ ಜಾಣ ಗುರುಭಕ್ತಾ ।೩೨೦॥ ಜ್ಯಾಚೇ ಸೇವಿತಾ ನಿಜಚರಣ । ದೇಹೀ ನ ಭಾಧೀ ದೇಹಬಂಧನ । ತ್ಯಾಸೀ ಜಾಹಲಿಯಾ ಅನನ್ಯ ಶರಣ । ದೇ ಅಗಾಧ ಕೋಣ ಹೇ ನ ಕಳೇ ವೇದಾ ।೩೨೧॥ ನ ಕರಿತಾ ಸದ್ಗುರುಭಕ್ತೀ । ಕದಾ ನವ್ಹೇ ಪರಮಾರ್ಥಪ್ರಾಪ್ತೀ । ಯಾಲಾಗೀ ಸದ್ಗುರುಭಕ್ತೀ । ಬೋಲಿಲೀ ಗ್ರಂಥೀ ಶಿಷ್ಯಹಿತಾರ್ಥ ।೩೨೨॥ ಯಾಲಾಗೀ ಪೂರ್ಣ ಸದ್ಗುರುಪಾಶೀ । ಅನನ್ಯ ಶರಣ ಹೋತಾ ತ್ಯಾಸೀ । ತೋ ಸದ್ಭಾವೇ ನಿವವೀ ಶಿಷ್ಯಾಸೀ । ನಿಜಬೋಧೇಸೀ ಯಥಾರ್ಥ ।೩೨೩॥ ಸದ್ಗುರು ಸ್ಥಿತೀಚೇ ನಿರೂಪಣ । ರಾಯಾ ಸಾಂಗಿತಲೇ ಸಂಪೂರ್ಣ । ಆತಾ ಶಿಷ್ಯಾಚೇ ಲಕ್ಷಣ । ಸಾವಧಾನ ಅವಧಾರೀ ।೩೨೪॥

ಹೀಗೆ ನಿಜವಾದ ಸದ್ಗುರುವಿನ ಲಕ್ಷಣವಾಗಿರುವುದು. ಆದರೆ ನಾನು ಜ್ಞಾನಿ ಎಂಬ ಅಹಂಕಾರದಿಂದ ಪಂಡಿತರಿಗೆ ಇದು ತಿಳಿಯುವುದಿಲ್ಲ. ಪೂರ್ಣ ಅನುಭವಿಗಳು ಮಾತ್ರ ಈ ಮರ್ಮವನ್ನು ತಿಳಿಯುವರು. ಇತರರ ಜ್ಞಾನವು ಇಲ್ಲಿ ಕುಂಠಿತವಾಗುವುದು ।೩೧೧॥ ಗುರುತ್ವದ ಅತಿ ದೊಡ್ಡದಾದ ರಹಸ್ಯವೇನೆಂದರೆ ಅವರ ಅಂಗದಲ್ಲಿ ಪರಿಪೂರ್ಣ ಶಾಂತಿಯು ವಾಸವಾಗಿರುವುದು. ಹೇ ರಾಜನೇ, ಸದ್ಗುರುವಿನ ಇದೇ ನಿಜವಾದ ಲಕ್ಷಣವಾಗಿರುವುದು. ಮತ್ತು ಇದುವೇ ಮುಖ್ಯ ಭೂಷಣವಾಗಿರುವುದು ।೩೧೨॥ ಜಗತ್ತಿನಲ್ಲಿ ಶಾಂತಿಯು ಪರದೇಶಿಯಾಗಿದ್ದಳು. ಆಕೆಗೆ ಎಲ್ಲಿಯೂ ಸ್ಥಳವು ದೊರಕದಾಯಿತು. ಆದ್ದರಿಂದ ಆಕೆಯು ಸುಖವಾಗಿ ಇರಲು ಸದ್ಗುರುವಿನ ಚರಣಗಳಲ್ಲಿ ಬಂದಳು ।೩೧೩॥ ತನ್ನ ತವರು ಮನೆಗೆ ಬಂದ ಕನ್ಯೆಯು ಸ್ವೇಚ್ಛೆಯಾಗಿ ಕ್ರೀಡಿಸುವಂತೆ ಶಾಂತಿಯೂ ಸಹ ಸದ್ಗುರುವಿನಲ್ಲಿ ಆನಂದವಾಗಿ ವಸತಿ ಮಾಡಲು ಬಂದಿರುವಳು ।೩೧೪॥ ವೇದಶಾಸ್ತ್ರಗಳ ಮರ್ಮವನ್ನು ಅರಿತುಕೊಂಡಿದ್ದರೂ ಯಾರು ತಮ್ಮ ವಿದ್ವತ್ತದ ಗರ್ವದಿಂದ ಮರೆಯುವುದಿಲ್ಲವೋ ಹೇ ರಾಜನೇ, ಅವರಿಗೆ ಆತ್ಮಾನುಭವದಿಂದಲೇ ಪೂರ್ಣವಾದ ಶಾಂತಿಯು ಪ್ರಾಪ್ತವಾಗಿರುವುದು. ಅವರೇ ನಿಶ್ಚಯವಾಗಿ ಸದ್ಗುರುಮೂರ್ತಿಯಾಗಿರುವರು ।೩೧೫॥ ಈಗ ಕದಾಚಿತ್ ಶ್ರೋತೃಗಳು ಇಲ್ಲಿ ಕೋಪಿಸಿಕೊಳ್ಳಬಹುದು. ವ್ಯರ್ಥವಾಗಿ ರಗಳೆಯನ್ನು ಹಚ್ಚಿ ಗ್ರಂಥವನ್ನು ಬೆಳೆಸಿದಿರಿ ಎನ್ನಬಹುದು. ಆದರೆ, ಅಹೋ ಶ್ರೋತೃಗಳೇ ''ನಿಷ್ಣಾತ'' ಎಂಬ ಈ ಪದದ ಅರ್ಥವನ್ನು ಹುಡುಕಿ ತೆಗೆಯಲು ಇಷ್ಟೊಂದು ನನಗೆ ಹೊಳೆದಿರುವುದು ।೩೧೬॥ ಇದೇನು ನನ್ನ ಸ್ವಮತಿಯ ಪಾಂಡಿತ್ಯವಲ್ಲ. ಸ್ವತಃ ಸದ್ಗುರುಗಳೇ ತಮ್ಮ ಸ್ಥಿತಿಗತಿಯನ್ನು ತಾವೇ ಗ್ರಂಥಾರ್ಥದಲ್ಲಿ ಪ್ರತಿಯೊಂದು ಪದಗಳ ಸ್ಪಷ್ಟೀಕರಣಗಳನ್ನು ನನ್ನಿಂದ ಹೇಳಿಸಿಕೊಳ್ಳುತ್ತಿದ್ದಾರೆ ।೩೧೭॥ ಆದ್ದರಿಂದ ಸದ್ಗುರುಗಳ ಲಕ್ಷಣಗಳು ಅಗಾಧವಾಗಿರುವುದರಿಂದ ಇವುಗಳನ್ನು ವರ್ಣಿಸಲು ಬರುವುದಿಲ್ಲ. ವೇದಗಳಿಗೆ ಹುಚ್ಚು ಹಿಡಿದು ಅವು ಮೂಕರಾಗಿ ಕುಳಿತಿರುವುವು. ಅಂದಮೇಲೆ ನನ್ನ ಹೇಳಿಕೆಗಳು ಎಷ್ಟಾಗಬಹುದು? ।೩೧೮॥ ಇಲ್ಲಿ ಹೇಗೆ ಚಮತ್ಕಾರವಾಗಿದೆ ನೋಡಿರಿ! ನನ್ನ ನಿಜ ಸಖರಾದ ಶ್ರೀಜನಾರ್ದನಸ್ವಾಮಿಗಳವರು ಪ್ರಸನ್ನರಾದರು. ಆದ್ದರಿಂದಲೇ ಶ್ರೀಭಾಗವತವನ್ನು ದೇಶಭಾಷೆಯಲ್ಲಿ ಬರೆಯಲ್ಪಟ್ಟು ಪರಮಾರ್ಥವು ಉತ್ತಮ ರೀತಿಯಲ್ಲಿ ಪ್ರಕಟಗೊಂಡಿತು ।೩೧೯॥ ಏಕನಾಥನು ಜನಾರ್ದನರಿಗೆ ಶರಣಾಗಿರುವನು. ಅವರ ಪೂರ್ಣ ಕೃಪೆಯು ಆಯಿತೆಂದರೆ ಗುರುಭಕ್ತನಿಗೆ ದೇಹದಲ್ಲಿ ಇದ್ದರೂ ದೇಹ ಬಂಧನವು ಸ್ಪರ್ಶ ಮಾಡಲಾರದು ।೩೨೦॥ ಗುರುಗಳ ಸೇವೆಯನ್ನು ಮಾಡುವುದರಿಂದ ದೇಹದಲ್ಲಿದ್ದರೂ ದೇಹ ಬಂಧನದ ಬಾಧೆಯಾಗಲಾರದು. ಇವರಿಗೆ ಅನನ್ಯ ಭಾವದಿಂದ ಶರಣಾದರೆ ಎಂತಹ ಭಾಗ್ಯವು ಒದಗುವುದೆಂಬುದು ವೇದಕ್ಕೂ ತಿಳಿಯದು ।೩೨೧॥ ಸದ್ಗುರುಗಳ ಭಕ್ತಿಯನ್ನು ಮಾಡದಿದ್ದರೆ ಪರಮಾರ್ಥವು ಎಂದಿಗೂ ಪ್ರಾಪ್ತಿಯಾಗಲಾರದು. ಆದ್ದರಿಂದ ಶಿಷ್ಯನ ಕಲ್ಯಾಣಕ್ಕಾಗಿ ಗ್ರಂಥದಲ್ಲಿ ಸದ್ಗುರುಗಳ ಭಕ್ತಿಯನ್ನು ಹೇಳಿರುವುದು ।೩೨೨॥ ಅದಕ್ಕಾಗಿ ಸದ್ಗುರುಗಳಿಗೆ ಅನನ್ಯಭಾವದಿಂದ ಶರಣಾಗಬೇಕು. ಆಗ ಶಿಷ್ಯನಿಗೆ ಅವರು ತಮ್ಮ ಯಥಾರ್ಥ ಆತ್ಮಬೋಧವನ್ನು ತಿಳಿಸಿ ಸದ್ಭಾವನೆಯಿಂದ ತೃಪ್ತಗೊಳಿಸುವರು ।೩೨೩॥ ರಾಜನೇ, ಈ ಪ್ರಕಾರವಾಗಿ ಸದ್ಗುರುಗಳ ಸ್ಥಿತಿಯ ಎಲ್ಲ ನಿರೂಪಣೆಯನ್ನು ನಿನಗೆ ಹೇಳಿದೆನು. ಈಗ ಶಿಷ್ಯನ ಲಕ್ಷಣಗಳನ್ನು ಹೇಳುವೆ, ಅದನ್ನು ಸಹ ಸರಿಯಾಗಿ ಲಕ್ಷಕೊಟ್ಟು ಕೇಳು ।೩೨೪॥

ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇವ ಗುರ್ವಾತ್ಮದೈವತಃ । ಅಮಾಯಯಾನುವೃತ್ತ್ಯಾ ಯೈಸ್ತುಕ್ಷ್ಯೇದಾತ್ಮಾತ್ಮದೋ ಹರಿಃ ॥೨೨॥

ಅರ್ಥ:- ಶಿಷ್ಯನಾದ ಜಿಜ್ಞಾಸು ಶ್ರೀಗುರುಗಳಿಗೆ ತಮ್ಮ ಪ್ರಿಯ ಆತ್ಮಾ ಮತ್ತು ಇಷ್ಟ ದೈವತ ಎಂದು ಭಾವಿಸಬೇಕು. ಇವರ ಸೇವೆಯನ್ನು ನಿಷ್ಕಪಟಭಾವದಿಂದ ಮಾಡಬೇಕು. ಅವರಲ್ಲಿಯೇ ಇದ್ದು ಭಾಗವತ ಧರ್ಮದ ಅಂದರೆ ಪರಮಾತ್ಮನನ್ನು ಪ್ರಾಪ್ತ ಮಾಡಿಕೊಳ್ಳುವ, ಭಕ್ತಿ ಸಾಧನೆಯ ಕ್ರಿಯಾತ್ಮಕ ಶಿಕ್ಷಣವನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಈ ಸಾಧನೆಯಿಂದ ಭಗವಂತನು ಪ್ರಸನ್ನನಾಗುವನು.

ವರೀವರೀ ದಿಸತೀ ಸಾತ್ತ್ವಿಕ । ಭೀತರೀ ವಿಕಲ್ಪೀ ಶಿಷ್ಯ ಏಕ । ಏಕ ತೇ ಕೇವಳ ದಾಂಭಿಕ । ಏಕ ಜ್ಞಾನಠಕ ಅತಿಧೂರ್ತ ॥೩.೨೫॥ ಏಕ ತೇ ಕೇವಳ ಪ್ರತಿಷ್ಠಾಕಾಮ । ಏಕಾಸೀ ಪೂಜ್ಯತೇಚಾ ಸಂಭ್ರಮ । ಏಕಾಸೀ ಜಾಣಿವೇಚಾ ಆಕ್ರಮ । ಏಕಾಚೇ ಪೋಟೀ ಭ್ರಮ ಮಹಾಸಿದ್ಧೀಚಾ ॥೩.೨೬॥ ಏಕ ವಾಗ್ವಾದೀ ವಾಜಟ । ಏಕ ಅತಿಶಯೇಸೀ ಕರ್ಮಠ । ಏಕ ಕೇವಳ ಕರ್ಮನಷ್ಟ । ಆಮ್ಹೀ ಬ್ರಹ್ಮನಿಷ್ಠ ಅಭಿಮಾನೇ ॥೩.೨೭॥ ಏಕಾ ಆವಡೇ ವಾಯುಧಾರಣ । ಏಕಾ ಆಸನಜಯಾಭಿಮಾನ । ಏಕಾಚೇ ಸಂಶಯೀ ಮನ । ವಿಶ್ವಾಸ ಪೂರ್ಣ ದೃಢ ನಾಹೀ ॥೩.೨೮॥ ಏಕ ಆದರೇ ಉಪದೇಶು ಘೇತೀ । ಮಗ ಹೋಯ ನವ್ಹೆ ವಿಕಲ್ಪ ಚಿತ್ತೀ । ಐಶಾ ಅನೇಕ ಶಿಷ್ಯಪಂಕ್ತೀ । ತೇ ಜಾಣ ನಿಶ್ಚಿತೀ ಮಾಯಿಕ ॥೩.೨೯॥ ಆತಾ ಜೇ ಕಾ ಅಮಾಯಿಕ । ಶೋಧಿತಸತ್ತ್ವಾಚೇ ಸಾತ್ತ್ವಿಕ । ಮುಖ್ಯ ಪರಮಾರ್ಥಾ ಸಾಧಕ । ಜೇ ಅವಂಚಕ ಸರ್ವಸ್ವೇ ॥೩.೩೦॥ ಜೇ ಗುರುಚರಣಾಚೇ ಅಂಕಿಲೇ । ಜೇ ಗುರುವಾಕ್ಯಾ ಜೀವೇ ವಿಕಲೇ । ಸದ್ಗುರೂಲಾಗೀ ವಹಿಲೇ । ಸರ್ವಸ್ವ ಆಪುಲೇ ವೋವಾಳಿತೀ ॥೩.೩೧॥ ಜೋ ಸದ್ಗುರೂಚ್ಯಾ ಬೋಲಾವರೀ । ಜೀವಿತಾಚೀ ಕುರವಂಡೀ ಕರೀ । ಜೋ ಗುರುಆಜ್ಞೇಬಾಹೇರೀ । ತಿಳಭರೀ ಹೋ ನ ಶಕೇ ॥೩.೩೨॥ ಸದ್ಗುರೂತೇ ಮನುಷ್ಯಬುದ್ಧೀ । ಪಾಹೋಂ ನೇಣೇ ಜೋ ತ್ರಿಶುದ್ಧೀ । ಸೇವೇಲಾಗೀ ನಿರವಧೀ । ಹರ್ಷಾನಂದೀ ತತ್ಪರ ॥೩.೩೩॥ ನಿಜಭಾವಾರ್ಥೇ ಸಾದರ । ಸೇವೇಲಾಗೀ ಅತಿತತ್ಪರ । ಶರೀರ ಆಠಹೀ ಪ್ರಹರ । ಅಣುಮಾತ್ರ ವಂಚೀನಾ ॥೩.೩೪॥ ಉಂಚ ಅಥವಾ ನೀಚ ಕಾಮ । ಮ್ಹಣೋ ನೇಣೇ ಮನೋಧರ್ಮ । ಗೌಣ ಕರೋನಿ ನಿತ್ಯಕರ್ಮ । ಮಾನೀ ಉತ್ತಮೋತ್ತಮ ಗುರುಸೇವಾ ॥೩.೩೫॥ ಸೇವೇಲಾಗೀ ನಿಷ್ಕಪಟ । ನಿತ್ಯ ನಿಜಭಾವೇ ಚೋಖಟ । ಜಂವ ಜಂವ ಸೇವಾ ಪಡೇ ಸದಟ । ತಂವ ತಂವ ಉದ್ಭಟ ಉಲ್ಹಾಸು ॥೩.೩೬॥

ಕೆಲವು ಶಿಷ್ಯರು ಮೇಲ್ನೋಟಕ್ಕೆ ಸಾತ್ವಿಕರಂತೆ ತೋರುವರು. ಆದರೆ, ಒಳಗೆ ಬಹಳ ವಿಕಲ್ಪಿಗಳಾಗಿರುವರು. ಇನ್ನು ಕೆಲವರು ಪೂರ್ಣವಾಗಿ ಢೋಂಗೀಗಳಾಗಿರುವರು. ಕೆಲವರು ಕದ್ದು ಜ್ಞಾನ ಸಂಪಾದನೆ ಮಾಡುವ ಅತಿಧೂರ್ತರಾಗಿರುವರು ॥೩.೨೫॥ ಕೆಲವರಿಗೆ ಕೇವಲ ತಮ್ಮ ಪ್ರತಿಷ್ಠೆಯ ಬಯಕೆವಿರುವುದು, ಕೆಲವರಿಗೆ ತಮ್ಮ ದೊಡ್ಡಸ್ಥಿಕೆಯ ಸಂಭ್ರಮವಿರುವುದು, ಕೆಲವರಿಗೆ ತಮ್ಮ ಜ್ಞಾನವಿಷಯಕ್ಕೆ ಗರ್ವವಿರುವುದು, ಇನ್ನು ಕೆಲವರ ಹೊಟ್ಟೆಯಲ್ಲಿ ಮಹಾ ಸಿದ್ಧಿಗಳ ಭ್ರಮೆವಿರುವುದು ॥೩.೨೬॥ ಕೆಲವರು ವಿತಂಡವಾದ ಮಾಡುವವರಿರುವರು, ಇನ್ನೂ ಕೆಲವರು ಕೇವಲ ಬಡಬಡಿಸುತ್ತಿರುವರು, ಕೆಲವರು ಅತಿಶಯವಾಗಿ ಕರ್ಮಠರಾಗಿರುವರು, ಇನ್ನೂ ಕೆಲವರು ನಾವು ಬ್ರಹ್ಮನಿಷ್ಠರೆಂಬ ಅಭಿಮಾನದಿಂದ ಯಾವ ಕರ್ಮವನ್ನೂ ಮಾಡರು ॥೩.೨೭॥ ಕೆಲವರಿಗೆ ಪ್ರಾಣಾಯಾಮವು ಪ್ರಿಯವಾಗಿರುವುದು, ಕೆಲವರಿಗೆ ಆಸನ ಜಯದ ಅಭಿಮಾನವಿರುವುದು . ಕೆಲವರ ಮನವು ಸಂಶಯಯುಕ್ತವಿರುವುದರಿಂದ ಎಲ್ಲಿಯೂ ಪೂರ್ಣ ವಿಶ್ವಾಸ ಇರದು ॥೩.೨೮॥ ಕೆಲವರು ಬಹಳ ಅಗತ್ಯವಾಗಿ ಗುರುಪದೇಶವನ್ನು ಪಡೆಯುವರು. ತದನಂತರ ಇದು ಫಲಿಸುವುದೋ, ಇಲ್ಲವೋ ಎಂಬ ವಿಕಲ್ಪವನ್ನು ಮನದಲ್ಲಿ ಹಿಡಿಯುವರು. ಈ ಪ್ರಕಾರವಾಗಿ ಶಿಷ್ಯರ ಅನೇಕ ತರಹಗಳಿರುವುವು. ಆದರೆ ಇವರೆಲ್ಲರೂ ಢೋಂಗಿಗಳಾಗಿರುವರು. ಇದನ್ನು ಲಕ್ಷದಲ್ಲಿಡು ॥೩.೨೯॥ ಈಗ ಸಚ್ಛಿಷ್ಯನ ಲಕ್ಷಣಗಳನ್ನು ಹೇಳುವೆನು, ಕೇಳು, ಸಚ್ಛಿಷ್ಯನು ನಿಷ್ಕಪಟ ಬುದ್ಧಿಯ, ಶುದ್ಧಸತ್ವಗುಣೀ ಮತ್ತು ನಿಜವಾದ ಪರಮಾರ್ಥ ಸಾಧಿಸುವವನಾಗಿರುವನು. ಅವನಲ್ಲಿ ಢೋಂಗಿತನವಿರುವುದಿಲ್ಲ ॥೩.೩೦॥ ಇವರು ಗುರುಚರಣಗಳಲ್ಲಿ ಅಂಕಿತರು, ಗುರುವಚನಗಳಿಗೆ ಜೀವಭಾವದಿಂದ ನಡೆಯುವವರು, ಮತ್ತು ಇವರು ತಮ್ಮ ಸದ್ಗುರುಗಳ ಮೇಲೆ ತಮ್ಮ ಸರ್ವಸ್ವವನ್ನು ನಿವಾಳಿಸಿ ಒಗೆದಿರುವರು ॥೩.೩೧॥ ಸಚ್ಛಿಷ್ಯನು ಸದ್ಗುರುಗಳ ವಚನಕ್ಕಾಗಿ ತನ್ನ ಪ್ರಾಣವನ್ನು ಸಹ ಅರ್ಪಿಸಲು ಸಿದ್ಧನಾಗಿರುವನು ತನ್ನ ಗುರುವಿನ ಆಜ್ಞೆಯ ಉಲ್ಲಂಘನೆಯನ್ನು ತಿಲಮಾತ್ರವೂ ಮಾಡಲಾರನು ॥೩.೩೨॥ ಸದ್ಗುರುವಿಗೆ ಮನುಷ್ಯಬುದ್ಧಿಯಿಂದ ನೋಡುವುದು ಈತನಿಗೆ ಗೊತ್ತೇ ಇರುವುದಿಲ್ಲ. ಗುರುಸೇವೆಗಾಗಿ ಈತನು ಅತ್ಯಂತ ಆನಂದದಿಂದ ಸದಾ ಸರ್ವಕಾಲದಲ್ಲಿಯೂ ತತ್ಪರನಾಗಿರುವನು ॥೩.೩೩॥ ನಿಜವಾದ ಶುದ್ಧ ಅಂತಃಕರಣದಿಂದ ಗುರುಸೇವೆಗೆ ಅತಿ ತತ್ಪರನಾಗಿರುವನು ಎಂಟೂ ಪ್ರಹರಗಳಲ್ಲಿಯೂ ಶರೀರವನ್ನು ಸವೆಸಲು ಅಣುಮಾತ್ರವೂ ವಂಚಿಸಲಾರನು ॥೩.೩೪॥ ಈ ಕೆಲಸವು ಉಚ್ಚವಾದದ್ದು, ಇನ್ನೊಂದು ಕೆಲಸವು ನೀಚವಾದದ್ದು ಎಂಬ ಭಾವವು ಈತನ ಮನದಲ್ಲಿ ಬರುವುದೇ ಇಲ್ಲ. ತನ್ನ ನಿತ್ಯದ ಧರ್ಮಕರ್ಮಗಳು ಗೌಣವೆಂದು ಭಾವಿಸಿ ಗುರುಸೇವೆಯನ್ನು ಉತ್ತಮವಾಗಿ ಮಾಡುವನು ॥೩.೩೫॥ ಸೇವೆಯಲ್ಲಿ ಕೃತ್ರಿಮತನವನ್ನು ಎಂದೂ ಮಾಡದೇ, ಶುದ್ಧವಾದ ಮನೋಭಾವದಿಂದ ಮಾಡುವನು. ಸೇವೆಯು ಅಧಿಕವಾಗಿ ಕಷ್ಟಕರವಾಗಿದ್ದರೆ, ಈತನು ಅವುಗಳನ್ನು ಅಧಿಕ ಉಲ್ಹಾಸದಿಂದ ಮಾಡುವನು ॥೩.೩೬॥

ಸಚ್ಛಿಷ್ಯ ಅಸಚ್ಛಿಷ್ಯ ಸಮುದಾವೋ । ಸದ್ಗುರೂಸೀ ಸಾರಿಖೇಚಿ ಪಹಾ ವೋ । ಜ್ಯಾಚೇ ಹೃದಯೀ ಜೈಸಾ ಭಾವೋ
। ತೈಸಾ ಪಹಾ ಹೋ ಫಳಭೋಗ ।।೩೩೭।। ''ಭಾವೇಷು ವಿದ್ಯತೇದೇವೋ'' । ಹಾ ಉಪದೇಶೀ ಮುಖ್ಯ ನಿರ್ವಾಹೋ
। ಆಪುಲಾ ಆಪಣಯಾ ಭಾವೋ । ಫಳಭೋಗ ಪಹಾ ಹೋ ಭೋಗವೀ ।।೩೩೮।। ಚುಕವಾವಯಾ ಮೃತ್ಯೂಚಾ
ಠಾವೋ । ಜಾಣವೇ ಆಣಿತಾ ನಿಜಭಾವೋ । ಹಿರಣ್ಯಕಶಿಪು ನಾಡಲಾ ಪಹಾ ಹೋ । ಸಂಧೀ ಸಾಧೋನಿ ದೇವೋ
ನಿರ್ದಳೀ ತ್ಯಾಸೀ ।।೩೩೯।। ತೇಥೇಚಿ ಪ್ರಹ್ಲಾದಾಚಾ ಭಾವೋ । ಮಜ ರಕ್ಷಿತಾ ದೇವಾಧಿದೇವೋ । ತ್ಯಾಸೀ ಸಾಕ್ಷೇಪೇ
ಮಾರಿತಾ ರಾವೋ । ಮರಣಚಿ ವಾವೋ ಭಾವಾರ್ಥೇ ಕೇಲೇ ।।೩೪೦।। ಪರಮಾರ್ಥೀ ಜೇ ಜಾಣಪಣ । ತೇ
ಜಾಣಾವೀ ನಾಗವಣ । ಯಾಲಾಗೀ ಸದ್ಭಾವೇ ಜೋ ಸಂಪೂರ್ಣ । ತೋ ಜನ್ಮ ಮರಣಭೇದಕೂ ।।೩೪೧।। ಮೀ
ಶಿಷ್ಯಪರೀಕ್ಷಕು ಜ್ಞಾತಾ । ಹೇ ಸದ್ಗುರೂಸೀ ನಾಹೀ ಅಹಂತಾ । ತೇಥೇ ಜೈಶೀ ತ್ಯಾಚೀ ಭಾವಾರ್ಥತಾ । ತೈಶಾ
ತೈಶಾ ಅರ್ಥಾ ತೋ ಪಾವೇ ।।೩೪೨।। ಹೇ ಅಸೋ ಸಚ್ಛಿಷ್ಯಾಚಾ ಸದ್ಭಾವೋ । ರಾಯಾ ಅಭಿನವ ಕೈಸಾ ಪಹಾ
ಹೋ । ಗುರು ಬ್ರಹ್ಮ ಐಕ್ಯಭಾವೋ । ನಿಜನಿರ್ವಾಹೋ ನಿಷ್ಟಂಕ ।।೩೪೩।। ಮಾಝ್ಯಾ ಇಂದ್ರಿಯವೃತ್ತೀ ಚಾಳಿತಾ
। ಸದ್ಗುರೂ ''ನಿಜಾತ್ಮಾ'' ಮಜಅಂತೌತಾ । ಬಾಹ್ಯ ಸೇವೇಲಾಗೀ ಸರ್ವಥಾ । ''ಬ್ರಹ್ಮಮೂರ್ತಿ'' ತತ್ತ್ವತಾ
ಸದ್ಗುರು ಮಾನೀ ।।೩೪೪।। ಸದ್ಗುರುಚರಣೀ ಆಪಣ । ಚಿತ್ತ - ವಿತ್ತ - ಜೀವಿತೇಸೀ ಪೂರ್ಣ । ಕರೂನಿ ಘಾಲೀ
ಆತ್ಮಾರ್ಪಣ । ಸರ್ವಸ್ವೇ ಸಂಪೂರ್ಣ ಸರ್ವಭಾವೇ ।।೩೪೫।। ತೇಥೇ ಸಂತುಷ್ಟಲಾ ಸ್ವಾಮೀ ಪೂರ್ಣ । ತೋಹೀ
ಸರ್ವಸ್ವೇ ಭುಲೋನ । ಆವಡೀ ನಿಜಾಂಗೇ ಆಪಣ । ಸೇವಕಾ ಆಧೀನ ಸ್ವಾಮೀ ಹೋಯೇ ।।೩೪೬।। ಆತ್ಮಾರ್ಪಣ
ಕರಿತಾ ಬಳೀ । ದ್ವಾರೀ ದ್ವಾರಪಾಳ ಜಾಹಲಾ ವನಮಾಳೀ । ಐಸೀ ಭಜನಭಾವಾಚೀ ನವಾಳೀ । ಸೇವಕಾಜವಳೀ
ಸ್ವಾಮೀ ತಿಷ್ಠೇ ।।೩೪೭।। ಏವಢೀ ಯೇ ಅಗಾಧ ಪ್ರೀತೀ । ಉತ್ತಮ ಭಕ್ತ ಸ್ವಯೇ ಪಾವತೀ । ಭಾಳ್ಯಾಭೋಳ್ಯಾ
ಹೇಚಿ ಸ್ಥಿತೀ । ಕೈಶಾ ರೀತೀ ಆತುಡೇ ।।೩೪೮।। ಯಾಚಿಲಾಗೀ ಸದ್ಗುರೂಪಾಶೀ । ಶರಣ ರಿಘಾವೇ ಸರ್ವಸ್ವೇಶೀ
। ತೋ ಸಂತೋಷೋನಿಯಾ ಶಿಷ್ಯಾಸೀ । ಭಜನಧರ್ಮಾಸೀ ಉಪದೇಶೀ ।।೩೪೯।। ಜೇಣೇ ಭಜನೇ ಭಗವಂತ ।
ಭಜೋನಿ ಜಾಹಲೇ ಉತ್ತಮ ಭಕ್ತ । ತೇ ಭಾಗವತಧರ್ಮ ಸಮಸ್ತ । ಶಿಕಾವೇ ನಿಶ್ಚಿತ ಸದ್ಭಾವೇಸೀ ।।೩೫೦।।

ಕೇಳು, ಸಚ್ಛಿಷ್ಯ ಮತ್ತು ಅಸಚ್ಛಿಷ್ಯ ಇವರಿಬ್ಬರೂ ಸದ್ಗುರುಗಳಿಗೆ ಸಮಾನವಾಗಿ ಕಾಣುವರು. ಆದರೆ ಯಾವನ ಮನದಲ್ಲಿ ಹೇಗೆ ಭಾವವಿರುವುದೋ, ಅದೇ ರೀತಿಯಲ್ಲಿ ಅವನಿಗೆ ಫಲ ದೊರೆಯುವುದು ।।೩೩೭।। ಭಾವದಲ್ಲಿಯೇ ದೇವನಿರುವನು. ಇದೇ ಉಪದೇಶದ ಮುಖ್ಯ ಸಾರವಾಗಿದೆ. ತನ್ನ ಭಾವವು ಹೇಗಿರುವುದೋ , ಅದೇ ಫಲವನ್ನು ಭೋಗಿಸಬೇಕಾಗುವುದು ।।೩೩೮।। ತನ್ನ ಚಾತುರ್ಯದಿಂದ ಮೃತ್ಯುವನ್ನು ತಪ್ಪಿಸುವ ಪ್ರಯತ್ನ ಮಾಡಿ ಹಿರಣ್ಯಕಶಿಪು ಮೋಸ ಹೋದನು. ಸಂಧಿಯನ್ನು ಸಾಧಿಸಿ ದೇವನು ಆತನನ್ನು ಸಂಹರಿಸಿದನು ।।೩೩೯।। ಆದರೆ, ಅದೇ ಪ್ರಹ್ಲಾದನನ್ನು ನೋಡಿರಿ! ನನ್ನ ಪ್ರಾಣದ ರಕ್ಷಣೆಯನ್ನು ಮಾಡುವವನು ದೇವಾಧಿದೇವನಿರುವನು. ಎಂಬ ದೃಢವಾದ ಭಾವವು ಆತನಲ್ಲಿತ್ತು. ಈ ಭಾವದಿಂದಲೇ ಆತನನ್ನು ಕೊಲ್ಲಲು ರಾಜನು ಮಾಡಿದ ಎಲ್ಲ ಪ್ರಯತ್ನಗಳೂ ವ್ಯರ್ಥವಾದವು ।।೩೪೦।। ಪರಮಾರ್ಥದಲ್ಲಿ ಜ್ಞಾನದ ಅಭಿಮಾನವು ಬಹಳ ಕೆಟ್ಟದ್ದಾಗಿದೆ. ಅದಕ್ಕಾಗಿ ಶುದ್ಧ ಸದ್ಭಾವನೆಯಿಂದ ಪರಿಪೂರ್ಣರಾದವರು ಮಾತ್ರ ಜನ್ಮಮರಣವನ್ನು ಭೇದಿಸುವರು ।।೩೪೧।। ಶಿಷ್ಯನ ಪರೀಕ್ಷೆ ಮಾಡುವ ನಾನು ಜ್ಞಾನಿಯಾಗಿರುವೆ ಎಂಬ ಅಹಂಕಾರವು ಸದ್ಗುರುವಿಗೆ ಇರುವುದಿಲ್ಲ. ಆದರೆ, ಇವರಲ್ಲಿ ಯಾರ ಭಾವನೆಯು ಹೇಗೆ ಇರುವುದೋ ಹಾಗೆಯೇ ಅವರು ಅದರ ಫಲವನ್ನು ಪಡೆಯುವರು ।।೩೪೨।। ಹೇ ರಾಜನೇ, ಇದು ಇರಲಿ, ಸಚ್ಛಿಷ್ಯನ ಸದ್ಭಾವವು ಎಷ್ಟೊಂದು ವಿಲಕ್ಷಣವಾಗಿದೆ, ನೋಡು, ಗುರು ಮತ್ತು ಬ್ರಹ್ಮ ಎರಡನ್ನೂ ಒಂದೇ ಎಂದು ಆತನು ನಿಶ್ಚಯವಾಗಿ ಮಾನ್ಯಮಾಡಿರುವನು ।।೩೪೩।। ಸದ್ಗುರುಗಳು ನನ್ನ ಇಂದ್ರಿಯವೃತ್ತಿಗಳ ಚಾಲಕರು, ಹೃದಯದಲ್ಲಿರುವ ನನ್ನ ''ಆತ್ಮಾ'' ಮತ್ತು ಹೊರಗಿನ ಸೇವೆ ಮಾಡುತ್ತಿರಲು ಸದ್ಗುರುಗಳು ನಿಜವಾಗಿಯೂ ಸಾಕ್ಷಾತ್ ''ಬ್ರಹ್ಮಮೂರ್ತಿ'' ಎಂದು ಈತನು ತಿಳಿಯುವನು ।।೩೪೪।। ಈತನು ಸದ್ಗುರುಗಳ ಚರಣಗಳಲ್ಲಿ ತನ್ನ ಸಂಪೂರ್ಣ ತನ, ಮನ, ಧನಗಳನ್ನು ಸಮರ್ಪಿಸಿ, ಸರ್ವಸ್ವದಿಂದ ತನ್ನ ಪ್ರಾಣವನ್ನು ಸಹ ಅವರಲ್ಲಿ ಅರ್ಪಿಸಿರುವನು. ಅರ್ಥಾತ್ ಸರ್ವಸ್ವವಾಗಿ ಆತ್ಮಾರ್ಪಣೆಯನ್ನು ಮಾಡುವನು ।।೩೪೫।। ಇದರಿಂದ ಸದ್ಗುರುಗಳು ಅತ್ಯಂತ ಸಂತುಷ್ಟರಾಗಿ ಆತನಲ್ಲಿ ಭುಲಾಯಿಸುವರು. ತಾವು ಸ್ವಾಮಿಯಾಗಿದ್ದರೂ ಬಹು ಪ್ರೀತಿಯಿಂದ ತಮ್ಮ ಶಿಷ್ಯನ ಆಧೀನರಾಗುವರು ।।೩೪೬।। ಬಲಿರಾಜನು ಸರ್ವಸ್ವವನ್ನು ಸಮರ್ಪಿಸಿದನು. ಆದ್ದರಿಂದಲೇ ಭಗವಂತನು ಆತನ ದ್ವಾರದಲ್ಲಿ ದ್ವಾರಪಾಲಕನಾದನು. ಭಜನಭಕ್ತಿಯು ಹೀಗೆಯೇ ಬಲು ತಮಾಷೆಯುಳ್ಳದ್ದಾಗಿದೆ. ಹೇಗೆಂದರೆ, ಅವರ ಸ್ವಾಮಿಯೇ ತನ್ನ ಸೇವಕನಲ್ಲಿ ಸೇವಕನಾಗುವನು ।।೩೪೭।। ಉತ್ತಮ ಭಕ್ತನು ಭಗವಂತನ ಇಷ್ಟೊಂದು ಪ್ರೀತಿಗೆ ಪಾತ್ರನಾಗುವನು. ಆದರೆ ಈ ಸ್ಥಿತಿಯು ಭೋಳೇ ಭಾವಿಕರಿಗೆ ಹೇಗೆ ದೊರಕಬೇಕು? ।।೩೪೮।। ಆದ್ದರಿಂದಲೇ ಸರ್ವಭಾವದಿಂದ ಸದ್ಗುರುವಿಗೆ ಶರಣಾಗಬೇಕು. ಆಗ ಸದ್ಗುರುಗಳು ಪ್ರಸನ್ನರಾಗಿ ತಮ್ಮ ಶಿಷ್ಯನಿಗೆ ಭಜನಧರ್ಮದ ಉಪದೇಶವನ್ನು ಮಾಡುವರು ।।೩೪೯।। ಯಾವ ಭಜನೆಯಿಂದ ಭಗವಂತನನ್ನು ಭಜಿಸಿ, ''ಉತ್ತಮ ಭಕ್ತ''ರಾದರೋ ಆ ಎಲ್ಲ ಭಾಗವತಧರ್ಮವನ್ನು ಸದ್ಗುರುವಿನಿಂದ ನಿಶ್ಚಯಪೂರ್ವಕವಾಗಿ ಮತ್ತು ಭಕ್ತಿಭಾವದಿಂದ ಕಲಿಯಬೇಕು ।।೩೫೦।।

ಮುಖ್ಯ ಭಾಗವತಧರ್ಮಸ್ಥಿತೀ । ಅವಶ್ಯ ಕರಾವೀ ಸತ್ಸಂಗತೀ । ಹೇಚಿ ಸದ್ಗುರು ಉಪದೇಶಿತೀ । ಅಸತ್ಸಂಗತಿತ್ಯಾಗಾರ್ಥ ॥೩೫೧॥

ಸರ್ವತೋ ಮನಸೋಽಸಂಗಮಾದೌ ಸಂಗಂ ಚ ಸಾಧುಷು ।
ದಯಾಂ ಮೈತ್ರೀಂ ಪ್ರಶ್ರಯಂ ಚ ಭೂತೇಷ್ವದ್ಧಾ ಯಥೋಚಿತಮ್ ॥೨೩॥

ಅರ್ಥ:- ಅನಾಸಕ್ತಿ, ಸಾಧುಸಂಗ, ಹೀನಪ್ರಾಣಿಯರಲ್ಲಿ ದಯೆ, ಸಮಾನಶೀಲರಲ್ಲಿ ಸ್ನೇಹ, ಶ್ರೇಷ್ಠರಲ್ಲಿ ವಿನಯ ಈ ಗುಣಗಳನ್ನು ಕಲಿಯಬೇಕು.

ಸರ್ವಾಪಾಸೋನಿ ನಿಃಸಂಗ । ಜರೀ ಮನೀ ಹೋಣೇ ಆಹೇ ಚಾಂಗ । ತ್ರೈ ಅವಶ್ಯ ಧರಾವಾ ಸತ್ಸಂಗ । ಅಸತ್ಸಂಗ ತ್ಯಾಗಾವಾ ॥೩೫೨॥ ಮುಖ್ಯ ಅಸತ್ಸಂಗ ದೇಹಸಂಗತೀ । ತ್ಯಾಚೀ ಸಮೂಳ ಕರಾವೀ ನಿವೃತ್ತೀ । ಜಗೀ ದಾಟುಗೀ ಸತ್ಸಂಗತೀ । ಜಾಣ ನಿಶ್ಚಿತೀ ನೃಪನಾಥಾ ॥೩೫೩॥ ಜೇಥೇ ದಯಾ ಮೈತ್ರೀ ಪ್ರಶ್ರಯೋಪೂರ್ಣ । ಮುಖ್ಯತ್ವೇ ಹೇ ತ್ರಿವಿಧ ಲಕ್ಷಣ । ಅವಶ್ಯ ಕರಾವೇ ಆಪಣ । ಸತ್ಸಂಗ ಪ್ರಮಾಣ ಸ್ವಹಿತಾಸೀ ॥೩೫೪॥ ಸಾಂಡೋನಿಯಾ ಥೋರಪಣ । ಸಾಧೂಸೀ ಲೀನ ಹೋಆವೇ ಸಂಪೂರ್ಣ । ಸಾಂಡೋನಿಯಾ ದೇಹಾಭಿಮಾನ । ತ್ಯಾಸೀ ಲೋಟಾಂಗಣ ಘಾಲಾವೇ ॥೩೫೫॥ ಸಾಧೂಪರತಾ ಪೂಜ್ಯ ಪಹಾ ಹೋ । ಜಗೀ ನಾಹೀ ಆನ ದೇವೋ । ಸಂತ ಪೂಜನೇ ದೇವಾಧಿದೇವೋ । ಸ್ವಯಮೇವೋ ಸಂತುಷ್ಟೇ ॥೩೫೬॥ ಸಂತಪದೀಚೇ ರಜಃಕಣ । ಶಿರೀ ವಂದಾವೇ ಶ್ರದ್ಧೇನೇ ಪೂರ್ಣ । ಸಂತಾ ಪುಢೇ ಜಾಣಪಣ । ಸರ್ವಥಾ ಆಪಣ ನ ಮಿರವಾವೇ ॥೩೫೭॥ ದೇಖೋನಿ ಸಂತಸಮುದಾವೋ । ಅನನ್ಯಗತೀ ಭಗವದ್ಭಾವೋ । ಭಗವದ್ಭಾವೇ ನಮ್ರ ಸ್ವಭಾವೋ । "ಪ್ರಶ್ರಯೋ" ಪಹಾ ಹೋ ಯಾ ನಾಂವ ॥೩೫೮॥ ನಮ್ರತಾ ಸೇವಿತಾ ಸಂತಚರಣ । ಯೇಥೇ ಭೂತದಯಾ ವಾಢೇ ಪೂರ್ಣ । ಹೇ ದಯೇಚೇ ನಿಜಲಕ್ಷಣ । ಸಾವಧಾನ ಅವಧಾರೀ ॥೩೫೯॥ ಭೂತಾಂಸೀ ಕಠಿಣಪಣ । ದೇಖತಾ ನಿಘೋ ಪಾಹೇ ಪ್ರಾಣ । ಮಾ ಸ್ವಯೇ ಕರೀಲ ಆಪಣ । ಹೇ ಸರ್ವಥಾ ಜಾಣ ಸ್ವಪ್ನೀ ನ ಘಡೇ ॥೩೬೦॥ ಜೇಣೇ ಆಪಣಾಸೀ ಹೋಯ ದುಃಖ । ತೇ ಭೂತಾಂಸೀ ಕರೀನಾ ನಿಃಶೇಖ । ಜೇಣೇ ಆಪಣಾಸೀ ಹೋಯ ಸುಖ । ತೇ ಆವಶ್ಯಕ ಕರೀ ದೀನಾ ॥೩೬೧॥ ಸರ್ವ ಭೂತೀ ದಯಾ ಸಮಾನ । ಕದಾ ನ ಬೋಲೇ ಕಠಿಣಪಣ । ಭೂತಾಂಚೀ ಪೀಡಾ ನಿವಾರಣ । ಕರೋನಿ ಆಪಣ ಸುಖೋಪಾಯ ಚಿಂತೀ ॥೩೬೨॥

ಭಾಗವತಧರ್ಮದ ಮುಖ್ಯ ಲಕ್ಷಣವೇನೆಂದರೆ, ಸತ್ಸಂಗವನ್ನು ಅವಶ್ಯವಾಗಿ ಒಡಿಯಬೇಕು. ಸದ್ಗುರುಗಳು ಸಹ ಅಸತ್ಸಂಗತಿ ತ್ಯಾಗಾರ್ಥ ಉಪದೇಶವನ್ನೇ ಮಾಡುವರು ॥೩೫೧॥

ಎಲ್ಲ ವಿಷಯಗಳಿಂದಲೂ ನಿಃಸಂಗನಾಗಬೇಕೆಂದು ಮನದಲ್ಲಿದ್ದರೆ, ಅವಶ್ಯವಾಗಿ ಸತ್ಸಂಗವನ್ನು ಒಡಿಯಬೇಕು, ಮತ್ತು ದುಷ್ಟಸಂಗತಿಯನ್ನು ತ್ಯಜಿಸಬೇಕು ॥೩೫೨॥ ದೇಹಸಂಗತಿ ಅಂದರೆ "ಈ ದೇಹವೇ ನಾನು" ಎಂಬ ಭಾವನೆಯೇ ಮುಖ್ಯವಾಗಿ ಅಸತ್ಸಂಗತಿಯಾಗಿರುವುದು. ಆದ್ದರಿಂದ ಅದನ್ನು ಪರಿಪೂರ್ಣವಾಗಿ ತ್ಯಜಿಸಬೇಕು. ಹೇ ನೃಪನಾಥನೇ, ಜಗತ್ತಿನಲ್ಲಿ ಸತ್ಸಂಗತಿ ಒಂದೇ ಅತಿ ಬಲಿಷ್ಠವಾಗಿದೆ. ಇದನ್ನು ಲಕ್ಷದಲ್ಲಿಡು ॥೩೫೩॥ ದಯೆ, ಮೈತ್ರೀ ಮತ್ತು ವಿನಯ ಇವು ಮೂರು ಲಕ್ಷಣಗಳು ಪೂರ್ಣವಾಗಿ ಯಾರಲ್ಲಿ ವಾಸಮಾಡಿದ್ದು ಕಾಣುವುದೋ, ಆ ಪುರುಷನ ಸಂಗತಿಗೆ "ಸತ್ಸಂಗ" ಎಂದು ಕರೆಯಬೇಕು. ಸ್ವಹಿತವನ್ನು ಸಾಧಿಸಲು ಸತ್ಸಂಗತಿಯು ಅತಿ ಅವಶ್ಯವಾಗಿದೆ ॥೩೫೪॥ ತನ್ನ ದೊಡ್ಡಸ್ಥಿಕೆಯನ್ನು ತ್ಯಜಿಸಿ ಸಾಧುಗಳವರಲ್ಲಿ ಲೀನರಾಗಬೇಕು. ದೇಹಾಭಿಮಾನವನ್ನು ಬಿಟ್ಟು ಅವರಿಗೆ ಲೋಟಾಂಗಣವನ್ನು ಹಾಕಬೇಕು ॥೩೫೫॥ ಇಲ್ಲಿ ನೋಡು, ಸಾಧುವಿಗಿಂತಲೂ ಶ್ರೇಷ್ಠರಾಗಿ ಯಾವ ದೇವರೂ ಜಗತ್ತಿನಲ್ಲಿರುವುದಿಲ್ಲ. ಸಂತರ ಪೂಜೆಯನ್ನು ಮಾಡಲು ಸ್ವತಃ ದೇವಾಧಿದೇವನಿಗೆ ಸಂತೋಷವಾಗುವುದು ॥೩೫೬॥ ಪೂರ್ಣವಾದ ಶ್ರದ್ಧೆಯಿಂದ ಸಂತರ ಚರಣರಜವನ್ನು ಶಿರಸಾ ವಂದಿಸಬೇಕು. ಸಂತರಲ್ಲಿ ತನ್ನ ಜ್ಞಾನದ ಡೌಲು ತೋರಿಸಿ ಮೆರೆಯಬಾರದು ॥೩೫೭॥ ಸಂತರ ಸಮುದಾಯವನ್ನು ಕಾಣುತ್ತಲೇ ಇವರು ಭಗವಂತನ ಸ್ವರೂಪರು ಎಂದು ಏಕನಿಷ್ಠೆಯ ಭಾವವನ್ನು ಧರಿಸಬೇಕು. ಹೀಗೆ ಭಗವದ್ಭಾವನೆಯಿಂದ ನಮ್ರನಾಗುವ ಸ್ಥಿತಿಗೆ "ಪ್ರಶ್ರಯ" ಅಥವಾ "ವಿನಯ" ಎಂದು ಹೇಳುವರು ॥೩೫೮॥ ನಮ್ರತೆಯಿಂದ ಸಂತರ ಚರಣಗಳಲ್ಲಿ ಸೇವೆಯನ್ನು ಮಾಡುತ್ತಿರಲು ಭೂತದಯೆಯು ಪೂರ್ಣವಾಗಿ ಬೆಳೆಯುವುದು, ಇದುವೇ "ದಯೆ" ಯ ಮುಖ್ಯ ಲಕ್ಷಣವಾಗಿದೆ. ಇದನ್ನು ಸರಿಯಾಗಿ ಕೇಳಿ ತಿಳಿ ॥೩೫೯॥ ಪ್ರಾಣಿಮಾತ್ರರ ದುಃಖವನ್ನು ಕಂಡಾಕ್ಷಣಕ್ಕೆ ಯಾರ ಪ್ರಾಣವು ತಳಮಳಿಸುವುದೋ, ಮತ್ತು ಯಾರು ತಾವು ಸ್ವತಃ ಯಾರನ್ನಾದರೂ ದುಃಖಕ್ಕೆ ಗುರಿ ಮಾಡುವುದು ತಮ್ಮ ಸ್ವಪ್ನದಲ್ಲಿಯೂ ಅರಿಯರೋ ॥೩೬೦॥ ಇವರು ತಮಗಾದ ದುಃಖವನ್ನು ಪ್ರಾಣಿಮಾತ್ರರಿಗೆ ಎಂದೂ ಕೊಡುವುದಿಲ್ಲ. ಮತ್ತು ಯಾವುದರಿಂದ ತಮಗಾದ ಸುಖವನ್ನು ದೀನದುಃಖಿಗಳವರಿಗೆ ಅವಶ್ಯವಾಗಿ ಕೊಟ್ಟು ಸುಖಿ ಮಾಡುವರು ॥೩೬೧॥ ಇವರು ಸರ್ವಪ್ರಾಣಿಗಳವರಲ್ಲಿ ಸಮಾನವಾದ ದಯೆ ತೋರುವರು. ಅವರಿಗೆ ಎಂದಿಗೂ ಕೆಟ್ಟಶಬ್ದಗಳಿಂದ ನುಡಿಯುವುದಿಲ್ಲ. ಪ್ರಾಣಿಮಾತ್ರರ ದುಃಖದ ನಿವಾರಣೆಯಾಗಿ ಅವರಿಗೆ ಸುಖವಾಗುವ ಉಪಾಯಗಳ ಚಿಂತನೆಯನ್ನು ಮಾಡುವರು ॥೩೬೨॥

ಜೀವಮಾತ್ರೀ ದುರುಕ್ತೀ ಬೋಲತಾ । ಜಿವ್ಹೇಚ್ಯಾ ಘೇವೋ ಪಾಹೇ ಜೀವಿತಾ । ಭೂತೀ ದುಷ್ಟಪಣ ಚಾಳಿತಾ । ಸಮೂಳ ನಿಜಚಿತ್ತಾ ನಿರ್ದಾಳೂ ಪಾಹೇ ॥೫೬೩॥ ಭೂತಾಂಸೀ ಜೇಥ ಪೀಡಾ ಪಾವೇ । ತ್ಯಾತಳೀ ಜೀವ ಘಾಲೂ ಧಾವೇ । ಜೀವಾಪರೀಸ ಭೂತೇ ಸರ್ವೇ । ದಯಾಗೌರವೇ ಪಢಿಯಂತೀ ॥೫೬೪॥ ಐಸೇ ಜೇ ಕಾರುಣ್ಯ ಪೂರ್ಣ । ತ್ಯಾ ನಾಂವ ''ದಯಾ'' ಸಂಪೂರ್ಣ । ಆತಾ ಮೈತ್ರೀಚೆ ಲಕ್ಷಣ । ಅಸಾಧಾರಣ ತೇ ಐಕಾ ॥೫೬೫॥ ಸರ್ವ ಭೂತಾಂಚೇ ಠಾಯೀ । ಸುಹೃದಾವಾಂಚೋನಿ ದುಜೇ ನಾಹೀ । ತರೀ ನ ಕರಿತಾಂಚಿ ಮೈತ್ರೀ ಪಾಹೀ । ಠಾಯೀಂಚೇ ಠಾಯೀ ಅಲೋಲಿಕ ॥೫೬೬॥ ಜೇ ವಿಷಯವಿಯೋಗೇ ನ ವಿಟೇ । ನಾನಾ ವಿಕಲ್ಪೀ ನ ತುಟೇ । ಆಲಿಯಾ ಪರಮ ಸಂಕಟೇ । ''ಮೈತ್ರೀ'' ನೇಟೇಪಾಟೇ ಸದಾ ಗ್ರಾಹ್ಯ ॥೫೬೭॥ ಯಾ ನಾಂವ ಗಾ ಮಿತ್ರಭಾವೋ । ಪ್ರಾಣ ಗೇಲಿಯಾ ನ ತುಟೇ ಪಹಾ ಹೋ । ದೇಖತಾ ಕಲ್ಪಾಂತಕಾಳಘಾವೋ । ನಿಜಮಿತ್ರಸಮುದಾವೋ ಏಕವಟೇ ಕೀ ॥೫೬೮॥ ಐಸೀ ಆಚರತಾ ನಿಜಸ್ಥಿತೀ । ಶ್ರದ್ಧಾ ಉಪಜೇ ಸರ್ವಾ ಭೂತೀ । ತ್ಯಾ ಶ್ರದ್ಧೇಚೀ ವ್ಯುತ್ಪತ್ತೀ । ಯಥಾನಿಗುತೀ ಸಾಂಗೇನ ॥೫೬೯॥ ನವಲ ಶ್ರದ್ಧೇಚೇ ಲಕ್ಷಣ । ಬ್ರಹ್ಮಾ ಮುಂಗೀ ಸಮಸಮಾನ । ತರೀ ಯಥೋಚಿತ ವಿಧಾನ । ಸರ್ವಥಾ ಜಾಣ ಚುಕೇನಾ ॥೫೭೦॥ ಅರ್ಘ್ಯಪಾದ್ಯಾದಿ ಪೂಜನ । ಸಕಳ ದಾನ ಆಣಿ ಸನ್ಮಾನ । ಹೇ ಶ್ರದ್ಧಾ ಬ್ರಾಹ್ಮಣೀ ಸಂಪೂರ್ಣ । ಏಕಾಸೀ ತೇ ಜಾಣ ಅನ್ನಮಾತ್ರಚಿ ॥೫೭೧॥ ಏಕಾ ಅನ್ನ ಆಚ್ಛಾದನ । ಏಕಾಸೀ ತೇ ಕೋರಡೇ ಕಣ । ತೃಣ ಆಣಿ ಜೀವನ । ಏಕಾ ಪಯಃಪಾನ ಯಥೋಚಿತ ॥೫೭೨॥ ಜೇಣೇ ಜ್ಯಾಸೀ ಸುಖ ಸಂಪೂರ್ಣ । ತೇ ತೇ ಕರೀ ಉಚಿತ ಶ್ರದ್ಧೇ ಜಾಣ । ಅನುಚಿತ ಶ್ರದ್ಧೇಚೇ ವಿಂದಾಣ । ದುಃಖಕಾರೀ ಸಂಪೂರ್ಣ ಸರ್ವಾರ್ಥೀ ॥೫೭೩॥ ಜೇವೀ ಬ್ರಾಹ್ಮಣಾ ವಾಢಿಲೇ ತಣ । ಗಾಈಸ ವಾಢಿಲೇ ಮಿಷ್ಟಾನ್ನ । ಶ್ವಾನಾಸೀ ಬೈಸಣೇ ಸಿಂಹಾಸನ । ಸಾಧೂಸೀ ಆಸನ ಥಾರೋಳಾ ॥೫೭೪॥ ವ್ಯಾಘ್ರಾಸೀ ಪಾಡಿಲ್ಯಾ ಲಂಘನ । ತ್ಯಾಸೀ ಅರ್ಪೂ ನಯೇ ಗೋದಾನ । ಗಾಯ ಗಾದಲ್ಯಾ ಸಂಪೂರ್ಣ । ತೈಲಾಭ್ಯಂಜನ ಕರೂ ನಯೆ ॥೫೭೫॥ ಹೋ ಕಾ ದೇಹ - ಇಂದ್ರಿಯೇ ಜರೀ ಏಕೇ । ತರೀ ಜಿವ್ಹಾ ಕರ್ಮ ನವ್ಹೇ ನಾಕೇ । ತೇವೀ ಏಕ ಭೂತಾತ್ಮಾ ಭೂತವೇಖೇ । ಉಚಿತೋನ್ಮುಖೇ ಯಜಾವಾ ॥೫೭೬॥ ಕರಿತಾ ಯಥೋಚಿತ ಅರ್ಪಣ । ಜರೀ ಕ್ರಿಯಾ ದಿಸೇ ಭಿನ್ನ ಭಿನ್ನ । ತರೀ ಅಂತರಶ್ರದ್ಧಾ ಅಭಿನ್ನ । ಹೇ ಮುಖ್ಯ ಲಕ್ಷಣ ಭಾಗವತಧರ್ಮೀ ॥೫೭೭॥

ಇತರರಿಗೆ ಕೆಡಕು ನುಡಿದರೆ ತಮ್ಮ ನಾಲಿಗೆಯ ಜೀವ ತೆಗೆಯಲು ಸಿದ್ಧರು, ಇತರರ ಕೆಡಕಾಗುವ ಚಿಂತನೆ ಮಾಡಿದರೆ ತಮ್ಮ ಚಿತ್ತವನ್ನೇ ನಾಶಮಾಡಲು ಸಿದ್ಧರು ॥೫೬೩॥ ಪ್ರಾಣಿಮಾತ್ರರಿಗೆ ದುಃಖವಾಯಿತೆಂದರೆ, ಅವರ ಕೆಳಗೆ ತಮ್ಮ ಪ್ರಾಣವನ್ನೆ ಹಾಸಲು ಧಾವಿಸುವರು. ತಮ್ಮ ಪ್ರಾಣಕ್ಕಿಂತಲೂ ಇತರ ಎಲ್ಲ ಪ್ರಾಣಿಗಳಲ್ಲಿ ದಯೆ ತೋರಿಸುವುದು ಇವರಿಗೆ ಬಹಳ ಪ್ರಿಯವಾಗುವುದು ॥೫೬೪॥ ಹೀಗಿರುವ ಪೂರ್ಣ ಕಾರುಣ್ಯಕ್ಕೆ ''ದಯೆ'' ಎಂದು ಹೆಸರು. ಈಗ ಮೈತ್ರೀಯ ಅಸಮಾನ್ಯವಾದ ಲಕ್ಷಣಗಳನ್ನು ಹೇಳುವೆನು ಕೇಳು ॥೫೬೫॥ ಸರ್ವಪ್ರಾಣಿಮಾತ್ರರಲ್ಲಿ ನನ್ನವರಲ್ಲದೇ ಇನ್ನಾರೂ ಇಲ್ಲ ಎಂಬ ಭಾವವಿದ್ದಕ್ಕೆ, ಮೈತ್ರೀ ಮಾಡದೇ ತಾನೇ ತಾನಾಗಿ ಕುಳಿತಲ್ಲಿಯೇ ವಿಲಕ್ಷಣವಾಗಿ ಮೈತ್ರೀಯು ಕೂಡಿಬರುವುದು ॥೫೬೬॥ ಇವರು ವಿಷಯಗಳ ವಿಯೋಗದಿಂದ ಎಂದೂ ಬೇಸರಪಡುವುದಿಲ್ಲ. ಇವರ ಮನದಲ್ಲಿ ಅನೇಕ ತರಹದ ವಿಕಲ್ಪಗಳು ಹುಟ್ಟುವುದಿಲ್ಲ. ಪರಮ ಸಂಕಟಗಳು ಒದಗಿದರೂ ಮೈತ್ರೀಯನ್ನು ಬಿಡುವುದಿಲ್ಲ ॥೫೬೭॥ ಪ್ರಾಣ ಹೋದರೂ ಹೋಗಲಿ, ಮೈತ್ರಿಯು ಮುರಿಯುವುದಿಲ್ಲ, ಇದರ ಹೆಸರೇ ಮಿತ್ರತ್ವವು. ಕಲ್ಪಾಂತರ ಸಂಕಟ ಒದಗಿದರೂ ನಿಜವಾದ ಮಿತ್ರ ಸಮುದಾಯವೂ ಯಾವಾಗಲೂ ಏಕತ್ರವಾಗಿರುವುದು ॥೫೬೮॥ ಈ ರೀತಿಯಲ್ಲಿದ್ದರೆ ಮಾತ್ರ ಸರ್ವಪ್ರಾಣಿಗಳವರಲ್ಲಿ ಶ್ರದ್ಧೆಯು ಉತ್ಪನ್ನವಾಗುವುದು. ಈ ಶ್ರದ್ಧೆಯ ಯಥಾರ್ಥ ಉಪಪತ್ತಿಯನ್ನು ಹೇಳುವೆನು ॥೫೬೯॥ ಶ್ರದ್ಧೆಯ ಲಕ್ಷಣಗಳು ವಿಲಕ್ಷಣಗಳಾಗಿವೆ. ಇದರಲ್ಲಿ ಪಿಪಿಲೀಕಾದಿ ಬ್ರಹ್ಮದೇವ ಪರ್ಯಂತ ಸರಿಸಮಾನವಾಗಿ ಕಾಣುವುವು. ಆದರೂ ಯಥೋಚಿತ ಕ್ರಿಯೆಗಳು ಎಂದೂ ತಪ್ಪುವುದಿಲ್ಲ ಇದನ್ನು ಲಕ್ಷದಲ್ಲಿಡು ॥೫೭೦॥ ಅರ್ಘ್ಯಪಾದ್ಯಾದಿ ಪೂಜೆಯನ್ನು ಎಲ್ಲ ಪ್ರಕಾರದ ದಾನಗಳನ್ನು ಮತ್ತು ಸನ್ಮಾನಗಳನ್ನು ಈ ಎಲ್ಲ ಶ್ರದ್ಧೆಗಳನ್ನು ಬ್ರಾಹ್ಮಣರಲ್ಲಿ ಮಾಡಬೇಕಾಗಿರುವುದು, ಕೆಲವರಿಗೆ ಕೇವಲ ಅನ್ನವನ್ನೇ ಕೊಡಬೇಕಾಗಿರುವುದು ॥೫೭೧॥ ಕೆಲವರಿಗೆ ಅನ್ನ ಮತ್ತು ವಸ್ತ್ರ, ಕೆಲವರಿಗೆ ಧಾನ್ಯಗಳು, ಕೆಲವರಿಗೆ ಹುಲ್ಲು ಮತ್ತು ನೀರು ಇನ್ನು ಕೆಲವರಿಗೆ ಕೇವಲ ಹಾಲು ಕುಡಿಯಲು ಕೊಡಬೇಕಾಗುವುದು ॥೫೭೨॥ ಸಾರಾಂಶವೇನೆಂದರೆ, ಯಾವುದರಿಂದ ಯಾರಿಗೆ ಪೂರ್ಣ ಸುಖವಾಗುವುದೋ ಅವರಿಗೆ ಆಯಾ ಪದಾರ್ಥಗಳನ್ನು ಯೋಗ್ಯವಾದ ಶ್ರದ್ಧೆಯಿಂದ ಕೊಡಬೇಕು ಅನುಚಿತ ಶ್ರದ್ಧೆಯ ಕೃತಿಯು ಸರ್ವವಿಧಿಯಿಂದಲೂ ದುಃಖಕಾರಕವಾಗುವುದು ॥೫೭೩॥ ಉದಾಹರಣಾರ್ಥ, ಬ್ರಾಹ್ಮಣರಿಗೆ ಹುಲ್ಲು ನೀಡುವುದು, ಆಕಳಿಗೆ ಪಕ್ವಾನ್ನವನ್ನು ಕೊಡುವುದು ಅಥವಾ ನಾಯಿಗೆ ಸಿಂಹಾಸನದಲ್ಲಿ ಕೂಡ್ರಿಸುವುದು ಮತ್ತು ಸಾಧುವಿಗೆ ಹೊಲಸಿನಿಂದ ಕೂಡಿದ ತಗ್ಗಿನಲ್ಲಿ ಕೂಡ್ರಲು ತಿಳಿಸುವುದು, ಇವು ಅನುಚಿತ ಶ್ರದ್ಧೆಯ ಲಕ್ಷಣಗಳಾಗಿವೆ ॥೫೭೪॥ ಹುಲಿಯು ಉಪವಾಸವಿದ್ದರೂ ಅದಕ್ಕೆ ಗೋದಾನ ಮಾಡಬಾರದು. ಆಕಳು ಕೆಸರಿನಿಂದ ಮೆತ್ತಿಕೊಂಡಿದ್ದರೂ ಅದಕ್ಕೆ ಎಣ್ಣೆ ಹಚ್ಚಿ ಸ್ನಾನ ಮಾಡಿಸಬಾರದು ॥೫೭೫॥ ದೇಹ, ಇಂದ್ರಿಯಗಳು ಒಂದಾಗಿಯೇ ಕೂಡಿ ಇದ್ದರೂ ನಾಲಿಗೆಯ ಕಾರ್ಯವು ಮೂಗಿನಿಂದಾಗುವುದಿಲ್ಲ. ಅದರಂತೆ ಎಲ್ಲ ಪ್ರಾಣಿಗಳ ಆತ್ಮವು ಒಂದೇ ಆಗಿದ್ದರೂ, ಅವರ ಪೂಜೆಗಳನ್ನು ಅವರವರ ಯೋಗ್ಯತೆಯ ಪ್ರಮಾಣದಂತೆ ಮಾಡಬೇಕಾಗುವುದು ॥೫೭೬॥ ಯಥೋಚಿತವಾಗಿ ಅರ್ಪಿಸುವಾಗ ಕ್ರಿಯೆಗಳು ಭಿನ್ನ ಭಿನ್ನವಾಗಿ ಕಂಡರೂ ಒಳಗಿನ ಶ್ರದ್ಧೆಯು ಅಭಿನ್ನವಾಗಿರುವುದು. ಭಾಗವತಧರ್ಮದಲ್ಲಿ ಇದು ಮುಖ್ಯ ಲಕ್ಷಣವಾಗಿದೆ ॥೫೭೭॥

ಭೂತೀ ಭೂತಾತ್ಮಾ ಅಭಿನ್ನಸ್ಥಿತೀ । ದಯಾ ಮೈತ್ರೀ ಸಾಧೂಂಚೀ ಭಕ್ತೀ । ಹೇಚ ಆತುಡೇ ಕೈಶಾ ರೀತೀ । ಪ್ರಬುದ್ಧ ತದರ್ಥೀ ಉಪಾವ ಸಾಂಗೇ ॥೩೭೮॥ ತೇಚಿ ನವ ಶ್ಲೋಕೀ ಶ್ಲೋಕೋಕ್ತೀ । ಸಮೂಳ ಭಾಗವತಧರ್ಮಸ್ಥಿತೀ । ಪ್ರಬುದ್ಧ ಸಾಂಗೇ ರಾಯಾಪ್ರತೀ । ಸಾಧಕಾ ನಿಜಪ್ರಾಪ್ತೀ ಸಾಧಾವಯಾ ॥೩೭೯॥

ಶೌಚಂ ತಪಸ್ತಿತಿಕ್ಷಾಂಚ ಮೌನಂ ಸ್ವಾಧ್ಯಾಯುಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾಂ ಚ ಸಮತ್ವಂ ದ್ವಂದ್ವಸಂಜ್ಞಯೋಃ ॥೨೪॥

ಅರ್ಥ:- ಗುರುಗಳ ಸೇವೆಯನ್ನು ಮಾಡಬಯಸುವ ಶಿಷ್ಯನು ಶುಚಿತ್ವ, ತಪಸ್ಸು, ಸಹಿಷ್ಣುತೆ, ಮೌನ, ವೈದಿಕ ಜ್ಞಾನದ ಅಧ್ಯಯನ, ಸರಳತೆ, ಬ್ರಹ್ಮಚರ್ಯ, ಅಹಿಂಸೆ, ಮತ್ತು ಶೀತ- ಉಷ್ಣ, ಸುಖ, ದುಃಖ ಮುಂತಾದ ಲೌಕಿಕ ದ್ವಂದ್ವಗಳ ಸಮ್ಮುಖದಲ್ಲಿ ಸಮಚಿತ್ತನಾಗಿರುವುದು. ಇವುಗಳನ್ನು ಕಲಿಯಬೇಕು.

ಮುಖ್ಯ ಸಾಧಾವಯಾ ಪರಮಾರ್ಥಾ । ಅವಶ್ಯ ಪಾಹಿಜೇ ಗಾ ''ಶುಚಿತಾ'' । ಶುಚಿತ್ವಾವಾಂಚೋನಿ ತತ್ತ್ವತಾ । ನ ಲಾಭೇ ಹಾತಾ ನಿಜಸ್ವಾರ್ಥು ॥೩೮೦॥ ಯಾಲಾಗೀ ಗಾ ನೃಪನಾಥಾ । ಶುದ್ಧ ಶೌಚಾಚೀ ಆಇಕ ಕಥಾ । ಆಂತರ ಮಳ ನ ಕ್ಷಾಳಿತಾ । ನ ಲಾಭೇ ಹಾತಾ ಬಾಹ್ಯ ಶುದ್ಧೀ ॥೩೮೧॥ ಮನ ಮಳಿಣ ವಾಸನಾಮಳೇ । ತೇ ನ ಕರಿತಾ ಸೋವಳೇ । ಬಾಹ್ಯ ಪವಿತ್ರತಾ ಅಹಂಬಳೇ । ತೇ ಜಾಣ ಆಂಧಳೆ ನ್ಯಾಹಾಳೀ ಜೈಸೇ ॥೩೮೨॥ ಮನ ಮಳಿಣ ವಾಸನಾಮಳೇ । ತೇ ಪ್ರಕ್ಷಾಳೂನಿ ಸೋವಿಳೇ । ಕರಾವೇ ಗಾ ಭಾವಬಳೇ । ಗುರುವಾಕ್ಯಮೇಳೇ ನಿಜನಿಷ್ಠಾ ॥೩೮೩॥ ಸೋನೇ ಜೇವೀ ಪುಟೀ ಪಡೇ । ಮಳ ತುಟೇ ವಾಣೀ ಚಢೇ । ತೇವೀ ಗುರುಸೇವಾ ಜಡತ್ವ ಮೋಡೇ । ಚಿತ್ತಶುದ್ಧೀ ಜೋಡೇ ನಿರ್ದುಷ್ಟ ॥೩೮೪॥ ಆರಶಾಸೀ ಸಹಾಣೇ ತೋಡಿಜೇ । ತೇಣೇ ಸ್ವಮುಖಾ ಶುದ್ಧತ್ವ ಜೋಡಿಜೇ । ತೇವೀ ಚಿತ್ತಶುದ್ಧೀ ಉಘಡಿಜೇ । ಸಹಜೇ ಸಹಜೇ ನಿಜಶುದ್ಧೀ ॥೩೮೫॥ ಲೋಹೇ ಪರಿಸು ಝಾಂಕಿಜೇ । ತಂವ ಲೋಹತ್ವಾ ಮುಕಿಜೇ । ತೇವೀ ಅಂತರಶುದ್ಧೀನೇ ಕೀಜೇ । ಮಹಾ ನಿರ್ಬುಜೇ ಸ್ಥೂಳಬುದ್ಧಿ ॥೩೮೬॥ ಸೂರ್ಯಾಸನ್ಮುಖ ಸೂರ್ಯಕಾಂತ । ಜಾಹಲಿಯಾ ಶುದ್ಧತ್ವೇ ಹೋಯ ದೀಪ್ತ । ತೇ ಪ್ರಭಾ ಬಾಹ್ಯ ಪ್ರಕಾಶತ । ಅಗ್ನಿಹೋತ್ರಾರ್ಥ ಮಹಾಯಾಗಾ ॥೩೮೭॥ ತೇವೀ ಗುರುವಾಕ್ಯೇ ಅಂತರಶುದ್ಧತಾ । ಸಬಾಹ್ಯ ಆಲೀ ಶುಚಿತಾ । ಹೇ ನ ಕರಿತೀ ತೇ ಪವಿತ್ರತಾ । ತೇ ಜಾಣ ತತ್ತ್ವತಾ ಅತಿಭಂಡಿಮಾ ॥೩೮೮॥ ಅಲ್ಪ ಜಳ ಶೌಚಾಪ್ರತೀ । ತೇಣೇ ಹಾತ ಕರಕಟಲೇ ಠಾತೀ । ಶೇವಟೀ ಗಿರಬಡೇ ಬ್ರಹತೀ । ತೇವೀ ವಿಕಲ್ಪೀ ಹೋತೀ ಅಪವಿತ್ರ ॥೩೮೯॥

ಸರ್ವಭೂತಗಳಲ್ಲಿ ಭೂತಾತ್ಮನು ಅಭಿನ್ನಸ್ಥಿತಿಯಲ್ಲಿರುವನು. ಆದ್ದರಿಂದ ದಯೆ, ಮೈತ್ರೀ ಮತ್ತು ಸಾಧೂಗಳ ಭಕ್ತಿ ಇವು ಯಾವ ರೀತಿಯಲ್ಲಿ ಪ್ರಾಪ್ತವಾದೀತೆಂಬುದಕ್ಕೆ ಪ್ರಬುದ್ಧ ಋಷಿಗಳು ಅದಕ್ಕಾಗಿ ಉಪಾಯಗಳನ್ನು ಹೇಳುತ್ತಿದ್ದಾರೆ ॥೩೭೮॥ ಇದುವೇ ಪೂರ್ಣ ಭಾಗವತ ಧರ್ಮದ ಸ್ಥಿತಿಯನ್ನು ಮುಂದಿನ ಒಂಬತ್ತು ಶ್ಲೋಕಗಳಲ್ಲಿ ಸಾಧಕರಿಗೆ ಬ್ರಹ್ಮಪ್ರಾಪ್ತಿಯಾಗಬೇಕೆಂದು ಪ್ರಬುದ್ಧರು ರಾಜನಿಗೆ ಹೇಳುತ್ತಿರುವರು ॥೩೭೯॥

ಪರಮಾರ್ಥವನ್ನು ಸಾಧಿಸಲು ''ಶುಚಿರ್ಭೂತ'' ವು ಅವಶ್ಯವಾಗಿಬೇಕಾಗುವುದು. ಶುಚಿತ್ವವಿಲ್ಲದೇ ನಿಜಹಿತದ ಸ್ವಾರ್ಥವು ಎಂದೆಂದಿಗೂ ತನ್ನ ಕೈಗೆ ಹತ್ತಲಾರದು ॥೩೮೦॥ ಅದಕ್ಕಾಗಿ ಹೇ ರಾಜನೇ, ಶುದ್ಧ ಶೌಚದ ಲಕ್ಷಣಗಳನ್ನು ಕೇಳು. ಅಂತಃಕರಣಗಳಲ್ಲಿನ ಮಲವನ್ನು ತೊಳೆದು ಹಾಕದ ವಿನಹ ಬಾಹ್ಯ ಶುದ್ಧಿಯು ಕೈಗೆ ಹತ್ತಲಾರದು ॥೩೮೧॥ ವಾಸನೆಯ ಮಲದಿಂದ ಮಲಿನವಾದ ಮನವನ್ನು ಮಡಿ ಮಾಡದ ಹೊರತಾಗಿ ಅಹಂಕಾರದಿಂದ ಬಾಹ್ಯ ಪವಿತ್ರತೆಯ ಮಿಂಚುವಿಕೆಯು, ಕುರುಡನು ದಿಟ್ಟಿಸಿನೋಡಿದಂತಾಗುವುದು. ಇದನ್ನು ಲಕ್ಷದಲ್ಲಿಡು ॥೩೮೨॥ ವಾಸನೆಯ ಮಲದಿಂದ ಮನವು ಮಲಿನಗೊಂಡಿರುವುದು. ಅದನ್ನು ಭಕ್ತಿಭಾವದಿಂದ ಗುರುವಚನಗಳಲ್ಲಿ ವಿಶ್ವಾಸವಿಟ್ಟು ಆತ್ಮನಿಷ್ಠೆಯಿಂದ ಮನವನ್ನು ತೊಳೆದು ಮಡಿಗೊಳಿಸಬೇಕು ॥೩೮೩॥ ಬಂಗಾರವನ್ನು ಅಗ್ನಿಯಲ್ಲಿ ಪುಟ ಹಾಕಲು ಅದರ ಹೊಲಸೆಲ್ಲ ಹೋಗಿ ಅದರ ವರಿಯು ಬೆಳೆಯುವುದು. ಅದರಂತೆ ಗುರುಸೇವೆಯಿಂದ ಜಡತ್ವವು ನಾಶವಾಗುವುದು ಮತ್ತು ನಿರ್ದೋಷವಾದ ಚಿತ್ತಶುದ್ಧಿಯು ಪ್ರಾಪ್ತವಾಗುವುದು ॥೩೮೪॥ ಕನ್ನಡಿಯನ್ನು ಸಾಣೆಯಲ್ಲಿ ತಿಕ್ಕಿ ಸ್ವಚ್ಛಗೊಳಿಸಲು, ತನ್ನ ಮುಖವು ಶುದ್ಧವಾಗಿ ಕಾಣುವುದು, ಅದರಂತೆ ಚಿತ್ತಶುದ್ಧಿಯಿಂದ ಆತ್ಮಶುದ್ಧಿಯು ತಾನಾಗಿಯೇ ಲಭಿಸುವುದು ॥೩೮೫॥ ಕಬ್ಬಿಣದಿಂದ ಪರೀಸಮಣಿಯನ್ನು ಮುಟ್ಟಿಹಾಕಲು, ಕಬ್ಬಿಣವು ತನ್ನ ಸ್ವರೂಪವನ್ನೇ ಕಳೆದುಕೊಳ್ಳುವುದು (ಕಬ್ಬಿಣವು ಬಂಗಾರವಾಗುವುದು) ಅದರಂತೆ ಅಂತಃಕರಣ ಶುದ್ಧವಾದರೆ, ಅದರ ಯೋಗದಿಂದ ಸ್ಥೂಳ ಬುದ್ಧಿಯು ಪೂರ್ಣವಾಗಿ ಲೋಪವಾಗುವುದು ॥೩೮೬॥ ಸೂರ್ಯಕಾಂತ ಶಿಲೆಯನ್ನು ಸೂರ್ಯನ ಎದುರಿಗೆ ಹಿಡಿಯಲು, ಅದು ಸೂರ್ಯನ ತೇಜದಿಂದ ಪ್ರದೀಪಗೊಳ್ಳುವುದು ಮತ್ತು ಅದೇ ತೇಜವು ಅಗ್ನಿರೂಪದಿಂದ ಹೊರಹೊಮ್ಮಿ ಯಜ್ಞಯಾಗಕ್ಕೆ ಉಪಯೋಗವಾಗುವುದು ॥೩೮೭॥ ಅದರಂತೆ ಗುರುವಚನಗಳಿಂದ ಅಂತಃಕರಣವು ಶುದ್ಧವಾಯಿತೆಂದರೆ, ಅಂತರ್ಬಾಹ್ಯ ಶುಚಿತ್ವವೇ ಪ್ರಕಟವಾಗುವುದು. ಹೀಗೆ ನಡೆಯದವರು ಮಹಾ ಢೋಂಗೀಗಳಾಗಿರುವರು ॥೩೮೮॥ ಶೌಚಕ್ಕೆ ಹೋಗುವಾಗ್ಗ ಸ್ವಲ್ಪೇ ನೀರನ್ನು ಒಯ್ದರೆ, ಅದರಿಂದ ಕೈಗೆ ಹತ್ತಿದ ಹೊಲಸು ಹಾಗೆಯೇ ಉಳಿದು ಗುದದ್ವಾರವೂ ಶುದ್ಧವಾಗುವುದಿಲ್ಲ. ತದ್ವತ್ ವಿಕಲ್ಪಿ ಜನರು ಅಪವಿತ್ರರಾಗಿರುವರು ॥೩೮೯॥

ಭರಲೇ ಕಾಳಕೂಟ ಜೀವೀ । ವರೀ ಟವಟವ ಅತಿಬರವೀ । ತೇ ಇಂದ್ರಾವಣ ಕೋಣೇಹೀ ನ ಸೇವೀ । ಅಂತರಸ್ವಭಾವೀ ಅತಿಮಳಿಣ ।೯೦॥ ತೀರ್ಥೀ ಧುತಲಾ ರಜಕರಾಜು । ತೋ ಕಾಯ ಹೋಈಲ ಶುದ್ಧ ದ್ವಿಜು । ನಟೇ ಘೇತಲಾ ರಾಜಧ್ವಜು । ತೋ ನವ್ಹೇ ಪೂಜ್ಯು ಬಾಹ್ಯಕ್ರಿಯಾವಶೇ ।೯೧॥ ಸುಂದರೀ ಸುಕುಮಾರ ಸಾಜಿರೀ । ವೋಠೀ ಕುಷ್ಠತಾ ತಿಳಭರೀ । ಜಾಹಲಿಯಾ ತೀತೇ ಕೋಣೀ ನ ವರೀ । ವರೀವರೀ ಬರೀ ದಿಸತಾಂಹೀ ।೯೨॥ ನಾಗವೀ ಮಾಥಾ ಮೋತ್ಯಾಂಚೀ ಜಾಳೀ । ಶಿಂಬರೀ ಸುಪಾಣೀದಾಣಾ ಲ್ಯಾಲೀ । ತೇವೀ ಬಾಹ್ಯ ಪವಿತ್ರತಾ ದಾವಿಲೀ । ತೇ ತೇ ಕೇಲೀ ನಿಜಭಂಡಿಮಾ ।೯೩॥ ದಹೇ ಮಾಖಿಲಾ ವಾಯಸು । ತೋ ಕಾಯ ಹೋಈಲ ರಾಜಹಂಸು । ದಹೀ ಮ್ಹಣೋನಿ ಮಥಿತಾ ಕಾಪುಸು । ತೃಪ್ತೀ ನವ್ಹೇ ಉಪಹಾಸು ಜಗೀ ಪ್ರಗಟೇ ।೯೪॥ ತೇವೀ ಅಂತರೀ ವಿಕಲ್ಪು ಅಸತಾ । ಬಾಹ್ಯ ಜೇ ಜೇ ಪವಿತ್ರತಾ । ತೇ ತೇ ಕ್ರಿಯಾ ನೃಪನಾಥಾ । ಜಾಣ ತತ್ತ್ವತಾ ಅತಿಭಂಡಿಮಾ ।೯೫॥ ಅಂತರ ಕ್ಷಾಳಿಲೇ ಗುರುಪ್ರತೀತೀ । ಬಾಹ್ಯ ಕ್ಷಾಳಿಲೇ ಶಾಸ್ತ್ರಯುಕ್ತೀ । ಐಸೇ ಶುಚಿತ್ವ ನಿಜನಿಶ್ಚಿತೀ । ಅದ್ವೈತ ಸ್ಥಿತೀ ತೇಥೇ ನಾಂದೇ ।೯೬॥ ಅಂತರೀ ಶುಚಿತ್ವ ಪೂರ್ಣ ವಸೇ । ತೇ ಬಾಹ್ಯಕರ್ಮೀ ಸ್ವಯೇ ಪ್ರಕಾಶೇ । ತೇ ಶುಚಿತ್ವಚಿ ಅನಾಯಾಸೇ । ಪರಮಾರ್ಥದಶೇ ಪ್ರಕಾಶೀ ।೯೭॥ ಈಶ್ವರಭಾವಾಚೇ ನಿಜವರ್ಮ । ಜ್ಯಾಚೇ ಪೋಟೀ ರಿಘಾಲೇ ಸಪ್ರೇಮ । ತ್ಯಾಚೇ ಕರ್ಮಚಿ ಹೋಯ ಬ್ರಹ್ಮ । ತ್ಯಾ ದೇಹಭ್ರಮ ಬಾಧೀನಾ ।೯೮॥ ಯಾ ನಾಮ ''ಸುಚಿಷ್ಮತಾ'' । ಸತ್ಯ ಜಾಣ ಗಾ ನೃಪನಾಥಾ। ತಪಾಚೀಹೀ ಸ್ಥಿತೀ ಆತಾ । ಐಕ ತತ್ತ್ವತಾ ಸಾಂಗೇನ ।೯೯॥ ಶರೀರ ಶೋಷಣಾ ನಾಂವ ತಪ । ತೇ ಪ್ರಾರಬ್ಧ - ಭೋಗಾನುರೂಪ । ಹೃದಯೀ ವಾಹಣೇ ಕೃಷ್ಣಸ್ವರೂಪ । ತೋ ಶುದ್ಧ ಸಾಕ್ಷೇಪ ತಪಾಚಾ ।೧೦೦॥ ಜೇವೀ ಧೂರಸೂನಿ ದಿಠೀ । ಶೂರ ರಣಾಮಾಜೀ ಉಠೀ । ತೇವೀ ಈಶ್ವರ ಧರೋನಿ ಪೋಟೀ । ವರ್ತೇ ತೋ ಸೃಷ್ಟೀ ತಪಿಯಾ ಶುದ್ಧ ।೧೦೧॥ ಹೇಚಿ ತಪಾಚೇ ನಿಜಸ್ವರೂಪ । ಯಾಚಿ ನಾಂವ ಶುದ್ಧ ''ತಪ'' । ಯಾವರತೇ ನ ಚಢೇ ರೂಪ । ವ್ಯರ್ಥ ವಾಗ್ಜಲ್ಪ ಕಾ ಕರಾವೇ ।೧೦೨॥ ದ್ವಂದ್ವಸಹಿಷ್ಣುತಾ ಮುಮುಕ್ಷಾ । ಯಾ ನಾಂವ ಮ್ಹಣಜೇ ''ತಿತಿಕ್ಷಾ'' । ತೇಹೀ ಆಣಾವಯಾ ಲಕ್ಷಾ । ನೃಪಾಧ್ಯಕ್ಷಾ ಅವಧಾರೀ ।೧೦೩॥

ಒಳಗೆ ವಿಷದಿಂದ ತುಂಬಿಕೊಂಡು ಮೇಲ್ನೋಟಕ್ಕೆ ಹೊಳಪಿಸುತ್ತ ಸುಂದರವಾಗಿ ಕಾಣುವ ಇಂದ್ರಾವಣ ಫಲವನ್ನು ಯಾರೂ ತೆಗೆದುಕೊಳ್ಳುವುದಿಲ್ಲ, ಏಕೆಂದರೆ ಅದರ ಒಳಗಡೆಯಲ್ಲಿ ಅತಿಶಯವಾಗಿ ವಿಷವು ತುಂಬಿರುವುದು ।೯೦॥ ಅಗಸ ರಾಜನಿಗೆ ತೀರ್ಥದಲ್ಲಿ ತೊಳೆದರೆ, ಆತನು ನಿಜವಾದ ಬ್ರಾಹ್ಮಣನಾಗಬಲ್ಲನೇ? ನಟನು ರಾಜನ ವೇಶವನ್ನು ಹಾಕಿದರೆ, ಹೊರಗಿನ ಕ್ರಿಯೆಗಳಿಂದ ಆತನು ಪೂಜ್ಯನಾಗಬಲ್ಲನೇ? ।೯೧॥ ಕನ್ಯೆಯು ಸುಕುಮಾರಳು, ಬಲು ಸುಂದರಳು ಇರುವಳು, ಆದರೆ ಆಕೆಯ ತುಟಿಯ ಮೇಲೆ ಎಳ್ಳಿನಷ್ಟು ಕುಷ್ಠವು ಎದ್ದಿರುವುದು. ಹೀಗಾದಲ್ಲಿ ಆಕೆಯು ಮೇಲ್ನೋಟಕ್ಕೆ ಸುಂದರವಾಗಿ ಕಂಡರೂ ಆಕೆಯನ್ನು ಯಾರೂ ವರಿಸರು ।೯೨॥ ಕೆಳಗೆ ಬತ್ತಲಾಗಿ ಮಸ್ತಕ ಮೇಲೆ ಮುತ್ತಿನ ದಂಡಿ ಧರಿಸಿದರೆ, ಮುಂಡ ಮೂಗಿನಾಕೆ ದೊಡ್ಡದಾದ ಮುತ್ತಿನ ನತ್ತು ಹಾಕಿದರೆ, ಅದು ಹೇಗೆ ಲಜ್ಜಾಸ್ಪದವಾಗುವುದೋ, ಅದರಂತೆಯೇ ಹೊರನೋಟಕ್ಕೆ ಪವಿತ್ರತೆಯನ್ನು ತೋರಿಸಿದರೆ ಅಷ್ಟೇ ಲಜ್ಜಾಸ್ಪದವಾಗುವುದು ।೯೩॥ ಕಾಗೆಯ ಅಂಗಕ್ಕೆ ಮೊಸರನ್ನು ಲೇಪಿಸಿದರೆ, ಅದು ರಾಜಹಂಸ ಪಕ್ಷಿಯಾಗಬಲ್ಲದೇ? ಮೊಸರೆಂದು ತಿಳಿದು ಅರಳೆಯನ್ನು ಕಡೆದರೆ ಅದರಿಂದ ಬೆಣ್ಣೆಯು ಹೊರಡುವುದಿಲ್ಲ. ಆದರೆ ಜನರಲ್ಲಿ ಮಾತ್ರ ಹಾಸ್ಯಾಸ್ಪದವಾಗುವುದು ।೯೪॥ ಅದರಂತೆ ಅಂತಃಕರಣವು ವಿಕಲ್ಪವಾಗಿದ್ದರೆ, ಹೊರನೋಟಕ್ಕೆ ಪವಿತ್ರತೆಯನ್ನು ತೋರಿಸುವ ಕ್ರಿಯೆಗಳೆಲ್ಲವೂ ಹೇ ರಾಜನೇ, ನಿಜವಾಗಿಯೂ ಅತ್ಯಂತ ಲಜ್ಜಾಸ್ಪದವಾಗಿರುವುವು ।೯೫॥ ಗುರೂಪದೇಶದ ಅನುಭವದಿಂದ ಅಂತಃಕರಣವನ್ನು ನಿರ್ಮಲಗೊಳಿಸಿ, ಮತ್ತು ಶಾಸ್ತ್ರಮಾರ್ಗದಿಂದ ಬಾಹ್ಯಾಂಗವನ್ನು ಸ್ವಚ್ಛಗೊಳಿಸಿದರೆ, ಇದುವೇ ನಿಜವಾದ ಪವಿತ್ರತೆಯಾಗಿರುವುದು. ಅಲ್ಲಿಯೇ ಅದ್ವೈತ ಸ್ಥಿತಿಯು ಬೆಳಗುವುದು ।೯೬॥ ಅಂತಃಕರಣವು ಪೂರ್ಣವಾಗಿ ಪವಿತ್ರಗೊಳ್ಳಲು ಬಾಹ್ಯಕರ್ಮಗಳಲ್ಲಿ ತನ್ನಿಂದ ತಾನೇ ಪ್ರವಿತ್ರತೆಯು ಪ್ರಕಟವಾಗುವುದು. ಮತ್ತು ಈ ಪವಿತ್ರತೆಯು ತನ್ನಿಂದ ತಾನೇ ಪರಮಾರ್ಥಸ್ಥಿತಿಗೆ ಒಯ್ದು ಮುಟ್ಟಿಸುವುದು ।೯೭॥ ಈಶ್ವರಭಾವದ ಈ ಮರ್ಮವು ಸಪ್ರೇಮದಿಂದ ಮನದಲ್ಲಿ ಸ್ಥಿರಗೊಳ್ಳಲು ಆತನ ಕರ್ಮಗಳೆಲ್ಲ ಬ್ರಹ್ಮರೂಪವಾಗುವುವು. ಆಗ ಆತನಿಗೆ ದೇಹಭ್ರಮವು ಬಾಧಿಸಲಾರದು ।೯೮॥ ಹೇ ನೃಪನಾಥನೇ, ಇದರ ನಾಮವೇ ನಿಜವಾಗಿ ''ಪವಿತ್ರತೆ'' ಯಾಗಿರುವುದು. ಇದನ್ನು ಲಕ್ಷದಲ್ಲಿಡು. ಈಗ ತಪದ ಸ್ಥಿತಿಯನ್ನು ಸಹ ಹೇಳುವೆನು, ಕೇಳು, ।೯೯॥ ಶರೀರ ಶೋಷಣೆಗೆ ''ತಪ'' ಎನ್ನುವರು ಆದರೆ ಅದು ಪ್ರಾರಬ್ಧಭೋಗಾನುಸಾರವಾಗಿರುವುದು, ಹೃದಯದಲ್ಲಿ ಕೃಷ್ಣಸ್ವರೂಪವನ್ನು ನಿರಂತರವಾಗಿ ಚಿಂತಿಸುವುದೇ ತಪದ ಶುದ್ಧ ಸ್ವರೂಪವಾಗಿರುವುದು ।೧೦೦॥ ವೀರತನದ ಮದವು ಕಣ್ಣಿಗೆ ಏರಿಬರಲು, ವೀರಪುರುಷರು ಅಗ್ರಭಾಗದಲ್ಲಿ ದೃಷ್ಟಿಯಿಟ್ಟು ರಣರಂಗದಲ್ಲಿ ಪರಾಕ್ರಮ ತೋರಿಸಲು ಧುಮುಕುವರು. ಅದರಂತೆ ಈಶ್ವರನನ್ನು ಹೃದಯದಲ್ಲಿ ಧರಿಸಿ, ಈ ಸೃಷ್ಟಿಯಲ್ಲಿ ವರ್ತಿಸುವವನು ನಿಜವಾದ ತಪಸ್ವಿಯಾಗಿರುವನು ।೧೦೧॥ ಇದೇ ತಪದ ನಿಜವಾದ ಸ್ವರೂಪವಾಗಿದೆ ಮತ್ತು ಇದಕ್ಕೇನೇ ಶುದ್ಧವಾದ ''ತಪ'' ಎನ್ನುವರು. ಇದಕ್ಕಿಂತಲೂ ಇದರ ಸ್ವರೂಪವನ್ನು ಹೇಳಲು ಬರುವುದಿಲ್ಲ. ಅಂದಮೇಲೆ ವ್ಯರ್ಥವಾಗಿ ಏಕೆ ಬಡಬಡಿಸಬೇಕು? ।೧೦೨॥ ಮುಮುಕ್ಷುಗಳವರಿಗೆ ದ್ವಂದ್ವಸಹಿಷ್ಣತೆಯು ಇರಬೇಕು ಇದಕ್ಕೆ ''ತಿತಿಕ್ಷಾ'' ಎನ್ನುವರು. ಹೇ ನೃಪನಾಥನೇ, ಇದನ್ನು ಸಹ ಲಕ್ಷದಲ್ಲಿರುವಂತೆ ಕೇಳು ।೧೦೩॥

ಸುಖದುಃಖ ಉಭಯ ಭೋಗ । ದೋಮಾಜೀ ಅಂಖಡ ಆಪುಲೇ ಅಂಗ । ಜೇವೀ ಚಿತ್ರೀಂಚೀ ವಾಘೀಣ ಆಣಿ ವಾಘ । ದೋಹೀ ಮಾಜೀ ಸಾಂಗ ನಿಜತ್ವೇ ಭಿಂತೀ ॥೪೦೪॥ ಜೇವೀ ದಾವಾಗ್ನೀ ಕಾ ಉನ್ಹಾಳೇ । ಆಕಾಶ ಜೈಸೇ ನ ಪೋಳೇ । ಅಸೋನಿ ತ್ಯಾಂಚೇನಿ ಮೇಳೇ । ತ್ಯಾವೇಗಳೇ ಅಲಿಪ್ತ ॥೪೦೫॥ ಶೀತಳ ಜಳ ಕಾ ಹೀಂವ ಪಡೇ । ಪೃಥ್ವಿ ನಿಜಕ್ಷಮಾ ನ ಕಾಂಕುಡೇ । ತೇವೀ ನಿಜಸ್ವರೂಪಸುರವಾಡೇ । ದ್ವಂದ್ವಾ ನಾತುಡೇ ನಿಜಸಾಧು ॥೪೦೬॥ ಶರೀರ ಜರೀ ಹಿಂವೇ ಕಾಪೇ । ತೇಣೇ ದೇಹ ಕಾಂಪೇ ಸಾಧು ನ ಕಾಂಪೇ । ಶರೀರ ಅತಿಉಷ್ಣೇ ತಾಪೇ । ಪರೀ ಸಾಧು ನ ತಾಪೇ ದೇಹತಾಪಾಮಾಜೀ ॥೪೦೭॥ ಸುಖ ದೇಖೋನಿ ದಿಠೀ । ಜ್ಯಾ ಗೋಡಿಯಾ ಘಾಲೀ ಮಿಠೀ । ದುಃಖಹೀ ತ್ಯಾಚಿ ಆವಡೀ ಘೋಟೀ । ''ದ್ವಂದ್ವಸಹಿಷ್ಣುತಾ'' ಮೋಠೀ ಯಾ ನಾಂವ ರಾಯಾ ॥೪೦೮॥ ಗೋಫಣಗುಂಡಾ ಸನ್ಮುಖ । ಲಾಗತಾ ಅವಶ್ಯ ಉಠೇ ದುಃಖ । ತೋಚ ಸುವರ್ಣಾಚಾ ಜಾಹಲಿಯಾ ದೇಖ । ದುಃಖ ಲೋಪೋನಿ ಸುಖ ಅನಿವಾರ ವಾಢೇ ॥೪೦೯॥ ಸುಖದುಃಖ ಪ್ರಕಾಶಕ । ನಿಜವಸ್ತು ಅಸೇ ಏಕ । ತ್ಯಾ ಏಕಾತ್ಮತಾ ದೇಖ । ದ್ವಂದ್ವೇ ಸಾಧಕ ಸುಖೇ ಸಾಹತೀ ॥೪೧೦॥ ತೇವೀ ದ್ವಂದ್ವಾಚೇ ಜಾಣಪಣ । ಜಾಣವೀತ ಅಸೇ ಜೇ ಜ್ಞಾನ । ತೇ ಜಾಣೆತಲ್ಯಾ ಆಪಣ । ದ್ವಂದ್ವೇ ಸಂಪೂರ್ಣ ನಿರ್ದ್ವಂದ್ವೇ ಹೋತೀ ॥೪೧೧॥ ರಸಲುಸೀ ಕಠಿಣಪಣ । ತ್ಯಾಮಾಜೀ ಗೋಡೀ ಅಖಂಡ ಪೂರ್ಣ । ತೇವೀ ದ್ವಂದ್ವಾಮಾಜೀ ವಸ್ತು ಚಿದ್ಘನ । ಅಖಂಡದಂಡಾಯಮಾನ ಸ್ವಯೇ ದೇಖೇ ॥೪೧೨॥ ಐಶೀ ಹೇ ಅಖಂಡತಾ । ಜಂವ ನ ಯೇ ಸಾಧಕಾಚೇ ಹಾತಾ । ತಂವ ದ್ವಂದ್ವಾಚೀ ಸಹನತಾ । ನವ್ಹೆ ನೃಪನಾಥಾ ನಿಶ್ಚಯೇಸೀ ॥೪೧೩॥ ಯಾ ನಾಂವ ''ದ್ವಂದ್ವಸಹನ'' । ನಿಜನಿಶ್ಚಯೇ ಜಾಣ ಪೂರ್ಣ । ಆತಾ ಮೌನಾಚೇ ಲಕ್ಷಣ । ಸಾವಧಾನ ಅವಧಾರೀ ॥೪೧೪॥ ವಾಗ್ವಾದು ಕರಾವಾ ಜನೀ । ತೈ ದೃಢ ವ್ಹಾವೇ ದೇಹಾಭಿಮಾನೀ । ಸಾಂಡವಿಲಾ ತೋ ಸದ್ಗುರೂನೀ । ನಿಃಶೇಷ ಧೋಉನಿ ಶಬ್ದೇಸೀ ॥೪೧೫॥ ಸದ್ಗುರುವಚನ ಪಡತಾ ಕಾನೀ । ಸ್ತುತಿ ನಿಂದಾ ಗಿಳೋನಿ ದೋನ್ಹೀ । ಬೋಲ ಬೋಲಣೇ ನಿರಸುನೀ । ಹೃದಯಭುವನೀ ಪರಿಪಕ್ವಲೇ ॥೪೧೬॥ ತೇವ್ಹಾ ಜ್ಯಾಚೇ ಬೋಲಾವೇ ಅವಗುಣ । ತೇಥೇ ದಿಸೇ ಹೃದಯಸ್ಥ ಆಪಣ । ಯಾಲಾಗೀ ಬೋಲತಾ ಪೈಶುನ್ಯ । ಪಡೇಮೌನ ಗುರುವಾಕ್ಯೇ ॥೪೧೭॥ ಗುಣ ದೇಖೋನಿಯಾ ಸ್ತವನ । ಕರಿತಾ ಪಡೇ ದೃಢ ಮೌನ । ಮೀಚಿ ಸ್ತವ್ಯ ಸ್ತವಿತಾ ಸ್ತವನ । ಮಜ ಮ್ಯಾ ವಾನಿತಾ ಪೂರ್ಣ ಮೂರ್ಖತ್ವ ಮಾಝೇ ॥೪೧೮॥

ಗೋಡೆಯಲ್ಲಿ ಬರೆದ ಚಿತ್ರದಲ್ಲಿ ಗಂಡುಹುಲಿ,ಹೆಣ್ಣುಹುಲಿ ಈ ಎರಡಕ್ಕೂ ಒಂದೇ ಗೋಡೆ ಆಧಾರವಾಗಿದೆ. ಅದರಂತೆ ಸುಖ ಮತ್ತು ದುಃಖ ಈ ಎರಡು ಭಾಗಗಳಾಗಿದ್ದರೂ ಅದಕ್ಕೆ ತಮ್ಮದೇ ಆದ ಒಂದೇ ಅಂಗವು ಅಖಂಡವಾಗಿರುವುದು ॥೪೦೪॥ ದಾವಾಗ್ನಿಯಾಗಿರಲಿ ಅಥವಾ ಬೇಸಿಗೆಯ ತಾಪವಾಗಲಿ ಇವುಗಳ ಝಳದಿಂದ ಆಕಾಶವು ಸುಡುವುದಿಲ್ಲ. ಇವು ಹತ್ತಿಕೊಂಡಿದ್ದರೂ ಅಲಿಪ್ತವಾಗಿರುವುದು ॥೪೦೫॥ ನೀರು ತಣ್ಣಗಾಗಿರಲಿ ಅಥವಾ ಹಿಮ ಬೀಳಲಿ,ಪೃಥ್ವಿಯು ತನ್ನ ಸಹನಶೀಲತೆಯಿಂದ ನಡುಗುವುದಿಲ್ಲ. ಅದರಂತೆ ಆತ್ಮ ಸ್ವರೂಪದ ಸುಖದಿಂದ ನಿಜವಾದ ಸಾಧು ಈ ದ್ವಂದ್ವಕ್ಕೆ ಲಿಪ್ತನಾಗುವುದಿಲ್ಲ ॥೪೦೬॥ ಶೀತದಿಂದ ಶರೀರವು ನಡುಗುವುದು ಆದರೆ ಸಾಧು ನಡುಗುವುದಿಲ್ಲ. ಅತಿಶಯ ಉಷ್ಣದಿಂದ ಶರೀರವು ಬಿಸಿಯಾಗುವುದು. ಆದರೆ ಈ ದೇಹದ ತಾಪದಿಂದ ಸಾಧು ತಾಪಗೊಳ್ಳುವುದಿಲ್ಲ ॥೪೦೭॥ ಹೇ ರಾಜನೇ, ಈತನು ಎಷ್ಟೊಂದು ಪ್ರೀತಿಯಿಂದ ಸುಖದಲ್ಲಿ ರಮಿಸುವನೋ ಅಷ್ಟೇ ಪ್ರೀತಿಯಿಂದ ದುಃಖದ ಅನುಭವವನ್ನು ಸ್ವೀಕರಿಸುವನು. ಇದಕ್ಕೆ ಮಾತ್ರ ದ್ವಂದ್ವಸಹಿಷ್ಣತೆ ಎನ್ನುವರು ॥೪೦೮॥ ಕವಣೆಯಿಂದ ಹೊಡೆದ ಕಲ್ಲು ದೇಹಕ್ಕೆ ಬಡೆದರೆ ದುಃಖವಾಗುವುದು ಆದರೆ ಅದೇ ಬಂಗಾರದ್ದಾಗಿದ್ದರೆ, ಬಡೆದ ದುಃಖವು ಲೋಪವಾಗಿ ಅತ್ಯಂತ ಸುಖವಾಗುವುದು ॥೪೦೯॥ ಸುಖದ ಅಥವಾ ದುಃಖದ ಪ್ರಕಾಶಕ ತತ್ವವು ಒಂದೇಯಾಗಿರುವುದು. ಇವುಗಳಲ್ಲಿ ಐಕ್ಯತೆಯಾಯಿತೆಂದರೆ ಸಾಧಕರು ದ್ವಂದ್ವಗಳನ್ನು ಸುಖದಿಂದಲೇ ಸಹಿಸುವರು ॥೪೧೦॥ ಇದಲ್ಲದೇ ದ್ವಂದ್ವದ ಅರಿವು ಯಾವ ಜ್ಞಾನಕ್ಕಾಗುವುದೋ, ಆ ಜ್ಞಾನವು ನಾನೇ ಆಗಿರುವೆನೆಂದು ತಿಳಿದಾಗ ದ್ವಂದ್ವಗಳು ಎಲ್ಲವೂ ನಿರ್ದ್ವಂದ್ವಗಳಾಗುವುವು ॥೪೧೧॥ ಕಠಿಣವಾದ ಕಬ್ಬು ಮತ್ತು ಅದರ ರಸವು ಇವುಗಳಲ್ಲಿ ಪರಿಪೂರ್ಣವಾಗಿ ಅಖಂಡವಾಗಿ ಸಿಹಿಯು ಇರುವಂತೆ ದ್ವಂದ್ವಗಳಲ್ಲಿಯೂ ಅಖಂಡವಾಗಿ ದಂಡಾಯಮಾನವಾಗಿರುವ ಚಿದ್ಘನ ವಸ್ತುವನ್ನು ಇವರು ಕಾಣುವರು ॥೪೧೨॥ ಈ ಪ್ರಕಾರವಾಗಿ ಅಖಂಡತೆಯು ಸಾಧಕರಿಗೆ ಎಲ್ಲಿಯವರೆಗೆ ಕೈಗೆ ಹತ್ತುವುದಿಲ್ಲವೋ ಅಲ್ಲಿಯವರೆಗೆ ಹೇ ನೃಪನಾಥನೇ, ಈ ದ್ವಂದ್ವಗಳನ್ನು ಸಹಿಸುವುದಾಗುವುದಿಲ್ಲ ॥೪೧೩॥ ಇದರ ಹೆಸರೇ ದ್ವಂದ್ವಸಹನೆ ಅಥವಾ ''ತಿತಿಕ್ಷಾ'' ಎಂದು ನಿಶ್ಚಯವಾಗಿ ತಿಳಿ. ಈಗ ಮೌನದ ಲಕ್ಷಣಗಳು ಹೇಗಿರುವುದೆಂಬುದು ಸರಿಯಾಗಿ ಲಕ್ಷಕೊಟ್ಟು ಕೇಳು ॥೪೧೪॥ ಜನರಲ್ಲಿ ವಾದವಿವಾದಗಳನ್ನು ಮಾಡಿದರೆ ದೇಹಾಭಿಮಾನವು ದೃಢವಾಗುವುದು. ಆದರೆ ಸದ್ಗುರುಗಳು ಆ ದೇಹಾಭಿಮಾನವನ್ನು ಶಬ್ದ ಸಹ ತೊಳೆದು ತೆಗೆದರು ॥೪೧೫॥ ಸದ್ಗುರುಗಳ ವಚನಗಳು ಕಿವಿಗಳಲ್ಲಿ ಬಿದ್ದಾಕ್ಷಣಕ್ಕೆ ಸ್ತುತಿ ಮತ್ತು ನಿಂದೆ ಈ ಎರಡನ್ನೂ ನುಂಗಿ ಮಾತುಗಳು ಮತ್ತು ಮಾತನಾಡುವಿಕೆಯು ನಿರಸನವಾಗಿ ಹೃದಯಮಂದಿರದಲ್ಲಿ ಪರಿಪಕ್ವವಾಗಿ ಕುಳಿತುಕೊಂಡಿತು ॥೪೧೬॥ ಆಗ ಇತರರ ಅವಗುಣಗಳನ್ನು ಹೇಳಲು ಹೋದರೆ ಅಲ್ಲಿ ಹೃದಯಸ್ಥನಾಗಿ ತಾನೇ ಇರುವುದು ತೋರುತ್ತದೆ. ಆದ್ದರಿಂದ ಇತರರ ಹೀನತನ ಹೇಳಲು ಹೊರಟರೆ ಗುರುವಚನದಿಂದ ಅದು ಮೌನವಾಗುವುದು ॥೪೧೭॥ ಇರಲಿ, ಈಗ ಗುಣಕಂಡು ಒಬ್ಬನನ್ನು ಸ್ತುತಿಮಾಡಬೇಕೆಂದರೆ ಅಲ್ಲಿಯೂ ಮೌನವೇ ಒದಗುವುದು. ಕಾರಣ, ಸ್ತವ್ಯ ನಾನೇ, ಸ್ತವಿಸುವವನು ನಾನೇ, ಮತ್ತು ಸ್ತವನವೂ ನಾನೇ, ಆದ್ದರಿಂದ ನನ್ನನ್ನು ನಾನೇ ಸ್ತುತಿ ಮಾಡಿದರೆ ನನ್ನದೇ ಪೂರ್ಣ ಮೂರ್ಖತನವಾಗುವುದು ॥೪೧೮॥

ನಿಜಾತ್ಮಾ ನಿಃಶೇಷ ನಸೇ । ಐಸಾ ರಿತಾ ಠಾವ ನ ದಿಸೇ । ತೇಥೇ ಜೇ ಜೇ ಕಾಂಹೀ ದಿಸೇ । ತೇ ಆತ್ಮ ಪ್ರಕಾಶೇ ಸದೋಚಿತ ॥೪೧೯॥ ಐಶೀ ಸದ್ಗುರೂನಿ ದಾಖವಿಲೀ ಯುಕ್ತೀ । ತೀ ವಿಶ್ವಾಸೇ ಸ್ಥಿರಾವಲೀ ಚಿತ್ತೀ । ಯಾಲಾಗೀ ನಿಂದಾ ಆಣೀ ಸ್ತುತೀ । ವಾಚೇಪ್ರತೀ ಬೋಲೇನಾ ॥೪೨೦॥ ಸಂವಾದ ಕರಾವಾ ನಿಜಸ್ವಾರ್ಥಿ । ತಂವ ಸದ್ಗುರೂಚ್ಯಾ ವಚನೋಕ್ತೀ । ಖುಂಟಲ್ಯಾ ವೇದಶಾಸ್ತ್ರಾಂಚ್ಯಾ ಯುಕ್ತೀ । ತ್ಯಾವರೀ ಸ್ಥಿತೀ ಚಢೇನಾ ॥೪೨೧॥ ಏವಂ ಸ್ತುತಿ ನಿಂದಾ ವಾಗ್ವಾದ । ಕರಿತಾ ಖುಂಟಲಾ ಸಂವಾದ । ಮಹಾಮೌನೇ ಅತಿಶುದ್ಧ । ಪರಮಾನಂದ ಸಾಧಕಾ ॥೪೨೨॥ ಐಸೇ ಸಾಧಾವಯಾ ದೃಢ ಮೌನ । ಸದ್ಗುರೂ ಶಿಕವೀ ವೇದಾಧ್ಯಯನ । ಉಪನಿಷದರ್ಥ ವಿವಂಚೂನ । ಪಢವೀ ಸಂಪೂರ್ಣ ಅರ್ಥಾವಬೋಧೇ ॥೪೨೩॥ ಅಥವಾ ಅತಿಶಯೇ ದೃಢ ಮೌನ । ಶ್ರೀರಾಮಕೃಷ್ಣನಾಮಸ್ಮರಣ । ಅಖಂಡ ನಾಮೇ ಗರ್ಜತಾ ಪೂರ್ಣ । ವೇದಾರ್ಥ ಜಾಣ ತಿಷ್ಠತೀ ಪುಢೇ ॥೪೨೪॥ ನಿತ್ಯ ರಾಮನಾಮ ಗರ್ಜೀವಾಣೀ । ತ್ಯಾ ತೀರ್ಥೇ ಯೇತೀ ಲೋಟಾಂಗಣೀ । ಸುರವರ ಲಾಗತೀ ಚರಣೀ । ಯಮ ಪಾಯವಣೀ ಸ್ವಯೇ ವಂದೀ ॥೪೨೫॥ ರಾಮನಾಮಚೇ ಜೇ ಸ್ಮರಣ । ಯಾ ನಾಂವ ಗಾ ''ಮಹಾಮೌನ'' । ವೇದೇ ನಾಮ ಸ್ತವಿಲೇ ಪೂರ್ಣ । ಶುದ್ಧ ಅಧ್ಯಯನ ಹರಿನಾಮ ॥೪೨೬॥ ವೇದು ಅಥವಾ ನಾಮಸ್ಮರಣ । ಯಾ ನಾಂವ ಗಾ ''ಸ್ವಾಧ್ಯಾಯೋ'' ಜಾಣ । ಆತಾ ಆರ್ಜವಾಚೇ ಲಕ್ಷಣ । ಐಕೇ ಸಂಪೂರ್ಣ ಮಹಾರಾಜಾ ॥೪೨೭॥ ಆತಾ ಆರ್ಜವ ತೇ ಐಸೇ । ಸರ್ವಾ ಜೀವಾ ಜೀವನ ಜೈಸೇ । ಕಾ ತಂತೂ ಜೈಸಾ ನಿಜವಿಲಾಸೇ । ಅವಿರೋಧೇ ಅಸೇ ಪಟಾಮಾಜೀ ॥೪೨೮॥ ಸಾಖರೇಚೇ ಇಂದ್ರಾವಣ । ಕೇಲಿಯಾ ನ ವಚೇ ಗೋಡಪಣ । ತೈಸೇ ವಿಷಮಾಹೀ ಜೀವಾ ಜಾಣ । ಆರ್ಜವೇ ಪೂರ್ಣ ರಂಜವೀ ಸ್ವಭಾವೇ ॥೪೨೯॥ ವಕ್ರ ಚಂದ್ರಾಚೀ ಚಂದ್ರಿಕಾ । ಪರೀ ಅಮೃತ ವಕ್ರ ನವ್ಹೇ ದೇಖಾ । ತೈಸೇ ದೇಖೋನಿ ವಿಷಮಾ ಲೋಕಾ । ಮನೋವೃತ್ತಿ ದೇಖಾ ಪಾಲಟೇನಾ ॥೪೩೦॥ ನಿಪರಾದ ನ ದೇಖೇ ಕೋಣಾಸೀ । ಜೀವಲಗ ಸೋಯರಾ ಸರ್ವಾಂಶೀ । ವೋಳಖೀ ಜೀವಮಾತ್ರಾಂಶೀ । ಜೈಶೀ ತೈಶೀ ಜುನಾಟ ॥೪೩೧॥ ನ್ಯಹಾ ಸಂತಪ್ತಾ ಆಧಾರ ದೇತ । ವರೂನಿ ಘಣಘಾಯ ಘೇತ । ಸಾಂಡಸ ಘಾಯಾತಳೀ ಸೂತ । ತೇ ಅಘವೇಚಿ ಆಪ್ತ ಲೋಹತ್ವೇ ಲೋಹಾ॥೪೩೨॥

ತನ್ನ ಆತ್ಮವು ಇಲ್ಲವೇ ಇಲ್ಲ ಎನ್ನುವಂತಹ ಬರಿದಾದ ಸ್ಥಳವೇ ಇಲ್ಲ. ಎಲ್ಲಿ ಎಲ್ಲಿ ಯಾವ ಯಾವ ಏನೊಂದು ಕಾಣುವದೋ ಅದೆಲ್ಲವೂ ನಿರಂತರವಾಗಿ ಆತ್ಮಪ್ರಕಾಶದಿಂದಲೇ ತೋರುವುವು ॥೪೧೯॥ ಹೀಗೆ ಸದ್ಗುರುಗಳು ಯುಕ್ತಿಯನ್ನು ತೋರಿಸಿರುವರು. ಹಾಗೆಯೇ ಅದನ್ನೇ ವಿಶ್ವಾಸದಿಂದ ಅಂತಃಕರಣದಲ್ಲಿ ಸ್ಥಿರವಾಯಿತು. ಆದ್ದರಿಂದ ನಿಂದೆ ಅಥವಾ ಸ್ತುತಿ ಇವುಗಳನ್ನು ಈತನು ತನ್ನ ಮಾತಿನಿಂದ ನುಡಿಯುವುದೇ ಇಲ್ಲ ॥೪೨೦॥ ತನ್ನ ಹಿತಕ್ಕಾಗಿಯಾದರೂ ಏನಾದರು ಸಂವಾದವನ್ನು ಮಾಡಬೇಕೆಂದರೆ, ಸದ್ಗುರುಗಳ ವಚನಗಳ ಎದುರಿಗೆ ವೇದಶಾಸ್ತ್ರಗಳ ಯುಕ್ತಿಗಳು ಸಹ ಕುಂಠಿತಗೊಂಡವು. ಅಂದಮೇಲೆ ಅಲ್ಲಿ ಮಾತನಾಡುವ ಸ್ಥಿತಿಯು ಏನೆಂದು ಉಳಿಯಬೇಕು? ॥೪೨೧॥ ಈ ಪ್ರಕಾರವಾಗಿ ಸ್ತುತಿನಿಂದೆಗಳು ಅಥವಾ ವಾಗ್ವಾದ ಮಾಡುವ ಮಾತೇ ನಿಂತು ಹೋಯಿತು. ಹೀಗೆ ಮಹಾಮೌನದ ಯೋಗದಿಂದ ಸಾಧಕರಿಗೆ ಪರಮಾನಂದ ಪ್ರಾಪ್ತಿಯಾಗುವುದು ॥೪೨೨॥ (ಈಗ ''ಸ್ವಾಧ್ಯಾಯ'' ಎಂದರೆ ಏನೆಂಬುದನ್ನು ಹೇಳುವರು) ಹೀಗೆ ಮಹಾಮೌನವು ಸಾಧ್ಯ ಮಾಡಿಕೊಳ್ಳಲು ಸದ್ಗುರುಗಳು ವೇದಾಧ್ಯಯನವನ್ನು ಕಲಿಸುವರು. ಅಥವಾ ಉಪನಿಷತ್‌ಗಳ ಅರ್ಥದ ವಿವರಗಳೆಲ್ಲವನ್ನು ಶೋಧಿಸಿ, ಅವುಗಳ ಅರ್ಥಜ್ಞಾನವನ್ನು ತಿಳಿಸಿಕೊಡುವರು ॥೪೨೩॥ ಅಥವಾ ಇದಕ್ಕಿಂತಲೂ ದೃಢವಾದ ಮೌನವು ಬೇಕಾಗಿದ್ದರೆ, ಶ್ರೀರಾಮಕೃಷ್ಣ ನಾಮಸ್ಮರಣೆಯನ್ನು ಮಾಡಲು ತಿಳಿಸುವರು. ಏಕೆಂದರೆ, ನಾಮದ ಗರ್ಜನೆಯನ್ನು ಅಖಂಡವಾಗಿ ಮಾಡಲು ವೇದಾರ್ಥವು ಆತನಲ್ಲಿ ಕೈಜೋಡಿಸಿ ನಿಲ್ಲುವುದು. ಇದನ್ನು ನೀನು ದೃಢವಾಗಿ ಲಕ್ಷದಲ್ಲಿಡು ॥೪೨೪॥ ನಿರಂತರವಾಗಿ ಮುಖದಿಂದ ರಾಮನಾಮವನ್ನು ಗರ್ಜಿಸುವವರಿಗೆ ತೀರ್ಥಗಳು ಲೋಟಾಂಗಣವನ್ನು ಹಾಕಲು ಬರುವುವು. ಮಹಾ ಮಹಾ ದೇವತೆಗಳು ಕಾಲಿಗೆ ಬೀಳುವರು. ಮತ್ತು ಯಮಧರ್ಮನು ಸ್ವತಃ ಆತನ ಚರಣತೀರ್ಥವನ್ನು ಮಸ್ತಕಕ್ಕೆ ಧರಿಸುವನು ॥೪೨೫॥ ರಾಮನಾಮದ ಸ್ಮರಣೆಯ ಹೆಸರೇ, ''ಮಹಾಮೌನ'' ವಾಗಿರುವುದು. ವೇದವು ನಾಮದ ಸ್ತುತಿಯನ್ನು ಪರಿಪೂರ್ಣವಾಗಿ ಮಾಡಿರುವುದು. ಆದ್ದರಿಂದ ಹರಿನಾಮವೇ ಶುದ್ಧವಾದ ವೇದಾಧ್ಯಯನವಾಗಿರುವುದು. ಹರಿನಾಮಸ್ಮರಣೆಯಿಂದ ವೇದಾಧ್ಯಯನದ ಫಲವು ದೊರಕುವುದೆಂದು ತಾತ್ಪರ್ಯವಾಗಿದೆ ॥೪೨೬॥ ವೇದ ಅಥವಾ ನಾಮಸ್ಮರಣೆ ಇದರ ಹೆಸರೇ ''ಸ್ವಾಧ್ಯಾಯ'' ವಾಗಿದೆ. ಇದನ್ನು ನೀನು ಲಕ್ಷದಲ್ಲಿಡು. ಹೇ ಮಹಾರಾಜನೇ, ಈಗ ''ಆರ್ಜವ'' ದ ಲಕ್ಷಣಗಳನ್ನು ಸಂಪೂರ್ಣವಾಗಿ ಕೇಳು ॥೪೨೭॥ ಆರ್ಜವ ಎಂದರೆ ಹೀಗಿರುವುದು, ಎಲ್ಲ ಜೀವಿಗಳಿಗೆ ಜೀವನದಂತೆ ಅಥವಾ ವಸ್ತ್ರದಲ್ಲಿ ನೂಲು ಐಕ್ಯಭಾವದಿಂದ ಇದ್ದಂತೆ ॥೪೨೮॥ ಅಥವಾ ಸಕ್ಕರೆಯಿಂದ ಇಂದ್ರಾವಣ (ವಿಷಫಲ) ವನ್ನು ತಯಾರಿಸಿದರೆ ಸಕ್ಕರೆಯ ಸಿಹಿಯು ಇಲ್ಲದಾಗುವುದಿಲ್ಲ. ಅದರಂತೆ ವಿಷಮ ಸ್ವಭಾವದ ಜೀವಿಗಳಿಗೂ ಇವರು ಆರ್ಜವದಿಂದ ಅಂದರೆ, ಸರಳ, ಮೃದು, ಸ್ವಭಾವದಿಂದಲೇ ಬೆಳಗುವರು ॥೪೨೯॥ ವಕ್ರ ಚಂದ್ರನ ಚಂದ್ರಿಕೆಯ ಅಮೃತವು ವಕ್ರವಾಗಿರುವುದಿಲ್ಲ. ಅದರಂತೆ ವಕ್ರಸ್ವಭಾವದ ಜನರನ್ನು ನೋಡಿದರೂ ಇವರ ಮನೋವೃತ್ತಿಯು ಬದಲಾಗುವುದಿಲ್ಲ ॥೪೩೦॥ ಇವರು ನೀಚರು ಎಂದು ಯಾರನ್ನೂ ತಿಳಿಯಲಾರರು. ಎಲ್ಲರಲ್ಲಿಯೂ ಅತಿ ಪ್ರೀತಿಯ ಬಂಧುವಾಗಿರುವರು. ಪ್ರತಿಯೊಬ್ಬರಲ್ಲಿಯೂ ಹಳೆಯ ಪರಿಚಯ ಇದ್ದವರಂತೆ ನಡೆದುಕೊಳ್ಳುವರು ॥೪೩೧॥ ಕಬ್ಬಿಣದ ಅಡಿಗಲ್ಲು ಕಾದ ಕಬ್ಬಿಣಕ್ಕೆ ಆಧಾರ ನೀಡುವುದು. ಮೇಲಿಂದ ಬೀಳುವ ಗನ್ನಿನ ಹೊಡೆತವನ್ನು ಸ್ವೀಕರಿಸುವುದು. ಇಕ್ಕಳವು ಕಬ್ಬಿಣದ ತುಕಡಿಯನ್ನು ಹಿಡಿಯುವುದು. ಅದರ ಮೇಲೆಯೂ ಹೊಡೆತ ಬೀಳುವುದು. ಕಬ್ಬಿಣಕ್ಕೆ ಕಬ್ಬಿಣವಾಗಿಯೇ ಇವು ಆಪ್ತವಾಗಿರುವುವು ॥೪೩೨॥

ಯಾಪರೀ ಜಯಾಸೀ ಆಪ್ತ ಸರ್ವ । ಐಸಾ ಜೋ ಕಾ ನಿಜಸ್ವಭಾವ । ತಯಾ ನಾಂವ ಗಾ "ಆರ್ಜವ" । ಅತಿಅಪೂರ್ವ ಗುರುದೀಕ್ಷಾ ॥೪೩೩॥ ಅಸುರ ಸುರ ನರ ಋಷೀಶ್ವರ । ಮದನೇ ಕೇಲೇ ನಿಜಕಿಂಕರ । ಕಂದರ್ಪಾಚಾ ಮಾರ ಘೋರ । ಅತಿದುರ್ಧರ ಅನಂಗು ॥೪೩೪॥ ಅಂತರೀ ಕಾಮಾಚೇ ದೃಢ ಠಾಣೇ । ವರೀವರೀ ದಾಂತ ಚಾವೂನಿ ಸಾಹಣೇ । ತ್ಯಾಚೇ ಮನಚಿ ನಿಷ್ಕಾಮ ನ ಮ್ಹಣೇ । ಚಾಳವಣೇ ಲೌಕಿಕು ॥೪೩೫॥ ತೈಸೀ ನವ್ಹೇ ಸದ್ಗುರುಚೀ ಯುಕ್ತೀ । ಕಾಮಾಚೀ ಪಾಲಟೇ ಕಾಮನಾವೃತ್ತೀ । ಅಭಂಗ ಬ್ರಹ್ಮಚರ್ಯಸ್ಥಿತೀ । ಶಿಷ್ಯಾಪ್ರತೀ ಉಪದೇಶೀ ॥೪೩೬॥ ಕಂದರ್ಪರಾಣಿವೇ ಸ್ತ್ರೀಪುರುಷ । ತೇಥೇ ಗುರುದೀಕ್ಷಾ ಅಲೋಲಿಕ । ಮಿಥ್ಯಾ ಸ್ತ್ರೀಪುರುಷ ಮಾಯಿಕ । ವಿಷಯಸುಖ ಭ್ರಮ ಮಾತ್ರ ॥೪೩೭॥ "ಆನಂದಾಚೇ ಉಪಸ್ಥ ಏಕಾಯತನ" । ಹೇ ಕಾಯ ಮಿಥ್ಯಾ ವಚನ । ತೇ ಅರ್ಥೀ ಪೂರ್ಣ ವೇದಜ್ಞ । ವೇದವಿವಂಚನ ದಾವಿತೀ ಐಸೇ ॥೪೩೮॥ ಪುಸತಾ ಸಾಖರೇಚಿ ಗೋಡೀ ಕೈಶೀ । ತೋ ಸ್ವಾದು ನ ಯೇ ಸಾಂಗಾವಯಾಸೀ । ತೇಥೇ ಚಾಖೋ ದೇತೀ ಅಣುಮಾತ್ರೇಶೀ । ತೇಚಿ ಗೋಡಪಣ ರಾಶಿ ಜಾಣತೀ ಜಾಣ ॥೪೩೯॥ ತೇವೀ ಪರಮಾನಂದಸುಖಪ್ರಾಪ್ತೀ । ಉಪಸ್ಥದ್ವಾರಾ ನರ ಚಾಖಿತೀ । ಆನಂದ ಏಕಾಯತನ ಸ್ಥಿತೀ । ಬೋಲಿಲೀ ಉಪಸ್ಥೀ ಯಾ ಹೇತು ವೇದೇ ॥೪೪೦॥ ತ್ಯಾ ಉಪಸ್ಥಸುಖಾಚೀ ನಿತ್ಯಸ್ಥಿತೀ । ಸಂಭೋಗೇವೀಣ ಜೇ ವಾಢವಿತೀ । ತೇಥ ಮಿಥ್ಯಾ ಸ್ತ್ರೀಪುರುಷವ್ಯಕ್ತೀ । ಸಹಜೇ ಹೋತೀ ಸಜ್ಞಾನ ॥೪೪೧॥ ಚಾಖಿಲೀ ಗೋಡೀ ತೇಚಿ ಸಾಖರ । ಪರಮಾನಂದ ಮೈಥುನಮಾತ್ರ । ಮಾನೂನಿಯಾ ಮೈಥುನಪರ । ಜಾಹಲೇ ಪಾಮರ ವಿಷಯಾಂಧ ॥೪೪೨॥ ಉಪಸ್ಥೀ ಪರಮಾನಂದಗೋಡೀ । ಯಾಲಾಗೀ ಸ್ತ್ರೀಕಾಮಾಚೀ ಅತಿವೋಢೀ । ಸದಾ ಸೋಸಿಜೇ ಮಹಾಮೂಢೀ । ತಾಡಾತೋಡೀ ಜೀವಿತಾಚ್ಯಾ ॥೪೪೩॥ ಸಾಖರೇಚೇ ಕೇಲೇ ನಾರಿಯೇಳ । ತೇಥ ತ್ವಚಾ ಗರ್ಭ ಸಾಖರಚಿ ಕೇವಳ । ತೇವೀ ವಿಷಯದ್ವಾರಾ ಸುಖಕಲ್ಲೋಳ । ಉಠತೀ ಸಕಳ ಪರಮಾನಂದೇ ॥೪೪೪॥ ನಾನಾ ಪಕ್ವಾನ್ನ ಪರವಡೀ । ಗುಳಾಚ್ಯಾ ಗೋಡೀನೇ ತೇ ಚವೀ ಗಾಢೀ । ತೇವೀ ವಿಷಯಾಚೀ ಜೇ ಜೇ ಆವಡೀ । ತೇ ತೇ ಗೋಡೀ ನಿಜಾನಂದೇ ॥೪೪೫॥

ಇದರಂತೆ ಇವರಿಗೆ ಎಲ್ಲರೂ ಆಪ್ತರಾಗಿಯೇ ಇರುವರು. ಹೀಗಿರುವ ಸ್ವಭಾವಕ್ಕೆ "ಆರ್ಜವ" ಎಂದು ಹೆಸರು. ಈ ಗುರುದೀಕ್ಷೆಯು ಬಹು ಅಪೂರ್ವವಾಗಿರುವುದು ॥೪೩೩॥ (ಈಗ "ಬ್ರಹ್ಮಚರ್ಯ" ಹೇಳುವರು) ದೇವ, ದಾನವ, ಮಾನವ, ಮಹಾಮಹಾ ಋಷಿಗಳು, ಇವರೆಲ್ಲರನ್ನು ಕಾಮನು ತನ್ನ ದಾಸರನ್ನಾಗಿ ಮಾಡಿರುವನು. ಈ ಮದನನ ಹೊಡೆತವು ಬಹು ಕಠಿಣವಾಗಿರುವುದು. ಹೀಗೆ ಈ ಮದನನು ಅತಿ ದುರ್ಧರನಾಗಿರುವನು ॥೪೩೪॥ ಅಂತಃಕರಣದಲ್ಲಿ ಕಾಮದ ವಿಚಾರಗಳು ಸತತವಾಗಿರುವುವು. ಆದರೆ ಅವನು ಹಲ್ಲು ತುಟಿಗಳನ್ನು ಬಿಗಿಹಿಡಿದು ಸಹಿಸುವನು. ಅವನ ಮನವೇ ಅವನಿಗೆ ನಿಷ್ಕಾಮವೆನ್ನುವುದಿಲ್ಲ. ಇವನು ಜನರನ್ನು ಮಾತ್ರ ವಂಚಿಸುವನು ॥೪೩೫॥ ಸದ್ಗುರುಗಳ ಯುಕ್ತಿಯು ಹೀಗಿರವುದಿಲ್ಲ. ಅವರ ಉಪದೇಶದಿಂದ ಕಾಮದ ಕಾಮವೃತ್ತಿಯೇ ಬದಲಾಗುವುದು. ಇವರು ಶಿಷ್ಯನಿಗೆ ಭಂಗಗೊಳ್ಳದ ಬ್ರಹ್ಮಚರ್ಯ ಸ್ಥಿತಿಯ ಉಪದೇಶವನ್ನು ಮಾಡುವರು ॥೪೩೬॥ ಸ್ತ್ರೀ ಪುರುಷರೆಂಬ ಭೇದವು ಮದನನ ರಾಜ್ಯದಲ್ಲಿ ಮಾತ್ರ; ಆದರೆ ಗುರುದೀಕ್ಷೆಯು ಅಲೌಕಿಕವಾಗಿರುವುದು. ಈ ದೀಕ್ಷೆಯಲ್ಲಿ ಸ್ತ್ರೀ ಪುರುಷರೆಂಬ ಎರಡೂ ಮಾಯಿಕ ಅಂದರೆ ಮಿಥ್ಯೆಯಾಗಿದ್ದು ವಿಷಯ ಸುಖವು ಇದು ಕೇವಲ ಭ್ರಮೆಯಾಗಿರುವುದು ॥೪೩೭॥ (ಪ್ರಶ್ನೆ) "ಜನನೇಂದ್ರಿಯವು ಆನಂದದ ಸ್ಥಾನವಾಗಿದೆ" ಈ ವೇದದ ವಚನವು ಅಸತ್ಯವೇ? (ಉತ್ತರ) ವೇದತತ್ತ್ವವನ್ನು ಪೂರ್ಣವಾಗಿ ತಿಳಿದವರು ಈ ವಿಷಯಕ್ಕೆ ಈ ರೀತಿಯಾಗಿ ವಿವೇಚನೆಯನ್ನು ಮಾಡಿರುವರು ॥೪೩೮॥ "ಸಕ್ಕರೆಯ ಸಿಹಿಯು ಹೇಗಿರುವುದು" ಎಂದು ಕೇಳಿದರೆ, ಇದನ್ನು ಮುಖದಿಂದ ಹೇಳಲು ಬರುವುದಿಲ್ಲ. ಕೇಳಿದವರಿಗೆ ಸಕ್ಕರೆಯ ಒಂದು ಕಣವನ್ನು ನೆಕ್ಕಲು ಕೊಡುವರು. ನೆಕ್ಕಿದವನು ಒಂದು ಕಣದಲ್ಲಿರುವ ಸಿಹಿಯು ಸಕ್ಕರೆಯ ರಾಶಿಯಲ್ಲಿರುವದೆಂದು ತಿಳಿಯಲ್ಪಡುವನು ॥೪೩೯॥ ಅದರಂತೆಯೇ ಪರಮಾನಂದದ ಸಿಹಿಯನ್ನು ಮನುಷ್ಯರು ಜನನೇಂದ್ರಿಯ ಮುಖಾಂತರ ನೆಕ್ಕುವರು. ಇದೇ ಉದ್ದೇಶದಿಂದ ವೇದವು ಜನನೇಂದ್ರಿಯವು ಆನಂದದ ಸ್ಥಾನವೆಂದು ಹೇಳಿರುವುದು ॥೪೪೦॥ ಈ ಜನನೇಂದ್ರಿಯ ಸುಖವು ಕೇವಲ ಕ್ಷಣಿಕ ಮಾತ್ರ. ಆದರೆ ಇವರು ಈ ಸುಖದ ನಿತ್ಯ ಸ್ಥಿತಿಯನ್ನು ಸಂಭೋಗವಿಲ್ಲದೇ ಬೆಳೆಸುವರು. ಇವರಿಗೆ ಸ್ತ್ರೀ ಪುರುಷ ವ್ಯಕ್ತಿಗಳು ಮಿಥ್ಯೆಯಾಗಿ ತೋರುವುವು ಮತ್ತು ಇವರು ಸಹಜವಾಗಿಯೇ ಸಜ್ಞಾನಿಗಳಾಗುವರು ॥೪೪೧॥ ಸಿಹಿ ನೆಕ್ಕಿದ್ದೇ ಸಕ್ಕರೆಯು ಅದರಂತೆ ಮೈಥುನವೇ ಪರಮಾನಂದವು ಹೀಗೆ ತಿಳಿದು ವಿಷಯಾಂಧ ಜನರು ಮೈಥುನ ಸುಖದ ಬೆನ್ನು ಹತ್ತುವರು ॥೪೪೨॥ ಜನನೇಂದ್ರಿಯದಲ್ಲಿಯೇ ಪರಮಾನಂದದ ಸಿಹಿ ಇರುವುದೆಂದು ಭಾವಿಸಿ ಈ ಮೂರ್ಖಶಿರೋಮಣಿಯು ನಿರಂತರವಾಗಿ ಜೀವನದಲ್ಲಿ ಕಷ್ಟಭೋಗಿಸುತ್ತ ಸ್ತ್ರೀಕಾಮದ ಅತ್ಯಂತ ಸೆಳೆತವನ್ನು ಸೋಸುತ್ತಿರುವನು ॥೪೪೩॥ ಸಕ್ಕರೆಯ ತೆಂಗಿನಕಾಯಿಯನ್ನು ತಯಾರಿಸಿದರೆ ಅದರ ಜುಬ್ಬುರ, ಚಿಪ್ಪು, ಕೊಬ್ರಿ ಇತ್ಯಾದಿ ಎಲ್ಲವೂ ಸಿಹಿಯಾಗಿರುವುವು. ಅದರಂತೆ ವಿಷಯಗಳಿಂದ ಏಳುವ ಸುಖದ ಅಲೆಗಳೆಲ್ಲವೂ ಮೂಲವಾದ ಪರಮಾನಂದದಿಂದಲೇ ಏಳುತ್ತಿರುವುವು ॥೪೪೪॥ ನಾನಾ ಪ್ರಕಾರದ ಪಕ್ವಾನ್ನಗಳನ್ನು ಸಿದ್ಧಪಡಿಸಿದರೆ ಅವುಗಳಲ್ಲಿ ಮುಖ್ಯವಾದ ಸಿಹಿಯ ರುಚಿಯು ಬೆಲ್ಲದ ಮಾಧುರ್ಯದಿಂದಲೇ. ಅದರಂತೆ ಯಾವ ಯಾವ ವಿಷಯದಿಂದ ಪ್ರೀತಿಯು ಉತ್ಪನ್ನವಾಗುವುದೋ ಅದೆಲ್ಲವೂ ಆತ್ಮಾನಂದದ ಸಿಹಿಯಿಂದಲೇ ॥೪೪೫॥

ಹೇ ನೇಣೋನಿ ಮೂಳೀಚೀ ನಿಜಗೋಡೀ । ಸೋಶಿತೀ ವಿಷಯಾಂಚ್ಯಾ ಅತಿವ್ರೋಢೀ । ಬಾಪ ಸದ್ಗುರುಕೃಪಾ ಗಾಢೀ । ವಿಷಯಾಂಚೀ ಆವಡೀ ಏಕತ್ವಾ ಆಣೀ ॥೪೪೬॥ ಯಾಲಾಗೀ ವಿಷಯಾಂಚೀ ಆಸ್ಥಾ । ನ ಚಢೇ ಸಚ್ಛಿಷ್ಯಾಚೇ ಮಾಥಾ । ಸ್ತ್ರೀ ಭೋಗಾಚೀ ಆಸಕ್ತತಾ । ಮಿಥ್ಯಾ ತತ್ತ್ವತಾ ಗುರುವಾಕ್ಯನಿಷ್ಠಾ ॥೪೪೭॥ ಹಾ ಆತ್ಮಾ ಹೇ ಆತ್ಮೀ ಪಾಹೀ । ಐಸೇ ಮಿಥುನ ಮುಳೀನಾಹಿ । ತೇ ನಿಜಮೂಳ ಪಾಡಿತಾ ಠಾಯೀ । ''ಬ್ರಹ್ಮಚರ್ಯ'' ಪಾಹೀ ಅಭಂಗ ॥೪೪೮॥ ಯಾ ನಾಂವ ಗಾ ನಿಜ ನೈಷ್ಠಿಕ್ಯ । ''ಬ್ರಹ್ಮಚರ್ಯ'' ಅತಿಸುಟಂಕ । ಸದ್ಗುರೂನೀ ಬೋಧಿಲೇ ನಿಷ್ಟಂಕ । ಅಲೋಲಿಕ ಅಭಂಗ ॥೪೪೯॥ ಆತಾ ಅಹಿಂಸೇಚೀ ಸ್ಥಿತೀ । ಐಕೇ ರಾಯಾ ಚಕ್ರವರ್ತೀ । ಭಂವಈ ಉಚಲಣೇ ನಾಹೀ ಭೂತೀ । ಸ್ವಪ್ನ - ಸುಷುಪ್ತೀ - ಜಾಗತಾ ॥೪೫೦॥ ಪಾವೋ ಆದಳತಾ ದೇಖ । ಝಣೇ ಪೃಥ್ವಿ ಪಾವೇಲ ದುಃಖ । ಯಾ ಕಾಕುಲತೀ ಆವಶ್ಯಕ । ಪಾಉಲೇ ಅಲೋಲಿಕ ಹಳುವಾರ ಠೇವೀ ॥೪೫೧॥ ಆಕಾಶ ದಚಕೇಲ ದೇಖ । ಯಾಲಾಗೀ ನೇದೀ ಸೈರಾ ಹಾಂಕ । ವಾಚಾ ಪರಿಪಕ್ವ ಪೀಯೂಖ । ವಚನೇ ಪರಮ ಸುಖ ಸರ್ವಾಸೀ ದೇತು ॥೪೫೨॥ ತ್ಯಾಚಾ ಶಬ್ದು ಜೈ ಗಗನೀ ಭರೇ । ತೇಣೇ ಶಬ್ದಾನಂದ ಚಮತ್ಕಾರೇ । ಗಗನಚಿ ನಿಜಸುಖೇ ಭರೇ । ಯೇಣೇ ಸುಖೋದ್ಗಾರೇ ವಚನೋಕ್ತೀ ॥೪೫೩॥ ಜಳಾಮಾಜೀ ಘಾಲಿತಾ ಉಡೀ । ಝಣೇ ಉದಕ ದಡಪೇ ಬುಡೀ । ತರಂಗನ್ಯಾಯೇ ದೇಣೇ ಬುಡೀ । ಜೀವನಾಚೀ ದುಥಡೀ ನ ಹೇಲಾವತಾ ॥೪೫೪॥ ತ್ಯಾಸೀ ಜಳೀ ಹೋತಾ ನಿಮಗ್ನ । ಜಳಾಚಾ ತಾಪು ಶಮೇ ಸಂಪೂರ್ಣ । ಯಾಪರೀ ಕರೀ ಸ್ನಾನ । ಜೀವನಾ ಜೀವನ ನಿವವಿತು ॥೪೫೫॥ ಝಣೇ ದುಃಖ ಪಾವೇಲ ವಾರಾ । ಮ್ಹಣೌನಿ ಶ್ವಾಸು ನ ಘಾಲೀ ಸೈರಾ । ನೇಮೂನಿ ಪ್ರಾಣ ಸಂಚಾರಾ । ನಿಜಶರೀರಾ ವಾಗವೀ ॥೪೫೬॥ ನಿಜದೇಹಾ ಕರಾವಯಾ ಘಾತು । ಸರ್ವಥಾ ಜೇವೀ ನುಚಲೇ ಹಾತು । ತೇವೀ ಭೂತಾವರೀ ನಿಘಾತು । ಜ್ಯಾಚಾ ಪೋಟಾಂತು ಉಪಜೇನಾ ॥೪೫೭॥ ಅತ್ಯಂತ ನ್ಯಾಹಾರೇ ಪಾಹತಾ । ವಚಕು ಪಡೇಲ ಪ್ರಾಣ್ಯಾಂಚ್ಯಾ ಚಿತ್ತಾ । ಯಾಲಾಗೀ ಬಾಹ್ಯದೃಷ್ಟೀ ಕ್ರೂರತಾ । ನ ಪಾಹೇ ಭೂತಾ ಭೂತಭಾವೇ ॥೪೫೮॥ ರೋಮ ರಗಡತೀಲ ಸಂಪೂರ್ಣ । ಯಾಲಾಗೀ ನ ಕರೀ ಅಂಗಮರ್ದನ । ಏವಂ ಸ್ವದೇಹಾಚೇ ದೇಹಪಣ । ಭೂತಹಿಂಸಾಭೇಣ ಅಹಂತ್ವಾ ನಾಣೀ ॥೪೫೯॥ ಭೂತಾ ದೇತಾ ದುಃಖಲೇಶು । ಭೂತಿ ದುಖವೇಲ ಭೂತೇಶು । ಐಸಾ ಜ್ಯಾಚಾ ದೃಢ ವಿಶ್ವಾಸು । ತೇಥ ರಹಿವಾಸು ಅಂಹಿಸೇಚಾ ॥೪೬೦॥

ಈ ನಿಜವಾದ ಮೂಲದಲ್ಲಿರುವ ಆತ್ಮಸ್ವರೂಪದ ಸುಖವು ಇವರಿಗೆ ತಿಳಿಯುವುದಿಲ್ಲ. ಆದ್ದರಿಂದಲೇ ಇವರು ವಿಷಯಗಳ ಜಗ್ಗಾಟವನ್ನು ಸೋಸುತ್ತಿರುವರು. ಆದರೆ ಸದ್ಗುರುಗಳ ಕೃಪೆಯು ಅತ್ಯಂತ ಬಲಾಢ್ಯವಾಗಿರುವುದು. ಇದು ಎಲ್ಲ ವಿಷಯಗಳ ಪ್ರೀತಿಯನ್ನು ಒಂದೇ ಸ್ಥಳದಲ್ಲಿ ಜಗ್ಗಿ ತರುವುದು ॥೪೪೬॥ ಆದ್ದರಿಂದ ವಿಷಯಗಳ ಅಪೇಕ್ಷೆಗಳು ಸಚ್ಛಿಷ್ಯನ ತಲೆಯ ಮೇಲೆ ಕೂಡ್ರಲಾರವು. ಗುರುವಚನಗಳ ನಿಷ್ಠೆಯಿಂದ ಸ್ತ್ರೀಭೋಗದ ಆಸಕ್ತಿಯು ಮಿಥ್ಯೆಯಾಗುವುದು ॥೪೪೭॥ ಇವನು ಆತ್ಮನು, ಇವಳು ಆತ್ಮಳು ಎಂಬ ಕೂಟವು ಮೂಲದಲ್ಲಿರುವುದೇ ಇಲ್ಲ. ಮೂಲವಾದ ತತ್ತ್ವವು ಪ್ರತ್ಯಯಕ್ಕೆ ಬಂದರೆ ಭಂಗಗೊಳ್ಳದ ''ಅಭಂಗ ಬ್ರಹ್ಮಚರ್ಯ''ವು ಲಭಿಸುವುದು ॥೪೪೮॥ ಇದರ ನಾಮವೇ ಉತ್ತಮವಾದ ನೈಷ್ಟಿಕ ''ಬ್ರಹ್ಮಚರ್ಯ'' ವು. ಇದನ್ನು ಅಲೌಕಿಕವಾಗಿ ಸ್ಥಿರವಾಗುವಂತೆ ಸದ್ಗುರುಗಳು ಬೋಧಿಸುವರು ॥೪೪೯॥ ಹೇ ಚಕ್ರವರ್ತಿ ರಾಜನೇ, ಈಗ ''ಅಹಿಂಸೆ''ಯ ಸ್ವರೂಪವನ್ನು ಕೇಳು. ಸ್ವಪ್ನದಲ್ಲಿ, ಸುಷುಪ್ತಿಯಲ್ಲಿ, ಜಾಗ್ರತಾವಸ್ಥೆಯಲ್ಲಿಯೂ ಸಹ ಪ್ರಾಣಿಮಾತ್ರರಲ್ಲಿ ವಕ್ರದೃಷ್ಟಿಯನ್ನು ಮಾಡವಂತೆಯೇ ಇಲ್ಲ ॥೪೫೦॥ ಇಲ್ಲಿ ನೋಡು, ಕಾಲುಗಳನ್ನು ನೆಲಕ್ಕೆ ಅಪ್ಪಳಿಸಿದರೆ ಕದಾಚಿತ್ ಪೃಥ್ವಿಗೆ ದುಃಖವಾದೀತೆಂಬ ಮನದ ಕಳಕಳಿಯಿಂದ ತನ್ನ ಕಾಲುಗಳನ್ನು ಮೆಲ್ಲ ಮೆಲ್ಲನೆ ಇಡುವನು ॥೪೫೧॥ ಆಕಾಶವು ದಚಕೀತು ಎಂಬ ಭಯದಿಂದ ಈತನು ಜಿಗಿದು ಕೂಗಲಾರನು. ತನ್ನ ನುಡಿಗಳಿಂದ ಎಲ್ಲರಿಗೂ ಅತ್ಯಂತ ಸಂತೋಷ ಕೊಡುವನು. ವಾಣಿಯಲ್ಲಿ ಅಮೃತವನ್ನೇ ತುಂಬಿಕೊಂಡತ್ತಿರುವನು ॥೪೫೨॥ ಈತನ ಶಬ್ದಗಳು ಆಕಾಶವನ್ನು ಸೇರಿದೊಡನೆಯೇ ಶಬ್ದಾನಂದದ ಚಮತ್ಕಾರದಿಂದ ಆಕಾಶವೇ ಆತ್ಮಸುಖದಿಂದ ತುಂಬಿಕೊಳ್ಳುವುದು. ಈ ಪ್ರಕಾರವಾಗಿ ಈತನ ಎಲ್ಲ ಮಾತುಗಳು ಆನಂದಮಯವಾಗಿರುವುವು ॥೪೫೩॥ ನೀರಿನಲ್ಲಿ ಜಿಗಿದರೆ ಕದಾಚಿತ್ ನೀರು ತಳಕ್ಕೆ ಬಡೆದು ಅದಕ್ಕೆ ತೊಂದರೆಯಾದೀತೆಂದು ನೀರಿನ ಎರಡೂ ದಂಡೆಗಳು ಅಳಗಾಡದಂತೆ ದಕ್ಷತೆ ವಹಿಸಿ ತರಂಗದಂತೆ ಈತನು ನೀರಿನಲ್ಲಿ ಸೇರುವನು ॥೪೫೪॥ ಈ ರೀತಿಯಲ್ಲಿ ನೀರಿನಲ್ಲಿ ಕೂಡಿಕೊಂಡರೆ ನೀರಿನ ಎಲ್ಲ ತಾಪಗಳು ದೂರಾಗುವುವು. ಈ ಪ್ರಕಾರವಾಗಿ ಸ್ನಾನವನ್ನು ಮಾಡಿದರೆ, ನೀರಿನಿಂದ ನೀರಿಗೆ ತೃಪ್ತಿಪಡಿಸಿದಂತಾಗುವುದು ॥೪೫೫॥ ವಾಯುವಿಗೆ ಅಕಸ್ಮಾತ್ತಾಗಿ ದುಃಖವಾದೀತೆಂದು ತಿಳಿದು ಈತನು ಶ್ವಾಸೋಚ್ಛ್ವಾಸವನ್ನು ಸಹ ಜೋರಾಗಿ ಬಿಡಲಾರನು. ಶ್ವಾಸೋಚ್ಛ್ವಾಸಕ್ಕೆ ನಿಯಮಗೊಳಿಸಿ ತನ್ನ ಶರೀರವನ್ನು ನಡೆಸುವನು ॥೪೫೬॥ ತನ್ನನ್ನೇ ಕೊಲ್ಲಲು ತನ್ನ ಕೈಗಳು ಎಂದೂ ಏಳುವುದಿಲ್ಲ. ಅದರಂತೆ ಯಾವ ಪ್ರಾಣಿಗಳ ಮೇಲೆಯೂ ಕೈ ಎತ್ತುವ ಬುದ್ಧಿಯು ಆತನ ಹೊಟ್ಟೆಯಲ್ಲಿ ಹುಟ್ಟಲಾರದು ॥೪೫೭॥ ಹೆಚ್ಚಾಗಿ ದೃಷ್ಟಿಸಿ ನೋಡಿದರೆ ಪ್ರಾಣಿಗಳ ಮನಸ್ಸಿಗೆ ಭಯ ಉಂಟಾಗಬಹುದೆಂದು ತಿಳಿದು ಪ್ರಾಣಿಮಾತ್ರರಿಗೆ ಪ್ರಾಣಿ ಎಂಬ ಭಾವದಿಂದ ಹೊರನೋಟಕ್ಕೂ ಕ್ರೂರ ದೃಷ್ಟಿಯಿಂದ ನೋಡಲಾರನು ॥೪೫೮॥ ಎಲ್ಲ ಕೂದಲುಗಳಿಗೆ ತಿಕ್ಕಾಟದಿಂದ ತ್ರಾಸಾದೀತೆಂದು ಈತನು ಅಂಗಮರ್ದನವನ್ನು ಸಹ ಮಾಡಿಕೊಳ್ಳುವುದಿಲ್ಲ. ಈ ಪ್ರಕಾರವಾದ ಭೂತಹಿಂಸೆಯ ಭಯದಿಂದ ತನ್ನ ದೇಹದ ದೇಹತ್ವವನ್ನು ಅಹಂಕಾರದಲ್ಲಿ ತರುವುದಿಲ್ಲ ॥೪೫೯॥ ಪ್ರಾಣಿಗಳಿಗೆ ಲೇಶಮಾತ್ರ ದುಃಖವಾದರೂ ಅವರಲ್ಲಿರುವ ಪರಮಾತ್ಮನಿಗೆ ದುಃಖವಾಗುವುದೆಂಬ ದೃಢವಾದ ವಿಶ್ವಾಸ ಇರುವವರಲ್ಲಿ ಅಹಿಂಸೆಯು ವಾಸವಾಗುವುದು ॥೪೬೦॥

ಕಾಯಿಕ – ವಾಚಿಕ – ಮಾನಸಿಕ । ಭೂತಾ ಉಪಜೇ ತ್ರಿವಿಧ ದುಃಖ । ಜೇ ಜೇಥೇ ನಿಮಾಲೇ ನಿಃಶೇಖ । ಅಹಿಂಸಾ ದೇಖ ತೇ ಠಾಯೀ ॥೪೬೧॥ ಯಾ ನಾಂವ ಗಾ ಶುದ್ಧ ''ಅಹಿಂಸಾ'' । ಸತ್ಯ ಜಾಣ ನೃಪವರೇಶಾ । ಆತಾ ದ್ವಂದ್ವಸಾಮ್ಯಾಚೀ ದಶಾ । ಆಈಕ ಕ್ಷಿತೀಶಾ ಸಾಂಗೇನ ॥೪೬೨॥ ಸುಖ ದುಃಖ ಅದೃಷ್ಟಾಧೀನ । ತೇ ಅದೃಷ್ಟ ದೇಹಾಚೇ ಮಾಥಾ ಪೂರ್ಣ । ಐಸೇ ಜಾಣೋನಿ ಆಪಣ । ನಿರ್ದ್ವಂದ್ವ ಸಂಪೂರ್ಣ ಸದ್ಗುರುವಾಕ್ಯೇ ॥೪೬೩॥ ಅದೃಷ್ಟೇ ದೇಹ ಸುಖದುಃಖ ಭೋಗೀ । ಮೂರ್ಖ ತೇಥ ರಾಗೀ ವಿರಾಗೀ । ಶಿಷ್ಯ ಲಾಗೋ ನೇದೀ ನಿಜಾಂಗೀ । ಗುರುವಾಕ್ಯರಂಗೀ ರಂಗಲಾ ॥೪೬೪॥ ದೇಹೀಚೇನಿ ಸುಖೇ ಸುಖಾವತಾ । ಸವೇಂಚಿ ದುಃಖ ಚಢೇ ಮಾಥಾ । ಹೇ ಗುರೂನೇ ಜಾಣೋನಿ ತತ್ತ್ವತಾ । ದೇಹಅಹಂತಾ ಸಾಂಡವಿಲೀ ॥೪೬೫॥ ನಿರಭಿಮಾನ್ಯಾಚ್ಯಾ ಅಂಗೀ । ದುಃಖ ನುರೇಚಿ ದುಃಖ ನಿಯೋಗೀ । ಸುಖ ನುರೇಚಿ ಸುಖಸಂಭೋಗೀ । ತೋ ಉಭಯಭಾಗೀ ಅಲಿಪ್ತ ॥೪೬೬॥ ಛಾಯಾ ಉಷ್ಣಾ ಮಾಜೀ ತಾಪಲೀ । ತೇ ಛಾಯಾ ಛಾಯೇಚಿ ನಿವಾಲೀ । ತೇವೀ ಸುಖದುಃಖೇ ಮಿಥ್ಯಾ ಜಾಹಲೀ । ಸ್ಥಿತೀ ಸುಖಾವಲೀ ಯಥಾನುಲಾಭೇ ॥೪೬೭॥ ಅದೃಷ್ಟೇ ದೇಹೀ ವರ್ತತಾ ದೇಖ । ಬಾಧೂ ನ ಶಕೇ ಸುಖಾಸುಖ । ಹೇ ಗುರುಗಮ್ಯ ಅಲೋಕಿಕ । ಶಿಷ್ಯ ವಿಶ್ವಾಸಿಕ ಪಾವತೀ ॥೪೬೮॥ ವಿಶ್ವಾಸೇವೀಣ ಸರ್ವಥಾ । ಗುರುಗಮ್ಯ ನ ಯೇ ಹಾತಾ । ಗುರುಗಮ್ಯೇವೀಣ ತತ್ತ್ವತಾ । ದ್ವಂದ್ವಸಮತಾ ಕದಾ ನ ಘಡೇ ॥೪೬೯॥ ದೇಹೀ ದೃಢತಾ ಜಂವ ಮೀಪಣ । ತಂವ ತಂವ ದ್ವಂದ್ವಬಾಧಾ ದಾರುಣ । ಜೇ ಗುರುವಾಕ್ಯೇ ನಿರಭಿಮಾನ । ತ್ಯಾಂಸೀ ದ್ವಂದೇ ಜಾಣ ಅತಿಮಿಥ್ಯಾ ॥೪೭೦॥ ಸ್ವಪ್ನೀಚೇ ದರಿದ್ರ – ಸಮರ್ಥತಾ । ಜೇವೀ ದೋನೀ ಮಿಥ್ಯಾ ಜಾಗ್ರತಾ । ತೇವೀ ದ್ವಂದ್ವಬಾಧೇಚೀ ವಾರ್ತಾ । ನ ಬಾಧೇ ಗುರುಭಕ್ತಾ ಅಪರೋಕ್ಷಬೋಧೇ ॥೪೭೧॥ ಲೇಕುರಾಂಚ್ಯಾ ಖೇಳಾಪಾಶೀ । ಪಾರಣೇ ತೈಶೀ ಏಕಾದಶೀ । ದ್ವಂದ್ವಾಚೀ ದಶಾ ತೈಶೀ । ಗುರುವಾಕ್ಯಾಸರಿಸೀ ಸಮೂಳ ಉಡೇ ॥೪೭೨॥ ಜೇವೀ ಚಂದನಾಚಿಯಾ ದ್ರುತೀ । ಆರೀಬೋರೀ ಚಂದನ ಹೋತೀ । ತೇವಿ ಗುರುವಾಕ್ಯಪ್ರತೀತಿ । ಸಕಳ ದ್ವಂದ್ವೇ ಯೇತೀ ನಿಜಸಾಮ್ಯಾ ॥೪೭೩॥ ಚಂದನಾಸಭೋವತೀ ಝಾಡೇ । ತೀಹೀ ಕೋರಡೀ ಲಾಂಕಡೇ । ದೇವದ್ವಿಜಾಂಚೇ ಮಸ್ತಕೀ ಚಢೇ । ಭಾಗ್ಯ ಏವಢೇ ಸತ್ಸಂಗೀ ॥೪೭೪॥

ಪ್ರಾಣಿಗಳಿಗೆ ಕಾಯಿಕ, ವಾಚಿಕ ಮತ್ತು ಮಾನಸಿಕ ಹೀಗೆ ಮೂರು ಪ್ರಕಾರಗಳ ದುಃಖವಾಗುವುದು. ಈ ದುಃಖವು ಎಲ್ಲಿ ನಿಃಶೇಷವಾಗಿ ಲಯವಾಗಿರುವುದೋ ಅಲ್ಲಿಯೇ ''ಅಹಿಂಸೆ'' ಯು ಇರುವುದು ॥೪೬೧॥ ಹೇ ನೃಪವರೇಣ್ಯನೇ, ಇದಕ್ಕೆ ಮಾತ್ರ ಶುದ್ಧವಾದ ''ಅಹಿಂಸೆ'' ಎಂದು ಕರೆಯುವರು. ಇದನ್ನು ಲಕ್ಷದಲ್ಲಿಡು. ಹೇ ನೃಪವರ್ಯನೇ, ''ದ್ವಂದ್ವಸಾಮ್ಯ''ದ ಸ್ಥಿತಿಯನ್ನು ಹೇಳುವೆ, ಅದನ್ನು ಕೇಳು ॥೪೬೨॥ ಸುಖ ಮತ್ತು ದುಃಖ ಇವು ಪ್ರಾರಬ್ಧಾದೀನವಾಗಿರುವುವು ಮತ್ತು ಈ ಪ್ರಾರಬ್ಧವು ಸಂಪೂರ್ಣವಾಗಿ ದೇಹದ ಮಸ್ತಕದ ಮೇಲೆ ಇರುವುದು. ಇದನ್ನು ಮನದಲ್ಲಿ ತಂದು ಸದ್ಗುರುವಿನ ಉಪದೇಶದಂತೆ ತಾನು ಪೂರ್ಣವಾಗಿ ನಿರ್ದ್ವಂದ್ವನಾಗಿರುವನು ॥೪೬೩॥ ಪ್ರಾರಬ್ಧ ಪ್ರಮಾಣದಂತೆ ದೇಹವು ಈ ಸುಖದುಃಖಗಳನ್ನು ಭೋಗಿಸುತ್ತಿರುವುದು. ಮೂರ್ಖನು ಅದರಲ್ಲಿ ಹರ್ಷ ಮತ್ತು ವಿಷಾದಗಳನ್ನು ತಿಳಿಯುವನು. ಶಿಷ್ಯನಾದವನು ಗುರೂಪದೇಶದಲ್ಲಿ ತನ್ಮಯನಾಗಿರುವುದರಿಂದ ಅವುಗಳಲ್ಲಿ ಯಾವುದನ್ನೂ ತನ್ನ ದೇಹಕ್ಕೆ ಹಚ್ಚಿಸಿಕೊಳ್ಳುವುದಿಲ್ಲ ॥೪೬೪॥ ದೇಹದ ಸುಖದಿಂದ ಸುಖಪಟ್ಟರೆ, ಅದರೊಂದಿಗೆ ದುಃಖವು ಒದಗಿ ತಲೆಯ ಮೇಲೆ ಬಂದು ಕುಳಿತುಕೊಳ್ಳುವುದು. ಈ ನಿಜವಾದ ಸ್ಥಿತಿಯನ್ನು ಗುರುಗಳು ಲಕ್ಷದಲ್ಲಿಟ್ಟುಕೊಂಡು ದೇಹದ ಅಹಂಕಾರವನ್ನೇ ಆತನಿಂದ ಬಿಡಿಸಿರುವರು ॥೪೬೫॥ ನಿರಭಿಮಾನಿ ಪುರುಷನಿಗೆ ದುಃಖಸಂಯೋಗದಲ್ಲಿ ದುಃಖವಾಗುವುದಿಲ್ಲ. ಹಾಗೆಯೇ ಸುಖಸಂಭೋಗದಲ್ಲಿ ಸುಖವೂ ಆಗುವುದಿಲ್ಲ. ಈ ಎರಡರಲ್ಲಿಯೂ ಈತನು ಅಲಿಪ್ತನಾಗಿಯೇ ಇರುವನು ॥೪೬೬॥ ನೆರಳು ಬಿಸಿಲಿನಲ್ಲಿ ತಾಪವಾದರೆ, ಆ ನೆರಳು ತನ್ನ ನೆರಳಿನಿಂದಲೇ ತಂಪಾಗುವುದು. ತದ್ವತ್, ಸುಖಗಳು ಮತ್ತು ದುಃಖಗಳು ಅಸತ್ಯವೆಂದು ಮನಕ್ಕೆ ಅದರ ಗುಟ್ಟು ತಿಳಿಯಲು, ಏನೇ ಪ್ರಾಪ್ತವಾಗಲಿ, ಅದರಿಂದ ಸುಖವೇ ಆಗುವುದು ॥೪೬೭॥ ದೇಹದಲ್ಲಿ ಪ್ರಾರಬ್ಧದಂತೆ ನಡೆದುಕೊಂಡರೆ, ಸುಖ ಅಥವಾ ದುಃಖಗಳು ಬಾಧಿಸಲಾರವು. ಈ ಅಲೌಕಿಕವಾದ ಗುರುಗಮ್ಯ (ರಹಸ್ಯ) ವು ಶ್ರದ್ಧಾವಂತನಾದ ಶಿಷ್ಯನಿಗೆ ಮಾತ್ರ ಲಭಿಸುವುದು ॥೪೬೮॥ ಶ್ರದ್ಧೆ ಇಲ್ಲದೇ ಈ ಗುರುಗಮ್ಯವು ಮಾತ್ರ ಕೈಗೆ ಸೇರುವುದೇ ಇಲ್ಲ ಮತ್ತು ಈ ಗುರುಗಮ್ಯವು ಕೈಸೇರದೇ ಸುಖದುಃಖಗಳಲ್ಲಿ ಸಮಭಾವವು ಎಂದಿಗೂ ಉತ್ಪನ್ನವಾಗಲಾರದು ॥೪೬೯॥ ದೇಹದಲ್ಲಿ ನಾನು ಎಂಬುವುದು ಎಲ್ಲಿಯವರೆಗೆ ದೃಢವಾಗಿರುವುದೋ, ಅಲ್ಲಿಯವರೆಗೂ ಈ ದ್ವಂದ್ವದ ಪೀಡೆಯು ಭಯಂಕರವಾಗಿರುವುದು. ಆದರೆ ಗುರೂಪದೇಶದಿಂದ ನಿರಭಿಮಾನರಾದವರಿಗೆ ಈ ದ್ವಂದ್ವಗಳು ಅತ್ಯಂತ ಮಿಥ್ಯೆಯಾಗುವುವು. ಇದನ್ನು ಲಕ್ಷದಲ್ಲಿಡು ॥೪೭೦॥ ಕನಸಿನ ದಾರಿದ್ರ್ಯ ಅಥವಾ ಶ್ರೀಮಂತಿಕೆ ನಿದ್ದೆಯಿಂದ ಎದ್ದಕೂಡಲೇ ಈ ಎರಡೂ ಸುಳ್ಳಾಗುವುವು. ಅದರಂತೆ ಗುರುಭಕ್ತರಿಗೆ ಸ್ವಾತ್ಮಸಾಕ್ಷಾತ್ಕಾರದಿಂದ ದ್ವಂದ್ವಬಾಧೆಯ ವಾರ್ತೆಯೂ ಸಹ ತಿಳಿಯುವುದಿಲ್ಲ ॥೪೭೧॥ ಚಿಕ್ಕ ಬಾಲಕರ ಆಟದಲ್ಲಿ ಏಕಾದಶೀ ದ್ವಾದಶೀ ಈ ಎರಡೂ ಒಂದೇ ಆಗಿರುವುವು. ಅದರಂತೆಯೇ ಗುರೂಪದೇಶದಿಂದ ಎಲ್ಲ ದ್ವಂದ್ವಗಳು ಇಲ್ಲದಾಗುವುವು ॥೪೭೨॥ ಚಂದನಮರದ ಸುಗಂಧದಿಂದ ಬಾರಿ, ಜಾಲಿಗಿಡಗಳು ಚಂದನ ಮರಗಳಾಗುವುವು. ಅದರಂತೆ ಗುರುವಚನ ಪ್ರತೀತಿಯಿಂದ ಸಕಲ ದ್ವಂದ್ವಗಳು ಆತ್ಮಸ್ವರೂಪದಲ್ಲಿ ಐಕ್ಯವಾಗುವುವು ॥೪೭೩॥ ಚಂದನ ಮರದ ಸುತ್ತಮುತ್ತ ಇರುವ ಇತರ ಮರಗಳು ಒಣಗಿ ಕಟ್ಟಿಗೆಗಳಾದರೂ ದೇವ, ಬ್ರಾಹ್ಮಣರ ಮಸ್ತಕಗಳಿಗೆ ಏರುವುವು. ಇದೆಲ್ಲವೂ ಸತ್ಸಂಗದ ಮಾಹತ್ಮ್ಯೆಯಾಗಿರುವುದು ॥೪೭೪॥

ಸದ್ಗುರೂ ತೋಚಿ ಸತ್ಸಂಗತೀ । ತತ್ಸಂಗೇ ಶಿಷ್ಯ ಪಾಲಟತೀ । ಸ್ವಯೇ ಬ್ರಹ್ಮ ರೂಪ ಹೋತೀ । ತೇಂವ್ಹಾ ದ್ವಂದ್ವೇ ಯೇತೀ ನಿರ್ದ್ವಂದ್ವಾ ॥೫೭೫॥ ಏವಂ ಗುರುವಾಕ್ಯೀ ವಿಶ್ವಾಸತಾ । ದ್ವಂದ್ವಸಾಮ್ಯ ಚಢೇ ಹಾತಾ । ತೇ ಗುರುವಾಕ್ಯಹೀ ತತ್ತ್ವತಾ । ಐಕ ಆತಾ ಸಾಂಗೇನ ॥೫೭೬॥

ಸರ್ವತ್ರಾತ್ಮೇಶ್ವರಾನ್ವೀಕ್ಷಾಂ ಕೈವಲ್ಯಮನಿಕೇತತಾಮ್ । ವಿವಿಕ್ತಚೀರವಸನಂ ಸಂತೋಷಂ ಯೇನಕೇನಚಿತ್ ॥೨೫॥

ಅರ್ಥ:- ಸರ್ವದೇಶಕಾಲ ಮತ್ತು ವಸ್ತುಗಳಲ್ಲಿ ಚೇತನರೂಪದಿಂದ ಆತ್ಮನನ್ನು ಮತ್ತು ನಿಯಂತಾ ರೂಪದಿಂದ ಈಶ್ವರನನ್ನು ಕಾಣಬೇಕು. ಧ್ಯಾನ ವರ್ಧನೆಗಾಗಿ ಏಕಾಂತ ಸ್ಥಳದಲ್ಲಿ ವಾಸಿಸಬೇಕು. ನಿರಾಕೃತ ಪ್ರದೇಶಗಳಲ್ಲಿ ದೊರೆಯುವ ಬಟ್ಟೆಯ ತುಂಡುಗಳಿಂದ ಮೈ ಮುಚ್ಚಿಕೊಳ್ಳಬೇಕು. ಈ ರೀತಿಯಲ್ಲಿ ಯಾವುದೇ ಸ್ಥಿತಿಯಲ್ಲಿ ಸಂತೋಷನಾಗಿರುವುದನ್ನು ಕಲಿಯಬೇಕು.

ಸದ್ಗುರುವಚನ ವಿಶ್ವಾಸೇ । ಮನೀ ಸರ್ವತ್ರ ಪರಮಾತ್ಮಾ ಐಸೇ । ತೇಚಿ ನಿಜಬುದ್ಧೀ ನಿಶ್ಚಯವಶೇ । ನಿಜಮಾನಸೇ ವಿವಂಚೀ ॥೫೭೭॥ ಮಜಮಾಜೀ ಪರಮಾತ್ಮಾ ವಸೇ । ತೇಣೇ ಸ್ಥೂಳದೇಹೋ ವರ್ತತಸೇ । ತ್ಯಾಚೇನಿ ಪೂರ್ಣ ಚಿತ್ಪ್ರಕಾಶೇ । ಜಗ ಭಾಸೇ ಜಗದ್ರೂಪೇ ॥೫೭೮॥ ತೇಣೇ ನಿಜಾತ್ಮ ಪ್ರಕಾಶೇ । ಮಾಝೇ ದೃಷ್ಟೀಸೀ ದೃಶ್ಯ ದಿಸೇ । ದೃಷ್ಟದರ್ಶನವಿಲಾಸೇ । ವಿಲಸತಸೇ ಪರಮಾತ್ಮಾ ॥೫೭೯॥ ದೃಶ್ಯ ದೃಶ್ಯಪಣೇ ಜೇ ಜೇ ಉರೀ । ತೇ ತೇ ನಿಜಾತ್ಮತಾ ಪಾಶೀಪೋಟೀ । ತೇಣೇ ಅನ್ವಯೇ ದೇವೋ ದೇಖೇ ದೃಷ್ಟೀ । ಆಹಾಳಬಾಹಾಳ ಸೃಷ್ಟಿ ದುಮದುಮಿತ ॥೫೮೦॥ ತೇವ್ಹಾ ಜೇ ಜೇ ದೇಖೇ ಭೂತಾಕೃತೀ । ತೇಥ ಪರಮಾತ್ಮಾ ಯೇ ಪ್ರತೀತೀ । ಮೀ ನಿಯಂತಾ ಈಶ್ವರ ತ್ರಿಜಗತೀ । ಹೇಹೀ ಸ್ಫೂರ್ತಿ ಸ್ಫುರೋ ಲಾಗೇ ॥೫೮೧॥ ಜಗ ವರ್ತೇ ಮಾಝಿಯಾ ಸತ್ತಾ । ಮೀ ಕಳಿಕಾಳಾಚಾ ನಿಯಂತಾ । ಮೀ ಉತ್ಪತ್ತಿಸ್ಥಿತಿಪ್ರಲಯಕರ್ತಾ । ಹೇ ಮೂಳ ಅಹಂತಾ ಸ್ವಭಾವೇ ಸ್ಫುರೇ ॥೫೮೨॥ ಯೇಣೇ ಪೂರ್ವಾನ್ವಯೇ ಜಂವ ಪಾಹೇ । ತಂವ ಸರ್ವೀ ಸರ್ವ ಮೀಚಿ ಆಹೇ । ತೇ ಪಾಹತೇ ಪಾಹಣೇ ಪಾಹೋ ಠಾಯೇ । ತೇಥೇ ''ಅಹಂ'' ಜಾಯೇ ವಿರೋನಿ ॥೫೮೩॥ ತೇಥೇ ಪರಬ್ರಹ್ಮೈಕ ಪ್ರಸಿದ್ಧ । ಕೋಂದಲಾ ಠಾಕೇ ಸಚ್ಚಿದಾನಂದ । ಐಸಾ ಗುರುವಾಕ್ಯೇ ಪ್ರಬೋಧ । ಶಿಷ್ಯ ಅತಿಶುದ್ಧ ಪಾವತೀ ॥೫೮೪॥ ತೇವ್ಹಾ ವೈಕುಂಠೀ ದೇವೋ ಆಹೇ । ಹೇ ಬೋಲಣೇ ತ್ಯಾ ಆಹಾಚಿ ಹೋಯೇ । ಕ್ಷೀರಸಾಗರೀ ದೇವೋ ರಾಹೇ । ಹೇ ಐಕೇತಾಂಚಿ ಪಾಹೇ ಅನಿವಾರ ಹಾಂಸೇ ॥೫೮೫॥ ದೇವಾವಾಂಚೋನಿ ತತ್ತ್ವತಾ । ತಿಳಭರೀ ಠಾವೋ ನಾಹೀ ರಿತಾ । ತ್ಯಾತೇ ಏಕದೇಶೀ ನೇಮಿತಾ । ನ ಮನೇ ವಸ್ತುತಾ ಸಚ್ಛಿಷ್ಯಾಸೀ ॥೫೮೬॥

ಸದ್ಗುರುಗಳೇ ಮಹಾ ಸತ್ಸಂಗವಾಗಿರುವರು. ಇವರ ಸಂಗತಿಯಿಂದ ಶಿಷ್ಯನು ಬದಲಾಗಿ ಸ್ವತಃ ಬ್ರಹ್ಮ ರೂಪನಾಗುವನು. ಆಗ ದ್ವಂದ್ವಗಳೆಲ್ಲವೂ ನಿರ್ದ್ವಂದ್ವಗಳಾಗುವುವು ॥೫೭೫॥ ಈ ಪ್ರಕಾರವಾಗಿ ಗುರುವಾಕ್ಯಗಳಲ್ಲಿ ವಿಶ್ವಾಸವಿಡಲು ದ್ವಂದ್ವಸಾಮ್ಯವು ಕೈ ಸೇರುವುದು. ಹೀಗಿರುವ ಆ ಗುರುವಾಕ್ಯವನ್ನು ಈಗ ಹೇಳುವೆನು, ಕೇಳು ॥೫೭೬॥

ಶಿಷ್ಯನಾದವನು ಸದ್ಗುರುಗಳ ವಚನಗಳಲ್ಲಿ ವಿಶ್ವಾಸವಿಟ್ಟು ಸರ್ವತ್ರವೂ ಪರಮಾತ್ಮನೇ ತುಂಬಿಕೊಂಡಿರುವನೆಂದು ತಿಳಿಯುವನು. ಮತ್ತು ಅದೇ ಆತ್ಮಬುದ್ಧಿಯನ್ನು ನಿಶ್ಚಯಪೂರ್ವಕವಾಗಿ ದೃಢಗೊಳಿಸಿ, ತನ್ನ ಮನದಲ್ಲಿ ಹೀಗೆ ವಿಚಾರಿಸುವನು ॥೫೭೭॥ ನನ್ನಲ್ಲಿ ಪರಮಾತ್ಮನು ಇರುವುದರಿಂದ ಈ ಸ್ಥೂಲದೇಹವು ನಡೆಯುವುದು, ಮಾತನಾಡುವುದು. ಈತನ ಪೂರ್ಣವಾದ ಚಿತ್‌ಪ್ರಕಾಶದಿಂದಲೇ ಈ ವಿಶ್ವವು ವಿಶ್ವರೂಪದಿಂದ ಭಾಸವಾಗುವುದು ॥೫೭೮॥ ಆತನ ನಿಜಾತ್ಮ ಪ್ರಕಾಶದಿಂದ ನನ್ನ ದೃಷ್ಟಿಗೆ ದೃಶ್ಯವು ಗೋಚರಿಸುವುದು. ದೃಶ್ಯ - ದೃಷ್ಟಾ - ದರ್ಶನ ರೂಪದಿಂದ ಎಲ್ಲೆಲ್ಲಿಯೂ ಪರಮಾತ್ಮನೇ ಶೋಭಿಸುತ್ತಿರುವನು ॥೫೭೯॥ ಯಾವ ಯಾವ ದೃಶ್ಯಗಳು ದೃಶ್ಯವಾಗಿ ಪ್ರಕಟಿಸುವುವೋ, ಅವುಗಳ ಒಳಹೊರಗೆ ಆತ್ಮಸ್ವರೂಪವೇ ತುಂಬಿರುವುದು. ಇದೇ ಅನುವೃತ್ತಿಯಿಂದ ಸರ್ವ ಸೃಷ್ಟಿಯು ಈಶ್ವರನಿಂದ ದುಮದುಮಿತವಾಗಿ ತುಂಬಿರುವುದಾಗಿ ಕಾಣುವನು ॥೫೮೦॥ ಆಗ ಭೂತಾಕೃತಿ ದೃಷ್ಟಿಗೆ ಬೀಳುವ ಎಲ್ಲದರಲ್ಲಿಯೂ ಪರಮಾತ್ಮಸ್ವರೂಪವೇ ಇರುವುದಾಗಿ ಆತನಿಗೆ ಅನುಭವವಾಗುವುದು. ಇಷ್ಟೇ ಅಲ್ಲ, ಮೂರು ಲೋಕಗಳ ನಿಯಂತನಾದ ಈಶ್ವರನು ನಾನೇ ಎಂಬ ಸ್ಫುರಣವು ಉದ್ಭವಿಸುವುದು ॥೫೮೧॥ ನನ್ನ ಸತ್ತೆಯಿಂದಲೇ ಈ ಜಗತ್ತು ನಡೆಯುತ್ತಿರುವುದು. ಕಲಿಕಾಲನನ್ನು ನಿಯಂತ್ರಿಸುವವನು ನಾನೇ, ಉತ್ಪತ್ತಿ, ಸ್ಥಿತಿ, ಲಯಗಳ ಕರ್ತನು ನಾನೇ. ಹೀಗಿರುವ ಮೂಲವಾದ ಅಹಂತೆಯು ಸಹಜವಾಗಿ ಸ್ಫುರಣಗೊಳ್ಳುವುದು ॥೫೮೨॥ ಈ ಯಾವ ಪೂರ್ವಾನುವೃತ್ತಿಯಿಂದ ಈತನು ಹೀಗೆ ಕಾಣಲು, ಎಲ್ಲದರಲ್ಲಿಯೂ ನಾನೇ ತುಂಬಿರುವೆನು ಎಂದು ಭಾಸವಾಗುವುದು. ಆಗ ದೃಶ್ಯ - ದರ್ಶನ - ದೃಷ್ಟಾ, ಈ ತ್ರಿಪುಟಿಗಳು ಇಲ್ಲದಾಗಿ "ಅಹಂಕಾರ" ವು ಕರಗಿಹೋಗುವುದು ॥೫೮೩॥ ಆಗ ಪರಮಾತ್ಮನಲ್ಲಿ ಐಕ್ಯವು ಸಿದ್ಧಗೊಂಡು ಎಲ್ಲೆಲ್ಲಿಯೂ ಸಚ್ಚಿದಾನಂದವೇ ತುಂಬಿರುವ ಈ ಶುದ್ಧ ಪ್ರತೀತಿಯು ಗುರೂಪದೇಶದಿಂದ ಸಚ್ಛಿಷ್ಯನಿಗೆ ಪ್ರಾಪ್ತವಾಗುವುದು ॥೫೮೪॥ ಆಗ ಈತನಿಗೆ ದೇವರು ವೈಕುಂಠದಲ್ಲಿರುವನು ಎಂಬ ಮಾತು ಹೇಗೇಗೋ ಎನಿಸುವುದು. ದೇವರು ಕ್ಷೀರಸಾಗರದಲ್ಲಿರುವನೆಂದು ಕೇಳಿದಾಕ್ಷಣವೇ ಈತನಿಗೆ ಅನಿವಾರ್ಯವಾಗಿ ನಗೆಯು ಬರುವುದು ॥೫೮೫॥ ನಿಜವಾಗಿ ನೋಡಿದರೆ, ದೇವರಿಲ್ಲದ ಬರೀ ಸ್ಥಳವು ತಿಲಮಾತ್ರವೂ ಇರುವುದಿಲ್ಲ. ಹೀಗಿರುವ ದೇವರಿಗೆ ಏಕದೇಶೀ ಎನ್ನುವುದು ಸಚ್ಛಿಷ್ಯನಿಗೆ ವಸ್ತುತಃ ಮೂಲದಲ್ಲಿಯೇ ಮನ್ನಿಸುವುದಿಲ್ಲ ॥೫೮೬॥

ವೈಕುಂಠ ಆಣಿ ಕ್ಷೀರಾಬ್ಧೀ । ಜ್ಯಾಚೇನಿ ಪ್ರಕಾಶೇ ಜ್ಯಾಮಧೀ । ತೋ ವೈಕುಂಠವಾಸೀ ಅಥವಾ ಕ್ಷೀರಾಬ್ಧೀ । ಹೇ ಬೋಲ ಸೋಪಾಧೀ ಶಬಲತ್ವಾಚೇ ॥೨೮೮॥ ಜೇಥ ಸರ್ವೀ ಸರ್ವ ಪರಮಾತ್ಮಾ । ತೇಥ ಏಕದೇಶೀ ನ ಸರೇ ಮಹಿಮಾ । ತೋ ಪೂರ್ಣಬ್ರಹ್ಮ ಅನಾಶ್ರಮಾ । ವೈಕುಂಠಾದಿ ಆಶ್ರಮಾ ವಶ ನವ್ಹೇ ॥೨೮೯॥ ಅಖಂಡಾತೇ ಆವಾಹನ । ಅಧಿಷ್ಠಾನಾತೇ ಆಸನ । ಸರ್ವಗತಾ ಸಿಂಹಾಸನ । ಕಲ್ಪಿತೀ ಸ್ಥಾನ ನಿಜ ಕಲ್ಪನಾ ॥೨೮೯॥ ತೇಹೀಕಲ್ಪಿತೀ ನಿಜವೃತ್ತೀ । ಜೇ ಬ್ರಹ್ಮ ರೂಪ ನಿತ್ಯ ಪಾಹತೀ । ತ್ಯಾಂಚೀ ಪರಬ್ರಹ್ಮಸ್ಥಿತೀ । ಕದಾ ಕಲ್ಪಾಂತೀ ಭಂಗೇನಾ ॥೨೯೦॥ ದೇಶೀ ಪರಬ್ರಹ್ಮ ಆವಾಪ್ತೀ । ಸಾಧಕೀ ಪಾವಾವಯಾ ನಿಶ್ಚಿತೀ । ನಿತ್ಯ ಬಸಾವೇ ಏಕಾಂತೀ । ದ್ವೈತಾಚೀ ಸ್ಫೂರ್ತೀ ತ್ಯಾಗೋನೀ ॥೨೯೧॥ ಸಾಧಿತಾ ಪರಮಾರ್ಥನಿಧಾನ । ಸಾಧಕಾ ಆಡವೀ ವಸ್ತ್ರ - ಅನ್ನ । ನಿರ್ಮೋಲೀ ವಲ್ಕಲೇ ಪರಿಧಾನ । ಕಾ ತ್ಯಾಗಿಲೀ ಅತಿಜೀರ್ಣ ವಸ್ತ್ರೇ ಘ್ಯಾವೀ ॥೨೯೨॥ ಶಾಕಫಲಮೂಲಕಂದಭೋಜನ । ಯೇಣೇ ಕರಾವೇ ಜಠರತರ್ಪಣ । ಸಾಂಡೂನಿ ಪರಮಾರ್ಥಸಾಧನ । ಜೋಡಾವಯಾ ಅನ್ನ ಧನ ನ ವಚಾವೇ ಕದಾ ॥೨೯೩॥ ಚೌಪಾಲಚೀ ಬಾಂಧೋನಿ ಕರೀ । ಭೀಕ ಮಾಗಾವೀ ದಾರೋದಾರೀ । ಪರೀ ಅನ್ನ ಆಚ್ಛಾದನಾವರೀ । ಆಯುಷ್ಯ ತಿಳಭರೀ ನ ವೇಂಚಾವೇ ॥೨೯೪॥ ಮೇಳವಾವಯಾ ಅನ್ನ ಆಚ್ಛಾದನ । ನ ಶಿಣತೀ ಸಾಧಕ ಸಜ್ಞಾನ । ದೇಹ ಅದೃಷ್ಟಾಧೀನ । ತೇ ಸಹಜೇ ಜಾಣ ಪ್ರತಿಪಾಳೀ ॥೨೯೫॥ ಸ್ವಯೇ ಶಿಣತಾ ಅಹೋರಾತೀ । ಅದೃಷ್ಟಾವೇಗಳೀ ಅಣುಭರೀ ಪ್ರಾಪ್ತೀ । ಕದಾ ನ ಚಢೇ ಕೋಣಾಚೇ ಹಾತೀ । ಹೇ ಸಾಧಕ ಜಾಣತೀ ಸಜ್ಞಾನ ॥೨೯೬॥ ಯಾಲಾಗೀ ಅದೃಷ್ಟೇ ಜೇ ಪ್ರಾಪ್ತ । ತೇಣೇ ನಿರ್ವಾಹೇ ಸದಾ ನಿಶ್ಚಿಂತ । ಸಾಧಕ ಪರಮಾರ್ಥ ಸಾಧಿತ । ಸಂತೋಷಯುಕ್ತ ಗುರುವಾಕ್ಯೇ ॥೨೯೭॥ ದೇಹಅದೃಷ್ಟಪರವಡೀ । ಹೋತೀ ಸುಖದುಃಖಘಡಾಮೋಡೀ । ಸಾಧಕಾ ಸಂತೋಷು ಚಢೋವಢೀ । ಗುರುವಾಕ್ಯ ಗೋಡೀ ದೃಢ ಲಾಗಲೀ ॥೨೯೮॥ ಜೈಸೇ ದೇಹಾಚೇ ಪ್ರಾಕ್ತನ । ತೈಸೇ ಹೋಯ ಅಶನ-ವಸನ । ಪರೀ ಗುರುವಾಕ್ಯಸುಖ ಸಾಂಡೂನ । ದೇಹಾವರೀ ಮನ ಮಮತ್ವೇ ನ ಯೇ ॥೨೯೯॥ ಯಾಂಚ್ಞೇವೀಣ ಯಥಾಕಾಳೇ । ಯದೃಚ್ಛಯಾ ಜೇ ಜೇ ಮಿಳೇ । ತೇ ತೇ ಸೇವೀ ಸಕಳ ಮಂಗಳೇ । ಗುರುವಾಕ್ಯಮೇಳೇ ಸ್ವಾನಂದೇ ॥೩೦೦॥

ವೈಕುಂಠ ಮತ್ತು ಕ್ಷೀರಸಾಗರ ಇವು ಯಾರ ಪ್ರಕಾಶದಿಂದ ಪ್ರಕಾಶಿತವಾಗುವುವೋ, ಆ ಪರಮಾತ್ಮನು ವೈಕುಂಠವಾಸಿಯು ಅಥವಾ ಕ್ಷೀರಸಾಗರವಾಸಿಯು ಎಂದು ಹೇಳುವಿಕೆಯು ಸೋಪಾಧಿಕ ಶಬಲ ಬ್ರಹ್ಮನಿಗೆ ಮಾತ್ರ ಸರಿಹೊಂದುವುದು ॥೨೮೮॥ ಎಲ್ಲೆಲ್ಲಿಯೂ ಸಂಪೂರ್ಣವಾಗಿ ಪರಮಾತ್ಮನೇ ತುಂಬಿರಲು, ಆತನ ಏಕದೇಶೀ ಮಹಿಮೆಯನ್ನು ವರ್ಣಿಸುವುದು ಯೋಗ್ಯವಾಗಲಾರದು. ಈತನು ಅನಾಶ್ರಮೀ ಪೂರ್ಣ ಬ್ರಹ್ಮನಿರುವನು. ವೈಕುಂಠಾದಿ ಆಶ್ರಮಕ್ಕೆ ಈತನು ಎಂದಿಗೂ ಬಂಧಿಸಿರಲಾರನು ॥೨೮೯॥ ಸರ್ವತ್ರವೂ ಅಖಂಡವಾಗಿ ತುಂಬಿಕೊಂಡವನಿಗೆ ''ಆವಾಹನ'' ಮಾಡುವುದು, ಸರ್ವಕ್ಕೂ ಅಧಿಷ್ಠಾನನಾದವನಿಗೆ ''ಆಸನ''ವನ್ನು ಹಾಕುವುದು, ಸರ್ವವ್ಯಾಪಿ ಇರುವ ಈತನಿಗೆ ''ಸಿಂಹಾಸನ''ವನ್ನು ಕಲ್ಪಿಸುವುದು, ಸ್ಥಾನವನ್ನು ಕಲ್ಪಿಸುವುದು, ಇವೆಲ್ಲವೂ ಕಲ್ಪನೆಗಳ ಆಟವಾಗಿರುವುದು ॥೨೮೯॥ ಆದರೆ ಹೀಗೆ ಕಲ್ಪನೆಗಳನ್ನು ಮಾಡುವ ತನ್ನ ವೃತ್ತಿಯು ಸಹ ಬ್ರಹ್ಮರೂಪವಾಗಿದೆ ಎಂದು ನಿತ್ಯ ಕಾಣುವರು. ಇವರ ಪರಬ್ರಹ್ಮ ಸ್ಥಿತಿಯು ಕಲ್ಪಾಂತಕ್ಕೂ ಭಂಗವಾಗದು ॥೨೯೦॥ ಈ ರೀತಿಯಲ್ಲಿ ಪರಬ್ರಹ್ಮಸ್ಥಿತಿಯು ಪಡೆಯಬೇಕಾದರೆ, ಸಾಧಕನು ದ್ವೈತದ ಭಾವನೆಯನ್ನು ಬಿಸಾಡಿ ನಿತ್ಯದಲ್ಲಿ ಏಕಾಂತವನ್ನು ಸಾಧಿಸಿ ಕುಳಿತುಕೊಳ್ಳಬೇಕು ॥೨೯೧॥ ಪರಮಾರ್ಥದ ನಿಧಿಯನ್ನು ಸಾಧ್ಯಮಾಡಿಕೊಳ್ಳುವಾಗ್ಗೆ, ಸಾಧಕನಿಗೆ ಅನ್ನದ ಮತ್ತು ವಸ್ತ್ರದ ಅಡಚಣೆಗಳಾಗುವುದುಂಟು. ಅದಕ್ಕಾಗಿ ಬೆಲೆಬಾಳದ ನಾರುಬಟ್ಟೆ ತೊಡಬೇಕು, ಇಲ್ಲವೇ ಜನರು ಒಗೆದ ಹರಕ ಬಟ್ಟೆಯನ್ನು ಉಡಬೇಕು ॥೨೯೨॥ ತಪ್ಪಲು, ಹಣ್ಣು ಹಂಪಲು, ಕಂದಮೂಲ ಇತ್ಯಾದಿ ಭಕ್ಷಿಸಿ ಹೊಟ್ಟೆತುಂಬಿಸಿಕೊಳ್ಳಬೇಕು. ಆದರೆ ಪರಮಾರ್ಥ ಸಾಧನೆಯನ್ನು ಬಿಟ್ಟು ಅನ್ನ, ವಸ್ತ್ರ ಅಥವಾ ದ್ರವ್ಯ ಕೂಡಿಸಲು ಎಂದೂ ಹೋಗಬಾರದು ॥೨೯೩॥ ನಾಲ್ಕು ಸೆರಗಿನ ಜೋಳಿಗೆಯನ್ನು ಕೈಯಲ್ಲಿ ಧರಿಸಿ, ಮನೆಮನೆಗೆ ಹೋಗಿ ಭಿಕ್ಷೆಯನ್ನು ಬೇಡಬೇಕು. ಆದರೆ ಅನ್ನ ವಸ್ತ್ರಕ್ಕಾಗಿ ತನ್ನ ಆಯುಷ್ಯವನ್ನು ತಿಲಮಾತ್ರಕ್ಕೂ ಖರ್ಚಿಸಬಾರದು ॥೨೯೪॥ ಸಜ್ಞಾನ ಸಾಧಕನು ಅನ್ನ ವಸ್ತ್ರ ಕೂಡಿಸಲು ಎಂದೂ ಶ್ರಮಪಡಲಾರನು. ಈ ದೇಹವು ಪ್ರಾರಬ್ಧಾಧೀನವಾಗಿದೆ, ಈ ಪ್ರಾರಬ್ಧವು ಸಹಜವಾಗಿಯೇ ದೇಹದ ಪಾಲನೆ ಮಾಡುವುದು ॥೨೯೫॥ ನಾವು ಹಗಲು ರಾತ್ರಿ ಕಷ್ಟಪಟ್ಟರೂ ಪ್ರಾರಬ್ಧವನ್ನು ಬಿಟ್ಟು ಒಂದು ಕವಡಿಯೂ ಸಹ ನಮ್ಮ ಕೈಸೇರಲಾರದು. ಇದು ಜ್ಞಾನಿ ಸಾಧಕನಿಗೆ ತಿಳಿದಿರುವುದು ॥೨೯೬॥ ಆದ್ದರಿಂದ ದೈವಯೋಗದಿಂದ ಪ್ರಾಪ್ತವಾದಷ್ಟರಲ್ಲಿಯೇ ತಮ್ಮ ನಿರ್ವಹಣೆಯನ್ನು ಸಾಗಿಸಿ, ಯಾವಾಗಲೂ ಸಾಧಕನು ನಿಶ್ಚಿಂತನಾಗಿರುವನು. ಮತ್ತು ಆನಂದದಿಂದ ಗುರುವಾಕ್ಯಾನುಸಾರವಾಗಿ ಪರಮಾರ್ಥವನ್ನು ಸಾಧಿಸುವನು ॥೨೯೭॥ ಪ್ರಾರಬ್ಧಾನುಸಾರವಾಗಿ ಈ ದೇಹದ ಸುಖದುಃಖಗಳ ಕಾರ್ಯಗಳಾಗುತ್ತಿರುವುವು. ಅವುಗಳಲ್ಲಿ ಸಾಧಕನಿಗೆ ಸಂತೋಷವೇ ಆಗುವುದು. ಕಾರಣ ಈತನಿಗೆ ಗುರುವಾಕ್ಯದ ಅಭಿರುಚಿಯು ಪೂರ್ಣ ಹತ್ತಿರುವುದು ॥೨೯೮॥ ದೇಹದ ದೈವವಿದ್ದಂತೆ ಅನ್ನವಸ್ತ್ರಗಳು ದೊರೆಯುತ್ತಿರುವುವು. ಅದಕ್ಕಾಗಿ ಗುರುವಾಕ್ಯದ ಸುಖವನ್ನು ಬಿಟ್ಟು ಆತನ ಮನವು ಮಮತೆಯಿಂದ ದೇಹದತ್ತ ಬರುವುದಿಲ್ಲ ॥೨೯೯॥ ಯಾಚನೆಯನ್ನು ಮಾಡದೇ ಸಹಜವಾಗಿ ಯಥಾಕಾಲದಲ್ಲಿ ಪ್ರಾಪ್ತವಾಗುವುದೆಲ್ಲವೂ ಉತ್ತಮವೇ ಎಂದು ಭಾವಿಸಿ, ಈತನು ಗುರುವಾಕ್ಯಾನುಸಾರವಾಗಿ ಸ್ವಾನಂದದಿಂದ ಅವುಗಳ ಸೇವನೆ ಮಾಡುವನು ॥೩೦೦॥

ಶರೀರನಿರ್ವಾಹಾವಿಖೀ । ಕೋಠೇ ಕಾಂಹೀ ನಾಭಿಲಾಖೀ । ಜೇ ಜೇ ಮಿಳೇ ತೇಣೇಂಚಿ ಸುಖೀ । ನಿಜಾತ್ಮ ತೋಖೀ ಸಂತುಷ್ಟ ॥೫೦೧॥ ಪ್ರಾರಬ್ಧೇ ಸುಖದುಃಖ ಭೋಗಿತಾ । ಸಂತೋಷ ಸಾಧಕಾಂಚ್ಯಾ ಚಿತ್ತಾ । ಹೇ ಗುರುವಾಕ್ಯೇ ವಿಶ್ವಾಸತಾ । ಚಢೇ ಹಾತಾ ಶಿಷ್ಯಾಚ್ಯಾ ॥೫೦೨॥ ತ್ಯಾಚ್ಯಾ ದೃಢ ವಿಶ್ವಾಸಾಸೀ । ಭಾಗವತಶಾಸ್ತ್ರ ಗುರೂಪಾಶೀ । ಅಭ್ಯಾಸಾವೇ ಆದರೇಸೀ । ದೃಢನಿಶ್ಚಯೇಸೀ ಪ್ರಬೋಧಕ ॥೫೦೩॥

ಶ್ರದ್ಧಾಂ ಭಾಗವತೇ ಶಾಸ್ತ್ರೇಽನಿಂದಾಮನ್ಯತ್ರ ಚಾಪಿ ಓ । ಮನೋವಾಕ್ಕರ್ಮದಂಡಂ ಚ ಸತ್ಯಂ ಶಮದಮಾವಪಿ ॥೨೬॥

ಅರ್ಥ:- ಭಗವಂತನ ಪ್ರಾಪ್ತಿಯ ಮಾರ್ಗ ತಿಳಿಸುವ ಶಾಸ್ತ್ರದಲ್ಲಿ ಪೂರ್ಣ ಶ್ರದ್ಧೆಯನ್ನಿಡಬೇಕು. ಬೇರೆ ಯಾವ ಶಾಸ್ತ್ರಗಳ ನಿಂದೆಯನ್ನು ಮಾಡಕೂಡದು. ಪ್ರಾಣಾಯಾಮದಿಂದ ಮನವನ್ನು ಅಂಕಿತಗೊಳಿಸಬೇಕು , ಮೌನದಿಂದ ವಾಣಿಯ ವಿಜಯ ಸಾಧಿಸಬೇಕು, ವಾಸನಾರಹಿತನಾಗಿ ಕರ್ಮಗಳ ಸಂಯಮವನ್ನು ಮಾಡಬೇಕು , ಸತ್ಯವನ್ನು ನುಡಿಯಬೇಕು , ಇಂದ್ರಿಯಗಳನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ಮನಸ್ಸು ಹೊರಗೆ ಹೋಗದಂತೆ ಕಲಿಯಬೇಕು.

ಸಗುಣ ಅಥವಾ ನಿರ್ಗುಣ । ಜೇಥ ಭಗವತ್ಸ್ವರೂಪವರ್ಣನ । ಕಾ ಭಗವಂತ ಬೋಲಿಲಾ ಆಪಣ । ಅಥವಾ ಭಗವದ್ಗುಣ ಕೀರ್ತಿ ಜೇಥೇ ॥೫೦೪॥ ತೇ ತೇ ರಾಯಾ ಶಾಸ್ತ್ರ ಜಾಣ । ಆವಡೇ ಜೈಸೇ ಜೀವಪ್ರಾಣ । ವಿಶೇಷೇಸಿ ಜ್ಞಾನಕಥನ । ಸಪ್ರೇಮ ಪೂರ್ಣ ಪಢಿಯಂತೇ ॥೫೦೫॥ ಗುರುಮುಖೇ ಜ್ಞಾನಕಥಾ ಗೋಡ । ತೇಣೇ ಶ್ರೀಭಾಗವತೀ ಶ್ರದ್ಧಾ ದೃಢ । ಶ್ರವಣೇ ಪುರೇ ಜೀವಾಚೇ ಕೋಡ । ವೋಸರೇ ಚಾಡ ವಿಷಯಾಂಚೀ ॥೫೦೬॥ ಜೀವೀ ನಾಹೀ ವಿಷಯಕೌತುಕ । ತರೀ ವಿಷಯ ಆವಶ್ಯಕ । ಸಾಧಕಾ ಹೋತೀ ಬಾಧಕ । ತೇಣೇ ಆತ್ಯಂತಿಕ ಅನುತಾಪು ॥೫೦೭॥ ಅನಿವಾರ ವಿಷಯಾವಸ್ಥಾ । ತ್ಯಾಗಿಲೀ ನ ವಚೇ ನಿಜಸತ್ತಾ । ತೇಣೇ ಮುಮುಕ್ಷೂಚ್ಯಾ ಚಿತ್ತಾ । ಅತ್ಯಂತ ವ್ಯಥಾ ಅನುತಾಪೇ ॥೫೦೮॥ ನಸತಾ ವಿಷಯಾಂಚೀ ಅತಿಪ್ರೀತಿ । ಸ್ವತಾಂ ನವ್ಹೇ ವಿಷಯನಿವೃತ್ತಿ । ಐಶಿಯಾ ಸಾಧಕಾಂಪ್ರತೀ । ನಿರ್ಣೀತ ಶಾಸ್ತ್ರಾರ್ಥೀ ನೇಮಿಲಾ ನೇಮು ॥೫೦೯॥ ನಾಹೀ ವಿಷಯಾಂಚೀ ಆಸಕ್ತಿ । ನಾ ನವ್ಹೇ ವಿಷಯನಿವೃತ್ತಿ । ಐಶೀ ಜೇ ಕಾ ಸಾಧಕಸ್ಥಿತಿ । ನೇಮೂ ತ್ಯಾಪ್ರತೀ ಶಾಸ್ತ್ರೇ ಕೇಲಾ ॥೫೧೦॥ ಜೋ ಕಾ ಕೇವಳ ವಿಷಯಾಸಕ್ತ । ತೋ ಕದಾ ನ ಮಾನೀ ಶಾಸ್ತ್ರಾರ್ಥ । ಕಾ ಜೋ ಝಾಲಾ ಜೀವನ್ಮುಕ್ತ । ತೋಹೀ ಶಾಸ್ತ್ರಾರ್ಥ ಮಾನೂನಿ ನ ಮಾನೀ ॥೫೧೧॥ ಜೈಸೀ ಮೃಗಜಳಾಚೀ ಭಾಸೇ ಸ್ಥಿತಿ । ತೈಸೇ ವಿಷಯ ಮುಕ್ತಾಪ್ರತೀ । ತ್ಯಾ ವಿಷಯಾಂಚಿಯೇ ನಿವೃತ್ತೀ । ಕೋಣತೇ ಶಾಸ್ತ್ರಾರ್ಥೀ ಮನಾವಾ ನೇಮು ॥೫೧೨॥

ಶರೀರ ಪೋಷಣೆಗಾಗಿ ಎಲ್ಲಿಯೂ ಯಾವುದನ್ನೂ ಅಪೇಕ್ಷೆ ಮಾಡುವುದಿಲ್ಲ. ಪ್ರಾಪ್ತವಾದದ್ದಲ್ಲಿಯೇ ಸುಖಭಾವಿಸಿ ಈತನು ಆತ್ಮಾನಂದದಲ್ಲಿ ತೃಪ್ತನಾಗಿರುವನು ॥೫೦೧॥ ಪ್ರಾರಬ್ಧಾನುಸಾರವಾಗಿ ಸುಖದುಃಖಗಳನ್ನು ಭೋಗಿಸುತ್ತಿರಲು ಸಾಧಕನ ಮನಸ್ಸಿಗೆ ಸಂತೋಷವಾಗುತ್ತಿರುವುದು. ಈ ಅನುಭವವು ಗುರುವಾಕ್ಯದಲ್ಲಿ ವಿಶ್ವಾಸವನ್ನಿಟ್ಟ ಶಿಷ್ಯನಿಗೆ ಮಾತ್ರ ಪ್ರಾಪ್ತವಾಗುವುದು ॥೫೦೨॥ ಈ ವಿಶ್ವಾಸವು ದೃಢವಾಗುವುದಕ್ಕಾಗಿ ಗುರುವಿನಲ್ಲಿ ಆಗತ್ಯಪೂರ್ವಕವಾಗಿ ಪೂರ್ಣವಾದ ನಿಶ್ಚಯದಿಂದ ಜ್ಞಾನದಾಯಕವಾದ ಭಾಗವತ ಶಾಸ್ತ್ರದ ಅಭ್ಯಾಸವನ್ನು ಮಾಡಬೇಕು ॥೫೦೩॥

ಯಾವುದರಲ್ಲಿ ಭಗವಂತನ ಸಗುಣ ಅಥವಾ ನಿರ್ಗುಣ ಸ್ವರೂಪದ ವರ್ಣನೆ ಇರುವ, ಇಲ್ಲವೇ ಭಗವಂತನೇ ಸ್ವತಃ ಹೇಳಿರುವ, ಅಥವಾ ಭಗವಂತನ ಗುಣಾನುವಾದದ ನಿರೂಪಣೆ ಇರುವ ॥೫೦೪॥ ಇವುಗಳನ್ನು ಹೇ ರಾಜನೇ, ನೀನು ಇದನ್ನು "ಭಾಗವತ ಶಾಸ್ತ್ರ" ಎಂದು ತಿಳಿ. ಇದು ಸಾಧಕರಿಗೆ ಜೀವ, ಪ್ರಾಣವಾಗಿರುವುದು. ಅದರಲ್ಲಿಯೂ ಯಾರಿಗೆ ಜ್ಞಾನಕಥನದಮೇಲೆ ವಿಶೇಷವಾಗಿ ಪ್ರೇಮವಿರುವುದೋ, ಅವರಿಗೆ ಇದು ಬಹು ಪ್ರಿಯವಾಗುವುದು ॥೫೦೫॥ ಗುರುಮುಖದಿಂದ ಕೇಳಿದ ಜ್ಞಾನದ ನಿರೂಪಣೆಯು ಇವರಿಗೆ ಅತ್ಯಂತ ಮಧುರವಾಗುವುದು. ಇದರಿಂದ ಇವರಿಗೆ ಭಾಗವತದಲ್ಲಿ ದೃಢವಾದ ವಿಶ್ವಾಸವು ಸ್ಥಿರವಾಗುವುದು. ಇದರ ಶ್ರವಣದಿಂದ ಇವರ ಮನದ ಮನೋರಥವು ಪೂರ್ಣವಾಗಿ ವಿಷಯಗಳ ಇಚ್ಛೆಯು ಇಲ್ಲದಾಗುವುದು ॥೫೦೬॥ ವಿಷಯಗಳ ಆನಂದವು ಮನಸಾ ಆಗದಿದ್ದರೂ, ಸಾಧಕರಿಗೆ ವಿಷಯಗಳು ಬಾಧಕವಾಗುವುವು ಮತ್ತು ಇದರಿಂದ ಇವರಿಗೆ ಅನುತಾಪವು ಉಂಟಾಗುವುದು ॥೫೦೭॥ ಅನಿವಾರ್ಯವಾಗಿರುವ ವಿಷಯಾವಸ್ಥೆಯನ್ನು ತನ್ನ ಸತ್ತೆಯಿಂದ ತ್ಯಾಗಿಸುವುದಾಗುವುದಿಲ್ಲ. ಇದರಿಂದಲೇ ಮುಮುಕ್ಷುಗಳ ಚಿತ್ತಕ್ಕೆ ಅನುತಾಪದ ಅತ್ಯಂತ ವ್ಯಥೆಯಾಗುವುದು ॥೫೦೮॥ ನಿಜವಾಗಿಯೂ ವಿಷಯಗಳಲ್ಲಿ ಅತ್ಯಂತವಾದ ಪ್ರೀತಿಯು ಇರದಿದ್ದರೂ ವಿಷಯಗಳ ತ್ಯಾಗವನ್ನು ಸ್ವತಃ ಮಾಡುವುದಾಗುವುದಿಲ್ಲ. ಇಂತಹ ಸಾಧಕರಿಗಾಗಿ ಶಾಸ್ತ್ರಗಳು ಕೆಲವು ನಿಯಮಗಳನ್ನು ಹಾಕಿಕೊಟ್ಟಿರುವುದು ॥೫೦೯॥ ವಿಷಯಗಳ ಆಸಕ್ತಿಯು ಇಲ್ಲವಾದರೂ ವಿಷಯಗಳ ನಿವೃತ್ತಿಯಾಗದು. ಹೀಗೆ ಕೆಲವು ಸಾಧಕರ ಸ್ಥಿತಿಯಾಗಿರುತ್ತದೆ. ಇವರಿಗಾಗಿಯೇ ಶಾಸ್ತ್ರವು ಕೆಲವು ನಿಯಮಗಳನ್ನು ಸಿದ್ಧಗೊಳಿಸಿದೆ. ॥೫೧೦॥ ಕೇವಲ ವಿಷಯಾಸಕ್ತರಾದವರು ಶಾಸ್ತ್ರಾರ್ಥವನ್ನು ಎಂದೂ ಮನ್ನಿಸಲಾರರು ಮತ್ತು ಜೀವನ್ಮುಕ್ತರಾದವರು ಶಾಸ್ತ್ರಾರ್ಥವನ್ನು ಮನ್ನಿಸಿಯೂ ಮನ್ನಿಸಲಾರರು ॥೫೧೧॥ ಮೃಗಜಲದ ಸ್ಥಿತಿಯಂತೆ ಮುಕ್ತರಿಗೆ ವಿಷಯಗಳು ಭಾಸವಾಗುವುವು. ಅಂದಮೇಲೆ ಮೃಗಜಲವತ್ ವಿಷಯಗಳ ನಿವೃತ್ತಿಗಾಗಿ ಇವರು ಯಾವ ಶಾಸ್ತ್ರದ ನಿಯಮಗಳನ್ನು ಪಾಲಿಸಬೇಕು? ॥೫೧೨॥

ಏವಂ ಅತ್ಯಾಸಕ್ತ ಅತಿವಿರಕ್ತ । ತ್ಯಾಂಸೀ ನೇಮು ನ ಚಲೇ ಯೇಥ । ಮುಮುಕ್ಷೂಂಸೀಚ ಶಾಸ್ತ್ರಾರ್ಥ । ನೇಮೀ ನಿಶ್ಚಿತ ನಿಜನೇಮೋ ।೫೧೩॥ ತೇಥ ಗುರುಶಿಷ್ಯಸಂವಾದ । ಕರಿತಾ ಜ್ಞಾನಾರ್ಥಬೋಧ । ತೇ ಬೋಧೀ ಬಾಧೀ ವಿಷಯ ಬಾಧ । ತತ್ತ್ಯಾಗೀ ಪ್ರಸಿದ್ಧ ಶಾಸ್ತ್ರಾರ್ಥನೇಮು ।೫೧೪॥ ಮನಸಾ - ವಾಚಾ - ಕರ್ಮಾವರೋಧು । ಯೇಣೇ ವಿಷಯಾಂಚಾ ತ್ರಿವಿಧ ಬಾಧು । ತ್ಯಾ ತಿಹೀಂಸಹೀ ತ್ರಿವಿಧು । ಶಾಸ್ತ್ರೀ ಅತಿಶುದ್ಧು ನೇಮಿಲಾ ನೇಮು ।೫೧೫॥

(ಪೂರ್ವಶ್ಲೋಕೋತ್ತರಾರ್ಧಮ್) ''ಮನೋವಾಕ್ಕಮದಂಡಂ ಚ ಸತ್ಯಂ ಶಮದಮಾವಪಿ''

। ಮನಾಸೀ ನೇಮು ಉಪಶಮಾಚಾ । ಇಂದ್ರಿಯಾ ನೇಮು ತೋ ದಮಾಚಾ । ಸತ್ಯೇ ನೇಮಿಲೀ ವಾಚಾ । ತಿಹೀಂಸಹೀ ತಿಹೀಂಚಾ ನಿಜನೇಮು ।೫೧೬॥ ವಿಷಯಕಾಮ ಗಜ ದಾರುಣ । ಅಹಂಮದೇ ಉನ್ಮತ್ತ ಪೂರ್ಣ । ದೇಹಾತಾರುಣ್ಯೇ ಅತಿಘೂರ್ಣ । ತೋಡೀ ಬಂಧನ ವಿಧೀಚೇ ।೫೧೭॥ ಖಂದೀ ಸುಹೃದ ರಾಜಾ ಗುರೂ । ಸೋಂಡಾ ಕವಳೀ ಸ್ವರ್ಗಶಿಖರು । ನರಕನದೀಮಾಜೀ ಅಪಾರು । ಅತಿದುಸ್ತರು ಬುಡ್ಯಾ ದೇತ ।೫೧೮॥ ಧರ್ಮಜಳೇ ಕ್ಷಾಳೇ ಅವಚಿತಾ । ಸವೇಂಚಿ ಸಲೋಭ ಧುಳೀ ಘಾಲೀ ಮಾಥಾ । ಘೋಳಸೀ ಬ್ರಹ್ಮಾದಿಕಾ ಸಮಸ್ತಾ । ಅಹಂಮಮತಾ ಗರ್ಜತು ।೫೧೯॥ ತ್ಯಾಸೀ ವಿವೇಕಮಹಾವತ ಜಾಣ । ಮಾಥಾ ಚಢೋ ಜಾಣೇ ಆಪಣ । ಶಾಸ್ತ್ರವಿಧಿಅಂಕುಶೇ ಪೂರ್ಣ । ಧರಿಲಾ ಆವರೂನ ಕರಕರಿತು ।೫೨೦॥ ತ್ಯಾಸೀ ಉಪಶಮಾಚೇ ಸಂರಕ್ಷಣ । ವೈರಾಗ್ಯಯುಕ್ತ ಠೇವೂನಿ ಜಾಣ । ದಮಾಚೇ ಶೃಂಖಳೀ ಆಕಳೂನ । ಸತ್ಯಾಚೇ ಸ್ತಂಭೀ ಪೂರ್ಣ ವಿವೇಕು ಬಾಂಧೇ ।೫೨೧॥ ಮನಸಾ - ವಾಚಾ - ಕಾಯಿಕ ಕರ್ಮ । ಯೇಣೇ ವಿಷಯಬಾಧಾ ಬಾಧೀ ಪರಮ । ತ್ಯಾ ತಿಹೀಂಸೀ ಕೇಲಾ ತ್ರಿವಿಧ ನೇಮ । ತ್ಯಾ ನೇಮಾಚೇ ಮರ್ಮ ಐಕ ರಾಯಾ ।೫೨೨॥ ಆತಾ ಶಮಾಚೀ ಐಶೀ ಸ್ಥಿತೀ । ಮನಬುದ್ಧ್ಯಾದಿ ಚಿತ್ತವೃತ್ತೀ । ಸಾಂಡವೂನಿ ವಿಷಯಾಸಕ್ತೀ । ಲಾವೀ ಪರಮಾರ್ಥೀ ಪ್ರಬೋಧೂನಿ ।೫೨೩॥ ಪೂರ್ವೇ ಉಗವತಾ ಗಭಸ್ತೀ । ಅಂಧಾರು ಸಾಂಡೀ ತ್ರಿಜಗತೀ । ತೇವೀ ಗುರುವಾಕ್ಯೇ ಶಮಾಚೀ ಪ್ರಾಪ್ತೀ । ವಿಷಯನಿವೃತ್ತಿ ಮಾನಸಿಕ ।೫೨೪॥ ಬಾಹ್ಯ ಇಂದ್ರಿಯಪ್ರವೃತ್ತೀ । ''ದಮೇ'' ದಮೋನಿ ಗುರುವಾಕ್ಯಸ್ಥಿತೀ । ಮಗ ಶಮಾಚೀ ಸಂಗತಿ । ಆಣೀ ನಿವೃತ್ತೀ ಇಂದ್ರಿಯಕರ್ಮೀ ।೫೨೫॥

ತಾತ್ಪರ್ಯವೇನಂದರೆ, ಅತಿಯಾದ ವಿಷಯಾಸಕ್ತರಿಗೆ ಪರಿಪೂರ್ಣವಾದ ವಿರಕ್ತರರಿಗೆ ಶಾಸ್ತ್ರ ನಿಯಮಗಳು ಸರಿಹೋಗಲಾರವು, ಕೇವಲ ಮುಮುಕ್ಷುಗಳವರಿಗೆ ಮಾತ್ರ, ಶಾಸ್ತ್ರಗಳ ನಿಯಮಗಳನ್ನು ನೇಮಿಸಲ್ಪಟ್ಟಿರುವುವು ।೫೧೩॥ ಗುರುಶಿಷ್ಯರ ಸಂವಾದವು ನಡೆಯಿತೆಂದರೆ, ಜ್ಞಾನಾರ್ಥದ ಬೋಧವಾಗುವುದು. ಆದರೆ ಈ ಬೋಧದಲ್ಲಿ ವಿಷಯಬಾಧೆಯು ಅಡ್ಡಾಗುವುದು. ಹೀಗಾಗಬಾರದೆಂದೇ ಶಾಸ್ತ್ರದ ನಿಯಮಗಳು ಪ್ರಸಿದ್ಧವಾಗಿರುವುವು ।೫೧೪॥ ಮಾನಸಿಕ ,ವಾಚಿಕ ಮತ್ತು ಕಾಯಿಕ ಕರ್ಮಾನುರೋಧದಿಂದ ವಿಷಯಬಾಧೆಯು ಮೂರು ಪ್ರಕಾರವಾಗಿರುವುದು. ಈ ಮೂರೂ ಪ್ರಕಾರಗಳಿಗೆ ಮೂರು ಪ್ರಕಾರದ ನಿಯಮಗಳನ್ನು ಶಾಸ್ತ್ರವು ಸಿದ್ಧಗೊಳಿಸಿರುವುದು ।೫೧೫॥

ಮನಸ್ಸಿಗೆ ''ಶಮ'' ಅಂದರೆ ಶಾಂತಿಯ ನೇಮವು. ಇಂದ್ರಿಯಗಳಿಗೆ ''ದಮ'' ಎಂದರೆ ನಿಗ್ರಹದ ನೇಮವು ಮತ್ತು ವಾಣಿಗೆ ''ಸತ್ಯ''ದ ನೇಮವು. ಹೀಗೆ ಮೂರಕ್ಕೆ ಮೂರು ನೇಮಗಳನ್ನು ಮಾಡಲಾಗಿದೆ ।೫೧೬॥ ವಿಷಯ ಕಾಮರೂಪ ಆನೆಯು ನಾನೆಂಬ ಮದದಿಂದ ಅತಿಶಯವಾಗಿ ಉನ್ಮತ್ತಗೊಂಡು ತಾರುಣ್ಯದ ಸೊಕ್ಕೇರಿ ವಿಧಿನಿಯಮಗಳ ಬಂಧನಗಳನ್ನು ಮುರಿದೊಗೆಯುವುದು ।೫೧೭॥ ಸುಹೃದನಾಗಿರಲಿ, ರಾಜನಾಗಿರಲಿ, ಗುರುವಾಗಿರಲಿ, ಎಲ್ಲರನ್ನೂ ಅಪಮಾನಗೊಳಿಸುವುದು. ತನ್ನ ಸೊಂಡಿಲದಿಂದ ಸ್ವರ್ಗದ ಶಿಖರಕ್ಕೆ ಸುತ್ತುಗಟ್ಟುವುದು. ಮತ್ತು ಅಪರಂಪಾರವಾಗಿ ತುಂಬಿದ ನರಕದ ನದಿಯಲ್ಲಿ ಅತಿ ದುಸ್ತರವಾದ ಜಿಗಿತ ಹಾಕುವುದು ।೫೧೮॥ ಅಕಸ್ಮಾತ್ತಾಗಿ ಧರ್ಮರೂಪ ಜಲದಿಂದ ಅದರ ಮೈಯನ್ನು ತೊಳೆದರೆ, ಕೂಡಲೇ ಲೋಭವೆಂಬ ಧೂಳನ್ನು ತಲೆಯಮೇಲೆ ಎರಚಿಕೊಳ್ಳುವುದು. ಬ್ರಹ್ಮಾದಿಕರನ್ನು ಮೊದಲು ಮಾಡಿ ಎಲ್ಲರನ್ನೂ ತನ್ನ ಕಾಲಿನಲ್ಲಿ ತುಳಿದು, ಅಹಂಮಮತೆಯ ಗರ್ಜನೆ ಮಾಡುವುದು ।೫೧೯॥ ಅದಕ್ಕೆ ವಿವೇಕ ಎಂಬ ಮಾವುತನು ಮಾತ್ರ ಅದರ ತಲೆಯ ಮೇಲೆ ಏರಬಲ್ಲನು ಮತ್ತು ಶಾಸ್ತ್ರವಿಧಿ ಎಂಬ ಅಂಕುಶದಿಂದ ಅದನ್ನು ಬಿಗಿಯಾಗಿ ಆವರಿಸಿ ಹಿಡಿಯುವನು ।೫೨೦॥ ಅದಕ್ಕೆ ವೈರಾಗ್ಯಯುಕ್ತ ''ಉಪಶಮ'' ಯ ಕಾವಲು ಇಟ್ಟು ''ದಮ'' ಎಂಬ ಸರಪಳಿಯಿಂದ ವಿವೇಕರೂಪ ಮಾವುತನು ಅದಕ್ಕೆ ಸತ್ಯ ಎಂಬ ಖಂಬಕ್ಕೆ ಬಿಗಿಯಾಗಿ ಕಟ್ಟುವನು ।೫೨೧॥ ಮಾನಸಿಕ, ವಾಚಿಕ ಮತ್ತು ಕಾಯಿಕ ಹೀಗೆ ಮೂರು ಪ್ರಕಾರದ ಕರ್ಮಗಳಿಂದ ವಿಷಯಗಳ ಅತ್ಯಂತ ಬಾಧೆಯಾಗುವುದು. ಈ ಮೂರಕ್ಕೆ ಮೂರು ಪ್ರಕಾರದ ನಿಯಮಗಳನ್ನು ಮಾಡಲಾಗಿರುವುದು. ಹೇ ರಾಜನೇ, ಆ ನಿಯಮಗಳ ಮರ್ಮವನ್ನು ಕೇಳು ।೫೨೨॥ ''ಶಮೆ'' ಯ ಸ್ಥಿತಿಯು ಹೇಗಿದೆ ಎಂದರೆ, ಅದು ವಿಷಯಗಳ ಮೇಲಿನ ಆಸಕ್ತಿಯನ್ನು ತೆಗೆದು ಮನಬುದ್ಧ್ಯಾದಿ ಚಿತ್ತವೃತ್ತಿಯನ್ನು ಜಗ್ಗಿ ಅವುಗಳಿಗೆ ಪರಮಾರ್ಥದತ್ತ ಹಚ್ಚುವುದು ।೫೨೩॥ ಪೂರ್ವ ದಿಶೆಯಲ್ಲಿ ಸೂರ್ಯೋದಯವಾದರೆ ಕತ್ತಲೆಯು ಮೂರು ಲೋಕಗಳನ್ನು ಬಿಟ್ಟು ಹೋಗುವುದು. ಅದರಂತೆ ಗುರೂಪದೇಶದಿಂದ ಶಮೆಯು ಪ್ರಾಪ್ತವಾದರೆ, ಮನದಲ್ಲಿನ ವಿಷಯಗಳ ನಿವೃತ್ತಿಯು ತನ್ನಿಂದ ತಾನೇ ಆಗುವುದು ।೫೨೪॥ ಬಾಹ್ಯ ಇಂದ್ರಿಯಗಳ ಪ್ರವೃತ್ತಿಯು ಗುರೂಪದೇಶಾನುಸಾರವಾಗಿ ''ದಮೆ'' ಯು ಹತ್ತಿಕ್ಕಿತೆಂದರೆ, ಆಗ ಶಮೆಯ ಸಂಗತಿಯಿಂದ ಇಂದ್ರಿಯಗಳ ಕರ್ಮದ ನಿವೃತ್ತಿಯಾಗುವುದು ।೫೨೫॥

ಕನ್ಯಾ ಪ್ರತಿಪಾಳೂನಿ ಜೈಸೀ । ದಾನ ದೇತಾ ಜಾಂವಯಾಸೀ । ತ್ಯಾಗೀ ಬಾಪಾಚೇ ಕುಳಗೋತ್ರಾಸೀ । ದಮೇ ಇಂದ್ರಿಯೇ ತೈಶೀ ವಿಷಯಾರ್ಥಾ ।।೩೨೬।। ಝಣೀ ವಾಚಾ ಜಾಈಲ ವಿಕಳ । ತಿಸೀ ಸತ್ಯಾಚಾ ಮಹಾಮೋಕಳ । ದೇಊನಿ ಕೇಲೀ ನಿಖಳ । ಅತಿಅಢಳ ಸತ್ಯಧೂತ ವಾಣೀ ।।೩೨೭।। ಸತ್ಯವಾದಿಯಾ ಬ್ರಹ್ಮಾದಿ ವಂದಿತೀ । ಅಸತ್ಯಾ ಹೋಯ ಅಧೋಗತೀ । ಐಸೇ ವ್ಯಾಖ್ಯಾನ ಜೇ ಕರಿತೀ । ತೇಹೀ ವದತೀ ಅಸತ್ಯ ।।೩೨೮।। ಕಾ ರಾಮನಾಮಾಚ್ಯಾ ಆವೃತ್ತೀ । ವಾಚಾ ಧೂತಲೀ ಸ್ಮರಣೋಕ್ತೀ । ತೇ ಅಸತ್ಯಾಮಾಜೀ ಪುಢತೀ । ಕದಾ ಕಲ್ಪಾಂತೀ ಬುಡೇನಾ ।।೩೨೯।। ಮಂಥೂನಿ ಕಾಢಿಲೇ ನವನೀತ । ತೇ ಪುಢತೀ ನ ಬುಡೇ ತಾಕಾಂತ । ತೇವೀ ನಾಮೇ ವಾಚಾ ನಿರ್ಧೂತ । ಅಸತ್ಯ ತೇಥ ಸ್ಪರ್ಶೇನಾ ।।೩೩೦।। ಜೇವೀ ಲಾಗಲೇನಿ ರವಿಕರೇ । ಘೃತಕಣಿಕಾ ಸ್ವಯೇ ವಿರೇ । ತೇವೀ ಸತ್ಯಾಚೇನಿ ನಿಜನಿರ್ಧಾರೇ । ಅಸತ್ಯ ಚಮತ್ಕಾರೇ ಸಮೂಳ ಉಡೇ ।।೩೩೧।। ಚಂದನಾಚಿಯಾ ಚೌಫೇರೀ । ಕಾಷ್ಠತ್ವಾ ಮುಕ್ತೀ ಖೈರ ಬೋರೀ । ತೇವೀ ನಾಮಾಚ್ಯಾ ನಿಜಗಜರೀ । ವಾಚೇಮಾಝಾರೀ ನಿಜಸತ್ಯ ಪ್ರಗಟೇ ।।೩೩೨।। ಝಾಲೇನಿ ಅರ್ಕಪ್ರಕಾಶೇ । ಖದ್ಯೋತ ಹರಪತೀ ಜೈಸೇ । ತೇವೀ ರಾಮನಾಮಸೌರಸೇ । ಲೋಪೇ ಅನಾಸಾಯಾಸೇ ಅಸತ್ಯ ।।೩೩೩।। ಅಂವಸೇಸೀ ಪ್ರತಿಪದೇ ಕುಹು । ಗೇಲಿಯಾ ಬಿಂಬ ಸಾಂಡೀ ರಾಹು । ತೇವ್ಹಾ ಪ್ರಕಾಶಾಚಾ ಸಮೂಹು । ಪ್ರಗಟೇ ಬಹು ಜಗಾಮಾಜೀ ।।೩೩೪।। ತೇವೀ ಅಸತ್ಯಾಚೇನಿ ಆಕ್ರಮೇ । ವಾಚಾ ಪ್ರಕಾಶೇ ಸತ್ಯ ಸಂಭ್ರಮೇ । ಜೇವೀ ರಾಜಾಜ್ಞಾ ಅನುಕ್ರಮೇ । ಪ್ರಜಾ ಸ್ವಧರ್ಮೆ ವರ್ತತೀ ।।೩೩೫।। ಸತ್ಯಾ ಪರತೇ ನಾಹೀ ತಪ । ಸತ್ಯಪರತಾ ನಾಹೀ ಜಪ । ಸತ್ಯೇ ಪಾವಿಜೇ ಸದ್ರೂಪ । ಸತ್ಯೇ ನಿಷ್ಪಾಪ ಸಾಧಕ ಹೋತೀ ।।೩೩೬।। ಏವಂ ಕಾಯಾ ವಾಚಾ ಆಣಿ ಮನೇ । ಶಮದಮಾದಿಸತ್ಯಲಕ್ಷಣೇ । ಜೋ ನೇಮಿಲಾ ತ್ರಿವಿಧವಿಂದಾನೇ । ತ್ಯಾಚೇ ವಿಷಯಾಚೇ ಧರಣೇ ತತ್ಕಾಳ ಉರೀ ।।೩೩೭।। ಐಸಿಯಾ ಸ್ವಾರ್ಥಾಲಾಗೀ ಜೇವೀ । ಭಗವಚ್ಛಾಸ್ತ್ರೀ ಆವಡೀ ಕರಾವೀ । ಪರೀ ಆಣಿಕಾ ಶಾಸ್ತ್ರಾ ನ ಲಾವೀ । ದ್ವೇಷಭಾವೀ ನಿಂದೇಚೇ ಬೋಟ ।।೩೩೮।। ಏಕಾ ಸ್ತುತೀ ಏಕಾ ನಿಂದಾ । ಕರಿತಾ ಆದಳೇ ಅಂಗೀ ಬಾಧಾ । ಯಾಲಾಗೀ ನಿಂದಾನುವಾದಾ । ಸಾಧಕ ಕದಾ ನಾತಳತೀ ।।೩೩೯।। ಅರ್ಧಾಂಗೀಚೇ ಲಕ್ಷ್ಮೀ ವಂದಾವೀ । ಮಾ ಚರಣೀಂಚೀ ಗಂಗಾ ಕಾಯ ನಿಂದಾವೀ । ನಿಜಜನನೀ ನಮಸ್ಕಾರಾವೀ । ಕಾಯ ಯೇರಾ ದ್ಯಾವೀ ಪಾಂಪರ ।।೩೪೦।।

ತನ್ನ ಮಗಳನ್ನು ಜೋಪಾನಮಾಡಿ ಆಕೆಯನ್ನು ಅಳಿಯನಿಗೆ ದಾನವಾಗಿ ಕೊಡಲು ಆಗ ಅವಳು ತಂದೆಯ ಕುಲಗೋತ್ರಗಳನ್ನು ಬಿಟ್ಟುಬಿಡುವಳು. ಅದರಂತೆ ದಮೆಯ ಸಹಾಯದಿಂದ ಇಂದ್ರಿಯಗಳು ವಿಷಯಗಳನ್ನು ಬಿಟ್ಟು ಬಿಡುವುವು ।।೩೨೬।। ವಾಣಿಯು ಕದಾಚಿತ್ ಅಪದ್ಧ ನುಡಿಯಬಹುದೆಂದು ತಿಳಿದು ಅದಕ್ಕೆ ''ಸತ್ಯ''ದ ಬೇಡಿಯನ್ನು ಹಾಕಿ ಅತ್ಯಂತ ಶುದ್ಧವಾಗಿ, ಸ್ಥಿರವಾಗಿ ಇಡುವರು ।।೩೨೭।। ''ಸತ್ಯವನ್ನು ನುಡಿಯುವವರಿಗೆ ಬ್ರಹ್ಮದೇವನೂ ಸಹ ವಂದಿಸುವನು, ಅಸತ್ಯವನ್ನು ನುಡಿಯುವವರಿಗೆ ಅಧೋಗತಿಯಾಗುವುದು'' ಹೀಗೆ ಪ್ರತಿಪಾದನೆಯನ್ನು ಮಾಡುವವರೇ ಅಸತ್ಯವನ್ನು ನುಡಿಯುವರು ।।೩೨೮।। ಆದರೆ ರಾಮನಾಮದ ಸತತ ಉಚ್ಚಾರದಿಂದ ಮತ್ತು ಸ್ಮರಣೆಯಿಂದ ಪವಿತ್ರವಾಗಿರುವ ವಾಣಿಯು ಎಂದಿಗೂ ಕಲ್ಪಾಂತಕ್ಕೂ ಅಸತ್ಯದಲ್ಲಿ ಮುಳುಗಲಾರದು ।।೩೨೯।। ಕಡೆದು ತೆಗೆದ ಬೆಣ್ಣೆಯನ್ನು ಪುನಃ ಮಜ್ಜಿಗೆಯಲ್ಲಿ ಒಗೆದರೆ ಅದು ಮುಳುಗುವುದಿಲ್ಲ. ಅದರಂತೆ ನಾಮೋಚ್ಚಾರದಿಂದ ವಾಣಿಯು ಪವಿತ್ರವಾಯಿತೆಂದರೆ, ಅದಕ್ಕೆ ಅಸತ್ಯವು ಎಂದೂ ಮುಟ್ಟುವುದಿಲ್ಲ ।।೩೩೦।। ಸೂರ್ಯನ ಕಿರಣಗಳು ತಗಲಲು ತುಪ್ಪದ ಕಣಗಳು ತನ್ನಿಂದ ತಾನೇ ಕರಗುವುವು. ಅದರಂತೆ ಸತ್ಯದ ನಿಶ್ಚಯದಲ್ಲಿ ಅಸತ್ಯವು ಚಮತ್ಕಾರದಿಂದ ಸಂಪೂರ್ಣವಾಗಿ ಇಲ್ಲದಾಗುವುದು ।।೩೩೧।। ಚಂದನ ವೃಕ್ಷದ ಸುತ್ತಮುತ್ತಲಿರುವ ಬಾರಿಯ ವೃಕ್ಷಗಳು ತಮ್ಮ ಸಾಮಾನ್ಯ ಕಾಷ್ಠತ್ವದಿಂದ ಬಿಡುಗಡೆಯಾಗಿ ಚಂದನರೂಪವಾಗುವುವು. ಅದರಂತೆ ನಾಮದ ಗರ್ಜನೆಯಿಂದ ವಾಣಿಯಲ್ಲಿ ನಿಜಸತ್ಯೆಯು ಪ್ರಕಟವಾಗುವುದು ।।೩೩೨।। ಸೂರ್ಯನ ಪ್ರಕಾಶವು ಬೆಳಗಿದಾಕ್ಷಣವೇ ಮಿಂಚಿನ ಹುಳಗಳ ಬೆಳಕು ಲೋಪವಾಗುವುದು. ಅದರಂತೆ ರಾಮನಾಮದ ಪ್ರಭಾವದಿಂದ ಅಸತ್ಯವು ತನಷ್ಟಕ್ಕೆ ತಾನೇ ಲೋಪವಾಗುವುದು ।।೩೩೩।। ಅಮವಾಸ್ಯೆ ನಂತರ ಚಂದ್ರಕಲೆಯು ಇಲ್ಲದ ಕಾಲವು ಹೋದಾಗ್ಗ, ರಾಹು ಸೂರ್ಯನ ಬಿಂಬವನ್ನು ಬಿಡುವನು. ಆಗ ಪ್ರಕಾಶದ ಸಮೂಹವು ಜಗತ್ತಿನಲ್ಲಿ ಪ್ರಕಟವಾಗುವುದು ।।೩೩೪।। ಅದರಂತೆ ಅಸತ್ಯದ ಪರಾಭವ ಮಾಡಲು ವಾಣಿಯು ಸತ್ಯ ಸಂಭ್ರಮದಿಂದ ಪ್ರಕಟವಾಗುವುದು. ರಾಜನ ಆಜ್ಞಾನುಸಾರವಾಗಿ ಪ್ರಜೆಗಳು ತಮ್ಮ ತಮ್ಮ ಧರ್ಮದಿಂದ ನಡೆಯುವಂತೆ ಇದಾಗಿರುವುದು ।।೩೩೫।। ಸತ್ಯಕ್ಕಿಂತಲೂ ಬೇರೆ ತಪವಿಲ್ಲ, ಸತ್ಯಕ್ಕಿಂತಲೂ ಅನ್ಯಜಪವಿಲ್ಲ, ಕಾರಣ, ಸತ್ಯದಿಂದ ಸದ್ರೂಪದ ಪ್ರಾಪ್ತಿಯಾಗುವುದು. ಮತ್ತು ಸತ್ಯದಿಂದಲೇ ಸಾಧಕರು ನಿಷ್ಪಾಪರಾಗುವರು ।।೩೩೬।। ಈ ಪ್ರಕಾರವಾಗಿ ಕಾಯಾವಾಚಾಮನದಿಂದ ಶಮ, ದಮ ಮತ್ತು ಸತ್ಯ ಈ ಲಕ್ಷಣಾತ್ಮಕವಾಗಿ ಮೂರು ಪ್ರಕಾರಗಳಿಂದ ಯಾರು ತಮ್ಮ ನಿಯಮಾತ್ಮಕವಾಗಿ ನಡೆಯುವರೋ, ಅವರ ಮನದಲ್ಲಿನ ವಿಷಯಗಳು ತತ್ಕಾಲದಲ್ಲಿ ಇಲ್ಲದಾಗುವುವು ।।೩೩೭।। ಈ ಪ್ರಕಾರದ ಸ್ವಾರ್ಥವನ್ನು ಸಾಧಿಸಲು ಭಗವತ್‌ಶಾಸ್ತ್ರದ ಪ್ರೀತಿ ಹಿಡಿಯಬೇಕು . ಆದರೆ ಬೇರೆ ಶಾಸ್ತ್ರಗಳಿಗೆ ದ್ವೇಷಭಾವದಿಂದ ನಿಂದೆಯ ಬೆರಳು ಸಹ ಹಚ್ಚಬಾರದು ।।೩೩೮।। ಕಾರಣ, ಒಬ್ಬರನ್ನು ಸ್ತುತಿಸುವುದು, ಇನ್ನೊಬ್ಬರನ್ನು ನಿಂದಿಸುವುದು ಇದರಿಂದ ಅಂಗಕ್ಕೆ ದೋಷ ಒದಗುವುದು. ಆದ್ದರಿಂದ ಸಾಧಕರು ನಿಂದೆಯ ಮಾರ್ಗಕ್ಕೆ ಹೋಗುವುದಿಲ್ಲ ।।೩೩೯।। ಅರ್ಧಾಂಗಿಯಾದ ಲಕ್ಷ್ಮಿಯನ್ನು ಮಾತ್ರ ವಂದಿಸುವುದು ಮತ್ತು ಚರಣದಿಂದ ಹುಟ್ಟಿದ ಗಂಗೆಯನ್ನು ನಿಂದಿಸಬೇಕೆ? ತನ್ನ ತಾಯಿಯನ್ನು ಮಾತ್ರ ನಮಸ್ಕರಿಸುವುದು. ಇತರ ಸ್ತ್ರೀಯರನ್ನು ಒದೆಯಬೇಕೆ? ।।೩೪೦।।

ತರೀ ಭಜ್ಯ ಭಜಾವೇ ಭಜನೀ । ಪರೀ ನಿಂದಾ ಸ್ತುತಿ ಸಾಂಡೂನಿ ದೋನೀ । ಜೋ ನಿಜಸತ್ಯೇ ಹೋಯ ಮೌನೀ । ತ್ಯೈ ಬ್ರಹ್ಮಜ್ಞಾನೀ ಅಧಿಕಾರೂ ॥೩೪೧॥ ಐಶೀ ನ ಕರಿತಾ ವ್ಯುತ್ಪತ್ತಿ । ನ ಸೋಶಿತಾ ಹೇ ಕಷ್ಟಸ್ಥಿತಿ । ಭಾವೇ ಕರಿತಾ ಭಗವದ್ಭಕ್ತಿ । ಫುಕಾಚೀ ಮುಕ್ತಿ ಹರಿಭಕ್ತಾ ॥೩೪೨॥ ತೇ ಭಕ್ತೀಚೀ ನಿಜಸ್ಥಿತಿ । ರಾಯಾ ಸಾಂಗೇನ ತುಜಪ್ರತೀ । ಸುಗಮತ್ವೇ ಪರಮಾತ್ಮಪ್ರಾಪ್ತಿ । ಹರಿಭಕ್ತ ಪಾವತೀ ತೇ ಐಕ ॥೩೪೩॥

ಶ್ರವಣಂ ಕೀರ್ತನಂ ಧ್ಯಾನಂ ಹರೇರದ್ಭುತಕರ್ಮಣಃ । ಜನ್ಮಕರ್ಮಗುಣಾನಾಂ ಚ ತದರ್ಥೇಽಖಿಲಚೇಷ್ಟಿತಮ್ ॥೨೭॥

ಅರ್ಥ:- ರಾಜನೇ , ಭಗವಂತನ ಲೀಲೆಗಳು ಅದ್ಭುತವಾಗಿವೆ. ಆತನ ಜನ್ಮ , ಕರ್ಮ ಮತ್ತು ಗುಣಗಳು ದಿವ್ಯವಾಗಿರುವುವು. ಅವುಗಳ ಶ್ರವಣ , ಕೀರ್ತನೆ , ಧ್ಯಾನ ಮಾಡಬೇಕು. ಯಾವತ್ತೂ ಕರ್ಮಗಳನ್ನು ಭಗವಂತನಿಗಾಗಿಯೇ ಮಾಡಬೇಕು.

ಮುಖ್ಯ ಭಕ್ತೀಚೇ ಕಾರಣ । ಹರೀಚೇ ಜನ್ಮ-ಕರ್ಮ-ಗುಣ । ಪೂರ್ಣ ಶ್ರದ್ಧಾ ಕರಾವೇ ಶ್ರವಣ । ಹರಿಕೀರ್ತನ ಸ್ವಾನಂದೇ ॥೩೪೪॥ ಹರಿಕೀರ್ತನಾಚಿಯಾ ಜೋಡೀ । ಸಕಳ ಸಾಧನೇ ಕೇಲೀ ಬಾಪುಡೀ । ಅದ್ಭುತ ಕರ್ಮೇ ಹರೀಚೀ ಗಾಢೀ । ಗಾತಾ ಅತಿಆವಡೀ ಉಲ್ಹಾಸೇ ॥೩೪೫॥ ಶಿಳಾ ತಾರಿಲ್ಯಾ ಸಾಗರೀ । ಗೋವರ್ಧನ ಧರಿಲಾ ಕರೀ । ನಿದ್ರಾನ ಮೋಡಿತಾ ಸಕಳ ನಗರೀ । ದ್ವಾರಕೇಮಾಝಾರೀ ಆಣೇಲೀ ಮಥುರಾ ॥೩೪೬॥ ನಿಮಾಲಾ ಗುರುಪುತ್ರ ದೇ ಆಣೂನಿ । ಮುಖೇ ಪ್ರಾಶಿಲಾ ದಾವಾಗ್ನಿ । ಗತ ಗರ್ಭ ಆಲಾ ಫೇಊನಿ । ನಿಜಜನನೀತೋಷಾರ್ಥ ॥೩೪೭॥ ಅಜನ್ಮ್ಯಾ ಜನ್ಮೇ ನೇಣೋ ಕಿತೀ । ಅಕರ್ಮ್ಯಾಚಿ ಕರ್ಮೇ ಗಾತೀ । ಅಗುಣಾಚೇ ಗುಣ ವರ್ಣಿತೀ । ತೇಣೇ ಶ್ರೀಪತಿ ಸುಖಾವೇ ॥೩೪೮॥ ಜೋ ಸುಖೈಕಮೂರ್ತಿ ನಿಜಸ್ವಭಾವೇ । ತೋಹೀ ಜನ್ಮ - ಕರ್ಮ - ಗುಣವೈಭವೇ । ಗಾತಾ ಕೀರ್ತನೀ ಅತಿಸುಖಾವೇ । ಸ್ವಾನಂದಗೌರವೇ ಡುಲ್ಲತು ॥೩೪೯॥ ಐಶೀ ಕೀರ್ತನೀ ಗಾತಾ ಕೀರ್ತಿ । ನಿರ್ಮಳ ಹೋಯ ಚಿತ್ತವೃತ್ತಿ । ತೇಥೇ ಠಸಾವೇ ಧ್ಯಾನಸ್ಥಿತಿ । ಐಕ ತೇ ನೃಪತೀ ಸಾಂಗೇನ ॥೩೫೦॥ ಮುಕುಟ ಕುಂಡಲೇ ಮೇಖಳಾ । ಕಾಂಸೇ ಕಸಿಲಾ ಸೋನಸಳಾ । ಆಪಾದ ರುಳೇ ವನಮಾಳಾ । ಘನಸಾಂವಳಾ ಘವಘವಿತ ॥೩೫೧॥ ಐಶೀ ಮೂರ್ತೀ ಸುರೇಖ ಸಗುಣ । ಕಾ ನಿರಸೂನ ರೂಪ ನಾಮ ಗುಣ । ಧ್ಯಾನೀ ಠಸಾವೇ ನಿಜನಿರ್ಗುಣ । ಬ್ರಹ್ಮ ಪರಿಪೂರ್ಣ ಪೂರ್ಣತ್ವೇ ॥೩೫೨॥ ಐಸೇ ಠಸಾವತಾ ಧ್ಯಾನ । ಭಕ್ತಾಂಚೀ ಸಬಾಹ್ಯ ಕ್ರಿಯಾ ಪೂರ್ಣ । ತೇ ತೇ ಹೋಯ ಕೃಷ್ಣಾರ್ಪಣ । ಸ್ತ್ರೀ ಪುತ್ರಾದಿ ಜಾಣ ಸರ್ವಸ್ವೇ ॥೩೫೩॥

ಸ್ತುತಿನಿಂದೆಗಳನ್ನು ಬಿಟ್ಟು ತಮ್ಮ ಉಪಾಸ್ಯ ದೇವತೆಯ ಭಜನೆಯನ್ನು ಪ್ರೇಮದಿಂದ ಮಾಡಬೇಕು. ನಿಜಸತ್ಯಯನ್ನು ಧರಿಸಿ ಮೌನರಾದವರೇ ಬ್ರಹ್ಮಜ್ಞಾನದ ಅಧಿಕಾರಿಯಾಗುವರು ॥೩೪೧॥ ಶಾಸ್ತ್ರಗಳ ಉತ್ಪತ್ತಿಯ ಸಾಹಸ ಮಾಡದೇ, ಯೋಗ ಸಾಧನೆಗಳ ಕಷ್ಟಸೋಸದೇ ಏಕನಿಷ್ಠೆಯಿಂದ ಭಗವದ್ಭಕ್ತಿಯನ್ನು ಮಾಡಿದರೆ ಅನಾಯಾಸವಾಗಿ ಮುಕ್ತಿಯು ದೊರೆಯುವುದು ॥೩೪೨॥ ಹೇ ರಾಜನೇ, ಈ ಭಕ್ತಿಯ ನಿಜಸ್ವರೂಪವು ಹೇಗಿರುವುದು? ಮತ್ತು ಹರಿಭಕ್ತನು ಸುಲಭವಾಗಿ ಪರಮಪ್ರಾಪ್ತಿಯನ್ನು ಹೇಗೆ ಪಡೆಯುವನು? ಇದನ್ನು ಹೇಳುವೆ, ಕೇಳು ॥೩೪೩॥

ಹರಿಯ ಜನ್ಮ, ಕರ್ಮ, ಮತ್ತು ಗುಣ ಇವು ಭಕ್ತಿಯ ಮುಖ್ಯ ಕಾರಣವಾಗಿವೆ. ಮತ್ತು ಈತನ ಜನ್ಮಾದಿಗಳ ಶ್ರವಣವನ್ನು ಪೂರ್ಣ ಶ್ರದ್ಧೆಯಿಂದ ಮಾಡಬೇಕು. ಹರಿಕೀರ್ತನೆಯನ್ನು ಸ್ವಾನಂದದಿಂದ ಮಾಡಬೇಕು ॥೩೪೪॥ ಇತರ ಎಲ್ಲ ಸಾಧನೆಗಳು ಹರಿಕೀರ್ತನೆಕ್ಕಿಂತಲೂ ಅತಿ ಕಡಿಮೆ ಪ್ರತೀತಿ ಎಂದು ನಿಶ್ಚಯಿಸಲ್ಪಟ್ಟಿವೆ. ಹರಿಯ ಲೀಲೆಗಳು ಅತ್ಯಂತ ಮಹತ್ತರವಾಗಿವೆ, ಅದ್ಭುತವಾಗಿವೆ. ಇವುಗಳನ್ನು ಹಾಡಿ ಹೊಗಳಿದರೆ, ಮನಸ್ಸಿಗೆ ಬಹಳ ಸಂತೋಷವಾಗುವುದು ॥೩೪೫॥ ಹರಿಯು ಸಮುದ್ರದಲ್ಲಿ ಕಲ್ಲುಗಳನ್ನು ತೇಲಿಸಿದನು, ಕೈಯಿಂದ ಗೋವರ್ಧನ ಪರ್ವತವನ್ನು ಎತ್ತಿ ಹಿಡಿದನು. ನಾಗರಿಕರನ್ನು ನಿದ್ದೆಗೆಡಿಸದೇ ಮಥುರಾ ನಿವಾಸಿಗಳೆಲ್ಲರನ್ನೂ ದ್ವಾರಕೆಗೆ ತಂದನು ॥೩೪೬॥ ಸತ್ತ ಗುರುಪುತ್ರನನ್ನು ತಂದು ಕೊಟ್ಟನು. ಮುಖದಿಂದ ದಾವಾಗ್ನಿಯನ್ನು ನುಂಗಿಬಿಟ್ಟನು. ತನ್ನ ತಾಯಿಯನ್ನು ಸಂತೋಷಪಡಿಸಲು ಕಂಸನು ಕೊಂದಿದ್ದ ಆಕೆಯ ಮಕ್ಕಳನ್ನು ತಂದು ಕೊಟ್ಟನು ॥೩೪೭॥ ಅಜನ್ಮನಾಗಿದ್ದರೂ ಅಸಂಖ್ಯ ಜನ್ಮಗಳನ್ನು ಧರಿಸುವವನು, ಅಕರ್ಮನಾಗಿದ್ದರೂ ಅದ್ಭುತವಾದ ಕರ್ಮಗಳನ್ನು ಮಾಡುವವನು, ಮತ್ತು ಅಗುಣನಾಗಿದ್ದರೂ ಗುಣಗಳಲ್ಲಿ ಆಚರಿಸುವವನು. ಹೀಗಿರುವ ಶ್ರೀಪತಿಯ ಗುಣಗಳನ್ನು ವರ್ಣಿಸುವುದರಿಂದ ಆತನಿಗೆ ಬಹು ಸಂತೋಷವಾಗುವುದು ॥೩೪೮॥ ಈತನು ಮೂಲತಃ ಆನಂದಘನನು. ಆದರೂ ಆತನ ಜನ್ಮಕರ್ಮಗುಣ ಲೀಲೆಗಳನ್ನು ಕೀರ್ತನದಲ್ಲಿ ಹಾಡಿಹೊಗಳಿದರೆ ಪ್ರಸನ್ನನಾಗಿ ಸ್ವಾನಂದದಿಂದ ಲೋಲಾಡುವನು ॥೩೪೯॥ ಈ ಪ್ರಕಾರವಾಗಿ ಕೀರ್ತನದಲ್ಲಿ ಹರಿಯ ಕೀರ್ತಿಯನ್ನು ಗುಣಗಾನ ಮಾಡಿದರೆ, ಚಿತ್ತವೃತ್ತಿಯು ನಿರ್ಮಲವಾಗುವುದು. ಮತ್ತು ಈ ಚಿತ್ತವೃತ್ತಿಯಲ್ಲಿ ಧ್ಯಾನದ ಮೂರ್ತಿಯು ಮೂಡುವುದು. ಹೇ ರಾಜನೆ, ಈ ಧ್ಯಾನದ ಸ್ಥಿತಿಯನ್ನು ಹೇಳುವೆ, ಕೇಳು ॥೩೫೦॥ ಮಸ್ತಕದ ಮೇಲೆ ಕಿರೀಟವು, ಕಿವಿಗಳಲ್ಲಿ ಕುಂಡಲಗಳು, ನಡುವಿನಲ್ಲಿ ನಡುಪಟ್ಟಿಯು, ಭರ್ಜರಿ ಪೀತಾಂಬರವನ್ನು ತೊಟ್ಟಿರುವ, ಮತ್ತು ಕೊರಳಲ್ಲಿ ಲೋಲಾಡುತ್ತಿರುವ ವೈಜಯಂತಿ ಮಾಲೆ, ಹೀಗಿರುವ ಮೇಘಶ್ಯಾಮನು ಪ್ರಕಾಶಿಸುತ್ತಿರುವನು ॥೩೫೧॥ ಇಂತಹ ಸುಂದರವಾದ ಸಗುಣ ಮೂರ್ತಿಯು ಮನಸ್ಸಿನ ನೇತ್ರದ ಮುಂದೆ ನಿಂತಿರುವುದು. ಅಥವಾ ನಾಮರೂಪಗುಣಗಳನ್ನು ನಿರಸನೆಯನ್ನು ಮಾಡಿ ನಿರ್ಗುಣ ಸ್ವರೂಪ ಎಂದರೆ, ಪರಿಪೂರ್ಣ ಬ್ರಹ್ಮ ಶುದ್ಧ ಚೈತನ್ಯವು ಅಂತಃಕರಣದಲ್ಲಿ ಸ್ಫುರಣವಾಗುವುದು ॥೩೫೨॥ ಹೀಗೆ ಧ್ಯಾನವು ಅಂತಃಕರಣದಲ್ಲಿ ಮೂಡಿಕೊಂಡರೆ, ಭಕ್ತನ ಸಬಾಹ್ಯ ಕ್ರಿಯೆಗಳು ಕೃಷ್ಣಾರ್ಪಣೆಯಾಗುವುವು, ಹಾಗೂ ಸ್ತ್ರೀಪುತ್ರಾದಿಯಾಗಿ ಸರ್ವಸ್ವವೂ ಕೃಷ್ಣಾರ್ಪಣೆಯಾಗುವುದೆಂದು ತಿಳಿ ॥೩೫೩॥

ಇಷ್ಟಂ ದತ್ತಂ ತಪೋ ಜಪ್ತಂ ವೃತ್ತಂ ಯಚ್ಚಾತ್ಮನಃ ಪ್ರಿಯಮ್ ।
ದಾರಾನ್ ಸುತಾನ್ ಗೃಹಾನ್ ಪ್ರಾಣಾನ್ ಯತ್ ಪರಸ್ಮೈ ನಿವೇದನಮ್ ।೨೮॥

ಅರ್ಥ:- ಯಜ್ಞ , ದಾನ , ತಪ ಅಥವಾ ಜಪ ,ಸದಾಚಾರದ ಪಾಲನೆ , ಮತ್ತು ಸ್ತ್ರೀ , ಪುತ್ರ, ಗೃಹ ತನ್ನ ಜೀವನ, ಪ್ರಾಣ ಇತ್ಯಾದಿ ತನಗೆ ಪ್ರಿಯವಾಗಿರುವುದೆಲ್ಲವನ್ನೂ ಭಗವಂತನ ಚರಣಗಳಿಗೆ ಅರ್ಪಿಸಬೇಕು.

ಅಗ್ನಿಹೋತ್ರಾದಿ ''ಯಾಗ'' ಹೋಮ । ಗ್ರಹಣಾದಿ ''ದಾನ'' ಅನುತ್ತಮ । ''ತಪ'' ಮ್ಹಣಿಜೇ ಸ್ವಧರ್ಮ । ಜೋ ವರ್ಣಾಶ್ರಮ ಯಥೋಚಿತ್ತ ।೫೫೪॥ ಆಗಮೋಕ್ತ ಯಥಾಶಾಸ್ತ್ರ । ಆವರಣವಿಧಿ - ವಿಧಾನತಂತ್ರ । ಗುರುದೀಕ್ಷಾ ಶುದ್ಧ ಮಂತ್ರ । ಅಥವಾ ನಾಮಮಾತ್ರ ಜೋ ''ಜಪು'' ಕೀಜೇ ।೫೫೫॥ ತೇ ಯಜ್ಞ ದಾನ ಕ್ರಿಯಾ ತಪ । ದೀಕ್ಷಾ ಮಂತ್ರ ಕಾ ನಾಮಜಪ । ತೇಥೇ ನ ಘಾಲಿತೀ ಸಂಕಲ್ಪ । ಕರೀ ನಿರ್ವಿಕಲ್ಪ ಕೃಷ್ಣಾರ್ಪಣ ।೫೫೬॥ ಹರೀಶೀ ಜಾಹಲೇ ಜೇ ಅನನ್ಯ ಶರಣ । ತೇ ಹರೀಚೇ ಲಡಿವಾಳ ಪೂರ್ಣ । ತ್ಯಾಂಚೇ ಹರಿ ಕರೀ ಪ್ರತಿಪಾಳಣ । ಜೇವೀ ಜನನೀ ಜಾಣ ತಾತುಲೇಯಾ ।೫೫೭॥ ಯಾಲಾಗೀ ಜೇ ಜೇ ಜೀವಿಕಾವರ್ತನ । ತೇಹೀ ಕರಾವೇ ಕೃಷ್ಣಾರ್ಪಣ । ''ಹೇ ಮಾಝೇ'' ಮ್ಹಣೋನಿ ಅಭಿಮಾನ । ಭಕ್ತ ಸಜ್ಞಾನ ನ ಧರಿತೀ ಕದಾ ।೫೫೮॥ ಜ್ಯಾಚೀ ಆವಡೀ ಅತಿಶಯೇ ಚಿತ್ತೀ । ತ್ಯಾಚೀ ಆಪಣಿಯಾ ಅತಿಪ್ರೀತಿ । ತೇ ತೇ ಕೃಷ್ಣಾರ್ಪಣ ಕರಿತೀ । ಗುರುವಾಕ್ಯಸ್ಥಿತೀ ವಿಶ್ವಾಸೇ ।೫೫೯॥ ಯಾಲಾಗೀ ಆಠಹೀ ಪ್ರಹರ । ಸೇವೇಸೀ ವೇಂಚಿತೀ ನಿಜಶರೀರ । ನಿಮಿಷಾರ್ಧಹೀ ವ್ಯಾಪಾರ । ವಿಷಯಾಕಾರ ಕರಿತೀ ನಾ ।೫೬೦॥ ಅನ್ನಾಲಾಗೀ ಹೋಊನಿ ವೇಡೇ । ಸಧನಾಂಚ್ಯಾ ಪಾಯಾ ನ ಪಡೇ । ಆಯುಷ್ಯಾಚೇ ತೀನ ಕವಡೇ । ವಿಷಯಾಚೇ ಚಾಡೇ ಕದಾ ನ ಕರೀ ।೫೬೧॥ ಆಯುಷ್ಯಾಚೇ ಅರ್ಧ ಘಡೀ । ವೇಂಚಿತಾ ನ ಮಿಳೇ ಲಕ್ಷ ಕೋಡೀ । ತೇಣೇ ಆಯುಷ್ಯೇ ಪರಮಾರ್ಥ ಜೋಡೀ । ವಿಷಯಾಂಚ್ಯಾ ಕೋಡೀ ಥುಂಕೋನಿ ಸಾಂಡೀ ।೫೬೨॥ ತ್ಯಾಗೋನಿಯಾ ರಾಜ್ಯಸಂಪತ್ತೀ । ರಾಜೇ ಜಾಊನಿ ವನಾಪ್ರತೀ । ಸ್ವಯೇ ಪರಮಾರ್ಥ ಸಾಧಿತೀ । ವಿಷಯಾಸಕ್ತಿ ಥುಂಕೋನಿ ।೫೬೩॥ ಕೈಶೀ ಭಕ್ತೀಚೀ ಗೋಡೀ ಸಂಪೂರ್ಣ । ರಿತಾ ಜಾವೋ ನೇದೀ ಅರ್ಧ ಕ್ಷಣ । ಅವಘೇ ಜೀವಿತಚಿ ಜಾಣ । ಕರೀ ಕೃಷ್ಣಾರ್ಪಣ ಸರ್ವಸ್ವೇ ।೫೬೪॥ ಆಣಿ ಪುತ್ರದಾರಾದಿಕ ಜೇ ಜೇ ಘರೀ । ತೇ ತೇ ಭಗವತ್ಸೇವೇವಾರೀ । ಸ್ವಯೇ ಕೃಷ್ಣಾರ್ಪಣ ಕರೀ । ಮಾಝೀ ಮ್ಹಣೋನಿ ನ ಧರೀ ಮಮತಾ ಜೀವೀ ।೫೬೫॥ ದಾರಾ ಪುತ್ರ ದೇಹ ಗೇಹ ಪ್ರಾಣ । ಯಾಂಸೀ ಆತ್ಮಾ ಸಬಾಹ್ಯ ಪೂರ್ಣ । ತೇಥೇ ಸಂಕಲ್ಪೇವೀಣ ಜಾಣ । ಬ್ರಹ್ಮಾರ್ಪಣ ಸಹಜಚಿ ।೫೬೬॥

ಅಗ್ನಿಹೋತ್ರಾದಿಕ ''ಯಾಗ'' ಅಥವಾ ಹೋಮ, ಗ್ರಹಣಾದಿಗಳಲ್ಲಿ ಮಾಡಿದ ಉತ್ತಮೋತ್ತಮ ''ದಾನ'' ಮತ್ತು ''ತಪ'' ಅಂದರೆ ವರ್ಣಾಶ್ರಮ ಪ್ರಮಾಣದಂತೆ ಯಥೋಚಿತವಾಗಿ ಮಾಡಲ್ಪಟ್ಟ ಸ್ವಧರ್ಮವು ।೫೫೪॥ ವೇದೋಕ್ತ, ಶಾಸ್ತ್ರೋಕ್ತ, ಆವರಣ - ವಿಧಿವಿಧಾನ ತಂತ್ರಾನುಸಾರವಾಗಿ, ಗುರುದೀಕ್ಷೆಯನ್ನು ಪಡೆದು, ಪ್ರಾಪ್ತವಾದ ಶುದ್ಧ ಮಂತ್ರ ಅಥವಾ ಕೇವಲ ಭಗವಂತನ ನಾಮಮಂತ್ರ ಇವುಗಳನ್ನು ಮಾಡಿದ ''ಜಪ'' ವು ।೫೫೫॥ ಇತ್ಯಾದಿ ಎಲ್ಲವನ್ನೂ ಅಂದರೆ, ಯಜ್ಞ ,ದಾನ, ಧರ್ಮಾಚರಣೆ, ತಪ, ದೀಕ್ಷಾ ಮಂತ್ರ ಅಥವಾ ನಾಮದ ಜಪ ಇವುಗಳಲ್ಲಿ ಸಂಕಲ್ಪವಿಲ್ಲದೇ ನಿರ್ವಿಕಲ್ಪ ಮನದಿಂದ ಕೃಷ್ಣಾರ್ಪಣೆಯನ್ನು ಮಾಡಬೇಕು ।೫೫೬॥ ಈ ರೀತಿಯಲ್ಲಿ ನಡೆದುಕೊಂಡು ಹರಿಯನ್ನು ಅನನ್ಯ ಭಾವದಿಂದ ಶರಣಾದವರು ಹರಿಯ ಪೂರ್ಣ ಪ್ರೀತಿಗೆ ಪಾತ್ರರಾಗುವರು ಮತ್ತು ತಾಯಿಯು ಕೂಸಿಗೆ ಪಾಲನೆ ಮಾಡುವಂತೆ ಶ್ರೀಹರಿಯು ಇವರನ್ನು ಪ್ರತಿಪಾಲಿಸುವನು ।೫೫೭॥ ಅದಕ್ಕಾಗಿ ಜೀವನ ನಡೆಸುವ ಎಲ್ಲ ಉದ್ಯೋಗಗಳನ್ನು ಸಹ ಕೃಷ್ಣಾರ್ಪಣೆಯನ್ನು ಮಾಡಬೇಕು. ಜ್ಞಾನ ಸಂಪನ್ನರಾದ ಭಕ್ತರು ''ಇವು ನನ್ನವು'' ಎಂದು ತಿಳಿದು ಎಂದೂ ಅಭಿಮಾನವನ್ನು ಹಿಡಿಯುವುದಿಲ್ಲ ।೫೫೮॥ ತಮ್ಮ ಮನದಲ್ಲಿ ಯಾವುದರಲ್ಲಿ ಅತಿಶಯವಾದ ಪ್ರೀತಿ ಇರುವುದೋ, ಯಾರು ತನ್ನನ್ನು ಅತ್ಯಂತ ಪ್ರೀತಿಸುವರೋ, ಇವೆಲ್ಲವನ್ನೂ ಗುರುವಾಕ್ಯದಲ್ಲಿ ವಿಶ್ವಾಸವನ್ನಿಟ್ಟು ಕೃಷ್ಣಾರ್ಪಣೆಯನ್ನು ಮಾಡುವರು ।೫೫೯॥ ಮತ್ತು ಭಗವಂತನಿಗಾಗಿ ಎಂಟು ಪ್ರಹರಗಳಲ್ಲಿಯೂ ತನ್ನ ಶರೀರವನ್ನು ಸೇವೆಯಲ್ಲಿ ಸವೆಸುವರು. ನಿಮಿಷಾರ್ಧ ಸಹ ವಿಷಯಾಕಾರದ ವ್ಯವಹಾರವನ್ನು ಮಾಡುವುದಿಲ್ಲ ।೫೬೦॥ ಅನ್ನಕ್ಕಾಗಿ ಹುಚ್ಚರಾಗಿ ಇವರು ಶ್ರೀಮಂತರ ಕಾಲಿಗೆ ಬೀಳುವುದಿಲ್ಲ. ವಿಷಯಗಳ ಇಚ್ಛೆಯಿಂದ ಇವರು ತಮ್ಮ ಆಯುಷ್ಯವನ್ನು ಕವಡಿಯಷ್ಟು ಬೆಲೆ ಮಾಡುವುದಿಲ್ಲ ।೫೬೧॥ ಲಕ್ಷಾವಧಿ ಹಣ ಖರ್ಚಿಸಿದರೂ ಆಯುಷ್ಯದ ಅರ್ಧ ಘಳಿಗೆಯೂ ಸಿಗಲಾರದು. ಇಂತಹ ಅಮೌಲ್ಯವಾದ ಆಯುಷ್ಯದಿಂದ ಭಕ್ತರು ಪರಮಾರ್ಥವನ್ನು ಬೆಳೆಸುತ್ತಿರುವರು, ಮತ್ತು ವಿಷಯಗಳ ರಾಶಿಯನ್ನು ಉಗುಳಿಬಿಡುವರು ।೫೬೨॥ ರಾಜರು ಸಹ ರಾಜ್ಯದ ಎಲ್ಲ ವೈಭವಗಳನ್ನು ತ್ಯಜಿಸಿ ವನದಲ್ಲಿ ಪರಮಾರ್ಥವನ್ನು ಸಾಧಿಸುವರು. ವಿಷಯಾಸಕ್ತಿಯನ್ನು ಉಗುಳಿ ಧಿಃಕ್ಕರಿಸುವರು ।೫೬೩॥ ಪರಿಪೂರ್ಣವಾದ ಭಕ್ತಿಯ ರುಚಿಯನ್ನು ಹೇಗೆಂದು ಹೇಳಬೇಕು? ನಿಜವಾದ ಭಕ್ತನು ಅರ್ಧಕ್ಷಣವನ್ನು ಸಹ ವ್ಯರ್ಥಗೊಳಿಸಲಾರನು. ತನ್ನ ಎಲ್ಲ ಆಯುಷ್ಯವನ್ನು ಕೃಷ್ಣಾರ್ಪಣೆ ಮಾಡುವನು ।೫೬೪॥ ಅದರಂತೆಯೇ ತನ್ನ ಸತಿಸುತರಾದಿ ಎಲ್ಲರೊಂದಿಗೆ ತಾನು ಸಹ ಭಗವಂತನ ಸೇವೆಗೆ ಅರ್ಪಿಸುವನು. ಯಾರನ್ನೂ ''ಇವರು ನನ್ನವರು'' ಎಂದು ಮನದಲ್ಲಿ ಮಮತೆಯನ್ನು ಮಾಡಲಾರನು ।೫೬೫॥ ಸ್ತ್ರೀ, ಪುತ್ರ, ತನ್ನದೇಹ,ಗೃಹ ಮತ್ತು ಪ್ರಾಣ ಇವು ಎಲ್ಲದರಲ್ಲಿಯೂ ಒಳಹೊರಗೆ ಪರಮಾತ್ಮನೇ ತುಂಬಿಕೊಂಡಿರುವುದನ್ನು ಈತನು ಕಾಣುತ್ತಿರುವುದರಿಂದ, ಸಂಕಲ್ಪವಿಲ್ಲದೇ ಸಹಜವಾಗಿಯೇ ಬ್ರಹ್ಮಾರ್ಪಣೆಯಾಗುವುದು ।೫೬೬॥

ಏವಂ ಕೃಷ್ಣಾತ್ಮನಾಥೇಷು ಮನುಷ್ಯೇಷು ಚ ಸೌಹೃದಮ್ । ಪರಿಚರ್ಯಾಂ ಚೋಭಯತ್ರ ಮಹತ್ಸು ನೃಷು ಸಾಧುಷು ।೨೯॥

ಅರ್ಥ:- ಶ್ರೀ ಕೃಷ್ಣನು ಮನುಷ್ಯರಲ್ಲಿ ಆತ್ಮನಾಗಿ ಅವರ ಜೀವದ ಸ್ವಾಮಿಯಾಗಿರುವನೆಂದು ತಿಳಿದು ಅವರಲ್ಲಿ ಪ್ರೀತಿ, ಸ್ಥಾವರ ಮತ್ತು ಜಂಗಮ ಎರಡರಲ್ಲಿಯೂ ಪರಿಚರ್ಯ, ಅದರಲ್ಲಿಯೂ ವಿಶೇಷವಾಗಿ ಮನುಷ್ಯರ, ಅವರಲ್ಲಿಯೇ ಧರ್ಮಶೀಲ ಸಾಧುಗಳಲ್ಲಿ ಮತ್ತು ಅವರಲ್ಲಿಯೇ ಭಗವದ್ಭಕ್ತರಾದ ಮಹಾತ್ಮರಲ್ಲಿ ಪರಿಚರ್ಯಿಸುವುದನ್ನು ಕಲಿಯಬೇಕು.

ಏವಂ ದಾರಾ ಗೇಹ ದೇಹ ಸಂಪದಾ । ಆತ್ಮಾರ್ಪಣೇ ಶುದ್ಧ ಶ್ರದ್ಧಾ । ಭಜಲೇ ಸರ್ವಕಾಳೀ ಸರ್ವದಾ । ತೇ ಭಕ್ತ ಗೋವಿಂದಾ ಪಢಿಯಂತೇ ।೫೬೭॥ ಜೋ ಸರ್ವ ಭೂತೀ ಹೃದಯಸ್ಥು । ಪರಮಾತ್ಮಾ ಶ್ರೀಕೃಷ್ಣನಾಥು । ತ್ಯಾಚೇ ಠಾಯೀ ಜೋ ಭಕ್ತು । ಸಾಧಾವಯಾ ನಿಜಸ್ವಾರ್ಥು ಸರ್ವಸ್ವೇ ಭಜೇ ।೫೬೮॥ ತ್ಯಾ ಹೃದಯಸ್ಥಾಚೇ ಠಾಯೀ । ದೃಢ ದೃಷ್ಟೀ ಜಂವ ಬಸಲೀ ನಾಹೀ । ತಂವ ಸಗುಣ ಮೂರ್ತೀ ಹೃದಯೀ । ಭಜಾವೀ ಪಾಹೀ ಸರ್ವಾತ್ಮಭಾವೇ ।೫೬೯॥ ಸಗುಣ ಮೂರ್ತೀ ನಾತುಡೇ ಧ್ಯಾನೀ । ತರೀ ಭಜಾವೇ ಪ್ರತಿಮೇಚ್ಯಾ ಸ್ಥಾನೀ । ತೇಥೇಹೀ ಚಲಾಚಲ ದೋನೀ । ಭಜಾವ್ಯಾ ಗುರುವಚನೀ ಸಮಸಾಮ್ಯಭಾವೇ ।೫೭೦॥ ಜ್ಯಾ ಉಪಾಸಕ ಪೂಜಿತೀ । ತ್ಯಾ ಜಾಣಾವ್ಯಾ ''ಚಲಾ'' ಮೂರ್ತಿ । ಜ್ಯಾ ಪಾಂಡುರಂಗಾದಿ ದ್ವಾರಾವತೀ । ತ್ಯಾ ''ಸ್ಥಾವರಾ'' ಮೂರ್ತೀ ಪುರಾಣೋಕ್ತ ।೫೭೧॥ ತ್ಯಾಮೂರ್ತೀಹೂನಿ ಶ್ರೇಷ್ಠ ಸ್ಥಾನ । ಪೂರ್ಣ ಪೂಜ್ಯತ್ವೇ ಬ್ರಾಹ್ಮಣ । ತೇಥೇ ಕರಾವೇ ಗಾ ಭಜನ । ಸರ್ವಸ್ವೇ ಜಾಣ ಸರ್ವದಾ ।೫೭೨॥ ತ್ಯಾ ಬ್ರಾಹ್ಮಣಾಮಾಜೀ ಅತಿಶ್ರೇಷ್ಠ । ಶ್ರೋತ್ರಿಯ ಸದಾಚಾರನಿಷ್ಠ । ತ್ಯಾಂತಹೀ ವೇದಶಾಸ್ತ್ರಾರ್ಥೀ ಪ್ರವಿಷ್ಟ । ತೇ ಅವಿರಿಷ್ಠ ಪೂಜ್ಯತ್ವೇ ।೫೭೩॥ ತ್ಯಾಂಹೀಮಾಜೀ ಜೇ ಭಾಗವತ । ಭಾಗವತಧರ್ಮೀ ನಿತ್ಯ ನಿರತ । ಜೇ ನಿಷ್ಕರ್ಮೇಸೀ ಭಗವದ್ಭಕ್ತ । ಜ್ಯಾಂಚಾ ಭಾವಾರ್ಥ ಶ್ರೀಕೃಷ್ಣೀ ।೫೭೪॥ ಜ್ಯಾಂಸೀ ಆತ್ಮಾ ಶ್ರೀಕೃಷ್ಣ ಹೃದಯಸ್ಥ । ಜ್ಯಾಂಚಾ ಅನನ್ಯಸ್ವಾಮೀ ಶ್ರೀಕೃಷ್ಣನಾಥ । ಐಸೇ ಜೇ ಭಗವದ್ಭಕ್ತ । ತೇ ಪೂಜ್ಯ ನಿಶ್ಚಿತ ನಿಜಭಕ್ತಾ ।೫೭೫॥ ಅತಿಮಹತ್ವೇ ಪೂಜ್ಯ ಗಹನ । ಜ್ಯಾಚೇ ಸುರ ನರ ವೇದ ಬಂದೀಜನ । ತೋ ಸದ್ಗುರೂ ಶ್ರೇಷ್ಠ ಪೂಜ್ಯ ಸ್ಥಾನ । ಶಿಷ್ಯಾಸೀ ಜಾಣ ಸರ್ವಸ್ವೇ ।೫೭೬॥ ಗುರುಬ್ರಹ್ಮ ದೋನೀ ಸಮಾನ । ಹೇಹೀ ವಚನ ದಿಸೇ ಗೌಣ । ಗುರುವಾಕ್ಯೇ ಬ್ರಹ್ಮಾ ಬ್ರಹ್ಮಪಣ । ತೇಥೇ ವ್ಹಾವಯಾ ಸಮಾನ ಭಿನ್ನತ್ವನುರೇ ।೫೭೭॥ ಜೈಸಾ ದೇವಾಚೇ ಠಾಯೀ ಭಾವೋ । ತೈಸಾಚಿ ಗುರುಚರಣೀ ಸದ್ಭಾವೋ । ಗುರುದೇವಾಮಾಜೀ ಪಹಾ ಹೋ । ಭಿನ್ನತ್ವಭಾವೋ ಅಸೇನಾ ।೫೭೮॥

ಈ ಪ್ರಕಾರವಾಗಿ ಯಾರು ಸ್ತ್ರೀ, ಗೃಹ, ದೇಹ ಮತ್ತು ಸಂಪತ್ತು ಎಲ್ಲವನ್ನೂ ಶುದ್ಧವಾದ ಶ್ರದ್ಧೆಯಿಂದ ಆತ್ಮಾರ್ಪಣೆಯನ್ನು ಮಾಡಿ, ಭಜನೆಯನ್ನು ಸರ್ವಕಾಲದಲ್ಲಿ ನಡೆಸುವರೋ ಆ ಭಕ್ತರೇ, ಶ್ರೀಹರಿಗೆ ಅತ್ಯಂತ ಪ್ರಿಯರಾಗುವರು ।೫೬೭॥ ಯಚ್ಚ ಯಾವತ್ ಪ್ರಾಣಿಮಾತ್ರರ ಹೃದಯದಲ್ಲಿ ವಾಸಮಾಡುವ ಪರಮಾತ್ಮನಾದ ಭಗವಾನ್ ಶ್ರೀಕೃಷ್ಣನನ್ನು ತನ್ನ ಸ್ವಹಿತವನ್ನು ಸಾಧಿಸುವುದಕ್ಕಾಗಿ ಭಕ್ತನು ಸರ್ವಭಾವದಿಂದ ಭಜಿಸುವನು ।೫೬೮॥ ಹೃದಯಸ್ಥ(ನಿರ್ಗುಣ) ಪರಮಾತ್ಮನಲ್ಲಿ ಎಲ್ಲಿಯವರೆಗೆ ದೃಷ್ಟಿಯು ಸ್ಥಿರಗೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಈತನು ಸರ್ವಾತ್ಮಭಾವನೆಯಿಂದ ಸಗುಣಮೂರ್ತಿಯ ಧ್ಯಾನ ಭಜನೆಯನ್ನೇ ಹೃದಯಪೂರ್ವಕ ಮಾಡಬೇಕು ।೫೬೯॥ ಧ್ಯಾನದಲ್ಲಿ ಸಗುಣಮೂರ್ತಿಯು ಸರಿಯಾಗಿ ಮೂಡದಿದ್ದರೆ, ಪ್ರತಿಮೆಯ ಧ್ಯಾನ, ಭಜನೆಯನ್ನು ಮಾಡಬೇಕು. ಅದರಲ್ಲಿಯೂ ಚಲ, ಅಚಲ ಹೀಗೆ ಎರಡೂ ಪ್ರಕಾರದ ಮೂರ್ತಿಯನ್ನು ಗುರೂಪದೇಶದಂತೆ ಸಮಸಮಾನ ಭಾವನೆಯಿಂದ ಭಜಿಸಬೇಕು ।೫೭೦॥ ಉಪಾಸಕರು ತಮ್ಮ ಮನೆಯಲ್ಲಿ ಪೂಜಿಸುವ ದೇವರಿಗೆ ''ಚಲಮೂರ್ತಿ'' ಎಂದು ತಿಳಿಯಬೇಕು. ದ್ವಾರಕಾದಿ ಕ್ಷೇತ್ರದಲ್ಲಿನ, ಪಾಂಡುರಂಗಾದಿ ಪುರಾಣ ಪ್ರಸಿದ್ಧವಾದ ಮೂರ್ತಿಗಳು ಸ್ಥಾವರ ಅಂದರೆ ''ಅಚಲಮೂರ್ತಿ'' ಎಂದು ತಿಳಿಯಬೇಕು ।೫೭೧॥ ಈ ಮೂರ್ತಿಗಳಿಗಿಂತಲೂ ಶ್ರೇಷ್ಠವಾದ ಸ್ಥಾನವು ''ಬ್ರಾಹ್ಮಣ'' ಎಂದು ತಿಳಿಯಬೇಕು. ಇವರು ಪೂರ್ಣತ್ವದಿಂದ ಪೂಜ್ಯರಾಗಿರುವರು. ಇವರ ಭಜನೆಯನ್ನು ಸರ್ವತೋಪರಿಯಿಂದ ಸರ್ವಕಾಲದಲ್ಲಿ ಮಾಡಬೇಕು ।೫೭೨॥ ಈ ಬ್ರಾಹ್ಮಣರಲ್ಲಿಯೂ ಸಹ ಸದಾಚಾರ ಸಂಪನ್ನನಾದ ''ಶ್ರೋತ್ರಿಯ'' ಅಂದರೆ ವೇದವೇತ್ತಾ ಬ್ರಾಹ್ಮಣನು ಶ್ರೇಷ್ಠನು. ಇವರಿಗಿಂತಲೂ ''ವೇದಶಾಸ್ತ್ರಪ್ರವೀಣ''ರಾದವರು ಅತ್ಯಂತ ಶ್ರೇಷ್ಠರೆಂದು ತಿಳಿಯಬೇಕು ।೫೭೩॥ ಇವರಲ್ಲಿಯೂ ''ಭಾಗವತ'' ಅಂದರೆ ಭಗವದ್ಭಕ್ತರಾಗಿ ನಿರಂತರವಾಗಿ ಭಾಗವತ ಧರ್ಮದಲ್ಲಿ ನಿರತರಾಗಿರುವವರು, ನಿಷ್ಕಾಮಭಾವದಿಂದ ಭಗವದ್ಭಕ್ತಿಯನ್ನು ಮಾಡುತ್ತಿದ್ದು ಅವರ ಭಾವವು ಶ್ರೀಕೃಷ್ಣನಲ್ಲಿ ಪೂರ್ಣವಾಗಿ ಇರುವ ।೫೭೪॥ ಇವರ ಹೃದಯಸ್ಥ ಶ್ರೀಕೃಷ್ಣನೇ ಆತ್ಮನು, ಶ್ರೀಕೃಷ್ಣನಾಥನೇ ಇವರ ಅನನ್ಯ ಸ್ವಾಮಿಯು, ಹೀಗೆ ಯಾರು ಪೂರ್ಣ ಭಗವದ್ಭಕ್ತರೋ, ಆ ಭಕ್ತರೇ ನಿಜವಾಗಿ ಪೂಜ್ಯರು ।೫೭೫॥ ದೇವತೆಗಳು, ಮನುಷ್ಯರು ಮತ್ತು ವೇದಗಳು ಸಹ ಯಾರನ್ನು ಸ್ತುತಿಸುವ ಹೊಗಳುಭಟ್ಟಂಗಿಗಳೋ, ಆ ''ಸದ್ಗುರು''ಗಳು ಅತ್ಯಂತ ದೊಡ್ಡವರಾಗಿದ್ದು ಶಿಷ್ಯನಿಗೆ ಎಲ್ಲರಕ್ಕಿಂತಲೂ ಅಧಿಕ ಪೂಜ್ಯರಾಗಿರುವರು. ಇದನ್ನು ಲಕ್ಷದಲ್ಲಿಡು ।೫೭೬॥ ಗುರು ಮತ್ತು ಬ್ರಹ್ಮ ಈ ಇಬ್ಬರೂ ''ಸಮಾನ''ರು ಎಂದು ಹೇಳುವುದು ಸಹ ಗೌಣವಾಗಿಯೇ ಕಾಣುವುದು, ಕಾರಣ ಗುರುವಾಕ್ಯದಿಂದಲೇ ಬ್ರಹ್ಮಕ್ಕೆ ಬ್ರಹ್ಮತ್ವವು ಬರುವುದು. ಅಂದಮೇಲೆ ಗುರು ಮತ್ತು ಬ್ರಹ್ಮ ಇವರ ಸಾಮ್ಯವನ್ನು ಕಲ್ಪಿಸಲು ಇವರ ಭಿನ್ನತ್ವವು ಉಳಿಯುವುದೇ ಇಲ್ಲ ।೫೭೭॥ ದೇವರಲ್ಲಿ ಭಾವವನ್ನು ಇಡುವಂತೆ ಸದ್ಗುರುಗಳ ಚರಣದಲ್ಲಿ ಸದ್ಭಾವವನ್ನು ಇಡಬೇಕು. ಕಾರಣ, ಗುರುಗಳಲ್ಲಿ ಮತ್ತು ದೇವರಲ್ಲಿ ಭಿನ್ನತ್ವದ ಭಾವವೇ ಇರುವುದಿಲ್ಲ ।೫೭೮॥

ದೇವೋ ಪೂಜಿಲ್ಯಾ ಗುರು ತೋಷೇ । ಗುರು ಪೂಜಿಲ್ಯಾ ದೇವೋ ಸಂತೋಷೇ । ದೋ ನಾವಾಂಚೇನಿ ಹರುಷೇ । ಸ್ವರೂಪೇ ಏಕೇ ವರ್ತತೀ ।।೫೭೯।। ಸುವರ್ಣ ಆಣಿ ಕಾಂಕಣ । ದೋ ನಾಂವೀ ಏಕ ಸುವರ್ಣ । ತೇವೀ ಗುರು-ಬ್ರಹ್ಮಾ ಮಾಜೀ ಜಾಣ । ಭಿನ್ನ ಪಣ ಅಸೇನಾ ।।೫೮೦।। ತ್ಯಾ ಸದ್ಗುರೂಚೇ ನಿಜಭಜನ । ಚಿತ್ತವಿತ್ತೇ ಅವಂಚನ । ಗುರುಚರಣೇ ಆತ್ಮಾರ್ಪಣ । ಕರಾವೇ ಆಪಣ ಸರ್ವಸ್ವೇಸೀ ।।೫೮೧।। ತೈಸೇಚಿ ಸಾಧು ಶ್ರೋತ್ರೇ ಸಜ್ಞಾನ । ತೇಹೀ ಮಾನಾವೇ ಸದ್ಗುರೂಸಮಾನ । ತ್ಯಾಂಚೇನಿ ಸಂವಾದೇ ಆಪಣ । ಶ್ರವಣ ಕಥನ ಕರಾವೇ ।।೫೮೨।।

ಪರಸ್ಪರಾನುಕಥನಂ ಪಾವನಂ ಭಗವದ್ಯಶಃ । ಮಿಥೋ ರತಿರ್ಮಿಥುಸ್ತುಷ್ಟಿರ್ನಿವೃತ್ತಿರ್ಮಿಥ ಆತ್ಮನಃ ।।೩೦।।

ಅರ್ಥ:- ಭಗವಂತನ ಪರಮಪಾವನ ಯಶವಿಷಯವಾಗಿ ಪರಸ್ಪರರು ಹೇಳಿಕೊಳ್ಳಬೇಕು. ಈ ಪ್ರಕಾರದ ಸಾಧಕರನ್ನು ಒಟ್ಟುಗೂಡಿಸಿ ಭಗವಂತನ ಪ್ರೇಮವನ್ನು ಬೆಳೆಸಬೇಕು. ಯಾವಾಗಲೂ ಸಂತೋಷವಾಗಿದ್ದು, ಪ್ರಪಂಚದಿಂದ ನಿವೃತ್ತನಾಗಿ ಆಧ್ಯಾತ್ಮಿಕ ಶಾಂತಿಯ ಅನುಭವ ಪ್ರಾಪ್ತಮಾಡಿಕೊಳ್ಳುವುದನ್ನು ಕಲಿಯಬೇಕು .

ತೇಥ ಕರಿತಾ ಕಥಾನುವಾದು । ಪರಸ್ಪರೇ ನಿಜಾತ್ಮಬೋಧು । ಕರಿತಾ ಗುಹ್ಯಜ್ಞಾನಸಂವಾದು । ಪರಮಾನಂದು ಪೋಸಂಡೇ ।।೫೮೩।। ಏವಂ ಹರಿಕಥೇಚ್ಯಾ ಆವಡೀ । ಪರಸ್ಪರೇ ಶ್ರದ್ಧಾ ಗಾಢೀ । ಸುಖಸಂವಾದಪರವಡೀ । ನಿಜಸುಖಗೋಡೀ ಚಾಖಿತೀ ।।೫೮೪।। ಚಾಖಿತಾ ನಿಜಸುಖಗೋಡೀ । ಹಾರಪತೀ ದುಃಖಕೋಡೀ । ಉಭವೂನಿ ಭಕ್ತಿಸಾಮ್ರಾಜ್ಯಗುಢೀ । ಸ್ವಾನಂದಜೋಡೀ ಜೋಡಾವೀ ।।೫೮೫।। ಭಾವೇ ಕರಿತಾ ಅಭೇದಭಜನ । ಭಕ್ತ ಪಾವತೀ ಸ್ವಾನಂದಪೂರ್ಣ । ತ್ಯಾ ಸ್ವಾನಂದಾಚೇ ನಿಜಚಿನ್ಹ । ಐಕ ಸಾಂಗೇನ ನೃಪನಾಥಾ ।।೫೮೬।।

ಸ್ಮರತಃ ಸ್ಮಾರಯಂತಶ್ಚ ಮಿಥೋಽಘೌಘಹರಂ ಹರಿಮ್ ।
ಭಕ್ತ್ಯಾ ಸಂಜಾತಯಾ ಭಕ್ತ್ಯಾ ಬಿಭ್ರತ್ಯುತ್ಪುಲಕಾಂ ತನುಮ್ ।।೩೧।।

ಕ್ವಚಿದ್ರುದಂತ್ಯಚ್ಯುತಚಿಂತಯಾ ಕ್ವಚಿದ್ಧಸಂತಿ ನಂದಂತಿ ವದಂತ್ಯಲೌಕಿಕಾಃ ।
ನೃತ್ಯಂತಿ ಗಾಯಂತ್ಯನುಶೀಲಯಂತ್ಯಜಂ ಭವಂತಿ ತೂಷ್ಣೀಂ ಪರಮೇತ್ಯ ನಿರ್ವೃತಾಃ ।।೩೨।।

ಅರ್ಥ:- ಪೂರ್ವದಲ್ಲಿ ಸಾಧನ ಭಕ್ತಿಯನ್ನು ಮಾಡಿ ಉತ್ಪನ್ನವಾಗಿರುವ ಪ್ರೇಮರಕ್ಷಣೆಯನ್ನು ಸಾಧ್ಯ ಭಕ್ತಿಯಿಂದ, ಸರ್ವ ಪಾಪಗಳ ಹರಣ ಮಾಡುವ ಹರಿಯ ಸ್ಮರಣೆಯನ್ನು ಸ್ವತಃ ಮಾಡಿ ತಮ್ಮ ತಮ್ಮಲ್ಲಿ ಸಂವಾದರೂಪದಿಂದ ಬೇರೆಯವರಲ್ಲಿ ನಾಮಸ್ಮರಣೆಯನ್ನು ಮಾಡಿಸುವ ಭಕ್ತರು ರೋಮಾಂಚಿತರಾಗುವರು. ಪ್ರಭುವಿನ ಪ್ರೇಮವು ಹೃದಯದಲ್ಲಿ ಹಿಡಿಸಲಾರದಾಗಿ ಅವರು ಕೆಲವೊಮ್ಮೆ ಅಳುವರು, ಇನ್ನೊಮ್ಮೆ ನಗುವರು. ಒಮ್ಮೊಮ್ಮೆ ಆನಂದವನ್ನು ಪ್ರಕಟಿಸುವರು, ಮತ್ತೊಮ್ಮೆ ಅಲೌಕಿಕ ಮಾತುಗಳನ್ನಾಡುವರು. ಒಂದೊಂದುಸಾರೆ ನರ್ತಿಸುವರು, ಇನ್ನೊಂದುಸಲ ಹಾಡುವರು. ಮಗದೊಮ್ಮೆ ಭಗವತಂನ ಲೀಲೆಗಳನ್ನು ಸ್ವತಃ ಹಾವಭಾವ ಮಾಡಿ ತೋರಿಸುವರು. ಈ ಪ್ರಕಾರವಾಗಿ ಪರಮಾತ್ಮಮಯರಾಗಿ ಅತ್ಯಂತ ಆನಂದಿತರಾಗಿರುವರು.

ಅದಕ್ಕಾಗಿ ದೇವರ ಪೂಜೆಯನ್ನು ಮಾಡಿದರೆ, ಗುರುವಿಗೆ ಸಂತೋಷವಾಗುವುದು. ಗುರುವಿನ ಪೂಜೆಯನ್ನು ಮಾಡಿದರೆ, ದೇವರಿಗೆ ಸಂತೋಷವಾಗುವುದು, ಹೆಸರುಗಳು ಎರಡಾದರೂ ಆನಂದದಲ್ಲಿ ಇವರು ಒಂದೇ ಸ್ವರೂಪದಲ್ಲಿರುವರು ।೫೭೯।। ಬಂಗಾರ ಮತ್ತು (ಬಂಗಾರದ) ಬಳೆ ಇವು ಎರಡು ಹೆಸರಿನಿಂದ ಇದ್ದರೂ ಬಂಗಾರವು ಒಂದೇ ಆಗಿರುವುದು. ಅದರಂತೆ ಗುರುವಿನಲ್ಲಿ ಮತ್ತು ಬ್ರಹ್ಮನಲ್ಲಿ ಭೇದಭಾವವಿರುವುದಿಲ್ಲ ।೫೮೦।। ತನ, ಮನ, ಧನದಿಂದ ಆ ಸದ್ಗುರುವಿನ ಭಜನೆಯನ್ನು ನಿಷ್ಕಪಟ ಭಾವದಿಂದ ಮಾಡಬೇಕು. ತಾನು ಸರ್ವಸ್ವಭಾವದಿಂದ ಶ್ರೀಗುರುಗಳ ಚರಣಗಳಲ್ಲಿ ಆತ್ಮಾರ್ಪಣೆಯನ್ನು ಮಾಡಬೇಕು ।೫೮೧।। ಅದರಂತೆಯೇ ಸಾಧುಗಳವರನ್ನು ಮತ್ತು ಜ್ಞಾನಸಂಪನ್ನರಾದ ಶ್ರೋತೃಗಳವರನ್ನು ಸದ್ಗುರು ಸಮಾನರೆಂದು ಭಾವಿಸಬೇಕು. ಅವರಲ್ಲಿ ಸಂವಾದವನ್ನು ಮಾಡುತ್ತ ತಾನು ಶ್ರವಣ ಮತ್ತು ನಿರೂಪಣೆಯನ್ನು ಮಾಡುತ್ತಿರಬೇಕು ।೫೮೨।।

ಇಂಥವರಲ್ಲಿ ಕಥಾನುವಾದವನ್ನು ಮಾಡುತ್ತಿರಲು, ಪರಸ್ಪರರಲ್ಲಿ ನಿಜಬೋಧವು ಸಾಧಿಸಿ, ಆ ಯಾವ ಗುಹ್ಯಜ್ಞಾನ ಸಂವಾದದಿಂದ ಪರಮಾನಂದವು ತುಂಬಿ ಹರಿಯುವುದು ।೫೮೩।। ಈ ಪ್ರಕಾರದ ಹರಿಕಥೆಯ ಪ್ರೇಮದಿಂದ ಪರಸ್ಪರರಲ್ಲಿ ವಿಲಕ್ಷಣವಾದ ಶ್ರದ್ಧೆಯು ಉತ್ಪನ್ನವಾಗುವುದು ಮತ್ತು ತಮ್ಮ ತಮ್ಮಲ್ಲಿ ಸುಖಸಂವಾದವನ್ನು ಮಾಡುತ್ತ ಅವರು ಆತ್ಮಸುಖದ ಸಿಹಿಯನ್ನು ನೆಕ್ಕುತ್ತಿರುವರು ।೫೮೪।। ಈ ನಿಜಸುಖದ ಆನಂದವನ್ನು ಒಂದು ಸಾರೆ ಸೇವಿಸಿದರೆ, ದುಃಖದ ರಾಶಿಯು ಲಯಗೊಳ್ಳುವುದು. ಇದರಂತೆ ಭಕ್ತಿಸಾಮ್ರಾಜ್ಯದ ಧ್ವಜವನ್ನು ಹಾರಿಸಿ ಸಾಧಕರು ಸ್ವಾನಂದಸಾಮ್ರಾಜ್ಯದ ಉಪಭೋಗವನ್ನು ಅನುಭವಿಸಬೇಕು ।೫೮೫।। ಸದ್ಭಾವನೆಯಿಂದ ಅಭೇದ ಭಜನೆಯನ್ನು ಮಾಡುತ್ತಿರಲು ಸಾಧಕರಿಗೆ ಸ್ವಾನಂದವು ಪರಿಪೂರ್ಣವಾಗಿ ಪ್ರಾಪ್ತವಾಗುವುದು. ಹೇ ರಾಜನೇ , ಈ ಸ್ವಾನಂದದ ನಿಜವಾದ ಚಿನ್ಹೆಗಳನ್ನು ಹೇಳುವೆ, ಅದನ್ನು ಶ್ರವಣ ಮಾಡು ।೫೮೬।।

ಹರಿಕಥೇಚೀ ಮಹಿಮಾ ಕೈಸೀ । ಆದರೇ ಪುಸತ್ಯಾ- ಸಾಂಗತ್ಯಾಸೀ । ಹೋತೀ ಪೂಣ್ಯಾಚಿಯಾ ರಾಶೀ । ಪಾಪ ವೋಖದಾಸೀ ಮಿಳೇನಾ ।೫೮೭॥ ಜ್ಯಾಚಿಯಾ ನಾಮಸ್ಮರಣಕರೀ । ಸಕಳ ಪಾತಕಾತೇ ಹರಿ ಹರೀ । ತೋ ಸ್ವಯೇ ಪ್ರಗಟಲಾ ಅಂತರೀ । ಪಾತಕಾ ಉರೀ ಉರೇ ಕೈಂಚೀ ।೫೮೮॥ ಸಾಧನರೂಪಭಕ್ತೀಚ್ಯಾ ಯುಕ್ತಿ । ಪೂರ್ಣ ಸಪ್ರೇಮ ಉಪಜೇ ಭಕ್ತೀ । ತೇ ಭಕ್ತೀಚೀ ನಿಜಸ್ಥಿತೀ । ಐಕ ಚಕ್ರವರ್ತೀ ಸಜ್ಞಾನಾ ।೫೮೯॥ ಸದ್ಭಾವೇ ನಿಜಭಜನಕರೀ । ಹೃದಯೀ ಪ್ರಗಟತಾ ಶ್ರೀಹರೀ । ತಂವ ದೇಹೀಂಚೀ ಚಿನ್ಹೇ ಬಾಹೇರೀ । ಕ್ಷಣಾಮಾಝಾರೀ ಪಾಲಟತೀ ।೫೯೦॥ ಪರಸ್ಪರೇ ನಿಜಸಂವಾದು । ಕರಿತಾ ಜಾಹಲಾ ಸ್ವರೂಪಾವಬೋಧು । ನೇತ್ರೀ ಜಳ ಅಂಗೀ ಸ್ವೇದು । ಪ್ರಾಣಸ್ಪಂದು ಪಾಂಗುಳೇ ।೫೯೧॥ ಚಿತ್ತ ಚೈತನ್ಯಾ ಹೋತಾ ಭೇಟೀ । ಹರ್ಷೇ ಬಾಷ್ಪ ದಾಟೇ ಕಂಠೀ । ಪುಲಕಾಂಕಿತ ರೋಮಾಂಚ ಉಠೀ । ಉನ್ಮೀಲಿತ ದೃಷ್ಟೀ ಪುಂಜಾಳೇ ।೫೯೨॥ ಕರಿತಾ ಅಚ್ಯುತಚಿಂತನ । ಸಪ್ರೇಮ ಗಹಿವರೇ ಮನ । ಅಟ್ಟಾಹಾಸೇ ಕರೀ ರುದನ । ಅನಿವಾರ ಸ್ಫುಂದನ ಊರ್ಧ್ವಶ್ವಾಸೇ ।೫೯೩॥ ತ್ಯಾ ರುದನಾಸವೇಂಚಿ ಹರ್ಷ ಪ್ರಗಟೇ । ತ್ಯಾ ಹರ್ಷಾಚೇನಿ ನೇಟೇಪಾಟೇ । ಹಾಂಸೋ ಲಾಗೇ ಕಡಕಡಾಟೇ । ಸುಖೋದ್ಭಟೇ ಗದಗದೌನೀ ।೫೯೪॥ ಮೀಪಣಾಚೇನಿ ಅನುರೋಧೇ । ಗಿಳಿಲೋ ಹೋತೋ ಮೋಹಮದೇ । ತೋ ಸುಟಲೋ ಗುರುಕೃಪಾವಬೋಧೇ । ತೇಣೇ ಪರಮಾನಂದೇ ಡುಲ್ಲತ ।೫೯೫॥ ಮೀ-ಮಾಝೇನಿ ಭವಭಾನೇ । ಮಜ ಮೀ ಚುಕಲೋ ಮೀಪಣೇ । ಮಜ ಮೀ ಭೇಟಲೋ ಸದ್ಗುರುವಚನೇ । ಆನಂದೇ ತೇಣೇ ಉಲ್ಹಾಸೇ ।೫೯೬॥ ಕೈಸೇ ಸದ್ಗುರುವಚನ ಅಲೋಲಿಕ । ಮ್ಯಾಂಚಿ ಮಾಝೇ ಭೋಗಿಜೇ ನಿಜಸುಖ । ಯೇಣೇ ಆಶ್ಚರ್ಯೇ ದೇಖ । ಸ್ವಾನಂದೋನ್ಮುಖ ಉಲ್ಹಾಸೇ ।೫೯೭॥ ಸಂಸಾರಬಾಗುಲಾಚೇ । ಭಯ ಲಾಗಲೇ ನೇಣೋ ಕೈಚೇ । ತೇ ಗುರುವಾಕ್ಯೇ ದವಡಿಲೇ ಸಾಚೇ । ಮ್ಹಣೋನಿ ನಾಚೇ ನಿರ್ಲಜ್ಜ ।೫೯೮॥ ಜೇವೀ ಮಾಉಲೀ ದೇಖೋನಿ ಡೋಳಾ । ಬಾಲಕ ನಾಚೇ ನಾನಾಕಳಾ । ತೇವೀ ಗುರುವಾಕ್ಯಾಚಾ ಸೋಹಳಾ । ದೇಖೋನಿ ಸ್ವಲೀಳಾ ನಿಜಭಕ್ತ ನಾಚೇ ।೫೯೯॥ ತೇಣೇ ನಿಜನೃತ್ಯವಿನೋದೇ । ಫಾವಲೇನಿ ನಿಜಬೋಧೇ । ನಾನಾಪರೀಚೇ ಭಗವತ್ಪದೇ । ಸುಖಾನುವಾದೇ ಸ್ವಯೇ ಗಾತು ।೬೦೦॥ ತೇಣೇ ಕೀರ್ತನಕೀರ್ತಿಗಜರೇ । ತ್ರೈಲೋಕ್ಯ ಸುಖೇ ಸುಭರೇ । ಪರಮಾನಂದುಹೀ ಹುಂಬರೇ । ಸುಖೋದ್ಗಾರೇ ತುಷ್ಟೋನೀ ।೬೦೧॥

ಹರಿಕಥೆಯ ಮಹಿಮೆಯು ಹೇಗಿರುವುದು? ಎಂದು ಭಕ್ತಿಭಾವದಿಂದ ಕೇಳುವುದರಿಂದ ಮತ್ತು ಹೇಳುವುದರಿಂದ ಮಹತ್ತರವಾದ ಪುಣ್ಯವು ಪ್ರಾಪ್ತವಾಗುವುದು. ಪಾಪಗಳು ಔಷಧಕ್ಕೂ ದೊರೆಯಲಾರವು ।೫೮೭॥ ಯಾರ ಕೇವಲ ನಾಮಸ್ಮರಣೆಯಿಂದ ಸರ್ವ ಪಾಪಗಳು ಇಲ್ಲದಾಗುವುವೋ, ಆತನು ಸ್ವತಃ ಅಂತಃಕರಣದಲ್ಲಿ ಪ್ರಕಟನಾದರೆ, ಪಾಪಗಳಿಗೆ ಸ್ಥಾನವಾದರೂ ಹೇಗೆ ದೊರೆತೀತು? ।೫೮೮॥ ಸಾಧನರೂಪ ಭಕ್ತಿಯ ಯುಕ್ತಿಯಿಂದ ಸಪ್ರೇಮ ಭಕ್ತಿಯು ಹುಟ್ಟುವುದು. ಹೇ ಜ್ಞಾನಸಂಪನ್ನನಾದ ಚಕ್ರವರ್ತಿಯೇ, ಈ ಭಕ್ತಿಯ ಸ್ಥಿತಿಯನ್ನು ಹೇಳುವೆ, ಕೇಳು ।೫೮೯॥ ಸದ್ಭಾವನೆಯಿಂದ ಮಾಡಿದ ಅಭೇದ ಭಕ್ತಿಯಿಂದ ಹೃದಯದಲ್ಲಿ ಶ್ರೀಹರಿಯು ಪ್ರಕಟನಾಗುವನು. ಆಗ ದೇಹದ ಹೊರಗಿನ ಚಿನ್ಹೆಗಳು ಕೂಡಲೇ ಬದಲಾಗುವುವು ।೫೯೦॥ ಪರಸ್ಪರರಲ್ಲಿ ಅಧ್ಯಾತ್ಮಪರ ಸಂವಾದವು ನಡೆಯುತ್ತಿರಲು ಅಂತರಂಗದಲ್ಲಿ ಸ್ವರೂಪದ ಬೋಧವಾಗುವುದು. ಆಗ ನೇತ್ರಗಳಲ್ಲಿ ಅಶ್ರುಗಳು ತುಂಬಿ ಬರುವುವು, ಶರೀರದಲ್ಲಿ ಬೆವರು ಹುಟ್ಟುವುದು ಮತ್ತು ಪ್ರಾಣದ ಗತಿಯು ಕುಂಠಿತವಾಗುವುದು ।೫೯೧॥ ಚಿತ್ತಚೈತನ್ಯಗಳ ಭೇಟಿಯಾಯಿತೆಂದರೆ, ಆನಂದದಿಂದ ಕಂಠವು ಬಿಗಿಯುವುದು. ಮೈಮೇಲೆ ರೋಮಾಂಚನಗಳು ಏಳುವುವು ಮತ್ತು ದೃಷ್ಟಿಯು ಅರ್ಧೋನ್ಮೀಲಿತವಾಗಿ ಸ್ತಬ್ಧವಾಗುವುದು ।೫೯೨॥ ಅಚ್ಯುತನ ಚಿಂತನೆಯಿಂದ ಮನವು ಪ್ರೇಮತುಂಬಿ ಉದ್ರೇಕವಾಗುವುದು. ಈತನು ಜೋರಾಗಿ ರೋಧಿಸುವನು, ಅನಿವಾರ್ಯವಾಗಿ ನಿಟ್ಟುಸಿರುಬಿಟ್ಟು ಬಿಕ್ಕುವನು ।೫೯೩॥ ಈ ರೀತಿ ಅಳುತ್ತಿರಲು ಪುನಃ ಹರ್ಷವು ಹುಟ್ಟುವುದು. ಈ ಹರ್ಷದಭರದಲ್ಲಿ ಈತನು ಗಹಗಹಿಸಿ ನಗುವನು ।೫೯೪॥ ಈತನು ಈಗ ಹೀಗೆ ಹೇಳುವನು, ಇಲ್ಲಿಯವರೆಗೆ ನಾನು ದೇಹಂಕಾರದಿಂದ ಮೋಹಮದಕ್ಕೆ ಗ್ರಸ್ತನಾಗಿದ್ದೆನು. ಗುರುಕೃಪಾಜನ್ಯ ಬೋಧದಿಂದ ಮುಕ್ತನಾದೆನು . ಹೀಗೆ ಹೇಳುತ್ತ ಪರಮಾನಂದದಿಂದ ಲೋಲಾಡುತ್ತಿರುವನು ।೫೯೫॥ ''ನಾನು'' ಮತ್ತು ''ನನ್ನದು'' ಎಂಬ ಸಂಸಾರ ಭಾವನೆಯಿಂದ ನನ್ನನ್ನು ನಾನೇ ತಪ್ಪಿಸಿಕೊಂಡಿದ್ದೆನು. ಈಗ ಶ್ರೀಗುರುವಚನಗಳಿಂದ ನನ್ನನ್ನು ನಾನು ಭೇಟಿಯಾದೆನು. ಹೀಗೆ ಆನಂದದಿಂದ ಈತನು ಉಲ್ಹಾಸಗೊಳ್ಳುವನು ।೫೯೬॥ ಸದ್ಗುರುಗಳ ವಚನಗಳು ಎಷ್ಟೊಂದು ಆಶ್ಚರ್ಯಕಾರಕಗಳಾಗಿವೆ! ಇವುಗಳಿಂದ ನಾನು ನನ್ನ ನಿಜಸುಖವನ್ನು ಭೋಗಿಸುತ್ತಿರುವೆ ಹೀಗೆಂದು ಈತನು ಚಕಿತನಾಗಿ ಸ್ವಾನಂದದಲ್ಲಿ ತಲ್ಲೀನನಾಗುವನು ।೫೯೭॥ ಸಂಸಾರವೆಂಬ ಬೆದರುಗೊಂಬೆಯ ಭಯವು ನನಗೆ ಹೇಗೆ ಬಡೆದಿತ್ತೋ ಯಾರು ಬಲ್ಲರು! ಆದರೆ, ಅದು ಗುರುವಾಕ್ಯದಿಂದ ನಿಜವಾಗಿಯೂ ಇಲ್ಲದಾಯಿತು. ಹೀಗೆ ಹೇಳುತ್ತ ಈತನು ನಿರ್ಲಜ್ಜನಾಗಿ ನರ್ತಿಸುವನು ।೫೯೮॥ ತಾಯಿಯನ್ನು ಕಂಡಾಕ್ಷಣಕ್ಕೆ ಬಾಲಕನು ನಾನಾರೀತಿಯಲ್ಲಿ ಕುಣಿಯುವನು. ಅದರಂತೆ ಗುರುವಚನದ ಪ್ರತಾಪವನ್ನು ಮನದಲ್ಲಿ ತಂದು ತನ್ನದೇ ರಂಗಿನಲ್ಲಿ ನಿಜಭಕ್ತನು ಕುಣಿಯುವನು ।೫೯೯॥ ಆತ್ಮಬೋಧವು ಪ್ರಾಪ್ತವಾದ್ದರಿಂದ ನೃತ್ಯವಿನೋದಗಳೊಂದಿಗೆ ಈತನು ಮೇಲಿಂದ ಮೇಲೆ ಭಗವಂತನ ಗುಣಗಾನವನ್ನು ಮಹಾನಂದದಿಂದ ಸ್ವಯಂಸ್ಫೂರ್ತಿಯಿಂದ ಹಾಡುವನು ।೬೦೦॥ ಈ ಯಾವ ಗುಣಾನುವಾದ ಕೀರ್ತಿಯ ಗರ್ಜನೆಯಿಂದ ಮೂರು ಲೋಕಗಳೆಲ್ಲವೂ ಆನಂದದಿಂದ ತುಳುಕಾಡುವುವು. ಈ ಯಾವ ಆನಂದೋದ್ಗಾರದಿಂದ ಸಂತುಷ್ಟನಾಗಿ ಪರಮಾನಂದಕ್ಕೆ ಉಕ್ಕೇರುವುದು ।೬೦೧॥

ತೇಹೀ ಸಾಂಡೋನಿಯಾ ಗಾಣೇ । ಗರ್ಜೋ ಲಾಗೇ ಅತಿಸತ್ರಾಣೇ । ದುಜೇ ನಾಹೀ ನಾಹೀ ಮ್ಹಣೇ । ಗಾಣೇ ಐಕಣೇ ಮ್ಯಾ ಮಾಝೇ ॥೬೦೨॥ ಮೀಚಿ ಗಾತಾ ಮೀಚಿ ಶ್ರೋತಾ । ಮಾಝೇ ಗಾಣೇ ಮೀಚಿ ತತ್ತ್ವತಾ । ಜಗೀ ಮೀಚಿ ಏಕುಲತಾ । ದ್ವೈತಾಚೀ ಕಥಾ ಅಸೋನಿ ನಾಹೀ ॥೬೦೩॥ ಸದ್ಭಾವೇ ಭಗವತ್ಪರಿಚರ್ಯಾ । ಕರಿತಾ ಪಾರುಷೇ ಕರ್ಮಕ್ರಿಯಾ । ಅಹಂಸೋಽಹಂ ನಿರಸೋನಿಯಾ । ವೃತ್ತಿ ಹೀ ಲಯಾ ಜಾಯ ತೇಥೇ ॥೬೦೪॥ ಏವಂ ಸಪ್ರೇಮ ಭಕ್ತಿಸಂಭ್ರಮು । ತೇಣೇ ನಿರಸೇ ಸಾಧನಶ್ರಮು । ಫಿಟೇ ನಿಃಶೇಷ ಭವಭ್ರಮು । ವಾಚಾಂಸೀ ಉಪರಮು ಇಂದ್ರಿಯಾ ಹೋಯ ॥೬೦೫॥ ಜೇಥೇ ಏಕ ನಾ ದುಸರೇ । ಸನ್ಮುಖ ನಾ ಪಾಠಿಮೋರೇ । ಜೇಥ ಸುಖಹೀ ನಿಜಸುಖಾಮಾಜೀ ವಿರೇ । ತೇ ಸ್ವರೂಪ ನಿರ್ಧಾರೇ ನಿಜಶಿಷ್ಯ ಹೋತೀ ॥೬೦೬॥ ಜೇವೀ ಬಾಳಾಚೇ ಲಳೇ ಪಾಳಣೇ । ಹೇ ವ್ಯಾಲೀಚಿ ವೇದನಾ ಜಾಣೇ । ಕಾ ಶಿಷ್ಯಾಸೀ ಪೂರ್ಣ ಬೋಧ ಕರಣೇ । ತೇಥೀಲ ಕಳವಳಣೇ ಸದ್ಗುರು ಜಾಣೇ ॥೬೦೭॥ ಬಾಳಕಾ ಲೇವವಿಲ್ಯಾ ಲೇಣೇ । ಜೇವೀ ಮಾಉಲೀ ನಿವೋ ಜಾಣೇ । ಕಾ ಶಿಷ್ಯಸುಖೇ ಸುಖಾವಣೇ । ಹೇ ಸದ್ಗುರು ಜಾಣೇ ಪರಿಪೂರ್ಣಬೋಧೇ ॥೬೦೮॥ ಇಂದ್ರಿಯೇ ನೇಣತೀ ಜ್ಯಾಚೇ ಘರ । ಜೇ ಮನಾ ವಚನಾ ಅಗೋಚರ । ಬುದ್ಧೀಸಿ ನ ಕಳೇ ಜ್ಯಾಚೇ ಮೇರ । ಐಸೀ ನಿರ್ವಿಕಾರ ನಿಜವಸ್ತು ॥೬೦೯॥ ದೃಷ್ಟೀ ದಾವಿಜೇ ಸಾಕ್ಷಾತ । ಹಾತೀ ದೇಇಜೇ ಪದಾರ್ಥ । ತೈಸಾ ನವ್ಹೇ ಗಾ ಪರಮಾರ್ಥ । ತೋಹೀ ಸದ್ಗುರುನಾಥ ಪ್ರಬೋಧೀ ಶಿಷ್ಯಾ ॥೬೧೦॥ ಶಿಷ್ಯಾಸೀ ಕರಾವಯಾ ಪ್ರಬೋಧ । ಬೋಧಿತಾ ಸದ್ಗುರು ಅಗಾಧ । ಯಾಲಾಗೀ ಶಿಷ್ಯಸುಖೇ ಸ್ವಾನಂದ । ಭೋಗೀ ಪರಮಾನಂದ ಗುರುರಾವೋ ॥೬೧೧॥ ಶಿಷ್ಯಾಸೀ ಆಕಳೇ ಪರಬ್ರಹ್ಮ । ತಂವ ತಂವ ನಿರಸೇ ತ್ಯಾಚಾ ಭ್ರಮ । ತೇಣೇ ಸದ್ಗುರೂಸೀ ಪರಮ । ಸುಖ ಸಂಭ್ರಮ ಉಲ್ಹಾಸೇ ॥೬೧೨॥ ಸೇವಕು ಪರಚಕ್ರ ವಿಭಾಂಡೀ । ತಂವ ರಾಜಾ ಉಭಾರೀ ಯಶಾಚೀ ಗುಢೀ । ಶಿಷ್ಯ ಪರಮಾನಂದೀ ದೇ ಬುಡೀ । ತೇಣೇ ಗುರೂಸೀ ಗಾಢೀ ಸುಖಾವಸ್ಥಾ ॥೬೧೩॥ ಐಸೀ ಶಿಷ್ಯಕೃಪೇಚೀ ಕಳವಳ । ಜ್ಯಾ ಸದ್ಗುರುಮಾಜೀ ಪ್ರಬಳ । ತೇಥೇ ಭಾಗವತಧರ್ಮ ಹೇ ಸಕಳ । ಶಿಕಾವೇ ಅವಿಕಳ ಅನನ್ಯಶ್ರದ್ಧಾ ॥೬೧೪॥

ಇತಿ ಭಾಗವತಾನ್ ಧರ್ಮಾನ್ ಶಿಕ್ಷನ್ ಭಕ್ತ್ಯಾ ತದುತ್ಥಯಾ । ನಾರಾಯಣಪರೋ ಮಾಯಾಮಂಜಸ್ತರತಿ ದುಸ್ತರಮ್ ॥೩೩॥

ಅರ್ಥ :- ಹೇ ರಾಜನೇ, ಈ ಪ್ರಕಾರವಾಗಿ ಭಾಗವತ ಧರ್ಮದ ಶಿಕ್ಷಣವನ್ನು ಪ್ರಾಪ್ತಮಾಡಿಕೊಂಡವನಿಗೆ ಪ್ರೇಮ ಭಕ್ತಿಯ ಪ್ರಾಪ್ತಿಯಾಗುವುದು. ಮತ್ತು ಆತನು ಭಗವಾನ ನಾರಾಯಣನಲ್ಲಿ ಏಕರೂಪನಾಗುವನು. ಅತ್ಯಂತ ದುಸ್ತರವಾದ ಮಾಯೆಯಿಂದ ಈತನು ಪ್ರೇಮಭಕ್ತಿಯ ಬಲದಿಂದ ಪಾರಾಗುವನು.

ಈ ರೀತಿ ಹಾಡುವುದನ್ನು ಬಿಟ್ಟುಕೊಟ್ಟು ಈತನು ಅತಿ ಜೋರಾಗಿ ಕೂಗುವನು. ''ನನ್ನ ಹಾಡುಗಳನ್ನು ನಾನೇ ಕೇಳುವೆನು'', ಇಲ್ಲಿ ಇನ್ನಾರೂ ಇಲ್ಲ, ಇಲ್ಲ ಇಲ್ಲವೆಂದು ಹೇಳುತ್ತಲೇ ಇರುವನು ॥೬೦೨॥ ಹಾಡುವವನು ನಾನೇ, ಕೇಳುವವನು ನಾನೇ, ನನ್ನ ಹಾಡುಗಳು ಸಹ ನಿಜವಾಗಿಯೂ ನಾನೇ. ಸಂಪೂರ್ಣ ಜಗತ್ತಿನಲ್ಲಿ ನಾನೊಬ್ಬನೇ ಇರುವುದು ನಾನೇ, ದ್ವೈತವಿದ್ದರೂ ದ್ವೈತದ ಮಾತೇ ಇಲ್ಲ. ಹೀಗೆ ಈತನ ಸ್ಥಿತಿಯಾಗುವುದು ॥೬೦೩॥ ಭಕ್ತಿಭಾವದಿಂದ ಭಗವಂತನ ಸೇವೆಯನ್ನು ಮಾಡುತ್ತಿರಲು, ಕರ್ಮ ಕ್ರಿಯೆಗಳು ತಾನಾಗಿಯೇ ನಿಲ್ಲುವುವು. ''ಅಹಂ-ಸೋಹಂ'' ಸಹ ಇಲ್ಲದಾಗಿ ಎಲ್ಲ ವೃತ್ತಿಗಳು ಇಲ್ಲದಾಗುವುವು ॥೬೦೪॥ ಈ ಪ್ರಕಾರವಾಗಿ ಪ್ರೇಮಯುಕ್ತ ಭಕ್ತಿಯು ಬೆಳೆಯಿತೆಂದರೆ, ಸಾಧಕರ ಸಾಧನೆ, ಶ್ರಮ ಇಲ್ಲದಾಗುವುವು. ಭವಭ್ರಮವು ಸಹ ನಿಃಶೇಷವಾಗಿ ಇಲ್ಲದಾಗುವುದು. ನಾಲ್ಕೂ ವಾಣಿ ಸಮೇತವಾಗಿ ಎಲ್ಲ ಇಂದ್ರಿಯಗಳಿಗೆ ಶಾಂತಿಯು ಪ್ರಾಪ್ತವಾಗುವುದು ॥೬೦೫॥ ಅಲ್ಲಿ ಒಂದೂ ಇಲ್ಲ, ಎರಡೂ ಇಲ್ಲ. ಮುಂದೆಯೂ ಇಲ್ಲ, ಹಿಂದೆಯೂ ಇಲ್ಲ. ಅಲ್ಲಿ ಸುಖವೂ ಸಹ ಆತ್ಮಸುಖದಲ್ಲಿ ಕರಗಿಹೋಗುವುದು. ಈ ಸ್ವರೂಪವನ್ನೇ ನಿಶ್ಚಯವಾಗಿ ಶಿಷ್ಯರಾಗುವರು ॥೬೦೬॥ ಬಾಲಕನ ಬಯಕೆಗಳನ್ನು ಹೇಗೆ ಪೂರೈಸಬೇಕೆಂಬುದು ಅವನನ್ನು ಹಡೆದ ತಾಯಿ ಮಾತ್ರ ಅರಿಯುವಳು. ಅದರಂತೆ ಶಿಷ್ಯನಿಗೆ ಪೂರ್ಣ ಬೋಧೆಯಾಗುವ ಕಳಕಳಿಯು ಒಬ್ಬ ಸದ್ಗುರುವಿಗೆ ಮಾತ್ರ ತಿಳಿದಿರುವುದು ॥೬೦೭॥ ಕೂಸಿಗೆ ಅಲಂಕಾರ ಮಾಡಿ ಶೃಂಗಾರದ ಸಮಾಧಾನವನ್ನು ಭೋಗಿಸುವುದು ಒಬ್ಬ ತಾಯಿಗೆ ಮಾತ್ರ ತಿಳಿದಿರುವುದು. ಅದರಂತೆ ಶಿಷ್ಯನ ಸುಖದಿಂದ ತಾವು ಸುಖಪಡುವಿಕೆಯ ಈ ಪೂರ್ಣ ಬೋಧೆಯು ಒಬ್ಬ ಸದ್ಗುರುವಿಗೆ ಮಾತ್ರ ತಿಳಿದಿರುವುದು ॥೬೦೮॥ ಇಂದ್ರಿಯಗಳಿಗೆ ಅದರ ಸ್ಥಾನವು ತಿಳಿದಿರುವುದಿಲ್ಲ, ಮನಸ್ಸಿಗೂ ಮತ್ತು ವಾಣಿಗೂ ಸಹ ಇದು ಅಗೋಚರವಾಗಿರುವುದು. ಬುದ್ಧಿಗೂ ಸಹ ಇದರ ಮರ್ಯಾದೆ ರೇಖೆಯು ತಿಳಿಯುವುದಿಲ್ಲ. ಇಂತಹ ನಿರ್ವಿಕಾರವು ನಿಜವಸ್ತುವಾಗಿರುವುದು ॥೬೦೯॥ ದೃಷ್ಟಿಗೆ ಪ್ರತ್ಯಕ್ಷವಾಗಿ ತೋರಿಸುವಿಕೆ ಅಥವಾ ಕೈಯಲ್ಲಿ ಯಾವುದಾದರೂ ಪದಾರ್ಥವನ್ನು ಕೊಡುವಿಕೆ, ಹೀಗೆ ಪರಮಾರ್ಥವನ್ನು ತೋರಿಸಲು ಅಥವಾ ಕೊಡಲು ಬರುವುದಿಲ್ಲ. ಆದರೆ ಇದನ್ನು ಸಹ ಸದ್ಗುರು ಶಿಷ್ಯನಿಗೆ ಬೋಧಿಸಿ ಕೊಡುವನು ॥೬೧೦॥ ಶಿಷ್ಯನಿಗೆ ಪ್ರಬೋಧ ಮಾಡುವ ಕಾರ್ಯದಲ್ಲಿ ಸದ್ಗುರು ವಿಲಕ್ಷಣವಾದ ಉಪದೇಶಕನಾಗಿರುವನು. ಆದ್ದರಿಂದಲೇ ಶಿಷ್ಯನ ಸುಖದಿಂದ ಗುರುರಾಜನು ಪರಮಾನಂದವನ್ನು ಭೋಗಿಸುವನು ॥೬೧೧॥ ಶಿಷ್ಯನಿಗೆ ಪರಬ್ರಹ್ಮದ ಪ್ರಾಪ್ತಿಯಾಗುತ್ತಿದ್ದಂತೆ ಆತನ ಭ್ರಮದ ನಿರಸನೆಯಾಗುತ್ತಸಾಗುವುದು. ಇದರಿಂದ ಸದ್ಗುರುಗಳ ಸುಖಸಂಭ್ರಮವು ಬೆಳೆಯುತ್ತ ಸಾಗುವುದು ॥೬೧೨॥ ಸೇನಾಪತಿ, ರಾಜಸೇವಕರು ಶತ್ರು ಸೈನ್ಯವನ್ನು ಪರಾಭವಗೊಳಿಸಿದರೆ, ಇಲ್ಲಿ ರಾಜನು ವಿಜಯೋತ್ಸವದ ಪತಾಕೆ ಹಾರಿಸುವನು. ತದ್ವತ್ ಶಿಷ್ಯನು ಪರಮಾನಂದದಲ್ಲಿ ಮುಳುಗಿದರೆ, ಗುರುವು ಸುಖಸಾಗರದಲ್ಲಿ ಈಜಾಡುವನು ॥೬೧೩॥ ಹೀಗೆ ಶಿಷ್ಯನ ವಿಷಯದಲ್ಲಿ ನಿಸ್ಸೀಮವಾದ ಕಳಕಳಿ ಇರುವ ಸದ್ಗುರುವಿನಲ್ಲಿ ಅನನ್ಯ ಶ್ರದ್ಧೆಯಿಂದ ಸಂಪೂರ್ಣವಾಗಿ ಭಾಗವತಧರ್ಮವನ್ನು ಕಲಿಯಬೇಕು ॥೬೧೪॥

ಐಶೀ ಹೇ ಭಾಗವತಧರ್ಮಸ್ಥಿತಿ । ಶರಣ ಜಾಊನಿ ಸದ್ಗುರೂಪ್ರತಿ । ಅಭ್ಯಾಸಾವೀ ಭಗವದ್ಭಕ್ತಿ । ತೈ ಮಾಯೇಚೀ ಶಕ್ತಿ ಬಾಧೂ ನ ಶಕೇ ॥೬೧೫॥ ಮಾಯಾ ವೇದಶಾಸ್ತ್ರಾ ಅನಾವರ । ಬ್ರಹ್ಮಾದಿಕಾ ಅತಿದುಸ್ತರ । ತೇ ಸುಖೇ ತರತೀ ಭಗವತ್ಪರ । ಹರಿನಾಮಮಾತ್ರ - ಸ್ಮರಣಾರ್ಥೇ ॥೬೧೬॥ ಹರಿನಾಮಾಚ್ಯಾ ಗಜರಾಪುಢೇ । ಮಾಯಾ ಪಳೇ ಲವಡಸವಡೇ । ಯಾಲಾಗೀ ತರಣೋಪಾವೋ ಘಡೇ । ಸುಖ ಸುರವಾಡೇ ಹರಿಭಕ್ತಾ ॥೬೧೭॥ ಪರಾತ್ಪರ ನಾರಾಯಣಾಚೀ ಮಾಯಾ । ಭಜತಾ ನಾರಾಯಣಾಚ್ಯಾ ಪಾಯಾ । ಸುಖೇಚಿ ತರಿಜೇಗಾ ರಾಯಾ । ತ್ಯಾ ಭಜನಉಪಾಯಾ ಸಾಂಗಿತಲೇ ॥೬೧೮॥ ಮಾಯಾತರಣೋಪಾಯಸ್ಥಿತಿ । ರಾಯಾ ತುವಾ ಪುಶಿಲೀ ಹೋತೀ । ತದರ್ಥೀ ಮುಖ್ಯ ಭಗವದ್ಭಕ್ತಿ । ಜಾಣ ನಿಶ್ಚಿತೀ ನೃಪನಾಥಾ ॥೬೧೯॥ ಭಕ್ತೀಪಾಶೀ ನಿತ್ಯ ತೃಪ್ತಿ । ಭಕ್ತೀಪಾಶೀ ನಿತ್ಯಮುಕ್ತಿ । ಭಕ್ತೀಪಾಶೀ ಭಗವತ್ಪ್ರಾಪ್ತಿ । ಮಾಯಾನಿವೃತ್ತಿ ಹರಿಭಜನೇ ॥೬೨೦॥ ಹರಿನಾಮಭಜನಕಲ್ಲೋಳೇ । ಮಾಯಾ ಜೀವಿತ್ವ ಘೇಊನಿ ಪಳೇ । ಭಕ್ತ ತರತೀ ಭಾಳೇಭೋಳೇ । ಹರಿಭಜನಬಳೇ ಮಾಹಾಮಾಯಾ ॥೬೨೧॥ ಕರಿತಾ ನಾರಾಯಣಾಚೀ ಭಕ್ತೀ । ನಿಜಭಕ್ತ ಸುಖೇ ಮಾಯಾ ತರತೀ । ತೇ ನಾರಾಯಣಾಚೀ ಮುಖ್ಯ ಸ್ಥಿತೀ । ಸ್ವಯೇ ಚಕ್ರವರ್ತೀ ಪುಸತು ॥೬೨೨॥

ರಾಜೋವಾಚ :-

ನಾರಾಯಣಾಭಿಧಾನಸ್ಯ ಬ್ರಹ್ಮಣಃ ಪರಮಾತ್ಮನಃ । ನಿಷ್ಠಾಮರ್ಹಥ ನೋ ವಕ್ತುಂ ಯೂಯಂಹಿ ಬ್ರಹ್ಮವಿತ್ತಮಾಃ ॥೩೪॥

ಅರ್ಥ:- ನಿಮಿರಾಜನು ಕೇಳಿದನು: ಹೇ ಮಹರ್ಷಿಯೇ, ನೀವು ಪರಮೇಶ್ವರನ ಸ್ವರೂಪವನ್ನು ತಿಳಿದವರಾದ ಸರ್ವಶ್ರೇಷ್ಠರಾಗಿರುವಿರಿ. ಪರಬ್ರಹ್ಮ ಪರಮಾತ್ಮನನ್ನು ನಾರಾಯಣ ನಾಮದಿಂದ ವರ್ಣಿಸಲ್ಪಡುವುದು. ಆತನ ಸ್ವರೂಪದ ವರ್ಣನೆಯನ್ನು ಮಾಡಿ ತಿಳಿಸಿರಿ.

ಸರ್ವಾಭೂತೀ ಭಗವದ್ಭಾವೋ । ಹಾ ಮುಖ್ಯ ಮಾಯಾ ತರಣೋಪಾವೋ । ಆಇಕೋನಿ ಸುಖಾವಲಾ ರಾವೋ । ತೇಣೇ ಆನಂದೇ ಪಹಾ ಹೋ ಪರಬ್ರಹ್ಮ ಪುಸೇ ॥೬೨೩॥ ಕರಿತಾ ನಾರಾಯಣಾಚೀ ಭಕ್ತಿ । ಉತ್ತಮ ಭಕ್ತ ಮಾಯಾ ತರತೀ । ತೇ ನಾರಾಯಣಾಚೀ ನಿಜಸ್ಥಿತಿ । ಸಾಕ್ಷೇಪೇ ನೃಪತಿ ಪುಸತು ॥೬೨೪॥ ''ಬ್ರಹ್ಮ - ಪರಮಾತ್ಮಾ ನಾರಾಯಣ'' । ವಸ್ತೂಸೀಚ ಮ್ಹಣಣೇ ಜಾಣ । ತೇ ವಸ್ತು ನಿಷ್ಠಾ ಪರಿಪೂರ್ಣ । ರಾಜಾ ಆಪಣ ಪುಸತು ॥೬೨೫॥ ಸಕಳಾಮಾಜೀ ಅಧಿಷ್ಠಾನ । ಸಬಾಹ್ಯ ಜ್ಯಾಚೇನಿ ಪರಿಪೂರ್ಣ । ತ್ಯಾ ಸ್ವರೂಪಾತೇ ''ನಾರಾಯಣ'' । ಸ್ವಯೇ ವೇದಜ್ಞ ಬೋಲತೀ ॥೬೨೬॥

ಹೀಗೆ ಭಾಗವತ ಧರ್ಮದ ಸ್ಥಿತಿಯಾಗಿರುವುದು. ಸದ್ಗುರುವಿಗೆ ಶರಣಾಗಿ ಭಾಗವತ ಧರ್ಮೋಕ್ತ ಭಗವದ್ಭಕ್ತಿಯ ಅಭ್ಯಾಸವನ್ನು ಮಾಡಬೇಕು. ಈ ಭಗವದ್ಭಕ್ತಿಯಿಂದ ಮಾಯೆಯ ಶಕ್ತಿಯು ಬಾಧಿಸುವುದಿಲ್ಲ ॥೬೧೫॥ ''ಮಾಯಾ'' ಎಂಬುದು ವೇದಶಾಸ್ತ್ರಗಳ ಅಭ್ಯಾಸದಿಂದ ಅಂಕಿತವಾಗಲಾರದು. ಬ್ರಹ್ಮಾದಿಕರಿಗೂ ಸಹ ಇದು ಅತಿ ದುಸ್ತರವಾಗಿರುವುದು. ಆದರೆ, ಭಗವದ್ಭಕ್ತನು ಕೇವಲ ಹರಿನಾಮ ಸ್ಮರಣೆಯಿಂದ ಮಾಯೆಯನ್ನು ಅನಾಯಾಸವಾಗಿ ಗೆಲ್ಲುವನು ॥೬೧೬॥ ಹರಿನಾಮದ ಗರ್ಜನೆಯನ್ನು ಕೇಳಿ ಮಾಯೆಯು ತತ್ಕಾಲದಲ್ಲಿ ಓಡಿಹೋಗುವುದು. ಆದ್ದರಿಂದ ಹರಿಭಕ್ತನಿಗೆ ತರಣೋಪಾಯವು ಸಾಧಿಸಿ, ಆತನಿಗೆ ಸುಖದ ಸುಕಾಳವಾಗುವುದು ॥೬೧೭॥ ಹೇ ರಾಜನೇ, ಈ ಮಾಯೆಯು ಪರಾತ್ಪರ ನಾರಾಯಣನ ಸ್ವಾಧೀನವು. ಆದ್ದರಿಂದ ನಾರಾಯಣ ಚರಣಗಳ ಭಜನೆಯಿಂದ ಆ ಮಾಯೆಯನ್ನು ಸಹಜವಾಗಿ ಗೆಲ್ಲಬಹುದು. ಈ ಭಜನೆಯ ಉಪಾಯವನ್ನು ನಿನಗೆ ತಿಳಿಸಲಾಗಿದೆ ॥೬೧೮॥ ಮಾಯೆಯನ್ನು ಗೆಲ್ಲಲು ಉಪಾಯ ಯಾವುದೆಂದು ನೀನು ಕೇಳಿದ್ದೆ, ಅದಕ್ಕಾಗಿ ಹೇ ನೃಪನಾಥನೇ, ಮುಖ್ಯವಾಗಿ ಭಗದ್ಭಕ್ತಿಯೇ ಅದಕ್ಕೆ ಉಪಾಯವಾಗಿರುವುದೆಂದು ನಿಶ್ಚಯವಾಗಿ ತಿಳಿ ॥೬೧೯॥ ಭಕ್ತಿಯಲ್ಲಿ ನಿತ್ಯತೃಪ್ತಿ ಇರುವುದು, ಭಕ್ತಿಯಲ್ಲಿ ನಿತ್ಯಮುಕ್ತಿ ಇರುವುದು, ಭಕ್ತಿಯಲ್ಲಿ ಭಗತ್ಪ್ರಾಪ್ತಿಯಿರುವುದು ಮತ್ತು ಹರಿಭಜನೆಯಿಂದಲೇ ಮಾಯೆಯ ನಿವೃತ್ತಿಯಾಗುವುದು ॥೬೨೦॥ ಹರಿನಾಮ ಕೀರ್ತನೆಯ ಗರ್ಜನೆಯಿಂದ ಮಾಯೆಯು ಜೀವ ಹಿಡಿದು ಓಡುವುದು. ಹರಿಭಜನೆಯ ಸಾಮರ್ಥ್ಯದಿಂದ ಭಾಳೇ ಭೋಳೇ ಭಕ್ತರು ಸಹ ಈ ಮಹಾಮಾಯೆಯನ್ನು ಗೆಲ್ಲುವರು ॥೬೨೧॥ ನಾರಾಯಣನ ಭಕ್ತಿಯಿಂದ ನಿಜ ಭಕ್ತರು ಮಾಯೆಯನ್ನು ಸಹಜವಾಗಿ ಗೆಲ್ಲುವರು. ಹಾಗಾದರೆ, ಆ ನಾರಾಯಣನ ಮುಖ್ಯ ಸ್ವರೂಪಸ್ಥಿತಿಯು ಹೇಗಿರುವುದೆಂದು ಚಕ್ರವರ್ತಿ ಜನಕನು ಮುಂದೆ ಕೇಳುವನು ॥೬೨೨॥

ಸರ್ವ ಭೂತಮಾತ್ರರಲ್ಲಿ ಭಗವದ್ಭಾವವನ್ನು ಇಡುವುದೇ ಮಾಯೆಯಿಂದ ಪಾರಾಗುವ ಉಪಾಯವಾಗಿರುವುದು. ಇದನ್ನು ಕೇಳಿ ರಾಜನಿಗೆ ಅತ್ಯಂತ ಆನಂದವಾಯಿತು. ಮತ್ತು ಈ ಆನಂದದ ಭರದಲ್ಲಿ ಈತನು ಪರಬ್ರಹ್ಮದ ಸ್ವರೂಪವನ್ನು ಕೇಳಿದನು ॥೬೨೩॥ ಈ ಯಾವ ನಾರಾಯಣನ ಭಕ್ತಿಯನ್ನು ಮಾಡುವುದರಿಂದ ಉತ್ತಮ ಭಕ್ತನು ಮಾಯೆಯಿಂದ ಸಹಜವಾಗಿ ಪಾರಾಗುವನು. ಅದಕ್ಕಾಗಿ ನಾರಾಯಣನ ನಿಜಸ್ವರೂಪವನ್ನು ರಾಜನು ಅತ್ಯಂತ ಉತ್ಕಂಠದಿಂದ ಕೇಳಿದನು ॥೬೨೪॥ ಸದ್‌ವಸ್ತುವಿಗೆ ಬ್ರಹ್ಮ, ಪರಮಾತ್ಮ, ಮತ್ತು ನಾರಾಯಣ ಎಂದು ಹೇಳುವರು. ಇದರ ನಿಜಸ್ಥಿತಿಯು ಹೇಗಿರುವುದೆಂಬುದನ್ನು ವಿಸ್ತಾರವಾಗಿ ಹೇಳಲೆಂದು ರಾಜನು ಪ್ರಶ್ನಿಸಿದನು ॥೬೨೫॥ ಎಲ್ಲ ಜಗತ್ತಿನ ಅಧಿಷ್ಠಾನವಾಗಿರುವ, ಒಳಹೊರಗೆ ಪರಿಪೂರ್ಣವಾಗಿ ವ್ಯಾಪ್ತನಾಗಿರುವ, ಈ ಸ್ವರೂಪಕ್ಕೆ ''ನಾರಾಯಣ'' ನೆಂದು ವೇದಜ್ಞರು ಹೇಳುವರು ॥೬೨೬॥

ತುಮ್ಹಾ ಐಸೇ ಜ್ಞಾನನಿಧಿ । ಭಾಗ್ಯೇ ಜೋಡಲೇತಿ ತ್ರಿಶುದ್ಧೀ । ತುಮಚ್ಯಾ ವಚನಾಮೃತಬೋಧೀ । ಅಹಂಬುದ್ಧಿ ಉಪಜೇನಾ ॥೬೨೭॥ ತುಮಚಿಯಾ ವಚನೋಕ್ತೀ । ವೋಸಂಡಲೀ ಸ್ವಾನಂದಸ್ಫೂರ್ತಿ । ಲಾಂಚಾವಲೀ ಚಿತ್ತವೃತ್ತಿ । ಶ್ರವಣೇ ತೃಪ್ತಿ ಕದಾ ನ ಮನೀ ॥೬೨೮॥ ಐಕೋನಿಯಾ ರಾಯಾಚಾ ಶ್ರೇಷ್ಠ ಪ್ರಶ್ನ । ಪ್ರಬುದ್ಧಾಧಾಕುಟಾ ಪಿಪ್ಪಲಾಯನ । ತೋ ಬೋಲಾವಯಾ ಆಪಣ । ಸ್ವಾನಂದೇ ಪೂರ್ಣ ಸರಸಾವಲಾ ॥೬೨೯॥

ಪಿಪ್ಪಲಾಯನ ಉವಾಚ :-

ಸ್ಥಿತ್ಯುದ್ಭವಪ್ರಲಯಹೇತುರಹೇತುರಸ್ಯ ಯತ್ ಸ್ವಪ್ನಜಾಗರಸುಷುಪ್ತಿಷು ಸದ್ಬಹಿಶ್ಚ ।
ದೇಹೇಂದ್ರಿಯಾಸುಹೃದಯಾನಿ ಚರಂತಿ ಯೇನ ಸಂಜೀವಿತಾನಿ ತದವೇಹಿ ಪರಂ ನರೇಂದ್ರ ॥೩೫॥

ಅರ್ಥ :- ಯೋಗೇಶ್ವರ ಪಿಪ್ಪಲಾಯನ ನುಡಿದನು: ಹೇ ರಾಜನೇ, ಈ ಜಗತ್ತಿನ ಉತ್ಪತ್ತೀ, ಸ್ಥಿತೀ, ಮತ್ತು ಲಯ ಇವುಗಳಿಗೆ ನಿಮಿತ್ತಕಾರಣ ಮತ್ತು ಉಪಾದಾನ ಕಾರಣ, ಈ ಎರಡಕ್ಕೂ ತಾನಾಗಿ, ಸಿದ್ಧವಾಗುವ, ಸಿದ್ಧಗೊಳಿಸುವವನು ಈತನೇ ಇರುವನು. ಈತನು ಸ್ವತಃ ಕಾರಣರೂಪನಾಗಿರುವನು. ಸ್ವಪ್ನ, ಜಾಗೃತಿ ಮತ್ತು ಸುಷುಪ್ತಿಗಳಲ್ಲಿ ಸಾಕ್ಷಿರೂಪನಾಗಿರುವನು. ಸಮಾಧಾನ ಅವಸ್ಥೆಯಲ್ಲಿಯೂ ಈತನು ಏಕರಸದಿಂದಿರುವನು. ಈತನ ಸತ್ತೆಯಿಂದಲೇ ಶರೀರ, ಇಂದ್ರಿಯಗಳು, ಪ್ರಾಣ ಮತ್ತು ಅಂತಃಕರಣಗಳು ತಮ್ಮ ತಮ್ಮ ಕಾರ್ಯಗಳನ್ನು ಸಮರ್ಥತನದಿಂದ ಮಾಡುವುವು. ಈ ಯಾವ ಪರಮ ಸತ್ಯ ವಸ್ತುವನ್ನು ನಾರಾಯಣ ಎಂದು ತಿಳಿಯಬೇಕು.

ಅಗಾ ಜ್ಯಾಚೇನಿ ಉಪಜೇ ಉತ್ಪತ್ತಿ । ಜ್ಯಾಚೇನಿ ಅಂಗೇ ಸ್ಥಿತೀಸೀ ಸ್ಥಿತಿ । ಜ್ಯಾಚೇನಿ ಪ್ರಳಯಾ ಪ್ರಳಯಶಕ್ತಿ । ಐಸಾ ಜೋ ತ್ರಿಜಗತೀ ಮುಖ್ಯ ಹೇತು ॥೬೩೦॥ ಯಾಪರೀ ಜೋ ಜಗಾಚಾ ಹೇತು । ಸ್ವಯೇ ಸ್ವಸತ್ತಾ ಹೇತುರಹಿತು । ಸಚ್ಚಿದಾನಂದೇ ಸದೋದಿತು । ತೋ ಜಾಣ ನಿಶ್ಚಿತು ನಾರಾಯಣು ॥೬೩೧॥ ಜೇವೀ ಸಾಯಂಪ್ರಾತರ್ಮಧ್ಯಾಹ್ನ । ತಿಹೀ ಕಾಳೀ ಅಲಿಪ್ತ ಗಗನ । ತೇವೀ ಉತ್ಪತ್ತಿ ಸ್ಥಿತಿ ಪ್ರಳಯೀ ಜಾಣ । ಅಲಿಪ್ತ ನಾರಾಯಣ ಪರಮಾತ್ಮಾ ॥೬೩೨॥ ಉತ್ಪತ್ತಿಸ್ಥಿತಿಪ್ರಳಯಾಂತ । ಮ್ಹಣಸೀ ಕೋಣ ದೇಖೇ ಯೇಥ । ತೇಚಿ ಅರ್ಥೀಚಾ ದೃಷ್ಟಾಂತ । ಸ್ಫುರದರ್ಥ ಅವಧಾರೀ ॥೬೩೩॥ ಜಾಗೃತಿ ಸ್ವಪ್ನ ಆಣಿ ಸುಷುಪ್ತಿ । ತಿನ್ಹೀ ವ್ಯಾಪೂನಿ ಸಮಾಧೀಹೀ ಪರತೀ । ಜ್ಯಾಚೇ ಸಾಕ್ಷಿತ್ವೇ ಸ್ಫುರೇ ಸ್ಫೂರ್ತಿ । ತೋ ಜಾಣ ನಿಶ್ಚಿತೀ ನಾರಾಯಣ ॥೬೩೪॥ ಜಾಗೃತೀಚೇ ಜಾಣಪಣ । ಸ್ವಪ್ನಾಚೇ ಮಿಥ್ಯಾ ಭಾನ । ಸುಷುಪ್ತೀಚಾ ಸಾಕ್ಷೀ ಪೂರ್ಣ । ತೋ ನಾರಾಯಣ ನಿಶ್ಚಿತ ॥೬೩೫॥ ಏವಂ ಪರಮಾತ್ಮಾ ಪರಂಜ್ಯೋತಿ । ಆತ್ಮಾ ಹೃದಯಸ್ಥ ತ್ರಿಜಗತೀ । ತ್ಯಾತೇ "ನಾರಾಯಣ" ಮ್ಹಣತೀ । ಜಾಣ ನಿಶ್ಚಿತೀ ನೃಪನಾಥಾ ॥೬೩೬॥ ಐಸೀ ಸಾಂಗತಾ ಬ್ರಹ್ಮಸ್ಫೂರ್ತಿ । ಅಗಮ್ಯ ವಾಟೇಲ ಬ್ರಹ್ಮಪ್ರಾಪ್ತಿ । ಸಹಜೇ ಬ್ರಹ್ಮ ಆತುಡೇ ಹಾತೀ । ಐಕ ತೇ ಉಪಪತ್ತಿ ಸಾಂಗೇನ ॥೬೩೭॥ ತರೀ ಪರಮಾತ್ಮಾ ಬ್ರಹ್ಮಪೂರ್ಣ । ತುಝೇ ಹೃದಯೀ ನಾಂದೇ ಆಪಣ । ಜ್ಯಾಚೇನಿ ಮನ ಬುದ್ಧಿ ಪ್ರಾಣ । ಇಂದ್ರಿಯೇ ಜಾಣ ವರ್ತತೀ ॥೬೩೮॥

ತಮ್ಮಂಥ ಜ್ಞಾನನಿಧಿಗಳು ನಿಜವಾಗಿಯೂ ನನ್ನ ಭಾಗ್ಯದಿಂದ ಪ್ರಾಪ್ತರಾಗಿರುವಿರಿ. ತಮ್ಮ ವಚನಾಮೃತದ ಬೋಧೆಯಿಂದ ನನ್ನ ಅಹಂ ಬುದ್ಧಿಯು ಹುಟ್ಟಲಾರದಾಗಿದೆ ॥೬೨೭॥ ತಮ್ಮ ವಚನೋಕ್ತಿಯಿಂದ ಸ್ವಾನಂದಸ್ಫೂರ್ತಿಯು ಉಕ್ಕೇರಿದೆ. ನನ್ನ ಚಿತ್ತವೃತ್ತಿಯು ಅದೆಷ್ಟು ಲೋಭಗೊಂಡಿದೆ ಎಂದರೆ, ನಿಮ್ಮಿಂದ ಎಷ್ಟು ಶ್ರವಣ ಮಾಡಿದರೂ ಸಾಕಾಗುತ್ತಿಲ್ಲ ॥೬೨೮॥ ರಾಜನ ಈ ಮಹತ್ವದ ಪ್ರಶ್ನೆಯನ್ನು ಕೇಳಿ ಪ್ರಬುದ್ಧನ ತಮ್ಮನಾದ "ಪಿಪ್ಪಲಾಯನ" ನು ಬಹಳ ಆನಂದದಿಂದ ಹೇಳಲು ಮುಂದಾದನು ॥೬೨೯॥

ಹೇ ರಾಜನೇ, ಯಾರಿಂದ ವಿಶ್ವದ ಉತ್ಪತ್ತಿಯಾಗುವುದೋ, ಯಾರಿಂದ ವಿಶ್ವದ ರಕ್ಷಣೆಯಾಗುವುದೋ, ಯಾರಿಂದ ಪ್ರಳಯಕಾಲಕ್ಕೆ ಪ್ರಳಯಶಕ್ತಿಯು ಪ್ರಾಪ್ತವಾಗುವುದೋ, ಹೀಗಿರುವ ತ್ರೈಲೋಕ್ಯದ ಮೂರೂ ಅವಸ್ಥೆಗಳಿಗೆ ಮುಖ್ಯಕಾರಣವಾಗಿದೆ ॥೬೩೦॥ ಈ ಪ್ರಕಾರವಾಗಿ ಜಗತ್ತಿನ ಮೂಲ ಕಾರಣನಾಗಿ, ತಾನು ಮಾತ್ರ ಸ್ವಸತ್ತೆಯಿಂದ ಹೇತುರಹಿತನಾಗಿ ಮತ್ತು ಸದಾ ಸರ್ವಕಾಲದಲ್ಲಿ ಸಚ್ಚಿದಾನಂದದಿಂದ ಪರಿಪೂರ್ಣನಾದ ಈತನೇ "ನಾರಾಯಣ" ನೆಂದು ನೀನು ನಿಶ್ಚಯವಾಗಿ ತಿಳಿ ॥೬೩೧॥ ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಈ ಮೂರೂ ಕಾಲಕ್ಕೆ ಆಕಾಶವು ಅಲಿಪ್ತವಾಗಿರುವಂತೆ, ಉತ್ಪತ್ತಿ, ಸ್ಥಿತಿ ಮತ್ತು ಲಯಗಳಲ್ಲಿ ನಾರಾಯಣನು ಅಲಿಪ್ತನಾಗಿರುವನು ॥೬೩೨॥ ಈಗ ಉತ್ಪತ್ತಿ - ಸ್ಥಿತಿ - ಪ್ರಳಯಗಳನ್ನು ನೋಡುವವರು ಯಾರೆಂದು ನೀನು ಕದಾಚಿತ್ ಕೇಳಬಹುದು, ಅದಕ್ಕಾಗಿ ಸ್ಪಷ್ಟವಾದ ಅರ್ಥವಾಗುವಂತೆ ದೃಷ್ಟಾಂತವನ್ನು ಕೇಳು ॥೬೩೩॥ ಜಾಗೃತ, ಸ್ವಪ್ನ ಮತ್ತು ಸುಷುಪ್ತಿ ಈ ಮೂರರಲ್ಲಿಯೂ ವ್ಯಾಪಿಸಿರುವ, ಸಮಾಧಿಯ ಆಚೆ ಇರುವ, ಯಾರ ಸಾಕ್ಷಿತ್ವದಿಂದ ಸ್ಫೂರ್ತಿಗೆ ಸ್ಫುರಣವಾಗುವ, ಈತನೇ ನಿಶ್ಚಯವಾಗಿ "ನಾರಾಯಣ" ನೆಂದು ತಿಳಿ ॥೬೩೪॥ ಜಾಗೃತಿಯ ಜ್ಞಾನವು, ಸ್ವಪ್ನದ ಮಿಥ್ಯಾಭಾನವು ಮತ್ತು ಸುಷುಪ್ತಿಯ ಪೂರ್ಣ ಸಾಕ್ಷಿತ್ವವು ಹೀಗಿರುವ ಆತನೇ ನಿಜವಾಗಿಯೂ "ನಾರಾಯಣ"ನು ॥೬೩೫॥ ಈ ಪ್ರಕಾರದ ಪರಂಜ್ಯೋತಿ ಪರಮಾತ್ಮನು, ತ್ರಿಭುವನಗಳ ಸರ್ವ ಜೀವರ ಹೃದಯಸ್ಥನು, ಹೇ ನೃಪನಾಥನೇ, ಈತನಿಗೆ "ನಾರಾಯಣ" ಎನ್ನುವರು, ಲಕ್ಷದಲ್ಲಿಡು ॥೬೩೬॥ ಹೀಗೆ ಬ್ರಹ್ಮನ ಸ್ವರೂಪವನ್ನು ಹೇಳುತ್ತ ಹೋದರೆ, ಬ್ರಹ್ಮಪ್ರಾಪ್ತಿಯು ಅಗಮ್ಯವೆಂದು ತೋರಬಹುದು, ಅದಕ್ಕಾಗಿಯೇ ಬ್ರಹ್ಮವು ಸಹಜವಾಗಿ ಕೈಸೇರುವಂತೆ ಯುಕ್ತಿಯನ್ನು ತಿಳಿಸುವೆ, ಕೇಳು ॥೬೩೭॥ ಪರಮಾತ್ಮನು ಪೂರ್ಣನಾಗಿ ನಿನ್ನ ಹೃದಯದಲ್ಲಿರುವನು. ಈತನಿಂದಲೇ ಮನ, ಬುದ್ಧಿ, ಪ್ರಾಣ ಮತ್ತು ಇಂದ್ರಿಯಗಳು ವರ್ತಿಸುವುವು ॥೬೩೮॥

ನಯನೇ ತೇಣೇ ತೇಜೇ ದೇಖಣೇ । ರಸನಾ ತೇಣೇ ಸ್ವಾದೇ ಚಾಖೋ ಜಾಣೇ । ಶ್ರವಣ ತೇಣೇ ಅವಧಾನೇ । ಶಬ್ದಜ್ಞಾನೇ ಪ್ರಬೋಧತೀ ॥೬೩೯॥ ತೇಣೇ ಅಹಂಕಾರಾ ಅಹಂಭಾವ । ತೇಣೇಚಿ ಮನಾಸೀ ಮಂತವ್ಯ । ತೇಣೇಚಿ ಚಿತ್ತಾಸೀ ಚೇತವ್ಯ । ಬುದ್ಧೀಸಿ ಬೋಧವ್ಯ ತೇಣೇ ಬ್ರಹ್ಮಾವಬೋಧೇ ॥೬೪೦॥ ತೇಣೇ ಜಡ ದೇಹ ಸಚೇತನ । ತೇಣೇಚಿ ಕಳೇ ಮೃದು ಕಠಿಣ । ತೇಣೇಚಿ ಚರಣಾಚ್ಯಾ ಠಾಯೀ ಗಮನ । ಕರೀ ಕರ ಗ್ರಹಣ ತ್ಯಾಚಿಯೇ ಸತ್ತಾ ॥೬೪೧॥ ತ್ಯಾಚೇನಿ ಪ್ರಾಣ ಪರಿಚರತೀ । ತ್ಯಾಚೇನಿ ನಿಮಿಷೋನ್ಮೇಷ ಸ್ಫೂರ್ತಿ । ತ್ಯಾಚಾ ಆನಂದಲೇಶಸ್ಥಿತೀ । ಆನಂದ ಉಪಸ್ಥೀ ಭೋಗಿತೀ ಪ್ರಾಣೇ ॥೬೪೨॥ ಏವಂ ಚಾಳಕು ಜೋ ತ್ರಿಜಗತೀ । ಜೋ ಸ್ವಾನಂದೇ ನಾಂದೇ ಹೃದಯಸ್ಥಿತೀ । ತ್ಯಾತೇ "ನಾರಾಯಣ" ಮ್ಹಣತೀ । ತೋಚಿ ನಿಶ್ಚಿತೀ ಪರಮಾತ್ಮಾ ॥೬೪೩॥ ಜ್ಯಾಚೇನಿ ಮನ ಬುದ್ಧಿ ಪ್ರಾಣ । ಇಂದ್ರಿಯೇ ವಿಚರತೀ ಸಂಪೂರ್ಣ । ತೋ ತೂ ಮ್ಹಣಸೀ ತ್ಯಾಆಧೀನ । ಹೇ ಕಲ್ಪಾಂತೀ ಜಾಣ ಕದಾ ನ ಘಡೇ ॥೬೪೪॥ ತೇಥ ಜಾಣಪಣೇ ಜಾಣೋ ಜಾಸೀ । ತೈ ಜಾಣವೇ ತೇಚಿ ನೇಣಸೀ । ತೇಥ ಜ್ಞಾತೇಪಣೇ ಜ್ಞಾನಾಸೀ । ಸ್ವರೂಪಾಪಾಶೀ ರಿಗೂ ನಾಹೀ ॥೬೪೫॥ ಜಾಣೇವ ಆಣಿ ನೇಣೇವ । ಹೇ ಸೋಡೂನಿ ಸರ್ವ ಭಾವ । ಜೈ ಉಪಜೇ "ಸದ್ಭಾವ" । ತೈ ಬ್ರಹ್ಮ ಸ್ವಯಮೇವ ಪಾವಿಜೇ ॥೬೪೬॥

ನೈತನ್ಮನೋ ವಿಶತಿ ವಾಗುತ ಚಕ್ಷುರಾತ್ಮಾ ಪ್ರಾಣೇಂದ್ರಿಯಾಣಿ ಚ ಯಥಾನಲಮರ್ಚಿಷಃ ಸ್ವಾಃ ।
ಶಬ್ದೋಽಪಿ ಬೋಧಕನಿಷೇಧತಯಾತ್ಮಮೂಲ - ಮರ್ಥೋಕ್ತಮಾಹ ಯದೃತೇ ನ ನಿಷೇಧಸಿದ್ಧಿಃ ॥೩೬॥

ಅರ್ಥ :- ಅಗ್ನಿಯಿಂದ ಹುಟ್ಟಿದ ಕಿಡಿಗಳು ಅಗ್ನಿಯನ್ನು ಬಾಧಿಸಲಾರವು. ಅದರಂತೆಯೇ ಮನಸ್ಸಾಗಲೀ ಅಥವಾ ವಾಕ್ಕು, ಚಕ್ಷು, ಬುದ್ಧಿ, ಪ್ರಾಣವಾಯು ಇಲ್ಲವೇ ಯಾವುದೇ ಇಂದ್ರಿಯವಾಗಲೀ ಆ ಪರಮತತ್ತ್ವವನ್ನು ಭೇದಿಸಲು ಅಸಮರ್ಥವಾಗಿವೆ. ವೇದಗಳ ಅಧಿಕೃತ ಭಾಷೆ ಕೂಡ ಪರಮತತ್ತ್ವವನ್ನು ಪರಿಪೂರ್ಣವಾಗಿ ವರ್ಣಿಸಲಾರದು. ಏಕೆಂದರೆ, ಸತ್ಯತತ್ತ್ವವನ್ನು ಶಬ್ದಗಳಲ್ಲಿ ಅಭಿವ್ಯಕ್ತಿಸುವ ಸಾಧ್ಯತೆಯನ್ನು ವೇದಗಳೇ ಅಲ್ಲಗಳೆಯುತ್ತವೆ. ಆದರೆ, ಪರೋಕ್ಷ ಸೂಚನೆಯ ಮೂಲಕ ವೈದಿಕ ವಾಣಿಯು ಪರಮತತ್ತ್ವದ ಪ್ರಮಾಣವಾಗುತ್ತದೆ. ಏಕೆಂದರೆ, ಆ ಪರಮತತ್ತ್ವವು ಇಲ್ಲದಿದ್ದರೆ, ವೇದಗಳಲ್ಲಿ ಕಂಡುಬರುವ ನಾನಾ ವಿಧವಾದ ಕಟ್ಟುಪಾಡುಗಳಿಗೆ ಯಾವ ಅಂತಿಮ ಉದ್ದೇಶವೂ ಇರುತ್ತಿರಲಿಲ್ಲ.

ವೈಕುಂಠ ಕೈಲಾಸ ಕ್ಷೀರಾಬ್ಧೀ । ಮನ ಕಲ್ಪೀ ಕಲ್ಪನಾವಿಧೀ । ಪರೀ ಆತ್ಮಾ ಕಲ್ಪಾವಯಾ ತ್ರಿಶುದ್ಧೀ । ಮನಬುದ್ಧ್ಯಾದೀ ಸರೇನಾ ॥೬೪೭॥ ಸ್ವಯೇ ಕಲ್ಪೀ ತ್ರಿಭುವನ । ತೇ ಸ್ವರೂಪೀ ರಿಘೋ ನ ಶಕೇ ಮನ । ಬುದ್ಧಿ ನಿಶ್ಚಯಾತ್ಮಕ ಪೂರ್ಣ । ತೀಸಹೀ ಜಾಣ ಅಗಮ್ಯ ವಸ್ತು ॥೬೪೮॥ ಜೇ ಮನಬುದ್ಧಿ ಅಗೋಚರ । ತೇ ವಾಚೇಸೀ ಅತಿ ದುಸ್ತರ । ವಸ್ತು ನವ್ಹೇ ಶಬ್ದಗೋಚರ । ಪರಾತ್ಪರ ಪರಬ್ರಹ್ಮ ॥೬೪೯॥

ನೇತ್ರಗಳು ಈತನ ತೇಜದಿಂದಲೇ ರೂಪ ನೋಡುವುದು, ಈತನ ಸ್ವಾದದಿಂದಲೇ ನಾಲಿಗೆಯು ರಸದ ರುಚಿಯನ್ನು ಚೀಪುವುದು, ಈತನ ಅವಧಾನದಿಂದಲೇ ಕಿವಿಗಳಿಗೆ ಶಬ್ದ ಧ್ವನಿಯ ಬೋಧವಾಗುವುದು ॥೬೩೯॥ ಆತನಿಂದಲೇ ಅಹಂಕಾರಕ್ಕೆ ಅಹಂಭಾವವು ಧರಿಸಲ್ಪಡುವುದು, ಮನವು ಮನನವನ್ನು ಮಾಡುವುದು. ಆತನಿಂದಲೇ ಚಿತ್ತಕ್ಕೆ ಚಿಂತನವು ಮಾಡಲ್ಪಡುವುದು, ಬುದ್ಧಿಗೆ ಅದೇ ಬ್ರಹ್ಮಜ್ಞಾನ ಶಕ್ತಿಯಿಂದ ಬೋಧವಾಗುವುದು ॥೬೪೦॥ ಆತನಿಂದಲೇ ಜಡದೇಹವು ಸಚೇತನವಾಗುವುದು. ಆತನಿಂದಲೇ ಚರ್ಮಕ್ಕೆ ಶೀತೋಷ್ಣ, ಮೃದು ಕಠಿಣ ತಿಳಿಯುವುದು. ಕಾಲುಗಳ ನಡೆಯುವಿಕೆ, ಕೈಗಳ ಕೊಡುವ ತೆಗೆದುಕೊಳ್ಳುವಿಕೆ ಆತನ ಸತ್ತೆಯಿಂದಲೇ ನಡೆಯುತ್ತವೆ ॥೬೪೧॥ ಆತನಿಂದಲೇ ಪ್ರಾಣದ ಉಸಿರಾಟವು, ಕಣ್ಣುಗಳ ತೆರೆಯುವಿಕೆ, ಮುಚ್ಚುವಿಕೆಗಳು ನಡೆಯುವವು. ಆತನದೇ ಆದ ಆನಂದಲೇಶದಿಂದ ಪ್ರಾಣಿಗಳು ಜನನೇಂದ್ರಿಯಗಳಿಂದ ವಿಷಯಾನಂದವನ್ನು ಭೋಗಿಸುವುವು ॥೬೪೨॥ ಈ ಪ್ರಕಾರವಾಗಿ ತ್ರಿಭುವನದ ಚಾಲಕನಾದ, ಸ್ವಾನಂದದಿಂದ ಹೃದಯದಲ್ಲಿ ವಾಸಮಾಡುವವನಿಗೆ ''ನಾರಾಯಣ'' ನೆಂದು ಹೇಳುವರು. ನಿಜವಾಗಿಯೂ ಆತನೇ ''ಪರಮಾತ್ಮ''ನು ॥೬೪೩॥ ಈಗ, ಆತನಿಂದಲೇ ಮನ, ಬುದ್ಧಿ, ಪ್ರಾಣ ಮತ್ತು ಇಂದ್ರಿಯಗಳು ಹೀಗೆ ಎಲ್ಲವೂ ನಡೆಯುತ್ತಿರಲು ಆತನು ಇವುಗಳ ಆಧೀನನಾಗಿರುವನು ಎಂದು ನೀನು ಕದಾಚಿತ್ ಹೇಳಬಹುದು. ಆದರೆ, ಅದು ಮಾತ್ರ ಕಲ್ಪಾಂತಕ್ಕೂ ಸಾಧ್ಯವಾಗದು ॥೬೪೪॥ ಹೀಗಿರುವ ಆ ಸ್ವರೂಪವನ್ನು ಜ್ಞಾನದಿಂದ ತಿಳಿಯಲು ಹೋದರೆ, ಅಲ್ಲಿ ತಿಳಿಯುವ ಜ್ಞಾನವೇ ಇಲ್ಲದಾಗುವುದು. ಏಕೆಂದರೆ, ನಾನು ಜ್ಞಾತಾ, ಅದು ಜ್ಞೇಯ ಎಂಬ ಜ್ಞಾನದಿಂದ ಬುದ್ಧಿಗೆ ಆತ್ಮ ಸ್ವರೂಪದಲ್ಲಿ ಪ್ರವೇಶವಾಗದು ॥೬೪೫॥ ಜ್ಞಾನಿ, ಅಜ್ಞಾನಿ ಎಂಬ ಎಲ್ಲ ಭಾವವನ್ನು ಬಿಟ್ಟು, ಕೇವಲ ''ಸದ್ಭಾವ'' ಹುಟ್ಟಿದರೆ, ಆಗ ಬ್ರಹ್ಮವು ತಾನೇ ಪ್ರಾಪ್ತವಾಗುವುದು ॥೬೪೬॥

ವೈಕುಂಠ, ಕೈಲಾಸ, ಕ್ಷೀರಸಾಗರ ಇತ್ಯಾದಿಗಳನ್ನು ಮನವು ಕಲ್ಪಿಸಲು ಸಾಧ್ಯವಾಗಿದೆ, ಆದರೆ, ಆತ್ಮದ ನಿಜವಾದ ಕಲ್ಪನೆ ಮಾಡಲು ಮನಬುದ್ಧಿಗಳಿಗೆ ಸಾಮರ್ಥ್ಯವು ಇರುವುದಿಲ್ಲ ॥೬೪೭॥ ಮನವು ತಾನು ಸ್ವತಃ ತ್ರಿಭುವನಗಳ ಕಲ್ಪನೆ ಮಾಡಲು ಸಮರ್ಥವಾಗಿದೆ. ಅದೇ ಮನವು ಆತ್ಮಸ್ವರೂಪದಲ್ಲಿ ಪ್ರವೇಶ ಮಾಡಲಾಗುವುದಿಲ್ಲ. ಬುದ್ಧಿಯು ನಿಜವಾಗಿಯೂ ಪೂರ್ಣ ನಿಶ್ಚಯಾತ್ಮಕವಾಗಿದೆ, ಆದರೆ ಅದೇ ಬುದ್ಧಿಗೆ ಪರಬ್ರಹ್ಮವು ಅಗಮ್ಯವಾಗಿರುವುದು ॥೬೪೮॥ ಹೀಗೆ ಮನಬುದ್ಧಿಗಳಿಗೆ ಅಗೋಚರವಾಗಿರುವ, ವಾಣಿಗೂ ಅತ್ಯಂತ ದುಸ್ತರವಾಗಿರುವ, ಪರಾತ್ಪರ ಪರಬ್ರಹ್ಮವು ಶಬ್ದಕ್ಕೆ ಗೋಚರಿಸಲು ಸಾಧ್ಯವೇ ಇಲ್ಲ ॥೬೪೯॥

ಮೋಟೇ ಬಾಂಧತಾ ಆಕಾಶಾತೇ । ಚಾರೀ ಪಾಲವ ಪಡತೀ ರಿತೇ । ತೇವೀ ಶಬ್ದೇ ಬೋಲಾವೇ ವಸ್ತೂತೇ । ತಂವ ಶಬ್ದ ಶಬ್ದಾರ್ಥೇ ನಿರ್ಧರ್ಮ ॥೬೫೦॥ ಪ್ರಾಣಾಚೇನಿ ನಿಜ ಧಾಳೇ । ಜೇ ಕಾ ಕ್ರಿಯಾಶಕ್ತಿ ಚಳೇ । ತೇ ಕ್ರಿಯೇಸೀ ವಸ್ತು ನಾತಳೇ । ಮಾ ಇಂದ್ರಿಯಾ ಆಕಳೇ ಕೈಸೇನೀ ॥೬೫೧॥ ಜೇವೀ ಥಿಲ್ಲರಾಆಂತೌತಾ । ಬಿಂಬೋನಿ ವೋಲಾ ನವ್ಹೇ ಸವಿತಾ । ತೇವೀ ಮನಬುದ್ಧಿ ಇಂದ್ರಿಯಾಪರತಾ । ಜಾಣ ತತ್ತ್ವತಾ ಪರಮಾತ್ಮಾ ॥೬೫೨॥ ಜೋ ಮನಾಚೇ ಅನಾದಿ ಮನ । ಜೋ ಬುದ್ಧೀಚೇ ಬುದ್ಧಿ ಸಜ್ಞಾನ । ಜೋ ನಯನಾಚೇ ಆದಿ ನಯನ । ಜೋ ಶ್ರವಣಾಚೇ ಶ್ರವಣ ಸಾವಧಾನತ್ವೇ ॥೬೫೩॥ ಜೋ ಘ್ರಾಣಾಚೇ ನಿಜಘ್ರಾಣ । ಜೋ ರಸನೇಚೇ ರಸನಾ ಆಪಣ । ಜೋ ತ್ವಚೇಚೀ ನಿಜತ್ವಚಾ ಪೂರ್ಣ । ಜೀವಾಚಾ ಜೋ ಜಾಣ ಜೀವು ಸ್ವಯೇ ॥೬೫೪॥ ಜೋ ಇಂದ್ರಿಯಾಂಚಾ ಪ್ರಕಾಶಿತಾ । ಜೋ ಕರ್ಮ ಕರೋನಿ ಅಕರ್ತಾ । ತೋ ಇಂದ್ರಿಯೀ ಇಂದ್ರಿಯಾರ್ಥಾ । ವಿಷಯೀ ಸರ್ವಥಾ ಹೋ ನೇಣೇ ॥೬೫೫॥ ಜೇಥ ಬುದ್ಧೀಚೀ ದೃಷ್ಟೀ ನ ವಳಂಘೇ । ತೇಥ ಮನ ಮನಪಣೇ ಕೇವೀ ರಿಘೇ । ಮಾ ಶ್ರವಣನಯನಘ್ರಾಣಯೋಗೇ । ವಿಷಯಸಂಯೋಗೇ ಕೇವೀ ಭೇಟೇ ॥೬೫೬॥ ಜೇಥ ಪ್ರಾಣಶಕ್ತಿ ನ ಚಲೇ ಪುಢೇ । ಜೇಥ ವಾಚಾ ಸ್ವಯೇ ಲಾಜಿಲೀ ಮುರಡೇ । ಮಾ ಕರ್ಮೇಂದ್ರಿಯಾಂಸೀ ಕೋಣೇಕಡೇ । ಪವಾಡು ಪುಢೇ ಜೋಡೇಲ ॥೬೫೭॥ ಅಗ್ನೀಪಾಸೂನಿ ಆಹ್ಯಾ ಅನೇಗ । ಕ್ಷಣಕ್ಷಣಾ ನಿಘತೀ ಚಾಂಗ । ಪರೀ ಆಹ್ಯಾಮಾಜೀ ಅಗ್ನೀಚೇ ಅಂಗ । ಸರ್ವಥಾ ಸಾಂಗ ಪ್ರಗಟೇನಾ ॥೬೫೮॥ ಕಾ ಸೂರ್ಯಾಪಾಸೂನ ಸೂರ್ಯಕಾಂತ । ಪ್ರಕಾಶತೀ ಅಸಂಖ್ಯಾತ । ಪರೀ ಸೂರ್ಯಕಾಂತಾಆಂತ । ಕದಾ ಭಾಸ್ವತ ಪ್ರಗಟೇನಾ ॥೬೫೯॥ ಜೇವೀ ಸಿಂಧೂಪಾಸೂನಿ ತರಂಗ । ಪ್ರಕಾಶಿತ ಅತಿ ಅನೇಗ । ತರೀ ತರಂಗೀ ಸಿಂಧೂಚೇ ಅಂಗ । ಸರ್ವಥಾ ಸಾಂಗ ಪ್ರಗಟೇನಾ ॥೬೬೦॥ ತೇವೀ ಬ್ರಹ್ಮಾಪಾಸೋನಿ ಕರಣೇ । ಪ್ರಕಾಶತೀ ಅನೇಕಪಣೇ । ತರೀ ತ್ಯಾ ಇಂದ್ರಿಯಾ ಬ್ರಹ್ಮ ಜಾಣಣೇ । ಹೇ ಜೀವೇ ಪ್ರಾಣೇ ಘಡೇನಾ ॥೬೬೧॥ ಜರೀ ಕೇಳಾಪಾಸೂನಿ ಕೇಳೀ ನಿಪಜೇ । ಕಾ ಸಾಖರೇಪಾಸೂನಿ ಊಂಸ ಉಪಜೇ । ತರೀ ಇಂದ್ರಿಯೀ ಬ್ರಹ್ಮ ಜಾಣಿಜೇ । ಹೇ ನ ಯೇ ನಿಜವೋಜೇ ಬ್ರಹ್ಮಾದಿಕಾ ॥೬೬೨॥ ಆಶಂಕಾ ॥ ಇಂದ್ರಿಯೀ ನವ್ಹೇ ಬ್ರಹ್ಮಜ್ಞಾನ । ತೈ ಜೀವಾಚೇ ಭವಬಂಧನ । ಕದಾ ಕಾಳೀ ನ ತುಟೇ ಜಾಣ । ಜನ್ಮ ಮರಣ ಅನಿವಾರ ॥೬೬೩॥ ''ಶಬ್ದಾದೇವಾಪರೋಕ್ಷ ಮತಿ'' । ಐಶೀ ಶ್ರುತಿಶಾಸ್ತ್ರ - ಉಪಪತ್ತಿ । ತೇಹೀ ಮಿಥ್ಯಾ ವಾಟೇ ವದಂತೀ । ಐಸೇ ತೂ ನಿಶ್ಚಿತೀ ಮಾನಿಸೀ ರಾಯಾ ॥೬೬೪॥

ಆಕಾಶವನ್ನು ಗಂಟುಮಾಡಿ ಕಟ್ಟಲು ಹೋದರೆ, ವಸ್ತ್ರದ ನಾಲ್ಕೂ ಸೆರಗುಗಳು ಹಾಗೆಯೇ ಉಳಿಯುವುವು. ಅದರಂತೆ ಶಬ್ದಗಳಿಂದ ಪರಬ್ರಹ್ಮವನ್ನು ಹೇಳಲು ಹೋದರೆ, ಶಬ್ದಾರ್ಥಗಳ ಧರ್ಮವೇ ಇಲ್ಲದಾಗುವುದು ॥೬೫೦॥ ಪ್ರಾಣದ ಗತಿಯಿಂದ ಕ್ರಿಯಾಶಕ್ತಿಯು ನಡೆಯುವುದು. ಆ ಕ್ರಿಯೆಗೂ ಪರಬ್ರಹ್ಮವು ತಿಳಿಯಲಾರದು. ಅಂದಮೇಲೆ ಇಂದ್ರಿಯಗಳಿಗೆ ಅದು ಹೇಗೆ ದೊರಕೀತು? ॥೬೫೧॥ ನಿಂತ ನೀರಿನಲ್ಲಿ ಪ್ರತಿಬಿಂಬವು ಕಾಣಲು ಸೂರ್ಯನೇನಾದರೂ ಹಸಿಯಾಗುವುವಿಲ್ಲ. ಅದರಂತೆ ಮನ, ಬುದ್ಧಿ ಮತ್ತು ಇಂದ್ರಿಯಗಳ ಆಚೆ ಪರಮಾತ್ಮನಿರುವನೆಂದು ನೀನು ನಿಶ್ಚಯವಾಗಿ ತಿಳಿ ॥೬೫೨॥ ಮನದ ಅನಾದಿಮನನಾಗಿರುವ, ಬುದ್ಧಿಯ ಸಜ್ಞಾನ ಬುದ್ಧಿಯಾಗಿರುವ, ನೇತ್ರಗಳ ಆದ್ಯ ನೇತ್ರನಾಗಿರುವ, ಕಿವಿಗಳ ಲಕ್ಷಕೊಟ್ಟು ಕೇಳುವ ಕಿವಿಯಾಗಿರುವ, ॥೬೫೩॥ ಮೂಗಿನ ಮೂಲವಾದ ಮೂಗಾಗಿರುವ, ನಾಲಿಗೆಯ ನಾಲಿಗೆಯಾಗಿರುವ, ತ್ವಚೆಯ ಅಂತರ್‌ತ್ವಚೆಯಾಗಿರುವ, ಮತ್ತು ಜೀವದ ಜೀವನಾಗಿರುವ ॥೬೫೪॥ ಇಂದ್ರಿಯಗಳ ಪ್ರಕಾಶಕನಾಗಿರುವ, ಎಲ್ಲ ಕರ್ಮಗಳನ್ನು ಮಾಡಿಯೂ ಅಕರ್ತನಾಗಿರುವ ಈತನು, ಇಂದ್ರಿಯಗಳಿಗೆ ವಿಷಯನಾಗಲು ಎಂದೂ ಸಾಧ್ಯವಿಲ್ಲ ॥೬೫೫॥ ಎಲ್ಲಿ ಬುದ್ಧಿಯ ದೃಷ್ಟಿಯು ನಿಲುಕುವುದಿಲ್ಲವೋ, ಅಲ್ಲಿ ಮನತ್ವದಿಂದ ಮನವಾದರೂ ಹೇಗೆ ಪ್ರವೇಶಿಸಬೇಕು? ಹಾಗಾದರೆ, ಶ್ರವಣ, ನಯನ, ಘ್ರಾಣ ಇವುಗಳಿಂದ ಮತ್ತು ವಿಷಯಗಳ ಸಂಯೋಗದಿಂದ ಪರಬ್ರಹ್ಮವು ಹೇಗೆ ಸಿಗಬೇಕು? ॥೬೫೬॥ ಪ್ರಾಣದ ಶಕ್ತಿಯೂ ಸಹ ಆತನತನಕ ಮುಟ್ಟದಾದಾಗ, ವಾಣಿಯಾದರೂ ಅಲ್ಲಿಗೆ ಹೇಗೆ ಮುಟ್ಟಬೇಕು? ಇದು ಲಜ್ಜೆಗೊಂಡು ತನ್ನಿಂದ ತಾನೇ ಹಿಂದಕ್ಕೆ ಸರಿಯುವುದು ॥೬೫೭॥ ಅಗ್ನಿಯಿಂದ ಕ್ಷಣಕ್ಷಣಕ್ಕೆ ಕಿಡಿಗಳು, ಜ್ವಾಲೆಗಳು ಹೊರಡುವುವು. ಆದರೆ ಅವುಗಳಲ್ಲಿ ಅಗ್ನಿಯ ಪೂರ್ಣಸ್ವರೂಪವು ಏನೂ ಪ್ರಕಟವಾಗಲಾರದು ॥೬೫೮॥ ಅಥವಾ ಸೂರ್ಯನಿಂದ ಅಸಂಖ್ಯಾತ ಸೂರ್ಯಕಾಂತಗಳು ಹೊಳೆಯುತ್ತವೆ. ಆದರೆ ಆ ಸೂರ್ಯಕಾಂತಗಳಲ್ಲಿ ಸೂರ್ಯನು ಎಂದೂ ಪ್ರಕಟವಾಗಲಾರನು ॥೬೫೯॥ ಅಥವಾ ಸಮುದ್ರದಿಂದ ಅನೇಕಾನೇಕ ತೆರೆಗಳು ಹುಟ್ಟುವುವು. ಆದರೆ ಆ ತೆರೆಗಳಲ್ಲಿ ಸಮುದ್ರದ ಸಂಪೂರ್ಣ ಅಂಗವು ಎಂದೂ ಪ್ರಕಟವಾಗಲಾರದು ॥೬೬೦॥ ತದ್ವತ್ ಬ್ರಹ್ಮನಿಂದ ಅನೇಕ ಇಂದ್ರಿಯಗಳು ವ್ಯಕ್ತವಾಗುವುವು. ಆದರೆ ಆ ಇಂದ್ರಿಯಗಳಿಗೆ ಬ್ರಹ್ಮದ ತಿಳುವಿಕೆಯು ಯಾವುದರಿಂದಲೂ ಎಂದೆಂದಿಗೂ ಆಗುವುದು ಶಕ್ಯವೇ ಇಲ್ಲ ॥೬೬೧॥ ಬಾಳೆಯ ಹಣ್ಣನ್ನು ಬಿತ್ತಿ ಬಾಳೆಯ ಫಲಗಳನ್ನು ಪಡೆದರೆ, ಅಥವಾ ಸಕ್ಕರೆಯನ್ನು ಬಿತ್ತಿ ಕಬ್ಬು ಬೆಳೆದರೆ ಮಾತ್ರ ಇಂದ್ರಿಯಗಳು ಬ್ರಹ್ಮನನ್ನು ತಿಳಿಯುವುವು. ಆದರೆ ಇದು ಬ್ರಹ್ಮದೇವರಿಗೂ ಸಾಧ್ಯವಿಲ್ಲ ॥೬೬೨॥ ಸಂಶಯ॥ ಇಂದ್ರಿಯಗಳಿಗೆ ಬ್ರಹ್ಮಜ್ಞಾನವಾಗದಿದ್ದರೆ, ಜೀವದ ಬಂಧನವು ಎಂದೂ ಮುರಿಯಲಾಗದು, ಅದರಿಂದ ಜನ್ಮಮರಣಗಳು ಎಂದೆಂದಿಗೂ ತಪ್ಪಲಾರವು ॥೬೬೩॥ ''ಶಬ್ದಾದೇವಾಪರೋಕ್ಷ'' ಅಂದರೆ ಶಬ್ದದಿಂದಲೇ ಅಪರೋಕ್ಷಾನುಭವವು ಎಂಬ ಶ್ರುತಿಶಾಸ್ತ್ರಗಳ ಉಪಪತ್ತಿ ಇರುವುದೆಂದು ಹೇಳುವುದೆಲ್ಲವೂ ಅಸತ್ಯವಾಗಿ ತೋರುವುವು. ಹೀಗೆ ನೀನು ನಿಜವಾಗಿಯೂ ನಿಶ್ಚಯಪಡಬಹುದು ॥೬೬೪॥

ತೇಹೀ ಅರ್ಥೀಚೇ ನಿರೂಪಣ । ಐಕ ರಾಯಾ ಸಾವಧಾನ । ಶಬ್ದ ನಿಮೋನಿ ಆಪಣ । ದೇ ಬ್ರಹ್ಮ ಜ್ಞಾನ ಜೀವಾಸೀ ॥೬೬೫॥

"ಶಬ್ದೋಽಪಿ ಬೋಧಕನಿಷೇಧತಯಾತ್ಮಮೂಲಮರ್ಥೋಕ್ತಮಾಹ ಯದೃತೇ ನ ನಿಷೇಧಸಿದ್ಧಿಃ" ।

ಜೀವು ಸೋಡವಾವಯಾ ಹೋಡಾ । ಶಬ್ದೇ ಸವೇಗ ಉಚಲಿಲಾ ವೀಡಾ । ತೇಣೇ ಘೇತಾ ತತ್ತ್ವಾಂಚಾ ಝಾಡಾ । ಆಪಣಹೀ ಪುಢಾ ನಿಮಾಲಾ ॥೬೬೬॥ ಶ್ರುತಿ "ನೇತಿ ನೇತಿ" ಯೇಣೇ ಶಬ್ದೇ । ಅನಾತ್ಮವೃತ್ತಿ ನಿಷೇಧಬೋಧೇ । ಪರೀ ಸಾಕ್ಷಾತ್ ವೇದಾನುವಾದೇ । ನಿಜ ವಸ್ತು ಶಬ್ದೇ ನ ಬೋಲವೇ ॥೬೬೭॥ ಶಬ್ದಾಸೀ ಜೇ ವಾಚ್ಯ ನೋಹೇ । ತೇಚಿ ಪರಬ್ರಹ್ಮ ಜಾಣಾವೇ । ತೇಥೀಲ ಜೋ ಖುಣೇ ಪಾವೇ । ತೋ ಬ್ರಹ್ಮ ಸದ್ಭಾವೇ ಸ್ವಯೇ ಹೋಯ ॥೬೬೮॥ ಶ್ರುತಿ "ನೇತಿ ನೇತಿ" ಯೇಣೇ ವಚನೇ । ಶಬ್ದ ನಿಷೇಧೂನಿ ವಸ್ತು ದಾವಣೇ । ಶಬ್ದೀ ನಿಃಶಬ್ದ ಜೋ ಲಕ್ಷೂ ಜಾಣೇ । ತೇಣೇ ಪಾವಣೇ ಪರಬ್ರಹ್ಮ ॥೬೬೯॥ ಶಬ್ದು ನಿಜನಿಷೇಧೇ ಜೇ ಬೋಧೀ । ತೇಥ ಸಮರಸೇ ಜ್ಯಾಚೀ ಬುದ್ಧಿ । ತೇಚಿ ಪರಬ್ರಹ್ಮ ಗಾ ತ್ರಿಶುದ್ಧಿ । ನಿಷೇಧಾವಧಿ ತೋ ಠಾವೋ ॥೬೭೦॥ ಶಬ್ದ ನಿಮೋನಿ ಸರ್ವಶಕ್ತೀ । ಜೀವಾಸೀ ದೇ ಬ್ರಹ್ಮಪ್ರಾಪ್ತಿ । "ಶಬ್ದಾದೇವಾಪರೋಕ್ಷೇತಿ" । ಜಾಣ ನಿಶ್ಚಿತೀ ಯಾ ನಾಂವ ॥೬೭೧॥ ವಾಚಾ ನಿಃಶೇಷ ನಿವರ್ತೇ । ಮನ ಬುದ್ಧಿ ನ ಪವೇ ಜೇಥೇ । ತೇಚೀ ಅವಧಿ ನಿಷೇಧಾತೇ । "ಪರಬ್ರಹ್ಮ" ತ್ಯಾತೇ ಬೋಲಿಜೇ ॥೬೭೨॥ ಜೇ ವಾಚೇಚೇ ವದವಿತೇ । ಪರೀ ವಾಚಾ ವದೋ ನ ಶಕೇ ಜ್ಯಾತೇ । ಜೇ ಮನಬುದ್ಧ್ಯಾದಿಕಾ ಜಾಣತೇ । ಪರೀ ಮನ ಬುದ್ಧಿ ಜ್ಯಾತೇ ನೇಣತೀ ॥೬೭೩॥ ಜೇ ನಯನಾತೇ ದಾಖವಿತೇ । ಪರೀ ನಯನ ನ ದೇಖತೀ ಜ್ಯಾತೇ । ಜೇ ಶ್ರವಣಘ್ರಾಣಾಂತೇ ಚೇತವಿತೇ । ಪರೀ ಶ್ರವಣ ಘ್ರಾಣ ಜ್ಯಾತೇ ನೇಣತೀ ॥೬೭೪॥ ಏವಂ ಸರ್ವಾಚೇ ಜಾಣತೇ । ಪರೀ ಸರ್ವ ಸರ್ವಥಾ ನೇಣೇ ಜ್ಯಾತೇ । ಜ್ಯಾಸೀ ಜಾಣಾವಯಾಲಾಗೀ ಯೇಥೇ । ಆಣಿಕ ಜಾಣತೇ ಅಸೇನಾ ॥೬೭೫॥ ಐಸೇ ಸ್ವಸಂವೇದ್ಯ ನಿಜಜ್ಞಾತೇ । ಜ್ಯಾಸೀ ದುಜೇ ನಾಹೀ ಜಾಣತೇ । ಶಬ್ದ ರಿಘಾವಯಾ ತೇಥೇ । ರಿಗಮು ತ್ಯಾತೇ ಅಸೇನಾ ॥೬೭೬॥ ಜೇ ಕೃಶ ನಾ ಪುಷ್ಕಳ । ಜೇ ವಕ್ರ ನಾ ವರ್ತುಳ । ಜೇ ಸೂಕ್ಷ್ಮ ನಾ ನವ್ಹೇ ಸ್ಥೂಳ । ವಸ್ತು ಕೇವಳ ನಿರ್ವಿಕಾರ ॥೬೭೭॥ ಜ್ಯಾಸೀ ನಾಹೀ ರೂಪಗುಣ । ಜ್ಯಾಸೀ ನಾಹೀ ಆಶ್ರಮವರ್ಣ । ಜ್ಯಾಸೀ ನಾಹೀ ಮೀತೂಪಣ । ಜ್ಯಾಸೀ ಜನ್ಮ ಮರಣ ಅಸೇನಾ ॥೬೭೮॥

ಹೇ ರಾಜನೇ, ಈ ಸಂಶಯವನ್ನು ಸಹ ನಾನು ನಿರಸನ ಮಾಡುವೆನು. ಅದನ್ನು ಸಾವಧಾನ ಚಿತ್ತದಿಂದ ಕೇಳು, ಶಬ್ದವು ತಾನು ಸ್ವತಃ ಲಯವಾಗಿ ಜೀವಕ್ಕೆ ಬ್ರಹ್ಮಜ್ಞಾನವನ್ನು ಕೊಡುವುದು ॥೬೬೫॥ "ಜೀವಕ್ಕೆ ಸಂಸಾರ ಬಂಧನದಿಂದ ಬಿಡಿಸುವೆ" ಎಂದು ವೇದವು ಆವೇಶಗೊಂಡು ದೂಡುಕಟ್ಟಿ ತಾಂಬೂಲವನ್ನು ಸ್ವೀಕರಿಸಿತು, ಆದರೆ ಎಲ್ಲ ತತ್ತ್ವಗಳನ್ನು ಶೋಧಿಸಿ ಕೊನೆಗೆ ಸಾಧ್ಯವಾಗದೇ ಕೈಪೂರಿತು ॥೬೬೬॥ ಶ್ರುತಿಯು "ನೇತಿ ನೇತಿ" ಎಂಬ ಶಬ್ದದಿಂದ ಅನಾತ್ಮ ಪದಾರ್ಥಗಳ ನಿಷೇಧವನ್ನು ತೋರಿಸಿ, ಆತ್ಮಸ್ವರೂಪದ ಚಿನ್ಹೆಯನ್ನು "ಪರ್ಯಾಯ" ದಿಂದ ಹೇಳಿರುವುದು. ಆದರೆ ಆತ್ಮದ "ಪ್ರತ್ಯಕ್ಷ" ಸ್ವರೂಪವನ್ನು ವೇದಕ್ಕೆ ಹೇಳಲು ಬರಲಿಲ್ಲ ॥೬೬೭॥ ಯಾವುದು ಶಬ್ದಕ್ಕೆ ವಿಷಯವಾಗುವುದಿಲ್ಲವೋ ಅದೇ "ಪರಬ್ರಹ್ಮ" ವೆಂದು ಅರಿಯಬೇಕು. ಈ ರಹಸ್ಯವು ಲಕ್ಷಕ್ಕೆ ಬಂದವರು ಸಹಜವಾಗಿ ಬ್ರಹ್ಮರೂಪರಾಗುವರು ॥೬೬೮॥ ಶ್ರುತಿಯು "ಇದು ಅಲ್ಲ, ಇದು ಅಲ್ಲ" ಹೀಗೆ ನಿಷೇಧರೂಪ ವಚನಗಳಿಂದ ಪರಬ್ರಹ್ಮವನ್ನು ತೋರಿಸುವುದು. ಈ ಶ್ರುತಿಶಬ್ದಗಳ ಸಹಾಯದಿಂದ ನಿಃಶಬ್ದವಾದ ಪರಬ್ರಹ್ಮವನ್ನು ತಿಳಿಯುವವನೇ ಪರಬ್ರಹ್ಮವನ್ನು ಪಡೆಯುವನು ॥೬೬೯॥ ಶಬ್ದವು ತನ್ನ ನಿಷೇಧದಿಂದ ಯಾವುದನ್ನು ಜ್ಞಾನಮಾಡಿ ಕೊಡುವುದೋ, ಆ ತತ್ತ್ವದಲ್ಲಿ ಯಾರ ಬುದ್ಧಿಯು ಸಮರಸವಾಗುವುದೋ ಆ ತತ್ತ್ವವೇ ನಿಶ್ಚಯವಾಗಿ "ಪರಬ್ರಹ್ಮ" ವು. ನಿಷೇಧದ ಕೊನೆಯಲ್ಲಿ ಇರುವ ಮರ್ಯಾದೆಸ್ಥಾನವೂ ಅದೇ ಆಗಿರುವುದು ॥೬೭೦॥ ಶಬ್ದವು ತನ್ನ ಸರ್ವಶಕ್ತಿಯೊಂದಿಗೆ ಲಯವಾಗಿ ಜೀವಕ್ಕೆ ಬ್ರಹ್ಮಪ್ರಾಪ್ತಿಯನ್ನು ಮಾಡಿಕೊಡುವುದು. "ಶಬ್ದದಿಂದಲೇ ಅಪರೋಕ್ಷ ಜ್ಞಾನವು" ಎಂದು ಇದಕ್ಕೇನೇ ಹೇಳುವರು ॥೬೭೧॥ ಎಲ್ಲಿ ವಾಣಿಯು ಸಂಪೂರ್ಣವಾಗಿ ಕುಂಠಿತವಾಗುವುದೋ ಅಲ್ಲಿ ಮನ ಮತ್ತು ಬುದ್ಧಿ ನಿಲುಕಲಾರವು. ಇದುವೇ ನಿಷೇಧದ ಸೀಮೆಯಾಗಿರುವುದು. ಇದಕ್ಕೇನೇ "ಪರಬ್ರಹ್ಮ" ಎಂದು ಹೇಳುವರು ॥೬೭೨॥ ಬ್ರಹ್ಮವು ವಾಣಿಗೆ ನುಡಿಸುವುದು. ಆದರೆ ವಾಣಿಯು ಅದನ್ನು ನುಡಿದು ತೋರಿಸದು. ಅದು ಮನಬುದ್ಧಿಗಳಿಗೆ ಬೆಳಗಿಸುವುದು. ಆದರೆ ಮನಬುದ್ಧಿಗಳು ಮಾತ್ರ ಅದನ್ನು ತಿಳಿಯಲಾರವು ॥೬೭೩॥ ಬ್ರಹ್ಮವು ನೇತ್ರಗಳಿಗೆ ರೂಪಾದಿ ತೋರಿಸುವುದು. ಆದರೆ ನೇತ್ರಗಳು ಮಾತ್ರ ಅದನ್ನು ನೋಡಲಾರವು. ಅದು ಶ್ರವಣಕ್ಕೆ ಮತ್ತು ಘ್ರಾಣಕ್ಕೆ ಕೇಳುವ ಮೂಸಿಸುವ ಶಕ್ತಿಯನ್ನು ಕೊಡುವುದು. ಆದರೆ ಅವು ಅದನ್ನು ಅರಿಯಲಾರವು ॥೬೭೪॥ ತಾತ್ಪರ್ಯವೇನೆಂದರೆ ಎಲ್ಲಕ್ಕೂ ಯಾವುದರಿಂದ ತಿಳುವಳಿಕೆಯಾಗಿದೆಯೋ, ಅವೆಲ್ಲವೂ ಅದನ್ನು ಸರ್ವಥಾ ಅರಿಯಲಾರವು. ಅದನ್ನು ಅರಿಯಲು ಬೇರೆ ಯಾರೂ ಇರುವುದಿಲ್ಲ ॥೬೭೫॥ ಹೀಗೆ ಬ್ರಹ್ಮವು "ಸ್ವಸಂವೇದ್ಯ" ಅಂದರೆ ತನ್ನನ್ನು ತಾನೇ ತಿಳಿಯುವವನು. ಆತನನ್ನು ಅರಿಯುವವರು ಅನ್ಯರಾರೂ ಇರುವುದಿಲ್ಲ. ಅಲ್ಲಿ ಶಬ್ದಕ್ಕೆ ಪ್ರವೇಶವಾಗಲು ಅವಕಾಶವೇ ಇರುವುದಿಲ್ಲ ॥೬೭೬॥ ಯಾವುದು ಕೃಶವಲ್ಲ, ವಿಪುಲವೂ ಅಲ್ಲ, ಯಾವುದು ಸರಳವಲ್ಲ, ವಕ್ರವೂ ಅಲ್ಲ; ಯಾವುದು ಸೂಕ್ಷ್ಮವು ಅಲ್ಲ, ಸ್ಥೂಲವೂ ಅಲ್ಲ. ಹೀಗೆ ಇದು ಕೇವಲ ನಿರ್ವಿಕಾರ ವಸ್ತುವಾಗಿದೆ ॥೬೭೭॥ ಇದಕ್ಕೆ ರೂಪವಿಲ್ಲ, ಗುಣವೂ ಇಲ್ಲ. ಇದಕ್ಕೆ ಆಶ್ರಮವಿಲ್ಲ, ವರ್ಣವೂ ಇಲ್ಲ. ಇದಕ್ಕೆ ನಾನೆಂಬುದು ಇಲ್ಲ, ನೀನೆಂಬುದೂ ಇಲ್ಲ. ಹಾಗೆಯೆ ಇದಕ್ಕೆ ಜನ್ಮವೂ ಇಲ್ಲ, ಮರಣವೂ ಇಲ್ಲ ॥೬೭೮॥

ಜೇ ಹಳುವಟ ನಾ ಗಹಿಂಸ । ಜೇ ಚಿವಳ ನಾ ಸಪೋಸ । ಜೇ ವಸತೇ ನಾ ವೋಸ । ಜೇ ಕಾ ನಿಃಶೇಷ ನಿರ್ಧರ್ಮ ।೬೭೯॥ ಜೇ ಹ್ರಸ್ವ ನಾ ಮೋಠೇ । ಜೇ ವಡೀಲ ನಾ ಧಾಕುಟೇ । ಜೇ ವಿಚಾರಿತಾ ವಿವೇಕವಾಟೇ । ವಿವೇಕುಹೀ ಆಟೇ ನಿಃಶೇಷ ।೬೮೦॥ ಜ್ಯಾಸೀ ಆದಿ ನಾ ಅಂತು । ಜೇ ಮಧ್ಯಸ್ಥಿತೀರಹಿತು । ಜೇ ಗುಣ ನಾ ಗುಣಾತೀತು । ಅಚ್ಯುತಾನಂತು ಅದ್ವಯತ್ವೇ ।೬೮೧॥ ತ್ಯಾ ಸ್ವರೂಪಾಚಾ ವಚನಪಾಠ । ಕರಾವಯಾ ವೇದೇ ಕೇಲೀ ಖಟಪಟ । ತೇಥ ಶ್ರುತೀಚಾಹೀ ಬೋಭಾಟ । ಲಾಜಿಲಾ ಕರೂನಿ ಕಷ್ಟ ನೇತಿನೇತಿವಾದೇ ।೬೮೨॥ ವೇದು ಕಾಯ ನೇಣೋನಿ ಪರತಲಾ । ಜಾಣೋನಿ ನ ಬೋಲಿವೇಚಿ ಬೋಲಾ । ಯಾಚಿಲಾಗೀ ತೋ ಮೌನಾವಲಾ । ತಟಸ್ಥ ಠೇಲಾ ನಿಃಶಬ್ದೇ ।೬೮೩॥ ವೇದೇ ಧರಿತಾ ದೃಢ ಮೌನ । ಶಾಸ್ತ್ರೇ ಭಾಂಬಾವಲೀ ಜಾಣ । ತಿಹೀ ಧರೋನಿ ಮತಾಭಿಮಾನ । ಕರಿತೀ ವಲ್ಗನ ಅತಿವಾದೇ ।೬೮೪॥ ''ಶಬ್ದಾಂತೀ ಬ್ರಹ್ಮಜ್ಞಾನ'' । ಹೇ ವೇದೇ ಪಾವೋನಿ ಪೂರ್ಣ ಖೂಣ । ಶಬ್ದೇ ಶಬ್ದ ನಿಷೇಧೂನ । ದೃಢ ಮೌನ ತೇಣೇ ಧರಿಲೇ ।೬೮೫॥ ವೇದರಾಯೇ ಧರಿತಾ ಮೌನ । ಶಾಸ್ತ್ರೇ ಭಾಂಬಾವಲೀ ಜಾಣ । ಶೋಧಿತಾ ಶಬ್ದಾಂಚೇ ರಾನ । ನಿಜಸಮಾಧಾನ ನ ಪಾವತೀ ।೬೮೬॥ ಜ್ಯಾಸೀ ಶಬ್ದಾಂತೀ ಬ್ರಹ್ಮಪ್ರಾಪ್ತಿ । ತ್ಯಾಸೀ ದರ್ಶನೇ ಐಕ್ಯಾ ಯೇತೀ । ಶಾಸ್ತ್ರೇ ಸ್ವಯೇಂಚಿ ಸಮಜತೀ । ಐಕ್ಯೇ ತ್ರಿಜಗತೀ ಆಭಾಸೇ ।೬೮೭॥ ಬ್ರಹ್ಮ ಏಕಾಕೀ ಅದ್ವಯಸ್ಥಿತಿ । ತುವಾಂಚಿ ದಾವಿಲೀ ಉಪಪತ್ತಿ । ತೇಥೇ ಐಕ್ಯರೂಪೇ ತ್ರಿಜಗತೀ । ಮ್ಹಣಸೀ ಕವಣಾಪ್ರತೀ ಆಭಾಸೇ ।೬೮೮॥ ಜ್ಯಾಚೀ ತುಟಲೀ ವಾಸನಾಫಾಂಸೋಟೀ । ವಿರಾಲೀ ಅಹಂಕಾರಾಚೀ ಗಾಂಠೀ । ಪ್ರಾರಬ್ಧ ಉತರಲೇ ದೇಹಾಚೇ ತಟೀ । ತ್ಯಾಸೀ ಐಕ್ಯೇ ಸೃಷ್ಟೀ ಆಭಾಸೇ ।೬೮೯॥ ತ್ಯಾ ಜ್ಯಾ ಅನುಭವಾಚೀ ಗೋಡ ಗೋಷ್ಟೀ । ಸಾಂಗಾವಯಾ ಉಲ್ಲಾಸ ಪೋಟೀ । ಪಿಪ್ಪಲಾಯನು ಸ್ವಾನಂದತುಷ್ಟೀ । ಬ್ರಹ್ಮೈಕ್ಯೇ ಸೃಷ್ಟೀ ವಾಖಾಣೀ ।೬೯೦॥

ಸತ್ತ್ವಂ ರಜಸ್ತಮ ಇತಿ ತ್ರಿವೃದೇಕಮಾದೌ ಸೂತ್ರಂ ಮಹಾನಹಮಿತಿ ಪ್ರವದಂತಿ ಜೀವಮ್ ।
ಜ್ಞಾನಕ್ರಿಯಾರ್ಥಫಲರೂಪತಯೋರುಶಕ್ತಿ ಬ್ರಹ್ಮೈವ ಭಾತಿ ಸದಸಚ್ಚತಯೋಃ ಪರಂ ಯತ್ ।೩೭॥

ಅರ್ಥ: ಸೃಷ್ಟಿಯು ಇಲ್ಲದಾಗ ಒಂದೇ ಪರಬ್ರಹ್ಮವು ಇದ್ದು, ಸೃಷ್ಟಿಯ ವಿಸ್ತಾರಕ್ಕಾಗಿ ಅದಕ್ಕೆ ಸಾತ್ವಿಕ, ರಾಜಸ, ತಾಮಸ ಪ್ರಕೃತಿ ಎಂದು ವರ್ಣಿಸಿದೆ. ಅದು ಜ್ಞಾನಪ್ರಧಾನವಾದ್ದರಿಂದ ಅದಕ್ಕೆ ಮಹತ್ ತತ್ತ್ವ ಕ್ರಿಯಾಪ್ರಧಾನವಾದ್ದರಿಂದ ಸೂತ್ರಕ್ಕೆ ಜೀವದ ಉಪಾಧಿಯಾಗಿದ್ದರಿಂದ ಅಹಂಕಾರ ರೂಪದಿಂದ ವರ್ಣಿಸಿದೆ . ವಾಸ್ತವಿಕವಾಗಿ ಇರುವ ಸರ್ವ ಶಕ್ತಿ , ಆ ಇಂದ್ರಿಯಗಳ ಅಧಿಷ್ಠಾನ ದೇವತೆಗಳ ರೂಪದಲ್ಲಿ ಇರಬಹುದು ಅಥವಾ ಇಂದ್ರಿಯಗಳ ಅವುಗಳ ವಿಷಯಗಳಲ್ಲಿ ಅಥವಾ ವಿಷಯಗಳ ಪ್ರಕಾಶರೂಪದಲ್ಲಿ ಹೀಗೆ ಎಲ್ಲದರಲ್ಲಿಯೂ ಎಲ್ಲವೂ ಬ್ರಹ್ಮವಾಗಿರುವುದು. ಮತ್ತು ಬ್ರಹ್ಮದ ಶಕ್ತಿಯು ಅನಂತ ,ಅಪಾರವಾಗಿರುವುದು. ದೃಶ್ಯ, ಅದೃಶ್ಯ, ಕಾರ್ಯಾಕಾರಣ, ಸತ್ಯ, ಅಸತ್ಯ ಇವೆಲ್ಲವೂ ಬ್ರಹ್ಮವಾಗಿರುವುದು. ಮತ್ತು ಇವುಗಳ ಆಚೆ ಇರುವುದೆಲ್ಲವೂ ಬ್ರಹ್ಮವೇ ಆಗಿರುವುದು.

ಇದು ಹಗುರು ಅಲ್ಲ,ಭಾರವೂ ಅಲ್ಲ, ಇದು ಸೊರಗಿಲ್ಲ, ಪುಷ್ಟವೂ ಆಗಿಲ್ಲ. ಇದು ವಸತಿಯಾಗಿಲ್ಲ, ಖಾಲಿಯೂ ಆಗಿಲ್ಲ. ಆದರೆ ಇದು ನಿಃಶೇಷವಾಗಿ ನಿಧರ್ಮವಾಗಿದೆ ।೬೭೯॥ ಇದು ಗಿಡ್ಡವಾಗಿಲ್ಲ, ಉದ್ದವೂ ಆಗಿಲ್ಲ. ಇದು ದೊಡ್ಡದಾಗಿಲ್ಲ, ಸಣ್ಣದಾಗಿಯೂ ಇಲ್ಲ. ಇದನ್ನು ವಿವೇಕ ಮಾರ್ಗದಿಂದ ವಿಚಾರವನ್ನು ಮಾಡಿದರೆ, ವಿವೇಕವೆಲ್ಲವೂ ಬತ್ತಿ ಹೋಗುವುದು ।೬೮೦॥ ಇದಕ್ಕೆ ಆದಿ ಇಲ್ಲ, ಅಂತ್ಯವೂ ಇಲ್ಲ, ಇದಕ್ಕೆ ಮಧ್ಯಸ್ಥಿತಿಯೂ ಇಲ್ಲ, ಇದು ಗುಣಯುಕ್ತವೂ ಅಲ್ಲ, ಗುಣಾತೀತವೂ ಅಲ್ಲ. ಆದರೆ ಅದ್ವಯತ್ವದಿಂದ ಅಚ್ಯುತ, ಅನಂತವಾಗಿರುವುದು ।೬೮೧॥ ಈ ಸ್ವರೂಪದ ವರ್ಣನೆಯನ್ನು ಶಬ್ದದಿಂದ ಮಾಡುವ ಸಾಹಸವನ್ನು ವೇದವು ನಡೆಸಿತು, ಶ್ರುತಿಯೂ ಸಹ ಬಹಳಷ್ಟು ಬೊಬ್ಬಾಟ ಮಾಡಿತು; ಆದರೆ ಬಹಳ ಕಷ್ಟದಿಂದ ಅವುಗಳಿಗೆ ''ನೇತಿ ನೇತಿ'' ಎನ್ನಬೇಕಾಗಿಬಂದು ಲಜ್ಜೆಯಿಂದ ಮುಖ ಕೆಳಗೆ ಮಾಡಬೇಕಾಯಿತು ।೬೮೨॥ ಹಾಗಾದರೆ ವೇದವು ಆ ಸ್ವರೂಪವನ್ನು ತಿಳಿಯದೇ ಸುಮ್ಮನಾಯಿತೆಂದು ತಿಳಿಯುವುದು ಸರಿ ಅಲ್ಲ. ವೇದಕ್ಕೆ ಅದು ತಿಳಿಯಿತು, ಆದ್ದರೆ ಶಬ್ದದಿಂದ ಹೇಳಲು ಬಾರದಾಯಿತು. ಆದ್ದರಿಂದ ಅದು ಮೌನವಾಯಿತು, ನಿಃಶಬ್ದವಾಗಿ ತಟಸ್ಥವಾಯಿತು ।೬೮೩॥ ಹೀಗೆ ವೇದವು ಮೌನಧರಿಸಲು ಶಾಸ್ತ್ರಗಳು ಒಮ್ಮೆಲೆ ಬೆರಗಾದವು. ಅವು ತಮ್ಮ ತಮ್ಮ ಮತಗಳಿಗೆ ಅಭಿಮಾನವನ್ನು ಹುಟ್ಟಿಸಿ ವಿತಂಡವಾದದಿಂದ ವಾಚಾಳತನ ಮಾಡಹತ್ತಿದವು ।೬೮೪॥ ಶಬ್ದವೃತ್ತಿಯು ಶಾಂತವಾದರೆ ಬ್ರಹ್ಮಜ್ಞಾನವಾಗುವುದು. ಈ ರಹಸ್ಯವು ವೇದಕ್ಕೆ ನಿಶ್ಚಯವಾಗಿ ತಿಳಿಯಿತು. ಆದ್ದರಿಂದ ಶಬ್ದದಿಂದ ಶಬ್ದದ ನಿಷೇಧವನ್ನು ಮಾಡಿ ತಾನು ದೃಢವಾಗಿ ಮೌನತಾಳಿತು ।೬೮೫॥ ವೇದರಾಜನು ಮೌನನಾಗಿರುವುದನ್ನು ಕಂಡು ಚಕಿತಗೊಂಡಿರುವ ಶಾಸ್ತ್ರಗಳು ಶಬ್ದಗಳ ಅರಣ್ಯ ಶೋಧ ಮಾಡಹತ್ತಿದವು. ಆದರೆ ಅವುಗಳಿಗೆ ಆತ್ಮಸಮಾಧಾನವು ಲಭಿಸಲೇ ಇಲ್ಲ ।೬೮೬॥ ಶಬ್ದಾಂತೀ (ಕಲ್ಪನೆಗಳ ವಿರಾಮವಾಗುತ್ತಲೇ) ಇವರಿಗೆ ಬ್ರಹ್ಮಪ್ರಾಪ್ತಿಯಾಗುವುದು. ಇವರಿಗೆ ಷಡ್‌ದರ್ಶನಗಳಲ್ಲಿನ ಹೊಂದಾಣಿಕೆ ತೋರುವುದು. ಶಾಸ್ತ್ರಗಳು ಸ್ವತಃ ತಿಳಿಯುವುವು ಮತ್ತು ಸರ್ವ ತ್ರಿಭುವನವು ಒಂದೇಯಾಗಿ ಕಾಣುವುದು ।೬೮೭॥ ಬ್ರಹ್ಮವು ಒಂದೇ ಒಂದಾಗಿದ್ದು ಅದ್ವಯವಾಗಿದೆ, ಹೀಗೆ ನೀವೇ ಉಪಪತ್ತಿಯನ್ನು ತೋರಿಸಿರುವಿರಿ. ಹಾಗಾದರೆ ತ್ರಿಭುವನದಲ್ಲಿ ಐಕ್ಯ ಕಾಣುವುದೆಂದು ಹೇಳುತ್ತಿರುವುದು ಯಾರಿಗಾಗಿ? ಎಂದು ಹೇ ರಾಜನೇ, ನೀನು ಹೀಗೆ ಹೇಳಬಹುದು ।೬೮೮॥ ಇದಕ್ಕಾಗಿ ಹೇಳುವೆನು ಕೇಳು. ವಾಸನೆಯ ಜಾಳಿಗೆ ಹರಿದಿರಬೇಕು ಅಹಂಕಾರದ ಗಂಟು ಕರಗಿ ಹೋಗಿರಬೇಕು, ದೇಹವು ಪ್ರಾರಬ್ಧ ತೀರಿಸಲು ಉಳಿದಿರಬೇಕು, ಹೀಗಿರುವವರಿಗೆ ಮಾತ್ರ ಸೃಷ್ಟಿಯು ಐಕ್ಯ ರೂಪವಾಗಿ ತೋರುವುದು ।೬೮೯॥ ಹೀಗಿರುವ ಅನುಭವದ ಮಧುರವಾದ ಮಾತುಗಳನ್ನು ಹೇಳಲು ಹೊಟ್ಟೆಯಲ್ಲಿ ಉಲ್ಲಾಸವು ಹುಟ್ಟಿ ಪಿಪ್ಪಲಾಯನಮುನಿಯು ಬ್ರಹ್ಮೈಕರೂಪದಿಂದ ಸೃಷ್ಟಿಯನ್ನು ಸಂತೋಷದಿಂದ ವರ್ಣಿಸಲಾರಂಭಿಸಿದನು ।೬೯೦॥

ಬ್ರಹ್ಮ ನಿಜಐಕ್ಯ ಪರಿಪಾಟೀ । ಪ್ರಪಂಚು ಬ್ರಹ್ಮತ್ವೇಚಿ ಉರೀ । ಸಂತಾಸಂತ ಸಕಳ ಸೃಷ್ಟೀ । ದೇಖತೀ ದೃಷ್ಟೀ ಬ್ರಹ್ಮ ರೂಪ ॥೧೯೧॥ ಜೇವೀ ನಭೀ ನೀಳಿಮೇಚೇ ಭಾನ । ತೇವೀ ಬ್ರಹ್ಮೀ ಮಾಯಾ ನಾಂದೇ ಸಂಪೂರ್ಣ । ನವಲ ತಿಯೇಚೇ ವಿಂದಾನ । ನಪುಂಸಕಾ ಜಾಣ ಪುರುಷತ್ವ ಕೇಲೇ ॥೧೯೨॥ ಅಗಾಧ ತಿಚಾ ಪತಿವೃತಾಧರ್ಮ । ನಪುಂಸಕೀ ಉಪಜವೀ ಕಾಮ । ಅನಾಮ್ಯಾ ಠೇವೀ ನಾಮ । ಕೀ ನಿಷ್ಕರ್ಮಾ ಕರ್ಮ ತಿಚೇನೀ ॥೧೯೩॥ ತೇ ನಿಃಸಂಗಸಂಗಾ ರಾತಲೀ । ಸ್ಪರ್ಶೇವೀಣ ಗುರ್ವಿಣೀ ಝಾಲೀ । ಪ್ರಧಾನ - ಮಹತ್ತತ್ತ್ವೀ ಗರ್ಭಾ ಆಲೀ । ತೇಥ ತ್ರಿಗುಣಾತೇ ವ್ಯಾಲೀ ವಿಕಾರಯುಕ್ತ ॥೧೯೪॥ ವಿದ್ಯಾಅವಿದ್ಯಾ ನಿಜಸ್ವಭಾವೀ । ಜೀವಶಿವಾಂಚೀ ಭೇದಪದವೀ । ಪ್ರಿಯಾ ಪುರುಷಾತೇ ಭೋಗವೀ । ಜ್ಞಾನಾಜ್ಞಾನಗಾಂವೀ ವಸೋನಿಯಾ ॥೧೯೫॥ ಜೇವೀ ಸುವರ್ಣೀ ಅಲಂಕಾರ । ತಂತೂಮಾಜೀ ಪಟಾಕಾರ । ಭಿಂತೀವರೀ ಭಾಸೇ ಚಿತ್ರ । ತೇವೀ ಮಾಯಾ ಸಾಕಾರ ಬ್ರಹ್ಮೀ ಭಾಸೇ ॥೧೯೬॥ ಮೃತ್ತಿಕೇಚೀ ಗೋಕುಳೇ ಕೇಲೀ । ನಾನಾ ನಾಮಾಕಾರೀ ಜರೀ ಪೂಜಿಲೀ । ತರೀ ಮೃತ್ತಿಕಾಚಿ ಸಂಚಲೀ । ತೇವೀ ಬ್ರಹ್ಮೀ ಭಾಸಲೀ ಜಗದ್ರೂಪೇ ಮಾಯಾ ॥೧೯೭॥ ಜೈಸಾ ಘೃತಾಚ್ಯಾ ಕಣಿಕಾ । ಘೃತೇಸೀ ನವ್ಹತೀ ಆಣಿಕಾ । ತೇವೀ ಬ್ರಹ್ಮೀ ಮಾಯಾಶಕ್ತಿ ದೇಖಾ । ದಾವೀ ಅನೇಕಾ ಅರ್ಥಾತೇ ॥೧೯೮॥ ಬ್ರಹ್ಮ ಪೂರ್ವೀ ಏಕಾಕೀ ಏಕ । ತೇಚಿ ಕೇವೀ ಝಾಲೇ ಅನೇಕ । ತೋ ಮಾಯಾಯೋಗಪರಿಪಾಕ । ವಿಶದ ಅರ್ಥ ದೇಖ ಪಿಪ್ಪಲಾಯನು ಸಾಂಗೇ ॥೧೯೯॥ ಮುಳೀ ಮುಖ್ಯ ಬ್ರಹ್ಮ ''ಓಂಕಾರ'' । ತೇ ಏಕಚಿ ಝಾಲೇ ತ್ರಿಪ್ರಕಾರ । ಆಕಾರ - ಉಕಾರ - ಮಕಾರ । ಸತ್ತ್ವಾದಿ ವಿಕಾರ ಗುಣತ್ರಯಾತ್ಮಕ ॥೨೦೦॥ ಗುಣತ್ರಯ ಸಮಸಮಾನ । ತ್ಯಾ ನಾಂವ ಬೋಲಿಜೇ ''ಪ್ರಧಾನ'' । ತೇಚಿ ಕ್ರಿಯಾಶಕ್ತಿಸೂತ್ರ ಜಾಣ । ತೇಥೇ ಪ್ರಗಟಲ್ಯಾ ಜ್ಞಾನ ''ಮಹತ್ತತ್ತ್ವ'' ಮ್ಹಣತೀ ॥೨೦೧॥ ''ಅಹಂಬ್ರಹ್ಮ'' ಹೇ ಪೂರ್ಣಸ್ಫೂರ್ತಿ । ತೇ ''ಅಹಂ'' ಆಲೇ ದೇಹಾಕೃತೀ । ದೇಹಾಭಿಮಾನೇ ನಿಶ್ಚಿತೀ । ''ಜೀವ'' ಮ್ಹಣತೀ ವಸ್ತೂತೇ ॥೨೦೨॥ ''ಕ್ರಿಯಾ'' ಮ್ಹಣಿಜೇ ದಶಧಾ ಕರಣೇ । ''ಜ್ಞಾನ'' ಶಬ್ದೇ ದೇವತಾಧಿಷ್ಠಾನೇ । ಅರ್ಥ ಐಸೇ ವಿಷಯಾಂಸೀ ಮ್ಹಣಣೇ । ತೇಥ ''ಫಳ'' ಜಾಣಣೇ ಸುಖದುಃಖ ॥೨೦೩॥ ಗುಣ - ಭೂತೇ - ವಿಷಯ - ಕರಣೇ । ಜೀವ ಭೋಕ್ತಾ ಸುಖದುಃಖಪಣೇ । ಜ್ಞಾನ ಕ್ರಿಯಾ ಕರ್ಮಾಚರಣೇ । ಹೇ ಸರ್ವಹೀ ಜಾಣಣೇ ಪೂರ್ಣ ಬ್ರಹ್ಮ ॥೨೦೪॥

ಬ್ರಹ್ಮಾತ್ಮೈಕ್ಯ(ಬ್ರಹ್ಮ ಮತ್ತು ಆತ್ಮ ಒಂದೇ) ಎಂಬ ಅನುಭವದಿಂದ ಪ್ರಪಂಚವು ಸಹ ಬ್ರಹ್ಮರೂಪದಿಂದಲೇ ತೋರುವುದು. ಸಂಪೂರ್ಣ ಜಡಾಜಡ ಸೃಷ್ಟಿಯು ಈತನ ದೃಷ್ಟಿಗೆ ಬ್ರಹ್ಮರೂಪವಾಗಿಯೇ ತೋರುವುದು ॥೧೯೧॥ ಆಕಾಶದಲ್ಲಿ ನೀಲಿವರ್ಣದ ಭಾಸವಾಗುವುದು. ಅದರಂತೆ ಬ್ರಹ್ಮನಲ್ಲಿ ಎಲ್ಲ ಮಾಯೆಯು ವರ್ತಿಸುವುದು. ಇದರ ಕಾರ್ಯವು ಮಹಾ ಅದ್ಭುತವಾಗಿರುವುದು. ಇದು ನಪುಂಸಕನಿಗೂ ಸಹ ಪುರುಷತ್ವವನ್ನು ತಂದು ಕೊಟ್ಟಿತು ॥೧೯೨॥ ಈಕೆಯ ಪತಿವ್ರತಾ ಧರ್ಮವು ವಿಚಿತ್ರವಾಗಿದೆ. ಈಕೆಯು ನಪುಂಸಕನಲ್ಲಿ ಕಾಮವನ್ನು ಹುಟ್ಟಿಸುವಳು. ಈಕೆಯಿಂದಲೇ ನಿಷ್ಕರ್ಮಕ್ಕೆ ಕರ್ಮವು ಪ್ರಾಪ್ತವಾಗುತ್ತದೆ ॥೧೯೩॥ ಈಕೆಯ ನಿಃಸಂಗನ ಸಂಗತಿಯಲ್ಲಿ ರಮಮಾಣಳಾಗಿರುವಳು. ಈತನ ಸ್ಪರ್ಶವಿಲ್ಲದೇ ಗರ್ಭವತಿಯಾದಳು. ಪ್ರಧಾನ ಮತ್ತು ಮಹತ್‌ತತ್ವ ಇವು ಈಕೆಯ ಹೊಟ್ಟೆಯಲ್ಲಿ ಹುಟ್ಟಿದವು ಮತ್ತು ವಿಕಾರಯುಕ್ತ ಮೂರು ಗುಣಗಳನ್ನು ಹಡೆದವು ॥೧೯೪॥ ವಿದ್ಯಾ ಮತ್ತು ಅವಿದ್ಯೆಯ ತನ್ನ ಸ್ವಭಾವದಿಂದ ಈಕೆಯು ಶಿವ - ಜೀವ ಭೇದವನ್ನು ನಿರ್ಮಿಸಿದಳು. ಪುರುಷನಿಗೆ ಅತಿ ಪ್ರಿಯಳಾಗಿ ಜ್ಞಾನ ಮತ್ತು ಅಜ್ಞಾನ ಎಂಬ ಊರಲ್ಲಿ ಇದ್ದು, ತನ್ನ ಭೋಗವನ್ನು ಪಡೆಯುತ್ತಿರುವಳು ॥೧೯೫॥ ಬಂಗಾರದಲ್ಲಿನ ಅಲಂಕಾರದಂತೆ, ನೂಲಿನಲ್ಲಿನ ವಸ್ತ್ರದಂತೆ ಮತ್ತು ಗೋಡೆಯ ಮೇಲಿನ ಚಿತ್ರಗಳಂತೆ ಭಾಸವಾಗುವ ರೀತಿಯಲ್ಲಿ ಮಾಯೆಯು ಬ್ರಹ್ಮನಲ್ಲಿ ಸಾಕಾರವಾಗಿ ಭಾಸವಾಗುವುದು. ಅದರಂತೆ ಬ್ರಹ್ಮನಲ್ಲಿ ಜಗದ್ರೂಪದಿಂದ ಮಾಯೆಯು ಭಾಸವಾಗುತ್ತದೆ ॥೧೯೬॥ ಮಣ್ಣಿನಿಂದ ಅನೇಕ ಆಕಾರಗಳನ್ನು ಮಾಡಿ ಅವುಗಳಿಗೆ ಅನೇಕ ಹೆಸರುಗಳಿಂದ ಪೂಜಿಸಿದರೂ ಅವುಗಳಲ್ಲಿರುವ ಮಣ್ಣು ಒಂದೇಯಾಗಿರುತ್ತದೆ. ಅದರಂತೆ ಬ್ರಹ್ಮನಲ್ಲಿ ಜಗದ್ರೂಪದಿಂದ ಮಾಯೆಯು ಭಾಸವಾಗುತ್ತದೆ ॥೧೯೭॥ ತುಪ್ಪದ ಕಣಗಳು ತುಪ್ಪಕ್ಕಿಂತಲು ಭಿನ್ನವಾಗಿರದಂತೆ ಮಾಯಾ ಶಕ್ತಿಯು ಬ್ರಹ್ಮನಲ್ಲಿ ಅನೇಕ ಪ್ರಕಾರಗಳನ್ನು ತೋರಿಸುವುದು ॥೧೯೮॥ ಉತ್ಪತ್ತಿಯ ಪೂರ್ವದಲ್ಲಿ ಬ್ರಹ್ಮವು ಒಂದೇ ಇದ್ದು ಅದ್ವಿತೀಯವಾಗಿತ್ತು. ಆದರೆ ಅದು ಅನೇಕ ಹೇಗಾಯಿತೆಂದರೆ, ಇದಕ್ಕೆಲ್ಲ ಕೇವಲ ಮಾಯೆಯ ಸಂಗತಿಯ ಕಾರಣವಾಗಿದೆ. ಪಿಪ್ಪಲಾಯನ ಮುನಿಯು ಇದೇ ಅರ್ಥವನ್ನು ಸ್ಪಷ್ಟಮಾಡಿ ಹೇಳುತ್ತಿರುವನು ॥೧೯೯॥ ಮೂಲದಲ್ಲಿ ಬ್ರಹ್ಮವು ಒಂದೇ (ಓಂಕಾರ ರೂಪದಿಂದ ಅಕಾರ, ಉಕಾರ, ಮಕಾರ ಹೀಗೆ ಮೂರು ಪ್ರಕಾರವಾಯಿತು) ಸಾತ್ವಿಕ, ರಾಜಸ, ತಾಮಸ ಈ ಮೂರು ಗುಣ ವಿಕಾರಗಳು ಇಲ್ಲಿಂದಲೇ ಆದವು ॥೨೦೦॥ ಈ ಮೂರು ಗುಣಗಳು ಸಮವಾಗಿರಲು ಅದಕ್ಕೆ ''ಪ್ರಧಾನ'' ಎನ್ನುವರು. ಇದೇ ಕ್ರಿಯಾಶಕ್ತಿ ಸೂತ್ರವಾಗಿದೆ. ಅದರಲ್ಲಿ ಜ್ಞಾನವು ಉತ್ಪನ್ನವಾದರೆ ಅದಕ್ಕೆ ''ಮಹತ್‌ತತ್ವ'' ಹೀಗೆ ಹೇಳುವರು ॥೨೦೧॥ ಅಹಂ ಬ್ರಹ್ಮ ಎಂಬುದು ಪೂರ್ಣ ಸ್ಫೂರ್ತಿಯಾಗಿದೆ. ಆದರೆ ಅದೇ ದೇಹ ಆಕಾರದಿಂದ ಪರಿಣತವಾಗಿ ದೇಹವೇ ನಾನೆಂದು ನಿಶ್ಚಯವಾಗಿ ಹೇಳಹತ್ತುವರು. ಈ ದೇಹಾಭಿಮಾನದಿಂಧ ಪರಬ್ರಹ್ಮಕ್ಕೆ ''ಜೀವ'' ಎಂದು ಹೇಳುವರು ॥೨೦೨॥ ಕ್ರಿಯೆ ಎಂದರೆ ಹತ್ತು ಇಂದ್ರಿಯಗಳು, ಅವುಗಳ ಅಧಿಷ್ಠಾನ ದೇವತೆಗಳಿಗೆ ''ಜ್ಞಾನ'' ಎಂದು ಹೇಳುವರು. ವಿಷಯಗಳಿಗೆ ''ಅರ್ಥ'' ಎಂದು ಹೇಳುವರು ಮತ್ತು ಸುಖದುಃಖಗಳಿಗೆ ''ಫಲ'' ಎನ್ನುವರು ॥೨೦೩॥ ಮೂರು ಗುಣಗಳು, ಪಂಚಭೂತಗಳು, ಐದು ವಿಷಯಗಳು, ಹತ್ತು ಇಂದ್ರಿಯಗಳು ಇವುಗಳ ಸಹಾಯದಿಂದ ಸುಖದುಃಖಗಳನ್ನು ಭೋಗಿಸುವ ದೇಹವು ಮತ್ತು ಜ್ಞಾನ, ಕ್ರಿಯೆ ಕರ್ಮಾಚರಣೆ ಇವೆಲ್ಲವೂ ಪೂರ್ಣ ಬ್ರಹ್ಮವಾಗಿರುವುದೆಂದು ಹೀಗೆ ತಿಳಿಯಬೇಕು ॥೨೦೪॥

ಸಾಖರೇಚಾ ಫಣಸ ಪ್ರಬಳ । ತೇಥೇ ಕಾಂಟೇ ತ್ವಚಾ ಬೀಜಗೋಳ । ಅವಘೀ ಸಾಖರಚಿ ಕೇವಳ । ತೇವೀ ಬ್ರಹ್ಮಚಿ ಸಕಳ ಜಗದಾಕಾರೇ ॥೨೦೫॥ ಜೇವೀ ಪಾಟಾಊ ಪುತಳೀಕೃತ । ತೇಥ ವಿಷಮಾವಯವೀ ಸಮಾನ ಸೂತ । ತೇವೀ ಜಗದಾಕಾರೇ ಆಕಾರವಂತ । ದಿಸೇ ಅವಿಕೃತ ಪರಬ್ರಹ್ಮ ॥೨೦೬॥ "ಜಗ - ವಿಶ್ವ - ಪ್ರಪಂಚು" ನಾಮ । ಪರೀ ತೇ ನಿಖಿಳ ಪರಬ್ರಹ್ಮ । ಹಾ ಉಪನಿಷದಾರ್ಥ ಉತ್ತಮ । ವೇದಾಂತೀ ಪರಮ ಪರಮಾರ್ಥು ತೋ ಹಾ ॥೨೦೭॥ ಜಗದಾಕಾರೇ ಬ್ರಹ್ಮ ನಿಶ್ಚಿತ । ಜಗ ಅವಘೇ ವಿಕಾರವಂತ । ತೈ ಬ್ರಹ್ಮಾಸಹೀ ವಿಕಾರ ಪ್ರಾಪ್ತ । ಮ್ಹಣತೀ ತೋ ಅರ್ಥ ನ ಘಡೇ ರಾಯಾ ॥೨೦೮॥

ನಾತ್ಮಾ ಜಜಾನ ನ ಮರಿಷ್ಯತಿ ನೈಧತೇಽಸೌ ನ ಕ್ಷೀಯತೇ ಸವನವಿದ್ ವ್ಯಭಿಚಾರಿಣಾಂ ಹಿ ।
ಸರ್ವತ್ರ ಶಶ್ವದನಪಾಯ್ಯುಪಲಬ್ಧಿಮಾತ್ರಂ ಪ್ರಾಣೋ ಯಥೇಂದ್ರಿಯ ಬಲೇನ ವಿಕಲ್ಪಿತಂ ಸತ್ ।೩೮॥

ಅರ್ಥ:- ಶಾಶ್ವತ ಆತ್ಮನಾದ ಬ್ರಹ್ಮವು ಹುಟ್ಟು ಸಾವುಗಳಿಂದ ಕೂಡಿಲ್ಲ. ಅದು ಬೆಳೆಯುವುದೂ ಇಲ್ಲ, ಕ್ಷಯಿಸುವುದೂ ಇಲ್ಲ. ಆ ಚೇತನಾತ್ಮನು ಭೌತಿಕ ದೇಹದ ತಾರುಣ್ಯ , ಮಧ್ಯವಯಸ್ಸು ಮತ್ತು ಮೃತ್ಯುವನ್ನು ದಿಟವಾಗಿ ತಿಳಿದವನು. ಆದ್ದರಿಂದ ಆತ್ಮವು ಸರ್ವಕಾಲದಲ್ಲಿಯೂ ಎಲ್ಲಕಡೆಗಳಲ್ಲಿಯೂ ಅಸ್ತಿತ್ವದಲ್ಲಿದೆಯೆಂದೂ, ಅದು ಎಂದೂ ನಾಶವಾಗದೆಂದೂ, ಅದು ಶುದ್ಧ ಪ್ರಜ್ಞೆ ಎಂದೂ ಅರಿತುಕೊಳ್ಳಬಹುದು ದೇಹದಲ್ಲಿರುವ ಪ್ರಾಣವಾಯುವು ಒಂದೇ. ಆದರೂ ನಾನಾ ಭೌತಿಕ ಇಂದ್ರಿಯಗಳ ಸಂಪರ್ಕದಿಂದ ಅಷ್ಟು ಬಗೆಯಾಗಿ ವ್ಯಕ್ತವಾಗುತ್ತದೆ. ಹಾಗೆಯೇ ಏಕ ಆತ್ಮವು ಭೌತಿಕ ದೇಹದ ಸಂಪರ್ಕದಿಂದ ನಾನಾ ಭೌತಿಕ ಅಂಕಿತಗಳನ್ನು ಪಡೆದಂತೆ ತೋರುತ್ತದೆ.

ಬ್ರಹ್ಮಾಸೀ ನಾಹೀ ಮಾತಾ ಪಿತಾ । ಯಾಲಾಗೀ ನ ಘಡೇ ಜನ್ಮಕಥಾ । ಆತ್ಮಾ ಏಕದೇಶೀ ಹೋತಾ । ತರೀ ಜನ್ಮಾ ಯೇತಾ ಜನನೀಜಠರಾ ॥೨೦೯॥ ಆತ್ಮ್ಯಾವೇಗಳಾ ಕಾಂಹೀ । ತಿಳಭರೀ ಠಾವೋ ರಿತಾ ನಾಹೀ । ಯಾಪರೀ ಪೂರ್ಣತ್ವೇ ಪಾಹೀ । ''ಜನ್ಮ'' ತೇ ಠಾಯೀ ಸ್ಪರ್ಶೇನಾ ॥೨೧೦॥ ಜನ್ಮಾಪೂರ್ವೀ ಬಾಳಾಚೇ ನಾಸ್ತಿಕ್ಯ । ಜನ್ಮಾಪಾಠೀ ಮಾನಿತೀ ಆಸ್ತಿಕ್ಯ । ಯಾ ಆಸ್ತಿನಾಸ್ತೀಚೀ ಭಾಖ । ಆತ್ಮ್ಯಾಸೀ ದೇಖ ಅಸೇನಾ ॥೨೧೧॥ ಆತಾ ಆಹೇ ಪೂರ್ವೀ ನಾಹೀ । ಐಸೇ ''ಆಸ್ತಿಕ್ಯ'' ಆತ್ಮ್ಯಾಚೇ ಠಾಯೀ । ಕದಾಕಾಳೀ ನ ರಿಘೇ ಕಾಂಹೀ । ತೋ ನಿತ್ಯ ಪಾಹೀ ನಿರಂತರ ॥೨೧೨॥ ದೇಹೀ ಜನ್ಮಲ್ಯಾ ಬಾಳಕಾಸೀ । ವಾಢೀ ದಿಸೇ ದಿವಸದಿವಸೀ । ತೋ ಬಾಳಜನ್ಮ ನಾಹೀ ಆತ್ಮ್ಯಾಸೀ । ಯಾಲಾಗೀ ''ವೃದ್ಧಿ'' ತ್ಯಾಸೀ ಘಡೇನಾ ॥೨೧೩॥ ಜ್ಯಾಸೀ ವೃದ್ಧಿ ನಾಹೀ ತತ್ತ್ವತಾ । ತ್ಯಾಸೀ ನ ಯೇ ''ವಿಪರಿಣಮತಾ'' । ಬಾಲ್ಯ ತಾರುಣ್ಯ ವೃದ್ಧಾವಸ್ಥಾ । ಆತ್ಮ್ಯಾಸೀ ಸರ್ವಥಾ ಅಸೇನಾ ॥೨೧೪॥ ಜೋ ಮೀ ಬಾಳತ್ವೇ ಹೋತೋ ಧಾಕುಟಾ । ತೋಚಿ ಮೀ ತಾರುಣ್ಯೇ ಜಾಹಲೋ ಮೋಠಾ । ತೋ ಮೀ ವೃದ್ಧ ಜಾಹಲೋ ಕಟಕಟಾ । ಐಸಾ ತ್ರಿಕಾಳದ್ರಷ್ಟಾ ಪರಮಾತ್ಮಾ ॥೨೧೫॥

ಸಕ್ಕರೆಯಿಂದ ತಯಾರಿಸಿದ ದೊಡ್ಡದಾದ ಹಲಸಿನ ಹಣ್ಣಿನಲ್ಲಿ, ಅದರ ಮೇಲಿನ ಮುಳ್ಳುಗಳು, ಸಿಪ್ಪೆ, ಒಳಗಿನ ಭಾಗಗಳು ಇತ್ಯಾದಿ ಎಲ್ಲವೂ ಸಕ್ಕರೆಯೇ ಆಗಿರುವುದು. ಅದರಂತೆಯೇ ಜಗತ್ತಿನಲ್ಲಿರುವ ಸರ್ವ ಆಕಾರವು ಬ್ರಹ್ಮವಾಗಿರುವುದು ।೨೦೫॥ ವಸ್ತ್ರದಿಂದ ಗೊಂಬೆಯನ್ನು ತಯಾರಿಸಿ ಭಿನ್ನಭಿನ್ನವಾಗಿ ಅದರ ಅವಯುವಗಳನ್ನು ತೋರಿಸಿದರೂ ಸಹ ಆ ಗೊಂಬೆಯಲ್ಲಿ ಎಲ್ಲೆಲ್ಲಿಯೂ ನೂಲು ಒಂದೇ ಇರುವುದು. ಅದರಂತೆ ನಿರ್ವಿಕಾರವಾದ ಪರಬ್ರಹ್ಮವು ಜಗತ್ತಿನ ಆಕಾರದಿಂದ ಆಕಾರಯುಕ್ತವಾಗಿ ತೋರುತ್ತದೆ ।೨೦೬॥ ಜಗ, ವಿಶ್ವ, ಪ್ರಪಂಚ ಹೀಗೆ ಭಿನ್ನಭಿನ್ನವಾದ ನಾಮುಗಳಿದ್ದರೂ ಶುದ್ಧವಾದ ಪರಬ್ರಹ್ಮವೇ ಆಗಿರುವುದು. ಮತ್ತು ವೇದಾಂತದಲ್ಲಿನ ಪರಮ ಪರಮಾರ್ಥವು ಇದಾಗಿದೆ ।೨೦೭॥ ಬ್ರಹ್ಮವೇ ಜಗದಾಕಾರವಾಗಿರುವುದು, ಹಾಗೂ ಸರ್ವ ಜಗತ್ತು ವಿಕಾರವುಳ್ಳದ್ದಾಗಿರುವುದು. ಆದುದರಿಂದ ಬ್ರಹ್ಮಕ್ಕೂ ವಿಕಾರವಾಗುವುದೆಂದು ಹಲವರು ಹೇಳುವರು. ಆದರೆ ಹೇ ರಾಜನೇ, ಈ ಮಾತು ಎಂದೂ ಸಾಧ್ಯವಾಗದು ।೨೦೮॥

ಬ್ರಹ್ಮನಿಗೆ ತಾಯಿತಂದೆಗಳಿಲ್ಲ. ಆದ್ದರಿಂದ ಈತನಿಗೆ ಜನ್ಮವೇ ಇಲ್ಲ. ಆತ್ಮನು ಒಂದುವೇಳೆ ಏಕದೇಶಿಯಾಗಿದ್ದರೆ ಮಾಯೆಯ ಉದರದಲ್ಲಿ ಜನ್ಮಿಸುತ್ತಿದ್ದನು ।೨೦೯॥ ಆತ್ಮನ ಹೊರತಾಗಿ ತಿಲಮಾತ್ರವೂ ಸಹ ಬರಿದಾದ ಸ್ಥಳವಿರುವುದಿಲ್ಲ. ಹೀಗಿರುವ ಈತನಿಗೆ ಜನ್ಮದ ಸ್ಪರ್ಶವಾಗುವುದೇ ಇಲ್ಲ ।೨೧೦॥ ಜನ್ಮದ ಪೂರ್ವದಲ್ಲಿ ಕೂಸಿನ ಅಸ್ತಿತ್ವವು ಇರುವುದಿಲ್ಲ. ಜನ್ಮಕ್ಕೆ ಬಂದ ನಂತರ ಕೂಸಿನ ಅಸ್ತಿತ್ವವನ್ನು ಮಾನ್ಯ ಮಾಡುವರು. ಆದರೆ, ಈ ಅಸ್ತೀ ನಾಸ್ತೀ ಭಾಷೆಯು ಆತ್ಮಕ್ಕೆ ಇಲ್ಲ ।೨೧೧॥ ಈಗ ಇರುವನು, ಪೂರ್ವದಲ್ಲಿ ಎಂದೂ ಇದ್ದಿಲ್ಲ ಎಂಬ ಈ ಅಸ್ತಿಕ್ಯವು ಆತ್ಮನಲ್ಲಿ ಎಂದೂ ಕೂಡದು. ಕಾರಣ ಆತ್ಮವು ನಿತ್ಯ ಮತ್ತು ನಿರಂತರವಾಗಿ ಹೀಗೆಯೇ ಇರುವುದು ।೨೧೨॥ ದೇಹರೂಪದಿಂದ ಜನ್ಮಿಸಿದ ಬಾಲಕನ ಬೆಳವಣಿಗೆಯು ದಿನದಿನಕ್ಕೆ ಹೆಚ್ಚಾಗುವುದು ಕಾಣುವುದು. ಈ ಪ್ರಕಾರದ ಬಾಲಜನ್ಮವು ಆತ್ಮಕ್ಕೆ ಎಂದೂ ಇಲ್ಲದ್ದಕ್ಕೆ ಅದರ ಬೆಳವಣಿಗೆಯಾಗದು ।೨೧೩॥ ಯಾವುದಕ್ಕೆ ನಿಜವಾಗಿಯೂ ಬೆಳವಣಿಗೆ ಇಲ್ಲದಿರಲು ಅದರ ಸ್ವರೂಪದಲ್ಲಿ ''ವಿಪರಿಣತೆ'' ಅಂದರೆ ಬದಲಾಗುವುದಿಲ್ಲ, ಆದ್ದರಿಂದ ಬಾಲ್ಯ ,ತಾರುಣ್ಯ,ವಾರ್ಧಕ್ಯ ಈ ಅವಸ್ಥೆಗಳು ಎಂದೂ ಆಗಲಾರವು ।೨೧೪॥ ನಾನು ಬಾಲ್ಯತ್ವದಲ್ಲಿ ಚಿಕ್ಕವನಾಗಿದ್ದೆನು, ಅದೇ ನಾನು ತಾರುಣ್ಯದಲ್ಲಿ ದೊಡ್ಡವನಾದೆ ಮತ್ತು ಈಗ ವೃದ್ಧಾವಸ್ಥೆಗೆ ಪ್ರಾಪ್ತನಾಗಿರುವೆನು ಹೀಗೆ ಮೂರೂ ಅವಸ್ಥೆಗಳನ್ನು ಅರಿಯುವವನೇ ಪರಮಾತ್ಮನಾಗಿರುವನು ।೨೧೫॥

ದೃಷ್ಟಾ ಸಾಕ್ಷೀ ಜೋ ಅವಸ್ಥಾತೀತ । ತೋ ಕದಾ ನವ್ಹೇ ಅವಸ್ಥಾಭೂತ । ದೇಹೀ ಅಸೋನಿ ಅವಸ್ಥಾರಹಿತ । ಜಾಣ ತೋ ನಿಶ್ಚಿತ ಪರಮಾತ್ಮಾ ॥೭೧೬॥ ನಿರವಸ್ಥ ಆತ್ಮಾ ಅವಿಕಾರೀ ಪೂರ್ಣ । ತ್ಯಾಸೀ ಕದಾ ನ ಯೇ ''ಕ್ಷೀಣಪಣ'' । ಜ್ಯಾಸೀ ಜನ್ಮಚಿ ನಾಹೀ ಜಾಣ । ತ್ಯಾಸೀ ''ಮರಣ'' ಅಸೇನಾ ॥೭೧೭॥ ಜೋ ಅವಿಕಾರೀ ನಿರವಸ್ಥ ಪೂರ್ಣ । ಜ್ಯಾಸೀ ನಾಹೀ ಜನ್ಮಮರಣ । ಐಸಾ ತೂ ಆತ್ಮಾ ಮ್ಹಣಶೀಲ ಕೋಣ । ತರೀ ಜಾಣ ಸರ್ವಜ್ಞ ಜ್ಞಾನಸ್ವರೂಪ ॥೭೧೮॥ ಮ್ಹಣಸೀ ಜ್ಞಾನಹೀ ಕ್ಷಣಿಕ ಅಸೇ । ಘಟಜ್ಞಾನೇ ಪಟಜ್ಞಾನ ನಿರಸೇ । ತೇಥ ಇಂದ್ರಿಯಾರ್ಥವೃತ್ತಿಚಿ ನಾಸೇ । ಜ್ಞಾನ ಜೈಸೇ ತೈಸೇ ಅವಿನಾಶೀ ॥೭೧೯॥ ತೇಚಿ ಅರ್ಥೀಚಾ ಪೂರ್ಣ ದೃಷ್ಟಾಂತ । ಜೇವೀ ಪ್ರಾಣ ದೇಹಾತೇ ವಾಢವೀತ । ತೋ ದೇಹೋಚಿ ಹೋಯ ಅವಸ್ಥಾಭೂತ । ಪ್ರಾಣ ನಿರವಸ್ಥ ಜೈಸಾ ತೈಸಾ ॥೭೨೦॥ ಪ್ರಾಣು ದೇಹಾತೇ ಚಾಳಿತಾ । ತ್ಯಾಸೀ ನ ಬಾಧೀ ದೇಹಾವಸ್ಥಾ । ಆತ್ಮಾ ಪ್ರಾಣಾತೇ ಚೇತವಿತಾ । ತ್ಯಾಸೇ ದೇಹಾವಸ್ಥಾ ಅಸೇನಾ ॥೭೨೧॥ ಯೇಣೇ ಚಿ ಪ್ರಾಣ ದೃಷ್ಟಾಂತೇ । ಸಾಧೂನಿ ಘ್ಯಾವೇ ಪರಬ್ರಹ್ಮಾತೇ । ದೇಹೇಂದ್ರಿಯಾವೇಗಳೇ ಆತ್ಮ್ಯಾತೇ । ಪುಢೀಲ ಶ್ಲೋಕಾರ್ಥೇ ಪ್ರಬೋಧೀ ॥೭೨೨॥

ಅಂಡೇಷು ಪೇಶಿಷು ತರುಷ್ವವಿನಿಶ್ಚಿತೇಷು ಪ್ರಾಣೋ ಹಿ ಜೀವಮುಪಧಾವತಿ ತತ್ರ ತತ್ರ ।
ಸನ್ನೇ ಯದಿಂದ್ರಿಯಗಣೇಽಹಮಿ ಚ ಪ್ರಸುಪ್ತೇ ಕೂಟಸ್ಥ ಆಶಯಮೃತೇ ತದನುಸ್ಮೃತಿರ್ನಃ ॥೩೯॥

ಅರ್ಥ: ಅಂಡಜ, ಸ್ವೇದಜ, ಜಾರಜ ಮತ್ತು ಉದ್ಭಿಜ ಈ ಶರೀರಗಳ ಪ್ರತ್ಯೇಕ ಜೀವದಲ್ಲಿ ಪ್ರಾಣದ ಅನುವೃತ್ತಿಯಾಗುವುದು, ಶರೀರಗಳು ಭಿನ್ನ ಭಿನ್ನವಾಗಿದ್ದರೂ ಪ್ರಾಣವು ಏಕತತ್ವದಿಂದಿರುವುದು. ಸುಷುಪ್ತಿ ಅವಸ್ಥೆಯಲ್ಲಿ ಇಂದ್ರಿಯಗಳು ನಿಚೇಷ್ಟವಾಗುವುವು ಅಹಂಕಾರವು ಮಲಗಿರುವುದು ಅಂದರೆ ಲಿಂಗ ಶರೀರವು ಇರುವುದಿಲ್ಲ. ಆಗ ಕೂಟಸ್ಥ ಆತ್ಮವು ಇರದಿದ್ದರೆ, ಸುಖವಾಗಿ ಮಲಗಿದ್ದೆನು ಎನ್ನುವ ಸ್ಮೃತಿಯು ಹೇಗಾಗುವುದು? ಪುನಃ ಆಗುವ ಈ ಸ್ಮೃತಿಯು ಆಗ ಆತ್ಮಕ್ಕೆ ಅಸ್ತಿತ್ವಕ್ಕೆ ಪ್ರಮಾಣಿತವನ್ನಾಗಿ ಮಾಡುವುದು.

ಅಂಡಜ ಸ್ವೇದಜ ಜಾರಜ । ಚೌಥೇ ಜಾಣ ಗಾ ಉದ್ಭಿಜ । ತ್ಯಾಂಚೇ ಠಾಯೀ ಪ್ರಾಣು ಸಹಜ । ಆತ್ಮಯೋಗೇ ಸದಾ ವರ್ತೇ ॥೭೨೩॥ ಪ್ರಾಣಯೋಗೇ ಆತ್ಮಾ ವರ್ತತಾ । ತ್ಯಾಸೀ "ಜೀವ" ಮ್ಹಣತೀ ತತ್ತ್ವತಾ । ತ್ಯಾ ಪ್ರಾಣಾಸೀ ನ ಬಾಧಿತೀ ದೇಹಾವಸ್ಥಾ । ಮಾ ಜೀವಾಚೇ ಮಾಥಾ ತ್ಯಾ ಕೈಂಚ್ಯಾ ॥೭೨೪॥ ದೇಹೇಂದ್ರಿಯಾಮಾಜೀ ವರ್ತತಾ । ಆತ್ಮಾ ಅಲಿಪ್ತ ದೇಹಾವಸ್ಥಾ । ತೋ ಕೈಸಾ ಮ್ಹಣಸೀ ಆತಾ । ಐಕ ತ್ಯಾಹೀ ದೃಷ್ಟಾಂತಾ ಸಾಂಗೇನ ॥೭೨೫॥ ಆತ್ಮಾ ಜಾಗೃತಿದೇಹೀ ವರ್ತೇ । ತೈ ಸವಿಕಾರ ಮಾನಿತೀ ತ್ಯಾತೇ । ತೋಚಿ ಸಾಂಡೂನಿ ದೇಹೇಂದ್ರಿಯಾಂತೇ । ಸ್ವಪ್ನೀ ವರ್ತೇ ಪೂರ್ವಾನುಧ್ಯಾಸೇ ॥೭೨೬॥

ಸಾಕ್ಷಿಯಾಗಿ ಅಥವಾ ನೋಡುವವನು ನಿಜವಾಗಿಯೂ ಅವಸ್ಥಾತೀತನಾಗಿರುವನು. ಈತನು ಅವಸ್ಥಾಭೂತನಾಗಿ ಎಂದಿಗೂ ಆಗಲಾರನು. ಹೀಗಿರುವ ಪರಮಾತ್ಮನು ನಿಜವಾಗಿಯೂ ದೇಹದಲ್ಲಿದ್ದರೂ ಅವಸ್ಥೆ ರಹಿತನಾಗಿರುವನು. ಅಂದರೆ ದೇಹಾತೀತನಾಗಿರುವನು ॥೭೧೬॥ ಆತ್ಮವು ಅವಸ್ಥಾಶೂನ್ಯನು, ಅವಿಕಾರಿಯು ಮತ್ತು ಪೂರ್ಣನಾಗಿರುವನು. ಈತನಿಗೆ ಎಂದೂ ಕ್ಷೀಣತೆಯು ಉಂಟಾಗದು. ಈತನಿಗೆ ಜನ್ಮವೇ ಇಲ್ಲದಿರಲು ಮೃತ್ಯು ಹೇಗೆ ಬರಬೇಕು? ॥೭೧೭॥ ಅವಿಕಾರಿಯಾದ ಅವಸ್ಥಾರಹಿತನಾದ, ಪೂರ್ಣನಾದ ಈತನಿಗೆ ಜನ್ಮಮರಣವಿಲ್ಲ. ಹೀಗಿರುವ ಆತ್ಮನು ಯಾರೆಂದು ನೀನು ಕೇಳಬಹುದು. ಆತನು ಸರ್ವಜ್ಞನು, ಕೇವಲ ಜ್ಞಾನಸ್ವರೂಪನಾಗಿರುವನೆಂದು ತಿಳಿ ॥೭೧೮॥ ಪುನಃ ನೀನು ಹೀಗೆ ಹೇಳಬಹುದು; ಜ್ಞಾನವೂ ಕ್ಷಣಿಕವಾಗಿದೆ, ಘಟಜ್ಞಾನದಿಂದ ಪಟಜ್ಞಾನವು ಇಲ್ಲದಾಗುವುದು, ಆದರೆ ಹೀಗಿಲ್ಲ, ವಿಷಯಗಳನ್ನು ಅರಿಯುವ ಆ ಇಂದ್ರಿಯ ವೃತ್ತಿಯೇ ನಾಶವಾಗುವುದು. ಜ್ಞಾನವು ಮಾತ್ರ ತಾನು ಇದ್ದಂತೆಯೇ ಅವಿನಾಶವಾಗಿರುವುದು ॥೭೧೯॥ ಇದಕ್ಕೆ ಸರಿಯಾದ ದೃಷ್ಟಾಂತವೇನೆಂದರೆ, ದೇಹಕ್ಕೆ ಪ್ರಾಣವು ಬೆಳೆಸುವುದು. ಆದರೆ ದೇಹವೇ ಬಾಲ್ಯತರುಣಾದಿ ಅವಸ್ಥಾಭೂತವಾಗುವುದು. ಪ್ರಾಣವು ಅವಸ್ಥೆಯರಹಿತವಾಗಿ ತಾನು ಇದ್ದಂತೆಯೇ ಇರುವುದು ॥೭೨೦॥ ಪ್ರಾಣವು ದೇಹದ ಚಾಲಕವಾಗಿರುವುದು. ಇದಕ್ಕೆ ದೇಹಾವಸ್ಥೆಯು ಬಾಧಕವಾಗಲಾರದು. ಆತ್ಮವು ಮಾತ್ರ ಪ್ರಾಣಕ್ಕೂ ಸಹ ಶಕ್ತಿ ನೀಡುವುದಾಗಿದೆ. ಆದ್ದರಿಂದ ಆತ್ಮಕ್ಕೆ ದೇಹಾವಸ್ಥೆ ಇರುವುದು ಶಕ್ಯವೇ ಇಲ್ಲ ॥೭೨೧॥ ಈ ಪ್ರಾಣದ ದೃಷ್ಟಾಂತದಿಂದಲೇ ಪರಬ್ರಹ್ಮದ ನಿರ್ವಿಕಾರ ಸ್ವರೂಪವನ್ನು ತಿಳಿದುಕೊಳ್ಳಬೇಕು. ಆತ್ಮವು ದೇಹೇಂದ್ರಿಯಗಳಿಂದ ಬೇರೆಯಾಗಿರುವುದು ಇದನ್ನು ಮುಂದಿನ ಶ್ಲೋಕಾರ್ಥದಲ್ಲಿ ಸ್ಪಷ್ಟೀಕರಿಸಿದೆ ॥೭೨೨॥

ಅಂಡಜ, ಸ್ವೇದಜ ಜಾರಜ ಮತ್ತು ಉದ್ಭಿಜ ಇವುಗಳಲ್ಲಿ ಆತ್ಮದ ಸಂಗತಿಯಿಂದ ಪ್ರಾಣವು ಸಹಜವಾಗಿ ಸರ್ವಕಾಲದಲ್ಲಿರುವುದು ॥೭೨೩॥ ಪ್ರಾಣದೊಂದಿಗೆ ಆತ್ಮವು ವರ್ತಿಸುವುದರಿಂದ ಅದಕ್ಕೆ ''ಜೀವ'' ಎನ್ನುವರು. ಆ ಪ್ರಾಣಕ್ಕೇನೇ ದೇಹಾವಸ್ಥೆಯು ಬಾಧಿಸದಿದ್ದಲ್ಲಿ, ಜೀವದ ತಲೆಯಮೇಲೆ ಅದು ಹೇಗೆ ಎಂದು ಕುಳಿತುಕೊಳ್ಳಬೇಕು? ॥೭೨೪॥ ದೇಹೇಂದ್ರಿಯಗಳಲ್ಲಿ ವರ್ತಿಸುತ್ತಿದ್ದರೂ ಆತ್ಮವು ದೇಹಾವಸ್ಥೆಯಿಂದ ಅಲಿಪ್ತವಾಗಿರುವುದು. ಅದು ಹೇಗೆ? ಎಂದರೆ, ಅದಕ್ಕಾಗಿಯೂ ಒಂದು ದೃಷ್ಟಾಂತವನ್ನು ಹೇಳುವೆ ಕೇಳು ॥೭೨೫॥ ಆತ್ಮವು ಜಾಗೃತ ದೇಹದಲ್ಲಿದ್ದಾಗ್ಗೆ ಅದಕ್ಕೆ ಆಗ ಸವಿಕಾರ ಎನ್ನುವರು. ಅದೇ ಆತ್ಮವು ಇಂದ್ರಿಯಗಳನ್ನು ಬಿಟ್ಟುಕೊಟ್ಟು ಪೂರ್ವಸ್ಮೃತಿಯಿಂದ ಸ್ವಪ್ನದಲ್ಲಿಯೂ ಇರುವುದು ॥೭೨೬॥

ದೇಹೇಂದ್ರಿಯಾವಿಹೀನ । ಕೇವಳ ''ಲಿಂಗದೇಹ'' ಜಾಣ । ನಿಜಾತ್ಮಾ ದೇಖೇ ಸ್ವಪ್ನ । ಜಾಗೃತ್ಯಭಿಮಾನಸಂಕಲ್ಪೆ ॥೨೨೭॥ ತೇ ಉಪರಮಲ್ಯಾ ಸ್ವಪ್ನ । ದೇಹಾಭಿಮಾನ ಝಾಲಿಯಾ ಲೀನ । ಸರ್ವವಿಕಾರವಿಹೀನ । ಸುಷುಪ್ತಿಕಾಳೀ ಪೂರ್ಣ ಪರಮಾತ್ಮಾ ಉರೇ ॥೨೨೮॥ ದೇಹೇಂದ್ರಿಯಾಸೀ ಅಭಿಮಾನ ಲೀನ । ಕೋಣೇಹೀ ಸ್ಪುರೇನಾ ಸ್ಫುರಣ । ತರೀ ತೇ ಝಾಲೇ ಸರ್ವ ಶೂನ್ಯ । ಆತ್ಮಾ ಚಿದ್‌ಘನ ನಾಹೀ ಮ್ಹಣಸೀ ॥೨೨೯॥ ಜರೀ ಸುಷುಪ್ತೀಸೀ ಆತ್ಮಾ ನಾಹೀ । ತರೀ ಸುಖೇ ನಿಜೇಲೋ ಹೋತೋ ಪಾಹೀ । ಹೇ ಉಪಜೇ ಜ್ಯಾಚ್ಯಾ ಠಾಯೀ । ತೋ ಸರ್ವಥಾ ನವ್ಹೆ ಕಾಂಹೀ ಶೂನ್ಯ ॥೨೩೦॥ ಜೋ ಮೀ ಜಾಗೃತೀ ಜಾಗತಾ । ತೋಚಿ ಮೀ ಸ್ವಪ್ನಾತೇ ದೇಖತಾ । ತೋಚಿ ಮೀ ಸುಷುಪ್ತೀ ಸುಖಭೋಕ್ತಾ । ಏವಂ ತಿಹೀ ಅವಸ್ಥಾ ಸಾಕ್ಷೀ ಜೋ ॥೨೩೧॥ ಜೋ ಅವಸ್ಥಾತ್ರಯೀ ಸಾಕ್ಷೀ ಪೂರ್ಣ । ತೋ ಸರ್ವಥಾ ನವ್ಹೇ ಶೂನ್ಯ । ತೋಚಿ ಪರಮಾತ್ಮಾ ಪರಿಪೂರ್ಣ । ಶುದ್ಧ ಚಿದ್‌ಘನ ತೋ ರಾಯಾ ॥೨೩೨॥ ಸುಷುಪ್ತೀ ಬ್ರಹ್ಮಾನುಭವೋ ಆಹೇ । ತರೀ ಕಾ ಪುಢತೀ ಸಂಸಾರು ಪಾಹೇ । ತೇಥ ಅವಿದ್ಯೇಸೀ ಅಹಂ ಲೀನ ರಾಹೇ । ಯಾಲಾಗೀ ಹೋಯೇ ಭವಭ್ರಮು ॥೨೩೩॥ ತೇ ಅವಿದ್ಯಾ ಅಹಂಕಾರೇಸೀ ನಾಶೇ । ತೈ ಜಗದ್ರೂಪೇ ಬ್ರಹ್ಮಚಿ ಭಾಸೇ । ಜನ್ಮ ಮರಣಾಂಚಾ ಠಾವೋಚಿ ಪುಸೇ । ಜೀವ ಸಮರಸೇ ಪರಬ್ರಹ್ಮೀ ॥೨೩೪॥ ತೇಥ ಹೇತುಮಾತು ದೃಷ್ಟಾಂತ । ಪ್ರಮಾಣ-ಪ್ರಮೇಯವಿವರ್ಜಿತ । ಪರಮಾತ್ಮಾ ಸದೋದಿತ । ಪರಬ್ರಹ್ಮ ನಿಶ್ಚಿತ ಪರಮಾನಂದೇ ॥೨೩೫॥ ತೇಥ ಸುಖಾವರೀ ಸುಖ ನಾಂದೇ । ಆನಂದು ಭೋಗಿಜೇ ಆನಂದೇ । ಜಗ ದುಮದುಮೀ ಪರಮಾನಂದೇ । ಸ್ವಾನಂದ ಬೋಧೇ ಸಂಪೂರ್ಣ ॥೨೩೬॥ ನಿರಸೋನಿಯಾ ನಿಜಮಾಯಾ । ಐಸಾ ಅನುಭವೋ ಮುನಿವರ್ಯಾ । ಕೈ ಹೋಈಲ ಮ್ಹಣಸೀ ರಾಯಾ । ತೈ ಭಜಾವೇ ಯದುವರ್ಯಾ ನಿಷ್ಕಾಮಭಾವೇ ॥೨೩೭॥

ಯರ್ಹ್ಯಬ್ಜನಾಭಚರಣೈಷಣಯೋರುಭಕ್ತ್ಯಾ ಚೇತೋಮಲಾನಿ ವಿಧಮೇದ್ ಗುಣಕರ್ಮಜಾನಿ ।
ತಸ್ಮಿನ್ ವಿಶುದ್ಧ ಉಪಲಭ್ಯತ ಆತ್ಮತತ್ತ್ವಂ ಸಾಕ್ಷಾದ್ ಯಥಾಮಲದೃಶೋಃ ಸವಿತೃಪ್ರಕಾಶಃ ॥೪೦॥

ಅರ್ಥ: ವ್ಯಕ್ತಿಯು ಜೀವನದ ಏಕಮೇವ ಗುರಿಯಾಗಿ ಭಗವಂತನ ಚರಣ ಕಮಲಗಳನ್ನು ತನ್ನ ಹೃದಯದಲ್ಲಿ ನೆಲೆಗೊಳಿಸಿ, ಪರಮಾತ್ಮನ ಭಕ್ತಿಸೇವೆಯಲ್ಲಿ ಪರಿಪೂರ್ಣನಾಗಿ ಮಗ್ನನಾಗಬೇಕು. ಇದರಿಂದ ಶರೀರ, ಇಂದ್ರಿಯಗಳಿಂದ ಆಗುವ ಕರ್ಮದಿಂದ ಉತ್ಪನ್ನವಾದ ರಾಗದ್ವೇಷಾದಿ ಚಿತ್ತಮಲಗಳನ್ನು ನಾಶಮಾಡಿದಲ್ಲಿ ಹೃದಯವು ಪರಿಶುದ್ಧವಾಗಿ ವ್ಯಕ್ತಿಯು ಪರಮಾತ್ಮನನ್ನೂ ತನ್ನನ್ನೂ ದಿವ್ಯ ವ್ಯಕ್ತಿಗಳೆಂದು ಪ್ರತ್ಯಕ್ಷವಾಗಿ ನೋಡಬಹುದು. ಹೀಗೆ ಶುದ್ಧ ದೃಷ್ಟಿಯಿಂದ ಸೂರ್ಯಪ್ರಕಾಶವನ್ನು ಪ್ರತ್ಯಕ್ಷವಾಗಿ ಅನುಭವಿಸುವಂತೆ, ನೇರ ಅನುಭವದ ಮೂಲಕವಾಗಿ ವ್ಯಕ್ತಿಯು ಅಧ್ಯಾತ್ಮಿಕ ಅರಿವಿನಲ್ಲಿ ಪರಿಪೂರ್ಣತೆಯನ್ನು ಪಡೆಯುತ್ತಾನೆ.

ದೇಹೇಂದ್ರಿಯಗಳಿಲ್ಲದೇ ಇರುವ ಕೇವಲ ಲಿಂಗದೇಹದಲ್ಲಿ ಆತ್ಮವು ಜಾಗೃತೆಯಲ್ಲಿನ ಅಭಿಮಾನಸಂಕಲ್ಪಗಳಿಂದ ಸ್ವಪ್ನವನ್ನೂ ಕಾಣುವುದು ॥೨೨೭॥ ಈ ಸ್ವಪ್ನವೂ ಮುಗಿದು ಮತ್ತು ದೇಹಾಭಿಮಾನವು ಲಯವಾಗಲು ಅಂದರೆ ಸುಷುಪ್ತಿ ಕಾಲದಲ್ಲಿ ಸರ್ವ ವಿಕಾರಶೂನ್ಯನಾಗಿರುವ ಪರಮಾತ್ಮನು ಉಳಿದಿರುವನು ॥೨೨೮॥ ಇಂದ್ರಿಯಗಳೊಂದಿಗೆ ಅಭಿಮಾನವೂ ಲೀನವಾಗಲು ಸ್ಫುರಣೆಯು ಸ್ಫುರಣವಾಗಲಾರದು. ಆಗ ಎಲ್ಲವೂ ಶೂನ್ಯವಾಗಿರುವುದು. ಆಗ ಅಲ್ಲಿ ಚಿದ್‌ಘನನಾದ ಆತ್ಮನೂ ಇಲ್ಲ ಎಂದು ನೀನು ಹೇಳಬಹುದು ॥೨೨೯॥ ಸುಷುಪ್ತಿಯಲ್ಲಿ ಆತ್ಮನು ಇರದಿದ್ದರೆ "ನಾನು ಸುಖವಾಗಿ ಮಲಗಿದ್ದೆನು" ಎಂಬ ಸ್ಮರಣೆಯು ಹೇಗಾಗುತ್ತಿತ್ತು? ಅಂದರೆ ಈ ಸ್ಮರಣೆ ಇರುವುದರಿಂದ ಅದಕ್ಕೆ "ಶೂನ್ಯ" ಎಂದೂ ಎಂದಿಗೂ ಹೇಳಲು ಬರುವುದಿಲ್ಲ ॥೨೩೦॥ ಯಾವುದು ನಾನು ಜಾಗೃತಿಯನ್ನು ತಿಳಿಯುವವನೇ ಸ್ವಪ್ನವನ್ನು ನೋಡುವೆನು ಮತ್ತು ನಾನೇ ಸುಷುಪ್ತಿಯಲ್ಲಿ ಸುಖವನ್ನು ಭೋಗಿಸುವವನಾಗಿರುವೆನು ಎಂದು ಹೇಳುವನು. ಹೀಗೆ ಮೂರೂ ಅವಸ್ಥೆಗಳಿಗೆ ಈತನು ಸಾಕ್ಷಿಯಾಗಿರುವನು ॥೨೩೧॥ ಹೀಗೆ ಮೂರೂ ಅವಸ್ಥೆಗಳಲ್ಲಿ ಪೂರ್ಣವಾದ ಸಾಕ್ಷಿರೂಪದಿಂದ ವರ್ತಿಸುತ್ತಿರಲು ಬ್ರಹ್ಮವು ಶೂನ್ಯ ಎಂದೂ ಆಗಲಾರದು. ಹೇ ರಾಜನೇ, ಅದು ಪರಿಪೂರ್ಣ ಪರಮಾತ್ಮವಾಗಿರುವುದು. ಹಾಗೂ ಶುದ್ಧ ಚಿದ್‌ಘನವಾಗಿರುವುದು ॥೨೩೨॥ ಸುಷುಪ್ತಿಯಲ್ಲಿ ಬ್ರಹ್ಮಾನುಭಾವವು ಬರಲು ಸಂಸಾರವು ಏಕೆ ಭಾಸವಾಗುವುದು? ಹೀಗೆ ನೀನು ಕೇಳಬಹುದು, ಆದರೆ ಆ ಅವಸ್ಥೆಯಲ್ಲಿ ಅಹಂಕಾರವು ಅವಿದ್ಯೆಯಲ್ಲಿ ಲೀನವಾಗಿರುವುದು. ಆದ್ದರಿಂದ ಸಂಸಾರ ಭ್ರಮವು ಹುಟ್ಟುವುದು ॥೨೩೩॥ ಈ ಅವಿದ್ಯೆಯು ಅಹಂಕಾರ ಸಹ ನಾಶವಾದಲ್ಲಿ, ಆಗ ಜಗತ್ತಿನ ರೂಪದಿಂದ ಸರ್ವತ್ರವೂ ಬ್ರಹ್ಮತ್ವವೇ ಭಾಸವಾಗುವುದು. ಮತ್ತು ಜನ್ಮ ಮರಣದ ಸ್ಥಾನವೇ ಒರೆಸಿ ಹೋಗುವುದು. ಜೀವವು ಪರಮಾತ್ಮನಲ್ಲಿ ಐಕ್ಯವಾಗುವುದು ॥೨೩೪॥ ಆ ಅವಸ್ಥೆಯಲ್ಲಿ ಪರಮಾತ್ಮನು ಹೇತು, ದೃಷ್ಟಾಂತ, ಪ್ರಮಾಣ, ಪ್ರಮೇಯ, ಪ್ರಮಾತಾ ಇತ್ಯಾದಿಗಳ ರಹಿತನಾಗಿ ಸದಾ ಪ್ರಕಾಶರೂಪ, ಪರಮಾನಂದ, ನಿಶ್ಚಿತವಾದ ಪರಬ್ರಹ್ಮನಾಗುವನು ॥೨೩೫॥ ಈ ಅವಸ್ಥೆಯಲ್ಲಿ ಅತಿಶಯವಾಗಿ ಆನಂದವಾಗುವುದು. ಆನಂದದಿಂದಲೇ ಆನಂದದ ಅನುಭವವಾಗುವುದು. ಜಗತ್ತು ಸ್ವಾನಂದದಿಂದ ದುಮದುಮಿಸುವುದು. ಸರ್ವತ್ರವೂ ಸ್ವಾನಂದಬೋಧೆಯು ತುಂಬಿರುವುದು ॥೨೩೬॥ ಮಾಯೆಯ ನಿರಸನವಾಗಿ ಇಂತಹ ಅನುಭವವು ಎಂದಾದೀತು ಎಂದು ನೀನು ಕೇಳಬಹುದು. ಅದಕ್ಕಾಗಿ ಹೇ ರಾಜನೇ, ಯದುಶ್ರೇಷ್ಠನಾದ ಶ್ರೀಕೃಷ್ಣನನ್ನು ನಿಷ್ಕಾಮ ಭಾವದಿಂದ ಭಜಿಸಬೇಕು. ಇದರಿಂದ ಮಾಯೆಯ ನಿವೃತ್ತಿಯಾಗುವುದು. ಹೀಗೆ ಸ್ವಾನುಭವವು ಬರುವುದು ॥೨೩೭॥

ನಿರ್ವಿಕಾರಸ್ವರೂಪಪ್ರಾಪ್ತಿ । ಅವಶ್ಯ ಪಾವಣೇ ಆಹೇ ಚಿತ್ತೀ । ತ್ರೈ ಕರಾವೀ ಭಗವದ್ಭಕ್ತೀ । ಉತ್ಕಟಾ ಪ್ರೀತಿ ಅವಿಶ್ರಮ ॥೭೩೮॥ ತ್ಯಜೂನಿ ಪುತ್ರವಿತ್ತೇಷಣೇಚೇ ಕಾಜ । ಜಿಣೌನಿ ಲೌಕಿಕಾಚೀ ಲಾಜ । ಪದ್ಮನಾಭ ಭಜನೇ ಭೋಜ । ಅತಿನಿರ್ಲಜ್ಜ ನಾಚಾವೇ ॥೭೩೯॥ ಪುತ್ರವಿತ್ತಲೋಕೇಷಣಾ । ತ್ಯಜೂನಿ ಭಜತಾ ಹರಿಚರಣಾ । ತಂವ ತಂವ ಚಿತ್ತಾಚೇ ಚೈತ್ಯಮಳ ಜಾಣಾ । ಕ್ಷಣಕ್ಷಣಾ ನಾಸತೀ ॥೭೪೦॥ ರಜತಮಾದಿ ಕರ್ಮಜ ಮಳ । ಚಿತ್ತೀ ಬೈಸಲೇ ಜೇ ಸಬಳ । ತೇ ಪ್ರಕ್ಷಾಳತೀ ಸಕಳ । ಭಕ್ತಿಪ್ರೇಮಜಳಕ್ಷಾಳಣೇ ॥೭೪೧॥ ಜಂವ ಜಂವ ಘೋರಾವೇ ಸಪ್ರೇಮ ಭಕ್ತಿ । ತಂವ ತಂವ ಪಾಯಾ ಲಾಗೇ ವಿರಕ್ತಿ । ಸ್ವಯೇ ವಿರಮೇ ವಿಷಯಾಸಕ್ತಿ । ಹೋಯ ಚಿತ್ತವೃತ್ತಿ ನಿರ್ಮಳ ॥೭೪೨॥ ನಿರ್ಮಳ ಜಾಹಲಿಯಾ ಚಿತ್ತವೃತ್ತಿ । ಪರಮಾತ್ಮಾ ಯಾ ಸರ್ವ ಭೂತೀ । ಭಜೋ ಲಾಗೇ ಅನನ್ಯ ಪ್ರೀತೀ । ಹೇ "ಚೌಥೀ ಭಕ್ತಿ" ಉದಾರ ॥೭೪೩॥ ಹೇ ಭಕ್ತಿ ಅತಿಶಯೇ ಉದಾರ । ನಿರ್ದಾಳೀ ಭಕ್ತಾಂಚಾ ಅಹಂಕಾರ । ಉದ್ಧರೀ ಸುರ ನರ ಸ್ತ್ರಿಯಾ ಶೂದ್ರ । ಆನಂದನಿರ್ಭರ ಕರೀ ಜೀವು ॥೭೪೪॥ ಹೇ ಭಕ್ತಿ ಜೈ ಲಾಗೇ ಹಾತೀ । ತ್ರೈ ಭವಭಯಾಚೀ ನಿಃಶೇಷ ಶಾಂತಿ । ಪಾಯಾ ಲಾಗತೀ ಚಾರೀ ಮುಕ್ತೀ । ಐಶೀ ಉದಾರ ಭಕ್ತಿ ಹರೀಚೀ ॥೭೪೫॥ ಜೇವೀ ಡೋಳಾ ಅಸತಾ ಪಡಳ । ಸವಿತಾ ಉಗವೇ ಸರ್ವ ಕಾಳ । ತೋ ಸನ್ಮುಖ ನ ದೇಖೇ ರವಿಮಂಡಳ । ಮಾ ಪದಾರ್ಥ ಸಕಳ ತ್ಯಾ ಕೈಂಚೇ ॥೭೪೬॥ ತೇಂಚಿ ಫಿಟಲಿಯಾ ಪಡಳ । ದೃಷ್ಟೀ ಹೋಯ ಅತಿನಿರ್ಮಳ । ದೇಖೋ ಲಾಗೇ ಪದಾರ್ಥ ಸಕಳ । ರವಿಮಂಡಳಮನ್ವಯೇ ॥೭೪೭॥ ತೇವೀ ನಿಜಾತ್ಮಾ ಹೃದಯೀ ವಸೇ । ಪರೀ ಚಿತ್ತವೃತ್ತಿ ಮಳಿಣ ಅಸೇ । ತಂವ ಪರಬ್ರಹ್ಮ ನ ಪ್ರಕಾಶೇ । ಚಿತ್ತ ವಾಸನಾದೋಷೇ ದೂಷಿತ ॥೭೪೮॥ ತೇಥ ಕರಿತಾ ಭಗವದ್ಭಕ್ತಿ । ನಿರ್ಮಳ ಹೋಯ ಚಿತ್ತವೃತ್ತಿ । ತೇವ್ಹಾ ನಿರ್ವಿಕಾರಸ್ವರೂಪಪ್ರಾಪ್ತಿ । ಭಕ್ತ ಪಾವತೀ ನಿಜಭಜನೇ ॥೭೪೯॥ ಪಾವಾವಯಾ ಪರಮಪ್ರಾಪ್ತೀ । ಜಗೀ ದಾಟುಗೀ ಭಗವದ್ಭಕ್ತಿ । ತೇ ಮ್ಯಾ ಸಾಂಗಿತಲೀ ತುಜಪ್ರತೀ । ಯಥಾನಿಗುತೀ ನೃಪನಾಥಾ ॥೭೫೦॥ ಜೇವೀ ಡೋಳ್ಯಾಂಚೇ ಪಡಳ ಫಿಟೇ । ಲೇಥ ಪ್ರಕಾಶೇಸೀ ಸವಿತಾ ಭೇಟೇ । ತೇವೀ ಕಲ್ಪನಾಲೋಪೇ ಪ್ರಗಟೇ । ನೇಟೇಪಾಟೇ ಪರಬ್ರಹ್ಮ ॥೭೫೧॥

ನಿರ್ವಿಕಾರ ಸ್ವರೂಪದ ಪ್ರಾಪ್ತಿಯ ತೀವ್ರ ಇಚ್ಛೆಯು ಮನದಲ್ಲಿದ್ದರೆ, ಭಗವಂತನಲ್ಲಿ ಉತ್ಕಟವಾದ ಪ್ರೇಮವನ್ನು ಮಾಡಬೇಕು ॥೭೩೮॥ ಪ್ರಪಂಚದ, ಸ್ತ್ರೀಪುತ್ರರ, ಸಂಪತ್ತಿನ ಇಚ್ಛೆ ಹಾಗೂ ಚಿಂತೆಯನ್ನು ಬಿಟ್ಟು ಲೌಕಿಕದ ಲಜ್ಜೆಯನ್ನು ತೊರೆದು ಭಗವಂತನ ಭಕ್ತಿಯಲ್ಲಿ ತಲ್ಲೀನನಾಗಿ ಪ್ರೇಮದಿಂದ ಕುಣಿಯುತ್ತಿರಬೇಕು ॥೭೩೯॥ ಪುತ್ರ, ವಿತ್ತ ಹಾಗೂ ಮಾನಸನ್ಮಾನಗಳ ಆಸಕ್ತಿಯನ್ನು ಮನಸ್ಸಿನಿಂದ ತಗೆದೊಗೆಯಬೇಕು. ಶುದ್ಧ ಪ್ರೇಮದಿಂದ ಭಗವಂತನ ಭಜನೆಯನ್ನು ಮಾಡಬೇಕು. ನಿರಪೇಕ್ಷಭಾವದಿಂದ ಭಗವಂತನ ಭಜನೆಯನ್ನು ಮಾಡಲು ಚಿತ್ತದಲ್ಲಿನ ದೋಷಗಳು ಕ್ಷಣಕ್ಷಣಕ್ಕೆ ನಾಶವಾಗಲಾರಂಭಿಸುವುವು ॥೭೪೦॥ ರಾಜಸ, ತಾಮಸ ಕರ್ಮಗಳಿಂದ ಚಿತ್ತದಲ್ಲಿ ಪ್ರಬಲವಾದ ಹೊಲಸು ಕೂಡಿರುವುದು. ಈ ಹೊಲಸನ್ನು ಭಕ್ತಿಪ್ರೇಮದ ನಿರ್ಮಲ ಜಲದಿಂದ ತೊಳೆಯಲ್ಪಡುವುದು ॥೭೪೧॥ ಪ್ರೇಮಮಯ ಭಕ್ತಿಯು ಹೃದಯದಲ್ಲಿ ಬೆಳೆಯುತ್ತ ಹೋಗುವಂತೆ, ವಿರಕ್ತಿಯೂ ಸಹ ಅದರಂತೆ ಬಂದು ಕಾಲಿಗೆ ಬೀಳುವುದು. ಅದರಿಂದ ಸಾಮಾನ್ಯ ವಿಷಯದ ಆಸಕ್ತಿಯು ಕಡಿಮೆಯಾಗಿ ಚಿತ್ತವೃತ್ತಿಯು ನಿರ್ಮಲವಾಗುವುದು ॥೭೪೨॥ ಚಿತ್ತವೃತ್ತಿಯು ನಿರ್ಮಲಗೊಳ್ಳುತ್ತಲೇ ಸರ್ವತ್ರವೂ ತುಂಬಿರುವ ಪರಮಾತ್ಮನು ಕಾಣಲಾರಂಭಿಸುವನು. ಸತ್ಯ, ಶಿವ, ಸೌಂದರ್ಯದ ಸರ್ವತ್ರ ದರ್ಶನವಾಗುವುದು. ಪ್ರತ್ಯೇಕ ಕಣಗಳು ಪವಿತ್ರವಾಗಿ ತೋರುವುವು. ಭಕ್ತನು ಅಲ್ಲಿ ನತಮಸ್ತಕನಾಗುವನು. ಇದು ಜ್ಞಾನೋತ್ತರವಾದ ನಾಲ್ಕನೆಯ ಭಕ್ತಿಯು ಅತ್ಯಂತ ಶ್ರೇಷ್ಠವಾಗಿರುವುದು ॥೭೪೩॥ ಈ ಭಕ್ತಿಯು ಅತಿಶಯವಾಗಿ ಉದಾರವಾಗಿರುವುದು. ಈ ಭಕ್ತಿಯು ಭಕ್ತನ ಹೃದಯದಲ್ಲಿನ ಸರ್ವಪ್ರಕಾರದ ಅಹಂಕಾರವನ್ನು ನಾಶ ಮಾಡುವುದು. ಇದು ದೇವ, ಮಾನವ, ಸ್ತ್ರೀ, ಶೂದ್ರರಿಗೆ ಉದ್ಧರಿಸಿ ಜೀವಕ್ಕೆ ಪೂರ್ಣಾನಂದವನ್ನು ನೀಡುವುದು ॥೭೪೪॥ ಈ ಭಕ್ತಿಮಾರ್ಗದಲ್ಲಿ ನಡೆಯುತ್ತಿದ್ದಂತೆ ಸಂಸಾರದಲ್ಲಿನ ಎಲ್ಲ ಪ್ರಕಾರದ ಭಯವು ಭಂಗವಾಗುವುದು. ಮತ್ತು ಮಾನವನಿಗೆ ಅಖಂಡ ಶಾಂತಿಯು ದೊರೆಯುವುದು ಮತ್ತು ನಾಲ್ಕೂ ಮುಕ್ತಿಗಳು ಭಕ್ತನ ಕಾಲಿಗೆ ಬೀಳುವುವು. ಈ ಹರಿಯ ಭಕ್ತಿಯು ಹೀಗೆ ಉದಾರಸ್ವರೂಪವಾಗಿದೆ ॥೭೪೫॥ ಕಣ್ಣುಗಳಿಗೆ ಪೊರೆ ಬರಲು ಯಾವಾಗಲೂ ಎದುರಿಗೆ ಇರುವ ಸೂರ್ಯನೇ ಕಾಣಿಸಲಾರನು. ಅಂದಮೇಲೆ ಇತರ ಪದಾರ್ಥಗಳು ಹೇಗೆ ಕಾಣಬೇಕು? ॥೭೪೬॥ ಪೊರೆಯು ಸಂಪೂರ್ಣವಾಗಿ ಹೊರಟು ಹೋದರೆ ದೃಷ್ಟಿಯು ಸ್ವಚ್ಛವಾಗಿ ಸೂರ್ಯಮಂಡಲ ಸಹ ಆ ಕಣ್ಣುಗಳು ಸರ್ವ ಪದಾರ್ಥಗಳನ್ನು ಕಾಣುವುವು ॥೭೪೭॥ ಅದರಂತೆ ಪರಮಾತ್ಮನು ಹೃದಯದಲ್ಲಿರುವನು. ಆದರೆ ಚಿತ್ತವೃತ್ತಿಯು ಮಲಿನವಾಗಿರುವುದರಿಂದ ಆ ಪರಮಾತ್ಮನು ಕಾಣುವುದಿಲ್ಲ. ಚಿತ್ತದಲ್ಲಿ ಯಾವಾಗಲೂ ವಾಸನೆಗಳ ದೋಷಗಳು ತುಂಬಿಕೊಂಡಿರುವುವು. ಅದರಿಂದಲೇ ಸಮೀಪವಾಗಿರುವ ಪರಮಾತ್ಮನನ್ನು ಅರಿಯಲಾಗದು ॥೭೪೮॥ ಚಿತ್ತವೃತ್ತಿಯು ನಿರ್ಮಲವಾಗುವ ಮಾರ್ಗವು ಭಗವದ್ಭಕ್ತಿಯಾಗಿರುವುದು. ನಿಃಸ್ವಾರ್ಥ, ಸಪ್ರೇಮ ಭಜನೆಯಿಂದ ಭಕ್ತರು ನಿರ್ವಿಕಾರ ಸ್ವರೂಪವನ್ನು ಪ್ರಾಪ್ತ ಮಾಡಿಕೊಳ್ಳುವರು ॥೭೪೯॥ ಪರಮಾತ್ಮನ ಪ್ರಾಪ್ತಿಯನ್ನು ಮಾಡಿಕೊಡಲು ಭಗವದ್ಭಕ್ತಿಯೊಂದೇ ಸಮರ್ಥವಾಗಿರುವುದು. ನಾನು ನಿನಗೆ ಈ ಭಕ್ತಿಯನ್ನು ಯಥಾರ್ಥವಾಗಿ ಹೇಳಿರುವೆನು ॥೭೫೦॥ ಕಣ್ಣುಗಳಲ್ಲಿಯ ಪೊರೆಯು ಇಲ್ಲದಾಗಲು ಕೂಡಲೇ ಸೂರ್ಯಪ್ರಕಾಶವು ಸಾಕ್ಷಾತ್ ಕಾಣುವುದು. ಅದರಂತೆ ಮನದಲ್ಲಿನ ಸರ್ವಕಲ್ಪನೆಗಳು ಲೋಪವಾಗಲು ನಿರ್ವಿಕಲ್ಪ ಅಂತಃಕರಣದಲ್ಲಿ ಪರಬ್ರಹ್ಮವು ಪ್ರಕಟವಾಗುವುದು ॥೭೫೧॥

ಜೇಥ ನಿರ್ವಿಕಲ್ಪ ಸಮಾನ । ನಿಶ್ಚಯೇಸೀ ಜಾಹಲೇ ಮನ । ತ್ಯಾಸೀ ದೇಹೀ ವರ್ತತಾಂಹೀ ಜಾಣ । ಭವಬಂಧನ ಸ್ಪರ್ಶೇನಾ ॥೭೫೨॥ ಐಸೇ ಗರ್ಜೋನಿಯಾ ಜಾಣ । ಹರ್ಷೇ ಬೋಲೇ ಪಿಪ್ಪಲಾಯನ । ತಂವ ರಾಜಾ ಸುಖಾವಲಾ ಸಂಪೂರ್ಣ । ಜೀವೀಚೀ ಖೂಣ ಬಾಣಲೀ ॥೭೫೩॥ ಐಕತಾ ಬ್ರಹ್ಮ ನಿರೂಪಣ । ರಾಜಾ ಲಾಂಚಾವಲಾ ಪೂರ್ಣ । ಪುಢೇ ವಾಢಾವಯಾ ನಿರೂಪಣ । ಅನ್ವಯೇ ಪ್ರಶ್ನ ಪುಸತಸೇ ॥೭೫೪॥ ಜೇಣೇ ತುಟೇ ಕರ್ಮಬಂಧನ । ತ್ಯಾ ಕರ್ಮಯೋಗಾಚೇ ಲಕ್ಷಣ । ಸಮೂಳ ಐಕಾವಯಾ ಜಾಣ । ರಾಜಾ ಆಪಣ ಸಾದರೇ ಪುಸತು ॥೭೫೫॥

ರಾಜೋವಾಚ :-

ಕರ್ಮಯೋಗಂ ವದತ ನಃ ಪುರುಷೋ ಯೇನ ಸಂಸ್ಕೃತಃ । ವಿಧೂಯೇಹಾಶು ಕರ್ಮಾಣಿ ನೈಷ್ಕರ್ಮ್ಯಂ ವಿಂದತೇ ಪರಮ್ ॥೪೧॥

ಅರ್ಥ:- ಯಾವ ಕರ್ಮಯೋಗದ ಆಚರಣೆಯಿಂದ ಮನುಷ್ಯನು ಸಂಸ್ಕಾರಯುಕ್ತನಾಗಿ ಕರ್ಮದ ತ್ಯಾಗವನ್ನು ಮಾಡಿ ಕರ್ಮನಿವೃತ್ತಿಯಿಂದ ಸಾಧ್ಯವಾಗುವ ಜ್ಞಾನಕ್ಕೆ ಪ್ರಾಪ್ತನಾಗುವನೋ, ಆ ಕರ್ಮಯೋಗವನ್ನು ನನಗೆ ಹೇಳಿರಿ.

ರಾಜಾ ನಿಜಶ್ರದ್ಧಾ ಸಂಪನ್ನ । ಅತಿವಿನೀತ ಕರೀ ಪ್ರಶ್ನ । ಜೇಣೇ ತುಟೇ ಕರ್ಮಬಂಧನ । ತೋ ಕರ್ಮಯೋಗ ಸಂಪೂರ್ಣ ಸಾಂಗಾ ಸ್ವಾಮೀ ॥೭೫೬॥ ಕೋಣ ಕರ್ಮೇ ಕರ್ಮ ತುಟೇ । ನೈಷ್ಕರ್ಮಸಿದ್ಧಿ ಸ್ವಯೇ ಪ್ರಗಟೇ । ಪುರುಷಾ ಪುರುಷೋತ್ತಮ ಭೇಟೇ । ಹೇ ಮಜ ಗೋಮಟೇ ವರ್ಮ ಸಾಂಗಾ ॥೭೫೭॥

ಏವಂ ಪ್ರಶ್ನಮೃಷೀನ್ಪೂರ್ವಮಪೃಚ್ಛಂ ಪಿತುರಂತಿಕೇ । ನಾಬ್ರುವನ್ ಬ್ರಹ್ಮಣಃ ಪುತ್ರಾಸ್ತತ್ರ ಕಾರಣಮುಚ್ಯತಾಮ್ ॥೪೨॥

ಅರ್ಥ:- ಪಿತನಾದ ಇಕ್ಷ್ವಾಕು ಸಮಕ್ಷಮದಲ್ಲಿ ಈ ಹಿಂದೆ ಒಂದು ಸಲ ಬ್ರಹ್ಮದೇವರ ಸನಕಪುತ್ರರಿಗೆ ಇದೇ ಪ್ರಶ್ನೆಯನ್ನು ಕೇಳಿದ್ದೆನು. ಆದರೆ ಅವರು ಸರ್ವಜ್ಞರಾಗಿದ್ದರೂ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಇದರ ಕಾರಣವೇನೆಂಬುದು ಹೇಳಿರಿ.

ಪೂರ್ವೀ ಹಾಚಿ ಪ್ರಶ್ನು ಸನಕಾದಿಕಾ । ಪಿತ್ಯಾ ಸನ್ನಿಧ ಪುಶಿಲಾ ದೇಖಾ । ತೇ ಉತ್ತರ ನೇದಿತೀಚಿ ಕಾ । ಹೇಹೀ ಆಶಂಕಾ ಫೇಡಾವೀ ಸ್ವಾಮೀ ॥೭೫೮॥ ರಾಯಾಚೇ ಪ್ರಶ್ನ ಅತಿಪವಿತ್ರ । ತ್ಯಾಂಚೇ ದ್ಯಾವಯಾ ಪ್ರತಿ ಉತ್ತರ । ಹರಿಖಾವಲಾ ''ಆವಿರ್ಹೋತ್ರ'' । ತೋ ಕರ್ಮವೈಚಿತ್ರ್ಯ ನಿರೂಪೀ ॥೭೫೯॥

ಆವಿರ್ಹೋತ್ರ ಉವಾಚ :-

ಕರ್ಮಾಕರ್ಮವಿಕರ್ಮೇತಿ ವೇದವಾದೋ ನ ಲಾಕಿಕಃ । ವೇದಸ್ಯ ಚೇಶ್ವರಾತ್ಮತ್ವಾತ್ತತ್ರ ಮುಹ್ಯಂತಿ ಸೂರಯಃ ॥೪೩॥

ಅರ್ಥ:- ಆವಿರ್ಹೋತ್ರನು ಹೇಳಿದನು: ಹೇ ರಾಜನೇ, ಕರ್ಮ, ಅಕರ್ಮ ಮತ್ತು ವಿಕರ್ಮ ಈ ಮೂರೂ ವೇದ ಮುಖಾಂತರವಾಗಿ ತಿಳಿಯಲ್ಪಡುವುವು. ಇವುಗಳ ವ್ಯಾಖ್ಯಾನವನ್ನು ಲೌಕಿಕ ರೀತಿಯಲ್ಲಿ ಮಾಡಲು ಬರುವುದಿಲ್ಲ. ವೇದವು ಅಪೌರುಷೀಯವಾಗಿದೆ. ಇದರಲ್ಲಿ ಕೇವಲ ವಾಕ್ಯಗಳ ಪೂರ್ವಾಪರ ಸಂಬಂಧದಿಂದ ತಾತ್ಪರ್ಯದ ನಿಶ್ಚಯಮಾಡಬೇಕಾಗುವುದು. ಆದರೆ ಇದು ದುಷ್ಕರವಾಗಿದೆ. ಮಹಾ ಮಹಾ ವಿದ್ವಾನ್‌ರಿಗೂ ಅರ್ಥಮಾಡಲು ಅಡಚಣೆಯಾಗುವುದು. ಕೆಲವು ವೇಳೆಯಲ್ಲಿ ತಪ್ಪಾಗಿ ಅರ್ಥವನ್ನು ಹಚ್ಚಲ್ಪಡುವುದು. ನಿಮ್ಮ ಬಾಲ್ಯತ್ವವನ್ನು ಕಂಡು ಅಧಿಕಾರವು ಕಡಿಮೆ ಇದ್ದದ್ದನ್ನು ಅರಿತು ಅವರು ನಿಮಗೆ ಉತ್ತರಿಸಿಲ್ಲ.

ಯಾರ ಮನವು ಭಕ್ತಿಯಿಂದ ನಿರ್ವಿಕಲ್ಪವಾಗಿದೆಯೋ ಅವನು ದೇಹದಲ್ಲಿದ್ದರೂ ಸಂಸಾರ ಬಂಧನವು ಯಾವ ಪ್ರಕಾರದ ಬಾಧೆಯನ್ನು ಮಾಡಲಾರದು ॥೭೫೨॥ ಪಿಪ್ಪಲಾಯನ ಮುನಿಗಳು ಬಹಳ ಸಂತೋಷದಿಂದ ಗರ್ಜಿಸುತ್ತ ಭಕ್ತಿಯ ವಿಚಾರಗಳನ್ನು ಮಂಡಿಸಿದರು. ಇದನ್ನು ಕೇಳಿ ರಾಜನಿಗೂ ಹರ್ಷವಾಯಿತು. ಮತ್ತು ಆತನಿಗೆ ಅನುಭವದ ಮರ್ಮವು ಮಾನ್ಯವಾಯಿತು ॥೭೫೩॥ ಪುನಃ ಬ್ರಹ್ಮ ನಿರೂಪಣೆಯನ್ನು ಕೇಳುವ ಅಭಿಲಾಷೆಯು ರಾಜನ ಅಂತಃಕರಣದಲ್ಲಿ ಉಂಟಾಯಿತು. ಆದ್ದರಿಂದ ಆತನು ಪುನಃ ಪ್ರಶ್ನೆಯನ್ನು ಕೇಳಲಾರಂಭಿಸಿದನು ॥೭೫೪॥ ಯಾವುದರಿಂದ ಕರ್ಮಬಂಧನವು ಮುರಿಯುವುದೋ, ಆ ಕರ್ಮಯೋಗದ ಸಂಪೂರ್ಣ ಲಕ್ಷಣಗಳನ್ನು ಕೇಳುವುದಕ್ಕಾಗಿ ರಾಜನು ತಾನಾಗಿಯೇ ಅಗತ್ಯಪೂರ್ವಕ ಕೇಳಿದನು ॥೭೫೫॥

ರಾಜನು ಶ್ರದ್ಧಾಸಂಪನ್ನನಾಗಿದ್ದನು. ಈತನು ಅತ್ಯಂತ ನಮ್ರತೆಯಿಂದ ಪ್ರಶ್ನೆಯನ್ನು ಮಾಡಿದನು. ಹೇ ಸ್ವಾಮಿಯೇ, ಯಾವ ಯೋಗದಿಂದ ಕರ್ಮದ ಬಂಧನವು ಮುರಿಯುವುದೋ, ಆ ಕರ್ಮಯೋಗವನ್ನು ಸಮಗ್ರವಾಗಿ ನನಗೆ ಹೇಳಿರಿ ॥೭೫೬॥ ಯಾವ ಕರ್ಮದ ಆಧಾರದಿಂದ ಸರ್ವಕರ್ಮಗಳು ನಷ್ಟವಾಗಿ ನೈಷ್ಕರ್ಮವು ತನ್ನಿಂದ ತಾನೇ ಸಿದ್ಧಿಯಾಗಿ ಪುರುಷನಿಗೆ ಪುರುಷೋತ್ತಮನು ದೊರೆಯುವನು? ಆ ಉತ್ತಮ ಕರ್ಮವನ್ನು ನನಗೆ ಹೇಳಿರಿ ॥೭೫೭॥

ಪೂರ್ವದಲ್ಲಿ ನಾನು ಇದೇ ಪ್ರಶ್ನೆಯನ್ನು ತಂದೆಯ ಎದುರಿನಲ್ಲಿ ಸನಕಾದಿಕರಿಗೆ ಕೇಳಿದ್ದೆನು. ಆದರೆ ಅವರು ಅದರ ಉತ್ತರವನ್ನು ಕೊಡಲಿಲ್ಲ ಏಕೆ ಉತ್ತರಿಸಲಿಲ್ಲ ಎಂದು ನನ್ನ ಮನದಲ್ಲಿ ಸಂಶಯವಿದೆ. ಅದನ್ನು ಬಿಡಿಸಿರಿ ॥೭೫೮॥ ರಾಜನ ಈ ಪ್ರಶ್ನೆಯು ಅತ್ಯಂತ ಪವಿತ್ರವಾಗಿತ್ತು. ಇದಕ್ಕೆ ಉತ್ತರಿಸಲು ಆವಿರ್ಹೋತ್ರರು ಬಹಳ ಸಂತೋಷದಿಂದ ಮುಂದಾದರು. ಮತ್ತು ಕರ್ಮವೈಚಿತ್ರಗಳ ನಿರೂಪಣೆಯನ್ನು ಮಾಡಿದರು ॥೭೫೯॥

ಕರ್ಮಾಕರ್ಮವಿಕರ್ಮ ಜಾಣಾ । ಸಾಮಾನ್ಯ ನವ್ಹೇ ನೃಪನಂದನಾ । ಕರಿತಾ ವಿಭಾಗವಿವಂಚನಾ । ನುಗವೇ ಸಜ್ಞಾನಾ ಸ್ಮೃತಿಕಾರಾಂಸೀ ॥೭೬೦॥ ಜೇ ಸ್ವಯೇ ಪ್ರತಿಸೃಷ್ಟಿಕಾರೀ । ತೇಹೀ ಭುಲಲೇ ಕರ್ಮವಿಭಾಗಾವರೀ । ಜೇ ಸಮುದ್ರ ಘೋಂಟಿತೀ ಚುಳೇಕರೀ । ತೇಹೀ ಕರ್ಮಸಾಗರೀ ಬುಡಾಲೇ ॥೭೬೧॥ ಯೇಚಿ ಕರ್ಮವಿವಂಚನೇಸಾಠೀ । ಋಷಿಮಹರ್ಷೀಚಿಯಾ ಕೋಟೀ । ಮತಾಭಿಮಾನೇ ಝಾಲೇ ಹಿಂಪುಟೀ । ತ್ಯಾಂಸೀಹೀ ಶೇವಟೀ ನುಗವೇಚಿ ॥೭೬೨॥ ಕರ್ಮಾಕರ್ಮವಿಭಾಗ ಜಾಣಾ । ಸ್ವಯೇ ನುಗವೇಚಿ ಚತುರಾನನಾ । ಇತರಾಂಚೀ ಕೋಣ ಗಣನಾ । ಕರ್ಮವಿವಂಚನಾ ಕರಾವಯಾ ॥೭೬೩॥ ಕರ್ಮ ವೇದಮೂಳ ಜಾಣ । ವೇದು ಸ್ವಯೇ ನಾರಾಯಣ । ವೇದವಾದವಿವಂಚನ । ಕರಿತಾ ಮೌನ ಶ್ರುತಿಶಾಸ್ತ್ರಾ ॥೭೬೪॥ ಕರ್ಮ - ಅಕರ್ಮ - ವಿಕರ್ಮ ಜಾಣ । ಏಕಚಿ ಪರೀ ತ್ರಿವಿಧ ಭಿನ್ನ । ತೇಹೀ ವಿಭಾಗವಿವಂಚನ । ಸಾವಧಾನ ಅವಧಾರೀ ॥೭೬೫॥ ಶ್ವೇತ ಮೃದು ಮಧುರ । ತ್ರಿವಿಧ ಭೇದೇ ಏಕ ಸಾಖರ । ತೇವೀ ಏಕಚಿ ತ್ರಿಪ್ರಕಾರ । ಕರ್ಮಠ ನರ ಮಾನಿತೀ ಕರ್ಮ ॥೭೬೬॥ ಭಿನ್ನ ಕರಿತಾ ಮಧುರತಾ । ತೀಮಾಜೀ ಯೇ ಮೃದು - ಶ್ವೇತತಾ । ಶ್ವೇತತಾಚಿ ಭಿನ್ನ ಕರಿತಾ । ಮೃದುಮಧುರತಾ ತೀಮಾಜೀ ॥೭೬೭॥ ತೇವೀ ಭಿನ್ನ ಕರಿತಾ ''ಕರ್ಮ'' । ಕರ್ಮಾ ಸರ್ವಾಂಗೀ ''ಅಕರ್ಮ'' । ಕರ್ಮ ಅಕರ್ಮಾಮಾಜೀ ''ವಿಕರ್ಮ'' । ಮಿರವೇ ಪರಮ ಸೌಭಾಗ್ಯೇ ॥೭೬೮॥ ಮುಖ್ಯ ಮೂಳೀ ಜೇ ಕಾ ನಿಪಜೇ । ''ಕರ್ಮ'' ಐಸೇ ತ್ಯಾತೇ ಮ್ಹಣಿಜೇ । ವಿಹಿತಾವಿಹಿತಕ್ರಿಯಾ ಜೇ ಜೇ । ''ವಿಕರ್ಮ'' ಮ್ಹಣಿಜೇ ತಿಯೇ ನಾಂವ ॥೭೬೯॥ ಕರ್ಮ ಅಕರ್ಮಯೋಗೇ ಚಳೇ । ಐಸೇ ವಿಕರ್ಮೀ ಜ್ಯಾಸೀ ವಿವಳೇ । ತ್ಯಾಸ ''ನಿಷ್ಕರ್ಮತಾ'' ಆಕಳೇ । ಗುರುಕೃಪಾಬಳೇ ತತ್ಕಾಳ ॥೭೭೦॥ ಕರ್ಮಾವರೀ ಕರ್ಮ ವಿಶೇಷ ವಾಢೇ । ''ವಿಕರ್ಮ'' ತ್ಯಾತೇ ಮ್ಹಣಣೇ ಘಡೇ । ತೇಥೇ ಕರ್ಮ ರಿಘೋ ನ ಶಕೇ ಪುಢೇ । ''ಅಕರ್ಮ'' ಚೋಖಡೇ ಯಾ ನಾಂವ ॥೭೭೧॥ ಐಶೀ ಕರ್ಮವಿವಂಚನಾ ಅಟಕ । ಹಾ ಪ್ರಶ್ನ ಕೇಲಾ ತೈ ತೂ ಬಾಳಕ । ತ್ಯಾಚಿಲಾಗೀ ಗಾ ರಾಯಾ ದೇಖ । ಸನಕಾದಿಕ ನ ಸಾಂಗತೀಚಿ ॥೭೭೨॥ ಕರ್ಮಾಕರ್ಮವಿವಂಚನಾ । ಅಧಿಕಾರೇವೀಣ ಕೋಣಾ । ಸಾಂಗೋ ನಯೇ ನೃಪನಂದನಾ । ಕರ್ಮ ಸಜ್ಞಾನಾ ಅತಿದುರ್ಬೋಧ ॥೭೭೩॥

ಪರೋಕ್ಷವಾದೋ ವೇದೋಽಯಂ ಬಾಲಾನಾಮನುಶಾಸನಮ್ । ಕರ್ಮಮೋಕ್ಷಾಯ ಕರ್ಮಾಣಿ ವಿಧತ್ತೇ ಹ್ಯಗದಂ ಯಥಾ ॥೪೪॥

ಅರ್ಥ:- ವೇದವು ಮುಖ್ಯಾರ್ಥವನ್ನು ಗುಪ್ತವಾಗಿಟ್ಟು ಬೇರೆ ಅರ್ಥವನ್ನು ವ್ಯಕ್ತಗೊಳಿಸುವುದು. ಆದ್ದರಿಂದ ಅದಕ್ಕೆ ಪರೋಕ್ಷವಾದವೆನ್ನುವರು. ಇದು ಕರ್ಮದ ನಿವೃತ್ತಿಗಾಗಿ ಕರ್ಮದ ನಿಯಮೋಕ್ತಿ ಮಾಡುವುದು. ಬಾಲಕನಿಗೆ ಮಿಠಾಯಿಯ ಲೋಭವನ್ನು ತೋರಿಸಿ ಔಷಧವನ್ನು ಕೊಡುವಂತೆ ವೇದವು ಸ್ವರ್ಗ ಇತ್ಯಾದಿಗಳ ಪ್ರಲೋಭವನ್ನು ತೋರಿಸಿ ಶ್ರೇಷ್ಠ ಕರ್ಮಗಳಿಗೆ ಪ್ರವರ್ತಿಸುವುದು.

ಹೇ ನೃಪನಂದನನೇ, ಕರ್ಮ, ಅಕರ್ಮ ಮತ್ತು ವಿಕರ್ಮ ಇವು ಸಾಮಾನ್ಯವೇನಲ್ಲ. ಮಹಾ ಮಹಾ ವಿದ್ವಾನ ಸ್ಮೃತಿಕಾರಗಳವರಿಗೂ ಇವುಗಳ ವಿಭಾಗದ ನಿರ್ಣಯನ್ನು ಮಾಡಲಾಗಲಿಲ್ಲ ॥೭೬೦॥ ಪ್ರತಿಸೃಷ್ಟಿಯನ್ನು ಮಾಡಿದವರೂ ಕೂಡ ಕರ್ಮಗಳ ವಿಭಾಗ ಮಾಡುವಾಗ್ಗ ಗೊಂದಲಕ್ಕೆ ಬಿದ್ದರು. ಒಂದೇ ಗುಟುಕಿನಲ್ಲಿ ಸಮುದ್ರದ ಜಲವನ್ನು ಕುಡಿದವರೂ ಸಹ ಕರ್ಮಸಮುದ್ರದಲ್ಲಿ ಮುಳುಗಿಬಿಟ್ಟರು ॥೭೬೧॥ ಇದೇ ಕರ್ಮಗಳ ವಿವೇಚನೆಯನ್ನು ಅನೇಕ ಋಷಿ ಮಹರ್ಷಿಗಳು ಭಿನ್ನ ಭಿನ್ನವಾದ ಮತಗಳಿಂದ ಮಂಡಿಸಿ ಅಭಿಮಾನದಿಂದ ನಿರಾಶರಾಗಬೇಕಾಯಿತು. ಇವರಿಗೂ ಕರ್ಮಗಳ ನಿರ್ಣಯವನ್ನು ಮಾಡಲಾಗಲಿಲ್ಲ ॥೭೬೨॥ ಕರ್ಮಾಕರ್ಮಗಳ ವಿಭಾಗವು ಬ್ರಹ್ಮದೇವರಿಗೂ ತಿಳಿಯಲಿಲ್ಲ. ಅಂದಮೇಲೆ ಇತರರ ಯಾವ ಕಥೆ? ॥೭೬೩॥ ಕರ್ಮದ ಮೂಲವು ವೇದವಾಗಿದೆ ಮತ್ತು ವೇದವು ಸ್ವತಃ ನಾರಾಯಣನಾಗಿರುವನು. ಆ ವೇದಗಳಲ್ಲಿ ವಾಕ್ಯಗಳ ಕಲ್ಪನೆ ಮಾಡಲಾಗದೇ ಶ್ರುತಿಶಾಸ್ತ್ರಗಳು ಸಹ ಮೌನವನ್ನು ಧರಿಸಬೇಕಾಯಿತು ॥೭೬೪॥ ಕರ್ಮ, ಅಕರ್ಮ, ವಿಕರ್ಮ ಇವು ಒಂದೇಯಾಗಿದ್ದು ಮೂರು ಪ್ರಕಾರವಾಗಿವೆ. ಅವುಗಳ ವಿಭಾಗದ ವಿಸ್ತಾರವನ್ನು ಹೇಳುವೆನು ಏಕಾಗ್ರದಿಂದ ಕೇಳಬೇಕು ॥೭೬೫॥ ಶುಭ್ರ, ಮೃದು ಮತ್ತು ಮಧುರ ಹೀಗೆ ಮೂರು ಭೇದಗಳಾಗಿ ಕಂಡರೂ ಸಕ್ಕರೆಯು ಒಂದೇಯಾಗಿರುವುದು. ಅದರಂತೆಯೇ ಕರ್ಮಠರು ಒಂದೇ ಕರ್ಮವನ್ನು ಮೂರು ಭೇದಗಳಾಗಿ ತಿಳಿಯುವರು ॥೭೬೬॥ ಸಕ್ಕರೆಯಲ್ಲಿನ ಮಧುರತ್ವವನ್ನು ಭಿನ್ನಗೊಳಿಸಿದರೆ ಅದರಲ್ಲಿ ಮೃದುತ್ವ ಮತ್ತು ಶುಭ್ರತ್ವವು ಉಳಿಯುವುದು. ಶುಭ್ರತ್ವವನ್ನು ಭಿನ್ನಗೊಳಿಸಿದರೆ, ಮೃದುತ್ವ ಮತ್ತು ಮಧುರತ್ವವು ಉಳಿಯುವುದು ॥೭೬೭॥ ಅದರಂತೆ ಕರ್ಮವನ್ನು ಭಿನ್ನಗೊಳಿಸಿದರೆ, ಕರ್ಮದ ಸರ್ವಾಂಗದಲ್ಲಿ ಅಕರ್ಮವಿರುವುದು ಮತ್ತು ಕರ್ಮ ಅಕರ್ಮಗಳಲ್ಲಿ ವಿಕರ್ಮವು ಬಹು ಭೂಷಣದಿಂದಿರುವುದು ॥೭೬೮॥ ಮುಖ್ಯತಃ ಮೂಲದಿಂದ ಆರಂಭದಲ್ಲಿ ಉತ್ಪನ್ನವಾಗುವುದಕ್ಕೆ ಕರ್ಮ ಎನ್ನುವರು. ವಿಹಿತ, ಅವಿಹಿತ ಕ್ರಿಯೆಗಳಿಗೆ ವಿಕರ್ಮ ಎನ್ನುವರು ॥೭೬೯॥ ಅಕರ್ಮದ ಯೋಗದಿಂದ ಕರ್ಮವು ವಿಕಾಸವಾಗುವುದು. ಇದು ವಿಕರ್ಮದಲ್ಲಿ ಯಾರಿಗೆ ಗೋಚರಿಸುವುದೋ ಅವರಿಗೆ ಗುರುಕೃಪೆಯಿಂದ ತತ್ಕಾಲದಲ್ಲಿ ನಿಷ್ಕರ್ಮತೆಯು ಪ್ರಾಪ್ತವಾಗುವುದು ॥೭೭೦॥ ಒಂದು ಕರ್ಮದ ಮೇಲೊಂದು ಕರ್ಮವು ಈ ಕರ್ಮದ ಮೇಲೆ ಮತ್ತೊಂದು ಕರ್ಮವು. ಹೀಗಾಗುವ ಕರ್ಮದ ಬೆಳವಣಿಗೆಗೆ "ವಿಕರ್ಮ" ಎನ್ನುವರು. ಕರ್ಮದ ವೃದ್ಧಿಯು ಕುಂಠಿತವಾಗಲು ಅದಕ್ಕೆ ''ಅಕರ್ಮ'' ಎನ್ನುವರು ॥೭೭೧॥ ಹೇ ರಾಜನೇ, ಈ ಕರ್ಮದ ವಿವಂಚನೆಯು ಅಗಾಧವಾಗಿರುವುದು. ಪೂರ್ವದಲ್ಲಿ ಈ ಪ್ರಶ್ನೆಯನ್ನು ಕೇಳುವಾಗ್ಗ ನೀನು ಚಿಕ್ಕ ಬಾಲಕನಾಗಿದ್ದೆ, ಆದ್ದರಿಂದ ಸನಕಾದಿಕರು ನಿನಗೆ ಇದರ ಉತ್ತರ ನೀಡಲಿಲ್ಲ ॥೭೭೨॥ ಹೇ ನೃಪನಂದನನೇ, ಕರ್ಮ, ಅಕರ್ಮಗಳ ವಿವರಣೆಯನ್ನು ಅಧಿಕಾರವಿಲ್ಲದ ಯಾರಿಗೂ ಹೇಳಬಾರದು ಏಕೆಂದರೆ, ಈ ಕರ್ಮವು ಜ್ಞಾನಿಗಳಿಗೂ ಅತ್ಯಂತ ದುರ್ಬೋಧವಾಗಿರುವುದು ॥೭೭೩॥

ಜೇವೀ ರೋಗು ಜಾವಯಾ ನಿಶ್ಚಿತ । ಬಾಪು ಬಾಳಾ ಭೇಷಜ ದೇತ । ತೇಥೇ ಸಾಖರ ಘಾಲೀ ಹಾತಾಂತ । ತತ್ಸೇವನಾರ್ಥ ಪ್ರಲೋಭೇ ॥೭೭೪॥ ತೇವೀ ವೇದಾಚಾ ಪರೋಕ್ಷವಾದ । ಸತ್ಯ ಮಾನಿತೀ ಬುದ್ಧಿಮಂದ । ಕರ್ಮೇ ಛೇದವೀ ಕರ್ಮಬಾಧ । ಹಾ ವೇದಾನುವಾದ ಮುಖ್ಯತ್ವೇ ॥೭೭೫॥ ವೇದು ಬೋಲೇ ಸ್ವರ್ಗಾದಿ ಫಳ । ತೋ ಪ್ರವೃತ್ತಿಲೋಭ ಕೇವಳ । ಪರೀ ಕರ್ಮೇ ಛೇದೀ ಕರ್ಮಮೂಳ । ಹೇ ಮುಖ್ಯತ್ವೇ ಫಳ ವೇದೋಕ್ತೀ ॥೭೭೬॥ ಲೋಹಾಚೀ ಬೇಡೀ ಪಡಲೀ ಪಾಯೀ । ತೇ ತೋಡಾವಯಾ ಘಣು ಆಣಿಲಾ ಪಾಹೀ । ತೋ ಘಣುಚಿ ವಿಕೂನ ಖಾದಲಾ ಜಿಹೀ । ತ್ಯಾಚೇ ಬಂಧನ ಕಹೀ ತುಟೇನಾ ॥೭೭೭॥ ತೇವೀ ಕರ್ಮೇ ಛೇದಾವೇ ಕರ್ಮಬಂಧನ । ತೇ ಕರ್ಮ ವೇಂಚಿತೀ ವಿಷಯೀ ಪೂರ್ಣ । ತ್ಯಾಂಚೇ ಕದಾ ನ ತುಟೇ ಭವಬಂಧನ । ಜನ್ಮ ಮರಣ ಸರೇನಾ ॥೭೭೮॥ ಆಮ್ಹೀ ಸ್ವರ್ಗಫಳಾ ವಿರಕ್ತ । ಮ್ಹಣೋನಿ ನಾಚರೇ ಜೋ ವೇದೋಕ್ತ । ತ್ಯಾಚೇ ಜ್ಞಾನ ಜಾಲೇ ವಿಪರೀತ । ಅತಿ ಅನರ್ಥ ಪಾವೇ ತೋ ॥೭೭೯॥

ನಾಚರೇದ್ಯಸ್ತು ವೇದೋಕ್ತಂ ಸ್ವಯಮಜ್ಞೋಽಜಿತೇಂದ್ರಿಯಃ । ವಿಕರ್ಮಣಾ ಹ್ಯಧರ್ಮೇಣ ಮೃತ್ಯೋರ್ಮೃತ್ಯುಮುಪೈತಿ ಸಃ ॥೪೫॥

ಅರ್ಥ: ಯಾರ ಮನದಲ್ಲಿನ ಅಜ್ಞಾನವು ನಾಶವಾಗಿಲ್ಲ, ಇಂದ್ರಿಯಗಳನ್ನು ವಶಮಾಡಿಕೊಂಡಿಲ್ಲ, ಆತನು ತನ್ನ ಮನದಂತೆ ವೇದದಲ್ಲಿನ ಕರ್ಮಗಳ ಪರಿತ್ಯಾಗವನ್ನು ಮಾಡಿ,ಮತ್ತು ವಿಹಿತ ಕರ್ಮಗಳ ಆಚರಣೆಯನ್ನು ಮಾಡದೇ ವಿಕರ್ಮರೂಪ ಅಧರ್ಮವನ್ನು ಮಾಡುವನು. ಇದರಿಂದ ಇವನಿಗೆ ಮೃತ್ಯು ನಂತರ ಮೃತ್ಯುವು ಪ್ರಾಪ್ತವಾಗುವುದು.

ಆಮ್ಹೀ ಜಿತೇಂದ್ರಿಯ ಮ್ಹಣವೀತ । ಮ್ಹಣೋನಿ ನಾಚರೇ ಜೋ ವೇದೋಕ್ತ । ತ್ಯಾಸೀ ನಾತುಡೇ ಗಾ ಪರಮಾರ್ಥ। ಅತಿಅನರ್ಥ ಅಂಗೀ ವಾಜೇ॥೭೮೦॥ ಜರೀ ಶಾಸ್ತ್ರಜ್ಞ ಜ್ಞಾತಾ ಝಾಲಾ। ಆಣಿ ವೇದೋಕ್ತಾ ವಿಮುಖ ಕೇಲಾ । ತರೀ ತೋ ಜಾಣಪಣೇಚಿ ನಾಗವಲಾ । ಜಾಣ ಬುಡಾಲಾ ದುಃಖಾರ್ಣವೀ ॥೭೮೧॥ ನಾಚರೇ ಜೋ ವೇದೋಕ್ತ ಕರ್ಮ। ತ್ಯಕ್ತಕರ್ಮೇ ಮಾನೀ ನಿಷ್ಕರ್ಮ। ತ್ಯಾಸೀ ಘೋರ ಪಡಲಾ ಭ್ರಮ। ನಾಡಲಾ ಪರಮ ಅಭಿಮಾನೇ ॥೭೮೨॥ ಜರೀ ವಿಷಯೋ ನಿಗ್ರಹಿಲಾ । ಆಣಿ ವೇದೋಕ್ತಾ ಜೋ ದುರಾವಲಾ । ತೋ ನಿಜಘಾತಾ ಪ್ರವರ್ತಲಾ । ಸ್ವಯೇ ಬುಡಾಲಾ ನರಕಾರ್ಣವೀ ॥೭೮೩॥ ವೇದ ನಿಜಮೂಳ ಪರಮಾರ್ಥಾ । ತೇ ವೇದೋಕ್ತ ನಾಚರತಾ । ಜೇ ಜೇ ಕರಣೇ ನೃಪನಾಥಾ । ತೇ ತೇ ತತ್ತ್ವತಾ ಅಧಃಪಾತೀ॥೭೮೪॥ ಡೋಳೇ ದೇಖಣೇ ತತ್ತ್ವತಾ । ತೇ ಕಾಢೋನಿ ಪಾಹೋ ಜಾತಾ । ನ ದೇಖೇ ಆಪುಲೀ ಡೋಳಸತಾ । ಮಾ ಇತರ ಪದಾರ್ಥಾ ಕೋಣ ದೇಖೇ ॥೭೮೫॥

ಬಾಲಕನ ರೋಗವು ಗುಣಮುಖವಾಗಲೆಂದು ಅವನ ತಂದೆಯು ಔಷಧವನ್ನು ಕೊಡುವನು, ಆದರೆ ಆ ಔಷಧವನ್ನು ಪ್ರೀತಿಯಿಂದ ಸೇವಿಸಬೇಕೆಂಬ ಉದ್ದೇಶದಿಂದ ತಂದೆಯು ಬಾಲಕನ ಕೈಯಲ್ಲಿ ಸಕ್ಕರೆಯನ್ನು ಕೊಡುವನು ॥೭೭೪॥ ಅದರಂತೆ, ಅಜ್ಞಾನಿ ಜನರು ವೇದದ ಪರೋಕ್ಷವಾದವನ್ನು ನಿಜವೆನ್ನುವರು. ಕರ್ಮದಿಂದಲೇ ಕರ್ಮಬಂಧನವನ್ನು ಮುರಿದು ಹಾಕಬೇಕೆಂಬುದೇ ವೇದದ ಅಂತರ್ಗತ ಹೇತುವಾಗಿರುವುದು ॥೭೭೫॥ ವೇದವು ಸ್ವರ್ಗಾದಿ ಫಲಗಳನ್ನು ಹೇಳಿರುವುದು ಕರ್ಮದಲ್ಲಿ ಪ್ರವೃತ್ತನಾಗಲು, ಆಮಿಷ ತೋರಿಸುವುದಾಗಿದೆ. (ಕರ್ಮದಿಂದಲೇ ಕರ್ಮದ ಬೇರನ್ನು ಕಿತ್ತೊಗೆಯಬೇಕು.) ಇದೇ ವೇದ ವಚನಗಳ ಮುಖ್ಯ ತಾತ್ಪರ್ಯವಾಗಿರುವುದು ಅಥವಾ ಫಲವಾಗಿರುವುದು ॥೭೭೬॥ ಕಾಲುಗಳಲ್ಲಿ ಕಬ್ಬಿಣದ ಬೇಡಿಗಳು ಬೀಳಲು ಅವುಗಳನ್ನು ಮುರಿದುಹಾಕಲು ಭಾರಿ ಸುತ್ತಿಗೆಯನ್ನು ತಂದು, ಅದನ್ನೆ ಮಾರಿ ತಿನ್ನಲು, ಅವನ ಬಂಧನವು ಎಂದೂ ಮುರಿಯಲಾರದು ॥೭೭೭॥ ಈ ಪ್ರಕಾರವಾಗಿ ಕರ್ಮದಿಂದ ಕರ್ಮಬಂಧನವನ್ನು ಮುರಿಯುವುದನ್ನು ಮರೆತು, ಈ ಜನರು ವಿಷಯಗಳ ಪ್ರಾಪ್ತಿಗಾಗಿ ಕರ್ಮಗಳನ್ನು ಆಚರಿಸುವ ಪ್ರಯತ್ನ ಮಾಡುವರು. ಇವರ ಭವಬಂಧನವು ಎಂದಿಗೂ ಮುರಿಯಲಾರದು. ಮತ್ತು ಜನ್ಮ ಮರಣಗಳು ಎಂದೂ ಮುಗಿಯಲಾರವು ॥೭೭೮॥ ಇನ್ನು ಬೇರೆಯವರು, ನಾವು ಸ್ವರ್ಗಫಲದ ಇಚ್ಛೆಯನ್ನು ಮಾಡಲಾರೆವು ಎಂದು ಇವರು ವೇದೋಕ್ತ ಕರ್ಮಗಳನ್ನು ಆಚರಿಸುವುದಿಲ್ಲ. ಇವರ ಈ ಜ್ಞಾನವು ವಿಪರೀತವಾಗಿರುವುದು ಇವರು ಬಹುದೊಡ್ಡ ಅನರ್ಥಕ್ಕೆ ಗುರಿಯಾಗುವರು ॥೭೭೯॥

ನಾವು ಇಂದ್ರಿಯಗಳನ್ನು ಜಯಸಿದ್ದೇವೆ ಎಂದು ತಿಳಿದು ಇವರು ವೇದದಲ್ಲಿನ ಕರ್ಮಗಳನ್ನು ಆಚರಿಸುವುದಿಲ್ಲ. ಇವರಿಗೆ ಪರಮಾರ್ಥದ ಲಾಭವು ಆಗಲಾರದು. ಬದಲಾಗಿ ಅವರಿಗೆ ಬಹು ದೊಡ್ಡ ಅನರ್ಥವು ಒದಗುವುದು ॥೭೮೦॥ ಯಾರೋ ಒಬ್ಬನು ಮಹಾಶಾಸ್ತ್ರವೇತ್ತಾನಾದನು ಅಥವಾ ಜ್ಞಾನಿಯಾದನು, ಹೀಗಿದ್ದೂ ಈತನು ವೇದದಲ್ಲಿನ ಕರ್ಮಗಳಿಗೆ ವಿಮುಖನಾದರೇ ಅವನು ತನ್ನ ಜ್ಞಾನದಿಂದಲೇ ಕೆಟ್ಟನು, ದುಃಖಸಾಗರದಲ್ಲಿ ಮುಳುಗಿದನೆಂದು ತಿಳಿ ॥೭೮೧॥ ಯಾರು ವೇದದಲ್ಲಿ ಹೇಳಿದ ಕರ್ಮಗಳನ್ನು ಆಚರಿಸದೇ ಮತ್ತು ಕರ್ಮಗಳನ್ನು ತ್ಯಜಿಸಿ, ಸ್ವತಃಕ್ಕೆ ತಾವು ನಿಷ್ಕರ್ಮಿ ಎಂದು ತಿಳಿಯುವರೋ ಅವರಿಗೆ ದೊಡ್ಡ ಭ್ರಮೆಯಾಗಿರುವುದು. ಅಭಿಮಾನದಿಂದ ಇವರು ಅತಿ ಅನರ್ಥಕ್ಕೆ ಕಾರಣಾದರೆಂದು ತಿಳಿಯಬೇಕು ॥೭೮೨॥ ಒಬ್ಬನು ವಿಷಯಗಳನ್ನು ನಿಗ್ರಹಿಸಿ, ವೇದದಲ್ಲಿನ ಕರ್ಮಗಳಿಂದ ದೂರ ಸರಿದರೆ, ಅವನು ತನ್ನ ಘಾತವನ್ನು ತಾನೇ ಮಾಡಿಕೊಂಡು, ಸ್ವತಃ ನರಕದಲ್ಲಿ ಮುಳುಗುವನು ॥೭೮೩॥ (ವೇದವು ಪರಮಾರ್ಥದ ಮೂಲವಾಗಿರುವುದು.) ಆದ್ದರಿಂದ ವೇದದಲ್ಲಿ ಹೇಳಿದ ಪ್ರಕಾರವಾಗಿ ಕರ್ಮಗಳನ್ನು ಮಾಡದೇ, ಇತರ ಕರ್ಮಗಳನ್ನು ಆಚರಿಸಿದರೆ, ಹೇ ರಾಜನೇ, ಅವು ಅಧಃಪತನಕ್ಕೆ ಕಾರಣವಾಗಿರುವುವು ॥೭೮೪॥ ನೋಡುವುದು ಕಣ್ಣುಗಳ ಕರ್ಮವಾಗಿರುವುದು. ಆದರೆ ಒಂದು ವೇಳೆ ಆ ಕಣ್ಣುಗಳನ್ನೇ ಹೊರಗೆ ಕಿತ್ತಿ ತೆಗೆದರೆ, ತನ್ನ ಕಾಣುವಿಕೆಯೂ ನಷ್ಟವಾಗಿ ಹೋಗಲು ಇತರ ಪದಾರ್ಥಗಳನ್ನು ಯಾರು ಕಾಣಬೇಕು? ॥೭೮೫॥

ತೈಸಾ ನಾಚರೋನಿ ವೇದಾರ್ಥು । ಜೋ ಜೋ ಮಾನಿಲಾ ಪರಮಾರ್ಥು । ತೇಣೇ ಆಂವತೂನಿಯಾ ಅನರ್ಥು । ಜಾಣ ನಿಶ್ಚಿತು ಆಣಿಲಾ ಘರಾ ॥೭೮೬॥ ತೇಣೇ ಆಚಾರ ಅನರ್ಥಪಾಟೇ । ವಾಹಾವಲೇ ಜನ್ಮ ಮರಣವಾಟೇ । ತೇಥ ನಾನಾಯೋನಿಗರ್ಭಸಂಕಟೇ । ಸೋಸಿತಾ ನ ಸುಟೇ ಕಲ್ಪಾಂತೀ ॥೭೮೭॥ ತೇಥೇ ಜನ್ಮ ಜನ್ಮೋ ಜನ್ಮ ನ ಟಕೇ । ಮರಮರೋ ಮರಣ ನ ಚುಕೇ । ಜೈ ವೇದವಿಹಿತ ಚುಕೇ । ತೇ ಅತಿದುಃಖೇ ದುಃಖಭೋಗು ॥೭೮೮॥ ''ವಿಕರ್ಮಣಾ ಹ್ಯಾಧರ್ಮೇಣ'' । ಹೇ ಮೂಳೀಚೇ ಪದನಿರೂಪಣ । ತೇಣೇ ''ವಿಕರ್ಮಾಮಾಜೀ ಅಧರ್ಮ'' ಪೂರ್ಣ । ಪರೀ ಅಕರ್ಮ ತೇ ಜಾಣ ಅಧರ್ಮ ನವ್ಹೆ ॥೭೮೯॥ ಜ್ಯಾಸೀ ಲಾವಿತಾ ನ ಲಾಗೇ ಕರ್ಮ । ಯಾ ನಾಂವ ಮುಖ್ಯ ನಿಷ್ಕರ್ಮ । ನಿಷ್ಕರ್ಮಲಕ್ಷಣ ಹಾಚಿ ಧರ್ಮ । ಯೇಣೇಂಚಿ ಪರಮ ಮುಕ್ತ ಸಾಧು ॥೭೯೦॥ ಜ್ಯಾಸೀ ಶುದ್ಧ ಆಕಳೇ ಅಕರ್ಮ । ತೋ ತತ್ಕಾಳ ಹೋಯ ನಿಷ್ಕರ್ಮ । ಅಕರ್ಮಾಚೇ ಕಳಲ್ಯಾ ವರ್ಮ । ಮುಕ್ತತಾ ಪರಮ ಪಾಯಾ ಲಾಗೇ ॥೭೯೧॥

ವೇದೋಕ್ತಮೇವ ಕುರ್ವಾಣೋ ನಿಃಸಂಗೋಽರ್ಪಿತಮೀಶ್ವರೇ । ನೈಷ್ಕರ್ಮ್ಯಾಂ ಲಭತೇ ಸಿದ್ಧಿಂ ರೋಚನಾರ್ಥಾ ಫಲಶ್ರುತಿಃ ॥೪೬॥

ಅರ್ಥ:- ಆದಕ್ಕಾಗಿ ಫಲದ ಅಭಿಲಾಷೆಯನ್ನು ಬಿಟ್ಟು, ಇದನ್ನು ವಿಶ್ವಾತ್ಮಕ ಭಗವಂತನಿಗೆ ಸಮರ್ಪಿತ ಮಾಡಬೇಕು. ಯಾರು ವೇದದಲ್ಲಿ ಹೇಳಿದ ಪದ್ಧತಿಯಿಂದ ಕರ್ಮಗಳನ್ನು ಮಾಡುವನೋ, ಅವನಿಗೆ ಕರ್ಮದ ನಿವೃತ್ತಿಯಿಂದ ಪ್ರಾಪ್ತವಾಗುವ ಜ್ಞಾನರೂಪ ಸಿದ್ಧಿಯು ದೊರೆಯುವುದು. ವೇದದಲ್ಲಿ ಸ್ವರ್ಗಾದಿಗಳ ಫಲದ ವರ್ಣನೆಯು ಆದರ ಫಲದ ಸತ್ಯತೆಯಲ್ಲಿರುವುದಿಲ್ಲ. ಅದು ಕರ್ಮದಲ್ಲಿ ರುಚಿ ಉಂಟುಮಾಡುವುದಕ್ಕಾಗಿ ಇರುವುದು.

ದಾಸೀ ಸ್ವಾಮೀಚೀ ಆಜ್ಞಾಧಾರೀ । ಕಾ ರಾಜಮುದ್ರಾ ಪ್ರಜಾವರೀ । ತೈಸೀ ವೇದಾಜ್ಞಾ ಜೋ ಶಿರೀ ಧರೀ । ಸ್ವಧರ್ಮಾಚಾರೀ ನಿಷ್ಕಾಮ ॥೭೯೨॥ ಮೀ ಏಕು ಕರ್ಮಕರ್ತಾ । ಐಶೀ ಉಠೋನೇದೀ ಅಹಂತಾ । ತೇ ಕರ್ಮಚಿ । ಸ್ವಭಾವತಾ । ಅರ್ಪೀ ಶ್ರೀಅನಂತಾ ಈಶ್ವರಾತೇ ॥೭೯೩॥ ಏವಂ ಈಶ್ವರೀ ಜೇ ಅರ್ಪೇ ಕರ್ಮ । ತೇ ಕರ್ಮ ಹೋಯ ನಿರ್ಧರ್ಮ । ಯಾಚಿ ನಾಂವ ಪರಮ । ''ನೈಷ್ಕರ್ಮ್ಯ'' ನಿಜಸಿದ್ಧೀ ॥೭೯೪॥ ವೇದೇ ಬೋಲಿಲೇ ಕರ್ಮಫಳ । ಜ್ಯಾಚೀ ವಾಸನಾ ನಿಷ್ಕಾಮ ನಿರ್ಮಳ । ತ್ಯಾಸಿ ವೇದೋಕ್ತ ಫಳ ಪ್ರಬಳ । ಭೋಗಾವಯಾ ಕೇವಳ ಸ್ವಪ್ನೀ ನ ದಿಸೇ ॥೭೯೫॥ ಐಸೇ ಅಸತಾ ಕರ್ಮಫಳ । ವಾಂಛಿತಾ ನಾಡಿಜೇ ಕೇವಳ । ಜೇವೀ ಪರಿಸು ದೇಊನಿ ಸೋಜ್ವಳ । ಮಾಗಿಜೇ ಪೋಫಳ ತಾಂಬೂಲಾಸೀ ॥೭೯೬॥ ಕರ್ಮಾ ನಿಷ್ಕಾಮತಾ ನಿತ್ಯ ಫಳ । ತೇಥ ಫಳಾಶಾ ನಾಡಲೇ ಸಕಳ । ಚಂದನ ಸರ್ವಾಂಗೀ ಸಫಳ । ತೇಥ ಮಾಗತಾ ಫಳ ನಾಡಿಜೇ ಸ್ವಯೇ ॥೭೯೭॥

ಇದರಂತೆಯೇ ಯಾರು ವೇದದಲ್ಲಿ ಹೇಳಿದ ಪ್ರಕಾರವಾಗಿ ಆಚರಣೆಯನ್ನು ಮಾಡದೇ ಯಾವ ಯಾವ ಪರಮಾರ್ಥವನ್ನು ಮನ್ನಿಸುವನೋ, ಅವನು ನಿಜವಾಗಿಯೂ ಅನರ್ಥಕ್ಕೆ ಆಮಂತ್ರಿಸಿ ಮನೆಗೆ ತಂದನೆಂದು ತಿಳಿ ॥೭೮೬॥ ಇವರು ಇಂತಹ ಆಚರಣೆಯ ಅನರ್ಥವಾದ ಪ್ರವಾಹದಲ್ಲಿ ಬಿದ್ದು ಜನ್ಮ ಮರಣಗಳ ದಾರಿಗೆ ಹತ್ತುವರು. ಮತ್ತು ಈ ಮಾರ್ಗದಲ್ಲಿ ಗರ್ಭವಾಸಗಳ ಸಂಕಟಗಳನ್ನು ಸೋಸುತ್ತ, ಇವರಿಗೆ ಕಲ್ಪಾಂತಕ್ಕೂ ಇದರಿಂದ ಮುಕ್ತಿಯು ದೊರೆಯುವುದಿಲ್ಲ ॥೭೮೭॥ ವೇದವಿಹಿತ ಕರ್ಮಗಳಿಗೆ ಯಾರು ತಪ್ಪುವರೋ, ಅವರು ಅತಿಶಯವಾಗಿ ದುಃಖಗಳನ್ನು ಭೋಗಿಸುವರು. ಎಷ್ಟು ಸಾರೆ ಹುಟ್ಟಿದರೂ ಜನ್ಮವು ತಪ್ಪುವುದಿಲ್ಲ. ಎಷ್ಟು ಸಾರೆ ಸತ್ತರೂ ಮರಣವು ತಪ್ಪುವುದಿಲ್ಲ ॥೭೮೮॥ ''ವಿಕರ್ಮಣಾ ಹ್ಯಾಧರ್ಮೇಣ'' ಎಂಬ ಮೂಲದ ಪದವನ್ನು ಹೇಳಿರುವುದು. ಇದನ್ನು ನೋಡಿದರೆ, ವಿಕರ್ಮದಲ್ಲಿ ಪೂರ್ಣವಾಗಿ ಅಧರ್ಮವು ಇರುವುದು. ಆದರೆ ಅಕರ್ಮವೆಂದರೆ ಅಧರ್ಮವೆಂದು ನೀನು ತಿಳಿಯಬೇಡ ॥೭೮೯॥ ಯಾವುದಕ್ಕೆ ಕರ್ಮವನ್ನು ಹಚ್ಚಿದರೂ, ತಟ್ಟುವುದಿಲ್ಲವೋ ಅದುವೇ ''ನಿಷ್ಕರ್ಮ'' ವಾಗಿರುವುದು. ಇದೇ ಮುಖ್ಯವಾದ ನೈಷ್ಕರ್ಮ್ಯ ಧರ್ಮವಾಗಿರುವುದು. ಇದರಿಂದಲೇ ಸಾಧುಸಂತರು ಪರಮಮುಕ್ತರಾಗುವರು ॥೭೯೦॥ ಶುದ್ಧವಾದ ಅಕರ್ಮವು ಪ್ರಾಪ್ತವಾದವರು ತತ್ಕಾಲದಲ್ಲಿ ಕರ್ಮಶೂನ್ಯರಾಗುವರು. ಯಾವ ವೇಳೆಯಲ್ಲಿ ಅಕರ್ಮದ ಕರ್ಮವು ತಿಳಿದಾಗ್ಗೆ ಮುಕ್ತಿಯು ಅವರ ದಾಸಿಯಾಗುವುದು ॥೭೯೧॥

ದಾಸಿಯು ಸ್ವಾಮಿಯ ಆಜ್ಞಾಧಾರಕಳಾಗಿರುವಳು, ಅಥವಾ ಪ್ರಜೆಗಳು ರಾಜಮುದ್ರೆಯನ್ನು ಮಾನ್ಯ ಮಾಡುವರು. ಅದರಂತೆಯೇ ವೇದದಲ್ಲಿನ ಆಜ್ಞೆಯನ್ನು ಮಾನ್ಯ ಮಾಡಿ ನಿಷ್ಕಾಮದಿಂದ ಸ್ವಧರ್ಮದ ಆಚರಣೆಯನ್ನು ಮಾಡುವರು ॥೭೯೨॥ ನಾನೊಬ್ಬ ಕರ್ಮಕರ್ತನು, ಎಂಬ ಅಹಂಕಾರವನ್ನು ಉತ್ಪನ್ನಗೊಳಿಸದೇ ಆ ಕರ್ಮಗಳು ಸಹಜಪ್ರವೃತ್ತಿಯಿಂದ ಶ್ರೀ ಅನಂತರೂಪಿ ಈಶ್ವರನಿಗೆ ಅರ್ಪಿತವಾಗುವುವು ॥೭೯೩॥ ಈ ಪ್ರಕಾರವಾಗಿ ಮಾಡಿದ ಕರ್ಮಗಳೆಲ್ಲವೂ ಭಗವಂತನಿಗೆ ಅರ್ಪಿಸಲ್ಪಡುವುವು. ಇದರ ನಾಮವೇ ಶ್ರೇಷ್ಠವಾದ ''ನೈಷ್ಕರ್ಮ್ಯಸಿದ್ಧಿ'' ಯಾಗಿರುವುದು ॥೭೯೪॥ ವೇದವು ಕರ್ಮಗಳ ಫಲವನ್ನು ಹೇಳಿರುವುದು. ಆದರೆ ಯಾರ ವಾಸನೆಯು ನಿಷ್ಕಾಮವಾಗಿ ನಿರ್ಮಲವಾಗಿರುವುದೋ, ಅವರಿಗೆ ವೇದೋಕ್ತವಾದ ಪ್ರಬಲವಾದ ಫಲಗಳು ಸ್ವಪ್ನದಲ್ಲಿಯೂ ಭೋಗಿಸಬೇಕಾಗುವುದಿಲ್ಲ ॥೭೯೫॥ ಹೀಗಿದ್ದರೂ ಕರ್ಮಫಲದ ಇಚ್ಛೆ ಮಾಡುವವರು ಇಕ್ಕಟ್ಟಿನಲ್ಲಿ ಸಿಕ್ಕಿಕೊಳ್ಳುವರು. ತನ್ನ ಕೈಯಲ್ಲಿದ್ದ ಸುಂದರವಾದ ಪರಿಸಮಣಿಯನ್ನು ಕೊಟ್ಟು ತಾಂಬೂಲ ತಿನ್ನಲು ಅಡಿಕೆ ಕೇಳಿದಂತಾಗುವುದು ॥೭೯೬॥ ಕರ್ಮದಲ್ಲಿ ನಿಷ್ಕರ್ಮವು ನಿಜವಾದ ಫಲವಾಗಿದ್ದು ಫಲದ ಆಶೆಯಿಂದ ಎಲ್ಲರೂ ಪೇಚಿನಲ್ಲಿ ಸಿಕ್ಕಿರುವರು. ಚಂದನವು ಸರ್ವಾಂಗದಿಂದಲೂ ಗಂಧರೂಪದಿಂದ ಫಲದ್ರೂಪವಾಗಿದೆ. ಅದಕ್ಕೆ ಫಲ ಕೇಳಿದರೆ ಸ್ವತಃ ಮೋಸಹೋದಂತಾಗುವುದು ॥೭೯೭॥

ಹಾತೀ ಆಂತುಡಾವಯಾ ಮಾಸಾ । ಗಳೀ ಲಾವಿಜೇ ಅಲ್ಪ ಆಮಿಷಾ । ತೇವೀ ನಿಷ್ಕಾಮ ಕರಾವಯಾ ಮಾನಸಾ । ವೇದು ಫಳಾಶಾ ಪ್ರಲೋಭೀ ।।೪೯೮।। ಆಮಿಷ ಘಾಲೂನಿ ಮಾಸೇ ಪಾಳೀ । ಕೀ ತದ್ಯೋಗೇ ಜಳಾ ಬಾಹೇರ ಗಾಳೀ । ತೇವೀ ಕರ್ಮ ಕರ್ಮಾತೇ ನಿರ್ದಾಳೀ । ಹೇ ನೇಣೆಜೇ ಮುಳೀ ಫಳಕಾಮೀ ।।೪೯೯ ।। ಹೋ ಕಾ ಫಳಾಚಿಯೇ ಚಾಡೇ । ಸ್ವಧರ್ಮಕರ್ಮಿ ಪ್ರವೃತ್ತಿ ಘಡೇ । ತೇಣೇ ನೈಷ್ಕರ್ಮ್ಯಸಿದ್ಧಿ ಆಂತುಡೇ । ಹೇ ವೇದಾಂಚೇ ಫುಡೇ ನಿಜಗುಹ್ಯ ।।೫೦೦।। ಕರ್ಮ ಬ್ರಹ್ಮತ್ವೇ ಸದಾ ಸಫಳ । ಫಳ ವಾಂಛ್ಛೀ ತ್ಯಾತೇ ನಿಷ್ಫಳ । ಹೇ ಜಾಣೋನಿ ಕರ್ಮಕುಶಳ । ಫಳಾಶಾ ಸಮೂಳ ಛೇದಿತೀ ।।೫೦೧।। ಐಸೇ ಆಚರತಾ ವೈದಿಕ ಕರ್ಮ । ತೇಣೇ ಕರ್ಮೇ ಪಾವಿಜೇ ನೈಷ್ಕರ್ಮ್ಯ । ಯಾಹೋನಿಯಾ ಅತಿಸುಗಮ । ಸಾಂಗೇನ ವರ್ಮ ತೇ ಐಕ ।।೫೦೨।।

ಯ ಆಶು ಹೃದಯಗ್ರಂಥಿ ನಿರ್ಜಿಹೀರ್ಷುಃ ಪರಮಾತ್ಮನಃ । ವಿಧಿನೋಪಚರೇದ್ದೇವಂ ತಂತ್ರೋಕ್ತೇನ ಚ ಕೇಶವಮ್ ।।೪೭।।

ಅರ್ಥ:- ಚೇತನಾತ್ಮವನ್ನು ಬಂಧಿಸಿರುವ ಮಿಥ್ಯಾ ಅಹಂಕಾರದ ಗಂಟನ್ನು ಕೂಡಲೇ ಕತ್ತರಿಸಬೇಕೆಂದು ಬಯಸುವವನು, ವೈದಿಕ ಸಾಹಿತ್ಯದಲ್ಲಿ ಕಂಡು ಬರುವ ತಂತ್ರಗಳಂತಹ ವಿಧಿಗಳಿಂದ ಪರಮ ಪ್ರಭು ಕೇಶವನನ್ನು ಆರಾಧಿಸಬೇಕು.

ಜೇಣೇ ವಾಸನೇಚೇ ಜಾಳ ತುಟೇ । ಅಹಂಕಾರಾಚೀ ಗಾಂಠೀ ಸುಟೇ । ಜೇವೀ ಪರಮಾತ್ಮಾ ಸ್ವಯೇ ಪ್ರಗಟೇ । ತೇ ತಾಂತ್ರಿಕ ಗೋಮಟೇ ಐಕ ರಾಯಾ ।।೫೦೩।। ಜಯಾ ತಾಂತ್ರಿಕ ಮಹಾಪೂಜಾ । ಸಂತೋಷ ಹೋಯ ಗರುಢಧ್ವಜಾ । ತೇ ತಾಂತ್ರಿಕ ವಿಧಾನ ವೋಜಾ । ಮಹಾರಾಜಾ ಅವಧಾರೀ ।।೫೦೪।। ವೈದಿಕ ಮಂತ್ರ ತಾಂತ್ರಿಕ ತಂತ್ರ । ಹೇ ಮಿತ್ರಪೂಜಾ ಅತಿಪವಿತ್ರ । ಶೀಘ್ರ ನಿಷ್ಕಾಮ ಕರೀ ನರ । ತೋ ಪೂಜಾಪ್ರಕಾರ ಅತಿ ಉತ್ತಮ ।।೫೦೫।। ವೈದಿಕ ಅಥವಾ ತಾಂತ್ರಿಕ । ಗುರುಮಾರ್ಗೇ ಸಿದ್ಧಿದಾಯಕ । ಯಾಲಾಗೀ ಗಾ ಆವಶ್ಯಕ । ಸದ್ಗುರೂಸೀ ದೇಖ ಶರಣ ಜಾವೇ ।।೫೦೬।।

ಲಬ್ಧಾನುಗ್ರಹ ಆಚಾರ್ಯಾತ್ತೇನ ಸಂದರ್ಶಿತಾಗಮಃ । ಮಹಾಪುರುಷಮಭ್ಯರ್ಚೇನ್ಮೂರ್ತ್ಯಾಽಭಿಮತಯಾಽಽತ್ಮನಃ ।।೪೮।।

ಅರ್ಥ:- ಗುರುಗಳು ವೈದಿಕ ಶಾಸ್ತ್ರಗಳ ಆದೇಶಗಳನ್ನು ತಮ್ಮ ಶಿಷ್ಯನಿಗೆ ತಿಳಿಸುತ್ತಾರೆ. ಅಂತಹ ಗುರುಗಳ ಅನುಗ್ರಹವನ್ನು ಪಡೆದ ಭಕ್ತನು ತನಗೆ ಅತ್ಯಂತ ಆಕರ್ಷಕವೆನಿಸುವ ವೈಯಕ್ತಿಕ ಮೂರ್ತಿಯಿಂದ ಪುರುಷೋತ್ತಮನಾದ ಭಗವಂತನ ಪೂಜೆಯನ್ನು ಮಾಡಬೇಕು.

ಪ್ರವತ್ತಿನಿವೃತ್ತಿಕೃತ ಕಾರ್ಯಾ । ಅವಶ್ಯ ಪಾಹಿಜೇ ಆಚಾರ್ಯಾ । ಆಪಮತೀ ಭಜತಾ ರಾಯಾ । ಅನೇಕ ಅಪಾಯಾಮಾಜೀ ಪಡೇ ।।೫೦೭।।

ಮೀನವು ಕೈಗೆ ಸೇರಬೇಕೆಂದು ಬಲೆಗೆ ಸ್ವಲ್ಪ ಆಮಿಷವನ್ನು ಹಚ್ಚಲ್ಪಡುವುದು. ಅದರಂತೆ ಮನಕ್ಕೆ ನಿಷ್ಕಾಮಗೊಳಿಸಲು ವೇದವು ಫಲದ ಆಶೆಯನ್ನು ಹಚ್ಚಿ ತೋರಿಸಿರುವುದು ।।೪೯೮।। ಮೀನಿನ ಬೇಟೆಗಾರನು ತನ್ನ ಬಲೆಗೆ ಆಮಿಷವನ್ನು ಮೀನು ಹಿಡಿಯಲು ಹಚ್ಚಿ, ಬಿದ್ದ ದೊಡ್ಡ ಮೀನನ್ನು ಬಲೆಯಿಂದ ಹೊರಗೆ ತೆಗೆಯುವನು. ಅದರಂತೆ ಕರ್ಮವು ಕರ್ಮದ ನಾಶವನ್ನು ಮಾಡುವುದು. ಆದರೆ ಇದನ್ನು ಸಕಾಮ ಪುರುಷನು ತಿಳಿಯಲಾರನು ।।೪೯೯।। ಫಲದ ಆಶೆಯಿಂದ ಸ್ವಧರ್ಮ ಕರ್ಮದಲ್ಲಿ ಪ್ರವೃತ್ತಿಯು ನಿರ್ಮಾಣವಾಗಿ, ಅದರಿಂದ ನೈಷ್ಕರ್ಮ ಸಿದ್ಧಿಯು ಪ್ರಾಪ್ತವಾಗುವುದು. ಇದು ವೇದದ ಸತ್ಯವಾದ ಉದ್ದೇಶವಾಗಿರುವುದು ।।೫೦೦।। ಕರ್ಮವು ಯಾವಾಗಲೂ ಸಫಲವಾಗಿರುವುದು. ಆದರೆ, ಫಲದ ಇಚ್ಛೆಯನ್ನು ಮಾಡುವವರಿಗೆ ಅದು ನಿಷ್ಫಲವಾಗುವುದು. ಇದನ್ನು ಅರಿತು (ಕರ್ಮಕುಶಲ ಪುರುಷನು ಫಲದ ಆಶೆಯನ್ನು ಸಂಪೂರ್ಣವಾಗಿ ತ್ಯಜಿಸುವನು ।।೫೦೧।। ಈ ರೀತಿಯಲ್ಲಿ ವೈದಿಕ ಕರ್ಮಗಳನ್ನು ಮಾಡುತ್ತಿರಲು, ಇದರ ಯೋಗದಿಂದ ನೈಷ್ಕರ್ಮ್ಯವು ಪ್ರಾಪ್ತವಾಗುವುದು. ಈಗ ಇದಕ್ಕಿಂತಲೂ ಸುಲಭವಾದ ಮಾರ್ಗವನ್ನು ಹೇಳುವೆನು, ಕೇಳು ।।೫೦೨।।

ಯಾವುದರಿಂದ ವಾಸನೆಯ ಜಾಳಿಗೆಯು ಹರಿಯುವುದೋ, ಅಹಂಕಾರದ ಗಂಟು ಬಿಚ್ಚುವುದೋ, ಹಾಗೂ ಜೀವದಲ್ಲಿ ಪರಮಾತ್ಮನು ಪ್ರತ್ಯಕ್ಷವಾಗಿ ಪ್ರಕಟನಾಗುವನೋ, ಅಂತಹ ಉತ್ತಮವಾದ ತಾಂತ್ರಿಕ ವಿಧಾನವನ್ನು ನೀನು ಕೇಳು ।।೫೦೩।। ಹೇ ಮಹಾರಾಜನೇ, ಯಾವ ತಾಂತ್ರಿಕ ಮಹಾಪೂಜೆಯ ಯೋಗದಿಂದ ಭಗವಂತನಿಗೆ ಸಂತೋಷವಾಗುವುದೋ, ಆ ಸುಂದರವಾದ ತಾಂತ್ರಿಕ ವಿಧಾನವನ್ನು ಈಗ ಕೇಳು ।।೫೦೪।। ವೈದಿಕ ಮಂತ್ರಗಳು, ತಾಂತ್ರಿಕ ಮಂತ್ರಗಳು ಮತ್ತು ಮಿಶ್ರಪೂಜೆಯು ಪವಿತ್ರವಾಗಿರುವುವು. ಇವು ಪುರುಷನಿಗೆ ತತ್ಕಾಲದಲ್ಲಿ ನಿಷ್ಕಾಮಗೊಳಿಸುವುವು. ಈ ಪೂಜೆಯ ಪ್ರಕಾರವು ಅತಿಶಯವಾಗಿ ಉತ್ತಮವಾಗಿರುವುದು ।।೫೦೫।। ಆದರೆ, ವೈದಿಕವಾಗಿರಲಿ ಅಥವಾ ತಾಂತ್ರಿಕವಾಗಿರಲಿ ಈ ಎರಡೂ ವಿಧಾನಗಳು ಗುರುಮಾರ್ಗದಿಂದ ಸಫಲವಾಗುವುವು. ಅದಕ್ಕಾಗಿ ಮೊಟ್ಟಮೊದಲು ಸದ್ಗುರುಗಳಿಗೆ ಶರಣಾಗಬೇಕು ।।೫೦೬।।

ಪ್ರವೃತ್ತಿ ಅಥವಾ ನಿವೃತ್ತಿ ಈ ಕರ್ತವ್ಯಗಳ ಜ್ಞಾನವನ್ನು ಮಾಡಿಕೊಡಲು ಗುರುಗಳ ಅವಶ್ಯಕತೆಯಿರುವುದು. ಹೇ ರಾಜನೇ, ಮಾರ್ಗದರ್ಶಕರಾದ ಆಚಾರ್ಯರನ್ನು ಬಿಟ್ಟು ತಾನೇ ತನ್ನ ಬುದ್ಧಿಯಿಂದ ಕರ್ಮಗಳನ್ನು ಮಾಡಲು, ನಿಜವಾಗಿಯೂ ಈ ಭಕ್ತನು ಅನೇಕ ಸಂಕಟಗಳಲ್ಲಿ ಬೀಳುವನು ।।೫೦೭।।

ಭೋಯಿ ಪಾಯ ಸಿದ್ಧ ಆಹೇತಿ । ಭೋಯಾಳೇವೀಣ ವೃಥಾ ಭ್ರಮತೀ । ತೇವೀ ಗುರೂವೀಣ ಜೇ ಜೇ ಕರಿತೀ । ತೇ ತೇ ಅಹಂಮತೀ ದೃಢ ಭ್ರಮಲೇ ॥೯೦೮॥ ಗುರು ಬ್ರಹ್ಮ ದೋನಿ ಏಕ । ಐಶಿಯಾ ಭಾವನಾ ಆವಶ್ಯಕ । ಸೇವಾ ಕರೂನಿ ಭಾವಪೂರ್ವಕ । ಸಂತೋಷವೂನಿ ದೇಖ ಅನುಗ್ರಹೋ ಘ್ಯಾವಾ ॥೯೦೯॥ ತೇಥ ನಿಜಾಧಿಕಾರಪ್ರಾಪ್ತೇ । ಜೇ ಮೂರ್ತಿ ಆವಡೇಲ ಆಪಣೆಯಾತೇ । ತೇಚಿ ಮಂತ್ರವಿದ್ಯಾ ತೇಥೇ । ಶ್ರದ್ಧಾ ಸಂಭರಿತೇ ಅಂಗೀಕಾರಾವೀ ॥೯೧೦॥ ತೇವ್ಹಾ ಗುರುಮುಖೇ ಮಿತ್ರ ವೋಜಾ । ಪುರುಷೋತ್ತಮ ಮಹಾಪೂಜಾ । ಶಿಕೋನಿಯಾ ನಿಜಕಾಜಾ । ಭಜಾವೇ ಅಧೋಕ್ಷಜಾ ಶಿಕ್ಷಿತಾ ಮತೀ ॥೯೧೧॥ ತೇಚಿ ಭಜತೀ ಹಾತವಟೀ । ಆಗಮೋಕ್ತ ನಿಜಪುಷ್ಟೀ । ರಾಯಾ ಸಾಂಗೇನ ಗೋಮಟೀ । ಸಾವಧಾನದೃಷ್ಟೀ ಅವಧಾರೀ ॥೯೧೨॥

ಶುಚಿಃ ಸಂಮುಖಮಾಸೀನಃ ಪ್ರಾಣಸಂಯಮನಾದಿಭಿಃ । ಪಿಂಡಂ ವಿಶೋಧ್ಯ ಸಂನ್ಯಾಸಕೃತರಕ್ಷೋಽರ್ಚಯೇದ್ಧರಿಮ್ ॥೯॥

ಅರ್ಥ:- ಪ್ರಾರಂಭದಲ್ಲಿ ಸ್ನಾನದಿಂದ ಶರೀರವನ್ನು ಶುದ್ಧಗೊಳಿಸಿ, ತದನಂತರ ಸಂತೋಷದಿಂದ ಅಂತಃಕರಣವನ್ನು ಶುದ್ಧಗೊಳಿಸಿ, ಆಮೇಲೆ ಪರಮಾತ್ಮನ ಮೂರ್ತಿಯ ಎದುರಿನಲ್ಲಿ ಕುಳಿತುಕೊಂಡು ಪ್ರಾಣಾಯಾಮದ ಸಹಾಯದಿಂದ ಭೂತಶುದ್ಧಿ, ನಾಡಿಶುದ್ಧಿ ಮಾಡಬೇಕು. ತದನಂತರ ವಿಧಿಪೂರ್ವಕವಾಗಿ ಮಂತ್ರದೇವತಾ ಇತ್ಯಾದಿ ನ್ಯಾಸಗಳಿಂದ ಅಂಗರಕ್ಷೆಯನ್ನು ಮಾಡಿಕೊಂಡು ಪ್ರಭುವಿನ ಪೂಜೆಯನ್ನು ಮಾಡಬೇಕು.

ವಿಧ್ಯುಕ್ತ ಕರಿತಾ ಸಂಧ್ಯಾಸ್ನಾನ। ತೇಥಚಿ ಆಹೇ ಬ್ರಹ್ಮಜ್ಞಾನ । ಆಚಮನೀ ಹೋಯ ಹರಿರೂಪ ಆಪಣ । ಹೇ ನೇಣೋನಿ ಅಜ್ಞಾನ ಆಗಮೀ ಭರತೀ ॥೯೧೩॥ ಕೇಶವಾದಿ ನಾಮೀ ಜಾಣ । ಅಂಗಪ್ರತ್ಯಂಗೀ ನ್ಯಾಸಿತಾ ಪೂರ್ಣ । ತೇವ್ಹಾ ಹರಿರೂಪ ಹೋಯ ಆಪಣ । ಹೇ ನೇಣೋನಿ ಅಜ್ಞಾನ ಆಗಮೀ ಭರತೀ ॥೯೧೪॥ ಕರೂನಿ ಆಗಮೋಕ್ತ ಸಂಧ್ಯಾಸ್ನಾನ । ಮೂರ್ತಿಪಾಸೀ ಯೇಊನ ಜಾಣ । ಸಂಮುಖ ಘಾಲಾವೇ ಆಸನ । ಚೈಲಾಜಿನಕುಶ ಯುಕ್ತ ॥೯೧೫॥ ರೇಚಕ - ಪೂರಕ - ಕುಂಭಕೇ ಜಾಣ । ಪ್ರಾಣಾಯಾಮೇ ಪ್ರಾಣಸಂಯಮನ । ಭೂತಶುದ್ಧ್ಯಾದಿಕೀ ಜಾಣ । ಶರೀರಶೋಧನ ಕರಾವೇ ॥೯೧೬॥ ಭೂತವಿಲಯ ಭೂತಶುದ್ಧೀ । ಪ್ರಾಣ ಪ್ರತಿಷ್ಠಾ ಪಿಂಡಾದಿ ಶುದ್ಧೀ । ಮೂಳಮಂತ್ರೇ ನ್ಯಾಸ ಪ್ರಬುದ್ಧೀ । ಗುರುದೀಕ್ಷಾ ವಿಧೀ ವಿಧ್ಯುಕ್ತ ಕೀಜೇ ॥೯೧೭॥ ಹೃದಯ ಕವಚ ಶಿಖಾ ಶಿರ । ನೇತ್ರ ಅಸ್ತ್ರಾದಿ ಫಟ್‌ಕಾರ । ಏವಂವಿಧಾನ ಅನುಕಾರ । ಆಗಮೋಕ್ತ ಪ್ರಕಾರ ಕರಾವೇ ನ್ಯಾಸ ॥೯೧೮॥ ಯಾಪರೀ ಮೂಳಮಂತ್ರ ದೀಕ್ಷಾ । ಕರೋನಿ ದಿಗ್ಬಂಧಾದಿ ಸರಂಕ್ಷಾ । ಮಗ ಮೂರ್ತಿಪೂಜನಪಕ್ಷಾ । ನೃಪಾಧ್ಯಕ್ಷಾ ಅವಧಾರೀ ॥೯೧೯॥

ಭೂಮಿ ಮತ್ತು ಕಾಲುಗಳು ಸಿದ್ಧವಾಗಿಯೇ ಇರುವುವು. ಆದರೆ ದಾರಿಯನ್ನು ತೋರಿಸುವವರು ಇರದಿದ್ದರೆ ವ್ಯರ್ಥವಾಗಿ ಅಲೆದಾಡಬೇಕಾಗುವುದು. ಅದರಂತೆ ಯಾರಾದರೂ ಸ್ವತಃ ಉಪಾಯಗಳನ್ನು ಮಾಡುತ್ತಿದ್ದರೆ, ಆ ಅಹಂಕಾರೀ ಪುರುಷನು ನಿಶ್ಚಯವಾಗಿ ಭ್ರಮೆಯಲ್ಲಿ ಮುಳುಗುವನು ॥೯೦೮॥ ಗುರು ಮತ್ತು ಬ್ರಹ್ಮ ಈ ಎರಡೂ ಒಂದೇ ಎಂಬ ಭಾವನೆಯನ್ನು ಅವಶ್ಯವಾಗಿ ಹಿಡಿದು ಭಕ್ತಿಭಾವದಿಂದ ಇವರ ಸೇವೆಯನ್ನು ಮಾಡಬೇಕು. ಇವರನ್ನು ಪ್ರಸನ್ನಗೊಳಿಸಿ, ಅನುಗ್ರಹವನ್ನು ಪಡೆಯಬೇಕು ॥೯೦೯॥ ನಂತರ ತನ್ನ ಅಧಿಕಾರದಂತೆ, ಸಂಸ್ಕಾರವಿದ್ದಂತೆ, ತನಗೆ ಪ್ರಿಯವೆನಿಸುವ ಮೂರ್ತಿಯ ವಿಷಯವಾಗಿ ಮಂತ್ರ ವಿದ್ಯೆಯನ್ನು ಶ್ರದ್ಧೆಯಿಂದ ಗ್ರಹಣ ಮಾಡಬೇಕು ॥೯೧೦॥ ಮತ್ತು ಗುರುಮುಖದಿಂದ ಪುರುಷೋತ್ತಮನ ವೈದಿಕ ತಾಂತ್ರಿಕವಾಗಿರುವ ಭಿನ್ನ ಭಿನ್ನ ಮಹಾಪೂಜೆಗಳನ್ನು ಕಲಿಯಬೇಕು ಮತ್ತು ಕಲಿಸಿದಂತೆ ಇಷ್ಟಪ್ರಾಪ್ತಿಗಾಗಿ ಭಗವಂತನ ಭಜನೆ, ಪೂಜೆಯನ್ನು ಮಾಡಬೇಕು ॥೯೧೧॥ ಈ ತಂತ್ರವನ್ನೇ ಶಾಸ್ತ್ರಯುಕ್ತ ಪೂಜೆಯ ಪದ್ಧತಿಯನ್ನು ನಾನು ನಿನಗೆ ಹೇಳುವೆ, ಅದನ್ನು ನೀನು ಲಕ್ಷ ಕೊಟ್ಟು ಕೇಳು ॥೯೧೨॥

ಶಾಸ್ತ್ರ ಪ್ರಕಾರವಾಗಿ ಸಂಧ್ಯಾಸ್ನಾನವನ್ನು ಮಾಡುವುದರಿಂದ ಅದರಲ್ಲಿಯೇ ಬ್ರಹ್ಮಜ್ಞಾನವಿರುವುದು. ಮತ್ತು ಈತನು ಸ್ವತಃ ಭಗವದ್ರೂಪನಾಗುವನು. ಇದನ್ನರಿಯದೇ ಜನರು ಅಜ್ಞಾನ ಮಾರ್ಗಕ್ಕೆ ಹತ್ತುವರು ॥೯೧೩॥ ಕೇಶವಾದಿ ನಾಮಗಳಿಂದ ಅಂಗ - ಪ್ರತ್ಯಂಗದಲ್ಲಿ ಯೋಗ್ಯವಾದ ಪದ್ಧತಿಯಿಂದ ನ್ಯಾಸವನ್ನು ಮಾಡಲು ತಾನು ಸ್ವತಃ ಹರಿರೂಪನಾಗುವನು. ಆದರೆ ಇದನ್ನು ತಿಳಿಯಲಾರದೇ ತಂತ್ರಮಾರ್ಗದಲ್ಲಿ ಅಜ್ಞಾನವನ್ನು ಸ್ಥಾಪಿಸುವರು ॥೯೧೪॥ ಆಗಮೋಕ್ತವಾಗಿ ಸಂಧ್ಯಾಸ್ನಾನಗಳನ್ನು ಮಾಡಿ, ಮೂರ್ತಿಯ ಸಮೀಪ ಬಂದು ಅದರ ಮುಂದೆ ಆಸನವನ್ನು ಹಾಕಬೇಕು. ಮೊದಲು ದರ್ಭಾಸನ, ಅದರ ಮೇಲೆ ಮೃಗಚರ್ಮ, ಆಮೇಲೆ ವಸ್ತ್ರದ ಮಡಿಕೆ ಹಾಕಬೇಕು ॥೯೧೫॥ ಅದರ ಮೇಲೆ ಕುಳಿತುಕೊಂಡು ರೇಚಕ, ಪೂರಕ ಮತ್ತು ಕುಂಭಕ ಹೀಗೆ ಪ್ರಾಣಾಯಾಮವನ್ನು ಮಾಡಿ ಪ್ರಾಣದ ನಿಯಂತ್ರಣವನ್ನು ಸಾಧಿಸಬೇಕು. ಮತ್ತು ಭೂತಶುದ್ಧಿ ಇತ್ಯಾದಿಯಿಂದ ಶರೀರಶುದ್ಧಿಯನ್ನು ಮಾಡಬೇಕು ॥೯೧೬॥ ಭೂತವಿಲಯ, ಭೂತಶುದ್ಧೀ, ಪ್ರಾಣಪ್ರತಿಷ್ಠೆ, ಇತ್ಯಾದಿಗಳಿಂದ ಚಿತ್ತಶುದ್ಧಿಯನ್ನು ಮಾಡಿ, ಮನುಷ್ಯನು ಗುರುಸಾಂಪ್ರದಾಯದಿಂದ ಪ್ರಾಪ್ತವಾದ ವಿಧಿಯಂತೆ ಮೂಲಮಂತ್ರದಿಂದ ಅಂಗ - ಪ್ರತ್ಯಂಗದ ನ್ಯಾಸವನ್ನು ಮಾಡಬೇಕು ॥೯೧೭॥ ಹೃದಯ, ಕವಚ, ಶಿಖಾ, ಶಿರ, ನೇತ್ರ, ಅಸ್ತ್ರಾದಿ, ಫಟ್‌ಕಾರ ಇತ್ಯಾದಿ ಸರ್ವನ್ಯಾಸಗಳನ್ನು ಆಗಮೋಕ್ತ ಪ್ರಕಾರಗಳಿಂದ ಯಥಾವಿಧಿ ಮಾಡಬೇಕು ॥೯೧೮॥ ಈ ಪ್ರಕಾರವಾಗಿ ಮೂಲಮಂತ್ರದ ದೀಕ್ಷೆಯನ್ನು ಮತ್ತು ದಿಕ್‌ಬಂಧದ ಸಂರಕ್ಷೆಯನ್ನು ಮಾಡಿ, ತದನಂತರ ಮೂರ್ತಿಯ ಪೂಜೆಯನ್ನು ಮಾಡಬೇಕು. ಈಗ ಅದನ್ನು ನಾನು ಹೇಳುವೆ, ಕೇಳು ॥೯೧೯॥

ಅರ್ಚಾದೌ ಹೃದಯೇ ಚಾಪಿ ಯಥಾಲಬ್ಧೋಪಚಾರಕೈಃ । ದ್ರವ್ಯಕ್ಷಿತ್ಯಾತ್ಮಲಿಂಗಾನಿ ನಿಷ್ಪಾದ್ಯ ಪ್ರೋಕ್ಷ್ಯ ಚಾಸನಮ್ ॥೫೦॥

ಅರ್ಥ:- ಹೂವುಗಳಲ್ಲಿನ ದ್ರವ್ಯಗಳನ್ನು ಆರಿಸಿ, ಅವುಗಳಲ್ಲಿನ ಜೀವಜಂತುಗಳನ್ನು ತೆಗೆದು, ಭೂಮಿಯ ಸಮಾರ್ಜನ ಇತ್ಯಾದಿ ಮಾಡಿ ಚಿತ್ತಕ್ಕೆ ಅವ್ಯಗ್ರ ಮಾಡಿ ಮೂರ್ತಿಗೆ ಪೂರ್ವದಲ್ಲಿ ಹಚ್ಚಿದ ಗಂಧವನ್ನು ತೊಳೆದು ಒರೆಸಿ, ಈ ಪ್ರಕಾರವಾಗಿ ಹೂವುಗಳು, ಪೂಜಾಭೂಮಿ, ಪೂಜ್ಯವಾದ ಮೂರ್ತಿಯನ್ನು ಪೂಜೆಗೆ ಯೋಗ್ಯಮಾಡಿ ಆಸನಗಳ ಪ್ರೋಕ್ಷಣೆಯನ್ನು ಮಾಡಬೇಕು.

ಪ್ರಯೋಗಭಂದ ಸಂಪೂರ್ಣ । ಪೂರ್ವಾನ್ವಯೋ ವಿಪರೀತ ಜಾಣ । ದ್ರವ್ಯಶುದ್ಧಿ ಕ್ಷಿತಿಮಾರ್ಜನ । ಹೇ ಮಾಗೀಲ ನಿರೂಪಣ ಪುಢಾ ಆಲೇ ॥೮೨೦॥ ದ್ರವ್ಯಶುದ್ಧಿ ಮುಖ್ಯಶೋಧನ । ಭೂಮಿಶುದ್ಧಿ ಸಂಮಾರ್ಜನ । ಆತ್ಮಶುದ್ಧಿ ಸಾವಧಾನ । ಕಾಢಿಲ್ಯಾ ಅನುಲೇಪನ ಮೂರ್ತಿಶುದ್ಧೀ ॥೮೨೧॥ ಪೂಜಾಸಂಭಾರ ಸಿದ್ಧ ಕರೂನ । ಸಮಸ್ತ ಶಂಖಶೋಯೇ ಪ್ರೋಕ್ಷೂನ । ನಿಜಾಸನೀ ಸಾವಧಾನ । ಏಕಾಗ್ರ ಜಾಣ ಬೈಸಾವೇ ॥೮೨೨॥ ಜ್ಯಾಸೀ ಧ್ಯಾನೀ ಮೂರ್ತಿ ನ ಯೇ ಸಂಪೂರ್ಣ । ತೇಣೇ ಪ್ರತಿಮಾಮೂರ್ತಿ ಅಧಿಷ್ಠಾನ । ತೇಥೇಂಚಿ ಕರಾವೇ ಪೂಜನ । ಲಬ್ಧೋಪಚಾರೇ ಜಾಣ ಆಗಮೋಕ್ತ ॥೮೨೩॥ ಜ್ಯಾಸೀ ಧ್ಯಾನಾ ಮೂರ್ತಿ ಯೇ ಅತಿಸಂಕಟೀ । ತೇಣೇ ಬಾಹ್ಯೋಪಚಾರ ಆಟಾಟೀ । ಸಾಂಡೂನಿಯಾ ಧ್ಯಾನದೃಷ್ಟೀ । ಕರಾವೀ ಗೋಮಟೀ ಮಾನಸಪೂಜಾ ॥೮೨೪॥ ಜ್ಯಾಚೇ ಹೃದಯೀಂಚೇ ನ ವಿಕರೇ ಧ್ಯಾನ । ಬಾಹ್ಯಮೂರ್ತೀ ಪೂಜೇಸೀ ಸಾವಧಾನ । ತೇಣೇ ಉಭಯತಾ ಪೂಜನ । ಕರಾವೇ ಸಂಪೂರ್ಣ ಆಗಮೋಕ್ತ ॥೮೨೫॥

ಪಾದ್ಯಾದೀನುಪಕಲ್ಪ್ಯಾಥ ಸನ್ನಿಧಾಪ್ಯ ಸಮಾಹಿತಃ । ಹೃದಾದಿಭಿಃ ಕೃತನ್ಯಾಸೋ ಮೂಲಮಂತ್ರೇಣ ಚಾರ್ಚಯೇತ್ ॥೫೧॥

ಅರ್ಥ:- ಮೂರ್ತಿ ಇತ್ಯಾದಿಗಳಲ್ಲಿ ಮತ್ತು ಹೃದಯದಲ್ಲಿ ಪ್ರಾಪ್ತವಾದ ಉಪಚಾರಗಳಿಂದ ಹರಿಯ ಪೂಜೆಯನ್ನು ಮಾಡಬೇಕು. ಇದಕ್ಕಿಂತ ಮೊದಲು ಪುಷ್ಪಾದಿ ದ್ರವ್ಯಗಳನ್ನು, ಭೂಮಿ ಇತ್ಯಾದಿಗಳನ್ನು ಪೂಜೆಗೆ ಯೋಗ್ಯಗೊಳಿಸಬೇಕು. ಅರ್ಘ್ಯಪಾದ್ಯಾದಿ ಪಾತ್ರೆಗಳನ್ನು ಸಮೀಪ ಇಟ್ಟುಕೊಂಡು ಹೃದಯದಲ್ಲಿ ಪೂಜಿಸಿದ ಮೂರ್ತಿಯ ಧ್ಯಾನಮಾಡಿ, ಹೃದಯ, ಶಿರ, ಶಿಖಾ, ಕವಚ, ನೇತ್ರ ಇತ್ಯಾದಿಗಳ "ಹೃದಯಾಯ ನಮಃ" "ಶಿರಸೇ ಸ್ವಾಹಾ" ಇತ್ಯಾದಿ ಮಂತ್ರಗಳಿಂದ ದೇವರಲ್ಲಿ ನ್ಯಾಸಗಳನ್ನು ಮಾಡಿ ಪೂಜೆಯನ್ನು ಮಾಡಬೇಕು.

ಸಕಳ ಪೂಜಾಸಂಭಾರ । ನಿಕಟ ಠೇವೂನಿ ಉಪಚಾರ । ಮಗ ಮೂರ್ತಿಸೀ ನ್ಯಾಸಪ್ರಕಾರ । ಉಕ್ತಶಾಸ್ತ್ರ ಕರಾವಾ ॥೮೨೬॥ ಜೈಸೇಚಿ ನ್ಯಾಸ ಆಪಣಾಸ । ತೈಸೇಚಿ ಕರಾವೇ ಮೂರ್ತೀಸ । ಹಾ ಆಗಮೋಕ್ತ ಗುರುಸೌರಸ । ಮೂಳಮಂತ್ರೇ ನ್ಯಾಸ ಮೂರ್ತೀಸೀ ॥೮೨೭॥ ಆಗಮೋಕ್ತ ಕರಿತಾ ನ್ಯಾಸ । ಅಂಗಪ್ರತ್ಯಂಗೀ ವಿನ್ಯಾಸ । ತೇಣೇ ಕರ್ತಾ ಹೋಯ ಹೃಷೀಕೇಶ । ಹಾ ಅರ್ಥಸೌರಸ ದೃಢ ಕರಾವಾ ॥೮೨೮॥ ದೃಢ ಕರೋನಿ ಅನುಸಂಧಾನ । ಮೂಳಮಂತ್ರೇ ಮೂರ್ತಿಪೂಜನ । ಹೃದಯೀ ಆಣಿ ಪ್ರತಿಮೇಸೀ ಜಾಣ । ಪೂಜಾವಿಧಾನ ದೋಹೀ ಠಾಯೀ ॥೮೨೯॥

ಹಿಂದಿನ ಶ್ಲೋಕದಲ್ಲಿ ತಿಳಿಸಿದ ಪ್ರಕಾರಗಳಲ್ಲಿ ಸರ್ವ ಪ್ರಯೋಗವನ್ನು ಅಂದರೆ, ದ್ರವ್ಯಶುದ್ಧೀ, ಭೂಮಿಪ್ರೋಕ್ಷಣೆ, ಪುನಃ ಮಾಡಬೇಕು ॥೮೨೦॥ ಪ್ರತ್ಯೇಕ ಪದಾರ್ಥಗಳನ್ನು ಶುದ್ಧಗೊಳಿಸುವುದೇ ಮುಖ್ಯ ಶುದ್ಧಿಯಾಗಿರುವುದು. ಸಂಮಾರ್ಜನೆಯಿಂದ ಭೂಮಿ ಶುದ್ಧಿಯಾಗುವುದು. ಚಿತ್ತದ ಸಾವಧಾನದಿಂದ ಆತ್ಮಶುದ್ಧಿಯಾಗುವುದು. ಮೂರ್ತಿಮೇಲಿನ ಲೇಪಗಳನ್ನು ತೆಗೆದರೆ ಮೂರ್ತಿಶುದ್ಧಿಯಾಗುವುದು ॥೮೨೧॥ ತದನಂತರ ಪೂಜೆಯ ಸಾಹಿತ್ಯಗಳನ್ನು ಶುದ್ಧಗೊಳಿಸಬೇಕು ಮತ್ತು ಸರ್ವ ಪದಾರ್ಥಗಳ ಮೇಲೆ ಶಂಕೋದಕದಿಂದ ಪ್ರೋಕ್ಷಣೆಯನ್ನು ಮಾಡಬೇಕು. ತನ್ನ ಆಸನದಲ್ಲಿ ಕುಳಿತುಕೊಂಡು ಮನದ ಏಕಾಗ್ರತೆಯನ್ನು ಮಾಡಬೇಕು ॥೮೨೨॥ ಆದರೆ, ಯಾರ ಧ್ಯಾನದಲ್ಲಿ ಮೂರ್ತಿಯು ಪೂರ್ಣವಾಗಿ ಬಾರದಿದ್ದಲ್ಲಿ, ಆತನು ಪ್ರತಿಮಾ ಮೂರ್ತಿಯ ಅಧಿಷ್ಠಾನವನ್ನು ಮಾಡಿ, ಅಲ್ಲಿಯೇ ಪ್ರಾಪ್ತವಾದ ಉಪಚಾರಗಳಿಂದ ಆಗಮೋಕ್ತ ವಿಧಿಯಿಂದ ಪೂಜೆಯನ್ನು ಮಾಡಬೇಕು ॥೮೨೩॥ ಈಗ ಯಾರ ಧ್ಯಾನದಲ್ಲಿ ಮೂರ್ತಿಯು ಪೂರ್ಣವಾಗಿ ಸ್ಥಿರಗೊಂಡಲ್ಲಿ ಆತನು ಬಾಹ್ಯ ಉಪಚಾರಗಳನ್ನು ಮಾಡುವ ಅವಶ್ಯವಿಲ್ಲ. ಧ್ಯಾನದೃಷ್ಟಿಯಿಂದ ಪ್ರೇಮದಿಂದ ಮಾನಸ ಪೂಜೆಯನ್ನು ಮಾಡಬೇಕು ॥೮೨೪॥ ಯಾರ ಹೃದಯದಲ್ಲಿ ಧ್ಯಾನವು ಸ್ಥಿರಗೊಂಡಿದ್ದು, ಆತನು ಬಾಹ್ಯ ಮೂರ್ತಿಯ ಪೂಜೆಯನ್ನು ಸಾವಧಾನದಿಂದ ಯೋಗ್ಯ ರೀತಿಯಲ್ಲಿ ಮಾಡುತ್ತಿರುವನು. ಇಂಥವರು ಆಗಮೋಕ್ತ ವಿಧಿಯಿಂದ ಎರಡೂ ಪೂಜೆಯನ್ನು ಯಥಾಸಾಂಗ ಮಾಡಬೇಕು ॥೮೨೫॥

ಪೂಜೆಯ ಉಪಚಾರಗಳ ಸಾಹಿತ್ಯಗಳೆಲ್ಲವನ್ನು ವ್ಯವಸ್ಥಿತವಾಗಿ ಸಮೀಪದಲ್ಲಿ ಇಟ್ಟುಕೊಳ್ಳಬೇಕು. ತದನಂತರ ಶಾಸ್ತ್ರೋಕ್ತವಾಗಿ ಮೂರ್ತಿಯ ಎದುರಿನಲ್ಲಿ ನ್ಯಾಸಗಳನ್ನು ಮಾಡಬೇಕು ॥೮೨೬॥ ತಾನು ತನ್ನ ಅಂಗದಲ್ಲಿ ನ್ಯಾಸಗಳನ್ನು ಮಾಡುವಂತೆ ಮೂರ್ತಿಗೂ ಮಾಡಬೇಕು. ಮೂಲಮಂತ್ರದಿಂದ ಮೂರ್ತಿಗೆ ನ್ಯಾಸಗಳನ್ನು ಮಾಡಬೇಕು. ಇದು ಆಗಮೋಕ್ತ ಗುರುದೀಕ್ಷೆಯಾಗಿರುವುದು ॥೮೨೭॥ ತನ್ನ ಅಂಗಪ್ರತ್ಯಂಗಗಳಲ್ಲಿ ಆಗಮೋಕ್ತವಾಗಿ ನ್ಯಾಸಗಳನ್ನು ಮಾಡಿದರೆ ಆತನು ಸ್ವತಃ ಹೃಷೀಕೇಶನಾಗುವನು. ಇದೇ ಅದರಲ್ಲಿಯ ಮುಖ್ಯ ಉದ್ದೇಶವನ್ನು ಮನದಲ್ಲಿ ದೃಢವಾಗಿ ಹಿಡಿಯಬೇಕು ॥೮೨೮॥ ಚಿತ್ತದ ಅನುಸಂಧಾನವನ್ನು ದೃಢಗೊಳಿಸಿ, ಹೃದಯದಲ್ಲಿನ ಮತ್ತು ಬಾಹ್ಯ ಮೂರ್ತಿಗಳ ಪೂಜೆಯನ್ನು ಮೂಲಮಂತ್ರಗಳಿಂದ ಯಥಾವಿಧಿಯಾಗಿ ಮಾಡಬೇಕು ॥೮೨೯॥

ಸಾಂಗೋಪಾಂಗಾಂ ಸಪಾರ್ಷದಾಂ ತಾಂ ತಾಂ ಮೂರ್ತಿಂ ಸ್ವಮಂತ್ರತಃ ।
ಪಾದ್ಯಾರ್ಘ್ಯಾಚಮನೀಯಾದ್ಯೈಃ ಸ್ನಾನವಾಸೋವಿಭೂಷಣೈಃ ।।೫೨।।

ಅರ್ಥ:- ಹೃದಯಾದಿ ಅಂಗಗಳು, ಸುದರ್ಶನಾದಿ ಉಪಾಂಗಗಳು, ಮತ್ತು ಇತರ ಪರಿವಾರ ಇವೇ ಪಾರ್ಷದದೊಂದಿಗೆ ಮೂರ್ತಿಯನ್ನು, ಮೂಲಮಂತ್ರದಿಂದ ಪಾದ್ಯ, ಅರ್ಘ್ಯ, ಆಚಮನೀಯ, ಮಧುಪರ್ಕ ಇತ್ಯಾದಿ ಸ್ನಾನ ಮತ್ತು ವಸ್ತ್ರಭೂಷಣಗಳು.

ಕರಚರಣಾದಿ ಅವ್ಯಂಗ । ಮೂರ್ತಿ ಚಿಂತಾವೀ ಸುಂದರ ಸಾಂಗ । ಶ್ಯಾಮ ಮನೋಹರ ಶ್ರೀರಂಗ । ಉಲ್ಹಾಸ ಚಾಂಗ ನಿಜಧ್ಯಾನೀ ।।೮೩೦।। ಮೂರ್ತಿ ಚತುರ್ಭುಜ ವೇಲ್ಹಾಳ । ಶಂಖ ಚಕ್ರ ಗದಾ ಕಮಳ । ಸುನಂದಾದಿ ಪಾರ್ಷದಮೇಳ । ಚಿಂತಾವೇ ಸಕಳ ಆಯುಧಾದಿಕ ।।೮೩೧।। ಯಥೋಕ್ತ ಮಧುಪರ್ಕವಿಧಾನ । ಅರ್ಘ್ಯಪಾದ್ಯಾದಿ ಆಚಮನ । ಪುರುಷಸೂಕ್ತಮಂತ್ರೇ ಜಾಣ । ಕರಾವೇ ಸ್ನಾನ ನಿರ್ಮಳ ಜಳೇ ।।೮೩೨।। ಮುಕುಟ ಕುಂಡಲೇ ಕಟೀ ಮೇಖಲಾ । ಕಾಂಸ ಮಿರವೇ ಸೋನಸಳಾ । ಅಪಾದ ರುಳೇ ವನಮಾಳಾ । ಕೌಸ್ತುಭ ತೇಜಾಳಾ ಕಂಠೀ ಝಳಕೇ ।।೮೩೩।। ಪಾದ ಪದ್ಮಾಂಕಿತ ಸುಕುಮಾರ । ಊರ್ಧ್ವರೇಖಾ ಧ್ವಜ ವಜ್ರ । ವಾಂಕೀ ಅಂದುವಾಂಚಾ ಗಜರ । ಚರಣೀ ತೋಡರ ಗರ್ಜತು ।।೮೩೪।।

ಗಂಧಮಾಲ್ಯಾಕ್ಷತಸ್ರಗ್ಭಿರ್ಧೂಪದಿಪೋಪಹಾರಕೈಃ । ಸಾಂಗಂ ಸಂಪೂಜ್ಯವಿಧಿವತ್ ಸ್ತವೈಃಸ್ತುತ್ವಾ ನಮೇದ್ಧರಿಮ್ ।।೫೩।।

ಅರ್ಥ: ಗಂಧ, ಪುಷ್ಪ, ತಿಲಕ, ಅಕ್ಷತೆ,ಹೂವಿನಹಾರಗಳು, ಧೂಪ, ದೀಪ, ನೈವೇದ್ಯ ಈ ಉಪಚಾರಗಳಿಂದ ಯಥಾವಿಧಿ ಪೂಜಿಸಿ, ಸ್ತೋತ್ರಗಳಿಂದ ಸ್ತುತಿಸಿ, ಶ್ರೀಹರಿಯನ್ನು ನಮಸ್ಕರಿಸಬೇಕು.

ನಿಢಳೀ ಶುದ್ಧ ಶ್ಯಾಮಕಮಳಾ । ಟಿಳಕು ರೇಖಿಲಾ ಪಿಂವಳಾ । ತ್ಯಾವರೀ ಅಕ್ಷತಾ ಸೋಜ್ಜ್ವಳಾ । ಆರಕ್ತ ತೇಜಾಳಾ ಕುಂಕುಮಾಕ್ತ ।।೮೩೫।। ಸುಮನೇ ಗುಂಫಿಲೀ ವೀರಗುಂಠೀ । ತ್ಯಾಂವರೀ ಮಧುಕರಾಂಚೀ ಘರಟೀ । ತುಳಸೀಕಮಳಮಾಳಾ ಕಂಠೀ । ಚಂದನಾಚೀ ಉಟೀ ಶ್ಯಾಮಾಂಗೀ ಶೋಭೇ ।।೮೩೬।। ಧೂಪ ದೀಪ ಉಪಹಾರ । ತಾಂಬೂಲ ಅರ್ಪಾವಾ ಸಕರ್ಪೂರ । ನಿರಂಜನೇ ಜಯಜಯಕಾರ । ಮಂತ್ರಾವಸರ ಅರ್ಪಾವಾ ।।೮೩೭।। ಸ್ತುತಿ ಕರಾವೀ ವೇದೋಕ್ತ ಮಂತ್ರೇ । ಕಾ ಪುರಾಣೋಕ್ತ ನಾನಾ ಸ್ತೋತ್ರೇ । ಅಥವಾ ಪ್ರಾಕೃತ ನಾಮೋಚ್ಚಾರೇ । ನಾನಾ ಪ್ರಕಾರೇ ಗದ್ಯಪದ್ಯೇ ।।೮೩೮।। ಸ್ತವನೇ ಸಂತೋಷ ಅಧೋಕ್ಷಜಾ । ಐಸೇ ಭಾವಾವೇ ಮಹಾರಾಜಾ । ಮಗ ಸಾಷ್ಟಾಂಗೇ ಅತಿವೋಜಾ । ಗರುಡಧ್ವಜಾ ನಮಸ್ಕಾರಾವೇ ।।೮೩೯।।

ಆತ್ಮಾನಂ ತನ್ಮಯಂ ಧ್ಯಾಯನ್ ಮೂರ್ತಿಂ ಸಂಪೂಜಯೇದ್ಧರೇಃ । ಶೇಷಾಮಾಧಾಯ ಶಿರಸಿ ಸ್ವಧಾಮ್ನ್ಯುದ್ವಾಸ್ಯ ಸತ್ಕೃತಮ್ ।।೫೪।।

ಅರ್ಥ: ತನ್ನ ಆತ್ಮವು ತದ್ರೂಪವಾಗಿದೆ ಎಂದು ಧ್ಯಾನಿಸುತ್ತ ಹರಿಯ ಮೂರ್ತಿಪೂಜೆಯನ್ನು ಮಾಡಬೇಕು. ನಿರ್ಮಾಲ್ಯವನ್ನು ತನ್ನ ಮಸ್ತಕಕ್ಕೆ ಧರಿಸಿ ವಂದಿಸಬೇಕು. ಭಗವಂತನ ಸತ್ಕಾರವನ್ನು ಮಾಡಿ ಹೃದಯದಲ್ಲಿ ಮೂರ್ತಿಯನ್ನು ಸ್ಥಾಪಿಸಿ, ಪೂಜಾವಿಧಿಯನ್ನು ಸಾಂಗಗೊಳಿಸಬೇಕು.

ಅವ್ಯಂಗವೆಂದರೆ, ಮೂರ್ತಿಯಲ್ಲಿ ಕೈಕಾಲು ಇತ್ಯಾದಿಗಳಲ್ಲಿ ಕಿಂಚಿತ್ತೂ ವ್ಯಂಗವಿಲ್ಲದ, ಶಾಮಸುಂದರ, ಮನೋಹರವಾದ ಶ್ರೀರಂಗನ ಮೂರ್ತಿಯನ್ನು ಧ್ಯಾನದಲ್ಲಿ ತರಬೇಕು. ಧ್ಯಾನಿಸುವಾಗ್ಗೆ ಮನವು ಅತಿಶಯವಾಗಿ ಉಲ್ಹಾಸವಾಗಿರಬೇಕು ।।೮೩೦।। ಚತುರ್ಭುಜ, ಸುಂದರ, ಮನೋಹರ,ಮೂರ್ತಿಯನ್ನು ಕಲ್ಪಿಸಬೇಕು. ಮೂರ್ತಿಯ ಕೈಗಳಲ್ಲಿ ಶಂಖ, ಚಕ್ರ, ಗದಾ ಮತ್ತು ಪದ್ಮ ಈ ಚಿನ್ಹೆಗಳಿರಬೇಕು. ಸುನಂದಾದಿ ಪಾರ್ಷದಗಳ ಸಮೂಹವು ಮತ್ತು ಆಯುಧಾದಿ ದೇವತೆಗಳ ಕಲ್ಪನೆ ಮಾಡಿ ಆ ಮೂರ್ತಿಗಳನ್ನು ಚಿಂತಿಸಬೇಕು ।।೮೩೧।। ಮಧುಪರ್ಕ, ವಿಧಿ, ಪಾದ್ಯ, ಅರ್ಘ್ಯ, ಆಚಮನ ಇತ್ಯಾದಿ ಆಚರಿಸಿ ನಿರ್ಮಲವಾದ ಜಲದಿಂದ ಪುರುಷ ಸೂಕ್ತ ಮಂತ್ರದಿಂದ ಸ್ನಾನವನ್ನು ಮಾಡಿಸಬೇಕು ।।೮೩೨।। ಮುಕುಟ, ಕುಂಡಲಗಳು, ನಡುಪಟ್ಟಿ, ತೊಡಲು ಭರ್ಜರೀ ಪೀತಾಂಬರ, ಕುತ್ತಿಗೆಯಿಂದ ಪಾದದವರೆಗೆ ಇರುವ ವನಮಾಲೆಯು,ಕಂಠದಲ್ಲಿ ತೇಜಃಪುಂಜ ಕೌಸ್ತುಭಮಣೀ ।।೮೩೩।। ಪಾದಗಳು ಪದ್ಮಾಂಕಿತವಾಗಿ ಸುಕುಮಾರವಿದ್ದು ಊರ್ಧ್ವರೇಖಾ, ಧ್ವಜ, ವಜ್ರ ಚಿನ್ಹೆಗಳಿರುವವು. ಕಾಲುಗಳಲ್ಲಿ ಗೆಜ್ಜೆ, ಗಿಲ್ ಗಿಲ್ ಎಂದು ಗರ್ಜಿಸುವ ತೋಡೆಗಳಿರುವುವು. ಹೀಗೆ ಚಿಂತಿಸಬೇಕು ।।೮೩೪।।

ಶುದ್ಧವಾದ ಶ್ಯಾಮವರ್ಣವು, ಹಣೆಯಮೇಲೆ ಹಳದಿ ಕೇಶರ ತಿಲಕ ಧರಿಸಿರುವ, ಅದರ ಮೇಲೆ ಕುಂಕುಮವರ್ಣದ ಪ್ರಕಾಶಮಯ ಅಕ್ಷತೆ ಹಚ್ಚಿರುವ ।।೮೩೫।। ಗಂಟುಕಟ್ಟಿದ ಕೂದಲಿಗೆ ಸುಗಂಧ ಹೂವುಗಳು, ಅವುಗಳ ಸುತ್ತ ಭ್ರಮರಗಳ ಗುಂಪು, ಕೊರಳಲ್ಲಿ ಕಮಲ, ತುಳಸಿಯ ಮಾಲೆ, ಶ್ಯಾಮವರ್ಣ ಶರೀರಕ್ಕೆ ಶೋಭಿಸುವ ಚಂದನದ ಲೇಪವು. ಈ ಪ್ರಕಾರವಾಗಿ ಧ್ಯಾನಿಸಬೇಕು ।।೮೩೬।। ಧೂಪ, ದೀಪ, ನೈವೇದ್ಯ ಮತ್ತು ಕರ್ಪೂರಯುಕ್ತ ತಾಂಬೂಲವನ್ನು ಅರ್ಪಿಸಬೇಕು.ತದನಂತರ ಆರತಿಯನ್ನು ಬೆಳಗಿ ಮಂತ್ರಗಳನ್ನು ಉಚ್ಚ ಸ್ವರದಲ್ಲಿ ಹೇಳಿ ಜಯಜಯಕಾರ ಮಾಡುತ್ತ ಮಂತ್ರಪುಷ್ಪಗಳನ್ನು ಅರ್ಪಿಸಬೇಕು ।।೮೩೭।। ಆಮೇಲೆ ವೇದೋಕ್ತ ಮಂತ್ರಗಳಿಂದ ಅಥವಾ ಪುರಾಣೋಕ್ತ ಮಂತ್ರಗಳಿಂದ ಸ್ತುತಿಸಬೇಕು. ಇಲ್ಲವೇ ಪ್ರಾಕೃತವಾಗಿ ನಾಮೋಚ್ಚಾರ ಮಾಡಿ ಗದ್ಯ ಪದ್ಯಾತ್ಮಕವಾಗಿ ಸ್ತುತಿಸಬೇಕು ।।೮೩೮।। ಹೇ ಜನಕರಾಜನೇ, ಹೀಗೆ ತನ್ನ ಸ್ತವನದಿಂದ ಭಗವಂತನಿಗೆ ಸಂತೋಷವಾಗುವುದು ಎಂಬ ದೃಢಭಾವನೆಯನ್ನು ಧರಿಸಬೇಕು. ನಂತರ ಅತ್ಯಂತ ಪ್ರೇಮಭಾವನೆಯಿಂದ ಭಗವಂತನಿಗೆ ಸಾಷ್ಟಾಂಗ ನಮಸ್ಕಾರವನ್ನು ಹಾಕಬೇಕು ।।೮೩೯।।

ದ್ವೈತಭಾವೇ ಭಜನವಿಧಿ । ತೇ ಜಾಣಾವೀ ಸ್ಥೂಲ ಬುದ್ಧಿ । ಭಜನಾಚೀ ಭಜನಸಿದ್ಧಿ । ಜಾಣ ತ್ರಿಶುದ್ಧೀ ತನ್ಮಯ ಹೋಣೇ ।।೪೪೦।। ಮೂರ್ತಿಧ್ಯಾನೇ ತನ್ಮಯ ಸ್ಥಿತಿ । ಐಕ್ಯತ್ವೇ ರಾಹೇ ನಿಶ್ಚಳ ವೃತ್ತಿ । ಯಾಚಿ ನಾಂವ ಮುಖ್ಯ ಭಕ್ತಿ । ಉಠಲಿಯಾ ಪುಢತೀ ನಮಾವೇ ಹರೀ ।।೪೪೧।। ಐಶೀ ಪೂಜಾ ಕರೂನಿ ಹರೀ । ಶೇಷ ಪ್ರಸಾದು ಧರೋನಿ ಶಿರೀ । ಮಗ ದೇವೋ ಆಪಣೆಯಾಭೀತರೀ । ಹೃದಯಮಂದಿರೀ ನಿಜವಿಜೇ ।।೪೪೨।। ಏವಂ ಪೂಜೇಚೇ ಉದ್ವಾಸನ । ಧ್ಯಾನಮೂರ್ತಿ ಹೃದಯೀ ಶಯನ । ಪ್ರತಿಮಾ ಪರ್ಯಂಕೀ ನಿಜವೂನ । ವಿಧಿವಿಧಾನಸಮಾಪ್ತಿ ।।೪೪೩।। ಜಾಹಲಿಯಾ ಪೂಜಾವಿಸರ್ಜನ । ವಿಸರ್ಜೂ ನಯೇ ಅನುಸಂಧಾನ । ಅಖಂಡ ಹರೀಚೇ ಸ್ಮರಣ । ಸರ್ವಸ್ವೇ ಆಪಣ ಸರ್ವದಾ ಕೀಜೇ ।।೪೪೪।। ಯಾವ ನಾಂವ ಗಾ ಆಗಮವಿಧಿ । ರಾಯಾ ಜಾಣ ತ್ರಿಶುದ್ಧಿ । ಸದಾ ಪಾಳಿತೀ ಸದ್‌ಬುದ್ಧಿ । ಪರಮಾತ್ಮಸಿದ್ಧಿಪ್ರಾಪಕ ।।೪೪೫।। ಆಗಮೋಕ್ತ ವಿಧಿಲಕ್ಷಣ । ಪ್ರತಿಮಾಚಿ ಮುಖ್ಯ ನವ್ಹೇ ಜಾಣ । ಜ್ಯಾಸೀ ಜೇಥ ಶ್ರದ್ಧಾ ಪೂರ್ಣ । ತೇಥ ಹೇ ವಿಧಾನ ಸುಖೇ ಕೀಜೇ ।।೪೪೬।।

ಏವಮಗ್ನ್ಯರ್ಕತೋಯಾದಾವತಿಥೌ ಹೃದಯೇ ಚ ಯಃ । ಯಜತೀಶ್ವರಮಾತ್ಮಾನಮಚಿರಾನ್ಮುಚ್ಯತೇ ಹಿ ಸಃ ।।೬೫।।

ಅರ್ಥ: ಈ ಪ್ರಕಾರವಾಗಿ ಯಾವ ಪುರುಷನು ಅಗ್ನಿ, ಸೂರ್ಯ, ಜಲ, ಅತಿಥಿ, ತನ್ನ ಹೃದಯದಲ್ಲಿನ ಹರಿಯನ್ನು ಪೂಜಿಸುವನೋ, ಆತನು ಶೀಘ್ರವಾಗಿ ಮುಕ್ತನಾಗುವನು.

ಹೇ ಪೂಜಾ ನವ್ಹೇ ಏಕದೇಶೀ । ಬಹುತ ಸ್ಥಾನೇ ಯೇ ಪೂಜೇಸೀ । ತ್ಯಾಂತ ಶೀಘ್ರತರ ಜೇ ಪ್ರಾಪ್ತೀಸೀ । ತೇ ಮೀ ತುಜಪಾಸೀ ಸಾಂಗೇನ ರಾಯಾ ।।೪೪೭।। ಯೇಣೇಂಚಿ ವಿಧಾನೇ ಯಥಾಕಾಳೀ । ಸಾಂಗ ಪೂಜಾ ಕೀಜೇ ''ಜಳೀ'' । ಅಥವಾ ''ಸೂರ್ಯಮಂಡಳೀ'' । ಪೂಜಾ ಸೋಜ್ವಳೀ ಹರಿಧ್ಯಾನೇ ಕೀಜೇ ।।೪೪೮।। ''ಅಗ್ನಿಜ್ವಾ'' ಠಾಯೀ ಹೋಯ ದೀಪ್ತಿ । ಪೂಜಾ ಕೀಜೇ ಕಮಳಾಪತಿ । ಅವಘ್ಯಾಪರೀಸ ಶೀಘ್ರಪ್ರಾಪ್ತಿ । ಪೂಜಾವಾ ''ಅತಿಥಿ'' ಭಗವದ್ಭಾವೇ ।।೪೪೯।। ಆಲಿಯಾ ವೈಶ್ವದೇವಾಚೇ ಅಂತೀ । ತೋ ಭಲತಾ ಹೋ ಭಲತೇ ಯಾತೀ । ತ್ಯಾಸೀ ಜೇ ಭಗವದ್ಭಾವೇ ಪೂಜಿತೀ । ತ್ಯಾಂಚೇ ಘರಾ ಪೂರ್ಣ ಪ್ರಾಪ್ತಿ ವೋರಸೋನಿ ಯೇ ।।೪೫೦।। ಪೂರ್ವೀ ಅನೋಳಖು ನಿಶ್ಚಿತೀ । ಆಲಿಯಾ ವೈಶ್ವದೇವಾಚೇ ಅಂತೀ । ತ್ಯಾತೇಬ್ರಹ್ಮ ಭಾವೇ ಜೇ ಪೂಜಿತೀ । ತ್ಯಾಂಸೀ ಭುಕ್ತಿ ಮುಕ್ತೀ ಆಂದಣೀ ।।೪೫೧।।

ದ್ವೈತಭಾವನೆಯಿಂದ ಭಜಿಸುವುದು ಸ್ಥೂಲಬುದ್ಧಿಯಾಗಿರುವುದು. ಭಜನೆಯಲ್ಲಿ ಏಕರೂಪವಾಗುವುದೇ ಭಜನೆಯ ಸಿದ್ಧಿಯಾಗಿರುವುದು ।।೪೪೦।। ಮೂರ್ತಿಯ ಧ್ಯಾನದಿಂದ ತನ್ಮಯತೆಯಾಗುವುದು ಮತ್ತು ಐಕ್ಯಭಾವದಿಂದ ವೃತ್ತಿಯು ನಿಶ್ಚಲವಾಗುವುದು, ಇದೇ ಮುಖ್ಯ ಭಕ್ತಿಯಾಗಿರುವುದು. ಈ ಪ್ರಕಾರವಾಗಿ ಪೂಜೆಯನ್ನು ಮುಗಿಸಿ, ಎದ್ದು ನಿಂತು ಭಗವಂತನಿಗೆ ಪುನಃ ನಮಸ್ಕರಿಸಬೇಕು ।।೪೪೧।। ಈ ರೀತಿಯಲ್ಲಿ ಪೂಜೆಯನ್ನು ಪೂರ್ಣಗೊಳಿಸಿ ನಿರ್ಮಾಲ್ಯಾದಿ ಶೇಷ ಪ್ರಸಾದವನ್ನು ಮಸ್ತಕಕ್ಕೆ ಧರಿಸಿ ದೇವರಿಗೆ ಹೃದಯಮಂದಿರದಲ್ಲಿ ಮಲಗಿಸಬೇಕು ।।೪೪೨।। ಈ ಪ್ರಕಾರವಾಗಿ ಪೂಜೆಯನ್ನು ವಿಸರ್ಜಿಸಬೇಕು. ಧ್ಯಾನದ ಮೂರ್ತಿಯನ್ನು ತನ್ನ ಹೃದಯದಲ್ಲಿ ಮತ್ತು ಪ್ರತಿಮೆಯ ಮೂರ್ತಿಯನ್ನು ಪಲಂಗದಲ್ಲಿ ಮಲಗಿಸಬೇಕು ।।೪೪೩।। ಪೂಜೆಯ ವಿಸರ್ಜನೆಯಾದರೂ ಸಹ ತನ್ನ ಅನುಸಂಧಾನವನ್ನು ಬಿಡಕೂಡದು ಅಖಂಡವಾಗಿ ಸದಾ ಸರ್ವಕಾಲದಲ್ಲಿ ಭಗವಂತನನ್ನು ಪ್ರೇಮದಿಂದ ಸ್ಮರಿಸುತ್ತಿರಬೇಕು ।।೪೪೪।। ಹೇ ರಾಜನೇ, ಇದಕ್ಕೇನೇ ಆಗಮವಿಧಿ ಎನ್ನುವರು. ಇದನ್ನು ಲಕ್ಷದಲ್ಲಿಡು. ಇದುವೇ ತಾಂತ್ರಿಕವಿಧಿಯಾಗಿರುವುದು. ಬುದ್ಧಿವಂತರು ಇದನ್ನೇ ಪಾಲಿಸುವರು. ಇದು ಪರಮಾತ್ಮನ ಸಿದ್ಧಿಪ್ರಾಪ್ತಕವಾಗಿರುವುದು ।।೪೪೫।। ಆಗಮೋಕ್ತ ವಿಧಿಯಲ್ಲಿ ಪ್ರತಿಮೆಯು ಮಾತ್ರ ಮುಖ್ಯವಲ್ಲ. ಯಾರ ಪೂರ್ಣಶ್ರದ್ಧೆಯು ಎಲ್ಲಿ ಇರುವುದೋ ಅಲ್ಲಿ ಈ ವಿಧಿಯನ್ನು ಸುಖದಿಂದ ಮಾಡಬೇಕು ।।೪೪೬।।

ಹೇ ರಾಜನೇ, ಈ ಪೂಜೆಯು ಏಕದೇಶೀಯ ಅಂದರೆ ಪ್ರತಿಮೆ ಮಾತ್ರರಲ್ಲಿ ಆಗುವುದೆಂದೆನ್ನುವಂತಿಲ್ಲ. ಇದರ ಅನೇಕ ಸ್ಥಾನಗಳಿರುವುವು. ಅವುಗಳಲ್ಲಿ ಹರಿಪ್ರಾಪ್ತಿಯನ್ನು ತ್ವರೆಯಾಗಿ ಮಾಡಿಕೊಡುವ ಸ್ಥಾನಗಳನ್ನು ನಾನು ನಿನಗೆ ಹೇಳುವೆ ।।೪೪೭।। ಇದೇ ವಿಧಿಯಿಂದ ಜಲದಲ್ಲಿ ಯಥಾಕಾಲಕ್ಕೆ ಪೂಜೆಯನ್ನು ಸಾಂಗಗೊಳಿಸಬೇಕು ಅಥವಾ ಸೂರ್ಯಮಂಡಲದಲ್ಲಿ ಹರಿಯ ಧ್ಯಾನವನ್ನು ಮಾಡಿ ಶುದ್ಧರೀತಿಯಲ್ಲಿ ಪೂಜೆಯನ್ನು ಮಾಡಬೇಕು ।।೪೪೮।। ಅಗ್ನಿಯಲ್ಲಿ ಜ್ವಾಲೆಗಳು ಏಳಲು, ಅದರಲ್ಲಿ ಶ್ರೀಹರಿಯ ಸ್ವರೂಪವನ್ನು ಮನದಲ್ಲಿ ತಂದು ಅದರ ಪೂಜೆಯನ್ನು ಮಾಡಬೇಕು. ಇವೆಲ್ಲಕ್ಕಿಂತಲೂ ಅತಿಥಿಯು ಭಗವಂತನ ಸ್ವರೂಪನು ಎಂದು ಭಾವಿಸಿ ಆತನ ಪೂಜೆಯನ್ನು ಮಾಡಲು ಭಗವಂತನ ಪ್ರಾಪ್ತಿಯು ತ್ವರಿತದಿಂದಾಗುವುದು ।।೪೪೯।। ವೈಶ್ವದೇವನ ಕೊನೆಯಲ್ಲಿ ಯಾರೇ ಆಗಲಿ ಯಾವ ಜಾತಿಯವನಾಗಿರಲಿ ಅತಿಥಿಯಾಗಿ ಬಂದರೆ, ಆತನ ಪೂಜೆಯನ್ನು ಭಗವಂತನ ಭಾವನೆಯಿಂದ ಮಾಡಲು ಆತನ ಮನೆಯಲ್ಲಿ ಪೂರ್ಣಪ್ರಾಪ್ತಿಯು ಧಾವಿಸಿ ಬರುವುದು ।।೪೫೦।। ಪೂರ್ವದಲ್ಲಿ ಆತನ ಪರಿಚಯ ಇಲ್ಲದ ವ್ಯಕ್ತಿಯು ವೈಶ್ವದೇವನ ಕೊನೆಯಲ್ಲಿ ಬಂದರೆ, ಯಾರು ಆತನನ್ನು ಬ್ರಹ್ಮ ಭಾವನೆಯಿಂದ ಪೂಜಿಸುವರೋ, ಅವರ ಮನೆಯಲ್ಲಿ ಭುಕ್ತಿಮುಕ್ತಿಗಳು ದಾಸಿಯಾಗಿರುವುವು ।।೪೫೧।।

ತ್ಯಾ ವೈಶ್ವದೇವಾಚೇ ಅಂತೀ ಜಾಣ । ನಿಜಭಾಗ್ಯೇ ಆಲಿಯಾ ಶುದ್ಧ ಬ್ರಾಹ್ಮಣ । ತಯಾ ಶ್ರದ್ಧೇನೇ ಪೂಜಿತಾ ಆಪಣ । ತೇ ಘರೀ ನಾರಾಯಣ ಸ್ವಾನಂದೇ ವಸೇ ॥೮೫೨॥ ರಾಯಾ ವೈಶ್ವದೇವಾಚೇ ಅಂತೀ । ಅತಿಥೀಸವೇ ಯೇ ಭುಕ್ತಿಮುಕ್ತೀ । ವಿಮುಖ ಜಾಹಲ್ಯಾ ತ್ಯಾ ಲಾಭಾ ನಾಡತೀ । ಪೂಜಕಾ ಸುಖಪ್ರಾಪ್ತಿ ಪರಮಾನಂದೇ ॥೮೫೩॥ ಅತಿಥೀಚ್ಯಾ ಠಾಯೀ ಮೂರ್ತಿಧ್ಯಾನ । ಸರ್ವಥಾ ಕರಣೇ ನ ಲಗೇ ಜಾಣ । ತೋ ಸ್ವರೂಪೇ ಸ್ವಯೇ ನಾರಾಯಣ । ಪೂಜಿತಾ ಸಂಪೂರ್ಣ ಸರ್ವಾರ್ಥಸಿದ್ಧಿ ॥೮೫೪॥ ಏವಂ ಅತಿಥೀಸೀ ಜೇ ಅರ್ಪೇ । ತೇ ಭಗವಂತಮುಖೀ ಸಮರ್ಪೇ । ಯಾಲಾಗೀ ಅತಿಸಾಕ್ಷೇಪೇ । ಅತಿಥಿ ಬ್ರಹ್ಮರೂಪೇ ಪೂಜಿಜೇ ಸದಾ ॥೮೫೫॥ ಜೇ ಜೇ ಬೋಲಿಲೇ ಪೂಜಾಸ್ಥಾನ । ತೇಥೇ ನಿಜಶ್ರದ್ಧಾಚಿ ಪ್ರಮಾಣ । ಶ್ರದ್ಧೇವೇಗಳೇ ರಾಯಾ ಜಾಣ । ಪ್ರಾಪ್ತಿ ಸಂಪೂರ್ಣ ಕದಾ ನ ಲಭೇ ॥೮೫೬॥ ನಿಜಶ್ರದ್ಧೇಚೇ ''ಹೃದಯ'' ಸ್ಥಾನ । ತೇ ಹೃದಯೀ ವಿಧ್ಯುಕ್ತ ಪೂಜನ । ಕರಿತಾ ಶ್ರದ್ಧೇನೇ ಆಪಣ । ಪ್ರಾಪ್ತಿ ಸಂಪೂರ್ಣ ಉದ್ಬೋಧೇ ಸ್ವಯೇ ॥೮೫೭॥ ಯೇರ್ಹವೀ ತರೀ ಆಪುಲ್ಯಾ ದೇಹೀ । ಚಾಳಕ ಈಶ್ವರು ಆಹೇ ಹೃದಯೀ । ಶ್ರದ್ಧೇನೇ ಭಜತಾ ತ್ಯಾಚೇ ಠಾಯೀ । ನಿಜಪ್ರಾಪ್ತಿ ಪಾಹೀ ಸಹಜೇ ಲಾಭೇ ॥೮೫೮॥ ಜೇ ಜೇ ಆಪಣ ಸೇವಿಜೇ । ತೇ ತೇ ಭಗವನ್ಮುಖೀ ಭಾವಿಜೇ । ಯೇಣೇ ನಿಜಭಜನೇ ಪಾವಿಜೇ । ಜಾಣ ಸಹಜೇ ಪರಮಾತ್ಮಾ ॥೮೫೯॥ ಸಾಂಡೋನಿ ದೇಹಿಂಚೀ ಅಹಂತಾ । ಸಕಳ ಭೋಗ ಈಶ್ವರ ಭೋಕ್ತಾ । ಐಸೀ ದೃಢ ಭಾವನಾ ಭಾವಿತಾ । ಪಾವಿಜೇ ಪರಮಾರ್ಥಾ ಅಪರೋಕ್ಷಸಿದ್ಧೀ ॥೮೬೦॥ ದೇಹ ಜಡ ಮೂಢ ಅಚೇತನ । ಸಕಳ ಭೋಗಭೋಕ್ತಾ ಈಶ್ವರ ಪೂರ್ಣ । ತೇಥ ವಾಢವೂನಿ ದೇಹಾಭಿಮಾನ । ಭೋಗಿತೀ ಅಜ್ಞಾನ ಅನೇಕ ದುಃಖೇ ॥೮೬೧॥ ತೇ ಸಾಂಡೂನಿ ದೇಹಅಹಂತಾ । ಹೃದಯಸ್ಥಾ ಶರಣ ಜಾತಾ । ಪಾವಿಜೇ ಪೂರ್ಣ ಪರಮಾರ್ಥಾ । ಜಾಣ ತತ್ತ್ವತಾ ನೃಪವರ್ಯಾ ॥೮೬೨॥ ನಿಃಶೇಷ ಸಾಂಡಿಜೇ ಮೀಪಣ । ಯಾಚಿ ನಾಂವ ಹೃದಯಸ್ಥಾ ಶರಣ । ತೂ ಸಹಜೇ ಪರಬ್ರಹ್ಮ ಪರಿಪೂರ್ಣ । ಮಿಥ್ಯಾ ದೇಹಾಭಿಮಾನ ಧರೂ ನಕೋ ॥೮೬೩॥ ರಾಯಾ ಯೇಣೇಂಚಿ ಕರ್ಮೇ ಜಾಣ । ತುಟೇ ಕರ್ಮಾಚೇ ಕರ್ಮಬಂಧನ । ಪಾವಿಜೇ ಪೂರ್ಣ ಸಮಾಧಾನ । ತೇ ಹೇ ಮುಖ್ಯ ಲಕ್ಷಣ ನೃಪನಾಥಾ ॥೮೬೪॥ ಆಗಮೋಕ್ತ ನಿಜಭಜನ । ಕರ್ಮಯೋಗಾಚೇ ಮುಖ್ಯ ಲಕ್ಷಣ । ಐಕತಾ ರಾಜಾ ಸಮಾಧಾನ । ಪರಮಾನಂದೇ ಪೂರ್ಣ ನಿವಾಲಾ ॥೮೬೫॥

ಇದರಂತೆಯೇ ವೈಶ್ವದೇವನ ಕೊನೆಯಲ್ಲಿ ಮಹಾಭಾಗ್ಯದಿಂದ ಪವಿತ್ರನಾದ ಬ್ರಾಹ್ಮಣನು ಆಗಮಿಸಿದಲ್ಲಿ ಆತನ ಪೂಜೆಯನ್ನು ಶ್ರದ್ಧಾಪೂರ್ವಕವಾಗಿ ಮಾಡಲು, ಆತನ ಮನೆಯಲ್ಲಿ ನಾರಾಯಣನು ಸ್ವಾನಂದದಿಂದ ವಾಸಿಸುವನು ॥೮೫೨॥ ಹೇ ರಾಜನೇ, ವೈಶ್ವದೇವನ ಕೊನೆಯಲ್ಲಿ ಅತಿಥಿಯೊಡನೆ ಭುಕ್ತಿಮುಕ್ತಿಗಳು ಬರುತ್ತಿರುವುವು. ಆದ್ದರಿಂದ ಅತಿಥಿಯು ವಿಮುಖನಾಗಿ ಹೋಗಲು ಗೃಹಸ್ಥನಿಗೆ ಆತನ ಲಾಭವಾಗುವುದಿಲ್ಲ. ಆತನನ್ನು ಪೂಜಿಸಿದರೆ ಸುಖದ ಪ್ರಾಪ್ತಿಯಾಗುವುದು ॥೮೫೩॥ ಅತಿಥಿಯ ಸ್ಥಾನದಲ್ಲಿ ಮೂರ್ತಿಯ ಧ್ಯಾನವನ್ನು ಮಾಡಬೇಕಾಗುವುದಿಲ್ಲ, ಏಕೆಂದರೆ ಆತನು ಸ್ವತಃ ನಾರಾಯಣಸ್ವರೂಪನಾಗಿದ್ದು ಆತನ ಪೂಜೆ ಮಾಡುವುದರಿಂದ ಪೂರ್ಣವಾಗಿ ಸರ್ವಾರ್ಥ ಸಿದ್ಧಿಯು ಪ್ರಾಪ್ತವಾಗುವುದು ॥೮೫೪॥ ಈ ಪ್ರಕಾರವಾಗಿ ಅತಿಥಿಗಳವರಿಗೆ ಅರ್ಪಿಸಿರುವುದು ಭಗವಂತನ ಮುಖಕ್ಕೆ ಸಮರ್ಪಿತವಾಗುವುದು. ಅದಕ್ಕಾಗಿ ಅತ್ಯಂತ ಆದರದಿಂದ ಸದಾ ಸರ್ವಕಾಲದಲ್ಲಿ ಅತಿಥಿಯನ್ನು ಬ್ರಹ್ಮಭಾವದಿಂದ ಪೂಜಿಸಬೇಕು ॥೮೫೫॥ ಹೇ ರಾಜನೇ, ಹೇಳಿರುವ ಪೂಜೆಯ ಸ್ಥಾನಗಳಲ್ಲಿ ಪೂಜಕನ ಶ್ರದ್ಧೆಯೂ ಅತ್ಯಂತ ಮಹತ್ವದ್ದಾಗಿರುವುದು. ಶ್ರದ್ಧೆ ಇಲ್ಲದೇ ಪೂರ್ಣಪ್ರಾಪ್ತಿಯು ಎಂದಿಗೂ ಆಗಲಾರದು ॥೮೫೬॥ ತನ್ನ ಹೃದಯವೂ ಒಂದು ಪೂಜಾಸ್ಥಾನವಾಗಿರುವುದು. ಆ ಹೃದಯದಲ್ಲಿ ತಾನು ಶ್ರದ್ಧೆಯಿಂದ ಪೂಜೆಯನ್ನು ಮಾಡಲು ಪೂರ್ಣಪ್ರಾಪ್ತಿಯು ತನ್ನಿಂದ ತಾನೇ ಪ್ರಕಟವಾಗುವುದು ॥೮೫೭॥ ದೇಹದ ಚಾಲಕನಾದ ಈಶ್ವರನು ತನ್ನ ದೇಹದಲ್ಲಿಯೇ ಹೃದಯದಲ್ಲಿರುವನು. ಆತನಲ್ಲಿ ಶ್ರದ್ಧೆಯಿಂದ ಭಜಿಸಲು ಸಹಜವಾಗಿ ಆತ್ಮಪ್ರಾಪ್ತಿಯಾಗುವುದು ॥೮೫೮॥ ತಾನು ಯಾವ ಯಾವ ಪದಾರ್ಥಗಳನ್ನು ಸೇವಿಸುತ್ತಿರುವನೋ, ಅವುಗಳು ಭಗವಂತನ ಮುಖದಲ್ಲಿ ಸೇರುತ್ತಿವೆ ಎಂಬ ಭಾವನೆಯ ಭಜನೆಯಿಂದ ಪರಮಾತ್ಮನ ಪ್ರಾಪ್ತಿಯು ಸಹಜವಾಗಿ ಆಗುವುದು ॥೮೫೯॥ ದೇಹದ ಅಹಂಕಾರವನ್ನು ಬಿಟ್ಟು ಎಲ್ಲ ಭೋಗಗಳನ್ನು ಭೋಗಿಸುವವನು ಈಶ್ವರನೇ ಇರುವನೆಂಬ ಭಾವನೆಯನ್ನು ಧರಿಸಬೇಕು. ಇದರಿಂದ ಪರಮಾರ್ಥದ ಪ್ರತ್ಯಕ್ಷ ಸಾಕ್ಷಾತ್ಕಾರವು ಪ್ರಾಪ್ತವಾಗುವುದು ॥೮೬೦॥ ಈ ದೇಹವು ಜಡ, ಮೂಢ, ಅಚೇತನವಾಗಿರುವುದು. ಎಲ್ಲ ಭೋಗಗಳನ್ನು ಪೂರ್ಣವಾಗಿ ಭೋಗಿಸುವವನು ಈಶ್ವರನೇ ಇರುವನು. ಹೀಗಿದ್ದರೂ ಅಜ್ಞಾನಿ ಜನರು ದೇಹದ ಅಭಿಮಾನವನ್ನು ಹಿಡಿದು ಅನೇಕ ಪ್ರಕಾರದ ದುಃಖಗಳನ್ನು ಭೋಗಿಸುತ್ತಿರುವರು ॥೮೬೧॥ ಹೇ ನೃಪವರ್ಯನೇ, ನೀನು ದೇಹದ ಅಹಂಕಾರವನ್ನು ಬಿಟ್ಟು ಹೃದಯದಲ್ಲಿನ ಪರಮಾತ್ಮನಿಗೆ ಶರಣಾಗು. ಅಂದರೆ ಪೂರ್ಣ ಪರಮಾತ್ಮನ ಪ್ರಾಪ್ತಿಯಾಗುವುದು ॥೮೬೨॥ ಹೇ ರಾಜನೇ, ''ನಾನು'' ಎಂಬುವುದನ್ನು ನಿಃಶೇಷವಾಗಿ ತ್ಯಜಿಸುವುದೇ ಹೃದಯಸ್ಥ ಈಶ್ವರನಿಗೆ ಶರಣಾದಂತಾಗುವುದು. ನೀನು ನಿಜವಾಗಿಯೂ ಸ್ವರೂಪದಿಂದ ಪೂರ್ಣ ಬ್ರಹ್ಮನಾಗಿರುವೆ. ಆದ್ದರಿಂದ ಮಿಥ್ಯೆಯಾದ ದೇಹದ ಅಭಿಮಾನವನ್ನು ಹಿಡಿಯಬೇಡ ॥೮೬೩॥ ಹೇ ರಾಜನೇ, ಇಂತಹ ಕರ್ಮದಿಂದಲೇ ಕರ್ಮಬಂಧನವು ಮುರಿಯುವುದು. ಮತ್ತು ಪೂರ್ಣವಾದ ಸಮಾಧಾನವು ಲಭಿಸುವುದು. ಆಗಮೋಕ್ತ ಭಜನೆಯ ಇದು ಮುಖ್ಯ ಲಕ್ಷಣವಾಗಿದೆ ॥೮೬೪॥ ಆಗಮೋಕ್ತ ಭಜನೆಯ ಮತ್ತು ಕರ್ಮಯೋಗದ ಈ ಮುಖ್ಯ ಲಕ್ಷಣಗಳನ್ನು ಕೇಳಿ ರಾಜನಿಗೆ ಅತ್ಯಂತ ಸಮಾಧಾನವಾಯಿತು. ಮತ್ತು ಈತನು ಪರಮಾನಂದದಿಂದ ತೃಪ್ತನಾದನು ॥೮೬೫॥

ಜಂವ ಜಂವ ರಾಯಾಚೇ ಪುರೇ ಕೋಡ । ತಂವ ತಂವ ಕಥಾ ಲಾಗೇ ಗೋಡ । ಅತಿಶಯೇ ಶ್ರವಣಾಚೀ ಚಾಡ । ವಿಶೇಷೇ ವಾಡ ಥೋರಾವಲೀ ।೮೬೬॥ ರಾಜಾ ನಿವಾಲೇನಿ ಪರಮಾನಂದೇ । ಸುಖಾವಲೇನಿ ನಿಜಬೋಧೇ । ಲಾಂಚವಲೇನಿ ಸ್ವಾನಂದೇ । ಪುಢಾ ಪ್ರಶ್ನ ವಿನೋದೇ ಪುಸೇಲ ।೮೬೭॥ ಉಗೇ ರಾಹತಾ ಆಪಣ । ಉಠೂನಿ ಜಾತೀ ಮುನಿಗಣ । ಯಾಲಾಗೀ ಪ್ರಶ್ನಾವರೀ ಪ್ರಶ್ನ । ವಿಚಿತ್ರವಿಂದಾನ ಪುಸತು ।೮೬೮॥ ಸ್ವಾನಂದೇ ಲೋಧಲೀ ಚಿತ್ತವೃತ್ತೀ । ಇಂದ್ರಿಯೇ ವೇಧಲೀ ಸುಖಸ್ಥಿತೀ । ರಾಜಾ ನಿವಾಲಾ ನಿಶ್ಚಿತೀ । ತರೀ ಪ್ರಶ್ನೋಕ್ತೀ ಪುಸತ ।೮೬೯॥ ಪುಸೇಲ ಹರೀಚೇ ಅವತಾರ । ತೇ ಕಥಾ ಸುಂದರ ಮನೋಹರ । ನಿರೂಪಣ ಅತಿಅರುವಾರ । ನಿಜಜಿವ್ಹಾರ ನಿವವೀಲ ।೮೭೦॥ ತ್ಯಾ ಪ್ರಶ್ನಾಚೇ ಪ್ರತ್ಯುತ್ತರ । ಕಥಾಕೌತುಕ ಸನಾಗರ । ಏಕಾ ಜನಾರ್ಜನಾಚಾ ಕಿಂಕರ । ಉಪಾನಹಧರ ಸಂತಾಂಚಾ ।೮೭೧॥ ಸಂತ ಸಜ್ಜನ ಕೃಪಾಸ್ಥಿತೀ । ಶ್ರೀಜನಾರ್ದನ ವರದಮೂರ್ತೀ । ಪುಢೀಲ ಕಥೇಚೀ ವ್ಯುತ್ಪತ್ತೀ । ಸಾಂಗೇನ ಯಥಾರ್ಥೀ ಅರ್ಥುನೀ ।೮೭೨॥ ಶ್ರೀಭಾಗವತಾಚೇ ರಾಶೀವರೀ । ಏಕಾಜನಾರ್ದನ ಕೇಲಾ ಮಾಪಾರೀ । ತೋ ನಿಜಬೋಧಾಚೇ ಕುಡವಾವಾರೀ । ಭರೀಲ ವಖಾರೀ ಶ್ರವಣಾಚ್ಯಾ ।೮೭೩॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ನಿಮಿಜಾಯಂತಸಂವಾದೇ
ಮಾಯಾಕರ್ಮಬ್ರಹ್ಮನಿರೂಪಣಂ ನಾಮ ತೃತೀಯೋಽಧ್ಯಾಯಾಯಃ ।೩॥

॥ ಶ್ರೀಕೃಷ್ಣಾರ್ಪಣಮಸ್ತು ॥

ರಾಜನ ಮನೋರಥವು ಯಾವ ಪ್ರಕಾರವಾಗಿ ಪೂರ್ಣವಾಗುತ್ತಿತ್ತೋ, ಅದರಂತೆಯೇ ಕಥೆಯು ಸಹ ಆತನಿಗೆ ಕರ್ಣಮಧುರವಾಗಿ ಶ್ರವಣದ ಇಚ್ಛೆಯು ಅತಿಶಯವಾಗಿ ಬೆಳೆಯುತ್ತಿತ್ತು ।೮೬೬॥ ಈಗ ರಾಜನು ಪರಮಾನಂದದಿಂದ ತೃಪ್ತನಾಗಿ ಆತ್ಮ ಬೋಧೆಯಿಂದ ಸುಖಿಯಾದರೂ ಸಹ ಸ್ವಾನಂದದಿಂದ ಮೋಹಗೊಂಡು ಪುನಃ ವಿನೋದವಾಗಿ ಪ್ರಶ್ನಿಸುವನು ।೮೬೭॥ ತಾನು ಸುಮ್ಮನಾದರೆ, ಈ ಎಲ್ಲ ಮುನಿವರರು ಎದ್ದು ಹೋದಾರೆಂದು ತಿಳಿದು ಚತುರನಾದ ರಾಜನು ವಿಚಿತ್ರವಾಗಿ ಪ್ರಶ್ನೆಗಳ ಮೇಲೆ ಪ್ರಶ್ನೆಯನ್ನು ಕೇಳುತ್ತಿದ್ದನು ।೮೬೮॥ ಸ್ವಾನಂದದಿಂದ ಈತನ ಚಿತ್ತವೃತ್ತಿಯು ತುಂಬಿಹೋಯಿತು. ಇಂದ್ರಿಯಗಳು ಆತ್ಮಸುಖಸ್ಥಿತಿಯಲ್ಲಿ ತಲ್ಲೀನವಾದವು. ಈ ಪ್ರಕಾರವಾಗಿ ರಾಜನು ಮನದಲ್ಲಿ ಪೂರ್ಣತೃಪ್ತನಾದನು. ಆದರೂ ಆತನು ಪ್ರಶ್ನೆಯನ್ನು ಕೇಳಲಾರಂಭಿಸಿದನು ।೮೬೯॥ ಇನ್ನು ಮುಂದೆ ಈತನು ಹರಿಯ ಅವತಾರಗಳನ್ನು ಕೇಳುವನು. ಈ ಕಥೆಯು ಬಹಳ ಸುಂದರವಾಗಿದೆ ಮತ್ತು ನಿರೂಪಣೆಯು ಅತಿರಮಣೀಯವಾಗುವುದಿದೆ. ಇದರಿಂದ ಶ್ರೋತೃಗಳವರ ಚಿತ್ತಕ್ಕೆ ಶಾಂತಿಯು ದೊರಕುವುದು ।೮೭೦॥ ಈ ಪ್ರಶ್ನೆಯ ಪ್ರತ್ಯುತ್ತರವಾಗಿ ಅಂದರೆ ಒಂದು ರಮಣೀಯವಾದ ಕಥೆಯು ಕೌತುಕವಾಗಿರುವುದು. ಏಕನಾಥನಾದ ನಾನು ಶ್ರೀ ಜನಾರ್ದನರ ಕಿಂಕರನಾಗಿ ಸಂತರ ಪಾದರಕ್ಷೆಯನ್ನು ಹೊರುವವನಾಗಿರುವೆನು ।೮೭೧॥ ಸಂತ ಸಜ್ಜನರು ಕೃಪಾಸಾಗರರಾಗಿರುವರು. ಶ್ರೀ ಜನಾರ್ದನರು ವರದಮೂರ್ತಿಯಾಗಿರುವರು. ಇವರ ಕೃಪೆಯಿಂದ ಮುಂದಿನ ಕಥೆಯನ್ನು ಯಥಾರ್ಥವಾಗಿ ಅರ್ಥೈಸಿ ಕಥಿಸುವೆನು ।೮೭೨॥ ಭಾಗವತದ ರಾಶಿ ಮೇಲೆ ಜನಾರ್ದನ ಸ್ವಾಮಿಗಳವರು ಏಕನಾಥನಿಗೆ ಅಳೆದು ಕೊಡುವವನಾಗಿ ನೇಮಿಸಿರುವರು. ಈತನು ಆತ್ಮ ಬೋಧೆಯ ಅಳತೆಯಿಂದ ಶ್ರವಣದ ವಖಾರವನ್ನು ತುಂಬುವನು ।೮೭೩॥

ಇತಿ ಶ್ರೀಮದ್‌ಭಾಗವತ ಮಹಾ ಪುರಾಣದ ಏಕಾದಶ ಸ್ಕಂಧದ ನಿಮಿಜಾಯಂತ ಸಂವಾದದ ಮಾಯಾಕರ್ಮ ಬ್ರಹ್ಮ ನಿರೂಪಣ
ನಾಮದ ಶ್ರೀ ಏಕನಾಥ ಮಹಾರಾಜರ ಭಾಷ್ಯಯ ಮೂರನೆಯ ಅಧ್ಯಾಯವು ಸಂಪೂರ್ಣ.

॥ ಶ್ರೀ ಕೃಷ್ಣಾರ್ಪಣ ಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ನಾಲ್ಕನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಶ್ರೀಗುರು ಶಿವಶಿವಾ । ನಮನೇ ಜೀವತ್ವ ಜೀವಾ । ನುರವಿಸೀ ತೇಥೇ ದೇಹಭಾವಾ । ಕೈಸೇನಿ ರಿಘಾವಾ ಹೋಈಲ ॥೧॥ ಜೀವೇ ಘೇಊನಿ ಜೀವಾ । ದೇಹತ್ವ ಮೋಡೂನಿ ದೇಹಭಾವಾ । ಯಾಹೀವರೀ ಕರವಿಸೀ ಸೇವಾ । ಹೇ ಲಾಘವ ದೇವಾ ನವಲ ತುಝೇ ॥೨॥ ಜೀವ ಘೇಊನಿ ಶಂಖಾಸುರಾ । ತ್ಯಾಚ್ಯಾ ವಾಗವಿಸೀ ಕಲೇವರಾ । ತೋ ತೂ ರಿಘೋನಿ ಮಜಭೀತರಾ । ಮಾಝಿಯಾ ಶರೀರಾ ವಾಗವಿಸೀ ॥೩॥ ಶಂಖ ಮಧುರ ಧ್ವನೀ ಗಾಜೇ । ತೋ ವಾಜವಿತ್ಯಾಚೇನಿ ವಾಜೇ । ತೇವೀ ಮ್ಯಾ ಜೇ ಜೇ ಬೋಲಿಜೇ । ತೇ ತೇ ಬೋಲಣೇ ಸಾಜೇ ತುಝೇನಿ ॥೪॥ ಆತಾ ಮಾಝೇ "ಶರೀರ" ಜೇ ಚಳೇ । ತೇ ತುಝೇನಿ ಆಂಗಿಕೇಮೇಳೇ । "ಕರ್ಮೇ" ನಿಪಜತೀ ಸಕಳೇ । ಸತ್ತಾ ಬಳೇ ತುಝೇನಿ ॥೫॥ ಮಾಝೇ ದೇಹೀಚೇ ಜೇ "ಮೀಪಣ" । ತೇ ತೂಚಿ ಝಾಲಾಸೀ ಆಪಣ । ತುಝೇನಿ ಪ್ರಾಣೇ "ಪ್ರಾಣ" । ಮಾಝಾಹೀ ಜಾಣ ಚಳೇ ದೇವಾ ॥೬॥ "ದೃಷ್ಟೀ" ಜೇ ಜೇ ಕಾಂಹೀ ದೇಖೇ । ತೇ ತೇ ತುಝೇನಿ ಜ್ಞಾನಲುನ್ಮೇಖೇ । "ಶ್ರವಣೇ" ಜೇ ಜೇ ಕಾಂಹೀ ಐಕೇ । ತೇ ತೇ ನೇಟಕೇ ಅವಧಾನ ತುಝೇ ॥೭॥ "ರಸನಾ" ಜೇ ಜೇ ಕಾಂಹೀ ಚಾಖೇ । ತೇ ತೇ ತುಝೇನಿ ಸ್ವಾದಮುಖೇ । "ಬುದ್ಧಿ" ಜಾಣಪಣೇ ತೋಖೇ । ತೇಹೀ ಅತಿನಿಕೇ ವೇದಕತ್ವ ತುಝೇ ॥೮॥ "ಮನ" ಮನಪಣೇ ಅತಿಚಪಳ । ತೇಹೀ ತುಝೇಚಿ ಆಂಗಿಕ ಬಳ । ವಿವೇಕಾ "ವಿವೇಕು" ಪ್ರಬಳ । ಅತಿಸೋಜ್ಜ್ವಳ ತುಝೇನಿ ॥೯॥ "ವಾಚಾ" ಜೇ ಜೇ ಕಾಂಹೀ ವದೇ । ತೇ ವಾಚಿಕತ್ವ ತುಝೇನಿ ಶಬ್ದೇ । "ಬೋಧು" ಜೇಣೇ ಉದ್ಬೋಧೇ । ತೋ ತುಝೇನಿ ಪ್ರಬೋಧೇ ಪ್ರಬೋಧು ॥೧೦॥ "ಜಾಗೃತೀ" ಜಾಗೇ ತುಝೇನಿ ಹರಿಖೇ । "ಸ್ವಪ್ನ" ಸ್ವಪ್ನಾ ತುಝೇನಿ ದೇಖೇ । "ಸುಷುಪ್ತೀ" ಸುಖಾವೇ ಜೇಣೇ ಸುಖೇ । ಪೂರ್ಣ ಸಂತೋಖೇ ತುಝೇನಿ ॥೧೧॥

ಹೇ ಓಂಕಾರಸ್ವರೂಪನಾದ, ಮಂಗಲಕ್ಕೆ ಮಂಗಲನಾದ ಶ್ರೀಗುರುವೇ, ನಿನಗೆ ನನ್ನ ನಮಸ್ಕಾರವು. ನಮಸ್ಕರಿಸುವುದರಿಂದ ಜೀವದ ಜೀವತ್ವವು ಉಳಿಯದಾಗಲು, ಅಲ್ಲಿ ದೇಹಭಾವದ ಪ್ರವೇಶವು ಎಲ್ಲಿಂದಾಗಬೇಕು? ॥೧॥ ಜೀವದ ಜೀವವನ್ನು ತೆಗೆದು, ದೇಹದ ದೇಹಭಾವವನ್ನು ಮುರಿದು ಪುನಃ ನನ್ನಿಂದ ಸೇವೆಯನ್ನು ಮಾಡಿಸಿಕೊಳ್ಳುವಿ. ಹೇ ದೇವನೇ, ಈ ನಿನ್ನ ಚಮತ್ಕಾರವು ಎಂತಹ ಅದ್ಭುತವಾಗಿದೆ! ॥೨॥ ಶಂಖಾಸುರನ ಜೀವವನ್ನು ತೆಗೆದು ಆತನ ಶರೀರವನ್ನು ನಿನ್ನ ಕೈಯಲ್ಲಿ ಬಳಸುತ್ತಿರುವೆ, ಹಾಗೆಯೇ ನೀನು ನನ್ನ ಶರೀರದಲ್ಲಿ ಸೇರಿಕೊಂಡು ನನ್ನನ್ನು ಬಳಸುತ್ತಿರುವೆ ॥೩॥ ಶಂಖದಿಂದ ಮಧುರವಾದ ಧ್ವನಿಯು ಹೊರಡುವುದು ನಿಜ. ಆದರೆ ಅದು ಅದನ್ನು ನುಡಿಸುವವನ ಕೌಶಲ್ಯವಾಗಿರುವುದು. ಅದರಂತೆ ನಾನು ಹೇಳುವುದೆಲ್ಲವೂ ನಿನ್ನಿಂದಲೇ ಶೋಭೆಗೊಂಡಿರುವುವು ॥೪॥ ಈಗ ನನ್ನ "ಶರೀರ" ವು ನಡೆದಾಡುವುದು ನಿನ್ನದೇ ಅಂಗಸಂಗದಿಂದಾಗಿದೆ. ನನ್ನಿಂದಾಗುವ ಎಲ್ಲ "ಕರ್ಮಗಳು" ನಿನ್ನ ಬಲದಿಂದಲೇ ಆಗುವುವು ॥೫॥ ನನ್ನ ದೇಹದ ''ನಾನೆಂಬುವುದು'' ಸ್ವತಃ ನೀನೇ ಆಗಿರುವೆ. ಹೇ ದೇವನೇ, ನಿನ್ನ ಪ್ರಾಣದಿಂದಲೇ ನನ್ನ ಪ್ರಾಣವು ಚಲಿಸುತ್ತಿರುವುದು ॥೬॥ "ನೇತ್ರ" ವು ಏನೇನು ನೋಡುವುದೋ ಅದೆಲ್ಲವೂ ನಿನ್ನ ಜ್ಞಾನಶಕ್ತಿಯಿಂದಲೇ, "ಕಿವಿಗಳು" ಏನೇನು ಕೇಳುವುವೋ ಅವೆಲ್ಲವೂ ನಿಜವಾಗಿಯೂ ನಿನ್ನ ಅವಧಾನವಾಗಿರುವುದು ॥೭॥ "ನಾಲಿಗೆ" ಯು ಏನೇನು ಸೇವಿಸುವುದೋ, ಅದೆಲ್ಲವೂ ನಿನ್ನ ಸ್ವಾದರೂಪ ಮುಖದಿಂದಲೇ, "ಬುದ್ಧಿ"ಯು ಅರುವಿಕೆಯಿಂದ ತುಷ್ಟವಾಗುವುದು, ಆ ಜ್ಞಾನವು ನಿನ್ನದೇ ಆಗಿರುವುದು ॥೮॥ ''ಮನವು'' ಮನೋಧರ್ಮದಂತೆ ಅತಿಚಪಲವಾಗಿರುವುದು, ಅದು ಸಹ ನಿನ್ನ ಅಂಗದ ಶಕ್ತಿಯಾಗಿರುವುದು. ವಿವೇಕಕ್ಕೆ ಅತಿಉಜ್ವಲವಾದ "ವಿವೇಕವು" ನಿನ್ನಿಂದಲೇ ಆಗುವುದು ॥೯॥ "ವಾಣಿಯು" ಏನೇನು, ನುಡಿಯುವುದೋ ಆ ಎಲ್ಲ ವಕ್ತೃತ್ವವು ನಿನ್ನ ಶಬ್ದಗಳಿಂದಲೇ ಹೇಳುವುದು. "ಬೋಧ" ವು ಯಾವ ಪ್ರಬೋಧೆಯ ಯೋಗದಿಂದ ಮನದಲ್ಲಿ ಬಿಂಬಿಸುವುದೋ, ಆ ಪ್ರಬೋಧವು ನಿನ್ನ ಅನುಗ್ರಹದಿಂದಲೇ ಆಗುವುದು ॥೧೦॥ ನಿನ್ನ ಆನಂದದಿಂದಲೇ "ಜಾಗೃತಿ" ಯು ಎಚ್ಚರವಾಗಿರುವು ದು. ನಿನ್ನಿಂದಲೇ, "ಸ್ವಪ್ನವು" ಸ್ವಪ್ನವನ್ನು ಕಾಣುವಿಕೆ, "ಸುಷುಪ್ತಿಯು" ಯಾವ ಸುಖದಿಂದ ಸುಖಿಯಾಗುವಿಕೆ, ಇದೆಲ್ಲವೂ ನಿನ್ನ ಪೂರ್ಣ ಸುಖದಿಂದಲೇ ಆಗುವುದು ॥೧೧॥

ಮೀ ಜೇ ಜೇ "ವಿಷಯ" ಭೋಗೀ । ತೇ ಭೋಕ್ತೇಪಣ ತುಝೇ ಅಂಗೀ । ತುಝೇನಿ ನಿಜಸಂಯೋಗೀ । ಮೀಪಣೇ ಜಗೀ ವರ್ತವಿಶೀ ಮಜ ॥೧೨॥ ಮಾಝೇ ಕರೂನಿ ಖಾಂಬಸೂತ್ರ । ತೂ ಝಾಲಾಸೀ ಸೂತ್ರಧಾರ । ಹಾಲವೂನಿಯಾ ನಿಜಸೂತ್ರ । ಕರ್ಮೇ ವಿಚಿತ್ರ ಕರವಿಶೀ ॥೧೩॥ ಐಸಿಯಾ ಶ್ರೀಜನಾರ್ದನಾ । ಜಗ ಚೇತವಿತ್ಯಾ ಚಿದ್‌ಘನಾ । ಕೃಪಾಳುವಾ ಜಗಜೀವನಾ । ನಮನ ಶ್ರೀಚರಣಾ ತುಝೇನಿ ತುಜ ॥೧೪॥ ಯಾಪರೀ ಮಜಮಾಜೀ ತೂ ಚಾಳಿತಾ । ಚಾಳಕತ್ವೇ ಕರವಿಸೀ ಗ್ರಂಥಾ । ತೇಥೇ ಮೀ ಏಕ ಕವಿತ್ವಕರ್ತಾ । ಹೇ ಜಾಣಾವೀ ತತ್ತ್ವತಾ ಸ್ಥೂಳಬುದ್ಧೀ ॥೧೫॥ ಏಕಾ ಏಕು ಜನಾರ್ದನೀ । ಕೀ ಜನಾರ್ದನು ಏಕಪಣೀ । ಇಯೇ ಪೃಥಕ್ ನಾಮಾಂಚೀ ಲೇಣೀ । ಲೇಊನಿ ಏಕಪಣೇ ಮಿರವಿಸೀ ತೂ ॥೧೬॥ ಜೇವೀ ಕನಕಾಚೇ ಭೂಷಣ । ಕೀ ಭೂಷಣೀ ಕನಕ ಸಂಪೂರ್ಣ । ತೇವೀ ಏಕಾ ಆಣಿ ಜನಾರ್ದನ । ಏಕತ್ವೇ ಜಾಣ ಜನಾರ್ದನಚಿ ॥೧೭॥ ಐಶೀ ಐಕೋನಿ ವಿನವಣೀ । ಸದ್ಗುರು ತುಷ್ಟಲಾ ಸಂತೋಷೋನಿ । ಯೇಥೇ ಭಿನ್ನ ಭಿನ್ನ ಸೋಸಣೀ । ನ ಲಗೇ ನಿರೂಪಣೀ ಕರಣೇ ತುಜ ॥೧೮॥ ಜೇವ್ಹಾ ಕಾಪುರಾ ಆಗೀ ಝಗಟೇ । ತೇವ್ಹಾಂಚಿ ಕಾಪುರತ್ವ ಖುಂಟೇ । ಸಚ್ಛಿಷ್ಯಾಸೀ ಸದ್ಗುರು ಭೇಟೇ । ತೇವ್ಹಾಂಚಿ ಫಿಟೇ ಭಿನ್ನ ಭೇದು ॥೧೯॥ ಜೇಣೇ ಫಿಟೇ ಭಿನ್ನ ಭೇದು । ತೋ ಶ್ರೀಭಾಗವತೀ ನಿಜಬೋಧು । ವಸುದೇವಾಪ್ರತೀ ನಾರದು । ಸಾಂಗತ ಸಂವಾದು ಇತಿಹಾಸಾಚಾ ॥೨೦॥ ಜ್ಯಾ ಇತಿಹಾಸಾಚಾ ಅರ್ಥ । ಪರಿಸತಾ ಪ್ರಗಟೇ ಪರಮಾರ್ಥ । ಸ್ವಾನಂದಬೋಧ ಹೃದಯಾಂತ । ಶ್ರವಣೇ ಸದೋದಿತ ಶ್ರೋತೇ ಹೋತೀ ॥೨೧॥ ತಂವ ಶ್ರೋತೇ ಸಂತಸಮುದಾವೋ । ಮ್ಹಣತೀ ಕೈಸಾ ನವಲಾವೋ । ಸದ್ಗುರುಸ್ತವನೀ ಬ್ರಹ್ಮಭಾವೋ । ಸಾಧಿಲಾ ಆವೋ ಅಭೇದತ್ವೇ ॥೨೨॥ ಹೇ ಸದ್ಗುರೂಚೀ ವಿನವಣೀ । ಕೀ ಬ್ರಹ್ಮಸುಖಾಚೀ ಖಾಣೀ । ಪರಿಸತಾ ಸಪ್ರೇಮ ಬೋಲಣೀ । ರಿಝಲೀ ಆಯಣೀ ಸಜ್ಜನಾಂಚೀ ॥೨೩॥ ಯಾ ದೇಶಭಾಷಾ ವಾಣೀ । ಉಘಡಿಲೀ ಪರಮಾರ್ಥಾಚೀ ಖಾಣೀ । ಬೋಲ ನವ್ಹತೀ ಹೇ ಸ್ಪರ್ಶಮಣೀ । ಲಾಗತಾ ಶ್ರವಣೀ ಪಾಲಟೇ ಜೀವ ॥೨೪॥ ಯಾಪರೀ ಶ್ರೀಭಾಗವತೀ । ಅನುಪಮ ಅಗಾಧ ಸ್ಥಿತಿ । ತೇ ಕಥೇಚೀ ಸಂಗತಿ । ಲಾವೀ ಸುನಿಶ್ಚಿತೀ ಅರ್ಥಾವಬೋಧೇ ॥೨೫॥ ಐಕೋನಿ ಸಂತಾಂಚೇ ವಚನ । ಶಿರೀ ವಂದೋನಿ ತ್ಯಾಂಚೇ ಚರಣ । ಪುಢೀಲ ಕಥಾ ನಿರೂಪಣ । ಶ್ರೋತೀ ಸಾವಧಾನ ಪರಿಸಾವೇ ॥೨೬॥

ನಾನು ಯಾವ ಯಾವ "ವಿಷಯ"ಗಳನ್ನು ಭೋಗಿಸುವೆನೋ, ಆ ಭೋಕ್ತೃತ್ವವು ನಿನ್ನ ಅಂಗದಲ್ಲಿಯೇ ಇರುವುದು . ನೀನೇ ನನ್ನನ್ನು ನಿನ್ನ ಜೊತೆಗೂಡಿಸಿ, ನನಗೆ ನಾನೆಂಬ ಭಾವನೆಯಿಂದ ಜಗತ್ತಿನಲ್ಲಿ ನಡೆಸುತ್ತಿರುವೆ ॥೧೨॥ ನನಗೆ ಸೂತ್ರದಗೊಂಬೆಯನ್ನಾಗಿ ಮಾಡಿ, ನೀನು ಸೂತ್ರಧಾರನಾಗಿ, ನಿನಗೆ ಬೇಕಾದ ರೀತಿಯಲ್ಲಿ ಸೂತ್ರವನ್ನು ಚಲಿಸಿ, ನೀನೇ ನನ್ನಿಂದ ವಿಚಿತ್ರವಾದ ಕರ್ಮಗಳನ್ನು ಮಾಡಿಸುತ್ತಿರುವೆ ॥೧೩॥ ಈ ಪ್ರಕಾರದ ಜಗದ್‌ಚಾಲಕ, ಚಿದ್‌ಘನ, ಕೃಪಾಳೂ, ಜಗಜ್ಜೀವನನೇ, ನಿನ್ನದೇ ಸತ್ತೆಯಿಂದ ನಿನ್ನ ಶ್ರೀಚರಣಗಳಿಗೆ ನಾನು ಪ್ರೇಮಭಾವದಿಂದ ನಮಸ್ಕರಿಸುವೆನು ॥೧೪॥ ಈ ರೀತಿಯಾಗಿ ನೀನು ನನ್ನಲ್ಲಿ ಚಾಲಕರೂಪದಲ್ಲಿರುವೆ, ನೀನೇ ಚಾಲಕನಾಗಿರುವುದರಿಂದ ಗ್ರಂಥವನ್ನೂ ನೀನೇ ಬರೆಯಿಸುತ್ತಿರುವೆ. ಹೀಗಿದ್ದಮೇಲೆ "ನಾನು ಕವಿತ್ವವನ್ನು ಮಾಡುವೆ" ಎಂಬುವುದು ಭ್ರಮೆಯಾಗಿರುವುದು ॥೧೫॥ ಏಕನಾಥನು ಜನಾರ್ದನನಲ್ಲಿ ಏಕರೂಪನಾಗಿರುವನು ಮತ್ತು ಜನಾರ್ದನನು ಒಂದೇ ಭಾವನೆಯಿಂದ ಏಕರೂಪನಾಗಿ ಏಕನಾಥನ ಭಾವಕ್ಕೆ ಪ್ರಾಪ್ತನಾಗಿರುವನು. ಈ ಭಿನ್ನ ಭಿನ್ನ ಹೆಸರಿನ ಆಭರಣಗಳನ್ನು ತೊಟ್ಟು ನೀನು ಒಂದೇ ಆಗಿ ಮೆರೆಯುವೆ ॥೧೬॥ ಯಾವ ಪ್ರಕಾರವಾಗಿ ಬಂಗಾರದ ಆಭರಣಗಳು ಅಥವಾ ಆಭರಣಗಳಲ್ಲಿ ಬಂಗಾರವು ಹೀಗೆ ಏಕನಾಥ ಮತ್ತು ಜನಾರ್ದನರು ಏಕತ್ವದಿಂದ ಜನಾರ್ದನನೇ ಆಗಿರುವನು ॥೧೭॥ ಹೀಗೆ ಪ್ರೇಮದಿಂದ ಮಾಡಿದ ವಿನಂತಿಯನ್ನು ಕೇಳಿ, ಸದ್ಗುರುಗಳು ಪ್ರಸನ್ನರಾದರು ಮತ್ತು ಆನಂದದಿಂದ ಹೀಗೆ ನುಡಿದರು, ನಿರೂಪಣೆಗಾಗಿ ನಿನಗೆ ಈಗ ಭಿನ್ನ ಭಿನ್ನವಾದ ಕಲ್ಪನೆ ಮಾಡುವುದು ಬೇಡ ॥೧೮॥ ಏಕೆಂದರೆ, ಕರ್ಪೂರಕ್ಕೆ ಜ್ಯೋತಿಯು ಹತ್ತಲು ಆಗಲೇ ಅದರ ಕರ್ಪೂರತ್ವವು ಮುಗಿಯುವುದು. ಅದರಂತೆ ಸಚ್ಛಿಷ್ಯನಿಗೆ ಸದ್ಗುರುಗಳು ಸಿಕ್ಕಾಗಲೇ, ಆತನ ಹೃದಯದಲ್ಲಿನ ಭೇದಭಾವವು ಕೂಡಲೇ ಇಲ್ಲದಾಗಿ ಹೃದಯವು ಪವಿತ್ರವಾಗುವುದು ॥೧೯॥ ಯಾವುದರಿಂದ ಹೃದಯದಲ್ಲಿನ ಸರ್ವ ಪ್ರಕಾರದ ದ್ವೈತವು ಇಲ್ಲದಾಗುವುದೋ, ಆ ಆತ್ಮಬೋಧೆಯು ಭಾಗವತದಲ್ಲಿ ತುಂಬಿರುವುದು. ನಾರದರು ವಸುದೇವನಿಗೆ ಈ ಇತಿಹಾಸವನ್ನು ಹೇಳುತ್ತಿರುವರು ॥೨೦॥ ಇದರ ಅರ್ಥವನ್ನು ಕೇಳುತ್ತಿರಲು ಅಂತರಂಗದಲ್ಲಿ ಪರಮಾರ್ಥವು ಪ್ರಕಟವಾಗುವುದು. ಶ್ರೋತೃಗಳು ಈ ಯಾವ ಶ್ರವಣದಿಂದ ಸದೈವ ಆನಂದಿತರಾಗುವರು ॥೨೧॥ ಇದನ್ನು ಕೇಳಿ ಶ್ರೋತೃಗಳ ಸಮುದಾಯವು ಹೀಗೆ ಹೇಳಿತು. ಇದೆಂತಹ ಆಶ್ಚರ್ಯ? ಸದ್ಗುರುಗಳ ಸ್ತವನವನ್ನು ಮಾಡುತ್ತಲೇ ನೀನು ಬ್ರಹ್ಮಭಾವವನ್ನು ಅಭೇದಭಾವದಿಂದ ಸಹಜವಾಗಿಯೇ ಉತ್ತಮ ರೀತಿಯಲ್ಲಿ ಸಾಧಿಸಿದೆ ॥೨೨॥ ಇದು ಸದ್ಗುರುವಿನ ಸ್ತುತಿಯೋ ಅಥವಾ ಬ್ರಹ್ಮಸುಖದ ಆಗರವೋ? ನಿನ್ನ ಪ್ರೇಮಯುಕ್ತ ಭಾಷಣವನ್ನು ಕೇಳಿ ಸಜ್ಜನರ ಚಿತ್ತವೃತ್ತಿಯು ತನ್ಮಯಗೊಂಡಿರುವುದು ॥೨೩॥ ಮರಾಠಿ ಭಾಷೆಯಲ್ಲಿ ನೀನು ಪರಮಾರ್ಥದ ಗಣಿಯನ್ನೇ ತೆರೆದಿರುವೆ. ಇವು ಶಬ್ದಗಳಲ್ಲ, ಪರೀಸಮಣಿಗಳಾಗಿವೆ. ಇವು ಕಿವಿಗಳಲ್ಲಿ ಬಿದ್ದಾಕ್ಷಣವೇ ಜೀವವು ಜೀವತ್ವಭಾವವನ್ನು ತೊರೆದು ಬ್ರಹ್ಮಸ್ವರೂಪವನ್ನು ಪ್ರಾಪ್ತಮಾಡಿಕೊಳ್ಳುವುದು ॥೨೪॥ ಈ ಪ್ರಕಾರವಾಗಿ ಭಾಗವತದಲ್ಲಿ ಅನುಪಮ್ಯ, ಮತ್ತು ಅಗಾಧ ಸ್ಥಿತಿ ಇರುವುದು. ಆದ್ದರಿಂದ ಈಗ ಕಥೆಯ ಸಂಗತಿಯನ್ನು ಅರ್ಥಜ್ಞಾನದಿಂದ ಉತ್ತಮ ರೀತಿಯಲ್ಲಿ ಹಚ್ಚು ॥೨೫॥ ಈ ಯಾವ ಸಂತರ ವಚನಗಳನ್ನು ಕೇಳಿ, ಅವರ ಚರಣಗಳಲ್ಲಿ ಮಸ್ತಕವನ್ನಿಟ್ಟು ನಾನು ಮುಂದಿನ ಕಥೆಯ ನಿರೂಪಣೆಯನ್ನು ಮಾಡುವೆನು. ಅದನ್ನು ಶ್ರೋತೃಗಳವರು ಲಕ್ಷ ಕೊಟ್ಟು ಕೇಳಬೇಕು ॥೨೬॥

ಯೇಥೇ ತೃತೀಯ ಅಧ್ಯಾಯಾಚೇ ಅಂತೀ । ನಿರೂಪಿತಾ ತಾಂತ್ರಿಕ ಭಕ್ತಿ । ಭಜಾವೇ ಆವಡೇಲ ತೇ ಮೂರ್ತಿ । ರಾಯಾಸೀ ತದರ್ಥೀ ಪ್ರಶ್ನ ಸ್ಫುರಲಾ ॥೨೭॥ ದೇವೋ ಏಕಚಿ ತ್ರಿಜಗತೀ । ತ್ಯಾಚ್ಯಾ ಕಿತೀ ಅವತಾರಮೂರ್ತಿ । ಜನ್ಮ ಕರ್ಮ ಅನೇಕ ವ್ಯಕ್ತೀ । ಹೇಚಿ ಮುನೀಪ್ರತಿ ಪುಸತು ॥೨೮॥

ರಾಜೋವಾಚ:-

ಯಾನಿ ಯಾನೀಹ ಕರ್ಮಾಣಿ ಯೈರ್ಯೈಃ ಸ್ವಚ್ಛಂದಜನ್ಮಭಿಃ । ಚಕ್ರೇ ಕರೋತಿ ಕರ್ತಾ ವಾ ಹರಿಸ್ತಾನಿ ಬ್ರುವಂತು ನಃ ॥೧॥

ಅರ್ಥ:- ನಿಮಿರಾಜನು ನುಡಿದನು :- ಹೇ ಯೋಗೀಶ್ವರರೇ, ಭಗವಾನನು ತನ್ನ ಭಕ್ತರ ಭಕ್ತಿಗಾಗಿ ಅವತಾರ ಧರಿಸುವನು ಮತ್ತು ಅನೇಕ ಲೀಲೆಗಳನ್ನು ಮಾಡುವನು. ಕೃಪೆಮಾಡಿ ತಾವು ಆ ಅವತಾರಗಳ, ಲೀಲೆಗಳ ವರ್ಣನೆಯನ್ನು ಮಾಡಿರಿ. ಇಂದಿನವರೆಗೆ ಮಾಡಿದ ಲೀಲೆಗಳ, ಈಗ ಮಾಡುತ್ತಿರುವ ಲೀಲೆಗಳ ಮತ್ತು ಮುಂದೆ ಮಾಡುವ ಲೀಲೆಗಳ ವರ್ಣನೆಯನ್ನು ಮಾಡಿರಿ.

ಮುನೀಶ್ವರಾಂಚೇ ಅಗಾಧ ಜ್ಞಾನ । ತ್ಯಾಹೀವರೀ ರಸಾಳ ನಿರೂಪಣ । ತೇಣೇ ರಾಯಾಚೇ ವೇಧಲೇ ಮನ । ಪ್ರಶ್ನಾವರೀ ಪ್ರಶ್ನ ಯಾಲಾಗೀ ಪುಸೇ ॥೨೯॥ ತೋ ಮ್ಹಣೇ ದೇವಾಧಿದೇವೋ ಹರಿ । ಸ್ವಲೀಲಾ ಕೈಸೀ ಜನ್ಮೇ ಧರೀ । ಸ್ವೇಚ್ಛಾ ಜೇ ಜೇ ಕರ್ಮೇ ಕರೀ । ತೇ ಅಗಾಧ ಥೋರೀ ಮಜ ಸಾಂಗಾ ॥೩೦॥ ಮ್ಹಣತೀ ದೇವಾ ನಾಹೀ ಜನ್ಮ । ತೇಥೇ ಕೈಂಚೇ ಪುಸಶೀ ಕರ್ಮ । ದೇವ ಅರೂಪ ಅನಾಮ । ತ್ಯಾಸೀ ಜನ್ಮ ಕರ್ಮ ಅಸೇನಾ ॥೩೧॥ ತೋ "ಅಜನ್ಮಾ" ಪರೀ ಜನ್ಮ ಧರೀ । "ಅಕರ್ಮಾ" ಪರೀ ಕರ್ಮೇ ಕರೀ । "ವಿದೇಹೀ" ತೋ ದೇಹಧಾರೀ । ಹೋಊನಿ ಸಂಸಾರೀ ಸ್ವಧರ್ಮ ಪಾಳೀ ॥೩೨॥ ತ್ಯಾಚ್ಯಾ ಅವತಾರಾಂಚೀ ಸ್ಥಿತಿ । ಕವಣ ಜನ್ಮ ಕವಣ ವ್ಯಕ್ತಿ । ಕಿತೀ ಅವತಾರ ಕಿತೀ ಮೂರ್ತಿ । ಕೃಪೇನೇ ಮಜಪ್ರತೀ ಸಾಂಗಾ ಸ್ವಾಮೀ ॥೩೩॥ ಜೇ ಕಾ ಅತೀತ ಅನಾಗತ । ವರ್ತಮಾನ ಜೇ ಪ್ರಸ್ತುತ । ತೇ ಅವತಾರ ಸಮಸ್ತ । ಇತ್ಥಂಭೂತ ಸಾಂಗಾವೇ ॥೩೪॥ ಹರಿಚರಿತ್ರ ಅವತಾರಗುಣ । ಪ್ರತಿಪಾದನ ಕರಾವಯಾಚಾ ಪ್ರಶ್ನ । ತೋ ಸಾಂಗಾವಯಾ ಜಯಂತೀ ನಂದನ । ಸ್ವಾನಂದೇ ಪೂರ್ಣ "ದ್ರುಮಿಲ" ಸಾಂಗೇ ॥೩೫॥

ದ್ರುಮಿಲ ಉವಾಚ:-

ಯೋ ವಾ ಅನಂತಸ್ಯ ಗುಣಾನನಂತಾನ್ ಅನುಕ್ರಮಿಷ್ಯನ್ ಸ ತು ಬಾಲಬುದ್ಧಿಃ ।
ರಜಾಂಸಿ ಭೂಮೇರ್ಗಣಯೇತ್ ಕಥಂಚಿತ್ ಕಾಲೇನ ನೈವಾಖಿಲಶಕ್ತಿಧಾಮ್ನಃ ॥೨॥

ಅರ್ಥ:- ದ್ರುಮಿಲನು ನುಡಿದನು:- ಹೇ ರಾಜನೇ, ಭಗವಾನನು ಅನಂತನು, ಆತನ ಗುಣಗಳೂ ಅನಂತವಾಗಿವೆ, ಆತನ ಗುಣಗಳ ಅಳತೆಯನ್ನು ಮಾಡುವ ಪ್ರಯತ್ನ ಮಾಡುವವನು ಅಜ್ಞಾನಿಯು, ಚಿಕ್ಕ ಬಾಲಕನಂತೆ ಆತನ ಬುದ್ಧಿಯಾಗಿದೆ. ಒಂದು ವೇಳೆ ಮಹಾ ಮೇಧಾವಿ ಪೃಥ್ವಿಯಲ್ಲಿನ ಕಣಗಳನ್ನು ಎಣಿಸಬಹುದು. ಆದರೆ ಸರ್ವಶಕ್ತಿಮಾನನಾದ ಭಗವಂತನ ಗುಣಗಳನ್ನು ಯಾರೂ ಎಣಿಸಲಾರರು.

ಜ್ಯಾಂಚೀ ಲೀಲಾಶಕ್ತಿ ಅಪರಿಮಿತ । ಐಸಾ ಅನಂತಶಕ್ತಿ ಜ್ಯಾಚ್ಯಾ ನಖಾಂತ । ಯಾಲಾಗೀ ತೋ ''ಅನಂತ'' ಮ್ಹಣತ । ತ್ಯಾಚೇ ಗುಣ ಸಮಸ್ತ ಗಣವತೀ ಕೋಣಾ ॥೩೬॥

ಮೂರನೆಯ ಅಧ್ಯಾಯದ ಕೊನೆಯಲ್ಲಿ ತಾಂತ್ರಿಕ ಭಕ್ತಿಯ ನಿರೂಪಣೆಯನ್ನು ಮಾಡುವಾಗ್ಗೆ, ಮನಸ್ಸಿಗೆ ಪ್ರೀತಿಯಾದ ಮೂರ್ತಿಯನ್ನು ಭಜಿಸಬೇಕೆಂದು ಹೇಳಿದರು. ಆದ್ದರಿಂದ ರಾಜನಿಗೆ ಪ್ರಶ್ನೆ ಕೇಳಲು ಹೊಳೆಯಿತು ॥೨೭॥ ತ್ರಿಭುವನದಲ್ಲಿ ದೇವನೊಬ್ಬನೇ ಇರುವನು. ಆದರೆ ಆತನ ಅವತಾರ ಮೂರ್ತಿಗಳು ಎಷ್ಟಿವೆ? ಅವುಗಳ ಜನ್ಮಕರ್ಮ ಅನೇಕ ಪ್ರಕಾರಗಳಾಗಿ ಹೇಗಾದವು? ಹೀಗೆ ರಾಜನು ಪ್ರಶ್ನಿಸಿದನು ॥೨೮॥

ಮುನೀಶ್ವರರ ಜ್ಞಾನವು ಅಗಾಧವಾಗಿತ್ತು. ಮತ್ತು ನಿರೂಪಣ ಶೈಲಿಯು ರಸಾಳವಾಗಿತ್ತು. ಆದ್ದರಿಂದ ರಾಜನ ಮನವು ತಲ್ಲೀನಗೊಂಡು ಪ್ರಶ್ನೆಗಳ ಮೇಲೆ ಪ್ರಶ್ನೆಯನ್ನು ಕೇಳಲಾರಂಭಿಸಿದನು ॥೨೯॥ ಈತನು ಹೀಗೆಂದನು, ದೇವಾಧಿದೇವನಾದ ಹರಿಯು ಸ್ವಲೀಲೆಯಿಂದ ಅವತಾರಗಳನ್ನು ಹೇಗೆ ಧರಿಸುವನು? ಮತ್ತು ಸ್ವಇಚ್ಛೆಯಿಂದ ಯಾವ ಯಾವ ಕರ್ಮಗಳನ್ನು ಮಾಡುವನು? ಈ ಮಹತ್ತರವಾದ, ಅಗಾಧವಾದದ್ದನ್ನು ನನಗೆ ಹೇಳಿರಿ ॥೩೦॥ ನೀವು ಕದಾಚಿತ್ ಹೀಗೆ ಹೇಳಬಹುದು, ದೇವರಿಗೆ ಜನ್ಮವಿಲ್ಲ ಅಂದಮೇಲೆ ಕರ್ಮವನ್ನು ಏಕೆ ಕೇಳುವೆ? ದೇವನು ಅರೂಪ, ಅನಾಮನಾಗಿರುವನು. ಆತನಿಗೆ ಜನ್ಮ ಕರ್ಮಗಳಿಲ್ಲ ॥೩೧॥ ಆತನು ಅಜನ್ಮನಾಗಿದ್ದರೂ ಜನ್ಮವನ್ನು ಧರಿಸುವನು. ಆತನು ಅಕರ್ಮನು, ಆದರೆ ಕರ್ಮಗಳನ್ನು ಮಾಡುವನು. ಆತನು ವಿದೇಹಿಯಾಗಿರುವನು. ಆದರೆ ದೇಹಧಾರಿಯಾಗಿ ಸಂಸಾರದಲ್ಲಿ ಸ್ವಧರ್ಮವನ್ನು ಪಾಲಿಸುವನು ॥೩೨॥ ಹೀಗಿರಲು ಆತನ ಅವತಾರಗಳ ಸ್ಥಿತಿ, ಯಾವ ಜನ್ಮಗಳು, ವ್ಯಕ್ತಿ ಎಂತಹದ್ದು ಅವತಾರಗಳೆಷ್ಟು, ಮೂರ್ತಿಗಳೆಷ್ಟು, ಇವುಗಳನ್ನು ತಾವು ಕೃಪೆಮಾಡಿ ನನಗೆ ಹೇಳಿರಿ ॥೩೩॥ ಈ ಹಿಂದೆ ಆದದ್ದೆಲ್ಲವನ್ನು ಮುಂದೆ ಆಗುವ ಮತ್ತು ಸಧ್ಯ ಇರುವ ಈ ಎಲ್ಲ ಅವತಾರಗಳನ್ನು ನನಗೆ ಹೇಳಿರಿ ॥೩೪॥ ಈ ಪ್ರಕಾರವಾಗಿ ರಾಜನು ಹರಿಯ ಚರಿತ್ರೆ ಮತ್ತು ಅವತಾರ ಗುಣಗಳ ಪ್ರತಿಪಾದನೆ ಮಾಡಲು ಪ್ರಶ್ನಿಸಿದನು. ಈ ಪ್ರಶ್ನೆಯ ಉತ್ತರವನ್ನು ಜಯಂತಿನಂದನನಾದ ದ್ರುಮಿಲಮುನಿಯು ಹೇಳತೊಡಗಿದನು ॥೩೫॥

ಯಾರ ಉಗುರಿನಲ್ಲಿ ಅನಂತವಾದ ಲೀಲಾ ಶಕ್ತಿಗಳಿರುವುವೋ ಮತ್ತು ಇದಕ್ಕಾಗಿ ಈ ಯಾವ ಅಪರಿಮಿತ ಲೀಲಾಶಕ್ತಿಮಾನನಿಗೆ ಅನಂತನೆಂದು ಕರೆಯುವರೋ, ಆತನ ಸರ್ವ ಗುಣಗಳ ಗಣನೆಯನ್ನು ಯಾರಿಗೆ ಮಾಡಲು ಸಾಧ್ಯ? ॥೩೬॥

ತ್ಯಾ ಅನಂತಾಚೇ ಗುಣಸಮೃದ್ಧೀ । ಗಣೂ ಮ್ಹಣೇ ತೋ ಬಾಲಬುದ್ಧೀ । ಜೇವೀ ಕಾ ಆಕಾಶಾಚೇ ವೃದ್ಧೀ । ಮುಂಗಿಯೇ ತ್ರಿಶುದ್ಧೀ ನ ಕರವೀ ಮಾಪ ।೩೭॥ ಸಾಗರೀಂಚೇ ಜಳ ಸಂಪೂರ್ಣ । ಕೇವೀ ಗಣೂ ಶಕೇ ಲವಣ । ತೇವೀ ಅನಂತಾಚೇ ಅನಂತ ಗುಣ । ಆಕಳೀ ಕವಣ ನಿಜಸತ್ತಾ ।೩೮॥ ಪರ್ಜನ್ಯಾಚಿಯಾ ಧಾರಾ । ಗಣಿತಾ ಯೇತೀಲ ನೃಪವರಾ । ಪೃಥ್ವೀಚಿಯಾ ದೂರ್ವಾಂಕುರಾ । ಸುಖೇ ಮಹಾವೀರಾ ಗಣಿತಾ ಯೇತೀ ।೩೯॥ ವಾರಾ ಅಫಾಟ ಧಾಂವೇ । ತೋಹೀ ಗಣಿತಾತೇ ಪಾವೇ । ನಿಮಿಷೋನ್ಮೇಷಾಂಚೇ ಯಾವೇ । ತ್ಯಾಂಸೀಹೀ ಸಂಭವೇ ಗಣಿತ ರಾಯಾ ।೪೦॥ ಪೃಥ್ವೀಚಿಯಾ ಪರಿಮಾಣಾ । ಕಾಳೇ ಕಾಳೇ ಹೋಯ ಗಣನಾ । ಪರೀ ಭಗವಂತಾಚಿಯಾ ಗುಣಾ । ವೇದಾಂಸಹೀ ಜಾಣಾ ಗಣಿತ ನವ್ಹೇ ।೪೧॥ ಭಗವಂತಾಚೇ ನಾಮ ಏಕ । ಘೇತಾ ವೇದ ಝಾಲೇ ಮೂಕ । ತ್ಯಾಚೇ ಗುಣ ಗಣಿತಾ ಸಕಳಿಕ । ಶೇಷಾಚೇ ಮುಖ ದುಖಂಡ ಝಾಲೇ ।೪೨॥ ತ್ಯಾ ಅನಂತಾಚೇ ಅನಂತ ಗುಣ । ತೇಥ ಗಣೂ ಶಕೇ ಕವಣ । ಕಾಂಹೀ ಏಕ ಸಂಕ್ಷೇಪೇ ಜಾಣ । ಸಾಂಗೇನ ಲಕ್ಷಣ ಅವತಾರಾಂಚೇ ।೪೩॥

ಭೂತೈರ್ಯದಾ ಪಂಚಭಿರಾತ್ಮಸೃಷ್ಟೈಃ ಪುರಂ ವಿರಾಜಂ ವಿರಚಯ್ಯ ತಸ್ಮಿನ್ ।
ಸ್ವಾಂಶೇನ ವಿಷ್ಟಃ ಪುರುಷಾಭಿಧಾನಮವಾಪ ನಾರಾಯಣ ಆದಿದೇವಃ ।೩॥

ಅರ್ಥ:- ಆದಿ ದೇವನಾದ ನಾರಾಯಣನು ತನ್ನಿಂದಲೇ ಉತ್ಪತ್ತಿಯಾದ ಪಂಚ ಮಹಾಭೂತಗಳಿಂದ ತನ್ನ ಜಗದ್ರೂಪವನ್ನು ಸೃಷ್ಟಿಸಿ, ತನ್ನ ಸ್ವಾಂಶ ಭಾಗದಿಂದ ಆ ಜಗದ್ರೂಪದೊಳಗೆ ಪ್ರವೇಶಿಸಿದಾಗ ಪುರುಷನೆಂಬ ನಾಮಧೇಯವನ್ನು ಪಡೆದನು.

ಅವತಾರಾಮಾಜೀ ಪ್ರಥಮತಾ । "ಪುರುಷಾವತಾರಾಂಚಿ" ಕಥಾ । ದ್ರುಮಿಲ ಝಾಲಾ ಸಾಂಗತಾ । ಏಕ ತತ್ತ್ವತಾ ಮಹಾರಾಜಾ ।೪೪॥ ನಾರಾಯಣೇ ಆತ್ಮಶಕ್ತೀ । ಪಂಚಮಹಾಭೂತೇ ಭೂತಾಕೃತಿ । ಸೃಜೂನಿಯಾ ಯಥಾನಿಗುತೀ । ಬ್ರಹ್ಮಾಂಡಾಚೇ ಸ್ಥಿತಿ ನಿರ್ಮಾಣ ಕೇಲೀ ।೪೫॥ "ವಿರಾಜಪುರ" ಬ್ರಹ್ಮಾಂಡಾ ನಾಮ । ತೇಥ ಲೀಲಾ ಪ್ರವೇಶೇ ದೇವೋತ್ತಮ । ಯಾಲಾಗೀ "ಪುರುಷ" ಹೇ ನಾಮ । ಪುರುಷೋತ್ತಮ ಸ್ವಾಂಶೇ ಪಾವೇ ।೪೬॥ ತ್ಯಾಚೇನಿ ಅಂಶಯೋಗೇ ಪ್ರಕೃತಿ । ಝಾಲೀ ಪ್ರಜಾಂತೇ ಪ್ರಸವತೀ । ಯಾಲಾಗೀ "ಪುರುಷ" ನಾಮಸ್ಥಿತಿ । ಜಾಣ ನಿಶ್ಚಿತೀ ಪಾವಲಾ ।೪೭॥ ತೋ ಅಕರ್ತಾತ್ಮ ಯೋಗಯುಕ್ತೀ । ಜಗ ಚೇತವೀ ಚಿಚ್ಛಕ್ತೀ । ಜ್ಯಾಚೇನಿ ಜಗಾ ಜಗತ್ವೇ ಸ್ಫೂರ್ತಿ । ತ್ಯಾಚೇ ಗುಣಕೀರ್ತಿ ದೋ ಶ್ಲೋಕೀ ಸಾಂಗೋ ।೪೮॥

ಯತ್ಕಾಯ ಏಷ ಭುವನತ್ರಯಸನ್ನಿವೇಶೋ ಯಸ್ಯೇಂದ್ರಿಯೈಸ್ತನುಭೃತಾಮುಭಯೇಂದ್ರಿಯಾಣಿ ।
ಜ್ಞಾನಂ ಸ್ವತಃ ಶ್ವಸನತೋ ಬಲಮೋಜ ಈಹಾ ಸತ್ತ್ವಾದಿಭಿಃ ಸ್ಥಿತಿಲಯೋದ್ಭವ ಆದಿಕರ್ತಾ ।೪॥

ಅರ್ಥ:- ಅವನ ಶರೀರದಲ್ಲಿ ಈ ಬ್ರಹ್ಮಾಂಡದ ಮೂರು ಗ್ರಹವ್ಯೂಹಗಳು ವ್ಯವಸ್ಥಿತವಾಗಿ ಅಣಿಗೊಂಡಿವೆ. ಅವನ ದಿವ್ಯೇಂದ್ರಿಯಗಳು ಸಕಲ ದೇಹಧಾರಿ ಜೀವಿಗಳ ಜ್ಞಾನೇಂದ್ರಿಯ ಹಾಗೂ ಕರ್ಮೇಂದ್ರಿಯಗಳನ್ನು ಉತ್ಪತ್ತಿ ಮಾಡುತ್ತವೆ. ಅವನ ಬಲಯುತವಾದ ಉಸಿರಾಟವು ದೇಹ ಶಕ್ತಿ, ಇಂದ್ರಿಯ ಪಟುತ್ವ ಹಾಗೂ ದೇಹಗತ ಆತ್ಮಗಳ ಬದ್ಧ ಚಟುವಟಿಕೆಗಳಿಗೆ ಜನನ ನೀಡುತ್ತವೆ. ಸತ್ವ, ರಜ ಹಾಗೂ ತಮೋಗುಣಗಳೆಂಬ ಮಧ್ಯವರ್ತಿಗಳ ಮೂಲಕ ಅವನು ಪ್ರಧಾನ ಚಾಲಕನು, ಹೀಗೆ ಅವನಿಂದ ಈ ಬ್ರಹ್ಮಾಂಡವು ಸೃಷ್ಟಿಯಾಗಿ, ಪರಿಪಾಲನೆಗೊಂಡು, ಅಳಿಯುತ್ತದೆ.

ನಾನು ಅನಂತನ ಗುಣಗಳ ಗಣನೆಯನ್ನು ಮಾಡುವೆ ಎನ್ನುವವನು ನಿಜವಾಗಿಯೂ ಮಂದಮತಿಯೇ ಸರಿ. ಇರುವೆಗೆ ಆಕಾಶದ ಉದ್ದಗಲದ ಅಳತೆಯನ್ನು ಎಂದೂ ಮಾಡಲು ಸಾಧ್ಯವಿಲ್ಲ ।೩೭॥ ಸಮುದ್ರದ ಸಂಪೂರ್ಣ ನೀರಿನ ಅಳತೆಯನ್ನು ಲವಣಕ್ಕೆ ಮಾಡಲು ಸಾಧ್ಯವಿಲ್ಲ. ಅದರಂತೆ ಅನಂತನ ಅನಂತ ಗುಣಗಳನ್ನು ಯಾರಿಗೂ ಎಣಿಸಲು ಸಾಧ್ಯವಿಲ್ಲ ।೩೮॥ ಮಳೆಯ ಧಾರೆಯನ್ನು ಎಣಿಸಬಹುದು, ಪೃಥ್ವಿಯ ಮೇಲಿನ ಕರಿಕೆಗಳನ್ನು ಗುಣಿಸಲುಬಹುದು ।೩೯॥ ಗಾಳಿಯು ತೀವ್ರವಾಗಿ ಧಾವಿಸುವುದು, ಆದರೆ ಅದರ ಗತಿಯನ್ನು ಗಣಿತಮಾಡಿ ಹೇಳಬಹುದು. ಕಣ್ಣುಗಳ ರೆಪ್ಪೆಹೊಡೆಯುವ ಪ್ರಮಾಣವನ್ನು ನಿಶ್ಚಯಿಸಿ ಹೇಳಬಹುದು ।೪೦॥ ಪೃಥ್ವಿಯ ಪರಮಾಣುಗಳನ್ನು ಸಹ ಕಾಲಾಂತರದಿಂದ ಗಣನೆಯನ್ನು ಮಾಡಬಹುದು. ಆದರೆ ಭಗವಂತನ ಗುಣಗಳ ಗಣಿತವು ವೇದಗಳಿಗೂ ಸಾಧ್ಯವಿಲ್ಲ. ಲಕ್ಷದಲ್ಲಿಡು ।೪೧॥ ಭಗವಂತನ ಒಂದೇ ನಾಮವನ್ನು ತೆಗೆದುಕೊಳ್ಳುತ್ತಲೇ ವೇದವು ಮೂಕವಾಯಿತು. ಈತನ ಎಲ್ಲ ಗುಣಗಳ ಗಣನೆ ಮಾಡಲು ಹೋಗಿ ಶೇಷನ ನಾಲಿಗೆಗಳು ಸೀಳಿಹೋದವು ।೪೨॥ ಇಂತಹ ಅನಂತನ ಅನಂತಗುಣಗಳನ್ನು ಇಲ್ಲಿ ಅಳೆಯುವವರು ಯಾರಿದ್ದಾರೆ? ಹೀಗಿದ್ದರೂ ಆತನ ಅವತಾರಗಳ ಕೆಲವು ಲಕ್ಷಣಗಳನ್ನು ಮಾತ್ರ ಸಂಕ್ಷಿಪ್ತವಾಗಿ ಹೇಳುವೆನು ।೪೩॥

ಪ್ರಥಮವಾಗಿ ದ್ರುಮಿಲಮುನಿಯು ಅವತಾರಗಳಲ್ಲಿನ ಪುರುಷ ಅವತಾರದ ಕಥೆಯನ್ನು ಹೇಳಲಾರಂಭಿಸಿದನು. ಹೇ ಮಹಾರಾಜನೇ, ಲಕ್ಷ ಕೊಟ್ಟು ಕೇಳೆಂದನು ।೪೪॥ ಶ್ರೀನಾರಾಯಣನು ಆತ್ಮಶಕ್ತಿಯ ಯೋಗದಿಂದ ಭೂತಾಕೃತಿಯಿಂದ ಪಂಚಮಹಾ ಭೂತಗಳನ್ನು ಯಥಾರೀತಿಯಲ್ಲಿ ಉತ್ಪನ್ನಗೊಳಿಸಿ ಬ್ರಹ್ಮಾಂಡದ ಸ್ಥಿತಿಯನ್ನು ನಿರ್ಮಾಣಗೊಳಿಸಿದನು ।೪೫॥ ಬ್ರಹ್ಮಾಂಡಕ್ಕೆ "ವಿರಾಜಪುರ" ಎಂದು ನಾಮವಿದೆ. ಅದರಲ್ಲಿ ದೇವೋತ್ತಮನು ಲೀಲೆಯಿಂದ ಪ್ರವೇಶಿಸಿದನು. ಆದ್ದರಿಂದ ಈ ಪುರುಷೋತ್ತಮನು ತನ್ನ ಅಂಶದಿಂದಲೇ ''ಪುರುಷ''ನೆಂಬ ನಾಮವನ್ನು ಪಡೆದನು ।೪೬॥ ಈತನದೇ ಅಂಶದಿಂದ ಪ್ರಕೃತಿಯು ಪ್ರಜೆಗಳ ಉತ್ಪನ್ನ ಮಾಡಿತು. ಆದ್ದರಿಂದಲೇ ಈತನಿಗೆ "ಪುರುಷ" ಎಂಬ ಸೂಕ್ತ ಹೆಸರು ದೊರೆಯಿತು ।೪೭॥ ಈತನು ಅಕರ್ತಾತ್ಮ ಯೋಗಯುಕ್ತಿಯಿಂದ ಜಗತ್ತಿಗೆ ಚಿಚ್ಛಕ್ತಿಯಿಂದ ಚೇತನಗೊಳಿಸುವನು. ಈತನಿಂದಲೇ ಜಗತ್ತಿಗೆ ಜಗತ್ವದ ಸ್ಫೂರ್ತಿಯಾಗುವುದು. ಈತನ ಗುಣಕೀರ್ತಿಯನ್ನು ಈಗ ಎರಡು ಶ್ಲೋಕಗಳಲ್ಲಿ ಹೇಳುವೆನು ।೪೮॥

ತ್ರೈಲೋಕ್ಯ ವಸೇ ಜೇ ಕಾಂಹೀ । ತೇಚಿ ಶರೀರ ತ್ಯಾಚೇ ಪಾಹೀ । ಜ್ಯಾಚೇನಿ ಯೋಗೇ ದೇಹೀ । ಠಾಯೀಂಚ್ಯಾ ಠಾಯೀ ವರ್ತತೀ ।।೪೯।। ಬ್ರಹ್ಮಾದಿಕ ಜೇ ತನುಧಾರೀ । ತ್ಯಾಂಚ್ಯಾ ಜ್ಞಾನಕರ್ಮೇಂದ್ರಿಯಾಂಚೀ ಥೋರೀ । ಜ್ಯಾಚೇನಿ ಇಂದ್ರಿಯೇಕರೀ । ನಿಜವ್ಯಾಪಾರೀ ವರ್ತತೀ ।।೫೦।। ಜೋ ಜಗಾಚೇ ನಯನಾಂಚಾ ನಯನ । ಜೋ ಜಗಚ್ಯಾ ಘ್ರಾಣಾಂಚೇ ಘ್ರಾಣ । ಜೋ ಜಗಾಚ್ಯಾ ಶ್ರವಣಾಂಚೇ ಶ್ರವಣ । ರಸನೇಚಿ ಜಾಣ ರಸನಾ ಜೋ ಕಾ ।।೫೧।। ಜೋ ಜಗಾಚ್ಯಾ ಹಾತಾಂಚೇ ಹಾತ । ಜ್ಯಾಚೇ ಪಾಯ ಜಗಚ್ಯಾ ಪಾಯಾಂತ । ಜೋ ವಾಚೇಚೀ ವಾಚಾ ನಿಶ್ಚಿತ । ಏವಂ ಉಭಯ ಇಂದ್ರಿಯಾ ಆಂತ ಇಂದ್ರಿಯೇ ಜ್ಯಾಚೀ ।।೫೨।। ಜೇವಾಚ್ಯಾ ಠಾಯೀ ಜೇ ಕಾ ಜ್ಞಾನ । ತೇಹೀ ತ್ಯಾಚೇನಿ ಜ್ಞಾನೇ ಜಾಣ । ತ್ಯಾಸೀ ಜ್ಞಾನದಾತಾ ನಾಹೀ ಆನ । ಸ್ವಯೇ ಜ್ಞಾನಘನ ಸ್ವಭಾವ ತಾಂಚಿ ।।೫೩।। ಜ್ಯಾಚೇನಿ ಪ್ರಾಣೇ ಜಾಣ । ಜಗಾಚಾ ಚಳೇ ಪ್ರಾಣ । ಬಳ ತೇಜ ಕ್ರಿಯಾಚರಣ । ಜಗಾಸೀ ಸಂಪೂರ್ಣ ಜ್ಯಾಚೇನಿ ।।೫೪।। ರಜತಮಸತ್ತ್ವಾದಿಗುಣಯುಕ್ತ । ಉತ್ಪತ್ತಿಸ್ಥಿತಿಪ್ರಳಯಾಂತ । ಮೂಳೀ ಆದಿಕರ್ತಾ ಭಗವಂತ । ಜಾಣ ತೋ ನಿಶ್ಚಿತ "ಪುರುಷಾವತಾರ" ।।೫೫।। ಸತ್ತ್ವಾದಿ ತ್ರಿಗುಣಾವಸ್ಥಾ । ಉತ್ಪತ್ತಿಸ್ಥಿತಿಲಯಕರ್ತಾ । ತೇಹೀ ಗುಣಾವತಾರಕಥಾ । ಐಕ ನೃಪನಾಥಾ ಸಾಂಗೇನ ।।೫೬।।

ಆದಾವಭೂಚ್ಛತಧೃತೀ ರಜಸಾಸ್ಯ ಸರ್ಗೇ ವಿಷ್ಣುಃ ಸ್ಥಿತೌ ಕ್ರತುಪತಿರ್ದ್ವಿಜಧರ್ಮಸೇತುಃ।
ರುದ್ರೋಽಪಯ್ಯಾಯ ತಮಸಾ ಪುರುಷಃ ಸ ಆದ್ಯಃ ಇತ್ಯುದ್ಭವಸ್ಥಿತಿಲಯಾಃ ಸತತಂ ಪ್ರಜಾಸು ।೫।।

ಅರ್ಥ: ಪ್ರಾರಂಭದಲ್ಲಿ ಜಗತ್ತಿನ ಉತ್ಪತ್ತಿಗಾಗಿ ರಜೋಗುಣದ ಅಂಶದಿಂದ ಬ್ರಹ್ಮನು ನಿರ್ಮಾಣನಾದನು. ತದನಂತರ ಆದಿಪುರುಷನು ಈ ವಿಶ್ವದ ಸ್ಥಿತಿಗಾಗಿ ತನ್ನ ಸತ್ತ್ವಾಂಶದಿಂದ ಧರ್ಮ ಮತ್ತು ಬ್ರಾಹ್ಮಣರ ರಕ್ಷಣೆಗಾಗಿ ವಿಷ್ಣು ಆದನು. ಹಾಗೆಯೇ ತಮೋಗುಣದ ಅಂಶದಿಂದ ಜಗತ್ತಿನ ಸಂಹಾರಕ್ಕಾಗಿ ರುದ್ರನಾದನು. ಈ ಪ್ರಕಾರ ನಿರಂತರವಾಗಿ ಪರಿವರ್ತನಶೀಲ ಪ್ರಜೆಗಳ ಉತ್ಪತ್ತಿ, ಸ್ಥಿತಿ ಹಾಗೂ ಸಂಹಾರ ಆಗುತ್ತಿರುವುವು.

ತೋಚಿ ಆದಿಕಲ್ಪೀ ಉತ್ಪತ್ತಿ । ರಜೋಗುಣೇ ರಾಜಸಾ ಶಕ್ತೀ । ಸ್ವಯೇ ಝಾಲಾ ಶತಧೃತೀ। "ಬ್ರಹ್ಮಾ"ಮ್ಹಣತೀ ಜಯಾತೇ ।।೫೭।। ಏವಂ ಬ್ರಹ್ಮರೂಪೇ ಉತ್ಪತ್ತಿ । ಸೃಜಿತಾ ಝಾಲಾ ರಾಜಸಾ ಶಕ್ತೀ । ತೇಥೇ ಪ್ರತಿಪಾಳಾವಯಾ ಸ್ವಧರ್ಮಸ್ಥಿತಿ । ಸತ್ತ್ವಗುಣೇ ನಿಶ್ಚಿತೀ "ಶ್ರೀವಿಷ್ಣು" ಜಾಹಲಾ ।।೫೮।। ತೋ ದ್ವಿಜಧರ್ಮಪ್ರತಿಪಾಳಣು । ಯಜ್ಞಭೋಕ್ತಾ ಶ್ರೀವಿಷ್ಣು । ದೇಖತಾ ಧರ್ಮಾಚಾ ಅವಗುಣು । ಅವತರೇ ನಾರಾಯಣು ನಾನಾವತಾರೀ ।।೫೯।। ತೋಚಿ ಯೇ ಸೃಷ್ಟೀಚೇ ಪ್ರಾಂತೀ । ತಮೋಗುಣೇ ತಾಮಸಾ ಶಕ್ತೀ । ಸ್ವಯೇ ಜಾಹಲಾ "ರುದ್ರಮೂರ್ತಿ" । ಸಕಳ ಕಲ್ಪಾಂತೀ ನಿರ್ದಾಳಿತು ।।೬೦।।

ತ್ರೈಲೋಕ್ಯಗಳೆಂದು ಇರುವವೆಲ್ಲವೂ ಈತನ ಶರೀರವಾಗಿದೆ. ಮತ್ತು ಈತನ ಯೋಗದಿಂದಲೇ ಸರ್ವ ದೇಹಗಳು ತಮ್ಮ ತಮ್ಮಲ್ಲಿ ವ್ಯವಹರಿಸುವುವು ।೪೯।। ಈತನ ಇಂದ್ರಿಯ ವಿಕಾರದಿಂದಲೇ ಬ್ರಹ್ಮಾದಿ ಜೀವಿಗಳ ಜ್ಞಾನಕರ್ಮೇಂದ್ರಿಯಗಳು ತಮ್ಮ ತಮ್ಮ ಕರ್ಮಗಳನ್ನು ಮಾಡುವುವು ।೫೦।। ಈತನು ಜಗತ್ತಿನ ನೇತ್ರಗಳ ನೇತ್ರನು, ಘ್ರಾಣಗಳ ಘ್ರಾಣನು, ಕರ್ಣಗಳ ಕರ್ಣನು, ನಾಲಿಗೆಗಳ ನಾಲಿಗೆ ಯಾಗಿರುವನು ।೫೧।। ಈತನೇ ಜಗತ್ತಿನ ಕೈಗಳ ಕೈ, ಕಾಲುಗಳ ಕಾಲು, ವಾಣಿಗಳ ವಾಣಿ, ಈ ಪ್ರಕಾರವಾಗಿ ಉಭಯ ಇಂದ್ರಿಯಗಳಲ್ಲಿ ಆತನದೇ ಇಂದ್ರಿಯಗಳಿರುವುವು ।೫೨।। ಜೀವಿಗಳಲ್ಲಿರುವ ಯಾವ ಜ್ಞಾನವು, ಅದು ಸಹ ಆತನ ಜ್ಞಾನವೇ ಆಗಿರುವುದು. ಆತನಿಗೆ ಜ್ಞಾನವನ್ನು ಕೊಡುವವರು ಬೇರೆ ಯಾರೂ ಇಲ್ಲ. ಆತನು ಸ್ವರೂಪವಾಗಿ ಜ್ಞಾನಘನನಾಗಿರುವನು ।೫೩।। ಆತನ ಪ್ರಾಣದಿಂದಲೇ ಜಗತ್ತಿನ ಪ್ರಾಣವು ಚಲಿಸುವುದು.ಜಗತ್ತಿಗೆ ಬಲ, ತೇಜ ಮತ್ತು ಕ್ರಿಯಾಶಕ್ತಿಗಳು ಆತನ ಯೋಗದಿಂದಲೇ ಪ್ರಾಪ್ತವಾಗುವುವು. ಆತನಿಂದಲೇ ಜಗತ್ತಿನ ಸರ್ವ ವ್ಯವಹಾರಗಳು ನಡೆಯುವುವು ।೫೪।। ಸಾತ್ವಿಕ, ರಾಜಸ, ತಾಮಸ ಗುಣಗಳಿಂದ ಯುಕ್ತನಾಗಿ ಉತ್ಪತ್ತಿ, ಸ್ಥಿತಿ, ಪ್ರಳಯಗಳನ್ನು ಮಾಡುವ ಮೂಲದ ಆದಿಕರ್ತನಾದ ಭಗವಂತನು ಆತನೇ ನಿಜವಾಗಿಯೂ "ಪುರಷಾವತಾರ" ನಿರುವನೆಂದು ನೀನು ತಿಳಿ ।೫೫।। ಹೇ ನೃಪನಾಥನೇ, ಸತ್ವಾದಿ ತ್ರಿಗುಣ ಅವಸ್ಥೆಗಳಿಂದ ಆತನೇ ಉತ್ಪತ್ತಿ, ಸ್ಥಿತಿ, ಲಯಕರ್ತನಾಗುವನು. ಆತನ ಗುಣಾವತಾರಗಳ ಕಥೆಯನ್ನು ನಿನಗೆ ಹೇಳುವೆ, ಕೇಳು ।೫೬।।

ಪ್ರಥಮ ಕಲ್ಪದಲ್ಲಿ ರಜೋಗುಣದಿಂದ ರಾಜಸೀ ಶಕ್ತಿಯನ್ನು ಧಾರಣೆ ಮಾಡಿ ಸೃಷ್ಟಿಗಾಗಿ ಆತನು ಸ್ವತಃ ಶತದೃತೀಯಾದನು. ಈತನಿಗೆ ಬ್ರಹ್ಮಾ ಎನ್ನುವರು ।೫೭।। ಈತನು ತನ್ನ ರಾಜಸಶಕ್ತಿಯಿಂದ ಸೃಷ್ಟಿಕರ್ತನಾದನು. ಆ ಸೃಷ್ಟಿಯ ಸ್ವಧರ್ಮಸ್ಥಿತಿಗಳ ಪರಿಪಾಲನೆ ಮಾಡುವುದಕ್ಕಾಗಿ ಆತನು ಶ್ರೀ ವಿಷ್ಣು ಆದನು ।೫೮।। ಆದರೆ, ಆತನು ದ್ವಿಜಧರ್ಮದ ಪಾಲಕನು ಮತ್ತು ಯಜ್ಞಬೋಕ್ತಾನಾದ ಶ್ರೀವಿಷ್ಣೂ ಧರ್ಮದ ಗ್ಲಾನಿಯಾದದ್ದು ಕಾಣುತ್ತಲೇ ಅನೇಕ ಅವತಾರಗಳನ್ನು ಧರಿಸಿ, ಭೂಲೋಕಕ್ಕೆ ಬಂದು, ಧರ್ಮದ ಸ್ಥಾಪನೆಯನ್ನು ಮಾಡುತ್ತಿರುವನು ।೫೯।। ಸೃಷ್ಟಿಯ ಸ್ಥಿತಿಕಾಲವು ಮುಗಿಯಲು ತಾಮಸಶಕ್ತಿಯಿಂದ ಸ್ವತಃ ರುದ್ರಮೂರ್ತಿಯಾಗಿ ಕಲ್ಪಾಂತದಲ್ಲಿ ಸಂಹಾರ ಮಾಡುವನು ।೬೦।।

ಜೋ ಶೇತಾಚೀ ಪೇರಣೀ ಕರೀ । ತೋಚಿ ರಾಖೇ ದೇಖೇ ಸೋಕರೀ । ತೋಚಿ ವಾಳಲಿಯಾವರೀ । ಸಂವಗಣೀ ಕರೀ ಸರ್ವಾಚೀ ॥೬೧॥ ತೇವೀ ಉತ್ಪತ್ತಿಕಾಳೀ ತೋಚಿ ಬ್ರಹ್ಮಾ । ಸ್ಥಿತಿಕಾಳೀ ತೋಚಿ ವಿಷ್ಣುನಾಮಾ । ಪ್ರಳಯಕಾಳೀಹೀ ರುದ್ರಪ್ರಮಾ । ಯೇ ಪುರುಷೋತ್ತಮಾ ತೇಚಿ ನಾಮೇ ॥೬೨॥ ಯಾಲಾಗೀ ತೋ ಆದಿಕರ್ತಾ । ಶ್ರುತಿಶಾಸ್ತ್ರೀ ದೃಢ ವಾರ್ತಾ । ದಕ್ಷ ಕಶ್ಯಪಾದಿಕಾ ಕರ್ತವ್ಯತಾ । ತ್ಯಾಂಸೀ ಸಮರ್ಥತಾ ಯಾಚೇನಿ ॥೬೩॥ ಯಾಪರೀ ವಿಚಾರಿತಾ । ಹಾಚಿ ಏಕ ಸಕಳ ಕರ್ತಾ । ಯಾವಾಂಚೂನ ಕರ್ತವ್ಯತಾ । ಅಣುಮಾತ್ರತಾ ಸರ್ವ್ಥೇ ಆನಾ ॥೬೪॥ ಜೋ ಸೃಷ್ಟೀಪೂರ್ವೀ ಸ್ವಯಂಭ ಅಸೇ । ಜೇಣೇ ಉತ್ಪತ್ತಿಸ್ಥಿತಿಪ್ರಳಯೋ ಭಾಸೇ । ತೋಚಿ ಆದಿಕರ್ತಾ ಅನಾಯಾಸೇ । ತೋಚಿ ನಿಜಾಂಶೇ ಪುರುಷಾವತಾರೂ ॥೬೫॥ ಏಕ ರಾಯಾ ಅತಿವಿಚಿತ್ರ । ಜೇ ಪರಿಸತಾ ಪುಣ್ಯ ಪವಿತ್ರ । ತೋ ನಾರಾಯಣಾಚಾ ಅವತಾರ । ಜ್ಯಾಚೇ ಚರಿತ್ರ ಅಲೋಕಿಕ ॥೬೬॥

ಧರ್ಮಸ್ಯ ದಕ್ಷದುಹಿತರ್ಯಜನಿಷ್ಟ ಮೂರ್ತ್ಯಾಂ ನಾರಾಯಣೋ ನರ ಋಷಿಪ್ರವರಃ ಪ್ರಶಾಂತಃ ।
ನೈಷ್ಕರ್ಮ್ಯಲಕ್ಷಣಮುವಾಚ ಚಚಾರ ಕರ್ಮ ಯೋಽದ್ಯಾಪಿ ಚಾಸ್ತ ಋಷಿವರ್ಯನಿಷೇವಿತಾಂಘ್ರಿಃ ॥೬॥

ಅರ್ಥ: ದಕ್ಷ ಪ್ರಜಾಪತಿಯ ಒಂದು ಕನ್ಯೆಯ ಹೆಸರು "ಮೂರ್ತೀ" ಎಂದಿತ್ತು. ಈಕೆಯು ಧರ್ಮನ ಪತ್ನಿಯಾಗಿದ್ದಳು. ಈಕೆಯ ಹೊಟ್ಟೆಯಲ್ಲಿ ಭಗವಂತನು ಋಷಿಶ್ರೇಷ್ಠ ಶಾಂತಾತ್ಮಾನರ ಮತ್ತು ನಾರಾಯಣನ ರೂಪದಿಂದ ಅವತರಿಸಿದನು. ಈತನು ಆತ್ಮತತ್ವದ ಸಾಕ್ಷಾತ್ಕಾರ ಮಾಡಿಕೊಡುವ ಭಗವದ್ಸಾಧನೆರೂಪ ಕರ್ಮಗಳ ಉಪದೇಶವನ್ನು ಮಾಡಿದನು. ಯಾವುದು ನಿಜವಾಗಿ ಕರ್ಮಬಂಧನದಿಂದ ಬಿಡಿಸುವ ಮತ್ತು ನೈಷ್ಕರ್ಮ್ಯಸ್ಥಿತಿಯನ್ನು ಪ್ರಾಪ್ತಮಾಡಿಕೊಡುವುದನ್ನು ಈತನು ಸ್ವತಃ ಆ ಕರ್ಮಗಳ ಅನುಷ್ಠಾನವನ್ನು ಮಾಡಿದನು. ಮಹಾ ಮಹಾ ಋಷಿಮುನಿಗಳು ಇವರ ಚರಣ ಕಮಲಗಳ ಸೇವೆಯನ್ನು ಮಾಡುವರು. ನಾರಾಯಣನು ಇಂದಿಗೂ ಬದ್ರಿಕಾಶ್ರಮದಲ್ಲಿ ಆ ಕರ್ಮಗಳನ್ನು ಆಚರಿಸುತ್ತ ವಿರಾಜಮಾನನಾಗಿರುವನು.

ಜೋ ಅಜನ್ಮಾ ನಿತ್ಯ ತ್ರಿಭುವನೀ । ಜೋ ನ ಜನ್ಮೋನಿ ಜನ್ಮಲಾ ಯೋನೀ । ತೇಣೇ ಧರ್ಮಾಚೀ ಧರ್ಮಪತ್ನೀ । ಕೇಲೀ ಜನನೀ ದಕ್ಷಕನ್ಯಾ "ಮೂರ್ತೀ" ॥೬೭॥ ತೇ ಮೂರ್ತಿಮಾತೇಚ್ಯಾ ಉದರೀ । ನರ-ನಾರಾಯಣ ಅವತಾರೀ । ಏಕಚಿ ದೋರೂಪೇಕರೀ । ಧರ್ಮಾಚ್ಯಾ ಘರೀ ಅವತರಲೇ ॥೬೮॥ ತೇಣೇ ನಾರದಾದಿಕಾಂಸೀ ಜಾಣ । ನಿರೂಪಿಲೇ ನೈಷ್ಕರ್ಮ್ಯಲಕ್ಷಣ । ಸ್ವಯೇ ಆಚರಲಾ ಆಪಣ । ತೇ ಕಥನ ಏಕ ರಾಯಾ ॥೬೯॥ ನಾರಾಯಣ ಮ್ಹಣಸೀ ಕೋಣೇ ದೇಶೀ । ತೋ ಬದರಿಕಾಶ್ರಮೀ ಆಶ್ರಮವಾಸೀ । ನಾರದ ಸನಕಾದಿಕ ಋಷಿ । ಅದ್ಯಾಪಿ ತ್ಯಾಪಾಸೀ ಸೇವೇಸೀ ಅಸತೀ ॥೭೦॥ ತ್ಯಾಸೀ ಸ್ವಸ್ವರೂಪಾಚೇ ಲಕ್ಷ್ಯ । ಸಹಜೇ ಅಸೇ ಪ್ರತ್ಯಕ್ಷ । ತೇ ಸ್ವರೂಪನಿಷ್ಠೇಚಾ ಪಕ್ಷ । ಅಲಕ್ಷ್ಯಾಚೇ ಲಕ್ಷ ಪ್ರಬೋಧೀ ಸ್ವಯೇ ॥೭೧॥ ತಯಾ ಸ್ವರೂಪಾಚಾ ನಿಜಬೋಧ । ಸ್ವಯೇ ಪಾವವಯಾ ವಿಶದ । ಅದ್ಯಾಪವರೀ ಋಷಿವೃಂದ । ನಿತ್ಯ ಸಂವಾದ ಕರಿತಾತಿ ತ್ಯಾಸೀ ॥೭೨॥

ಯಾವ ಒಕ್ಕಲಿಗನು ಹೊಲವನ್ನು ಹದಮಾಡಿ ಬಿತ್ತುವನು, ಆತನೇ ಅದರ ರಕ್ಷಣೆಯನ್ನು ಮಾಡುವನು. ಕೊನೆಯಲ್ಲಿ ಹೊಲದ ಬೆಳೆಯು ಒಣಗಲು ಎಲ್ಲವನ್ನೂ ಆತನೇ ಕೊಯ್ಯುವನು ॥೬೧॥ ಇದೇ ನ್ಯಾಯದಂತೆ ಉತ್ಪತ್ತಿಕಾಲದಲ್ಲಿ ಆತನೇ ಬ್ರಹ್ಮಾ, ಸ್ಥಿತಿಕಾಲದಲ್ಲಿ ಆತನೇ ವಿಷ್ಣು ಆಗುವನು ಮತ್ತು ಪ್ರಳಯಕಾಲದಲ್ಲಿ ಪುರುಷೋತ್ತಮನಾದ ಆತನೇ ರುದ್ರನಾಗುವನು ॥೬೨॥ ಆದ್ದರಿಂದಲೇ ವೇದಶಾಸ್ತ್ರಗಳಲ್ಲಿ ಆತನಿಗೆ ಆದಿಕರ್ತಾ ಎಂದು ಹೇಳಿದೆ. ದಕ್ಷ, ಕಶ್ಯಪ ಇತ್ಯಾದಿಕರಿಗೆ ಕರ್ತವ್ಯಕ್ಷಮತಾ ಪ್ರಾಪ್ತವಾದದ್ದು ಆತನ ಸಾಮರ್ಥ್ಯದಿಂದಲೇ ॥೬೩॥ ಈ ಪ್ರಕಾರವಾಗಿ ವಿಚಾರ ಮಾಡಲು ಈತನೊಬ್ಬನೇ ಸಕಲಕರ್ತನಾಗಿರುವನು. ಈತನ ಹೊರತಾಗಿ ಇತರ ಯಾರಿಗೂ ಕರ್ತವ್ಯತೆಯು ಸಾಧ್ಯವಿಲ್ಲ ॥೬೪॥ ಯಾರು ಸೃಷ್ಟಿಯ ಪೂರ್ವದಲ್ಲಿ ಸ್ವಯಂಭೂನಾಗಿರುವನೋ, ಯಾರಿಂದ ಉತ್ಪತ್ತಿ, ಸ್ಥಿತಿ ಮತ್ತು ಲಯಗಳು ಭಾಸವಾಗುವುವೋ ಆತನೇ ಆದಿಕರ್ತನಾಗಿದ್ದು ನಿಜಾಂಶದಿಂದ ಆತನೇ ಪುರುಷಾವತಾರನಾಗಿರುವನು ॥೬೫॥ ಹೇ ರಾಜನೇ, ಆತನೇ "ನಾರಾಯಣ" ನಾಮದಿಂದ ಅವತರಿಸಿದನು. ಈತನ ಚರಿತ್ರೆಯು ಅತ್ಯಂತ ಅದ್ಭುತವಾಗಿ ಅಲೌಕಿಕವಾಗಿರುವುದು. ಹಾಗೆಯೇ ಅತ್ಯಂತ ಪವಿತ್ರ ಮತ್ತು ಪುಣ್ಯಕಾರಕವಾಗಿರುವುದು ॥೬೬॥

ನಿತ್ಯ ಅಜನ್ಮನಾಗಿರುವುದರಿಂದ ಈ ತ್ರಿಭುವನದಲ್ಲಿ ವಸ್ತುತಃ ಜನ್ಮಿಸದೇ ದೇಹಭಾವ ಇರುವವರಂತೆ ತೋರುವ ಭಗವಂತನು ಧರ್ಮನ ಧರ್ಮಪತ್ನಿ ದಕ್ಷಕನ್ಯಾ ಮೂರ್ತಿ ಎಂಬುವಾಕೆಯನ್ನು ತನ್ನ ಜನನೀ ಮಾಡಿಕೊಂಡನು ॥೬೭॥ ಈ ಯಾವ ಮೂರ್ತಿಮಾತೆಯ ಉದರದಲ್ಲಿ ನರನಾರಾಯಣರ ಅವತಾರವಾಯಿತು. ಮತ್ತು ಒಂದೇ ಎರಡು ರೂಪಗಳನ್ನು ಧರಿಸಿ ಧರ್ಮನ ಮನೆಯಲ್ಲಿ ಅವತರಿಸಿದರು ॥೬೮॥ ಹೇ ರಾಜನೇ, ಈ ನಾರಾಯಣನು ನಾರದಾದಿಕರಿಗೆ ನೈಷ್ಕರ್ಮ್ಯ ಲಕ್ಷಣಗಳ ನಿರೂಪಣೆಯನ್ನು ಮಾಡಿ ತಾನು ಸ್ವತಃ ಅದನ್ನು ಆಚರಿಸಿ ತೋರಿಸಿದನು. ಈ ಕಥೆಯನ್ನು ಕೇಳು ॥೬೯॥ ಈ ನಾರಾಯಣನು ಯಾವ ದೇಶದವನೆಂದು ನೀನು ವಿಚಾರಿಸಬಹುದು, ಹಾಗಾದರೆ ಈತನು ಬದ್ರಿಕಾಶ್ರಮದಲ್ಲಿರುವವನೆಂದು ತಿಳಿ. ನಾರದ, ಸನಕಾದಿಕರು ಈಗಲೂ ಆತನ ಸೇವೆಯಲ್ಲಿ ನಿರತರಾಗಿರುವರು ॥೭೦॥ ಈತನಿಗೆ ಸ್ವರೂಪದ ಪ್ರತ್ಯಕ್ಷವಾದ ಲಕ್ಷವು ಅಥವಾ ಭಾನವು ಸಹಜವಾಗಿ ಇರುವುದು. ಆದ್ದರಿಂದ ಆ ಸ್ವರೂಪನಿಷ್ಠೆಯ ಪಕ್ಷ ಅಂದರೆ ಅಲಕ್ಷದ ಲಕ್ಷವನ್ನು ಈತನು ಸಾಧಕರಿಗೆ ಉಪದೇಶಿಸುತ್ತಿರುವನು ॥೭೧॥ ಈ ಸ್ವರೂಪದ ಬೋಧವು ತಮಗೂ ಸ್ಪಷ್ಟವಾಗಿ ಆಗಬೇಕೆಂದು ಋಷಿಗಳ ಸಮುದಾಯವು ಈಗಲೂ ಆತನಲ್ಲಿ ಸಂವಾದವನ್ನು ಮಾಡುತ್ತಿರುವುದು ॥೭೨॥

ಜೇ ಸ್ವರೂಪ ಲಕ್ಷೇನಾ ಜನೀ । ತೇ ವಿಶದ ಕರೂನಿ ದೇ ವಚನೀ । ತೇಚಿ ಅನುಗ್ರಹೇಕರೂನೀ । ಅನುಭವಾ ಆಣೀ ತತ್ಕಾಳ ॥೭೩॥ ಜ್ಞಾತೇ ಬಹುಸಾಲ ಋಷೀಶ್ವರ । ತ್ಯಾಮಾಜೀ ನಾರಾಯಣಅವತಾರ । ತೇಥ ವರ್ತಲೇ ಜೇ ಚರಿತ್ರ । ಅತಿವಿಚಿತ್ರ ಐಕ ರಾಯಾ ॥೭೪॥

ಇಂದ್ರೋ ವಿಶಂಕ್ಯ ಮಮ ಧಾಮ ಜಿಘೃಕ್ಷತೀತಿ ಕಾಮಂ ನ್ಯಯುಕ್ತ ಸಗಣಂ ಸ ಬದರ್ಯುಪಾಖ್ಯಮ್ ।
ಗತ್ವಾಪ್ಸರೋಗಣವಸಂತಸುಮಂದವಾತೈಃ ಸ್ತ್ರೀ ಪ್ರೇಕ್ಷಣೇಷು ಭಿರವಿಧ್ಯದತನ್ಮ ಹಿಜ್ಞಃ ॥೭॥

ಅರ್ಥ: ಉಗ್ರ ತಪಶ್ಚರ್ಯೆಗಳನ್ನು ಆಚರಿಸುತ್ತಿದ್ದ ನಾರಾಯಣನು ಬಲಾಢ್ಯನಾಗಿ ಸ್ವರ್ಗಾಧಿಪತ್ಯವನ್ನು ಆಕ್ರಮಿಸಿಯಾನೆಂದು ಇಂದ್ರನು ಭಯಗ್ರಸ್ತನಾದನು. ತಪೋಭಂಗಕ್ಕಾಗಿ ಇಂದ್ರನು, ಮನ್ಮಥ ಹಾಗೂ ಅವನ ಸಹಚರರನ್ನು ಬದರಿಕಾಶ್ರಮದಲ್ಲಿದ್ದ ಭಗವಂತನಲ್ಲಿಗೆ ಕಳುಹಿಸಿದನು. ವಸಂತ ಕಾಲದ ಮಲಯ ಮಾರುತವು ಅತ್ಯಂತ ಕಾಮೋತ್ತೇಜಕ ಪರಿಸರವನ್ನು ನಿರ್ಮಿಸಿತ್ತು. ಸುಂದರಿಯರಾದ ನೀರೆಯರ ಸೆಳೆಯುವ ಕುಡಿಗಣ್ಣ ನೋಟದ ರೂಪದಲ್ಲಿ ಸ್ವಯಂ ಮನ್ಮಥನೇ ತನ್ನ ಬಾಣಗಳನ್ನು ಪ್ರಯೋಗಿಸಿದನು.

ಐಸಾ ನಾರಾಯಣಾಚಾ ಪ್ರತಾಪ । ದೇಖೋನಿ ನಿಷ್ಠಾ ದೃಢ ತಪ । ತೇಣೇ ಇಂದ್ರಾಸೀ ಆಲಾ ಕಂಪ । ಮ್ಹಣೇ ಸ್ವರ್ಗ ನಿಷ್ಪಾಪ ಘೇಈಲ ಮಾಝಾ ॥೭೫॥ ತ್ಯಾಚೇ ತಪ ದೇಖೋನಿ ಪರಮ । ಮ್ಹಣೇ ಗೇಲೇ ಗೇಲೇ ಸ್ವರ್ಗಧಾಮ । ಇಂದ್ರೇ ಕೋಪೇ ಪ್ರೇರಿಲಾ ಕಾಮ । ಅಪ್ಸರಾಸಂಭ್ರಮಸವೇತ ॥೭೬॥ ಕಾಮಸಮವೇತ ಅಪ್ಸರಾ । ಸವೇ ವಸಂತಹೀ ದುಸರಾ । ಕ್ರೋಧು ಅವಘಿಯಾ ಪುಢಾರಾ । ಜೋ ತಾಪಸಾಂತೇ ಪುರಾ ನಾಗವೀ ಸದಾ ॥೭೭॥ ತೀರ್ಥೋತೀರ್ಥೀಚ್ಯಾ ಅನುಷ್ಠಾನಾ । ಕ್ಷಮಾ ನುಪಜೇ ಅಂತಃಕರಣಾ । ಕೋಪುಯೇತಾಂಚ ಜಾಣಾ । ಕರೀ ಉಗಾಣಾ ತಪಾಚಾ ॥೭೮॥ ಕ್ರೋಧು ತಾಪಸಾಂಚಾ ಉಘಡ ವೈರೀ । ತಾಪಸಾ ನಾಗವೀ ನಾನಾಪರೀ । ತೋಹೀ ನಾರಾಯಣಾವರೀ । ಅವಘ್ಯಾ ಅಗ್ರೀ ಚಾಲಿಲಾ ॥೭೯॥ ಐಶೀ ಮಿಳೋನಿ ಬಿರುದಾಯಿತೇ । ಆಲೀ ಬದರಿಕಾಶ್ರಮಾ ಸಮಸ್ತೇ । ನಾರಾಯಣು ತಪ ಕರೀ ಜೇಥೇ । ಉತಾವಲೀ ತೇಥೇ ಅತಿ ಆಕ್ರಮೇಸೀ ॥೮೦॥ ವಸಂತೇ ಶೃಂಗಾರಿಲೇ ವನ । ಕೋಕಿಳಾ ಕಲಖೇ ಗಾಯನ । ಸುಗಂಧ ಶೀತಳ ಝುಳಕೇ ಪವನ । ಪರಾಗ ಸಂಪೂರ್ಣ ವರುಷತೀ ಸುಮನೇ ॥೮೧॥ ತೇಥ ಭ್ರಮರಾಂಚೇ ಝುಣತ್ಕಾರ । ಕಾಮಿನೀಗಾಯನ ಕಾಮಾಕಾರ । ಹಾವಭಾವ ಕಟಾಕ್ಷವಿಕಾರ । ಕಾಮಸಂಚಾರ ಚೇತವಿತೀ ॥೮೨॥ ನವ್ಹೇಚಿ ಕಾಮಿನೀಕಾಮಬಾಧಾ । ಪರಾಕ್ರಮು ನ ಚಲೇಚಿ ಕ್ರೋಧಾ । ತೋಹೀ ಸಾಂಡೋನಿಯಾ ಬಿರುದಾ । ಪರತಲಾ ನುಸಧಾ ಮ್ಲಾನವದನೇ ॥೮೩॥

ಯಾವ ಸ್ವರೂಪವು ವ್ಯವಹಾರದಲ್ಲಿ ಯಾವ ಪ್ರಯತ್ನದಿಂದಲೂ ಅನುಭವಕ್ಕೆ ಬರುವುದಿಲ್ಲವೋ, ಅದನ್ನೇ ಆತನು ತನ್ನ ವಚನಗಳಿಂದ ವಿಸ್ತರಿಸಿ ಹೇಳುವನು. ಮತ್ತು ಅನುಗ್ರಹಿಸಿ ತತ್ಕಾಲದಲ್ಲಿ ಅನುಭವಕ್ಕೆ ತಂದು ಕೊಡುವನು ॥೭೩॥ ಜ್ಞಾನಸಂಪನ್ನರಾದ ಅನೇಕ ಋಷೀಶ್ವರರಿದ್ದರು. ಆದರೆ, ಅವರ ಮಧ್ಯ ನಾರಾಯಣನು ಅವತಾರಿಯಾಗಿದ್ದನು. ಆ ಅವತಾರದ ಚರಿತ್ರೆಯು ನಡೆದದ್ದು ಅತ್ಯಂತ ವಿಚಿತ್ರವಾಗಿತ್ತು. ಹೇ ರಾಜನೇ, ನಿನಗೆ ಈ ಚರಿತ್ರೆಯನ್ನು ಈಗ ಹೇಳುವೆನು. ಅದನ್ನು ನೀನು ಕೇಳು ॥೭೪॥

ನಾರಾಯಣನ ಪ್ರತಾಪ, ನಿಷ್ಠೆ ಮತ್ತು ದೃಢವಾದ ತಪಸ್ಸನ್ನು ಕಂಡು ಇಂದ್ರನಿಗೆ ನಡುಕು ಹುಟ್ಟಿತು. ಈ ನಿಷ್ಪಾಪನಾದ ನಾರಾಯಣನು ನನ್ನ ಸ್ವರ್ಗವನ್ನು ಸಹಜವಾಗಿ ತೆಗೆದುಕೊಳ್ಳಬಹುದು ॥೭೫॥ ಈತನ ಈ ದುಷ್ಕರವಾದ ತಪವನ್ನು ಕಂಡು, ಹೋಯಿತು, ಹೋಯಿತು, ನನ್ನ ಸ್ವರ್ಗಸ್ಥಾನವು ಹೋಯಿತೆಂದು ಇಂದ್ರನಿಗೆ ಅನಿಸಿತು. ಮತ್ತು ಕ್ರೋಧದಿಂದ ಅಪ್ಸರೆಯರ ಸಮೂಹದೊಂದಿಗೆ ಈತನು ಕಾಮನಿಗೆ ಪ್ರೇರಿಸಿದನು ॥೭೬॥ ಕಾಮನ ಜೊತೆಯಲ್ಲಿ ಅಪ್ಸರೆಯರು ಇದ್ದರು. ಇದಲ್ಲದೇ ಇವರ ಜೊತೆಯಲ್ಲಿ ಇನ್ನೊಬ್ಬ ವಸಂತ ಮತ್ತು ತಪಸ್ವಿಗಳವರಿಗೆ ನಿರಂತರವಾಗಿ ತೊಂದರೆ ಕೊಡುವ ಕ್ರೋಧನು ಎಲ್ಲರಕ್ಕಿಂತಲೂ ಮುಂದಿದ್ದನು ॥೭೭॥ ಅನೇಕ ತೀರ್ಥಗಳಲ್ಲಿ ಮಾಡಿದ ಅನುಷ್ಠಾನವು, ಅಂತಃಕರಣದಲ್ಲಿ ಕ್ಷಮೆಯನ್ನು ನಿರ್ಮಾಣಗೊಳಿಸದಿದ್ದರೆ ಅದು ವ್ಯರ್ಥವಾಗುವುದು. ಮನದಲ್ಲಿ ಕ್ರೋಧವು ಹುಟ್ಟಿತೆಂದರೆ ಸರ್ವತಪದ ನಾಶವಾಗುವುದು ॥೭೮॥ ಕ್ರೋಧವು ತಪಸ್ವಿಗಳವರ ಸ್ಪಷ್ಟವಾದ ಮಹಾವೈರಿಯಾಗಿರುವುದು. ಇದು ತಪಸ್ವಿಗಳವರಿಗೆ ಅನೇಕ ಪ್ರಕಾರಗಳಿಂದ ಹಾನಿಗೊಳಿಸುವುದು. ಅದೂ ಸಹ ನಾರಾಯಣನ ಮೇಲೆ ಸವಾರಿ ಮಾಡಲು ಎಲ್ಲರಕ್ಕಿಂತಲೂ ಮುಂದೆ ನಡೆಯಿತು ॥೭೯॥ ಹೀಗೆ ಜೂಜುಕಟ್ಟಿ ನಡೆದ ಈ ಸರ್ವ ಮಂಡಳಿಯವರು ಬದ್ರಿಕಾಶ್ರಮದಲ್ಲಿ ನಾರಾಯಣನು ತಪವನ್ನಾಚರಿಸುವ ಸ್ಥಳಕ್ಕೆ ಬಂದರು ಮತ್ತು ಎಲ್ಲರೂ ತಮ್ಮ ತಮ್ಮ ಪರಾಕ್ರಮವನ್ನು ತೋರಿಸಲು ಆರಂಭಿಸಿದರು ॥೮೦॥ ವಸಂತನು ವನವನ್ನು ಶೃಂಗರಿಸಿದನು. ಕೋಗಿಲೆಗಳು ಮಂಜುಳ ಧ್ವನಿಯಲ್ಲಿ ಗಾಯನ ಮಾಡಹತ್ತಿದವು. ಗಾಳಿಯು ಮಂದವಾಗಿ, ಶೀತಲ ಸುಗಂಧವಾಗಿ ಬೀಸಹತ್ತಿತು. ವೃಕ್ಷಗಳು ಪರಾಗಗಳಿಂದ ಪರಿಪೂರ್ಣವಾದ ಪುಷ್ಪಗಳ ಮಳೆಗರೆದವು ॥೮೧॥ ಅಲ್ಲಿ ಭ್ರಮರಗಳ ಝಣತ್ಕಾರವು ಇಂಪಾಗಿತ್ತು. ಅಪ್ಸರೆಯರು ಕಾಮೋತ್ತೇಜಕ ಗಾಯನಗಳನ್ನು ಮಾಡಲಾರಂಭಿಸಿದರು. ಅನೇಕ ಪ್ರಕಾರದ ಹಾವಭಾವಗಳಿಂದ, ನೇತ್ರಕಟಾಕ್ಷಗಳಿಂದ ಕಾಮವಿಕಾರಗಳಿಗೆ ಉತ್ತೇಜಿತ ಮಾಡಹತ್ತಿದರು ॥೮೨॥ ಆದರೆ, ಈ ಕಾಮಿನೀಯವರಿಂದ ನಾರಾಯಣನಿಗೆ ಏನೇನೂ ಕಾಮಬಾಧೆಯಾಗಲಿಲ್ಲ. ಈತನ ಎದುರಿನಲ್ಲಿ ಯಾರ ಪರಾಕ್ರಮವೂ ನಡೆಯದಾಯಿತು. ಆಗ ಎಲ್ಲರೂ ನಾವು ಈ ಜೂಜಿನಲ್ಲಿ ಸೋತುಹೋದೆವು ಎಂದು ಮ್ಲಾನವದನರಾಗಿ ಹಿಂತಿರುಗಹತ್ತಿದರು ॥೮೩॥

ಮಗ ಮದನೇ ಮಾಂಡೂನಿಯಾ ಠಾಣ। ವಿಂಧೀ ಕಾಮಿನೀಕಟಾಕ್ಷ ಬಾಣ । ತೇಣೇ ಘಾಯೇ ನಾರಾಯಣ । ಅಣುಪ್ರಮಾಣ ನ ಡಂಡಳೇಚಿ ।।೮೪।। ಶಸ್ತ್ರೇ ತೋಡಿತಾ ಆಕಾಶಾಸೀ । ಆಕಾಶ ಸ್ವಯೇ ಸಾವಕಾಶೀ । ತೇವೀ ಕಾಮೇ ಛಳಿತಾ ನಾರಾಯಣಾಸೀ । ಜೋ ನಿಜಸಂತೋಷೀ ನಿರ್ದ್ವಂದ್ವ ।।೮೫।। ಆಗ್ಯಾ ನಿಜತೇಜಸತ್ತಾ । ಅಗ್ನಿತೇಜ ಪ್ರಾಶೂ ಜಾತಾ । ತೋಂಡ ಜಳೇ ಚವೀ ಚಾಖಿತಾ । ತೇವೀ ಕಾಮಿನೀ ಕಾಮತಾ ನಾರಾಯಣದೃಷ್ಟೀ ।।೮೬।। ನೇಣತಾ ನಾರಾಯಣಮಹಿಮೇ । ಧಾಂವೋನಿ ಘಾಲಾ ಘಾತಲಾ ಕಾಮೇ । ತೇವ್ಹಾ ಅವಘೀಚ ಪರಾಕ್ರಮೇ । ಸ್ವನಿಂದ್ಯ ಧರ್ಮೇ ಲಾಜಲೀ ।।೮೭।। ತೇಥ ಅವಘೀ ಝಾಲೀ ಪರಾಙ್ಮುಖೇ । ಪಾಠಮೋರೀ ನಿಘಾಲೀ ಅಧೋಮುಖೇ । ತೇವ್ಹಾ ತ್ಯಾಂಚೀ ಗತಿ ನಿಃಶೇಖೇ । ನಾರಾಯಣ ದೇಖೇ ಖುಂಟಲೀ ।।೮೮।। ಇಂದ್ರಿಯನಿಯಂತಾ ನಾರಾಯಣ । ನೇಣೋನಿ ಛಳೂ ಗೇಲೀ ಆಪಣ । ತ್ಯಾಪುಢೋನಿ ಪುನರಾಗಮನ । ಸರ್ವಥಾ ಜಾಣ ಕರವೇನಾ ।।೮೯।। ಮಾಗೇ ನ ನಿಘವೇ ನಿಶ್ಚಿತೇ । ಐಸೇ ಜಾಣೋನಿ ಸಮಸ್ತೇ । ಥೋರ ಗಜಬಜಲೀ ತೇಥೇ । ಭಯಚಕಿತೇ ವ್ಯಾಕುಳೇ ।।೯೦।। ಜಾಣೋನಿ ನಾರಾಯಣಪ್ರತಾಪ । ಆತಾ ಕೋಪೂನ ದೇಈಲ ಶಾಪ । ಯೇಣೇ ಧಾಕೇ ಮ್ಲಾನರೂಪ । ಅತಿಸಕಂಪ ಭಯಭೀತೇ ।।೯೧।। ಐಶೀ ದೇಖೋನಿ ತ್ಯಾಂಚೀ ಸ್ಥಿತಿ । ಕೃಪೇನೇ ತುಷ್ಟಲಾ ಕೃಪಾಮೂರ್ತಿ । ಅಣುಮಾತ್ರ ಕೋಪು ನಯೇ ಚಿತ್ತೀ । ಅಭಿನವ ಶಾಂತಿ ನಾರಾಯಣಾಚೀ ।।೯೨।।

ವಿಜ್ಞಾಯ ಶಕ್ರಕೃತಮಕ್ರಮಮಾದಿದೇವಃ ಪ್ರಾಹ ಪ್ರಹಸ್ಯ ಗತವಿಸ್ಮಯ ಏಜಮಾನಾನ್ ।
ಮಾ ಭೈಷ್ಟ ಭೋ ಮದನ ಮಾರುತ ದೇವವಧ್ವೋ ಗೃಹ್ಣೀತ ನೋ ಬಲಿಮಶೂನ್ಯಮಿಮಂ ಕುರುಧ್ವಮ್ ।।೮।।

ಅರ್ಥ: ಇದೆಲ್ಲವೂ ಇಂದ್ರನ ಕಾರಸ್ಥಾನವಾಗಿದೆ ಎಂದು ಆದಿದೇವ ನಾರಾಯಣನು ಅರಿತುಕೊಂಡನು ಭಯದಿಂದ ನಡುಗುತ್ತಿರುವ ಕಾಮ ಇತ್ಯಾದಿಕರಿಗೆ ನಾರಾಯಣನು ಹೀಗೆ ಹೇಳಿದನು. ಮದನ, ವಾಯುವೇ, ಸುಂದರರಾದ ದೇವ ಸ್ತ್ರೀಯರೇ, ಭಯಪಡಬೇಡಿರಿ. ನನ್ನ ಆತಿಥ್ಯವನ್ನು ಸ್ವೀಕರಿಸಿರಿ. ಅತಿಥಿಗಳ ಅಭಾವದಿಂದ ಈ ಆಶ್ರಮವು ಶೂನ್ಯದಂತೆ ಆಗಬಹುದು. ಅದಕ್ಕಾಗಿ ನಮ್ಮ ಆಶ್ರಮವನ್ನು ಶೂನ್ಯಗೊಳಿಸದೇ, ಆಗಮಿಸಿರಿ ಎಂದು ನಾನು ನಿಮಗೆ ಪ್ರಾರ್ಥಿಸುತ್ತಿರುವೆನು.

ಇಂದ್ರೇ ಕೇಲಾ ಅಪರಾಧ । ತರೀ ನಾರಾಯಣಾಸೀ ನ ಯೇಚಿ ಕ್ರೋಧ । ಬಾಪು ನಿಜಶಾಂತಿ ಅಗಾಧ । ನ ಮನೀ ವಿರುದ್ಧ ಕಾಮಾದಿಕಾಂಚೇ ।।೯೩।। ನ ಯೇಚಿ ಕಾಮಾದಿಕಾವರೀ ಕೋಪ । ಇಂದ್ರಾಸಹೀ ನೇದೀಚ ಶಾಪ । ನಾರಾಯಣಾಚ್ಯಾ ಠಾಯೀ ಅಲ್ಪ । ಕದಾ ವಿಕಲ್ಪ ನುಪಜೇಚಿ ।।೯೪।। ಅಪಕಾರ್ಯಾವರೀ ಜೋ ಕೋಪಲಾ । ತೋ ತತ್ಕಾಳ ಕೋಪೇ ನಾಗವಿಲಾ । ಅಪಕಾರ್ಯಾ ಜೇಣೇ ಉಪಕಾರ ಕೇಲಾ । ತೋಚಿ ದಾದುಲಾ ಪರಮಾರ್ಥೀ ।।೯೫।।

ಆಗ ಮದನನು ಬಲು ಜಿದ್ದಿನಿಂದ ಕಾಮಿನಿಕಟಾಕ್ಷ ಬಾಣಗಳನ್ನು ನಾರಾಯಣನ ಮೇಲೆ ಬಿಟ್ಟನು. ಆದರೆ ಇದರಿಂದ ನಾರಾಯಣನು ಅಣುಮಾತ್ರವೂ ವಿಚಲಿತನಾಗಲಿಲ್ಲ ।।೮೪।। ಶಸ್ತ್ರಗಳು ಆಕಾಶವನ್ನು ತುಂಡರಿಸಲು ಪ್ರಯತ್ನಿಸಿದರೆ, ಆಗ ಆಕಾಶವು ತಾನು ಇದ್ದಂತೆಯೇ ಇರುವುದು. ಅದರಂತೆ ಕಾಮನು ನಾರಾಯಣನಿಗೆ ಅತಿ ಪೀಡಿಸಿದನು. ಆದರೂ ಆತನು ತನ್ನ ಆತ್ಮಾನಂದದಲ್ಲಿ ನಿರ್ವಿಕಾರ ಸ್ಥಿತಿಯಲ್ಲಿ ಇದ್ದನು ।।೮೫।। ಕಚ್ಚುವ ಆಗ್ಯಾ ಸರ್ಪವು ಅಭಿಮಾನದಿಂದಲೇ ಅಗ್ನಿಯನ್ನೇ ತಿನ್ನಲು ಹೋದರೆ, ಅದರ ಮುಖವು ಸುಟ್ಟು ಹೋಗುವಂತೆ, ನಾರಾಯಣನ ದೃಷ್ಟಿಯಿಂದ ಕಾಮಿನೀಯರ ಕಾಮನೆಯು ಬೆಂದು ಹೋಯಿತು ।।೮೬।। ನಾರಾಯಣನ ಮಹಿಮೆಯನ್ನರಿಯದೇ ಕಾಮನು ಆತನ ಮೇಲೆ ಧಾವಿಸಿ ಪ್ರಹಾರ ಮಾಡಿದನು. ಆದರೆ ತನ್ನ ಹಾಗೂ ತನ್ನ ಪರಿವಾರದ ಎಲ್ಲರಿಂದಲೂ ಯಾವ ಪರಿಣಾಮವೂ ಆಗಲೇ ಇಲ್ಲ. ತಮ್ಮ ನಿಂದ್ಯಕರ್ಮಗಳಿಂದ ಎಲ್ಲರೂ ತಮ್ಮ ತಮ್ಮ ಮನಗಳಲ್ಲಿಯೇ ಲಜ್ಜೆಗೊಂಡರು ।।೮೭।। ಸರ್ವ ಪರಿವಾರ ಸಹ ಕಾಮನು ಕೆಳಗೆ ಮುಖಮಾಡಿ ಹಿಂದಕ್ಕೆ ಹೊರಟನು. ಇವರೆಲ್ಲರೂ ಇಂದ್ರನ ಕಡೆ ಹೊರಟರು. ನಾರಾಯಣನು ಅವರ ಗತಿಯನ್ನು ಕುಂಠಿತಗೊಳಿಸಿದನು ।।೮೮।। ನಾರಾಯಣನು ಈ ಎಲ್ಲ ಇಂದ್ರಿಯಗಳ ನಿಯಂತಾನಾಗಿರುವನು. ಇದನ್ನು ಅರಿಯದೇ ಇವರೆಲ್ಲರೂ ಆತನ ಎದುರು ಕಾಡಿ, ಪೀಡಿಸಲು ಮುಂದಾದರು, ಆದರೆ ಅಲ್ಲಿಂದ ಹೊರಳಿ ಹೋಗುವುದು ಮಾತ್ರ ಅವರ ಸ್ವಾಧೀನ ಉಳಿಯಲಿಲ್ಲ ।।೮೯।। ತಮ್ಮ ಸ್ವರೂಪದಿಂದ ಹೊರಳಿ ಹೋಗದ್ದನ್ನು ಅರಿತು ಇವರೆಲ್ಲರೂ ಅತಿಶಯವಾಗಿ ಗಡಬಡಿಸಿದರು ಮತ್ತು ಮನದಲ್ಲಿ ಅತಿಶಯವಾಗಿ ಆಶ್ಚರ್ಯಚಕಿತರಾಗಿ, ಭಯದಿಂದ ವ್ಯಾಕುಲರಾದರು ।।೯೦।। ನಾರಾಯಣನ ಮಹಾನ ಪ್ರತಾಪವು ಇವರಿಗೆ ಅರಿವಾಯಿತು. ಈಗ ನಾರಾಯಣನು ತಮಗೆ ಕೋಪಿಸಿ ಶಾಪ ಕೊಡುವನೆಂಬ ಭಯದಿಂದ ಅವರ ಮನವು ಮ್ಲಾನರೂಪವಾಗಿ ಶರೀರವು ನಡುಗ ಹತ್ತಿತು ।।೯೧।। ಆಗ ಇವರ ಈ ಅವಸ್ಥೆಯನ್ನು ಕಂಡು ನಾರಾಯಣನಿಗೆ ಅವರಿಗಾಗಿ ದಯೆ ಹುಟ್ಟಿತು. ಇವರಿಗಾಗಿ ಆತನ ಮನದಲ್ಲಿ ಅಣುಮಾತ್ರವೂ ಕ್ರೋಧವಾಗಲಿಲ್ಲ. ಇದರ ಪ್ರತಿಯಾಗಿ ಆತನು ಇವರಲ್ಲಿ ಸಂತುಷ್ಟನಾದನು. ಆತನ ಶಾಂತಿಯು ಅಪಾರವಾಗಿತ್ತು ।।೯೨।।

ಇಂದ್ರನು ಅಪರಾಧವನ್ನು ಮಾಡಿದ್ದರೂ ಕೂಡ ನಾರಾಯಣನಿಗೆ ಕ್ರೋಧವು ಬರಲೇ ಇಲ್ಲ. ಆತನ ಶಾಂತಿಯು ಅಗಾಧವಾಗಿತ್ತು. ಕಾಮಾದಿಕರ ವಿಷಯವಾಗಿ ಮನದಲ್ಲಿ ವಿರುದ್ಧ ವಿಚಾರವು ನಿರ್ಮಾಣವಾಗಲಿಲ್ಲ ।।೯೩।। ಆತನಿಗೆ ಕಾಮಾದಿಕರಿಗಾಗಿ ಕ್ರೋಧವು ಬರಲಿಲ್ಲ, ಆದ್ದರಿಂದ ಆತನು ಇಂದ್ರನಿಗೂ ಶಾಪ ಕೊಡಲಿಲ್ಲ. ನಾರಾಯಣನ ಹೃದಯದಲ್ಲಿ ಅಣುಮಾತ್ರವೂ ವಿಕಲ್ಪವು ಹುಟ್ಟಲಿಲ್ಲ ।।೯೪।। ಅಪಕಾರವನ್ನು ಮಾಡಿದವರ ಮೇಲೆ ಯಾರು ಕ್ರೋಧರಾಗುವರೋ, ಅವರು ಸ್ವತಃ ಸ್ವತಕ್ಕೆ ನಾಶವನ್ನು ಮಾಡಿಕೊಳ್ಳುವರು. ಅಪಕಾರವನ್ನು ಮಾಡಿದವರ ಮೇಲೆ ಯಾರು ಕ್ರೋಧಗೊಳ್ಳುವುದಿಲ್ಲವೋ, ಅವರೇ ಪರಮಾರ್ಥದ ಅಧಿಕಾರವನ್ನು ಪ್ರಾಪ್ತಮಾಡಿಕೊಳ್ಳುವರು ।।೯೫।।

ಅಪಕಾರ್‍ಯಾ ಉಪಕಾರ ಕರಿತೀ । ತ್ಯಾಚೀ ನಾಂವ ಗಾ ಪರಮ ಶಾಂತಿ । ತೇ ಶಾಂತೀಚೀ ನಿಜಸ್ಥಿತಿ । ದಾವೀ ಲೋಕಾಪ್ರತೀ
ಆಚರೋನಿ ॥೯೬॥ ಪರಮಾರ್ಥಾಚೀ ಮುಖ್ಯತ್ವೇ ಸ್ಥಿತಿ । ಪಾಹಿಜೇ ಗಾ ಪರಮ ಶಾಂತಿ । ತೇ ಶಾಂತೀಚೀ ಉತ್ಕಟ
ಗತಿ । ದಾವೀ ಲೋಕಾಪ್ರತೀ ಆಚರೋನಿ ॥೯೭॥ ಭಯಭೀತ ಕಾಮಾದಿಕ । ಅಪ್ಸರಾಗಣ ಸಾಶಂಕ । ತ್ಯಾತೇ
ಅಭಯದಾನೇ ಸುಖ । ದೇಊನಿಯಾ ದೇಖ ನಾರಾಯಣ ಬೋಲೇ ॥೯೮॥ ಅಹೋ ಕಾಮವಸಂತಾದಿಕ ಸ್ವಾಮೀ
। ಕೃಪಾ ಕರೂನಿ ಆಲೇತಿ ತುಮ್ಹೀ । ತುಮಚೇನಿ ಪದಾಭಿಗಮೀ । ಆಶ್ರಮಭೂಮಿ ಪುನೀತ ಝಾಲೀ ॥೯೯॥ ತುಮಚೇ
ಝಾಲಿಯಾ ಆಗಮನ । ಅವಶ್ಯ ಕರಾವೇ ಆಮ್ಹೀ ಪೂಜನ । ಹೇಚಿ ಆಮುಚೇ ಅನುಷ್ಠಾನ । ಕಾಂಹೀ ಬಳಿದಾನ
ಅಂಗೀಕಾರಾ ಮಾಝೇ ॥೧೦೦॥ ಅಹೋ ಅಪ್ಸರಾ ದೇವಕಾಂತಾ । ತುಮ್ಹೀ ಭೇವೋ ನಕಾ ಸರ್ವಥಾ । ಯೇಥ
ಆಲಿಯಾ ಸಮಸ್ತಾ । ಪೂಜ್ಯ ಸರ್ವಥಾ ತುಮ್ಹೀ ಮಜ ॥೧೦೧॥ ಆಶ್ರಮಾ ಆಲಿಯಾ ಅತಿಥಿ । ಜೇ ಕೋಣೀ
ಪೂಜಾ ನ ಕರಿತೀ । ತ್ಯಾಂಚೀ ಶೂನ್ಯ ಪುಣ್ಯಸಂಪತ್ತಿ । ಆಶ್ರಮಸ್ಥಿತಿ ಶೂನ್ಯ ಹೋಯೇ ॥೧೦೨॥ ತುಮ್ಹೀ
ನಾಂಗೀಕಾರಿತಾ ಪೂಜನ । ಕಾಂಹೀ ನ ಘೇತಾ ಬಳಿದಾನ । ಗೇಲ್ಯಾ ಹಾ ಆಶ್ರಮ ಹೋಈಲ ಶೂನ್ಯ । ಯಾಲಾಗೀ
ಕೃಪಾ ಕರೂನ ಪೂಜಾ ಘ್ಯಾವೀ ॥೧೦೩॥ ಆಶ್ರಮಾ ಆಲಿಯಾ ಅತಿಥೀ । ತೋ ಪೂಜ್ಯ ಸರ್ವಾಸ ಸರ್ವಾರ್ಥೀ ।
ಅತಿಥಿ ಆಶ್ರಮೀ ಜೇ ಪೂಜಿತೀ । ತೇ ಆಶ್ರಮಕೀರ್ತಿ ಶಿವ ವಾನೀ ॥೧೦೪॥ ವ್ಯಾಹೀ ರುಸಲಿಯಾ ಪಾಯಾ ಪಡತೀ
। ತೇವೀ ವಿಮುಖ ಜಾತಾ ಅತಿಥಿ । ಜೇ ವಂದೋನಿಯಾ ಸುಖೀ ಕರಿತೀ । ತೇ ಸುಖ ಪಾವತೀ ಸ್ವಾನಂದೇ ॥೧೦೫॥
ವ್ಯಾಹೀ ರುಸಲಿಯಾ ಕನ್ಯಾ ನ ಧಾಡೀ । ಅತಿಥಿ ರುಸಲಿಯಾ ಪುಣ್ಯಕೋಡೀ । ಪೂರ್ವಾಪಾರ ಜೇ ಕಾ ಜೋಡೀ ।
ತೇಹೀ ರೋಕಡೀ ಕ್ಷಯೋ ಪಾವೇ ॥೧೦೬॥ ವೈಕುಂಠೀ ಜ್ಯಾಚೀ ನಿಜಸ್ಥಿತಿ । ತೋ ತ್ಯಾ ಆಶ್ರಮಾ ಯೇ ನಿತ್ಯ ವಸ್ತೀ
। ಜೇ ಆಶ್ರಮೀ ಅತಿಥಿ । ಪೂಜಿತೀ ಪ್ರೀತೀ ಬ್ರಹ್ಮಾತ್ಮಭಾವೇ ॥೧೦೭॥ ಐಸೇ ಬೋಲಿಲಾ ತಯಾಂಪ್ರತೀ । ಪರೀ
ಮಾಝೀ ಹೇ ಅಗಾಧ ಶಾಂತಿ । ಹೇಹೀ ನಾರಾಯಣಾಚೇ ಚಿತ್ತೀ । ಗರ್ವಸ್ಥಿತಿ ಅಸೇನಾ ॥೧೦೮॥ ಐಕ ರಾಯಾ
ಅತಿಅಪೂರ್ವ । ಅಸೋನಿ ನಿಜಶಾಂತಿಅನುಭವ । ಜ್ಯಾಚ್ಯಾ ಠಾಯೀ ನಾಹೀ ಗರ್ವ । ತೋಚಿ ದೇವಾಧಿದೇವ
ನಿಶ್ಚಯೇಸೀ ॥೧೦೯॥ ಜೋ ನಿತ್ಯ ನಾಚವೀ ಸುರನರಾಸೀ । ಜ್ಯಾ ಭೇಣೇ ತಪ ಸಾಂಡಿಜೇ ತಾಪಸೀ । ತ್ಯಾ ಅಭಯ
ದೇವೋನಿ ಕಾಮಕ್ರೋಧಾಂಸೀ । ಆಪಣಾಪಾಸೀ ರಾಹವಿಲಾ ॥೧೧೦॥

ಅಪಕಾರ ಮಾಡಿದವರಿಗೆ ಉಪಕಾರ ಮಾಡುವುದು, ಇದಕ್ಕೆ ಪರಮಶಾಂತಿ ಎನ್ನುವರು. ಜಗತ್ತಿನ ಜನರು ಹೇಗೆಯೇ ನಡೆದುಕೊಳ್ಳಲಿ, ತಾನು ಮಾತ್ರ ತನ್ನ ಶಾಂತಿಯನ್ನು ಬಿಡಬಾರದು. ನಾರಾಯಣನು ಈ ಪರಮಶಾಂತಿಯನ್ನು ಪ್ರತ್ಯಕ್ಷವಾಗಿ ಆಚರಿಸಿ ಜನರಿಗೆ ತೋರಿಸಿದನು ॥೯೬॥ ಪರಮಾರ್ಥದ ಮುಖ್ಯ ಸ್ಥಿತಿ ಎಂದರೆ ಹೃದಯದಲ್ಲಿ ಅಪಾರವಾದ ಶಾಂತಿಯು ಯಾವಾಗಲೂ ಇರಬೇಕಾಗುವುದು. ಈ ಶಾಂತಿಯ ಪರಮಸ್ಥಿತಿಯನ್ನು ನಾರಾಯಣನು ಜನರಿಗೆ ಆಚರಿಸಿ ತೋರಿಸಿದನು ॥೯೭॥ ಕಾಮ, ಕ್ರೋಧ ಮತ್ತು ಅಪ್ಸರೆಯವರು ಮನದಲ್ಲಿ ಸಾಶಂಕರಾಗಿ ಭಯಪಟ್ಟಿದ್ದರು. ಅವರಿಗೆ ಅಭಯವನ್ನು ಕೊಟ್ಟು ನಾರಾಯಣನು ಹೀಗೆ ಹೇಳಿದನು ॥೯೮॥ ಅಹೋ ಶ್ರೇಷ್ಠರಾದ ಕಾಮವಸಂತಾದಿಕರೇ, ನೀವು ಕೃಪೆಮಾಡಿ ಬಂದಿರುವಿರಿ. ನಿಮ್ಮ ಪಾದಸ್ಪರ್ಶದಿಂದ ನಮ್ಮ ಆಶ್ರಮ ಭೂಮಿಯು ಪವಿತ್ರವಾಯಿತು ॥೯೯॥ ನಿಮ್ಮ ಆಗಮನವಾಗಿದೆ. ಆದ್ದರಿಂದ ನಾವು ನಿಮ್ಮ ಪೂಜೆಯನ್ನು ಮಾಡಬೇಕಾಗುವುದು. ಇದೇ ನಮ್ಮ ಅನುಷ್ಠಾನವಾಗಿರುವುದು. ನಮ್ಮ ಆದರಾತಿಥ್ಯವನ್ನು ತಾವು ಸ್ವೀಕರಿಸಬೇಕು ॥೧೦೦॥ ಅಹೋ ದೇವಸ್ತ್ರೀಯರೇ, ಅಪ್ಸರೆಯರೇ ನೀವೂ ಸ್ವಲ್ಪವೂ ಭಯಪಡಬೇಡಿರಿ. ಇಲ್ಲಿಗೆ ಬಂದಿರುವ ನೀವೆಲ್ಲರೂ ನಮಗೆ ಪೂಜ್ಯರಾಗಿರುವಿರಿ ॥೧೦೧॥ ತಮ್ಮ ಮನೆಗೆ ಬಂದ ಅತಿಥಿಗಳವರ ಪೂಜೆಯನ್ನು ಮಾಡದಿದ್ದಲ್ಲಿ ಅವರ ಪುಣ್ಯ, ಸಂಪತ್ತು ಮತ್ತು ಆಶ್ರಮಸ್ಥಿತಿಯು ಇವೆಲ್ಲವೂ ಇಲ್ಲದಾಗುವುವು ॥೧೦೨॥ ನೀವು ನಮ್ಮಿಂದ ಪೂಜೆಗೊಳ್ಳದೇ, ಮತ್ತು ಉಪಹಾರಾದಿಗಳ ಸ್ವೀಕಾರವನ್ನು ಮಾಡದೇ, ಹಾಗೆಯೇ ಹೋದರೆ, ನಮ್ಮ ಆಶ್ರಮವು ಶೂನ್ಯವಾದೀತು. ಆದ್ದರಿಂದ ಕೃಪೆಮಾಡಿ ನಮ್ಮ ಪೂಜೆಯನ್ನು ಸ್ವೀಕಾರ ಮಾಡಿರಿ ॥೧೦೩॥ ಆಶ್ರಮಕ್ಕೆ ಅತಿಥಿಯು ಬಂದರೆ ಆತನು ಎಲ್ಲರಿಗೂ ಎಲ್ಲ ಪ್ರಕಾರದಿಂದಲೂ ಪೂಜ್ಯನಾಗಿರುವನು. ಯಾವ ಆಶ್ರಮದಲ್ಲಿ ಅತಿಥಿಗಳವರನ್ನು ಮನೋಭಾವದಿಂದ ಸತ್ಕಾರವನ್ನು ಮಾಡಿದರೆ, ಆ ಆಶ್ರಮದ ಕೀರ್ತಿಯನ್ನು ಶಂಕರನೂ ವರ್ಣಿಸುವನು ॥೧೦೪॥ ಬೀಗನು ಮುನಿಸಗೊಂಡರೆ ಆತನ ಕಾಲಿಗೆ ಬೀಳುವರು. ಅದರಂತೆ ಅತಿಥಿಯು ವಿಮುಖನಾಗಿ ಹೊರಟರೆ, ಆತನನ್ನು ವಂದಿಸಿ, ಆತನನ್ನು ಶಾಂತಗೊಳಿಸುವರು. ಹೀಗೆ ನಡೆದವರು ಸ್ವಾನಂದ ಸುಖಕ್ಕೆ ಪ್ರಾಪ್ತರಾಗುವರು ॥೧೦೫॥ ಮಗಳ ಮಾವನಾದ ಬೀಗನು ಮುನಿಸುಗೊಂಡರೆ, ಬಹಳಾದರೆ ಮಗಳಿಗೆ ತವರು ಮನೆಗೆ ಕಳಿಸಲಿಕ್ಕಿಲ್ಲ. ಆದರೆ, ಅತಿಥಿಯು ಮುನಿಸುಗೊಂಡರೆ, ಅನೇಕ ಜನ್ಮದಿಂದ ಗಳಿಸಿದ ಪುಣ್ಯದ ರಾಶಿಯೇ ನಾಶವಾಗುವುದು ॥೧೦೬॥ ಯಾವ ಆಶ್ರಮದಲ್ಲಿ ಅತಿಥಿಯವರನ್ನು ಬ್ರಹ್ಮಭಾವದಿಂದ ಪೂಜೆಯು ನಡೆಯುವುದೋ ಅಲ್ಲಿ ವೈಕುಂಠದಲ್ಲಿರುವ ಭಗವಾನನು ನಿತ್ಯ ವಸತಿ ಮಾಡುವನು ॥೧೦೭॥ ಹೀಗೆ ನಾರಾಯಣನು ಅವರಲ್ಲಿ ಹೇಳಿದನು. ಆದರೆ ಇದು ನನ್ನ ಬಹಳ ಮಹತ್ತರವಾದ ಶಾಂತಿಯಾಗಿದೆ ಎಂಬ ಗರ್ವವು ಸ್ವಲ್ಪವೂ ನಾರಾಯಣನ ಮನಸ್ಸಿನಲ್ಲಿ ನಿರ್ಮಾಣವಾಗಲಿಲ್ಲ ॥೧೦೮॥ ಹೇ ರಾಜನೇ, ಹೃದಯದಲ್ಲಿ ಪರಿಪೂರ್ಣವಾದ ಶಾಂತಿಯು ನೆಲೆಸಿ, ಅವರಲ್ಲಿ ಸ್ವಲ್ಪವೂ ಗರ್ವವು ಇರದಿದ್ದರೆ, ನಿಜವಾಗಿಯೂ ಅವರೇ ದೇವಾಧಿದೇವನಾಗಿರುವರು ॥೧೦೯॥ ಯಾವ ಕಾಮನು ದೇವತೆಗಳಿಗೆ, ಮನುಷ್ಯರಿಗೆ ಕುಣಿಸುವನು. ಈತನ ಭಯದಿಂದ ತಪಸ್ವಿ ಜನರು ತಪಗಳನ್ನು ಬಿಟ್ಟು ಬಿಡುವರು. ಇಂತಹ ಕಾಮಕ್ರೋಧರಿಗೆ ನಾರಾಯಣನು ಅಭಯವನ್ನು ನೀಡಿ ತಮ್ಮ ಸಮೀಪದಲ್ಲಿ ಇಟ್ಟುಕೊಂಡನು ॥೧೧೦॥

ಇತ್ಥಂ ಬ್ರುವತ್ಯಭಯದೇ ನರದೇವ ದೇವಾ: ಸವ್ರೀಡನಮ್ರಶಿರಸ: ಸಘೃಣಂ ತಮೂಚು: ।
ನೈತದ್ವಿಭೋ ತ್ವಯಿ ಪರೇಽವಿಕೃತೇ ವಿಚಿತ್ರಂ ಸ್ವಾರಾಮಧೀರನಿಕರಾನತಪಾದಪದ್ಮೇ ।೯॥

ಅರ್ಥ: ಹೇ ರಾಜನೇ, ಅಭಯ ನೀಡುವ ನಾರಾಯಣನು ಹೀಗೆ ಹೇಳಲು ಕಾಮಾದಿಕ ದೇವತೆಗಳು ಲಜ್ಜಿತರಾದರು. ಅವರ ಮುಖಗಳು ಕೆಳಗಾದವು. ದಯಾಳು ನಾರಾಯಣನಿಗೆ ಇವರು ಹೇಳಿದರು, ಹೇ ಪ್ರಭೋ, ಮಾಯೆಯಿಂದ ವಿಲಕ್ಷಣವಾಗಿ ನಿರ್ವಿಕಾರನಾದ ಮತ್ತು ಸರ್ವ ಆತ್ಮಜ್ಞಾನಿಗಳವರಿಂದ ವಂದಿತರಾದ, ನೀವು ನಮ್ಮಂಥವರ ಅಪರಾಧ ಮಾಡಿದವರಲ್ಲಿ ಕ್ರೋಧಗೊಳ್ಳದೇ ಅತ್ಯಂತ ಶಾಂತಿಯನ್ನು ತೋರಿಸಿರುವಿರಿ ಮತ್ತು ದಯೆ ತೋರಿಸಿರುವಿರಿ. ಇದು ಬಹಳ ಆಶ್ಚರ್ಯವಾಗಿದೆ.

ಏವಂ ಅಭಯ ದೇತ ನಾರಾಯಣ । ಸ್ವಮುಖೇ ಬೋಲಿಲಾ ಆಪಣ । ತೇಣೇ ಕಾಮಾದಿ ಅಪ್ಸರಾಗಣ । ಲಾಜಾ ವಿರೋನ ಅಧೋಮುಖ ಝಾಲೀ ।೧೧೧॥ ದೇಖೋನಿ ನಿರ್ವಿಕಾರ ಪೂರ್ಣ ಕ್ಷಮಾ । ಶ್ರೀನಾರಾಯಣ ಹಾ ಪರಮಾತ್ಮಾ । ಕಳೋ ಸರಲೇ ವಸಂತಾದಿ ಕಾಮಾ । ತ್ಯಾಚಾಚಿ ಮಹಿಮಾ ವರ್ಣಿತೀ ಸ್ವಯೇ ।೧೧೨॥ ಐಕೇ ನರದೇವ ಚಕ್ರವರ್ತೀ । ವಿದೇಹಾ ಸಾರ್ವಭೌಮಾ ಭೂಪತೀ । ತ್ಯಾ ನಾರಾಯಣಾಚೀ ನಿಜಸ್ತುತೀ । ಕಾಮಾದಿ ಕರಿತೀ ಸದ್ಭಾವೇಸೀ ।೧೧೩॥ ಜೇ ಸದಾ ಸರ್ವಾತೇ ಛಳಿತೀ । ತ್ಯಾಂಹೀ ದೇಖಿಲೀ ಪೂರ್ಣ ಶಾಂತಿ । ತೇಚಿ ಶಾಂತೀಚೀ ಸ್ತುತಿ ಕರಿತೀ । ನಾರಾಯಣಾಪ್ರತೀ ಕಾಮ ಕ್ರೋಧ ।೧೧೪॥ ಜೇಣೇ ಸಂತೋಷೇ ಶ್ರೀನಾರಾಯಣ । ತ್ಯಾಸೀ ಕೃಪಾ ಉಪಜೇ ಪೂರ್ಣ । ಐಶಿಯಾ ಪರೀಚೇ ಸ್ತವನ । ಮಾಂಡಿಲೇ ಸಂಪೂರ್ಣ ಪರಮಾರ್ಥಬುದ್ಧೀ ।೧೧೫॥ ಜಯಜಯ ದೇವಾಧಿದೇವಾ । ತುಝಿಯಾ ಅವಿಕಾರಭಾವಾ । ಪಾಹತಾ ನ ದೇಖೋ ಜೀ ಸರ್ವಾ । ದೇವಾಮಾನವಾಮಾಝಾರೀ ।೧೧೬॥ ಮಜ ಕಾಮಾಚೇನಿ ಘಾಯೇ । ಬ್ರಹ್ಮಾ ಕನ್ಯೇಸೀ ಧರೂ ಜಾಯೇ । ಪರಾಶರಾ ಕೇಲೇ ಕಾಯೇ । ಭೋಗಿಲೀ ಪಾಹೇ ದಿವಾ ದುರ್ಗಂಧಾ ।೧೧೭॥ ಜ್ಯಾತೇ ಯೋಗೀ ವಂದಿತೀ ಮುಗುಟೀ । ಜೋ ತಾಪಸಾಮಾಜೀ ಧೂರ್ಜಟೀ । ತೋ ಶಿವು ಲಾಗೇ ಮೋಹಿನೀಪಾಠೀ । ಫಿಟೋನಿ ಲಂಗೋಟೀ ವೀರ್ಯ ದ್ರವಲೇ ।೧೧೮॥ ವಿಷ್ಣು ವೃಂದೇಚ್ಯಾ ಶ್ಮಶಾನೀ । ಧರಣೇ ಬೈಸೇ ವಿಷಯಗ್ಲಾನೀ । ಅಹಲ್ಯೇಚೀ ಕಹಾಣೀ । ವೇದೀ ಪುರಾಣೀ ವರ್ಣಿಜೇ ।೧೧೯॥ ನಾರದು ನಾಯಕೇ ಮಾಝೀ ಗೋಷ್ಟೀ । ತ್ಯಾಸೀ ಜನ್ಮಲೇ ಪುತ್ರ ಸಾಠೀ । ಮಾಝೀ ಸಾಹೋ ಶಕೇ ಕಾಠೀ । ಐಸಾ ಬಳಿಯಾ ಸೃಷ್ಟೀ ಅಸೇನಾ ।೧೨೦॥ ಜೋ ಬ್ರಹ್ಮಚಾರ್ಯಾಮಾಜೀ ರಾಜಾ । ಹನುಮಂತು ಮಿರವೀ ಧ್ವಜಾ । ತಯಾಸ್ತವ ಮಕರಧ್ವಜಾ । ಸಂಗೇವೀಣ ವೋಜಾ ಜನ್ಮವೀಲಾ ಮ್ಯಾ ।೧೨೧॥ ಕಲಂಕಿಯಾ ಕೇಲಾ ಚಂದ್ರ । ಭಗಾಂಕಿತ ಕೇಲಾ ಇಂದ್ರ । ಕಪಾಟೇ ಘಾತಲಾ ಷಣ್ಮುಖ ವೀರ । ಜೋ ಲಾಡಕಾ ಕುಮರ ಮಹೇಶಾಚಾ ।೧೨೨॥

ಈ ಪ್ರಕಾರವಾಗಿ ನಾರಾಯಣನು ಇವರಿಗೆ ಅಭಯವನ್ನು ಕೊಟ್ಟು ಶಾಂತಿಯಿಂದ ಹೇಳಹತ್ತಿದನು. ಆಗ ಆ ವೇಳೆಯಲ್ಲಿ ಕಾಮ, ಕ್ರೋಧ, ವಸಂತ ಮತ್ತು ಅಪ್ಸರಾ ಸ್ತ್ರೀಯರು ಇತ್ಯಾದಿ ಮಂಡಳಿಯವರು ತಮ್ಮ ಮುಖಗಳನ್ನು ಕೆಳಗೆ ಮಾಡಿದರು ।೧೧೧॥ ಶ್ರೀನಾರಾಯಣನಲ್ಲಿರುವ ನಿರ್ವಿಕಾರ ಮತ್ತು ಪೂರ್ಣವಾದ ಕ್ಷಮೆಯನ್ನು ಕಂಡು ಈತನು ಪರಮಾತ್ಮನಿರುವನೆಂದು ಕಾಮ, ವಸಂತಾದಿಯರು ಅರಿತುಕೊಂಡರು. ಮತ್ತು ಅವರು ಸ್ವತ: ನಾರಾಯಣನ ಮಹಿಮೆಯನ್ನು ವರ್ಣಿಸಲಾರಂಭಿಸಿದರು ।೧೧೨॥ ಹೇ ಮಹಾರಾಜಾ, ಚಕ್ರವರ್ತಿ! ಸಾರ್ವಭೌಮಾ ವಿದೇಹಾ! ಕೇಳು, ಹೀಗೆ ಕಾಮಾದಿ ಮಂಡಳಿಯವರು ಅತ್ಯಂತ ಭಕ್ತಿ ಭಾವದಿಂದ ನಾರಾಯಣನ ಸ್ತುತಿಯನ್ನು ಮಾಡಹತ್ತಿದರು ।೧೧೩॥ ಯಾರು ಸರ್ವಕಾಲದಲ್ಲಿಯೂ ಸರ್ವರಿಗೂ ಕಾಡಿ ಪೀಡಿಸುವವರು ಪ್ರತ್ಯಕ್ಷವಾಗಿ ನಾರಾಯಣನ ಪರಿಪೂರ್ಣ ಶಾಂತಿಯನ್ನು ಕಂಡು ಕಾಮಕ್ರೋಧಗಳು ಆ ಶಾಂತಿಯ ಸ್ತುತಿಯನ್ನು ನಾರಾಯಣನಲ್ಲಿ ಮಾಡಹತ್ತಿದರು ।೧೧೪॥ ನಾರಾಯಣನು ಸಂತೋಷನಾಗಬೇಕು ಆತನ ಮನದಲ್ಲಿ ಪೂರ್ಣ ಕೃಪೆಯು ಉತ್ಪನ್ನವಾಗಬೇಕು ಎಂಬ ಭಾವನೆಯನ್ನು ತಾಳಿ ಆ ರೀತಿಯಲ್ಲಿ ಪರಮಾರ್ಥಿಕ ಬುದ್ಧಿಯಿಂದ ಸ್ತುತಿಸಲು ಆರಂಭಿಸಿದರು ।೧೧೫॥ ಹೇ ದೇವಾಧಿದೇವನೇ, ನಿನಗೆ ಜಯಜಯಕಾರವಾಗಲಿ ನಿನ್ನ ಈ ನಿರ್ವಿಕಾರ ಭಾವವು ಯಾವ ದೇವತೆಗಳವರಲ್ಲಿಯೂ, ಯಾವ ಮಾನವರಲ್ಲಿಯೂ ಕಾಣುವುದಿಲ್ಲ ।೧೧೬॥ ಕಾಮನಾಗಿರುವ ನಾನು, ಯಾವ ನನ್ನ ಪ್ರಹಾರದಿಂದ ಬ್ರಹ್ಮದೇವನು ತನ್ನ ಮಗಳನ್ನು ಹಿಡಿಯಲು ಹೋದನು. ಪರಾಶರಮುನಿಯು ದುರ್ಗಂಧಯುಕ್ತ ಮತ್ಸ್ಯಗಂಧೆಯನ್ನು ಹಗಲಿನಲ್ಲಿಯೇ ಉಪಭೋಗಿಸಿದನು ।೧೧೭॥ ಯೋಗಿಗಳು ಯಾರ ಚರಣಗಳಲ್ಲಿ ಲೋಟಾಂಗಣವನ್ನು ಹಾಕುವರೋ, ಯಾರು ತಪಸ್ವಿಗಳಲ್ಲಿ ಶ್ರೇಷ್ಠನಾಗಿರುವನೋ, ಅಂತಹ ಶ್ರೀಶಂಕರನು ಮೋಹಿನಿಯನ್ನು ಹಿಂಬಾಲಿಸಿದನು. ಆಗ ಆತನ ಲಂಗೋಟಿಯು ಬಿಚ್ಚಿ ವೀರ್ಯಸ್ಖಲನವಾಯಿತು ।೧೧೮॥ ವಿಷ್ಣು ಸಹ ವಿಷಯಕ್ಕಾಗಿ ವ್ಯಾಕುಲನಾಗಿ, ವೃಂದೇಗಾಗಿ ಸ್ಮಶಾನದಲ್ಲಿ ಸತ್ಯಾಗ್ರಹ ಹೂಡಿ ಕುಳಿತನು. ಅಹಲ್ಯೆಯ ಕಥೆ ಮಾತ್ರ ವೇದದಲ್ಲಿ, ಪುರಾಣದಲ್ಲಿ ಪ್ರಸಿದ್ಧವಾಗಿದೆ ।೧೧೯॥ ನಾರದನು ನನ್ನ ಮಾತು ಕೇಳಲೇ ಇಲ್ಲ. ಅದಕ್ಕಾಗಿ ಆತನಿಗೆ ಅರವತ್ತು ಮಕ್ಕಳಾದರು. ನನ್ನ ಹೊಡೆತವನ್ನು ಸಹಿಸುವ ಸಮರ್ಥರು ಈ ಜಗತ್ತಿನಲ್ಲಿಯೇ ಇಲ್ಲ ।೧೨೦॥ ಬ್ರಹ್ಮಚಾರಿಗಳವರಲ್ಲಿ ಶ್ರೇಷ್ಠನಾದ ಹನುಮಂತನು ಬಹು ದೊಡ್ಡ ಪಂಥವನ್ನು ಕಟ್ಟಿದ್ದನು. ಆದರೆ ಆತನಿಂದಲೇ ಸಂಗವಿಲ್ಲದೇ ಮಕರಧ್ವಜನಿಗೆ ನಾನು ಜನ್ಮಿಸಿದೆ ।೧೨೧॥ ಚಂದ್ರನಿಗೆ ಕಲಂಕಪಡಿಸಿದೆನು, ಇಂದ್ರನ ಅಂಗಕ್ಕೆ ರಂಧ್ರಗಳನ್ನು ಮಾಡಿದೆನು ಮತ್ತು ಶಂಕರನ ಪ್ರೀತಿಯ ಮಗನಾದ ಷಣ್ಮುಖನಿಗೆ ಗುಹೆಯಲ್ಲಿ ಬಂಧಿಸಿ ಇಟ್ಟೆನು ।೧೨೨॥

ಮಜ ಮನ್ಮಥಾಚಾ ಯಾವಾ । ನ ಸಾಹವೇ ದೇವಾ ದಾನವಾ । ಮಾ ತೇಥ ಇತರಾ ಮಾನವಾ । ಕೋಣ ಕೇವಾ ಸಾಹಾವಯಾಸೀ ॥೧೨೩॥ ಮಜ ಜಾಳಿಲೇ ಮಹೇಶೇ । ತ್ಯಾಸೀ ಮ್ಯಾ ಅನಂಗೇ ಕೇಲೇ ಪಿಸೇ । ನವಲ ಧಾರಿಷ್ಟ ತುಝ್ಯಾ ಐಸೇ । ಪಾಹತಾ ನ ದಿಸೇ ತಿಹೀ ಲೋಕೀ ॥೧೨೪॥ ತ್ಯಾ ಮಜ ಕಾಮಾ ನ ಸರತೇ ಕೇಲೇ । ಶಾಂತೀಚೇ ಕಲ್ಯಾಣ ಪಾಹಾಲೇ । ಹೇ ತುವಾಂಚಿ ಏಕೇ ಯಶ ನೇಲೇ । ಸ್ವಭಾವಾ ಜಿಂಕಲೇ ನಿಜಶಾಂತಿಯೋಗೇ ॥೧೨೫॥ ತೋ ಮೀ ನ ಸರತಾ ಕೇಲಾ ಕಾಮ । ಕ್ರೋಧಾ ಆಣಿಲಾ ಉಪಶಮ । ವಾಸನೇಚಾ ಸಂಭ್ರಮ । ನಿತ್ಯನಿರ್ಭ್ರಮ ತ್ವಾಂ ಕೇಲಾ ॥೧೨೬॥ ಹೇ ನಾರಾಯಣಾ ತುರಿಝೀ ನಿಷ್ಠಾ । ನ ಯೇ ಆಣಿಕಾ ತಪೋನಿಷ್ಠಾ । ಕೇಲಾ ಅನುಭವಾಚಾ ಚೋಹಟಾ । ಶಾಂತೀಚಾ ಮೋಠಾ ಸುಕಾಳು ಕೇಲಾ ॥೧೨೭॥ ಮಾಗೇ ತಪಸ್ವೀ ವಾಖಾಣಿಲೇ । ಮ್ಹಣತೀ ಕಾಮಕ್ರೋಧಾ ಜಿಂಕಿಲೇ । ತ್ಯಾಂಸಿಹೀ ಆಮ್ಹೀ ಪೂರ್ಣ ಛಳಿಲೇ । ಏಕ ತೇ ಭಲೇ ಸಾಂಗೇನ ॥೧೨೮॥ ಕಪಿಲಾಐಸಾ ತೇಜೋರಾಶೀ । ಕ್ರೋಧೇ ತತ್ಕಾಳ ಛಳಿಲೇ ತ್ಯಾಸೀ । ಶಾಪು ದೇತಾಂಚಿ ಸಗರಾಸೀ । ತೋಹೀ ಕ್ರೋಧಾಚೇ ವಶ್ಯ ಝಾಲಾ ॥೧೨೯॥ ಕೋಪು ಆಲಾ ನಾರದಾಸೀ । ವೃಕ್ಷ ಕೇಲೇ ನಲಕೂಬರಾಂಸೀ । ಗೌತಮೇ ಅಹಲ್ಯೇಸೀ । ಕೋಪೇ ವನವಾಸೀ ಶಿಳಾ ಕೇಲೀ ॥೧೩೦॥ ಜೋ ಸರ್ವದಾ ವಿಘ್ನಾತೇ ಆಕಳೀ । ತ್ಯಾ ವಿಘ್ನೇಶಾತೇ ಕ್ರೋಧ ಛಳೀ । ತೇಣೇ ಅತಿಕೋಪೇ ಕೋಪಾನಳೀ । ಚಂದ್ರಾಸೀ ತತ್ಕಾಳೀ ದಿಧಲಾ ಶಾಪ ॥೧೩೧॥ ಕೋಪು ಆಲಾ ದುರ್ವಾಸಾಸೀ । ಶಾಪ ದಿಧಲಾ ಅಂಬರೀಷಾಸೀ । ದೇವೋ ಆಣಿಲಾ ಗರ್ಭವಾಸಾಸೀ । ಕ್ರೋಧೇ ಮಹಾಋಷೀ ಛಳಿಲೇ ಐಸೇ ॥೧೩೨॥ ಜೇ ದುಜೀ ಸೃಷ್ಟೀ ಕರೂ ಶಕತೀ । ತೇಹೀ ಕಾಮಕ್ರೋಧೇ ಝಡಪಿಜೇತೀ । ಸಾಗರೀ ಪಡೇ ಇಂದ್ರಸಂಪತ್ತೀ । ಹೇ ಕೋಧ್ರಾಚೀ ಖ್ಯಾತಿ ಪುರಾಣಸಿದ್ಧ ॥೧೩೩॥ ಇತರಾಂಚೀ ಗೋಠೀ ಕಾಯಸೀ । ಕ್ರೋಧೇ ಛಳಿಲೇ ಈಶ್ವರಾಸೀ । ತೇಣೇ ದೀಕ್ಷಿತಾ ದ್ವಿಜದಕ್ಷಾಸೀ । ಶಿರಚ್ಛೇದಾಸೀ ಕರವಿತಾ ಝಾಲಾ ॥೧೩೪॥ ಜೇಥ ಮೀ ಕಾಮು ಸ್ವಯೇ ವಸೇ । ತೇಥ ಕ್ರೋಧ ವಸೇ ಸಾವಕಾಶೇ । ಕಾಮ ಕ್ರೋಧ ಅಸತಚಿ ನಸೇ । ನಾರಾಯಣ ಐಸೇ ತುವಾ ಕೇಲೇ ॥೧೩೫॥ ಹೇ ಪರಮಾದ್ಭುತ ತುಝೇ ವೀರ್ಯ । ಆಣಿಕಾ ಏವಢೇ ನಾಹೀ ಧೈರ್ಯ । ಯಾಲಾಗೀ ತುಝೇ ಪರಿಚರ್ಯ । ಸದಾ ಮುನಿವರ್ಯ ಸೇವಿತೀ ಚರಣ ॥೧೩೬॥

ನನ್ನ ಮದನನ ಪ್ರಹಾರವು ದೇವ ದಾನವರಿಗೆ ಸಹಿಸುವುದಾಗುವುದಿಲ್ಲ. ಅಂದಮೇಲೆ ಮಾನವರು ಇದನ್ನು ಯಾರು ಎಂದು ಹೇಗೆ ಸಹಿಸಬೇಕು? ॥೧೨೩॥ ನನಗೆ ಶಂಕರನು ಸುಟ್ಟು ಬೂದಿಮಾಡಿದನು. ಆತನಿಗೂ ನಾನು ಅನಂಗ ಮದನನು ಹುಚ್ಚನನ್ನಾಗಿ ಮಾಡಿದೆನು. ಆದರೆ ನಿನ್ನಂತಹ ಆಶ್ಚರ್ಯಕಾರಕ ಧೈರ್ಯವು ಮೂರು ಲೋಕಗಳಲ್ಲಿ ಹುಡುಕಿದರೂ ಸಿಗಲಾರದು ॥೧೨೪॥ ನೀನು ನನ್ನಂತಹ ಪ್ರಭಾವಶಾಲಿ ಮದನನನ್ನು ಪರಾಭವಗೊಳಿಸಿರುವೆ. ಶಾಂತಿಯ ಕಲ್ಯಾಣವು ಉದಯಕ್ಕೆ ಬಂದಿತು. ಇಷ್ಟೊಂದು ಯಶವನ್ನು ನೀನೊಬ್ಬನೇ ಸಂಪಾದಿಸಿರುವೆ. ನಿನ್ನ ಶಾಂತಿಯಿಂದ ನಮ್ಮ ಸ್ವಭಾವವನ್ನು ಗೆದ್ದುಕೊಂಡಿರುವೆ ॥೧೨೫॥ ನನಗೆ ಕಾಮನಿಗೆ ಗೆದ್ದುಕೊಂಡು ಕ್ರೋಧದ ಗರ್ವವನ್ನೂ ಜೀರ್ಣಿಸಿರುವೆ. ವಾಸನೆಯ ಸಂಭ್ರಮವನ್ನು ಉಳಿಯದಂತೆ ಕೊನೆಗೊಳಿಸಿರುವೆ ॥೧೨೬॥ ಹೇ ನಾರಾಯಣನೇ, ಇತರ ಅನೇಕ ಮಹಾ ತಪಸ್ವಿಗಳಾದರು, ಆದರೆ ಅವರಿಗೆ ಈ ನಿನ್ನ ನಿಷ್ಠೆಯು ಎಂದೂ ಸಾಧ್ಯವಾಗಲಾರದು. ನಿನ್ನ ಸ್ವಾನುಭವವನ್ನು ಜಗಜಾಹೀರಗೊಳಿಸಿ ಶಾಂತಿಯ ದೊಡ್ಡದಾದ ಸುಕಾಳವನ್ನು ಮಾಡಿಬಿಟ್ಟಿರುವೆ ॥೧೨೭॥ ಪೂರ್ವದಲ್ಲಿ ಅನೇಕ ತಪಸ್ವಿಗಳು ಕಾಮ ಕ್ರೋಧಗಳನ್ನು ಗೆದ್ದಿರುವರು ಎಂದು ವರ್ಣನೆ ಮಾಡಿದ್ದು ತೋರುವುದು. ಆದರೆ ನಾವು ಅಂಥವರಿಗೂ ಬಿಡದೇ ಪೂರ್ಣವಾಗಿ ಛೇಡಿಸಿದ್ದೇವೆ. ಅವುಗಳನ್ನು ಬಿಚ್ಚಿ ಹೇಳುವೆ, ಕೇಳು ॥೧೨೮॥ ಕಪಿಲಾಋಷಿಗಳಂಥ ತೇಜಸ್ವಿಯು, ಆದರೆ ಆತನಿಗೂ ಕ್ರೋಧವು ಪೀಡಿಸಿಯೇತೀರಿತು. ಸಗರನಿಗೆ ಶಾಪ ಕೊಡುವಾಗ್ಗೆ ಆತನು ಕ್ರೋಧದ ಸ್ವಾಧೀನನಾದನು ॥೧೨೯॥ ನಾರದನಿಗೆ ಕ್ರೋಧವು ಬಂದಿತು. ಆಗ ಆತನು ಕುಬೇರನ ಪುತ್ರರಾದ ನಲಕುವರಿಗೆ ಶಪಿಸಿ ವೃಕ್ಷವನ್ನಾಗಿ ಮಾಡಿದನು. ಗೌತಮಋಷಿಯು ಕ್ರೋಧದಿಂದ ಸಂತಪ್ತನಾಗಿ ಪಾಪ, ಅಹಲ್ಯೆಯನ್ನು ವನದಲ್ಲಿ ಶಿಲೆಮಾಡಿ ಬಿಟ್ಟನು ॥೧೩೦॥ ಯಾವ ಸರ್ವದಾ ವಿಘ್ನಹರ್ತನಾದ ಗಣಪತಿಯು, ಆ ವಿಘ್ನೇಶನಿಗೂ ಪೀಡಿಸಲು ಕ್ರೋಧಾಗ್ನಿಯಿಂದ ಸಂತಪ್ತನಾದ ಈತನು ತತ್ಕಾಲದಲ್ಲಿ ಚಂದ್ರನಿಗೆ ಶಾಪವನ್ನು ಕೊಟ್ಟನು ॥೧೩೧॥ ದುರ್ವಾಸಋಷಿಗೂ ಕೋಪವು ಬಂದಿತು. ಆಗ ಆತನು ಅಂಬರೀಷನಿಗೆ ಶಾಪವನ್ನು ಕೊಟ್ಟನು. ಇದರಿಂದ ದೇವರಿಗೆ ಗರ್ಭವಾಸ ಮಾಡಬೇಕಾಯಿತು. ಈ ಪ್ರಕಾರವಾಗಿ ಕ್ರೋಧವು ಬ್ರಹ್ಮಋಷಿಗಳವರಿಗೂ ಪೀಡಿಸಿದೆ ॥೧೩೨॥ ಪ್ರತಿಸೃಷ್ಟಿ ಮಾಡುವಂಥವರಿಗೂ ಈ ಕಾಮಕ್ರೋಧಗಳು ಅಪ್ಪಳಿಸಿದವು. ಇಂದ್ರನ ಸಂಪತ್ತು ಎಲ್ಲವೂ ಸಮುದ್ರದಲ್ಲಿ ಬಿದ್ದವು. ಈ ಕ್ರೋಧದ ಖ್ಯಾತಿಯು ಪುರಾಣದಲ್ಲಿ ಪ್ರಸಿದ್ಧವಾಗಿದೆ ॥೧೩೩॥ ಇತರ ಮಂಡಳಿಯವರ ಮಾತೇಕೆ? ಕ್ರೋಧವು ಈಶ್ವರನಿಗೂ ಬಿಡದೇ ಛೇಡಿಸಿರುವುದು. ಈತನು ಕ್ರೋಧವಶನಾಗಿ ದೀಕ್ಷಿತನಾದ ದಕ್ಷಬ್ರಾಹ್ಮಣನ ಶಿರಚ್ಛೇದನವನ್ನು ವೀರಭದ್ರನಿಂದ ಮಾಡಿಸಿದನು ॥೧೩೪॥ ಎಲ್ಲಿ ನಾನು ಕಾಮನು ಸ್ವತಃ ಇದ್ದಲ್ಲಿ, ಅಲ್ಲಿ ಕ್ರೋಧನೂ ಮೆಲ್ಲಮೆಲ್ಲನೇ ಬಂದೇತೀರುವನು. ಆದರೆ ಹೇ ನಾರಾಯಣನೇ, ನೀನು ಯಾವ ಈ ಕಾಮಕ್ರೋಧಗಳಿಗೆ ಇದ್ದೂ ಇಲ್ಲದಂತೆ ಮಾಡಿರುವೆರೆ ॥೧೩೫॥ ನಿಮ್ಮ ಸಾಮರ್ಥ್ಯವು ಆಶ್ಚರ್ಯಕಾರಕವಾಗಿದೆ. ಇತರರಲ್ಲಿ ಇಷ್ಟೊಂದು ಸಾಮರ್ಥ್ಯವು ಇರುವುದಿಲ್ಲ. ಆದ್ದರಿಂದಲೇ ಮಹಾ ಮಹಾ ಋಷಿಗಳು ನಿಮ್ಮ ಚರಣ ಸೇವೆಯನ್ನು ಮಾಡುವರು ॥೧೩೬॥

ಶಾಂತೀಚ್ಯಾ ಚಾಡೇ ದೇವಾಧಿದೇವಾ । ಜೇ ನಿತ್ಯ ಕರಿತೀ ತುಝೀ ಸೇವಾ । ತೇ ಕಾಮಕ್ರೋಧಾದಿಸ್ವಭಾವಾ । ಸ್ಮರತಾ ತವ ನಾಂವಾ ಜಿಂಕಿತೀ ಸುಖೇ ॥೧೩೭॥ ಜೇಥ ಸನ್ಮಾನೇ ಕಾಮ ಪುರತ । ತೇಥ ಆದರೇ ಅನುಗ್ರಹೋ ಕರಿತ । ಕಾಮ ಸನ್ಮಾನೇ ಜೇಥೇ ಅತೃಪ್ತ । ತೇಥೇ ಶಾಪ ದೇತ ಅತಿಕ್ರೋಧೇ ॥೧೩೮॥ ಯಾಲಾಗೀ ಶಾಪಾನುಗ್ರಹಸಮರ್ಥ । ತೇ ಸರ್ವದಾ ಕಾಮಕ್ರೋಧಯುಕ್ತ । ಪರೀ ನವಲ ತುಝೇ ಸತ್ತ್ವೋಚಿತ । ಕೇಲೇ ಅಂಕಿತ ಕಾಮಕ್ರೋಧ ॥೧೩೯॥ ಮಜ ಗರ್ವ ನಾಹೀ ಸರ್ವಥಾ । ಹೇಹೀ ತುಜ ನಾಹೀ ಅಹಂತಾ । ಛಳವಾದ್ಯಾದ್ಯಾವೀ ಲಘುತಾ । ಅಥವಾ ಉಪೇಕ್ಷತಾ ನ ಕರಿಸೀ ॥೧೪೦॥ ಪೃಥ್ವೀ ದುಃಖೀ ಕರಿತೀ ನಾಂಗರೀ । ತೇ ಪಿಕೋನಿ ತ್ಯಾಂತೇ ಸುಖೀ ಕರೀ । ತೇವೀ ಅಪಕಾರ್‍ಯಾ ಜೋ ಉಪಕಾರೀ । ತೋ ಮೋಕ್ಷಾಚ್ಯಾಶಿರೀ ಮುಗುಟು ॥೧೪೧॥ ತುಜಮಾಜೀ ನಿರ್ವಿಕಾರ ಶಾಂತಿ । ಹೇ ನವಲ ನವ್ಹೇ ಕೃಪಾಮೂರ್ತಿ । ತುಝ್ಯಾ ಸ್ವರೂಪಾಚೀ ಸ್ಥಿತಿ । ಆಜಿ ನಿಶ್ಚಿತೀ ಕಳಲೀ ಆಮ್ಹಾ ॥೧೪೨॥ ತೂ ನಿರ್ಗುಣ ನಿರುಪಮ । ಮಾಯಾತೀತ ಪೂರ್ಣ ಬ್ರಹ್ಮ । ತುಝೇ ಸ್ವಭಾವೇ ಸ್ಮರತಾ ನಾಮ । ಸಕಾಮಾಹೀ ಕಾಮ ಸ್ಪರ್ಶೋ ನ ಶಕೇ ॥೧೪೩॥ ಜೋ ನಿತ್ಯ ಸ್ಮರೇ ತುಝೇ ನಾಮ । ತ್ಯಾಸೀ ಮೀ ಕಾಮಚಿ ಕರೀ ನಿಷ್ಕಾಮ । ಕ್ರೋಧಚಿ ಕರೀ ಕ್ರೋಧಾ ಶಮ । ಮೋಹೋ ತೋ ಪರಮ ಪ್ರಬೋಧ ಹೋಯ ॥೧೪೪॥ ಜೇ ಧೀರ ವೀರ ನಿಜಶಾಂತೀ । ಜ್ಯಾಂಸೀ ಪರಮಾನಂದೇ ನಿತ್ಯ ತೃಪ್ತಿ । ಐಶಿಯಾಂಚಿಯಾ ಅಮಿತ ಪಂಕ್ತಿ । ಪಾಯಾ ಲಾಗತೀ ತುಝಿಯಾ ॥೧೪೫॥ ತುಜ ಕರಾವಯಾ ನಮಸ್ಕಾರೂ । ಪುಢೇ ಸರಸೇ ಮಹಾಸಿದ್ಧಾಂಚಾ ಸಂಭಾರೂ । ತ್ಯಾಂಸಹೀ ನ ಲಭೇ ಅವಸರೂ । ತೂ ಪರಾತ್ಪರೂ ಪರಮಾತ್ಮಾ ॥೧೪೬॥ ತುಝಿಯಾ ಸೇವಕಾಕಡೇ । ವಿಘ್ನ ರಿಘತಾ ಹೋಯ ಬಾಪುಡೇ । ತೇ ರಿಘಾವಯಾ ತುಜಪುಢೇ । ಕೋಣ್ಯಾ ಪರಿಪಾಡೇ ರಿಘೇಲ ॥೧೪೭॥

ತ್ವಾಂ ಸೇವತಾಂ ಸುರಕೃತಾ ಬಹವೋಽಂತರಾಯಾಃ ಸ್ವೌಕೋ ವಿಲಂಘ್ಯ ಪರಮಂ ವ್ರಜತಾಂ ಪದಂ ತೇ ।
ನಾನ್ಯಸ್ಯ ಬರ್ಹಿಷಿ ಬಲೀನ್ ದದತಃ ಸ್ವಭಾಗಾನ್ । ಧತ್ತೇ ಪದಂ ತ್ವಮವಿತಾ ಯದಿ ವಿಘ್ನಮೂರ್ಧ್ನಿ ॥೧೦॥

ಅರ್ಥ: ದೇವತೆಗಳ ಅನಿತ್ಯ ಧಾಮಗಳನ್ನು ಉಲ್ಲಂಘಿಸಿ, ನಿನ್ನ ಪರಮ ಧಾಮವನ್ನು ಸೇರಬಯಸುವ ಭಕ್ತರ ಹಾದಿಯಲ್ಲಿ ದೇವತೆಗಳು ನಾನಾ ಬಗೆಯ ವಿಘ್ನಗಳನ್ನು ತಂದೊಡ್ಡುವರು. ಒಕ್ಕಲಿಗನು ರಾಜನಿಗೆ ಕರ ಕೊಡುವಂತೆ ಯಜ್ಞದಲ್ಲಿ ಪುರೋಡಾಶಾದಿ ದೇವಭಾಗವನ್ನು ಕೊಡುವ ನಿನ್ನ ಭಕ್ತರಿಗೆ ಅವರು ವಿಘ್ನಗಳನ್ನು ಮಾಡುವುದಿಲ್ಲ. ನೀನಾದರೂ ಸರ್ವ ದೇವತೆಗಳ ಅಧಿಪತಿಯಾಗಿರುವೆ. ನೀನು ನಿನ್ನ ಭಕ್ತರ ರಕ್ಷಣೆ ಮಾಡುವೆ. ನಿನ್ನ ಭಕ್ತನು ವಿಘ್ನಗಳ ತಲೆಯ ಮೇಲೆ ಕಾಲಿಡುವನು. ಇಷ್ಟೊಂದು ಸಾಮರ್ಥ್ಯವು ನಿನ್ನ ಭಕ್ತನಲ್ಲಿದ್ದಲ್ಲಿ ನಿನ್ನ ವಿಷಯಕ್ಕೆ ವಿಘ್ನಗಳ ಬಗ್ಗೆ ಯಾವ ಅನುಮಾನವನ್ನು ಮಾಡುವುದೇ ಬೇಡ.

ಹೇ ದೇವಾಧಿದೇವನೇ, ಶಾಂತಿಯ ಅಪೇಕ್ಷೆಪಟ್ಟು ಅವರು ನಿನ್ನ ಸೇವೆಯನ್ನು ನಿತ್ಯದಲ್ಲಿ ಮಾಡುವರು. ಅವರು ನಿನ್ನ ನಾಮಸ್ಮರಣೆಯಿಂದ ಕಾಮಕ್ರೋಧಾದಿಕರ ಸ್ವಭಾವವನ್ನು ಸಹಜವಾಗಿಯೇ ಗೆಲ್ಲುವರು ॥೧೩೭॥ ಎಲ್ಲಿ ಸನ್ಮಾನದಿಂದ ಕಾಮ ಅಂದರೆ ಇಚ್ಛೆಯು ಪೂರ್ಣಗೊಳ್ಳುವುದೋ, ಅಲ್ಲಿ ಆತನು ಆದರದಿಂದ ಅನುಗ್ರಹಿಸುವನು. ಎಲ್ಲಿ ಸನ್ಮಾನದಿಂದ ಆತನು ತೃಪ್ತನಾಗುವುದಿಲ್ಲವೋ, ಅಲ್ಲಿ ಆತನು ಕ್ರೋಧದಿಂದ ಶಾಪ ಕೊಡುವನು ॥೧೩೮॥ ಈ ಪ್ರಕಾರವಾಗಿ ಶಾಪಾನುಗ್ರಹ ಮಾಡುವ ವಿಷಯವಾಗಿ ಸಮರ್ಥರಾಗಿರುವ ಪುರುಷರು ಸದಾಸರ್ವದಾ ಕಾಮಕ್ರೋಧಯುಕ್ತರಾಗಿರುವರು. ಆದರೆ, ನಿನ್ನ ಮಹಿಮೆ ತಕ್ಕಂತೆ ಉಚಿತವಾದದ್ದು ಮಾಡಿರುವುದು ಮಹಾ ಕೌತುಕವಾಗಿದೆ. ನಿಮ್ಮ ಶಾಂತಿಯಿಂದ ಮತ್ತು ಸ್ವರೂಪ ನಿಷ್ಠೆಯಿಂದ ಕಾಮಕ್ರೋಧಗಳಿಗೆ ಅಂಕಿತಗೊಳಿಸಿರುವಿರಿ ॥೧೩೯॥ ಇಷ್ಟೊಂದು ಮಾಡಿ ತೋರಿಸಿದರೂ, ನಿಮಗೆ ಎಂತಹದ್ದೂ ಗರ್ವವಿಲ್ಲ, ಹೀಗಿರುವೆ ಎಂಬ ಅಹಂಕಾರವೂ ನಿಮಗಿಲ್ಲ. ಛೇಡಿಸಿದವರನ್ನು ಉಪೇಕ್ಷಿಸಬೇಕು. ಆದರೆ ನೀವು ಹಾಗೆ ಮಾಡಲಿಲ್ಲ ॥೧೪೦॥ ಜನರು ಭೂಮಿಯನ್ನು ನೇಗಿಲ ಹೊಡೆದು ಅದಕ್ಕೆ ದುಃಖ ಕೊಡುವರು, ಆದರೆ ಆ ಭೂಮಿಮಾತೆಯು ಬೆಳೆಕೊಟ್ಟು ಎಲ್ಲರನ್ನೂ ಸುಖೀ ಮಾಡುತ್ತಿರುವಳು. ಅದರಂತೆ ಅಪಕಾರ ಮಾಡಿದವರನ್ನು ಯಾರು ಉಪಕಾರ ಮಾಡುವರೋ, ಅವರು ಮೋಕ್ಷದ ಮಸ್ತಕ ಮೇಲಿನ ಮುಕುಟರಾಗಿರುವರು ॥೧೪೧॥ ನಿನ್ನಲ್ಲಿ ನಿರ್ವಿಕಾರವು, ಶಾಂತಿಯು ನೆಲೆಸಿರುವುದು, ಇದೇನು ಯಾವ ಆಶ್ಚರ್ಯವಲ್ಲ ನಿನ್ನ ಸ್ವರೂಪದ ನಿಜವಾದ ಸ್ಥಿತಿಯಾಗಿರುವುದು. ನಮಗಿಂದು ತಿಳಿಯಿತು ॥೧೪೨॥ ನೀನು ನಿರ್ಗುಣನು, ನಿರುಪಮನು, ಮಾಯಾತೀತನಾಗಿ ಪೂರ್ಣ ಬ್ರಹ್ಮನಾಗಿರುವೆ. ನಿನ್ನ ನಾಮಃ ಸ್ಮರಣೆಯನ್ನು ಸಹಜವಾಗಿ ಮಾಡಿದರೂ ಸಕಾಮನಿಗೂ ಕಾಮವು ಸ್ಪರ್ಶ ಮಾಡಲು ಸಾಧ್ಯವಿಲ್ಲ ॥೧೪೩॥ ಯಾರು ಸದಾ ಸರ್ವಕಾಲದಲ್ಲಿ ನಿನ್ನ ನಾಮಃ ಸ್ಮರಣೆಯನ್ನು ಮಾಡುವರೋ, ಅವರಿಗೆ ನಾನು ಕಾಮನಾದವನೇ ನಿಷ್ಕಾಮನನ್ನಾಗಿ ಮಾಡಿಬಿಡುವೆನು. ಮತ್ತು ಕ್ರೋಧವೇ ಕ್ರೋಧಕ್ಕೆ ಶಾಂತಗೊಳಿಸುವುದು. ಮೋಹವು ಪರಮಶ್ರೇಷ್ಠವಾಗುವುದು ॥೧೪೪॥ ನಿಜಶಾಂತಿಯ ಯೋಗದಿಂದ ಧೀರವೀರರಾಗಿ ಪರಮಾನಂದದಿಂದ ನಿತ್ಯ ತೃಪ್ತರಾದ ಮುಕ್ತ ಜನರ ಅಸಂಖ್ಯ ಪಂಕ್ತಿಯವರು ಬಂದು ನಿನ್ನ ಪಾದಗಳ ಸೇವೆಯನ್ನು ಮಾಡುವರು ॥೧೪೫॥ ನಿನ್ನನ್ನು ನಮಸ್ಕರಿಸಬೇಕೆಂದು ಹವಣಿಸಿ, ಮಹಾಸಿದ್ಧರ ಸಮುದಾಯವು ಮುಂದುಮುಂದಾಗುವುದು ಆದರೂ ಅವರಿಗೆ ಯಶವು ದೊರೆಯುವುದಿಲ್ಲ. ಹೀಗೆ ನೀನು ಪರಾತ್ಪರ ಗುರು, ಪರಮಾತ್ಮನಾಗಿರುವೆ ॥೧೪೬॥ ನಿನ್ನ ಸೇವಕರಲ್ಲಿ ವಿಘ್ನಗಳು ಬಂದಲ್ಲಿ, ಆ ವಿಘ್ನಗಳೇ ಹೀನದೀನವಾಗುವುವು. ಅಂದಮೇಲೆ ಅವು ನಿನ್ನ ಎದುರಿಗೆ ಅದಾವ ಬಲದಿಂದ ಬರಬೇಕು? ॥೧೪೭॥

ತಾಪಸಾ ಬಹು ವಿಘ್ನ ಅಪಾವೋ । ಆಮ್ಹೀ ಕರಾವಾ ಅಂತರಾವೋ । ಹಾ ಅಮುಚಾ ನಿಜಸ್ವಭಾವೋ । ನವ್ಹೇ ನವಲಾವೋ ನಾರಾಯಣಾ ॥೧೪೮॥ ಹೃದಯೀಂಚಾ ಗುಪ್ತ ಕರೋನಿ ಕಾಮು । ಬಾಹ್ಯ ಜಪ-ತಪ-ಭಕ್ತಿಸಂಭ್ರಮು । ಐಸೇ ಜೇ ಕಾ ಶಠ ಪರಮು । ವಿಘ್ನಾಂಚಾ ಆಕ್ರಮ ತ್ಯಾಂವರೀ ಚಾಲೇ ॥೧೪೯॥ ತೇ ಆಮುಚೀ ವಿಘ್ನಸ್ಥಿತಿ । ನ ಚಲೇ ತುಝಿಯಾ ಭಕ್ತಾಪ್ರತೀ । ತೂ ರಕ್ಷಿತಾ ಭಕ್ತಪ್ರತಿ । ತೇಥೇ ವಿಘ್ನಾಂಚೀ ಗತಿ ಪರಾಂಗ್‌ಮುಖ ಸದಾ ॥೧೫೦॥ ಮಾಝಿಯಾ ನಿಜಭಕ್ತಾಂಸೀ । ವಿಘ್ನೇ ಕೈಚೀ ಮ್ಹಣಸೀ ತ್ಯಾಂಸೀ । ಐಕ ತ್ಯಾಹೀ ಅಭಿಪ್ರಾಯಾಸೀ । ಸಾಂಗೇನ ತುಜಪಾಸೀ ದೇವಾಧಿದೇವಾ ॥೧೫೧॥ ಪಾವಾವಯಾ ನಿಜಪದಾತೇ । ಲಾತಾ ಹಾಣೂನ ಸ್ವರ್ಗಭೋಗಾತೇ । ಜೇ ನಿತ್ಯ ನಿಷ್ಕಾಮ ಭಜತೀ ತೂಂತೇ । ನಾನಾ ವಿಘ್ನೇ ತ್ಯಾಂತೇ ಸುರವರ ರಚಿತೀ ॥೧೫೨॥ ಉಲ್ಲಂಘೂನಿಯಾ ಆಮುತೇ । ಹೇ ಪಾವತೀ ಅಚ್ಯುತಪದಾತೇ । ಯಾಲಾಗೀ ಸುರವರ ತ್ಯಾತೇ । ಅತಿವಿಘ್ನಾಂತೇ ಪ್ರೇರಿತೀ ॥೧೫೩॥ ಬಳೀ ನೇದುನಿ ಆಮ್ಹಾಸೀ । ಜೇ ಜಾಊ ಪಾಹತೀ ಪೂರ್ಣಪದಾಸೀ । ಯೇಣೇ ಕ್ಷೋಭೇ ಇಂದ್ರಾದಿಕ ತ್ಯಾಂಪಾಸೀ । ನಾನಾ ವಿಘ್ನಾಸೀ ಮೋಕಲಿತೀ ॥೧೫೪॥ ಯಾಲಾಗೀ ತ್ಯಾಂಚ್ಯಾ ಭಜನಾಪಾಸೀ । ವಿಘ್ನೇ ಛಳೂ ಧಾಂವತೀ ಆಪೈಸೀ । ವಿಘ್ನೀ ಅಭಿಭವ ನವ್ಹೇ ತ್ಯಾಂಸೀ । ತೂ ಹೃಷೀಕೇಶೀ ರಕ್ಷಿತಾ ॥೧೫೫॥ ಸಾಂಡೂನಿ ಸಕಾಮ ಕಲ್ಪನಾ । ಜೇ ರತಲೇ ತುಝ್ಯಾ ಚರಣಾ । ತ್ಯಾಂಸ ಆಠಹೀ ಪ್ರಹರ ಜಾಣಾ । ತೂ ನಾರಾಯಣಾ ರಕ್ಷಿಸೀ ॥೧೫೬॥ ಭಕ್ತ ವಿಘ್ನೀ ಹೋತೀ ಕಾಸಾವಿಸೀ । ಧಾಂವ ಧಾಂವ ಮ್ಹಣತೀ ಹೃಷೀಕೇಶೀ । ತೇವ್ಹಾ ತೂ ಧಾಂವಣ್ಯಾ ಧಾಂವಸೀ । ನಿಷ್ಠೂರ ನವ್ಹಸೀ ನಾರಾಯಣಾ ॥೧೫೭॥ ವಿಘ್ನ ನ ಯೇತಾ ಭಕ್ತಾಪಾಸೀ । ಆಧೀಚ ಭಕ್ತಸಂರಕ್ಷಣಾಸೀ । ತೂ ಭಕ್ತಾಂಚೇ ಚೌಪಾಸೀ । ಅಹರ್ನಿಶೀ ಸಂರಕ್ಷಿತಾ ॥೧೫೮॥ ವಿಘ್ನ ಛಳೂ ಧಾಂವೇ ಸಕೋಪ । ತಂವ ವಿಘ್ನೀ ಪ್ರಗಟೇ ತುಝೇ ಸ್ವರೂಪ । ಯಾಲಾಗೀ ಭಕ್ತಾಂಸೀ ಅಲ್ಪ । ವಿಘ್ನಪ್ರತಾಪ ಬಾಧೂ ನ ಶಕೇ ॥೧೫೯॥ ಕಾಮೇ ಛಳಾವೇ ಹರಿಭಕ್ತಾಂಸೀ । ತಂವ ಹರಿ ಕಾಮಾಚಾ ಹೃದಯವಾಸೀ । ತೇವ್ಹಾ ವಿಘ್ನಚಿ ನಿರ್ವಿಘ್ನ ತ್ಯಾಂಸೀ । ಭಯ ಭಕ್ತಾಂಸೀ ಸ್ವಪ್ನೀ ನಾಹೀ ॥೧೬೦॥ ವಿಘ್ನ ಉಪಜವೀ ವಿರೋಧು । ತಂವ ವಿರೋಧಾ ಸಬಾಹ್ಯ ಗೋವಿಂದು । ಮಗ ವಿರೋಧ ತೋಚಿ ಮಹಾಬೋಧು । ಸ್ವಾನಂದಕಂದು ನಿಜಭಕ್ತಾ ॥೧೬೧॥

ಹೇ ನಾರಾಯಣನೇ, ತಪಸ್ಸನ್ನು ಆಚರಿಸುವ ಜನರಿಗೆ, ವಿಘ್ನಗಳನ್ನು ಒಡ್ಡುವುದು, ಅವರಿಗೆ ಉಪದ್ರವಿಸುವುದು, ಅವರ ತಪಸ್ಸನ್ನು ಭಂಗಗೊಳಿಸುವುದು. ಇದು ನಮ್ಮ ಸ್ವಭಾವವೇ ಆಗಿರುವುದು. ಆದ್ದರಿಂದ ಅದರಲ್ಲಿ ಯಾವ ಆಶ್ಚರ್ಯವಿಲ್ಲ ॥೧೪೮॥ ಹೃದಯದಲ್ಲಿ ಕಾಮದ ವಿಚಾರವಿಟ್ಟುಕೊಂಡು ತೋರಿಕೆಯ ಜಪ, ತಪ ಮತ್ತು ಭಕ್ತಿಯ ಆಡಂಬರವನ್ನು ಮಾಡುವವರು, ಸುಳ್ಳು ಹೇಳುವ ಢೋಂಗಿ ಜನರ ಮೇಲೆ ನಮ್ಮ ವಿಘ್ನಗಳ ಪ್ರಭಾವವು ನಡೆಯುವುದು ॥೧೪೯॥ ಯಾರು ಶುದ್ಧ ಅಂತಃಕರಣದಿಂದ ನಿನ್ನ ಭಕ್ತಿಯನ್ನು ಮಾಡುವುರೋ, ಅದರಲ್ಲಿ ನಮ್ಮ ವಿಘ್ನಗಳು ಏನೂ ಮಾಡಲಾರವು. ಕಾರಣವೇನೆಂದರೆ, ನೀನು ಭಕ್ತರ ರಕ್ಷಕನಾಗಿರುವೆ. ಆದ್ದರಿಂದ ವಿಘ್ನಗಳ ಗತಿಯು ಯಾವಾಗಲೂ ಓಮ್ಮುಖವಾಗುವುದು ॥೧೫೦॥ ನನ್ನ ಭಕ್ತರಿಗೆ ವಿಘ್ನಗಳು ಎಲ್ಲಿಯವು? ಹೀಗೆ ನೀನು ಹೇಳಬಹುದು. ಆದರೆ, ಹೇ ದೇವಾಧಿದೇವನೇ, ಅದನ್ನು ಸಹ ಹೇಳುವೆ, ಕೇಳು ॥೧೫೧॥ ಸ್ವರ್ಗಸುಖವನ್ನು ಒದ್ದು (ತ್ಯಜಿಸಿ) ನಿನ್ನ ನಿಜಪ್ರಾಪ್ತಿಗಾಗಿ ಯಾರು ನಿಷ್ಕಾಮ ಭಜನೆಯನ್ನು ಮಾಡುವರೋ, ಅವರಿಗೆ ದೇವತೆಗಳು ಅನೇಕ ಪ್ರಕಾರದ ವಿಘ್ನಗಳನ್ನು ರಚಿಸುವರು ॥೧೫೨॥ ನಮ್ಮನ್ನು ಉಲ್ಲಂಘಿಸಿ ಇವರು ಅಚ್ಯುತಪದವನ್ನು ಪ್ರಾಪ್ತಮಾಡಿಕೊಂಡು ಪರಮಾತ್ಮ ಸ್ವರೂಪರಾಗಬಹುದೆಂಬ ಭಯದಿಂದ ದೇವತೆಗಳು ಅವರ ಮಾರ್ಗದಲ್ಲಿ ಅನೇಕ ವಿಘ್ನಗಳನ್ನು ನಿರ್ಮಿಸುವರು ॥೧೫೩॥ ನಮಗೆ ನಮ್ಮ ಹವಿರ್ಭಾಗವನ್ನು ಕೊಡದೇ ಇವರು ಪೂರ್ಣತ್ವಕ್ಕೆ ಮುಟ್ಟಲು ಪ್ರಯತ್ನಿಸುವರು ಎಂದು ಇಂದ್ರಾದಿ ದೇವತೆಗಳು ಕ್ಷೋಭೆಗೊಂಡು ಅವರು ಅನೇಕ ವಿಘ್ನಗಳನ್ನು ನಿರ್ಮಿಸುವರು ॥೧೫೪॥ ಇದರಿಂದ ವಿಘ್ನಗಳು ಭಕ್ತರಿಗೆ ಪೀಡಿಸಲು ಧಾವಿಸುವುವು. ಆದರೆ ಹೃಷೀಕೇಶನಾದ ನೀನು ರಕ್ಷಿಸುತ್ತಿರಲು ಭಕ್ತರು ವಿಘ್ನಗಳಿಂದ ಸೋಲುವುದಿಲ್ಲ ॥೧೫೫॥ ಹೇ ನಾರಾಯಣನೇ, ಸಕಾಮ ಕಲ್ಪನೆತ್ಯಜಿಸಿ ನಿನ್ನ ಚರಣಗಳಲ್ಲಿ ಪ್ರೇಮದಿಂದ ರಮಮಾಣವಾದವರನ್ನು ನೀನು ಎಂಟು ಪ್ರಹರಗಳಲ್ಲಿಯೂ ಸಂರಕ್ಷಣೆಯನ್ನು ಮಾಡುತ್ತಿರುವೆ ॥೧೫೬॥ ಭಕ್ತರು ಯಾವ ಪ್ರಸಂಗದಲ್ಲಿ ವಿಘ್ನಗಳಿಂದ ತಳಮಳಿಸಿ ತತ್ತರಿಸಲು ಆಗ ಅವರು ನಿನ್ನನ್ನು ಕೂಗಿ ಕರೆಯುವರು. ಆಗ ನೀನು ಭಕ್ತರ ಕರೆಗೆ ಓಗೊಟ್ಟು ಧಾವಿಸಿ ಬರುವೆ. ಏಕೆಂದರೆ ನೀನು ನಿಷ್ಠುರನಲ್ಲ ॥೧೫೭॥ ಭಕ್ತರಲ್ಲಿ ವಿಘ್ನಗಳು ಒದಗುವ ಪೂರ್ವದಲ್ಲಿಯೇ ನೀನು ಹಗಲು ರಾತ್ರಿ ಅವರನ್ನು ಎಲ್ಲ ದೃಷ್ಟಿಯಿಂದ ರಕ್ಷಣೆಯನ್ನು ಮಾಡುತ್ತಿರುವೆ ॥೧೫೮॥ ವಿಘ್ನವು ಕೋಪದಿಂದ ಪೀಡಿಸಲು ಧಾವಿಸಿದರೆ ಆಗ ಆ ವಿಘ್ನದಲ್ಲಿ ನಿನ್ನ ಸ್ವರೂಪವು ಪ್ರಕಟವಾಗುವುದು. ಆದ್ದರಿಂದ ಭಕ್ತರಿಗೆ ವಿಘ್ನಗಳ ಬಾಧೆಯು ಸ್ವಲ್ಪವೂ ಆಗುವುದಿಲ್ಲ ॥೧೫೯॥ ಕಾಮನು ಹರಿಭಕ್ತರಿಗೆ ಪೀಡಿಸಲು ಹೋಗುವನು. ಆಗ ಕಾಮನ ಹೃದಯದಲ್ಲಿಯೂ ಸಹ ಶ್ರೀಹರಿಯ ವಾಸ್ತವ್ಯವು ಭಕ್ತರಿಗೆ ತೋರುವುದು; ಆದ್ದರಿಂದ ವಿಘ್ನವು ನಿರ್ವಿಘ್ನವಾಗಿ ನಿನ್ನ ಭಕ್ತರಿಗೆ ಸ್ವಪ್ನದಲ್ಲಿಯೂ ಅದರ ಭಯವಾಗುವುದಿಲ್ಲ ॥೧೬೦॥ ವಿಘ್ನವು ವಿರೋಧವನ್ನು ಹುಟ್ಟಿಸುವುದು. ಆದರೆ ಗೋವಿಂದನೇ ಆ ವಿರೋಧಕ್ಕೆ ಒಳಹೊರಗೆ ವ್ಯಾಪಿಸಿಕೊಳ್ಳುವನು. ಆದ್ದರಿಂದ ವಿರೋಧವೇ ಮಹಾಬೋಧೆಯಾಗುವುದು. ಅದು ನಿನ್ನ ಭಕ್ತನಿಗೆ ಸ್ವಾನಂದಕಂದವಾಗಿ ತೋರುವುದು ॥೧೬೧॥

ಜ್ಯಾಸೀ ತುಝ್ಯಾ ಚರಣೀ ಭಾವಾರ್ಥು । ತ್ಯಾಸೀ ವಿಘ್ನೀ ಪ್ರಗಟೇ ಪರಮಾರ್ಥು । ಐಸಾ ಭಾವಬಳೇ ತೂ ಸಮರ್ಥು । ಸಾಹ್ಯ ಸತತು ನಿಜಭಕ್ತಾ ॥೧೬೨॥ ಯಾಪರೀ ಸಮರ್ಥ ತೂ ಸಂರಕ್ಷಿತಾ । ತೇ ಜಿಣೋನಿ ವಿಘ್ನಾ ಸಮಸ್ತಾ । ಪಾಯ ದೇಊನಿ ಇಂದ್ರಪದಮಾಥಾ । ಪಾವತೀ ಪರಮಾರ್ಥಾ ತುಝಿಯಾ ಕೃಪೇ ॥೧೬೩॥ ದೇವೋ ಸಂರಕ್ಷಿತಾ ಜ್ಯಾಸೀ । ವಿಘ್ನೇ ಛಳೂ ಧಾಂವತೀ ತ್ಯಾಸೀ । ಮಾ ಸಕಾಮಾಚೀ ಗತೀ ಕಾಯಸೀ । ವಿದೇಹಾ ಮ್ಹಣಸೀ ತೇ ಐಕ ॥೧೬೪॥ ವಿಷಯಕಾಮ ಧರೋನಿ ಮನೀ । ಇಂದ್ರಾದಿ ದೇವಾ ಬಳಿಪೂಜನೀ । ಜೇ ಭಜಲೇ ಯಾಗಯಜನೀ । ದೇವ ತ್ಯಾಲಾಗೋನೀ ನ ಕರಿತೀ ವಿಘ್ನ ॥೧೬೫॥ ಇಂದ್ರ ಯಾಜ್ಞಿಕಾಂಚಾ ರಾಜಾ । ಸಕಾಮ ಯಾಜ್ಞಿಕ ದೇವಾಂಚ್ಯಾ ಪ್ರಜಾ । ಯಜ್ಞಭಾಗ ಅರ್ಪಿತೀ ವೋಜಾ । ಪಾವಲ್ಯಾ ಬಳೀ ಪೂಜಾ ನ ಕರಿತೀ ವಿಘ್ನ ॥೧೬೬॥ ಮ್ಹಣಸೀ ಕಾಮಾದಿಕ ವಿಟಂಬಿತೀ । ತೇ ನಿಷ್ಕಾಮ ಕದಾ ನಾತಳತೀ । ಸಹಜ ಕಾಮಾ ವಶ ಅಸತೀ । ಸದಾ ಕರ್ಮೇ ಕರಿತೀ ಸಕಾಮ ॥೧೬೭॥ ಜೇ ಮಜ ಕಾಮಾಸೀ ವಶ ಹೋತೀ । ತೇ ತಪ ವೇಂಚೋನಿ ಭೋಗ ಭೋಗಿತೀ । ಜೇ ಆತುಡಲೇ ಕ್ರೋಧಾಚ್ಯಾ ಹಾತೀ । ತೇ ವೃಥಾ ನಾಗವತೀ ತಪಾಸೀ ॥೧೬೮॥

ಕ್ಷುತ್ತೃಟ್‌ತ್ರಿಕಾಲಗುಣಮಾರುತಜೈಹ್ವಶೈಶ್ನ್ಯಾನಸ್ಮಾನಪಾರಜಲಧೀನತಿತೀರ್ಯ ಕೇಚಿತ್ ।
ಕ್ರೋಧಸ್ಯ ಯಾಂತಿ ವಿಫಲಸ್ಯ ವಶಂ ಪದೇ ಗೋರ್ಮಜ್ಜಂತಿ ದುಶ್ಚರತಪಶ್ಚ ವೃಥೋತ್ಸೃಜಂತಿ ॥೧೧॥

ಅರ್ಥ: ಅಳೆಯಲು ಬಾರದ ಕಡಲಿನ ನಿರಂತರ ಅಲೆಗಳಂತಿರುವ ಹಸಿವು, ಬಾಯಾರಿಕೆ, ಶೀತೋಷ್ಣಗಳು, ಬೀಸಿ ಬರುವ ಕಾಮೋತ್ತೇಜಕ ಗಾಳಿ, ಜಿಹ್ವಾಚಾಪಲ್ಯ ಮತ್ತು ಜನನೇಂದ್ರಿಯಗಳ ಸೆಳೆತ, ಇವುಗಳ ಪ್ರಭಾವವನ್ನು ದಾಟಲು ಕೆಲವು ಜನರು ಉಗ್ರವಾದ ವ್ರತಗಳನ್ನು ಕೈಗೊಳ್ಳುತ್ತಾರೆ. ಅಂತಹವರು ಇಂದ್ರಿಯ ತೃಪ್ತಿಯೆಂಬ ಶರಧಿಯನ್ನು ಕಠೋರ ತಪಸ್ಸಿನಿಂದ ದಾಟಿದರೂ ಕೂಡ ಕೋಪವಶರಾದಾಗ ಗೋವಿನ ಹೆಜ್ಜೆ ಗುರುತಿನಲ್ಲಿ ನಿಂತ ನೀರಿನಲ್ಲಿ ಮುಳುಗಿ ಹೋಗುತ್ತಾರೆ. ಹೀಗೆ ಅವರು ತಮ್ಮ ತಪಸ್ಸಿನ ಫಲವೆಲ್ಲವನ್ನೂ ವೃಥಾ ವ್ಯಯಿಸುತ್ತಾರೆ.

ಪ್ರಾಣಾಯಾಮೇ ಪ್ರಾಣಾಪಾನೀ । ನಿಜಪ್ರಾಣಾತೇ ಆಕಳೋನೀ । ವಾತ ವರ್ಷ ಶೀತ ಉಷ್ಣ ಸಾಹೋನೀ । ಜೇ ಅನುಷ್ಠಾನೀ ಗುಂತಲೇ ॥೧೬೯॥ ಕ್ಷುಧೇ ತೃಷೇನೇ ನೇಮೂನೀ । ಜಿವ್ಹಾ ಶಿಶ್ನ ಆಕಳೋನೀ । ಮಜ ಕಾಮಾತೇ ಜಿಂತಿಲೇ ಮಾನೂನೀ । ನಿಷ್ಕಾಮಾಭಿಮಾನೀ ಉನ್ಮತ್ತ ॥೧೭೦॥ ಅಲ್ಪ ಅಪಮಾನಾಹಾತೀ । ಜೇ ಕ್ರೋಧಾಸೀ ವಶ ಹೋತೀ । ತೇ ಶಾಪ ದೇಊನಿ ತಪಸಂಪತ್ತೀ । ವ್ಯರ್ಥ ನಾಗವಿತೀ ನಿಜನಿಷ್ಠಾ ॥೧೭೧॥ ಸಕಾಮಾಚ್ಯಾ ಅನುಷ್ಠಾನಾ । ಮಜ ಕಾಮಸಂಗೇ ಸ್ರಕ್‌ಚಂದನಾ । ಭೋಗ ಭೋಗಿತೀ ಸ್ವರ್ಗಾಂಗನಾ । ಅಮೃತಪಾನಾ ಪ್ರಾಶಿತೀ ॥೧೭೨॥

ನಿನ್ನ ಚರಣಗಳಲ್ಲಿ ದೃಢವಾದ ಭಾವವಿದ್ದವರಿಗೆ ವಿಘ್ನಗಳಲ್ಲಿಯೂ ಪರಮಾರ್ಥವು ಸ್ಪಷ್ಟವಾಗಿ ತೋರುವುದು. ಈ ಪ್ರಕಾರವಾಗಿ ಭಾವಕ್ಕಾಗಿ ಸರ್ವ ಸಮರ್ಥ ಪ್ರಭುವಾಗಿರುವ ನೀನು ನಿನ್ನ ಭಕ್ತರನ್ನು ನಿರಂತರವಾಗಿ ಸಹಾಯ ಮಾಡುವವನಾಗಿರುವೆ ॥೧೬೨॥ ಸರ್ವ ಸಮರ್ಥನಾದ ನೀನು ರಕ್ಷಣಕರ್ತನಾದ ಮೇಲೆ ಭಕ್ತನು ಎಲ್ಲ ವಿಘ್ನಗಳನ್ನೂ ಗೆಲ್ಲುವನು. ಇಂದ್ರಪದವನ್ನು ಉಲ್ಲಂಘಿಸಿ ನಿನ್ನ ಕೃಪೆಯಿಂದ ಪರಮಾರ್ಥ ಪದಕ್ಕೆ ಪ್ರಾಪ್ತನಾಗುವನು ॥೧೬೩॥ ಸ್ವತಃ ದೇವನು ರಕ್ಷಿಸುತ್ತಿರಲು ಆತನಿಗೂ ವಿಘ್ನಗಳು ಪೀಡಿಸಲು ಧಾವಿಸುವುವು. ಅಂದ ಮೇಲೆ ಸಕಾಮ ಪುರುಷರ ಯಾವ ಕಥೆ? ಅದನ್ನು ವರ್ಣಿಸುವೆ, ಕೇಳು ॥೧೬೪॥ ಮನದಲ್ಲಿ ವಿಷಯಗಳ ಇಚ್ಛೆಯನ್ನು ಧರಿಸಿ ಇಂದ್ರಾದಿ ದೇವತೆಗಳಿಗೆ ಹವಿರ್ಭಾಗವನ್ನು ಕೊಡಲು ಯಜ್ಞಯಾಗಾದಿಗಳನ್ನು ಮಾಡುವರು. ದೇವತೆಗಳು ಅವರಿಗೆ ವಿಘ್ನಗಳನ್ನು ಒಡ್ಡುವುದಿಲ್ಲ ॥೧೬೫॥ ಇಂದ್ರನು ಯಜ್ಞ ಮಾಡುವವರ ರಾಜನು, ಕಾಮನೆಗಳನ್ನು ಧರಿಸಿ ಯಜ್ಞ ಮಾಡುವವರೆಲ್ಲರೂ ಆತನ ಪ್ರಜೆಗಳು. ಅವರು ಉತ್ತಮ ಭಾಗವನ್ನು ಈತನಿಗೆ ಅರ್ಪಿಸುವರು. ಹೀಗೆ ಭಾಗಗಳು ಮುಟ್ಟಿದ ಮೇಲೆ ದೇವತೆಗಳು ಅವರಿಗೆ ವಿಘ್ನಗಳನ್ನು ಮಾಡರು ॥೧೬೬॥ ಕಾಮಾದಿಕರನ್ನು ಇವರು ಅವಮಾನಿಸಬಹುದೆಂದು ನೀನು ಕೇಳಬಹುದು, ಅದನ್ನೂ ಹೇಳುವೆ, ಇವರು ನಿಷ್ಕಾಮಕ್ಕೆ ಎಂದೂ ಮುಟ್ಟುವುದಿಲ್ಲ. ಇವರು ಕಾಮಕ್ಕೆ ಸಹಜವಾಗಿ ವಶವಾಗಿಬಿಡುವರು. ಕಾರಣ, ಇವರು ಯಾವಾಗಲೂ ಸಕಾಮ ಕರ್ಮಗಳನ್ನೇ ಮಾಡುತ್ತಿರುವರು ॥೧೬೭॥ ಈ ರೀತಿಯಲ್ಲಿ ಕಾಮಕ್ಕೆ ವಶರಾದವರು ತಮ್ಮ ತಪಸ್ಸನ್ನು ಖರ್ಚುಮಾಡಿ ಭೋಗಗಳನ್ನು ಭೋಗಿಸುವರು. ಮತ್ತು ಕ್ರೋಧದ ಕೈಯಲ್ಲಿ ಸಿಕ್ಕವರು ಸಹ ವ್ಯರ್ಥವಾಗಿ ತಪವನ್ನು ವ್ಯಯಗೊಳಿಸುವರು ॥೧೬೮॥

ಪ್ರಾಣಾಯಾಮದ ಸಹಾಯದಿಂದ ಪ್ರಾಣಾಪಾನಗಳ ಗತಿಯ ನಿರೋಧವನ್ನು ಮಾಡಿ, ನಿಜಪ್ರಾಣವನ್ನು ಸ್ವಾಧೀನಗೊಳಿಸಿ ಗಾಳಿ, ಮಳೆ, ಶೀತ, ಉಷ್ಣ ಸಹಿಸಿಕೊಂಡು ಅನುಷ್ಠಾನಗಳಲ್ಲಿ ಗುಂತಾಯಿಸಿರುವರು ॥೧೬೯॥ ಹಸಿವು, ನೀರಡಿಕೆಗಳನ್ನು ನಿಯಮನಗೊಳಿಸಿ, ನಾಲಿಗೆ, ಜನನೇಂದ್ರಿಯಗಳನ್ನು ಸ್ವಾಧೀನ ಮಾಡಿಕೊಂಡು ಕಾಮನಾದ ನನ್ನನ್ನು ಗೆದ್ದಿರುವೆ ಎಂಬ ಭಾವನೆಯಿಂದ ನಿಷ್ಕಾಮ ಭಾವದ ಅಭಿಮಾನದಿಂದ ಉನ್ಮತ್ತರಾಗುವರು ॥೧೭೦॥ ಇವರು ಅಲ್ಪ ಅಪಮಾನದಿಂದಲೇ ಕ್ರೋಧಕ್ಕೆ ವಶರಾಗಿ ಶಾಪವನ್ನು ಕೊಡುವರು. ಇದರಿಂದ ತಮ್ಮ ನಿಷ್ಠೆಯನ್ನು ಮತ್ತು ತಪಸಂಪತ್ತನ್ನು ವ್ಯರ್ಥವಾಗಿ ಕಳೆದುಕೊಳ್ಳುವರು ॥೧೭೧॥ ಸಕಾಮ ಅನುಷ್ಠಾನದಿಂದ ಸ್ವರ್ಗದಲ್ಲಿ ಪುಷ್ಪಮಾಲೆ, ಚಂದನ, ಅಪ್ಸರೆಯರು ಮತ್ತು ಅಮೃತ ಇತ್ಯಾದಿ ಭೋಗಗಳನ್ನು ನನ್ನ ಕಾಮದ ಆಸಕ್ತಿಯಿಂದ ಭೋಗಿಸುವರು ॥೧೭೨॥

ತ್ಯಾ ಮಜ ಕಾಮಾತೇ ಉಪೇಕ್ಷಿತೀ । ಆಣಿ ಕ್ರೋಧಾಸೀ ವಶ ಹೋತೀ । ತೇ ನಿಜತಪಾ ನಾಗವತೀ । ಶಾಪದೀಪ್ತಿ ಅನುವಾದೇ ॥೧೭೩॥ ಜೇ ಅಪಾರ ಸಾಗರ ತರತೀ । ತೇ ಗೋಪ್ಪದೋದಕೀ ಬುಡತೀ । ತೇವೀ ಮಜ ಕಾಮಾತೇ ಜಿಣೋನಿ ಜಾತೀ । ತೇಹೀ ನಾಗವಿಜೇತಿ ನಿಜಕ್ರೋಧೇ ॥೧೭೪॥ ಮಜ ಕಾಮಾಚೀ ಅಪೂರ್ಣ ಕಾಮವೃತ್ತಿ । ತೇಚಿ ಕ್ರೋಧಾಚೀ ದೃಢ ಸ್ಥಿತಿ । ಕಾಮ ಕ್ರೋಧ ಅಭಕ್ತಾ ಬಾಧಿತೀ । ಹರಿಭಕ್ತಾಪ್ರತೀ ತೇ ನ ಚಲೇ ॥೧೭೫॥ ತುರ್ಝ್ಯಾ ಭಕ್ತಾಪ್ರತೀ ಜಾಣ । ನಚಲೇ ಕಾಮಕ್ರೋಧಾದಿ ಬಂಧನ । ತೋ ತೂ ಭಕ್ತಪತಿ ನಾರಾಯಣ । ತುಜ ಆಮುಚೇ ಕಾಮಪಣ ಕೇವೀ ಬಾಧೀ ॥೧೭೬॥ ನೇಣತಾ ತುರ್ಝಾ ಮಹಿಮಾ । ಆಮ್ಹಿ ಕರೂ ಆಲೋ ನಿಜಧರ್ಮಾ ।ತುಜಪಾಸೀ ನಿತ್ಯ ನಿಜಕ್ಷಮಾ । ಪುರುಷೋತ್ತಮಾ ಕೃಪಾಳುವಾ ॥೧೭೭॥

ಇತಿ ಪ್ರಗೃಣತಾಂ ತೇಷಾಂ ಸ್ತ್ರಿಯೋಽತ್ಯದ್ಭುತದರ್ಶನಾಃ ।
ದರ್ಶಯಾಮಾಸ ಶುಶ್ರೂಷಾಂ ಸ್ವರ್ಚಿತಾಃ ಕುರ್ವತೀರ್ವಿಭುಃ ॥೧೨॥

ಅರ್ಥ: ಕಾಮದೇವ, ವಸಂತ ಇತ್ಯಾದಿಕರು ಈ ಪ್ರಕಾರವಾಗಿ ಸ್ತುತಿಸಲು ಆಗ ಸರ್ವಶಕ್ತಿಮಾನ ನಾರಾಯಣನು ತನ್ನ ಯೋಗಬಲದಿಂದ ಅವರ ಎದುರಿನಲ್ಲಿಯೇ ನಯನರಮ್ಯ, ರಮಣೀಯತೆಗಳನ್ನು ನಿರ್ಮಿಸಿ ತೋರಿಸಿದನು. ಅನೇಕ ಸ್ತ್ರಿಯರು ರೂಪಲಾವಣ್ಯ ಸಂಪನ್ನರಾಗಿದ್ದರು. ಮತ್ತು ವಸ್ತ್ರಾಲಂಕಾರಗಳಿಂದ ಸುಶೋಭಿತರಾಗಿದ್ದರು. ಅವರು ನಮ್ರಭಾವದಿಂದ ನಾರಾಯಣನ ಸೇವೆ ಮಾಡುತ್ತಿದ್ದರು.

ಅಪಕಾರ್ಯಾ ಉಪಕಾರ ಕರಿತೀ । ಯಾ ನಾಂವ "ನಿರ್ವಿಕಾರ ನಿಜಶಾಂತಿ" । ತೇಚಿ ಶಾಂತೀಚೀ ಪರಿಪಾಕಸ್ಥಿತಿ । ವಿಘ್ನಕರ್ತ್ಯಾಪ್ರತೀ ಹರಿದಾವೀ ॥೧೭೮॥ ಸಾಂಗೋನಿಯಾ ಆಪುಲೀ ಸ್ಥಿತೀ । ಕಾಮಾದಿಕ ಸ್ತುತಿ ಕರಿತೀ । ತಂವ ಪರಮಾಶ್ಚರ್ಯ ದೇಖತೀ । ಸ್ತ್ರಿಯಾ ಅತ್ಯದ್ಭುತೀ ಅಕಸ್ಮಾತ ॥೧೭೯॥ ಸ್ವರೂಪ ವೈಭವ ಅಳಂಕಾರ । ಶ್ರಿಯೇಹೂನಿಯಾ ಸುಂದರ । ಸೇವೇಲಾಗೀ ಅತಿತತ್ಪರ । ಸದಾ ಸಾದರ ಸಾವಧಾನೇ ॥೧೮೦॥ ನವಲ ಲಾಘವ ನಾರಾಯಣಾ । ಕೈಸೇಯಾ ದಾಖವಿಲೇ ವಿಂದಾನಾ । ತ್ಯಾ ಸ್ತ್ರಿಯಾಖಾಲೀ ಸ್ವರ್ಗಾಂಗನಾ । ದಿವಾ ಖದ್ಯೋತ ಜಾಣಾ ತೈಶಾ ದಿಸತೀ ॥೧೮೧॥

ತೇ ದೇವಾನುಚರಾ ದೃಷ್ಟ್ವಾ ಸ್ತ್ರಿಯಃ ಶ್ರೀರಿವ ರೂಪಿಣೀಃ ।
ಗಂಧೇನ ಮುಮುಹುಸ್ತಾಸಾಂ ರೂಪೌದಾರ್ಯಹತಶ್ರಿಯಃ ॥೧೩॥

ಅರ್ಥ: ನಾರಾಯಣನು ಉತ್ಪನ್ನಗೊಳಿಸಿರುವ ಸಾಕ್ಷಾತ್ ಲಕ್ಷ್ಮಿಯಂತಿರುವ ಆ ಸ್ತ್ರಿಯರನ್ನು ಕಂಡು ಕಾಮಾದಿ ದೇವಾನುಚರರು ಅವರ ಉತ್ಕೃಷ್ಟ ರೂಪದಿಂದ ನಿಸ್ತೇಜರಾದರು ಮತ್ತು ಆ ಸ್ತ್ರಿಯರ ಸ್ವಾಭಾವಿಕ ಸುಗಂಧದಿಂದ ಮೋಹಿತರಾದರು. ॥೧೩.೧॥

ಯಾ ಸ್ತ್ರಿಯಾ ದೇಖೋನಿ ದಿಠೀ । ಕಾಮು ಮೂರ್ಚ್ಛಿತ ಪಡಿಲಾ ಸೃಷ್ಟೀ । ವಸಂತ ಘಟಘಟಾ ಲಾಳ ಘೋಟೀ । ಕ್ರೋಧಾಚೀ । ದೃಷ್ಟೀ ತಟಸ್ಥ ಠೇಲೀ ॥೧೮೨॥

ಆದರೆ ಇಂತಹ ಭೋಗಗಳನ್ನು ಕೊಡುವ ನನ್ನ ಕಾಮದ ಉಪೇಕ್ಷೆಯನ್ನು ಮಾಡಿ ಇವರು ಕ್ರೋಧಕ್ಕೆ ವಶರಾಗುವರು. ಯಾರಿಗೋ ಪ್ರಖರವಾದ ಶಾಪವನ್ನು ಕೊಟ್ಟು ತಮ್ಮ ಸಂಪೂರ್ಣ ತಪಸ್ಸಿನಮೇಲೆ ನೀರು ಹಣಿಸುವರು ॥೧೭೩॥ ಅಪಾರವಾದ ಸಮುದ್ರದಲ್ಲಿ ಈಜಿ ಪಾರಾಗುವವರು ಆಕಳ ಹೆಜ್ಜೆಯ ನಿಂತ ನೀರಿನಲ್ಲಿ ಮುಳುಗಿ ಹೋಗುವಂತೆ, ನನಗೆ ಕಾಮನಿಗೆ ಗೆದ್ದುಕೊಂಡಿದ್ದರೂ ಅವರು ತಮ್ಮ ಕ್ರೋಧದಿಂದ ಶೋಷಣೆಗೆ ಗುರಿಯಾಗುವರು ॥೧೭೪॥ ನನ್ನ ಕಾಮದ ಅತೃಪ್ತಿಯೇ ಅದು ಕ್ರೋಧದ ದೃಢಸ್ಥಿತಿಯಾಗಿರುವುದು. ಆದರೆ ಕಾಮ, ಕ್ರೋಧಗಳು ಅಭಕ್ತರಿಗೆ ಪೀಡಿಸುವುವು. ಹರಿಭಕ್ತರ ಎದುರು ಅವರದೇನೂ ನಡೆಯಲಾರದು ॥೧೭೫॥ ಹೀಗೆ ನಿನ್ನ ಭಕ್ತರಿಗೆ ಕಾಮಕ್ರೋಧಾದಿಕರಿಂದ ಬಂಧನವು ಸಾಧ್ಯವಿಲ್ಲದಿರುವಾಗ, ನೀನಂತೂ ಭಕ್ತಪತಿಯಾದ ನಾರಾಯಣನು. ನಿನಗೆ ನಮ್ಮ ಕಾಮತ್ವವು ಹೇಗೆ ಬಾಧಿಸೀತು? ॥೧೭೬॥ ಈ ನಿನ್ನ ಮಹಿಮೆಯನ್ನು ನಾವು ಅರಿಯದೇ ನಮ್ಮ ಧರ್ಮವನ್ನು ಪ್ರದರ್ಶಿಸಲು ಬಂದೆವು. ಆದರೆ ಹೇ ಕೃಪಾವಂತನಾದ ಪುರುಷೋತ್ತಮನೇ, ನಿನ್ನಲ್ಲಿ ಸದಾಸರ್ವದಾ ಕ್ಷಮೆಯು ವಾಸಮಾಡಿಕೊಂಡಿದೆ ॥೧೭೭॥

ಅಪಕಾರ ಮಾಡಿದವರಲ್ಲಿ ಉಪಕಾರವನ್ನು ಮಾಡುವುದು ಇದಕ್ಕೇನೇ "ನಿರ್ವಿಕಾರ ಶಾಂತಿ" ಎನ್ನುವರು. ಈ ಶಾಂತಿಯ ಪೂರ್ಣಾವಸ್ಥೆಯನ್ನು ನಾರಾಯಣನು ವಿಘ್ನಕಾರಕರಿಗೆ ತೋರಿಸಿಕೊಟ್ಟನು ॥೧೭೮॥ ಕಾಮಾದಿಕರು ತಮ್ಮ ಸ್ಥಿತಿಗತಿಗಳನ್ನು ನಿವೇದಿಸಿ ಅನೇಕ ಪ್ರಕಾರವಾಗಿ ನಾರಾಯಣನನ್ನು ಸ್ತುತಿಸಿದರು. ಇಷ್ಟರಲ್ಲಿಯೇ ಅವರಿಗೆ ಅಲ್ಲಿ ಅದ್ಭುತವಾದ ಚಮತ್ಕಾರವು ಅವರ ದೃಷ್ಟಿಗೆ ಗೋಚರಿಸಿತು. ಅಲ್ಲಿ ಅಕಸ್ಮಾತ್ತಾಗಿ ಉತ್ತಮೋತ್ತಮ ಸ್ತ್ರಿಯರು ಉತ್ಪನ್ನರಾದದ್ದು ಅವರಿಗೆ ಕಾಣಿಸಿತು ॥೧೭೯॥ ಸ್ವರೂಪದಿಂದ, ವೈಭವದಿಂದ, ಅಲಂಕಾರ ಇತ್ಯಾದಿಗಳಿಂದ ಅವರು ಲಕ್ಷ್ಮಿಕ್ಕಿಂತಲೂ ಸುಂದರವಾಗಿ ಕಾಣಿಸಹತ್ತಿದರು. ಹೀಗಿದ್ದರೂ ಅವರು ಸೇವೆಗಾಗಿ ಸಾವಧಾನದಿಂದ ಆದರದಿಂದ ತತ್ಪರರಾಗಿದ್ದರು ॥೧೮೦॥ ನಾರಾಯಣನ ಈ ಲೀಲೆಯು ಅದೆಂತಹ ವಿಲಕ್ಷಣವು? ಈತನು ಎಂತಹ ಚಮತ್ಕಾರವನ್ನು ತೋರಿಸಿದನು? ಈ ಸ್ತ್ರಿಯರನ್ನು ಕಂಡಾಕ್ಷಣವೇ ಅವರು ಸೂರ್ಯನ ಎದುರು ಮಿಣುಕುವ ಹುಳದಂತೆ ನಿಸ್ತೇಜರಾಗಿ ಕಾಣಹತ್ತಿದರು ॥೧೮೧॥

ಈ ಸ್ತ್ರಿಯರನ್ನು ನೋಡುತ್ತಲೇ ಮನ್ಮಥನು ಮೂರ್ಛಿತನಾಗಿ ಭೂಮಿಯಮೇಲೆ ಬಿದ್ದನು. ವಸಂತನ ಬಾಯಿಯಲ್ಲಿ ನೀರು ಬರಹತ್ತಿತು ಮತ್ತು ಕ್ರೋಧನು ಚಿತ್ರದ ಗೊಂಬೆಯಂತೆ ತಟಸ್ಥನಾದನು ॥೧೮೨॥

ಭ್ರಮರ ವಿಸರಲೇ ಝುಣತ್ಕಾರ । ಕೋಕಿಳಾ ವಿಸರಲ್ಯಾ ಪಂಚಮ ಸ್ವರ । ಪ್ರಾಣ ವಿಸರಲಾ ಸಂಚಾರ । ದೇವಾನುಚರ ಭುಲಲೇ ।।೧೮೩।। ದೇಖೋನಿ ತ್ಯಾಂಚಿಯಾ ಸ್ವರೂಪಾಸೀ । ಅಪ್ಸರಾ ದಿಸತೀ ಜೈಶಾ ದಾಸೀ । ಅತ್ಯಂತ ಲಜ್ಜಾ ಝೂಲೀ ತ್ಯಾಂಸೀ । ಕಾಳಿಮೇಸೀ ಉತರಲ್ಯಾ ।।೧೮೪।। ತ್ಯಾಂಚೇ ಅಂಗೀಚಾ ಸುಗಂಧ ವಾತು । ತೇಣೇ ಭುಲಲಾ ವಸಂತು । ಮಲಯಾನಿಲ ಝೂಲಾ ಭ್ರಾಂತು । ತ್ಯಾಂಚಾ ಅಂಗವಾತು ಲಾಗತಾ ।।೧೮೫।। ನಾರಾಯಣಾಚೀ ವಿದ್ಯಾ ಕೈಸೀ । ಜೇ ಭುಲವೂ ಆಲೇ ಆಪಣಾಸೀ । ಭುಲಿ ಪಾಡಲೀ ತಯಾಂಸೀ । ಯೋಗಮಾಯೇಸೀ ದಾವೂನೀ ।।೧೮೬।। ಸುಂದರತ್ವೇ ರಂಭಾ ತಿಲೋತ್ತಮಾ । ಜಿಯಾ ಮಂದರಮಥನೀ ಜಿಂತಿಲಿಯಾ ರಮಾ । ರಮೇಹೂನಿಯಾ ಉತ್ತಮಾ । ಉತ್ತಮೋತ್ತಮಾ ಅತಿರೂಪೇ ।।೧೮೭।।

ತಾನಹ ದೇವದೇವೇಶಃ ಪ್ರಣತಾನ್ ಪ್ರಹಸನ್ನಿವ ।
ಆಸಾಮೇಕತಮಾಂ ವೃಙ್ಧ್ವಂ ಸವರ್ಣಾಂ ಸ್ವರ್ಗಭೂಷಣಾಮ್ ।।೧೪।।

ಅರ್ಥ: ದೇವದೇವೇಶ ಭಗವಾನ ನಾರಾಯಣನು ನಗುನಗುತ್ತ ಹೇಳಿದನು, ನೀವು ಇವರಲ್ಲಿ ನಿಮಗೆ ಅನುರೂಪವಾದ ಒಬ್ಬ ಸ್ತ್ರೀಯಳನ್ನು ಗ್ರಹಣ ಮಾಡಿರಿ ಈಕೆಯು ಸ್ವರ್ಗಲೋಕದ ಶೋಭೆಯನ್ನು ಬೆಳೆಸುವಳು.

ತೇ ಅತಿಆಶ್ಚರ್ಯ ದೇಖೋನ । ಝೂಲೇ ಕಾಮಾದಿಕ ಮೂರ್ಚ್ಛಾಪನ್ನ । ತಯಾಪ್ರತಿ ನಾರಾಯಣ । ಕಾಯ ಹಾಂಸೋನಿ ಬೋಲಿಲಾ ।।೧೮೮।। ಆಮ್ಹೀ ಅವಶ್ಯ ಪೂಜಾವೇ ತುಮ್ಹಾಸೀ । ಕಾಂಹೀ ಅರ್ಪಾವೇ ಬಲಿದಾನಾಸೀ । ಸಂತೋಷಾವಯಾ ಇಂದ್ರಾಸೀ । ಯಾಂತೀಲ ಏಕಾದಿ ದಾಸೀ ಅಂಗೀಕಾರಾ ತುಮ್ಹೀ ।।೧೮೯।। ಯಾಂಚೇ ಸೌಂದರ್ಯ ಅತಿಥೋರ । ಮ್ಹಣಾಲ ಹೋಈಲ ಅಪಮಾನಕರ । ತುಮ್ಹಾ ಸಮಾನ ಜೇ ಸುಂದರ । ತಿಚಾ ಅಂಗೀಕಾರ ಕರಾವಾ ತುಮ್ಹೀ ।।೧೯೦।। ಮ್ಹಣಾಲ ಯಾಂತ ನಾಹೀ ಹೀನ । ಅವಘ್ಯಾ ಸೌಂದರ್ಯೇ ಸಂಪೂರ್ಣ । ಕೋಣೀ ನ ದಿಸೇ ಆಮ್ಹಾ ಸಮಾನ । ಕೇವೀ ಆಪಣ ಅಂಗೀಕರಾವೀ ।।೧೯೧।। ಜರೀ ನಾಹೀ ತುಮ್ಹಾ ಸಮಾನ । ಸಕಳ ಸೌಂದರ್ಯೇ ಅತಿಸಂಪನ್ನ । ತರೀ ಏಕೀಚೇ ಕರಾವೇ ವರಣ । ಹೋಈಲ ಭೂಷಣ ಸ್ವರ್ಗಾಸೀ ।।೧೯೨।। ಐಸೇ ನಾರಾಯಣಾಚೇ ವಚನ । ಐಕೋನಿ ಹರಿಖಲೀ ಸಂಪೂರ್ಣ । ಕರೂನಿಯಾ ಸಾಷ್ಟಾಂಗ ನಮನ । ಮಸ್ತಕೀ ವಚನ ವಂದಿಲೇ ।।೧೯೩।।

ಭ್ರಮರಗಳಿಗೆ ಝಣತ್ಕರಿಸುವಿಕೆಯು ಮರುವಾಯಿತು. ಕೋಗಿಲೆಗಳ ಕಂಠದಿಂದ ಪಂಚಮ ಸ್ವರವು ಬಾರದಾಯಿತು. ಪ್ರಾಣವು ಸಂಚರಿಸುವುದನ್ನು ಮರೆಯಿತು. ಈ ಪ್ರಕಾರವಾಗಿ ಆ ಎಲ್ಲ ದೇವತೆಗಳ ಸೇವಕರು ಭ್ರಮಿಷ್ಠರಾದರು ।।೧೮೩।। ಆ ಸ್ತ್ರೀಯರನ್ನು ಕಾಣುತ್ತಲೇ ಅಪ್ಸರೆಯರು ದಾಸಿಯರಂತೆ ಕಾಣಹತ್ತಿದರು. ಅವರಿಗೆ ಬಹಳ ನಾಚಿಕೆಯಾಗಿ ಮುಖಗಳು ಕಪ್ಪಾದವು ।।೧೮೪।। ಆ ಸ್ತ್ರೀಯರ ಅಂಗದಿಂದ ಹೊರಡುವ ಪರಿಮಳದಿಂದ ವಸಂತನು ಭುಲಾಯಿಸಿದನು. ಇವರ ಅಂಗವಾಯುವಿನ ಸುಗಂಧಯುಕ್ತವು ಸ್ಪರ್ಶವಾಗುತ್ತಲೇ ಮಲಯ ಪರ್ವತವೂ ಭ್ರಾಂತಿಗೊಳಗಾಯಿತು ।।೧೮೫।। ಇದೆಂತಹ ನಾರಾಯಣನ ವಿದ್ಯೆ? ತನ್ನನ್ನು ಭುಲಾಯಿಸಲು ಬಂದವರನ್ನೇ ಭುಲಾಯಿಸಿಬಿಟ್ಟನು. ತನ್ನ ಯೋಗಮಾಯೆಯ ಅದ್ಭುತ ಸಾಮರ್ಥ್ಯವನ್ನು ತೋರಿಸಿದನು ।।೧೮೬।। ರಂಭೆ ಮತ್ತು ತಿಲೋತ್ತಮೆ ಇವರು ಅತಿಶಯ ಸೌಂದರ್ಯವತಿಯರು. ಆದರೆ ಸಮುದ್ರ ಮಂಥನದಲ್ಲಿ ಉತ್ಪನ್ನಳಾದ ಲಕ್ಷ್ಮೀಯು ತನ್ನ ಸೌಂದರ್ಯದಿಂದ ಈ ಇಬ್ಬರನ್ನೂ ಗೆದ್ದಿದ್ದಳು. ಆದರೆ ಇಂದು ನಾರಾಯಣನು ನಿರ್ಮಾಣ ಮಾಡಿದ ಸ್ತ್ರೀಯರು ರೂಪದಿಂದ ಲಕ್ಷ್ಮೀಗಿಂತಲೂ ಉತ್ತಮರಾಗಿದ್ದರು ।।೧೮೭।।

ಈ ಅದ್ಭುತವನ್ನು ಆಶ್ಚರ್ಯವನ್ನು ಕಂಡು ಕಾಮಾದಿಕರೆಲ್ಲರೂ ಮೂರ್ಛಿತರಾಗಿ ಬಿದ್ದರು. ಇವರು ಎಚ್ಚರಾದಮೇಲೆ ಶ್ರೀನಾರಾಯಣನು ನಗುನಗುತ್ತ ಅವರಿಗೆ ಹೇಳಿದನು ।।೧೮೮।। ನಾವು ನಿಮ್ಮ ಪೂಜೆಯನ್ನು ಅವಶ್ಯವಾಗಿ ಮಾಡಬೇಕು. ನಿಮಗೆ ಏನಾದರೂ ಉಡುಗರೆಯನ್ನು ಕೊಡಬೇಕು. ಇಂದ್ರನಿಗೆ ಸಂತೋಷಗೊಳಿಸಲು ಈ ದಾಸಿಯರಲ್ಲಿ ಯಾರಿಗಾದರೂ ನೀವು ಸ್ವೀಕರಿಸಿರಿ ।।೧೮೯।। ಇವರ ಸೌಂದರ್ಯವು ಬಹು ಶ್ರೇಷ್ಠವಾಗಿದೆ. ತಮಗೆ ಇದು ಅಪಮಾನಕಾರಕವಾದೀತು ಎಂದು ಅನಿಸಿದರೆ, ನಿಮ್ಮಷ್ಟೇ ಸೌಂದರ್ಯವುಳ್ಳ ಸ್ತ್ರೀಯನ್ನು ಸ್ವೀಕರಿಸಿರಿ ।।೧೯೦।। ಕದಾಚಿತ್ ನೀವು ಹೀಗೂ ಹೇಳಬಹುದು. ಇವರಲ್ಲಿ ಯಾರೊಬ್ಬರೂ ಸೌಂದರ್ಯದಿಂದ ಕಡಿಮೆ ಇಲ್ಲ. ಎಲ್ಲರೂ ಸೌಂದರ್ಯದಿಂದ ಪರಿಪೂರ್ಣರಾಗಿರುವರು. ನಮಗೆ ಶೋಭಿಸುವಂಥವರು ಇವರಲ್ಲಿ ಒಬ್ಬರೂ ಕಾಣರು. ಹಾಗಿದ್ದಲ್ಲಿ ನಾವು ಹೇಗೆ ಅಂಗೀಕರಿಸಬೇಕು? ।।೧೯೧।। ಹಾಗಾದರೆ ಹೇಳುವೆ, ನಿಮ್ಮ ಹಾಗೆ ಇವರಲ್ಲಿ ಯಾರೂ ಇರದಿದ್ದರೆ ಎಲ್ಲರೂ ಸೌಂದರ್ಯದಲ್ಲಿ ಸರ್ವೋತ್ಕೃಷ್ಟರಾಗಿದ್ದರೆ, ಒಬ್ಬಳನ್ನಾದರೂ ನೀವು ಅಂಗೀಕರಿಸಿರಿ. ಇದರಿಂದ ಸ್ವರ್ಗಕ್ಕೆ ಒಂದು ಭೂಷಣವಾಗುವುದು ।।೧೯೨।। ಈ ಯಾವ ನಾರಾಯಣನ ಭಾಷಣವನ್ನು ಕೇಳಿ ಎಲ್ಲರಿಗೂ ಬಹಳ ಸಂತೋಷವಾಯಿತು. ಇವರು ನಾರಾಯಣನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಆತನ ವಚನವನ್ನು ಶಿರಸಾವಂದಿಸಿದರು ।।೧೯೩।।

ಓಮಿತ್ಯಾದೇಶಮಾದಾಯ ನತ್ವಾ ತಂ ಸುರವಂದಿನಃ ।
ಉರ್ವಶೀಮಪ್ಸರಃ ಶ್ರೇಷ್ಠಾಂ ಪುರುಸ್ಕೃತ್ಯ ದಿವಂ ಯಯುಃ ॥೧೫॥
ಇಂದ್ರಾಯಾನಮ್ಯ ಸದಸಿ ಶೃಣ್ವತಾಂ ತ್ರಿದಿವೌಕಸಾಮ್ ।
ಊಚುರ್ನಾರಾಯಣ ಬಲಂ ಶಕ್ರಸ್ತತ್ರಾಸ ವಿಸ್ಮಿತಃ ॥೧೬॥

ಅರ್ಥ: ಆಗ ಕಾಮಾದಿಕರು ಒಳ್ಳೆಯದು ಎಂದು ಒಪ್ಪಿಕೊಂಡು ನಮಸ್ಕರಿಸಿ ಉರ್ವಶೀಯನ್ನು ತಮ್ಮ ಸಂಗಡ ಕರೆದುಕೊಂಡು ಸ್ವರ್ಗಲೋಕಕ್ಕೆ ಹೋದರು. ಅಲ್ಲಿ ಇಂದ್ರನಿಗೆ ಸರ್ವ ಸಭೆಯ ಸಮಕ್ಷಮದಲ್ಲಿ ಆಣೆ ಇಟ್ಟು ನಾರಾಯಣನ ಸಾಮರ್ಥ್ಯವನ್ನು ಹೇಳಿದರು. ಇದನ್ನು ಕೇಳಿ ಇಂದ್ರನಿಗೆ ಭಯವಾಗಿ ವಿಸ್ಮಯನಾದನು.

ಐಕೋನಿ ನಾರಾಯಣವಚನ । ಮಸ್ತಕಾಂಬುಜೇ ಕರೂನಿಯಾ ನಮನ । ಉರ್ವಶೀ ಪುಢಾ ಸೂನ । ಕಾಮಾದಿ ಗಣ ನಿಘಾಲೇ ವೇಗೀ ॥೧೯೪॥ ನಾರಾಯಣಾಚೇ ಊರೂಸ್ಪರ್ಶೀ । ಉಭೀ ಹೋತೀ ನಾರಾಯಣಾಪಾಶೀ । ತೇಚಿ ನಾಂವ ಝಾಲೇ ತಿಸೀ । ಮ್ಹಣತೀ "ಉರ್ವಶೀ" ಸ್ವರ್ಗಾಂಗನಾ ॥೧೯೫॥ ತೇ ದೇವಾಂಚೇ ದೇವದೂತ । ಸ್ವರ್ಗಾ ಪಾವಲೇ ಸಮಸ್ತ । ಮಗ ಶಕ್ರಾಚೇ ಸಭೇಆಂತ । ಸಾಂಗತೀ ಅದ್ಬುತ ನಾರಾಯಣಶಕ್ತಿ ॥೧೯೬॥ ತಿಹೀ ನಾರಾಯಣಾಚೇ ಚರಿತ್ರ । ಸಾಂಗಿತಲೇ ಅತಿಪವಿತ್ರ । ತೇಣೇ ಅವಘೇಚಿ ಸುರವರ । ಝಾಲೇ ಥೋರ ವಿಸ್ಮಿತ ಪೈ ॥೧೯೭॥ ಇಂದ್ರೇ ದೇಖೋನಿ ಉರ್ವಶೀ । ತಿಸೀ ಭುಲಲಾ ಅಹರ್ನಿಶೀ । ಬಾಹೇರ ಯಾವೇ ಸಭೇಸೀ । ಹೇ ವರ್ಷಾನುವರ್ಷೀ ನಾಠವೇ ॥೧೯೮॥ ಹೇ ಪ್ರಥಮಾವತಾರವಾರ್ತಾ । ಜೇ ಕಾ ನಾರಾಯಣಾಚೀ ಕಥಾ । ಪುಢೀಲ ಅವತಾರ ಆತಾ । ನೃಪನಾಥಾ ಅವಧಾರೀ ॥೧೯೯॥ ಐಕ ರಾಯಾ ಅತಿಅಪೂರ್ವ । ಛಳವಾದಿಯಾ ಪೂಜಾ ಸರ್ವ । ಕರೂನ ದಾಖವೀ ಸ್ವಯಮೇವ । "ಪೂರ್ಣಾನುಭವ" ಯಾ ನಾಂವ ॥೨೦೦॥ (ಆಶಂಕಾ) ಭಾವೇ ಕರಿತಾ ಭಗವದ್ಭಜನ । ಯಾಪರೀ ಇಂದ್ರ ಕರೀ ವಿಘ್ನ । ನಾರಾಯಣ ಚೈತನ್ಯಘನ । ತೇಣೇ ವಿಘ್ನೇ ಸಂಪೂರ್ಣ ಪರಾಭವಿಲೀ ॥೨೦೧॥ ಮಾ ಬಾಳ್ಯಾಭೋಳ್ಯಾ ಕರಿತಾ ಭಕ್ತಿ । ಐಶೀ ವಿಘ್ನೇ ಜೈ ಛಳೂ ಯೇತೀ । ತೈ ಕದಾ ನವ್ಹೇ ಭಗವತ್ಪ್ರಾಪ್ತಿ । ಐಸಾ ವಿಕಲ್ಪ ಚಿತ್ತೀ ಝಣೇ ಧರಿಶೀ ॥೨೦೨॥ ಬ್ರಹ್ಮಾದಿಕಾ ಸರ್ವ ಭೂತಾ । ಭೃಕುಟಿಮಾತ್ರೇ ಜೋ ನಿಯಂತಾ । ತ್ಯಾ ಭಗವಂತಾತೇ ಭಜತಾ । ವಿಘ್ನೇ ಸರ್ವಥಾ ಬಾಧೂ ನ ಶಕತೀ ॥೨೦೩॥ ಜ್ಯಾಚೇನಿ ಇಂದ್ರಾ ಇಂದ್ರಪಣ । ತೋ ಭಾವೇ ಭಜತಾ ಶ್ರೀನಾರಾಯಣ । ಭಕ್ತಾಂಸೀ ವಿಘ್ನ ಕರೀ ಕೋಣ । ಹರಿ ರಕ್ಷಣ ನಿಜಭಕ್ತಾ ॥೨೦೪॥ ಇಂದ್ರಮುಖ ಕಾಮದಿಕ । ವಿಘ್ನೇ ಛಳಿತೀ ಸಕಳ ಲೋಕ । ತ್ಯಾಂಚಾಹೀ ನಾರಾಯಣ ಚಾಳಕ । ತೋ ಭಕ್ತಾಂಸೀ ದೇಖ ಸ್ಪರ್ಶೋ ನೇದೀ ॥೨೦೫॥

ನಾರಾಯಣನ ವಚನವನ್ನು ಕೇಳಿ, ಆತನ ಚರಣಗಳ ಮೇಲೆ ಮಸ್ತಕವನ್ನಿಟ್ಟು ಕಾಮಾದಿ ಸಮೂಹವು ಉರ್ವಶೀಯೊಂದಿಗೆ ಶೀಘ್ರವಾಗಿ ಹೊರಟರು ॥೧೯೪॥ ಈಕೆಯು ನಾರಾಯಣನ ತೊಡೆಗೆ ಹತ್ತಿಕೊಂಡು ನಿಂತುಕೊಂಡಿದ್ದಳು. ಆದ್ದರಿಂದ ಈಕೆಗೆ ಉರ್ವಶೀ ಎಂದು ಹೆಸರಾಯಿತು. ಮುಂದೆ ಈಕೆಯು ದೇವಾಂಗನಾ ಎಂಬ ಹೆಸರಿನಿಂದ ಪ್ರಸಿದ್ಧಳಾದಳು ॥೧೯೫॥ ಈ ಪ್ರಕಾರವಾಗಿ ಈ ಯಾವ ಸರ್ವ ದೇವತೆಯರ ದೂತರು ಸ್ವರ್ಗಕ್ಕೆ ಬಂದು ಮುಟ್ಟಿದರು ಮತ್ತು ಇಂದ್ರನ ಸಭೆಯಲ್ಲಿ ನಾರಾಯಣನ ಅದ್ಭುತವಾದ ಶಕ್ತಿಯ ವರ್ಣನೆಯನ್ನು ಮಾಡಲಾರಂಭಿಸಿದರು ॥೧೯೬॥ ಇವರು ನಾರಾಯಣನ ಅತಿಪವಿತ್ರವಾದ ಚರಿತ್ರೆಯನ್ನು ಹೇಳಿದರು. ಇದನ್ನು ಕೇಳಿ ಎಲ್ಲ ದೇವತೆಗಳಿಗೆ ಅತ್ಯಂತ ವಿಸ್ಮಯವಾಯಿತು ॥೧೯೭॥ ಉರ್ವಶೀಯನ್ನು ಕಂಡು ಇಂದ್ರನು ಎಷ್ಟೊಂದು ಮೋಹಿತನಾದನೆಂದರೆ, ಈತನು ಅನೇಕ ವರ್ಷಗಳವರೆಗೆ ಸಭೆಗೆ ಹೋಗುವುದನ್ನೇ ಮರೆತುಬಿಟ್ಟನು ॥೧೯೮॥ ಇದು ನಾರಾಯಣನ ಮೊದಲನೆಯ ಅವತಾರದ ಕಥೆಯಾಗಿರುವುದು. ಹೇ ರಾಜನೇ, ಈ ಮುಂದಿನ ಅವತಾರಗಳ ಅಪೂರ್ವ ವೃತ್ತಾಂತವನ್ನು ಕೇಳು ॥೧೯೯॥ ತನ್ನನ್ನು ಪೀಡಿಸಿದವರಿಗೂ ಸತ್ಕಾರವನ್ನು ಮಾಡುವುದು ಇದು "ಪೂರ್ಣಾನುಭವ" ದ ಲಕ್ಷಣವಾಗಿರುವುದು. ಕದಾಚಿತ್, ನೀನು ಇದಕ್ಕಾಗಿ ಹೀಗೆ ಹೇಳಬಹುದು. ಅದೇನೆಂದರೆ ॥೨೦೦॥ ಸದ್ಭಾವನೆಯಿಂದ ಭಗವದ್ಭಕ್ತಿಯನ್ನು ಮಾಡುತ್ತಿರಲು ಇಂದ್ರನು ಈ ರೀತಿಯಾಗಿ ಅನೇಕ ವಿಘ್ನಗಳನ್ನು ಒಡ್ಡುವನು. ನಾರಾಯಣನು ಚೈತನ್ಯಘನನಾಗಿರುವುದರಿಂದ, ಆತನು ಎಲ್ಲ ವಿಘ್ನಗಳಿಗೂ ಸೋಲಿಸಿದನು ॥೨೦೧॥ ಆದರೆ ; ಭೋಳೇಭಾಳೇ ಜನರು ಭಕ್ತಿಮಾಡುತ್ತಿರಲು ಅವರಿಗೆ ಇದೇ ಪ್ರಕಾರವಾಗಿ ವಿಘ್ನಗಳು ಪೀಡಿಸಲು ಮುಂದಾದರೆ ಅವರಿಗೆ ಭಗವತ್ಪ್ರಾಪ್ತಿಯು ಎಂದೂ ಆಗಲಾರದು ಎಂದು ಹೀಗೆ ನೀನು ಮನದಲ್ಲಿ ನಿಶ್ಚಯಿಸಬೇಡ ॥೨೦೨॥ ಬ್ರಹ್ಮದೇವನಿಂದ ಹಿಡಿದು ಹುಲ್ಲಿನವರೆಗೂ ಎಲ್ಲ ಭೂತಗಳ ನಿಯಮನವನ್ನು ತನ್ನ ಕೇವಲ ನೇತ್ರಕಟಾಕ್ಷದಿಂದ ಮಾಡುವವನು ಭಗವಾನನಾಗಿರುವನು. ಈತನ ಭಜನೆಯನ್ನು ಮಾಡಲು ವಿಘ್ನಗಳು ಏನೂ ಮಾಡಲು ಸಾಧ್ಯವಿಲ್ಲ ॥೨೦೩॥ ಯಾರಿಂದ ಇಂದ್ರನಿಗೆ ಇಂದ್ರಪದವು ದೊರಕಿದೆಯೋ, ಆ ಶ್ರೀನಾರಾಯಣನ ಭಜನೆಯನ್ನು ಭಕ್ತಿಯಿಂದ ಮಾಡುವ ಆ ಭಕ್ತನಿಗೆ ಯಾರು ವಿಘ್ನಗಳನ್ನು ಮಾಡಬೇಕು? ಕಾರಣ, ಶ್ರೀಹರಿಯು ತನ್ನ ಭಕ್ತರ ರಕ್ಷಣೆಯನ್ನು ಮಾಡುತ್ತಿರುವನು ॥೨೦೪॥ ಪ್ರಮುಖರಾದ ಕಾಮಾದಿಕರು ಸರ್ವರಿಗೂ ಪೀಡಿಸುವರು ನಿಜ, ಆದರೆ ಅವರ ಚಾಲಕನೂ ನಾರಾಯಣನೇ ಇರುವುದರಿಂದ ಆತನು ಇವರನ್ನು ತನ್ನ ಭಕ್ತರಿಗೆ ಸ್ಪರ್ಶ ಸಹಿತ ಮಾಡಿ ಕೊಡುವುದಿಲ್ಲ ॥೨೦೫॥

ವಿಘ್ನಾಸೀ ಭುಲವಿಲೇ ಜೇಣೇ ಸಂಪೂರ್ಣ । ತೋ ನಿತ್ಯ ಸ್ಮರತಾ ನಾರಾಯಣ । ಆಪಧಾಕೇ ವಿಘ್ನೇ ಪಳತೀ ಜಾಣ । ಭಕ್ತಸಂರಕ್ಷಣ ಹರಿನಾಮೇ ।।೨೦೬।। ಕರಾವಯಾ ನಿಜಭಕ್ತಕೈವಾರ । ದೇವೋ ಧರೀ ನಾನಾವತಾರ । ತ್ಯಾಚ್ಯಾ ಅವತಾರಾಂಚೇ ಚರಿತ್ರ । ಅತಿವಿಚಿತ್ರ ಅವಧಾರೀ ।।೨೦೭।।

ಹಂಸಸ್ವರೂಪ್ಯವದದಚ್ಯುತ ಆತ್ಮಯೋಗಂ ದತ್ತ: ಕುಮಾರ ಋಷಭೋ ಭಗವಾನ್ ಪಿತಾ ನಃ ।
ವಿಷ್ಣು: ಶಿವಾಯ ಜಗತಾಂ ಕಲಯಾವತೀರ್ಣಸ್ತೇನಾಹೃತಾ ಮಧುಭಿದಾ ಶ್ರುತಯೋ ಹಯಾಸ್ಯೇ ।೧೭।।

ಅರ್ಥ: ಭಗವಾನ ವಿಷ್ಣು ಸಂಪೂರ್ಣ ಜಗತ್ತಿನ ಕಲ್ಯಾಣಕ್ಕಾಗಿ ಅನೇಕ ಅವತಾರಗಳನ್ನು ಧರಿಸಿದನು. ಹಂಸ,ದತ್ತಾತ್ರೇಯ, ಸನಕ-ಸನಕನಂದನ, ಸನಾತನ, ಸನತ್ಕುಮಾರ ಮತ್ತು ನಮ್ಮ ಪಿತಾ ಋಷಭ ಇತ್ಯಾದಿ ರೂಪಗಳಲ್ಲಿ ಅವತೀರ್ಣನಾಗಿ ಆತ್ಮ ಸಾಕ್ಷಾತ್ಕಾರ ಸಾಧನೆಗಳ ಉಪದೇಶ ಮಾಡಿದನು. ಈತನು ಹಯಗ್ರೀವ ಅವತಾರವೆತ್ತಿ ಮಧು-ಕೈಟಭ ಹೆಸರಿನ ಅಸುರನ ವಧೆ ಮಾಡಿದನು ಮತ್ತು ಅವರು ಕದ್ದಿದ್ದ ವೇದಗಳನ್ನು ತಿರುಗಿ ತಂದನು.

ಸನಕಾದಿಕ ಬ್ರಹ್ಮನಂದನ । ತಿಹೀ ಪಿತ್ಯಾಸೀ ಕೇಲಾ ಪ್ರಶ್ನ । ಪ್ರಶ್ನಖಂಡಣಮಿಸೇ ಜಾಣ । ಕೇಲೇ ಬ್ರಹ್ಮಜ್ಞಾನ "ಹಂಸಾವತಾರೇ" ।।೨೦೮।। ನಿತ್ಯ ಸ್ಮರತಾ ಹರೀಚೇ ನಾಮ । ಮಹಾ ವಿಘ್ನೇ ಹೋತೀ ಭಸ್ಮ । ತ್ಯಾಚೇ ಅವತಾರಸಂಭ್ರಮ । ಉತ್ತಮೋತ್ತಮ ಅವಧಾರೀ ।।೨೦೯।। ಜ್ಯಾಚೇನಿ ನಾಮೇ ಪಳೇ ಕೃತಾಂತು । ಜ್ಯಾಚೇನಿ ನಾಮೇ ಜನ್ಮಮರಣಾ ಘಾತು । ತೋ ಅವತಾರು "ಶ್ರೀದತ್ತು" । ಮೂರ್ತಿಮಂತು ಪರಬ್ರಹ್ಮ ।।೨೧೦।। ನೈಷ್ಠಿಕ ಬ್ರಹ್ಮಚಾರೀ ನಿಶ್ಚಿತೀ । ಜ್ಯಾಸೀ ಸ್ವಪ್ನೀ ನಾಹೀ ವೀರ್ಯಚ್ಯುತಿ । ಯಾಲಾಗೀ "ಕುಮಾರ" ಮ್ಹಣತೀ । ಅವತಾರಮೂರ್ತಿ ಸನಕಾದಿಕ ।।೨೧೧।। ಆಣಿ ಆಮುಚಾ ಜೋ ಕಾ ಪಿತಾ । ''ಋಷಭ'' ನಾರಾಯಣ ಜ್ಞಾತಾ । ತೋಹೀ ಅವತಾರ ನೃಪನಾಥಾ । ಜಾಣ ತತ್ತ್ವತಾ ಭಗವನ್ಮೂರ್ತಿ ।।೨೧೨।। ಇಹೀ ನಾಮೀರೂಪೀ ಸಂಪೂರ್ಣ । ಅವತಾರೀ ಅವತರೇ ನಾರಾಯಣ । ಜೋ ಜಗಾಚಾ ಪ್ರತಿಪಾಳಣ । ಸ್ವಾಂಶೇ ಶ್ರೀಕೃಷ್ಣ ಅವತರೇ ।।೨೧೩।। ತೋಚಿ ಸ್ವಯೇ ಗಾ ಶ್ರೀಕೃಷ್ಣ । ಮಧುಕೈಟಭ ನಿರ್ದಾಳೂನ । ನಾಮೇ ಜೋ ಕಾ ''ಮಧುಸೂದನ'' । ''ತೋಚಿ ಅವತರೂನ'' ಹಯಗ್ರೀವ ಝಾಲಾ ।।೨೧೪।। ತೇಣೇ ಶಂಖ ಮರ್ದೂನ ಪುಢತೀ । ಉದ್ಧರಿಲ್ಯಾ ಬುಡಲ್ಯಾ ಶ್ರುತೀ । ಆಣೋನಿ ದಿಧಲ್ಯಾ ಬ್ರಹ್ಮಯಾಹಾತೀ । ಜಾಣ ನಿಶ್ಚಿತೀ ವೇದರಕ್ಷಣಾ ।।೨೧೫।।

ಗುಪ್ತೋಽಪ್ಯಯೇ ಮನುರಿಳಾಪ ಧಯಶ್ಚ ಮಾತ್ಸ್ಯೇ ಕ್ರೌಡೇ ಹತೋ ದಿತಿಜ ಉದ್ಧರತಾಂಭಸಃ ಕ್ಷ್ಮಾಮ್ ।
ಕಾರ್ಮೇ ಧೃತೋಽದ್ರಿರಮೃತೋನ್ಮಥನೇ ಸ್ವಪೃಷ್ಠೇ ಗ್ರಾಹಾತ್ಪ್ರಸನ್ನ ಮಿಭರಾಜಮಮುಂಚ ದಾರ್ತಮ್ ।೧೮।।

ಅರ್ಥ :- ಮತ್ಸ್ಯಾವತಾರದಲ್ಲಿ ಭಗವಂತನು ಸತ್ಯವ್ರತ ಮನುವನ್ನು ರಕ್ಷಿಸಿದನು ಹಾಗೂ ಭೂಮಿ ಮತ್ತು ಅದರ ಬೆಲೆ ಬಾಳುವ ಸಸ್ಯಗಳನ್ನು ಜಲಪ್ರಳಯದಿಂದ ಪಾರು ಮಾಡಿದನು. ವರಾಹಾವತಾರದಲ್ಲಿ ಭೂಮಿಯನ್ನು ಕಾರಣ ಸಮುದ್ರದಿಂದ ಮೇಲೆತ್ತಿ ತರುವಾಗ ದಿತಿಯ ಮಗನಾದ ಹಿರಣ್ಯಾಕ್ಷನನ್ನು ಸಂಹರಿಸಿದನು. ಕೂರ್ಮಾವತಾರವನ್ನು ಧರಿಸಿ ಸಮುದ್ರದಲ್ಲಿ ಅಮೃತ ಮಂಥನ ನಡೆಯಲನುವಾಗಲು ಮಂದರಗಿರಿಯನ್ನು ತನ್ನ ಬೆನ್ನ ಮೇಲೆ ಹೊತ್ತನು. ಅತೀವ ಯಾತನೆಯನ್ನು ಅನುಭವಿಸುತ್ತಿದ್ದ ಸಮಯದಲ್ಲಿ ತನ್ನನ್ನು ಮೊರೆಹೊಕ್ಕ ಗಜೇಂದ್ರನನ್ನು ಮೊಸಳೆಯ ಬಾಯಿಂದ ಭಗವಂತನು ರಕ್ಷಿಸಿದನು.

ಯಾರು ವಿಘ್ನಗಳಿಗೂ ಬಿಡದೇ ಪರಿಪೂರ್ಣವಾಗಿ ಭುಲಾಯಿಸಿದ ಆ ನಾರಾಯಣನನ್ನು ನಿತ್ಯದಲ್ಲಿ ಸ್ಮರಿಸುತ್ತಿರಲು ವಿಘ್ನಗಳು ಭಯಪಟ್ಟು ಓಡಿಹೋಗುವುವು. ಹರಿನಾಮದಿಂದಲೇ ಭಕ್ತರ ರಕ್ಷಣೆಯು ಆಗುತ್ತಿರುತ್ತದೆ ।।೨೦೬।। ನಿಜಭಕ್ತರ ರಕ್ಷಣೆಗಾಗಿ ದೇವನು ಅನೇಕ ಅವತಾರಗಳನ್ನು ಧರಿಸುವನು. ಆತನ ಅವತಾರಗಳ ಅತಿ ಅದ್ಭುತ ಚರಿತ್ರೆಗಳನ್ನು ನೀನೀಗ ಶ್ರವಣಮಾಡು ।।೨೦೭।।

ಸನಕಾದಿಕ ಬ್ರಹ್ಮಕುಮಾರರು ತಮ್ಮ ಪಿತಾಶ್ರೀಯವರಿಗೆ ಪ್ರಶ್ನೆಯನ್ನು ಕೇಳಿದರು. ಈ ಪ್ರಶ್ನೆಗೆ ಉತ್ತರಿಸುವ ನಿಮಿತ್ತವಾಗಿ ಹರಿಯು ಹಂಸಾವತಾರವನ್ನು ಧರಿಸಿ, ಬ್ರಹ್ಮಜ್ಞಾನದ ಉಪದೇಶವನ್ನು ಮಾಡಿದನು ।।೨೦೮।। ಹರಿಸ್ಮರಣೆಯನ್ನು ನಿತ್ಯದಲ್ಲಿಯೂ ಅಂತಃಕರಣಪೂರ್ವಕವಾಗಿ ಮಾಡಿದರೆ, ಮಹಾದುರ್ಧರವಾದ ವಿಘ್ನಗಳು ಸುಟ್ಟು ಭಸ್ಮವಾಗುವುವು. ಆತನ ಉತ್ತಮೋತ್ತಮ ಅವತಾರ ಕೃತ್ಯಗಳನ್ನು ಕೇಳು ।।೨೦೯।। ಯಾರ ನಾಮವನ್ನು ಕೇಳಿದಾಕ್ಷಣವೇ ಕಾಲನು ಸಹ ಓಡಿ ಹೋಗುವನು, ಯಾರ ನಾಮ ಸ್ಮರಣೆಯಿಂದ ಜನ್ಮ ಮರಣವು ಇಲ್ಲದಾಗುವುದು, ಅಂತಹ ಶ್ರೀದತ್ತಾತ್ರೇಯನ ಅವತಾರವು ಮೂರ್ತಿಮಂತ ಪರಬ್ರಹ್ಮವಾಗಿರುವುದು ।।೨೧೦।। ಯಾರು ನೈಷ್ಠಿಕ ಬ್ರಹ್ಮಚಾರಿಗಳೋ, ಇವರ ಬ್ರಹ್ಮಚರ್ಯವು ಸ್ವಪ್ನದಲ್ಲಿಯೂ ಭಂಗವಾಗಲು ಸಾಧ್ಯವಿಲ್ಲ. ಆದ್ದರಿಂದ ಇವರಿಗೆ ಕುಮಾರ ಎನ್ನುವರು. ಹೀಗಿರುವ ಸನಕಾದಿಕರೂ ಅವತಾರ ಮೂರ್ತಿಯಾಗಿರುವರು ।।೨೧೧।। ಹಾಗೆಯೇ, ನಾರಾಯಣನನ್ನು ಅರಿತಿರುವ ನಮ್ಮ ತಂದೆಯಾದ ಯಾವ ವೃಷಭನೂ ಸಹ ಭಗವಂತನ ಅವತಾರವಾಗಿರುವನು ಎಂದು ತಿಳಿಯಿರಿ ।।೨೧೨।। ಈ ನಾಮ ರೂಪಗಳಿಂದ ಅವತಾರವನ್ನು ಧರಿಸುವ ಆ ನಾರಾಯಣನು ಒಬ್ಬನೇ ಆಗಿರುವನು. ಜಗತ್ತಿನ ಪ್ರತಿಪಾಲನೆಯನ್ನು ಮಾಡುವ ಶ್ರೀಕೃಷ್ಣನೇ ತನ್ನ ಅಂಶದಿಂದ ಅವತಾರಗಳನ್ನು ಧರಿಸುತ್ತಿರುವನು ।।೨೧೩।। ಅದೇ ಶ್ರೀಕೃಷ್ಣನು ಸ್ವತಃ ಹಯಗ್ರೀವ ಅವತಾರಗಳನ್ನು ಧರಿಸಿ ಮಧುಕೈಟಭ ರಾಕ್ಷಸರ ನಾಶಮಾಡಿ ಮಧುಸೂದನನೆಂಬ ನಾಮದಿಂದ ಪ್ರಸಿದ್ಧನಾದನು ।।೨೧೪।। ಈತನೇ ಮುಂದೆ ಶಂಖಾಸುರನನ್ನು ಕೊಂದನು. ಮತ್ತು ಮುಳುಗಿದ್ದ ವೇದಗಳನ್ನು ಮೇಲಕ್ಕೆ ತೆಗೆದು, ಆ ವೇದಗಳನ್ನು ಬ್ರಹ್ಮದೇವನ ಕೈಯಲ್ಲಿ ಕೊಟ್ಟನು. ಈ ಪ್ರಕಾರವಾಗಿ ಈತನು ವೇದಗಳನ್ನು ರಕ್ಷಿಸಿದನು ।।೨೧೫।।

ತೇಣೇಂಚಿ "ಮತ್ಸ್ಯಾವತಾರೇ" । ಪ್ರಲಯಕಾಲಾಂಬುಮಹಾಭಾರೇ । ಮನೂಸಗಟ ರಕ್ಷಿಲೇ ಧರೇ । ನಿಜನಿರ್ಧಾರೇ ಔಷಧೀಸೀ ॥೨೧೬॥ ತೇಣೇಂಚಿ "ಕಮಠಾವತಾರಾ" । ಸ್ವಪೃಷ್ಟೀ ಧರೂನಿ ಗಿರಿವರಾ । ಮಂಥೋನಿಯಾ ಕ್ಷೀರಸಾಗರಾ । ಅಮೃತ ಸುರವರಾ ಅರ್ಪಿಲೇ ॥೨೧೭॥ ಶ್ವೇತವಾರಾಹ ಮಹಾಮೂರ್ತಿ । ಧರೇನೇ ಕೇಲೀ ಪೂರ್ಣ ಭಕ್ತಿ । ತಿಸೀ ಉದ್ಧರೋನಿ ಕೃಪಾಮೂರ್ತಿ । ಅಭಿನವ ಶಾಂತಿ ಅರ್ಪಿಲೀ ॥೨೧೮॥ ತೇಣೇ ಆರ್ತತ್ರಾಣಾ ತಾಂತಡೀ । ವೈಕುಂಠೀಹೂನ ಘಾಲೋನಿ ಉಡೀ । "ಗಜಾಚೇ ಗ್ರಹಬಂಧನ ತೋಡೀ" । ಉದ್ಧರಿಲೇ ಆವಡೀ ಗಜೇಂದ್ರಾತೇ ॥೨೧೯॥

ಸಂಸ್ತುನ್ವತೋ ನಿಪತಿತಾನ್ ಶ್ರಮುಣಾನ್ನೃಷೀಂಶ್ಚ ಶಕ್ರಂ ಚ ವೃತವಧತಸ್ತಮಸಿ ಪ್ರವಿಷ್ಟಮ್ ।
ದೇವಸ್ತ್ರಿಯೋಽಸುರಗೃಹೇ ಪಿಹಿತಾ ಅನಾಥಾ ಜಘ್ನೇಽಸುರೇಂದ್ರಮಭಯಾಯ ಸತಾಂ ನೃಸಿಂಹೇ ॥೧೯॥

ಅರ್ಥ :- ವಾಲಖಿಲ್ಯ ಋಷಿಯು ತಪಸ್ಸನ್ನಾಚರಿಸುತ್ತಿರಲು ಅತ್ಯಂತ ದುರ್ಬಲನಾದನು. ಆತನು ಕಶ್ಯಪ ಋಷಿಗಾಗಿ ಸಮಿಧಾ ತರುತ್ತಿದ್ದನು. ಆಗ ದಣಿದುಕೊಂಡಿದ್ದ ಆತನು ಆಕಳ ಕೊಂಬಿನಿಂದ ನಿರ್ಮಾಣಗೊಂಡಿದ್ದ ತಗ್ಗಿನಲ್ಲಿ ಬಿದ್ದನು. ಆತನಿಗೆ ಸಮುದ್ರದಲ್ಲಿ ಬಿದ್ದಂತೆ ಅವಸ್ಥೆಯಾಯಿತು. ಆಗ ಆತನು ಭಗವಂತನ ಸ್ತುತಿ ಮಾಡಲು, ಭಗವಂತನು ಅವತರಿಸಿ ಆತನನ್ನು ಉದ್ಧರಿಸಿದನು. ವೃತ್ರಾಸುರನನ್ನು ಕೊಂದ ಇಂದ್ರನಿಗೆ ಬ್ರಹ್ಮಹತ್ಯಾ ದೋಷವಾದ್ದರಿಂದ ಆಗ ಆತನು ಹೆದರಿ ಓಡಿಹೋಗಿ ಅಡುಗಿ ಕುಳಿತನು. ಆಗ ಭಗವಂತನು ಇಂದ್ರನನ್ನು ರಕ್ಷಿಸಿದನು. ಅಸುರರು ದೇವಾಂಗನೆಯರನ್ನು ಬಂದಿಸಿರಲು ಆಗಲೂ ಭಗವಂತನು ಇಂದ್ರನನ್ನು ರಕ್ಷಿಸಿ ದೇವಾಂಗನೆಯರನ್ನು ಅಸುರರ ಬಂಧನದಿಂದ ಬಿಡಿಸಿದನು. ಹಿರಣ್ಯಕಶ್ಯಪುವಿನಿಂದ ಪ್ರಹ್ಲಾದ ಮತ್ತು ಸಂತ ಪುರುಷರಿಗೆ ತ್ರಾಸು ಒದಗಿದಾಗ ಭಗವಂತನು ನೃಸಿಂಹ ಅವತಾರವನ್ನು ಧರಿಸಿ ಹಿರಣ್ಯಕಶ್ಯಪುನನ್ನು ಸಂಹರಿಸಿದನು.

ಮಾರ್ಕಂಡೇಯೋ ಏಕೇ ವೇಳೀ । ಬುಡತಾ ಅಕಾಳಪ್ರಳಯಜಳೀ । ತೇಣೇ ಸ್ಮರತಾ ವನಮಾಳೀ । ತಾರೀ ತತ್ಕಾಳೀ "ವಟಪತ್ರಶಾಯೀ" ॥೨೨೦॥ ಶಾಳಿಗ್ರಾಮ ಪೂಜಿತಾ ಋಷೀಶ್ವರೀ । ನಳ ವಾನರು ತೇ ಅವಸರೀ । ದೇವಪೂಜಾ ಟಾಕೀ ಸಾಗರೀ । ಚೇಷ್ಟಾ ವಾನರೀ ಸ್ವಭಾವೇ ॥೨೨೧॥ ತೇ ದೇಖೋನಿ ಋಷೀಶ್ವರೀ । "ಶಿಳಾ ನ ಬುಡೋತ ತುಝ್ಯಾ ಕರೀ" । ಐಸಾ ಶಾಪ ತೇ ಅವಸರೀ । ಕ್ಷೋಭೇಕರೀ ದಿಧಲಾ ॥೨೨೨॥ ತೈ ಶಾಳೀಗ್ರಾಮ ಸಾಗರೋದರೀ । ತರತಾ ದೇಖಿಲೇ ಋಷೀಶ್ವರೀ । ಕಾಢಾವಯಾ ರಿಘತಾ ಭೀತರೀ । ಲಹರೀಕರೀ ನಿರ್ಬುಜಲೇ ॥೨೨೩॥ ತೇ ಕಾಳೀ ಋಷೀಶ್ವರೀ । "ಆರ್ತಿಹರಣ" ಸ್ತವಿಲಾ ಹರಿ । ತೇಥ ಅವತರೋನಿ ಶ್ರೀಹರಿ । ಋಷೀತೇ ತಾರೀ ಪೂಜೇಸಹಿತ ॥೨೨೪॥ ವೃತ್ರ ವಧಿಲಾ ವಜ್ರಘಾತೇ । ತೇ ಬ್ರಹ್ಮಹತ್ಯಾ ಇಂದ್ರಾತೇ । ತೇಣೇ ದೋಷೇ ತೋ ಅಂಧ ತಮಾತೇ । ಜಾಣ ಪಾ ನಿಶ್ಚಿತೇ ಬುಡತ ಹೋತಾ ॥೨೨೫॥ ತೇಥ ಅವತರೋನಿ ಶ್ರೀ ಅನಂತೇ । ಚತುರ್ಧಾ ವಾಂಟೂನಿ ತೇ ಹತ್ಯೇತೇ । ಶುದ್ಧ ಕೇಲೇ ಇಂದ್ರಾತೇ । ಕೃಪಾವಂತೇ ಕೃಪಾಳುವೆ ॥೨೨೬॥

ಈತನು ಮತ್ಸ್ಯಾವತಾರದಲ್ಲಿ ಪ್ರಳಯಕಾಲದ ಜಲದಲ್ಲಿ ಮನು ಸಹ ಪೃಥ್ವಿಯ ಮತ್ತು ವನಸ್ಪತಿಗಳ ಸಂರಕ್ಷಣೆ ಮಾಡಿದನು ॥೨೧೬॥ ಕೂರ್ಮಾವತಾರದಲ್ಲಿ ಈತನು ತನ್ನ ಬೆನ್ನಿನ ಮೇಲೆ ಮಂದಾರ ಪರ್ವತವನ್ನು ಧಾರಣೆ ಮಾಡಿ ಕ್ಷೀರಸಾಗರದ ಮಂಥನವನ್ನು ನಡೆಸಿಕೊಟ್ಟು, ದೇವತೆಗಳಿಗೆ ಅಮೃತವನ್ನು ಅರ್ಪಿಸಿದನು ॥೨೧೭॥ ಹಿರಣ್ಯಾಕ್ಷ ದೈತ್ಯನು ಪೃಥ್ವಿಯನ್ನು ರಸಾತಳಕ್ಕೆ ಒಯ್ದಿದ್ದನು. ಆಗ ಪ್ರಭು ವರಾಹ ಅವತಾರವನ್ನು ಧರಿಸಿದನು. ಆ ಶ್ವೇತವರಾಹ ಮೂರ್ತಿಯ ಭಕ್ತಿಯನ್ನು ಪೃಥ್ವಿಯು ಮಾಡಿದಳು. ಆಗ ಆ ದೈತ್ಯನಿಗೆ ಸಂಹರಿಸಿ ಪೃಥ್ವಿಯ ಉದ್ಧಾರವನ್ನು ಮಾಡಿದನು. ಮತ್ತು ಪರಮ ಶಾಂತಿಯನ್ನು ಕೊಟ್ಟನು ॥೨೧೮॥ ಈತನು ದೀನರ ಸಂಕಟವನ್ನು ನಿವಾರಿಸಲು ವೈಕುಂಠದಿಂದ ತೀವ್ರವಾಗಿ ಬಂದು ಗಜೇಂದ್ರನ ಕಾಲನ್ನು ನಕ್ರನು ಹಿಡಿದಿದ್ದನ್ನು ಬಿಡಿಸಿ ಅತಿಶಯ ಪ್ರೇಮದಿಂದ ಆತನ ಉದ್ಧಾರ ಮಾಡಿದನು ॥೨೧೯॥

ಒಂದೊಮ್ಮೆ ಪ್ರಳಯಕಾಲದ ಮಹಾಪೂರಿನಲ್ಲಿ ಮಾರ್ಕಂಡೇಯ ಋಷಿಯು ಮುಳುಗುತ್ತಿರಲು ಆಗಾತನು ಭಗವಾನ ಶ್ರೀಕೃಷ್ಣನ ಸ್ಮರಣೆಯನ್ನು ಮಾಡಿದನು. ಆ ಸಮಯಕ್ಕೆ ವಟಪತ್ರದ ಮೇಲೆ ಶಯನ ಮಾಡುವ ಭಗವಂತನು ತತ್ಕಾಲದಲ್ಲಿ ಆತನನ್ನು ಉದ್ಧರಿಸಿದನು ॥೨೨೦॥ ಋಷಿಗಳು ಶಾಲಿಗ್ರಾಮಗಳ ಪೂಜೆಯನ್ನು ಮಾಡುತ್ತಿರಲು ನಳ ಎಂಬುವ ವಾನರನು ಆ ಪೂಜಾ ಸಾಮಗ್ರಿಗಳನ್ನೆಲ್ಲ ಸಮುದ್ರದಲ್ಲಿ ಒಗೆದುಬಿಟ್ಟನು ॥೨೨೧॥ ಇದನ್ನು ಕಂಡ ಋಷಿಯು "ನಿನ್ನ ಕೈಯಿಂದ ಒಗೆದ ಕಲ್ಲುಗಳು ನೀರಿನಲ್ಲಿ ಮುಳುಗಬಾರದು" ಎಂದು ಶಾಪವನ್ನು ಕೊಟ್ಟನು ॥೨೨೨॥ ಆಗ ಸಮುದ್ರದಲ್ಲಿ ಶಾಲಿಗ್ರಾಮಗಳು ತೇಲುತ್ತಿರುವುದನ್ನು ಕಂಡು, ಅವುಗಳನ್ನು ಹೊರಗೆ ತೆಗೆಯಲು ಋಷಿಯು ನೀರಿನಲ್ಲಿ ಇಳಿದನು. ಆಗ ಆತನು ಸಮುದ್ರದ ಭಯಂಕರವಾದ ತೆರೆಗಳಲ್ಲಿ ಸಿಲುಕಿ ಅತಿಶಯವಾಗಿ ಗಾಬರಿಯಾದನು ॥೨೨೩॥ ಆಗ ಸರ್ವರ ದುಃಖಗಳನ್ನು ನಿವಾರಿಸುವ ಹರಿಯ ಸ್ತುತಿಯನ್ನು ಈತನು ಮಾಡಿದನು. ಆಗ ಶ್ರೀ ಹರಿಯು ಅಲ್ಲಿ ಪ್ರಕಟನಾಗಿ ಋಷಿಯನ್ನು ಪೂಜಾ ಸಾಮಗ್ರಿ ಸಮೇತವಾಗಿ ಹೊರಗೆ ತಂದನು ॥೨೨೪॥ ಇಂದ್ರನು ವೃತ್ರನಿಗೆ ವಜ್ರಘಾತದಿಂದ ವಧಿಸಿದ್ದರಿಂದ ಆತನಿಗೆ ಬ್ರಹ್ಮಹತ್ಯೆ ದೋಷವು ಹತ್ತಿಕೊಂಡಿತ್ತು. ಈ ದೋಷದಿಂದ ಆತನು ಅಂಧತಮ ಎಂಬ ನರಕದಲ್ಲಿ ಮುಳುಗುತ್ತಿದ್ದನು ॥೨೨೫॥ ಆ ಸಮಯಕ್ಕೆ ಕೃಪಾವಂತನಾದ ಅನಂತನು ಅವತಾರವನ್ನು ಧರಿಸಿ, ಕೃಪಾದೃಷ್ಟಿಯಿಂದ ಇಂದ್ರನನ್ನು ನರಕದಿಂದ ಪಾರು ಮಾಡಿದನು ॥೨೨೬॥

ಜಿಣೋನಿಯಾ ಅಮರಪುರೇ । ಹಿರೋನಿ ದೇವಾಂಚೀ ಅಂತೌರೇ । ತೀ ಕೋಂಡೋನಿಯಾ ಸಮಗ್ರೇ । ಮುರೇ ಮಹಾ ಅಸುರೇ ಏಕಂದರ ಕೇಲೇ ॥೨೨೭॥ ತೋ ಮುರಮರ್ದನ ಶ್ರೀಹರಿ । ಯಾಲಾಗೀ ನಾಂವೇ "ಮುರಾರಿ" । ದೇವಸ್ತ್ರಿಯಾ ಕಾಡೋನಿ ಬಾಹೇರಿ । ದೇವಾಂಚ್ಯಾ ಕರೀ ಅರ್ಪಿತಾ ಝಾಲಾ ॥೨೨೮॥ ಜೋ ಅಸುರಾಮಾಜೀ ಚೂಡಾಮಣೀ । ಜೋ ದ್ವೇಷಿಯಾಮಾಜೀ ಅಗ್ರಗಣೀ । ತೋ ಹರಿನಾಮ ಐಕತಾ ಕಾನೀ । ಅತಿಕ್ಷೋಭೇ ಮನೀ ಪ್ರಜ್ವಳೋ ಲಾಗೇ ॥೨೨೯॥ ಜೋ ಪೂರ್ಣ ಕ್ರೋಧಾಚಾ ಉದಧಿ । ಜೋ ಅವಿವೇಕಾಚಾ ಮಹಾನಿಧಿ । ಜೋ ಹರಿ ಸ್ಮರೇ ತ್ಯಾ ಪುತ್ರಾತೇ ಬಾಧೀ । ಗರ್ವಮದೀ ಉನ್ಮತ್ತ ॥೨೩೦॥ ತೋ ಹಿರಣ್ಯಕಶಿಪು ನಖಿಧಾರೀ । ಸ್ವಯೇ ನಿವಟೀ "ನರಕೇಸರೀ" । ಜೋ ನಿಜಭಕ್ತಾಂಚಾ ಕೈವಾರೀ । ಅಭಯಕಾರೀ ಸಾಧೂಂಚಾ ॥೨೩೧॥

ದೇವಾಸುರೇ ಯುಧಿ ಚ ದೈತ್ಯಪತೀನ್ ಸುರಾರ್ಥೇ ಹತ್ವಾಂತರೇಷು ಭುವನಾನ್ಯದಧಾತ್ಕಲಾಭಿಃ ।
ಭೂತ್ವಾಥ ವಾಮನ ಇಮಾಮಹರದ್ ಬಲೇಃ ಕ್ಷ್ಮಾಂ ಯಾಂಚಾಚ್ಛಲೇನ ಸಮದಾದದಿತೇಃ ಸುತೇಭ್ಯಃ ॥೨೦॥

ಅರ್ಥ: ದೇವ ಮತ್ತು ದಾನವರ ಯುದ್ಧದಲ್ಲಿ ದೇವತೆಗಳಿಗಾಗಿ ದೈತ್ಯರ ಅಧಿಪತಿಗಳಿಗೆ ಎಲ್ಲ ಮನ್ವಂತರಗಳಲ್ಲಿ ತನ್ನ ಮೂರ್ತಿಗಳಿಂದ ಭುವನಗಳನ್ನು ರಕ್ಷಿಸಿದನು. ತದನಂತರ ವಾಮನನಾಗಿ ಭೂಮಿಯಾಚನೆಯ ನಿಮಿತ್ತಮಾಡಿ ಪೃಥ್ವಿಯ ಹರಣ ಮಾಡಿದನು ಮತ್ತು ಅದನ್ನು ಆದಿತಿಯ ಪುತ್ರರಿಗೆ ಸಮರ್ಪಿಸಿದನು.

ಸಮುದ್ರಮಂಥನಾಚ್ಯಾ ಶೇವಟೀ । ಕ್ಷೀರಸಾಗರಾಚೇ ತಟೀ । ಸುರಾ ಅಸುರಾ ಕಳೀ ಮೋಠೀ । ಅಮೃತಾಸಾಠೀ ಮಾಂಡಲೀ ॥೨೩೨॥ ತೇವ್ಹಾ ಅಮೃತ ವಿಟೇ ಜೇ ದೇಖೋನಿ । ತೋ ಅವತಾರೂ ಘೇತಲಾ ಮೋಹಿನೀ । ತೇಣೇ ಅಸುರಾ ಸುರಾಪಾನೀ । ಅಮೃತದಾನೀ ದೇವಾಂಸೀ ॥೨೩೩॥ ತೇಥ ಚೋರೂನಿ ಘೇತಾ ಅಮೃತಗ್ರಾಸಾ । ನಿವಟಿಲಾ ರಾಹೂಚಾ ಘಸಾ । ತ್ಯಾಚ್ಯಾ ಕಬಂಧಾವರೀ ಮ್ಹಾಳಸಾ । ವಾಸ ನೇವಾಸಾ ಸ್ವಯೇ ಕೇಲಾ ॥೨೩೪॥ ಸುರಸಾಹ್ಯ ನಾರಾಯಣು । ದ್ವಾರಕೇ ಕುಶ ನಿರ್ದಾಳೂನು । ಕಾ ಲವಣಾಸುರ ಮರ್ದೂನು । ಅವತರೇ ಆಪಣು "ಕುಮಾರ"ರೂಪೇ ॥೨೩೫॥ ಐಸಾ ಮನ್ವಂತರಾಮನ್ವಂತರೀ । ನಿಜಭಕ್ತಕಾಜ ಕೈವಾರೀ । ಸುರಕಾರ್ಯಾರ್ಥ ಶ್ರೀಹರಿ । ನಾನಾ ಅವತಾರೀ ಅವತರೇ ಸ್ವಯೇ ॥೨೩೬॥ ತೋ ಸುರಸಾಹ್ಯ ಜಗಜೀವನ । ಸ್ವಯೇ ಕುಬ್ಜ ಝಾಲಾ "ವಾಮನ" । ಅಂಗೇ ಯಾಚಕ ಹೋಊನ । ದೇವಾಂಚಾ ಅಪಮಾನ ಉತರಲಾ ಜೇಣೇ ॥೨೩೭॥ ದಾನೇ ದಾಟುಗಾ ಬಳೀ । ತ್ಯಾಸೀ ದೇವಾಂಚೇನಿ ನವ್ಹೇ ಕಳೀ । ಮಗ ತ್ರಿವಿಕ್ರಮರೂಪೇ ಆಕಳೀ । ಯಾಂಚಾಛಳೇ ಬಳೀ ಛಳಿಲಾ ಜೇಣೇ ॥೨೩೮॥

ಮುರನೆಂಬ ದೈತ್ಯನು ದೇವತೆಗಳ ನಗರಗಳನ್ನು ಗೆದ್ದು ಅವರ ಅಂತಃಪುರವನ್ನು ಕಸಿದುಕೊಂಡು ಅಲ್ಲಿರುವ ಎಲ್ಲ ಸ್ತ್ರೀಯರನ್ನು ಬಂಧಿಸಿ ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡನು ॥೨೨೭॥ ಆಗ ಶ್ರೀಹರಿಯು ಮುರ ದೈತ್ಯನ ವಧೆ ಮಾಡಿದನು. ಆದ್ದರಿಂದ ಹರಿಗೆ "ಮುರಾರೀ" ಎಂದು ಹೆಸರಾಯಿತು. ಈತನು ದೇವಸ್ತ್ರೀಯರನ್ನು ಬಂಧನದಿಂದ ಬಿಡಿಸಿ ದೇವತೆಗಳ ಸ್ವಾಧೀನ ಮಾಡಿದನು ॥೨೨೮॥ ಅಸುರರ ಶಿರೋಮಣಿಯಾಗಿರುವ, ದ್ವೇಷದ ಅಗ್ರಗಣಿಯಾಗಿರುವ ಯಾವ ಹರಿಯ ನಾಮವು ಕಿವಿಗೆ ಬಿದ್ದಾಕ್ಷಣವೇ ಕ್ರೋಧದಿಂದ ಸಂತಪ್ತನಾಗಿ ಮನದಲ್ಲಿ ಉರಿಯುತ್ತಿರುವ ॥೨೨೯॥ ಕ್ರೋಧದ ಮಹಾಸಾಗರನಾಗಿರುವ, ಅವಿವೇಕದ ಮಹಾನಿಧಿಯಾದ, ಗರ್ವದಿಂದ ಉನ್ಮತ್ತನಾಗಿ ಹರಿನಾಮಸ್ಮರಣೆಯನ್ನು ಮಾಡುವ ತನ್ನ ಪುತ್ರನನ್ನು ಪೀಡಿಸುವವನಾದ ॥೨೩೦॥ ಆ ಹಿರಣ್ಯಕಶ್ಯಪುನಿಗೆ ಭಗವಂತನು ನೃಸಿಂಹರೂಪವನ್ನು ಧರಿಸಿ, ತನ್ನ ಉಗುರುಗಳಿಂದ ಕೊಂದನು. ಸಾಧುಗಳಿಗೆ ಅಭಯವನ್ನು ಕೊಡುವ, ತನ್ನ ಭಕ್ತರ ಕೈವಾರಿಯಾದ ಹರಿಯು ಈ ಪ್ರಕಾರವಾಗಿ ಅನೇಕ ಅವತಾರ ಕಾರ್ಯಗಳನ್ನು ಮಾಡಿದನು ॥೨೩೧॥

ಸಮುದ್ರಮಂಥನದ ಕೊನೆಯಲ್ಲಿ ಕ್ಷೀರಸಾಗರದ ದಂಡೆಯಮೇಲೆ ದೇವತೆಗಳ ಮತ್ತು ಅಸುರರ ಮಧ್ಯದಲ್ಲಿ ಅಮೃತದ ಪ್ರಾಪ್ತಿಗಾಗಿ ಭಯಂಕರ ಕಲಹವು ನಿರ್ಮಾಣವಾಯಿತು ॥೨೩೨॥ ಈಕೆಯನ್ನು ನೋಡಿದಾಕ್ಷಣವೇ ಅಮೃತವೂ ಸಪ್ಪಗಾಗಿ ತೋರಬೇಕು, ಅಂತಹ ಮೋಹಿನಿ ಅವತಾರವನ್ನು ಧರಿಸಿ, ರಾಕ್ಷಸರಿಗೆ ಮದ್ಯವನ್ನು ಪ್ರಾಶನ ಮಾಡಲು ಕೊಟ್ಟು, ದೇವತೆಗಳವರಿಗೆ ಅಮೃತವನ್ನು ಕೊಟ್ಟನು ॥೨೩೩॥ ಆ ಸಮಯದಲ್ಲಿ ರಾಹೂ ಎಂಬ ಅಸುರನು ಅಮೃತವನ್ನು ಕದ್ದು ಕುಡಿದಿದ್ದಕ್ಕೆ ಆತನ ಶಿರಚ್ಛೇದನವನ್ನು ಮಾಡಿ ಮತ್ತು ಆ ರುಂಡವಿಲ್ಲದ ಮುಂಡದಲ್ಲಿ ಮ್ಹಾಳಸಾ ಸ್ವರೂಪದಿಂದ ನೇವಾಸೆಯಲ್ಲಿ ಸ್ವತಃ ವಾಸ್ತವ್ಯ ಮಾಡಿದನು ॥೨೩೪॥ ದೇವತೆಗಳಿಗೆ ಸಹಾಯ ಮಾಡುವ ನಾರಾಯಣನು ದ್ವಾರಕೆಯಲ್ಲಿ ಕುಶನನ್ನು ನಿರ್ದಳಿಸೀ ಮತ್ತು ಲವಣಾಸುರನನ್ನು ಕೊಂದು ತಾನು ಕುಮಾರ ರೂಪದಿಂದ ಅವತಾರವನ್ನು ಧರಿಸಿದನು ॥೨೩೫॥ ಈ ಪ್ರಕಾರವಾಗಿ ಪ್ರತ್ಯೇಕ ಮನ್ವಂತರಗಳಲ್ಲಿ ತನ್ನ ಭಕ್ತರ ಕೈವಾರಿಯಾದ ಶ್ರೀಹರಿಯು ದೇವತೆಗಳ ಕಾರ್ಯಗಳಿಗಾಗಿ ಸ್ವತಃ ನಾನಾ ಪ್ರಕಾರದ ಅವತಾರಗಳನ್ನು ಸ್ವೀಕರಿಸುವನು ॥೨೩೬॥ ಆತನು ದೇವತೆಗಳ ಸಹಾಯಾರ್ಥವಾಗಿ ಜಗಜ್ಜೀವನನು ಸ್ವತಃ ವಾಮನ ವಟೂವಿನ ರೂಪವನ್ನು ಪಡೆದು ಯಾಚಕನಾದನು ಮತ್ತು ಆತನು ದೇವತೆಗಳ ಅಪಮಾನವನ್ನು ಅಳಿಸಿದನು ॥೨೩೭॥ ಬಳೀ ರಾಜನು ದಾನಕೊಡುವುದರಲ್ಲಿ ಸಮರ್ಥನಾಗಿದ್ದನು. ಆತನೊಂದಿಗೆ ಯುದ್ಧ ಮಾಡಲು ದೇವತೆಗಳಿಗೆ ಆಗದಾಯಿತು. ಆಗ ಆತನು ತ್ರಿವಿಕ್ರಮರೂಪದಿಂದ ತ್ರಿಭುವನವನ್ನು ವ್ಯಾಪಿಸಿದನು ಮತ್ತು ಯಾಚನೆಯ ನಿಮಿತ್ತದಿಂದ ಬಳೀಗೆ ತೊಂದರೆಗೀಡು ಮಾಡಿದನು ॥೨೩೮॥

ತರೀ ಭಾವಬಳೇ ಬಳೀ ಪ್ರಬಳು । ತೇಣೇ ದೇವೋ ಕೇಲಾ ದ್ವಾರಪಾಳು । ವಿಷ್ಣು ಸತ್ತ್ವ ಪಾಹೇ ಛಳಛಳೂ । ಶೇಖೀ ದಾಸಾಂಚಾ ದಯಾಳು ದಾಸ್ಯ ಕರೀ ಸ್ವಯೇ ॥೨೩೯॥ ಯಾಪರೀ ಬಳೀಚಾ ಛಳ । ಕರೂನಿ ಘೇತಲೇ ದಿಂಗ್ಮಂಡಳ । ತೇಣೇ ಅಮರಗಣ ಸಕಳ । ಅರ್ಪೂನಿ ತತ್ಕಾಳ ಸುಖೀ ಕೇಲೇ ॥೨೪೦॥

ನಿಃಕ್ಷತ್ರಿಯಾಮಕೃತ ಗಾಂ ಚ ತ್ರಿಃಸಪ್ತಕೃತ್ವೋ ರಾಮಸ್ತು ಹೈಹಯಕುಲಾಪ್ಯಯಭಾರ್ಗವಾಗ್ನಿಃ ।
ಸೋऽಬ್ಧಿಂ ಬಬಂಧ ದಶವಕ್ತ್ರಮಹನ್ ಸಲಂಕಂ ಸೀತಾಪತಿರ್ಜಯತಿ ಲೋಕಮಲಘ್ನಕೀರ್ತಿಃ ॥೨೧॥

ಅರ್ಥ: ಪರಶುರಾಮನ ಅವತಾರವನ್ನು ಧರಿಸಿ, ಆತನು ಇಪ್ಪತ್ತೊಂದು ಸಾರೇ ಪೃಥ್ವಿಯನ್ನು ಕ್ಷತ್ರಿಯಹೀನ ಮಾಡಿದನು.ಪರಶುರಾಮನು ಹೈಹಯ ವಂಶದ ಪ್ರಳಯ ಮಾಡುವುದಕ್ಕಾಗಿ ಭೃಗೂ ವಂಶದಲ್ಲಿ ಅಗ್ನಿರೂಪವೇನೋ ಎಂಬಂತೆ ಅವತರಿಸಿದನು. ಭಗವಂತನು ರಾಮಾವತಾರದಲ್ಲಿ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿದನು. ರಾವಣನನ್ನು ಮತ್ತು ಆತನ ರಾಜಧಾನಿ ಲಂಕೆಯನ್ನು ನಾಶಗೊಳಿಸಿದನು. ಈತನ ಕೀರ್ತಿಯು ಸರ್ವಜನರ ಹೃದಯದಲ್ಲಿನ ಅಜ್ಞಾನವನ್ನು ನಷ್ಟಗೊಳಿಸುವುದ್ದಾಗಿದೆ, ಸೀತಾಪತಿಯಾದ ಭಗವಾನ ರಾಮನ ವಿಜಯವೇ, ವಿಜಯವು ಸರ್ವತ್ರವೂ ಆಗುತ್ತಿರುವುದು.

ತೋ ದೇವಾಧಿದೇವೋತ್ತಮು । ಸ್ವಯೇ ಝಾಲಾ ''ಪರಶುರಾಮು'' । ತೇಣೇ ಕ್ಷತ್ರಿಯಾಂಚಾ ಪರಾಕ್ರಮು । ಕೇಲಾ ನಿರ್ಧರ್ಮುರ್ಜ ನಿಜಪ್ರತಾಪೇ ॥೨೪೧॥ ತೋ ಗೋಬ್ರಾಹ್ಮಣಕೈವಾರೀ । ಸಹಸ್ರಾರ್ಜುನಾತೇ ಸಂಹಾರೀ । ಸಹಸ್ರ ಭುಜಾಂಚೀ ಕಾಂಡೋರೀ ಕರೀ । ಕೇಲೀ ಬೋಹರೀ ದಾನವಕುಳಾ ॥೨೪೨॥ ಜಮದಗ್ನೀಚಾ ಕೋಪಾಗ್ನಿ । ಪರಶುರಾಮತೇಜೇ ಪ್ರಜ್ವಳೂನಿ । ಹೈಹಯಕುಳ ಜಾಳೂನಿ । ಆಹಾಳಿಲೀ ಅವನೀ ಕ್ಷತ್ರಿಯಾಂಚೀ ॥೨೪೩॥ ತೇಣೇ ತೀನ ಸಪ್ತಕೇ ವೀರರಸು । ದೇಊನಿ ಕ್ಷತ್ರಿಯಮದ ಬಹುವಸು । ತ್ಯಾ ರೋಗಾಚಾ ಕೇಲಾ ನಾಶು । ಧರೇಚೇ ಈಶು ಧರಾಮರ ಕೇಲೇ ॥೨೪೪॥ ಜೋ ಅವತಾರಾಂಚೇ ಮೂಳ ಪೀಠ । ಜೋ ವೀರವೃತ್ತಿ ಅತಿಉದ್ಭಟ । ತೋ ಅವತರಾಮಾಜೀ ಶ್ರೇಷ್ಠ । ಅತಿವರಿಷ್ಠ ಶ್ರೀರಾಮ ॥೨೪೫॥ ಪಾಪೇ ಪಳತೀ ರಾಮನಾಮೇ । ನಾಮಾಂಕಿತ ವಂದಿಜೇ ಯಮೇ । ಗಣಿಕೇಚೀ ಕರ್ಮಾಕರ್ಮೇ । ಶ್ರೀರಾಮನಾಮೇ ನಿರ್ದಳಿಲೇ ॥೨೪೬॥ ನಾಮೇ ಕಳಿಕಾಳಾಸೀ ಧಾಕ । ಯಮದೂತಾ ನ ಮಿಳೇ ಭೀಕ । ರಾಮನಾಮಗಜರೇ ದೇಖ । ಪಳೇ ನಿಃಶೇಖ ಜನ್ಮ ಮರಣ ॥೨೪೭॥ ಜೋ ದೇವಾಂಚೇ ಬಂದ ಸೋಡೀ । ನವಗ್ರಹಾಂಚೀ ಬೇಡೀ ತೋಡೀ । ಜೇಣೇ ರಾಮರಾಜ್ಯಾಚೀ ರೋಕಡೀ । ಉಭವಿಲೀ ಗುಢೀ ತಿನ್ಹೀ ಲೋಕೀ ॥೨೪೮॥ ಜ್ಯಾಚೇನಿ ಶಿಳಾ ತರತೀ ಸಾಗರೀ । ಅಸುರ ಮಾರಿಲೇ ವಾನರೀ । ಜೇಣೇ ಸುವರ್ಣಾಚೀ ನಗರೀ । ವೋಪಿಲೀ ಪುರೀ ಶರಣಾಗತಾಸೀ ॥೨೪೯॥ ಜೋ ಪ್ರತಾಪಾಚಾ ಮರಿಗಳಾ । ಜೇಣೇ ಸೇತು ಬಾಂಧಿಲಾ ಅವಲೀಲಾ । ಚರಣೇ ಉದ್ಧರಿಲೀ ಶಿಳಾ । ಜೋ ನಿಜಜಿವ್ಹಾಳಾ ನಿಜಭಕ್ತಾ ॥೨೫೦॥

ಆದರೆ, ಬಳೀಯ ಭಾವವು ಪ್ರಬಲವಾಗಿರುವುದರಿಂದ ಆತನು ದೇವನಿಗೆ ದ್ವಾರಪಾಲಕನನ್ನಾಗಿ ಮಾಡಿ ಬಿಟ್ಟನು. ಈ ಪ್ರಕಾರವಾಗಿ ವಿಷ್ಣೂ ತನ್ನ ಭಕ್ತರಿಗೆ ಪೀಡಿಸಿ, ಪರೀಕ್ಷಿಸಿ ಅವರ ಸತ್ವವನ್ನು ತಿಳಿಯುವನು ಮತ್ತು ಕೊನೆಯಲ್ಲಿ ಭಕ್ತರ ದಾಸನಾಗಿ ಸ್ವತಃ ಅವರ ಸೇವೆಯನ್ನು ಮಾಡುವನು ॥೨೩೯॥ ಈ ಪ್ರಕಾರವಾಗಿ ನಾರಾಯಣನು ಬಳೀಯನ್ನು ಪೀಡಿಸಿ, ಆತನಿಂದ ತ್ರಿಭುವನವೆಲ್ಲವನ್ನೂ ಕಸಿದುಕೊಂಡು, ದೇವತೆಗಳಿಗೆ ಅರ್ಪಿಸಿ ಅವರನ್ನು ಸುಖೀಗಳನ್ನಾಗಿ ಮಾಡಿದನು ॥೨೪೦॥

ಆ ಪುರುಷೋತ್ತಮನಾದ ದೇವಾಧಿದೇವನು ಸ್ವತಃ ಪರಶುರಾಮನಾದನು. ಮತ್ತು ಆತನು ತನ್ನ ಪ್ರತಾಪದಿಂದ ಸರ್ವ ಕ್ಷತ್ರಿಯರ ಪರಾಕ್ರಮವನ್ನು ನಿಃಸತ್ವಮಾಡಿದನು ॥೨೪೧॥ ಆತನು ಗೋಬ್ರಾಹ್ಮಣರ ಮಹಾ ಕೈವಾರೀಯಾಗಿದ್ದನು. ಆತನು ಸಹಸ್ರಾರ್ಜುನನನ್ನು ಸಂಹರಿಸಿದನು. ಆತನ ಸಾವಿರ ಕೈಗಳನ್ನೆಲ್ಲ ತುಂಡು ತುಂಡು ಮಾಡಿದನು. ದಾನವಕುಲದ ನಾಶ ಮಾಡಿದನು ॥೨೪೨॥ ಜಮದಗ್ನಿಯ ಕ್ರೋಧಾಗ್ನಿಯು ಪರಶುರಾಮನ ರೂಪದಿಂದ ಪ್ರಜ್ವಲಿತವಾಯಿತು. ಈತನು ಹೈಹಯ ಕುಲವನ್ನು ಭಸ್ಮಗೊಳಿಸಿ, ಕ್ಷತ್ರಿಯರ ಪೃಥ್ವಿಯನ್ನು ಬೆಂದಿಸಿಬಿಟ್ಟನು ॥೨೪೩॥ ಈತನು ಇಪ್ಪತ್ತೊಂದು ಸಾರೇ ವೀರರಸವನ್ನು ಕೊಟ್ಟು ಕ್ಷತ್ರಿಯರ ಉನ್ಮಾದ ರೋಗದ ನಾಶ ಮಾಡಿದನು. ಬ್ರಾಹ್ಮಣರಿಗೆ ಭೂಮಿಯ ಅಧಿಪತಿಯನ್ನಾಗಿ ಮಾಡಿದನು ॥೨೪೪॥ ತದನಂತರ ಸರ್ವ ಅವತಾರಗಳ ಮೂಳಪೀಠವಾದ, ವೀರವೃತ್ತಿಯು ಅತ್ಯಂತ ಉಜ್ವಲವಾದ ಸರ್ವ ಅವತಾರಗಳಲ್ಲಿ ಅತ್ಯಂತ ಶ್ರೇಷ್ಠವಾದ ಸಮರ್ಥವಾದ, ಇಂತಹ ಶ್ರೀರಾಮನಾದನು ॥೨೪೫॥ ಈ ರಾಮನ ನಾಮದಿಂದ ಸರ್ವ ಪಾಪಗಳು ಸುಟ್ಟು ಹೋಗುವುವು. ಈತನ ನಾಮಃಸ್ಮರಣೆಯನ್ನು ಮಾಡುವವರ ಚರಣಗಳಿಗೆ ಯಮನು ಸಹ ವಂದಿಸುವನು. ಗಣಿಕೆಯ ಎಲ್ಲ ಕರ್ಮಾಕರ್ಮಗಳು ರಾಮನಾಮದಿಂದ ಇಲ್ಲದಾದವು ॥೨೪೬॥ ಈತನ ನಾಮಕ್ಕೆ ಕಲಿಕಾಲನು ಗಡಗಡನೇ ನಡುಗುವನು. ಯಮದೂತರಿಗೆ ಯಾರೂ ಭಿಕ್ಷೆ ಹಾಕರು. ರಾಮನಾಮದ ಗರ್ಜನೆಯಿಂದ ಸಮೂಲವಾಗಿ ಜನ್ಮಮರಣಗಳು ಓಡಿ ಹೋಗುವುವು ॥೨೪೭॥ ಶ್ರೀರಾಮನು ದೇವತೆಗಳ ಬಂಧನವನ್ನು ಬಿಡಿಸಿದನು. ನವಗ್ರಹಗಳ ಬೇಡಿಗಳನ್ನೇ ಮುರಿದುಹಾಕಿದನು ಮತ್ತು ಈತನು ಮೂರು ಲೋಕಗಳಲ್ಲಿಯೂ ರಾಮರಾಜ್ಯದ ಧ್ವಜವನ್ನು ಹಾರಿಸಿದನು ॥೨೪೮॥ ಈತನ ಸಾಮರ್ಥ್ಯದಿಂದ ಸಮುದ್ರದಲ್ಲಿ ಕಲ್ಲುಗಳು ತೇಲಿದವು. ವಾನರರಿಂದ ರಾಕ್ಷಸರು ಕೊಲ್ಲಲ್ಪಟ್ಟರು ಮತ್ತು ಬಂಗಾರದ ನಗರವಾದ ಲಂಕಾಪುರವನ್ನು ಶರಣಾಗತನಾದ ವಿಭೀಷಣನಿಗೆ ಕೊಟ್ಟನು॥೨೪೯॥ ಪ್ರತಾಪದ ಮೂರ್ತಿಮಂತ ಮೂರ್ತಿಯಾಗಿರುವ ಈತನು ಲೀಲಾಮಾತ್ರದಿಂದ ಸೇತುವೆಯನ್ನು ಕಟ್ಟಿಸಿದನು. ಶಿಲೆಯಾಗಿ ಬಿದ್ದಿರುವ ಅಹಲ್ಯೆ - ಯನ್ನು ಚರಣಸ್ಪರ್ಶದಿಂದ ಉದ್ಧಾರಮಾಡಿದನು. ಈತನಿಗೆ ತನ್ನ ಭಕ್ತರು ಜೀವ ಪ್ರಾಣರಾಗಿರುವರು ॥೨೫೦॥

ತೋ ಅವತಾರ ಮೂರ್ತಿಮಂತ । ರಾಯಾ ಅದ್ಯಾಪಿ ಅಸೇ ವರ್ತತ । ಹಾ ಸಂವಾದ ತ್ರೇತಾಯುಗಾಂತ । ದ್ರುಮಿಲ ಸಾಂಗತ ವಿದೇಹಾಸೀ ।।೨೫೧।। ಯಾಲಾಗೀ ಶ್ರೀರಾಮ ರಾಮ । ನಿತ್ಯ ಜಪೇ ಜೋ ಹೇ ನಾಮ । ತೋ ಪುರುಷಾಮಾಜೀ ಪುರುಷೋತ್ತಮ । ಕರ್ಮಾಕರ್ಮ ಅತೀತ ತೋ ।।೨೫೨।। ತೇ ರಾಮನಾಮ ಅವಚಟೇ । ಭೀತರೀ ರಿಘೇ ಕರ್ಣಪುಟೇ । ತೈ ಕಳಿಮಳಾಂಚೇ ಮಳಕಟೇ । ನಾಮೋದ್ಧಾಟೇ ನಾಸತೀ ।।೨೫೩।। ಐಶೀ ರಾಮನಾಮಾಚೀ ಖ್ಯಾತೀ । ಜಗದುದ್ಧಾರೇ ಕೇಲೀ ಕೀರ್ತಿ । ಧನ್ಯ ಧನ್ಯ ಜೇ ಪರಿಸತೀ । ಧನ್ಯ ಜೇ ಗಾತೀ ರಾಮಚರಿತ ।।೨೫೪।।

ಭೂರ್ಮೇರ್ಭರಾವತರಣಾಯ ಯದುಷ್ವಜನ್ಮಾ ಜಾತಃ ಕರಿಷ್ಯತಿ ಸುರೈರಪಿ ದುಷ್ಕರಾಣಿ ।
ವಾದೈರ್ವಿಮೋಹಯತಿ ಯಜ್ಞಕೃತೋಽತದರ್ಹಾನ್ ಶೂದ್ರಾನ್ ಕಲೌ ಕ್ಷಿತಿಭುಜೋ ನ್ಯಹನಿಷ್ಯದಂತೇ ।।೨।।

ಅರ್ಥ: ಭೂಮಿಯ ಭಾರವನ್ನು ಇಳಿಸಲೋಸುಗ ಜನ್ಮರಹಿತ ಪರಮಾತ್ಮನು ಯಾದವ ಕುಲದಲ್ಲಿ ಉತ್ಪನ್ನನಾಗಿ ದೇವತೆಗಳಿಗೂ ದುಷ್ಕರವಾದ ಕರ್ಮಗಳನ್ನು ಮಾಡುವನು. ಯಜ್ಞಕ್ಕಾಗಿ ವಾದವನ್ನು ಮಾಡಿ ಯಜ್ಞ ಮಾಡಲು ಯೋಗ್ಯರಲ್ಲದ ಅಸುರರನ್ನು ಭಗವಂತನು ಮೋಹಿತರನ್ನಾಗಿ ಮಾಡುವನು. ಮತ್ತು ಕಲಿಯುಗದಲ್ಲಿ ಆ ಭಗವಂತನು ಶೂದ್ರ ರಾಜರನ್ನೂ ಕೊಲ್ಲುವನು.

ಆತಾ ಭಾವೀ ಅವತಾರವಾರ್ತಾ । ತುಜ ಮೀ ಸಾಂಗೇನ ನೃಪನಾಥಾ । ಶ್ರೀಕೃಷ್ಣಾವತಾರಕಥಾ । ಪರಮಾದ್ಭುತಾ ವಿಚಿತ್ರ ।।೨೫೫।। ಜೋ ಪರೇಹೂನ ಪರಾತ್ಪರು । ಜೋ ಕಾ ಅಜನ್ಮಾ ಅಕ್ಷರು । ಜೋ ಶ್ರುತಿಶಾಸ್ತ್ರ ಅಗೋಚರು । ತೋ ಪೂರ್ಣಾವತಾರು "ಶ್ರೀಕೃಷ್ಣ" ।।೨೫೬।। ಜೇಥೇ ನಾಮಮಾತ್ರ ರಿಘೋ ನ ಲಾಹೇ । ಜೇಥೇ ರೂಪಾಚೀ ನ ಲಭೇ ಸೋಯೇ । ಜ್ಯಾ ಬ್ರಹ್ಮತ್ವ ಅಂಗೀ ನ ಸಾಹೇ । ತೋ ಅವತಾರ ಪಾಹೇ ಶ್ರೀಕೃಷ್ಣ ।।೨೫೭।। ಜೋ ವರ್ಣಾಶ್ರಮಾಂಸೀ ನಾತಳೇ । ಜ್ಯಾಸೀ ಈಶ್ವರತ್ವಹೀ ವೋವಿಳೇ । ಜೋ ಅಜ ಅವ್ಯಯ ಸ್ವಾನಂದಮೇಳೇ । ತೋ ಅವತಾರು ಸ್ವಲೀಲೇ ಶ್ರೀಕೃಷ್ಣನಾಥು ।।೨೫೮।। ಐಸಾ ಗುಣಧರ್ಮಕರ್ಮಾತೀತು । ತೋ ಅವತಾರು ಶ್ರೀಕೃಷ್ಣನಾಥು । ಪ್ರಗಟಲಾ ಯದುವಂಶಾ ಆಂತು । ಸ್ವಯೇ ಜಗನ್ನಾಥು ಸ್ವಇಚ್ಛೆ ।।೨೫೯।। ಜೈಸೇ ಖಳಾಳ ಕಲ್ಲೋಳ ಚಂಚಳ । ಭಾಸೇ ಪರೀ ತೇ ಕೇವಳ ಜಳ । ಕಾಳೀ ಭರಡೀ ಪಾಂಢರೀ ಚೋಳ । ಪರೀ ತೇ ಕೇವಳ ವಸುಧಾಚಿ ।।೨೬೦।। ಜೇ ಗೋಡಿ ನಾಬದರಾಸೀ । ತೇಚಿ ವೇಗಳೀ ರವೇಯಾಸೀ । ತೈಸಾ ಅವತಾರ ಯದುವಂಶೀ । ಪೂರ್ಣಾಂಶೇಸೀ ಶ್ರೀಕೃಷ್ಣ ।।೨೬೧।। ಜೈಸಾ ದೀಪು ಲಾವಿತಾ ತತ್ಕ್ಷಣೀ । ಸವೇಂಚಿ ಪ್ರಗಟೇ ತೇಜಾಚೀ ಖಾಣೀ । ತೈಸಾ ಉಪಜತಾಂಚಿ ಬಾಳಪಣೀ । ಅಭಿನವ ಕರಣೀ ಸ್ವಯೇಕೇಲೀ ।।೨೬೨।। ಜೇ ಬ್ರಹ್ಮಾದಿಕ ದೇವಾ ನವ್ಹೇ । ತೇ ಬಾಳಲೀಲಾ ಸ್ವಭಾವೇ । ಕರೂನಿ ದಾವಿಲೇ ಆಘವೇ । ದೇವಾಧಿದೇವೇ ಶ್ರೀಕೃಷ್ಣೇ ।।೨೬೩।।

ಆ ಸಾಕ್ಷಾತ ಅವತಾರೀ ರಾಮನು ಈಗಲೂ ಈ ಪೃಥ್ವಿಯಲ್ಲಿ ವಾಸಮಾಡಿರುವನು. ತ್ರೇತಾಯುಗದಲ್ಲಿ ಈ ಕಥೆಯನ್ನು ದ್ರುಮಿಲನು ವಿದೇಹ ರಾಜನಿಗೆ ಹೇಳಿದನು ।।೨೫೧।। ಆದ್ದರಿಂದ ಶ್ರೀರಾಮ ಎಂಬ ನಾಮವನ್ನು ನಿತ್ಯವೂ ಜಪಿಸುವವನು ಪುರುಷರಲ್ಲಿ ಪುರುಷೋತ್ತಮನಾಗಿ ಕರ್ಮಾಕರ್ಮಗಳ ಅತೀತನಾಗುವನು ।।೨೫೨।। ಈ ರಾಮನ ನಾಮವು ಯಾವುದೇ ನಿಮಿತ್ತದಿಂದಾಗಲೀ ಕಿವಿಗೆ ಬೀಳಲು ಕಲಿಕಾಲನ ದೋಷವು ಈ ನಾಮದ ಉಚ್ಚಾರದಿಂದ ನಾಶವಾಗುವುದು ।।೨೫೩।। ಹೀಗೆ ರಾಮನಾಮದ ಖ್ಯಾತಿಯಾಗಿರುವುದು. ರಾಮನಾಮವು ಜಗತ್ತನ್ನು ಉದ್ಧಾರಗೊಳಿಸಿ ತನ್ನ ಕೀರ್ತಿಯನ್ನು ಹಬ್ಬಿಸಿರುವುದು. ಈ ರಾಮನ ಚರಿತ್ರೆಯನ್ನು ಹಾಡುವವರು, ಕೇಳುವವರು ಧನ್ಯಧನ್ಯರಾಗುವರು ।।೨೫೪।।

ಹೇ ರಾಜಾಧಿರಾಜನೇ, ಈಗ ಮುಂದಾಗುವ ಅವತಾರಗಳ ಕಥೆ ಹೇಳುವೆನು. ಇದು ಶ್ರೀಕೃಷ್ಣನ ಅವತಾರವಾಗಿರುವುದು. ಈತನ ಚರಿತ್ರೆಯು ಅತ್ಯಂತ ಅದ್ಭುತ ಮತ್ತು ವಿಚಿತ್ರವಾಗಿರುವುದು ।।೨೫೫।। ಈತನು ಪರಾಕ್ಕಿಂತಲೂ ಪರಾತ್ಪರನು. ಅಜನ್ಮನಾಗಿ, ಅಕ್ಷರನು ಮತ್ತು ಶ್ರುತಿಶಾಸ್ತ್ರಗಳಿಗೂ ಅಗೋಚರನು ಹೀಗಿರುವ ಶ್ರೀಕೃಷ್ಣನು ಪೂರ್ಣಾವತಾರನು ।।೨೫೬।। ಅಲ್ಲಿ ನಾಮದ ಪ್ರವೇಶವಾಗುವುದಿಲ್ಲ ರೂಪಕ್ಕೆ ಅವಕಾಶವು ದೊರೆಯುವುದಿಲ್ಲ. ಈತನ ಸ್ವರೂಪದಲ್ಲಿ ಬ್ರಹ್ಮತ್ವವೂ ತಿಳಿಯುವುದಿಲ್ಲ. ಇದು ಶ್ರೀಕೃಷ್ಣನ ಅವತಾರವಾಗಿರುವುದು ।।೨೫೭।। ಈತನು ವರ್ಣಾಶ್ರಮವನ್ನು ಮುಟ್ಟನು, ಅಂದರೆ ವರ್ಣಾಶ್ರಮದಿಂದ ಆಚೆ ಇರುವನು. ಈತನಿಗೆ ಈಶ್ವರತ್ವದ ಸ್ಪರ್ಶವೂ ಸಹನವಾಗದು. ಹೀಗೆ ಶ್ರೀಕೃಷ್ಣನ ಅವತಾರವಾಗಿರುವುದು ।।೨೫೮।। ಈ ಪ್ರಕಾರವಾಗಿ ಈತನು ಶ್ರೀಕೃಷ್ಣ ನಾಮದ ಅವತಾರನಾಗಿ ಗುಣಕರ್ಮಾತೀತ ಆಗಿರುವನು. ಈತನು ಜಗತ್ತಿನ ನಾಥನು. ತಾನಾಗಿಯೇ ತನ್ನ ಇಚ್ಛೆಯಿಂದಲೇ ಯಾದವರ ವಂಶದಲ್ಲಿ ಉತ್ಪನ್ನನಾದನು ।।೨೫೯।। ನೀರಿನಲ್ಲಿ ತೆರೆಗಳು ಅತಿಶಯವಾಗಿ ಚಂಚಲದಂತೆ ಭಾಸವಾಗುವುವು. ಆದರೆ ಅವು ಎಲ್ಲವೂ ನೀರೇ ಆಗಿರುವುವು, ಮಣ್ಣು ಕಪ್ಪು, ಕೆಂಪು, ಬಿಳಪು ಹೀಗೆ ಅನೇಕ ಬಣ್ಣಗಳಿಂದ ಕೂಡಿರುವುದು. ಆದರೆ ಅವೆಲ್ಲವೂ ಪೃಥ್ವಿಯೇ ಆಗಿರುವುದು ।।೨೬೦।। ಅಥವಾ ಕಲ್ಲು ಸಕ್ಕರೆಯ ದೊಡ್ಡ ರಾಶಿಯಲ್ಲಿ ಇರುವ ಸಿಹಿಯು, ಅದೇ ರಾಶಿಯಲ್ಲಿನ ಬೇರೆಯಾದ ಸಕ್ಕರೆಯ ಹರಳಿನಲ್ಲಿಯೂ ಇರುವುದು. ಅದರಂತೆ ಯಾದವರ ಕುಲದಲ್ಲಿ ಶ್ರೀಕೃಷ್ಣನ ಅವತಾರವು ಪೂರ್ಣಾಂಶದಿಂದ ಆಗಿರುವುದು ।।೨೬೧।। ದೀಪವನ್ನು ಹಚ್ಚಿದಾಕ್ಷಣವೇ ಅದರ ಬೆಳಕು ನಾಲ್ಕೂಕಡೆ ಹಬ್ಬುವುದು, ಅದರಂತೆ, ಶ್ರೀಕೃಷ್ಣನು ಜನ್ಮಕ್ಕೆ ಬರುತ್ತಲೇ ಆತನು ಸ್ವತಃ ಮಹಾ ಅದ್ಭುತಕಾರ್ಯಗಳನ್ನು ಮಾಡಿದನು ।।೨೬೨।। ಯಾವ ಬ್ರಹ್ಮಾದಿಕ ದೇವರಿಗೂ ಮಾಡಲು ಶಕ್ಯವಿಲ್ಲದ ಆ ಎಲ್ಲ ಕಾರ್ಯಗಳನ್ನು ದೇವಾಧಿದೇವ ಶ್ರೀಕೃಷ್ಣನು ಬಾಲಲೀಲೆಯ ಸ್ವಭಾವದಿಂದ ಮಾಡಿ ತೋರಿಸಿದನು ।।೨೬೩।।

ವಣವಾ ಗಿಳಿಲಾ ಮುಖೇ । ಪರ್ವತ ಉಚಲಿಲಾ ನಖೇ । ಪೂತನೇಚೇ ಸ್ತನ ವಿಖೇ । ಪ್ಯಾಲಾ ನಿಜಮುಖೇ ಜೀವಾಸಗಟ ॥೨೬೪॥ ಜೇಣೇ ವತ್ಸ ಹರಣಮಿಸೇ । ಸೃಷ್ಟಾ ಸಹೀ ಲಾವಿಲೇ ಪಿಸೇ । ಜೋ ವತ್ಸ ವತ್ಸ ಪವೇಶೇ । ಝಾಲಾ ಸಾವಕಾಶೇ ಏಕಾಕೀ ಏಕ ॥೨೬೫॥ ಅಘ ಚಿರಿಲಾ ಜಾಭಾಡಾ । ಕಾಳಿಯಾಚ್ಯಾ ಕುಟಿಲ್ಯಾ ಫಡಾ । ಯಮಲೋಕೀ ಘೇಊನಿ ಝಾಡಾ । ಆಣಿಲಾ ರೋಕಡಾ ಗುರುಪುತ್ರ ಜೇಣೇ ॥೨೬೬॥ ಜೇ ಪ್ರಜಾ ಪೀಡೂನಿ ಕರ ಘೇತೀ । ಜಯಾ ನಾವಡೇ ಧರ್ಮನೀತೀ । ಐಸೇ ರಾಜೇ ಭಾರಭೂತ ಕ್ಷಿತೀ । ನೇಣೋ ಕಿತೀ ನಿರ್ದಾಳಿಲೇ ॥೨೬೭॥ ಏಕಾ ಸೈನ್ಯೇ ಏಕಾ ಸ್ವಾಂಗೇ । ಏಕಾ ವಧವೀ ಆನ ಪ್ರಯೋಗೇ । ಏಕಾ ಗೋತ್ರಕಲಹಪ್ರಸಂಗೇ । ಅಗ್ರಪೂಜಾಯೋಗೇ ಏಕಾಂಸೀ ॥೨೬೮॥ ಅಧರ್ಮಾ ಲಾವಿಲ ಸೀಕ । ಧರ್ಮಾಚೇ ವಾಢವಿಲ ಬಿಕ । ಹೇ ಅವತಾರ ಕೌತುಕ । ರಾಯಾ ತೂ ಆವಶ್ಯಕ ದೇಖಿಶೀಲ ಪುಢಾ ॥೨೬೯॥ ಜೈ ಜೈ ಲೋಟೇಲ ಅಹೋರಾತ್ರ । ತೈ ತೈ ಕರೀಲ ನವೇ ಚರಿತ್ರ । ತಯಾ ಕೃಷ್ಣಸುಖಾಸೀ ಪಾತ್ರ । ಭಕ್ತ ಪವಿತ್ರ ಹೋತೀಲ ॥೨೭೦॥ ಸಾಧೂಂಸೀ ಸ್ವಾನಂದ ಸೋಹಳಾ । ನಿತ್ಯ ನವಾ ಹೋಈಲ ಆಗಳಾ । ತೇ ಶ್ರೀಕೃಷ್ಣಾಚೀ ಲೀಲಾ । ದೇಖಸೀ ಡೋಳಾ ನೃಪನಾಥಾ ॥೨೭೧॥ ತೋಚಿ ಬೌದ್ಧ ರೂಪೇ ಜಾಣ । ಪುಢಾ ಧರೀಲ ದೃಢ ಮೌನ । ತೇವ್ಹಾ ಕರ್ಮಾಕರ್ಮವಿವಂಚನ । ಸರ್ವಥಾ ಜಾಣ ಕಳೇನಾ ॥೨೭೨॥ ತೋ ತಟಸ್ಥಪಣೇ ಸದಾ । ಪ್ರವರ್ತವೀಲ ಮಹಾವಾದಾ । ತೇಣೇ ವಾದಮಿಸೇ ಸದಾ । ವಾಢವೀಲ ಮದಾ ಮಹಾಮೋಹಾತೇ ॥೨೭೩॥ ಮೋಹ ಉಪಜವೀಲ ದುರ್ಘಟ । ಏಕ ಕರ್ಮೀ ಕರೀಲ ಕರ್ಮಠ । ಏಕ ಹೋತೀಲ ಕರ್ಮಭ್ರಷ್ಟ । ನ ಕಳೇ ಚೋಖಟ ನಿಜಾತ್ಮಹಿತ ॥೨೭೪॥ ಕೈಸೇ ಮಾಜವೀಲ ಮತ । ವೇದ ಮಿಥ್ಯಾ ಮಾನೀತ । ವೇದವಿಹಿತಾ ನಾತಳತ । ತೋ ಜಾಣ ನಿಶ್ಚಿತ ಮಹಾಮೋಹೋ ॥೨೭೫॥ ಮೋಹೇ ಕೇಲಾ ಸರ್ವಾಂಸೀ ಛಳ । ಏಕಾ ಜ್ಞಾನಾಭಿಮಾನ ಪ್ರಬಳ । ತೇ ಕರ್ಮ ನಿಂದಿತೀ ಸಕಳ । ತ್ಯಾಗಿತೀ ಕೇವಳ ಜಾಡ್ಯ ಮ್ಹಣೌನೀ ॥೨೭೬॥ ಐಸಿಯೇ ವರ್ತತಾ ಮೋಹಸ್ಥಿತೀ । ಪೂರ್ಣ ಕಳೀಚೀ ಹೋಯ ಪ್ರವೃತ್ತೀ । ತೇವ್ಹಾ ನೀಚ ತೇ ರಾಜೇ ಹೋತೀ । ಪ್ರಜಾ ನಾಗವಿತೀ ಚೋರಪ್ರಾಯ ॥೨೭೭॥ ಶೂದ್ರಾಹೂನಿ ಅತಿಕನಿಷ್ಠ । ರಾಜೇ ಹೋತೀ ಪರಮಶ್ರೇಷ್ಠ । ವರ್ಣಾವರ್ಣ ಕರಿತೀ ಭ್ರಷ್ಟ । ಅತಿಪಾಪಿಷ್ಠ ಅಧರ್ಮೀ ॥೨೭೮॥

ದಾವಾಗ್ನಿಯನ್ನು ಮುಖದಿಂದ ನುಂಗಿಬಿಟ್ಟನು. ಉಗುರಿನಿಂದಲೇ ಪರ್ವತವನ್ನು ಎತ್ತಿದನು ಮತ್ತು ಪೂತನೆಯ ಸ್ತನದ ವಿಷವನ್ನು ಆಕೆಯ ಪ್ರಾಣಸಮೇತವಾಗಿ ಪ್ರಾಶನಮಾಡಿದನು ॥೨೬೪॥ ಗೋವತ್ಸಗಳ ಅಪಹರಣದ ನಿಮಿತ್ತದಲ್ಲಿ ಈತನು ಬ್ರಹ್ಮದೇವನಿಗೂ ಹುಚ್ಚು ಹಿಡಿಸಿದನು. ಆ ಗೋವು ವತ್ಸಗಳೆಲ್ಲವನ್ನೂ ತಾನೊಬ್ಬನೇ ಆದನು ॥೨೬೫॥ ಅಘಾಸುರನ ದವಡೆಯನ್ನು ಸೀಳಿಹಾಕಿದನು. ಕಾಲಿಯಾ ಸರ್ಪದ ಹೆಡೆಯನ್ನು ಕುಟ್ಟಿಬಿಟ್ಟನು. ಯಮಲೋಕದಲ್ಲಿ ತಪಾಸಣೆ ಮಾಡಿ ಗುರುಪುತ್ರನನ್ನು ಇದ್ದಂತೆಯೇ ತಿರುಗಿ ತಂದನು ॥೨೬೬॥ ಪ್ರಜೆಗಳನ್ನು ಪೀಡಿಸಿ ಕರಗಳನ್ನು ವಸೂಲಿಮಾಡುವವರನ್ನು, ಯಾರಿಗೆ ಧರ್ಮವು, ನೀತಿಯು ಹಿಡಿಸುವುದಿಲ್ಲ. ಇಂತಹ ಭೂಮಿಗೆ ಭಾರವಾದ ಅದೆಷ್ಟು ರಾಜರಿಗೆ ಸಂಹರಿಸಿದನೋ ಅವುಗಳ ಪತ್ತೆಯೇ ಇಲ್ಲ ॥೨೬೭॥ ಎಷ್ಟೋ ಜನರಿಗೆ ಸೈನ್ಯದ ಕೈಗಳಿಂದ, ಎಷ್ಟೋ ಜನರಿಗೆ ಸ್ವತಃ ತನ್ನ ಕೈಯಿಂದ ಮತ್ತು ಇನ್ನು ಎಷ್ಟೋ ಜನರಿಗೆ ಯಾವುದೋ ಉಪಾಯಗಳ ಯೋಜನೆಯನ್ನು ಮಾಡಿ, ಕೌರವ ಮತ್ತು ಕ್ಷತ್ರಿಯರಿಗೆ ಭೂಮಿಗಾಗಿ ಕಲಹ ಹುಟ್ಟಿಸಿ ಮತ್ತು ಶಿಶುಪಾಲನಿಗೆ ಅಗ್ರಪೂಜೆಯ ನಿಮಿತ್ತ ಮಾಡಿ, ಹೀಗೆ ಈತನು ಸಂಹರಿಸಿದನು ॥೨೬೮॥ ಶ್ರೀಕೃಷ್ಣನು ಅಧರ್ಮವನ್ನು ನಾಶಗೊಳಿಸಿ ಧರ್ಮದ ರಕ್ಷಣೆಯನ್ನು ಮಾಡಿದನು. ಈ ಅವತಾರದ ಕೌತುಕವು ಮುಂದೆ ನಿನ್ನ ದೃಷ್ಟಿಗೆ ಬೀಳುವುದು ॥೨೬೯॥ ಹಗಲು ರಾತ್ರಿಗಳು ಹೇಗೇಗೆ ಉರುಳುವುವೋ ಹಾಗೆ ಹಾಗೇಯೇ ಈತನು ಹೊಸ ಹೊಸ ಚರಿತ್ರೆಗಳನ್ನು ತೋರಿಸುವನು. ಅಂತಃಕರಣದಿಂದ ಭಕ್ತಿಯನ್ನು ಮಾಡುವವರೇ ಆ ಕೃಷ್ಣನ ಸುಖಕ್ಕೆ ಪಾತ್ರರಾಗುವರು ॥೨೭೦॥ ಶ್ರೀಕೃಷ್ಣನ ಲೀಲೆಯು ಸಾಧುಗಳ ಅವರ್ಣನೀಯ ಮತ್ತು ನಿತ್ಯ ನೂತನವಾದ ಸ್ವಾನಂದದ ವೈಭವವು. ಹೇ ನೃಪನಾಥನೇ, ಈ ಕೃಷ್ಣನ ಲೀಲೆಗಳನ್ನು ನೀನೂ ಸಹ ನಿನ್ನ ಕಣ್ಣುಗಳಿಂದ ನೋಡುವೆ ॥೨೭೧॥ ಈತನೇ ಮುಂದೆ ಬೌದ್ಧರೂಪವನ್ನು ಧರಿಸಿ ದೃಢವಾದ ಮೌನವನ್ನು ತಾಳುವನು. ಆಗ ಕರ್ಮ ಮತ್ತು ಅಕರ್ಮಗಳ ವಿವೇಚನೆಯು ಯಾರಿಗೂ ತಿಳಿಯದಂತಾಗುವುದು ॥೨೭೨॥ ಈತನು ಸದಾಸರ್ವಕಾಲದಲ್ಲಿ ತಟಸ್ಥನಾಗಿದ್ದು ದೊಡ್ಡ ದೊಡ್ಡ ವಾದಗಳನ್ನು ಹುಟ್ಟಿಸುವನು. ವಾದದ ನಿಮಿತ್ತದಿಂದ ಮದಮೋಹಗಳು ಸೊಕ್ಕೇರುವುವು ॥೨೭೩॥ ಈತನು ದುರ್ಘರವಾದ ಮೋಹವನ್ನು ಹುಟ್ಟಿಸುವನು, ಕೆಲವರು ಡಾಂಭಿಕ ಕರ್ಮಗಳನ್ನು ಮಾಡಿದರೆ ಇನ್ನೂ ಹಲವರನೇಕರು ಕರ್ಮಭ್ರಷ್ಟರಾಗುವರು. ಇವರಿಗೆ ನಿಜವಾದ ಆತ್ಮಹಿತವು ಯಾವುದರಲ್ಲಿದೆ ಎನ್ನುವುದು ತಿಳಿಯದಾಗುವುದು ॥೨೭೪॥ ವೇದಕ್ಕೆ ಇದೆಲ್ಲ ಸುಳ್ಳು ಎನ್ನುವರು. ವೇದವಿಧಿಗಳನ್ನು ಮೀರಿ ಕೇವಲ ಮೋಹಾತ್ಮಕ ಮತಗಳು ಈ ಜಗತ್ತಿನಲ್ಲಿ ಮೆರೆಯುವುವು ॥೨೭೫॥ ಅನೇಕರು ಮೋಹದಿಂದ ಮುಳುಗಿಬಿಡುವರು. ಅನೇಕರಿಗೆ ಜ್ಞಾನದ ಪ್ರಬಲವಾದ ಅಭಿಮಾನವು ನಿರ್ಮಾಣವಾಗುವುದು. ಮತ್ತು ಇವರು ಎಲ್ಲ ಕರ್ಮಗಳನ್ನು ನಿಂದಿಸುವರು. ಕರ್ಮವು ಕೇವಲ ಜಡವೆಂದು ತಿಳಿದು ಅವುಗಳನ್ನು ತ್ಯಜಿಸುವರು ॥೨೭೬॥ ಈ ಪ್ರಕಾರವಾಗಿ ಮೋಹಮಯ ಸ್ಥಿತಿಯು ಆರಂಭವಾಯಿತೆಂದರೆ ಕಲಿಯುಗದ ಪ್ರವೃತ್ತಿಯಾಗುವುದು. ನೀಚ ಜನರು ರಾಜರಾಗಿ ಕಳ್ಳರಂತೆ ಪ್ರಜೆಗಳನ್ನು ಮುಳುಗಿಸಿಬಿಡುವರು ॥೨೭೭॥ ಅತ್ಯಂತ ಕನಿಷ್ಠ ಜನರು ರಾಜರಾಗುವರು. ಈ ಯಾವ ಅತ್ಯಂತ ಪಾಪಿಗಳಾದ, ಮತ್ತು ಅಧರ್ಮಿಗಳಾದ ರಾಜರು ವರ್ಣಾವರ್ಣವನ್ನು ಭ್ರಷ್ಟಗೊಳಿಸುವರು ॥೨೭೮॥

ಅಪರಾಧೇವೀಣ ವಿತಂಡ । ಭಲೇತ್ಯಾಂಸಿ ಕರಿತೀ ದಂಡ । ಮಾರ್ಗಸ್ಥಾಂಚಾ ಕರಿತೀಕೋಂಡ । ಕರಿತೀ ಉದಂಡ ಸರ್ವಾಪಹರಣ ।೨೭೯॥ ಅಬಳಾಂಚೇ ನಿಜಬಳ ರಾಜಾ । ತೋ ರಾಜಚಿ ಸ್ವಯೇ ನಾಗವೀ ಪ್ರಜಾ । ಐಸಾ ಅಧರ್ಮ ಉಪಜೇ ಕ್ಷಿತಿಭುಜಾ । ತೇ ಗರುಡಧ್ವಜಾ ನ ಸಾಹವೇ ।೨೮೦॥ ಜೇವ್ಹಾ ಸ್ವಧರ್ಮಾಚೇ ಜಿಣೇ । ಅಧರ್ಮೇನಿಲಾಗ ಗಾಂಜಣೇ । ಯಾಲಾಗೀ ಶ್ರೀನಾರಾಯಣೇ । ಅವತಾರ ಧರಣೇ "ಕಲ್ಕೀ" ನಾಮಾ ।೨೮೧॥ ತೋ ಶಸ್ತ್ರಧಾರಾ ಪ್ರಬಳ । ನಷ್ಟ ರಾಜೇ ನಿರ್ದಾಳೀಲ ಸಕಳ । ಮಹಾಮೋಹಾಚೇ ಮೂಳ । ಸ್ವಯೇ ಸಮೂಳ ಉಚ್ಛೇದೀಲ ।೨೮೨॥ ತೇವ್ಹಾ ಧರ್ಮಾಚೇ ಪಾಹಾಂಟ ಫುಟೇ । ಸತ್ಯಾಸೀ ಸತ್ತ್ವ ಚೌಪಟೇ । ತೇವ್ಹಾ ವೇದೋಕ್ತ ವಿಧಾನ ಪ್ರಗಟೇ । ಸ್ವಧರ್ಮರಾಹಾಟೇ ರಾಹಟತೀ ಸರ್ವ ।೨೮೩॥

ಏವಂವಿಧಾನಿ ಕರ್ಮಾಣಿ ಜನ್ಮಾನಿ ಚ ಜಗತ್ಪತೇಃ । ಭೂರೀಣಿ ಭೂರಿಯಶಸೋ ವರ್ಣಿತಾನಿ ಮಹಾಭುಜ ।೨೩॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಚತುರ್ಥೋಽಧ್ಯಾಯಃ ।೪॥

ಅರ್ಥ:- ಮಹಾಬಾಹು ವಿದೇಹ ರಾಜನೇ, ನಾನು ಈಗಾಗಲೇ ವರ್ಣಿಸಿರುವಂತಹ ಅಸಂಖ್ಯಾತ ಅವತಾರಗಳನ್ನೂ ಕಾರ್ಯಗಳನ್ನೂ ಜಗದಧಿಪತಿಯಾದ ನಾರಾಯಣನು ಮಾಡಿದ್ದಾನೆ. ವಾಸ್ತವವಾಗಿ ನೋಡಿದರೆ ಭಗವಂತನ ಮಹಿಮೆಗಳು ಅಪಾರವಾಗಿವೆ.

ಇಲ್ಲಿಗೆ ಶ್ರೀಮದ್ಭಾಗವತದ, ಮಹಾಪುರಾಣದ, ಹನ್ನೊಂದನೆಯ ಸ್ಕಂಧದ ನಾಲ್ಕನೆಯ ಅಧ್ಯಾಯವು ಮುಗಿದುದು.

ಜಯಾಚೀ ಗಾ ಅನಂತ ನಾಮೇ । ಅನಂತ ಅವತಾರ ಅನಂತ ಜನ್ಮೇ । ಅನಂತ ಚರಿತ್ರೇ ಅನಂತ ಕರ್ಮೇ । ಅನಂತೋತ್ತಮೇ ಹರಿಕೀರ್ತೀ ।೨೮೪॥ ಅಗಾಧ ಭಗವಂತಾಚಾ ಮಹಿಮಾ । ತ್ಯಾಚ್ಯಾ ಪಾರ ನಾಹೀ ಜನ್ಮಕರ್ಮಾ । ತ್ಯಾಚಾ ಅನುಷ್ಟುಪ್ ಹಾ ಮಹಿಮಾ । ತುಜ ಮ್ಯಾ ನರೋತ್ತಮಾ ನಿರೂಪಿಲಾ ಯೇಥೇ ।೨೮೫॥ ಐಶೀ ಅವತಾರಚರಿತ್ರ - ನಾಮೇ । ಪರಿಸತಾ ವಿಚಿತ್ರ ಕರ್ಮೇ । ರಾಜಾ ಅತ್ಯಂತ ಸಪ್ರೇಮೇ । ಮನೋಧರ್ಮೇ ನಿವಾಲಾ ।೨೮೬॥ ಜೇ ಜೇ ಅವತಾರೀ ದೇವೋ ಸಗುಣ । ಜಾಹಲಾ ಪರೀ ನಿರ್ಗುಣಾಚೇ ಗುಣ । ಪ್ರಕಟ ಕರೀತಚಿ ಆಪಣ । ಕರ್ಮಾಚರಣ ಸ್ವಯೇ ದಾವೀ ।೨೮೭॥ ಧನ್ಯ ಧನ್ಯ ತೇ ಹರಿಗಣ । ಜೇ ವರ್ಣಿತೀ ಭಗವದ್ಗುಣ । ಜ್ಯಾಂಚೇನಿ ವಚನೇ ಸಂಪೂರ್ಣ । ನಿವೇ ಅಂತಃಕರಣ ಶ್ರೋತ್ಯಾಂಚೇ ।೨೮೮॥ ಶ್ರೋತ್ಯಾಂಚೇ ಅವಧಾನ ನಿವೇ । ತೇಥ ವಕ್ತಾ ಸ್ವಾನಂದಸುಖ ಪಾವೇ । ಗ್ರಂಥ ವೋಸಂಡೇ ಸ್ವಭಾವೇ । ಸಾಹಿತ್ಯಗೌರವೇ ರಸಾಳ ।೨೮೯॥

ಯಾವ ಅಪರಾಧವಿಲ್ಲದೇ ಯಾರಿಗೆ ಬೇಕಾದರೂ ಯಾವುದೇ ದಂಡವನ್ನು ಕೊಡುವರು. ಸನ್ಮಾರ್ಗದಿಂದ ನಡೆಯುವವರನ್ನು ಉಸಿರುಗಟ್ಟಿಸುವರು ಮತ್ತು ಅವರದ್ದೆಲ್ಲವನ್ನೂ ಲೂಟೀ ಮಾಡಿಬಿಡುವರು ।೨೭೯॥ ರಾಜನೆಂದರೆ ದುರ್ಬಲರ ಬಲನಾಗಿರಬೇಕು. ಆ ರಾಜನೇ ಪ್ರಜೆಗಳನ್ನು ಕಾಡಿ ಪೀಡಿಸ ಹತ್ತುವನು. ಹೀಗೆ ರಾಜರಲ್ಲಿ ಅಧರ್ಮವು ಹುಟ್ಟಿ ಬೆಳೆಯಿತೆಂದರೆ ಭಗವಂತನಿಗೆ ಸಹನವಾಗುವುದೇ ಇಲ್ಲ ।೨೮೦॥ ಈ ಪ್ರಕಾರವಾಗಿ ಅಧರ್ಮ ಜನರು ಸ್ವಧರ್ಮನಿಷ್ಠರಿಗೆ ಈ ರೀತಿಯಾಗಿ ಪೀಡಿಸಹತ್ತಲು ನಾರಾಯಣನು ಕಲ್ಕೀ ಅವತಾರವನ್ನು ಧರಿಸುವನು ।೨೮೧॥ ಈ ಕಲ್ಕೀ ಅವತಾರವು ಪ್ರಬಲವಾದ ಶಸ್ತ್ರಗಳಿಂದ ದುಷ್ಟ ರಾಜರನ್ನು ಸಂಹರಿಸುವುದು. ಮತ್ತು ಮಹಾಮೋಹದ ಬೇರನ್ನೇ ಕಿತ್ತಿ ಹಾಕುವುದು ।೨೮೨॥ ಆಗ ಧರ್ಮದ ಉದಯವಾಗುವುದು. ಸತ್ಯವು ನಾಲ್ಕು ಪಟ್ಟಿನಿಂದ ಅಭಿವೃದ್ಧಿಗೊಳ್ಳುವುದು. ವೇದೋಕ್ತ ಕರ್ಮಗಳು ಆರಂಭವಾಗುವುವು ಮತ್ತು ಸರ್ವ ಜನರು ಸ್ವಧರ್ಮದಿಂದ ನಡೆಯುವರು ।೨೮೩॥

ಹೇ ರಾಜನೇ, ಭಗವಂತನ ನಾಮಗಳು ಅನಂತವಾಗಿವೆ. ಆತನ ಅವತಾರಗಳೂ ಅನಂತ, ಜನ್ಮಗಳೂ ಅನಂತ, ಚರಿತ್ರೆಗಳೂ ಅನಂತ, ಆತನ ಕರ್ಮಗಳೂ ಅನಂತವಾಗಿರುವ ಆ ಶ್ರೀಹರಿಯ ಸರ್ವೋತ್ತಮ ಕೀರ್ತಿಗಳೂ ಅನಂತವಾಗಿವೆ ।೨೮೪॥ ಹೀಗೆ ಈ ಭಗವಂತನ ಮಹಿಮೆಯು ಅಗಾಧವಾಗಿರಲು ಈತನನ್ನು ಹೇಗೆ ವರ್ಣಿಸಬೇಕು? ಈತನ ಜನ್ಮಕರ್ಮಕ್ಕೆ ಕೊನೆಯೇ ಇಲ್ಲ. ಹೇ ನರೋತ್ತಮನೇ, ಆತನ ಮಹಿಮೆಯನ್ನು ಸಂಕ್ಷಿಪ್ತವಾಗಿ ನಾನು ನಿನಗೆ ತಿಳಿಸಿರುವೆನು ।೨೮೫॥ ಹೀಗೆ ಅವತಾರ ಚರಿತ್ರೆಗಳನ್ನು ಮತ್ತು ಅವುಗಳ ನಾಮವನ್ನು, ಆ ಅವತಾರಿಯು ಮಾಡಿರುವ ಅದ್ಭುತ ಕರ್ಮಗಳನ್ನು ಕೇಳಿ ರಾಜನ ಅಂತಃಕರಣದಿಂದ ಪ್ರೇಮವು ಅರಳಹತ್ತಿತು. ಆತನ ಎಲ್ಲ ಪ್ರಕಾರದ ಮನೋಧರ್ಮಗಳು ಪೂರ್ಣವಾಗಿ ಶಾಂತಗೊಂಡವು ।೨೮೬॥ ಪ್ರತ್ಯೇಕ ಅವತಾರದ ಕಾಲಕ್ಕೆ ದೇವನು ಸಗುಣ ಸಾಕಾರನಾಗುವನು ನಿಜ, ಆದರೆ ಆಯಾ ಅವತಾರಗಳಲ್ಲಿ ಆತನು ತನ್ನ ನಿರ್ಗುಣದ ಗುಣವನ್ನು ಪ್ರಕಟಿಸುತ್ತಲೇ ಸ್ವತಃ ಕರ್ಮಾಚರಣೆಗಳನ್ನು ಮಾಡಿ ತೋರಿಸುತ್ತಿದ್ದನು ।೨೮೭॥ ಯಾರು ಭಗವಂತನ ಗುಣಗಳನ್ನು ವರ್ಣಿಸುವರೋ ಮತ್ತು ಯಾರ ವಚನಗಳಿಂದ ಶ್ರೋತೃಗಳವರ ಅಂತಃಕರಣವು ಪ್ರಸನ್ನವಾಗಿ ಶಾಂತವಾಗುವುದೋ, ಆ ಹರಿಭಕ್ತನು ಧನ್ಯ ಧನ್ಯನಾಗಿರುವನು ।೨೮೮॥ ಶ್ರೋತೃಗಳವರ ವೃತ್ತಿಯು ಶಾಂತಗೊಂಡರೆ, ವಕ್ತಾನಿಗೆ ಸ್ವಾನಂದಸುಖವು ಪ್ರಾಪ್ತವಾಗುವುದು. ಶ್ರೋತೃ ಮತ್ತು ವಕ್ತಾ ಈ ಇಬ್ಬರ ವೃತ್ತಿಯೂ ತನ್ಮಯವಾಯಿತೆಂದರೆ ಸರ್ವ ಗ್ರಂಥವು ಸಾಹಿತ್ಯಗುಣದಿಂದ ಸ್ವಭಾವತವಾಗಿ ಪ್ರಾಸಾದಿಕವಾಗುವುದು ।೨೮೯॥

ಜೇವೀ ಚಂದ್ರಕರೇ ಸಾಚಾ । ಮುಖಬಂಧ ಸುಟೇ ಚಕೋರಾಂಚಾ । ತೇವೀ ಏಕಾ ಜನಾರ್ದನಾಚಾ । ಸಂತಕೃಪಾ ವಾಚಾ ಫುಟಲೀ ತ್ಯಾಸೀ ॥೭೯೦॥ ಜೇವೀ ಸೂರ್ಯಕಿರಣಸ್ಪರ್ಶೇ । ಕಮಳಕಳೀ ಸ್ವಯೇ ವಿಕಾಸೇ । ತೇವೀ ಸಂತಕೃಪಾಸೌರಸೇ । ಗ್ರಂಥು ವಿಕಾಸೇ ಅರ್ಥಾವಬೋಧೇ ॥೭೯೧॥ ತೇಚಿ ಕೃಪೇನೇ ತತ್ತ್ವತಾ । ಅರ್ಥಿಲೇ ಶ್ರೀಭಾಗವತಾ । ಆತಾ ಪಂಚಮಾಧ್ಯಾಯೀ ಕಥಾ । ಸಾವಧ ಶ್ರೋತಾ ಅವಧಾರಿಜೇ ॥೭೯೨॥ ರಾಜಾ ಪ್ರಶ್ನ ಕರೀಲ ಗೋಡ । ಜೋ ಪರಿಸತಾ ಪುರೇಲ ಕೋಡ । ಸಾಧಕಾಂಚೀ ಉಪಶಮೇಲ ಚಾಡ । ಹೋಯ ನಿವಾಡ ಧರ್ಮಾಧರ್ಮಾಚಾ ॥೭೯೩॥ ಜೇಥ ಭಜನಾ ಭಜನಹಾತವಟೀ । ಪ್ರಶ್ನೋತ್ತರೇ ಕಥಾ ಗೋಮಟೀ । ಅತಿಶಯೇ ರಸಾಳ ಗೋಠೀ । ಜೇಣೇ ಸುಟೇ ಗಾಂಠೀ ಅಧರ್ಮಾಚೀ ॥೭೯೪॥ ತೇ ಉತ್ತಮೋತ್ತಮ ನಿರೂಪಣ । ಭರೀತ ಸಂತಾಂಚೇ ಶ್ರವಣ । ಜನಾರ್ದನ ಕೃಪಾಪೂರ್ಣ । ಏಕಾ ಜನಾರ್ದನ ಸಾಂಗೇಲ ॥೭೯೫॥ ಅಂಗೀ ವಾರಿಯಾಚೇನ ಸಂಚರಣೇ । ಘುಮಾರಾ ಘುಮೋ ಲಾಗೇ ತೇಣೇ । ತೇವೀ ಏಕಾಜನಾರ್ದನೇ ಕವಿತಾ ಕರಣೇ ನಿಜಾಂಗೇ ॥೭೯೬॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ನಿಮಿಜಾಯಂತ ಸಂವಾದೇ
ಏಕಾಕಾರ ಟೀಕಾಯಾಂ ಚತುರ್ಥೋಽಧ್ಯಾಯಃ ॥೪॥

॥ ಶ್ರೀಕೃಷ್ಣಾರ್ಪಣಮಸ್ತು ॥

ಚಂದ್ರಕಿರಣಗಳು ಚಕೋರ ಪಕ್ಷಿಗಳ ಮುಖಗಳನ್ನು ತೆರೆಯಿಸುವಂತೆ ಶ್ರೀ ಜನಾರ್ದನ ಸ್ವಾಮಿಗಳವರ ಮತ್ತು ಅನ್ಯ ಸಂತರ ಕೃಪೆಯಿಂದ ಏಕನಾಥನ ವಾಣಿಯು ಸ್ಫೂರ್ತಿಗೊಂಡಿತು ॥೭೯೦॥ ಸೂರ್ಯ ಕಿರಣಗಳ ಸ್ಪರ್ಶವಾದೊಡನೆ ಕಮಲದ ದಳಗಳು ತಮ್ಮಿಂದ ತಾವೇ ಅರಳುವುವು. ಅದರಂತೆ ಸಂತರ ಕೃಪಾಪ್ರಸಾದದಿಂದ ಅರ್ಥಜ್ಞಾನದಿಂದ ಗ್ರಂಥವು ತನ್ನಿಂದ ತಾನೇ ವಿಕಾಸಗೊಳ್ಳುವುದು ॥೭೯೧॥ ಅವರ ಕೃಪೆಯಿಂದ ಭಾಗವತದ ಅರ್ಥವು ಸಹಜವಾಗಿ ಪ್ರಕಟವಾಗುತ್ತಿದೆ. ಈಗ ಮುಂದಿನ ಐದನೆಯ ಅಧ್ಯಾಯದಲ್ಲಿನ ಕಥೆಯನ್ನು ಶ್ರೋತೃಗಳು ಏಕಾಗ್ರತೆಯಿಂದ ಕೇಳಬೇಕು ॥೭೯೨॥ ರಾಜನು ಇನ್ನು ಮುಂದೆ ಪ್ರೇಮಭಾವವು ಪ್ರಕಟವಾಗುವಂತಹ ಪ್ರಶ್ನೆಗಳನ್ನು ಕೇಳುವನು. ಅವುಗಳ ಉತ್ತರಗಳನ್ನು ಕೇಳಿ ಶ್ರೋತೃಗಳ ಇಚ್ಛೆಯು ಪೂರ್ಣವಾಗುವುದು. ಸಾಧಕರ ಜಿಜ್ಞಾಸೆಯು ತೃಪ್ತವಾಗುವುದು ಮತ್ತು ಧರ್ಮಾಧರ್ಮಗಳ ನಿರ್ಣಯವು ತಿಳಿಯುವುದು ॥೭೯೩॥ ಇದರಿಂದ ಭಜನಕ್ಕೆ ಭಜನದ ಕೌಶಲ್ಯವು ಸಾಧಿಸುವುದು. ಪ್ರಶ್ನೋತ್ತರ ರೂಪದಿಂದ ಆ ಕಥೆಯು ಬಹಳ ಸುಂದರವಾಗುವುದಿದೆ. ಅದರಲ್ಲಿಯ ಮಾತುಗಳು ಸಹ ಅತಿಶಯವಾಗಿ ರಸಾಳವಾಗಿರುವುವು. ಇವುಗಳನ್ನು ಕೇಳಿದರೆ ಅಧರ್ಮದ ವಿಚಾರಗಳು ಕೊನೆಗೊಳ್ಳುವುವು ॥೭೯೪॥ ಆ ಉತ್ತಮೋತ್ತಮವಾದ ನಿರೂಪಣೆಯಿಂದ ಸಂತರ ಶ್ರವಣಗಳು ತೃಪ್ತವಾಗುವುವು. ಜನಾರ್ದನಸ್ವಾಮಿಯವರ ಪೂರ್ಣ ಕೃಪೆಯಿಂದ ಏಕನಾಥನು ಅದನ್ನು ಹೇಳುವನು ॥೭೯೫॥ ಅಂಗದಲ್ಲಿ ಭೂತಸಂಚಾರವಾಯಿತೆಂದರೆ ಬಡಬಡಿಸಲು ಆರಂಭವಾಗುವುದು. ಅದರಂತೆಯೇ ಏಕಾಜನಾರ್ದನರಿಂದ ಈ ಕವಿತ್ವವು ಮಾಡಲ್ಪಡುವುದು ॥೭೯೬॥

ಈ ಪ್ರಕಾರವಾಗಿ ಶ್ರೀಮದ್‌ಭಾಗವತ ಮಹಾಪುರಾಣದ ಏಕಾದಶಸ್ಕಂಧದ ನಿಮಿಜಾಯಂತ ಸಂವಾದದ ಏಕನಾಥ ಮಹಾರಾಜರ ಭಾಷ್ಯಯ ನಾಲ್ಕನೆಯ ಅಧ್ಯಾಯ ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಐದನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ದೇವಾ ಉದಾರಾ । ಮ್ಹಣತಾ ಕೃಪಣ ತೂ ಖರಾ । ಮಾಗತೇ ಆಪುಲಿಯಾ ಘರಾ । ದುಜೇಪಣೇ ದಾರಾ ಯೇವೋ ನೇದೀಸೀ ।।೧।। ಅವಚಟೇ ಮಾಗತಯಾಸೀ । ಜೈ ಭೇಟೀ ಹೋಯ ತುಜಸೀ । ತೈ ಘೋಟ ಭರೂ ಧಾಂವಸೀ । ದೇಖತಾಂಚಿ ಘೇಸೀ ಜೀವೇ ತ್ಯಾತೇ ।।೨।। ಜೇ ಜೇ ಮಾಗೋ ಯೇತೀ ತುಜಪಾಸೀ । ತೇ ಬಾಂಧೋನ ಐಕ್ಯತೇಮಾಜೀ ಸೂದಸೀ । ಶೇಖೀತ್ಯಾಂಚೇ ಸೋಡವಣೇಸೀ । ಭೇಟೀ ದುಸರ್ಯಾಸೀ ಸ್ವಪ್ನೀಹೀ ನವ್ಹೆ ।।೩।। ಅಣುಮಾತ್ರ ತುಝೀ ಪ್ರಾಪ್ತಿ । ಅವಚಟೇ ಚಢೇ ಜ್ಯಾಚೇ ಹಾತೀ । ತ್ಯಾಚಿಯೇ ಸಂಸಾರಸಂಪತ್ತೀ । ಸರ್ವಸ್ವೇ ನಿಶ್ಚಿತೀ ನಾಡಿಸೀ ತೂ ।।೪।। ಮೈಂದಾಚಾ ವಿಡಾ ಘೇತಾ । ತೋ ಪ್ರವರ್ತೇ ಆಪುಲೇ ಘಾತಾ । ತೇವೀ ತುಝೀ ಪ್ರಸನ್ನತಾ । ಝಾಲಿಯಾ ಜೀವಿತಾ ಸ್ವಯೇ ನಾಶೀ ।।೫।। ಜೇ ಜೇ ತುಜಪೇ ಮಾಗೋ ಆಲೇ । ತೇ ತೇ ಸರ್ವಸ್ವೇ ನಾಗವಲೇ । ಶೇಖೀ ನಾಗವೇ ತುವಾ ಕೇಲೇ । ನಿರ್ಲಜ್ಜ ಝಾಲೇ ತಿಹೀ ಲೋಕೀ ।।೬।। ಐಶೀ ತುಝೀ ನಿರ್ವಾಣಗತೀ । ತ್ಯಾ ತುಝೀ ಉದಾರ ಕೀರ್ತೀ । ಘಡೇ ಮ್ಹಣಶೀ ಕೈಸಾ ರೀತೀ । ತೇ ಅಗಾಧ ಸ್ಥಿತಿ ಅವಧಾರೀ ।।೭।। ಮಾಗೇ ಉದಾರ ವಾಖಾಣಿಲೇ । ತೇಹೀ ಆಪಣಿಯಾಐಸೇ ಕೇಲೇ । ಮಗ ಸರ್ವಸ್ವ ಆಪುಲೇ । ದಾನ ದಿಧಲೇ ದಾತೃತ್ವೇ ।।೮।। ಷಡ್‌ಗುಣೈಶ್ವರ್ಯವೈಭವೇಸೀ । ಆಪಣಿಯಾತೇ ದಾನಾ ದೇಸೀ । ದಿಧಲೇ ತೇ ಘೇವೋ ನೇಣಸೀ । ಕದಾಕಾಳೇಸೀ ಕಲ್ಪಾಂತೀ ।।೯।। ಆಪಣಿಯಾ ದಿಧಲೇ ದಾನ । ಯಾಲಾಗೀ ತೂ ದಾಸಾ ಅಧೀನ । ಮಗ ತ್ಯಾಂಚೇನಿ ಛಂದೇ ಜಾಣ । ಸರ್ವಸ್ವೇ ಆಪಣ ನಾಚಸೀ ।।೧೦।। ಬಳೀನೇ ಸರ್ವಸ್ವ ಕೇಲೇ ದಾನ । ಶೇಖೀ ತೂ ಝಾಲಾಸಿ ತ್ಯಾ ಅಧೀನ । ತ್ಯಾಚೇ ದ್ವಾರಪಾಳಪಣ । ಅದ್ಯಾಪಿ ಆಪಣ ಚಾಲವಿಸೀ ।।೧೧।।

ಹೇ ಓಂಕಾರರೂಪ ಸದ್ಗುರು ದೇವನೇ, ನಿನಗೆ ನನ್ನ ನಮಸ್ಕಾರವು. ನಿನಗೆ ಉದಾರನು ಎಂದು ಹೇಳಬೇಕೆಂದರೆ, ನಿಜವಾಗಿಯೂ ನೀನು ಕೃಪಣನಾಗಿರುವೆ. ನೀನು ಯಾಚಕನಿಗೆ ನಿನ್ನ ಬಾಗಿಲಲ್ಲಿ ಭಿನ್ನ ಭಾವದಿಂದ ನಿಲ್ಲಿಸಿಕೊಡಲಾರೆ ।೧।। ನಿನ್ನ ಮತ್ತು ಯಾಚಕನ ಅಕಸ್ಮಾತವಾಗಿ ಭೇಟಿಯಾಯಿತೆಂದರೆ, ನೀನು ಆತನ ಜೀವ ತೆಗೆದುಕೊಳ್ಳಲು ಧಾವಿಸುವೆ. ನೀನು ಆತನ ಜೀವವನ್ನು ನಿನ್ನಲ್ಲಿ ತಾದಾತ್ಮ್ಯ ಮಾಡಿಕೊಳ್ಳುವೆ ।೨।। ಯಾವ ಭಕ್ತರು ನಿನ್ನಲ್ಲಿ ಬೇಡಲು ಬರುವರೋ, ಆ ಎಲ್ಲ ಭಕ್ತರಿಗೆ ನೀನು ಸಾಯುಜ್ಯ ಮುಕ್ತಿಯನ್ನು ಕೊಟ್ಟು ನಿನ್ನ ಐಕ್ಯತ್ವದಲ್ಲಿ ಅವರನ್ನು ಕಟ್ಟಿಹಾಕುವೆ. ಅದರಿಂದ ಅವರಿಗೆ ಬಿಡಿಸಿಕೊಳ್ಳುವುದು ಆಗುವುದಿಲ್ಲ. ಬೇರೆ ಯಾರ ಸ್ವಪ್ನದಲ್ಲಿಯೂ ನೀನು ಭೇಟಿಯನ್ನು ಕೊಡಲಾರೆ ।೩।। ಐಕ್ಯಭಾವದಿಂದ ಜೀವಶಿವರ ಮಿಲನವಾಗುವುದು. ನಿನ್ನ ಪ್ರಾಪ್ತಿಯು ಅಣುಮಾತ್ರವಾದರೂ ಸಾಕು, ಆ ಭಕ್ತರ ಸಂಸಾರದುಃಖವೆಲ್ಲವನ್ನೂ ಇಲ್ಲದಂತೆ ಮಾಡುವೆ. ಅವರ ಸಂಸಾರ ಪಾಶವನ್ನು ಮುರಿದು ಹಾಕುವೆ ।೪।। ಮೋಸಗಾರನ ತಾಂಬೂಲ ತಿಂದರೆ ತನ್ನ ಜೀವದ ಘಾತವಾಗುವುದು. ಅದರಂತೆ ನೀನು ಪ್ರಸನ್ನನಾದರೆ ಸಾಕು, ಭಕ್ತರ ಜೀವತ್ವವೇ ಇಲ್ಲದಾಗಿ ನಿನ್ನಲ್ಲಿ ಐಕ್ಯರೂಪರಾಗುವರು ।೫।। ನಿನ್ನಲ್ಲಿ ಬೇಡಲು ಬಂದವರೆಲ್ಲರೂ ತಮ್ಮ ಎಲ್ಲವನ್ನೂ ಕಳೆದುಕೊಂಡರು. ನೀನು ಅವರಿಗೆ ಸಂಪೂರ್ಣವಾಗಿ ಬತ್ತಲು ಮಾಡಿರುವುದರಿಂದ ಅವರು ಲಜ್ಜಿರಹಿತರಾಗಿ ಮೂರೂ ಲೋಕಗಳಲ್ಲಿ ತಿರುಗುತ್ತಿರುವರು ।೬।। ಈ ಪ್ರಕಾರವಾಗಿ ನಿನ್ನ ನಿರ್ವಾಣಸ್ಥಿತಿಯಾಗಿರಲು, ನೀನು ಉದಾರನೆಂಬ ಕೀರ್ತಿಯು ಹೇಗಾಗುವುದು? ಓಗೆ ವಿಚಾರವು ಮನದಲ್ಲಿ ನಿರ್ಮಾಣವಾಗಬಹುದು. ಅದಕ್ಕಾಗಿ ಅದರ ಅಪೂರ್ವವಾದ ವರ್ಣನೆಯನ್ನು ಕೇಳು ।೭।। ಪೂರ್ವದಲ್ಲಿ ಯಾರ ಉದಾರವು ಕೀರ್ತಿಗೆ ಪ್ರಾಪ್ತವಾಗಿತ್ತೋ, ಅವರಿಗೂ ನೀನು ಆತ್ಮರೂಪ ಮಾಡಿಬಿಟ್ಟಿರುವೆ. ಮತ್ತು ಆ ಮೇಲೆ ಅವರಿಗೆ ದೊಡ್ಡ ಔದಾರ್ಯದಿಂದ ನಿನ್ನ ಸರ್ವಸ್ವವನ್ನು ದಾನ ಕೊಟ್ಟಿರುವೆ ।೮।। ನಿನ್ನ ಷಡ್‌ಗುಣ ಐಶ್ವರ್ಯದ ದಾನವನ್ನು ಭಕ್ತರಿಗೆ ಮಾಡುವೆ. ನೀನು ಒಂದು ಸಾರೆ ಕೊಟ್ಟ ದಾನವನ್ನು ಕಲ್ಪಾಂತಕ್ಕೂ ಮರಳಿ ಪಡೆಯಲಾರೆ ।೯।। ಸ್ವತಃದ್ದು ಎಲ್ಲವನ್ನೂ ದಾನ ಕೊಟ್ಟಿರುವುದರಿಂದ ನೀನು ಭಕ್ತರ ಆಧೀನನಾಗಿರುವೆ. ಆದರಿಂದ ಭಕ್ತರು ಪ್ರೇಮದಿಂದ ಕುಣಿಯಲಾರಂಭಿಸಲು ನೀನೂ ಅವರಂತೆಯೇ ಕುಣಿಯುವೆ ।೧೦।। ಬಲಿಯು ನಿನಗೆ ಸರ್ವಸ್ವದ ದಾನವನ್ನು ಮಾಡಿದನು. ಆದರೆ ಕೊನೆಯಲ್ಲಿ ನೀನು ಆತನ ಆಧೀನನಾದೆ ಮತ್ತು ಈಗಲೂ ಆತನ ದ್ವಾರಪಾಲಕನ ಕೆಲಸವನ್ನು ಮಾಡುತ್ತಿರುವೆ ।೧೧।।

ಧರ್ಮೇ ಅರ್ಪಿಲೇ ಅಗ್ರಪೂಜೇಸೀ । ಶೇಖೀ ತೂ ತ್ಯಾಚೀ ಸೇವಾ ಕರಿಸೀ । ನಾನಾ ಸಂಕಟೇ ಸ್ವಯೇ ಸೋಶಿಸೀ । ಅಂಗೇ ಕಾಢಿಸೀ ಉಚ್ಛಿಷ್ಟೇ ॥೧೨॥ ತುಝಾ ನಿಜಭಕ್ತು ಅಂಬಋಷೀ । ತ್ಯಾಚೇ ಗರ್ಭವಾಸ ತೂ ಸೋಶಿಸೀ । ತುಜ ಗೌಳಿಯೇ ರಾಖಿತೀ ಹೃಷೀಕೇಶೀ । ಶೇಖೀ ತ್ಯಾ ಗೋಪಾಳಾಂಸೀ ರಕ್ಷಿಲೇ ॥೧೩॥ ಏವಂ ಸ್ವಸ್ವರೂಪ ದ್ಯಾವಯಾಸೀ । ಉದಾರತ್ವ ತುಜಪಾಸೀ । ಹೇ ನ ಯೇ ಗಾ ಆಣಿಕಾಂಸೀ । ಹೃಷೀಕೇಶೀ ಕೃಪಾಳುವಾ ॥೧೪॥ ತೋ ತೂ ಪರಮ ಉದಾರ ಐಸಾ । ರಾಯಾ ರಂಕಾ ಸಮಭಾವೇ ಸರಿಸಾ । ಭಾವೋ ತೇಥ ಭರಂವಸಾ । ತೂ ಆಪೈಸಾ ಆತುಡಸೀ ॥೧೫॥ ತ್ಯಾ ತುಝಿಯಾ ಪ್ರಾಪ್ತಿಲಾಗೀ । ಕಪಾಟೇ ಸದಾ ಸೇವಿತೀ ಯೋಗೀ । ಏಕ ತೇ ಝಾಲೇ ಭೋಗವಿರಾಗೀ । ಏಕ ತೇ ತ್ಯಾಗೀ ಸರ್ವಸ್ವೇ ॥೧೬॥ ಏಕ ಹಿಂಡತೀ ದಶದಿಶೇ । ಏಕ ತುಜಲಾಗೀ ಝಾಲೇ ಪಿಸೇ । ಪರೀ ತುಝೀ ಭೇಟೀ ಸ್ವಪ್ನಿಹೀ ದಿಸೇ । ಐಸಾ ನ ದಿಸೇ ಕ್ಷಣ ಏಕ ॥೧೭॥ ಐಶಿಯಾಹೀ ತುಝೀ ಪ್ರಾಪ್ತೀ । ಸುಲಭ ಅಸೇ ಏಕೇ ರೀತೀ । ಜರೀ ಸಂತಚರಣೇ ರಂಗತೀ । ಅತಿಪ್ರೀತೀ ಸಪ್ರೇಮ ॥೧೮॥ ಸಂತಚರಣೀ ಜೋ ವಿನಟಲಾ । ತೋ ನಿಜಪ್ರಾಪ್ತೀಸೀ ಪಾವಲಾ । ಸಂತಸ್ವರೂಪೇ ಅವತರಲಾ । ಸ್ವಯೇ ಸಂಚಲಾ ಪರಮಾತ್ಮಾ ॥೧೯॥ ಯಾಲಾಗೀ ಜೇ ಜೇ ಸಂತಾಂಚೀ ರೂಪೇ । ತೀ ತೀ ಶ್ರೀಹರೀಚೀ ಸ್ವರೂಪೇ । ಮ್ಹಣೌನಿ ಸಂತಾಚಿಯೇ ಕೃಪೇ । ಅತಿಸಾಕ್ಷೇಪೇ ಅರ್ಜಾವೇ ॥೨೦॥ ತೇ ಜ್ಞಾನಾರ್ಥಾಚೇ ಪರಮ ಪಿಸೇ । ಯಾಲಾಗೀ ಗ್ರಂಥಾಚೇನಿ ಮಿಸೇ । ತ್ಯಾಂಚೇ ಚರಣ ಅನಾಯಾಸೇ । ಸಾವಕಾಶೇ ವಂದೀನ ॥೨೧॥ ಸಂತಕರುಣಾವಲೋಕನ । ತೇ ಮಜ ನೇತ್ರಿಂಚೇ ಅಂಜನ । ಚರಣಕೃಪಾ ಪಾಹತಾ ಜಾಣ । ಶ್ರೀಜನಾರ್ದನ ಪ್ರಕಾಶೇ ॥೨೨॥ ತಯಾ ಜನಾರ್ದನಾಚಿಯೇ ಸೇವೇ । ಗುರುತ್ವಾಚೇನಿ ಆಡನಾಂವೇ । ರಿಘಾಲೋ ನಿಜಸ್ವಭಾವೇ । ಜೀವೇಭಾವೇ ಭಜನಾಸೀ ॥೨೩॥ ಭಜ್ಯ - ಭಜಕ - ಭಜನಾ । ಏಕೇ ಅಂಗೀ ತ್ರಿವಿಧ ಭಾವನಾ । ದಾವೂನಿಯಾ ಜಗಜ್ಜೀವನಾ । ಜನೀ ಜನಾರ್ದನಾ ನಿಜಭಕ್ತೀ ॥೨೪॥ ಹೇ ಅಭೇದಭಕ್ತೀ ಚೋಖಡೀ । ಪರಮ ಐಕ್ಯೇ ಭಜನಗೋಡೀ । ಅಧಿಕಾಧಿಕ ಚಢೋವಢೀ । ವಾಢೇ ಆವಡೀ ನಿಜಭಕ್ತಾ ॥೨೫॥ ದೇವೋ ಆಪಲೀ ಸರ್ವಸ್ವಜೋಡೀ । ವೇಂಚೀ ಭಕ್ತಾಂಚಿಯೇ ವೋಢೀ । ಐಶೀ ಅಭೇಧಭಕ್ತೀಚೀ ಗೋಡೀ । ಪಢಿಯೇ ಗಾಢೀ ಗೋವಿಂದಾ ॥೨೬॥

ಧರ್ಮರಾಜನು ನಿನಗೆ ಮಾನ ಕೊಟ್ಟು ಅಗ್ರಪೂಜೆಯನ್ನು ಅರ್ಪಿಸಿದನು. ಆದರೆ ನೀನೇ ಕೊನೆಯಲ್ಲಿ ಅವನ ಸೇವೆಯನ್ನು ಮಾಡಿದೆ. ಅನೇಕ ಪ್ರಕಾರದ ಸಂಕಟಗಳನ್ನು ಸ್ವತಃ ಸೋಸಿದೆ. ನಿನ್ನ ಕೈಯಿಂದಲೇ ಆತನ ಮನೆಯಲ್ಲಿ ಎಂಜಲು ತೆಗೆದೆ ॥೧೨॥ ನಿನ್ನ ಪ್ರಿಯ ಭಕ್ತನಾದ ಅಂಬರೀಷರಾಜನ ಗರ್ಭವಾಸವನ್ನು ನೀನು ಸೋಸಿದೆ. ಹೇ ಶ್ರೀಕೃಷ್ಣನೇ, ಗೌಳಿಯರು ನಿನ್ನನ್ನು ಜೋಪಾನ ಮಾಡಿದರು. ಆದರೆ ಕೊನೆಯಲ್ಲಿ ಆ ಗೌಳಿಯರ ರಕ್ಷಣೆಯನ್ನು ನೀನೇ ಮಾಡಿದೆ ॥೧೩॥ ತಾತ್ಪರ್ಯವೇನೆಂದರೆ, ಭಕ್ತರಿಗೆ ಸ್ವಸ್ವರೂಪವನ್ನು ಕೊಡುವಂತಹ ಉದಾರತ್ವವು ನಿನ್ನೊಬ್ಬನಲ್ಲಿ ಮಾತ್ರ ಇದೆ. ಹೇ ದಯಾಳುನಾದ ಹೃಷೀಕೇಶೀಯೇ, ಈ ಸಾಮರ್ಥ್ಯವು ಬೇರೆ ಯಾರಲ್ಲಿಯೂ ಇಲ್ಲ ॥೧೪॥ ರಾಜಾ ಮತ್ತು ದರಿದ್ರ ಈ ಇಬ್ಬರಿಗೂ ಸಮಭಾವದಿಂದ ನೀನು ಒಂದೇಯಾಗಿರುವೆ. ಶ್ರದ್ಧೆ ಪ್ರೇಮವಿದ್ದಲ್ಲಿ ನೀನು ನಿಶ್ಚಯಪೂರ್ವಕವಾಗಿ ನಿನ್ನಷ್ಟಕ್ಕೆ ನೀನೇ ಸಿಗುವೆ ॥೧೫॥ ಈ ನಿನ್ನ ಪ್ರಾಪ್ತಿಗಾಗಿ ಯೋಗಿಗಳು ನಿರಂತರವಾಗಿ ಗುಹೆಯಲ್ಲಿ ಕುಳಿತು ತಪಶ್ಚರ್ಯಗಳನ್ನು ಮಾಡುವರು. ಕೆಲವರು ಯೋಗ ಸಾಧನೆಯನ್ನು ಬಿಟ್ಟು ವಿರಕ್ತರಾಗುವರು. ಮತ್ತು ಇನ್ನೂ ಕೆಲವರು ಮಾತ್ರ ಎಲ್ಲವನ್ನೂ ತ್ಯಾಗ ಮಾಡುವರು ॥೧೬॥ ಕೆಲವರು ನಿನ್ನನ್ನು ಹುಡುಕಲು ಹತ್ತು ದಿಕ್ಕುಗಳಲ್ಲಿಯೂ ತಿರುಗುವರು. ನಿನಗಾಗಿ ಕೆಲವರು ಹುಚ್ಚರಾಗಿ ಬಿಡುವರು. ಆದರೆ ಅವರಿಗೆ ನೀನು ಕ್ಷಣವೂ ಸಹ ಅವರ ಸ್ವಪ್ನದಲ್ಲಿಯೂ ಭೇಟಿಯಾಗಲಾರೆ ॥೧೭॥ ಹೀಗಿರುವ ಯೋಗಿಗಳಿಗೆ ನಿನ್ನ ಪ್ರಾಪ್ತಿಯಾಗಲು ಒಂದು ಸುಲಭ ಮಾರ್ಗವಿರುವುದು. ಇವರು ಸಂತರ ಚರಣಗಳಲ್ಲಿ ಅನನ್ಯ ಭಾವದಿಂದ ಮತ್ತು ಪ್ರೇಮ ಭಕ್ತಿಯಿಂದ ತಲ್ಲೀನರಾದರೆ, ಅವರಿಗೆ ನಿನ್ನ ಪ್ರಾಪ್ತಿಯಾಗಲು ಶಕ್ಯವಿದೆ ॥೧೮॥ ಸಂತ ಚರಣಗಳಲ್ಲಿ ಲೀನರಾದವರಿಗೆ ಆತ್ಮ ಸ್ವರೂಪವು ಪ್ರಾಪ್ತವಾಗುವುದು. ಸಂತ ಸ್ವರೂಪದಿಂದ ಅವತರಿಸುವನು ಮತ್ತು ಸ್ವತಃ ಪರಮಾತ್ಮ ಸ್ವರೂಪನಾಗುವನು ॥೧೯॥ ಆದ್ದರಿಂದ ಸಂತರಾದವರೆಲ್ಲರೂ ಶ್ರೀಹರಿಯ ಸ್ವರೂಪವೇ ಆಗಿರುವರು. ಅದಕ್ಕಾಗಿಯೇ ಸತತವಾಗಿ ಪ್ರಯತ್ನ ಪಟ್ಟು ಸಂತರ ಕೃಪೆಯನ್ನು ಸಂಪಾದಿಸಬೇಕು ॥೨೦॥ ಇವರಿಗೆ ಜ್ಞಾನಾರ್ಥದ ಬಹಳಷ್ಟು ಹುಚ್ಚು ಇರುವುದರಿಂದ ನಾನು ಈ ಗ್ರಂಥದ ನಿಮಿತ್ತದಿಂದ ಸಹಜವಾಗಿ ಅವರ ಚರಣಗಳಲ್ಲಿ ಸೇವೆಯನ್ನು ಮಾಡುವೆ ॥೨೧॥ ಸಂತರ ಕೃಪಾದೃಷ್ಟಿಯೇ ನನ್ನ ಕಣ್ಣುಗಳ ಅಂಜನವಾಗಿದೆ. ಇವರ ಚರಣ ಕೃಪೆಯು ಉದಯವಾಯಿತೆಂದರೆ, ಶ್ರೀ ಜನಾರ್ದನರು ಪ್ರಗಟರಾಗುವರು ॥೨೨॥ ಈ ಜನಾರ್ದನರ ಸೇವೆಗೆ ಗುರುವಿನ ಅಡ್ಡ ಹೆಸರನ್ನು ತೆಗೆದುಕೊಂಡು ನಾನು ಜೀವಭಾವದಿಂದ ಸಹಜವಾಗಿ ಭಜನೆಯನ್ನು ಮಾಡುತ್ತಿರುವೆನು ॥೨೩॥ ಆದರೆ, ಈಗ ಭಜನೆ, ಭಕ್ತ ಮತ್ತು ಭಜನೆಯ ವಿಷಯ ಈ ಮೂರೂ ಭಾವಗಳನ್ನು ನನ್ನ ಒಬ್ಬನಲ್ಲಿಯೇ ತೋರಿಸಿಕೊಂಡು ಜನರಲ್ಲಿಯ ಜನಾರ್ದನ ರೂಪವಾದ ಜಗಜ್ಜೀವನನ ಭಕ್ತಿಯನ್ನು ನಾನು ಮಾಡುತ್ತಿರುವೆನು ॥೨೪॥ ಶುದ್ಧವಾದ ಅಭೇದ ಭಕ್ತಿಯು ಇದೇ ಆಗಿರುವುದು. ಇದರಲ್ಲಿ ಪರಮ ಐಕ್ಯದ ಯೋಗದಿಂದ ಭಜನೆಗೆ ಅಧಿಕವಾದ ಆನಂದವು ಪ್ರಾಪ್ತವಾಗುವುದು. ಹಾಗೆಯೇ ಭಕ್ತರ ಪ್ರೇಮವು ಸಹ ಅಧಿಕಾಧಿಕವಾಗಿ ಬೆಳೆಯುತ್ತ ಸಾಗುವುದು ॥೨೫॥ ಭಕ್ತರ ಪ್ರೇಮಕ್ಕಾಗಿ ದೇವನು ತನ್ನ ಸರ್ವಸ್ವವನ್ನೂ ಖರ್ಚು ಮಾಡುವನು. ಹೀಗೆ ಅಭೇದ ಭಕ್ತಿಯ ಆನಂದವಾಗಿದೆ. ಇದು ಗೋಃವಿಂದನಿಗೆ ಅತಿಶಯವಾಗಿ ಪ್ರಿಯವಾಗಿದೆ ॥೨೬॥

ಯಾಲಾಗೀ ಭಕ್ತಾಂಚಾ ಶರೀರಭಾರ । ಸ್ವಯೇ ವಾಗವೀ ಶ್ರೀಧರ । ಆಪುಲೇನಿ ಅಂಗೇ ಪರಪಾರ । ಪಾವವೀ ಸಾಚಾರ ನಿಜಭಕ್ತಾ ।।೨೭।। ನಿಜಭಕ್ತಾಂಚಾ ದೇಹಭಾವೋ । ನಿಜಾಂಗೇ ವಾಗವೀ ದೇವಾಧಿದೇವೋ । ತರೀ ಅಭಕ್ತಾಂಚಾ ದೇಹೋ । ವಾಗವಾವಯಾ ಪಹಾ ಹೋ ಕಾಯ ಆನ ಆಹೇ ।।೨೮।। ಭಕ್ತಾ ನಾಹೀ ದೇಹಅಹಂತಾ । ಯಾಲಾಗೀ ದೇವೋ ವಾಗವಿತಾ । ಪೂರ್ಣ ದೇಹಾಭಿಮಾನ ಅಭಕ್ತಾ । ತ್ಯಾಂಸೀ ಅತಿಬದ್ಧತಾ ಯಾ ಹೇತೂ ।।೨೯।। ಯಾಲಾಗೀ ಜೋ ನಿರಭಿಮಾನ । ತೋಚಿ ಭಗವದ್ಭಕ್ತ ಸಂಪೂರ್ಣ । ಜ್ಯಾಚ್ಯಾ ಅಂಗೀ ದೇಹಾಭಿಮಾನ । ತ್ಯಾಸೀ ಭಕ್ತಪಣ ಕದಾ ನ ಘಡೇ ।।೩೦।। ನಿಜಭಕ್ತ ತಾರಿತಾ ಕೌತುಕೇ । ತ್ಯಾಚೀ ರೋಮಾವಳೀ ಕೇವೀ ದುಖೇ । ನಿರ್ಭಯ ಕರೋನಿ ಪೂರ್ಣ ಹರಿಖೇ । ದೇವೋ ನಿಜಮುಖೇ ನಿಜಭಕ್ತಾ ತಾರೀ ।।೩೧।। ಯಾಲಾಗೀ ನಿರಭಿಮಾನತಾ । ಜೇ ವಿನಟಲೇ ಭಕ್ತಿಪಂಥಾ । ತೇ ಪಾವೋ ದೇವೋನಿ ವಿಘ್ನಾಂಚೇ ಮಾಥಾ । ಪಾವತೀ ತತ್ತ್ವತಾ ಭಗವದ್ಪದ ।।೩೨।। ಭಕ್ತಾಂಚೀ ಐಶೀ ಸ್ಥಿತೀ । ತರೀ ಅಭಕ್ತಾ ಕವಣ ಗತೀ । ತೇಚಿ ಪುಸಾವಯಾ ನೃಪತೀ । ಪ್ರಶ್ನಾರ್ಥೀ ಪ್ರವರ್ತೇ ।।೩೩।। ಪಂಚಮಾಮಾಜೀ ನಿರೂಪಣ । ಅಭಕ್ತಾಂಚೀ ಗತಿ ಲಕ್ಷಣ । ಯುಗೀ ಯುಗೀ ಪೂಜಾವಿಧಾನ । ಸಾಂಗೇಲ ಪಾವನ ಹರೀಚೇ ।।೩೪।। ಅವತಾರಚರಿತಪುರುಷಾರ್ಥು । ಸಾಂಗೋನ ಸಂಪಲಾ ಚತುರ್ಥು । ಆತಾ ಅಭಕ್ತಾಂಚಾ ವೃತ್ತಾಂತು । ರಾಜಾ ಪುಸತು ಮುನೀಸೀ ।।೩೫।।

ರಾಜೋವಾಚ :-

ಭಗವಂತಂ ಹರಿಂ ಪ್ರಾಯೋ ನ ಭಜಂತ್ಯಾತ್ಮವಿತ್ತಮಾಃ । ತೇಷಾಮಶಾಂತಕಾಮಾನಾಂ ಕಾ ನಿಷ್ಠಾ ವಿಜಿತಾತ್ಮನಾಮ್ ।।೧।।

ನಿಮಿರಾಜನು ಕೇಳಿದನು :- ಹೇ ಯೋಗೀಶ್ವರರೇ, ನೀವು ಶ್ರೇಷ್ಠ ಆತ್ಮಜ್ಞಾನಿಗಳು ಭಗವಂತನ ಭಕ್ತರಾಗಿರುವಿರಿ. ಕೃಪೆಮಾಡಿ ಇದನ್ನು ಹೇಳಿರಿ; ಯಾರ ಕಾಮನೆಗಳು ಪೂರ್ಣಗೊಂಡಿಲ್ಲ, ಲೌಕಿಕ ಪಾರಲೌಕಿಕ ಭೋಗದ ಆಶೆಯು ಅಂತಃಕರಣದಲ್ಲಿ ಅಳಿಕಿಲ್ಲ, ಮನ ಮತ್ತು ಇಂದ್ರಿಯಗಳನ್ನು ಗೆದ್ದಿಲ್ಲ ಹಾಗೆಯೇ ಇವರು ಭಗವಂತನ ಭಜನೆಯನ್ನೂ ಮಾಡುವುದಿಲ್ಲ. ಇಂತಹ ಜನರ ಯಾವ ಗತಿಯು?

ರಾಜಾ ಮ್ಹಣೇ ಜೀ ಮುನಿವರಾ । ಜೋ ಭಗವದ್ಭಜನೀ ಪಾಠಿಮೋರಾ । ಐಶಿಯಾ ಅಭಕ್ತಾ ನರಾ । ಕೋಣ ದಾತಾರಾ ಗತಿ ತ್ಯಾಸೀ ।।೩೬।। ಜೇ ಕಾಮಾಲಾಗೀ ಅತಿಉದ್ಭಟ । ಜೇ ಸಕ್ರೋಧ ಕ್ರೋಧೇ ತೇಜಿಷ್ಠ । ಜೇ ಅತಿಲೋಭೇ ಲೋಭಿಷ್ಠ । ಜೇ ಪರಮ ಶ್ರೇಷ್ಠ ಪ್ರಪಂಚೀ ।।೩೭।। ಜೇ ಗರ್ವಾಚೇ ಅಗ್ರಗಣೇ । ಜೇ ಅಹಂಕಾರಾಚೇ ಚೂಡಾಮಣೇ । ಜೇ ವಿಕಾರಾಂಚೀ ಪ್ರವಾಹಶ್ರೇಣೇ । ಜೇ ಉಘಡಲೀ ಖಾಣೇ ವಿಕಲ್ಪಾಂಚೀ ।।೩೮।।

ಆದ್ದರಿಂದ ದೇವಾಧಿದೇವನಾದ ಶ್ರೀಧರನು ನಿಜ ಭಕ್ತರ ಯೋಗಕ್ಷೇಮವನ್ನು ತಾನು ಸ್ವತಃ ನಡೆಸುವನು. ತನ್ನ ಭಕ್ತನಿಗೆ ಆತನು ಸ್ವತಃ ಸುಖರೂಪದಿಂದ ಭವಸಾಗರದ ಆಚೆಯ ದಂಡೆಯನ್ನು ಮುಟ್ಟಿಸುವನು ।।೨೭।। ತನ್ನ ಭಕ್ತನ ದೇಹಭಾವವನ್ನು ದೇವಾಧಿದೇವನು ತಾನು ಸ್ವತಃ ಆಚರಿಸುವನು. ಹಾಗಾದರೆ, ಅಭಕ್ತರಿಗೆ ದೇಹವನ್ನು ನಡೆಯಿಸಿಕೊಡುವವನು ಬೇರೆ ಯಾರಾದರೂ ಇದ್ದಾರೆಯೇ? ।।೨೮।। ಭಕ್ತನಿಗೆ ದೇಹಾಭಿಮಾನವು ಇರುವುದಿಲ್ಲ. ಆದ್ದರಿಂದ ದೇವರಿಗೆ ಆತನ ಭಾರವನ್ನು ಹೊರಬೇಕಾಗುವುದು. ಆದರೆ ಅಭಕ್ತರಿಗೆ ದೇಹಾಭಿಮಾನವು ಇರುವುದು. ಆದ್ದರಿಂದ ಸಂಸಾರದಲ್ಲಿ ಅವರು ಬದ್ಧರಾಗುವರು ।।೨೯।। ಅದಕ್ಕಾಗಿಯೇ ನಿರಭಿಮಾನಿಯಾಗಿ ಇರುವವನೇ ನಿಜವಾದ ಭಕ್ತನಾಗಿರುವನು. ಯಾರ ಅಂಗದಲ್ಲಿ ದೇಹಾಭಿಮಾನವು ಇರುವುದೋ, ಆತನಿಗೆ ಭಕ್ತತನವು ಎಂದೂ ಪ್ರಾಪ್ತವಾಗಲಾರದು ।।೩೦।। ದೇವನು ತನ್ನ ಪ್ರೇಮಳ ಭಕ್ತರನ್ನು ಸಹಜ ಲೀಲೆಯಿಂದ ರಕ್ಷಣೆಯನ್ನು ಮಾಡುವನು. ಭಕ್ತರ ಕೂದಲಿಗೂ ಸಹ ಧಕ್ಕೆ ಹಚ್ಚಿಕೊಡಲಾರನು. ದೇವನು ತನ್ನ ಭಕ್ತರನ್ನು ನಿರ್ಭಯರನ್ನಾಗಿ ಮಾಡಿ ಪೂರ್ಣ ಆನಂದದಿಂದ ಅವರನ್ನು ರಕ್ಷಿಸುವನು ।।೩೧।। ಇದಕ್ಕಾಗಿಯೇ ಅಭಿಮಾನವನ್ನು ತೊರೆದು ಈ ಭಕ್ತಿಮಾರ್ಗಕ್ಕೆ ಹತ್ತಿದವರು ವಿಘ್ನಗಳ ಮಸ್ತಕದ ಮೇಲೆ ಕಾಲುಗಳಿಂದ ಮೆಟ್ಟಿ ಭಗವಂತನ ಪದಕ್ಕೆ ಪ್ರಾಪ್ತರಾಗುವರು ।।೩೨।। ಭಕ್ತರ ಸ್ಥಿತಿಯು ಈ ರೀತಿಯಾಗಿರಲು, ಹಾಗಾದರೆ ಅಭಕ್ತರಿಗೆ ಯಾವ ಗತಿಯಾಗುವುದೆಂದು ಕೇಳುವುದಕ್ಕಾಗಿಯೇ ರಾಜನು ಪ್ರಶ್ನೆಯನ್ನು ಮಾಡಲು ಪ್ರವೃತ್ತನಾದನು ।।೩೩।। ಈ ಐದನೆಯ ಅಧ್ಯಾಯದಲ್ಲಿ ಅಭಕ್ತರ ಗತಿ ಮತ್ತು ಅವರ ಲಕ್ಷಣಗಳ ನಿರೂಪಣೆಯನ್ನು ಮಾಡುತ್ತ ಬೇರೆ ಬೇರೆ ಯುಗಗಳಲ್ಲಿನ ಶ್ರೀಹರಿಯ ಪೂಜಾ ವಿಧಾನಗಳು ಹೇಗಿರುವುವು ಎಂಬುವುದನ್ನೂ ಹೇಳುವವನಿದ್ದಾನೆ ।।೩೪।। ಅವತಾರ ಚರಿತ್ರೆಗಳನ್ನು ಮತ್ತು ಅವುಗಳ ಪರಾಕ್ರಮಗಳನ್ನು ಹೇಳಿ ನಾಲ್ಕನೆಯ ಅಧ್ಯಾಯವನ್ನು ಪೂರ್ಣಗೊಳಿಸಿದೆ. ಈಗ ರಾಜನು ಮುನಿಗಳಿಗೆ ಅಭಕ್ತರ ಲಕ್ಷಣಗಳನ್ನು ವಿಚಾರಿಸುತ್ತಿರುವನು ।।೩೫।।

ರಾಜನು ನುಡಿದನು; ಭಗವಂತನ ಕಡೆ ಬೆನ್ನು ತಿರುಗಿಸುವವನು ಅಭಕ್ತನಾಗಿರುವನು. ಆತನ ಗತಿಯು ಏನಾಗುವುದು? ।।೩೬।। ಯಾರು ಕಾಮದಿಂದ ಮದಾಂಧನಾಗಿರುವನು, ಕ್ರೋಧದಿಂದ ಸಂತಪ್ತನಾಗಿರುವನು, ಅತಿಲೋಭದಿಂದ ಲೋಭಿಷ್ಠನಾಗಿರುವನು ಮತ್ತು ಪ್ರಪಂಚದಲ್ಲಿ ಮುಳುಗಿ ಹೋಗಿರುವನು ।।೩೭।। ಯಾರು ಗರ್ವದ ಕೇವಲ ಮೂರ್ತಿಯಾಗಿರುವರು ಮತ್ತು ಅಹಂಕಾರದ ಶಿರೋಮಣಿಯಾಗಿರುವರು, ವಿಕಾರಗಳ ಹರಿಯುವ ನದಿಯಾಗಿರುವರು. ಮತ್ತು ಇವರು ವಿಕಲ್ಪಗಳ ಗಣಿಯನ್ನೇ ತೆರೆದಿರುವರು ।।೩೮।।

ಜ್ಯಾಂಚೇ ಸದ್‌ಬುದ್ಧೀ ಆಡ ಆಭಾಳ । ಮಹಾಮೋಹಾಚೇ ಸದಾ ಸಬಳ । ಜೇ ಛಳಣಾರ್ಥೀ ಅತಿಕುಶಳ । ಜೇ ಅತಿ ಪ್ರಬಳ ಪ್ರಲೋಭೇ ।೪೯॥ ದಿವಸಾ ನ ದೇಖತಿ ನಿಶ್ಚಿತೇ । ತೇ ಅಂಧಾರೀ ದೇಖಣೇ ದಿವಾಭೀತೇ । ತೇವೀ ನೇಣೋನಿ ಪರಮಾರ್ಥಾತೇ । ಜೇ ಅತಿಜ್ಞಾತೇ ಪ್ರಪಂಚೀ ।೫೦॥ ಜೇ ನೇಣತೀ ಆತ್ಮ ಹಿತ । ಜ್ಞಾನ ವಿಕೂನಿ ಕಾಮ ಪೋಸಿತ । ಐಸೇ ಜೇ ಕಾ ಅಭಕ್ತ । ತ್ಯಾಂಚೀ ಗತಿ ನಿಶ್ಚಿತ ಸಾಂಗ ಮಜ ।೫೧॥ ತುಮ್ಹಾ ಐಸೇ ಸದ್‌ಬುದ್ಧೀ । ಚಾಲತೇ ಬೋಧಾಚೇ ಉದಧೀ । ಭಾಗ್ಯೇ ಲಾಧಲೋ ಜ್ಞಾನನಿಧೀ । ಹಾ ಪ್ರಶ್ನ ತ್ರಿಶುದ್ಧೀ ಸಾಂಗಾವಾ ।೫೨॥ ರಾಜಾ ಸಾಕ್ಷೇಪೇ ಬಹುವಸ । ಪುಸೇ ಅಭಕ್ತ ಗತಿ ವಿನ್ಯಾಸ । ತೋ ಸಾಂಗವಯಾ "ಚಮಸ" । ಸಾವಕಾಶ ಸರಸಾವಲಾ ।೫೩॥

ಚಮಸ ಉವಾಚ :-

ಮುಖ ಬಾಹೂರುಪಾದೇಭ್ಯಃ ಪುರುಷಸ್ಯಾಶ್ರಮೈಃ ಸಹ । ಚತ್ವಾರೋ ಜಜ್ಞಿರೇ ವರ್ಣಾ ಗುಣೈರ್ವಿಪ್ರಾದಯಃ ಪೃಥಕ್ ।೭॥

ಅರ್ಥ:- ಎಂಟನೆಯ ಯೋಗೀಶ್ವರ ಚಮಸ ಹೇಳಿದನು: ಹೇ ರಾಜನೇ, ವಿರಾಟ ಪುರುಷನ ಮುಖದಿಂದ ಸತ್ತ್ವಪ್ರಧಾನ ಬ್ರಾಹ್ಮಣ, ಭುಜಗಳಿಂದ ಸತ್ತ್ವರಜಪ್ರಧಾನ ಕ್ಷತ್ರಿಯ, ಮಂಡೆಯಿಂದ ರಜತಮಪ್ರಧಾನ ವೈಶ್ಯ, ಮತ್ತು ಚರಣಗಳಿಂದ ತಮಪ್ರಧಾನ ಶೂದ್ರರ ಉತ್ಪತ್ತಿಯಾಯಿತು. ಆತನ ಮಂಡೆಯಿಂದ ಗ್ರಹಸ್ಥಾಶ್ರಮ, ಹೃದಯದಿಂದ ಬ್ರಹ್ಮಚರ್ಯ ಆಶ್ರಮ, ವಕ್ಷಸ್ಥಳದಿಂದ ವಾನಪ್ರಸ್ಥಾಶ್ರಮ ಮತ್ತು ಮಸ್ತಕದಿಂದ ಸನ್ಯಾಶ್ರಮಗಳು ಪ್ರಗಟವಾದವು.

ಜೋ ಕಾ ಜಗಾಚಾ ಜನಕು । ಮುಖ್ಯ ಗುರುತ್ವೇ ತೋಚಿ ಏಕು । ತ್ಯಾಸೀ ನ ಭಜೇ ಜೋ ವಿವೇಕು । ತೋ ನಾಡಲಾ ಲೋಕು ಸರ್ವಸ್ವೇ ।೫೪॥ ಪುರುಷಾಪಾಸೂನಿ ಜನ್ಮಲೇ ಜಾಣ । ಚಾರ್ಹೀ ಆಶ್ರಮ ಚಾರ್ಹೀ ವರ್ಣ । ತ್ಯಾಂಚೇ ಉತ್ಪತ್ತೀಚೇ ಸ್ಥಾನ । ಐಕ ಸಂಪೂರ್ಣ ನೃಪನಾಥಾ ।೫೫॥ ಮುಖೀ ವೇದವಿದ ಬ್ರಾಹ್ಮಣ । ಬಾಹೂ ಜನ್ಮಲೇ ರಾಜನ್ಯ । ಉರೂ ಜನ್ಮಲೇ ವೈಶ್ಯವರ್ಣ । ಚರಣೀ ಜನ್ಮಸ್ಥಾನ ಶೂದ್ರವರ್ಣಾ ।೫೬॥ ಮೂಳೀ ಅವಘೇ ತೀನ ಗುಣ । ಗುಣಯೋಗೇ ವರ್ಣ ಜಾಣ । ತ್ರಿಗುಣೀ ಚಾರೀ ವರ್ಣ । ಜನ್ಮ ಲಕ್ಷಣ ಘಡೇ ಕೈಸೇ ।೫೭॥ ಸತ್ತ್ವಗುಣೇ ಶುದ್ಧ ಬ್ರಾಹ್ಮಣ । ಸತ್ತ್ವರಜಮಿಶ್ರೇ ರಾಜೇ ಜಾಣ । ರಜತಮೇ ವೈಶ್ಯವರ್ಣ । ಕೇವಳ ತಮೋಗುಣ ಶೂದ್ರವರ್ಣ ।೫೮॥ ಕ್ಷತ್ರಿಯ ವೈಶ್ಯ ಆಣಿ ಬ್ರಾಹ್ಮಣ । ದ್ವಿಜನ್ಮೇ ಹೇ ತಿನ್ಹೀ ವರ್ಣ । ತ್ಯಾಂಸೀ ಗಾಯತ್ರೀ ವೇದಾಧ್ಯಯನ । ಶೂದ್ರ ತೇ ಜಾಣ ಸಂಸ್ಕಾರರಹಿತ ।೫೯॥ ಬ್ರಹ್ಮಚರ್ಯ ಆಣಿ ಗಾರ್ಹಸ್ಥ್ಯ । ತಿಹೀ ವರ್ಣಾ ಅವಶ್ಯ ಪ್ರಾಪ್ತ । ಚಹೂ ಆಶ್ರಮಾ ಆಶ್ರಯಭೂತ । ಜಾಣ ನಿಶ್ಚಿತ ಬ್ರಾಹ್ಮಣ ।೬೦॥ ಗಾರ್ಹಸ್ಥ್ಯ ಪುರುಷಾಚ್ಯಾ ಚರಣೀ । ಬ್ರಹ್ಮಚರ್ಯ ಹೃದಯಸ್ಥಾನೀ । ವಕ್ಷಃಸ್ಥಳೀ ವಸತೀ ವನೀ । ಶಿರೋಮಣೀ ಸನ್ಯಾಸ ।೬೧॥

ಇವರ ಸದ್ಬುದ್ಧಿಯ ಅಡ್ಡವಾಗಿ ಮೋಹದ ಪರದೆಯು ಬಿದ್ದಿರುವುದು. ಕಪಟ ಮಾಡುವುದರಲ್ಲಿ ಇವರು ಅತಿ ಕುಶಲರಾಗಿರುವರು. ಇವರ ವಿಷಯವಾದ ಮೋಹವು ಅತ್ಯಂತ ಪ್ರಬಲವಾಗಿರುವುದು ।೪೯॥ ತೊಗಲುಬಾವಲಿಗಳಿಗೆ ಹಗಲು ಕಾಣಿಸುವುದಿಲ್ಲ. ಆದರೆ ರಾತ್ರಿಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಅದರಂತೆ ಪರಮಾರ್ಥವನ್ನು ಕಾಣದವರು ಪ್ರಪಂಚ ಮಾತ್ರ ಸ್ಪಷ್ಟವಾಗಿ ಕಾಣುವರು ।೫೦॥ ಯಾರಿಗೆ ಆತ್ಮ ಹಿತವು ತಿಳಿಯುವುದಿಲ್ಲ, ಜ್ಞಾನವನ್ನು ಮಾರಿಕೊಂಡು ಕಾಮವನ್ನು ಬೆಳೆಸುವವರಾದ ಅಭಕ್ತರಿಗೆ ನಿಜವಾಗಿಯೂ ಅವರಿಗೆ ಯಾವ ಗತಿಯು ಇರುವುದು? ಇದನ್ನು ನನಗೆ ಹೇಳಿರಿ ।೫೧॥ ತಮ್ಮಂಥ ಬುದ್ಧಿವಾನ ಮತ್ತು ಬೋಧದ ಮಹಾಸಾಗರರು ನನ್ನ ಭಾಗ್ಯದಿಂದ ಲಭಿಸಿರುವಿರಿ. ಆದ್ದರಿಂದ ಕೃಪೆಮಾಡಿ ಈ ಪ್ರಶ್ನೆಗೆ ಉತ್ತರವನ್ನು ಕೊಡಿರಿ ।೫೨॥ ಈ ಪ್ರಕಾರವಾಗಿ ರಾಜನು ಅಭಕ್ತರ ಸ್ಥಿತಿಗತಿ ಏನೆಂಬುವ ಪ್ರಶ್ನೆಯನ್ನು ಬೇಕಾಗಿಯೇ ಕೇಳಿದನು. ಆಗ ಒಂಭತ್ತು ಯೋಗಿಗಳ ಪೈಕಿ ಎಂಟನೆಯವರಾದ "ಚಮಸ" ಯೋಗಿಯು ಉತ್ತರವನ್ನು ಕೊಡಲು ಬಹಳ ಆನಂದದಿಂದ ಮುಂದಾದನು ।೫೩॥

ಯಾವ ಸರ್ವ ಜಗತ್ತಿನ ಜನಕನಾದ, ಆತನೇ ಮುಖ್ಯ ಗುರುವಾಗಿರುವನು. ಆತನಿಗೆ ಅವಿವೇಕೀ ಪುರುಷನು ಭಜಿಸುವುದಿಲ್ಲ. ಇವನು ಸರ್ವಸ್ವವನ್ನೂ ಕಳೆದುಕೊಂಡುಬಿಡುವನು ।೫೪॥ ನಾಲ್ಕು ಆಶ್ರಮಗಳು, ನಾಲ್ಕು ವರ್ಣಗಳು ಮೂಲ ಪುರುಷನಿಂದಲೇ ಜನ್ಮಕ್ಕೆ ಬಂದಿರುವುವು. ಹೇ ನೃಪನಾಥನೇ, ಅವುಗಳ ಉತ್ಪತ್ತಿಯ ಸ್ಥಾನಗಳನ್ನು ಹೇಳುವೆ, ಈಗ ಅದನ್ನು ಕೇಳು ।೫೫॥ ಆ ಪರಮಪುರುಷನ ಮುಖದಿಂದ ಬ್ರಾಹ್ಮಣ, ಬಾಹುಗಳಿಂದ ಕ್ಷತ್ರಿಯ, ಮಂಡೆಯಿಂದ ವೈಶ್ಯ ಮತ್ತು ಚರಣಗಳಿಂದ ಶೂದ್ರರಾದರು ।೫೬॥ ಸತ್ತ್ವ, ರಜ ಮತ್ತು ತಮ ಇವು ಮೂರು ಗುಣಗಳು ಮೂಲದಲ್ಲಿರುವುವು. ಈ ಮೂರುಗುಣಗಳಿಂದ ನಾಲ್ಕು ವರ್ಣಗಳ ಉತ್ಪತ್ತಿಯು ಹೇಗಾಯಿತು? ।೫೭॥ ಸತ್ತ್ವಗುಣದಿಂದ ಶುದ್ಧ ಬ್ರಾಹ್ಮಣನು, ಸತ್ತ್ವ ಮತ್ತು ರಜ ಇವುಗಳ ಮಿಶ್ರಣದಿಂದ ಕ್ಷತ್ರಿಯನು, ರಜ ಮತ್ತು ತಮ ಕೂಡಿ ವೈಶ್ಯನು, ಮತ್ತು ಕೇವಲ ತಮೋಗುಣದಿಂದ ಶೂದ್ರ ವರ್ಣವು ನಿರ್ಮಾಣವಾದವು ।೫೮॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳು ದ್ವಿಜನ್ಮ ಅಂದರೆ, ಉಪನಯನಗಳಿಂದ ಎರಡು ಸಾರೆ ಜನ್ಮಕ್ಕೆ ಬರುವವರು. ಇವರಿಗೆ ಗಾಯತ್ರೀ ಮಂತ್ರದ ಮತ್ತು ವೇದಾಧ್ಯಯನಗಳ ಅಧಿಕಾರವಿರುವುದು. ಶೂದ್ರರು ಸಂಸ್ಕಾರರಹಿತರಾಗಿರುವರು ।೫೯॥ ಬ್ರಹ್ಮಚರ್ಯಾಶ್ರಮ ಮತ್ತು ಗೃಹಸ್ಥಾಶ್ರಮ ಈ ಎರಡು ಆಶ್ರಮಗಳು ಮೂರು ವರ್ಣಗಳವರಿಗೆ ಅವಶ್ಯವಾಗಿರುವುವು. ಬ್ರಾಹ್ಮಣರು ನಾಲ್ಕೂ ಆಶ್ರಮಗಳ ಆಶ್ರಯಭೂತರಾಗಿರುವರು ।೬೦॥ ಗೃಹಸ್ಥಾಶ್ರಮವು ಆ ಪರಮ ಪುರುಷನ ಚರಣಗಳಲ್ಲಿರುವುದು. ಬ್ರಹ್ಮಚರ್ಯಾಶ್ರಮವು ಹೃದಯದಲ್ಲಿರುವುದು, ವಾನಪ್ರಸ್ಥಾಶ್ರಮವು ವಕ್ಷಃಸ್ಥಳದಲ್ಲಿರುವುದು ಮತ್ತು ಸನ್ಯಾಸಾಶ್ರಮವು ಮಾತ್ರ ಭಗವಂತನ ಶಿರೋಮಣಿಯಾಗಿರುವುದು ।೬೧॥

ಯ ಏಷಾಂ ಪುರುಷಂ ಸಾಕ್ಷಾದಾತ್ಮಪ್ರಭವಮೀಶ್ವರಮ್ । ನ ಭಜಂತ್ಯವಜಾನಂತಿ ಸ್ಥಾನಾದ್‌ಭ್ರಷ್ಟಾಃ ಪತಂತ್ಯಧಃ ।।೩।।

ಅರ್ಥ :- ನಾಲ್ಕೂ ವರ್ಣಗಳ ಮತ್ತು ನಾಲ್ಕೂ ಆಶ್ರಮಗಳ ಜನ್ಮದಾತನು ಸ್ವಯಂ ಭಗವಂತನೇ ಆಗಿರುವನು. ಈತನು ಇವರ ಸ್ವಾಮೀ, ನಿಯಂತಾ ಮತ್ತು ಆತ್ಮಾನಾಗಿರುವನು. ಆದ್ದರಿಂದಲೇ ಈ ವರ್ಣಗಳಲ್ಲಿ, ಆಶ್ರಮಗಳಲ್ಲಿ ಇರುವ ಮನುಷ್ಯನು ಭಗವಂತನ ಭಜನೆಯನ್ನು ಮಾಡದೇ, ಪುನಃ ಆತನ ಅನಾದರವನ್ನು ಮಾಡುವನು. ಇದರಿಂದ ಈತನು ತನ್ನ ಸ್ಥಾನ, ವರ್ಣ, ಆಶ್ರಮ ಮತ್ತು ಮನುಷ್ಯ ಜೀವನ ಇವುಗಳಿಂದ ಅಧಃಪತನನಾಗುವನು.

ಹೇ ಬ್ರಾಹ್ಮಣಾದಿ ವರ್ಣ ಪಹಾ ಹೋ । ಜ್ಯಾಪಾಸೋನಿ ಜನ್ಮಪ್ರಭಾವೋ । ತೋ ನ ಭಜತಾ ದೇವಾಧಿದೇವೋ । ಉತ್ತಮದೇಹೋ ಅಧಃಪಾತೀ ।।೫೨।। ಪೂರ್ವೋತ್ತರಮೀಮಾಂಸಾ ದೋನೀ । ನಾನಾಶಾಸ್ತ್ರಾರ್ಥಕಡಸಣೀ । ಸ್ವರೂಪ ಬೋಲತೀ ನಿರ್ವಚೂನೀ । ಏವಂ ಶಬ್ದಜ್ಞಾನೀ ಅತಿಚತುರ ।।೫೩।। ಯಾಪರೀ ಜೇ ಪಂಡಿತ । ಜ್ಞಾನಾಭಿಮಾನೇ ಅತಿಉನ್ಮತ್ತ । ತೇಣೇ ಅಭಿಮಾನೇಚಿ ಯೇಥ । ಭಜನೀ ನಿಶ್ಚಿತ ವಿಮುಖ ಕೇಲೇ ।।೫೪।। ಏಕ ಅಜ್ಞಾನೀ ಸರ್ವಥಾ । ಸ್ವಪ್ನೀ ನೇಣತೀ ಪರಮಾರ್ಥಾ । ತೇ ನೇಣಪಣೇಚಿ ತತ್ತ್ವತಾ । ಶ್ರೀಜಗನ್ನಾಥಾ ನ ಭಜತೀ ।।೫೫।। ಶೇಳೀ ಉಂಸಾಚೀ ಚವೀ ಗಾಢೀ । ನೇಣೋನಿ ಪಾಚೋಳಾ ಕರಾಂಡೀ । ತೇವೀ ನೇಣೋನಿ ಹರಿಭಕ್ತೀಚೀ ಗೋಡೀ । ಅಜ್ಞಾನೇ ಬಾಪುಡೀ ವಿಷಯಲುಬ್ಧ ।।೫೬।। ಆಲೋಡೂನಿ ವೇದಶಾಸ್ತ್ರಾರ್ಥ । ಜ್ಞಾತೇಪಣೇ ಜೇ ಪಂಡಿತ । ಗರ್ವೇ ಹೇಳಸಿತೀ ಭಕ್ತಿಪಂಥ । ಅತಿಉನ್ಮತ್ತ ಜ್ಞಾತೃತ್ವೇ ।।೫೭।। ಜೇವೀ ಜ್ವರಿತಾಚೇ ಮುಖ । ದೂಧ ಮಾನೀ ಕಡೂ ವಿಖ । ತೇವೀ ಜ್ಞಾನಗರ್ವೇ ಪಂಡಿತ ದೇಖ । ಠೇಲೇ ವಿಮುಖ ಹರಿಭಜನೀ ।।೫೮।। ಯಾಪರೀ ಜ್ಞಾನಾಭಿಮಾನೀ । ವಿಮುಖ ಝಾಲೇ ಹರಿಭಜನೀ । ತೇ ಜರೀ ವರ್ಣಾಮಾಜೀ ಅಗ್ರಗಣೀ । ತರೀ ಅಧಃಪತನೀ ಪಡತೀಲ ।।೫೯।। ಹೋ ಕಾ ವರ್ಣಾಮಾಜೀ ಅಗ್ರಗಣೀ । ಜೋ ವಿಮುಖ ಹರಿಚರಣೀ । ತ್ಯಾಹೂನಿ ಶ್ವಪಚ ಶ್ರೇಷ್ಠ ಮಾನೀ । ತೋ ಭಗವದ್ಭಜನೀ ಪ್ರೇಮಳು ।।೬೦।। ಆಮ್ಹೀ ಮುಕ್ತ ಹೇ ಮಾನುನೀ । ಜೇ ವಿಮುಖ ಭಗವದ್ಭಜನೀ । ತೇ ಪಚಿಜತೀ ಅಧಃಪತನೀ । ತಿರ್ಯಗ್ಯೋನೀ ಜನ್ಮಮರಣೇ ।।೬೧।। ಮನುಷ್ಯದೇಹೀ ಜೇ ಭಜನನಷ್ಟ । ತೇ ಹೋತೀ ಗಾ ಸ್ಥಾನಭ್ರಷ್ಟ । ಅಧಃಪಾತೇ ಭೋಗಿತೀ ಕಷ್ಟ । ಅತಿಉದ್ಭಟ ಯಾತನಾ ।।೬೨।। ಜ್ಞಾನಾಭಿಮಾನೇ ಜೇ ನ ಭಜತೀ । ತೇ ಪ್ರೌಢಪತನೀ ಪಚಿಜತೀ । ಅಜ್ಞಾನಾಂಹೀ ತೇಚಿ ಗತೀ । ಸರ್ವಥಾ ನೃಪತೀ ಮ್ಹಣೋ ನಯೇ ।।೬೩।।

ದೂರೇ ಹರಿಕಥಾಃ ಕೇಚಿದ್‌ದೂರೇಚಾಚ್ಯುತಕೀರ್ತನಾಃ । ಸ್ತ್ರಿಯಃ ಶೂದ್ರಾದಯಶ್ಚೈವ ತೇऽನುಕಂಪ್ಯಾ ಭವಾದೃಶಾಮ್ ।।೪।।

ಅರ್ಥ :- ಅನೇಕ ಸ್ತ್ರೀಯರು ಮತ್ತು ಶೂದ್ರರು ಇತ್ಯಾದಿ ಭಗವದ್ಭಜನೆಯ ಕಥೆ ಮತ್ತು ಅದರ ನಾಮಸಂಕೀರ್ತನೆಯಿಂದ ದೂರವಿರುವರು. ಇವರು ತಮ್ಮಂತಹ ಭಗವದ್ಭಕ್ತರ ದಯೆಗೆ ಪಾತ್ರರಾಗಿರುವರು. ತಾವು ಅವರಿಗೆ ಕಥೆ ಕೀರ್ತನೆಯ ಲಾಭವನ್ನು ಪ್ರಾಪ್ತ ಮಾಡಿ ಕೊಡಬೇಕು ಮತ್ತು ಅವರನ್ನು ಉದ್ಧರಿಸಬೇಕು.

ಬ್ರಾಹ್ಮಣಾದಿ ವರ್ಣಗಳಿಗೆ ಯಾರಿಂದ ಜನ್ಮವು ಪ್ರಾಪ್ತಿಯಾಗುವುದೋ, ಆ ದೇವಾಧಿದೇವನಿಗೆ ಭಜಿಸದಿದ್ದರೆ ಉತ್ತಮವಾದ ದೇಹವು ಪ್ರಾಪ್ತವಾಗಿದ್ದರೂ ಆತನ ಅಧಃಪಾತವಾಗುವುದು ।।೫೨।। ಪೂರ್ವ ಮತ್ತು ಉತ್ತರ ಮೀಮಾಂಸಗಳ ಮತ್ತು ವಿಧಿ ಶಾಸ್ತ್ರಗಳ ಸ್ವರೂಪದ ನಿರೂಪಣೆಯನ್ನು ಉತ್ತಮ ರೀತಿಯಲ್ಲಿ ಮಾಡುವರು. ಶಬ್ದಜ್ಞಾನದಲ್ಲಿ ಇವರು ಅತಿಶಯವಾಗಿ ಚತುರರಾಗಿರುವರು ।।೫೩।। ಈ ಪ್ರಕಾರದ ಯಾವ ಪಂಡಿತರು ಜ್ಞಾನದ ಅಭಿಮಾನದಿಂದ ಅತ್ಯಂತ ಉನ್ಮತ್ತರಾಗಿರುವರು. ನಿಜವಾಗಿಯೂ ಇವರು ಅಭಿಮಾನದಿಂದಲೇ ಭಜನೆಗೆ ವಿಮುಖರಾಗುವರು ।।೫೪।। ಉಳಿದ ಬೇರೆ ಎಷ್ಟೋ ಜನರು ಕೇವಲ ಅಜ್ಞಾನಿಗಳಾಗಿರುವರು. ಇವರು ಪರಮಾತ್ಮನಿಗೆ ಸ್ವಪ್ನದಲ್ಲಿಯೂ ಅರಿಯಲಾರರು. ಇವರು ಕೇವಲ ಅಜ್ಞಾನದಿಂದಲೇ ಶ್ರೀ ಜಗನ್ನಾಥನಿಗೆ ಭಜಿಸುವುದಿಲ್ಲ ।।೫೫।। ಕಬ್ಬಿನಲ್ಲಿಯ ರಸದ ರುಚಿಯನ್ನು ಅರಿಯದೇ ಆಡು ಅದರ ಕಸ ಕಡ್ಡಿಗಳನ್ನು ಮೆಲುಕುತ್ತಿರುವುದು. ಅದರಂತೆ ಹರಿಭಕ್ತಿಯ ರುಚಿಯನ್ನು ಅರಿಯದೇ ಪಾಪ! ಅಜ್ಞಾನಿಗಳು ವಿಷಯಗಳಲ್ಲಿ ಲುಬ್ಧರಾಗುವರು ।।೫೬।। ವೇದಶಾಸ್ತ್ರಗಳ ಮಂಥನವನ್ನು ಮಾಡಿ ಜ್ಞಾನದ ಅಭಿಮಾನದಿಂದ ತಾನು ಪಂಡಿತನು ಎಂದು ತಿಳಿದಾತನಿಗೆ ಗರ್ವವು ಬಂದಿರುವುದು. ಆದ್ದರಿಂದ ಇವರು ಭಕ್ತಿಪಂಥಕ್ಕೆ ಅನಾದರ ಮಾಡುವರು ।।೫೭।। ಜ್ವರಪೀಡಿತ ಮುಖಕ್ಕೆ ಹಾಲು ವಿಷವಾಗಿ ಕಾಣುವುದು. ಅದರಂತೆ ಜ್ಞಾನದ ಗರ್ವದಿಂದ ಪಂಡಿತ ಜನರು ಹರಿಭಜನೆಗೆ ವಿಮುಖರಾಗುವರು ।।೫೮।। ಇವರು ಚತುರ್ವರ್ಣಗಳಲ್ಲಿ ಶ್ರೇಷ್ಠರಾಗಿದ್ದರೂ ಅಧಃಪತನದಲ್ಲಿ ಬೀಳುವರು ।।೫೯।। ಹೆಚ್ಚಿಗೇನು ಹೇಳಬೇಕು? ವರ್ಣಗಳಲ್ಲಿ ಶ್ರೇಷ್ಠವಾಗಿರುವ, ಬ್ರಾಹ್ಮಣನಾಗಿಯೂ ಹರಿಚರಣಕ್ಕೆ ವಿಮುಖನಾದರೆ, ಈತನಿಗಿಂತಲೂ ಪ್ರೇಮದಿಂದ ಭಗವದ್ಭಜನೆ ಮಾಡುವ ಆ ಚಾಂಡಾಲನೇ ಶ್ರೇಷ್ಠನು ।।೬೦।। ನಾವು ಮುಕ್ತರಾಗಿದ್ದೇವೆ ಎಂದು ಭಾವಿಸಿ ಭಗವದ್ಭಜನೆಯನ್ನು ಮಾಡದವರು ಪಶುಪಕ್ಷಿಗಳ ಜನ್ಮಮರಣಗಳಲ್ಲಿ ತಿರುಗುತ್ತ ಅಧಃಪತನಗಳಲ್ಲಿ ಬೀಳುವರು ।।೬೧।। ಮನುಷ್ಯ ದೇಹವು ಸಿಕ್ಕಿದ್ದರೂ ಯಾರು ಈಶ್ವರನ ಭಜನೆಯನ್ನು ಮಾಡುವುದಿಲ್ಲವೋ, ಅವರು ಸ್ಥಾನಭ್ರಷ್ಟರಾಗಿ ಭಯಂಕರವಾದ ಯಾತನೆಗಳನ್ನು ಭೋಗಿಸುವರು ।।೬೨।। ಆದರೆ ಹೇ ರಾಜನೇ, ಜ್ಞಾನಾಭಿಮಾನದಿಂದ ಈಶ್ವರನ ಭಜನೆ ಮಾಡದವರಿಗೆ ಅಧಃಪಾತವಾಗುವುದು. ಆದರೆ ಅಜ್ಞಾನಿಗೂ ಇದೇ ಗತಿಯಾಗಬೇಕಾಗಬಹುದೆಂದು ಹೀಗೆ ಮಾತ್ರ ನೀನು ತಿಳಿಯಬೇಡ।।೬೩।।

ಏಕಾ ಪಿತ್ಯಾಚೇ ದೋಘೇ ಅರ್ಭಕ । ಏಕ ಪ್ರಬುದ್ಧ ಏಕ ಬಾಳಕ । ಪಿತ್ಯಾಸೀ ಅವಮಾನಿತಾ ದೇಖ । ತಾಡೀ ಜನಕ ಪ್ರಬುದ್ಧಾಸೀ ॥೬೪॥ ಬಾಳಕ ಪಿತ್ಯಾಚೇ ಮಾಥಾ ಚಢೇ । ಜರೀ ಲಾತಾ ಹಾಣೇ ತಯಾಕಡೇ । ತರೀ ತ್ಯಾಸೀ ದೋಷು ನ ಘಡೇ । ದೋಷಾಂಚೇ ಸಾಂಕಡೇ ಸಜ್ಞಾನಾಸೀ ॥೬೫॥ ಜ್ಞಾನತ್ಯಾಪಾಸೋನಿ ಭಜನ ಠಾಕೇ । ತೇ ಕವಳಿಜತೀ ಮಹಾದೋಖೇ । ಅಜ್ಞಾನೇ ತರತೀ ಭಾವಿಕೇ । ಸಾಧುಕೃಪಾಮುಖೇ ಅನುಗ್ರಹಿತಾ ॥೬೬॥ ಅಜ್ಞಾನಾ ನಾಹೀ ವಿಶೇಷ ಬಾಧು । ತೋ ಸಾಧುವಿಶ್ವಾಸೇ ಹೋಯ ಶುದ್ಧು । ಜ್ಞಾನಾಭಿಮಾನಿಯಾ ಭಾವ ವಿರುದ್ಧು । ಯಾಲಾಗೀ ಸುಬುದ್ಧು ದೋಷ ಬಾಧೀ ॥೬೭॥ ಅಜ್ಞಾನೀ ವಿಶ್ವಾಸೇ ಸಾಧು ವಂದೀ । ಜ್ಞಾನಾಭಿಮಾನೀ ದೋಹೋತೇ ನಿಂದೀ । ಯಾಲಾಗೀ ತ್ಯಾತೇ ತ್ರಿಶುದ್ಧೀ । ಅವಶ್ಯ ಬಾಧೀ ಅತಿದೋಷ ॥೬೮॥ ಸಾಧುವಿಶ್ವಾಸೇ ಅಜ್ಞಾನ ಫಿಟೇ । ಜ್ಞಾನಾಭಿಮಾನಿಯಾ ವಿಕಲ್ಪ ಮೋಠೇ । ತ್ಯಾಂಸೀ ವಿಶ್ವಾಸ ಕದಾ ನ ಘಟೇ । ಅಭಿಮಾನಹಟೇ ಅಧಃಪಾತ ॥೬೯॥ ಏವಂ ವಿಚಾರಿತಾ ನೇಟೇಪಾಟೇ । ಅಹಂತೇಚೇ ಬಂಧನ ಮೋಠೇ । ಅಭಿಮಾನ ಐಸೇ ನಾಹೀ ಖೋಟೇ । ದುಜೇ ವೋಖಟೇ ತ್ರಿಲೋಕೀ ॥೭೦॥ ಅಭಿಮಾನು ಈಶ್ವರಾ ಬಾಧೀ । ತೋಹೀ ಶಬಳ ಕೀಜೇ ಸೋಪಾಧೀ । ಅಭಿಮಾನೇ ದೇಹಬುದ್ಧೀ । ಬಾಧಕ ತ್ರಿಶುದ್ಧೀ ಸುರನರಾಂಸೀ ॥೭೧॥ ಯಾಲಾಗೀ ಜೇ ಅಜ್ಞಾನ ಜನ । ಜ್ಯಾಂಸೀ ನಾಹೀ ಜ್ಞಾನಾಭಿಮಾನ । ತೇಹೀ ವಿಶ್ವಾಸಲ್ಯಾ ಸಂಪೂರ್ಣ । ಸಾಧು ಸಜ್ಜನ ಅನುಗ್ರಹೋ ಕರಿತೀ ॥೭೨॥ ಜ್ಯಾಸೀ ಮ್ಹಣತೀ ನೀಚ ವರ್ಣ । ಸ್ತ್ರೀಶೂದ್ರಾದಿ ಹೀನ ಜನ । ಜ್ಯಾಸೀ ಕಾ ದೂರೀ ಶಾಸ್ತ್ರಶ್ರವಣ । ಜ್ಯಾಸೀ ದೂರೀ ಶ್ರವಣ ವೇದೋಕ್ತ ॥೭೩॥ ತ್ಯಾಂಸೀ ಜಾಹಲಿಯಾ ಸದ್ಭಾವ ಸಂಪೂರ್ಣ । ತೇ ಹೋತು ಕಾ ಹೀನ ಜನ । ಪರೀ ಸಂತಕೃಪೇಸೀ ಆಯತನ । ವಿಶ್ವಾಸೇ ಪೂರ್ಣ ಅಧಿಕಾರ ಝಾಲಾ ॥೭೪॥ ಐಸೇ ಪೂರ್ಣ ಭಾವಾರ್ಥೀ । ತ್ಯಾಂಸೀ ತುಮ್ಹಾ ಐಸಾ ಸಾಧುಸಂತೀ । ಅನುಗ್ರಹೋನಿ ತಾರಿತೀ । ಕೃಪಾಮೂರ್ತೀ ಕೃಪಾಳು ॥೭೫॥ ಅಜ್ಞಾನೀ ಯಾಪರೀ ತರತೀ । ಪರೀ ಜ್ಞಾನಾಭಿಮಾನ ಜ್ಯಾಂಚ್ಯಾ ಮತೀ । ತೇ ಬ್ರಹ್ಮಾದಿಕಾ ನ ತರತೀ । ತ್ಯಾಂಚೀಹೀ ಸ್ಥಿತಿ ಮುನಿ ಸಾಂಗೇ ॥೭೬॥

ಒಬ್ಬ ತಂದೆಗೆ ಇಬ್ಬರು ಮಕ್ಕಳಿರುವರು. ಇವರಲ್ಲಿ ಒಬ್ಬನು ದೊಡ್ಡವನು ತಿಳಿದವನಿರುವನು, ಇನ್ನೊಬ್ಬ ತೀರ ಚಿಕ್ಕವನು ಏನೂ ತಿಳಿಯಲಾರದವನಾಗಿರುವನು. ತಿಳಿದಿರುವ ಮಗನು ತಂದೆಯಲ್ಲಿ ಅಪರಾಧ ಎಸಗಿದರೆ ಕೂಡಲೇ ತಂದೆಯು ಆ ಮಗನಿಗೆ ಥಳಿಸುವನು ॥೬೪॥ ಚಿಕ್ಕ ಬಾಲಕನು ತನ್ನ ತಂದೆಯ ತಲೆಯ ಮೇಲೇರುವನು. ಮತ್ತು ತನ್ನ ತಂದೆಗೆ ಕಾಲಿನಿಂದ ಒದೆಯುವನು, ಆದರೂ ಈತನಿಗೆ ದೋಷವು ಒದಗುವುದಿಲ್ಲ. ಸಜ್ಞಾನಿಗೆ ಮಾತ್ರ ದೋಷದ ಬಂಧನವಿರುವುದು ॥೬೫॥ ಜ್ಞಾನಿಗಳವರಿಂದ ಭಜನೆಯು ದೂರವಿರುವುದು. ಇವರು ಜ್ಞಾನದ ಅಭಿಮಾನದಿಂದ ಭಜನೆಯನ್ನು ಮಾಡಲಾರರು. ಇದರಿಂದ ಇವರಿಗೆ ದೊಡ್ಡ ದೋಷವು ಒದಗುವುದು. ಆದರೆ ಅಜ್ಞಾನಿ ಜನರು ಸಾಧುಗಳವರ ಕೃಪೆಯ ಅನುಗ್ರಹದಿಂದ ಕೇವಲ ಭಾವನೆಯಿಂದಲೇ ಉದ್ಧಾರರಾಗುವರು ॥೬೬॥ ಅಜ್ಞಾನಿಗೆ ವಿಶೇಷ ಬಾಧೆ ಇರುವುದಿಲ್ಲ. ಈತನು ದೃಢವಾದ ಶ್ರದ್ಧೆಯಿಂದ ಶುದ್ಧನಾಗುವನು. ಜ್ಞಾನಿಯ ಅಭಿಮಾನದ ಭಾವವು ಇದರ ವಿರುದ್ಧವಾಗಿರುವುದು. ಆದ್ದರಿಂದ ಈತನಿಗೆ ದೋಷದ ಬಾಧೆಯಾಗುವುದು ॥೬೭॥ ಅಜ್ಞಾನಿಯು ವಿಶ್ವಾಸವನ್ನಿಟ್ಟು ಮನೋಭಾವದಿಂದ ಸಾಧುವಿಗೆ ವಂದಿಸುವನು. ಆದರೆ ಜ್ಞಾನದ ಅಭಿಮಾನ ಇದ್ದವನು ಇವರಿಬ್ಬರನ್ನೂ ನಿಂದಿಸುವನು. ಆದ್ದರಿಂದ ಈತನಿಗೆ ನಿಜವಾಗಿಯೂ ದೋಷದ ಬಾಧೆಯು ಬಿಡದೇ ತಟ್ಟುವುದು ॥೬೮॥ ದೃಢವಾದ ಶ್ರದ್ಧೆಯಿಂದ ಅಜ್ಞಾನವು ಇಲ್ಲದಾಗುವುದು. ಜ್ಞಾನದ ಅಭಿಮಾನ ಇದ್ದ ಮನುಷ್ಯನ ಮನಸ್ಸಿನಲ್ಲಿ ವಿಕಲ್ಪಗಳು ಬಹಳಿರುವುವು. ಈತನ ವಿಶ್ವಾಸವು ಎಲ್ಲಿಯೂ ಇರುವುದಿಲ್ಲ. ಆದ್ದರಿಂದ ಅಭಿಮಾನದ ಆಗ್ರಹದಿಂದ ಈತನ ನಾಶವಾಗುವುದು ॥೬೯॥ ಈ ಪ್ರಕಾರವಾಗಿ ನಿಶ್ಚಯಪೂರ್ವಕದ ವಿಚಾರಿಸಿ ನೋಡಲು ಹೀಗೆ ತಿಳಿಯುವುದು. ಅಹಂಕಾರದ ಬಂಧನವು ಬಹುದೊಡ್ಡದಾಗಿರುವುದು. ಅಭಿಮಾನದಂತಹ ಖೊಟ್ಟಿ, ಕೆಡಕು ಈ ಮೂರು ಲೋಕಗಳಲ್ಲಿಯೂ ಬೇರೆ ಯಾವುದೂ ಇಲ್ಲ ॥೭೦॥ ಅಭಿಮಾನವು ಈಶ್ವರನಿಗೂ ಬಾಧಿಸುವುದು ಅಭಿಮಾನದಿಂದಲೇ ಈಶ್ವರನು "ಶಬಲ" ಮಾಯೆಯ ಆಧೀನನಾಗುವನು. ಅಭಿಮಾನದಿಂದಲೇ ದೇಹಬುದ್ಧಿಯು ನಿರ್ಮಾಣಗೊಳ್ಳುತ್ತಿರುವುದು. ಇದೇ ಸುರರಿಗೂ ನರರಿಗೂ ಬಾಧಕವಾಗಿರುವುದು ॥೭೧॥ ಅದಕ್ಕಾಗಿಯೇ ಅಜ್ಞಾನಿ ಜನರಿಗೆ ಜ್ಞಾನದ ಅಭಿಮಾನವು ಇರುವುದಿಲ್ಲ. ಇವರು ಸಾಧುಸಂತರಲ್ಲಿ ಪೂರ್ಣವಾದ ವಿಶ್ವಾಸವನ್ನು ಇಟ್ಟರೆ ಅವರು ಇವರಿಗೆ ಅನುಗ್ರಹವನ್ನು ಮಾಡುವರು ॥೭೨॥ ಯಾವ ಸ್ತ್ರಿಯರು, ಶೂದ್ರರು ಸಂಸ್ಕಾರವಿಲ್ಲದವರಾಗಿರುವರು. ಇವರಿಗೆ ವೇದದಲ್ಲಿನ ಶಾಸ್ತ್ರ ಶ್ರವಣ ಮಾಡುವುದು ಕಠಿಣವಾಗುವುದು ॥೭೩॥ ಆದರೆ ಇವರಲ್ಲಿ ಪೂರ್ಣವಾದ ಸದ್ಭಾವನೆಯು ನಿರ್ಮಾಣವಾಯಿತೆಂದರೆ, ಹೃದಯವು ಪವಿತ್ರವಾಗುವುದು ಮತ್ತು ಇವರು ಸಂತರ ಕೃಪೆಗೆ ಪಾತ್ರರಾಗುವರು. ದೃಢವಾದ ಶ್ರದ್ಧೆಯಿಂದ ಇವರಿಗೆ ಪೂರ್ಣವಾದ ಅಧಿಕಾರವು ಪ್ರಾಪ್ತವಾಗುವುದು ॥೭೪॥ ಹೀಗೆ ಪರಿಪೂರ್ಣವಾಗಿ ಭಾವಿಕರಾಗಿರುವರು. ಹೇ ಕೃಪಾಮೂರ್ತಿಯರೇ, ಅವರಿಗೆ ತಮ್ಮಂಥ ಸಾಧು ಸಂತರು ಅನುಗ್ರಹವನ್ನು ಮಾಡಿ ಅವರನ್ನು ಸರ್ವಪ್ರಕಾರದ ದುಃಖಗಳಿಂದ ಬಿಡಿಸುವರು ॥೭೫॥ ಈ ಪ್ರಕಾರವಾಗಿ ಅಜ್ಞಾನಿ ಜನರು ಶ್ರದ್ಧೆಯಿಂದ ಉದ್ಧಾರರಾಗುವರು, ಆದರೆ ಯಾರ ಹೃದಯದಲ್ಲಿ ಜ್ಞಾನದ ಅಭಿಮಾನ ಇರುವುದೋ, ಅವರಿಗೆ ಬ್ರಹ್ಮಾದಿಕರೂ ಸಹ ಉದ್ಧರಿಸಲಾರರು. ಅದರ ಸ್ಥಿತಿಯನ್ನು ಮುನಿಗಳು ಹೇಳುವರು ॥೭೬॥

ವಿಪ್ರೋ ರಾಜನ್ಯವೈಶ್ಯೌಚ ಹರೇಃ ಪ್ರಾಪ್ತಾಃ ಪದಾಂತಿಕಮ್ ।
ಶ್ರೌತೇನ ಜನ್ಮನಾಥಾಪಿ ಮುಹ್ಯಂತ್ಯಾಮ್ನಾಯವಾದಿನಃ ॥೬॥

ಅರ್ಥ: ಬ್ರಾಹ್ಮಣರು ಕ್ಷತ್ರಿಯರು ಮತ್ತು ವೈಶ್ಯರು ವೇದದೀಕ್ಷೆಯಿಂದ ಎರಡನೆಯ ಜನ್ಮವನ್ನು ಪಡೆದು ಶ್ರೀಹರಿಯ ಪಾದ-ಕಮಲವನ್ನು ತಲುಪಲು ಅವಕಾಶವಿದ್ದರೂ ಸಹ ದಿಗ್ಭ್ರಾಂತರಾಗಿ ಅನೇಕ ಭೌತಿಕ ದರ್ಶನ ಶಾಸ್ತ್ರಗಳನ್ನು ಅನುಸರಿಸುವ ಸಂಭವ ಇದೆ.

ಅಜ್ಞಾನ ಜೇ ನೀಚ ವರ್ಣ । ಭಾವೇ ಧರೋನಿ ಸಂತಚರಣ । ನಿಜವಿಶ್ವಾಸೇ ಸಂಪೂರ್ಣ । ಜನ್ಮ ಮರಣ ನಿರಸಿತೀ ॥೭೭॥ ಯೇರ ದ್ವಿಜನ್ಮೇ ಜೇ ಕಾ ತಿನ್ಹೀ । ಸ್ವಭಾವೇ ಪ್ರಾಪ್ತ ಹರಿಚರಣೀ । ಆಮ್ಹೀ ಅಧಿಕಾರೀ ವೇದಜ್ಞಾನೀ । ಜನ್ಮಾಭಿಮಾನೀ ಅತಿಗರ್ವೀ ॥೭೮॥ ಜನ್ಮಾಭಿಮಾನ ಕರ್ಮಾಭಿಮಾನ । ಅಗ್ರಪೂಜ್ಯತ್ವೇ ಪೂಜ್ಯಾಭಿಮಾನ । ಅಲ್ಪಮಾತ್ರ ವೇದೀಚೇ ಜ್ಞಾನ । ತೋ ವೇದಾಭಿಮಾನ ವಾಢವಿತೀ ॥೭೯॥ ಜ್ಯಾಸೀ ಪ್ರಾಪ್ತ ಉಪನಯನ । ಜ್ಯಾಸೀ ಪ್ರಾಪ್ತ ಗಾಯತ್ರೀ ಪೂರ್ಣ । ಜ್ಯಾಸೀ ಹರೀಚೇ ಆವಡೇ ಭಜನ । ತ್ಯಾಚೇ ಧರಿತಾ ಚರಣ ಹರಿ ಭೇಟೇ ॥೮೦॥ ಐಸೇ ಉತ್ತಮ ಜೇ ಬ್ರಾಹ್ಮಣ । ತ್ಯಾಂಸೀ ವೇದವಾದೇ ಜ್ಞಾನಾಭಿಮಾನ । ತೇಣೇ ಗರ್ವೇ ಪಡೇ ಮೋಹನ । ತೇಚಿ ನಿರೂಪಣ ವಿಶದ ಸಾಂಗೇ ॥೮೧॥

ಕರ್ಮಣ್ಯಕೋವಿದಾಃ ಸ್ತಬ್ಧಾ ಮೂರ್ಖಾಃ ಪಂಡಿತಮಾನಿನಃ ।
ವದಂತಿ ಚಾಟುಕಾನ್ಮೂಢಾ ಯಯಾ ಮಾಧ್ವ್ಯಾ ಗಿರೋತ್ಸುಕಾಃ ॥೭॥

ಅರ್ಥ: ಇವರಿಗೆ ಕರ್ಮದ ರಹಸ್ಯವು ತಿಳಿದಿಲ್ಲ. ಅಜ್ಞಾನಿಯಾಗಿದ್ದರೂ ತಮ್ಮನ್ನು ಪಂಡಿತರೆಂದು ಭಾವಿಸುವರು. ಮಧುರ ಶಬ್ದಗಳಿಗೆ ಭುಲಾಯಿಸುವರು. ಚತುರ್ಮಾಸ ಮಾಡುವವರಿಗೆ ಅಕ್ಷಯ ಫಲವಾದ ಸ್ವರ್ಗವು ದೊರೆಯುವುದು. ಇಲ್ಲಿ ಶೀತ, ಉಷ್ಣ, ಗ್ಲಾನೀ ಮತ್ತು ಶತ್ರುಗಳು ಇರುವುದಿಲ್ಲ ಎಂಬ ಇತ್ಯಾದಿ ಮಧುರವಾಣಿಯಿಂದ ಉತ್ಸುಕರಾಗಿ ಅಜ್ಞಾನಿಗಳಾಗುವರು.

ನ ಕಳೇ ವಿಧಿವಿಧಾನಮಂತ್ರ । ಕೋಣೇ ಕರ್ಮೀ ಕೈಸೇ ತಂತ್ರ । ನೇಣೋನಿಯಾ ಗರ್ವ ಥೋರ । ತಾತಾ ಅಪಾರ ಜ್ಞಾತೃತ್ವಾಚಾ ॥೮೨॥ ಗಾರೋಡಿಯಾಸೀ ವಿದ್ಯಾ ಥೋಡೀ । ಪರೀ ಸರ್ವಾಂಗೀ ಬಿರುದೇ ಗಾಢೀ । ಕಾ ಜಾಣೇ ಜಾಣಪಣೇ ಜೋಡೀ । ಕಡೋವಿಕಡೀ ಆಸನಪೂಜಾ ॥೮೩॥ ದೇಊನಿ ಪತಂಗಾಚೇ ಢಾಳ । ಸ್ಫಟಿಕಾ ಅಂಗೀ ಮಾಣಿಕ ಕೀಳ । ತೈಸೇ ಮೂರ್ಖಹೀ ಕೇವಳ । ಮಿರವಿತೀ ಪ್ರಬಳ ಜ್ಞಾನಾಭಿಮಾನೇ ॥೮೪॥ ಆಪಣ ವಿಧಾನ ನೇಣತೀ । ಶೇಖೀ ಸಜ್ಞಾನಾಹೀ ನ ಪುಸತೀ । ಕರ್ಮ ಆಪಮತೀ ಕರಿತೀ । ಲೌಕಿಕೀ ಸ್ಥಿತೀ ವಾಢವಾವಯಾ ॥೮೫॥ ಮಿಥ್ಯಾ ಮಧುರ ಶಬ್ದೇ ಚಾಟುಕ । ಜೇ ಭೋಗೀ ಅಣುಮಾತ್ರ ನಾಹೀ ಸುಖ । ತರೀ ಇಹಾಮುತ್ರ ಭಜವಿತೀ ಲೋಕ । ಅಪ್ಸರಾದಿಕ ಭೋಗಲಿಪ್ಸಾ ॥೮೬॥

ಅಜ್ಞಾನಿಗಳು ಮತ್ತು ಅಲ್ಪ ಸಂಸ್ಕಾರ ಹೊಂದಿದವರಾದ ಇವರು ದೃಢವಾದ ಶ್ರದ್ಧೆಯಿಂದ ಸಂತರ ಚರಣಗಳನ್ನು ಹಿಡಿಯುವರು ಅವರಲ್ಲಿ ಪರಿಪೂರ್ಣ ವಿಶ್ವಾಸವನ್ನಿಟ್ಟು ಜನ್ಮಮರಣಗಳನ್ನು ಕಳೆದುಕೊಳ್ಳುವರು ॥೭೭॥ ಉಳಿದವರು ಉಪನಯನಗಳಿಂದ ಎರಡುಸಾರೆ ಜನ್ಮ ಪಡೆದವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರು ಸ್ವಾಭಾವಿಕವಾಗಿಯೇ ಹರಿಚರಣದತ್ತ ಮುಟ್ಟಿರುವರು. ಆದರೆ ನಾವು ವೇದಾರ್ಥ ಜ್ಞಾನದ ಅಧಿಕಾರಿಗಳು ಎಂಬ ಜನ್ಮಾಭಿಮಾನದಿಂದ ಇವರು ಅತಿಶಯವಾಗಿ ಗರ್ವಿಷ್ಠರಾಗುವರು ॥೭೮॥ ಇವರಿಗೆ ತಮ್ಮ ಜನ್ಮದ, ಕರ್ಮದ ಮತ್ತು ಅಗ್ರಪೂಜೆಯ ಮಾನದಿಂದ ಪೂಜ್ಯತ್ವದ ಅಭಿಮಾನವು ಹೆಚ್ಚಾಗಿರುವುದು. ಇವರಿಗೆ ವೇದದ ಜ್ಞಾನವು ಅತ್ಯಲ್ಪವಾಗಿರುವುದು. ಆದಾಗ್ಯೂ ಇದು ಅವರ ದೇಹಾಭಿಮಾನವನ್ನು ಬೆಳೆಸುವುದು ॥೭೯॥ ಯಾರಿಗೆ ಮೌಂಜೀಬಂಧನದ ಮತ್ತು ಗಾಯತ್ರೀ ಮಂತ್ರದ ಪೂರ್ಣ ಅಧಿಕಾರವು ಇರುವುದೋ, ಯಾರಿಗೆ ಹರಿಯ ಭಜನೆಯಲ್ಲಿ ಪ್ರೇಮವಿರುವುದೋ, ಅವರ ಪಾದಗಳನ್ನು ಹಿಡಿದರೆ ಹರಿಯ ದರ್ಶನವಾಗುವದು ॥೮೦॥ ಹೀಗಿರುವ ಉತ್ತಮ ಬ್ರಾಹ್ಮಣರಿಗೆ ವೇದವಾದವನ್ನು ಮಾಡಿ ಜ್ಞಾನದ ಅಭಿಮಾನವಾಗುವುದು. ಈ ಅಭಿಮಾನದಿಂದ ಗರ್ವವು, ಗರ್ವದಿಂದ ಮೋಹವು ಹುಟ್ಟುವುದು. ಈ ನಿರೂಪಣೆಯನ್ನೇ ಚಮಸಮುನಿಯು ಸ್ಪಷ್ಟವಾಗಿ ಹೇಳುತ್ತಿರುವರು ॥೮೧॥

ಇವರಿಗೆ ವಿಧಿ, ವಿಧಾನ, ಮಂತ್ರ ಯಾವುದೂ ಏನೂ ತಿಳಿಯುವುದಿಲ್ಲ. ಯಾವ ಕರ್ಮಕ್ಕೆ ಯಾವ ತ್ರಂತ್ರವೆಂಬುದೂ ಸಹ ತಿಳಿಯುವುದಿಲ್ಲ. ಹೀಗಿದ್ದರೂ ಬಹಳ ಗರ್ವ ಮತ್ತು ಜ್ಞಾನದ ಡೌಲು ಸಹ ಬೇಕಾದಷ್ಟಿರುವುದು ॥೮೨॥ ಗಾರುಡಿಗನ ವಿದ್ಯೆಯು ಸ್ವಲ್ಪ ಇರುವುದು. ಆದರೆ ದೊಡ್ಡ ದೊಡ್ಡ ತಾಯಿತಗಳು, ಪದಕಗಳು ಇತ್ಯಾದಿ ಮೈತುಂಬ ಇರುವುವು. ಅದರಂತೆ ಈತನು ಸ್ವಲ್ಪ ಜ್ಞಾನದ ಜೋಡು ಸಿಕ್ಕಿದೆ ಎಂದು ತಿಳಿದು ಆಸನ ಪೂಜಾದಿಕಗಳನ್ನು ಅತಿದೊಡ್ಡದಾಗಿ ತೋರಿಸುವನು. ಅನೇಕ ಪ್ರಕಾರದ ಪೂಜೆಯನ್ನು ಮಾಡಿಸಿಕೊಳ್ಳುವನು ॥೮೩॥ ಸ್ಫಟಿಕಮಣಿಯನ್ನು ಬೇರೆ ಬೇರೆ ಬಣ್ಣಗಳ ಪುಟ ಕೊಟ್ಟು ಅದಕ್ಕೆ ಮಾಣಿಕ್ಯದ ಸ್ವರೂಪವನ್ನು ತರುವಂತೆ ಅಜ್ಞಾನಿಗಳು ಜ್ಞಾನದ ಸುಳ್ಳಾದ ಅಭಿಮಾನವನ್ನು ರಕ್ಷಿಸುವರು ॥೮೪॥ ಇವರು ಸ್ವತಃ ಕರ್ಮದ ವಿಧಾನಗಳನ್ನು ಅರಿಯಲಾರರು. ಮತ್ತು ತಮ್ಮ ಗರ್ವದಿಂದ ತಿಳಿದವರಲ್ಲಿ ವಿಚಾರಿಸಿ ತಿಳಿಯಲಾರರು. ಜನರಲ್ಲಿ ಪ್ರತಿಷ್ಠೆಯನ್ನು ಬೆಳೆಸುವುದಕ್ಕಾಗಿ ತಮ್ಮದೇ ಆದ ಮತದಿಂದ ಕರ್ಮಗಳನ್ನು ಮಾಡುವರು ॥೮೫॥ ಮಿಥ್ಯೆಯಾದ ಮಧುರ ಮಧುರ ಶಬ್ದಗಳಿಗೆ ಮೋಹಿತರಾಗುವರು. ಆ ಉಪಭೋಗಗಳಲ್ಲಿ ಸ್ವಲ್ಪಾದರೂ ಸುಖವಿರುವುದಿಲ್ಲ. ಅಂತಹ ಅಪ್ಸರಾದಿಗಳ ಇಚ್ಛೆಯಿಂದ ಐಹಿಕ ಮತ್ತು ಪಾರಲೌಕಿಕ ಭೋಗಗಳನ್ನು ಮಾಡುವರು ಮತ್ತು ಮಾಡಿಸುವರು ॥೮೬॥

ಯೇಥ ಭೋಗ ಭೋಗಾವೇ ಚೋಖಡೇ । ಆಣಿ ಪುಢೇ ಸ್ವರ್ಗಭೋಗ ಜೋಡೇ । ಯೇಣೇ ವಚನೇ ಬಾಪುಡೇ । ಯಾಗಾಕಡೇ ಧಾಂವತೀ ॥೮೭॥ ಕರ್ತಾ ಸರ್ವಸ್ವೇ ನಾಗವೋ । ಪರಿ ಆಚಾರ್ಯತ್ವ ಆಮ್ಹಾ ಯೇವೋ । ಐಶೀ ಯಾಂಚೀ ಬುದ್ಧಿ ಪಹಾ ಹೋ । ಯಾಗಪ್ರರೋಹೋ ಆರಂಭಿತೀ ॥೮೮॥ ಪಾವಾವಯಾ ಅತಿಪ್ರತಿಷ್ಠಾ । ನಾನಾ ಕರ್ಮಾಚ್ಯಾ ಕರ್ಮಚೇಷ್ಟಾ । ಕರೂನಿ ದಾವಿತೀ ಖಟಪಟಾ । ಕರ್ಮಾರಂಭು ಮೋಠಾ ಆರಂಭುನೀ ॥೮೯॥ ನಾ ತರೀ ಜೈಸಾ ಮದ್ಯಪಾನೀ । ಮದ್ಯರಸಾ ಅಮೃತ ಮಾನೀ । ಯಾ ವಚನಗೋಡಿಯಾ ಮದ್ಯಪಾನೀ । ಪ್ರವರ್ತಿಜೇ ಜನೀ ಸ್ವಾದಲಿಪ್ಸಾ ॥೯೦॥ ತೇ ಸೇವಿಲಿಯಾ ಕಾಯ ಜೋಡೇ । ಥಿತೀ ಸಾವಧಾನತಾ ಬುಡೇ । ಮಗ ದುರ್ಭಗತ್ವ ರೋಕಡೇ । ಪಿಶಾಚತ್ವ ಗಾಢೇ ಅಂಗೀ ವಾಜೇ ॥೯೧॥ ತೈಸೇ ಕೇವಳ ಪತನಾತ್ಮಕ । ತ್ಯಾ ನಾಂವ ಮ್ಹಣತೀ ಸ್ವರ್ಗಸುಖ । ಜಾಣೋನಿ ಪ್ರವರ್ತತೀ ತೇ ಮೂರ್ಖ । ಫಳಕಾಮುಕ ಅಭಿಲಾಷೀ ॥೯೨॥ ಉಂಡಣೇ ಲಂಘೂ ನ ಶಕೇ ಭಿಂತೀಸೀ । ತರೀ ಚಢೋ ರಿಘತೇ ಸಾಯಾಸೀ । ಚಢತಾ ಪಡೇ ಆಪೈಸೀ । ತೇವೀ ಸ್ವರ್ಗಸುಖಾಸೀ ದೃಢ ಪತನ ॥೯೩॥ ಕರ್ಮಾಭಿನಿವೇಶಪಡಿಪಾಡೇ । ಕಾಮಲೋಭ ದೃಢ ವಾಢೇ । ತೇಣೇ ದಾಂಭಿಕ ಕರಣೇ ಘಡೇ । ಕ್ರೋಧಾಚೇ ಚಢೇ ಮಹಾಭರಿತೇ ॥೯೪॥

ರಜಸಾ ಘೋರಸಂಕಲ್ಪಾಃ ಕಾಮುಕಾ ಅಹಿಮನ್ಯವಃ । ದಾಂಭಿಕಾ ಮಾನಿನಃ ಪಾಪಾ ವಿಹಸಂತ್ಯಚ್ಯುತಪ್ರಿಯಾನ್ ॥೭॥

ಅರ್ಥ: ರಜೋಗುಣದ ಪ್ರಾಧಾನ್ಯದಿಂದ ಅವರ ಸಂಕಲ್ಪಗಳು ಘೋರವಾಗಿರುವುವು. ಇವರು ಅತಿಶಯವಾಗಿ ವಿಷಯೀಗಳಾಗಿರುವರು. ಹಾವಿನಂತೆ ಕ್ರೋಧಿಗಳು, ಮಹಾ ಡಾಂಭಿಕರು, ಹೀಗಿರುವ ಪಾಪಿಗಳು ಭಗವಂತನಿಗೆ ಪ್ರಿಯರಾದ ಭಕ್ತರಿಗೆ ಹಾಸ್ಯಮಾಡುವರು .

ತೇ ಕಾಯ ಕರಿತೀಲ ಬಾಪುಡೇ । ಶುದ್ಧ ಸತ್ವೇ ಸಾಂಡಿಲೇ ಪುಡೇ । ಮಗ ರಜೋಗುಣೇ ಕಾಮಾಕಡೇ । ಝೂಲೇ ಧಡಪುಡೇ ಅತಿಕಾಮೀ ॥೯೫॥ ತೇವ್ಹಾ ಉರ್ವಶೀಚ್ಯಾ ಅತಿಆವಡೀ । ಸ್ವರ್ಗಭೋಗಾಚೀ ಅತಿಗೋಡೀ । ಯಾಲಾಗೀ ಯಾಗಪರವಡೀ । ಪುಣ್ಯಾಚೀ ಜೋಡೀ ಜೋಡೂ ಧಾಂವೇ ॥೯೬॥ ತೇಥ ಮಂತ್ರತಂತ್ರದ್ರವ್ಯಶುದ್ಧೀ । ನಾಹೀ ಯಾಗಯಜನವಿಧೀ । ತೇಣೇ ಸ್ವರ್ಗ ನವ್ಹೇಚಿ ತ್ರಿಶುದ್ಧೀ । ಠಕಲೇ ದುರ್ಬುದ್ಧೀ ಅವಿಹಿತಾಚಾರೇ ॥೯೭॥ ತಯಾ ಅಲಬ್ಧಕಾಮಾಸಾಠೀ । ಸರ್ವಾಂಗೀ ಕ್ರೋಧು ಉಠೀ । ಜೇವೀ ಪಾರೇಪಾಕಾಸಾಠೀ । ಧರೀ ಕಡುವಟೀ ಆಂಬಿಲಕಾಂಜೀ ॥೯೮॥

ಇಲ್ಲಿ ಉತ್ತಮ ಭೋಗಗಳನ್ನು ಭೋಗಿಸುವರು ಮತ್ತು ಮುಂದೆ ಸ್ವರ್ಗಸುಖವು ನಿಶ್ಚಿತವಾಗಿ ಸಿಗುವುದೆಂಬ ವಚನಗಳಿಗೆ ಭುಲಾಯಿಸಿ ಪಾಪ, ಯಜ್ಞಗಳನ್ನು ಮಾಡುವವರ ಬೆನ್ನು ಹತ್ತುವರು ॥೮೭॥ ಕರ್ತಾ ಯಜಮಾನನು ಸಂಪೂರ್ಣವಾಗಿ ಮುಳುಗಿದರೂ ಚಿಂತೆ ಇಲ್ಲ, ಆದರೆ ತನ್ನ ಕಡೆಗೆ ಆಚಾರ್ಯಪದವಿ ಬರಬೇಕೆಂಬ ಬುದ್ಧಿಯು ಇವರದಾಗಿರುವುದು. ಸ್ವತಃ ತಮ್ಮ ಪ್ರತಿಷ್ಠೆಯು ಬೆಳೆಯುವುದಕ್ಕಾಗಿ ಇವರು ಯಜ್ಞಗಳನ್ನು ಮಾಡುವರು ॥೮೮॥ ತಮ್ಮ ಪ್ರತಿಷ್ಠೆಯು ಬೆಳೆಯಬೇಕೆಂದು ನಾನಾ ಪ್ರಕಾರದ ಕರ್ಮಗಳನ್ನು ಮಾಡುವರು. ಕರ್ಮಾರಂಭದ ದೊಡ್ಡ ಸಮಾರಂಭವನ್ನು ಮಾಡುವರು. ಬಹಳ ಸಾಹಸದಿಂದ ಜನರಲ್ಲಿ ಮೆರೆಯುವರು ॥೮೯॥ ಸೆರೆ ಕುಡಿಯುವ ಮನುಷ್ಯನು ಸೆರೆಗೆ ಅಮೃತವೆಂದು ತಿಳಿಯುವನು ಮತ್ತು ಸೆರೆ ಸೇವನೆಯನ್ನು ಚೆಲ್ಲದ ಮಾತಿನಿಂದ ಹೊಗಳಿ ಇತರರನ್ನೂ ಕುಡಿಯಲು ಹಚ್ಚುವನು ॥೯೦॥ ಆದರೆ ಇದರ ಸೇವನೆಯಿಂದ ಏನಾಗುವುದೆಂದು ಅರಿಯದೇ ತನ್ನ ಅರಿವು ಇಲ್ಲದಾಗಿ ಕೂಡಲೇ ದೌರ್ಭಾಗ್ಯವೂ ಪ್ರಾಪ್ತವಾಗಿ, ಶರೀರದಲ್ಲಿ ಪಿಶಾಚಿತನವು ಸಂಚರಿಸುವುದು ॥೯೧॥ ಅದರಂತೆ ಯಾವುದಕ್ಕೆ ಕೇವಲ ಪತನವಿದೆಯೋ, ಅದರ ಹೆಸರು ಸ್ವರ್ಗಸುಖವೆಂದು ನಾಮವಿದೆ. ಆದರೆ ಇದನ್ನು ಅರಿತರೂ ಸಹ ಮೂರ್ಖರು, ಲೋಭಿಯಾಗಿ ಫಲ ಇಚ್ಛೆಯ ಲಂಪಟರಾಗುವರು. ಇವರು ಇದನ್ನು ತಿಳಿದೂ ತಿಳಿದೂ ಈ ಕಾರ್ಯಕ್ಕೆ ಪ್ರವೃತ್ತರಾಗುವರು ॥೯೨॥ ಒಂದು ಹುಳವು ಗೋಡೆಯನ್ನು ಏರಿ ದಾಟಲಾರದು ಆದರೂ ಏರುವ ಪ್ರಯತ್ನಮಾಡಿ ಕೆಳಗೆ ಬೀಳುವುದು. ಅದರಂತೆ ಸ್ವರ್ಗಸುಖಕ್ಕೆ ಪತನವು ನಿಶ್ಚಿತವಾಗಿದೆ ॥೯೩॥ ಕರ್ಮದ ಆಸಕ್ತಿಯಿಂದ ಕಾಮ ಮತ್ತು ಲೋಭ ಇವು ಬೆಳೆಯುವುವು. ಇದರಿಂದ ಮನುಷ್ಯನು ಡಾಂಭಿಕನಾಗುವನು ಮತ್ತು ಈತನಿಗೆ ಕ್ರೋಧವು ಉಕ್ಕೇರುವುದು ॥೯೪॥

ಪಾಪ, ಅವರಾದರೂ ಏನು ಮಾಡಲು ಸಾಧ್ಯ? ಅವರ ಹೃದಯದಲ್ಲಿನ ಸತ್ವಗುಣವು ಇಲ್ಲದಾಗಿರುವುದು. ಆದ್ದರಿಂದ ರಜೋಗುಣದಿಂದ ಇವರು ಕಾಮ ವಿಷಯಗಳಲ್ಲಿ ಉತ್ಸುಕರಾಗಿ ಅತಿಶಯವಾಗಿ ಕಾಮುಕರಾಗಿರುವರು ॥೯೫॥ ಇದರಿಂದ ಇವರಿಗೆ ಉರ್ವಶೀಯಂಥ ಅಪ್ಸರೆಯರ ಅತ್ಯಂತ ಉತ್ಕಟೇಚ್ಛೆ ನಿರ್ಮಾಣವಾಗಿರುವುದು. ಸ್ವರ್ಗಸುಖದ ಅಪೇಕ್ಷೆಯು ಬೆಳೆಯುತ್ತಿರುವುದು. ಅದಕ್ಕಾಗಿ ಯಜ್ಞದ ಆರಂಭಮಾಡಿ ಪುಣ್ಯವನ್ನು ಬೆಳೆಸಿಕೊಳ್ಳಲು ಪ್ರಯತ್ನವನ್ನು ಮಾಡುತ್ತಿರುವರು ॥೯೬॥ ಆಗ ಅವರು ಮಂತ್ರಶುದ್ಧೀ, ದ್ರವ್ಯಶುದ್ಧೀ ಅಥವಾ ಯಜ್ಞದ ವಿಧಿಗಳನ್ನು ಸಹ ಲೆಕ್ಕಿಸುವುದಿಲ್ಲ. ಆದ್ದರಿಂದ ಸ್ವರ್ಗಪ್ರಾಪ್ತಿಯಂತು ಆಗುವುದಿಲ್ಲ. ಬದಲಾಗಿ ದುರ್ಬುದ್ಧಿಯ ಈ ಜನರು ಈ ಯಾವ ಅವಿಧಿಯ ಕೃತ್ಯದಿಂದ ಸ್ವತಃ ಮೋಸಕ್ಕೆ ಹೋಗುವರು ॥೯೭॥ ಗಂಜಿಯು ಸಂಪೂರ್ಣವಾಗಿ ನೆನೆದು ಹಳಸಿತೆಂದರೆ ಅದು ವಿಷವಾಗುವುದು. ಅದರಂತೆ ಕಾಮವು ಪೂರ್ಣಗೊಳ್ಳದಿದ್ದರೆ ಕ್ರೋಧವು ಅದರ ಅಂಗದಲ್ಲಿ ಸಂಚಾರವಾಗುವುದು ॥೯೮॥

ಜಂವ ಜಂವ ಪಿಕಿಜೇ ಕೋರಿಫಡೇ । ತಂವ ತಂವ ಕಡೂಪಣ ಗಾಢೇ । ತೈಸಾ ಕಾಮನಾಶಾಪುಢೇ । ಕ್ರೋಧ ವಾಢೇ ಅತ್ಯುಗ್ರ ॥೯೯॥ ಕ್ರೋಧ ಕಾಳಿಯಾ- ನಾಗ ಖರಾ । ದೇತು ದ್ವೇಷಾಚಾ ಫುಂಫಾರಾ । ಘಾಲೀ ಪೂಜ್ಯತೇಚ್ಯಾ ಆಕಾರಾ । ಧುಧುಃಕಾರಾ ಸಾಧುನಿಂದೇಚಾ ॥೧೦೦॥ ಐಸಾ ಕ್ರೋಧಾಚಾ ವಸೌಟಾ । ಹೋಯ ತಮಾಚಾ ಚೋಹಟಾ । ಮಗ ದಂಭಾಚೇ ನಾಣವಟಾ । ಹೀನಕಸಾಚಾ ಖೋಟಾ ವಿಕರಾ ಮಾಂಡೀ ॥೧೦೧॥ ಮಗ ಜೋ ಜೋ ಭೇಟೇ ಪ್ರಾಣಿಯಾ । ತ್ಯಾಸೀ ಅಭಿಚಾರಯೋಗಕ್ರಿಯಾ । ಲಾವೂನಿ ಬಾಹೇರ ಮುದ್ರಿಯಾ । ಪಾಪಾಚಾರೇ ಪಾಪಿಯಾ ಪ್ರವೃತ್ತಿ ಮಾಂಡೀ ॥೧೦೨॥ ಸ್ವಧರ್ಮಾಚಾ ಢಾಡೋವಾಡೇ । ಪ್ರತಿಪದೀ ಪಾಡಾ ಪಢೇ । ಅಧರ್ಮಾಚೀ ಖಾಣೀ ಉಘಡೇ । ಸಮೂಳ ಕುಡೇ ಕರ್ಮಾಚರಣ ॥೧೦೩॥ ತೇಣೇ ಪಾಪಾಚಾರ ಪಿಕೇ । ಗಗನಚುಂಬಿತ ಜಾಹಲೀ ಟೇಂಕೇ । ಮಗ ಅಧಮೋತ್ತಮ ಏಕೇ ತುಕೇ । ಘಾಲಿತೀ ಯಥಾಸುಖೇ ಅಧರ್ಮಘಾಲಣೇ ॥೧೦೪॥ ತೇಥ ಠಾಣೇ ದೇಊನಿ ಅಭಿಮಾನಾ । ವಾಢವಿತೀ ಜ್ಞಾನಾಭಿಮಾನಾ । ಮಗ ನಿಂದಿತೀ ಸಾಧುಜನಾ । ವಿಪುಳಾತೀ ಸಜ್ಜನಾ ಉಪಹಾಸಯುಕ್ತ ॥೧೦೫॥ ಜಗೀ ಸರ್ವತ್ರ ಪಾಹತೀ ದೋಷ । ತಥಾಪಿ ದೇಖಿಲ್ಯಾಹೀ ನಿರ್ದೋಷ । ತರೀ ಕರೂನಿಯಾ ಉಪಹಾಸ । ಕರಿತೀ ಸಾವಕಾಶ ಅಸದಾರೋಪೇ ॥೧೦೬॥ ಯಾಪರೀ ಅಭಿಮಾನವಿದಾ । ಪಾಪಬುದ್ಧೀಚೀ ದೃಢ ಬಾಧಾ । ಸಹಜಾನುವಾದೇ ಸದಾ । ಸಾಧುನಿಂದಾ ಅನುವಾದತೀ ॥೧೦೭॥ ಜೇ ಕಾ ಹರೀತೇ ಆವಡತೀ । ಜೇ ಸದಾ ಕರಿತೀ ಹರಿಭಕ್ತೀ । ತ್ಯಾಂತೇ ಸದಾ ಉಪಹಾಸಿತೀ । ಅನುವಾದತೀ ಗುಣದೋಷ ॥೧೦೮॥ ದ್ವಿಜ ಸ್ಮರತೀ ಹರಿನಾಮ । ತ್ಯಾ ನಾಂವ ಮ್ಹಣತೀ ಅಧರ್ಮ । ಐಕೋನಿ ಹರಿಕೀರ್ತನಸಂಭ್ರಮ । ಮ್ಹಣತೀ ಹೇ ಪರಮ ಮಹಾಪಾಪ ॥೧೦೯॥ ಐಸಾ ಜೋ ಹರಿನಾಮಾತೇ ನಿಂದೀ । ಹರಿಕೀರ್ತನೀ ದುರ್ಬುದ್ಧೀ । ತೋ ಖಳ ಜಾಣಾವಾ ತ್ರಿಶುದ್ಧೀ । ಭಜನಾಪವಾದೀ ದುರ್ಜನ ॥೧೧೦॥

ವದಂತಿ ತೇಽನ್ಯೋನ್ಯ ಮುಪಾಸಿತಸ್ತ್ರಿಯೋ ಗೃಹೇಷು ಮೈಥುನ್ಯಸುಖೇಶು ಚಾಶಿಷಃ ।
ಯಜಂತ್ಯ ಸೃಷ್ಟಾನ್ನ ವಿಧಾನದಕ್ಷಿಣಂ ವೃತ್ತ್ಯೈ ಪರಂ ಘ್ನಂತಿ ಪಶೂನತದ್ವಿದಃ ॥೮॥

ಅರ್ಥ: ವೇದಾಚರಣೆಯ ಪ್ರಾಪಂಚಿಕರು ಭಗವಂತನನ್ನು ಪೂಜಿಸುವುದನ್ನು ಬಿಟ್ಟು ಸ್ತ್ರೀ ಉಪಾಸನೆಯನ್ನು ಮಾಡುತ್ತಾರೆ ಹೀಗೆ ಅವರ ಮನಗಳೆಲ್ಲ ಕಾಮಜೀವನಕ್ಕೆ ಮೀಸಲಾಗಿವೆ. ಈ ಗೃಹಸ್ಥರು ಇಂತಹ ಚಂಚಲ ವರ್ತನೆಯನ್ನು ಪರಸ್ಪರವಾಗಿ ಹುರಿದುಂಬಿಸುತ್ತಾರೆ. ತಿಂದುಂಡು ದೇಹರಕಷಣೆಗೆ ಕರ್ಮಕಾಂಡೀಯ ಅಗತ್ಯವೆಂದು ತಿಳಿದು ಬ್ರಾಹ್ಮಣರಿಗೂ ಇತರ ಗಣ್ಯರಿಗೂ ದಾನ ಸಂತರ್ಪಣೆಗಳನ್ನು ಮಾಡದೇ ಅನಧಿಕೃತವಾದ ವಿಧಿಗಳನ್ನು ಆಚರಿಸುತ್ತಾರೆ. ಕುರಿ ಮೊದಲಾದ ಪ್ರಾಣಿಗಳನ್ನು ಕ್ರೂರವಾಗಿ ಬಲಿಕೊಡುತ್ತಾರೆ. ಈ ಕಾರ್ಯಗಳ ಫಲ ಶುಭವಲ್ಲವೆಂದು ಇವರು ಅರಿಯುವುದಿಲ್ಲ.

ಲೋಳೇಸರ ವನಸ್ಪತಿಯು ಹೇಗೆ ಹೇಗೆ ಹಣ್ಣಾಗುವುದೋ, ಹಾಗೆಯೇ ಅದು ಅತಿಶಯವಾಗಿ ವಿಷವಾಗುತ್ತಿರುವುದು. ಅದರಂತೆ ಕಾಮುಕನ ಕಾರ್ಯಕ್ಕೆ ಪ್ರತಿಬಂಧವಾದಂತೆಯೇ ಆತನ ಕ್ರೋಧವು ಭಯಂಕರವಾಗಿ ಬೆಳೆಯುವುದು ॥೯೯॥ ಕ್ರೋಧವು ನಿಜವಾಗಿಯೂ ಕಾಳಸರ್ಪವಾಗಿರುವುದು, ಕಾಲಿಯಾ ನಾಗದಂತಿರುವುದು. ಈತನು ಯಾವಾಗಲೂ ದ್ವೇಷದ ಫೂತ್ಕಾರ ಮಾಡುತ್ತಿರುವನು. ಸಾಧುಗಳ ನಿಂದೆಯನ್ನು ಬಿಡದೇ ಮಾಡುವನು ॥೧೦೦॥ ಕ್ರೋಧದ ಆಶ್ರಯವು ಹೇಗಿರುವುದೆಂದರೆ ಅಲ್ಲಿ ತಮೋಗುಣದ ನಾಲ್ಕು ದಾರಿ ಕೂಡಿರುವುದು, ದಂಭದ ಸರಾಫ ಅಂಗಡಿ ಇರುವುದು, ಅಲ್ಲಿ ಹೊಲಸಿನಿಂದ ಕೂಡಿದ ಬಂಗಾರದ ವ್ಯಾಪಾರವು ನಡೆದಿರುವುದು ॥೧೦೧॥ ಆಗ ಅಲ್ಲಿ ಯಾವ ಯಾವ ಮನುಷ್ಯರ ಭೇಟಿಯಾಗುವುದೋ ಅವರಿಗೆಲ್ಲ ಜಾರಣ, ಮಾರಣಗಳ ಪ್ರಯೋಗಗಳ ನಾದವನ್ನು ಹತ್ತಿಸಿ, ಅವರ ಕೈಯಿಂದ ಪಾಪದ ಆಚರಣೆಗಳನ್ನು ಮಾಡಿಸಿ, ಪಾಪದ ಪ್ರವೃತ್ತಿಯನ್ನು ಬೆಳೆಸುವರು ॥೧೦೨॥ ಬಹಳ ಪ್ರೀತಿಯಿಂದ ಸ್ವಧರ್ಮದ ಕೀರ್ತಿಯನ್ನು ಹಾಡಿ ಹೊಗಳುವರು, ಆದರೆ ಅಧರ್ಮದ ಖಣಿಯನ್ನೇ ತೆರೆಯುವರು. ಕಾರಣ ಇವರ ಎಲ್ಲ ಕರ್ಮಾಚರಣೆಗಳು ಅಸತ್ಯವಾಗಿರುವುವು ॥೧೦೩॥ ಇದರಿಂದ ಪಾಪಾಚರಣೆಗಳ ಬೆಳೆಯು ಅತಿಶಯವಾಗಿ ಬೆಳೆದು ನಿಲ್ಲುವುದು. ಅವು ಗಗನಚುಂಬಿಯಾಗಿ ಪರ್ವತಪ್ರಾಯ ರಾಶಿಯಾಗುವುದು. ಆಗ ಒಳ್ಳೆಯದು, ಕೆಟ್ಟದ್ದು ಒಂದೇ ತೂಕದಲ್ಲಿ ಅಧರ್ಮದ ತಕ್ಕಡಿಯಲ್ಲಿ ತೂಗಲ್ಪಡುವುದು ॥೧೦೪॥ ಅಲ್ಲಿ ಅಭಿಮಾನವು ತಾನು ಸ್ಥಾನ ಹಿಡಿದು ಕುಳಿತುಕೊಳ್ಳುವುದು. ಮತ್ತು ಜ್ಞಾನದ ಅಭಿಮಾನವನ್ನು ಬೆಳೆಸುವುದು. ಅದರಿಂದ ಇವರು ಸಾಧುಗಳ ನಿಂದೆಯನ್ನು ಮಾಡುವರು ಮತ್ತು ಸಜ್ಜನರ ಅಪಹಾಸ್ಯ ಮಾಡುವರು ॥೧೦೫॥ ಜಗತ್ತಿನ ಎಲ್ಲರಲ್ಲಿಯೂ ಇವರು ದ್ವೇಷವನ್ನೇ ಕಾಣುವರು. ಒಂದು ವೇಳೆ ಯಾರಾದರು ನಿರ್ದೋಷಿಯು ಕಂಡರೆ ಆತನ ತಮಾಷೆ ಮಾಡುವರು ಮತ್ತು ಆತನಲ್ಲಿ ಸುಳ್ಳು ಆರೋಪಗಳನ್ನು ಹೊರಿಸುವರು ॥೧೦೬॥ ಈ ಪ್ರಕಾರವಾಗಿ ಅಭಿಮಾನಿ ಪುರುಷರಿಗೆ ಪಾಪಬುದ್ಧಿಯ ದೃಢವಾದ ಬಾಧೆಯಾಗುವುದು. ಸಹಜವಾಗಿ ಮಾತನಾಡಿದರೂ ಅವರು ಸಾಧುಗಳ ನಿಂದೆಯನ್ನು ಮಾಡುವರು ॥೧೦೭॥ ಶ್ರೀಹರಿಯ ಪ್ರೀತಿಗೆ ಪಾತ್ರರಾದವರು ಯಾವಾಗಲೂ ಶ್ರೀಹರಿಯ ಭಕ್ತಿಯನ್ನು ಮಾಡುವರು. ಇವರನ್ನು ಇವರು ಯಾವಾಗಲೂ ಅಪಹಾಸ್ಯ ಮಾಡುವರು ಮತ್ತು ಇವರ ಗುಣದೋಷಗಳನ್ನು ಎತ್ತಿ ತೋರಿಸುವರು ॥೧೦೮॥ ಬ್ರಾಹ್ಮಣರು ಹರಿಯ ನಾಮಸ್ಮರಣೆಯನ್ನು ಮಾಡಹತ್ತಲು ಅದಕ್ಕೆ ಅಧರ್ಮ ಎನ್ನುವರು. ನಾಮಕೀರ್ತನದ ಗರ್ಜನೆ ಕೇಳಿದರೆ ಅದಕ್ಕೆ ಮಹಾಪಾಪ ಎನ್ನುವರು ॥೧೦೯॥ ಹೀಗೆ ಯಾರು ಹರಿನಾಮದ ನಿಂದೆಯನ್ನು ಮಾಡುವರೋ, ಹರಿಕೀರ್ತನ ವಿಷಯಕ್ಕೆ ದುರ್ಬುದ್ಧಿಯನ್ನು ಧರಿಸುವರೋ, ಇವರು ನಿಜವಾಗಿಯೂ ದುಷ್ಟರು ಮತ್ತು ಭಜನವೈರಿ ದುರ್ಜನರೆಂದು ತಿಳಿಯಬೇಕು ॥೧೧೦॥

ಸ್ತ್ರೀಕಾಮೇ ಅತಿಕಾಮುಕ । ಮೈಥುನಾಪರತೇ ನಾಹೀ ಸುಖ । ಯೇಣೇ ಭ್ರಮೇ ಕಾಮಮೂರ್ಖ । ಸ್ತ್ರಿಯಾ ಅವಶ್ಯಕ ಉಪಾಸಿತೀ ॥೧೧೧॥ ಯಾಪರೀ ಮಂದಬುದ್ಧೀ । ಕೈಸೇ ಸಂವಾದತೀ ಶಬ್ದೀ । ಮನುಷ್ಯಜನ್ಮೇ ಹೇಚಿ ಸಿದ್ಧೀ । ನಾನಾ ಭೋಗವಿಧೀ ಭೋಗಾವ್ಯಾ ಸ್ತ್ರಿಯಾ ॥೧೧೨॥ ಜೇ ಸ್ತ್ರೀಭೋಗೀ ಸದ್ಯಸುಖ । ತೇ ತ್ಯಾಗವಿತೀ ತೇ ಅತಿಮೂರ್ಖ । ವೈರಾಗ್ಯಮಿಸೇ ಲೋಕ । ಠಕಿಲೇ ದೇಖ ಮಹಾಮೂಢೀ ॥೧೧೩॥ ಸಾಂಡೂನಿ ಗೃಹಭೋಗ ಅಂಗನಾ । ಜಯಾ ವೈರಾಗ್ಯೇ ಉದ್ಭಟ ಭಾವನಾ । ತೇ ನಿಜಕರ್ಮೇ ದಂಡಿಲೇ ಜಾಣಾ । ನಾಗವೂನಿ ವನಾ ದವಡಿಲೇ ದೈವೇ ॥೧೧೪॥ ಕಾಯ ಗೃಹಾಶ್ರಮೀ ದೇವ ನಸೇ । ಮಗ ವನಾ ಧಾಂವತಾತೀ ಪಿಸೇ । ಸಾಚಚಿ ದೇವ ವನೀ ವಸೇ । ತರೀ ಕಾ ಮೃಗ ಸಸೇ ನ ತರತೀ ವ್ಯಾಘ್ರ ॥೧೧೫॥ ಘಾಲೋನಿಯಾ ಆಸನೇ । ದೇವೋ ಭೇಟತಾ ಜರೀ ಧ್ಯಾನೇ । ತರೀ ಬಕಾಚೀ ಪಾಳಿಂಗಣೇ । ಕಾ ಪಾ ತತ್ಕ್ಷಣೇ ನುದ್ಧರತೀ ॥೧೧೬॥ ಏಕಾಂತ ರಹಿವಾಸ ವಿವರೀ । ತೇಥಚಿ ಭೇಟತಾ ಶ್ರೀಹರೀ । ತರೀ ನ ತರೋನಿಯಾ ಉಂದಿರೀ । ಕಾ ಪಾ ಘರೋಘರೀ ಚಿಂವತಾತೀ ॥೧೧೭॥ ದೇವೋ ಸರ್ವಜ್ಞ ಚೋಖಡಾ । ತೇಣೇ ಪಶುಪಕ್ಷಿಯಾ ಕೇಲಾ ಜೋಡಾ । ತೋಹೀ ಲೋಕೀ ಮಾನೂನಿಯಾ ವೇಡಾ । ತ್ಯಾಗಾಚಾ ಗಾಥಾ ಪಾಡಿಲಾ ಮೋಳಾ ॥೧೧೮॥ "ಆನಂದಾ ಉಪಸ್ಥ ಏಕಾಯತನ" । ಹೇ ದೇವಾಚೇ ವೇದವಚನ । ತೇಹೀ ನ ಮಾನೂನಿ ಅಜ್ಞಾನ । ತ್ಯಾಗಾಚೇ ಸಂಪೂರ್ಣ ಮಾಂಡಿತೀ ಬಂಡ ॥೧೧೯॥ ಮೈಥುನೀ ಪರಮ ಸುಖ । ದೇವೇಚಿ ರಚಿಲೇ ದೇಖ । ತೇಹೀ ತ್ಯಾಗೋನಿಯಾ ಮೂರ್ಖ । ವೀತರಾಗೇ ಲೋಕ ಸನ್ಯಾಸೀ ಹೋತೀ ॥೧೨೦॥ ಜೇ ಜಗಾಮಾಜೀ ಕೇವಳ ಪಿಶೀ । ತೇ ಸ್ವಯೇ ಹೋತೀ ಸನ್ಯಾಸೀ । ದೇವೇ ದಂಡ ದೇಊನಿ ತ್ಯಾಂಸೀ । ಲಾವಿಲೇ ಭಿಕೇಸೀ ದಾರೋದಾರೀ ॥೧೨೧॥ ತ್ಯಾಗೋನಿಯಾ ನಿಜಸ್ತ್ರಿಯೇಸೀ । ಕರ್ಮತ್ಯಾಗೇ ಹೋತೀ ಸನ್ಯಾಸೀ । ತೋ ಸ್ತ್ರೀಶಾಪ ಬಾಧೀ ತ್ಯಾಂಸೀ । ಮಾಗತಾ ಭಿಕೇಸೀ ಪೋಟ ನ ಭರೇ ॥೧೨೨॥ ಹಾತಾವರೀ ಪಾವಲೇ ದಂಡ । ಖಾಂಡಮಿಶಾ ಕೇಲೇ ಮುಂಡ । ಹಿಂಡತೀ ಭಗವೀ ಗುಂಡಗುಂಡ । ಹಾ ಸ್ತ್ರೀಶಾಪೇ ವಿತಂಡ ವಿಟಂಬೂ ಕೇಲಾ ॥೧೨೩॥ ಘೇಊನಿಯಾ ದೋಹೀ ಹಾತೀ । ಉದಂಡ ಗಾಂಡೀಸೀ ಲಾವಿತೀ ಮಾತೀ । ತ್ರಿಕಾಳ ಜಳೀ ಬುಡವಿಜತೀ । ಐಸೀ ಸ್ತ್ರೀಶಾಪೇ ಖ್ಯಾತೀ ಲಾವಿಲೀ ತ್ಯಾಂಸೀ ॥೧೨೪॥

ಸ್ತ್ರೀ ವಿಷಯಕ್ಕೆ ಅತಿಶಯ ಕಾಮುಕರಾದ ಇವರು ಈ ಸುಖಕ್ಕಿಂತಲೂ ಅನ್ಯ ಸುಖವೇ ಇಲ್ಲವೆಂದು ತಿಳಿದು, ಈ ಕಾಮದ ಆಸಕ್ತಿಯಿಂದ ಮೂರ್ಖರಾದ ಜನರು ಸ್ತ್ರೀಯರ ಉಪಾಸನೆಯನ್ನು ಮಾಡುವರು ॥೧೧೧॥ ಈ ಪ್ರಕಾರದ ಮೂರ್ಖಜನರು ಶಬ್ದ ಪಾಂಡಿತ್ಯದಲ್ಲಿ ಚತುರರಾಗಿರುವರು. ಇವರು ಹೀಗೆ ಹೇಳುವರು, ಸ್ತ್ರೀಯರನ್ನು ನಾನಾ ಭೋಗವಿಧಿಗಳಲ್ಲಿ ಭೋಗಿಸುವುದಕ್ಕಾಗಿಯೇ ಈ ಮನುಷ್ಯ ಜನ್ಮವು ಒಂದು ಸಿದ್ಧಿಯಾಗಿರುವುದು ॥೧೧೨॥ ಸ್ತ್ರೀ ಭೋಗದಲ್ಲಿ ಸಿಗುವ ಸುಖವನ್ನು ಬಿಡಿಸಲಿಕ್ಕೆ ಹಚ್ಚುವವರು ಮೂರ್ಖರಾಗಿರುವರು. ಈ ಮೂರ್ಖರು ವೈರಾಗ್ಯದ ನೆಪಮಾಡಿ ಅನೇಕ ಜನರನ್ನು ಮೋಸಗೊಳಿಸುವರು ॥೧೧೩॥ ಸ್ತ್ರೀ, ಪುತ್ರ, ಗೃಹ, ಸಂಪತ್ತು ಇವುಗಳನ್ನು ಬಿಟ್ಟು ಯಾರಿಗೆ ಉತ್ಕಟ ವೈರಾಗ್ಯವು ಪ್ರಾಪ್ತವಾಗುವುದೋ ಅವರಿಗೆ ಅವರ ಪೂರ್ವಕರ್ಮಗಳಿಂದಲೇ ಶಿಕ್ಷೆ ಕೊಟ್ಟಿರುವುದು. ಇವರ ದೈವವೇ ಇವರನ್ನು ಅರಣ್ಯಕ್ಕೆ ಕಳಿಸುತ್ತಿರುವುದು ॥೧೧೪॥ ಗೃಹಾಶ್ರಮರ ಮನೆಯಲ್ಲಿ ಯಾವ ದೇವರಿರುವುದಿಲ್ಲವೇ? ಈ ಮೂರ್ಖರು ಅರಣ್ಯಕ್ಕೆ ಏಕೆ ಧಾವಿಸುತ್ತಿರಬಹುದು? ದೇವರು ನಿಜವಾಗಿಯೂ ಅರಣ್ಯದಲ್ಲಿದ್ದರೆ, ಚಿಗರೆ, ಮೊಲ, ಹುಲಿ ಇತ್ಯಾದಿ ಪಶುಗಳು ಉದ್ಧಾರ- ವಾಗುತ್ತಿರಲಿಲ್ಲವೆ? ॥೧೧೫॥ ಆಸನ ಹಾಕಿದರೆ ಮಾತ್ರ ದೇವರು ಸಿಗುವನು ಎಂದಿದ್ದರೆ ಬಕಪಕ್ಷಿಗಳ ಸರ್ವ ಹಿಂಡು ಉದ್ಧರಿಸಿಬಿಡುತ್ತಿದ್ದವು ॥೧೧೬॥ ಏಕಾಂತದಿಂದ ಗುಹೆಯಲ್ಲಿದ್ದರೆ ಮಾತ್ರ ದೇವರು ಭೇಟಿಯಾಗುವಂತಿದ್ದರೆ ಬಿಲದಲ್ಲಿರುವ ಇಲಿಗಳ ಉದ್ಧಾರವೂ ಆಗುತ್ತಿತ್ತು. ಇವು ಮನೆಯಿಂದ ಮನೆಗೆ ಚಿಂವುಗುಡುತ್ತ ತಿರುಗುತ್ತಿದ್ದಿಲ್ಲ ॥೧೧೭॥ ದೇವರು ಮಹಾ ಸರ್ವಜ್ಞನಿರುವನು. ಈತನು ಪಶುಪಕ್ಷಿಗಳಿಗೂ ಹೆಣ್ಣುಗಂಡು ಜೋಡಿ ಮಾಡಿರುವನು. ಹೀಗಿದ್ದರೂ ಪರಮೇಶ್ವರನ ಮಾತನ್ನೂ ಕೇಳದೇ ಸರ್ವಸಂಗ ಪರಿತ್ಯಾಗದ ದೊಡ್ಡಸ್ತಿಕೆಯನ್ನು ಮೆರೆಯಿಸುವರು ॥೧೧೮॥ ಅದಲ್ಲದೇ ಉಪಸ್ಥ ಇಂದ್ರಿಯವು ಇದೊಂದು ಸರ್ವ ಆನಂದದ ಒಂದು ಆಧಾರವಾಗಿದೆ ಎಂದು ದೇವರ ವೇದವಚನವಾಗಿರುವುದು. ಹೀಗಿದ್ದರೂ ಇದಕ್ಕೂ ಸುಳ್ಳು ಎಂದು ತಿಳಿದು ತ್ಯಾಗದ ದೊಡ್ಡ ಬಂಡಾಯವನ್ನೇ ಹೂಡುವರು ॥೧೧೯॥ ದೇವರೇ ಸ್ತ್ರೀಸಂಗದಲ್ಲಿ ಪರಮ ಸುಖವನ್ನು ಇಟ್ಟಿರುವುದರಿಂದ ಮೂರ್ಖಜನರು ಇದರ ತ್ಯಾಗವನ್ನು ಮಾಡಿ ಮತ್ತು ಎಲ್ಲ ಆಸಕ್ತಿ ತೊರೆದು ಸನ್ಯಾಸವನ್ನು ಸ್ವೀಕರಿಸಿ ಮನೆಬಿಟ್ಟು ಹೋಗುವರು ॥೧೨೦॥ ಜಗತ್ತಿನಲ್ಲಿ ಕೇವಲ ಹುಚ್ಚರಾದವರು ಮಾತ್ರ ಸ್ವತಃ ಸನ್ಯಾಸಿಯಾಗುವರು. ದೇವರೇ ಇವರನ್ನು ಮನೆಮನೆಗೆ ಹೋಗಿ ಭಿಕ್ಷೆ ಬೇಡುವ ಶಿಕ್ಷೆಯನ್ನು ಕೊಟ್ಟಿರುವನು ॥೧೨೧॥ ತನ್ನ ಹೆಂಡತಿಯನ್ನು ತ್ಯಜಿಸಿ, ಕರ್ಮಗಳನ್ನೆಲ್ಲವನ್ನೂ ಬಿಟ್ಟುಕೊಟ್ಟು ಸನ್ಯಾಸಿಯಾಗುವವನಿಗೆ ಸ್ತ್ರೀ ಶಾಪವು ಬಾಧಿಸಿ ಹೊಟ್ಟೆ ತುಂಬ ಭಿಕ್ಷೆಯೂ ದೊರೆಯುವುದಿಲ್ಲ ॥೧೨೨॥ ಕೈಯಲ್ಲಿ ದಂಡವನ್ನು ಧರಿಸುವರು, ಗಡ್ಡಮೀಸೆಗಳನ್ನು ಬೋಳಿಸಿಬಿಡುವರು, ಕ್ಯಾವಿ ವಸ್ತ್ರಗಳನ್ನು ಹೊದ್ದುಕೊಳ್ಳುವರು.ಸ್ತ್ರೀ ಶಾಪದಿಂದಲೇ ಇವರಿಗೆ ಇಂತಹ ವಿಲಕ್ಷಣವಾದ ಅವಮಾನಕಾರಕ ಸ್ಥಿತಿಯಾಗಿರುವುದು ॥೧೨೩॥ ಸ್ತ್ರೀ ಶಾಪದಿಂದಲೇ ಇವರು ಎರಡೂ ಕೈಗಳಲ್ಲಿ ಮಣ್ಣು ತೆಗೆದುಕೊಂಡು ಕುಂಡಿಗೆ ಹಚ್ಚಿಕೊಳ್ಳುವರು. ದಿನ ಒಂದಕ್ಕೆ ಮೂರು ವೇಳೆ ನೀರಿನಲ್ಲಿ ಮುಳುಗುವರು ॥೧೨೪॥

ಲಂಗೋಟೀ ಲಾವಿಲೀ ಗಾಂಡೀಸೀ । ಝೋಳಿ ಲಾವಿಲೀ ಹಾತಾಸೀ । ತ್ಯಾಹೀವರೀ ದಂಡ ದೇಊನಿ ತ್ಯಾಸೀ । ಸ್ತ್ರೀಶಾಪೇ ಸನ್ಯಾಸೀ ಲಾವಿಲೇ ಭಿಕೇ ॥೧೨೫॥ ಸ್ತ್ರೀಸುಖಾಪರತೇ ನಾಹೀ ಸುಖ । ಸ್ತ್ರೀತ್ಯಾಗಾಪರತಾ ನಾಹೀ ದೋಖ । ಹೇಚಿ ನೇಣೋನಿಯಾ ಮೂರ್ಖ । ದಂಡಿಲೇ ಅನೇಕ ವೈರಾಗ್ಯತ್ಯಾಗೇ ॥೧೨೬॥ ಸ್ತ್ರೀಸಂಗೇವೀಣ ವಿವಿಧ ಭೋಗ । ತೇ ಜಾಣಾವೇ ಅತಿಉದ್ವೇಗ । ನಿಜಭಾಗ್ಯೇ ಜೇ ಸಭಾಗ್ಯ ಸಾಂಗ । ತೇ ಸ್ತ್ರೀಯೋಗೇ ಭೋಗ ಭೋಗಿತೀ ನಾನಾ ॥೧೨೭॥ ಹೇಚಿ ದೇವಾಚೇ ಪ್ರಸನ್ನ ಹೋಣೇ । ಜೇ ಸದಾ ಇಷ್ಟ ಭೋಗ ಭೋಗಣೇ । ತೇ ಭೋಗ ಜೇಣೇ ತ್ಯಾಗಣೇ । ತೇಚಿ ಕ್ಷೋಭಣೇ ದೇವಾಚೇ ॥೧೨೮॥ ಸ್ತ್ರಿಯಾದಿ ಭೋಗ ತ್ಯಾಗಿಲೇ ರೋಕಡೇ । ಪುಢೇ ನಿಜಮೋಕ್ಷ ಹೇ ವಚನ ಕುಡೇ । ಯಾಪರೀ ಭೋಳೇ ಲೋಕ ಬಾಪುಡೇ । ವೈರಾಗ್ಯವಾದೇ ಫುಡೇ ನಾಡಿಲೇ ಯೇಥ ॥೧೨೯॥ ಐಸಐಸಿಯಾ ಅನುವಾದಾ । ಕರಿತೀ ಪರಸ್ಪರೇ ಸಂವಾದಾ । ಮ್ಹಣತೀ ತ್ಯಾಗಾಚೀ ಬುದ್ಧಿ ಕದಾ । ಆಮ್ಹಾಸೀ ಗೋವಿಂದಾ ದೇಊ ನಕೋ ॥೧೩೦॥ ತ್ಯಾಗ ಕರೋನಿ ಭೀಕ ಮಾಗಣೇ । ಯಾಪರೀಸ ಭಲೇ ಮರಣೇ । ಮುಕ್ತಿ ದೇಖಿಲೀ ನಾಹೀ ಕೋಣೇ । ಆಪದಾ ಭೋಗಣೇ ಜಗ ದೇಖೇ ॥೧೩೧॥ ಕೋಣಾಸೀ ತರೀ ಮುಕ್ತೀ । ಕೋಣೇ ತರೀ ದೇಖಿಜೇತೀ । ತರೀ ತೇ ಸಾಚ ಮಾನೂ ಯೇತೀ । ಮಿಥ್ಯಾ ವದಂತೀ ವೈರಾಗ್ಯತ್ಯಾಗಾ ॥೧೩೨॥ ಐಶೀ ಸದಾ ತ್ಯಾಗಾಚೀ ಕರೂನಿ ನಿಂದಾ । ಭೋಗ ಭೋಗಾವೇ ಮ್ಹಣತೀ ಸದಾ । ಐಸಐಶಿಯಾ ಆಶೀರ್ವಾದಾ । ದೇತೀ ಸದಾ ಸ್ವಾಧ್ಯಾಯಾಸೀ ॥೧೩೩॥ ಸ್ತ್ರೀಸುಖ ಪರಮ ಮಾನೂನ । ಸ್ವಯೇ ಸದಾ ಹೋತೀ ಸ್ತ್ರೈಣ । ಮಗ ಜಾಗ್ರತೀ ಸುಷುಪ್ತಿ ಸ್ವಪ್ನ । ಸ್ತ್ರಿಯೇಚೇ ಧ್ಯಾನ ಅಹರ್ನಿಶೀ ॥೧೩೪॥ ನಾಹೀ ಸದ್ಗುರೂಚೇ ಭಜನ । ನಾಹೀ ವೃದ್ಧಾಸೀ ಪೂಜನ । ನಾಹೀ ಅತಿಥೀಸೀ ಅನ್ನ । ಸ್ತ್ರೀಆಧಿನ ಸರ್ವಸ್ವೇ ॥೧೩೫॥ ಸ್ತ್ರೀಯೇಚೇ ದುಖವೂ ನೇದಿ ಮನ । ಕದಾ ನುಲ್ಲಂಘೀ ಸ್ತ್ರೀಯೇಚೇ ವಚನ । ನಿತ್ಯ ಸ್ತ್ರಿಯೇಚೇ ಅನುಸಂಧಾನ । ಸದ್ಭಾವೇ ಉಪಾಸನ ಸ್ತ್ರಿಯೇಚೇ ಸದಾ ॥೧೩೬॥ ನಾಹೀ ಕುಳದೇವತಾ ಕುಳವೃತ್ತೀ । ನಾಹೀ ಪಿತಾ – ಮಾತಾ ಸದ್ಗುರುಭಕ್ತೀ । ಸಂಪತ್ತಿ ವೋಪೀ ಸ್ತ್ರಿಯೇಹಾತೀ । ಆಪಣ ಸರ್ವಾರ್ಥೀ ತೀಆಧೀನ ವರ್ತೇ ॥೧೩೭॥ ತೇ ಸ್ತ್ರೀಭೋಗ ಭೋಗಾವಯಾಸೀ । ಧನಾರ್ಜನ ಅರ್ಜಾವಯಾಸೀ । ಯಾಗು ಆರಂಭೀ ಜೀವಿಕೇಸಿ । ಕೇವಳ ದಂಭೇಸೀ ಉದರಾರ್ಥ ॥೧೩೮॥

ಮರ್ಯಾದೆಗೆ ಲಂಗೋಟಿ ತೊಡುವವರು. ಕೈಯಲ್ಲಿ ಜೋಳಿಗೆ ಮೇಲಾಗಿ ದಂಡವನ್ನು ಧರಿಸುವರು. ಸ್ತ್ರೀಶಾಪದಿಂದ ಈ ರೀತಿಯಲ್ಲಿ ಸನ್ಯಾಸಿಗೆ ಭಿಕ್ಷೆ ಬೇಡಲು ಹಚ್ಚುವುದು ॥೧೨೫॥ ಸ್ತ್ರೀಸುಖದಂತಹ ಬೇರೆ ಸುಖವೇ ಇಲ್ಲ ಮತ್ತು ಸ್ತ್ರೀತ್ಯಾಗದಂತಹ ದೋಷವಿಲ್ಲ. ಇದನ್ನು ತಿಳಿಯದೇ ಅನೇಕ ಮೂರ್ಖ ಜನರು ವೈರಾಗ್ಯರೂಪದಿಂದ ಸರ್ವಸಂಗ ಪರಿತ್ಯಾಗ ಮಾಡಿ ಶಿಕ್ಷೆಗೆ ಒಳಗಾಗುವರು ॥೧೨೬॥ ಸ್ತ್ರೀ ಸಂಗ ಹೊರತಾದ ಇತರ ಎಲ್ಲ ಭೋಗಗಳು ಉದ್ವೇಗಕಾರಕಗಳಾಗಿವೆ ಎಂದು ತಿಳಿಯಬೇಕು. ಸುದೈವದಿಂದ ಭಾಗ್ಯವಂತರಾದವರು ಸ್ತ್ರೀ ಸಂಗತಿಯಿಂದ ಅನೇಕ ಪ್ರಕಾರದ ಸುಖವಿಲಾಸಗಳನ್ನು ಭೋಗಿಸುವರು ॥೧೨೭॥ ಸದಾಸರ್ವದಾ ಇಚ್ಛಿತ ಭೋಗಗಳು ಭೋಗಿಸಲಿಕ್ಕೆ ದೊರೆಯುವುದು. ಇದು ದೇವರ ಪ್ರಸಾದವಾಗಿರುವುದು. ಮತ್ತು ಈ ಭೋಗಗಳನ್ನು ತ್ಯಜಿಸುವುದು ಇದು ದೇವರ ಕ್ಷೋಭೆಯಾಗಿರುವುದು ॥೧೨೮॥ ಪ್ರತ್ಯಕ್ಷವಾಗಿ ಸಿಗುವ ಸ್ತ್ರೀಯರ ಭೋಗಗಳನ್ನು ಒಗೆದು, ಈಗ ನಮಗೆ ಮೋಕ್ಷವು ಸಿಗುವುದು ಎಂಬ ವಚನವು ಪೂರ್ಣ ಸುಳ್ಳಾಗಿರುವುದು. ಈ ಪ್ರಕಾರವಾಗಿ ಧೂರ್ತಜನರು ವೈರಾಗ್ಯವಾದದಿಂದ ಭೋಳೇ ಜನರಿಗೆ ಮೋಸಗೊಳಿಸಿರುವರು ॥೧೨೯॥ ಈ ಪ್ರಕಾರವಾಗಿ ಇವರು ಚರ್ಚೆಗಳನ್ನು ಮಾಡುವರು. ಮತ್ತು ಹೇ ಗೋವಿಂದನೇ, ನಮಗೆ ತ್ಯಾಗದ ಬುದ್ಧಿಯನ್ನು ಎಂದೂ ಕೊಡಬೇಡ ಎಂದು ಬೇಡಿಕೊಳ್ಳುವರು ॥೧೩೦॥ ತ್ಯಾಗವನ್ನು ಮಾಡಿ ಭಿಕ್ಷೆಯನ್ನು ಬೇಡುವುದಕ್ಕಿಂತ ಮರಣವೇ ಲೇಸು. ಮುಕ್ತಿಯನ್ನು ಯಾರೂ ನೋಡಿರುವುದಿಲ್ಲ. ಆದರೆ ಸನ್ಯಾಸನಂತರ ಆಗುವ ದುಃಖ ಮಾತ್ರ ಎಲ್ಲರೂ ನೋಡಿರುವರು ॥೧೩೧॥ ಯಾರಿಗಾದರೂ ಮುಕ್ತಿಯಾಗಿದ್ದರೆ ಅದು ಎಲ್ಲರಿಗೂ ಕಾಣುತ್ತಿತ್ತು. ಆಗ ಅದನ್ನು ನಿಜವೆಂದು ತಿಳಿಯಬಹುದಾಗಿತ್ತು. ಆದರೆ ಅದು ಸರ್ವಥಾ ಹಾಗಿರುವುದಿಲ್ಲ. ಅಂದಮೇಲೆ ವೈರಾಗ್ಯದಿಂದ ಸರ್ವವನ್ನೂ ತ್ಯಾಗ ಮಾಡಬೇಕೆಂಬ ವಿಚಾರವು ವ್ಯರ್ಥವು ॥೧೩೨॥ ಈ ಪ್ರಕಾರವಾಗಿ ತ್ಯಾಗದ ನಿಂದೆ ಮಾಡುತ್ತ ಯಾವಾಗಲೂ ಭೋಗಗಳನ್ನು ಭೋಗಿಸಬೇಕು ಎಂದೇ ಹೇಳುತ್ತಿರುವರು ಈ ಪ್ರಕಾರದ ತಮ್ಮ ಆಶೀರ್ವಾದಗಳನ್ನು ತಮ್ಮ ಸಮಾನರಾದವರಿಗೆ ಯಾವಾಗಲೂ ಕೊಡುತ್ತಿರುವರು ॥೧೩೩॥ ಸ್ತ್ರೀ ಸುಖವೇ ಶ್ರೇಷ್ಠವೆಂದು ಭಾವಿಸಿ ಸದಾ ಸ್ತ್ರೀ ಲಂಪಟರಾಗುವರು ಮತ್ತು ಜಾಗೃತ, ಸ್ವಪ್ನ, ಸುಷುಪ್ತಿಯ ಸರ್ವಕಾಲದಲ್ಲಿಯೂ ಸ್ತ್ರೀ ಚಿಂತನವನ್ನೇ ಮಾಡುವರು ॥೧೩೪॥ ಇವರು ಸದ್ಗುರುಗಳ ಭಜನೆಯನ್ನೂ ಮಾಡುವುದಿಲ್ಲ. ವೃದ್ಧರ ಪೂಜೆಯನ್ನೂ ಮಾಡುವುದಿಲ್ಲ. ಅತಿಥಿಗಳವರಿಗೆ ಅನ್ನ ಕೊಡುವುದಿಲ್ಲ. ಸರ್ವ ಪ್ರಕಾರಗಳಿಂದ ಸ್ತ್ರೀಯ ಆಧೀನರಾಗಿ ಇರುವರು ॥೧೩೫॥ ಸ್ವಸ್ತ್ರೀಯ ಮನವನ್ನು ಎಂದೂ ನೋಯಿಸಲಾರರು, ಆಕೆಯ ಮಾತನ್ನು ಎಂದೂ ಮೀರಲಾರರು. ನಿತ್ಯದಲ್ಲಿಯೂ ಆಕೆಯ ಚಿಂತನವನ್ನೇ ಮಾಡುತ್ತಿರುವರು. ಮತ್ತು ಆಕೆಯ ಉಪಾಸನೆಯನ್ನೇ ಮಾಡುತ್ತಿರುವರು ॥೧೩೬॥ ಕುಲದೈವತ, ಕುಲಾಚಾರ, ಮಾತಾ, ಪಿತಾ, ಸದ್ಗುರು ಭಕ್ತೀ ಇವು ಯಾವುದನ್ನೂ ಮಾಡದೇ ಸರ್ವ ಸಂಪತ್ತನ್ನು ಸ್ತ್ರೀಗೆ ಅರ್ಪಣೆ ಮಾಡುವರು ॥೧೩೭॥ ಹೀಗಿರುವ ಸ್ತ್ರೀಲಂಪಟ ಜನರು ತಾವು ಆಕೆಯ ತಂತ್ರದಂತೆ ನಡೆಯುವರು. ಇವರು ಸ್ತ್ರೀಭೋಗಗಳನ್ನು ಭೋಗಿಸುವುದಕ್ಕಾಗಿ, ಧನ ಪ್ರಾಪ್ತಿ ಮಾಡಿಕೊಳ್ಳಲು ಮತ್ತು ಇದರಿಂದ ಉದರಪೋಷಣೆ ನಿಮಿತ್ತವಾಗಿ ಕೇವಲ ಡಾಂಭಿಕತನದಿಂದ ಯಜ್ಞವನ್ನು ಆರಂಭಿಸುವರು ॥೧೩೮॥

(ಪೂರ್ವ ಶ್ಲೋಕಾರ್ಥ:-) ಯಜಂತ್ಯಸೃಷ್ಟಾನ್ನವಿಧಾನದಕ್ಷಿಣಂ ವೃತ್ತ್ಯೈ ಪರಂಘ್ನಂತಿ ಪಶೂನತದ್ವಿದಃ ।

ಯಾಗೇ ವ್ಹಾವೀ ಸರ್ವಸಿದ್ಧಿ । ಹೇಹೀ ನಾಹೀ ದೃಢ ಬುದ್ಧಿ । ಲೋಕಡಿಯೇ ಜೀವಿಕಾವಧಿ । ಉಪಾಯ ತ್ರಿಶುದ್ಧೀ ಹಾಚಿ ಕೇಲಾ ॥೧೪೯॥ ಯಜ್ಞದಿಕ್ಷೇಚೀ ಪ್ರತಿಷ್ಠಾ । ತೇಣೇ ಪೂಜ್ಯ ಹೋಊನ ವರಿಷ್ಠಾ । ಅಗ್ರಪೂಜಾ ಮಾಝ್ಯಾ ವಾಂಟಾ । ಐಶಿಯಾ ಉತ್ಕಂಠಾ ಆದರೀ ಯಾಗು ॥೧೫೦॥ ಐಶಿಯಾ ನಾನಾ ವಿವಂಚನಾ । ಆಧೀ ಸಂಕಲ್ಪೂನಿ ಮನಾ । ಮಗ ಪ್ರವರ್ತೇ ಯಾಗಯಜನಾ । ಜೋಡಾವಯಾ ಧನಾ ಕೃತನಿಶ್ಚಯೋ ॥೧೫೧॥ ನ ಪಾಹೇ ವಿಧಿವಿಧಾನಾ । ನಾಹೀ ಆದರೂ ಮಂತ್ರೋಚ್ಚಾರಣಾ । ನ ಕರೀ ಅನ್ನಸಂಪಾದನಾ । ಕೋರಡೇ ಕಣಾ ಹವನ ಮಾಂಡೀ ॥೧೫೨॥ ಮೀ ಯಜ್ಞ ಕರಿತೋ ಅಂಗೇ । ಐಸೇ ಜಗಾಪಾಸೀ ಸಾಂಗೇ । ಆಣಿ ತೇಣೇ ಯಾಗಯೋಗೇ । ಚಾಲವೀ ಪ್ರಸಂಗೇ ಜೀವಿಕಾಯೋಗು ॥೧೫೩॥ ಸ್ವಯೇ ನೇಣತೀ ವಿಧಿವಿಧಾನಾ । ಆಣಿ ನ ಪುಸತೀ ಸಜ್ಞಾನಾ । ಪರೀ ಪಶೂಂಚಿಯಾ ಹನನಾ । ಪ್ರವರ್ತತೀ ಜಾಣಾ ಶಠ ನಷ್ಟ ದಂಭೇ ॥೧೫೪॥ ಮಗ ತೇಥಿಂಚಾ ಪುರೋಡಾಶ । ಸೇವಿತೀ ಯಥಾಸಾವಕಾಶ । ಆಮ್ಹೀ ಪವಿತ್ರ ಝಾಲೋ ನಿರ್ದೋಷ । ಐಸಾಹೀ ಉಲ್ಹಾಸ ಲಾಗತೀ ಕರೂ ॥೧೫೫॥ ಗೌಣತಾ ಆವಾಹನವಿಸರ್ಜನಾ । ತೇಥ ಕೈಚೀ ಪೂಜಾ ದಕ್ಷಿಣಾ । ಸತ್ಪಾತ್ರಾಚೀ ಅವಗಣನಾ । ಕರಿತೀ ಹೇಳಣಾ ಜ್ಞಾನಗರ್ವೇ ॥೧೫೬॥ ಕೇವಳ ಜೀವಿಕೇಚ್ಯಾ ಆಶಾ । ಕರೂ ಲಾಗತೀ ಪಶುಹಿಂಸಾ । ಆಮ್ಹೀ ಯಾಜ್ಞಿಕ ಯಾ ಆವೇಶಾ । ಪಿಟಿತೀ ಠಸಾ ತಿಹೀ ಲೋಕೀ ॥೧೫೭॥ ಕೇವಳ ಜೀವಿಕೇಚಿಯಾ ದುರಾಶಾ । ಅವಿಧೀ ಕರಿತೀ ಪಶುಹಿಂಸಾ । ಮಜ ದೋಷ ಹೋಈಲ ಐಸಾ । ಕಂಟಾಳಾ ಮಾನಸಾ ಕದಾ ನುಪಜೇ ॥೧೫೮॥

ಶ್ರಿಯಾ ವಿಭೂತ್ಯಾಽಭಿಜನೇನ ವಿದ್ಯಯಾ ತ್ಯಾಗೇನ ರೂಪೇಣ ಬಲೇನ ಕರ್ಮಣಾ ।
ಜಾತಸ್ಮಯೇನಾಂಧಧಿಯಃ ಸಹೇಶ್ವರಾನ್ ಸತೋಽವ ಮನ್ಯಂತಿ ಹರಿಪ್ರಿಯಾನ್ ಖಲಾಃ ।೯॥

ಅರ್ಥ :- ಧನವೈಭವ, ಪ್ರತಿಷ್ಠಿತ ಬಂಧುವರ್ಗ, ವಿದ್ಯೆ, ದಾನ, ಸೌಂದರ್ಯ, ಬಲ ಮತ್ತು ಕರ್ಮ ಇತ್ಯಾದಿಗಳಿಂದ ಅಹಂಕಾರಿಯಾಗಿ ಬುದ್ಧಿಯು ಕುರುಡಾಗುವುದು. ಇಂತಹ ಜನರು ಭಗವಂತನನ್ನು, ಆತನ ಭಕ್ತರನ್ನು ದೂಷಿಸುವರು.

ಯಾಪರೀ ವರ್ತತಾ ಸ್ಥಿತೀ । ತ್ಯಾಹೀವರೀ ಝಾಲಿಯಾ ಸಂಪತ್ತೀ । ತೈ ಗರ್ವಾಚಾ ಭದ್ರಜಾತೀ । ತೈಶಿಯಾ ಉನ್ನತೀ ಡುಲೋ ಲಾಗೇ ॥೧೫೯॥ ಕಾ ಲೇಂಡಿಯೇ ಆಲಾ ಲೋಂಢಾ । ವಾಹವೀ ವಾಳಲಿಯಾ ಲೇಂಡಾ । ಕಾ ಮರ್ಕಟಾಚಿಯಾ ತೋಂಡಾ । ಮದಿರೇಚಾ ಭಾಂಡಾ ಸಾಂಪಡೇ ಜೈಸಾ ॥೧೬೦॥ ತೈಸಾ ಮೀ ಏಕು ಜ್ಞಾತಾ ಪುಡಾ । ಮ್ಹಣೌನಿ ನಾಚೇ ತಡತಡಾ । ಸಜ್ಞಾನ ಆಮ್ಹಾ ಪುಢಾ । ಕವಣ ಬಾಪುಡಾ ಆನ ಆಹೇ ॥೧೬೧॥

ಯಜ್ಞದಿಂದ ತಮಗೆ ಸರ್ವ ಪ್ರಕಾರದ ಸಿದ್ಧಿ ಪ್ರಾಪ್ತವಾಗಬೇಕೆಂಬ ಉದ್ದೇಶವೂ ಈ ಡಾಂಭಿಕರ ಮನದಲ್ಲಿರುವುದಿಲ್ಲ. ಕೇವಲ ತಮ್ಮ ಉಪಜೀವನವಾಗಬೇಕೆಂದು ಯಜ್ಞವನ್ನು ಮಾಡುತ್ತಾರೆ ॥೧೪೯॥ ಯಜ್ಞದ ದೀಕ್ಷೆಯನ್ನು ತೆಗೆದುಕೊಳ್ಳುವುದು, ಯಜ್ಞಕಂಕಣವನ್ನು ಕೈಯಲ್ಲಿ ಕಟ್ಟಿಕೊಳ್ಳುವುದು ಹೀಗೆ ಮಾಡಿ ಜನರಲ್ಲಿ ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವ, ದೊಡ್ಡ ದೊಡ್ಡ ಜನರು ನಮಗೆ ಪೂಜ್ಯಭಾವದಿಂದ ಮನ್ನಿಸಲಿ, ಅಗ್ರಪೂಜೆಯ ಸ್ಥಾನದ ಲಾಭವೂ ಆದೀತು. ಹೀಗೆ ಉದ್ದೇಶಗಳನಿಟ್ಟುಕೊಂಡು ಇವರು ಯಜ್ಞದ ಆರಂಭ ಮಾಡುವರು ॥೧೫೦॥ ನಿರ್ವಾಹಗಳ, ಮತ್ತು ಪ್ರತಿಷ್ಠೆಯ ನಾನಾ ವಿಚಾರಗಳು ಅವರ ಮನದಲ್ಲಿರುವುವು. ಈ ವಿಚಾರಗಳಿಂದಲೇ ಯಜ್ಞಯಾಗಗಳು ಪ್ರಾರಂಭಿಸುವರು. ಪ್ರತಿಯೊಂದು ಕಾರ್ಯಗಳಿಗಾಗಿ ಭರಪೂರ ಹಣ ಕೂಡಬೇಕೆಂಬ ಬಯಕೆಗಳು ಅವರ ಮನದಲ್ಲಿರುವುದು ॥೧೫೧॥ ಶಾಸ್ತ್ರವಿಧಾನದತ್ತ ಇವರ ಲಕ್ಷವೇ ಇರುವುದಿಲ್ಲ. ಶುದ್ಧವಾಗಿ ಮಂತ್ರೋಚ್ಚಾರವನ್ನೂ ಮಾಡುವುದಿಲ್ಲ. ಅನ್ನವನ್ನು ಕುದಿಸದೇ ಒಣ ಧಾನ್ಯಗಳ ಹವನವನ್ನು ಮಾಡುವರು ॥೧೫೨॥ ನಾನು ಯಜ್ಞವನ್ನು ಮಾಡುತ್ತಿರುವೆನು ಎಂದು ತಾನೇ ಸ್ವತಃ ಸರ್ವ ಜನರಿಗೆ ಹೇಳುತ್ತ ಹೊರಡುವನು. ಮತ್ತು ಯಜ್ಞದ ನಿಮಿತ್ತದಿಂದ ತನ್ನ ಯೋಗಕ್ಷೇಮವನ್ನು ನಡೆಸುವನು ॥೧೫೩॥ ಇವರು ಸ್ವತಃ ಶಾಸ್ತ್ರವಿಧಿಗಳನ್ನು ತಿಳಿಯದವರಾದರೂ ತಿಳಿದಿರುವವರ ಸಲಹೆಗಳನ್ನು ಕೇಳುವುದಿಲ್ಲ. ಆದರೆ ಪಶುವಿನ ಬಲಿಯನ್ನು ಕೊಡಲು ಮಾತ್ರ ಇವರು ಪ್ರವೃತ್ತರಾಗುವರು ॥೧೫೪॥ ಯಜ್ಞದಲ್ಲಿನ ಪುರೋಡಾಶ ಎಂದರೆ ಮೃತ ಪಶುವನ್ನು ಸಂತೋಷವಾಗಿ ತಿನ್ನುವರು ಮತ್ತು ನಾವು ನಿರ್ದೋಷಿಗಳು ಹಾಗೂ ಪವಿತ್ರರಾದೆವು ಎಂದು ಅಹಂಕಾರದಿಂದ ಮೆರೆಯುವರು ॥೧೫೫॥ ದೇವರ ಆವಾಹನೆ, ವಿಸರ್ಜನೆ ಇವು ಸಹ ಇವರಿಗೆ ಗೌಣವಾಗುತ್ತಿರಲು ಅಲ್ಲಿ ಅದೆಂತಹ ಪೂಜೆ? ಎಲ್ಲಿಯ ದಕ್ಷಿಣೆ? ಅಲ್ಲದೇ ಸತ್ಪಾತ್ರಗಳಿಗೆ ತುಚ್ಛವೆಂದು ಭಾವಿಸಿ ಜ್ಞಾನದ ಗರ್ವದಿಂದ ಅವುಗಳನ್ನು ನಿಂದಿಸುವರು ॥೧೫೬॥ ಕೇವಲ ಉಪಜೀವನದ ಆಶೆಯಿಂದ ಪಶುಹಿಂಸೆಯನ್ನು ಮಾಡುವರು ಮತ್ತು ನಾವು ಯಾಜ್ಞಿಕರಾಗಿರುವೆವು ಎಂದು ಡಂಗುರವನ್ನು ಸಾರುವರು ॥೧೫೭॥ ಕೇವಲ ತಮ್ಮ ಬದುಕಿನ ದುರಾಶೆಗಳಿಂದ ಅವಿಧಿಯಿಂದ ಹಿಂಸೆಯನ್ನು ಮಾಡುವರು. ಪಶುಹಿಂಸೆಯಿಂದ ನನಗೆ ಪಾಪ ತಟ್ಟೀತು ಎಂಬ ವಿಚಾರವೂ ಸಹ ಅವರ ಮನದಲ್ಲಿ ಬರುವುದಿಲ್ಲ ॥೧೫೮॥ ಈ ಸ್ಥಿತಿಯಿಂದ ಇರುತ್ತಿರಲು ಅದರಲ್ಲಿ ಪುನಃ ಸಾಕಷ್ಟು ಸಂಪತ್ತು ಕೂಡಿತೆಂದರೆ ಕೇಳವುದೇನು? ಇವರು ಗರ್ವದಿಂದ ಮದೋನ್ಮತ್ತರಾಗಿ ಆನೆಯಂತೆ ತೂಗಾಡುತ್ತಿರುವರು ॥೧೫೯॥ ಅಥವಾ ಹಳ್ಳಕ್ಕೆ ಪೂರವು ಬಂದರೆ ಅದರಲ್ಲಿ ಒಣ ಸೆಗಣಿಯು ತೇಲಿ ಹೋಗುವಂತೆ, ಇಲ್ಲವೇ ಮಂಗಕ್ಕೆ ಮದ್ಯದ ಪಾತ್ರೆಯನ್ನು ಬಾಯಿಗೆ ಹಚ್ಚಿದಂತೆ ॥೧೬೦॥ ಈ ರೀತಿಯಾಗಿ ನಾನೇ ಒಬ್ಬ ನಿಜವಾದ ಜ್ಞಾನಿಯು ಎಂದು ಹೇಳುತ್ತ ಮನ ಬಂದಂತೆ ಕುಣಿಯುತ್ತಿರುವನು. ನಮ್ಮ ಎದುರಾಳಿ ಇನ್ನೊಬ್ಬ ಯಾವನೂ ಜ್ಞಾನಿ ಇರುವುದಿಲ್ಲವೆಂದು ಅವನಿಗೆ ಅನಿಸುವುದು ॥೧೬೧॥

ಐಶಿಯಾಹೀವರೀ ಅದೃಷ್ಟತಾ । ರತ್ನೇ ಮೋತಿಲಗಾ ವಸ್ತುಜಾತಾ । ಗಜವಾಜಿನ್ಯಯಾನ ಪ್ರಾಪ್ತತಾ । ತೇಣೇ ಗರ್ವೇ ಇಂದ್ರಮಾಥಾ ಮೋಚೇ ಫೇಡೀ ॥೧೫೨॥ ಯಜ್ಞೀ ಯಾಗಸ್ವಾಹಾಕಾರೀ । ಇಂದ್ರ ಆಮುಚೀ ಆಶಾ ಕರೀ । ತ್ಯಾಚೀ ಆಮ್ಹಾ ಹೂನಿ ಥೋರೀ । ಕೈಶಾಪರೀ ಮಾನಾವೀ ॥೧೫೩॥ ಮಗ ಶಿಷ್ಯ - ಸುಹೃತ್ - ಸಜ್ಜನೀ । ಪರಿವಾರಿಲ್ಯಾ ಸೇವಕಜನೀ । ಮಜಸಮಾನ ತ್ರಿಭುವನೀ । ಸಮರ್ಥ ಕೋಣೇ ಅಸೇನಾ ॥೧೫೪॥ ಜೈಶೀ ಕಾ ಕಾಂಟೇಭೋವತೀ ಹರಳೀ । ತೈಶೀ ಶಿಷ್ಯಾಂಚೀ ಮಾಂದಿಯಾಳೀ । ತೇ ಮಹಿಮೇಚ್ಯಾ ಗರ್ವಮೇಳೀ । ಮಾನೀ ಪಾಯಾತಳೀ ಧ್ರುವಮಂಡಳ ॥೧೫೫॥ ಜೈಸೇ ವಿಂಚುವಾ ವಿಷ ಥೋಡೇ । ಪರೀ ಪ್ರಬಳ ವೇದನೇಸೀ ಚಡೇ । ತೇವೀ ವಿದ್ಯಾ ಥೋಡೀ ಪರಿ ಗಾಢೇ । ಗರ್ವಾಚೇ ಪುಢೇ ಅತಿಭರಿತೇ ॥೧೫೬॥ ತೋ ಅಜ್ಞಾನಾಮಾಜೀ ಸರ್ವಜ್ಞತಾ । ಮಿರವೀ ಆಪುಲೀ ಯೋಗ್ಯತಾ । ಜೇವೀ ಅಂಧಾರೀ ಖದ್ಯೋತಾ । ಸತೇಜತಾ ಝಗಮಗೀ ॥೧೫೭॥ ಅಲ್ಪಜ್ಞಾತಾ ವಿದ್ಯೇಸಾಠೀ । ವಾಚಸ್ಪತೀ ನಾಣೇ ದೃಷ್ಟೀ । ಜೇವೀ ಮುಂಗೀ ಪಾಂಖಾಸಾಠೀ । ಗರುಡಾಚೇ ಪೃಷ್ಠೀ ಪಾಯ ದೇವೋ ಪಾಹೇ ॥೧೫೮॥ ನಿಖಿಳ ತಾಂಬಿಯಾಚೇ ನಾಣೇ । ದೇವೋ ರಿಘೇ ದಾಮೋಕ್ಯಾಯೇಸಣೇ । ತೇಣೇ ಆಪುಲೇನಿ ದಾತೇಪಣೇ । ಮಾನೀ ಶೇಂಗಣೇ ಬಳೀತೇ ॥೧೫೯॥ ಕರ್ಣ ದಾತೃತ್ವೇ ಮಾನಿಜೇ ಪುಡಾ । ತೋಹೀ ನ ಮಾಂಡೇ ಆಮ್ಹಾ ಪುಢಾ । ಪ್ರತ್ಯಹೀ ಭಾರಸುವರ್ಣಹುಡಾ । ಉಪಜೇ ತೇಣೇ ಗಾಢಾ ದಾತಾ ಕರ್ಣು ॥೧೬೦॥ ಆಮ್ಹೀ ನಿಜಾರ್ಜಿತೇ ವಿತ್ತೇ । ದಾನ ದೇವೋ ಸತ್ಪಾತ್ರಾತೇ । ಮಾ ದಾತೃತ್ವೇ ಕರ್ಣಾತೇ । ವಿಶೇಷು ಯೇಥೇ ತೋ ಕಾಯೀ ॥೧೬೧॥ ಸದಾ ಅಪಕಾರುಚಿ ಜೋಡೇ । ತ್ಯಾಸೀಹೀ ಅಲ್ಪ ಉಪಕಾರು ಘಡೇ । ಇತುಕಿಯಾಸಾಠೀ ನ ಉಕಲ ಪಡೇ । ಸರ್ವಸ್ವ ರೋಕಡೇ ಬುಡವೀ ಸದಾ ॥೧೬೨॥ ಏವಂ ಅಲ್ಪ ದಾನಾಸಾಠೀ । ದಾತೃತ್ವಾಚೇ ತ್ರಿಕುಟೀ । ಮೇಘಾಚ್ಯಾಪರೀ ಅತಿಉದ್ಭಟೀ । ಸ್ವಮುಖೇ ಉಠೀ ಗರ್ಜತು ॥೧೬೩॥ ಬರವೇಪಣಾಚೇನಿ ಪಾಂಗೇ । ಮದನಾಸೀ ವಿಟಾವೋ ಲಾಗೇ । ಸೌಂದರ್ಯ ಮಾರ್ಘೋನಿ ಅಂಗೇ । ದುಜೇ ಮಜಜೋಗೇ ಅಸೇನಾ ॥೧೬೪॥ ಕೀ ಕಾವಳಾ ಬರವೇಪಣಾಸಾಠೀ । ರಾಜಹಂಸಾ ನಾಣೇ ದಿಠೀ । ಕಾ ಆಸ್ವಲೀ ಮಾನೀ ಪೋಟೀ । ಮೀ ಹೀ ಗೋಮಟೀ ಸೀತೇಪರೀಸ ॥೧೬೫॥ ತೇವೀ ಬರವೇಪಣಾಚಾ ಜಾಣ । ಥೋರ ಚಢೇ ದೇಹಾಭಿಮಾನ । ಜೇವೀ ದೇಖೋನಿ ಹಿರವೇ ರಾನ । ವೈಸಾ ಸಂಪೂರ್ಣ ಉನ್ಮಾದೇ ॥೧೬೬॥

ಇದರ ಮೇಲಾಗಿ ದೈವವಶಾತ್ ನವರತ್ನಗಳು, ಮುತ್ತಿನ ಮಾಲೆಗಳು, ಆನೆಗಳು, ಕುದುರೆಗಳು ಪಾಲಖಿ ಇತ್ಯಾದಿ ಈ ಐಶ್ವರ್ಯದ ಪ್ರಾಪ್ತಿಯಾಯಿತೆಂದರೆ, ಇನ್ನೇನು? ತಾನು ಸ್ವತಃಕ್ಕೆ ಇಂದ್ರನಿಗಿಂತಲೂ ಶ್ರೇಷ್ಠನೆಂದುಕೊಳ್ಳುವನು ॥೧೫೨॥ ಯಜ್ಞಯಾಗಗಳಲ್ಲಿ ತನಗೆ ಸ್ವಾಹಾಕಾರವು ಸಿಗಬೇಕೆಂದು ಇಂದ್ರನು ನಮ್ಮನ್ನೇ ಇಚ್ಛಿಸುತ್ತಿರುವನು. ಆದ್ದರಿಂದ ನಮ್ಮ ಎದುರಿಗೆ ಇಂದ್ರನ ದೊಡ್ಡಸ್ತಿಕೆಯು ಅದೆಂತಹದ್ದು? ॥೧೫೩॥ ಶಿಷ್ಯರಲ್ಲಿ, ಇಷ್ಟಮಿತ್ರರಲ್ಲಿ, ಮತ್ತು ಇತರ ಸಜ್ಜನ ಮತ್ತು ಸೇವಕರಲ್ಲಿ "ಈ ಮೂರು ಲೋಕಗಳಲ್ಲಿ ನನ್ನಂತಹ ಶ್ರೇಷ್ಠರು ಯಾರೂ ಇಲ್ಲ" ಎಂದು ತನ್ನ ಪ್ರೌಢತ್ವವನ್ನು ಮೆರೆಯಿಸುವನು ॥೧೫೪॥ ಮುಳ್ಳಿನ ಗಿಡಗಳ ಸುತ್ತಲೂ ಹುಲ್ಲು ಹುಟ್ಟುವಂತೆ ಈತನ ಸುತ್ತಲೂ ಶಿಷ್ಯ ಸಮುದಾಯಗಳು ಕೂಡುವುವು. ಆ ವೇಳೆಯಲ್ಲಿ ಧ್ರುವಮಂಡಳವು ಸಹ ನನ್ನ ಕಾಲಿನಡಿ ಇರುವುದೆಂದು ಅವನು ತಿಳಿಯುವನು ॥೧೫೫॥ ಚೇಳಿನ ಕೊಂಡಿಯಲ್ಲಿ ವಿಷವು ಸ್ವಲ್ಪೇ ಇರುವುದು. ಆದರೆ ಅದರ ವೇದನೆಯು ಮಾತ್ರ ಭಯಂಕರವಾಗಿರುವುದು. ಅದರಂತೆ ಈತನಿಗೆ ವಿದ್ಯೆಯು ಅಲ್ಪವಾಗಿರುವುದು. ಆದರೆ ಗರ್ವವು ಮಾತ್ರ ಉಕ್ಕಿ ಚೆಲ್ಲುವುದು ॥೧೫೬॥ ಕತ್ತಲಲ್ಲಿ ಮಿಂಚಿನ ಹುಳವು ಮಿರಿ ಮಿರಿ ಮಿಂಚುವಂತೆ, ಈತನು ಅಜ್ಞಾನಿ ಜನರಲ್ಲಿ ತನ್ನ ಸರ್ವಜ್ಞತನ ಮತ್ತು ಪ್ರತಿಷ್ಠೆಗಳಿಂದ ಮೆರೆಯುತ್ತಿರುವನು ॥೧೫೭॥ ರೆಕ್ಕೆ ಬಂದ ಇರುವೆಯು ಗರುಡನ ತಲೆಯ ಮೇಲೆ ಕಾಲಿಡಬೇಕೆಂದು ಇಚ್ಛಿಸುವುದು. ಅದರಂತೆ ಈ ಅಲ್ಪಜ್ಞನು ತನ್ನ ಅಲ್ಪವಿದ್ಯೆಯ ಗರ್ವದಿಂದ ಬೃಹಸ್ಪತಿಗೂ ಲೆಕ್ಕಿಸುವುದಿಲ್ಲ ॥೧೫೮॥ ಒಂದು ತಾಮ್ರದ ದುಡ್ಡನ್ನು ದಾನ ಕೊಡಲು ಸಿದ್ಧನಾಗುವನು. ಮತ್ತು ತನ್ನ ಔದಾರ್ಯದಲ್ಲಿ ಬಲಿರಾಜನು ಸಹ ತನಗಿಂತಲೂ ಕಡಿಮೆ ಎಂದು ತಿಳಿಯುವನು ॥೧೫೯॥ ಕರ್ಣನಿಗೆ ಮಹಾದಾನೀ ಎನ್ನುವರು. ಆದರೆ ಆತನೂ ಸಹ ನಮ್ಮೆದುರು ತುಚ್ಛನೇ. ಏಕೆಂದರೆ ಕರ್ಣನು ದಿನಾಲೂ ಬಂಗಾರದ ಗಟ್ಟಿಗಳನ್ನೇ ದಾನಮಾಡುತ್ತಿದ್ದನು. ಆದ್ದರಿಂದಲೇ ಆತನು ಮಹಾದಾನಿ ಎಂದು ಪ್ರಸಿದ್ಧಗೊಂಡಿರುವನು ॥೧೬೦॥ ಆದರೆ, ನಾವು ಸ್ವಕಷ್ಟದಿಂದ ದ್ರವ್ಯವನ್ನು ಸಂಪಾದಿಸುತ್ತೇವೆ ಮತ್ತು ಅದನ್ನು ಸತ್ಪಾತ್ರಗಳಿಗೆ ದಾನ ಮಾಡುತ್ತೇವೆ. ಅಂದಮೇಲೆ ನಮಗಿಂತಲೂ ಕರ್ಣನ ದಾತೃತ್ವದಲ್ಲಿ ವಿಶೇಷವೇನಿದೆ? ॥೧೬೧॥ ಈತನ ಕೈಯಿಂದ ಯಾವಾಗಲೂ ಅಪಕಾರಗಳೇ ನಡೆಯುವುವು. ಅಕಸ್ಮಾತ್ತಾಗಿ ಸ್ವಲ್ಪ ಉಪಕಾರವೂ ಆಗುವುದು. ಆಗ ಕೇಳುವುದೇನು? ಇದರಿಂದ ತನ್ನ ತಿಳುವಳಿಕೆ ಕೆಟ್ಟು ಅದರ ಪುಣ್ಯವನ್ನು ಕಳೆದುಕೊಳ್ಳುವನು ॥೧೬೨॥ ಈ ಪ್ರಕಾರವಾಗಿ ಅಲ್ಪದಾನ ಮಾಡಿ ದಾತೃತ್ವದ ದೊಡ್ಡ ಗುಡ್ಡದ ಮೇಲೆ ಮೇಘವು ಗರ್ಜಿಸುವಂತೆ ಇವನು ತನ್ನ ಮುಖದಿಂದಲೇ ಬಹಳಷ್ಟು ವರ್ಣಿಸುವನು ॥೧೬೩॥ ತನ್ನ ಸೌಂದರ್ಯದ ಅಭಿಮಾನದಿಂದ ಈತನು ಮನ್ಮಥನಿಗೂ ಹೀನನೆನ್ನುವನು. ಎಲ್ಲ ಸೌಂದರ್ಯವು ನನ್ನಲ್ಲಿಯೇ ಇರುವುದು. ನನ್ನ ಸರಿಸಮಾನರು ಬೇರೆ ಯಾರೂ ಇಲ್ಲವೆಂದು ಹೇಳುವನು ॥೧೬೪॥ ಕಾಗೆಯು ತನ್ನ ಸೌಂದರ್ಯದಿಂದ ರಾಜಹಂಸಪಕ್ಷಿಗೆ ತುಚ್ಛ ಮಾಡಿದಂತೆ ಅಥವಾ ಕರಡಿಯು ತನ್ನ ಮನದಲ್ಲಿ ನಾನು ಸೀತೆಗಿಂತಲೂ ಬಲು ಚೆಲುವೆ ಎಂದಂತೆ ॥೧೬೫॥ ಅಥವಾ ಹಸಿರು ಹೊಲ, ನೆಲ ಕಂಡು ಕೋಣವು ಉನ್ಮಾದ ಹೊಂದುವಂತೆ ತನ್ನ ಸೌಂದರ್ಯದ ಅಭಿಮಾನವು ಉಕ್ಕೇರಿ ಸೊಕ್ಕಿನಿಂದ ತುಂಬಿರುವನು ॥೧೬೬॥

ಯಾವರೀ ಕಾಂಹೀ ಏಕ ಪರಾಕ್ರಮ । ಕೇಲಿಯಾ ನ ಮಾನೀ ತೀನಹೀ ರಾಮ । ಜೇವೀ ಗೋಗ್ರಹಣೀ ಸಂಗ್ರಾಮ । ಶೌರ್ಯಧರ್ಮ ಉತ್ತರಾಚಾ ॥೧೬೭॥ ಕಾ ಅಂಗೀಚೇನಿ ಮಾಜೇ । ರಾನಸೋರು ನ ಮಾನೀ ದುಜೇ । ತೈಸಾ ಬಳಾಚೇನಿ ಪುಂಜೇ । ಸ್ವಯೇ ಗರ್ಜೇ ಮುಸಮುಸಿತು ॥೧೬೮॥ ತೇ ಆಧೀಂಚ ಮ್ಹಣವಿತೀ ಸಜ್ಞಾನ । ತ್ಯಾಹೀವರೀ "ಯಾಜ್ಞಿಕ " ಹೇ ಮಹಿಮಾನ । ತೇ ಯಾಜ್ಞಿಕ ಕರ್ಮಾಚರಣ । ದಾವಿತೀ ಆಪಣ ಲೋಕಾಂಪ್ರತೀ ॥೧೬೯॥ ಆಲಿಯಾ ಧನಿಕ ಜನಾಪ್ರತೀ । ಆಪುಲೀ ಸ್ತವೀತಿ ಕರ್ಮಸ್ಥಿತೀ । ಮಗ ಕರ್ಮಮುದ್ರಾ ನಾನಾಯುಕ್ತೀ । ಸ್ವಯೇ ದಾವಿತೀ ಲೌಕಿಕಾ ॥೧೭೦॥ ಐಶಿಯಾಹೀ ಕರ್ಮಾಚಾರಾ । ಜ್ಞಾತೃತ್ವಾಚಾ ಗರ್ವ ಪುರಾ । ಜೇವೀ ದಿವಾಭೀತು ಅಂಧಾರಾ । ನಿಘೇ ಬಾಹೇರಾ ಘುಂಘಾತು ॥೧೭೧॥ ಅಜಾಂಚೇ ಲೇಂಡೋರೇ ಪೇಟೇ । ತೇಥ ಜ್ಯೋತಿಜ್ವಾಳಾ ಕದಾ ನುಮಟೇ । ಪರೀ ಧುರಕಟಲೇ ಧುಪಧುಪೀ ಮೋಠೇ । ಧುವೇ ಧಿಕಟೇ ದಿಗ್ಮಂಡಳ ॥೧೭೨॥ ಯಾಪರೀ ನಾನಾ ದಂಭೋಪಾಧೀ । ಅತಿಗರ್ವಾಂಚ್ಯಾ ಉನ್ಮಾದೀ । ಅಂಧ ಜಾಹಲೀ ಸದ್‌ಬುದ್ಧೀ । ತೋ ಸಾಧೂತೇ ನಿಂದೀ ಹರಿಹರಾಸಹಿತ ॥೧೭೩॥ ಜೇವೀ ದಾಟಲೇನಿ ಕಾವಿಳೇ । ದೃಷ್ಟೀತೇ ಕರೀ ಪಿಂವಳೇ । ಮಗ ದೇಖೋ ಲಾಗೇ ಸಕಳೇ । ಆಚೂಡಮೂಳೇ ಪೀತವರ್ಣ ॥೧೭೪॥ ತೇವಿ ನಿಂದೋಪಾಧೀ ಅತಿಗರ್ವೀ । ಮಂದ ಜಾಹಲೀ ಪ್ರಜ್ಞಾಛವೀ । ಮಗ ನಿರ್ದುಷ್ಟೀ ದೋಷ ಲಾವೀ । ಶುದ್ಧಾತೇ ಭಾವೀ ಅತಿಮಲಿನ ॥೧೭೫॥ ಜೋ ಯೋಗಿಯಾಂಚ್ಯಾ ಮುಗುಟೀ । ಜ್ಯಾತೇ ಮ್ಹಣತೀ ಧೂರ್ಜಟೀ । ತ್ಯಾಚೀ ಪಾಹತಾ ರಾಹಾಟೀ । ದಿಸೇ ಶೇವಟೀ ಅತಿಮಂದ ॥೧೭೬॥ ರಾಗೇ ಉಮಾ ಘೇತಲೀ ಆಗೀ । ಯಾಲಾಗೀ ಯಾಜ್ಞಿಕಾಚೇ ಶಿರ ಭಂಗೀ । ಸಕಾಮು ತರೀ ಮೋಹಿನೀ ಲಾಗೀ । ನಗ್ನ ಲಾಗವೇಗೀ ಪಾಠೀ ಲಾಗೇ ॥೧೭೭॥ ವಿಷ್ಣು ಸದಾಚಾ ಕಪಟೀ । ಕಾಂಹಿನ ದೇಖೋ ಶುದ್ಧ ದೃಷ್ಟೀ । ವೃಂದಾ ಪತಿವ್ರತಾ ಗೋಮಟೀ । ತೇಣೇ ಕೇಲೀ ಶೇವಟೀ ವ್ಯಭಿಚಾರಿಣೀ ॥೧೭೮॥ ಜೇಥ ವಿಷ್ಣು ವ್ಯಭಿಚಾರವಾಸೀ । ತೇ ವೃಂದೇಚ್ಯಾ ವೃಂದಾವನಾಪಾಶೀ । ಜಟ್ಯಾಳ ಗಾಂಠ್ಯಾಳ ಮಿಳತೀ ರಾಶೀ । ಕೇವೀ ಸಾಧುತ್ವ ತ್ಯಾಂಸೀ ಮಾನೂ ಆಮ್ಹೀ ॥೧೭೯॥ ಸಾಧು ಮಾನೂ ಸನತ್ಕುಮಾರ । ತ್ಯಾಂ ಸೀಹೀ ವೈಕುಂಠೀ ಕ್ರೋಧ ಘೋರ । ಶಬ್ದಾಸಾಠೀ ಹರಿಕಿಂಕರ । ಜಯವಿಜಯ ವೀರ ಶಾಪಿಲೇ ॥೧೮೦॥

ಇಷ್ಟಾದ ನಂತರ ಆತನ ಕೈಯಿಂದ ಯಾವುದಾದರೂ ಒಂದು ಪರಾಕ್ರಮ ಕಾರ್ಯವು ನಡೆಯಿತೆಂದರೆ ಸಾಕು, ಆಗ ಏನು ಹೇಳಬೇಕು? ಶ್ರೀರಾಮ, ಪರಶುರಾಮ, ಬಲರಾಮ, ಈ ಮೂರೂ ರಾಮರನ್ನು ತನ್ನೆದುರು ಏನೂ ಅಲ್ಲ ಎಂದು ಹೇಳುವನು. ಗೋಗ್ರಹಣದ ಯುದ್ಧದಲ್ಲಿ ಉತ್ತರಕುಮಾರನು ತೋರಿಸಿದ ಶೌರ್ಯದಂತೆ ॥೧೬೭॥ ಅಥವಾ ಕಾಡುಹಂದಿಯು ಯಾರಿಗೂ ಲೆಕ್ಕಿಸದಂತೆ ಈತನು ತನ್ನ ಬಲದ ಗರ್ವದಿಂದ ಸದಾವಕಾಲ ಬಡಬಡಿಸುತ್ತಾ ಹೂಂಕರಿಸುತ್ತಿರುವನು ॥೧೬೮॥ ಇಂತಹ ಜನರು ಮೊದಲೇ, ತಮ್ಮಿಂದ ತಾವೇ ಜ್ಞಾನಿಗಳೆಂದು ಹೇಳುತ್ತಿರುವರು. ಅವರಲ್ಲಿ ಕೆಲವರು "ಯಾಜ್ಞಿಕರು" ಎಂದು ಪ್ರಸಿದ್ಧರಾಗುವರು. ಆದ್ದರಿಂದ ಸ್ವತಃ ಯಜ್ಞಕರ್ಮಗಳನ್ನು ಮಾಡಿ ಜನರನ್ನು ರಂಜಿಸಿಬಿಡುವರು ॥೧೬೯॥ ತಮ್ಮನ್ನು ಭೇಟಿಯಾಗಲು ಯಾರಾದರೂ ಶ್ರೀಮಂತರು ಬಂದರೆ ಸಾಕು, ಇವರು ತಮ್ಮ ಕರ್ಮಸ್ಥಿತಿಗಳ ಬಡಾಯೀ ಕೊಚ್ಚುವರು. ಮತ್ತು ಲೌಕಿಕವನ್ನು ಬೆಳೆಸುವುದಕ್ಕಾಗಿ ಅನೇಕ ಯುಕ್ತಿ ಪ್ರಯುಕ್ತಿಗಳಿಂದ ಕರ್ಮಗಳ ಮುದ್ರೆಗಳನ್ನು ಅವುಗಳ ಪ್ರಕಾರಗಳನ್ನು ಜನರಿಗೆ ತೋರಿಸುವರು ॥೧೭೦॥ ಇಂಥ ಮಿಥ್ಯೆಯಾದ ಕರ್ಮಾಚಾರಗಳಲ್ಲಿಯೇ ಜ್ಞಾತೃತ್ವದ ಪೂರ್ಣ ಗರ್ವವು ತುಂಬಿರುವುದು. ಕತ್ತಲಾದರೆ ಸಾಕು, ಗೂಗಿಯು ಘೂಽ ಘೂಽ ಎಂದು ಒದರುತ್ತ ಹೊರಗೆ ಬೀಳುವಂತೆ ಇವರು ಅಜ್ಞಾನಿಗಳವರಲ್ಲಿ ತಮ್ಮ ಆತ್ಮಸ್ತುತಿ ಮಾಡುತ್ತಲಿರುವರು ॥೧೭೧॥ ಕುರಿಗಳ ಹಿಕ್ಕೆರಾಶಿಯನ್ನು ಬೆಂಕಿ ಹಚ್ಚಿದರೆ, ಅದರಿಂದ ಜ್ವಾಲೆಯು ಹೊರಡುವುದೇ ಇಲ್ಲ. ಆದರೆ ಹೊಗೆಯಿಂದ ಮಾತ್ರ ಹತ್ತು ದಿಕ್ಕುಗಳೂ ತುಂಬಿಬಿಡುವುವು ॥೧೭೨॥ ಅದರಂತೆ ಅನೇಕ ಪ್ರಕಾರದ ಡಾಂಭಿಕ ಕಾರ್ಯಗಳಿಂದ, ಮತ್ತು ಗರ್ವದ ಪ್ರಚಂಡವಾದ ಉನ್ಮಾದಗಳಿಂದ ಆತನ ಸದ್ಬುದ್ಧಿಯು ಕುರುಡಾಗಿ ಸಾಧುಗಳ ಅಷ್ಟೇ ಅಲ್ಲ, ಹರಿಹರರನ್ನೂ ಸಹ ನಿಂದಿಸುವನು ॥೧೭೩॥ ಕಾಮಾಲೆ ರೋಗದಿಂದ ಕಣ್ಣುಗಳು ಹಳದಿಯಾಗುವುವು. ಅದರಿಂದ ಎಲ್ಲ ಪದಾರ್ಥಗಳೂ ಹಳದಿಯಾಗಿಯೇ ಕಾಣುವುವು ॥೧೭೪॥ ಅದರಂತೆ ಇತರರ ನಿಂದೆ ಮತ್ತು ಗರ್ವ, ಇವು ಬುದ್ಧಿಯನ್ನು ಮಂದಗೊಳಿಸುವುವು. ಆದ್ದರಿಂದ ಈತನು ನಿರ್ದೋಷ ಜನರಲ್ಲಿಯೂ ದೋಷಗಳನ್ನು ಹೊರಿಸುವನು ಮತ್ತು ನಿಷ್ಪಾಪರಾಗಿರುವವರನ್ನು ಪಾಪಿಗಳೆಂದು ಭಾವಿಸುವನು ॥೧೭೫॥ ಯೋಗಿಗಳ ಮುಕುಟಮಣಿಯಾದ ಈತನಿಗೆ ಶಂಕರ ಎಂದು ಕರೆಯುವರು. ಈತನ ನಡವಳಿಕೆಗಳನ್ನು ನೋಡಿದರೆ ಕೊನೆಯಲ್ಲಿ ಈತನೂ ಸಹ ಮಲಿನನೇ ಎಂದು ತೋರುವುದು ॥೧೭೬॥ ಏನೆಂದರೆ, ಸಿಟ್ಟಿನಿಂದ ಉಮೆಯು ಅಗ್ನಿಯಲ್ಲಿ ಧುಮುಕಿದಳೆಂದು ತಿಳಿದು ಶಂಕರನು ಯಾಜ್ಞಿಕನ ಶಿರಚ್ಛೇದವನ್ನು ಮಾಡಿದನು ಮತ್ತು ಕಾಮದ ವಿಷಯದಲ್ಲಿ ನೋಡಬೇಕೆಂದರೆ, ಮೋಹಿನಿಯ ಹಿಂದೆ ದಿಗಂಬರನಾಗಿ ಧಾವಿಸಿದನು ॥೧೭೭॥ ವಿಷ್ಣೂ ಆದರೂ ಯಾವಾಗಲೂ ಕಪಟಿಯಾಗಿರುವನು. ಆತನಿಗೆ ಒಳ್ಳೆಯದೇನೂ ಕಾಣಿಸುವುದಿಲ್ಲ. ವೃಂದೆಯು ಎಂಥ ಪತಿವ್ರತೆ! ಆದರೆ ಕೊನೆಯಲ್ಲಿ ಈತನು ಆಕೆಗೆ ವ್ಯಭಿಚಾರಿಣಿಯನ್ನಾಗಿ ಮಾಡಿದನು ॥೧೭೮॥ ಹೀಗೆ ವ್ಯಭಿಚಾರಿಯಾಗಿರುವ ವಿಷ್ಣು ಯಾವ ವೃಂದೆಯ ವೃಂದಾವನದಲ್ಲಿ ವಾಸಿಸುವನು. ಆ ವನದಲ್ಲಿ ಜಡೆ ಗಡ್ಡಗಳನ್ನು ಬೆಳೆಸಿದ ಜನರು ಕೂಡಿಕೊಳ್ಳುವರು. ಇವರಿಗಾದರೂ ನಾವು ಸಾಧುಗಳೆಂದು ಹೇಗೆ ಮನ್ನಿಸಬೇಕು? ॥೧೭೯॥ ಸನತ್ಕುಮಾರರಿಗೆ ಸಾಧು ಎಂದು ಹೇಳಬೇಕೆಂದರೆ, ಅವರಿಗೆ ವೈಕುಂಠದಲ್ಲಿ ಬಹಳ ಕ್ರೋಧವು ಹುಟ್ಟಿತು. ಕೇವಲ ಒಂದು ಶಬ್ದಕ್ಕಾಗಿ ಶ್ರೀಹರಿಯ ಸೇವಕರಾದ ವೀರ ಜಯ ವಿಜಯರವರಿಗೆ ಇವರು ಶಾಪವನ್ನು ಕೊಟ್ಟರು ॥೧೮೦॥

ಶ್ರೇಷ್ಠ ಮಾನೂ ಚತುರಾನನ । ತೋಹೀ ನಿಲಾಗಚಿ ಹೀನ । ಉಮಾ ನೋವರೀ ದೇಖೋನ । ಮ್ಹಣತಾ "ಸಾವಧಾನ" ವೀರ್ಯ ದ್ರವಿಲೇ ॥೧೮೧॥ ನಾರದ ಬ್ರಹ್ಮ ಚಾರೀ ನಿಜಾಂಗೇ । ತೋಹೀ ಕೃಷ್ಣ ದಾರಾ ಸ್ವಯೇ ಮಾಗೇ । ತೋ ಕೃಷ್ಣೇ ಠಕವಿಲಾ ತತ್ತ್ರಸಂಗೇ । ಸಾಠೀ ಪುತ್ರ ವೇಗೇ ಸ್ನಾನೀ ವ್ಯಾಲಾ ॥೧೮೨॥ ಜ್ಯಾತೇ ಮ್ಹಣತೀ ಸತ್ಯ "ಧರ್ಮ" । ತೋಹೀ ಕೇವಳ ಅಧರ್ಮ । ಗೋತ್ರವಧಾಚಾ ಸಂಭ್ರಮ । ಹಾ ಪೂರ್ಣ ಅಧರ್ಮ ಧರ್ಮಾಸೀ ॥೧೮೩॥ ವ್ಯಾಸ ತರೀ ತೋ ಜಾರ ಪುತ್ರ । ತೇಣೇಂಚಿ ಕರ್ಮೇ ಪರಾಶರ । ದ್ವೇಷಿಯಾ ವಸಿಷ್ಠ-ವಿಶ್ವಾಮಿತ್ರ । ಅತಿಮತ್ಸರ ಪರಸ್ಪರೇ ॥೧೮೪॥ ಸಾಧು ಮ್ಹಣೋ ದುರ್ವಾಸ ಋಷೀ । ತೋ ಛಳೂ ಗೇಲಾ ಅಂಬರೀಷಾಸೀ । ಪಿತೃದ್ರೋಹ ಪ್ರಹ್ಲಾದಾಸೀ । ಸಾಧುತ್ವ ತ್ಯಾಸೀ ಕೇವೀ ಮಾನೂ ॥೧೮೫॥ ಏವಂ ವಾಖಾಣಿಲೇ ಪುರಾಣೀ । ತೇಹೀ ಸಾಚೇ ನ ಮಾನತೀ ಮನೀ । ಮಾ ಆತಾಂಚೇ ವರ್ತಮಾನೀ । ಸಾಧು ಕೋಣೀ ಅಸೇನಾ ॥೧೮೬॥ ಐಕೋನಿಯಾ ಅಚಾಟ ಗೋಷ್ಟೀ । ಯೇರೀ ಧಾಂವತೀ ಯೇರಾಪಾಠೀ । ಏಕ ಕರಿತೀ ತೋಂಡಪಿಟೀ । ಅತಿಚಾವಟೀ ಉದರಾರ್ಥ ॥೧೮೭॥ ಏಕ ಮುದ್ರಾವಂತ ಆಸನೀ । ಏಕ ಬಸತೀ ಬಕಧ್ಯಾನೀ । ಪರೀ ಸತ್ಯ ಮಾನೇ ಮನೀ । ಐಸಾ ಸಾಧು ಕೋಣೀ ಅಸೇನಾ ॥೧೮೮॥ ಐಶೀ ಆಪುಲಿಯಾಚಿ ಯುಕ್ತೀ । ಸಾಕ್ಷೇಪೇ ಸಾಧೂಂತೇ ನಿಂದಿತೀ । ಸಾಧು ಅಸತೀ ಹೇ ವಸ್ತೀ । ಅಣುಮಾತ್ರ ಚಿತ್ತೀ ಅಸೇನಾ ॥೧೮೯॥ ಜೇ ಜೇ ಹರೀಚೇ ಪಢಿಯಂತೇ । ತೇ ತೇ ನಾವಡತೀ ತಯಾಂತೇ । ಜೇವೀ ದಾಖವಿತಾ ದರ್ಪಣಾತೇ । ಕ್ಷೋಭೇ ನಿಜಚಿತ್ತೇ ನಿರ್ನಾಸಿಕ ॥೧೯೦॥ ಜ್ಯಾ ಈಶ್ವರಾಚೇನಿ ವರ್ತಿಜತೀ । ತೋ ಈಶ್ವರು ಆಹೇ ಹೇ ನ ಮಾನಿತೀ । ತೋ ಈಶ್ವರ ಆಹೇ ಕೋಣೇ ಸ್ಥಿತೀ । ಐಕ ತುಜಪ್ರತೀ ಸಾಂಗೇನ ರಾಯಾ ॥೧೯೧॥

ಸರ್ವೇಷು ಶಶ್ವತ್ತನುಭೃತ್ಸ್ವವಸ್ಥಿತಂ ಯಥಾ ಖಮಾತ್ಮಾನಮಭೀಷ್ಟಮೀಶ್ವರಮ್ ।
ವೇದೋಪಗೀತಂ ಚ ನ ಶೃಣ್ವತೇಽಬುಧಾ ಮನೋರಥಾನಾಂ ಪ್ರವದಂತಿ ವಾರ್ತಯಾ ॥೧೦॥

ಅರ್ಥ: ಹೇ ರಾಜನೇ, ವೇದವು ಪುನಃಪುನಃ ಹೇಳಿರುವುದೇನೆಂದರೆ, ಭಗವಂತನು ಆಕಾಶದಂತೆ ನಿತ್ಯನಿರಂತರವಾಗಿ ಸರ್ವ ಶರೀರಧಾರೀ ಜನರಲ್ಲಿ ಸ್ಥಿತನಾಗಿರುವನು. ಆತನು ನಮ್ಮ ಆತ್ಮನು ಮತ್ತು ಪ್ರಿಯತಮನು. ಆದರೆ ಈ ಮೂರ್ಖಜನರು ಈ ವೇದವಾಣಿಯನ್ನು ಕೇಳುವುದಿಲ್ಲ. ಕೇವಲ ದೊಡ್ಡ ದೊಡ್ಡ ಮನೋರಥಗಳ ಮಾತುಗಳನ್ನೇ ತಮ್ಮತಮ್ಮಲ್ಲಿ ಆಡುವರು ಮತ್ತು ಕೇಳುವರು.

ಜೋ ಸರ್ವ ಭೂತಾಂಚೇ ಠಾಯೀ । ನಿರಂತರ ಅಂತರ ನಾಹೀ । ಸಮಸಾಮ್ಯೇ ಸರ್ವದಾ ಪಾಹೀ । ಉಣಾಪುರಾ ಕದಾಹೀ ಕಲ್ಪಾಂತೀ ನವ್ಹೇ ॥೧೯೨॥

ಈಗ ಬ್ರಹ್ಮದೇವನಿಗೆ ಶ್ರೇಷ್ಠನು ಎಂದು ಹೇಳಬೇಕೆಂದರೆ, ಆತನೂ ಯೋಗ್ಯನಲ್ಲ. ಏಕೆಂದರೆ ಶಂಕರನ ಲಗ್ನದಲ್ಲಿ ಪಾರ್ವತೀ ವಧುವನ್ನು ಕಂಡು ಸಾವಧಾನ ಎನ್ನುವ ಕಾಲಕ್ಕೆ ಆತನ ವೀರ್ಯವು ದ್ರವಿಸಿತು ॥೧೮೧॥ ನಾರದನು ಬಹುದೊಡ್ಡ ಬ್ರಹ್ಮಚಾರಿಯು. ಆದರೆ ಆತನು ಕೃಷ್ಣನಲ್ಲಿ ಆತನ ಹೆಂಡತಿಯನ್ನೇ ಕೇಳತೊಡಗಿದನು. ಆಗ ಕೃಷ್ಣನು ಆತನನ್ನು ಬಹು ಮೋಸಗೊಳಿಸಿದನು. ಆತನು ಸ್ನಾನ ಮಾಡುತ್ತಿರಲು ಅರವತ್ತು ಮಕ್ಕಳು ಹುಟ್ಟಿಬಿಟ್ಟರು ॥೧೮೨॥ ಯುಧಿಷ್ಠಿರನಿಗೆ ಮೂರ್ತಿಮಂತ ಧರ್ಮ ಎನ್ನುವರು. ಆದರೆ ಆತನೂ ಸಹ ಕೇವಲ ಅಧರ್ಮಿಯಾಗಿರುವನು. ಏಕೆಂದರೆ ಈತನಿಗೆ ತನ್ನ ಕುಲವನ್ನು ಸಂಹರಿಸಿದ್ದಕ್ಕೆ ಪಾಪದೋಷಗಳು ನಿಶ್ಚಿತವಾಗಿ ತಟ್ಟಿವೆ ॥೧೮೩॥ ವ್ಯಾಸನು ಮಾತ್ರ ಶುದ್ಧ ಜಾರಪುತ್ರನು. ಪರಾಶರರ ಜಾರಕರ್ಮದಿಂ::ಲೇ ಈತನು ಪಾರಶರನಾದನು. ವಸಿಷ್ಠ ವಿಶ್ವಾಮಿತ್ರರು ಪರಸ್ಪರ ಶತ್ರುಗಳಾಗಿದ್ದರು ॥೧೮೪॥ ದುರ್ವಾಸ ಋಷಿಗೆ ಸಾಧು ಎಂದು ಹೇಳಬೇಕೆಂದರೆ, ಆತನು ಅಂಬರೀಷನಿಗೆ ಬಹು ಪೀಡಿಸಿ, ಕಾಡಿಸಿದನು. ತಂದೆಗೆ ದ್ರೋಹ ಮಾಡಿದ ಪ್ರಹ್ಲಾದನಿಗೆ ಸಾಧು ಎಂದು ಹೇಗೆ ಹೇಳಬೇಕು? ॥೧೮೫॥ ಈ ಪ್ರಕಾರ ಇವರಿಗೆ ಪುರಾಣದಲ್ಲಿ ಸ್ತುತಿ ಮಾಡಿದ ಭಕ್ತರಿಗೆ ನಿಜವಾದ ಸಾಧುಗಳೆಂದು ಮನ್ನಿಸಲಾರದವರು ವರ್ತಮಾನ ಕಾಲದಲ್ಲಿ ಇವರಿಗೆ ಸಾಧುಗಳೆಂದು ಯಾರೂ ಕಾಣುವುದಿಲ್ಲ ॥೧೮೬॥ ಪುನಃ ಹೀಗೆ ಹೇಳುವರು, ಪುರಾಣದಲ್ಲಿ ಮಹತ್ತರವಾದ ಮಾತುಗಳನ್ನು ಕೇಳಿ ಧಾರ್ಮಿಕ ಜನರು ಕುರಿಗಳಂತೆ ಒಬ್ಬರ ಹಿಂದೆ ಒಬ್ಬರು ಬಿಡದೇ ಧಾವಿಸುತ್ತಿರುವರು. ಇವರು ಹೊಟ್ಟೆಪಾಡಿಗೆ ಏನು ಬೇಕಾದರೂ ಹೇಳುತ್ತಿರುವರು ॥೧೮೭॥ ಕೆಲವರು ಮುದ್ರೆಗಳನ್ನು ಧರಿಸಿ ಆಸನಗಳ ಮೇಲೆ ಕುಳಿತುಕೊಳ್ಳುವರು. ಇನ್ನು ಕೆಲವರು ಬಕಪಕ್ಷಿಗಳಂತೆ ಧ್ಯಾನ ಮಾಡುವರು. ಆದರೆ ಅವರಲ್ಲಿ ನಿಜವಾದ ಸಾಧು ಒಬ್ಬನೂ ಇರುವುದಿಲ್ಲ ॥೧೮೮॥ ಈ ಪ್ರಕಾರವಾಗಿ ಇವರು ತಮ್ಮದೇ ಆದ ವೃತ್ತಿಯಲ್ಲಿ ಯುಕ್ತಿಗಳಿಂದ ಸಾಕ್ಷೇಪಪೂರ್ವಕವಾಗಿ ಸಾಧುಗಳ ನಿಂದೆಯನ್ನು ಮಾಡುವರು. ಈ ಮೂರೂ ಲೋಕಗಳಲ್ಲಿ ಯಾರಾದರೂ ಸಾಧುಗಳು ಇರುವರು ಎಂಬ ಈ ಕಲ್ಪನೆಯು ಅವರ ಚಿತ್ತಕ್ಕೆ ಸ್ಪರ್ಶವೇ ಆಗುವುದಿಲ್ಲ ॥೧೮೯॥ ಹರಿಗೆ ಪ್ರಿಯರಾದವರು ಇವರಿಗೆ ಅಪ್ರಿಯರಾಗಿರುವರು. ಮೊಂಡು ಮೂಗಿನವನಿಗೆ ಕನ್ನಡಿಯನ್ನು ತೋರಿಸಿದರೆ ಸಿಟ್ಟಿಗೆ ಬರುವನು. ಅದರಂತೆ ಸಾಧುಗಳ ಹೆಸರನ್ನು ತೆಗೆದರೆ ಇವರ ಪಿತ್ತವು ನೆತ್ತಿಗೇರುವುದು ॥೧೯೦॥ ಯಾವ ಈಶ್ವರನ ಸತ್ತೆಯಿಂದಲೇ ಇವರು ತಮ್ಮ ಜೀವನವನ್ನು ನಡೆಸುವರು. ಆದರೆ ಈ ಈಶ್ವರನು ಇದ್ದಾನೆ ಎಂದು ಒಪ್ಪುವುದೇ ಇಲ್ಲ. ಹೇ ರಾಜನೇ, ಈಶ್ವರನು ಯಾವ ಸ್ಥಿತಿಯಲ್ಲಿರುವನು? ಇದನ್ನು ನಾನು ನಿನಗೆ ಹೇಳುವೆ ॥೧೯೧॥

ಈಶ್ವರನು ಸರ್ವ ಪ್ರಾಣಿಮಾತ್ರರಲ್ಲಿ ಭೇದಭಾವರಹಿತನಾಗಿ ಸದಾ ಸರ್ವದಾ ಅಖಂಡವಾಗಿ ತುಂಬಿಕೊಂಡಿರುವನು. ಈತನು ಸರ್ವತ್ರವೂ ಸಮಭಾವನೆಯಿಂದ ಇರುವನು. ಎಂದೆಂದಿಗೂ ಕಲ್ಪಾಂತಕ್ಕೂ ಹೆಚ್ಚು ಕಡಿಮೆ ಆಗಲಾರನು ॥೧೯೨॥

ಜೋ ಸರ್ವಾಮಾಜೀ ಅಸೇ ಸರ್ವದಾ । ಪರೀ ಸರ್ವಪಣಾ ನಾತಳೇ ಕದಾ । ಜೇವೀ ಪದ್ಮ ಪತ್ರ ಜಲಸ್ಪಂದಾ । ಅಲಿಪ್ತ ಬುಬ್ದುದಾ ಅಸೋನಿ ಸಂಗೇ ॥೧೯೩॥ ತೇವೀ ಅಸೋನಿ ಸಕಳ ಜನೀ । ಘಸವಟೇನಾ ಜನಘಸಣೀ । ನಭ ಜೈಸೇ ಅಲಿಪ್ತ ಪಣೀ । ನರಚೂಡಾಮಣೀ ಸಬಾಹ್ಯ ॥೧೯೪॥ ತೈಸೇ ಅಲಿಪ್ತ ಪಣ ನ ಮೋಡೇ । ಪರೀ ರಚೀ ಅನಂತ ಬ್ರಹ್ಮಾಂಡೇ । ತೇ ಬ್ರಹ್ಮಾಂಡ ಅಂಡೇ ಪ್ರಚಂಡೇ । ವಾಗವೀ ಉದಂಡೇ ಅಕರ್ತಾತ್ಮಯೋಗೇ ॥೧೯೫॥ ಯಾಲಾಗೀ ತೋ "ಅಂತರ್ಯಾಮೀ" । ಅಭಿಧಾನ ಬೋಲಿಜೇ ನಿತ್ಯ ನಿಗಮೀ । ಜೋ ಸರ್ವಾಂಚ್ಯಾ ಹೃದಯಗ್ರಾಮೀ । ಚೇತನಾನುಕ್ರಮೀ ಲಕ್ಷಿಜೇ ॥೧೯೬॥ ತ್ಯಾ ಈಶ್ವರಾತೇ ನಿತ್ಯ ಧ್ಯಾತಾ । ಕಾ ಆವಡೀ ನಾಮ ಮುಖೀ ಗಾತಾ । ತರೀ ಅಭೀಷ್ಟ ಮನೋರಥಾ । ಹೋಯ ವರ್ಷತಾ ಅಖಂಡಧಾರೀ ॥೧೯೭॥ ತ್ಯಾ ಈಶ್ವರಾಚ್ಯಾ ಗಾತಾ ಗೋಷ್ಟೀ । ಸರ್ವ ಅನಿಷ್ಟಾ ಹೋಯ ತುಟೀ । ಜೋ ದೇಖತಾಂಚಿ ದೃಷ್ಟೀ । ಸ್ವಾನಂದಸೃಷ್ಟಿ ತುಷ್ಟಲಾ ವರ್ಷೇ ॥೧೯೮॥ ಏವಂ ಸುಖದಾತಾ ತೋಚಿ ಶಾಸ್ತಾ । ತೋ ಕಾ ಅಂತಕಾಚಾ ನಿಯಂತಾ । ಅಕಾಳೇ ಕಾಳಹೀ ಸತ್ತಾ । ಜ್ಯಾ ಭೇಣೇ ಸರ್ವಥಾ ಕರೂ ನ ಶಕೇ ॥೧೯೯॥ ಶ್ವಾಸೋಚ್ಛ್ವಾಸಾಂಚಿಯಾ ಪರಿಚಾರಾ । ಜ್ಯಾ ಭೇಣೇ ನೇಮಸ್ತ ವಾಜೇ ವಾರಾ । ಜ್ಯಾಚೇನಿ ಧಾಕೇ ಧರಾ । ನ ವಿರವೇ ಸಾಗರಾ ಜಳೀ ಅಸತಾ ॥೨೦೦॥ ಜ್ಯಾಚೇ ಆಜ್ಞೇವರೀ ಜಾಣ । ಸೂರ್ಯ ಚಾಲವೀ ದಿನಮಾನ । ಜ್ಯಾಚೇ ಪುರಾತನ ಆಜ್ಞೇಭೇಣ । ಸಮುದ್ರ ಆಪಣ ರೇಖಾ ನುಲ್ಲಂಘೀ ॥೨೦೧॥ ಜ್ಯಾತೇ ಸದಾ ಗಾಯಿಜೇ ವೇದೀ । ಜೋ ವಾಖಾಣಿಜೇ ಉಪನಿಷದೀ । ಜ್ಯಾಚೀ ಪವಿತ್ರ ಕೀರ್ತಿ ದುರ್ಬುದ್ಧೀ । ಸ್ವಯೇ ತ್ರಿಶುದ್ಧೀ ನಾಯಕತೀ ಕದಾ ॥೨೦೨॥ ಜ್ಯಾಚೇ ನಾಮ ಸ್ಮರತಾ ಜಾಣ । ಸಕಳ ದೋಷಾ ನಿರ್ದಳಣ । ಜ್ಯಾಚೇ ಕೃತಾಂತ ವಂದೀ ಚರಣ । ಜನ್ಮ ಮರಣ ವಿಭಾಂಡೀ ॥೨೦೩॥ ಜ್ಯಾಚೀ ಕಥಾ ಕರ್ಣಪುಟೀ । ಪಡತಾ ವಿಕಲ್ಪಾಂಚಿಯಾ ಕೋಟೀ । ನಿರ್ದಳೂನಿ ಉಠಾಉಠೀ । ಪಾಡೀ ಮಿಠೀ ಪರಬ್ರಹ್ಮೀ ॥೨೦೪॥ ಯಾಪರೀ ಜೋ ಪವಿತ್ರ ಮೂರ್ತೀ । ಜ್ಯಾಲಾಗೀ ವೇದ ಸದಾ ವರ್ಣಿತೀ । ಅಭಾಗ್ಯ ನಾಯಕತೀ ತ್ಯಾಚೀ ಕೀರ್ತೀ । ವಾರ್ತಾ ಕರಿತೀ ಮನೋರಥಾಂಚ್ಯಾ ॥೨೦೫॥ ಅಸ್ವಲ ಆಪುಲಿಯಾ ಗುಣಗುಣಾ । ನಾಯಕೇ ವಾಜತಿಯಾ ನಿಶಾಣಾ । ತೇವೀ ನಾಯಕೋನಿ ಹರೀಚ್ಯಾ ಗುಣಾ । ವಿಷಯಸಂಭಾಷಣಾ ಆದರೇ ವದತೀ ॥೨೦೬॥

ಈತನು ಎಲ್ಲದರಲ್ಲಿಯೂ ಎಲ್ಲ ಕಾಲದಲ್ಲಿಯೂ ಇರುವನು. ಆದರೆ ಈತನಿಗೆ ಸರ್ವಸ್ವದ ಸ್ಪರ್ಶವೂ ಸಹ ಆಗುವುದಿಲ್ಲ. ಯಾವ ಪ್ರಕಾರವಾಗಿ ಕಮಲದ ಎಲೆಯು ಜಲಬಿಂದುವಿನಿಂದ ಲಿಪ್ತವಾಗುವುದಿಲ್ಲ ಮತ್ತು ಅದು ನೀರಿನಲ್ಲಿದ್ದರೂ ತೋಯುವುದಿಲ್ಲ ॥೧೯೩॥ ಅದರಂತೆ ಈತನು ಎಲ್ಲ ಲೋಕದೊಳಗೆ ಇದ್ದೂ ಸಹ ಲೋಕವ್ಯವಹಾರಗಳ ಸಂಬಂಧವು ಆತನಿಗೆ ಇರುವುದಿಲ್ಲ. ಹೇ ರಾಜೇಶ್ವರನೇ, ಆಕಾಶವು ಯಾವ ಪ್ರಕಾರವಾಗಿ ಸರ್ವ ಪದಾರ್ಥಗಳಿಗೆ ಅಂತರ್ಬಾಹ್ಯವಾಗಿ ವ್ಯಾಪಿಸಿಕೊಂಡಿದ್ದರೂ ಸಹ ಅಲಿಪ್ತವಾಗಿರುವುದು ॥೧೯೪॥ ಅದರಂತೆ ಅಲಿಪ್ತತೆಯನ್ನು ಮುರಿಯದೇ ಈತನು ಅನಂತ ಬ್ರಹ್ಮಾಂಡಗಳ ರಚನೆಯನ್ನು ಮಾಡುವನು. ಮತ್ತು ಅಕರ್ತತೆಯಿಂದಲೇ ಯಾವ ಪ್ರಚಂಡವಾದ ಅನಂತ ಬ್ರಹ್ಮಾಂಡಗಳನ್ನು ತನ್ನ ಸ್ವರೂಪದಲ್ಲಿಯೇ ನಡೆಸುವನು ॥೧೯೫॥ ಆದ್ದರಿಂದ ಈತನಿಗೆ ವೇದದಲ್ಲಿ ನಿತ್ಯ ಅಂತರ್ಯಾಮೀ ಎಂದು ಹೇಳಿದೆ. ಈತನು ಎಲ್ಲರ ಹೃದಯಮಂದಿರದಲ್ಲಿದ್ದು ಸಾಕ್ಷಿಯಾಗಿ ಸರ್ವವನ್ನೂ ನೋಡುವನು ॥೧೯೬॥ ಹೀಗಿರುವ ಈ ಈಶ್ವರನನ್ನು ನಿತ್ಯದಲ್ಲಿ ಧ್ಯಾನಿಸಲು ಮತ್ತು ಮುಖದಿಂದ ಆತನ ನಾಮವನ್ನು ಪ್ರೇಮದಿಂದ ಉಚ್ಚರಿಸಲು ಆತನು ನಮ್ಮ ಎಲ್ಲ ಮನೋರಥಗಳನ್ನು ಅಖಂಡವಾಗಿ ಪೂರೈಸುವನು ॥೧೯೭॥ ಈ ಈಶ್ವರನ ವಿಷಯವಾಗಿ ಮಾತನಾಡಿದರೆ ಸರ್ವ ಸಂಕಟಗಳು ನಾಶವಾಗುವುವು. ಈತನನ್ನು ಕಣ್ತುಂಬ ನೋಡಲು ಪ್ರಸನ್ನನಾಗಿ ಸ್ವಾನಂದದ ಮಳೆಗರೆಯುವನು ॥೧೯೮॥ ಈತನೇ ಎಲ್ಲರ ಸುಖದಾತಾನಾಗಿರುವನು ಮತ್ತು ಎಲ್ಲರ ಶಾಸ್ತಾನಾಗಿರುವನು. ಈತನೇ ಸಾಕ್ಷಾತ್ ಯಮನ ನಿಯಂತನಾಗಿರುವನು. ಈತನ ಭಯದಿಂದ ಮನಸ್ಸಿಗೆ ಬಂದ ಯಾವುದೇ ವೇಳೆಯಲ್ಲಿ ಕಾಲನೂ ಸಹ ತನ್ನ ಶಕ್ತಿಯನ್ನು ತೋರಿಸಲಾರನು ॥೧೯೯॥ ಈತನ ಭಯದಿಂದಲೇ ಪ್ರಾಣಿಗಳ ಶ್ವಾಸವು ಸರಿಯಾಗಿ ನಡೆಯುವುದು. ಈತನ ಸತ್ತೆಯಿಂದಲೇ ವಾಯು ಸಹ ಆಕಾಶದಲ್ಲಿ ಸಾವಕಾಶವಾಗಿ ಪ್ರಮಾಣಬದ್ಧವಾಗಿ ಬೀಸುವುದು. ಈತನ ಭಯದಿಂದಲೇ ಪೃಥ್ವಿಯು ಸಮುದ್ರದ ಜಲದಲ್ಲಿದ್ದರೂ ಭೂಮಿಯನ್ನು ಕರಗಿಸಲಾರದು ॥೨೦೦॥ ಈತನ ಆಜ್ಞೆಯಿಂದಲೇ ಸೂರ್ಯನು ದಿನಮಾನವನ್ನು ಯೋಗ್ಯರೀತಿಯಲ್ಲಿ ನಡೆಸುವನು. ಈತನ ಆಜ್ಞೆಯಿಂದಲೇ ಸಮುದ್ರವು ತನ್ನ ಮರ್ಯಾದೆ ರೇಖೆಯನ್ನು ಉಲ್ಲಂಘಿಸುವುದಿಲ್ಲ ॥೨೦೧॥ ಈತನಿಗೆ ವೇದವು ಯಾವಾಗಲೂ ಸ್ತುತಿಮಾಡಿ ಹಾಡುವುದು. ಉಪನಿಷತ್‌ಗಳು ಈತನನ್ನು ಹೊಗಳುವುವು. ಈತನ ಪವಿತ್ರವಾದ ಕೀರ್ತಿಗಳನ್ನು ಈ ದುರ್ಜನರು ತಮ್ಮ ಕಿವಿಗಳಿಂದ ಕೇಳುವುದೇ ಇಲ್ಲ ॥೨೦೨॥ ಈತನ ಕೇವಲ ನಾಮಸ್ಮರಣೆಯ ಮಾತ್ರದಿಂದ ಸರ್ವ ಪಾಪಗಳ ನಾಶವಾಗುವುದು. ಯಮನು ಸಹ ಈತನ ಕಾಲಿಗೆ ಬೀಳುವನು. ಈತನು ಭಕ್ತರ ಜನ್ಮಮರಣಗಳನ್ನು ನಿವಾರಿಸುವನು ॥೨೦೩॥ ಈತನ ಕಥೆಗಳು ಕಿವಿಗಳಿಗೆ ಬಿದ್ದಾಕ್ಷಣವೇ ಕೋಟ್ಯಾವಧಿ ವಿಕಲ್ಪಗಳು ತತ್ಕಾಲದಲ್ಲಿ ಇಲ್ಲದಾಗಿ ಪರಬ್ರಹ್ಮದ ಪ್ರಾಪ್ತಿಯಾಗುವುದು ॥೨೦೪॥ ಈ ಪ್ರಕಾರವಾಗಿ ಪವಿತ್ರವಾಗಿರುವ ವೇದಗಳು ಈತನನ್ನು ಸದಾ ವರ್ಣಿಸುವುವು. ಈತನ ಕೀರ್ತಿಗಳನ್ನು ಈ ಯಾವ ಅಭಾಗಿಗಳು ಕೇಳುವುದಿಲ್ಲ. ಆದರೆ ಮನೋರಥಗಳ ಮಾತುಗಳನ್ನು ಆಡುತ್ತಿರುವರು ॥೨೦೫॥ ಕರಡಿಯು ತನ್ನ ಗುನುಗುನುವಿನಲ್ಲಿ ನಗಾರೀ, ಭೇರಿಗಳ ಸಪ್ಪಳವನ್ನು ಕೇಳುವುದಿಲ್ಲ. ಅದರಂತೆ ದುರ್ಜನರು ಹರಿಯ ಗುಣಗಳನ್ನು ಕೇಳುವುದಿಲ್ಲ. ಆದರೆ ವಿಷಯದ ವಾರ್ತೆಗಳನ್ನು ಮಾತ್ರ ಆದರದಿಂದ ಕೇಳುವರು ॥೨೦೬॥

ಯಾಲಾಗೀ ತೇ ಅತಿಮಂದ । ಅವಿನೀತ ಸದಾ ಸ್ತಬ್ಧ । ವಿಷಯಾಲಾಗೀ ವಿಷಯಾಂಧ । ಅತಿಲುಬ್ಧ ಲೋಲುಪ್ಯೇ ॥೨೦೭॥

ಲೋಕೇ ವ್ಯವಾಯಾಮಿಷ ಮದ್ಯಸೇವಾ ನಿತ್ಯಾಸ್ತು ಜಯಂತೋರ್ನಹಿ ತತ್ರ ಚೋದನ।
ವ್ಯವಸ್ಥಿತಿಸ್ತೇಷು ವಿವಾಹಯಜ್ಞಸುರಾಗ್ರಹೈರಾಸು ನಿವೃತ್ತಿರಿಷ್ಟಾ॥೧೧॥

ಅರ್ಥ:- ಜಗತ್ತಿನಲ್ಲಿ ಮೈಥುನ, ಮಾಂಸ ಭಕ್ಷಣ, ಮದ್ಯಪಾನ ಮಾಡುವುದು ಪ್ರಾಣಿ ಮಾತ್ರರ ಸಹಜ ಪ್ರವೃತ್ತಿಯಾಗಿರುವುದು. ಮನುಷ್ಯರಿಗೆ ಮುದ್ದಾಮ ಪ್ರವೃತ್ತರಾಗಲು ಕಾರಣವಿಲ್ಲ. ಹೀಗಿದ್ದರೂ ವಿವಾಹ ಯಜ್ಞ ಮತ್ತು ಸೌತ್ರಾಮಣಿ ಯಜ್ಞದ್ವಾರಾ ಇವುಗಳ ನಿಯಮನವಾಗಿರುವುದು. ವಾಸ್ತವಿಕವಾಗಿ ಈ ದೋಷಗಳನ್ನು ತೆಗೆದೊಗೆಯಬೇಕೆಂದು ಶ್ರುತಿಯ ಸಂದೇಶವಾಗಿರುವುದು.

ವೇದೇ ನ ಕರಿತಾ ಪ್ರೇರಣಾ । ವಿಷಯಾಂವರೀ ಸಹಜ ವಾಸನಾ । ಸ್ವಭಾವೇ ಸಕಳ ಜನಾ । ಸದಾ ಜಾಣ ಸರ್ವಾಸೀ ॥೨೦೮॥ ಮಾಂಸಸೇವನಾ ಮದ್ಯಪಾನಾ । ಮಿಥುನೀಭೂತ ಮೈಥುನಾ । ಯೇಅರ್ಥೀ ಸರ್ವ ಜನಾ । ತೀವ್ರ ವಾಸನಾ ಸರ್ವದಾ ॥೨೦೯॥ ತೇಥೇ ಸೇವ್ಯಾ ಸೇವ್ಯ ಪರವಡೀ । ವಿವಂಚಾನ ಕೋಣ ನಿವಡೀ । ಲಾಗಲೀ ವಿಷಯಾಂಚೀ ಗೋಡೀ । ತೇ ಅನರ್ಥಕೋಡೀ ಕರಿತೀಲ ॥೨೧೦॥ ಆಗಿ ಲಾಗಲಿಯಾ ಕಾಪುಸಾ । ವಿಝುವಿತಾ ನ ವಿಝೀ ಜೈಸಾ । ತೇವೀ ವಿಷಯವಂತಾ ಮಾನಸಾ । ವಿವೇಕು ಸಹಸಾ ಉಪಜೇನಾ ॥೨೧೧॥ ಝುಲ್ಯಾ ಲೋಲಿಂಗತ ಬಡಿಶಾ । ನಿಜಮರಣ ವಿಸರೇ ಮಾಸಾ ॥ ಕಾ ಮುಠೀ ಚಣೆಯಾಂಚ್ಯಾ ಆಶಾ । ನಳೀಮಾಜೀ ಆಪೈಸಾ ವಾನರೂ ಅಡಕೇ ॥೨೧೨॥ ದೂಧ ಮಿಳಾಲಿಯಾ ಮಾಂಜರ । ನ ಮ್ಹಣೇ ದ್ವಿಜ ಅಂತ್ಯಘರ । ತೇವೀ ವಿಷಯ ಉನ್ಮತ್ತ ನರ । ನ ಕರತೀ ವಿಚಾರ ಸೇವ್ಯಾ ಸೇವ್ಯ ॥೨೧೩॥ ಕಾ ಖವಳಲ್ಯಾ ವಿಷಯ ಚಾಡೇ । ಯೋನಿ ಸಂಕರು ಘಡೇಲ ಪುಢೇ । ಯಾಗಲೀ ವೇದೇ ಚೋಖಡೇ । ವರ್ಣಾಶ್ರಮಪಾಡೇ ವಿಭಾಗ ಕೇಲೇ ॥೨೧೪॥ ಜೈಸೇ ಅಫಾಟ ಪೃಥ್ವಿಚೇ ಅಂಗ । ತೇಥೇ ಸಪ್ತದ್ವೀಪೇ ಕರೂನಿ ವಿಭಾಗ । ಮಗ ಭಿನ್ನಾಧಿಕಾರೇ ಚಾಂಗ । ಧರಾ ಸಾಂಗ ಆಕ್ರಮಿಲೀ ॥೨೧೫॥ ಕಾ ಅನಾವೃತ ಮೇಘಜಳಾ । ಧರಣೇ ಧರೂನಿ ಘಾಲಿಜೇ ತಳಾ । ಮಗ ನೇಮಂಚಿ ಧಾಳೇ ಧಾಳಾ । ಪಿಕಾಲಾಂಗೀ ಜಳಾ ಕಾಢಿಜೇ ಪಾಟ ॥೨೧೬॥ ಆಣಿ ಪವನಾ ನಾದಾಕಾರಾ । ಸಾಧೂನಿ ಕೀಜೇ ವಾಂಜತರಾ । ಮಗ ಜೇವೀ ನಾನಾ ಧ್ವನೀ ಮಧುರಾ । ವಾಜವಿಜೇ ಯಂತ್ರಾ ಸಪ್ತ ಸ್ವರೇ ॥೨೧೭॥ ತೈಸೇ ಉಂಚ್ಛೃಂಖಳಾ ವಿಷಯಾಂಸೀ । ವೇದೇ ನೇಮಿಲೆ ನೇಮಿಸೀ । ತೇಚಿ ವೇದಜ್ಞಾ ಐಶೀ । ಐಕ ತುಜಪಾಸೀ ಸಾಂಗೇನ ॥೨೧೮॥ ಆವರಾವಯಾ ಯೋನಿಭ್ರಷ್ಟಾ । ಮೈಥುನೀ ವಿವಾಹ ಪ್ರತಿಷ್ಠಾ । ಲಾವೂನಿಯಾ ನಿಜನಿಷ್ಠಾ । ವರ್ಣವರಿಷ್ಠಾ ನೇಮಿಲೆ ॥೨೧೯॥

ಆದ್ದರಿಂದ ಇವರು ಅತಿಮೂರ್ಖ, ಉದ್ಧಟ, ಆಲಸಿ, ದುರಾಭಿಮಾನೀ, ವಿಷಯಾಂಧರಾಗಿ ಅತಿಲೋಲುಪ್ಯರಾಗಿರುವರು ॥೨೦೭॥

ಸಹಜವಾಗಿಯೇ ವಿಷಯಗಳ ವಾಸನೆಯುಂಟಾಗುವಿಕೆಯು ಸರ್ವಜನರ ಸ್ವಭಾವವಾಗಿರುವುದು. ವೇದಕ್ಕೆ ಇದರ ಪ್ರೇರಣೆಯನ್ನು ಮಾಡಬೇಕಾಗುವುದಿಲ್ಲ ॥೨೦೮॥ ಮಾಂಸ ಭಕ್ಷಣ ಮಾಡುವಿಕೆ, ಮದ್ಯ ಪ್ರಾಶನೆ ಮತ್ತು ಸ್ತ್ರೀಸಂಗ, ಈ ವಿಷಯಗಳಲ್ಲಿ ಸದಾ ಸರ್ವಕಾಲದಲ್ಲಿ ಜನರ ವಾಸನೇ ಇದ್ದೇ ಇರುವುದು ॥೨೦೯॥ ಆದ್ದರಿಂದ ಯಾವುದನ್ನು ಸ್ವೀಕರಿಸಬೇಕು ಮತ್ತು ಯಾವುದನ್ನು ತ್ಯಜಿಸಬೇಕು, ಇವುಗಳ ವಿಚಾರವನ್ನು ಯಾರೂ ಮಾಡುವುದಿಲ್ಲ. ಒಂದು ಸಲ ಈ ವಿಷಯಗಳ ರುಚಿಯು ಹತ್ತಿತೆಂದರೆ ಸಾಕು, ಮನುಷ್ಯನು ವಿಚಾರ ಬಿಟ್ಟು ಅನರ್ಥಕ್ಕೆ ಗುರಿಯಾಗುವನು ॥೨೧೦॥ ಅರಳೆಗೆ ಬೆಂಕಿ ಹತ್ತಲು, ಅದನ್ನು ಆರಿಸಿದರೂ ಆರುವುದಿಲ್ಲ. ಅದರಂತೆ ವಿಷಯಗಳ ಜ್ವಾಲೆಯು ಒಮ್ಮೆ ಹೊತ್ತಿಕೊಂಡರೆ ಮನದಲ್ಲಿ ವಿವೇಕವು ಉತ್ಪನ್ನವಾಗುವುದೇ ಇಲ್ಲ ॥೨೧೧॥ ಬಲೆಗೆ ಹಾಕಿರುವ ಆಮಿಷದ ಲೋಭವು ಉತ್ಪನ್ನವಾಯಿತೆಂದರೆ ಮೀನವು ಅದರಲ್ಲಿ ತನ್ನ ಮರಣವಿದೆ ಎಂಬುವುದನ್ನು ಮರೆತು ಬಿಡುವುದು. ಒಂದು ಹಿಡಿ ಕಡಲೆಯ ಆಶೆಯಿಂದ ಮಂಗವು ನಳಿಕೆಯಲ್ಲಿ ತನ್ನಿಂದ ತಾನೇ ಸಿಕ್ಕಿಕೊಳ್ಳುವುದು ॥೨೧೨॥ ಬೆಕ್ಕಿಗೆ ಹಾಲು ಸಿಕ್ಕಿತೆಂದರೆ ಸಾಕು, ಈ ಮನೆಯು ಬ್ರಾಹ್ಮಣನದೋ ಅಥವಾ ಮಾದಿಗನದೋ ಎಂಬ ವಿಚಾರವನ್ನು ಮಾಡುವುದಿಲ್ಲ. ಅದರಂತೆ ವಿಷಯಗಳ ಉನ್ಮತ್ತನಾದ ಪುರುಷನು ಸೇವ್ಯ, ಅಸೇವ್ಯಗಳ ವಿಚಾರವನ್ನು ಮಾಡುವುದಿಲ್ಲ ॥೨೧೩॥ ಈ ಪ್ರಕಾರಗಳ ತೀವ್ರ ವಿಷಯ ವಾಸನೆಗಳಿಂದ ಜನರು ಮಹಾಕ್ಷೋಭೆಗೆ ಒಳಗಾಗಿ ವರ್ಣಸಂಕರವಾದೀತೆಂದು, ವೇದವು ವರ್ಣ ಮತ್ತು ಆಶ್ರಮಗಳ ವಿಭಾಗವನ್ನು ಮಾಡಿಟ್ಟಿರುವುದು ॥೨೧೪॥ ಪೃಥ್ವಿಯ ಕ್ಷೇತ್ರವು ವಿಪರೀತ ವಿಸ್ತಾರವಿರುವದರಿಂದ ಅದನ್ನು ಏಳು ದ್ವೀಪವಾಗಿ ವಿಭಾಗಿಸಿ, ಆ ಭಿನ್ನ ಭಿನ್ನ ವಿಭಾಗಗಳಲ್ಲಿ ಬೇರೆ ಬೇರೆ ಅಧಿಕಾರಿಗಳನ್ನು ನೇಮಿಸಿ, ಅದರ ವ್ಯವಸ್ಥೆ ಮಾಡಲಾಗಿದೆ ॥೨೧೫॥ ಅಸ್ತವ್ಯಸ್ತವಾಗಿ ಹರಡಿರುವ ಮಳೆಯ ನೀರಿಗೆ ಯುಕ್ತಿಯಿಂದ ಒಂದು ಕೆರೆಯಲ್ಲಿ ಸಂಗ್ರಹಿಸಿ, ಮೆಲ್ಲಮೆಲ್ಲನೇ ಅದನ್ನು ಗದ್ದೆಯ ಬೆಳೆಗೆ ಉಪಯೋಗಿಸಲಾಗುವುದು ॥೨೧೬॥ ಅಥವಾ ನಾದಾಕಾರವಾದ ವಾಯುವನ್ನು ಒಂದು ವಾದ್ಯದಲ್ಲಿ ಸಂಗ್ರಹಿಸಿ, ನಂತರ ಅದರಿಂದ ಸಪ್ತಸ್ವರದಲ್ಲಿ ಮಧುರವಾಗಿ ಬಾರಿಸಲ್ಪಡುವುದು ॥೨೧೭॥ ಅದರಂತೆ ಈ ಪ್ರಕಾರದ ಬಂಧನರಹಿತ, ಸ್ವೇಚ್ಛೆಯಾಗಿರುವ ಈ ವಿಷಯಗಳಿಗೆ ನಿರ್ಬಂಧಗೊಳಿಸಲು ವೇದವು ನಿಯಮಗಳನ್ನು ಹಾಕಿಕೊಟ್ಟಿರುವುದು. ವೇದದ ಆಜ್ಞೆಗಳನ್ನು ಈಗ ನಾನು ನಿನಗೆ ಹೇಳುವೆನು ಅದನ್ನು ಲಕ್ಷಕೊಟ್ಟು ಕೇಳು ॥೨೧೮॥ ಕಾಮುಕರಿಗೆ ಹಿಡಿತದಲ್ಲಿ ತರಲು ವಿವಾಹದ ಬಂಧನವನ್ನು ಹಾಕಿರುವುದು. ಮತ್ತು ಪ್ರತಿಯೊಬ್ಬರಿಗೂ ಮರ್ಯಾದೆಗಳನ್ನು ತೋರಿಸಿ ವರ್ಣಗಳ ಶ್ರೇಷ್ಠತ್ವವನ್ನು ಸ್ಥಾಪನೆ ಮಾಡಿರುವುದು ॥೨೧೯॥

ಬ್ರಾಹ್ಮಣ ಜಾತಾ ರಜಕೀ ಪಾಸೀ । ತೇ ತಂವ ಕಡೂ ನ ಲಗೇ ತ್ಯಾಸೀ । ರಜಕ ಜಾತಾ ಬ್ರಾಹ್ಮಣಿಪಾಶೀ । ತಿಖಟ ತ್ಯಾಸೀ ತೇ ನ ಲಗೇ ॥೨೨೦॥ ಭಲತೀ ಸ್ತ್ರೀ ಭಲತಾ ನರ । ಮೈಥುನೀ ಹೋಯ ವರ್ಣಸಂಕರ । ತೋ ಚುಕವಾವಯಾ ಪ್ರಕಾರ । ವಿವಾಹ ನಿರ್ಧಾರ ನೇಮಿಲೇ ವೇದೇ॥೨೨೧॥ ಧರ್ಮಪತ್ನೀ ಪಾಣಿಗ್ರಹಣ । ವಿವಾಹ ನೇಮಿಲಾ ಸವರ್ಣ। ತೇಥೇ ಸಪ್ತಮ ಪಂಚಮ ತ್ಯಜೂನ। ಸ್ವಗೋತ್ರಿ ಲಗ್ನ ಕರೂ ನಯೇ ॥೨೨೨॥ ತೀನ್ಹೀ ವೇದ ತೀನ್ಹೀ ವರ್ಣ। ವೇದೇ ಸಾಂಡೂನಿಯಾ ಜಾಣ। ಸವೇದ ಆಣಿ ಸವರ್ಣ। ಪಾಣಿಗ್ರಹಣ ನೇಮಿಲೇ ॥೨೨೩॥ ಕನ್ಯಾ ಸವೇದ ಸವರ್ಣ। ಜೇಸೀ ನಾಹೀ ರಜೋದರ್ಶನ। ತೇಹೀ ಪಿತ್ಯಾಪಾಸೀ ಯಾಚೂನ । ಕರಾವೇ ಲಗ್ನ ವಿಧಾನೋಕ್ತ ॥೨೨೪॥ ಧರ್ಮ - ಅರ್ಥ - ಕಾಮಾಚರಣ ಅನ್ಯತ್ರ ನ ಕರಾವೇ ಆಪಣ । ಐಶೀ ವಾಹೂನಿಯಾ ಆಣ । ಪಾಣಿಗ್ರಹಣ ವೇದೋಕ್ತ ॥೨೨೫॥ ಕರಿತಾ ವಧೂವರಾ ಪಾಣಿಗ್ರಹಣ। ಸಾಕ್ಷೀ ದ್ವಿಜ - ದೇವ - ಹುತಾಶನ । ಇತರ ಸ್ತ್ರಿಯಾ ಮಾತೇಸಮಾನ । ಸ್ವದಾರಾಗಮನ ನೇಮಿಲೇ ವೇದೇ ॥೨೨೬॥ ಏವಂ ನೇಮೂನಿಯಾ ವಿವಾಹಾಸೀ । ವೇದರಾಯೇ ದಿಲೀ ಆಜ್ಞಾ ಐಶೀ । ಸಾಂಡೂನಿ ಸಕಳ ಸ್ತ್ರಿಯಾಂಸೀ। ಸ್ವದಾರೇಪಾಶೀ ಮೈಥುನ ॥೨೨೭॥ ದಿವಾ ಮೈಥುನ ನಾಹೀ ಸ್ತ್ರಿಯಾಂಸೀ । ರಾತ್ರಿ ತ್ಯಜೂನಿ ಪೂರ್ವಾಪರ ಪ್ರಹರಾಸೀ । ಮೈಥುನ ಸ್ತ್ರೀಯೇಪಾಸೀ । ಮಧ್ಯರಾತ್ರೀಸೀ ನೇಮಸ್ತ ॥೨೨೮॥ ನೇಮಿಲೇ ಸ್ವದಾರಾ ಮೈಥುನ । ತೇಹೀ ಅಹೋರಾತ್ರ ನಾಹೀ ಜಾಣ । ಪ್ರಜಾರ್ಥ ಸ್ತ್ರೀಸೇವನ । ಋತುಕಾಳೀ ಗಮನ ನೇಮಸ್ತ ॥೨೨೯॥ ಋತುಕಾಳೀ ಜ್ಯಾ ಸ್ತ್ರೀಗಮನ । ತೇ ಪುರುಷ ಬ್ರಹ್ಮಚಾರೀ ಪೂರ್ಣ । ವೇದ ನಿವೃತ್ತಿಪರ ಜಾಣ । ತ್ಯಾಗರೂಪೇ ಆಪಣ ಭೋಗಾತೇ ನೇಮಿ ॥೨೩೦॥ ಆತ್ಮಾ ವೈ ಪುತ್ರನಾಮಾಸಿ । ಪುತ್ರ ಝಾಲಿಯಾ ಸ್ತ್ರೀಯೇಸೀ । ಸಂಗ ಕರೂ ನಯೇ ಸ್ತ್ರಿಪಾಸೀ । ಶನೈಃ ಶನೈಃ ವಿಷಯಾಂಸೀ ತ್ಯಾಗವೀ ವೇದ ॥೨೩೧॥ ಸೇವಾವಯಾ ಆಮಿಷಾ । ವೇದೇ ನೇಮು ಕೇಲಾ ಕೈಸಾ । ನ ಘಡಾವಯಾ ಪಶುಹಿಂಸಾ। ಸಂಕಟ ಆಯಾಸಾ ಸ್ವಯೇ ದ್ಯೋತೀ ॥೨೩೨॥ ಆವಡೀ ಖಾವಯಾ ಮಾಂಸಾ। ಅಥವಾ ಸ್ವರ್ಗಾಚಿಯಾ ಆಶಾ । ಜೇ ಕರಿತೀ ಪಶುಹಿಂಸಾ । ತಯಾ ಪುರುಷಾ ಅಧಃಪತನ ॥೨೩೩॥ ನಿಷ್ಕಾಮ ಕರ್ಮೀ ಪಶುಹಿಂಸಾ । ಕರೀ ತರೀ ತೋ ನಿಷ್ಕಾಮ ಕೈಸಾ । ತೇಥ ನಿಗಮಾಚಾ ನೇಮು ಐಸಾ । ಮುಖ್ಯ ಅಹಿಂಸಾ ಸರ್ವ ಧರ್ಮೀ ॥೨೩೪॥

ಬ್ರಾಹ್ಮಣನಿಗೆ ರಜಕ ಸ್ತ್ರೀಯು ವಿಷ ಹತ್ತುವುದಿಲ್ಲ. ಮತ್ತು ರಜಕ ಪುರುಷನಿಗೆ ಬ್ರಾಹ್ಮಣ ಸ್ತ್ರೀಯು, ಖಾರ ಹತ್ತುವುದಿಲ್ಲ ॥೨೨೦॥ ಆದರೆ ಭಿನ್ನ ಭಿನ್ನ ಜಾತಿಗಳ ಸ್ತ್ರೀ, ಪುರುಷರಿಂದ ವರ್ಣಸಂಕರವಾಗುವುದು. ಇದನ್ನು ಬಿಡಿಸುವುದಕ್ಕಾಗಿ ವೇದವು ವಿವಾಹದ ನಿರ್ಬಂಧನೆಯನ್ನು ಹಾಕಿರುವುದು ॥೨೨೧॥ ತನ್ನ ಕುಲದಲ್ಲಿನ ಸ್ತ್ರೀಯಳನ್ನೇ ಪಾಣಿಗ್ರಹಣ (ಮದುವೆ) ಮಾಡಿ ಆಕೆಯನ್ನು ಧರ್ಮಪತ್ನಿಯನ್ನಾಗಿ ಮಾಡಿಕೊಳ್ಳಬೇಕು. ಆದರೆ ಏಳು ಅಥವಾ ಐದು ಪೀಳಿಗೆಯಲ್ಲಿ ಸ್ವಗೋತ್ರದಲ್ಲಿ ಲಗ್ನವನ್ನು ಮಾಡಕೂಡದು ॥೨೨೨॥ ಮೂರು ವರ್ಣಗಳನ್ನು ಮತ್ತು ಮೂರು ವೇದಗಳನ್ನು ಬಿಟ್ಟು ಅಂದರೆ ಅವುಗಳಲ್ಲಿ ಮಿಶ್ರಣಗೊಳಿಸದೇ ಸವೇದ ಮತ್ತು ಸವರ್ಣಗಳಲ್ಲಿ ಪಾಣಿಗ್ರಹಣ ಮಾಡಿಕೊಳ್ಳಬೇಕು. ಹೀಗೆ ವೇದವು ನಿಶ್ಚಯಗೊಳಿಸಿಟ್ಟಿದೆ ॥೨೨೩॥ ತನ್ನ ವೇದದಲ್ಲಿನ, ಮತ್ತು ತನ್ನ ಜಾತಿಯ ಹಾಗೂ ಪುಷ್ಪವತಿ ಆಗಿರದ ಕನ್ಯೆಯನ್ನು ನೋಡಿ, ಆಕೆಯ ತಂದೆಯಲ್ಲಿ ಯಾಚನೆಯನ್ನು ಮಾಡಿ ಯಥಾವಿಧಿ ಮದುವೆಯನ್ನು ಮಾಡಿಕೊಳ್ಳಬೇಕು ॥೨೨೪॥ ಧರ್ಮ, ಅರ್ಥ ಮತ್ತು ಕಾಮಾಚರಣೆಯನ್ನು ತಾನು ಅನ್ಯ ಸ್ತ್ರೀಯಲ್ಲಿ ಮಾಡುವುದಿಲ್ಲವೆಂದು ಶಪಥ ಮಾಡಿ ವೇದದಲ್ಲಿ ಹೇಳಿದ ರೀತಿಯಲ್ಲಿ ಆಕೆಯನ್ನು ಮದುವೆಯಾಗಬೇಕು ॥೨೨೫॥ ವಧೂವರರು ಪಾಣಿಗ್ರಹಣ ಮಾಡಿಕೊಳ್ಳುವ ಸಮಯದಲ್ಲಿ ಬ್ರಾಹ್ಮಣ, ದೇವರು ಮತ್ತು ಅಗ್ನಿ ಸಾಕ್ಷಿಯಾಗಿರುವರು. ಇತರ ಸ್ತ್ರೀಯರು ತಾಯೀ ಸಮಾನವಾಗಿ ತಿಳಿಯಬೇಕೆಂಬ ಆಜ್ಞೆಯನ್ನು ಮಾಡಿ ವೇದವು ಸ್ವಸ್ತ್ರೀಗಮನವನ್ನು ಹೇಳಿದೆ ॥೨೨೬॥ ಈ ಪ್ರಕಾರವಾಗಿ ವಿವಾಹದ ನಿಯಮಗಳನ್ನು ನಿಶ್ಚಯಗೊಳಿಸಿ ವೇದವು ತನ್ನ ಧರ್ಮಪತ್ನಿ ವ್ಯತರಿಕ್ತ ಸರ್ವ ಸ್ತ್ರೀಯರಿಂದ ದೂರವಿರಬೇಕೆಂಬ ಆಜ್ಞೆಯನ್ನು ಮಾಡಿರುವುದು ॥೨೨೭॥ ಹಗಲಿನಲ್ಲಿ ಸ್ತ್ರೀಸಂಗವನ್ನು ಮಾಡಕೂಡದು. ಮೊದಲನೆಯ ಮತ್ತು ಕೊನೆಯ ಪ್ರಹರಗಳನ್ನು ಬಿಟ್ಟು ಮಧ್ಯ ರಾತ್ರಿಯಲ್ಲಿನ ವೇಳೆಯನ್ನು ವೇದವು ನಿಯಮಿಸಿರುವುದು ॥೨೨೮॥ ಸ್ವಸ್ತ್ರೀಸಂಗ ಮಾಡಲಿಕ್ಕೆ ವೇದವು ಆಜ್ಞೆ ಕೊಟ್ಟಿದ್ದರೂ ನಿತ್ಯದಲ್ಲಿಯೂ, ಹಗಲು ರಾತ್ರಿ ಮಾಡಕೂಡದು. ಕೇವಲ ಪ್ರಜಾ ಉತ್ಪತ್ತಿಗಾಗಿ ಸ್ತ್ರೀಸಂಗವನ್ನು ಮಾಡಬೇಕು. ಅದು ಸಹ ಋತುಕಾಲದಲ್ಲಿ ಮಾತ್ರ ಇರಬೇಕು ॥೨೨೯॥ ಈ ಪ್ರಕಾರವಾಗಿ ಕೇವಲ ಋತುಕಾಲದಲ್ಲಿ ಸ್ವಸ್ತ್ರೀಗಮನ ಮಾಡುವ ಪುರುಷನು ನಿಜವಾಗಿಯೂ ಬ್ರಹ್ಮಚಾರಿ ಎಂದು ತಿಳಿಯಬೇಕು. ತಾತ್ಪರ್ಯವೇನೆಂದರೆ, ವೇದವು ನಿವೃತ್ತಿಪರವೇ ಆಗಿರುವುದು. ಅದು ತ್ಯಾಗದ ಬೀಜವನ್ನು ಬಿತ್ತಿ ಭೋಗವನ್ನು ನಿಯಮಿಸಿರುವುದು ॥೨೩೦॥ ಆತ್ಮವೇ ಪುತ್ರನು ಎಂದು ಶ್ರುತಿಯ ವಚನವಾಗಿರುವುದು. ಪುತ್ರನಾದ ಮೇಲೆ ಸ್ತ್ರೀಸಂಗವು ಇರಕೂಡದು. ಈ ಪ್ರಕಾರವಾಗಿ ವೇದವು ವಿಷಯದಿಂದ ಮೆಲ್ಲ ಮೆಲ್ಲನೇ ಬಿಡಿಸುವುದು ॥೨೩೧॥ ಈಗ ಅಭಕ್ಷ್ಯ ಭಕ್ಷಿಸುವ ವಿಷಯಕ್ಕೆ ವೇದವು ಹೇಗೆ ನಿಯಮಿಸಿದೆ ಎಂಬುದನ್ನು ನೋಡಿರಿ. ಅಭಕ್ಷ್ಯವನ್ನು ತಿನ್ನುವುದು ಮಾನವನಿಗೆ ಸ್ವಭಾವತಃ ಪ್ರೀತಿ ಇರುವುದು. ಇದನ್ನು ನಿವೃತ್ತಿಗೊಳಿಸುವ ಉದ್ದೇಶದಿಂದ ವೇದವು ಕಷ್ಟಕಾರಕ ಯಜ್ಞ ಮಾಡಲು ತಿಳಿಸಿದೆ ॥೨೩೨॥ ಮಾಂಸವನ್ನು ತಿನ್ನುವ ಪ್ರೀತಿಗಾಗಿ ಅಥವಾ ಸ್ವರ್ಗದ ಅಪೇಕ್ಷೆಗಾಗಿ ಯಾರು ಪಶುಹಿಂಸೆಯನ್ನು ಮಾಡುವರೋ, ಅವರು ಅಧಃಪತನ ಹೊಂದುವರು ॥೨೩೩। ಯಾವ ಕರ್ಮದಲ್ಲಿ ಪಶುಹಿಂಸೆ ಇರಲು, ಅದು ನಿಷ್ಕಾಮ ಹೇಗಾಗುವುದು? ಎಲ್ಲ ಧರ್ಮಗಳಲ್ಲಿಯೂ ಅಹಿಂಸೆಯು ಮುಖ್ಯ ಧರ್ಮವಾಗಿರುವುದು. ಹೀಗೆ ವೇದದ ನಿಯಮವಾಗಿರುವುದು ॥೨೩೪॥

ನಿತ್ಯ ನ ಕರಾವಯಾ ಮಾಂಸಭಕ್ಷಣ । ಯಜ್ಞೀ ಪುರೋಡಾಶಸೇವನ । ತೇಹೀ ಪರಿಮಿತ ಜಾಣ । ಸ್ವೇಚ್ಛಾ ಮಾಂಸಾದನ ವಾರಿಲೇ ವೇದೇ ॥೨೩೫॥ ಯಾಗ ಕರೂನಿ "ಸೌತ್ರಾಮಣೀ" ಪ್ರವರ್ತಾವೇ ಸುರಾಪಾನೀ । ಹೇ ವೇದಾಜ್ಞಾ ಜೋ ಸತ್ಯ ಮಾನೀ । ತೋ ಸ್ವಧರ್ಮಾಚರಣೀ ನಾಗವಲಾ ॥೨೩೬॥ ಜೇ ಕರ್ಮೀ ಮದ್ಯಪಾನ ಘಡೇ । ತೋ ಸ್ವಧರ್ಮ ಮ್ಹಣತಾ ಜೀಭ ಝಡೇ । ಲೋಲುಪತೇ ಭುಲಲೇ ಬಾಪುಡೇ । ವೇದ ವಿಷಯಾಂಕಡೇ ವೊಢಿತೀ ॥೨೩೭॥ ಯಾಗು ಕರಿತಾ ಸೌತ್ರಾಮಣೀ । ಸ್ವಯೇ ನ ವ್ಹಾವೇ ಮದ್ಯಪಾನೀ । ತೇ ಯಜ್ಞಶೇಷ ಅವಘ್ರಾಣೀ । ಪರೀ ಸರ್ವಥಾ ವದನೀ ಘಾಲೂ ನಯೇ ॥೨೩೮॥ ಹೇ ವಿಷಯಾಚೇ ತ್ರಿವಿಧ ವಿಂದಾನ । ಮೈಥುನ - ಮಾಂಸಭಕ್ಷಣ - ಸುರಾಪಾನ । ಯದರ್ಥೀ ನಿವೃತ್ತೀಚಿ ಪ್ರಮಾಣ । ಹೇ ಮನೋಗತ ಪೂರ್ಣ ವೇದಾಚೇ ॥೨೩೯॥ ವಿಷಯಾಪಾಸೂನಿ ನಿವೃತ್ತೀ । ವೇದ ವಿಭಾಗೇ ಹೇಚಿ ದ್ಯೋತೀ । ಪರೀ ಧರಾವೀ ವಿಷಯಾಸಕ್ತಿ । ಹೇ ವೇದೋಕ್ತಿ ಸರ್ವಥಾ ನ ಘಡೇ ॥೨೪೦॥ ವೆಂಚೋನಿಯಾ ನಿಜಧನ । ಕರೋನಿಯಾ ವಿವಾಹ ಯಜ್ಞ । ಸೇವಾವೇ ಮದ್ಯ - ಮಾಂಸ - ಮೈಥುನ । ಹೇ ವೇದವಚನ ಕದಾ ನ ಘಡೇ ॥೨೪೧॥

ಧನಂ ಚ ಧರ್ಮೈಕಫಲಂ ಯತೋ ವೈ ಜ್ಞಾನಂ ಸವಿಜ್ಞಾನಮನುಪ್ರಶಾಂತಿ ।
ಗೃಹೇಷು ಯುಂಜಂತಿ ಕಲೇವರಸ್ಯ ಮೃತ್ಯುಂ ನ ಪಶ್ಯಂತಿ ದುರಂತವೀರ್ಯಮ್ ॥೧೨॥

ಅರ್ಥ:- ಧಾರ್ಮಿಕತೆಯೇ ಧನಾರ್ಜನೆಯ ನಿಜವಾದ ಫಲ. ಧರ್ಮದಿಂದ ಪರಮತತ್ತ್ವದ ಜ್ಞಾನವನ್ನು ಅರಿಯಬಹುದಾಗಿದೆ. ಈ ಅರಿವು ಪಕ್ವಗೊಂಡಾಗ ಪರಮಶಾಂತಿಯು ದೊರೆಯಬಹುದಾಗಿದೆ. ಆದರೆ ಲೌಕಿಕ ಜನರು ಧನದ ಉಪಯೋಗವನ್ನು ಕೇವಲ ತಮ್ಮ ಆಶ್ರಮದ ಸ್ವಾರ್ಥಕ್ಕಾಗಿ ವಿನಿಯೋಗಿಸುತ್ತಾರೆ. ತಮ್ಮ ಶರೀರವು ನಾಶವಾಗುವುದಿದೆ ಎಂಬ ಅರಿವು ಇವರಿಗೆ ಇರುವುದಿಲ್ಲ.

ನಾಯಕೋನಿ ಭಗವತ್ಕಥಾ । ಜ್ಞಾನಾಭಿಮಾನೀ ನಾಡಲೇ ತತ್ತ್ವತಾ । ಧನೇ ಪರಮಾರ್ಥ ಯಾವಾ ಹಾತಾ । ತೋಹೀ ಸ್ವಧರ್ಮತಾ ನ ಲಾವಿತೀ ಧರ್ಮೀ ॥೨೪೨॥ ವಿಷಯಾಂಚಿಯಾ ಕಾಮನಾ । ಸರ್ವಸ್ವೇ ವೆಂಚಿತೀ ಧನಾ । ತೇಚಿ ಧರ್ಮಾರ್ಥ ವೆಂಚಿತಾ ಜಾಣಾ । ಸಾಂಡಿತೀ ಪ್ರಾಣಾ ಕವಡೀ ಸಾಠೀ ॥೨೪೩॥ ಜಯಾ ಧರ್ಮಾಚೇನಿ ಪಾಂಗೇ । ಹಾ ಧರ್ಮಚಿ ಆಲಾಸೇ ನಿಜಾಂಗೇ । ಜೇವೀ ಪಾಯಾಳಾಚೇನಿ ಯೋಗೇ । ಮಹಾನಿಧಿ ವೇಗೇ ಆತುಡೇ ಹಾತೀ ॥೨೪೪॥ ಬೀಜ ತೇಥೇ ಸದ್ರುಮ ಫಳ । ಚಂದನ ತೇಥೇ ಪರಿಮಳ । ಜಳಾಚೇ ಠಾಯೀ ಕೇವಳ । ನಾಂದತೀ ಸಕಳ ರಸಸ್ವಾದ ॥೨೪೫॥ ದೇಹ ತೇಥ ಅಸೇ ಕರ್ಮ । ರೂಪ ತೇಥ ವಸೇ ನಾಮ । ಧನ ತೇಥ ಉತ್ತಮೋತ್ತಮ । ಸಕಳ ಧರ್ಮ ಸದಾ ವಸತೀ ॥೨೪೬॥

ಪ್ರತಿದಿನವೂ ಮಾಂಸ ಭಕ್ಷಣೆ ಮಾಡಬಾರದೆಂದು ಅದು ಯಜ್ಞದಲ್ಲಿನ ಪುರೋಡಾಶ ಸೇವನೆಯನ್ನು ಹೇಳಿರುವುದು. ಆದರೆ ಅದು ಸಹಿತವಾಗಿ ಯಜ್ಞಶೇಷ ಭಕ್ಷಣೆಯು ಪರಿಮಿತ ಸ್ವರೂಪದಲ್ಲಿರಬೇಕು. ಹೀಗೆ ಹೇಳಿ ಯಥೇಷ್ಟ ಮಾಂಸ ಭಕ್ಷಣೆಯ ನಿಷೇಧನವನ್ನು ಮಾಡಿರುವುದು ॥೨೩೫॥ ಸೌತ್ರಾಮಣಿ ಯಾಗವನ್ನು ಮಾಡಿ ಮದ್ಯಪಾನಕ್ಕೆ ಪ್ರವರ್ತನಾಗಬೇಕೆಂಬ ವೇದಾಜ್ಞೆಯನ್ನು ನಿಜವೆಂದು ತಿಳಿದವನು ತಾನು ಸ್ವಧರ್ಮದಿಂದ ಚ್ಯುತನಾಗುವನೆಂದು ತಿಳಿಯಬೇಕು ॥೨೩೬॥ ಕಾರಣ ಯಾವ ಕರ್ಮದಲ್ಲಿ ಮದ್ಯಪಾನವು ನಡೆಯುವುದೋ ಅದಕ್ಕೆ ಸ್ವಧರ್ಮವೆಂದರೆ ನಾಲಿಗೆಯು ಕತ್ತರಿಸಿ ಹೋಗುವುದು. ಪಾಪ, ವಿಷಯಗಳ ಲೋಭದಿಂದ ಮೂಢರಾದವರು ವೇದಕ್ಕೂ ವಿಷಯದತ್ತ ಎಳೆಯುವರು ॥೨೩೭॥ ಸೌತ್ರಾಮಣಿ ಯಜ್ಞವನ್ನು ಆರಂಭಗೊಳಿಸಿದರೂ ಮದ್ಯಪಾನವನ್ನು ಮಾಡಬಾರದು. ಮತ್ತು ಯಜ್ಞದಲ್ಲಿ ಅವಶೇಷವಾಗಿರುವ ಮದ್ಯವನ್ನು ಮೂಸಿನೋಡಬೇಕು. ಆದರೆ, ಮುಖದಲ್ಲಿ ಹಾಕಬಾರದು ॥೨೩೮॥ ಮೈಥುನ, ಮಾಂಸಭಕ್ಷಣ, ಮತ್ತು ಮದ್ಯಪಾನ ಇವು ಮೂರು ಪ್ರಕಾರದ ವಿಷಯಗಳಾಗಿವೆ. ಇವುಗಳ ತ್ಯಾಗ ಮಾಡಬೇಕು. ಹೀಗೆ ವೇದದ ಪೂರ್ಣ ಅಪೇಕ್ಷೆಯಾಗಿರುವುದು ॥೨೩೯॥ ವರ್ಣಾಶ್ರಮದ ವಿಭಾಗದಿಂದ ವೇದವು ಈ ವಿಷಯಗಳಿಂದ ನಿವೃತ್ತವಾಗುವ ಶಿಕ್ಷಣವನ್ನೇ ಕೊಡುವುದು. ವಿಷಯಗಳ ಆಸಕ್ತಿ ಹಿಡಿಯಬೇಕೆಂದು ವೇದವು ಎಂದೂ ಹೇಳುವುದಿಲ್ಲ ॥೨೪೦॥ ನಿಮ್ಮ ಹಣವನ್ನು ಖರ್ಚುಮಾಡಿ. ಮದುವೆ, ಯಜ್ಞಗಳನ್ನು ಮಾಡಿರಿ ಮತ್ತು ಮಾಂಸವನ್ನು ತಿನ್ನಿರಿ, ಮದ್ಯವನ್ನು ಕುಡಿಯಿರಿ ಮತ್ತು ಮೈಥುನವನ್ನು ಮಾಡಿರಿ, ಹೀಗೆ ವೇದವಚನವು ಎಂದೂ ಸಂಭವಿಸಲಾರದು ॥೨೪೧॥

ಜ್ಞಾನದ ಅಭಿಮಾನೀ ಜನರು ಭಗವಂತನ ಕಥಾಕೀರ್ತನೆಗಳನ್ನು ಕೇಳದೇ ಹಾಳಾಗುವರು. ಹಣದ ಉಪಯೋಗದಿಂದ ಪರಮಾರ್ಥವನ್ನು ಪ್ರಾಪ್ತ ಮಾಡಿಕೊಳ್ಳಬೇಕಾಗುವುದು. ಆದರೆ ಇವರು ಸ್ವಧರ್ಮಾನುಸಾರವಾಗಿ ಹಣದ ಉಪಯೋಗವನ್ನು ಧರ್ಮದಲ್ಲಿ ಮಾಡುವುದಿಲ್ಲ ॥೨೪೨॥ ಇದಲ್ಲದೇ ವಿಷಯ ಭೋಗಗಳಿಗಾಗಿ ಹಣವನ್ನು ಬಹಳಷ್ಟು ಖರ್ಚುಮಾಡುವರು. ಧರ್ಮಕ್ಕಾಗಿ ಸ್ವಲ್ಪ ಹಣವು ಖರ್ಚಾದರೆ ಇವರಿಗೆ ಪ್ರಾಣಸಂಕಟವಾಗುವುದು ॥೨೪೩॥ ಕಾಲು ಮುಂದೆ ಮಾಡಿ ಹುಟ್ಟಿದವನಿಗೆ ದ್ರವ್ಯದ ದೊಡ್ಡ ನಿಧಿಯು ಕೈಗೆ ಎಟುಕುವುದು. ಅದರಂತೆ ಧನದ ಯೋಗದಿಂದ ಧರ್ಮವೇ ಪ್ರತ್ಯಕ್ಷವಾಗಿ ಆತನತ್ತ ಆಗಮಿಸಿರುವುದು ॥೨೪೪॥ ಬೀಜವಿದ್ದಲ್ಲಿ ಗಿಡಸಹಿತವಾಗಿ ಫಲವಿರುವುದು. ಚಂದನವಿದ್ದಲ್ಲಿ ಸುಗಂಧವಿರುವುದು. ಜಲವಿದ್ದಲ್ಲಿ ಸರ್ವರಸಗಳಿರುವುವು ॥೨೪೫॥ ದೇಹವಿದ್ದಲ್ಲಿ ಕರ್ಮವಿರುವುದು, ರೂಪವಿದ್ದಲ್ಲಿ ನಾಮವಿರುವುದು, ಅದರಂತೆ ಧನವಿದ್ದಲ್ಲಿ ಎಲ್ಲ ಉತ್ತಮೋತ್ತಮ ಧರ್ಮಗಳು ಯಾವಾಗಲೂ ಇರುವುವು ॥೨೪೬॥

ಜೇವೀ ಏಕಾದಶೀ ವ್ರತಯೋಗೇ । ಜಾಗರೀ ಗೀತನೃತ್ಯ ಪಾಂಗೇ । ತುಷ್ಟಲಾ ದೇವೋ ಲಾಗವೇಗೇ । ಆತುಡೇ ಧನಯೋಗೇ ನಿಜಭಕ್ತಾ ಕರೀ ॥೨೪೭॥ ತೇವೀ ಧನಾಚಿಯಾ ಪಾಠೋವಾಠೀ । ಪರಮ ಧರ್ಮೇಸೀ ಪಡೇ ಗಾಂಠೀ । ಧರ್ಮ ತೇಥ ಉಠಾಉಠೀ । ಜ್ಞಾನಾಚೀ ಬೇಟೀ ವಿಜ್ಞಾನೇಸೀ ॥೨೪೮॥ ಚಂದ್ರಾಸ್ತವ ವಾಢತೀ ಕಳಾ । ಜೀವನಾಸ್ತವ ಜಿವ್ಹಾಳಾ । ತೇವೀ ಧನಾಸ್ತವ ಸೋಜ್ಜ್ವಳಾ । ಧರ್ಮಾಚಾ ಸೋಹಳಾ ಧಾರ್ಮಿಕಾ ಘರೀ ॥೨೪೯॥ ಧರ್ಮ ತೇಥ ಶುದ್ಧ ಜ್ಞಾನ । ಜ್ಞಾನ ತೇಥ ವಿಜ್ಞಾನ । ವಿಜ್ಞಾನ ತೇ ಸಮಾಧಾನ । ಶಾಂತಿ ಸಂಪೂರ್ಣನಾಂದೇ ತೇಥ ॥೨೫೦॥ ಏವಢೇ ಫಳ ಜ್ಯಾ ಧನಾಪಾಸೀ । ತೇ ಮೂರ್ಖ ವೇಂಚಿತೀ ವಿಷಯಾಂಸೀ । ದೇಹಲೋಭೇ ಭುಲಲೀ ಪಿಸೀ । ಅಂಗೀಚ್ಯಾ ಮೃತ್ಯೂಸೀ ವಿಸರಲೇ ॥೨೫೧॥ ಜಳತೇ ಘರೀ ಠೇವಾ ಠೇವಣೇ । ಮರತ್ಯಾ ದೇಹಾ ಸುರವಾಡ ಕರಣೇ । ತೋ ನಾಗವಲಾ ವೇದು ಮ್ಹಣೇ । ತೇ ವೇದಾಚೇ ಬೋಲಣೇ ನಾಯಕೇ ಕೋಣೇ ॥೨೫೨॥ ಉಪಜಲೇನಿ ದಿವಸದಿವಸೇ । ದೇಹಾತೇ ಕಾಳು ಗ್ರಾಸೀತಸೇ । ಹೇ ನಿತ್ಯ ನವೇ ಮರಣ ಕೈಸೇ । ದೇಹಲೋಭವಶೇ ವಿಸರಲೇ ॥೨೫೩॥ ಜ್ಯಾಚೇ ತ್ಯಾ ದೇಖತಾ ಕೈಸಾ । ಕಾಳು ಗಿಳೀ ಬಾಳವಯಸಾ । ಮಗ ತಾರುಣ್ಯಾಚೀ ದಶಾ । ಮುರಡೂನಿ ಘಸಾ ಗ್ರಾಸೀ ಕಾಳ ॥೨೫೪॥ ಗಿಳೋನಿಯಾ ತಾರುಣ್ಯಪಣ । ಆಣೀ ವಾರ್ಧಕ್ಯ ಕಂಪಾಯಮಾನ । ಐಸೇ ಕಾಳಾ ಚೇ ವಿಂದಾನ । ದುರ್ಧರ ಪೂರ್ಣ ಬ್ರಹ್ಮಾದಿಕಾ ॥೨೫೫॥ ಜಯಾಚೇನಿ ಚಪೇಟಘಾತೇ । ಮರಣ ಆಣೀ ಅಮರಾಂತೇ । ಮಾ ಮೂರ್ಖ ತೇಥೇ ಜೀವಿತಾತೇ । ಅಕ್ಷಯ ಚಿತ್ತೇ ದೃಢ ಮಾನಿತೀ ॥೨೫೬॥ ಮೂಳೀ ದೇಹಚಿ ತಂವ ಅನಿತ್ಯ । ಮಾ ತೇಥೀಂಚೇ ಭೋಗ ಕಾಯ ಶಾಶ್ವತ । ಪರೀ ಧನ ವೇಂಚೂನಿ ವಿಷಯಾರ್ಥ । ಭುಲಲೇ ಜಾಣಾ ಭ್ರಾಂತ ಸ್ತ್ರೀ ಲೋಭೇ ॥೨೫೭॥ ಐಸೇ ನಶ್ವರ ಭೋಗ ಜಗೀ । ತೇ ಭೋಗಾವಯಾ ರಿಘಾವೇ ಸ್ವರ್ಗೀ । ತದರ್ಥ ಪ್ರವರ್ತತೀ ಯಾಗೀ । ಲಾಗವೇಗೀ ಭೋಗೇಚ್ಛಾ ॥೨೫೮॥ ಸುಖ ಭೋಗಾವಯಾ ವೇಗೀ । ಪತಂಗು ಜೇವೀ ಉಡೀ ಘಾಲೀ ಆಗೀ । ತೇವೀ ಇಹಾಮುತ್ರಭೋಗೀ । ಪತನಾಲಾಗೀ ಪಾವತೀ ॥೨೫೯॥ ಸ್ತ್ರೀ-ಆಮಿಷ-ಮದ್ಯಪಾನ । ಹೇ ವೇದೋಕ್ತ ಭೋಗ ಜಾಣ । ತೇಥ ಕೇವೀ ಘಡೇ ಪತನ । ತೇ ವೇದವಿಧಾನ ನೇಣತೀ ಮೂರ್ಖ ॥೨೬೦॥

ಏಕಾದಶೀವ್ರತದ ನಿಮಿತ್ತದಿಂದ ಗೀತ, ನೃತ್ಯಗಳನ್ನು ಮಾಡುತ್ತ ಜಾಗರಣೆಯನ್ನು ಮಾಡಲು ದೇವನು ತತ್ಕಾಲದಲ್ಲಿ ಸಂತುಷ್ಟನಾಗುವನು. ಮತ್ತು ಧನದ ಯೋಗದಿಂದಲೇ ದೇವನು ನಿಜಭಕ್ತರ ಕೈಯಲ್ಲಿ ಸಿಗುವನು ॥೨೪೭॥ ಧನದ ಹಿಂದೆಹಿಂದೆಯೇ ಪರಮ ಧರ್ಮವು ಪ್ರಾಪ್ತವಾಗುವುದು ಮತ್ತು ಧರ್ಮವಿದ್ದಲ್ಲಿ ಪರೋಕ್ಷ ಜ್ಞಾನಸಹಿತವಾಗಿ ಅಪರೋಕ್ಷ ಜ್ಞಾನವು ಪ್ರಾಪ್ತವಾಗುವುದು ॥೨೪೮॥ ಚಂದ್ರನ ಇರುವಿಕೆಯಿಂದಲೇ ಅದರ ಕಲೆಗಳು ಬೆಳೆಯುತ್ತಿರುವುವು. ಜೀವನವಿದ್ದಲ್ಲಿ ಜೀವಾಳವು ಬೆಳೆಯುವುದು. ಅದರಂತೆ ಧರ್ಮಶೀಲ ಮನುಷ್ಯನ ಮನೆಯಲ್ಲಿ ಧನದಿಂದಲೇ ಧರ್ಮದ ವೈಭವವು ದೃಷ್ಟಿಗೆ ಬೀಳುವುದು ॥೨೪೯॥ ಧರ್ಮವಿದ್ದಲ್ಲಿ ಶುದ್ಧ ಜ್ಞಾನವಿರುವುದು, ಜ್ಞಾನವಿದ್ದಲ್ಲಿ ವಿಜ್ಞಾನವಿರುವುದು, ವಿಜ್ಞಾನವಿದ್ದಲ್ಲಿ ಸಮಾಧಾನವಿರುವುದು ಮತ್ತು ಸಮಾಧಾನವಿದ್ದಲ್ಲಿ ಅಖಂಡವಾದ ಶಾಂತಿಯು ನೆಲೆಸುವುದು ॥೨೫೦॥ ಇಂಥ ಶ್ರೇಷ್ಠ ಫಲವು ಯಾವ ಈ ಧನದಿಂದ ಸಿಗುತ್ತಿರಲು, ಮೂರ್ಖ ಜನರು ಈ ಧನವನ್ನು ವಿಷಯ ವಿಲಾಸಗಳಿಗೆ ಖರ್ಚುಮಾಡುವರು. ದೇಹಲೋಭದಿಂದ ಮನುಷ್ಯರು ಹುಚ್ಚರಾಗುವರು ಮತ್ತು ಪ್ರತ್ಯಕ್ಷವಾಗಿರುವ ಮೃತ್ಯುವನ್ನು ಮರೆತುಬಿಡುವರು ॥೨೫೧॥ ಅಗ್ನಿಯಿಂದ ಉರಿಯುತ್ತಿರುವ ಮನೆಯಲ್ಲಿ ನಿಧಿ ಇಡಲು ಹೊರಟವನು ಮತ್ತು ಸಾಯುತ್ತಿರುವ ದೇಹಕ್ಕೆ ಶೃಂಗರಿಸಲು ನಡೆದವನು ಸಂಪೂರ್ಣವಾಗಿ ಹಾಳಾಗುವನೆಂದು ವೇದವು ಹೇಳುವುದು. ಆದರೆ ಈ ವೇದದ ವಚನವನ್ನು ಯಾರೂ ಕೇಳುವುದಿಲ್ಲ ॥೨೫೨॥ ಹುಟ್ಟಿದಾರಭ್ಯ ದಿನೇ ದಿನೇ ದೇಹಕ್ಕೆ ಕಾಲವು ನುಂಗುತ್ತಲೇ ಇರುವುದು. ಆದರೂ ದೇಹಲೋಭಕ್ಕೆ ಅಧೀನರಾಗಿ ಈ ನಿತ್ಯ ನೂತನವಾದ ಮರಣವನ್ನು ಜನರು ಹೇಗೆ ಮರೆಯುವರೋ ಏನೋ? ॥೨೫೩॥ ನೋಡುನೋಡುತ್ತಿದ್ದಂತೆಯೇ ಈ ಕಾಲವು ಬಾಲ್ಯಾವಸ್ಥೆಯನ್ನು ನುಂಗಿ ಬಿಡುವುದು. ಆಗ ತಾರುಣ್ಯವು ಪ್ರಾಪ್ತವಾಗುವುದು. ಈ ಕಾಲವು ತಾರುಣ್ಯದಶೆಯ ಕುತ್ತಿಗೆಯನ್ನು ಹಿಚುಕಿ ಅದನ್ನು ಸಹ ನುಂಗಿಬಿಡುವುದು ॥೨೫೪॥ ತಾರುಣ್ಯವನ್ನು ನುಂಗಿದನಂತರ ಗದಗದ ನಡುಗುವ ವಾರ್ಧಕ್ಯವನ್ನು ಕೊಡುವುದು. ಈ ರೀತಿಯ ಕಾಲನ ಕಾರ್ಯವು ಬ್ರಹ್ಮದೇವತಾದಿಗಳಿಗೂ ತಿಳಿಯಲು ಸಾಧ್ಯವಿಲ್ಲ ॥೨೫೫॥ ಈತನ ಒಂದೇ ಹೊಡೆತಕ್ಕೆ ಅಮರರಾದ ದೇವತೆಗಳೂ ಮರಣ ಹೊಂದುವರು. ಹೀಗಿರಲು ಈ ಮೂರ್ಖಜನರು ತಮ್ಮ ಜೀವಿತವು ಎಂದೂ ಮುಗಿಯುವದಿಲ್ಲವೆಂದು ತಿಳಿದುಕೊಂಡಿರುವರು ॥೨೫೬॥ ಈ ದೇಹವು ಮೊದಲೇ ಅಶಾಶ್ವತವಾಗಿರಲು, ಅದಕ್ಕೆ ಸಂಬಂಧಪಟ್ಟ ಭೋಗಗಳು ಹೇಗೆ ಶಾಶ್ವತವಾಗಿ ಇರುವುವು? ಆದರೆ ವಿಷಯಕ್ಕಾಗಿ ಹಣ ಖರ್ಚಿಸಿ ಸ್ತ್ರೀಲೋಭದಿಂದ ಜನರು ಭುಲಾಯಿಸಿ ಭ್ರಾಂತರಾಗಿಬಿಡುವರು ॥೨೫೭॥ ಹೀಗೆ ಈ ಜಗತ್ತಿನಲ್ಲಿಯ ಭೋಗಗಳು ನಾಶಿವಂತವಾಗಿರುವುವು. ಆದ್ದರಿಂದ ಈ ಭೋಗಗಳಿಗಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಭೋಗದ ಇಚ್ಛೆಯಿಂದ ಇವರು ಯಜ್ಞಗಳನ್ನು ಮಾಡಹತ್ತುವರು ॥೨೫೮॥ ಸುಖವು ಬೇಕೆಂಬ ಇಚ್ಛೆಯಿಂದ ಪತಂಗವು ಅಗ್ನಿಯಲ್ಲಿ ಜಿಗಿಯುವುದು. ಅದರಂತೆ ಈ ಜನರು ಈ ಲೋಕದ ಮತ್ತು ಪರಲೋಕದ ಸುಖಕ್ಕಾಗಿ ತಮ್ಮ ಅಧಃಪಾತವನ್ನು ಮಾಡಿಕೊಳ್ಳುವರು ॥೨೫೯॥ ಸ್ತ್ರೀ, ಮಾಂಸ, ಮದ್ಯ ಈ ಭೋಗಗಳು ವೇದೋಕ್ತವಾಗಿವೆ. ಹೀಗಿರಲು ಇವುಗಳಿಂದ ಪತನವು ಹೇಗಾಗುವುದು? ಹೀಗೆ ಹೇಳುವ ಮೂರ್ಖರಿಗೆ ವೇದದಲ್ಲಿನ ನಿಜವಾದ ಜ್ಞಾನವು ತಿಳಿದಿರುವುದಿಲ್ಲ ॥೨೬೦॥

ಯದ್ ಘ್ರಾಣಭಕ್ಷೋ ವಿಹಿತಃ ಸುರಾಯಾಸ್ತಥಾ ಪಶೋರಾಲಭನಂ ನ ಹಿಂಸಾ ।
ಏವಂ ವ್ಯವಾಯಃ ಪ್ರಜಯಾ ನ ರತ್ಯಾ ಇಮಂ ವಿಶುದ್ಧಂ ನ ವಿದುಃ ಸ್ವಧರ್ಮಮ್ ।೧೩॥

ಅರ್ಥ:- ಸೌತ್ರಾಮಣಿ ಯಜ್ಞದಲ್ಲಿ ಮದ್ಯಪ ವಾಸನೆ ಸೇವಿಸುವ ವಿಧಾನವಿದೆ. ಕುಡಿಯಲಿಕ್ಕೆ ಅಲ್ಲ. ಯಜ್ಞದಲ್ಲಿ ಪಶುವಿಗೆ ಸ್ಪರ್ಶಮಾಡುವ ವಿಧಾನವಿದೆ. ಹಿಂಸೆಕ್ಕಾಗಿ ಅಲ್ಲ. ಇದೇ ಪ್ರಕಾರವಾಗಿ ತನ್ನ ಧರ್ಮಪತ್ನಿಯಲ್ಲಿ ಮೈಥುನಕ್ಕೆ ಆಜ್ಞೆಮಾಡಿರುವದು ವಿಷಯಭೋಗಕ್ಕಾಗಿ ಅಲ್ಲ. ಧಾರ್ಮಿಕ ಪರಂಪರೆಯ ರಕ್ಷಣೆ ಮಾಡಲು ಸಂತಾನ ಪ್ರಾಪ್ತಿಗಾಗಿ ಇರುವುದು. ಆದರೆ ವಿಷಯೀ ಜನರು ಈ ಧರ್ಮದಲ್ಲಿನ ತತ್ವಗಳನ್ನು ಅರಿಯುವುದಿಲ್ಲ.

ವೇದವಿಹಿತ ಕರ್ಮಾಚರಣ । ತೇಥ ಸರ್ವಥಾ ನವ್ಹೇ ಪತನ । ಜೇಥ ಚುಕೇ ವೇದವಿಧಾನ । ತೇಥೇ ಪಾವೇ ಪತನ ಸಜ್ಞಾನ ।೨೬೧॥ ವೇದೀಂಚ್ಯಾ ಅರ್ಥವಾದಾಸರಿಸಾ । ಮನೀ ಬಾಂಧೋನಿ ಭೋಗಾಶಾ । ಯಜ್ಞಮಿಷೇ ಪಶುಹಿಂಸಾ । ಭೋಗಲಿಪ್ಸಾ ಕರೂ ಧಾಂವತೀ ।೨೬೨॥ ವೇದೇ ಬೋಲಿಲೇ "ಆಲಭನ" । ತ್ಯಾ ನಾಂವ ಮ್ಹಣತೀ ಪಶುಹನನ । ಹೇ ಸಕಾಮ ಮಾನಿತೀ ವಿಧಾನ । ನಿಷ್ಕಾಮಾ ಹನನ ಕದಾ ನ ಘಡೇ ।೨೬೩॥ ನಿಷ್ಕಾಮಾಸೀ ಯಾಗಯಜನ । ಸ್ವಧರ್ಮಾರ್ಥ ಕರಾವೇ ಯಜ್ಞ । ತೇಥ ಪಶೂಚೇ ಆಲಭನ । ಸರ್ವಥಾ ಹನನ ಕರೂ ನಯೇ ।೨೬೪॥ ಪಶೂಚೇ ಕರೂ ನಯೇ ಹನನ । ದೇವತೋದ್ದೇಶೇ ಅಂಗಸ್ಪರ್ಶನ । ಯಾ ನಾಂವ ಬೋಲಿಜೇ "ಆಲಭನ" । ಹೇ ಯಜ್ಞಾಚರಣ ನಿಷ್ಕಾಮ ।೨೬೫॥ ಹರಿಶ್ಚಂದ್ರಾಚ್ಯಾ ಯಾಗೀ । ಶುನಃಶೇಪ-ಪಶುಪ್ರಸಂಗೀ । ತೇಣೇ ಘಾವೋ ಲಾಗೋ ನೇದಿತಾ ಅಂಗೀ । ವೇದೋಕ್ತ ಪ್ರಯೋಗೀ ಯಜ್ಞಸಿದ್ಧೀ ಕೇಲೀ ।೨೬೬॥ ವೇದೋಕ್ತಮಂತ್ರಭಾಗಾರ್ಥ । ದೇವ ಸುಖೀ ಕರೋನಿ ಸಮಸ್ತ । ಆಪಣ ಝಾಲಾ ನಿರ್ಮುಕ್ತ । ಹಾ ಋಗ್ವೇದಾರ್ಥ ಬ್ರಾಹ್ಮಣೀ ।೨೬೭॥ ಯಾಪರೀ ಪಶುಘಾತ । ಯಜ್ಞೀ ನ ಲಗೇ ನಿಶ್ಚಿತ । ತೋ ಹರಿಶ್ಚಂದ್ರ ಯಾಗಾರ್ಥ । ಪಶುಘಾತ ನಿವಾರೀ ।೨೬೮॥ ತೇಥ ಮೀಮಾಂಸಕಾಂಚೇ ಮತ । ದೇವತೋದ್ದೇಶೇ ಜೋ ಪಶುಘಾತ । ಯಾ ನಾಂವ "ಆಲಭನ"ಮ್ಹಣತ । ಸ್ವರ್ಗ ಫಲಾರ್ಥ ಆವಶ್ಯಕ ।೨೬೯॥ ಕೇವಳ ಮಾಂಸಭಕ್ಷಣಾರ್ಥ । ಜೇ ಕರಿತೀ ಪಶುಘಾತ । ಹಿಂಸಾದೋಷ ತೇಥೇ ಪ್ರಾಪ್ತ । ಐಸೇ ಬೋಲತ ಮೀಮಾಂಸಕ ।೨೭೦॥ ದೇವತೋದ್ದೇಶೇ ಪಶೂಂಚಾ ಘಾತ । ತೇಣೇ ಸ್ವರ್ಗಭೋಗ ಹೋಯ ಪ್ರಾಪ್ತ । ತೋಹೀ ಭೋಗಕ್ಷಯೇ ಕ್ಷಯಾ ಜಾತ । ತೇಣೇ ಹಿಂಸಾ ಪ್ರಾಪ್ತ ಯಾಜ್ಞಿಕಾ ।೨೭೧॥ ಯಾಗ ಕರಿತಾ "ಸೌತ್ರಾಮಣೀ" । ಪುರೋಡಾಶ ಘ್ಯಾವಾ ಅವಘ್ರಾಣೀ । ಪರಿ ಪ್ರವರ್ತಾವೇ ಸುರಾಪಾನೀ । ಹೇ ವೇದವಿಧಾನೀ ಅಸೇನಾ ।೨೭೨॥ ಏವಂ ಜೇಥೇ ಪಶುಹನನ । ತೇ ಕರ್ಮ ಸದೋಷ ಪೂರ್ಣ । ಯಾಲಾಗೀ ತೇಥ ಅಧಃಪತನ । ಬೋಲಿಲೇ ಜಾಣ ಯಾಜ್ಞಿಕಾಂಸೀ ।೨೭೩॥

ವೇದವಿಹಿತ ಕರ್ಮಗಳ ಆಚರಣೆಯಿಂದ ಎಂದೂ ಅಧಃಪತನವಾಗಲಾರದು. ಆದರೆ, ವೇದವಿಧಾನಗಳು ತಪ್ಪಿದರೆ ಮಾತ್ರ ಅಲ್ಲಿ ದೊಡ್ಡ ಜ್ಞಾನಿಯೂ ಸಹ ಪತನನಾಗುವನು ।೨೬೧॥ ಇವರು ವೇದವಲ್ಲಿನ ಅರ್ಥವಾದವನ್ನು ಕೇಳಿ ಮನದಲ್ಲಿ ಭೋಗದ ಇಚ್ಛೆಯನ್ನು ಧರಿಸುವರು ಮತ್ತು ಭೋಗದ ಆಶೆಯಿಂದ ಯಜ್ಞದ ನಿಮಿತ್ತದಿಂದ ಪಶುಹಿಂಸೆಯನ್ನು ಮಾಡಲು ಧಾವಿಸುವರು ।೨೬೨॥ ವೇದವು ಯಾವ ಆಲಭನವನ್ನು ಹೇಳಿರುವುದು. ಇದಕ್ಕೆನೇ, ಇವರು ಪಶುಹನನ ಎನ್ನುವರು ; ಸಕಾಮ ಪುರುಷರು ಇದಕ್ಕೇನೇ ವಿಧಾನ ಎನ್ನುವರು. ಆದರೆ ನಿಷ್ಕಾಮ ಜನರು ಪಶುಹಿಂಸೆಯನ್ನು ಎಂದೂ ಮಾಡುವುದಿಲ್ಲ ।೨೬೩॥ ಇವರು ಧರ್ಮಕ್ಕಾಗಿ ಯಜ್ಞಯಾಗಗಳನ್ನು ಮಾಡುವರು. ಅದರಲ್ಲಿ ಪಶುವಿನ ಆಲಭನ ಮಾಡುವರು. ಪಶುವಿನ ವಧೆಯನ್ನು ಮಾಡುವುದಿಲ್ಲ ।೨೬೪॥ ದೇವತೆಗಳ ಉದ್ದೇಶದಿಂದ ಪಶುವಿನ ಶರೀರಕ್ಕೆ ಸ್ಪರ್ಶವನ್ನು ಮಾಡಬೇಕು. ಇದೇ ಆಲಭನವಾಗಿರುವುದು ಮತ್ತು ಇದ್ದಕ್ಕೇನೇ ನಿಶ್ಚಿತವಾಗಿಯೂ ನಿಷ್ಕಾಮ ಆಚರಣೆ ಎನ್ನುವರು ।೨೬೫॥ ಹರಿಶ್ಚಂದ್ರನ ಯಜ್ಞದಲ್ಲಿ(ವರುಣನಿಗೆ ಬಲಿಕೊಡಲು) ''ಶುನಃಶೇಪ'' ಹೆಸರಿನ ಒಬ್ಬ ಋಷಿಪುತ್ರನನ್ನು ತರಲಾಗಿತ್ತು. ಆಗ (ವಿಶ್ವಾಮಿತ್ರನು) ಆತನ ಶರೀರಕ್ಕೆ ಶಸ್ತ್ರದ ಘಾಯವನ್ನು ಮಾಡದೇ ವೇದೋಕ್ತ ಪ್ರಯೋಗದಿಂದಲೇ ಯಜ್ಞವನ್ನು ಸಿದ್ಧಿಗೊಳಿಸಿದನು ।೨೬೬॥ ವೇದೋಕ್ತ ಮಂತ್ರದಿಂದಲೇ ಸರ್ವ ದೇವತೆಗಳವರಿಗೆ ಸಂತುಷ್ಟಗೊಳಿಸಿ ಶುನಃಶೇಪನಿಗೆ ಮುಕ್ತಗೊಳಿಸಿದನು. ಹೀಗೆ ಋಗ್ವೇದಾರ್ಥ ಐತರೇಯ ಬ್ರಾಹ್ಮಣೀಯಲ್ಲಿ ಹೇಳಿರುವುದು ।೨೬೭॥ ಆದ್ದರಿಂದ ಯಜ್ಞದಲ್ಲಿ ಪಶುವಿನ ಘಾತವನ್ನು ಮಾಡಬೇಕಾಗುವುದಿಲ್ಲ. ಹರಿಶ್ಚಂದ್ರನು ಯಜ್ಞಕ್ಕಾಗಿ ಪಶುವಿನ ವಧೆಯನ್ನು ಮಾಡಲಿಲ್ಲ ।೨೬೮॥ ಹೀಗಿದ್ದರೂ ಮೀಮಾಂಸಕರ ಮತವು ಹೀಗಿರುವುದು. ಏನೆಂದರೆ, ದೇವತೆಗಳಿಗಾಗಿ ಪಶು ವಧೆ ಮಾಡುವುದಕ್ಕೆ ಅಲಾಭನ ಎನ್ನಬೇಕು. ಮತ್ತು ಸ್ವರ್ಗದ ಪ್ರಾಪ್ತಿಯಾಗಬೇಕಾದರೆ ಇದು ಅವಶ್ಯವಾಗಿರುವುದು ।೨೬೯॥ ಕೇವಲ ಮಾಂಸ ಭಕ್ಷಣೆಗಾಗಿ ಯಾರು ಪಶುಗಳನ್ನು ಕೊಲ್ಲುವರೋ ಅವರಿಗೆ ಹಿಂಸೆಯ ಪಾಪವು ತಟ್ಟುವುದು. ಹೀಗೆಂದು ಮೀಮಾಂಸಕರು ಹೇಳುವರು ।೨೭೦॥ ಆದರೆ ದೇವತೆಗಳಿಗಾಗಿ ಪಶುವನ್ನು ಕೊಲ್ಲುವುದರಿಂದ ಸ್ವರ್ಗದ ಪ್ರಾಪ್ತಿಯಾದರೂ, ಆ ಸ್ವರ್ಗಭೋಗವು ಕೆಲವು ಕಾಲದ ನಂತರ ನಾಶವಾಗುವುದು. ಆದ್ದರಿಂದ ಯಾಜ್ಞಿಕನಿಗೆ ಹಿಂಸೆಯ ದೋಷವು ಬಡೆಯುವುದು ।೨೭೧॥ ಸೌತ್ರಾಮಣೀ ಯಜ್ಞವನ್ನು ಮಾಡಿದ ನಂತರ ಅದರಲ್ಲಿನ ಪುರೋಡಾಶ ಅಂದರೆ ಯಜ್ಞದಲ್ಲಿನ ಅವಶೇಷವನ್ನು ಅದರ ಕೇವಲ ವಾಸನೆಯನ್ನು ಸ್ವೀಕರಿಸಬೇಕೆಂದು ಹೇಳಿರುವುದು ಆದರೆ ಸುರಾಪಾನವನ್ನು ಮಾಡಬೇಕೆಂದು ವೇದದ ವಿಧಾನದಲ್ಲಿ ಹೇಳಿರುವುದೇ ಇಲ್ಲ ।೨೭೨॥ ತಾತ್ಪರ್ಯವೇನೆಂದರೆ ಯಾವುದರಲ್ಲಿ ಪಶುವಿನ ವಧೆಯಾಗುವುದೋ ಆ ಕರ್ಮವು ಸದೋಷವಾಗುವುದು. ಆದ್ದರಿಂದಲೇ ಯಾಜ್ಞಿಕರ ಅಧಃಪತನ ಹೇಳಿರುವುದು ।೨೭೩॥

ವೇದೇ ವಿಹಿಲೇ ಪಾಣಿಗ್ರಹಣ । ತೇ ಪ್ರಜಾರ್ಥ ಸ್ವದಾರಾಗಮನ । ಪರೀ ರತ್ಯರ್ಥ ನಿತ್ಯ ಮೈಥುನ । ಹೇ ವೇದಾಜ್ಞಾ ಜಾಣ ಅಸೇನಾ ॥೨೭೪॥ ಮದ್ಯ - ಮಾಂಸ - ಮೈಥುನ ಪ್ರಸಂಗ । ಸ್ವಇಚ್ಛಾ ನ ಕರಾವಯಾ ಭೋಗ । ವೇದೇ ದ್ಯೋತಿಲಾ ವಿವಾಹ ಯಾಗ । ಭೋಗ ತ್ಯಾಗನಿಯಮಾರ್ಥ ॥೨೭೫॥ ನೇಣೋನಿ ಐಸಿಯಾ ಶುದ್ಧ ಧರ್ಮಾ । ಯಾಗಮಿಷೇ ಅಧರ್ಮಾ । ಪ್ರವರ್ತೋನಿ ಕಾಮ್ಯಕರ್ಮಾ । ಭೋಗ ಸಂಭ್ರಮಾ ಭೋಗಿತೀ ಮೂರ್ಖ ॥೨೭೬॥

ಯೇ ತ್ವನೇವಂವಿದೋಽಸಂತಃ ಸ್ತಬ್ಧಾಃ ಸದಭಿಮಾನಿನಃ ।
ಪಶೂಂದ್ರುಹ್ಯಂತಿ ವಿಸ್ರಬ್ಧಾಃ ಪ್ರೇತ್ಯ ಖಾದಂತಿ ತೇ ಚ ತಾನ್ ॥೧೪॥

ಅರ್ಥ:- ಯಾರು ವಿಶುದ್ಧ ಧರ್ಮವನ್ನು ತಿಳಿಯುವುದಿಲ್ಲವೋ ಅವರು ಗರ್ವಿಷ್ಠರು, [illegible]ಷ್ಠರಾಗಿರುವರು. ಆದರೂ ಸ್ವತಃಕ್ಕೆ ಶ್ರೇಷ್ಠರೆಂದು ತಿಳಿಯುವರು. ಇವರು ಪಶುಗಳ ಹಿಂಸೆಯನ್ನು ಮಾಡುವರು. ಇವರು ಸತ್ತಮೇಲೆ ಆ ಪಶುಗಳು ತಮಗೆ ಕೊಂದವರನ್ನು ಕಬಳಿಸುವುವು.

ನೇಣೋನಿ ಶುದ್ಧ ವೇದವಿಧಾನಾತೇ । ಅತಿಗರ್ವಾಚೇನಿ ಉದ್ಧತೇ । ಆಪಣಿಯಾ ಮಾನೂನಿ ಜ್ಞಾತೇ । ಅವಿಧೀ ಪಶೂತೇ ಘಾತು ಕರಿತೀ ॥೨೭೭॥ ಕೇವಳ ಅಭಿಚಾರಮತೇ । ಪಾವೋನಿ ಸಕಳ ಭೋಗಾತೇ । ಐಶಿಯಾ ಮಾನೋನಿ ವಿಶ್ವಾಸಾತೇ । ಸ್ವೇಚ್ಛಾ ಪಶೂತೇ ಘಾತ ಕರಿತೀ ॥೨೭೮॥ ಅವಿಧೀ ಪಶೂತೇ ವಧಿತೀ । ತ್ಯಾ ಯಾಜ್ಞಿಕಾಂಚೇ ದೇಹಾಂತೀ । ಮಾರಿಲೇ ಪಶು ಮಾರೂ ಯೇತೀ । ಝುಳಕತ ಕಾಂತೀ ಘೇಊನಿಯಾ ॥೨೭೯॥ ಏವಂ ನಿಮಾಲಿಯಾ ಯಾಜ್ಞಿಕಾಂಸೀ । ಭಕ್ಷಿಲೇ ಪಶು ಭಕ್ಷಿತೀ ತ್ಯಾಂಸೀ । ಜೈಸೇ ಸೇವಿಲೇ ವಿಷ ಪ್ರಾಣಿಯಾಂಸೀ । ಗ್ರಾಸೀ ಪ್ರಾಣಾಂಸೀ ಸಮೂಳ ॥೨೮೦॥

ದ್ವಿಷಂತಃ ಪರಕಾಯೇಷು ಸ್ವಾತ್ಮಾನಂ ಹರಿಮೀಶ್ವರಮ್ ।
ಮೃತಕೇ ಸಾನುಬಂಧೇಽಸ್ಮಿನ್ಬದ್ಧಸ್ನೇಹಾಃ ಪತಂತ್ಯಧಃ ॥೧೫॥

ಅರ್ಥ:- ಬೇರೆಯವರ ಶರೀರದಲ್ಲಿನ ಸ್ವಾತ್ಮಭೂತನಾದ ಈಶ್ವರನ ಅಭಿಚಾರಾದಿ ಕರ್ಮಗಳ ದ್ವೇಷವನ್ನು ಮಾಡುವವರು ಮತ್ತು ಪುತ್ರಾದಿಕಸಹ ಸಾಯುವ ದೇಹದಲ್ಲಿ ಅತಿಶಯವಾಗಿ ಪ್ರೇಮವನ್ನು ಮಾಡುವವರು ನಿಶ್ಚಿತವಾಗಿ ನರಕದಲ್ಲಿ ಮುಳುಗಿ ಹೋಗುವರು.

ಪರಮಾತ್ಮಾ ಜೋ ಶ್ರೀಹರೀ । ತೋ ಅಂತರ್ಯಾಮೀ ಸರ್ವ ಶರೀರೀ । ತೇಥ ಪರಾಚಾ ಜೋ ದ್ವೇಷು ಕರೀ । ತೇಣೇ ದ್ವೇಷಿಲಾ ಹರಿ ನಿಜಾತ್ಮ ॥೨೮೧॥ ಪರಾಸೀ ಜೋ ಕರೀ ಅಪಘಾತು । ತೇಣೇ ಕೇಲಾ ನಿಜಾತ್ಮಘಾತು । ತ್ಯಾಸೀ ಸಕುಟುಂಬ ಅಧಃಪಾತು । ರೌರವಾಂತು ತೇ ಬುಡತೀ ॥೨೮೨॥

ವೇದವು ಪಾಣಿಗ್ರಹಣ ಅಂದರೆ ಮದುವೆಯ ವಿಧಿಯನ್ನು ಹೇಳಿರುವುದು. ಅದು ಪ್ರಜೆಯ ಉತ್ಪತ್ತಿಗಾಗಿ ಸ್ವಸ್ತ್ರೀಯಲ್ಲಿ ಗಮನ ಮಾಡಬೇಕೆಂದಿರುವುದು. ಆದರೆ ಕೇವಲ ರತಿಸುಖಕ್ಕಾಗಿ ಪ್ರತಿನಿತ್ಯದಲ್ಲಿ ಸ್ತ್ರೀ ಸಂಗವನ್ನು ಮಾಡಬೇಕೆಂದು ಹೀಗೆ ವೇದದ ಆಜ್ಞೆಯು ಇರುವುದಿಲ್ಲ ॥೨೭೪॥ ಮದ್ಯಪಾನ, ಮಾಂಸಭಕ್ಷಣ ಮತ್ತು ಮೈಥುನ ಇವುಗಳನ್ನು ಮನಬಂದಂತೆ ಉಪಭೋಗಗಳನ್ನು ಪಡೆಯಬಾರದು. ಅಂದರೆ ಸ್ವೇಚ್ಛೆಯಾದ ಭೋಗಕ್ಕೆ ನಿಯಂತ್ರಣ ಹಾಕುವ ಉದ್ದೇಶದಿಂದ ವೇದವು ಯಜ್ಞವಿಧಿ ಮತ್ತು ಲಗ್ನವಿಧಿಗಳನ್ನು ಹೇಳಿಟ್ಟಿರುವುದು ॥೨೭೫॥ ಹೀಗಿರುವ ಶುದ್ಧ ಧರ್ಮವನ್ನು ಅರಿಯದೇ ಯಜ್ಞದ ನಿಮಿತ್ತ ಮಾಡಿ ಮೂರ್ಖಜನರು ಅಧರ್ಮದಿಂದ ನಡೆಯುವರು ಮತ್ತು ಕಾಮ್ಯ ಕರ್ಮಗಳನ್ನು ಮಾಡುತ್ತ ಭೋಗ ಸಂಭ್ರಮಗಳನ್ನು ಭೋಗಿಸುವರು ॥೨೭೬॥

ಇವರು ವೇದ ವಿಧಾನವನ್ನು ಅರಿಯದೇ ಗರ್ವದಿಂದ ಉನ್ಮತ್ತರಾಗುವರು ಮತ್ತು ಸ್ವತಃಕ್ಕೆ ಜ್ಞಾನಿ ಎಂದು ತಿಳಿದಿರುವರು. ಅವಿಧಿಗಳಿಂದ ಪಶುವಿನ ಹಿಂಸೆ ಮಾಡುವರು ॥೨೭೭॥ ಕೇವಲ ಜಾರಣ-ಮಾರಣಾದಿ ಕರ್ಮಗಳಿಂದ ಸರ್ವ ಭೋಗಗಳು ಪ್ರಾಪ್ತವಾಗುವವೆಂಬ ವಿಶ್ವಾಸವನ್ನು ಮನದಲ್ಲಿ ಧರಿಸಿ ಇವರು ಸ್ವೇಚ್ಛೆಯಿಂದ ಪಶುಗಳನ್ನು ಕೊಲ್ಲುವರು ॥೨೭೮॥ ಈ ಪ್ರಕಾರವಾಗಿ ಅಡ್ಡಮಾರ್ಗದಿಂದ ಅಥವಾ ವಿನಾಕಾರಣವಾಗಿ ಪಶುಗಳ ವಧೆ ಮಾಡುವ ಆ ಯಜ್ಞಕರ್ತರು ಮರಣ ಹೊಂದಿದ ಮೇಲೆ ಪಶುಗಳು ತೇಜಸ್ವರೂಪವನ್ನು ಧರಿಸಿ ಅವರನ್ನು ಕೊಲ್ಲಲು ಧಾವಿಸುವುವು ॥೨೭೯॥ ಈ ಪ್ರಕಾರವಾಗಿ ತಿಂದ ವಿಷವು ತಿಂದವನ ಪ್ರಾಣವನ್ನು ತಿಂದುಬಿಡುವುದು. ಅದರಂತೆ ಯಜ್ಞ ಮಾಡುವವರು ಮರಣವಾದಾಗ ಅವರು ಯಾವ ಪಶುವನ್ನು ಭಕ್ಷಿಸಿರುವರೋ ಅದೇ ಅವರನ್ನು ಪರಲೋಕದಲ್ಲಿ ಭಕ್ಷಿಸುವುದು ॥೨೮೦॥

ಪರಮಾತ್ಮನು ಸರ್ವರ ಶರೀರದಲ್ಲಿ ಅಂತರ್ಯಾಮಿ ರೂಪದಲ್ಲಿರುವನು. ಆದ್ದರಿಂದ ಬೇರೆಯವರ ದ್ವೇಷವನ್ನು ಮಾಡುವವರು ಅವರು ತಮ್ಮದೇ ಆದ ಹೃದಯಸ್ಥ ಪರಮಾತ್ಮನ ದ್ವೇಷವನ್ನು ಮಾಡಿದಂತಾಗುವುದು ॥೨೮೧॥ ಸಾರಾಂಶವೇನಂದರೆ ಇನ್ನೊಬ್ಬರನ್ನು ಯಾರು ಕೊಲ್ಲುವರೋ ಅವರು ತಮ್ಮನ್ನು ತಾವೇ ಕೊಲ್ಲಿದಂತಾಗುವುದು. ಇದರಿಂದ ಇವರ ಸಕುಟುಂಬವು ಅಧಃಪತನವಾಗಿ ರೌರವ ನರಕದಲ್ಲಿ ಬೀಳುವುದು ॥೨೮೨॥

ಯೇ ಕೈವಲ್ಯಮಸಂಪ್ರಾಪ್ತಾ ಯೇ ಚಾತೀತಾಶ್ಚ ಮೂಢತಾಂ ।
ತ್ರೈವರ್ಗಿಕಾ ಹ್ಯಕ್ಷಣಿಕಾ ಆತ್ಮಾನಂ ಘಾತಯಂತಿ ತೇ ।।೧೬।।

ಅರ್ಥ:- ಯಾವ ಜನರಿಗೆ ಆತ್ಮ ಜ್ಞಾನವಿಲ್ಲ, ಅವರಿಗೆ ಕೈವಲ್ಯಮೋಕ್ಷವು ಆಗುವುದಿಲ್ಲ. ಪೂರ್ಣ ಜ್ಞಾನಿ ಅಲ್ಲದ ಮತ್ತು ಪೂರ್ಣ ಅಜ್ಞಾನಿ ಅಲ್ಲದ ಇವರು ಅರ್ಥ, ಧರ್ಮ, ಕಾಮ ಈ ಮೂರು ಪುರುಷಾರ್ಥದಲ್ಲಿಯೇ ಮುಳುಗಿರುವರು. ಒಂದು ಕ್ಷಣಸಹ ಇವರಿಗೆ ಶಾಂತಿಯು ಪ್ರಾಪ್ತವಾಗುವುದಿಲ್ಲ. ಇವರು ತಮ್ಮ ಕೈಯಿಂದಲೇ ತಮ್ಮ ಕಾಲಿಗೆ ಕೊಡಲಿ ಪೆಟ್ಟು ಹಾಕಿಕೊಳ್ಳುವರು. ಇಂಥ ಜನರಿಗೆ ಆತ್ಮಘಾತಕರೆನ್ನುವರು.

ಸಜ್ಞಾನೀ ಸ್ವತಾ ತರತೀ । ಅಜ್ಞಾನೀ ಸಜ್ಞಾನಾ ಶರಣ ಯೇತೀ । ತೇಣೇ ತ್ಯಾಂಸೀ ಕೈವಲ್ಯಪ್ರಾಪ್ತೀ । ತ್ಯಾಂಚ್ಯಾ ವಚನೋಕ್ತಿ ವಿಶ್ವಾಸೇ ।।೨೮೩।। ಜೇ ಅಜ್ಞಾನ ನಾ ಸಜ್ಞಾನ । ಜ್ಯಾಂಸೀ ಕೇವಳ ಜ್ಞಾನಾಭಿಮಾನ । ಜ್ಯಾಂಚೇ ವಿಷಯೀ ಲೋಲುಪ ಮನ । ತೇ ಪುರುಷ ಜಾಣ ಆತ್ಮಘಾತೀ ।।೨೮೪।। ಸಾಧಾವಯಾ ಅರ್ಥ ಕಾಮ । ಜೇ ಕರಿತೀ ಅಭಿಚಾರಧರ್ಮ । ಹೇ ತ್ರೈವರ್ಣಿಕ ಘೋರ ಕರ್ಮ । ಆತ್ಮಘಾತೀ ಪರಮ ಜ್ಯಾಚೇ ತ್ಯಾಸೀ ।।೨೮೫।। ದೇಹಾಚಿಯಾ ಗೋಮಟಿಯಾ । ಜೇ ಕರಿತೀ ಅಭಿಚಾರಕ್ರಿಯಾ । ತೇಣೇ ಕರ್ಮೇ ಆಪಆಪಣಿಯಾ । ಸೃಜಿಲಾ ರಾಯಾ ನಿಜಘಾತು ।।೨೮೬।। ಜೋ ಸ್ವಯೇ ಬೈಸಲೀ ಖಾಂದೀ ತೋಡೀ । ತೋ ಖಾಂದೀಸಹಿತ ಪಡೇ ಬುಡೀ । ತೇವೀ ಕಾಮ್ಯಕರ್ಮಾಚ್ಯಾ ವೋಢೀ । ಕ್ರಿಯೇಸೀ ರೋಕಡೀ ಅಧಃಪಾತ ।।೨೮೭।।

ಏತ ಆತ್ಮಹನೋಽಶಾಂತಾ ಅಜ್ಞಾನೇ ಜ್ಞಾನಮಾನಿನಃ ।
ಸೀದಂತ್ಯಕೃತಕೃತ್ಯಾ ವೈ ಕಾಲಧ್ವಸ್ತಮನೋರಥಾಃ ।।೧೭।।

ಅರ್ಥ:- ಅಜ್ಞಾನಕ್ಕೇನೇ ಜ್ಞಾನವೆನ್ನುವ ಈ ಆತ್ಮಘಾತಕೀ ಜನರಿಗೆ ಎಂದೆಂದಿಗೂ ಶಾಂತಿಯು ದೊರಕದು. ಇವರ ಕರ್ಮದ ಪರಂಪರೆಯು ಎಂದೂ ಶಾಂತವಾಗದು. ಕಾಲವು ಇವರ ಮನೋರಥಗಳನ್ನು ವಿಧ್ವಂಸಗೊಳಿಸುವುದು. ಇವರ ಹೃದಯದಲ್ಲಿನ ದುಃಖವು ಎಂದೂ ಮುಗಿಯಲಾರದು.

ಕಾಮ ಕ್ರೋಧೀ ಅತಿಅದ್ಭುತ । ಕ್ರೂರಕರ್ಮೀ ಜೇ ಅಶಾಂತ । ತಿಹೀ ಆಪಆಪಣಿಯಾ ಅನಹಿತ । ನಿಜಾತ್ಮಘಾತ ಜೋಡಿಲಾ ।।೨೮೮।। ಸ್ವಯೇ ಕರ್ಮ ಕರಿತೀ ಅವಿಧೀ । ತೇಚಿ ಮ್ಹಣತೀ ಶುದ್ಧ ವಿಧೀ । ಅಜ್ಞಾನ ತೇಚಿ ಪ್ರತಿಪಾದೀ । ಜ್ಞಾನ ತ್ರಿಶುದ್ಧೀ ಮ್ಹಣೋನಿಯಾ ।।೨೮೯।। ತೇ ಕಾಮ್ಯಕರ್ಮೀ ಛಳಿಲೇ । ಕಾ ಮಹಾ ಮೋಹೇ ಆಕಳಿಲೇ । ಗರ್ವದಂಭಾದಿ ಭೇದೇ ಖಿಳಿಲೇ । ಕಾಳಸರ್ಪೇ ಗಿಳಿಲೇ ಸದ್ಬುದ್ಧೀಸೀ ।।೨೯೦।। ಗರ್ವಾದಿಜ್ವರಿತಮುಖೇ । ಗೋಡಪಣೇ ಕಡೂ ಠಾಕೇ । ವಿಷಪ್ರಾಯ ವಿಷಯಸುಖೇ । ಅತಿಹರಿಖೇ ಸೇವಿತೀ ।।೨೯೧।। ಐಸಾ ವಿಷಯಾಲಾಗೀ ಪಹಾ ಹೋ । ಆಪ್ತ ಮಾನೂನಿ ನಿಜದೇಹೋ । ರಚುನಿ ನಾನಾ ಉಪಾವೋ । ಅರ್ಥಸಂಗ್ರಹೋ ಸ್ವಯೇ ಕರಿತೀ ।।೨೯೨।।

ಜ್ಞಾನಿಯಾಗಿರುವವರು ಸ್ವತ: ಉದ್ಧಾರರಾಗುವರು. ಅಜ್ಞಾನಿಯಾದವರು ಜ್ಞಾನಿಗಳವರಿಗೆ ಶರಣಾಗುವರು. ಮತ್ತು ಅವರ ವಚನಗಳಲ್ಲಿ ದೃಢವಾದ ವಿಶ್ವಾಸವನ್ನಿಡುವರು. ಆದ್ದರಿಂದ ಇವರಿಗೂ ಮೋಕ್ಷಪ್ರಾಪ್ತಿಯಾಗುವುದು ।।೨೮೩।। ಆದರೆ ಜ್ಞಾನಿಯೂ ಅಲ್ಲ ಅಜ್ಞಾನಿಯೂ ಅಲ್ಲದವರಲ್ಲಿ ಕೇವಲ ಜ್ಞಾನದ ಅಭಿಮಾನವು ಇರುವುದು. ಇವರ ಮನವು ಕೇವಲ ವಿಷಯಗಳಲ್ಲಿ ಆಸಕ್ತಿ ಹೊಂದಿರುವುದು. ಈ ಪುರುಷರಿಗೆ ಆತ್ಮಘಾತಕರು ಎಂದು ತಿಳಿಯಬೇಕು ।।೨೮೪।। ಕೇವಲ ಅರ್ಥ ಮತ್ತು ಕಾಮವನ್ನು ಸಾಧಿಸುವುದಕ್ಕಾಗಿ ಜಾರಣ, ಮಾರಣ, ಉಚ್ಚಾಟನ ಇತ್ಯಾದಿ ಅಭಿಚಾರ ಕರ್ಮಗಳನ್ನು ಮಾಡುವವರು, ಮಾಡಿದ ಕರ್ಮಗಳಿಂದಲೇ ತಮ್ಮ ಘಾತವನ್ನು ಮಾಡಿಕೊಳ್ಳುವರು ।।೨೮೫।। ಹೇ ರಾಜನೇ, ಶರೀರದ ಸುಖಕ್ಕಾಗಿ ಯಾರು ಅಭಿಚಾರ ಕರ್ಮಗಳನ್ನು ಮಾಡುವರೋ ಅವರು, ಅದೇ ಕರ್ಮಗಳಿಂದ ತಮ್ಮನ್ನು ಘಾತ ಮಾಡಿಕೊಳ್ಳುವರು ।।೨೮೬।। ಯಾವನೊಬ್ಬ ಮನುಷ್ಯನು ಮರದ ಮೇಲೆ ತಾನು ಕುಳಿತುಕೊಂಡ ಟೊಂಗೆಯನ್ನೇ ಕಡೆದರೆ, ಆ ಟೊಂಗೆ ಸಮೇತವಾಗಿ ತಾನು ಕೆಳಗೆ ಬೀಳುವನು. ಅದರಂತೆ ಕಾಮ್ಯ ಕರ್ಮಗಳ ಆಸಕ್ತಿಯಿಂದ ಆತನ ತತ್ಕಾಲದಲ್ಲಿ ಅಧಃಪತನವಾಗುವುದು ।।೨೮೭।।

ಅತ್ಯಂತ ಕಾಮಾಸಕ್ತರು, ಅತಿಶಯ ಸಂತಾಪಿಗಳು ಮತ್ತು ಕ್ರೂರಕರ್ಮಗಳನ್ನು ಮಾಡುವ ಇಂಥ ಅಶಾಂತ ಜನರು ತಮ್ಮಿಂದ ತಾವೇ ತಮ್ಮ ಘಾತವನ್ನು ಮಾಡಿಕೊಳ್ಳುವರು ।।೨೮೮।। ತಾವೇ ಸ್ವತ: ಶಾಸ್ತ್ರದ ವಿರುದ್ಧವಾಗಿ ಕರ್ಮಗಳನ್ನು ಮಾಡಿ ಅದಕ್ಕೇನೇ ಶುದ್ಧ ವಿಧಿ ಎನ್ನುವರು. ಇವರು ಅಜ್ಞಾನಕ್ಕೇನೇ ಜ್ಞಾನವೆಂದು ಹೇಳುವರು ।।೨೮೯।। ಕಾಮ್ಯ ಕರ್ಮಗಳಿಂದ ಪೀಡಿತರಾದವರು ಅಥವಾ ಮೋಸ ಹೋದವರು ಮಹಾಮೋಹದಿಂದ ಸುತ್ತಿಕೊಂಡವರು ಗರ್ವ ದಂಭಗಳಿಂದ ಅಂಟಿಕೊಂಡಿರುವವರಾದ ಇವರ ಸದ್ಬುದ್ಧಿಯನ್ನು ಕಾಳಸರ್ಪವು ನುಂಗಿಬಿಡುವುದು ।।೨೯೦।। ಗರ್ವದ ಜ್ವರದಿಂದ ಅವರ ಬಾಯಿಗೆ ಸಿಹಿ ಪದಾರ್ಥಗಳು ವಿಷಹತ್ತುವುವು ಮತ್ತು ವಿಷದಂತಹ ಮಾರಕವಾಗಿರುವ ವಿಷಯ ಸುಖಗಳನ್ನು ಇವರು ಬಹಳ ಸಂತೋಷದಿಂದ ಸೇವನೆ ಮಾಡುವರು ।।೨೯೧।। ಇಂತಹ ಯಾವ ಈ ವಿಷಯಗಳಿಗಾಗಿ ತಮ್ಮ ದೇಹಕ್ಕೆ ಒಳ್ಳೆಯ ಹಿತಕರವೆಂದು ಭಾವಿಸಿ ಮತ್ತು ಅನೇಕ ಉಪಾಯಗಳನ್ನು ಯೋಜಿಸಿ, ಸ್ವತ: ಧನದ ಸಂಚಯ ಮಾಡುವರು ।।೨೯೨।।

ಹಿತ್ವಾತ್ಮಾ ಯಾ ಸರಚಿತಾ ಗೃಹಾಪತ್ಯಸುಹೃಚ್ಛ್ರಿಯಃ । ತಮೋ ವಿಶಂತ್ಯನಿಚ್ಛಂತೋ ವಾಸುದೇವ ಪರಾಂಙ್ಮುಖಾಃ ।।೧೮।।

ಅರ್ಥ:- ಹೇ ರಾಜನೇ, ಅಂತರ್ಯಾಮಿ ಭಗವಾನ ಶ್ರೀಕೃಷ್ಣನಿಗೆ ವಿನ್ಮುಖರಾದವರು ಅತ್ಯಂತ ಪರಿಶ್ರಮ ವಹಿಸಿ ಗೃಹ, ಪುತ್ರ, ಮತ್ತು ಧನಸಂಪತ್ತುಗಳನ್ನು ಒಂದುಗೂಡಿಸುವರು. ಆದರೆ ಕೊನೆಯಲ್ಲಿ ಇವರಿಗೆ ಈ ಎಲ್ಲವನ್ನೂ ಬಿಟ್ಟು ಹೋಗಬೇಕಾಗುವುದು. ಇಚ್ಛೆ ಇಲ್ಲದಿದ್ದರೂ ಇವರಿಗೆ ವಿವಶರಾಗಿ ನರಕಕ್ಕೆ ಹೋಗಬೇಕಾಗುವುದು. ಭಗವಂತನ ಭಜನೆಯನ್ನು ಮಾಡದ ವಿಷಯೀ ಪುರುಷರ ಈ ಗತಿಯಾಗುವುದು.

ಮರಣೇಸೀ ಝುಟೇ ಘೇತ । ಶ್ರೀ ಮೇಳವಿತೀ ಶ್ರೀಮಂತ । ಗೃಹ ದಾರಾ ಪುತ್ರ ವಿತ್ತ । ನಾನಾ ವಸ್ತುಜಾತಸಂಗ್ರಹೋ ।।೯೩।। ಐಸೇ ಭೋಗ ಆಯಾಸಯುಕ್ತ । ಸಾಂಡೂನಿ ಜ್ಞಾನಗರ್ವೀ ಸಮಸ್ತ । ಜ್ಞಾನಾಭಿಮಾನೇ ನೇಣಿಜೇತ । ಅಂಧತಮಾಂತ ಅತಿಗರ್ವೇ ।।೯೪।। ಜೇಥ ಅಂಧರಾಚೇ ಡೋಳೇ । ಹೋಊನಿ ಠಾಕತೀ ಆಂಧಳೇ । ತೇಥ ಮೋಹರಾತ್ರೀಚೇ ಕಾಳೇ । ಅಂಧತಮಮೇಳೇ ಅಧಿಕ ಕಾಂಟೇ ।।೯೫।। ಜಯಾ ಅಂಧಾರಾತೇ ಪ್ರಕಾಶು ಯೇತಾ । ನಿಖಿಳ ಕಾಳಾ ಹೋಯ ಸವಿತಾ । ಜೇಥ ಗಾಢ ಮೂಢ ಅವಸ್ಥಾ । ಅತಿಮೌಢ್ಯತಾ ಸ್ವಯೇ ಪಾವೇ ।।೯೬।। ಜೇಥ ಸುಷುಪ್ತೀಸೀ ಝೋಂಪ ಲಾಗೇ । ಆಳಸು ಆಳಸಿಜೇ ಸರ್ವಾಂಗೇ । ತೇಥ ಘರ ಬಾಂಧೋನಿ ನಿಜಾಂಗೇ । ನಿಂದಾ ಕ್ರೋಧ ದೋಘೇ ಸದಾ ವಸತೀ ।।೯೭।। ತೇಥ ಭಜನವಿಮುಖ ನರಾ । ಅಧಃಪತನ ಅಭಿಮಾನದ್ವಾರಾ । ಜೇವೀ ಅಥಾವೀ ಪಡಿಲಾ ಚಿರಾ । ತೇವೀ ಬಾಹೇರಾ ನಿಘೋ ನ ಶಕೇ ।।೯೮।। ಜೇ ವಾಸುದೇವೀ ಸದಾ ವಿಮುಖ । ಜ್ಯಾಂಸೀ ಹರಿಭಜನೀ ನಾಹೀ ಹರಿಖ । ತ್ಯಾಂಚೀ ದಶಾ ಹೇ ಅಧೋಮುಖ । ಅತಿದುಃಖೇ ದುಃಖ ಭೋಗಿತೀ ।।೯೯।। ಐಶೀ ಅಭಕ್ತಾಂಚೀ ಗತಿ । ಸಾಂಗಿತಲೀ ಆಹಾಚ ಸ್ಥಿತಿ । ವಾಂಚೂನಿ ತ್ಯಾಂಚೀ ದುರ್ಗತಿ । ವಾಗ್ದೇವತಾ ಭೀತೀ ಸ್ಪಷ್ಟ ವದತಾ ।।೧೦೦।। ಅಭಕ್ತಾಂಚೀ ಗತಿ ಬೋಲಣೇ । ಯಾಪರೀಸ ಚಾಂಗ ಮುಕೇ ಹೋಣೇ । ಪ್ರಾಣು ಜಾವೋ ಕಾ ಸರ್ವ ಪ್ರಾಣೇ । ಪರೀ ತೇ ದೋಷ ಕೋಣೇ ಬೋಲಾವೇ ।।೧೦೧।। ರಾಯಾ ತುಝಿಯಾ ಪ್ರಶ್ನಕಾಜೀ । ಹೇ ದಶಾ ಬೋಲಣೇ ಪಡೇ ಆಜೀ । ಯೇರ್ಹವೀ ಅಭಕ್ತವಾದೇ ಆಮ್ಹಾ ಮಾಜೀ । ವಾಚೇಚೀ ಪಾಂಜೀ ವಿಟಾಳಲೀ ನಾಹೀ ।।೧೦೨।। ಯಾವರೀ ಆತಾ ನೃಪನಾಥಾ । ವಕ್ತಾ ಆಣಿ ಸಮಸ್ತ ಶ್ರೋತಾ । ರಾಮ-ಸ್ಮರಣೇ ತತ್ತ್ವತಾ । ವಾಚೇಸೀ ಪ್ರಾಯಶ್ಚಿತ್ತಾ ಸವೇ ಕೀಜೇ ।।೧೦೩।। ಐಕೋನಿ ಅಭಕ್ತಾಂಚೀ ಗತೀ । ಅತಿಶಯೇಸೀ ದುಃಖಪ್ರಾಪ್ತೀ । ರಾಜಾ ಕಂಟಾಳಲಾ ಚಿತ್ತೀ । ಯಾಲಾಗೀ ನಿಶ್ಚಿತೀ ಹರಿನಾಮ ಸ್ಮರೇ ।।೧೦೪।। ಜ್ಯಾ ಸ್ಮರವಿಲೇ ಹರೀ ತೇ । ತೋಚಿ ಯಾಸೀ ಪುಸೋ ಯೇಥೇ । ಯುಗಾಯುಗೀ ಭಕ್ತ ತ್ಯಾತೇ । ಕೋಣೇ ವಿಧೀನೇ ಭಜನ ಕರಿತೀ ।।೧೦೫।।

ಮರಣದೊಂದಿಗೆ ಹೋರಾಡಿ ಶ್ರೀಮಂತ ಜನರು ಧನ ಕೂಡಿಸುವರು. ಮತ್ತು ಗೃಹ, ಸ್ತ್ರೀ, ಸಂಪತ್ತು ಇಂತಹಗಳನ್ನು ಸಂಗ್ರಹಿಸುವರು ।।೯೩।। ಈ ಎಲ್ಲವನ್ನು ಕಷ್ಟದಿಂದ ಗಳಿಸಿರುವುದನ್ನು ಭೋಗ ವಿಲಾಸಗಳನ್ನು ಒಗೆಯಬೇಕಾಗುವುದು. ಜ್ಞಾನದ ಗರ್ವವನ್ನು ಹೊತ್ತವರಾದ ಈ ಜನರಿಗೆ ಅವರ ಜ್ಞಾನದ ಅಭಿಮಾನವು ಅಂಧತಮಸ್ ಎಂಬ ನರಕದಲ್ಲಿ ಒಯ್ದು ಒಗೆಯುವುದು ।।೯೪।। ಅಲ್ಲಿ ಕತ್ತಲದ ಕಣ್ಣುಗಳು ಸಹ ಕುರುಡಾಗುವುವು. ಅಲ್ಲಿ ಮೋಹರೂಪ ರಾತ್ರಿಯ ಕತ್ತಲವು ಆ ಕುರುಡುತನಕ್ಕೆ ಕೂಡಿಕೊಳ್ಳುವುದರಿಂದ ಅತಿ ಹೆಚ್ಚಾದ ಭಯಂಕರವಾಗುವುದು ।।೯೫।। ಸೂರ್ಯನು ಸಹ ಆ ಅಂಧಕಾರಕ್ಕೆ ಪ್ರಕಾಶಗೊಳಿಸಲು ಬಂದನೆಂದರೆ ಆತನೇ ಕರೇಕಿಟ್ಟನಾಗಿಬಿಡುವನು. ಹೀಗೆ ಈ ಅಂಧತಮ ಅವಸ್ಥೆಯು ಅತಿದುಸ್ತರವಾಗಿದೆ. ಈ ಯಾವ ಮೂಢ, ಪಾಮರ ಜನರು ಈ ಅವಸ್ಥೆಗೆ ಪ್ರಾಪ್ತರಾಗುವರು ।।೯೬।। ಅಲ್ಲಿ ಸುಷುಪ್ತಿಗೆ ನಿದ್ರೆ ಹತ್ತುವುದು. ಅಲ್ಲಿ ಆಲಸ್ಯದ ಸರ್ವಾಂಗವೂ ಆಲಸ್ಯಮಯವಾಗುವುದು. ಅಲ್ಲಿ ನಿಂದೆ ಮತ್ತು ಕ್ರೋಧಗಳು ಮನೆಕಟ್ಟಿ ಯಾವಾಗಲೂ ಇರುವುವು ।।೯೭।। ಅಲ್ಲಿ ಭಜನವಿಮುಖ ಪುರುಷನ ಅಭಿಮಾನದಿಂದ ಅಧಃಪಾತವಾಗುವುದು. ಆಳವಾದ ಮಡುವಿನಲ್ಲಿ ಬಿದ್ದ ಕಲ್ಲು ಮೇಲಕ್ಕೆ ಎಂದೂ ಬರುವುದಿಲ್ಲ. ಅದರಂತೆ ಇವರು ಅಲ್ಲಿಂದ ಎಂದೂ ಹೊರಗೆ ಬೀಳುವುದಿಲ್ಲ ।।೯೮।। ಯಾರು ವಾಸುದೇವನಿಗೆ ಸದಾ ವಿಮುಖರಾದವರು ಯಾರಿಗೆ ಹರಿಭಜನೆಯಲ್ಲಿ ಸಂತೋಷವಾಗುವುದಿಲ್ಲ, ಅವರಿಗೂ ಅಧೋಗತಿಯಾಗಿ ಅತಿಶಯವಾಗಿ ದುಃಖವನ್ನು ಭೋಗಿಸುವರು ।।೯೯।। ಈ ಪ್ರಕಾರವಾಗಿ ಅಭಕ್ತರ ದಶೆಯನ್ನು ಅಲ್ಪಪ್ರಮಾಣದಲ್ಲಿ ಹೇಳಲಾಯಿತು. ಇವರ ದುರ್ಗತಿಯ ಸ್ಪಷ್ಟವಾದ ವರ್ಣನೆಯನ್ನು ಮಾಡಲು ವಾಗ್ದೇವಿಗೆ ಭಯವಾಗುವುದು ।।೧೦೦।। ಅಭಕ್ತರ ಗತಿಯನ್ನು ಹೇಳುವುದಕ್ಕಿಂತ ಮೂಕರಾಗುವುದು ಉತ್ತಮ. ಪ್ರಾಣ ಹೋದರೂ ಹೋಗಲಿ ಅವರ ದೋಷದ ಉಚ್ಚಾರವು ಬೇಡ ।।೧೦೧।। ಹೇ ರಾಜನೇ, ನೀನು ಪ್ರಶ್ನೆಯನ್ನು ಮಾಡಿದಕ್ಕಾಗಿ ಅವರ ಸ್ಥಿತಿಗತಿಯನ್ನು ಇಷ್ಟು ಹೇಳಬೇಕಾಯಿತು. ಇಲ್ಲದಿದ್ದರೆ ನಾವು ಎಂದೂ ಅಭಕ್ತರ ವಿಷಯಕ್ಕೆ ಮಾತನಾಡಿ ನಮ್ಮ ನಾಲಿಗೆಯನ್ನು ಮೈಲಿಗೆ ಮಾಡಿಕೊಳ್ಳುವುದಿಲ್ಲ ।।೧೦೨।। ಹೇ ನೃಪನಾಥನೇ ಈಗ ಇದಕ್ಕಾಗಿ ವಕ್ತಾನಾದ ನಾನು ನೀವೆಲ್ಲ ಶ್ರೋತೃಗಳು ಎಲ್ಲರೂ ಕೂಡಿ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಹೀಗೆ ನುಡಿದು ವಾಣಿಗೆ ಪ್ರಾಯಶ್ಚಿತ್ತವನ್ನು ಕೊಡಬೇಕು ।।೧೦೩।। ಹೀಗೆ ಅಭಕ್ತರ ದಶೆಗಳನ್ನು ಕೇಳಿ ರಾಜನಿಗೆ ಅತ್ಯಂತ ದುಃಖವಾಯಿತು. ಈತನು ಬೇಸರಗೊಂಡನು ಮತ್ತು ಶಾಂತಚಿತ್ತದಿಂದ ಹರಿಯನ್ನು ಸ್ಮರಿಸಲಾರಂಭಿಸಿದನು ।।೧೦೪।। ಯಾವ ಹರಿಯ ಸ್ಮರಣೆ ಮಾಡಲು ಹೇಳಿದ ಇವರಿಗೆ ಹರಿವಿಷಯಕ್ಕೆ ಕೇಳಬೇಕೆಂದು ಹರಿಯ ಭಕ್ತರು ಯುಗಯುಗಗಳಲ್ಲಿ ಯಾವ ಪ್ರಕಾರವಾಗಿ ಭಜನೆ ಮಾಡುವರು? ಹೀಗೆ ಈತನು ನಮ್ರ ಭಾವದಿಂದ ಪ್ರಶ್ನೆಯನ್ನು ಮಾಡಿದನು ।।೧೦೫।।

ರಾಜೋವಾಚ:-

ಕಸ್ಮಿನ್ಕಾಲೇ ಸ ಭಗವಾನ್ ಕಿಂ ವರ್ಣಃ ಕಿದೃಶೋ ನೃಭಿಃ ।
ನಾಮ್ನಾ ವಾ ಕೇನ ವಿಧಿನಾ ಪೂಜ್ಯತೇ ತದಿಹೋಚ್ಯತಾಮ್ ।೧೯॥

ಅರ್ಥ:- ರಾಜನು ಕೇಳಿದನು, ಹೇ ಯೋಗೀಶ್ವರರೇ, ಭಗವಾನನು ಯಾವ ವೇಳೆಯಲ್ಲಿ ಯಾವ ವರ್ಣದ, ಯಾವ ಆಕಾರವನ್ನು ಸ್ವೀಕಾರ ಮಾಡುವನು? ಮಾನವರು ಆತನನ್ನು ಯಾವ ನಾಮದಿಂದ ಮತ್ತು ಯಾವ ವಿಧಿಯಿಂದ ಉಪಾಸನೆಯನ್ನು ಮಾಡುತ್ತಾರೆ?

ಜ್ಯಾಚೇನಿ ಸ್ಮರಣೇ ತತ್ತ್ವತಾ । ಕರ್ಮಾಕರ್ಮೇ ನುಧವಿತೀ ಮಾಥಾ । ತ್ಯಾ ಭಗವಂತಾಚೀ ಕಥಾ । ಮಾಝಿಯಾ ಹಿತಾಲಾಗೀ ಸಾಂಗಾ ।೩೦೬॥ ಜೋ ಪರಮಾತ್ಮಾ ಶ್ರೀಹರೀ । ತೋ ಸೃಷ್ಟ್ಯಾದಿ ಯುಗಯುಗಾಂತರೀ । ಕೋಣೇ ನಾಮೇ ರೂಪೇ ವರ್ಣಾಕಾರೀ । ಭಕ್ತ ಕೈಶಾಪರೀ ಪೂಜಿತೀ ।೩೦೭॥ ಆಣಿ ತೇ ಕಾಳಿಂಚ್ಯಾ ಪ್ರಜಾ । ಕೈಸೇನಿ ಯಜಿತೀ ಅಧೋಕ್ಷಜಾ । ಕವಣೇ ವಿಧೀ ಕರಿತೀ ಪೂಜಾ । ತೇ ಯೋಗಿರಾಜಾ ಸಾಂಗಿಜೇ ।೩೦೮॥ ತುಮಚೀ ಮುಖೀಚೇ ಕೃಪಾವಚನ । ತ್ಯಾ ಪುಢೇ ಅಮೃತಹೀ ಗೌಣ । ವಚನೇ ಪರಮಾನಂದ ಪೂರ್ಣ । ಜನ್ಮ ಮರಣ ಉಚ್ಛೇದೀ ।೩೦೯॥ ತ್ಯಾ ಹೀಮಾಜೇ ಭಗವದ್ಗುಣ । ಯುಗಾನುವರ್ತೀ ನಾರಾಯಣ । ತ್ಯಾಚೇ ಭಜನಪೂಜನವಿಧಾನ । ಕೃಪಾ ಕರೂನ ಸಾಂಗಿಜೇ ಸ್ವಾಮೀ ।೩೧೦॥ ಐಕೋನಿ ರಾಯಾಚೇ ವಚನ । ಸಂತೋಷಲೇ ಅವಘೇ ಜಣ । ಜಾಣೋನಿ ಹರಿಗುಣಾಂಚಾ ಪ್ರಶ್ನ । ಕನಿಷ್ಠ "ಕರಭಾಜನ" ಬೋಲತಾ ಝಾಲಾ ।೩೧೧॥

ಕರಭಾಜನ ಉವಾಚ; ಕೃತಂ ತ್ರೇತಾ ದ್ವಾಪರಂ ಚ ಕಲಿರಿತ್ಯೇಷು ಕೇಶವಃ ।
ನಾನಾವರ್ಣಾಭಿದಾಕಾರೋ ನಾನೈವ ವಿಧಿನೇಜ್ಯತೇ ।೨೦॥

ಅರ್ಥ:- ಕರಭಾಜನನು ನುಡಿದನು, ಕೃತ, ತ್ರೇತ, ದ್ವಾಪರ ಮತ್ತು ಕಲಿ ಈ ನಾಲ್ಕು ಯುಗಗಳಲ್ಲಿಯೂ ಕೇಶವನು ಬೇರೆ ಬೇರೆ ನಾಮ,ರೂಪ, ವರ್ಣಗಳಲ್ಲಿ ಅವತರಿಸಿ ವಿವಿಧ ವಿಧಾನಗಳಲ್ಲಿ ಪೂಜೆಗೊಳ್ಳುತ್ತಾನೆ.

ನಾನಾ ವರ್ಣ ನಾನಾಕಾರೇ । ನಾನಾ ನಾಮ ನಾನೋಪಚಾರೇ । ಕೃತ-ತ್ರೇತಾ-ದ್ವಾಪರೇ । ಭಕ್ತ ನಿರ್ಧಾರೇ ಕೇಶವು ಯಜಿತೀ ।೩೧೨॥ "ಕ" ಕಾರ ಬ್ರಹ್ಮಾ "ವ" ಕಾರ ವಿಷ್ಣು । "ಶ" ಕಾರ ಸ್ವಯೇ ತ್ರಿನಯನು । ಕೇಶವ ತೋ ಗುಣವಿಹೀನು । ಪ್ರಕಾಶ ಪೂರ್ಣು ತಿಹೀಂಚಾ ।೩೧೩॥ ಕೇಶವ ಕೇವಳ ಅರ್ಧಮಾತ್ರಾ । ನ ಯೇ ವ್ಯಕ್ತಾವ್ಯಕ್ತ ಉಚ್ಚಾರಾ । ವ್ಯಾಪ್ಯೇವೀಣ ವ್ಯಾಪಕು ಖರಾ । ಸಬಾಹ್ಯಾಭ್ಯಂತರಾ ಏಕತ್ವೇ ।೩೧೪॥ ತೋಚಿ ಯುಗಪರತ್ವೇ ರೂಪ ನಾಮ । ಭಜನವಿಧಿ ಕ್ರಿಯಾಧರ್ಮ । ಭಕ್ತ ಪೂಜಿತೀ ಪುರುಷೋತ್ತಮ । ತೋ ಅನುಕ್ರಮ ಅವಧಾರೀ ।೩೧೫॥

ಯಾರ ಸ್ಮರಣೆಯನ್ನು ಮಾಡಲು ಕರ್ಮ-ಅಕರ್ಮಗಳು ನಿರ್ಮಾಣವಾಗಲು ಶಕ್ಯವೇ ಇಲ್ಲ. ಹೀಗಿರುವ ಆ ಭಗವಂತನ ಕಥೆಯನ್ನು ನನ್ನ ಹಿತಕ್ಕಾಗಿ ಹೇಳಿರಿ ।೩೦೬॥ ಆ ಯಾವ ಪರಮಾತ್ಮ ಶ್ರೀಹರಿಯು ಸೃಷ್ಟಿಯ ಆರಂಭದ, ಯುಗಯುಗಗಳಲ್ಲಿ ಯಾವ ಯಾವ ಹೆಸರಿನಿಂದ ಯಾವ ಯಾವ ರೂಪದಿಂದ ಮತ್ತು ಯಾವ ಯಾವ ವರ್ಣಗಳಿಂದ ಅವತರಿಸುವನು? ಹಾಗೆಯೇ ಭಕ್ತರು ಆತನ ಪೂಜೆಯನ್ನು ಯಾವ ಯಾವ ರೀತಿಗಳಲ್ಲಿ ಮಾಡುವರು? ।೩೦೭॥ ಆಗಿನ ಕಾಲದ ಜನರು ಯಾವ ಪ್ರಕಾರದಿಂದ ಈಶ್ವರನ ಭಜನೆಯನ್ನು ಮಾಡುವರು? ಯಾವ ವಿಧಿಯಿಂದ ಪೂಜೆಯನ್ನು ಮಾಡುವರು? ಅವುಗಳನ್ನು ಕೃಪೆ ಮಾಡಿ ನನಗೆ ಹೇಳಿರಿ ।೩೦೮॥ ನಿಮ್ಮ ಮುಖದಿಂದ ಹೊರಬೀಳುವ ವಚನಗಳ ಮುಂದೆ ಅಮೃತವೂ ಸಪ್ಪಗಾಗುವುದು. ತಮ್ಮ ಕೃಪಾಯುಕ್ತ ವಚನಗಳಿಂದ ಪರಮಾನಂದದ ಪ್ರಾಪ್ತಿಯಾಗಿ ಜನ್ಮ ಮರಣಗಳ ನಾಶವಾಗುವುದು ।೩೦೯॥ ಯುಗಧರ್ಮ ಪ್ರಮಾಣದಂತೆ ನಡೆಯುವ ನಾರಾಯಣನ ಗುಣಾನುವಾದವನ್ನು ಮತ್ತು ಆತನ ಭಜನೆ ಪೂಜನೆಯ ವಿಧಿಗಳನ್ನು ಕೃಪೆಮಾಡಿ ನೀವು ನನಗೆ ಹೇಳಿರಿ ।೩೧೦॥ ರಾಜನ ಈ ಕೇಳಿಕೆಯನ್ನು ಕೇಳಿ ಸರ್ವರಿಗೂ ಸಂತೋಷವಾಯಿತು. ಎಲ್ಲರಕ್ಕಿಂತ ಚಿಕ್ಕವನಾದ ಕರಭಾಜನನು ಹರಿಗುಣದ ಪ್ರಶ್ನೆಯನ್ನು ತಿಳಿದುಕೊಂಡು ಹೇಳಲಾರಂಭಿಸಿದನು ।೩೧೧॥

ಕೃತ, ತ್ರೇತಾ, ದ್ವಾಪರ ಈ ಯುಗಗಳಲ್ಲಿ ಭಕ್ತರು ನಾನಾ ವರ್ಣಗಳಲ್ಲಿ, ನಾನಾ ಆಕಾರಗಳಲ್ಲಿ, ನಾನಾ ನಾಮಗಳಲ್ಲಿ ಮತ್ತು ನಾನಾ ಪ್ರಕಾರಗಳ ಉಪಚಾರಗಳಿಂದ ಕೇಶವನ ಪೂಜೆಯನ್ನು ಮಾಡುತ್ತಿರುವರು ।೩೧೨॥ ಕೇಶವ ಈ ಶಬ್ದದಲ್ಲಿನ "ಕ" ಕಾರವು ಬ್ರಹ್ಮಾ "ವ" ಕಾರವು ವಿಷ್ಣು "ಶ" ಕಾರವು ಸಾಕ್ಷಾತ್ ತ್ರಿನೇತ್ರ, ಶಂಕರನು. ಕೇಶವನು ಗುಣರಹಿತನಾಗಿ ಈ ಮೂವರ ಪೂರ್ಣ ಪ್ರಕಾಶಕನಾಗಿರುವನು ।೩೧೩॥ ಕೇಶವನು ಕೇವಲ ಅರ್ಧಮಾತ್ರಾನಾಗಿರುವನು. ಈತನೇ ಸರ್ವವ್ಯಕ್ತ ಅವ್ಯಕ್ತನಾಗಿದ್ದು ಅನಿರ್ವಾಚ್ಯನಾಗಿರುವನು. ಈತನು ಸಬಾಹ್ಯ ಅಭ್ಯಂತರಗಳಲ್ಲಿ ಒಬ್ಬನೇ ಇರುವುದರಿಂದ ಪೂರ್ಣವ್ಯಾಪಕನಾಗಿರುವನು. ಆದರೆ ಆತನಲ್ಲಿ ವ್ಯಾಪ್ಯತ್ವಧರ್ಮ ಇರುವುದಿಲ್ಲ ।೧೧೪॥ ಈತನು ಯುಗಪ್ರಮಾಣದಂತೆ ಭಿನ್ನ ಭಿನ್ನವಾದ ನಾಮರೂಪಗಳನ್ನು ಧರಿಸುವನು. ಭಜನವಿಧೀ, ಕರ್ಮ ಮತ್ತು ಧರ್ಮಗಳಿಗೆ ಪ್ರವೃತ್ತಗೊಳಿಸುವನು. ಭಕ್ತರು ಆ ಪುರುಷೋತ್ತಮನ ಪೂಜೆಯನ್ನು ಯಾವ ಅನುಕ್ರಮದಿಂದ ಮಾಡುವರೆಂಬುದನ್ನು ನೀನು ಕೇಳು ।೩೧೫॥

ಕೃತೇ ಶುಕ್ಲಶ್ಚತುರ್ಬಾಹುರ್ಜಟಿಲೋ ವಲ್ಕಲಾಂಬರಃ । ಕೃಷ್ಣಾಜಿನೋಪವೀತಾಕ್ಷಾನ್ ಬಿಭ್ರದ್‌ದಂಡಕಮಂಡಲೂನ್ ।೨೧॥

ಅರ್ಥ:- ಕೃತಯುಗದಲ್ಲಿ ಭಗವಾನ ಶ್ರೀವಿಗ್ರಹದ ವರ್ಣವು ಶ್ವೇತವಾಗಿರುವುದು. ಆತನಿಗೆ ನಾಲ್ಕು ಭುಜಗಳು ಮಸ್ತಕದ ಮೇಲೆ ಜಟೆ ಇರುವುದು. ಈತನು ನಾರುಬಟ್ಟೆ ಧರಿಸುವವನು, ಕೃಷ್ಣಾಜಿನ, ಯಜ್ಞೋಪವೀತ, ಅಕ್ಷಮಾಲಾ, ದಂಡ ಮತ್ತು ಕಮಂಡಲ ಇವುಗಳನ್ನು ಧರಿಸಿ ಭಗವಾನನು ಬ್ರಹ್ಮಚಾರಿ ವೇಷದಿಂದ ಯುಕ್ತನಾಗಿರುವನು.

ಕೃತಯುಗೀ ಶ್ವೇತವರ್ಣಧರ । ಜಟಿಲ ಚತುರ್ಭುಜ ವಲ್ಕಲಾಂಬರ । ದಂಡಕಮಂಡಲ್ವಾಂಕಿತ ಕರ । ಅಜಿನ ಬ್ರಹ್ಮಸೂತ್ರ ಅಕ್ಷಮಾಲಾ ಹಾತೀ ।।೩೧೬॥ ಬ್ರಹ್ಮಚರ್ಯೇ ದೃಢವ್ರತ । ಯೇ ಚಿನ್ಹೀ ಚಿನ್ಹಾಂಕಿತ । ಪರಮಾತ್ಮಾ ಮೂರ್ತಿಮಂತ । ಭಕ್ತ ಯಾಪರೀ ಯಜಿತೀ ।।೩೧೭॥

ಮನುಷ್ಯಾಸ್ತು ತದಾ ಶಾಂತಾ ನಿರ್ವೈರಾಃ ಸುಹೃದಃ ಸಮಾಃ । ಯಜಂತಿ ತಪಸಾ ದೇವಂ ಶಮೇನ ಚ ದಮೇನ ಚ ।೨೨॥

ಅರ್ಥ:- ಕೃತಯುಗದಲ್ಲಿ ಮನುಷ್ಯರು ಪರಮ ಶಾಂತರು, ಪರಸ್ಪರರಲ್ಲಿ ವೈರರಹಿತರು, ಸರ್ವರ ಹಿತಚಿಂತಕರು, ಸಮದರ್ಶಿಯಾಗಿರುವರು. ಈ ಜನರು ಇಂದ್ರಿಯಗಳನ್ನು ಮತ್ತು ಮನಸ್ಸನ್ನು ವಶಗೊಳಿಸಿ ಧ್ಯಾನರೂಪ ತಪಶ್ಚರ್ಯದ್ವಾರಾ ಸರ್ವರ ಪ್ರಕಾಶಕ ಪರಮಾತ್ಮನ ಆರಾಧನೆಯನ್ನು ಮಾಡುತ್ತಿರುವರು .

ತೇ ಕಾಳಿಚೇ ಸಕಳ ನರ । ಸದಾ ಶಾಂತ ನಿರ್ವೈರ । ಸಮತಾಬುದ್ಧೀ ನಿರಂತರ । ಸುಹೃನ್ಮಿತ್ರ ಪರಸ್ಪರೇ ।।೩೧೮॥ ತೈ ತಪೇ ಕರಾವೇ ದೇವಯಜನ । ತ್ಯಾ ತಪಾಚೇ ಮುಖ್ಯ ಲಕ್ಷಣ । ಶಮ-ದಮ ಸಾಧೂನಿ ಸಂಪೂರ್ಣ । ಭಗವದ್ಭಜನ ಸ್ವಯೇ ಕರಿತೀ ।।೩೧೯॥ ತೈ ದೇವಾಚೇ ನಾಮೋಚ್ಚರಣ । ದಶಧಾ ನಾಮೀ ನಾಮಸ್ಮರಣ । ತೇಚಿ ನಾಮ ಕೋಣ ಕೋಣ । ಐಕ ಸಾವಧಾನ ನೃಪನಾಥಾ ।।೩೨೦॥

ಹಂಸಃ ಸುಪರ್ಣೋ ವೈಕುಂಠೋ ಧರ್ಮೋ ಯೋಗೇಶ್ವರೋಽಮಲಃ ।
ಈಶ್ವರಃ ಪುರುಷೋಽವ್ಯಕ್ತಃ ಪರಮಾತ್ಮೇತಿ ಗೀಯತೇ ।೨೩॥

ಅರ್ಥ:- ಈ ಜನರು ಹಂಸ, ಸುಪರ್ಣ, ವೈಕುಂಠ, ಧರ್ಮ, ಯೋಗೇಶ್ವರ, ಅಮಲ, ಈಶ್ವರ, ಪುರುಷ, ಅವ್ಯಕ್ತ ಮತ್ತು ಪರಮಾತ್ಮಾ ಎಂಬ ನಾಮಗಳಿಂದ ಭಗವಂತನ ಗುಣ ಲೀಲೆ ಇತ್ಯಾದಿಗಳ ಗಾನ ಮಾಡುವರು.

ಹಂಸ ಸುಪರ್ಣ ವೈಕುಂಠ । ಧರ್ಮ ಯೋಗೇಶ್ವರ ಶ್ರೇಷ್ಠ । ಅಮಲ ಈಶ್ವರ ವರಿಷ್ಠ । ಪುರುಷ ಅವ್ಯಕ್ತ ನಾಮಪಾಠ ಪರಮಾತ್ಮಾ ಮ್ಹಣತೀ ।।೩೨೧॥ ತೇ ಕಾಳೀಚೇ ಭಕ್ತ ಶ್ರೇಷ್ಠ । ಯಾ ನಾಮಾಂಚಾ ನಾಮಪಾಠ । ಗಾಯನ ಕರಿತೀ ಘಡಘಡಾಟ । ಭವಸಂಕಟ ನಿರ್ದಾಳಿತೀ ।।೩೨೨॥ ಹೇ ಕೃತಯುಗೀಚೇ ಯಜನ । ತುಜ ಸಾಂಗಿತಲೇ ಸಂಪೂರ್ಣ । ಆತಾ ತ್ರೇತಾಯುಗೀಚೇ ಭಜನ । ಮೂರ್ತೀಚೇ ಧ್ಯಾನ ತೇ ಐಕ ।।೩೨೩॥

ತ್ರೇತಾಯಾಂ ರಕ್ತವರ್ಣೋಽಸೌ ಚತುರ್ಬಾಹುಸ್ತ್ರಿಮೇಖಲಃ । ಹಿರಣ್ಯಕೇಶಸ್ತ್ರಯ್ಯಾತ್ಮಾ ಸ್ರುಕ್‌ಸ್ರುವಾದ್ಯುಪಲಕ್ಷಣಃ ।೨೪॥

ಅರ್ಥ:- ತ್ರೇತಾಯುಗದಲ್ಲಿ ಭಗವಂತನು ಕೆಂಪುವರ್ಣದವನಾಗಿ ನಾಲ್ಕು ಭುಜಗಳನ್ನು ಸುವರ್ಣ ಕೇಶವನ್ನು ಹೊಂದಿರುತ್ತಾನೆ. ಮೂರು ವೇದಗಳ ದೀಕ್ಷೆಯ ಸಂಕೇತವಾದ ಮುಪ್ಪುರಿಯಾದ ನಡುಕಟ್ಟನ್ನು ಧರಿಸಿರುತ್ತಾನೆ. ಈತನು ವೇದಪ್ರತಿಪಾದಿತ ಯಜ್ಞದ ರೂಪದಲ್ಲಿದ್ದು ಸ್ರುಕ್, ಸ್ರುವಾ ಇತ್ಯಾದಿ ಯಜ್ಞ ಪಾತ್ರೆಗಳನ್ನು ಧಾರಣೆ ಮಾಡುವವನು.

ಕೃತಯುಗದಲ್ಲಿ ಗೌರವರ್ಣ, ಜಟಾಧಾರೀ ಚತುರ್ಭುಜ, ನಾರುಬಟ್ಟೆ ಧಾರಣೆ, ಕೈಗಳಲ್ಲಿ ದಂಡ ಕಮಂಡಲಗಳ ಧಾರಣೆ, ಮೃಗಚರ್ಮ, ಯಜ್ಞೋಪವೀತ ಮತ್ತು ಕೈಯಲ್ಲಿ ರುದ್ರಾಕ್ಷಿಯ ಮಾಲೆ ।೩೧೬॥ ಕಡತರವಾದ ಬ್ರಹ್ಮಚರ್ಯವ್ರತ ಧರಿಸುವವನು, ಈ ಲಕ್ಷಣಗಳಿಂದ ಯುಕ್ತನಾಗಿರುವ ಮೂರ್ತಿಮಂತ ಪರಮಾತ್ಮನ ಪೂಜೆಯನ್ನು ಕೃತಯುಗದಲ್ಲಿನ ಭಕ್ತರು ಮಾಡುವರು ।೩೧೭॥

ಆ ಕಾಲದಲ್ಲಿ ಎಲ್ಲ ಜನರು ಶಾಂತರು, ನಿರ್ವೈರರು, ಯಾವಾಗಲೂ ಸಮಬುದ್ಧಿಯನ್ನು ಧರಿಸಿದವರು, ಪರಸ್ಪರರಲ್ಲಿ ನಿರಪೇಕ್ಷವಾದ ಪ್ರೇಮ ಮಾಡುವವರಾಗಿರುವರು ।೩೧೮॥ ಆಗ ಅವರು ತಪಸ್ಸನ್ನಾಚರಿಸಿ ದೇವರ ಉಪಾಸನೆಯನ್ನು ಮಾಡುವರು. ಆ ತಪದ ಮುಖ್ಯ ಲಕ್ಷಣವೆಂದರೆ ಶಮದಮಗಳನ್ನು ಸಂಪೂರ್ಣವಾಗಿ ಸಾಧಿಸಿ ಸ್ವತಃ ಭಗವದ್ಭಜನೆಯನ್ನು ಮಾಡುವರು ।೩೧೯॥ ಹೇ ರಾಜನೇ, ಇವರು ಹತ್ತು ಪ್ರಕಾರದ ನಾಮಗಳಿಂದ ಪರಮಾತ್ಮನ ನಾಮಸ್ಮರಣೆಯನ್ನು ಮಾಡುವರು. ಆ ಹತ್ತು ನಾಮಗಳು ಯಾವುವು ಎಂಬುವುದನ್ನು ಹೇಳುವೆನು. ಲಕ್ಷಕೊಟ್ಟು ಕೇಳು ।೩೨೦॥

ಹಂಸ, ಸುಪರ್ಣ, ವೈಕುಂಠ, ಧರ್ಮ, ಯೋಗೇಶ್ವರ, ಅಮಲ, ಈಶ್ವರ, ಪುರುಷ, ಅವ್ಯಕ್ತ ಮತ್ತು ಪರಮಾತ್ಮಾ ಹೀಗಿರುವ ನಾಮಗಳ ಜಪವನ್ನು ಇವರು ಮಾಡುವರು ।೩೨೧॥ ಆ ಕಾಲದ ಭಕ್ತಶ್ರೇಷ್ಠರು ಈ ನಾಮಗಳ ಪಾಠ ಮಾಡಿ ಉಚ್ಚಸ್ವರದಿಂದ ಗಾಯನವನ್ನು ಮಾಡುವರು. ಮತ್ತು ಸಂಸಾರ ಭಯವನ್ನು ಹಾಗೂ ದುಃಖವನ್ನು ಇಲ್ಲದಂತೆ ಮಾಡುವರು ।೩೨೨॥ ಈ ಯಾವ ಕೃತಯುಗದ ಉಪಾಸನೆಯನ್ನು ನಿನಗೆ ವಿಸ್ತಾರವಾಗಿ ಹೇಳಿದೆನು. ಈಗ ತ್ರೇತಾಯುಗದ ಭಜನೆ ಮತ್ತು ಮೂರ್ತಿ ಧ್ಯಾನವು ಹೇಗಿರುವುದೆಂಬುದು ಕೇಳು ।೩೨೩॥

ತ್ರೇತೀ ಯಜ್ಞ ಮೂರ್ತಿ ಪುರುಷೋತ್ತಮು । ರಕ್ತವರ್ಣ ಜ್ವಲನೋಪಮು । ಪಿಂಗಟಕೇಶ ನಿರ್ಧೂಮು ।ದೇವದೇವೋತ್ತಮು ಚತುರ್ಬಾಹೂ ।೩೨೪॥ ತಯಾ ಯಜ್ಞಪುರುಷಾ ನಿರ್ಮಳಾ । ತ್ರಿಗುಣಾಂಚೀ ತ್ರಿಮೇಖಳಾ । ವೇದತ್ರಯೀಚಾ ಪೂರ್ಣಮೇಳಾ । ಮೂರ್ತೀಚಾ ಸೋಹಳಾ ತದಾತ್ಮಕಚಿ ।೩೨೫॥ ಸ್ರುಕ್ - ಸ್ರುವಾ - ಪಾಣಿಗ್ರಹಣ । ಹೇಚಿ ತಯಾಚೇ ಉಪಲಕ್ಷಣ । ತ್ರೇತಾಯುಗೀ ನಾರಾಯಣ । ಯೇಣೇ ರೂಪೇ ಜಾಣ ನಿಜಭಕ್ತ ಧ್ಯಾತೀ ।೩೨೬॥

ತಂ ತದಾ ಮನುಜಾ ದೇವಂ ಸರ್ವದೇವಮಯಂ ಹರಿಂ ।
ಯಜಂತಿ ವಿದ್ಯಯಾ ತ್ರಯ್ಯಾ ಧರ್ಮಿಷ್ಠಾ ಬ್ರಹ್ಮವಾದಿನಃ ।೨೫॥

ಅರ್ಥ:- ಆ ಯುಗದಲ್ಲಿ ಮನುಷ್ಯರು ತಮ್ಮ ಧರ್ಮಗಳಲ್ಲಿ ದೃಢವಾದ ನಿಷ್ಠೆಯನ್ನಿಟ್ಟಿರುವರು. ವೇದಗಳ ಅಧ್ಯಯನ ಮತ್ತು ಅಧ್ಯಾಪನ ಇವುಗಳಲ್ಲಿ ನಿಷ್ಣಾತರಾಗಿರುವರು. ಇವರು ಋಗ್ವೇದ, ಯರ್ಜುವೇದ ಮತ್ತು ಸಾಮವೇದ ರೂಪ ವೇದ ತ್ರಯಿಗಳಿಂದ ದೇವಾಧಿದೇವ ಭಗವಾನ ಶ್ರೀಹರಿಯ ಆರಾಧನೆಯನ್ನು ಮಾಡುವರು.

ತ್ಯೆಂಚೇ ಜೇ ಮನುಷ್ಯ ಜಾಣ । ತ್ರಿವೇದೀ ಕರಿತೀ ಭಜನ । ಸರ್ವದೇವಸ್ವರೂಪ ಹರಿ ಪೂರ್ಣ । ಯಾಪರೀ ಯಜನ ತ್ರೇತಾಯುಗೀ ।೩೨೭॥ ತ್ರೇತಾಯುಗೀ ಸರ್ವಹೀ ನರ । ವೇದೋಕ್ತೀ ನಿತ್ಯ ಸಾದರ । ಸರ್ವಹೀ ಭಜನತತ್ಪರ । ಧರ್ಮಿಷ್ಠ ಸಮಗ್ರ ಅತಿಧಾರ್ಮಿಕ ।೩೨೮॥ ತೇ ಧರ್ಮಿಷ್ಠ ಧಾರ್ಮಿಕ ಜನ । ಅಷ್ಟಧಾ ನಾಮೀ ನಾಮಸ್ಮರಣ । ಗಜರೇ ಕರಿತೀ ಸದಾ ಪಠಣ । ತೇ ನಾಮಾಭಿಧಾನ ಐಕ ರಾಯಾ ।೩೨೯॥

ವಿಷ್ಣುರ್ಯಜ್ಞಃ ಪೃಶ್ನಿಗರ್ಭಃ ಸರ್ವದೇವ ಉರುಕ್ರಮಃ ।
ವೃಷಾಕಪಿರ್ಜಯಂತಶ್ಚ ಉರುಗಾಯ ಇತೀರ್ಯತೇ ।೨೬॥

ಅರ್ಥ:- ತ್ರೇತಾಯುಗದಲ್ಲಿ ಅಧಿಕ ಜನರು ವಿಷ್ಣು, ಯಜ್ಞ, ಪೃಶ್ನಿಗರ್ಭ, ಸರ್ವದೇವ, ಉರುಕ್ರಮ, ವೃಷಾಕಪಿ, ಜಯಂತ ಮತ್ತು ಉರುಗಾಯ ಈ ನಾಮಗಳಿಂದ ಅನೇಕ ಗುಣ, ಲೀಲೆಗಳ ಕೀರ್ತನೆ ಮಾಡುವರು.

ವಿಷ್ಣು ಯಜ್ಞ ಪೃಶ್ನಿ ಜನ್ಮ । ಸರ್ವದೇವ ಉರುಕ್ರಮ । ವೃಷಾಕಪಿ ಜಯಂತನಾಮ । ಉರುಗಾಯ ಪರಮ ನಾಮೇ ಸ್ಮರತೀ ।೩೩೦॥ ದ್ವಾಪರೀ ಭಗವಧ್ಯಾನ । ತೇ ಯುಗೀಚೇ ಪೂಜಾವಿಧಾನ । ಭಕ್ತ ಕೈಸೇ ಕರಿತೀ ಭಜನ । ನಾಮಸ್ಮರಣ ತೇ ಐಕ ।೩೩೧॥

ದ್ವಾಪರೇ ಭಗವಾನ್ ಶ್ಯಾಮಃ ಪೀತವಾಸಾ ನಿಜಾಯುಧಃ ।
ಶ್ರೀವತ್ಸಾದಿಭಿರಂಕೈಶ್ಚ ಲಕ್ಷಣೈರುಪಲಕ್ಷಿತಃ ।೨೭॥

ಅರ್ಥ:- ಹೇ ರಾಜನೇ, ದ್ವಾಪರಯುಗದಲ್ಲಿ ಭಗವಾನನ ವರ್ಣವು ನೀಲಗಪ್ಪು ಇರುವುದು. ಈತನು ಪೀತಾಂಬರಧಾರಿ ಹಾಗೂ ಶಂಖ, ಚಕ್ರ, ಗದಾ ಇತ್ಯಾದಿ ಆಯುಧಗಳನ್ನು ಧರಿಸಿರುವನು. ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿನ್ಹೆ, ಕೌಸ್ತುಭಮಣಿ ಇತ್ಯಾದಿ ಲಕ್ಷಣಗಳಿಂದ ತಿಳಿಯಲ್ಪಡುವನು.

ತ್ರೇತಾಯುಗದಲ್ಲಿ ಪುರುಷೋತ್ತಮನು ಯಜ್ಞಮೂರ್ತಿಸ್ವರೂಪದಲ್ಲಿರುವನು. ಆತನ ವರ್ಣವು ಅಗ್ನಿಯ ಜ್ವಾಲೆಯಂತೆ ಬಲು ಕೆಂಪಗಿರುವುದು. ಕೇಶಗಳು ಕಪಿಲವರ್ಣದ್ದಾಗಿ ಆ ದೇವಾಧಿದೇವನಿಗೆ ನಾಲ್ಕು ಕೈಗಳಿರುವುವು ।೩೨೪॥ ಆ ನಿರ್ಮಲ ಯಜ್ಞ ಪುರುಷನಿಗೆ ತ್ರಿಗುಣದ ಮೂರು ಪದರಿನ ನಡುಪಟ್ಟಿ ಇದ್ದು ಮತ್ತು ಮೂರು ವೇದಗಳ ಪರಿಪೂರ್ಣ ಐಕ್ಯದ ಆ ಸ್ವರೂಪವಿರುವುದರಿಂದ ಆ ಮೂರ್ತಿಯ ಆಕಾರವೂ ಅದರಂತೆಯೇ ಇರುವುದು ।೩೨೫॥ ಕೈಯಲ್ಲಿ ಸ್ರುಕ್, ಸ್ರುವಾ ಇತ್ಯಾದಿ ಯಜ್ಞಪಾತ್ರೆಗಳನ್ನು ತೆಗೆದುಕೊಂಡಿರುವುದೇ ಆ ಯಜ್ಞಮೂರ್ತಿಯ ಉಪಲಕ್ಷಣವಾಗಿದೆ. ಈ ಪ್ರಕಾರವಾಗಿ ತ್ರೇತಾಯುಗದಲ್ಲಿ ಭಕ್ತರು ನಾರಾಯಣನ ರೂಪದ ಧ್ಯಾನವನ್ನು ಮಾಡುವರು ।೩೨೬॥

ಆ ಕಾಲದಲ್ಲಿನ ಜನರು ಮೂರು ವೇದಗಳಿಂದ ನಾರಾಯಣನ ಭಜನೆಯನ್ನು ಮಾಡುವರು. ಶ್ರೀಹರಿಯು ಪೂರ್ಣವಾಗಿ ಸರ್ವದೇವಸ್ವರೂಪವಾಗಿರುವುದರಿಂದ ತ್ರೇತಾಯುಗದ ಭಜನೆಯು ಈ ಪ್ರಕಾರದಿಂದ ಕೂಡಿರುವುದು ।೩೨೭॥ ತ್ರೇತಾಯುಗದಲ್ಲಿ ಸರ್ವ ಜನರು ವೇದವಚನಗಳಲ್ಲಿ ದೃಢವಾದ ಶ್ರದ್ಧೆಯನ್ನು ಇಡುವರು. ಮತ್ತು ಭಜನಶೀಲರಾಗಿರುವರು. ಧರ್ಮದಲ್ಲಿ ನಿಷ್ಠೆಯುಳ್ಳವರು ಧಾರ್ಮಿಕರಾಗಿರುವರು ।೩೨೮॥ ಇವರು ಎಂಟು ಪ್ರಕಾರದ ನಾಮಸ್ಮರಣೆಯ ಪಠಣೆ, ಘೋಷಣೆಯನ್ನು ಮಾಡುವರು. ಹೇ ರಾಜನೇ, ಆ ನಾಮಗಳನ್ನು ಈಗ ಕೇಳು ।೩೨೯॥

ವಿಷ್ಣು, ಯಜ್ಞ, ಪೃಶ್ನಿಗರ್ಭ, ಸರ್ವದೇವ, ಉರುಕ್ರಮ, ವೃಷಾಕಪಿ, ಜಯಂತ, ಉರುಗಾಯ ಈ ಯಾವ ಶ್ರೇಷ್ಠವಾದ ನಾಮಗಳಿಂದ ಆತನ ಸ್ಮರಣೆಯನ್ನು ಮಾಡುವರು ।೩೩೦॥ ಹೇ ರಾಜನೇ, ಈಗ ದ್ವಾಪರಯುಗದಲ್ಲಿ ಭಕ್ತರು ಭಗವಂತನ ಧ್ಯಾನವನ್ನು, ಪೂಜೆಯನ್ನು ಮತ್ತು ಭಜನೆಯನ್ನು ಯಾವ ಪ್ರಕಾರವಾಗಿ ಮಾಡುವರೆಂಬುದನ್ನು ಕೇಳು ।೩೩೧॥

ದ್ವಾಪರೀ ಘನಶ್ಯಾಮವರ್ಣ । ಅತಸೀಪುಷ್ಪ ಪ್ರಭಾಸಮಾನ । ಪೀತಾಂಬರಪರಿಧಾನ । ಶ್ರೀವತ್ಸ ಚಿನ್ಹ ಅಂಕಿತ ।೩೩೨॥ ಶಂಖ - ಚಕ್ರ - ಪದ್ಮ - ಗದಾ । ಚಾರೀ ಭುಜಾ ಸಾಯುಧಾ । ಇಹೀ ಲಕ್ಷಣೀ ಗೋವಿಂದಾ । ಲಕ್ಷಿತೀ ಸದಾ ನಿಜಭಕ್ತ ।೩೩೩॥

ತಂ ತದಾ ಪುರುಷಂ ಮರ್ತ್ಯಾ ಮಹಾರಾಜೋಪಲಕ್ಷಣಮ್ । ಯಜಂತಿ ವೇದ ತಂತ್ರಾಭ್ಯಾಮ್ ಪರಂ ಜಿಜ್ಞಾಸವೋ ನೃಪ ।೨೮॥

ಅರ್ಥ:- ಹೇ ರಾಜನೇ, ಆಗ ಜಿಜ್ಞಾಸು ಜನರು ಮಹಾರಾಜರ ಚಿನ್ಹೆ ಛತ್ರ, ಚಾಮರಾದಿ ಯುಕ್ತರಾಗಿ ಪರಮ ಪುರುಷನಾದ ಭಗವಾನನ ವೈದಿಕ ಮತ್ತು ತಾಂತ್ರಿಕ ವಿಧಿಯಿಂದ ಆರಾಧನೆಯನ್ನು ಮಾಡುವರು.

ಶಶಾಂಕಛತ್ರ ಮಣಿ ಚಾಮರ । ರಾಜಲಕ್ಷಣೀ ರಾಜೋಪಚಾರ । ಯಾಪರೀ ದ್ವಾಪರೀಚೇ ನರ । ಅತಿಸಾದರ ಪೂಜೇಸೀ ।೩೩೪॥ ಶೀಘ್ರ ಪಾವಾವಯಾ ಪರಾತ್ಪರ । ವೈದಿಕ ತಾಂತ್ರಿಕ ಪೂಜಾ ಮಿತ್ರ । ತತ್ತ್ವ ಜಿಜ್ಞಾಸು ಕರಿತೀ ನರ । ಭಜನತತ್ಪರ ಯಾ ರೀತೀ ।೩೩೫॥ ತೇ ಕಾಳೀಚೇ ನಾಮಸ್ಮರಣ । ಜೇಣೇ ಹೋಈ ಕಲಿಮಲದಹನ । ತ್ಯಾ ನಾಮಾಂಚೇ ಅಭಿಧಾನ । ಐಕ ಸಾಂಗೇನ ನೃಪನಾಥಾ ।೩೩೬॥

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ । ಪ್ರದ್ಯುಮ್ನಾಯಾನಿರುದ್ಧಾಯ ತುಭ್ಯಂ ಭಗವತೇ ನಮಃ ।೨೯॥

ಅರ್ಥ:- ವಾಸುದೇವನೇ, ನಿನಗೆ ನಮಸ್ಕಾರ. ಸಂಕರ್ಷಣನೇ, ನಿನಗೆ ನಮಸ್ಕಾರ. ನೀನಾಗಿರುವ ಭಗವಾನ ಪ್ರದ್ಯುಮ್ನ ಮತ್ತು ನಿರುದ್ಧ ಇವರಿಗೂ ನಮಸ್ಕಾರ.

"ವಾಸುದೇವಾ" ತುಜ ಲೋಟಾಂಗಣ । "ಸಂಕರ್ಷಣಾ" ತುಜ ನಮನ । "ಪದ್ಯುಮ್ನಾ" ಪ್ರಮಾಣ ಪೂರ್ಣ । ಅಭಿನಂದನ "ಅನಿರುದ್ಧಾ" ।೩೩೭॥

ನಾರಾಯಣಾಯ ಋಷಯೇ ಪುರುಷಾಯ ಮಹಾತ್ಮನೇ । ವಿಶ್ವೇಶ್ವರಾಯ ವಿಶ್ವಾಯ ಸರ್ವಭೂತಾತ್ಮನೇ ನಮಃ ।೩೦॥

ಅರ್ಥ:- ನಾರಾಯಣ ಋಷಿಗೆ, ಮಹಾತ್ಮಾ ಪುರುಷನಿಗೆ, ವಿಶ್ವೇಶ್ವರನಿಗೆ, ವಿಶ್ವನಿಗೆ ಮತ್ತು ಸರ್ವಭೂತಾತ್ಮನಿಗೆ ನಮಸ್ಕಾರವು.

''ನಾರಾಯಣಾ'' ಋಷಿವರಾ । ''ಮಹಾಪುರುಷಾ'' ಸುರೇಂದ್ರಾ । ''ವಿಶ್ವರೂಪಾ'' ವಿಶ್ವೇಶ್ವರಾ । ಮಹಾತ್ಮ್ಯಾ ಶ್ರೀವರಾ ನಮನ ತುಜ ।೩೩೮॥ ''ಸರ್ವ ಭೂತೀ ತೂ ಭೂತಾತ್ಮಾ'' । ತುಜ ನಮೋ ಪುರುಷೋತ್ತಮಾ । ದ್ವಾಪರೀ ಐಶಿಯಾ ನಾಮಾ । ನೃಪೋತ್ತಮಾ ಸದಾ ಸ್ಮರತೀ ।೩೩೯॥ ತ್ಯಾ ನಾಮಾಂಚ್ಯಾ ಪಾಠಾ । ತೇಣೇ ದೇವಾಸೀ ಸಂತೋಷ ಮೋಠಾ । ವೇಗೀ ಸಾಂಡೋನಿ ವೈಕುಂಠಾ । ಧಾವೇ ಅವಚಟಾ ಕೀರ್ತನಾಮಾಜೀ ।೩೪೦॥

ಇತಿ ದ್ವಾಪರ ಉರ್ವೀಶ ಸ್ತುವಂತಿ ಜಗದೀಶ್ವರಮ್ । ನಾನಾತಂತ್ರವಿಧಾನೇನ ಕಲಾವಪಿ ಯಥಾ ಶೃಣು ।೩೧॥

ಅರ್ಥ:- ಹೇ ರಾಜಾ, ದ್ವಾಪರಯುಗದಲ್ಲಿ ಈ ಪ್ರಕಾರವಾಗಿ ಜನರು ಜಗದೀಶ್ವರ ಭಗವಂತನ ಸ್ತುತಿಯನ್ನು ಮಾಡುವರು. ಈಗ ಕಲಿಯುಗದಲ್ಲಿ ಅನೇಕ ತಂತ್ರಗಳಿಂದ ವಿಧಿವಿಧಾನಗಳಿಂದ ಭಗವಂತನ ಪೂಜೆಯನ್ನು ಹೇಗೆ ಮಾಡುವರೆಂಬ ವರ್ಣನೆಯನ್ನು ಕೇಳು.

ದ್ವಾಪರಯುಗದಲ್ಲಿ ಮೇಘದಂತೆ ನೀಲಕಾಂತಿ, ಅಗಸೆಯ ಹೂವಿನಂತೆ ಶರೀರದ ಬಣ್ಣ, ಪೀತಾಂಬರವನ್ನು ಪರಿಧಾನ ಮಾಡಿದ, ಮತ್ತು ಶ್ರೀವತ್ಸ ಚಿನ್ಹೆಯಿಂದ ವಿರಾಜಮಾನನಾದ ।೩೩೨॥ ನಾಲ್ಕೂ ಕೈಗಳಲ್ಲಿ ಶಂಖ, ಚಕ್ರ ಗದಾ, ಪದ್ಮ ಆಯುಧಗಳನ್ನು ಧರಿಸಿರುವ, ಈ ಲಕ್ಷಣಗಳಿಂದ ಯುಕ್ತನಾಗಿರುವ ಗೋವಿಂದನನ್ನು ಭಕ್ತರು ಸದಾ ಚಿಂತಿಸುವರು ।೩೩೩॥

ಚಂದ್ರನಂತೆ ಶುಭ್ರವಾದ ಛತ್ರವು ಮತ್ತು ರತ್ನಖಚಿತ ಚಾಮರ ಇತ್ಯಾದಿ ರಾಜಲಕ್ಷಣಗಳಿಂದ ರಾಜೋಪಚಾರವನ್ನು ಸಮರ್ಪಿಸಿ ದ್ವಾಪರಯುಗದಲ್ಲಿನ ಜನರು ಅತ್ಯಂತ ಭಕ್ತಿಭಾವದಿಂದ ಪೂಜೆಯನ್ನು ಮಾಡುವರು ।೩೩೪॥ ಪರಬ್ರಹ್ಮನ ಸ್ವರೂಪವನ್ನು ಅರಿಯುವ ಇಚ್ಛೆಯನ್ನು ಮಾಡುವ ಪುರುಷರು ಪರಮಾತ್ಮನ ಸತ್ವರ ಪ್ರಾಪ್ತಿಗಾಗಿ ವೈದಿಕ ಮತ್ತು ತಾಂತ್ರಿಕ ಈ ಎರಡು ಪ್ರಕಾರದ ಮಿಶ್ರ ಪೂಜೆಯನ್ನು ಮಾಡುವರು. ಈ ರೀತಿಯಲ್ಲಿ ಅವರು ಭಗವಂತನ ಭಜನೆಯನ್ನು ಮಾಡುವರು ।೩೩೫॥ ಆ ಕಾಲದಲ್ಲಿನ ಕಲಿಮಲದ ನಾಶವನ್ನು ಮಾಡುವ ಯಾವ ನಾಮಸ್ಮರಣೆಯನ್ನು ನಾನು ನಿನಗೆ ಹೇಳುವೆನು. ಹೇ ನೃಪನಾಥನೇ, ಅದನ್ನು ನೀನು ಕೇಳು ।೩೩೬॥

ಹೇ ವಾಸುದೇವನೇ, ನಿನಗೆ ಲೋಟಾಂಗಣವನ್ನು ಹಾಕುವೆ. ಹೇ ಸಂಕರ್ಷಣನೇ, ನಿನಗೆ ನಮಸ್ಕಾರವನ್ನು ಮಾಡುವೆ. ಹೇ ಪ್ರದ್ಯುಮ್ನನೇ, ನಿನಗೆ ಪ್ರಣಾಮವನ್ನು ಮಾಡುವೆ. ಹೇ ಅನಿರುದ್ಧನೇ, ನಿನಗೆ ಅಭಿನಂದನೆಯನ್ನು ಮಾಡುವೆ ।೩೩೭॥

ಹೇ ಋಷೀಶ್ವರಾ ನಾರಾಯಣಾ, ಹೇ ಸುರೇಂದ್ರಾ ಮಹಾಪುರುಷಾ, ಹೇ ವಿಶ್ವರೂಪಾ ವಿಶ್ವೇಶ್ವರಾ, ಹೇ ಮಹಾತ್ಮ್ಯಾ ಶ್ರೀವರಾ, ನಿನಗೆ ನಮಸ್ಕಾರವು ।೩೩೮॥ ಸರ್ವ ಭೂತಗಳಲ್ಲಿನ ನೀನು ಭೂತಾತ್ಮಾನಾಗಿರುವೆ. ಹೇ ಪುರುಷೋತ್ತಮನೇ, ನಿನಗೆ ನಮಸ್ಕಾರವು, ದ್ವಾಪರಯುಗದಲ್ಲಿ ಈ ನಾಮಗಳಿಂದ ಆತನ ನಿತ್ಯ ಸ್ಮರಣೆಯನ್ನು ಮಾಡುವರು ।೩೩೯॥ ಈ ನಾಮದ ಘೋಷದಿಂದ ದೇವನಿಗೆ ಪರಮ ಸಂತೋಷವಾಗುವುದು. ಮತ್ತು ಲಗುಬಗೆಯಿಂದ ವೈಕುಂಠವನ್ನು ಬಿಟ್ಟು ಆ ನಾಮಕೀರ್ತನಕ್ಕಾಗಿ ಧಾವಿಸಿ ಬರುವನು ।೩೪೦॥

ಯಾಂಹೀ ನಾಮೀ ಸ್ತುತಿಸ್ತವನ । ದ್ವಾಪರೀಚೇ ಕರಿತೀ ಜನ । ಆತಾ ಕಲಿಯುಗೀಚೇ ಭಜನ । ತಂತ್ರೋಕ್ತ ವಿಧಾನ ಐಕ ರಾಯಾ ।೩೪೧॥

ಕೃಷ್ಣವರ್ಣಂ ತ್ವಿಷಾಕೃಷ್ಣಂ ಸಾಂಗೋಪಾಂಗಾಸ್ತ್ರಪಾರ್ಷದಮ್ ।
ಯಜ್ಞೈಃ ಸಂಕೀರ್ತನಪ್ರಾಯೈರ್ಯಜಂತಿ ಹಿ ಸುಮೇಧಸಃ ।೩೨॥

ಅರ್ಥ:- ಸತತವಾಗಿ ಕೃಷ್ಣನಾಮವನ್ನು ಹಾಡುತ್ತ ಭಗವದವತಾರವನ್ನು ಪೂಜಿಸಲು ಕಲಿಯುಗದಲ್ಲಿ ಮೇಧಾವಿಗಳು ಸಾಮೂಹಿಕ ಸಂಕೀರ್ತನೆ ನಡೆಸುತ್ತಾರೆ. ಭಗವಂತನ ವರ್ಣವು ಕಪ್ಪಾಗಿರುವುದು. ಆತನು ತಾನೇ ಕೃಷ್ಣ. ಅವನು ತನ್ನ ಸಹಯೋಗಿಗಳು, ದಾಸರು, ಆಯುಧಗಳು ಮತ್ತು ಅಂತರಂಗದ ಸಂಗಾತಿಗಳು ಹೀಗೆ ಇತರರ ಜೊತೆಗೂಡಿರುತ್ತಾನೆ.

ಕಲಿಯುಗೀ ಶ್ರೀಕೃಷ್ಣದೇವೋ । ವರ್ಣೇ ಕೃಷ್ಣವರ್ಣಪ್ರಭಾವೋ । ಪ್ರಭಾ ಇಂದ್ರನೀಳಕೀಳ - ಸಮುದಾವೋ । ಮೂರ್ತೀ ತಶೀ ಪಹಾ ಹೋ ಶೋಭಾಯಮಾನ ।೩೪೨॥ ಮೂರ್ತಿ ಸರ್ವಾವಯವೀ ಸಾಂಗ । ವೇಣುವಿಷಾಣಾದಿ ಉಪಾಂಗ । ಚಾರೀ ಭುಜಾ ಪರಾಕ್ರಮೀ ಚಾಂಗ । ಆಯುಧೇ ಅವ್ಯಂಗ ಶಂಖಚಕ್ರಾದಿಕ ।೩೪೩॥ ಪೃಷ್ಠಭಾಗೀ ನಿಜಪಾರ್ಷದ । ನಂದಸುನಂದಾದೀ ಸಾಯುಧ । ಕಲಿಯುಗೀ ಪ್ರಜ್ಞಾಪ್ರಬುದ್ಧ । ಯಾಪರೀ ಗೋವಿಂದ ಚಿಂತಿತೀ ಸದಾ ।೩೪೪॥ ಮಧುಪರ್ಕಾದಿಕ ವಿಧಾನ । ಸಾಂಗ ಕೇಲೇ ಜೇ ಪೂಜನ । ತೇಹೀ ಮಾನೋನಿಯಾ ಗೌಣ । ಆವಡೇ ಕೀರ್ತನ ಕಲಿಯುಗೀ ಕೃಷ್ಣಾ ।೩೪೫॥ ನವಲ ಕೈಸೇ ರಾಜಾಧಿರಾಜಾ । ಕೀರ್ತನ ತೇಚಿ ಮಹಾಪೂಜಾ । ಐಶೀ ಆವಡೀ ಅಧೋಕ್ಷಜಾ । ಕೀರ್ತನೇ ಗರುಡಧ್ವಜಾ ಉಲ್ಹಾಸು ಸದಾ ।೩೪೬॥ ಕೀರ್ತನ ಪಢಿಯೇ ಗೋವಿಂದಾ । ಯಾಲಾಗೀ ಸನ್ಮಾನೀ ನಾರದಾ । ತೋ ಕೃಷ್ಣಕೀರ್ತೀ ಪಢೇ ಸದಾ । ನಾಮಾನುವಾದಾ ಗರ್ಜತು ।೩೪೭॥ ಕೀರ್ತನ ಕರಿತಾ ನಾಮಾನುವಾದ । ಸಂಕಟೀ ರಕ್ಷಿಲಾ ಪ್ರಹ್ಲಾದ । ಕೀರ್ತನೇ ತುಷ್ಟೇ ಗೋವಿಂದ । ಭೇದೀ ಭವಬಂಧ ದಾಸಾಂಚಾ ।೩೪೮॥ ಗಜೇಂದ್ರೇ ನಾಮಸ್ಮರಣ । ಕರಿತಾ ಪಾವಲಾ ನಾರಾಯಣ । ತ್ಯಾಚೇ ತೋಡೋನಿ ಭವಬಂಧನ । ನಿಜಧಾಮಾ ಆಪಣ ಸ್ವಯೇ ನೇಲಾ ।೩೪೯॥ ಅಧಮಾಧಮ ಅತಿವೋಖಟೀ । ತೋಂಡಾ ರಾಮು ಆಲಾ ಅವಚಟೀ । ತೇ ಗಣಿಕಾ ಕೀ ವೈಕುಂಠೀ । ಕೃಷ್ಣೇ ನಾಮಾಸಾಠೀ ಸರತೀ ಕೇಲೀ ।೩೫೦॥ ಮಹಾದೋಷಾಂಚಾ ಮರಗಳಾ । ಅತಿನಷ್ಟ ಅಜಾಮೇಳಾ । ತೋಹೀ ನಾಮೇ ನಿರ್ಮಳ ಕೇಲಾ । ಪ್ರತಾಪು ಆಗಳಾ ನಾಮಾಚಾ ।೩೫೧॥

ದ್ವಾಪರಯುಗದಲ್ಲಿನ ಜನರು ಇದೇ ನಾಮಗಳಿಂದ ಸ್ತುತಿಸ್ತವನಗಳನ್ನು ಮಾಡುವರು. ಹೇ ರಾಜನೇ, ಕಲಿಯುಗದಲ್ಲಿನ ಭಜನೆ ಮತ್ತು ತಂತ್ರೋಕ್ತ ವಿಧಾನಗಳನ್ನು ಹೇಳುವೆನು. ಅದನ್ನು ಕೇಳು ।೩೪೧॥

ಕಲಿಯುಗದಲ್ಲಿ ಶ್ರೀಕೃಷ್ಣನೇ ದೇವರಾಗಿರುವನು. ಆತನ ವರ್ಣವು ಕೃಷ್ಣವಾಗಿರುವುದು. ಆತನ ಪ್ರಭೆಯು ಇಂದ್ರನೀಲ ಮಣಿಗಳಂತೆ ಸರ್ವತ್ರ ಪ್ರಕಾಶಮಾನವಾಗಿರುವುದು. ಆದ್ದರಿಂದ ಆತನು ಅತಿಶಯವಾಗಿ ಶೋಭಾಯಮಾನನಾಗಿರುವನು ।೩೪೨॥ ಆತನ ಮೂರ್ತಿಯು ಸರ್ವ ಅವಯವಗಳನ್ನು ತೀಡಿ ಬರೆದಂತೆ ಪರಿಪೂರ್ಣ ಸುಂದರವಾಗಿರುವುವು. ಮುರಲಿ, ಶೃಂಗ ಇತ್ಯಾದಿ ಆತನ ಉಪಾಂಗವಾಗಿರುವುವು. ನಾಲ್ಕು ಭುಜಗಳು ಅತಿಸುಂದರವಾಗಿ ಹಾಗೂ ಬಹು ಪರಾಕ್ರಮಿಯಾಗಿರುವುವು. ಆ ನಾಲ್ಕೂ ಕೈಗಳಲ್ಲಿ ಶಂಖಚಕ್ರಾದಿ ಸರ್ವಾಂಗ ಸುಂದರವಾದ ಆಯುಧಗಳು ಶೋಭಿಸುವುವು ।೩೪೩॥ ಆತನ ಹಿಂಭಾಗದಲ್ಲಿ ನಂದಸುನಂದಾದಿ ಸೇವಕರು ಸಶಸ್ತ್ರರಾಗಿ ನಿಂತಿರುವರು. ಕಲಿಯುಗದಲ್ಲಿ ಜ್ಞಾನಿ ಜನರು ಈ ರೀತಿಯಿಂದ ಶ್ರೀಕೃಷ್ಣನ ಚಿಂತನೆಯನ್ನು ಯಾವಾಗಲೂ ಮಾಡುವರು ।೩೪೪॥ ಮಧುಪರ್ಕಾದಿಕ ವಿಧಾನಗಳಿಂದ ಯಥಾಸಾಂಗ ಪೂಜೆಯನ್ನು ಮಾಡಲಾಗುವುದು. ಇದು ಸಹ ಗೌಣವೆಂದು ಭಾವಿಸಿ ಕಲಿಯುಗದಲ್ಲಿ ಶ್ರೀಕೃಷ್ಣನಿಗೆ ಕೀರ್ತನವು ಬಹಳ ಮೆಚ್ಚಿಗೆಯಾಗುವುದು ।೩೪೫॥ ಹೇ ರಾಜಾಧಿರಾಜನೇ, ನೋಡು, ಇದೆಂತಹ ಆಶ್ಚರ್ಯ! ಶ್ರೀಕೃಷ್ಣನಿಗೆ ಕೀರ್ತನವೇ ಮಹಾಪೂಜೆಯಂತೆ ಅನಿಸುವುದು. ಶ್ರೀಕೃಷ್ಣನಿಗೆ ಕೀರ್ತನದಲ್ಲಿ ಇಷ್ಟೊಂದು ಪ್ರೇಮವಿರುವುದು. ಇದರಿಂದಲೇ ಆ ಗರುಡಧ್ವಜನಿಗೆ ಯಾವಾಗಲೂ ಆನಂದವಾಗುವುದು ।೩೪೬॥ ಶ್ರೀ ಕೃಷ್ಣನಿಗೆ ಕೀರ್ತನವು ಅತ್ಯಂತ ಪ್ರಿಯವಾಗಿರುವುದರಿಂದ ಈತನು ನಾರದನಿಗೆ ಬಹಳವಾಗಿ ಮಾನ್ಯ ಮಾಡುವನು. ಆತನ ಸತ್ಕಾರವನ್ನು ಮಾಡುವನು. ಆತನು ನಿರಂತರವಾಗಿ ಹರಿನಾಮದ ಗರ್ಜನೆಯನ್ನು ಮಾಡುತ್ತಿರುವನು. ಸದಾವಕಾಲದಲ್ಲಿ ಶ್ರೀಕೃಷ್ಣನ ಕೀರ್ತಿಗಳನ್ನು ಹಾಡುತ್ತಿರುವನು ।೩೪೭॥ ನಾಮಸಂಕೀರ್ತನವನ್ನು ಮಾಡುತ್ತಿರುವುದರಿಂದ ಪ್ರಹ್ಲಾದನನ್ನು ಸಂಕಟಗಳಿಂದ ರಕ್ಷಿಸಿದನು. ಕೀರ್ತನದಿಂದ ಶ್ರೀಹರಿಗೆ ಸಂತೋಷವಾಗುವುದು. ಆದ್ದರಿಂದ ಈತನು ಭಕ್ತರ ಭವಬಂಧನವನ್ನು ಮುರಿದು ಬಿಡುವನು ।೩೪೮॥ ಗಜೇಂದ್ರನು ನಾಮಸ್ಮರಣೆಯನ್ನು ಮಾಡುತ್ತಲೇ ಆತನಿಗೆ ನಾರಾಯಣನ ಭೇಟಿಯಾಯಿತು. ಆತನ ಭವಬಂಧನವನ್ನು ಮುರಿದು ಆತನನ್ನು ತನ್ನ ಸಂಗಡವೇ ಕರೆದೊಯ್ದನು ।೩೪೯॥ ಅತಿಶಯವಾಗಿ ಅಧಮಳಾದ, ಪಾಪಿಯಾಗಿರುವ ಗಣಿಕೆಯು, ಆದರೆ ಆಕೆಯ ಮುಖದಿಂದ ಸಹಜವಾಗಿ ರಾಮನಾಮವು ಬಂದಾಕ್ಷಣವೇ ಆಕೆಯನ್ನು ಶ್ರೀಕೃಷ್ಣನು ವೈಕುಂಠಕ್ಕೆ ಒಯ್ದನು. ಕೇವಲ ನಾಮದಿಂದಲೇ ಆಕೆಯನ್ನು ಕೃತಾರ್ಥಳನ್ನಾಗಿ ಮಾಡಿದನು ।೩೫೦॥ ಮಹಾದೋಷದ ಮೂರ್ತಿಯೇ ಆಗಿರುವ ಯಾವ ಅತಿಭ್ರಷ್ಟ ಅಜಾಮಿಳನಿಗೂ ನಾಮಸ್ಮರಣೆಯು ಪವಿತ್ರನನ್ನಾಗಿ ಮಾಡಿತು. ನಾಮಸ್ಮರಣೆಯ ಹೀಗೆ ಅಲೌಕಿಕ ಪ್ರಭಾವವಿದೆ ।೩೫೧॥

ನಾಮೇ ವಿನಟಲೀ ಗೋವಿಂದೀ । ತೇ ಸಂಕಟೀ ರಾಖಿಲೀ ದ್ರೌಪದೀ । ನಾಮ ತೋಡೀ ಆಧಿವ್ಯಾಧೀ । ಜಾಣ ತ್ರಿಶುದ್ಧೀ ದಾಸಾಂಚೀ ॥೩೫೨॥ ಅಂತರಶುದ್ಧೀಚೇ ಕಾರಣ । ಮುಖ್ಯತ್ವೇ ಹರಿಕೀರ್ತನ । ನಾಮಾಪರತೇ ಸಾಧನ । ಸರ್ವಥಾ ಆನ ಅಸೇನಾ ॥೩೫೩॥ ಕೀರ್ತನೀ ಹರೀಚೀ ಆವಡೀ ಕೈಶೀ । ವತ್ಸಾಲಾಗೀ ಧೇನು ಜೈಶೀ । ಕಾ ನ ವಿಸಂಬೇ ಜೇವೀ ಮಾಶೀ । ಮೋಹಳಾಸೀ ಕ್ಷಣಾರ್ಧ ॥೩೫೪॥ ತೇವೀ ನಾಮ ಸ್ಮರತಯಾ ಭಕ್ತಾ । ಅತಿಶಯೇ ಆವಡೀ ಅಚ್ಯುತಾ । ದಾಸಾಂಚೀ ಅಣುಮಾತ್ರ ಅವಸ್ಥಾ । ನಿಜಾಂಗೇ ಸರ್ವಥಾ ನಿವಾರೀ ಸ್ವಯೇ ॥೩೫೫॥ ಯಾಲಾಗೀ ಹರಿಕೀರ್ತನೀ ಗೋಡೀ । ಜಯಾಸೀ ಲಾಗಲೀ ಧಡಪುಢೀ । ತ್ಯಾಸೀ ನಾನಾ ಸಾಧನಾಂಚ್ಯಾ ವೋಢೀ । ಸೋಸಾವಯಾ ಸಾಂಕಡೀ ಕಾರಣ ನಾಹೀ ॥೩೫೬॥ ಜ್ಯಾಸೀ ಕೀರ್ತನೀ ಕಥಾಕಥನೀ । ಚೌಗುಣ ಆಹ್ಲಾದ ಉಪಜೇ ಮನೀ । ತೋ ಉದ್ಧರಲಾ ಸರ್ವ ಸಾಧನೀ । ಪವಿತ್ರ ಅವನೀ ತ್ಯಾಚೇನಿ ॥೩೫೭॥ ಏಕಚಿ ಜರೀ ನಾಮ ವಾಚೇ । ಸದಾ ವಸೇ ಶ್ರೀರಾಮಾಚೇ । ತರೀ ಪರ್ವತ ಭೇದೋನಿ ಪಾಪಾಚೇ । ಪರಮಾನಂದಾಚೇ ನಿಜಸುಖ ಪಾವೇ ॥೩೫೮॥ ಆವಡೀ ಕರಿತಾ ಹರಿಕೀರ್ತನ । ಹೃದಯೀ ಪ್ರಗಟೇ ಶ್ರೀಜನಾರ್ದನ । ತ್ಯಾಹೋನಿ ಶ್ರೇಷ್ಠ ಸಾಧನ । ಸರ್ವಥಾ ಆನ ಅಸೇನಾ ॥೩೫೯॥ ಥೋರ ಕೀರ್ತನಾಚೇ ಸುಖ । ನಿಷ್ಠಾ ತುಷ್ಟೇ ಯದುನಾಯಕ । ಕೀರ್ತನೇ ತರಲೇ ಅಸಂಖ್ಯ । ಭಾಬಡೇ ಲೋಕ ಹರಿನಾಮೇ ॥೩೬೦॥ ಯಾಲಾಗೀ ಕೀರ್ತನಾಹೂನಿ ಥೋರ । ಆನ ಸಾಧನ ನಾಹೀ ಸಧರ । ಮಾ ಕವಣ ಹೇತೂ ಪಾಮರ । ಕೀರ್ತನ ನರ ನಿಂದಿತೀ ॥೩೬೧॥ ಏವಂ ನಾಮ ಕೀರ್ತನೀ ವಿಮುಖ । ತೇ ಸ್ವಪ್ನಿಹೀ ನ ದೇಖತೀ ಸುಖ । ಕೀರ್ತನ ದ್ವೇಷೇ ಮೂರ್ಖ । ಅತಿದುಃಖ ಭೋಗಿತೀ ॥೩೬೨॥ ಜ್ಯಾಂಚೇ ಹೃದಯೀ ದ್ವೇಷಸಂಚಾರ । ಜಳೋ ಜಳೋ ತ್ಯಾಚಾ ಆಚಾರ । ಸರ್ವ ಕಾಳ ದ್ವೇಷೀ ನರ । ದುಃಖ ದುಸ್ತರ ಭೋಗಿತೀ ॥೩೬೩॥ ಕಲಿಯುಗೀ ಜೇ ಬುದ್ಧಿಮಂತ । ತೇ ನಾಮಕೀರ್ತನೀ ಸದಾ ನಿರತ । ಗೌರವೂನಿ ನಾಮ ಸ್ಮರತ । ಹರ್ಷಯುಕ್ತ ಸಪ್ರೇಮ ॥೩೬೪॥ ನಾನಾ ಅವತಾರ ಅತಿಗಹನ । ತ್ಯಾಂತ ಶ್ರೀರಾಮ ಕಾ ಭಗವಾನ ಕೃಷ್ಣ । ಯಾಂಚೇ ಚರಿತ್ರ ಅತಿಪಾವನ । ತ್ಯಾಂಚೇ ಚರಣವಂದನ ಸಾಂಗತ ॥೩೬೫॥

ಸಂಕಟ ಪ್ರಸಂಗದಲ್ಲಿ ದ್ರೌಪದಿಯು ಮೊರೆಯಿಡುತ್ತಲೇ ಶ್ರೀಕೃಷ್ಣನು ಆಕೆಯ ರಕ್ಷಣೆಯನ್ನು ಮಾಡಿದನು . ನಾಮಸ್ಮರಣೆಯಿಂದ ಭಕ್ತರ ಆಧಿವ್ಯಾಧಿಯು ಇಲ್ಲದಾಗುವುದು ॥೩೫೨॥ ಹರಿಕೀರ್ತನವೇ ಚಿತ್ತಶುದ್ಧಿಯ ಪ್ರಮುಖ ಕಾರಣವಾಗಿರುವುದು. ಚಿತ್ತಶುದ್ಧಿಗಾಗಿ ನಾಮದಂತಹ ಬೇರೆ ಸಾಧನೆ ಯಾವುದೂ ಇರುವುದಿಲ್ಲ ॥೩೫೩॥ ಆಕಳವು ಯಾವ ಪ್ರಕಾರವಾಗಿ ತನ್ನ ಕರುವಿಗೆ ಒಂದು ಕ್ಷಣವೂ ಮರೆಯುವುದಿಲ್ಲ. ಅಥವಾ ಜೇನು ನೊಣವು ತನ್ನ ಜೇನುಗೂಡನ್ನು ಯಾವ ಪ್ರಕಾರವಾಗಿ ಮರೆಯುವುದಿಲ್ಲ. ಅದರಂತೆಯೇ ಹರಿಗೆ ಕೀರ್ತನದ ಪ್ರೇಮವಿರುವುದು ॥೩೫೪॥ ಈ ಪ್ರಕಾರವಾಗಿ ನಾಮಸ್ಮರಣೆಯನ್ನು ಮಾಡುವ ಭಕ್ತನಲ್ಲಿ ಶ್ರೀಹರಿಯು ಅತ್ಯಂತ ಪ್ರೇಮವಿರುವುದು. ಭಕ್ತನಿಗೆ ಅಣುಮಾತ್ರವೂ ದುಃಖವಾದರೆ ಹರಿಯು ಸ್ವತ: ಅದರ ನಿವಾರಣೆಯನ್ನು ಮಾಡುವನು ॥೩೫೫॥ ಆದ್ದರಿಂದ ಯಾರಿಗೆ ಅಂತಃಕರಣ ಪೂರ್ವಕವಾಗಿ ಹರಿಕೀರ್ತನದ ಅಭಿರುಚಿಯು ಹತ್ತಿರುವುದೋ ಅವರಿಗೆ ಇತರ ಸಾಧನಗಳಲ್ಲಿ ಬಿದ್ದು ಕಷ್ಟಪಡುವ ಕಾರಣವು ಉಳಿಯುವುದಿಲ್ಲ ॥೩೫೬॥ ಯಾರಿಗೆ ಹರಿಯ ನಾಮಸಂಕೀರ್ತನೆಯಲ್ಲಿ ಮತ್ತು ಹರಿಯ ಗುಣಾನುವಾದ ವರ್ಣನೆ ಮಾಡುವಲ್ಲಿ ಮನದಲ್ಲಿ ನಾಲ್ಕುಪಟ್ಟು ಆಹ್ಲಾದವಾಗುವುದೋ ಆತನು ಸರ್ವ ಸಾಧನೆಗಳನ್ನು ಮಾಡಿದಂತೆ ಉದ್ಧಾರನಾಗುವನು. ಈತನಿಂದ ಸಂಪೂರ್ಣ ಪೃಥ್ವಿಯು ಪವಿತ್ರವಾಗಿಬಿಡುವುದು ॥೩೫೭॥ ಒಂದೇ ಒಂದು ಶ್ರೀರಾಮನ ನಾಮವು ವಾಣಿಯಲ್ಲಿ ನಿರಂತರವಾಗಿ ಇರಲು, ಅದರ ಫಲವಾಗಿ ಪಾತಕಗಳ ಪರ್ವತವು ಇಲ್ಲದಾಗುವುದು ಹಾಗೂ ಪರಮಾನಂದದ ಪ್ರಾಪ್ತಿಯಾಗುವುದು ॥೩೫೮॥ ನಿಃಸ್ವಾರ್ಥ ಪ್ರೇಮದಿಂದ ಹರಿಕೀರ್ತನೆಯನ್ನು ಮಾಡಲು ಹೃದಯದಲ್ಲಿ ಶ್ರೀಹರಿಯು ಪ್ರಕಟನಾಗುವನು. ಇದಕ್ಕಿಂತಲೂ ಶ್ರೇಷ್ಠವಾದ ಅನ್ಯ ಸಾಧನೆಯು ಇರುವುದಿಲ್ಲ ॥೩೫೯॥ ಕೀರ್ತನದ ಸುಖವು ಬಹು ದೊಡ್ಡದಾಗಿರುವುದು. ಕೀರ್ತನದಿಂದ ಭಗವಂತನು ಸಂತುಷ್ಟನಾಗುವನು. ಕೀರ್ತನೆಯಿಂದ ಮತ್ತು ಹರಿನಾಮದಿಂದ ಭಾಳೇ ಭೋಳೇ ಅಸಂಖ್ಯ ಜನರು ಉದ್ಧಾರರಾಗಿರುವರು ॥೩೬೦॥ ಆದ್ದರಿಂದಲೇ ಕೀರ್ತನೆಗಿಂತಲೂ ದೊಡ್ಡದಾದ ಪ್ರಬಲವಾದ ಬೇರೆ ಯಾವ ಸಾಧನೆಯೂ ಇರುವುದಿಲ್ಲ. ಹೀಗಿರಲು ಅಜ್ಞಾನಿ ಜನರು ಕೀರ್ತನದ ನಿಂದೆಯನ್ನು ಏಕೆ ಮಾಡುವರು? ॥೩೬೧॥ ಒಟ್ಟಿನಲ್ಲಿ ಹರಿನಾಮದ ಕೀರ್ತನೆಗೆ ವಿಮುಖರಾದವರಿಗೆ ಅವರ ಸ್ವಪ್ನದಲ್ಲಿಯೂ ಸುಖವು ಸಿಗುವುದಿಲ್ಲ. ಈ ಮೂರ್ಖ ಜನರು ಕೀರ್ತನದ ದ್ವೇಷವನ್ನು ಮಾಡಿ ಅತ್ಯಂತ ವಿಪತ್ತುಗಳನ್ನು ಭೋಗಿಸುವರು ॥೩೬೨॥ ಮನದಲ್ಲಿ ದ್ವೇಷದ ಸಂಚಾರವಿರುವವರ ಆಚಾರಗಳಿಗೆ ಧಿಃಕ್ಕಾರವು. ದ್ವೇಷ ಮಾಡುವ ಜನರು ನಿರಂತರವಾಗಿ ಅತಿದುಃಖವನ್ನೇ ಭೋಗಿಸುತ್ತಿರುವರು ॥೩೬೩॥ ಕಲಿಯುಗದಲ್ಲಿ ಬುದ್ಧಿವಂತರಾದ ಪುರುಷರು ನಾಮಕೀರ್ತನೆಗಳಲ್ಲಿ ಸದಾ ಸರ್ವಕಾಲದಲ್ಲಿ ತನ್ಮಯರಾಗಿರುವರು. ಇವರು ಬಹಳ ಆನಂದದಿಂದ ನಾಮದ ಗೌರವ ಮಾಡಿ ಪ್ರೇಮದಿಂದ ಅದರ ಸ್ಮರಣೆಯನ್ನು ಮಾಡುವರು ॥೩೬೪॥ ಅತಿಗಹನವಾದ ನಾನಾ ಅವತಾರಗಳಿರುವುವು. ಅವುಗಳಲ್ಲಿ ಶ್ರೀರಾಮಚಂದ್ರ ಮತ್ತು ಭಗವಾನ ಶ್ರೀಕೃಷ್ಣ ಇವರ ಚರಿತ್ರೆಗಳು ಅತ್ಯಂತ ಪವಿತ್ರವಾಗಿರುವುವು. ಇವರ ಚರಣಗಳಿಗೆ ವಂದನೆಯನ್ನು ಮಾಡಬೇಕು. ಇದರ ಮಹಿಮೆಯನ್ನು ಹೇಳುವೆ ॥೩೬೫॥

ಧ್ಯೇಯಂ ಸದಾ ಪರಿಭವಘ್ನಮಭೀಷ್ಟದೋಹಂ ತೀರ್ಥಾಸ್ಪದಂ ಶಿವವಿರಿಂಚಿನುತಂ ಶರಣ್ಯಮ್ ।
ಭೃತ್ಯಾರ್ತಿಹಂ ಪ್ರಣತಪಾಲ ಭವಾಬ್ಧಿಪೋತಂ ವಂದೇ ಮಹಾಪುರುಷ ತೇ ಚರಣಾರವಿಂದಮ್ ।೫.೩॥

ಅರ್ಥ :- ಭಗವಂತನ ಸುತ್ತಿಯನ್ನು ಹೀಗೆ ಮಾಡುವರು, ಹೇ ಪ್ರಭೋ, ನೀವು ಶರಣು ಬಂದವರ ರಕ್ಷಣೆಯನ್ನು ಮಾಡುವಿರಿ. ನಿಮ್ಮ ಚರಣಗಳು ಯಾವಾಗಲೂ ಧ್ಯಾನ ಮಾಡಲು ಯೋಗ್ಯವಾಗಿರುವುವು. ಮಾಯಾ ಮೋಹದ ಕಾರಣವಾದ ಸಂಸಾರ ಪರಾಜಯದ ಅಂತ್ಯಗೊಳಿಸುವುದ್ದಾಗಿರುವುವು. ಭಕ್ತರ ಸಮಸ್ತ ಅಭೀಷ್ಟ ವಸ್ತುಗಳನ್ನು ದಾನವಾಗಿ ಕೊಡುವುವು. ನೀವು ಕಾಮಧೇನು ಸ್ವರೂಪರಾಗಿರುವಿರಿ. ನಿಮ್ಮ ಚರಣಗಳು ತೀರ್ಥವಾಗುವ ಸ್ವಯಂ ಪರಮ ತೀರ್ಥಸ್ವರೂಪವಾಗಿವೆ. ಶಿವ, ಬ್ರಹ್ಮಾ ಇತ್ಯಾದಿ ಮಹಾ ಮಹಾ ದೇವತೆಗಳು ಅವುಗಳಿಗೆ ನಮಸ್ಕರಿಸುವರು. ಇವುಗಳಿಗೆ ಯಾರೇ ಶರಣು ಬರಲಿ ಅವರನ್ನು ಸ್ವೀಕರಿಸುವುವು. ಇವು ಸೇವಕರ ಸರ್ವ ವಿಪತ್ತುಗಳನ್ನು ನಾಶಮಾಡುವುವು. ಸಂಸಾರಸಾಗರದಿಂದ ಸಹಜವಾಗಿ ಪಾರುಮಾಡುವುವು. ನಾನು ಈ ನಿಮ್ಮ ಚರಣಕಮಲಗಳಿಗೆ ವಂದಿಸುವೆನು.

ಲಯೇ ಲಕ್ಷೇ ಧ್ಯಾನಲಕ್ಷಣೇ । ದೇವ ದೇವೀ ಧ್ಯೇಯ ಧ್ಯಾನೇ । ತೃಣಪ್ರಾಯ ಕೇಲೀ ಜೇಣೇ । ಹರಿಚರಣ ಸ್ಮರಣೇ ತತ್ಕಾಳ ।೫.೬೬॥ ಯಾಲಾಗೀ ಧ್ಯಾನಾಸೀ ತೇ ವರಿಷ್ಠ । ಧ್ಯಾತಾ ಛೇದೀ ಕಲ್ಪನಾದಿ ಕಷ್ಟ । ಭಕ್ತಾಂಚೇ ಅತಿಅಭೀಷ್ಟ । ಮನೋರಥ ಇಷ್ಟ ಸದಾ ಪುರವೀ ।೫.೬೭॥ ನಿತ್ಯ ಧ್ಯಾತಾ ಹರೀಚೇ ಚರಣ । ಕರೀ ಭಕ್ತದೇಹರೋಗ ದುಃಖಹರಣ । ಇತುಕೇಚ ರಾಯಾ ನವ್ಹೇ ಜಾಣ । ಕರೀ ನಿರ್ದಳಣ ಭವರೋಗಾ ।೫.೬೮॥ ಭಕ್ತಾಂಚೇ ಪುರವೀ ಮನೋರಥ। ತೇ ತೂ ಮ್ಹಣಸೀ ವಿಷಯಯುಕ್ತ । ಪರಮಾನಂದೇ ನಿತ್ಯ ತೃಪ್ತ । ನಿವವೀ ನಿಜಭಕ್ತ ಚರಣಾಮೃತೇ ।೫.೬೯॥ ವಾನೂ ಚರಣಾಂಚೀ ಪವಿತ್ರತಾ। ಶಿವು ಪಾಯವಣೀ ವಾಹೇ ಮಾಥಾ। ಜೇ ಜನ್ಮಭೂಮೀ ಸಕಳ ತೀರ್ಥಾ। ಪವಿತ್ರಪಣ ಭಕ್ತಾ ಚರಣಧ್ಯಾನೇ।೫.೭೦॥ ಅವಚಟೇ ಲಾಗಲ್ಯಾ ಚರಣ। ಪವಿತ್ರ ಝಾಲೇ ಪಾಷಾಣ। ಮಾ ಜೇ ಜಾಣೋನಿ ಕರಿತೀ ಧ್ಯಾನ। ತ್ಯಾಂಚೇ ಪವಿತ್ರಪಣ ಕಾಯ ವಾನೂ।೫.೭೧॥ ಜೋ ಸದಾ ಶತ್ರುತ್ವೇ ವರ್ತತಾ । ಜೇಣೇ ಚೋರೂನ ನೇಲೀ ನಿಜಕಾಂತಾ । ತ್ಯಾಚ್ಯಾ ಬಂಧೂ ಶರಣಾಗತಾ। ದಿಧಲೀ ಆತ್ಮತಾ ನಿಜಭಾವೇ।೫.೭೨॥ ಕೋರಡೀ ಆತ್ಮ ತೇಚಿ ಥೋರೀ। ತೈಶೀ ನವ್ಹೇ ಗಾ ನೃಪಕೇಸರೀ। ದೇಊನಿ ಸುವರ್ಣಾಚೀ ನಗರೀ । ಅಚಳತೇವರೀ ಸ್ಥಾಪಿಲಾ ।೫.೭೩॥ ಯಾಲಾಗಿ ಶರಣಾಗತಾ ಶರಣ್ಯ । ಸತ್ಯ ಜಾಣ ಹರೀಚೇ ಚರಣ । ಯಾಪರತೇ ನಿರ್ಭಯ ಸ್ಥಾನ । ನಾಹೀ ಆನ ನಿಜಭಕ್ತಾ ।೫.೭೪॥ ಭಕ್ತಾಂಚೀ ಅಣುಮಾತ್ರ ವ್ಯಥಾ । ಕ್ಷಣ ಏಕ ನ ಸಾಹವೇ ಭಗವಂತಾ । ಪ್ರಹ್ಲಾದಾಚೀ ಅತಿದುಃಖಿತಾ । ಹೋಯ ನಿವಾರಿತಾ ನಿಜಾಂಗೇ ।೫.೭೫॥ ದಾವಾಗ್ನಿ ಗಿಳೂನಿ ಅಂತರೀ । ಗೋಪಾಳ ರಾಖಿಲೇ ವನಾಂತರೀ । ಪಾಂಡವ ಜಳತಾ ಜೋಹರೀ । ಕಾಢಿಲೇ ಬಾಹೇರೀ ವಿವರದ್ವಾರೇ ।೫.೭೬॥

ಧ್ಯಾನ, ಲಕ್ಷಣ, ಸಮಾಧೀ, ದೇವದೇವೀ-ಧ್ಯೇಯ ಇತ್ಯಾದಿ ಎಲ್ಲವನ್ನೂ ಒಂದೇ ಕ್ಷಣದಲ್ಲಿ ತೃಣಪ್ರಾಯವನ್ನಾಗಿ ಮಾಡಿತು ।೫.೬೬॥ ಧ್ಯಾನವನ್ನು ಮಾಡುವವರಿಗೆ ಹರಿಚರಣವು ಇದೊಂದು ಶ್ರೇಷ್ಠವಾಗಿರುವುದು. ಹರಿಚರಣದ ಧ್ಯಾನವನ್ನು ಮಾಡಲು ಕಲ್ಪನಾದಿ ಸರ್ವಪ್ರಕಾರದ ಕ್ಲೇಶಗಳು ಇಲ್ಲದಾಗುವುವು ಮತ್ತು ಭಕ್ತನ ಮನದಲ್ಲಿನ ಸರ್ವ ಮನೋರಥಗಳು ಪೂರ್ಣವಾಗಿ ಅವನು ಪ್ರೇಮಮಯನಾಗುವನು ।೫.೬೭॥ ಹೇ ರಾಜನೇ, ಸತತವಾಗಿ ಹರಿಚರಣದ ಧ್ಯಾನವನ್ನು ಪ್ರೇಮದಿಂದ ಮಾಡಲು ಶಾರೀರಿಕ ರೋಗಗಳ ದುಃಖವು ದೂರಾಗುವುಲ್ಲದೇ ಅದರೊಂದಿಗೆ ಮನದಲ್ಲಿನ ತಾಪಗಳು ಸಹ ಇಲ್ಲದಾಗುವುವು. ಭಕ್ತನ ಭವರೋಗವೂ ಸಹ ನಾಶವಾಗುವುದು ।೫.೬೮॥ ಹೇ ರಾಜನೇ, ಭಕ್ತನ ವಿಷಯಯುಕ್ತ ಮನೋರಥಗಳನ್ನು ದೇವರು ಪೂರ್ಣಮಾಡುವನೆಂದು ನೀನು ತಿಳಿಯಬಹುದು. ಆದರೆ ಅದು ಹಾಗಿರುವುದಿಲ್ಲ. ಹರಿಯ ಕೃಪೆಯಿಂದ ಭಕ್ತನ ಹೃದಯದಲ್ಲಿನ ವಿಷಯವು ಇಲ್ಲದಾಗಿ ಆ ಹೃದಯವು ಆನಂದದಿಂದ ಪರಿಪೂರ್ಣವಾಗಿ ತುಂಬಿಕೊಂಡು ಆತನು ಪೂರ್ಣವಾಗಿ ತೃಪ್ತನಾಗುವನು ।೫.೬೯॥ ಹರಿ ಚರಣದ ಪವಿತ್ರತೆಯ ವರ್ಣನೆಯು ಅಲೌಕಿಕವಾಗಿರುವುದು. ಭಗವಂತನ ಚರಣದಿಂದ ಹೊರಟಿರುವ ಗಂಗೆಯನ್ನು ಶಂಕರನು ತನ್ನ ಮಸ್ತಕದಲ್ಲಿ ಧರಿಸಿದನು. ಈ ಗಂಗೆಯಿಂದಲೇ ಮೂರುಲೋಕಗಳಲ್ಲಿನ ಸರ್ವ ತೀರ್ಥಗಳಿಗೆ ತೀರ್ಥತ್ವವು ಪ್ರಾಪ್ತವಾಯಿತು. ಈತನ ಚರಣಗಳ ಧ್ಯಾನದಿಂದ ಭಕ್ತರಿಗೆ ಪವಿತ್ರತೆಯು ಪ್ರಾಪ್ತವಾಗುವುದು ।೫.೭೦॥ ಅಕಸ್ಮಾತ್ತಾಗಿ ಚರಣ ಸ್ಪರ್ಶದಿಂದ ಪಾಷಾಣವೂ ಪವಿತ್ರವಾಯಿತು. ಶ್ರೀರಾಮಚಂದ್ರನ ಸ್ಪರ್ಶದಿಂದ ಅಹಿಲ್ಯೆಯ ಉದ್ಧಾರವಾಯಿತು. ಹೀಗಿರಲು, ಈ ವಿಚಾರದಿಂದ ಅತ್ಯಂತ ಪ್ರೇಮದಿಂದ ಪ್ರಭುವಿನ ಚರಣಗಳನ್ನು ಧ್ಯಾನ ಮಾಡುವವರ ಪಾವಿತ್ರತೆಯನ್ನು ಹೇಗೆ, ಏನೆಂದು ವರ್ಣಿಸಬೇಕು? ।೫.೭೧॥ ಯಾವ ರಾವಣನು ಯಾವಾಗಲೂ ಶತ್ರುತ್ವದಿಂದ ನಡೆದುಕೊಳ್ಳುತ್ತಿದ್ದನು. ಈತನು ರಾಮನ ಪ್ರಿಯ ಪತ್ನಿಯನ್ನು ಕದ್ದು ಒಯ್ದನು. ಹೀಗಿದ್ದರೂ ಇದೇ ರಾವಣನ ತಮ್ಮ ವಿಭೀಷಣನು ಶರಣು ಬರಲು ರಾಮನು ಆತನಿಗೆ ಆತ್ಮೀಯತೆಯನ್ನು ನೀಡಿದನು ।೫.೭೨॥ ಹೇ ರಾಜನೇ, ರಾಮನು ಈತನಿಗೆ ಕೇವಲ ಆತ್ಮೀಯತೆಯನ್ನು ಕೊಡದೇ ಸುವರ್ಣ ಲಂಕೆಯ ಅಧಿಪತಿಯನ್ನಾಗಿ ಮಾಡಿ ಚಿರಂಜೀವಿಯನ್ನಾಗಿ ಮಾಡಿದನು ।೫.೭೩॥ ಆದ್ದರಿಂದ ಹರಿಚರಣವು ಶರಣ ಹೋಗಲು ಯೋಗ್ಯವಾಗಿರುವುದು. ಇದನ್ನು ಬಿಟ್ಟು ಭಗವದ್ಭಕ್ತರಿಗೆ ಅನ್ಯ ನಿರ್ಭಯ ಸ್ಥಾನವೇ ಇರುವುದಿಲ್ಲ ।೫.೭೪॥ ಭಕ್ತನಿಗೆ ಅತ್ಯಲ್ಪ ದುಃಖವಾದರೂ ಭಗವಂತನಿಗೆ ಅದನ್ನು ಕ್ಷಣಹೊತ್ತು ಸಹ ಸಹಿಸುವುದಾಗುವುದಿಲ್ಲ. ಪ್ರಹ್ಲಾದನ ದುಃಖಗಳನ್ನು ಈತನು ಸ್ವತಃ ನಿವಾರಣೆ ಮಾಡಿದನು ।೫.೭೫॥ ಶ್ರೀಕೃಷ್ಣನ ಅವತಾರದಲ್ಲಿ ಈತನು ದಾವಾಗ್ನಿಯನ್ನು ನುಂಗಿ ವನದಲ್ಲಿ ಗೋಪಾಲಕರನ್ನು ರಕ್ಷಿಸಿದನು. ಲಕ್ಷಾಗೃಹದಲ್ಲಿ ಪಾಂಡವರು ಅಗ್ನಿಯಲ್ಲಿ ಸಿಕ್ಕಿಕೊಂಡಿರಲು, ಗುಹೆ ದ್ವಾರದಿಂದ ಇವರನ್ನು ಹೊರಗೆ ತಂದನು ।೫.೭೬॥

ಕರೂನಿ ಸರ್ವಾಂಗಾಚಾ ವೋಢಾ । ನಿತ್ಯ ನಿವಾರೀ ಭಕ್ತಾಂಚೀ ಪೀಡಾ । ಜೋ ಕಾ ಭಕ್ತಾಂಚಿಯಾ ಭಿಡಾ । ರಣರಂಗೀ ಪುಡಾ ವಾಗವೀ ರಥು ।੫.೭೭॥ ತೇ ಚರಣ ವಂದಿತಾ ಸಾಷ್ಟಾಂಗೀ । ಭಕ್ತಾ ಪ್ರತಿಪಾಳೀ ಉತ್ಸಂಗೀ । ಐಸಾ ಪ್ರಣತಪಾಳು ಕೃಪಾವೋಘೀ । ದುಸರಾ ಜಗೀ ಅಸೇನಾ ।੫.೭೮॥ ತರಾವಯಾ ಭವಾಬ್ಧಿ ಪ್ರಬಳ । ಚರಣಾಂಚೀ ನಾವ ಅಡಂಡಳ । ಅನನ್ಯಶರಣ ಸಕಳ । ತಾರೀ ತತ್ಕಾಳ ಚರಣಾನುರಾಗೇ ।੫.೭೯॥ ತೇ ಮಹಾಪುರುಷಾಚೇ ಶ್ರೀಚರಣ । ಶರಣಾಗತಾ ನಿಜಶರಣ್ಯ । ಜ್ಯಾಂಚೇ ಸನಕಾದಿಕ ಧ್ಯಾನ । ಕರಿತೀ ಅಭಿವಂದನ ಸದ್ಭಾವೇ ।੫.೮೦॥ ಅಗಾಧ ಚರಣಾಂಚೇ ಮಹಿಮಾನ । ವಾನಿತಾ ವೇದಾ ಪಡಿಲೇ ಮೌನ । ಬ್ರಹ್ಮಾ ಸದಾಶಿವ ಆಪಣ । ಕರಿತಾ ಸ್ತವನ ತಟಸ್ಥ ಠೇಲೇ ।੫.೮೧॥ ಅಗಮ್ಯ ಅತರ್ಕ್ಯ ಶ್ರೀಚರಣ । ಜಾಣೋನಿ ಬ್ರಹ್ಮಾದಿಕ ಈಶಾನ । ಸಾಷ್ಟಾಂಗೇ ಅಭಿವಂದನ । ಕರೂನಿಯಾ ಸ್ತವನ ಕರಿತೀ ಐಸೇ ।੫.೮೨॥

ತ್ಯಕ್ತ್ವಾ ಸುದುಸ್ತ್ಯಜಸುರೇಪ್ಸಿತರಾಜ್ಯಲಕ್ಷ್ಮೀಮ್ ಧರ್ಮಿಷ್ಠ ಆರ್ಯವಚಸಾ ಯದಗಾದರಣ್ಯಮ್ ।
ಮಾಯಾಮೃಗಂ ದಯಿತಯೇಪ್ಸಿತಮನ್ವಧಾವದ್ ವಂದೇ ಮಹಾಪುರುಷ ತೇ ಚರಣಾರವಿಂದಮ್ ।੫.೪॥

ಅರ್ಥ:- ಹೇ ಭಗವಂತನೇ, ನಿಮ್ಮ ಚರಣ ಕಮಲಗಳ ಮಹಿಮೆಯನ್ನು ಯಾರು ವರ್ಣಿಸಬೇಕು? ರಾಮ ಅವತಾರದಲ್ಲಿ ನೀವು ತಂದೆ ದಶರಥನ ವಚನದಂತೆ ರಾಜ್ಯ ಲಕ್ಷ್ಮೀಯ ತ್ಯಾಗವನ್ನು ಮಾಡಿ ವನವಾಸವನ್ನು ಭೋಗಿಸಿದಿರಿ. ನಿಜವಾಗಿಯೂ ನೀವು ಧರ್ಮನಿಷ್ಠೆಯ ಸೀಮೆಯಾಗಿರುವಿರಿ. ತಾವು ಮಹಾಪುರುಷರು. ನಿಮ್ಮ ಧರ್ಮಪತ್ನಿ ಸೀತೆಯ ಕೇಳಿಯಂತೆ, ನೀವು ತಿಳಿದೂ ತಿಳಿದೂ ಮಾಯಾರೂಪ ಮೃಗದ ಬೆನ್ನುಹತ್ತಿ ಧಾವಿಸಿದಿರಿ. ನಿಜವಾಗಿಯೂ ನೀವು ಪ್ರೇಮದ ಸೀಮೆಯಾಗಿರುವಿರಿ. ನಾನು ನಿಮ್ಮ ಆ ಚರಣಗಳಿಗೆ ವಂದಿಸುವೆನು.

ಜೇ ರಾಜ್ಯಶ್ರೀಯೇಕಾರಣೇ । ಅಮರ ಲೋಲಂಗತ ಮನೇ । ತೇ ರಾಜ್ಯ ಶ್ರೀರಾಮೇ ತ್ಯಾಗಣೇ । ವಚನಾಕಾರಣೇ ಪಿತ್ಯಾಚ್ಯಾ ।੫.೮೩॥ ಶ್ರೀರಾಮ ಧರ್ಮಿಷ್ಠ ಚೋಖ । ಪಿತೃವಚನಪ್ರತಿಪಾಳಕ । ಉದ್ಭಟ ರಾಜ್ಯ ಸಾಂಡೋನಿ ದೇಖ । ನಿಘೇ ಏಕಾಏಕ ವನವಾಸಾ ।੫.೮೪॥ ವನವಾಸಾ ಚರಣೇ ಜಾತಾ । ಸವೇ ಘೇತಲೀ ಪ್ರಿಯಾ ಸೀತಾ । ಯೇಣೇ ಬೋಲೇ ಸ್ತ್ರೀಕಾಮತಾ । ಶ್ರೋತೀಸರ್ವಥಾ ನ ಮಾನಾವೀ ।੫.೮೫॥ ತರೀ ಕೇವಳ ಸ್ತ್ರೀ ನವ್ಹೇ ಸೀತಾ । ತೇ ನಿಜಭಕ್ತ ಜಾಣ ತತ್ತ್ವತಾ । ಸಾಂಡೂನಿ ರಾಜಭೋಗಾ ಸಮಸ್ತಾ । ಸೇವೇಚ್ಯಾ ನಿಜಸ್ವಾರ್ಥಾ ವನಾ ಆಲೀ ।੫.೮೬॥ ರಾಜ್ಯೀ ಅಸತಾ ರಘುವೀರೇ । ದಾಸ್ಯ ದಾಸಾ ವಾಂಟಲೇ ಅಧಿಕಾರೇ । ತೇಮೀ ಏಕಲೀ ಏಕಸರೇ । ಸೇವಾ ವನಾಂತರೀ ಅವಘೀಚ ಕರೀನ ।੫.೮೭॥ ತೇ ಸೇವಾ ಯಾವಯಾ ಹಾತಾ । ಸಕಳ ಸೇವೇಚ್ಯಾ ನಿಜಸ್ವಾರ್ಥಾ । ಚರಣಚಾಲೀ ಚಾಲೋನಿ ಸೀತಾ । ಆಲೀ ತತ್ತ್ವತಾ ವನವಾಸಾಸೀ ।੫.೮೮॥

ಈ ಪ್ರಕಾರವಾಗಿ ಈ ಭಗವಂತನು ತನ್ನ ಸ್ವತಃ ಶರೀರವನ್ನು ಸವಿಸಿ ಭಕ್ತರ ಸಂಕಟಗಳನ್ನು ನಿತ್ಯದಲ್ಲಿಯೂ ನಿವಾರಿಸುವನು. ಭಕ್ತರಿಗಾಗಿ ಈತನು ರಣರಂಗದಲ್ಲಿ ಅರ್ಜುನನ ರಥವನ್ನು ಹೊಡೆದನು ।੫.೭೭॥ ಈತನ ಚರಣಗಳಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಲು, ಆತನು ಭಕ್ತನನ್ನು ತನ್ನ ತೊಡೆಯ ಮೇಲೆ ಪ್ರತಿಪಾಲನೆ ಮಾಡುವನು. ಹೀಗೆ ಶರಣಾದವರನ್ನು ರಕ್ಷಿಸುವ ಪ್ರೇಮಳನು ಜಗತ್ತಿನಲ್ಲಿ ಅನ್ಯರು ಯಾರೂ ಇಲ್ಲ ।੫.೭೮॥ ಪ್ರಚಂಡವಾದ ಭವಸಾಗರವನ್ನು ದಾಟಿ ಹೋಗಲು ಹರಿಚರಣ ಒಂದೇ ದೃಢವಾದ ನೌಕೆಯಾಗಿರುವುದು. ಅನನ್ಯವಾಗಿ ಶರಣಾದ ಭಕ್ತರೆಲ್ಲರನ್ನೂ ಈತನು ತ್ವರಿತವಾಗಿ ಉದ್ಧರಿಸುವನು ।੫.೭೯॥ ಈ ಮಹಾಪುರುಷನ ಚರಣಗಳನ್ನು ಸನಕಾದಿಕರು ಸದ್‌ಭಾವನೆಯಿಂದ ವಂದಿಸುವರು ಮತ್ತು ಧ್ಯಾನಿಸುವರು ।੫.೮೦॥ ಈ ಚರಣಗಳ ಅಗಾಧವಾದ ಮಹಿಮೆಯನ್ನು ವರ್ಣನೆ ಮಾಡಲು ಹೋಗಿ ವೇದವು ಸಹ ಮೌನವಾಯಿತು.ಬ್ರಹ್ಮದೇವರು ಮತ್ತು ಮಹಾದೇವರು ಈತನ ಸುತ್ತಿ ಮಾಡಲು ತಟಸ್ಥರಾದರು ।੫.೮೧॥ ಹೀಗೆ ಶ್ರೀಚರಣವು ಅಗಮ್ಯವಾಗಿದೆ, ಅತರ್ಕ್ಯವಾಗಿದೆ. ಇದನ್ನರಿತು ಬ್ರಹ್ಮದೇವರು, ಮಹಾದೇವರು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಸ್ತವನ ಮಾಡಲಾರಂಭಿಸಿದರು ।੫.೮೨॥

ಯಾವ ರಾಜ್ಯವೈಭವವನ್ನು ಪ್ರಾಪ್ತಮಾಡಿಕೊಳ್ಳಲು ದೇವಾನುದೇವತೆಗಳ ಮನವು ಮೋಹಿಸುವುದು. ಅಂತಹ ರಾಜ್ಯವನ್ನು ಶ್ರೀರಾಮನು ತನ್ನ ತಂದೆಯ ವಚನಕ್ಕಾಗಿ ತ್ಯಾಗ ಮಾಡಿದನು ।੫.೮೩॥ ಶ್ರೀರಾಮನು ಧರ್ಮನಿಷ್ಠನಾಗಿದ್ದನು ಮತ್ತು ತಂದೆಯ ವಚನವನ್ನು ಪಾಲಿಸುವವನಾಗಿದ್ದನು. ಆದ್ದರಿಂದಲೇ ಇಂತಹ ಮಹತ್ತರವಾದ ರಾಜ್ಯವೈಭವವನ್ನು ಬಿಟ್ಟು ವನವಾಸಕ್ಕೆ ಹೊರಟು ಹೋದನು ।੫.೮೪॥ ವನವಾಸಕ್ಕೆ ಕಾಲುನಡಿಗೆಯಿಂದ ಹೊರಡಲು ಜೊತೆಗೆ ತನ್ನ ಪ್ರಿಯಳಾದ ಸೀತೆಯನ್ನು ತೆಗೆದುಕೊಂಡನು. ಸ್ತ್ರೀಕಾಮಕ್ಕಾಗಿ ಎಂದು ಶ್ರೋತೃಗಳು ಎಂದೂ ತಿಳಿಯಬಾರದು ।੫.೮೫॥ ಏಕೆಂದರೆ ಸೀತೆಯು ಕೇವಲ ಸ್ತ್ರೀ ಆಗದೇ ಭಗವಂತನ ನಿಸ್ಸೀಮ ನಿಜಭಕ್ತಳಾಗಿದ್ದಳು. ಆದ್ದರಿಂದ ರಾಜಭೋಗ ಎಲ್ಲವನ್ನೂ ಒಗೆದು ಶ್ರೀರಾಮನ ಸೇವೆಗಾಗಿ ರಾಮನ ಜೊತೆಯಲ್ಲಿ ವನವಾಸಕ್ಕೆ ಹೊರಟಳು ।੫.೮೬॥ ರಘುವೀರನು ರಾಜಧಾನಿಯಲ್ಲಿ ಇರುತ್ತಿರಲು ಭಿನ್ನಭಿನ್ನ ಸೇವಕರಿಂದ ಅವರವರ ಅಧಿಕಾರ ತಕ್ಕಂತೆ ಸೇವೆಯನ್ನು ಹಂಚಲಾಗಿತ್ತು. ಈ ಎಲ್ಲ ಸೇವೆಯನ್ನು ವನದಲ್ಲಿ ನಾನೊಬ್ಬಳೇ ಮಾಡುವೆನು ।੫.೮೭॥ ಹೀಗೆ ಪವಿತ್ರವಾದ ಉದ್ದೇಶವನ್ನು ಮನದಲ್ಲಿಟ್ಟುಕೊಂಡು ಸೇವೆ ಮಾಡಿ ಕೃತಾರ್ಥಳಾಗಬೇಕೆಂದು ಸೀತೆಯು ಕಾಲುನಡಿಗೆಯಿಂದ ವನವಾಸಕ್ಕೆ ಹೊರಟಳು ।੫.೮೮॥

ಕೈಸೇ ಶ್ರೀರಾಮಸೇವೇಚೇ ಸುಖ । ಚರಣೇಚಾಲತಾ ನಾಠವೇ ದುಃಖ । ವಿಸರಲೀ ಮಾಯಾಮಾಹೇರಪಕ್ಷ । ಅತ್ಯಂತ ಹರಿಖ ಸೇವೇಚ್ಯಾ ॥೮೯॥ ಐಶಿಯಾ ಮನೋಗತ-ಸದ್ಭಾವಾ । ವನಾ ಆಲೀ ಕರಾವಯಾ ಸೇವಾ । ಶ್ರೀರಾಮ ಜಾಣೇ ಭಕ್ತ ಭಾವಾ । ಯೇರಾ ದೇವಾ ದಾನವಾ ಕಳೇನಾ ॥೯೦॥ ನಿಜಭಕ್ತಾಂಚೇ ಮನೋಗತ । ಜಾಣತಾ ಏಕ ರಘುನಾಥ । ಕಾ ಶ್ರೀರಾಮಸೇವೇಚಾ ಸ್ವಾರ್ಥ । ಜಾಣತೀ ನಿಜಭಕ್ತ ಭಜನಾನಂದೇ ॥೯೧॥ ಭಗವದ್ಭಜನಾಚೇ ಸುಖ । ಭಕ್ತ ಜಾಣತೀ ಭಾವಿಕ । ಭಾವೇವೀಣ ಭಜನಸುಖ । ಅನೋಳಖ ಅಭಾವಿಕಾ ॥೯೨॥ ಪೂರ್ಣ ಭಾವಿಕ ಭಕ್ತ ಸೀತಾ । ಹೇ ಕಳಲೇಸೇ ರಘುನಾಥಾ । ಯಾಲಾಗೀ ತಿಚಿಯಾ ವಚನಾರ್ಥಾ । ಹೋಯ ಧಾವತಾ ಮೃಗಾಮಾಗೇ ॥೯೩॥ ಮಾಯಿಕ ಮೃಗಾಚೇ ಸುವರ್ಣಭಾನ । ಜರೀ ಜಾಣೇ ರಘುನಂದನ । ತರೀ ಭಕ್ತಲಳೇ ಪಾಳಣ । ಕರೀ ಧಾವೂನ ಮೃಗಾಮಾಗೇ ॥೯೪॥ ಬಾಳಕಾಚೇನಿ ಛಂದೇ ಜಾಣ । ಜೇವೀ ಮಾಉಲೀ ನಾಚೇ ಆಪಣ । ತೇವೀ ಮಾಯಾಮೃಗಾಪಾಠೀ ಧಾವನ । ಕರೀ ರಘುನಂದನ ನಿಜಭಕ್ತವಾಕ್ಯೇ ॥೯೫॥ ಜೋ ರಾಮ ವಾನರಾಂಚ್ಯಾ ಗೋಷ್ಟೀ । ಐಕತಾ ವಿಕಲ್ಪ ನ ಧರೀ ಪೋಟೀ । ತೋ ಸೀತೇಚ್ಯಾ ವಚನಾಸಾಠೀ । ಧಾವೇ ಮೃಗಾಪಾಠೀ ನವಲ ಕಾಯೀ ॥೯೬॥ ಭಲತೈಸೇ ಭಕ್ತವಚನ । ಮಿಥ್ಯಾ ನ ಮ್ಹಣೇ ರಘುನಂದನ । ಯಾಲಾಗೀ ನಿಜಚರಣೇ ಧಾವನ । ಕರೀ ಆಪಣ ಮೃಗಾಮಾಗೇ ॥೯೭॥ ಏವಂ ಭಕ್ತವಾಕ್ಯೇ ಉಠಾಉಠೀ । ಜೋ ಪಾಯೀ ಧಾವೇ ಮೃಗಾಪಾಠೀ । ಜ್ಯಾಚೇ ಚರಣರೇಣು ಅಣುಕುಟೀ । ವಂದಿತೀ ಮುಕುಟೀ ಶಿವಾದಿ ಸರ್ವ ॥೯೮॥ ಜೋ ಮೃಗಾಮಾಗೇ ಧಾಂವತಾ ಜಾಣ । ಪಾವನ ಕೇಲೇ ಪಾಷಾಣ । ತ್ಯಾಚ್ಯಾ ಚರಣಾ ಅನನ್ಯ ಶರಣ । ಅಭಿವಂದನ ಸದ್ಭಾವೇ ॥೯೯॥ ಏವಂ ಮಹಾಪುರುಷಾಚೇ ಚರಣ । ಅಭಿವಂದನೇ ಕರಿತೀ ಸ್ತವನ । ಕಲಿಯುಗೀ ಕೀರ್ತನೇ ಜನ । ಪರಮ ಪಾವನ ನಿತ್ಯಯುಕ್ತ ॥೧೦೦॥

ಏವಂ ಯುಗಾನುರೂಪಾಭ್ಯಾಂ ಭಗವಾನ್ ಯುಗವರ್ತಿಭಿಃ ।
ಮನುಜೈರಿಜ್ಯತೇ ರಾಜನ್ ಶ್ರೇಯಸಾಮೀಶ್ವರೋ ಹರಿಃ ॥೩೫॥

ಅರ್ಥ:- ಹೇ ರಾಜನೇ, ಈ ಪ್ರಕಾರವಾಗಿ ವಿಭಿನ್ನ ಯುಗಗಳಲ್ಲಿ ಜನರು ತಮ್ಮ ತಮ್ಮ ಯುಗದ ಅನುಸಾರವಾಗಿ ವಿಚಿತ್ರ ಪ್ರಕಾರಗಳಿಂದ ಭಗವಂತನ ಆರಾಧನೆಯನ್ನು ಮಾಡುತ್ತಿರುವರು. ಧರ್ಮ ,ಅರ್ಥ, ಕಾಮ ಮತ್ತು ಮೋಕ್ಷ ಈ ಎಲ್ಲ ಪುರುಷಾರ್ಥಗಳ ಸ್ವಾಮಿಯು ಒಬ್ಬ ಭಗವಾನ ಶ್ರೀಹರಿಯಾಗಿರುವನು.

ಶ್ರೀರಾಮನ ಸೇವೆಯ ಸುಖದ ವರ್ಣನೆಯನ್ನು ಏನೆಂದು ಮಾಡಬೇಕು? ಕಾಲುನಡಿಗೆಯಲ್ಲಿ ಆಕೆಗೆ ಸ್ವಲ್ಪವೂ ದುಃಖವಾಗಲಿಲ್ಲ. ಮಾಯೆಯ ತವರು ಮನೆಯನ್ನು ಸಹ ಆಕೆಯು ಮರೆತುಬಿಟ್ಟಳು. ಇಷ್ಟೊಂದು ಸೀತೆಗೆ ಶ್ರೀರಾಮ ಸೇವೆಯ ಆನಂದವಾಗುತ್ತಿತ್ತು ॥೮೯॥ ಈ ಪ್ರಕಾರದ ಸದ್ಭಾವನೆಯಿಂದ ಈಕೆಯು ಶ್ರೀರಾಮಚಂದ್ರನ ಸೇವೆ ಮಾಡುವುದಕ್ಕಾಗಿಯೇ ಅರಣ್ಯಕ್ಕೆ ಹೊರಟಳು. ಭಕ್ತರ ಮನೋಗತವನ್ನು ಶ್ರೀರಾಮನೊಬ್ಬನೇ ಅರಿಯಬಲ್ಲನು. ಅನ್ಯ ದೇವ ದಾನವರಿಗೆ ಇದು ತಿಳಿಯಲಾರದು ॥೯೦॥ ಒಬ್ಬ ರಘುನಾಥನು ಮಾತ್ರ ತನ್ನ ಭಕ್ತರ ಪ್ರೇಮವನ್ನು ತಿಳಿಯುವನು. ಹಾಗೆಯೇ ಆತನ ಸೇವೆಯ ಸ್ವಾರ್ಥವನ್ನು ಭಕ್ತರು ಭಜನಾನಂದದಿಂದ ತಿಳಿಯುವರು ॥೯೧॥ ಭಗವದ್‌ಭಜನೆಯ ಸುಖವನ್ನು ಕೇವಲ ಭಾವಿಕ ಭಕ್ತರು ಮಾತ್ರ ತಿಳಿಯುವರು. ಪ್ರೇಮಭಾವವಿಲ್ಲದೇ ಯಾವ ಭಜನೆ ಸುಖವು ಅಭಾವಿಕರಿಗೆ ತಿಳಿಯುವುದಿಲ್ಲ ॥೯೨॥ ಸೀತೆಯು ಪರಿಪೂರ್ಣ ಭಾವಿಕ ಭಕ್ತಳು ಎಂದು ಶ್ರೀರಾಮನು ತಿಳಿದಿದ್ದನು. ಆದ್ದರಿಂದಲೇ ಆಕೆಯ ಹೇಳಿಕೆಯಂತೆ ಆತನು ಮೃಗದ ಹಿಂದೆ ಧಾವಿಸುತ್ತ ಹೋದನು ॥೯೩॥ ಈ ಸುವರ್ಣ ಮೃಗವು ಮಾಯಾವೀಯಾಗಿರುವುದೆಂದು ಶ್ರೀರಾಮನು ಅರಿತಿದ್ದನು. ಆದರೂ ಭಕ್ತಳ ಇಚ್ಛೆಯನ್ನು ಪೂರ್ಣಗೊಳಿಸಲು ಆ ಮಾಯಾವೀ ಮೃಗದ ಹಿಂದೆ ಧಾವಿಸುತ್ತಿದ್ದನು ॥೯೪॥ ಚಿಕ್ಕ ಬಾಲಕನ ಪ್ರೇಮದ ಬೇಡಿಕೆಯನ್ನು ಪೂರ್ಣಗೊಳಿಸಲು ತಾಯಿಯು ಓಡಾಡುವಂತೆ ಶ್ರೀರಾಮನೂ ಸಹ ಭಕ್ತಳ ಇಚ್ಛೆಯನ್ನು ಪೂರ್ಣಗೊಳಿಸಲು ಆ ಮಾಯಾವೀ ಮೃಗದ ಹಿಂದೆ ಹಿಂದೆ ಧಾವಿಸಿದನು ॥೯೫॥ ಯಾವ ರಾಮನು ಕಪಿಗಳ ಮಾತು ಕೇಳಿಯೂ ಮನದಲ್ಲಿ ವಿಕಲ್ಪವನ್ನು ಹಿಡಿಯಲಿಲ್ಲ. ಈಗ ಆತನು ಸೀತೆಯ ಶಬ್ದಕ್ಕಾಗಿ ಮೃಗದ ಹಿಂದೆ ಧಾವಿಸುವುದರಲ್ಲಿ ಯಾವ ಆಶ್ಚರ್ಯವಿದೆ? ॥೯೬॥ ಭಕ್ತರ ವಚನಗಳು ಯಾವುದೇ ಹೇಗೆಯೇ ಇರಲಿ, ಅವುಗಳನ್ನು ಶ್ರೀರಾಮನು ಸುಳ್ಳಾಗಿ ಭಾವಿಸುತ್ತಿರಲಿಲ್ಲ. ಆದ್ದರಿಂದ ಆತನು ಮೃಗದ ಹಿಂದೆ ಧಾವಿಸುತ್ತ ಹೊರಟನು ॥೯೭॥ ಯಾರ ಚರಣಗಳ ಸೂಕ್ಷ್ಮವಾದ ಧೂಳನ್ನು ಶಂಕರಾದಿಯವರು ತಮ್ಮ ಮಸ್ತಕದಲ್ಲಿ ಧರಿಸುವರೋ ಅಂತಹ ಶ್ರೀರಾಮನು ಸೀತೆಯ ವಚನಕ್ಕಾಗಿ ಮೃಗದ ಹಿಂದೆ ಧಾವಿಸಿದನು ॥೯೮॥ ಈತನು ಮೃಗದ ಹಿಂದೆ ಧಾವಿಸುವ ನಿಮಿತ್ತದಲ್ಲಿ ಪಾಷಾಣಗಳಿಗೆ ಪಾವನಗೊಳಿಸಿದನು. ಈತನ ಚರಣಗಳಿಗೆ ಅನನ್ಯಭಾವದಿಂದ ಶರಣಾಗಿ ಪರಮಭಕ್ತಿಯಿಂದ ವಂದನೆ ಮಾಡೋಣ ॥೯೯॥ ಈ ಮಹಾಪುರುಷನ ಚರಣಗಳಿಗೆ ದೇವತೆಗಳೂ ವಂದಿಸಿ ಸ್ತವನ ಮಾಡಲಾರಂಭಿಸಿದರು. ಕಲಿಯುಗದಲ್ಲಿ ಭಕ್ತಜನರು ಆ ಮಹಾ ಪುರುಷನ ಲೀಲೆಗಳ ಕೀರ್ತನೆಯನ್ನು ಮಾಡಿ ಪರಮಪಾವನರಾಗಿ ನಿತ್ಯಮುಕ್ತರಾಗುವರು. ಆನಂದರೂಪ ತತ್ವದಲ್ಲಿ ಒಂದಾಗಿಬಿಡುವರು ॥೧೦೦॥

ಏವಂ ಕೃತಾದಿ - ಕಲಿಯುಗಾವರೀ । ಇಹೀ ನಾಮೀ ರೂಪೀ ಅವತಾರೀ । ಸದ್ಭಾವೇ ತ್ಯೆಂಚ್ಯಾ ನರೀ । ಭಜಿಜೇ ಶ್ರೀಹರೀ ಶ್ರೇಯಾರ್ಥ ॥೪೦೧॥ ತ್ಯಾಮಾಜೀ ಕಲಿಯುಗಾಚೀ ಥೋರೀ । ವಾನಿಜೇ ಸದ್ಭಾವೇ ಋಷೀಶ್ವರೀ । ಯೇಥೇ ಹರಿಕೀರ್ತನಾವರೀ । ಮುಕ್ತಿ ಚಾರೀ ವೋಳಂಗಣ್ಯಾ ॥೪೦೨॥

ಕಲಿಂ ಸಭಾಜಯಂತ್ಯಾರ್ಯಾ ಗುಣಜ್ಞಾ: ಸಾರಭಾಗಿನ: । ಯತ್ರ ಸಂಕೀರ್ತನೇನೈವ ಸರ್ವ: ಸ್ವಾರ್ಥೋಽಭಿಲಭ್ಯತೇ ॥೩೬॥

ಅರ್ಥ:- ಕಲಿಯುಗದಲ್ಲಿ ಕೇವಲ ಸಂಕೀರ್ತನೆಯಿಂದಲೇ ಸರ್ವ ಸ್ವಾರ್ಥ-ಪರಮಾರ್ಥವು ಪ್ರಾಪ್ತವಾಗುವುದು. ಆದ್ದರಿಂದ ಈ ಯುಗವನ್ನು ತಿಳಿದಿರುವ ಶ್ರೇಷ್ಠಪುರುಷರು ಕಲಿಯುಗದ ಮಹಾ ಪ್ರಶಂಸೆಯನ್ನು ಮಾಡುವರು. ಅದನ್ನು ಪ್ರೀತಿಸುವರು.

ಅವಧಾರೀ ರಾಯಾ ಸರ್ವಜ್ಞಾ । ಧನ್ಯ ಧನ್ಯ ಕಲಿಯುಗ ಜಾಣಾ । ಜೇಥ ಸರ್ವ ಸ್ವಾರ್ಥ ಹರಿಕೀರ್ತನಾ । ನಾಮಸ್ಮರಣಾಸಾರೀ ಹೋತೀ ॥೪೦೩॥ ಕಲಿಯುಗೀ ದೋಷ ಬಹುತ । ಕೇವೀ ಕೀರ್ತನೇ ಹೋಯ ಸ್ವಾರ್ಥ । ತೇಥೇ ದೋಷತ್ಯಾಗೇ ಜೇ ಗುಣ ಘೇತ । ತೇ ನಿತ್ಯಮುಕ್ತ ಹರಿಕೀರ್ತನೀ ॥೪೦೪॥ ಹರಿಕೀರ್ತನೇ ಶುದ್ಧ ಚಿತ್ತ । ದೋಷತ್ಯಾಗೇ ಗುಣ ಸಂಗ್ರಹೀತ । ಐಸೇ ಸಾರಭಾಗೀ ಕಲಿಯುಗಾಂತ । ಪರಮಮುಕ್ತ ಹರಿಕೀರ್ತನೇ ॥೪೦೫॥ ಕಲೀಚ್ಯಾ ಗುಣಾಂತೇ ಜಾಣತೇ । ನಾಮೇ ಮೋಕ್ಷ ಜೋಡಣೇ ಯೇಥೇ । ಜಾಣೋನಿ ಕರಿತೀ ಕೀರ್ತನಾತೇ । ತೇ ಜಾಣ ನಿಶ್ಚಿತೇ ನಿತ್ಯಮುಕ್ತ ॥೪೦೬॥ ಕಲಿಯುಗೀ ಹೇಚಿ ಸಾರ । ನಾಮಸ್ಮರಾವೇ ನಿರಂತರ । ಕರಿತೀ ನಾಮಾಚಾ ನಿಜಗಜರ । ತೇ ಮುಕ್ತ ನರ ನೃಪನಾಥಾ ॥೪೦೭॥

ಸಮಂತ ಶ್ಲೋಕ:-

ಧ್ಯಾಯನ್ ಕೃತೇ ಯಜನ್ ಯಜ್ಞೈ: ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ ॥೧॥

ಅರ್ಥ:- ಕೃತಯುಗದಲ್ಲಿ ಧ್ಯಾನದಿಂದ ತ್ರೇತಾಯುಗದಲ್ಲಿ ಯಜ್ಞಕರ್ಮಗಳ ಆಚರಣೆಯಿಂದ ದ್ವಾಪರ ಯುಗದಲ್ಲಿ ದೇವಾಲಯದಲ್ಲಿ ಮಾಡುವ ಪೂಜೆಯಿಂದ ಯಾವುದನ್ನು ಪ್ರಾಪ್ತವಾಗುವುದೋ ಕಲಿಯುಗದಲ್ಲಿ ಅದನ್ನೇ ಕೇಶವನ ನಾಮಗಳ ಕೀರ್ತನೆಯಿಂದ ಪ್ರಾಪ್ತವಾಗುವುದು.

ಕೃತಯುಗೀ ಶಮದಮಾದಿಸಾಧನ । ತ್ರೇತಾಯುಗೀ ವೇದೋಕ್ತ ಯಜ್ಞ । ದ್ವಾಪರೀ ಆಗಮೋಕ್ತ ಪೂಜನ । ತಂತ್ರವಿಧಾನ ವಿಧಿಯುಕ್ತ ॥೪೦೮॥ ಯಾಪರೀ ತ್ರಿಯುಗೀ ಜನಾ । ಪರಮ ಸಂಕಟ ಸಾಧನಾ । ಕರಿತಾಂಹೀ ಪರೀ ಮನಾ । ಅಣುಮಾತ್ರ ಜಾಣಾ ಉಪರಮು ನವ್ಹೇ ॥೪೦೯॥ ತೀ ಅವಘೀಚ ಸಾಧನೇ । ಕಲೀನೇ ಲಾಜವಿಲೀ ಕೀರ್ತನೇ । ಜೇಥ ಗಾತಾ ನಾಚತಾ ಆಪಣೇ । ವಶ್ಯ ಕರಣೇ ಪರಮಾತ್ಮಾ ॥೪೧೦॥ ಆಖರೀ ಹುಂಬಳೀ ಗುಣೇ । ಐಕತಾ ಗೋವಳಾಂಚೇ ಗಾಣೇ । ದೇವ ಭುಲಲಾ ಜೀವೇ ಪ್ರಾಣೇ । ತ್ಯಾಂಸವೇ ನಾಚಣೇ ಸ್ವಾನಂದೇ ॥೪೧೧॥

ಈ ಪ್ರಕಾರವಾಗಿ ಕೃತಯುಗದಿಂದ ಹಿಡಿದು ಕಲಿಯುಗದವರೆಗೆ ನಾಮ, ರೂಪ ಮತ್ತು ಅವತಾರಗಳಲ್ಲಿ ಆಯಾ ಯುಗಗಳಲ್ಲಿನ ಪುರುಷರು ತಮ್ಮ ಶ್ರೇಯಕ್ಕಾಗಿ ಶ್ರೀಹರಿಯನ್ನು ಪೂಜಿಸಬೇಕು ॥೪೦೧॥ ಮಹಾ ಮಹಾ ಋಷಿಗಳು ಈ ಕಲಿಯುಗದ ಮಹತ್ವವನ್ನು ಬಹಳಷ್ಟು ವರ್ಣಿಸಿರುವರು. ಏಕೆಂದರೆ ಈ ಯುಗದಲ್ಲಿ ಹರಿಕೀರ್ತನೆಯಿಂದಲೇ ನಾಲ್ಕೂ ಮುಕ್ತಿಗಳು ದಾಸಿಯಾಗುವುವು ॥೪೦೨॥

ಹೇ ಸರ್ವಜ್ಞ ರಾಜನೇ ಕೇಳು, ಕಲಿಯುಗವು ನಿಜವಾಗಿಯೂ ಅತ್ಯಂತ ಧನ್ಯವಾಗಿದೆ. ಏಕೆಂದರೆ ಕಲಿಯುಗದಲ್ಲಿ ಹರಿಕೀರ್ತನೆ ಮತ್ತು ನಾಮಸ್ಮರಣೆ ಇವುಗಳಿಂದಲೇ ಸರ್ವ ಮನೋರಥಗಳು ಸಿದ್ಧಿಯಾಗುವುವು ॥೪೦೩॥ ಕಲಿಯುಗದಲ್ಲಿ ಪಾಪಗಳು ಬಹಳಾಗುವುವು. ಅಂದಮೇಲೆ ಕೀರ್ತನೆಗಳಿಂದ ಸ್ವಾರ್ಥವು ಹೇಗೆ ಸಾಧಿಸುವುದು ? ಆದರೆ, ಅದರಲ್ಲಿನ ದೋಷವನ್ನು ಬಿಟ್ಟುಕೊಟ್ಟು ಒಳ್ಳೆಯದನ್ನು ಸ್ವೀಕರಿಸುವವರು ಹರಿಕೀರ್ತನೆಯಿಂದಲೇ ನಿತ್ಯ ಮುಕ್ತರಾಗುವರು ॥೪೦೪॥ ಹರಿಕೀರ್ತನೆಯಿಂದ ಚಿತ್ತಶುದ್ಧಿಯಾಗುವುದು. ದೋಷವನ್ನು ತ್ಯಜಿಸಿ ಒಳ್ಳೆಯದನ್ನು ಸಂಗ್ರಹಿಸುವ ಗುಣಜ್ಞರು ಕಲಿಯುಗದಲ್ಲಿ ಪರಮ ಮುಕ್ತಿಯನ್ನು ಪಡೆಯುವರು ॥೪೦೫॥ ಕಲಿಯುಗದ ಮಹಿಮೆಯನ್ನು ಅರಿತ ಜನರು ನಾಮದಿಂದಲೇ ಮೋಕ್ಷವು ದೊರೆಯುವುದೆಂಬುದನ್ನು ಲಕ್ಷದಲ್ಲಿರಿಸಿ ಕೀರ್ತನೆಯನ್ನು ಮಾಡುವರು. ಆದ್ದರಿಂದ ಇವರು ನಿತ್ಯ ಮುಕ್ತರಾಗುವರು ॥೪೦೬॥ ಕಲಿಯುಗದಲ್ಲಿ ನಿರಂತರವಾಗಿ ನಾಮಸ್ಮರಣೆಯನ್ನು ಮಾಡಬೇಕು. ಇದೇ ಸಾರಭೂತವಾಗಿರುವುದು. ಹೇ ನೃಪನಾಥನೇ, ಹರಿನಾಮದ ಗರ್ಜನೆ ಮಾಡುವ ಪುರುಷನು ಮುಕ್ತನಾಗುವನು ॥೪೦೭॥

ಕೃತಯುಗದಲ್ಲಿ ಶಮದಮಾದಿ ಸಾಧನೆಗಳು ತ್ರೇತಾಯುಗದಲ್ಲಿ ವೇದೋಕ್ತ ಯಜ್ಞಗಳು ಮತ್ತು ದ್ವಾಪರ ಯುಗದಲ್ಲಿ ತಂತ್ರವಿಧಾನ ಯುಕ್ತ ಪೂಜಾ ವಿಧಾನಗಳು ಸಾಧನೆಗಳಾಗಿರುವುವು ॥೪೦೮॥ ಈ ಪ್ರಕಾರವಾಗಿ ಈ ಮೂರೂ ಯುಗಗಳಲ್ಲಿನ ಜನರಿಗೆ ಪರಮ ಸಂಕಟಗಳ ಸಾಧನೆಗಳನ್ನು ಮಾಡಿದರೂ ಮನಸ್ಸಿಗೆ ಅಣುಮಾತ್ರವೂ ಶಾಂತಿಯು ಲಭಿಸುವುದಿಲ್ಲ ॥೪೦೯॥ ಈ ಎಲ್ಲ ಸಾಧನಗಳಿಗೆ ಕಲಿಯುಗದಲ್ಲಿ ಕೀರ್ತನೆಯ ಮುಂದೆ ನಾಚುವಂತಾಯಿತು. ಪರಮೇಶ್ವರನಿಗೆ ಕೀರ್ತನೆಯಲ್ಲಿ ಹಾಡುತ್ತ,ಕುಣಿಯುತ್ತ ಆತನನ್ನು ವಶ ಮಾಡಿಕೊಳ್ಳಲು ಬರುವುದು ॥೪೧೦॥ ಊರಹೊರಗೆ ಯಮುನಾ ದಂಡೆಯಲ್ಲಿ ಆಕಳುದನಗಳನ್ನು ಒಂದುಗೂಡಿಸಿ ಹುಂಬರೀಹಮಾಮಾ ಆಟಗಳನ್ನು ಆಡುತ್ತ ಗೋಪಾಲಕರಾದ ಹುಡುಗರ ಪ್ರೇಮದ ಹಾಡುಗಳನ್ನು ಕೇಳಿ ದೇವನು ಭುಲಾಯಿಸಿ ಆನಂದದಿಂದ ಕುಣಿಯಲಾರಂಭಿಸಿದನು ॥೪೧೧॥

ಕೃಷ್ಣಾ ಕಾನ್ಹೋ ಗೋಪಾಳಾ । ಯಾ ಆರುಷ ನಾಮಾಂಚಾ ಚಾಳಾ । ಘೇಊನಿ ಗರ್ಜತೀ ವೇಳೋವೇಳಾ । ತೇಣೇ ಘನಸಾಂವಳಾ ಸುಖಾವೇ ।।೪೧೨।। ತೇಣೇ ಸುಖಾಚೇನಿ ಸಂತೋಷೇ । ದೇವೋ ಪರಮಾನಂದೇ ಉಲ್ಲಾಸೇ । ಏವಂ ಕಲಿಯುಗೀ ಕೀರ್ತನವಶೇ । ಭಕ್ತ ಅನಾಯಾಸೇ ಉದ್ಧರತೀ ।।೪೧೩।। ಕೀರ್ತನಆವರ್ತನಮೇಳೀ । ಜಳತೀ ಪಾಪಾಂಚ್ಯಾ ವಡವಾಳೀ । ಭಕ್ತ ಉದ್ಧರತೀ ತತ್ಕಾಳೀ । ಹರಿನಾಮೇ ಕಲಿದಾಟುಗಾ ।।೪೧೪।। ಕಲಿಯುಗೀ ಹೇಚಿ ಥೋರೀ । ನಾಮಸಂಕೀರ್ತನಾವಾರೀ । ಚಹೂ ವರ್ಣಾ ಮುಕ್ತ ಕರೀ । ತೇಥ ನ ವಿಚಾರೀ ಸ್ತ್ರೀ ಶೂದ್ರ ।।೪೧೫।। ವೇದು ಅತ್ಯಂತ ಕೃಪಣು ಜಾಲಾ । ತ್ರಿವರ್ಣಾಚೇ ಕಾನೀ ಲಾಗಲಾ । ಸ್ತ್ರೀಶೂದ್ರಾದಿಕಾಂಸೀ ಅಬೋಲಾ । ಧರೂನಿ ಠೇಲಾ ಅದ್ಯಾಪಿ ।।೪೧೬।। ತೇ ವೇದಾಚೇ ಅತಿನ್ಯೂನ । ಉದ್ಧರೀ ಹರಿನಾಮಕೀರ್ತನ । ಸ್ತ್ರೀ ಶೂದ್ರ ಅಂತ್ಯಜ ಜನ । ಉದ್ಧರಣ ಹರಿನಾಮೇ ।।೪೧೭।। ಕೀರ್ತನೇ ಸ್ವಧರ್ಮು ವಾಢೇ । ಕೀರ್ತನೇ ಸ್ವಧರ್ಮು ಜೋಡೇ । ಕೀರ್ತನೇ ಪರಬ್ರಹ್ಮ ಆತುಡೇ । ಮುಕ್ತಿ ಕೀರ್ತನಾ ಪುಢೇ ಲಾಜೋನಿ ಜಾಯ ।।೪೧೮।। ಕೀರ್ತನಾನಂದೇ ಚಾರೀ ಮುಕ್ತಿ । ಹರಿಭಕ್ತಾಂತೇ ವರೂ ಯೇತೀ । ಭಕ್ತ ತ್ಯಾಂತೇ ಉಪೇಕ್ಷಿತೀ । ತರೀ ಪಾಯಾ ಲಾಗತೀ ದಾಸ್ಯತ್ವೇ ।।೪೧೯।। ಏವಢೀ ಕಲಿಯುಗೀ ಪ್ರಚೀತೀ । ಕೀರ್ತನಾಚೀ ಪರಮ ಖ್ಯಾತೀ । ರಾಯಾ ಜಾಣ ಗಾ ನಿಶ್ಚಿತೀ । ವಿಕಲ್ಪ ಚಿತ್ತೀ ಝಣೇ ಧರಿಸೀ ।।೪೨೦।। ಕೃತತ್ರೇತಾದ್ವಾಪಾರಾಸೀ । ನಿಷೇಧು ನಾಹೀ ನಾಮಾಸೀ । ಕಲಿಯುಗೀ ನಾಮಾಪಾಶೀ । ಚಾರೀ ಮುಕ್ತೀ ದಾಸೀ ಸ್ವಯೇ ಹೋತೀ ।।೪೨೧।।

ನ ಹ್ಯತಃ ಪರಮೋ ಲಾಭೋ ದೇಹಿನಾಂ ಭ್ರಾಮ್ಯತಾ ಮಿಹ । ಯತೋ ವಿದಂತ ಪರಮಾಂ ಶಾಂತಿಂ ನಶ್ಯತಿ ಸಂಸೃತಿಃ ।।೩೭।।

ಅರ್ಥ:- ದೇಹಾಭಿಮಾನಿ ಜೀವವು ಸಂಸಾರಚಕ್ರದಲ್ಲಿ ಅನಾದಿ ಕಾಲದಿಂದಲೂ ತಿರುಗುತ್ತಿರುವುದು. ಇದಕ್ಕೆ ಭಗವಂತನ ಲೀಲೆ, ಗುಣ ನಾಮ ಕೀರ್ತನೆ ಇವುಗಳ ಹೊರತಾದ ಅನ್ಯ ಲಾಭವಿಲ್ಲ. ಆದ್ದರಿಂದ ಇದರಿಂದ ಸಂಸಾರದ ತಿರುಗಾಟವು ನಿಂತು ಹೋಗುವುದು. ಪರಮ ಶಾಂತಿಯ ಅನುಭವದ ಪ್ರಾಪ್ತಿಯಾಗುವುದು.

ಜೇ ಜನ್ಮ ಮರಣಾಂಚ್ಯಾ ಆವರ್ತೀ । ಪಡಿಲೇ ಸಂಸಾರೀ ಸದಾ ಭ್ರಮತೀ । ತ್ಯಾ ಪ್ರಾಣಿಯಾ ಕಲಿಯುಗಾ ಪ್ರತೀ । ಕೀರ್ತನೇ ಗತೀ ನೃಪನಾಥಾ ।।೪೨೨।। ಕಲಿಯುಗೀ ಕೀರ್ತನಾಸಾರೀ । ಸಂಸಾರಾಚೀ ಕಾಢೂನಿ ಕಾಂಟೀ । ಪರಮಶಾಂತಿಸುಖಸಂತುಷ್ಟೀ । ಪಡೇ ಮಿಠೀ ಪರಮಾನಂದೀ ।।೪೨೩।। ಐಸಾ ಕೀರ್ತನೀ ಪರಮ ಲಾಭು । ಶಿಣತಾ ಸುರನರಾ ದುರ್ಲಭು । ತೋ ಕಲಿಯುಗೀ ಝಾಲಾ ಸುಲಭು । ಯಾಲಾಗೀ ಸಭಾಗ್ಯಾ ಲೋಭು ಹರಿಕೀರ್ತನೀ ।।೪೨೪।।

ಕೃಷ್ಣ, ಕಾನ್ಹಾ, ಗೋಪಾಳ ಹೀಗೆ ಸಲಿಗೆಯಿಂದ ಹುಚ್ಚ ಹುಚ್ಚಾಕಾರದ ನಾಮದ ಗರ್ಜನೆಯನ್ನು ಗೋಪಾಲಕರು ಪ್ರೇಮದಿಂದ ಮೇಲಿಂದ ಮೇಲೆ ಗರ್ಜಿಸುವರು. ಇದರಿಂದ ಆ ಘನಶ್ಯಾಮನು ಸುಖಿಯಾಗುವನು ।।೪೧೨।। ಈ ಸುಖದ ಭರದಲ್ಲಿ ದೇವನಿಗೆ ಪರಮಾನಂದದ ಪೂರವು ಬರುವುದು. ಈ ಪ್ರಕಾರವಾಗಿ ಕಲಿಯುಗದಲ್ಲಿ ಕೀರ್ತನದ ಯೋಗದಿಂದ ಭಕ್ತರು ಸಹಜವಾಗಿ ಉದ್ಧಾರಾಗುವರು ।।೪೧೩।। ಸತತವಾಗಿ ಕೀರ್ತನೆಗಳನ್ನು ಮಾಡುವುದರಿಂದ ಪಾಪದ ರಾಶಿಯು ದಗ್ಧವಾಗಿ ಹೋಗುವುದು. ಭಕ್ತರ ಉದ್ಧಾರವು ಬೇಗನೇ ಆಗುವುದು ।।೪೧೪।। ಇದು ಕಲಿಯುಗದ ಮಹಾತ್ಮ್ಯಯಾಗಿದೆ. ನಾಮ ಸಂಕೀರ್ತನೆಯಿಂದ ನಾಲ್ಕು ವರ್ಣದವರೂ ಮುಕ್ತರಾಗುವರು. ಸ್ತ್ರೀ ಶೂದ್ರರೂ ಮೊದಲು ಮಾಡಿ ಉದ್ಧಾರಾಗುವರು ।।೪೧೫।। ವೇದವು ಅತ್ಯಂತ ಕೃಪಣವಾಗಿ ಅದು ಮೂರು ವರ್ಣಗಳ ಕಿವಿಗಳಲ್ಲಿ ಮಾತ್ರ ಗುಣುಗುಟ್ಟಿತು. ಸ್ತ್ರೀ ಶೂದ್ರರಿಗೆ ಅದು ಮೌನವನ್ನು ಈಗಲೂ ಧರಿಸಿರುವುದು ।।೪೧೬।। ಈ ವೇದದ ನ್ಯೂನ್ಯತ್ವವನ್ನು ಹರಿಕೀರ್ತನವು ದೂರ ಮಾಡಿತು. ಹರಿಯ ನಾಮದಿಂದ ಸ್ತ್ರೀ, ಶೂದ್ರ, ಅಂತ್ಯಜ ಜನರು ಸಹ ಉದ್ಧಾರರಾಗುವರು ।।೪೧೭।। ಕೀರ್ತನೆಯಿಂದ ಸ್ವಧರ್ಮವು ದೊರೆಯುವುದು. ಕೀರ್ತನೆಯಿಂದ ಸ್ವಧರ್ಮವು ಬೆಳೆಯುವುದು. ಕೀರ್ತನೆಯಿಂದ ಪರಬ್ರಹ್ಮವು ಪ್ರಾಪ್ತವಾಗುವುದು. ಹೆಚ್ಚಿಗೇನು ಹೇಳಬೇಕು? ಕೀರ್ತನೆಯ ಮುಂದೆ ಮುಕ್ತಿಯು ನಾಚಿಕೆಪಡುವುದು ।।೪೧೮।। ಕೀರ್ತನದ ಆನಂದದಿಂದ ಹರಿಭಕ್ತರಿಗೆ ನಾಲ್ಕೂ ಮುಕ್ತಿಗಳು ಕೂಡಲು ಬರುವುವು. ಆದರೂ ಭಕ್ತರು ಅವುಗಳ ಅಪೇಕ್ಷೆಯನ್ನು ಮಾಡುವುದಿಲ್ಲ. ಆದರೆ ಆ ನಾಲ್ಕೂ ಮುಕ್ತಿಗಳು ದಾಸಿಯರಾಗಿ ಭಕ್ತರ ಚರಣದಡಿಯಲ್ಲಿರುವುವು ।।೪೧೯।। ಹೀಗೆ ಕಲಿಯುಗದ ಅನುಭವವಾಗಿರುವುದು. ಹೀಗೆ ಕೀರ್ತನದ ದೊಡ್ಡ ಖ್ಯಾತಿಯಾಗಿರುವುದು. ಇದನ್ನು ನೀನು ನಿಶ್ಚಿತವಾಗಿ ತಿಳಿ. ಮನದಲ್ಲಿ ಯಾವ ವಿಕಲ್ಪಗಳನ್ನು ತರಬೇಡ ।।೪೨೦।। ಕೃತಯುಗವಿರಲಿ, ತ್ರೇತಾಯುಗವಿರಲಿ ಅಥವಾ ದ್ವಾಪರಯುಗವಿರಲಿ ನಾಮಕ್ಕೆ ಎಂದಿಗೂ ನಿಷೇಧವಿರುವುದಿಲ್ಲ. ಆದರೆ ಕಲಿಯುಗದಲ್ಲಿ ಮಾತ್ರ ನಾಲ್ಕೂ ಮುಕ್ತಿಗಳು ಸ್ವತಃ ದಾಸಿಯರಾಗಿ ಇರುವುವು ।।೪೨೧।।

ಹೇ ನೃಪನಾಥನೇ, ಜನ್ಮ ಮರಣದ ತಿರಗುಣಿಯಲ್ಲಿ ಸಿಕ್ಕಿಕೊಂಡು ಸಂಸಾರದಲ್ಲಿ ಸದಾ ಭ್ರಮಣ ಮಾಡುವವರಿಗೆ, ಈ ಕಲಿಯುಗದಲ್ಲಿ ಕೀರ್ತನೆಯಿಂದ ಸದ್ಗತಿಯು ಪ್ರಾಪ್ತವಾಗುವುದು ।।೪೨೨।। ಕಲಿಯುಗದಲ್ಲಿ ಕೀರ್ತನೆಯಿಂದಲೇ ಸಂಸಾರದ ಬೇಲಿಯನ್ನು ಹಸನಮಾಡಿ ಶಾಂತಿ ಸುಖವು ಆನಂದದಿಂದ ಪರಮಾನಂದಕ್ಕೆ ಆಲಿಂಗಿಸುವುದು ।।೪೨೩।। ಇಂತಹ ಮಹಾಲಾಭವು ಕೀರ್ತನೆಯದ್ದಾಗಿದೆ. ಸುರನರರಿಗೆ ಇತರ ಯುಗಗಳಲ್ಲಿ ಕಷ್ಟಪಟ್ಟರೂ ಇದಾಗಲು ಶಕ್ಯವಿಲ್ಲ. ಆದರೆ ಕಲಿಯುಗದಲ್ಲಿ ಇದು ಸುಲಭಸಾಧ್ಯವಾಗಿದೆ. ಆದ್ದರಿಂದಲೇ ಭಾಗ್ಯವಂತ ಜನರು ಹರಿಕೀರ್ತನದಲ್ಲಿ ಬಹಳ ಪ್ರೇಮವಿಡುವರು ।।೪೨೪।।

"ಕೀರ್ತನಾಸ್ತವ ಚಾರೀ ಮುಕ್ತೀ । ಭಕ್ತಾ ಪಾಸೀ ವ್ಹೋಳಂಗತೀ । ಹೇ ನ ಘಡೇ" ಕೋಣಿ ಮ್ಹಣತೀ । ಐಕ ತೇ ಸ್ಥಿತಿ ನೃಪನಾಥಾ ॥೪೨೫॥ ಕೀರ್ತನೀ ಹರಿನಾಮಾಚಾ ಪಾಠಾ । ತೇಣೇ ದೇವಾಸೀ ಸಂತೋಷ ಮೋಠಾ । ವೇಗೀ ಸಾಂಡೋನಿ ವೈಕುಂಠಾ । ಧಾವೇ ಅವಚಟಾ ಕೀರ್ತನಾಮಾಜೀ ॥೪೨೬॥ ಹರಿಕೀರ್ತನಾ ಲೋಧಲಾ ದೇವ್ಹೋ । ವಿಸರಲಾ ವೈಕುಂಠಾ ಜಾವ್ಹೋ । ತೋಚಿ ಆವಡಲಾ ಠಾವ್ಹೋ । ಭಕ್ತ ಭಾವ್ಹೋ ದೇಖೋನಿ ॥೪೨೭॥ ಜೇಥ ರಾಹಿಲಾ ಯದುನಾಯಕ । ತೇಥೇಂಚಿ ಯೇ ವೈಕುಂಠಲೋಕ । ಯಾಪರೀ ಮುಕ್ತಿ "ಸಲೋಕ" । ಕೀರ್ತನೇ ದೇಖ ಪಾವತೀ ಭಕ್ತ ॥೪೨೮॥ ನಾಮಕೀರ್ತನ-ನಿಜಗಜರೀ । ಭಕ್ತಾ ನಿಕಟ ಧಾಂವೇ ಶ್ರೀಹರಿ । ತೇಚಿ "ಸಮೀಪತಾ" ಮುಕ್ತಿ ಖರೀ । ಭಕ್ತಾಂಚ್ಯಾ ಕರೀ ಹರಿಕೀರ್ತನೇ ॥೪೨೯॥ ಕೀರ್ತನೇ ತೋಷಲಾ ಅಧೋಕ್ಷಜ । ಭಕ್ತಾ ಪ್ರತ್ಯಕ್ಷ ಗರುಡಧ್ವಜ । ಶ್ಯಾಮ ಪೀತವಾಸಾ ಚತುರ್ಭುಜ । ತೇ ಧ್ಯಾನ ಸಹಜ ಠಸಾವೇ ॥೪೩೦॥ ಭಕ್ತು ಕೀರ್ತನ ಕರೀ ಜೇಣೇ ಧ್ಯಾನೇ । ತೇ ಧ್ಯಾನ ದೃಢ ಠಸಾವೇ ಮನೇ । ತೇವ್ಹಾ ದೇವಾಚೀ ನಿಜಚಿನ್ಹೇ । ಭಕ್ತೀ ಪಾವಣೇ ಸಂಪೂರ್ಣ ॥೪೩೧॥ ಶ್ಯಾಮ ಚತುರ್ಭುಜ ಪೀತಾಂಬರಧಾರೀ । ಶಂಖಚಕ್ರಾದಿ ಆಯುಧೇ ಕರೀ । ಹೇ "ಸ್ವರೂಪತಾ" ಭಕ್ತಾ ತೇ ವರೀ । ಕೀರ್ತನಗಜರೀ ಭಾಳೋನೀ ॥೪೩೨॥ ತೇವ್ಹಾ ದೇವ ಭಕ್ತ ಸಮಾನ । ಸಮಾನ ಅವಯವ ಸಮ ಚಿನ್ಹ । ಭಾವೇ ಕರಿತಾ ಹರಿಕೀರ್ತನ । ಏವಢೇ ಮಹಿಮಾನ ಹರಿಭಕ್ತಾ ॥೪೩೩॥ ದೋಘಾ ಏಕತ್ರ ರಮಾ ದೇಖೇ । ದೇವ್ಹೋ ಕೋಣ ತೇಹೀ ನೋಳಖೇ । ಬ್ರಹ್ಮಾ ನಮಸ್ಕಾರೀ ಚವಕೇ । ದೇವ್ಹೋ ತಾತ್ತ್ವಿಕೇ ನ ಕಳೇ ತ್ಯಾಸೀ ॥೪೩೪॥ ಭಾವೇ ಕರಿತಾ ಹರಿಕೀರ್ತನ । ತೇಣೇ ಸಂತೋಷೇ ಜನಾರ್ದನ । ಉಭಯತಾ ಪಡೇ ಆಲಿಂಗನ । ಮಿಠೀ ಪರತೋನ ಸುಟೇನಾ ॥೪೩೫॥ ತೇವ್ಹಾ ಸಬಾಹ್ಯಾಂತರೀ । ದೇವ್ಹೋ ಪ್ರಗಟೇ ಚರಾಚರೀ । ದುಜೇ ದೇಖಾವಯಾ ಸಂಸಾರೀ । ಸರ್ವಥಾ ಉರೀ ಉರೇನಾ ॥೪೩೬॥ ವೃತ್ತಿ ಸ್ವಾನಂದೀ ನಿಮಗ್ನ । ಪರತೋನಿ ಕದಾ ನವ್ಹೇ ಬಿನ್ನ । ಸಾಯುಜ್ಯಮುಕ್ತಿ" ಯಾ ನಾಂವ ಪೂರ್ಣ । ಜೇಣೇ ದುಜೇಪಣ ಅಸೇನಾ ॥೪೩೭॥ ಐಶೀ ಲಾಹೂನಿ ಪೂರ್ಣ ಸಾಯುಜ್ಯತಾ । ತೋ ಜ್ಯೆ ಕರೀ ಹರಿಕಥಾ । ತೇ ಕಥೇಚೀ ತಲ್ಲೀನತಾ । ಜೀವಾ ಸಮಸ್ತಾ ಅತಿಪ್ರಿಯ ॥೪೩೮॥

ಕೀರ್ತನೆಯಿಂದ ಭಕ್ತರಲ್ಲಿ ನಾಲ್ಕು ಮುಕ್ತಿಗಳು ಬರುವವು ಎಂಬುದನ್ನು ಎಷ್ಟೋ ಜನರಿಗೆ ನಿಜವೆನಿಸುವುದಿಲ್ಲ. ಹೇ ರಾಜನೇ, ಅದರ ವಸ್ತುಸ್ಥಿತಿಯನ್ನು ನಿನಗೆ ಹೇಳುವೆ. ಅದನ್ನು ನೀನು ಕೇಳು ॥೪೨೫॥ ಕೀರ್ತನೆಯಲ್ಲಿ ಹರಿನಾಮದ ಘೋಷವಾಗುವುದು. ಇದರಿಂದ ಪರಮಾತ್ಮನಿಗೆ ಪರಮ ಸಂತೋಷವಾಗುವುದು. ಆತನು ವೈಕುಂಠವನ್ನು ಬಿಟ್ಟುಕೊಟ್ಟು ಕೀರ್ತನೆಯಲ್ಲಿ ಧಾವಿಸಿ ಬರುವನು ॥೪೨೬॥ ದೇವರಿಗೆ ಕೀರ್ತನೆಯ ಬಲು ಪ್ರೀತಿ ಇರುವುದು. ಆತನು ವೈಕುಂಠಕ್ಕೆ ಹೋಗುವುದನ್ನು ಮರೆತು ಬಿಡುವನು. ಭಕ್ತರ ಭಕ್ತಿಯನ್ನು ಕಂಡು ಆತನಿಗೆ ಈ ಸ್ಥಾನವು ಪ್ರಿಯವಾಗುವುದು ॥೪೨೭॥ ಯದುನಾಥನು ಇದ್ದಲ್ಲಿ ವೈಕುಂಠವೂ ಬರುವುದು! ಈ ಪ್ರಕಾರವಾಗಿ ಭಕ್ತನು ಕೀರ್ತನೆಯಿಂದ ಸಲೋಕತಾ ಮುಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುವನು ॥೪೨೮॥ ನಾಮಕೀರ್ತನೆಯ ಗರ್ಜನೆಯಿಂದ ದೇವರು ಭಕ್ತನ ಸಮೀಪಕ್ಕೆ ಧಾವಿಸಿ ಬರುವನು. ಇದು ಸಮೀಪತಾ ಮುಕ್ತಿಯಾಗಿರುವುದು. ಹರಿಕೀರ್ತನೆಯಿಂದ ಇದು ಭಕ್ತರ ಕೈಗೆ ಒದಗುವುದು ॥೪೨೯॥ ಕೀರ್ತನೆಯಿಂದ ಭಗವಂತನು ಸಂತುಷ್ಟನಾದನೆಂದರೆ, ಭಕ್ತರಿಗೆ ಆತನ ದರ್ಶನವು ಸರ್ವತ್ರವೂ ಆಗಲಾರಂಭಿಸುವುದು. ಭಕ್ತರ ಅಂತಃಕರಣಗಳಲ್ಲಿ ಶ್ಯಾಮ ಸುಂದರ ಪೀತಾಂಬರಧಾರಿ, ಚತುರ್ಭುಜ ಭಗವಾನನ ಧ್ಯಾನವು ಸಹಜವಾಗಿ ಅಂಕಿತವಾಗುವುದು ॥೪೩೦॥ ಭಕ್ತನು ಯಾವ ಧ್ಯಾನದಿಂದ ಕೀರ್ತನೆಯನ್ನು ಮಾಡುವನೋ ಅದೇ ಧ್ಯಾನವು ಆತನ ಮನದಲ್ಲಿ ದೃಢವಾಗಿ ಬಿಂಬಿಸಿರುವುದು. ದೇವರ ಎಲ್ಲ ಚಿನ್ಹೆಗಳು ಭಕ್ತನಿಗೆ ಪ್ರಾಪ್ತ ವಾಗುವುವು ॥೪೩೧॥ ಶ್ಯಾಮಸುಂದರ, ಚತುರ್ಭುಜ ಪೀತಾಂಬರಧಾರಿ, ಶಂಖಚಕ್ರಾಂಕಿತ ಈ ಪ್ರಕಾರದ ಯಾವ ಸ್ವರೂಪತಾ''ವು'' ಕೀರ್ತನ ಗರ್ಜನೆಗೆ ಮೋಹಿಸಿ ಭಕ್ತನಿಗೆ ವರಿಸುವುದು ॥೪೩೨॥ ಆ ವೇಳೆಯಲ್ಲಿ ದೇವನು ಮತ್ತು ಭಕ್ತನು ಒಂದೇ ರೂಪವಾಗುವರು. ಇಬ್ಬರ ಅವಯವ ಗಳು ಚಿನ್ಹೆಗಳು ಒಂದೇ ತರಹವಾಗುವುವು. ಪ್ರೇಮದಿಂದ ಹರಿಕೀರ್ತನೆಯನ್ನು ಮಾಡಲು ಹರಿಭಕ್ತನ ಮಹಿಮೆಯ ಇಷ್ಟೊಂದು ಬೆಳೆಯುವುದು ॥೪೩೩॥ ಲಕ್ಷ್ಮಿಯು ಈ ಇಬ್ಬರನ್ನೂ ಒಂದೇ ಸ್ಥಳದಲ್ಲಿ ಕಾಣಲು, ಆಗ ದೇವನು ಯಾರು? ಮತ್ತು ಭಕ್ತನು ಯಾರು? ಎಂಬುದು ಆಕೆಯು ತಿಳಿಯಲಾರಳು. ಬ್ರಹ್ಮದೇವನು ಆಶ್ಚರ್ಯಚಕಿತನಾಗಿ ನಮಸ್ಕರಿಸುವನು. ಇಬ್ಬರಲ್ಲಿ ನಿಜವಾದ ದೇವನು ಯಾರು ಎಂಬುದು ಆತನಿಗೂ ಸಹ ತಿಳಿಯಲಾರದು ॥೪೩೪॥ ಶುದ್ಧ ಪ್ರೇಮಭಾವದಿಂದ ಹರಿಕೀರ್ತನವನ್ನು ಮಾಡಲು ಜನಾರ್ದನನು ಸಂತುಷ್ಟನಾಗುವನು. ದೇವನು ಭಕ್ತನನ್ನು ಆಲಿಂಗಿಸುವನು. ಈ ಕೂಡುವಿಕೆಯು ಪುನಃ ಎಂದೂ ಬಿಡುವುದಿಲ್ಲ ॥೪೩೫॥ ಆಗ ಚರಾಚರಗಳಲ್ಲಿ ಅಂತರ್ಬಾಹ್ಯವಾಗಿ ದೇವನು ಪ್ರಕಟನಾಗುವನು ಮತ್ತು ಸಂಸಾರದಲ್ಲಿ ಬೇರೆ ಯಾವುದೂ ಕಾಣಲು ಇರುವುದಿಲ್ಲ ॥೪೩೬॥ ಈ ಪ್ರಕಾರವಾಗಿ ವೃತ್ತಿಯು ಸ್ವಾನಂದದಲ್ಲಿ ಮಗ್ನವಾಗುವುದು ಮತ್ತು ಪುನಃ ಎಂದೆಂದಿಗೂ ಭಿನ್ನವಾಗಲಾರದು ಭಿನ್ನಭಾವವೂ ಉಳಿಯಲಾರದು. ಈ ಅವಸ್ಥೆಗೆ ಸಾಯುಜ್ಯ ಮುಕ್ತಿ ಎಂದು ಹೇಳುವರು ॥೪೩೭॥ ಹೀಗೆ ಪೂರ್ಣ ಸಾಯುಜ್ಯತಾವನ್ನು ಪ್ರಾಪ್ತಿ ಮಾಡಿಕೊಂಡು ಹರಿಕಥೆಯನ್ನು ಮಾಡುತ್ತಿರಲು ಆಗ ಆ ಕಥೆಯಲ್ಲಿನ ತಲ್ಲೀನತೆಯು ಕಥೆ ಕೇಳಲು ಕುಳಿತ ಎಲ್ಲ ಪ್ರಾಣಿಗಳಿಗೂ ಅತ್ಯಂತ ಪ್ರಿಯವಾಗುವುದು ॥೪೩೮॥

ಯಾಪರೀ ಹರಿಕೀರ್ತನಾಪಾಸೀ । ಚಾರೀ ಮುಕ್ತೀ ಹೋತೀ ದಾಸೀ । ಭಕ್ತ ಲೋಧಲೇ ಹರಿಭಜನಾಸೀ । ಸರ್ವಥಾ ಮುಕ್ತೀಸೀ ನ ಘೇತೀ ।।೪೩೯।। ಏವಂ ಯೋಗಯಾಗಾದಿ ತಪಸಾಧನೇ । ಪೋರಕೀ ಕೇಲೀ ಹರಿಕೀರ್ತನೇ । ಕಲಿಯುಗೀ ನಾಮಸ್ಮರಣೇ । ಜಡ ಉದ್ಧರಣೇ ಹರಿಕೀರ್ತನೀ ।।೪೪೦।।

ಕೃತಾದಿಷು ಪ್ರಜಾ ರಾಜನ್ ಕಲಾವಿಚ್ಛಂತಿ ಸಂಭವಮ್ ।
ಕಲೌ ಖಲು ಭವಿಷ್ಯಂತಿ ನಾರಾಯಣಪರಾಯಣಾಃ ।।೩೮।।

ಅರ್ಥ :- ಹೇ ರಾಜನೇ, ಕೃತ, ತ್ರೇತಾ ಮತ್ತು ದ್ವಾಪರ ಯುಗಗಳಲ್ಲಿನ ಪ್ರಜೆಗಳು ಕಲಿಯುಗದಲ್ಲಿ ಜನ್ಮತಾಳಲು ಕಾತರಿಸುವರು, ಕಾರಣ ಕಲಿಯುಗದಲ್ಲಿ ನಾರಾಯಣಪರಾಯಣರಾಗಲು ಬರುವುದು.

ಕೀರ್ತನಾಸಾಠೀ ಚಾರೀ ಮುಕ್ತಿ । ಹೇಚಿ ಕಲಿಯುಗೀ ಮುಖ್ಯ ಭಕ್ತಿ । ಯಾಲಾಗೀ ಇಂದ್ರಾದಿ ದೇವಪಂಕ್ತಿ । ಜನ್ಮ ಇಚ್ಛಿತೀ ಕಲಿಯುಗೀ ।।೪೪೧।। ಸ್ವರ್ಗ ನವ್ಹೇ ಭೋಗಸ್ಥಾನ । ಹೇ ವಿಷಯಾಚೇ ಬಂದಿಖಾನ । ಕಲಿಯುಗೀ ಸಭಾಗ್ಯ ಜನ । ಜನ್ಮೋನಿ ಕೀರ್ತನ ಹರೀಚೇ ಕರಿತೀ ।।೪೪೨।। ಜೇಥೀಚ್ಯಾ ಜನ್ಮಾ ದೇವ ಸಕಾಮ । ತೇಥ ಕೃತಾದಿ ಯುಗೀಚೇ ಉತ್ತಮೋತ್ತಮ । ಪ್ರಜಾ ಅವಶ್ಯ ವಾಂಛಿತೀ ಜನ್ಮ । ಕೀರ್ತನಧರ್ಮ ನಿಜಭಜನಾ ।।೪೪೩।। ಕೃತಯುಗೀಚೇ ಸಭಾಗ್ಯ ಜನ । ಯಾಗೀ ಪಾವಲೇ ಸ್ವರ್ಗಸ್ಥಾನ । ತೇಹೀ ಕಲಿಯುಗೀಚೇ ಜಾಣ । ಜನ್ಮ ಆಪಣ ವಾಂಛಿತೀ ।।೪೪೪।। ಕೃತ, ತ್ರೇತಾ ಆಣಿ ದ್ವಾಪರ । ತೇಥೀಲಹೀ ಮುಖ್ಯ ನರ । ಕಲಿಯುಗೀ ಜನ್ಮ ತತ್ಪರ । ನಿರಂತರ ವಾಂಛಿತೀ ।।೪೪೫।। ತ್ಯಂಚೇ ಲೋಕ ಕರಿತೀ ಗೋಷ್ಟೀ । ಚಾರೀ ಪುರುಷಾರ್ಥ ಕೀರ್ತನಾಸಾಠೀ । ಕಲಿಯುಗೀ ಹೇ ಮಹಿಮಾ ಮೋಠೀ । ಧನ್ಯ ಧನ್ಯ ಸೃಷ್ಟೀ ಕಲಿಯುಗ ।।೪೪೬।। ಜೇ ಅಸತೀ ಧನ್ಯಭಾಗೀ । ತೇ ಜನ್ಮ ಪಾವತೀ ಕಲಿಯುಗೀ । ಐಸೇ ಕಲೀಚ್ಯಾ ಜನ್ಮಾಲಾಗೀ । ನರ-ಸುರ-ಉರಗೀ ಉತ್ಕಂಠಾ ।।೪೪೭।। ತರಾವಯಾ ದೀನ ಜನ । ಕಲೀಮಾಜೀ ಶ್ರೀನಾರಾಯಣ । ನಾಮೇ ಛೇದೀಭವಬಂಧನ । ತಾರೀ ಹರಿಕೀರ್ತನ ಸಕಳಾಂಸೀ ।।೪೪೮।। ಯಾಲಾಗೀ ಕಲಿಮಾಜೀ ಪಾಹೀ । ಶ್ರದ್ಧಾ ಹರಿಕೀರ್ತನಾಚ್ಯಾ ಠಾಯೀ । ಜನ ತರತೀ ಸುಖೋಪಾಯೀ । ಸಂದೇಹೋ ನಾಹೀ ನೃಪನಾಥಾ ।।೪೪೯।। ಕಲಿಯುಗೀ ಬಹುಸಾಲ ನರ । ಹೋತೀಲ ನಾರಾಯಣೀ ತತ್ಪರ । ಭಕ್ತೀಚೇ ಭೋಜ ವಿಚಿತ್ರ । ಸ್ತ್ರಿಶೂದ್ರ ಮಾಜವಿತೀ ।।೪೫೦।।

ಈರೀತಿಯಲ್ಲಿ ಹರಿಕೀರ್ತನೆಯಿಂದ ನಾಲ್ಕೂ ಮುಕ್ತಿಗಳು ದಾಸಿಯರಾಗಿ ಇರುವುವು. ಆದರೆ ಭಕ್ತರು ಅವುಗಳನ್ನು ಅಂಗೀಕಾರ ಮಾಡುವುದಿಲ್ಲ. ಇವರ ಎಲ್ಲ ಪ್ರೇಮವು ಹರಿಕೀರ್ತನೆಯಲ್ಲಿಯೇ ಇರುವುದು ।।೪೩೯।। ಈ ಪ್ರಕಾರವಾಗಿ ಹರಿಕೀರ್ತನೆಯು ಯೋಗ, ಯಾಗ, ತಪ ಇತ್ಯಾದಿ ಸಾಧನೆಗಳಿಗೆ ಹುಡುಗಾಟಿಕೆಯನ್ನಾಗಿ ಮಾಡಿಬಿಟ್ಟಿರುವುದು? ಕಲಿಯುಗದಲ್ಲಿ ಹರಿಕೀರ್ತನೆಯಿಂದ ಮತ್ತು ನಾಮಃಸ್ಮರಣೆಯಿಂದ ಜೀವಿಗಳ ಉದ್ಧಾರವಾಗುವುದು ।।೪೪೦।।

ಕಲಿಯುಗದಲ್ಲಿ ನಾಲ್ಕೂ ಮುಕ್ತಿಗಳು ಪ್ರಾಪ್ತವಾಗುವುವು. ಆದಕ್ಕಾಗಿಯೇ ಕಲಿಯುಗದಲ್ಲಿ ಈ ಕೀರ್ತನ ಭಕ್ತಿಯು ಒಂದೇ ಮುಖ್ಯವಾಗಿರುವುದು. ಇದಕ್ಕಾಗಿ ಇಂದ್ರಾದಿ ದೇವತೆಗಳು ಸಹ ಕಲಿಯುಗದಲ್ಲಿ ಜನ್ಮ ಧರಿಸುವ ಇಚ್ಛೆಯನ್ನು ಮಾಡುವರು ।।೪೪೧।। ಸ್ವರ್ಗವು ಭೋಗದ ಸ್ಥಾನವಾಗಿರದೇ ಅದೊಂದು ವಿಷಯಗಳ ಬಂದೀಖಾನೆಯಾಗಿರುವುದು. ಆದ್ದರಿಂದ ಭಾಗ್ಯಉಳ್ಳ ಜೀವಿಗಳು ಕಲಿಯುಗದಲ್ಲಿ ಜನ್ಮ ಪಡೆದು ಪ್ರೇಮದಿಂದ ಹರಿಕೀರ್ತನೆಯನ್ನು ಮಾಡುವರು ।।೪೪೨।। ಹೀಗೆ ಕಲಿಯುಗದ ಜನ್ಮಕ್ಕಾಗಿ ದೇವತೆಗಳು ಇಚ್ಛಿಸುತ್ತಿರಲು ಕೃತಾದಿ ಯುಗಗಳಲ್ಲಿನ ಉತ್ತಮ ಉತ್ತಮ ಜನರು ಕೀರ್ತನ ಧರ್ಮದಲ್ಲಿ ಭಜನೆಯನ್ನು ಮಾಡಲು ಕಲಿಯುಗದಲ್ಲಿ ಜನ್ಮವನ್ನು ಪಡೆಯಲು ಇಚ್ಛಿಸುವುದರಲ್ಲಿ ಅದಾವ ಆಶ್ಚರ್ಯವಿದೆ? ।।೪೪೩।। ಕೃತಯುಗದಲ್ಲಿನ ಭಾಗ್ಯಉಳ್ಳ ಜನರು ಯಜ್ಞಗಳನ್ನು ಮಾಡಿ ಸ್ವರ್ಗವನ್ನು ಪಡೆದು ಅವರೂ ಸಹ ಕಲಿಯುಗದಲ್ಲಿ ಜನ್ಮ ಪಡೆಯುವ ಇಚ್ಛೆಯನ್ನ ಮಾಡುವರು ।।೪೪೪।। ಕೃತ, ತ್ರೇತಾ ಮತ್ತು ದ್ವಾಪರ ಈ ಯುಗಗಳಲ್ಲಿನ ಪ್ರಸಿದ್ಧ ಪುರುಷರು ಕಲಿಯುಗದಲ್ಲಿ ಜನ್ಮ ಸಿಗಬೇಕೆಂದು ನಿರಂತರವಾಗಿ ಇಚ್ಛೆಪಡುವರು ।।೪೪೫।। ನಾಲ್ಕೂ ಪುರುಷಾರ್ಥಗಳು ಕೀರ್ತನೆಯಿಂದಲೇ ಪ್ರಾಪ್ತವಾಗುವುವು ಎಂದು ಆ ಯುಗಗಳ ಜನರು ಹೇಳುವರು. ಇದೇ ಕಲಿಯುಗದ ಮಹಿಮೆಯಾಗಿರುವುದು. ಸೃಷ್ಟಿಯಲ್ಲಿ ಕಲಿಯುಗವೇ ಧನ್ಯವಾಗಿರುವುದು ।।೪೪೬।। ಪುಣ್ಯವನ್ನು ಮಾಡಿದವರೇ ಕಲಿಯುಗದಲ್ಲಿ ಜನ್ಮಿಸುವರು. ಹೀಗೆ ಕಲಿಯುಗದಲ್ಲಿ ಜನ್ಮವನ್ನು ಸಿಗುವುದಕ್ಕಾಗಿ ದೇವತೆಗಳಿಗೆ, ನರರಿಗೆ, ನಾಗಗಳಿಗೆ ತೀವ್ರ ಅಪೇಕ್ಷೆ ಇರುವುದು ।।೪೪೭।। ಕಲಿಯುಗದಲ್ಲಿ ದೀನ ಜನರ ಉದ್ಧಾರ ಮಾಡುವುದಕ್ಕಾಗಿ ಶ್ರೀನಾರಾಯಣನು ನಾಮಸ್ಮರಣೆಯಿಂದಲೇ ಸಂಸಾರ ಬಂಧನವನ್ನು ಮುರಿದು ಹಾಕುವನು. ಸಾರಾಂಶವೇನಂದರೆ, ಕೀರ್ತನವು ಎಲ್ಲರನ್ನೂ ಸಂಸಾರದಿಂದ ಉದ್ಧರಿಸುವುದು ।।೪೪೮।। ಹೇ ರಾಜನೇ, ಈ ಕಾರಣದಿಂದ ಕಲಿಯುಗದಲ್ಲಿ ಕೀರ್ತನ ವಿಷಯಕ್ಕೆ ಶ್ರದ್ಧೆಯನ್ನು ಇಡುವುದರಿಂದ ಜನರು ತಮ್ಮಷ್ಟಕ್ಕೆ ತಾವೇ ಸಹಜವಾಗಿ ಉದ್ಧಾರರಾಗುವರು. ಈ ವಿಷಯಕ್ಕೆ ಸ್ವಲ್ಪವೂ ಅನುಮಾನವಿಲ್ಲ ।।೪೪೯।। ಕಲಿಯುಗದಲ್ಲಿ ಅನೇಕ ಪ್ರಕಾರದ ಜನರು ನಾರಾಯಣನ ಉಪಾಸನೆಯನ್ನು ಮಾಡುವರು. ಸ್ತ್ರೀ ಶೂದ್ರರೂ ಸಹ ಭಕ್ತಿಯ ಮಹಿಮೆಯನ್ನು ಬೆಳೆಸುವರು ।।೪೫೦।।

ಕ್ವಚಿತ್ ಕ್ವಚಿನ್ಮಹಾರಾಜ ದ್ರವಿಡೇಷು ಚ ಭೂರಿಶಃ ।
ತಾಮ್ರಪರ್ಣೀಂ ನದೀ ಯತ್ರ ಕೃತಮಾಲಾ ಪಯಸ್ವಿನಿ ॥೩೯॥

ಕಾವೇರೀ ಚ ಮಹಾಪೂಣ್ಯಾ ಪ್ರತೀಚೀ ಚ ಮಹಾನದೀ ।
ಯೇ ಪಿಬಂತಿ ಜಲಂ ತಾಸಾಂ ಮನುಜಾ ಮನುಜೇಶ್ವರ ।
ಪ್ರಯೋಭಕ್ತಾ ಭವಿಷ್ಯಂತಿ ವಾಸುದೇವಾಽಮಲಾಶಯಯಾಃ ॥೪೦॥

ಅರ್ಥ:- ಹೇ ಮಹಾರಾಜನೇ, ಕಲಿಯುಗದಲ್ಲಿ ಇತರತ್ರ ಅಲ್ಲಲ್ಲಿ ಜನರು ನಾರಾಯಣ ಪರಾಯಣರಾಗುವರು. ಆದರೆ ದ್ರಾವಿಡ ದೇಶದಲ್ಲಿ ಮಾತ್ರ ಬಹಳಷ್ಟಾಗುವರು. ಎಲ್ಲಿ ತಾಮ್ರಪರ್ಣೀ, ಪಯಸ್ವಿನೀ, ಪರಮ ಪವಿತ್ರ ಕಾವೇರೀ, ಮಹಾನದೀ ಮತ್ತು ಪ್ರತೀಚಿ ಎಂಬ ನದಿಗಳು ಹರಿಯುವುವೋ, ಹೇ ರಾಜನೇ ಅಲ್ಲಿನ ಜನರು ಈ ನದಿಗಳ ನೀರನ್ನು ಕುಡಿದವರ ಅಂತಃಕರಣವು ಶುದ್ಧವಾಗಿ ಅವರು ವಾಸುದೇವನ ಭಕ್ತರಾಗುವರು.

ವಿಶೇಷೇ ದ್ರವಿಡ ದೇಶಾಂಚೇ ಠಾಯೀ । ಅತಿಶಯೇ ಭಕ್ತಿ ವಾಢೇಲ ಪಾಹೀ । ತೇಥೇಹೀ ತೀರ್ಥವಿಶೇಷ ಭುಯೀ । ತೇ ತೇ ಠಾಯೀ ಅತಿಉತ್ಕಟ ॥೪೫೧॥ ತಾಮ್ರಪರ್ಣೀಚ್ಯಾ ತೀರೀ । ಹರಿಭಕ್ತೀಚೀ ಅಗಾಧ ಥೋರೀ । ಕೃತಮಾಲೇಚ್ಯಾ ಪರಿಸರೀ । ಉತ್ಸಾಹೇಕರೀ ಹರಿಭಕ್ತಿ ನಾಂದೇ ॥೪೫೨॥ ನಿರ್ಮಳಜಳಾ ಪಯಸ್ವಿನೀ । ಜೇಚಿಯೇ ಪಯಃಪ್ರಾಶನೀ । ವೃತ್ತಿ ವಾಢೇ ಹರಿಚರಣೀ । ಭಗವದ್ಭಜನೀ ದೃಢ ಬುದ್ಧೀ ॥೪೫೩॥ ದೇಖತಾ ಕಾವೇರೀಚೀ ಥಡೀ । ಪಳತೀ ಪಾಪಾಂಚಿಯಾ ಕೋಡೀ । ತೇಥ ಶ್ರೀರಂಗು ವಸೇ ಆವಡೀ । ಜೇಥೇ ಭಕ್ತಿ ದುಥಡೀ ಉದ್ಭಟ ನಾಂದೇ ॥೪೫೪॥ ಪ್ರತೀಚೀಮಾಜೀ ದೇತಾ ಬುಡೀ । ಚಿತ್ತಶುದ್ಧಿ ಜೋಡೇ ರೋಕಡೀ । ಭಜನ ವಾಢೇ ಚಢೋವಢೀ । ಭಕ್ತೀಚೀ ಗುಢೀ ವೈಕುಂಠೀ ಉಭಾರೇ ॥೪೫೫॥ ಐಕೇ ನರವರಚೂಡಾಮಣೀ । ಯಾ ಪಂಚನದೀಚಿಯಾ ತೀರ್ಥಸ್ನಾನೀ । ಅಥವಾ ಪಯಃಪ್ರಾಶನೀ । ಭಗವದ್ಭಜನೀ ದೃಢ ಬುದ್ಧೀ ॥೪೫೬॥ ಯಾ ತೀರ್ಥಾಚೇ ಕೇಲ್ಯಾ ದರ್ಶನ । ಹೋಯ ಕಲಿಮಲಕ್ಷಾಲನ । ಕೇಲ್ಯಾ ಸ್ನಾನ ಪಯಃಪ್ರಾಶನ । ಭಗವದ್ಭಜನ ಉಲ್ಹಾಸೇ ॥೪೫೭॥ ದರ್ಶನ ಸ್ಪರ್ಶನ ಸ್ನಾನ । ಯಾ ತೀರ್ಥಾಚೇ ಕರಿತಾ ಜಾಣ । ವಾಸುದೇವೀ ನಿರ್ಮಳ ಭಜನ । ನಿತ್ಯ ನೂತನ ದೃಢ ವಾಢೇ ॥೪೫೮॥ ಯಾಪರೀ ಜೇ ಭಗವದ್ಭಕ್ತ । ತೇ ಋಣತ್ರಯಾಸೀ ನಿರ್ಮುಕ್ತ । ಸುರನರಪಿತರಾ ಪಂಗಿಸ್ತ । ಹರಿಭಕ್ತ ಕದಾ ನವ್ಹತೀ ॥೪೫೯॥

ದೇವರ್ಷಿಭೂತಾಪ್ತನೃಣಾಂ ಪಿತೃಣಾಂ ನ ಕಿಂಕರೋ ನಾಯಮೃಣೀಚ ರಾಜನ್ ।
ಸರ್ವಾತ್ಮನಾ ಯಃಶರಣಂ ಶರಣ್ಯಂ ಗತೋ ಮುಕುಂದಂ ಪರಿಹೃತ್ಯ ಕರ್ತಮ್ ॥೪೧॥

ಅರ್ಥ:- ಹೇ ರಾಜನೇ, ಅಭಕ್ತನು ದೇವ, ಋಷಿ ಮತ್ತು ಭೂತಗಳು ಅಂದರೆ ಕುಟುಂಬದಲ್ಲಿನ ಪೋಷಣೀಯ ಮನುಷ್ಯರು ಹಾಗೂ ಇತರ ಪಂಚಯಜ್ಞ ದೇವತೆಗಳ ಋಣಿಯಾಗಿರುವನು. ಆದ್ದರಿಂದ ಆತನು ಅವರ ದಾಸನಾಗಿರುವನು. ಆದ್ದರಿಂದ ನಿತ್ಯದಲ್ಲಿ ಪಂಚಾದಿ ಯಜ್ಞಗಳನ್ನು ಮಾಡುವನು. ಆದರೆ ಅನನ್ಯ ಭಾವದಿಂದ ಭಗವಂತನಿಗೆ ಶರಣಾದ ಭಕ್ತನು ಇದರಂತೆ ಅವರ ಋಣಿ ಮತ್ತು ದಾಸನಾಗಿರುವುದಿಲ್ಲ.

ವಿಶೇಷವಾಗಿ ದ್ರವಿಡ ದೇಶದಲ್ಲಿ ಅತಿಶಯವಾಗಿ ಭಕ್ತಿಯು ಬೆಳೆಯುವುದು. ಅದರಲ್ಲಿಯೂ ಎಲ್ಲಿ ನಾಮಾಂಕಿತ ತೀರ್ಥಗಳ ಸ್ಥಾನಗಳು ಇರುವುವೋ ಅಲ್ಲಿ ಮಾತ್ರ ಅತಿಉತ್ಕಟವಾದ ಭಕ್ತಿಯು ಪ್ರಕಟವಾಗುವುದು ॥೪೫೧॥ ತಾಮ್ರಪರ್ಣೀ ನದಿಯ ದಡದಲ್ಲಿನ ಹರಿಭಕ್ತಿಯ ಮಹಿಮೆಯು ಅಗಾಧವಾಗಿದೆ. ಕೃತಮಾಲೇಯ ಸುತ್ತುಮುತ್ತು ಹರಿಭಕ್ತಿಯು ಉಲ್ಹಾಸದಿಂದ ನಡೆಯುವುದು ॥೪೫೨॥ ಪಯಸ್ವಿನೀಯ ನಿರ್ಮಲ ಜಲವನ್ನು ಪ್ರಾಶನ ಮಾಡಿದರೆ ಹರಿಚರಣಗಳಲ್ಲಿ ವೃತ್ತಿಯು ನಟ್ಟಿಕೊಳ್ಳುವುದು ಮತ್ತು ಭಗವದ್ಭಜನೆಯಲ್ಲಿ ಬುದ್ಧಿಯು ಸ್ಥಿರಗೊಳ್ಳುವುದು ॥೪೫೩॥ ಕಾವೇರೀ ನದಿಯ ಕೇವಲ ದಡವನ್ನು ಕಂಡಾಕ್ಷಣಕ್ಕೆ ಕೋಟ್ಯಾವಧೀ ಪಾಪಗಳು ಹೊರಟು ಹೋಗುವುವು. ಅಲ್ಲಿ ಶ್ರೀರಂಗನು ಪ್ರೇಮದಿಂದ ಇರುವನು. ಅಲ್ಲಿ ಭಕ್ತಿಸಂಪತ್ತು ನದಿಯ ಎರಡೂ ದಡಗಳಲ್ಲಿ ಬಹು ಉತ್ಕರ್ಷೆಯಿಂದ ನಡೆಯುವುವು ॥೪೫೪॥ ಪ್ರತೀಚೀ ನದಿಯಲ್ಲಿ ಸ್ನಾನ ಮಾಡುತ್ತಲೇ ಬಹುಬೇಗ ಚಿತ್ತಶುದ್ಧಿಯಾಗುವುದು ಮತ್ತು ಭಜನೆಯು ಮೇಲೆ ಬಿದ್ದು ಬೆಳೆಯುತ್ತಸಾಗಿ ಭಕ್ತಿಯ ಪತಾಕೆಯನ್ನು ವೈಕುಂಠದವರೆಗೂ ಏರಿಸುವುದು ॥೪೫೫॥ ಹೇ ನರವರ ಚೂಡಾಮಣಿಯೇ, ಈ ಐದು ನದಿಗಳಲ್ಲಿ ಸ್ನಾನವನ್ನು ಮಾಡಿದರೆ ಅಥವಾ ಜಲವನ್ನು ಪ್ರಾಶನ ಮಾಡಿದರೆ ಭಗವಂತನ ಭಜನೆಯಲ್ಲಿ ಬುದ್ಧಿಯು ಸ್ಥಿರವಾಗುವುದು ॥೪೫೬॥ ಈ ತೀರ್ಥಗಳ ದರ್ಶನ ಮಾತ್ರದಿಂದ ಕಲಿಮಲದ ಕ್ಷಾಲನೆಯಾಗುವುದು ಮತ್ತು ಸ್ನಾನ ಅಥವಾ ಜಲ ಪ್ರಾಶನದಿಂದ ಭಗವದ್ಭಜನೆಯಲ್ಲಿ ಉಲ್ಹಾಸವು ಬರುವುದು ॥೪೫೭॥ ಈ ತೀರ್ಥಗಳ ದರ್ಶನ, ಪ್ರಾಶನ ಹಾಗೂ ಸ್ನಾನ ಮಾಡುವುದರಿಂದ ವಾಸುದೇವನ ನಿರ್ಮಲವಾದ ಭಜನೆಯ ಬುದ್ಧಿಯು ನಿತ್ಯದಲ್ಲಿ ಅಧಿಕಾಧಿಕವಾಗಿ ಬೆಳೆಯುತ್ತ ಸಾಗುವುದು ॥೪೫೮॥ ಹೀಗಿರುವ ಭಗವದ್ಭಕ್ತರು ಮೂರೂ ಋಣಗಳಿಂದ ಮುಕ್ತರಾಗುವರು. ಹರಿಭಕ್ತರು ದೇವ, ಪಿತೃ ಮತ್ತು ಋಷಿ ಇವರ ಆಧೀನದಲ್ಲಿ ಎಂದೂ ಇರುವುದಿಲ್ಲ ॥೪೫೯॥

ಶರಣಾಗತಾ ನಿಜಶರಣ್ಯ । ಮುಕುಂದಾಚೇ ಶ್ರೀಚರಣ । ಸದ್ಭಾವೇ ರಿಘಾಲ್ಯಾ ಶರಣ । ಜನ್ಮ ಮರಣ ಬಾಧೀನಾ ॥೪೬೦॥ ಜೇಥ ಬಾಧೀನಾ ಜನ್ಮ ಮರಣ । ತೇಥೇ ದೇವ-ಋಷಿ-ಆಚಾರ್ಯ-ಪಿತೃಗಣ । ಯಾಂಚಾ ಋಣಾಂಚಾ ಪಾಡ ಕೋಣ । ತೇ ಝಾಲೇ ಉತ್ತೀರ್ಣ ಭಗವದ್ಭಜನೇ ॥೪೬೧॥ ಜೋ ವಿನಟಲಾ ಹರಿಚರಣೀ । ತೋ ಕೋಣಾಚಾ ನವ್ಹೇ ಋಣೀ । ಜೇವೀ ಪರಿಸಾಚಿಯೇ ಮಿಳಣೀ । ಲೋಹ ಕಾಳೇಪಣೀ ನಿರ್ಮುಕ್ತ ॥೪೬೨॥ ಸಕಳ ಪಾಪಾಪಾಸೂನೀ । ಸುಟಿಜೇ ಜೇವೀ ಗಂಗಾಸ್ನಾನೀ । ತೇವೀ ವಿನಟಲ್ಯಾ ಹರಿಚರಣೀ । ನಿರ್ಮುಕ್ತ ತ್ರೈಋಣೀ ಭಗವದ್ಭಕ್ತ ॥೪೬೩॥ ಭಾವೇ ಕರಿತಾ ಭಗವದ್ಭಕ್ತೀ । ಸಕಳ ಪಿತರ ಉದ್ಧರತೀ । ಋಷೀಶ್ವರಾ ನಿತ್ಯ ತೃಪ್ತೀ । ಭಗವದ್ಭಕ್ತಿ-ಸ್ವಾನಂದೇ ॥೪೬೪॥ ಸ್ವಾನಂದೇ ಭಗವದ್ಭಕ್ತೀ । ತೇಣೇ ಸರ್ವ ಭೂತೇ ಸುಖೀ ಹೋತೀ । ಪುತ್ರೇ ಕೇಲ್ಯಾ ಭಗವದ್ಭಕ್ತೀ । ಆಪ್ತ ಉದ್ಧರತೀ ಮಾತಾಪಿತರೇ ॥೪೬೫॥ ಸಕಳ ದೇವಾಂಚಾ ನಿಯಂತಾ । ಅತಿಉಲ್ಹಾಸೇ ತ್ಯಾತೇ ಭಜತಾ । ದೇವಋಣಾಚೀ ವಾರ್ತಾ । ಭಗವದ್ಭಕ್ತಾ ಬಾಧೀನಾ ॥೪೬೬॥ ಜ್ಯಾಂಸೀ ಅನನ್ಯ ಭಗವದ್ಭಜನ । ತೇ ಕದಾ ನವ್ಹತೀ ಕರ್ಮಾಧೀನ । ಕರ್ಮ ಜ್ಯಾಚೇ ಆಜ್ಞಾಧೀನ । ತ್ಯಾ ಹರೀಸೀ ಶರಣ ಜೋ ಝಾಲಾ ॥೪೬೭॥ ತೋ ನವ್ಹೇ ಕರ್ಮಾಚಾ ಸೇವಕ । ನವ್ಹೇ ದೇವಾಂಚಾ ಪಾಈಕ । ನವ್ಹೇ ಪ್ರಾಕೃತಾಚಾ ರಂಕ । ಅನನ್ಯ ಭಾವಿಕ ಹರಿಭಕ್ತ ॥೪೬೮॥ ಜೋ ಹರೀಚಾ ಶರಣಾಗತ । ತೋ ಕೋಣಾಚಾ ನವ್ಹೇ ಅಂಕಿತ । ಕರ್ಮಾಕರ್ಮೀ ತೋ ಅಲಿಪ್ತ । ನಿತ್ಯಮುಕ್ತ ಋಣತ್ರಯಾಸೀ ॥೪೬೯॥ ವಾಸುದೇವ ಸರ್ವಾಭೂತೀ । ಹೇ ದೃಢ ಠಸಾವೇ ಪ್ರತೀತೀ । ಯಾಲಾಗೀ ಅಲಿಪ್ತ ಕರ್ಮಗತೀ । ಸಕಳ ಋಣನಿರ್ಮುಕ್ತೀ ಭಗವದ್ಭಕ್ತಾ ॥೪೭೦॥

ಸ್ವಪಾದಮೂಲಂ ಭಜತಃ ಪ್ರಿಯಸ್ಯ ತ್ಯಕ್ತಾನ್ಯಭಾವಸ್ಯ ಹರಿಃ ಪರೇಶಃ ।
ವಿಕರ್ಮ ಯಚ್ಚೋತ್ಪತಿತಂ ಕಥಂಚಿದ್ ಧುನೋತಿ ಸರ್ವಹೃದಿ ಸನ್ನಿವಿಷ್ಟಃ ॥೪೨॥

ಅರ್ಥ:- ಅನನ್ಯ ಚಿತ್ತದಿಂದ ಭಜನೆಯನ್ನು ಮಾಡುವ ಭಗವದ್ಭಕ್ತನ ನಿಷಿದ್ಧ ಪ್ರವೃರ್ತಿಯು ಮೊದಲೇ ಸಂಭವಿಸುವುದಿಲ್ಲ. ಆದರಲ್ಲಿಯೂ ಅನವಧಾನದಿಂದ ಯದಾ ಕದಾಚಿತ್ ಆತನ ಕೈಯಿಂದ ಏನಾದರೊಂದು ವಿಕರ್ಮವು ನಡೆಯಿತೆಂದರೆ ಶ್ರೀಹರಿಯು ಅದರ ನಿವಾರಣೆಯನ್ನು ಮಾಡುವನು. ಶ್ರೀಹರಿಯು ಆತನ ಹೃದಯದಲ್ಲಿ ವಾಸವನ್ನು ಮಾಡಿ ಆತನ ಹೃದಯವನ್ನು ಶುದ್ಧಗೊಳಿಸುವನು.

ಸಾಂಡೂನಿ ದೇಹಾಚ್ಯಾ ಅಭಿಮಾನಾ । ತ್ಯಜೂನಿ ದೇವತಾಂತರಭಜನಾ । ಜೇ ಅನನ್ಯ ಶರಣ ಹರಿಚರಣಾ । ತೇ ಕರ್ಮಬಂಧನಾ ನಾತಳತೀ ॥೪೭೧॥

ಶರಣಾಂಗತರಿಗೆ ಶರಣ್ಯವೆಂದರೆ ಆಶ್ರಯವನ್ನು ಕೊಡುವ ಶ್ರೀಮುಕುಂದನ ಚರಣವು ಒಂದೇ ಇರುವುದು. ಈತನಿಗೆ ಅನನ್ಯ ಭಾವದಿಂದ ಶರಣಾಗಲು ಜನ್ಮ ಮರಣದ ಬಾಧೆಯಾಗಲಾರದು ॥೪೬೦॥ ಜನ್ಮ ಮರಣದ ಬಾಧೆಯೇ ಆಗಲಾರದವರಿಗೆ ದೇವ, ಋಷಿ, ಆಚಾರ್ಯ ಮತ್ತು ಪಿತೃ ಇವರ ಋಣಗಳು ಇವರಿಗೆ ಸಂಬಂಧ ಬೀಳುವುದಿಲ್ಲ. ಈ ಭಕ್ತರು ಭಗವದ್ಭಜನೆಯಿಂದ ಉದ್ಧಾರರಾಗುವರು॥೪೬೧॥ ಹರಿಚರಣಗಳಲ್ಲಿ ಸಂಪೂರ್ಣವಾಗಿ ತನ್ಮಯರಾದ ಇವರಿಗೆ ಯಾರ ಋಣವನ್ನೂ ತೀರಿಸಬೇಕಾಗಿಲ್ಲ. ಪರಿಸಮಣಿಯ ಸ್ಪರ್ಶವಾದೊಡನೆಯೇ ಕಬ್ಬಿಣವು ತನ್ನ ಕಪ್ಪುತನದಿಂದ ಮುಕ್ತವಾಗುವುದು ॥೪೬೨॥ ಗಂಗಾನದಿಯಲ್ಲಿ ಸ್ನಾನವನ್ನು ಮಾಡಿದರೆ ಎಲ್ಲ ಪಾಪಗಳಿಂದ ಮುಕ್ತರಾಗುವರು. ಅದರಂತೆಯೇ ಹರಿಚರಣಗಳಲ್ಲಿ ವೃತ್ತಿಯು ಸ್ಥಿರಗೊಂಡಲ್ಲಿ ಭಗವದ್ಭಕ್ತನು ಯಾವ ಈ ಮೂರೂ ಋಣಗಳಿಂದ ಮುಕ್ತನಾಗುವನು ॥೪೬೩॥ ಸದ್ಭಾವನೆಯಿಂದ ಭಗವದ್ಭಕ್ತಿಯನ್ನು ಮಾಡಲು ಸರ್ವ ಪಿತೃಗಳ ಉದ್ಧಾರವಾಗುವುದು. ಭಗವದ್ಭಕ್ತಿಯ ಆನಂದದಿಂದ ಋಷೀಶ್ವರರು ನಿತ್ಯ ತೃಪ್ತರಾಗಿರುವರು ॥೪೬೪॥ ಭಗವದ್ಭಕ್ತಿಯ ಆನಂದದಿಂದ ಸರ್ವ ಪ್ರಾಣಿ ಮಾತ್ರರು ಸುಖೀಯಾಗುವರು. ಪುತ್ರನು ಭಕ್ತಿಯನ್ನು ಮಾಡುತ್ತಿರಲು ಆತನ ಮಾತಾಪಿತೃಗಳು ಮತ್ತು ಆಪ್ತೇಷ್ಟರು ಮೊದಲು ಮಾಡಿ ಉದ್ಧಾರರಾಗುವರು ॥೪೬೫॥ ಸರ್ವ ದೇವತೆಗಳ ನಿಯಂತನಾಗಿರುವ ಶ್ರೀಹರಿಯ ಭಜನೆಯನ್ನು ಅತ್ಯಂತ ಉಲ್ಹಾಸದಿಂದ ಮಾಡಲು ದೇವ ಋಣವು ಆ ಭಕ್ತನಿಗೆ ಎಂದೂ ಬಾಧಿಸಲಾರದು. ಒಟ್ಟಿನಲ್ಲಿ ಅನನ್ಯ ಭಾವದಿಂದ ಭಜನೆಯನ್ನು ಮಾಡುವವರು ಎಂದೆಂದಿಗೂ ಬಾಧಿತರಾಗಲಾರರು ॥೪೬೬॥ ಈ ಯಾವ ಅನನ್ಯಭಾವದಿಂದ ಭಜನೆಯನ್ನು ಮಾಡುವವರಾದ ಇವರಿಗೆ ಎಂದಿಗೂ ಕರ್ಮದ ಬಾಧೆಯಾಗಲಾರದು. ಏಕೆಂದರೆ ಯಾವ ಕರ್ಮವು ಯಾರ ಆಧೀನದಲ್ಲಿರುವುದೋ ಆ ಶ್ರೀಹರಿಯನ್ನು ಇವರು ಶರಣಾಗಿರುವರು ॥೪೬೭॥ ಅನನ್ಯಭಾವದಿಂದ ಶರಣು ಹೋಗಿರುವ ಭಾವಿಕ ಹರಿಭಕ್ತನು ಕರ್ಮದ ಸೇವಕ, ದೇವತೆಗಳ ಚಾಕರ ಮತ್ತು ಅನ್ಯ ಪ್ರಾಕೃತ ಜನರ ದಾಸನಾಗುವುದಿಲ್ಲ ॥೪೬೮॥ ಯಾರು ಶ್ರೀಹರಿಯನ್ನು ಶರಣಾಗಿರುವರೋ, ಅವರು ಯಾರ ಅಂಕಿತವೂ ಆಗುವುದಿಲ್ಲ. ಇವರು ಕರ್ಮ ಮತ್ತು ಅಕರ್ಮಗಳಿಂದ ಅಲಿಪ್ತರಾಗಿ ಮೂರೂ ಋಣಗಳಿಂದ ನಿತ್ಯಮುಕ್ತರಾಗಿರುವರು ॥೪೬೯॥ ಸರ್ವ ಪ್ರಾಣಿಮಾತ್ರರಲ್ಲಿ ವಾಸುದೇವನು ತುಂಬಿಕೊಂಡಿರುವನೆಂಬ ಇವರ ದೃಢವಾದ ವಿಶ್ವಾಸವಿರುವುದು. ಆದ್ದರಿಂದ ಈ ಭಕ್ತರು ಕರ್ಮಗಳಿಂದ ಅಲಿಪ್ತರಾಗಿರುವರು ಮತ್ತು ಸಕಲ ಋಣಗಳಿಂದ ಮುಕ್ತರಾಗಿರುವರು ॥೪೭೦॥

ದೇಹದ ಅಭಿಮಾನವನ್ನು ತ್ಯಜಿಸಿ ಮತ್ತು ಇತರ ದೇವತೆಗಳ ಭಜನೆಯನ್ನು ಬಿಟ್ಟು ಅನನ್ಯ ಭಾವದಿಂದ ಹರಿಚರಣಗಳಲ್ಲಿ ಶರಣಾದ ಭಕ್ತರು ಕರ್ಮಬಂಧನದಲ್ಲಿ ಬೀಳುವುದಿಲ್ಲ ॥೪೭೧॥

ಯಾಪರೀ ಜೇ ಅನನ್ಯ ಶರಣ । ತೇಚಿ ಹರೀಸೀ ಪಢಿಯಂತೇ ಪೂರ್ಣ । ಹರಿಪ್ರಿಯಾ ಕರ್ಮಬಂಧನ । ಸ್ವಪ್ನೀಹೀ ಜಾಣ ಸ್ಪರ್ಶೋ ನ ಶಕೇ ॥೪೭೨॥ ರಾಯಾ ಮ್ಹಣಸೀ "ಭಗವದ್ಭಕ್ತ । ವಿಹಿತಕರ್ಮೀ ನಿತ್ಯನಿರ್ಮುಕ್ತ" । ತೇ ಜರೀ ವಿಕರ್ಮ ಆಚರತ । ತರೀ ಪ್ರಾಯಶ್ಚಿತ್ತ ನ ಭಾಧೀ ತ್ಯಾಂಸೀ ॥೪೭೩॥ ಜೇವೀ ಪಂಚಾನನಾಚೇ ಪಿಲೇ । ನ ವಚೇ ಮದಗಜಾಂಚೇನಿ ವೇಢಿಲೇ । ತೇವೀ ಹರಿಪ್ರಿಯೀ ವಿಕರ್ಮ ಕೇಲೇ । ತ್ಯಾಂಸೀ ನ ವಚೇ ಬಾಂಧಿಲೇ ಸಾಚೇನಿ ॥೪೭೪॥ ಸ್ಮರತಾ ಏಕ ಹರೀಚೇ ನಾಮ । ಮಹಾಪಾತಕ್ಯಾ ವಂದೀ ಯಮ । ಮಾ ಹರೀಚೇ ಪಢಿಯಂತೇ ಪರಮ । ಪಾ ವಿಕರ್ಮೇ ಯಮ ಕೇವೀ ದಂಡೀ ॥೪೭೫॥ ಆಶಂಕಾ ॥ ''ವೇದಾಜ್ಞಾ ವಿಷ್ಣೂಚೀ ಪರಮ । ವೇದೇ ವಿಹಿಲೇ ಧರ್ಮಾಧರ್ಮ । ಭಕ್ತ ಆಚರತಾ ವಿಕರ್ಮ । ಕೇವೀ ವೇದಾಜ್ಞಾನೇಮ ನ ಬಾಧೀ ತ್ಯಾಂಸೀ'' ॥೪೭೬॥ ಜೇವೀ ರಾಯಾಚಾ ಸೇವಕ ಆಪ್ತ । ತೋ ದ್ವಾರಪಾಳಾ ನವ್ಹೇ ಅಂಕಿತ । ತೇಥ ರಾಯಾಚಾ ಪಢಿಯಂತಾ ಸುತ । ತ್ಯಾಚಾ ಪಂಗಿಸ್ತ ತೋ ಕೇವೀ ಹೋಯ ॥೪೭೭॥ ಹರಿನಾಮಾಚೇ ಜ್ಯಾಸೀ ಸ್ಮರಣ । ವೇದ ತ್ಯಾಚೇ ವಂದೀ ಚರಣ । ಮಾ ಜೋ ಹರೀಚಾ ಪಢಿಯಂತಾ ಪೂರ್ಣ । ತ್ಯಾಸೀ ವೇದವಿಧಾನ ಕದಾ ನ ಬಾಧೀ ॥೪೭೮॥ ಭಕ್ತಾಪಾಸೂನಿ ವಿಕರ್ಮಸ್ಥಿತೀ । ಕದಾ ನ ಘಡೇ ಗಾ ಕಲ್ಪಾಂತೀ । ಅವಚಟೇ ಘಡಲ್ಯಾ ದೈವಗತೀ । ತ್ಯಾ ಕರ್ಮಾ ನಿರ್ಮುಕ್ತಿ ಅಚ್ಯುತಸ್ಮರಣೇ ॥೪೭೯॥ ಬಾಧೂ ನ ಶಕೇ ಕರ್ಮಾಕರ್ಮ । ಐಸಾ ಕೋಣ ಭಾಗವತಧರ್ಮ । ತೇ ಭಕ್ತೀಚೇ ನಿಜವರ್ಮ । ಉತ್ತಮೋತ್ತಮ ಅವಧಾರೀ ॥೪೮೦॥ ತ್ಯಜೂನಿ ದೇಹಾಭಿಮಾನ ವ್ಹೋಢೀ । ಸರ್ವಾ ಭೂತಿ ಹರಿಭಕ್ತಿ ಗಾಢೀ । ತೋ ಕರ್ಮಾಕರ್ಮೇ ಪಾಯೀ ರಗಡೀ । ಮುಕ್ತಿ ಪಾಯ ಝಾಡೀ ನಿಜಕೇಶೀ ॥೪೮೧॥ ತೋ ಜ್ಯಾಕಡೇ ಕೃಪಾದೃಷ್ಟೀ ಪಾಹೇ । ತ್ಯಾಚೇ ನಿರ್ದಳೇ ಭವಭಯೇ । ತೋ ಜೇಥ ಮ್ಹಣೇ ರಾಹೇ । ತೇಥೇ ಲಾಹೇ ಮುಕ್ತಿಸುಖ ॥೪೮೨॥ ತ್ಯಾಚೇನಿ ಅನುಗ್ರಹಕರೀ । ದೇವ ಪ್ರಗಟೇ ದೀನಾಚ್ಯಾ ಅಂತರೀ । ತ್ಯಾಚ್ಯಾ ಕರ್ಮಾಕರ್ಮಾಚೇ ಬೋಹರೀ । ಸ್ವಯೇ ಶ್ರೀಹರೀ ಕರೂ ಲಾಗೇ ॥೪೮೩॥ ಜೇವೀ ಪ್ರಗಟಲ್ಯಾ ದಿನಮಣೀ । ಅಂಧಾರ ಜಾಯ ಪಳೋನೀ । ರಾಮ ಪ್ರಗಟಲ್ಯಾ ಹೃದಯಭುವನೀ । ಕರ್ಮಾಕರ್ಮಧುಣೀ ಸಹಜಚಿ ॥೪೮೪॥ ಭಗವಂತಾಚೇ ನಾಮಕೀರ್ತಿ । ಯಾಚಿ ನಾಮೇ ಪರಮ ಭಕ್ತಿ । ಭಕ್ತೀಪಾಶೀ ಚಾರೀ ಮುಕ್ತಿ । ದಾಸೀತ್ವೇ ವಸತೀ ನೃಪನಾಥಾ ॥೪೮೫॥

ಹೀಗೆ ಅನನ್ಯ ಶರಣಾದವರೇ ಹರಿಯ ಪೂರ್ಣ ಪ್ರಿಯರಾಗುವರು. ಹರಿಯ ಸಲಿಗೆಯ ಭಕ್ತರಿಗೆ ಕರ್ಮಬಂಧನವು ಸ್ವಪ್ನದಲ್ಲಿಯೂ ಬಾಧೆಯಾಗುವುದಿಲ್ಲ ॥೪೭೨॥ ಹೇ ರಾಜನೇ, ಭಗವದ್ಭಕ್ತನು ನಿತ್ಯಕರ್ಮಗಳಿಂದ ನಿತ್ಯಮುಕ್ತನಾಗಿರುವನು. ಈತನು ಒಂದು ವೇಳೆ ನಿಷಿದ್ಧ ಕರ್ಮದ ಆಚರಣೆಯನ್ನು ಮಾಡಿದರೆ ಏನಾಗಬಹುದು ಎಂದು ನೀನು ಕೇಳಬಹುದು. ಅದರ ಉತ್ತರವು ಹೀಗಿದೆ, ಕೇಳು. ನಿಷಿದ್ಧಕರ್ಮದ ಆಚರಣೆಯನ್ನು ಮಾಡಿದ ಭಗವದ್ಭಕ್ತನಿಗೆ ಪ್ರಾಯಶ್ಚಿತ್ತದ ಪ್ರತಿಬಂಧವು ಇರುವುದಿಲ್ಲ ॥೪೭೩॥ ಸಿಂಹದ ಮರಿಗೆ ಉನ್ಮತ್ತ ಆನೆಯಿಂದಲೂ ಮುತ್ತಿಗೆ ಹಾಕುವುದು ಸಾಧ್ಯವಾಗುವುದಿಲ್ಲ. ಅದರಂತೆ ಹರಿಭಕ್ತನು ವಿಕರ್ಮ ಮಾಡಿದರೂ ಯಮನು ಆತನಿಗೆ ಬಂಧಿಸಲಾರನು ॥೪೭೪॥

ಹರಿಯ ಒಂದು ನಾಮಃಸ್ಮರಣೆಯನ್ನು ಮಾಡಲು, ಆ ಮಹಾಪಾಪಿಗೂ ಯಮನು ಬಂದು ವಂದಿಸುವನು. ಹೀಗಿರಲು ಹರಿಯ ಪ್ರೀತಿಗೆ ಪಾತ್ರರಾದ ಪರಮ ಭಕ್ತರಿಗೆ ವಿಕರ್ಮಕ್ಕಾಗಿ ಯಮನು ಹೇಗೆ ದಂಡಿಸುವನು? ॥೪೭೫॥ ಅನುಮಾನ: ಅಹೋ, ಹೀಗಾದರೆ ವೇದವಾದರೂ ಶ್ರೀವಿಷ್ಣುವಿನ ಶ್ರೇಷ್ಠ ಆಜ್ಞೆಯಾಗಿರುವುದು. ವೇದವು ಧರ್ಮ, ಅಧರ್ಮಗಳನ್ನು ಹೇಳಿರುವುದು ಹೀಗಿರಲು ಭಕ್ತನು ನಿಷಿದ್ಧ ಕರ್ಮವನ್ನು ಮಾಡಲು ಆ ವೇದಾಜ್ಞೆಯು ಆತನಿಗೆ ಬಾಧಿಸಲಾರದೆ? ॥೪೭೬॥ ಉತ್ತರ: ಅಹೋ, ರಾಜನ ಪ್ರಿಯ ಸೇವಕರು ದ್ವಾರಪಾಲಕನ ಅಂಕಿತರಾಗುವುದಿಲ್ಲ. ಹೀಗಿರಲು ರಾಜನ ಪ್ರೀತಿಯ ಪುತ್ರನು ಆತನ ಅಂಕಿತ ಹೇಗಾಗುವನು? ॥೪೭೭॥ ಹರಿನಾಮದ ಸ್ಮರಣೆಯನ್ನು ಮಾಡುವ ಭಕ್ತರ ಚರಣಗಳಿಗೆ ವೇದವು ವಂದಿಸುವುದು. ಹೀಗಿರಲು ಹರಿಯ ಅತ್ಯಂತ ಪ್ರಿಯ ಭಕ್ತನಿಗೆ ವೇದಾಜ್ಞೆಯು ಹೇಗೆ ಬಾಧಿಸುವುದು? ॥೪೭೮॥ ಭಕ್ತನ ಕೈಯಿಂದ ನಿಷಿದ್ಧ ಕರ್ಮದ ಆಚರಣೆಯು ಕಲ್ಪಾಂತಕ್ಕೂ ನಡೆಯುವುದಿಲ್ಲ. ಕದಾಚಿತ್ ದೈವಯೋಗದಿಂದ ಎಂದಾದರು ನಡೆದರೆ ಆತನು ಅಚ್ಯುತನ ಸ್ಮರಣೆಯಿಂದ ಆ ಕರ್ಮದಿಂದ ಮುಕ್ತನಾಗುವನು ॥೪೭೯॥ ಕರ್ಮ-ಅಕರ್ಮಗಳು ಬಾಧಿಸದ ಅಂತಹ ಭಾಗವತ ಧರ್ಮವು ಯಾವುದು ಎಂದು ನೀನು ಕೇಳಬಹುದು. ಹಾಗಾದರೆ ನೃಪಶ್ರೇಷ್ಠನೇ ಆ ಭಕ್ತಿಯ ಉತ್ತಮ ವರ್ಮವನ್ನು ಹೇಳುವೆ ಕೇಳು ॥೪೮೦॥ (ಯಾರು ದೇಹದ ಅಭಿಮಾನವನ್ನು ತ್ಯಜಿಸಿ, ಸರ್ವಭೂತಗಳಲ್ಲಿ ದೃಢವಾದ ಹರಿಭಕ್ತಿಯನ್ನು ಇಟ್ಟಿರುವನೋ, ಆ ಭಕ್ತನು ಕರ್ಮ ಅಕರ್ಮಗಳನ್ನು ತನ್ನ ಕಾಲಡಿಯಲ್ಲಿ ಒರೆಸಿಬಿಡುವನು.) ಮುಕ್ತಿಯು ತನ್ನ ತಲೆ ಕೂದಲುಗಳಿಂದ ಆತನ ಪಾದಗಳನ್ನು ಬಳೆಯುವುದು ॥೪೮೧॥ ಈತನು ಯಾರನ್ನು ಕೃಪಾದೃಷ್ಟಿಯಿಂದ ನೋಡುವನೋ, ಆತನ ಸಂಸಾರ ಭಯವು ತತ್ಕಾಲದಲ್ಲಿ ಇಲ್ಲದಾಗುವುದು ಮತ್ತು ಈತನು ಎಲ್ಲಿ ಹೇಳುವನೋ ಅಲ್ಲಿ ಹರಿಭಕ್ತಿಯು ಎದ್ದು ನಿಲ್ಲುವುದು ॥೪೮೨॥ ಈತನ ಅನುಗ್ರಹವು ಆಯಿತೆಂದರೆ ದೇವನು ದೀನ ಜನರ ಹೃದಯದಲ್ಲಿ ಪ್ರಕಟನಾಗುವನು ಮತ್ತು ಸ್ವತಃ ಶ್ರೀಹರಿಯು ಆತನ ಕರ್ಮಗಳನ್ನು ಭಸ್ಮ ಮಾಡುವನು ॥೪೮೩॥ ಸೂರ್ಯೋದಯವಾಗುತ್ತಲೇ ಕತ್ತಲೆಯು ಓಡಿ ಹೋಗುವಂತೆ ಹೃದಯದಲ್ಲಿ ರಾಮನು ಪ್ರಕಟನಾಗುತ್ತಲೇ ಕರ್ಮ, ಅಕರ್ಮಗಳು ಸಹಜವಾಗಿ ಇಲ್ಲದಾಗುವುವು ॥೪೮೪॥ ಪರಮೇಶ್ವರನ ನಾಮಸಂಕೀರ್ತನವೇ ಭಕ್ತಿಯಾಗಿರುವುದು. ಭಕ್ತಿಯಲ್ಲಿ ನಾಲ್ಕೂ ಮುಕ್ತಿಗಳು ದಾಸಿಯಾಗಿ ಇರುವುವು ॥೪೮೫॥

ಐಕೋನಿ ಭಕ್ತೀಚೀ ಪೂರ್ಣ ಸ್ಥಿತೀ । ರೋಮಾಂಚಿತ ಝಾಲಾ ನೃಪತೀ । ಆನಂದಾಶ್ರು ನಯನೀ ಯೇತೀ । ಸುಖಾವಲಿಯಾ ವೃತ್ತೀ ಡುಲ್ಲತು ।।೪೮೬।। ಸಾಂಗತಾ ವೈದೇಹಾಚೀ ಸ್ಥಿತೀ । ನಾರದು ಸುಖಾವೇ ನಿಜ ಚಿತ್ತೀ । ತೋ ಉಲ್ಹಾಸೇ ವಸುದೇವಾಪ್ರತೀ । ಸಾಂಗೇ ಸಮಾಪ್ತಿ ಇತಿಹಾಸಾಚೀ ।।೪೮೭।।

ನಾರದ ಉವಾಚ:-

ಧರ್ಮಾನ್ ಭಾಗವತಾನಿತ್ಥಂ ಶ್ರುತ್ವಾಽಥ ಮಿಥಿಲೇಶ್ವರಃ ।
ಜಾಯಂತೇಯಾನ್ ಮುನೀನ್ ಪ್ರೀತಃ ಸೋಪಾಧ್ಯಾಯೋಹ್ಯಪೂಜಯತ್ ।।೪೩।।

ಅರ್ಥ:- ನಾರದರು ನುಡಿದರು; ಹೇ ವಸುದೇವನೇ, ಮಿಥಿಲ ನರೇಶನಾದ ನಿಮೀ ರಾಜನು ಒಂಬತ್ತು ಯೋಗಿಗಳವರಿಂದ ಈ ಪ್ರಕಾರವಾಗಿ ಭಾಗವತ ಧರ್ಮದ ವರ್ಣನೆಯನ್ನು ಕೇಳಿ ಅತಿಶಯವಾಗಿ ಆನಂದಿತನಾದನು. ಆತನು ತನ್ನ ಆಚಾರ್ಯರೊಂದಿಗೆ ಋಷಿಭನಂದರಾದ ಒಂಬತ್ತು ಯೋಗಿಶ್ವರರ ಪೂಜೆಯನ್ನು ಮಾಡಿದನು.

ನಾರದ ಇತಿಹಾಸ ಸಾಂಗತು । ತೇವೀಂಚ ಆನಂದೇ ಡುಲ್ಲತು । ತೇಣೇ ಆನಂದೇ ಬೋಲತು । ಭಕ್ತೀಚೇ ಮಥಿತು ವಸುದೇವಾಪ್ರತೀ ।।೪೮೮।। ಯಾಪರೀ ಜಯಂತೀಸುತೀ । ಭಗವಂತಾಚೀ ಉದ್ಭಟ ಭಕ್ತೀ । ಸಾಂಗೀತಲೀ ಪರಮ ಪ್ರೀತೀ । ಮಿಥಿಲೇಶಾಪ್ರತೀ ನಿಜಬೋಧೇ ।।೪೮೯।। ಐಕೋನಿ ತ್ಯಾಂಚಿಯಾ ವಚನಾ । ಸುಖ ಜಾಹಲೇ ವಿದೇಹಾಚಿಯಾ ಮನಾ । ಮಗ ಅತಿಪ್ರೀತೀ ಪೂಜನಾ । ಜಯಂತೀನಂದನಾ ಪೂಜಿತಾ ಝಾಲಾ ।।೪೯೦।। ಶ್ರವಣೇ ಜಾಹಲೀ ಅತಿವಿಶ್ರಾಂತೀ । ತೇಣೇ ಪೂಜೇಲಾಗೀ ಅತಿಪ್ರೀತೀ । ವಿದೇಹಾ ಉಲ್ಹಾಸು ಚಿತ್ತೀ । ಸ್ವಾನಂದಸ್ಥಿತೀ ಪೂಜಿತಾ ಝಾಲಾ ।।೪೯೧।। ಪೂಜೇಚಾ ಪರಮ ಆದರು । ಜಯಂತೀನಂದನಾ ಕೇಲಾ ಥೋರು । ಉಪಾಧ್ಯಾಯ ಜೋ ಅಹಲ್ಯಾಕುಮರು । ತೇಣೇಹೀ ಅತ್ಯಾದರೂ ಪೂಜೇಸೀ ಕೇಲಾ ।।೪೯೨।।

ತತೋಽನ್ತರ್ದಧಿರೇ ಸಿದ್ಧಾಃ ಸರ್ವಲೋಕಸ್ಯ ಪಶ್ಯತಃ ।
ರಾಜಾ ಧರ್ಮಾನುಪಾತಿಷ್ಠನ್ನವಾಪ ಪರಮಾಂ ಗತಿಮ್ ।।೪೪।।

ಅರ್ಥ:- ಆ ಬಳಿಕ ಅಲ್ಲಿದ್ದವರೆಲ್ಲರೂ ನೋಡುತ್ತಿಂದಂತೆಯೇ ಆ ಸಿದ್ಧ ಮುನಿಗಳು ಅದೃಶ್ಯರಾದರು. ವಿದೇಹರಾಜನಾದ ನಿಮಿಯು ಅವರಿಂದ ಆಲಿಸಿದ ಭಾಗವತ ಧರ್ಮದ ಆಚರಣೆಯನ್ನು ಮಾಡಿ ಪರಮಗತಿಯನ್ನು ಪ್ರಾಪ್ತಮಾಡಿಕೊಂಡನು.

ಯಾಪರೀ ತೇ ಭಾಗವತಶ್ರೇಷ್ಠ । ನವಹೀ ಜಣ ಅತಿವರಿಷ್ಠ । ಸಮಸ್ತಾ ದೇಖತಾಂಚಿ ಸ್ಪಷ್ಟ । ಝಾಲೇ ಅದೃಷ್ಟ ಊರ್ಧ್ವಗಮನೇ ।।೪೯೩।। ತೇ ಭಾಗವತಧರ್ಮಸ್ಥಿತೀ । ಅನುಷ್ಠೂನಿ ಭಗವದ್ಭಕ್ತೀ । ರಾಜಾ ಪಾವಲಾ ಪರಮ ಗತೀ । ಪೂರ್ಣಪ್ರಾಪ್ತೀ ನಿಜಬೋಧೇ ।।೪೯೪।। ಭಾವೇ ಕರಿತಾ ಭಗವದ್ಭಕ್ತೀ । ದೇಹೀ ಪ್ರಗಟೇ ವಿದೇಹಸ್ಥಿತೀ । ತೇ ಪಾವೋನಿ ನೃಪತೀ । ಪರಮ ವಿಶ್ರಾಂತೀ ಪಾವಲಾ ।।೪೯೫।।

ಭಕ್ತಿಯ ಈ ಮಹಿಮೆಯನ್ನು ಕೇಳಿ ರಾಜನು ರೋಮಾಂಚಿತನಾದನು. ನೇತ್ರಗಳಿಂದ ಆನಂದಾಶ್ರುಗಳು ಹರಿಯತೊಡಗಿದವು ಮತ್ತು ಈತನು ಆನಂದದಿಂದ ತೂಗಾಡಹತ್ತಿದನು ।।೪೮೬।। ಜನಕರಾಜನು ಈ ಸ್ಥಿತಿಯನ್ನು ಹೇಳುತ್ತಿರಲು ನಾರದರ ಮನದಲ್ಲಿ ಅತ್ಯಂತ ಸುಖವಾಯಿತು ಮತ್ತು ಆಸುಖದ ಭರದಲ್ಲಿ ಆತನು ಆ ಇತಿಹಾಸವನ್ನು ಸಮಾಪ್ತಿಗೊಳಿಸಿದನು ।।೪೮೭।।

ನಾರದನು ಇತಿಹಾಸವನ್ನು ಹೇಳುತ್ತ ಹಾಗೆಯೇ ಆತನು ಆನಂದದಿಂದ ಲೋಲಾಡಿದನು ಮತ್ತು ಅದೇ ಆನಂದದ ಭರದಲ್ಲಿ ವಸುದೇವನಿಗೆ ಭಕ್ತಿಯ ರಹಸ್ಯವನ್ನು ಹೇಳಿದನು ।।೪೮೮।। ಈ ಪ್ರಕಾರವಾಗಿ ಜಯಂತಿ ಪುತ್ರರು ಮಿಥಿಲೇಶಾ ರಾಜನಿಗೆ ಪರಮ ಪ್ರೀತಿಯಿಂದ ಸ್ವಾನುಭವಉಳ್ಳ ಪ್ರಭೂವಿನ ಶ್ರೇಷ್ಠ ಭಕ್ತಿಯನ್ನು ಹೇಳಿದರು ।।೪೮೯।। ಅವರ ವಚನಗಳನ್ನು ಕೇಳಿ ಜನಕರಾಜನಿಗೆ ಪರಮ ಸಂತೋಷವಾಯಿತು ಮತ್ತು ಈತನು ಅತಿಶಯ ಪ್ರೇಮದಿಂದ ಜಯಂತೀಪುತ್ರರ ಪೂಜೆಯನ್ನು ಮಾಡಿದನು ।।೪೯೦।। ಶ್ರವಣದಿಂದ ಅತ್ಯಂತ ಸಮಾಧಾನವಾದ್ದರಿಂದ ಪೂಜೆಯನ್ನು ಮಾಡಲು ಅತಿಶಯವಾಗಿ ಉತ್ಸಾಹವಾಯಿತು ಮತ್ತು ನಿಜಾನಂದದಿಂದ ಈತನು ಪೂಜೆಯನ್ನು ಮಾಡಿದನು ।।೪೯೧।। ಜಯಂತೀನಂದನರು ಅತಿಆದರದಿಂದ ಪೂಜೆಯನ್ನು ಸ್ವೀಕರಿಸಿದರು. ಅಹಲ್ಯೆಯ ಪುತ್ರನಾದ ಶತಾನಂದನು ಜನಕರಾಜನ ಪುರೋಹಿತನಾಗಿ ಆದರಭಾವದಿಂದ ಪೂಜೆಯನ್ನು ಮಾಡಿದನು ।।೪೯೨।।

ಈ ಪ್ರಕಾರವಾಗಿ ಅತಿಶ್ರೇಷ್ಠರಾದ ಈ ಒಂಬತ್ತು ಭಗವದ್ಭಕ್ತರು ಎಲ್ಲ ಸಭಾಜನರು ನೋಡುತ್ತಿದ್ದಂತೆಯೇ ಆಕಾಶ ಮಾರ್ಗವಾಗಿ ಅಂತರ್ಧಾನರಾದರು ।।೪೯೩।। ಇವರು ವರ್ಣಿಸಿದ ಭಗವದ್ಭಕ್ತಿಯ ಆಚರಣೆಯನ್ನು ಮಾಡಿ ರಾಜನು ಪರಮ ಗತಿಯನ್ನು ಪಡೆದನು. ಆತನಿಗೆ ಆತ್ಮಜ್ಞಾನದ ಪೂರ್ಣ ಪ್ರಾಪ್ತಿಯಾಯಿತು ।।೪೯೪।। ದೃಢವಾದ ಶ್ರದ್ಧೆಯಿಂದ ಭಗವದ್ಭಕ್ತಿಯನ್ನು ಮಾಡಲು, ಇದರಿಂದ ಯಾವ ವಿದೇಹ ಅವಸ್ಥೆಯು ಪ್ರಾಪ್ತವಾಗುವುದೋ, ಅದೇ ಸ್ಥಿತಿಯನ್ನು ಪ್ರಾಪ್ತಮಾಡಿಕೊಂಡು ಜನಕರಾಜನು ಪರಮ ವಿಶ್ರಾಂತಿಯನ್ನು ಪಡೆದುಕೊಂಡನು ।।೪೯೫।।

ತ್ವಮಪ್ಯೇತಾನ್ ಮಹಾಭಾಗ ಧರ್ಮಾನ್ ಭಾಗವತಾನ್ ಶ್ರುತಾನ್ ।
ಆಸ್ಥಿತಃ ಶ್ರದ್ಧಯಾ ಯುಕ್ತೋ ನಿಃಸಂಗೋ ಯಾಸ್ಯಸೇ ಪರಮ್ ।।೪೫।।

ಅರ್ಥ:- ಮಹಾಭಾಗ್ಯಶಾಲಿ ವಸುದೇವನೇ, ಈಗ ನೀನು ಕೇಳಿಸಿಕೊಂಡ ಭಕ್ತಿಸೇವೆಯ ತತ್ತ್ವಗಳನ್ನು ಶ್ರದ್ಧೆಯಿಂದ ಆಚರಿಸಿದರೆ, ಸರ್ವಪ್ರಕಾರದ ಆಸಕ್ತಿಯ ಬಂಧನವನ್ನು ಮುರಿದು ಭಗವಂತನ ಪರಮಪದವನ್ನು ಹೊಂದುವೆ.

ಸಕಳ ಭಾಗ್ಯಾಂಚಿಯಾ ಪಂಕ್ತೀ । ಜೇಥೇ ಠಾಕಲ್ಯಾ ಯೇತೀ ವಿಶ್ರಾಂತೀ । ತೇ ವಸುದೇವಾ ಭಾಗ್ಯಸ್ಥಿತೀ । ತುಝ್ಯಾ ಘರಾಪ್ರತೀ ಕ್ರೀಡತ ।।೨೯೬।। ವಸುದೇವಾ ತುಝೇನಿ ನಾಂವೇ । ದೇವಾತೇ "ವಾಸುದೇವ" ಮ್ಹಣಾವೇ । ತೇಣೇ ನಾಮಾಚೇನಿ ಗೌರವೇ । ಜನಾಂಚೇ ಆಘವೇ ನಿರಸತೀ ದೋಷ ।।೨೯೭।। ಯೇವಢ್ಯಾ ಭಾಗ್ಯಚಾ ಭಾಗ್ಯನಿಧಿ । ವಸುದೇವಾ ತೂಂಚಿ ತ್ರಿಶುದ್ಧಿ । ತುವಾ ಭಾಗವತಧರ್ಮಾಚಾ ವಿಧಿ । ಆಸ್ತಿಕ್ಯಬುದ್ಧಿ ಅವಧಾರಿಲಾ ।।೨೯೮।। ಶ್ರದ್ಧೇನೇ ಕೇಲಿಯಾ ವಸ್ತುಶ್ರವಣಾ । ಮನನಯುಕ್ತ ಧರಾವೀ ಧಾರಣಾ । ತೈ ನಿಃಸಂಗ ಹೋಊನಿಯಾ ಜಾಣಾ । ಪಾವಸೀ ತತ್ಕ್ಷಣಾ ನಿಜಧಾಮಾಸೀ ।।೨೯೯।। ಜಯಾ ನಿಜಧಾಮಾಚ್ಯಾ ಠಾಯೀ । ಕಾರ್ಯ ಕಾರಣ ದೋನ್ಹೀ ನಾಹೀ । ತ್ಯಾ ಪರಮಪದಾಚೇ ಠಾಯೀ । ನಿಜಸುಖೇ ಪಾಹೀ ಸುಖರೂಪ ಹೋಸೀ ।।೩೦೦।।

ಯುವಯೋಃ ಖಲು ದಂಪತ್ಯೋರ್ಯಶಸಾ ಪೂರಿತಂ ಜಗತ್ । ಪುತ್ರತಾಮಗಮದ್ ಯದ್ ವಾಂ ಭಗವಾನೀಶ್ವರೋ ಹರಿಃ ।।೪೬।।

ಅರ್ಥ:- ನಿಜವಾಗಿಯೂ ಪರಮ ಪುರುಷನಾದ ಶ್ರೀಹರಿಯು ನಿನ್ನ ಮಗನ ಸ್ಥಾನದಲ್ಲಿರುವುದರಿಂದ, ದಂಪತಿಯಾದ ನಿಮ್ಮ (ನಿನ್ನ ಮತ್ತು ನಿನ್ನ ಧರ್ಮಪತ್ನಿಯ) ಮಹಿಮೆಯಿಂದ ಪ್ರಪಂಚವೆಲ್ಲ ತುಂಬಿಹೋಗಿದೆ.

ತುಮ್ಹಾ ದಾಂಪತ್ಯಾಚಿಯೇ ಕೀರ್ತೀ । ಯಶಾಸೀ ಆಲೀ ಶ್ರೀಮಂತೀ । ತುಮಚೇ ಯಶೇ ತ್ರಿಜಗತೀ । ಪರಮಾನಂದೇ ಕ್ಷಿತೀ ಪರಿಪೂರ್ಣ ಝಾಲೀ ।।೩೦೧।। ಜ್ಯಾಲಾಗೀ ಕೀಜೇ ಯಜನ । ಜ್ಯಾಲಾಗೀ ದೀಜೇ ದಾನ । ಜ್ಯಾಲಾಗೀ ಕೀಜೇ ತಪಾಚರಣ । ಯೋಗಸಾಧನ ಜ್ಯಾಲಾಗೀ ।।೩೦೨।। ಜೋ ನ ವರ್ಣವೇ ವೇದಾ ಶೇಷಾ । ಜೋ ದುರ್ಲಭ ಸನಕಾದಿಕಾ । ತ್ಯಾ ಪುತ್ರತ್ವೇ ಯದುನಾಯಕಾ । ಉತ್ಸಂಗೀ ದೇಖಾ ಖೇಳವಿಸೀ ।।೩೦೩।। ಜೋ ಕಳಿಕಾಳಾಚಾ ನಿಜಶಾಸ್ತಾ । ಜೋ ಬ್ರಹ್ಮಾದಿಕಾಂಚಾ ನಿಯಂತಾ । ಜೋ ಸಂಹಾರಕಾಚಾ ಸಂಹರ್ತಾ । ಜೋ ಪ್ರತಿಪಾಳಿತಾ ತ್ರಿಜಗತೀ ।।೩೦೪।। ಜೋ ಸಕಳ ಭಾಭ್ಯಾಚೇ ಭೂಷಣ । ಜೋ ಸಕಳ ಮಂಡಣಾ ಮಂಡಣ । ಷಡ್‌ಗುಣಾಂಚೇ ಅಧಿಷ್ಠಾನ । ತೋ ಪುತ್ರತ್ವೇ ಶ್ರೀಕೃಷ್ಣ ಸರ್ವಾಂಗೀ ಲೋಳೇ ।।೩೦೫।।

ದರ್ಶನಾಲಿಂಗನಾಲಾಪೈಃ ಶಯನಾಸನಭೋಜನೈಃ । ಆತ್ಮಾ ವಾಂ ಪಾವಿತಃ ಕೃಷ್ಣೇ ಪುತ್ರಸ್ನೇಹಂ ಪ್ರಕುರ್ವತೋಃ ।।೪೭।।

ಅರ್ಥ:- ಕೃಷ್ಣನಲ್ಲಿ ಪುತ್ರನೆಂದು ಪ್ರೇಮ ಮಾಡುವ ನಿಮ್ಮಿಬ್ಬರಿಗೂ ದರ್ಶನ, ಆಲಿಂಗನ, ಸಂಭಾಷಣೆ, ಮಲಗಿಸುವಿಕೆ, ಕೂಡಿಸುವಿಕೆ, ಭೋಜನ ಬಡಿಸುವಿಕೆ ಇತ್ಯಾದಿ ಉಪಾಯಗಳಿಂದ ನಿಮ್ಮ ಚಿತ್ತವು ಶುದ್ಧವಾಗಿರುವುದು.

ಹೇ ವಸುದೇವನೇ, ಸರ್ವ ಭಾಗ್ಯಗಳ ಪಂಕ್ತಿಯು ಸಹಜವಾಗಿ ಎಲ್ಲಿ ವಿಶ್ರಾಂತಿಯನ್ನು ಪಡೆಯಲು ಬರುವುವೋ, ಆ ಭಾಗ್ಯಸ್ಥಿತಿಯು ನಿನ್ನ ಮನೆಯಲ್ಲಿ ಆಡುತ್ತಿರುವುದು ।।೨೯೬।। ನಿನ್ನ ವಸುದೇವ ಎಂಬ ನಾಮದಿಂದಲೇ ದೇವನಿಗೆ ವಾಸುದೇವ ಎಂದು ನಾಮವು ಪ್ರಾಪ್ತವಾಯಿತು. ಈ ಹೆಸರಿನ ಮಹಾತ್ಮ್ಯದಿಂದ ಜನರ ಸರ್ವ ದೋಷಗಳು ನಾಶವಾಗುವುವು ।।೨೯೭।। ಹೇ ವಸುದೇವನೇ, ಇಷ್ಟೊಂದು ಮಹಾಭಾಗ್ಯದ ನಿಧಿಯು ನೀನೇ ಆಗಿರುವೆ. ನೀನು ಈಗ ಭಾಗವತ ಧರ್ಮದ ವಿಧಿ ವಿಧಾನವನ್ನು ಭಕ್ತಿಪೂರ್ವಕವಾಗಿ ಕೇಳಿರುವೆ ।।೨೯೮।। ಶ್ರದ್ಧಾಪೂರ್ವಕವಾಗಿ ಪರಮಾತ್ಮ ಸ್ವರೂಪದ ಶ್ರವಣ ಮಾಡಿದ ನಂತರ ಮನಃಪೂರ್ವಕವಾಗಿ ಅದರ ಧಾರಣಾ ಧರಿಸಬೇಕು. ಹೀಗೆ ಮಾಡಿದರೆ ನೀನು ಸರ್ವಸಂಗದಿಂದ ಅಂದರೆ ಬಂಧನಗಳಿಂದ ಮುಕ್ತನಾಗಿ ತತ್ಕಾಲದಲ್ಲಿ ನಿಜಧಾಮವನ್ನು ಪ್ರಾಪ್ತಮಾಡಿಕೊಳ್ಳುವೆ ।।೨೯೯।। ಆ ನಿಜಧಾಮದ ಸ್ಥಳದಲ್ಲಿ ಕಾರ್ಯ ಮತ್ತು ಕಾರಣ ಭಾವ ಎರಡೂ ಇರುವುದಿಲ್ಲ. ಆ ಪರಮ ಪದವಿಯಲ್ಲಿ ನೀನು ನಿಜಸುಖದ ಅನುಭವದಿಂದ ಸುಖರೂಪನಾಗುವಿ ।।೩೦೦।।

ನಿಮಗೆ ಉಭಯತರಿಗೂ ಕೀರ್ತಿಯ ಶ್ರೀಮಂತಿಕೆಯು ಜಯವನ್ನು ಪಡೆದುಕೊಂಡಿದೆ. ನಿಮ್ಮ ಈ ಯಶವು ತ್ರಿಲೋಕದಲ್ಲಿ ಪಸರಿಸಿರುವುದು. ಈ ಪೃಥ್ವಿಯು ಪರಮಾನಂದದಿಂದ ತುಂಬಿ ಬಿಟ್ಟಿದೆ ।।೩೦೧।। ಯಾರಿಗಾಗಿ ಯಜ್ಞಯಾಗಗಳನ್ನು ಆಚರಿಸಬೇಕೋ, ಯಾರಿಗಾಗಿ ದಾನವನ್ನು ಕೊಡಬೇಕೋ, ಯಾರಿಗಾಗಿ ತಪಾಚರಣೆಗಳನ್ನು ಮಾಡಬೇಕೋ ಮತ್ತು ಯಾರಿಗಾಗಿ ಯೋಗಸಾಧನೆಯನ್ನು ಮಾಡಬೇಕಾಗುವುದೋ ।।೩೦೨।। ಆತನ ವರ್ಣನೆಯನ್ನು ವೇದಕ್ಕೂ ಅಥವಾ ಶೇಷನಿಗೂ ಮಾಡಲು ಬರುವುದಿಲ್ಲ. ಯಾವ ಸನಕಾದಿಕರಿಗೂ ದುರ್ಲಭನಾದ ಆ ಶ್ರೀಕೃಷ್ಣನನ್ನು ನೀವು ಪುತ್ರ ಭಾವದಿಂದ ಪ್ರೇಮದಿಂದ ನಿಮ್ಮ ತೊಡೆಯ ಮೇಲೆ ಆಡಿಸುವಿರಿ ।।೩೦೩।। ಯಾವ ಕಲಿಕಾಲನನ್ನು ಶಾಸನ ಮಾಡುವವ, ಯಾವ ಬ್ರಹ್ಮಾದಿಕರಿಗೂ ನಿಯಮನ ಮಾಡುವವ, ಯಾವ ಯಮನಿಗೂ ಸಂಹರಿಸುವವ ಮತ್ತು ಮೂರು ಲೋಕಗಳ ಪಾಲನೆಯನ್ನು ಮಾಡುವವ ।।೩೦೪।। ಹಾಗೂ ಸರ್ವಭಾಗ್ಯದ ಭೂಷಣನಾಗಿರುವ, ಸರ್ವಮಂಡನಕ್ಕೆ ಮಂಡನನಾಗಿರುವ, ಷಡ್‌ಗುಣಗಳ ಅಧಿಷ್ಠಾನನಾಗಿರುವ ಯಾವ ಶ್ರೀಕೃಷ್ಣನು ಪುತ್ರನೆಂಬ ಭಾವದಿಂದ ನಿಮ್ಮ ಸರ್ವಾಂಗದ ಮೇಲೆ ಆಡುವನು ।।೩೦೫।।

ಪರಬ್ರಹ್ಮ ಮೂರ್ತಿ ಶ್ರೀಕೃಷ್ಣ । ಸಾದರೇ ಕರಿತಾ ಅವಲೋಕನ । ತೇಣೇ ದೃಷ್ಟಿ ಹೋಯ ಪಾವನ । ಡೋಳ್ಯಾ ಸಂಪೂರ್ಣ ಸುಖಾವಬೋಧು ॥೫೦೬॥ ಕೃಷ್ಣ ಮುಖೀಚೀ ಉತ್ತರೇ । ಪ್ರವೇಶತಾ ಕರ್ಣದ್ವಾರೇ । ಪವಿತ್ರ ಝಾಲೀ ಕರ್ಣಕುಹರೇ । ಕೃಷ್ಣ ಕುಮರೇ ಅನುವಾದೇ ॥೫೦೭॥ ಆಳವಿತಾ ಶ್ರೀಕೃಷ್ಣ ಕೃಷ್ಣ । ಅಥವಾ ಕೃಷ್ಣೀಸೀ ಸಂಭಾಷಣ । ತೇಣೇ ವಾಚಾ ಝಾಲೀ ಪಾವನ । ಜೈಸೇ ಗಂಗಾಜೀವನ ಸಂತಪ್ತಾ ॥೫೦೮॥ ನಾನಾ ಯಾಗವಿಧೀ ಯಜಿತೀ ಜ್ಯಾತೇ । ತೇಥ ನ ಘೇ ಜೋ ಅವದಾನಾತೇ । ತೋ ವಾರಿತಾಂಹೀ ದೋಹೀ ಹಾತೇ । ಬೈಸೇ ಸಾಂಗಾತೇ ಭೋಜನೀ ಕೃಷ್ಣ ॥೫೦೯॥ ದುರ್ಲಭು ಯೋಗಯಾಗೀ । ತೋ ವೇಳ ರಾಖೇ ಭೋಜನಾಲಾಗೀ । ಮುಖೀಚೇ ಶೇಷ ದೇ ತುಮ್ಹಾಲಾಗೀ । ಲಾಗವೇಗೀ ಬಾಲಲೀಲಾ ॥೫೧೦॥ ತೇಣೇ ಸಂತಪ್ತ ಸಂತೋಖೀ । ತೋಹೀ ಗ್ರಾಸ ಘಾಲೀ ತುಮ್ಹಾ ಮುಖೀ । ತುಮ್ಹಾ ಐಸೇ ಭಾಗ್ಯ ತ್ರಿಲೋಕೀ । ನಾಹೀ ಆಣಿಕೀ ಅರ್ಜಿಲೇ ॥೫೧೧॥ ತೇಣೇ ಕೃಷ್ಣ ಶೇಷಾಮೃತೇ । ರಸನಾ ವಿಟೋ ಯೇ ಅಮೃತಾತೇ । ಮಾ ಇತರ ರಸಾ ಗೋಡ ತೇಥೇ । ಕೋಣ ಮ್ಹಣತೇ ಮ್ಹಣಾವಯಾ ॥೫೧೨॥ ತೇಣೇ ಶ್ರೀಕೃಷ್ಣ ರಸಶೇಷೇ । ಅಂತರಶುದ್ಧಿ ಅನಾಯಾಸೇ । ಜೇ ನಾನಾ ತಪಸಾಯಾಸೇ । ಅತಿ ಪ್ರಯಾಸೇ ನ ಲಭೇ ಕದಾ ॥೫೧೩॥ ದೇತಾ ಕೃಷ್ಣಾಶೀ ಚುಂಬನ । ತೇಣೇ ಅವಘ್ರಾಣೇ ಘ್ರಾಣ ಪಾವನ । ಚುಂಬಿತಾಂಚಿ ನಿವೇ ಮನ । ಸ್ವಾನಂದ ಪೂರ್ಣ ಉಲ್ಹಾಸೇ ॥೫೧೪॥ ತುಮ್ಹಾ ಬೈಸಲೇ ದೇಖೇ ಆಸನೀ । ಕೃಷ್ಣ ಸವೇಗ ಯೇ ಧಾಂವೋನೀ । ಮಗ ಅಂಕಾವರೀ ಬೈಸೋನಿ । ನಿಜಾಂಗ ಮಿಳಣೀ ನಿವವೀ ಕೃಷ್ಣು ॥೫೧೫॥ ತೇಣೇ ಶ್ರೀಕೃಷ್ಣಾಚೇನಿ ಸ್ಪರ್ಶೇ । ಸರ್ವೇಂದ್ರಿಯೀ ಕಾಮು ನಾಸೇ । ತೇಣೇ ಕರ್ಮಚಿ ಅನಾಯಾಸೇ । ಹೋಯ ಆಪೈಸೇ ನಿಷ್ಕರ್ಮ ॥೫೧೬॥ ಸಪ್ರೇಮ ಭಾವೇ ಸಂಲಗ್ನ । ದೇತಾ ಶ್ರೀಕೃಷ್ಣಾಸೀ ಆಲಿಂಗನ । ತೇಣೇ ದೇಹಾಚೇ ದೇಹಪಣ । ಮೀ ತೂ ಸ್ಫುರಣ ಹಾರಪೇ ॥೫೧೭॥ ಶಯನಾಚ್ಯಾ ಸಮಯ ರೂಪೀ । ಜನಾ ಗಾಢ ಮೂಢ ಅವಸ್ಥಾ ವ್ಯಾಪೀ । ತೇ ಕಾಳೀ ತುಮ್ಹಾ ಸಮೀಪೀ । ಕೃಷ್ಣ ಸದ್ರೂಪೀ ಸಂಲಗ್ನ ॥೫೧೮॥ ಯೋಗೀ ಭಾವನಾ ಭಾವೂನ । ಕರ್ಮ ಕಲ್ಪಿತೀ ಕೃಷ್ಣಾರ್ಪಣ । ತುಮಚಿ ಸಕಳ ಕರ್ಮೇ ಜಾಣ । ಸ್ವಯೇ ಶ್ರೀಕೃಷ್ಣ ನಿತ್ಯ ಭೋಕ್ತಾ ॥೫೧೯॥ ಪುತ್ರಸ್ನೇಹಾಚೇನಿ ಲಾಲಸೇ । ಸಕಳ ಕರ್ಮೇ ಅನಾಯಾಸೇ । ಸ್ವಯೇ ಶ್ರೀಕೃಷ್ಣ ಸಾವಕಾಶೇ । ಪರಮ ಉಲ್ಹಾಸೇ ಅಂಗೀಕಾರೀ ॥೫೨೦॥

ಪರಬ್ರಹ್ಮ ಮೂರ್ತಿ ಶ್ರೀಕೃಷ್ಣನನ್ನು ಆದರ ಭಾವದಿಂದ ಅವಲೋಕನೆ ಮಾಡಲು ದೃಷ್ಟಿಯು ಪಾವನವಾಗುವುದು. ನೇತ್ರಗಳಿಗೆ ಸುಖದ ಅನುಭವವಾಗುವುದು ॥೫೦೬॥ ಕೃಷ್ಣನ ಮುಖದಿಂದ ಶಬ್ದಗಳು ಕಿವಿಗಳಿಗೆ ಬೀಳಲು ಆ ಕರ್ಣರಂಧ್ರಗಳು ಪವಿತ್ರವಾಗುವುವು ॥೫೦೭॥ ಸಂತಪ್ತನಾದವರಿಗೆ ಗಂಗಾಜಲವು ಶಾಂತಗೊಳಿಸುವಂತೆ ಶ್ರೀಕೃಷ್ಣನಿಗೆ ಕೃಷ್ಣ, ಕೃಷ್ಣ ಎಂದು ಕರೆಯುತ್ತಿರಲು ಹಾಗೂ ಕೃಷ್ಣನಲ್ಲಿ ಸಂಭಾಷಣೆಯನ್ನು ಮಾಡಲು ವಾಣಿಯು ಪಾವನವಾಗುವುದು ॥೫೦೮॥ ಈತನಿಗಾಗಿ ಅನೇಕ ಪ್ರಕಾರಗಳ ಯಜ್ಞಯಾಗಗಳನ್ನು ಮಾಡಲ್ಪಡುವುವು. ಆದರೆ ಈತನು ಅಲ್ಲಿ ಯಜ್ಞದ ಭಾಗವನ್ನು ಸ್ವೀಕರಿಸುವುದಿಲ್ಲ. ಆದರೆ ಈ ಕೃಷ್ಣನು ನೀವು ಬೇಡ ಎಂದು ಎರಡೂ ಕೈಗಳಿಂದ ಸರಿಸಿದರೂ ನಿಮ್ಮ ತಾಟನಲ್ಲಿ ಭೋಜನಕ್ಕೆ ಕುಳಿತುಕೊಳ್ಳುವನು ॥೫೦೯॥ ಈತನು ಯೋಗಯಾಗಗಳಿಗೂ ದೊರಕದ ಶ್ರೀಕೃಷ್ಣನು ಊಟದ ಹೊತ್ತಿಗೆ ಬಾಲಲೀಲೆಯಿಂದ ಜಪ್ಪಿಸಿ ಕುಳಿತುಕೊಂಡು ಮತ್ತು ತನ್ನ ಮುಖದ ಎಂಜಲ ನಿಮ್ಮ ಮುಖಕ್ಕೆ ಹಾಕುವ ಪ್ರಯತ್ನವನ್ನು ಮಾಡುವನು ॥೫೧೦॥ ತ್ರಿವಿಧ ತಾಪಗಳನ್ನು ನಿವಾರಣೆ ಮಾಡುವಂತಹ ಆ ಭಗವಾನ ಶ್ರೀಕೃಷ್ಣನು ನಿಮ್ಮ ಮುಖಗಳಲ್ಲಿ ತುತ್ತು ಇಡುವನು. ಅಂದಮೇಲೆ ನಿಮ್ಮಂತಹ ಭಾಗ್ಯವು ಈ ಮೂರೂ ಲೋಕಗಳಲ್ಲಿ ಅನ್ಯ ಯಾರೂ ಸಂಪಾದಿಸಿರುವುದಿಲ್ಲ ॥೫೧೧॥ ಆ ಕೃಷ್ಣನ ಮುಖದಲ್ಲಿನ ಶೇಷಾಮೃತದಿಂದ ನಾಲಿಗೆಗೆ ನಿಜವಾದ ಅಮೃತವು ಅರುಚಿಯಾಗುವುದು. ಹೀಗಿರಲು ಇತರ ರಸಗಳಿಗೆ ರುಚಿ ಎಂದು ಯಾರು ಹೇಳುವರು? ॥೫೧೨॥ ಅನೇಕ ಪ್ರಕಾರದ ತಪಸಾಯಾಸಗಳನ್ನು ಮಾಡಿ ಅತ್ಯಂತ ಕಷ್ಟಗಳನ್ನು ಭೋಗಿಸಿದರೂ ಅಂತಃಕರಣವು ಶುದ್ಧವಾಗುವುದಿಲ್ಲ. ಇದು ಶ್ರೀಕೃಷ್ಣನ ರಸಶೇಷದಿಂದ ಅನಾಯಾಸವಾಗಿ ಪ್ರಾಪ್ತವಾಗುವುದು ॥೫೧೩॥ ಶ್ರೀಕೃಷ್ಣನಿಗೆ ಚುಂಬನ ಕೊಡಲು ಆತನ ಮುಖದ ವಾಸನೆಯಿಂದ ಘ್ರಾಣೇಂದ್ರಿಯವು ಪಾವನಗೊಳ್ಳುವುದು ಮತ್ತು ಮನಸ್ಸಿಗೆ ಪೂರ್ಣ ಆನಂದದ ಅನುಭವವು ಪ್ರಾಪ್ತವಾಗುವುದು ॥೫೧೪॥ ನಿಮ್ಮನ್ನು ಆಸನದಲ್ಲಿ ಕುಳಿತುಕೊಂಡದ್ದನ್ನು ಕಂಡು ಶ್ರೀಕೃಷ್ಣನು ಧಾವಿಸುತ್ತ ಧಾವಿಸುತ್ತ ಬರುವನು ಮತ್ತು ತನ್ನ ಆಲಿಂಗನದಿಂದ ನಿಮಗೆ ತೃಪ್ತರನ್ನಾಗಿ ಮಾಡುವನು ॥೫೧೫॥ ಶ್ರೀಕೃಷ್ಣನ ಸ್ಪರ್ಶದಿಂದ ಸರ್ವ ವಿಷಯ ವಾಸನೆಗಳು ಇಲ್ಲದಾಗುವುವು ಮತ್ತು ಎಲ್ಲ ಕರ್ಮಗಳು ನಿಷ್ಕರ್ಮವಾಗಿಬಿಡುವುವು ॥೫೧೬॥ ಪ್ರೇಮ ಭಕ್ತಿಯಿಂದ ಶ್ರೀಕೃಷ್ಣನಿಗೆ ಬಿಗಿದಪ್ಪಿ ಆಲಿಂಗನವನ್ನು ಕೊಡಲು ದೇಹದ ದೇಹವೃತ್ತಿಯು ದೂರಾಗಿ "ನಾನು" ಮತ್ತು "ನೀನು" ಎಂಬ ಸ್ಫುರಣವು ಮುಗಿಯುವುದು ॥೫೧೭॥ ನಿದ್ರೆಯಲ್ಲಿ ಇತರ ಜನರಿಗೆ ಗಾಢವಾದ ಮೂಢಾವಸ್ಥೆಯು ವ್ಯಾಪಿಸಿಕೊಳ್ಳುವುದು. ಆದರೆ ಆ ವೇಳೆಯಲ್ಲಿ ಶ್ರೀಕೃಷ್ಣನು ತನ್ನ ಸದ್ರೂಪದಿಂದ ನಿಮ್ಮ ಸನ್ನಿಧಿಯಲ್ಲಿರುವನು ॥೫೧೮॥ ಯೋಗಿ ಜನರು ತಮ್ಮ ಭಾವನೆಯಿಂದ ಸರ್ವಕರ್ಮಗಳನ್ನು ಕೃಷ್ಣಾರ್ಪಣೆ ಮಾಡುವರು. ಆದರೆ ಆಗ ಶ್ರೀಕೃಷ್ಣನು ಅದನ್ನು ಅಂಗೀಕಾರವನ್ನು ಮಾಡಿದನೋ, ಇಲ್ಲವೋ ಎಂಬುದು ತಿಳಿಯುವದಿಲ್ಲ. ಆದರೆ ನಿಮ್ಮ ಸರ್ವಕರ್ಮಗಳನ್ನು ತಾನಾಗಿಯೇ ಅಂಗೀಕರಿಸುವನು ॥೫೧೯॥ ಪುತ್ರಪ್ರೇಮದ ಪ್ರೀತಿಯಿಂದ ಶ್ರೀಕೃಷ್ಣನು ಅನಾಯಸವಾಗಿ ಸರ್ವ ಕರ್ಮಗಳನ್ನು ಅತ್ಯಂತ ಉಲ್ಹಾಸದಿಂದ ಸ್ವೀಕರಿಸುವನು ॥೫೨೦॥

ತುಮಚೀ ಪವಿತ್ರತಾ ಸಾಂಗೋ ಕೈಸೀ । ಪವಿತ್ರ ಕೇಲೇ ಯದುವಂಶಾಸೀ । ಪುತ್ರತ್ವೇ ಪಾಳೂನಿ ಶ್ರೀಕೃಷ್ಣಾಸೀ । ಜಗದುದ್ಧಾರಾಸೀ ಕೀರ್ತಿ ಕೇಲೀ ।೫೨೧॥ ನಾಮ ಘೇತಾ "ವಸುದೇವಸೂನು" । ಸ್ಮರತಾ "ದೇವಕೀನಂದನು" । ಹೋಯ ಭವಬಂಧಚ್ಛೇದನು । ಐಸೇ ಪಾವನು ನಾಮ ತುಮಚೇ ।೫೨೨॥ ತುಮ್ಹೀ ತರಾ ಅನಾಯಾಸೀ । ಹೇ ನವಲ ನವ್ಹೇ ವಿಶೇಷೀ । ಕೇವಳ ಜೇ ಕಾ ಕೃಷ್ಣದ್ವೇಷೀ । ತೇ ವೈರೀ ಅನಾಯಾಸೀ ವಿರೋಧೇ ತರತೀ ।೫೨೩॥

ವೈರೇಣ ಯಂ ನೃಪತಯಃ ಶಿಶುಪಾಲಪೌಂಡ್ರ ಶಾಲ್ವಾದಯೋ ಗತಿವಿಲಾಸ ವಿಲೋಕನಾದ್ಯೈಃ ।
ಧ್ಯಾಯಂತ ಆಕೃತಧಿಯಃ ಶಯನಾಸನಾದೌ ತತ್ಸಾಮ್ಯಮಾಪುರನುರಕ್ತಧಿಯಾಂ ಪುನಃ ಕಿಮ್ ।೫೮॥

ಅರ್ಥ: ಶಿಶುಪಾಲ, ಪೌಂಡ್ರ, ಶಾಲ್ಯ ಇತ್ಯಾದಿ ರಾಜರು ಮಂಚದ ಮೇಲೆ ಮಲಗಿದಾಗ ಆಸನದಲ್ಲಿ ಕುಳಿತಾಗ ವೈರಭಾವದಿಂದ ಶ್ರೀಕೃಷ್ಣನ ಧ್ಯಾನವನ್ನು ಮಾಡುತ್ತಿದ್ದರು. ಈತನ ಗತೀ, ವಿಲಾಸ, ಅವಲೋಕನ ಬಗ್ಗೆ ಇವರ ಬುದ್ಧಿಯು ತದಾಕಾರವಾಯಿತು. ಇದರಿಂದ ಇವರು ಸ್ವರೂಪ ಮುಕ್ತಿಯ ಅಧಿಕಾರಿಗಳಾದರು. ಅಂದಮೇಲೆ ಪ್ರೇಮ ಭಾವದಿಂದ ಶ್ರೀಕೃಷ್ಣನ ಚಿಂತನೆಯನ್ನು ಮಾಡುವವರಿಗೆ ಲಭಿಸುವ ಅನುಗ್ರಹದ ಬಗ್ಗೆ ಹೇಳಬೇಕಾದ್ದೇನಿದೆ?

ಶಿಶುಪಾಲ ದಂತವಕ್ರ । ಪೌಂಡ್ರಕ-ಶಾಲ್ವಾದಿ ಮಹಾವೀರ । ಕೃಷ್ಣಾಸೀ ಚಾಲವಿತೀ ವೈರ । ದ್ವೇಷೀ ಮತ್ಸರೇ ಧ್ಯಾನ ಕರಿತೀ ।೫೨೪॥ ಘನಶ್ಯಾಮ ಪೀತಾಂಬರ ಕಟೇ । ವಿಚಿತ್ರಾಲಂಕಾರೀ ಕೃಷ್ಣು ನಟೇ । ಗದಾದೀ ಆಯುಧೀ ಐಸಾ ವೇಠೇ । ಅತಿಬಳೇ ತಗಟೇ ರಣಭೂಮೀಸೀ ।೫೨೫॥ ಐಸೇ ವೈರವತೇ ಉದ್ಭಟ । ಕ್ರೋಧೇ ಕೃಷ್ಣಧ್ಯಾನ ಉತ್ಕಟ । ತೇ ವೈರಭಾವೇ ವರಿಷ್ಠ । ತದ್ರೂಪತಾ ಸ್ಪಷ್ಟ ಪಾವಲೇ ದ್ವೇಷೇ ।೫೨೬॥ ಕಂಸಾಸೀ ಪರಮ ಭಯೇ ಜಾಣ । ಅಖಂಡ ಲಾಗಲೇ ಶ್ರೀಕೃಷ್ಣಧ್ಯಾನ । ಅನ್ನಪಾನ ಶಯನಾಸನ । ಧಾಕೇ ಸಂಪೂರ್ಣ ಶ್ರೀಕೃಷ್ಣ ದೇಖೇ ।೫೨೭॥ ಕಂಸಾಸುರ ಭಯಾವೇಶೇ । ಶಿಶುಪಾಳಾದಿಕ ಮಹಾದ್ವೇಷೇ । ಸಾಯುಜ್ಯ ಪಾವಲೇ ಅನಾಯಾಸೇ । ಮಾ ಶ್ರದ್ಧಾಳೂ ಕೈಸೇ ನ ಪಾವತೀ ಮೋಕ್ಷ ।೫೨೮॥ ತುಮ್ಹೀ ತರೀ ಪರಮ ಪ್ರೀತೀ । ಚಿತ್ತೇ ವಿತ್ತೇ ಆತ್ಮಶಕ್ತೀ । ಜೀವೇ ವೋವಾಳಾ ಶ್ರೀಪತಿ । ಪಾಯಾ ಬ್ರಹ್ಮಪ್ರಾಪ್ತಿ ತುಮಚ್ಯಾ ಲಾಗೇ ।೫೨೯॥ ಪೂರ್ಣ ಪ್ರಾಪ್ತಿ ತುಮ್ಹಾ ಪಾಸೀ । ತೇ ತುಮ ಚೇ ನ ಕಳೇ ತುಮ್ಹಾಸೀ । ಬಾಲಕ ಮಾನಿತಾ ಶ್ರೀಕೃಷ್ಣಾಸೀ । ನಿಜಲಾಭಾಸೀ ನಾಡಣೇ ।೫೩೦॥

ಮಾಪತ್ಯಬುದ್ಧಿಮಕೃಥಾಃ ಕೃಷ್ಣೇ ಸರ್ವಾತ್ಮನೀಶ್ವರೇ ।
ಮಾಯಾಮನುಷ್ಯಭಾವೇನ ಗೂಢೈಶ್ವರ್ಯೇ ಪರೇಽವ್ಯಯೇ ।೫೯॥

ಅರ್ಥ: ಸರ್ವಭೂತಗಳ ಆತ್ಮನಾಗಿರುವ ಮತ್ತು ಈಶ್ವರನಾಗಿರುವ ಶ್ರೀಕೃಷ್ಣನನ್ನು ನನ್ನ ಮಗನು ಎಂಬ ಬುದ್ಧಿಯನ್ನು ಇಡಬೇಡ. ಈತನು ಸರ್ವೇಶ್ವರನು. ಕಾರಣಾತೀತನು ಮತ್ತು ಅವಿನಾಶಿಯಾಗಿರುವನು. ತನ್ನ ಲೀಲೆಯಿಂದ ಮನುಷ್ಯ ರೂಪವನ್ನು ಧರಿಸಿರುವನು. ಮತ್ತು ತನ್ನ ಐಶ್ವರ್ಯವನ್ನು ಮುಚ್ಚಿಟ್ಟಿರುವನು.

ನಿಮ್ಮ ಪವಿತ್ರತೆಯನ್ನು ಏನೆಂದು ವರ್ಣಿಸಬೇಕು? ಶ್ರೀಕೃಷ್ಣನನ್ನು ಪುತ್ರ ಭಾವನೆಯಿಂದ ಪರಿಪಾಲನೆಯನ್ನು ಮಾಡಿ ಸಂಪೂರ್ಣ ಯದುವಂಶವನ್ನೇ ನೀವು ಪವಿತ್ರ ಮಾಡಿರುವಿರಿ ಮತ್ತು ಜಗತ್ತಿನ ಉದ್ಧಾರದ ಕೀರ್ತಿಯನ್ನು ಪಡೆದಿರುವಿರಿ ।೫೨೧॥ "ವಸುದೇವ ಪುತ್ರ" ಮತ್ತು "ದೇವಕೀನಂದನ" ಹೀಗೆ ನಾಮಃಸ್ಮರಣೆಯನ್ನು ಮಾಡಲು ಭವಬಂಧನವು ಇಲ್ಲದಾಗುವುದು ಹೀಗೆ ನಿಮ್ಮ ಹೆಸರುಗಳು ಪರಮಪವಿತ್ರವಾಗಿವೆ ।೫೨೨॥ ಹೀಗಿರಲು ನೀವು ಅನಾಯಾಸವಾಗಿ ಉದ್ಧರಿಸುವುರಲ್ಲಿ ಯಾವ ವಿಶೇಷವಾದ ಆಶ್ಚರ್ಯವೇನಿಲ್ಲ. ಶ್ರೀಕೃಷ್ಣನ ದ್ವೇಷವನ್ನು ಮಾಡುವ ಆ ವೈರಿಗಳು ಸಹ ವಿರೋಧ ಭಕ್ತಿಯನ್ನು ಮಾಡಿ ಅನಾಯಾಸವಾಗಿ ಉದ್ಧಾರರಾಗುವರು ।೫೨೩॥

ಶಿಶುಪಾಲ, ವಕ್ರದಂತ, ಪೌಂಡ್ರ, ಶಾಲ್ವ ಇತ್ಯಾದಿ ಮಹಾವೀರರು ಶ್ರೀಕೃಷ್ಣನಲ್ಲಿ ವೈರವನ್ನು ಮಾಡಿ ಮತ್ಸರ ಮತ್ತು ದ್ವೇಷಬುದ್ಧಿಯಿಂದ ಧ್ಯಾನವನ್ನು ಮಾಡುವರು ।೫೨೪॥ ಘನಶ್ಯಾಮನಾದ, ಪಿತಾಂಬರಧಾರಿಯಾದ, ವಿವಿಧ ಅಲಂಕಾರಗಳಿಂದ ನಟಿಸಿದ ಗದಾದಿ ಆಯುಧಗಳಿಂದ ಸಜ್ಜನಾಗಿರುವ ಶ್ರೀಕೃಷ್ಣನು ತನ್ನ ಶೌರ್ಯದಿಂದ ರಣಭೂಮಿಯಲ್ಲಿ ಶತ್ರುಗಳತ್ತ ನೋಡುತ್ತ ನಿಂತಿರುವನು ।೫೨೫॥ ಉತ್ಕಟವಾದ ವೈರಭಾವದಿಂದ ಇವರು ಶ್ರೀಕೃಷ್ಣನತ್ತ ಮಹಾಕ್ರೋಧದಿಂದ ನೋಡುತ್ತಿರುವರು. ಕ್ರೋಧದಿಂದ ಮತ್ತು ದ್ವೇಷದಿಂದ ಇವರಿಗೆ ಅಖಂಡ ಧ್ಯಾನವು ಹತ್ತಿರುವುದರಿಂದ ಇವರು ತದ್ರೂಪರಾದರು ।೫೨೬॥ ಕಂಸನಿಗೆ ಅತಿಭಯದಿಂದ ಶ್ರೀಕೃಷ್ಣನ ಅಖಂಡ ಧ್ಯಾನವು ಹತ್ತಿತು. ಈ ಭಯದಿಂದ ಆತನಿಗೆ ಅನ್ನಪಾನಗಳಲ್ಲಿ ಶಯನಾಸನಗಳಲ್ಲಿ ನೋಡಿದಲ್ಲೆಲ್ಲ ಕೃಷ್ಣನೇ ಕೃಷ್ಣನು ಕಾಣಹತ್ತಿದನು ।೫೨೭॥ ಕಂಸಾಸುರನು ಭಯದಿಂದ ಮತ್ತು ಶಿಶುಪಾಲಾದಿಕರು ಮಹಾದ್ವೇಷದಿಂದ ಅನಾಯಾಸವಾಗಿ ಸಾಯುಜ್ಯ ಪದವಿಗೆ ಮುಟ್ಟಿದರು. ಹೀಗಿರಲು ಶ್ರದ್ಧಾಳೂ ಭಕ್ತರು ಮುಕ್ತರಾಗುವುದಿಲ್ಲವೇ? ।೫೨೮॥ ನೀವು ಮಾತ್ರ ಪರಮ ಪ್ರೀತಿಯಿಂದ ತನ, ಮನ, ಧನವನ್ನು ಶ್ರೀಕೃಷ್ಣನಲ್ಲಿ ನಿವಾಳಿಸಿ ಒಗೆದಿರುವಿರಿ. ಆದ್ದರಿಂದ ನಿಮಗೆ ಬ್ರಹ್ಮಪ್ರಾಪ್ತಿಯು ಸಹಜವಾಗಿ ದೊರಕುವುದು ।೫೨೯॥ ನಿಮ್ಮಲ್ಲಿ ಪೂರ್ಣಪ್ರಾಪ್ತಿಯು ಇರುವುದು. ಆದರೆ ಅದು ನಿಮ್ಮದು ನಿಮಗೆ ತಿಳಿಯುವುದಿಲ್ಲ. ಶ್ರೀಕೃಷ್ಣನಿಗೆ ನೀವು ಬಾಲಕನು ಎಂದು ತಿಳಿದಿರುವುದರಿಂದ ನಿಮಗೆ ನಿಜಲಾಭವಾಗುವುದಿಲ್ಲ ।೫೩೦॥

ತುಮ್ಹೀ ಬಾಳಕು ಮಾನಾ ಶ್ರೀಕೃಷ್ಣ । ಹಾ ಭಾವೋ ಅತಿಕೃಪಣ । ತೋ ಪರಮಾತ್ಮಾ ಪರಿಪೂರ್ಣ । ಅವತರಲಾ ನಿರ್ಗುಣ ಕೃಷ್ಣಾವತಾರೇ ।೫೩೧॥ ಯಾಸೀ ಝಣೀ ಮ್ಹಣಾಲ ಲೇಕರೂ । ಹಾ ಈಶ್ವರಾಚಾ ಈಶ್ವರೂ । ಸರ್ವಾತ್ಮಾ ಸರ್ವೇಶ್ವರೂ । ಯೋಗಿಯಾ ಯೋಗಿಂದ್ರು ಶ್ರೀಕೃಷ್ಣ ।೫೩೨॥ ಹಾ ಅವಿಕಾರು ಅವಿನಾಶು । ಪರಾತ್ಪರು ಪರಮಹಂಸು । ಇಂದ್ರಿಯ ನಿಯಂತಾ ಹೃಷೀಕೇಶು । ಜಗನ್ನಿವಾಸು ಜಗದಾತ್ಮಾ ।೫೩೩॥ ಮಾಯಾಮನುಷ್ಯವೇಶಾಕೃತೀ । ಹಾ ಭಾಸತಾಹೇ ಸಕಳಾಂಪ್ರತೀ । ಗೂಢಐಶ್ವರ್ಯ ಮಹಾಮೂರ್ತೀ । ವ್ಯಾಪಕ ತ್ರಿಜಗತೀ ಗುಣಾತೀತು ।೫೩೪॥

ಭೂಭಾರಾಸುರರಾಜನ್ಯಹಂತವೇ ಗುಪ್ತಯೇ ಸತಾಮ್ । ಅವತೀರ್ಣಸ್ಯ ನಿರ್ವೃತ್ತ್ಯೈ ಯಶೋ ಲೋಕೇ ವಿತನ್ಯತೇ ।೫೦॥

ಅರ್ಥ: ಈತನು ಭೂಮಿಯಲ್ಲಿನ ಭಾರಭೂತ ರಾಜವೇಶಧಾರೀ ಅಸುರರನ್ನು ನಾಶಮಾಡುವುದಕ್ಕಾಗಿ ಮತ್ತು ಸಂತರನ್ನು ರಕ್ಷಿಸುವುದಕ್ಕಾಗಿ ಹಾಗೇಯೇ ಜೀವಿಗಳಿಗೆ ಪರಮ ಶಾಂತಿ ಮತ್ತು ಮುಕ್ತಿಯನ್ನು ಕೊಡುವುದಕ್ಕಾಗಿ ಅವತೀರ್ಣನಾಗಿರುವನು. ಆದ್ದರಿಂದ ಈತನ ಕೀರ್ತಿಯು ಜಗತ್ತಿನಲ್ಲಿ ಬೆಳಗುತ್ತಿರುವುದು.

ಕಾಳಯವನಾದಿ ಅಸುರ । ಕಾ ಜರಾಸಂಧಾದಿ ಮಹಾವೀರ । ಅಥವಾ ರಾಜೇ ಅಧರ್ಮಕರ । ಅತಿಭೂಭಾರ ಸೇನಾ ಜ್ಯಾಂಚೀ ।೫೩೫॥ ತೋ ಉತರಾವಯಾ ಧರಾಭಾರ । ಧರ್ಮ ವಾಢವಾವಯಾ ನಿರ್ವಿಕಾರ । ಸಂತಸಂರಕ್ಷಣೀ ಶಾರಂಗಧರ । ಪೂರ್ಣಾವತಾರ ಶ್ರೀಕೃಷ್ಣ ।೫೩೬॥ ಪ್ರತಿಪಾಳಾವಯಾ ನಿಜಭಕ್ತಾಂಸೀ । ಸುಖ ದ್ಯಾವಯಾ ಸಾಧೂಂಸೀ । ಅವತರಲಾ ಯದುವಂಶೀ । ಹೃಷೀಕೇಶೀ ಶ್ರೀಕೃಷ್ಣ ।೫೩೭॥ ತೋ ಅಸುರಗಜಪಂಚಾನನು । ಸಜ್ಜನವನಆನಂದಘನು । ತುಮಚ್ಯಾ ಉದರೀ ಶ್ರೀಕೃಷ್ಣು । ಅವತಾರ ಪೂರ್ಣು ಪೂರ್ಣಾಂಶೇಸೀ ।೫೩೮॥ ಉದ್ಧರಾವಯಾ ತ್ರಿಜಗತೀ । ಥೋರ ಉದಾರ ಕೇಲೀ ಕೀರ್ತೀ । ಜ್ಯಾಚ್ಯಾ ಅವತಾರಾಚೀ ಖ್ಯಾತೀ । ಪವಾಡೇ ಪಢತೀ ಬ್ರಹ್ಮಾದಿಕ ।೫೩೯॥ ತರಾವಯಾ ಅತಿದುಸ್ತರ । ಜ್ಯಾಚೀ ಕೀರ್ತಿ ಗಾತೀ ಸುರನರ । ಪರಮಾದರೇ ಋಷೀಶ್ವರ । ಕೃಷ್ಣಚರಿತ್ರ ಸರ್ವದಾ ಗಾತೀ ।೫೪೦॥ ಜ್ಯಾಚೇ ನಾಮ ಸ್ಮರತಾ ಭಕ್ತ । ಕಳಿಕಾಳ ನಾಗವತ । ತೋ ಅವತಾರ ಶ್ರೀಕೃಷ್ಣನಾಥ । ತುಮ್ಹಾ ಆಂತ ಪ್ರಗಟಲಾ ।೫೪೧॥ ಶ್ರೀಕೃಷ್ಣ ಪರಬ್ರಹ್ಮೈಕನಿಧೀ । ತ್ಯಾಸೀ ಪಾಹೂ ನಕಾ ಬಾಳಬುದ್ಧೀ । ಇತುಕೇನ ತುಮ್ಹೀ ಭವಾಬ್ಧೀ । ಜಾಣಾ ತ್ರಿಶುದ್ಧೀ ತರಲೇತೀ ।೫೪೨॥

ನೀವು ಶ್ರೀಕೃಷ್ಣನಿಗೆ ನಮ್ಮ ಪುತ್ರನು ಎಂಬ ಈ ನಿಮ್ಮ ಭಾವನೆಯು ಅತ್ಯಂತ ಸಾಮಾನ್ಯವಾಗಿರುವುದು. ಆತನು ಪರಿಪೂರ್ಣ ನಿರ್ಗುಣ ಪರಮಾತ್ಮನೇ ಶ್ರೀಕೃಷ್ಣರೂಪದಿಂದ ಅವತಾರಕ್ಕೆ ಬಂದಿರುವನು ।೫೩೧॥ ಆತನಿಗೆ ನೀವು ನಮ್ಮ ಕೂಸು ಎಂದು ತಿಳಿಯಬೇಡಿರಿ. ಈತನು ಈಶ್ವರನಿಗೆ ಈಶ್ವರನಾಗಿರುವನು. ಈ ಶ್ರೀಕೃಷ್ಣನು ಎಲ್ಲಕ್ಕಿಂತಲೂ ಶ್ರೇಷ್ಠನಾಗಿರುವನು. ಸರ್ವಾತ್ಮನು, ಸರ್ವೇಶ್ವರನು ಮತ್ತು ಯೋಗಿಗಳಲ್ಲಿ ಶ್ರೇಷ್ಠಯೋಗಿಯಾಗಿರುವನು ।೫೩೨॥ ಯಾವ ಈತನು ಅವಿಕಾರಿಯು, ಅವಿನಾಶಿಯು, ಪರಾತ್ಪರನು, ಪರಮಹಂಸನು, ಇಂದ್ರಿಯನಿಯಂತನು, ಹೃಷೀಕೇಶನಾಗಿದ್ದು ಜಗನ್ನಿವಾಸ, ಜಗದಾತ್ಮಾನಾಗಿರುವನು ।೫೩೩॥ ಈತನು ಮಾಯಾತ್ಮಕನಾಗಿರುವುದರಿಂದ ಸರ್ವರಿಗೂ ಮನುಷ್ಯರೂಪಧಾರಿಯಾಗಿ ಭಾಸಿಸುವನು. ಈತನ ಐಶ್ವರ್ಯವು ಅತ್ಯಂತ ಗೂಢವಾಗಿದೆ. ಈತನು ಗುಣಾತೀತನಾಗಿದ್ದು ತ್ರಿಗುಣಗಳಲ್ಲಿ ವ್ಯಾಪಿಸಿರುವನು ।೫೩೪॥

ಕಾಲಯವನಾದಿ ಅಸುರರು, ಜರಾಸಂಧಾದಿ ಮಹಾವೀರರು, ಅಧರ್ಮದಿಂದ ನಡೆಯುವ ರಾಜರು ಮತ್ತು ಅವರ ಸೈನ್ಯವು ಭೂಮಿಗೆ ಅತ್ಯಂತ ಭಾರವಾಗಿತ್ತು ।೫೩೫॥ ಭೂಮಿಯ ಮೇಲೆ ಆಗಿರುವ ಈ ಭಾರವನ್ನು ಇಳಿಸುವುದಕ್ಕಾಗಿ ನಿರ್ವಿಕಾರವಾದ ಧರ್ಮವನ್ನು ಬೆಳೆಸುವುದಕ್ಕಾಗಿ ಹಾಗೂ ಸಾಧುಸಂತರ ರಕ್ಷಣೆಯನ್ನು ಮಾಡುವುದಕ್ಕಾಗಿ ಬಂದಿರುವ ಶ್ರೀಕೃಷ್ಣನು ಭಗವಂತನ ಪೂರ್ಣಾವತಾರನಾಗಿರುವನು ।೫೩೬॥ ತನ್ನ ಭಕ್ತರ ರಕ್ಷಣೆಯನ್ನು ಮಾಡುವುದಕ್ಕಾಗಿ ಮತ್ತು ಸಾಧುಗಳವರಿಗೆ ಸುಖವನ್ನು ಕೊಡುವುದಕ್ಕಾಗಿ ಯದುವಂಶದಲ್ಲಿ ಶ್ರೀಕೃಷ್ಣನು ಅವತರಿಸಿರುವನು ।೫೩೭॥ ಈತನು ಅಸುರ ರೂಪ ಆನೆಯನ್ನು ಸಂಹಾರ ಮಾಡುವ ಸಿಂಹನು. ಸಜ್ಜನರೂಪ ವನದಲ್ಲಿ ಆನಂದದ ಮಳೆಗೆರೆಯುವ ಮೇಘನು, ನಿಮ್ಮ ಉದರದಲ್ಲಿ ಪೂರ್ಣಾಂಶದಿಂದ ಅವತರಿಸಿರುವನು ।೫೩೮॥ ಈತನು ತ್ರಿಭುವನದ ಉದ್ಧಾರವನ್ನು ಮಾಡುವುದಕ್ಕಾಗಿ ಬಹು ದೊಡ್ಡ ಮತ್ತು ಉದಾರ ಕೀರ್ತಿಯನ್ನು ಮಾಡಿಟ್ಟಿರುವನು. ಈತನ ಅವತಾರದ ಕೀರ್ತಿಯನ್ನು ಬ್ರಹ್ಮಾದಿಕರು ಸಹ ಹೊಗಳುತ್ತಿರುವರು ।೫೩೯॥ ಅತ್ಯಂತ ದುಸ್ತರವಾದ ಸಂಸಾರ ಸಾಗರವನ್ನು ದಾಟಿ ಹೋಗುವುದಕ್ಕಾಗಿ ಈತನ ಕೀರ್ತಿಯನ್ನು ಸುರನರರು ಗುಣಗಾನ ಮಾಡುತ್ತಿರುವರು ಮತ್ತು ಮಹಾ ಮಹಾ ಋಷಿಗಳು ಸಹ ಈತನ ಚರಿತ್ರೆಯನ್ನು ಬಹು ಭಕ್ತಿ ಭಾವದಿಂದ ಯಾವಾಗಲೂ ಹಾಡಿ ಹೊಗಳುವರು ।೫೪೦॥ ಈತನ ನಾಮಸ್ಮರಣೆಯನ್ನು ಮಾಡಲು ಭಕ್ತರ ಕಲಿಕಾಲವು ನಾಶವಾಗುವುದು. ಇಂತಹ ಶ್ರೀಕೃಷ್ಣನು ನಿಮ್ಮಲ್ಲಿ ಪ್ರಕಟನಾಗಿರುವನು ।೫೪೧॥ ಶ್ರೀಕೃಷ್ಣನು ಪರಬ್ರಹ್ಮದ ನಿಧಿಯಾಗಿರುವನು. ಈತನಲ್ಲಿ ಬಾಲಕನ ಭಾವನೆ ಇಡಬೇಡಿರಿ. ಇಷ್ಟು ಮಾಡಿದರೇ ಸಾಕು, ನೀವು ಸಂಸಾರಸಾಗರದಿಂದ ಸಹಜವಾಗಿ ಪಾರಾಗುವಿರಿ ।೫೪೨॥

ಐಶೀ ಶ್ರೀಕೃಷ್ಣ ಅವತಾರಕಥಾ । ನಾರದ ವಸುದೇವಾ ಸಾಂಗತಾ । ಶುಕ ಮ್ಹಣೇ ಗಾ ನೃಪನಾಥಾ । ವಿಸ್ಮಯೋ ಸಮಸ್ತಾ ಥೋರ ಝಾಲಾ ।೫೪೩॥

ಶುಕ ಉವಾಚ:-

ಏತಚ್ಛ್ರುತ್ವಾ ಮಹಾಭಾಗೋ ವಸುದೇವೋಽತಿವಿಸ್ಮಿತ: । ದೇವಕೀ ಚ ಮಹಾಭಾಗಾ ಜಹತುರ್ಮೋಹಮಾತ್ಮನ: ।೫೧॥

ಅರ್ಥ: ಶುಕದೇವನು ಹೇಳಿದನು;- ಹೇ ಪ್ರಿಯ ಪರೀಕ್ಷಿತನೇ, ನಾರದರ ಮುಖದಿಂದ ಇದೆಲ್ಲವನ್ನು ಕೇಳಿ ಪರಮ ಭಾಗ್ಯವಂತರಾದ ವಸುದೇವ - ದೇವಕಿಯವರಿಗೆ ಬಹಳ ಆಶ್ಚರ್ಯವಾಯಿತು. ಅವರಲ್ಲಿದ್ದ ಮಾಯಾ ಮೋಹಗಳನ್ನು ಅವರು ತ್ಯಾಗ ಮಾಡಿದರು.

ನಿಮಿಜಾಯಂತ ಮುನಿಗಣ । ಇತಿಹಾಸ ಪುರಾತನ ಜೀರ್ಣ । ಕೃಷ್ಣ ಪರಮಾತ್ಮಾ ಬ್ರಹ್ಮ ಪೂರ್ಣ । ನಾರದ ಆಪಣ ನಿರೂಪೀ ಹರ್ಷೇ ।೫೪೪॥ ಶುಕ ಮ್ಹಣೇ ಪರೀಕ್ಷಿತೀ । ಐಕೋನಿ ನಾರದಾವಚನೋಕ್ತೀ । ದೇವಕೀವಸುದೇವೋ ಚಿತ್ತೀ । ಅತಿವಿಸ್ಮಿತೀ ತಟಸ್ಥ ।೫೪೫॥ ತಯಾ ನಾರದಾಚೇನಿ ವಚನೇ । ಕೃಷ್ಣ ಪರಮಾತ್ಮಾ ಬೋಲೇಯೇಣೇ । ದೇವಕೀ ವಸುದೇವ ನಿಜಮನೇ । ದೋಘೇ ಜಣೇ ವಿಸ್ಮಿತ ।೫೪೬॥ ತೀ ಪರಮ ಭಾಗ್ಯವಂತ ದೋನ್ಹೀ । ಜೋ ಪುತ್ರಸ್ನೇಹೋ ಹೋತಾ ಶ್ರೀಕೃಷ್ಣೀ । ತೋ ಸಾಂಡೋನಿಯಾ ತತ್‌ಕ್ಷಣೀ । ಕೃಷ್ಣ ಪರಬ್ರಹ್ಮ ಪಣೇ ನಿಶ್ಚಯೋ ಕೇಲಾ ।೫೪೭॥ ಶ್ರೀಕೃಷ್ಣೀ ಬ್ರಹ್ಮ ಭಾವೋ । ಧರಿತಾ ನಿಃಶೇಷ ಮೋಹಸ್ನೇಹೋ । ಹೃದಯೀಚಾ ನಿಘೋನಿ ಗೇಲಾ ಪಹಾ ಹೋ । ಬಾಪ ನವಲಾವೋ ಭಾಗ್ಯಾಚಾ ।೫೪೮॥

ಇತಿಹಾಸಮಿಮಂ ಪುಣ್ಯಂ ಧಾರಯೇದ್ಯ: ಸಮಾಹಿತ: । ಸ ವಿಧೂಯೇಹ ಶಮಲಂ ಬ್ರಹ್ಮಭೂಯಾಯ ಕಲ್ಪತೇ ।೫೨॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಪಂಚಮೋಽಧ್ಯಾಯ: ।೧॥

॥ಶ್ರೀಕೃಷ್ಣಾರ್ಪಣಮಸ್ತು॥

ಅರ್ಥ: ಹೇ ರಾಜನೇ, ಈ ಇತಿಹಾಸವು ಪರಮ ಪವಿತ್ರವಾಗಿರುವುದು. ಯಾರು ಇದನ್ನು ಏಕಾಗ್ರ ಚಿತ್ತದಿಂದ ಶ್ರವಣ ಮಾಡುವರೋ ಮತ್ತು ಮನದಲ್ಲಿ ಧರಿಸುವರೋ, ಅವರು ತಮ್ಮ ಎಲ್ಲ ಶೋಕ ಮೋಹಗಳನ್ನು ದೂರಮಾಡಿ ಬ್ರಹ್ಮಪದವನ್ನು ಪ್ರಾಪ್ತಮಾಡಿಕೊಳ್ಳುವರು.

ಜೋ ನಿಮಿ - ಜಯಂತಸಂವಾದು । ವಸುದೇವಾ ಸಾಂಗೇ ನಾರದು । ಹಾ ಇತಿಹಾಸ ಅತಿಶುದ್ಧು । ಜೀವಶಿವಭೇಧುಚ್ಛೇದಕು ।೫೪೯॥ ಸಾವಧಾನಪಣೇ ಶ್ರೋತಾ । ತಲ್ಲೀನ ಹೋಊನಿ ತತ್ತ್ವತಾ । ಹೇ ಇತಿಹಾಸಾಚೀ ಕಥಾ । ಸಾದರತಾ ಜೋ ಪರಿಸೇ ।೫೫೦॥ ತೇಣೇ ಸಕಳ ಪೂಣ್ಯಾಂಚಿಯಾ ರಾಶೀ । ಶ್ರವಣೇ ಜೋಡಿಲ್ಯಾ ಅಹರ್ನಿಶೀ । ತೋ ಗಾ ಪುರುಷು ಅವಶ್ಯತೇಸೀ । ಬ್ರಹ್ಮಪ್ರಾಪ್ತೀಸೀ ಸತ್ಪಾತ್ರ ।೫೫೧॥ ಸಾರ್ಥಕ ಏಕ ಏಕ ಪದ । ಪರಿಸತಾ ಹೋಯ ಅಂತರ ಶುದ್ಧ । ಯಾಲಾಗೀ ಪಾವೇ ಬ್ರಹ್ಮಪದ । ಪರಮಾನಂದ ನಿಜಬೋಧೇ ।೫೫೨॥

ಹೀಗೆ ಶ್ರೀಕೃಷ್ಣನ ಕಥೆಯನ್ನು ನಾರದರು ವಸುದೇವನಿಗೆ ಹೇಳಿದರು. ಶುಕ ದೇವರು ಹೇಳಿದರು ; ಹೇ ಪರೀಕ್ಷಿತೀ ರಾಜನೇ, ಇದನ್ನು ಕೇಳಿ ಸರ್ವರಿಗೂ ಬಹಳ ಆಶ್ಚರ್ಯವಾಯಿತು ।೫೪೩॥

ನಿಮಿರಾಜಾ ಮತ್ತು ಜಯಂತಿಪುತ್ರ ಮುನಿವರ್ಯ ಇವರ ಸಂವಾದದ ಯಾವ ಪುರಾತನ ಇತಿಹಾಸವನ್ನು ಮತ್ತು ಶ್ರೀಕೃಷ್ಣ ಪರಮಾತ್ಮನು ಪೂರ್ಣಬ್ರಹ್ಮನಿರುವ ಇತ್ಯಾದಿ ವೃತ್ತಾಂತವನ್ನು ನಾರದರು ಬಹಳ ಆನಂದದಿಂದ ಹೇಳಿದರು ।೫೪೪॥ ಶುಕಾಚಾರ್ಯರು ಹೇಳಿದರು ಹೇ ಪರೀಕ್ಷಿತೀ ರಾಜನೇ, ಈ ನಾರದರ ವಚನಗಳನ್ನು ಕೇಳಿ ವಸುದೇವ ಮತ್ತು ದೇವಕೀಯವರು ಆಶ್ಚರ್ಯಚಕಿತರಾದರು ।೫೪೫॥ ಕೃಷ್ಣನು ಪರಮಾತ್ಮನಾಗಿರುವನೆಂಬ ನಾರದರ ಈ ವಚಗಳನ್ನು ಕೇಳಿ ದೇವಕೀ ವಸುದೇವರು ತಮ್ಮ ಮನದಲ್ಲಿ ವಿಸ್ಮಿತರಾಗಿ ತಟಸ್ಥರಾದರು ।೫೪೬॥ ಪರಮ ಭಾಗ್ಯವಂತರಾದ ಈ ಇಬ್ಬರೂ ಶ್ರೀಕೃಷ್ಣನಲ್ಲಿ ಇಟ್ಟಿದ್ದ ತಮ್ಮ ಪುತ್ರಭಾವವನ್ನು ತತ್‌ಕ್ಷಣದಲ್ಲಿ ಬಿಟ್ಟುಬಿಟ್ಟರು. ಶ್ರೀಕೃಷ್ಣನು ಸಾಕ್ಷಾತ್ ಪರಬ್ರಹ್ಮರೂಪನಿರುವನೆಂಬ ದೃಢವಾದ ಭಾವನೆಯನ್ನು ಧರಿಸಿದರು ।೫೪೭॥ ಇವರ ಭಾಗ್ಯದವರ್ಣನೆಯನ್ನು ಏನೆಂದು ಮಾಡಬೇಕು? ಶ್ರೀಕೃಷ್ಣನಲ್ಲಿ ಬ್ರಹ್ಮ ಭಾವನೆಯನ್ನು ದೃಢವಾಗಿ ಧರಿಸಿದ್ದರಿಂದ ಇವರ ಮೋಹರೂಪ ಸ್ನೇಹವು ಸಂಪೂರ್ಣವಾಗಿ ಹೊರಟು ಹೋಯಿತು ।೫೪೮॥

ಈ ಯಾವ ನಿಮಿ-ಜಯಂತ ಸಂವಾದವನ್ನು ನಾರದರು ವಸುದೇವನಿಗೆ ಹೇಳಿದರು. ಈ ಇತಿಹಾಸವು ಅತ್ಯಂತ ಪವಿತ್ರವಾಗಿದ್ದು ಜೀವಶಿವದಲ್ಲಿನ ಭೇದವನ್ನು ತೆಗೆದು ಹಾಕುವುದು ।೫೪೯॥ ಈ ಇತಿಹಾಸದ ಕಥೆಯನ್ನು ಯಾರು ಲಕ್ಷಗೊಟ್ಟು ತಲ್ಲೀನರಾಗಿ ಭಕ್ತಿಭಾವದಿಂದ ಶ್ರವಣವನ್ನು ಮಾಡುವರೋ ।೫೫೦॥ ಅವರಿಗೆ ಆ ಶ್ರವಣದಿಂದ ಹಗಲು ರಾತ್ರಿಯಲ್ಲಿ ಪುಣ್ಯದ ರಾಶಿಯು ಒದಗಿ ಬ್ರಹ್ಮಪದವು ಪ್ರಾಪ್ತವಾಗುವುದು ।೫೫೧॥ ಈ ಕಥೆಯಲ್ಲಿನ ಅರ್ಥಪೂರ್ಣವಾದ ಒಂದೊಂದೇ ಶಬ್ದಗಳನ್ನು ಶ್ರದ್ಧೆಯಿಂದ ಕೇಳಲು ಆದರಿಂದ ಚಿತ್ತವು ಶುದ್ಧವಾಗುವುದು ಮತ್ತು ಶ್ರೋತಾ ಪರಮಾನಂದ ಸ್ವರೂಪ ಬ್ರಹ್ಮಪದಕ್ಕೆ ಪ್ರಾಪ್ತನಾಗುವನು ।೫೫೨॥

ಹೇ "ಪಂಚಾಧ್ಯಾಯೀ" ಮ್ಹಣಣೇ ಘಡೇ । ಪಂಚವಕ್ತ್ರ ಚಂದ್ರಚೂಡೇ । ಏಕಾದಶಾಚೇ ಜ್ಞಾನ ಗಾಢೇ । ವರ್ಣಾವಯಾ ಪುಡೇ ಧ್ವಜ ಉಭವಿಲಾ ।।೫೫೩।। ಹೇ ಪಂಚಾಧ್ಯಾಯೀ ನವ್ಹೇ ಜಾಣ । ಏಕಾದಶಾಚೇ ಪಂಚಪ್ರಾಣ । ಉಪದೇಶಾವಯಾ ಶುದ್ಧ ಜ್ಞಾನ । ಸಾಮೋರೇ ಆಪಣ ಸ್ವಭಕ್ತಾ ಆಲೇ ।।೫೫೪।। ಹೇ ಪಂಚಾಧ್ಯಾಯೀ ನವ್ಹೇ ಕೇವಳ । ಪಂಚಮ ಆಲಾಪೇ ಶುಕಕೋಕಿಳ । ಏಕಾದಶ ವಸಂತಕಾಳ । ಭಕ್ತ - ಅಲಿಕುಳ ಆಲಾಪವೀ ಸ್ವಯೇ ।।೫೫೫।। ಹಾಹೀ ನವ್ಹೇ ಪ್ರಕಾರ । ಹೇ ಶರ್ಕರಾ ಪಂಚಧಾರ । ಚಾಖೋ ಧಾಡಿಲೀ ಸತ್ವರ । ಜ್ಞಾನಗಂಭೀರ ನಿಜಭಕ್ತ ।।೫೫೬।। ಹೇ ಪಂಚಾಧ್ಯಾಯೀ ನವ್ಹೇ ಸಿದ್ಧ । ಏಕಾದಶಾಚೇ ಪಂಚಗಂಧ । ಭಕ್ತ ಆವಂತಾವಯಾ ಶುದ್ಧ । ಧಾಡಿಲೀ ಪ್ರಸಿದ್ಧ ಗಂಧಾಕ್ಷತಾ ।।೫೫೭।। ಏಕಾದಶ ಅತಿವಿವೇಕೀ । ಯಾವಯಾ ಪಂಚಾಧ್ಯಾಯೀ ಪಾಲಖೀ । ಪುಢೇ ಧಾಡಿಲೀ ಕವತುಕೀ । ನಿಜಭಕ್ತ ವಿಖೀ ಕೃಪಾಳುವೇ ।।೫೫೮।। ಹೇ ಕೃಷ್ಣ - ಉದ್ಧವ ಅರ್ಧಮಾತ್ರಾ । ಅರ್ಧೋದಯೋ ಮಹಾಯಾತ್ರಾ । ತೇ ಯಾತ್ರೇಲಾಗೀ ಹಾಂಕಾರಾ । ಪಂಚಾಧ್ಯಾಯೀ ಖರಾ ಸಾಧಕಾ ಕರೀ ।।೫೫೯।। ಶ್ರೀಕೃಷ್ಣ ಉದ್ಧವಮೇಳಾ । ದೇಖೋನಿ ಬ್ರಹ್ಮಸುಖಾಚಾ ಸೋಹಳಾ । ತೋ ಸಾಂಗೋ ಆಲೀ ಕಳವಳಾ । ಭಕ್ತಾ ಜವಳಾ ಪಂಚಾಧ್ಯಾಯೀ ।।೫೬೦।। ಅಹಂಕಾರಾಚೇ ಮೇಟ ಹೋತೇ । ತೇ ಉಠವೂನಿ ಶ್ರೀಕೃಷ್ಣನಾಥೇ । ಕೇಲೇ ಆತ್ಮತೀರ್ಥೇ ಮುಕ್ತೇ । ಅಭಯಹಸ್ತೇ ಉದ್ಧವಾಸೀ ।।೫೬೧।। ತೇ ಮುಕ್ತತೀರ್ಥನವಾಈ । ಪುಢೇ ಸಾಂಗೋ ಆಲೀ ಪಂಚಾಧ್ಯಾಯೀ । ಸಂಸಾರಶ್ರಾಂತ ಜೇ ಜೇ ಕಾಂಹೀ । ತೇ ಧಾಂವಾ ಲವಲಾಹೀ ವಿಶ್ರಾಂತೀಸೀ ।।೫೬೨।। ಕೃಷ್ಣಉದ್ಧವಗೋಡಗೋಷ್ಟೀ । ಹೇ ನಿರ್ವಿಕಲ್ಪ ಕಪಿಲಾಷಷ್ಠೀ । ತೇ ಪರ್ವಕಾಳಕಸವಟೀ । ಸಾಂಗೋ ಉಠಾಉಠೀ ಪಂಚಾಧ್ಯಾಯೀ ಆಲೀ ।।೫೬೩।। ಉದ್ಧವಾಲಾಗೀ ಭವಸಾಗರೀ । ಉತರಾವಯಾ ಪಾಯಉತಾರೀ । ಭಾಗವತ ಮಿಷೇ ಶ್ರೀಹರಿ । ಸುಗಮ ಸೋಪಾರೀ ಪಾಯವಾಟ ಕೇಲೀ ।।೫೬೪।। ಪವ್ಹಣೆಯಾಹೂನಿ ಪಾಯಉತಾರಾ । ಭಾಗವತಮಾರ್ಗ ಅತಿಸೋಪಾರಾ । ತೋ ಮಾರ್ಗು ದಾವಾವಯಾ ಪುರಾ । ಹಾಂಕಾರೀ ಸ್ತ್ರೀಶೂದ್ರಾ ಪಂಚಾಧ್ಯಾಯೀ ।।೫೬೫।। ಪುಢೀಲ ನಿರೂಪಣ ಆವಡೀ । ಅತಿಶಯೇ ವಾಢೇ ಚಢೋವಢೀ । ತೇ ಕೃಷ್ಣವಾಕ್ಯರಸಗೋಡೀ । ಪಂಚಾಧ್ಯಾಯೀ ಪುಡೀ ಸಾಧಾವಯಾ ಸಾಂಗೇ ।।೫೬೬।।

ಈ ಐದನೆಯ ಅಧ್ಯಾಯವೆಂದರೆ ಚಂದ್ರಚೂಡ ಶಂಕರನ ಐದು ಮುಖಗಳಾಗಿವೆ. ಹನ್ನೊಂದನೆಯಸ್ಕಂಧದಲ್ಲಿ ಗೂಢವಾದ ಜ್ಞಾನದ ವರ್ಣನೆಯನ್ನು ಮಾಡಲು ಈ ಧ್ವಜವನ್ನು ಏರಿಸಿರುವುದು ।।೫೫೩।। ಇದು ಕೇವಲ ಐದನೆಯ ಅಧ್ಯಾಯವಾಗದೇ ಹನ್ನೊಂದನೆಯಸ್ಕಂಧದ ಪಂಚಪ್ರಾಣವಾಗಿರುವುದು. ಶುದ್ಧ ಜ್ಞಾನದ ಉಪದೇಶವನ್ನು ಮಾಡಲು ತನ್ನ ಭಕ್ತರನ್ನು ಸ್ವತಃ ಎದುರುಗೊಳ್ಳಲು ಬಂದಿರುವುದು ।।೫೫೪।। ಇದು ಕೇವಲ ಪಂಚಾಧ್ಯಾಯವಾಗಿರದೇ ಶುಕಾಚಾರ್ಯ ರೂಪವಾದ ಕೋಗಿಲೆಯ ಪಂಚಮ ಸ್ವರದ ಗಾಯನವಾಗಿದೆ. ಈ ಸ್ಕಂಧವು ವಸಂತ ಋತುವಾಗಿರುವುದು ಮತ್ತು ಭಕ್ತರೂಪ ಭ್ರಮರಗಳ ಗುಂಜನವು ನಡೆದಿರುವುದು ।।೫೫೫।। ಆದರೆ ಹೀಗೂ ಅಲ್ಲ. ಜ್ಞಾನಗಂಭೀರ ಭಕ್ತರಿಗೆ ಸವಿಯಲು ಇದು ಪಂಚಧಾರಾಯುಕ್ತ ಸಕ್ಕರೆಯನ್ನೇ ಕಳಿಸಿರುವುದು ।।೫೫೬।। ಇದು ಐದನೆಯ ಅಧ್ಯಾಯವಲ್ಲದೇ ಏಕಾದಶ ಸ್ಕಂಧದಲ್ಲಿನ ಐದು ಪ್ರಕಾರದ ಗಂಧಗಳನ್ನು ತೇದು ಭಕ್ತರಿಗೆ ಆಮಂತ್ರಿಸಲು ಗಂಧಾಕ್ಷತೆಯನ್ನು ಕಳಿಸಿಲಾಗಿದೆ ।।೫೫೭।। ಭಕ್ತರ ವಿಷಯಕ್ಕೆ ಅತ್ಯಂತ ಕೃಪಾಳುನಾಗಿರುವ ಭಗವಂತನು ಅತಿವಿವೇಕಯುಕ್ತ ಭಕ್ತರಿಗೆ ಕರೆತರಲು ಈ ಅಧ್ಯಾಯ ರೂಪ ಪಾಲಖಿಯನ್ನೇ ಕಳಿಸಿರುವನು ।।೫೫೮।। ಈ ಏಕಾದಶಸ್ಕಂಧವು ಕೃಷ್ಣ ಉದ್ಧವರೂಪ ಅರ್ಧಮಾತ್ರಾ ಆಗಿದೆ. ಅರ್ಧೋದಯವು ಪರ್ವಕಾಲದ ಮಹಾಯಾತ್ರೆಯಾಗಿರುವುದು. ಈ ಯಾತ್ರೆಗಾಗಿ ಐದನೆಯ ಅಧ್ಯಾಯವು ಸಾಧಕರಿಂದ ಘೋಷಣೆಯನ್ನು ಮಾಡಿಸುತ್ತಿರುವುದು ।।೫೫೯।। ಶ್ರೀಕೃಷ್ಣ- ಉದ್ಧವರ ಕೂಡುವಿಕೆಯಲ್ಲಿನ ಬ್ರಹ್ಮಸುಖದ ಉತ್ಸವವನ್ನು ಕಂಡು ಐದನೆಯ ಅಧ್ಯಾಯವು ಬಹಳ ಕಳಕಳಿಯಿಂದ ಅದನ್ನು ತಿಳಿಸಲು ಬಂದಿರುವುದು ।।೫೬೦।। ಶ್ರೀಕೃಷ್ಣನು ಅಹಂಕಾರದ ಕೂಟವನ್ನು ಇಲ್ಲದಾಗಿ ಮಾಡಿ ಮತ್ತು ತನ್ನ ಅಭಯ ಹಸ್ತದಿಂದ ಆತ್ಮಜ್ಞಾನರೂಪತೀರ್ಥವನ್ನು ಉದ್ಧವನಿಗೆ ಸ್ನಾನಮಾಡಲು ದಾರಿಮಾಡಿಕೊಟ್ಟನು ।।೫೬೧।। ಈ ಮುಕ್ತಿ ತೀರ್ಥದ ಚಮತ್ಕಾರ ವಾರ್ತೆಯನ್ನು ಹೇಳುವುದಕ್ಕಾಗಿಯೇ ಈ ಐದನೆಯ ಅಧ್ಯಾಯವು ಮುಂದಾಯಿತು. ಸಂಸಾರ ತಾಪದಿಂದ ತ್ರಸ್ತರಾದ ಎಲ್ಲರಿಗೂ ವಿಶ್ರಾಂತಿ ಪಡೆಯಲು ಆದಷ್ಟು ಬೇಗನೇ ಅಲ್ಲಿಗೆ ಬರಲು ಹೇಳುತ್ತಿರುವುದು ।।೫೬೨।। ಉದ್ಧವ ಶ್ರೀಕೃಷ್ಣರ ಸುಖದ ಮಾತುಗಳೆಂದರೆ, ಕಪಿಲಾಷಷ್ಠಿಯ ಯೋಗವೇ ಆಗಿರುವುದು. ಈ ಪರ್ವಕಾಲದ ವಾರ್ತೆಯನ್ನು ತಿಳಿಸಲು ಪಂಚಮಾಧ್ಯಾಯವು ಲಗುಬಗೆಯಿಂದ ಪ್ರವೃತ್ತವಾಗಿರುವುದು ।।೫೬೩।। ಉದ್ಧವನಿಗೆ ಭವಸಮುದ್ರದಲ್ಲಿ ಕಾಲುನಡಿಗೆಯಿಂದ ದಾಟಿಹೋಗಲು ಶ್ರೀಕೃಷ್ಣನು ಭಾಗವತರೂಪದ ಈ ಸುಲಭ, ಸರಳವಾದ ಕಾಲುದಾರಿಯನ್ನು ಮಾಡಿ ಕೊಟ್ಟಿರುವನು ।।೫೬೪।। ಈಸಿ ಹೋಗುವುದಕ್ಕಿಂತ ನಡೆದುಹೋಗುವುದು ಯಾವಾಗಲೂ ಒಳ್ಳೆಯದು. ಭಾಗವತಧರ್ಮ ಮಾರ್ಗವು ಇದು ಅತಿಶಯವಾಗಿ ಸುಲಭಮಾರ್ಗವಾಗಿರುವುದು. ಈ ಮಾರ್ಗವನ್ನು ಸಂಪೂರ್ಣವಾಗಿ ಸರಿಯಾಗಿ ತೋರಿಸಿಕೊಡಲು ಈ ಐದನೆಯ ಅಧ್ಯಾಯವು ಸ್ತ್ರೀ, ಶೂದ್ರರಿಗೆ ಕೂಗಿ ಕರೆಯುತ್ತಿರುವುದು ।।೫೬೫।। ಇನ್ನು ಮುಂದಿನ ನಿರೂಪಣವು ಉತ್ತರೋತ್ತರವಾಗಿ ಚಿತ್ತಕ್ಕೆ ಆಕರ್ಷಿತವನ್ನಾಗಿ ಮಾಡುವುದಾಗಿದೆ. ಶ್ರೀಕೃಷ್ಣವಾಕ್ಯದ ರಸದ ಮಾಧುರ್ಯವನ್ನು ಸವಿಯಲು ಈ ಪಂಚಮಾಧ್ಯಾವು ಹೇಳುತ್ತಿದೆ ।।೫೬೬।।

ಕೃಷ್ಣ ಉದ್ಧವಸಂವಾದೀ । ಹೋ ಈಲ ಪರಬ್ರಹ್ಮ - ಗವಾದೀ । ಸಾಧಕಮುಮುಕ್ಷಾಂಚೀ ಮಾಂದೀ । ಧಾಂವ ತ್ರಿಶುದ್ಧೀ ನಿಜಸುಖಾರ್ಥ ।೫೬೭॥ ಪರಬ್ರಹ್ಮ ಝಾಲೇ ಸಾವೇವ । ಸ್ವರೂಪಸುಂದರ ಜ್ಞಾನಗೌರವ । ಮನೋಹರ ರೂಪವೈಭವ । ಸ್ವರ್ಗೀಂಚೇ ದೇವ ಪಾಹೋ ಯೇತೀ ।೫೬೮॥ ತೋ ದೇವಾಂಚಾ ಸ್ತುತಿವಾದು । ಸವೇಂಚಿ ಉದ್ಧವಾಚಾ ನಿರ್ವೇದು । ಕೃಷ್ಣ ಉದ್ಧವಮಹಾಬೋಧು । ಜೇಣೇ ಪರಮಾನಂದು ವೋಸಂಡೇ ।೫೬೯॥ ತೇ ಪುಢೀಲ ಅಧ್ಯಾಯೀ ಕಥಾ । ರಸಾಳ ಸಾಂಗೇನ ಆತಾ ।ಅವಧಾನ ಧ್ಯಾವೇ ಶ್ರೋತಾ । ಗ್ರಂಥಾರ್ಥಾ ನಿಜಬೋಧೇ ।೫೭೦॥ ಸ್ವಯೇ ವಾವಡೀ ಕರೂನಿ ಪೂರ್ಣ । ತಿಸೀ ಉಡವಿಜೇ ಜೇವೀ ಆಪಣ । ಮಗ ಉಡಾಲೇಪಣೇ ಜಾಣ । ಆಪಲ್ಯಾ ಆಪಣ ಸಂತೋಷಿಜೇ ।೫೭೧॥ ತೇವೀ ಮಜನಾವೇ ಕವಿತಾ । ಕರೂನಿ ಸ್ವಯೇ ಸದ್ಗುರು ವಕ್ತಾ । ಏವಂ ವದವೂನಿಯಾ ಗ್ರಂಥಾರ್ಥಾ । ಶ್ರೋತೇರೂಪೇ ಸರ್ವಥಾ ಸಂತೋಷೇ ಸ್ವಯೇ ।೫೭೨॥ ತೋ ಏಕಪಣೇವೀಣ ಏಕಲಾ ಏಕಾ । ದುಜೇನವೀಣ ಜನಾರ್ದನು ಸಖಾ । ತೇಣೇ ಪುಢೀಲ ಗ್ರಂಥಆವಂಕಾ । ವಿಶದಾರ್ಥೇ ದೇಖಾ ವಿವಂಚಿಲಾ ।೫೭೩॥ ನಾತಳೋನಿ ದುಜೇಪಣ । ಏಕಾ ಜನಾರ್ದನಾ ಶರಣ । ಧರೋನಿ ಶ್ರೋತ್ಯಾಂಚೇ ಚರಣ । ಪುಢೀಲ ಅನುಸಂಧಾನ ಪಾವೇಲ ।೫೭೪॥ ಏಕಾ ಜನಾರ್ದನ ನಾಂವೇ ದೇಖ । ದೋ ನಾಂವೀ ಸ್ವರೂಪ ಏಕ । ಹೇ ಜಾಣ ತೋ ಆವಶ್ಯಕ । ಪರಮ ಸುಖ ಸ್ವಯೇ ಪಾವೇ ।೫೭೫॥ ಏಕಾಜನಾರ್ದನಾ ಶರಣ । ತ್ಯಾಚೀ ಕೃಪಾ ಪರಿಪೂರ್ಣ । ಪಂಚಾಧ್ಯಾಯೀ ನಿರೂಪಣ । ಝಾಲೀ ಸಂಪೂರ್ಣ ಜನಾರ್ದನಕೃಪಾ ।೫೭೬॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ವಸುದೇವನಾರದಸಂವಾದೇ
ಏಕಾಕಾರ-ಟೀಕಾಯಾಂ ಪಂಚಮೋऽಧ್ಯಾಯಃ ।೫॥

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಕೃಷ್ಣ ಉದ್ಧವರ ಸಂವಾದದಲ್ಲಿ ಪರಬ್ರಹ್ಮದ ಅನ್ನಛತ್ರವನ್ನು ತೆರೆಯಲಾಗುವುದು. ಅಲ್ಲಿ ಸ್ವತಃದ ಸುಖಕ್ಕಾಗಿ ಸಾಧಕ ಮುಮುಕ್ಷುಗಳವರ ಹಿಂಡಿಗೆ ಹಿಂಡೇ ಧಾವಿಸುವುದು ।೫೬೭॥ ನಿರವಯವ ಪರಬ್ರಹ್ಮವೇ ಶ್ರೀಕೃಷ್ಣರೂಪದಿಂದ ಸಾವಯವವಾಗಿ ಬಂದಿರುವುದು. ಆತನ ಸ್ವರೂಪಸೌಂದರ್ಯವನ್ನು ಜ್ಞಾನಗೌರವವನ್ನು ಮತ್ತು ಮನೋಹರ ರೂಪದ ವೈಭವವನ್ನು ಕಾಣುವುದಕ್ಕಾಗಿ ಸ್ವರ್ಗದಲ್ಲಿನ ದೇವತೆಗಳು ಬರುವವರಿದ್ದಾರೆ ।೫೬೮॥ ಆ ದೇವತೆಗಳು ಮಾಡಿದ ಸ್ತುತಿಸ್ತೋತ್ರಗಳು ಹಾಗೂ ಅದರ ಜೊತೆಗೆ ಉದ್ಧವನ ವೈರಾಗ್ಯವು ಶ್ರೀಕೃಷ್ಣನು ಉದ್ಧವನಿಗೆ ಮಾಡಿದ ಮಹಾಬೋಧವು ಇವುಗಳಿಂದ ಪರಮಾನಂದಕ್ಕೆ ಮಹಾಪೂರವು ಬರುವುದಾಗಿದೆ ।೫೬೯॥ ಇದೇ ರಸಾಳವಾದ ಕಥೆಯನ್ನು ನಾನು ಮುಂದಿನ ಅಧ್ಯಾಯದಲ್ಲಿ ಹೇಳುವೆನು. ಆದ್ದರಿಂದ ಶ್ರೋತೃಗಳವರು ತಮಗೆ ಬೋಧವಾಗುವುದಕ್ಕಾಗಿ ಅರ್ಥದತ್ತ ಪೂರ್ಣ ಲಕ್ಷವನ್ನು ಕೊಡಬೇಕು ।೫೭೦॥ ಒಬ್ಬನು ಗಾಳಿಪಟವನ್ನು ತಾನೇ ತಯಾರಿಸಿ ಅದನ್ನು ತಾನೇ ಮೇಲಕ್ಕೆ ಹಾರಿಸಿ ಅದು ಎತ್ತರಕ್ಕೆ ಹಾರಿದಾಗ ತಾನೇ ಸಂತೋಷಪಡುವನು ।೫೭೧॥ ಅದರಂತೆ ನನ್ನ ಹೆಸರಿನಿಂದ ಕಾವ್ಯವನ್ನು ಮಾಡಿ ಸದ್ಗುರುಗಳು ತಾವೇ ವಕ್ತಾ ಆಗುವರು. ಈ ರೀತಿಯಲ್ಲಿ ಗ್ರಂಥದ ಅರ್ಥವನ್ನು ಹೇಳಿ ತಾನೇ ಶ್ರೋತೃಗಳ ರೂಪದಿಂದ ಆನಂದಪಡುವನು ।೫೭೨॥ ಒಂದಲ್ಲದೇ ಒಂದೇ ಆಗಿರುವ ಏಕನಾಥನು ಮತ್ತು ಎರಡಲ್ಲದ ಬೇರೆಯಾಗಿರದ ಸಖನಾದ ಜನಾರ್ದನನು ಆತನೇ ಮುಂದಿನ ಗ್ರಂಥದ ವಿಚಾರವನ್ನು ಸ್ಪಷ್ಟಮಾಡಿ ಹೇಳುವವನಾಗಿದ್ದಾನೆ ।೫೭೩॥ ಭಿನ್ನಭಾವಕ್ಕೆ ಮುಟ್ಟದೇ ಏಕನಾಥನು ಜನಾರ್ದನಿಗೆ ಶರಣಾದನು. ಶ್ರೋತೃಗಳವರ ಚರಣಗಳನ್ನು ಹಿಡಿದು ಮುಂದಿನ ಕಥಾಭಾಗವನ್ನು ಹೇಳುವೆನು ।೫೭೪॥ ಏಕನಾಥ ಮತ್ತು ಜನಾರ್ದನ ಈ ಹೆಸರುಗಳು ಎರಡಾಗಿವೆ. ಆದರೆ ಇಬ್ಬರ ಸ್ವರೂಪ ಮಾತ್ರ ಒಂದೇ ಆಗಿದೆ. ಹೀಗೆ ಯಾರು ತಿಳಿಯುವರೋ, ಅವರು ಪರಮಸುಖಕ್ಕೆ ಪ್ರಾಪ್ತರಾಗುವರು ।೫೭೫॥ ಏಕನಾಥನು ಜನಾರ್ದನಸ್ವಾಮಿಯವರಿಗೆ ಶರಣಾಗಿ ಅವರ ಪೂರ್ಣ ಕೃಪೆಯಿಂದ ಈ ಪಂಚಮಾಧ್ಯಾಯದ ನಿರೂಪಣೆಯನ್ನು ಪೂರ್ಣಗೊಳಿಸಿದನು. ಇದು ಅವರ ಕೃಪೆಯೇ ಆಗಿರುವುದು ।೫೭೬॥

ಇತಿ ಶ್ರೀಭಾಗವತ ಮಹಾಪುರಾಣದ ಏಕಾದಶಸ್ಕಂಧದ ವಸುದೇವನಾರದಸಂವಾದದ ಶ್ರೀಏಕನಾಥ ಮಹಾರಾಜರ ಭಾಷ್ಯಯ
ಐದನೆಯ ಅಧ್ಯಾಯ ಸಂಪೂರ್ಣ ।೫॥ ।೫೭೬॥

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಆರನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಶ್ರೀಜನಾರ್ದನಾ । ಭಾವಾರ್ಥೇ ನಮಿತಾ ಚರಣಾ । ಜನೇ ಸಹಿತ ಮೀಪಣಾ । ನಾಹೀಂಚ ಜಾಣಾ ಸ್ವಯೇ ಕೇಲೇ ॥೧॥ ಲಿಂಗದೇಹಾಚೇ ಮರ್ದನ । ತೇಚಿ ಜನಾಚೇ ಅರ್ದನ । ಯಾಲಾಗೀ ನಾಮೇ ಜನಾರ್ದನ । ಪ್ರಗಟ ಜಾಣ ಪ್ರಸಿದ್ಧೀ ॥೨॥ ತುಝೀ ಐಶೀಚ ಕರಣೀ । ಕರ್ಮ ಕರ್ತಾ ನುರವೂನಿ । ಸುಖೇ ನಾಂದವಿಸೀ ಜನೀ । ಸಮಾಧಾನೀ ಜನಾರ್ದನಾ ॥೩॥ ಸುಖೇಚೇ ತುಝೇ ನಾಮ ಘೇತಾ । ಘಾತು ಕರಿಸೀ ಜೀವಿತಾ । ಜೀವು ಘೇಊನಿ ತತ್ತ್ವತಾ । ಹೋಸಿ ಸರ್ವಥಾ ಕೃಪಾಳೂ ॥೪॥ ತುಝೇ ನಾಮಾಚೇ ಪ್ರಬಳ ಬಳ । ಮಾಥಾ ನುಧವಿತೀ ಕಳಿಕಾಳ । ಚಾರೀ ಮುಕ್ತಿ ಕೇವಳ । ಹೋತೀ ನಿಶ್ಚಳ ನಿಜದಾಸೀ ॥೫॥ ನಾಮೇ ಎವಢೇ ಥಸಾಳ ದೇಣೇ । ತ್ಯಾ ತುಝೇ ಸ್ವರೂಪ ಕವಣ ಜಾಣೇ । ಸಾಂಡೂನಿ ಜಾಣಣೇ ನೇಣಣೇ । ನಿವಾಂತ ರಾಹಾಣೇ ತತ್ತ್ವತಾ ॥೬॥ ತುಝಾ ಸ್ತುತಿವಾದು ಕರಣೇ । ತಂವ ಪರತಲೀ ಶ್ರುತಿ ಪುರಾಣೇ । ತೇಥ ಮಾಝೇ ಆರುಷ ಬೋಲಣೇ । ಕೋಣೇ ಕೋಣೇ ಸಾರಾವೇ ॥೭॥ ತುಝಾ ಸ್ತುತಿವಾದು ತೇ ಮೌನ । ತುಝಾ ಕಳವಳಾ ತೇ ಕೀರ್ತನ । ಕಾಂಹೀ ನ ಕರಣೇ ತೇ ಅನುಸಂಧಾನ । ಸಾಚಾರ ಜಾಣ ಶ್ರೀಕೃಷ್ಣಾ ॥೮॥ ಐಶಿಯಾಹೀ ತುಝೇ ಠಾಯೀ । ಅಚಾಟ ಹಾಂವ ಉರಿಲೀ ಪಾಹೀ । ತೇಚಿ ಅರ್ಥೀ ಚಿತ್ತ ದೇಈ । ಕೃಪಾನಿರ್ವಾಹೀ ಗುರುರಾಯಾ ॥೯॥ ಖದ್ಯೋತ ಪ್ರಕಾಶೂ ಪಾಹೇ ಚಾಂದಾ । ಮಶಕ ಗರುಡಾಸೀ ಘೇ ಖಾಂದಾ । ತೈಸಾ ಮೀ ಏಕಾದಶಸ್ಕಂಧಾ । ಮೂರ್ಖನುಸಧಾ ಟೀಕಾರ್ಥೀ ॥೧೦॥ ಯೇಚಿ ವಿಷಯೀ ಗುರುನಾಥಾ । ಕೃಪಾ ಕರಾವೀ ಸರ್ವಥಾ । ಗ್ರಂಥರಚನಾ ಗ್ರಂಥಾರ್ಥಾ । ಸಾರ್ಥಕತಾ ಕರಾವೀ ॥೧೧॥ ಐಶೀ ವಿನವಣೀ ಐಕತಾ । ಕೃಪಾ ಪದ್ಮ ಕರು ಠೇವಿಲಾ ಮಾಥಾ । ತಂವ ಉದ್ಯೋತ್ಕಾರ ಜಾಹಲಾ ಗ್ರಂಥಾ । ಯಥಾರ್ಥತಾ ನಿಜದೀಪೇ ॥೧೨॥

ಹೇ ಓಂಕಾರಸ್ವರೂಪನಾದ ಶ್ರೀಜನಾರ್ದನನೇ, ನಿನಗೆ ನನ್ನ ನಮಸ್ಕಾರವು. ಭಕ್ತಿಭಾವದಿಂದ ನಿನ್ನ ಚರಣಗಳನ್ನು ವಂದಿಸಲು ನಾನೆನ್ನುವುದು ತನ್ನಷ್ಟಕ್ಕೆ ತಾನೇ ಇಲ್ಲದಾಗುವುದು ॥೧॥ ಲಿಂಗದೇಹದ ಮರ್ದನವೆಂದರೆ ಜನರ ಅರ್ದನವಾಗಿದೆ. ಆದ್ದರಿಂದ "ಜನಾರ್ದನ" ನಾಮದಿಂದ ನೀನು ಪ್ರಸಿದ್ಧನಾದೆ ॥೨॥ ಹೇ ಜನಾರ್ದನನೇ, ನಿನ್ನ ಕಾರ್ಯವು ಹೀಗೆಯೇ ಇರುವುದು. ಕರ್ಮ ಅಥವಾ ಕರ್ತೃತ್ವಭಾವವನ್ನು ಉಳಿಸದೇ ನೀನು ಜನರಲ್ಲಿ ಸುಖವಾಗಿ ವರ್ತಿಸುವೆ ॥೩॥ ಪ್ರೇಮದಿಂದ ನಿನ್ನ ನಾಮವನ್ನು ಉಚ್ಚರಿಸಲು ಜೀವತ್ವವನ್ನು ಇಲ್ಲದಂತೆ ಮಾಡುವೆ. ಜೀವದ ಹರಣವನ್ನು ಮಾಡಿ ನಿಜವಾಗಿಯೂ ನೀನು ಕೃಪೆಯನ್ನು ಮಾಡುವೆ ॥೪॥ ನಿನ್ನ ನಾಮದ ಶಕ್ತಿಯು ಅಪಾರವಾಗಿದೆ. ಇದರೆದುರಿನಲ್ಲಿ ಕಲಿಕಾಲನ ಶಕ್ತಿಯೂ ನಡೆಯುವುದಿಲ್ಲ. ನಾಲ್ಕೂ ಮುಕ್ತಿಗಳು ಕೇವಲ ದಾಸಿಯಾಗಿರುವುವು ॥೫॥ ನಿನ್ನ ನಾಮದ ಪ್ರಭಾವವೇ ಇಷ್ಟೊಂದು ಬಲಾಢ್ಯವಾಗಿರಲು ನಿನ್ನ ಸ್ವರೂಪವನ್ನು ಯಾರು ಅರಿಯಬಲ್ಲರು? ಅದಕ್ಕಾಗಿ ಅರುವಿಕೆ ಮತ್ತು ಅರಿಯದಿರುವಿಕೆ ಈ ಎರಡನ್ನೂ ಬಿಟ್ಟು ಸ್ವಸ್ಥನಾಗಿರುವುದೇ ಲೇಸು ॥೬॥ ನಿನ್ನ ಸ್ತುತಿಯನ್ನು ಸ್ತವಿಸಲು ಶ್ರುತಿ ಮತ್ತು ಪುರಾಣಗಳು ದಣಿದುಕೊಂಡವು. ಹೀಗಿರಲು ನನ್ನ ತೊದಲು ನುಡಿಯು ಯಾರಿಗೆ ಹೇಗೆ ಹಿಡಿಸಬೇಕು? ॥೭॥ ಹೇ ಶ್ರೀಕೃಷ್ಣನೇ ಸುಮ್ಮನೇ ಮೌನವಾಗುವುದೇ ನಿನ್ನ ಸ್ತುತಿಸ್ತೋತ್ರಗಳು. ನಿನ್ನ ಕಳಕಳಿಯೇ ನಿನ್ನ ಕೀರ್ತನವು ಮತ್ತು ಏನೂ ಮಾಡದಿರುವುದೇ ನಿನ್ನ ಅನುಸಂಧಾನವು ॥೮॥ ಹೀಗಿದ್ದರೂ ನಿನ್ನ ವಿಷಯಕ್ಕೆ ನನಗೆ ಅತಿಶಯವಾಗಿ ಪ್ರೇಮವು ನಿರ್ಮಾಣವಾಗಿರುವುದು. ಹೇ ಗುರುರಾಯನೇ, ಕೃಪೆದೋರಿ ಆ ಅರ್ಥದತ್ತ ಲಕ್ಷವನ್ನು ಕೊಡು ॥೯॥ ಮಿಂಚುಹುಳವು ಚಂದ್ರನಿಗೆ ಪ್ರಕಾಶವನ್ನು ಕೊಡಬೇಕೆನ್ನುವುದು ಅಥವಾ ನೊಣವು ಗರುಡನನ್ನು ತನ್ನ ಬೆನ್ನಮೇಲೇ ಕೂಡ್ರಿಸಿಕೊಳ್ಳಬೇಕೆನ್ನುವುದು, ಹೇಗೋ, ಅದರಂತೆ ಕೇವಲ ಮೂರ್ಖನಾದ ನಾನು ಹನ್ನೊಂದನೆಯ ಸ್ಕಂಧಕ್ಕೆ ಟೀಕೆಯನ್ನು ಮಾಡಲು ಪ್ರವೃತ್ತನಾಗಿರುವೆನು ॥೧೦॥ ಹೇ ಗುರುರಾಯರೇ, ಅದಕ್ಕಾಗಿ ನೀವು ಈಗ ಪೂರ್ಣ ಕೃಪೆಯನ್ನು ಮಾಡಿ ಗ್ರಂಥ ರಚನೆಯಲ್ಲಿ ಯಥಾರ್ಥ ಅರ್ಥವನ್ನು ಹೇಳಿ ನನ್ನ ಉದ್ದೇಶದ ಸಾರ್ಥಕತೆಯನ್ನು ಮಾಡಿರಿ ॥೧೧॥ ಇಂತಹ ಪರಮ ಪ್ರೇಮದ ವಿನಂತಿಯನ್ನು ಕೇಳುತ್ತಲೇ ಶ್ರೀಗುರುಗಳು ಕೃಪೆಯ ವರದ ಹಸ್ತವನ್ನು ಮಸ್ತಕದ ಮೇಲಿಟ್ಟರು. ಆಗಲೇ ಆತ್ಮಜ್ಯೋತಿಯ ಪ್ರಕಾಶದಿಂದ ಗ್ರಂಥದ ಯಥಾರ್ಥ ಅರ್ಥವು ಪ್ರಕಟವಾಯಿತು ॥೧೨॥

ನವಲ ಕೃಪೇಚೀ ಕರಣೀ । ಅರ್ಥಚಿಂತಾಮಣೀಚೀ ಖಾಣೀ । ಉಘಡಲೀ ತತ್‍ಕ್ಷಣೀ । ಪದಾರ್ಥಶ್ರೇಣೀ ಕವಿಮುದ್ರಾ ।।೧೩।। ಲೇತಾ ಸಿದ್ಧ ಅಲಂಕಾರಾ । ಕವಣ ಸಾಂಕಡೇ ಲೇಣಾರಾ । ತಾಲ ರಾಖಿತಾ ಖಾಂಬಸೂತ್ರಾ । ಲೇಪಾಚ್ಯಾ ಕರಾ ಪ್ರಯಾಸ ಕಾಯ ।।೧೪।। ಬಾಪಾಚೀ ಪಕ್ವಾನ್ನೇ ಘೇಉನೀ । ಬಾಳ ಘಾಲೀ ಬಾಪಾಚೇ ವದನೀ । ತೇಣೇ ಸಾಚಚಿ ತೋ ಸಂತೋಷೋನೀ । ಹೋಯ ಮನೀ ಸುಖಾಚಾ ।।೧೫।। ತೈಶೀಚ ಹೇಹೀ ಕಥಾ । ತೂಚಿ ಗ್ರಂಥು ತೂಚಿ ಕವಿತಾ । ತೇಥೇ ಕೋಣೀ ಧ್ಯಾವೀ ಅಹಂತಾ । "ಮೀ ಕರ್ತಾ" ಮ್ಹಣೌನೀ ।।೧೬।। ಗುರೂನೇ ಸಾಂಡವಿಲೀ "ಅಹಂತಾ" । ಶೇಖೀ ರಾಹೋ ನೇದೀಚ "ಸೋಹಂತಾ" । ತೇಥ ಮೀ ಏಕು ಕವಿ-ಕರ್ತಾ । ಹೇಹೀ ಸರ್ವಥಾ ನ ಸರೇ ಪೈ ।।೧೭।। ಸೂಟಿತಾ ಅಹಂಕಾರಾಚಾ ಝಾಡಾ । ಸೂಚನಾಚಿ ಹೋಯ ತ್ಯಾಚಾ ಜೋಡಾ । ಜೋ ಆಪಣೆಯಾತೇ ಮ್ಹಣವೀ ವೇಡಾ । ತೋಚಿ ಗಾಢಾ ಅತಿಚತುರ ।।೧೮।। ತೈಶೀಚ ಹೇಹೀ ಹೋಈಲ ವಾರ್ತಾ । ಯಾಲಾಗೀ ಶ್ರೀಗುರುನಾಥಾ । ಚರಣೀ ಠೇವಿಲಾ ಮಾಥಾ । ಕರ್ತಾ ಕರವಿತಾ ತೂಚಿ ತೂ ।।೧೯।। ಮಾಗೀಲ ಗ್ರಂಥಸಂಗತೀ । ಪಂಚಮಾಧ್ಯಾಯಾಚೇ ಅಂತೀ । ನಾರದ ವಸುದೇವಾಪ್ರತೀ । ಬೋಲಿಲಾ ಉಪಪತ್ತಿ ತೇ ಐಶೀ ।।೨೦।। ಹಾ ಪರಮಾತ್ಮಾ ಶ್ರೀಹರೀ । ಲೀಲಾವಿಗ್ರಹೇ ದೇಹಧಾರೀ । ಅವತರಲಾ ತುಮಚೇ ಘರೀ । ಭಾಗ್ಯೇ ಕರೀ ನಟನಾಟ್ಯ ।।೨೧।। ಹಾ ಈಶಾಚಾಹೀ ನಿಜಈಶು । ವೈಕುಂಠೀಚಾ ನಿಜವಾಸು । ಪರಮಾತ್ಮಾ ಪರೇಶು । ಜಗದೀಶು ಶ್ರೀಕೃಷ್ಣ ।।೨೨।। ತೇಚಿ ನಾರದವಚನಪ್ರಮಾಣ । ಪ್ರಾರ್ಥಾವಯಾ ಶ್ರೀಕೃಷ್ಣ । ಮಿಳವೋನಿಯಾ ದೇವಗಣ । ದ್ವಾರಕೇಸೀ ಜಾಣ ಸ್ವಯೇ ಆಲೇ ।।೨೩।।

ಶ್ರೀಶುಕ ಉವಾಚ:-

ಅಥ ಬ್ರಹ್ಮಾತ್ಮಜೈರ್ದೇವೈಃ ಪ್ರಜೇಶೈರಾವೃತೋಽಭ್ಯಗಾತ್ ।
ಭವಶ್ಚ ಭೂತಭವ್ಯೇಶೋ ಯಯೌ ಭೂತಗಣೈರ್ವೃತಃ ।।೧।।

ಅರ್ಥ:- ಶುಕಮುನಿಗಳು ನುಡಿದರು : ನಾರದರು ಹೋದನಂತರ ಬ್ರಹ್ಮದೇವನು ತನ್ನ ಪುತ್ರಸನಕಾದಿಕರನ್ನೂ ದೇವತೆಗಳನ್ನೂ ಕೂಡಿಕೊಂಡು ದ್ವಾರಕೆಗೆ ಹೊರಟನು. ಆಗ ಸಕಲ ಜೀವಿಗಳಿಗೆ ಶುಭಪ್ರದನಾದ ಶಿವನು ಕೂಡ ತನ್ನ ಅನೇಕ ಭೂತಗಣಗಳ ಜೊತೆಗೂಡಿ ಅಲ್ಲಿಗೆ ನಡೆದನು.

ಶುಕ ಮ್ಹಣೇ ಪರೀಕ್ಷಿತೀ । ಪಹಾವಯಾ ಶ್ರೀಕೃಷ್ಣಮೂರ್ತೀ । ಸುರವರ ದ್ವಾರಕೇಸೀ ಯೇತೀ । ವಿಚಿತ್ರ ಸ್ತುತಿ ತಿಹೀ ಕೇಲೀ ।।೨೪।।

ನಿನ್ನ ಕೃಪೆಯ ಮಹತ್ವವು ನಿಜವಾಗಿಯೂ ಆಶ್ಚರ್ಯಕಾರಕವಾಗಿದೆ. ಅದು ತತ್ಕಾಲದಲ್ಲಿ ಅರ್ಥರೂಪ ಗಣಿಯನ್ನೇ ತೆರೆಯಿತು. ಆದರಿಂದ ಕವಿತ್ವವು ಮತ್ತು ಬೇಕಾಗುವಷ್ಟು ಸಾಹಿತ್ಯವು ಹೊರಗೆ ಬೀಳಹತ್ತಿದವು ।।೧೩।। ಸಿದ್ಧಗೊಳಿಸಿದ ತನ್ನ ಅಲಂಕಾರಗಳನ್ನು ಧರಿಸಲು ಯಾವ ಕಷ್ಟವಾಗುವುದು? ಸೂತ್ರಗೊಂಬೆ ಆಡಿಸುವವನು ಗೊಂಬೆಗಳಿಂದ ತಾಳವನ್ನು ಹಿಡಿಸಿ ಕುಣಿಸಲು ಆಗ ಆ ಗೊಂಬೆಗಳ ಕೈಗಳಿಗೆ ಕಷ್ಟವು ಹೇಗಾಗುವುದು? ।।೧೪।। ತಂದೆಯ ತಾಟಿನಲ್ಲಿಯ ಪಕ್ವಾನ್ನವನ್ನು ಕೈಯಲ್ಲಿ ತೆಗೆದುಕೊಂಡು ಬಾಲಕನು ತಂದೆಯ ಮುಖದಲ್ಲಿ ಹಾಕಲು ಆಗ ತಂದೆಗೆ ನಿಜವಾಗಿಯೂ ಸುಖವಾಗುವುದು ಮತ್ತು ಮನವು ಪ್ರಸನ್ನವಾಗುವುದು ।।೧೫।। ಹೀಗೆಯೇ ಈ ಕಥೆಯಾಗಿದೆ. ಗ್ರಂಥವೂ ನೀನೇ ಮತ್ತು ಕವಿತೆಯೂ ನೀನೇ. ಹೀಗಿರಲು ಅಲ್ಲಿ ನಾನು ಕರ್ತನೆಂದು ಅಹಂಕಾರವನ್ನು ಯಾರು ಹಿಡಿಯಬೇಕು? ।।೧೬।। ಗುರುಗಳು ನನ್ನಲ್ಲಿರುವ ಅಹಂಕಾರವನ್ನು ತೆಗೆದೊಗೆದಿರುವರು. ಕೊನೆಗೆ ಸೋಽಹಂ ಭಾವವನ್ನು ಇರಗೊಡಲಿಲ್ಲ. ಆದ್ದರಿಂದಲೇ ನನ್ನಲ್ಲಿ ನಾನು ಕವಿ, ಕರ್ತನು ಎಂಬ ಭಾವನೆಯು ಉಳಿಯಲಿಲ್ಲ ।।೧೭।। ಲೌಕಿಕ ಅಹಂಕಾರವನ್ನು ತ್ಯಾಗ ಮಾಡಿದಾಗ ಶಾಸ್ತ್ರೀಯ ಅಹಂಕಾರವು ಅಂಟಿಕೊಳ್ಳುವುದು. ಆದ್ದರಿಂದ ಯಾರು ತನಗೆ ಅಜ್ಞಾನಿ ಎಂದು ತಿಳಿಯುವನೋ ಆತನೇ ಮಹಾ ಚತುರನು ಮತ್ತು ಜ್ಞಾನಿಯಾಗಿರುವನು ।।೧೮।। ನಾನು ಗ್ರಂಥಕರ್ತನು ಎಂದರೆ ನನ್ನದು ಅದೇ ಅವಸ್ಥೆಯಾಗುವುದು. ಆದ್ದರಿಂದ ಹೇ ಗುರುರಾಯನೇ, ನಾನು ನಿನ್ನ ಚರಣಗಳಲ್ಲಿ ಮಸ್ತಕವನ್ನಿಡುವೆ. ಮಾಡುವ, ಮಾಡಿಸುವವನು ನೀನೇ ಆಗಿರುವೆ ।।೧೯।। ಹಿಂದಿನ ಅಧ್ಯಾಯದಲ್ಲಿ ಕಥೆಯ ಸಂದರ್ಭವು ಹೀಗಿದೆ, ಐದನೆಯ ಅಧ್ಯಾಯದ ಕೊನೆಯಲ್ಲಿ ನಾರದನು ವಸುದೇವನಿಗೆ ಹೀಗೆ ಉಪಪತ್ತಿಯನ್ನು ಹೇಳಿದನು ।।೨೦।। ಶ್ರೀಹರಿಯು ಸಾಕ್ಷಾತ್ ಪರಮಾತ್ಮನಾಗಿದ್ದು, ಆತನು ಲೀಲೆಯಿಂದ ಮನುಷ್ಯದೇಹವನ್ನು ಧರಿಸಿ ನಿಮ್ಮ ಮನೆಯಲ್ಲಿ ಅವತರಿಸಿರುವನು. ನಿಮ್ಮ ಭಾಗ್ಯದಿಂದ ಆತನು ಅನೇಕ ಲೀಲೆಗಳನ್ನು ಮಾಡುವನು ।।೨೧।। ಶ್ರೀಕೃಷ್ಣನು ಈಶ್ವರನಿಗೆ ಈಶ್ವರನು, ವೈಕುಂಠದ ಸಾಮ್ರಾಟನು, ಪರಮಾತ್ಮನು, ಪರೇಶನು, ಜಗದೀಶನಾಗಿರುವನು ।।೨೨।। ನಾರದರ ಈ ವಚನಗಳಿಗೆ ಪ್ರಮಾಣ ಭಾವಿಸಿ ಶ್ರೀಕೃಷ್ಣನ ಪ್ರಾರ್ಥನೆಯನ್ನು ಮಾಡುವುದಕ್ಕಾಗಿ ಸರ್ವದೇವತೆಗಳ ಸಮುದಾಯವು ಒಂದೆಡೆ ಸೇರಿ ದ್ವಾರಕಾ ನಗರಕ್ಕೆ ಬಂದರು ।।೨೩।।

ಶುಕಾಚಾರ್ಯರು ಹೇಳಿದರು ; ಹೇ ಪರೀಕ್ಷಿತ ರಾಜನೇ, ಶ್ರೀಕೃಷ್ಣನ ಮೂರ್ತಿಯನ್ನು ನೋಡುವುದಕ್ಕಾಗಿ ಸ್ವರ್ಗದಲ್ಲಿನ ಸರ್ವ ದೇವತೆಗಳು ದ್ವಾರಕಾ ನಗರಕ್ಕೆ ಆಗಮಿಸಿದರು. ಅವರು ವಿಚಿತ್ರವಾಗಿ ಸ್ತುತಿಮಾಡಲು ಆರಂಭಿಸಿದರು ।।೨೪।।

ಶ್ರೀಕೃಷ್ಣಮೂರ್ತೀಚೇ ಕವತಿಕ । ಪಹಾವಯಾ ದೇವ ಸಕಳಿಕ । ಚತುರ್ಮುಖ ಪಂಚಮುಖ । ವೇಗೇ ಷಣ್ಮುಖ ಪಾತಲೇ ॥೨೫॥ ಕರಾವಯಾಸ ಪ್ರಜಾಉತ್ಪತ್ತೀ । ಪೂರ್ವೀ ನೇಮಿಲಾ ಪ್ರಜಾಪತೀ । ತೋಹೀ ಆಲಾ ದ್ವಾರಕೇಪ್ರತೀ । ಕೃಷ್ಣಮೂರ್ತಿ ಪಹಾವಯಾ ॥೨೬॥ ಸನಕಾದಿಕ ಆತ್ಮಾರಾಮ । ಅವಾಪ್ತ ಸಕಳಕಾಮ । ತೇಹೀ । ಹೋಊನಿ ಆಲೇ ಸಕಾಮ । ಮೇಘಶ್ಯಾಮ ಪಹಾವಯಾ ॥೨೭॥ ಭೂತನಾಯಕ ರುದ್ರಗಣ । ಆಲೇ ಅಕರಾಹೀ ಜಣ । ಪಹಾವಯಾ ಶ್ರೀಕೃಷ್ಣ । ಭೂತಗಣ ಸಮವೇತ ॥೨೮॥ ಪಹಾವಯಾ ಶ್ರೀಕೃಷ್ಣರಾವೋ । ಘೇವೂನಿ ಗಣಾಂಚಾ ಸಮುದಾವೋ । ದ್ವಾರಕೇ ಆಲಾ ಮಹಾದೇವೋ । ಭೂತಭವಿಷ್ಯಾಂಚಾ ಪಹಾ ಹೋ ತ್ರಿಕಾಳಜ್ಞಾತಾ ॥೨೯॥ ಶ್ರೀಕೃಷ್ಣದರ್ಶನಾಚೀ ಉತ್ಕಂಠಾ । ಥೋರ ಲಾಗಲೀ ನೀಲಕಂಠಾ । ಧಾವಂತಾ ಮೋಕಳ್ಯಾ ಸುಟಲ್ಯಾ ಜಟಾ । ಕೃಷ್ಣವರಿಷ್ಠಾ ಪಹಾವಯಾ ॥೩೦॥

ಇಂದ್ರೋ ಮರುದ್ಭಿರ್ಭಗವಾನಾದಿತ್ಯಾ ವಸವೋಽಶ್ವಿನೌ । ಋಭವೋಽಂಗಿರಸೋ ರುದ್ರಾ ವಿಶ್ವೇ ಸಾಧ್ಯಾಶ್ಚ ದೇವತಾ ॥೨॥
ಗಂಧರ್ವಾಪ್ಸರಸೋ ನಾಗಾಃ ಸಿದ್ಧಚಾರಣಗುಹ್ಯಕಾಃ । ಋಷಯಃ ಪಿತರಶ್ಚೈವ ಸವಿದ್ಯಾಧರಕಿನ್ನರಾಃ ।
ದ್ವಾರಕಾಮುಪಸಂಜಗ್ಮುಃ ಸರ್ವೇ ಕೃಷ್ಣದಿದೃಕ್ಷವಃ ॥೩॥

ಅರ್ಥ:- ದೇವತೆಗಳೊಂದಿಗೆ ಇಂದ್ರ, ಹನ್ನೆರಡು ಆದಿತ್ಯರು, ಎಂಟು ವಸುಗಳು, ಇಬ್ಬರು ಅಶ್ವಿನಿಕುಮಾರರು, ಋಭು, ಅಂಗಿರಸ, ಹನ್ನೊಂದು ರುದ್ರರು, ಹತ್ತು ವಿಶ್ವದೇವರು, ಸಾಧ್ಯಾ ಇತರ ದೇವತೆಗಳು, ಗಂಧರ್ವರು, ಅಪ್ಸರೆಯರು, ನಾಗ, ಸಿದ್ಧ, ಚಾರಣ, ಗುಹಕ, ಋಷಿ, ವಿದ್ಯಾಧರ ಮತ್ತು ಕಿನ್ನರರು ಇವರೊಂದಿಗೆ ಪಿತರರು ಇವರೆಲ್ಲರೂ ಶ್ರೀಕೃಷ್ಣನನ್ನು ಕಾಣಲು ದ್ವಾರಕಾನಗರಕ್ಕೆ ಆಗಮಿಸಿದರು.

ಏಕುಣಪನ್ನಾಸ ಮರುದ್ಗಣ । ತೇಣೇಸಿ ಇಂದ್ರ ಆಲಾ ಆಪಣ । ಪಹಾವಯಾ ಶ್ರೀಕೃಷ್ಣ । ಸ್ವಯೇ ಜಾಣ ಸಾದರ ॥೩೧॥ ಸಾಂಡೋನಿಯಾ ರವಿಮಂಡಳಾ । ಬಾರಾ ಆದಿತ್ಯಾಂಚಾ ಮೇಳಾ । ಪಹಾವಯಾ ಕೃಷ್ಣ ಸೋಹಳಾ । ತೃಷಿತ ಡೋಳಾ ಹೋಊನಿ ಆಲೇ ॥೩೨॥ ಸೂರ್ಯ ಅಧಿಷ್ಠಿಲಾ ಡೋಳಾ । ದೇಖೇ ಪದಾರ್ಥ ಸಕಳಾ । ಕೃಷ್ಣ ನ ದೇಖತಾ ಆಂಧಳಾ । ಸೂರ್ಯೋ ಪಾವಲಾ ಅಂಧತ್ವ ॥೩೩॥ ಪಾಹತಾ ಶ್ರೀಕೃಷ್ಣಾಚೇ ಮುಖಕಮಳ । ಫಿಟಲೇ ಸೂರ್ಯಾಚೇ ಪಟಳ । ಮಗ ದೇಖಣಾ ಝಾಲಾ ಕೇವಳ । ಸರ್ವಾಂಗೇ ಸಕಳ ಸ್ವಯೇ ರವಿ ॥೩೪॥ ತಿನ್ಹೀ ಅಗ್ನೀ ತೇಜಾಳೇ । ಪರೀ ತೇ ಧೂಮೇ ಝಾಂಕೋಳಲೇ । ಕೃಷ್ಣ ದೇಖತಾಂಚ ಉಜಳಲೇ । ನಿರ್ಧೂಮ ಜಾಹಲೇ ನಿಜತೇಜೇ ॥೩೫॥ ಆತಾ ವಸೂಂಚಾ ಮೇಳಾ । ಪಾಹೋ ಆಲಾ ಕೃಷ್ಣಲೀಲಾ । ಮ್ಹಣೇ ಮದನಾಚಾ ಪುತಳಾ । ತಂವ ತೋ ಖೇಳೇ ಲೀಲಾ ಕೃಷ್ಣಾಂಕೀ ॥೩೬॥ ಅಶ್ವಿನೀಕುಮಾರ ಧನ್ವಂತರೀ । ತೇಹೀ ಭವರೋಗೇ ಪೀಡಿಲೇ ಭಾರೀ । ಕೃಷ್ಣದರ್ಶನಾಮೃತಕರೀ । ನಿರುಜ ಕ್ಷಣಾವರೀ ತೇ ಜಾಹಲೇ ॥೩೭॥

ಶ್ರೀಕೃಷ್ಣನ ಕೌತುಕವನ್ನು ನೋಡುವುದಕ್ಕಾಗಿ ಚತುರ್ಮುಖ ಬ್ರಹ್ಮದೇವನು, ಪಂಚಮುಖ ಶಂಕರನು, ಷಣ್ಮುಖ ಕಾರ್ತಿಕಸ್ವಾಮಿ ಬಂದರು ॥೨೫॥ ಪೂರ್ವದಲ್ಲಿ ಪ್ರಜೆಗಳನ್ನು ಉತ್ಪನ್ನಗೊಳಿಸಲು ಪ್ರಜಾಪತಿಯನ್ನು ನೇಮಿಸಲಾಗಿತ್ತು. ಆತನೂ ಸಹ ಕೃಷ್ಣನಮೂರ್ತಿಯನ್ನು ನೋಡುವುದಕ್ಕಾಗಿ ದ್ವಾರಕೆಗೆ ಬಂದನು ॥೨೬॥ ಆತ್ಮಸ್ವರೂಪದಲ್ಲಿ ರಮಮಾಣರಾಗಿರುವ ಮತ್ತು ಅವರ ಎಲ್ಲ ಕಾರ್ಯಗಳೂ ಪರಿಪೂರ್ಣವಾಗಿರುವ ಸನಕಾದಿಕ ನಿಷ್ಕಾಮ ಭಕ್ತರು ಸಕಾಮರಾಗಿ ಮೇಘಶ್ಯಾಮನನ್ನು ನೋಡಲು ಬಂದರು ॥೨೭॥ ಭೂತನಾಮಕ ಹನ್ನೊಂದು ರುದ್ರರೂ ಭೂತಗಣ ಸಮೇತರಾಗಿ ಶ್ರೀಕೃಷ್ಣನನ್ನು ಕಾಣಲು ಬಂದರು ॥೨೮॥ ಭೂತ ಭವಿಷ್ಯಗಳನ್ನು ಅರಿಯುವ ತ್ರಿಕಾಲಜ್ಞಾನಿಯಾದ ಮಹಾದೇವರು ತಮ್ಮ ಗಣಗಳ ಸಮುದಾಯದೊಂದಿಗೆ ಶ್ರೀಕೃಷ್ಣನನ್ನೂ ನೋಡಲು ದ್ವಾರಕೆಗೆ ಬಂದರು ॥೨೯॥ ಶಂಕರನಿಗೆ ಶ್ರೀಕೃಷ್ಣನ ದರ್ಶನದ ಎಷ್ಟೊಂದು ಉತ್ಕಟೇಚ್ಛೆ ಆಯಿತೆಂದರೆ, ಆತನು ಶ್ರೀಕೃಷ್ಣನನ್ನು ಕಾಣಲು ಧಾವಿಸುತ್ತ ಬರುತ್ತಿರಲು ಆತನ ಕಟ್ಟಿದ್ದ ಜಟೆಗಳು ಬಿಡಿಬಿಡಿಯಾದವು ॥೩೦॥

ನಲವತ್ತೊಂಬತ್ತು ಮರುದ್ಗಣ ಸಹ ಇಂದ್ರನು ಬಹುಭಕ್ತಿಭಾವದಿಂದ ಶ್ರೀಕೃಷ್ಣನನ್ನು ದರ್ಶನ ಪಡೆಯಲು ಬಂದನು ॥೩೧॥ ಸೂರ್ಯಮಂಡಲವನ್ನು ಬಿಟ್ಟು ಹನ್ನೆರಡು ಆದಿತ್ಯರ ಮೇಳವು ಶ್ರೀಕೃಷ್ಣನ ದರ್ಶನ ಸುಖ ಪಡೆಯಲು ಅತ್ಯಂತ ತೃಷಿತರಾಗಿ ಆಗಮಿಸಿದರು ॥೩೨॥ ಸೂರ್ಯನ ನೇತ್ರಗಳಲ್ಲಿ ಜ್ಯೋತಿಯು ಸ್ಥಾಪನೆಯಾಗಿರುವುದರಿಂದ ಆತನು ಎಲ್ಲ ಪದಾರ್ಥಗಳನ್ನು ಕಾಣುವನು. ಆದರೆ ಕೃಷ್ಣದರ್ಶನವಿಲ್ಲದ್ದರಿಂದ ಸೂರ್ಯನು ಕುರುಡನಾಗಿದ್ದನು ॥೩೩॥ ಶ್ರೀಕೃಷ್ಣನ ಮುಖಕಮಲವನ್ನು ಕಂಡಾಕ್ಷಣಕ್ಕೆ ಸೂರ್ಯನ ಕಣ್ಣಿನ ಪೊರೆಗಳು ಹರಿದು ಹೋದವು. ಆಗ ಸೂರ್ಯನು ಸರ್ವಾಂಗದಿಂದ ನೋಡುವವನಾದನು ॥೩೪॥ ಮೂರು ಅಗ್ನಿಗಳು ಅಂದರೆ ಗಾರ್ಹಪತ್ಯ, ದಕ್ಷಿಣ ಮತ್ತು ಆಹವನೀಯ ಇವು ಮೂಲದಲ್ಲಿ ತೇಜಃಪುಂಜರು ನಿಜ. ಆದರೆ ಅವು ಹೊಗೆಯಿಂದ ಮುಚ್ಚಲ್ಪಟ್ಟಿದ್ದವು. ಅವರು ಶ್ರೀಕೃಷ್ಣನನ್ನು ಕಾಣುತ್ತಲೇ ಮುಚ್ಚಿದ್ದ ಹೊಗೆಯು ದೂರಾಗಿ ಮೂಲದಲ್ಲಿದ್ದ ತೇಜದಿಂದ ಪ್ರಕಾಶಮಾನರಾದರು ॥೩೫॥ ಎಂಟು ವಸುಗಳ ಗುಂಪು ಕೃಷ್ಣನ ಲೀಲೆಯನ್ನು ಅವಲೋಕಿಸಲು ಬಂದಿತು. ಇವರು ಶ್ರೀಕೃಷ್ಣನನ್ನು ನೋಡುತ್ತಲೇ ಈತನು ಕೇವಲ ಮದನನ ಮೂರ್ತಿಯಾಗಿರುವನು ಎಂದು ಹೇಳಿದರು. ಆಗ ಆ ಮದನನು ಶ್ರೀಕೃಷ್ಣನ ತೊಡೆಯ ಮೇಲೆ ಲೀಲೆಯಿಂದ ಆಡುತ್ತಿರುವ ದೃಶ್ಯವು ಅವರ ದೃಷ್ಟಿಗೆ ಬಿದ್ದಿತು ॥೩೬॥ ಅಶ್ವಿನಿಕುಮಾರರು ಮಹಾಧನ್ವಂತರಿಯಾಗಿದ್ದರು. ಆದರೆ ಇವರು ಭವರೋಗದಿಂದ ಅತಿಶಯವಾಗಿ ತೊಂದರೆಗೀಡಾಗಿದ್ದರು. ಶ್ರೀಕೃಷ್ಣ ದರ್ಶನರೂಪ ಅಮೃತದ ಸೇವನೆಯಿಂದ ಇವರು ನಿರೋಗಿಯಾದರು ॥೩೭॥

ಋಷಭದೇವ ಅಂಗಿರಸ । ರುದ್ರ ಮಿನಲೇ ಅಸಮಸಾಹಸ । ವಿಶ್ವೇ-ಸಾಧ್ಯದೇವ ಬಹುವಸ । ದೇವಿ ಆಕಾಶ ದಾಟಲೇ ॥೩೮॥ ಆಮುಚೀ ಗಾಯನಕಳಾ ಮೋಠೀ । ಹೋತೇ ಗಂಧರ್ವಾಂಚ್ಯಾ ಪೋಟೀ । ತೇ ಕೃಷ್ಣ ವೇಣುಗೀತಾಸಾಠೀ । ಜಾಹಲೀ ಶೇವಟೀ ನ ಸರತೀ ॥೩೯॥ ಯಾಲಾಗೀ ದರ್ಶನಾಚೀ ಆಸ । ಕ್ಷಣಕ್ಷಣಾ ಪಾಹತೀ ವಾಸ । ತ್ಯಾಂಸೀ ಗಾಯನಕಳಾ ಸಾವಕಾಶ । ದಿಧಲೀ ಸುರಸ ಕೃಪಾಮಾತ್ರೆ ॥೪೦॥ ಅಪ್ಸರಾ ಮ್ಹಣತೀ ಆಮ್ಹೀ ನಾಚಣೀ । ತಂವ ಕಾಳಿಯಾಚ್ಯಾ ಫಣಾರಂಗಣೀ । ಏಕೇಚಿ ತಾಲೇ ಲಾಜವೂನೀ । ತತ್ಕ್ಷಣೀ ಸಾಂಡಿಲ್ಯಾ ॥೪೧॥ ತ್ಯಾ ದೀನವದನಾ ಕಾಮಿನೀ । ಆಲ್ಯಾ ದರ್ಶನಾಲಾಗೋನೀ । ನಾಚೋ ಶಿಕವಿಲ್ಯಾ ನಾಚಣೀ । ರಾಸರಂಗಣೀ ಭ್ರುಕುಟಿಮಾತ್ರೆ ॥೪೨॥ ಪಹಾವಯಾ ಶ್ರೀರಂಗ । ಆಲೇ ಪಾತಾಳೀಚೇ ಪನ್ನಗ । ಸಿದ್ಧ ಚಾರಣ ಅನೇಗ । ವಿದ್ಯಾಧರ ಸಾಂಗ ಸಮುದಾಯೇ ॥೪೩॥ ಕಶ್ಯಪಾದಿ ಋಷೀಶ್ವರ । ಅಮರ್ಯಾದಿ ಪಿತರ । ಗುಹ್ಯಕ ಆಣಿ ಕಿನ್ನರ । ಆಲೇ ಅಪಾರ ಸ್ವಗಣೇಸೀ ॥೪೪॥ ಏವಂ ವಿಮಾನಾಂಚಿಯಾ ಪಂಕ್ತೀ । ದಾಟಲಿಯಾ ದ್ವಾರಕೇಪ್ರತೀ । ಪಹಾವಯಾ ಕೃಷ್ಣ ಮೂರ್ತೀ । ಆಲೇ ಸುರಪತೀ ಸ್ವಾನಂದೇ ॥೪೫॥

ವಪುಷಾ ಯೇನ ಭಗವಾನ್ನಾರಲೋಕಮನೋರಮಃ । ಯಶೋ ವಿತೇನೇ ಲೋಕೇಷು ಸರ್ವಲೋಕಮಲಾಪಹಮ್ ॥೯॥

ಅರ್ಥ:- ಯಾವ ಶರೀರದಿಂದ ಮನುಷ್ಯ ಲೋಕದಲ್ಲಿ ಮನೋಹರನಾಗಿರುವ ಭಗವಾನನು ಸರ್ವ ಲೋಕಗಳಲ್ಲಿ ಸರ್ವ ಜನರ ಪಾಪಗಳನ್ನು ನಾಶ ಮಾಡುವ ಯಶವನ್ನು ವಿಸ್ತರಿಸಿದನು.

ಜೇಣೇ ಶರೀರೇ ಶ್ರೀಹರೀ । ನಾನಾ ಚರಿತ್ರಾಂತೇ ಕರೀ । ಯಶ ವಿಸ್ತಾರಿಲೇ ಸಂಸಾರೀ । ದುರಾಚಾರೀ ತರಾವಯಾ ॥೪೬॥ ಐಕತಾ ಶ್ರೀಕೃಷ್ಣ ಕೀರ್ತೀ । ಚತುರ್ವಿಧ ಪ್ರಾಯಶ್ಚಿತ್ತಾಂಚೀ ಗತೀ । ಖುಂಟಲೀ ಜೀ ನಿಶ್ಚಿತೀ ಶ್ರವಣಾರ್ಥೀ ಸಾದರ ಜಾಹಲಿಯಾ ॥೪೭॥ ಭಾವೇ ಘೇತಲಿಯಾ ಶ್ರೀಕೃಷ್ಣನಾಮ । ಸಕಳ ಪಾತಕಾ ಕರೀ ಭಸ್ಮ । ದೇವೀ ದೇಖಿಲಾ ಪುರುಷೋತ್ತಮ । ವಿಶ್ರಾಮಧಾಮ ಜಗಾಚೇ ॥೪೮॥ ಠಾಣಠಕಾರೇ ಅತಿಉತ್ತಮ । ಸುರನರಾಮಾಜೀ ಮನೋರಮ । ಡೋಳ್ಯಾ ಜಾಹಲಾ ವಿಶ್ರಾಮ । ಮೇಘಶ್ಯಾಮ ದೇಖೋನೀ ॥೪೯॥ ಮುಕುಟಕುಂಡಲೇ ಮೇಖಲಾ । ಕಾಂಸೇ ಕಸಿಲಾ ಸೋನಸಳಾ । ಕಂಠೀ ರುಳೇ ವನಮಾಳಾ । ಘನಸಾಂವಳಾ ಶೋಭತು ॥೫೦॥ ಲಾವಣ್ಯಗುಣನಿಧಾನ । ಅವತಾರಮಾಳೇ ಮುಖ್ಯ ರತ್ನ । ದೇವೀ ದೇಖಿಲಾ ಶ್ರೀಕೃಷ್ಣ । ನಿವಾಸಸ್ಥಾನ ದ್ವಾರಕಾ ॥೫೧॥

ಋಷಭದೇವ, ಅಂಗಿರಸ, ಅನುಪಮ್ಯ ಧೈರ್ಯದ ರುದ್ರನು ಹೀಗೆ ಎಲ್ಲರೂ ಬಂದರು. ವಿಶ್ವದೇವ ಸಾಧ್ಯದೇವ ಇತ್ಯಾದಿ ಅನೇಕ ದೇವತೆಗಳಿಂದ ಆಕಾಶವು ತುಂಬಿಹೋಗಿತ್ತು ॥೩೮॥ ಗಂಧರ್ವರಿಗೆ ತಮ್ಮ ಗಾಯನದ ಕಲೆಯಬಗ್ಗೆ ಬಹಳ ಅಭಿಮಾನವು ಉಂಟಾಗಿತ್ತು. ಆದರೆ ಕೃಷ್ಣನ ಮುರಲಿಯಿಂದ ಹೊರಹೊಮ್ಮಿದ ಸ್ವರವೈಭವವನ್ನು ಕೇಳಿ ಅವರ ಅಭಿಮಾನವು ಇಲ್ಲದಾಯಿತು ॥೩೯॥ ಅವರಿಗೆ ಶ್ರೀಕೃಷ್ಣದರ್ಶನದ ಅತಿಶಯವಾಗಿ ತೀವ್ರ ಇಚ್ಛೆಯು ಉಂಟಾಗಿತ್ತು. ಕ್ಷಣಕ್ಷಣಕ್ಕೂ ಅವರು ದರ್ಶನದ ದಾರಿಕಾಯುತ್ತಿದ್ದರು. ಶ್ರೀಕೃಷ್ಣನು ಅವರಿಗೆ ಕೃಪಾದೃಷ್ಟಿಯಿಂದ ಸುರಸವಾದ ಗಾಯನ ಕಲೆಯನ್ನು ನೀಡಿದನು ॥೪೦॥ ಅಪ್ಸರೆಯರು ಹೀಗೆಂದರು, ಇಂದಿನವರೆಗೆ ನಮಗೆ ನಮ್ಮ ನೃತ್ಯವು ಶ್ರೇಷ್ಠವೆಂದು ಅನಿಸುತ್ತಿತ್ತು. ಆದರೆ ಶ್ರೀಕೃಷ್ಣನು ಕಾಲಿಯಾ ಸರ್ಪದ ಹೆಡೆಯ ಮೇಲೆ ಒಂದೇ ತಾಳದಲ್ಲಿ ಕುಣಿಕುಣಿದು ನಮಗೆಲ್ಲರನ್ನೂ ನಾಚಿಸಿದನು ॥೪೧॥ ಆ ಅಪ್ಸರೆಯರು ಮ್ಲಾನವದನರಾಗಿ ದರ್ಶನಕ್ಕಾಗಿ ಬಂದಿದ್ದರು. ಈ ನೃತ್ಯಾಂಗನೆಯರನ್ನೂ ರಾಸಕ್ರೀಡೆಯಲ್ಲಿ ನೇತ್ರ ಸಂಕೇತಗಳಿಂದ ಇವರನ್ನು ಶ್ರೀಕೃಷ್ಣನು ನೃತ್ಯಕಲೆಯಲ್ಲಿ ಪಾರಾಂಗತಗೊಳಿಸಿದನು ॥೪೨॥ ಶ್ರೀಕೃಷ್ಣನನ್ನು ನೋಡುವುದಕ್ಕಾಗಿ ಪಾತಾಳದಲ್ಲಿನ ನಾಗಗಳು ಸಹ ಬಂದಿದ್ದವು. ಅನೇಕ ಸಿದ್ಧರು, ಚಾರಣರು, ವಿದ್ಯಾಧರರ ಸರ್ವ ಸಮುದಾಯವೂ ಆಗಮಿಸಿದ್ದವು ॥೪೩॥ ಕಶ್ಯಪಾದಿ ಮಹಾಮಹಾ ಋಷಿಗಳು ಅಮರ್ಯಾದಿ ಪಿತರು ಗುಹಕರು ಮತ್ತು ಕಿನ್ನರರು ತಮ್ಮ ಅಸಂಖ್ಯ ಗಣಗಳೊದಿಂಗೆ ಇಲ್ಲಿಗೆ ಬಂದರು ॥೪೪॥ ದ್ವಾರಕೆಯಲ್ಲಿ ವಿಮಾನಗಳು ಕಿಕ್ಕಿರಿದು ತುಂಬಿದವು. ಕೃಷ್ಣಮೂರ್ತಿಯನ್ನು ಕಾಣುವುದಕ್ಕಾಗಿ ದೇವತೆಗಳು ಆನಂದದಿಂದ ಅಲ್ಲಿಗೆ ಬಂದರು॥೪೫॥

ಶ್ರೀಕೃಷ್ಣನು ಈ ಯಾವ ಅವತಾರ ಶರೀರದಿಂದ ಅನೇಕ ಪ್ರಕಾರದ ಚರಿತ್ರೆಗಳನು ಮಾಡಿ ದುರಾಚಾರಿ ಜನರನ್ನು ಸಂಸಾರಸಾಗರದಿಂದ ಪಾರಾಗುವುದಕ್ಕಾಗಿ ಯಶವನ್ನು ನಿರ್ಮಾಣಗೊಳಿಸಿದನು ॥೪೬॥ ಈ ಯಾವ ಶ್ರೀಕೃಷ್ಣನ ಕೀರ್ತಿಯನ್ನು ಬಹು ಆದರದಿಂದ ಕೇಳುವುದರಿಂದ ನಾಲ್ಕು ಪ್ರಕಾರದ ಪ್ರಾಯಶ್ಚಿತ್ತಗಳ ಗತಿಯು ಕುಂಠಿತವಾಗಿ ಬಿಡುವುದು ॥೪೭॥ ಭಕ್ತಿಭಾವದಿಂದ ಈತನ ನಾಮವನ್ನು ತೆಗೆದುಕೊಂಡರೆ, ಸರ್ವಪಾಪಗಳು ಭಸ್ಮವಾಗುವುವು. ಈ ಯಾವ ಕೃಷ್ಣರೂಪ ಪುರುಷೋತ್ತಮನು ಸರ್ವ ಜಗತ್ತಿನ ವಿಶ್ರಾಂತಿಸ್ಥಾನನು. ಹೀಗಿರುವ ಪುರುಷೋತ್ತಮನನ್ನು ದೇವತೆಗಳೆಲ್ಲರೂ ಕಂಡರು ॥೪೮॥ ಈತನ ಶರೀರದ ಅವಯವಗಳು ಅತ್ಯಂತ ಸುರೇಖವಾಗಿರುವುವು. ಸುರನರರಲ್ಲಿ ಈತನು ಅತ್ಯಂತ ಮನೋಹರನಾಗಿ ಕಾಣುವವನಾಗಿರುವನು. ಈ ಘನಶ್ಯಾಮನನ್ನು ಕಂಡು ದೇವತೆಗಳ ನೇತ್ರಗಳು ತೃಪ್ತವಾದವು ॥೪೯॥ ಕಿರೀಟವನ್ನು ಧರಿಸಿರುವ ಕರ್ಣಗಳಲ್ಲಿ ಕುಂಡಲಗಳು ನಡುವಿಗೆ ಹಳದಿ ಭರ್ಜರಿ ಪೀತಾಂಬರವನ್ನು ತೊಟ್ಟಿರುವ ಕಂಠದಲ್ಲಿ ನಿಡಿದಾದ ವನಮಾಲೆಯು ಇವುಗಳಿಂದ ಈ ಘನನೀಲನು ಅತಿಶಯವಾಗಿ ಶೋಭಿಸುತ್ತಿದ್ದನು ॥೫೦॥ ಲಾವಣ್ಯದ ಮತ್ತು ಗುಣದ ಭಾಂಡಾರವೇ ಆಗಿರುವ ಮತ್ತು ಅವತಾರ ಮಾಲೆಯಲ್ಲಿನ ಮುಖ್ಯ ರತ್ನನಾಗಿರುವ ದ್ವಾರಕಾಧೀಶ ಶ್ರೀಕೃಷ್ಣನನ್ನು ದೇವತೆಗಳು ಕಂಡರು ॥೫೧॥

ತಸ್ಯಾಂ ವಿಭ್ರಾಜಮಾನಾಯಾಂ ಸಮೃದ್ಧಾಯಾಂ ಮಹರ್ದ್ಧಿಭಿಃ ।
ವ್ಯಚಕ್ಷತಾವಿತೃಪ್ತಾಕ್ಷಾಃ ಕೃಷ್ಣಮದ್ಭುತದರ್ಶನಮ್ ।೫॥

ಅರ್ಥ:- ದ್ವಾರಕಾಪುರವು ಸರ್ವ ಪ್ರಕಾರದ ಸಂಪತ್ತಿನಿಂದ ಮತ್ತು ಐಶ್ವರ್ಯಗಳಿಂದ ಸಮೃದ್ಧವಾಗಿತ್ತು. ಹಾಗೆಯೇ ಅಲೌಕಿಕವಾದ ಪ್ರಕಾಶದಿಂದ ದೇದಿಪ್ಯಮಾನವಾಗಿತ್ತು .ಇಲ್ಲಿಗೆ ಬಂದು ಆ ಎಲ್ಲ ಭಾಗ್ಯವಂತರು ಶ್ರೀಕೃಷ್ಣನ ದರ್ಶನ ಪಡೆದರು. ಭಗವಂತನ ರೂಪಮಾಧುರ್ಯದ ಅಲ್ಪಸಮಯ ದರ್ಶನಪಡೆದು ಅವರಿಗೆ ತೃಪ್ತಿಯಾಗಲಿಲ್ಲ. ಇವರೆಲ್ಲರೂ ಒಂದೇಸವನೆ ಆ ಸುಂದರ ಶ್ರೀಕೃಷ್ಣನತ್ತ ನೋಡುತ್ತಿದ್ದರು.

ಕೃಷ್ಣೇ ಅಧಿಷ್ಠಿಲೀ ಪುರೀ । ಕನಕಕಳಸಾಂಚಿಯಾ ಹಾರೀ । ರತ್ನೇ ಜಡಿಲೀ ನಾನಾ ಕುಸರೀ । ತೇಜ ಅಂಬರೀ ನ ಸಮಾಯೇ ।।೪೨।। ಜೇ ದ್ವಾರಕೇಭೀತರೀ । ಕಾಮಧೇನು ಘರೋಘರೀ । ಕಲ್ಪದ್ರುಮಾಂಚಿಯಾ ಹಾರೀ । ಖೇಳಣೇ ದ್ವಾರೀ ಚಿಂತಾಮಣೀಂಚೇ ।೪೩॥ ದ್ವಾರಕಾಜನನಿವಾಸಿಯಾಂಸೀ । ಘರೀ ನವರತ್ನಾಂಚಿಯಾ ರಾಶೀ । ಋದ್ಧಿಸಿದ್ಧಿ ಕರೂನಿ ದಾಸೀ । ಹೃಷೀಕೇಶೀ ನಾಂದತು ।೪೪॥ ಕೃಷ್ಣರೂಪಾಚಿಯಾ ಲಾಲಸೇ । ಡೋಳ್ಯಾ ತೇಣೇ ಲಾವಿಲೇ ಪಿಸೇ । ಆವಡೀ ಜಾಹಲೇ ಮೋರಪಿಸೇ । ಅತಿಡೋಳಸೇ ಹರಿಅಂಗೀ ।೪೫॥ ಕೈಸೀ ಬರವೇಪಣಾಚೀ ಶೋಭಾ । ಪಾಹತಾ ನಯನೀ ನಿಘತೀ ಜಿಭಾ । ರಸಾಳಪಣೇ ತೋ ವಾಲಭಾ । ಉಪನಿಷದ್ಗಾಭಾ ಸಾಕಾರಲಾ ।೪೬॥ ಕೃಷ್ಣ ಪಹಾವಯಾ ಆವಡೀ । ಹೋತಾಹೇ ದೇವಾಂಸೀ ವರಪಡೀ । ಡೋಳ್ಯಾ ಥೋರ ಲಾಗಲೀ ಗೋಡೀ । ಅರ್ಧ ಘಡೀ ನ ವಿಸಂಬತೀ ।೪೭॥ ಕೃಷ್ಣರೂಪಾಚೇ ಕವತುಕ । ಪಾಹತಾ ನಯನಾ ಲಾಗಲೀ ಭೂಕ । ಅಂತರೀ ನಿಬಿಡ ದಾಟಲೇ ಸುಖ । ತರೀ ಅಧಿಕಾಧಿಕ ಭುಕೇಲೇ ।೪೮॥ ಅವಲೋಕಿತಾ ಶ್ರೀಕೃಷ್ಣಾಸೀ । ದೃಷ್ಟೀಸೀ ದಾಟಣೀ ಹೋತಸೇ ಕೈಶೀ । ಮುಂಡಪಘಸಣೀ ನ್ಯಾಹಾರಾಸೀ । ಹೃಷೀಕೇಶೀ ಪಹಾವಯಾ ।೪೯॥ ಮಾಗೇ ಪುಢೇ ಶ್ರೀಕೃಷ್ಣಾಸೀ । ದೇಖಣೇನಿ ವೇಢಿಲೇ ಚೌಪಾಶೀ । ಭಾಗ್ಯ ಉಪಜಲೇ ಡೋಳ್ಯಾಂಸೀ । ಪೂರ್ಣಪುರಾಪಾಸೀ ದೇಖತೀ ।೫೦॥ ಶ್ರೀಕೃಷ್ಣ ಘನಮೇಘ ಸಾಂವಳಾ । ನಿಜಾತ್ಮಭಾವೇ ಪಾಹತಾ ಡೋಳಾ । ಸಹಜೇ ಶ್ಯಾಮತಾ ಆಲೀ ಬುಬುಳಾ । ಕೃಷ್ಣಕಳಾ ಠಸಾವಲೀ ।೫೧॥ ಜೋ ನ ಕಳೇಚಿ ವೇದವಿವಂಚನಾ । ಯೋಗಿಯಾಂಚ್ಯಾ ನ ಯೇ ಧ್ಯಾನಾ । ತ್ಯಾ ಪ್ರತ್ಯಕ್ಷ ದೇಖೋನಿ ಕೃಷ್ಣಾ । ಭಾಗ್ಯಗಣನಾ ಅಪೂರ್ವ ।೫೨॥ ಐಸಾ ದೇಖೋನಿಯಾ ಶ್ರೀಹರೀ । ದೇವ ಸುಮನಾಂಚ್ಯಾ ಶತಧಾರೀ । ವಹು ವರುಷಲೇ ಪೈ ಅಂಬರೀ । ರಾಹೋನಿ ವರೀ ವಿಮಾನೀ ।೫೩॥

ಶ್ರೀಕೃಷ್ಣನು ವಾಸಿಸುತ್ತಿದ್ದ ಆ ಯಾವ ದ್ವಾರಕಾ ನಗರದಲ್ಲಿ ಸುವರ್ಣ ಕಳಸಗಳ ಪಂಕ್ತಿಯು ಝಳಪಿಸುತ್ತಿದ್ದವು. ಅವುಗಳಿಗೆ ಅನೇಕ ಪ್ರಕಾರದ ರತ್ನಗಳನ್ನು ಬಹಳ ಕಲಾ ಕೌಶ್ಯಲದಿಂದ ಕೂಡ್ರಿಸಿದ್ದವು. ಆ ದ್ವಾರಕೆಯ ಪ್ರಕಾಶವು ಆಕಾಶಕ್ಕೆ ಹಿಡಿಸದಾಯಿತು ।೪೨॥ ಈ ಯಾವ ದ್ವಾರಕಾ ನಗರದಲ್ಲಿ ನಿಜವಾಗಿಯೂ ಕಾಮಧೇನುಗಳಿದ್ದವು. ಎರಡೂ ಸಾಲುಗಳಲ್ಲಿ ಕಲ್ಪವೃಕ್ಷಗಳಿದ್ದವು ಮತ್ತು ಬಾಗಿಲುಗಳಲ್ಲಿ ಚಿಂತಾಮಣಿಯ ಆಟಿಕೆಗಳು ತೂಗಾಡುತ್ತಿದ್ದವು ।೪೩॥ ದ್ವಾರಕೆಯಲ್ಲಿ ವಾಸಿಸುವ ಜನರ ಮನೆಗಳಲ್ಲಿ ನವರತ್ನಗಳ ಗಂಟುಗಳು ಅಲ್ಲಲ್ಲಿ ಬಿದ್ದುಕೊಂಡಿದ್ದವು. ಋದ್ಧಿಸಿದ್ಧಿಗಳಿಗೆ ದಾಸಿಯರನ್ನಾಗಿ ಮಾಡಿಕೊಂಡು ಇಲ್ಲಿ ಹೃಷೀಕೇಶನು ಆಳುತ್ತಿದ್ದನು ।೪೪॥ ಶ್ರೀಕೃಷ್ಣರೂಪದ ಲಾಲಸೆಯಿಂದ ದೇವತೆಗಳ ಕಣ್ಣುಗಳಿಗೆ ಹುಚ್ಚು ಹಿಡಿದಂತಾಯಿತು. ಆಗ ಆ ಕಣ್ಣುಗಳು ಬಹು ಪ್ರೀತಿಯಿಂದ ನವಿಲು ಗರಿಯ ರೂಪದಿಂದ ಶ್ರೀಹರಿಯ ಅಂಗದಲ್ಲಿ ಕುಳಿತು ಆತನನ್ನು ನೋಡಹತ್ತಿದವು ।೪೫॥ ಶ್ರೀಕೃಷ್ಣನ ಸೌಂದರ್ಯದ ಶೋಭೆಯನ್ನು ಹೇಗೆ ವರ್ಣಿಸಬೇಕು? ಇದನ್ನು ಸವಿಯಲು ಕಣ್ಣುಗಳಿಗೆ ನಾಲಿಗೆಗಳು ಹುಟ್ಟಿಕೊಂಡವು. ಉಪನಿಷತ್ತಿನಲ್ಲಿ ವರ್ಣಿಸಿದ ತತ್ವವಾಗಿರುವ ಆ ಪರಬ್ರಹ್ಮವು ಸಾಕಾರ ರೂಪದಲ್ಲಿ ಬಂದಿರುವುದರಿಂದ ಅದು ರಸಾಳತನದಲ್ಲಿ ಕೇವಲ ಅಪೂರ್ವವೇ ಆಗಿತ್ತು ।೪೬॥ ಕೃಷ್ಣನನ್ನು ಕಾಣುವ ಪ್ರೀತಿಯಲ್ಲಿ ದೇವತೆಗಳು ಒಬ್ಬರಮೇಲೆ ಒಬ್ಬರು ಹಾರುತ್ತ ಬರಹತ್ತಿದರು. ಕಣ್ಣುಗಳಿಗೆ ಎಷ್ಟೊಂದು ಪ್ರೀತಿಯಾಯಿತೆಂದರೆ, ಅವು ಆ ರೂಪವನ್ನು ಅರ್ಧಕ್ಷಣವನ್ನೂ ಮರೆಯದಾದವು ।೪೭॥ ಶ್ರೀಕೃಷ್ಣನ ಕೌತುಕವನ್ನು ಕಾಣಬೇಕೆಂದು ಅವರ ಕಣ್ಣುಗಳಿಗೆ ಎಷ್ಟೊಂದು ಹಸಿವೆಯಾಯಿತೆಂದರೆ ಅಂತಃಕರಣವು ಸುಖದಿಂದ ತುಂಬಿಹೋಗಿದ್ದರೂ, ಅವರ ಹಸಿವೆಯು ಅಧಿಕಾಧಿಕವಾಗಿ ಬೆಳೆಯುತ್ತ ಸಾಗಿತು ।೪೮॥ ಶ್ರೀಕೃಷ್ಣನನ್ನು ಕಾಣಲು ಇಲ್ಲಿ ಎಷ್ಟೊಂದು ಜನಸಂದಣಿಯಾಯಿತೆಂದರೆ ಅವರ ತಲೆಯ ಮೇಲಿನ ಕಿರೀಟಗಳು ಒಂದಕ್ಕೊಂದು ಬಡೆದು ತಿಕ್ಕಲಾರಂಭಿಸಿದವು ।೪೯॥ ಶ್ರೀಕೃಷ್ಣನನ್ನು ನೋಡುವುದಕ್ಕಾಗಿ ಹಿಂದೆ, ಮುಂದೆ ಮತ್ತು ನಾಲ್ಕೂ ಕಡೆಯಿಂದಲೂ ಸುತ್ತುಗಟ್ಟಿದರು. ಕಣ್ಣುಗಳ ಸರ್ವ ಭಾಗ್ಯಗಳು ಉದಯಕ್ಕೆ ಬಂದಿದ್ದವು ।೫೦॥ ಶ್ರೀಕೃಷ್ಣನು ದಟ್ಟವಾದ ಮೋಡದಂತೆ ಮೇಘವರ್ಣದವನಾಗಿದ್ದನು. ಆತನಲ್ಲಿ ನಿಜಾತ್ಮಬುದ್ಧಿಯಿಂದ ನೋಡುತ್ತಲೇ ಕಣ್ಣುಗಳ ಕಣ್ಣುಗೊಂಬೆಗಳಿಗೆ ಸಹಜವಾದ ಕಪ್ಪುವರ್ಣ ಉಂಟಾಯಿತು. ಶ್ರೀಕೃಷ್ಣನ ವರ್ಣವು ಕಣ್ಣುಗಳಲ್ಲಿ ನಟ್ಟಿಕೊಂಡಿತು ।೫೧॥ ಯಾವುದು ವೇದ ವಿಚಾರಕ್ಕೆ ತಿಳಿಯುವುದಿಲ್ಲ. ಯೋಗಿಗಳ ಧ್ಯಾನಕ್ಕೂ ನಿಲುಕುವುದಿಲ್ಲ. ಅಂತಹ ಶ್ರೀಕೃಷ್ಣನನ್ನು ಪ್ರತ್ಯಕ್ಷವಾಗಿ ಕಾಣುವ ಭಾಗ್ಯವು ಅತ್ಯಂತ ಅಪೂರ್ವವಾಗಿರುವುದು ।೫೨॥ ಹೀಗೆ ಶ್ರೀಕೃಷ್ಣನನ್ನು ಕಂಡು ದೇವತೆಗಳು ವಿಮಾನಗಳಲ್ಲಿ ಆಕಾಶಮಾರ್ಗವಾಗಿ ಆತನಿಗೆ ಮಳೆಯ ಧಾರೆಯಂತೆ ಪುಷ್ಪಗಳ ವೃಷ್ಟಿಯನ್ನು ಮಾಡಿದರು ।೫೩॥

ಸ್ವರ್ಗೋದ್ಯಾನೋಪಗೈರ್ಮಾಲ್ಯೈಶ್ಛಾದಯಂತೋ ಯದೂತ್ತಮಮ್ ।
ಗೀರ್ಭಿಶ್ಚಿತ್ರಪದಾರ್ಥಾಭಿಸ್ತುಷ್ಟುವುರ್ಜಗದೀಶ್ವರಮ್ ॥೬॥

ಅರ್ಥ:- ದೇವತೆಗಳು ಸ್ವರ್ಗದ ನಂದವನಗಳಿಂದ ತಂದ ಹೂಮಾಲೆಗಳಿಂದ ವಿಶ್ವನಾಯಕನಾದ ಯದುಶ್ರೇಷ್ಠನಿಗೆ ಅಲಂಕರಿಸಿದರು. ಅನಂತರ ಶೃಂಖಲಾಬದ್ಧವಾದ ಪದಗಳಿಂದ ಹಾಗೂ ವಿಚಿತ್ರವಾದ ಅರ್ಥಗರ್ಭಿತವಾಗಿ ತಮ್ಮ ವಾಣಿಗಳಿಂದ ಜಗದೀಶ್ವರ ಶ್ರೀಕೃಷ್ಣನನ್ನು ಸುಂದರವಾಗಿ ಸ್ತುತಿಸಿದರು.

ಮಾಂದಾರ ಪಾರಿಜಾತ ಸಂತಾನ । ಕಲ್ಪದ್ರುಮ ಹರಿಚಂದನ । ಐಶಿಯಾ ವೃಕ್ಷಾಂಚೀ ಸುಮನೇ ಜಾಣ । ಕೃಷ್ಣಾವರೀ ಸಂಪೂರ್ಣ ವರುಷಲೇ ॥೬೪॥ ಶ್ರೀಕೃಷ್ಣಾಸೀ ಚಹೂಕಡಾ । ದಿವ್ಯ ಸುಮನಾಂಚಾ ಜಾಹಲಾಸಡಾ । ಸಮಸ್ತ ದೇವೀ ಸನ್ಮುಖ ಪುಢಾ । ಕೇಲಾ ಪೈ ಗಾಢಾ ಜಯಜಯಕಾರೂ ॥೬೫॥ ಸಾರ್ಥ ಪದಬಂಧರಚನಾ । ನಾನಾ ಗದ್ಯಪದ್ಯವಿವಂಚನಾ । ಸ್ತವೂ ಆದರಿಲೇ ಯದುನಂದನಾ । ಅಮರಸೇನಾ ಮಿಳೋನೀ ॥೬೬॥

ದೇವಾ ಊಚುಃ ನತಾಃ ಸ್ಮ ತೇ ನಾಥ ಪದಾರವಿಂದಂ ಬುದ್ಧೀಂದ್ರಿಯಪ್ರಾಣಮನೋವಚೋಭಿಃ ।
ಯಚ್ಚಿಂತ್ಯತೇಽಂತರ್ಹೃದಿ ಭಾವಯುಕ್ತೈರ್ಮುಮುಕ್ಷುಭಿಃ ಕರ್ಮಮಯೋರುಪಾಶಾತ್ ॥೭॥

ಅರ್ಥ:- ದೇವತೆಗಳು ಹೇಳತೊಡಗಿದರು, ಹೇ ನಾಥನೇ, ಯೋಗಸಾಧನೆಯಲ್ಲಿ ಮುಂದುವರಿದಿರುವ ಯೋಗಿಗಳು ಕಠಿಣವಾದ ಲೌಕಿಕ ಬಂಧನದಿಂದ ಮುಕ್ತರಾಗಲು ನಿನ್ನ ಪಾದಕಮಲಗಳನ್ನು ತಮ್ಮ ಹೃದಯದಲ್ಲಿ ಬಹು ಭಕ್ತಿಯಿಂದ ಧ್ಯಾನಿಸುತ್ತಾರೆ. ದೇವತೆಗಳಾದ ನಾವು ನಮ್ಮ ಬುದ್ಧಿ, ಇಂದ್ರಿಯ, ಪ್ರಾಣವಾಯು, ಮನಸ್ಸು ಮತ್ತು ವಾಕ್‌ಶಕ್ತಿಯನ್ನು ನಿನಗೆ ಅರ್ಪಿಸಿ, ನಿನ್ನ ಚರಣಕಮಲಗಳಿಗೆ ತಲೆಬಾಗುತ್ತೇವೆ.

ವಿವೇಕಯುಕ್ತ ಪ್ರಾಣಧಾರಣಾ । ಮನಸಾ ವಾಚಾ ಕರ್ಮಣಾ । ನಮಸ್ಕಾರು ತುಝಿಯಾ ಚರಣಾ । ಸಚ್ಚಿದ್ಘನಾ ಶ್ರೀಕೃಷ್ಣಾ ॥೬೭॥ ಇಂದ್ರಿಯ ಉಪರಮಾಲಾಗೀ ಜಾಣಾ । ಸಾಂಡೂನಿ ವಿಷಯವಾಸನಾ । ದಶ ಇಂದ್ರಿಯೀ ಲಾಗಲೋ ಚರಣಾ । ನಮನ ಶ್ರೀಕೃಷ್ಣಾ ನಿಜಭಾವೇ ॥೬೮॥ ವಿಷಯೀ ಹೋಊನಿಯಾ ಉದಾಸ । ಸಾಂಡೋನಿ ಸಂಸಾರಾಚೀ ಆಸ । ಚರಣ ಚಿಂತಿತೀ ತಾಪಸ । ಕರ್ಮಪಾಶ ಛೇದಾವಯಾ ॥೬೯॥ ಐಸೇ ಮುಕ್ತೀಚಿಯಾ ವಾಸನಾ । ಮುಮುಕ್ಷು ಚಿಂತಿತೀ ಚರಣಾ । ತ್ಯಾಸೀ ಅರ್ಧಕ್ಷಣ ನ ಯೇಸೀ ಧ್ಯಾನಾ । ದೃಢ ಭಾವನಾ ಕರಿತಾಂಹೀ ॥೭೦॥ ತೇ ಪ್ರತ್ಯಕ್ಷ ತುಝೇ ಚರಣ । ಆಮ್ಹಾಸೀ ಝಾಲೇ ಜೇ ದರುಷಣ । ದೇವ ಆಪುಲ್ಯಾ ಭಾಗ್ಯ ಆಪಣ । ಅತಿಸ್ತವನ ಕರಿತಾತೀ ॥೭೧॥ ದೇಖೂನಿ ಸಗುಣ ಸ್ವರೂಪಾಸೀ । ಏವಢೀ ಶ್ಲಾಘ್ಯತಾ ಕಾ ಮ್ಹಣಸೀ । ಜೇ ಆಲೇ ಆಕಾರಾಸೀ । ತೇ ನಿಶ್ಚಯೇಸೀ ಮಾಯಿಕ ॥೭೨॥ ಜೈಸೇ ತುಮ್ಹೀ ಶರೀರಧಾರೀ । ತೈಸಾಚ ಮೀಹೀ ಏಕು ಶರೀರೀ । ತ್ಯಾ ಮಾಝೇನಿ ದರ್ಶನೇಕರೀ । ತುಮ್ಹೀ ಕೈಸಾಪರೀ ತರಾಲ ॥೭೩॥ ಐಸೇ ನ ಮ್ಹಣಾವೇ ಜೇ ಅನಂತಾ । ತೂ ಮಾಯೇಚಾ ನಿಯಂತಾ । ಹೇಹೀ ಕಳಲೇ ಅಸೇ ತತ್ತ್ವತಾ । ಸಮೂಳ ಕಥಾ ಪರಿಯೇಸೀ ॥೭೪॥

ದೇವತೆಯರು ಮಾಂದಾರ, ಪಾರಿಜಾತಕ, ಹರಿಚಂದನ ಕಲ್ಪತರೂ ಹೀಗೆ ವೃಕ್ಷಗಳ ಹೂವುಗಳಿಂದ ಕೃಷ್ಣನಮೇಲೆ ಮಳೆಗರೆದರು ॥೬೪॥ ಶ್ರೀಕೃಷ್ಣನಿಗೆ ನಾಲ್ಕೂ ಕಡೆಯಿಂದಲೂ ದಿವ್ಯ ಸುಗಂಧಿತ ಪುಷ್ಪಗಳ ರಾಶಿಯೇ ಬಿದ್ದಿತು. ಎಲ್ಲ ದೇವತೆಗಳು ಮುಂದೆ ಬಂದು ಘನಗರ್ಜನೆಯಿಂದ ಜಯಜಯಕಾರಗಳನ್ನು ಮಾಡಿದರು ॥೬೫॥ ಅನೇಕ ಪ್ರಕಾರದ ರಸಭರಿತ ಪದ್ಯಗಳನ್ನು ಪ್ರಬಂಧಗಳನ್ನು ನಾನಾ ಪ್ರಕಾರಗಳ ಗದ್ಯಪದ್ಯಗಳನ್ನು ಕವನಗಳನ್ನು ಪ್ರಯೋಗಿಸಿ ಶ್ರೀಕೃಷ್ಣನ ಸ್ತವನವನ್ನು ಪ್ರಾರಂಭಿಸಿದರು ॥೬೬॥

ದೇವತೆಗಳು ಅಂದರು, ಹೇ ಸಚ್ಚಿದಾನಂದಘನಾ! ಶ್ರೀಕೃಷ್ಣಾ! ಕಾಯಾ ವಾಚಾ ಮನದಿಂದ ವಿವೇಕಯುಕ್ತ ಪ್ರಾಣಧಾರಣೆಯಿಂದ ನಿನ್ನ ಚರಣಗಳಿಗೆ ನಮ್ಮ ನಮಸ್ಕಾರವು ॥೬೭॥ ಇಂದ್ರಿಯಗಳು ಶಾಂತವಾಗಬೇಕೆಂದು ತಿಳಿದು ವಿಷಯವಾಸನೆಗಳನ್ನು ಬಿಟ್ಟು ಹತ್ತೂ ಇಂದ್ರಿಯಗಳನ್ನೂ ನಿನ್ನಲ್ಲಿ ಇಟ್ಟು, ಹೇ ಶ್ರೀಕೃಷ್ಣನೇ ಭಕ್ತಿಭಾವದಿಂದ ನಿನಗೆ ನಮಸ್ಕಾರಗಳನ್ನು ಮಾಡುತ್ತಿದ್ದೇವೆ ॥೬೮॥ ತಪಸ್ವಿ ಜನರು ಮನದಲ್ಲಿನ ವಿಷಯದ ಆಶೆಯನ್ನು ಬದಿಗಿಟ್ಟು ಸಂಸಾರ ಸುಖದ ಆಶೆಯನ್ನು ದೂರ ಒಗೆದು, ಕರ್ಮಪಾಶವನ್ನು ಮುರಿಯುವುದಕ್ಕಾಗಿ ನಿನ್ನ ಚರಣಗಳ ಚಿಂತನೆಯನ್ನು ಸತತವಾಗಿ ಮಾಡುವರು ॥೬೯॥ ಮುಕ್ತಿಯು ಪ್ರಾಪ್ತವಾಗಬೇಕೆಂದು ಮುಮುಕ್ಷು ಜನರು ನಿನ್ನ ಚರಣಗಳ ಧ್ಯಾನವನ್ನು ಮಾಡುವರು, ಆದರೆ ಅವರು ಎಷ್ಟೇ ದೃಢ ಭಾವನೆಯನ್ನು ಇಟ್ಟರೂ ಅರ್ಧಕ್ಷಣವೂ ನೀನು ಅವರ ಧ್ಯಾನದಲ್ಲಿ ಬರುವುದಿಲ್ಲ ॥೭೦॥ ಅಂತಹ ಚರಣಗಳ ದರ್ಶನವು ನಮಗಿಂದಾಯಿತು. ಈ ಪ್ರಕಾರವಾಗಿ ದೇವತೆಗಳವರು ತಮ್ಮ ಭಾಗ್ಯದ ವರ್ಣನೆಯನ್ನು ತಾವೇ ಮಾಡಲಾರಂಭಿಸಿದರು ॥೭೧॥ ಹೇ ದೇವನೇ ನೀನು ಕದಾಚಿತ್ ಹೀಗೆ ಹೇಳಬಹುದು; ನೀವು ನನ್ನ ಈ ಸಗುಣ ರೂಪವನ್ನು ಕಂಡು ಇಷ್ಟೊಂದು ಏಕೆ ಹೊಗಳುತ್ತಿರುವಿರಿ? ಇರುವ ಎಲ್ಲ ಸಾಕಾರ ಪದಾರ್ಥಗಳು ಎಲ್ಲವೂ ಮಾಯಿಕವಾಗಿರುವುವು ॥೭೨॥ ನೀವು ಹೇಗೆ ದೇಹಧಾರಿಗಳೋ, ಹಾಗೆಯೇ ನಾನೂ ದೇಹಧಾರಿಯಾಗಿರುವೆನು. ಈ ನನ್ನ ದರ್ಶನದಿಂದ ನೀವು ಹೇಗೆ ಉದ್ಧಾರರಾಗುವಿರಿ? ॥೭೩॥ ಹೇ ಅನಂತನೇ, ನೀನು ಹೀಗೆ ಹೇಳಬೇಡ. ನೀನೇ ಮಾಯೆಯ ನಿಯಂತನಾಗಿರುವೆ, ನೀನೇ ಚಾಲಕನಾಗಿರುವೆ. ಇದು ನಮಗೆ ತಿಳಿದಿರುವುದು. ಈ ಸವಿಸ್ತಾರವಾದ ಕಥೆಯನ್ನು ಈಗ ಕೇಳು ॥೭೪॥

ತ್ವಂ ಮಾಯಯಾ ತ್ರಿಗುಣಯಾತ್ಮನಿ ದುರ್ವಿಭಾವ್ಯಂ ವ್ಯಕ್ತಂ ಸೃಜಸ್ಯವಸಿ ಲುಂಪಸಿ ತದ್ಗುಣಸ್ಥಃ।
ನೈತೈರ್ಭವಾನಜಿತ ಕರ್ಮಭಿರಜ್ಯತೇ ವೈ ಯತ್ ಸ್ವೇ ಸುಖೇಽವ್ಯವಹಿತೇಽಭಿರತೋಽನವದ್ಯಃ ॥೮॥

ಅರ್ಥ:- ನೀನು ನಿನ್ನೊಳಗಿರುವ ಅಚಿಂತ್ಯ ವಿಶ್ವಗಳನ್ನು ಸೃಷ್ಟಿಸಲು, ಪಾಲಿಸಲು ಮತ್ತು ಲಯಗೊಳಿಸಲು ತ್ರಿಗುಣಾತ್ಮಕವಾದ ನಿನ್ನ ಮಾಯಾ ಶಕ್ತಿಯನ್ನು ತೊಡಗಿಸುವೆ. ಮಾಯೆಯ ಹಿರಿಯ ಮೇಲ್ವಿಚಾರಕನಾಗಿ ನೀನು ಪ್ರಕೃತಿ ಗುಣಗಳ ಪರಸ್ಪರ ಕ್ರಿಯೆಗಳಲ್ಲಿ ಸೇರಿಕೊಂಡಿರದಂತೆ ತೋರುವೆ. ಆದರೆ ನೀನು ಎಂದೂ ಲೌಕಿಕ ಕ್ರಿಯಗಳಿಂದ ಬಾಧಿತನಾಗುವುದಿಲ್ಲ. ನೀನು ನಿನ್ನ ಶಾಶ್ವತ ಆಧ್ಯಾತ್ಮಾನಂದದಲ್ಲಿ ನೇರನಾಗಿ ನಿರತನಾಗಿರುವೆ. ಆದ್ದರಿಂದ ನೀನು ಯಾವುದೇ ಲೌಕಿಕ ಕಲ್ಮಷದಿಂದ ಕೂಡಿದವನೆಂದು ಆಪಾದಿಸುವಂತಿಲ್ಲ.

ಝೋಂಪ ಲಾಗಲ್ಯಾ ಝೋಂಪ ನ ದಿಸೇ ಪಾಹೀ। ಜಾಗೇ ಜಾಹಲ್ಯಾ ದಿಸತಚಿ ನಾಹೀ। ತೈಸೀ ಮಾಯಾ ಅತರ್ಕ್ಯ ದೇಹೀ। ನ ಪಡೇ ಠಾಯೀ ಸುರನರಾ ॥೭೫॥ ಮೂಳೀಂಚ ತುಝೀ ಅತರ್ಕ್ಯ ಮಾಯಾ। ತಿಸೀ ಗುಣಕ್ಷೋಭು ಜಾಹಲಾ ಸಾಹ್ಯಾ। ತೇ ಬ್ರಹ್ಮಾದಿಕಾ ನ ಯೇಚಿ ಆಯಾ। ದೇವರಾಯಾ ಶ್ರೀಕೃಷ್ಣಾ ॥೭೬॥ ತೂ ಧರೋನಿ ದೈವೀ ಮಾಯೇಸೀ। ಬ್ರಹ್ಮಾದಿಕಾಂತೇ ಸೃಜಿಸೀ। ಪ್ರತಿಪಾಳೋನಿ ಸಂಹಾರಿಸೀ। ತೂ ತ್ಯಾ ಕರ್ಮಾಸೀ ಅಲಿಪ್ತ ॥೭೭॥ ಸ್ವಪ್ನೀ ಸ್ವಯೇ ಸೃಷ್ಟಿ ಸೃಜಿಲೀ। ಪ್ರತಿಪಾಳೋನಿ ಸಂಹಾರಿಲೀ। ತೇ ಕ್ರಿಯಾ ಕರ್ತ್ಯಾಸೀ ನಾಹೀ ಲಾಗಲೀ। ತೇವೀ ಸೃಷ್ಟಿ ಕೇಲೀ ತ್ವಾ ಅಲಿಪ್ತತ್ವೇ ॥೭೮॥ ಮೃಗಜಳಾಚೀ ಭರಣೀ। ಸೂರ್ಯ ಕರೀ ನಿಜಕಿರಣೀ। ಶೋಷೂನಿ ನೇ ಅಸ್ತಮಾನೀ। ಅಲಿಪ್ತಪಣೇ ತೈಸಾ ತೂ ॥೭೯॥ ಸಮೂಳ ಧರ್ಮಾಚೀ ವಾಢೀ ಮೋಡೇ। ಅಧರ್ಮಾಚೀ ಶೀಗ ಚಢೇ। ತೈ ತುಜ ಅವತಾರ ಧರಣೇ ಘಡೇ। ಆಮುಚೇ ಸಾಂಕಡೇ ಫೇಡಾವಯಾ ॥೮೦॥ ಕರೋನಿ ಅಧರ್ಮಾಚಾ ಘಾತು। ಧರ್ಮ ವಾಢವಿಶೀ ಯಥಾಸ್ಥಿತು। ದೇವಾಂಸೀ ನಿಜಪದೀ ಸ್ಥಾಪಿತು। ಕರ್ಮಾತೀತು ತೂ ಶ್ರೀಕೃಷ್ಣ ॥೮೧॥ ತುಜ ಅಖಂಡ ದಂಡಾಯಮಾನ। ಆತ್ಮಸುಖಾಚೇ ಅನುಸಂಧಾನ। ತೇ ಆಮ್ಹಾಸೀ ನಾಹೀ ಅರ್ಧಕ್ಷಣ। ದೀನವದನ ಯಾಲಾಗೀ ॥೮೨॥ ಜ್ಯಾಸೀ ಆತ್ಮಸುಖ ನಿರಂತರ। ತೋ ದೇಹಧಾರೀ ಪರೀ ಅವತಾರ। ತ್ಯಾಚೇ ಚರಣ ಪವಿತ್ರಕರ। ಗಂಗಾಸಾಗರ ಆದಿ ತೀರ್ಥಾಸೀ ॥೮೩॥ ತೋ ಜರೀ ವರ್ತೇ ಗುಣಾಆಂತು। ತರೀ ತೋ ಜಾಣಾವಾ ಗುಣಾತೀತು। ತ್ಯಾಚಾ ಚರಣರೇಣು ಕರೀ ಘಾತು। ತ್ರೈಲೋಕ್ಯಾಂತು ಮಹಾಪಾಪಾ ॥೮೪॥ ಐಶೀ ತುಝ್ಯಾ ದಾಸಾಂಚೀ ಕಥಾ। ತ್ಯಾ ತುಝೇ ಚರಣ ವಂದೂ ಮಾಥಾ। ಅಸೋ ಚರಣಾಂಚೀ ಹೇ ಕಥಾ। ಕೀರ್ತಿ ಐಕತಾ ನಿಜಲಾಭು ॥೮೫॥ ಚರಣ ದೇಖತೀ ತೇ ಭಾಗ್ಯಾಚೇ। ತ್ಯಾಂಚೇ ಮಹಿಮಾನ ನ ವರ್ಣವೇ ವಾಚೇ। ಪವಿತ್ರಪಣ ತುಝಿಯೇ ಕೀರ್ತೀಚೇ। ಪರಿಸ ಸಾಚೇ ಸ್ವಾಮಿಯಾ ॥೮೬॥

ನಿದ್ರೆ ಹತ್ತಿದಾಗ ನಿದ್ರೆಯು ಕಾಣುವುದಿಲ್ಲ. ಮತ್ತು ಜಾಗೃತನಾದ ಮೇಲೆ ಆಗ ಮಾತ್ರ ಅದು ಕಾಣುವುದೇ ಇಲ್ಲ. ಅದರಂತೆ ದೇಹದಲ್ಲಿನ ಮಾಯೆಯು ಅತರ್ಕ್ಯವಾಗಿರುವುದು. ಸುರನರರಿಗೆ ಇದನ್ನು ಅರಿಯುವುದು ಆಗುವುದಿಲ್ಲ ॥೭೫॥ ಹೇ ದೇವರಾಯನೇ, ಶ್ರೀಕೃಷ್ಣನೇ ನಿನ್ನ ಮಾಯೆಯು ಮೂಲದಲ್ಲಿಯೇ ಅತರ್ಕ್ಯವಾಗಿರುವುದು. ಆ ಮಾಯೆಯಲ್ಲಿ ಸತ್ವ, ರಜ, ತಮ ಈ ಯಾವ ಮೂರು ಗುಣಗಳ ಸಾಮ್ಯಾವಸ್ಥೆಯಲ್ಲಿ ಗುಣಕ್ಷೋಭವಾಯಿತು. ಆದ್ದರಿಂದ ಈ ಮಾಯೆಯು ಬ್ರಹ್ಮದೇವನ ಹಿಡಿತದಲ್ಲಿಯೂ ಸಿಲುಕಲಿಲ್ಲ ॥೭೬॥ ನೀನು ದೈವೀ ಮಾಯೆಯ ಸಹಾಯದಿಂದ ಬ್ರಹ್ಮಾದಿಕರನ್ನು ಉತ್ಪನ್ನಗೊಸುವೆ, ಅವರನ್ನು ರಕ್ಷಿಸುವೆ ಹಾಗೂ ಸಂಹಾರಗೊಳಿಸುವೆ. ಆದರೆ ಆ ಕರ್ಮಗಳಿಂದ ನೀನು ಅಲಿಪ್ತನಾಗಿರುವೆ ॥೭೭॥ ಯಾರೋ ಒಬ್ಬನಿಗೆ ಸ್ವಪ್ನ ಬಿದ್ದು ಅದರಲ್ಲಿ ಅವನು ಸೃಷ್ಟಿಯನ್ನು ಮಾಡಿದನು. ಅವುಗಳನ್ನು ರಕ್ಷಿಸಿದನು. ಕೊನೆಗೆ ಎಲ್ಲವನ್ನೂ ಸಂಹರಿಸಿದನು. ಈ ಎಲ್ಲ ಕ್ರಿಯೆಗಳು ಅವನಿಗೆ ಸಂಬಂಧಪಡುವುದಿಲ್ಲ. ಕಾರಣ ಇವೆಲ್ಲವೂ ಸ್ವಪ್ನದಲ್ಲಾಗಿರುವುವು. ಅದರಂತೆ ನೀನೂ ಅಲಿಪ್ತನಾಗಿಯೇ ಸೃಷ್ಟಿಯನ್ನು ಮಾಡಿರುವೆ ॥೭೮॥ ಸೂರ್ಯನು ತನ್ನ ಕಿರಣಗಳ ಪರಾವರ್ತನೆಯಿಂದ ಮೃಗಜಳದ ಭಾಸವನ್ನು ನಿರ್ಮಾಣಗೊಳಿಸುವಂತೆ, ಮತ್ತು ಸೂರ್ಯಾಸ್ತವಾದಂತೆಯೇ ಅದನ್ನು ನಾಶಮಾಡುವಂತೆ ನೀನು ಅಲಿಪ್ತನಾಗಿ ಸರ್ವ ಲೀಲೆಗಳನ್ನು ಮಾಡುವೆ ॥೭೯॥ ಧರ್ಮ ಪ್ರವೃತ್ತಿಯ ಸಮೂಹವು ಮುರಿಯಲು ಮತ್ತು ಅಧರ್ಮದ ಕಳಸವು ಏರಲು ಆಗ ನಮ್ಮ ಸಂಕಟಗಳನ್ನು ದೂರ ಮಾಡುವುದಕ್ಕಾಗಿ ನಿನಗೆ ಅವತಾರವನ್ನು ಧರಿಸಬೇಕಾಗುವುದು ॥೮೦॥ ಅಧರ್ಮದ ನಾಶ ಮಾಡಿ ನೀನು ಧರ್ಮದ ಬೆಳವಣಿಗೆಯನ್ನು ಪೂರ್ಣವಾಗಿ ಮಾಡುವೆ ಮತ್ತು ದೇವತೆಗಳಿಗೆ ಅವರವರ ಪದವಿಗಳಲ್ಲಿ ಸ್ಥಾಪಿಸುವೆ. ಆದರೂ ನೀನು ಕರ್ಮಾತೀತನೇ ಆಗಿರುವೆ ॥೮೧॥ ನಿನಗೆ ಆತ್ಮಸುಖದ ಅಖಂಡ ಅನುಸಂಧಾನವಿರುವುದು. ಆದರೆ, ಆ ಅನುಸಂಧಾನವು ನಮಗೆ ಅರ್ಧಕ್ಷಣವೂ ಸಹ ಸಿಗಲಾರದು. ಆದ್ದರಿಂದ ನಾವು ದೀನವದನರಾಗಿದ್ದೇವೆ ॥೮೨॥ ಯಾರಿಗೆ ಆತ್ಮಸುಖವು ನಿರಂತರವಾಗಿ ಇರುವುದೋ, ಆತನು ದೇಹಧಾರಿಯಾಗಿದ್ದರೂ ಅವತಾರ ಪುರುಷನಾಗಿರುವನು. ಆತನ ಚರಣಗಳು ಗಂಗಾಸಾಗರಾದಿ ತೀರ್ಥಗಳಿಗೆ ಪವಿತ್ರ ಮಾಡುವುವು ॥೮೩॥ ಆತನು ಗುಣಗಳಲ್ಲಿ ವರ್ತಿಸುತ್ತಿದ್ದರೂ, ಆತನು ಗುಣಾತೀತನೇ ಆಗಿರುವನು. ಆತನ ಚರಣರಜವು ಮೂರು ಲೋಕಗಳಲ್ಲಿನ ಮಹಾಪಾಪಗಳನ್ನು ನಾಶಮಾಡುವುದು ॥೮೪॥ ಹೀಗೆ ನಿನ್ನ ದಾಸರ ಕಥೆಯಾಗಿದೆ. ನಿನ್ನ ಚರಣಗಳನ್ನು ಮಸ್ತಕದಲ್ಲಿ ಧರಿಸಿ ಅವರನ್ನೂ ಮನೋಭಾವದಿಂದ ವಂದನೆಯನ್ನು ಮಾಡಿ ಚರಣಗಳ ಕೀರ್ತಿಯನ್ನು ಶ್ರವಣ ಮಾಡಲು ಸಹಜವಾಗಿಯೇ ಆತ್ಮಲಾಭವಾಗುವುದು ॥೮೫॥ ಇಂತಹ ಯಾವ ಈ ನಿನ್ನ ಚರಣಗಳನ್ನು ಕಾಣುವವರು ಎಂತಹ ಭಾಗ್ಯವಂತರು ಎಂದು ಶಬ್ದಗಳಿಂದ ವರ್ಣಿಸಲು ಬರುವುದಿಲ್ಲ. ಹೇ ಪ್ರಭುವೇ, ನಿನ್ನ ಕೀರ್ತಿಯ ಪವಿತ್ರತೆಯನ್ನು ಈಗ ಕೇಳು ॥೮೬॥

ಅಗ್ನಿ ಶಿಖಾ ಸಮಸಮಾನೀ । ಇಂಧನ ಘಾಲಿತಾ ವಾಢೇ ಅಗ್ನೀ । ಆಶಾ ವಾಢೇ ದೇಹಾಭಿಮಾನೀ । ಶ್ರವಣಕೀರ್ತನೀ ತೇ ತ್ಯಾಗವೀ ।।೫೭।।

ಶುದ್ಧಿರ್ನೃಣಾಂ ನ ತು ತಥೇಡ್ಯ ದುರಾಶಯಾನಾಂ ವಿದ್ಯಾಶ್ರುತಾಧ್ಯಯನದಾನತಪಃಕ್ರಿಯಾಭಿಃ ।
ಸತ್ತ್ವಾತ್ಮನಾಮೃಷಭ ತೇ ಯಶಸೀ ಪ್ರವೃದ್ಧಸಚ್ಛ್ರದ್ಧಯಾ ಶ್ರವಣಸಂಭೃತಯಾ ಯಥಾ ಸ್ಯಾತ್ ।।೯।।

ಅರ್ಥ:- ಹೇ ಶ್ರೀಕೃಷ್ಣನೇ, ಯಾರ ಪ್ರಜ್ಞೆಯು ಮಾಯೆಯಿಂದ ಕಲುಷಿತವಾಗಿದೆಯೋ, ಅಂತಹವರು ಸಾಮಾನ್ಯ ಅರ್ಚನೆ, ವೇದಾಧ್ಯಾಯನ, ದಾನ, ವ್ರತ ಮತ್ತು ವಿಧಿಕರ್ಮ ಇಷ್ಟರಿಂದಲೇ ಶುದ್ಧರಾಗಲಾರರು. ನಿನ್ನ ಮಹಿಮೆಗಳಲ್ಲಿ ದೃಢವೂ ಅಲೌಕಿಕವೂ ಆದ ಶ್ರದ್ಧೆಯನ್ನು ಬೆಳೆಸಿಕೊಂಡ ಶುದ್ಧಾತ್ಮರು ಶ್ರದ್ಧಾಹೀನರಿಗೆ ದೊರಕದ ಶುದ್ಧ ಅಸ್ತಿತ್ವದ ನೆಲೆಯನ್ನು ಹೊಂದುವರು.

ಕೃಷ್ಣಸ್ತವನೇ ಸ್ತವಿತಾ ತರೇ । ಶ್ರವಣದ್ವಾರೇ ಐಕತಾ ಉದ್ಧರೇ । ಯಾಲಾಗೀ ಸ್ತವ್ಯ ತೂಂಚಿ ನಿರ್ಧಾರೇ । ಸ್ತವನದ್ವಾರೇ ತಾರಕು ।।೫೮।। ಏವಂ ತುರ್ಝೀ ಕೀರ್ತೀಚೇ ಶ್ರವಣ । ತೇಂಚಿ ಪರಮ ಶುದ್ಧೀಸೀ ಕಾರಣ । ಯಾವೇಗಳೇ ಜೇ ಸಾಧನ । ತೇ ಕೇವಳ ಜಾಣ ಪ್ರಯಾಸ ।।೫೯।। ಐಕೇ ಗಾ ಸುರವರಿಷ್ಠಾ । ತುಝಿಯಾ ಶ್ರವಣಾಚೀ ಉತ್ಕಂಠಾ । ಅಂತರೀ ಪಾಪಾಚಾ ಮಳಕಟಾ । ಧುವೋನಿ ಚೋಖಟಾ ಕರೀ ವೃತ್ತೀ ।।೬೦।। ತುಝ್ಯಾ ಶ್ರವಣೀ ಹೋಊನಿ ಉದಾಸ । ತಪೇ ತಪತಾ ತಾಪಸ । ನಾನಾ ಸಾಧನೀ ಕರ್ಕಶ । ಜಾಹಲ್ಯಾ ನಿರಸ ಮತೀ ತ್ಯಾಂಚ್ಯಾ ।।೬೧।। ''ಮಂತ್ರವಿದ್ಯಾಗ್ರಹಣ'' । ವಿಕಳ ಉಚ್ಚಾರಿತಾ ವರ್ಣ । ಶುದ್ಧೀ ನವ್ಹೇ ಪರೀ ದಾರುಣ । ಪಾತಕ ಪೂರ್ಣ ಅಂಗೀ ವಾಜೇ ।।೬೨।। ಕರಿತಾ ''ಶಾಸ್ತ್ರಶ್ರವಣ'' । ಚೌಗುಣಾ ಗರ್ವ ಚಢೇ ಪೂರ್ಣ । ತೋ ಜ್ಞಾತೇಪಣಾಚಾ ಅಭಿಮಾನ । ನ ನಿಘೇ ಜಾಣ ಚತುರ್ಮುಖಾ ।।೬೩।। ಕರಿತಾ "ವೇದಾಧ್ಯಯನ" । ವಿಸ್ವರ ಗೇಲಿಯಾ ಉಚ್ಚಾರಣ । ಶುದ್ಧೀ ನವ್ಹೇಚಿ ಪರೀ ಮರಣ । ಅವಶ್ಯ ಜಾಣ ವೃತ್ರಾಸುರಾಐಸೇ ।।೬೪।। "ದಾನ" ದೇತಾ ನೃಗ ಬಹುವಸ । ಕೃಪೀ ಜಾಲಾ ಕೃಕಲಾಸ । ಪ್ರಾಪ್ತಿ ದೂರೀ ಪರೀ ನಾಶ । ಅಸಮಸಾಹಸ ರೋಕಡಾ ।।೬೫।। "ತಪ" ಕರಿತಾ ಋಷ್ಯಶೃಂಗಾಸೀ । ತೋ ವಶ ಜಾಹಲಾ ವೇಶ್ಯಾಂಸೀ । ಶ್ರದ್ಧಾ ಶ್ರವಣಾಚಿಯಾ ಐಶೀ । ಶುದ್ಧೀ ಆಣಿಕಾಂಸೀ ಪೈ ನಾಹೀ ।।೬೬।। "ಕರ್ಮ" ಕರಾವೇ ಯಥಾನಿಗುತೀ । ತಂವ ತ್ಯಾ ಕರ್ಮಾಚೀ ಗಹನ ಗತೀ । ಪ್ರಾಚೀನಬರ್ಹ್ಯಾಚೀ ಕರ್ಮಸ್ಥಿತೀ । ನಾರದೋಕ್ತೀ ಸಾಂಡವಿಲೀ ।।೬೭।। ಕರ್ಮೀ ಆಚಮನ ಕರಾವೇ । ತೇಥ ಮಾಷಮಾತ್ರ ಜಳ ಘ್ಯಾವೇ । ನ್ಯೂನಾಧಿಕತ್ವಾಸವೇ । ದೋಷ ಪಾವೇ ಸುರಾಪಾನಸಮ ।।೬೮।।

ಅಗ್ನಿಯ ಜ್ವಾಲೆಯು ಪ್ರಖರಗೊಳ್ಳಲು ಅದರಲ್ಲಿ ಪುನಃ ಉರುವಲ ಹಾಕಿದರೆ ಆಗ ಅಗ್ನಿಯ ಜ್ವಾಲೆಯು ಇನ್ನೂ ಹೆಚ್ಚಾಗಿ ಪ್ರಜ್ವಲಿಸುವುದು. ಅದರಂತೆ ದೇಹಾಭಿಮಾನದಿಂದ ಆಶೆಯು ಅಧಿಕವಾಗಿಯೇ ಬೆಳೆಯುತ್ತಿರುವುದು. ಈ ಆಶೆಯು ನಿನ್ನ ಶ್ರವಣ ಕೀರ್ತನೆಗಳಿಂದ ಇಲ್ಲದಾಗುವುದು ।।೫೭।।

ಶ್ರೀಕೃಷ್ಣನ ಸ್ತುತಿಯನ್ನು ಮಾಡಲು, ಸ್ತುತಿಸುವವನು ಉದ್ಧಾರನಾಗುವನು. ಈ ಸ್ತುತಿಯನ್ನು ಕಿವಿಯಿಂದ ಕೇಳಿದವರ ಉದ್ಧಾರವು ಆಗುವುದು. ಆದ್ದರಿಂದ ನೀನು ಸ್ತುತಿಸಿಕೊಳ್ಳಲು ಯೋಗ್ಯನಾಗಿರುವೆ. ಸ್ತುತಿಯ ಮುಖಾಂತರ ನೀನು ಉದ್ಧರಿಸಲು ಸಮರ್ಥನಾಗಿರುವೆ ।।೫೮।। ಈ ಪ್ರಕಾರವಾಗಿ ನಿನ್ನ ಕೀರ್ತಿಯ ಶ್ರವಣವು, ಇದೇ ಶುದ್ಧವಾಗುವುದಕ್ಕೆ ಹಿರಿದಾದ ಒಂದು ಕಾರಣವಾಗಿದೆ. ಇದರ ಹೊರತಾಗಿ ಇತರ ಸರ್ವ ಸಾಧನೆಗಳು ಕೇವಲ ಕಷ್ಟಕರವಾಗಿವೆ ।।೫೯।। ಹೇ ಸುರಶ್ರೇಷ್ಠನೇ, ನಿನ್ನ ಕೀರ್ತಿಯ ಶ್ರವಣದ ಉತ್ಕಟೇಚ್ಛೆಯಾದರೆ ಸಾಕು, ಅಂತಃಕರಣದಲ್ಲಿನ ಪಾಪಗಳ ಗುಂಪನ್ನು ತೊಳೆದುಬಿಡುವುದು. ವೃತ್ತಿಯು ನಿರ್ಮಲವಾಗುವುದು ।।೬೦।। ನಿನ್ನ ಈ ಶ್ರವಣ ವಿಷಯಕ್ಕೆ ಉದಾಸರಾಗಿ ಯಾವ ತಪಸ್ವೀ ಜನರು ಅನೇಕ ಪ್ರಕಾರದ ಕ್ಲೇಶಕರ ಸಾಧನೆಗಳಿಂದ ತಪಶ್ಚರ್ಯಗಳನ್ನು ಮಾಡಿದರು. ಆದರೆ ಅವರ ಬುದ್ಧಿಯು ನೀರಸವಾಯಿತು ।।೬೧।। ಮಂತ್ರವಿದ್ಯೆಯನ್ನು ಗ್ರಹಣಮಾಡಿದವರು ಮಂತ್ರಗಳ ಉಚ್ಚಾರದಲ್ಲಿ ಅಶುದ್ಧವಾಯಿತೆಂದರೆ ಆದರಿಂದ ಪುಣ್ಯವು ಹತ್ತುವುದೇ ಇಲ್ಲ. ಆದರೆ ಭಯಂಕರವಾದ ಪಾಪ ಮಾತ್ರ ಹತ್ತಿಕೊಳ್ಳುವುದು ।।೬೨।। ಶಾಸ್ತ್ರದ ಶ್ರವಣವನ್ನು ಮಾಡಲು ಗರ್ವವು ನಾಲ್ಕುಪಟ್ಟು ಬೆಳೆಯುವುದು. ಮತ್ತು ಅದರ ಜ್ಞಾನದ ಗರ್ವವನ್ನು ಆ ಯಾವ ಬ್ರಹ್ಮದೇವನಿಗೂ ಬಿಡುವುದು ಆಗಲಿಲ್ಲ ।।೬೩।। ವೇದದ ಅಧ್ಯಯನವನ್ನು ಮಾಡಲು ಅದರಲ್ಲಿನ ಯಾವುದಾದರೂ ಒಂದು ಸ್ವರದ ಉಚ್ಚಾರವು ತಪ್ಪಿದರೆ ಮನುಷ್ಯನು ಶುದ್ಧನಾಗುವುದಿಲ್ಲ. ಪ್ರತಿಯಾಗಿ ವೃತ್ರಾಸುರನಂತೆ ಅವಶ್ಯವಾಗಿ ಮರಣವಾಗುವುದು ।।೬೪।। ದಾನವನ್ನು ಕೊಡುವಾಗ್ಗೆ ತಿಳಿಯದೇ ದೋಷಗಳು ಒದುಗುವುವು. ಹೀಗಾಗಿ ನೃಗರಾಜನು ಓತಿಕಾಟನಾಗಿ ಬಾವಿಯಲ್ಲಿ ಬಿದ್ದನು. ಲಾಭ ಮಾತ್ರ ಆಗಲೇ ಇಲ್ಲ ಆದರೆ ನಾಶ ಮಾತ್ರ ನಿಶ್ಚಯವಾಗಿ ಆಯಿತು ।।೬೫।। ಋಷ್ಯಶೃಂಗನು ತಪವನ್ನಾಚರಿಸಿದನು. ಆದರೆ ಆತನು ವೇಶ್ಯಯರಿಗೆ ವಶನಾದನು. ಹೀಗಿರುವುದರಿಂದ ಶ್ರದ್ಧಾಪೂರ್ವಕವಾಗಿ ನಿನ್ನ ಕೀರ್ತಿಯನ್ನು ಶ್ರವಣ ಮಾಡುವಷ್ಟು ಶುದ್ಧತ್ವವು ಬೇರೆ ಯಾವುದರಲ್ಲಿಯೂ ಇರುವುದಿಲ್ಲ ।।೬೬।। ಯಥಾವಿಧಿಯಿಂದ ಕರ್ಮಗಳನ್ನು ಆಚರಿಸಬೇಕೆಂದರೆ, ಕರ್ಮದ ಗತಿಯು ಅತಿ ಗಹನವಾಗಿರುವುದು. ಪ್ರಾಚೀನ ಬಾರ್ಹೀರಾಜನು ಅತಿಶಯವಾಗಿ ಕರ್ಮನಿಷ್ಠನಿದ್ದನು. ಆಗ ನಾರದರ ಉಪದೇಶದಿಂದ ಆತನ ಕರ್ಮಸ್ಥಿತಿಯು ಮುಗಿಯಿತು ।।೬೭।। ಕರ್ಮಗಳನ್ನು ಆಚರಿಸುವಲ್ಲಿ ಆಚಮನವನ್ನು ಮಾಡಬೇಕಾಗುವುದು. ಆಗ ಉದ್ದಿನಬೇಳೆ ಮುಳುಗುವಷ್ಟೇ ನೀರನ್ನು ಸ್ವೀಕರಿಸಬೇಕಾಗುವುದು. ಒಂದುವೇಳೆ ಸ್ವೀಕರಿಸುವ ನೀರು ಹೆಚ್ಚು ಕಡಿಮೆ ಆದಲ್ಲಿ ಅದರಿಂದ ಸುರಾಪಾನ ಮಾಡಿದಷ್ಟು ದೋಷವು ತಟ್ಟುವುದು ।।೬೮।।

ಏವಂ ದುಷ್ಟಹೃದಯ ಜ್ಯಾಸೀ । ತಪಾದಿಕ ಸಾಧನೇ ತ್ಯಾಸೀ । ಶುದ್ಧಿ ನವ್ಹೇ ಹೃಷೀಕೇಶೀ । ಶ್ರವಣೇ ಕೀರ್ತೀಸೀ ನಾಯಕತಾ ।।೯೯।। ಶ್ರವಣೇ ಪರೀಕ್ಷಿತೀ ತರಲಾ । ಶ್ರವಣೇ ಕ್ರೌಂಚ ಉದ್ಧರಿಲಾ । ಮಕರೋದರೀ ಶ್ರವಣ ಪಾವಲಾ । ಸಿದ್ಧ ಜಾಹಲಾ ಮತ್ಸೇಂದ್ರ ।।೧೦೦।। ತುರ್ಝೇ ಶ್ರವಣ ದೋಪರೀ । ಏಕ ತೇ ಚಿತ್ತಶುದ್ಧೀ ಕರೀ । ದುಸರೇ ಜೀವಬ್ರಹ್ಮ ಐಕ್ಯ ಕರೀ । ದೋಹೀಪರೀ ಉದ್ಧಾರು ।।೧೦೧।। ಪ್ರತ್ಯಕ್ಷ ಪಾಹತಾ ವಾರಾಣಸೀ । ಶ್ರವಣೇ ತಾರಕ ಬ್ರಹ್ಮ ಉಪದೇಶೀ । ಮುಕ್ತಿಕ್ಷೇತ್ರ ಜಾಹಲೀ ಕಾಶೀ । ಶ್ರವಣೇ ಜೀವಾಸೀ ಉದ್ಧಾರು ।।೧೦೨।। ತೂ ಅವಾಪ್ತಸಕಳಕಾಮ । ನಿಷ್ಕಾಮಾಚೇ ನಿಜಧಾಮ । ಐಶಿಯಾ ತುಜ ಕರಣೇ ಕರ್ಮ । ಭಕ್ತಭ್ರಮ ಛೇದಾವಯಾ ।।೧೦೩।। ನಾನಾ ಚರಿತ್ರಾಂಚೀ ಕರಣೀ । ಕರಿತಾ ಝಾಲಾಸೀ ಚಕ್ರಪಾಣೀ । ಮೋಕ್ಷಮಾರ್ಗಾಚೀ ನಿಜಶ್ರೇಣೀ । ದಿಧಲೀ ರಚೂನಿ ಜನಾಸೀ ।।೧೦೪।। ಚಿತ್ತಶುದ್ಧೀಸೀ ಕಾರಣ । ಪ್ರೇಮಯುಕ್ತ ಕೀರ್ತಿಶ್ರವಣ । ಯೇಥ ಸಚ್ಛ್ರದ್ಧಾಚಿ ಪ್ರಮಾಣ । ಅಕಾರಣ ಸಾಧನೇ ।।೧೦೫।। ಅಪೇಕ್ಷಾ ಜೇ ಜೇ ಸಾಧನ ಸಾಧಿಲೇ । ತೇ ತೇ ಅಪೇಕ್ಷೆನೇಚಿ ಪೋಲ ಕೇಲೇ । ನಿರಪೇಕ್ಷಾಚೇ ಹೃದಯ ಭಲೇ । ವೇಗೀ ಗೇಲೇ ಪರಮಾರ್ಥೀ ।।೧೦೬।। ಹೃದಯಾಚೇ ಸಖೋಲ ಆಳಾ । ಸ್ವಧರ್ಮಬೀಜೇ ಅಂಕುರಲಾ । ಶ್ರದ್ಧೇಚಾ ವೇಲ ಉಗವಲಾ । ಕೋಂಭ ನಿಘಾಲಾ ತರಿತರಿತು ।।೧೦೭।। ಸಚ್ಛ್ರವಣಪ್ರಬಳಜಳೇ । ರುತಲೀ ವೈರಾಗ್ಯದೃಢಮೂಳೇ । ವೇಗೀ ಗೇಲೀ ನಿಜಬಳೇ । ಶ್ರದ್ಧಾಮೇಳೇ ಚಿದಾಕಾಶೀ ।।೧೦೮।। ತೇ ಚಿದಾಕಾಶೀಚಾ ಚಂದ್ರಮಾ । ಸ್ವಪ್ರಕಾಶ ತೂ ಪುರುಷೋತ್ತಮಾ । ಸಾಧಕ ಶಿಣತೀ ಮೇಘಶ್ಯಾಮಾ । ತುಝೀ ಪ್ರತಿಮಾ ಪಹಾವಯಾ ।।೧೦೯।। ತ್ಯಾ ತುರ್ಝೇ ಶ್ರೀಚರಣ । ಪ್ರತ್ಯಕ್ಷ ಜಾಹಲೇ ದರ್ಶನ । ಘಾಲೋನಿಯಾ ಲೋಟಾಂಗಣ । ಚರಣಸ್ತವನ ಕರಿತಾತೀ ।।೧೧೦।।

ಸ್ಯಾನ್ನಸ್ತವಾಂಘ್ರಿರಶುಭಾಶಯಧೂಮಕೇತುಃ ಕ್ಷೇಮಾಯ ಯೋ ಮುನಿಭಿರಾರ್ದ್ರಹೃದೋಹ್ಯಮಾನಃ ।
ಯಃ ಸಾತ್ವತೈಃ ಸಮವಿಭೂತಯ ಆತ್ಮವದ್ಭಿರ್ವ್ಯೂಹೇಽರ್ಚಿತಃ ಸವನಶಃ ಸ್ವರತಿಕ್ರಮಾಯ ।।೧೦।।

ಅರ್ಥ:- ಯಾವ ನಿನ್ನ ಚರಣಗಳು ಮುಮುಕ್ಷುಗಳವರಿಂದ ಮೋಕ್ಷಕ್ಕಾಗಿ ಪ್ರೇಮಮಯ ಹೃದಯದಿಂದ ಚಿಂತಿಸಲ್ಪಡುವುವು. ಯಾವ ಭಕ್ತರಿಂದ ಸಮಾನ ಐಶ್ವರ್ಯಕ್ಕಾಗಿ ವಾಸುದೇವಾದಿ ವ್ಯೂಹದಲ್ಲಿ ಪೂಜಿಸಿರುವುದು ಮತ್ತು ಕೆಲವರಿಂದ ಘೋರವಾದ ಭಕ್ತಿಯಿಂದ ಸ್ವರ್ಗದ ಉಲ್ಲಂಘನೆಯನ್ನು ಮಾಡಿ ವೈಕುಂಠ ಪ್ರಾಪ್ತಿಯಾಗಬೇಕೆಂದು ತ್ರಿಕಾಲದಲ್ಲಿ ಪೂಜಿಸಲ್ಪಡುವುದು. ಈ ಯಾವ ನಿನ್ನ ಚರಣಗಳು ನಮ್ಮ ವಿಷಯವಾಸನೆಗಳನ್ನು ಸುಡುವ ಅಗ್ನಿಯಾಗಿರುವುದು.

ತಾತ್ಪರ್ಯವೇನೆಂದರೆ, ಮಲಿನ ಹೃದಯೀಗಳವರಿಗೆ ಶ್ರೀಕೃಷ್ಣನ ಕೀರ್ತಿಯನ್ನು ಶ್ರವಣ ಮಾಡುವ ಹೊರತಾಗಿ, ತಪಾದಿಕ ಸಾಧನೆಗಳಿಂದ ಎಂದೆಂದಿಗೂ ಶುದ್ಧಿಯಾಗಲಾರದು ।।೯೯।। ಪರೀಕ್ಷಿತ ರಾಜನು ಕೇವಲ ಶ್ರವಣದಿಂದಲೇ ಉದ್ಧಾರನಾದನು. ಶ್ರವಣದಿಂದ ಕ್ರೌಂಚನು ಉದ್ಧಾರನಾದನು. ಮೀನಿನ ಉದರದಲ್ಲಿದ್ದಾಗ ಪ್ರಾಪ್ತವಾದ ಶ್ರವಣದಿಂದಲೇ ಮತ್ಸೇಂದ್ರನು ಸಿದ್ಧನಾದನು ।।೧೦೦।। ನಿನ್ನ ಕೀರ್ತಿಯನ್ನು ಶ್ರವಣಮಾಡಲು ಚಿತ್ತವು ಶುದ್ಧವಾಗುವುದು. ಹಾಗೂ ಜೀವ ಬ್ರಹ್ಮ ಐಕ್ಯವಾಗುವುದು. ಹೀಗೆ ಎರಡೂ ಪ್ರಕಾರದಿಂದ ಉದ್ಧಾರವಾಗುವುದು. ।।೧೦೧।। ಕಾಶೀ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ದರ್ಶನವನ್ನು ಪಡೆಯಲು ಮರಣ ಸಮಯಕ್ಕೆ ಅಲ್ಲಿನ ವಿಶ್ವನಾಥನು ಆ ಮುಮುಕ್ಷುವಿನ ಕಿವಿಯಲ್ಲಿ ತಾರಕ ಬ್ರಹ್ಮದ ಉಪದೇಶವನ್ನು ಮಾಡುತ್ತಾನೆ. ಆದ್ದರಿಂದ ಕಾಶಿಯು ಮುಕ್ತಿಯ ಕ್ಷೇತ್ರವಾಯಿತು. ಶ್ರವಣದಿಂದ ಜೀವದ ಉದ್ಧಾರವಾಗುವುದು ।।೧೦೨।। ನೀನು ಸದಾ ಸರ್ವಕಾಲದಲ್ಲಿ ಪೂರ್ಣಕಾಮನಾಗಿರುವೆ, ನೀನು ನಿಷ್ಕಾಮ ನಿಜಧಾಮನಾಗಿರುವೆ. ಹೀಗಿರುವ ನಿನಗೂ ಭಕ್ತರ ಭ್ರಮೆಯನ್ನು ಬಿಡಿಸಲು ಕರ್ಮಗಳನ್ನು ಮಾಡಬೇಕಾಗುವುದು ।।೧೦೩।। ಹೇ ಶ್ರೀಕೃಷ್ಣನೇ, ಇದಕ್ಕಾಗಿ ನೀನು ಅನೇಕ ಪ್ರಕಾರಗಳ ಅನೇಕ ಚರಿತ್ರೆಗಳನ್ನು ಮಾಡಿ ತೋರಿಸಿರುವೆ ಮತ್ತು ಸರ್ವರಿಗೂ ಮೋಕ್ಷಮಾರ್ಗದ ಅಟ್ಟದ ಪಾವುಟಣಿಗೆಯನ್ನು ಸಿದ್ಧಗೊಳಿಸಿರುವೆ ।।೧೦೪।। ಪ್ರೇಮದಿಂದ ನಿನ್ನ ಕೀರ್ತಿಯ ಶ್ರವಣವನ್ನು ಮಾಡುವುದೇ ಚಿತ್ತಶುದ್ಧಿಯ ಕಾರಣವಾಗಿದೆ, ಶ್ರವಣದಲ್ಲಿ ದೃಢವಾದ ಸಾತ್ವಿಕ ಶ್ರದ್ಧೆಯೇ ಇದೊಂದು ಪ್ರಮಾಣವಾಗಿದೆ. ಇತರ ಸಾಧನೆಗಳು ವ್ಯರ್ಥವಾಗಿರುವುವು ।।೧೦೫।। ಮನದಲ್ಲಿ ಇಚ್ಛೆಯನ್ನು ಧರಿಸಿ ಆಯಾ ಸಾಧನೆಗಳನ್ನು ಮಾಡಲು ಅವುಗಳೆಲ್ಲವೂ ಆ ವಾಸನೆಗಳಿಂದಲೇ ವ್ಯರ್ಥವಾಗುವುವು. ಯಾರ ಹೃದಯದಲ್ಲಿ ಕೇವಲ ನಿಃಸ್ವಾರ್ಥ ಪ್ರೇಮವಿರುವುದೋ ಆತನು ಬೇಗನೇ ಪರಮಾರ್ಥದತ್ತ ಸಾಗುವನು ।।೧೦೬।। ಹೃದಯದ ಆಳವಾದ ಭೂಮಿಯಲ್ಲಿ ಸ್ವಧರ್ಮದ ಬೀಜದ ಅಂಕುರವು ಹುಟ್ಟಿರುವುದು. ಅದರಲ್ಲಿಯೇ ಶ್ರದ್ಧೆಯ ಬಳ್ಳಿಯು ಹುಟ್ಟಿಕೊಂಡು ಅದರಲ್ಲಿಯೇ ತೀವ್ರವಾಗಿ ಮೊಳಕೆಗಳು ಹೊರಡುವುವು ।।೧೦೭।। ಸತ್‌ಶಾಸ್ತ್ರದ ಶ್ರವಣ ರೂಪ ಜಲದಿಂದ ವೈರಾಗ್ಯದ ಬೇರುಗಳು ಆಳವಾಗಿ ಇಳಿದು ಭದ್ರವಾಗುವುವು. ಅವುಗಳಿಗೆ ಶ್ರದ್ಧೆಯ ಪುಷ್ಟಿಯು ದೊರೆಯಲು ಅವು ವೇಗದಿಂದ ಚಿದಾಕಾಶಕ್ಕೆ ಏರುವುವು ।।೧೦೮।। ಹೇ ಪುರುಷೋತ್ತಮನೇ, ಆ ಚಿದಾಕಾಶದಲ್ಲಿ ಸ್ವಪ್ರಕಾಶನಾದ ಚಂದ್ರಮನು ನೀನಾಗಿರುವೆ. ಹೇ ಮೇಘಶ್ಯಾಮನೇ, ನಿನ್ನ ಮೂರ್ತಿಯನ್ನು ನೋಡುವುದಕ್ಕಾಗಿ ಸಾಧಕರಿಗೆ ಅದೆಷ್ಟೋ ಪ್ರಯಾಸಗಳನ್ನು ಮಾಡಬೇಕಾಗುವುದು ।।೧೦೯।। ಆ ಯಾವ ನಿನ್ನ ಶ್ರೀಚರಣಗಳ ದರ್ಶನವು ಪ್ರತ್ಯಕ್ಷವಾಗಿ ನಮಗಾಯಿತು. ಹೀಗೆ ಹೇಳಿ ಶ್ರೀಕೃಷ್ಣನಿಗೆ ಲೋಟಾಂಗಣವನ್ನು ಹಾಕಿ ಎಲ್ಲ ದೇವತೆಗಳು ಆ ಚರಣಗಳ ಸ್ತುತಿಯನ್ನು ಮಾಡಲಾರಂಭಿಸಿದರು ।।೧೧೦।।

ಆಮುಚ್ಯಾ ಅಶುಭಾಶಯಾಚಾ ಘಾತು । ಕರಿತಾ ಚರಣಧೂಮಕೇತು । ತುಝಾಚಿ ಜೇ ವಿಖ್ಯಾತು । ತ್ರೈಲೋಕ್ಯಾಂತು ಶ್ರೀಕೃಷ್ಣಾ ॥೧೧೧॥ ಪಾಪಇಂಧನಾಚಾ ಮೇಳು । ತೇಥ ತುಝಾ ಚರಣ ವಡವಾನಳು । ಲಾಗತಾ ತೋ ಅತಿತೇಜಾಳು । ತಿಳೇತಿಳು ಜಾಳಿತು ॥೧೧೨॥ ಐಸಾ ಪಾಪಿಯಾಂತೇ ಕಾಂಪವಿತಾ । ಪ್ರೇಮಳಾಂತೇ ಅಭಯದಾತಾ । ತುಝಾ ಚರಣ ಜೇ ಅನಂತಾ । ಹೃದಯೀ ಸರ್ವಥಾ ವಾಹತಾತೀ ॥೧೧೩॥ ತೇಂಚಿ ಹೃದಯ ಜೇ ಕೈಸೇ । ವೋಳಲೇ ಭಕ್ತಿಪ್ರೇಮರಸೇ । ತೇಥ ತುಝೇ ಚರಣ ಸಾವಕಾಶೇ । ಅತಿಉಲ್ಹಾಸೇ ವಾಹತಾತೀ ॥೧೧೪॥ ಕರಿತಾ ಚರಣಾಚೇ ಧ್ಯಾನ । ಜೇ ವಿಸರಲೇ ಭೂಕತಹಾನ । ತ್ಯಾಂಸೀ ದ್ಯಾವಯಾ ಅಭಯದಾನ । ಚರಣಧ್ವಜು ಜಾಣ ಪೈ ತುಝಾ ॥೧೧೫॥ ತೋಚಿ ಚರಣ ಸಾತ್ವತೀ । ಪಾವಾವಯಾ ಸಮವಿಭೂತೀ । ಪೂಜಿಲಾ ಜೇ ಶ್ರೀಪತೀ । ಚತುರ್ಮೂರ್ತೀ ವ್ಯೂಹರೂಪೇ ॥೧೧೬॥ "ವಾಸುದೇವ" "ಸಂಕರ್ಷಣ" । "ಅನಿರುದ್ಧ" ಆಣಿ "ಪ್ರದ್ಯುಮ್ನ" । ಹಾಚಿ ಚತುರ್ವ್ಯೂಹ ಜಾಣ । ಪೂಜಾಸ್ಥಾನ ಭಕ್ತಾಂಚೇ ॥೧೧೭॥ ಭಿನ್ನ ಭಿನ್ನ ಚಾರೀ ವ್ಯಕ್ತೀ । ಚಹೂ ರೂಪೀ ಏಕ ಮೂರ್ತೀ । ಐಸೇ ಜಾಣೋನಿ ಪೂಜಿಜೇ ಭಕ್ತೀ । "ವ್ಯೂಹಸ್ಥಿತಿ" ತ್ಯಾ ನಾಂವ ॥೧೧೮॥ ''ಸಾತ್ವತ'' ಮ್ಹಣಿಪತೀ ತೇ ಭಕ್ತ । ಭಗವತ್ಪದಐಶ್ವರ್ಯಾತೇ ವಾಂಛಿತ । ಚತುರ್ವ್ಯೂಹರೂಪೇ ಪೂಜಿತ । ಐಶ್ವರ್ಯೀ ಚಿತ್ತ ಠೇವೂನೀ ॥೧೧೯॥ ಜನ್ಮ ಮರಣಪ್ರವಾಹಸ್ಥಿತೀ । ನಾಸಾವಯಾ ಏಕ ಭಕ್ತೀ । "ಪೂಜಾ" ಕೀಜೇ ಚತುರ್ಮೂರ್ತೀ । ಆತ್ಮವಂತೀ ಸಜ್ಞಾನೀ ॥೧೨೦॥ ತ್ರಿಷವಣ ತ್ರಿಕಾಳ । ಪೂಜಾ ಕರಿತಾ ಅವಿಕಳ । ಭಜೋನಿ ಜಿಂತಿಲಾ ಕಳಿಕಾಳ । ಜನ್ಮ ಮೂಳ ಛೇದಾವಯಾ ॥೧೨೧॥ ಆಣಿಕಹೀ ಭಕ್ತಜನ । ತುಝೇ ಕರಿತಾತೀ ಭಜನ । ಯಜ್ಞದ್ವಾರಾ ಹೋಮಹವನ । ವಿಧಿ ವಿಧಾನ ವೇದೋಕ್ತ ॥೧೨೨॥

ಯಶ್ಚಿಂತ್ಯತೇ ಪ್ರಯತಪಾಣಿಭಿರಧ್ವರಾಗ್ನೌ ತ್ರಯ್ಯಾನಿರುಕ್ತವಿಧಿನೇಶಹವಿರ್ಗೃಹೀತ್ವಾ ।
ಅಧ್ಯಾತ್ಮಯೋಗ ಉತ ಯೋಗಿಭಿರಾತ್ಮಮಾಯಾಂ ಜಿಜ್ಞಾಸುಭಿಃ ಪರಮಭಾಗವತೈಃ ಪರೀಷ್ಟಃ ॥೧೧॥

ಅರ್ಥ:- ಋಗ್, ಯಜುರ್ ಮತ್ತು ಸಾಮವೇದಾನುಸಾರ ಹೋಮಾಗ್ನಿಯಲ್ಲಿ ಆಹುತಿ ಕೊಡುವವರು. ನಿನ್ನ ಪಾದಕಮಲಗಳನ್ನು ಧ್ಯಾನಿಸುತ್ತಾರೆ. ಅದೇ ಪ್ರಕಾರ ದಿವ್ಯಯೋಗ ಸಾಧಕರು ನಿನ್ನ ದಿವ್ಯಯೋಗ ಶಕ್ತಿಯ ಜ್ಞಾನವನ್ನು ತಿಳಿಯಲು ನಿನ್ನ ಪಾದಕಮಲಗಳನ್ನು ಧ್ಯಾನಿಸುತ್ತಾರೆ. ಅತ್ಯಂತ ಶ್ರೇಷ್ಠರಾದ ಶುದ್ಧ ಭಕ್ತರು ನಿನ್ನ ಮಾಯಾಶಕ್ತಿಯನ್ನು ದಾಟಬಯಸಿ ನಿನ್ನ ಪಾದಕಮಲಗಳನ್ನು ಪರಿಪೂರ್ಣವಾಗಿ ಆರಾಧಿಸುತ್ತಾರೆ.

ದೀಕ್ಷಾಗ್ರಹಣೇ ಅತಿಸಾದರ । ಯಜ್ಞದ್ವಾರಾ ಭಜನತತ್ಪರ । ಕ್ರಿಯೇಪಾಸೋನಿ ನೇಮಿಲೇ ಕರ । ಹಸ್ತವ್ಯಾಪಾರ ನ ಕರಿತೀ ॥೧೨೩॥

ಹೇ ಶ್ರೀಕೃಷ್ಣನೇ, ನಿನ್ನ ಚರಣರೂಪ ಧೂಮಕೇತು ನಮ್ಮ ಅಶುಭ ವಿಷಯ ಕಾಮನೆಗಳ ನಾಶ ಮಾಡುವುದು. ಇದು ತ್ರಿಭುವನದಲ್ಲಿ ಪ್ರಸಿದ್ಧವಾಗಿದೆ ॥೧೧೧॥ ಪಾತಕರೂಪಿ ಉರವಲಗಳ ರಾಶಿಗೆ ನಿನ್ನ ಚರಣರೂಪ ವಡವಾನಲ ಅಗ್ನಿಯು ತಾಗಲು ಅದು ತನ್ನ ದೇದಿಪ್ಯಮಾನವಾದ ತೇಜದಿಂದ ಆ ಪಾಪವನ್ನು ಮೆಲ್ಲಮೆಲ್ಲನೆ ನಿಃಶೇಷವಾಗಿ ಸುಟ್ಟುಹಾಕುವುದು ॥೧೧೨॥ ಹೇ ಅನಂತನೇ, ಹೀಗೆ ಸರ್ವ ಪಾಪಗಳಿಗೆ ನಡುಗಿಸುವ ಮತ್ತು ಪ್ರೇಮಳ ಭಕ್ತರಿಗೆ ಅಭಯವನ್ನು ಕೊಡುವ ನಿನ್ನ ಚರಣಗಳನ್ನು ಭಕ್ತರು ಬಹು ಉತ್ಸಾಹದಿಂದ ತಮ್ಮ ಹೃದಯದಲ್ಲಿ ಧರಿಸುವರು ॥೧೧೩॥ ಅವರ ಅಂತಃಕರಣವು ಭಕ್ತಿಪ್ರೇಮರಸದಿಂದ ಪೂರ್ಣವಾಗಿ ತುಂಬಿರುವುದು . ಅದರಲ್ಲಿ ನಿನ್ನ ಚರಣಗಳನ್ನು ಅತ್ಯಂತ ಉಲ್ಹಾಸದಿಂದ ಮತ್ತು ಯಥೇಚ್ಛವಾಗಿ ಧರಿಸಿಕೊಂಡಿರುವರು ॥೧೧೪॥ ಅವರು ನಿನ್ನ ಚರಣಗಳ ಧ್ಯಾನವನ್ನು ಮಾಡುತ್ತಿರಲು ತಮ್ಮ ಹಸಿವೆ ನೀರಡಿಕೆ ಎಲ್ಲವನ್ನೂ ಮರೆತುಬಿಡುವರು. ಅವರಿಗೆ ಅಭಯವನ್ನು ನೀಡಲು ನಿನ್ನ ಚರಣಗಳು ಧ್ವಜವೇ ಆಗಿರುವುವು ॥೧೧೫॥ ಅದೇ ಚರಣಗಳನ್ನು ಭಕ್ತರು ಸಮಾನವಾದ ಐಶ್ವರ್ಯವು ಪ್ರಾಪ್ತವಾಗಬೇಕೆಂದು ಚತುರ್ಮೂರ್ತಿ ವ್ಯೂಹರೂಪದಲ್ಲಿ ಪೂಜಿಸಿದರು ॥೧೧೬॥ ವಾಸುದೇವ, ಸಂಕರ್ಷಣ, ಅನಿರುದ್ಧ ಮತ್ತು ಪ್ರದ್ಯುಮ್ನ ಈ ಸ್ವರೂಪಕ್ಕೆ "ಚತೂರ್ವ್ಯೂಹ" ಎಂದು ಹೇಳುವರು. ಮತ್ತು ಇದೇ ಭಕ್ತರ ಪೂಜಾಸ್ಥಾನವಾಗಿರುವುದು ॥೧೧೭॥ ಈ ನಾಲ್ಕು ವ್ಯಕ್ತಿಗಳು ಭಿನ್ನ ಭಿನ್ನವಾಗಿ ತೋರುತ್ತಿದ್ದರೂ ಆ ನಾಲ್ಕೂ ರೂಪಗಳಲ್ಲಿ ಮೂರ್ತಿಯು ಒಂದೇ ಇರುವುದು. ಇದನ್ನು ಅರಿತುಕೊಂಡು ಆತನ ಪೂಜೆಯನ್ನು ಮಾಡುವುದಕ್ಕೆ ವ್ಯೂಹಸ್ಥಿತಿ ಎನ್ನುವರು ॥೧೧೮॥ ಯಾವ ಭಕ್ತರು ಸಾತ್ವತರಾಗಿರುವರೋ, ಅವರು ಭಗವಂತನ ಐಶ್ವರ್ಯದ ಇಚ್ಛೆಯನ್ನು ಮಾಡುವರು. ಇವರು ಚತುರ್ವ್ಯೂಹರೂಪದಿಂದ ಐಶ್ವರ್ಯದಲ್ಲಿ ಚಿತ್ತವನ್ನಿಟ್ಟು ಪೂಜೆಯನ್ನು ಮಾಡುವರು ॥೧೧೯॥ ಆತ್ಮಜ್ಞಾನಿಯರಾದ ಸಜ್ಞಾನ ಪುರುಷರು ಜನ್ಮ, ಜರಾ, ಮರಣಗಳ ನಾಶ ಮಾಡುವುದಕ್ಕಾಗಿ ಭಕ್ತಿಯಿಂದ ಚತುರ್ಮೂರ್ತಿಯ ಪೂಜೆಯನ್ನು ಮಾಡಬೇಕು ॥೧೨೦॥ ಮುಂಜಾನೆ ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ನಿನ್ನ ಯಥಾಸಾಂಗವಾಗಿ ಪೂಜೆಯನ್ನು ಮಾಡುವವರು, ಪುನರ್ಜನ್ಮದ ಬೇರನ್ನೇ ಛೇದಿಸಲು ಕಲಿಕಾಲನನ್ನು ಜಯಿಸುವರು ॥೧೨೧॥ ಬೇರೆ ಭಕ್ತರು ಯಜ್ಞವನ್ನು ಮಾಡಿ ಮತ್ತು ವೇದೋಕ್ತ ವಿಧಿಗಳಿಂದ ಹೋಮ ಹವನಾದಿಗಳನ್ನು ಮಾಡಿ ನಿನ್ನ ಪೂಜೆಯನ್ನು ಮಾಡುವರು ॥೧೨೨॥ ದೀಕ್ಷೆಯನ್ನು ಗ್ರಹಣ ಮಾಡುವಲ್ಲಿ ಅತಿಶಯವಾಗಿ ದಕ್ಷತೆ, ಯಜ್ಞದ್ವಾರಾ ಭಜನೆಯನ್ನು ಮಾಡುವಲ್ಲಿ ಅತ್ಯಂತ ತತ್ಪರತೆ, ಹೀಗೆ ಯಾಜ್ಞಿಕ ಕ್ರಿಯೆಗಳಿಂದ ತನ್ನ ಕೈಗಳಿಗೆ ಕ್ಷಣಹೊತ್ತು ಸಹ ಬೇರೆಯಾಗಲು ಕೊಡುವುದಿಲ್ಲ ॥೧೨೩॥

ತೇಥ ವೇದತ್ರಯೀಚೀ ವಿಧಾನಕಳಾ । ಬಾಹೇರ ತ್ರಿಗುಣಾಂಚೀ ತ್ರಿಮೇಖಳಾ । ಆಂತ ಯಜ್ಞ ಪುರುಷ ಆವ್ಹಾನಿಲಾ ।ಚೈತನ್ಯತೇಜಾಳಾ ಸರ್ವಾತ್ಮಾ ।।೧೨೪।। ತೇಥ ಓಂಕಾರ ವಷಟ್‌ಕಾರ । ಲಕ್ಷಣೋಕ್ತ ಮಂತ್ರಉಚ್ಚಾರ । ದ್ರವ್ಯೇ ಅರ್ಪಿತೀ ಅಪಾರ । ಅತಿಪವಿತ್ರ ಅವದಾನೀ ।।೧೨೫।। ಆಣಿಕ ಏಕ ಯೋಗಯುಕ್ತ । ಯೋಗಧಾರಣಾ ತುತೇ ಭಜತ । ಪ್ರಾಣಾಪಾನಾಂಚೀ ಸಮತಾ ದೇತ । ಆಸನಸ್ಥ ಹೋಊನಿಯಾ ।।೧೨೬।। ವಜ್ರಾಸನೀ ದೃಢ ಬಂಧ । ಭೇದೋನಿ ಷಟ್‌ಕಾರಾಚೇ ಭೇದ । ಕುಂಡಲಿನೀಚಾ ಸ್ಕಂಧ । ಅತಿಸುಬದ್ಧ ಥಾಪಟಿಲಾ ।।೧೨೭।। ತೇ ಖವಳಲೀ ಮಹಾಶಕ್ತೀ । ವೇಗೇ ಚಾಲಿಲೀ ಊರ್ಧ್ವಗತೀ । ಪವನ ಪ್ರಾಶೂನಿ ಗ್ರಾಸಿತೀ । ಯೋಗಸ್ಥಿತೀ ಗಗನಾತೇ ।।೧೨೮।। ಶೋಷೂನಿ ಸಹಸ್ರದಳಾಚೇ ಪಾಟ । ಆಟಪೀಠ ಆಣಿ ಗೋಲ್ಹಾಟ । ಕ್ರಮೋನಿಯಾ ಶ್ರೀಹಾಟ । ಆಲೀ ಅತಿಉದ್ಭಟ ಬ್ರಹ್ಮಸ್ಥಾನಾ ।।೧೨೯।। ತೇಥ ಪರಮಾನಂದಾಚಾ ಭೋಗ । ಶಿವಶಕ್ತೀಚಾ ಸಂಯೋಗ । ಯಾಪರೀ ಅಭ್ಯಾಸೋನಿ ಯೋಗ । ಹಾ ಭಜನಮಾರ್ಗ ಯೋಗ್ಯಾಂಚಾ ।।೧೩೦।। ತುರ್ಯೀ ಜಾಣಾವಯಾ ಮಾಯಾ । ಏಕ ಭಜೋ ಲಾಗಲೇ ತುರ್ಯಿಯಾ ಪಾಯಾ । ಸರ್ವಥಾ ಅತರ್ಕ್ಯ ತುರ್ಯೀ ಮಾಯಾ । ದೇವರಾಯಾ ಶ್ರೀಕೃಷ್ಣಾ ।।೧೩೧।। ಮಾಯಾ ನ ಲಕ್ಷೇಚಿ ಲಕ್ಷಿತಾ । ತೋಚಿ ಮಾಯಾಮೋಹ ಜಾಹಲಾ ಚಿತ್ತಾ । ಮಗ ತೇ ಸಿದ್ಧೀಲಾಗೀ ತತ್ತ್ವತಾ । ಚರಣ ಭಗವಂತಾ ಪೂಜಿತೀ ।।೧೩೨।। ಆಣಿಕಹೀ ಏಕ ಪಕ್ಷ । ತುಜ ಭಜಾವಯಾ ಮುಮುಕ್ಷ । ಜಾಲೇ ಗಾ ಅತಿದಕ್ಷ । ಅಧ್ಯಾತ್ಮ ಪಕ್ಷ ನಿಜಯೋಗೇ ।।೧೩೩।। ಆತ್ಮ ಮಾಯೇಚಾ ನಾಶು । ಕರಾವಯಾ ಜಿಜ್ಞಾಸು । ನಿಜಾತ್ಮ ಭೋಧೇ ಸಾವಕಾಶು । ಅತಿಉಲ್ಹಾಸು ಪೂಜೇಚಾ ।।೧೩೪।। ವಿವೇಕಾಚಿಯಾ ಭಾವನಾ । ನಿತ್ಯಾನಿತ್ಯಾಚೀ ವಿವಂಚನಾ । ಕರೂನಿ ಆಣಿತಾ ಅನುಸಂಧಾನಾ । ಸರ್ವತ್ರ ಜಾಣಾ ತೂಚಿ ತೂ ।।೧೩೫।। ಜೇ ಅನಿತ್ಯಪಣೇ ವಾಳಿಲೇ । ಮಾಯಿಕತ್ವೇ ಮಿಥ್ಯಾ ಜಾಹಲೇ । ಮಗ ಚಿನ್ಮಾತ್ರೈಕ ಉರಲೇ । ನಿರ್ವಾಳಿಲೇ ನಿಜರೂಪ ।।೧೩೬।। ಏವಂ ಪಾಹತಾ ಚಹೂಕಡೇ ।ತುರ್ಝೇಚಿ ಸ್ವರೂಪ ಜಿಕಡೇ ತಿಕಡೇ । ಮಗ ಪೂಜಿತೀ ವಾಡೇಕೋಡೇ । ನಿಜಸುರವಾಡೇ ಸರ್ವತ್ರ ।।೧೩೭।। ಜೇ ಜೇ ದೇಖತೀ ಜೇ ಜೇ ಠಾಯೀ । ತೇ ತೇ ತುಜ ವಾಂಚೂನಿ ಆನ ನಾಹೀ । ಐಸಾ ಸರ್ವತ್ರ ಚರಣ ಪಾಹೀ । ಠಾಯಿಂಚಾ ಠಾಯೀ ಪೂಜಿಲಾ ।।೧೩೮।।

ಇವರಿಗೆ ವೇದಗಳ ವಿಧಾನಗಳೇ ಪ್ರಮಾಣವಾಗಿರುವುವು. ಇವರು ಹೊರಗಿನಿಂದ ತ್ರಿಗುಣಗಳಿಗೆ ಮೂರು ಪದರುಗಳ ದಾರದಿಂದ ಬದ್ಧರಾಗಿರುವರು. ಒಳಗೆ ಚೈತನ್ಯ ಪ್ರಕಾಶ ಸರ್ವಾತ್ಮಾ ಯಜ್ಞಪುರುಷನಿಗೆ ಆವ್ಹಾನಿಸಿರುವರು ।।೧೨೪।। ಓಂಕಾರ, ಷಟ್‌ಕಾರ ಲಕ್ಷಣಯುಕ್ತವಾದ ಯೋಗದಿಂದ ಅವರು ಆಹುತಿಯಲ್ಲಿ ಅತಿಪವಿತ್ರವಾದ ಮತ್ತು ಅಪಾರ ದ್ರವ್ಯಗಳನ್ನು ಅರ್ಪಿಸುವರು ।।೧೨೫।। ಇನ್ನು ಬೇರೆಯವರು ಯೋಗಯುಕ್ತರಾಗಿ ಅವರು ಯೋಗ ಸಾಧನೆಯಿಂದ ನಿನ್ನ ಭಜನೆಯನ್ನು ಮಾಡುವರು. ಅವರು ಆಸನದಲ್ಲಿ ಸ್ಥಿರರಾಗಿ ಪ್ರಾಣ-ಅಪಾನ ಸಮಾನ ಮಾಡುವರು ।।೧೨೬।। ವಜ್ರಾಸನವನ್ನು ಹಾಕಿ ಕುಳಿತುಕೊಳ್ಳುವರು. ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ ಮತ್ತು ಆಜ್ಞಾ ಈ ಆರು ಷಟ್‌ಚಕ್ರಗಳ ಭೇದ ಮಾಡಿ ಕುಂಡಲಿನೀ ಶಕ್ತಿಯನ್ನು ಉತ್ಥಾಪನ ಮಾಡುವರು ।।೧೨೭।। ಇದರಿಂದ ಕುಂಡಲಿನೀ ಮಹಾಶಕ್ತಿಯು ಉದ್ರೇಕಗೊಂಡು ಬಹು ತೀವ್ರಗತಿಯಿಂದ ಊರ್ಧ್ವಗತಿಯಲ್ಲಿ ಹೋಗುತ್ತಿರುವುದು ಮತ್ತು ವಾಯು ಭಕ್ಷಣೆಯನ್ನು ಮಾಡಿ ಯೋಗಸ್ಥಿತಿಯಿಂದ ಆಕಾಶವನ್ನು ಗ್ರಾಸಿಸುವುದು ।।೧೨೮।। ಸಹಸ್ರದಳದ ಕಾಲುವೆಯನ್ನು ಶೋಷಣೆಗೊಳಿಸಿ ಔಟಪೀಠ, ಗೋಲ್ಹಾಟ ಮತ್ತು ಶ್ರೀಹಾಟ ಇತ್ಯಾದಿ ಸ್ಥಾನಗಳನ್ನು ಆಕ್ರಮಿಸಿ ಅತ್ಯಂತ ವೇಗದಿಂದ ಅದು ಬ್ರಹ್ಮಸ್ಥಾನಕ್ಕೆ ಹೋಗಿ ತಲುಪುವುದು ।।೧೨೯।। ಅಲ್ಲಿ ಪರಮಾನಂದದ ಭೋಗವು ಮತ್ತು ಶಿವಶಕ್ತಿಯ ಸಂಗಮವಾಗುವುದು. ಈ ಪ್ರಕಾರವಾಗಿ ಯೋಗದ ಅಭ್ಯಾಸವನ್ನು ಮಾಡುವುದು. ಇದು ಯೋಗಿಗಳವರ ಭಜನೆಮಾರ್ಗವಾಗಿರುವುದು ।।೧೩೦।। ಇನ್ನೂ ಕೆಲವರು ನಿನ್ನ ಮಾಯೆಯನ್ನು ಅರಿಯಬೇಕೆಂದು ನಿನ್ನ ಚರಣಗಳ ಭಜನೆಯನ್ನು ಮಾಡುವರು. ಆದರೆ, ಹೇ ಶ್ರೀಕೃಷ್ಣನೇ ನಿನ್ನ ಮಾಯೆಯು ಅತರ್ಕ್ಯವಾಗಿರುವುದು ।।೧೩೧।। ಮಾಯೆಯನ್ನು ಕಾಣಬೇಕೆಂದು ಪ್ರಯತ್ನಿಸಿದರೆ ಅದು ಕಾಣುವುದಿಲ್ಲ . ಇಷ್ಟೇ ಅಲ್ಲ, ಪ್ರಯತ್ನಿಸುವವನೇ ಮಾಯೆಯ ಚಿತ್ತಕ್ಕೆ ಮೋಹಿಸಲ್ಪಡುವನು. ಮತ್ತು ಅವರು ಹೀಗಾದ ನಂತರ ಸಿದ್ಧಿಗಾಗಿ ಭಗವಂತನ ಚರಣಗಳ ಪೂಜೆಯನ್ನು ಮಾಡುವರು ।।೧೩೨।। ಇನ್ನೊಂದು ಪಕ್ಷವಿರುವುದು. ಅದು ಮುಮುಕ್ಷು ಜನರದ್ದಾಗಿದೆ. ಅವರು ಅಧ್ಯಾತ್ಮದಲ್ಲಿ ಅತಿದಕ್ಷರಾಗಿರುವರು ।।೧೩೩।। ಆತ್ಮ ಮಾಯೆಯ ನಾಶವನ್ನು ಮಾಡುವುದಕ್ಕಾಗಿ ಜಿಜ್ಞಾಸುಗಳವರೆಗೆ ನಿನ್ನ ಪೂಜೆಯನ್ನು ಮಾಡಲು ಅತಿ ಉಲ್ಹಾಸವಾಗುವುದು ।।೧೩೪।। ಆದರೆ ವಿವೇಕದ ಅಭ್ಯಾಸದಿಂದ ನಿತ್ಯ, ಅನಿತ್ಯಗಳ ವಿವೇಚನೆಗಳ ನಿನ್ನ ಅನುಸಂಧಾನ ಮಾಡಹತ್ತಲು ಸರ್ವತ್ರವೂ ನೀನೊಬ್ಬನೇ ಕಾಣಹತ್ತುವೆ ।।೧೩೫।। ಯಾವುದು ಅನಿತ್ಯಯುಕ್ತವಾಗಿರುವುದೋ ಅದು ಮಾಯಿಕವಾಗಿದ್ದು ಮಿಥ್ಯೆಯಾಗಿರುವುದು. ತದನಂತರ ಕೇವಲ ಒಂದೇ ಚಿನ್ಮಾತ್ರವು ನಿಜರೂಪವಾಗಿಯೇ ಉಳಿಯುವುದು ।।೧೩೬।। ಈ ಪ್ರಕಾರವಾಗಿ ನೋಡಹತ್ತಲು ಸರ್ವತ್ರವೂ ಎಲ್ಲೆಲ್ಲಿಯೂ ನಿನ್ನ ಸ್ವರೂಪವೇ ಕಾಣಹತ್ತುವುದು. ಆದ್ದರಿಂದ ಇಂತಹ ಭಕ್ತರು ಪ್ರೇಮದಿಂದ ಸರ್ವತ್ರವೂ ನಿನ್ನ ಪೂಜೆಯನ್ನೇ ಮಾಡುವರು ।।೧೩೭।। ಯಾವ ಯಾವ ಸ್ಥಳದಲ್ಲಿ ಏನೇನು ನೋಡುವರೋ, ಅವುಗಳೆಲ್ಲವೂ ನಿನ್ನ ಹೊರತಾಗಿ ಬೇರೆ ಯಾವುದೂ ಇರುವುದಿಲ್ಲ. ಈ ಪ್ರಕಾರವಾಗಿ ಇವರು ನಿನ್ನ ಚರಣಗಳ ಪೂಜೆಯನ್ನು ಮಾಡುವರು ।।೧೩೮।।

ಪರ್ಯುತ್ಸುಯಾ ತವ ವಿಭೋ ವನಮಾಲಯೇಯಂ ಸಂಸ್ಪರ್ಧಿನೀ ಭಗವತೀ ಪ್ರತಿಪತ್ನಿ ವಚ್ಛ್ರಃ ।
ಯಃ ಸುಪ್ರಣೀತಮಮುಯಾರ್ಹಣಮಾದದನ್ನೋ ಭೂಯಾತ್ ಸದಾಂಘ್ರಿರಶುಭಾಶಯಧೂಮಕೇತುಃ ॥೧೨॥

ಅರ್ಥ:- ಹೇ ಪ್ರಭೋ, ಈ ಭಗವತಿ ಲಕ್ಷ್ಮಿಯು ನಿನ್ನ ವಕ್ಷಸ್ಥಳದಲ್ಲಿನ ತಂಗಳ ವನಮಾಲೆ ಜೊತೆಗೆ ಸವತಿಯಂತೆ ಅದಕ್ಕೆ ಸ್ಪರ್ಧೆಯನ್ನು ಮಾಡುವಳು. ಆದರೆ ಅದಕ್ಕೆ ಲಕ್ಷ್ಯಕೊಡದೇ ಭಕ್ತರಿಂದ ಈ ತಂಗಳ ವನಮಾಲೆಯು ಭಕ್ತಿಯಿಂದ ಅರ್ಪಿಸಿದ್ದು ನೀನು ತಿಳಿದು ಪ್ರೀತಿಯಿಂದ ಸಂತೋಷಪೂರ್ವಕವಾಗಿ ಪೂಜೆಯ ಸ್ವೀಕಾರವನ್ನು ಮಾಡುವೆ. ಆ ನಿನ್ನ ಚರಣಗಳು ನಮ್ಮ ಮೇಲ ಅಶುಭ ವಾಸನೆಗಳನ್ನು ಯಾವಾಗಲೂ ದಗ್ಧಗೊಳಿಸುವುದಾಗಿವೆ.

ಐಸೇ ಸರ್ವತ್ರ ತೂತೇ ಪೂಜಿತೀ । ಭಕ್ತ ಪಢಿಯಂತೆ ಹೋತೀ । ತಾಂಚೀ ಪೂಜಾ ತೇಹೀ ಅತಿಪ್ರೀತೀ । ಸ್ವಯೇ ಶ್ರೀಪತೀ ಮಾನಿಸೀ ॥೧೪೯॥ ರಾನೀಚೀ ರಾನವಟ ವನಮಾಳಾ । ಭಕ್ತೀ ಆಣೂನಿ ಘಾತಲೀ ಗಳಾ । ರಮಾ ಸಾಂಡೋನಿ ಉತಾವಿಳಾ । ಸ್ವಯೇ ಭಾಳಲಾ ಮಾಳೇಸೀ ॥೧೫೦॥ ಭಕ್ತೀ ಅರ್ಪಿಲೀ ಆವಡೀ । ಮ್ಹಣೌನಿ ತಿಯೇಚೀ ಅಧಿಕ ಗೋಡೀ । ಶಿಳೀ ಜಾಹಲೀ ತರೀ ನ ಕಾಢೀ । ಅರ್ಧಘಡೀ ಗಳಾಂಚೀ ॥೧೫೧॥ ಭಕ್ತೀ ಭಾವಾರ್ಥೇ ಅರ್ಪಿಲೀ । ದೇವೇ ಸರ್ವಾಂಗೀ ಧರಿಲೀ । ಯಾಲಾಗೀ ಸುಕೋ ವಿಸರಲೀ । ಟವಟವವೀತ ಸರ್ವದಾ ॥೧೫೨॥ ತಿಚಾ ಆಸ್ವಾದಿತಾ ಗಂಧು । ಭಾವೇ ಭುಲಲಾ ಮುಕುಂದು । ಶ್ರಿಯೇಸೀ ಉಪಜಲಾ ಕ್ರೋಧು । ಸವತಿಸಂಬಂಧು ಮಾಂಡಿಲಾ ॥೧೫೩॥ ಮಜ ನ ಯೇತಾ ಆಧೀ । ಭಕ್ತೀ ಅರ್ಪಿಲೀ ನೇಣೊ ಕಧೀ । ಮೀ ತರುಣ ಸಾಂಡೋನಿ ತ್ರಿಶುದ್ಧೀ । ತೇ ವೃದ್ಧ ಖಾಂದೀ ವಾಹಾತಸೇ ॥೧೫೪॥ ದೇವ ನೇಣೇ ಭೋಗಾಚೀ ಖೂಣ । ತೀ ವೃದ್ಧ ಮೀ ತರುಣ । ಪರೀ ತಿಶೀಂಚ ಭುಲಲಾ ನಿರ್ಗುಣ । ಗುಣಾಗುಣ ಹಾ ನೇಣೇ ॥೧೫೫॥ ಮಜ ಚರಣ ಸೇವಾ ಏಕಾದೇ ವೇಳಾ । ಹೇ ಸರ್ವಕಾಳ ಪಡಲೀ ಗಳಾ । ಮಜಹೂನಿ ಸ್ನೇಹ ಆಗಳಾ । ನೇಲಾ ವನಮಾಳಾ ಸರ್ವಥಾ ॥೧೫೬॥ ಮಾತೇ ಡಾವಲೂನಿ ವೇಗೀ । ಹೇ ಬೈಸಲೀ ದೋಹೀ ಅಂಗೀ । ಇಸೀ ಬೋಲತೋ ಶ್ರೀ ಶಾರಂಗೀ । ಮಜಚಿಲಾಗೀ ತ್ಯಾಗೀಲ ॥೧೫೭॥ ಮಜ ದಿಧಲೀ ಚರಣಾಂಚಿ ಸೇವಾ । ಇಚಾ ಮತ್ಸರು ಕಿತೀ ಸಹಾವಾ । ಆಪಾದ ಆವರಿಲೇ ಯಾದವಾ । ಮಾಝೀ ಸೇವಾ ಹರಿತಲೀ ॥೧೫೮॥ ಮೀ ಕುಳಾತ್ಮಜಾ ಕ್ಷೀರಾಬ್ಧೀಚೀ । ಹೇ ರಾನಟ ರಾನೀಚೀ । ಖಾಂದೀ ಬೈಸಲೀ ದೇವಾಚೀ । ಭೀಡ ಭಕ್ತಾಂಚೀ ಮ್ಹಣವೂನಿ ॥೧೫೯॥ ಹೇ ಭಕ್ತಿಬಳೇ ಬೈಸಲೀ ಖಾಂದೀ । ಕಂಹೀ ನುತರೇಚಿ ತ್ರಿಶುದ್ಧೀ । ರಮಾ ವನಮಾಳೇತೇ ಚಂದೀ । ದ್ವೇಷಬುದ್ಧೀ ಸಾಂಡೋನೀ ॥೧೬೦॥

ಈ ಪ್ರಕಾರವಾಗಿ ಸರ್ವತ್ರವೂ ನಿನ್ನ ಪೂಜೆಯನ್ನು ಮಾಡುವ ಭಕ್ತರು ನಿನಗೆ ಅತಿಶಯವಾಗಿ ಪ್ರಿಯರಾಗುವರು. ಈ ಭಕ್ತರ ಪೂಜೆಯನ್ನು ನೀನು ಪ್ರೇಮದಿಂದ ಸ್ವೀಕರಿಸುವೆ ॥೧೪೯॥ ಭಕ್ತರು ಅಡವಿಯಲ್ಲಿನ ಸರಿಯಾಗಿರದ ಹೂವುಗಳ ಮಾಲೆಯನ್ನು ತಂದು ಕೊರಳಿಗೆ ಹಾಕಲು ನೀನು ಲಕ್ಷ್ಮಿಯನ್ನು ಬಿಟ್ಟು ಆ ಮಾಲೆಗೆ ಮೆಚ್ಚುಕೊಳ್ಳುವೆ ॥೧೫೦॥ ಭಕ್ತರು ಪ್ರೇಮದಿಂದ ಅರ್ಪಿಸಿರುವುದರಿಂದ ಅದರ ಆನಂದವು ಅಧಿಕವಾಗಿರುವುದು. ಈ ಮಾಲೆಯು ತಂಗಳವಾದರೂ ಸಹ ಒಂದು ಕ್ಷಣ ಸಹಿತವಾಗಿ ನೀನು ಕೊರಳಿನಿಂದ ತೆಗೆಯಲಾರೆ ॥೧೫೧॥ ಭಕ್ತರು ಪರಮ ಶ್ರದ್ಧೆಯಿಂದ ಅರ್ಪಣೆ ಮಾಡಿರುವ ಮತ್ತು ದೇವನು ಸರ್ವಾಂಗದಲ್ಲಿ ಧರಿಸಿರುವ ಮಾಲೆಯು ಬಾಡುವುದನ್ನು ಮರೆತು ಸತತವಾಗಿ ಸೊಬಗಿನಿಂದ ಕಾಣುತ್ತಿತ್ತು ॥೧೫೨॥ ಇದರ ಸುಗಂಧವನ್ನು ಸೇವಿಸುತ್ತಲೇ ಶ್ರೀಕೃಷ್ಣನು ಭಕ್ತಿಯಿಂದ ಭುಲಾಯಿಸಿಬಿಟ್ಟನು. ಇದನ್ನು ಕಂಡು ಲಕ್ಷ್ಮಿಯ ಮನದಲ್ಲಿ ಸವತಿ ಮತ್ಸರ ಭಾವವು ಉತ್ಪನ್ನವಾಗಿ ಆಕೆಯು ಕ್ರೋಧದಿಂದ ಹೇಳಹತ್ತಿದಳು ॥೧೫೩॥ ನಾನು ನಿನ್ನತ್ತ ಬರುವ ಮೊದಲೇ ಭಕ್ತರು ಎಂದು ಇದನ್ನು ಅರ್ಪಿಸಿದರೋ ತಿಳಿಯದಾಗಿದೆ. ನಾನು ತರುಣಿಯಾಗಿದ್ದರೂ ನನ್ನನ್ನು ಬಿಟ್ಟು ಆ ವೃದ್ಧೆಯನ್ನು ಹೆಗಲ ಮೇಲೆ ಹೊರುವಿರಿ ॥೧೫೪॥ ದೇವರಿಗೆ ಭೋಗದ ಮರ್ಮವು ತಿಳಿಯುವುದಿಲ್ಲ. ಆಕೆಯು ಮುದುಕಿ ಆದರೆ ನಾನು ತರುಣಿಯು. ಹೀಗಿದ್ದರೂ ಈತನು ಆಕೆಯನ್ನು ಮೆಚ್ಚಿಕೊಂಡಿದ್ದಾನೆ, ಕಾರಣ ಈತನು ನಿರ್ಗುಣನಿರುವನು. ಈತನಿಗೆ ಗುಣ ಅವಗುಣಗಳು ತಿಳಿಯುವುದಾದರೂ ಹೇಗೆ? ॥೧೫೫॥ ನನಗೆ ಈತನ ಚರಣ ಸೇವೆಯು ಎಂದೋ ಒಮ್ಮೆ ಸಿಗುವುದು. ಆದರೆ ಈಕೆಯು ಮಾತ್ರ ಯಾವಾಗಲೂ ಆತನ ಕೊರಳಲ್ಲಿಯೇ ಬಿದ್ದಿರುವಳು. ನನಗಿಂತಲೂ ಹೆಚ್ಚಿನ ಪ್ರೇಮವು ಆ ವನಮಾಲೆಯ ಮೇಲಿರುವುದು ॥೧೫೬॥ ನನಗೆ ಒಂದು ಬದಿಗೆ ಸರಿಸಿ ಈಕೆಯು ಎರಡೂ ಅಂಗಗಳಲ್ಲಿ ಕೂತಿರುವಳು. ಹೀಗೆಂದು ಆಕೆಗೆ ಏನಾದರೂ ಹೇಳಬೇಕೆಂದರೆ ಭಗವಾನನು ನನ್ನನ್ನು ತ್ಯಾಗಮಾಡುವನು ॥೧೫೭॥ ನನಗೆ ತನ್ನ ಚರಣಗಳ ಸೇವೆಯನ್ನು ಮಾಡಲು ಹಚ್ಚಿರುವನು. ಆದರೆ ಈಕೆ ಮಾತ್ರ ಈ ಯಾದವನಿಗೆ ಪಾದಗಳವರೆಗೂ ವ್ಯಾಪಿಸಿರುವಳು ಈಕೆಯು ನನ್ನ ಸೇವೆಯನ್ನು ಹರಣ ಮಾಡಿರುವಳು. ಈಗ ಈಕೆಯ ಈ ದ್ವೇಷವನ್ನು ನಾನು ಎಷ್ಟೆಂದು ಸಹಿಸಬೇಕು? ॥೧೫೮॥ ನಾನು ಕ್ಷೀರಸಾಗರದ ಕುಲೀನ ಕನ್ಯೆಯಾಗಿರುವೆನು. ಆದರೆ ಈಕೆಯು ಅಡವಿಯ ಚೆನ್ನಾಗಿಲ್ಲದವಳು. ಆದರೆ ಈಕೆಯು ಭಕ್ತರ ಭಿಡೆಯಿಂದ ದೇವರ ಹೆಗಲಮೇಲೆ ಕುಳಿತಿರುವಳು ॥೧೫೯॥ ಭಕ್ತರ ಸಾಮರ್ಥ್ಯದಿಂದ ಈ ವನಮಾಲೆಯು ದೇವರ ಹೆಗಲಮೇಲೆ ಕುಳಿತಿರುವಳು ಮತ್ತು ಈಕೆಯು ಅಲ್ಲಿಂದ ಕೆಳಗೆ ಇಳಿಯುತ್ತಿಲ್ಲ. ಇದನ್ನು ಕಂಡು ರಮೆಯು ಮತ್ಸರವನ್ನು ಬಿಟ್ಟುಕೊಟ್ಟು ಆ ಮಾಲೆಗೆ ವಂದಿಸಿದಳು ॥೧೬೦॥

ಐಶೀ ಭಕ್ತಾಂಚೀ ಪೂಜಾ । ತುಜ ಆವಡೇ ಗರುಡಧ್ವಜಾ । ಸುಪ್ರಣೀತ ಭಾವೋ ವೋಜಾ । ಚರಣೀ ತುಝ್ಯಾ ಅರ್ಪಿಲ್ಯಾ ॥೧೫೧॥ ತೋ ಚರಣ ಧೂಮಕೇತು ತುಝಾ । ಆಮುಚ್ಯಾ ಪಾಪಾಂತೇ ನಾಶು ವೋಜಾ । ಪುನಃ ಪುನಃ ಗರುಡಧ್ವಜಾ । ಪಾಪಸಮಾಜಾ ನಿರ್ದಳೂ ॥೧೫೨॥ ಕರಿತಾ ಚರಣಾಂಚೇ ವರ್ಣನ । ನ ಧಾಯೇ ದೇವಾಂಚೇ ಮನ । ಪುಢತಪುಢತೀ ಚರಣಸ್ತವನ । ಧ್ವಜಲಕ್ಷಣ ವರ್ಣಿತೀ ॥೧೫೩॥

ಕೇತು ಸ್ತ್ರಿವಿಕ್ರಮಯುತಸ್ತ್ರಿಪತತ್ಪತಾ ಕೋ ಯಸ್ತೇ ಭಯಾಭಯಕರೋಽಸುರದೇವಚಮ್ವೋಃ ।
ಸ್ವರ್ಗಾಯ ಸಾಧುಷು ಖಲೇಷ್ವಿತರಾಯ ಭೂಮನ್ ಪಾದಃ ಪುನಾತು ಭಗವನ್ ಭಜತಾಮಘಂ ನಃ ॥೧೩॥

ಅರ್ಥ:- ಬಲಿಯ ಬಂಧನ ಪ್ರಸಂಗದಲ್ಲಿ ಮೂರು ಹೆಜ್ಜೆಗಳಿಂದ ಅತಿ ಎತ್ತರದ ವಿಜಯಧ್ವಜದಂತೆ ಮೂರು ಮಾರ್ಗಗಳಲ್ಲಿ ಮೂರು ಲೋಕಗಳಲ್ಲಿ ಸಂಚರಿಸುವ ಗಂಗೆಯು ಈಕೆಯ ಮೂರುಧ್ವಜಗಳಿರುವುವು. ಮತ್ತು ನಿನ್ನ ಚರಣಗಳು ಅಸುರರ ಸೈನ್ಯಕ್ಕೆ ಭಯ ಹುಟ್ಟಿಸುವ ಮತ್ತು ದೇವತೆಯರ ಸೈನ್ಯಕ್ಕೆ ಅಭಯವನ್ನು ನೀಡುವುದಾಗಿದೆ. ಹಾಗೆಯೇ ದೇವತೆಗಳವರಿಗೆ ಸ್ವರ್ಗಸುಖವನ್ನು ಮತ್ತು ಅಸುರರಿಗೆ ಅಧೋಗಮನ ರೂಪ ದುಃಖಕ್ಕೆ ಕಾರಣವಾಗಿದೆ. ಈ ನಿಮ್ಮ ಪಾದಪದ್ಮಗಳು ಭಜನೆ ಮಾಡುವ ನಮಗೆ ಸಂಪೂರ್ಣವಾಗಿ ಪಾಪತಾಪಗಳನ್ನು ಕಳೆಯಲಿ.

ಬಲಿಬಂಧನೀ ಅನಂತಾ । ತ್ರಿವಿಕ್ರಮಚರಣು ವಾಢತಾ । ಸತ್ಯಲೋಕಾಹೀ ವರುತಾ । ದಿಸೇ ಝಳಕತಾ ಶ್ರೀಚರಣು ॥೧೫೪॥ ಚರಣು ವಾಢಲಾ ಸರ್ವಾವರೀ । ತೋ "ಕೇತು" ಬೋಲಿಜೇ ಕವೀಶ್ವರೀ । ಪತಾಕಾ ಝಳಕತ ಕವಣೇಪರೀ । ಸುರಸರೀ ನಿಜಗಂಗಾ ॥೧೫೫॥ ಬಲಿಬಂಧನೀ ಆವೇಶ । ಚರಣ ಉಚಲಿಲಾ ದುರಾಶ । ನಖೇ ಭೇದಲಾ ಆವರಣಕೋಶ । ಜಳ ಬಹುವಸ ಚಾಲಿಲೇ ॥೧೫೬॥ ಚರಣಸ್ಪರ್ಶೇ ಭಗವಂತಾ । ಜಾಹಲೀ ಜೀವನಾಸೀ ಪವಿತ್ರತಾ । ಬ್ರಹ್ಮಾ ಕಮಂಡಲೀ ಧರಿತಾ । ಶಿವೇ ಮಾಥಾ ವಾಹಿಲೀ ॥೧೫೭॥ ಚರಣಧ್ವಜೀ ಪತಾಕಾ ತೇ ಗಂಗಾ । ತ್ರಿವಾಹಿನೀ ತ್ರಿಪಥಗಾ । ಚರಣಶೋಭಾ ಶ್ರೀರಂಗಾ । ನಯನಭೃಂಗಾ ಉಲ್ಹಾಸು ॥೧೫೮॥ ಕೇತು ಝಳಕಲಿಯಾ ಪಾಠೀ । ಅಸುರೀ ಸೇನೇಸೀ ಭಯ ಉಠೀ । ದೈವೀ ಸಂಪತ್ತೀಚೇ ಪೋಟೀ । ಅತ್ಯಂತ ಉಠೀ ಆಹ್ಲಾದು ॥೧೫೯॥ ಆಣಿಕ ಚರಣಾಚೀ ಕಥಾ । ದೇವಾಸೀ ಸ್ವರ್ಗಸುಖದಾತಾ । ತೋಚ ಚರಣು ಅಧರ್ಮವಂತಾ । ಹೋಯ ತತ್ತ್ವತಾ ನರಕಹೇತು ॥೧೬೦॥ ಏಕ ತರಲೇ ಚರಣ ಪೂಜಿತಾ । ಏಕ ತರಲೇ ಚರಣ ಧ್ಯಾತಾ । ಚರಣ ಉಪೇಕ್ಷಿತೀ ಸರ್ವಥಾ । ಅಧಃಪಾತಾ ತೇ ಜಾತೀ ॥೧೬೧॥ ಚರಣ ವಂದಿತೀ ಕಾ ನಿಂದಿತೀ । ತೇ ನಿಜಪದಾಪ್ರತೀ ಜಾತೀ । ಸರ್ವಥಾ ಜೇ ಉಪೇಕ್ಷಿತೀ । ಅಧೋಗತೀ ತಯಾಂಸೀ ॥೧೬೨॥ ಚರಣ ವಂದಿತಾ ತರಲೀ ಶಿಳಾ । ನಿಂದಿತಾ ಉದ್ಧರಿಲೇಶಿಶುಪಾಳಾ । ಜೇ ಉಪೇಕ್ಷಿತೀ ಚರಣಕಮಳಾ । ತಯಾ ಖಿಳಾ ರೌಖ ॥೧೬೩॥

ಹೇ ಶ್ರೀಕೃಷ್ಣನೇ, ಭಕ್ತರ ಈ ಪ್ರಕಾರದ ಪೂಜೆಯು ನಿನಗೆ ಬಹು ಪ್ರೀತಿಯಾಗುವುದೆಂದು ನಾವು ನಮ್ರಭಾವನೆಯಿಂದ ನಮ್ಮ ಸರ್ವ ಭಕ್ತಿಪ್ರೇಮವನ್ನು ನಿನ್ನ ಚರಣಗಳಲ್ಲಿ ಅರ್ಪಿಸಿರುವೆವು ॥೧೫೧॥ ಆ ಯಾವ ನಿನ್ನ ಚರಣರೂಪ ಧೂಮಕೇತುವು ಅಂದರೆ ಅಗ್ನಿಯು ತನ್ನ ಜ್ವಾಲೆಯಿಂದ ನಮ್ಮ ಪಾಪಗಳ ನಾಶಮಾಡಲಿ. ಪುನಃಪುನಃ ಪಾಪಗಳು ಕೂಡಿದರೂ ಅವುಗಳನ್ನೂ ಸಹ ನಾಶಮಾಡಲಿ ॥೧೫೨॥ ಈ ಪ್ರಕಾರವಾಗಿ ಶ್ರೀಕೃಷ್ಣನ ಚರಣಗಳ ವರ್ಣನೆಯನ್ನು ದೇವತೆಗಳು ಮಾಡಿದರು. ಆದರೂ ಅವರ ಮನವು ತೃಪ್ತವಾಗದ್ದಕ್ಕೆ ಪುನಃ ಚರಣ ಸ್ತವನ ಮಾಡಿ ಧ್ವಜಲಕ್ಷಣವನ್ನು ವರ್ಣಿಸಲಾರಂಭಿಸಿದರು ॥೧೫೩॥

ಹೇ ಅನಂತನೇ, ಬಲಿಬಂಧನದ ಸಮಯಕ್ಕೆ ವಾಮನರೂಪದಲ್ಲಿ ನಿಮ್ಮ ಚರಣಗಳನ್ನು ಬೆಳೆಸಿದಿರಿ. ಆಗ ನಿಮ್ಮ ಚರಣಗಳು ಸತ್ಯಲೋಕದ ಮೇಲೆ ಝಳಿಪಿಸುತ್ತಿರುವುದು ಕಂಡಿತು ॥೧೫೪॥ ಎಲ್ಲರ ಮೇಲೆ ಬೆಳೆದಿರುವ ಈ ಚರಣಕ್ಕೆ ಜ್ಞಾನಿ ಪುರುಷರು ಕೇತು ಎಂದು ಹೇಳುವರು. ಈ ಚರಣದಿಂದಲೇ ಉತ್ಪನ್ನವಾಗಿರುವ ಗಂಗೆಯು ಧ್ವಜದಂತೆ ಬೆಳಗುತ್ತಿರುವಳು ॥೧೫೫॥ ಬಲಿಬಂಧನದವೇಳೆಯಲ್ಲಿ ಭಯಂಕರವಾದ ಆವೇಶದಿಂದ ಚರಣವನ್ನು ಎತ್ತಿದ್ದರಿಂದ ಅದರ ಉಗುರುಗಳ ಅಡಿಯಲ್ಲಿ ಭೂಮಿಯ ಆವರಣ ಕೋಶವು ಭಂಗವಾಯಿತು. ಅಲ್ಲಿಂದ ಜಲದ ಪ್ರವಾಹವು ಹರಿಯಹತ್ತಿತು ॥೧೫೬॥ ಹೇ ಭಗವಂತನೇ, ನಿಮ್ಮ ಚರಣ ಸ್ಪರ್ಶದಿಂದ ಆ ಜಲಕ್ಕೆ ಪವಿತ್ರತೆಯು ಪ್ರಾಪ್ತವಾಯಿತು. ಆದ್ದರಿಂದ ಆ ಜಲವನ್ನು ಬ್ರಹ್ಮದೇವನು ಕಮಂಡಲದಲ್ಲಿ ತುಂಬಿದನು. ಮತ್ತು ಶಂಕರನು ಮಸ್ತಕಕ್ಕೆ ಧರಿಸಿದನು ॥೧೫೭॥ ನಿನ್ನ ಚರಣಧ್ವಜಗಳಾದ ಈ ಪತಾಕೆಗಳು ಇವೇ ಈ ಮೂರು ಮಾರ್ಗದಿಂದ ಮೂರೂ ಲೋಕಗಳಲ್ಲಿ ಹರಿಯುವ ಗಂಗಾನದಿಯಾಗಿರುವುದು. ಈ ನಿನ್ನ ಚರಣಗಳ ಶೋಭೆಯು ನೇತ್ರರೂಪ ಭೃಂಗಗಳಿಗೆ ಬಹು ಆನಂದ ಕೊಡುವುದು ॥೧೫೮॥ ಈ ಧ್ವಜವು ಹಾರಾಡುತ್ತಲೇ ಅಸುರ ಸೈನ್ಯದ ಮನದಲ್ಲಿ ಭಯ ಹುಟ್ಟಿತು ಮತ್ತು ದೈವೀಸಂಪತ್ತಿನಿಂದ ಕೂಡಿರುವ ದೇವತೆಗಳ ಮನದಲ್ಲಿ ಆನಂದದ ತೆರೆಗಳು ಹುಟ್ಟಿದವು ॥೧೫೯॥ ಈ ಚರಣಗಳ ವೈಶಿಷ್ಟ್ಯವು ಇನ್ನೊಂದು ಪ್ರಕಾರವಾಗಿರುವುದು. ಅದೇನೆಂದರೆ ದೇವತೆಗಳವರಿಗೆ ಸ್ವರ್ಗಸುಖವನ್ನು ಕೊಡುವ ಆ ಚರಣಗಳೇ ಅಧರ್ಮ ಜನರಿಗೆ ನರಕದಲ್ಲಿ ಒಗೆಯುವುವು ॥೧೬೦॥ ಕೆಲವರು ಚರಣಗಳ ಪೂಜೆಯನ್ನು ಮಾಡಿ ಉದ್ಧಾರರಾದರು. ಕೆಲವರು ಚರಣಗಳ ಧ್ಯಾನ ಮಾಡಿ ಉದ್ಧಾರರಾದರು. ಆದರೆ ಯಾರು ಈ ಚರಣಗಳನ್ನು ಉಪೇಕ್ಷೆ ಮಾಡುವರೋ ಅವರಿಗೆ ಅಧಃಪಾತವಾಗುವುದು ॥೧೬೧॥ ಈ ಚರಣಗಳಿಗೆ ವಂದಿಸುವವರು ಅಥವಾ ನಿಂದಿಸುವವರು ನಿಜಪದಕ್ಕೆ ಮುಟ್ಟುವರು. ಆದರೆ ಸರ್ವಥಾ ಉಪೇಕ್ಷೆ ಮಾಡುವವರಿಗೆ ಮಾತ್ರ ಅಧಃಪಾತವಾಗುವುದು ॥೧೬೨॥ ಚರಣಗಳಿಗೆ ವಂದಿಸಿ ಶಿಲೆಯು ಉದ್ಧಾರವಾಯಿತು. ನಿಂದಿಸುವ ಶಿಶುಪಾಲನಿಗೆ ನೀನು ಉದ್ಧಾರಮಾಡಿದೆ ಆದರೆ ಈ ಚರಣಗಳನ್ನು ತಿರಸ್ಕರಿಸುವ ಆ ದುಷ್ಟರಿಗೆ ರೌರವ ನರಕದಲ್ಲಿ ಒಗೆಯುವೆ ॥೧೬೩॥

ಐಕೇ ಸ್ವಾಮಿಯಾ ವ್ಯಾಪಕಾ । ಐಸಾ ತುಝಾ ಚರಣ ನಿಕಾ । ಆಮುಚ್ಯಾ ಸಕಳ ಪಾತಕಾ । ಕ್ಷಣಾರ್ಧೇ ದೇಖಾ ಉದ್ಧಾರು ॥೧೬೪॥ ಜೇಥ ಪಾಪಾಚಾ ಜಾಹಲಾ ಉದ್ಧಾರು । ತೇಥ ಸಹಜಚಿ ಖುಂಟಲಾ ದುರಾಚಾರು । ಐಸಾ ತರಾವಯಾ ಸಂಸಾರು । ಚರಣ ಸಾಚಾರು ಪೈ ತುಝಾ ॥೧೬೫॥

ನಸ್ಯೋತಗಾವ ಇವ ಯಸ್ಯ ವಶೇ ಭವಂತಿ ಬ್ರಹ್ಮಾದಯಸ್ತನುಭೃತೋ ಮಿಥುರರ್ದ್ಯಮಾನಾಃ ।
ಕಾಲಸ್ಯ ತೇ ಪ್ರಕೃತಿಪೂರುಷಯೋಃ ಪರಸ್ಯ ಶಂ ನಸ್ತನೋತು ಚರಣಃ ಪುರುಷೋತ್ತಮಸ್ಯ ॥೧೪॥

ಅರ್ಥ:- ಮೂಗಿನಲ್ಲಿ ಮುಗದಾಣ ಹಾಕಿಕೊಂಡ ದನಗಳಂತೆ ಪರಸ್ಪರರಲ್ಲಿ ಯುದ್ಧಾದಿಕ ಯೋಗದಿಂದ ಪೀಡಿಸಲ್ಪಡುವ ಬ್ರಹ್ಮಾದಿಕ ದೇವತೆಗಳು ಯಾರ ಆಧೀನರಾಗಿರುವರೋ, ಆ ಪ್ರಕೃತಿ ಮತ್ತು ಪುರುಷಗಳಿಂದಲೂ ಬೇರೆಯಾಗಿರುವ ಪುರುಷೋತ್ತಮನಾದ ನಿನ್ನ ಕಾಲದ ಅಂದರೆ ಸರ್ವ ಪ್ರವರ್ತಕರ ಆ ಚರಣಗಳು ನಮ್ಮ ಕಲ್ಯಾಣವನ್ನು ಸರ್ವಭಾವದಿಂದ ಮಾಡುವುವು.

ನಿಜಸುಖಾತೇ ವಿಸ್ತಾರಿತಾ । ತುಝಾ ಚರಣ ಜೇ ಅಚ್ಯುತಾ । ಕಾಳಾದಿಕರ್ಮಾಚಾ ಶಾಸ್ತಾ । ಆತ್ಮಾ ನಿಯಂತಾ ದೇವಾಚಾ ॥೧೬೬॥ ತೂ ಕಾಳಾಚಾ ನಿಜನಿಯಂತಾ । ಕಾಳಾಸೀ ಅಕಾಳೇ ನ ಕರವೇ ಸತ್ತಾ । ದೇವಾಂಸೀ ಅಧಿಕಾರೀ ಸ್ಥಾಪಿತಾ । ದೇವನಿಯಂತಾ ತೂ ಕೃಷ್ಣಾ ॥೧೬೭॥ ಕರ್ಮಸ್ವಾಮೀ ತೂ ಕೃಷ್ಣನಾಥಾ । ಇಂದ್ರಿಯಕ್ರಿಯಾ ಸಮಸ್ತಾ । ಕೋಣಾ ನ ಕರವೇ ಅನ್ಯಥಾ । ಕರ್ಮನಿಯಂತಾ ಶ್ರೀಕೃಷ್ಣ ॥೧೬೮॥ ಬ್ರಹ್ಮಾದಿ ಶರೀರಧಾರೀ । ತುಜ ಆಧೀನ ಗಾ ಶ್ರೀಹರೀ । ಜೈಸೇ ನಾಥಿಲೇ ಬೈಲ ನಾಂಗರೀ । ಕೃಷೀವಳೂ ಧರೀ ಸ್ವಾಮಿತ್ವೇ ॥೧೬೯॥ ತೇಥ ಜೋ ರಾಹೇ ಮಾಗೇ ಪುಢೇ । ತೋ ಝೋಡಿಜೇ ಆಸುಡೇ । ತುಝೀ ಆಜ್ಞೇವರೀ ರೋಕಡೇ । ವರ್ತತೀ ಗಾಢೇ ಕಳಿಕಾಳಾದಿಕ ॥೧೭೦॥ ಸಂಸಾರಲಕ್ಷಣ ಶೇತಾಸೀ । ಅಧಿಕಾರೀ ಜುಂಪೋನಿ ಸರ್ವಾಸೀ । ನಿಜಕರ್ಮೇ ಕ್ಷೇತ್ರಾಸೀ । ತೂ ವಾಹವಿಸೀ ನಿಜಾಜ್ಞಾ ॥೧೭೧॥ ರೋವೋನಿ ಅಹಂಕಾರಾಚೀ ಮೇಢೀ । ಮಹತ್ತತ್ತ್ವಾಂಚೇ ಖಳೇ ಝಾಡೀ । ತ್ರಿಗುಣದೋರೇ ಬಾಪುಡೀ । ಬಾಂಧಿಶೀ ಕಡೋವಿಕಡೀ ಜೀವಪಶುಂತೇ ॥೧೭೨॥ ಉದೋಅಸ್ತಾಂಚೇನಿ ಝುಣತ್ಕಾರೇ । ದೇತಾ ನಿಜಕರ್ಮಾಚೇ ಫೇರೇ । ಜೋ ಖಾಂದಾ ಚುಕವೋನಿ ವೋಸರೇ । ತೋಚಿ ಮಾರೇ ಮಾರಿಜೇ ॥೧೭೩॥ ಹಾ ಬೋಲ ಜರೀ ಮ್ಹಣಸೀ ವಾಯಾ । "ಸೃಷ್ಟಿಕರ್ತ್ರೀ ಧರಿತೀ ಮಾಯಾ । ಮಜಸೀ ಸಂಬಂಧ ನಾಹೀ ಯಯಾ"। ದೇವರಾಯಾ ಹೇ ನ ಮ್ಹಣೇ ॥೧೭೪॥ ಮಾಯೇಸೀ ತೂ ಅಧಿಷ್ಠಾನ । ಯಾಲಾಗೀ ತೂ ಪರಮ ಕಾರಣ । ತುಝಿಯೇ ಮಾಂಡೀವರೀ ಜಾಣ । ಕ್ರೀಡಾಸ್ಥಾನ ಪ್ರಕೃತಿಪುರುಷಾ ॥೧೭೫॥ ತೂ ಮಾಯೇಹೂನಿ ಅಪಾರು । ಪ್ರಕೃತಿಪುರುಷಾಹೂನಿ ಪರು । ಕಾಳಾಚಾ ಕಾಳ ತೂ ದುರ್ಧರು । ಸರ್ವಸಂಹಾರುಕರ್ತಾ ತೂ ॥೧೭೬॥

ಹೇ ಸರ್ವವ್ಯಾಪಿ, ಸರ್ವೇಶ್ವರನೇ, ಹೀಗೆ ನಿನ್ನ ಚರಣಗಳು ಉತ್ತಮವಾಗಿವೆ. ಇವು ನಮ್ಮ ಸರ್ವ ಪಾಪಗಳನ್ನು ಕ್ಷಣದಲ್ಲಿ ಹೋಗಲಾಡಿಸಿ ಉದ್ಧರಿಸುವುವು ॥೧೬೪॥ ಎಲ್ಲಿ ಪಾತಕಗಳ ನಾಶವಾಗುವುದೋ, ಅಲ್ಲಿ ದುರಾಚಾರಗಳು ಸಹಜವಾಗಿಯೇ ನಿಲ್ಲುವುವು. ಈ ಪ್ರಕಾರವಾಗಿ ನಿನ್ನ ಚರಣಗಳು ನಿಜವಾಗಿಯೂ ಸಂಸಾರಸಾಗರದಿಂದ ಪಾರುಮಾಡುವಂತಹದ್ದಾಗಿವೆ ॥೧೬೫॥

ಹೇ ಅಚ್ಯುತನೇ, ನಿನ್ನ ಚರಣಗಳು ಸ್ವಾತ್ಮಸುಖದ ವಿಸ್ತಾರವನ್ನು ಮಾಡುವಂತಹದ್ದಾಗಿವೆ. ಕಾಲಾದಿ ಕರ್ಮಗಳ ಶಾಸ್ತಾ ಆಗಿರುವುವು. ಹಾಗೆಯೇ ದೇವತೆಗಳ ಆತ್ಮ ಮತ್ತು ನಿಯಂತವಾಗಿರುವುವು ॥೧೬೬॥ ಕಾಲದ ನಿಯಂತನು ನೀನೇ ಆಗಿರುವೆ. ಆದ್ದರಿಂದ ಕಾಲನಿಗೆ ಅಕಾಲದಲ್ಲಿ ತನ್ನ ಸತ್ತೆಯನ್ನು ಪ್ರಯೋಗಿಸಲು ಬರುವುದಿಲ್ಲ. ಮತ್ತು ದೇವತೆಗಳವರಿಗೆ ಅಧಿಕಾರಗಳಲ್ಲಿ ನೇಮಿಸುವವನಾದ ನೀನು ದೇವತೆಗಳ ನಿಯಂತಕನಾಗಿರುವೆ ॥೧೬೭॥ ಹೇ ಕೃಷ್ಣನಾಥನೇ, ಕರ್ಮದ ಸ್ವಾಮಿಯು ನೀನೇ ಆಗಿರುವೆ. ಕಾರಣ ನಿನ್ನ ಹೊರತಾಗಿ ಇಂದ್ರಿಯಗಳ ಕ್ರಿಯೆಗಳನ್ನು ಯಾರಿಂದಲೂ ಏನೂ ಮಾಡಲು ಸಾಧ್ಯವಿಲ್ಲ. ಆದ್ದರಿಂದಲೇ ಕರ್ಮದ ನಿಯಂತಕನು ನೀನೇ ಇರುವೆ ॥೧೬೮॥ ಹೇ ಶ್ರೀಹರಿಯೇ ಬ್ರಹ್ಮಾದಿಕ ಶರೀರಧಾರಿ, ಸರ್ವದೇವತೆಗಳು ನಿನ್ನ ಆಧೀನರಾಗಿರುವರು. ಯಾವ ಪ್ರಕಾರವಾಗಿ ಒಕ್ಕಲಿಗನು ದನಗಳಿಗೆ ಮುಗುದಾಣವನ್ನು ಹಾಕಿ ತನ್ನ ಅಂಕಿತದಲ್ಲಿಟ್ಟುಕೊಳ್ಳುವನು ॥೧೬೯॥ ದನಗಳು ಏನಾದರೂ ಹಿಂದೆ ಮುಂದಾದರೆ ಅವುಗಳಿಗೆ ಬಾರಕೋಲಿನಿಂದ ಹೊಡೆಯಲಾಗುವುದು. ಅದರಂತೆ ನಿನ್ನ ಆಜ್ಞಾನುಸಾರವಾಗಿ ಚಾಚೂ ತಪ್ಪದೇ ಕಾಲಾದಿಕರು ವರ್ತಿಸುವರು ॥೧೭೦॥ ನೀನು ಸಂಸಾರ ರೂಪದ ಹೊಲದಲ್ಲಿ ಆಯಾ ಅಧಿಕಾರಿಗಳನ್ನು ನೇಮಿಸಿ ಆ ದೇಹಧಾರಿಗಳನ್ನು ನಿನ್ನ ಆಜ್ಞೆಯಂತೆ ವರ್ತಿಸಲು ಹಚ್ಚುವೆ ॥೧೭೧॥ ಅಹಂಕಾರದ ಚಿಕ್ಕಕಂಬವನ್ನು ನಟ್ಟಿಸಿ, ಮಹತ್‌ತತ್ತ್ವದ ಕಣವನ್ನು ಸಿದ್ಧಗೊಳಿಸಿ ಮೂರು ಗುಣಗಳ ಹಗ್ಗದಿಂದ ಜೀವಗಳಿಗೆ ನೀನು ಕಟ್ಟಿಹಾಕುವೆ ॥೧೭೨॥ ಸೂರ್ಯನ ಉದಯ ಮತ್ತು ಅಸ್ತವೆಂಬ ಬಾರಕೋಲನ್ನು ಬಾರಿಸಿ ನೀನು ಅವರಿಗೆ ಅವರ ಕರ್ಮದ ಸುತ್ತು ಹಾಕಿಸುವೆ. ಅದರಲ್ಲಿ ಯಾವುದಾದರೂ ದನವು ಹೆಗಲನ್ನು ಜಾರಿಸಿ ತಪ್ಪಿಸಿಕೊಳ್ಳಲು ಪ್ರಯತ್ನಿಸಲು ನೀನು ಅದಕ್ಕೆ ಹೊಡೆತ ಹಾಕುವೆ ॥೧೭೩॥ ಈ ನಿಮ್ಮ ಹೇಳಿಕೆಗಳು ವ್ಯರ್ಥವಾಗಿವೆ. ಕಾರಣ ಸೃಷ್ಟಿಸುವ ಕಾರ್ಯವು ಮಾಯೆದ್ದಾಗಿದೆ, ನನ್ನದು ಅದರಲ್ಲಿ ಯಾವ ಸಂಬಂಧವಿಲ್ಲ. ಹೀಗೆ ನೀನು ಅಕಸ್ಮಾತ ಹೇಳಿದರೆ, ಹೇ ದೇವರಾಯನೇ, ಇದು ನಿಜವಲ್ಲ ॥೧೭೪॥ ಏಕೆಂದರೆ ನೀನೇ ಮಾಯೆಯ ಆಶ್ರಯನಾಗಿರುವೆ. ಆದ್ದರಿಂದ ಮುಖ್ಯಕಾರಣನು ನೀನೇ ಆಗಿರುವೆ. ನಿನ್ನ ತೊಡೆಯ ಮೇಲೆ ಪ್ರಕೃತಿ ಮತ್ತು ಪುರುಷರು ಆಡುತ್ತಿರುವರು ॥೧೭೫॥ ನೀನು ಮಾಯೆಗಿಂತಲೂ ಅತ್ಯಂತ ಶ್ರೇಷ್ಠನಾಗಿರುವೆ. ಪ್ರಕೃತಿ ಪುರುಷರಿಗಿಂತಲೂ ಅತಿಭಿನ್ನನಾಗಿರುವೆ. ನೀನು ಕಾಲನಿಗೆ ಅತಿ ದುರ್ಧರನಾದ ಕಾಲನಾಗಿರುವೆ. ಸರ್ವ ಸಂಹಾರದ ಕರ್ತನು ನೀನೇ ಆಗಿರುವೆ ॥೧೭೬॥

ಆಮುಚ್ಯಾ ನಿಜಸುಖಾ ಉತ್ತಮಾ । ತುರ್ಝಾ ಚರಣವಿಸ್ತಾರ ಮೇಘಶ್ಯಾಮಾ । ಹೇಚಿ ಮಾಗೋ ಪುರುಷೋತ್ತಮಾ ।ಕೃಪಾ ಆಮ್ಹಾ ವರೀ ಕೀಜೇ ।।೧೭೭।।

ಅಸ್ಯಾಸಿ ಹೇತುರುದಯಸ್ಥಿತಿಸಂಯಮಾನಾಮವ್ಯಕ್ತಜೀವಮಹತಾಮಪಿ ಕಾಲಮಾಹುಃ ।
ಸೋಽಯಂ ತ್ರಿಣಾಭಿರಖಿಲಾಪಚಯೇ ಪ್ರವೃತ್ತಃ ಕಾಲೋ ಗಭೀರರಯ ಉತ್ತಮಪೂರುಷಸ್ತ್ವಮ್ ।।೧೫।।

ಅರ್ಥ:- ನೀನು ಈ ಬ್ರಹ್ಮಾಂಡದ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾಗಿರುವೆ. ಕಾಲನಾಗಿ ನೀನು ಭೌತಿಕ ಪ್ರಕೃತಿಯ ಸೂಕ್ಷ್ಮ ಮತ್ತು ವ್ಯಕ್ತ ನೆಲೆಗಳನ್ನು ನಿಯತಗೊಳಿಸುತ್ತ ಪ್ರತಿಯೊಂದು ಜೀವಿಯನ್ನು ನಿಯಂತ್ರಿಸುವೆ. ಶೀತ, ಗ್ರೀಷ್ಮ, ವರ್ಷಾಕಾಳರೂಪ ತ್ರಿವಳಿ ಕಾಲಚಕ್ರನಾಗಿ ನೀನು ಅಗೋಚರ ಕಾರ್ಯಗಳಿಂದ ಎಲ್ಲ ವಸ್ತುಗಳನ್ನು ಕ್ಷಯಗೊಳಿಸುವೆ. ನೀನು ಸ್ವತಃ ಪುರುಷೋತ್ತಮನಾಗಿರುವೆ.

ಜಗಾಚೀ ಉತ್ಪತ್ತಿ ಸ್ಥಿತಿ । ತುಜಚಿಪಾಸೋನಿ ಶ್ರೀಪತಿ । ಸಕಳ ಸಂಹಾರಿತಾ ಅಂತೀ । ತೂಚಿ ನಿಶ್ಚಿತೀ ಮಹಾಕಾಳು ।।೧೭೮।। ಕ್ಷೋಭಲಿಯಾ ತಾಮಸೀ ಶಕ್ತೀ । ಸೃಷ್ಟೀಚಾ ಪ್ರಳಯ ಕರೀ ಅಂತೀ । ತೇಥೇ ಬೀಜರೂಪೀ ಅವ್ಯಕ್ತೀ । ಜೀವ ರಾಹತೀ ಸೂಕ್ಷ್ಮತ್ವೇ ।।೧೭೯।। ಮಗ ಉತ್ಪತ್ತೀಚೇ ಕಾಳವೇಳೇ । ತೀಂಚ ಬೀಜೇ ವಿರೂಢತೀ ಸಕಳೇ । ಪಾಲ್ಹೇಜತೀ ಸ್ಥಿತಿಕಾಳೇ । ಪುಷ್ಪಫಳೇ ಸಫಳಿತ ।।೧೮೦।। "ಹೇ ಗುಣಕ್ಷೋಭಾಚೀ ಅವಸ್ಥಾ । ತೇಥ ಮೀ ನವ್ಹೇ ಪ್ರಳಯಕರ್ತಾ" । ಐಸೇ ಮ್ಹಣಸೀ ಜರೀ ಕೃಷ್ಣನಾಥಾ । ತರೀ ಹೇ ಕಥಾ ಪರಿಯೇಸೀ ।।೧೮೧।। ತುರ್ಝಾ ಸಾಚಾರ ಜಾಹಲಿಯಾ ಭಾವೋ । ಮಾಯಾ ಮಹತ್ತತ್ತ್ವ ಆಣಿ ಜೀವೋ । ನಾಸೋನಿಯಾ ದಾಸ ಪಾಹಾ ಹೋ । ನಿಜಪದೀ ನಿರ್ವಾಹೋ ಭೋಗಿತೀ ।।೧೮೨।। ತ್ಯಾ ತುಜ ಸಕಳ ಸಂಹಾರಿತಾ । ಕೋಣ ದುರ್ಘಟತಾ ಕೃಷ್ಣನಾಥಾ । ಕಾರಣೇಸೀ ಪ್ರಳಯಕರ್ತಾ । ತೂಚಿ ಸರ್ವಥಾ ಮಹಾಕಾಳು ।।೧೮೩।। ಕಳೋ ನೇದಿಸೀ ಸಂಸಾರಸ್ಥಿತೀ । ಅತಿಸೂಕ್ಷ್ಮ ಕಾಳಗತೀ । ನಾಶ ಕರಿಸೀ ಅಂತೀ । ನಿಜಪ್ರಕೃತಿವಿಕಾರ ।।೧೮೪।। ಪ್ರಳಯಾಸೀ ಪ್ರಮಾಣ ಮೂಳ । ಲವ ನಿಮೇಷ ಘಟಕಾ ಪಳ । ಅಹೋರಾತ್ರ ತ್ರಿಕಾಳ । ತ್ರಿನಾಮೀ ಕೇವಳ ಜೋ ಮ್ಹಣಿಯೇ ।।೧೮೫।। ಐಸಿಯೇ ಗಂಭೀರ ಗತೀಸೀ ।ಮಾಯಾಮಹತ್ತತ್ತ್ವ ನಾಶಿಸೀ । ತೋ ತೂ "ಮಹಾಕಾಳ" ಹೋಸೀ । ಹೃಷೀಕೇಶೀ ಶ್ರೀಕೃಷ್ಣ ।।೧೮೬।।

ತ್ವತ್ತಃ ಪುಮಾನ್ ಸಮಧಿಗಮ್ಯ ಯಥಾಽಸ್ಯ ವೀರ್ಯ ಧತ್ತೇ ಮಹಾಂತಮಿವ ಗರ್ಭಮಮೋಘವೀರ್ಯಃ ।
ಸೋಽಯಂ ತಥಾನುಗತ ಆತ್ಮನ ಅಂಡಕೋಶಂ ಹೈಮಂ ಸಸರ್ಜ ಬಹಿರಾವರಣೈರುಪೇತಮ್ ।।೧೬।।

ಅರ್ಥ:- ಈ ಪುರುಷನು ತನ್ನಿಂದಲೇ ಶಕ್ತಿಯನ್ನು ಪ್ರಾಪ್ತಮಾಡಿಕೊಂಡು ಅಮೋಘವೀರ್ಯನಾಗುವನು. ತದನಂತರ ಮಾಯೆಯ ಸಂಗಡ ಸಂಯುಕ್ತನಾಗಿ ವಿಶ್ವದ ಮಹತ್‌ಸ್ವರೂಪ ಗರ್ಭದ ಸ್ಥಾಪನೆ ಮಾಡುವನು. ಆ ಮೇಲೆ ಮಹತ್‌ತ್ವ ತ್ರಿಗುಣಮಯೀ ಮಾಯೆಯ ಅನುಕರಣೆ ಮಾಡಿ ಪೃಥ್ವಿ, ಜಲ, ತೇಜ, ವಾಯೂ, ಆಕಾಶ, ಅಹಂಕಾರ ಮತ್ತು ಮನಸ್ಸು ಹೀಗೆ ಏಳು ಆವರಣದಿಂದ ಯುಕ್ತವಾಗಿರುವ ಸುವರ್ಣ ವರ್ಣದ ಬ್ರಹ್ಮಾಂಡದ ರಚನೆಯನ್ನು ಮಾಡುವನು.

ಪುಢತೀ ಸೃಷ್ಟೀಚಾ ಸೃಜಿತಾ । ತೂಚಿ ಹೋಶೀ ಗಾ ಅನಂತಾ । ತೇ ಉತ್ಪತ್ತೀಚೀ ಅವಸ್ಥಾ । ಮೂಳಕರ್ತಾ ತೂಚಿ ತೂ ।।೧೮೭।।

ಹೇ ಮೇಘಶ್ಯಾಮನೇ, ನಮ್ಮ ಉತ್ತಮವಾದ ನಿಜಸುಖಕ್ಕೆ ನಿನ್ನ ಚರಣಗಳೇ ಕಾರಣವಾಗಿವೆ. ಆದ್ದರಿಂದ ಹೇ ಪುರುಷೋತ್ತಮನೇ, ನಮ್ಮ ಮೇಲೆ ಕೃಪೆ ಮಾಡು. ಇದೇ ಬೇಡಿಕೆಯನ್ನು ನಾವು ನಿನ್ನಲ್ಲಿ ಬೇಡುತ್ತಿದ್ದೇವೆ ।।೧೭೭।।

ಹೇ ಶ್ರೀಪತಿಯೇ ಜಗತ್ತಿನ ಉತ್ಪತ್ತಿ ಮತ್ತು ಸ್ಥಿತಿ ಇವು ನಿನ್ನಿಂದಲೇ ಆಗುವುವು ಮತ್ತು ಕೊನೆಯಲ್ಲಿ ಎಲ್ಲವನ್ನೂ ಸಂಹಾರ ಮಾಡುವ ಮಹಾಕಾಲನು ನೀನೇ ಆಗಿರುವೆ ।।೧೭೮।। ತಾಮಸ ಶಕ್ತಿಯು ಕ್ಷುಬ್ಧಗೊಂಡಿತೆಂದರೆ ಅದು ಸೃಷ್ಟಿಯ ಪ್ರಳಯವನ್ನು ಮಾಡುವುದು. ಆಗ ಎಲ್ಲ ಜೀವಿಗಳು ಸೂಕ್ಷ್ಮರೂಪದಿಂದ ಬೀಜರೂಪವಾಗಿ ಅವ್ಯಕ್ತದಲ್ಲಿರುವುವು ।।೧೭೯।। ನಂತರ ಪುನಃ ಉತ್ಪತ್ತಿಯ ಕಾಲವು ಬಂದಿತೆಂದರೆ ಈ ಎಲ್ಲ ಬೀಜಗಳು ಹುಟ್ಟುವುವು ಮತ್ತು ಸ್ಥಿತಿಯ ಕಾಲದಲ್ಲಿ ಅವುಗಳಿಗೆ ಎಲೆಗಳು ಹುಟ್ಟಿಕೊಂಡು ಪುಷ್ಪ ಮತ್ತು ಫಲಗಳಿಂದ ತುಂಬಿಕೊಳ್ಳುವುದು ।।೧೮೦।। ಇದು ಮಾತ್ರ ಗುಣಕ್ಷೋಭೆಯ ಪರಿಣಾಮವಾಗಿರುವುದು. ನಾನೇನು ಪ್ರಳಯಕರ್ತನಲ್ಲನೆಂದು ನೀನೇನಾದರೂ ಹೇಳುತ್ತಿದ್ದರೆ ಹೇ ಕೃಷ್ಣನೇ, ಈ ಮಾತನ್ನು ಕೇಳು ।।೧೮೧।। ನಿನ್ನ ಸ್ವರೂಪದ ನಿಜವಾದ ಜ್ಞಾನವು ಪ್ರಾಪ್ತವಾಯಿತೆಂದರೆ ಮಾಯಾ ಮಹತ್‌ತತ್ವ ಮತ್ತು ಜೀವ ಇವೆಲ್ಲವೂ ನಾಶವಾಗಿ ನಿನ್ನ ಭಕ್ತರು ನಿಜಪದದ ಆನಂದವನ್ನು ಭೋಗಿಸುವರು ।।೧೮೨।। ನೀನು ಸರ್ವರ ಸಂಹಾರಕರ್ತನಾಗಿರುವೆ. ನಿನಗೆ ಅಸಾಧ್ಯ ಎಂಬುದು ಯಾವುದೂ ಇಲ್ಲ ಸರ್ವರ ನಾಶಮಾಡುವ ಮಹಾಕಾಲನು ನೀನೇ ಆಗಿರುವೆ ।।೧೮೩।। ನೀನು ಸಂಸಾರದ ಸ್ಥಿತಿಯನ್ನು ತಿಳಿಯಕೊಡುವುದಿಲ್ಲ. ಕಾಲದ ಗತಿಯನ್ನು ಅತ್ಯಂತ ಸೂಕ್ಷ್ಮವನ್ನಾಗಿ ಮಾಡಿರುವೆ. ಕೊನೆಯಲ್ಲಿ ನಿನ್ನ ಪ್ರಕೃತಿಯ ವಿಕಾರಗಳ ನಾಶವನ್ನು ನೀನೇ ಮಾಡುವೆ ।।೧೮೪।। ಲವ, ನಿಮಿಷ, ಘಟಿಕಾ, ಪಳ ಅಹೋರಾತ್ರಿ ತ್ರಿಕಾಲಕ್ಕೆ ಕೇವಲ ತ್ರಿನಾಭೀ ಎಂದು ಹೇಳುವರು. ಇದೇ ಪ್ರಳಯದ ಮೂಲ ಪ್ರಮಾಣವಾಗಿದೆ ।।೧೮೫।। ಹೀಗೆ ಗಂಭೀರ ಗತಿಯಿಂದ ನೀನು ಮಾಯಾ ಮಹತ್‌ತತ್ವದ ನಾಶವನ್ನು ಮಾಡುವೆ. ಹೇ ಶ್ರೀಕೃಷ್ಣನೇ ಈ ರೀತಿಯಾಗಿ ನೀನು ಮಹಾಕಾಲನಾಗಿರುವೆ ।।೧೮೬।। ಹೇ ಅನಂತನೇ, ಸೃಷ್ಟಿಯ ಉತ್ಪನ್ನಕರ್ತನು ನೀನೇ ಆಗುವೆ ಮತ್ತು ಆ ಉತ್ಪತ್ತಿಯ ಪಾಲನಕರ್ತನು ನೀನೇ ಆಗಿರುವೆ ।।೧೮೭।।

ತುಝೀ ಲಾಹೋನಿ ವೀರ್ಯಶಕ್ತೀ । ಹೋಯೇ ಪುರುಷಾಸೀ ಪುರುಷತ್ವಪ್ರಾಪ್ತೀ । ತೇಣೇ ಅಂಗೀಕಾರೂನಿ ಪ್ರಕೃತೀ । ಕೇಲೇ ಉತ್ಪತ್ತೀ ಗರ್ಭಾಧಾನ ॥೧೮೮॥ ತೇಚಿ ತೇ ವೇಳೀ ಪ್ರಕೃತೀ । ಮಹತ್ತತ್ತ್ವೀ ಹೋಯ ಗರ್ಭವತೀ । ಪಂಚತತ್ತ್ವೇಸೀ ಗರ್ಭೀ ಧರಿತೀ । ಹಿರಣ್ಯವರ್ಣ ಅಂಡಾತೇ ॥೧೮೯॥ ತೇ ಅಮೋಘ ವೀರ್ಯ ಪ್ರಬಳ । ಗರ್ಭೀ ವಿಶ್ವಾಕಾರ ಬಾಳ । ಧರಿತೀ ಜಾಹಲೀ ವೇಲ್ಹಾಳ । ಬ್ರಹ್ಮಾಂಡ ಸಕಳ ಅಂಡಾಮಾಜೀ ॥೧೯೦॥ ಜೈಸೇ ಗರ್ಭಾಸೀ ಉಲ್ಬ ಜಾಣ । ತೈಸೇ ಅಂಡಾಸೀ ಬಹಿರಾವರಣ । ಸಪ್ತಧಾ ನೇಮಸ್ತ ಪ್ರಮಾಣ । ತೂ ನಿರ್ಮಾಣ ಕರವಿತಾ ॥೧೯೧॥ ಪೃಥ್ವೀ ಜಲ ಅನಲ ಅನಿಲ । ನಭ ಆಣಿ ಅಹಂಕಾರ ಸ್ಥೂಳ । ಸಾತವೇ ತೇ ಅತಿಸಬಳ । ಜಾಣ ಕೇವಳ ಕ್ರಿಯಾಸೂತ್ರ ॥೧೯೨॥ ತ್ಯಾ ಗರ್ಭಾಸೀ ಜತನೇವರೀ । ತೂಚಿ ಆಂತು ಆಣಿ ಬಾಹೇರೀ । ರಿಘಾಲಾಸೀ ಸೂತ್ರಧಾರೀ । ಖಾಂಬ ಸೂತ್ರೀ ಜೈಸಾ ಕಾ ॥೧೯೩॥ ಐಸೇ ಜಗ ಜಾಹಲೇ ದೋಘಾಪಾಸೂನೀ । ಪರೀ ತಿಸರೇ ನ ದೇಖೋ ಕೋಣೀ । ಅವಘೀ ಸೃಷ್ಟೀ ದೋಘೀಜಣೀ । ದುಮದುಮುನೀ ಭರಲೀಸೇ ॥೧೯೪॥ ವಾತೀ ಲಾವೂನಿ ಪಾಹತಾ । ತಿಸರೇ ನ ಲಗೇಚಿ ಹಾತಾ । ದುಸರೀ ಪ್ರಕೃತೀ ನಿರ್ಧಾರಿತಾ । ತೇಹೀ ಸರ್ವಥಾ ಟವಾಳ ॥೧೯೫॥ ಐಸಾ ದುಜೇನವೀಣ ಏಕಲಾ । ಏಕಲಾಚಿ ವಿಶ್ವ ಜಾಹಲಾ । ಆಕಳೀತ ಕೌಶಲ್ಯಕಳಾ । ಮಲ್ಲಮರ್ದನಾ ಶ್ರೀಕೃಷ್ಣಾ ॥೧೯೬॥ ಏವಂ ಏಕಲೇಪಣೇ ತೂ ಕರ್ತಾ । ತ್ಯಾಲಾಗೀ ಲೇಪು ನ ಲಗೇ ಸರ್ವಥಾ । ಕರ್ಮ ಕರೂನಿ ತೂ ಅಕರ್ತಾ । ತೇಚಿ ಕಥಾ ಪರಿಯೇಸೀ ॥೧೯೭॥

ತತ್ತಸ್ಥೂಪಶ್ಚ ಜಗತಶ್ಚ ಭವಾನಧೀಶೋ ಯನ್ಮಾಯಯೋತ್ಥಗುಣವಿಕ್ರಿಯಯೋಪನೀತಾನ್ ।
ಅರ್ಥಾಂಜುಷನ್ನಪಿ ಹೃಷೀಕಪತೇ ನ ಲಿಪ್ತೋ ಯೇಽನ್ಯೇ ಸ್ವತಃ ಪರಿಹೃತಾದಪಿ ಬಿಭ್ಯತಿ ಸ್ಮ ॥೧೭॥

ಅರ್ಥ:- ಹೃಷೀಕೇಶನೇ, ನೀನು ಸಮಸ್ತ ಚರಾಚರ ಜಗತ್ತಿನ ಅಧೀಶ್ವರರಾಗಿರುವೆ. ಮಾಯೆಯಿಂದ ಉತ್ಪನ್ನವಾದ ಇಂದ್ರಿಯವೃತ್ತಿರೂಪ ಗುಣವಿಕಾರದಿಂದ ಸಮೀಪವಾಗಿ ತಂದಿರುವ ವಿಷಯಗಳ ಉಪಭೋಗವನ್ನು ಸ್ವೀಕರಿಸುತ್ತಿದ್ದರೂ ನೀನು ಲಿಪ್ತನಾಗುವುದಿಲ್ಲ. ಇನ್ನೂ ಇತರ ಜೀವಿಗಳು ಅಥವಾ ಯೋಗಿಗಳು, ಅವರು ಸ್ವತಃ ಅವಿದ್ಯಾಮಾನ ಅಥವಾ ಅದರಲ್ಲಿನ ವಿಷಯ ಸೇವನೆಗೆ ಭಯಪಡುವರು. ಕೇವಲ ವಿಷಯವಾಸನೆಯಿಂದಲೇ ಬದ್ಧರಾಗುವರು.

ಚರೇ ಆಣಿ ಅಚರೇ । ಜಂಗಮೇ ಆಣಿ ಸ್ಥಾವರೇ । ಯಾ ಜಗಾಚಾ ಸ್ವಾಮೀ ತೂ ನಿರ್ಧಾರೇ । ಕೇಲೆ ಖರೇ ಗತಶ್ಲೋಕೀ ॥೧೯೮॥ ತೇಚಿ ಸ್ವಾಮಿತ್ವ ಕೈಸೇ ಘಡೇ । ಹೇ ಜರೀ ಪುಸಸೀ ಧಡಪುಡೇ । ತರೀ ತೇಹೀವಿಖೀ ರೋಕಡೇ । ವಚನ ಗಾಢೇ ಅವಧಾರೀ ॥೧೯೯॥ ನಿಜಮಾಯೇಚೇನಿ ಯೋಗೇ । ನಾನಾ ವಿಷಯ ಭೋಗಿಸೀ ಅಂಗೇ । ತೇ ಭೋಗಿಲೇಪಣ ಅಂಗೀ ನ ಲಗೇ । ಅಕರ್ತಾತ್ಮ ಸಂಗೇ ಅಲಿಪ್ತ ॥೨೦೦॥

ನಿನ್ನ ವೀರ್ಯ ಶಕ್ತಿಯನ್ನು ಸ್ವೀಕರಿಸಿ ಪುರುಷನಿಗೆ ಪುರುಷತ್ವವು ಬರುವುದು. ಆದ್ದರಿಂದ ಈತನು ಪ್ರಕೃತಿಯ ಅಂಗೀಕಾರವನ್ನು ಮಾಡಿ ಅದರಲ್ಲಿ ಗರ್ಭಧಾರಣೆಯನ್ನು ಮಾಡುವನು ॥೧೮೮॥ ಆ ವೇಳೆಯಲ್ಲಿ ಈ ಪ್ರಕೃತಿಯು ಮಹತ್‌ತತ್ವದ ಯೋಗದಿಂದ ಗರ್ಭವತಿಯಾದಳು. ಸುವರ್ಣದಂತಹ ತೇಜಸ್ವೀ ಬ್ರಹ್ಮಾಂಡವನ್ನು ಪಂಚತತ್ವ ಸಮೇತವಾಗಿ ಈಕೆಯು ಗರ್ಭದಲ್ಲಿ ಧರಿಸಿದಳು ॥೧೮೯॥ ನಿನ್ನ ಅಮೋಘ ವೀರ್ಯವು ಅತಿಶಯವಾಗಿ ಸಾಮರ್ಥ್ಯದಿಂದ ಕೂಡಿರುವುದರಿಂದ ಈ ಪ್ರಕೃತಿಯು ವಿಶ್ವಾಕಾರದ ಕೂಸನ್ನು ಅಂದರೆ ಸರ್ವ ಬ್ರಹ್ಮಾಂಡಗಳನ್ನು ತನ್ನ ಗರ್ಭದಲ್ಲಿ ಬೆಳೆಸಹತ್ತಿದಳು ॥೧೯೦॥ ಗರ್ಭಕ್ಕೆ ಗರ್ಭದ ಆವರಣ ಇರುವಂತೆ ನೀನು ಯಾವ ಈ ಬ್ರಹ್ಮಾಂಡಕ್ಕೆ ಏಳು ಪ್ರಕಾರದ ಆವರಣಗಳನ್ನು ನಿರ್ಮಾಣಗೊಳಿಸಿರುವೆ ॥೧೯೧॥ ಪೃಥ್ವಿ, ಜಲ, ಅಗ್ನೀ, ವಾಯೂ ಆಕಾಶ, ಸ್ಥೂಲ ಅಹಂಕಾರ ಮತ್ತು ಪ್ರಬಳವಾದ ಕ್ರಿಯಾಸೂತ್ರ ಇವು ಏಳು ಆಗಿವೆ ॥೧೯೨॥ ಸೂತ್ರ ಗೊಂಬೆಗಳಲ್ಲಿ ಸೂತ್ರಧಾರನು ಇರುವಂತೆ ಆ ಗರ್ಭದ ರಕ್ಷಣೆ ಮಾಡುವ ಒಳಹೊರಗೆ ನೀನೇ ಇರುವೆ ॥೧೯೩॥ ಈ ಪ್ರಕಾರವಾಗಿ ಈ ಜಗತ್ತು ಪ್ರಕೃತಿ ಮತ್ತು ಪುರುಷ ಇವರಿಬ್ಬರಿಂದ ಉತ್ಪನ್ನವಾಗಿರುವುದು. ಮೂರನೆಯವರು ಯಾರೂ ಕಾಣುವುದಿಲ್ಲ. ಈ ಎಲ್ಲ ಸೃಷ್ಟಿಯು ಈ ಇಬ್ಬರಿಂದ ತುಂಬಿಹೋಗಿದೆ ॥೧೯೪॥ ದೀಪ ಹಚ್ಚಿ ಹುಡುಕಿ ನೋಡಿದರೂ ಮೂರನೆಯವರು ಯಾರೂ ಕಾಣುವುದಿಲ್ಲ. ಎರಡನೆಯದಾದ ಈ ಯಾವ ಪ್ರಕೃತಿಯು ಇದೂ ಸಹ ಮಿಥ್ಯೆಯಾಗಿರುವುದು ॥೧೯೫॥ ಈ ಪ್ರಕಾರವಾಗಿ ಬೇರೆ ಯಾರೂ ಇಲ್ಲದ ನೀನೊಬ್ಬನೇ ಸರ್ವ ವಿಶ್ವನಾಗಿರುವೆ. ಹೇ ಶ್ರೀಕೃಷ್ಣನೇ, ಈ ನಿನ್ನ ಕೌಶಲ್ಯವು ಯಾರಿಗೂ ತಿಳಿಯುವುದಿಲ್ಲ ॥೧೯೬॥ ಈ ಪ್ರಕಾರವಾಗಿ ನೀನು ಒಬ್ಬನೇ ಸರ್ವರ ಕರ್ತನಾಗಿ ಯಾವುದರಿಂದಲೂ ಲಿಪ್ತನಾಗುವುದಿಲ್ಲ. ಕರ್ಮಗಳನ್ನು ಮಾಡಿಯೂ ನೀನು ಹೇಗೆ. ಅಕರ್ತನು ಎಂಬ ಈ ಕಥೆಯನ್ನು ಈಗ ಕೇಳು ॥೧೯೭॥

ಚರ ಮತ್ತು ಅಚರ, ಸ್ಥಾವರ ಮತ್ತು ಜಂಗಮ ಹೀಗೆ ಸರ್ವ ಜಗತ್ತಿನ ನೀನೇ ಧಣಿ ಆಗಿರುವೆ. ಇದನ್ನು ಈ ಹಿಂದಿನ ಶ್ಲೋಕದಲ್ಲಿ ಸಿದ್ಧಮಾಡಿ ತೋರಿಸಲಾಗಿದೆ ॥೧೯೮॥ ಈಗ ಆ ಧಣಿತ್ವವು ಹೇಗೆ ಬರುವುದೆಂದು ನಿಜವಾಗಿ ನೀನು ವಿಚಾರಿಸುತ್ತಿದ್ದಲ್ಲಿ ಆ ವಿಷಯಕ್ಕೆ ಸ್ಪಷ್ಟವಾಗಿ ಹೇಳುವುದನ್ನು ಈಗ ಕೇಳು ॥೧೯೯॥ ನಿನ್ನ ಮಾಯೆಯ ಯೋಗದಿಂದ ನೀನು ಅನೇಕ ಪ್ರಕಾರಗಳ ವಿಷಯಗಳನ್ನು ಭೋಗಿಸುವೆ. ಆದರೂ ನೀನು ಆ ಭೋಗಗಳಲ್ಲಿ ಲಿಪ್ತನಾಗುವುದಿಲ್ಲ. ಅಕರ್ತರೂಪದಿಂದ ಅಲಿಪ್ತತೆಯಿಂದ ಇರುವೆ ॥೨೦೦॥

ತೋಚಿ ಅಕರ್ತಾತ್ಮ ಬೋಧು ಕೈಸಾ । ಜರೀ ಮ್ಹಣಶೀ ಹೃಷೀಕೇಶಾ । ತೇ ಆಗಮನಿಗಮಾ ಅತರ್ಕ್ಯ ದಶಾ । ಪರಮ ಪುರುಷಾ ಪರಿಯೇಸೀ ॥೨೦೧॥ ಭೋಗ್ಯ-ಭೋಗ-ಭೋಕ್ತಾ । ಯಾ ತಿಹೀತೇ ತೂ ಪ್ರಕಾಶಿತಾ । ಜೇವೀ ಘಟೀ ಬಿಂಬೋನಿ ಸವಿತಾ । ಅಲಿಪ್ತ ತಾ ಸ್ವಭಾವೇ ॥೨೦೨॥ ಘಟ - ಜಳ - ಪ್ರತಿ ಬಿಂಬಾಸೀ । ಸ್ವಯೇ ಸವಿತಾ ಪ್ರಕಾಶೀ ।ಪ್ರಕಾಶೂನಿ ಅಲಿಪ್ತ ತ್ಯಾಂಸೀ । ತೇವೀ ತೂ ಭೋಗಾಸೀ ಶ್ರೀಕೃಷ್ಣಾ ॥೨೦೩॥ ಅಥವಾ ಕರ್ಮ-ಕಾರ್ಯ-ಕರ್ತಾ । ಯಾ ತಿಹೀಮಾಜೀ ನಿಜಾತ್ಮತಾ । ದೇಖೇ ತೋ ಅಭೋಕ್ತಾ । ಭೋಗೋನಿ ತತ್ತ್ವತಾ ನಿಜಭೋಗ ॥೨೦೪॥ ದರ್ಪಣೀಚ್ಯಾ ಪ್ರತಿಬಿಂಬಾಸೀ । ಜೋ ಪ್ರವರ್ತಲಾ ಭೋಗಾಸೀ । ವ್ಯಭಿಚಾರಾಚಾ ಆಳ ತ್ಯಾಸೀ । ಕೇವೀ ಅಂಗಾಸೀ ಲಾಗೇಲ ॥೨೦೫॥ ಜಗಚಿ ಹೇ ಅವಘೇ । ಜೋ ಹೋಊನಿ ಠಾಕೇ ಅಂಗೇ । ತ್ಯಾಸೀ ಬಾಧಾವೇ ಕೋಣೇ ಭೋಗೇ ।ನಿಜಾತ್ಮ ಯೋಗೇ ಯೋಗಿಯಾ ॥೨೦೬॥ ಐಶಿಯಾ ಬೋಧಾಚೇನಿ ಬಳೇ । ತೋ ವಿಷಯಾ ವರೀ ಜರೀ ಲೋಳೇ ।ತರೀ ವಿಷಯಾಚೇನಿ ವಿಟಾಳೇ । ಬೋಧು ನ ಮೈಳೇ ತಯಾಂಚಾ ॥೨೦೭॥ ತೋ ಘೇಣೇ ದೇಣೇ ಕರೀ । ಪಾಹತಾ ದಿಸೇ ವ್ಯವಹಾರೀ । ನಾಂದತಾಂಹೀ ಘರದಾರೀ । ತ್ಯಾಮಾಝಾರೀ ತೋ ನಾಹೀ ॥೨೦೮॥ ನೇಣೋನಿ ಬೋಧಾಚೀ ಮಾಗೀ । ಭೋಗತ್ಯಾಗ ಕೇಲಾ ಯೋಗೀ । ತರೀ ಕಾಂಪತಾತೀ ಸರ್ವಾಂಗೀ । ವಾಸನಾ ಅಂಗೀ ಉರಲೀಸೇ ॥೨೦೯॥ ಸ್ವಪ್ನೀ ವಿಷಯ ದೇಖತೀ । ಜಾಗೇ ಜಾಹಲ್ಯಾ ಪ್ರಾಯಶ್ಚಿತ ಘೇತೀ । ನಾಹೀ ಮಾವಳಲೀ ಅಹಂಕೃತೀ । ಯಾಲಾಗೀ ಭೀತೀ ಸರ್ವದಾ ॥೨೧೦॥ ಐಶಿಯಾ ಜೇ ವಿಷಯಭೇಡಾ । ನಾಹೀ ನಿಜಬೋಧು ಧಡಪುಡಾ । ತೈಸಾ ನವ್ಹೇಸೀ ತೂ ನಿಧಡಾ । ದಿಸೇ ರೋಕಡಾ ನಿಜಬೋಧು ॥೨೧೧॥

ಸ್ಮಾಯಾವಲೋಕಲವದರ್ಶಿತಭಾವಹಾರಿಭ್ರೂಮಂಡಲಪ್ರಹಿತಸೌರತಮಂತ್ರ ಶೌಂ ಡೈ: ।
ಪತ್ನ್ಯಸ್ತು ಷೋಡಶಸಹಸ್ರಮನಂಗಬಾಣೈರ್ಯಸ್ಯೇಂದ್ರಿಯಂ ವಿಮಥಿತುಂ ಕರಣೈರ್ನವಿಭ್ವ್ಯ: ॥೧೮॥

ಅರ್ಥ:- ಪ್ರಭುವೇ, ನಿನಗೆ ಅತ್ಯಂತ ಸುಂದರಿಯರಾದ ಹದಿನಾರು ಸಾವಿರ ಶ್ರೀಮಂತ ಪತ್ನಿಯರು ಇದ್ದಾರೆ. ತಮ್ಮ ಅಪ್ರತಿಮವಾದ ಸೌಂದರ್ಯ ಮತ್ತು ಮಂದಹಾಸಯುಕ್ತ ನೋಟಗಳಿಂದಲೂ ಸುಂದರವಾದ ಕಣ್ಣು ಹುಬ್ಬುಗಳಿಂದಲೂ ಅವರು ನಿನಗೆ ಮಧುರ ಪ್ರೇಮದ ಕಾತರ ಸಂದೇಶಗಳನ್ನು ಕಳಿಸುತ್ತಾರೆ. ಹೀಗಿದ್ದರೂ ಅವರು ನಿನ್ನ ಚಿತ್ತವನ್ನಾಗಲೀ ಮತ್ತು ಇಂದ್ರಿಯಗಳನ್ನಾಗಲೀ ಕ್ಷೋಭೆಗೊಳಿಸಲು ಪೂರ್ಣವಾಗಿ ಅಸಮರ್ಥರಾಗಿದ್ದಾರೆ. ಹೀಗೆ ನೀನು ಅಲಿಪ್ತನಾಗಿರುವೆ.

ಮೀ ನಿಧಡಾ ನಿಜಬೋಧೇ ಸಂಪೂರ್ಣ । ಮ್ಹಣಶೀ ದೇಖೋ ನ ಶಕೇ ಕವಣ । ಯೇ ಅರ್ಥೀಚೇ ಉಪಲಕ್ಷಣ । ಐಕ ತೇ ಖೂಣ ಸ್ವಾಮಿಯಾ ॥೨೧೨॥

ಹೇ ಹೃಷೀಕೇಶೀಯೇ, ಆ ಅಕರ್ತಾತ್ಮಕ ಬೋಧವು ಹೀಗಿರುವುದೆಂದು ನೀನು ಹೇಳಬಹುದು. ಆದರೆ ಹೇ ಪುರುಷೋತ್ತಮನೇ, ಕೇಳು ಈ ದಶೆಯು ವೇದಶಾಸ್ತ್ರಗಳಿಗೂ ಅತರ್ಕ್ಯವಾಗಿರುವುದು ॥೨೦೧॥ ಭೋಗ್ಯ, ಭೋಗ, ಭೋಕ್ತಾ ಈ ಮೂರನ್ನು ಪ್ರಕಾಶಿತವನ್ನಾಗಿ ಮಾಡುವವನು ನೀನೇ ಆಗಿರುವೆ. ಯಾವ ಪ್ರಕಾರವಾಗಿ ಸೂರ್ಯನು ಘಟದಲ್ಲಿ ಪ್ರತಿಬಿಂಬಿತನಾದರೂ ಆತನು ಸ್ವಭಾವತಃ ಅಲಿಪ್ತನಾಗಿರುವನು ॥೨೦೨॥ ಘಟ, ಜಲ ಮತ್ತು ಪ್ರತಿಬಿಂಬ ಈ ಮೂರನ್ನೂ ಸೂರ್ಯನು ಸ್ವತಃ ಪ್ರಕಾಶಿತವನ್ನಾಗಿ ಮಾಡುವನು. ಆದರೆ ಆತನು ಪ್ರಕಾಶಗೊಳಿಸಿದರೂ ಅವುಗಳಿಂದ ಅಲಿಪ್ತನಾಗಿರುವನು. ಅದರಂತೆಯೇ ಹೇ ಶ್ರೀಕೃಷ್ಣನೇ, ನೀನೂ ಸಹ ಭೋಗಗಳನ್ನು ಭೋಗಿಸಿ ಅಲಿಪ್ತನಾಗಿರುವೆ ॥೨೦೩॥ ಅಥವಾ ಕರ್ಮ, ಕಾರ್ಯ ಮತ್ತು ಕರ್ತಾ ಈ ಮೂರರಲ್ಲಿಯೂ ಯಾವನು ಆತ್ಮಸ್ವರೂಪವನ್ನು ಕಾಣುವನೋ, ಅವನು ವಾಸ್ತವಿಕವಾಗಿ ಭೋಗಗಳನ್ನು ಭೋಗಿಸಿಯೂ ಅಭೋಕ್ತನಾಗಿರುವನು ॥೨೦೪॥ ಕನ್ನಡಿಯಲ್ಲಿನ ಪ್ರತಿಬಿಂಬದೊಂದಿಗೆ ವಿಲಾಸವನ್ನು ಮಾಡಲು ಪ್ರವೃತ್ತನಾದವನ ಮೇಲೆ ವ್ಯಭಿಚಾರದ ಆರೋಪವು ಒದಗುವುದಿಲ್ಲ ॥೨೦೫॥ ಯಾರು ಸ್ವತಃ ಸರ್ವ ಜಗತ್ತನ್ನು ಉಪಭೋಗಿಸಿದವನಿಗೆ ಈ ಸ್ವರೂಪದಲ್ಲಿರುವ ಯೋಗಿಯಾದವನಿಗೆ ಯಾವ ಉಪಭೋಗವು ಬಾಧಿಸೀತು? ॥೨೦೬॥ ಇಂತಹ ಬೋಧದ ಸಾಮರ್ಥ್ಯದಿಂದ ಆತನು ವಿಷಯಗಳಲ್ಲಿ ಉರುಳಾಡಿದರೂ ಆತನಿಗೆ ವಿಷಯಗಳ ಮೈಲಿಗೆಯಿಂದ ಆತ್ಮಜ್ಞಾನವು ಮಲಿನವಾಗುವುದಿಲ್ಲ ॥೨೦೭॥ ಆತನು ಕೊಡುವುದು ತೆಗೆದುಕೊಳ್ಳುವುದು ಮಾಡುತ್ತಿರುವನು. ನೋಡಿದರೆ ಆತನು ವ್ಯವಹಾರಿಯಂತೆ ಕಾಣಿಸುತ್ತಿರುವನು. ಮನೆಮಾರು ಕಟ್ಟಿಕೊಂಡು ವರ್ತಿಸುತ್ತಿರುವನು. ಹೀಗಿದ್ದರೂ ಆತನು ಮಾತ್ರ ಅವುಗಳಲ್ಲಿ ಲಿಪ್ತನಾಗಿ ಇರುವುದಿಲ್ಲ ॥೨೦೮॥ ಹೀಗೆ ಆತ್ಮಬೋಧೆಯ ಮಾರ್ಗವನ್ನು ಅರಿಯದೇ ಯೋಗಿಗಳು ಭೋಗದ ತ್ಯಾಗ ಮಾತ್ರ ಮಾಡಿದರು. ಆದರೂ ಅವರ ಮನದಲ್ಲಿ ವಿಷಯ ವಾಸನೆಗಳು ಉಳಿದುಕೊಂಡಿರುವುದರಿಂದ ಅವರ ಸರ್ವಾಂಗವು ಕಂಪಾಯಮಾನವಾಗಿರುವುದು ॥೨೦೯॥ ಇವರು ಸ್ವಪ್ನದಲ್ಲಿ ವಿಷಯಗಳನ್ನು ಕಾಣುವರು. ಎಚ್ಚರಾದಮೇಲೆ ಅದಕ್ಕಾಗಿ ಪಾಯಶ್ಚಿತ ಮಾಡಿಕೊಳ್ಳುವರು. ಮನದಲ್ಲಿನ ಅಹಂಭಾವವು ಹೋಗದೇ ಇರುವುದರಿಂದ ಸರ್ವಥಾ ಹೀಗೆ ಭಯವು ಉಂಟಾಗುವುದು ॥೨೧೦॥ ಈ ಪ್ರಕಾರವಾಗಿ ಯಾರು ಈ ವಿಷಯಗಳ ಬೆದರುಗೊಂಬೆಗೆ ಭಯಪಡುವರೋ, ಅವರಿಗೆ ನಿಜವಾಗಿಯೂ ಆತ್ಮಬೋಧೆಯಾಗಿರುವುದಿಲ್ಲ. ಆದರೆ ಹಾಗೆ ನೀನಿರುವುದಿಲ್ಲ. ನೀನು ಮಹಾನ್ ಧೈರ್ಯಶಾಲಿಯಾಗಿದ್ದು, ನಿನ್ನ ಆತ್ಮಬೋಧೆಯು ಪ್ರತ್ಯಕ್ಷವಾಗಿ ತೋರುವುದು ॥೨೧೧॥ ಹೇ ಸ್ವಾಮಿರಾಯನೇ, ನೀನು ಕದಾಚಿತ್ ಹೀಗೆ ಹೇಳಬಹುದು ನಾನು ಧೈರ್ಯಶಾಲಿಯಾಗಿರುವೆನು. ಆತ್ಮಜ್ಞಾನದಿಂದ ಪರಿಪೂರ್ಣನಾಗಿರುವೆನು. ನನಗೆ ಯಾರೂ ನೋಡಲು ಸಾಧ್ಯವಿಲ್ಲ ಹಾಗಾದರೆ ಅಂತಹ ಪ್ರಕಾರದ ಲಕ್ಷಣಗಳನ್ನು ಪ್ರತ್ಯಕ್ಷವಾದ ಮಾತುಗಳನ್ನು ಹೇಳುವೆ ಅದನ್ನು ಕೇಳು॥೨೧೨॥

ಸೋಳಾ ಸಹಸ್ರ ಪತ್ನ್ಯಾ ಘರೀ । ಆಣಿ ಗೋಕುಳೀಂಚ್ಯಾ ಪರನಾರೀ । ಕುಬ್ಜಾದಿ ಮಥುರೇಮಾರಝಾರೀ । ಕರ್ಣಕುಮಾರೀ ಭೋಗಿಲ್ಯಾ ।೨೧೩॥ ಮುಂಜೀ ನವ್ಹತಾ ಆಧೀ । ಭೋಗಿಲೀ ತ್ವಾ ಗೋವಳೀ ಪೇಂಧೀ । ಧರೋನಿಯಾ ಸಾಂದೀಬಿದೀ । ನದೋನದೀ ಅಸಂಖ್ಯ ।೨೧೪॥ ಅವಿಧೀ ಭೋಗಿತಾ ನಾರೀ । ಬೋಧ ನ ಮೈಳೇಚಿ ಶ್ರೀಹರಿ । ಅಂಗೇ ರಿಘಾಲಾಸೀ ಕ್ಷೀರಸಾಗರೀ । ಅರ್ಜುನಾ ಕರೀ ಧರೋನೀ ।೨೧೫॥ ಶೇಷಶಾಯೀ ನಾರಾಯಣಾ । ಉತ್ಕಂಠಾ ತುಝಿಯಾ ದರ್ಶನಾ । ತೇಣೇ ಉಪಾವೋ ಕೇಲಾ ಜಾಣಾ । ಹರೂನಿ ಬ್ರಾಹ್ಮಣಾಚೀ ಬಾಳೇ ।೨೧೬॥ ಜೇವೀ ಆಪುಲೇ ಸ್ವರೂಪ ಆಪಣ । ಪಹಾವಯಾ ಕೀಜೇ ದರ್ಪಣ । ತೇವೀ ಪಹಾವಯಾ ಕೃಷ್ಣಾರ್ಜುನ । ಸ್ವಯೇ ನಾರಾಯಣ ಅಪತ್ಯೇ ಆಣೀ ।೨೧೭॥ "ತೂ ಅವತಾರ ನರ-ನಾರಾಯಣ । ತುಝೇ ಘ್ಯಾವಯಾ ದರುಶಣ । ಬ್ರಾಹ್ಮಣಅಪತ್ಯೆ ಜಾಣ । ಮ್ಯಾ ಆಪಣ ಆಣಿಲೀ" ।೨೧೮॥ ಐಸೇ ನಾರಾಯಣಾಚೇ ಬೋಲ । ಸಪ್ರೇಮ ಅತಿಸಖೋಲ । ಆಮ್ಹೀ ಐಕಿಲೇ ಗಾ ಸಕಳ । ತುಝಾ ಬೋಧ ಅಕಳ ಶ್ರೀಕೃಷ್ಣಾ ।೨೧೯॥ ತೀ ಬ್ರಾಹ್ಮಣಾಚೀ ಅಪತ್ಯೆ । ಜೀ ಬಹು ಕಾಳ ಜಾಹಲೀ ಹೋತೀ ಮೃತೇ । ತುವಾ ಆಣೋನಿ ದಿಧಲೀ ಶ್ರೀಅನಂತೇ । ತೀ ದೇಖಿಲೀ ಸಮಸ್ತೇ ಚರಿತೇ ಆಮ್ಹೀ ।೨೨೦॥ ತುಝೀ ನಾರಾಯಣಾಸೀ ಆಸ್ಥಾ । ತೇಥ ಆಮುಚೀ ಕವಣ ಕಥಾ । ಪಾರ ನ ಕಳೇ ಜೇ ಅಚ್ಯುತಾ । ಗುಣಾತೀತಾ ಶ್ರೀಕೃಷ್ಣಾ ।೨೨೧॥ ಮಾಗಾ ಅವತಾರ ಜಾಹಲೇ । ಪರೀ ಐಸೇ ಚರಿತ್ರ ನಾಹೀ ಕೇಲೇ । ವಿಧಿವೇದಾ ಲಾಜವಿಲೇ । ವ್ಯಭಿಚಾರಿಯಾ ದಿಧಲೇ ನಿಜಪದ ।೨೨೨॥ ಜೇ ಮ್ಯಾ ಭೋಗಿಲೇ ಸ್ತ್ರಿಯಾಂಸೀ । ತೇ ತೂ ಉದಾಸೀನತ್ವೇ ಮ್ಹಣಸೀ । ತೇಣೇ ಬಾಂಧ ನ ಪವೇ ಬೋಧಾಸೀ । ಹೃಷೀಕೇಶೀ ತೇ ನ ಘಡೇ ।೨೨೩॥ ಹಾವಭಾವವಿಲಾಸೇಸೀ । ಅಂಗೇ ದಾವಿತೀ ಚಪಳತೇಸೀ । ತುಜ ಲಕ್ಷೋನಿ ಪುರುಷೋತ್ತಮಾಸೀ । ಕಾಮಬಾಣಾಸೀ ಯೋಜಿತೀ ।೨೨೪॥ ವಾಊನಿ ಭ್ರಮಂಡಲಾಚೇ ವೇಢೇ । ವ್ಯಂಕಟ ಕಟಾಕ್ಷೇ ಬಾಣ ಗಾಢೇ । ಸುರತಮಂತ್ರೀ ರೋಕಡೇ । ಕೇಲೇ ಧಡಪುಡೇ ಸತೇಜ ।೨೨೫॥ ಜ್ಯಾ ಬಾಣಾಂಚೇ ಘಾಯೀ । ಇಂದ್ರ ಖೋಂಚಲಾ ಸಹಸ್ರಾಠಾಯೀ । ಶಿವ ಲೋಳವಿಲಾ ಪಾಹೀ । ಮೋಹಿನೀವ್ಯಾಮೋಹೀ ಮಹಾಬಾಣೇ ।೨೨೬॥ ಜ್ಯಾ ಬಾಣಾಚಾ ಪಿಸಾರಾ । ಲಾಗತಾಂಚಿ ಪೈ ಭೇದರಾ । ತಪಾಸೀ ಘೇತಲಾ ಪುರಾ । ಸೋಡೋನಿ ಘರದಾರಾ ಪಳಾಲೇ ।೨೨೭॥

ನಿನ್ನ ಮನೆಯಲ್ಲಿ ಹದಿನಾರು ಸಾವಿರ ಪತ್ನಿಯರು ಅಲ್ಲದೇ ಗೋಕುಲದಲ್ಲಿನ ಗೋಪಿಕೆಯರು, ಮಥುರೆಯಲ್ಲಿನ ಕುಬ್ಜಾದಿ ಕರ್ಣಕುಮಾರಿಯರು ಇವರಲ್ಲಿ ನೀನು ರಮಮಾಣನಾದೆ ।೨೧೩॥ ಮುಂಜಿಯಾಗದ ಮುನ್ನ ನೀನು ಕುಂಟಿ ಗೌಳಣಿಯಲ್ಲಿ ನದಿ, ಹಳ್ಳಗಳಲ್ಲಿ ರಮಮಾಣನಾದೆ ।೨೧೪॥ ಹೇ ಶ್ರೀಹರಿಯೇ, ಹೀಗೆ ನೀನು ಅವಿಧಿಯಿಂದ ರಮಮಾಣನಾಗಿದ್ದರೂ ನಿನ್ನ ಆತ್ಮಬೋಧವು ಮೈಲಿಗೆಯಾಗಲಿಲ್ಲ. ಅರ್ಜುನನ ಕೈಯನ್ನು ಹಿಡಿದು ನೀನು ಕ್ಷೀರಸಾಗರದಿಂದ ಹೋದೆ ।೨೧೫॥ ಶೇಷಶಾಯೀ ನಾರಾಯಣನಿಗೂ ನಿನ್ನ ದರ್ಶನದ ಉತ್ಕಟೇಚ್ಛೆಯಿತ್ತು. ಆದ್ದರಿಂದ ಆತನು ಬೇಕೆಂತಲೇ ಬ್ರಾಹ್ಮಣನ ಬಾಲಕರನ್ನು ಹರಣ ಮಾಡಿ ತನ್ನತ್ತ ಒಯ್ದನು ।೨೧೬॥ ಯಾವ ಪ್ರಕಾರವಾಗಿ ತನ್ನ ಸ್ವತಃ ಮುಖಾವಲೋಕನಕ್ಕಾಗಿ ಕನ್ನಡಿಯನ್ನು ನೋಡಬೇಕಾಗುವುದು. ಅದರಂತೆ ಕೃಷ್ಣಾರ್ಜುನರನ್ನು ಕಾಣಬೇಕೆಂದು ನಾರಾಯಣನು ಸ್ವತಃ ಬ್ರಾಹ್ಮಣನ ಬಾಲಕರನ್ನು ತಂದನು ।೨೧೭॥ ನೀನು ಮಾತ್ರ ನಾರಾಯಣನ ಅವತಾರವಾಗಿರುವೆ. ನಿನ್ನ ದರ್ಶನವನ್ನು ಪಡೆಯುವುದಕ್ಕಾಗಿಯೇ ಬ್ರಾಹ್ಮಣನ ಬಾಲಕರನ್ನು ಇಲ್ಲಿಗೆ ತಂದಿರುವೆ ।೨೧೮॥ ಈ ನಾರಾಯಣನ ಪ್ರೇಮಮಯ, ರಹಸ್ಯಪೂರ್ಣ ಶಬ್ದಗಳನ್ನು ನಾವು ಸ್ವತಃ ಕೇಳಿರುವೆವು. ಹೇ ಶ್ರೀಕೃಷ್ಣನೇ, ನಿನ್ನ ಬೋಧೆಯು ಅಗಮ್ಯವಾಗಿದೆ ।೨೧೯॥ ದೀರ್ಘಕಾಲದ ಹಿಂದೆ ಮೃತರಾಗಿದ್ದ ಬ್ರಾಹ್ಮಣನ ಬಾಲಕರನ್ನು ನೀನು ತಿರುಗಿ ತಂದು ಕೊಟ್ಟಿರುವೆ. ಹೇ ಶ್ರೀಕೃಷ್ಣನೇ, ಈ ಎಲ್ಲ ಚರಿತ್ರೆಗಳನ್ನು ನಾವು ನಮ್ಮ ಕಣ್ಣುಗಳಿಂದ ಪ್ರತ್ಯಕ್ಷವಾಗಿ ಕಂಡಿದ್ದೇವೆ ।೨೨೦॥ ನಾರಾಯಣನಿಗೂ ನಿನ್ನ ಮಹತ್ತರವಾದ ಆಸ್ಥೆ ಇರುವುದು. ಅಂದಮೇಲೆ ನಮ್ಮ ಆಸ್ಥೆಯ ಯಾವ ಕಥೆ? ಹೇ ಅಚ್ಯುತಾ, ಶ್ರೀಕೃಷ್ಣಾ, ನೀನು ಗುಣಾತೀತನಾಗಿರುವೆ. ನಿನ್ನ ಅಂತಪಾರವು ಯಾರಿಗೂ ಹತ್ತಲಾರದು ।೨೨೧॥ ಈ ಪೂರ್ವದಲ್ಲಿ ಸಾಕಷ್ಟು ಅವತಾರಗಳಾಗಿವೆ. ಆದರೆ ಇಂಥ ಚರಿತ್ರೆಗಳಾಗಿಲ್ಲ. ವಿಧಿಗಳಿಗೂ, ವೇದಕ್ಕೂ ನೀನು ನಾಚಿಸಿದೆ. ವ್ಯಭಿಚಾರಿಗಳಿಗೆ ನೀನು ನಿಜಪದವನ್ನು ಕೊಟ್ಟಿರುವೆ ।೨೨೨॥ ನಾನು ಸ್ತ್ರೀಯರನ್ನು ಭೋಗಿಸಿದ್ದು ಉದಾಸೀನತ್ವದಿಂದ, ಆದ್ದರಿಂದ ನನ್ನ ಬೋಧೆಗೆ ಯಾವ ಬಾಧೆಯೂ ಬರುವುದಿಲ್ಲ. ಹೀಗೆ ನೀನು ಹೇಳಬಹುದು. ಆದರೆ, ಹೃಷೀಕೇಶನೇ, ಅದು ಹೀಗೆ ಸಂಭವಿಸುವುದಿಲ್ಲ ।೨೨೩॥ ಪುರುಷೋತ್ತಮನಾದ ನಿನ್ನನ್ನು ನೋಡಿ ಸ್ತ್ರೀಯರು ಹಾವಭಾವ ಇತ್ಯಾದಿ ವಿಲಾಸಗಳಿಂದ ಚಪಲತನದಿಂದ ತಮ್ಮ ಅಂಗದ ಪ್ರದರ್ಶನವನ್ನು ಮಾಡುವರು ಮತ್ತು ನಿನ್ನತ್ತ ಕಾಮಬಾಣಗಳ ಮಳೆಗರೆಯುವರು ।೨೨೪॥ ಹುಬ್ಬುಗಳನ್ನು ಏರಿಸುತ್ತ ಕುಡಿನೋಟಗಳಿಂದ ಸುರತ ಮಂತ್ರಗಳಲ್ಲಿ ಪ್ರವೀಣವಾಗಿರುವ ನೇತ್ರಕಟಾಕ್ಷರೂಪ ಬಾಣಗಳನ್ನು ನಿನ್ನ ಶರೀರದಲ್ಲಿ ಆಳವಾಗಿ ಚುಚ್ಚುವರು ।೨೨೫॥ ಯಾವ ಕಾಮಬಾಣದಿಂದ ಇಂದ್ರನಿಗೆ ಸಾವಿರ ರಂಧ್ರಗಳಾದವು. ಯಾವ ಈ ಪ್ರಚಂಡ ಬಾಣದಿಂದ ಶಂಕರನಿಗೆ ಮೋಹಿನಿಯ ಮೋಹದಲ್ಲಿ ಮೋಹಗೊಳ್ಳಬೇಕಾಯಿತು. ಈ ಮೋಹವನ್ನು ತಡೆಯುವುದಾಗಲಿಲ್ಲ ।೨೨೬॥ ಯಾವ ಈ ಬಾಣದ ಕೇವಲ ರೆಕ್ಕೆ ಬಡೆದಾಕ್ಷಣವೇ ತಪಸ್ವೀ ಜನರು ಅತಿಶಯವಾಗಿ ಗಾಬರಿಯಾಗುವರು. ಇವರು ಮನೆಮಾರು ಬಿಟ್ಟುಕೊಟ್ಟು ಓಡಿಹೋಗುವರು ।೨೨೭॥

ಐಸೇ ಸೋಳಾ ಸಹಸ್ರ ಬಾಣ । ಅಖಂಡ ತುಜಚಿವರೀ ಸಂಧಾನ । ಕರಿತಾ ನ ಮೈಳೇ ಬೋಧು ಜಾಣ । ಅತಿವಿಂದಾನ ಹೇತುರ್ಝೀ ।೨೨೮॥ ಘರೀಚ್ಯಾ ಸ್ತ್ರಿಯಾ ಸಹಸ್ರ ಸೋಳಾ । ಗೋಕುಲಾದಿ ಮಥುರೇಚ್ಯಾ ಅಬಳಾ । ತುಜ ವಿಷಯೀ ಕರಾವಯಾ ಗೋಪಾಳಾ । ನವ್ಹತೀ ಸಕಳಾ ಸಮರ್ಥಾ ।೨೨೯॥ ತ್ಯಾಂಚೇನಿ ತುಜ ನ ಕರವೇ ವಿಷಯೀ । ಪರೀ ತ್ಯಾ ತ್ಯಾಂ ಕೇಲ್ಯಾ ನಿರ್ವಿಷಯೀ । ಐಸಾ ತೂ ತ್ರೈಲೋಕ್ಯಾಚೇ ಠಾಯೀ । ಸ್ವಾಮೀ ಪಾಹೀ ಶ್ರೀಕೃಷ್ಣಾ ।೨೩೦॥ ಐಶೀ ತುಝೀ ಕೀರ್ತಿ ಐಕತಾ । ಅಥವಾ ಚರಣತೀರ್ಥ ಘೇತಾ । ಯಾಚಿ ದೋಹೀ ತೀರ್ಥಾಚೀ ಸಮರ್ಥತಾ । ಪವಿತ್ರತಾ ಜಗಾಸೀ ।೨೩೧॥

ವಿಧ್ವ್ಯಸ್ತವಾಮೃತಕಥೋದವಹಾಸ್ತ್ರಿಲೋಕ್ಯಾ: ಪಾದಾವನೇಜಸರಿತ: ಶಮಲಾನಿ ಹಂತುಮ್ ।
ಆನುಶ್ರವಂ ಶ್ರುತಿಭಿರಂಘ್ರಿಜಮಂಗಸಂಗೈಸ್ತೀರ್ಥದ್ವಯಂ ಶುಚಿಷದಸ್ತ ಉಪಸ್ಪೃಶಂತಿ ।೨೯॥

ಅರ್ಥ:- ನಿನ್ನನ್ನು ಕುರಿತು ನಡೆಯುವ ಸಂವಾದದ ಅಮೃತ ನದಿಗಳು ಮತ್ತು ನಿನ್ನ ಪಾದಕಮಲಗಳ ಅಭಿಷೇಕದಿಂದ ಹುಟ್ಟಿದ ಪುಣ್ಯ ನದಿಗಳು ಮೂರುಲೋಕಗಳ ಎಲ್ಲ ಪಾಪಗಳನ್ನು ನಾಶಮಾಡಲು ಸಮರ್ಥವಾಗಿವೆ. ಶುದ್ಧರಾಗಲು ಪ್ರಯತ್ನಿಸುವವರು ತಮ್ಮ ಕಿವಿಗಳಿಂದ ನಿನ್ನ ಪುಣ್ಯ ಕಥೆಗಳ ಶ್ರವಣ ಮಾಡುತ್ತಾರೆ. ಅವರು ನಿನ್ನ ಪಾದಕಮಲಗಳಿಂದ ಹರಿದು ಬರುವ ಪುಣ್ಯ ನದಿಗಳಲ್ಲಿ ಸ್ನಾನ ಮಾಡುತ್ತಾರೆ.

ತುಝಿಯೇ ಕೀರ್ತೀಚೇ ಶ್ರವಣ । ಆಂತರಮಲಾಚೇ ಕ್ಷಾಲನ । ಕರೂನಿಯಾ ವೃತ್ತಿ ಜಾಣ । ಪರಮ ಪಾವನ ಕೀರ್ತನೇ ।೨೩೨॥ ತುಝಿಯಾ ಚರಣೇಂಚೀ ಗಂಗಾ । ಸಕಳ ಪಾತಕೇ ನೇ ಭಂಗಾ । ತೇ ಪಾಯವಣೇ ಶ್ರೀರಂಗಾ । ಪವಿತ್ರ ಜಗಾತೇ ಕರೀ ।೨೩೩॥ ಯಾ ದೋಹೀ ತೀರ್ಥಾಚೇ ಸೇವನ । ಅಖಂಡ ಕರಿತೀ ಸಾಧುಜನ ।ತೇಣೇ ಹೋಊನಿ ಪರಮ ಪಾವನ । ಸಮಾಧಾನ ನಿಜವೃತ್ತೀ ।೨೩೪॥ ಅವತಾರಾಂಚೇ ಅಂತೀ । ಯೇ ದೋನೀ ತೀರ್ಥೀ ಅತಿವಿಖ್ಯಾತೀ । ಪ್ರಗಟ ಕೇಲೀ ತುವಾ ಕ್ಷಿತೀ । ತಾರಾವಯಾ ಶ್ರೀಪತೀ ನಿಜದಾಸಾ ।೨೩೫॥ ಏಕ ಶ್ರವಣೇ ಏಕ ಸ್ನಾನೇ । ದೋನೀ ತೀರ್ಥೇ ಪರಮ ಪಾವನೇ । ಪ್ರಗಟ ಕೇಲೀ ಜಗಜ್ಜೀವನೇ । ಮಲಿನ ಜನೇ ತರಾವಯಾ ।೨೩೬॥

ಬಾದರಾಯಣಿರುವಾಚ:

ಇತ್ಯಭಿಷ್ಟೂಯ ವಿಬುಧೈ: ಸೇಶ: ಶತಧೃತಿರ್ಹರಿಮ್ । ಅಭ್ಯಭಾಷತ ಗೋಂವಿದ ಪ್ರಣಮ್ಯಾಂಬರಮಾಶ್ರಿತ: ।೩೦॥

ಅರ್ಥ:- ಶುಕದೇವನು ನುಡಿದನು: ಪರೀಕ್ಷಿತನೇ ಸಮಸ್ತ ದೇವತೆಗಳು ಮತ್ತು ಶಂಕರನು ಹಾಗೆಯೇ ಬ್ರಹ್ಮನು ಇವರು ಶ್ರೀಕೃಷ್ಣನಸ್ತುತಿಯನ್ನು ಮಾಡಿದರು. ತದನಂತರ ಪ್ರಣಾಮಗಳನ್ನು ಮಾಡಿ ಅವರು ತಮ್ಮ ಧಾಮಗಳಿಗೆ ಹೋಗುವುದಕ್ಕಾಗಿ ಆಕಾಶದಲ್ಲಿ ಸ್ಥಿತರಾಗಿ ಶ್ರೀಕೃಷ್ಣನಿಗೆ ಹೀಗೆ ಹೇಳಿದರು.

ಇಂತಹ ಹದಿನಾರು ಸಾವಿರ ಬಾಣಗಳು ನಿನ್ನ ಮೇಲೆ ಮಳೆಗರೆಯುತ್ತಿದ್ದರೂ, ನಿನ್ನ ಆತ್ಮಜ್ಞಾನವು ಮಲಿನವಾಗಲಿಲ್ಲ ಇದೆಂತಹ ನಿನ್ನ ವಿಲಕ್ಷಣವಾದ ಕೌಶಲ್ಯ? ।೨೨೮॥ ನಿನ್ನ ಮನೆಯಲ್ಲಿನ ಸ್ವತ: ಹದಿನಾರು ಸಾವಿರ ಸ್ತ್ರೀಯರು, ಗೋಕುಲದಲ್ಲಿನ ಗೋಪಿಯರು, ಮಥುರೆಯಲ್ಲಿನ ಕುಮಾರಿಯರು ಈ ಸರ್ವರೂ ನಿನ್ನನ್ನು ವಿಷಯೀಯನ್ನಾಗಿ ಮಾಡಲು ಸಮರ್ಥರಾಗಲಿಲ್ಲ ।೨೨೯॥ ಹೇ ಗೋಪಾಲನೇ, ನೀನು ಸ್ವತ: ಅವರೆಲ್ಲರಿಗೂ ಪ್ರೇಮವಿಷಯನಾದೆ ಮತ್ತು ಅವರನ್ನು ನಿರ್ವಿಷಯರನ್ನಾಗಿ ಮಾಡಿದೆ, ಮತ್ತು ಅವರ ಅಂತ:ಕರಣದಲ್ಲಿನ ವಿಷಯ ವಾಸನೆಗಳನ್ನು ಇಲ್ಲದಂತೆ ಮಾಡಿದೆ. ಹೀಗೆ ನೀನು ಮೂರುಲೋಕಗಳ ಸ್ವಾಮಿಯಾಗಿರುವೆ ।೨೩೦॥ ಹೀಗಿರುವ ಈ ನಿನ್ನ ಕೀರ್ತಿಯನ್ನು ಶ್ರವಣ ಮಾಡುವುದರಿಂದ ಅಥವಾ ನಿನ್ನ ಚರಣಗಳ ತೀರ್ಥವನ್ನು ಸೇವಿಸುವುದರಿಂದ ಹೀಗೆ ಈ ಎರಡು ತೀರ್ಥಗಳ ಸಾಮರ್ಥ್ಯದಿಂದ ಜಗತ್ತು ಪವಿತ್ರವಾಗುವುದು ।೨೩೧॥

ನಿನ್ನ ಈ ಕೀರ್ತಿಯನ್ನು ಪ್ರೇಮದಿಂದ ಶ್ರವಣ ಮಾಡಲು ಅಂತ:ಕರಣದಲ್ಲಿನ ಪಾಪಗಳು ಕ್ಷಾಲನೆಯಾಗಿ ವೃತ್ತಿಯು ಅತ್ಯಂತ ಪವಿತ್ರವಾಗುವುದು ।೨೩೨॥ ನಿನ್ನ ಚರಣದಿಂದ ಹೊರಟ ಗಂಗೆಯು ಸರ್ವ ಪಾತಕಗಳ ನಾಶಮಾಡುವುದು. ಮತ್ತು ಹೇ ಶ್ರೀರಂಗನೇ ಈ ಗಂಗೆಯು ಜಗತ್ತನ್ನು ಪಾವನಗೊಳಿಸುವುದು ।೨೩೩॥ ಸಾಧುಗಳು ಸಹ ಈ ಎರಡು ತೀರ್ಥಗಳ ಅಖಂಡ ಸೇವನೆ ಮಾಡುವರು. ಆದ್ದರಿಂದ ಅವರ ವೃತ್ತಿಯು ಪರಮ ಪಾವನವಾಗುವುದು ಮತ್ತು ಅವರಿಗೆ ಸಮಾಧಾನವು ಪ್ರಾಪ್ತವಾಗುವುದು ।೨೩೪॥ ಹೇ ಶ್ರೀಪತಿಯೇ, ಅವತಾರದ ಕೊನೆಯಲ್ಲಿ ನಿನ್ನ ಭಕ್ತರ ಉದ್ಧಾರಕ್ಕಾಗಿ ಈ ಎರಡು ತೀರ್ಥಗಳಲ್ಲಿ ನೀನು, ನಿನ್ನ ಖ್ಯಾತಿಯನ್ನು ಪ್ರಕಟಗೊಳಿಸಿರುವೆ ।೨೩೫॥ ಪಾಪಿ ಜನರ ಉದ್ಧಾರಕ್ಕಾಗಿ ಜಗಜ್ಜೀವನನು ಒಂದು ಶ್ರವಣವನ್ನು ಮತ್ತು ಇನ್ನೊಂದು ಸ್ನಾನವನ್ನು ಹೀಗೆ ಎರಡು ಪರಮ ಪವಿತ್ರ ತೀರ್ಥಗಳನ್ನು ಪ್ರಕಟಗೊಳಿಸಿರುವನು ।೨೩೬॥

ಶುಕ ಮ್ಹಣೇ ಪರೀಕ್ಷಿತೀ । ಯಾಪರೀ ದೇವೀ ಸಮಸ್ತೀ । ಸ್ತವಿಲಾ ಸ್ವಾನಂದೇ ಶ್ರೀಪತೀ । ಪರಮಭಕ್ತಿ ಭಾವಾರ್ಥೇ ।೨೩೭॥ ಐಸಾ ಕರೂನಿ ಸ್ತುತಿವಾದು । ಸಂತೋಷವಿಲಾ ಗೋವಿಂದು । ದೇವಾಂಸೀ ಹೋತ ಅಸೇ ಆಹ್ಲಾದು । ಪರಮ ವಿನೋದು ಸರ್ವಾಸೀ ।೨೩೮॥ ಸ್ತುತಿ ಕರಾವಯಾ ಅಗ್ರಣೀ । ಬ್ರಹ್ಮಾ ಶಿವ ಪುಢೇ ಯೇಊನೀ । ತಿಹೀ ಜಯಜಯಕಾರ ಕರೂನೀ । ಲೋಟಾಂಗಣೇ ಘಾತಲೀ ।೨೩೯॥ ದೇವ ರಾಹೂನಿಯಾ ಗಗನೀ । ಹಾತ ಜೋಡೋನಿ ವಿಮಾನೀ । ವಿನಂತೀ ಕರಾವಯಾಲಾಗೋನೀ । ಬ್ರಹ್ಮಾ ಪುಢೇರಾಹೋನೀ ಬೋಲತು ।೨೪೦॥

ಬ್ರಹ್ಮೋವಾಚ:

ಭೂಮೇರ್ಭಾರಾವತಾರಾಯ ಪುರಾ ವಿಜ್ಞಾಪಿತಃ ಪ್ರಭೋ । ತ್ವಮಸ್ಮಾಭಿರಶೇಷಾತ್ಮಂತತ್ತಥೈವೋಪಪಾದಿತಮ್ ।೨೧॥

ಅರ್ಥ:- ಬ್ರಹ್ಮನು ನುಡಿದನು: ಸರ್ವಾತ್ಮಕ ಪ್ರಭುವೇ, ತಾವು ಅವತಾರವನ್ನು ಧರಿಸಿ ಪೃಥ್ವಿಯ ಭಾರವನ್ನು ಕಡಿಮೆ ಮಾಡಬೇಕೆಂದು ಪ್ರಾರಂಭದಲ್ಲಿ ನಾವು ನಿಮ್ಮನ್ನು ಪ್ರಾರ್ಥಿಸಿದ್ದೆವು. ಆದರಂತೆ ಆ ಕಾರ್ಯವನ್ನು ನಮ್ಮ ಪ್ರಾರ್ಥನೆಯ ಅನುಸಾರವಾಗಿ ಯಥೋಚಿತ ರೂಪದಲ್ಲಿ ಪೂರ್ಣ ಮಾಡಿರುವಿರಿ.

ಉತರಾವಯಾ ಧರಾಭಾರಾ । ಪೂರ್ವೀ ಪ್ರಾರ್ಥಿಲಾಸೀ ಯದುವೀರಾ । ಅಭಯ ದ್ಯಾವಯಾ ಸುರವರಾ । ಆಮ್ಹೀ ಶ್ರೀಧರಾ ವಿನವಿಲೇ ।೨೪೧॥ ಆಮ್ಹೀ ವಿನವಿಲೇ ಜೈಸೇ । ತುವಾ ಕಾರ್ಯ ಕೇಲೇ ಮ್ಹಣೋ ತೈಸೇ । ತ್ಯಾಹೂನಿಯಾ ವಿಶೇಷೇ । ಕೇಲೀ ನಿಜವಿನ್ಯಾಸೇ ಧರ್ಮವೃದ್ಧೀ ।೨೪೨॥ ತೂ ಸರ್ವೇಶ್ವರು ಸರ್ವಾತ್ಮಾ । ಜೇ ಕಾರ್ಯ ನ ಕಳೇಚಿ ಆಮ್ಹಾ । ತೇಹೀ ತುವಾ ಪುರುಷೋತ್ತಮಾ । ಘನಶ್ಯಾಮಾ ಸಂಪಾದಿಲೇ ।೨೪೩॥

ಧರ್ಮಶ್ಚ ಸ್ಥಾಪಿತಃ ಸತ್ಸು ಸತ್ಯಸಂಧೇಷು ವೈ ತ್ವಯಾ । ಕೀರ್ತಿಶ್ಚ ದಿಕ್ಷು ವಿಕ್ಷಿಪ್ತಾ ಸರ್ವಲೋಕಮಲಾಪಹಾ ।೨೨॥

ಅರ್ಥ:- ನೀನು ಸದಾ ಸತ್ಯ ದೃಢವ್ರತರಾದ ಪುಣ್ಯವಂತರಲ್ಲಿ ಧರ್ಮತತ್ತ್ವಗಳನ್ನು ಪುನಃ ಸ್ಥಾಪಿಸಿರುವೆ. ಹಾಗೆಯೇ ನಿನ್ನ ಮಹಿಮೆಗಳನ್ನು ಲೋಕಾದ್ಯಂತ ಪ್ರಸಾರ ಮಾಡಿರುವೆ. ಆದ್ದರಿಂದ ಇಡೀ ಜಗತ್ತು ನಿನ್ನ ಕಥಾಶ್ರವಣದಿಂದ ಪುನೀತವಾಗುವುದು.

ಸತ್ಯವಾದೀ ಸಾಧು ಜೇ ಕಾಂಹೀ । ಜ್ಯಾಂಚಾ ಸಂಕಲ್ಪ ತುಝ್ಯಾ ಪಾಯೀ । ಧರ್ಮ ಸ್ಥಾಪಿಲಾ ತ್ಯಾಂಚ್ಯಾ ಠಾಯೀ । ತುವಾ ಪಾಹೀ ಯಥಾಸ್ಥಿತ ।೨೪೪॥ ಆಣಿಕ ದಶ ದಿಶಾಂಪ್ರತೀ । ವಿಸ್ತಾರಿಲೀ ಉದಾರ ಕೀರ್ತೀ । ತೇಣೇ ಪಾವನ ತ್ರಿಜಗತೀ । ಹೋಯ ನಿಶ್ಚಿತೀ ಶ್ರವಣದ್ವಾರೇ ।೨೪೫॥

ಅವತೀರ್ಯ ಯದೋರ್ವಂಶೇ ಬಿಭ್ರದ್ರೂಪಮನುತ್ತಮಮ್ । ಕರ್ಮಾಣ್ಯುದ್ದಾಮವೃತ್ತಾನಿ ಹಿತಾಯ ಜಗತೋಽಕೃಥಾಃ ।೨೩॥

ಅರ್ಥ:- ನೀನು ಈ ಸರ್ವೋತ್ತಮ ರೂಪವನ್ನು ಧರಿಸಿ ಯದುವಂಶದಲ್ಲಿ ಅವತಾರವನ್ನು ತೆಗೆದುಕೊಂಡೆ ಮತ್ತು ಜಗತ್ತಿನ ಹಿತಕ್ಕಾಗಿ ಉದಾರತೆಯಿಂದ ಮತ್ತು ಪರಾಕ್ರಮಗಳಿಂದ ಪರಿಪೂರ್ಣಗಳಾದ ಅನೇಕ ಲೀಲೆಗಳನ್ನು ಮಾಡಿದೆ.

ಪೂರ್ಣಪುರುಷಾ ಹೃಷೀಕೇಶೀ । ತೂ ಅವತರಲಾಸೀ ಯದುವಂಶೀ । ಸೀಮಾ ತುಝಿಯಾ ರೂಪಾಸೀ । ಬರವೇಪಣಾಸೀ ನ ಕರವೇ ।೨೪೬॥

ಶುಕಾಚಾರ್ಯರು ಹೇಳುವರು: ಹೇ ಪರೀಕ್ಷಿತೀಯೇ ಸರ್ವ ದೇವತೆಗಳು ಅತ್ಯಂತ ಭಕ್ತಿಭಾವದಿಂದ ಮತ್ತು ಆನಂದದಿಂದ ಶ್ರೀಕೃಷ್ಣನ ಸ್ತುತಿಯನ್ನು ಮಾಡಿದರು ।೨೩೭॥ ಈ ಪ್ರಕಾರವಾಗಿ ಸುತ್ತಿಸ್ತೋತ್ರಗಳನ್ನು ಹಾಡಿ ಹೊಗಳಿ ಶ್ರೀಕೃಷ್ಣನನ್ನು ಸಂತೋಷ ಗೊಳಿಸಿದರು. ಸರ್ವ ದೇವತೆಗಳವರಿಗೆ ಬಹಳ ಆಹ್ಲಾದವಾಯಿತು, ಹಾಗೆಯೇ ಬಹಳ ಕೌತುಕಪಟ್ಟರು ।೨೩೮॥ ಸ್ತುತಿಯನ್ನು ಮಾಡಲು ಎಲ್ಲರಕ್ಕಿಂತಲೂ ಮುಂದಾಗಿ ಬ್ರಹ್ಮದೇವನು ಮತ್ತು ಶಂಕರನು ಬಂದಿದ್ದರು. ಇವರು ಜೋರಾಗಿ ಜಯಜಕಾರಗಳನ್ನು ಮಾಡಿ ಶ್ರೀಕೃಷ್ಣನಿಗೆ ಲೋಟಾಂಗಣವನ್ನು ಹಾಕಿದರು ।೨೩೯॥ ಆಗ ಉಳಿದ ದೇವತೆಗಳೆಲ್ಲರೂ ಆಕಾಶದಲ್ಲಿ ಕೈಗಳನ್ನು ಜೋಡಿಸಿಕೊಂಡು ನಿಂತುಕೊಂಡಿದ್ದರು ಬ್ರಹ್ಮದೇವನು ಮುಂದೆ ನಿಂತುಕೊಂಡು ಹೀಗೆ ಹೇಳಹತ್ತಿದನು ।೨೪೦॥

ಹೇ ಯಾದವಶ್ರೇಷ್ಠನೇ, ಪೃಥ್ವಿಗೆ ಆಗಿರುವ ಭಾರವನ್ನು ಕಡಿಮೆಗೊಳಿಸಿರೆಂದು ಇದಕ್ಕಾಗಿ ಸುರವರರಿಗೆ ಅಭಯನೀಡಿರೆಂದು ನಾವೇ ನಿಮ್ಮ ಪ್ರಾರ್ಥನೆಯನ್ನು ಮಾಡಿದ್ದೆವು ।೨೪೧॥ ನಾವು ಯಾವ ಪ್ರಕಾರವಾಗಿ ಪ್ರಾರ್ಥನೆಯನ್ನು ಮಾಡಿದ್ದೆವೋ ಅದರಂತೆಯೇ ನೀವು ಕಾರ್ಯವನ್ನು ಮಾಡಿರುವಿರಿ. ಅಲ್ಲದೇ ಇದಕ್ಕಿಂತಲೂ ವಿಶೇಷವಾದ ಯಾವ ನಿಮ್ಮ ಸಾಮರ್ಥ್ಯದಿಂದ ನೀವು ಧರ್ಮದ ವೃದ್ಧಿಯನ್ನು ಮಾಡಿರುವಿರಿ ।೨೪೨॥ ನೀವು ಸರ್ವೇಶ್ವರರು ಸರ್ವಾತ್ಮರಾಗಿರುವಿರಿ. ಯಾವ ಕಾರ್ಯವು ನಮಗೆ ತಿಳಿಯುವುದಿಲ್ಲವೋ, ಅಂತಹ ಕಾರ್ಯವನ್ನು ನೀವು ಪೂರ್ಣಗೊಳಿಸಿರುವಿರಿ ।೨೪೩॥

ನಿನ್ನ ಚರಣಗಳಲ್ಲಿಯೇ ಸಂಕಲ್ಪಿತರಾಗಿರುವ ಸತ್ಯವಾದಿ, ಸಾಧುಗಳವರಲ್ಲಿ ನೀನು ಯಥೋಚಿತವಾಗಿ ಧರ್ಮದ ಸ್ಥಾಪನೆಯನ್ನು ಮಾಡಿರುವೆ ।೨೪೪॥ ಹತ್ತು ದಿಶೆಗಳಲ್ಲಿಯೂ ನಿನ್ನ ಉದಾರ ಕೀರ್ತಿಯನ್ನು ಪ್ರಸರಿಸಿದೆ. ಆದ್ದರಿಂದ ಮೂರುಲೋಕಗಳು ಶ್ರವಣದ್ವಾರ ಪರಮ ಪಾವನಗಳಾದವು ।೨೪೫॥

ಹೇ ಪೂರ್ಣಪುರುಷನೇ, ಹೃಷೀಕೇಶನೇ, ನೀನು ಯದುಕುಲದಲ್ಲಿ ಅವತಾರವನ್ನು ಧರಿಸಿದೆ. ನಿನ್ನ ರೂಪದ ಉತ್ಕೃಷ್ಟತನಕ್ಕೆ ಅಂತಪಾರವೇ ಇಲ್ಲ ।೨೪೬॥

ತೂ ಸರ್ವಾಮಾಜೀ ಸರ್ವೋತ್ತಮು । ದೇಖತಾ ವೃತ್ತೀಸೀ ಉಪರಮು । ಲೀಲಾವಿಗ್ರಹೀ ಪುರುಷೋತ್ತಮ । ಮನೋರಮ ಸಕಳಿಕಾ ॥೨೪೭॥ ಕರ್ಮೇ ಕೇಲೀ ಪರಮಾದ್ಭುತೇ । ಗೋವರ್ಧನ ಧರಿಲಾ ವಾಮ ಹಸ್ತೇ । ಮುಖೇ ಪ್ರಾಶುನಿ ವಣವ್ಯಾತೇ । ಗೋಪಾಳಾಂತೇ ವಾಂಚವಿಲೇ ॥೨೪೮॥ ಮೃತಾ ಆಣಿಲೇ ಗುರುಪುತ್ರಾಸೀ । ಗತ ಗರ್ಭ ಭೇಟವಿಲೇ ದೇವಕೀಸೀ । ಗೋಪಾಲವತ್ಸೇ ತೂ ಜಾಹಲಾಸೀ । ವಿಧಾತ್ಯಾಸೀ ಭುಲವಿಲೇ ॥೨೪೯॥ ಜಗಾಚಿಯಾ ಪರಮ ಹಿತಾ । ಲಾಗೀ ನಾನಾ ಚರಿತ್ರಕಥಾ । ಕರಿತಾ ಜಾಲಾಸೀ ಶ್ರೀಅನಂತಾ । ಕೃಷ್ಣನಾಥಾ ನಿಜಜನಕಾ ॥೨೫೦॥

ಯಾನಿ ತೇ ಚರಿತಾನೀಶ ಮನುಷ್ಯಾ: ಸಾಧವ: ಕಲೋ । ಶೃಣ್ವತ: ಕೀರ್ತಯಂತಶ್ಚ ತರಿಷ್ಯಂತ್ಯಂಜಸಾ ತಮ: ॥೨೪॥

ಅರ್ಥ:- ಹೇ ಪ್ರಭುವೇ, ಕಲಿಯುಗದಲ್ಲಿ ಯಾವ ಸಾಧುಸ್ವಭಾವದ ಮನುಷ್ಯರು ಈ ಯಾವ ನಿನ್ನ ಲೀಲೆಗಳ ಶ್ರವಣ, ಕೀರ್ತನೆಗಳನ್ನು ಮಾಡುವರೋ, ಅವರು ಸಹಜವಾಗಿ ಅಜ್ಞಾನ ಅಂಧಕಾರಗಳಿಂದ ದೂರರಾಗುವರು.

ಕಥಾ ಕೌತುಕೇ ವಿಚಿತ್ರೇ । ನಾನಾ ಪರೀಂಚೀ ಚರಿತ್ರೇ । ಪರಮ ಪಾವನ ಪವಿತ್ರೇ । ಯೇಣೇ ಅವತಾರೇ ತ್ವಾಂ ಕೇಲೀ ॥೨೫೧॥ ಕಲಿಯುಗೀ ಸಾಧುಜನ । ಯಾ ಚರಿತ್ರಾಂಚೇ ಶ್ರವಣ ಕೀರ್ತನ । ಕರಿತಾ ತರಲೇ ಜಾಣ । ಮಾಯಾಮೋಹ ತ್ರಿಗುಣೇಸೀ ॥೨೫೨॥

ಯದುವಂಶೇಽವತೀರ್ಣಸ್ಯ ಭವತ: ಪುರುಷೋತ್ತಮ । ಶರಚ್ಛತಂ ವ್ಯತೀಯಾಯ ಪಂಚವಿಂಶಾಧಿಕಂ ಪ್ರಭೋ ॥೨೫॥

ಅರ್ಥ:- ಹೇ ಪ್ರಭೋ ಪುರುಷೋತ್ತಮನೇ, ನೀನು ಯದುವಂಶದಲ್ಲಿ ಅವತಾರ ಧರಿಸಿ ಒಂದುನೂರಾ ಇಪ್ಪತ್ತೈದು ವರ್ಷಗಳಾದವು.

ಅವತರಲ್ಯಾ ಯದುವಂಶೀ । ಪುರುಷೋತ್ತಮಾ ಹೃಷೀಕೇಶೀ । ಸಂಖ್ಯಾ ಯಾ ಅವತಾರಾಂಸೀ । ಜಾಹಲೀ ತೇ ತುಜಪಾಶೀ ಸಾಂಗೇನ ॥೨೫೩॥ ಮೃತ್ಯುಲೋಕೀ ಮನುಷ್ಯಮರ್ಯಾದಾ । ಶತ ವರ್ಷೇ ಜೇ ಗೋವಿಂದಾ । ತೇ ಅತಿಕ್ರಮೋನಿ ಆವದಾ । ಅಧಿಕ ಮುಕುಂದಾ ಪಂಚವೀಸ ಜಾಹಲೀ ॥೨೫೪॥

ನಾಧುನಾ ತೇಽಖಿಲಾಧಾರ ದೇವಕಾರ್ಯಾವಶೇಷಿತಮ್ । ಕುಲಂ ಚ ವಿಪ್ರಶಾಪೇನ ನಷ್ಟಪ್ರಾಯಮಭೂದಿದಮ್ ॥೨೬॥

ಅರ್ಥ:- ಹೇ ಸಾರ್ವಾಧಾರನೇ , ಈಗ ನಿನ್ನ ಯಾವ ಕಾರ್ಯವು ಅವಶೇಷವಾಗಿರುವುದಿಲ್ಲ. ಬ್ರಾಹ್ಮಣರ ಶಾಪದಿಂದ ನಿನ್ನ ಕುಲವು ಸಹ ಒಂದು ಪ್ರಕಾರದಿಂದ ನಷ್ಟವಾಗಿರುವುದು.

ಆತಾ ಪುಢೇ ಯೇಥ ಕಾಂಹೀ । ದೇವಕಾರ್ಯ ಉರಲೇ ನಾಹೀ । ಯಾದವಕುಳ ಮ್ಹಣಸೀ ತೇಹೀ । ನಷ್ಟಪ್ರಾಯ ಪಾಹೀ ಉರಲೇಸೇ ॥೨೫೫॥ ಉಠವಣೇ ಆಲೇ ಹತಿರೂ । ಕಾ ಪಾಂಖ ಉಪಡಿಲ್ಯಾ ಪಾಖರೂ । ತೈಸಾ ಯಾದವಾಂಚಾ ದಳಭಾರೂ । ಭೂಮಿಯೇ ಭಾರು ಉರಲಾ ಅಸೇ ॥೨೫೬॥

ನೀನು ಎಲ್ಲರಲ್ಲಿಯೂ ಸರ್ವೋತ್ತಮನಾಗಿರುವೆ. ನಿನ್ನನ್ನು ನೋಡಿದಾಕ್ಷಣವೇ ಇಂದ್ರಿಯಗಳ ಎಲ್ಲ ವೃತ್ತಿಗಳು ಶಾಂತವಾಗುವುವು ಮನುಷ್ಯದೇಹವನ್ನು ಧರಿಸಿರುವ ಪುರುಷೋತ್ತಮನೇ, ನೀನು ಎಲ್ಲರಿಗೂ ಮನೋಹರನಾಗಿ ಕಾಣುವೆ ॥೨೪೭॥ ನೀನು ಅತ್ಯಂತ ಅದ್ಭುತವಾದ ಅನೇಕ ಕಾರ್ಯಗಳನ್ನು ಮಾಡಿರುವೆ. ಎಡಗೈಯಲ್ಲಿ ಗೋವರ್ಧನ ಪರ್ವತವನ್ನು ಎತ್ತಿಹಿಡಿದೆ. ಕಾಡಾಗ್ನಿ ಜ್ವಾಲೆಯನ್ನು ಮುಖದಿಂದ ಪ್ರಾಶನ ಮಾಡಿ ಗೋಪಾಲಕರನ್ನು ರಕ್ಷಿಸಿದೆ ॥೨೪೮॥ ಮೃತ ಗುರುಪುತ್ರನನ್ನು ತಂದು ಕೊಟ್ಟೆ. ದೇವಕಿಯ ನಾಶವಾದ ಗರ್ಭಗಳನ್ನು ಪುನ: ಆಕೆಗೆ ಭೇಟಿ ಮಾಡಿಸಿದೆ ಮತ್ತು ಗೋಪಾಲರು ಮತ್ತು ಆಕಳುಕರಗಳನ್ನು ನೀನೇ ಆಗಿ ಬ್ರಹ್ಮದೇವನಿಗೂ ಭುಲಾಯಿಸಿಬಿಟ್ಟೆ ॥೨೪೯॥ ಹೇ ಶ್ರೀಕೃಷ್ಣನಾಥನೇ, ಶ್ರೀಅನಂತನೇ, ಈ ಪ್ರಕಾರವಾಗಿ ಜಗತ್ತಿನ ಕಲ್ಯಾಣಕ್ಕಾಗಿ ಅನೇಕ ಪ್ರಕಾರದ ಚರಿತ್ರೆ, ಕಥೆಗಳನ್ನು ನೀನು ಮಾಡಿ ತೋರಿಸಿದೆ ॥೨೫೦॥

ನೀವು ಈ ಅವತಾರವನ್ನು ಧರಿಸಿ ಅತ್ಯಂತ ಪಾವನವಾದ ಅದ್ಭುತ ಕಥೆ ಕೌತುಕಗಳನ್ನು ಮತ್ತು ನಾನಾ ಪ್ರಕಾರಗಳ ಚರಿತ್ರೆಗಳನ್ನು ಮಾಡಿ ತೋರಿಸಿರುವಿರಿ ॥೨೫೧॥ ಕಲಿಯುಗದಲ್ಲಿ ಸಾಧು ಜನರು ಈ ಚರಿತ್ರೆಗಳ ಶ್ರವಣ ಕೀರ್ತನೆಗಳನ್ನು ಮಾಡಿ ತ್ರಿಗುಣ ಮಾಯಾಮೋಹದಿಂದ ಪಾರಾಗುವರು ॥೨೫೨॥

ಹೇ ಪುರುಷೋತ್ತಮನೇ, ಹೇ ಹೃಷೀಕೇಶನೇ, ಈ ಯದುವಂಶದಲ್ಲಿ ನೀವು ಅವತಾರವನ್ನು ಎತ್ತಿರುವಿರಿ, ಈ ಅವತಾರಕ್ಕೆ ಈಗ ಎಷ್ಟು ವರ್ಷಗಳಾದವು ಎಂಬುದನ್ನು ನಾನು ನಿಮಗೆ ಹೇಳುತ್ತಿದ್ದೇನೆ ॥೨೫೩॥ ಹೇ ಗೋವಿಂದನೇ, ಮೃತ್ಯುಲೋಕದಲ್ಲಿ ಮನುಷ್ಯನ ಆಯುಷ್ಯ ಮರ್ಯಾದೆಯು ಒಂದು ನೂರು ವರ್ಷಗಳೆಂದು ನೇಮಿಸಲ್ಪಟ್ಟಿರುವುದು. ಈ ಮರ್ಯಾದೆಯು ಮುಗಿದು ಇಪ್ಪತ್ತೈದು ವರ್ಷಗಳು ಅಧಿಕವಾಗಿರುವುದು ॥೨೫೪॥

ಇನ್ನು ಮುಂದೆ ಇಲ್ಲಿ ದೇವಕಾರ್ಯಗಳು ಯಾವುವೂ ಉಳಿದಿರುವುದಿಲ್ಲ. ಯಾದವ ಕುಲವೂ ಸಹ ಕೇವಲ ನಷ್ಟಪ್ರಾಯವಾಗಿ ಉಳಿದಿರುವುದು ॥೨೫೫॥ ಇನ್ನೊಬ್ಬರ ಆಧಾರದಿಂದ ಏಳುವಷ್ಟು ಅಶಕ್ತತೆ ಆನೆಗೆ ಬಂದರೆ, ಅಥವಾ ರೆಕ್ಕೆಗಳನ್ನು ಕಿತ್ತಿದ ಪಕ್ಷಿಯಂತೆ, ದುರ್ಬಲತೆಯು ಯಾದವ ಸೈನ್ಯಕ್ಕೆ ಬಡೆದು ಭೂಮಿಗೆ ಭಾರವಾಗಿ ಉಳಿದಿದೆ ॥೨೫೬॥

ನಿವಣಾಚಾ ಪುಟಕಾ ಡೇರಾ । ಕಾ ಕ್ಷಯೋ ಲಾಗಲ್ಯಾ ರಾಜಕುಮರಾ । ವಣವಾ ಆಹಾಳಲ್ಯಾ ಅಜಗರಾ । ಯಾದವವೀರಾ ತೇ ದಶಾ ।೨೫೭॥ ದಾರುಣ ಬ್ರಾಹ್ಮಣಾಚಾ ಶಾಪ । ನಾಶಲಾ ವೀರ್ಯಶೌರ್ಯಪ್ರತಾಪ । ಗಳಾಲಾ ವಾಢಿವೇಚಾ ದರ್ಪ । ಕೇವಳ ಪ್ರೇತರೂಪ ದಿಸತಾತೀ ।೨೫೮॥

ತತಃ ಸ್ವಧಾಮ ಪರಮಂ ವಿಶಸ್ವ ಯದಿ ಮನ್ಯಸೇ । ಸಲೋಕಾಲೋಕಪಾಲಾನ್ನಃ ಪಾಹಿ ವೈಕುಂಠ ಕಿಂಕರಾನ್ ।೨೭॥

ಅರ್ಥ: ಹೇ ವೈಕುಂಠಾಧಿಪತಿಯೇ, ಈ ನಾಮವು ನಿನಗೆ ಉಚಿತವೆಂದಿನಿಸಿದರೆ, ನೀವು ನಿಮ್ಮ ಪರಮಧಾಮಕ್ಕೆ ಪ್ರವೇಶವನ್ನು ಮಾಡಿರಿ. ನಮ್ಮನ್ನು, ಲೋಕಪಾಲರನ್ನು, ನಿಮ್ಮ ದಾಸರನ್ನು ರಕ್ಷಣೆ ಮಾಡಿರಿ.

ಯಾಲಾಗೀ ಜೀ ಯಾದವರಾಯಾ । ಆಮ್ಹೀ ವಾಂಭೂ ತುರ್ಝ್ಯಾ ಪಾಯಾ । ವೇಗು ಕೀಜೇ ಸ್ವಧಾಮಾ ಯಾವಯಾ । ಸುರವರ್ಯಾ ಶ್ರೀಕೃಷ್ಣಾ ।೨೫೯॥ ಐಕೇ ದೇವಕೀನಂದನಾ । ಜರೀ ಮಾನೇಲ ತುರ್ಝಿಯಾ ಮನಾ । ತರೀ ನಿಘಿಜೋ ಜೀ ಯಾಚಿ ಕ್ಷಣಾ । ಸುರಸೇನಾ ತಿಷ್ಠತ ।೨೬೦॥ ಸಲೋಕ ಲೋಕಪಾಳ ಜೇ ಜೇ । ತ್ಯಾಂವರೀ ತುವಾ ಕೃಪಾ ಕೀಜೇ । ಆಮ್ಹೀ ಕಿಂಕರ ಗಾ ತುರ್ಝೇ । ವಚನ ಮಾನಿಜೇ ದಾಸಾಂಚೇ ।।೨೬೧॥ ಐಕೇ ಜೀ ವೈಕುಂಠನಾಥಾ । ತುರ್ಝೀ ಥೋರ ಆಮ್ಹಾ ಅವಸ್ಥಾ । ಆದಿಕರೂನಿ ಉಮಾಕಾಂತಾ । ಆಣಿ ಸಮಸ್ತಾ ದೇವಾಂಸೀ ।೨೬೨॥

ಶ್ರೀಭಗವಾನುವಾಚ:

ಅವಧಾರಿತಮೇತನ್ಮೇ ಯದಾತ್ಥ ವಿಬುಧೇಶ್ವರ । ಕೃತಂ ವಃ ಕಾರ್ಯಮಖಿಲಂ ಭೂಮೇರ್ಭಾರೋಽವತಾರಿತಃ ।೨೮॥

ಅರ್ಥ:- ಭಗವಾನ ಶ್ರೀಕೃಷ್ಣನು ನುಡಿದನು; ಬ್ರಹ್ಮದೇವನೇ, ನೀವು ಏನನ್ನು ಹೇಳುತ್ತಿರುವುದೆಲ್ಲವನ್ನು ನಾನು ನಿಶ್ಚಯವಾಗಿ ಮಾಡಿರುವೆನು. ನಾನು ನನ್ನ ಪೂರ್ಣ ಕಾರ್ಯವನ್ನು ಮಾಡಿರುವೆನು. ಪೃಥ್ವಿಯ ಭಾರವನ್ನು ಇಳಿಸಿರುವೆನು.

ಜೋ ಯೋಗಜ್ಞಾನಾ ಮುಕಟಮಣೀ । ಮೇಘಗಂಭೀರಯಾ ವಾಣೀ । ಬ್ರಹ್ಮಯಾಪ್ರತೀ ಚಕ್ರಪಾಣೀ । ಹಾಸ್ಯವದನೀ ಬೋಲಿಲಾ ।೨೬೩॥ ನಾದಬ್ರಹ್ಮ ಮುಸಾವಲೇ । ಕೀ ನಿಜಾನಂದಾಚೇ ಫಳ ಪಿಕಲೇ । ತೈಸೇ ಶ್ರೀಮುಖೇ ಬೋಲೋ ಆದರಿಲೇ । ಭಾಗ್ಯ ಉದೇಲೇ ಶ್ರವಣಾಂಚೇ ।೨೬೪॥ ಗೌರವೇ ಮ್ಹಣೇ ''ಬ್ರಹ್ಮದೇವಾ । ಸಂತೋಷಲೋ ತುರ್ಝಿಯಾ ಭಾವಾ'' । ಪುತ್ರಸ್ನೇಹೇಕರೂನಿ ತೇವ್ಹಾ । ಉದ್ಯತ ಖೇವಾ ಹರಿ ಜಾಲಾ ।೨೬೫॥ ಆವಡೀ ಮ್ಹಣೇ ವಿಬುಧೇಂದ್ರಾ । ಸತ್ಯ ತುರ್ಝೀ ವಾಂಗ್‌ಮುದ್ರಾ । ತುರ್ಝೇನಿ ವಚನೇ ಬ್ರಾಹ್ಮಣೇಂದ್ರಾ । ಧರಾಭಾರಾ ಉತರಿಲೇ ।೨೬೬॥ ಸಕಳ ಕಾರ್ಯ ನಿಃಶೇಖ । ಮ್ಯಾ ಸಂಪಾದಿಲೇ ದೇಖ । ತರೀ ಉರಲೇ ಅಸೇ ಏಕ । ಥೋರ ಅಟಕ ಮಜಲಾಗೀ ।೨೬೭॥

ಹುಲ್ಲಿನ ಸಿಂಬೆಯ ಮೇಲಿನ ಒಡಕು ಮಣ್ಣಿನ ಹರಿವೆ, ಕ್ಷಯರೋಗದ ರಾಜಕುಮಾರನು ಅಥವಾ ಕಾಡಾಗ್ನಿಯಿಂದ ತ್ರಸ್ತಗೊಂಡಿರುವ ಹೆಬ್ಬಾವು ಇವು ಯಾವ ಪ್ರಕಾರವಾಗಿ ದುರ್ಬಲವಾಗಿ ಮರಣೋನ್ಮುಖವಾಗಿರುವುವೋ, ಅದೇ ಸ್ಥಿತಿಯು ಯಾದವರದ್ದಾಗಿದೆ ।೨೫೭॥ ಬ್ರಾಹ್ಮಣರ ಮಹಾಭಯಂಕರವಾದ ಶಾಪದಿಂದ ಅವರ ಎಲ್ಲ ವೀರ್ಯವು, ಶೌರ್ಯವು, ಪ್ರತಾಪವು ಇಲ್ಲದಾಗಿ ಐಶ್ವರ್ಯದ ಸರ್ವ ಗರ್ವವು ಮುಗಿದುಹೋಗಿದೆ. ಅವರು ಕೇವಲ ಮೃತಪ್ರಾಯರಾಗಿ ತೋರುತ್ತಿರುವರು ।೨೫೮॥ ಹೇ ದೇವಾಧಿದೇವನೇ, ಹೇ ಯಾದವರಾಜನೇ, ಹೇ ಶ್ರೀಕೃಷ್ಣನೇ, ನಾವು ನಿನ್ನ ಚರಣಗಳ ಇಚ್ಛೆಯನ್ನು ಮಾಡುತ್ತಿದ್ದೇವೆ. ಆದ್ದರಿಂದ ನೀನು ವೈಕುಂಠಕ್ಕೆ ಬರಲು ತ್ವರೆ ಮಾಡಬೇಕು ।೨೫೯॥ ಹೇ ದೇವಕೀನಂದನನೇ, ಕೇಳು, ನಿನಗೆ ಉಚಿತವೆನಿಸಿದರೆ ಈ ಕ್ಷಣವೇ ಹೊರಡು. ದೇವತೆಗಳ ಸರ್ವ ಸೈನ್ಯವು ನಿನ್ನ ದಾರಿಕಾಯುತ್ತ ನಿಂತಿರುವುದು ।೨೬೦॥ ಸಲೋಕದವರಿಗೂ, ಸರ್ವಲೋಕಪಾಲಕರಿಗೂ ನೀನು ಕೃಪೆದೋರು. ನಾವು ನಿನ್ನ ಸೇವಕರಾಗಿದ್ದೇವೆ. ಆದ್ದರಿಂದ ಈ ನಿನ್ನ ದಾಸರ ವಚನವನ್ನು ಮನ್ನಿಸು ।೨೬೧॥ ಹೇ ವೈಕುಂಠನಾಥನೇ, ಈ ಪ್ರಕಾರವಾಗಿ ನಿನ್ನ ಸೇವೆಯ ಉತ್ಕಟೇಚ್ಛೆಯು ಉಮಾಕಾಂತ ಮೊದಲುಮಾಡಿ ಸರ್ವದೇವತೆಗಳಿಗೆ ಹತ್ತಿಕೊಂಡಿದೆ ।೨೬೨॥

ಈ ಯಾವ ಬ್ರಹ್ಮದೇವನ ಭಾಷಣವನ್ನು ಕೇಳಿ, ಯೋಗಜ್ಞಾನದ ಮುಕುಟಮಣಿಯಾದ ಶ್ರೀಕೃಷ್ಣನು ಮೇಘದಂತೆ ಗಂಭೀರ ವಾಣಿಯಿಂದ ಹಾಸ್ಯವದನನಾಗಿ ಬ್ರಹ್ಮದೇವನಲ್ಲಿ ಹೇಳಹತ್ತಿದನು ।೨೬೩॥ ನಾದಬ್ರಹ್ಮವೇ ತುಂಬಿ ತುಳುಕುವಂತೆ ಅಥವಾ ಆತ್ಮಾನಂದದ ಫಲವು ಪಕ್ವದಶೆಗೆ ಬಂದಂತೆ ಆ ಶ್ರೀಕೃಷ್ಣನು ನುಡಿಯಲು ಪ್ರಾರಂಭಿಸಿದನು. ಇದರಿಂದ ಕಿವಿಗಳ ಭಾಗ್ಯವು ಉದಯಕ್ಕೆ ಬಂದಂತಾಯಿತು ।೨೬೪॥ ಶ್ರೀಕೃಷ್ಣನು ಬಹು ಗೌರವದಿಂದ ಹೇಳಿದನು, ಹೇ ಬ್ರಹ್ಮದೇವನೇ, ನಿನ್ನ ಭಾವಭಕ್ತಿಯಿಂದ ನಾನು ಬಹಳ ಸಂತುಷ್ಟನಾಗಿರುವೆ. ಪುತ್ರಮೋಹದಿಂದ ಹರಿಯು ಆತನನ್ನು ಆಲಿಂಗಿಸಲು ಉತ್ಸುಕನಾದನು ।೨೬೫॥ ಈತನು ಪ್ರೇಮದಿಂದ ಹೀಗೆ ನುಡಿದನು. ಹೇ ದೇವೇಂದ್ರನೇ, ನೀನು ನುಡಿದಿರುವುದು ನಿಜವಿದೆ, ಹೇ ಬ್ರಾಹ್ಮಣೇಂದ್ರನೇ, ನಿನ್ನವಚನದಿಂದ ಪೃಥ್ವಿಯ ಭಾರವು ಇಳಿಯಿತು ।೨೬೬॥ ನಾನು ಸರ್ವಕಾರ್ಯಗಳನ್ನು ನಿಃಶೇಷವಾಗಿ ಸಂಪಾದಿಸಿರುವೆನು. ಆದರೂ ಒಂದು ಮಾತ್ರ ಅತಿ ದೊಡ್ಡ ಪ್ರತಿಬಂಧವು ಉಳಿದಿರುವುದು ।೨೬೭॥

ತದಿದಂ ಯಾದವಕುಲಂ ವೀರ್ಯಶೌರ್ಯಶ್ರೀಯೋದ್ಧತಮ್ ।
ಲೋಕಂ ಜಿಘೃಕ್ಷದ್ ರುದ್ಧಂ ಮೇ ವೇಲಯೇವ ಮಹಾರ್ಣವಃ ।೪೯॥
ಯದ್ಯಸಂಹೃತ್ಯ ದೃಪ್ತಾನಾಂ ಯದೂನಾಂ ವಿಪುಲಂ ಕುಲಮ್ ।
ಗಂತಾಸ್ಮ್ಯನೇನ ಲೋಕೋಽಯಮುದ್ವೇಲೇನ ವಿನಂಕ್ಷ್ಯತಿ ।೫೦॥

ಅರ್ಥ:- ಆದರೆ, ಇನ್ನೂ ಕಾರ್ಯವು ಉಳಿದುಕೊಂಡಿದೆ. ಯದುವಂಶದಲ್ಲಿ ಬಲ, ವಿಕ್ರಮ, ವೀರತ್ವ, ಶೂರತ್ವ ಮತ್ತು ಧನ ಸಂಪತ್ತಿನಿಂದ ಉನ್ಮತ್ತಗೊಂಡಿದೆ. ಇವೆರಲ್ಲರೂ ಸಂಪೂರ್ಣ ಪೃಥ್ವಿಯನ್ನು ನುಂಗಬೇಕೆನ್ನುವರು. ಅವರಿಗೆ ನಾನು ಸಮುದ್ರಕ್ಕೆ ಹಾಕಿದ ರೇಖೆಯು ದಾಟದಂತೆ , ತಡೆಹಿಡಿದಿರುವೆನು. ನಾನು ಒಂದು ವೇಳೆ ಈ ಯಾವ ಗರ್ವಿಷ್ಠ, ಮದೋನ್ಮತ್ತ ವಿಶಾಲ ಕುಲದ ಸಂಹಾರ ಮಾಡದೇ ಹೊರಟು ಹೋದರೆ ಇವರು ನಾನು ಹಾಕಿರುವ ಮರ್ಯಾದೆ ರೇಖೆಯನ್ನು ದಾಟಿ ಎಲ್ಲರನ್ನೂ ಸಂಹಾರ ಮಾಡುವರು.

ಹೇ ಯಾದವಕುಳ ಯೇಥ । ವೀರ್ಯಶೌರ್ಯಶ್ರೀಯೋದ್ಧತ । ಧರ್ಮ ನಾಶಾವಯಾ ಉದ್ಯತ । ಅತಿದೃಪ್ತ ನಿಜಬಳೇ ।।೨೬೮।। ಹೇ ಛೇದೂ ಪಾಹತೀ ಧರ್ಮಮೂಳೇ । ಮ್ಯಾ ಆವರಿಲೇ ಅಸತೀ ಯೋಗಬಳೇ । ಜೇವೀ ಸಮುದ್ರಾತೇ ಮರ್ಯಾದವೇಳೇ । ಅಸೇ ರಾಖಿಲೇ ನೇಮೂನೀ ।।೨೬೯।। ಸಾಂಡೋನಿ ಐಶಿಯಾಂಸೀ । ಮಜ ಗೇಲಿಯಾ ನಿಜಧಾಮಾಸೀ । ಹೇ ಪ್ರವರ್ತತೀಲ ಅಧರ್ಮಾಸೀ । ಕೋಣ ಯಾಂಸೀ ವಾರೀಲ ।।೨೭೦।। ಜೈಸಾ ನಿರ್ಮರ್ಯಾದ ಸಾಗರೂ । ಖವಳಲ್ಯಾ ಸರ್ವಸಂಹಾರಕರೂ । ತ್ಯಾಸೀ ಕೋಣ ಶಕೇಲ ಆವರೂ । ತೈಸಾ ವಿಚಾರೂ ಹೋಈಲ ।।೨೭೧।। ಹೇ ಅಧರ್ಮಪರ ಹೋತೀಲ ಗಾಢೇ । ತುಮ್ಹಾಸೀ ಪಡೇಲ ಸಾಂಕಡೇ । ಸಾಂಗೋ ಧಾಂವಾಲ ಮಜಪುಢೇ । ಯಾಂಚೇ ರೋಕಡೇ ಗಾರ್ಹಾಣೇ ।।೨೭೨।। ಹೇ ನಾಟೋಪತೀ ದೇವಾ । ನಾಕಳತೀ ದೈತ್ಯಾ ದಾನವಾ । ಹೇ ಅಧರ್ಮ ಕರಿತೀಜೇವ್ಹಾ । ತುಮ್ಹಿ ಏಚ ಮಜ ತೇವ್ಹಾ ಸಾಂಗೋ ಯಾಲ ।।೨೭೩।।

ಇದಾನೀಂನಾಶ ಆರಬ್ಧಃ ಕುಲಸ್ಯ ದ್ವಿಜಶಾಪಜಃ । ಯಾಸ್ಯಾಮಿ ಭವನಂ ಬ್ರಹ್ಮ ಬ್ರಹ್ಮಾನ್ ಏತದಂತೆ ತವಾನಘ ।೫೧॥

ಅರ್ಥ: ಹೇ ನಿಷ್ಪಾಪನಾದ ಬ್ರಹ್ಮದೇವನೇ, ಈಗ ಬ್ರಾಹ್ಮಣರ ಶಾಪದಿಂದ ಈ ವಂಶದ ನಾಶವು ಆರಂಭವಾಗಿದೆ. ಇವರ ಅಂತವಾದೊಡನೆಯೇ ನಾನು ವೈಕುಂಠಕ್ಕೆ ಹೋಗುವಾಗ್ಗೆ ನಿನ್ನ ಲೋಕಕ್ಕೆ ಬಂದು ಭೇಟಿಯಾಗುವೆನು.

ಯಾಲಾಗೀ ಕುಳನಾಶಾಸೀ ತ್ವರಿತ । ಆಜಿಪಾಸೋನಿ ಸುಮುಹೂರ್ತ । ಕೇಲಾ ಅಸೇ ಗಾ ನಿಶ್ಚಿತ । ಯಥೋಚಿತ ಯಾದವಾ ।।೨೭೪।। ಐಕೇ ಸಖಿಯಾ ಪ್ರಜಾಪತೀ । ಯಾ ಕುಳನಾಶಾಚಿಯಾ ಅಂತೀ । ತುಝಿಯಾ ಭುವನಾವರೂನಿ ನಿಶ್ಚಿತೀ । ನಿಜಧಾಮಾಪ್ರತೀ ಯೇಈನ ।।೨೭೫।। ಐಸೇ ಬೋಲಿಲಾ ಪ್ರಭೂ । ಐಕೋನಿ ಶಂಭು ಸ್ವಯಂಭೂ । ಆನಂದಲಾ ದೇವಕದಂಬೂ । ಸಮಾರಂಭೂ ಮಾಂಡಿಲಾ ।।೨೭೬।। ಜಯಜಯಕಾರು ಕೇಲಾ ಸಕಳೀ ।ಪರಮಾನಂದೇ ಪಿಟಿಲೀ ಟಾಳೀ । ಚರಣ ವಂದೂನಿ ವನಮಾಳೀ । ಪುಷ್ಪಾಂಜಳೀ ಅರ್ಪಿಲ್ಯಾ ।।೨೭೭।।

ಈ ಯಾವ ಯಾದವ ಕುಲವು ವೀರ್ಯ, ಶೌರ್ಯ, ವೈಭವಗಳಿಂದ ಉನ್ಮತ್ತಗೊಂಡಿರುವುದು. ತಮ್ಮ ಬಲದ ಗರ್ವದಿಂದ ಧರ್ಮದ ನಾಶಮಾಡಲು ಸಿದ್ಧರಾಗಿರುವರು ।೨೬೮।। ಇವರು ಧರ್ಮದ ಬೇರುಗಳನ್ನೇ ಕತ್ತರಿಸುವ ಪ್ರಯತ್ನಗಳನ್ನು ಮಾಡುತ್ತಿರುವರು. ಆದರೆ ನಾನು ಯಾವ ರೀತಿಯಲ್ಲಿ ಸಮುದ್ರಕ್ಕೆ ಮರ್ಯಾದೆ ರೇಖೆಯಿಂದ ತಡೆದಿರುವೆನೋ, ಅದರಂತೆಯೇ ನಾನು ಯೋಗಬಲದಿಂದ ಅವರನ್ನು ಆವರಿಸಿದ್ದೇನೆ ।೨೬೯।। ಈಗ ಯಾದವರಿಗೆ ಹೀಗೆಯೇ ಬಿಟ್ಟುಕೊಟ್ಟು ಒಂದುವೇಳೆ ನಾನು ನಿಜಧಾಮಕ್ಕೆ ಹೋದೆನೆಂದರೆ, ಇವರು ಅಧರ್ಮಕ್ಕೆ ಪ್ರವರ್ತರಾಗುವರು. ಆಗ ಇದರ ನಿವಾರಣೆಯನ್ನು ಯಾರು ಮಾಡಬೇಕು? ।೨೭೦।। ಸಮುದ್ರವು ತನ್ನ ಮರ್ಯಾದೆ ರೇಖೆಯನ್ನು ದಾಟಿ ಉಗ್ರವಾಗಿ ಆರ್ಭಟಿಸಿ ಎಲ್ಲರ ಸಂಹಾರ ಮಾಡುವುದು. ಆಗ ಅದನ್ನು ಯಾರೂ ತಡೆಹಿಡಿಯಲಾರರು. ಅದರಂತೆ ನನ್ನ ತರುವಾಯ ಹೀಗಾದರೆ ಇದರ ನಿವಾರಣೆಯನ್ನು ಯಾರು ಮಾಡಿಯಾರು? ।೨೭೧।। ಇವರು ಅತಿಶಯವಾಗಿ ಅಧರ್ಮದಿಂದ ವರ್ತಿಸುವರು. ಆಗ ನೀವು ಬಹು ಸಂಕಟಕ್ಕೆ ಗುರಿಯಾಗುವಿರಿ ಮತ್ತೆ ನೀವೇ ಅವರ ನಿಂದನೆಯನ್ನು ವಿವರಿಸಲು ನನ್ನತ್ತ ಧಾವಿಸುವಿರಿ ।೨೭೨।। ಇವರು ದೇವತೆಗಳವರಿಗೂ ಬಗ್ಗಲಾರರು, ದೈತ್ಯದಾನವರನ್ನು ಲೆಕ್ಕಿಸರು ಮತ್ತು ಅಧರ್ಮದ ಬಂಡಾಯವನ್ನು ಹೂಡಿದಾಗ ನೀವು ಇದನ್ನೆಲ್ಲ ಹೇಳಲು ನನ್ನಲ್ಲಿ ಬರಬೇಕಾಗುವುದು ।೨೭೩।।

ಆದ್ದರಿಂದ ಈ ಯಾದವಕುಲದ ಸತ್ವರನಾಶಕ್ಕಾಗಿ ಯೋಗ್ಯವಾದ ಮುಹೂರ್ತವನ್ನು ನಾನು ಇಂದಿನಿಂದಲೇ ಆರಂಭಿಸುತ್ತಿದ್ದೇನೆ ।೨೭೪।। ಹೇ ಸಖನಾದ, ಬ್ರಹ್ಮದೇವನೇ ಕೇಳು, ಈ ಕುಲದ ನಾಶವಾಗುತ್ತಲೇ ನಾನು ನಿನ್ನ ಲೋಕಕ್ಕೆ ಬಂದು ಅಲ್ಲಿಂದ ವೈಕುಂಠಕ್ಕೆ ತೆರಳುತ್ತೇನೆ ।೨೭೫।। ಶ್ರೀಕೃಷ್ಣನ ಈ ವಚನಗಳನ್ನು ಕೇಳಿ ಶಂಕರನಿಗೆ, ಬ್ರಹ್ಮದೇವನಿಗೆ ಹಾಗೂ ದೇವತೆಗಳ ಸಮುದಾಯಕ್ಕೆ ಬಹು ಸಂತೋಷವಾಯಿತು. ಇದರಿಂದ ಇವರು ಒಂದು ಸಮಾರಂಭವನ್ನೇ ಆರಂಭಿಸಿದರು ।೨೭೬।। ಎಲ್ಲರೂ ಕೂಡಿ ಜಯಜಯಕಾರವನ್ನು ಮಾಡಿದರು. ಪರಮಾನಂದದಿಂದ ಎಲ್ಲರೂ ಚಪ್ಪಾಳೆಗಳನ್ನು ಬಾರಿಸಿದರು. ಮತ್ತು ವನಮಾಳಿಯ ಚರಣಗಳಲ್ಲಿ ವಂದಿಸಿ ಆತನ ಮೇಲೆ ಪುಷ್ಪಾಂಜಲಿಯಿಂದ ಹೂಮಳೆಗರೆದರು ।೨೭೭।।

ಶ್ರೀಶುಕ ಉವಾಚ:

ಇತ್ಯುಕ್ತೋ ಲೋಕನಾಥೇನ ಸಯಂಭೂಃ ಪ್ರಣಿಪತ್ಯ ತಮ್ । ಸಹ ದೇವಗಣೈರ್ದೇವಃ ಸ್ವಧಾಮ ಸಮಪದ್ಯತ ।೩೨॥

ಅರ್ಥ:- ಶ್ರೀ ಶುಕದೇವನು ನುಡಿದನು: ಹೇ ಪರೀಕ್ಷಿತಿಯೇ, ಅಖಿಲ ಲೋಕಾಧಿಪತಿಯಾದ ಶ್ರೀಕೃಷ್ಣನು ಹೀಗೆ ಹೇಳಲು, ಆಗ ಬ್ರಹ್ಮದೇವನು ಈತನಿಗೆ ಪ್ರಣಾಮಗಳನ್ನು ಮಾಡಿದನು ಮತ್ತು ಎಲ್ಲ ದೇವತೆಗಳೊಂದಿಗೆ ಇವರು ತಮ್ಮ ಧಾಮಕ್ಕೆ ತೆರಳಿದರು.

ಶುಕ ಮ್ಹಣೇ ಪರೀಕ್ಷಿತೀ । ಐಕೋನಿ ಕೃಷ್ಣವದಂತೀ । ಸುರವರ ಆನಂದಲೇ ಚಿತ್ತೀ । ಆಹ್ಲಾದೇ ಕರಿತೀ ಅಭಿವಂದನೇ ।೨೭೮॥ ಧಾತಾ ಸವಿತಾ ಶೂಳಪಾಣೀ । ಮಿಳೋನಿಯಾ ದೇವಗಣೀ । ಕೃಷ್ಣಾಸೀ ಘಾತಲ್ಯಾ ಲೋಟಾಂಗಣೀ । ಚರಣ ವಂದೂನೀ ನಿಘಾಲೇ ।೨೭೯॥ ಏವಂ ವಂದೂನೀ ಶ್ರೀಪತಿ । ಆಪುಲಿಯಾ ಸ್ಥನಾ ಪ್ರತೀ । ನಿಘಾಲ್ಯಾ ಜೀ ದೇವಪಂಕ್ತೀ । ಪವನಗತೀ ವಿಮಾನೇ ।೨೮೦॥

ಅಥ ತಸ್ಯಾಂ ಮಹೋತ್ಪಾತಾನ್ ದ್ವಾರವತ್ಯಾಂ ಸಮುತ್ಥಿತಾನ್ । ವಿಲೋಕ್ಯ ಭಗವಾನಾಹ ಯದುವೃದ್ಧಾನ್ ಸಮಾಗತಾನ್ ।೩೩॥

ಅರ್ಥ:- ಅವರು ಹೊರಟು ಹೋದನಂತರ ದ್ವಾರಕೆಯಲ್ಲಿ ಅಪಶಕುನಗಳಾಗಲಾರಂಭಿಸಿದವು. ದೊಡ್ಡ ದೊಡ್ಡ ಉತ್ಪಾತಗಳು ಆದವು. ಅದನ್ನು ನೋಡಿ ಯದುವಂಶದ ವೃದ್ಧ ಜನರು ಶ್ರೀಕೃಷ್ಣನಲ್ಲಿ ಬಂದರು. ಭಗವಾನ ಶ್ರೀಕೃಷ್ಣನು ಇವರಿಗೆ ತಿಳಿಸಿ ಹೇಳಿದನು.

ಕುಳನಾಶು ಕರಣೇ ರೋಕಡೇ । ಐಸೇ ಕೃಷ್ಣೇ ನೇಮಿಲೇ ಧಡಪುಡೇ । ತಂವ ದ್ವಾರಕೇಸೀ ಯೇರೀಕಡೇ । ಮಹೋತ್ಪಾತ ಗಾಢೇ ಉಠಿಲೇ ।೨೮೧॥ ಗಗನೀ ನಿಘಾಲೇ ತ್ರಿಕೇತು । ಧೂಮಕೇತು ದಂಡಕೇತು । ಶಿಖೇಸಹಿತ ಶಿಖಾಕೇತು । ಗಗನಾಆಂತು ಉಗವಲೇ ।೨೮೨॥ ಮಾಧ್ಯಾಹ್ನೀ ವಾಜಲಾ ಆಘಾತ । ದಿವಸಾ ಉಲ್ಕಾಪಾತ ಹೋತ । ಹೋತ ಭೂತೇ ನಾಗವೀ ನಾಚತ । ಗಗನಾಆಂತ ರುದತೀ।೨೮೩॥ ವೃಕ ಜಂಬುಕ ನಗರಾಆಂತ । ದಿವಸಾ ಚೌಬಾರಾ ಕುಕಾಂತ । ನಗರೀ ಭಾಲುವಾ ಭೂಂಕತ । ಜನ ಕಾಂಪತ ದೇಖೋನಿ ।೨೮೪॥ ನಗರಾ ಆಂತುಬಾಹೇರೀ । ಶ್ವಾನಾಂಚೀ ರಡಣೀ ಭಾರೀ । ಮರ್ಜಾರಕಲಹೋ ನಗರೀ । ಘರೋಘರೀ ಹೋತಸೇ ।೨೮೫॥ ಗಾಈ ಆರಡತೀ ಮಧ್ಯರಾತ್ರೀ। ಲೇಕುರೇ ಖೇಳತೀ ಝುಂಝುರೀ। ಮಾಣಸಾಂತೇ ಝುಡಪಿತೀ ಘಾರೀ। ಘುಂಘಾತೀ ಘರೋಘ್ರುರೀ ದಿವಾಭೀತೇ ।೨೮೬॥ ವಾಗೀಶ್ವರೀ ಕ್ಷೋಭಲೀ ಗಾಢೀ । ಬೋಲೀ ಮ್ಹಣತೀ ಆಲೀ ಯಮಧಾಡೀ । ಕಾ ಗೇ ದಾಂವತಾ ತಾಂತಡೀ। ಆಗೀ ಉಡೀ ಘಾಲೂ ಪಾಹತಾ।೨೮೭॥ ಭೂಸ್ಫೋಟ ಭೂಮಿಕಂಪ । ಅಗ್ನಿಕಾರಣೇ ತಪೇ ಆತಪ । ವಾರೇನಿ ಸೋಡಿಲಾ ಅಹಾ ಕಂಪ । ಲಾಗೇ ಝುಡಪ ಸ್ವರಸ್ಪೇರ್ಶೇ ।೨೮೮॥ ಧುಳೋರಾ ಉಧಳತ ನಗರೀ। ರಜ ಭರೇ ಡೋಳ್ಯಾಮಾಝಾರೀ । ಡೋಳಾ ನುಘಡವೇ ನರನಾರೀ । ದಿಶಾ ಚಾರೀ ಧುಮಧುಮಿತ ।೨೮೯॥

ಶುಕಾಚಾರ್ಯರು ಹೇಳಿದರು, ಹೇ ಪರೀಕ್ಷಿತೀ ರಾಜನೇ, ಕೃಷ್ಣನ ಈ ಶಬ್ದಗಳನ್ನು ಕೇಳಿ ಎಲ್ಲ ದೇವತೆಗಳ ಮನದಲ್ಲಿ ಅತಿಶಯವಾಗಿ ಆನಂದವಾಯಿತು. ಮತ್ತು ಎಲ್ಲರೂ ಹರ್ಷಚಿತ್ತರಾಗಿ ನಮಸ್ಕಾರಗಳನ್ನು ಮಾಡಿದರು ।೨೭೮॥ ಬ್ರಹ್ಮದೇವ, ಸೂರ್ಯ, ಶಂಕರ ಇತ್ಯಾದಿ ದೇವತೆಗಳವರು ಕೂಡಿಕೊಂಡು ಕೃಷ್ಣನಿಗೆ ಲೋಟಾಂಗಣವನ್ನು ಹಾಕಿದರು. ಮತ್ತು ಚರಣಗಳಲ್ಲಿ ವಂದಿಸಿ ಎಲ್ಲರೂ ಹೊರಟು ಹೋದರು ।೨೭೯॥ ಒಟ್ಟಿನಲ್ಲಿ ಶ್ರೀಪತಿಯನ್ನು ವಂದಿಸಿ ಎಲ್ಲ ದೇವತೆಗಳವರು ವಾಯುವೇಗದ ವಿಮಾನಗಳಲ್ಲಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟರು ।೨೮೦॥

ಶ್ರೀಕೃಷ್ಣನು ಬಿಟ್ಟು ಮನಸ್ಸಿನಿಂದ ಪ್ರತ್ಯಕ್ಷವಾಗಿ ಕುಲನಾಶದ ಯೋಜನೆ ಹಾಕಿದನು. ಇಲ್ಲಿ ದ್ವಾರಕೆಯಲ್ಲಿ ಭಯಂಕರವಾದ ದುಶ್ಚಿನ್ಹೆಗಳು ಉದ್ಭವಿಸಿಕೊಂಡವು ।೨೮೧॥ ಆಕಾಶದಲ್ಲಿ ತ್ರಿಕೇತುಗಳು ಧೂಮಕೇತು ದಂಡಕೇತುಗಳು ಕಾಣಹತ್ತಿದವು. ಜುಟ್ಟುಗಳಿರುವ ಜುಟ್ಟು ನಕ್ಷತ್ರಗಳು ಗಗನ ಮಂಡಲದಲ್ಲಿ ಉತ್ಪನ್ನವಾದವು ।೨೮೨॥ ಮಧ್ಯಾಹ್ನವೇ ಭೂಕಂಪವಾಯಿತು. ಹಗಲಿನಲ್ಲಿಯೇ ಉಲ್ಕೆಗಳ ಪಾತವಾಗಹತ್ತಿದವು. ಪಿಶಾಚಿಗಳು ಬತ್ತಲು ಕುಣಿಯಹತ್ತಿದವು ಮತ್ತು ಆಕಾಶದಲ್ಲಿ ಅಳಹತ್ತಿದವು ।೨೮೩॥ ತೋಳಗಳು, ನರಿಗಳು ನಗರದಲ್ಲಿ ಸೇರಿಕೊಂಡು ಹಗಲಿನಲ್ಲಿಯೇ ನಾಲ್ಕುದಾರಿ ಕೂಡಿದಲ್ಲಿ ಕೂಗಲಾರಂಭಿಸಿದವು. ಇದನ್ನು ಕಂಡು ಜನರು ಭಯಗ್ರಸ್ಥರಾಗಿ ನಡುಗಹತ್ತಿದರು ।೨೮೪॥ ನಗರದ ಒಳಗೂ, ಹೊರಗೂ ನಾಯಿಗಳು ಮೇಲುಮುಖ ಮಾಡಿ ಅಳುವ ಧ್ವನಿಯಲ್ಲಿ ಕೂಗುತ್ತಿದ್ದವು. ಮನೆಮನೆಗಳಲ್ಲಿ ಬೆಕ್ಕುಗಳು ಜಗಳವಾಡುತ್ತಿದ್ದವು ।೨೮೫॥ ಮಧ್ಯರಾತ್ರಿಯಲ್ಲಿ ಆಕಳುಗಳು ಒದರಹತ್ತಿದವು, ಬಾಲಕರು ಆಟಗಳಲ್ಲಿ ಬಡೆದಾಟ ಮಾಡಲಾರಂಭಿಸಿದರು. ಹದ್ದುಗಳು ಮನುಷ್ಯರ ಮೇಲೆ ರೆಕ್ಕೆಗಳಿಂದ ಬಡೆಯಲಾರಂಭಿಸಿದವು. ಅಶುಭ ಪ್ರಾಣಿಗಳು ಓಡಾಡಹತ್ತಿದವು ।೨೮೬॥ ಜನರ ವಾಗ್ದೇವಿಯು ಬಹಳ ಕ್ಷೋಭೆಗೊಂಡಳು ಇವರು ಹೀಗೆ ಹೇಳಲಾರಂಭಿಸಿದರು, ಯಮನ ಮುತ್ತಿಗೆ ಬಂದಿದೆ. ಸುಮ್ಮನೇ ಬೇಗಬೇಗನೇ ಧಾವಿಸುತ್ತ ಅಗ್ನಿಯಲ್ಲಿ ಏಕೆ ಜಿಗಿಯುವಿರಿ? ಇತ್ಯಾದಿ ।೨೮೭॥ ಜ್ವಾಲಾಮುಖಿಯ ಸ್ಫೋಟವಾಯಿತು, ಭೂಕಂಪವೂ ಆರಂಭವಾಯಿತು, ಬಿಸಿಲು ಅಗ್ನಿ ಸಮವಾಯಿತು, ಬಿರುಗಾಳಿಯು ಎದ್ದಿತು. ಇದರ ವೇಗದಿಂದ ಎಲ್ಲರಿಗೂ ತಲ್ಲಣಿಸಬೇಕಾಯಿತು ।೨೮೮॥ ನಗರದಲ್ಲಿ ನೋಡಿದಲ್ಲೆಲ್ಲ ಧೂಳಿನಿಂದ ತುಂಬಿಹೋಯಿತು. ಈ ಧೂಳು ಕಣ್ಣುಗಳಲ್ಲಿ ಸೇರಿಕೊಂಡಿತು. ಇದರಿಂದ ನರನಾರಿಯರಿಗೆ ಕಣ್ಣು ತೆರೆಯಲು ಬಾರದಾಯಿತು, ನಾಲ್ಕೂ ದಿಕ್ಕುಗಳು ಧೂಳಿನಿಂದ ತುಂಬಿಹೋದವು ।೨೮೯॥

ಐಸೇ ನಾನಾ ಪರೀಚೇ ಉತ್ಪಾತ । ನಗರೀ ರುಧಿರವೃಷ್ಟಿ ಹೋತ । ದೇಖೋನಿ ಯಾದವ ಸಮಸ್ತ । ಭಯಚಕಿತ ಪೈ ಜಾಹಲೇ ।।೪೯೦।। ಯಾದವ ಮಿಳೋನಿ ಥೋರ ಥೋರ । ವೃದ್ಧ ವೃದ್ಧ ಕರಿತೀ ವಿಚಾರ । ಯೇ ಚಿನ್ಹೇ ಅರಿಷ್ಟಕರ । ವಿಘ್ನ ಥೋರ ದಿಸತಸೇ ।।೪೯೧।। ಅವಘೇ ಆಲೇ ಕೃಷ್ಣಾಪಾಶೀ । ವೃತ್ತಾಂತ ಸಾಂಗತೀ ತಯಾಸೀ । ಉದ್ವಿಗ್ನ ದೇಖೋನಿ ಯಾದವಾಂಸೀ । ಹೃಷೀಕೇಶೀ ಬೋಲಿಲಾ ।।೪೯೨।।

ಶ್ರೀಭಗವಾನುವಾಚ:

ಏತೇ ವೈ ಸುಮಹೋತ್ಪಾತಾ ವ್ಯುತ್ತಿಷ್ಠಂತೀಹ ಸರ್ವತಃ । ಶಾಪಶ್ಚ ನಃ ಕುಲಸ್ಯಾಸೀದ್ ಬ್ರಾಹ್ಮಣೇಭ್ಯೋ ದುರತ್ಯಯಃ ।।೩೪।।

ಅರ್ಥ:- ಭಗವಾನನು ನುಡಿದನು : ನಮ್ಮ ವಂಶವು ಬ್ರಾಹ್ಮಣರಿಂದ ಶಪಿತವಾಗಿದೆ. ಅಂತಹ ಶಾಪವನ್ನು ಎದುರಿಸುವುದು ಸಾಧ್ಯವಿಲ್ಲ. ಆದ್ದರಿಂದಲೇ ನಮ್ಮ ಸುತ್ತ ಎಲ್ಲ ಕಡೆಗಳಲ್ಲಿಯೂ ಮಹಾ ಉತ್ಪಾತಗಳು ಕಾಣಿಸಿಕೊಳ್ಳುತ್ತಿವೆ.

ಕೃಷ್ಣ ಯಾದವಾಂಸೀ ಸಾಂಗತ । ದಿವಿ-ಭೂ-ಅಂತರಿಕ್ಷ ಗತ । ಉಠಿಲೇ ಜೇ ಮಹೋತ್ಪಾತ । ಸರ್ವಗತ ಸರ್ವದಾ ।।೪೯೩।। ದೇಖೋನಿಯಾ ಚಿನ್ಹಾಂಸಿ । ಮಜಹೀ ಆಠವಲೇ ಮಾನಸೀ । ಬ್ರಾಹ್ಮಣಶಾಪ ಯದುಕುಳಾಸೀ । ಚಿನ್ಹೇ ತ್ಯಾಸೀ ಸೂಚಕೇ ।।೪೯೪।। ಬ್ರಾಹ್ಮಣಾಂಚಾ ಶಾಪು ಖರಾ । ನುಲ್ಲಂಘವೇ ಹರಿಹರಾ । ತುಮ್ಹೀ ಆತಾಂಚಿ ವಿಚಾರ ಕರಾ । ನಗರಾಬಾಹಿರಾ ಜನು ಕಾಢಾ ।।೪೯೫।।

ನ ವಸ್ತವ್ಯಮಿಹಾಸ್ಮಾಭಿರ್ಜಿಜೀವಿಷುಭಿರಾರ್ಯಕಾಃ । ಪ್ರಭಾಸಂ ಸುಮಹತ್ಪುಣ್ಯಂ ಯಾಸ್ಯಾಮೋಽದ್ಯೈವ ಮಾ ಚಿರಮ್ ।।೩೫।।

ಅರ್ಥ:- ಹೇ ಪ್ರಿಯ ಹಿರಿಯರೇ, ನಾವು ಜೀವಂತವಿರಲು ಬಯಸುವದಾದರೆ ಇನ್ನು ಹೆಚ್ಚು ಕಾಲ ಈ ಸ್ಥಳದಲ್ಲಿ ಇರಕೂಡದು. ಇಂದೇ ನಾವು ಆ ಪವಿತ್ರ ಪ್ರಭಾಸ ಕ್ಷೇತ್ರಕ್ಕೆ ಹೊರಟು. ಹೋಗೋಣ ವಿಳಂಬ ಮಾಡಬೇಡಿರಿ.

ಯೇಥೋನಿ ದ್ವಾರಕೇಚೀ ವಸ್ತೀ । ಆಮ್ಹಿ ಸಾಂಡಾವೀ ಸಮಸ್ತೀ । ಜೀವೇ ಜಿಯಾವಯಾಚೀ ಚಾಡ ಚಿತ್ತೀ । ತರೀ ಪ್ರಭಾಸಾಪ್ರತೀ ನಿಘಾವೇ ।।೪೯೬।। ವೇಗೀ ಕರಾ ರೇ ತಾಂತಡೀ । ಆಜಚಿ ನಿಘಾ ಲವಡಸವಡೀ । ಸಾಂಡಾ ಘರದಾರಾಂಚೀ ಗೋಡೀ । ಯೇಥ ಅರ್ಧಘಡೀ ನ ರಹಾವೇ ।।೪೯೭।।

ಯತ್ರ ಸ್ನಾತ್ವಾ ದಕ್ಷಶಾಪಾದ್ ಗೃಹೀತೋ ಯಕ್ಷ್ಮಣೋಡುರಾಟ್ ।
ವಿಮುಕ್ತಃ ಕಿಲ್ಬಿಷಾತ್ ಸದ್ಯೋ ಭೇಜೇ ಭೂಯಃ ಕಲೋದಯಮ್ ।।೩೬।।

ಅರ್ಥ:- ಒಂದು ಸಾರೆ ಚಂದ್ರನು ದಕ್ಷಬ್ರಹ್ಮನು ನೀಡಿದ ಶಾಪದಿಂದ ಕ್ಷಯರೋಗಿಯಾಗಿದ್ದನು. ಆತನು ಪ್ರಭಾಸಕ್ಷೇತ್ರದಲ್ಲಿ ಸ್ನಾನಮಾಡುವುದರಿಂದಲೇ ಶಾಪವಿಮುಕ್ತನಾಗಿ ಮತ್ತೆ ತನ್ನ ಕಲಾ ವೃದ್ಧಿಯನ್ನು ಪಡೆದನು.

ಐಕಾ ಸಮಸ್ತ ಯಾದವಶ್ರೇಷ್ಠ । ಪ್ರಭಾಸತೀರ್ಥ ಮಹಾವರಿಷ್ಠ । ಜೇಥಿಚೇನೀ ಸ್ನಾನೇ ಉಡುರಾಟ । ನಿಸ್ತರಲಾ ಕಷ್ಟ ಕ್ಷಯಾಚೇ ।।೪೯೮।।

ಈ ಪ್ರಕಾರವಾಗಿ ಅನೇಕ ರೀತಿಯಲ್ಲಿ ದುಶ್ಚಿನ್ಹೆಗಳು ತೋರಲಾರಂಭಿಸಿದವು. ರಕ್ತದ ಮಳೆಯಾಯಿತು. ಇದನ್ನು ಕಂಡು ಯಾದವರೆಲ್ಲರೂ ಭಯಭೀತರಾದರು ।।೪೯೦।। ಸರ್ವ ವಯೋವೃದ್ಧರು ಹಾಗೂ ಹಿರಿಯ ಯಾದವರು ಒಂದೆಡೆ ಸೇರಿ ವಿಚಾರ ಮಾಡಿದರು. ಇವೆಲ್ಲವೂ ಅನಿಷ್ಟಸೂಚಕ ಚಿನ್ಹೆಗಳಾಗಿವೆ ಯಾವುದಾದರೂ ಭಯಂಕರವಾದ ವಿಘ್ನವು ಬರುವುದೆಂದು ಕಾಣುತ್ತದೆ ।।೪೯೧।। ಹೀಗೆ ಹೇಳುತ್ತ ಈ ಎಲ್ಲ ಜನರು ಕೃಷ್ಣನಲ್ಲಿ ಬಂದು, ಆದ ಘಟನೆಗಳನ್ನು ಆತನಲ್ಲಿ ಹೇಳತೊಡಗಿದರು. ಸರ್ವ ಯಾದವರು ಉದ್ವಿಗ್ನರಾದದ್ದು ಕಂಡು ಶ್ರೀಕೃಷ್ಣನು ಹೇಳಲಾರಂಭಿಸಿದನು ।।೪೯೨।।

ಶ್ರೀಕೃಷ್ಣನು ಯಾದವರಿಗೆ ಹೀಗೆ ಹೇಳಿದನು, ಸ್ವರ್ಗ, ಪೃಥ್ವಿ ಅಂತರಿಕ್ಷಗಳಲ್ಲಿ ಭಯಾನಕ ದೃಶ್ಯಗಳು ಎಲ್ಲ ಕಡೆಗಳಲ್ಲಿಯೂ ಕಾಣಸುತ್ತಿವೆ ।।೪೯೩।। ಈ ಅಶುಭ ಚಿನ್ಹೆಗಳನ್ನು ಕಂಡು ನನ್ನ ಮನದಲ್ಲಿ ಒಂದು ಘಟನೆಯು ನೆನಪಾಗುತ್ತಿದೆ. ಈ ಯಾವ ನಮ್ಮ ಕುಲಕ್ಕೆ ಬ್ರಾಹ್ಮಣರ ಶಾಪವಾಗಿದೆ. ಅದರ ಸೂಚಕ ಚಿನ್ಹೆಗಳೇ ಇವಾಗಿವೆ ।।೪೯೪।। ಬ್ರಾಹ್ಮಣರ ಶಾಪವು ಸತ್ಯವಾಗಿರುವುದು. ಅದರ ಉಲ್ಲಂಘನೆಯನ್ನು ಹರಿಹರರಿಗೂ ಮಾಡಲು ಬರುವುದಿಲ್ಲ. ಆದ್ದರಿಂದ ನೀವು ಈಗಲೇ ವಿಚಾರ ಮಾಡಿರಿ. ಹಾಗೆಯೇ ನಗರದ ಹೊರಗೆ ಕಾಲು ಹಾಕಿರಿ ।।೪೯೫।।

ಜೀವಂತರಾಗಿ ಇರುವ ಇಚ್ಛೆ ಇದ್ದರೆ ನಾವೆಲ್ಲರೂ ದ್ವಾರಕೆಯಲ್ಲಿನ ವಸತಿ ತ್ಯಜಿಸಿ ಈಗಿಂದೀಗಲೇ ಪ್ರಭಾಸಕ್ಕೆ ಹೊರಡಲು ಸಿದ್ಧರಾಗಬೇಕು ।।೪೯೬।। ನೀವೆಲ್ಲರೂ ತ್ವರೆಮಾಡಿರಿ. ಲಗುಬಗೆಯಿಂದ ಇಂದೇ ಹೊರಡಿರಿ. ಮನೆಮಾರಿನ ಮಮತೆ ಮರೆತುಬಿಡಿರಿ. ಒಂದು ಕ್ಷಣ ಸಹಿತವಾಗಿ ಇಲ್ಲಿರಬೇಡಿರಿ ।।೪೯೭।।

ಯಾವತ್ತೂ ಯಾದವ ಶ್ರೇಷ್ಠರೇ ಕೇಳಿರಿ. ಪ್ರಭಾಸತೀರ್ಥವು ಇದೊಂದು ಅತ್ಯಂತ ಪವಿತ್ರ ಸ್ಥಾನವಾಗಿರುವುದು. ಇಲ್ಲಿ ಸ್ನಾನ ಮಾಡಿ ಚಂದ್ರನು ಕ್ಷಯರೋಗದಿಂದ ಮುಕ್ತನಾದನು ।।೪೯೮।।

ದಕ್ಷೇ ನಿಜಕನ್ಯಾ ಚಂದ್ರಾಸೀ । ಸತ್ತಾವೀಸ ದಿಧಲ್ಯಾ ತ್ಯಾಸೀ । ತೋ ರತಲಾ ರೋಹಿಣೀಸೀ । ಯೇರಾ ಸರ್ವಾಸೀ ಉಪೇಕ್ಷುನೀ ।೯೯॥ ದಕ್ಷೇ ಶಾಪಿಲೇ ಚಂದ್ರಾಸೀ । ಕ್ಷಯರೋಗು ಲಾಗಲಾ ತ್ಯಾಸೀ । ತೇಣೇ ಯೇಊನಿ ಪ್ರಭಾಸಾಸೀ । ಸ್ನಾನದಾನಾಸೀ ಪೈ ಕೇಲೇ ।೧೦೦॥ ಸ್ನಾನಮಾತ್ರೇ ಕೇವಳ । ಕ್ಷಯರೋಗ ಗೇಲಾ ತತ್ಕಾಳ । ಕಳಾ ಪಾವಲಾ ಸಕಳ । ಶೋಭೇ ನಿರ್ಮಳ ನಿಜತೇಜೇ ।೧೦೧॥

ವಯಂ ಚ ತಸ್ಮಿನ್ನಾಪ್ಲುತ್ಯ ತರ್ಪಯಿತ್ವಾ ಪಿತೃನ್ ಸುರಾನ್ । ಭೋಜಯಿತ್ವೋಶಿಜೋ ವಿಪ್ರಾನ್ ನಾನಾಗುಣವತಾಂಧಸಾ ।೩೮॥

ಅರ್ಥ:- ನಾವು ಆ ತೀರ್ಥದಲ್ಲಿ ಸ್ನಾನ ಮಾಡಿ ಪಿತೃಗಳಿಗೆ ಮತ್ತು ದೇವತೆಗಳಿಗೆ ತೃಪ್ತಿಗೊಳಿಸಿ ಉತ್ತಮ ಅನ್ನದಿಂದ ಉತ್ತಮ ಬ್ರಾಹ್ಮಣರಿಗೆ ಭೋಜನ ಹಾಕೋಣ.

ಆಮ್ಹಿಂಹೀ ತೇಥ ಸ್ನಾನ ದಾನ । ಪಿತೃತರ್ಪಣ ದೇವತಾರ್ಚನ । ಕರೂ ಬ್ರಾಹ್ಮಣಪೂಜನ । ಜೇ ಸಂಪನ್ನ ಶ್ರುತಿ ಶಾಸ್ತ್ರೀ ।೧೦೨॥ ನಾನಾ ಪರೀಂಚೀ ಪಕ್ವಾನ್ನೇ । ಗುಣಾಧಿಕ್ಯೇ ಮಿಷ್ಟಾನ್ನೇ । ದೇವಾ ಬ್ರಾಹ್ಮಣಾಂಸೀ ಭೋಜನೇ । ನಾನಾ ದಾನೇ ವಿಧಾನೋಕ್ತ ।೧೦೩॥

ತೇಷು ದಾನಾನೀ ಪಾತ್ರೇಷು ಶ್ರದ್ಧಯೋಪ್ತ್ವಾ ಮಹಾಂತಿ ವೈ । ವೃಜನಾನಿ ತರಿಷ್ಯಾಮೋ ದಾನ್ಯೈರ್ನೌಭಿರಿವಾರ್ಣವಮ್ ।೩೯॥

ಅರ್ಥ:- ನಾವು ಪೂರ್ಣ ಶ್ರದ್ಧೆಯಿಂದ ಸತ್ಪಾತ್ರ, ಬ್ರಾಹ್ಮಣರಿಗೆ ಪೂರ್ಣ ಶ್ರದ್ಧೆಯಿಂದ ಮಹಾ ಮಹಾ ದಾನದಕ್ಷಿಣೆಗಳನ್ನು ಕೊಡೋಣ ಹಡಗದಿಂದ ಸಮುದ್ರವನ್ನು ದಾಟುವಂತೆ ದಾನಗಳಿಂದ ಸರ್ವ ಪ್ರಕಾರದ ಸಂಕಟಗಳಿಂದ ಪಾರಾಗೋಣ .

ಶ್ರದ್ಧೇಚೇನಿ ನೇಟೇಪಾಟೇ । ಪಾಹೂನಿ ದಾನಪಾತ್ರೇ ಚೋಖಟೇ । ದಾನ ದ್ಯಾವೇ ಗೋಮಟೇ । ಭೂಮೀ ವೋಲಟೇ ಜೇವೀ ಬೀಜ ।೧೦೪॥ ಬ್ರಾಹ್ಮಣಾಚೇ ಮುಖ ತೇ ಕ್ಷೇತ್ರ । ಪಾಲವಿಯೇಪೇಢೀವೀಣ ಪವಿತ್ರ । ಐಸೇ ಪಾಹೂನಿ ಸುಕ್ಷೇತ್ರ । ದಾನೇ ವಿಚಿತ್ರ ಪೇರಾವೀ ।೧೦೫॥ ವಿನೀತತೇಚೀ ಸೇಜ ವೋಲ । ಶ್ರದ್ಧೇಚೇ ಚಾಡೇ ನಿರ್ಮಳ । ಶಮದಮಾದಿ ಬೈಲ ಸಬಳ । ತೇ ತಾತ್ಕಾಳ ಜುಂಪೋನೀ ।೧೦೬॥ ಐಶಿಯಾ ವೋಜಾ ಪರೀ । ಬೀಜ ಪೇರಿಲಿಯಾ ಕ್ಷೇತ್ರೀ । ಪೀಕ ಪೀಕೇಲ ಘುಮರೀ । ಪುರುಷಾರ್ಥ ಚಾರೀ ಲಗಟೋನೀ ।೧೦೭॥ ತ್ಯಾ ಪಿಕಾಚೇನಿ ಸಬಳೇ । ಪಾಪೇ ತರೋನಿ ಪೈ ಸಕಳೇ । ಜೇವೀ ನಾವೇಚೇನಿ ಬಳೇ । ಸಮುದ್ರಜಳೇ ತರಿಜೇತೀ ।೧೦೮॥

ಶ್ರೀಶುಕ ಉವಾಚ:

ಏವಂ ಭಗವತಾದಿಷ್ಟಾ ಯಾದವಾಃ ಕುಲನಂದನ । ಗಂತುಂ ಕೃತಧಿಯಸ್ತೀಥ ಸ್ಯಂದನಾನ್ ಸಮಯೂಯುಜನ್ ।೪೦॥

ಅರ್ಥ:- ಶ್ರೀ ಶುಕದೇವರು ಹೇಳಿದರು : ಹೇ ಕುರುನಂದನನೇ, ಶ್ರೀಕೃಷ್ಣನು ಈ ಪ್ರಕಾರವಾಗಿ ಆಜ್ಞೆಯನ್ನು ಮಾಡಲು ಯದುವಂಶದವರು ಒಮ್ಮತದಿಂದ ಪ್ರಭಾಸಕ್ಕೆ ಹೊರಡಲು ತಮ್ಮ ತಮ್ಮ ರಥಗಳನ್ನು ಸಿದ್ಧಗೊಳಿಸಿದರು.

ದಕ್ಷನು ತನ್ನ ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೆ ಕೊಟ್ಟಿದ್ದನು. ಈ ಎಲ್ಲರನ್ನು ಉಪೇಕ್ಷೆ ಮಾಡಿ ಚಂದ್ರನು ರೋಹಿಣಿಯಲ್ಲಿ ಆಸಕ್ತನಾದನು ।೯೯॥ ಆಗ ದಕ್ಷನು ಚಂದ್ರನಿಗೆ "ನಿನ್ನ ಕಲೆಯ ಕ್ಷಯವಾಗಲಿ" ಎಂದು ಶಾಪವನ್ನು ಕೊಟ್ಟನು. ಆದ್ದರಿಂದ ಆತನಿಗೆ ಕ್ಷಯರೋಗವು ಅಂಟಿಕೊಂಡಿತು. ಮುಂದೆ ಚಂದ್ರನು ಪ್ರಭಾಸತೀರ್ಥದಲ್ಲಿ ಸ್ನಾನಗೈದನು ।೧೦೦॥ ಆಗ ಕೇವಲ ಸ್ನಾನ ಮಾತ್ರದಿಂದ ಚಂದ್ರನು ತತ್ಕಾಲದಲ್ಲಿ ರೋಗದಿಂದ ಮುಕ್ತನಾದನು. ಆತನ ಸರ್ವ ಕಲೆಗಳು ಆತನಿಗೆ ಪ್ರಾಪ್ತವಾದವು ಮತ್ತು ತನ್ನ ಮೂಲದ ನಿಜ ತೇಜದಿಂದ ಶೋಭಿತಗೊಂಡನು ।೧೦೧॥

ನಾವೂ ಸಹ ಅಲ್ಲಿಗೆ ಹೋಗಿ ಸ್ನಾನದಾನಾದಿಕ ಪಿತೃತರ್ಪಣ ಮತ್ತು ವೇದಶಾಸ್ತ್ರ ಸಂಪನ್ನರಾದ ಬ್ರಾಹ್ಮಣರ ಪೂಜೆಯನ್ನು ಮಾಡೋಣ ।೧೦೨॥ ನಾನಾ ಪ್ರಕಾರಗಳ ಪಕ್ವಾನ್ನಗಳನ್ನು ಮತ್ತು ರುಚಿಕರವಾದ ಮೃಷ್ಟಾನ್ನವನ್ನು ಸಿದ್ಧಗೊಳಿಸಿ ದೇವ, ಬ್ರಾಹ್ಮಣರಿಗೆ ಸಮರ್ಪಣೆಯನ್ನು ಮಾಡೋಣ ಮತ್ತು ಅನೇಕ ಪ್ರಕಾರಗಳ ದಾನಗಳನ್ನು ವಿಧಿಯುಕ್ತವಾಗಿ ಕೊಡೋಣ ।೧೦೩॥

ತೋಯ್ದ ಹಸಿ ಭೂಮಿಯಲ್ಲಿ ಬೀಜಗಳನ್ನು ಬಿತ್ತುವಂತೆ ಉತ್ತಮ ಸತ್ಪಾತ್ರತೆಯನ್ನು ಕಂಡು ಶ್ರದ್ಧೆಯಿಂದ ದಾನವನ್ನು ಕೊಡಬೇಕು ।೧೦೪॥ ಬ್ರಾಹ್ಮಣರ ಮುಖವು ಹೊಲವಿದ್ದಂತೆ. ಇದು ಕೋಲಿಗಳಿಲ್ಲದೇ, ಕಳೆ ಇಲ್ಲದೇ ಪವಿತ್ರವಾಗಿರುವುದು. ಹೀಗೆ ಸತ್‌ಪಾತ್ರರೂಪ ಹೊಲವನ್ನು ನೋಡಿ ವಿವಿಧ ದಾನರೂಪ ಬೀಜಗಳನ್ನು ಬಿತ್ತಬೇಕು ।೧೦೫॥ ವಿನಯ ಎಂಬುವ ಉತ್ತಮ ಹಸಿ, ಶ್ರದ್ಧೆ ಎಂಬುದು ಬೀಜಬಿತ್ತುವ ಮಂಡಿಯನ್ನು, ಶಮದಮಗಳೆಂಬ ಬಲಿಷ್ಠವಾದ ಎತ್ತುಗಳನ್ನು ತೀವ್ರವಾಗಿ ನೇಗಿಲಕ್ಕೆ ಜೋಡಿಸಬೇಕು ।೧೦೬॥ ಈ ರೀತಿ ವ್ಯವಸ್ಥೆಗೊಳಿಸಿ ಬೀಜವನ್ನು ಬಿತ್ತಲು ಹೊಲದಲ್ಲಿ ವಿಪುಲವಾಗಿ ಬೆಳೆಯು ಬರುವುದು ಮತ್ತು ನಾಲ್ಕೂ ಪುರುಷಾರ್ಥಗಳು ಕೈಗೆಟುಕುವುವು ।೧೦೭॥ ಹಡಗದಿಂದ ಸಮುದ್ರವನ್ನು ಪಾರಾಗಲು ಬರುವುದು. ಆದರಂತೆ ಈ ಬೆಳೆಯ ಸಾಮರ್ಥ್ಯದಿಂದ ಸರ್ವ ಪಾಪಗಳಿಂದ ಮುಕ್ತರಾಗಲು ಬರುವುದು ।೧೦೮॥

ಶುಕಮ್ಹಣೇ ಕೌರವನಂದನಾ । ಐಕೇ ಪರೀಕ್ಷಿತ ಸಜ್ಞಾನಾ । ಕೃಷ್ಣೇ ದಿಧಲೀ ಅನುಜ್ಞಾ । ತೀರ್ಥವಿಧಾನಾ ಪ್ರಭಾಸಾ ॥೩೦೯॥ ಯಾದವ ಉಠಿಲೇ ಗಾಢೇ । ರಥೀ ಜುಂಪಿಲೇ ಜೇ ಘೋಡೇ । ಯೇರ ಧಾಂವತೀ ಯೇರಾಪುಢೇ । ಚಹೂಕಡೇ ಲಗಬಗ ॥೩೧೦॥

ತನ್ನೀರಿಷ್ಯೋದ್ಧವೋ ರಾಜನ್ ಶ್ರುತ್ವಾ ಭಗವತೋದಿತಮ್ । ದೃಷ್ಟ್ವಾರಿಷ್ಟಾನಿ ಘೋರಾಣಿ ನಿತ್ಯಂ ಕೃಷ್ಣ ಮನುವ್ರತಃ ॥೪೦॥

ಅರ್ಥ:- ಹೇ ರಾಜನೇ, ಕೃಷ್ಣನ ಭಕ್ತನಾದ ಉದ್ಧವನು ಇದನ್ನೆಲ್ಲವನ್ನೂ ಕೇಳಿ, ನೋಡಿ ಘೋರ ಅರಿಷ್ಟಗಳನ್ನು ಕಂಡು ಕೃಷ್ಣನ ಸನ್ನಿಧಿಯಲ್ಲಿಯೇ ಇದ್ದನು.

ಘೋರ ವೀರಾಂಚೇ ಬೋಭಾಟ । ಗಜರಥಾಂಚೇ ಘಡಘಡಾಟ । ದ್ವಾರಕೇಮಾಜಿ ನ ಪುಟೇ ವಾಟ । ಪ್ರಯಾಣ ಉದ್ಭಟ ಪ್ರಭಾಸಾಸೀ ॥೩೧೧॥ ಹಡಬಡಲೀ ದೇಖೋನಿ ದ್ವಾರಾವತೀ । ಐಕ ರಾಯಾ ಪರೀಕ್ಷಿತೀ । ಉದ್ಧವಾಸ ಆಠವಲೇ ಚಿತ್ತೀ । ಕೃಷ್ಣವದಂತೀ ದೇವಾಸೀ ॥೩೧೨॥ ಕುಳನಾಶಾಸೀ ತ್ವರಿತ । ಆಜೀಪಾಸೂನ ಸುಮುಹೂರ್ತ । ತೋಚಿ ದೇವೇ ಪ್ರಸ್ತುತ । ಕಾರ್ಯಾರ್ಥ ನಿಶ್ಚಿತ ಮಾಂಡಿಲಾ ॥೩೧೩॥ ಉದ್ಧವ ಕೃಷ್ಣಾಸವೇ ಸಂತತ । ಕೃಷ್ಣಾನುಮತೇ ತೋ ವರ್ತತ । ಸುರಸಂವಾದ ನಿಶ್ಚಿತ । ಹೋತಾ ಶ್ರುತ ತಯಾಸೀ ॥೩೧೪॥ ಅಸತಾ ಯೇಥ ಕೃಷ್ಣನಾಥ । ದ್ವಾರಕೇಮಾಜೀ ಅತಿ ಉತ್ಪಾತ । ಉಠಿಲೇ ತೇ ಮನೋಗತ । ಜಾಣ ನಿಶ್ಚಿತ ಕೃಷ್ಣಾಚೇ ॥೩೧೫॥ ಯಾದವ ನೇಊನಿ ಪ್ರಭಾಸಾಸೀ । ಅರ್ಧಕ್ಷಣೇ ನಾಶೀಲ ಯಾಂಸೀ । ಜಾವಯಾ ನಿಜಧಾಮಾಸೀ । ಹೃಷಿಕೇಶೀ ಉದ್ಯತ ॥೩೧೬॥ ಮ್ಹಣಾಲ "ಕಾ ನೇಲೇ ಇತುಕೇ ದುರೀ । ನಾಶು ನ ಕರೀಚ ದ್ವಾರಕಾಪುರೀ" । ತರೀ ತೋ ಸರ್ವಜ್ಞ ಶ್ರೀ ಹರೀ । ಸೂತ್ರಧಾರೀ ಜಾಣತಾ ॥೩೧೭॥ ಯಾದವ ದೇವಾಂಶ ನಿಶ್ಚಿತೀ । ಸಾತವೀ ಪುರೀ ದ್ವಾರಾವತೀ । ಯೇಥ ನಿಮಾಲ್ಯಾ ಸಾಯುಜ್ಯಮುಕ್ತೀ । ಹೇ ಜಾಣೋನಿ ಶ್ರೀಪತಿ ನ ನಾಶೀ ॥೩೧೮॥ ಯಾಂಸೀ ಆಹೇ ಪದಾಭಿಮಾನ । ದ್ವಾರಕೇಮಾಜೀ ನ ಘಡೇ ನಿಧನ । ಹೇ ಜಾಣೋನಿ ಜಗಜ್ಜೀವನ । ಕರವೀ ಪ್ರಯಾಣ ಪ್ರಭಾಸಾಸೀ ॥೩೧೯॥ ಬ್ರಹ್ಮಶಾಪಾಚೇ ಮೂಳ ದೇಖಾ । ಪ್ರಭಾಸಾಸೀ ನಿಘಾಲೀ ತೇ ಯೇರಿಕಾ । ಹೇ ಕಳಲೇಸೀ ಯದುನಾಯಕಾ । ತೇಥ ಸಕಳಿಕಾ ಧಾಡಿಲೇ ॥೩೨೦॥ ಸ್ವಕುಳ ಗ್ರಾಸೋನಿ ಶ್ರೀಪತೀ । ನಿಘೇಲ ನಿಜಧಾಮಾ ಪ್ರತೀ । ಹೇ ಜಾಣೋನಿ ಉದ್ಧವ ಚಿತ್ತೀ । ಬಹುತಾ ರೀತೀ ಕಳವಳಲಾ ॥೩೨೧॥

ಶುಕಾಚಾರ್ಯರು ಹೇಳಿದರು :- ಹೇ ಕುರವಂಶದ ಜ್ಞಾನೀ ಪರೀಕ್ಷಿತ ರಾಜನೇ, ಕೇಳು. ಈ ಪ್ರಕಾರವಾಗಿ ಪ್ರಭಾಸಕ್ಕೆ ಹೋಗಿ ತೀರ್ಥವಿಧಿಗಳನ್ನು ಮಾಡಲು ಶ್ರೀಕೃಷ್ಣನು ಆಜ್ಞೆಯನ್ನು ಕೊಟ್ಟನು ॥೩೦೯॥ ಆಗ ಯಾದವರ ಹಿಂಡಿಗೆ ಹಿಂಡೇ ಒಮ್ಮೆಲೆ ಹೊರಟಿತು. ಅವರು ತಮ್ಮ ರಥಗಳಿಗೆ ಕುದುರೆಗಳನ್ನು ಹೂಡಿದರು. ಮತ್ತು ಒಬ್ಬರ ಮುಂದೆ ಒಬ್ಬರು ಧಾವಿಸಹತ್ತಿದರು. ಇದರಿಂದ ನಾಲ್ಕೂ ಕಡೆಗಳಲ್ಲಿ ಗಡಿಬಿಡಿಯು ಎದ್ದಿತು ॥೩೧೦॥

ಆ ವೀರರೆಲ್ಲರೂ ಬಹು ದೊಡ್ಡ ಗೊಂದಲವನ್ನೇ ಎಬ್ಬಿಸಿದರು. ಅವರ ಘಡಘಡಾಟವು ಆರಂಭವಾಯಿತು. ದ್ವಾರಕೆಯಲ್ಲಿ ತಿರುಗಾಡಲು ಯಾರಿಗೂ ದಾರಿಯು ಸಿಗದಾಯಿತು. ಪ್ರಭಾಸಕ್ಕೆ ಪ್ರವಾಸದ ಈ ರೀತಿಯ ಬಹು ತರಾತುರಿಯು ನಡೆಯಿತು ॥೩೧೧॥ ಹೇ ಪರೀಕ್ಷಿತ ರಾಜನೇ, ಸಂಪೂರ್ಣ ದ್ವಾರಕೆಯು ಗೊಂದಲ ಗದ್ದಲಗಳಿಂದ ತುಂಬಿರುವುದನ್ನು ನೋಡಿ, ಉದ್ಧವನ ಮನದಲ್ಲಿ ಶ್ರೀಕೃಷ್ಣನು ದೇವತೆಗಳಿಗೆ ಹೇಳಿದ್ದು ಜ್ಞಾಪಕಕ್ಕೆ ಬಂದಿತು ॥೩೧೨॥ ಬೇಗನೇ ಕುಲದ ನಾಶಮಾಡಲು ಇಂದಿನಿಂದಲೇ ಮುಹೂರ್ತಗೊಳಿಸುವೆ ಎಂದು ಹೇಳಿದ್ದನು. ಅದೇ ಕಾರ್ಯಕ್ಕೆ ದೇವನು ಇಂದು ನಿಜವಾಗಿಯೂ ಪ್ರಾರಂಭಗೊಳಿಸಿರುವನು ಎಂದು ಆತನಿಗೆ ಕಂಡಿತು ॥೩೧೩॥ ಉದ್ಧವನು ಯಾವಾಗಲೂ ಶ್ರೀಕೃಷ್ಣನಲ್ಲಿಯೇ ಇರುತ್ತಿದ್ದನು ಮತ್ತು ಆತನು ಹೇಳಿದಂತೆಯೇ ನಡೆಯುತ್ತಿದ್ದನು. ಆದ್ದರಿಂದ ದೇವತೆಗಳವರಲ್ಲಿ ಆದ ಸಂವಾದವನ್ನು ಈತನು ಕೇಳಿದ್ದನು ॥೩೧೪॥ ಶ್ರೀಕೃಷ್ಣನು ದ್ವಾರಕೆಯಲ್ಲಿ ಇರುತ್ತಿರಲು ಈ ಪ್ರಕಾರದ ದುಶ್ಚಿನ್ಹೆಗಳಾಗಬೇಕಾದರೆ, ಶ್ರೀಕೃಷ್ಣನ ಇಚ್ಛೆಯೇ ಹೀಗೆ ಇರುವುದು ॥೩೧೫॥ ಯಾದವರಿಗೆಲ್ಲರಿಗೂ ಪ್ರಭಾಸತೀರ್ಥಕ್ಕೆ ಒಯ್ದು ಅಲ್ಲಿ ಒಂದೇ ಕ್ಷಣದಲ್ಲಿ ಈತನು ಅವರ ನಾಶ ಮಾಡುವನು. ಕಾರಣ ಭಗವಂತನು ಸ್ವಧಾಮಕ್ಕೆ ಹೋಗಲು ಉತ್ಸುಕತನಾಗಿರುವನು ॥೩೧೬॥ ಹಾಗಾದರೆ ಈತನು ಇವರಿಗೆಲ್ಲರಿಗೂ ಇಷ್ಟೊಂದು ದೂರ ಏತಕ್ಕೆ ಒಯ್ದನು? ದ್ವಾರಕೆಯಲ್ಲಿಯೇ ಅವರನ್ನು ನಾಶವೇಕೆ ಮಾಡಲಿಲ್ಲ? ಹೀಗೆ ನೀನು ಕೇಳಬಹುದು. ಆದರೆ ಭಗವಂತನು ಸರ್ವಜ್ಞನು ಸೂತ್ರಧಾರನಾಗಿರುವನು ॥೩೧೭॥ ಯಾದವರು ದೇವತೆಗಳ ಅಂಶೀಭೂತರು ಮತ್ತು ದ್ವಾರಕೆಯು ಏಳನೆಯ ಮೋಕ್ಷಪುರಿ ಆಗಿರುವುದು. ಇಲ್ಲಿ ಇವರ ನಾಶವಾದರೆ ಅವರಿಗೆ ಸಾಯುಜ್ಯ ಮುಕ್ತಿಯ ಲಾಭವಾದೀತೆಂಬುದನ್ನು ಲಕ್ಷಕ್ಕೆ ತೆಗೆದುಕೊಂಡು ಶ್ರೀಕೃಷ್ಣನು ಅವರ ನಾಶವನ್ನು ಅಲ್ಲಿ ಮಾಡಲಿಲ್ಲ ॥೩೧೮॥ ಇವರಿಗೆ ತಮ್ಮ ದೇವತನದ ಅತಿಯಾದ ಅಭಿಮಾನವಿರುವುದು. ಆದ್ದರಿಂದ ಅವರ ಮರಣವು ದ್ವಾರಕೆಯಲ್ಲಿ ಯೋಗ್ಯವಲ್ಲವೆಂದು ತಿಳಿದು ಶ್ರೀಕೃಷ್ಣನು ಅವರನ್ನು ಪ್ರಭಾಸ ತೀರ್ಥಕ್ಕೆ ಕಳುಹಿಸಿದನು ॥೩೧೯॥ ಬ್ರಹ್ಮಶಾಪದ ಆ ಯಾವ ಕಬ್ಬಿಣ ಹಾರಿಯನ್ನು ತಿಕ್ಕಿ ಒಗೆದಿದ್ದರಿಂದ ಆ ಪ್ರಭಾಸತೀರ್ಥದಲ್ಲಿ ಅದು ನೀರಹಾವುಸೆಯಾಗಿ ಬೆಳೆದಿತ್ತು. ಇದನ್ನು ಶ್ರೀಕೃಷ್ಣನು ಅರಿತಿದ್ದನು. ಆದ್ದರಿಂದ ಈತನು ಎಲ್ಲರನ್ನು ಇಲ್ಲಿಗೆ ಕಳುಹಿಸಿದನು ॥೩೨೦॥ ಈ ಪ್ರಕಾರವಾಗಿ ತನ್ನ ಕುಲದ ಸಂಹಾರವನ್ನು ಮಾಡಿ ಶ್ರೀಕೃಷ್ಣನು ನಿಜಧಾಮಕ್ಕೆ ಹೊರಡಲು ಸಿದ್ಧನಾಗುವನೆಂಬುದನ್ನು ತನ್ನ ಲಕ್ಷಕ್ಕೆ ಬಂದಿರುವುದರಿಂದ ಉದ್ಧವನು ಮನಸ್ಸಿನಲ್ಲಿ ಅತಿ ಖಿನ್ನನಾದನು ॥೩೨೧॥

ಬಾಷ್ಪೇ ಕಂಠ ನಿರೋಧಲಾ । ನೇತ್ರೀ ಅಶ್ರೂಂಚಾ ಪೂರ ಲೋಟಲಾ । ಸ್ವೇದು ಸರ್ವಾಂಗೀ ಚಾಲಿಲಾ । ಹೃದಯೀ ದಾಟಲಾ ಹುಂದಕಾ ॥೩೨೨॥ ಕೃಷ್ಣ ವಿಯೋಗ ಅರ್ಧಕ್ಷಣ । ತೇಣೇ ನಿಘೋ ಪಾಹೇ ಪ್ರಾಣ । ವಿಸರಲಾ ಕಾರ್ಯ ಆಠವಣ । ಕೃಷ್ಣ ವದನ ನಿರೀಕ್ಷೀ ॥೩೨೩॥ ವಿಯೋಗಪ್ರಾಪ್ತೀಚೇ ಬಾಣ ಪ್ರಬಳ । ಹೃದಯೀ ರುತಲೇ ಅತಿಸಬಳ । ಬುದ್ಧಿ ಧೈರ್ಯೇಸೀ ಹೋತೀ ವಿಕಳ । ಜೀವಿ ತಳಮಳ ಲಾಗಲೀ ॥೩೨೪॥ ಏಕಾಂತ ದೇಖೋನಿ ಶ್ರೀಕೃಷ್ಣಾಸೀ । ಧಾಂವೋನಿ ಲಾಗಲಾ ಪಾಯಾಂಸೀ । ಮಿಠೀ ಘಾಲೋನಿ ಚರಣೇಸೀ । ಉಕಸಾಬುಕಸೀ ಸ್ಫುಂದತ ॥೩೨೫॥

ವಿವಿಕ್ತ ಉಪಸಂಗಮ್ಯ ಜಗತಾಮೀಶ್ವರೇಶ್ವರಮ್ । ಪ್ರಣಮ್ಯ ಶಿರಸಾ ಪಾದೌ ಪ್ರಾಂಜಲಿಸ್ತಮಭಾಷತ ॥೪೧॥

ಅರ್ಥ:- ಸೃಷ್ಟಿಯ ಈಶ್ವರನ ಈಶ್ವರನಾಗಿರುವ ಯಾವ ಈ ಶ್ರೀಕೃಷ್ಣನಲ್ಲಿ ಏಕಾಂತನಿದ್ದಾಗ ಹೋಗಿ ಚರಣಗಳಲ್ಲಿ ಮಸ್ತಕವನ್ನಿಟ್ಟು ಕೈಮುಗಿದು ಹೇಳಿದನು.

ಜೋ ಜಗಾಚಾ ನಿಯಂತಾ । ತ್ಯಾ ಕಾಳಾಚಾ ಕೃಷ್ಣ ಕಳಿತಾ । ತ್ಯಾಚೇ ಚರಣೇ ಠೇವೂನಿ ಮಾಥಾ । ವಿನೀತತಾ ಬೋಲತು ॥೩೨೬॥

ಉದ್ಧವ ಉವಾಚ :

ದೇವದೇವೇಶ ಯೋಗೇಶ ಪುಣ್ಯಶ್ರವಣಕೀರ್ತನ । ಸಂಹೃತ್ಯೈತತ್ಕುಲಂ ನೂನಂ ಲೋಕಂ ಸಂತ್ಯಕ್ಷ್ಯತೇ ಭವಾನ್ ।
ವಿಪ್ರಶಾಪಂ ಸಮರ್ಥೋಽಪಿ ಪ್ರತ್ಯಹನ್ನ ಯದೀಶ್ವರಃ ॥೪೨॥

ಅರ್ಥ:- ಉದ್ಧವನು ಹೇಳಿದನು, ಹೇ ಯೋಗೇಶ್ವರರೇ, ನೀವು ದೇವಾಧಿದೇವರ ಅಧೀಶ್ವರರಾಗಿರುವಿರಿ. ನಿಮ್ಮ ಲೀಲೆಯ ಶ್ರವಣ-ಕೀರ್ತನೆಗಳಿಂದ ಜೀವವು ಪವಿತ್ರವಾಗುವುದು. ನೀವು ಸರ್ವಶಕ್ತಿಮಾನ ಪರಮೇಶ್ವರರಾಗಿರುವಿರಿ. ಬ್ರಾಹ್ಮಣರ ಶಾಪವನ್ನು ಅಳಿಸಬಲ್ಲಿರಿ. ಆದರೆ ನೀವು ಹಾಗೆ ಮಾಡಲಿಲ್ಲ. ಆದ್ದರಿಂದ ನೀವು ಯದುವಂಶವನ್ನು ಸಂಹಾರಗೊಳಿಸಿ ಈ ಲೋಕದ ಪರಿತ್ಯಾಗವನ್ನು ಮಾಡುವವರಿರುವಿರೆಂದು ನಾನು ತಿಳಿದಿರುವೆನು.

ಉದ್ಧವ ಮ್ಹಣೇ ಯಾದವೇಂದ್ರಾ । ದೇವೇಂದ್ರಾಚ್ಯಾ ಆದಿಇಂದ್ರಾ । ಯೋಗಿಯಾಂಚ್ಯಾ ಪ್ರಬೋಧ ಚಂದ್ರಾ । ಅಕಳ ಮುದ್ರಾ ಪೈ ತುಝೀ ॥೩೨೭॥ ದೇವಾಮಾಜೀ ಇಂದ್ರ ಈಶು । ತ್ಯಾ ಇಂದ್ರಾಚಾ ತೂ ಜಗದೀಶು । ಯೋಗಿಯಾಮಾಜೀ ಶ್ರೇಷ್ಠ ಮಹೇಶು । ತ್ಯಾಚಾಹೀ ಈಶು ತೂ ಶ್ರೀಕೃಷ್ಣಾ ॥೩೨೮॥ ತುಝೇ ಜೇ ಶ್ರವಣಕೀರ್ತನ । ತೇ ಪುಣ್ಯಾಸೀ ಕರೀ ಪಾವನ । ಭೇದೀ ಸಂಸಾರಬಂಧನ । ಸಮಾಧಾನ ಕೀರ್ತನೇ ॥೩೨೯॥ ಸಂಹಾರೂನಿ ನಿಜಕುಳಾಸೀ । ಸಾಂಡೋನಿಯಾ ಯಾ ಲೋಕಾಸೀ । ನಿಜಧಾಮಾ ಜಾವೋ ಪಾಹಸೀ । ಹೃಷೀಕೇಶೀ ನಿಶ್ಚಿತ ॥೩೩೦॥

ನಾಹಂ ತವಾಂಘ್ರಿಕಮಲಂ ಕ್ಷಣಾರ್ಧಮಪಿ ಕೇಶವ । ತ್ಯಕ್ತುಂ ಸಮುತ್ಸಹೇ ನಾಥ ಸ್ವಧಾಮ ನಯ ಮಾಮಪಿ ॥೪೩॥

ಅರ್ಥ:- ಹೇ ಕೇಶವಾ, ನಾನು ನಿನ್ನ ಚರಣಕಮಲಗಳನ್ನು ಒಂದು ಕ್ಷಣವು ಬಿಟ್ಟಿರಲು ಸಮರ್ಥನಲ್ಲ. ಹೇ ಸ್ವಾಮಿಯೇ ನಿಜಧಾಮಕ್ಕೆ ನನ್ನನ್ನೂ ಒಯ್ಯಬೇಕು.

ಆಗ ಆತನ ಕಂಠವು ಬಿಗಿಯಿತು. ನೇತ್ರಗಳಿಂದ ಕಣ್ಣೀರಿನ ಧಾರೆಯು ಹರಿಯತೊಡಗಿತು. ಸರ್ವಾಂಗಕ್ಕೂ ಬೆವರು ಹುಟ್ಟಿತು. ಹೃದಯವು ಬಿಕ್ಕಳಿಕೆಗಳಿಂದ ತುಂಬಿಕೊಂಡಿತು ॥೩೨೨॥ ಅರ್ಧಕ್ಷಣ ಶ್ರೀಕೃಷ್ಣನ ವಿಯೋಗವಾದರೆ ಪ್ರಾಣವಿರುವುದೋ ಹೋಗುವುದೋ ಎಂದಂತಾಯಿತು. ಆದ್ದರಿಂದ ಈಗ ಏನು ಮಾಡಬೇಕೆಂಬುದು ಆತನಿಗೆ ಹೊಳೆಯದಾಯಿತು. ಆತನು ಶ್ರೀಕೃಷ್ಣನತ್ತ ಒಂದೇಸವನೆ ನೋಡಲಾರಂಭಿಸಿದನು ॥೩೨೩॥ ಶ್ರೀಕೃಷ್ಣ ವಿಯೋಗದಿಂದ ತೀವ್ರ ಬಾಣವು ಆತನ ಹೃದಯಕ್ಕೆ ಅತಿಶಯ ಜೋರಾಗಿ ಚುಚ್ಚಿಕೊಂಡಿತು. ಆದ್ದರಿಂದ ಆತನ ಬುದ್ಧಿ ಮತ್ತು ಧೈರ್ಯವು ಕುಂಠಿತವಾಗಿ ಜೀವಕ್ಕೆ ತಳಮಳವು ಹತ್ತಿಕೊಂಡಿತು ॥೩೨೪॥ ಅದಕ್ಕಾಗಿ ಶ್ರೀಕೃಷ್ಣನಲ್ಲಿ ಏಕಾಂತವನ್ನು ಸಾಧಿಸಿ ಉದ್ಧವನು ಧಾವಿಸುತ್ತ ಹೋಗಿ ಆತನ ಪಾದಗಳನ್ನು ಹಿಡಿದನು. ಮತ್ತು ಪಾದಗಳಿಗೆ ಆಲಂಗಿಸಿ ಜೋರಾಗಿ ಬಿಕ್ಕಿ ಬಿಕ್ಕಿ ಅಳಹತ್ತಿದನು ॥೩೨೫॥

ಜಗತ್ತಿನ ಯಾವ ನಿಯಂತನು ಕಾಲನಾಗಿರುವನು. ಈತನ ನಿಯಂತಕನಾದ ಶ್ರೀಕೃಷ್ಣನ ಚರಣಗಳಲ್ಲಿ ಮಸ್ತಕವನ್ನಿಟ್ಟು ಈತನು ವಿನಯದಿಂದ ಹೇಳಲಾರಂಭಿಸಿದನು ॥೩೨೬॥

ಉದ್ಧವನು ಹೇಳಿದನು: ಹೇ ಯಾದವಶ್ರೇಷ್ಠನೇ, ಇಂದ್ರನಿಗೂ ದೇವೇಂದ್ರನಾದವನೇ, ಯೋಗಿಗಳ ಜ್ಞಾನಚಂದ್ರನೇ, ನಿನ್ನ ಸ್ವರೂಪವು ಅಲಕ್ಷ್ಯವಾಗಿರುವುದು ॥೩೨೭॥ ದೇವತೆಗಳವರಲ್ಲಿ ಇಂದ್ರನು ಶ್ರೇಷ್ಠನು. ಆದರೆ ನೀನು ಇಂದ್ರನಿಗೂ ಜಗದೀಶನಾಗಿರುವೆ. ಯೋಗಿಗಳವರಲ್ಲಿ ಮಹಾದೇವನು ಶ್ರೇಷ್ಠನು. ಆದರೆ ಹೇ ಶ್ರೀಕೃಷ್ಣನೇ, ನೀನು ಆತನಿಗೂ ಸ್ವಾಮಿಯಾಗಿರುವೆ ॥೩೨೮॥ ನಿನ್ನ ಕೀರ್ತಿಯ ಶ್ರವಣ ಮತ್ತು ಕೀರ್ತನೆಯು ಪುಣ್ಯಕ್ಕೂ ಪಾವನಗೊಳಿಸುವುದಾಗಿದೆ. ಕೀರ್ತನೆಯಿಂದ ಸಂಸಾರಭವಬಂಧನವು ಮುರಿದು ಹೋಗುವುದು. ಮತ್ತು ಸಮಾಧಾನವು ಪ್ರಾಪ್ತವಾಗುವುದು ॥೩೨೯॥ ಹೇ ಶ್ರೀಕೃಷ್ಣನೇ ನೀನೀಗ ನಿನ್ನ ಕುಲದ ಸಂಹಾರ ಮಾಡಿ ಈ ಲೋಕವನ್ನು ಬಿಟ್ಟು ನಿಜಧಾಮಕ್ಕೆ ಹೋಗಲು ಹವಣಿಸುತ್ತಿರುವೆ ॥೩೩೦॥

ಅನ್ಯಥಾ ವಿಪ್ರಶಾಪಾಸೀ । ಕರಾವಯಾ ಸಮರ್ಥ ಹೋಸೀ । ತೇ ನ ಕರೂನಿ ಕುಳ ಸಂಹಾರಿಸೀ । ನಿಜಧಾಮಾಸೀ ಜಾವಯಾ ।೩೩೧॥ ಐಸೇ ಬೋಲತಾ ಆಲೇ ರೂದನ । ನ ಧರತ ಚಾಲಿಲೇ ಸ್ಫುಂದನ । ಆಸುವೀ ಪೂರ್ಣ ಝಾಲೇ ನಯನ । ಧಾಂವೋನಿ ಚರಣ ಧರಿಯೇಲೇ ।೩೩೨॥ ಮಾಥಾ ಠೇವಿಲಾ ಚರಣಾವರೀ । ಸಖಾ ಸ್ವಾಮೀ ತೂ ಶ್ರೀಹರೀ । ಆಮ್ಹಾಸೀ ಸಾಂಡೂನಿಯಾ ದುರೀ । ಕೈಶಾಪರೀ ಜಾಸೀಲ ।೩೩೩॥ ತುಝಿಯಾ ಪ್ರಯಾಣಾಚೀ ವಾರ್ತಾ । ಐಕತಾಂಚಿ ಗಾ ಅಚ್ಯುತಾ । ಉಭಡ ಸಾಂಠವೇನಾ ಚಿತ್ತಾ । ವಿಯೋಗ ಸರ್ವಥಾ ನ ವ್ಹಾವಾ ।೩೩೪॥ ಜಳಾವೇಗಳೀ ಮಾಸೋಳೀ । ತೈಸಾ ಜೀವು ತಳಮಳೀ । ನಿಷ್ಠುರ ಜಾಹಲಾಸೀ ಅಂತಕಾಳೀ । ವನಮಾಳೀ ಮಜಲಾಗೀ ।೩೩೫॥ ತುಜ ಗೇಲಿಯಾಪಾಠೀ । ಮೀ ದೀನವದನ ಯೇ ಸೃಷ್ಟೀ । ಕೋಣಾಸೀ ಸಾಂಗೋ ಗೋಡ ಗೋಷ್ಟೀ । ಶ್ವಾಸು ಪೋಟೀ ನ ಸಮಾಯೇ ।೩೩೬॥ ನಿಘೋನಿ ಗೇಲಿಯಾ ಆತ್ಮ । ಪ್ರೇತರೂಪ ಉರೇ ಪ್ರತಿಮಾ । ತುವಾ ಗೇಲಿಯಾ ನಿಜಧಾಮಾ । ತೈಸೇ ಆಮ್ಹಾ ಹೋಈಲ ।೩೩೭॥ ತೂಚಿ ಆಮ್ಹಾ ಜನಕ ಜನನೀ । ಹಾ ದೃಢ ವಿಶ್ವಾಸ ಆಮುಚೇ ಮನೀ । ಕೇವೀ ಜಾತೋಸೀ ಸಾಂಡೋನಿ । ಮ್ಹಣೋನಿ ಲೋಳಣೇ ಘಾತಲೀ ।೩೩೮॥ ತೂ ನಿಘಾಲಾಸೀ ನಿಜಧಾಮಾ । ಕೋಣಾಸೀ ನಿರವಲೇ ಜೀ ಆಮ್ಹಾ । ಕಾ ರುಸಲಾಸೀ ಪುರುಷೋತ್ತಮಾ । ಬೋಲು ನಿಜಕರ್ಮಾ ಆಮುಚ್ಯಾ ।೩೩೯॥ ಮುಕೇ ಬಾಳ ಸಾಂಡೋನಿ ಕ್ಷಿತೀ । ಮಾತಾ ರಿಘೋ ಪಾಹೇ ಸತೀ । ತೇ ಜೀವೀ ಯೇ ಕಾಕುಳತೀ । ತೈಸೇ ಗತೀ ಉದ್ಧವಾ ।೩೪೦॥ ಗೋಡು ಗಿಳೀ ಆಮಿಷಕವಳು । ಸವೇಂಚಿ ಪಾರಧೀ ಆಂಸುಡೀ ಗಳು । ತ್ಯಾ ಮೀನಾಐಸಾ ವಿಕಳು । ಹೋಯ ಪ್ರೇಮಳು ಉದ್ಧವ ।೩೪೧॥ ತುಜ ಗೇಲಿಯಾವರೀ ದೇವಾ । ಮ್ಯಾ ಕೋಣಾಚೀ ಕರಾವೀ ಸೇವಾ । ಕಾ ರುಸಲಾಸೀ ಗಾ ಯಾದವಾ । ಆಮುಚ್ಯಾ ದೈವಾ ನಿಶ್ಚಿತ ।೩೪೨॥ ಕಾಂಟವಣೀ ಆಡ ಕ್ಷಿತೀ । ಆಂಧಳೇ ಸಾಂಡೂನಿ ಜಾಯೇ ಸಾಂಗಾತೀ । ತೇ ಗ್ಲಾನೀ ಕರೀ ವನಾಂತೀ । ತೈಸಿ ಗತೀ ಉದ್ಧವಾ ।೩೪೩॥ ಧಾಂವಧಾವೋ ಪಾಯಾಪಡೇ । ಧಾಯ ಲೋಕಲೋನಿ ರಡೇ । ಮಜ ಸಾಂಡೋನಿ ತೂಚಿ ಪುಢೇ । ಕೋಣೇಕಡೇ ಜಾತೋಸೀ ।೩೪೪॥ ಮೀ ನವ್ಹೇ ಪಾಯಾವೇಗಳಾ । ಕ್ಷಣ ನೋಸಂಡೀ ಚರಣಕಮಳಾ । ತುಝೀ ಪ್ರಯಾಣ ಜೀ ಗೋಪಾಳಾ । ಅಂತಕಾಳಾ ಮಜ ಕಾಳು ।೩೪೫॥

ಹೇ ದೇವನೇ, ವಿಪ್ರ ಶಾಪವನ್ನು ಸುಳ್ಳು ಮಾಡುವ ಸಾಮರ್ಥ್ಯವು ನಿನ್ನಲ್ಲಿರುವುದು. ಆದರೆ ನೀನು ಹಾಗೆ ಮಾಡದೇ ನಿಜಧಾಮಕ್ಕೆ ಹೋಗುವುದಕ್ಕಾಗಿ ನಿನ್ನ ಕುಲದ ಸಂಹಾರವನ್ನು ಮಾಡುತ್ತಿರುವೆ ।೩೩೧॥ ಹೀಗೆ ಹೇಳುತ್ತಿರಲು ಉದ್ಧವನು ತಡೆಯದೇ ಅಳಲಾರಂಭಿಸಿದನು. ಈತನು ಬಹಳ ಜೋರಾಗಿ ಬಿಕ್ಕಿ ಬಿಕ್ಕಿ ಅಳಹತ್ತಿದನು. ಈ ಅವಸ್ಥೆಯಲ್ಲಿಯೇ ಈತನು ಧಾವಿಸುತ್ತ ಹೋಗಿ ಶ್ರೀಕೃಷ್ಣನ ಪಾದವನ್ನು ಹಿಡಿದನು ।೩೩೨॥ ಶ್ರೀಕೃಷ್ಣನ ಚರಣಗಳಲ್ಲಿ ಮಸ್ತಕವನ್ನಿಟ್ಟು ಉದ್ಧವನು ಹೀಗೆ ಹೇಳಿದನು, ಹೇ ಶ್ರೀಹರಿಯೇ, ನೀನು ನನ್ನ ಸಖನು ಸ್ವಾಮಿಯಾಗಿರುವೆ. ನಮಗೆ ಬಿಟ್ಟು ನೀನು ದೂರ ಹೇಗೆ ಹೋಗುವೆ? ।೩೩೩॥ ಹೇ ಅಚ್ಯುತನೇ ನೀನು ಹೋಗುವಿ ಎಂಬ ಮಾತು ಕಿವಿಗಳಿಗೆ ಬಿದ್ದಾಕ್ಷಣವೇ ಮನದಲ್ಲಿ ದುಃಖದ ಅನೇಕ ಊರ್ಮಿಗಳು ಉತ್ಪನ್ನವಾದವು. ಈ ಊರ್ಮಿಗಳನ್ನು ತಡೆಯುವುದಾಗುವುದಿಲ್ಲ. ಅದಕ್ಕಾಗಿ ನಿನ್ನ ವಿಯೋಗವು ಎಂದೂ ಆಗಬಾರದೆಂದು ಅನಿಸುತ್ತಿದೆ ।೩೩೪॥ ನೀರಿನಿಂದ ಹೊರಗೆ ತೆಗೆದ ಮೀನವು ತಳಮಳಿಸುವಂತೆ ನನ್ನ ಜೀವವು ತಳಮಳಿಸುತ್ತಿದೆ. ಅಂತ್ಯಕಾಲದಲ್ಲಿ ನೀನು ನನಗಾಗಿ ಹೀಗೇಕೇ ನಿಷ್ಠುರನಾದೆ? ।೩೩೫॥ ನೀನು ಹೊರಟು ಹೋದನಂತರ ನಾನು ಈ ಜಗತ್ತಿನಲ್ಲಿ ದೀನವದನನಾಗಬೇಕಾಗುವುದು. ಆಗ ನಾನು ಈ ಜಗತ್ತಿನಲ್ಲಿ ಯಾರನ್ನು ಕುರಿತು ಗುಜಗೋಷ್ಠಿ ಮಾಡಲಿ? ಈಗ ದೇಹದಲ್ಲಿ ಪ್ರಾಣಮಾತ್ರ ಇರಲಾರದು ।೩೩೬॥ ಜೀವವು ಹೊರಟು ಹೋದಮೇಲೇ ಶರೀರವು ಪ್ರೇತರೂಪದಿಂದ ಉಳಿಯುವಂತೆ ನೀನು ನಿಜಧಾಮಕ್ಕೆ ಹೋದರೆ ನಮ್ಮ ಸ್ಥಿತಿ ಹಾಗಾಗುವುದು ।೩೩೭॥ ನೀನು ನಮ್ಮ ಮಾತಾ, ಪಿತಾನಾಗಿರುವೆ. ಹೀಗೆ ನಮ್ಮ ಮನದ ದೃಢವಾದ ಭಾವವಾಗಿರುವುದು. ಹೀಗಿರಲು ನಮ್ಮನ್ನು ಬಿಟ್ಟು ನೀನಾದರೂ ಹೇಗೆ ಹೋಗಬಯಸುವೆ? ಹೀಗೆನ್ನುತ್ತ ಉದ್ಧವನು ಶ್ರೀಕೃಷ್ಣನ ಚರಣಗಳಲ್ಲಿ ಉರುಳಾಡಹತ್ತಿದನು ।೩೩೮॥ ನೀನೇನೊ, ನಿಜಧಾಮಕ್ಕೆ ಹೋಗುವೆ ನಿಜ, ಆದರೆ ನಮ್ಮನ್ನು ಯಾರಲ್ಲಿ ಒಪ್ಪಿಸುವೆ? ಹೇ ಪುರುಷೋತ್ತಮನೇ, ನೀನು ನಮ್ಮ ಮೇಲೆ ಏಕೆ ಮುನಿಸಿರುವೆ? ಇದು ನಮ್ಮ ಕರ್ಮದ ದೋಷವಾಗಿದೆ ।೩೩೯॥ ಇನ್ನೂ ಮಾತು ಬರದ ಕೂಸನ್ನು ನೆಲದ ಮೇಲೆ ಒಗೆದು ಅದರ ತಾಯಿಯು ಸತಿ ಹೋಗಲು ಹೊರಟಾಗ ಆ ಕೂಸು ಕರುಣಾಜನಕವಾಗುವಂತೆ ಉದ್ಧವನ ಸ್ಥಿತಿಯಾಯಿತು ।೩೪೦॥ ಬಲೆಗೆ ಹಾಕಿರುವ ರುಚಿಕರ ಆಮಿಷದ ತುತ್ತು ನುಂಗಬೇಕೆನ್ನುವಷ್ಟರಲ್ಲಿ ಮೀನುಗಾರನು ಎಳೆದೊಗೆಯುವನು. ಆಗ ಅದರ ಪ್ರಾಣವು ಕಸಿವಿಸಿಯಾಗುವಂತೆ ಪ್ರೇಮಳ ಉದ್ಧವನ ಅವಸ್ಥೆಯಾಯಿತು ।೩೪೧॥ ಹೇ ದೇವನೇ, ನೀನು ಹೋದಮೇಲೆ ನಾನು ಯಾರ ಸೇವೆಯನ್ನು ಮಾಡಲಿ? ಹೇ ಯಾದವನೇ ನೀನು ನಮ್ಮ ಮೇಲೆ ಹೀಗೇಕೆ ಮುನಿಸುಕೊಂಡಿರುವೆ? ।೩೪೨॥ ಅಯ್ಯೋ ಇದು ನಮ್ಮ ದುರ್ದೈವವೇ ಸರಿ. ಕುರುಡ ಮನುಷ್ಯನಿಗೆ ಮುಳ್ಳಿನ ಅರಣ್ಯದ ಅಡ್ಡರಸ್ತೆಯಲ್ಲಿ ಅವನ ಸಂಗಾತಿಯು ಆತನನ್ನು ಬಿಟ್ಟುಹೋಗಲು, ಆಗ ಆತನು ವ್ಯಾಕುಲನಾಗಿ ಬೀಳುವನು. ಹಾಗೆ ಉದ್ಧವನ ಸ್ಥಿತಿಯಾಯಿತು ।೩೪೩॥ ಆತನು ಪುನಃಪುನಃ ಕೃಷ್ಣನ ಕಾಲಿಗೆ ಬೀಳಹತ್ತಿದನು. ಉಚ್ಚಸ್ವರದಲ್ಲಿ ಆಕ್ರೋಶದಿಂದ ಅಳಹತ್ತಿದನು. "ನನ್ನನ್ನು ಬಿಟ್ಟು ನೀನು ಎಲ್ಲಿಗೆ ಹೋಗುವೆ"? ।೩೪೪॥ ನಾನು ನಿನ್ನ ಪಾದಗಳಿಂದ ದೂರವಿರಲಾರೆ. ನಿನ್ನ ಚರಣಕಮಲಗಳನ್ನು ಕ್ಷಣಹೊತ್ತು ಸಹ ಬಿಟ್ಟಿರಲಾರೆ ಹೇ ಗೋಪಾಲನೇ, ನಿನ್ನ ಪ್ರಯಾಣವೆಂದರೆ ನನ್ನ ಅಂತಕಾಲವೇ ಆಗಿದೆ ।೩೪೫॥

ತುಝೀ ಥೋರ ಲಾಗಲೀ ಸವೇ । ಮಜ ನ್ಯಾವೇ ಆಪಣಾಸವೇ । ಹೇಚಿ ಪ್ರಾರ್ಥೀತಸೇ ಜೀವೇಭಾವೇ । ಕೃಪಾ ಯಾದವೇ ಮಜ ಕೀಜೇ ।೩೪೬॥ ತೂ ಗರುಡಾರೂಢ ಹೋಸೀ । ತೇವ್ಹಾ ಕೃಪೇನೇ ಬೈಸವೀ ಪಾಠೀಸೀ । ಸಾಂಡೋ ನಕೋ ಹೃಷೀಕೇಶೀ । ನಿಜಧಾಮಾಸೀ ಮಜ ನೇಈ ।೩೪೭॥ ಸಲಗೀ ದಿಧಲೀ ಜನ್ಮವರೀ । ಅಂತೀ ಕಾ ತ್ಯಾಗಿಸೀ ದುರೀ । ಕೃಪಾಳುವಾ ಶ್ರೀಹರೀ । ಕೃಪಾ ಕರೀ ಸರ್ವಥಾ ।೩೪೮॥ ಮ್ಹಣಸೀ ಮೀ ನಿಜಕುಳಾಸೀ ಕಾಳು । ತೋ ತುಜ ಕೇವೀ ಹೋಈನ ಕೃಪಾಳು । ಹೇ ನ ಮ್ಹಣೇ ತೂ ದೀನದಯಾಳೂ । ಅತಿಸ್ನೇಹಾಳು ಭಕ್ತಾಸೀ ।೩೪೯॥ ತುಝೀ ಕೃಪಾ ಭಕ್ತಾವರೀ । ಯಾಲಾಗೀ ಮೀ ಸಲಗೀ ಕರೀ । ಮಾತೇ ಉದ್ಧರೀ ಶ್ರೀಹರೀ । ಝಣೇ ಸಂಸಾರೀ ಸಾಂಡಿಸೀ ।೩೫೦॥

ತವ ವಿಕ್ರೀಡಿತಂ ಕೃಷ್ಣ ನೃಣಾಂ ಪರಮಮಂಗಲಮ್ । ಕರ್ಣಪಿಯೂಷಮಾಸ್ವಾದ್ಯ ತ್ಯಜತ್ಯನ್ಯಸ್ಪೃಹಾಂ ಜಯಃ ।೪೪॥

ಅರ್ಥ:- ಹೇ ಶ್ರೀಕೃಷ್ಣನೇ, ನಿನ್ನ ಕ್ರೀಡೆಗಳು ಮನುಷ್ಯರಿಗೆ ಪರಮ ಮಂಗಲಕರವಾಗಿವೆ. ಜನರು ಕಿವಿಗಳಿಗೆ ಅಮೃತದಂತೆ ಮಧುರವಾಗಿರುವ ಆ ಕ್ರೀಡೆಗಳ ಸ್ವಾದವನ್ನು ಸ್ವೀಕರಿಸಿ ವಿಷಯಾ-ವಿಷಯೀಗಳ ಇಚ್ಛೆಯನ್ನು ಬಿಟ್ಟುಬಿಡುವರು.

ತುಝೀ ಕ್ರೀಡಾ ನಾನಾ ಖೇಳ । ಪ್ರಾಣಿಯಾಂಸೀ ಪರಮ ಮಂಗಳ । ಕರ್ಣದ್ವಾರೇ ವೇಲ್ಹಾಳ । ನಿಜನಿರ್ಮಳ ಸೇವಿತೀ ।೩೫೧॥ ತುಝೀ ಕೀರ್ತಿಶ್ರವಣಾಚೀ ಆವಡೀ । ಲಾಗಲೀ ಕರ್ಣಪಿಯೂಷೀ ಗೋಡೀ । ತೇಥ ಅಮೃತಾಚೀ ಚವೀ ಥೋಡೀ । ಹೋಯ ಅರ್ಧ ಘಡೀ ನ ಲಾಗತಾ ।೩೫೨॥ ಐಶೀ ಐಕತಾ ತುಝೀ ಕೀರ್ತೀ । ಸವಾಸನಾ ಸ್ಪೃಹಾ ನಾಸತೀ । ತೇ ಭಕ್ತ ತುಜ ನ ವಿಸಂಬತೀ । ಹೃದಯೀ ವಾಹತೀ ಸರ್ವದಾ ।೩೫೩॥ ತ್ಯಾ ತುಜ ಪ್ರತ್ಯಕ್ಷ ಶ್ರೀಕೃಷ್ಣಾಸೀ । ಮಜ ನ ಸಾಹವೇ ವಿಯೋಗಾಸೀ । ಸವೇ ಲಾವಿಲೀ ಆಮ್ಹಾಸೀ । ಸೌಜನ್ಯೇಸೀ ಸ್ವಾಮಿತ್ವೇ ।೩೫೪॥

ಶಯ್ಯಾಸನಾಟನಸ್ಥಾನಸ್ನಾನಕ್ರೀಡಾಶನಾದಿಷು । ಕಥಂ ತ್ವಾಂ ಪ್ರಿಯಮಾತ್ಮಾನಂ ವಯಂ ಭಕ್ತಾಸ್ತ್ಯಜೇಮ ಹಿ ।೪೫॥

ಅರ್ಥ:- ಹೇ ಪ್ರಭೋ, ಏಳುವಾಗ, ಕುಳಿತಾಗ, ಮಲಗುವಾಗ, ಎದ್ದು ಹೊರಗೆ ಅಲೆದಾಡುವಾಗ ನಾವು ನಿನ್ನ ಜೊತೆಯಲ್ಲಿಯೇ ಇದ್ದೆವು. ನಿನ್ನ ಜೊತೆಗೂಡಿ ಸ್ನಾನ ಮಾಡಿದೆವು. ಆಟಗಳನ್ನು ಆಡಿದೆವು, ಭೋಜನ ಮಾಡಿದೆವು ಹೀಗೆಂದು, ಎಷ್ಟು ಹೇಳಲಿ? ಪ್ರತಿಯೊಂದು ಪ್ರಸಂಗದಲ್ಲಿಯೂ ನಿನ್ನ ಜೊತೆಯಲ್ಲಿಯೇ ಇದ್ದೆವು. ನೀನು ನಮ್ಮ ಆತ್ಮನಾಗಿರುವೆ. ಇಂಥ ಸ್ಥಿತಿಯಲ್ಲಿ ನಾವು ನಿನ್ನ ಪ್ರೇಮಳ ಭಕ್ತರು ನಿನ್ನನ್ನು ಹೇಗೆ ಬಿಡುವೆವು.

ತೂ ತಂವ ಆಮುಚಾ ಸ್ವಾಮೀ ಹೋಸೀ । ಮಜ ಅರ್ಧಾಸನೀ ಬೈಸವಿಸೀ । ಮಜವೇಗಳೇ ಹೃಷೀಕೇಶೀ । ನಿಜಗುಜಾಸೀ ತುಜ ನಾಹೀ ।೩೫೫॥ ಅಚಾಟ ಕಾರ್ಯ ಪಡೇ ಥೋರ । ತೇವ್ಹಾ ಮಜ ಪುಸಸೀ ವಿಚಾರ । ಮೀ ಸಾಂಗೇ ಜೋ ಜೋ ಮಂತ್ರ । ತೋ ಸಾಚಾರ ಮಾನಿಸೀ ।೩೫೬॥

ನಿನ್ನಲ್ಲಿರುವುದೇ ನನಗೆ ಅತಿಶಯವಾದ ರೂಢಿಯಾಗಿದೆ. ಆದ್ದರಿಂದ ನೀನು ನನ್ನನ್ನು ನಿನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗು. ಜೀವಭಾವದಿಂದ ನಾನು ನಿನ್ನಲ್ಲಿ ಪ್ರಾರ್ಥಿಸುವೆನು ।೩೪೬॥ ಹೇ ಯಾದವನೇ, ನೀನು ನನ್ನಲ್ಲಿ ಇಷ್ಟು ಮಾತ್ರ ಕೃಪೆದೋರು. ನೀನು ಗರುಡನ ಮೇಲೆ ಆರೂಢನಾದಾಗ ನನ್ನನ್ನು ಕೃಪೆಮಾಡಿ ನಿನ್ನ ಬೆನ್ನಿನ ಹಿಂದೆ ಕೂಡ್ರಿಸಿಕೋ. ಹೇ ಹೃಷೀಕೇಶೀಯೇ, ನನ್ನನ್ನು ಇಲ್ಲಿಯೇ ಬಿಟ್ಟು ಹೋಗದಿರು. ನನ್ನನ್ನು ನಿನ್ನ ಜೊತೆಯಲ್ಲಿಯೇ ನಿಜಧಾಮಕ್ಕೆ ಕರೆದುಕೊಂಡು ಹೋಗು ।೩೪೭॥ ಇಡೀ ಆಯುಷ್ಯ ತುಂಬ ಸ್ನೇಹವನ್ನು ಇಟ್ಟು ಕೊನೆಯಲ್ಲಿ ನನ್ನನ್ನು ದೂರವೇಕೆ ಒಗೆಯುವೆ? ಹೇ ದಯಾಮೂರ್ತಿ ಕೇಶವನೇ, ಶ್ರೀಹರಿಯೇ, ನನ್ನಲ್ಲಿ ಕೃಪೆದೋರು ।೩೪೮॥ ನಾನು ನನ್ನ ಕುಲದ ನಾಶ ಮಾಡಲು ಹೊರಟಿರಲು ನಿನ್ನ ಮೇಲೆ ನಾನು ಹೇಗೆ ದಯೆ ತೋರಿಸಲಿ? ಎಂದು ಹೇಳಬಹುದು. ಆದರೆ ನೀನು ದೀನದಯಾಳನು, ನಿನ್ನ ಭಕ್ತರಲ್ಲಿ ಅತ್ಯಂತ ಪ್ರೇಮ ಮಾಡುವವನಾಗಿರುವೆ ।೩೪೯॥ ನೀನು ಭಕ್ತರಲ್ಲಿ ಯಾವಾಗಲೂ ಕೃಪಾ ಮಾಡುವೆ. ಆದ್ದರಿಂದಲೇ ನಾನು ನಿನ್ನಲ್ಲಿ ಸಲಿಗೆ ಮಾಡುತ್ತಿರುವೆನು. ಹೇ ಶ್ರೀಹರಿಯೇ, ನನ್ನನ್ನು ಉದ್ಧರಿಸು. ನನಗೆ ಈ ಸಂಸಾರದಲ್ಲಿ ಪುನಃ ಹಾಕದಿರು ।೩೫೦॥

ನಿನ್ನ ಕ್ರೀಡೆಗಳು, ಅನೇಕ ಪ್ರಕಾರಗಳ ಆಟಗಳು ಮನುಷ್ಯನಿಗೆ ಪರಮ ಮಂಗಲವನ್ನುಂಟು ಮಾಡುವುವು. ಅವರು ನಿನ್ನ ಪವಿತ್ರ ಕಥೆಗಳನ್ನು ಕೌತುಕದಿಂದ ಕೇಳುವರು ।೩೫೧॥ ನಿನ್ನ ಕೀರ್ತಿಯ ಶ್ರವಣಾಮೃತದ ಮಧುರತ್ವವು ಕರ್ಣಗಳಿಂದ ಅರ್ಧಕ್ಷಣ ಸೇವಿಸಲು ಅದು ಎಷ್ಟೊಂದು ರುಚಿ ಹತ್ತುವುದೆಂದರೆ ಅದರ ಮುಂದೆ ಅಮೃತವೂ ಸಪ್ಪಾಗುವುದು ।೩೫೨॥ ನಿನ್ನ ಪವಿತ್ರವಾದ ಕೀರ್ತಿಗಳನ್ನು ಶ್ರವಣ ಮಾಡಲು ವಾಸನೆ ಸಹ ಸರ್ವ ಕಾಮನೆಗಳು ನಷ್ಟವಾಗುವುವು. ಈ ಭಕ್ತರು ನಿನ್ನನ್ನು ಎಂದೂ ಮರೆಯಲಾರರು. ಯಾವಾಗಲೂ ನಿನ್ನನ್ನು ಹೃದಯದಲ್ಲಿ ಧರಿಸಿರುವರು ।೩೫೩॥ ಹೀಗಿರುವ ನಿನ್ನ ಪ್ರತ್ಯಕ್ಷ ಶ್ರೀಕೃಷ್ಣನ ವಿಯೋಗವು ನನಗೆ ಎಂದೂ ಸಹಿಸುವುದಾಗುವುದಿಲ್ಲ. ನೀನು ನಮ್ಮ ಸ್ವಾಮಿಯಾಗಿ ನಿನ್ನ ಸೌಜನ್ಯದಿಂದ ನೀನು ನಮಗೆ ರೂಢಿಸಿಕೊಂಡಿರುವೆ ।೩೫೪॥

ನಿಜವಾಗಿಯೂ ನೀನು ನಮ್ಮ ಯಜಮಾನನಾಗಿರುವೆ ಹೀಗಿರುವ ನೀನು ನನ್ನನ್ನು ನಿನ್ನ ಅರ್ಧಾಸನದಲ್ಲಿ ಕುಳ್ಳಿರಿಸಿದೆ. ಹೇ ಶ್ರೀಕೃಷ್ಣನೇ, ಯಾವುದಾದರೂ ಒಂದು ರಹಸ್ಯದ ಮಾತಿದ್ದರೆ ಅದನ್ನು ಹೇಳಲು ನನ್ನನ್ನು ಬಿಟ್ಟು ನಿನಗೆ ಇನ್ನೂ ಯಾರೂ ಇರಲಿಲ್ಲ ।೩೫೫॥ ಯಾವುದಾದರೂ ಒಂದು ಮಹತ್ಕಾರ್ಯವನ್ನು ಮಾಡುವ ಪ್ರಸಂಗ ಒದಗಲು, ಆಗ ನೀನು ನಮ್ಮ ವಿಚಾರಗಳನ್ನು ಆಲಿಸುತ್ತಿದ್ದೆ ಮತ್ತು ಆಗ ನಾವು ಕೊಟ್ಟ ಅಭಿಪ್ರಾಯವನ್ನು ಮಾನ್ಯ ಮಾಡುತ್ತಿದ್ದೆ ।೩೫೬॥

ಜೇವ್ಹಾ ಭೋಜನ ಕರೂ ನಿಘಸೀ । ಮಾಝೇ ತಾಟ ತಾಟೇಸೀ ಮಾಂಡಿಸೀ । ಜೇವಿತಾ ನಾನಾ ವಿನೋದ ಕರಿಸೀ । ನಿಜ ಶೇಷ ದೇಸೀ ಮಜಲಾಗೀ ॥೩೫೭॥ ಬ್ರಹ್ಮಾದಿಕಾ ನ ಲಭೇ ಪಂಕ್ತೀ । ತೋ ಮೀ ಜೇವೀ ತುಝಿಯಾ ಪಾಂತೀ । ಶೇಷವಿಭಾಗೀ ಜೇ ಶ್ರೀಪತೀ । ಕೇಲೇ ನಿಶ್ಚಿತೀ ತ್ವಾಂ ಮಜ ॥೩೫೮॥ ಮಾತೇ ಧರೋನಿಯಾ ಹಾತೀ । ಏಕಲಾ ಬೈಸಸೀ ಏಕಾಂತೀ । ಬ್ರಹ್ಮಾದಿಕಾಂಚೀ ವಿನಂತೀ । ತುಜಪ್ರತೀ ಮೀ ಸಾಂಗೇ ॥೩೫೯॥ ಕಳೋ ನೇದಿತಾ ಕೋಣಾಸೀ । ತುವಾ ಕೇಲೇ ರಾಸಕ್ರೀಡೇಸೀ । ತೇ ಗುಹ್ಯ ಸಾಂಗೋನಿ ಮಜಪಾಶೀ । ಗೋಕುಳಾಸೀ ಧಾಡಿಲೇ ॥೩೬೦॥ ಸೇಜೇಚೇ ಉಠವೂನಿ ಭೀಮಕೀಸೀ । ಮಜ ಆಪಣಾಜವಳ ನಿಜವಿಶೀ । ತೇ ನಿದ್ರೇಚಿಯಾ ಸುಖಾಸೀ । ಸಮಾಧಿ ಕಾಯಸೀ ಬಾಪುಡೀ ॥೩೬೧॥ ಐಶಿಯಾ ತುಝೇ ಸಂಗತೀ । ರಾತ್ರೀ ಭೋಗಿಲ್ಯಾ ನೇಣೋ ಕಿತೀ । ತ್ಯಾ ಮಜ ಸಾಂಡೋನಿ ಶ್ರೀಪತೀ । ಜಾಣೇ ನಿಶ್ಚಿತೀ ಕರಿ ತೋಸೀ ॥೩೬೨॥ ವೇಳು ನ ಗಮೇ ಚಕ್ರಪಾಣೀ । ಮಜ ಬೋಲವೂ ಧಾಡಿಸೀ ರುಕ್ಮಿಣೀ । ಸಾರಿಪಾಟು ಆಮ್ಹೀ – ದೋಘೀ ಜಣೇ । ಏಕಾಸನೀ ಖೇಳಿಜೇ ॥೩೬೩॥ ಜೇವ್ಹಾ ವ್ಯಾಹಾಳಿಯೇ ನಿಘಸೀ । ಮತ ಆಪುಲೇ ರಥೀ ಬೈಸವಿಶೀ । ದೋಘಾ ಗಮನ ಏಕೇ ರಥೇಸೀ । ಆಜಿ ಉಬಗಲಾಸೀ ಸಾಂಘಾತಾ ॥೩೬೪॥ ಜಳಕ್ರೀಡಾ ಕರಿತಾ ಜಳೀ । ಕರಿತಾ ಗೋಪಿಕಾಂಸೀ ರಾಂಡೋಳೀ । ತೇಂವ್ಹಾ ಹೀ ಮೀ ತುಜಜವಳೀ । ಸ್ನಾನಕಾಳೀ ಸರ್ವದಾ ॥೩೬೫॥ ಐಸೇ ಸಾಂಗೋ ಮೀ ಕಿತೀ । ತುಜವೇಗಳಾ ಶ್ರೀಪತೀ । ನಾಹೀ ಝಾಲೋ ಅಹೋರಾತೀ । ಕೇವೀ ಮ್ಯಾ ಅಂತೀ ಸಾಂಡಾವೇ ॥೩೬೬॥ ತೂ ಸ್ವಾಮೀ ಸಖಾ ಸರ್ವಾತ್ಮಾ । ಜೇವಾಚಾ ಜೇವ ಪುರುಷೋತ್ತಮಾ । ತುಝಾ ವಿಯೋಗು ಮೇಘಶ್ಯಾಮಾ । ಕೇವೀ ಆಮ್ಹಾ ಸಾಹವೇಲ ॥೩೬೭॥ ಆಮುಚಾ ಜೇವು ಆಣ ಪ್ರಾಣ । ತೇ ತುಝೇ ಗಾ ಶ್ರೀಚರಣ । ತೇ ವಿಯೋಗದುಃಖ ಸಾಹಾವಯಾ ಜಾಣ । ಸಮರ್ಥಪಣ ಮಜ ನಾಹೀ ॥೩೬೮॥ ಆಮುಚಾ ಹಾಚಿ ಲಾಭು ಅವ್ಯಂಗ । ತೇ ತುಝಿಯಾ ಪಾಯಾಂಚಾ ಸಂಯೋಗ । ತ್ಯಾಂಚಾ ನ ಸಾಹವೇ ವಿಯೋಗ । ದೇಹಭಂಗ ಝಾಲಿಯಾ ॥೩೬೯॥ ದೇಹ ರಾಹೇಲ ತರೀ ರಾಹೋ । ಅಥವಾ ಜಾಈಲ ತರೀ ಜಾವೋ । ತುಝ್ಯಾ ಚರಣಾಂಚಾ ವಿಯೋಗ ಪಹಾ ಹೋ । ನ ಶಕೇ ಸಾಹೋ ಸರ್ವಥಾ ॥೩೭೦॥ ಘೋರ ದುಸ್ತರ ತುಝೀ ಮಾಯಾ । ಬ್ರಹ್ಮಾದಿಕಾ ನ ಯೇ ಆಯಾ । ಮಜ ಸುಗಮ ಜಾಲೀ ತರಾವಯಾ । ಯಾದವರಾಯಾ ನಿಜಶೇಷೀ ॥೩೭೧॥

ಊಟಕ್ಕೆ ಕುಳಿತಾಗ್ಗೆ ನಿನ್ನ ಮಗ್ಗಲಿಗೆ ನನ್ನ ಎಲೆ ಹಾಕಿಸಿ ಅನೇಕ ಪ್ರಕಾರದ ವಿನೋದಗಳನ್ನು ಮಾಡುತ್ತಿದ್ದೆ. ನಿನ್ನ ತಾಟನಲ್ಲಿಯ ಶೇಷವನ್ನು ನನಗೆ ಕೊಡುತ್ತಿದ್ದೆ ॥೩೫೭॥ ಬ್ರಹ್ಮಾದಿಕ ದೇವತೆಗಳಿಗೆ ನಿನ್ನ ಪಂಕ್ತಿಲಾಭವಾಗುವುದು ದುರ್ಲಭವು. ಆದರೆ ನೀನು ನನಗೆ ನಿನ್ನ ಪಂಕ್ತಿಯಲ್ಲಿ ಕುಳ್ಳಿರಿಸಿ ನಿನ್ನ ಎಲೆಯಲ್ಲಿನ ಶೇಷದ ಪಾಲುಗಾರನನ್ನಾಗಿ ಮಾಡಿದೆ ॥೩೫೮॥ ನನ್ನ ಕೈಹಿಡಿದು ನನ್ನನ್ನು ಕರೆದುಕೊಂಡು ನೀನು ಏಕಾಂತದಲ್ಲಿ ಕುಳಿತುಕೊಳ್ಳುತ್ತಿದ್ದೆ ಮತ್ತು ಬ್ರಹ್ಮದೇವನ ವಿನಂತಿಯನ್ನು ನಿನ್ನಲ್ಲಿ ಹೇಳಬೇಕಾದಲ್ಲಿ ನಾನೇ ನಿನಗೆ ಹೇಳುತ್ತಿದ್ದೆನು ॥೩೫೯॥ ಯಾರಿಗೂ ತಿಳಿಯದಂತೆ ನೀನು ರಾಸಕ್ರೀಡೆಯನ್ನು ನಡೆಯಿಸಿದೆ. ಪುನಃ ಗುಪ್ತ ಮಾತುಗಳನ್ನು ಹೇಳಿ ನನಗೆ ಗೋಕುಲದಲ್ಲಿ ಕಳಿಸಿದೆ ॥೩೬೦॥ ಪಲಂಗದಲ್ಲಿ ಮಲಗಿರುವ ರುಕ್ಮಿಣೀಯನ್ನು ಎಬ್ಬಿಸಿ ನೀನು ನನ್ನನ್ನು ನಿನ್ನ ಬಳಿಯಲ್ಲಿ ಮಲಗಿಸುತ್ತಿದ್ದೆ. ಆ ನಿದ್ರೆಯ ಸುಖದ ಮುಂದೆ ಪಾಪ! ಸಮಾಧಿ ಸುಖದ ಯಾವ ಕಥೆ? ॥೩೬೧॥ ಈ ಪ್ರಕಾರದ ನಿನ್ನ ಸಹವಾಸದ ಅದೆಷ್ಟೋ ರಾತ್ರಿಗಳನ್ನು ಕಳೆದೆನೋ ಅದರ ಗಣತವೇ ಮಾಡಲು ಬಾರದು. ಹೇ ಶ್ರೀಕೃಷ್ಣನೇ, ನನ್ನನ್ನು ಬಿಟ್ಟು ಹೋಗುವ ನಿಶ್ಚಯವನ್ನು ನೀನು ಹೇಗೆ ಮಾಡುವೆ? ॥೩೬೨॥ ಹೇ ಚಕ್ರಪಾಣಿಯೇ, ನಿನಗೆ ವೇಳೆಯು ಹೋಗದಿದ್ದರೆ, ನನ್ನನ್ನು ಕರೆಯಲು ರುಕ್ಮಿಣೀಗೆ ನನ್ನಲ್ಲಿ ಕಳಿಸುತ್ತಿದ್ದೆ. ಮತ್ತು ನಾವಿಬ್ಬರೂ ಒಂದೇ ಆಸನದಲ್ಲಿ ಕುಳಿತುಕೊಂಡು ಸಾರೀಪಾಟವನ್ನು ಆಡುತ್ತಿದ್ದೆವು ॥೩೬೩॥ ಹೊರಗೆ ಅಲೆದಾಡಲು ಹೊರಟೆ ಎಂದರೆ ನೀನು ನನ್ನನ್ನು ನಿನ್ನ ರಥದಲ್ಲಿ ಕುಳ್ಳಿರಿಸಿಕೊಳ್ಳುತ್ತಿದ್ದೆ. ಒಂದೇ ರಥದಲ್ಲಿ ಇಬ್ಬರೂ ಜೊತೆಗೂಡಿ ಅಲೆದಾಡಿದೆವು. ಆದರೆ ಇಂದು ನನ್ನ ಸಂಗತಿಯು ಬೇಸರವಾಯಿತೆ? ॥೩೬೪॥ ಜಲಕ್ರೀಡೆಯನ್ನು ಮಾಡುವಾಗ, ಗೋಪಿಯವರಲ್ಲಿ ವಿನೋದಗಳನ್ನು ಮಾಡುವಾಗ, ಸ್ನಾನದ ವೇಳೆಯಲ್ಲಿ ಹೀಗೆ ಸರ್ವಕಾಲದಲ್ಲಿಯೂ ನಾನು ನಿನ್ನ ಜೊತೆಯಲ್ಲಿಯೇ ಇರುತ್ತಿದ್ದೆ ॥೩೬೫॥ ಹೇ ಶ್ರೀಪತಿಯೇ, ಹೀಗೆ ಎಷ್ಟೊಂದು ಮಾತುಗಳನ್ನು ಹೇಳಲಿ? ಹಗಲು ರಾತ್ರಿ ನಾನು ನಿನ್ನಿಂದ ದೂರನಾಗಿಲ್ಲ. ಹೀಗಿರಲು ಅಂತ್ಯಕಾಲದಲ್ಲಿ ನಿನ್ನನ್ನು ಹೇಗೆ ಬಿಡಬೇಕು? ॥೩೬೬॥ ನೀನು ನಮ್ಮ ಯಜಮಾನನು. ನಮ್ಮ ಸಖನು. ಸರ್ವ ಜೀವದ ಜೀವನು. ನಮ್ಮ ಸರ್ವಪ್ರಾಣವೂ ನೀನೇ ಇರುವೆ. ಹೇ ಪುರುಷೋತ್ತಮನೇ, ಹೇ ಮೇಘಶ್ಯಾಮನೇ, ನಿನ್ನ ವಿಯೋಗವು ನಮಗೆ ಸಹಿಸುವುದು ಹೇಗಾಗುವುದು? ॥೩೬೭॥ ನಿಮ್ಮ ಚರಣಗಳು ನನ್ನ ಜೀವ ಪ್ರಾಣವಾಗಿರುವುವು. ಅವುಗಳ ವಿಯೋಗ ದುಃಖವನ್ನು ಸಹಿಸುವ ಸಾಮರ್ಥ್ಯವು ನನ್ನಲ್ಲಿರುವುದಿಲ್ಲ ॥೩೬೮॥ ನಿನ್ನ ಚರಣಗಳ ಪ್ರಾಪ್ತಿಯೇ ನಮ್ಮ ಅಖಂಡವಾದ ಲಾಭವಾಗಿರುವುದು. ದೇಹಪಾತವಾದರೂ ಸಹ ಅದರ ವಿಯೋಗವು ನಮಗೆ ಸಹಿಸುವುದಾಗುವುದಿಲ್ಲ ॥೩೬೯॥ ಈ ಶರೀರವು ಇದ್ದರೆ ಇರಲಿ, ಇಲ್ಲವೇ ಹೋಗಲಿ, ನಮಗೆ ಅದರ ಯಾವ ಪರಿವೆ ಇಲ್ಲ. ಆದರೆ ನಿನ್ನ ಚರಣಗಳ ವಿಯೋಗ ಮಾತ್ರ ಸರ್ವಥಾ ಸಹಿಸುವುದಾಗುವುದಿಲ್ಲ ॥೩೭೦॥ ನಿನ್ನ ಮಾಯೆಯು ಅತ್ಯಂತ ದುಸ್ತರವಾಗಿರುವುದು. ಬ್ರಹ್ಮಾದಿಕರಿಗೂ ಅದನ್ನು ಅಂಕಿತಗೊಳಿಸುವುದು ಆಗುವುದಿಲ್ಲ. ಆದರೆ ಹೇ ಶ್ರೀಕೃಷ್ಣನೇ, ಹೇ ಯಾದವ ಶ್ರೇಷ್ಠನೇ, ಈ ಮಾಯೆಯನ್ನು ನಿನ್ನ ಶೇಷ ಪ್ರಸಾದದಿಂದ ಪಾರಾಗಲು ಸುಲಭ ಸಾಧ್ಯವಾಗಿದೆ ॥೩೭೧॥

ತ್ವಯೋಪಭುಕ್ತಸ್ರಗ್ಗಂಧವಾಸೋಽಲಂಕಾರಚರ್ಚಿತಾಃ । ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮ ಹಿ ।೪೬॥

ಅರ್ಥ:- ನಾವು ನೀವು ಧರಿಸಿದ ಮಾಲೆಯನ್ನು ಹಾಕಿಕೊಂಡೆವು, ನೀವು ಹಚ್ಚಿಕೊಂಡ ಚಂದನವನ್ನು ಹಚ್ಚಿಕೊಂಡೆವು, ನೀವು ಹಾಕಿದ ಬಟ್ಟೆಗಳನ್ನು ಪರಿಧಾನ ಮಾಡಿದೆವು, ನೀವು ಧರಿಸಿದ ಅಲಂಕಾರಗಳನ್ನು ನಾವು ಹಾಕಿಕೊಂಡೆವು. ನಿಮ್ಮ ಎಂಜಲ ಭೋಜನ ಮಾಡಿದೆವು. ಇದರಿಂದ ನಿಮ್ಮ ಮಾಯೆಯಲ್ಲಿ ಅವಶ್ಯವಾಗಿ ವಿಜಯವನ್ನು ಸಾಧಿಸಿದ್ದೇವೆ. ಹೇ ಪ್ರಭೂ, ನಿಜವಾಗಿಯೂ ನಮಗೆ ಮಾಯೆಯ ಭಯವಿಲ್ಲ. ಕೇವಲ ತಮ್ಮ ವಿಯೋಗದ ಭಯವಿದೆ.

ತುರ್ಝೆ ಗಂಧಶೇಷ ಆಣಿ ಮಾಳಾ । ಧರಿತಾ ಕಪಾಳೀ ಆಣಿ ಗಳಾ । ಮೀ ನಾಗವೇ ಕಳಿಕಾಳಾ । ದಾಸ ಗೋಪಾಳಾ ಪೈ ತುಝಾ ।೩೭೨॥ ತುರ್ಝೆ ಕಾಂಸೇಚಾ ಪಿಂವಳಾ । ಯೇಊನಿ ಮಾರ್ಝೆ ಕಾಂಸೇ ಲಾಗಲಾ । ತೈಚಿ ಕಾಮು ಮ್ಯಾ ಜಿಂತಿಲಾ । ದೃಢ ಜಾಹಲಾ ನಿಜಕಾಂಸೇ ।೩೭೩॥ ತುವಾ ಆಪುಲೇ ಹೃದಯೀಚೇ ಪದಕ । ಜೆವ್ಹಾ ಮಹ ದಿಧಲೇ ದೇಖ । ತೇವ್ಹಾಂಚಿ ಮಾಯಾ ಜಾಹಲೀ ವಿಮುಖ । ದಾಸಾ ಸನ್ಮುಖ ನ ರಾಹೇ ।೩೭೪॥ ಮಾಯೇಸೀ ಅಸತೇ ಮುಖ । ತರೀ ಹೋ ಲಾಹತೀ ಸನ್ಮುಖ । ತೇ ಮಿಥ್ಯಾ ಗಾ ನಿಃಶೇಖ । ವೃಥಾ ಲೋಕ ಭ್ರಮಲೇ ಪೈ ।೩೭೫॥ ತುರ್ಝೆ ಉಚ್ಛಿಷ್ಟ ಸೇವಿತಾ ದೇಖ । ಲಾಜೋನಿ ಜಾಯೇ ಸಮಾಧಿಸುಖ । ನಿವಡಾರಲಾ ನಿಜಾತ್ಮತೋಖ । ಶೇಷೇ ಪ್ರತ್ಯಕ್ಷ ನಿಜಲಾಭು ।೩೭೬॥ ಐಸಾ ತುರ್ಝೆನಿ ದಾಸ್ಯೇ ಸರತಾ ಜಾಹಲಾ । ತುರ್ಝೆನಿ ನಿಜಶೇಷೇ ಚರ್ಚಿಲಾ । ತುಝೀ ಮಾಯಾ ಮೀ ತರಲಾ । ಜೆಯಾ ಧಾಕು ಲಾವಿಲಾ ಯೋಗಿಯಾ ।೩೭೭॥

ವಾತಾಶನಾ ಯೇ ಋಷಯಃ ಶ್ರವಣಾ ಊರ್ಧ್ವಮಂಥಿನಃ ।
ಬ್ರಹ್ಮಾಖ್ಯಂ ಧಾಮ ತ ಯಾಂತಿ, ಶಾಂತಾಃ ಸಂನ್ಯಾಸಿನೋಽಮಲಾಃ ।೪೭॥

ಅರ್ಥ:- ದಿಗಂಬರ ಮುನಿಗಳು ಊರ್ಧ್ವರೇತಸರಾಗಿ ಶಾಂತರೂ, ಸನ್ಯಾಸದೀಕ್ಷಾಬದ್ಧರೂ ಆಗಿರುತ್ತಾರೆ. ಅವರು ಅಧ್ಯಾತ್ಮ ಸಾಧನೆಯಲ್ಲಿ ಗಂಭೀರವಾಗಿ ತೊಡಗಿದ್ದು ಬ್ರಹ್ಮನ್ ಎಂಬ ಆಧ್ಯಾತ್ಮ ಧಾಮವನ್ನು ಪಡೆಯುವರು.

ಮಿಥ್ಯಾ ಮಾಯೇಚ್ಯಾ ಧಾಕಾಸಾರೀ । ಯೋಗಿ ರಿವಾಲೇ ಕಪಾಟೀ । ಜರೀ ಸಾಂಡಿಲೀ ಲಂಗೋಟೀ । ತರೀ ಪೋಟೀ ಧಾಕತೀ ।೩೭೮॥ ಆಸನಸ್ಥ ಹೋಊನಿ ಜಾಣಾ । ಆಕಳಾವಯಾ ಪ್ರಾಣಾಪಾನಾ । ಮೂಳಬಂಧೇ ಆಕೋಚನಾ । ದೃಢ ಧಾರಣಾ ತೇ ಕರಿತೀ ।೩೭೯॥ ಅಂಗುಲೇ ಬಾರಾ ಬಾರಾ । ಜಿಣಾವಯಾ ಜೀ ವಾರಾ । ರಾತ್ರಂದಿವಸ ಶರೀರಾ । ಅಭ್ಯಾಸದ್ವಾರಾ ಆಟಿತೀ ।೩೮೦॥ ಕ್ಷುಧೇನೇ ಖಾದಲೀ ಭೂಕ । ತೃಷಾ ತಹಾನ ಪ್ಯಾಲೀ ದೇಖ । ಜಿಣೋನಿಯಾ ಸುಖಃದುಃಖ । ಅತಿನೇಟಕ ನಿರ್ಧಾರೇ ।೩೮೧॥ ಸುಬುದ್ಧಿ ಧರೂನಿಯಾ ಹಾತೀ । ಆಕಳೂನಿ ಇಂದ್ರಿಯವೃತ್ತೀ । ವೈರಾಗ್ಯೇ ಕರೀತ ಖ್ಯಾತೀ । ಊರ್ಧ್ವಗತೀ ನಿಘಾಲೇ ।೩೮೨॥

ಹೇ ಗೋಪಾಲನೇ, ನಾನು ನಿನ್ನ ದಾಸನಾಗಿರುವುದರಿಂದ ನಿನ್ನ ಗಂಧದಲ್ಲಿ ಉಳಿದ ಗಂಧವನ್ನು ಹಣೆಗೆ ಹಚ್ಚಿಕೊಳ್ಳುವುದರಿಂದ ಹಾಗೂ ನಿನ್ನ ಕೊರಳಿನ ಮಾಲೆಯನ್ನು ನಾನು ಹಾಕಿಕೊಳ್ಳುವುದರಿಂದ ನಾನು ಕಲಿಕಾಲನ ಕೈಗೂ ಸಹ ಹತ್ತಲಾರೆನು ।೩೭೨॥ ನೀನು ತೊಟ್ಟಿರುವ ಪೀತಾಂಬರವು ನನ್ನ ಶರೀರಕ್ಕೆ ಹತ್ತುತ್ತಲೇ ನಾನು ಕಾಮನನ್ನು ಗೆಲ್ಲಿದೆ ಮತ್ತು ಜೀತೇಂದ್ರಿಯನಾದೆ ।೩೭೩॥ ನೀನು ಎಂದು ನಿನ್ನ ಹೃದಯ ಮೇಲಿನ ಪದಕವನ್ನು ನನಗೆ ಕೊಟ್ಟೆ, ಅಂದಿನಿಂದಲೂ ಮಾಯೆಯು ವಿನ್ಮುಖವಾಗಿ ನನ್ನೆದುರಿನಲ್ಲಿ ನಿಂತಿರುವುದಿಲ್ಲ ।೩೭೪॥ ನಿಜವಾಗಿ ನೋಡಿದರೆ ಮಾಯೆಗೆ ಮುಖವಿದ್ದರೆ ಆಕೆಯು ಮುಂದೆ ಬಂದು ನಿಲ್ಲುತ್ತಿದ್ದಳು. ಆದರೆ ಆಕೆಯು ಮೂಲತಃ ಅಸತ್ಯಳಾಗಿರುವಳು. ಜನರು ಆಕೆಯನ್ನು ವ್ಯರ್ಥವಾಗಿ ಭ್ರಮಿಸಿರುವರು ।೩೭೫॥ ನಿನ್ನ ಉಚ್ಛಿಷ್ಟವನ್ನು ಸೇವನೆ ಮಾಡಲು ಅದರೆದುರಿಗೆ ಸಮಾಧಿಸುಖವು ನಾಚಿಕೊಳ್ಳುವುದು. ಹಾಗೂ ಆತ್ಮಾನಂದವು ಪರಿಪಕ್ವವಾಗುವುದು. ನಿನ್ನ ಶೇಷಾನ್ನದ ಗ್ರಹಣದಿಂದ ಇಷ್ಟೊಂದು ಪ್ರತ್ಯಕ್ಷ ಲಾಭವಾಗುವುದು ।೩೭೬॥ ಈ ಪ್ರಕಾರವಾಗಿ ನಾನು ದಾಸ್ಯತ್ವವನ್ನು ಸಾಧಿಸಿ ದೊಡ್ಡಸ್ಥನವನ್ನು ಪಾಪ್ತ ಮಾಡಿಕೊಂಡೆನು. ನಿನ್ನ ಎಂಜಲವನ್ನು ಸೇವಿಸಿ ನಿಜಯೋಗಿಗಳಿಗೂ ಬೆಚ್ಚಿ ಬೀಳುವಂತೆ ಮಾಡಿರುವೆನು. ನಿನ್ನ ಮಾಯೆಯನ್ನು ನಾನು ಗೆದ್ದಿರುವೆನು ।೩೭೭॥

ಮಿಥ್ಯೆಯಾದ ಮಾಯೆಯ ಭಯದಿಂದ ಯೋಗಿಗಳು ಗುಹೆಯಲ್ಲಿ ಹೋದರು. ಲಂಗೋಟಿಯನ್ನು ತೆಗೆದೊಗೆದರೂ ಮನದಲ್ಲಿ ಕಸಿವಿಸಿಗೊಳ್ಳುವರು ।೩೭೮॥ ಇವರು ಆಸನದಲ್ಲಿ ಕುಳಿತು ಪ್ರಾಣಾಯಾಮಗಳನ್ನು ಮಾಡಿ ವಜ್ರಾಸನದಿಂದ ಶರೀರ ಗಾತ್ರವನ್ನು ಅಟ್ಟಿಸಿಬಿಡುವರು. ಹೀಗೆ ದೃಢವಾದ ಧಾರಣೆ ಮಾಡುವರು ।೩೭೯॥ ಪ್ರಾಣವಾಯುವಿನ ಗಾಳಿಯನ್ನು ಹನ್ನೆರಡು ಅಂಗುಲಗಳಿಂದ ವಿಜಯ ಸಾಧಿಸಲು ಪ್ರಾಣಾಯಾಮದ ಅಭ್ಯಾಸದಿಂದ ಹಗಲೂ ರಾತ್ರಿ, ಶರೀರವನ್ನು ಸವೆಸುವರು ।೩೮೦॥ ಇವರು ಹಸಿವೆಯಿಂದ ಹಸಿವೆಯನ್ನು ತಿನ್ನುವರು. ನೀರಡಿಕೆಯಿಂದಲೇ ನೀರಡಿಕೆ ಕುಡಿಯುವರು. ಈ ಪ್ರಕಾರವಾಗಿ ದೃಢ ನಿಶ್ಚಯದಿಂದ ಸುಖದುಃಖಗಳನ್ನು ಗೆಲ್ಲುವರು ।೩೮೧॥ ಸುಬುದ್ಧಿಯನ್ನು ಕೈಯಲ್ಲಿ ಹಿಡಿದು ಇಂದ್ರಿಯ ವೃತ್ತಿಗಳನ್ನು ನಿಯಂತ್ರಣಗೊಳಿಸಿ ವಿರಕ್ತಿಯಿಂದ ತಮ್ಮ ಪ್ರಸಿದ್ಧಿಯಿಂದ ಊರ್ಧ್ವಗತಿಯಲ್ಲಿ ಹೊರಡುವರು ।೩೮೨॥

ಭೇದೋನಿ ಮಣಿಕರ್ಣಿಕಾ ವೋವರೀ । ಉಸಳಲೇ ಜೇ ಬ್ರಹ್ಮರಂಧ್ರೀ । ಜಿಣೋನಿಯಾ ಬ್ರಹ್ಮಗಿರೀ । ನಿಶಾಣಭೇರೀ ಲಾವಿಲ್ಯಾ ।।೩೮೩।। ತೇಥ ಶಾಂತೀಚೇನಿ ಯೋಗೇ । ವಿಲಸತ ಸರ್ವಾಂಗೇ । ಸಂಕಲ್ಪತ್ಯಾಗವೇಗೇ । ಜಾಹಲೇ ಅಂಗೇ ಚಿದ್‌ಬ್ರಹ್ಮ ।।೩೮೪।। ಐಸೇ ಯೋಗಬಳೇ ಯೋಗೀ । ಮಾಯಾ ಜಿಣತೀ ಅಂಗೋಅಂಗೀ । ತ್ಯಾಹೋನಿ ಅತಿಸುಗಮ ಮಾರ್ಗೀ । ಆಮ್ಹಾ ಲಾಗೀ ತ್ವಾಂ ಕೇಲೀ ।।೩೮೫।।

ವಯಂ ತ್ವಿಹ ಮಹಾಯೋಗಿನ್ ಭ್ರಮಂತಃ ಕರ್ಮವರ್ತ್ಮಸು । ತ್ವದ್ವಾರ್ತಯಾ ತರಿಷ್ಯಾಮಸ್ತಾವಕೈರ್ದುಸ್ತರಂ ತಮಃ ।೫೮॥

ಅರ್ಥ:- ಹೇ ಯೋಗೇಶ್ವರಾ, ಈ ಲೋಕದಲ್ಲಿ ಕರ್ಮಮಾರ್ಗದಲ್ಲಿ ಭ್ರಮಣ ಮಾಡುವ ನಿನ್ನ ಭಕ್ತರಿಗೆ ನಿನ್ನ ಕೀರ್ತಿಯನ್ನು ಹೇಳುತ್ತ ಸಂಸಾರವನ್ನು ಗೆಲ್ಲುತ್ತೇವೆ.

ಭಜಾವೇ ತುಝಿಯಾ ನಿಜಭಕ್ತಾ । ಐಕಾವೀ ತುಝೀ ಕಥಾವಾರ್ತಾ । ಇತುಕೇನಿ ತರಲೋ ಜೇ ಸರ್ವಥಾ । ಕೃಷ್ಣನಾಥಾ ನಿಜಮಾಯಾ ।।೩೮೬।। ಆಮ್ಹಾ ಕರ್ಮಮಾರ್ಗೀಚಿಯಾ ಕರ್ಮಠಾ । ತುವಾ ಉಪಕಾರು ಕೇಲಾ ಮೋಠಾ । ತುಝ್ಯಾ ಕಥೇಚಾ ಶ್ರವಣಪಾಠಾ । ಮುಕ್ತ ದಾರವಂಠಾ ಮೋಕ್ಷಾಚಾ ।।೩೮೭।। ಅಸೋ ಮೋಕ್ಷಾಚೀ ಕಥಾ । ಚಾಡ ನಾಹೀ ಗಾ ಸರ್ವಥಾ । ತುಝ್ಯಾ ಭಕ್ತಾಂಸೀ ತುಝೀ ಕಥಾ । ಕರಿತಾ ಭವವ್ಯಥಾ ನ ಬಾಧೀಚಿ ।।೩೮೮।। ತುಝೀ ಅಭೇದ ಭಕ್ತೀಚೇ ಕೋಡ । ಆಮ್ಹಾ ಸಂಸಾರುಚಿ ಗೋಡ । ಠೇಂಚೂನಿ ತ್ರಿಗುಣಾಂಚೇ ತೋಂಡ । ಭಕ್ತ ಪ್ರಚಂಡ ಭಜತಾತೀ ।।೩೮೯।।

ಸ್ಮರಂತಃ ಕೀರ್ತಯಂತಸ್ತೇ ಕೃತಾನಿ ಗದಿತಾನಿ ಚ । ಗತ್ಯುತ್ಸ್ಮಿತೇಕ್ಷಣ ಕ್ಷ್ವೇಲಿ ಯನ್ನೃಲೋಕವಿಡಂಬನಮ್ ।೫೯॥

ಅರ್ಥ:- ನಿನ್ನ ಕೃತೀ, ಭಾಷಣಗಳು, ಗತೀ, ಸ್ಮಿತ, ನೋಡುವಿಕೆ ಹಾಗೂ ವಿನೋದ ಇತ್ಯಾದಿಗಳ ಮನುಷ್ಯಲೋಕದಲ್ಲಿ ಅನುಕರಣೆ, ಆದರ ಸ್ಮರಣೆ, ಕೀರ್ತನೆ ಮಾಡುತ್ತ ಸಂಸಾರವನ್ನು ದಾ..ತ್ತೇವೆ.

ತುಝ್ಯಾ ಚರಿತ್ರಾಚೇ ಶ್ರವಣ । ಆವಡೀ ಕರಿತಾ ಕೀರ್ತನ । ತ್ಯಾಂಚಾ ಭವಬಂಧ ಛೇದನ । ಬಳೇಂಚಿ ಜಾಣ ತೂ ಕರಿಶೀ ।।೩೯೦।। ಪುಸೋನಿಯಾ ಸಂಸಾರಭಾವೋ । ನಿಜಪದೀ ದೇಸೀ ಠಾವೋ । ಹಾ ಶ್ರವಣಕೀರ್ತನಲಾಭ ಪಾಹಾ ಹೋ । ಆಮ್ಹೀ ಸಹಜೇ ಲಾಹೋ ನಿಜಭಕ್ತ ।।೩೯೧।। ಸ್ವಭಾವೇ ಕೀರ್ತನ ಕರಿತಾ । ಏವಢಾ ಲಾಭು ಹೋಯೇ ತತ್ತ್ವತಾ । ಯಾ ತುಝಿಯೇ ಮುಖೀಚ್ಯಾ ಕಥಾ ಗಾತಾ । ಆಪಣಿಯಾ ದೇತಾ ತೂ ಹೋಶೀ ।।೩೯೨।। ತುಝೀ ಗೋಕುಳೀಂಚೀ ಗಮನಪದೇ । ಆವಡೀ ವರ್ಣಿತೀ ಜೇ ಆನಂದೇ । ತ್ಯಾಸೀ ಖಾಂದೀ ವಾಹೂನಿ ನಿಜಬೋಧೇ । ಕೀರ್ತನಛಂದೇ ನಾಚಶೀ ।।೩೯೩।।

ಮಣಿಕರ್ಣಿಕೆಯನ್ನು ಭೇದಿಸಿ ಬ್ರಹ್ಮರಂಧ್ರದಲ್ಲಿ ಸೇರುವವರು ಮತ್ತು ಬ್ರಹ್ಮಗಿರಿಯನ್ನು ಗೆದ್ದುಕೊಂಡು ನಿಶಾಣ ಭೇರಿಯನ್ನು ಬಾರಿಸುವವರು ।೩೮೩॥ ಅಲ್ಲಿ ಅವರ ಸರ್ವಾಂಗದಲ್ಲಿ ಶಾಂತಿಯು ವರ್ತಿಸುವುದು. ಸಂಕಲ್ಪಗಳ ತ್ಯಾಗವನ್ನು ಮಾಡಿ ಸ್ವತಃ ಚಿದ್ರೂಪ ಬ್ರಹ್ಮರಾಗುವರು ।೩೮೪॥ ಈ ಪ್ರಕಾರವಾಗಿ ಯೋಗಿಗಳು ಯೋಗದ ಬಲದಿಂದ ಮಾಯೆಯನ್ನು ಗೆಲ್ಲುವರು. ಆದರೆ ಅದಕ್ಕಿಂತಲೂ ಅತಿಶಯವಾಗಿ ಸುಲಭ ಮಾರ್ಗವನ್ನು ನಮಗಾಗಿ ನೀನು ಮಾಡಿರುವೆ ।೩೮೫॥

ಹೇ ಕೃಷ್ಣನಾಥನೇ, ನಿನ್ನ ಭಕ್ತರ ಭಜನೆಯನ್ನು ಮಾಡಿ ಹಾಗೂ ನಿನ್ನ ಕಥೆಯ ಕಥನವನ್ನು ಕೇಳಿ ನಿನ್ನ ಮಾಯೆಯನ್ನು ನಾನು ಗೆದ್ದಿರುವೆನು ।೩೮೬॥ ಕರ್ಮಠ, ಕರ್ಮಮಾರ್ಗಿಗಳಾದ ನಮ್ಮಂಥವರ ಜನರಿಗೆ ನೀನು ದೊಡ್ಡ ಉಪಕಾರವನ್ನು ಮಾಡಿಟ್ಟಿರುವೆ. ನಿನ್ನ ಕಥೆಯ ಶ್ರವಣ ಹಾಗೂ ಪಠಣ ಮಾಡುವುದರಿಂದ ಮೋಕ್ಷದ ದ್ವಾರವು ತೆರೆಯುವುದು ।೩೮೭॥ ಮೋಕ್ಷದ ಕಥೆಯು ಒತ್ತಟ್ಟಿಗಿರಲಿ, ಅದರ ಇಚ್ಛೆಯು ನಮಗೆ ಇಲ್ಲವೇ ಇಲ್ಲ. ಕಾರಣ ನಿನ್ನ ಭಕ್ತರು ನಿನ್ನ ಕಥೆಯ ಶ್ರವಣವನ್ನು ಮಾಡಲು ಅವರಿಗೆ ಸಂಸಾರದ ಬಾಧೆಯಾಗಲಾರದು ।೩೮೮॥ ನಿನ್ನ ಅಭೇದ ಭಕ್ತಿಯ ಒಂದೇ ನಮಗೆ ಪ್ರೇಮವಿರುವುದರಿಂದ ನಮಗೆ ಸಂಸಾರವು ಪ್ರಿಯವಾಗಿದೆ. ಭಕ್ತರಾದವರು ಆ ತ್ರಿಗುಣದ ಮುಖಕ್ಕೆ ಬಡೆದು ನಿನ್ನ ಭಜನೆಯನ್ನು ಅತ್ಯಂತ ಪ್ರೇಮದಿಂದ ಮಾಡುವರು ।೩೮೯॥

ನಿನ್ನ ಚರಿತ್ರೆಗಳನ್ನು ಭಕ್ತಿಯಿಂದ ಶ್ರವಣ ಮಾಡುವವರನ್ನು ಮತ್ತು ಪ್ರೇಮದಿಂದ ಕೀರ್ತನೆ ಮಾಡುವವರನ್ನು ನೀನು ಅವರ ಭವಬಂಧನವನ್ನು ನಿಶ್ಚಯವಾಗಿ ಮುರಿದು ಹಾಕುವೆ ।೩೯೦॥ ಸಂಸಾರದ ಆಸಕ್ತಿಯನ್ನು ನಾಶಮಾಡಿ ಅವರನ್ನು ನಿನ್ನ ಚರಣಗಳಲ್ಲಿ ಸ್ಥಾನವನ್ನು ಕೊಡುವೆ. ಇದು ಶ್ರವಣ ಕೀರ್ತನೆಗಳ ಅಲಭ್ಯ ಲಾಭವಾಗಿರುವುದು ಭಕ್ತರಾದ ನಾವು ಇದನ್ನು ಸಹಜವಾಗಿ ಅನುಭವಿಸಿದೆವು ।೩೯೧॥ ಸಹಜವಾಗಿ ಕೀರ್ತನೆಯನ್ನು ಮಾಡಲು ಇಷ್ಟೊಂದು ಲಾಭವಾಗುವುದು ಹೀಗಿರಲು ನಿನ್ನ ಮುಖದಿಂದ ಹೊರಟ ಕಥಾ ಗಾಯನವನ್ನು ಮಾಡಿದರೆ ನಿನ್ನ ಸ್ವರೂಪವನ್ನೇ ನೀನು ಅರ್ಪಿಸುವೆ ।೩೯೨॥ ಗೋಕುಲದಲ್ಲಿನ ನಿನ್ನ ಲೀಲೆಗಳನ್ನು ಆನಂದದಿಂದ, ಪ್ರೇಮದಿಂದ ಯಾರು ಗುಣಗಾನ ಮಾಡುವರೋ ಅವರನ್ನು ನೀನು ನಿಮ್ಮವರನ್ನಾಗಿ ಮಾಡಿಕೊಂಡು ಅವರನ್ನು ಹೆಗಲ ಮೇಲೆ ಹೊರುವೆ ಮತ್ತು ಕೀರ್ತನದ ರಂಗಿನಲ್ಲಿ ನರ್ತಿಸುವೆ ।೩೯೩॥

ತುವಾ ಜೇ ಕೇಲೀ ಲೀಲಾ । ತೇ ಆವಡೀ ಗಾತಾ ಜೇ ಗೋಪಾಳಾ । ನಿತ್ಯತ್ಯಾ ಸೇವಕಾಜವಳಾ । ಅಂಗೇ ಅಂಗವಳಾ ತೂ ಹೋಶೀ ।।೯೪।। ತುಝೀ ವರ್ಣಿತೀ ಜೇ ಹಾಸ್ಯವದನ । ತ್ಯಾ ಭಕ್ತಾಚೇ ತೂ ಕರಿಶೀ ಧ್ಯಾನ । ತ್ಯಾಂಚೇನಿ ಬೋಲೇ ಸಮಾಧಾನ । ಸ್ತ್ರೀಶೂದ್ರಾ ಜಾಣ ತೂ ದೇಶೀ ।।೯೫।। ತುಝೀ ದೃಷ್ಟೀಚೇ ದರ್ಶನ । ದೃಶ್ಯಾತೀತ ನಿರೀಕ್ಷಣ । ಸರ್ವತ್ರ ದೇಖಣೇಪಣ । ಕೀರ್ತನೀ ಗಾನ ಜೇ ಗಾತೀ ।।೯೬।। ತ್ಯಾಚ್ಯಾ ಪಾಉಲಾಪಾಉಲಾಂಸೀ । ಆಪುಲೇ ಸರ್ವಾಂಗ ತೂ ವೋವಾಳಿಸೀ । ಅಂಗ ಟಾಕೂನಿ ತಿಷ್ಠಸೀ । ತ್ಯಾಪಾಶೀ ಸರ್ವದಾ ।।೯೭।। ಆಪುಲೀ ಗುಹ್ಯ ಜ್ಞಾನಮುದ್ರಾ । ತ್ಯಾಂಸೀ ಅರ್ಪಿಸೀ ತೂ ಜ್ಞಾನೀ ನರೇಂದ್ರಾ । ನಿಜಬೋಧೇ ಪ್ರಬೋಧಚಂದ್ರಾ । ತ್ಯಾಂಚ್ಯಾ ನಿಜಭದ್ರಾ ತೂ ಕರಿಶೀ ।।೯೮।। ರಾಸಕ್ರೀಡಾದಿ ನಾನಾ ಛಂದ । ಅಂಗನಾಮಂಗನಾದಿ ಪ್ರಬಂಧ । ಕೀರ್ತಿ ಅತಿಶಯೇ ವಿಶದ । ಭಾವಾರ್ಥೇ ಶುದ್ಧ ಜೇ ಗಾತೀ ।।೯೯।। ಕಾ ಠಕೂನಿಯಾ ಬ್ರಹ್ಮಯಾಸೀ । ಗೋಪಾಳ ವತ್ಸೇ ತೂ ಜಾಹಲಾಸೀ । ಐಸಐಸಿಯಾ ವಿನೋದಾಸೀ । ಹೃಷೀಕೇಶೀ ಜೇ ಗಾತೀ ।।೧೦೦।। ತ್ಯಾಂಸೀ ಸರ್ವಾಭೂತೀ ನಿಜಾತ್ಮತಾ । ದೇಶಿ ತೂ ಆಪುಲೀ ಸತ್ತಾ । ತ್ಯಾಂಚ್ಯಾ ಬೋಲಾಮಾಜೀ ವರ್ತತಾ । ಕೃಷ್ಣನಾಥಾ ತೂ ಹೋಶೀ ।।೧೦೧।। ಮನುಷ್ಯನಾಟ್ಯಾಚೇನಿ ಯೋಗೇ । ಜೇ ಜೇ ಕೇಲೇ ತುವಾ ಅಂಗೇ । ತೇ ಗಾತಾ ಐಕತಾ ಅನುರಾಗೇ । ತರಲೇ ವೇಗೇ ನಿಜಭಕ್ತ ।।೧೦೨।। ಮ್ಯಾಂಚಿ ಕೇಲೀ ಜೇ ಜೇ ಆಳೀ । ತೇ ತ್ವಾಂ ಪುರವಿಲೀ ಸಾರ್ವಕಾಳೀ । ತ್ಯಾ ಮಜ ಉಪೇಕ್ಷೂನಿ ವನಮಾಳೀ । ಅಂತಕಾಳೀ ಕಾ ಜಾಶೀ ।।೧೦೩।।

ಶ್ರೀಶುಕ ಉವಾಚ:-

ಏವಂ ವಿಜ್ಞಾಪಿತೋ ರಾಜನ್ ಭಗವಾಂದೇವಕೀಸುತಃ । ಏಕಾಂತಿನಂ ಪ್ರಿಯಂ ಭೃತ್ಯಮುದ್ಧವಂ ಸಮಭಾಷತ ।।೫೦।।
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಷಷ್ಠೋಽಧ್ಯಾಯಃ ।।೬।।

ಅರ್ಥ:- ಶ್ರೀಶುಕದೇವರು ನುಡಿದರು, ಹೇ ಪರೀಕ್ಷಿತಿಯೇ, ಉದ್ಧವನು ದೇವಕಿನಂದನ ಭಗವಾನ ಶ್ರೀಕೃಷ್ಣನಲ್ಲಿ ಈ ಪ್ರಕಾರದ ಪ್ರಾರ್ಥನೆಯನ್ನು ಸಲ್ಲಿಸಲು ಅನನ್ಯ ಪ್ರೇಮಿಯಾದ, ಸಖಿನಾದ ಹಾಗೂ ಸೇವಕನಾದ ಉದ್ಧವನಿಗೆ ಶ್ರೀಕೃಷ್ಣನು ಹೀಗೆ ಹೇಳಿದನು.

ಏವಂ ಯಾಪರೀ ದೇವಕೀಸುತ । ಪೂರ್ಣ ಪೂರ್ಣಾಂಶೇ ಭಗವಂತ । ವಿನವಿಲಾ ಶ್ರೀಕೃಷ್ಣನಾಥ । ನಿಜಭೃತ್ಯ - ಉದ್ಧವೇ ।।೧೦೪।। "ನಿಜಭೃತ್ಯ" ಮ್ಹಣಣೇ । ಉದ್ಧವಾಸೀ ಯಾಕಾರಣೇ । ನಿಜಗುಜ ಶ್ರೀಕೃಷ್ಣೇ । ತ್ಯಾಸೀ ಬೋಲಣೇ ಸರ್ವದಾ ।।೧೦೫।। ಜೇಥ ರಿಗಮು ನಾಹೀ ರುಕ್ಮಿಣೇಸೀ । ಠಾವೋ ನಾಹೀ ವಸುದೇವದೇವಕೀಸೀ । ಬಳಿಭದ್ರಾ ಪ್ರದ್ಯುಮ್ನಾಸೀ । ಅನಿರುದ್ಧಾಸೀ ತೇ ಠಾಯೀ ।।೧೦೬।।

ಹೇ ಗೋಪಾಲನೇ ನೀನು ಮಾಡಿರುವ ಲೀಲೆಗಳನ್ನು ಪ್ರೇಮದಿಂದ ಹಾಡಲು, ಆ ಭಕ್ತ ಸೇವಕರ ಸಮೀಪದ ಆಪ್ತನಾಗುವೆ ।।೯೪।। ಯಾವ ಭಕ್ತರು ನಿನ್ನ ಹಾಸ್ಯವದನದ ವರ್ಣನೆಯನ್ನು ಮಾಡುವರೋ, ಆ ಭಕ್ತ ಶ್ರೇಷ್ಠರ ಧ್ಯಾನವನ್ನು ನೀನು ಮಾಡುವೆ. ಅವರ ಶಬ್ದಗಳಿಂದ ಸ್ತ್ರೀ ಶೂದ್ರರಿಗೆ ಸಮಾಧಾನವನ್ನು ಕೊಡುವೆ ।।೯೫।। ನಿನ್ನ ದೃಷ್ಟಿಯ ದರ್ಶನ ಅಂದರೆ ದೃಶ್ಯಾತೀತನ ಕಾಣುವಿಕೆ. ನೀನು ಸರ್ವತ್ರ ಇರುವ ಅರಿಯುವಿಕೆಯನ್ನು ಯಾರು ಕೀರ್ತನೆಯಲ್ಲಿ ವರ್ಣಿಸುವರೋ ।।೯೬।। ಅವರ ಹೆಜ್ಜೆ ಹೆಜ್ಜೆಗೂ ನೀನು ನಿನ್ನ ಸರ್ವಾಂಗದ ನಿವಾಳಿಯನ್ನು ತೆಗೆಯುವೆ ಮತ್ತು ನಿರಾಕಾರ ರೂಪದಿಂದ ನೀನು ಅವರಲ್ಲಿ ಸರ್ವದಾ ಇರುವೆ ।।೯೭।। ಹೇ ಜ್ಞಾನಶ್ರೇಷ್ಠನೇ, ಪ್ರಬೋಧಚಂದ್ರನೇ, ನೀನು ಅವರಿಗೆ ನಿನ್ನ ಗುಹ್ಯ ಜ್ಞಾನದ ಮುದ್ರೆಯನ್ನು ಅರ್ಪಿಸಿ ಅವರ ಆತ್ಮಹಿತವನ್ನು ಸಾಧಿಸುವೆ ।।೯೮।। ರಾಸಕ್ರೀಡೆ ಇತ್ಯಾದಿ ನಾನಾ ಪ್ರಕಾರದ ಲೀಲೆಗಳನ್ನು ಅಥವಾ ಮೂಲ ಗದ್ಯಪದ್ಯ ಕವಿತೆಗಳಲ್ಲಿ ವಿಶದಪಡಿಸಿರುವ ನಿನ್ನ ಕೀರ್ತಿಯ ಗುಣಗಾನವನ್ನು ಯಾರು ಮಾಡುವರೋ ।।೯೯।। ಅಥವಾ ಹೇ ಕೃಷ್ಣನೇ, ಬ್ರಹ್ಮದೇವನಿಗೆ ಮೋಸಗೊಳಿಸಿ ನೀನೇ ಗೋಪಾಲ, ಗೋವು, ಕರ ಹೇಗಾದೆ ಎಂಬ ಗೀತೆಗಳನ್ನು ಯಾರು ಹಾಡುವರೋ ।।೧೦೦।। ಅವರಿಗೆ ಸರ್ವಭೂತಗಳಲ್ಲಿ ಆತ್ಮವೇ ತುಂಬಿರುವುದೆಂಬ ನಿದರ್ಶನವನ್ನು ತಂದುಕೊಟ್ಟು ನಿನ್ನ ಸತ್ತೆಯನ್ನು ಕೊಡುವೆ ಹಾಗೂ ಕೃಷ್ಣನಾಥನೇ ನೀನು ಅವರ ಆಜ್ಞೆಯಲ್ಲಿ ವರ್ತಿಸುವೆ ।।೧೦೧।। ಲೀಲೆಯಿಂದ ಮನುಷ್ಯರೂಪವನ್ನು ಧರಿಸಿ ನೀನು ಯಾವ ಯಾವ ಚರಿತ್ರೆಗಳನ್ನು ಮಾಡಿರುವಿಯೋ ಅದನ್ನು ಪ್ರೇಮದಿಂದ ಗುಣಗಾನ ಮಾಡುವವರಾದ ಮತ್ತು ಶ್ರವಣ ಮಾಡುವವರಾದ ನಿಜಭಕ್ತರು ತ್ವರಿತವಾಗಿ ಉದ್ಧಾರರಾಗುವರು ।।೧೦೨।। ಹೇ ಕೃಷ್ಣನೇ, ನಾನು ಇದುವರೆಗೆ ಯಾವ ಯಾವ ಬಯಕೆಗಳನ್ನು ಬಯಸಿದೆನೋ, ಅದೆಲ್ಲವನ್ನೂ ನೀನು ಪೂರೈಸಿರುವೆ ಹೀಗಿದ್ದರೂ ಈಗ ಕೊನೆಯಲ್ಲಿ ನನ್ನ ಉಪೇಕ್ಷೆಯನ್ನು ಏಕೆ ಮಾಡುವೆ ? ।।೧೦೩।। ಶ್ರೀಶುಕಾಚಾರ್ಯರು ಹೇಳುವರು, ಈ ಪ್ರಕಾರವಾಗಿ ದೇವಕಿಯ ಪುತ್ರನಾದ, ಪೂರ್ಣಾಂಶದಿಂದ ಪೂರ್ಣನಾಗಿರುವ ಭಗವಾನ ಶ್ರೀಕೃಷ್ಣನಾಥನಲ್ಲಿ ಆತನ ನಿಜ ಸೇವಕನಾದ ಉದ್ಧವನು ವಿನಂತಿಯನ್ನು ಮಾಡಿದನು ।।೧೦೪।। ಉದ್ಧವನಿಗೆ ನಿಜಸೇವಕನೆನ್ನಬೇಕಾದ ಕಾರಣವೇನೆಂದರೆ, ಶ್ರೀಕೃಷ್ಣನು ಸದಾಸರ್ವದಾ ಆತನಲ್ಲಿ ಗುಟ್ಟಾದ ಮಾತುಗಳನ್ನಾಡುತ್ತಿದ್ದನು ।।೧೦೫।। ಅಲ್ಲಿ ರುಕ್ಮಿಣೀಗೂ ಪ್ರವೇಶವು ಸಿಗುತ್ತಿದ್ದಿಲ್ಲ. ವಸುದೇವ, ದೇವಕೀ, ಬಲರಾಮ, ಪ್ರದ್ಯುಮ್ನ ಬಳಿಭದ್ರ, ಅನಿರುದ್ಧ ಇವರಿಗೂ ಅಲ್ಲಿ ಪ್ರವೇಶವು ಆಗುತ್ತಿದ್ದಿಲ್ಲ ।।೧೦೬।।

ತೇ ಠಾಯೀ ಕೃಷ್ಣಾಪ್ರತೀ । ಉದ್ಧವ ಅಸೇ ಅಹೋರಾತೀ । ತ್ಯಾಲಾಗೀ ಪೈ "ಏಕಾಂತೀ" । ಜ್ಞಾತೇ ಮ್ಹಣತೀ ತಯಾಸೀ ॥೪೦೭॥ ಶ್ರೀಕೃಷ್ಣಾಸೀ ವಾಡೇಕೋಡೇ । ಜೀವಾಪರೀಸ ಜೇ ಜೇ ಆವಡೇ । ತೇ ಉದ್ಧವಾಸೀ ದೇಣೇ ಘಡೇ । ಪ್ರೇಮ ಗಾಢೇ ಭಕ್ತಾಂಚೇ ॥೪೦೮॥ ದೇತಾ ತೋ ಜರೀ ನೇಘೇ । ತರೀ ಧಾಂವೋನಿ ಆಲಿಂಗೀ ವೇಗೇ । ನ ಘೇತಾ ದೇವೋ ಪಾಯಾ ಲಾಗೇ । ಭಕ್ತಪಾಂಗೇ ಪಾಂಗಿಲಾ ॥೪೦೯॥ ಯಾಲಾಗೀ ಕೃಷ್ಣಾಸೀ ಪ್ರಿಯಕರ । ಉದ್ಧವುಚಿ ಸಾಚಾರ । ಯಾಹೂನಿ ಪ್ರೇಮ ಥೋರ । ನಾಹೀ ಸಧರ ಆನಾಚೇ ॥೪೧೦॥ ಯಾಲಾಗೀ "ಪ್ರಿಯ - ಭೃತ್ಯ - ಏಕಾಂತೀ" । ಯೇ ಬಿರುದೇ ಉದ್ಧವಾಸೀ ಸಾಜತೀ । ತೇಣೇ ನಿಜಸ್ವಾಮೀಸ ವಿನಂತೀ । ನಿಜಪ್ರೀತೀ ಪೈ ಕೇಲೀ ॥೪೧೧॥ ಐಕೋನಿ ಉದ್ಧವಾಚೇ ವಚನ । ಚಾತಕಾಲಾಗೀ ಜೇವೀ ಘನ । ತೇವೀ ವೋಳಲಾ ಜಗಜ್ಜೀವನ । ಸ್ವಾನಂದಘನ ನಿಜಬೋಧೇ ॥೪೧೨॥ ಚಾತಕಾಚೀ ತಹಾನ ಕಿತೀ । ತೃಪ್ತ ಕರೂನಿ ನಿವವೀ ಕ್ಷಿತೀ । ಉದ್ಧವ ಉದ್ದೇಶೇ ಶ್ರೀಪತೀ । ತ್ರಿಜಗತೀ ನಿವವೀಲ ॥೪೧೩॥ ಐಕತಾ ಉದ್ಧವಾಚೇ ಬೋಲ । ಯೇತಾತಿ ಶ್ರೀಕೃಷ್ಣಾಸೀ ಡೋಲ । ಭಕ್ತಭಾಗ್ಯ ಜೇ ಸಖೋಲ । ಜಾಹಲೀ ವೋಲ ಪ್ರೇಮಾಚೀ ॥೪೧೪॥ ತೇ ವೋಳಲೇ ಭಕ್ತಭೂಮೀಸೀ । ನಿಜಬೀಜ ಪೇರೀಲ ಹೃಷಿಕೇಶೀ । ತೇ ಪೀಕ ಪುರೇಲ ಜಗಾಸೀ । ಮುಕ್ತರಾಶೀ ಮುಮುಕ್ಷಾ ॥೪೧೫॥ ಧೇನು ವತ್ಸಾಚೇನಿ ವೋರಸೇ । ಘರಾ ದುಭತೇ ಪುರವೀ ಜೈಸೇ । ತೇವೀ ಉದ್ಧವಾಚೇನಿ ಉದ್ದೇಶೇ । ಜಗ ಹೃಷೀಕೇಶೇ ನಿವವಿಜೇ ॥೪೧೬॥ ಘರೀ ಪಾಹುಣ್ಯಾಲಾಗೀ । ಕೀಜತೀ ಪರವಡೀ ಅನೇಗೀ । ತೇಥ ಬಾಲಕೇ ಜೇವೀ ವಿಭಾಗೀ । ಹೋತೀ ವೇಗೀ ನ ಮಾಗತಾ ॥೪೧೭॥ ಪಕ್ವಾನ್ನ ಸೇವೂ ನೇಣತೀ ಬಾಳೇ । ತರೀ ಮಾತಾ ಮುಖೀ ಘಾಲೀ ಬಳೇ । ತೈಸೇ ಜನಾರ್ದನೇ ಆಮ್ಹಾ ಕೇಲೇ । ಸ್ವಯೇ ದಿಧಲೇ ನಿಜಶೇಷ ॥೪೧೮॥ ನವಲ ಕೃಪಾ ಕೇಲೀ ಕೈಶೀ । ಕೃಷ್ಣ ಉದ್ಧವಾತೇ ಉಪದೇಶೀ । ತೋಚಿ ಅರ್ಥ ದಿಧಲಾ ಆಮ್ಹಾಸೀ । ದೇಶಭಾಷೀ ಅರ್ಥಿತಾ ॥೪೧೯॥ ಏಕಾ ಜನಾರ್ದನು ಮ್ಹಣೇ । ಶ್ರೋತ್ರಾ ಸಾವಧಾನ ಹೋಣೇ । ಹೇ ಮೀ ತೋಂಡೇ ಬೋಲೋ ಕವಣೇ । ತಿಹೀ ಮಜ ಕರಣೇ ಸಾವಧ ॥೪೨೦॥ ನಿಜಭಕ್ತೀ ಕೇಲೀ ವಿನಂತೀ । ನಿಜಜ್ಞಾನ ಬೋಲೇ ಭಕ್ತಪ್ರತೀ । ಶ್ರವಣಾಚೀ ಸಾವಧ ಪಂಕ್ತೀ । ಬೈಸವಾ ವೃತ್ತಿ ತದ್‌ಬೋಧೇ ॥೪೨೧॥

ಅಲ್ಲಿ ಮಾತ್ರ ಕೃಷ್ಣನ ಸಾನಿಧ್ಯದಲ್ಲಿ ಉದ್ಧವನು ಅಹೋರಾತ್ರಿ ಇರುತ್ತಿದ್ದನು. ಆದ್ದರಿಂದಲೇ ಜ್ಞಾನೀ ಪುರುಷರು ಈತನಿಗೆ ಏಕಾಂತೀ ಅಂದರೆ ಏಕಾಂತಭಕ್ತನು ಎಂದು ಹೇಳುವರು ॥೪೦೭॥ ಶ್ರೀಕೃಷ್ಣನಿಗೆ ಯಾವುದಾದರೂ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೇಮ ವಸ್ತು ಇದ್ದರೆ ಆತನು ಅದನ್ನು ಉದ್ಧವನಿಗೆ ಕೊಡುತ್ತಿದ್ದನು. ಇಷ್ಟೊಂದು ಆ ಭಕ್ತನಲ್ಲಿ ಪ್ರೇಮವು ಗಾಢವಾಗಿತ್ತು ॥೪೦೮॥ ಒಂದುವೇಳೆ ಉದ್ಧವನು ಅದನ್ನು ಸ್ವೀಕರಿಸದಿದ್ದರೆ ಧಾವಿಸಿ ಹೋಗಿ ಆತನಿಗೆ ಆಲಂಗಿಸಿ, ಕೊನೆಗೆ ಕಾಲಿಗೆ ಬಿದ್ದು ಕೊಡುತ್ತಿದ್ದನು. ಇಷ್ಟೊಂದು ಭಕ್ತನ ಆಧೀನನಾಗಿದ್ದನು ॥೪೦೯॥ ಆದ್ದರಿಂದ ಕೃಷ್ಣನಿಗೆ ಅತ್ಯಂತ ಪ್ರಿಯನಾದ ಉದ್ಧವನೊಬ್ಬನೇ ಇದ್ದನು. ಆತನಕ್ಕಿಂತಲೂ ಮಿಗಿಲಾದ ಪ್ರೇಮಕ್ಕೆ ಯಾರೂ ಪಾತ್ರರಿರಲಿಲ್ಲ ॥೪೧೦॥ ಆದ್ದರಿಂದಲೇ ಪ್ರಿಯ, ಸೇವಕ, ಏಕಾಂತೀ ಎಂಬ ಪದವಿಗಳು ಉದ್ಧವನಿಗೆ ಮಾತ್ರ ಶೋಭಿಸುವುವು. ಆದ್ದರಿಂದ ಉದ್ಧವನು ತನ್ನ ಸ್ವಾಮಿಗೆ ಈ ವಿನಂತಿಯನ್ನು ಮಾಡಿದನು ॥೪೧೧॥ ಉದ್ಧವನ ಪ್ರೇಮದ ಮಾತುಗಳನ್ನು ಕೇಳಿ ಚಾತಕಪಕ್ಷಿಗಾಗಿ ಮೇಘವು ತುಂಬಿ ಬರುವಂತೆ ಸ್ವಾನಂದಘನನಾದ ಶ್ರೀಕೃಷ್ಣನು ಪ್ರೇಮದಿಂದ ಪ್ರಸನ್ನನಾದನು ॥೪೧೨॥ ಚಾತಕಪಕ್ಷಿಯ ತೃಷೆಯ ಅಲ್ಪವಾಗಿರುವುದು. ಮೇಘವು ಇದಕ್ಕೆ ತೃಪ್ತಿಪಡಿಸಿ ಪೃಥ್ವಿಯನ್ನು ಶಾಂತಗೊಳಿಸುವಂತೆ ಶ್ರೀಪತಿಯು ಉದ್ಧವನ ನಿಮಿತ್ತದಿಂದ ತ್ರೈಲೋಕಕ್ಕೆ ತೃಪ್ತ ಮಾಡಿದನು ॥೪೧೩॥ ಉದ್ಧವನ ಪ್ರೇಮಮಯ ಶಬ್ದಗಳನ್ನು ಕೇಳಿ ಶ್ರೀಕೃಷ್ಣನು ತೂಗಾಡಹತ್ತಿದನು. ಭಕ್ತನ ಭಾಗ್ಯವು ದೊಡ್ಡದೆಂದು ಪ್ರೇಮದ ಪೂರವು ಹರಿಯತೊಡಗಿತು ॥೪೧೪॥ ಈಗ ಆ ಭಕ್ತರೂಪ ಭೂಮಿಯಲ್ಲಿ ಶ್ರೀಕೃಷ್ಣನು ಆತ್ಮ ಬೀಜವನ್ನು ಬಿತ್ತುವನು. ಇದರಿಂದ ಬಂದ ಬೆಳೆಯು ಸಂಪೂರ್ಣ ಜಗತ್ತಿಗೆ ಸಾಕಾಗುವುದು. ಮುಮುಕ್ಷುಗಳವರಿಗೆ ಮುಕ್ತಿಯ ರಾಶಿಯೇ ದೊರಕುವುದು ॥೪೧೫॥ ಆಕಳು ತನ್ನ ಕರುವನ್ನು ನಿಮಿತ್ತಮಾಡಿ ಬಿಟ್ಟ ಹಾಲಿನ ತೊರೆಯು ಸಂಪೂರ್ಣ ಮನೆಯವರಿಗೆ ಹಿಂಡಿಕೊಳ್ಳಲು ಬಿಡುವುದು. ಅದರಂತೆ ಉದ್ಧವನ ನಿಮಿತ್ತದಿಂದ ಶ್ರೀಕೃಷ್ಣನು ಸಂಪೂರ್ಣ ಜಗತ್ತಿಗೆ ಶಾಂತಗೊಳಿಸಿದನು ॥೪೧೬॥ ಮನೆಗೆ ಬೀಗನು ಬಂದನೆಂದರೆ ಅನೇಕ ತರಹದ ಪಕ್ವಾನ್ನಗಳು ಸಿದ್ಧವಾಗುವುವು. ಆದರೆ ಮನೆಯ ಬಾಲಕನಿಗೆ ಕೇಳದೇ ಅವು ಸಿಗುವುವು ॥೪೧೭॥ ಮಾಡಿದ ಪಕ್ವಾನ್ನವನ್ನು ಹೇಗೆ ಭುಂಜಿಸಬೇಕೆನ್ನುವುದು ಬಾಲಕನಿಗೆ ತಿಳಿಯದಿದ್ದರೆ ಆತನ ತಾಯಿಯು ಬಾಲಕನ ಮುಖದಲ್ಲಿ ಬಿಡದೇ ಹಾಕುವಳು. ಅದರಂತೆ ಜನಾರ್ದನರು ನನಗೆ ಮಾಡಿರುವರು. ತಮ್ಮ ಶೇಷ ಪ್ರಸಾದವನ್ನು ತಾವಾಗಿಯೇ ನಮಗೆ ಕೊಟ್ಟರು ॥೪೧೮॥ ಎಂತಹ ಅಪೂರ್ವವಾದ ಕೃಪೆಯನ್ನು ಮಾಡಿದರು ನೋಡಿರಿ ! ಶ್ರೀಕೃಷ್ಣನು ಉದ್ಧವನಿಗೆ ಯಾವುದನ್ನು ಉಪದೇಶಿಸಿದನೋ, ಅದನ್ನೇ ನಮಗೆ ಮರಾಠಿ ಭಾಷೆಯಲ್ಲಿ ಅರ್ಥಮಾಡಿ ಹೇಳಿದರು ॥೪೧೯॥ ಏಕಾಜನಾರ್ದನನು ಹೇಳುವುದೇನೆಂದರೆ, ನಾನು ಶ್ರೋತೃಗಳವರಿಗೆ ಲಕ್ಷಕೊಟ್ಟು ಕೇಳಿರಿ ಎಂದು ಯಾವ ಮುಖದಿಂದ ಹೇಳಲಿ? ಇದರ ಬದಲಾಗಿ ಅವರೆ ನನ್ನನ್ನು ಲಕ್ಷಕೊಡಲು ಹಚ್ಚಬೇಕು ॥೪೨೦॥ ನಿಜಭಕ್ತಿಯಿಂದ ವಿನಂತಿ ಮಾಡಿರುವುದರಿಂದ ಆತನು ಭಕ್ತರಿಗಾಗಿ ಈಗ ಆತ್ಮಜ್ಞಾನವನ್ನು ಹೇಳುವನು. ಇದನ್ನು ಕೇಳುವುದಕ್ಕಾಗಿ ನಿಮ್ಮ ವೃತ್ತಿಯನ್ನು ಏಕಾಗ್ರಗೊಳಿಸಿರಿ ॥೪೨೧॥

ಯೇಥ ಮುಕ್ತಾಚೇ ಕೋಡ । ಪುರೇ ಮುಮುಕ್ಷಾಂಚೀ ಚಾಡ । ಯೇಚಿವಿಷಯೀ ಕಥಾ ಗೋಡ । ಶ್ರವಣ ಕವಾಡ ಉಘಡೇಲ ।೪೨೨॥ ಉದ್ಧವೇ ಶ್ರೀಕೃಷ್ಣ ವಿನವಿಲಾ । ನಾ ತೋ ಶ್ರವಣೀ ಡಾಂಗೋರಾ ಪಿಟಿಲಾ । ಮುಮುಕ್ಷಾ ವ್ಹಾಣೀ ಚಲಾ ಚಲಾ । ಕೃಷ್ಣ ವೋಳಲಾ ನಿಜಬೋಧೇ ।।೪೨೩॥ ಮೋಕ್ಷಮಾರ್ಗೀಚೇ ಕಾಪಡೀ । ಅರ್ಥತೃಷಾತೃಷಿತೇ ಬಾಪುಡೀ । ಪ್ರಬೋಧಬೋಧಾಚೀ ಪವ್ಹೀ ಗಾಢೀ । ಉದ್ಧವೇ ರೋಕಡೀ ಘಾಲವಿಲೀ ।।೪೨೪॥ ಭಕ್ತಿ ಜನನೀ ಮಾಝೀ ತೇಥ । ಕಡೇ ಘೇವೋನಿ ಹೋತೀ ನೇತ । ಜನಾರ್ದನ ಪರಮಾಮೃತ । ಜಾಹಲೇ ಪ್ರಾಪ್ತ ತಿಚೇನೀ ।೪೨೫॥ ತೇ ತುಝೀ ಭಕ್ತಿ ತತ್ತ್ವತಾ । ಆಮ್ಹಾಸಿ ಅಸಾವೀ ಸರ್ವಥಾ । ತುಜ ಮಾಗಾವೀ ಮುಕ್ತತಾ । ತಂವ ತೇ ಮೂರ್ಖತಾ ಭಕ್ತಾಂಚೀ ।೪೨೬॥ ಸಾಚ ಅಸಾವೀ ಬದ್ಧತಾ । ತರೀ ಮ್ಯಾ ಮಾಗಾವೀ ಮುಕ್ತತಾ । ತೇಚಿ ನಾಹೀ ಗಾ ತತ್ತ್ವತಾ । ಮಿಥ್ಯಾಮಾಗತಾ ಮೂರ್ಖತ್ವ ।೪೨೭॥ ಮೀತೂಪಣೇವೀಣ ಸಹಜಸ್ಥಿತೀ । ತುಝೀ ಅಸೋ ಅಭೇದಭಕ್ತೀ । ಹೇಚಿ ಮಾಗಣೇ ಪುಢತಪುಢತೀ । ಸಂತಾಪ್ರತೀ ಸರ್ವದಾ ।೪೨೮॥ ಉದ್ಧವಾಸೀ ಜ್ಞಾನ ಗುಪ್ತ । ಉಪದೇಶೀಲ ಕೃಷ್ಣನಾಥ । ಏಕಾ ಜನಾರ್ದನಾ ವಿನವಿತ । ದತ್ತ ಚಿತ್ತ ತುಮ್ಹೀ ದೀಜೇ ।೪೨೯॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಏಕಾಕಾರಟೀಕಾಯಾಂ
ದೇವಸ್ತುತ್ಯುದ್ಧವವಿಜ್ಞಾಪನ ನಾಮ ಷಷ್ಠೋಽಧ್ಯಾಯಃ ।೬॥

॥ ಶ್ರೀಕೃಷ್ಣಾರ್ಪಣಮಸ್ತು ॥

ಇಲ್ಲಿ ಮುಕ್ತರ ಇಚ್ಛೆಯು ಪೂರ್ಣಗೊಳ್ಳುವುದು.ಮುಮುಕ್ಷುಗಳ ಬೇಡಿಕೆಗಳು ಈಡೇರುವುವು. ಈ ಯಾವ ಅಮೃತಮಯ ಕಥೆಯನ್ನು ಕೇಳಲು ಶ್ರವಣರೂಪ ದ್ವಾರವು ಸಹಜವಾಗಿ ತೆರೆಯುವುದು ।೪೨೨॥ ಉದ್ಧವನು ಶ್ರೀಕೃಷ್ಣನಿಗೆ ವಿನಂತಿಸಿದನು ಎಂದು ಹೇಳುವುದಕ್ಕಿಂತ ಆತನು ಶ್ರವಣದ ಡಂಗುರವನ್ನು ಸಾರಿದನು ಮತ್ತು ಮುಮುಕ್ಷುಗಳವರಿಗೆ, ನಡೆಯಿರಿ, ನಡೆಯಿರಿ, ಈಗ ಶ್ರೀಕೃಷ್ಣನು ಆತ್ಮಬೋಧೆಯಿಂದ ಪ್ರಸನ್ನನಾಗಿರುವನು ।೪೨೩॥ ಮೋಕ್ಷ ಮಾರ್ಗದಲ್ಲಿ ಪ್ರವಾಸಿಗರು ಅರ್ಥತೃಷೆಯಿಂದ ನೀರಡಿಸಿದ್ದರು. ಅವರಿಗೆ ಜ್ಞಾನಾಮೃತದ ಅರವಟಿಗೆಯನ್ನು ತೋರಿಸಿ ಅವರ ದಾಹವನ್ನು ಶಾಂತಗೊಳಿಸಿದನು ।೪೨೪॥ ನನ್ನ ಭಕ್ತಿ ರೂಪ ತಾಯಿಯು ನನ್ನನ್ನು ಬಗಲಿನಲ್ಲಿ ಎತ್ತಿಕೊಂಡು ಅಲ್ಲಿಗೆ ಒಯ್ದಳು. ಆಕೆಯಿಂದಲೇ ಜನಾರ್ದನರೂಪ ಪರಮಾಮೃತವು ನನಗೆ ಪ್ರಾಪ್ತವಾಯಿತು ।೪೨೫॥ ಹೇ ಭಗವಂತನೇ ಈ ಯಾವ ನಿನ್ನ ಭಕ್ತಿಯು ನಮ್ಮ ಜೊತೆಯಲ್ಲಿ ಸದಾ ಇರಲಿ, ನಿನ್ನಲ್ಲಿ ಮುಕ್ತಿಯನ್ನು ಕೇಳುವವರು ಅಜ್ಞಾನಿಗಳಾಗಿರುತ್ತಾರೆ ।೪೨೬॥ ನಿಜವಾಗಿಯೂ ಬಂಧನವು ಇದ್ದರೆ ಮಾತ್ರ, ಬಂಧಮುಕ್ತವಾಗುವ ಬೇಡಿಕೆ ಮಾಡಬೇಕು. ಆದರೆ ಬಂಧನವು ವಸ್ತುತಃ ಇಲ್ಲದಿರುವಾಗ ಮುಕ್ತತಾ ಬೇಡಿದರೆ ನಮ್ಮ ಪಾಲಿಗೆ ಮೂರ್ಖತ್ವವು ಬರುವುದು ।೪೨೭॥ "ನಾನು" "ನೀನು" ಎಂಬುವುದು ಇರದೇ ಸಹಜಸ್ಥಿತಿಯು ಮತ್ತು ಶ್ರೀಕೃಷ್ಣನ ಅಭೇದ ಭಕ್ತಿಯು ಇರಬೇಕು.ಇದನ್ನೇ ಸಂತರಲ್ಲಿ ಪುನಃಪುನಃ ಸರ್ವದಾ ಬೇಡುತ್ತಿದ್ದೇನೆ ।೪೨೮॥ ಈಗ ಉದ್ಧವನಿಗೆ ಶ್ರೀಕೃಷ್ಣನು ಗುಪ್ತ ಜ್ಞಾನದ ಉಪದೇಶವನ್ನು ಮಾಡುತ್ತಾನೆ. ಆದ್ದರಿಂದ ಏಕಾಜನಾರ್ದನರಲ್ಲಿ ವಿನಂತಿ ಮಾಡುವುದೇನೆಂದರೆ, ಶ್ರವಣ ಮಾಡಲು ನನಗೆ ಸಾವಧಾನ ಚಿತ್ತವನ್ನು ಕೊಡು ।೪೨೯॥

ಇತಿ ಶ್ರೀಮದ್‌ಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಶ್ರೀಏಕನಾಥ ಮಹಾರಾಜರ ಭಾಷ್ಯಯ ದೇವಸ್ತುತಿ ಹಾಗೂ
ಉದ್ಧವ ವಿಜ್ಞಾಪನಾ ಎಂಬ ಆರನೆಯ ಅಧ್ಯಾಯ ಸಂಪೂರ್ಣ ।೬೦॥ ।೪೨೯॥

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಏಳನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ಚತುರಕ್ಷರಾ । ಚತುರಚಿತ್ತಪ್ರಬೋಧಚಂದ್ರಾ । "ಜನಾರ್ದನಾ" ಸುರೇಂದ್ರಇಂದ್ರಾ । ಜ್ಞಾನನರೇಂದ್ರಾ ನಿಜಬೋಧಾ ॥೧॥ ತುಝೀ ಕರಿತಾಂಚಿ ಗೋಠೀ । ಪ್ರಗಟಸೀ ಪಾಠೀಪೋಟೀ । ಸನ್ಮುಖ ಠಸಾವಸೀ ದೃಷ್ಟೀ । ಹೃದಯಗಾಂಠೀ ಭೇದೂನೀ ॥೨॥ ಭೇದೂನಿ ವಿಷಯವಾಸನಾ । ಸ್ವಯೇ ಪ್ರಗಟಸೀ ಜನಾರ್ದನಾ । ಭವಅಭವಭಾವನಾ । ನೇದಿಸೀ ಮನಾ ಆತಳೋ ॥೩॥ ಆತಳತಾ ತುಝೇ ಚರಣ । ಆಕಳಲೇ ರಾಹೇ ಮನ । ಸಹಜ ದೇಶೀ ಸಮಾಧಾನ । ಆನಂದಘನ ಅಚ್ಯುತಾ ॥೪॥ ಐಶಿಯಾ ಜೇ ಗುರುನಾಥಾ । ಸಮಸಾಮ್ಯೇ ಚರಣೀ ಮಾಥಾ । ಪುಢೀಲ ಪರಿಸಾವೀ ಜೇ ಕಥಾ । ಜೇಥ ವಕ್ತಾ ಶ್ರೀಕೃಷ್ಣ ॥೫॥ ಉದ್ಧವೇ ವಿನವಿಲಿಯಾವರೀ । ಕೃಪಾ ಕಳವಳಲಾ ಶ್ರೀಹರೀ । ನಿಜಜ್ಞಾನ ಅತಿವಿಸ್ತಾರೀ । ಬೋಧಕುಸರೀ ಸಾಂಗತು ॥೬॥ ಹೋತೇ ಕೃಷ್ಣಾಚೇ ಮಾನಸೀ । "ಮಜ ಗೇಲಿಯಾ ನಿಜಧಾಮಾಸೀ । ಮಾಝೇ ನಿಜಜ್ಞಾನ ಕೋಣಾಪಾಸೀ । ಅತಿಯತ್ನೇಸೀ ಠೇವಾವೇ" ॥೭॥ ತಂವ ದೇಖಿಲೀ ಉದ್ಧವಾಚೀ ಅವಸ್ಥಾ । ಸುಖ ಜಾಹಲೇ ಶ್ರೀಕೃಷ್ಣನಾಥಾ । ವೈರಾಗ್ಯಯುಕ್ತ ಉಪದೇಶಿತಾ । ಹೋಯ ಸರ್ವಥಾ ನಿಜಜ್ಞಾನ ॥೮॥ ಏವಂ ವಾಂಚವಾವಯಾ ಉದ್ಧವಾಸೀ । ಕೃಷ್ಣ ಬ್ರಹ್ಮಜ್ಞಾನ ಉಪದೇಶೀ । ಶಾಪ ನ ಬಾಧೀ ಬ್ರಹ್ಮವೇತ್ಯಾಸೀ । ಹೇ ಹೃಷೀಕೇಶೀ ಜಾಣತು ॥೯॥ ಬ್ರಹ್ಮ ಉಪದೇಶಾಚೀ ಹಾತವಟೀ । ಉಪದೇತೂ ಜಾಣೇ ಜಗಜೇಠೀ । ವೈರಾಗ್ಯ ಉಪಜವೀ ಉಠಾಉಠೀ । ಜೇಣೇ ಪಡೇ ಮಿಠೀ ನಿಜತತ್ತ್ವೀ ॥೧೦॥ ನವ್ಹತಾ ವೈರಾಗ್ಯ ದಾರುಣ । ಉಪದೇಶು ಕೇಲಾ ತೋ ವೃಥಾ ಜಾಣ । ಹೇ ಶ್ರೀಕೃಷ್ಣಚಿ ಜಾಣೇ ಖೂಣ । ವೈರಾಗ್ಯ ವಿಂದಾನ ಬೋಲತು ॥೧೧॥

ಹೇ ಓಂಕಾರಸ್ವರೂಪನಾದ ಚತುರಾಕ್ಷರೀ ದೇವನೇ, ಹೇ ಚತುರರ ಚಿತ್ತಕ್ಕೆ ಜ್ಞಾನರೂಪ ಆಹ್ಲಾದವನ್ನು ಕೊಡುವ ಪ್ರಬೋಧಚಂದ್ರನೇ, ಹೇ ಇಂದ್ರನಿಗೂ ಇಂದ್ರನಾದವನೇ, ಜನಾರ್ದನನೇ, ಹೇ ಜ್ಞಾನನರೇಂದ್ರನೇ, ನಿಜಬೋಧರೂಪನೇ, ನಿನಗೆ ನಮಸ್ಕರಿಸುವೆ ॥೧॥ ನಿನ್ನ ನಾಮವನ್ನು ಸ್ಮರಿಸುತ್ತಲೇ, ನೀನು ಒಳಗೂ, ಹೊರಗೂ ಪ್ರಕಟನಾಗುವೆ. ಕಣ್ಮುಂದೆ ನಿಂತುಕೊಳ್ಳುವೆ, ಹೃದಯದ ಚಿಜ್ಜಡ ಗ್ರಂಥಿಯನ್ನು ಭೇದಿಸುವೆ ॥೨॥ ವಿಷಯವಾಸನೆಯನ್ನು ಭೇದಿಸಿ, ನೀನು ಸ್ವತಃ ಪ್ರಕಟನಾಗುವೆ. ಸಂಸಾರ ಮತ್ತು ಮೋಕ್ಷ ಇವುಗಳ ವಾಸನೆಗಳನ್ನು ನೀನು ಮನಸ್ಸಿಗೆ ಸ್ಪರ್ಶಮಾಡಿಕೊಡುವುದಿಲ್ಲ ॥೩॥ ನಿನ್ನ ಚರಣಸ್ಪರ್ಶದಿಂದ ನನ್ನ ಮನವು ಸ್ಥಿರವಾಗಿರುವುದು. ಹೇ ಆನಂದಘನನೇ, ಅಚ್ಯುತನೇ, ನೀನು ಸಹಜವಾಗಿಯೇ ಅಪಾರವಾದ ಸಮಾಧಾನವನ್ನು ಕೊಡುವೆ ॥೪॥ ಹೀಗಿರುವ ಹೇ ಗುರುನಾಥನೇ, ನಿನ್ನ ಚರಣಗಳಲ್ಲಿ ನಾನು ಸಮಭಾವದಿಂದ ಪ್ರೇಮಪೂರ್ವಕವಾಗಿ ಮಸ್ತಕವನ್ನಿಡುವೆ. ಮತ್ತು ಶ್ರೀಕೃಷ್ಣನೇ ವಕ್ತಾನಾಗಿರುವ ಆ ಕಥೆಯನ್ನು ಕೇಳಿರೆಂದು ನಮ್ರ ಭಾವದಿಂದ ವಿನಂತಿಸುವೆ ॥೫॥ ಉದ್ಧವನು ವಿನಂತಿಸಲು ಆಗ ಶ್ರೀಕೃಷ್ಣನ ಮನದಲ್ಲಿ ದಯೆಯು ಉತ್ಪನ್ನವಾಗಿ ಆನಂದಿತನಾದನು. ಆತನು ಮಹಾ ಕೌಶಲ್ಯದಿಂದ ಆತ್ಮಜ್ಞಾನವನ್ನು ವಿಸ್ತಾರಪೂರ್ವಕವಾಗಿ ಹೇಳಲು ಆರಂಭಿಸಿದನು ॥೬॥ ಶ್ರೀಕೃಷ್ಣನ ಮನದಲ್ಲಿ ಇದೇ ಇತ್ತು. ನಾನು ನಿಜಧಾಮಕ್ಕೆ ಹೋಗುವಾಗ್ಗೆ ಯಾರಲ್ಲಿಯಾದರೂ ಆತ್ಮಜ್ಞಾನವನ್ನು ಬಹು ಪ್ರಯತ್ನದಿಂದ ಇಟ್ಟುಹೋಗಬೇಕು ॥೭॥ ಈ ಯಾವ ಉದ್ಧವನ ಆದ ಅವಸ್ಥೆಯನ್ನು ಕಂಡು ಶ್ರೀಕೃಷ್ಣನಿಗೆ ಬಹಳ ಸಮಾಧಾನವಾಯಿತು. ಆದ್ದರಿಂದ ಆತನು ವೈರಾಗ್ಯಯುಕ್ತ ಸಂಪೂರ್ಣ ಆತ್ಮಜ್ಞಾನದ ಉಪದೇಶವನ್ನು ಮಾಡಲು ಆರಂಭಿಸಿದನು ॥೮॥ ಉದ್ಧವನಿಗೆ ಬ್ರಾಹ್ಮಣರ ಶಾಪದಿಂದ ಉಳಿಸಿಕೊಳ್ಳಲು ಆತನಿಗೆ ಬ್ರಹ್ಮಜ್ಞಾನದ ಉಪದೇಶ ಮಾಡುವುದು ಅವಶ್ಯವಾಗಿತ್ತು. ಏಕೆಂದರೆ ಬ್ರಹ್ಮವೇತ್ತಾನಿಗೆ ಶಾಪದ ಯಾವ ಬಾಧೆಯೂ ಆಗುವುದಿಲ್ಲವೆಂಬುದು ಶ್ರೀಕೃಷ್ಣನು ಅರಿತಿದ್ದನು ॥೯॥ ಬ್ರಹ್ಮೋಪದೇಶವನ್ನು ಕುಶಲತೆಯಿಂದ ಮಾಡುವುದು ಹೇಗೆಂಬುವುದು ಈತನಿಗೆ ತಿಳಿದಿತ್ತು. ಆದ್ದರಿಂದ ಆತ್ಮಜ್ಞಾನದ ಉಪದೇಶವು ಫಲಿಸುವುದಕ್ಕಾಗಿ ಅಂತಹ ವೈರಾಗ್ಯವನ್ನು ಆತನ ಮನದಲ್ಲಿ ಹುಟ್ಟಿಸಿದನು ॥೧೦॥ ತೀವ್ರ ವೈರಾಗ್ಯವು ಇಲ್ಲದಿದ್ದರೆ ಮಾಡಿದ ಉಪದೇಶವು ವ್ಯರ್ಥವಾಗುವುದು. ಈ ವೈರಾಗ್ಯದ ಮಹತ್ವವನ್ನು ಅರಿತುಕೊಂಡೇ ಶ್ರೀಕೃಷ್ಣನು ವೈರಾಗ್ಯ ವಿಷಯವನ್ನು ಹೇಳಲಾರಂಭಿಸಿದನು ॥೧೧॥

ಪಹಿಲೇ ಉದ್ಧವಾಚ್ಯಾ ಬೋಲಾಸೀ । ಅನುಮೋದನ ದೇ ಹೃಷೀಕೇಶೀ । ತೇಣೇ ಅನ್ವಯೇ ಸಾವಕಾಶೀ । ಜ್ಞಾನವೈರಾಗ್ಯ ತ್ಯಾಸೀ ಬೋಲತು ॥೧೨॥

ಶ್ರೀಭಗವಾನುವಾಚ:-

ಯದಾತ್ಥ ಮಾಂ ಮಹಾಭಾಗ ತಚ್ಚಿಕೀರ್ಷಿತ ಮೇತ್ರ ಮೇ । ಬ್ರಹ್ಮಾ ಭವೋ ಲೋಕಪಾಲಾಃ ಸ್ವರ್ವಾಸಂ ಮೇಽಭಿಕಾಂಕ್ಷಿಣಃ ॥೧॥

ಅರ್ಥ:- ಭಗವಾನ ಶ್ರೀಕೃಷ್ಣನು ನುಡಿದನು, ಹೇ ಮಹಾಭಾಗ್ಯಶಾಲಿ ಉದ್ಧವನೇ, ನೀನು ನನಗೆ ಹೇಳಿರುವುದನ್ನು ನಾನು ಮಾಡುವೆ. ಬ್ರಹ್ಮಾ, ಶಂಕರ ಮತ್ತು ಇಂದ್ರ ಇತ್ಯಾದಿ ಲೋಕಪಾಲರೂ ಸಹ ಈಗ ನನ್ನ ವೈಕುಂಠವಾಸದ ಅಕಾಂಕ್ಷೆಯನ್ನು ಮಾಡುತ್ತಿದ್ದಾರೆ.

ಜೋ ವೇದಾಂಚಾ ವೇದವಕ್ತಾ । ಜೋ ಜ್ಞಾನಿಯಾಂಚಾ ಜ್ಞಾನದಾತಾ । ತೋ ಶ್ರೀಕೃಷ್ಣ ಮ್ಹಣೇ ಭಾಗ್ಯವಂತಾ । ಐಕೇ ನಿಜಭಕ್ತಾ ಉದ್ಧವಾ ॥೧೩॥ ಜೇ ತೂ ಬೋಲಿಲಾಸೀ ಭಾವಯುಕ್ತ । ತೇ ವಚನ ತುಝೇ ಸತ್ಯ ಸತ್ಯ । ತೇಚಿ ಮಾಝೇ ಮನೋಗತ । ಜಾಣ ನಿಶ್ಚತ ನಿರ್ಧಾರೇ ॥೧೪॥ ಮಾಝೀ ಅವಸ್ಥಾ ಜಾಣ್ವನೀಳಾ । ಬ್ರಹ್ಮಾದಿದೇವಾ ಸಕಳಾ । ಯೇಥ ಆಲೇ ಹೋತೇ ಮಿಳೋನಿ ಮೇಳಾ । ಲೋಕಪಾಳಾಸಮವೇತ ॥೧೫॥ ಯೇಊನಿ ಮಾಝೀ ಘೇತಲೀ ಭೇಟೀ । ಅಪೇಕ್ಷಾ ಜೇ ಹೋತೀ ಪೋಟೀ । ಪುಶಿಲೀ ಮಾಝ್ಯಾ ಪ್ರಯಾಣಾಚೀ ಗೋಠೀ । ಜೇಣೇ ತುಜ ಮೋಠೀ ಅವಸ್ಥಾ ॥೧೬॥ ಮ್ಯಾ ವೇಗೀ ಯಾವೇ ವೈಕುಂಠಾ । ಹೇ ಸಮಸ್ತಾಸೀ ಉತ್ಕಂಠಾ । ಆದಿಕರೂನಿ ನೀಳಕಂಠಾ । ಸುರವರಿಷ್ಠಾ ಝಾಲೀಸೇ ॥೧೭॥

ಮಯಾ ನಿಷ್ಪಾದಿತಂ ಹ್ಯತ್ರ ದೇವಕಾರ್ಯಮಶೇಷತಃ । ಯದರ್ಥಮವತೀರ್ಣೋಽಹಮಂಶೇನ ಬ್ರಹ್ಮಣಾರ್ಥಿತಃ ॥೨॥

ಅರ್ಥ:- ಭೂಲೋಕದಲ್ಲಿ ದೇವತೆಗಳ ಕಾರ್ಯಗಳೆಲ್ಲವನ್ನೂ ಮಾಡಿ ಪೂರ್ಣಗೊಳಿಸಿದ್ದೇನೆ. ಈ ಕಾರ್ಯಕ್ಕಾಗಿ ಬ್ರಹ್ಮದೇವನ ಪ್ರಾರ್ಥನೆಯನ್ನು ಆಲಿಸಿ ಬಲರಾಮನ ಜೊತೆಯಲ್ಲಿ ನಾನು ಅವತರಿಸಿದೆನು.

ಜ್ಯಾಲಾಗೀ ಬ್ರಹ್ಮೇನಿ ಪ್ರಾರ್ಥಿಲೇ । ತೇ ದೇವಕಾರ್ಯ ಮ್ಯಾ ಸಂಪಾದಿಲೇ । ಅವತಾರ ನಟನಾಟ್ಯ ಧರಿಲೇ । ಜೇಷ್ಠತ್ವ ದಿಧಲೇ ಬಳಿಭದ್ರಾ ॥೧೮॥ ಜೇಷ್ಠಕನಿಷ್ಠ ಭಾವನಾ । ದೋಘಾಮಾಜೀ ನಾಹೀ ಜಾಣಾ । ಕೃಷ್ಣಾ ಆಣಿ ಸಂಕರ್ಷಣಾ । ಏಕಾತ್ಮತಾ ನಿಜಾಂಶೇ ॥೧೯॥

ಕುಲಂವೈ ಶಾಪಾನಿರ್ದಗ್ಧಂ ನಂಕ್ಷ್ಯತ್ಯನ್ಯೋನ್ಯವಿಗ್ರಹಾತ್ । ಸಮುದ್ರಃ ಸಪ್ತಮೇಹ್ನ್ಯೇನಾಂ ಪುರೀಂ ಚ ಪ್ಲಾವಯಿಷ್ಯತಿ ॥೩॥

ಅರ್ಥ:- ಶಾಪದಿಂದ ದಗ್ಧವಾಗಿರುವ ಈ ಯಾದವ ಕುಲವು ತಮ್ಮ ತಮ್ಮಲ್ಲಿಯೇ ಕಲಹ ಮಾಡಿ ನಾಶವಾಗುವುದು ಮತ್ತು ಸಮುದ್ರವು ಏಳನೆಯ ದಿನದಲ್ಲಿ ಈ ನಗರವನ್ನು ಮುಳುಗಿಸಿಬಿಡುವುದು.

ಉರಲೇ ಅಸೇ ಆಮುಚೇ ಕುಳ । ಶಾಪನಿರ್ದಗ್ಧ ಕೇವಳ । ಅನ್ಯೋನ್ಯವಿಗ್ರಹೇ ಸಕಳ । ಕಲಹಮೂಳ ನಾಸೇಲ ॥೨೦॥ ಭೂಮಿ ಮಾಗೋನಿ ಸಮುದ್ರಾಪಾಶೀ । ಮ್ಯಾ ರಚಿಲೇ ದ್ವಾರಕೇಸೀ । ಮಜ ಗೇಲಿಯಾ ನಿಜಧಾಮಾಸೀ । ತೋ ಸಾತವೇ ದಿವಸೀ ಬುಡವೀಲ ॥೨೧॥

ಶ್ರೀಕೃಷ್ಣನು ಪ್ರಥಮತಃ ಉದ್ಧವನ ಮಾತಿಗೆ ಅನುಮೋದಿಸಿದನು.ತದನಂತರ ಆ ಪ್ರಸಂಗದಿಂದ ಮೆಲ್ಲಮೆಲ್ಲನೇ ಆತನಲ್ಲಿ ಜ್ಞಾನ ಮತ್ತು ವೈರಾಗ್ಯದ ವಿಷಯಗಳನ್ನು ಹೇಳಹತ್ತಿದನು ॥೧೨॥

ಯಾವ ವೇದಗಳ ವೇದವಕ್ತಾನಾಗಿರುವ, ಯಾವ ಜ್ಞಾನದ ಜ್ಞಾನದಾತಾನಾಗಿರುವ, ಆ ಶ್ರೀಕೃಷ್ಣನು ತನ್ನ ಭಾಗ್ಯವಂತನಾದ ನಿಜಭಕ್ತನಿಗೆ ಹೀಗೆ ಹೇಳಿದನು. ಹೇ ಉದ್ಧವನೇ ಕೇಳು, ॥೧೩॥ ನೀನೇನು ಭಕ್ತಿಯಿಂದ ನುಡಿದಿರುವ ನಿನ್ನ ವಚನಗಳು ಸಂಪೂರ್ಣವಾಗಿ ನಿಜವಾಗಿವೆ. ನನ್ನ ಮನೋಗತವೂ ಕೂಡ ಹಾಗೆಯೇ ಇದೆ ॥೧೪॥ ನನ್ನ ಸ್ಥಿತಿಯು ಏನಾಗಿದೆ ಎಂಬುವುದು ನೀನು ಅರಿತಿರುವೆ. ಶಂಕರ, ಬ್ರಹ್ಮದೇವ ಇತ್ಯಾದಿ ಸರ್ವ ದೇವತೆಗಳಿಗೆ ನನ್ನ ಆತುರತೆ ಹತ್ತಿರುವುದು. ಲೋಕಪಾಲ ಸಹ ಅವರ ಮೇಳವು ಬಂದು ಹೋಯಿತು ॥೧೫॥ ಅವರೆಲ್ಲರೂ ನನ್ನನ್ನು ಸಂದರ್ಶಿಸಿದರು. ಹಾಗೆಯೇ ನನ್ನ ಪ್ರಯಾಣದ ವಿಷಯವನ್ನು ಎತ್ತಿದರು. ಆದ್ದರಿಂದ ನಿನ್ನ ಈ ವ್ಯಾಕುಲಸ್ಥಿತಿಯು ಉಂಟಾಗಿರುವುದು ॥೧೬॥ ಆದರೆ ಶಂಕರ, ಬ್ರಹ್ಮದೇವ ಇತ್ಯಾದಿ ಸರ್ವದೇವತೆಗಳವರಿಗೆ ವೈಕುಂಠಕ್ಕೆ ತೀವ್ರವಾಗಿ ಬರಬೇಕೆಂಬ ಉತ್ಕಟೇಚ್ಛೆಯಾಗಿದೆ ॥೧೭॥

ಯಾವ ಕಾರ್ಯಕ್ಕಾಗಿ ಬ್ರಹ್ಮದೇವನು ನನ್ನ ಪ್ರಾರ್ಥನೆಯನ್ನು ಮಾಡಿದ್ದನೋ, ಆ ಎಲ್ಲ ದೇವಕಾರ್ಯಗಳನ್ನು ನಾನು ಪೂರ್ಣಗೊಳಿಸಿರುವೆನು. ನಾನು ಮನುಷ್ಯರೂಪದಲ್ಲಿ ಮಾಯಿಕ ಅವತಾರವನ್ನು ಧರಿಸಿದೆನು ಮತ್ತು ಬಲರಾಮನಿಗೆ ಯಜಮಾನತ್ವವನ್ನು ಕೊಟ್ಟೆನು ॥೧೮॥ ಹೀಗಿದ್ದರೂ ನಮ್ಮಿಬ್ಬರಲ್ಲಿ ಜೇಷ್ಠಕನಿಷ್ಠ ಭಾವನೆ ಇರುವುದಿಲ್ಲ. ಕೃಷ್ಣ ಮತ್ತು ಬಲರಾಮ ಇವರಲ್ಲಿ ನಿಜಾಂಶದಿಂದ ಏಕಾತ್ಮತೆಯು ಇರುವುದು ॥೧೯॥

ವಿಪ್ರಶಾಪದಿಂದ ಬೆಂದುಕೊಂಡಿರುವ ನಮ್ಮ ಕುಲವು ಮಾತ್ರ ಉಳಿದುಕೊಂಡಿದೆ. ಅವರು ಪರಸ್ಪರರಲ್ಲಿ ಕಲಹ ಮಾಡಿ ನಾಶವಾಗುವರು ॥೨೦॥ ನಾನು ಸಮುದ್ರದಿಂದ ಭೂಮಿಯನ್ನು ಬೇಡಿಕೊಂಡು ಅದರ ಮೇಲೆ ದ್ವಾರಕಾನಗರವನ್ನು ನಿರ್ಮಿಸಿರುವೆನು. ನಾನು ನಿಜಧಾಮಕ್ಕೆ ಹೋಗಲು ಅಲ್ಲಿಂದ ಏಳನೆಯ ದಿನದಲ್ಲಿ ಸಮುದ್ರವು ದ್ವಾರಕೆಯನ್ನು ಮುಳುಗಿಸುವುದು ॥೨೧॥

ಯರ್ಹ್ಯೇವಾಯಂ ಮಯಾ ತ್ಯಕ್ತೋ ಲೋಕೋಽಯಂ ನಷ್ಟಮಂಗಲಃ । ಭವಿಷ್ಯತ್ಯಚಿರಾತ್ ಸಾಧೋ ಕಲಿನಾಪಿ ನಿರಾಕೃತಃ ॥೪॥

ಅರ್ಥ:- ಪ್ರಿಯ ಉದ್ಧವನೇ, ಸದ್ಯದಲ್ಲಿಯೇ ನಾನು ಈ ಭೂಮಿಯನ್ನು ಪರಿತ್ಯಾಗ ಮಾಡುವೆನು. ಆ ಬಳಿಕ ಕಲಿಯುಗವು ಆಕ್ರಮಿಸುವುದು. ಅದರಿಂದ ಭೂಮಿ ಮಂಗಲಕರ ಧರ್ಮನಿಷ್ಠೆಯನ್ನು ಕಳೆದುಕೊಳ್ಳುವುದು.

ಐಕೇ ಉದ್ಧವಾ ಹಿತಗೋಷ್ಟೀ । ಮ್ಯಾ ಸಾಂಡಲಿಯಾ ಹೇ ಸೃಷ್ಟಿ । ಥೋಡಿಯಾಚಿ ಕಾಳಾಪಾಠೀ । ನಷ್ಟದೃಷ್ಟೀ ಜನ ಹೋತೀ ॥೨೨॥ ಅಧರ್ಮ ವಾಢೇಲ ಪ್ರಬಳ । ಲೋಕ ಹೋತೀಲ ನಷ್ಟ ಅಮಂಗಳ । ತೇ ಅಮಂಗಳತೇಚೀ ಮೂಳ । ಐಕ ಸಮೂಳ ಸಾಂಗೇನ ॥೨೩॥ ಮಜ ನಾಂದತಾ ಯೇ ಸೃಷ್ಟೀ । ಕಲೀ ಉಘಡೂ ನ ಶಕೇ ದೃಷ್ಟೀ । ಮಜ ಗೇಲಿಯಾಪಾಠೀ । ತೋ ಉಠಾಉಠೀ ಉಠೇಲ ॥೨೪॥ ಕಲಿ ವಾಢೇಲ ಅತಿವಿಷಮ । ಬ್ರಾಹ್ಮಣ ಸಾಂಡತೀಲ ಸ್ವಧರ್ಮ । ಸ್ವಭಾವೇ ನಾವಡೇ ದಾನಧರ್ಮ । ಕ್ರಿಯಾಕರ್ಮ ದಂಭಾರ್ಥ ॥೨೫॥

ನ ವಸ್ತವ್ಯಂ ತ್ವಯೈವೇಹ ಮಯಾ ವಕ್ತೇ ಮಹೀತಲೇ । ಜನೋಽಧರ್ಮರುಚಿರ್ಭದ್ರ ಭವಿಷ್ಯತಿ ಕಲೌ ಯುಗೇ ॥೫॥

ಅರ್ಥ:- ನಾನು ಈ ಭೂಮಿಯನ್ನು ತ್ಯಜಿಸಲು ಆಗ ನೀನು ಇಲ್ಲಿರಬೇಡ. ಕಾರಣ ಕಲಿಯುಗದಲ್ಲಿ ಅಧಿಕಾಂಶ ಜನರಲ್ಲಿ ಅಧರ್ಮವೇ ಪ್ರಿಯವಾಗುವುದು.

ಮ್ಯಾ ಸಾಂಡಿಲಿಯಾ ಮಹೀತಳೀ । ಪ್ರಬಳ ಬಳೇ ವಾಢೇಲ ಕಳೀ । ಆಜೀಚ ತುವಾ ನಿಘಿಜೇ ತತ್ಕಾಳೀ । ಜಂವ ತೋ ಕಾಳೀ ನಾತಳೇ ॥೨೬॥ ಕಳೀ ಆತಳೇಲ ತೇವ್ಹಾ । ಜನಿ ಅಧರ್ಮು ವಾಢೇಲ ತೇವ್ಹಾ । ಕುವಿದ್ಯೇಚ್ಯಾ ಉಠತೀ ಹಾಂವಾ । ಸೈಂಘ ಧಾಂವಾ ನಿಂದೇಚ್ಯಾ ॥೨೭॥ ನ ಲಭೇ ಸ್ವಾರ್ಥಾಚೀ ಕವಡೀ । ತರೀ ಕರಿತೀ ನಿಂದೇಚ್ಯಾ ಕೋಡೀ । ಐಸೀ ಕಲಿಯುಗೀ ವಸ್ತೀ ಕುಡೀ । ತುವಾ ಅರ್ಧ ಘಡೀ ನ ರಹಾವೇ ॥೨೮॥

ತ್ವಂ ತು ಸರ್ವ ಪರಿತ್ಯಜ್ಯ ಸ್ನೇಹಂ ಸ್ವಜನಬಂಧುಷು । ಮಯ್ಯಾವೇಶ್ಯ ಮನಃ ಸಮ್ಯಕ್ ಸಮದೃಗ್ವಿಚರಸ್ವ ಗಾಮ್ ॥೬॥

ಅರ್ಥ:- ಈಗ ನೀನು ಸ್ವಜನ, ಬಂಧು ಬಳಗದ ಸ್ನೇಹ ಸಂಬಂಧವನ್ನು ಬಿಟ್ಟುಬಿಡು ಮತ್ತು ಅನನ್ಯಭಾವದಿಂದ ನನ್ನಲ್ಲಿ ಮನಸ್ಸಿಟ್ಟು ಸರ್ವದರಲ್ಲಿಯೂ ಸಮದೃಷ್ಟಿಯನ್ನಿಟ್ಟು ಪೃಥ್ವಿಯಲ್ಲಿ ಸಂಚಾರ ಮಾಡು.

ಉದ್ಧವಾ ತೂ ಯಾಲಾಗೀ । ಯೇಥೋನಿ ನಿಘಾವೇ ವೇಗೀ । ಏಕಲಾಚಿ ಅಂಗೋವಾಂಗೀ । ಹಿತಾಲಾಗೀ ಸರ್ವಥಾ ॥೨೯॥ ಧನಧಾನ್ಯಸಮೃದ್ಧೀಸೀ । ಸಾಂಡಾವೇ ಸ್ವಜನಗೋತ್ರಜಾಂಸೀ । ಭ್ರಾತಾದುಹಿತಾನಿಜಭಗಿನೀಸೀ । ಸ್ತ್ರೀ-ಪುತ್ರಾಸೀ ತ್ಯಜಾವೇ ॥೩೦॥ ಸ್ನೇಹೋ ಠೇವೂನಿ ಘರದಾರೀ । ಅಂಗೇ ತೂ ಜರೀ ನಿಘಾಲಾಸಿ ಬಾಹೇರೀ । ತರೀ ತೋ ತ್ಯಾಗೂಚಿ ಕಠಿಣಭಾರೀ । ಅನರ್ಥಕಾರೀ ಹೋಈಲ ॥೩೧॥ ಆಧೀ ಸಮೂಳ ಸ್ನೇಹೋ ಸಾಂಡಾವಾ । ಪಾಠೀ ಅಭಿಮಾನುಹೀ ದಂಡಾವಾ । ವಾಸನಾ ಜಟಾಜೂಟ ಮುಂಡಾವಾ । ಮಗ ಸಾಂಡಾವಾ ಆಶ್ರಮು ॥೩೨॥

ಹೇ ಉದ್ಧವನೇ, ನಿನಗೆ ಹಿತ ವಚನಗಳನ್ನು ಹೇಳುವೆ, ಅದನ್ನು ಕೇಳು. ನಾನು ಈ ಜಗತ್ತನ್ನು ಬಿಟ್ಟು ಹೋದ ಕೆಲವೇ ಕಾಲದಲ್ಲಿ ಜನರು ವಿವೇಕರಹಿತರಾಗುವರು ॥೨೨॥ ಅಧರ್ಮವು ಬಲಿಷ್ಠವಾಗಿ ಬೆಳೆಯುವುದು. ಜನರು ನಷ್ಟಕಾರಕ, ಅಮಂಗಲಕಾರಕರಾಗುವರು. ಈ ಅಮಂಗಲದ ಸಂಪೂರ್ಣ ಕಾರಣವನ್ನು ಹೇಳುವೆ, ಕೇಳು ॥೨೩॥ ನಾನು ಎಲ್ಲಿಯವರೆಗೆ ಈ ಜಗತ್ತಿನಲ್ಲಿ ವ್ಯವಹರಿಸುವೆನೋ, ಅಲ್ಲಿಯವರೆಗೆ ಕಲಿಯು ಇವರಿಗೆ ಕಣ್ಣು ತೆರೆದು ಸಹ ನೋಡಲಾರನು. ಆದರೆ ನಾನು ಇಲ್ಲಿಂದ ಹೊರಡುವುದೇ ತಡ, ಗಡಬಡಿಸಿ ಏಳುವನು ॥೨೪॥ ಕಲಿಯ ಶಕ್ತಿಯು ಬಹುವಾಗಿ ಬೆಳೆಯಿತೆಂದರೆ, ಬ್ರಾಹ್ಮಣರು ತಮ್ಮ ಸ್ವಧರ್ಮವನ್ನು ಬಿಡುವರು. ದಾನ ಧರ್ಮಗಳು ಸ್ವಭಾವತಃ ಪ್ರಿಯವಾಗಲಾರವು. ಕೇವಲ ಡಾಂಭಿಕತನದಿಂದ ಕ್ರಿಯಾ ಕರ್ಮಗಳನ್ನು ಮಾಡುವರು ॥೨೫॥

ನಾನು ಈ ಪೃಥ್ವಿಯನ್ನು ಬಿಟ್ಟು ಹೊರಡಲು ಕಲಿಯು ಅತ್ಯಂತ ಪ್ರಬಲನಾಗಿ ಅನಿಷ್ಟಕ್ಕೆ ಕಾರಣನಾಗುವನು. ಆದ್ದರಿಂದ ಆ ಕಲಿಯು ಈ ಭೂಮಿಯನ್ನು ಸ್ಪರ್ಶಮಾಡುವುದಕ್ಕಿಂತ ಮುಂಚಿತವಾಗಿಯೇ ಈಗಿಂದೀಗಲೇ ನೀನು ಹೊರಡುವ ಸಿದ್ಧತೆಮಾಡು ॥೨೬॥ ಕಲಿಯು ಪ್ರವೇಶನಾದನೆಂದರೆ ಜನರಲ್ಲಿ ಅಧರ್ಮವು ಬೆಳೆಯುವುದು. ಹಾಗೂ ಕುವಿದ್ಯೆಯ ಬಯಕೆ ಬೆಳೆಯುವುದು. ನಿಂದೆಯ ಹೋರಾಟ ಆರಂಭಿಸುವುದು ॥೨೭॥ ಕವಡಿಯಷ್ಟು ಲಾಭವಿಲ್ಲದಿದ್ದರೂ ಜನರು ನಿಂದೆಯ ರಾಶಿಯನ್ನೇ ರಚಿಸುವರು. ಹೀಗೆ ಕಲಿಯುಗದ ವಸ್ತಿಯು ಬಹಳ ಕೆಟ್ಟದ್ದಾಗಿದೆ. ಆದ್ದರಿಂದ ನೀನು ಅರ್ಧ ಘಳಿಗೆ ಕೂಡ ಇಲ್ಲಿರಬೇಡ ॥೨೮॥

ಅದಕ್ಕಾಗಿ ಹೇ ಉದ್ಧವನೇ, ನಿನ್ನ ಕಲ್ಯಾಣಕ್ಕಾಗಿ ನೀನು ಒಬ್ಬನೇ ಬೇಗ ಹೊರಟು ಹೋಗು ॥೨೯॥ ಧನಧಾನ್ಯಗಳ ಕೋಠಾರಗಳು ಇರಬಹುದು. ಆದರೆ ಅವುಗಳನ್ನು ಒಗೆದುಬಿಡು. ಸ್ವಜನಗೋತ್ರಜರನ್ನು ತ್ಯಜಿಸು. ನಿನ್ನ ಹೆಂಡತಿ, ಮಕ್ಕಳು, ಅಣ್ಣ-ತಮ್ಮ, ಅಕ್ಕ-ತಂಗಿ ಇವರ ಆಶೆಯನ್ನು ಹಿಡಿಯಬೇಡ ॥೩೦॥ ಮನೆಮಾರುಗಳಲ್ಲಿ ನೀನು ಸ್ನೇಹವನ್ನಿಟ್ಟು ಹೊರನೋಟಕ್ಕೆ ದೇಹದಿಂದ ಹೊರಗೆ ಹೋದರೆ ಇಂತಹ ತ್ಯಾಗವು ಕಷ್ಟಕ್ಕೆ ಗುರಿಯಾಗಿ ಅನರ್ಥಕಾರಕವಾಗುವುದು ॥೩೧॥ ಪ್ರಾರಂಭದಲ್ಲಿ ಸಂಪೂರ್ಣ ಸ್ನೇಹವನ್ನು ಬಿಡಬೇಕು. ತದನಂತರ ಅಭಿಮಾನವನ್ನು ಒಗೆಯಬೇಕು. ಆ ಮೇಲೆ ವಾಸನಾರೂಪ ಜಡೆಯ ಮುಂಡನ ಮಾಡಬೇಕು. ಕೊನೆಯಲ್ಲಿ ಆಶ್ರಮವನ್ನು ತ್ಯಜಿಸಬೇಕು॥೩೨॥

"ಸ್ನೇಹೋ ಕೈಸೇನಿ ಸಾಂಡೇ । ಅಭಿಮಾನು ಕೈಸೇನಿ ದಂಡೇ"। ಹೇ ತುಜ ವಾಟೇಲ ಸಾಂಕಡೇ । ತರೀ ರೋಕಡೇ ಪರಿಯೇಸೀ ।।೩೩।। ಮಾಝೇ ಸ್ವರೂಪ ಜೇ ಸರ್ವಗತ । ತೇಥ ಠೇವೋನಿಯಾ ಚಿತ್ತ । ಸಾವಧಾನೇ ಸುನಿಶ್ಚಿತ । ರಾಹಾವೇ ಸತತ ನಿಜರೂಪೀ ।।೩೪।। ತಯೇ ಸ್ವರೂಪೀ ಚಿತ್ತಾ । ನಿರ್ಧಾರೇಸೀ ಧಾರಣಾ ಧರಿತಾ । ನಿಜಭಾವೇ ತನ್ಮಯತಾ । ತದ್ರೂಪತಾ ಪಾವೇಲ ।।೩೫।। ಭೃಂಗೀ ಜಡ ಕೀಟೀ ಮೂಢ । ಧ್ಯಾನೇ ತದ್ರೂಪ ಹೋಯ ದೃಢ । ಅಭ್ಯಾಸೀ ಕಾಂಹೀ ನಾಹೀ ಅವಘಡ । ತೋ ಅಭ್ಯಾಸ ಗೂಢ ವಿಶದ ಕೇಲಾ ।।೩೬।। ಮಾಝೇ ಸ್ವರೂಪ ಜ್ಞಾನಘನ । ಧ್ಯಾತಾ ಜೀವು ಸ್ವಯೇ ಸಜ್ಞಾನ । ಯಾ ಸ್ಥಿತೀ ಕರಿತಾ ಧ್ಯಾನ । ಸಹಜೇ ಜಾಣ ತದ್ರೂಪ ।।೩೭।। ತೇಥ ಸಮಸಾಮ್ಯೇ ಸಮಸ್ತ । ಸಮತ್ವ ಪಾವೇಲ ಚಿತ್ತ । ತೇಣೇ ಸಮಭಾವೇ ನಿಶ್ಚಿತ । ತೇಥೀಂಚಾ ತೇಥ ರಹಾವೇ ।।೩೮।। ಆಧೀ ಗ್ರಹಾಶ್ರಮಾತೇ ತ್ಯಾಗಾವೇ । ಮಗ ಮ್ಯಾ ಮ್ಹಣೆಸೀ ಕೋಠೇ ರಾಹಾವೇ । ಐಸೇ ಮಾನಿಸೀಲ ಸ್ವಭಾವೇ । ತೇವಿಖೀ ಬರವೇ ಪರಿಯೇಸೀ ।।೩೯।। ಸ್ವರೂಪಸಾಮ್ಯೇ ಸಮದೃಷ್ಟೀ । ಸಮಭಾವೇ ವಿಚರೇ ಸೃಷ್ಟೀ । ನಿವಾಸಸ್ಥಾನಾಂಚೀ ಆಟಾಟೀ । ಸರ್ವಥಾ ಪೋಟೀ ನ ಧರಾವೀ ।।೪೦।। ಜೇಥ ಅಲ್ಪ ಕಾಳ ವಸತೀ ಘಡೇ । ತ್ಯಾ ಠಾಯಾಚಾ ಅಭಿಮಾನ ಚಢೇ । ವಸತಿಸ್ಥಾನ ಐಸೇ ಕುಡೇ । ವಸ್ತೀಚೇ ಸಾಂಕಡೇ ಸರ್ವಥಾ ನ ಧರೀ ।।೪೧।। ತೂ ಸರ್ವೀ ಸರ್ವಗತ ಹೋಸೀ । ಸರ್ವಾಧಾರ ಸರ್ವದೇಶೀ । ಐಸಾ ಮೀ ಹೋಊನ ಮಜ ಪಾವಸೀ । ನ ಹಾಲತಾ ಯೇಸೀ ನಿಜಧಾಮಾ ।।೪೨।। "ಮಜ ನಿಜಧಾಮಾ ನ್ಯಾವೇ"। ಹೋತೇ ಪುಶಿಲೇ ಉದ್ಧವೇ । ತೇ ನಿಜಬೋಧಸ್ವಭಾವೇ । ಸ್ವಯೇ ಕೇಶವೇ ಸಾಂಗಿತಲೇ ।।೪೩।। ನ ಕರಿತಾ ಹೇ ಉಪಾಯಸ್ಥಿತೀ । ಸರ್ವಥಾ ನ ಘಡೇ ಮಾಝೀ ಪ್ರಾಪ್ತೀ । ಮಗ ತೂ ನಿಜಧಾಮಾಪ್ರತೀ । ಕೈಶಾ ಗತೀ ಯೇಶೀಲ ।।೪೪।। ಗರುಡೀ ವಾಊನಿ ವೇಗೇಸೀ । ನ್ಯಾವೇ ನಿಜಧಾಮಾ ಮ್ಹಣಸೀ । ಗತಿ ತೇಥ ನಾಹೀ ಪಾಖಾಂಸೀ । ಗಮ್ಯ ಗರುಡಾಸೀ ತೇ ನವ್ಹೇ ।।೪೫।। ಸಾಂಡೂನಿ ಉಭಯ ಪಕ್ಷಾಂಸೀ । ಸಾಧಕ ಪಾವತೀ ಮದ್ರೂಪಾಸೀ । ಪಕ್ಷಾಭಿಮಾನ ಅಸೇ ಗರುಡಾಸೀ । ಗಮನ ತ್ಯಾಸೀ ತೇಣೇ ನವ್ಹೇ ।।೪೬।। ಮ್ಹಣವೀ ನ್ಯಾವೇ ಘೇವೋನಿ ಖಾಂದೀ । ಮಜ ಖಾಂದಾಚಿ ನಾಹೀ ತ್ರಿಶುದ್ಧೀ । ತುಜ ನ ಸಾಂಡಿತಾ ಅಹಂಬುದ್ಧೀ । ಗಮನಸಿದ್ಧೀ ತೇಥ ನಾಹೀ ।।೪೭।।

ಸ್ನೇಹವನ್ನು ಹೇಗೆ ನಷ್ಟಗೊಳಿಸಬೇಕು? ಅಭಿಮಾನವನ್ನು ಹೇಗೆ ಬಿಡಬೇಕು ಎಂದು ನಿನಗೆ ತೋಂದರೆ ಅನಿಸಬಹುದು. ಹಾಗಾದರೆ ಹೇಳುವೆ, ಸರಿಯಾಗಿ ಕೇಳು ।।೩೩।। ನನ್ನ ಸರ್ವವ್ಯಾಪಿಯಾಗಿರುವ ಸ್ವರೂಪದಲ್ಲಿ ನಿನ್ನ ಚಿತ್ತವನ್ನು ಸರ್ವದಾ ಸ್ಥಿರಗೊಳಿಸಿ ನಿಶ್ಚಯಪೂರ್ವಕವಾಗಿ ನಿರಂತರ ಎಚ್ಚರದಿಂದಿರಬೇಕು ।।೩೪।। ಈ ಯಾವ ನನ್ನ ಸ್ವರೂಪದಲ್ಲಿ ನಿಶ್ಚಯಪೂರ್ವಕವಾಗಿ ಚಿತ್ತವನ್ನು ಏಕಾಗ್ರಗೊಳಿಸಲು ಭಕ್ತಿಯಿಂದ ಅದು ತನ್ಮಯಗೊಂಡು ತದ್ರೂಪವಾಗುವುದು ।।೩೫।। ಭೃಂಗವು ಜಡವಾಗಿರುವುದು. ಕೀಟವು ಮೂಢವಾಗಿರುವುದು. ಆದರೂ ದೃಢವಾದ ಧ್ಯಾನದಿಂದ ಕೀಟವು ತದ್ರೂಪವಾಗುವುದು. ಆದ್ದರಿಂದ ಅಭ್ಯಾಸದಿಂದ ಯಾವುದೂ ಅಸಾಧ್ಯವಿಲ್ಲ. ಈ ಗೂಢವಾದ ಅಭ್ಯಾಸವನ್ನು ನಾನು ವಿಶದಗೊಳಿಸಿರುವೆನು ।।೩೬।। ನನ್ನ ಸ್ವರೂಪವು ನೋಡಿದರೆ ಜ್ಞಾನಘನವಾಗಿದೆ. ಮತ್ತು ಧ್ಯಾನ ಮಾಡುವ ಜೀವವೂ ಸಹ ಸಜ್ಞಾನವೇ ಆಗಿದೆ. ಆದ್ದರಿಂದ ಈ ರೀತಿಯಲ್ಲಿ ಧ್ಯಾನಿಸುವುದರಿಂದ ಜೀವವು ತದ್ರೂಪವಾಗಿ ಸಹಜ ತಾದಾತ್ಮ್ಯ ಹೊಂದುವುದು ।।೩೭।। ಅಲ್ಲಿ ಎಲ್ಲವೂ ಸಮದೃಷ್ಟೀಯೇ ಆಗುತ್ತಿರುವುದರಿಂದ ಚಿತ್ತವೂ ಸಮತ್ವಕ್ಕೆ ಪ್ರಾಪ್ತವಾಗುವುದು. ಆ ಸಮಭಾವದಲ್ಲಿ ನಿಶ್ಚಯಪೂರ್ವಕವಾಗಿ ಇರಬೇಕು ।।೩೮।। ಮೊದಲು ಗೃಹಸ್ಥಾಶ್ರಮವನ್ನು ಬಿಡಬೇಕು. ಹೀಗಾದಮೇಲೆ ನಾನೆಲ್ಲಿರಬೇಕೆಂಬ ವಿಚಾರವು ನಿನ್ನ ಮನದಲ್ಲಿ ಬರುವುದು ಸ್ವಾಭಾವಿಕವಾಗಿದೆ. ಆ ವಿಷಯಕ್ಕೆ ಈಗ ಹೇಳುವೆ, ಸರಿಯಾಗಿ ಕೇಳು ।।೩೯।। ಸ್ವರೂಪ ಸಾಮ್ಯದಿಂದ ಸಮದೃಷ್ಟಿಯು ಬರುವುದು. ಈ ಸಮದೃಷ್ಟಿಯಿಂದ ನೀನು ಸೃಷ್ಟಿಯಲ್ಲಿ ಸಂಚರಿಸುತ್ತ ಇರು. ಇರುವ ಸ್ಥಾನಕ್ಕಾಗಿ ನೀನು ಮನದಲ್ಲಿ ಚಿಂತೆ ಅಥವಾ ಯೋಚನೆ ಮಾಡಬೇಡ ।।೪೦।। ಯಾವುದಾದರೂ ಒಂದು ಸ್ಥಳದಲ್ಲಿ ಅಲ್ಪಕಾಲವಿರಲು ಆ ಸ್ಥಳದ ಅಭಿಮಾನವು ಬೆಳೆಯಲಾರಂಭಿಸುವುದು. ಹೀಗೆ ಈ ವಸತಿ ಸ್ಥಾನವು ಕೆಡಕಾಗಿರುವುದು. ಆದ್ದರಿಂದ ನೀನು ಇರುವ ಸ್ಥಾನದ ಚಿಂತೆಯನ್ನು ಸ್ವಲ್ಪಾದರೂ ಮಾಡಬೇಡ ।।೪೧।। ನೀನು ನನ್ನಂತೆಯೇ ಸರ್ವವ್ಯಾಪಿ ಆದರೆ ಮಾತ್ರ ನನ್ನನ್ನು ಪ್ರಾಪ್ತ ಮಾಡಿಕೊಳ್ಳುವೆ. ಇದ್ದಸ್ಥಳದಿಂದ ಅಲುಗಾಡದೇ ನಿಜಧಾಮಕ್ಕೆ ಬರುವೆ ।।೪೨।। "ನನ್ನನ್ನು ನಿಜಧಾಮಕ್ಕೆ ಒಯ್ಯಿರಿ" ಎಂದು ಉದ್ಧವನು ವಿನಂತಿಸಿದ್ದನು. ಅದರ ಉತ್ತರವನ್ನು ಶ್ರೀಕೃಷ್ಣನು ಆತ್ಮಬೋಧೆಯ ರೂಪದಿಂದ ಕೊಟ್ಟನು ।।೪೩।। ಈ ಉಪಾಯವನ್ನು ನೀನು ಮಾಡದಿದ್ದರೆ, ನನ್ನ ಪ್ರಾಪ್ತಿಯು ನಿನಗೆ ಎಂದೂ ಆಗಲಾರದು. ಹಾಗಾದರೆ ನೀನು ನಿಜಧಾಮಕ್ಕೆ ಯಾವ ಮಾರ್ಗದಿಂದ ಬರುವೆ? ।।೪೪।। "ಗರುಡನ ಮೇಲೆ ಕುಳ್ಳಿರಿಸಿ ನನ್ನನ್ನು ನಿಜಧಾಮಕ್ಕೆ ಬೇಗನೇ ಒಯ್ಯಿರಿ" ಎಂದು ಹೇಳುವೆ. ಆದರೆ ಅಲ್ಲಿ ರೆಕ್ಕೆಗಳ ಗತಿಯು ಇಲ್ಲದಿರುವುದರಿಂದ ಗರುಡನ ಪ್ರವೇಶವೂ ಆಗಲು ಸಾಧ್ಯವಿಲ್ಲ ।।೪೫।। ಸಾಧಕರು ಎರಡೂ ಪಕ್ಷಗಳನ್ನು ಬಿಟ್ಟು ನನ್ನಲ್ಲಿ ಏಕರೂಪರಾಗುತ್ತಾರೆ. ಆದರೆ ಗರುಡನು ಪಕ್ಷಗಳ ಅಭಿಮಾನಿಯಾಗಿರುವುದರಿಂದ ಅಲ್ಲಿ ಆತನಿಗೆ ಹೋಗಲು ಆಗುವುದಿಲ್ಲ ।।೪೬।। ನನ್ನನ್ನು ಹೆಗಲಮೇಲೆ ಹೊತ್ತುಕೊಂಡು ಹೋಗಲು ನೀನು ಹೇಳಿದರೆ ನನಗೆ ಮೂಲತಃ ಹೆಗಲೇ ಇಲ್ಲ. ಆದ್ದರಿಂದ ನಿನಗೆ ಅಹಂಕಾರವನ್ನು ಬಿಡದ ಹೊರತಾಗಿ ಅಲ್ಲಿಗೆ ಬರಲು ಸಾಧ್ಯವೇ ಇಲ್ಲ ।।೪೭।।

ನ ತ್ಯಾಗಿತಾ ಅಹಂಭಾವಸ್ಥಿತೀ । ಕೇಲ್ಯಾ ನಾನಾ ಉಪಾಯಯುಕ್ತೀ । ತೇಣೇ ನಿಜಧಾಮಾಪ್ರತೀ । ನವ್ಹೇ ಗತೀ ಸರ್ವಥಾ ।೪೮।। ಜೇ ಜೇ ದೇಖಸೀ ಸಾಕಾರ । ತೇ ತೇ ಜಾಣ ಪಾ ನಶ್ವರ । ತೇಚಿ ವಿಖೀಚಾ ನಿರ್ಧಾರ । ಕರೀ ಸಾಚಾರ ನಿಜಬೋಧೇ।೪೯।।

ಯದಿದಂ ಮನಸಾ ವಾಚಾ ಚತುರ್ಭ್ಯಾ ಶ್ರವಣಾದಿಭಿಃ ।
ನಶ್ವರಂ ಗೃಹ್ಯಮಾಣಂ ಚ ವಿದ್ಧಿ ಮಾಯಾಮನೋಮಯಮ್ ।೭।।

ಅರ್ಥ:- ಈ ಜಗತ್ತಿನಲ್ಲಿ ಮನಸ್ಸಿನಿಂದ ವಿಚಾರ ಮಾಡುವ, ವಾಣಿಯಿಂದ ನುಡಿಯುವ, ನೇತ್ರಗಳಿಂದ ಕಾಣುವ, ಶ್ರವಣ ಇತ್ಯಾದಿ ಇಂದ್ರಿಯಗಳಿಂದ ಅನುಭವಕ್ಕೆ ಬರುವುದೆಲ್ಲವೂ ನಾಶಿವಂತವಾಗಿವೆ. ಸ್ವಪ್ನದಂತೆ ಮನಸ್ಸಿನ ವಿಲಾಸವಾಗಿದೆ. ಆದ್ದರಿಂದ ಇವೆಲ್ಲವೂ ಮಾಯಾರೂಪವಾಗಿವೆ ಅಸತ್ಯವಾಗಿವೆ ಎಂದು ತಿಳಿ.

ಜೇ ಜೇ "ದೃಷ್ಟೀ" ದೇಖಿಲೇ । ತೇ ತೇ ದೃಶ್ಯತ್ವೇ ವಾಳಿಲೇ । ಜೇ ಜೇ "ಶ್ರವಣಾ" ಗೋಚರ ಝಾಲೇ । ತೇಹೀ ವಾಳಿಲೇ ಶಬ್ದತ್ವೇ ।೫೦।। ಜೇ ಜೇ "ವಾಚಾ" ವದೇ । ತೇ ತೇ ವಾಳಿಜೇ ಜಲ್ಪವಾದೇ । ವಾಚಿಕ ಸಾಂಡವಿಲೇ ವೇದೇ । "ನೇತಿ" ಶಬ್ದೇ ಲಾಜಿಲಾ ।೫೧।। ಜೇ ಜೇ "ಸಂಕಲ್ಪೇ" ಆಕಳಿಲೇ । ತೇ ತೇ ಕಲ್ಪಿತ ಪೈ ಝಾಲೇ । ಜೇ ಜೇ "ಅಹಂಕಾರಾ" ಆಲೇ । ತೇ ತೇ ವಾಳಿಲೇ ವಿಜಾತೀಯ ।೫೨।। ಜೇ ಜೇ "ಇಂದ್ರಿಯಾ" ಗೋಚರೇ । ತೇ ತೇ ಜಾಣ ಪಾ ನಶ್ವರೇ । ಹೇ ನಿತ್ಯಾನಿತ್ಯ ವಿಚಾರೇ । ಕೇಲೇ ಖರೇ ನಿಶ್ಚಿತ ।೫೩।। ತೋಹೀ "ನಿತ್ಯಾನಿತ್ಯ ವಿವೇಕ" । ಜಾಣ ಪಾ ನಿಶ್ಚಿತ ಮಾಯಿಕ । ಏವಂ ಮಾಯಾಮಯ ಹಾ ಲೋಕ । ಕರೀ ಸಂಕಲ್ಪ ಸೃಷ್ಟೀ ತೇ ।೫೪।। ಜೇವ್ಹಡಾ ದೇಖಸೀ ಸಂಸಾರ । ತೇವ್ಹಡಾ ಮಾಯಿಕ ವ್ಯವಹಾರ । ಹಾ ವೋಳಖ ತೂ ಸಾಚಾರ । ಧೈರ್ಯ ನಿರ್ಧಾರ ಧರೋನೀ ।೫೫।। ಜೈಶೀ ಸ್ವಪ್ನೀಂಚೀ ರಾಣೀವ । ಕೇವಳ ಭ್ರಮಚಿ ಜಾಣೀವ । ತೈಸೇಚಿ ಜಾಣ ಹೇ ಸರ್ವ । ಭವವೈಭವವಿಲಾಸ।೫೬।।

ಪುಂಸೋಽಯುಕ್ತಸ್ಯ ನಾನಾರ್ಥೋ ಭ್ರಮಃ ಸ ಗುಣದೋಷಭಾಕ್ ।
ಕರ್ಮಾಕರ್ಮವಿಕರ್ಮೇತಿ ಗುಣದೋಷಧಿಯೋ ಭಿದಾ ।೮।।

ಅರ್ಥ:- ಪುರುಷರ ವಿಕ್ಷಿಪ್ತ ಮನದ ಈ ದ್ವೈತವಿಷಯವು ಭ್ರಮವಾಗಿರುವುದು. ಈ ಭ್ರಮವು ಗುಣ ಮತ್ತು ದೋಷ ಈ ಭ್ರಮಜನ್ಯ ಬುದ್ಧಿಯಿಂದ ಕೂಡಿದ ಪುರುಷನಿಗೆ ಉದ್ದೇಶಿಸಿ ವೇದವು ಕರ್ಮವನ್ನು ಹೇಳಿದೆ. ಅವಿದ್ಯೆಯ ಪುರುಷನಿಗೆ ಕರ್ಮ, ಅಕರ್ಮ, ವಿಕರ್ಮಗಳ ಭೇದವಿರುವುದು.

ಪರಮಾತ್ಮೇಸೀ ಜೋ ವಿಭಕ್ತ । ತೋ ಪುರುಷ ಬೋಲಿಜೇ "ಅಯುಕ್ತ" । ತ್ಯಾಸೀ ನಾನಾತ್ವೇ ಭೇದು ಭಾಸತ । ನಿಜೇ ನಿಜತ್ವ ವಿಸರೋನೀ ।೫೭।। ತ್ಯಾ ವಿಸರಾಚೇನಿ ಉಲ್ಹಾಸೇ । ಮಿಥ್ಯಾ ಭೇದು ಸತ್ಯತ್ವೇ ಭಾಸೇ । ತ್ಯಾ ಭೇದಾಚೇನಿ ಆವೇಶೇ । ಅವಶ್ಯ ದಿಸೇ ಗುಣದೋಷು ।೫೮।। ಜರೀ ಭೇದೂಚಿ ನಾಹೀ । ತರೀ ಗುಣದೋಷ ಕೈಚಾ ಪಾಹೀ । ದಿಸಾವಯಾ ಠಾವೋಚಿ ನಾಹೀ । ಶುದ್ಧಾಚೇ ಠಾಯೀ ಸರ್ವಥಾ ।೫೯।।

ಅಹಂಭಾವವನ್ನು ಬಿಡದೇ ಎಷ್ಟೇ ಉಪಾಯಗಳನ್ನು ಅಥವಾ ಯುಕ್ತಿಗಳನ್ನು ಯೋಜಿಸಿದರೂ ಕೂಡ ನಿಜಧಾಮಕ್ಕೆ ಪ್ರವೇಶವಾಗಲಾರದು ।೪೮।। ಆದ್ದರಿಂದ ಸಾಕಾರವಾಗಿರುವ ಎಲ್ಲ ವಸ್ತುಗಳೂ ನಾಶಿವಂತವಾಗಿರುವುವು. ಹೀಗೆ ನೀನು ಆತ್ಮಬೋಧೆಯಿಂದ ನಿಶ್ಚಯಿಸು ।೪೯।।

ದೃಷ್ಟಿಯಿಂದ ಯಾವ ಯಾವುದನ್ನು ನೋಡುವೆಯೋ, ಅದೆಲ್ಲವೂ ದೃಶ್ಯತ್ವದಿಂದ ಇಲ್ಲದಾಗುವುದು. ಕಿವಿಗಳಿಗೆ ಯಾವ ಯಾವುದನ್ನು ಕೇಳಿಸುವುದೋ, ಅದೆಲ್ಲವೂ ಶಬ್ದತ್ವದಿಂದ ಲಯವಾಗುವುದು ।೫೦।। ವಾಣಿಯಿಂದ ಏನೇನು ನುಡಿಯುವೆಯೋ, ಅವೆಲ್ಲವೂ ವಿತಂಡವಾದದಿಂದ ಮುಳುಗುವುವು. ಆದ್ದರಿಂದ ವೇದವು ಹೇಳುವುದನ್ನೇ ಬಿಟ್ಟುಕೊಟ್ಟು "ನೇತಿ" ಶಬ್ದದಿಂದ ಅದು ನಾಚಿಕೊಂಡಿತು ।೫೧।। ಸಂಕಲ್ಪಗಳಿಂದ ಕಲ್ಪನೆಗಳನ್ನು ಮಾಡುವುದೆಲ್ಲವೂ ಕಲ್ಪಿತವಾಗುವುವು. ಮತ್ತು ಅಹಂಕಾರಕ್ಕೆ ಆದ ವಿಷಯವು ವಿಜಾತೀಯತ್ವದಿಂದ ವ್ಯರ್ಥ ಹೋಗುವುದು ।೫೨।। ಆದಕಾರಣ ಇಂದ್ರಿಯಗಳಿಗೆ ಗೋಚರವಾಗುವುದೆಲ್ಲವೂ ನಶ್ವರವಾಗಿರುವುವು. ಈ ಪ್ರಕಾರವಾಗಿ ನಿತ್ಯಾನಿತ್ಯ ವಿವೇಕಗಳಿಂದ ನಿಶ್ಚಿತಗೊಳಿಸಿರುವುದು ।೫೩।। ಆದರೂ ಈ ನಿತ್ಯಾನಿತ್ಯ ವಿವೇಕವು ಸಹ ಮಾಯಿಕವಾಗಿರುವುದು. ಇದನ್ನು ಲಕ್ಷದಲ್ಲಿಡು. ಒಟ್ಟಿನಲ್ಲಿ ಈ ಎಲ್ಲ ಸೃಷ್ಟಿಯು ಮಾಯಾಮಯವಾಗಿದೆ. ಮಾಯೆಯು ಸಂಕಲ್ಪಸೃಷ್ಟಿಯನ್ನು ನಿರ್ಮಾಣಗೊಳಿಸುವುದು ।೫೪।। ನೀನು ಕಾಣುವ ಸಂಸಾರವೆಲ್ಲವೂ ಮಾಯಿಕ ವ್ಯವಹಾರವಾಗಿರುವುದು. ಇದನ್ನು ನೀನು ಧೈರ್ಯವಾಗಿ ಮನದಲ್ಲಿ ನಿರ್ಧರಿಸಿ ತಿಳಿದುಕೋ ।೫೫।। ಸ್ವಪ್ನದಲ್ಲಿನ ರಾಜ್ಯವು ಭ್ರಮಾತ್ಮಕವಾಗಿರುವಂತೆ ಸಂಸಾರದಲ್ಲಿನ ವೈಭವದ ವಿಲಾಸವು ಮಾಯಿಕವಾಗಿರುವುದೆಂದು ತಿಳಿ ।೫೬।।

ಪರಮಾತ್ಮನಿಂದ ಯಾವ ಮನುಷ್ಯನು ಭಿನ್ನನಾಗಿರುವನೋ ಆತನಿಗೆ ಅಯುಕ್ತನೆನ್ನುವರು. ತನ್ನ ಆತ್ಮಸ್ವರೂಪದ ಮರುವೆಯಾಗಿರುವುದರಿಂದ ಆತನಿಗೆ ಅನೇಕ ಪ್ರಕಾರದ ಭೇದಗಳು ಭಾಸವಾಗವುವು ।೫೭।। ಈ ಮರುವಿನಭರದಲ್ಲಿ ಇವನಿಗೆ ಕಾಲ್ಪನಿಕ ಭೇದಗಳು ಸತ್ಯವಾಗಿ ಭಾಸವಾಗುವುವು ಮತ್ತು ಈ ಯಾವ ಭೇದದೃಷ್ಟಿಯ ಆವೇಶದಲ್ಲಿ ಇವನಿಗೆ ಗುಣದೋಷಗಳು ಅವಶ್ಯವಾಗಿ ಕಾಣುವುವು ।೫೮।। ಮೂಲತಃ ಭೇದವೇ ಇಲ್ಲದಿರಲು ಶುದ್ಧವಸ್ತುವಿನಲ್ಲಿ ಗುಣದೋಷಗಳನ್ನು ಕಾಣುವ ಪ್ರಸಂಗವೇ ಇರುವುದಿಲ್ಲ ।೫೯।।

ಯಾಲಾಗೀ ಭೇದಾಚ್ಯಾ ಉದ್ಭಟೀ । ತೇ ಗುಣದೋಷದೃಷ್ಟೀ ಉಠೀ । ತೇಥೇ ಕರ್ಮಾಕರ್ಮತ್ರಿಪುಟೀ । ಭೇದದೃಷ್ಟೀ ಠಸಾವೇ ॥೬೦॥ ಭೇದ ಘೋರ ಕೇಲೇ ವಿಷಮ । ಕರ್ಮ ಅಕರ್ಮ ವಿಕರ್ಮ । ಜನ್ಮ ಮರಣಾದಿ ಧರ್ಮ । ನಿಜಕರ್ಮ ಪ್ರಕಾಶೀ ॥೬೧॥ ಕರ್ಮೇ ವಿಕರ್ಮೇ ನರಕಯಾತನಾ । ಕಾಮ್ಯಕರ್ಮೇ ಸ್ವರ್ಗು ಜಾಣಾ । ಕರ್ಮೇಚಿ ಕರೂನಿ ಕರ್ಮಮೋಚನಾ । ಸಮಾಧಾನಾ ಪಾವಿಜೇ ॥೬೨॥ ಯೇಥ ಮ್ಹಣತೀ "ಕರ್ಮ" ಕೋಣ । "ಅಕರ್ಮಾಚೇ" ಕಾಯ ಲಕ್ಷಣ । "ವಿಕರ್ಮಾಚಾ" ಕವಣ ಗುಣ । ತೇಹೀ ಸಂಪೂರ್ಣ ಪರಿಸ ಪಾ ॥೬೩॥ ಕಾಯಾ ವಾಚಾ ಅಥವಾ ಮನ । ಕರಿಜೇ ತಿತುಕೇ ಕರ್ಮ ಜಾಣ । ಸೂಕ್ಷ್ಮ ಸ್ಫೂರ್ತೀಚೇ ಜೇ ಭಾನ । ತೇ ಮೂಳ ಜಾಣ ಕರ್ಮಾಚೇ ॥೬೪॥ ಮನಸಾ ವಾಚಾ ದೇಹೀ । ಸರ್ವಥಾ ಕರ್ಮಬೀಜ ನಾಹೀ । ಅಕರ್ಮ ಮ್ಹಣಿಜೇ ತೇ ಪಾಹೀ । ನ ಪಡೇ ಠಾಯೀ ದೇಹವಂತಾ ॥೬೫॥ ಜೇ ಕರ್ಮಾವೇಗಳೇ ಸರ್ವಾಂಗೇ । ಜೇಥ ಕರ್ಮ ಲಾವಿತಾಹೀ ನ ಲಗೇ । ಜೇ ನವ್ಹೇ ಕರ್ಮಠಾಜೋಗೇ । ತೇ ಜಾಣ ಸರ್ವೇಗೆ "ಅಕರ್ಮ" ॥೬೬॥ ವಿಧಿನಿಷೇಧಜೋಡಪಾಡೇ । ಜೇಥ ವಿಶೇಷ ಕರ್ಮ ವಾಢೇ । "ವಿಕರ್ಮ"ತ್ಯಾತೇ ಮ್ಹಣಣೇ ಘಡೇ । ಘೋರ ಸಾಂಕಡೇ ಪೈ ಯಾಚೇ ॥೬೭॥ ಕರ್ಮ ಸರ್ವಸಾಧಾರಣ । ತೇಚಿ ವಿಕಾರಾತೇ ಪಾವಲೇ ಜಾಣ । ಉಠೀಲೇ ವಿಧಿನಿಷೇಧ ದಾರುಣ । "ವಿಕರ್ಮ" ಜಾಣ ತೇ ಮ್ಹಣಿಪೇ ॥೬೮॥ ಜೇ ವಿಧೀಸೀ ನಾತುಡೇ । ತೇ ನಿಷೇಧಾಚೇ ಅಂಗ ಚಢೇ । ಕರಿತಾ ಚುಕೇ ಠಾಕೇ ವಿಕಳ ಪಡೇ । ತೇಹೀ ರೋಕಡೇ "ನಿಷಿದ್ಧಚಿ" ॥೬೯॥ ಐಸೇ ಕರ್ಮ ವಿಕಾರಲೇ । ತೇ "ವಿಕರ್ಮ" ಪದೇ ವಾಖಾಣಿಲೇ । ಏವಂ ಕರ್ಮಾಕರ್ಮ ದಾವಿಲೇ । ವಿಭಾಗ ಕೇಲೇ ತುಜಲಾಗೀ ॥೭೦॥ ಜೀವಾಸೀ ಆವಿದ್ಯಕ ಉತ್ಪತ್ತೀ । ತ್ಯಾಚೀ ಕರ್ಮೇ ಆವಿದ್ಯಕೇ ಹೋತೀ । ಶ್ರೀಧರವ್ಯಾಖ್ಯಾನಾಚೀ ಯುಕ್ತೀ । ತೇಹೀ ಉಪಪತ್ತೀ ಪರಿಯೇಸೀ ॥೭೧॥ ಅವಿದ್ಯಾಯುಕ್ತ ಜೀವ ಪರಮ । ತ್ಯಾಸೀ ನಿತ್ಯ ಕ್ರಿಯಾ ತೇಚಿ "ಕರ್ಮ" । ನಿತ್ಯ ನ ಕರಣೇ ತೇ "ಅಕರ್ಮ" । "ವಿಕರ್ಮ" ತೇ ನಿಷಿದ್ಧ ॥೭೨॥ ಐಸೀ ಕರ್ಮಾಕರ್ಮ ವಿಕರ್ಮ ತ್ರಿಪುಟೀ । ಭೇದಾನುರೂಪೇ ವಾಢಲೀ ಸೃಷ್ಟೀ । ತೇಥ ಗುಣದೋಷಬುದ್ಧೀಚ್ಯಾ ಪೋಟೀ । ಬೇಧದೃಷ್ಟೀ ವಾಢತೀ ॥೭೩॥ ಅಭೇದೀ ಭೇದು ಕೈಸಾ ಉಠೀ । ಜೇಣೇ ಗುಣದೋಷೀ ನಾಂದೇ ದೃಷ್ಟೀ । ವಿಧಿನಿಷೇಧೀ ಪಾಡೀ ಗಾಂಠೀ । ತೇಹೀ ಗೋಠೀ ಪರಿಯೇಸೀ ॥೭೪॥ ಪುರುಷ ಏಕಲಾ ಏಕು ಅಸೇ । ತೋಚಿ

ಭೇದದ ಬಲದಿಂದ ಗುಣದೋಷದೃಷ್ಟಿಯು ಉತ್ಪನ್ನವಾಗುವುದು. ಮತ್ತು ಕರ್ಮಾಕರ್ಮಗಳ ತ್ರಿಪುಟಿಯು ಭೇದದೃಷ್ಟಿಯಿಂದ ನಾಟಿಕೊಳ್ಳುವುದು ॥೬೦॥ ಈ ಭೇದವು ವಿಪರೀತ ಪರಿಣಾಮಗಳನ್ನು ಮಾಡಿರುವುದು. ಇದು ಕರ್ಮ, ಅಕರ್ಮ, ವಿಕರ್ಮ, ಜನ್ಮ ಮರಣಗಳ ಧರ್ಮ ಮತ್ತು ಸ್ವಕರ್ಮ ಹೀಗೆ ಸರ್ವವನ್ನೂ ಪ್ರಕಾಶಗೊಳಿಸುತ್ತದೆ ॥೬೧॥ ಕರ್ಮ ಮತ್ತು ವಿಕರ್ಮಗಳು ನರಕ ಯಾತನೆಗಳನ್ನು ಭೋಗಿಸಲು ಹಚ್ಚುವುವು. ಕಾಮ್ಯ ಕರ್ಮಗಳು ಸ್ವರ್ಗ ಭೋಗಗಳನ್ನು ಕೊಡುವುವು. ಅದಕ್ಕಾಗಿಯೇ ಕರ್ಮವನ್ನೇ ನಿಷ್ಕರ್ಮವನ್ನಾಗಿ ಮಾಡಿ ಸಮಾಧಾನವನ್ನು ಪಡೆಯಬೇಕು ॥೬೨॥ ಈಗ ನೀನು ಹೀಗೆ ಕೇಳಬಹುದು, ಆ ಕರ್ಮ ಯಾವುದು? ಅಕರ್ಮದ ಲಕ್ಷಣಗಳೇನು? ವಿಕರ್ಮದ ಗುಣಗಳಾವುವು? ಆದ್ದರಿಂದ ಇವುಗಳ ವಿಸ್ತಾರವನ್ನು ಈಗ ಕೇಳು ॥೬೩॥ ಕಾಯಾ, ವಾಚಾ ಮತ್ತು ಮನದಿಂದ ಆಗುವುದೆಲ್ಲವೂ ಕರ್ಮವೆಂದು ತಿಳಿ. ಸ್ಫೂರ್ತಿಯ ಯಾವ ಸೂಕ್ಷ್ಮ ಭಾನವು ಕರ್ಮದ ಮೂಲವಾಗಿದೆ ॥೬೪॥ ಮನದಲ್ಲಿ ವಾಣಿಯಲ್ಲಿ ಅಥವಾ ದೇಹದಲ್ಲಿ ಕರ್ಮಗಳ ಬೀಜವನ್ನು ಅಣುಮಾತ್ರವೂ ಉತ್ಪನ್ನವಾಗದಿರುವುದೇ ಅದು ಅಕರ್ಮವಾಗಿರುವುದು. ಇದು ದೇಹಭಾವವಿರುವವರಿಗೆ ಹೀಗಾಗಲೂ ಶಕ್ಯವೇ ಇಲ್ಲ ॥೬೫॥ ಯಾವುದು ಕರ್ಮಗಳಿಂದ ಸರ್ವಥಾ ಭಿನ್ನವಾಗಿರುವುದೋ, ಯಾವುದಕ್ಕೆ ಕರ್ಮವನ್ನು ಹಚ್ಚಲು ಹೋದರೆ ಹತ್ತುವುದಿಲ್ಲವೋ ಯಾವುದು ಕರ್ಮಠನಿಗೆ ಉಪಯೋಗವಿಲ್ಲವೋ ಅದಕ್ಕೆ ಅಕರ್ಮವೆನ್ನುವರು ॥೬೬॥ ವಿಧಿ ನಿಷೇಧಗಳನ್ನು ಬಿಟ್ಟು ಆಗುವ ಕರ್ಮಗಳಿಗೆ "ವಿಕರ್ಮ" ಎನ್ನುವರು. ಈ ವಿಕರ್ಮವು ಬಹು ಸಂಕಟಕ್ಕೆ ಗುರಿಮಾಡುವುದು ॥೬೭॥ ಸರ್ವಸಾಧಾರಣ ಕರ್ಮಗಳಲ್ಲಿ ವಿಕೃತಿಯಾಗಿ ದೊಡ್ಡ ದೊಡ್ಡ ವಿಧಿನಿಷೇಧಗಳು ಉತ್ಪನ್ನವಾಯಿತೆಂದರೆ ಅದೇ ವಿಕರ್ಮವಾಗುವುದು ॥೬೮॥ ಯಾವುದು ವಿಧಿಯನ್ನು ಅನುಸರಿಸುವುದಿಲ್ಲವೋ ಅದು ನಿಷೇಧಯುಕ್ತವಾಗಿರುವುದು. ಆದ್ದರಿಂದ ಅದನ್ನು ಆಚರಿಸಲು ದೋಷಗಳುಂಟಾಗುವುವು ಅಥವಾ ಅದರಲ್ಲಿ ಖಂಡವಾಗುವುದು. ಆದ್ದರಿಂದ ಆ ಕರ್ಮಗಳು ನಿಷಿದ್ಧವಾಗಿರುವುವು ॥೬೯॥ ಹೀಗಿರುವ ವಿಕಾರಯುಕ್ತ ಕರ್ಮಗಳನ್ನು "ವಿಕರ್ಮ" ಎಂಬ ಶಬ್ದದಿಂದ ಅದರ ಸ್ವರೂಪವನ್ನು ತೋರಿಸಿಕೊಟ್ಟಿದೆ. ಈ ಪ್ರಕಾರವಾಗಿ ಕರ್ಮ ಮತ್ತು ಅಕರ್ಮಗಳ ವಿಭಾಗವನ್ನು ನಿನಗೆ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ ॥೭೦॥ ಜೀವದ ಉತ್ಪತ್ತಿಯು ಅವಿದ್ಯೆಯಿಂದ ಅಂದರೆ ಅಜ್ಞಾನದಿಂದ ಆಗಿರುವುದು. ಆದ್ದರಿಂದ ಅವುಗಳ ಕರ್ಮಗಳು ಸಹ ಅಜ್ಞಾನಯುಕ್ತವಾಗಿರುವುವು. ಈ ಸಂಬಂಧವಾಗಿ ಶ್ರೀಧರಸ್ವಾಮಿಗಳು ಮಾಡಿರುವ ವ್ಯಾಖ್ಯಾನದ ಉಪಪತ್ತಿಯನ್ನು ಕೇಳು ॥೭೧॥ ಜೀವವು ಪರಮ ಅವಿದ್ಯಾಯುಕ್ತವಾಗಿರುವುದು. ನಿತ್ಯ ಕ್ರಿಯೆಯೇ ಅದರ ಕರ್ಮವಾಗಿರುವುದು. ನಿತ್ಯಕರ್ಮಗಳನ್ನು ಮಾಡದಿರುವುದೇ "ಅಕರ್ಮ" ವಾಗಿರುವುದು ಮತ್ತು ನಿಷಿದ್ಧ ಕರ್ಮಗಳು "ವಿಕರ್ಮ" ವಾಗಿರುವುವು ॥೭೨॥ ಹೀಗೆ ಬೇಧಾನುರೂಪವಾದ ಕರ್ಮಾಕರ್ಮ ವಿಕರ್ಮಗಳ ತ್ರಿಪುಟಿಯು ಸೃಷ್ಟಿಯಲ್ಲಿ ಬೆಳೆಯುತ್ತಿರುವುದು. ಆಗ ಗುಣದೋಷಬುದ್ಧಿಯ ಹೊಟ್ಟೆಯಲ್ಲಿ ಭೇದಕದೃಷ್ಟಿಯು ಪ್ರಬಲವಾಗುವುದು ॥೭೩॥ ಅಭೇದದಲ್ಲಿ ಹೀಗೆ ಬೇಧವು ಹೇಗೆ ಇರುವುದು? ಎಂದು ನೀನು ಕೇಳಬಹುದು. ಅದಕ್ಕಾಗಿ ಆ ವಿಷಯಕ್ಕೆ ಹೇಳುವೆ, ಕೇಳು ॥೭೪॥

ಮನೋರಥಪೂಜ್ಯೆ ಬೈಸೇ । ಧೇಯ – ಧ್ಯಾತಾ – ಧ್ಯಾನಮಿಸೇ । ವಾಢವೀ ಪಿಸೇ ಭೇದಾಚೇ ॥೭೫॥ ತೇಥೇ ನಾನಾಪರೀಚೇ ಉಪಚಾರ । ಪೂಜಾ ಸಾಮಗ್ರೀಸಂಭಾರ । ಐಸಾ ಏಕಪಣೇ ಅಪಾರ । ಭೇದು ಸಾಚಾರ ವಾಢವೀ ॥೭೬॥ ತೇಥ "ಧ್ಯೇಯ" ಉತ್ತಮ ಮ್ಹಣೇ ಜಾಣ । "ಧ್ಯಾತಾ" ನೀಚ ಹೋಯೇ ಆಪಣ । ತದಂಗೇ "ಧ್ಯಾನ" ಗೌಣ । ಗುಣದೋಷ ಜಾಣ ವಾಢವೀ ॥೭೭॥ ಧ್ಯಾನೀ ಗುಣದೋಷ ವಿಚಿತ್ರ । ಧ್ಯೇಯ ಮ್ಹಣೇ ಪರಮ ಪವಿತ್ರ । ಧ್ಯಾತಾ ಆಪಣ ಹೋಯೇ ಅಪವಿತ್ರ । ಶೌಟಾಚಾರ ದೋಷತ್ವೇ ॥೭೮॥ ಏವಂ ಧ್ಯಾನಾಚಿಯೇ ದೃಷ್ಟೀ । ಆಪಣಚಿ ಆಪುಲ್ಯಾ ಪೋಟೀ । ಗುಣದೋಷಾಂಚೀ ತ್ರಿಪುಟೀ । ಭೇದದೃಷ್ಟೀ ವಾಢವೀ ॥೭೯॥ ಧ್ಯೇಯ – ಧ್ಯಾತಾ – ಧ್ಯಾನ । ಆಘವಾಚೀ ಆಹೇ ಆಪಣ । ತೇ ಸಾಂಡೋನಿಯಾ ಜಾಣ । ಗುಣದೋಷಲಕ್ಷಣ ವಾಢವೀ ॥೮೦॥ ಉದ್ಧವಾ ಹೇ ಅವಘೀ ಸೃಷ್ಟೀ । ವಾಢಲೀ ಅಸೇ ಭೇದದೃಷ್ಟೀ । ತೇಣೇ ಭೇದೇ ಉಠಾಉಠೀ । ಕರ್ಮತ್ರಿಪುಟೀ ವಾಢವಿಲೀ ॥೮೧॥ ಜಂವ ಜಂವ ಭೇದಾಚಾ ಜಿವ್ಹಾಳಾ । ಜಂವ ಜಂವ ವಿಷಯಾಂಚಾ ಸೋಹಳಾ । ಪಾಳಿಜೇ ಇಂದ್ರಿಯಾಂಚಾ ಲಳಾ । ತಂವ ತಂವ ಆಗಳಾ ಸಂಸಾರು ॥೮೨॥ ಸಾಪಾ ಪಾಜಿಜೇ ಪೀಯೂಖ । ತೇಚಿ ಪರತೋನಿ ಹೋಯ ವಿಖ । ತೈಸೇ ಇಂದ್ರಿಯಾ ದೀಜೇ ಜಂವ ಜಂವ ಸಂತೋಖ । ತಂವ ತಂವ ದುಃಖ ಭೋಗಿಜೇ ॥೮೩॥

ತಸ್ಮಾದ್ಯುಕ್ತೇಂದ್ರಿಯಗ್ರಾಮೋ ಯುಕ್ತಚಿತ್ತ ಇದಂ ಜಗತ್ । ಆತ್ಮನೀಕ್ಷಸ್ವ ವಿತತಮಾತ್ಮಾನಂ ಮಯ್ಯಧೀಶ್ವರೇ ॥೯॥

ಅರ್ಥ:- ಆದ್ದರಿಂದ ನಿನ್ನ ಎಲ್ಲ ಎಂದ್ರಿಯಗಳನ್ನೂ ಆಧೀನಕ್ಕೆ ತಂದುಕೊಂಡು, ತನ್ಮೂಲಕ ಮನಸ್ಸನ್ನು ನಿಗ್ರಹಿಸಿ ಆತ್ಮನಲ್ಲಿ ಇಡೀ ಜಗತ್ತು ನೆಲೆಸಿರುವುದನ್ನು ಕಾಣಬೇಕು. ಆತ್ಮವೇ ಎಲ್ಲೆಡೆ ವಿಸ್ತರಿಸಿದೆ. ಆದ್ದರಿಂದ ಆತ್ಮವನ್ನು ಬ್ರಹ್ಮನಲ್ಲಿ ಬ್ರಹ್ಮರೂಪದಿಂದ ಕಾಣಬೇಕು.

ಯಾಲಾಗೀ ಇಂದ್ರಿಯಾಂಚ್ಯಾ ದ್ವಾರೀ । ವಿಷಯೋ ನೇದಾವಾ ಚತುರೀ । ಜೇವೀ ವಿಷೇ ರಾಂಧಿಲೀ ಕ್ಷೀರಧಾರೀ । ಸಾಂಡಿಜೇ ದುರೀ ನ ಚಾಖಿತಾ ॥೮೪॥ ಘಮಘಮಿತ ಅಮೃತಫಳೇ । ವರೀ ಸರ್ಪೇ ಘಾತಲಿಯಾ ಗರಳೇ । ತೇ ನ ಸೇವಿತೀ ಕಾಉಳೇ । ಸೇವನೀ ಕಳೇ ನಿಜಘಾತು ॥೮೫॥ ತೈಸೇ ಸೇವಿತಾ ವಿಷಯಾಂಸೀ । ಕೋಣ ಗೋಡೀ ಮುಮುಕ್ಷ್ವಾಸೀ । ಪ್ರತಿಪದೀ ಆತ್ಮಘಾತಾಸೀ । ಅಹರ್ನಿಶೀ ದೇಖತೀ ॥೮೬॥ ಆತ್ಮಘಾತು ನ ದೇಖತೀ । ತೇ ವಿಷಯೀವಿಷಯೋ ಸೇವಿತೀ । ಜೈಶೀ ದಿವಾಭೀತಾ ಮಧ್ಯರಾತೀ । ಅಸತಾ ಗಭಸ್ತಿ ಮಧ್ಯಾನ್ಹೀ ॥೮೭॥ ತೈಸೇಚಿ ವಿಷಯಸೇವನ । ಮುಮುಕ್ಷ್ವಾಂಸೀ ಘಡೇ ಜಾಣ । ತೇಣೇ ನ ಚುಕೇ ಜನ್ಮಮರಣ । ಆತ್ಮಪತನ ತಯಾಂಚೇ

ಪುರುಷನು ಒಬ್ಬನೇ ಒಬ್ಬನಾಗಿ ಇರುವನು. ಆತನು ಮನೋರಥದ ಪೂಜೆಗೆ ಕುಳಿತುಕೊಳ್ಳುವನು ಮತ್ತು ಧ್ಯೇಯ, ಧ್ಯಾತಾ, ಧ್ಯಾನ ಇವುಗಳ ನಿಮಿತ್ತದಿಂದ ಭೇದದ ಹುಚ್ಚನ್ನು ಬೆಳೆಸುವನು ॥೭೫॥ ಅಲ್ಲಿ ನಾನಾ ಪ್ರಕಾರದ ಉಪಚಾರ, ಪೂಜಾ ಸಾಮುಗ್ರಿಗಳಿಂದ ಆತನು ತನ್ನ ಒಂಟಿಗತನದಲ್ಲಿ ಅನೇಕ ಭೇದಗಳನ್ನು ಬೆಳೆಸುವನು ॥೭೬॥ ಅಲ್ಲಿ ಧ್ಯೇಯಕ್ಕೆ ಆತನು ಉತ್ತಮ ಎನ್ನುವನು. ಆತನು ಧ್ಯಾತಾ ಸ್ವತಃಕ್ಕೆ ಸಾಮಾನ್ಯ ತಿಳಿಯುವನು. ಆದ್ದರಿಂದ ಆತನ ಧ್ಯಾನವು ಗೌಣವಾಗುವುದು. ಮತ್ತು ಗುಣದೋಷಗಳನ್ನು ಬೆಳೆಸುತ್ತಿರುವುದು ॥೭೭॥ ಧ್ಯಾನದಲ್ಲಿ ತ್ರಿವಿಧ ಗುಣದೋಷಗಳಿರುವುವು. ಇರುವ ಧ್ಯೇಯಕ್ಕೆ ಪರಮ ಪವಿತ್ರ ಎನ್ನುವನು. ಮತ್ತು ತನ್ನ ಆವರಣವು ಪವಿತ್ರವಿಲ್ಲ ಎಂದು ಧ್ಯಾತಾ ತಾನು ಅಪವಿತ್ರ ಹೀಗಾಗುವನು ॥೭೮॥ ಈ ಪ್ರಕಾರವಾಗಿ ಧ್ಯಾನದ ದೃಷ್ಟಿಯಿಂದ ತಾನೇ ತನ್ನ ಮನದಲ್ಲಿ ಗುಣದೋಷದ ತ್ರಿಪುಟಿ ಮತ್ತು ಭೇದಬುದ್ಧಿಯನ್ನು ಬೆಳೆಸುವನು ॥೭೯॥ ಧ್ಯೇಯ, ಧ್ಯಾತಾ ಹಾಗೂ ಧ್ಯಾನ ಈ ಎಲ್ಲವೂ ನಾನೇ ಇರುವೆನೆಂಬ ನಿಶ್ಚಯವನ್ನು ಮಾಡದೇ ಆತನು ಗುಣದೋಷಗಳ ಸ್ವರೂಪವನ್ನು ಬೆಳೆಸುತ್ತಾ ಸಾಗುವನು ॥೮೦॥ ಹೇ ಉದ್ಧವನೇ ಈ ಎಲ್ಲ ಸೃಷ್ಟಿಯು ಭೇದ ದೃಷ್ಟಿಯಿಂದ ಬೆಳೆದಿರುವುದು. ಮತ್ತು ಆ ಭೇದಕಾರಣದಿಂದ ಕರ್ಮದ ತ್ರಿಪುಟಿಯು ಅದರ ಹಿಂದೆ ಹಿಂದೆಯೇ ಬೆಳೆದಿರುವುದು ॥೮೧॥ ಭೇದದಲ್ಲಿನ ಆಸಕ್ತಿಯು ಹೇಗೇಗೆ ಬೆಳೆಯುತ್ತಾ ಸಾಗುವುದೋ ಅದರಂತೆಯೇ ವಿಷಯಗಳ ಉತ್ಸವವು ಅನುಭವಕ್ಕೆ ಬರಲಾರಂಭಿಸುವುದು. ಇಂದ್ರಿಯಗಳ ಬೇಡಿಕೆ ಪೂರ್ಣಗೊಳಿಸಲು ಹೋದಂತೆ ಸಂಸಾರವು ಬೆಳೆಯುತ್ತಾ ಸಾಗುವುದು ॥೮೨॥ ಸರ್ಪಕ್ಕೆ ಅಮೃತವನ್ನು ಕುಡಿಸಿದರೂ ಅದರಿಂದ ವಿಷವೇ ಆಗುವುದು. ಅದರಂತೆ ಇಂದ್ರಿಯಗಳಿಗೆ ಯಾವ ಯಾವ ಸುಖವನ್ನು ಕೊಡುತ್ತೇವೆಯೋ ಅದರಿಂದ ದುಃಖವನ್ನೇ ಭೋಗಿಸಬೇಕಾಗುವುದು ॥೮೩॥

ಯಾವ ಪ್ರಕಾರವಾಗಿ ವಿಷದಲ್ಲಿ ಕುದಿಸಿರುವ ಹಾಲಿನ ಖೀರನ್ನು ಮುಖದಲ್ಲಿ ಹಾಕದೇ ಅದನ್ನು ದೂರ ಚೆಲ್ಲಬೇಕೋ, ಅದರಂತೆ ಬುದ್ಧಿವಂತ ಮನುಷ್ಯನು ಇಂದ್ರಿಯಗಳ ದ್ವಾರದಲ್ಲಿ ವಿಷಯಗಳ ಪಾದಗಳನ್ನು ಬೀಳುಗೊಡುವುದಿಲ್ಲ ॥೮೪॥ ರಸದಿಂದ ತುಂಬಿರುವ ಸುಗಂಧ ಅಮೃತ ಫಲವನ್ನು ಸರ್ಪವು ಸುತ್ತುಕೊಂಡಿರಲು ಅದನ್ನು ಕಾಗೆಯೂ ಸಹ ತಿನ್ನಲಾರದು. ಕಾರಣ ಇದರಿಂದ ತನ್ನ ಆತ್ಮಘಾತವಾಗುವುದೆಂಬುದು ಅದಕ್ಕೆ ತಿಳಿದಿರುತ್ತದೆ ॥೮೫॥ ಅದರಂತೆ ವಿಷಯಗಳ ಸೇವನೆಯನ್ನು ಮಾಡುವಾಗ್ಗೆ ಮುಮುಕ್ಷುಗಳವರಿಗೆ ಅದು ಹೇಗೆ ಮಧುರವಾಗಬೇಕು? ಹಗಲು ರಾತ್ರಿ ಹೆಜ್ಜೆ ಹೆಜ್ಜೆಗೂ ಅದರಲ್ಲಿ ಆತ್ಮಘಾತವಿದೆ ಎಂಬುದು ಅವರಿಗೆ ಕಾಣಿಸುತ್ತಿರುತ್ತದೆ ॥೮೬॥ ವಿಷಯೀ ಜನರು ವಿಷಯದಲ್ಲಿನ ಆತ್ಮಘಾತವನ್ನು ಕಾಣಲಾರರು. ಅವರು ಕೇವಲ ವಿಷಯಗಳ ಸೇವನೆ ಮಾಡುವರು. ಗೂಗಿಯು ಮಟಮಟ ಮಧ್ಯಾಹ್ನದಲ್ಲಿ ಸೂರ್ಯನು ಧಗಧಗಿಸುತ್ತಿದ್ದರೂ ಅದಕ್ಕೆ ಮಧ್ಯರಾತ್ರಿ ಎಂದು ತಿಳಿಯುವುದು ॥೮೭॥

॥೮೮॥ ಮ್ಹಣಸೀ "ಪ್ರಾಣಿ ಯಾಂಚೀ ಸ್ಥಿತೀ । ವಿಷಯಾವರೀ ನಿಶ್ಚಿತೀ । ವಿಷಯತ್ಯಾಗೇ ಕೇವೀ ರಾಹತೀ" । ತೇ ಸುಗಮ ಸ್ಥಿತೀ ಅವಧಾರೀ ॥೮೯॥ ಅಸತಾ ಇಂದ್ರಿಯಾಂಚಾ ನೇಮು । ಕರೀ ಚಿತ್ತಾಚಾ ಉಪರಮು । ಐಸಾ ದೋಹೀಪರೀ ಸುಗಮು । ಉತ್ತಮೋತ್ತಮು ಹಾ ತ್ಯಾಗು ॥೯೦॥ ಇಂದ್ರಿಯೇ ಅಸೋತು ವಿಷಯಾವರೀ । ಮನ ರಿಘೋ ನೇದೀ ತ್ಯಾಭೀತರೀ । ಹಾಹೀ ತ್ಯಾಗು ಸರ್ವಾಪರೀ । ಯೋಗೇಶ್ವರೀ ಬೋಲಿಜೇ ॥೯೧॥ ಮನಾಸೀ ವಿಷಯಾಂಚೇ ಬಳ । ವಿಷಯಧ್ಯಾಸೇ ತೇ ಚಪಳ । ನವ್ಹೇ ಮ್ಹಣತೀ ತೇ ನಿಶ್ಚಳ । ಐಕ ಸಮೂಳ ತೋ ಉಪಾವೋ ॥೯೨॥ ಮಾಝೇ ಸ್ವರೂಪ ಸರ್ವಗತ । ಮನಾಬಾಹೇರೀ ಆಣಿ ಆಂತ । ಜೇಥ ಜೇಥ ಜಾಈಲ ಚಿತ್ತ । ತೇಥ ತೇಥ ತೇ ಅಸೇ ॥೯೩॥ ಮಜವೇಗಳೇ ಜಾವಯಾಸೀ । ಠಾವೋ ನಾಹೀ ಪೈ ಚಿತ್ತಾಸೀ । ಸ್ವದೇಶೀ ಹೋ ಪರದೇಶೀ । ಅಹರ್ನಿಶೀ ಮಜ ಆಂತು ॥೯೪॥ ಐಸೇ ನಿಜರೂಪ ಸಂತತ । ಪಾಹತಾ ಥೋರಾವೇಲ ಚಿತ್ತ । ತ್ಯಾ ಚಿತ್ತಾ ಮಾಜೀ ಆದ್ಯಂತ । ಪಾಹೇ ಸಮಸ್ತ ಹೇ ಜಗ ॥೯೫॥ ಅಥವಾ ಜೀವ ಸ್ವರೂಪ ತುಝೇ ಚಾಂಗ । ತ್ಯಾಮಾಜೀ ಪಾಹತಾ ಹೇ ಜಗ । ಜಗಚಿ ಹೋಈಲ ತುಝೇ ಅಂಗ । ಅತಿನಿರ್ವ್ಯಂಗ ನಿಶ್ಚಿತ ॥೯೬॥ ಚರೇ ಆಣಿ ಅಚರೇ । ಲಹಾನೇ ಕಾ ಥೋರೇ । ಜೀವರೂಪೀ ಸವಿಸ್ತರೇ । ಪಾಹೇ ನಿರ್ಧಾರೇ ಹೇ ಜಗ ॥೯೭॥ ಮ್ಹಣಸೀ ಜೀವು ತೋ ಏಕದೇಶೀ । ತ್ಯಾಮಾಜೀ ಕೇವೀ ಪಹಾವೇ ಜಗಾಸೀ । ತ್ಯಾಸೀ ಐಕ್ಯತಾ ಕರೀ ಮಜಸೀ । ಜೇವೀ ಕನಕೇಸೀ ಅಳಂಕಾರ ॥೯೮॥ ಚಿಂತಿತಾ ಕೀಟಕೀ ಭಿಂಗುರಟೀ। ತೇಚಿ ತೇ ಹೋಊನ ಉಠೀ। ತೈಸಾ ತೂ ಉಠಾಉಠೀ। ಹೋಈ ನಿಜದೃಷ್ಟೀ ನಿಜತತ್ತ್ವ॥೯೯॥ ಹೋ ಕಾ ಸೈಂಧವಾಚಾ ಖಡಾ । ಪಡಲ್ಯಾ ಸಿಂಧೂಮಾಜಿವಡಾ। ತೋ ಹೋವೋನಿ ಠಾಕೇ ತ್ಯಾಏವಢಾ। ತೈಸಾ ತೂ ರೋಕಡಾ ಮೀ ಹೋಸೀ॥೧೦೦॥ ಜೇಥ ಮೀತೂಪಣಾಚಾ ಭೇದ। ಫಿಠೋನಿ ಜಾಈಲ ವಿಶದ। ಪರಮಾನಂದ ಶುದ್ಧ ಬುದ್ಧ। ಮುಕ್ತ ಸಿದ್ಧ ತೂ ಹೋಸೀ॥೧೦೧॥

ಜ್ಞಾನ ವಿಜ್ಞಾನ ಸಂಯುಕ್ತ ಆತ್ಮ ಭೂತಃ ಶರೀರಿಣಾಮ್।
ಆತ್ಮಾನುಭವತುಷ್ಟಾತ್ಮಾ ನಾಂತರಾಯೈರ್ವಿಹನ್ಯಸೇ॥೧೦॥

ಅರ್ಥ: ವೇದದ ಮುಖ್ಯ ತಾತ್ಪರ್ಯ, ನಿಶ್ಚಯರೂಪ ಜ್ಞಾನ ಮತ್ತು ಅನುಭವರೂಪ ವಿಜ್ಞಾನದಿಂದ ಸಂಪನ್ನನಾಗಿ ನೀನು ನಿನ್ನ ಆತ್ಮದ ಅನುಭವದಲ್ಲಿ ಆನಂದ ಮಗ್ನನಾಗುವೆ. ಮತ್ತು ಸಂಪೂರ್ಣವಾಗಿ ದೇವತಾ ಇತ್ಯಾದಿ ಶರೀರ ಧಾರಣೆ ಮಾಡುವವರ ಆತ್ಮನಾಗುವೆ. ಆದ್ದರಿಂದ ಯಾವುದೇ ವಿಘ್ನಗಳಿಂದ ನಿನಗೆ ಪೀಡೆಯಾಗಲಾರದು. ಕಾರಣ ಆ ವಿಘ್ನಗಳು ಮತ್ತು ವಿಘ್ನಗಳನ್ನು ಮಾಡುವವರ ಆತ್ಮವು ನೀನೇ ಆಗಿರುವೆ.

ಅದರಂತೆ ವಿಷಯಗಳ ಸೇವನೆಯಿಂದ ಮುಮುಕ್ಷುಗಳ ಈ ಸ್ಥಿತಿಯಾಗುವುದು. ಕಾರಣ ಈ ಯೋಗದಿಂದಲೇ ಜನ್ಮ ಮರಣವು ತಪ್ಪುವುದಿಲ್ಲ. ಆದರೆ ಆತ್ಮ ಪತನವು ಮಾತ್ರ ಆಗುವುದು ॥೮೮॥ ಪ್ರಾಣಿಗಳ ಜೀವನವು ನಿಜವಾಗಿಯೂ ವಿಷಯಗಳಿಂದಲೇ ಅವಲಂಬಿಸಿರುವುದು. ಹೀಗಿರಲು ವಿಷಯಗಳ ತ್ಯಾಗವನ್ನು ಮಾಡಿ ಅವರು ಹೇಗೆ ಬದುಕಬೇಕು? ಹೀಗೆ ಹೇಳಬಹುದು. ಅದರ ಸುಗಮ ಮಾರ್ಗವನ್ನು ಹೇಳುವೆ, ಅದನ್ನು ಕೇಳು॥೮೯॥ ಇಂದ್ರಿಯಗಳನ್ನು ವಿಧಿನಿಯಮಗಳಿಂದ ನಿಗ್ರಹ ಮಾಡಿದರೆ ಚಿತ್ತವು ಶಾಂತವಾಗುವುದು. ಈ ಪ್ರಕಾರವಾಗಿ ಇಂದ್ರಿಯಗಳ ಮತ್ತು ಮನಸ್ಸಿನ ನಿಗ್ರಹ, ಈ ಎರಡೂ ಮಾರ್ಗದಿಂದ ಈ ತ್ಯಾಗವು ಉತ್ತಮೋತ್ತಮವು ಹಾಗೂ ಸುಲಭವಾಗಿರುವುದು॥೯೦॥ ಇಂದ್ರಿಯಗಳು ವಿಷಯಗಳಲ್ಲಿದ್ದರೂ ಅದರಲ್ಲಿ ಮನಸ್ಸನ್ನು ಮಾತ್ರ ಇಡಕೂಡದು. ಇದು ಸಹ ತ್ಯಾಗವೇ ಆಗಿರುವುದೆಂದು ಮಹಾ ಮಹಾ ಯೋಗಿಗಳು ಹೇಳುತ್ತಾರೆ॥೯೧॥ ಮನಸ್ಸಿಗೆ ವಿಷಯಗಳ ಬಲವು ದೊರೆಯಿತೆಂದರೆ ಅವುಗಳ ಧ್ಯಾಸದಿಂದ ಅದು ಚಂಚಲವಾಗುವುದು. ಅದಕ್ಕಾಗಿಯೂ ಉಪಾಯವಿರುವುದು, ಕೇಳು॥೯೨॥ ನನ್ನ ಸ್ವರೂಪವು ಸರ್ವವ್ಯಾಪಿಯಾಗಿರುವುದು. ಅದು ಮನಸ್ಸಿನ ಒಳಗೂ, ಹೊರಗೂ ಇರುವುದು. ಮನಸ್ಸು ಎಲ್ಲೆಲ್ಲಿ ಹೋಗುವುದೋ ಅಲ್ಲಲ್ಲಿ ಅದು ಇದ್ದೇ ಇರುವುದು॥೯೩॥ ನನ್ನನ್ನು ಬಿಟ್ಟು ಹೋಗಲು ಚಿತ್ತಕ್ಕೆ ಬೇರೆ ಸ್ಥಳವೇ ಇರುವುದಿಲ್ಲ. ಅದು ಸ್ವದೇಶದಲ್ಲಿರಲಿ ಅಥವಾ ಪರದೇಶದಲ್ಲಿರಲಿ, ಹಗಲೂ ರಾತ್ರಿ ನನ್ನ ಒಳಗೆನೇ ಇರುವುದು॥೯೪॥ ಈ ಪ್ರಕಾರವಾಗಿ ನೀನು ಆತ್ಮ ಸ್ವರೂಪವನ್ನು ಸತತವಾಗಿ ಕಾಣುತ್ತಿರಲು ನಿನ್ನ ಚಿತ್ತವು ವ್ಯಾಪಕವಾಗುವುದು. ಆಗ ಆ ಚಿತ್ತದಲ್ಲಿ ಈ ಎಲ್ಲ ಜಗವು ಆದಿಯಿಂದ ಅಂತ್ಯದವರೆಗೂ ತೋರಹತ್ತುವುದು॥೯೫॥ ಅಥವಾ ನಿನ್ನ ಜೀವರೂಪವು ಬಹು ಉತ್ತಮವಾಗಿದೆ. ಅದರಲ್ಲಿ ನೀನು ಈ ಜಗತ್ತನ್ನು ನೋಡುತ್ತಿರಲು ನಿನ್ನ ಸರ್ವಾಂಗವೂ ಜಗತ್ತಾಗುವುದು॥೯೬॥ ಚರ, ಅಚರ, ಚಿಕ್ಕ, ದೊಡ್ಡ ಹೀಗಿರುವುದೆಲ್ಲವನ್ನೂ ನೀನು ಜೀವ ರೂಪದಲ್ಲಿ ನೋಡುತ್ತ ಸಾಗು॥೯೭॥ ಜೀವವು ಏಕದೇಶೀಯಾಗಿರುವುದು. ಆದರಲ್ಲಿ ಸಂಪೂರ್ಣ ಜಗತ್ತನ್ನು ಹೇಗೆ ಕಾಣಬೇಕೆಂದು ನೀನು ಕೇಳಬಹುದು. ಆದರೆ ಸುವರ್ಣ ಮತ್ತು ಅದರ ಅಲಂಕಾರಗಳು ಹೇಗೆ ಒಂದೇ ಸ್ವರೂಪವೋ ಹಾಗೆಯೇ ಜೀವವನ್ನು ನನ್ನಲ್ಲಿ ಐಕ್ಯ ಮಾಡು॥೯೮॥ ಕೀಟವು ಭೃಂಗದ ಧ್ಯಾನವನ್ನು ಮಾಡಿ ತಾನು ಭೃಂಗವೇ ಆಗಿ ಸ್ವತಃ ಹೊರಗೆ ಬೀಳುವುದು. ಅದರಂತೆಯೇ ನೀನು ಸಹ ಆತ್ಮದೃಷ್ಟಿಯಿಂದ ತತ್ಕಾಲದಲ್ಲಿ ಆತ್ಮತತ್ವವೇ ಆಗುವೆ॥೯೯॥ ಅರೇ, ಉಪ್ಪಿನ ಹರಳು ಸಮುದ್ರದಲ್ಲಿ ಬೀಳಲು ಅದು ಸಮುದ್ರದಷ್ಟೇ ಆಗುವುದು. ಅದರಂತೆಯೇ ನೀನು ಸಹ ಮದ್ರೂಪನಾಗುವೆ॥೧೦೦॥ ಯಾವ ವೇಳೆಯಲ್ಲಿ ನಾನು ನೀನೆಂಬುವ ಭೇದವು ಸಂಪೂರ್ಣವಾಗಿ ಹೊರಟು ಹೋಗುವುದೋ, ಆಗ ನೀನು ಪರಮಾನದ ಸ್ವರೂಪ ಶುದ್ಧ, ಬುದ್ಧ, ಮುಕ್ತ ಮತ್ತು ಸಿದ್ಧನಾಗುವೆ॥೧೦೧॥

ಶಾಸ್ತ್ರ ಶ್ರವಣೇ ದೃಢ "ಜ್ಞಾನ"। ಮನನಾಭ್ಯಾಸೇ ಹೋಯ "ವಿಜ್ಞಾನ" ॥ ಯಾ ದೋಹೀಂಚೀ ಜಾಣೋನಿ ಖೂಣ। ಬ್ರಹ್ಮ ಸಂಪನ್ನ ತೂ ಹೋಸೀ।।೧೦೨।। ಐಸಿಯಾ ಸ್ವಾರ್ಥಾಚೇನಿ ಲವಲಾಹೇ। ಅವಿಶ್ರಮ ಭಜಾವೇ ತುಝೇ ಪಾಯೇ। ಮ್ಹಣಸೀ ''ವೋಢವತೀಲ ಅಂತರಾಯೇ। ತ್ಯಾಸೀ ಕಾಯೇ ಕರಾವೇ'' ।।೧೦೩।। ಸಾಂಡೋನಿ ದಾಂಭಿಕ ಲೌಕಿಕ। ತ್ಯಜೋನಿಯಾ ಫಳಾಭಿಲಾಖ। ಜೋ ಮಜಭಜೇ ಭಾವಿಕ। ವಿಘ್ನ ದೇಖ ತ್ಯಾಕೈಂಚೇ।।೧೦೪।। ತ್ಯಾಚ್ಯಾ ವಿಘ್ನನಾಶಾಸೀ ದೇಖ। ಕರೀ ಚಕ್ರಾಚೇ ಲಖಲಖ। ಘೇಊನಿ ಪಾಠೀಸೀ ಅಚುಕ। ಉಭಾ ಸನ್ಮುಖ ಮೀ ಅಸೇ ।।೧೦೫।। ಯಾಪರೀ ಗಾ ಉದ್ಧವಾ। ಜೋ ಮಜ ಭಜೇ ನಿಜಭಾವಾ । ತ್ಯಾಸೀ ವಿಘ್ನ ಕರಾವಯಾ ದೇವಾ । ನವ್ಹೇ ಉಠಾವಾ ಮಜ ಅಸತಾ ।।೧೦೬।। ಏವಂ ಬ್ರಹ್ಮ ಸಂಪನ್ನ ಜಾಹಲಿಯಾವರೀ। ಆತ್ಮಾ ತೂಚಿ ಚರಾಚರೀ। ಜಂಗಮೀ ಆಣಿ ಸ್ಥಾವರೀ। ಸುರಾಸುರೀ ತೂಚಿ ತೂ।।೧೦೭।। ತುಜಹೂನಿ ಕಾಂಹೀ। ಅಣುಭರೀ ವೇಗಳೇ ನಾಹೀ। ತೇಥ ವಿಘ್ನ ಕೈಂಚೇ ಕಾಯೀ। ತುಝ್ಯಾ ಠಾಯೀ ಬಾಧೀಲ।।೧೦೮।। ಬ್ರಹ್ಮಾದಿಕಾಂಸೀ ಜೋ ಗ್ರಾಸೀ । ತ್ಯಾ ಕಾಳಾಚಾ ತೂ ಆತ್ಮಾ ಹೋಸೀ। ಪಾಠೀ ಥೋಪಟೂನ ಹೃಷೀಕೇಶೀ। ಉದ್ಧವಾಸೀ ಸಾಂಗತು।।೧೦೯।। ಐಶೀ ಬಾಧ್ಯ ಬಾಧಕತಾ ಫಿಟಲೀ। ಸಂಕಲ್ಪ ಕಲ್ಪನಾ ತುಟಲೀ। ಬ್ರಹ್ಮಾನಂದೇ ಪಾಹಾಟ ಫುಟಲೀ। ವಾಟ ಮೋಡಲೀ ಕರ್ಮಾಚೀ ।।೧೧೦।। ಐಸಾ ಬ್ರಹ್ಮಾನುಭವೀ ಜೋ ದೇಖ। ಕರ್ಮ ತೇಥ ಹೋಯ ರಂಕ। ವೇದ ತಯಾಚೇ ಸೇವಕ। ವಿಧಿವಿವೇಕ ಕಾಮಾರೀ।।೧೧೧।। ಹೇಚಿ ಕಿತೀ ಸಾಂಗೋ ಕಾಯೀ। ಮೀ ತ್ಯಾಚಾ ಆಜ್ಞಾಧಾರಕ ಪಾಹೀ। ಪ್ರತಿಷ್ಠಿತೀ ಜೇ ಜೇ ಠಾಯೀ । ತೇಥ ಪಾಹೀ ಪ್ರಗಟತು।।೧೧೨।। ವಚನಮಾತ್ರಾ ಸಾಠೀ। ಪ್ರಗಟಲೋ ಕೋರಡೇ ಕಾಷ್ಠೀ । ದುರ್ವಾಸಾ ವಾಇಲಾ ಪಾಠೀ। ತ್ವಾಂಹೀ ದಿಠೀ ದೇಖಿಲೇ।।೧೧೩।। ಮ್ಹಣಸೀ ''ದೇವ ಜ್ಯಾಚಾ ಆಜ್ಞಾಧಾರು। ಕರ್ಮ ತ್ಯಾಚೇ ಹೋಯ ಕಿಂಕರು। ತರೀ ಜ್ಞಾತೇ ಯಥೇಷ್ಟಾಚಾರು। ವಿಷಯೀ ಸಾಚಾರು ವಿಚರತೀ'' ।।೧೧೪।। ಜ್ಞಾತ್ಯಾಸೀ ಸ್ವೇಚ್ಛಾ ವಿಷಯಾಚರಣ। ಸರ್ವಥಾ ನ ಘಡೇಗಾಜಾಣ। ತೇಹೀ ವಿಷಯೀಚೇ ಲಕ್ಷಣ। ಸಾವಧಾನ ಪರಿಯೇಸೀ।।೧೧೫।। ಜ್ಯಾಸೀ ದಗ್ಧ ಪಟ ಅಭಿಮಾನ। ಮಿಥ್ಯಾ ಪ್ರಪಂಚಾಚೇ ಭಾನ। ಮೃಷಾ ವಿಷಯಾಂಚೇ ದರ್ಶನ। ವಿಷಯಾಚರಣ ತ್ಯಾ ನಾಹೀ।।೧೧೬।। ಜಯಾಸೀ ಪ್ರಪಂಚಾಚೀ ಆವಡೀ। ವಿಷಯಾಚೀ ಅತಿಗೋಡೀ। ಯಥೇಷ್ಟಾಚರಣಾಚೀ ವೋಢೀ। ಪಡೇ ಸಾಂಕಡೀ ತಯಾಸೀ।।೧೧೭।। ಜ್ಞಾತಯಾಚ್ಯಾ

ಶಾಸ್ತ್ರ ಶ್ರವಣದಿಂದ ದೃಢವಾದ ಜ್ಞಾನವು ಪ್ರಾಪ್ತವಾಗುವುದು. ಮೇಲಿಂದ ಮೇಲೆ ಮನನ ಮಾಡುವುದರಿಂದ ಅನುಭವ ಜ್ಞಾನವು ಪ್ರಾಪ್ತವಾಗುವುದು. ಈ ಎರಡರ ಲಕ್ಷಣಗಳನ್ನು ತಿಳಿದು ನೀನು ಬ್ರಹ್ಮಸ್ವರೂಪನಾಗುವೆ।।೧೦೨।। ಈ ಪ್ರಕಾರವಾಗಿ ಸ್ವಹಿತಕ್ಕಾಗಿ ನಿನ್ನ ಚರಣಗಳ ಅಖಂಡ ಭಜನೆಯನ್ನು ಮಾಡಬೇಕು. ಆದರೆ ಅದಕ್ಕಾಗಿ ವಿಘ್ನಗಳು ಒದಗಿದರೆ ಆಗೇನು ಮಾಡಬೇಕು ? ಎಂದು ನೀನು ಕೇಳಬಹುದು. ಅದನ್ನು ಹೇಳುವೆ, ಕೇಳು।।೧೦೩।। ಡಾಂಭಿಕತನ ಮತ್ತು ಲೌಕಿಕವನ್ನು ಬಿಟ್ಟು ಮತ್ತು ಫಲದ ಆಸಕ್ತಿಯನ್ನು ಬಿಟ್ಟು ಯಾವ ಭಾವಿಕರು ನನ್ನ ಭಜನೆಯನ್ನು ಮಾಡುವರೋ, ಅವರಿಗೆ ವಿಘ್ನವು ಎಲ್ಲಿಯದು? ।।೧೦೪।। ಅವರ ವಿಘ್ನಗಳ ನಾಶವನ್ನು ಮಾಡಲು ಈ ಲಖಲಖಿತ ಚಕ್ರವನ್ನು ಕೈಯಲ್ಲಿ ಧರಿಸಿ ಅವರ ಬೆನ್ನಿನ ಹಿಂದೆ ನಾನು ನಿಲ್ಲುತ್ತೇನೆ।।೧೦೫।। ಹೇ ಉದ್ಧವನೇ, ಈ ಪ್ರಕಾರವಾಗಿ ಆತ್ಮಭಾವನೆಯಿಂದ ಭಜನೆಯನ್ನು ಮಾಡುವವರಿಗೆ ನಾನು ಸ್ವತಃ ಮುಂದಿರಲು ವಿಘ್ನಗಳನ್ನು ಮಾಡಲು ಯಾವ ದೇವತೆಗಳಿಗೂ ಸಾಮರ್ಥ್ಯವಿಲ್ಲ।।೧೦೬।। ಈ ಪ್ರಕಾರವಾಗಿ ಬ್ರಹ್ಮ ಸಂಪನ್ನನಾದನಂತರ ಚರಾಚರದಲ್ಲಿ, ಸ್ಥಾವರ, ಜಂಗಮ ದೇವ, ದಾನವ ಹಾಗೂ ಸರ್ವರಲ್ಲಿಯ ಆತ್ಮವು ನೀನೇ ಆಗುವೆ।।೧೦೭।। ನಿನ್ನ ಹೊರತಾಗಿ ಅನ್ಯವಾದ ಒಂದು ಅಣು ಸಹವೂ ಉಳಿಯಲಾರದು. ಅಂದ ಮೇಲೆ ಅಲ್ಲಿ ವಿಘ್ನಗಳು ನಿನಗೆ ಹೇಗೆ ಬಾಧಿಸುವುವು? ।।೧೦೮।। ಬ್ರಹ್ಮಾದಿಕರನ್ನೂ ಗ್ರಾಸ ಮಾಡುವ ಯಾವ ಕಾಲನ ಆತ್ಮವು ನೀನಾಗುವೆ. ಈ ಪ್ರಕಾರವಾಗಿ ಶ್ರೀ ಕೃಷ್ಣನು ಉದ್ಧವನಿಗೆ ಬೆನ್ನು ಚಪ್ಪರಿಸಿ ಹೇಳಿದನು।।೧೦೯।। ಈ ರೀತಿಯಾಗಿ ಬಾಧ್ಯಬಾಧಕತೆಯು ಇಲ್ಲದಾಗುವುದು. ಸಂಕಲ್ಪ ಕಲ್ಪನೆಗಳು ಬಂದಾಗುವುವು. ಬ್ರಹ್ಮಾನಂದದ ದಿವ್ಯವಾದ ಉದಯವಾಗುವುದು ಮತ್ತು ಕರ್ಮದ ಮಾರ್ಗವು ಮುರಿದು ಹೋಗುವುದು।।೧೧೦।। ಹೀಗೆ ಆತನು ಬ್ರಹ್ಮಾನುಭಾವಿನಾದನೆಂದರೆ ಕರ್ಮವು ದುರ್ಬಲವಾಗುವುದು ಮತ್ತು ವೇದಗಳು ಆತನ ಸೇವಕರಾಗುವುವು, ವಿಧಿ ವಿವೇಕಗಳು ಆತನ ದಾಸರಾಗುವುವು।।೧೧೧।। ಹೀಗೆ ಇನ್ನು ಎಷ್ಟೆಂದು ಹೇಳಬೇಕು? ನಾನೂ ಸಹ ಆತನ ಆಜ್ಞೆಯಲ್ಲಿರುವೆನು. ಅವರು ಎಲ್ಲೆಲ್ಲಿ ಇರುವರೋ ಅಲ್ಲಲ್ಲಿ ನಾನು ಪ್ರಕಟನಾಗುವೆನು।।೧೧೨।। ಭಕ್ತ ವಚನವನ್ನು ಸತ್ಯಗೊಳಿಸಲು ನರಸಿಂಹ ಅವತಾರದಲ್ಲಿ ನನಗೆ ಒಣಗಿದ ಕಟ್ಟಿಗೆಯಲ್ಲಿ ಪ್ರಕಟನಾಗಬೇಕಾಯಿತು. ದುರ್ವಾಸನಿಗೆ ಮಾತ್ರ ಪ್ರತ್ಯಕ್ಷವಾಗಿ ಬೆನ್ನಿನ ಮೇಲೆ ಹೊತ್ತು ಒಯ್ದುದ್ದು ನೀನು ನಿನ್ನ ಕಣ್ಣಿನಿಂದ ನೋಡಿರುವೆ।।೧೧೩।। ನೀನು ಹೀಗೆ ಹೇಳಬಹುದು, ದೇವರೇ ಇವರ ಆಜ್ಞಾಧಾರಕನಾಗಲು ಕರ್ಮಗಳು ಸಹಜವಾಗಿಯೇ ಆತನ ಸೇವಕವಾಗುವುವು. ಹಾಗಾದರೆ, ಜ್ಞಾನಿಗಳು ವಿಷಯಗಳಲ್ಲಿ ಏನು ಬೇಕಾದರೂ ಸ್ವೇಚ್ಛಾಚಾರದಿಂದ ಮಾಡುತ್ತಿರಬಹುದು।।೧೧೪।। ಆದರೆ ಜ್ಞಾನಿಯವರಿಂದ ಯಥೇಷ್ಟಾಚರಣಗಳು ಎಂದೂ ಆಗುವುದಿಲ್ಲ. ಅದರ ಕಾರಣವನ್ನು ಹೇಳುವೆನು. ಲಕ್ಷಪೂರ್ವಕವಾಗಿ ಕೇಳು।।೧೧೫।। ಯಾರ ಅಭಿಮಾನವು, ದಗ್ಧಗೊಂಡ ವಸ್ತ್ರದಂತೆ ಇರುವುದೋ ಆತನಿಗೆ ಪ್ರಪಂಚದ ಭಾನವು ಮಿಥ್ಯೆಯಾಗಿ ವಿಷಯಗಳ ದರ್ಶನವೂ ಮಿಥ್ಯಾ ಭಾಸವಾಗುವುದು. ಆದ್ದರಿಂದ ಆತನಿಗೆ ವಿಷಯಾಚರಣವೇ ಇರುವುದಿಲ್ಲ।।೧೧೬।। ಯಾರಿಗೆ ಪ್ರಪಂಚದ ಅತಿಶಯವಾದ ಪ್ರೇಮ ಇರುವುದೋ, ವಿಷಯಗಳ ಆನಂದವಿರುವುದೋ ಮತ್ತು ಯಥೇಷ್ಟಾಚರಣಗಳ ಹೆಬ್ಬಯಕೆ ಇರುವುದೋ ಅವರು ಸಂಸಾರ ಸಂಕಟಗಳಲ್ಲಿ ನಿಶ್ಚಿತವಾಗಿ ಸಿಕ್ಕಿಕೊಳ್ಳುವರು ।।೧೧೭।।

ಲಾಯೀ। ಸತ್ಯತ್ವೇ ವಿಷಯೋ ನಾಹೀ। ಮಾ ಭೋಗಾವಯಾ ಕಾಯೀ। ಅಭಿಲಾಷೀ ಪಾಹೀ ತೋ ಹೋಈಲ॥೧೧೮॥ ಆತಾ ಜ್ಞಾತಯಾಚೇ ಕರ್ಮ। ಐಕ ಸಾಂಗೋ ತ್ಯಾಚೇ ಮರ್ಮ। ನಾತಳತಾ ಮನೋಧರ್ಮ। ಕ್ರಿಯಾಕರ್ಮ ಆಚರತೀ॥೧೧೯॥

ದೋಷಬುದ್ಧ್ಯೋ ಭಯಾತೀತೋ ನಿಷೇಧಾನ್ನ ನಿವರ್ತತೇ। ಗುಣಬುದ್ಧ್ಯಾಚ ವಿಹಿತಂ ನ ಕರೋತಿ ಯಥಾರ್ಭಕಃ॥೧೧॥

ಅರ್ಥ:- ಯಾವ ಪುರುಷನು ಗುಣ ಮತ್ತು ದೋಷ- ಬುದ್ಧಿಯಿಂದ ಅಲಿಪ್ತನೋ, ಆತನು ಬಾಲಕನಂತೆ ನಿಷಿದ್ಧ ಕರ್ಮಗಳಿಂದ ನಿವೃತ್ತನಾಗುವನು. ಆದರೆ ದೋಷ ಬುದ್ಧಿಯಿಂದಲ್ಲ. ಈತನು ವಿಹಿತ ಕರ್ಮಗಳ ಅನುಷ್ಠಾನವನು ಮಾಡುವನು, ಆದರೆ ಗುಣ ಬುದ್ಧಿಯಿಂದಲ್ಲ.

ಗುಣದೋಷಾತೀತ ಜ್ಞಾತಾ। ತೋ ನಿಷೇಧೀ ನ ವರ್ತೇ ಸರ್ವಥಾ। ಪರೀ ಭ್ಯಾಲೇಪಣ ಚಿತ್ತಾ। ನಾಹೀ ತತ್ತ್ವತಾ ತಯಾಸೀ॥೧೨೦॥ ತೋ ವಿಹಿತಹೀ ಕರ್ಮ ಕರೀ। ತೇಥ ಗುಣತ್ವೇ ಬುದ್ಧಿ ನ ಧರೀ। ಕುಲಾಲಚಕ್ರಾಚಿಯೇಪರೀ। ಪೂರ್ವಸಂಸ್ಕಾರೀ ವರ್ತತ॥೧೨೧॥ ಸಂಕಲ್ಪು ನಾಹೀ ವೃತ್ತೀ। ಹೇತು ಸ್ಫುರೇನಾ ಚಿತ್ತೀ। ಐಸೀ ಕರ್ಮೇ ಜ್ಞಾತೇ ಕರಿತೀ। ಶರೀರಸ್ಥಿತೀ ಕೇವಳ॥೧೨೨॥ ತೇಥ ಸತ್ಕರ್ಮ ಸಿದ್ಧೀ ಗೇಲೇ। ತೇಣೇ ಫುಗೇನಾ ಮ್ಯಾಹೇ ಕೇಲೆ। ಅಥವಾ ಮಾಝಾರೀ ವಿಕಳ ಪಡಿಲೇ। ತೇಣೇ ತಗಮಗಿಲೇಪಣ ನಾಹೀ॥೧೨೩॥ ನಿದ್ರಿತಾಮಾಗೇ ಬೈಸಲಾ ವಾಘು। ಅಥವಾ ಪುಢೇ ಆಲಾ ಸ್ವರ್ಗಭೋಗು। ತ್ಯಾಸೀ ನಾಹೀ ರಾಗವಿರಾಗು। ತೈಸಾಲಾಗು ಜ್ಞಾತ್ಯಾಚಾ॥೧೨೪॥ ಗುಣದೋಷೀ ಚಿತ್ತವೃತ್ತೀ। ಸಾಂಡೋನಿಯಾ ಸಹಜಸ್ಥಿತೀ। ಬಾಳಕೇ ಜೇವೀ ಕ್ರೀಡತೀ। ತೈಶೀ ಸ್ಥಿತಿ ಜ್ಞಾತ್ಯಾಚೀ॥೧೨೫॥ ಅಭಿಮಾನೇ ಕರ್ಮಪ್ರಾಪ್ತೀ। ತ್ಯಾ ಅಭಿಮಾನಾತೇ ತ್ಯಾಗಿತೀ। ಮಗ ನಿರಭಿಮಾನೇ ಕೇವೀ ವರ್ತತೀ। ಕರ್ಮಸ್ಥಿತಿ ತ್ಯಾ ನ ಘಡೇ॥೧೨೬॥ ಐಸಾ ವಿಕಲ್ಪು ಜರೀ ಕರಿಸೀ। ತೇ ಸ್ಥಿತಿ ನ ಕಳೇ ಇತರಾಂಸೀ। ನಿರಭಿಮಾನತಾ ಸ್ವಾನುಭವೇಸೀ। ಕೇವೀ ಯೇರಾಸೀ ಕಳೇಲ॥೧೨೭॥ ದೇಹ ಪ್ರಾರಬ್ಧಾಚೇನಿ ಮೇಳೇ। ಸ್ವಭಾವೇ ಸರ್ವ ಕರ್ಮೀ ಚಳೇ। ತೇಥ ಅಜ್ಞಾನಾಚೇನಿ ಬಳೇ। ಅಭಿಮಾನು ಖವಳೇ "ಮೀ ಕರ್ತಾ"॥೧೨೮॥ ತೇಥ ಗುರುವಾಕ್ಯ-ಅನುವೃತ್ತೀ। ಅಭ್ಯಾಸೂನಿ ಯಥಾ ನಿಗುತೀ। ಅಜ್ಞಾನೇಸಹಿತ ನಿರಸಿತೀ। ಅಭಿಮಾನ ಸ್ಥಿತಿ ನಿಜಬೋಧೇ॥೧೨೯॥ ಶೇಷ ಪ್ರಾರಬ್ಧಾಚೇನಿ ಮೇಳೇ। ನಿರಭಿಮಾನೇ ದೇಹ ಚಳೇ। ಜ್ಞಾತೇ ಕರ್ಮೇ ಕರಿತೀ ಸಕಳೇ। ಜಾಣ ಕೇವಳೇ ಶರೀರೇ॥೧೩೦॥

ಆದರೆ ಜ್ಞಾನಿಗೆ ವಿಷಯಗಳಲ್ಲಿ ಸತ್ಯಬುದ್ಧಿಯು ಇರುವುದಿಲ್ಲ. ಹೀಗಿರಲು ಆತನು ವಿಷಯ ಭೋಗದಲ್ಲಿ ಹೇಗೆ ಲುಬ್ಧನಾಗುವನು? ॥೧೧೮॥ ಈಗ ಜ್ಞಾನಿಯ ಕರ್ಮದಲ್ಲಿನ ರಹಸ್ಯವನ್ನು ಹೇಳುವೆನು. ಅದನ್ನು ನೀನು ಕೇಳು. ಆತನು ಮನೋಧರ್ಮಕ್ಕೆ ಸ್ಪರ್ಶವನ್ನು ಮಾಡದೇ ಸರ್ವಕರ್ಮಗಳನ್ನು ಹಾಗೂ ಸರ್ವ ಧರ್ಮಗಳನ್ನು ಆಚರಿಸುವನು ॥೧೧೯॥

ಗುಣದೋಷಾತೀತನಾದ ಜ್ಞಾನಿಯು ನಿಷಿದ್ಧ ಧರ್ಮದ ಆಚರಣೆಯನ್ನು ಎಂದೂ ಮಾಡಲಾರನು. ಆದ್ದರಿಂದ ಆತನ ಚಿತ್ತಕ್ಕೆ ಭಯ ಎನ್ನುವುದೇ ಗೊತ್ತಿರುವುದಿಲ್ಲ ॥೧೨೦॥ ಆತನು ವಿಹಿತ ಕರ್ಮಗಳನ್ನು ಮಾಡುವನು. ಆದರೆ ನಾನು ಇದನ್ನು ಒಳ್ಳೆಯ ಕಾರ್ಯ ಮಾಡಿದೆ ಎಂಬ ಗುಣಬುದ್ಧಿಯನ್ನು ಹಿಡಿಯುವುದಿಲ್ಲ. ಕುಂಬಾರನ ಚಕ್ರದಂತೆ ಪೂರ್ವ ಸಂಸ್ಕಾರ ರೂಪದಂತೆ ವರ್ತಿಸುತ್ತಿರುವನು ॥೧೨೧॥ ವೃತ್ತಿಗಳಲ್ಲಿ ಸಂಕಲ್ಪಗಳು ಏಳುವುದಿಲ್ಲ ಮತ್ತು ಮನದಲ್ಲಿ ಯಾವ ಉದ್ದೇಶವೂ ಇರುವುದಿಲ್ಲ. ಈ ರೀತಿಯಲ್ಲಿ ಕರ್ಮಗಳನ್ನು ಜ್ಞಾನಿ ಜನರು ಕೇವಲ ದೇಹದಿಂದ ಮಾತ್ರ ಮಾಡುತ್ತಿರುವರು॥೧೨೨॥ ಆದ್ದರಿಂದ ಸತ್ಕರ್ಮವು ಸಿದ್ಧಿಗೊಂಡರೆ ಆತನು ಗರ್ವದಿಂದ ಉಬ್ಬಿಕೊಳ್ಳುವುದಿಲ್ಲ. ಮತ್ತು ಹಿಡಿದ ಕರ್ಮವು ನಡುವೆಯೇ ನಿಂತುಕೊಂಡರೆ ಆತನಿಗೆ ಮನದಲ್ಲಿ ತಳಮಳವಾಗುವುದಿಲ್ಲ ॥೧೨೩॥ ನಿದ್ರಿತನಾಗಿರುವವನ ಹಿಂದೆ ಹುಲಿಯು ಕುಳಿತಿರಲು ಅಥವಾ ಮುಂದೆ ಸ್ವರ್ಗ-ಭೋಗವು ಬಂದಿರಲು ಆತನಿಗೆ ಹುಲಿಯ ಹೆದರಿಕೆಯು ಇರುವುದಿಲ್ಲ ಭೋಗದ ಪ್ರೀತಿಯು ಇರುವುದಿಲ್ಲ. ಇದರಂತೆಯೇ ಜ್ಞಾನಿಯ ಸ್ಥಿತಿಯಾಗಿರುವುದು॥೧೨೪॥ ಗುಣದೋಷಗಳಲ್ಲಿನ ಚಿತ್ತವೃತ್ತಿಯನ್ನು ಬಿಟ್ಟುಕೊಟ್ಟು ಬಾಲಕನ ಕ್ರೀಡೆಯಂತೆ ಜ್ಞಾನಿಯು ಸಹಜ ಸ್ಥಿತಿಯಲ್ಲಿ ಇರುವನು॥೧೨೫॥ ಕರ್ಮ ಪ್ರಾಪ್ತಿಯು ಅಭಿಮಾನದಿಂದ ನಡೆಯುವುದು. ಆ ಅಭಿಮಾನವನ್ನು ಬಿಟ್ಟುಕೊಡಲು ನಿರಾಭಿಮಾನದಿಂದ ಅವರು ಹೇಗೆ ವರ್ತಿಸಬೇಕು? ಕರ್ಮವೆಂಬುವುದು ಅವರಿಂದ ನಡೆಯುವುದೇ ಇಲ್ಲ ॥೧೨೬॥ ಹೀಗೆ ಒಂದು ವೇಳೆ ನಿನಗೆ ಸಂಶಯವಾದರೆ ಈ ಸ್ಥಿತಿಯು ಇತರರಿಗೆ ತಿಳಿಯುವಂತಿರುವುದಿಲ್ಲ. ನಿರಾಭಿಮಾನದ ಅನುಭವವನ್ನು ತೆಗೆದುಕೊಳ್ಳುವವರಿಗೆ ಮಾತ್ರ ತಿಳಿಯುವುದು. ಇತರರಿಗೆ ಹೇಗೆ ತಿಳಿಯಬೇಕು? ॥೧೨೭॥ ದೇಹವು ಪ್ರಾರಬ್ಧದ ಅನುಸಾರವಾಗಿ ಸ್ವಭಾವತಃ ಅದು ಎಲ್ಲ ಕರ್ಮಗಳನ್ನು ಮಾಡುತ್ತಿರುವುದು. ಅಜ್ಞಾನದ ಬಲದಿಂದಲೇ ಅಭಿಮಾನವು ಉಗ್ರವಾಗುವುದು. ಆಗ ಪುರುಷನು ನಾನು ಕರ್ಮಗಳನ್ನು ಮಾಡುವವನು ಎಂದೆನ್ನುವನು॥೧೨೮॥ ಆದರೆ, ಗುರು ಉಪದೇಶದ ಅನುವೃತ್ತಿಯಿಂದ ಹಾಗೂ ಯೋಗ್ಯವಾದ ಅಭ್ಯಾಸದಿಂದ ಆತ್ಮಜ್ಞಾನವಾಗುವುದು. ಅಜ್ಞಾನಸಹಿತವಾಗಿ ಅಭಿಮಾನದ ನಿರಸನೆಯಾಗುವುದು॥೧೨೯॥ ಜ್ಞಾನಿಯ ದೇಹವು ಪ್ರಾರಬ್ಧಾನುಸಾರವಾಗಿ ನಿರಾಭಿಮಾನದಿಂದ ವರ್ತಿಸುತ್ತಿರುವುದು. ಜ್ಞಾನಿ ಪುರುಷರ ಸರ್ವ ಕಾರ್ಯಗಳು ಕೇವಲ ದೇಹದಿಂದ ಮಾತ್ರ ನಡೆಯುತ್ತಿರುವುವು॥೧೩೦॥

ಕೇವಳ ಶರೀರೇ ಕರ್ಮೇ ಹೋತೀ। ತೀಚ "ಅಹೇತುಕ" ಬೋಲಿಜೇತೀ। ಅರ್ಭಕದೃಷ್ಟಾಂತೇ ಉಪಪತ್ತೀ। ಹೇಚಿ ಸ್ಥಿತಿ ಸಾಂಗೀತಲೀ।।೧೩೧।। ನಿರಭಿಮಾನಾಚೀ ಲಕ್ಷಣೇ। ಕೃಷ್ಣ ಉದ್ಧವಾತೇ ಐಕ ಮ್ಹಣೇ। ಯೇರೂ ಆನಂದಲಾ ಅಂತಃಕರಣೇ। ಸಾದರಪಣೇ ಪರಿಸತು।।೧೩೨।।

ಸರ್ವಭೂತ ಸೃಹಚ್ಛಾಂತೋ ಜ್ಞಾನವಿಜ್ಞಾನ ನಿಶ್ಚಯಃ। ಪಶ್ಯನ್ ಮದಾತ್ಮಕಂ ವಿಶ್ವಂ ನ ವಿಪದ್ಯೇತ ವೈ ಪುನಃ।।೧೨।।

ಅರ್ಥ: ಸರ್ವಭೂತಗಳಲ್ಲಿ ನಿರಪೇಕ್ಷ ಉಪಕಾರ ಮಾಡುವವನು, ಶಾಂತನಾದವನು, ಜ್ಞಾನ ಮತ್ತು ಸಾಕ್ಷಾತ್ಕಾರಗಳಲ್ಲಿ ದೃಢತೆಯಿಂದ ಸ್ಥಿರನಾದವನು. ಎಲ್ಲ ವಸ್ತುಗಳಲ್ಲಿಯೂ ನನ್ನನ್ನು ಕಾಣುವನು. ಅಂತಹ ವ್ಯಕ್ತಿಯು ಪುನಃ ಎಂದೂ ಜನ್ಮ-ಮರಣಗಳ ಚಕ್ರದಲ್ಲಿ ಬೀಳುವುದಿಲ್ಲ.

ಪಹಿಲೇ ಶಾಸ್ತ್ರಶ್ರವಣೇ "ಜ್ಞಾನ"। ತದನುಭವೇ ಹೋಯ "ವಿಜ್ಞಾನ"। ಐಸಾ ಜ್ಞಾನವಿಜ್ಞಾನ ಸಂಪನ್ನ। ನಿರಭಿಮಾನ ತೋ ಹೋಯ।।೧೩೩।। ಸಾಚಚಿ ನಿರಭಿಮಾನತಾ। ಜರೀ ಆಲೀ ಹೋಯ ಹಾತಾ। ತರೀ "ಶಾಂತಿ" ತೇಥ ಸರ್ವಥಾ। ಉಲ್ಹಾಸತಾ ಪೈ ಪಾವೇ।।೧೩೪।। ದಾಟೂನಿ ನಿಶ್ಚಳ ಹೋಣೇ। ಕಾ ದಾಂತ ಚಾವೂನಿ ಸಾಹಣೇ। ತೇ ''ಶಾಂತಿ'' ಐಸೇ ಕೋಣ ಮ್ಹಣೇ। ಅಕ್ರೋಶಪಣೇ ಸಾಹಾತು ।।೧೩೫।। "ಶಾಂತಿ" ಮ್ಹಣಿಜೇ ತೇ ಐಶೀ। ಸಾಗರೀ ಅಕ್ಷೋಭ್ಯತಾ ಜೈಸೀ। ಚಢ ವೋಹಟ ನಾಹೀ ತಿಸೀ। ಸರ್ವದೇಶೀ ಸರ್ವದಾ।।೧೩೬।। ನಾನಾ ಸರಿತಾಂಚೇ ಖಳಾಳ। ಆಣೂನಿ ಘಾಲಿತೀ ಸಮಳ ಜಳ। ತೋ ತಿಳಭರೀ ನವ್ಹೇ ಡಹುಳ। ಅತಿ ನಿರ್ಮಳ ನಿಜಾಂಗೇ ।।೧೩೭।। ತೈಶೀ ನಾನಾಭೂತ ವಿಷಮತಾ। ಸ್ವವಿರೋಧೇ ಅಂಗೀ ಆದಳತಾ। ಪಾಲಟೂ ನವ್ಹೇ ಜ್ಯಾಚ್ಯಾ ಚಿತ್ತಾ। ತೇ ಜಾಣ ಸರ್ವಥಾ "ನಿಜಶಾಂತಿ"।।೧೩೮।। ಐಸೀ ಶಾಂತಿ ಜ್ಯಾಸೀ ದೇಖಾ। ತೋಚಿ ಸರ್ವಭೂತಾಂಚಾ ಸಖಾ। ಆವಡತಾ ಸರ್ವ ಲೋಕಾ। "ಸುಹೃದ" ತೋ ಕಾ ಸರ್ವಾಂಚಾ ।।೧೩೯।। ನವಲ ಸಖ್ಯತ್ವಾಚೀ ಪರೀ। ಸರ್ವಸ್ವ ದೇ ನಿಜಮೈತ್ರೀ। ಸ್ವಾರ್ಥೀ ವಂಚನಾರ್ಥ ನ ಕರೀ। ಕೃಪಾಪಾತ್ರೀ ಉಪದೇಶು।।೧೪೦।। ಅತರ್ಕ್ಯ ತ್ಯಾಚೀ ಪಾಹತೀ ದಿಠೀ। ಮದ್ರೂಪೇ ದೇಖೇ ಸಕಳ ಸೃಷ್ಟೀ। ಜಗಾಸೀ ಮಜ ಅಭಿನ್ನ ಗಾಂಠೀ। ನಿಜ ದೃಷ್ಟೀ ಬಾಂಧಲೀ।।೧೪೧।। ಮಗ ತೋ ಜೇಉತೇ ಪಾಹೇ। ತೇಉತಾ ಮೀಚಿ ತಯಾ ಆಹೇ। ತೋ ಜರೀ ಮಾತೇ ನ ಪಾಹೇ। ತೇ ನ ಪಾಹಣೇಹೀ ಹೋಯೇ ಮೀಚಿ ತ್ಯಾಚೇ।।೧೪೨।। ತ್ಯಾಚೀ ಪಾಹತೀ ಜೇ ದಿಠೀ। ತೇ ಮೀಚಿ ಹೋಯೇ ಜಗಜೇಠೀ। ಐಶೀ ತಯಾ ಮಜ ಏಕ ಗಾಂಠೀ। ಸಕಳ ಸೃಷ್ಟೀ ಸಮವೇತ ।।೧೪೩।।

ಕೇವಲ ದೇಹದಿಂದಾಗುವ ಕರ್ಮಗಳಿಗೆ ಮಾತ್ರ ಅಹೇತುಕ ಕರ್ಮಗಳೆನ್ನುವರು. ಚಿಕ್ಕ ಬಾಲಕನ ದೃಷ್ಟಾಂತವನ್ನು ಕೊಟ್ಟು ನಾನೇ ಈ ಸ್ಥಿತಿಯ ಸ್ಪಷ್ಟೀಕರಣೆಯನ್ನು ಮಾಡಿರುವೆನು।।೧೩೧।। ಕೃಷ್ಣನು ಉದ್ಧವನಿಗೆ ಹೇಳಿದನು; ಈಗ ನಿರಭಿಮಾನದ ಲಕ್ಷಣಗಳನ್ನು ಕೇಳು. ಅದನ್ನು ಕೇಳಿ ಉದ್ಧವನು ಮನದಲ್ಲಿ ಅತಿಶಯವಾಗಿ ಆನಂದಿತನಾಗಿ ಪರಮಾನಂದದಿಂದ ಶ್ರವಣ ಮಾಡಲಾರಂಭಿಸಿದನು।೧೩೨।।

ಪ್ರಥಮತಃ ಶಾಸ್ತ್ರ ಶ್ರವಣದಿಂದ ಜ್ಞಾನವು ಉತ್ಪನ್ನವಾಗುವುದು. ಆ ಜ್ಞಾನದ ಅನುಭವದಿಂದ ವಿಜ್ಞಾನವು ಪ್ರಾಪ್ತವಾಗುವುದು. ಹೀಗೆ ಜ್ಞಾನವಿಜ್ಞಾನಗಳಿಂದ ಯುಕ್ತನಾದವನು ನಿರಾಭಿಮಾನಿಯಾಗಿರುವನು।೧೩೩।। ಈ ಪ್ರಕಾರವಾಗಿ ನಿಜವಾದ ನಿರಾಭಿಮಾನತ್ವವು ಪ್ರಾಪ್ತಿಯಾಯಿತೆಂದರೆ ಹೃದಯದಲ್ಲಿ ಅಪಾರವಾದ ಶಾಂತಿಯು ಬೆಳೆಯುತ್ತ ಸಾಗುವುದು।೧೩೪।। ಜೋರ ಜುಲುಮೆಯಿಂದ ಚಿತ್ತವನ್ನು ನಿಶ್ಚಲಗೊಳಿಸುವ ಪ್ರಯತ್ನ ಮಾಡುವುದು ಅಥವಾ ಹಲ್ಲಿನಿಂದ ತುಟಿ ಹಿಡಿದು ಸಹನಶೀಲತೆ ತರುವುದು ಇದಕ್ಕೆ ಶಾಂತಿ ಎಂದು ಯಾರು ಹೇಳಬೇಕು? ಆಕ್ರೋಶಪಡುತ್ತ ಸಹಿಸುವುದು ಯಾವ ಶಾಂತಿಯೂ ಅಲ್ಲ।೧೩೫।। ಶಾಂತಿಯು ಸಾಗರದಂತಿರಬೇಕು. ಸಾಗರವು ಎಂದೂ ಕ್ಷುಬ್ಧಗೊಳ್ಳುವುದಿಲ್ಲ. ಅದಕ್ಕೆ ಹೆಚ್ಚು ಕಡಿಮೆ ಎನ್ನುವುದು ಇರುವುದೇ ಇಲ್ಲ।೧೩೬।। ಅನೇಕ ನದಿಗಳ ಮಲಿನ ನೀರು ಹರಿದು ಬಂದು ಸಮುದ್ರಕ್ಕೆ ಸತತವಾಗಿ ಕೂಡುವುದು. ಆದರೂ ಸಮುದ್ರವು ಎಳ್ಳಷ್ಟು ಮಲಿನವಾಗದೇ ತನ್ನ ಸ್ವರೂಪದಿಂದ ನಿರ್ಮಲವಾಗಿಯೇ ಇರುವುದು।೧೩೭।। ಅದರಂತೆಯೇ ನಾನಾ ಪ್ರಕಾರದ ಪ್ರಾಣಿಗಳ ವಿಷಮತೆಯಿಂದ ತನ್ನ ಸ್ವಾರ್ಥಕ್ಕೆ ಅಡಚಣೆಯಾದರೂ ಆತನ ಚಿತ್ತವು ಸ್ವಲ್ಪವೂ ವಿಚಲಿತವಾಗುವುದಿಲ್ಲ. ಇದುವೇ ನಿಜವಾದ ಶಾಂತಿಯಾಗಿರುವುದು ।। ೧೩೮।। ಹೀಗೆ ಅಪಾರವಾದ ಶಾಂತಿಯು ಯಾರಿಗೆ ಪ್ರಾಪ್ತಿಯಾಗುವುದೋ ಅತನೇ ಸರ್ವಪ್ರಾಣಿಗಳ ಸಖನು. ಸರ್ವ ಜನರ ಪ್ರಿಯನು. ಹಾಗೂ ಎಲ್ಲರ ಸುಹೃದಯನಾಗುವನು ।। ೧೩೯।। ಸಖ್ಯತ್ವದ ಪ್ರಕಾರವು ಬಹು ವಿಲಕ್ಷಣವಾಗಿರುವುದು. ಅವನು ಸ್ನೇಹಕ್ಕಾಗಿ ಸರ್ವಸ್ವವನ್ನೂ ಅರ್ಪಣೆ ಮಾಡುವನು. ಸ್ವಾರ್ಥಕ್ಕಾಗಿ ಎಂದೂ ಯಾರಿಗೂ ಮೋಸಮಾಡಲಾರನು. ಕೃಪೆಗೆ ಪಾತ್ರರಾದವರನ್ನೇ ಆತನು ಉಪದೇಶವನ್ನು ಮಾಡುತ್ತಿರುವನು ।। ೧೪೦।। ಆತನು ನೋಡುವ ದೃಷ್ಟಿಕೋನವು ಬಹು ಅತರ್ಕ್ಯವಾಗಿರುವುದು. ಅತನು ಸರ್ವಸೃಷ್ಟಿಯನ್ನು ನನ್ನ ರೂಪವಾಗಿಯೇ ಕಾಣುವನು. ಜಗತ್ತು ನನ್ನಿಂದ ಭಿನ್ನವಿಲ್ಲವೆಂಬ ಈ ಜ್ಞಾನವು ಆತನಿಗೆ ಸಂಪೂರ್ಣವಾಗಿರುವುದು ।೧೪೧।। ಹೀಗಾಗಿರುವುದರಿಂದ ಅವನು ಎಲ್ಲೆಲ್ಲಿ ನೋಡುವನೋ ಅಲ್ಲಲ್ಲಿ ಆತನಿಗೆ ನಾನೇ ಕಾಣುತ್ತಿರುವೆನು. ಆತನು ಒಂದು ವೇಳೆ ನನಗೆ ನೋಡದಿದ್ದರೂ ಆತನ ನೋಡದಿರುವಿಕೆಯೂ ನಾನೇ ಆಗುವೆನು. ।। ೧೪೨।। ಆತನ ನೋಡುವಿಕೆಯ ದೃಷ್ಟಿಯು ನಾನೇ ಸ್ವತಃ ಭಗವಂತನಾಗಿರುವೆನು. ಸರ್ವ ಸೃಷ್ಟಿ ಸಮೇತವಾಗಿ ಆತನ ಮತ್ತು ನನ್ನ ಏಕಾತ್ಮತೆಯಾಗಿರುವುದು ।೧೪೩।।

ಅವಘೇ ಜಗಚಿ ಮೀ ಹೋಯೇ । ತೇವ್ಹಾ ''ತೋಮೀ'' ಹೇ ಭಾಷ ಜಾಯೇ । ಐಸಾ ತೋ ಮಜಮಾಜೀ ಸಮಾಯೇ । ಸಮಸಾಮ್ಯೇ ಸಮತ್ವೇ ।।೧೪೪।। ಸಾಂಡೋನಿಯಾ ಮನೋಧರ್ಮ । ಐಸಾ ಜ್ಯಾಸಿ ಮೀ ಝಾಲೋ ಸುಗಮ। ತ್ಯಾಸೀ ಪುಢತೀ ಕೈಚೇ ಜನ್ಮ। ದುಃಖ ದುರ್ಗಮ ಜ್ಯಾಚೇನೀ ।।೧೪೫।। ಮಾತೇಚ್ಯಾ ಉದರಕುಹರೀ । ರಜಸ್ವಲೇಚ್ಯಾ ರುಧಿರಾಮಾಝಾರೀ । ಪಿತ್ಯಾಚೇನಿ ರೇತದ್ವಾರೀ । ಗರ್ಭಸಂಚಾರೀ ಸಂಸರಣ ।।೧೪೬।। ಜೇ ಮಾತೇಚ್ಯಾ ಉದರೀ । ಜಂತು ನಾಕೀ ತೋಂಡೀ ಉರೀ ಶಿರೀ । ವಿಷ್ಠಾಮೂತ್ರಾಚೇ ದಾಥರೀ । ನವಮಾಸವರೀ ಉಕಡಿಜೇ ।।೧೪೭।। ಜಠರಾಗ್ನೀಚ್ಯಾ ತೋಂಡೀ । ಘಾಲೂನಿ ಗರ್ಭಾಚೀ ಉಂಡೀ । ಉಕಡ ಉಕಡೂನಿ ಪಿಂಡೀ । ಗರ್ಭಕಾಂಡೀ ಘಡಿಜೇತಿ ।।೧೪೮।। ತೆ ಗರ್ಭೀಚೀ ವೇದನಾ । ನಾನಾಪರೀಚೀ ಯಾತನಾ। ನಕೋ ನಕೋ ರಘುನಂದನಾ । ಚಿಳಸೀ ಮನಾ ಯೇತಸೇ ।। ೧೪೯।। ಅವಘ್ಯಾಂಚಾ ಶೇವಟೀ । ಪ್ರಸೂತಿವಾತು ಜೋ ಆಟೀ। ಸರ್ವಾಂಗೀ ವೇದನಾ ಉಠೀ । ಯೋನಿಸಂಕಟೀ ದೇಹಜನ್ಮ ।।೧೫೦।। ಐಸೇ ಅಪವಿತ್ರ ಜೇ ಜನ್ಮ । ತೇ ನ ಪವತೀಚ ತೇ ನರೋತ್ತಮ । ಜೆಂಹೀ ಠಾಕಿಲೇ ನಿಜಧಾಮ । ತೇ ಪುರುಷೋತ್ತಮ ಸಮಸಾಮ್ಯೇ ।।೧೫೧।। ಮೀ ಅಸತಾ ಪಾಠೀಪೋಟೀ । ತ್ಯಾಂಸೀ ಕಾ ಇಶಾ ಜನ್ಮ ಗೋಠೀ । ಕಳಿಕಾಳಾತೇ ನಾಣೆತೀ ದಿಠೀ । ಆಲೇ ಉಠಾಉಠೀ ಮದ್ರೂಪಾ ।।೧೫೨।। ಜೇಥ ಜನ್ಮ ನಾಹೀ ಜಾಹಲೇ । ತೇಥ ಮರಣ ನ ಲಾಗತಾಂಚಿ ಗೇಲೇ । ಐಸೇ ಭಜೋನಿ ಮಾತೇ ಪಾವಲೇ । ಭಜನಬಳೇ ಮದ್ಭಕ್ತ ।।೧೫೩।। ಕೃಷ್ಣ ಉದ್ಧವಾತೇ ಥಾಪಟೀ । ಮ್ಹಣೇ ವೇಗೇ ಉಠೀ ಉಠೀ । ಹೇಚಿ ಹಾತವಶೀ ಹಾತವಟೀ । ಜನ್ಮತುಟೀ ತೇಣೇ ಹೋಯ ।।೧೫೪।। ಜೈಸೇ ಮೇಘಮುಖೀಚೇ ಉದಕ । ವರಿಚ್ಯಾವರೀ ಝೇಲಿತೀ ಚಾತಕ । ತೈಸೇ ಕೃಷ್ಣವಚನಾಂಸೀ ದೇಖ । ಉದ್ಧವೇ ಮುಖ ಪಸರಿಲೇ ।।೧೫೫।। ಕಾ ಚಂದ್ರಕಿರಣೀ ಚಕೋರ । ಜೇವೀ ಅತ್ಯಂತ ಸಾದರ । ತೇವೀ ಉದ್ಧವಾಚಾ ಆದರ । ದಿಸೇ ಥೋರ ಹರಿವಚನೀ ।।೧೫೬।। ಹೋ ಕಾ ಪಕ್ಷಿಣೀ ದೇಖೋನಿ ಪಿಲೇ । ಜಾಣೋನಿ ಚಾರ್ಯಾಚೇ ವೇಳೇ । ಸಾಂಡೋನಿಯಾ ಆವಿಸಾಳೇ । ಮುಖ ಕೋವಳೇ ಜೇವೀ ಪಸರೀ ।।೧೫೭।। ತೇವೀ ದೇಖೋನಿ ಕೃಷ್ಣಮುಖ । ಉದ್ಧವಾಸೀ ಅತ್ಯಂತ ಹರಿಖ । ಶ್ರವಣಾಚೇ ಮುಖೇ ದೇಖ । ಕೃಷ್ಣಪಿಯೂಖ ಸೇವಿತ ।।೧೫೮।।

ಸರ್ವ ಜಗತ್ತು ನಾನಾಗಿರುವೆನು ಎಂದು ತಿಳಿಯಲು "ಆತನು ಮತ್ತು ನಾನು" ಈ ಶಬ್ದವೇ ಇಲ್ಲದಾಗುವುದು. ಹೀಗೆ ಆತನು ಸರ್ವತ್ರವೂ ಸಮದೃಷ್ಟಿಯ ಯೋಗದಿಂದ ಏಕಾತ್ಮತೆಯಿಂದ ನನ್ನಲ್ಲಿಯೇ ಇರುವನು ।।೧೪೪।। ಈ ಪ್ರಕಾರವಾಗಿ ಮನೋಧರ್ಮವನ್ನು ಬಿಟ್ಟಿರುವುದರಿಂದ ಆತನಿಗೆ ನಾನು ಸುಲಭನಾಗುವೆನು. ಆತನಿಗೆ ದುರ್ಧರವಾದ ದುಃಖವನ್ನು ಭೋಗಿಸಬೇಕಾದ ಮುಂದಿನ ಜನ್ಮವು ಹೇಗೆ ಪ್ರಾಪ್ತವಾಗುವುದು? ।।೧೪೫।। ತಾಯಿಯ ಉದರರೂಪ ಗುಹೆಯಲ್ಲಿ, ರಜಸ್ವಲೆಯ ರಕ್ತದಲ್ಲಿ ತಂದೆಯ ವೀರ್ಯ ದ್ವಾರದಿಂದ ಗರ್ಭಸಂಚಾರವಾಗಿ ಸಂಸಾರಕ್ಕೆ ಪ್ರಾರಂಭವಾಗುವುದು. ।।೧೪೬।। ತಾಯಿಯ ಹೊಟ್ಟೆಯಲ್ಲಿರುವ ಜಂತುಗಳು(ಗರ್ಭದ) ಆತನ ಮೂಗು, ಮುಖ, ಎದೆ, ಮಸ್ತಕಗಳಲ್ಲಿ ಸೇರಿಕೊಂಡಿರುವ ಈ ಪ್ರಾಣಿಯು ಮಲಮೂತ್ರದ ಉಷ್ಣತೆಯಲ್ಲಿ ಒಂಬತ್ತು ತಿಂಗಳವರೆಗೆ ಕುದಿಯುತ್ತಿರುವನು ।।೧೪೭।। ಜಠರಾಗ್ನಿಯ ಮುಖದಲ್ಲಿ ಗರ್ಭದ ಉಂಡಿಯನ್ನು ಕೊಟ್ಟು, ಅದರಿಂದ ಅದು ಕುದ್ದು ಕುದ್ದು ಅದರ ಒಂದೊಂದೇ ಅವಯವಗಳು ಸಿದ್ಧವಾಗುತ್ತಿರುವುವು ।।೧೪೮।। ಹೇ ರಘುನಂದನನೇ, ಆ ಗರ್ಭದಲ್ಲಿನ ವೇದನೆಯು ಮತ್ತು ಅನೇಕ ಪ್ರಕಾರದ ಯಾತನೆಗಳು ಬೇಡವೇ ಬೇಡ ಎಂತಾಗುವುದು. ಮನಸ್ಸಿಗೆ ಅದರ ಅತಿಶಯವಾಗಿ ಹೇಸಿಕೆಯಾಗುವುದು. ।।೧೪೯।। ಈ ಎಲ್ಲವೂ ಮುಗಿದು ಕೊನೆಯಲ್ಲಿ ಪ್ರಸೂತವಾಯುವಿನ ಹೊಡೆತದಿಂದ ಸಂಪೂರ್ಣವಾಗಿ ಶರೀರಕ್ಕೆ ಗಂಭೀರ ವೇದನೆಯುಂಟಾಗುವುದು. ಭಯಂಕರವಾದ ಯೋನಿ ಸಂಕಟದಿಂದ ದೇಹದ ಜನ್ಮವಾಗುವುದು. ।।೧೫೦।। ಹೀಗಿರುವ ಈ ಯಾವ ಅಪವಿತ್ರ ಜನ್ಮವು, ಆ ಯಾವ ಉತ್ತಮ ಪುರುಷನಿಗೆ ಎಂದೂ ಪ್ರಾಪ್ತವಾಗಲಾರದು. ಯಾರು ನಿಜಧಾಮಕ್ಕೆ ಹೋಗಿ ಮುಟ್ಟಿಕೊಂಡನೋ ಆತನು ಸಮಸಾಮ್ಯದಿಂದ ಪುರುಷೋತ್ತಮನಾದನು. ।।೧೫೧।। ಆತನ ಹಿಂದೆ ಮುಂದೆ ನಾನಿರಲು ಜನ್ಮ ಧರಿಸುವ ಮಾತು ಹೇಗೆ ನಿರ್ಮಾಣವಾಗುವುದು ? ಆತನು ಕಲಿಕಾಲನನ್ನು ಎಂದೂ ನೋಡಲಾರನು. ತತ್ಕಾಲದಲ್ಲಿ ಮದ್ರೂಪನಾಗುವನು ।।೧೫೨।। ಎಲ್ಲಿ ಜನ್ಮವೇ ಇಲ್ಲದಾಗಿರಲು ಅಲ್ಲಿ ಮೃತ್ಯು ಸಹ ಬರಿಗೈಯಿಂದ ಹೊರಳಿ ಹೋಗುವುದು. ಈ ಪ್ರಕಾರವಾಗಿ ನನ್ನ ಭಕ್ತರು ನನ್ನ ಭಜನೆಯನ್ನು ಮಾಡಿ, ಆ ಭಜನೆಯ ಯೋಗದಿಂದ ನನ್ನಲ್ಲಿ ಏಕರೂಪರಾಗುವರು।।೧೫೩।। ಇಷ್ಟೊಂದು ಹೇಳಿ ಶ್ರೀ ಕೃಷ್ಣನು ಉದ್ಧವನ ಬೆನ್ನು ಚಪ್ಪರಿಸಿದನು. ಹಾಗೂ ಹೀಗೆ ಹೇಳಿದನು ; ಈಗ ಬೇಗನೇ ಏಳು. ಇದೇ ನಿನ್ನ ಕೈಯಲ್ಲಿರುವ ಯುಕ್ತಿಯಾಗಿದೆ. ಇದರಿಂದಲೇ ಜನ್ಮ ಮರಣದ ನಾಶವಾಗುವುದು ।।೧೫೪।। ಮೇಘದ ಮುಖದಿಂದ ಬರುತ್ತಿರುವ ಉದಕವನ್ನು ಚಾತಕಪಕ್ಷಿಯು ಯಾವ ಪ್ರಕಾರವಾಗಿ ಮೇಲಿಂದ ಮೇಲೆ ಹಿಡಿತದಿಂದ ಲಕ್ಷಕೊಟ್ಟು ಸೇವಿಸುವುದೋ ಅದರಂತೆ ಉದ್ಧವನು ಶ್ರೀ ಕೃಷ್ಣನ ವಚನಗಳನ್ನು ಮುಖ ಪಸರಿಸಿ ಸ್ವೀಕರಿಸಿದನು ।।೧೫೫।। ಅಥವಾ ಚಕೋರ ಪಕ್ಷಿಯು ಚಂದ್ರಕಿರಣಗಳಿಗಾಗಿ ಹೇಗೆ ಉತ್ಸುಕವಾಗುವುದೋ, ಅದರಂತೆ ಹರಿಯ ವಚನಗಳಲ್ಲಿ ಉದ್ಧವನ ಅತಿಶಯವಾಗಿ ಇರುವ ಪ್ರೀತಿಯು ತೋರಹತ್ತಿತು ।।೧೫೬।। ಅಥವಾ ಪಕ್ಷಿಯ ಮರಿಗಳು ತಮ್ಮ ತಾಯಿಯನ್ನು ಕಂಡು ಆಹಾರದ ವೇಳೆ ಆದದ್ದು ಅರಿತು ಲಗುಬಗೆಯಿಂದ ಹೊರ ಬಂದು ತಮ್ಮ ಕೋಮಲವಾದ ಚುಂಚನ್ನು ತೆಗೆಯುವುವು ।।೧೫೭।। ಅದರಂತೆ ಶ್ರೀ ಕೃಷ್ಣನ ಮುಖವನ್ನು ಕಂಡು ಉದ್ಧವನು ಅತ್ಯಂತ ಆನಂದ ಭರಿತನಾದನು ಹಾಗೂ ಶ್ರವಣದ್ವಾರದಿಂದ, ಆನಂದ ಯುಕ್ತನಾಗಿ ಕೃಷ್ಣಾಮೃತವನ್ನು ಸೇವಿಸಲಾರಂಭಿಸಿದನು ।।೧೫೮।।

ಶ್ರೀ ಶುಕ ಉವಾಚ:-

ಇತ್ಯಾದಿಷ್ಟೋ ಭಗವತಾ ಮಹಾಭಾಗವತೋ ನೃಪ। ಉದ್ಧವಃ ಪ್ರಣಿಪತ್ಯಾಹ ತತ್ತ್ವಂ ಜಿಜ್ಞಾಸುರಚ್ಯುತಮ್ ।೧೩॥

ಅರ್ಥ:- ಶುಕ ದೇವರು ಹೇಳಿದರು; ಹೇ ಪರೀಕ್ಷಿತ ರಾಜನೇ, ಭಗವಾನ ಶ್ರೀ ಕೃಷ್ಣನು ಈ ಪ್ರಕಾರದ ಆದೇಶವನ್ನು ಕೊಡಲು ಆಗ ಪರಮ ಪ್ರೇಮಿ ಉದ್ಧವನು ಆತನಿಗೆ ಪ್ರಣಾಮಗಳನ್ನು ಮಾಡಿ ತತ್ತ್ವಜ್ಞಾನದ ಪ್ರಾಪ್ತಿಯ ಇಚ್ಛೆಯಿಂದ ಈ ಪ್ರಶ್ನೆಯನ್ನು ಮಾಡಿದನು.

ಶುಕ ಮ್ಹಣೇ ಕೌರವನಾಥಾ । ಕೃಪಾ ಉಪಜಲೀ ಭಗವಂತಾ । ಉಪದೇಶಿಲೇ ಮಹಾಭಾಗವತಾ । ಜ್ಞಾನಕಥಾ ನಿಜಬೋಧು ॥೧೫೯॥ ತೇ ಐಕೋನಿ ಉದ್ಧವ । ಶ್ರವಣೀ ಥೋರ ಉಠೀ ಹಾಂವ । ಕೈಸೇ ಬೋಲಿಲಾ ಜ್ಞಾನಗೌರವ । ಅತಿಪೂರ್ವಕ ಶ್ರೀಕೃಷ್ಣ ।೧೬೦॥ ಶ್ರೀಕೃಷ್ಣ ಶ್ರೀಮುಖೇ ಸಾಂಗೇ ಕೋಡ । ತೇ ನಿರೂಪಣ ಅತಿಗೋಡ । ಜೀವೀ ಉಠಲೀ ಶ್ರವಣಚಾಡ । ನುಲ್ಲಂಘೀ ಭೀಡ ದೇವಾಚೀ ।೧೬೧॥ ಆವಡೀ ಕಳವಳೇ ಚಿತ್ತ । ಘಾಲೀ ಸಾಷ್ಟಾಂಗ ದಂಡವತ। ಹಾತ ಜೋಡೋನಿ ಪುಸತ । ಪ್ರೇಮಳ ಭಕ್ತ ಉದ್ಧವ ।೧೬೨॥

ಉದ್ಧವ ಉವಾಚ :-

ಯೋಗೇಶ ಯೋಗ ವಿನ್ಯಾಸ ಯೋಗಾತ್ಮನ್ಯೋಗ ಸಂಭವ। ನಿಃಶ್ರೇಯಸಾಯ ಮೇ ಪ್ರೋಕ್ತಸ್ತ್ಯಾಗಃ ಸನ್ಯಾಸ ಲಕ್ಷಣಃ ।೧೪॥

ಅರ್ಥ:- ಉದ್ಧವನು ಹೇಳಿದನು: ಹೇ ಭಗವಂತನೇ, ನೀವು ಯೋಗವೇತ್ತ್ಯಾ ಅವರ ಮೂರ್ತಿಮಂತ ಅತಿ ಗುಪ್ತ ನಿಧಿಯಾಗಿರುವಿರಿ. ನೀವು ಸಮಸ್ತ ಯೋಗಗಳ ಆಧಾರರಾಗಿರುವಿರಿ. ಆದ್ದರಿಂದ ನೀವು ಯೋಗ ಸ್ವರೂಪರು. ನೀವು ನನ್ನ ಕಲ್ಯಾಣಕ್ಕಾಗಿ ಆ ಯಾವ ಸನ್ಯಾಸ ರೂಪ ತ್ಯಾಗದ ಉಪದೇಶವನ್ನು ಮಾಡಿರುವಿರಿ.

ಐಕೇ ಯೋಗಿಯಾಂಚ್ಯಾ ಯೋಗಪತೀ । ಯೋಗ್ಯಾಂಚ್ಯಾ ಠೇವಾ ತೂ ಶ್ರೀಪತೀ। ಯೋಗೀ ಪ್ರಗಟ ತೂ ಯೋಗಮೂರ್ತೀ । ಯೋಗ ಉತ್ಪತ್ತೀ ತುಜಪಾಸೀ ।೧೬೩॥ ಮಜ ಮೋಕ್ಷಾಸೀ ಕಾರಣ । ತ್ಯಾಗು ಸನ್ಯಾಸ ಲಕ್ಷಣ । ಬೋಲಿಲಾಸೀ ತೋ ಅತಿ ಕಠಿಣ । ಪರಮ ದಾರುಣ ಹಾ ತ್ಯಾಗು ।೧೬೪॥

ತ್ಯಾಗೋಽಯ ದುಷ್ಕರೋ ಭೂಮನ್ ಕಾಮಾನಾಂ ವಿಷಯಾತ್ಮಭಿಃ । ಸುತರಾಂ ತ್ವಯೀ ಸರ್ವಾತ್ಮನ್ನಭಕ್ತೈರಿತಿ ಮೇ ಮತಿಃ ।೧೫॥

ಅರ್ಥ:- ಹೇ ವ್ಯಾಪಕ ಪರಮಾತ್ಮನೇ, ಈ ಕಾಮದ ತ್ಯಾಗವನ್ನು ವಿಷಯಾಸಕ್ತ ಜನರಿಂದ ಮಾಡುವುದು ಅತ್ಯಂತ ಕಠಿಣವಾಗಿರುವುದು. ಹೇ ಸರ್ವಭೂತಾತ್ಮನೇ, ಅಭಕ್ತರು ನಿನ್ನಲ್ಲಿ ಕಾಮದ ತ್ಯಾಗವನ್ನು ಮಾಡುವುದು ಮಾತ್ರ ಅತಿಶಯವಾಗಿ ಕಠಿಣವಾಗಿರುವುದು. ಹೀಗೆ ನನ್ನ ನಿಶ್ಚಯವಾಗಿರುವುದು.

ಪಾಹತಾ ಯಾ ತ್ಯಾಗಾಚೀ ರೀತೀ । ಮಜ ತಂವ ದುರ್ಧರು ಗಾ ಶ್ರೀಪತೀ । ಮಗ ಇತರಾಂಚೀ ಯೇಥ ಮತೀ । ಕವಣ್ಯಾ ಸ್ಥಿತೀ ಹೋಈಲ ॥೧೬೫॥ ಕಾಮು ಜಯಚ್ಯಾ ಚಿತ್ತೀ । ವಿಷಯೀ ಆಸಕ್ತ ಮತೀ । ತ್ಯಾಸೀಯಾ ತ್ಯಾಗಾಚೀ ಗತೀ । ನವ್ಹೇ ಶ್ರೀಪತಿ ಸರ್ವಥಾ ।೧೬೬॥ ತುಝೀ ಕೃಪಾ ಜಂವ ನವ್ಹೇ । ತಂವ ತೋ ಅಭಕ್ತಾ ಕೇವೀ ಕರವೇ। ತ್ಯಾಗು ಬೋಲಿಲಾ ಜೋ ದೇವೇ । ತೋ ಸರ್ವಾಸೀ ನವ್ಹೇ ಸರ್ವಥಾ ।೧೬೭॥

ಶುಕಾಚಾರ್ಯರು ಹೇಳುವರು: ಹೇ ಪರೀಕ್ಷಿತಿಯೇ, ಭಗವಂತನ ಮನದಲ್ಲಿ ಕೃಪೆಯು ಉತ್ಪನ್ನವಾದ್ದರಿಂದ ಆತನು ಉದ್ಧವನಿಗೆ ಪ್ರೇಮದಿಂದ ತನ್ನ ಮಹಾಭಾಗವತ ಆತ್ಮಜ್ಞಾನದ ಉಪದೇಶವನ್ನು ಮಾಡಿದನು ।೧೫೯॥ ಆದರೆ ಇದನ್ನು ಕೇಳಿ ಉದ್ಧವನಲ್ಲಿ ಶ್ರವಣದ ಇಚ್ಛೆಯು ಬಹುವಾಗಿ ಬೆಳೆಯಿತು. ಹೀಗಾಗಬೇಕಾದರೆ ಶ್ರೀಕೃಷ್ಣನು ಜ್ಞಾನಯುಕ್ತ ವಚನಗಳು ಅದೆಷ್ಟು ಅಪೂರ್ವವಾಗಿರಬೇಕು? ।೧೬೦॥ ಶ್ರೀ ಕೃಷ್ಣನು ಸ್ವಮುಖದಿಂದ ತನ್ನ ರಹಸ್ಯವನ್ನು ಹೇಳಿದನು. ಈ ಯಾವ ಅತ್ಯಂತ ಮಧುರವಾದ ನಿರೂಪಣೆಯನ್ನು ಕೇಳುವ ಬಯಕೆಯು ಬೆಳೆಯಿತು. ಉದ್ಧವನ ಭಿಡೆಯಿಂದ ದೇವನಿಗೆ ಇದನ್ನು ಉಲ್ಲಂಘಿಸಲು ಆಗಲಿಲ್ಲ. ।೧೬೧॥ ಉದ್ಧವನ ಚಿತ್ತವು ಪ್ರೇಮದಿಂದ ಸದ್ಗದಿತವಾಯಿತು. ಆತನು ಶ್ರೀಕೃಷ್ಣನಿಗೆ ಸಾಷ್ಟಾಂಗ ದಂಡವತಗಳನ್ನು ಹಾಕಿದನು ಮತ್ತು ಆ ಪ್ರೇಮಳ ಭಕ್ತನು ಕೈ ಜೋಡಿಸಿ ಕೃಷ್ಣನಿಗೆ ಹೀಗೆ ಕೇಳಿದನು ।೧೬೨॥

ಹೇ ಯೋಗಿಗಳ ಯೋಗಿರಾಜನೇ, ಕೇಳು. ಹೇ ಶ್ರೀಪತಿಯೇ, ನೀನು ಯೋಗಿಗಳ ನಿಧಿಯಾಗಿರುವೆ. ನೀನು ಯೋಗದ ಸಾಕ್ಷಾತ್ ಮೂರ್ತಿಯಾಗಿದ್ದು ಯೋಗದಿಂದಲೇ ಪ್ರಕಟನಾಗುವೆ. ಸಂಪೂರ್ಣ ಯೋಗದ ಉತ್ಪತ್ತಿಯು ನಿನ್ನಿಂದಲೇ ಆಗುವುದು. ।೧೬೩॥ ನೀನು ನನಗೆ ಮೋಕ್ಷಪ್ರಾಪ್ತಿಗಾಗಿ ತ್ಯಾಗದ ಮತ್ತು ಸನ್ಯಾಸದ ಲಕ್ಷಣಗಳನ್ನು ಹೇಳಿರುವೆ. ಆದರೆ ತ್ಯಾಗವು ಅತಿ ಕಠಿಣವಾಗಿ ಪರಮ ದಾರುಣವಾಗಿದೆ ।೧೬೪॥

ಹೇ ಶ್ರೀಪತಿಯೇ, ಆ ತ್ಯಾಗದ ಪ್ರಕಾರ ಕಂಡರೆ ಅದು ನನಗೂ ಸಹ ಅತಿ ಕಠಿಣವಾಗಿ ತೋರುತ್ತಿದೆ. ಇತರರ ಗತಿ, ಮತಿಯು ಯಾವ ಸ್ಥಿತಿಯಾದೀತು? ।೧೬೫॥ ಹೇ ಶ್ರೀಕೃಷ್ಣನೇ, ಯಾರ ಮನದಲ್ಲಿ ಕಾಮವಿರುವುದೋ ಅವರ ಬುದ್ಧಿಯು ವಿಷಯಾಸಕ್ತವಾಗಿರುವುದು. ಅವರಿಗೆ ಈ ತ್ಯಾಗವು ಎಂದೆಂದಿಗೂ ಆಗಲು ಶಕ್ಯವಿಲ್ಲ ।೧೬೬॥ ಎಲ್ಲಿಯವರೆಗೆ ನಿನ್ನ ಕೃಪೆಯಾಗಿಲ್ಲವೋ, ಅಲ್ಲಿಯವರೆಗೆ ಆ ಅಭಕ್ತರಿಗೆ ಈ ತ್ಯಾಗವು ಹೇಗಾದೀತು? ದೇವನು ಹೇಳಿರುವ ಈ ತ್ಯಾಗವು ಎಲ್ಲರಿಗೂ ಸರ್ವಥಾ ಮಾಡಲು ಬಾರದಂತಹದ್ದು ।೧೬೭॥

ತೂ ಸರ್ವಾತ್ಮಾ ಅಸತಾ ಹೃದಯೀ । ಚಿತ್ತ ಪ್ರವೇಶೇನಾ ತುಝೀ ಠಾಯೀ । ತೇ ಆವರಿಲೇ ಅಸೇ ವಿಷಯೀ। ನವಲ ಕಾಯೀ ಸಾಂಗಾವೇ ॥೧೬೮॥ ಐಸೇ ಪ್ರಪಂಚೀ ಆಸಕ್ತ । ಯಾಲಾಗಿ ವಿಮುಖ ಝಾಲೇ ಅಭಕ್ತ । ತ್ಯಾಂಸೀ ತ್ಯಾಗು ನವ್ಹೇ ಹಾ ನಿಶ್ಚಿತ । ಚಿತ್ತ ದುಶ್ಚಿತ ಸರ್ವದಾ ॥೧೬೯॥ ತ್ಯಾಗು ಕಾ ನವ್ಹೇ ಮ್ಹಣಸೀ । ತೇ ಪರಿಸ ಗಾ ಹೃಷೀಕೇಶೀ । ಕಠಿಣತ್ವ ಜೇ ತ್ಯಾಗಾಸೀ । ತೇ ತುಜಪಾಶೀ ಸಾಂಗೇನ ॥೧೭೦॥

ಸೋಽಹಂ ಮಮಾಹಮಿತಿ ಮೂಢಮತಿರ್ವಿಗಾಢ ಸ್ತ್ವನ್ಮಾಯಯಾ ವಿರಚಿತಾತ್ಮನೀ ಸಾನು ಬಂಧೇ।
ತತ್ತ್ವಂಜಸಾ ನಿಗದಿತಂ ಭವತಾ ಯಥಾಹಂ ಸಂಸಾಧಯಾಮಿ ಭಗವನ್ನನು ಶಾಧಿ ಭೃತ್ಯಮ್।೧೬॥

ಅರ್ಥ:- ನೀನು ನನಗೆ ತ್ಯಾಗದ ಉಪದೇಶವನ್ನು ಮಾಡಿರುವೆ. ಆದರೆ ನಾನು ಮೂಢಮತಿಯಾಗಿರುವೆನು. ನಾನು ಮತ್ತು ನನ್ನದು ಎಂಬ ಜೊತೆಯಲ್ಲಿ ಪುತ್ರಾದಿಕ ಸಹ ನಿನ್ನ ಮಾಯೆಯಿಂದ ರಚಿಸಿರುವ ಈ ದೇಹದಲ್ಲಿ ನಾನು ನಿಮಗ್ನನಾಗಿರುವೆನು. ಆದ್ದರಿಂದ ನೀನು ಹೇಳಿರುವ ಈ ತತ್ವವನ್ನು ಪ್ರತ್ಯಕ್ಷವಾಗಿ ಸಾಧಿಸಲು ನಾನು ಸಮರ್ಥನಾಗುವ ರೀತಿಯಲ್ಲಿ ಹೇ ಭಗವಂತನೇ, ದಾಸನಾದ ನನಗೆ ಕ್ರಮ ಕ್ರಮವಾಗಿ ಉಪದೇಶಿಸು.

ತುಝೀ ಮಾಯಾ ವಿಚಿತ್ರ ಉಪಾಧೀ । ಶರೀರೀ ಕೇಲೀ ಆತ್ಮಬುದ್ಧೀ । ಆತ್ಮೀಯೇ ಶರೀರ ಸಂಬಂಧೀ। ವಿಪರೀತ ಸಿದ್ಧೀ ವಾಢಲೀ ॥೧೭೧॥ "ಮೀ - ಮಾಝೇ" ವಾಢಲೇ ಗಾಢ । ತೇಣೇ ಮತಿ ಝಾಲೀ ಮೂಢ । ಗೃಹಾಸಕ್ತಿ ಲಾಗಲೀ ದೃಢ । ತ್ಯಾಗು ಅವಘಡ ಯಾಲಾಗೀ ॥೧೭೨॥ ಐಶೀ ಹೀ ಬುದ್ಧಿ ವಿವಳೇ । ಅಪ್ರಯಾಸೇ ತತ್ತ್ವ ಆಕಳೇ । ತೈಶೀ ಕೃಪಾ ಕೀಜೇ ರಾಉಳೇ । ದಾಸ ಗೋಪಾಳೇ ತಾರಾವಯಾ ॥೧೭೩॥ ಐಕೇ ಗಾ ಪುರುಷೋತ್ತಮಾ । ನಿಜದಾಸಾ ಆಪುಲ್ಯಾ ಆಮ್ಹಾ । ಸೋಡವೀ ಗಾ ಸಂಸಾರಶ್ರಮಾ । ಆತ್ಮಯಾರಾಮಾ ಶ್ರೀಕೃಷ್ಣಾ ॥೧೭೪॥ ತುಜ ಸಾಂಡೋನಿ ಹೃಷೀಕೇಶೀ। ಪುಸೋ ಜಾವೇ ಆಣಿಕಾಪಾಸೀ । ತೇ ನಯೇ ಮಾಝಿಯಾ ಮನಾಸೀ। ವಿಷಯೀ ಸರ್ವಾಸೀ ವ್ಯಾಪಿಲೇ ॥೧೭೫॥

ಸತ್ಯಸ್ಯ ತೇ ಸ್ವದೃಶ ಆತ್ಮನ ಆತ್ಮನೋಽನ್ಯಂ ವಕ್ತಾರಮೀಶ ವಿಬುಧೇಷ್ವಪಿ ನಾನು ಚಕ್ಷೇ।
ಸರ್ವೇ ವಿಮೋಹಿತಧಿಯಸ್ತವ ಮಾಯಯೇಮೇ ಬ್ರಹ್ಮಾದಯಸ್ತನುಭೃತೋ ಬಹಿರರ್ಥ ಭಾವಾಃ ।೧೭॥

ಅರ್ಥ:- ಹೇ ಈಶ್ವರನೇ, ಸ್ವಯಂಪ್ರಕಾಶ ಹಾಗೂ ಸತ್ಯನಾಗಿರುವ ನೀನು ಆತ್ಮನು, ಈ ಸ್ವರೂಪದ ಆದೇಶವನ್ನು ನನಗೆ ಕೊಡಲು ನಿನ್ನ ಹೊರತಾಗಿ ಅನ್ಯರಾರೂ ದೇವತೆಗಳಲ್ಲಿ ನನಗೆ ಕಾಣರು. ಕಾರಣ ಈ ಎಲ್ಲ ಬ್ರಹ್ಮಾದಿಕರು ಬಾಹ್ಯ ವಿಷಯಗಳಲ್ಲಿ ಅರ್ಥಬುದ್ಧಿ ಇಡುವವರಾಗಿದ್ದಾರೆ. ನಿನ್ನ ಮಾಯೆಯಿಂದ ಮೂಢಬುದ್ಧಿಯವರಾಗಿದ್ದಾರೆ. ಅಂದರೆ ಅವರ ಬುದ್ಧಿಯು ವಿವೇಕ ಹೀನವಾಗಿರುವುದು.

ಪುಸೋ ಜಾವೇ ಬ್ರಹ್ಮಯಾಸೀ । ತೋ ಗುಂತಲಾ ಸೃಷ್ಟಿಕರ್ಮಾಸೀ । ಪ್ರಜಾಉತ್ಪತ್ತಿ ಮಾನಸೀ । ಅಹರ್ನಿಶೀ ಚಿಂತಿತು ॥೧೭೬॥ ಜೋ ಆಪುಲ್ಯಾ ನಿಜಸ್ವಭಾವೀ । ಸದಾ ಸಂಸಾರು ವಾಢವೀ । ತೋ ಕೇವೀ ಸಂಸಾರು ತೋಡವೀ । ಕೇಲೇ ನ ಬುಡವೀ ಸರ್ವಥಾ ॥೧೭೭॥

ನೀನು ಸರ್ವಾತ್ಮನು, ಪ್ರತ್ಯಕ್ಷವಾಗಿ ಹೃದಯದಲ್ಲಿದ್ದರೂ ನಿನ್ನಲ್ಲಿ ಚಿತ್ತವು ಪ್ರವೇಶವಾಗಲರಿಯದು, ಬದಲಾಗಿ ವಿಷಯದಲ್ಲಿ ಸಂಪೂರ್ಣವಾಗಿ ಆಸಕ್ತವಾಗಿರುವುದು. ಇದು ಎಂತಹ ಆಶ್ಚರ್ಯ ! ॥೧೬೮॥ ಹೀಗೆ ಪ್ರಪಂಚದಲ್ಲಿ ಆಸಕ್ತರಾಗಿರುವ ಅಭಕ್ತರು ನಿನ್ನಿಂದ ವಿಮುಖರಾಗಿರುವರು. ಅವರಿಗೆ ನಿಜವಾಗಿಯೂ ತ್ಯಾಗ ಮಾಡಲು ಸಾಧ್ಯವೇ ಇಲ್ಲ. ಏಕೆಂದರೆ ಸದಾ ಸರ್ವಕಾಲದಲ್ಲಿ ಅವರ ಚಿತ್ತವು ಅಸ್ಥಿರವಾಗಿ ದೂಷಿತವಾಗಿರುವುದು ॥೧೬೯॥ ಹೇ ಹೃಷೀಕೇಶನೇ, ತ್ಯಾಗವೇಕಾಗುವುದಿಲ್ಲವೆಂದು ನೀನು ಹೇಳಬಹುದು. ಆದರೆ, ಕೇಳು ತ್ಯಾಗ ಮಾಡಲು ಒದಗುವ ಕಠಿಣತೆಯನ್ನು ನಿನ್ನಲ್ಲಿ ಕಥಿಸುವೆನು ॥೧೭೦॥

ಈ ನಿನ್ನ ಮಾಯೆಯು ವಿಚಿತ್ರವಾದ ಉಪಾಧಿಯಾಗಿದೆ. ಅದು ಶರೀರದಲ್ಲಿ ಆತ್ಮಬುದ್ಧಿಯನ್ನು ನಿಶ್ಚಯಿಸುವುದು. ಶರೀರ ಸಂಬಂಧದಲ್ಲಿ ಸರ್ವವೂ ಆತ್ಮದ್ದೇ ಆಗಿದೆ ಎಂದು ವಿಪರೀತ ಭಾವನೆಯನ್ನು ಹುಟ್ಟಿಸುವುದು।೧೭೧॥ ''ನಾನು'' ಮತ್ತು ''ನನ್ನದು'' ಎಂಬ ಈ ವೃತ್ತಿಯು ಬಹುವಾಗಿ ಬೆಳೆದಿರುವುದರಿಂದ ಬುದ್ಧಿಯು ಮೂಢವಾಗುವುದು. ಹಾಗೂ ಮನೆಮಾರಿನ ಮೇಲೆ ಅತಿಶಯವಾಗಿ ಆಸಕ್ತಿಯು ಬೆಳೆಯುವುದು. ಆದ್ದರಿಂದ ತ್ಯಾಗ ಮಾಡುವುದು ಬಹಳ ಕಠಿಣವಾಗುವುದು. ॥೧೭೨॥ ಈ ಬುದ್ಧಿಯು ನಿರ್ಮಲವಾಗಬೇಕು, ಅನಾಯಾಸವಾಗಿ ಆತ್ಮಸ್ವರೂಪವು ತಿಳಿಯುವಂತಾಗಬೇಕು, ಹೀಗೆ ದೇವರು ಕೃಪೆ ಮಾಡಬೇಕು. ಹೀಗಾದಲ್ಲಿ ದಾಸನು ಉದ್ಧಾರನಾಗುವನು ॥೧೭೩॥ ಹೇ ಪುರುಷೋತ್ತಮನೇ, ಹೇ ಆತ್ಮಾರಾಮನೇ, ಈ ಯಾವ ನಮ್ಮಂಥ ನಿನ್ನ ದಾಸರನ್ನು ನೀನು ಸಂಸಾರದ ಯಾತನೆಗಳಿಂದ ಮುಕ್ತಗೊಳಿಸು ॥೧೭೪॥ ಹೇ ಶ್ರೀಕೃಷ್ಣನೇ, ನಿನ್ನನ್ನು ಬಿಟ್ಟು ಬೇರೆ ಯಾರನ್ನು ಕೇಳಲು ಹೋಗುವುದು ನನ್ನ ಮನಸ್ಸಿಗೆ ಹಿಡಿಸುವುದಿಲ್ಲ. ಕಾರಣ ಸರ್ವರಿಗೂ ವಿಷಯಗಳು ನುಂಗಿಬಿಟ್ಟಿವೆ ॥೧೭೫॥

ಬ್ರಹ್ಮದೇವರಿಗೆ ಕೇಳಲು ಹೋಗಬೇಕೆಂದರೆ, ಆತನು ಸೃಷ್ಟಿಯನ್ನು ಉತ್ಪನ್ನಗೊಳಿಸುವುದರಲ್ಲಿಯೇ ಮಗ್ನನಾಗಿರುವನು. ಹಗಲು ರಾತ್ರಿ ಪ್ರಜೆಗಳನ್ನು ಹೇಗೆ ಹುಟ್ಟಿಸಬೇಕೆಂಬುದೇ ಆತನಲ್ಲಿ ವಿಚಾರ ತುಂಬಿ ಹೋಗಿದೆ ॥೧೭೬॥ ಆತನು ತನ್ನ ಸ್ವಭಾವದಂತೆ ಸತತವಾಗಿ ಸಂಸಾರವನ್ನು ಬೆಳೆಸುತ್ತಲೇ ಇರುವನು. ಅಂದಮೇಲೆ ಸಂಸಾರವನ್ನು ಹೇಗೆ ಮುರಿಯುವನು? ತಾನು ನಿರ್ಮಾಣಗೊಳಿಸಿದ್ದನ್ನು ಯಾರೂ ಎಂದೂ ನಾಶ ಮಾಡಲಾರರು ॥೧೭೭॥

ವಾಢೋ ನೇದೀ ಸಂಸಾರಾಸೀ । ಕೋಪು ಆಲಾ ಪ್ರಜಾಪತೀಸೀ । ಶಾಪು ದಿಧಲಾ ನಾರದಾಸೀ । ಬ್ರಹ್ಮ ಉಪದೇಶೀ ಮ್ಹಣೌನೀ ॥೧೭೮॥ ಐಸೇ ಸಂಸಾರೀ ಆಸಕ್ತ । ನಿತ್ಯ ಸಂಸಾರಯುಕ್ತ । ತ್ಯಾಂಸೀ ಪುಸೋ ನ ಮನೀ ಚಿತ್ತ । ಜಾಣ ನಿಶ್ಚಿತ ಶ್ರೀಕೃಷ್ಣಾ ॥೧೭೯॥ ಪುಸೋ ಜಾವೇ ಋಷೀಪ್ರತೀ । ತಂವ ತೇ ಸದಾ ಆಪಮತೀ । ಆಪುಲೇ ಮತ ಪ್ರತಿಷ್ಠಿತೀ । ಅನ್ಯಥಾ ದೇತೀ ಶಾಪಾತೇ ॥೧೮೦॥ ಜೇವೀ ಧರೋನಿ ಅರ್ಥಾಸಕ್ತೀ । ಶಿಷ್ಯಾಂತೇ ಉಪದೇಶಿತೀ । ವಿಷಯೋ ಧರೋನಿಯಾ ಚಿತ್ತೀ । ಜೀವಿಕಾವೃತ್ತೀ ಉಪದೇಶು ॥೧೮೧॥ ಗುರುಸೀಚ ವಿಷಯಾಸಕ್ತೀ । ತೇಥ ಶಿಷ್ಯಾಸೀ ಕೈಚೀ ವಿರಕ್ತಿ । ಐಶಿಯಾಸೀ ಜೇ ಪುಸತೀ । ತೇ ಭ್ರಂಶತೀ ಸ್ವಾರ್ಥಾತೇ ॥೧೮೨॥ ಸತ್ಯಸ್ವರೂಪ ಸ್ವ ಪ್ರಕಾಶ । ಆತ್ಮಾ ತೂ ಅವಿನಾಶ । ಯುಕ್ತಿ ಪ್ರಯುಕ್ತೀ ಉಪದೇಶ । ವಿಕಲ್ಪ ನಿರಾಸ ಜಾಣಸೀ ॥೧೮೩॥ ಬ್ರಹ್ಮಜ್ಞಾನಾಚಾ ವಕ್ತಾ । ತುಜವೇಗಳಾ ಶ್ರೀಕೃಷ್ಣನಾಥಾ । ನ ದಿಸೇ ಗಾ ಸರ್ವಥಾ। ಮಜ ಪಾಹತಾ ತ್ರಿಲೋಕೀ॥೧೮೪॥ ಏವಂ ಆತ್ಮಾ ತೂ ತತ್ತ್ವತಾ । ತೂಚಿ ಆತ್ಮಜ್ಞಾನದಾತಾ । ಆತ್ಮ ಬೋಧೀ ಸಂಸ್ಥಾಪಿತಾ । ಕೃಷ್ಣನಾಥಾ ತೂ ಏಕು॥೧೮೫॥

ತಸ್ಮಾದ್ಭವಂತ ಮನವದ್ಯ ಮನಂತಪಾರಂ ಸರ್ವಜ್ಞ ಮೀಶ್ವರಮಕುಂಠಧಿಷ್ಣ್ಯಮ್।
ನಿರ್ವಿಣ್ಣಧೀರ ಹಮುಹೇ ವೃಜಿನಾಭಿತಪ್ತೋ ನಾರಾಯಣಂ ನರಸಖಿಂ ಶರಣಂ ಪ್ರಪದ್ಯ ।೧೮

ಅರ್ಥ:- ಹೇ ಭಗವಂತನೇ, ನಾನು ಸರ್ವಪ್ರಕಾರದ ದುಃಖದ ದಾವಾಗ್ನಿಯಿಂದ ಬೆಂದು ಹೋಗಿರುವೆನು. ನಾನು ನಿಮಗೆ ಶರಣಾಗಿರುವೆನು. ನೀವು ನಿರ್ದೋಷಿ, ದೇಶಕಾಲದಿಂದ ಅಪರಿಚ್ಛಿನ್ನ, ಸರ್ವಜ್ಞ, ಸರ್ವಶಕ್ತಿಮಾನ ಮತ್ತು ಅವಿನಾಶಿ, ವೈಕುಂಠ ನಿವಾಸಿ, ನರರ ನಿತ್ಯ ಸಖನಾದ ನಾರಾಯಣನಾಗಿರುವಿರಿ.

ಯಾಲಾಗೀ ಜೇ ಯಾದವಪತೀ । ನಿತ್ಯ ಶುದ್ಧ ಪವಿತ್ರ ಮೂರ್ತೀ । ತುಜ ಮಾಯಾಮೋಹೋ ನಾತಳತೀ । ಪವಿತ್ರ ಖ್ಯಾತೀ ಯಾಲಾಗೀ ॥೧೮೬॥ ಗೋವಳಾಂಚೇ ಉಚ್ಛಿಷ್ಟಕವಳೇ । ಜ್ಯಾಚೀ ಪವಿತ್ರತಾ ನ ಮೈಳೇ। ತೇಣೇಂಚೀ ಉಚ್ಛಿಷ್ಟ ಬಳೇ । ಗೋವಳೇ ಸಕಳೇ ತಾರಿಲೀ ॥೧೮೭॥ ಪ್ರಾಣೇ ಶೋಷಿಲೇ ಪೂತನೇಸೀ । ತರೀ ಪವಿತ್ರತಾ ಅಧಿಕ ಕೈಶೀ । ತೇಣೇಂಚಿ ಉದ್ಧರಿಲೇ ತಿಸೀ । ದೋಷೀ ದೋಷಾಂಸೀ ತಾರಕು ॥೧೮೮॥ ಕರುನಿ ಕಾಲೀಯಮರ್ದನ । ಮರ್ದಿಲಾ ತ್ಯಾಚಾ ಅಭಿಮಾನ । ತರೀ ಮೈಳೇನಾ ಪವಿತ್ರಪಣ । ನಿರ್ವಿಷೇ ಜಾಣ ತಾರಿಲಾ ॥೧೮೯॥ ರಜಕ ಆಪವಿತ್ರ ಅತ್ಯಂತ । ಆತಳೇ ತಯಾ ಅಧಃಪಾತ । ತ್ಯಾಸೀ ಮಾರೂನಿಯಾ ನಿಶ್ಚಿತ । ಕೇಲಾ ಪುನೀತ ಸಾಯುಜ್ಯಾ ॥೧೯೦॥

ನಾರದರು ಪರಬ್ರಹ್ಮದ ಉಪದೇಶಗಳನ್ನು ಮಾಡಿ ಸಂಸಾರದ ವೃದ್ಧಿಯನ್ನು ಆಗಗೊಡುವುದಿಲ್ಲವೆಂದು ಬ್ರಹ್ಮದೇವನಿಗೆ ಆತನ ಮೇಲೆ ಕೋಪವು ಬಂದಿತು. ಅದರಿಂದ ನಾರದರಿಗೆ ಶಾಪವನ್ನು ಕೊಟ್ಟನು ।೧೭೮॥ ಹೇ ಶ್ರೀಕೃಷ್ಣನೇ, ಈ ಪ್ರಕಾರವಾಗಿ ಸಂಸಾರದಲ್ಲಿ ಆಸಕ್ತರಾದವರು ಹಾಗೂ ನಿತ್ಯವೂ ಸಂಸಾರಯುಕ್ತರಾಗಿರುವ ಅವರನ್ನು ವಿಚಾರಿಸಲು ಮನಸ್ಸಿಗೆ ಒಪ್ಪಿಗೆಯಾಗದು ।೧೭೯॥ ಇನ್ನು ಋಷಿಗಳಿಗಾದರೂ ಕೇಳಲು ಹೋಗಬೇಕೆಂದರೆ, ಅವರು ಯಾವಾಗಲೂ ತಮ್ಮ ಮತದ ಅಭಿಮಾನಿಯಾಗಿರುವರು. ಹಾಗೂ ಸತತವಾಗಿ ತಮ್ಮ ಮತದ ಪುರಸ್ಕಾರವನ್ನೇ ಮಾಡುತ್ತಿರುವರು. ಅವರ ವಿರುದ್ಧವಾಗಿ ಒಂದು ಶಬ್ದ ನುಡಿದರೆ ಸಾಕು, ಶಾಪವನ್ನು ಕೊಟ್ಟು ಬಿಡುವರು ।೧೮೦॥ ಮನದಲ್ಲಿ ದ್ರವ್ಯದ ಅಭಿಲಾಷೆಯನ್ನಿಟ್ಟುಕೊಂಡು ಶಿಷ್ಯರಿಗೆ ಉಪದೇಶವನ್ನು ಕೊಡುವರು. ಇವರು ವಿಷಯಗಳ ಆಸಕ್ತಿಯಿಂದ ಕೇವಲ ಉದರ ಪೋಷಣೆಗಾಗಿ ಉಪದೇಶವನ್ನು ಮಾಡುವರು ।೧೮೧॥ ಗುರುವಿಗೇನೇ ವಿಷಯಗಳ ಆಸಕ್ತಿ ಇರಲು ಅಲ್ಲಿ ಶಿಷ್ಯನಿಗೆ ವಿರಕ್ತಿಯು ಎಲ್ಲಿಂದ ಬರಬೇಕು? ಇಂತಹ ಗುರುಗಳಿಗೆ ವಿಚಾರಿಸಲು ಹೋದವರು ತಮ್ಮ ಸ್ವಾರ್ಥದಿಂದ ಚ್ಯುತರಾಗುವರು ।೧೮೨॥ ನೀನು ಸತ್ಯಸ್ವರೂಪನು, ಸ್ವಯಂ ಪ್ರಕಾಶಕನು, ಸರ್ವಾತ್ಮಾ ಹಾಗೂ ಅವಿನಾಶಿಯು. ಹೀಗಿರುವುದರಿಂದ ನೀನು ಯುಕ್ತಿ ಪ್ರಯುಕ್ತಿಗಳಿಂದ ಉಪದೇಶವನ್ನು ಮಾಡಿ ವಿಕಲ್ಪಗಳನ್ನು ನಾಶ ಮಾಡುವೆ ಎಂದು ನನಗೆ ತಿಳಿದಿದೆ ।೧೮೩॥ ಹೇ ಕೃಷ್ಣನಾಥನೇ, ಬ್ರಹ್ಮಜ್ಞಾನದ ಉಪದೇಶವನ್ನು ಮಾಡುವ ಸಮರ್ಥರು ನಿನ್ನ ಹೊರತಾಗಿ ಈ ತ್ರಿಭುವನದಲ್ಲಿ ನನಗೆ ಯಾರೂ ಕಾಣರು ।೧೮೪॥ ಹೇ ಅಚ್ಯುತನೇ, ಈ ಪ್ರಕಾರವಾಗಿ ನೀನೇ ಆತ್ಮನಾಗಿರುವೆ. ಆತ್ಮಜ್ಞಾನವನ್ನು ಕೊಡುವವನು ಸಹ ನೀನೇ ಆಗಿರುವೆ. ಮತ್ತು ಆತ್ಮ ಬೋಧೆಯಲ್ಲಿ ಸ್ಥಿರ ಮಾಡುವವನೂ ನೀನೇ ।೧೮೫॥

ಹೇ ಯಾದವ ರಾಜನೇ, ನೀನು ನಿತ್ಯ, ಶುದ್ಧ, ಪವಿತ್ರ ಮೂರ್ತಿಯಾಗಿರುವೆ. ಆದ್ದರಿಂದ ನಿನಗೆ ಮಾಯಾ-ಮೋಹಗಳು ಸ್ಪರ್ಶ ಮಾಡಲಾರವು. ಆದ್ದರಿಂದಲೇ "ನೀನು ಪವಿತ್ರನು" ಎಂದು ಲೋಕವು ನಿನ್ನ ಕೀರ್ತಿಯನ್ನು ಹೊಗಳುವುದು ।೧೮೬॥ ಗೋಪಾಲಕರ ಎಂಜಲ ತುತ್ತಿನಿಂದ ನಿನ್ನ ಪವಿತ್ರತೆಯು ಮಲಿನವಾಗಲಿಲ್ಲ. ಅದರ ಬದಲಾಗಿ ಆ ಎಂಜಲದ ಬಲದಿಂದಲೇ ಸರ್ವ ಗೋಪಾಲಕರು ಉದ್ಧಾರರಾದರು ।೧೮೭॥ ಪೂತನೆಯನ್ನು ಪ್ರಾಣ ಸಮೇತವಾಗಿ ಶೋಷಣೆಗೊಳಿಸಿದೆ. ಆದರೂ ನಿನ್ನ ಪವಿತ್ರತೆಯು ಎಂತಹ ಶ್ರೇಷ್ಠವಿರಬೇಕು? ಅದರಿಂದಲೇ ನೀನು ಆಕೆಯ ಉದ್ಧಾರವನ್ನು ಮಾಡಿದೆ. ದೋಷದಿಂದಲೇ ದೋಷವನ್ನು ಉದ್ಧರಿಸಿದೆ ।೧೮೮॥ ಕಾಲಿಯಾ ಸರ್ಪವನ್ನು ಮರ್ದಿಸಿ ಅದರ ಅಭಿಮಾನವನ್ನು ನಾಶಮಾಡಿದೆ. ಆದರೂ ನಿನ್ನ ಪವಿತ್ರತೆಯು ದೂಷಿತವಾಗಲಿಲ್ಲ. ಅದನ್ನು ನಿರ್ವಿಷವನ್ನಾಗಿ ಮಾಡಿ ಅದರ ಉದ್ಧಾರವನ್ನು ಮಾಡಿದೆ।೧೮೯॥ ಅತಿಶಯವಾಗಿ ಹೀನ ದೀನ ವೃತ್ತಿಯ ರಜಕನು ಅಧೋಗತಿಗೆ ಹೋಗುವವನಿದ್ದನು. ಆದರೆ ನೀನು ಆತನನ್ನು ಕೊಂದು ಪವಿತ್ರಗೊಳಿಸಿ ಸಾಯುಜ್ಯ ಮುಕ್ತಿಯನ್ನು ಕೊಟ್ಟೆ ।೧೯೦॥

ಕರೂನಿ ಗೋಪಿಕಾಂಸೀ ನಿಂದ್ಯ ಕಾಮ । ತೇಣೇ ತ್ಯಾ ಕೇಲ್ಯಾ ನಿತ್ಯ ನಿಷ್ಕಾಮ । ತೇಚಿ ಪವಿತ್ರತಾ ಅನುತ್ತಮ। ಸಾಯುಜ್ಯಧಾಮ ಪಾವಲ್ಯಾ ॥೧೯೧॥ ಕರಿತಾ ಸುಕರ್ಮ ಕುಕರ್ಮ । ಜ್ಯಾಚೀ ಪವಿತ್ರತಾ ಅನುತ್ತಮ । ಯಾಲಾಗೀ ನಾಮೇ "ಪುರುಷೋತ್ತಮ"। ಅಕರ್ತಾತ್ಮ ನಿಜಬೋಧೇ ॥೧೯೨॥ ಜೋ ಆಕಳೇ ಗುಣಾ ಆಂತು । ತ್ಯಾಸೀ ತೇ ಗುಣ ಕರಿತೀ ಪ್ರಾಂತು । ತ್ಯಾ ಗುಣಾಂಸೀ ತುಜಮಾಜೀ ಅಂತು। ಯಾಲಾಗೀ ತೂ "ಅನಂತು" ಸರ್ವಥಾ ॥೧೯೩॥ ದೇಶತಃ ಕಾಲತಃ ಪಾರ । ತುಜ ನ ಕರವೇಚಿ ಸಾಚಾರ । ಯಾಲಾಗೀ ಅನಂತ ತೂ ಅಪಾರ । ಶ್ರುತೀಸೀ ಪಾರ ನ ಕಳೇಚಿ ॥೧೯೪॥ ತುಜ ಮ್ಯಾ ಕರಾವೀ ವಿನಂತೀ । ಕಿತೀ ಯಾವೇ ಕಾಕುಳತೀ । ತೂ ಹೃದಯಸ್ಥ ಜ್ಞಾನಮೂರ್ತೀ । ಜಾಣತಾ ತ್ರಿಜಗತೀ ತೂ ಏಕು ॥೧೯೫॥ ಜ್ಞಾನ ಅಜ್ಞಾನ ಮಾಯಾ ಶಕ್ತೀ । ಈಶ್ವರಾ ಆಧೀನ ಗಾ ಅಸತೀ। ತ್ಯಾ ಈಶ್ವರಾಚೀ ತೂ ಈಶ್ವರಮೂರ್ತೀ । ಸತ್ಯ ಕೀರ್ತಿ ತೂ ಶ್ರೀಕೃಷ್ಣಾ ॥೧೯೬॥ ತೂ ಸರ್ವಾಂಚಾ ನಿಯಂತಾ। ಸರ್ವ ಕರೂನಿ ಅಕರ್ತಾ । ಐಸಾ "ಈಶ್ವರು" ತೂ ಕೃಷ್ಣನಾಥಾ । ಭೋಗೂನಿ ಅಭೋಕ್ತಾ ತೂ ಏಕು ॥೧೯೭॥ ದೇಶತಃ ಕಾಲತಃ ಸ್ವಭಾವೇಸೀ । ನಾಶು ನ ಪಾವೇ ಜ್ಯಾ ಸ್ಥಾನಾಸೀ । ತೇಥೀಂಚಾ ತೂ ನಿವಾಸವಾಸೀ । ಪೂರ್ಣ ಪುರ್ಣಾಂಶೀ ಅವತಾರು ॥೧೯೮॥ ನರಾಚೇ ಅವಿನಾಶಸ್ಥಾನ । ಯಾಲಾಗೀ ತೂ "ನಾರಾಯಣ" । ತುಝೇನಿ ಜೀವಾಸೀ ಚಳಣವಳಣ । ಚಾಳಕಪಣ ತುಜಪಾಶೀ ॥೧೯೯॥ ಐಸಾ ಈಶ್ವರ ತೂ ಆಪಣ । "ನರಸಖಾ - ನಾರಾಯಣ"। ಯುದ್ಧಸಮಯೀ ಅರ್ಜುನಾಸೀ ಜಾಣ । ಬ್ರಹ್ಮಜ್ಞಾನ ತ್ವಾಂ ದಿಧಲೇ ॥೨೦೦॥ ದಾರುಣ ಹೋತಾ ಸಂಗ್ರಾಮಾಸೀ । ಪಾವಡಾ ಪಾವೋ ಯುದ್ಧಾಸೀ । ತೇವ್ಹಾ ಬ್ರಹಜ್ಞಾನ ಸಾಂಗಸೀ । ನಿಜ ಸಖ್ಯಾಸೀ ಅರ್ಜುನಾ ॥೨೦೧॥ ಐಸಾ ಕೃಪಾಳೂ ತೂ ನಾರಾಯಣ । ಯಾಲಾಗೀ ತುಜ ಆಲೋ ಶರಣ । ತ್ರಿವಿಧತಾಪೇ ತಾಪಲೋ ಜಾಣ । ದುಃಖ ದಾರುಣ ಸಂಸಾರು ॥೨೦೨॥ ಸಂಸಾರ ಮ್ಹಣಜೇ ಅಂಧಕೂಪ । ಮಾಜೀ ಕಾಮಕ್ರೋಧಾದಿ ದುಷ್ಟ ಸರ್ಪ। ನಿಂದಾ ಸ್ಪರ್ಧಾ ಕಾಂಟೇ ಅಮೂಪ । ದುಃಖರೂಪ ಮೀ ಪಡಿಲೋ ॥೨೦೩॥ ತೇಥ ಪಡಲಿಯಾಪಾಠೀ। ಬ್ರಹ್ಮದ್ವೇಷಾಚಾ ಶೂಳ ಪೋಟೀ । ಭರಲಾ ಜೀ ಉಠಾಉಠೀ । ತೇಣೇ ಹಿಂಪುಟೀ ಹೋತುಸೇ ॥೨೦೪॥ ತೇಥೂನ ನಿಘಾವಯಾ ತ್ರಿಶುದ್ಧೀ । ಉಪಾವೋ ನ ದಿಸೇ ಗಾ ನಿವಬುದ್ಧೀ । ಕೃಪಾಳುವಾ ಕೃಪಾನಿಧೀ । ಆತ್ಮ ಬೋಧೀ ಮಜ ಕಾಢೀ ॥೨೦೫॥

ಗೋಪಿಕೆಯರನ್ನು ಕಾಮ ಆಸಕ್ತಿಯಿಂದ ಅವರನ್ನು ನಿಷ್ಕಾಮಗೊಳಿಸಿದೆ. ಇದರಿಂದ ಇವರು ಅತ್ಯಂತ ಪವಿತ್ರರಾಗಿ ಸಾಯುಜ್ಯ ಧಾಮಕ್ಕೆ ಹೋದರು ॥೧೯೧॥ ಸತ್ಕರ್ಮವಿರಲಿ ಅಥವಾ ದುಷ್ಕರ್ಮವಿರಲಿ ನಿನ್ನ ಪವಿತ್ರತೆಯು ಯಾವಾಗಲೂ ಇದ್ದೇ ಇರುವುದು. ಆದ್ದರಿಂದ ನಿನಗೆ ಪುರುಷೋತ್ತಮ ಎನ್ನುವರು. ॥೧೯೨॥ ತ್ರಿಗುಣಗಳಲ್ಲಿ ಸಿಕ್ಕಿಕೊಂಡಿರುವರನ್ನು ಆ ಎರಡು ಗುಣಗಳು ಬಂಧಿಸುವುವು. ಆದರೆ ಅದೇ ಗುಣಗಳು ನಿನ್ನಲ್ಲಿ ಇಲ್ಲದಾಗುವುವು. ಆದ್ದರಿಂದ ನೀನು ನಿಜವಾಗಿಯೂ ಅನಂತನಾಗಿರುವೆ ॥೧೯೩॥ ದೇಶ ಮತ್ತು ಕಾಲವು ನಿನಗೆ ಮರ್ಯಾದೆಯನ್ನು ಹಾಕಲು ಶಕ್ಯವೇ ಇಲ್ಲ. ಆದ್ದರಿಂದ ನೀನು ಅನಂತ ಮತ್ತು ಅಪಾರನಾಗಿರುವೆ. ಶ್ರುತಿಗಳಿಗೆ ನಿನ್ನ ಅಂತವು ಹತ್ತಲು ಸಾಧ್ಯವೇ ಇಲ್ಲ ॥೧೯೪॥ ನಾನು ನಿನಗೆ ಎಷ್ಟೆಂದು ವಿನಂತಿಸಬೇಕು? ಅದೆಷ್ಟು ದೀನನಾಗಿ ಬೇಡಬೇಕು? ನೀನು ಹೃದಯಸ್ಥ ಜ್ಞಾನಮೂರ್ತಿಯಾಗಿರುವೆ. ಈ ತ್ರೈಲೋಕ್ಯವೆಲ್ಲವನ್ನೂ ಬಲ್ಲವನು ನೀನೊಬ್ಬನೇ ಇರುವೆ ॥೧೯೫॥ ಜ್ಞಾನ, ಅಜ್ಞಾನ, ಮಾಯಾಶಕ್ತಿ ಈ ಸರ್ವವೂ ಈಶ್ವರನ ಆಧೀನವಾಗಿರುವುವು. ಆದರೆ ನೀನು ಆ ಈಶ್ವರನಿಗೂ ಈಶ್ವರಮೂರ್ತಿಯಾಗಿರುವೆ. ಹೇ ಶ್ರೀ ಕೃಷ್ಣನೇ, ಈ ನಿನ್ನ ಕೀರ್ತಿಯು ಸತ್ಯವಾಗಿರುವುದು ॥೧೯೬॥ ಹೇ ಕೃಷ್ಣನಾಥನೇ, ನೀನು ಸರ್ವರ ನಿಯಂತನು, ಎಲ್ಲವನ್ನೂ ಮಾಡಿಯೂ ಅಕರ್ತನು, ಮತ್ತು ಎಲ್ಲವನ್ನೂ ಭೋಗಿಸಿಯೂ ಅಭೋಕ್ತನು. ಹೀಗೆ ನೀನೊಬ್ಬನೇ ಈಶ್ವರನಾಗಿರುವೆ ॥೧೯೭॥ ಯಾವ ಸ್ಥಾನವು ವಸ್ತುತಃ ದೇಶತಃ ಮತ್ತು ಕಾಲತಃ ನಾಶವಾಗುವುದಿಲ್ಲವೋ, ಅಲ್ಲಿಯ ವಾಸಿಸುವ ರಹವಾಸಿಯಾಗಿರುವೆ. ಮತ್ತು ಪೂರ್ಣಾಂಶದಿಂದ ಪೂರ್ಣಾವತಾರನಾಗಿರುವೆ. ॥೧೯೮॥ ನರರ ಅವಿನಾಶೀ ಸ್ಥಾನವು ನೀನಾಗಿರುವೆ, ಆದ್ದರಿಂದ ನಿನಗೆ ನಾರಾಯಣ ಎನ್ನುವರು. ನಿನ್ನಿಂದಲೇ ಜೀವದ ಚಲನವಲನೆಗಳಾಗುವುವು. ಸರ್ವರನ್ನು ನಡೆಯಿಸುವಿಕೆಯು ನಿನ್ನಲ್ಲಿಯೇ ಇರುವುದು ॥೧೯೯॥ ಈ ಪ್ರಕಾರದ ನೀನು ಸ್ವತಃ ಈಶ್ವರನಾಗಿದ್ದು ನರನ ಸಖನಾದ ನಾರಾಯಣನಾಗಿರುವೆ. ಯುದ್ಧ ಪ್ರಸಂಗದಲ್ಲಿ ನೀನೇ ಅರ್ಜುನನಿಗೆ ಬ್ರಹ್ಮಜ್ಞಾನದ ಉಪದೇಶವನ್ನು ಮಾಡಿದೆ. ॥೨೦೦॥ ಭಯಂಕರವಾದ ಯುದ್ಧಪ್ರಸಂಗದಲ್ಲಿ ಮಹಾನ್ ಯೋಧರು ಒಬ್ಬರಿಗೊಬ್ಬರು ಸಂಹರಿಸಲು ಸಿದ್ಧರಾಗಿರಲು ಆ ವೇಳೆಯಲ್ಲಿ ನಿನ್ನ ಸಖನಾದ ಅರ್ಜುನನಿಗೆ ಬ್ರಹ್ಮಜ್ಞಾನದ ಉಪದೇಶವನ್ನು ಮಾಡಿದೆ ॥೨೦೧॥ ಹೇ ನಾರಾಯಣನೇ ಈಗ ನೀನು ಕೃಪಾಳುನಾಗಿರುವೆ. ನಾನು ನಿನಗೆ ಶರಣು ಬಂದಿರುವೆನು. ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ಈ ತ್ರಿವಿಧ ತಾಪದಿಂದ ನಾನು ತಾಪಪಟ್ಟಿರುವೆನು. ಈ ಸಂಸಾರವು ಭಯಂಕರವಾದ ದುಃಖದಿಂದ ಕೂಡಿರುವುದು ॥೨೦೨॥ ಸಂಸಾರವೆಂದರೆ ಅದೊಂದು ಕತ್ತಲೆ ಬಾವಿಯಾಗಿರುವುದು. ಅದರಲ್ಲಿ ಕಾಮ, ಕ್ರೋಧ, ಲೋಭ ಇತ್ಯಾದಿ ದುಷ್ಟ ಸರ್ಪಗಳಿರುವುವು. ನಿಂದೆ, ಸ್ಪರ್ದೆ ಎಂಬ ದಟ್ಟವಾದ ಮುಳ್ಳುಗಳು ಹಬ್ಬಿರುವುವು. ಆ ದುಃಖದಲ್ಲಿ ನಾನು ಬಿದ್ದಿರುವೆನು॥೨೦೩॥ ಇಲ್ಲಿ ನಾನು ಬಿದ್ದಿರುವುದರಿಂದ ಹೊಟ್ಟೆಯಲ್ಲಿ ಬ್ರಹ್ಮದ್ವೇಷದ ನೋವು ಎದ್ದುಕೊಂಡಿದ್ದು ಅದರಿಂದ ನಾನು ತಳಮಳಿಸುತ್ತಿದ್ದೇನೆ ॥೨೦೪॥ ಇಲ್ಲಿಂದ ಹೊರ ಬರಲು ನನ್ನ ಬುದ್ಧಿಗೆ ಯಾವುದೊಂದೂ ಉಪಾಯವು ಹೊಳೆಯದಾಗಿದೆ. ಆದರೂ ಹೇ ಕೃಪಾನಿಧಿ, ದಯಾಳನೇ, ನನಗೆ ಆತ್ಮಜ್ಞಾನವನ್ನು ನೀಡಿ ಅಲ್ಲಿಂದ ಹೊರಗೆ ತೆಗೆ ॥೨೦೫॥

ಶ್ರೀ ಭಾಗವನುವಾಚ:-

ಪ್ರಾಯೇಣ ಮನುಜಾ ಲೋಕೇ ಲೋಕತತ್ತ್ವವಿಚಕ್ಷಣಾಃ । ಸಮುದ್ಧರಂತಿ ಹ್ಯಾತ್ಮಾನ ಮಾತ್ಮನೈವಾ ಶುಭಾಶಯಾತ್ ।೧೯॥

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು: ಹೇ ಉದ್ಧವನೇ, ಯಾರು ''ಈ ಜಗತ್ತು ಅಂದರೆ ಏನು?'' ಇದರಲ್ಲಿ ಏನೇನು ನಡೆದಿರುವುದು? ಇತ್ಯಾದಿ ವಿಷಯಗಳ ವಿಚಾರ ಮಾಡುವವನು, ಚಿತ್ತದಲ್ಲಿ ನಿರ್ಮಾಣವಾಗುವ ಅಶುಭ ಘಟನೆಗಳನ್ನು ತನ್ನ ವಿವೇಕದಿಂದ ತ್ಯಾಗ ಮಾಡುವವನು.

ಭೂತ ಸಂಚರಲಿಯಾಪಾಠೀ । ಸುಟತೀ ಜಲ್ಪವಾದಗೋಠೀ । ತ್ಯಾತೇ ಗುಣೆಯಾ ಪಾಹೋನಿ ದಿಠೀ । ಅಕ್ಷತಾ ತ್ರಾಹಾಟಿ ಮಂತ್ರೋನೀ ।೨೦೬॥ ಪಾಹತಾ ಪಾಂಚಭೌತಿಕ ಸಂಸಾರು। ಸಹಜೇ ಝಾಲಾ ಅಸೇ ಥೋರು । ಮಾಜೇ ರೆಘೋಂಬಲಾಸೇ ಕೃಷ್ಣವಿಯೋಗಖೇಚರು । ಉದ್ಧವ ಲೇಕರೂ ಝಡಪಿಲೇ ।೨೦೭॥ ಮಿಸೇ ಉದ್ಧವಾಚೇ ಝಡಪಣೇ । ಅಹಂ - ಮ್ಹೈಸಾಸುರ ಲಾಗಲಾ ಜನೀ । ತ್ಯಾಸೀ ಕರಾವಯಾ ಝಾಡಣೇ। ಕೃಷ್ಣ ಗುಣೀ ಚಾಲಿಲಾ ।೨೦೮॥ ತೇಥ ಝಾಡಣೀಲಾಗೀ ಆತಾ । ಯದುಅವಧೂತಸಂವಾದ ಕಥಾ। ತ್ಯಾಚೀ ಮಂತ್ರೂನಿ ಮಂತ್ರಾಕ್ಷತಾ । ಹೋಯ ಝಾಡಿತಾ ಶ್ರೀಕೃಷ್ಣು ।೨೦೯॥ ಶ್ರೀಕೃಷ್ಣ ಮ್ಹಣೇ ಉದ್ಧವಾಸೀ । ಸಾವಧ ಹೋಈ ನಿಜಮಾನಸೀ। ಯೇಊನಿಯಾ ಮನುಷ್ಯಲೋಕಾಸೀ । ಆಪಆಪಣಾಂಸೀ ಉದ್ಧರಿತೀ ।೨೧೦॥ ಪಾಹತಾ ಯಯಾ ಪರಮಾರ್ಥಾ । ಸಾಹ್ಯ ನವ್ಹೇ ಮಾತಾಪಿತಾ । ಪುತ್ರಭ್ರಾತಾ ದುಹಿತಾ ಕಾಂತಾ । ಸಾಹ್ಯ ಸರ್ವಥಾ ಹೇ ನವ್ಹತೀ ।೨೧೧॥ ಸಾಹ್ಯ ಪರಮಾರ್ಥ ನವ್ಹೇ ವ್ಯಾಹೀ । ಶೇಖೀ ಸಾಹ್ಯ ನವ್ಹೇ ಜಾಂವಯೀ । ಆಪಣೆಯಾ ಆಪಣ ಸಾಹ್ಯ ಪಾಹೀ । ಜೋ ನಿಜದೇಹೀ ವಿವೇಕೀ ।೨೧೨॥ ಮುಮುಕ್ಷುಮಾರ್ಗೀಚೇ ಸಜ್ಞಾನ । ಲೋಕ ತತ್ತ್ವವಿಚಕ್ಷಣ । ವಿಚಾರೂನಿ ಕಾರ್ಯಾಕಾರಣ । ಸ್ವಬುದ್ಧೀ ಜಾಣ ಉದ್ಧರಲೇ ।೨೧೩॥ ನಿತ್ಯಾನಿತ್ಯ ವಿವೇಕೇ । ಅನಿತ್ಯ ಸಾಂಡಿತೀ ತ್ಯಾಗಮುಖೇ । ನಿತ್ಯ ತೇ ಯಥಾಸುಖೇ । ಹಿತ ಸಂತೋಖೇ ಅಂಗೀಕಾರಿತೀ ।೨೧೪॥ ನಿತ್ಯತ್ವೇ ಜೇ ಉರಲೇ ಜಾಣ । ತೇ ಸ್ವರೂಪ ಮಾಝೇ ಚಿದ್ಘನ । ತೇಚಿ ಸಾಧಕಾಂಚೇ ಸಾಧನ ಜಾಣ । ಅನನ್ಯಪಣೇ ಚಿಂತಿತೀ ।೨೧೫॥ ಭಾವಿತಾ ಮಾಝೀ ದೃಢ ಭಾವನಾ । ಮೀಚಿ ತೇ ಹೋತೀ ಜಾಣಾ । ಕೀಟಕೀ - ಭೃಂಗೀಚಿಯಾ ಖುಣಾ । ಆಪಆಪಣೆಯಾ ಉದ್ಧರಿತೀ ।೨೧೬॥

ಆತ್ಮನೋ ಗುರುರಾತ್ಮೈವ ಪುರುಷಸ್ಯ ವಿಶೇಷತಃ । ಯತ್ಪ್ರತ್ಯಕ್ಷಾನುಮಾನಾಭ್ಯಾಂ ಶ್ರೇಯೋಽಸಾವನುವಿಂದತೇ ।೨೦॥

ಅರ್ಥ:- ಸಮಸ್ತ ಪ್ರಾಣಿಗಳ, ವಿಶೇಷತಃ ಮನುಷ್ಯರ ಆತ್ಮವು ತನ್ನ ಹಿತ ಮತ್ತು ಅಹಿತದ ಉಪದೇಶ ಮಾಡುವ ಗುರುವಾಗಿರುವುದು. ಮನುಷ್ಯನು ತನ್ನ ಪ್ರತ್ಯಕ್ಷವಾದ ಅನುಭವದಿಂದ ಮತ್ತು ಅಂದಾಜಿನಿಂದ ತನ್ನ ಹಿತ ಅಹಿತದ ನಿರ್ಣಯ ಮಾಡಲು ಪೂರ್ಣ ಸಮರ್ಥನಾಗಿರುವನು.

ಯಾರಾದರೊಬ್ಬ ಮನುಷ್ಯನ ಶರೀರದಲ್ಲಿ ಭೂತದ ಸಂಚಾರ ವಾಯಿತೆಂದರೆ ಅವನು ಮನ ಬಂದಂತೆ ಯದ್ವಾ ತದ್ವಾ ಬಡಬಡಿಸುವನು. ಆತನಿಗೆ ಮಂತ್ರಜ್ಞನು ನೋಡಿದನೆಂದರೆ ಆತನು ಅಕ್ಷತೆಯನ್ನು ಮಂತ್ರಿಸಿ ಆತನ ಶರೀರಕ್ಕೆ ಒಗೆಯುವನು ।೨೦೬॥ ಅದರಂತೆ ಈ ಸಂಸಾರವು ವಸ್ತುತಃ ಪಂಚಭೂತಾತ್ಮಕವಾಗಿದೆ. ಅದು ಸ್ವಭಾವತಃ ಅತಿಶಯವಾಗಿ ಬೆಳೆದಿರುವುದು. ಅದರಲ್ಲಿ ಈ ಉದ್ಧವರೂಪ ಬಾಲಕನಿಗೆ ಶ್ರೀಕೃಷ್ಣ ವಿಯೋಗ ರೂಪ ಭೂತವು ಬಡೆದಿರುವುದು. ।೨೦೭॥ ಆಗ ಉದ್ಧವನಿಗೆ ಈ ನಿಮಿತ್ತದಿಂದ ಶರೀರದಲ್ಲಿ ''ಅಹಂ'' ನಾಮದ ಮ್ಹೈಸಾಸುರನು ಸಂಚಾರನಾಗಿದ್ದನು. ಅದನ್ನು ಬಿಡಿಸುವುದಕ್ಕಾಗಿ ಮಾಂತ್ರಿಕ ಕೃಷ್ಣನು ಸಿದ್ಧನಾಗಿರುವನು ।೨೦೮॥ ಈತನೀಗ ಆತನನ್ನು ಬಿಡಿಸಿಕೊಳ್ಳಲು ಯದು ಅವಧೂತ ಸಂವಾದ ಕಥಾರೂಪ ಮಂತ್ರಾಕ್ಷತೆಯನ್ನು ಮಂತ್ರಿಸಿ ಭೂತವನ್ನು ಬಿಡಿಸುವನು ।೨೦೯॥ ಶ್ರೀಕೃಷ್ಣನು ಉದ್ಧವನಿಗೆ ಹೀಗೆ ಹೇಳಿದನು; ನೀನು ನಿನ್ನ ಮನದಲ್ಲಿ ಸಾವಧನಾಗು, ಈ ಮನುಷ್ಯಲೋಕದಲ್ಲಿ ಜನ್ಮವನ್ನು ಧರಿಸಿ ತನ್ನನ್ನು ತಾನೇ ಉದ್ಧರಿಸಲು ಬರುವುದು ॥ ೨೧೦॥ ನಿಜ ಹೇಳಬೇಕೆಂದರೆ ಈ ಪರಮಾರ್ಥಕ್ಕೆ ಮಾತಾಪಿತರು ಸಹಾಯ ಮಾಡಲು ಸಾಧ್ಯವಿಲ್ಲ. ಪುತ್ರ, ಬಂಧು, ಕನ್ಯಾ ಅಥವಾ ಕಾಂತಾ ಇವರು ಎಂದೆಂದಿಗೂ ಸಹಾಯವಾಗಲು ಶಕ್ಯವಿಲ್ಲ ।೨೧೧॥ ಪರಮಾರ್ಥಕ್ಕೆ ಬೀಗರು ಸಹಾಯ ಮಾಡಲು ಸಾಧ್ಯವಿಲ್ಲ. ಕೊನೆಗೆ ಅಳಿಯನೂ ಸಹ ಸಹಾಯ ಮಾಡಲು ಶಕ್ಯವಿಲ್ಲ. ಅದಕ್ಕಾಗಿ ತನ್ನಲ್ಲಿ ತಾನು ವಿವೇಕಿಯಾದವನೇ ತನ್ನ ಉದ್ಧಾರವನ್ನು ಮಾಡಿಕೊಳ್ಳುವನು ।೨೧೨॥ ಮುಮುಕ್ಷು ಮಾರ್ಗದಲ್ಲಿನ ತತ್ತ್ವ ವಿವೇಚನೆ ಮಾಡುವ ಸಜ್ಞಾನ ಜನರು ಕಾರ್ಯಕಾರಣಗಳ ವಿಚಾರವನ್ನು ಮಾಡಿ ತಮ್ಮ ಬುದ್ಧಿಯಿಂದ ಉದ್ಧಾರವಾಗಿರುವರು ।೨೧೩॥ ಅವರು ನಿತ್ಯಾನಿತ್ಯ ವಿವೇಕದಿಂದ ತ್ಯಾಗ ದ್ವಾರದಿಂದ ಅನಿತ್ಯವನ್ನು ಬಿಟ್ಟು ಬಿಡುವರು. ಮತ್ತು ನಿತ್ಯವನ್ನು ಸ್ವಹಿತಕ್ಕಾಗಿ ಸಂತೋಷದಿಂದ ಸ್ವ ಇಚ್ಛೆಯಿಂದ ಸ್ವೀಕಾರ ಮಾಡುವರು ।೨೧೪॥ ನಿತ್ಯತ್ವದಿಂದ ಉಳಿಯುವುದನ್ನೇ ನನ್ನ ಚಿದ್ಘನವೆಂಬ ರೂಪವೆಂದು ಭಾವಿಸುವರು. ಇವರು ಸಾಧಕರ ಸಾಧನೆಯನ್ನು ಅನನ್ಯ ಭಾವದಿಂದ ಅದನ್ನೇ ಚಿಂತನೆಯನ್ನು ಮಾಡುವರು ।೨೧೫॥ ನನ್ನಲ್ಲಿ ದೃಢವಾದ ಭಾವವನ್ನು ಇಡುವುದರಿಂದ ಅವರು ನನ್ನಲ್ಲಿ ಏಕರೂಪರಾಗುವರು. ಕೀಟಕೀ ಭೃಂಗನ್ಯಾಯದಂತೆ ಸತತವಾದ ಚಿಂತನೆಯಿಂದ ಅವರು ತಮ್ಮನ್ನು ತಾವೇ ಉದ್ಧರಿಸಿಕೊಳ್ಳುವರು ।೨೧೬॥

ಪಶ್ವಾದಿ ಯೋನೀಂಚ್ಯಾ ಠಾಯೀ । ಹಿತಾಹಿತಜ್ಞಾನ ಅಸೇ ಪಾಹೀ । ಮಾ ಪುರುಷಾಂಚ್ಯಾ ಪುರುಷದೇಹೀ । ಜ್ಞಾನ ಪಾಹೀ ಸ್ಫುರದ್ರೂಪ ॥೨೧೭॥ ಜೇ ಕರ್ಮ ಕರಿತೋ ಮೀ ದೇಹೀ । ತೇಣೇ ತರೇನ ಕೀ ನಾಹೀ । ಹೇ ಜ್ಯಾಚೇ ತ್ಯಾಚೇ ಠಾಯೀ । ಸ್ಫುರದ್ರೂಪ ಪಾಹೀ ಕಳತಸೇ ॥೨೧೮॥ ಸಾಂಡೂನಿ ಅಶುಭ ವಾಸನಾ । ಜೋ ನ ಕರೀ ವಿಷಯಕಲ್ಪನಾ । ತೋ ಆಪುಲಾ ಗುರೂ ಆಪಣ ಜಾಣಾ । ನರಕಯಾತನಾ ಚುಕವಿಲೀ ॥೨೧೯॥ ಜೋ ಕಂಟಾಳಲಾ ಜನ್ಮಗರ್ಭಾಸೀ । ಮರಮರೋ ಉಗಬಲಾ ಮರಣಾಸೀ । ಆಧಿ ಲಾಗಲೀ ಮಾನಸೀ । ಜನ್ಮಮರಣಾಸೀ ನಾಸಾವಯಾ ॥೨೨೦॥ ಆವಡೀ ನುಪಜೇ ಸ್ತ್ರೀಪುತ್ರಾಂಸೀ । ನಿದ್ರಾ ನ ಲಾಗೇ ಅಹರ್ನಿಶೀ । ಕಾಳೇ ಗ್ರಾಸಿಲೇ ಆಯುಷ್ಯಾಸೀ । ನಿಜಹಿತಾಸೀ ನ ದೇಖಿಜೇ ॥೨೨೧॥ ತುರ್ಝೀಚ ತುಜಚಿ ದೇಖತಾ । ಕಾಳೇ ಗಿಳಿಲೀ ಬಾಲ್ಯಾವಸ್ಥಾ । ತಾರುಣ್ಯಾಚಾ ಗ್ರಾಸಿಲಾ ಮಾಥಾ । ವಾರ್ಧಕ್ಯಾ ಭಂವತಾ ಲಾಗಲಾ ಅಸೇ ॥೨೨೨॥ ಕೇವಳ ವಾರ್ಧಕ್ಯಾಚಾ ಜರಂಗಾ । ತ್ಯಾಸೀಹೀ ಕಾಳು ಲಾಗಲಾ ಪೈಗಾ । ಆಯುಷ್ಯ ವ್ಯರ್ಥ ಜಾತಸೇ ವೇಗಾ । ಹಾ ನಿಜನಾಡು ಜಗಾ ಕಳೇನಾ ॥೨೨೩॥ ಕ್ಷಣಕ್ಷಣಾ ಕಾಳೂ ಜಾತಸೇ ವ್ಯರ್ಥ । ಕಾಂಹೀ ನ ಸಾಧೇ ಜೇ ಪರಮಾರ್ಥ । ಜನ್ಮಮರಣಾಂಚಾ ಆವರ್ತ । ಪುಢೇ ಅನರ್ಥ ರೋಕಡಾ ॥೨೨೪॥ ಸ್ವರ್ಗ ನರಕ ಕರ್ಮ ಬ್ರಹ್ಮ । ಚಹೂ ಪ್ರಾಪ್ತೀಸೀ ಮನುಷ್ಯಧರ್ಮ । ಯಾಲಾಗೀ ತ್ಯಜೂನಿ ಪಾಪಕರ್ಮ । ಮೋಕ್ಷಧರ್ಮ ಧರಾವಾ ॥೨೨೫॥ ನರದೇಹ ಮೋಕ್ಷಾಚಾ ವಾಂಟಾ । ವೃಥಾ ಜಾತಸೇ ಕಟಕಟಾ । ಹೃದಯೀ ಆಧೀ ಲಾಗಲಾ ಮೋಠಾ । ವಿಷಯಚೇಷ್ಟಾ ವಿಸರಲಾ ॥೨೨೬॥ "ಪ್ರತ್ಯಕ್ಷ" ಲಕ್ಷಣೇ ಅನಿತ್ಯ । ಸಂಸಾರು ದಿಸೇ ನಾಶವಂತ । ಯಾಲಾಗೀ ತೋ ನವ್ಹೇ ಆಸಕ್ತ । ಹೋಯ ವಿರಕ್ತ ಇಹಭೋಗೀ ॥೨೨೭॥ ಯಾಚಿಪರೀ "ಅನುಮಾನಾ" । ಪರಲೋಕಭೋಗಭಾವನಾ । ಆತಳೋ ನೇದೀ ಮನಾ । ನಶ್ವರ ಪತನಾ ಜಾಣೋನಿ ॥೨೨೮॥ ಕೈ ಕೃಪಾ ಕರೀಲ ಗೋವಿಂದ । ಕೈ ತುಟೇಲ ಭವಬಂಧ । ಕೈ ದೇಖೇನ ತೋ ನಿಜಬೋಧ । ಪರಮಾನಂದ ಜೇಣೇ ಹೋಯ ॥೨೨೯॥ ಧಾಂವ ಪಾವಗಾ ಶ್ರೀಹರೀ । ಕೃಪಾ ಕರೀ ದೀನಾವರೀ । ಮಜ ಉದ್ಧರೀ ಭವಸಾಗರೀ । ಭಕ್ತಕೈವಾರೀ ಶ್ರೀಕೃಷ್ಣಾ ॥೨೩೦॥

ಪಶುಪಕ್ಷಿಗಳಲ್ಲಿ ಕೂಡ ಹಿತ ಮತ್ತು ಅಹಿತ ಯಾವುದರಲ್ಲಿದೆ ಎಂಬುವ ಜ್ಞಾನವು ಇರುವುದು. ಅಂದಮೇಲೆ ಈ ಜ್ಞಾನವು ಮನುಷ್ಯನ ದೇಹದಲ್ಲಿ ಹೇಗೆ ಇರುವುದಿಲ್ಲ? ಅದು ಸ್ಫೂರ್ತಿರೂಪದಿಂದ ಇದ್ದೇ ಇರುವುದು ॥೨೧೭॥ ನಾನು ದೇಹದಿಂದ ಮಾಡುತ್ತಿರುವ ಕರ್ಮಗಳಿಂದ ಉದ್ಧರಿಸುವೆನೋ ಅಥವಾ ಇಲ್ಲವೋ ಎಂಬುವ ಜ್ಞಾನವು ತನ್ನಿಂದ ತಾನೇ ಸ್ಫೂರ್ತಿರೂಪದಿಂದ ಅವರವರಿಗೆ ತಿಳಿಯುವುದು ॥೨೧೮॥ ಯಾರು ಅಶುಭ ವಾಸನೆಗಳನ್ನು ಬಿಟ್ಟುಕೊಟ್ಟು ಮತ್ತು ಮನದಲ್ಲಿ ವಿಷಯದ ಕಲ್ಪನೆ ಕೂಡ ತರುವುದಿಲ್ಲವೋ, ಅವನು ತಾನೇ ತನ್ನ ಗುರುವಾಗಿ ನರಕ ಯಾತನೆಯನ್ನು ತಪ್ಪಿಸಿಕೊಳ್ಳುವನು ॥೨೧೯॥ ಯಾರು ಗರ್ಭಾವಸ್ಥೆ ಹಾಗೂ ಜನ್ಮ ಇವುಗಳಿಗೆ ಬೇಸರ ಪಡುವನೋ ಅವನಿಗೆ ಮರಣದ ಜಿಗುಪ್ಸೆಯಾಗುವುದು. ಜನ್ಮ ಮರಣದ ನಾಶಕ್ಕಾಗಿ ತಳಮಳವು ಅವನ ಮನದಲ್ಲಿ ನಿರ್ಮಾಣವಾಗುವುದು ॥೨೨೦॥ ಸ್ತ್ರೀ ಪುತ್ರರ ವಿಷಯದಲ್ಲಿ ಅವನ ಮನದಲ್ಲಿ ಮೋಹವು ಇರುವುದಿಲ್ಲ. ಆಯುಷ್ಯವನ್ನು ಕಾಲನು ತಿನ್ನುತ್ತಿರುವುದರಿಂದ ತನ್ನ ಹಿತವು ಎಲ್ಲಿಯೂ ಕಾಣಿಸುವುದಿಲ್ಲವಲ್ಲ ಎಂಬ ವಿಚಾರದಿಂದ ಹಗಲು ರಾತ್ರಿ ನಿದ್ರೆ ಹತ್ತುವುದಿಲ್ಲ ॥೨೨೧॥ ವಿಚಾರಿಸಿ ನೋಡು, ನೀನು ನೋಡುತ್ತಿದ್ದಂತೆಯೇ ನಿನ್ನ ಬಾಲ್ಯವನ್ನು ಕಾಲನು ನುಂಗಿ ಕುಳಿತಿರುವನು. ತಾರುಣ್ಯದ ಶಿಖರವನ್ನು ಸಹ ನುಂಗಿಬಿಟ್ಟನು. ಈಗ ಅವನು ಮುಪ್ಪಿನ ಸುತ್ತ ಮುತ್ತ ತಿರುಗಾಟ ನಡೆಸಿರುವನು ॥೨೨೨॥ ವಾರ್ಧಕ್ಯವೆಂದರೆ ಅದು ಸಹ ಕೇವಲ ವಂಚನೆಯಿಂದ ಕೂಡಿದೆ. ಅದರ ಹಿಂದೆಯೂ ಕಾಲನು ಬೆನ್ನು ಹತ್ತಿರುವನು. ಈ ಪ್ರಕಾರವಾಗಿ ಆಯುಷ್ಯವು ತೀವ್ರಗತಿಯಿಂದ ವ್ಯರ್ಥವಾಗಿ ಹೋಗುತ್ತಿದೆ. ಆದರೆ ಈ ನಾಶತನವು ಜಗತ್ತಿಗೆ ತಿಳಿಯುತ್ತಿಲ್ಲ ॥೨೨೩॥ ಕ್ಷಣಕ್ಷಣವೂ ಕಾಲವು ವ್ಯರ್ಥವಾಗಿ ಹೋಗುತ್ತಿರುವುದು. ಅದರಲ್ಲಿ ಯಾವ ಪರಮಾರ್ಥವೂ ಸಾಧಿಸುತ್ತಿಲ್ಲ. ಆದ್ದರಿಂದ ಜನ್ಮ ಮರಣದ ತಿರುಗುಣಿಯಲ್ಲಿ ಅನರ್ಥವು ತೋರುತ್ತಿರುವುದು ॥೨೨೪॥ ಸ್ವರ್ಗ, ನರಕ, ಕರ್ಮ ಮತ್ತು ಬ್ರಹ್ಮ ಈ ನಾಲ್ಕೂ ವಿಷಯಗಳು ಮನುಷ್ಯತ್ವದಲ್ಲಿ ಮಾತ್ರ ಪ್ರಾಪ್ತವಾಗುವುದು. ಆದ್ದರಿಂದ ಪಾಪಕರ್ಮಗಳನ್ನು ಬಿಟ್ಟು ಬಿಡಬೇಕು. ಹಾಗೂ ಮೋಕ್ಷಧರ್ಮದ ಸ್ವೀಕಾರವನ್ನು ಮಾಡಬೇಕು ॥೨೨೫॥ ಅರೇರೇರೇ, ನರದೇಹವು ಮೋಕ್ಷದ ಮಾರ್ಗವಾಗಿದ್ದು, ವ್ಯರ್ಥವಾಗಿ ಹೋಗುತ್ತಿದೆಯಲ್ಲಾ! ಈ ವಿಚಾರವು ಆತನ ಹೃದಯದಲ್ಲಿ ಬಾಣವಾಗಿ ನಡುವುದು. ಆದ್ದರಿಂದ ವಿಷಯಗಳ ಎಲ್ಲ ಚಿಂತನೆಗಳನ್ನು ಆತನು ಮರೆತು ಬಿಡುವನು ॥೨೨೬॥ ಅನಿತ್ಯವಾಗಿರುವ ಪ್ರತ್ಯಕ್ಷ ಲಕ್ಷಣಗಳಿಂದ ಸಂಸಾರವು ನಾಶಿವಂತವಾಗಿರುವುದು ಆತನಿಗೆ ಕಂಡುಬರುವುದು. ಆದ್ದರಿಂದ ಆತನು ಅದರಲ್ಲಿಯೇ ಆಸಕ್ತನಾಗುವುದಿಲ್ಲ. ಈ ಮೃತ್ಯುಲೋಕದ ಭೋಗವಿಷಯದಲ್ಲಿ ಅವನು ವಿರಕ್ತನಾಗಿರುವನು ॥೨೨೭॥ ಇದರಂತೆಯೇ ಪರಲೋಕದ ಸುಖವನ್ನು ಸಹ ಅಂದಾಜ ಮಾಡಿ ನೋಡಲು ಅದುಕೂಡ ನಶ್ವರವಾಗಿಯೇ ತೋರುವುದು. ಮತ್ತು ಅದರಲ್ಲಿಯೂ ಸಹ ಪತನವು ಇದ್ದೇ ಇದೆ ಎಂಬುದು ಅರಿತುಕೊಂಡು ಆತನು ತನ್ನ ಮನಕ್ಕೆ ಪರಲೋಕದ ಸುಖವನ್ನು ಸ್ಪರ್ಶ ಮಾಡಿಕೊಡುವುದಿಲ್ಲ ॥೨೨೮॥ ಗೋವಿಂದನು ಎಂದು ಕೃಪೆ ತೋರುವನು? ಸಂಸಾರದ ಬಂಧನವು ಎಂದು ಮುರಿದೀತು । ಪರಮಾನಂದದ ಪ್ರಾಪ್ತಿಯಾಗುವಂತಹ ಆತ್ಮಲಾಭವು ನನಗೆ ಎಂದಾದೀತು? ॥೨೨೯॥ ಹೇ ಶ್ರೀಹರಿಯೇ, ಬೇಗನೇ ಧಾವಿಸು, ಈ ದೀನನಲ್ಲಿ ದಯೆ ತೋರಿಸು, ಹೇ ಭಕ್ತಕೈವಾರೀ ಶ್ರೀ ಕೃಷ್ಣನೇ, ಈ ಸಂಸಾರ ಸಾಗರದಿಂದ ನನ್ನನ್ನು ಉದ್ಧರಿಸು ॥೨೩೦॥

ಜೈಸೀ ಜೀವನಾವೇಗಳೀ ಮಾಸೋಳೀ । ತೈಸಾ ಬೋಧಾಲಾಗೀ ತಳಮಳೀ । ಪ್ರೇಮಪಡಿಭರಾಚ್ಯಾ ಮೇಳೀ । ದೇಹ ನಸಾಂಭಾಳೀ ಸರ್ವಥಾ ।।೨೩೧।। ಏಕ ನೇಣೋನಿ ನರದೇಹಾ ಮುಕಲೇ । ಏಕೀ ನವ್ಹೇ ಮ್ಹಣೋನಿ ಉಪೇಕ್ಷಿಲೇ । ಏಕ ಜ್ಞಾನಗರ್ವೇ ಗಿಳಿಲೇ । ಏಕ ಭುಲಲೇ ವಿಷಯಾರ್ಥೀ ।।೨೩೨।। ಏಕ ಸಾಧನಾಭಿಮಾನೇ ಠಕಿಲೇ । ಏಕ ಕರೂ ಕರೂ ಮ್ಹಣತಾ ಗೇಲೇ । ಏಕ ಕರಿತಾ ಅವ್ಹಾಟಾ ಭರಲೇ । ಕರಣೇ ಠೇಲೇ ತೈಸೇಂಚಿ ।।೨೩೩।। ಜರೀ ವಿವೇಕ ಕಳಲಾ ಮನಾ । ತರೀ ನ ತುಟತೀ ವಿಷಯವಾಸನಾ । ತೇಣೇ ಸಂತಪ್ತ ಹೋಊನಿ ಜಾಣಾ । ನಾರಾಯಣಾ ಚಿಂತಿತು ।।೨೩೪।। ಕೃಷ್ಣ ಮ್ಹಣೇ ಉದ್ಧವಾಸೀ । ಸವಿವೇಕ ವೈರಾಗ್ಯ ಅಸೇ ಜ್ಯಾಸೀ । ತೋಚಿ ಆಪುಲಾ ಗುರು ಆಪಣಾಸೀ । ವಿಶೇಷೇಸೀ ಜಾಣಾವಾ ।।೨೩೫।। ತ್ಯಾಚಿಯೇ ನಿಜಬುದ್ಧೀಸೀ । ಮೀಚಿ ವಿವೇಕುಪ್ರಕಾಶೀ । ತೋ ಸ್ವಯೇ ಜಾಣೇ ನಿಜ ಬೋಧಾಸೀ । ನಿಜಮಾನಸೀ ವಿವೇಕೇ ।।೨೩೬।। ಜ್ಯಾಸೀ ಜೈಸಾ ಭಾವೋ । ತ್ಯಾಸೀ ಮೀ ತೈಸಾ ದೇವೋ । ಯೇ ಅರ್ಥೀ ಸಂದೇಹೋ । ಉದ್ಧವಾ ಪಹಾ ಹೋ ನ ಧರಾವಾ ।।೨೩೭।। ಉದ್ಧವಾ ಯೇಥ ಕೇವಳ । ಪಾಹಿಜೇ ನಿಜಬುದ್ಧಿ ನಿರ್ಮಳ । ತರೀ ಆತ್ಮ ಭೋಧ ತತ್ಕಾಳ । ಹೋಯ ಸಫಳ ಸರ್ವಥಾ ।।೨೩೮।।

ಪುರುಷತ್ವೇ ಚ ಮಾಂ ಧೀರಾಃ ಸಾಂಖ್ಯಯೋಗ ವಿಶಾರದಾಃ। ಆವಿಸ್ತರಾಂ ಪ್ರಪಶ್ಯಂತಿ ಸರ್ವಶಕ್ತ್ಯು ಪಬೃಂಹಿತಮ್ ।।೨೧।।

ಅರ್ಥ:- ಆತ್ಮಾನಾತ್ಮ ವಿವೇಕ ಮತ್ತು ಧ್ಯಾನರೂಪಯೋಗ, ಇವುಗಳಲ್ಲಿ ನಿಷ್ಣಾತರಾದ ವಿದ್ವಾನ ಮನುಷ್ಯ ಶರೀರದಲ್ಲಿ ಸರ್ವಶಕ್ತಿಯಿಂದ ಕೂಡಿರುವ ನನ್ನನ್ನು ಅತ್ಯಂತ ವಿಸ್ತರಿಸಿದ ಸ್ವರೂಪದಲ್ಲಿ ಪ್ರಕಟವಾಗಿರುವುದನ್ನು ಕಾಣುವರು.

ಏವಂ ವೈರಾಗ್ಯೇ ಪೂರ್ಣ ಭರಿತ । ಧೀರ ಪುರುಷ ವಿವೇಕಯುಕ್ತ । ಸಾಂಖ್ಯಯೋಗ ವಿವಂಚಿತ । ನಿಜೀ ನಿಜ ಪ್ರಾಪ್ತ ತತ್ಕಾಳ ।।೨೩೯।। ನರದೇಹೀ ವಿವೇಕ ವಸೇ । ನಿಜರೂಪ ಪಾವಲೇ ಕೈಸೇ । ಜೇ ಸರ್ವಶಕ್ತಿಯುಕ್ತ ಅಸೇ । ತೇ ಸಾವಕಾಶೇ ದೇಖತೀ ।।೨೪೦।। ಜೇ ಪ್ರಸವೇ ಸರ್ವಶಕ್ತೀತೇ । ತೇ ಸರ್ವಶಕ್ತಿ-ಶಕ್ತಿದಾತೇ । ಜೇ ನಾತಳೇ ಸರ್ವಶಕ್ತೀತೇ । ತ್ಯಾ ಸ್ವರೂಪಾತೇ ಪಾಹತಾತಿ ।।೨೪೧।। ಉದ್ಧವಾ ಕಾಯ ಸಾಂಗೋ ಗೋಷ್ಠೀ । ಬಹುತ ಶರೀರೇ ಸೃಜಿಲೀ ಸೃಷ್ಟೀ । ಮಜ ನರದೇಹೀ ಆವಡೀ ಮೋಠೀ । ಉತಾಉಠೀ ಮೀ ಹೋತೀ ।।೨೪೨।।

ಏಕದ್ವಿತ್ರಿ ಚತುಷ್ಪಾದೋ ಬಹುಪಾದಸ್ತಥಾಪದಃ । ಬ್ರಹ್ವ್ಯಃ ಸಂತಿ ಪುರಃ ಸೃಷ್ಟಾಸ್ತಾಸಾಂ ಮೇ ಪೌರುಷೀ ಪ್ರಿಯಾ ।।೨೨।।

ಅರ್ಥ:- ನಾನು ಒಂದು ಕಾಲಿನ, ಎರಡು ಕಾಲುಗಳ, ಮೂರು ಕಾಲುಗಳ, ನಾಲ್ಕು ಕಾಲುಗಳ ಇದಕ್ಕೂ ಹೆಚ್ಚು ಕಾಲುಗಳುಳ್ಳ, ಕಾಲುಗಳೇ ಇಲ್ಲದ ಇತ್ಯಾದಿ ಅನೇಕ ಪ್ರಕಾರಗಳ ಶರೀರಗಳನ್ನು ನಿರ್ಮಿಸಿರುವೆನು. ಇವುಗಳಲ್ಲಿ ನನ್ನ ಪ್ರೇಮವು ಮನುಷ್ಯ ಶರೀರದಲ್ಲಿ ಅಧಿಕವಾಗಿದೆ.

ಕೇಲೀ ಏಕಚರಣೀ ಶರೀರೇ। ದೋಪಾಯಾಂಚೀ ಅಪಾರೇ । ತೀಪಾಯಾಂಚೀ ಮನೋಹರೇ ।

ಯಾವ ಪ್ರಕಾರವಾಗಿ ನೀರಿನ ಹೊರತಾಗಿ ಮೀನವು ಹೇಗೆ ತಳಮಳಿಸುವುದೋ ಅದರಂತೆ ಜ್ಞಾನಕ್ಕಾಗಿ ಆತನು ತಳಮಳಿಸುತ್ತಿರುವನು. ಭಕ್ತಿ ಪ್ರೇಮದ ತರಂಗಗಳು ಹೃದಯಲ್ಲಿ ತುಂಬಿ ತುಳುಕುತ್ತಿರುವವು. ಆದ್ದರಿಂದ ದೇಹಭಾವನೇ ಇರುವುದಿಲ್ಲ ।೨೩೧।। ಕೆಲವರು ಅಜ್ಞಾನದಿಂದ ಮನುಷ್ಯ ದೇಹವನ್ನು ಕಳೆದುಕೊಂಡರು ಕೆಲವರು ನಾನಿಸ್ತಕಭಾವದಿಂದ ಅದರ ಉಪೇಕ್ಷೆ ಮಾಡಿದರು. ಕೆಲವರಿಗೆ ಜ್ಞಾನದ ಗರ್ವವು ನುಂಗಿ ನೀರು ಕುಡಿಯಿತು. ಕೆಲವರು ವಿಷಯಗಳಿಗೆ ಭುಲಾಯಿಸಿ ಅದರಲ್ಲಿ ಬಿಟ್ಟು ಹೋದರು ।೨೩೨।। ಕೆಲವರು ಸಾಧನೆಗಳ ಅಭಿಮಾನದಲ್ಲಿ ಮೋಸ ಹೋದರು. ಕೆಲವರು ಮಾಡೋಣ ಮಾಡೋಣ ಎನ್ನುತ್ತಲೇ ಮರಣ ಹೊಂದಿದರು. ಇನ್ನು ಕೆಲವರು ಕರ್ಮಗಳನ್ನು ಮಾಡುತ್ತ ಅಡ್ಡದಾರಿ ತುಳಿದರು. ಹಾಗೂ ಮಾಡುವುದು ಹಾಗೆಯೇ ಉಳಿಯಿತು ।೨೩೩।। ಮನಸ್ಸಿಗೆ ವಿವೇಕವು ಮನದಟ್ಟಾದರೂ ವಿಷಯ ವಾಸನೆಯು ಬಿಡುವುದಿಲ್ಲ. ಆದ್ದರಿಂದ ಮನಸ್ಸಿನಲ್ಲಿ ಸಂತಾಪವು ಉತ್ಪನ್ನವಾಗಿ ಆತನು ನಾರಾಯಣನ ಚಿಂತನೆಯನ್ನು ಮಾಡವನು ।೨೩೪।। ಶ್ರೀ ಕೃಷ್ಣನು ಉದ್ಧವನಿಗೆ ಹೀಗೆ ಹೇಳಿದನು. ಯಾರಿಗೆ ವಿವೇಕಯುಕ್ತ ವೈರಾಗ್ಯವು ಉತ್ಪನ್ನವಾಗುವುದೋ ಆತನೇ ತನಗೆ ತಾನೇ ಗುರುವಾಗುವನು ।೨೩೫।। ಅರೇರೇರೇ, ನರದೇಹವು ಮೋಕ್ಷದ ಮಾರ್ಗವಾಗಿದ್ದು, ವ್ಯರ್ಥವಾಗಿ ಹೋಗುತ್ತಿದೆಯಲ್ಲಾ! ಈ ವಿಚಾರವು ಆತನ ಹೃದಯದಲ್ಲಿ ಬಾಣವಾಗಿ ನಡುವುದು. ಆದ್ದರಿಂದ ವಿಷಯಗಳ ಎಲ್ಲ ಚಿಂತನೆಗಳನ್ನು ಆತನು ಮರೆತು ಬಿಡುವನು ।೨೩೬।। ಯಾರ ಭಾವನೆಯು ಹೇಗೆ ಇರುವುದೋ ದೇವನಾದ ನಾನು ಹಾಗೆಯೇ ಆಗುವೆನು. ಇದರಲ್ಲಿ ನೀನು ಎಳ್ಳಷ್ಟೂ ಸಂಶಯಪಡಬೇಡ ।೨೩೭।। ಹೇ ಉದ್ಧವನೇ ಇದಕ್ಕಾಗಿಯೇ ಅಂತಃಕರಣವು ಕೇವಲ ನಿರ್ಮಲವಾಗಿರಬೇಕು. ಹೀಗಾದರೆ ಮಾತ್ರ ತತ್ಕಾಲದಲ್ಲಿ ಆತ್ಮ ಬೋಧವು ಫಲದ್ರೂಪವಾಗುವುದು ।೨೩೮।।

ಈ ಪ್ರಕಾರವಾಗಿ ವೈರಾಗ್ಯದಿಂದ ಪೂರ್ಣ ತುಂಬಿರವವನು, ಮತ್ತು ವಿವೇಕದಿಂದ ಕೂಡಿಕೊಂಡವನು., ಹೀಗೆ ಯಾರು ಧೈರ್ಯವಂತ ಪುರುಷನಾಗುವನೋ ಆತನು ಸಾಂಖ್ಯಯೋಗದ ವಿಚಾರವನ್ನು ಮಾಡುವನು, ಆತನಿಗೆ ಅಂತಃಕರಣದಲ್ಲಿ ಆತ್ಮಜ್ಞಾನದ ಪ್ರಾಪ್ತಿಯಾಗುವುದು ।೨೩೯।। ಯಾವ ನರದೇಹದಲ್ಲಿ ವಿವೇಕವಿರುವುದೋ, ಅವರಿಗೆ ಆತ್ಮ ಸ್ವರೂಪದ ಪ್ರಾಪ್ತಿಯಾಗುವುದು. ಯಾವ ಈ ಸರ್ವಶಕ್ತಿಮಾನ ತತ್ವವು ಅವರಿಗೆ ಮೆಲ್ಲಮೆಲ್ಲನೆ ಹೃದಯದಲ್ಲಿ ಅನುಭವಕ್ಕೆ ಬರುವುದು ।೨೪೦।। ತದನಂತರ ಆತನಿಂದ ಸರ್ವ ಶಕ್ತಿಯು ಉತ್ಪನ್ನವಾಗುವುದು. ಮತ್ತು ಸರ್ವಶಕ್ತಿಗಳಿಗೆ ಶಕ್ತಿಯನ್ನು ಕೊಡುವ ಹಾಗೂ ಸರ್ವಶಕ್ತಿಗಳವರಿಗೂ ತಿಳಿಯದ ಆ ಸ್ವರೂಪವು ಆತನಿಗೆ ತೋರುವುದು ।೨೪೧।। ಹೇ ಉದ್ಧವನೇ, ನಿನಗೆ ಇನ್ನೇನು ಹೇಳಬೇಕು? ಈ ಸೃಷ್ಟಿಯಲ್ಲಿ ನಾನು ಅನೇಕ ಶರೀರಗಳನ್ನು ಹುಟ್ಟಿಸಿರುವೆನು. ಆದರೂ ನನಗೆ ಮನುಷ್ಯ ದೇಹದಲ್ಲಿ ಬಲು ಪ್ರೀತಿ ಇರುವುದು. ಏಕೆಂದರೆ ಆ ದೇಹದಲ್ಲಿ ಜೀವವು ಬೇಗನೇ ಮದ್ರೂಪವಾಗುವುದು ।೨೪೨।।

ಅತಿಸುಂದರೇ ಚತುಷ್ಪಾದೇ ।।೨೪೩।। ಸರ್ಪಾದಿ ಯೋನಿಚ್ಯಾ ಠಾಯೀ । ಮ್ಯಾ ಚರಣಚಿ ಕೇಲೇ ನಾಹೀ । ಏಕೇ ಚಾಲತೀ ಬಹು ಪಾಯೀ । ಕೇಲೀ ಪಾಹೀ ಶರೀರೇ ।।೨೪೪।। ಐಶೀ ಶರೀರೇ ನೇಣೋ ಕಿತೀ । ಮ್ಯಾ ನಿರ್ಮಾಣ ಕೇಲೀ ಯೇ ಕ್ಷಿತೀ । ಮಜ ಕರ್ತ್ಯಾತೇ ನೇಣತೀ । ಮೂಢಮತಿ ಯಾಲಾಗೀ ।।೨೪೫।। ಮಜ ಕರ್ತ್ಯಾಚೀ ಪ್ರಾಪ್ತಿ । ಹೋಆವಯಾಲಾಗೀ ನಿಶ್ಚಿತೀ । ಸ್ವಾಂಶೇ ಪ್ರಕಾಶೋನಿ ಜ್ಞಾನಶಕ್ತಿ । ಪೌರುಷೀ ಪ್ರಕೃತಿ ಮ್ಯಾ ಕೇಲೀ ।।೨೪೬।। ಜೇಣೇ ದೇಹೇ ಮಜ ಪಾವತೀ। ತ್ಯಾ ದೇಹಾಚೀ ಮಜ ಅತಿ ಪ್ರೀತಿ । ಯಾಲಾಗೀ ಶ್ರುತಿ ನರದೇಹ ವರ್ಣಿತೀ। ದೇವ ವಾಂಛಿತೀ ನರದೇಹಾ ।।೨೪೭।। ಐಶೀ ನರದೇಹಾಚೀ ಪ್ರೀತಿ। ಕೃಷ್ಣ ಸಾಂಗೇ ಉದ್ಧವಾಪ್ರತೀ । ಯೇಣೇ ಶರೀರೇ ಮಜ ಪಾವತೀ । ನಾನಾ ಯುಕ್ತಿ ವಿಚಾರೇ ।।೨೪೮।।

ಅತ್ರ ಮಾಂ ಮೃಗಯಂತ್ಯದ್ಧಾ ಯುಕ್ತಾ ಹೇತುಭಿರೀಶ್ವರಮ್ । ಗೃಹ್ಯ ಮಾಣೈರ್ಗುಣೈರ್ಲಿಂಗೈರಗ್ರಾಹ್ಯ ಮನುಮಾನತಃ ।।೨೩।।

ಅರ್ಥ:- ಪರಮಾತ್ಮನಾದ ನನ್ನನ್ನು ಸಾಮಾನ್ಯ ಇಂದ್ರಿಯ ಗ್ರಹಿಕೆಯಿಂದ ಎಂದೂ ವಶಪಡಿಸಿಕೊಳ್ಳಲಾಗದು. ಆದರೂ ಮಾನವ ಜನ್ಮ ಪಡೆದವರು ಪ್ರತ್ಯಕ್ಷ ಹಾಗೂ ಅನುಮಾನಗಳೆರಡರಿಂದಲೂ ಕಂಡುಕೊಂಡ ಲಕ್ಷಣಗಳ ಮೂಲಕ ನನ್ನನ್ನು ನೇರವಾಗಿ ಹುಡುಕಲು ತಮ್ಮ ಬುದ್ಧಿಯನ್ನೂ ಗ್ರಹಿಕೆಯ ಇತರ ಶಾರೀರಕ ಸಾಮರ್ಥ್ಯವನ್ನೂ ಬಳಸಬಹುದು.

ಯೇಊನಿ ನರದೇಹಾಪ್ರತೀ । ಕರ್ತ್ಯಾಚೀ ಗವೇಷಣಾ ಜೇ ಕರಿತೀ । ಜೋ ಮೀ ಈಶ್ವರ ತ್ರಿಜಗತೀ। ಉತ್ಪತ್ತಿ ಸ್ಥಿತಿ ಸಂಹರ್ತಾ ।।೨೪೯।। ಬುದ್ಧಿಯುಕ್ತೀ ವಿವೇಕ ಕರಣೇ । ತೇ ಜಡೇ ಪ್ರಕಾಶಪಣೇ । ತ್ಯಾಚಾಹೀ ಮೀ ಪ್ರಕಾಶಕು ಮ್ಹಣೇ । ಯೇಣೇ ಲಕ್ಷಣೇ ಲಕ್ಷಿತೀ ।।೨೫೦।। ಐಶಾ ನಾನಾಪರೀಂಚ್ಯಾ ಅನುಮಾನಾ । ಮೀ ತಂವ ವಶ ನವ್ಹೇ ಜಾಣಾ । ತೇ ಲಕ್ಷಿತೀ ಸಾಂಡೋನಿ ಅಭಿಮಾನಾ । ಸಾಕ್ಷಾತ್ವಣಾ ತೇ ಯೇತೀ ।।೨೫೧।। ಜ್ಯಾಚೀ ಆಶಾ ಹೋಯ ನಿರಾಶ । ತೋಚಿ ಬ್ರಹ್ಮ ಪಾವೇ ಸಾವಕಾಶ । ತೇಣೇ ಕಳಿಕಾಳಾವರೀ ಕಾಂಸ । ಜಾಣ ಅವಶ್ಯ ಘಾತಲೀ।।೨೫೨।। ಮುಖ ತಂವ ಸ್ವತಃ ಸಿದ್ಧ ಅಸೇ । ತೇ ನಿರ್ಮಳ ಆರಿಸಾ ದಿಸೇ । ತೇವೀ ಬುದ್ಧೀಚೇನಿ ವಿವೇಕ ವರ್ಷೇ । ಆತ್ಮಾ ಭಾಸೇ ನರ ದೇಹೀ ।।೨೫೩।। ಯೇಚಿವಿಖೀಂಚಾ ಇತಿಹಾಸ ಜಾಣ । ತುಜ ಮೀ ಸಾಂಗೇನ ಪುರಾತನ । ಯಧು ಅವಧೂತ ಸಂವಾದಲಕ್ಷಣ । ಜ್ಞಾನಸಾಧನ ಸಾಧಕಾ ।।೨೫೪।।

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್। ಅವಧೂತಸ್ಯ ಸಂವಾದಂ ಯದೋರಮಿತ ತೇಜಸಃ ।।೨೪।।

ನಾನು ಕೆಲವು ಶರೀರಗಳನ್ನು ಒಂದೇ ಕಾಲು ಇರುವಂತೆ ಮಾಡಿರುವೆನು. ಎರಡು ಕಾಲುಗಳ ಅನೇಕ ಶರೀರಗಳನ್ನು ಮಾಡಿರುವೆನು. ಕೆಲವು ಮೂರು ಕಾಲುಗಳನ್ನಾಗಿ ಮಾಡಿದೆ, ನಾಲ್ಕು ಕಾಲುಗಳುಳ್ಳವಂತೂ ಅತಿಶಯ ಸುಂದರವಾಗಿರುವುವು ।।೨೪೩।। ಸರ್ಪಾದಿ ಪ್ರಾಣಿಗಳಿಗೆ ನಾನು ಕಾಲುಗಳೇ ಕೊಟ್ಟಿರುವುದಿಲ್ಲ. ಎಷ್ಟೋ ಪ್ರಾಣಿಗಳು ಅನೇಕ ಕಾಲಗಳಿಂದ ನಡೆಯುತ್ತಿರುವುವು. ಹೀಗೆ ನಾನಾ ಪ್ರಕಾರದ ಶರೀರಗಳನ್ನು ನಾನು ನಿರ್ಮಿಸಿರುವೆನು ।।೨೪೪।। ಹೀಗೆ ಪೃಥ್ವಿಯಲ್ಲಿ ನಾನು ನಿರ್ಮಾಣ ಮಾಡಿರುವ ಶರೀರಗಳು ಎಷ್ಟಿವೆ ಎಂಬುದಕ್ಕೆ ಗಣಿತವೇ ಇಲ್ಲ. ಆದರೆ ಇವುಗಳಿಗೆ ತಮ್ಮ ಕರ್ತನ ಅರಿವು ಇಲ್ಲದ್ದಕ್ಕೆ ಇವು ಮೂಢಮತಿಯಾಗಿರುವುವು ।।೨೪೫।। ಕರ್ತನಾದ ನನ್ನ ಪ್ರಾಪ್ತಿಯಾಗುವುದಕ್ಕಾಗಿಯೇ ನಾನು ನನ್ನ ಅಂಶದಿಂದ ಜ್ಞಾನಶಕ್ತಿಯನ್ನು ಪ್ರಕಾಶಗೊಳಿಸಿ ಈ ಪುರುಷ ಶರೀರವನ್ನು ಉತ್ಪನ್ನಗೊಳಿಸಿರುವೆನು ।।೨೪೬।। ಯಾವ ದೇಹದಿಂದ ನನ್ನ ಪ್ರಾಪ್ತಿಯಾಗುವುದೋ, ಆ ದೇಹದ ಮೇಲೆ ನನ್ನ ಬಲು ಪ್ರೀತಿ ಇರುವುದು. ಆದ್ದರಿಂದಲೇ ವೇದವು ಮನುಷ್ಯ ದೇಹದ ವರ್ಣನೆ ಮಾಡಿರುವುದು. ಅದಕ್ಕಾಗಿ ದೇವ ದೇವತೆಗಳು ನರದೇಹದ ಇಚ್ಛೆಯನ್ನು ಮಾಡುವರು ।।೨೪೭।। ಈ ಶರೀರದಿಂದಲೇ ಅನೇಕ ಯುಕ್ತಿ ವಿಚಾರಗಳಿಂದ ನನ್ನ ಪ್ರಾಪ್ತಿಯಾಗುವುದು. ಈ ಪ್ರಕಾರವಾಗಿ ಶ್ರೀಕೃಷ್ಣನು ಉದ್ಧವನಿಗೆ ನರದೇಹದ ಮೇಲೆ ಇರುವ ತನ್ನ ಪ್ರೀತಿಯನ್ನು ಹೇಳಿದನು ।।೨೪೮।।

ನರದೇಹವನ್ನು ಪಡೆದು ಕರ್ತನಾದ ನನ್ನನ್ನು ಶೋಧ ಮಾಡುವರು. ನಾನು ಈ ಯಾವ ತ್ರಿಭುವನದ ಉತ್ಪತ್ತೀ, ಸ್ಥಿತೀ ಮತ್ತು ಸಂಹಾರ ಮಾಡುವ ಈಶ್ವರನಾಗಿರುವೆನು ।।೨೪೯।। ಆ ಯಾವ ನನ್ನ ಬುದ್ಧಿಯ ಅನುಮಾನದಿಂದ ವಿಚಾರವನ್ನು ಮಾಡುವರು. ಆದರೆ ಆ ಅನುಮಾನವು ಮತ್ತು ಅದರ ಜ್ಞಾನವೂ ಜಡವಾಗಿರುವುದು. ಕಾರಣ ಆ ಜ್ಞಾನಕ್ಕೆ ಪ್ರಕಾಶವನ್ನು ಮಾಡುವ ನಾನು ಅದರಿಂದ ಬೇರೆಯಾಗಿರುವೆ ಎಂಬ ಲಕ್ಷಣದಿಂದ ನನ್ನನ್ನು ತಿಳಿಯುವರು ।।೨೫೦।। ಆದರೆ ಈ ಪ್ರಕಾರವಾಗಿ ಎಷ್ಟೇ ಅನುಮಾನಗಳನ್ನು ಮಾಡಲಿ, ಅವರಿಗೆ ನಾನು ಮಾತ್ರ ವಶನಾಗುವುದಿಲ್ಲ. ಆದರೆ ಯಾರು ಅಭಿಮಾನವನ್ನು ಬಿಟ್ಟು ನನ್ನ ಸ್ವರೂಪವನ್ನು ನೋಡಲಾರಂಭಿಸುವರೋ, ಅವರಿಗೆ ಮಾತ್ರ ಸ್ವರೂಪದ ಸಾಕ್ಷಾತ ಅನುಭವಕ್ಕೆ ಬರುವುದು. ಇದನ್ನು ನೀನು ಲಕ್ಷದಲ್ಲಿಡು ।।೨೫೧।। ಯಾರ ಆಶೆ ಎಂಬುದು ಸಂಪೂರ್ಣವಾಗಿ ನಾಶವಾಗಿರುವುದೋ, ಅವನು ಮೆಲ್ಲಮೆಲ್ಲನೆ ಬ್ರಹ್ಮಪದಕ್ಕೆ ಮುಟ್ಟುವನು. ಆತನು ಕಲಿಕಾಲದಲ್ಲಿ ಹೋರಾಡಲು ನಡುಕಟ್ಟಿರುವನೆಂದು ತಿಳಿ ।।೨೫೨।। ನಮ್ಮ ಮುಖವು ಸ್ವತಃ ಸಿದ್ಧವಾಗಿದೆ. ಆದರೆ ಸ್ವಚ್ಛವಾದ ಕನ್ನಡಿಯಲ್ಲಿ ಮಾತ್ರ ಅದು ತೋರುತ್ತದೆ. ಅದರಂತೆ ವಿವೇಕದಿಂದ ಅಂತಃಕರಣವು ನಿರ್ಮಲವಾಯಿತೆಂದರೆ ನರದೇಹದಲ್ಲಿ ಆತ್ಮವು ಪ್ರತ್ಯಕ್ಷವಾಗಿ ಭಾಸವಾಗುವುದು ।।೨೫೩।। ಈ ವಿಷಯವಾಗಿ ನಾನು ನಿನಗೊಂದು ಪುರಾತನ ಕಥೆಯನ್ನು ಹೇಳುವೆನು. ಯದು ಮತ್ತು ಅವಧೂತ ಇವರಿಬ್ಬರ ಸಂವಾದವು ಸಾಧಕರಿಗೆ ಜ್ಞಾನಸಾಧನೆ ರೂಪವಾಗಿದೆ ।।೨೫೪।।

ಅರ್ಥ:- ಈ ಸಂಬಂಧದಲ್ಲಿ ಋಷಿಗಳು ಮಹಾನ್ ಶಕ್ತಿಶಾಲಿ ರಾಜನಾದ ಯದು ಮತ್ತು ಪರಮ ತೇಜಸ್ವೀ ಅವಧೂತ ದತ್ತಾತ್ರೇಯ ಇವರ ಸಂವಾದ ರೂಪದಲ್ಲಿ ಪ್ರಾಚೀನವಾದ ಇತಿಹಾಸವನ್ನು ಹೇಳುವರು.

ಹರಿಖೇ ಮ್ಹಣತಸೇ ಗೋವಿಂದು । ಉದ್ಧವಾ ಆಮುಚಾ ಪೂರ್ವಜ ಯದು । ತೇಣೇ ಬ್ರಹ್ಮಜ್ಞಾನಾಸೀ ಸಂವಾದು । ಕೇಲಾ ವಿಶದು ಅವಧೂತಾಸೀ ॥೨೫೫॥ ರಾಜಾ ಯದು ಮ್ಹಣಸೀ ಕೈಸಾ । ಕ್ಷಾತ್ರಸೃಷ್ಟೀಚಾ ಸೂರ್ಯೋ ಜೈಸಾ । ರಾಜಾ ಚಂದ್ರಾಬ್ಯಾ ಪ್ರಕಾಶಾ । ನಿಜತೇಜವಶಾ ಲೋಪಿತು ॥೨೫೬॥ ತೇಣೇ ಗುರೂಚೀ ಲಕ್ಷಣೇ ಐಕತಾ । ಸಾಯುಜ್ಯಮುಕ್ತಿ ಆಲೀ ಹಾತಾ । ತೇ ಹೇ ಪುರಾತನ ಕಥಾ । ತುಜ ಮೀ ಆತಾ ಸಾಂಗೇನ ॥೨೫೭॥

ಅವಧೂತಂ ದ್ವಿಜಂ ಕಂಚಿಚ್ಚರಂತಮಕುತೋಭಯಮ್। ಕವಿಂ ನಿರೀಕ್ಷ್ಯ ತರುಣಂ ಯದುಃ ಪ್ರಪಚ್ಚ ಧರ್ಮವಿತ್ ೨೫॥

ಅರ್ಥ:- ಒಂದು ದಿನ ಧರ್ಮದ ಮರ್ಮಜ್ಞನಾದ ಯದುರಾಜನು ಒಬ್ಬ ತ್ರಿಕಾಲದರ್ಶೀ, ತರುಣ ಅವಧೂತ, ಬ್ರಾಹ್ಮಣ, ನಿರ್ಭಯನಾಗಿ ವಿಚರಿಸುವುದನ್ನು ಕಂಡನು.

ಕೋಣೀ ಏಕ ಅವಧೂತು । ನಿಜತೇಜೇ ಪ್ರಕಾಶವಂತು । ಬ್ರಹ್ಮಾನಂದೇ ಡುಲ್ಲತು । ಯದೂನೇ ಯೇತು ದೇಖಿಲಾ ॥೨೫೮॥ ತ್ಯಾ ಅವಧೂತಾಚೇ ಲಕ್ಷಣ । ಯದು ನಿರೀಕ್ಷಿ ಆಪಣ । ದೇಖಿಲೇ ಬ್ರಹ್ಮಸೂತ್ರಧಾರಣ । ಹೋಯ ಬ್ರಾಹ್ಮಣ ಬ್ರಹ್ಮವೇತ್ತಾ ॥೨೫೯॥ ಐಸಾ ತೋ ಅವಧೂತು । ನಿರ್ಭಯ ನಿಃಶಂಕ ವರ್ತತು । ಯದು ವ್ಯಾಹಾಳಿಯೇ ಹೋತಾ ಜಾತು । ದೇಖಿಲಾ ವನಾಂತು ಸನ್ಮುಖ ॥೨೬೦॥ ಆಂತುಲಾ ಪ್ರಾಣತತ್ತ್ವತಾ । ಬಾಹೇರ ರಿಘೋ ನೇದೀ ಸರ್ವಥಾ । ಸ್ವಭಾವೇ ಪ್ರಾಣಾಪಾನಸಮತಾ । ಝಾಲೀ ನ ಧರಿತಾ ಧಾರಣಾ ॥೨೬೧॥ ನವಲ ತಯಾಚೇ ಪಾಹಣೇ । ದೃಶ್ಯ ದೃಶ್ಯತ್ವೇ ದೇಖೋ ನೇಣೇ । ಝಾಲಾ ಸರ್ವಾಂಗೇ ದೇಖಣೇ । ದೇಖಣೇಪಣೇ ಪಾಹಾತಸೇ ॥೨೬೨॥ ಮೀ ಏಕು ವನೀ ವಸತಾ । ಹೇಹೀ ನಾಠವೆ ತ್ಯಾಚಿಯಾ ಚಿತ್ತಾ । ಝಾಲೀ ಸರ್ವತ್ರ ಸರ್ವಗತತಾ । ಸಮಸಾಮ್ಯತಾ ಸಮತ್ವೇ ॥೨೬೩॥ ಕರ್ಮ ಕಾರ್ಯ ಕರ್ತಾ ಜಾಣ । ಅವಘಾ ಜಾಹಲಾ ತೋ ಆಪಣ । ಕ್ರಿಯೇನೇ ವಾಹೂನಿಯಾ ಆಣ । ನಿಂಬಲೋಣ ಜೀವೇ ಕೇಲೇ ॥೨೬೪॥ ದೇಹಾಚಿಯಾ ಮಾಥಾ । ಠೇವಿಲೀ ಹೋತೀ ಅಹಂತಾ । ತೇ ದೇಹಮಿಥ್ಯಾತ್ವ ಪಾವತಾ । ಸಮೂಳ ಅಹಂತಾ ಪಳಾಲೀ ॥೨೬೫॥ ನಿತ್ಯಾನಿತ್ಯ ಹೋಮದ್ವಾರೇ । ಬ್ರಹ್ಮಾಗ್ನಿ ಪ್ರಜ್ವಳಲಾ ಏಕಸರೇ । ಜಾಳೂನಿ ಆಶ್ರಮಾಂಚೀ ಚಾರೀ ಘರೇ । ಕೇಲೇ ಖರೇ ನಿರಾಶ್ರಮೀ ॥೨೬೬॥
ತ್ಯಾ ಆಶ್ರಮಾಮಾಜೀ ಹೋತೀ । ಶಾಸ್ತ್ರ ಶ್ರವಣ ವಿಧಿವಾದ ಪೋಥೀ । ತೇ ಜಳಾಲೀ ಜೇ ನಿಶ್ಚಿತೀ । ಭಸ್ಮ ಹಾತೀ

ಶ್ರೀ ಕೃಷ್ಣನು ಉದ್ಧವನಿಗೆ ಆನಂದದಿಂದ ಹೇಳಿದನು; ನಮ್ಮ ಪೂರ್ವಜರಲ್ಲಿ ಯದು ಎನ್ನುವವರು ಆಗಿ ಹೋದರು. ಆತನು ಅವಧೂತನಲ್ಲಿ ಬ್ರಹ್ಮಜ್ಞಾನದ ಸಂವಾದವನ್ನು ಮಾಡಿರುವನು ॥೨೫೫॥ ಯದು ರಾಜನು ಹೇಗಿದ್ದನು ಎಂದು ನೀನು ಕೇಳಬಹುದು, ಹೇಳುವೆ ಕೇಳು. ಆತನು ಕ್ಷತ್ರಿಯರಲ್ಲಿ ಸೂರ್ಯನಂತೆ ಇದ್ದನು. ಇತರ ರಾಜರೂಪ ಚಂದ್ರನಿಗೆ ತನ್ನ ತೇಜದಿಂದ ಲೋಪಗೊಳಿಸಿದ್ದನು ॥೨೫೬॥ ಈತನು ಅವಧೂತರಿಂದ ಗುರುವಿನ ಲಕ್ಷಣಗಳನ್ನು ಶ್ರವಣ ಮಾಡುವುದರಿಂದ ಸಾಯುಜ್ಯ ಮುಕ್ತಿಯು ಈತನ ಹಸ್ತಗತವಾಯಿತು. ಅದೇ ಪ್ರಾಚೀನವಾದ ಕಥೆಯನ್ನು ಈಗ ನಾನು ನಿನಗೆ ಹೇಳುವವನಾಗಿರುವೆನು ॥೨೫೭॥

ಒಂದು ಸಾರೆ ಯದುರಾಜನು ಯಾರೋ ಒಬ್ಬರು ಆತ್ಮತೇಜದಿಂದ ಪ್ರಕಾಶಮಾನವಾಗಿ ಮತ್ತು ಬ್ರಹ್ಮಾನಂದದಲ್ಲಿ ತೂಗಾಡುತ್ತಾ ಬರುತ್ತಿರುವ ಅವಧೂತನನ್ನು ನೋಡಿದನು. ಆ ಅವಧೂತನ ಸ್ವರೂಪದ ಸ್ಥಿತಿಯನ್ನು ಯದುರಾಜನು ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸಿದನು ॥೨೫೮॥ ಆತನ ಕೊರಳಿನಲ್ಲಿನ ಯಜ್ಞೋಪವೀತವನ್ನು ಕಂಡು ಈತನು ಬ್ರಹ್ಮವೇತ್ತಾ ಬ್ರಾಹ್ಮಣನಿರಬೇಕೆಂದು ನಿಶ್ಚಯಿಸಿದನು ॥೨೫೯॥ ಈ ಯಾವ ಅವಧೂತನು ಭೂಮಿಯಲ್ಲಿ ನಿರ್ಭಯನಾಗಿ ತಿರುಗಾಡುತ್ತಿದ್ದನು. ಯದುರಾಜನು ಕ್ರೀಡೆಗಾಗಿ ಅರಣ್ಯಕ್ಕೆ ಹೋಗುತ್ತಿರಲು ಆತನು ಈತನ ಎದುರಿನಲ್ಲಿ ಬಂದು ನಿಂತುಕೊಂಡನು ॥೨೬೦॥ ಈ ಯಾವ ಅವಧೂತನು ತನ್ನ ಶರೀರದಲ್ಲಿನ ಪ್ರಾಣಕ್ಕೆ ಹೊರಗೆ ಬಿಡುತ್ತಿರಲಿಲ್ಲ. ಧಾರಣೆಯನ್ನು ಧರಿಸದೇ ಸ್ವಾಭಾವಿಕವಾಗಿಯೇ ಆತನ ಪ್ರಾಣ, ಅಪಾನಗಳ, ಸಮತ್ವವಾಗಿತ್ತು ॥೨೬೧॥ ಆತನ ದೃಷ್ಟಿಯು ಬಹು ಚಮತ್ಕಾರಕವಾಗಿತ್ತು. ಆತನು ದೃಶ್ಯಗಳಿಗೆ ದೃಶ್ಯತ್ವದಿಂದ ಎಂದೂ ಕಾಣುತ್ತಿದ್ದಿಲ್ಲ. ಆತನು ಸರ್ವಾಂಗದಿಂದ ನೋಡುತ್ತಿದ್ದನು. ಮತ್ತು ಸರ್ವತ್ರವೂ ಜ್ಞಾನರೂಪವನ್ನು ಕಾಣುತ್ತಿದ್ದನು ॥೨೬೨॥ ನಾನೊಬ್ಬನು ಅರಣ್ಯದಲ್ಲಿರುವೆನು ಎಂಬ ಭಾನವು ಸ್ವಲ್ಪವೂ ಇದ್ದಿಲ್ಲ. ಎಲ್ಲವನ್ನೂ ಸಮದೃಷ್ಟಿಯ ಯೋಗದಿಂದ ಆತನಿಗೆ ಹೀಗೆ ಸರ್ವವ್ಯಾಪಕತ್ವವು ಪ್ರಾಪ್ತವಾಗಿತ್ತು ॥೨೬೩॥ ಕರ್ಮ, ಕಾರ್ಯ ಮತ್ತು ಕರ್ತಾ ಇವು ಈತನೇ ಸ್ವತಃ ಆಗಿದ್ದನು. ಈತನು ಶಪಥವನ್ನು ಹೊತ್ತು ಜೀವದ ಮೇಲಿಂದ ಕ್ರಿಯೆಗಳನ್ನು ನಿವಾಳಿಸಿ ಒಗೆದಿದ್ದನು ॥೨೬೪॥ ದೇಹದ ಮೇಲೆ ಅಹಂಕಾರವು ಇಡಲ್ಪಟ್ಟಿತ್ತು. ಆದರೆ ದೇಹವು ಮಿಥ್ಯೆ ಎಂದು ನಿಶ್ಚಯಿಸುತ್ತಲೇ ಆತನ ಅಹಂಕಾರವು ಇಲ್ಲದಾಗಿತ್ತು ॥೨೬೫॥ ನಿತ್ಯ ಮತ್ತು ಅನಿತ್ಯ ಇವುಗಳ ಹೋಮದಿಂದ ಬ್ರಹ್ಮಾಗ್ನಿ ಪ್ರಜ್ವಲವಾಯಿತು. ನಾಲ್ಕೂ ಆಶ್ರಮಗಳ ಮನೆಗಳನ್ನು ಸುಟ್ಟು ಅವುಗಳಿಗೆ ನಿರಾಶ್ರಮೀಯನ್ನಾಗಿ ಮಾಡಿದರು ॥೨೬೬॥

ನ ಲಗೇಚಿ॥೨೬೭॥ ವಿಧಿನಿಷೇಧ ಪೈಜಾ । ಜಳಾಲೀ ಪಂಚಾಯತನದೇವಪೂಜಾ । ಹೋತಾ ಸಂಚಿತಕ್ರಿಯಮಾಣಪುಂಜಾ । ತೋಹೀ ವೋಜಾ ಜಳಾಲಾ ॥೨೬೮॥ ಯಾಪರೀ ತೋ ಅವಧೂತು। ಬ್ರಹ್ಮಾನಂದೇ ಜೀ ಡುಲ್ಲತು । ನಿಜಸುಖೇ ವೇಲ್ಹಾವತು । ದೇಖಿಲಾ ಯೇತು ಯದುರಾಯೇ ॥೨೬೯॥ ಸಂಕಲ್ಪವಿಕಲ್ಪರಹಿತ । ಶುದ್ಧ ಸರ್ವಾಂಗೀ ವಿಭೂತ । ಯಾಲಾಗೀ ಬೋಲಿಜೇ "ಅವಧೂತ"। ಯೇರ್ಹವೀ ವಿಖ್ಯಾತ ಬ್ರಾಹ್ಮಣು ॥೨೭೦॥ ಸಭೋವತಾ ಸಮಸ್ತು। ಪ್ರಪಂಚ ನಿಜಬೋಧೇ ಅಸೇ ಧೂತು । ಯಾಲಾಗೀ ಬೋಲಿಜೇ "ಅವಧೂತು"। ಯೇರ್ಹವಿ ವಿಖ್ಯಾತು ಬ್ರಾಹ್ಮಣು ॥೨೭೧॥ ಅಹಂ ಧುಈ ತೋ "ಅವಧೂತು"। ತೋಚಿ ಯೋಗೀ ತೋಚಿ ಪುನೀತು । ಜೋ ಕಾ ಅಹಂಕಾರಗ್ರಸ್ತು । ತೋಚಿ ಪತಿತು ಜನ್ಮಕರ್ಮೀ ॥೨೭೨॥ ವಾರ್ಧಕ್ಯ ಯಾವೇ ದೇಹಾಸೀ । ತಂವ ದೇಹಪಣ ನಾಹೀ ದೇಹಾಪಾಸೀ । ರಿಗಮು ನವ್ಹೇಚ ಜರೇಸೀ। ತಾರುಣ್ಯಾಚೀ ತೇ ಮೂಳ ॥೨೭೩॥ ಆಣಿಕಹೀ ತ್ಯಾಚೀ ಲಕ್ಷಣೇ । ನಿತ್ಯ ನವಾ ಬೋಧು ಮೈಳೋ ನೇಣೇ। ಭೋಗಿಜೇ ನಿತ್ಯ ನೂತನಪಣೇ । ಪರಮ ತಾರುಣ್ಯೆ ಟವಟವಲಾ ॥೨೭೪॥ ನಿಜಬೋಧಾಚಿಯಾ ಸತ್ತಾ । ದ್ವೈತ ಜಂತಿಲೇ ತತ್ತ್ವತಾ । ಐಸಾ ನಿಃಶಂಕು ವಿಚರತಾ । ಭಯ ಸರ್ವಥಾ ತ್ಯಾ ನಾಹೀ ॥೨೭೫॥ ಐಶೀ ಲಕ್ಷಣೇ ನಿರ್ಧಾರಿತಾ । ಅವಧೂತ ನಿಜಬೋಧೇ ಪುರತಾ । ಯದೂಸೀ ಉಪಜಲೀ ವಿನೀತತಾ । ಶ್ರದ್ಧಾ ಸರ್ವಥಾ ಅನಿವಾರ ॥೨೭೬॥ ಕರೂನಿ ಸಾಷ್ಟಾಂಗ ದಂಡವತ । ಅತಿನಮ್ರ ಶ್ರದ್ಧಾಯುಕ್ತ । ಹಾತ ಜೋಡೂನಿ ಪುಸತ । ಪ್ರಸನ್ನ ಚಿತ್ತ ರಾಯಾಚೇ ॥೨೭೭॥

ಶ್ರೀ ಯದುರುವಾಚ :-

ಕುತೋ ಬುದ್ಧಿರಿಯಂ ಬ್ರಹ್ಮನ್ನಕರ್ತುಃ ಸುವಿಶಾರದಾ।
ಯಾಮಾಸಾಧ್ಯ ಭವಾಂಲ್ಲೋಕಂ ವಿದ್ವಾಂಶ್ಚರತಿ ಬಾಲವತ್ ॥೨೬॥

ಅರ್ಥ :- ಯದುರಾಜನು ಕೇಳಿದನು; ಹೇ ಬ್ರಾಹ್ಮಣನೇ, ನೀನು ಕಾರ್ಯತಃ ಯಾವುದೇ ಧಾರ್ಮಿಕ ಕ್ರಿಯೆಯಲ್ಲಿ ತೊಡಗಿರುವಂತೆ ತೋರುವುದಿಲ್ಲ. ಆದಾಗ್ಯೂ ನೀನು ಈ ಜಗತ್ತಿನಲ್ಲಿರುವ ಎಲ್ಲ ವಸ್ತುಗಳ ಹಾಗೂ ಎಲ್ಲ ಜನರ ಪರಿಣಿತ ಅರಿವನ್ನು ಪಡೆದಿರುವೆ. ಮಹನೀಯನೇ, ನೀನು ಈ ಅಸಾಧಾರಣ ಬುದ್ಧಿಮತ್ತೆಯನ್ನು ಹೇಗೆ ಗಳಿಸಿದೆ? ಏಕೆ ನೀನು ಮಗುವಿನಂತೆ ನಡೆದುಕೊಳ್ಳುತ್ತ ಜಗತ್ತಿನುದ್ದಕ್ಕೂ ಮುಕ್ತನಾಗಿ ಸಂಚರಿಸುತ್ತಿರುವೆ? ದಯವಿಟ್ಟು ಹೇಳು.

ಆ ಯಾವ ಆಶ್ರಮಗಳಲ್ಲಿ ಶಾಸ್ತ್ರ ವಿಧಿಗಳ ಇರುವ ಗಂಟನ್ನು ಸುಟ್ಟು ಭಸ್ಮ ಮಾಡಿದನು. ಅದರ ಬೂದಿಯು ಸಹ ಕೈಗೆ ಹತ್ತಲಿಲ್ಲ ॥೨೬೭॥ ವಿಧಿ ನಿಷೇಧಗಳನ್ನು, ಪಂಚಾಯತನ, ದೇವ ಪೂಜೆಗಳು ಜಿದ್ದಿನಿಂದ ಸುಟ್ಟು ಭಸ್ಮವಾದವು. ಸಂಚಿತ ಕ್ರಿಯಾಮಾಣಗಳ ರಾಶಿಯು ಸಹ ಸುಟ್ಟು ಭಸ್ಮವಾಯಿತು ॥೨೬೮॥ ಈ ಪ್ರಕಾರವಾಗಿ ಆ ಯಾವ ಆತ್ಮಾನಂದದಲ್ಲಿ ನಿಮಗ್ನನಾಗಿರುವ ಅವಧೂತನು ನಿಜಾನಂದದಲ್ಲಿ ತೂಗಾಡುತ್ತ ಬರುತ್ತಿರುವುದನ್ನು ಯದುರಾಜನು ಕಂಡನು ॥೨೬೯॥ ಆತನು ಸರ್ವ ಸಂಕಲ್ಪರಹಿತನಾಗಿದ್ದನು. ಆತನು ಸರ್ವಾಂಗಕ್ಕೂ ಭಸ್ಮವನ್ನು ಧರಿಸಿದ್ದನು. ಆದ್ದರಿಂದ ಆತನಿಗೆ ಅವಧೂತ ಎನ್ನುತ್ತಿದ್ದರು. ಇದಲ್ಲದೇ ಆತನು ಪ್ರಖ್ಯಾತ ಬ್ರಾಹ್ಮಣನಾಗಿದ್ದನು ॥೨೭೦॥ ಆತನು ತನ್ನ ಸುತ್ತಮುತ್ತ ಹರಡಿರುವ ಸಂಸಾರವನ್ನು ಆತ್ಮ ಬೋಧೆಯಿಂದ ತೊಳೆದು ಒಗೆಯುತ್ತಿದ್ದನು. ಆದ್ದರಿಂದ ಆತನಿಗೆ ಅವಧೂತ ಎನ್ನುತ್ತಿದ್ದರು. ಇದಲ್ಲದೇ ಆತನು ಪ್ರಖ್ಯಾತ ಬ್ರಾಹ್ಮಣನಾಗಿದ್ದನು ॥೨೭೧॥ ಅಹಂಕಾರವನ್ನು ಯಾರು ತೊಳೆಯುವರೋ, ಆತನೇ ಅವಧೂತನಾಗಿರುವನು. ಆತನೇ ಯೋಗಿಯು, ಆತನೇ ಪವಿತ್ರನಾಗಿರುವನು. ಯಾವನು ಅಹಂಕಾರದಿಂದ ತುಂಬಿರುವನೋ ಅವನು ಜನ್ಮ ಕರ್ಮಗಳಲ್ಲಿ ಬೀಳುವನು ॥೨೭೨॥ ಆತನ ದೇಹಕ್ಕೆ ಮುಪ್ಪು ಬರಬೇಕೆಂದರೆ, ದೇಹಕ್ಕೆ ಮೊದಲೇ ದೇಹತ್ವವೇ ಇಲ್ಲ. ಅಂದ ಮೇಲೆ ಮುಪ್ಪು ಎಲ್ಲಿಂದ ಬರಬೇಕು? ಮುಪ್ಪುತನಕ್ಕೆ ಪ್ರವೇಶವೇ ದೊರೆಯದಿರುವಾಗ ತಾರುಣ್ಯವು ಯಾವಾಗಲೂ ಇರಲಿಕ್ಕೆ ಮೂಲ ಕಾರಣವಾಯಿತು ॥೨೭೩॥ ಇನ್ನೂ ಆತನ ಲಕ್ಷಣಗಳಿರುವುವು. ಆತನ ನಿತ್ಯ ನೂತನವಾಗಿರುವ ಜ್ಞಾನವು ಮಲಿನವಾಗುವುದಿಲ್ಲ. ಆತನು ಅದನ್ನು ನಿತ್ಯ ನೂತನವಾಗಿ ಭೋಗಿಸುತ್ತಿರುವನು. ಆದ್ದರಿಂದ ಆತನು ಯಾವಾಗಲೂ ತಾರುಣ್ಯದಿಂದ ಶೋಭಾಯಮಾನನಾಗಿದ್ದನು ॥೨೭೪॥ ಆತ್ಮಜ್ಞಾನದ ಸಾಮರ್ಥ್ಯದಿಂದ ಆತನು ದ್ವೈತವನ್ನು ಜಯಿಸಿದ್ದರಿಂದ ಹೀಗೆ ನಿಃಶಂಕನಾಗಿ ವರ್ತಿಸುತ್ತಿದ್ದನು. ಆತನಿಗೆ ಯಾವ ಪ್ರಕಾರದ ಭಯವು ಆಗುತ್ತಿದ್ದಿಲ್ಲ ॥೨೭೫॥ ಈ ಪ್ರಕಾರವಾಗಿ ಅವಧೂತನ ಸರ್ವ ಲಕ್ಷಣಗಳನ್ನು ಕಂಡು ಮತ್ತು ಈತನು ಆತ್ಮ ಜ್ಞಾನದಿಂದ ಪರಿಪೂರ್ಣವಾಗಿರುವುದನ್ನು ಅರಿತುಕೊಂಡು ಯದುರಾಜನ ಮನದಲ್ಲಿ ಆತನ ವಿಷಯಕ್ಕೆ ಪೂಜ್ಯಭಾವವು ಉತ್ಪನ್ನವಾಯಿತು. ಹಾಗೂ ಆತನಲ್ಲಿ ಅತ್ಯಂತ ಶ್ರದ್ಧೆಯು ಹುಟ್ಟಿಕೊಂಡಿತು ॥೨೭೬॥ ರಾಜನ ಚಿತ್ತವು ಅತ್ಯಂತ ಪ್ರಸನ್ನವಾಯಿತು. ಈತನು ಆತನಿಗೆ ಸಾಷ್ಟಾಂಗ ದಂಡವತ ಹಾಕಿ ಅತಿ ನಮ್ರಭಾವದಿಂದ ಭಕ್ತಿಯುಕ್ತ ಅಂತಃಕರಣದಿಂದ ಕೈ ಮುಗಿದು ಪ್ರಶ್ನಿಸಿದನು ॥೨೭೭॥

ಅಪೂರ್ವ ಬುದ್ಧಿ ಹೇ ಸ್ವಾಮೀ । ತುಮಚೇ ಠಾಯೀ ದೇಖೋ ಆಮ್ಹಿ । ಜೇ ನ ಲಭೇ ಯಮನಿಯಮೀ । ಕರ್ಮಧರ್ಮೀ ಆಚರತಾ ॥೨೭೮॥ ದಿಸತೋಸೀ ಸರ್ವಾರ್ಥೀ ಕುಶಳ । ಪರೀ ಕಾಹೀ ನ ಕರೂನಿ ನಿಶ್ಚಳ । ಅಕರ್ತಾತ್ಮ ಬೋಧೇ ತೂ ಕೇವಳ । ಜೈಸೇ ಬಾಳ ಅಹೇತುಕ ॥೨೭೯॥ ತೂ ಬಾಲಾ ಐಸಾ ವರ್ತಸೀ । ಪರೀ ಬಾಲಬುದ್ಧಿ ನಾಹಿ ತುಜಪಾಶೀ । ಸರ್ವಜ್ಞ ಸರ್ವತಾ ಹೋಸೀ । ಐಸೇ ಆಮ್ಹಾಸೀ ದಿಸತಸೇ ॥೨೮೦॥ ಯೇವೋನಿಯಾ ಯಾ ಲೋಕಾಸೀ । ಪಾವೋನಿಯಾ ನರದೇಹಾಸೀ । ಸಾರ್ಥಕತಾ ತುಝ್ಯಾ ಐಸೀ । ಆಣಿಕಾಪಾಶೀ ನ ದೇಖೋ ॥೨೮೧॥

ಪ್ರಾಯೋ ಧರ್ಮಾರ್ಥ ಕಾಮೇಷು ವಿವಿತ್ಸಾಯಾಂ ಚ ಮಾನವಾಃ । ಹೇತುನೈವ ಸಮೀಹಂತೇ ಆಯುಷೋ ಯಶಸಃ ಶ್ರಿಯಃ ॥೨೭॥

ಅರ್ಥ:- ಬಹುತೇಕವಾಗಿ ಸರ್ವ ಜನರು ಆಯುಷ್ಯ, ಯಶ, ಅಥವಾ ಸೌಂದರ್ಯ, ಸಂಪತ್ತು ಇತ್ಯಾದಿ ಮನದಲ್ಲಿ ಇಚ್ಛೆಯನ್ನು ಹಿಡಿದು ಅವರು ಧರ್ಮ, ಅರ್ಥ, ಕಾಮ ಮತ್ತು ಆತ್ಮ ವಿಚಾರಕ್ಕೆ ಪ್ರವೃತ್ತರಾಗುವರು.

ಪ್ರಾಯಶಾ ಯೇ ಲೋಕೀ ಲೋಕ । ಧರ್ಮಅರ್ಥಕಾಮಕಾಮುಕ । ಯೇಚಿವಿಖೀ ಜ್ಞಾನ ದೇಖ । ಆವಶ್ಯಕ ಕರಿತಾತಿ ॥೨೮೨॥ ಆಮ್ಹೀ ಸ್ವಧರ್ಮ ಕರಿತೋ ಮ್ಹಣತೀ । ಸ್ನಾನಸಂಧ್ಯೇಚೀ ಕೀರ್ತಿ ಮಿರವಿತೀ । ಶೇವಟೀ ಗಾಯತ್ರಿ ಚೇ ಫಳ ದೇತೀ । ಅರ್ಥ ಪ್ರಾಪ್ತೀಲಾಗೋನೀ ॥೨೮೩॥ ವೇದೋಕ್ತ ಆಮ್ಹೀ ಕರಿತೋಯಾಗ । ಸಂಸ್ಥಾಪಿತೋ ವೇದಮಾರ್ಗ । ಶೇಖೀ ತೋ ಕರಿತೀ ಜೀವಿಕಾಯೋಗ । ಸ್ವರ್ಗಭೋಗ ವಾಂಛಿತೀ ॥೨೮೪॥ ಏಕ ಮ್ಹಣತೀ ಆಮ್ಹೀ ಸ್ವಕರ್ಮಕ । ಕುಶ ಮೃತ್ತಿಕಾ ನಾಶಿಲೇ ಉದಕ । ಸಮಯೀ ಆಲಿಯಾ ಯಾಚಕ । ಇವಲೀಸೀ ಭೀಕ ನ ಘಾಲಿತೀ ॥೨೮೫॥ ದಾಂಭಿಕ ವಾಢವಾವಯಾ ಸ್ಥಿತೀ । ವೈಷ್ಣವದೀಕ್ಷಾ ಅವಲಂಬಿತೀ । ದೇವಪೂಜಾ ಝುಳಫಳೀತ ದಾವಿತೀ । ಶಂಖ ಲಾವಿತೀ ದೋ ಹಾತೀ ॥೨೮೬॥ ಆಯುಷ್ಯದಾನೀ ಪುಣ್ಯಪುರುಷ । ಆಮ್ಹೀ ಚಿಕಿತ್ಸಕ ಅಹಿಂಸ । ಸ್ಥಾವರ ಜಂಗಮ ಜೀವ ಅಶೇಷ । ಮಾರುನಿಯಾ ಯಶ ಮಿರವಿತೀ ॥೨೮೭॥ ಯಶ ವಾಢವಾವಯಾಕಾರಣ । ತುಳಾ ಪುರುಷ ಕರಿತೀ ದಾನ । ದೇಹೋ ಮೂತ್ರವಿಷ್ಟೇ ಪರಿಪೂರ್ಣ । ಧನ ತ್ಯಾಸಮಾನ ಜೋಖಿತೀ ॥೨೮೮॥ ಪರೀ ಪರಮಾರ್ಥಾಚಿಯಾ ಚಾಡಾ ॥ ಕೋಣೀ ವೇಂಚಿನಾ ಕವಡಾ । ಭೂಲ ಕೈಶೀ ಪಡಲೀ ಮೂಢಾ । ಸ್ವಾರ್ಥ ರೋಕಡಾ ವಿಸರಲೇ ॥೨೮೯॥

ಯದು ಹೇಳಿದನು, ಸ್ವಾಮೀ ಮಹಾರಾಜರೇ, ಧರ್ಮಕರ್ಮಗಳನ್ನು ಆಚರಿಸಿ, ಹಾಗೂ ಯಮ ನಿಯಮಗಳನ್ನು ಸಾಧಿಸಿದರೂ ಪ್ರಾಪ್ತವಾಗದ ಸ್ಥಿತಿಯು ನಿಮ್ಮಲ್ಲಿ ತೋರುತ್ತಿರುವುದು ॥೨೭೮॥ ನೀವು ಎಲ್ಲ ಕರ್ಮಗಳಲ್ಲಿ ಕುಶಲರಾಗಿ ಕಾಣುವಿರಿ ಆದರೂ ಯಾವುದನ್ನೂ ಮಾಡದೆ ಸ್ವಸ್ಥರಾಗಿರುವಿರಿ. ಬಾಲಕನಂತೆ ಅಹೇತುಕರಾಗಿರುವಿರಿ ॥೨೭೯॥ ನೀವು ಬಾಲಕರಂತೆ ವರ್ತಿಸುವಿರಿ. ಆದರೆ ನಿಮ್ಮ ಬುದ್ಧಿಯು ಮಾತ್ರ ಬಾಲಕರಂತೆ ಇಲ್ಲ. ನೀವು ಸರ್ವಥಾ ಸರ್ವಜ್ಞರಾಗಿರುವಿರಿ ಹೀಗೆ ನನಗೆ ಅನಿಸುತ್ತದೆ ॥೨೮೦॥ ಮೃತ್ಯು ಲೋಕದಲ್ಲಿ ಬೇರೆಯವರು ಬಂದು ನಿಮ್ಮಂತೆ ನರದೇಹದ ಸಾರ್ಥಕತೆ ಮಾಡಿರುವುದನ್ನು ನಾನು ಕಂಡಿಲ್ಲ ॥೨೮೧॥

ಈ ಮೃತ್ಯುಲೋಕದಲ್ಲಿ ಬಹುತೇಕವಾಗಿ ಸರ್ವ ಜನರು ಧರ್ಮ, ಅರ್ಥ, ಕಾಮ ಇವುಗಳ ಇಚ್ಛೆಯನ್ನು ಮಾಡುವವರಾಗಿರುವರು. ಆದ್ದರಿಂದ ಆ ವಿಷಯಗಳ ಜ್ಞಾನವನ್ನು ಅವಶ್ಯವಾಗಿ ಮಾಡಿಕೊಳ್ಳುವರು ॥೨೮೨॥ ನಾವು ಸ್ವಧರ್ಮವನ್ನು ಪಾಲಿಸುತ್ತಿರುವೆವು ಎಂದು ಇವರು ಹೇಳಿಕೊಳ್ಳುವರು. ಸ್ನಾನ ಸಂಧ್ಯಾಗಳ ಪ್ರೌಢತ್ವವನ್ನು ಮೆರೆಯಿಸುವರು ಹಾಗೂ ಕೊನೆಯಲ್ಲಿ ಗಾಯತ್ರಿಯ ಫಲವನ್ನು ಹಣಕ್ಕಾಗಿ ಕೊಟ್ಟುಬಿಡುವರು ॥೨೮೩॥ ನಾವು ವೇದೋಕ್ತವಾಗಿ ಯಜ್ಞಗಳನ್ನು ಮಾಡುವೆವು, ವೇದ ಮಾರ್ಗವನ್ನು ಸ್ಥಾಪಿಸುತ್ತಿದ್ದೇವೆ, ಹೀಗೆನ್ನುತ್ತ ಕೊನೆಗೆ ಉಪಜೀವನದ ಸಾಧನೆ ಮಾಡಿಕೊಂಡು ಸ್ವರ್ಗಭೋಗದ ಇಚ್ಛೆಯನ್ನು ಮಾಡುವರು ॥೨೮೪॥ ಇನ್ನು ಕೆಲವರು ನಾವು ಸ್ವಧರ್ಮನಿಷ್ಠರಾಗಿರುವೆವು ಎಂದು ಹೇಳುವರು. ಹೀಗೆನ್ನುತ್ತ ದರ್ಭ, ಮೃತ್ತಿಕಾ ಮತ್ತು ಜಲ ಇವುಗಳನ್ನು ವ್ಯರ್ಥವಾಗಿ ವ್ಯಯಗೊಳಿಸುವರು. ಆ ವೇಳೆಯಲ್ಲಿ ಯಾರಾದರೊಬ್ಬರು ಯಾಚಕರಾಗಿ ಮನೆ ಬಾಗಿಲಿಗೆ ಬಂದರೆ ಆತನಿಗೆ ಸ್ವಲ್ಪಾದರೂ ಭಿಕ್ಷೆ ನೀಡಲಾರರು ॥೨೮೫॥ ಢೋಂಗೀ ಜನರಾದ ಇವರು ತಮ್ಮ ಲೌಕಿಕವನ್ನು ಬೆಳೆಸುವುದಕ್ಕಾಗಿ ವೈಷ್ಣವ ದೀಕ್ಷೆಯನ್ನು ಸ್ವೀಕರಿಸುವರು ಮತ್ತು ದೇವಪೂಜೆಯನ್ನು ಆರ್ಭಟಗೊಳಿಸಿ ಎರಡೂ ಕೈಗಳಿಂದ ಶಂಖವನ್ನು ಊದುವರು ॥೨೮೬॥ ಆಯುಷ್ಯವನ್ನು ಬೆಳೆಸುವ ಪುಣ್ಯ ಪುರುಷ ವೈದ್ಯರು, ಅಹಿಂಸಕರು ನಾವು ಎಂದು ಹೇಳಿಕೊಳ್ಳುವರು. ಆದರೆ, ಸ್ಥಾವರ ಜಂಗಮಾದಿ ಸರ್ವ ಜೀವಿಗಳ ವಧೆ ಮಾಡಿ ಯಶದ ಡೌಲು ಮೆರೆಯಿಸುವರು ॥೨೮೭॥ ತಮ್ಮ ಕೀರ್ತಿಯು ಬೆಳೆಯಬೇಕೆಂದು ಕೆಲವರು ತುಲಾ ಪುರುಷ ದಾನ ಮಾಡುವರು. ಮಲಮೂತ್ರದಿಂದ ಕೂಡಿರುವ ದೇಹವನ್ನು ಹಣದ ಸರಿ ಸಮಾನತೆಯಲ್ಲಿ ತೂಕ ಮಾಡಿಕೊಳ್ಳುವರು ಮತ್ತು ಈ ಎರಡರ ಯೋಗ್ಯತೆಯನ್ನು ಸಮವೆಂದು ನಿಶ್ಚಯಿಸುವರು ॥೨೮೮॥ ಆದರೆ ಪರಮಾರ್ಥಕ್ಕಾಗಿ ಯಾರೂ ಒಂದು ಕವಡಿಯನ್ನು ಸಹ ಖರ್ಚು ಮಾಡಲಾರರು. ಈ ಮೂರ್ಖರಿಗೆ ಅದು ಹೇಗೆ ಭ್ರಮವಾಗುವುದೋ ತಿಳಿಯದು. ಇವರು ತಮ್ಮ ನಿಜವಾದ ಸ್ವಾರ್ಥವನ್ನು ಮರೆತುಬಿಡುವರು ॥೨೮೯॥

ಪೂರ್ವೀ ಅದೃಷ್ಟೀ ನಾಹೀ ಪ್ರಾಪ್ತೀ । ತೇ ಶ್ರೀಕಾಮಾ ಉಪಾಸ್ತಿ ಕರಿತೀ । ಶ್ರೀಯೇಚಾ ಸ್ವಾಮೀ ಶ್ರೀಪತೀ । ತ್ಯಾತೇ ನ ಭಜತೀ ಅಭಾಗ್ಯ ॥೧೯೦॥ ಲಕ್ಷ್ಮೀ ವಿಶ್ವಗುರು ಹರೀಚೀ ಪತ್ನೀ । ತೀ ತೇ ಜೋ ತೋ ರಾಖೀ ಅಭಿಲಾಷೂನೀ । ನೇದಿತೀ ಹರೀಚೀ ಹರಿಲಾಗೋನೀ । ತ್ಯಾತೇ ಪತನೀ ಹರಿ ಪಚವೀ ॥೧೯೧॥ ರೋಗ ತ್ಯಾಗೇ ಆಯುಷ್ಯ ಮಾಗತೀ । ಯಾಲಾಗೀ ಸವಿತಾ ಉಪಾಸಿತೀ । ದೇಹೋ ನಶ್ವರ ಹೇ ನಾಠವೇ ಚಿತ್ತೀ । ಪಡಲೀ ಭ್ರಾಂತೀ ನಿಜಪದಾ ॥೧೯೨॥ ಏವಂ ಆಯುಷ್ಯ - ಯಶ - ಶ್ರೀಕಾಮೀ । ಸಮಸ್ತ ಭಜತಾ ದೇಖೋ ಆಮ್ಹೀ । ಪರೀ ನವಲ ಕೇಲೇ ತುವಾ ಸ್ವಾಮೀ । ಪರಬ್ರಹ್ಮೀ ನಿಜಬೋಧು ॥೧೯೩॥ ವಿಷಯಬಳ ಅಲೋಲಿಕ । ಮಿಥ್ಯಾ ಭ್ರಮೇ ಭ್ರಮಲೇ ಲೋಕ । ಜ್ಞಾನಸಾಧನೇ ಸಾಧೋನಿ ದೇಖ । ವಿಷಯಸುಖ ವಾಂಛಿತೀ ॥೧೯೪॥ ವೇದಾಂತವಾರ್ತಿಕ ವಾಕ್‌ಸ್ಫೂರ್ತಿ । ಅದ್ವೈತ ಬ್ರಹ್ಮ ಪ್ರತಿಪಾದಿತೀ । ಶೇಖೀ ಪೋಟಾಸಾಠೀ ವಿಕಿತೀ । ನವಲ ಕಿತೀ ಸಾಂಗಾವೇ ॥೧೯೫॥ ಏಕ ಮ್ಹಣವಿತೀ ಯೋಗಜ್ಞಾನೀ । ವಾಯುಧಾರಣಾ ದಾವಿತೀ ಜನೀ । ಟಾಳೀ ಲಾವೂನಿ ಬೈಸತೀ ಧ್ಯಾನೀ। ಜೀವಿಕಾ ಮನೀ ವಿಷಯಾಂಚೀ ॥೧೯೬॥ ಐಸೇ ವಿವಿದಿಷಾ ಲೋಕ । ಸಾಧನೇ ಸಾಧೂನಿ ಝಾಲೇ ಮೂರ್ಖ । ತುವಾ ಕೇಲೇ ಜೇ ಅಲೋಲಿಕ । ಆತ್ಮಸುಖ ಸಾಧಿಲೇ ॥೧೯೭॥ ಐಸೇ ಸ್ವಾಮೀ ಅವಧೂತಾ । ತುವಾ ತೃಣಪ್ರಾಯ ಕೇಲೇ ಜೀವಿತಾ । ತುಚ್ಛ ಕರೋನಿ ಲೋಕಾ ಸಮಸ್ತಾ । ನಿಜಾತ್ಮಹಿತಾ ಮೀನಲಾಸೀ ॥೧೯೮॥ ನಿಜಾನಂದೇ ನಿವಾಲಾಸೀ । ಅಂತರೀ ಶೀತಳ ಝಾಲಾಸೀ । ಐಸೇ ದಿಸತಾಹೇ ಆಮ್ಹಾಂಸೀ । ಉಪಲಕ್ಷಣೇಸೀ, ಪರಿಯೇಸೀ ॥೧೯೯॥

ತ್ವಂ ತು ಕಲ್ಪಃ ಕವಿರ್ದಕ್ಷಃ ಸುಭಗೋಽಮೃತ ಭಾಷಣಃ। ನ ಕರ್ತಾ ನೇಹಸೇ ಕಿಂಚಿಜ್ಜಡೋನ್ಮತ್ತ ಪಿಶಾಚವತ್ ॥೨೮॥

ಅರ್ಥ:- ನೀನು ಸಮರ್ಥನೂ, ವಿದ್ವಾಂಸನೂ, ಪರಿಣಿತನೂ, ಸುಂದರನೂ, ವಾಗ್ಮಿಯೂ ಆಗಿದ್ದರೂ ಯಾವ ಕ್ರಿಯೆಯಲ್ಲೂ ತೊಡಗಿಲ್ಲ. ಏನನ್ನೂ ಬಯಸುತ್ತಿಲ್ಲ. ಅದಕ್ಕೆ ಬದಲಾಗಿ ಮೂರ್ಖನಂತೆ, ಹುಚ್ಚನಂತೆ, ಪಿಶಾಚದಂತೆ ತೋರುವೆ.

ಸರ್ವಜ್ಞ ಜ್ಞಾತಾ ತೂ ಹೋಸೀ । ತೇ ಜ್ಞಾತೇಪಣ ದಿಸೋ ನ ದೇಸೀ । ಕಾಂಹೀ ಕರಿಸೀ ನಾ ವಾಂಛಿಸೀ । ಜಡತ್ವೇ ದಾವಿಸೀ ನಿಜಶಾಂತೀ ॥೨೦೦॥ ಸರ್ವಥಾ ಉಗಾ ಅಸಸೀ । ಪರೀ ತೂ ಅಂಗೇ ವಿಕಳ ನವ್ಹಸೀ । ಅಂಗೀ ಅವ್ಯಂಗ ದಿಸತೋಸೀ । ಸ್ವರೂಪರೂಪೇಸೀ ಶೋಭಿತು ॥೨೦೧॥

ತಮ್ಮ ಅದೃಷ್ಟದಲ್ಲಿ ಹಣದ ಪ್ರಾಪ್ತಿ ಇಲ್ಲದ ಇವರು ಲಕ್ಷ್ಮೀ ಪ್ರಾಪ್ತಿಗಾಗಿ ಉಪಾಸನೆಯನ್ನು ಮಾಡುವರು. ಆದರೆ ಲಕ್ಷ್ಮಿಯ ಪತಿಯಾದ ಯಾವ ಶ್ರೀಹರಿಯನ್ನು ಆ ಅಭಾಗಿಗಳು ಭಜಿಸಲರಿಯರು ॥೧೯೦॥ ವಿಶ್ವಗುರುವಾಗಿರುವ ಶ್ರೀಹರಿಯ ಪತ್ನಿ ಲಕ್ಷ್ಮಿಯಾಗಿರುವಳು. ಈ ಲಕ್ಷ್ಮಿಯ ಅಭಿಲಾಷೆಯನ್ನು ಹಿಡಿದವನು ಹರಿಯ ಪತ್ನಿಯನ್ನು ಹರಿಗೆ ಕೊಡಲಾರನು. ಅವನಿಗೆ ಹರಿಯು ನರಕದಲ್ಲಿ ನೂಕುವನು ॥೧೯೧॥ ರೋಗದ ನಾಶವಾಗಿ ಆಯುಷ್ಯವು ಬೆಳೆಯಬೇಕೆಂಬ ಬಯಕೆಯಿಂದ ಸೂರ್ಯನ ಉಪಾಸನೆಯನ್ನು ಮಾಡುವರು. ಆದರೆ ಈ ದೇಹವು ನಶ್ವರ ಎಂದು ಇವರು ಅರಿಯರು. ಇವರಿಗೆ ನಿಜವಾಗಿಯೂ ಆತ್ಮಸ್ವರೂಪದಲ್ಲಿ ಭ್ರಾಂತಿ ಹುಟ್ಟಿಕೊಂಡಿರುವುದು ॥೧೯೨॥ ಈ ಪ್ರಕಾರವಾಗಿ ಆಯುಷ್ಯ, ಯಶ ಹಾಗೂ ದ್ರವ್ಯ ಇವುಗಳಿಗಾಗಿ ಜನರು ದೇವರನ್ನು ಭಜಿಸುವರು. ಆದರೆ ಹೇ ಸ್ವಾಮಿ ರಾಯನೇ, ನೀನು ಪರಬ್ರಹ್ಮ ಸ್ವರೂಪದಲ್ಲಿ ಕೂಡಿಕೊಂಡು ಇರುವೆ ॥೧೯೩॥ ವಿಷಯಗಳ ಶಕ್ತಿಯು ವಿಲಕ್ಷಣವಾಗಿದೆ. ಆ ಮಿಥ್ಯೆಯ ಭ್ರಮಕ್ಕೆ ಜನರು ಭ್ರಮಿಸುವರು. ಜ್ಞಾನ ಸಾಧನೆಯನ್ನು ಸಾಧಿಸಿ ಇವರು ವಿಷಯ ಸುಖವನ್ನು ಇಚ್ಛಿಸುವರು ॥೧೯೪॥ ವೇದಾಂತ, ವಾರ್ತಿಕ ಇತ್ಯಾದಿ ವಾಕ್ ಸ್ಫೂರ್ತಿಯಿಂದ ಇವರು ಅದ್ವೈತ ಬ್ರಹ್ಮದ ಪ್ರತಿಪಾದನೆಯನ್ನು ಮಾಡುವರು. ಆದರೆ ಕೊನೆಯಲ್ಲಿ ಹೊಟ್ಟೆಪಾಡಿಗೆ ಅದನ್ನು ಮಾರಿಕೊಳ್ಳುವರು. ಈ ಆಶ್ಚರ್ಯವನ್ನು ಎಷ್ಟೆಂದು ಹೇಳಬೇಕು? ॥೧೯೫॥ ಕೆಲವರು ನಾವು ಯೋಗ ಜ್ಞಾನಿಗಳೆನ್ನುವರು. ಜನರಿಗೆ ವಾಯು ನಿರೋಧಮಾಡಿ ತೋರಿಸುವರು. ಕೆಲವರು ಧ್ಯಾನ ಧರಿಸಿ ಕುಳಿತುಕೊಳ್ಳುವರು. ಆದರೆ ಅವರ ಮನದಲ್ಲಿ ವಿಷಯದ ಚಿಂತನೆಯು ನಡೆದಿರುವುದು ॥೧೯೬॥ ಈ ಪ್ರಕಾರವಾಗಿ ಜ್ಞಾನದ ಇಚ್ಛೆಯನ್ನು ಮಾಡುವ ಅನೇಕ ಜನರು ಅನೇಕ ಸಾಧನೆಗಳನ್ನು ಸಾಧಿಸಿ ಮೂರ್ಖರಾಗುವರು. ನೀವು ಮಾತ್ರ ನಿಜವಾಗಿಯೂ ಅಲೌಕಿಕರಾಗಿರುವಿರಿ. ಕಾರಣ ನೀವು ಆತ್ಮಸುಖವನ್ನು ಸಂಪಾದಿಸಿರುವಿರಿ ॥೧೯೭॥ ಹೇ ಅವಧೂತ ಸ್ವಾಮಿಯವರೇ, ಈ ಪ್ರಕಾರವಾಗಿ ನೀವು ನಿಮ್ಮ ಜೀವಿತಕ್ಕೆ ತೃಣಪ್ರಾಯವನ್ನಾಗಿ ಮಾಡಿರುವಿರಿ. ಸರ್ವ ಸಮಸ್ತರನ್ನು ತುಚ್ಛಗೊಳಿಸಿ ತಾವು ಸ್ವತಃ ಆತ್ಮ ಹಿತದಲ್ಲಿ ರಮಿಸಿರುವಿರಿ ॥೧೯೮॥ ತಾವು ಆತ್ಮಾನಂದದಲ್ಲಿ ತೃಪ್ತರಾಗಿ ಶಾಂತರಾಗಿರುವಿರಿ. ಹೀಗೆ ನಮಗೆ ತೋರುತ್ತಿದೆ. ಅವುಗಳ ಉಪಲಕ್ಷಣಗಳನ್ನು ಕೇಳಬೇಕು ॥೧೯೯॥

ತಾವು ಸರ್ವಜ್ಞರಾಗಿರುವಿರಿ. ಆದರೆ ಆ ಜ್ಞಾನವನ್ನು ತಾವು ತೋರಿಸಿ ಕೊಡುವುದಿಲ್ಲ. ತಾವು ಏನೂ ಮಾಡುವುದಿಲ್ಲ. ಹಾಗೂ ಯಾವುದನ್ನೂ ಇಚ್ಛಿಸುವುದಿಲ್ಲ. ತಮ್ಮ ಶಾಂತಿಯು ಜಡತ್ವವಾಗಿದೆ ಎನ್ನುವಂತೆ ಜನರಿಗೆ ತೋರಿಸುವಿರಿ ॥೨೦೦॥ ತಾವು ಪರಿಪೂರ್ಣ ಸ್ವಸ್ಥರಾಗಿರುವುದು ತೋರುತ್ತದೆ. ಆದರೂ ತಮ್ಮ ಅಂಗದಲ್ಲಿ ಯಾವ ಅಪೂರ್ಣತೆಯೂ ಇರುವುದಿಲ್ಲ. ತಾವು ಅಂಗದಿಂದ ಅವ್ಯಂಗರಾಗಿರುವುದರಿಂದ ಬಹಳ ಶೋಭಾಯಮಾನರಾಗಿ ಕಾಣುವಿರಿ ॥೨೦೧॥

ಜ್ಞಾನ ಏಕಲೇಪಣೇ ಠೇಲೇ । ದುಜೇನಿವೀಣ ಪರದೇಶೀ ಝಾಲೇ । ತೇ ತುಜಮಾಜೀ ಸಾಮಾವಲೇ । ಯಾಲಾಗೀ ಆಲೇ ''ಕವಿ'' ಪದ ।।೩೦೨।। ಕರೂನಿ ಝಾಲಾಸೀ ಅಕರ್ತಾ । ಹೇಚಿ ತುಝೀ ಥೋರ ''ದಕ್ಷತಾ'' । ಬ್ರಹ್ಮರಸೇ ''ರಸಾಳ '' ಬೋಲತಾ । ಚವೀ ಅಮೃತಾ ತೇ ಕೈಚೀ ।।೩೦೩।। ಬ್ರಹ್ಮರಸ ತೂ ಪ್ಯಾಲಾಸೀ । ಬ್ರಹ್ಮಾನಂದೇ ಮಾತಲಾಸೀ। ಜಗೀ ''ಉನ್ಮತ್ತ'' ಝಾಲಾಸೀ । ದೃಷ್ಟೀ ನಾಣಸೀ ಕೋಣಾತೇ ।।೩೦೪।। ಸದಾ ಸಾವಧ ನಿಜರೂಪೇಸೀ । ಯಾಲಾಗೀ ''ಮಾಝೆ - ತುಝೇ'' ನ ಮ್ಹಣಸೀ । ತೇಚಿ ''ಪಿಸೇಪಣ'' ತುಜಪಾಶೀ । ದಿಸೇ ಜಗಾಸೀ ಸರ್ವಥಾ ।।೩೦೫।। ನಿಜಬೋಧೇ ತೃಪ್ತ ಝಾಲಾಸೀ । ಪರಮಾನಂದೇ ನಿವಾಲಾಸೀ । ತೀ ಹೀ ಲಕ್ಷಣೇ ತುಜಪಾಸೀ । ನಿರ್ಧಾರೇಸೀ ದಿಸತಾತೀ ।।೩೦೬।।

ಜನೇಷು ದಹ್ಯ ಮಾನೇಷು ಕಾಮಲೋಭದಾವಾಗ್ನಿನಾ । ನ ತಪ್ಯಸೇಽಗ್ನಿನಾ ಮುಕ್ತೋ ಗಂಗಾಂಭಃಸ್ಥ ಇವ ದ್ವಿಪ: ।।೨೯।।

ಅರ್ಥ:- ಈ ಲೌಕಿಕ ಜಗತ್ತಿನಲ್ಲಿರುವ ಜನರೆಲ್ಲ ಕಾಮ, ಲೋಭಗಳೆಂಬ ಕಾಳ್ಗಿಚ್ಚಿನಿಂದ ದಹಿಸಿ ಹೋಗುತ್ತಿದ್ದರೂ ನೀನು ಮುಕ್ತನಾಗಿರುವೆ. ಆ ಕಾಳ್ಗಿಚ್ಚು ನಿನ್ನನ್ನು ದಹಿಸದು. ನೀನು ಇದರಿಂದ ತಪ್ಪಿಸಿಕೊಂಡು ಗಂಗಾನದಿಯ ನೀರಿನಲ್ಲಿ ನಿಂತ ಆನೆಯಂತಿರುವೆ.

ಕಾಮಲೋಭದಾವಾಗ್ನಿ । ಮಾಜೀ ಜಳತಾ ಲೋಕ ತೀನ್ಹೀ । ದೇಖತ ಅಸೋ ಜೇ ನಯನೀ । ವೇಗಳಾ ಕೋಣೀ ದಿಸೇನಾ ।।೩೦೭।। ತೇ ದಾವಾಗ್ನೀ - ಮಾಜೀ ಅಸತಾ । ತೂ ನ ಪೋಳಸೀ ಗಾ ಅವಧೂತಾ । ನವಲ ತುಝೀ ಅಕ್ಷೋಭ್ಯತಾ । ನಕಳೇ ಸರ್ವಥಾ ಆಮ್ಹಾಂಸೀ ।।೩೦೮।। ವಣವಾ ಜಳೇ ದೋಹೀ ಥಡೀ । ಗಜೇ ಗಂಗಾಜಳೀ ದಿಧಲೀ ಬುಡೀ । ತ್ಯಾಸೀ ನ ಲಾಗತೀ ತಾಪಾಚ್ಯಾ ವೋಡೀ । ತೈಸೀ ನಿರವಡೀ ತುಜ ದೇಖೋ ।।೩೦೯।। ಐಸೀ ದ್ವಂದ್ವೇ ತುಜ ನಾತಳತೀ । ದೃಢ ರಾಹಿಲಾಸೀ ಬ್ರಹ್ಮಸ್ಥಿತೀ । ಕಾಂಹೀ ಏಕ ಕರೀನ ವಿನಂತೀ । ಕೃಪಾಮೂರ್ತಿ ದಯಾಳುವಾ ।।೩೧೦।।

ತ್ವಂಹಿ ನಃ ಪೃಚ್ಛತಾಂ ಬ್ರಹ್ಮನ್ನಾತ್ಮನ್ಯಾನಂದಕಾರಣಮ್। ಬ್ರೂಹಿ ಸ್ಪರ್ಶವಿಹೀನಸ್ಯ ಭವತಃ ಕೇವಲಾತ್ಮನಃ ।।೩೦।।

ಅರ್ಥ:- ಹೇ ಬ್ರಾಹ್ಮಣನೇ, ತಾವು ಸ್ತ್ರೀ, ಪುತ್ರ, ಧನ ಇತ್ಯಾದಿ ಸಂಸಾರಿಕ ವಿಷಯಗಳಿಂದ ದೂರ ಇರುವಿರಿ. ತಮಗೆ ಆತ್ಮದಲ್ಲಿ ಅಲೌಕಿಕ ಅನಿರ್ವಚನೀಯ ಆನಂದವು ಹೇಗೆ ಪ್ರಾಪ್ತವಾಯಿತೆಂಬುದನ್ನು ನಾವು ಕೇಳಲು ಇಚ್ಛಿಸುತ್ತಿದ್ದೇವೆ. ತಾವು ಕೃಪೆದೋರಿ ಅವಶ್ಯವಾಗಿ ಹೇಳಿರಿ.

ತೂ ಬ್ರಹ್ಮವೇತ್ತಾ ಬ್ರಾಹ್ಮಣ । ನಿಜಾನಂದೇ ಪರಿಪೂರ್ಣ । ತ್ಯಾ ಆನಂದಾಚೇ ಕಾರಣ । ವಿಶದ ಕರೂನ ಸಾಂಗಾವೇ ।।೩೧೧।। ತೂ ದೇಹೀ ವರ್ತಸೀ ವಿದೇಹಸ್ಥಿತಿ । ತುಜ ವಿಷಯ ಆತಳೂ ನ ಶಕತೀ । ಹೇ ಅಲಿಪ್ತಪಣಾಚೀ ಪ್ರಾಪ್ತೀ । ಕವಣ್ಯಾ ರೀತೀ ತುಜ ಝಾಲೀ ।।೩೧೨।।

ಜ್ಞಾನವು ಒಂಟಿಯಾಗಿತ್ತು. ಅದರ ಜೊತೆಯಲ್ಲಿ ಯಾರೂ ಇಲ್ಲದಕ್ಕೆ ಅದು ಪರದೇಶಿಯಾಗಿತ್ತು. ಅದು ನಿಮ್ಮಲ್ಲಿ ಪ್ರವೇಶಿಸಿರುವುದರಿಂದ ನಿಮಗೆ ''ಕವಿ'' ಅಂದರೆ ಜ್ಞಾನೀ ಈ ಪದವಿಯು ಬಂದಿತು ।।೩೦೨।। ನೀವು ಕರ್ಮಗಳನ್ನು ಮಾಡಿಯೂ ಅಕರ್ತರಾಗಿರುವಿರಿ. ಇದೇ ನಿಮ್ಮ ದಕ್ಷತೆಯಾಗಿರುವುದು. ನೀವು ಬ್ರಹ್ಮರಸದಿಂದ ಪರಿಪೂರ್ಣವಾಗಿರುವ ರಸಾಳ ಭಾಷಣವನ್ನು ಮಾಡುವಿರಿ. ಈ ಮಾಧುರ್ಯವು ಅಮೃತಕ್ಕೆ ಹೇಗೆ ಬರಬೇಕು? ।।೩೦೩।। ನೀವು ಬ್ರಹ್ಮರಸವನ್ನು ಪ್ರಾಶನ ಮಾಡಿ ಬ್ರಹ್ಮಾನಂದದಲ್ಲಿ ಮಗ್ನರಾಗಿರುವಿರಿ ಮತ್ತು ಅದರ ಉನ್ಮತ್ತದಿಂದ ಜಗತ್ತಿನಲ್ಲಿ ಯಾವುದಕ್ಕೂ ತಮ್ಮ ಲಕ್ಷವಿಲ್ಲ ।।೩೦೪।। ನೀವು ಸದಾ ಸರ್ವದಾ ಆತ್ಮ ಸ್ವರೂಪದಲ್ಲಿ ಜಾಗೃತರಾಗಿರುವುದರಿಂದ ನನ್ನದು, ನಿನ್ನದು ಎಂದು ಎಂದೂ ಹೇಳಲಾರಿರಿ. ಈ ಹುಚ್ಚು ತನವು ನಿಮ್ಮಲ್ಲಿದೆ. ಇದು ಮಾತ್ರ ಸರ್ವ ಜಗತ್ತಿಗೂ ಕಾಣಿಸುತ್ತಿದೆ ।।೩೦೫।। ನೀವು ಆತ್ಮಜ್ಞಾನದಿಂದ ತೃಪ್ತರಾಗಿರುವಿರಿ. ಪರಮಾನಂದದಿಂದ ಶಾಂತರಾಗಿರುವಿರಿ. ಈ ಲಕ್ಷಣಗಳು ನಿಮ್ಮಲ್ಲಿ ಸ್ಪಷ್ಟವಾಗಿ ತೋರುತ್ತಿವೆ ।।೩೦೬।।

ಕಾಮ ಲೋಭ ರೂಪ ದಾವಾಗ್ನಿಯಲ್ಲಿ ಮೂರು ಲೋಕಗಳು ಸುಡುತ್ತಿರುವುದು ನಮ್ಮ ಕಣ್ಣುಗಳಿಗೆ ಪ್ರತ್ಯಕ್ಷವಾಗಿ ತೋರುತ್ತಿದೆ. ಇದರಿಂದ ಯಾರೂ ಬಿಡುಗಡೆಯಾಗದಿರುವುದು ತೋರುತ್ತದೆ ।।೩೦೭।। ಆದರೆ ಹೇ ಅವಧೂತನೇ, ನೀವು ಆ ದಾವಾಗ್ನಿಯಲ್ಲಿದ್ದರೂ ಬೆಂದಿರುವುದಿಲ್ಲ. ನಿಮ್ಮ ಶಾಂತಿಯು ಮಹಾ ವಿಲಕ್ಷಣವಾಗಿದೆ. ಇದು ನಮಗೆ ಎಂದಿಗೂ ತಿಳಿಯಲಾರದು ।।೩೦೮।। ನದಿಯ ಎರಡೂ ದಂಡೆಯಲ್ಲಿ ಕಾಡಬೆಂಕಿಯು ಹತ್ತಿರಲು ಆನೆಯು ನದಿಯಲ್ಲಿ ಜಿಗಿಯಿತೆಂದರೆ ಅದಕ್ಕೆ ಯಾವ ಪ್ರಕಾರವಾಗಿ ಅಗ್ನಿಯ ಝಳವು ತಾಕುವುದಿಲ್ಲವೋ ಅದರಂತೆ ನೀವು ನಿಶ್ಚಯವಾಗಿಯೂ ದುಃಖಮುಕ್ತರಾಗಿರುವಿರಿ ।।೩೦೯।। ಶೀತ ಉಷ್ಣ ದ್ವಂದ್ವಗಳು ನಿಮಗೆ ಸ್ಪರ್ಶ ಮಾಡಲಾರವು. ನೀವು ಬ್ರಹ್ಮ ಸ್ವರೂಪದಲ್ಲಿ ಸ್ಥಿರರಾಗಿರುವಿರಿ. ಆದ್ದರಿಂದ ಹೇ ದಯಾಳನೇ, ಕೃಪಾಮೂರ್ತಿಯೇ, ನಾನೊಂದು ತಮಗೆ ವಿನಂತಿಸುವೆ ।।೩೧೦।।

ತಾವು ಬ್ರಹ್ಮವೇತ್ತಾ ಬ್ರಾಹ್ಮಣರು, ಆತ್ಮಾನಂದದಿಂದ ಪರಿಪೂರ್ಣ ರಾಗಿರುವಿರಿ. ಆ ಆನಂದದ ಕಾರಣವನ್ನು ನನಗೆ ಸ್ಪಷ್ಟವಾಗಿ ವಿಸ್ತರಿಸಿ ಹೇಳಿರಿ ।।೩೧೧।। ತಾವು ದೇಹದಲ್ಲಿದ್ದರೂ ವಿದೇಹ ಅವಸ್ಥೆಯಲ್ಲಿ ವರ್ತಿಸುವಿರಿ. ತಮಗೆ ವಿಷಯಗಳು ಸ್ಪರ್ಶಸಹ ಮಾಡಲು ಸಾಧ್ಯವಿಲ್ಲ. ಇತಂಹ ಅಲಿಪ್ತತೆಯು ತಮಗೆ ಯಾವ ಉಪಾಯದಿಂದ ಪ್ರಾಪ್ತವಾಯಿತು? ।।೩೧೨।।

ತುಜ ನಾಹೀ ರಾಯಾಚೀ ಭೀಡ । ನ ಕರಿಸೀ ಧನವಂತಾಚೀ ಚಾಡ । ದೀನವಚನ ಮಾನಿಸೀ ಗೋಡ । ಪುರವಿಸೀ ಕೋಡ ನಿಜಬೋಧೇ ॥೩೧೩॥ ಐಸಾ ಕೇವಳ ತೂ ಕೃಪಾಳೂ । ಆತ್ಮ ಬಂಧು ದೀನದಯಾಳು । ನಿಜಾತ್ಮ ಭಾವೇ ತೂ ಕೇವಳು । ಭಕ್ತ ವತ್ಸಲು ಭಾವಾರ್ಥೇ ॥೩೧೪॥ ಐಸಾ ಯದೂಚಾ ಸಂವಾದು । ಆವಡೀ ಸಾಂಗೇ ಗೋವಿಂದು । ಉದ್ಧವಾಸೀ ಮ್ಹಣೇ ಸಾವಧು । ಹೃದಯೀ ಬೋಧು ಧರಾವಾ ॥೩೧೫॥

ಶ್ರೀ ಭಗವಾನುವಾಚ:

ಯದುನೈವಂ ಮಹಾಭಾಗೋ ಬ್ರಹ್ಮಣ್ಯೇವ ಸುಮೇಧಸಾ । ಪೃಷ್ಟ: ಸಭಾಜಿತ : ಪ್ರಾಹ ಪ್ರಶ್ರಯಾವನತಂ ದ್ವಿಜ : ॥೩೧॥

ಅರ್ಥ:- ಭಗವಾನ ಶ್ರೀ ಕೃಷ್ಣನು ನುಡಿದನು; ಹೇ ಉದ್ಧವಾ, ನಮ್ಮ ಪೂರ್ವಜ ಯದುರಾಜನ ಬುದ್ಧಿಯು ಶುದ್ಧವಾಗಿತ್ತು, ಹೃದಯದಲ್ಲಿ ಬ್ರಾಹ್ಮಣ ಭಕ್ತಿಯೂ ಇತ್ತು. ಆತನು ಪರಮ ಭಾಗ್ಯಶಾಲಿ ದತ್ತಾತ್ರೇಯರ ಸತ್ಕಾರವನ್ನು ಮಾಡಿ, ಬಹು ವಿನಮ್ರ ಭಾವದಿಂದ ಆತನಲ್ಲಿ ನಿಂತುಕೊಂಡು ಪ್ರಶ್ನಿಸಿಲು, ದತ್ತಾತ್ರೇಯರು ಹೀಗೆ ಹೇಳಿದರು.

ಶ್ರೀಮುಖೇ ಶ್ರೀಕಾಂತ । ಯದೂಚೇ ಭಾಗ್ಯ ವರ್ಣಿತ । ಬ್ರಾಹ್ಮಣಭಕ್ತ ಸತ್ತ್ವಯುತ್ತ । ಬುದ್ಧಿಮಂತ ಶ್ರದ್ಧಾಳು ॥೩೧೬॥ ಭಗವದ್ ಭಾಗ್ಯೇ ಭಾಗ್ಯವಂತು । ಯದೂಸೀ ಭೇಟಲಾ ತೋ ಅವಧೂತು । ತ್ಯಾಸೀ ಹೋಊನಿ ಅತಿವಿನೀತು । ಅಸೇ ವಿನವಿತು ನಿಜಹಿತಾ ॥೩೧೭॥ ಮೃದು ಮಂಜುಳ ವಚನೀ ಪ್ರಾರ್ಥಿಲಾ । ಮಧುಪರ್ಕವಿಧಾನೇ ಪೂಜಿಲಾ । ಅವಧೂತ ಅತಿಸಂತೋಷಲಾ । ಬೋಲತಾ ಝಾಲಾ ನಿಜಮುಖೇ ॥೩೧೮॥

ಶ್ರೀ ಬ್ರಾಹ್ಮಣ ಉವಾಚ:

ಸಂತಿ ಮೇ ಗುರವೋ ರಾಜನ್ ಬಹವೋ ಬುದ್ಧ್ಯುಪಾಶ್ರಿತಾ:।
ಯತೋ ಬುದ್ಧಿಮುಪಾದಾಯ ಮುಕ್ತೋಽಟಾಮೀಹ ತಾನ್ ಶೃಣು ॥೩೨॥

ಅರ್ಥ:- ಬ್ರಾಹ್ಮಣನು ನುಡಿದನು; ಪ್ರಿಯ ರಾಜನೇ, ನನ್ನ ಬುದ್ಧಿಯಿಂದ ನಾನು ಅನೇಕ ಗುರುಗಳ ಆಶ್ರಯವನ್ನು ಪಡೆದಿದ್ದೇನೆ. ಅವರಿಂದ ಅಲೌಕಿಕ ಜ್ಞಾನವನ್ನು ಗಳಿಸುತ್ತ ಈಗ ನಾನು ಮುಕ್ತ ಸ್ಥಿತಿಯಲ್ಲಿ ಭೂಮಿಯುದ್ದಕ್ಕೂ ಸಂಚರಿಸುತ್ತೇನೆ. ಆ ಗುರುಗಳ ಹೆಸರುಗಳು ಗ್ರಹಣ ಮಾಡಿರುವ ಜ್ಞಾನವನ್ನು ಹೇಳುವೆ, ಕೇಳು.

ಕ್ಷೀರಸಾಗರ ಉಚಂಬಳಲಾ । ಕೀ ಕೃಪೇಚಾ ಮೇಘು ಗರ್ಜಿನ್ನಲಾ । ನಿಜಸುಖಾಚಾ ವಾಧಾವಾ ಆಲಾ । ತೈಸೇ ಬೋಲಿಲಾ ಬ್ರಾಹ್ಮಣು ॥೩೧೯॥ ಐಕೇ ರಾಜಯಾ ಚೂಡಾಮಣೀ । ಯದುಕುಳದೀಪ ದಿನಮಣೀ । ಧನ್ಯ ಧನ್ಯ ತುಝೀ ವಾಣೀ । ನಿಜಗುಣೀ ನಿವವಿಲೇ ॥೩೨೦॥ ರಾಜಾ ಆಣಿ ಸಾತ್ತ್ವಿಕು । ಸಿದ್ಧಲಕ್ಷಣೇ ಲಕ್ಷಕು । ಪೃಥ್ವೀ ಮಾಜೀ ತೂಚಿ ಏಕು । ನ ದಿಸೇ ಆಣಿಕು ಸರ್ವಥಾ ॥೩೨೧॥ ಸುಂದರ ಆಣಿ ಸಗುಣ । ಉತ್ತಮೋತ್ತಮ ಕೇಲಾ ಪ್ರಶ್ನ । ಪುಸಿಲೇ ನಿಜಾನಂದಕಾರಣ । ತೇ ಯಥಾರ್ಥ ಜಾಣ ಸಾಂಗೇನ ॥೩೨೨॥

ತಮಗೆ ರಾಜನ ಭಿಡೆ ಇಲ್ಲ. ಶ್ರೀಮಂತರ ಅವಶ್ಯಕತೆ ಇಲ್ಲ. ದೀನರ ವಚನಗಳನ್ನು ಮಾತ್ರ ಪ್ರೀತಿಯಿಂದ ಮನ್ನಿಸುವಿರಿ. ಅವರಿಗೆ ಆತ್ಮ ಜ್ಞಾನವನ್ನು ಕೊಟ್ಟು ಅವರ ಮನೋರಥವನ್ನು ಪೂರ್ಣಗೊಳಿಸುವಿರಿ ॥೩೧೩॥ ಹೀಗೆ ತಾವು ಅತ್ಯಂತ ಕೃಪಾವಂತರಾಗಿರುವಿರಿ. ತಾವು ದುಃಖಿಗಳ ಬಂಧು, ದೀನರ ದಯಾಳುಗಳಾಗಿರುವಿರಿ. ಕೇವಲ ಆತ್ಮ ಭಾವದಿಂದ ಭಕ್ತವತ್ಸಲರಾಗಿರುವಿರಿ ॥೩೧೪॥ ಶ್ರೀ ಕೃಷ್ಣನು ಯದುರಾಜನ ಈ ಸಂವಾದವನ್ನು ಆನಂದದಿಂದ ಹೇಳಿದನು. ಹಾಗೂ ಈ ಬೋಧೆಯನ್ನು ಸಾವಧಾನ ಚಿತ್ತದಿಂದ ಹೃದಯದಲ್ಲಿ ಧರಿಸು ಎಂದು ಉದ್ಧವನಿಗೆ ಹೇಳಿದನು ॥೩೧೫॥

ಶ್ರೀಪತಿಯು ತನ್ನ ಮುಖದಿಂದ ಯದುರಾಜನ ಭಾಗ್ಯದ ವರ್ಣನೆಯನ್ನು ಮಾಡಲಾರಂಭಿಸಿದನು. ಯದುರಾಜನು ಬ್ರಾಹ್ಮಣರ ಮಹಾಭಕ್ತನಾಗಿದ್ದು, ಸತ್ವಶೀಲನಾಗಿದ್ದನು. ಅಲ್ಲದೇ ಈತನು ಅತ್ಯಂತ ಬುದ್ಧಿವಂತನೂ, ಶ್ರದ್ಧಾವಂತನೂ ಆಗಿದ್ದನು ॥೩೧೬॥ ಆದ್ದರಿಂದ ಈತನಿಗೆ ಭಾಗ್ಯವಾನ್ ಅವಧೂತನು ಭಗವಂತನ ಕೃಪೆಯಿಂದ ಭೇಟಿಯಾದನು. ಆಗ ತನ್ನ ಕಲ್ಯಾಣಕ್ಕಾಗಿ ಅತಿವಿನೀತನಾಗಿ ಯದುರಾಜನು ಆತನನ್ನು ವಿನಂತಿಸಿದನು ॥೩೧೭॥ ಅವರನ್ನು ಮಧುಪರ್ಕ ವಿಧಿಯಿಂದ ಪೂಜೆಯನ್ನು ಮಾಡಿ ಮೃದುವಾದ ಮಂಜುಳ ವಾಣಿಯಿಂದ ಪ್ರಾರ್ಥನೆಯನ್ನು ಮಾಡಿದನು. ಆಗ ಅವಧೂತನು ಸಂತುಷ್ಟನಾಗಿ ಹೇಳಲಾರಂಭಿಸಿದನು ॥೩೧೮॥

ಕ್ಷೀರಸಾಗರವು ಉಕ್ಕೇರುವಂತೆ, ಅಥವಾ ಕೃಪಾರೂಪ ಮೇಘವು ಗರ್ಜಿಸುವಂತೆ, ಇಲ್ಲವೇ ಆತ್ಮ ಸುಖದ ತುತ್ತೂರಿ ಬಾರಿಸಿದಂತೆ ಆ ಬ್ರಾಹ್ಮಣನು ಹೇಳಲಾರಂಭಿಸಿದನು ॥೩೧೯॥ ಹೇ ರಾಜ ಚೂಡಾಮಣಿಯೇ, ಕೇಳು. ನೀನು ಯದು ಕುಲದೀಪಕರಲ್ಲಿ ಸೂರ್ಯನಂತಿರುವೆ. ನಿನ್ನ ವಾಣಿಯು ಧನ್ಯವಾಗಿದೆ. ನೀನು ನಿನ್ನ ಗುಣಗಳಿಂದ ನನ್ನನ್ನು ತೃಪ್ತಗೊಳಿಸಿರುವೆ ॥೩೨೦॥ ರಾಜನಾಗಿ ಸತ್ವಗುಣಯುಕ್ತ ಹಾಗೂ ಸಿದ್ಧ ಲಕ್ಷಣಗಳಿಂದ ಕೂಡಿರುವವನೆಂದರೆ ಈ ಪೃಥ್ವಿಯಲ್ಲಿ ನೀನೊಬ್ಬನೇ ನನಗೆ ಕಂಡಿರುವೆ. ಹೀಗೆ ಬೇರೆ ಯಾರನ್ನೂ ಕಾಣೆನು ॥೩೨೧॥ ನೀನು ಯಾವ ಯಾವ ಪ್ರಶ್ನೆಯನ್ನು ಮಾಡಿರುವೆ, ಅವೆಲ್ಲವೂ ಸುಂದರವಾಗಿ ಗುಣಯುಕ್ತವಾಗಿವೆ, ಉತ್ತಮೋತ್ತಮವಾಗಿವೆ. ನೀನು ನಿಜಾನಂದದ ಕಾರಣವನ್ನು ಕೇಳಿರುವೆ, ಅದನ್ನು ನಾನು ಯಥಾರ್ಥವಾಗಿ ಹೇಳುವೆನು, ಅದನ್ನು ಕೇಳು ॥೩೨೨॥

ಗುರುವಿಣ ಆತ್ಮಪ್ರಾಪ್ತೀ । ಸರ್ವಥಾ ನ ಘಡೇ ಗಾ ನೃಪತೀ । ತೇ ಗುರುಹೀ ಮೀ ತುಜಪ್ರತೀ । ಯಥಾನಿಗುತೀ ಸಾಂಗೇನ ।೩೨೩॥ ನಿಜಬುದ್ಧೀಚ್ಯಾ ವಿವೇಕಸ್ಥಿತೀ । ಬಹುತ ಗುರು ಮ್ಯಾ ಕೇಲೇ ಅಸತೀ । ಜೇ ಜೇ ಸದ್ಗುಣ ಮ್ಯಾ ದೇಖಿಲೇ ಭೂತೀ । ತೇ ತೇ ಸ್ಥಿತೀ ತೋ ಗುರು ।೩೨೪॥ ಬುದ್ಧೀನೇ ಅಂಗೀಕಾರಿಲೇ ಗುಣಾ । ನಿಜಧೈರ್ಯ ಧರಿಲೀ ಧಾರಣಾ । ತೇಣೇ ಮೀ ಮುಕ್ತ ಝಾಲೋ ಜಾಣಾ । ಸ್ವೇಚ್ಛಾ ಅಟಣಾ ಕರೀತಸೇ ।೩೨೫॥ ಸಂಸಾರೂ ತರಾವಯಾ । ಮುಖ್ಯ ''ಸದ್ಬುದ್ಧಿ'' ಗಾ ರಾಯಾ । ರಿಗಮೂ ನಾಹೀ ಆಣಿಕಾ ಉಪಾಯಾ । ವ್ಯರ್ಥ ಕಾಸಯಾ ಶಿಣಾವೇ ।೩೨೬॥ ಸದ್‌ಬುದ್ಧಿ ನಾಹೀ ಜ್ಯಾಪಾಸೀ । ತೋ ಸಂಸಾರಾಚೀ ಆಂದಣೀ ದಾಸೀ । ಉಸಂತ ನಾಹೀ ಅಹರ್ನಿಶೀ । ದುಃಖಭೋಗಾಸೀ ಅನಂತ ।೩೨೭॥ ಸದ್‌ಬುದ್ಧಿ ನಾಹೀ ಹೃದಯಭುವನೀ । ತೇಥ ವೈರಾಗ್ಯ ನುಪಜೇ ಮನೀ । ಮಾ ತೋ ತರೇಲ ಕೈಸೇನೀ । ವಿವೇಕ ಸ್ವಪ್ನೀ ನ ದೇಖೇ ।೩೨೮॥ ವೈರಾಗ್ಯಾಚೇನಿ ಪಡಿಪಾಡೇ ।ಜ್ಯಾಸೀ ಸದ್‌ಬುದ್ಧಿ ಸಾಂಪಡೇ । ತೇಥ ಸಂಸಾರ ಕೋಣ ಬಾಪುಡೇ । ಘಾಯೇ ರೋಕಡೇ ವಿಭಾಂಡೀ ।೩೨೯॥ ಆಧೀ ಸಂಸಾರು ಏಕು ಅಸಾವಾ । ಮಗ ತೋ ಖಟಾಟೋಪೇ ನಾಸಾವಾ । ಜೋ ರಿಘಾಲಾ ವಿವೇಕಗಾಂವಾ । ತ್ಯಾಸೀ ತೇವ್ಹಾ ತೋ ನಾಹೀ ।೩೩೦॥ ಸಂಸಾರನಾಶಾಸೀ ಮೂಳ । ಶಿಷ್ಯ - ಪ್ರಜ್ಞಾ ಚಿ ಕೇವಳ । ತಿಚೇ ಝಾಲ್ಯಾ ಅಢಳ ಬಳ । ಹೋಯೇ ಮೃಗಜಳ ಸಂಸಾರೂ ।೩೩೧॥ ಜೇ ಮೀ ಗುರು ಸಾಂಗೇನ ಮ್ಹಣೇ । ತೇ ನಿಜಪ್ರಜ್ಞೇಚೇನಿ ಲಕ್ಷಣೇ । ಹೇಯಾದೇಯಉಪಾಯಪಣೇ । ಘೇಣೇ ತ್ಯಜಣೇ ಸವಿವೇಕೇ ।೩೩೨॥ ಹೇಚಿ ಮರ್‍ಹಾಠಿಯಾ ಭಾಖಾ ।ಸಾಂಗೇನ ತೇ ಸಾವಧ ಐಕಾ । ಜೇಣೇ ಶಿಷ್ಯಾಚಾ ಆವಾಂಕಾ । ಪಡೇ ಠಾಉಕಾ ಪ್ರತ್ಯಕ್ಷ ।೩೩೩॥ ಐಕ ಪ್ರಜ್ಞೇಚಿ ಲಕ್ಷಣೇ । ಸಾಂಗೇನ ದೃಷ್ಟಾಂತಪಣೇ । ಸೂಪ ಚಾಳಣೇ ರಾಂಧಣೇ । ಘೇಣೇ ತ್ಯಜಣೇ ವಿವೇಕೇ ।೩೩೪॥ ಚಾಳಣೀಮಾಜೀ ಜೇ ಜೇ ಪಡೇ । ಸೂಕ್ಷ್ಮ ನಿಜತತ್ತ್ವ ತಳೀ ಸಾಂಡೇ । ಉರತೀ ಗುಣದೋಷಾಂಚೇ ಖಡೇ । ಕರಿತೀ ಬಡಬಡೇ ಖಡಬಡಿತ ।೩೩೫॥ ಐಸೀ ಜೇ ಅವಸ್ಥಾ । ತೇ ತ್ಯಾಗಾವೀ ಸರ್ವಥಾ । ಭೃಂತು ಹೋಈಲ ಸ್ವಾರ್ಥಾ । ಹೇ ರಾಖತಾ ತ್ರಿಶುದ್ಧೀ ।೩೩೬॥

ಹೇ ರಾಜನೇ, ಗುರುವಿಲ್ಲದೇ ಆತ್ಮಪ್ರಾಪ್ತಿಯು ಎಂದಿಗೂ ಆಗುವುದಿಲ್ಲ. ಆ ಗುರುಗಳ ವಿಷಯಕ್ಕೆ ನಾನು ನಿನಗೆ ಯಥಾರ್ಥ ರೀತಿಯಲ್ಲಿ ಹೇಳುವೆನು ।೩೨೩॥ ಆತ್ಮಬುದ್ಧಿಯ ವಿಚಾರವನ್ನು ಮಾಡುತ್ತಿದ್ದಾಗ ನಾನು ಅನೇಕ ಗುರುಗಳನ್ನು ಮಾಡಿಕೊಂಡೆನು. ಯಾವ ಯಾವ ಪ್ರಾಣಿಗಳಲ್ಲಿ ಸದ್ಗುಣಗಳು ದೃಷ್ಟಿಗೆ ಬಿದ್ದಂತೆ ಆ ಯಾವ ಗುಣಗಳಷ್ಟಕ್ಕಾಗಿಯೇ ಅವರನ್ನು ಗುರುಗಳನ್ನಾಗಿ ಅಂಗೀಕರಿಸಿದೆನು ।೩೨೪॥ ಬುದ್ಧಿಯಿಂದ ಆ ಯಾವ ಗುಣಗಳನ್ನು ನಾನು ಸ್ವೀಕಾರ ಮಾಡಿದೆನು ಮತ್ತು ನಿಜಧರ್ಮದಿಂದ ಅವುಗಳನ್ನು ಬಿಗಿಯಾಗಿ ಧರಿಸಿದೆನು. ಅದರಿಂದ ನಾನು ಮುಕ್ತನಾದೆನು. ಹಾಗೂ ಸ್ವೇಚ್ಛೆಯಿಂದ ತಿರುಗಾಡುತ್ತಿರುವೆನು ।೩೨೫॥ ಹೇ ರಾಜನೇ, ಸಂಸಾರದಿಂದ ಪಾರಾಗಬೇಕಾದರೆ ಮುಖ್ಯವಾಗಿ ಸದ್‌ಬುದ್ಧಿಯು ಬೇಕಾಗುವುದು. ಇದನ್ನು ಬಿಟ್ಟು ಅನ್ಯ ಉಪಾಯಗಳಿಗೆ ಇಲ್ಲಿ ಪ್ರವೇಶವೇ ಇಲ್ಲ. ಅಂದಮೇಲೆ ಸದ್‌ಬುದ್ಧಿಯನ್ನು ಬಿಟ್ಟು ವ್ಯರ್ಥವಾಗಿ ಕಷ್ಟವನ್ನು ಸೋಸುವುದರಲ್ಲಿ ನಿಜವಾಗಿಯೂ ಯಾವ ಅರ್ಥವಿದೆ? ।೩೨೬॥ ಯಾರಲ್ಲಿ ಸದ್‌ಬುದ್ಧಿಯು ಇರುವುದಿಲ್ಲವೋ ಅವನು ಸಂಸಾರಕ್ಕೆ ಕಾಣಿಕೆ ಕೊಟ್ಟ ದಾಸಿಯಂತೆ ಆಗುವನು. ಅಹೋರಾತ್ರಿ ಸಾವಿರಾರು ದುಃಖಗಳನ್ನು ಭೋಗಿಸುತ್ತ ಅವನಿಗೆ ಒಂದು ಕ್ಷಣ ಸಹ ಎಂದಿಗೂ ವಿಶ್ರಾಂತಿಯು ಸಿಗಲಾರದು।೩೨೭॥ ಯಾರ ಹೃದಯಮಂದಿರದಲ್ಲಿ ಸದ್‌ಬುದ್ಧಿಯು ಇಲ್ಲದಿರಲು ಅವರ ಮನದಲ್ಲಿ ವೈರಾಗ್ಯವು ಎಂದಿಗೂ ಹುಟ್ಟಲಾರದು. ಆಗ ಅವನು ಉದ್ಧಾರನಾಗುವುದಾದರೂ ಹೇಗೆ? ಅವನ ಸ್ವಪ್ನದಲ್ಲಿಯೂ ವಿವೇಕ ಮಾತ್ರ ಕಾಣಲಾರದು ।೩೨೮॥ ವೈರಾಗ್ಯದ ಜೊತೆಯಲ್ಲಿ ಸದ್‌ಬುದ್ಧಿಯು ಕೂಡಿಕೊಂಡಿತೆಂದರೆ ಅಲ್ಲಿ ಪಾಪ! ಸಂಸಾರವಾದರೂ ಏನು ಮಾಡೀತು? ಅದು ಒಂದೇ ಹೊಡೆತಕ್ಕೆ ಎರಡು ತುಂಡಾಗುವುದು ।೩೨೯॥ ಎಂದಾದರೂ ಸಂಸಾರವೆಂಬುದು ಒಂದು ಇದ್ದರೆ ಮಾತ್ರ ಅದರ ನಾಶಕ್ಕಾಗಿ ಪ್ರಯತ್ನ ಮಾಡಿದರೆ ನಡೆದೀತು, ಆದರೆ ಯಾರ ಹೃದಯದಲ್ಲಿ ವಿವೇಕವು ಪ್ರಕಟವಾಗುವುದೋ, ಆಗ ಅಲ್ಲಿ ಸಂಸಾರವು ಇಲ್ಲದಾಗುವುದು ।೩೩೦॥ ಸಂಸಾರ ನಾಶದ ನಿಜವಾದ ಕಾರಣವೇನೆಂದರೆ ಅದು ಶಿಷ್ಯನ ಪ್ರಜ್ಞೆಯೇ ಆಗಿರುವುದು. ಪ್ರಜ್ಞೆಯ ಬಲವು ಗಟ್ಟಿಯಾಗಲು ಈ ಯಾವ ಸಂಸಾರವು ಮೃಗಜಲದಂತಾಗುವುದು ।೩೩೧॥ ನಾನು ನಿನಗೆ ಈ ಯಾವ ಗುರುಗಳ ಬಗ್ಗೆ ಹೇಳುವೆನು. ಅದನ್ನು ತನ್ನ ಬುದ್ಧಿಯಿಂದ ಶೋಧಿಸಿ ಅದರಲ್ಲಿಯ ಗ್ರಾಹ್ಯವಾದುದನ್ನು ಸ್ವೀಕರಿಸಬೇಕು. ಮತ್ತು ತ್ಯಾಜ್ಯವನ್ನು ತ್ಯಾಗ ಮಾಡಬೇಕು ।೩೩೨॥ ಇದನ್ನೇ ನಿನಗೆ ತಿಳಿಯುವ (ಮರಾಠಿ) ಭಾಷೆಯಲ್ಲಿ ಹೇಳುವೆನು. ನೀನು ಸರಿಯಾಗಿ ಲಕ್ಷಕೊಟ್ಟು ಕೇಳು. ಇದರಿಂದಲೇ ಶಿಷ್ಯನ ಗ್ರಹಣ ಶಕ್ತಿಯು ಸ್ಪಷ್ಟವಾಗಿ ಕಾಣಬರುವುದು ।೩೩೩॥ ಈಗ ಆ ಬುದ್ಧಿಯ ಲಕ್ಷಣಗಳನ್ನು ದೃಷ್ಟಾಂತಗಳ ರೂಪದಲ್ಲಿ ಹೇಳುವೆನು. ಮರದಲ್ಲಿ ಹಾಕಿ ಹಸನು ಮಾಡಿ, ಜರಡಿಯಲ್ಲಿ ಸೋಸಿ ತದನಂತರ ಪಾಕ ಮಾಡಬೇಕು. ಅದರಲ್ಲಿ ವಿಚಾರದಿಂದ ಬೇಕಾಗಿದ್ದು ಇಟ್ಟುಕೊಂಡು ಬೇಡವಾದದ್ದನ್ನು ಒಗೆಯಬೇಕು ।೩೩೪॥ ಜರಡಿಯಲ್ಲಿ ಹಾಕಿರುವುದರಲ್ಲಿ ನಿಜವಾದ ಸೂಕ್ಷ್ಮ ತತ್ವವು ಕೆಳಗೆ ಬೀಳುವುದು. ಮತ್ತು ಗುಣದೋಷಗಳ ಹರಳುಗಳು ಮಾತ್ರ ಜರಡಿಯಲ್ಲಿಯೇ ಉಳಿಯುವುವು ಹಾಗೂ ಖಡ ಖಡವೆನ್ನುವುವು ।೩೩೫॥ ಈ ಸ್ಥಿತಿಯಲ್ಲಿ ವಿಶೇಷವಾಗಿ ತ್ಯಾಗ ಮಾಡಬೇಕು. ಇಲ್ಲದಿದ್ದರೆ ಗುಣದೋಷರೂಪ ಹರಳುಗಳು ಹೊಟ್ಟೆಯಲ್ಲಿ ಸೇರಿ ಸ್ವಾರ್ಥದ ನಿಶ್ಚಯಪೂರ್ವಕವಾಗಿ ಹಾನಿಯಾಗುವುದು ।೩೩೬॥

ಸುಪಾಚೀ ದಶಾ ತೇ ಐಶೀ । ತ್ಯಜೀ ರಜಃಕಣ ಭುಸಾಸೀ । ನಿಡಾರಲ್ಯಾ ನಿಜಬೀಜಾಸೀ । ನಿಜಹೃದಯೇಸೀ ರಾಖಿತ ॥೩೩೭॥ ಸ್ವಯೇ ವೈರಾಗ್ಯೇ ತಾಪಣೇ । ತೇ ದಶಾ ''ರಾಂಧಣೇ'' ಮ್ಹಣೇ । ಅಪಕ್ವಾಸೀ ಪರಿಪಕ್ವ ಕರಣೇ । ನಿಜಗುಣೇ ನಿಜಾಂಗೇ ॥೩೩೮॥ ಏವಂ ಯಾ ದೋನೀ ದಶಾ । ದೃಢ ಧರಾವ್ಯಾ ವೀರೇಶಾ । ತೇಣೇ ಪರಮಾರ್ಥು ಹೋಣೇ ಆಪೈಸಾ । ಜೇವೀ ಆರಿಸಾ ಹಾತೀಂಚಾ ॥೩೩೯॥ ಯದೂಸೀ ಮ್ಹಣೇ ಬ್ರಾಹ್ಮಣ । ಜೇ ಮ್ಯಾ ಸಾಂಗಿತಲೇ ಲಕ್ಷಣ । ತೇಥೇ ಠೇವೂನಿಯಾ ಮನ । ಸಾವಧಾನ ಪರಿಯೇಸೀ ॥೩೪೦॥ ಜೋ ಜೋ ಜಯಾಚಾ ಘೇತಲಾ ಗುಣ । ತೋ ತೋ ಗುರು ಮ್ಯಾ ಕೇಲಾ ಜಾಣ । ಗುರೂಸೀ ಆಲೇ ಅಪಾರಪಣ । ಜಗ ಸಂಪೂರ್ಣ ಗುರು ದಿಸೇ ॥೩೪೧॥ ಜ್ಯಾಚಾ ಗುಣ ಘೇತಲಾ । ತೋ ಸಹಜೇ ಗುರುತ್ವಾ ಆಲಾ । ಜ್ಯಾಚಾ ಗುಣ ತ್ಯಾಗರೂಪೇ ಘೇತಲಾ। ತೋಹೀ ಗುರು ಝಾಲಾ ಅಹಿತತ್ಯಾಗೇ ॥೩೪೨॥ ಏವಂ ತ್ಯಾಗಾತ್ಯಾಗಸಮತುಕೇ । ದೋಹೀಸೀ ಗುರುತ್ವ ಆಲೇ ನಿಕೇ । ರಾಯಾ ತೂ ಪಾಹೇ ಪಾ ವಿವೇಕೇ । ಜಗಚಿ ಅಸೇ ಗುರೂ ದಿಸೇ ॥೩೪೩॥ ಐಸೇ ಪಾಹತಾ ಸಾವಕಾಶೀ। ಗುರುತ್ವ ಆಲೇ ಜಗಾಸೀ । ಹೇಚಿ ಸಾಧನ ಜಯಾಪಾಸೀ । ತೋಚಿ ಪರಮಾರ್ಥಾಸೀ ಸಾಧಕು ॥೩೪೪॥ ಐಸೇ ಸಾಂಗತಾ ಅಚಾಟ । ತುಜ ವಾಟೇಲ ಹೇ ಕಚಾಟ । ತರೀ ಗುರು ಸಾಂಗೋ ಶ್ರೇಷ್ಠ । ಮಾನಿಲೇ ವರಿಷ್ಠ ನಿಜಬುದ್ಧೀ ॥೩೪೫॥

ಪೃಥಿವೀ ವಾಯುರಾಕಾಶಮಾಪೋಽಗ್ನಿಶ್ಚಂದ್ರಮಾ ರವಿಃ । ಕಪೋತೋಽಜಗರಃ ಸಿಂಧುಃ ಪತಂಗೋ ಮಧುಕೃದ್ ಗಜಃ ॥೩೩॥
ಮಧುಹಾ ಹರಿಣೋ ಮೀನಃ ಪಿಂಗಲಾ ಕುರರೋಽರ್ಭಕಃ । ಕುಮಾರೀ ಶರಕೃತ್ ಸರ್ಪ ಊರ್ಣನಾಭಿಃ ಸುಪೇಶಕೃತ್ ॥೩೪॥

ಅರ್ಥ:- ನನ್ನ ಗುರುಗಳ ಹೆಸರು ಹೀಗಿವೆ, ಭೂಮಿ, ಗಾಳಿ, ಆಕಾಶ, ನೀರು, ಬೆಂಕಿ, ಚಂದ್ರ, ಸೂರ್ಯ, ಪಾರಿವಾಳ, ಹೆಬ್ಬಾವು, ಸಮುದ್ರ, ಮಿಡತೆ, ಜೇನ್ನೊಣ, ಆನೆ, ಭೃಂಗ, ಜಿಂಕೆ, ಮೀನು, ಪಿಂಗಲಾ, ಕುರರ ಪಕ್ಷಿ, ಮಗು, ಯುವತಿ, ಬಾಣ ಮಾಡುವವ ಕೋಳೀ, ಸರ್ಪ, ಬೇಡ, ಕಣಜದ ಹುಳು.

ಗುರು ಸಾಂಗೇನ ಅಶೇಷ । ಸಂಖ್ಯಾಪ್ರಮಾಣ ''ಚೋವೀಸ'' । ತ್ಯಾಂಚೀ ನಾವೇ ತೂ ಪರೀಸ । ಸಾವಕಾಶ ಸಾಂಗೇನ ॥೩೪೬॥ ಪೃಥ್ವೀ ವಾಯು ಆಕಾಶ । ಅಗ್ನಿ ಆಪ ಸೀತಾಂಶ । ಸಾತವಾ ತೋ ಚಂಡಾಂಶ । ಕಪೋತಾ.ಪರಿಸ ಆಠವಾ ॥೩೪೭॥ ಅಜಗರ ಸಿಂಧು ಪತಂಗ । ಮಧುಮಕ್ಷಿಕಾ ಗಜ ಭೃಂಗ । ಹರಿಣ ಮೀನ ವೇಶ್ಯಾ ಸಾಂಗ । ನಾವೇ ಸುಭಗ ''ಪಿಂಗಲಾ'' ॥೩೪೮॥ ಟಿಟವೀ ಆಣಿ ಲೇಕರು । ಕುಮಾರೀ ಆಣಿ ಶರಕಾರು । ಸರ್ಪ ಕಾತಣೀ ಪೇಶಸ್ಕರು । ಇತಕೇನ ಗುರು ಚೋವೀಸ ॥೩೪೯॥

ಆದರೆ ಮರದ ಸ್ಥಿತಿಯು ಭಿನ್ನವಾಗಿರುತ್ತದೆ, ಮಣ್ಣು, ತೌಡು ಮತ್ತು ಹೊಲಸು ಇತ್ಯಾದಿಗಳು ಹೊರಗೆ ಹಾಕಿ ನಿಜ ಬೀಜಗಳನ್ನು ತನ್ನ ಹೊಟ್ಟೆಯಲ್ಲಿ ಹಿಡಿದಿಟ್ಟುಕೊಳ್ಳುವುದು ॥೩೩೭॥ ಸ್ವತಃ ವೈರಾಗ್ಯದಿಂದ ಕುದಿಸುವುದು. ತಾನೇ ತನ್ನ ಗುಣಗಳಿಂದ ಅಪಕ್ವಕ್ಕೆ ಪರಿಪಕ್ವ ಮಾಡುವುದೇ ಈ ಸ್ಥಿತಿಯಾಗಿದೆ ॥೩೩೮॥ ಹೇ ವೀರಶ್ರೇಷ್ಠನೇ, ಈ ಪ್ರಕಾರವಾಗಿ ಈ ಎರಡೂ ಸ್ಥಿತಿಗಳನ್ನು ದೃಢವಾದ ನಿಶ್ಚಯದಿಂದ ಧಾರಣ ಮಾಡಬೇಕು. ಅಂದರೇನೇ, ಕೈಯಲ್ಲಿನ ಕನ್ನಡಿಯಂತೆ ಪರಮಾರ್ಥವು ತನ್ನಷ್ಟಕ್ಕೆ ತಾನೇ ಹಸ್ತಗತವಾಗುವುದು ॥೩೩೯॥ ಆ ಬ್ರಾಹ್ಮಣನು ಯದುರಾಜನಿಗೆ ಹೀಗೆ ಹೇಳಿದನು. ನಾನು ನಿನಗೆ ಹೇಳಿರುವ ಈ ಯಾವ ಲಕ್ಷಣಗಳನ್ನು ಸ್ಮರಣದಲ್ಲಿ ಇಟ್ಟುಕೋ. ಈಗ ಪುನಃ ಹೇಳುವೆ, ಲಕ್ಷಪೂರ್ವಕವಾಗಿ ಕೇಳು ॥೩೪೦॥ ಯಾರ ಯಾವ ಯಾವ ಗುಣಗಳನ್ನು ನಾನು ಸ್ವೀಕರಿಸಿದೆನೋ, ಅವರನ್ನೆಲ್ಲ ನಾನು ಗುರುಗಳನ್ನಾಗಿ ಮಾಡಿಕೊಂಡೆನು. ಆದ್ದರಿಂದ ನನ್ನ ಗುರುಗಳು ಬಹಳಷ್ಟಾದರು. ಕೊನೆ ಕೊನೆಗೆ ಸಂಪೂರ್ಣ ಜಗತ್ತೇ ನನಗೆ ಗುರುಗಳಾಗಿ ಕಾಣಿಸ ಹತ್ತಿತು ॥೩೪೧॥ ಯಾರ ಗುಣಗಳನ್ನು ನಾನು ಸ್ವೀಕರಿಸಿದೆನೋ ಅವರು ಸಹಜವಾಗಿ ನನ್ನ ಗುರುಗಳಾದರು. ಇದಲ್ಲದೇ ಯಾರಲ್ಲಿನ ದೋಷಗಳನ್ನು ಕಂಡು ನಾನು ಅದನ್ನು ತ್ಯಾಗ ಮಾಡಿದ್ದರಿಂದ ಅವರೂ ಸಹ ನನ್ನ ಗುರುಗಳಾದರು ॥೩೪೨॥ ಈ ಪ್ರಕಾರವಾಗಿ ಗುಣ ಗ್ರಹಣ ಹಾಗೂ ದೋಷತ್ಯಾಗ ಈ ಎರಡನ್ನು ಸಮಾನವಾದ ಭಾವದಿಂದ ಈ ಇಬ್ಬರಿಗೂ ಗುರುವಿನ ಮಾನವು ಬಂದಿತು. ಹೇ ರಾಜನೇ, ನೀನು ಸಹ ಇದರಂತೆಯೇ ವಿಚಾರ ಮಾಡಿನೋಡು. ಅಂದರೆ ನಿನಗೂ ಸಹ ಈ ಸಂಪೂರ್ಣ ಜಗತ್ತು ಗುರುಮಯವಾಗಿ ತೋರುವುದು ॥೩೪೩॥ ಈ ರೀತಿಯಲ್ಲಿ ಸಾವಕಾಶವಾಗಿ ನೋಡಲು ಎಲ್ಲ ಜಗವು ಗುರುವಾಗಿ ಕಾಣುವುದು. ಈ ಸಾಧನೆಯು ಇದ್ದವರಿಗೆ ಪರಮಾರ್ಥವು ಪ್ರಾಪ್ತವಾಗುವುದು ॥೩೪೪॥ ಇಂತಹ ವಿಲಕ್ಷಣವಾದ ವರ್ಣನೆಯನ್ನು ಕೇಳಿ, ನಿನಗೆ ಮಹದಶ್ಚರ್ಯ ಉಂಟಾಗಬಹುದು. ಆದ್ದರಿಂದ ಶ್ರೇಷ್ಠವೆಂದು ಯಾರನ್ನು ನಾನು ಗುರು ಎಂದಿರುವೆನೋ ಅವುಗಳ ಪೈಕಿ ಮುಖ್ಯವಾದುದನ್ನು ಹೇಳುವೆನು. ನೀನೀಗ ಅದನ್ನು ಕೇಳು ॥೩೪೫॥

ನನ್ನ ಎಲ್ಲ ಗುರುಗಳ ಹೆಸರು ಹೇಳುವೆ, ಅವರ ಸಂಖ್ಯೆಯು ಇಪ್ಪತ್ತಾಲ್ಕು ಇರುವುದು. ಅವುಗಳನ್ನು ನೀನು ಸಾವಧಾನ ಚಿತ್ತದಿಂದ ಕೇಳು ॥೩೪೬॥ ಪೃಥ್ವಿ, ವಾಯು, ಆಕಾಶ, ಅಗ್ನಿ, ಜಲ, ಚಂದ್ರ, ಸೂರ್ಯ, ಕಪೋತ ॥೩೪೭॥ ಹೆಬ್ಬಾವು, ಸಮುದ್ರ, ಪತಂಗ, ಜೇನುನೊಣ, ಆನೆ, ಭೃಂಗ, ಚಿಗರೆ, ಮೀನು, ಪಿಂಗಲಾ ಹೆಸರಿನ ವಾರಾಂಗನಾ ॥೩೪೮॥ ಕುರರ ಪಕ್ಷಿ, ಬಾಲಕ, ಕುಮಾರೀ, ಬಾಣ ತಯಾರಿಸುವ ಕಮ್ಮಾರ, ಸರ್ಪ, ಕೋಳಿ (ಬೇಡರವ) ಕುಂಬಾರ ಹುಳು. ಹೀಗೆ ನಾನು ಇಪ್ಪತ್ತಾಲ್ಕು ಗುರುಗಳನ್ನಾಗಿ ಮಾಡಿಕೊಂಡೆನು ॥೩೪೯॥

ಪಾವಾವಯ ತತ್ತ್ವ ಪಂಚವಿಸಾವೇ । ಚೋವಿಸಾ ಗುರೂಂಸೀ ಉಪಾಸಾವೇ । ವಿವೇಕಯುಕ್ತಿಸ್ವಭಾವೇ । ಗುರು ಭಜಾವೇ ನಿಜಬುದ್ಧೀ ।೩೫೦॥ ಠಾಕಾವಯಾ ನಿಜಬೋಧಾಸೀ । ನಿಜವಿವೇಕೇ ಅಹರ್ನಿಶೀ । ಗುರುತ್ವ ದೇಊನಿ ಅನೇಕಾಂಸೀ । ನಿಜಹಿತಾಸೀ ಗುರು ಕೇಲೇ ।೩೫೧॥ ಕೋಣ ಯುಕ್ತಿ ಕೋಣ ವಿಚಾರು । ಕೋಣೇ ಲಕ್ಷಣೇ ಕೋಣ ಗುರು । ಕೇಲಾ ತೋಹೀ ನಿಜನಿರ್ಧಾರು । ಸವಿಸ್ತಾರು ಪರಿಯೇಸೀ ।೩೫೨॥

ಏತೇ ಮೇ ಗುರವೋ ರಾಜನ್ ಚತುರ್ವಿಂಶತಿರಾಶ್ರಿತಾ । ಶಿಕ್ಷಾ ವೃತ್ತಿಭಿರೇತೇಷಾ ಮನ್ವಶಿಕ್ಷಮಿಹಾತ್ಮನಃ ।೩೫॥

ಅರ್ಥ:- ನಾನು ಈ ಇಪ್ಪತ್ನಾಲ್ಕು ಗುರುಗಳ ಆಶ್ರಯ ಪಡೆದೆನು. ಇವರ ಚರಿತ್ರದಿಂದ ನಾನು ಇಲ್ಲಿ ನನಗೆ ಕಲಿಯಲು ಯೋಗ್ಯವಾದ ಗ್ರಾಹ್ಯ ಮತ್ತು ತ್ಯಾಜ್ಯ ಇವುಗಳನ್ನು ಕಲಿತೆನು.

ಐಕೇ ರಾಜವರ್ಯಾ ನೃಪತೀ । ವಿವೇಕಧವಲಚಕ್ರವರ್ತೀ । ಗುರುಸಂಖ್ಯಾ ತುಜಪ್ರತೀ । ಯಥಾನಿಗುತೀ ಸಾಂಗಿತಲೀ ।೩೫೩॥ ಯಾಂಚಿಯಾ ಶಿಕ್ಷಿತಾ ವೃತ್ತೀ । ಶಿಕಲೋ ಆಪುಲಿಯಾ ಯುಕ್ತೀ । ಮಗ ಪಾವಲೋ ಆತ್ಮಸ್ಥಿತೀ । ವಿಕಲ್ಪಭ್ರಾಂತೀ ಸಾಂಡೂನೀ ।೩೫೪॥

ಯತೋ ಯದನುಶಿಕ್ಷಾಮಿ ಯಥಾ ವಾ ನಾಹುಷಾತ್ಮಜ । ತಂ ತಥಾ ಪುರುಷವ್ಯಾಘ್ರ ನಿಬೋಧ ಕಥಯಾಮಿ ತೇ ।೩೬॥

ಅರ್ಥ:- ಹೇ ಯಯಾತಿರಾಜನ ಪುತ್ರನೇ, ಪುರುಷವ್ಯಾಘ್ರನೇ, ಈ ಗುರುಗಳಲ್ಲಿ ಪ್ರತಿಯೊಬ್ಬರಿಂದ ಕಲಿತುದ್ದನ್ನು ನಾನು ವಿವರಿಸುತ್ತೇನೆ. ದಯವಿಟ್ಟು ಕೇಳು.

ನಹುಷಾಚಾ ಪುತ್ರ ಯಯಾತೀ । ಯಯಾತೀಚಾ ಯದು ನಿಶ್ಚಿತೀ । "ನಾಹುಷನಂದನ" ಯದೂಸೀ ಮ್ಹಣತೀ । ಮೂಳ ವ್ಯುತ್ಪತ್ತೀ ತೇಣೇ ಯೋಗೇ ।೩೫೫॥ ಯಾಲಾಗೀ ಮ್ಹಣೇ "ನಾಹುಷನಂದನಾ" । ಪುರುಷಾಮಾಜೀ ಪಂಚಾನನಾ । ಸಾಂಗೇನ ಗುರೂಂಚ್ಯಾ ಲಕ್ಷಣಾ । ವಿಚಕ್ಷಣಾ ಪರಿಯೇಸೀ ।೩೫೬॥ ಜ್ಯಾ ಗುರೂಚೇ ಜೇ ಶಿಕ್ಷಿತ । ಮೀ ಶಿಕಲೋ ಸುನಿಶ್ಚಿತ । ತೇ ತೇ ಸಾಂಗೇನ ಸಮಸ್ತ । ಸಾವಧ ಚಿತ್ತ ಕರೀ ರಾಯಾ ।೩೫೭॥ ಐಕಾವಯಾ ಗುರುಲಕ್ಷಣ । ಯದೂನೇ ಸರ್ವಾಂಗ ಕೇಲೇ ಶ್ರವಣ । ಅರ್ಥೀ ಬುಡವೂನಿಯಾ ಮನ । ಸಾವಧಾನ ಪರಿಸತು ।೩೫೮॥ ಶಬ್ದ ಸಾಂಡೋನಿಯಾ ಮಾಗೇ । ಶಬ್ದಾರ್ಥಾಮಾಜೀ ರಿಗೇ । ಜೇ ಜೇ ಪರಿಸತು ತೇತೇ ಹೋಯ ಅಂಗೇ । ವಿಕಲ್ಪ ತ್ಯಾಗೇ ವಿನೀತು ।೩೫೯॥

ಭೂತೈರಾಕ್ರಮ್ಯಮಾಣೋಽಪಿ ಧೀರೋ ದೈವವಶಾನುಗೈಃ ।
ತದ್ ವಿಧ್ವಾನ್ನ ಚಲೇನ್ಮಾರ್ಗಾದನ್ವಶಿಕ್ಷಂ ಕ್ಷಿತೇರ್ವ್ರತಮ್ ।೩೭॥

ಅರ್ಥ:- ದೈವಾಧೀನರಾಗಿರುವ ಪ್ರಾಣಿಗಳಿಂದ ತನಗೆ ಪೀಡೆ ಒದಗಿದಾಗ, ಸರ್ವಭೂತಗಳು ದೈವಾಧೀನವಾಗಿವೆ ಎಂದು ಅರಿತು ತನ್ನ ಸನ್ಮಾರ್ಗದಿಂದ ಎಂದೂ ಚಲಿತನಾಗಬಾರದು. ಈ ವ್ರತವನ್ನು ನಾನು ಪೃಥ್ವಿಯಿಂದ ಕಲಿತುಕೊಂಡೆನು.

ಇಪ್ಪತ್ತೈದನೆಯ ತತ್ವವಾಗಿರುವ ಯಾವ ಪರಬ್ರಹ್ಮದ ಪ್ರಾಪ್ತಿಗಾಗಿ ಈ ಯಾವ ಇಪ್ಪತ್ನಾಲ್ಕು ಗುರುಗಳ ಉಪಾಸನೆಯನ್ನು ಮಾಡಬೇಕು. ವಿವೇಕದಿಂದ ಹಾಗೂ ಆತ್ಮಬುದ್ಧಿಯಿಂದ ಈ ಗುರುಗಳ ಭಜನೆಯನ್ನು ಮಾಡಬೇಕು ।೩೫೦॥ ಆತ್ಮಜ್ಞಾನವು ಹೃದಯದಲ್ಲಿ ಅಂಕಿತವಾಗಬೇಕೆಂದು ಆತ್ಮಾನಾತ್ಮ ವಿಚಾರದಿಂದ ಅನೇಕರಿಗೆ ಗುರುತ್ವವನ್ನು ಕೊಟ್ಟು ಆತ್ಮಹಿತಕ್ಕಾಗಿ ಅವರನ್ನು ನಾನು ಗುರುಗಳನ್ನಾಗಿ ಮಾಡಿಕೊಂಡೆನು ।೩೫೧॥ ಯಾವ ಯುಕ್ತಿಯಿಂದ, ಯಾವ ವಿಚಾರದಿಂದ, ಯಾವ ಲಕ್ಷಣಗಳಿಂದ ನಾನು ಯಾರಿಗೆ ಗುರುವನ್ನಾಗಿ ಮಾಡಿಕೊಂಡಿರುವ ನನ್ನ ನಿಶ್ಚಯವನ್ನು ನೀನು ಸವಿಸ್ತಾರವಾಗಿ ಕೇಳು ।೩೫೨॥ ಹೇ ನಿರ್ಮಲ ವಿವೇಕ ಚಕ್ರವರ್ತಿ, ರಾಜರಾಜೇಶ್ವರನೇ, ಕೇಳು. ನಾನು ಮಾಡಿಕೊಂಡಿರುವ ಗುರುಗಳ ಸಂಖ್ಯೆಗಳನ್ನು ಇರುವುದೆಲ್ಲವನ್ನು ಹೇಳಿದೆನು ।೩೫೩॥ ಅವರಿಂದ ಸ್ವೀಕರಿಸುವಂತಹ ಯಾವ ಯಾವ ಗುಣಗಳಿದ್ದವೋ ಅವುಗಳೆಲ್ಲವನ್ನು ನನ್ನ ಯುಕ್ತಿಯಿಂದ ಕಲಿತುಕೊಂಡೆನು. ತದನಂತರ ವಿಕಲ್ಪದ ಭ್ರಾಂತಿಯನ್ನು ಬಿಟ್ಟು ಆತ್ಮಸ್ಥಿತಿಗೆ ಮುಟ್ಟಿಕೊಂಡೆನು ।೩೫೪॥

ನಹುಷ ರಾಜನ ಮಗನು ಯಯಾತಿ, ಯಯಾತಿಯ ಪುತ್ರನು ಯದುರಾಜನು. ಈ ವಂಶಪರಂಪರೆಯಿಂದ ಯದುವಿಗೆ "ನಾಹುಷನಂದನ" ಎಂದು ಹೇಳುವರು ।೩೫೫॥ ಆದ್ದರಿಂದ ಅವಧೂತನು ಹೇಳಿದನು, ಹೇ ನಹುಷನಂದನನೇ, ಪುರುಷಸಿಂಹನೇ, ಈಗ ಗುರುಗಳ ಲಕ್ಷಣಗಳನ್ನು ಹೇಳುತ್ತೇನೆ, ಚತುರನಾದ ನೀನು ಅದನ್ನು ಶ್ರವಣ ಮಾಡು ।೩೫೬॥ ಯಾವ ಗುರುಗಳಿಂದ ಸ್ವೀಕರಿಸುವಂತಹ ಗುಣಗಳನ್ನು ನಾನು ನಿಶ್ಚಯವಾಗಿ ಕಲಿತುಕೊಂಡೆನು. ಆ ಗುಣಗಳು ಯಾವುವು ಎಂಬುದನ್ನು ಸವಿಸ್ತಾರವಾಗಿ ಹೇಳುವೆನು. ಅವುಗಳನ್ನು ಲಕ್ಷಪೂರ್ವಕವಾಗಿ ಕೇಳು ।೩೫೭॥ ಈ ಯಾವ ಗುರುಗಳ ಲಕ್ಷಣಗಳನ್ನು ಕೇಳುವುದಕ್ಕಾಗಿ ಯದುರಾಜನು ತನ್ನ ಸರ್ವಾಂಗವನ್ನು ಕಿವಿಗಳನ್ನಾಗಿ ಮಾಡಿದನು. ಮತ್ತು ಅರ್ಥದತ್ತ ಚಿತ್ತಕೊಟ್ಟು ಲಕ್ಷಪೂರ್ವಕವಾಗಿ ಕೇಳಲಾರಂಭಿಸಿದನು ।೩೫೮॥ ಶಬ್ದಗಳನ್ನು ಹಿಂದಕ್ಕೆ ತಳ್ಳಿ ಈತನು ಶಬ್ದಗಳ ಅರ್ಥದಲ್ಲಿ ಪ್ರವೇಶಿಸುತ್ತಿದ್ದನು. ಎಲ್ಲ ವಿಕಲ್ಪಗಳನ್ನು ದೂರೀಕರಿಸಿ ನಮ್ರನಾಗಿದ್ದ ರಾಜನು ಯಾವ ಯಾವ ವಿಷಯಗಳನ್ನು ಕೇಳುತ್ತಿದ್ದನೋ ಅವುಗಳೆಲ್ಲವನ್ನೂ ಸ್ವತಃ ತಾನೇ ಆದನು ।೩೫೯॥

ಪರಮಾರ್ಥೀ ಮುಖ್ಯ ಶಾಂತೀ । ಸಾಧಕಾಂಸೀ ಪಾಹಿಜೇ ನಿಶ್ಚಿತೀ । ಯಾಲಾಗೀ ಪ್ರಥಮ ಗುರು ಕ್ಷಿತೀ। ನಿಜಶಾಂತೀಲಾಗೂನೀ ॥೩೬೦॥ ''ಪೃಥ್ವಿ'' ಗುರು ತ್ರಿವಿಧ ಪಾಹೀ । ಪರ್ವತ ವೃಕ್ಷ ಆಣಿ ಮಹೀ । ಯಾಂಚಿ ಲಕ್ಷಣೇ ಧರಿತಾ ದೇಹೀ । ಗುರುತ್ವ ಪಾಹೀ ಪೃಥ್ವೀಸೀ ॥೩೬೧॥ ಅಂತರನಿಗ್ರಹೋ ತೇ ''ಶಾಂತಿ'' । ಬಾಹ್ಯೇಂದ್ರಿಯನಿಗ್ರಹೋ ತೇ ದಾಂತೀ । ಉಭಯಸಹಿಷ್ಣುತಾ ತೇ ''ಕ್ಷಾಂತೀ'' । ಕ್ಷಾಂತೀಸೀ ಕ್ಷಿತೀ ಗುರು ಕೇಲೀ ॥೩೬೨॥ ಪೃಥ್ವೀ ತೇ ನಾನಾಭೂತೀ । ಮಾಝೀ ಮಾಝೀ ಮ್ಹಣೌನಿ ಝೋಂಬತೀ । ನಾನಾ ಭೇದೀ ಭಿನ್ನ ಕರಿತೀ । ನಿಜವೃತ್ತಿವ್ಯವಹಾರೇ ॥೩೬೩॥ ತ್ಯಾ ಭೂತಾಂಚೇ ಭಿನ್ನ ವರ್ತನ । ಪೃಥ್ವೀ ಸಂಪಾದೀ ಆಪಣ । ಮೋಡೋ ನೇದೀ ಅಭಿನ್ನಪಣ । ಅಖಂಡ ಜಾಣ ಸರ್ವದಾ ॥೩೬೪॥ ತೈಸೇ ಯೋಗಿಯಾಂಚೇ ಲಕ್ಷಣ । ಕರಿತಾ ಕರ್ಮ ಭಿನ್ನಭಿನ್ನ । ವೃತ್ತಿ ಅಖಂಡದಂಡಾಯಮಾನ । ಸರ್ವದಾ ಜಾಣ ಅಸಾವೀ ॥೩೬೫॥ ಭೂತೇ ಅದೃಷ್ಟಯೋಗೇ ಆಕ್ರಮಿತೀ । ದೇಹಾಸೀ ಅದೃಷ್ಟಯೋಗೇ ಆಕ್ರಮಿತೀ । ಭೂತೀ ನಿಜಾತ್ಮತಾ ಭಾವಿತೀ । ದ್ವಂದ್ವೇ ನ ಬಾಧಿತೀ ಸಾಧಕಾ ॥೩೬೬॥ ಯೇಥ ಭೂತೀ ಪೃಥ್ವೀ ಪೂಜಿಲೀ । ನಾತರೀ ವಿಷ್ಠಾಮೂತ್ರೀ ಗಾಂಜಿಲೀ । ಹರ್ಷವಿಷಾದಾ ನಾಹೀ ಆಲೀ । ನಿಶ್ಚಳ ಠೇಲೀ ನಿಜಕ್ಷಾಂತೀ ॥೩೬೭॥ ಭೂತೇ ಪಾರ್ಥಿವೇಚಿ ತಂವ ಝಾಲೀ । ತಿಹೀ ಪೃಥ್ವೀ ಪೂಜಿಲೀ ನಾ ಗಾಂಜಿಲೀ । ಐಕ್ಯೇ ದ್ವಂದ್ವಭಾವಾ ಮುಕಲೀ । ನಿಶ್ಚಳ ಝಾಲೀ ನಿಜರೂಪೇ ॥೩೬೮॥ ತೈಸಾಚಿ ಯೋಗಿಯಾಹೀ ಜಾಣಾ । ಭೂತವೈಷಮ್ಯೇ ಡಂಡಳೇನಾ । ಸರ್ವಭೂತೀ ನಿಜಾತ್ಮ ಭಾವನಾ । ವಿಷಮೀ ಸಮಾನಾ ಭಾವಿತಾ ॥೩೬೯॥ ಆತಾ ಪೃಥ್ವೀಚೀ ಅಭಿನವ ಶಾಂತೀ । ತೇ ಸಾಂಗೇನ ರಾಯಾ ತುಜಪ್ರತೀ । ಜೇ ಶಾಂತೀ ಧರೋನಿ ಸಂತೀ । ಭಗವದ್ಭಕ್ತೀ ಪಾವಲೇ ॥೩೭೦॥ ಪೃಥ್ವೀ ದಾಹೇಕರೂನಿ ಜಾಳಿಲೀ । ನಾಂಗರ ಫಾಲೂನಿ ಫಾಳಿಲೀ । ಲಾತವರೀ ತುಡವಿಲೀ । ತೋಡಿಲೀ ಝಾಡಿಲೀ ಪೈ ಭೂತೀ ॥೩೭೧॥ ತೋ ಅಪರಾಧು ನ ಮಾನೂನಿ ಕ್ಷಿತೀ । ಸವೇಂಚಿ ಭೂತಾಂತೇ ಪ್ರಸನ್ನ ಹೋತೀ । ತೇಥೇಂಚಿ ಪಿಕವೂನಿ ನಾನಾ ಸಂಪತ್ತೀ । ತೃಪ್ತಿ ದೇತೀ ಭೂತಾಂತೇ ॥೩೭೨॥

ಪರಮಾರ್ಥದಲ್ಲಿ ಶಾಂತಿ ಎಂಬುದು ಬಹು ಮುಖ್ಯವಾಗಿರುವುದು. ಸಾಧಕರ ಅಂಗದಲ್ಲಿ ಅದು ಅವಶ್ಯವಾಗಿ ಇರಬೇಕಾಗುವುದು. ಆದ್ದರಿಂದಲೇ ನಾನು ಪ್ರಥಮತಃ ಆ ಶಾಂತಿಗಾಗಿ ಪೃಥ್ವಿಯನ್ನು ಗುರುವನ್ನಾಗಿ ಮಾಡಿಕೊಂಡೆನು ॥೩೬೦॥ ಪೃಥ್ವಿಯು ಮೂರು ಪ್ರಕಾರಗಳಿಂದ ಗುರುವಾಗಿರುವುದು. ಪರ್ವತ, ವೃಕ್ಷ ಮತ್ತು ಭೂಮಿ. ಈ ಮೂರರ ಗುಣಗಳನ್ನು ನನ್ನಲ್ಲಿ ಧರಿಸಿದೆನು. ಆದ್ದರಿಂದ ಪೃಥ್ವಿಗೆ ಗುರುತ್ವವು ಪ್ರಾಪ್ತವಾಗಿರುವುದು ॥೩೬೧॥ ಅಂತರನಿಗ್ರಹ ಮಾಡುವುದು ಶಾಂತಿಯಾಗಿದೆ. ಬಾಹೇಂದ್ರಿಯ ನಿಗ್ರಹ ಮಾಡುವುದು ದಾಂತಿಯಾಗಿದೆ ಮತ್ತು ದ್ವಂದ್ವ ಸಹಿಷ್ಣುತೆ ಎಂದರೆ ಈ ಎರಡನ್ನೂ ಸಹಿಸುವಿಕೆಯು ಕ್ಷಾಂತಿಯಾಗಿದೆ. ಶಾಂತಿಯನ್ನು ಸಂಪಾದಿಸುವುದಕ್ಕಾಗಿ ನಾನು ಪೃಥ್ವಿಯನ್ನು ಗುರುವನ್ನಾಗಿ ಮಾಡಿಕೊಂಡೆನು ॥೩೬೨॥ ಅನೇಕ ಪ್ರಾಣಿಗಳು ಪೃಥ್ವಿಯನ್ನು ನನ್ನದು, ನನ್ನದು ಎಂದು ತೆಕ್ಕೆ ಬಿದ್ದಿರುವುವು. ಮತ್ತು ತಮ್ಮ ತಮ್ಮ ವೃತ್ತಿಗಳಂತೆ, ವ್ಯವಹಾರದಂತೆ ಪೃಥ್ವಿಯನ್ನು ತುಂಡು ತುಂಡಾಗಿ ಮಾಡುತ್ತಿರುವುವು ॥೩೬೩॥ ಆದರೆ ಆ ಜೀವಿಗಳ ಭಿನ್ನ ಭಿನ್ನ ವ್ಯಾಪಾರಗಳನ್ನು ಈ ಪೃಥ್ವಿಯು ನಡೆಸಿಕೊಡುವುದು. ಹಾಗೂ ತನ್ನ ಏಕಾತ್ಮ ತತ್ವವನ್ನು ಬಿಡದೇ ಅದು ಯಾವಾಗಲೂ ಅಖಂಡವಾಗಿಯೇ ಇರುವುದು ॥೩೬೪॥ ಅದರಂತೆಯೇ ಯೋಗಿಗಳ ಲಕ್ಷಣಗಳು ಇರುವುವು. ಇವರು ಕರ್ಮಗಳನ್ನು ಭಿನ್ನ ಭಿನ್ನವಾಗಿ ಮಾಡಿದರೂ ಅವರ ವೃತ್ತಿಯು ಯಾವಾಗಲೂ ಒಂದೇ ಸ್ವರೂಪವಾಗಿರುವುದು ॥೩೬೫॥ ದೇಹದ ಗತಿಯು ಪ್ರಾರಬ್ಧದ ಅನುಸಾರವಾಗಿರುವುದು ಮತ್ತು ಪ್ರಾಣಿಗಳೂ ಸಹ ಪ್ರಾರಬ್ಧ ಪ್ರಮಾಣವಾಗಿ ವರ್ತಿಸುವುವು. ಇದನ್ನು ಲಕ್ಷಕ್ಕೆ ತಂದು ಪ್ರತಿಯೊಂದು ಪ್ರಾಣಿಗಳಲ್ಲಿಯೂ ಆತ್ಮವು ತುಂಬಿರುವುದೆಂದು ಆ ಸಾಧಕನು ಹೇಳುವನು. ಈತನಿಗೆ ದ್ವಂದ್ವದ ಬಾಧೆಯಾಗುವುದಿಲ್ಲ ॥೩೬೬॥ ಪ್ರಾಣಿಗಳು ಪೃಥ್ವಿಯನ್ನು ಪೂಜಿಸಲಿ ಅಥವಾ ಪೃಥ್ವಿಯ ಮೇಲೆ ಮಲಮೂತ್ರಗಳಿಂದ ಹೊಲಸು ಮಾಡಿ ಅದಕ್ಕೆ ತೊಂದರೆ ಕೊಟ್ಟರೂ ಇದರಿಂದ ಹರ್ಷ, ವಿಷಾದಗಳನ್ನು ಮಾಡಿಕೊಳ್ಳದೇ ಅದು ತನ್ನ ಕ್ಷಮೆಯನ್ನು ಬಿಟ್ಟುಕೊಡುವುದಿಲ್ಲ ॥೩೬೭॥ ಎಲ್ಲ ಪ್ರಾಣಿಗಳು ಪೃಥ್ವಿಯಿಂದಲೇ ಉತ್ಪನ್ನವಾಗಿರುವುವು. ಅವರು ಈಕೆಯನ್ನು ಪೂಜಿಸಲೀ ಅಥವಾ ಪೀಡಿಸಲಿ, ಐಕ್ಯಭಾವದಿಂದ ದ್ವಂದ್ವದಿಂದ ದೂರಾಗಿ ಆಕೆಯು ಆತ್ಮರೂಪದಿಂದ ನಿಶ್ಚಲಳಾಗಿರುವಳು ॥೩೬೮॥ ಇದೇ ಪ್ರಕಾರವಾಗಿ ಯೋಗಿಗಳು ಸಹ ಭಿನ್ನ ಭಿನ್ನ ಪ್ರಕಾರಗಳ ಸ್ವಭಾವಗಳಿಗೆ ಭಯಪಡಲಾರರು. ಸರ್ವಭೂತಗಳಲ್ಲಿಯೂ ಇವರ ಆತ್ಮಭಾವವು ಇರುವುದರಿಂದ ವಿಷಮ ಪ್ರಸಂಗದಲ್ಲಿಯೂ ಇವರಲ್ಲಿ ಸಮಭಾವವೇ ಇರುವುದು ॥೩೬೯॥ ಹೇ ರಾಜನೇ, ಈಗ ನಿನಗೆ ಪೃಥ್ವಿಯ ಇನ್ನೊಂದು ಅಭಿನವ ಶಾಂತಿಯನ್ನು ಹೇಳುವೆನು, ಅದನ್ನು ಕೇಳು. ಈ ಶಾಂತಿಯನ್ನು ಸಾಧು ಸಂತರು ಸಾಧಿಸುವುದರಿಂದ ಅವರು ಭಗವದ್ಭಕ್ತಿಗೆ ಪ್ರಾಪ್ತರಾದರು ॥೩೭೦॥ ಪೃಥ್ವಿಯ ಮೇಲೆ ಅಗ್ನಿಯನ್ನು ಹೊತ್ತಿಸಿ ಆಕೆಯನ್ನು ಸುಡಲಿ, ನೇಗಿಲನ್ನು ಹೊಡೆದು ಭಾಗಗೊಳಿಸಲಿ, ಆಕೆಯನ್ನು ಕಾಲಿನಿಂದ ತುಳಿಯಲಿ, ಅಥವಾ ಪ್ರಾಣಿಗಳು ಆಕೆಯನ್ನು ಅಗೆಯಲಿ, ಝಾಡಿಸಲಿ ॥೩೭೧॥ ಆದಾಗ್ಯೂ ಪೃಥ್ವಿಯು ಇವರ ಎಲ್ಲ ಅಪರಾಧಗಳನ್ನು ಮನದಲ್ಲಿ ಗಣನೆ ತಾರದೇ, ಪ್ರತಿಯಾಗಿ ಪ್ರಾಣಿಮಾತ್ರರಲ್ಲಿ ಪ್ರಸನ್ನಳಾಗುವಳು ಮತ್ತು ನಾನಾ ಪ್ರಕಾರದ ಧಾನ್ಯಗಳನ್ನು ಬೆಳೆಸಿಕೊಟ್ಟು ಎಲ್ಲ ಪ್ರಾಣಿಗಳಿಗೆ ತೃಪ್ತಿಗೊಳಿಸುವಳು ॥೩೭೨॥

ಐಶಐಶಿಯಾ ನಿಜಶಾಂತೀ । ಲಾಗೀ ಗುರು ಮ್ಯಾ ಕೇಲೀ ಕ್ಷಿತೀ । ಐಕ ಸಭಾಗ್ಯಾ ಭೂಪತೀ । ಶಾಂತೀಚೀ ಸ್ಥಿತಿ ಅಭಿನವ ।।೩೭೩।। ಏಕೇ ಅಪರಾಧು ಕೇಲಾ । ದುಜೇನಿ ಉಗಾಚಿ ಸಾಹಿಲಾ । ಇತುಕೇನಿ ಶಾಂತು ಕೇವೀ ಝಾಲಾ । ಉಪೇಕ್ಷಿಲಾ ಅಪರಾಧೀ ।।೩೭೪।। ಊಂಸು ಮೋಡೀ ತ್ಯಾ ಗೋಡ ಭಾರೀ । ಭೇದಿತೇ ಶಸ್ತ್ರ ಗೋಡ ಕರೀ । ಪಿಳಿಲಿಯಾಆಳಿಲಿಯಾವರೀ । ಸ್ವಾದಾಚಿಯಾ ಥೋರೀ ಅಪಕಾರ್ಯಾ ದೇತು ।।೩೭೫।। ಅಪರಾಧ ಸಾಹೋನು ಅಂಗೀ । ತ್ಯಾಚ್ಯಾ ಪ್ರವರ್ತೇ ಹಿತಾಲಾಗೀ । ತೇಚಿ "ಶಾಂತೀ" ಪೈ ಜಗೀ । ಹೋಯ ದಾಟುಗೀ ನಿರ್ದ್ವಂದ್ವ ।।೩೭೬।। ಅಪರಾಧ ಸಾಹೋನಿ ಅಂಗಾವರೀ । ಅಪರಾಧ್ಯಾ ಹೋಈಜೇ ಉಪಕಾರೀ । ಹೇ ಶಿಕಲೋ ಪೃಥ್ವಿಯೇವರೀ । ಪರೋಪಕಾರೀ ಪರ್ವತ ।।೩೭೭।।

ಶಶ್ವತ್ಪರಾರ್ಥಸರ್ವೇಹಃ ಪರಾರ್ಥೈಕಾಂತಸಂಭವಃ । ಸಾಧುಃ ಶಿಕ್ಷೇತ ಭೂಭೃತ್ತೋ ನಗಶಿಷ್ಯಃ ಪರಾತ್ಮತಾಮ್ ।।೩೮।।

ಅರ್ಥ:- ಯಾರ ಸರ್ವ ಪ್ರಯತ್ನವು ಸರ್ವದಾ ಪರೋಪಕಾರಾರ್ಥಕವಾಗಿದೆಯೋ, ಯಾರ ಉತ್ಪತ್ತಿಯು ಕೇವಲ ಪರಾರ್ಥಕ್ಕಾಗಿದೆಯೋ, ಅಂತಹ ಸಾಧು ಪರ್ವತದಿಂದ ಈ ಗುಣಗಳನ್ನು ಕಲಿಯಬೇಕು. ಆತನು ವೃಕ್ಷದ ಶಿಷ್ಯನಾಗಿ ತನ್ನ ಜೀವನವನ್ನು ಇತರರಿಗಾಗಿ ಇದೆ ಎಂಬುದು ಕಲಿಯಬೇಕು.

ಪೃಥ್ವೀ ಪಾಸೋನಿ ಝಾಲೇ । ತೇ ಪರ್ವತಹೀ ಮ್ಯಾ ಗುರು ಕೇಲೇ । ತ್ಯಾಂಪಾಸೋನಿ ಜೇ ಜೇ ಶಿಕಲೇ । ತೇಹೀ ವಹಿಲೇ ಪರಿಯೇಸೀ ।।೩೭೮।। ರತ್ನ – ನಿಕರ ಸಮಸ್ತ । ಪರ್ವತ ಪರಾರ್ಥಚ ವಾಹತ । ತೃಣ ಜಲ ನಾನಾ ಅರ್ಥ । ತೇಹೀ ಪರಾರ್ಥ ಧರಿತಸೇ ।।೩೭೯।। ಕೋಣಾಸೀ ನೇಮೀ ನಾ ನಿವಾರೀ । ಉಬಗೋನಿ ನ ಘಾಲೀ ಬಾಹೇರೀ । ಯಾಚಕಾಚೇ ಇಚ್ಛೇವರೀ । ಪರೋಪಕಾರೀ ದೇತಸೇ ।।೩೮೦।। ಗ್ರೀಷ್ಮಾ ಅಂತೀ ಸರ್ವ ಸರೇ । ಪರೀ ತೋ ದೇತಾ ಮಾಗೇ ನ ಸರೇ । ಸವೇಂಚಿ ಭಗವಂತೇ ಕೀಜೇ ಪುರೇ । ವರ್ಷೋನಿ ಜಳಧರೇ ಸಮೃದ್ಧೀ ।।೩೮೧।। ಜಂವ ಜಂವ ಉಲ್ಹಾಸೇ ದಾತಾ ದೇತು । ತಂವ ತಂವ ಪುರವೀ ಜಗನ್ನಾಥು । ವಿಕಲ್ಪ ನ ಧರಿತಾ ಮನಾಆಂತು । ದೇತಾ ಅಚ್ಯುತು ಅನಿವಾರ ।।೩೮೨।। ಸತ್ಯ ಅಚ್ಯುತ ದಾತಾ । ಹೇ ನ ಮನೇಚಿ ತತ್ತ್ವತಾ । ಯಾಲಾಗೀ ದರಿದ್ರತಾ । ವಿಕಲ್ಪವಂತಾ ಲಾಗಲೀ ।।೩೮೩।। ಏವಂ ಪರ್ವತಾಚೀ ಜೇ ಉತ್ಪತ್ತೀ । ತೇ ಪರೋಪಕಾರಾರ್ಥ ಏಕಾಂತೀ । ಉಪಕಾರಾವಾಂಚೂನಿ ಚಿತ್ತೀ । ದುಜೀ ವೃತ್ತೀ ಜಾಣೇನಾ ।।೩೮೪।। ತ್ಯಾ ಪರ್ವತಾ ಐಶೀ ತತ್ತ್ವತಾ । ಅಸಾವೀ ಸಾಧಕಾಸೀ ಉದಾರತಾ । ಕಾಯಾ ವಾಚಾ ಆಣಿ ಚಿತ್ತಾ । ಸರ್ವಸ್ವ ದೇತಾ ಉಲ್ಹಾಸು ।।೩೮೫।।

ಈ ಪ್ರಕಾರದ ಆತ್ಮ ಶಾಂತಿಗಾಗಿಯೇ ನಾನು ಪೃಥ್ವಿಯನ್ನು ಗುರುವನ್ನಾಗಿ ಮಾಡಿಕೊಂಡೆನು. ಹೇ ಭಾಗ್ಯವಂತನಾದ ರಾಜನೇ, ಹೀಗೆ ಶಾಂತಿಯು ಅಪೂರ್ವವಾದ ಮಹತ್ತರವಾಗಿದೆ ।।೩೭೩।। ಒಬ್ಬಾತನು ಇನ್ನೊಬ್ಬನಿಗೆ ಅಪರಾಧವನ್ನು ಮಾಡಲು ಆಗ ಆತನು ಸುಮ್ಮನೇ ಸಹಿಸಿಕೊಂಡನೆಂದರೆ ಇಷ್ಟರಿಂದಲೇ ಆತನಿಗೆ ಶಾಂತನು ಎಂದು ಹೇಳಲು ಬರುವುದಿಲ್ಲ. ಆತನು ಕೇವಲ ಅಪರಾಧದ ಉಪೇಕ್ಷೆ ಮಾಡಿರುವನು ಅಷ್ಟೇ ।।೩೭೪।। ಕಬ್ಬನ್ನು ಮುರಿದವನಿಗೆ ಸಿಹಿಯೇ ಹತ್ತುವುದು. ಅದನ್ನು ಭೇದಿಸುವ ಶಸ್ತ್ರವೂ ಸಿಹಿಯಾಗುವುದು ಮತ್ತು ಕಬ್ಬನ್ನು ಹಿಂಡುವುದು, ಕುದಿಸುವುದು ಹೀಗೆ ಅಪಕಾರವನ್ನು ಮಾಡುವವರಿಗೂ ಇನ್ನೂ ಹೆಚ್ಚಾಗಿಯೇ ಸಿಹಿರುಚಿಯನ್ನು ಕೊಡುವುದು ।।೩೭೫।। ಬೇರೆಯವರು ಮಾಡಿದ ಅಪರಾಧಗಳನ್ನು ಸಹಿಸಿ, ಅವರ ಹಿತವನ್ನು ಮಾಡುವುದಕ್ಕೇನೇ ಜಗತ್ತಿನಲ್ಲಿ ನಿಜವಾದ ನಿರ್ದ್ವಂದ್ವ ಶಾಂತಿಯಾಗಿರುವುದು ।।೩೭೬।। ತಾನು ಅಪರಾಧಗಳನ್ನು ಸಹಿಸಿ ಪ್ರತಿಯಾಗಿ ಆ ಅಪಕಾರ ಮಾಡುವವರಿಗೆ ಉಪಕಾರವನ್ನು ಮಾಡುವುದು ನಾನು ಈ ಪೃಥ್ವಿಯಿಂದ ಕಲಿತುಕೊಂಡೆನು. ಹಾಗೂ ಪರೋಪಕಾರಕ್ಕೆ ಪ್ರವೃತ್ತನಾದೆನು ।।೩೭೭।।

ಪೃಥ್ವಿಯಲ್ಲಿಯೇ ನಿರ್ಮಾಣಗೊಂಡಿರುವ ಪರ್ವತಗಳನ್ನೂ ನಾನು ಗುರುವನ್ನಾಗಿ ಮಾಡಿಕೊಂಡಿರುವೆನು ಮತ್ತು ಅವುಗಳಿಂದ ಏನೇನು ಕಲಿತುಕೊಂಡೆನೆಂಬುದು ಅದನ್ನು ಸಹ ಈಗ ಕೇಳು ।।೩೭೮।। ಪರ್ವತವು ರತ್ನಾದಿ ಪದಾರ್ಥಗಳನ್ನು ಸಂಗ್ರಹ ಮಾಡಿಕೊಂಡು ತನ್ನಲ್ಲಿ ಇಟ್ಟುಕೊಂಡಿದ್ದು ಕೇವಲ ಪರೋಪಕಾರಕ್ಕಾಗಿಯೇ ಇರುವುದು. ನೀರು, ಹುಲ್ಲು, ಮೇವು ಇತ್ಯಾದಿ ಎಲ್ಲವನ್ನೂ ಕೇವಲ ಪರೋಪಕಾರಕ್ಕಾಗಿಯೇ ಪಾಲನೆ ಮಾಡಿರುವುದು ।।೩೭೯।। ಅದು ಯಾರಿಗೂ ಬಾ ಎಂದು ಕರೆಯುವುದಿಲ್ಲ, ಬರಬೇಡ ಎನ್ನುವುದಿಲ್ಲ. ಬಂದವರಿಗೆ ಹೋಗು ಸಹ ಎನ್ನುವುದಿಲ್ಲ. ಯಾಚಕರ ಇಚ್ಛೆಯಂತೆ ಅವರ ಮೇಲೆ ಉಪಕಾರ ಮಾಡುತ್ತಿರುವುದು ।।೩೮೦।। ಗ್ರೀಷ್ಮ ಋತುವಿನ ಕೊನೆಯಲ್ಲಿ ತೃಣ, ಧಾನ್ಯ ಇತ್ಯಾದಿ ಎಲ್ಲವೂ ಮುಗಿಯುವುವು. ಆದರೂ ಪರ್ವತವು ಕೊಡುವುದಕ್ಕೆ ಎಂದೂ ಹಿಂದೆ ಸರಿಯುವುದಿಲ್ಲ. ಆದ್ದರಿಂದ ಪರಮೇಶ್ವರನು ಮಳೆಗರೆದು ಅದಕ್ಕೆ ಸಮೃದ್ಧಗೊಳಿಸುವನು ।।೩೮೧।। ದಾತಾ ಯಾವ ಯಾವುದನ್ನು ಸಂತೋಷವಾಗಿ ಕೊಡಲಾರಂಭಿಸುವನೋ, ಅವುಗಳನ್ನೆಲ್ಲ ಜಗನ್ನಾಥನು ಪೂರೈಸುತ್ತಿರುವನು. ಮನದಲ್ಲಿ ವಿಕಲ್ಪ ಮಾತ್ರ ಇರದಿರಲು ಭಗವಂತ ಅಚ್ಯುತನು ಅನಿವಾರ್ಯವಾಗಿ ಕೊಡುತ್ತಿರುವನು ।।೩೮೨।। ಸಂಶಯ ಜೀವಿಗಳಿಗೆ ಭಗವಂತನು ನಿಜವಾಗಿಯೂ ದಾತಾ ಎನ್ನುವ ಈ ಸತ್ಯವು ಒಪ್ಪಿಗೆಯಾಗುವುದಿಲ್ಲ. ಆದ್ದರಿಂದಲೇ ಅವರಿಗೆ ದರಿದ್ರತನವನ್ನು ಭೋಗಿಸಬೇಕಾಗುವುದು ।।೩೮೩।। ಈ ಪ್ರಕಾರವಾಗಿ ಪರ್ವತದ ಉತ್ಪತ್ತಿಯು ಕೇವಲ ಪರೋಪಕಾರಕ್ಕಾಗಿಯೇ ಇರುವುದು. ಪರೋಪಕಾರದ ಹೊರತಾಗಿ ಅದರ ಮನದಲ್ಲಿ ಬೇರೆ ಯಾವುದೂ ಇರುವುದಿಲ್ಲ ।।೩೮೪।। ಸಾಧಕರಲ್ಲಿ ಈ ಪರ್ವತದಂತೆ ಉದಾರತೆಯು ಇರಬೇಕು. ಕಾಯಾ ವಾಚಾ ಮನದಿಂದ ಯಾವಾಗಲೂ ಕೊಡುತ್ತಿರುವಾಗ್ಗೆ ಸರ್ವಕಾಲಕ್ಕೂ ಮನವು ಪ್ರಸನ್ನವಾಗಿರಬೇಕು ।।೩೮೫।।

ಚೇಷ್ಟಾಮಾತ್ರೇ ಪರೋಪಕಾರತಾ । ಸರ್ವದಾ ಕರಾವೀ ಸಮಸ್ತಾ । ಕೋಟಿಲಾಭಾ ಹಾಣೋನಿ ಲಾತಾ । ಉಪಕಾರೀ ತತ್ತ್ವತಾ ಉದ್ಯತು ।।೩೮೬।। ಪರಮಾರ್ಥಾಚಿಯಾ ಚಾಡಾ । ಸ್ವಾರ್ಥ ಸಾಂಡೋನಿ ರೋಕಡಾ । ಪರೋಪಕಾರಾರ್ಥ ಅವಘಡಾ । ರಿಘೇ ಸಾಂಕಡಾ ಪರಾರ್ಥೇ ।।೩೮೭।। ಉಪಕಾರುಚಿ ಸಾಕಾರಲಾ । ಕೀ ಪರೋಪಕಾರೂ ರೂಪಾ ಆಲಾ । ತೈಸಾ ಜನ್ಮೋನಿ ಉಪಕಾರೀ । ಝಾಲಾ ಉಪಕಾರೂ ಸರ್ವಾಸೀ ।।೩೮೮।। ಊಂಸ ಜೈಸಾ ಅವಧಾರೀ । ಸರ್ವಾಸೀ ಗೋಡಪಣೇ ಉಪಕಾರೀ । ತೈಸಾಚೀ ಯೋಗಿಯಾ ಸಂಸಾರೀ । ಪರೋಪಕಾರೀ ಮಧುರತ್ವೇ ।।೩೮೯।। ಜೈಸೇ ಪರ್ವತೀ ನಿರ್ಝರ । ತೈಸೇ ಉಪಕಾರಾಚೇ ಪಾಝರ । ಸುಕೋ ನೇಣತೀ ನಿರಂತರ । ಕೃತೋಪಕಾರ ಜಗ ಕೇಲೇ ।।೩೯೦।। ಸಾಂಡೋನಿ ಕೃಪಣವೃತ್ತೀಚೀ ಸಂಗತೀ । ಉಪಕಾರಲಾ ಪರ್ವತ ಏಕಾಂತೀ । ರಾಹಿಲಾಸೇ ಉಪಕಾರಮೂರ್ತೀ । ಧೈರ್ಯವೃತ್ತಿ ನಿರ್ಧಾರೇ ।।೩೯೧।। ಪರೋಪಕಾರಾಲಾಗೀ ನಿಶ್ಚಿತ । ಗುರು ಕೇಲಾ ಮ್ಯಾ ಪರ್ವತ । ಆತಾ ವೃಕ್ಷಾ ಪಾಸೋನಿ ಜೇ ಶಿಕ್ಷಿತ । ತೇಹೀ ಸಮಸ್ತ ಪರಿಯೇಸೀ ।।೩೯೨।। ಸರ್ವಾಂಗೇ ಸರ್ವಭಾವೇಸೀ । ಸರ್ವಕಾಳ ಸರ್ವದೇಶೀ । ಪರಾಧೀನ ಹೋಆವೇ ಸರ್ವಾಸೀ । ಹೇ ವೃಕ್ಷಾ ಪಾಶೀ ಶಿಕಲೋ ।।೩೯೩।। ವೃಕ್ಷ ಜೇಣೇ ಪ್ರತಿಪಾಳಿಲಾ । ತೋ ತ್ಯಾ ಆಧೀನ ಜಾಹಲಾ । ಕಾ ಜೋ ಛೇದಾವಯಾ ರಿಘಾಲಾ । ತ್ಯಾಹೀ ಝಾಲಾ ಸ್ವಾಧೀನು ।।೩೯೪।। ಯೋಗಿಯಾ ಪಾಲಖೀಸೀ ಘಾತಲಾ । ತೆವ್ಹಾ ತ್ಯಾಚಿಯಾ ಆಧೀನ ಝಾಲಾ । ಏಕೀ ಶೂಳೀ ದ್ಯಾವಯಾ ಚಾಲವಿಲಾ । ತೇವ್ಹಾ ತ್ಯಾಚ್ಯಾಹೀ ಬೋಲಾ ಆಧೀನು ।।೩೯೫।। ಸಾಂಡೂನಿ ದೇಹೀಂಚೀ ಅಹಂತಾ । ಯೋಗಿಯಾಸೀ ಝಾಲೀ ಪರಾಧೀನತಾ । ವಿಶ್ವ ಮಾಝಾ ಆತ್ಮಾ ಸರ್ವಥಾ । ಸರ್ವಾಂಚ್ಯಾ ವರ್ತತಾ ಬೋಲಾಆಂತು ।।೩೯೬।। ಸರ್ವ ತೇ ಮೀಚಿ ಆಹೇ । ಯಾಲಾಗೀ ಸಾಧಕ ಬಾಧಕ ನ ಪಾಹೇ । ತ್ಯಾಚ್ಯಾ ಬೋಲಾಮಾಜೀ ರಾಹೇ । ವರ್ತತಾ ಹೋಯೇ ಸಂತೋಷೇ ।।೩೯೭।। ಪ್ರಾಪ್ತ ಜೇ ಜೇ ಸುಖದುಃಖ । ತೇ ತೇ ಅದೃಷ್ಟಾ ಆಧೀನ ದೇಖ । ಆತ್ಮಾ ಮಾನುನೀ ಸಕಳ ಲೋಕ । ಪರಾಧೀನ ದೇಖ ವರ್ತತ ।।೩೯೮।। ಸಕಳ ಲೋಕೀ ನಿಜಾತ್ಮತಾ । ದೇಖತಾ ಜಾಹಲೀ ಪರಾಧೀನತಾ । ಹೇ ವೃಕ್ಷಾ ಪಾಸೋನಿ ತತ್ತ್ವತಾ । ''ಪರಾತ್ಮತಾ'' ಶಿಕಲೋ ।।೩೯೯।।

ಆಣೇಕ ಏಕ ಲಕ್ಷಣ ।

ಯಾವುದೇ ವ್ಯವಹಾರವನ್ನು ಮಾಡುತ್ತಿರಲಿ ಎಲ್ಲರಲ್ಲೂ ಸತತವಾಗಿ ಉಪಕಾರವನ್ನು ಮಾಡಬೇಕು. ಕೋಟಿಗಟ್ಟಲೇ ಲಾಭವಿದ್ದರೂ ಅದನ್ನು ಒದೆದು ಪರೋಪಕಾರ ಮಾಡುವುದಕ್ಕೆ ಸಿದ್ಧನಾಗಿರಬೇಕು ।।೩೮೬।। ಸಾಧಕನು ಪರಮಾರ್ಥದ ಅಪೇಕ್ಷೆ ಪಟ್ಟು ತನ್ನ ಸ್ವಾರ್ಥವನ್ನು ಪ್ರತ್ಯಕ್ಷವಾಗಿ ಬಿಟ್ಟು ಕಠಿಣವಾದ ಪರೋಪಕಾರವನ್ನು ಮಾಡಲು ಸಿದ್ಧನಾಗುವನು ಮತ್ತು ಅದಕ್ಕಾಗಿ ತನ್ನ ದೇಹವನ್ನು ಕಷ್ಟವಿಸುವನು ।।೩೮೭।। ಮೂರ್ತಿಮಂತನಾದ ಉಪಕಾರವೇ ಜನ್ಮಕ್ಕೆ ಬಂದಂತೆ ಅಥವಾ ಪರೋಪಕಾರವೇ ಅವತಾರವನ್ನು ಧರಿಸಿದಂತೆ ಆ ಯಾವ ಜನ್ಮವು ಉಪಕಾರಿಯಾಗಿ ಎಲ್ಲರಲ್ಲೂ ಯಾವಾಗಲೂ ಉಪಕಾರವನ್ನು ಮಾಡ ಹತ್ತಿತು ।।೩೮೮।। ಕಬ್ಬು ತನ್ನ ಅಂಗದ ಸಿಹಿ ಗುಣದಿಂದ ಎಲ್ಲರಲ್ಲೂ ಉಪಕಾರವನ್ನು ಮಾಡುವಂತೆ ಯೋಗಿಯು ಸಂಸಾರದಲ್ಲಿದ್ದು ತನ್ನ ಸಿಹಿಯಾದ ವರ್ತನೆಯಿಂದ ಯಾವಾಗಲೂ ಉಪಕಾರವನ್ನು ಮಾಡುತ್ತಿರುವನು ।।೩೮೯।। ಪರ್ವತದಿಂದ ಯಾವ ಪ್ರಕಾರವಾಗಿ ನೈಸರ್ಗಿಕದಿಂದ ಝರಿಗಳು ಪ್ರಕಟವಾಗುತ್ತಿರುವುವೋ ಅದರಂತೆ ಯೋಗಿಗಳಿಗೆ ಉಪಕಾರಗಳ ಸೆಲೆಗಳು ಹುಟ್ಟುವುವು. ಮತ್ತು ಅವು ಸತತವಾಗಿ ಹರಿಯುತ್ತಿರುವುವು. ಎಂದೆಂದಿಗೂ ಬತ್ತುವುದಿಲ್ಲ. ಆತನು ಸರ್ವ ಜಗತ್ತನ್ನು ಉಪಕಾರದಿಂದ ತುಂಬಿಬಿಡುವನು ।।೩೯೦।। ಕೃಪಣ ವೃತ್ತಿಯವರ ಸಂಗತಿಯನ್ನು ಬಿಟ್ಟು ಪರ್ವತವು ಏಕಾಂತದಲ್ಲಿ ಉಪಕಾರ ಮಾಡುವುದು. ಅಥವಾ ಧೈರ್ಯ ವೃತ್ತಿಯ ನಿರ್ಧಾರದಿಂದ ಉಪಕಾರದ ಸಾಕ್ಷಾತ್ ಮೂರ್ತಿಯಾಗಿ ಇರುವುದು ।।೩೯೧।। ನಿಜವಾಗಿಯೂ ಪರೋಪಕಾರಕ್ಕಾಗಿಯೇ ನಾನು ಪರ್ವತವನ್ನು ಗುರುವನ್ನಾಗಿ ಮಾಡಿಕೊಂಡೆನು. ಈಗ ವೃಕ್ಷದಿಂದ ಯಾವುದನ್ನು ಕಲಿಯಬೇಕಾಗಿದೆ ಎಂಬುದನ್ನು ಎಲ್ಲವನ್ನೂ ಹೇಳುವೆ, ಕೇಳು ।।೩೯೨।। ಸರ್ವಾಂಗದಿಂದ, ಸರ್ವತೋಪರಿಯಾಗಿ, ಸರ್ವಕಾಲದಲ್ಲಿ, ಸರ್ವತ್ರವೂ, ಸರ್ವರ ಪರಾಧೀನದಲ್ಲಿರಬೇಕೆಂಬುದವುದನ್ನೇ ನಾನು ವೃಕ್ಷದಿಂದ ಕಲಿತುಕೊಂಡೆನು ।।೩೯೩।। ವೃಕ್ಷವು ತನ್ನನ್ನು ಬೆಳೆಸಿದವನ ಆಧೀನವಾಗಿರುವುದು. ಅಲ್ಲದೇ ತನ್ನನ್ನು ಕಡಿಯಲು ಸಿದ್ಧನಾದವನಿಗೂ ಆತನ ಆಧೀನವಾಗುವುದು ।।೩೯೪।। ಅದರಂತೆ ಯೋಗಿಯನ್ನು ಪಾಲಖಿಯಲ್ಲಿ ಕುಳ್ಳಿರಿಸಿದರೂ ಆತನು ಈತನ ಆಧೀನನಾಗುವನು. ಅಥವಾ ಯಾವನಾದರೂ ಆತನಿಗೆ ಶೂಲಕ್ಕೆ ಏರಿಸಲು ಕರೆದುಕೊಂಡು ಹೋಗುತ್ತಿದ್ದರೂ ಆತನು ಈತನ ಆಜ್ಞೆಯಂತೆಯೇ ವರ್ತಿಸುವನು ।।೩೯೫।। ದೇಹದ ಅಹಂಕಾರವನ್ನು ಬಿಟ್ಟಿರುವುದರಿಂದ ಯೋಗಿಗೆ ಪರಾಧೀನತೆಯು ಒದಗಿರುವುದು. ಈ ಎಲ್ಲ ವಿಶ್ವವು ನನ್ನ ಆತ್ಮವೇ ಆಗಿರುವುದೆಂದು ತಿಳಿದು ಎಲ್ಲರ ಮಾತಿನಂತೆ ಆತನು ವರ್ತಿಸುವನು ।।೩೯೬।। ಇರುವುದೆಲ್ಲವೂ ನಾನೇ ಇರುವೆನೆಂದು ತಿಳಿದು ಆತನು ಯಾವ ಸಾಧಕ, ಬಾಧಕಗಳಿಗೆ ಲಕ್ಷವನ್ನು ಕೊಡುವುದಿಲ್ಲ. ಹಾಗೂ ಆತನ ಆಜ್ಞೆಯಲ್ಲಿ ಇದ್ದು ಸಂತೋಷದಿಂದ ವರ್ತಿಸುವನು ।।೩೯೭।। ಸುಖ ದುಃಖಗಳು ಪ್ರಾರಬ್ಧಾಧೀನವಾಗಿವೆ ಎಂದು ತಿಳಿದು ಹಾಗೂ ಸರ್ವ ಜನರು ನನ್ನ ಆತ್ಮವೇ ಆಗಿರುವರೆಂದು ತಿಳಿದು ಆತನು ಪರಾಧೀನನಾಗಿ ವರ್ತಿಸುತ್ತಿರುವನು ।।೩೯೮।। ಸರ್ವ ಜಗತ್ತಿನಲ್ಲಿ ಆತ್ಮವಿದೆ ಎಂದು ಕಾಣಲು ಆಗ ಪರಾಧೀನತೆಯು ಸಹಜವಾಗಿ ಪ್ರಾಪ್ತವಾಗುವುದು. ಈ ''ಪರಾತ್ಮತಾ'' ನಿಜವಾಗಿಯೂ ನಾನು ವೃಕ್ಷಗಳಿಂದ ಕಲಿತುಕೊಂಡೆನು ।।೩೯೯।।

ವೃಕ್ಷಾ ಪಾಸೋನಿ ಶಿಕಲೋ ಜಾಣ । ಅತಿಥೀಚೇ ಪೂಜಾವಿಧಾನ । ತೇ ಸಾವಧಾನ ಪರಿಯೇಸೀ ॥೪೦೦॥ ಅತಿಥೀ ಆಲ್ಯಾ ವೃಕ್ಷಾ ಪಾಸೀ । ವಂಚನಾರ್ಥು ನ ಕರೀ ತ್ಯಾಸೀ । ಪತ್ರಪುಷ್ಪಫಲಮೂಳಛ್ಯಾಯೇಸಿ । ತ್ವಚಾಕಾಷ್ಠಾಂಸೀ ದೇತಸೇ ॥೪೦೧॥ ಜೋ ವೃಕ್ಷಾಸೀ ಪ್ರತಿಪಾಳೀ । ಕಾ ಜೋ ಘಾವೋ ಘಾಲೂ ಯೇ ಮೂಳೀ । ದೋಹೀಂಸೀಹೀ ಸಮಮೇಳೀ । ಪುಷ್ಪೀ ಫಳೀ ಸಂತುಷ್ಟೀ ॥೪೦೨॥ ಜೈಸಾ ವೃಕ್ಷ ಸಮೂಳ ಸಗಳಾ । ಅರ್ಥಿಯಾಲಾಗೀ ಸಾರ್ಥಕ ಜಾಹಲಾ । ತೈಸಾ ಚಿತ್ತೇ ವಿತ್ತೇ ದೇಹೇ ಬೋಲಾ । ಸಾಧು ಸಂತುಷ್ಟಲಾ ಅರ್ಥ್ಯಾಸೀ ॥೪೦೩॥ ಅತಿಥೀಸೀ ನವ್ಹೇ ಪರಾಂಗ್‌ಮುಖ । ಹಾ ಸಾಧೂಸೀ ಗುಣ ಅಲೋಲಿಕ । ಅನ್ನ ಧನ ಉದಕ । ಯಥಾಸುಖೇ ದೇತುಸೇ ॥೪೦೪॥ ಅರ್ಥೀ ಆಲ್ಯಾ ಅರ್ಥಾವಯಾಸೀ । ವಿಮುಖ ನ ವ್ಹಾವೇ ಸರ್ವಸ್ವೇಸೀ । ಹೇ ಶಿಕಲೋ ವೃಕ್ಷಾ ಪಾಸೀ । ವಿವೇಕೇಸೀ ನಿಜಬುದ್ಧೀ ॥೪೦೫॥ ಏವಂ ಪೃಥ್ವೀ ಗುರು ಝಾಲೀ ಐಸೀ । ದುಜೇ ಗುರುತ್ವ ತೇ ವಾಯೂಸೀ । ಆಲೇ ಜೇ ಜೇ ಯುಕ್ತೀಸೀ । ತೇ ತೇ ಪರಿಯೇಸೀ ನರದೇವಾ ॥೪೦೬॥ ಗುರುತ್ವ ಜೇ ವಾಯುಸೀ । ತೇ ದೋ ಪ್ರಕಾರೀ ಪರಿಯೇಸೀ । ಏಕ ತೇ ಪ್ರಾಣವೃತ್ತೀಸೀ । ಬಾಹ್ಯ ವಾಯೂಸೀ ದುಸರೇ ॥೪೦೭॥

ಪ್ರಾಣವೃತ್ತ್ಯೈವ ಸಂತುಷ್ಯೇನ್ಮುನಿರ್ನೈವೇಂದ್ರಿಯಪ್ರಿಯೈಃ । ಜ್ಞಾನಂ ಯಥಾ ನ ನಶ್ಯೇತ ನಾವಕೀರ್ಯೇತ ವಾಙ್ಮನಃ ॥೩೯॥

ಅರ್ಥ:- ನನ್ನೊಳಗಿರುವ ವಾಯುವಿನಿಂದ ನಾನಿದನ್ನು ಕಲಿತುಕೊಂಡೆನು. ಏನೆಂದರೆ ವಾಯುವು ಆಹಾರದ ಇಚ್ಛೆಯನ್ನು ಮಾಡಿ, ಅದರ ಪ್ರಾಪ್ತಿಯಿಂದ ಸಂತುಷ್ಟವಾಗುವುದು. ಅದರಂತೆ ಮುನಿಗಳು ಪ್ರಾಣಧಾರಣೆಯಾಗುವಷ್ಟೇ ಅನ್ನವು ಸಿಕ್ಕಿತೆಂದರೆ ಸಾಕು, ಅಷ್ಟರಿಂದಲೇ ತೃಪ್ತರಾಗುವರು. ಇಂದ್ರಿಯಗಳಿಗೆ ತೃಪ್ತಿಕೊಡುವುದಕ್ಕಾಗಿ ಅನೇಕ ವಿಷಯಗಳ ಸೇವನೆ ಮಾಡಕೂಡದು. ಬುದ್ಧಿಯು ವಿಕೃತಿಗೊಳ್ಳುವಂತೆ ವಿಷಯಗಳ ಸೇವನೆ ಮಾಡಕೂಡದು. ಮನಸ್ಸು ಚಂಚಲವಾಗಬಾರದು ಮತ್ತು ವಾಣಿಯನ್ನು ವ್ಯರ್ಥವಾದ ಮಾತಿಗೆ ಹಚ್ಚಬಾರದು.

ಪ್ರಾಣಾಚಿಯೇಪರೀ । ಜೋ ವಿಷಯೀ ಆಸಕ್ತೀ ನ ಧರೀ । ವಿಷಯ ಸೇವಿಲಿಯಾಹೀ ವರೀ । ನವ್ಹೇ ಅಹಂಕಾರೀ ಪ್ರಾಣು ಜೈಸಾ ॥೪೦೮॥ ಪ್ರಾಣಾಭ್ಯಾಸೇ ಕ್ಷುಧಾ ಅದ್ಭುತ । ತೇವ್ಹಾ ಪ್ರಾಣಾಸೀಚ ಕ್ಷೋಭ ಯೇತ । ತೇಣೇ ಕಾಯಾ ವಾಚಾ ಚಿತ್ತ । ವಿಕಳ ಪಡತ ಇಂದ್ರಿಯೇ ॥೪೦೯॥ ತಯಾ ಪ್ರಣಾಸೀ ಆಧಾರು । ಭಲತೈಸಾ ಮಿಳೋ ಆಹಾರು । ಪರೀ ಧಡಗೋಡಾಂಚಾ ವಿಚಾರು । ನ ಕರೀ ಸಾಚಾರು ಪೈ ಪ್ರಾಣು॥೪೧೦॥ ತೈಸಾಚಿ ಯೋಗಿಯಾ ಪಾಹೀ । ತೋ ಅಭಿಮಾನ ನ ಧರೀ ದೇಹೀ । ವಿಷಯೋ ಸೇವಾ ಪರೀ ಕಾಂಹೀ । ಆಸಕ್ತಿ ನಾಹೀ ತಯಾಸೀ ॥೪೧೧॥

ಅತಿಥಿ ಪೂಜನೆ ಎಂಬುದನ್ನು ಇನ್ನೊಂದು ಲಕ್ಷಣವನ್ನು ನಾನು ವೃಕ್ಷದಿಂದ ಕಲಿತುಕೊಂಡೆನು. ಅದನ್ನು ಲಕ್ಷಪೂರ್ವಕವಾಗಿ ಕೇಳು ॥೪೦೦॥ ವೃಕ್ಷದ ಹತ್ತಿರ ಯಾರೇ ಅತಿಥಿಯಾಗಿ ಬಂದಲ್ಲಿ ಅದು ಆತನನ್ನು ಎಂದೂ ಇಲ್ಲವೆಂದು ವಂಚಿಸಲಾರದು. ಎಲೆ, ಪುಷ್ಪ, ಫಲ, ನೆರಳು, ತೊಗಟೆ, ಕಟ್ಟಿಗೆ ಇವುಗಳಲ್ಲಿ ಏನಾದರೂ ಕೊಡುತ್ತಿರುವುದು ॥೪೦೧॥ ವೃಕ್ಷವು ತನ್ನನ್ನು ಜೋಪಾನ ಮಾಡುವವನನ್ನು ಹಾಗೂ ಅದರ ಬಡ್ಡೆಗೆ ಕೊಡಲೆ ಹಾಕುವವನನ್ನು ಈ ಇಬ್ಬರಿಗೂ ಸಮವಾಗಿಯೇ ಹೂ ಹಣ್ಣುಗಳನ್ನು ಕೊಟ್ಟು ಸಂತೋಷಗೊಳಿಸುವುದು ॥೪೦೨॥ ಯಾವ ಪ್ರಕಾರವಾಗಿ ವೃಕ್ಷವು ತನ್ನ ಬೇರು ಮೊದಲು ಮಾಡಿ ಸರ್ವ ದೇಹವನ್ನು ಯಾಚಕರಿಗಾಗಿ ಬಿಟ್ಟುಕೊಟ್ಟು ತನ್ನ ಸಾರ್ಥಕಮಾಡಿಕೊಂಡಿದೆಯೋ, ಅದರಂತೆಯೇ ಸಾಧು ಸಹ ತನ್ನ ತನ, ಮನ, ಧನವನ್ನು ಮತ್ತು ತನ್ನ ಶಬ್ದಗಳನ್ನು ಹೀಗೆ ಎಲ್ಲವನ್ನೂ ಅತಿಥಿಗಳವರಿಗೆ ಪ್ರೇಮದಿಂದ ಅರ್ಪಿಸಿ ಸಂತೋಷಗೊಳಿಸುವನು ॥೪೦೩॥ ಅತಿಥಿಗಳವರನ್ನು ವಿಮುಖ ಮಾಡಲಾಗದಿರುವಿಕೆಯೇ ಸಾಧುವಿನ ಅಲೌಕಿಕ ಗುಣವಾಗಿರುವುದು. ಈತನು ಅತಿಥಿಗೆ ಅನ್ನ, ದ್ರವ್ಯ, ನೀರು ಇತ್ಯಾದಿ ಪದಾರ್ಥಗಳನ್ನು ಸಂತೋಷವಾಗಿ ಕೊಡುತ್ತಿರುವನು ॥೪೦೪॥ ಯಾಚಕನು ಕೇಳಲು ಬಂದಾಗ ಆತನ ಕಾಮನೆಗಳನ್ನು ಪೂರ್ಣಗೊಳಿಸುವುದಕ್ಕಾಗಿ ತನ್ನ ಸರ್ವಸ್ವವೂ ಹೋಗುತ್ತಿದ್ದರೂ ಆತನನ್ನು ವಿನ್ಮುಖ ಮಾಡಬಾರದೆಂಬುದನ್ನು ನಾನು ವಿವೇಕದಿಂದ ಆತ್ಮಬುದ್ಧಿಯೊಂದಿಗೆ ವೃಕ್ಷದಿಂದ ಕಲಿತುಕೊಂಡೆನು ॥೪೦೫॥ ಈ ಪ್ರಕಾರವಾಗಿ ಪೃಥ್ವಿಯು ನನ್ನ ಮೊದಲನೆಯ ಗುರುವಾಯಿತು. ಎರಡೆನಯ ಗುರು ವಾಯುವಾಯಿತು. ಅದರಿಂದ ಗ್ರಹಣ ಮಾಡಿದ್ದನು ಹೇಳುವೆ, ಅದನ್ನೂ ಈಗ ಕೇಳು ॥೪೦೬॥ ವಾಯುವಿನಿಂದ ಎರಡು ಪ್ರಕಾರವಾಗಿ ಗುರುತ್ವವು ಬಂದಿರುವುದು. ಒಂದು ಪ್ರಾಣವೃತ್ತಿಯಿಂದ, ಇನ್ನೊಂದು ಬಾಹ್ಯವಾಯುವಿನ ಯೋಗದಿಂದ ಅದು ಹೇಗೆಂಬುದನ್ನು ಈಗ ಕೇಳು ॥೪೦೭॥

ಪ್ರಾಣವು ಯಾವ ಪ್ರಕಾರವಾಗಿ ವಿಷಯಗಳ ಆಸಕ್ತಿ ಧರಿಸುವುದಿಲ್ಲವೋ, ಅಥವಾ ವಿಷಯ ಸೇವನೆ ಮಾಡಿದ ಮೇಲೆ ಪ್ರಾಣಕ್ಕೆ ಯಾವ ಪ್ರಕಾರವಾಗಿ ಅಹಂಕಾರವು ಹುಟ್ಟುವುದಿಲ್ಲವೋ ಅದರಂತೆಯೇ ಸಾಧು ಇರುವನು ॥೪೦೮॥ ಪ್ರಾಣದ ಓಡಾಟದಿಂದ ಹಸಿವೆ ಹುಟ್ಟುವುದು. ಇದರಿಂದ ಪ್ರಾಣವು ಕ್ಷೋಭೆಗೊಳ್ಳುವುದು. ಇದರಿಂದ ಕಾಯಾ, ವಾಚಾ, ಮನ ಹಾಗೂ ಇಂದ್ರಿಯಗಳು ವಿಚಲಿತವಾಗುವುವು. ॥೪೦೯॥ ಆಗ ಪ್ರಾಣದ ರಕ್ಷಣೆಗಾಗಿ ಆಧಾರಭೂತವಾಗಿರುವ ಆಹಾರವು ಎಂತಹದ್ದೇ ಸಿಗಲಿ, ಅದು ಒಳ್ಳೆಯದೋ ಅಥವಾ ಕೆಡಕಾದದ್ದೋ ಇದರ ವಿಚಾರವನ್ನು ಪ್ರಾಣವು ಎಂದೂ ಮಾಡುವುದಿಲ್ಲ ॥೪೧೦॥ ಅದರಂತೆ ಯೋಗಿಯು ದೇಹದಲ್ಲಿ ಅಭಿಮಾನವನ್ನಿಡುವುದಿಲ್ಲ. ಈತನು ವಿಷಯ ಸೇವನೆಯನ್ನು ಮಾಡುವನು. ಆದರೆ ಈತನಿಗೆ ಅದರ ಆಸಕ್ತಿ ಇರುವುದಿಲ್ಲ ॥೪೧೧॥

ಕ್ಷುಧೇಚಿಯಾ ತೋಂಡಾ । ಮಿಳೋ ಕೋಂಡಾ ಅಥವಾ ಮಾಂಡಾ । ಪರೀ ರಸನೇಚಾ ಪಾಂಗಡಾ । ನ ಕರೀ ಧಡಪುಡಾ ತಯಾಸೀ ॥೪೧೨॥ ಜ್ಞಾನಧಾರಣಾ ನ ಢಳೇ । ಇಂದ್ರಿಯೇ ನವ್ಹತೀ ವಿಕಳೇ । ತೈಸಾ ಆಹಾರ ಯುಕ್ತಿಬಳೇ । ಸೇವಿಜೇ ಕೇವಳೇ ನಿಜ ಧೈರ್ಯೇ ॥೪೧೩॥ ಪ್ರಾಣಾಸ್ತವ ಇಂದ್ರಿಯೇ ಸಬಳೇ । ಪ್ರಾಣಯೋಗೇ ದೇಹ ಚಳೇ । ತ್ಯಾ ದೇಹಕರ್ಮಾ ಪ್ರಾಣು ನಾತಳೇ । ಅಲಿಪ್ತ ಮೇಳೇ ವರ್ತತು ॥೪೧೪॥ ತ್ಯಾ ಪ್ರಾಣಾಚ್ಯಾ ಐಸೀ ಸ್ಥಿತೀ । ಯೋಗಿಯಾಚೀ ವರ್ತತೀ ವೃತ್ತೀ । ಸರ್ವ ಕರೂನಿ ನ ಕರೀ ಆಸಕ್ತೀ । ದೇಹಸ್ಥಿತಿ ನಾತಳೇ ॥೪೧೫॥ ಬ್ರಹ್ಮಾದಿಕಾಂಚಾ ದೇಹ ಪಾಳೂ । ಕಾ ಸೂಕರಾದಿಕಾಂಚಾ ದೇಹ ಟಾಳೂ । ಐಸಾ ನ ಮಾನೀಚ ವಿಟಾಳೂ । ಪ್ರಾಣ ಕೃಪಾಳು ಸಮಭಾವೇ ॥೪೧೬॥ ತೈಸೇಂಚ ಯೋಗಿಯಾಚೇ ಕರ್ಮ । ನ ಧರೀ ಉಂಚ ನೀಚ ಮನೋಧರ್ಮ । ಕದಾ ನ ದೇಖೇ ಅಧಮೋತ್ತಮ । ಭಾವನಾ ಸಮ ಸಮಭಾವೇ ॥೪೧೭॥ ಆವಡೀ ಪ್ರತಿಪಾಳಾವಾ ರಾವೋ । ರಂಕಾಚಾ ಟಾಳಾವಾ ದೇಹೋ । ಐಸಾ ಪ್ರಾಣಾನೇ ನಾಹೀ ಭಾವೋ । ಶುದ್ಧ ಸಮಭಾವೋ ಸರ್ವತ್ರ ॥೪೧೮॥ ಪ್ರಾಣ ಅಪಾನ ಸಮಾನ ಉದಾನ । ಸರ್ವ ಸಂಧೀ ವಸೇ ವ್ಯಾನ । ಇತುಕೀ ನಾಮೇ ಸ್ಥಾನೇ ಪಾವೋನಿ ಜಾಣ । ನ ಸಾಂಡೀ ಪ್ರಾಣ ಏಕಪಣಾ ॥೪೧೯॥ ತೈಸೇ ಉಂಚ ನೀಚ ವರ್ಣಾವರ್ಣ । ಅಧಮೋತ್ತಮಾದಿ ಗುಣಾಗುಣ । ದೇಖೋನಿಯಾ ಯೋಗೀ ಆಪಣ । ಭಾವನಾ ಪರಿಪೂರ್ಣ ನ ಸಾಂಡೀ ॥೪೨೦॥ ಪ್ರಾಣು ಅಸೋನಿ ದೇಹಾಭೀತರೀ । ಬಾಹ್ಯ ವಾಯೂಸೀ ಭೇದ ನ ಧರೀ । ತೈಶೀ ಯೋಗಿಯಾ ಭಾವನಾ ಕರೀ । ಬಾಹ್ಯಾಂಭ್ಯಂತರೀ ಐಕ್ಯತಾ ॥೪೨೧॥

ವಿಷಯೇಷ್ವಾವಿಶನ್ ಯೋಗೀ ನಾನಾಧರ್ಮೇಷು ಸರ್ವತಃ । ಗುಣದೋಷವ್ಯಪೇತಾತ್ಮಾ ನ ವಿಷಜ್ಜೇತ ವಾಯುವತ್ ॥೪೦॥

ಪಾರ್ಥಿವೇಷ್ವಿಹ ದೇಹೇಷು ಪ್ರವಿಷ್ಟಸ್ತದ್ಗುಣಾಶ್ರಯಃ । ಗುಣೈರ್ನ ಯುಜ್ಯತೇ ಯೋಗೀ ಗಂಧೈರ್ವಾಯುರಿವಾತ್ಮದೃಕ್ ॥೪೧॥

ಅರ್ಥ :- ಒಳ್ಳೆಯ ಹಾಗೂ ಕೆಟ್ಟ ಗುಣಗಳನ್ನು ಹೊಂದಿರುವ ಅನೇಕ ಲೌಕಿಕ ವಸ್ತುಗಳು ಅಧ್ಯಾತ್ಮವಾದಿಯನ್ನು ಕೂಡ ಸುತ್ತುವರಿದಿರುತ್ತವೆ. ಆದರೂ ಲೌಕಿಕ ಒಳಿತು ಕೆಡಕುಗಳನ್ನು ಮೀರಿದವನು ಲೌಕಿಕ ವಸ್ತುಗಳ ಸಂಪರ್ಕವಿದ್ದಾಗಲೂ ಕೂಡ ಅವಕ್ಕೆ ಸಿಲುಕಬಾರದು. ಅದರ ಬದಲು ಗಾಳಿಯಂತೆ ವರ್ತಿಸಬೇಕು.

ಆತ್ಮ ಸಾಕ್ಷಾತ್ಕಾರ ಪಡೆದವನು ಈ ಜಗತ್ತಿನಲ್ಲಿ ನಾನಾ ಭೌತಿಕ ಶರೀರಗಳಲ್ಲಿ ವಾಸಿಸುತ್ತಿದ್ದು, ಅವುಗಳ ಗುಣಗಳನ್ನೂ ಕ್ರಿಯೆಗಳನ್ನೂ ಅನುಭವಿಸುತ್ತಿದ್ದರೂ ಎಂದೂ ಅವಕ್ಕೆ ಸಿಲುಕಿದವನಾಗುವುದಿಲ್ಲ. ಹೇಗೆಂದರೆ ವಾಯುವು ನಾನಾ ಗಂಧಗಳನ್ನು ಹೊತ್ತು ಒಯ್ಯುತ್ತಿದ್ದರೂ ವಾಸ್ತವಿಕವಾಗಿ ಅವುಗಳೊಂದಿಗೆ ಬೆರೆತಿರುವುದಿಲ್ಲ.

ಐಕ್ಯತಾ ಸಾಧಾವೀ ಚತುರೀ । ತೇ ವಾಯೂಚ್ಯಾ ಐಶೀ ದೋಹೋಪರೀ । ಬಾಹ್ಯ ಆಣಿ ಅಂತರೀ । ಐಕ್ಯಪರೀ ವರ್ತಾವೇ ॥೪೨೨॥

ಹಸಿವೆಯ ಮುಖಕ್ಕೆ ತೌಡು ಆಗಿರಲಿ ಅಥವಾ ಹೋಳಿಗೆ ಸಿಗಲಿ ಸ್ವೀಕರಿಸುವನು. ನಾಲಿಗೆಯ ಅಂಕಿತನಾಗುವುದಿಲ್ಲ ॥೪೧೨॥ ಜ್ಞಾನಧಾರಣೆಯು ತಪ್ಪದಂತೆ ಇಂದ್ರಿಯಗಳಿಗೆ ದುಃಖವಾಗದ ರೀತಿಯಲ್ಲಿ ಯುಕ್ತಿಯೊಂದಿಗೆ ಮತ್ತು ಧೈರ್ಯವಾಗಿ ಆತನು ಆಹಾರವನ್ನು ಸೇವಿಸುತ್ತಿರುವನು ॥೪೧೩॥ ಪ್ರಾಣದಿಂದ ಇಂದ್ರಿಯಗಳಿಗೆ ಬಲವು ಬರುವುದು. ಪ್ರಾಣದಿಂದಲೇ ದೇಹವು ನಡೆಯುವುದು. ಹೀಗಿದ್ದರೂ ದೇಹಕರ್ಮದಿಂದ ಪ್ರಾಣವು ಎಂದೂ ಲಿಪ್ತವಾಗುವುದಿಲ್ಲ. ಅದು ಅಲಿಪ್ತವಾಗಿಯೇ ಇರುವುದು ॥೪೧೪॥ ಈ ಪ್ರಾಣದಂತೆಯೇ ಯೋಗಿಯ ಸ್ಥಿತಿಯಾಗಿರುವುದು. ಎಲ್ಲವನ್ನು ಮಾಡಿಯೂ ಆತನು ಅನಾಸಕ್ತನಾಗಿರುವನು. ಆದ್ದರಿಂದ ದೇಹಸ್ಥಿತಿಯು ಆತನಿಗೆ ಸ್ಪರ್ಶವನ್ನು ಮಾಡುವುದಿಲ್ಲ ॥೪೧೫॥ ಬ್ರಹ್ಮಾದಿಕರ ದೇಹದಲ್ಲಿದ್ದು ಅವರ ಪಾಲನೆಯನ್ನು ಮಾಡಬೇಕು, ಹಂದಿ ಇತ್ಯಾದಿ ದೇಹಗಳಲ್ಲಿ ಪ್ರವೇಶವನ್ನೇ ಮಾಡಬಾರದು ಹೀಗೆ ವಿಚಾರವು ಮನದಲ್ಲಿ ಬರುವುದಿಲ್ಲ. ಪ್ರಾಣವು ಸಮಭಾವದಿಂದ ಕೃಪಾವಂತವಾಗಿರುವುದು ॥೪೧೬॥ ಅದರಂತೆ ಯೋಗಿಯ ಮನೋಧರ್ಮವು ಉಚ್ಚನೀಚ ಭಾವವನ್ನು ಧರಿಸುವುದಿಲ್ಲ. ಆತನ ಭಾವನೆಯು ಸರ್ವತ್ರವೂ ಸಮಭಾವದಿಂದ ಇರುವುದು ॥೪೧೭॥ ರಾಜನ ದೇಹವನ್ನು ಪ್ರೇಮದಿಂದ ಜೀವಂತವಾಗಿ ಇಡಬೇಕು, ಭಿಕ್ಷುಕನ ದೇಹವನ್ನು ಬಿಟ್ಟುಬಿಡಬೇಕು ಎಂಬ ಕೆಟ್ಟ ಭಾವವು ಪ್ರಾಣದಲ್ಲಿ ಎಂದೂ ಇರುವುದಿಲ್ಲ. ಅದರ ಭಾವವು ಸರ್ವತ್ರವೂ ಶುದ್ಧವಾಗಿರುವುದು ॥೪೧೮॥ ಪ್ರಾಣ, ಅಪಾನ, ಸಮಾನ , ಉದಾನ ಅಥವಾ ಸರ್ವ ಸಂಧಿಯಲ್ಲಿರುವ ವ್ಯಾನ ಹೀಗೆ ಇಷ್ಟೊಂದು ಹೆಸರು, ಸ್ಥಾನಗಳಿದ್ದರೂ ಪ್ರಾಣವು ತಾನು ಎಲ್ಲವೂ ಒಂದೇ ಎನ್ನುವುದನ್ನು ಬಿಡುವುದಿಲ್ಲ ॥೪೧೯॥ ಅದರಂತೆ ಉಚ್ಚ-ನೀಚ, ವರ್ಣ, ಅವರ್ಣ, ಉತ್ತಮ ಅಧಮ, ಹೀಗೆ ಗುಣ ಅವಗುಣಗಳನ್ನು ಕಂಡೂ ಸಹ ಯೋಗಿಯು ತನ್ನ ಸಮತ್ವ ಭಾವವನ್ನು ಎಂದೂ ಬಿಡುವುದಿಲ್ಲ ॥೪೨೦॥ ಪ್ರಾಣವು ವಾಸ್ತವಿಕವಾಗಿ ದೇಹದ ಒಳಗೆ ಇದ್ದರೂ ಸಹ ಬಾಹ್ಯ ವಾಯುವಿನಲ್ಲಿ ಭೇದಭಾವ ಮಾಡುವುದಿಲ್ಲ. ಅದರಂತೆಯೇ ಯೋಗಿಯ ವೃತ್ತಿಯು ಅಂತಃಬಾಹ್ಯದಲ್ಲಿ ಸರಿಸಮಾನವಾಗಿರುವುದು ॥೪೨೧॥

ಚತುರ ಪುರುಷನು ವಾಯುವಿನಂತೆ ಎರಡು ಕಡೆಯಲ್ಲಿಯೂ ಐಕ್ಯತೆಯನ್ನು ಸಾಧಿಸಬೇಕು. ಅಂತರ್ಬಾಹ್ಯದಲ್ಲಿ ಯಾವಾಗಲೂ ಐಕ್ಯಭಾವದಿಂದ ವರ್ತಿಸಬೇಕು ॥೪೨೨॥

ಪ್ರಾಣವೃತ್ತೀಚೀ ಲಕ್ಷಣೇ । ತುಜ ಸಾಂಗಿತಲೀ ಸಂಪೂರ್ಣೇ । ಆತಾ ಬಾಹ್ಯ ವಾಯೂಚೀ ಚಿನ್ಹೇ । ಸಾವಧಾನೇ ಪರಿಯೇಸೀ ।೪೨೩॥ ವಾಯು ಸರ್ವಾತೇ ಸ್ಪರ್ಶೋನಿ ಜಾಯೇ । ಪರೀ ಅಡಕಲಾ ಕೋಠೇ ನ ರಾಹೇ । ತೈಸೇ ವಿಷಯ ಸೇವಿತಾ ಪಾಹೇ । ಆಸಕ್ತ ನವ್ಹೇ ಯೋಗಿಯಾ ।೪೨೪॥ ಅಸೋನಿ ಇಂದ್ರಿಯಾಂಚೇನಿ ಮೇಳೇ । ತೋ ವಿಷಯಾಮಾಜಿ ಜರಿ ಖೇಳೇ । ತರೀ ಗುಣದೋಷ ಆಸಕ್ತಿ ಮೇಳೇ । ಬೋಧು ನ ಮಳೇ ತಯಾಚಾ ।೪೨೫॥ ವಸ್ತ್ರ ಚಂದನ ವನಿತಾ ಮಾಳಾ । ಸದಾ ಭೋಗಿತಾ ವಿಷಯಸೋಹಳಾ । ವಾಯು ನಾತಳೇ ಜೇವಿ ಜಾಳಾ । ತೇವೀ ಯೋಗೀ ವೇಗಳಾ ವಿಷಯಾಂಚೀ ।೪೨೬॥ ಜೈಸೇ ವಾರೇನಿ ಜಾಳ ಉಡೇ । ಪರೀ ಜಾಳೀ ವಾರಾ ನಾತುಡೇ । ತೇವೀ ಭೋಗ ಭೋಗಿತಾ ಗಾಢೇ । ಭೋಗೀ ನಾತುಡೇ ಯೋಗಿಯಾ ।೪೨೭॥ ಜಾತಯಾ ವಾಯೂಚೇ ಭೇಟೀ । ಸುಗಂಧ ಕೋಟೀ ಘಾಲಿತೀ ಮಿಠೀ । ತ್ಯಾಂಚೀ ಆಸಕ್ತೀ ನಾಹೀ ಪೋಟೀ । ಉಠಾ ಉಠೀ ಸಾಂಡಿತು ।೪೨೮॥ ತೈಸಾ ಆತ್ಮತ್ವೇ ಯೋಗಿಯಾ ಪಾಹೀ । ಪ್ರವೇಶಲಾಸೇ ಸರ್ವಾದೇಹೀ । ದೇಹ ಗುಣಾಶ್ರಯೋ ಪಾಹೀ । ಠಾಯೀಂಚ್ಯಾ ಠಾಯೀ ತೋಚಿ ತೋ ।೪೨೯॥ ನಿಜಾತ್ಮ ದೃಷ್ಟೀಚೇನಿ ಬಳೇ । ತೋ ದೇಹಗುಣಾಂಸೀ ನಾತಳೇ । ಜೈಸಾ ಗಂಧಾವರೀ ವಾರಾ ಲೋಳೇ । ಪರೀ ನಾಕಳೇ ಗಂಧಾಂಸೀ ।೪೩೦॥ ತೇಚಿ ಪರಿಪೂರ್ಣ ಆತ್ಮಸ್ಥಿತಿ । ರಾಯಾ ಮೀ ಸಾಂಗೇನ ತುಜಪ್ರತೀ । ಜೈಸೀ ಆಕಾಶಾಚೀ ಪ್ರತೀತೀ । ಸರ್ವಪದಾರ್ಥೀ ಅಲಿಪ್ತ ।೪೩೧॥

ಅಂತರ್ಹಿತಶ್ಚ ಸ್ಥಿರ ಜಂಗಮೇಷು ಬ್ರಹ್ಮಾತ್ಮಭಾವೇನ ಸಮನ್ವಯೇನ ।
ವ್ಯಾಪ್ತ್ಯಾವ್ಯವಚ್ಛೇದಮ ಸಂಗಮಾತ್ಮನೋಮುನಿರ್ನಭಸ್ತ್ವಂ ವಿತತಸ್ಯ ಭಾವಯೇತ್ ।೪೨॥

ಅರ್ಥ :- ಮುನಿಯು ಭೌತಿಕ ದೇಹದಲ್ಲಿ ನೆಲೆಸಿರುವಾಗಲೂ ತಾನು ಶುದ್ಧ ಚೈತನ್ಯಾತ್ಮ ಎಂಬುದನ್ನು ಅರಿಯಬೇಕು. ಅಂತೆಯೇ ಚೇತನಾತ್ಮವು ಎಲ್ಲ ಸ್ಥಾವರ - ಜಂಗಮ ಎರಡೂ ರೂಪಗಳೊಳಗೆ ಪ್ರವೇಶಿಸುತ್ತದೆ ಎಂಬುದನ್ನು ಕಾಣಬೇಕು. ಹಾಗಾಗಿ ಜೀವಾತ್ಮಗಳು ಸರ್ವವ್ಯಾಪಕವಾಗಿವೆ. ಅದೇ ಕಾಲಕ್ಕೆ ಪರಮಾತ್ಮನು ಎಲ್ಲ ವಸ್ತುಗಳಲ್ಲಿಯೂ ನೆಲೆಸಿರುವನು ಎಂಬುದನ್ನು ಮುನಿಯು ಅವಲೋಕಿಸಬೇಕು. ಜೀವಾತ್ಮ, ಪರಮಾತ್ಮರಿಬ್ಬರನ್ನೂ ಆಕಾಶದ ಸ್ವಭಾವಕ್ಕೆ ಹೋಲಿಸಿ ಅರಿಯಬಹುದು. ಆಕಾಶವು ಎಲ್ಲೆಡೆ ಚಾಚಿದ್ದರೂ ಸಕಲವೂ ಆಕಾಶದಲ್ಲಿ ನೆಲೆಸಿದ್ದರೂ ಅದು ಯಾವುದರೊಂದಿಗೂ ಬೆರೆಯುವುದಿಲ್ಲ. ಅದನ್ನು ಯಾವುದರಿಂದಲೂ ವಿಭಾಗಿಸಲಿಕ್ಕೂ ಆಗದು.

ಸರ್ವ ಪದಾರ್ಥೀ ಸಮತ್ವ । ಯಾಲಾಗೀ ಆಕಾಶಾಸೀ ಗುರುತ್ವ । ಅಸಂಗತ್ವ ಅಭೇದತ್ವ । ನಿರ್ಮಳತ್ವ ಜಾಣೋನಿ ।೪೩೨॥ ವಿಷಮೀ ಅಸೋನಿ ಸಮತ್ವ । ಸಂಗೀ ಅಸೋನಿ ಅಸಂಗತ್ವ । ಭೇದು ಕರಿತಾ ಅಭೇದತ್ವ । ಯಾಲಾಗೀ ಗುರುತ್ವ ಆಕಾಶಾ ।೪೩೩॥

ಪ್ರಾಣವಾಯುವಿನ ಸರ್ವ ಲಕ್ಷಣಗಳನ್ನು ನಿನಗೆ ಸವಿಸ್ತಾರವಾಗಿ ಹೇಳಿರುವೆನು. ಈಗ ಬಾಹ್ಯ ವಾಯುವಿನ ಲಕ್ಷಣಗಳನ್ನು ಹೇಳುವೆನು. ಚೆನ್ನಾಗಿ ಲಕ್ಷ ಕೊಟ್ಟು ಕೇಳು ।೪೨೩॥ ವಾಯುವು ಸರ್ವರನ್ನು ಸ್ಪರ್ಶಿಸಿ ಹೋಗುವುದು. ಆದರೆ ಅದು ಎಲ್ಲಿಯೂ ಸಿಕ್ಕಿಕೊಳ್ಳುವುದಿಲ್ಲ. ಅದರಂತೆ ಯೋಗಿಯು ವಿಷಯ ಸೇವನೆಯನ್ನು ಮಾಡಿದರೂ ಆತನು ಎಲ್ಲಿಯೂ ಆಸಕ್ತನಾಗುವುದಿಲ್ಲ. ಅನಾಸಕ್ತನಾಗಿ ಭಾವದಿಂದ ಕರ್ಮಗಳನ್ನು ಮಾಡುವನು ।೪೨೪॥ ಆತನು ಇಂದ್ರಿಯಗಳ ಸಂಗತಿಯಲ್ಲಿದ್ದು ವಿಷಯಗಳೊಂದಿಗೆ ಆಟವಾಡುತ್ತಿದ್ದರೂ ಗುಣದೋಷಗಳ ಆಸಕ್ತಿಯಿಂದ ಆತನ ಆತ್ಮಜ್ಞಾನವು ಎಂದೂ ಮಲಿನವಾಗುವುದಿಲ್ಲ ।೪೨೫॥ ವಸ್ತ್ರ, ಚಂದನ, ಸ್ತ್ರೀ ಅಥವಾ ಹೂಗಳ ಮಾಲೆ ಇವುಗಳ ಸಂಗತಿಯಲ್ಲಿ ವಾಯುವು ಯಾವಾಗಲೂ ವಿಲಾಸವನ್ನು ಭೋಗಿಸುವುದು. ಆದರೆ ಅದು ಅವುಗಳ ಬಲೆಯಲ್ಲಿ ಸಿಕ್ಕಿ ಬೀಳುವುದಿಲ್ಲ. ಅದರಂತೆ ಯೋಗಿಯು ವಿಷಯಗಳಲ್ಲಿ ಆಸಕ್ತನಾಗುವುದಿಲ್ಲ ।೪೨೬॥ ವಾಯುವಿನಿಂದ ಬಲೆಯು ಹಾರಿಹೋಗುವುದು. ಆದರೆ ವಾಯುವು ಆ ಬಲೆಯಲ್ಲಿ ಸಿಕ್ಕಿಕೊಳ್ಳುವುದಿಲ್ಲ. ಅದರಂತೆ ಯೋಗಿಯು ಭೋಗ ಭೋಗಿಸಿ ಅದರಲ್ಲಿ ಆಸಕ್ತನಾಗುವುದಿಲ್ಲ ।೪೨೭॥ ಕೋಟಿಗಟ್ಟಲೇ ಸುಗಂಧಗಳು ವಾಯುವಿಗೆ ಬಂದು ಭೇಟಿಯಾಗುವುವು. ಆದರೆ ವಾಯುವು ಅವುಗಳಲ್ಲಿ ಆಸಕ್ತವಾಗುವುದಿಲ್ಲ. ಆ ಎಲ್ಲ ಸುಗಂಧಗಳನ್ನು ತತ್ಕಾಲದಲ್ಲಿ ಬಿಟ್ಟು ಹೊರಟು ಹೋಗುವುದು ।೪೨೮॥ ಅದರಂತೆ ಯೋಗಿಯು ಆತ್ಮಸ್ವರೂಪದಿಂದ ಸರ್ವರ ಶರೀರಗಳಲ್ಲಿ ಪ್ರವೇಶಿಸುವನು. ಆದ್ದರಿಂದ ಆಯಾ ದೇಹಗಳ ಗುಣಗಳ ಆಶ್ರಯವನ್ನು ಆ ಯಾ ಸ್ಥಳಗಳಲ್ಲಿಯೇ ಸ್ವೀಕರಿಸುವನು ।೪೨೯॥ ವಾಯುವು ಯಾವ ಪ್ರಕಾರವಾಗಿ ಸುಗಂಧಗಳ ಮೇಲೆ ಉರುಳಾಡುತ್ತಿದ್ದರೂ ಅದರಲ್ಲಿ ಲಿಪ್ತಗೊಳ್ಳುವುದಿಲ್ಲ. ಹಾಗೆಯೇ ಯೋಗಿಯು ಆಯಾ ಶರೀರಗಳಲ್ಲಿನ ಗುಣಗಳಿಂದ ಲಿಪ್ತಗೊಳ್ಳುವದಿಲ್ಲ. ಹಾಗೆಯೇ ಯೋಗಿಯು ಆಯಾ ಶರೀರಗಳಲ್ಲಿನ ಗುಣಗಳಿಂದ ಲಿಪ್ತನಾಗುವುದಿಲ್ಲ ।೪೩೦॥ ಆಕಾಶವು ಯಾವ ಪ್ರಕಾರವಾಗಿ ಸರ್ವ ಪದಾರ್ಥಗಳಿಂದ ಅಲಿಪ್ತವಾಗಿರುವುದು ಪ್ರತ್ಯಯಕ್ಕೆ ಬರುವುದೋ, ಹಾಗೆಯೇ ಯೋಗಿಯ ಸತ್ಯಸ್ಥಿತಿಯು ಪರಿಪೂರ್ಣವಾಗಿರುವುದನ್ನು ನಾನು ನಿನಗೆ ಹೇಳುವೆನು ।೪೩೧॥

ಆಕಾಶವು ಸರ್ವ ವಸ್ತುಗಳಲ್ಲಿ ಸಮಭಾವವನ್ನು ಇಡುವುದು. ಇದು ಅಸಂಗ, ಅಭೇದ ಹಾಗೂ ನಿರ್ಮಲವಾಗಿರುವುದನ್ನು ನಾನು ಅರಿತುಕೊಂಡು ಅದನ್ನು ಗುರು ಮಾಡಿಕೊಂಡೆನು ।೪೩೨॥ ಇದು ವಿಷಮದಲ್ಲಿದ್ದು ಸಮವಾಗಿರುವುದು, ಸಂಗದಲ್ಲಿದ್ದು ಅಸಂಗವಾಗಿರುವುದು ಹಾಗೂ ಭೇದವನ್ನು ಮಾಡಿಯೂ ಅಭೇದ್ಯವಾಗಿರುವುದು. ಆದ್ದರಿಂದ ನಾನು ಅದಕ್ಕೆ ಗುರುತ್ವವನ್ನು ಕೊಟ್ಟೆನು ।೪೩೩॥

ವೈರ ಸರ್ಪಾಮುಂಗುಸಾಸೀ । ಆಕಾಶ ದೋಹೀಂಚೇ ಹೃದಯವಾಸೀ । ವೈರ ನಿರ್ವೈರತಾ ಆಕಾಶಾಸೀ । ತೇ ಸ್ಥಿತೀ ಯೋಗಿಯಾಸೀ ಪಾಹಿಜೇ ॥೪೩೪॥ ತೇಣೇ ಆಕಾಶ ದೃಷ್ಟಾಂತೇ । ಬ್ರಹ್ಮ ಭಾವೇ ಆಪಣೆಯಾತೇ । ಯೋಗೀ ದೇಖಿಜೇ ಪುರತೇ । ವ್ಯಾಪಕತ್ವೇ ಆಪುಲ್ಯಾ ॥೪೩೫॥ ಬ್ರಹ್ಮ ಸಮನ್ವಯೇ ಪಾಹತಾ ಪಾಹೀ । ಸ್ಥಾವರಜಂಗಮಾಚ್ಯಾ ಠಾಯೀ । ತಿಳಭರೀ ವಾಢೀ ರಿತೀ ನಾಹೀ । ಆಪಣ ಪೈ ಪಾಹೀ ಕೋಂದಲಾ ॥೪೩೬॥ ಆಕಾಶ ಸರ್ವ ಪದಾರ್ಥಿ ಅಸೇ । ಪರೀ ಅಸೇ ಹೇ ಸರ್ವಾಸೀ ನ ದಿಸೇ । ತೇವೀ ದೃಶ್ಯ - ದೃಷ್ಟಾ - ಅತೀತದಶೇ । ಸರ್ವತ್ರ ಅಸೇ ಯೋಗಿಯಾ ॥೪೩೭॥ ನಭ ನ ಖೋಚೇ ಸಾಂಬಳೇ । ಜಳೇನಾ ವಣವ್ಯಾಚೇನಿ ಜಾಳೇ । ನವ್ಹತಾ ಜ್ವಾಳಾವೇಗಳೇ । ಅಸೇ ಸಗಳೇ ಟವಟವಿತ ॥೪೩೮॥ ತೈಸೀ ಯೋಗೀ ಯಾಸೀ ದ್ವಂದ್ವೇ ಸಕಳೇ । ಬಾಧೂ ನ ಶಕತೀ ಕವಣೇ ಕಾಳೇ । ನವ್ಹತಾ ದ್ವಂದ್ವಾವೇಗಳೇ । ಸ್ವರೂಪ ಸಗಳೇ ಶೋಭತ ॥೪೩೯॥ ಯೋಗಿಯಾ ಭೇದಾವಯಾ ಲವಲಾಹೇ । ಸೋಡಿಲೇ ಶಸ್ತ್ರಾಂಚೇ ಸಮುದಾಯೇ । ತೋ ಶಸ್ತ್ರಾಮಾಜೀ ಆಪಣೆಯಾ ತೇ ಪಾಹೇ । ನ ರುಪತೀ ಘಾಯೇ ಜೇವೀ ಗಗನಾ ॥೪೪೦॥ ಜೇ ಜೇ ದ್ವಂದ್ವ ಬಾಧೂ ಆಲೇ । ತೇ ತೇ ಸ್ವರೂಪ ದೇಖೇ ಆಪುಲೇ । ಸಹಜೇ ದ್ವಂದ್ವಭಾವಾ ಮುಕಲೇ । ಅಬಾಧಿತ ಉರಲೇ ನಿಜರೂಪ ॥೪೪೧॥ ಗಗನ ಬುಡಾಲೇ ದಿಸೇ ಡೋಹೀ । ಪರೀ ತೇ ಉದಕೇ ಭಿಜಲೇಂಚಿ ನಾಹೀ । ತೈಸಾ ಅಸೋನಿಯಾ ಸರ್ವ ದೇಹೀ । ಅಲಿಪ್ತ ಪಾಹೀ ಯೋಗಿಯಾ ॥೪೪೨॥ ಆಕಾಶಾ ಚಿಖಲ ಮಾಖೂ ಜಾತಾ । ತೇ ನ ಮಾಖೇ, ಮಾಖೇ ಲಾವಿತಾ । ತೈಸಾ ಯೋಗಿಯಾ ದೋಷೀ ಮ್ಹಣತಾ । ದೋಷು ಸರ್ವಥಾ ಮ್ಹಣತ್ಯಾಸೀ ॥೪೪೩॥ ಗಗನ ಅಸೋನಿಯಾ ಜನೀ । ಮೈಳೇನಾ ಜನಘುಸಣೀ । ತೈಸಾ ಯೋಗಿಯಾ ಸಕಳ ಕರ್ಮೇ ಕರೂನೀ । ಕರ್ಮಶಪಣೇ ನ ಮೈಳೇ ॥೪೪೪॥ ಮೋಟೇ ಬಾಂಧಿತಾ ಆಕಾಶಾತೇ । ಚಾರೀ ಪಾಲವ ಪಡತೀ ರಿತೇ । ತೇವೀ ಕರ್ಮೀ ಬಾಂಧಿತಾ ಯೋಗಿಯಾತೇ । ಕರ್ಮ ತೇಥೇ ನಿಷ್ಕರ್ಮ ॥೪೪೫॥ ಘಟಾಮಾಜೀ ಆಕಾಶ ಅಸೇ । ತೇ ವಾಚ್ಯ ಕೀಜೇ ಘಟಾಕಾಶೇ । ಪಾಹತಾ ಘಟಾ ಸಬಾಹ್ಯ ಸಮರಸೇ । ಆಕಾಶ ಅಸೇ ಪರಿಪೂರ್ಣ ॥೪೪೬॥ ತೈಸಾ ಆತ್ಮಾ ಮ್ಹಣತೀ ದೇಹೀ । ತಂವ ತೋ ದೇಹಾ ಸಬಾಹ್ಯ ಪಾಹೀ । ದೇಹ ಮಿಥ್ಯಾತ್ವೇ ಠಾಯೀಚೇ ಠಾಯಿ । ಚಿನ್ಮಾತ್ರ ಪಾಹೀ ಪರಿಪೂರ್ಣ ॥೪೪೭॥

ಹಾವು, ಮುಂಗುಲಿ ಇವರಿಬ್ಬರಲ್ಲಿ ವೈರತ್ವವು ಇರುವುದು. ಆದರೆ ಆಕಾಶವು ಇವರಿಬ್ಬರ ಹೃದಯಲ್ಲಿ ಇರುವುದು. ಆಕಾಶವು ವೈರಿಗೆ ನಿರ್ವೈರವಾಗಿ ತಿಳಿಯುವುದು. ಯೋಗಿಗಳ ಸ್ಥಿತಿಯೂ ಹಾಗೆಯೇ ಇರಬೇಕಾಗುವುದು ॥೪೩೪॥ ಈ ಯಾವ ಆಕಾಶದ ದೃಷ್ಟಾಂತದಿಂದಲೇ ಯೋಗಿಯೂ ಕೂಡ ತನ್ನ ಪರಿಪೂರ್ಣವಾದ ವ್ಯಾಪಕತ್ವದಿಂದ ಬ್ರಹ್ಮ ಎಂಬ ಭಾವನೆಯಿಂದಲೇ ತನ್ನನ್ನು ಕಾಣುತ್ತಿರುವನು ॥೪೩೫॥ ಬ್ರಹ್ಮ ಸಮನ್ವಯದಿಂದ ನೋಡಲಾರಂಭಿಸಿದರೆ ಸ್ಥಾವರ ಜಂಗಮಗಳಲ್ಲಿ ತಾನೇ ತುಂಬಿಕೊಂಡಿರುವನು. ತನ್ನ ಹೊರತಾಗಿ ಎಳ್ಳಷ್ಟೂ ಸ್ಥಾನವಿರುವುದಿಲ್ಲ. ಹೀಗೆ ಆತನಿಗೆ ತಿಳುವಳಿಕೆ ಬರುವುದು ॥೪೩೬॥ ಆಕಾಶವು ಸರ್ವ ಪದಾರ್ಥಗಳಲ್ಲಿ ಇದ್ದೇ ಇರುವುದು. ಆದರೆ ಎಲ್ಲರಿಗೂ ಏನೂ ತೋರುವುದಿಲ್ಲ. ಅದರಂತೆ ಯೋಗಿಯು ದೃಶ್ಯ ಮತ್ತು ದೃಷ್ಟಾ ಇವುಗಳಿಂದ ಬಿನ್ನನಾಗಿ ಸರ್ವತ್ರವೂ ಇರುವನು ॥೪೩೭॥ ಕಬ್ಬಿಣದ ಕೋಲಿನಿಂದ ಆಕಾಶಕ್ಕೆ ಛಿದ್ರಗೊಳಿಸಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಾರದು. ಅಗ್ನಿಯಿಂದ ಅದು ಬೆಂದುವುದಿಲ್ಲ. ಅದು ಜ್ವಾಲೆಯಿಂದ ಬೇರೆಯಾಗಿರದಿದ್ದರೂ ತಾನು ಇದ್ದಂತೆಯೇ ಚೆನ್ನಾಗಿಯೇ ಇರುವುದು ॥೪೩೮॥ ಅದರಂತೆಯೇ ಯೋಗಿಗಳಿಗೆ ಶೀತ, ಉಷ್ಣ ದ್ವಂದ್ವಗಳು ಬಾಧಿಸಲಾರವು. ದ್ವಂದ್ವಗಳಿಂದ ಬೇರೆಯಾಗಿರದಿದ್ದರೂ ಆತನ ಸ್ವರೂಪವು ಶೋಭಿಸುತ್ತಿರುವುದು ॥೪೩೯॥ ಯೋಗಿಯನ್ನು ತುಂಡರಿಸಬೇಕೆಂದು ಆತನ ಶರೀರದ ಮೇಲೆ ಶಸ್ತ್ರಗಳನ್ನು ಒಗೆದರೂ ಆತನು ಆ ಶಸ್ತ್ರಗಳಲ್ಲಿ ಸ್ವತಃ ತನ್ನನೇ ಕಾಣುತ್ತಿರುವುದರಿಂದ, ಆಕಾಶಕ್ಕೆ ಶಸ್ತ್ರವು ನಾಟದಂತೆ ಈತನಿಗೆ ಶಸ್ತ್ರಗಳ ಹೊಡೆತ ಬೀಳುವುದಿಲ್ಲ ॥೪೪೦॥ ಯಾವ ಯಾವ ದ್ವಂದ್ವಗಳು ಈತನನ್ನು ಕಾಣಲು ಬಂದಾಗ ಅವುಗಳೆಲ್ಲವೂ ತನ್ನ ಸ್ವರೂಪವಾಗಿದೆ ಎಂದು ಈತನಿಗೆ ತೋರುವುದು. ಆದ್ದರಿಂದ ಆ ದ್ವಂದ್ವವು ದ್ವಂದ್ವಭಾವದಿಂದ ಇಲ್ಲದಾಗುವುದು ಮತ್ತು ಆತ್ಮಸ್ವರೂಪದಿಂದ ಉಳಿಯುವುದು ॥೪೪೧॥ ಆಕಾಶವು ನೀರಿನ ಮಡುವಿನಲ್ಲಿ ಮುಳುಗಿದಂತೆ ತೋರುವುದು. ಆದರೆ ಅದು ನೀರಿನಿಂದ ಎಂದಿಗೂ ತೋಯುವುದಿಲ್ಲ. ಅದರಂತೆ ಯೋಗಿಯು ಎಲ್ಲರ ದೇಹದಲ್ಲಿದ್ದರೂ ಸಹ ಅಲಿಪ್ತನಾಗಿರುವನು ॥೪೪೨॥ ಆಕಾಶಕ್ಕೆ ಕೆಸರು ಎರಚಲು ಪ್ರಯತ್ನಪಟ್ಟರೆ ಆ ಕೆಸರು ಆಕಾಶಕ್ಕೆ ತಾಗದೇ ಎರಚುವವನಿಗೆ ತಗಲುವುದು. ಅದರಂತೆ ಯೋಗಿಗೆ ದೋಷ ಹೊರಿಸುವ ಪ್ರಯತ್ನ ಮಾಡುವವನೇ ದೋಷಿಯಾಗಿ ನಿರ್ಣಯಿಸಲ್ಪಡುವನು ॥೪೪೩॥ ಆಕಾಶವು ಜನರಲ್ಲಿದ್ದರೂ ಕೂಡ ಅದು ಎಂದಿಗೂ ಸಂಸರ್ಗದಿಂದ ಮಲಿನಗೊಳ್ಳುವುದಿಲ್ಲ. ಅದರಂತೆ ಯೋಗಿಯು ಸರ್ವ ಕರ್ಮಗಳನ್ನು ಮಾಡಿದರೂ ಕೂಡ ಕರ್ಮಶತನದಿಂದ ಎಂದೂ ಮಲಿನವಾಗುವುದಿಲ್ಲ ॥೪೪೪॥ ಆಕಾಶದ ಗಂಟು ಕಟ್ಟುವ ಪ್ರಯತ್ನ ಮಾಡಲು ಅದರ ನಾಲ್ಕೂ ಸೆರಗುಗಳು ಹಾಗೆಯೇ ಉಳಿಯುವುವು. ಅದರಂತೆ ಯೋಗಿಗೆ ಕರ್ಮದಿಂದ ಕಟ್ಟಬೇಕೆಂದರೆ ಆ ಕರ್ಮವೇ ನಿಷ್ಕರ್ಮವಾಗುವುದು ॥೪೪೫॥ ಘಟದಲ್ಲಿ ಆಕಾಶವು ಇರುವುದು. ಅದಕ್ಕೆ ಘಟಾಕಾಶವೆನ್ನುವರು. ನಿಜವಾಗಿ ನೋಡಿದರೆ ಘಟಕದ ಒಳಗೂ, ಹೊರಗೂ ಆಕಾಶವೇ ಪರಿಪೂರ್ಣವಾಗಿ ತುಂಬಿರುವುದು ॥೪೪೬॥ ಅದರಂತೆ ಆತ್ಮವು ದೇಹದಲ್ಲಿ ಇದೆ ಎಂದು ಹೇಳುವರು. ಆದರೆ ಅದು ದೇಹದ ಹೊರಗೂ ಇರುವುದು. ದೇಹವು ಮಿಥ್ಯತ್ವದಿಂದ ಇದ್ದಲ್ಲಿಯೇ ಇರುವುದು,ಚೈತನ್ಯವು ಪರಿಪೂರ್ಣವಾಗಿರುವುದು ॥೪೪೭॥

ತೇಜೋಽಬನ್ನಮಯೈರ್ಭಾವೈರ್ಮೇಘಾದ್ಯೈರ್ವಾಯುನೇರಿತೈಃ ।
ನ ಸ್ಪೃಶ್ಯತೇ ನಭಸ್ತದ್ವತ್ ಕಾಲಸೃಷ್ಟೈರ್ಗುಣೈಃ ಪುಮಾನ್ ॥೪೩॥

ಅರ್ಥ:- ಆಕಾಶಾದುದ್ದಕ್ಕೂ ಬಲವಾದ ಗಾಳಿಯು ಮೋಡಗಳನ್ನೂ ಬಿರುಮಳೆಯನ್ನೂ ಹಾರಿಸಿಕೊಂಡು ಹೋಗುವುದು. ಆದರೂ ಆಕಾಶವು ಈ ಕ್ರಿಯೆಗಳಲ್ಲಿ ಸಿಲುಕುವುದಿಲ್ಲ. ಅವುಗಳಿಂದ ಬಾಧಿತವೂ ಆಗುವುದಿಲ್ಲ. ಅದರಂತೆ ಐಹಿಕ ಪ್ರಕೃತಿಯ ಸಂಪರ್ಕದಿಂದ ಚೈತನ್ಯಾತ್ಮವು ವಾಸ್ತವಿಕವಾಗಿ ಬದಲಾಗುವುದಿಲ್ಲ. ಬಾಧಿತವೂ ಆಗುವುದಿಲ್ಲ. ಜೀವಿಯು ಪೃಥ್ವಿ,ಜಲ,ಅಗ್ನಿಗಳಿಂದಾದ ದೇಹದೊಳಗೆ ಪ್ರವೇಶಿಸಿದ್ದರೂ, ಶಾಶ್ವತ ಕಾಲವು ಸೃಷ್ಟಿಸಿದ ಐಹಿಕ ತ್ರಿಗುಣಗಳ ಪ್ರಚೋದನೆಗೆ ಒಳಗಾಗಿದ್ದರೂ ಆತನ ಶಾಶ್ವತ ಆಧ್ಯಾತ್ಮಿಕ ಸ್ವಭಾವಕ್ಕೆ ವಾಸ್ತವಿಕವಾಗಿ ಅವುಗಳ ಬಾಧೆ ಇಲ್ಲ.

ನಭ ಪೃಥ್ವೀರಜೇ ನ ಗದಳೇ । ಉದಕೇ ಕರೀ ನ ಪಘಳೇ । ಅಗ್ನಿಚೇನೀ ಜ್ವಾಳೇ ನ ಜಳೇ । ವಾಯುಬಳೇ ಉಡೇನಾ ॥೪೪೮॥ ಕಡಕಡೀತ ಆಭಾಳೇ । ಯೇಊನಿ ಆಕಾಶ ಝಾಂಕೋಳೇ । ತ್ಯಾ ಸಮಸ್ತಾ ನಭ ನಾತಳೇ । ಅಲಿಪ್ತ ಬಳೇ ಸಂಸ್ಥಿತ ॥೪೪೯॥ ತೈಸೇಂಚಿ ಯೋಗಿಯಾಸೀ । ಅಸತಾ ನಿಜಾತ್ಮಸಮರಸೀ । ಕಾಳೇ ಸೃಜಿಲಿಯಾ ಗುಣಾಂಸೀ । ವಶ್ಯ ತ್ಯಾಂಸೀ ತೋ ನವ್ಹೇ ॥ ೪೫೦॥ ಕಾಳಾಚೇ ಘೋರ ಸಾಮರ್ಥ್ಯ ಜಾಣ । ದೇಹಾಸೀ ಆಣೇ ಜರಾಮರಣ । ಯೋಗೀ ದೇಹಾತೀತ ಆಪಣ । ಜನ್ಮಮರಣ ನ ದೇಖೇ ॥೪೫೧॥ ಸ್ವಪ್ನೀ ಚಿಂತಾಮಣೀ ಜೋಡಲಾ । ಸವೇಂಚಿ ಅಂಧಕೂಪೀ ಪಡಲಾ । ಜಾಗಾ ಜಾಹಲ್ಯಾ ನ ಮ್ಹಣೇ ನಾಡಲಾ । ತೈಸಾ ಘಡಲಾ ದೇಹಸಂಗು ॥೪೫೨॥ ಜೋ ಬ್ರಹ್ಮಾದಿ ದೇಹಾಂಸೀ ಖಾಯೇ । ತೋ ಕಾಳು ವಂದೀ ಯೋಗಿಯಾಚೇ ಪಾಯೇ । ಜೋ ಕಾಳಾಚಾಹೀ ಆತ್ಮಾ ಹೋಯೇ । ನಿಧಡಾ ಪಾಹೇ ಮಹಾಕಾಳು ॥೪೫೩॥ ವಿಜೂ ಕಡಕಡೂನಿ ಆಕಾಶೀ । ತೇಜೇ ಪ್ರಕಾಶೀ ಗಗನಾಸೀ । ಗಗನ ನಾತಳೇ ತೇ ವಿಜೂಸೀ । ಅಸೋನಿ ತಿಶೀ ಸಬಾಹ್ಯ ॥೪೫೪॥ ತೈಸಾ ಸತ್ವಗುಣ ಪ್ರಕಾಶೀ ಜ್ಞಾನ । ತ್ಯಾಸೀ ಯೋಗಿಯಾ ನಾತಳೇ ಜಾಣ । ಜ್ಞಾನಸ್ವರೂಪ ನಿಖಳ ಆಪಣ । ವೃತ್ತಿಜ್ಞಾನ ಮಗ ನೇಘೇ ॥೪೫೫॥ ಝಾಲಿಯಾ ಸೂರ್ಯ ಉದಯಾಸೀ । ದೀಪಪ್ರಭಾ ನಯೇ ಉಪೇಗಾಸೀ । ತೇವೀ "ಸಹಜ"ಆಲಿಯಾ ಹಾತಾಸೀ । ವೃತ್ತಿಜ್ಞಾನಾಸೀ ಕೋಣ ಪುಸೇ ॥೪೫೬॥ ಸತ್ವೇ ಪ್ರಕಾಶಿಲೇ ಜ್ಞಾನ । ತೇ ಆವಡೋನಿ ನೇಣೇ ಜಾಣ । ಅಥವಾ ಖವಳಲ್ಯಾ ರಜೋಗುಣ । ಕರ್ಮಠಪಣ ತ್ಯಾ ನ ಯೇ ॥೪೫೭॥ ಹೋ ಕಾ ತಮೋಗುಣಾಚೇನಿ ಮೇಳೇ । ಕ್ರೋಧಮೋಹಾಂಸೀ ನಾತಳೇ । ಗುಣಾತೀತ ಝಾಲಾ ಬಳೇ । ಬೋಧಕಲ್ಲೋಳೇ ಸ್ವಾನಂದೇ ॥೪೫೮॥ ಉದಕಾಸೀ ಗುರುಪಣ । ಆಲೇ ತೇ ಐಕ ಲಕ್ಷಣ । ಅವಧೂತ ಮ್ಹಣೇ ಸಾವಧಾನ । ನೃಪನಂದನ ಯದುವೀರಾ ॥೪೫೯॥

ಆಕಾಶವು ಭೂಮಿ ಮೇಲಿನ ಧೂಳಿನಿಂದ ಮಲಿನವಾಗುವುದಿಲ್ಲ. ಜಲದಿಂದ ತೋಯುವುದಿಲ್ಲ, ಅಗ್ನಿಯ ಜ್ವಾಲೆಯಿಂದ ಅದು ಎಂದಿಗೂ ಸುಡುವುದಿಲ್ಲ. ಬಿರುಗಾಳಿಯು ಬಂದರೂ ಅದು ಎಂದಿಗೂ ಹಾರಿಹೋಗುವುದಿಲ್ಲ ॥೪೪೮॥ ಘನವಾದ ಮೋಡಗಳಿಂದ ಆಕಾಶವು ಮುಚ್ಚಿಹೋಗುವುದು. ಆದರೆ ಆ ಮೋಡಗಳಿಂದ ಆಕಾಶವು ಲಿಪ್ತವಾಗುವುದಿಲ್ಲ. ತನ್ನ ಸ್ಥಳದಲ್ಲಿಯೇ ಅದು ತಾನು ಇದ್ದಂತೆಯೇ ಅಲಿಪ್ತವಾಗಿಯೇ ಇರುವುದು ॥೪೪೯॥ ಅದರಂತೆ ಯೋಗಿಯು ಆತ್ಮಸ್ವರೂಪದಲ್ಲಿ ಮಗ್ನನಾದನೆಂದರೆ ಕಾಲನು ನಿರ್ಮಿಸಿರುವ ಗುಣಗಳಿಗೆ ಎಂದಿಗೂ ಸ್ವಲ್ಪವೂ ವಶನಾಗುವುದಿಲ್ಲ ॥೪೫೦॥ ಕಾಲನ ಸಾಮರ್ಥ್ಯವು ಅತಿ ಮಹತ್ತರವಾಗಿದೆ. ಕಾಲನು ದೇಹಕ್ಕೆ ಜರಾಮರಣಕೊಡುವನು. ಆದರೆ ಯೋಗಿಗಳು ದೇಹಾತೀತರಾಗಿರುವುದರಿಂದ ಕಾಲನು ಅವರ ಜರಾಮರಣದತ್ತ ನೋಡುವುದಿಲ್ಲ ॥೪೫೧॥ ಸ್ವಪ್ನದಲ್ಲಿ ಚಿಂತಾಮಣಿಯು ಸಿಕ್ಕಂತಾಗಿ ಮತ್ತು ಅದು ಕೂಡಲೇ ಹಾಳುಬಾವಿಯಲ್ಲಿ ಬಿದ್ದಂತಾಗಿದ್ದಾಗ ಆತನು ಎಚ್ಚರನಾದ ಮೇಲೆ ನನಗೆ ಬಹಳ ಹಾನಿಯಾಯಿತೆಂದು ಆತನು ಹೇಳಲಾರನು. ಅದರಂತೆ ಯೋಗಿಗೆ ದೇಹಸಂಗವು ಒದಗುತ್ತಿರುವುದು ॥೪೫೨॥ ಕಾಲನು ಬ್ರಹ್ಮಾದಿಕರ ದೇಹಗಳನ್ನೂ ತಿಂದುಬಿಡುವನು. ಆದರೆ ಅದೇಕಾಲನು ಯೋಗಿಗಳ ಚರಣಗಳಿಗೆ ವಂದಿಸುವನು. ಯೋಗಿಯು ಕಾಲನ ಆತ್ಮವು ಆಗಿರುವುದರಿಂದ ಈತನು ಮಹಾಕಾಲನಾಗಿರುವನು ॥೪೫೩॥ ಆಕಾಶದಲ್ಲಿ ಮಿಂಚು ಜೋರಾಗಿ ಗರ್ಜಿಸುತ್ತ ತನ್ನ ಪ್ರಖರವಾದ ತೇಜದಿಂದ ಆಕಾಶವನ್ನು ಪ್ರಕಾಶಗೊಳಿಸುವುದು. ಆದರೆ ಆಕಾಶವು ಅದರ ಒಳಗೂ ಹೊರಗೂ ಇದ್ದರೂ ಅದರಿಂದ ಲಿಪ್ತವಾಗುವುದಿಲ್ಲ ॥೪೫೪॥ ಅದರಂತೆ ಸತ್ವಗುಣವು ಜ್ಞಾನಕ್ಕೆ ಪ್ರಕಾಶಗೊಳಿಸುವುದು. ಆದರೆ ಯೋಗಿಯು ಅದಕ್ಕೂ ಸಹ ಸ್ಪರ್ಶಮಾಡುವುದಿಲ್ಲ. ಕಾರಣ ಆತನು ಸ್ವತಃ ಶುದ್ಧಜ್ಞಾನಸ್ವರೂಪನಾಗಿಯೇ ಇರುವನು. ಆದ್ದರಿಂದ ಆತನು ವೃತ್ತಿಜ್ಞಾನವನ್ನು ಸ್ವೀಕರಿಸುವುದಿಲ್ಲ ॥೪೫೫॥ ಸೂರ್ಯನ ಉದಯವಾಗಲು ದೀಪದ ಪ್ರಕಾಶವು ಉಪಯೋಗವಾಗುವುದಿಲ್ಲ. ಅದರಂತೆ ಜ್ಞಾನವು ಸಹಜವಾಗಿ ಹಸ್ತಗತವಾಗಲು ಆಗ ವೃತ್ತಿಜ್ಞಾನಕ್ಕೆ ಯಾರು ವಿಚಾರಿಸಬೇಕು ॥೪೫೬॥ ಸತ್ವದ ಜ್ಞಾನವು ಉತ್ಪನ್ನವಾಗಿರುವುದು. ಆದರೆ ಯೋಗಿಯು ಅದನ್ನು ಪ್ರೀತಿಯಿಂದ ಸ್ವೀಕರಿಸುವುದಿಲ್ಲ ಅಥವಾ ರಜೋಗುಣವು ಉಗ್ರವಾಗಲು ಆತನಿಗೆ ಕರ್ಮಠತನವು ಒದಗುವುದಿಲ್ಲ ॥೪೫೭॥ ಹಾಗೂ ತಮೋಗುಣದಿಂದ ಆತನು ಕ್ರೋಧ ಮೋಹಗಳಿಗೆ ವಶನಾಗುವುದಿಲ್ಲ. ಆತನು ಸ್ವಾನಂದ ಸಾಗರದಲ್ಲಿನ ಜ್ಞಾನಪ್ರಕಾಶದಿಂದ ಪರಿಪೂರ್ಣವಾಗಿ ಗುಣಾತೀತನಾಗಿರುವನು ॥೪೫೮॥ ಅವಧೂತನು ನುಡಿದನು, ಹೇ ನೃಪನಂದನನೇ, ಯದುವೀರನೇ, ಜಲಕ್ಕೆ ಗುರುತ್ವವು ಹೇಗೆ ಬಂದಿತು ಎಂಬುದನ್ನು ಈಗ ಹೇಳುವೆ, ಲಕ್ಷಕೊಟ್ಟು ಕೇಳು ॥೪೫೯॥

ಸ್ವಚ್ಛಃ ಪ್ರಕೃತಿತಃ ಸ್ನಿಗ್ಧೋ ಮಾಧುರ್ಯಸ್ತೀರ್ಥಭೂರ್ನೃಣಾಮ್ ।
ಮುನಿಃ ಪುನಾತ್ಯಪಾಂ ಮಿತ್ರಮೀಕ್ಷೋಪಸ್ಪರ್ಶಕೀರ್ತನೈಃ ॥೪೪॥

ಅರ್ಥ:- ಜಲವು ತನ್ನ ಸ್ವಭಾವದಂತೆ ಸ್ವಚ್ಛ, ಮಧುರ ಹಾಗೂ ಪವಿತ್ರ ಮಾಡುವಂತೆ, ಗಂಗಾ ಆದಿಯಾಗಿ ತೀರ್ಥಗಳ ದರ್ಶನ, ಸ್ಪರ್ಶ ಮತ್ತು ನಾಮದ ಉಚ್ಚಾರದಿಂದ ಜನರು ಪವಿತ್ರರಾಗುವಂತೆ ಸಾಧಕರಿಗೆ ಸ್ವಭಾವದಿಂದ ಶುದ್ಧ, ಮಧುರಭಾಷೀ ಹಾಗೂ ಲೋಕಪಾವನರಾಗಬೇಕು. ಜಲದಿಂದ ಜ್ಞಾನವನ್ನು ಪ್ರಾಪ್ತಮಾಡಿಕೊಂಡವನು ತನ್ನ ದರ್ಶನದಿಂದ, ಸ್ಪರ್ಶದಿಂದ ಹಾಗೂ ನಾಮದ ಉಚ್ಚಾರದಿಂದ ಜನರನ್ನು ಪವಿತ್ರಗೊಳಿಸುವನು.

ಲಕ್ಷಣೇ ಪಾಹತಾ ಜಳ । ಸ್ವಭಾವೇ ಅತಿನಿರ್ಮಳ । ಪ್ರಕೃತೀಸ್ತ್ವ ಕೋಮಳ । ಮಧುರ ಕೇವಳ ಸರ್ವಾಸೀ ॥೪೬೦॥ ಪವಿತ್ರ ವ್ಹಾವಯಾ ಪ್ರಾಣಿಯಾಸೀ । ತೀರ್ಥೀ ತೀರ್ಥತ್ವೇ ಉದಕಾಸೀ । ಇತುಕೀ ಲಕ್ಷಣೇ ಯೋಗಿಯಾಸೀ । ಅಹರ್ನಿಶೀ ಅಸಾವೀ ॥೪೬೧॥ ಉದಕೀ ರಿಘಾಲೇ ಜೇ ಸಮ್ಳೈಳ । ತೇ ಸ್ವಭಾವೇ ಕರೀ ನಿರ್ಮಳ । ಪರೀ ನ ಧರೀ ಅಹಂಬಳ । ಜೇ ಮ್ಯಾ ಹೇ ಮಳ ಕ್ಷಾಳಿಲೇ ॥೪೬೨॥ ತೈಸೇ ಯೋಗಿಯಾಸೀ ಭಜನಶೀಳ । ಭಾವೇ ಭಾವಿಕ ಜೇ ಕೇವಳ । ತ್ಯಾಂಚೇ ನಿರಸೂನಿ ಕಳಿಮಳ । ನ ಧರೀ ಬಳ ಗುರುತ್ವೇ ॥೪೬೩॥ ಪ್ರಾಣು ಗೇಲಾ ತರೀ ಪ್ರಾಣಿಯಾಂಸೀ । ಕಠಿಣತ್ವ ಉಪಜೇನಾ ಮಾನಸೀ । ಜೇ ಜೇ ಭೇಟೇ ತಯಾಸೀ । ಮೃದುತಾ ಕೈಸೀ ವರ್ತತ ॥೪೬೪॥ ಜೇವೀ ಚಂದ್ರಕಿರಣ ಚಕೋರಾಂಸೀ । ಪಾಂಖೋವಾ ಜೇವೀ ಪಿಲಿಯಾಂಸೀ । ಜೀವನ ಜೈಸೇ ಕಾ ಜೀವಾಂಸೀ । ತೇವೀ ಸರ್ವಾಂಸೀ ಮೃದುತ್ವ ॥೪೬೫॥ ಜಳ ವರಿವರೀ ಕ್ಷಾಳೀ ಮಳ । ಯೋಗಿಯಾ ಸಬಾಹ್ಯ ಕರೀ ನಿರ್ಮಳ । ಉದಕ ಸುಖೀ ಕರೀ ಏಕ ವೇಳ । ಯೋಗಿ ಸರ್ವಕಾಳ ಸುಖದಾತಾ ॥೪೬೬॥ ಉದಕಾಚೇ ಸುಖ ತೇ ಕಿತೀ । ಸವೇಂಚಿ ಕ್ಷಣೇ ತೃಷಿತೇ ಹೋತೀ । ಯೋಗಿಯಾ ದೇ ಸ್ವಾನಂದತೃಪ್ತೀ । ಸುಖಾಸೀ ವಿಕೃತೀ ಪೈ ನಾಹೀ ॥೪೬೭॥ ಉದಕಾಚೀ ಜೇ ಮಧುರತಾ । ತೇ ರಸನೇಸೀಚಿ ತತ್ತ್ವತಾ । ಯೋಗಿಯಾಂಚೇ ಗೋಡಪಣ ಪಾಹತಾ । ಹೋಯ ನಿವವಿತಾ ಸರ್ವೇಂದ್ರಿಯಾ ॥೪೬೮॥ ಲಾಗಲ್ಯಾ ಯೋಗಿಯಾಚೀ ಗೋಡೀ । ಅಮೃತಾಚೀ ಚವೀ ಥೋಡೀ । ಬ್ರಹ್ಮೇಂದ್ರಾದಿ ಪದೇ ಬಾಪುಡೀ । ಅರ್ಧಘಡೀಮಾಜೀ ಕರೀತ ॥೪೬೯॥ ತಾಪಲೇ ಆಲೇ ಉದಕಾಪಾಶೀ । ಅಂಗಸ್ಪರ್ಶೇ ನಿವವೀ ತ್ಯಾಂಸೀ । ತೈಸೀಚೇ ದಶಾ ಯೋಗಿಯಾಸೀ । ಸ್ಪರ್ಶೇ ತಾಪಾಸೀ ನಿವಾರೀ ॥೪೭೦॥ ಉದಕೇ ನಿವವಿಲೇ ಜ್ಯಾಸೀ । ಪರತೋನಿ ತಾಪಹೋಯೇ ತ್ಯಾಸೀ । ಯೋಗೀ ಕೃಪೇನೇ ಸ್ಪರ್ಶೇ ಜ್ಯಾಸೀ । ತ್ರಿವಿಧ ತಾಪಾಂಸೀ ನಿರ್ಮುಕ್ತ ॥೪೭೧॥

ಜಲದ ಲಕ್ಷಣವು ಮೊದಲನೆಯದಾಗಿ ಯಾವುದೆಂದರೆ ಅದು ಸ್ವಭಾವತವಾಗಿಯೇ ಅತಿನಿರ್ಮಲವಾಗಿರುವುದು. ಮತ್ತು ತನ್ನ ಸ್ವಭಾವದಂತೆ ಅದು ಎಲ್ಲರಿಗೂ ಮಧುರವಾಗಿ, ಮೃದುವಾಗಿರುವುದು ॥೪೬೦॥ ಪ್ರಾಣಿಮಾತ್ರರಿಗೆ ಪವಿತ್ರಗೊಳಿಸಬೇಕೆಂದು ತೀರ್ಥಗಳಲ್ಲಿ ಉದಕಕ್ಕೆ ಪ್ರವಿತ್ರತೆ ಇರುವುದು. ಯೋಗಿಗಳ ಅಂಗದಲ್ಲಿಯೂ ಈ ಲಕ್ಷಣಗಳು ಹಗಲೂ ರಾತ್ರಿ ಇರಬೇಕಾಗುವುದು ॥೪೬೧॥ ಮಲಿನ ಅಂಗದಿಂದ ತನ್ನಲ್ಲಿ ಸೇರಿದವರನ್ನು ಜಲವು ತನ್ನ ಸ್ವಭಾವದಂತೆ ನಿರ್ಮಲಗೊಳಿಸುವುದು. ಆದರೆ ನಾನು ಅವರ ಮಲಿನತೆಯನ್ನು ತೊಳೆದೆನು ಎಂಬ ಅಹಂಕಾರವನ್ನು ಹಿಡಿಯುವುದಿಲ್ಲ ॥೪೬೨॥ ಅದರಂತೆ ಯೋಗಿಯೂ ಸಹ ಭಕ್ತಿಯಿಂದ ಭಜನಶೀಲರಾಗಿರುವ ಭಾವಿಕರ ಪಾತಕಗಳನ್ನು ನಾಶಮಾಡಿ ಅದಕ್ಕಾಗಿ ತಮ್ಮ ಮನದಲ್ಲಿ ಯಾವ ಪ್ರಕಾರದ ಗುರುತ್ವದ ಅಹಂಕಾರವನ್ನು ಹಿಡಿಯುವುದಿಲ್ಲ ॥೪೬೩॥ ಇವರಲ್ಲಿ ಯಾರೇ ಭೇಟಿಯಾಗಲಿ, ಅವರಲ್ಲಿ ಇವರ ವರ್ತನೆಯು ಪ್ರಿಯಕರವಾಗಿರುವುದು. ಪ್ರಾಣ ಹೋದರೂ ಸಹ ಇವರು ಯಾವ ಪ್ರಾಣಿಮಾತ್ರರಲ್ಲಿಯೂ ತಮ್ಮ ಮನದಲ್ಲಿ ಕಠೋರತನವನ್ನು ನಿರ್ಮಾಣಗೊಳಿಸುವುದಿಲ್ಲ ॥೪೬೪॥ ಚಕೋರಕ್ಕೆ ಚಂದ್ರನ ಕಿರಣಗಳಂತೆ, ಪಕ್ಷಿಯ ಮರಿಗಳಿಗೆ ತಮ್ಮ ತಾಯಿಯ ರೆಕ್ಕೆಗಳಂತೆ, ಅಥವಾ ಜೀವಿಗಳಿಗೆ ಜಲವು ಇದ್ದಂತೆ ಇವರು ಎಲ್ಲರಲ್ಲಿಯೂ ಮೃದುವಾಗಿರುವರು ॥೪೬೫॥ ಉದಕವು ಮೇಲಿನ ಹೊಲಸನ್ನು ಇಲ್ಲದಂತೆ ಮಾಡುವುದು. ಆದರೆ ಯೋಗಿಯು ಮಾನವರ ಒಳಗಿನ ಹೊರಗಿನ ಹೊಲಸನ್ನು ತೊಳೆದುಹಾಕುವನು ಮತ್ತು ಅವರಿಗೆ ಅಂತರ್ಬಾಹ್ಯವಾಗಿ ಶುದ್ಧಗೊಳಿಸುವನು. ಉದಕವು ಒಂದು ಹೊತ್ತಿಗೆ ಸುಖವನ್ನು ಕೊಡುವುದು. ಆದರೆ ಯೋಗಿಯು ಸರ್ವಕಾಲಕ್ಕೂ ಸುಖ ಕೊಡುವವನಾಗಿರುವನು ॥೪೬೬॥ ಉದಕದ ಯಾವ ಸುಖವು ಕ್ಷಣಿಕವಾಗಿರುವುದು. ಕೂಡಲೇ ಪುನಃ ತೃಷೆಯಾಗುವುದು. ಆದರೆ ಯೋಗಿಯು ಆತ್ಮಾನಂದದಿಂದ ತೃಪ್ತಗೊಳಿಸುವನು. ಈ ಸುಖವು ಎಂದಿಗೂ ಇಲ್ಲದಾಗುವುದಿಲ್ಲ ॥೪೬೭॥ ನೀರಿನ ಮಧುರತ್ವವು ಇದು ಕೇವಲ ನಾಲಿಗೆಗೆ ಮಾತ್ರ ಇರುವುದು. ಆದರೆ ಯೋಗಿಯು ತನ್ನ ಮಾಧುರ್ಯದಿಂದ ಸರ್ವ ಇಂದ್ರಿಯಗಳಿಗೆ ತೃಪ್ತಿಪಡಿಸುವನು ॥೪೬೮॥ ಯೋಗಿಯ ಮಾಧುರ್ಯವನ್ನು ಒಂದು ಸಾರೆ ಸವಿಯಲು ಅದರೆದುರು ಅಮೃತವೂ ಸಪ್ಪಗಾಗುವುದು. ಇವರು ಒಂದೇ ಕ್ಷಣದಲ್ಲಿ ಬ್ರಹ್ಮದೇವ, ಇಂದ್ರ ಇತ್ಯಾದಿಕರ ಪದವಿಗಳನ್ನು ತುಚ್ಛಗೊಳಿಸುವರು ॥೪೬೯॥ ಸಂತಪ್ತ ಜನರು ಜಲದಲ್ಲಿ ಬರಲು ಅವರು ಅದರ ಸ್ಪರ್ಶಮಾತ್ರದಿಂದ ಶಾಂತರಾಗುವರು. ಅದರಂತೆ ಯೋಗಿಯೂ ಸಹ ತನ್ನ ಸ್ಪರ್ಶದಿಂದ ಸಂಸಾರ ತಾಪವನ್ನು ಸಹಜವಾಗಿಯೇ ನಿವಾರಿಸುವನು ॥೪೭೦॥ ಉದಕವು ಯಾರನ್ನು ಶಾಂತಗೊಳಿಸಿರುವುದೋ, ಅವರಿಗೆ ಪುನಃ ತಾಪವು ನಿಶ್ಚಿತವಾಗಿ ಆಗುವುದು. ಆದರೆ ಯೋಗಿಯು ಕೃಪೆ ಮಾಡಿ ಯಾರನ್ನು ಸ್ಪರ್ಶಮಾಡುವನೋ, ಆತನು ತ್ರಿವಿಧ ತಾಪದಿಂದ ಮುಕ್ತನಾಗುವನು ॥೪೭೧॥

ಯೋಗೀ ಜ್ಯಾಸೀ ನಿವವೀ ಜೀವೇಭಾವೇ । ತ್ಯಾಸೀ ಜೀವು ಗೇಲಿಯಾಹೀ ತಾಪು ನವ್ಹೇ । ನಿವಾಲೇಪಣೇ ತೋ ವೋಲ್ಹಾವೇ । ಸ್ವಾನುಭವೇ ಡುಲ್ಲತ ॥೪೭೨॥ ಮೇಘಮುಖೇ ಅಧಃಪತನ । ಉದಕಾಂಚೇ ದೇಖೋನಿ ಜಾಣ । ಅಧಃಪಾತೇ ನಿವತೀ ಜನ । ಅನ್ನದಾನಸಕಳಾಂಸೀ ।೪೭೩॥ ತೈಸೇ ಯೋಗಿಯಾಸೀ ಚಾಲುತೇ ಯೇಣೇ । ಜೇ ಇಹಲೋಕೀ ಜನ್ಮ ಪಾವಣೇ । ಜನ ನಿವವೀ ಶ್ರವಣಕೀರ್ತನೇ । ನಿಜಜ್ಞಾನೇ ಉದ್ಧರೀ ।೪೭೪॥ ಪರ್ಜನ್ಯೋದಕ ದೇಖತಾ ಜಾಣ । ಜೇವೀ ನಿವತೀ ಸಕಳಹೀ ಜನ । ಕಾ ಗಂಗಾದಿಕಾಂಚೇ ದರ್ಶನ । ಕರೀ ಮೋಚನ ಪಾಪಾಚೇ ।೪೭೫॥ ತೈಸೇ ಯೋಗಿಯಾಂಚೇ ದರ್ಶನ । ಭಾಗ್ಯೇವೀಣ ನವ್ಹೇ ಜಾಣ । ಜ್ಯಾಣೇ ದೇಖಿಲೇ ತ್ಯಾಚೇ ಚರಣ । ಕರೀ ಮೋಚನ ಭವರೋಗಾ ।೪೭೬॥ ನ ಘಡೇ ದರ್ಶನ ಸ್ಪರ್ಶನ । ತರೀ ಕರಾವೇ ತ್ಯಾಚೇ ನಾಮಸ್ಮರಣ । ಇತುಕೇನಿ ಭವಮೂಳ ಜಾಣ । ಕರೀ ಛೇದನ ತೇ ನಾಮ ।೪೭೭॥ ಸಾಂಡೂನಿ ಭಗವಂತಾಚೇ ಕೀರ್ತನ । ಕೇಲ್ಯಾ ಭಕ್ತಾಚೇ ನಾಮಸ್ಮರಣ । ಕೇವಿ ತುಟೇಲಭವಬಂಧನ । ಐಸೇ ನ ಮ್ಹಣಾ ಸರ್ವಥಾ ।೪೭೮॥ ದೇವಾಸೀ ಪೂರ್ವೀ ನಾಮಚಿ ನಾಹೀ । ತ್ಯಾಸೀ ಭಕ್ತೀ ಪ್ರತಿಷ್ಠೂನಿ ಪಾಹೀ । ನಾಮರೂಪಾದಿ ಸರ್ವಹೀ ।ನಾನಾ ವಿಲಾಸಹೀ ಅರ್ಪಿಲೇ ।೪೭೯॥ ಐಸಾ ಭಕ್ತೀ ದೇವ ಥೋರ ಕೇಲಾ । ಆಣೂನಿ ವೈಕುಂಠೀ ಬೈಸವಿಲಾ । ಭಕ್ತ ಉಪಕಾರೇ ದಾಟಲಾ । ಮಗ ತ್ಯಾಚ್ಯಾ ಬೋಲಾಮಾಜೀ ವರ್ತೇ ।೪೮೦॥ ದೇವೋ ಭಕ್ತವಚನೇಕರೀ । ಝಾಲಾ ನರ ನಾ ಕೇಸರೀ । ಪ್ರಗಟಲಾ ಖಾಂಬಾಮಾಝಾರೀ । ಶಬ್ದ ಕರೀ ಭಕ್ತಾಚಾ ।೪೮೧॥ ಆತಾಂಹೀ ಪ್ರತ್ಯಕ್ಷ ಪ್ರಮಾಣ । ದಾಸಾಂಚೇನಿ ವಚನೇ ಜಾಣ । ಪಾಷಾಣಪ್ರತಿಮೇ ದೇವೋ ಆಪಣ । ಆನಂದಘನ ಪ್ರಗಟೇ ಪೈ ।೪೮೨॥ ಭಕ್ತಭಾವೇ ಆಭಾರಲಾ । ದೇವೋ ಉಪಕಾರೇ ದಾಟಲಾ । ಯಾಲಾಗೀ ನುಲಂಘವೇ ಬೋಲಾ । ಪಾಂಗೇ ಪಾಂಗಲಾ ಭಕ್ತಾಂಚ್ಯಾ ।೪೮೩॥ ಏವಂ ಜೇಥ ಭಕ್ತಾಂಚೇ ನಾಮಘೇಣೇ । ತೇಥ ಅವಶ್ಯ ದೇವೇ ಧಾಂವಣೇ । ಭಕ್ತ ಉಪಕಾರಾ ಉತ್ತೀರ್ಣ ಹೋಣೇ । ವೇಗೇ ಪಾವಣೇ ಯಾಲಾಗೀ ।೪೮೪॥ ಯಾಲಾಗೀ ಭಕ್ತಾಚೇ ನಾಮ ಘೇತಾ । ತುಟತೀ ಭವಬಂಧನವ್ಯಥಾ । ಐಸೇ ಸಾಂಗತಾ ಅವಧೂತಾ । ಪ್ರೇಮ ಸರ್ವಥಾ ನ ಸಂಡೇ ।೪೮೫॥ ಆತಾ ಅಗ್ನಿ ಗುರು ಜೋ ಕರಣೇ । ತ್ಯಾಚೇ ಸಾಂಗೇನ ಲಕ್ಷಣೇ । ಕಾನಾ ಮನಾ ಏಕ ಕರಣೇ । ಸಾವಧಪಣೇ ಪರಿಯೇಸೀ ।೪೮೬॥

ಯೋಗಿಯು ಜೀವಭಾವದಿಂದ ಯಾರನ್ನು ತೃಪ್ತರನ್ನಾಗಿ ಮಾಡುವನೋ, ಆತನ ಪ್ರಾಣ ಹೋದರೂ ಸಹ ಯಾವ ತರಹದ ತಾಪವಾಗುವುದಿಲ್ಲ. ಆತನು ಆ ಪ್ರೇಮದ ರಸದಿಂದ ಸ್ವಾನುಭವದಿಂದ ತೂಗಾಡುತ್ತಿರುವನು ।೪೭೨॥ ಮೇಘಮುಖದಿಂದ ಜಲವು ಅಧಃಪತನವಾಗುವುದು. ಅದರಿಂದ ಸರ್ವಜನರು ತೃಪ್ತರಾಗಿ ಸರ್ವರಿಗೂ ಅನ್ನದಾನವಾಗುವುದು ।೪೭೩॥ ಅದರಂತೆ ಯೋಗಿಗಳು ಕೆಳಗೆ ಬರುವುದೆಂದರೆ ಮೃತ್ಯು ಲೋಕದಲ್ಲಿ ಜನ್ಮ ಧರಿಸುವುದು. ಅವರು ಜನರನ್ನು ಶ್ರವಣಕೀರ್ತನೆಗಳಿಂದ ತೃಪ್ತಗೊಳಿಸುವರು ಮತ್ತು ಆತ್ಮಜ್ಞಾನದಿಂದ ಅವರನ್ನು ಉದ್ಧರಿಸುವರು ।೪೭೪॥ ಮಳೆಯಾಗುವುದನ್ನು ಕಂಡು ಸರ್ವಜನರಿಗೂ ಆನಂದವಾಗುವಂತೆ ಅಥವಾ ಗಂಗಾ ಇತ್ಯಾದಿ ಪವಿತ್ರ ನದಿಗಳ ದರ್ಶನದಿಂದ ಪಾಪಗಳ ಕ್ಷಾಲನೆಯಾಗುವಂತೆ ।೪೭೫॥ ಈ ರೀತಿಯಾಗಿ ಯೋಗಿಗಳ ದರ್ಶನವೂ ಕೂಡ ಭಾಗ್ಯವಿಲ್ಲದೇ ಆಗುವುದಿಲ್ಲ. ಅವರ ಚರಣಗಳ ದರ್ಶನ ಪಡೆದವರು ಭವರೋಗದಿಂದ ಸದೈವ ಮುಕ್ತರಾಗುವರು ।೪೭೬॥ ಯೋಗಿಗಳ ದರ್ಶನ ಅಥವಾ ಸ್ಪರ್ಶನವು ಲಭಿಸುವುದು ಸಾಧ್ಯವಾಗದಿದ್ದಲ್ಲಿ, ಅಂತಃಕರಣದಿಂದ ಅವರ ನಾಮಸ್ಮರಣೆಯನ್ನು ಮಾಡಬೇಕು. ಇದರಿಂದ ಸಂಸಾರದಲ್ಲಿನ ಸಂಪೂರ್ಣ ದುಃಖವು ಇಲ್ಲದಾಗುವುದು ।೪೭೭॥ ಭಗವಂತನ ನಾಮಸ್ಮರಣೆಯನ್ನು ಮಾಡುವುದು ಬಿಟ್ಟು ಆತನ ಭಕ್ತನ ನಾಮಸ್ಮರಣೆಯಿಂದ ಭವಬಂಧವು ಹೇಗೆ ಮುರಿದೀತೆಂದು ನೀನು ಸರ್ವಥಾ ಹೇಳದಿರು ।೪೭೮॥ ನಿಜವಾಗಿ ಹೇಳಬೇಕೆಂದರೆ ದೇವರಿಗೆ ಮೊದಲೇ ಹೆಸರಿಲ್ಲ, ಭಕ್ತನು ದೇವರ ಪ್ರತಿಷ್ಠಾಪನೆಯನ್ನು ಮಾಡಿ ಆತನಿಗೆ ನಾಮರೂಪ ಇತ್ಯಾದಿ ಅನೇಕ ವಿಲಾಸಗಳನ್ನು ಅರ್ಪಿಸಿರುವನು ।೪೭೯॥ ಈ ಪ್ರಕಾರವಾಗಿಯೇ ಭಕ್ತರು ಪ್ರೇಮದಿಂದ ದೇವರ ಪ್ರತಿಷ್ಠೆಯನ್ನು ಬೆಳೆಸಿದರು. ಮತ್ತು ಆತನನ್ನು ವೈಕುಂಠದಲ್ಲಿ ತಂದು ಕುಳ್ಳಿರಿಸಿದರು. ಭಕ್ತನು ದೇವರಲ್ಲಿ ನಿಸ್ವಾರ್ಥವಾಗಿ ಪ್ರೀತಿಸುವುದರಿಂದ ದೇವರು ಆತನ ಆಜ್ಞೆಯಂತೆ ವರ್ತಿಸುವನು ।೪೮೦॥ ದೇವನು ಭಕ್ತನ ಶಬ್ದದಂತೆ ಈ ಕಡೆ ನರನೂ ಅಲ್ಲ, ಆ ಕಡೆ ಸಿಂಹವೂ ಅಲ್ಲ, ಇಂತಹ ರೂಪವನ್ನು ಧರಿಸಿ ಕಂಬದಲ್ಲಿ ಪ್ರಕಟನಾದನು. ಹಾಗೆಯೇ ಭಕ್ತನ ವಚನವನ್ನು ನಿಜಮಾಡಿ ತೋರಿಸಿದನು ।೪೮೧॥ ಈಗಲೂ ಪ್ರತ್ಯಕ್ಷ ಪ್ರಮಾಣವು ಇದ್ದೇ ಇದೆ. ಜ್ಞಾನಾನಂದ ಘನನಾದ ದೇವನು ತನ್ನ ದಾಸರ ವಚನಕ್ಕಾಗಿ ಕಲ್ಲಿನ ಮೂರ್ತಿಯಲ್ಲಿ ಪ್ರಕಟನಾಗುವನು ।೪೮೨॥ ಭಕ್ತರ ಭಕ್ತಿಯ ಭಾರದಿಂದ ಅತಿಶಯವಾಗಿ ಆಭಾರಿಯಾಗಿರುವನು. ಇವರ ಉಪಕಾರಭಾರದಿಂದ ಬಾಗಿಬಿಡುವನು. ಆದ್ದರಿಂದ ಭಕ್ತನ ವಚನವನ್ನು ಉಲ್ಲಂಘಿಸಲಾರನು. ಭಕ್ತರ ಪ್ರೇಮಕ್ಕಾಗಿ ದೇವನು ಬಹುಕರುಣೆಯಾಗುವನು ।೪೮೩॥ ಆದ್ದರಿಂದ ಭಕ್ತರ ನಾಮಸ್ಮರಣೆಯು ಎಲ್ಲಿ ಆಗುವುದೋ, ಅಲ್ಲಿ ದೇವನಿಗೆ ಧಾವಿಸುತ್ತ ಹೋಗಬೇಕಾಗುವುದು. ಭಕ್ತರ ಉಪಕಾರದಿಂದ ಮುಕ್ತನಾಗುವುದಕ್ಕಾಗಿ ಆತನಿಗೆ ತ್ವರಿತವಾಗಿ ಅಂಗೀಕರಿಸುವನು ।೪೮೪॥ ಆದ್ದರಿಂದ ಭಕ್ತರ ನಾಮಸ್ಮರಣೆಯನ್ನು ಮಾಡಲು ಭವಬಂಧನದ ವ್ಯಥೆಯು ಸಹಜವಾಗಿ ಮುರಿದು ಬೀಳುವುದು. ಹೀಗೆ ಹೇಳುತ್ತಿರಲು ಅವಧೂತನ ಪ್ರೇಮವು ತುಂಬಿಬಂದಿತು ।೪೮೫॥ ಪುನಃ ಹೀಗೆ ಹೇಳಿದರು ; ಈಗ ಮುಂದಿನ ನನ್ನ ಗುರು ಅಗ್ನಿಯಾಗಿದೆ. ಇದರ ಲಕ್ಷಣವನ್ನು ಹೇಳುವೆ, ಅದನ್ನು ಕಿವಿಗೂ ಮನಕ್ಕೂ ಒಂದು ಮಾಡಿ ಬಹಳ ಲಕ್ಷ ಕೊಟ್ಟು ಕೇಳು ।೪೮೬॥

ತೇಜಸ್ವೀ ತಪಸಾ ದೀಪ್ತೋ ದುರ್ಧರ್ಷೋದರ ಭಾಜನಃ । ಸರ್ವಭಕ್ಷ್ಯೋಽಪಿ ಯುಕ್ತಾತ್ಮಾ ನಾದತ್ತೇಮಲಮಗ್ನಿವತ್ ॥೫೫॥

ಅರ್ಥ :-ಜ್ಞಾನದಿಂದ ತೇಜಸ್ವೀ, ತಪದಿಂದ ದೇದಿಪ್ಯಮಾನ, ಅಕ್ಷೋಭ್ಯ ಹಾಗೂ ಯಾರಿಂದಲೂ ಸಿಟ್ಟಿಗೆ ಬಾರದವನು, ಸಿಕ್ಕಿದ್ದನ್ನು ಉದರದಲ್ಲಿ ಹಾಕುವವನು, ಸರ್ವಭಕ್ಷ್ಯರಾಗಿದ್ದರೂ ಮುನಿಯು ಅಗ್ನಿಯಂತೆ ಮಲಿನತೆಯ ಸ್ವೀಕಾರವನ್ನು ಮಾಡಲಾರದವನು.

ಅಗ್ನಿ ನಿಜತೇಜೇ ದೈದೀಪ್ಯಮಾನ । ಸಾಕ್ಷಾತ ಹಾತೀ ನ ಧರವೇ ಜಾಣ । ಉದರಮಾತ್ರೀ ಸಾಂಠವಣ। ಸರ್ವ ಭಕ್ಷಣ ನಿಜತೇಜೇ ॥೪೮೭॥ ತೈಸಾಚಿ ಯೋಗಿಯಾಹೀಜಾಣ । ಭಗವದ್ಭಾವೇ ದೇದಿಪ್ಯಮಾನ । ತ್ಯಾಸೀ ಧರಾವಯಾ ಆಂಗವಣ । ನವ್ಹೇ ಜಾಣ ಸುರನರಾ ॥೪೮೮॥ ಹಾತೀ ನ ಧರವೇ ಖದಿರಾಂಗಾರು । ತೈಸಾ ಯೋಗಿಯಾ ಅತಿದುರ್ಧರೂ । ತಯಾಸೀ ನ ಶಕೇ ಆವರೂ । ಮಾಯಾವ್ಯವಹಾರೂ ಗುಣೇಸೀ ॥೪೮೯॥ ಅಗ್ನೀಸೀ ಜೇವೀ ಮುಖಚಿ ಪಾತ್ರ । ತೈಸೇ ಯೋಗಿಯಾಸೀ ಉದರ ಮಾತ್ರ। ಠೇವಾ ಠೇವಣೇ ವಿಚಿತ್ರ । ನಾಹೀ ಪಾತ್ರ ಗಾಂಠೀಸೀ ॥೪೯೦॥ ಅಗ್ನೀನೇ ಜೇ ಜೇ ಸೇವಣೇ । ತೇ ಜಾಳೂನಿ ಆಪುಲ್ಯಾ ಐಸೇ ಕರಣೇ । ಯಾಪರೀ ಸರ್ವ ಭಕ್ಷಣೇ ।ನಾಹೀ ಸ್ಪರ್ಶಣೇ ಮಳಾಸೀ ॥೪೯೧॥ ಚಂದನ ಸುವಾಸೇ ದುರ್ಗಂಧ ಧುರೇ । ನಿಂಬ ಕಡೂ ಊಂಸ ಗೋಡಿರೇ। ತೇ ಜಾಳೂನಿ ಆಕಾರವಿಕಾರೇ । ಕೀಜೇ ವೈಶ್ವಾನರೇ ಆಪಣಾಐಸೀ ॥೪೯೨॥ ತೈಸಾ ಯೋಗೀ ಜೇ ಅಂಗೀಕಾರೀ । ತೇ ಆತ್ಮದೃಷ್ಟೀ ನಿರ್ಧಾರೀ । ದೋಷ ದವಡೂನಿಯಾ ದೂರೀ । ಮಗ ಸ್ವೀಕಾರೀ ನಿಜಬೋಧೇ॥೪೯೩॥ ಭೋಗ್ಯ ಜೇ ಭೋಗು ಜಾಯೇ । ತೇಥ ಆತ್ಮಪ್ರತೀತಿ ಪಾಹೇ । ಭೋಕ್ತಾ ತದ್ರೂಪಚಿ ಹೋಯೇ । ಹಾ ಭೋಗು ಪಾಹೇ ಯೋಗಿಯಾ ॥೪೯೪॥ ಅಗ್ನೀತ ಪಡಿಲೇ ಜೇ ಸಮಳ । ತೇ ಅಗ್ನಿಮುಖೀ ಹೋಯ ನಿರ್ಮಳ । ಯೋಗಿಯಾ ಜೇ ಸೇವೀ ಅಳುಮಾಳ । ಪರಮ ಮಂಗಳ ತೇ ಹೋಯ ॥೪೯೫॥ ಅಗ್ನಿಮುಖೀ ಯಾಗು ಘಡೇ । ತೇಣೇ ಅದೃಷ್ಟೀ ಸ್ವರ್ಗ ಜೋಡೇ । ಯೋಗಿಯಾಚೇ ಮುಖೀ ಜೇ ಪಡೇ । ತೇಣೇ ಜೋಡೇ ನಿಜಪದ ॥೪೯೬॥ ಆಣಿಕ ಅಗ್ನೀಚೇ ಚಿನ್ಹ । ಐಕ ರಾಯಾ ಸಾವಧಾನ । ತೇಚಿ ಸಾಧಕಾಸೀ ಸಾಧನ । ಸಿದ್ಧ ಲಕ್ಷಣ ಸಿದ್ಧಾಚೇ ॥೪೯೭॥

ಕ್ವಚಿಚ್ಛನ್ನ ಕ್ವಚಿತ್‌ಸ್ಪಷ್ಟ ಉಪಾಸ್ಯಃಶ್ರೇಯ ಇಚ್ಛತಾಮ್ । ಭುಂಕ್ತೇ ಸರ್ವತ್ರ ದಾತೃಣಾಂ ದಹನ್ ಪ್ರಾಗುತ್ತರಾಶುಭಮ್ ॥೫೬॥

ಅರ್ಥ:- ಅಗ್ನಿಯು ಪ್ರಕಟ, ಅಪ್ರಕಟವಾಗುವಂತೆ ಸಾಧುಪುರುಷನು ಕೆಲವೊಮ್ಮೆ ಗುಪ್ತನಾಗಿರುವನು. ಕೆಲವೊಮ್ಮೆ ಪ್ರಕಟನಾಗುವನು. ಇನ್ನೂ ಕೆಲವೊಮ್ಮೆ ಕಲ್ಯಾಣದ ಇಚ್ಛೆಯನ್ನು ಮಾಡುವ ಪುರುಷನು ಆತನ ಉಪಾಸನೆಯನ್ನು ಮಾಡುವ ರೀತಿಯಲ್ಲಿ ಪ್ರಕಟನಾಗುವನು. ಎಲ್ಲರಿಂದಲೂ ಅನ್ನಾದಿಕಗಳನ್ನು ಸ್ವೀಕರಿಸುವನು. ದಾನಿಯ ಹಿಂದಿನ,ಮುಂದಿನ ಪಾಪಗಳನ್ನೆಲ್ಲ ನಾಶಮಾಡುವನು.

ಅಗ್ನಿಯು ತನ್ನ ಸಹಜವಾದ ಸ್ವಭಾವದಿಂದ ದೇದಿಪ್ಯಮಾನವಾಗಿರುವುದು. ಅದನ್ನು ಪ್ರತ್ಯಕ್ಷವಾಗಿ ಕೈಯಿಂದ ಹಿಡಿಯಲು ಬರುವುದಿಲ್ಲ. ಆದರೆ ಅಗ್ನಿಯು ಪ್ರತಿಯೊಂದು ಪ್ರಾಣಿಗಳ ಉದರದಲ್ಲಿ ಇದ್ದುಕೊಂಡು ಸ್ವಭಾವತಃ ಪ್ರದೀಪ್ತವಾಗಿ ಸರ್ವವನ್ನೂ ಭಕ್ಷಿಸುತ್ತಿರುವುದು ॥೪೮೭॥ ಅದರಂತೆ ಯೋಗಿಯೂ ಸಹ ಭಗವದ್ಭಕ್ತಿಯಿಂದ ದೇದಿಪ್ಯಮಾನರಾಗಿರುವನು. ಇವನನ್ನು ಹಿಡಿಯುವ ಸಾಮರ್ಥ್ಯವು ನರರಿಗೂ ದೇವತೆಗಳಿಗೂ ಇರುವುದಿಲ್ಲ ॥೪೮೮॥ ಜಾಲಿಯ ಬೆಂಕಿಯ ಕೆಂಡವನ್ನು ಕೈಯಿಂದ ಹಿಡಿಯುವುದಾಗುವುದಿಲ್ಲ. ಅದರಂತೆ ಯೋಗಿಯು ದುರ್ಧರನಾಗಿರುವನು. ಗುಣಸಹಿತ ಮಾಯೆಯ ವರ್ತಮಾನ ವ್ಯವಹಾರ ಕೂಡ ಆತನನ್ನು ಹಿಡಿಯಲು ಸಾಧ್ಯವಿಲ್ಲ ॥೪೮೯॥ ಅಗ್ನಿಗೆ ಮುಖ ಒಂದೇ ಪಾತ್ರೆಯಾಗಿರುವುದು. ಅದರಂತೆ ಯೋಗಿಯ ಪಾತ್ರೆ ಎಂದರೆ ಅವನ ಉದರವು ಒಂದೇ ಆಗಿರುವುದು. ಯಾವುದಾದರೂ ವಿಶಿಷ್ಟ ವಸ್ತುಗಳನ್ನು ಸಂಗ್ರಹಿಸಬೇಕೆಂದರೆ ಅವನಲ್ಲಿ ಬೇರೆ ಯಾವ ಪಾತ್ರೆಯೂ ಇರುವುದಿಲ್ಲ ॥೪೯೦॥ ಅಗ್ನಿಯು ಸೇವನೆ ಮಾಡಿದ ಪದಾರ್ಥಗಳನ್ನು ಸುಟ್ಟು ಅವುಗಳನ್ನು ತನ್ನಂತೆ ಮಾಡಿಕೊಳ್ಳುವುದು. ಅದರಂತೆ ಯೋಗಿಯೂ ಸರ್ವವನ್ನೂ ಭಕ್ಷಿಸುವನು. ಆದರೆ ಮಲಿನತೆಗೆ ಸ್ಪರ್ಶ ಸಹ ಮಾಡುವುದಿಲ್ಲ ॥೪೯೧॥ ಸುಗಂಧವಾದ ಚಂದನವಿರಲಿ, ಅಥವಾ ದುರ್ಗಂಧಯುಕ್ತ ಯಾವುದೇ ಕಟ್ಟಿಗೆಯಾಗಿರಲಿ, ವಿಷವಾಗಿರುವ ಬೇವು ಇರಲಿ ಅಥವಾ ಸಿಹಿಯಾದ ಕಬ್ಬು ಇರಲಿ, ಅಗ್ನಿಯು ಅವುಗಳ ಆಕಾರ ವಿಕಾರಗಳನ್ನು ಸುಟ್ಟು ತನ್ನಂತೆ ಮಾಡಿಕೊಳ್ಳುವುದು ॥೪೯೨॥ ಅದರಂತೆ ಯೋಗಿಯು ಅಂಗೀಕಾರವನ್ನು ಮಾಡಿದವನನ್ನು ಆತನಲ್ಲಿ ಆರಂಭದಲ್ಲಿ ಆತ್ಮದೃಷ್ಟಿಯಿಂದ ನೋಡುವನು. ಹಾಗೂ ಆತನ ದೋಷಗಳನ್ನೆಲ್ಲಾ ಕಳೆಯುವನು. ಆತ್ಮಜ್ಞಾನದಿಂದ ಆತನನ್ನು ಸ್ವೀಕರಿಸುವನು ॥೪೯೩॥ ಯಾವ ಭೋಗಗಳನ್ನು ಭೋಗಿಸಲು ಪ್ರವರ್ತನಾಗುವನೋ, ಅಲ್ಲಿ ಆತನು ಆತ್ಮಪ್ರಚೀತಿಯನ್ನು ಕಾಣುವನು. ಆದ್ದರಿಂದ ಭೋಕ್ತನು ಕೂಡ ತದ್ರೂಪನಾಗುವನು. ಇದು ಯೋಗಿಯ ಭೋಗವಾಗಿರುವುದು ॥೪೯೪॥ ಅಗ್ನಿಯಲ್ಲಿ ಬಿದ್ದ ಅಪವಿತ್ರ ವಸ್ತುಗಳು ಅಗ್ನಿಮುಖದಿಂದ ಪವಿತ್ರವಾಗುವುವು. ಅದರಂತೆ ಯೋಗಿಯು ಸೇವನೆ ಮಾಡಿದ್ದೆಲ್ಲವೂ ಪವಿತ್ರವಾಗುವುವು ॥೪೯೫॥ ಅಗ್ನಿಮುಖದಿಂದ ಯಜ್ಞವು ಸಾಧಿಸುವುದು. ಈ ಕರ್ಮದಿಂದ ಸ್ವರ್ಗಪ್ರಾಪ್ತಿಯು ಸಾಧಿಸುವುದು. ಅದರಂತೆ ಯೋಗಿಗಳ ಮುಖದಲ್ಲಿ ಬಿದ್ದವರೆಲ್ಲರೂ ಸಹಜವಾಗಿ ಆತ್ಮಪದವಿಯನ್ನು ಸಾಧಿಸುವರು ॥೪೯೬॥ ಹೇ ರಾಜನೇ, ಅಗ್ನಿಯ ಮತ್ತೊಂದು ಲಕ್ಷಣವನ್ನು ಹೇಳುವೆನು. ಸಾವಧಾನ ಚಿತ್ತದಿಂದ ಕೇಳು, ಇದುವೇ ಸಾಧಕರ ಸಾಧ್ಯವು ಹಾಗೂ ಸಿದ್ಧಿಯ ಲಕ್ಷಣವಾಗಿರುವುದು ॥೪೯೭॥

ಭೀತರೀ ತೇಜಸ್ವೀ ವರೀ ಝಾಂಕಿಲಾ । ಹೋಮಕುಂಡೀ ಅಗ್ನಿ ಪುರಿಲಾ । ಕಾ ಯಜ್ಞಶಾಳೇ ಪ್ರಜ್ವಳಲಾ । ಯಾಜ್ಞಿಕೀ ಕೇಲಾ ಮಹಾಯಾಗು ॥೨೯೮॥ ಜೋ ಜೋ ಉಪಾಸಕಾ ಭಾವೋ ಜೀವೀ । ತ್ಯಾ ತ್ಯಾ ಶ್ರೇಯಾತೇ ಉಪಜವೀ । ಪೂರ್ವೋತ್ತರ ಅಶುಚಿತ್ವೆ ಆಘವೀ । ಜಾಳೂನಿ ಹವೀ ಸೇವಿತು ॥೨೯೯॥ ತೈಶೀಚೀ ಯೋಗಿಯಾಚೀ ಲೀಳಾ । ಭಾವಿಕಾ ಪ್ರಕಟ ದಿಸೇ ಡೋಳಾ । ಏಕಾ ಗುಪ್ತಚಿ ಹೋಊನಿ ಠೇಲಾ । ನ ದಿಸೇ ಪಾಹಿಲಾ ಸರ್ವಥಾ ॥೩೦೦॥ ಐಶಿಯಾಚ್ಯಾಹೀ ಠಾಯೀ । ಭಾವಬಳ ಭಾವಿಕ ಪಾಹೀ । ಅರ್ಪಿತೀ ಜೇ ಜೇ ಕಾಂಹೀ । ತೇಣೇ ಮೋಕ್ಷ ಪಾಹೀ ಮುಮುಕ್ಷಾ ॥೩೦೧॥ ತೇ ಪಡತಾಂಚಿ ಯೋಗಿಯಾಂಚ್ಯಾ ಮುಖೀ । ಸಂಚಿತ ಕ್ರಿಯಾಮಾಣೇ ಅಸಕೀ । ಜಾಳೋನಿಯಾ ಏಕಾಏಕೀ । ಕರೀ ಸುಖೀ ನಿಜಪದೀ ॥೩೦೨॥ ಆಣೇಕಹೀ ಅಗ್ನೀಚೇ ಲಕ್ಷಣ । ರಾಯಾ ತುಜ ಮೀ ಸಾಂಗೇನ ಜಾಣ । ಜೇಣೇ ಸಗುಣ ಆಣಿ ನಿರ್ಗುಣ । ದಿಸೇ ಸಮಾನ ಸಮಸಾಮ್ಯೇ ॥೩೦೩॥

ಸ್ವಮಾಯಯಾ ಸೃಷ್ಟಮಿದಂ ಸದಸಲ್ಲಕ್ಷಣಂ ವಿಭುಃ । ಪ್ರವಿಷ್ಟ ಈಯತೇ ತತ್ತತ್ಸ್ವರೂಪೋಗ್ನಿರಿವೈಧಸಿ ॥೪೭॥

ಅರ್ಥ :- ಭಿನ್ನ ಭಿನ್ನ ಗಾತ್ರಗಳ, ಭಿನ್ನ ಭಿನ್ನ ಗುಣಗಳ ಕಟ್ಟಿಗೆಯ ತುಂಡುಗಳಲ್ಲಿ ಬೆಂಕಿಯು ವಿಭಿನ್ನವಾಗಿ ಪ್ರಕಟವಾಗುತ್ತದೆ. ಸರ್ವಶಕ್ತನಾದ ಪರಮಾತ್ಮನು ತನ್ನದೇ ಶಕ್ತಿಯು ಸೃಷ್ಟಿಸಿದ ಉಚ್ಚ, ನೀಚ ಜೀವರೂಪಗಳ ದೇಹಗಳನ್ನು ಪ್ರವೇಶಿಸಿ ಪ್ರತಿಯೊಂದರ ರೂಪವನ್ನು ತಳೆದಿರುವಂತೆ ಕಾಣುತ್ತಾನೆ.

ಅಗ್ನಿ ಸಹಜೇ ನಿರಾಕಾರ । ತ್ಯಾಸೀ ಕಾಷ್ಠಾನುರೂಪೇ ಆಕಾರ । ದೀರ್ಘಚಕ್ರ ವರ್ತುಲ ಥೋರ । ನಾನಾಕಾರ ಭಾಸತು ॥೩೦೪॥ ತೈಸೀಚ ಭಗವಂತಾಚೀ ಭಗವದ್ಗತೀ । ಸ್ವಮಾಯಾಕಲ್ಪಿತ ಕಲ್ಪನಾಕೃತೀ । ತೇಥ ಪ್ರವೇಶಲಾ ಸಹಜಸ್ಥಿತೀ । ಬಹುಧಾ ವ್ಯಕ್ತೀ ತೋ ಭಾಸೇ ॥೩೦೫॥ ಜೈಸೇ ಗಂಗೇಚೇ ಏಕ ಜಳ । ಭಾಸೇ ಭಂವರೇ ಲಹರೀ ಕಲ್ಲೋಳ । ತೈಸಾ ಜಗದಾಕಾರೇ ಅಖಿಲ । ಭಾಸೇ ಸಕಳ ಜಗದಾತ್ಮಾ ॥೩೦೬॥ ಕಾ ಛಾಯಾಮಂಡಪೀಚ್ಯಾ ಚಿತ್ರಾಸೀ । ದೀಪ ಪ್ರಭಾ ಭಾಸೇ ಜೈಸೀ । ರಾಮ ರಾವಣ ಯಾ ನಾಂವೇಂಸೀ । ದಾವೀ ಜಗಾಸೀ ನಟನಾಟ್ಯ ॥೩೦೭॥ ತೈಸಾ ನಾನಾವಿಧಾ ವ್ಯಕ್ತೀ । ನಾನಾ ಮತೇ ನಾನಾಕೃತೀ । ತೇಥ ಪ್ರವೇಶೋನಿ ಶ್ರೀಪತೀ । ಸಹಜಸ್ಥಿತೀ ನಾಚವೀ ॥೩೦೮॥ ತೈಶೀ ಯೋಗಿಯಾಚೀ ಸ್ಥಿತೀ । ಪಾಹತಾ ನಾನಾಕಾರ ವ್ಯಕ್ತೀ । ಆಪಣೆಯಾತೇ ದೇಖೇ ಸಮವೃತ್ತಿ । ಭೇದಭ್ರಾಂತಿ ತ್ಯಾ ನಾಹೀ ॥೩೦೯॥

ಹೋಮಕುಂಡದಲ್ಲಿ ಹುಗಿದಿರುವ ಅಗ್ನಿಯು ಒಳಭಾಗದಲ್ಲಿ ತೇಜಸ್ವಿಯಾಗಿದ್ದು ಮೇಲ್ಭಾಗದಲ್ಲಿ ಬೂದಿಯಿಂದ ಮುಚ್ಚಲ್ಪಟ್ಟಿರುವುದು. ಅಥವಾ ಯಜ್ಞಶಾಲೆಯಲ್ಲಿ ಅದನ್ನು ಪ್ರಜ್ವಲಿತಗೊಳಿಸಿ ಯಾಜ್ಞಿಕರು ದೊಡ್ಡ ಯಜ್ಞವನ್ನು ಮಾಡುವರು ॥೨೯೮॥ ಉಪಾಸಕರ ಮನದಲ್ಲಿ ಯಾವ ಯಾವ ಭಾವವಿರುವುದೋ, ಆ ಶ್ರೇಯವನ್ನು ಅಗ್ನಿಯು ಅವರಿಗೆ ಪ್ರಾಪ್ತಮಾಡಿಕೊಡುವುದು. ಮತ್ತು ಪೂರ್ವೋತ್ತರದಲ್ಲಿ ಸರ್ವ ಪಾಪಗಳನ್ನು ಸುಟ್ಟು ಹವಿಗ್ರಹಣವನ್ನು ಮಾಡುವುದು ॥೨೯೯॥ ಯೋಗಿಗಳ ಲೀಲೆಯು ಸಹ ಭಾವಿಕರಿಗೆ ಹೀಗೆಯೇ ತೋರುವುದು. ಈತನು ಅನೇಕರಿಂದ ಸಂಪೂರ್ಣ ಗುಪ್ತನಾಗಿರುವನು. ಆತನಿಗೆ ಶೋಧಿಸಿದರೂ ಎಲ್ಲಿಯೂ ಸರ್ವಥಾ ದೊರಕಲಾರನು ॥೩೦೦॥ ಆದರೆ ಭಾವಿಕ ಜನರು ಆತನಿಗೆ ಸರ್ವವನ್ನೂ ಅರ್ಪಿಸುವರು. ಇದರಿಂದ ಮುಮುಕ್ಷುಗಳವರಿಗೆ ಮೋಕ್ಷ ಪ್ರಾಪ್ತವಾಗುವುದು ॥೩೦೧॥ ಇವರು ಯೋಗಿಗಳ ಮುಖದಲ್ಲಿ ಬಿದ್ದಾಕ್ಷಣವೇ ಇವರ ಸಂಚಿತ ಕ್ರಿಯಾಮಾಣ ಕರ್ಮಗಳೆಲ್ಲವನ್ನೂ ಸುಟ್ಟು ಹಾಕಿ ಆತನು ಇವರಿಗೆ ಆತ್ಮಪದವಿಯನ್ನು ಕೊಟ್ಟು ಸುಖಿಗಳನ್ನಾಗಿ ಮಾಡುವನು ॥೩೦೨॥ ಹೇ ರಾಜನೇ, ಯಾವುದರಿಂದ ಸಗುಣ ಮತ್ತು ನಿರ್ಗುಣವು ಸಾಮ್ಯಭಾವದಿಂದ ಏಕರೂಪವಾಗಿ ತೋರುವುದೋ, ಅಂತಹ ಅಗ್ನಿಯ ಮತ್ತೊಂದು ಲಕ್ಷಣವನ್ನು ಹೇಳುವೆನು ಅದನ್ನು ಕೇಳು ॥೩೦೩॥

ಅಗ್ನಿಯು ಸ್ವಭಾವತಃ ನಿರಾಕಾರವಾಗಿರುವುದು. ಅದಕ್ಕೆ ಕಟ್ಟಿಗೆಯ ಆಕಾರದಂತೆ ಉದ್ದ, ಚಕ್ರಾಕಾರ, ಅಂಕಡೊಂಕ ಅಥವಾ ನಾನಾ ಪ್ರಕಾರದ ಆಕಾರಗಳಿಂದ ತೋರುವುದು ॥೩೦೪॥ ಭಗವತ್ಸ್ವರೂಪ ಗತಿಯೂ ಕೂಡ ಹಾಗೆಯೇ ಇರುವುದು. ಸ್ವಮಾಯೆಯ ಕಲ್ಪನೆಯಿಂದಲೇ ಆಕೃತಿಗಳನ್ನು ನಿರ್ಮಿಸಿ ಅವುಗಳಲ್ಲಿ ಆತನು ಸಹಜಸ್ಥಿತಿಯಲ್ಲಿ ಪ್ರವೇಶಿಸಿರುವುದರಿಂದ ಅನೇಕ ರೂಪದಿಂದ ಕಾಣುವನು ॥೩೦೫॥ ಗಂಗೆಯ ಜಲವು ಒಂದೇ ಆಗಿದ್ದರೂ, ತಿರುಗಣೆ, ತೆರೆಗಳು, ಪ್ರವಾಹ ಇತ್ಯಾದಿ ಭಿನ್ನಭಿನ್ನ ರೂಪಗಳಿಂದ ತೋರುವುದು. ಅದರಂತೆ ಅಖಿಲ ವಿಶ್ವದ ಆಕಾರದಿಂದ ಸರ್ವವೂ ವಿಶ್ವಾತ್ಮವೇ ಭಾಸವಾಗುವುದು ॥೩೦೬॥ ಅಥವಾ ಛಾಯಾ ಮಂಟಪದ ಚಿತ್ರಗಳು ದೀಪದ ಪ್ರಕಾಶದಿಂದಲೇ ಸಿದ್ಧವಾಗಿರುವುವು. ರಾಮ ರಾವಣ ಇತ್ಯಾದಿ ನಾಮಗಳಿಂದ ಜನರಿಗೆ ಪರದೆಯ ಮೇಲೆ ನಟಿಸಿ ತೋರಿಸುವುವು ॥೩೦೭॥ ಅದರಂತೆ ನಾನಾ ಪ್ರಕಾರಗಳ ಪ್ರಾಣಿಗಳು ನಾನಾ ರೀತಿಗಳ ಆಕೃತಿಗಳು ಅನೇಕ ಮತಗಳು ಇವರೆಲ್ಲರಲ್ಲಿಯೂ ಪ್ರವೇಶ ಮಾಡಿ ಶ್ರೀಪತಿಯು ಅವರನ್ನು ಸ್ವಭಾವಿಕವಾಗಿ ಕುಣಿಸುತ್ತಿರುವನು ॥೩೦೮॥ ಯೋಗಿಯ ಸ್ಥಿತಿಯೂ ಸಹ ಹಾಗೆಯೇ ಇರುವುದು. ಅನೇಕ ಆಕಾರಗಳ ವ್ಯಕ್ತಿಗಳನ್ನು ಕಾಣುತ್ತಿದ್ದರೂ ಆತನು ಸಮವೃತ್ತಿಯಿಂದ ಅವರನ್ನು ಆತ್ಮರೂಪದಿಂದ ಕಾಣುವನು. ಆದ್ದರಿಂದ ಆತನಿಗೆ ಯಾವುದೇ ಭೇದ ಭ್ರಾಂತಿಯಾಗುವುದಿಲ್ಲ ॥೩೦೯॥

ತೇಥ ಜೇ ಜೇ ಕಾಂಹೀ ಪಾಹೇ । ತೇ ತೇ ಆಪಣಚಿ ಆಹೇ । ಯಾ ಉಪಪತ್ತೀ ಉಭವೂನಿ ಬಾಹೇ । ಸಾಂಗತಾಹೇ ಅವಧೂತು ।೫೧೦।। ಯಾ ದೇಹಾಸೀ ಜನ್ಮ ನಾಶು । ಆತ್ಮಾ ನಿತ್ಯ ಅವಿನಾಶು । ಹಾ ದೃಢ ಕೇಲಾ ವಿಶ್ವಾಸು । ಗುರು ಹಿಮಾಂಶು ಕರೂನಿ ।೫೧೧।।

ವಿಸರ್ಗಾದ್ಯಾಃಶ್ಮಶಾನಾಂತಾ ಭಾವಾ ದೇಹಸ್ಯ ನಾತ್ಮನಃ । ಕಲಾನಾಮಿವ ಚಂದ್ರಸ್ಯಕಾಲೇನಾವ್ಯಕ್ತವರ್ತ್ಮನಾ ।೪೮।।

ಅರ್ಥ :-ಜನನದಿಂದ ಆರಂಭವಾಗಿ ಸಾವಿನಲ್ಲಿತುದಿ ಮುಟ್ಟುವ ತನ್ನ ಲೌಕಿಕ ಜೀವನದ ನಾನಾ ಹಂತಗಳೆಲ್ಲ ದೇಹದ ಗುಣಗಳಾಗಿವೆ. ಅವು ಆತ್ಮವನ್ನು ಬಾಧಿಸುವುದಿಲ್ಲ. ಹೇಗೆಂದರೆ ಚಂದ್ರನು ಕಲಾವೃದ್ಧಿ ಮತ್ತು ಕಲಾಕ್ಷಯಗಳನ್ನು ಹೊಂದುವಂತೆ ಕಂಡರೂ ಅವನು ಅವುಗಳಿಂದ ಬಾಧಿತನಾಗುವುದಿಲ್ಲ. ಅಂತಹ ಬದಲಾವಣೆಗಳು ಅಗ್ರಾಹ್ಯವಾದ ಕಾಲನ ಚಲನೆಯಿಂದಾಗಿ ತಪ್ಪದೇ ಸಂಭವಿಸುತ್ತವೆ.

ಶುಕ್ಲಕೃಷ್ಣಪಕ್ಷಪಾಡೀ । ಚಂದ್ರಕಳಾಂಚೀ ವಾಢೀಮೋಡಿ । ತೇ ನಿಜಚಂದ್ರೀ ನಾಹೀ ವೋಢೀ । ತೈಸೀ ರೋಕಡೀ ಯೋಗಿಯಾ ।೫೧೨।। ಜನ್ಮನಾಶಾದಿ ಷಡ್ವಿಕಾರ । ಹೇ ದೇಹಾಸೀಚ ಸಾಚಾರ । ಆತ್ಮಾ ಅವಿನಾಶೀ ನಿರ್ವಿಕಾರ । ಅನಂತ ಅಪಾರ ಸ್ವರೂಪತ್ವೇ ।೫೧೩।। ಘಟು ಸ್ವಭಾವೇ ನಾಶವಂತು ಅಸೇ । ತ್ಯಾಮಾಜೀ ಚಂದ್ರಮಾ ಬಿಂಬಲಾಸೇ । ನಶ್ವರೀ ಅನಶ್ವರ ದಿಸೇ । ವಿಕಾರದೋಷೇ ಲಿಂಪೇನಾ ।।೫೧೪।। ಘಟಾಸವೇ ಚಂದ್ರಾಸೀ ಉತ್ಪತ್ತೀ । ನಾಹೀ ನಾಶಾಸವೇ ನಾಶಪ್ರಾಪ್ತೀ । ಚಂದ್ರಮಾ ಆಪುಲೇ ಸಹಜಸ್ಥಿತೀ । ನಾಶ ಉತ್ಪತ್ತಿರಹಿತು ।೫೧೫।। ತೈಸಾ ಯೋಗಿಯಾನಿಜರೂಪಪಣೇ । ದೇಹಾಸವೇ ನಾಹೀ ಹೋಣೇ । ದೇಹ ನಿಮಾಲ್ಯಾ ನಾಹೀ ನಿಮಣೇ । ಅಖಂಡಪಣೇ ಪರಿಪೂರ್ಣ ।೫೧೬।। ಕಾಳಾಚೀ ಅಲಕ್ಷ ಗತೀ । ದಾಖವೀ ನಾಶ ಆಣಿ ಉತ್ಪತ್ತೀ । ತೇ ಕಾಳಸತ್ತಾ ದೇಹಾಪ್ರತೀ । ಆತ್ಮಸ್ಥಿತೀ ನಾತಳೇ ।೫೧೭।। ಏವಂ ಕಾಳಾಚೇ ಬಳ ಗಾಢೇ । ವ್ಯಾಪ್ತಿ ಣತೀ ತೇ ದೇಹಾಚಿಪುಢೇ । ಪಾಹತಾ ಆತ್ಮಸ್ಥಿತೀ ಕಡೇ । ಕಾಳ ಬಾಪುಡೇ ತೇಥ ನಾಹೀ ।೫೧೮।। ಸೂಕ್ಷ್ಮ ಕಾಳಗತೀ ಸಾಂಗತಾ । ವೇಗೇ ಆಠವಲೇ ಅವಧೂತಾ । ಸಿಂಹಾವಲೋಕನೇ ಮಾಗುತಾ । ಅಗ್ನಿದೃಷ್ಟಾಂತಾ ಸಾಂಗತು ।೫೧೯।।

ಕಾಲೇನ ಹ್ಯೋಘವೇಗೇನ ಭೂತಾನಾಂ ಪ್ರಭವಾಪ್ಯಯೌ ।
ನಿತ್ಯಾವಪಿ ನ ದೃಶ್ಯೇತೇ ಆತ್ಮನೋಽಗ್ನೇರ್ಯಥಾರ್ಚಿಷಾಮ್ ।೪೯।।

ಅರ್ಥ :- ಅಗ್ನಿಯ ಜ್ವಾಲೆಯು ಅಥವಾ ದೀಪದ ಜ್ಯೋತಿಯು ಕ್ಷಣಕ್ಷಣಕ್ಕೂ ಹುಟ್ಟುತ್ತ ನಾಶವಾಗುತ್ತವೆ. ಈ ಕ್ರಮವು ಸತತವಾಗಿ ನಡೆದಿರುತ್ತದೆ. ಆದರಂತೆ ಜಲಪ್ರವಾಹದ ಸಮಾನವಾದ ವೇಗವುಳ್ಳ ಕಾಲನಿಂದ ಕ್ಷಣಕ್ಷಣಕ್ಕೂ ಪ್ರಾಣಿಗಳ ಶರೀರಗಳ ಉತ್ಪತ್ತಿ ಹಾಗೂ ವಿನಾಶವಾಗುತ್ತಿರುವುವು. ಆದರೆ ಅಜ್ಞಾನದಿಂದ ಇದು ತೋರುವುದಿಲ್ಲ.

ಆತನು ಯಾವ ಯಾವುದನ್ನು ಕಾಣುವನೋ ಅವರಲ್ಲಿ ಸ್ವತಃ ತಾನೇ ಇರುವನು. ಈ ಉಪಪತ್ತಿಯನ್ನು ಅವಧೂತನು ಕೈಮೇಲೆತ್ತಿ ಹೇಳಿದನು ।೫೧೦।। ದೇಹಕ್ಕೆ ಜನ್ಮ ಮೃತ್ಯುವಿರುವುದು. ಆತ್ಮವು ನಿತ್ಯ ಅವಿನಾಶಿಯಾಗಿರುವುದು. ಈ ಶ್ರದ್ಧೆಯನ್ನು ದೃಢಗೊಳಿಸುವುದಕ್ಕಾಗಿ ನಾನು ಚಂದ್ರನನ್ನು ಗುರುವನ್ನಾಗಿ ಮಾಡಿಕೊಂಡೆನು ।೫೧೧।।

ಚಂದ್ರನ ಕಲೆಗಳು ಶುಕ್ಲಪಕ್ಷಗಳಲ್ಲಿ ಬೆಳೆಯುವುವು. ಹಾಗೂ ಕೃಷ್ಣಪಕ್ಷಗಳಲ್ಲಿ ಕ್ಷಯಗೊಳ್ಳುವುವು. ಆದರೆ ಆದರಿಂದ ಚಂದ್ರನಿಗೆ ಯಾವ ವೃದ್ಧೀ ಅಥವಾ ಕ್ಷಯ ಇರುವುದಿಲ್ಲ. ನಿಜವಾಗಿಯೂ ಯೋಗಿಯ ಸ್ಥಿತಿಯು ಹಾಗೆಯೇ ಇರುವುದು ।೫೧೨।। ಜನ್ಮ ಮರಣ ಇತ್ಯಾದಿ ಷಡ್ವಿಕಾರಗಳು ದೇಹದ್ದಾಗಿರುವುದು. ಆತ್ಮಾ ಮಾತ್ರ ಸ್ವರೂಪತಃ ಅವಿನಾಶೀ, ನಿರ್ವಿಕಾರ, ಅನಂತ ಮತ್ತು ಅಪಾರವಾಗಿರುವುದು ।೫೧೩।। ಘಟವು ಮಾತ್ರ ಸ್ವಭಾವತಃ ನಾಶಿವಂತವಾಗಿರುವುದು. ಅದರಲ್ಲಿ ಚಂದ್ರನ ಪ್ರತಿಬಿಂಬವು ತೋರುವುದು. ಅದರಂತೆ ನಾಶಿವಂತ ದೇಹಗಳಲ್ಲಿ ಅವಿನಾಶ ತತ್ವವು ಕಾಣಿಸುತ್ತಿರುವುದು. ಅದು ಯಾವುದೇಪ್ರಕಾರದ ವಿಚಾರ ದೋಷಗಳಿಂದ ಲಿಪ್ತವಾಗುವುದಿಲ್ಲ ।೫೧೪।। ಘಟದ ಜೊತೆಗೆ ಚಂದ್ರನು ಹುಟ್ಟಿಕೊಳ್ಳುವುದಿಲ್ಲ ಅಥವಾ ಘಟದ ನಾಶದಿಂದ ಚಂದ್ರನು ನಾಶವಾಗುವುದಿಲ್ಲ. ಆತನು ತನ್ನ ಸ್ವಾಭಾವಿಕವಾದ ಸ್ವರೂಪದಲ್ಲಿ ಉತ್ಪತ್ತಿನಾಶರಹಿತನಾಗಿರುವನು ।೫೧೫।। ಅದರಂತೆ ಯೋಗಿಯು ಆತ್ಮಸ್ವರೂಪದಿಂದ ಸ್ಥಿತನಾಗಿರುವುದರಿಂದ ಆತನು ದೇಹದ ಜೊತೆಯಲ್ಲಿ ಹುಟ್ಟುವುದಿಲ್ಲ. ದೇಹವು ನಷ್ಟಗೊಂಡಾಗ ಸಾಯುವುದಿಲ್ಲ. ಹೀಗೆ ಆತನು ತನ್ನ ಅಖಂಡ ಸ್ವರೂಪದಿಂದ ಸದೈವ ಪರಿಪೂರ್ಣನಾಗಿರುವನು ।೫೧೬।। ಕಾಲನ ಗತಿಯು ಬಹು ಗಹನವಾಗಿರುವುದು. ಇದರಿಂದಲೇ ಉತ್ಪತ್ತೀ, ನಾಶವು ಆಗುತ್ತಿರುವುದು ತೋರುವುದು. ಆದರೆ ಈ ಕಾಲನ ಸತ್ತೆಯು ದೇಹದ ಮೇಲೆ ನಡೆಯುವುದು. ಆತ್ಮಸ್ವರೂಪಕ್ಕೆ ಸ್ಪರ್ಶ ಸಹ ಮಾಡಲು ಶಕ್ಯವಿಲ್ಲ ।೫೧೭।। ಕಾಲನ ಸಾಮರ್ಥ್ಯವು ಬಹಳ ಅಗಾಧವಾಗಿರುವುದು. ಆದರೆ ಅದು ಕೇವಲ ದೇಹಕ್ಕಷ್ಟೇ ಸೀಮಿತವಾಗಿರುವುದು. ಆತ್ಮಸ್ಥಿತಿಯ ಅತ್ತ ನೋಡಲು ಪಾಪ, ಆ ಕಾಲನ ಯಾವುದೂ ನಡೆಯುವುದಿಲ್ಲ ।೫೧೮।। ಕಾಲನ ಹೀಗಿರುವ ಸೂಕ್ಷ್ಮ ಗತಿಯನ್ನು ಹೇಳುತ್ತಿರಲು ಅವಧೂತನಿಗೆ ತಕ್ಷಣ ಸ್ಮರಣಕ್ಕೆ ಬಂದು ಸಿಂಹಾವಲೋಕನ ನ್ಯಾಯದಂತೆ ಆತನು ಪುನಃ ಅಗ್ನಿಯ ದೃಷ್ಟಾಂತವನ್ನು ಹೇಳಲಾರಂಭಿಸಿದನು ।೫೧೯।।

ಕಾಳನದೀಚಾ ಮಹಾವೇಗು । ಸೂಕ್ಷ್ಮಗತೀ ವಾಹತಾ ವೋಘು । ತೇಥ ಭೂತತರಂಗಾ ಜನ್ಮಭಂಗು। ದೇಖತಾಂಚಿ ಜಗು ನ ದೇಖೇ ।೬೨೦॥ ಜರಾಜರ್ಜರಿತ ಜಾಣ । ವಾಹತಾ ನದೀಮಾಜೀ ವೋಸಣ । ಷಡ್‌ವಿಕಾರ ತೇಚಿ ಪರಿಪೂರ್ಣ । ಭಂವರೇ ದಾರುಣ ಭಂವತಾತಿ ।೬೨೧॥ ಬಾಲ್ಯ ತಾರುಣ್ಯಾಂಚೇ ಖಳಾಳ । ವಾರ್ಧಕ್ಯಾಚೇ ಮಂದ ಜಳ । ಜನ್ಮಮರಣಾಂಚೇ ಉಸಾಳ । ಅತಿಕಲ್ಲೋಳ ಉಠತೀ ।೬೨೨॥ ವೋಘವೇಗಾಚ್ಯಾ ಕಡಾಡೀ । ಪಡತ ಆಯುಷ್ಯಾಚೀ ದರಡೀ । ಸ್ವರ್ಗಾದಿ ದೇಊಳೇ ಮೋಡೀ । ಶಿಖರಿಂಚೇ ಪಾಡೀ ಸುರೇಂದ್ರ ।೬೨೩॥ ತಳೀ ರಿಚವಿತಾ ಘೋಗೇ । ಪಾತಾಳಾದಿ ವಿವರೇ ವೇಗೇ । ನಾತೂನಿಯಾ ಪನ್ನಗೇ । ಅಂಗಭಂಗೇ ಅಡಿಮೋಡೀ ಕರೀ ।೬೨೪॥ ಐಶಿಯಾ ಜೇ ಕಾಳವೋಘಾಸೀ । ಘಡಾಮೋಡೀ ಭೂತರಂಗಾಸೀ । ಹೋತಸೇ ಅಹರ್ನಿಶೀ । ತೇ ಕೋಣಾಸೀ ಲಕ್ಷೇನಾ ।೬೨೫॥ ಜೈ ಮಹಾಪ್ರಳಯೀ ಮೇಘು ಗಡಾಡೀ । ತೈಪೂರ ಚಢೇ ಕಡಾಡೀ । ಬ್ರಹ್ಮಾದಿಕ ತರುವರ ಉಪಡೀ । ಸಮೂಳ ಸರೇಂಡೀ ವಾಹಿವಲೇ ।೬೨೬॥ ಜೈ ಅತ್ಯಂತಿಕ ಪೂರು ಚಢೇ । ತೈ ವೈಕುಂಠ ಕೈಲಾಸಹೀ ಬುಡೇ । ತೇಥ ಕಾಳಾ ರಿಗೂ ನ ಘಡೇ । ಹೇ ಅವಚಟ ಘಡೇ ಏಕದಾ ।೬೨೭॥ ಅನಿವಾರ ಕಾಳನದೀಚೀ ಗತೀ। ಸೂಕ್ಷ್ಮ ಲಕ್ಷೇನಾ ನಿಶ್ಚಿತೀ । ತೇ ಸೂಕ್ಷ್ಮ ಗತೀಚೀ ಸ್ಥಿತೀ । ಅತಿನಿಗುತೀ ಪರಿಯೇಸೀ ।೬೨೮॥ ದೀಪೂ ತೋಚಿ ತೋ ಹಾ ಮ್ಹಣತೀ । ಪರೀ ಶಿಖಾ ಕ್ಷಣಕ್ಷಣಾ ಜಾತೀ । ತೇ ಲಕ್ಷೇನಾ ಸೂಕ್ಷ್ಮ ಗತೀ । ಅಂತೀ ಮ್ಹಣತೀ ವಿಝಾಲಾ ।೬೨೯॥ ಪ್ರತ್ಯಕ್ಷ ಗಂಗಾಜಳ । ತೇ ಕಾಳೀಚೇ ಮ್ಹಣತೀ ಬರಳ । ತೈಶೀ ಕಾಳಗತೀ ಅಕಳ । ಲೋಕ ಸಕಳ ನೇಣತೀ ।೬೩೦॥ ಪ್ರತ್ಯಕ್ಷ ಪಾಹತಾ ದೇಹಾಸೀ । ಕಾಳ ವಯಸೇತೇ ಗ್ರಾಸೀ । ಬಾಲ್ಯ-ಕೌಮಾರ-ತಾರುಣ್ಯಾಂಸೀ । ನಿಕಟ ಕಾಳಾಸೀ ನ ದೇಖತೀ ।೬೩೧॥ ಅಲಕ್ಷ್ಯ ಕಾಳಾಚೀ ಕಾಳಗತೀ । ಯಾಲಾಗೀ ಗುರು ಕೇಲಾ ಗಭಸ್ತೀ । ತ್ಯಾಪಾಸೋನಿ ಶಿಕಲೋ ಸ್ಥಿತಿ । ತೇಹೀ ನೃಪತಿ ಪರಿಯೇಸೀ ।೬೩೨॥

ಗುಣೈರ್ಗುಣಾನುಪಾದತ್ತೇ ಯಥಾಕಾಲಂ ವಿಮುಂಚತಿ । ನ ತೇಷು ಯುಜ್ಯತೇಯೋಗೀ ಗೋಭಿರ್ಗಾ ಇವ ಗೋಪತಿಃ ।೮೦॥

ಅರ್ಥ:- ಸೂರ್ಯನು ಪ್ರಬಲವಾದ ಕಿರಣಗಳಿಂದ ಭಾರೀಮೊತ್ತದ ಜಲವನ್ನು ಆವಿಯಾಗಿ ಹೀರುವನು. ಮುಂದೆ ಮಳೆಯ ರೂಪದಲ್ಲಿ ಅದೇ ನೀರನ್ನೇ ಭೂಮಿಗೆ ಹಿಂದಿರುಗಿಸುವನು. ಅದರಂತೆಯೇ ಯೋಗಿಯು ತನ್ನ ಭೌತಿಕ ಇಂದ್ರಿಯಗಳಿಂದ ಎಲ್ಲ ಬಗೆಯ ಐಹಿಕ ವಸ್ತುಗಳನ್ನು ಸ್ವೀಕರಿಸುವನು. ತಕ್ಕಕಾಲದಲ್ಲಿ ತಕ್ಕ ವ್ಯಕ್ತಿ ಅವುಗಳನ್ನು ಬೇಡಿ ಅವನ ಬಳಿ ಬಂದಾಗ ಆ ಐಹಿಕ ವಸ್ತುಗಳನ್ನು ಆತನು ಮರಳಿ ಕೊಡುವನು. ಹೀಗೆ ಕೂಡಿಸಿದ ವಸ್ತುಗಳನ್ನು ತೆಗೆದುಕೊಳ್ಳುವ, ಕೊಡುವ ಕಾರ್ಯಗಳಲ್ಲಿ ಆಸಕ್ತನಾಗುವುದಿಲ್ಲ.

ಕಾಲರೂಪ ನದಿಯ ವೇಗವು ಬಹು ಭಯಂಕರವಾಗಿರುವುದು. ಇದರ ಓಘವು ಅತ್ಯಂತ ಸೂಕ್ಷ್ಮಗತಿಯಿಂದ ಹರಿಯುತ್ತಿರುವುದು. ಅಲ್ಲಿ ಪ್ರಾಣಿರೂಪ ತರಂಗಗಳು ಉತ್ಪನ್ನಗೊಳ್ಳುವುವು. ಹಾಗೂ ನಾಶವಾಗುತ್ತಿರುವುವು. ಆದರೆ ಸರ್ವ ಜಗತ್ತು ಇದನ್ನು ಕಾಣುತ್ತಿದ್ದರೂ ಕಾಣದವರಂತೆ ವರ್ತಿಸುವರು ।೬೨೦॥ ಈ ನದಿಯಲ್ಲಿ ಮುಪ್ಪು ಎಂಬುವುದು ಜರ್ಜರವಾಗಿರುವ ಲೋಕರೂಪ ಕಸವು ತರಂಗಗಳಲ್ಲಿ ಇರುವುದು.ಮತ್ತು ಷಡ್‌ವಿಕಾರ ರೂಪಗಳಾದ ಮಹಾಭಯಂಕರವಾದ ತಿರುಗಣಿಗಳು ಅದರಲ್ಲಿ ತಿರುಗುತ್ತಿರುವುವು ।೬೨೧॥ ಬಾಲ್ಯ ಮತ್ತು ತಾರುಣ್ಯಗಳ ಗರ್ಜನೆಯು ನಡದೇ ಇರುತ್ತದೆ. ವಾರ್ಧಕ್ಯದ ಮಂದಮಂದ ಜಲವು ಹರಿಯುತ್ತಿರುವುದು. ಜನ್ಮ ಮರಣ ಸುತ್ತುವಿಕೆಯ ದೊಡ್ಡ ದೊಡ್ಡ ತೆರೆಗಳು ಅಪ್ಪಳಿಸುತ್ತಿರುವುವು ।೬೨೨॥ ಪ್ರವಾಹದ ಪ್ರಚಂಡ ವೇಗದಿಂದ ಆಯುಷ್ಯದ ಬಂಡೆಯು ಜಾರಿ ಬೀಳುವುದು. ಸ್ವರ್ಗಾದಿಕ ದೇಗುಲಗಳು ಕುಸಿದು ಬಿದ್ದು ಶಿಖರದ ಮೇಲಿರುವ ಇಂದ್ರನನ್ನು ಆ ಪ್ರವಾಹ ವೇಗವು ಕೆಳಗೆ ಬೀಳಿಸುವುದು ।೬೨೩॥ ಈ ತೆರೆಯು ಪಾತಾಳದ್ವಾರದಿಂದ ವೇಗವಾಗಿ ಒಳಗೆ ಹೊಕ್ಕಿಕೊಂಡು ಸರ್ಪಗಳನಾಶ ಮಾಡಿ ಅವುಗಳನ್ನು ವಿಧ್ವಂಸಗೊಳಿಸುವುದು ।೬೨೪॥ ಹೀಗಿರುವ ಕಾಲನ ಓಘದಲ್ಲಿ ಪಂಚಮಹಾಭೂತರೂಪವಾದ ತೆರೆಗಳ ಕಾರ್ಯರೂಪವು ಸತತವಾಗಿ ನಡೆದಿರುವುದು. ಆದರೆ ಈ ವಿಷಯವು ಯಾರ ಲಕ್ಷಕ್ಕೂ ಬರುವುದಿಲ್ಲ ।೬೨೫॥ ಮಹಾಪ್ರಳಯಕಾಲಕ್ಕೆ ಪ್ರಳಯ ಮೇಘದ ಘನಗರ್ಜನೆಯಾಗುವುದು. ಆಗ ಪ್ರಚಂಡವಾದ ಪೂರವು ಹುಟ್ಟುವುದು. ಆಗ ಬ್ರಹ್ಮದೇವರಂತಹ ಮಹಾ ಮಹಾ ವೃಕ್ಷಗಳು ಬೇರು ಸಮೇತವಾಗಿ ತುದಿ ಮೊದಲು ಮಾಡಿ ಹರಿದು ಹೋಗುವುವು ।೬೨೬॥ ಈ ಮಹಾಪೂರದ ಅತಿರೇಕವಾಯಿತೆಂದರೆ ಅದರಲ್ಲಿ ವೈಕುಂಠ, ಕೈಲಾಸ ಸಹ ತೇಲಿ ಹೋಗುವುವು. ಅಲ್ಲಿ ಕಾಲನ ಪ್ರವೇಶವೂ ಆಗುವುದಿಲ್ಲ. ಮಹಾಪ್ರಳಯದ ಕಾಲಕ್ಕೆ ಈ ರೀತಿಯಾಗಿ ಒಮ್ಮಿಂದೊಮ್ಮೆಲೆ ಆಕಸ್ಮಾತ್‌ವಾಗಿ ಒದಗುವುದು ।೬೨೭॥ ಕಾಳರೂಪವಾದ ನದಿಯು ಅನಿವಾರ್ಯವಾಗಿರುವುದು. ಇದರ ಗತಿಯು ಸೂಕ್ಷ್ಮವಾಗಿರುವುದರಿಂದನಿಜವಾಗಿಯೂ ಲಕ್ಷಕ್ಕೆ ಬರುವುದಿಲ್ಲ. ಆ ಸೂಕ್ಷ್ಮ ಗತಿಯ ಸ್ಥಿತಿಯನ್ನು ಈಗ ಕೇಳು ।೬೨೮॥ ದೀಪವು ಅದೇ ಇರುವುದೆಂದು ಹೇಳುವರು ನಿಜ. ಆದರೆ ಅದರ ಜ್ಯೋತಿಯು ಪ್ರತಿಕ್ಷಣಕ್ಕೂ ಬದಲಿಸುತ್ತಿರುವುದು. ಆದರೆ ಅದರ ಈ ಸೂಕ್ಷ್ಮ ಗತಿಯು ಯಾರ ಲಕ್ಷಕ್ಕೂ ಬರುವುದಿಲ್ಲ. ಕೊನೆಗೆ ದೀಪವು ಆರಿತು ಎಂದು ಹೇಳುವರು ।೬೨೯॥ ನದಿಯ ನೀರು ಪ್ರತ್ಯಕ್ಷವಾಗಿ ಹರಿಯುತ್ತಿರುತ್ತದೆ. ಅಲ್ಲಿ ಪ್ರತಿಕ್ಷಣಕ್ಕೂ ಹೊಸ ನೀರು ಬರುತ್ತಿರುವುದು. ಆದರೆ ಅಜ್ಞಾನಿ ಜನರು ಈ ನೀರು ಆರಂಭದಿಂದಲೇ ಇದೆ ಎಂದು ತಿಳಿಯುವರು. ಅದರಂತೆ ಕಾಲನ ಗತಿಯು ಅಗಮ್ಯವಾಗಿರುವುದು. ಆದ್ದರಿಂದ ಇದು ಎಲ್ಲರಿಗೂ ತಿಳಿಯುವುದಿಲ್ಲ ।೬೩೦॥ ದೇಹದತ್ತ ಪ್ರತ್ಯಕ್ಷವಾಗಿ ಕಂಡರೆ ಅದಕ್ಕೂ ಕಾಲನು ವಯಸ್ಸಿನ ಯೋಗದಿಂದ ಗ್ರಾಸಮಾಡುತ್ತಿರುವನು.(ಕಾಲನು ಬಾಲ್ಯ, ಕೌಮಾರ ಮತ್ತು ತಾರುಣ್ಯಗಳ ಅತಿ ಸಮೀಪವಾಗಿರುವನು.) ಆದರೆ ಆತನನ್ನು ಯಾರೂ ನೋಡುವುದಿಲ್ಲ ।೬೩೧॥ ಹೀಗೆ ಕಾಲನ ಗತಿಯು ಅಗಾಧವಾಗಿರುವುದು. ತದನಂತರ ನಾನು ಸೂರ್ಯನನ್ನು ಗುರುವಾಗಿ ಮಾಡಿಕೊಂಡೆನು. ಹೇ ರಾಜನೇ, ಸೂರ್ಯನಿಂದ ಏನು ಕಲಿತೆ ಎಂಬುದನ್ನು ಈಗ ಕೇಳು ।೬೩೨॥

ಸೂರ್ಯ ಕಾಳೇ ನಿಜಕಿರಣೇ । ರಸೇ ಸಹಿತ ಶೋಷೀ ಪಾಣೀ । ತೋಚಿ ವರ್ಷಾಕಾಳೀ ವರ್ಷೋನೀ। ನಿವವೀ ಜನೀ ಸಹಸ್ರಧಾ ।।೫೩೩।। ಸರ್ವ ಶೋಷೂನಿ ಘೇ ಕಿರಣೇ । ತೇ ಶೋಷಿತೇ ಲಕ್ಷಣ ನೇಣೇ ಕೋಣೇ। ದೇತಾ ಮೇಘಮುಖೇ ವರುಷೋನೀ । ನಿವವೀ ಅವನೀ ಜನೇಸೀ ।।೫೩೪।। ತೈಸೀಚಿ ಯೋಗಿಯಾಚೀ ಪರೀ। ಅಲ್ಪ ಜ್ಯಾಚೇ ಅಂಗೀಕಾರೀ । ತ್ಯಾಚೇ ಮನೋರಥ ಪೂರ್ಣ ಕರೀ । ಸಹಸ್ರ ಪ್ರಕಾರೀ ಹಿತತ್ವೇ ।।೫೩೫।। ಜ್ಯಾಂಚೇ ಸೇವಿತೀ ಯೋಗೀ ಆತ್ಮಾರಾಮು । ತ್ಯಾಂಚೇ ಪುರತೀ ಸಕಳ ಕಾಮು। ಅಂತೀ ಕರೋನಿಯಾ ನಿಷ್ಕಾಮು। ವಿಶ್ರಾಮಧಾಮು ಆಣಿತೀ ।।೫೩೬।। ಏವಂ ಯೋಗೀ ಆಪುಲೇ ಯೋಗಬಳೇ । ವಿಷಯೋ ಸೇವಿತೀ ಇಂದ್ರಿಯಮೇಳೇ । ಜೇ ದೇತೀ ತ್ಯಾಂಸೀ ಯಥಾಕಾಳೇ । ಕೃಪಾಬಳೇ ನಿವವಿತೀ ।।೫೩೭।। ತ್ಯಾಂಸೀ ವಿಷಯೋ ದೇತಾ ಕಾ ಘೇತಾ । ಆಸಕ್ತಿ ನಾಹೀ ಸರ್ವಥಾ । ರಸು ಚೋಖೂನಿ ಘೇತಾ ದೇತಾ । ಅಲಿಪ್ತ ಸವಿತಾ ತೈಸೇ ತೇ ।।೫೩೮।।

ಬುಧ್ಯತೇ ಸ್ವೇನ ಭೇದೇನ ವ್ಯಕ್ತಿಸ್ಥ ಇವ ತಗ್ದತಃ । ಲಕ್ಷ್ಯತೇ ಸ್ಥೂಲಮತಿಭಿರಾತ್ಮಾ ಚಾವಸ್ಥಿತೋಽರ್ಕವತ್ ।।೮೧।।

ಅರ್ಥ:- ಮಂದ ಬುದ್ಧಿಯ ಮನುಷ್ಯನಿಗೆ ಜಲದ ವಿವಿಧ ಪಾತ್ರೆಗಳಲ್ಲಿ ಸೂರ್ಯನು ಬೇರೆ ಬೇರೆ ಪ್ರಕಾರನಾಗಿ ತೋರುವನು. ಆದರೆ ಸೂರ್ಯನು ಒಬ್ಬನೇ ಇರುವನು. ಆದರಂತೆ ಅನೇಕ ಪ್ರಕಾರದ ಉಪಾಧಿಗಳಿಂದ ಆತ್ಮವು ಪ್ರತ್ಯೇಕರಲ್ಲಿ ಭಿನ್ನವಾಗಿರುವಂತೆ ಅನಿಸುವುದು. ಆದರೆ ಸೂರ್ಯನಂತೆ ಆತ್ಮವು ಒಂದೇ ಇರುವುದು. ಸ್ವರೂಪದಿಂದ ಅದರಲ್ಲಿ ಯಾವ ಭೇದವಿರುವುದಿಲ್ಲ.

ಸೂರ್ಯೋ ಥಿಲ್ಲರಾಮಾಜೀ ಬಿಂಬಲಾ । ಮೂಢ ಮ್ಹಣತೀ ಥಿಲ್ಲರೀ ಬುಡಾಲಾ । ತ್ಯಾಚೇನಿ ಕಂಪೇ ಕಂಪು ಮಾನಿಲಾ । ಡಹುಳೇ ಡಹುಳಲಾ ಮ್ಹಣತೀ ತೋ ।। ೫೩೯।। ತ್ಯಾ ಥಿಲ್ಲರಾತೇ ನಾವಾಳತಾ । ಗಗನೀ ಅಲಿಪ್ತ ಜೇವೀ ಸವಿತಾ । ತೈಸೀಚ ಯೋಗಿಯಾಂಚೀ ಯೋಗ್ಯತಾ । ದೇಹಾತೀತಾ ದೇಹ ಕರ್ಮೀ ।।೫೪೦।। ತ್ಯಾಸೀ ದೇಹ ಬುದ್ಧೀಚೇನಿ ಛಂದೇ । ಮ್ಹಣತೀ ಯೋಗಿಯಾ ದೇಹೀ ನಾಂದೇ । ತ್ಯಾ ದೇಹಾಚೇನಿ ನಾನಾ ಬಾಧೇ । ಸ್ವಬುದ್ಧಿಭೇದೇ ಬಾಂಧಿಲಾ ಮ್ಹಣತೀ ।।೫೪೧।। ತ್ಯಾಸೀ ದೇಹಾಚೇ ಬಾಧಿತಭಾನ । ಹೇ ನ ಕಳೇ ತ್ಯಾಚೇ ಗುಹ್ಯಜ್ಞಾನ । ದೋರಾಚೇನಿ ಸಾಪೇ ಜಾಣ । ಡಸೋನಿ ಕೋಣ ಮಾರಿಲಾ ।।೫೪೨।। ಏವಂ ಆತ್ಮಾ ತೋ ಚಿದಾಕಾಶೀ । ಮಿಥ್ಯಾ ದೇಹೀ ಮಿಥ್ಯಾತ್ವೇಸೀ । ಬಿಂಬೋನಿ ದಾವೀ ದೇಹಕರ್ಮಾಸೀ । ನವ್ಹೇ ತೇ ತ್ಯಾಸೀ ಬಾಧಕ ।।೫೪೩।।

ಸೂರ್ಯನು ತನ್ನ ಕಿರಣಗಳಿಂದ ಸಮುದ್ರ ಜಲದ ಶೋಷಣೆ ಮಾಡುವನು ಮತ್ತು ಮಳೆಗಾಲದಲ್ಲಿ ಆ ಜಲವನ್ನೇ ಮಳೆಗರೆದು ಜನರನ್ನು ತೃಪ್ತಗೊಳಿಸುವನು ।೫೩೩।। ಸೂರ್ಯನು ತನ್ನ ಕಿರಣಗಳಿಂದ ಸಮುದ್ರದ ಜಲವನ್ನು ಹೀರುತ್ತಿರಲು ಅದರ ಜಲಶೋಷಣೆಯು ಯಾರ ಲಕ್ಷಕ್ಕೂ ಬಾರದು. ಸೂರ್ಯನು ಅದೇ ಹೀರಿದ ಜಲವನ್ನು ಮಳೆಗರೆದು ಸೃಷ್ಟಿಯಲ್ಲಿನ ಎಲ್ಲ ಜನರಿಗೂ ತೃಪ್ತಗೊಳಿಸುವನು ।೫೩೪।। ಯೋಗಿಗಳ ಸ್ಥಿತಿಯೂ ಸಹ ಹಾಗೆಯೇ ಇರುವುದು. ಇವರು ಯಾರಿಂದಲಾದರೂ ಸ್ವಲ್ಪ ಸ್ವೀಕರಿಸಿದರೆ ಅವರ ಹಿತಕ್ಕಾಗಿ ಅವರ ಮನೋರಥಗಳನ್ನು ಅನೇಕ ಪ್ರಕಾರಗಳಿಂದ ಪೂರ್ಣಗೊಳಿಸುವರು ।೫೩೫।। ಈ ಪ್ರಕಾರವಾಗಿ ಆತ್ಮಾನಂದದಲ್ಲಿ ನಿಮಗ್ನರಾಗಿರುವ ಯೋಗಿಯ ಸೇವೆಯನ್ನು ಮಾಡುವವರ ಸರ್ವ ಕಾಮನೆಗಳು ಪೂರ್ಣವಾಗುವುವು. ಕೊನೆಯಲ್ಲಿ ಅವರನ್ನು ನಿಷ್ಕಾಮಗೊಳಿಸಿ ನಿಜಧಾಮಕ್ಕೆ ತರುವನು ।೫೩೬।। ಈ ಪ್ರಕಾರವಾಗಿ ಯೋಗಿಯು ತನ್ನ ಯೋಗಬಲದಿಂದ ಇಂದ್ರಿಯಗಳ ಮುಖಾಂತರವಾಗಿ ವಿಷಯ ಸೇವನೆ ಮಾಡುತ್ತಿರುವನು. ಈತನಿಗೆ ಯಾರಾದರೂ ಏನಾದರೂ ಕೊಟ್ಟರೆ ಅವರಲ್ಲಿ ಕೃಪೆ ಮಾಡಿ ಅವರನ್ನು ತೃಪ್ತಗೊಳಿಸುವನು ।೫೩೭।। ಆದರೆ ವಿಷಯಗಳನ್ನು ಕೊಡುವ, ಸ್ವೀಕರಿಸುವ ಅದರ ಮೇಲೆ ಆಸಕ್ತಿ ಇರುವುದಿಲ್ಲ. ಸೂರ್ಯನು ಜಲವನ್ನು ಹೀರುವಾಗ್ಗೆ ಅಥವಾ ಕೊಡುವಾಗ್ಗೆ ಅಲಿಪ್ತನಾಗಿರುವಂತೆ ಯೋಗಿಯು ಸಹ ವಿಷಯಗಳಿಂದ ಸಂಪೂರ್ಣವಾಗಿ ಅಲಿಪ್ತನಾಗಿರುವನು ।೫೩೮।।

ತೆಗ್ಗಿನೊಳಗೆ ನಿಂತ ನೀರಿನಲ್ಲಿ ಸೂರ್ಯನ ಪ್ರತಿಬಿಂಬವು ಬೀಳುವುದು. ಆದರೆ ಅಜ್ಞಾನ ಜನರು ಆ ಚಿಕ್ಕ ಹೊಂಡದಲ್ಲಿ ಸೂರ್ಯನು ಮುಳುಗಿದನೆಂದು ತಿಳಿಯುವರು. ಅದರಲ್ಲಿಯ ನೀರು ಅಲುಗಾಡಿತೆಂದರೆ ಸೂರ್ಯನು ನಡೆದಾಡಿದನೆಂದು ತಿಳಿಯುವರು. ನೀರು ಹೊಲಸಾದರೆ ಸೂರ್ಯನು ಹೊಲಸಾದನು ಎನ್ನುವರು ।೫೩೯।। ವಾಸ್ತವಿಕವಾಗಿ ಸೂರ್ಯನು ಆ ಯಾವ ನೀರಿನ ಹೊಂಡಕ್ಕೆ ಸ್ಪರ್ಶ ಸಹ ಮಾಡಿರುವುದಿಲ್ಲ. ಆತನು ಆಕಾಶದಲ್ಲಿಯೇ ಅಲಿಪ್ತನಾಗಿರುನು. ಅದರಂತೆ ಯೋಗಿಗಳ ಯೋಗ್ಯತೆಯು ದೇಹಕರ್ಮಗಳಿಂದ ಅಲಿಪ್ತವಾಗಿರುವುದು ।೫೪೦।। ಯೋಗಿಯು ದೇಹಬುದ್ಧಿಯ ಛಂದದಿಂದ ದೇಹದಲ್ಲಿ ವರ್ತಿಸುವನು. ಹಾಗೆಯೇ ದೇಹದ ಅನೇಕ ಪ್ರಕಾರದ ಉಪಾಧಿಗಳಿಂದ ಆತನು ಬಂಧಿಸಲ್ಪಟ್ಟಿರುವನು ಎಂದು ಜನರು ತಮ್ಮ ಬುದ್ಧಿಯಿಂದ ಹೇಳುವರು ।೫೪೧।। ಆದರೆ ಯೋಗಿಗೆ ದೇಹದ ಭಾನವು ಬಾಧಿಸುವುದಿಲ್ಲ. ಈ ಯಾವ ಆತನ ಗುಹ್ಯವಾದ ಜ್ಞಾನವು ಜನರಿಗೆ ತಿಳಿಯುವುದಿಲ್ಲ. ಹಗ್ಗದಲ್ಲಿನ ಮಿಥ್ಯಾರೂಪವಾದ ಸರ್ಪವು ಯಾರನ್ನು ಕಚ್ಚಿಕೊಂದಿರುವುದು? ।।೫೪೨।। ಅದರಂತೆಯೇ ಆ ಆತ್ಮವು ಚಿದಾಕಾಶದಲ್ಲಿ ಇದ್ದು ಮಿಥ್ಯೆಯಾಗಿರುವ ದೇಹದಲ್ಲಿ ಮಿಥ್ಯಾ ರೂಪದಿಂದ ಪ್ರತಿಬಿಂಬಿತವಾಗಿ ದೇಹಕರ್ಮಗಳನ್ನು ತೋರಿಸುವುದು. ಆದ್ದರಿಂದ ಆ ಕರ್ಮಗಳು ಅದಕ್ಕೆ ಬಾಧಕವಾಗುವುದಿಲ್ಲ ।೫೪೩।।

ದೇಖೇ ಆಪಣಾತೇ ಜಳೀ ಬಿಂಬಲಾ । ಪರೀ ನ ಮ್ಹಣೇ ಮೀ ಜಳೀ ಬುಡಾಲಾ । ತೈಸಾ ದೇಹಾತೀತು ಬೋಧು ಝಾಲಾ । ನಾಹೀ ಭಯಾಲಾ ದೇಹಕರ್ಮಾ ॥೫೪೪॥ ದೇಖೋನಿ ಮೃಗಜಳಾಚಾ ಪೂರು । ಮೂರ್ಖ ಕರೂ ಧಾಂವತೀ ತಾರೂ । ತೈಸಾ ಮಿಥ್ಯಾ ಹಾ ಸಂಸಾರು । ಭಯಂಕರು ಮೂರ್ಖಾಸೀ ॥೫೪೫॥ ಯಾಲಾಗೀ ದಾರಾಗೃಹಪುತ್ರಪ್ರಾಪ್ತೀ । ತೇಥ ನ ಕರಾವೀ ಅತಿಪ್ರೀತೀ । ಯೇಚಿವಿಷಯೀ ರಾಯಾಪ್ರತೀ । ಕಥಾ ಕಪೋತೀ ಸಾಂಗತು ॥೫೪೬॥

ನಾತಿಸ್ನೇಹಃ ಪ್ರಸಂಗೋ ವಾ ಕರ್ತವ್ಯಃ ಕ್ವಾಪಿ ಕೇನಚಿತ್ । ಕುರ್ವನ್ ವಿಂದೇತ ಸಂತಾಪಂ ಕಪೋತ ಇವ ದೀನಧೀಃ ॥೫೨॥

ಅರ್ಥ:- ಹೇ ರಾಜನೇ, ಯಾರೂ ಯಾವುದರಲ್ಲಿಯೂ ಅತಿಯಾದ ಪ್ರೀತಿ ಅಥವಾ ಆಸಕ್ತಿಯನ್ನಿಡಬಾರದು. ಏಕೆಂದರೆ ಅವರ ತಮ್ಮ ಬುದ್ಧಿಯ ಸ್ವಾತಂತ್ರ್ಯತೆ ಇಲ್ಲದಂತಾಗಿ ಪಾರಿವಾಳ ಪಕ್ಷಿಯಂತೆ ಅವರಿಗೆ ಅತ್ಯಂತ ಯಾತನೆ ಭೋಗಿಸಬೇಕಾಗುವುದು.

ಸಂಸಾರದುಃಖಾಚೇ ಮೂಳ । ಸ್ತ್ರೀ ಆಸಕ್ತೀಚ ಜಾಣ ಕೇವಳ । ಸ್ತ್ರೀಲೋಭಾಚೇ ಜೇಥ ಪ್ರಬಳ ಬಳ। ದುಃಖ ಸಕಳ ತ್ಯಾಪಾಸೀ ॥೫೪೭॥ ಸ್ತ್ರೀಪಾಸವ ಝಾಲೇ ಪುತ್ರ । ತ್ಯಾಂಚೇ ಠಾಯೀ ಸ್ನೇಹ ವಿಚಿತ್ರ । ಕರಿತಾ ದುಃಖಾಸೀ ಪಾತ್ರ । ಸಂಸಾರೀ ನರ ಹೋತಾತೀ ॥೫೪೮॥ ಆಸಕ್ತಿ ಆಣೀ ಸ್ನೇಹಸೂತ್ರ । ಯಾ ದೋನ್ಹಿ ಪಾಸವ ದುಃಖ ವಿಚಿತ್ರ । ಪದೋಪದೀ ಭೋಗಿತೀ ನರ । ಅಸ್ವತಂತ್ರ ಹೋಊನಿ ॥೫೪೯॥ ಯಾಲಾಗೀ ಭಲತೇನಿ ಭಲತೇ ಠಾಯೀ । ಆಸಕ್ತಿ ಸ್ನೇಹೋ ನ ಕರಾವಾ ಪಾಹೀ । ಅತಿಸ್ನೇಹೋ ಮಾಂಡಿಜೇ ಜಿಂಹೀ । ದುಃಖ ತಿಹೀ ಭೋಗಿಜೇ ॥೫೫೦॥ ಸ್ನೇಹದುಃಖಾಚೀ ವಾರ್ತಾ । ಕಪೋತಾ - ಕಪೋತೀಚೀ ಕಥಾ । ತುಜ ಸಾಂಗೇನ ನೃಪನಾಥಾ । ಸ್ವಾಸ್ಥಚಿತ್ತೀ ಪರಿಯೇಸೀ ॥೫೫೧॥

ಕಪೋತಃ ಕಶ್ಚನಾರಣ್ಯೇ ಕೃತನೀಡೋ ವನಸ್ಪತೌ । ಕಪೋತ್ಯಾ ಭಾರ್ಯಯಾ ಸಾರ್ಧಮುವಾಸ ಕತಿಚಿತ್ಸಮಾಃ ॥೫೩॥

ಅರ್ಥ : ಒಮ್ಮೆ ಪಾರಿವಾಳವೊಂದು ಕಾಡಿನ ದೊಡ್ಡ ಮರದಲ್ಲಿ ತನ್ನ ಹೆಂಡತಿಯೊಂದಿಗೆ ಗೂಡು ಕಟ್ಟಿಕೊಂಡು ವಾಸವಾಗಿತ್ತು. ಅಲ್ಲಿ ಆಕೆಯ ಸಂಗತಿಯಲ್ಲಿ ಅನೇಕ ವರ್ಷಗಳ ಕಾಲ ವಾಸಿಸಿತ್ತು.

ಕಪೋತೀಚೇ ಸ್ನೇಹ ಗೋಡ । ಧರೋನೀ ಸ್ತ್ರೀಸುಖಾಚೀ ಚಾಡ । ವನೀ ವೃಕ್ಷ ಪಾಹೋನಿಯಾ ಗೂಢ । ಕರೀ ನೀಡ ಕಪೋತ ॥೫೫೨॥ ತೇಣೇ ವನಚರೇ ವನಸ್ಥಳೀ । ನೀಡಾಮಾಜೀ ಸ್ತ್ರೀಮೇಳೀ । ವಾಸು ಕೇಲಾ ಬಹುಕಾಳೀ । ಭಾರ್ಯೇಜವಳೀ ಭೂಲಲಾ ॥೫೫೩॥

ಕಪೋತೌ ಸ್ನೇಹಗುಣಿತಹೃದಯೌ ಗೃಹಧರ್ಮಿಣೌ । ದೃಷ್ಟಿಂ ದೃಷ್ಟ್ಯಾಂಗಮಂಗೇನ ಬುದ್ಧಿಂ ಬುದ್ಧ್ಯಾ ಬಬಂಧತುಃ ॥೫೪॥

ಅರ್ಥ : ಎರಡೂ ಪಾರಿವಾಳಗಳ ಮನವು ಸ್ನೇಹದಿಂದ ಪರಸ್ಪರರಲ್ಲಿ ಆಸಕ್ತರಾಗಿದ್ದವು. ಹೀಗೆ ಗೃಹಧರ್ಮದಲ್ಲಿ ವರ್ತಿಸುವ ಈ ಪಾರಿವಾಳಗಳು ದೃಷ್ಟಿಯಿಂದ ದೃಷ್ಟಿಗೆ, ಅಂಗದಿಂದ ಅಂಗಕ್ಕೆ, ಬುದ್ಧಿಯಿಂದ ಬುದ್ಧಿಗೆ ಬದ್ಧವಾಗಿದ್ದವು.

ತನ್ನ ಪ್ರತಿಬಿಂಬವನ್ನು ಜಲದಲ್ಲಿ ನೋಡಿದವರಲ್ಲಿ ಯಾರೂ ನಾನು ಜಲದಲ್ಲಿ ಮುಳಿಗಿದೆನೆಂದು ಹೇಳುವುದಿಲ್ಲ. ಅದರಂತೆ ನಾನು ದೇಹದಿಂದ ಭಿನ್ನನಾಗಿರುವೆನೆಂದು ಈ ಸಾಕ್ಷಾತ್ ಜ್ಞಾನವನ್ನು ಪಡೆದವರು ಯಾವುದೇ ಪ್ರಕಾರಗಳ ದೇಹಕರ್ಮಗಳಿಗೆ ಭಯಪಡುವುದಿಲ್ಲ ॥೫೪೪॥ ಮೃಗಜಲದ ಪೂರವನ್ನು ಕಂಡು ಮೂರ್ಖನು ಗಾಬರಿಯಾಗುವನು. ಹಾಗೂ ಹಡಗಕ್ಕಾಗಿ ಧಾವಿಸುವನು. ಅದರಂತೆ ಈ ಮಿಥ್ಯೆಯಾಗಿರುವ ಸಂಸಾರವು ಮೂರ್ಖ ಜನರಿಗೆ ಭಯಂಕರವಾಗಿ ತೋರುವುದು ॥೫೪೫॥ ಆದ್ದರಿಂದ ಸ್ತ್ರೀ, ಪುತ್ರ, ಗೃಹ ಇವುಗಳ ಪ್ರಾಪ್ತಿ ವಿಷಯಕ್ಕೆ ಮನದಲ್ಲಿ ಅತ್ಯಂತ ಆಸಕ್ತಿಯನ್ನು ಎಂದಿಗೂ ಇಡಬಾರದು. ಈ ವಿಷಯಕ್ಕೆ ಅವಧೂತನು ರಾಜನಿಗೆ ಕಪೋತ ಕಥೆಯನ್ನು ಹೇಳುವನು ॥೫೪೬॥

ಸಂಸಾರ ದುಃಖದ ಮೂಲವೆಂದರೆ ಕೇವಲ ಸ್ತ್ರೀ ಆಸಕ್ತಿಯಾಗಿರುವುದು. ಯಾರಲ್ಲಿ ಸ್ತ್ರೀ ಲೋಭವು ಅತ್ಯಂತ ಪ್ರಬಲವಾಗಿದೆಯೋ, ಅವರಲ್ಲಿ ಸರ್ವ ದುಃಖಗಳು ಇರುವುವು ॥೫೪೭॥ ಆ ಯಾವ ಸ್ತ್ರೀ ಇಂದ ಉತ್ಪನ್ನವಾದ ಪುತ್ರನಲ್ಲಿ ಆತನ ವಿಲಕ್ಷಣವಾದ ಮಮತೆಯು ನಟ್ಟಿಕೊಳ್ಳುವುದು. ಆದ್ದರಿಂದ ಸಂಸಾರೀ ಜನರು ದುಃಖಿಗಳಾಗುವರು ॥೫೪೮॥ ಆಸಕ್ತೀ ಮತ್ತು ಸ್ನೇಹಪಾಶ ಈ ಎರಡರಿಂದ ಮನುಷ್ಯನು ಪರಾಧೀನನಾಗುವನು. ಸ್ವಾತಂತ್ರ್ಯತೆ ಕಳೆದುಕೊಂಡು ವಿಲಕ್ಷಣವಾದ ದುಃಖಗಳನ್ನು ಭೋಗಿಸುವನು ॥೫೪೯॥ ಆದ್ದರಿಂದಲೇ ಯಾರೂ ಯಾರಲ್ಲಿಯೂ ಅತ್ಯಂತಿಕ ಆಸಕ್ತೀ ಅಥವಾ ಸ್ನೇಹವನ್ನು ಇಡಕೂಡದು. ಇದನ್ನು ತಪ್ಪಿ ಅತಿಸ್ನೇಹವನ್ನು ಇಟ್ಟವನಿಗೆ ದುಃಖಗಳನ್ನು ಭೋಗಿಸಬೇಕಾಗುವುದು ॥೫೫೦॥ ಹೇ ರಾಜನೇ, ಸ್ನೇಹದಿಂದ ದುಃಖವು ಹೇಗಾಗುವುದೆಂಬ ವಿಷಯಕ್ಕೆ ನಾನೊಂದು ನಿನಗೆ ಜೋಡಿ ಪಾರಿವಾಳಗಳ ಕಥೆಯನ್ನು ಹೇಳುತ್ತೇನೆ, ಇದನ್ನು ಶಾಂತ ಚಿತ್ತದಿಂದ ಆಲಿಸು ॥೫೫೧॥

ಒಂದು ಅರಣ್ಯದಲ್ಲಿ ಒಂದು ಪಾರಿವಾಳ ಪಕ್ಷಿಯು ಇರುತ್ತಿತ್ತು. ಅದು ಸ್ತ್ರೀ ಸುಖದ ಆಶೆಯಿಂದ ವನದಲ್ಲಿ ಏಕಾಂತ ಪ್ರದೇಶದ ಒಂದು ದೊಡ್ಡ ಮರವನ್ನು ಕಂಡು ಅದರಲ್ಲಿ ತಾವಿರಲು ಒಂದು ಗೂಡು ಕಟ್ಟಿತು ॥೫೫೨॥ ಅರಣ್ಯದಲ್ಲಿ ವಿಹಾರ ಮಾಡುವ ಈ ಪಾರಿವಾಳವು ತನ್ನ ಸ್ತ್ರೀಯಳನ್ನು ಭುಲಾಯಿಸಿ ಆ ಮರದ ಗೂಡಿನಲ್ಲಿಯೇ ಆಕೆಯ ಜೊತೆಯಲ್ಲಿ ಬಹುಕಾಲದವರೆಗೆ ವಾಸಮಾಡಿತು ॥೫೫೩॥

ಕಪೋತಾ ಆಣಿ ಕಪೋತೀ। ಪರಸ್ಪರೇ ದೋಘಾ ಅತಿಪ್ರೀತೀ । ಸ್ನೇಹೋ ವಾಢಲಾಸೇ ಚಿತ್ತೀ । ಹೃದಯೀ ಆಸಕ್ತೀ ನೀಚ ನವೀ ।೫೫೪॥ ಹಾವಭಾವ ವಿಲಾಸಸ್ಥಿತೀ । ಯೇರಯೇರಾಕಡೇ ಪಾಹತೀ । ಪರಸ್ಪರೇ ಕುರವಾಳಿತೀ । ವೋಽಲಂಗಿತೀ ಯೇರಯೇರಾ ।೫೫೫॥ ಯೇರಯೇರಾ ವೇಗಳೇ ಹೋಣೇ । ನಾಹೀ ಜೀವೇ ಅಥವಾ ಮನೇ। ದೋಘೇ ವರ್ತತೀ ಏಕೇ ಪ್ರಾಣೇ । ಖಾಣೇ ಜೇವಣೇ ಏಕತ್ರ ।೫೫೬॥

ಶಯ್ಯಾಸನಾಟನಸ್ಥಾನವಾರ್ತಾಕ್ರೀಡಾಶನಾದಿಕಮ್ । ಮಿಥುನೀಭೂಯ ವಿಶ್ರಬ್ಧೌ ಚೇರತುರ್ವನರಾಜಿಷು ।೫೫॥

ಅರ್ಥ: ಇವರ ಪರಸ್ಪರರಲ್ಲಿ ವಿಶ್ವಾಸವು ಪೂರ್ಣವಾಗಿತ್ತು. ಇವು ನಿಶಂಕರಾಗಿ ಆ ವೃಕ್ಷದಲ್ಲಿ ಕೂಡಿಯೇ ಕುಳಿತುಕೊಳ್ಳುತ್ತಿದ್ದವು. ಮಲಗುವುದು, ತಿರುಗಾಡುವುದು, ಆಟವಾಡುವುದು, ಉಣ್ಣು ತಿನ್ನುವುದು ಎಲ್ಲವೂ ಕೂಡಿಯೇ ಮಾಡುತ್ತಿದ್ದವು.

ಸೇವಿತಾ ಜ್ಯಾಚೀ ಅತಿಗೋಡೀ । ತೇ ಘಾಲಿತೀ ಯೇರಯೇರಾಂಚ್ಯಾ ತೋಂಡೀ । ಜೀವೇಪ್ರಾಣೇ ಶಿಣೋನೀ ಜೋಡೀ । ತೇ ದೇ ಆವಡೀ ಸ್ತ್ರೀಯೇಸೀ ।೫೫೭॥ ಸ್ತ್ರೀಯೇಸೀ ಸಾಂಡೂನಿ ದುರೀ । ಪಾಊಲನ ಘಾಲೀ ಬಾಹೇರೀ । ಹಾತ ಧರೋನಿ ಪರಸ್ಪರೀ । ಆಂತಬಾಹೇರೀ ಹಿಂಡತೀ ।।೫೫೮॥ ಸದಾ ಏಕಾಂತೀ ಬಸತೀ । ಏಕೇ ಸ್ಥಾನೀ ದೋಘೇ ಅಸತೀ । ದೋಘೇ ಕ್ರೀಡಾವಿಹಾರ ಕರಿತೀ । ಖೇಳ ಖೇಲತೀ ವಿನೋದೇ ।೫೫೯॥ ಏಕಾಂತೀ ಗೋಡ ಬೋಲೀ । ಸಾಸುಸಾಸರ್ಯಾಂಚಾ ವಿಕಲ್ಪ ಘಾಲೀ । ದೀರಾಭಾವಾಂಚ್ಯಾ ಮೋಡಿ ಚಾಲೀ। ಬೋಲಾಚ್ಯಾ ಭುಲೀ ಭುಲವಿತ ।೫೬೦॥ ಏಕೇ ಆಸನೀ ಬೈಸತೀ । ಯೇರಯೇರಾಂತೇ ಟೇಂಕತೀ । ಏಕೇ ಶಯ್ಯೇ ನಿದ್ರಾ ಕರಿತೀ । ಅಹೋರಾತೀ ಏಕತ್ರ ।೫೬೧॥ ಮೈಥುನಸುಖಾಚೇನಿ ವೈಭವೇ । ವಿಶ್ವಾಸೋನಿ ಜೀವೇಭಾವೇ । ಹಿತಾಹಿತ ಕಾಂಹೀ ನಾಠವೇ । ಗೃಹಣಿಗೌರವೇ ನಾಚತು ॥ ೫೬೨॥ ಖೇಂಡಕುಲಿಯಾ ಆರಾಮ । ತ್ಯಾಮಾಜೀ ದೋಘಾ ಸಮಾಗಮ । ನಾಮಮಾತ್ರೇ ಗೃಹಾಶ್ರಮ । ವಿಷಯ ಸಂಭ್ರಮ ವನರಾಜೀ ।೫೬೩॥

ಯಂ ಯಂ ವಾಂಛತಿ ಸಾ ರಾಜಂತಪಯಂತ್ಯನುಕಂಪಿತಾ । ತಂ ತಂ ಸಮನಯತ್ ಕಾಮಂ ಕೃಚ್ಛ್ರೇಣಾಪ್ಯಜಿತೇಂದ್ರಿಯಃ ।೫೬॥

ಅರ್ಥ:- ಹೇ ರಾಜನೇ, ವಿಲಾಸಯುಕ್ತ ಹಾಸ್ಯ, ನಯನಕಟಾಕ್ಷ, ಮಧುರ ಭಾಷಣ ಇತ್ಯಾದಿಕಗಳಿಂದ ತನ್ನ ಪ್ರಿಯತಮನಿಗೆ ಸುಖ ಕೊಡುವ, ಸಂತೋಷಗೊಳಿಸುವ, ಹೆಣ್ಣು ಪಾರಿವಾಳವು ಆತನಿಗೆ ಅನುಕಂಪಕ್ಕೆ ಪಾತ್ರಳಾಗಿ ತಾನು ಯಾವ ಯಾವುದನ್ನೂ ಬಯಸುತ್ತಿದ್ದಳೋ, ಅವುಗಳನ್ನೆಲ್ಲಾ ಕಷ್ಟಸೋಸಿ ವಿಷಯಾಸಕ್ತ ಪಾರಿವಾಳವು ಆಕೆಗೆ ತಂದು ಕೊಡುತ್ತಿತ್ತು.

ಜೀವಿತಾಪರೀಸ ಸಮರ್ಥ । ಜೇ ಜೇ ಮಾಗೇ ತೇ ತೇ ಅರ್ಥ । ಜೀವೇಪ್ರಾಣೇ ಶಿಣೋನಿ ದೇತ। ಕಾಮಾಮೋಹಿತ ಹೋಊನಿ ।೫೬೪॥

ಈ ಪಾರಿವಾಳದ ಜೋಡಿಯಲ್ಲಿ ಪರಸ್ಪರ ಅತ್ಯಂತ ಪ್ರೇಮವಿತ್ತು. ದಿನೇ ದಿನೇ ಇವರ ಪ್ರೇಮವು ಬೆಳೆಯುತ್ತ ಸಾಗಿತು. ಹೃದಯದಲ್ಲಿ ನಿತ್ಯವೂ ನೂತನ ಆಸಕ್ತಿಯು ನಿರ್ಮಾಣವಾಗಲಾರಂಭಿಸಿತು ।೫೫೪॥ ಈ ಎರಡೂ ಪಕ್ಷಿಗಳು ಹಾವಭಾವ ಮಾಡುತ್ತ ವಿಲಾಸದಿಂದ ಒಂದಕ್ಕೊಂದು ನೋಡುತ್ತಿದ್ದವು. ಪ್ರೀತಿಯಿಂದ ಒಂದಕ್ಕೊಂದು ಅಪ್ಪಿಕೊಳ್ಳುತ್ತಿದ್ದವು ।೫೫೫॥ ಮನಸಾ ಜೀವಭಾವದಿಂದ ಅವು ಒಂದಕ್ಕೊಂದು ಅಗಲುತ್ತಿದ್ದಿಲ್ಲ. ತಿನ್ನುವ, ಕುಡಿಯುವ ಈ ಎಲ್ಲವನ್ನೂ ಕೂಡಿಯೇ ಮಾಡುತ್ತಿದ್ದವು. ಈ ಪ್ರಕಾರವಾಗಿ ಈ ಎರಡೂ ಪಕ್ಷಿಗಳು ಒಂದೇ ಜೀವವಾಗಿ ಇರುತ್ತಿದ್ದವು ।೫೫೬॥

ಈ ಎರಡೂ ಕೂಡಿ ತಿನ್ನುತ್ತಿರಲು ಇಬ್ಬರಿಗೂ ರುಚಿಯಾಗುತ್ತಿತ್ತು. ಇವರಿಬ್ಬರೂ ಪರಸ್ಪರ ಒಂದು ಇನ್ನೊಂದಕ್ಕೆ ಮುಖದಲ್ಲಿ ಹಾಕುತ್ತಿದ್ದವು. ಗಂಡು ಪಾರಿವಾಳವು ಕಷ್ಟಪಟ್ಟು ದಣಿದುಕೊಂಡು ಕೂಡಿಸಿದ ಎಲ್ಲವನ್ನೂ ತನ್ನ ಹೆಣ್ಣುಪಾರಿವಾಳಕ್ಕೆ ಕೊಡುತ್ತಿತ್ತು ।೫೫೭॥ ತನ್ನ ಸ್ತ್ರೀಯಳನ್ನು ಬಿಟ್ಟು ಒಂದು ಹೆಜ್ಜೆಯನ್ನೂ ಮುಂದಕ್ಕೆ ಹಾಕುತ್ತಿದ್ದಿಲ್ಲ. ಪರಸ್ಪರರು ಕೂಡಿಯೇ ಅವು ಒಳಗೆ, ಹೊರಗೆ ಹಾರಾಡುತ್ತಿದ್ದವು ।೫೫೮॥ ಇವರು ಯಾವಾಗಲೂ ಏಕಾಂತದಲ್ಲಿರುತ್ತಿದ್ದರು. ಒಂದೇ ಸ್ಥಳದಲ್ಲಿ ಇಬ್ಬರೂ ಇರುತ್ತಿದ್ದರು. ಇಬ್ಬರೂ ಕೂಡಿ ಅನೇಕ ಪ್ರಕಾರದ ಕ್ರೀಡೆಗಳನ್ನಾಡುತ್ತಿದ್ದರು. ನಾನಾ ಪ್ರಕಾರದ ವಿಹಾರ ಮಾಡುತ್ತಿದ್ದರು. ಮತ್ತು ವಿನೋದದಿಂದ ಆಟವಾಡುತ್ತಿದ್ದರು ।೫೫೯॥ ಸ್ತ್ರೀಯು ಏಕಾಂತದಲ್ಲಿ ಮಧುರವಾಗಿಮಾತನಾಡುವುದು, ಗಂಡನಲ್ಲಿ ಅತ್ತೆಮಾವಂದಿರಲ್ಲಿ ವಿಕಲ್ಪ ತುಂಬುವುದು, ಮೈದುನರ ವರ್ತನೆಗಳನ್ನು ಖಂಡಿಸುವುದು, ಮತ್ತು ಮರುಳಿನ ಭಾಷೆಯಿಂದ ಮಂತ್ರಮುಗ್ಧ ಮಾಡುವುದು ।೫೬೦॥ ಮತ್ತು ಒಂದೇ ಆಸನದಲ್ಲಿ ಕುಳಿತುಕೊಳ್ಳುವುದು, ಒಬ್ಬರಿಗೊಬ್ಬರು ಹತ್ತಿಕೊಂಡೇ ಇರುವುದು, ಮತ್ತು ಅಹೋರಾತ್ರಿ ಒಂದೇ ಹಾಸಿಗೆಯಲ್ಲಿ ನಿದ್ರಿಸುವುದು ।೫೬೧॥ ಈ ಪ್ರಕಾರದ ಸ್ತ್ರೀ ಸಮಾಗಮದ ಸುಖದ ಐಶ್ವರ್ಯದಲ್ಲಿ ಜೀವಭಾವದಿಂದ ವಿಶ್ವಾಸಪಟ್ಟು ಆತನಿಗೆ ಹಿತ ಅಹಿತಗಳ ಯಾವುದೂ ಸ್ಮರಿಸುತ್ತಿದ್ದಿಲ್ಲ. ಗೃಹಿಣಿಯ ಗೌರವಕ್ಕಾಗಿ ಅವನು ಕುಣಿಯುತ್ತಿದ್ದನು ।೫೬೨॥ ಹೊರಭಾಗದ ಶಾಂತ ಸ್ಥಳದಲ್ಲಿ ಇವರ ಸಮಾಗಮವಾಗುತ್ತಿತ್ತು. ಇವರ ಗೂಡು ಹೆಸರಿಗೆ ಮಾತ್ರ ಇತ್ತು. ಸರ್ವ ವಿಷಯ ವಿಲಾಸಗಳು ಹೊರ ಅರಣ್ಯದಲ್ಲಿಯೇ ನಡೆಯುತ್ತಿದ್ದವು ।೫೬೩॥

ಜೀವಕ್ಕಿಂತಲೂ ಹೆಚ್ಚಾಗಿರುವ ಮೌಲ್ಯ ವಸ್ತುಗಳನ್ನು ಯಾವುದೇ ಕೇಳಲಿ, ಅವನು ತನ್ನ ಜೀವಕ್ಕೆ ಸಮಾನವಾಗಿ ಶ್ರಮಿಸಿ ಕೇವಲ ಕಾಮಮೋಹಿತನಾಗಿ ಆಕೆಗೆ ತಂದು ಕೊಡುತ್ತಿದ್ದನು ।೫೬೪॥

ಜಾಣೋನಿ ಜೀವೀಚೇ ಖುಣೇ । ನ ಮಾಗತಾ ಅರ್ಥ ದೇಣೇ । ತ್ಯಾಹೀವರೀ ಜರೀ ತ್ಯಾ ಮಾಗಣೇ । ತರೀ ವಿಕೂನಿ ದೇಣೇ ಆಪಣಿಯಾತೇ ।೫೬೫॥ ಧರ್ಮಾಚೀ ವೇಳ ನಾಠವಣೇ। ದೀನಾವರೀ ದಯಾ ನೇಣೇ। ಕೃಪಾ ಸ್ತ್ರೀಯೇವರೀ ಕರಣೇ । ಜೀವೇಪ್ರಾಣೇ ಸರ್ವಸ್ವೇ ॥೫೬೬॥ ಬೈಸಲೀ ಸಾಕರೇವರೀ ಮಾಶೀ । ಮಾರಿತಾಂಹೀ ನುಡೇ ಜೈಶೀ । ತೈಸಾ ಭೋಗಿತಾ ವಿಷಯಾಂಸೀ । ಜರಾಮರಣಾಸೀ ನಾಠವೀ ।೫೬೭॥ ಜೈಶೀ ಪೂರ್ವಜಾಂಚೀ ಭಾಕ । ಪಾಳಿತೀ ಸತ್ಯವಾದೀ ಲೋಕ । ತೈಸಾ ಸ್ತ್ರೀಯೇಚೇಚಿ ಸುಖ । ಪಾಳೀ ದೇಖ ಸರ್ವಸ್ವೇ॥೫೬೮॥ ಜೈಸೀ ಆತ್ಮ ಉಪಾಸಕಾಸೀ । ಏಕಾತ್ಮತಾ ಹೋಯೇ ತ್ಯಾಸೀ । ತೈಸೇ ಸ್ತ್ರೀವಾಂಚೋನಿ ದೃಷ್ಟೀಸೀ । ಜಗೀ ಆಣಿಕಾಸೀ ನ ದೇಖೇ ।೫೬೯॥

ಕಪೋತೀ ಪ್ರಥಮಂ ಗರ್ಭಂ ಗೃಹ್ಣಂತೀ ಕಾಲ ಆಗತೇ । ಅಂಡಾನಿ ಸುಷುವೇ ನೀಡೇ ಸ್ವಪತ್ಯುಃ ಸನ್ನಿಧೌ ಸತೀ ।೫೭॥

ಅರ್ಥ : ಆ ಬಳಿಕ ಹೆಣ್ಣು ಪಾರಿವಾಳವು ಮೊದಲ ಬಾರಿಗೆ ಗರ್ಭವತಿಯಾಯಿತು. ಹೆರಿಗೆಯ ಕಾಲ ಬಂದಾಗ ಆ ಪತಿವ್ರತೆ ಗಂಡನೆದುರಿಗೆ ಗೂಡಿನಲ್ಲಿ ಮೊಟ್ಟೆಗಳನ್ನು ಇಟ್ಟಿತು.

ಆಧಿಂಚೀ ಪ್ರಿಯಾ ಪಢಿಯಂತೀ । ತೇಹೀ ಝಾಲೀ ಗರ್ಭವತೀ । ಜೈಶೀ ಲೋಭಿಯಾಚೇ ಹಾತೀ । ಸಾಂಪಡೇ ಅವಚಿತೀ ಧನಲೋಹೇ ।೫೭೦॥ ತೈಸೇ ತಿಚ್ಯಾ ಗರ್ಭಾಚೇ ಕೋಡ । ಅಧಿಕಾಧಿಕ ವಾಢವೀ ಗೋಡ ।ಜೈಸೇ ಮದಿರಾ ಪಿಊನಿ ಮಾಕಡ । ನಾಚೇ ತಡತಡ ಡುಲ್ಲತು ।೫೭೧॥ ತೈಸೇ ಗರ್ಭಾಚೇ ಸೋಹಳೇ । ಸರ್ವಸ್ವೇ ಪುರವೀ ಡೋಹಳೇ । ತಿಚೇ ಲೀಳೇಮಾಜೀ ಖೇಳೇ । ಪ್ರಾಪ್ತಕಾಳೇ ಪ್ರಸೂತೀ ।೫೭೨॥ ಸ್ವನೀಡಾ – ಆಂತೌತೀ ।ಜಾಹಲೀ ಅಂಡಾತೇ ಪ್ರಸವತೀ । ಪ್ರಸೂತಿವಾಧವಾ ಸಾಂಗತಿ । ಐಕೋನಿ ಪತಿ ಉಲ್ಹಾಸೇ ।೫೭೩॥

ತೇಷು ಕಾಲೇ ವ್ಯಾಜಾಯಂತ ರಚಿತಾವಯಾವಾ ಹರೇಃ । ಶಕ್ತಿಭಿರ್ದುರ್ವಿಭಾವ್ಯಭಿಃ ಕೋಮಲಾಂಗತನ್ಯರುಹಾಃ ।೫೮॥

ಅರ್ಥ : ಜಲದಿಂದ ತುಂಬಿರುವ ಆ ತತ್ತಿಗಳಲ್ಲಿ ಯೋಗ್ಯ ಕಾಲವಾದ ಮೇಲೆ ಹರಿಯ ಅಂಚಿತ್ಯ ಸ್ವಭಾವಕರ್ಮಾದಿ ಶಕ್ತಿಯಿಂದ ಅದರಲ್ಲಿ ಅವಯವಗಳು ಸಿದ್ಧವಾದವು. ಅವುಗಳ ಶರೀರ, ರೋಮಗಳು ಕೋಮಲವಾಗಿರುವ ಪಕ್ಷಿಗಳು ಹುಟ್ಟಿದವು.

ಅಘಟಿತ ಘಟೀ ಹರೀಚೀ ಮಾಯಾ । ಅಲಕ್ಷ ಲಕ್ಷೀನಾ ಬ್ರಹ್ಮಯಾ । ಅವೇವ ಅಂಡಾಮಾಜೀ ತಯಾ । ದೇವಮಾಯಾ ರಚಿಯೇಲೇ ।೫೭೪॥ ರಸೇ ಭರಲೀ ಹೋತೀ ಅಂಡೇ । ತ್ಯಾಮಾಜೀ ನಖ ಪಕ್ಷ ಚಾಂಚುವಡೇ । ಉಘಡಿಲೀ ಡೋಳ್ಯಾಂಚೀ ಕವಾಡೇ । ಕರೀ ಕೋಡೇ ಹರಿಮಾಯಾ ।೫೭೫॥ ಅಂಡೇ ಉಲೋನಿ ಆಪಣ । ಕೋವಳೀ ಪಿಲೀ ನಿಘಾಲೀ ಜಾಣ । ಪಿತರೇ ದೃಷ್ಟೀ ದೇಖೋನ । ಜೀವೇ ಪ್ರಾಣೇ ಭುಲಲೀ ।೫೭೬॥

ಪ್ರಜಾ ಪುಪುಷತುಃ ಪ್ರೀತೌ ದಂಪತೀ ಪುತ್ರವತ್ಸಲೌ । ಶ್ರುಣ್ವಂತೌ ಕೂಜಿತಂ ತಾಸಾಂ ನಿರ್ವೃತೌ ಕಾಲಭಾಷಿತೈಃ ।೫೯॥

ಆಕೆಯ ಮನೋಗತಗಳನ್ನು ಅರಿತುಕೊಂಡು ಆಕೆಯು ಕೇಳದೇ ತಂದುಕೊಡುತ್ತಿದ್ದನು. ಇದಲ್ಲದೇ ಆಕೆಯು ಇನ್ನೇನಾದರೂ ಹೆಚ್ಚಾಗಿ ಕೇಳಿದರೆ ಸಾಕು ತನ್ನ ಸ್ವತಃ ಜೀವವನ್ನು ಒತ್ತೆ ಇಟ್ಟು ಆಕೆಯ ಇಚ್ಛೆಯನ್ನು ಪೂರ್ಣಗೊಳಿಸುತ್ತಿದ್ದನು ।೫೬೫॥ ಅವನಿಗೆ ಧರ್ಮದ ವೇಳೆಯು ಎಂದಿಗೂ ಸ್ಮರಣಕ್ಕೆ ಬರುತ್ತಿರಲಿಲ್ಲ. ಬಡವರಲ್ಲಿ ದಯೆ ತೋರಿಸಬೇಕೆಂಬುದು ಅವನಿಗೆ ಎಂದೂ ತಿಳಿದಿದ್ದಿಲ್ಲ. ಜೀವಭಾವದಿಂದ ಕೇವಲ ಸ್ತ್ರೀಯಳನ್ನು ಕೃಪೆದೋರಬೇಕೆಂಬುವದಷ್ಟೇ ಅವನಿಗೆ ತಿಳಿದಿತ್ತು ।೫೬೬॥ ಸಕ್ಕರೆಯ ಮೇಲೆ ಕುಳಿತ ನೊಣವು ಹೊಡೆದರೂ ಹಾರಿ ಹೋಗದಂತೆ, ವಿಷಯದ ಉಪಭೋಗ ಪಡೆಯುತ್ತಿರಲು ಇವನಿಗೆ ಮುಂದಾಗುವ ಮುಪ್ಪು, ಮೃತ್ಯುವಿನ ಸ್ವಲ್ಪಾದರೂ ನೆನಪಿಗೆ ಬರುತ್ತಿರಲಿಲ್ಲ ।೫೬೭॥ ಸತ್ಯವಾದಿ ಜನರು ತಮ್ಮ ಹಿರಿಯರ ವಚನಗಳನ್ನು ತಪ್ಪದೇ ಪಾಲಿಸುವಂತೆ ಇವನು ತನ್ನ ಸ್ತ್ರೀಯಳ ಸಂತೋಷವನ್ನು ಸರ್ವಸ್ವದಿಂದ ಪಾಲಿಸುತ್ತಿದ್ದನು ।೫೬೮॥ ಆತ್ಮತತ್ವದ ಉಪಾಸನೆಯನ್ನು ಮಾಡುವವರು ಸರ್ವತ್ರವೂ ಆತ್ಮವೇ ತುಂಬಿಕೊಂಡಿದ್ದು ಕಾಣುವಂತೆ ಇವನ ದೃಷ್ಟಿಗೆ ಈ ಜಗತ್ತಿನಲ್ಲಿ ಸ್ತ್ರೀ ಹೊರತಾಗಿ ಇನ್ನು ಬೇರೆ ಯಾವುದೂ ಕಾಣಿಸುತ್ತಿದ್ದಿಲ್ಲ ।೫೬೯॥

ಮೊದಲೇ ಪ್ರೀತಿಯ ಹೆಂಡತಿ, ಆಕೆ ಗರ್ಭಿಣಿಯಾದರೆ ಕೇಳುವುದೇನು? ಲೋಭಿಯ ಕೈಯಲ್ಲಿ ಆಕಸ್ಮಿಕ ನಿಧಿ ಸಿಕ್ಕಂತಾಯಿತು ।೫೭೦॥ ಆಕೆಯ ಬಯಕೆಗಳು ಬೆಳೆಯುತ್ತ ಸಾಗಿದವು. ಸೆರೆ ಕುಡಿದ ಕೋತಿಯು ಟಣ್ ಟಣ್ ಜಿಗಿಯುತ್ತ ತೂಗಾಡುತ್ತಾ ಕುಣಿಯುವುದು ।೫೭೧॥ ಅದರಂತೆ ಇವನೂ ಸಹ ಗರ್ಭದ ವೈಭವ ಮಾಡುತ್ತಾ ಆಕೆಯ ಬಯಕೆಗಳನ್ನೆಲ್ಲಾ ಪೂರೈಸುತ್ತ ಪ್ರಸೂತಿ ವೇಳೆ ಬರುವವರೆಗೂ ಆಕೆಯ ಲೀಲೆಗಳಲ್ಲಿಯೇ ಆಡುತ್ತಿದ್ದನು ।೫೭೨॥ ಇಷ್ಟರಲ್ಲಿ ಹೆಣ್ಣು ಪಾರಿವಾಳವು ತನ್ನ ಗೂಡಿನಲ್ಲಿ ತತ್ತಿಗಳನ್ನು ಹಾಕಿತು. ಈ ಪ್ರಸೂತದ ವಾರ್ತೆಯನ್ನು ಕೇಳಿ ಪತಿಗೆ ಅತ್ಯಂತ ಹರ್ಷವಾಯಿತು ।೫೭೩॥

ಹರಿಮಾಯೆಯು ಅಘಟಿತವಾಗಿರುವುದು. ಇದು ಬ್ರಹ್ಮದೇವನಿಗೂ ಅಗಮ್ಯವಾಗಿರುವುದು. ಆದ್ದರಿಂದ ಅದೇ ದೇವಮಾಯೆಯು ಅಂಡದಲ್ಲಿ ಅವಯವಗಳನ್ನು ತಯಾರಿಸಿತು ।೫೭೪॥ ಆ ಅಂಡವು ಪ್ರಥಮತಃ ಕೇವಲ ರಸದಿಂದ ತುಂಬಿಕೊಂಡಿತ್ತು. ಆ ಹರಿಮಾಯೆಯಿಂದ ಉಗುರುಗಳು, ರೆಕ್ಕೆಗಳು, ಚುಂಚು ಮತ್ತು ನೇತ್ರಗಳ ದ್ವಾರಗಳು ತೆರೆದು ಚಮತ್ಕಾರವನ್ನು ತೋರಿಸಲ್ಪಟ್ಟಿತು ।೫೭೫॥ ಕೋಮಲವಾದ ಅಂಡಗಳು ತಮ್ಮಷ್ಟಕ್ಕೆ ತಾವೇ ಒಡೆದು ಕೋಮಲಗಳಾದ ಮರಿಗಳು ಹೊರಬಂದವು. ಇವುಗಳನ್ನು ಕಂಡಾಕ್ಷಣವೇ ತಂದೆ ತಾಯಿಗಳ ಜೀವವು ಪರಿಪೂರ್ಣವಾಗಿ ಅವಕ್ಕೆ ಮೆಚ್ಚಿಕೊಂಡಿತು ।೫೭೬॥

ಅರ್ಥ : ತಮ್ಮ ಮರಿಗಳ ಮೃದುವಾದ ರೆಕ್ಕೆಗಳನ್ನು ಚಿಲಿಪಿಲಿಯನ್ನು ಗೂಡಿನ ಸುತ್ತ ಅವು ಮುದ್ದಾಗಿ ಮುಗ್ಧವಾಗಿ ಸಂಚರಿಸುವುದನ್ನೂ ಅವು ಜಿಗಿಯುವ ಹಾರುವ ಪ್ರಯತ್ನವನ್ನೂ ಕಂಡು ಆ ಪಾಲಕ ಪಕ್ಷಿಗಳು ತುಂಬಾ ಸಂತೋಷಭರಿತವಾದವು. ಇವುಗಳ ಸುಖದಿಂದ ಪಾಲಕರೂ ಸುಖಿಗಳಾದರು.

ಅತ್ಯಂತ ಕೋವಳೀ ಬಾಳೇ । ದೋಘೇ ಜಣೇ ಪುತ್ರವತ್ಸಲೇ । ಶಾಂತವಿತೀ ಮಂಜುಳೇ । ಅತಿಸ್ನೇಹಾಳೇ ಪ್ರಜಾಂಸೀ ।೫೭೭॥ ಜೇ ಸಮಯೀ ಜೈಸೇ ಲಕ್ಷಣ । ತೈಸೇ ಪ್ರಜಾಂಚೇ ಪೋಷಣ । ಅಂಗೇ ಕರಿತಾತೀ ಆಪಣ। ದೋಘೇ ಜಣ ಮಿಳೋನಿ ।೫೭೮॥ ಗೋಡ ಗೋಜಿರೇ ಬೋಲ। ಐಕೋನಿ ದೋಘಾ ಯೇತೀ ಡೋಲ। ಧಾಂವೋನಿಯಾ ವೇಳೋವೇಳ । ನಿಂಬಲೋಣ ಉತರಿತೀ ।೫೭೯॥

ತಾಸಾಂ ಪತತ್ರೈಃ ಸುಸ್ಪರ್ಶೈಃ ಕೂಜಿತೈರ್ಮುಗ್ಧಚೇಷ್ಟಿತೈಃ । ಪ್ರತ್ಯುದ್ಗಮೈರದೀನಾನಾಂ ಪಿತರೌ ಮುದಮಾಪತುಃ ।೬೦॥

ಅರ್ಥ:- ಹೇ ರಾಜನೇ, ಅತಿಶಯ ಆನಂದಿತವಾಗಿರುವ ಈ ಸುಖಾವಹ ಸ್ಪರ್ಶದಿಂದ ರೆಕ್ಕೆಗಳಿಂದ ಮಂಜುಳ ಶಬ್ದಗಳಿಂದ, ಮನೋಹರ ಲೀಲೆಗಳಿಂದ ಅವರೆದುರು ಕೂಸುಗಳು ಬರುತ್ತಿರಲು ಆ ತಾಯಿ ತಂದೆಯವರಿಗೆ ಅತಿಶಯವಾಗಿ ಆನಂದವಾಗುತ್ತಿತ್ತು.

ತ್ಯಾಂಚೇನಿ ಆಲಿಂಗನಚುಂಬನೇ । ಮೃದು ಮಂಜುಳ ಕಲಭಾಷಣೇ । ದೋ ಪಕ್ಷಾಂಚೇನಿ ಸ್ಪರ್ಶನೇ। ದೋಘೇಜಣೇ ನಿವತಾತೀ ।೫೮೦॥ ಮಾತಾ ಪಿತಾ ದೋಘೇ ಬೈಸತಿ । ಸನ್ಮುಖ ಅಪತ್ಯೇ ಧಾವಂತೀ । ಲೋಲ ವಕ್ರ ವಿಲೋಕಿತೀ । ವೇಗೆ ದಾವಿತೀ ಯೇರಯೇರಾ ।೫೮೧॥ ಮಗ ದೇವೋನಿಯಾ ಖೇವೇ । ದೂರೀಜಾತೀ ಮುಗ್ಧಭಾವೇ । ತೇಥೂನಿ ಫೇಊನಿಯಾ ಧಾಂವೇ । ವೇಗೇ ಯಾವೇ ತಯಾಪಾಸೀ ।೫೮೨॥ ಮಾಯಬಾಪಾಂಚ್ಯಾ ಪಾಖೋವ್ಯಾಪಾಸೀ । ಹೀನದೀನತಾ ನಾಹೀ ಬಾಳಾಂಸೀ । ಜೇ ಜನ್ಮೋನಿ ತ್ಯಾಂಚೇ ಕುಶೀ । ತ್ಯಾ ದೋಘಾಂಸೀ ಸಭಾಗ್ಯತಾ ।೫೮೩॥ ಲಾಡಿಕೀ ಲಳೇವಾಡೇ ಬಾಳೇ । ಲಾಡೇಕೋಡೇ ಪುರವಿತೀ ಲಳೇ। ದೇಖೋನಿ ನಿವತೀ ದಿಠೀ ಡೋಳೇ। ಸ್ನೇಹ ಆಗಳೇ ಯೇರಯೇರಾ ।೫೮೪॥ ಐಸೀ ಖೇಳತಾ ದೇಖೋನಿ ಬಾಳೇ । ದೋಘೇ ಧಾಂವತೀ ಏಕ ವೇಳೇ । ಉಚಲೂನಿಯಾ ಸ್ನೇಹಬಳೇ । ಮುಖ ಕೋವಳೇ ಚುಂಬಿತೀ ।೫೮೫॥

ಸ್ನೇಹಾನುಬದ್ಧಹೃದಯಾವನ್ಯೋನ್ಯಂ ವಿಷ್ಣುಮಾಯಯಾ । ವಿಮೋಹಿತೌ ದೀನಧಿಯೌ ಶಿಶೂನ್ ಪುಪುಷತುಃ ಪ್ರಜಾ ।೬೧॥

ಅರ್ಥ : ಅವರ ಹೃದಯಗಳು ಪರಸ್ಪರ ಪ್ರೀತಿಯಿಂದ ಕಟ್ಟಲ್ಪಟ್ಟವು. ಆ ಮೂರ್ಖ ಪಕ್ಷಿಗಳು ಭಗವಾನ ವಿಷ್ಣುವಿನ ಮಾಯಾಶಕ್ತಿಯಿಂದ ಸಂಪೂರ್ಣ ದಿಙ್ಮೂಢರಾಗಿ, ತಮ್ಮಿಂದ ಜನಿಸಿದ ಎಳೆಯ ಸಂತತಿಯ ಪೋಷಣೆಯನ್ನು ಮುಂದುವರಿಸಿದವು.

ಅಜಾಚೀ ಜೇ ಅಜಾ ಮಾಯಾ । ತ್ಯಾ ಕೈಸೀ ಭುಲವೀ ಗಾ ರಾಯಾ ।ಅನ್ಯೋನ್ಯಸ್ನೇಹ ಬಾಂಧೋನಿ ಹೃದಯಾ । ಪಿಲೀ ಪೋಸಾವಯಾ ಉದ್ಯತ ।೫೮೬॥
ಸ್ತ್ರೀಪುತ್ರಾಂಚಾ ಮೋಹ ಗಹನ । ತ್ಯಾಂಚೇ ಕರಾವಯಾ ಪೋಷಣ । ಚಿಂತಾತುರ ಅತಿದೀನ । ಕರೀ ಭ್ರಮಣ

ಈ ಮರಿಗಳು ಅತಿಶಯವಾಗಿ ಕೋಮಲವಾಗಿದ್ದವು. ಅವು ಕಾಣಲು ಸುಂದರವಾಗಿದ್ದಕ್ಕೆ ಪುತ್ರ ವಾತ್ಸಲ್ಯದಿಂದ ಮಾತಾಪಿತರರು ಮಂಜುಳ ವಾಣಿಯಿಂದ ಅವುಗಳನ್ನು ಸಂತೈಸುತ್ತಿದ್ದರು ।೫೭೭॥ ಯಾವುದನ್ನು ಯಾವ ಕಾಲಕ್ಕೆ ಮಾಡುವುದು ಯೋಗ್ಯವಾಗಿರುವುದೋ, ಅದರಂತೆ ಇಬ್ಬರೂ ಕೂಡಿ ತಮ್ಮ ಯಾವ ಮರಿಗಳ ಲಾಲನೆ ಪಾಲನೆಗಳನ್ನು ಮಾಡುತ್ತಿದ್ದವು ।೫೭೮॥ ಮರಿಗಳ ಮಂಜುಳ ಶಬ್ದಗಳನ್ನು ಕೇಳಿ ಇಬ್ಬರೂ ಆನಂದದಿಂದ ತೂಗಾಡುತ್ತಿದ್ದರು. ಮೇಲಿಂದ ಮೇಲೆ ಅವರ ಮೇಲೆ ನಿವಾಳಿಸಿ ಒಗೆಯುತ್ತಿದ್ದರು ।೫೭೯॥

ಆ ಮರಿಗಳ ಆಲಿಂಗನ, ಮಧುರವಾದ ತೊದಲು ನುಡಿಗಳು, ಎರಡೂ ಮೃದುವಾದ ಪಂಖಗಳ ಸ್ಪರ್ಶವು, ಇವುಗಳಿಂದ ಈ ಇಬ್ಬರಿಗೂ ಆನಂದವಾಗುತ್ತಿತ್ತು ।೫೮೦॥ ಮಾತಾ ಪಿತಾಗಳು ಇಬ್ಬರೂ ಕೂಡಿ ಕುಳಿತಿರಲು ಆ ಮರಿಗಳು ಇವರತ್ತ ಧಾವಿಸುತ್ತ ಬಂದು ಅವರ ಚುಂಚುಗಳಲ್ಲಿ ತಮ್ಮ ಚುಂಚುಗಳನ್ನಿಟ್ಟು ಪರಸ್ಪರ ಪ್ರೇಮವ್ಯಕ್ತ ಮಾಡುತ್ತಿದ್ದವು. ।೫೮೧॥ ಪುನಃ ಆಲಿಂಗನ ಕೊಟ್ಟಂತೆ ಮಾಡಿ ಹುಡುಗಾಟಿಕೆಯಿಂದ ದೂರ ಓಡಿಹೋಗುತ್ತ ಪುನಃ ಅಲ್ಲಿಂದ ಧಾವಿಸುತ್ತ ಅವರತ್ತ ಬರುತ್ತಿದ್ದವು ।೫೮೨॥ ತಂದೆ ತಾಯಿಯವರ ಆಶ್ರಯದಲ್ಲಿ ಬೆಳೆಯುತ್ತಿರುವ ಈ ಮರಿಗಳಿಗೆ ಹೀನ, ದೀನ ಎಂಬುದು ಗೊತ್ತೇ ಇರುವುದಿಲ್ಲ. ಆದ್ದರಿಂದ ತಮ್ಮ ಹೊಟ್ಟೆಯಲ್ಲಿ ಇಂತಹ ಮಕ್ಕಳು ಹುಟ್ಟಿದರೆಂದು ಅವುಗಳಿಗೆ ಬಹು ಧನ್ಯತೆಯಾಗುತ್ತಿತ್ತು ।೫೮೩॥ ಈ ಮರಿಗಳು ಇವರಿಗೆ ಬಹಳ ಪ್ರೀತಿಗೆ ಪಾತ್ರರಾದವು. ಇವರ ಮನದ ಇಚ್ಛೆಗಳನ್ನು ಬಹಳ ಪ್ರೇಮಪಟ್ಟು ಪೂರೈಸುತ್ತಿದ್ದವು. ಇವುಗಳನ್ನು ಕಂಡು ಅವರ ಕಣ್ಣುಗಳು ತೃಪ್ತವಾಗುತ್ತಿದ್ದವು. ಹೀಗೆ ಪರಸ್ಪರರಲ್ಲಿ ಅತ್ಯಧಿಕ ಪ್ರೇಮವು ಉಂಟಾಯಿತು ।೫೮೪॥ ತಮ್ಮ ಮರಿಗಳು ಆಡುತ್ತಿರುವುದನ್ನು ಕಂಡು ಉಭಯರೂ ಒಮ್ಮೆಲೆ ಅವರತ್ತ ಧಾವಿಸಿ, ಪ್ರೇಮದಿಂದ ಅವುಗಳನ್ನು ಎತ್ತಿಕೊಂಡು ಅವರ ಕೋಮಲ ಮುಖಗಳಿಗೆ ಚುಂಬನ ಕೊಡುತ್ತಿದ್ದವು ।೫೮೫॥

ಹೇ ರಾಜನೇ, ಅಜ ಪರಮಾತ್ಮನ ಆ ಯಾವ ಜನ್ಮರಹಿತ ಮಾಯೆಯು ಆ ಇಬ್ಬರನ್ನು ಹೇಗೆ ಭುಲಾಯಿಸುತ್ತಿತ್ತೆಂಬುದು ಈಗ ನೋಡು, ಹೃದಯ ಪೂರ್ವಕವಾಗಿ ಪರಸ್ಪರರಲ್ಲಿ ಇರುವ ಪ್ರೇಮಬಂಧದಿಂದ ಆ ಮರಿಗಳನ್ನು ಪೋಷಿಸುವುದಕ್ಕೆ ಅತ್ಯಂತ ತತ್ಪರರಾಗಿದ್ದವು ।೫೮೬॥

ಅನ್ನಾರ್ಥ ।೫೮೭॥

ಏಕದಾ ಜಗ್ಮತುಸ್ತಾಸಾವನ್ನಾರ್ಥಮ ತೌ ಕುಟುಂಬಿನೌ ।
ಪರಿತಃ ಕಾನನೇ ತಸ್ಮಿನ್ನರ್ಥಿನೌ ಚೇರತುಶ್ಚಿರಮ್ ।೬೨॥

ಅರ್ಥ:- ಒಂದು ದಿನ ಈ ಪಕ್ಷಿ ಕುಟುಂಬದ ಇಬ್ಬರೂ ಮರಿಗಳಿಗೆ ಆಹಾರವನ್ನು ಹುಡುಕಿಕೊಂಡು ಹೊರಹೊರಟವು. ತಮ್ಮ ಸಂತತಿಗೆ ಸರಿಯಾಗಿ ಆಹಾರವನ್ನು ಉಣಿಸಬೇಕೆಂದು ತುಂಬ ಉದ್ವಿಗ್ನರಾಗಿ ಬಹಳ ಕಾಲ ಕಾಡಿನ ಉದ್ದಗಲಕ್ಕೂ ಅಲೆದಾಡಿದವು.

ಏವಂ ಟಣಕೀ ಜಾಲೀ ಬಾಳೇ । ಕುಟುಂಬ ಥೋರ ಥೋರಾವಲೇ । ಅನ್ನ ಬಹುಸಾಲ ಪಾಹಿಜೇ ಝಾಲೇ ।ದೋಘೇ ವಿವ್ಹಳೇ ಗೃಹಧರ್ಮೇ ।೫೮೮॥ ಯಾಪರೀ ಕುಟುಂಬವತ್ಸಲೇ । ಪುತ್ರಸ್ನೇಹೇ ಸ್ನೇಹಾಳೇ । ದೋಘೇ ಜಣೇ ಏಕೇ ವೇಳೇ । ಅನ್ನ ಬಹುಕಾಳೇ ಅರ್ಥಿತೀ ।೫೮೯॥ ಸಹಸಾ ಮಿಳೇನಾ ಅನ್ನ । ಯಾಲಾಗೀ ಹಿಂಡತೀ ವನೋಪವನ । ಬಹುಸಾಲ ಶ್ರಮತಾಂಹೀ ಜಾಣ । ಪೂರ್ಣ ಪೋಷಣ ಮಿಳೇನಾ ।೫೯೦॥ ಬಹುಸಾಲ ಮೇಳವೂನಿ ಚಾರಾ । ದೋಘೇ ಜಾಣೇ ಜಾಊ ಘರಾ । ಮಗ ಆಪುಲ್ಯಾ ಲೇಕುರಾ । ನಾನಾ ಉಪಚಾರಾ ಪ್ರತಿಪಾಳೂ ।೫೯೧॥ ಐಸಐಶಿಯಾ ವಾಸನಾ । ಮೇಳವಾವಯಾ ಅನ್ನಾ । ದೋಘೇಜಣೇ ನಾನಾ ಸ್ಥಾನಾ । ವನಾ ಉಪವನಾ ಹಿಂಡತೀ ।೫೯೨॥

ದೃಷ್ಟ್ವಾ ತಾನ್ ಲುಬ್ಧಕಃ ಕಶ್ಚಿದ್ ಯದೃಚ್ಛಾತೋ ವನೇಚರಃ ।
ಜಗೃಹೇ ಜಾಲಮಾತತ್ಯ ಚರತಃ ಸ್ವಾಲಯಾಂತಿಕೇ ।೬೩॥

ಅರ್ಥ:- ಆ ಸಮಯದಲ್ಲಿ ಬೇಡನೊಬ್ಬ ಸಂಚರಿಸುತ್ತಾ ಅದೇ ಕಾಡಿನ ಮೂಲಕ ಹಾದು ಹೋಗುತ್ತಿದ್ದಾಗ, ತಮ್ಮ ಗೂಡಿನ ಸುತ್ತ ಆಡ್ಡಾಡುತ್ತಿದ್ದ ಈ ಎಳೆಯ ಪಾರಿವಾಳಗಳನ್ನು ಕಂಡು, ತನ್ನ ಬಲೆಯನ್ನು ಬೀಸಿ ಅವುಗಳನ್ನು ಹಿಡಿದನು.

ಮಾತಾ ಪಿತಾ ಗೇಲೀ ದುರೀ । ಉಡತೀ ಪಿಲೇ ನೀಡಾಭಿತರೀ । ಕ್ಷುಧೇನೇ ಪೀಡಿಲೀ ಭಾರೀ । ನಿಘಾಲೀ ಬಾಹೇರೀ ಅದೃಷ್ಟೇ ।೫೯೩॥ ತೇ ವನೀ ಕೋಣೀ ಏಕ ಲುಬ್ಧಕ । ಪಕ್ಷಿಬಂಧನೀ ಅತಿಸಾಧಕ । ತೇಣೇ ತೇ ಕಪೋತಕಬಾಳಕ । ಅದೃಷ್ಟೇ ದೇಖಿ ದೇಖಿಲೇ ।೫೯೪॥ ತೇಣೇ ಪಸರೋನಿಯಾ ಕಾಳಜಾಳೇ । ಪಾಶೀ ಬಾಂಧಿಲೀ ತೀ ಬಾಳೇ । ಕಪೋತಕಪೋತೀಚೇ ವೇಳೇ । ರಾಖಿತ ಕೇವಳೇ ರಾಹಿಲಾ ।೫೯೫॥

ಕಪೋತಶ್ಚ ಕಪೋತಿ ಚ ಪ್ರಜಾಪೋಷೇ ಸದೋತ್ಸುಕೌ ।
ಗತೌ ಪೋಷಣ ಮಾದಾಯ ಸ್ವನೀಡಮುಪಜಗ್ಮತುಃ ।೬೪॥

ಅರ್ಥ :- ಆ ಪಾರಿವಾಳ ದಂಪತಿಗಳು ತಮ್ಮ ಮರಿಗಳ ಪೋಷಣೆಗಾಗಿ ಸರ್ವದಾ ಉತ್ಸುಕರಾಗಿ ಆಹಾರ ತರಲು ಹೋಗಿದ್ದವು. ಅವು ಆಹಾರವನ್ನು ತೆಗೆದುಕೊಂಡು ತಮ್ಮ ಗೂಡಿನತ್ತ ಬಂದವು.

ಬಾಳಕಾಂಚ್ಯಾ ಅತಿಪ್ರೀತೀ । ಕಪೋತಾ ಆಣಿ ಕಪೋತೀ । ಚಾರಾ ಘೇಊನಿ ಯೇತೀ । ನೀಡಾಪ್ರತಿ

ಸ್ತ್ರೀಪುತ್ರರ ಮೋಹವು ಅತಿ ಕಠಿಣವಾಗಿರುವುದು. ಅವರ ಪೋಷಣೆಗಾಗಿ ಚಿಂತಾಕ್ರಾಂತ, ಹಾಗೂ ಅತಿ ದೀನರಾಗಿ ಆ ಪಾರಿವಾಳಗಳು ಆಹಾರಕ್ಕಾಗಿ ಹತ್ತು ದಿಶೆಗಳಲ್ಲಿಯೂ ಭ್ರಮಣ ಮಾಡುತ್ತಿದ್ದವು ।೫೮೭॥

ಈ ಪ್ರಕಾರವಾಗಿ ಈ ಮರಿಗಳು ದೊಡ್ಡವಾದವು. ಕುಟುಂಬವು ಬಹು ಬೆಳೆಯಿತು. ಹಾಗೆಯೇ ಆಹಾರವೂ ಹೆಚ್ಚು ಬೇಕಾಯಿತು. ಆಗ ಈ ಈರ್ವರೂ ಪ್ರಪಂಚದ ಕಾಳಜೀ ಮಾಡಲಾರಂಭಿಸಿದರು ।೫೮೮॥ ಈ ರೀತಿಯಲ್ಲಿ ಕುಟುಂಬ ವಾತ್ಸಲ್ಯದಿಂದ ಹಾಗೂ ಪುತ್ರಸ್ನೇಹಕ್ಕಾಗಿ ಇವರೀರ್ವರೂ ಬಹಳ ಹೊತ್ತು ಹೊರಗಿದ್ದು ಆಹಾರವನ್ನು ತರುತ್ತಿದ್ದರು ।೫೮೯॥ ಸಹಜವಾಗಿ ಅನ್ನವು ದೊರಕದಿರಲು ಆಗ ಅವು ಅರಣ್ಯದಲ್ಲಿ ಸಿಕ್ಕ ಸಿಕ್ಕಲ್ಲಿ ಓಡಾಡುತ್ತ, ಅವಿಶ್ರಾಂತ ಶ್ರಮಪಡುತ್ತಿದ್ದರೂ ಹೊಟ್ಟೆತುಂಬ ಭಕ್ಷ್ಯವು ಸಿಗುತ್ತಿರಲಿಲ್ಲ ।೫೯೦॥
ಬಹಳಷ್ಟು ಆಹಾರಗಳನ್ನು ಕೂಡಿಸಿಕೊಂಡು ತಮ್ಮ ಗೂಡಿನತ್ತ ಸಾಗಬೇಕು. ತಮ್ಮ ಮಕ್ಕಳಿಗೆ ನಾನಾ ಪ್ರಕಾರದ ಭಕ್ಷ್ಯಗಳನ್ನು ಕೊಟ್ಟು ಸಾಕಬೇಕು ।೫೯೧॥ ಹೀಗೆ ಇಚ್ಛೆಯನ್ನು ಮಾಡಿ ಅನ್ನ ಕೂಡಿಸುವುದಕ್ಕಾಗಿ ಅವರೀರ್ವರು ವನ, ಉಪವನಗಳ ಅನೇಕ ಸ್ಥಳಗಳಲ್ಲಿ ತಿರುಗಾಡಹತ್ತಿದರು ।೫೯೨॥

ಈ ಪ್ರಕಾರವಾಗಿ ತಮ್ಮ ಮಾತಾಪಿತರು ಆಹಾರವನ್ನು ತರಲು ಬಹುದೂರ ಹೋದಾಗ್ಗೆ ಒಮ್ಮೆ ಈ ಮರಿಗಳು ಹಸಿವೆಯಿಂದ ವ್ಯಾಕುಲರಾಗಿ, ದೈವಯೋಗದಿಂದ ಅವು ತಮ್ಮ ಗೂಡಿನ ಹೊರಗೆ ಬಂದವು ।೫೯೩॥ ಆ ಅರಣ್ಯದಲ್ಲಿ ಬೇಡನೊಬ್ಬನು ಪಕ್ಷಿಗಳನ್ನು ಬೇಟೆಯಾಡುವುದರಲ್ಲಿ ಅತಿ ತಜ್ಞನಾಗಿದ್ದನು. ದೈವಯೋಗದಿಂದ ಈ ಪಾರಿವಾಳ ಮರಿಗಳು ಆತನ ದೃಷ್ಟಿಗೆ ಬಿದ್ದವು ।೫೯೪॥ ತಕ್ಷಣ ಅವನು ತನ್ನ ಕಾಲಬಲೆಯನ್ನು ಬೀಸಿ ಆ ಮರಿಗಳನ್ನು ಅದರಲ್ಲಿನ ಪಾಶಗಳಲ್ಲಿ ಸಿಕ್ಕಿಹಾಕಿಕೊಂಡನು ಹಾಗೂ ಅವನು ಆ ದಂಪತಿ ಪಾರಿವಾಳಗಳಿಗಾಗಿ ಕಾಯುತ್ತಾ ಕುಳಿತನು ।೫೯೫॥

ಲವಲಾಹೇ ॥೯೬॥ ಸ್ತ್ರೀಸುಖಾಚೀ ಆಸಕ್ತೀ । ತೇಚಿ ವಾಢತ್ಯಾ ದುಃಖಾಚೀ ಸೂತೀ । ಸ್ತ್ರೀಸಂಗೇ ದುಃಖಪ್ರಾಪ್ತೀ । ಸಾಂಗೋ ಕಿತೀ ಅನಿವಾರ ॥೯೭॥ ಪುರುಷಾಸೀ ದ್ಯಾವಯಾ ದುಃಖ । ಸ್ತ್ರೀ ಸಂಗೂಚಿ ಆವಶ್ಯಕ । ಪುತ್ರಪೌತ್ರದ್ವಾರಾ ದೇಖ । ನಾನಾದುಃಖ ಭೋಗವೀ ॥೯೮॥

ಕಪೋತೀ ಸ್ವಾತ್ಮಜಾತನ್ ವೀಕ್ಷ್ಯ ಬಾಲಕಾನ್ ಜಾಲಸಂವೃತಾನ್ ।
ತಾನಭ್ಯಧಾವತ್ ಕ್ರೋಶಂತೀ ಕ್ರೋಶತೋ ಭೃಶದುಃಖಿತಾ ॥೬೫॥

ಅರ್ಥ:- ಆಗ ಹೆಣ್ಣು ಪಾರಿವಾಳವು ಬಲೆಯಲ್ಲಿ ಸಿಕ್ಕಿಕೊಂಡಿರುವ ಹಾಗೂ ಆಕ್ರೋಶ ಮಾಡುತ್ತಿರುವ ತನ್ನ ಮರಿಗಳನ್ನು ಕಂಡು ಅತಿಶಯ ದುಃಖಿಯಾಗಿ ಆಕ್ರೋಶ ಮಾಡುತ್ತಾ ಅವರತ್ತ ಧಾವಿಸಿತು.

ತಂವ ಕಾಳಜಾಳೀ ಏಕೇ ವೇಳೇ । ಕಪೋತೀ ಬಾಂಧಲೀ ದೇಖೇ ಬಾಳೇ । ತೋಂಡ ಫೇಲೂನಿ ಪಿಟೀ ಕಪಾಳೇ । ಆಕ್ರೋಶೇ ಲೋಳೇ ದುಃಖಿತ ॥೯೯॥ ಬಾಳೇ ಚರಫಡಿತಾ ದೇಖೇ ಜಾಳೀ । ಆಕ್ರಂದೋನಿ ದೇ ಆರೋಳೀ । ಬಾಳಾ ಸನ್ಮುಖ ಧಾಂವೇ ವೇಳೋ ವೇಳೀ । ದುಃಖೇ ತಳಮಳೀ ದುಃಖಿತ ॥೧೦೦॥

ಸಾಽಸಕೃತ್ ಸ್ನೇಹಗುಣಿತಾ ದೀನಚಿತ್ತಾಽಜಮಾಯಯಾ ।
ಸ್ವಯಂ ಚಾ ಬಧ್ಯತ ಶಿಚಾ ಬದ್ಧಾನ್ ಪಶ್ಯಂತ್ಯಪಸ್ಮೃತಿಃ ॥೬೬॥

ಅರ್ಥ:- ಸ್ನೇಹದಿಂದ ಬಂಧಿತವಾಗಿದ್ದ ಆ ದೀನ ಚಿತ್ತದ ಹೆಣ್ಣು ಪಾರಿವಾಳವು, ಭಗವಂತನ ಮಾಯೆಯಿಂದ ತನ್ನ ದೇಹದ ಎಚ್ಚರಿಕೆ ತೊರೆದು, ತನ್ನ ಮರಿಗಳು ಬಲೆಯಲ್ಲಿ ಸಿಕ್ಕಿಕೊಂಡಿದ್ದು ಕಣ್ಣಾರೇ ಕಂಡರೂ ಸಹ ಆ ಬಲೆಯಲ್ಲಿ ಮರಿಗಳತ್ತ ಧಾವಿಸಿ ತಾನೂ ಬಂಧಿಸಲ್ಪಟ್ಟಿತು.

ದುಃಖ ದ್ಯಾವಯಾ ಭ್ರತಾರಾಸೀ । ಆಕ್ರಂದೇ ಕಪೋತಿ ಚಾಲಿಲೀ ಕೈಸೀ । ಶತಗುಣೇ ಸ್ನೇಹೋ ವಾಢಲಾ ತಿಸೀ । ಮೃತಪುತ್ರಾಂಸೀ ದೇಖೋನಿ ॥೧೦೧॥ ಪುತ್ರ ಸ್ನೇಹೇ ಕೇಲೆ ವೇಡೇ । ಗುಣ ಆಠ ಆಠವೂನಿ ರಡೇ । ಹಿತಾಹಿತ ನ ದೇಖೇ ಪುಢೇ । ಬಳೇಚಿ ಪಡೇ ಜಳಾಂತು ॥೧೦೨॥ ಮಾಯಾಮೋಹೇ ಭುಲಲೀ ಕೈಶೀ। ಜೇಥ ಬಾಂಧಲೇ ದೇಖೇ ಪುತ್ರಾಂಸೀ । ತೇ ಜಾಳೀ ಘಾಲೀ ಆಪಣಾಸೀ । ಮೋಹೇ ಪಿಶೀ ತೇ ಕೇಲೀ ॥೧೦೩॥

ಕಪೋತಃಸ್ವಾತ್ಮಜಾನ್ ಬದ್ಧಾನಾತ್ಮನೋಽಪ್ಯಧಿಕಾನ್ ಪ್ರಿಯಾನ್ ।
ಭಾರ್ಯಾಂಚಾತ್ಮಸಮಾಂ ದೀನೋ ವಿಲಲಾಪತಿದುಃಖಿತಃ ॥೬೭॥

ಅರ್ಥ:- ಪ್ರಾಣಕ್ಕಿಂತ ಹೆಚ್ಚು ಪ್ರಿಯವಾದ ಮರಿಗಳು ಬೇಟೆಗಾರನ ಬಲೆಯಲ್ಲಿ ಸಿಲುಕಿದ್ದವು. ಜೊತೆಗೆ ಎಲ್ಲ ರೀತಿಯಿಂದಲೂ ತನಗೆ ಸಮಾನಳಾದ, ಅತ್ಯಂತ್ರ ಪ್ರಿಯಕರಳಾದ ಹೆಂಡತಿಯೂ ಸಿಲುಕಿದ್ದಳು. ಇದನ್ನು ಕಂಡು ಬಡ ಗಂಡು ಪಾರಿವಾಳವು ತೀವ್ರ ದುಃಖದಿಂದ ಶೋಕಿಸತೊಡಗಿತು.

ತಮ್ಮ ಮರಿಗಳಲ್ಲಿ ಅತಿಯಾದ ಪ್ರೇಮವಿರುವುದರಿಂದ ಆ ಪಾರಿವಾಳ ದಂಪತಿಗಳು ಆಹಾರವನ್ನು ಸಂಗ್ರಹಿಸಿ ಶೀಘ್ರವಾಗಿ ಗೂಡಿನತ್ತ ಬಂದವು ॥೯೬॥ ಸ್ತ್ರೀ ಸುಖದ ಅತ್ಯಂತಿಕ ಆಸಕ್ತಿಯೇ ದುಃಖವನ್ನು ಬೆಳೆಸಲು ಮೂಲ ಕಾರಣವಾಗಿರುವುದು. ಸ್ತ್ರೀ ಸಂಗತಿಯಿಂದ ಅನಿವಾರ್ಯವಾಗಿ ದುಃಖವನ್ನು ಭೋಗಿಸಬೇಕಾಗುವುದು. ಇದರ ವರ್ಣನೆಯನ್ನು ಮಾಡಲು ಬರುವುದಿಲ್ಲ ॥೯೭॥ ಪುರುಷರಿಗೆದುಃಖ ಕೊಡಲು ಸ್ತ್ರೀಸಂಗವೇ ಕಾರಣೀಭೂತವಾಗಿರುವುದು. ಈಕೆಯಿಂದಲೇ ಮಕ್ಕಳು, ಮೊಮ್ಮಕ್ಕಳು ಇತ್ಯಾದಿಕರಿಂದ ಇವನಿಗೆ ನಾನಾ ಪ್ರಕಾರದ ದುಃಖಗಳನ್ನು ಭೋಗಿಸಬೇಕಾಗುವುದು ॥೯೮॥

ಹೆಣ್ಣು ಪಾರಿವಾಳವು ತನ್ನ ಮರಿಗಳು ಕಾಲ ಬಲೆಯಲ್ಲಿ ಸಿಲುಕಿಕೊಂಡಿರುವುದನ್ನು ಕಂಡಿತು. ಆಗ ಆಕೆಯು ಬಾಯಿ, ಹಣೆಗಳನ್ನು ಬಡಿದುಕೊಳ್ಳುತ್ತಾ ಜೋರಾಗಿ ಅಳುತ್ತ ಗಡಗಡನೇ ಉರುಳಾಡಹತ್ತಿದಳು ॥೯೯॥ ಬಲೆಯಲ್ಲಿ ತನ್ನಮರಿಗಳು ದುಃಖದಿಂದ ಒದ್ದಾಡುತ್ತಿರುವುದನ್ನು ಕಂಡು ಇನ್ನೂ ಹೆಚ್ಚು ಹೆಚ್ಚಾಗಿ ಆಕ್ರೋಶಮಾಡಹತ್ತಿದಳು. ಈಕೆಯು ಪುನಃ ಪುನಃ ಧಾವಿಸುತ್ತ ಆ ಮರಿಗಳತ್ತ ಹೋಗುತ್ತ ದುಃಖದಿಂದ ವ್ಯಾಕುಲಪಟ್ಟು ತಳಮಳಿಸ ಹತ್ತಿದಳು ॥೧೦೦॥

ತನ್ನ ಮೃತಪುತ್ರರನ್ನು ಕಂಡು ಆಕೆಯ ಅಂತಃಕರಣವು ಸ್ನೇಹದಿಂದ ನೂರುಪಟ್ಟು ಬೆಳೆಯಿತು. ತನ್ನ ಗಂಡನಿಗೆ ದುಃಖ ಮಾಡಲು ಆ ಹೆಣ್ಣು ಪಾರಿವಳವು ತನ್ನ ಮರಿಗಳತ್ತ ಹೇಗೆ ಹೊರಟಿದೆ ನೋಡಿರಿ ॥೧೦೧॥ ಪುತ್ರ ಪ್ರೇಮದಿಂದ ಈಕೆಯು ಹುಚ್ಚಿಯಾಗಿದ್ದಳು. ಮರಿಗಳ ಗುಣಗಳನ್ನು ನೆನೆಯುತ್ತ ಅಳಹತ್ತಿದಳು. ಈಕೆಯು ತನ್ನ ಹಿತವನ್ನು ಮರೆತುಬಿಟ್ಟಳು. ಮತ್ತು ತಾನಾಗಿಯೇ ಆ ಬಲೆಯಲ್ಲಿ ಹೋಗಿ ಬಿದ್ದಳು ॥೧೦೨॥ ಮಾಯಾ ಮೋಹದಿಂದ ಆಕೆಗೆ ಹೇಗೆ ಮರುವು ಉಂಟಾಯಿತು ಎಂಬುದನ್ನು ನೋಡಿರಿ. ಮರಿಗಳು ಕಾಲರೂಪ ಪಾಶದಲ್ಲಿ ಸಿಲುಕಿರುವುದನ್ನು ಕಂಡು ಅದೇ ಬಲೆಯಲ್ಲಿ ತಾನು ಸ್ವತಃ ಸಿಲುಕಿಕೊಂಡಳು. ಮೋಹವು ಆಕೆಯನ್ನು ಭ್ರಮಿಷ್ಠಳನ್ನಾಗಿ ಮಾಡಿತು ॥೧೦೩॥

ಅಂತರಲಾ ಸ್ತ್ರೀ ಬಾಳಕೀ । ಕಪೋತಾತೋ ಏಕಾಏಕೀ । ರುದನಕರೀ ಅಧೋಮುಖೀ । ಅತಿದುಃಖೀ ವಿಲಪತು ॥೬೦೪॥ ಜೀವಾಹೋನಿ ಪ್ರಿಯ ಅಧಿಕ । ತೇ ನಿರ್ಜೀವ ದೇಖಿಲೇ ಬಾಳಕ । ಅನುಕೂಲ ಅನುರೂಪಕ । ಭಾರ್ಯಾ ದೇಖ ಅಂತರಲೀ ॥೬೦೫॥

ಅಹೋ ಮೇ ಪಸ್ಯತಾಪಾಯಮಲ್ಪಪುಣ್ಯಸ್ಯ ದುರ್ಮತೇಃ । ಅತೃಪ್ತಸ್ಯಾಕೃತಾರ್ಥಸ್ಯ ಗೃಹಸ್ತ್ರೈವರ್ಗಿಕೋ ಹತಃ ॥೬೮॥

ಅರ್ಥ : ಅಹೋ, ನಾನು ಅಭಾಗಿಯು, ನನ್ನದು ಕೆಟ್ಟ ಬುದ್ಧಿಯಾಗಿದೆ ಪುಣ್ಯಸಾಲದಾಗಿದೆ. ನನ್ನ ಸತ್ಯಾನಾಶವಾಯಿತು. ನನಗೆ ಇನ್ನೂ ತೃಪ್ತಿಯಾಗಿಲ್ಲ, ಆಶೆಯೂ ಪೂರ್ಣ ಮುಗಿದಿಲ್ಲ. ಈಗಾಗಲೇ ನನ್ನ ಧರ್ಮ, ಅರ್ಥ, ಕಾಮಗಳ ಮೂಲವಾದ ಗೃಹಸ್ಥಾಶ್ರಮವು ನಷ್ಟವಾಯಿತು.

ಧರ್ಮ ಅರ್ಥ ಆಣಿ ಕಾಮ । ಯಾ ತಿಹೀಂಚಾ ಆಶ್ರಯೋ ಗೃಹಾಶ್ರಮ । ತೋ ಭಂಗಲಾ ಮೀ ಅನಾಶ್ರಮ । ಅತೃಪ್ತ ಕಾಮ ಸಾಂಡೂನಿ ॥೬೦೬॥ ಪೂರ್ವಪಾಪಾಚಾ ಆವರ್ತು । ಮಜ ಸಾಂಡೂನಿ ಅಕೃತಾರ್ಥು । ಮಾಝಾ ಕಾಮು ನವ್ಹತಾ ತೃಪ್ತು । ಧರ್ಮಕಾಮಾರ್ಥು ಭಂಗಲಾ ॥೬೦೭॥ ಗೃಹೀ ತ್ರೈವರ್ಗುಚಿ ಭಂಗಲಾ । ಚೌಥಾ ಪುರುಷಾರ್ಥ ಅಸೇ ಉರಲಾ । ತೋ ಸಾಧೂನಿ ಘೇಊ ವಹಿಲಾ । ಆಶ್ರಮು ಭಂಗಲ್ಯಾ ಕ್ಷಿತೀ ಕಾಯ ॥೬೦೮॥ ಐಸೇ ಮ್ಹಣಸೀ ಜರೀ ನಿಗುತೀ । ಯೇ ಅರ್ಥೀ ಮೀ ದುರ್ಮತೀ । ವಿಷಯವಾಸನಾ ನೋಸಂಡಿತೀ । ಕೈಸೇನಿ ಮುಕ್ತ ಸಾಧೇಲ ॥೬೦೯॥ ಮ್ಯಾ ಪೂರ್ವೀ ಅಲ್ಪಪುಣ್ಯ ಹೋತೇ ಕೇಲೇ । ಯಾಲಾಗೀ ಅಂತರಾಯೀ ಘರ ಘೇತಲೇ । ಮಾಝೇ ಪರಲೋಕಸಾಧನ ಠೇಲೇ । ವಿಧುರ ಕೇಲೇ ಮಜಲಾಗೀ ॥೬೧೦॥ ಹೋ ಕಾ ಗೃಹೀ ಅಸತಾ ಗೃಹಸ್ಥಾ । ಕಾಯ ಪರಲೋಕ ಸಾಧೇ ಸಮಸ್ತಾ । ಇತರಾಂಚೀ ಅಸೋ ಕಥಾ । ಮಜ ಸಾಧನತಾ ತಂವ ಹೋತೀ ॥೬೧೧॥

ಅನುರೂಪಾನುಕೂಲಾ ಚ ಯಸ್ಯ ಮೇ ಪತಿದೇವತಾ । ಶೂನ್ಯೇ ಗೃಹೇ ಮಾಂ ಸಂತ್ಯಜ್ಯ ಪುತ್ರೈಃ ಸ್ವರ್ಯಾತಿ ಸಾಧುಭಿಃ ॥೬೯॥

ಅರ್ಥ : ನನ್ನ ಅನುಕೂಲ, ಅನುರೂಪ ಹಾಗೂ ಪತಿವ್ರತೆಯಾದ ಹಂಡತಿ ಇದ್ದಳು. ನನಗೆ ಈ ಯಾವ ಶೂನ್ಯ ಗೃಹದಲ್ಲಿ ಬೀಸಾಡಿ ನನ್ನ ಪುತ್ರ ಸಹ ಆಕೆಯು ಸ್ವರ್ಗಕ್ಕೆ ಹೋಗುತ್ತಿದ್ದಾಳೆ.

ಸ್ತ್ರೀಪುರುಷಾಂಚೀ ಚಿತ್ತವೃತ್ತೀ । ಅನುಕೂಲ ವರ್ತೇ ಧರ್ಮಪ್ರವೃತ್ತೀ । ತರೀಚ ಪರಲೋಕ ಸಾಧಿತೀ । ಇತರಾ ಪ್ರಾಪ್ತೀ ತೇ ನಾಹೀ ॥೬೧೨॥ ಏಕಾಂಚ್ಯಾ ಭಾರ್ಯಾ ತ್ಯಾ ತೋಂಡಾಳಾ । ಏಕಾಂಚ್ಯಾ ತ್ಯಾ ಬಹು ಪೋಥಾಳಾ । ಏಕಾಂಚ್ಯಾ ತ್ಯಾ ಅತಿಚಾಂಡಾಳಾ । ಏಕೀ ದುಃಶಿಲಾ ದುರ್ಭಗಾ ॥೬೧೩॥ ಏಕೀಚಾ ತೋ ಕ್ರೋಧ ಗಾಢಾ । ಏಕೀ ಅತ್ಯಂತ ಖಾದಾಡಾ । ಏಕೀ ಸೋಲಿತೀ ದಾಂತ ದಾಢಾ । ಆರಿಸಾ ಪುಢಾ ಮಾಂಡೂನಿ ॥೬೧೪॥

ಈ ಪ್ರಕಾರವಾಗಿ ಸ್ತ್ರೀ ಪುತ್ರರನ್ನು ಕಳೆದುಕೊಂಡು ಆ ಯಾವ ಗಂಡು ಪಾರಿವಾಳವು ಒಂಟಿಯಾಯಿತು. ಅದು ಅಧೋಮುಖಿಮಾಡಿ ಅಳಹತ್ತಿತು. ಅತಿಶಯ ದುಃಖದಿಂದ ವಿಲಾಪಪಡಹತ್ತಿತು ॥೬೦೪॥ ಪ್ರಾಣಕ್ಕಿಂತಲೂ ಅತ್ಯಂತ ಪ್ರಿಯವಾದ ತನ್ನ ಮರಿಗಳು ಗತಪ್ರಾಣವಾದದ್ದು ಕಂಡು ಹಾಗೆಯೇ ಅನುಕೂಲ, ಅನುರೂಪಳಾದ ತನ್ನ ಸ್ತ್ರೀ ಸಹ ಅಗಲಿದ್ದನ್ನು ಕಂಡಿತು ॥೬೦೫॥

ಅದು ವನದಲ್ಲಿ ಹೀಗೆ ಹೇಳಹತ್ತಿತು, ಧರ್ಮ, ಅರ್ಥ ಮತ್ತು ಕಾಮವು ಈ ಮೂರರ ಆಧಾರವು ಗೃಹಾಶ್ರಮದಲ್ಲಿರುವುದು, ಇದು ಮುರಿಯುತ್ತಲೇ ನನ್ನ ಸರ್ವ ಇಚ್ಛೆಗಳು ಅಪೂರ್ಣವಾದವು. ನಾನೀಗ ಆಶ್ರಮಹೀನನಾದೆನು ॥೬೦೬॥ ನಾನು ಕೃತಾರ್ಥನಾಗುವ ಪೂರ್ವದಲ್ಲಿಯೇ ಹಿಂದಿನ ಜನ್ಮದ ಪಾಪದಿಂದ ನನ್ನ ಧರ್ಮ, ಅರ್ಥ, ಕಾಮಗಳ ಸಂಪೂರ್ಣ ಭಂಗವಾಯಿತು ॥೬೦೭॥ ಗೃಹಾಶ್ರಮದಲ್ಲಿನ ಮೂರು ಪುರುಷಾರ್ಥಗಳನ್ನು ನಾನೀಗ ಕಳೆದುಕೊಂಡಿರುವೆನು. ನಾಲ್ಕನೆಯ ಪುರುಷಾರ್ಥವಾದ ಮೋಕ್ಷವನ್ನು ಸಾಧಿಸಿ ಪಡೆಯಬೇಕಾಗಿದೆ, ಪಡೆಯೋಣ. ಆಶ್ರಮ ಮುರಿದಿದ್ದಕ್ಕೆ ಚಿಂತೆ ಏತಕ್ಕೆ? ॥೬೦೮॥ ಹೀಗೆ ಹೇಳಬೇಕೆಂದರೆ ಮೊದಲನೇಯದಾಗಿ ನಾನು ಮೂಢಮತಿಯು. ನನಗೆ ವಿಷಯ ವಾಸನೆಯು ಬಿಡಲು ಸಾಧ್ಯವೇ ಇಲ್ಲ. ಅಂದ ಮೇಲೆ ಮುಕ್ತಿಯು ನನಗೆ ಹೇಗೆ ಸಾಧಿಸಲು ಸಾಧ್ಯ? ॥೬೦೯॥ ನಾನು ಪೂರ್ವಜನ್ಮದಲ್ಲಿ ಅತ್ಯಲ್ಪ ಪುಣ್ಯ ಆಚರಿಸಿದ್ದರಿಂದ ಕಾಲನು ನನ್ನ ಮನೆಯೇ ಇಲ್ಲದಂತೆ ಮಾಡಿರುವನು. ನನಗೆ ವಿಧುರನನ್ನಾಗಿ ಮಾಡಿರುವುದರಿಂದ ಪರಲೋಕ ಸಾಧನೆಯು ಮುಳುಗಿಹೋಗಿದೆ ॥೬೧೦॥ ಇರಲಿ, ಎಲ್ಲ ಗೃಹಾಸ್ಥಾಶ್ರಮಗಳವರಿಗೆ ಪರಲೋಕ ಸಾಧನೆಯು ಸಾಧಿಸುತ್ತಿರುವುದೇ? ಹೋಗಲಿ, ಇತರರ ಮಾತು ನನಗಾದರೂ ಏತಕ್ಕೆ ಬೇಕು? ನನಗೆ ಮಾತ್ರ ಸಾಧಿಸಬೇಕಾಗಿದ್ದರೆ ಅಂತಹ ಸಾಧನೆ ಇತ್ತು ॥೬೧೧॥

ಸ್ತ್ರೀಪುರುಷರ ಮನೋವೃತ್ತಿಯು ಪರಸ್ಪರರಲ್ಲಿ ಅನುಕೂಲವಿದ್ದು ಅವರ ಪ್ರವೃತ್ತಿಯು ಧರ್ಮದತ್ತ ಇದ್ದರೆ ಮಾತ್ರ ಪರಲೋಕ ಸಾಧನೆಯಾಗಬಹುದು. ಎಲ್ಲರಿಗೂ ಅದು ಪ್ರಾಪ್ತವಾಗಲಾರದು ॥೬೧೨॥ ಯಾರ ಹೆಂಡತಿಯು ಕೇವಲ ಬಾಯಬಡಿಕೆಯಾಗಿರುವಳು, ಯಾರ ಹೆಂಡತಿಯು ಅತ್ಯಂತಿಕ ಲೋಭಿಯಾಗಿರುವಳು. ಯಾರ ಹೆಂಡತಿಯು ಅತಿಶಯವಾಗಿ ದುಷ್ಟಳಾಗಿರುವಳು. ಇನ್ನು ಕೆಲವು ಶೀಲಭ್ರಷ್ಟ, ನ್ಯಾಯಚೋರರಾಗಿರುವರು ॥೬೧೩॥ ಇನ್ನೊಬ್ಬಳು ಅತ್ಯಂತ ತಿನಸುಬಕ್ಕಳು, ಅತ್ಯಂತ ಸಿಟ್ಟಿನವಳು, ಮಗದೊಬ್ಬಳು ಕನ್ನಡಿಯನ್ನು ಮುಂದಿಟ್ಟುಕೊಂಡು ಹಲ್ಲು ಕಿಸಿಯುವವಳಾಗಿರುವಳು ॥೬೧೪॥

ಏಕೀ ವ್ರೋಂಗಳಾ ಆಳಸಿಣೀ । ಏಕೀ ತ್ಯಾ ಮಹಾಡಾಕಿನೀ । ಏಕೀ ಸುಕುಮಾರ ವಿಲಾಸಿನೀ । ಬರವೇಪಣೀ ಗರ್ವಿತ ॥೬೧೫॥ ತೈಶೀ ನವ್ಹೇ ಮಾಝೀ ಪತ್ನೀ । ಸದಾ ಅನುಕೂಳ ಮಜಲಾಗುನೀ । ಮಜಸೀ ವರ್ತೇ ಅನುರೂಪಪಣೀ । ಧರ್ಮಪತ್ನೀ ಧಾರ್ಮಿಕ ॥೬೧೬॥ ಮೀ ಜೇಂವ್ಹಾ ಧರ್ಮೀ ತತ್ಪರ । ತೇವ್ಹಾ ಧರ್ಮಾಸೀ ತೇ ಅತಿಸಾದರೆ । ಮಜಕಾಮೀ ಜೆವ್ಹಾ ಆದರೆ । ತೆವ್ಹಾ ಕಾಮಚತುರ ಕಾಮಿನಿ ॥೬೧೭॥ ಮಜವಾಂಚೋನೀ ತತ್ತ್ವತಾ । ನ ಭಜೇ ಆಣಿಕಾ ದೇವಾ ದೇವತಾ । ಮಜ ಸಾಂಡೂನಿ ನ ವಜೇ ತೀರ್ಥಾ । ಮಾಝೇ ವಚನ ಸರ್ವಥಾ ನುಲ್ಲಂಘೀ ॥೬೧೮॥ ಏವಂ ರೂಪ ಗುಣಕುಲಶೀಲ । ಮಜಸೀ ಸದಾ ಅನುಕೂಲ । ಪತಿವ್ರತಾ ಜೇ ಕೇವಳ । ಪತ್ನೀ ನಿರ್ಮಳ ಪೈ ಮ್ಹಾಝೀ ॥೬೧೯॥ ಮಜ ಸಾಂಡೂನಿ ಶೂನ್ಯಗೃಹೀ । ಪುತ್ರೇಸಹಿತ ಸಾಧ್ವೀ ಪಾಹೀ । ಜಾತಸೇ ಸ್ವರ್ಗಾಚ್ಯಾ ಠಾಯೀ । ಮಜ ಅಪಾಯೀ ಘಾಲೂನಿ ॥೬೨೦॥

ಸೋಽಹಂ ಶೂನ್ಯೇ ಗೃಹೇ ದಿನೋ ಮೃತದಾರೋ ಮೃತಪ್ರಜಃ । ಜಿಜೀವಿಷೇ ಕಿಮರ್ಥಂ ವಾ ವಿಧುರೋ ದುಃಖಜೀವಿತಃ ॥೭೦॥

ಅರ್ಥ:- ನಾನೀಗ ಬರಿದಾದ ಮನೆಯಲ್ಲಿನ ದುಃಖಿತ ವ್ಯಕ್ತಿಯಾಗಿದ್ದೇನೆ. ನನ್ನ ಹೆಂಡತಿ ಸತ್ತಳು. ಮಕ್ಕಳೂ ಸತ್ತರು. ನಾನೇಕೆ ಬದುಕಬೇಕಾಗಿದೆ? ನನ್ನ ಕುಟುಂಬದ ಅಗಲುವಿಕೆಯಿಂದ ನನ್ನ ಹೃದಯಕ್ಕೆ ಅತೀವ ವೇದನೆಯಾಗಿದೆ. ಜೀವನವೇ ಕೇವಲ ಯಾತನಾಮಯವಾಗಿದೆ.

ನಾಶಿಲೀ ಸ್ತ್ರೀ ನಾಶಿಲ್ಯಾ ಪ್ರಜಾ । ಯೇಥ ಮ್ಯಾ ರಹಾವೇ ಕವಣ್ಯಾ ಕಾಜಾ । ದುಃಖೇ ಪ್ರಾಣ ಜಾಈಲ ಮಾಝಾ । ಲೋಕಲಾಜಾ ನಿಂದಿತ ॥೬೨೧॥ ಏವಢೇ ಅಂಗೀ ವಾಜಲೇ ದುಃಖ । ಕಾಯ ಲೌಕಿಕೀ ದಾಖವೂ ಮುಖ । ಭಂಗಲೇ ಸಂಸಾರಾಚೇ ಸುಖ । ಜಿತಾ ಮೂರ್ಖ ಮ್ಹಣತೀಲ ॥೬೨೨॥ ಜಳೋ ವಿಧುರಾಚೇ ಜಿಣೇ । ಸದಾ ನಿಂದ್ಯ ಲಾಜಿರವಾಣೇ । ನ ಯೇ ಶ್ರಾದ್ಧೀಚೇ ಆವತಣೇ । ಸದಾ ವಸಣೇ ಏಕಾಕೀ ॥೬೨೩॥ ಐಸೇನೀ ವಸತಾ ಯೇ ಲೋಕೀ । ಶೂನ್ಯ ಗೃಹೀ ಏಕಾಕೀ । ಧಡಗೋಡ ನ ಮಿಳೇ ಮುಖೀ । ಪರಮ ದುಃಖೀ ಮೀ ಹೋಈನ ॥೬೨೪॥

ತಾಂಸ್ತಥೈವಾವೃತಾನ್ ಶಿಗ್ಭಿರ್ಮೃತ್ಯುಗ್ರಸ್ತಾನ್ ವಿಚೇಷ್ಟತಃ । ಸ್ವಯಂ ಚ ಕೃಪಣಃ ಶಿಕ್ಷು ಪಶ್ಯನ್ನಪ್ಯಬುಧೋಽಪತತ್ ॥೭೧॥

ಅರ್ಥ:- ಹೇ ರಾಜನೇ, ಪಾರಿವಾಳದ ಹೆಂಡತಿ ಮಕ್ಕಳು ಬಲೆಯಲ್ಲಿ ಬಿದ್ದು ಒದ್ದಾಡುತ್ತಿದ್ದವು. ಇವರು ಮೃತ್ಯುವಿನ ಬಲೆಯಲ್ಲಿ ಬಿದ್ದಿರುವುದು ಸ್ಪಷ್ಟವಾಗಿ ಅರಿತಿದ್ದರೂ, ಯಾವ ಈ ಮೂರ್ಖ ಪಾರಿವಾಳವು ಇಷ್ಟೆಲ್ಲ ಕಂಡರೂ ಸಹ ಅತಿ ದೀನತೆಯಿಂದ ಸ್ವತಃ ತಾನೇ ಬಲೆಯಲ್ಲಿ ಹೋಗಿ ಸಿಲುಕಿಕೊಂಡಿತು.

ಇನ್ನು ಕೆಲವರ ಹೆಂಡತಿಯು ಅತಿಶಯವಾಗಿ ಹೊಲಸಾಗಿರುವಳು, ಆಳಸಿಯು ಹಾಗೂ ಮಾಟಗಾರತಿಯಾಗಿರುವಳು. ಇನ್ನೊಬ್ಬಳು ನಾಜೂಕ ವಿಲಾಸಿಯಾಗಿ ತನ್ನ ಸೌಂದರ್ಯದ ಗರ್ವದಲ್ಲಿಯೇ ಇರುವಳು ॥೬೧೫॥ ನನ್ನ ಹೆಂಡತಿ ಮಾತ್ರ ಹೀಗಿದ್ದಿಲ್ಲ. ಆಕೆಯು ಯಾವಾಗಲೂ ನನಗೆ ಅನುಕೂಲಳಾಗಿದ್ದಳು. ಆಕೆಯು ನನ್ನ ಧರ್ಮಪತ್ನಿಯಾಗಿ ಧಾರ್ಮಿಕ ವೃತ್ತಿಯವಳಾಗಿದ್ದಳು. ಮತ್ತು ನನ್ನ ಇಚ್ಛೆ ಪ್ರಕಾರ ನಡೆದುಕೊಳ್ಳುತ್ತಿದ್ದಳು ॥೬೧೬॥ ನಾನು ಧರ್ಮ ಕಾರ್ಯಕ್ಕೆ ಪ್ರವರ್ತನಾಗುತ್ತಲೇ ಆಕೆಯು ನನಗೆ ಬಹಳ ಭಕ್ತಿಭಾವದಿಂದ ಸಹಾಯ ಮಾಡಲು ತತ್ಪರಳಾಗುತ್ತಿದ್ದಳು. ನನ್ನದು ಯಾವುದೇ ಇಚ್ಛೆ ಇರಲಿ, ಅದನ್ನು ಪೂರ್ಣಗೊಳಿಸಲು ತತ್ಪರಳಾಗುತ್ತಿದ್ದಳು ॥೬೧೭॥ ನನ್ನನ್ನು ಬಿಟ್ಟು ಆಕೆಯು ಇತರ ಯಾವುದೇ ದೇವ, ದೇವತೆಯವರ ಭಜನೆ ಮಾಡುತ್ತಿರಲಿಲ್ಲ. ನನ್ನನ್ನು ಬಿಟ್ಟು ಎಂದೂ ತೀರ್ಥಯಾತ್ರೆ ಮಾಡುತ್ತಿರಲಿಲ್ಲ. ನನ್ನ ಮಾತಿನ ಉಲ್ಲಂಘನೆಯನ್ನು ಎಂದೂ ಮಾಡುತ್ತಿರಲಿಲ್ಲ ॥೬೧೮॥ ಹೀಗೆ ಗುಣದಲ್ಲಿ, ರೂಪದಲ್ಲಿ, ಕುಲದಲ್ಲಿ, ಶೀಲದಲ್ಲಿ ಸಂಪನ್ನಳಾಗಿ ಸದಾವಕಾಲ ನನಗೆ ಅನುಕೂಲವಾಗಿರುವ ಪತಿವ್ರತೆಯಾದ ಇಂತಹ ನನ್ನ ನಿಷ್ಕಳಂಕ ಸಾಧ್ವಿ ಪತ್ನಿಯಾಗಿದ್ದಳು ॥೬೧೯॥ ಈಗ ಆ ಸಾಧ್ವಿ ಪತ್ನಿಯು ನನ್ನನ್ನು ಈ ಹಾಳು ಮನೆಯಲ್ಲಿ ಬೀಸಾಡಿ ಸಂಕಟದಲ್ಲಿ ಬೀಳಿಸಿ, ಪುತ್ರರ ಸಮೇತಳಾಗಿ ಸ್ವರ್ಗಕ್ಕೆ ಹೊರಟಿರುವಳು ॥೬೨೦॥

ಹೆಂಡತಿ ಸತ್ತಳು, ಮಕ್ಕಳೂ ಸತ್ತರು. ಈಗ ನಾನಾದರೂ ಇಲ್ಲಿ ಏಕೆ ಇರಬೇಕು? ಲೋಕಲಜ್ಜೆಯಿಂದ ಮತ್ತು ಲೋಕನಿಂದೆಯಿಂದ ನನಗೆ ಅತೀವ ದುಃಖವಾಗಿ ನನ್ನ ಪ್ರಾಣವೇ ಹೋದಿತು ॥೬೨೧॥ ನನ್ನ ಮೇಲೆ ಇಷ್ಟೊಂದು ದುಃಖಗಳು ಒದಗಿ ಬಂದಾಗ ನಾನು ಜನರಿಗೆ ನನ್ನ ಮುಖವಾದರೂ ಹೇಗೆ ತೋರಿಸಲಿ? ಸರ್ವ ಸಂಸಾರ ಸುಖವು ನಾಶವಾಯಿತು. ಇಂತಹ ಸ್ಥಿತಿಯಲ್ಲಿ ನಾನು ಬದುಕುಳಿದರೆ ಜನರು ನನಗೆ ಮೂರ್ಖನೆಂದು ಹೇಳಲಿಕ್ಕಿಲ್ಲವೇ? ॥೬೨೨॥ ಈ ನನ್ನ ವಿಧುರನ ಜೀವನಕ್ಕೆ ಬೆಂಕಿ ಹತ್ತಲಿ. ಇದು ನಿಂದ್ಯ ಮತ್ತು ನಾಚಿಕೆಗೇಡು ಬದುಕಾಗುವುದು. ಶ್ರಾದ್ಧಕ್ಕೂ ಯಾರೂ ಆಮಂತ್ರಣ ಸಹ ನನಗೆ ಕೊಡಲಾರರು. ಕೊನೆಯವರೆಗೂ ನಾನೊಬ್ಬನೇ ಬಿದ್ದುಕೊಂಡು ಇರಬೇಕಾಗುವುದು ॥೬೨೩॥ ಹೀಗೆ ನಾನು ಒಬ್ಬನೇ ಈ ಜಗತ್ತಿನಲ್ಲಿ ಬಾಳಿದರೆ ನನ್ನ ಹಾಳು ಮನೆಯಲ್ಲಿಯೂ ನಾನೊಬ್ಬನೇ ಇರಬೇಕಾಗುವುದು. ಯಾವುದೂ ಎಂದೂ ಸಿಹಿ, ಮಾಧುರ್ಯವು ನನ್ನ ಬಾಯಿಗೆ ಬೀಳಲಾರದು. ಇದರಿಂದ ನಾನು ಇನ್ನಷ್ಟು ಹೆಚ್ಚಿಗೆ ದುಃಖಿಯಾಗಬೇಕಾಗುವುದು ॥೬೨೪॥

ಐಸೇ ಬೋಲೋನಿ ಕೇಲೇ ಕಾಯೇ । ಮೃತಸ್ತ್ರೀಪುತ್ರಾಂಕಡೇ ಪಾಹೇ । ಕಾಳಪಾಶೀ ಬಾಂಧಿಲೀ ಆಹೇ । ಚೇಷ್ಟಾರಾಹೇ ನಿಃಶೇಷ ॥೭೨೫॥ ಐಸೇ ದೇಖತಾಂಹೀ ಅಬುದ್ಧೀ । ವಿವೇಕೇ ನ ಧರೀಚಿ ಬುದ್ಧೀ । ಆಪಣ ಜಾಊನಿ ತ್ರಿಶುದ್ಧೀ । ಜಾಳಾಮಧೀ ಪಡಿಯೇಲಾ ॥೭೨೬॥ ಮೇಲ್ಯಾ ಮಾಗೇ ಮರಣೇ । ದೇಖೋ ಹೇಚಿ ಸರ್ವಾಸೀ ಕರಣೇ । ಪರೀ ಜನ್ಮ ಮೃತ್ಯು ನಿವಾರಣೇ । ಹಾ ಸ್ವಾರ್ಥು ಕವಣೇ ನ ಧರೀಜೇ ॥೭೨೭॥ ಪಹಾ ಪಾ ಸ್ತ್ರೀ ಪುತ್ರಾಕಾರಣೇ । ಆಪುಲಾಹೀ ಜೀವು ದೇಣೇ । ಪರೀ ಭಗವತ್ಪದವೀ ಸಾಧಣೇ । ಹೇ ನ ಮನೇ ಮನೇ ಸರ್ವಥಾ ॥೭೨೮॥

ತಂ ಲಬ್ಧ್ವಾ ಲುಬ್ಧಕಃ ಕ್ರೂರಃ ಕಪೋತಂ ಗೃಹಮೇಧಿನಮ್ ।
ಕಪೋತಕಾನ್ ಕಪೋತಿಂ ಚ ಸಿದ್ಧಾರ್ಥಃ ಪ್ರಯಯೌ ಗೃಹಮ್ ॥೭೨॥

ಅರ್ಥ : ಆ ಯಜಮಾನನಾದ ಪಾರಿವಾಳವನ್ನೂ ಅದರ ಹೆಂಡತಿಯನ್ನೂ ಎಲ್ಲ ಮರಿಗಳನ್ನೂ ಸೆರೆ ಹಿಡಿದಿದ್ದರಿಂದ ಆ ಕ್ರೂರ ಬೇಟೆಗಾರನ ಆಸೆಯು ಈಡೇರಿತು. ಆತನು ಎಲ್ಲವನ್ನೂ ತೆಗೆದುಕೊಂಡು ಮನೆಗೆ ಹೊರಟನು.

ಜಾಳೀ ಪಡಲಾ ಕಪೋತಾ ದುರ್ಬುದ್ಧೀ । ಝಾಲೀ ಲುಬ್ಧಕಾಚೀ ಕಾರ್ಯಸಿದ್ಧೀ। ಸಹಕುಟುಂಬ ಘೇಊನಿ ಖಾಂದೀ । ನಿಘೇ ಪರಾಧೀ ನಿಜಸ್ಥಾನಾ ॥೭೨೯॥ ಐಸಾ ಜೋ ಕೋಣೀ ಗೃಹ ಮೇಧೀ । ತ್ಯಾಸೀ ಸರ್ವಥಾ ಕಾಳು ಸಾಧೀ । ಜೈಸೀ ಕಪೋತ್ಯಾಚೀ ಬುದ್ಧೀ । ತೈಸಾ ಬುದ್ಧೀ ಗೃಹಮೇಧ್ಯಾ ॥೭೩೦॥ ಬಾಳಕಾಂಚ್ಯಾ ಕಾಕುಳತೀ । ಮರಣ ಪಾವಲೀ ಕಪೋತೀ । ಐಸೇ ದೇಖತ ದೇಖತಾ ದುರ್ಮತಿ। ತೇಥ ನಿಶ್ಚಿತೀ ಉಡೀ ಘಾಲೀ ॥೭೩೧॥ ಯಾಪರೀ ತೋ ಕಪೋತಾ । ಕುಟುಂಬಾಚೀ ಮೇಧಾ ವಾಹತಾ । ಮರಣ ಪಾವಲಾ ಸರ್ವಥಾ । ವಿವೇಕು ಚಿತ್ತಾ ನ ಧರೀಚಿ ॥೭೩೨॥

ಏವಂ ಕುಟುಂಬ್ಯಶಾಂತಾತ್ಮಾ ದ್ವಂದ್ವಾರಾಮಃ ಪತತ್ರಿವತ್ । ಪುಷ್ಣನ್ ಕುಟುಂಬಂ ಕೃಪಣಃ ಸಾನುಬಂಧೋಽವಸೀದತಿ ॥೭೩॥

ಅರ್ಥ: ಇದೇ ನ್ಯಾಯದಂತೆ ವಿಷಯಗಳಲ್ಲಿ ರಮಮಾಣನಾಗುವ, ಚಿತ್ತವನ್ನು ಅಸ್ವಸ್ಥವಾಗಿಟ್ಟುಕೊಂಡ ಮನುಷ್ಯನು ಕುಟುಂಬಿ ಪಕ್ಷಿಗಳಂತೆ ಕುಟುಂಬ ಪೋಷಣೆಯನ್ನು ಮಾಡುವ ಮೂಢನು ತನ್ನ ಪರಿವಾರದ ಜೊತೆಯಲ್ಲಿ ಅಪಾರ ಯಾತನೆಗಳನ್ನು ಭೋಗಿಸಬೇಕಾಗುವುದು.

ಐಸಾ ಕುಟುಂಬೀ ಗೃಹಸ್ಥು । ಕುಟುಂಬ ಪೋಷಣೀ ಆಸಕ್ತು । ವಿಷಯವಾಸನಾ ಅಶಾಂತು । ಪಾವೇ ಘಾತು ಸಕುಟುಂಬ ॥೭೩೩॥ ಗೃಹಾಸಕ್ತೀ ಗೃಹಾಶ್ರಮು । ತೋ ಕೇವಳ ದ್ವಂದ್ವಾಚಾ ಆರಾಮು । ಕಪೋತ್ಯಾ ಐಸಾ ಪಡೇ ಭ್ರಮು । ವೃಥಾ ಜನ್ಮ ದವಡಾವಾ ॥೭೩೪॥

ಹೀಗೆ ಹೇಳುತ್ತ ಅದು ಏನು ಮಾಡಿತೆಂಬುದು ನೋಡಿರಿ. ಸತ್ತಿರುವ ಸ್ತ್ರೀ ಪುತ್ರರತ್ತ ನೋಡಿತು. ಆಗ ಅವು ಕಾಲಪಾಶದಲ್ಲಿ ಬಿದ್ದು ಈಗಾಗಲೇ ಅವರ ಅಲಗಾಡುವಿಕೆಯು ಮುಗಿದಿತ್ತು ॥೭೨೫॥ ಹೀಗೆ ಪ್ರತ್ಯಕ್ಷವಾಗಿ ಕಂಡರೂ ಆ ಮೂರ್ಖ ಪಕ್ಷಿಯು ಯಾವ ವಿಚಾರವನ್ನು ಮಾಡಲಿಲ್ಲ. ಮತ್ತು ನಿಜವಾಗಿಯೂ ತಾನೂ ಆ ಬಲೆಯಲ್ಲಿ ಹೋಗಿ ಸಿಲುಕಿಕೊಂಡಿತು ॥೭೨೬॥ ಒಬ್ಬನು ಸತ್ತ ಮೇಲೆ ಅವನ ಹಿಂದೆ ಇನ್ನೊಬ್ಬನ ಮರಣವನ್ನು ನಾವು ನಿತ್ಯದಲ್ಲಿಯೂ ಕಾಣುತ್ತೇವೆ. ಆದರೆ ಜನ್ಮ ಮರಣದ ನಿವಾರಣೆ ಮಾಡಿ ನಿಜವಾದ ಹಿತವನ್ನು ಸಾಧಿಸುವುದಕ್ಕಾಗಿ ಯಾರೂ ಪ್ರಯತ್ನಿಸುವುದಿಲ್ಲ ॥೭೨೭॥ ನೋಡಿದಿರಾ! ಪಾರಿವಾಳ ಪಕ್ಷಿಯು ತನ್ನ ಸ್ತ್ರೀ ಪುತ್ರರಿಗಾಗಿ ತನ್ನ ಜೀವವನ್ನೇ ಕೊಟ್ಟುಬಿಟ್ಟಿತು. ಆದರೆ ಭಗವದ್‌ಪ್ರಾಪ್ತಿ ಮಾಡಿಕೊಳ್ಳಬೇಕೆಂಬ ವಿಚಾರವು ಅದರ ಮನಕ್ಕೆ ಒಪ್ಪಿಗೆಯಾಗಲಿಲ್ಲ ॥೭೨೮॥

ಈ ರೀತಿಯಿಂದ ಮೂಢಮತಿಯಾದ ಪಾರಿವಾಳವು ಬಲೆಯಲ್ಲಿ ಬಿದ್ದಾಕ್ಷಣವೇ ಬೇಡನ ಕಾರ್ಯವು ಪೂರ್ಣವಾಯಿತು. ಅವನು ಪಾರಿವಾಳದ ಸಕುಟುಂಬವನ್ನು ಹೆಗಲ ಮೇಲೆ ಎತ್ತಿಕೊಂಡು ತನ್ನ ಮನೆಯತ್ತ ನಡೆದನು ॥೭೨೯॥ ಹೀಗೆ ಯಾರಾದರೂ ಮನೆಮಾರಿನ ಮೇಲೆ ಅತಿಯಾದ ಮೋಹವಿಡುವನೋ, ಆ ಗೃಹಸ್ಥಾಶ್ರಮಿ ಮನುಷ್ಯನಿಗೆ ಕಾಲವು ತತ್ಕಾಲದಲ್ಲಿ ಗ್ರಾಸಿಸುವುದು. ಪಾರಿವಾಳದ ಆಸಕ್ತಿಯು ಯಾವ ಪ್ರಕಾರವಾಗಿ ತನ್ನ ಕುಟುಂಬದಲ್ಲಿತ್ತೋ ಅದೇ ರೀತಿ ಆಸಕ್ತಿಯು ಗೃಹಸ್ಥಾಶ್ರಮದ ಮನುಷ್ಯನಲ್ಲಿರುವುದು ॥೭೩೦॥ ತನ್ನ ಮರಿಗಳ ಶೋಕದಿಂದ ವ್ಯಾಕುಲವಾಗಿ ತನ್ನ ಹೆಂಡತಿ ಪ್ರಾಣಬಿಟ್ಟದ್ದು ಪ್ರತ್ಯಕ್ಷವಾಗಿ ಕಂಡರೂ ಮಂದಬುದ್ಧಿಯ ಪಾರಿವಾಳವು ಮೃತ್ಯು ಮುಖದಲ್ಲಿ ಜಿಗಿಯಿತು ॥೭೩೧॥ ಒಟ್ಟಿನಲ್ಲಿ ಆ ಪಾರಿವಾಳವು ತನ್ನ ಕುಟುಂಬದ ಕಾಳಜಿ ಮಾಡುತ್ತ, ಮಾಡುತ್ತ ಕೊನೆಗೆ ತಾನೂ ಸಹ ಮೃತವಾಯಿತು. ಅದರ ಮನದಲ್ಲಿ ಸ್ವಲ್ಪಾದರೂ ವಿವೇಕವು ಹುಟ್ಟಲಿಲ್ಲ ॥೭೩೨॥

ಈ ಪ್ರಕಾರವಾಗಿ ಕುಟುಂಬ ಗೃಹಸ್ಥನು ತನ್ನ ಕುಟುಂಬ ಪೋಷಣೆಯಲ್ಲಿ ಆಸಕ್ತನಾಗಿರಲು ವಿಷಯ ವಾಸನೆಗಳಿಂದ ಅತೃಪ್ತನಾಗಿರುವನು. ಅದರಿಂದಲೇ ಕುಟುಂಬದ ನಾಶವಾಗುತ್ತಿರುವುದು ॥೭೩೩॥ ಗೃಹದ ಆಸಕ್ತಿಯು ಮತ್ತು ಗೃಹಸ್ಥಾಶ್ರಮವು ಕೇವಲ ದ್ವಂದ್ವದ ಆಗರವೇ ಆಗಿರುವುದು. ಆದ್ದರಿಂದ ಗೃಹಸ್ಥನಿಗೆ ಪಾರಿವಾಳದಂತೆ ಭ್ರಾಂತಿಯಾಗುವುದು. ಅದಕ್ಕಾಗಿ ಹೀಗೆ ವರ್ತಿಸಿ ತಮ್ಮ ಅಲೌಕಿಕವಾದ ಮಾನವ ಜನ್ಮವನ್ನು ವ್ಯರ್ಥಮಾಡಬಾರದು ॥೭೩೪॥

ಯಃ ಪ್ರಾಪ್ಯ ಮಾನುಷಂ ಲೋಕಂ ಮುಕ್ತಿದ್ವಾರಮಪಾವೃತಮ್ । ಗೃಹೇಷು ಖಗವತ್ಸಕ್ತಸ್ತಮಾರೂಢಚ್ಯುತಂ ವಿದುಃ ॥೬೪॥

ಇತಿ ಶ್ರೀ ಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಸಪ್ತಮೋಽಧ್ಯಾಯಃ ॥ ೭ ॥

ಅರ್ಥ: ಈ ಮನುಷ್ಯ ಶರೀರವು ಮುಕ್ತಿಯ ಮುಕ್ತದ್ವಾರವಾಗಿರುವುದು. ಇಂತಹ ಮನುಷ್ಯ ಶರೀರವನ್ನು ಪ್ರಾಪ್ತಮಾಡಿಕೊಂಡು ಗೃಹಸ್ಥಾಶ್ರಮದಲ್ಲಿ ಯಾರು ಪಕ್ಷಿಗಳಂತೆ ಆಸಕ್ತರಾದರೆ ಅವರಿಗೆ ಆರೂಢ ಪತಿತರು ಎಂದು ಹೇಳುವರು.

ಯೇವೋನಿಯಾ ಕರ್ಮಭೂಮೀಸೀ । ಜೋ ಪಾವಲಾ ಉತ್ತಮ ದೇಹಾಸೀ । ತ್ಯಾಹೀಮಾಜೀ ಉತ್ತಮತಾ ಕೈಶೀ । ಅಗ್ರವರ್ಣಾಸೀ ಪೈ ಜನ್ಮ ॥೬೩೫॥ ಆಲಿಯಾ ಮನುಷ್ಯ ದೇಹಾಸೀ । ಮುಕ್ತೀಚಾ ದಾರವಂಟಾ ಮುಕ್ತ ತ್ಯಾಸೀ । ಲವ ನಿಮಿಷ ಯೇಕು ದಿಶೀ । ಯಾವಜ್ಜನ್ಮೇಸೀ ಮೋಕಳಾ ॥೬೩೬॥ ಇತರಾ ವರ್ಣಾಚೀ ಹೇ ಗತೀ । ಮಾ ಬ್ರಾಹ್ಮಣ ತರೀ ಪುಣ್ಯಮೂರ್ತೀ । ತೇ ಸದಾಮುಕ್ತಚೀ ಅಸತೀ । ವೃಥಾ ಆಸಕ್ತೀ ಗುಂತಲೇ ॥೬೩೭॥ ವಿದ್ವಾಂಸ ಆಣ ವೈರಾಗ್ಯ । ತೇ ಬ್ರಹ್ಮಾದಿಕಾ ನ ಲಭೇ ಭಾಗ್ಯ । ವೃಥಾ ಆಸಕ್ತೀ ಕೇಲೇ ಅಭಾಗ್ಯ । ಶಿಶ್ನೋದರಾ ಸಾಂಗ ವೇಂಚಲೇ ॥೬೩೮॥ ಮನುಷ್ಯದೇಹಿ ಗೃಹಾಸಕ್ತು । ತೋ ಬೋಲಿಜೇ "ಆರುಢಚ್ಯುತು" । ಕಪೋತ್ಯಾಚೇ ಪರೀ ದುಃಖಿತು । ಸಿದ್ಧ ಸ್ವಾರ್ಥು ನಾಶಿಲಾ ॥೬೩೯॥ ವಿಷಯೀ ಸರ್ವಥಾ ನಾಹೀ ತೃಪ್ತೀ । ಐಸೇ ಶ್ರುತಿಪುರಾಣೇ ಬೋಲತೀ । ಕರಿತಾ ವಿಷಯಾಚೀ ಆಸಕ್ತಿ । ಥಿತ್ಯಾ ಮುಕತೀ ನರದೇಹಾ ॥೬೪೦॥ ನವಲ ನರದೇಹಾಚೀ ಖ್ಯಾತೀ । ರಾಮನಾಮಾಚ್ಯಾ ಆವೃತ್ತೀ । ಚಾರೀ ಮುಕ್ತೀ ದಾಸೀ ಹೋತೀ । ತೋ ದೇಹೋ ವೇಂಚಿತೀ ವಿಷಯಾಸೀ ॥೬೪೧॥ ವಿಷಯಸುಖಾಚಿಯೇ ಆಸಕ್ತೀ । ಕೋಣಾ ನಾಹೀ ಝಾಲೀ ತೃಪ್ತೀ । ಮೃಗಜಳಾಚಿಯೇ ಪ್ರಾಪ್ತೀ । ಕೇವೀ ನಿವತೀ ತೃಷಾರ್ತ ॥೬೪೨॥ ಯಾಲಾಗೀ ಜಾಣತೇನಿ ಮನುಷ್ಯೇ । ನರದೇಹೀಚೇನಿ ಆಯುಷ್ಯೇ । ವಿಷಯಾಂಚೇನಿ ಸಾಯಾಸೇ । ವ್ಯರ್ಥ ಕಾ ಪಿಸೇ ಕಷ್ಟತೀ ॥೬೪೩॥ ನರದೇಹಾ ಐಸೇ ನಿಧಾನ । ಅನಾಯಾಸೇ ಲಾಧಲೇ ಜಾಣ । ಸಾಂಡೀ ಸಾಂಡೀ ಅಭಿಮಾನ । ತೇಣೇ ಸಮಾಧಾನ ಪಾವಸೀ ॥೬೪೪॥ ಪುಢತೀ ನರದೇಹಾಚೀ ಪ್ರಾಪ್ತೀ । ಹೋಈಲ ಯೇಥ ನಾಹೀ ಯುಕ್ತಿ । ಯಾಲಾಗೀ ಸಾಂಡೂನಿ ವಿಷಯಾಸಕ್ತೀ । ಭಾವೇ ಶ್ರೀಪತಿ ಭಜಾವಾ ॥೬೪೫॥ ಕಲಿಯುಗೀ ಸುಗಮ ಸಾಧನ । ನ ಲಗೇ ಯೋಗ ಯಾಗ ತ್ಯಾಗ ದಾನ । ಕರಿತಾ ನಿರ್ಲಜ್ಜ ಹರಿಕೀರ್ತನ । ಚಾರೀ ಮುಕ್ತಿ ಚರಣ ವಂದಿತೀ ॥೬೪೬॥

ಈ ಮೃತ್ಯು ಲೋಕಕ್ಕೆ ಬಂದು ಉತ್ತಮ ದೇಹವು ಪ್ರಾಪ್ತವಾಗಿರುವುದು. ಹಾಗೂ ಅದರಲ್ಲಿಯೂ ಬ್ರಾಹ್ಮಣ ಜನ್ಮವು ಲಭಿಸಿರುವುದು. ಇವರು ಮೋಕ್ಷವನ್ನು ಪಡೆಯಲೇಬೇಕು ॥೬೩೫॥ ಈ ಮಹತ್ವಪೂರ್ಣಮನುಷ್ಯ ದೇಹವು ದೊರಕಿತೆಂದರೆಸಾಕು, ಇದಕ್ಕೆ ಮುಕ್ತಿಯ ದ್ವಾರವು ಸದಾ ತೆರೆದಿರುವುದು.ಮನಸ್ಸು ಮಾಡಿದರೆ ಒಂದೇ ದಿನದಲ್ಲಿ, ಒಂದೇ ಕ್ಷಣದಲ್ಲಿಯೂ ಸಹ ಆತನು ಜನ್ಮ ಮರಣದಿಂದ ಬಿಡುಗಡೆಯಾಗುವನು ॥೬೩೬॥ ಇತರ ವರ್ಣಗಳ ಸ್ಥಿತಿಯು ಹೀಗಿರುವಾಗ್ಗೆ ಬ್ರಾಹ್ಮಣ ಜನ್ಮವು ಸಾಕ್ಷಾತ್ ಪುಣ್ಯಮೂರ್ತಿಯೇ ಆಗಿರುವುದು. ಇವರು ಯಾವಾಗಲೂ ಮುಕ್ತರಾಗಿರುವರು. ಇದನ್ನರಿಯದೇ ಇವರು ವ್ಯರ್ಥವಾಗಿ ಆಸಕ್ತಿಯಲ್ಲಿ ಸಿಲುಕಿಕೊಳ್ಳುವರು ॥೬೩೭॥ ವಿದ್ವತ್ತು ಇದ್ದು ವೈರಾಗ್ಯವಿರುವುದು ಬ್ರಹ್ಮದೇವಾದಿಕರಿಗೂ ದುರ್ಲಭವು. ಇವರು ವ್ಯರ್ಥವಾಗಿ ಆಸಕ್ತಿ ಇಟ್ಟು ಅಭಾಗಿಗಳಾಗುವರು. ಹಾಗೂ ಶಿಶ್ನೋದರ ಪರಾಯಣರಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವರು ॥೬೩೮॥ ಮನುಷ್ಯ ಜನ್ಮವು ಪ್ರಾಪ್ತವಾಗಿ ಗೃಹಾಸಕ್ತನಾದವನಿಗೆ "ಆರುಢಚ್ಯುತ" ಅಂದರೆ ತಿಳಿದೂಮೂರ್ಖನಾದನೆಂದು ಹೇಳುವರು. ಇವನು ತನ್ನ ಕೈಗೆ ಬಂದ ಸ್ವಾರ್ಥವನ್ನು ಬಿಟ್ಟು ಪಾರಿವಾಳದಂತೆ ದುಃಖಿಯಾಗುವನು ॥೬೩೯॥ ವಿಷಯಗಳಲ್ಲಿ ತೃಪ್ತಿಯು ಎಂದೂ ಆಗುವುದಿಲ್ಲ. ಹೀಗೆ ವೇದ, ಪುರಾಣಗಳು ಹೇಳುವುವು. ಹೀಗಿದ್ದರೂ ವಿಷಯಗಳಲ್ಲಿ ಆಸಕ್ತಿ ಇಟ್ಟು ಮನುಷ್ಯ ಜನ್ಮವನ್ನು ಪುಕ್ಕಟ್ಟೆಯಾಗಿ ಕಳೆದುಕೊಳ್ಳುವರು ॥೬೪೦॥ ನರದೇಹದ ಶ್ರೇಷ್ಠತೆಯು ಅತಿ ವಿಲಕ್ಷಣವಾಗಿರುವುದು. ಕೇವಲ ರಾಮನಾಮವನ್ನು ಉಚ್ಚರಿಸಿದರೆ ನಾಲ್ಕೂ ಮುಕ್ತಿಗಳು ದಾಸಿಯಾಗಿ ಇರುವುವು. ಹೀಗಿರಲು ಇದೇ ದೇಹವನ್ನು ವಿಷಯಕ್ಕಾಗಿ ವ್ಯರ್ಥವಾಗಿ ಕಳೆದುಕೊಳ್ಳುವರು ॥೬೪೧॥ ವಿಷಯ ಸುಖದ ಆಸಕ್ತಿಯಿಂದ ಎಂದೂ ಯಾರಿಗೂ ತೃಪ್ತಿಯಾಗಿರುವುದಿಲ್ಲ. ತೃಷಾ ಪೀಡಿತ ಜನರು ಮೃಗಜಳದಿಂದ ಹೇಗೆ ಶಾಂತರಾಗಬೇಕು? ॥೬೪೨॥ ಆದರೆ ತಿಳಿದ ಜನರೂ ಸಹ ಈ ನರದೇಹ ಲಭಿಸಿದ್ದರೂ ವಿಷಯಗಳ ವಿವಂಚನೆಗಳಿಂದ ವ್ಯರ್ಥವಾಗಿ ಕಾಲವನ್ನು ಕಳೆಯುವರು. ವ್ಯರ್ಥವಾಗಿ ಕಷ್ಟಕ್ಕೆ ಗುರಿಯಾಗುವರು ॥೬೪೩॥ ಹೇ ಮಾನವನೇ, ನಿನಗೆ ನರದೇಹದಂತಹ ಮಹಾನಿಧಿಯು ಅನಾಯಾಸವಾಗಿ ದೊರಕಿರುವುದು. ಆದ್ದರಿಂಧ ಅಭಿಮಾನವನ್ನು ಬಿಟ್ಟು ಬಿಡು. ಇದರಿಂದ ನಿನಗೆ ಸಮಾಧಾನವು ಪ್ರಾಪ್ತವಾಗುವುದು ॥೬೪೪॥ ಮುಂದಿನ ಜನ್ಮದಲ್ಲಿ ಮನುಷ್ಯ ದೇಹವು ದೊರೆಯುವುದೆಂಬುದಕ್ಕೆ ಖಾತ್ರಿ ಇಲ್ಲ. ಅದಕ್ಕಾಗಿಯೇ ವಿಷಯಗಳ ಆಸಕ್ತಿಯನ್ನು ತೊರೆದು ಭಗವಂತನನ್ನು ಭಕ್ತಿಯಿಂದ ಭಜಿಸಬೇಕು ॥೬೪೫॥ ಕಲಿಯುಗದಲ್ಲಿ ಇದೇ ಸುಲಭವಾದ ಸಾಧನೆಯಾಗಿರುವುದು. ಇದಕ್ಕೆ ಯಜ್ಞ, ಯಾಗ, ತ್ಯಾಗ, ದಾನ ಏನೂ ಬೇಕಾಗುವುದಿಲ್ಲ. ಲೋಕಲಜ್ಜೆಯನ್ನು ತೊರೆದು ಏಕಾಗ್ರಭಾವದಿಂದ ಹರಿಕೀರ್ತನೆಯನ್ನು ಮಾಡಲು ನಾಲ್ಕೂ ಮುಕ್ತಿಗಳು ಅವರ ಚರಣಗಳನ್ನು ವಂದಿಸುವುವು ॥೬೪೬॥

ಇಟೇಸಾಠೀ ಪರೀಸ ಪಾಲಟೇ । ಯೇತಾ ಕಾ ಮಾನಿತೀ ವೋಖಟೇ । ತೈಸಾ ಕೀರ್ತನಾಚೇನಿ ನೇಟೇಪಾಟೇ । ದೇವೋ ಭೇಟೇ ಪ್ರತ್ಯಕ್ಷ ॥೬೪೭॥ ಏಕಾ ಜನಾರ್ದನು ಮ್ಹಣೇ । ನಶ್ವರ ದೇಹಾಚೇನಿ ಸಾಧನೇ । ಜನೀ ಜನಾರ್ದನು ಹೋಣೇ । ಹೇ ಮುದ್ರಾ ತೇಣೇ ಲಾವಿಲೀ ॥೬೪೮॥ ಏಕಾ ಜನಾರ್ದನಾ ಶರಣ । ತಂವ ಜನಾರ್ದನು ಝಲಾ ಏಕ ಏಕಪಣ । ಜೈಸೇ ಸುವರ್ಣ ಆಣಿ ಕಂಕಣ । ದೋ ನಾವೀ ಜಾಣ ಏಕ ತೇ ॥೬೪೯॥ ತೋಚಿ ಏಕಾ ಏಕಾದಶೀ । ಶ್ರೀಕೃಷ್ಣ ಸಾಂಗ ಉದ್ಧವಾಸೀ । ಅವಧೂತ ಸಾಂಗೇ ಯದೂಸೀ । ಗುರು ಉಪದೇಶೀ ಉಪದೇಶು ॥೬೫೦॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀ ಕೃಷ್ಣೋದ್ಧವ ಸಂವಾದೇ
ಯದ್ವವಧೂತೇತಿಹಾಸೇ ಏಕಾಕಾರಟೀಕಾಯಾಮ್ ಸಪ್ತಮೋಽಧ್ಯಾಯಃ ॥೭॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಇಟ್ಟಂಗಿ ಒಂದನ್ನು ಕೊಟ್ಟು ಅದರ ಬೆಲೆಯಲ್ಲಿ ಪರಿಸಮಣಿಯು ಪ್ರಾಪ್ತವಾಯಿತೆಂದರೆ ಕೆಟ್ಟಿತೆಂದು ಹೇಳಬೇಕೇ? ಅದರಂತೆ ಕೀರ್ತನದ ಉತ್ತಮ ಆಧಾರದಿಂದ ದೇವನು ಪ್ರತ್ಯಕ್ಷವಾಗಿ ಭೇಟಿಯಾಗುವನು, ತಿಳಿಯಿರಿ ॥೬೪೭॥ ನಶ್ವರವಾದ ಈ ದೇಹದ ಸಾಧನೆಯಿಂದ ಜನತಾ ಜನಾರ್ದನನಾಗುವ ಈ ಮುದ್ರೆಯನ್ನು ಜನಾರ್ದನರು ಹಚ್ಚಿಕೊಟ್ಟರೆಂದು ಏಕನಾಥರು ಹೇಳುವರು॥೬೪೮॥ ಏಕನಾಥನು ಜನಾರ್ದನ ಸ್ವಾಮಿಯವರಿಗೆ ಶರಣಾದನು. ಆ ಜನಾರ್ದನರು ಏಕತ್ವದಿಂದ ಏಕನಾಥರಾದರು. ಬಂಗಾರ ಮತ್ತು ಬಂಗಾರದಬಳೆ ಇವು ಹೆಸರಿಗೆ ಎರಡಾಗಿದ್ದರೂ ಒಂದೇ ಆಗಿರುವುವು ॥೬೪೯॥ ಅದರಂತೆ ಅವಧೂತನು ಯದುರಾಜನಿಗೆ ಮಾಡಿದ ಗುರುವಿನ ಉಪದೇಶವನ್ನು ಭಗವಾನ ಶ್ರೀಕೃಷ್ಣನು ಏಕಾದಶಸ್ಕಂಧದಲ್ಲಿ ಉದ್ಧವನಿಗೆ ಕಥಿಸಿದನು. ಅದೇ ಗುರುಪದೇಶವನ್ನು ಜನಾರ್ದನರೂಪ ಏಕನಾಥನು ಹೇಳುತ್ತಿರುವನು ॥೬೫೦॥

ಇತಿ ಶ್ರೀಮದ್ಭಾಗವತ ಮಹಾಪುರಾಣದ ಏಕಾದಶಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದಲ್ಲಿನ ಯದು-ಅವಧೂತ
ಇತಿಹಾಸ ಮೇಲಿನ ಏಕನಾಥ ಮಹಾರಾಜರ ಭಾಷೆಯ ಏಳನೆಯ ಅಧ್ಯಾಯವು ಸಂಪೂರ್ಣವಾಯಿತು.

ಶ್ಲೋಕ ॥೭೪॥ ವೋವಿಗಳು ॥೬೫೦॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಎಂಟನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ತೂ ಜ್ಯೋತಿಷೀ । ಏಕಾತ್ಮತೇಚೀ ಘಟಿತ ಪಾಹಸೀ । ಚಿದ್‌ಬ್ರಹ್ಮೇಸಿ ಲಗ್ನ ಲಾವಿಶೀ । ಓಂ ಪುಣ್ಯೇಶೀ ತತ್ತ್ವತಾ ॥೧॥ ವಧೂವರಾ ಲಗ್ನ ಲಾವಿತೀ । ಜೇ ದೇಖಿಲೇ ಅಸೇ ಬಹುತೀ । ಆಪುಲೀ ಆಪಣಾ ಲಗ್ನ ಪ್ರಾಪ್ತೀ । ಹೇ ಅಲಕ್ಷ್ಯ ಗತೀ ಗುರುರಾಯಾ ॥೨॥ ಲಗ್ನಲಾವಿಶೀ ಹಾತವಟೀ । ಪಾಂಚಾ ಪಂಚಕಾಂಚೀ ಆಟಾಟೀ । ಚುಕವೂನಿ ಕಾಳಾಚೀ ಕಾಳದೃಷ್ಟೀ । ಘಟಿಕಾ ಪ್ರತಿಷ್ಠೀ ನಿಜಬೋಧೇ ॥೩॥ ಚಹೂ ಪುರುಷಾರ್ಥಾಚೇ ತೇಲವಣ । ಲಾಡೂ ವಳಿಲೇ ಸಂಪೂರ್ಣ । ಅಹಂಭಾವಾಚೇ ನಿಂಬಲೋಣ । ಕೇಲೇಜಾಣ ಸರ್ವಸ್ವೇ ॥೪॥ ಸಾಧನಚತುಷ್ಟ್ಯಾಚಾ ಸಮ್ಯಕ । ಯಥೋಕ್ತ ದೇಊನ ಮಧುಪರ್ಕ । ಜೀವಭಾವಾಚೀ ಮೂದ ದೇಖ । ಏಕಾಏಕ ಸಾಂಡವಿಲೀ ॥೫॥ ವಿಷಯಸುಖ ಮಾಗೇ ಸಾಂಡೇ । ತೇಚ ಪಾಯಾತಳೀ ಪಾಯಮಾಂಡೇ । ಸಾವಧಾನ ಮ್ಹಣಸೀ ದೋಹೀಕಡೇ । ವಚನ ಧಡಪುಡೇ ತೇ ತುಝೇ ॥೬॥ ವ್ಯವಧಾನಾಚೇ ವಿಧಾನ ತುಟೇ । ಸಹಜಭಾವೇ ಅಂತ್ರಪಟು ಫಿಟೇ । ಶಬ್ದ ಉಪರಮೋನಿ ಖುಂಟೇ । ಮುಹೂರ್ತ ಗೋಮಟೇ ಪೈ ತುಝೇ ॥೭॥ ಅರ್ಧಮಾತ್ರಾ ಸಮದೃಷ್ಟೀ । ನಿಜಬಿಂಬೀ ಪಡೇ ಗಾಂಠೀ । ಐಕ್ಯಭಾವಾಚ್ಯಾ ಮೀನಲ್ಯಾ ಮುಷ್ಟೀ । ಲಗ್ನಕಸವಟೀ ಅನುಪಮ ॥೮॥ ತೇಥ ಕಾಳಾ ನಾ ಧವಳಾ । ಗೋರಾ ನವ್ಹೇ ನಾ ಸಾಂವಳಾ । ನೋವರಾ ಲಕ್ಷೇನಾ ಡೋಳಾ । ಲಗ್ನಸೋಹಳಾ ತೇ ಠಾಯೀ ॥೯॥ ಪರೀ ನವಲ ಕೈಸೇ ಕವತಿಕ । ದುಜೇನವೀಣ ಏಕಾಏಕ । ಏಕಪಣೇ ಲಗ್ನ ದೇಖ । ಲಾವಿತಾ ತೂ ನಿಃಶೇಖ ಗುರುರಾಯಾ ॥೧೦॥ ತುಜ ಗುರುತ್ವೇ ನಮೂ ಜಾತಾ । ತಂವ ಆತ್ಮಾ ತೂಂಚಿ ಆಂತೌತಾ । ಆಂತು ಕೀ ಬಾಹೇರ ಪಾಹೋ ಜಾತಾ । ಸರ್ವೀ ಸರ್ವಥಾ ತೂಂಚಿ ತೂ ॥೧೧॥

ಹೇ ಓಂಕಾರರೂಪನಾದ ಸದ್ಗುರುವೇ, ನಿನಗೆ ನಮಸ್ಕಾರವು. ನೀನೊಬ್ಬ ಮಹಾಜ್ಯೋತಿಷಿಯಾಗಿರುವೆ. ನೀನು ಗಣಿತದ ಆಧಾರದಿಂದ ಜೀವ ಬ್ರಹ್ಮದ ಐಕ್ಯವನ್ನು ಸಾಧಿಸುವುದಕ್ಕಾಗಿ ಮುಹೂರ್ತವನ್ನು ನೋಡುವೆ ॥೧॥ ವಧುವರರ ಲಗ್ನ ಮಾಡಿರುವುದನ್ನು ಅನೇಕರು ಕಂಡಿದ್ದಾರೆ. ಆದರೆ ಹೇ, ಗುರುರಾಯನೇ, ನೀನು ಅಲೌಕಿಕವಾದ ಕೌಶಲ್ಯದಿಂದ ನನ್ನಲ್ಲಿ ನನ್ನನ್ನೇ ಲಗ್ನ ಮಾಡಿಕೊಡುವೆ ॥೨॥ ಲಗ್ನ ಮಾಡುವ ನಿನ್ನ ಪದ್ಧತಿಯು ವಿಲಕ್ಷಣವಾಗಿದೆ. ನೀನು ಇಪ್ಪತ್ತೈದು ತತ್ತ್ವಗಳ ಬಿಕ್ಕಟ್ಟು ಮತ್ತು ಕಾಲನ ಕಾಲದೃಷ್ಟಿಯನ್ನು ತಪ್ಪಿಸಿ ಆತ್ಮ ಬೋಧೆಯಿಂದ ಘಟಿಕಾ ಸ್ಥಾಪನೆ ಮಾಡುವೆ ॥೩॥ ನಾಲ್ಕೂ ಪುರುಷಾರ್ಥಗಳ ಉಂಡಿ ತಯಾರಿಸಿ, ಅದರಲ್ಲಿ ಎಣ್ಣೆ ಮಜ್ಜನ ಮಾಡಿ ಅಹಂಭಾವದ ನಿವಾಳಿ ತೆಗೆದು ಒಗೆಯುವೆ ॥೪॥ ವೈರಾಗ್ಯ, ವಿವೇಕ, ಶಮ-ದಮ-ತಿತೀಕ್ಷಾ, ಉಪರತೀ, ಶ್ರದ್ಧಾ, ಸಮಾಧಾನ ಮತ್ತು ಮುಮುಕ್ಷತ್ವ ಈ ಸಾಧನ ಚತುಷ್ಟಯದ ಯಥಾವಿಧಿ ಮಧುಪರ್ಕವನ್ನು ಅರ್ಪಣೆ ಮಾಡಿ, ನಂತರ ಜೀವಭಾವದ ಅನ್ನದ ಆರತಿಯನ್ನು ನಿವಾಳಿಸಿ ಒಗೆಯುವೆ ॥೫॥ ವಿಷಯ ಸುಖವೆಂಬುದು ಹಿಂದೆ ಬೀಳುವುದು. ಅದುವೇ ಕಾಲಕೆಳಗಿನ ವಸ್ತ್ರವಾಗಿದೆ. ಮತ್ತು ಎರಡೂ ಕಡೆಯಲ್ಲಿ "ಸಾವಧಾನ" ಎಂದು ಹೇಳುತ್ತಿರುವುದು ನಿನ್ನ ನಿಜವಾದ ಉಪದೇಶವಾಗಿರುವುದು ॥೬॥ ವಿಷಯದ ವ್ಯವಹಾರವೇ ಅಂತರಪಟವಾಗಿರುವುದು . ಇದು ಸಹಜ ಸಮಾಧಿಯಿಂದ ಕಳಚಿ ಶಬ್ದವು ನಿಂತು ಎಲ್ಲೆಲ್ಲಿಯೂ ಶಾಂತಿಯು ಪ್ರಾಪ್ತವಾಗುವುದು. ಹೀಗೆ ನಿನ್ನ ಮುಹೂರ್ತವು ಮಂಗಲಕರವಾಗಿದೆ ॥೭॥ ಪ್ರಣವದಲ್ಲಿನ ಅರ್ಧಮಾತ್ರೆಯ ಸಮದೃಷ್ಟಿಯಿಂದ ಆತ್ಮತತ್ತ್ವದ ಗಂಟು ಬೀಳುವುದು. ಐಕ್ಯಭಾವದ ಕೈಗಳು ಕೂಡುವುವು. ಇದು ನಿನ್ನ ಲಗ್ನ ಮಾಡುವ ವಿಧಿಯು ಅಪೂರ್ವವಾಗಿರುವುದು ॥೮॥ ಬಣ್ಣ ಕಪ್ಪು ಅಲ್ಲ, ಸಾದಗಪ್ಪು ಅಲ್ಲ, ಗೌರವರ್ಣ ಅಲ್ಲ, ಸಾಧಾರಣ ಬಣ್ಣ ಅಲ್ಲ, ಹೀಗಿರುವ ಮದುಮಗನು ಕಣ್ಣಿಗೆ ಕಾಣಿಸುವುದೇ ಇಲ್ಲ. ಇಂತಹವನಲ್ಲಿ ನಿನ್ನ ಮದುವೆಯ ಸಮಾರಂಭವು ॥೯॥ ಆದರೆ ಹೇ ಗುರುರಾಯನೇ, ಇದೆಂತಹ ಆಶ್ಚರ್ಯವು? ಎಂತಹ ಮಹಾಚಮತ್ಕಾರವಾಗಿದೆ ? ಅಲ್ಲಿ ಬೇರೆಯವರು ಯಾರೂ ಇಲ್ಲದಿದ್ದರೂ ನೀನು ಒಬ್ಬನೇ ಏಕಾಏಕೀ ಒಬ್ಬನಲ್ಲಿಯೇ ಲಗ್ನವನ್ನು ಮಾಡುವೆಯಲ್ಲ? ॥೧೦॥ ನಿನಗೆ ಗುರು ಎಂದು ವಂದಿಸಬೇಕೆಂದರೆ ಅಂತರಾತ್ಮನು ನೀನೆ ಆಗಿರುವೆ. ಇನ್ನು ಹೊರಗೆ ನೋಡಿದರೆ ಸರ್ವತ್ರವೂ ನೀನೇ ತುಂಬಿರುವೆ ॥೧೧॥

ತುಝೀ ತೂಪಣ ಪಾಹತಾ । ಮಾಝೀ ಮೀಪಣ ಗೇಲೇ ತತ್ತ್ವತಾ । ಐಸೇ ಕರೂನಿಯಾ ಗುರುನಾಥಾ । ಗ್ರಂಥಕಥಾ ಕರವಿತಸೀ ॥೧೨॥ ಮಾಗೀಲ ಕಥಾಸಂಗತೀ । ಸಪ್ತಮಾಧ್ಯಾಯಾಚೇ ಅಂತೀ । ಅವಧೂತೇ ಯದೂಪ್ರತೀ । ಕಥಾ ಕಪೋತಿ ಸಾಂಗಿತಲೀ ॥೧೩॥ ಪೃಥ್ವೀ ಆದಿ ಅಂತೀ ಚೋಖಟ । ಕಪೋತಾಪರ್ಯಂತ ಗುರೂ ಆಠ । ಸಾಂಗಿತಲೇ ಅತಿಶ್ರೇಷ್ಠ । ಗುರೂ ವರಿಷ್ಠ ನಿಜಬೋಧೇ ॥೧೪॥ ಉರಲ್ಯಾ ಗುರೂಂಚೀ ಸ್ಥಿತೀ । ಅವಧೂತ ಸಾಂಗೇಲ ಯದೂಪ್ರತೀ । ತೇಥೇ ಸಾವಧಾನ ಠೇವಾ ಚಿತ್ತವೃತ್ತೀ । ಶ್ರವಣೇ ಸ್ಥಿತಿ ತದ್‌ಬೋಧೇ ॥೧೫॥

ಬ್ರಾಹ್ಮಣ ಉವಾಚ :-

ಸುಖಮೈಂದ್ರಿಯಕಂ ರಾಜನ್ ಸ್ವರ್ಗೇ ನರಕ ಏವ ಚ। ದೇಹಿನಾಂ ಯದ್‌ಯಥಾ ದುಃಖಂ ತಸ್ಮಾನ್ನೇಚ್ಛೇತ ತದ್ಬುಧಃ॥೧॥

ಅರ್ಥ :- ಅವಧೂತ ದತ್ತಾತ್ರೇಯ ಹೇಳುವರು; ಹೇ ರಾಜನೇ ದೇಹಗತನಾದ ಜೀವಿಯು ಸ್ವರ್ಗದಲ್ಲಾಗಲಿ, ನರಕದಲ್ಲಾಗಲೀ ಇಂದ್ರಿಯಗಳಿಂದ ತಾನಾಗಿ ಒದಗಿ ಬರುವ ಸುಖದುಃಖಗಳನ್ನು ಒಂದೇ ರೀತಿಯಲ್ಲಿ ಅನುಭವಿಸುತ್ತಾನೆ. ಆದ್ದರಿಂದ ವಿವೇಕಿಯಾದವನು ಐಹಿಕ ಸುಖಕ್ಕಾಗಿ ಪ್ರಯತ್ನ ಮಾಡುವುದಿಲ್ಲ.

ಶ್ರವಣೀ ಸಾದರತಾ ಯದೂಸೀ । ದೇಖೋನಿ ಸುಖ ಜಾಲೇ ಬ್ರಾಹ್ಮಣಾಸೀ । ತೇಣೇ ಸುಖೇ ನಿರೂಪಣಾಸೀ । ಉಲ್ಹಾಸೇಸೀ ಕರೀತಸೇ ॥೧೬॥ ತೋ ಮ್ಹಣೇ ರಾಯಾ ಸಾವಧಾನ । ವಿಷಯಸುಖಾಚೇ ಜೇ ಸೇವನ । ತೇ ಸ್ವರ್ಗನರಕೀ ಗಾ ಸಮಾನ । ನಾಹೀ ಅನುಮಾನ ಯೇ ಅರ್ಥೀ ॥೧೭॥ ಭೋಗಿತಾ ಉರ್ವಶೀಸೀ । ತೇ ಸುಖ ಸ್ವರ್ಗೀ ಇಂದ್ರಾಸೀ । ತೇಚೀ ವಿಷ್ಠೇಮಾಜೀ ಸೂಕರಾಸೀ । ಸೂಕರೀಪಾಸೀ ನಿಶ್ಚಿತ ॥೧೮॥ ಹೇ ಜಾಣೋನಿ ಸಾಧುಜನ । ಉಭಯ ಭೋಗೀ ನ ಘಾಲಿತೀ ಮನ । ನೇದವೇ ಪ್ರೇತಾಸೀ ಆಲಿಂಗನ । ತೇವೀ ಸಾಧುಜನ ವಿಷಯಾಂಸೀ ॥೧೯॥ ಜೀತ ಸಾಪು ಧರಾವಾ ಹಾತೀ । ಹೇ ಪ್ರಾಣಿಯಾಸೀ ನುಪಜೇ ಚಿತ್ತೀ । ತೇವೀ ವಿಷಯಾಂಚೀ ಆಸಕ್ತೀ । ಸಾಧು ನ ಧರಿತೀ ಸರ್ವಥಾ ॥೨೦॥ ಜೈಸೇ ನ ಪ್ರಾರ್ಥಿತಾ ದುಃಖ । ಪ್ರಾಣೀ ಪಾವತಾತಿ ದೇಖ । ತೈಸೇ ನ ಇಚ್ಛಿತಾ ಇಂದ್ರಿಯಸುಖ । ಭೋಗವೀ ಆವಶ್ಯಕ ಅದೃಷ್ಟ ॥೨೧॥ ಮಜ ದುಃಖಭೋಗು ವ್ಹಾವಾ । ಹೇ ನಾವಡೇ ಕೋಣಾಚ್ಯಾ ಜೀವಾ । ತೇ ದುಃಖ ಆಣೀ ಅದೃಷ್ಟ ತೇವ್ಹಾ । ತೇವಿ ಸುಖಾಚಾ ಯಾವಾ ಅದೃಷ್ಟೇ ॥೨೨॥ ಐಸೇ ಅಸೋನಿ ಉದ್ಯೋಗು ಕರಿತಾ । ತೇಣೇ ಆಯುಷ್ಯ ನಾಶೀಲೇ ಸರ್ವಥಾ । ಯಾಲಾಗೀ ಸಾಂಡೂನಿ ವಿಷಯ ಆಸ್ಥಾ । ಪರಮಾರ್ಥಾ ಭಜಾವೇ ॥೨೩॥ ಕೇವಳ ಝಾಲಿಯಾ ಪರಮಾರ್ಥಪರ । ಮ್ಹಣಸೀ ಆಹಾರೇವೀಣ ನ ರಾಹೇ ಶರೀರ । ಯೇಚ ನಿರ್ಧಾರೀ ಸಾಚಾರ । ಗುರು ''ಅಜಗರ'' ಮ್ಯಾ ಕೇಲಾ ॥೨೪॥

ನಿನ್ನ ನಿನ್ನದು ನೋಡಲು ಹೋಗಬೇಕೆಂದರೆ ನಿಜವಾಗಿಯೂ ನನ್ನ, ನನ್ನದು ಇಲ್ಲದಾಗಿ ಹೋಗುವುದು. ಹೇ ಗುರುನಾಥನೇ, ನೀನು ಹೀಗೆ ಮಾಡಿ ನನ್ನ ಮುಖದಿಂದ ಈ ಗ್ರಂಥ ಕಥೆಯನ್ನು ಹೇಳಿಸುತ್ತಿರುವೆ ॥೧೨॥ ಏಳನೆಯ ಅಧ್ಯಾಯದ ಕೊನೆಯಲ್ಲಿ ಅವಧೂತನು ಯದುರಾಜನಿಗೆ ಕಪೋತದ ದೃಷ್ಟಾಂತವನ್ನು ಹೇಳಿದನು. ಇದು ಹಿಂದಿನ ಕಥಾ ಸಂಬಂಧವಾಗಿರುವುದು ॥೧೩॥ ಆದಿಯಿಂದ ಈಗಿನವರೆಗೆ ಉತ್ತಮವಾಗಿರುವ, ಪೃಥ್ವಿಯಿಂದ ಹಿಡಿದು ಕಪೋತ ಪರ್ಯಂತ ಅತ್ಯಂತ ಶ್ರೇಷ್ಠವಾದ ಗುರುಗಳ ವರ್ಣನೆ ಮಾಡಿದರು. ಆತ್ಮಜ್ಞಾನದಿಂದಲೇ ಗುರುವಿಗೆ ಶ್ರೇಷ್ಠತೆಯು ಬರುವುದು ॥೧೪॥ ಈಗ ಅವಧೂತನು ಯದುರಾಜನಿಗೆ ಇನ್ನುಳಿದ ಗುರುಗಳ ಕಥೆಯನ್ನು ಹೇಳುವನು, ಅದಕ್ಕಾಗಿ ಚಿತ್ತವನ್ನು ಸ್ಥಿರವಾಗಿಟ್ಟು ಅದನ್ನು ಏಕಾಗ್ರತೆಯಿಂದ ಕೇಳಿರಿ, ಏಕೆಂದರೆ ಈ ಶ್ರವಣದಿಂದ ಆ ಬೋಧಸ್ಥಿತಿಯು ನಿಮಗೂ ಲಭಿಸುವುದು ॥೧೫॥

ಯದುರಾಜನಿಗೆ ಶ್ರವಣದ ಬಲು ಪ್ರೀತಿ ಇರುವುದನ್ನು ಕಂಡು ಅವಧೂತನಿಗೆ ಬಹಳ ಆನಂದವಾಯಿತು. ಆ ಆನಂದದ ಭರದಲ್ಲಿ ಹೆಚ್ಚಿನ ಉತ್ಸಾಹದಿಂದ ಆತನು ಮುಂದಿನ ನಿರೂಪಣೆಯನ್ನು ಮಾಡಲು ಆರಂಭಿಸಿದನು ॥೧೬॥ ಅವಧೂತನು ಹೇಳಿದನು, ಹೇ ರಾಜನೇ, ವಿಷಯಗಳ ಸುಖವು ಸ್ವರ್ಗದಲ್ಲಿಯೂ, ನರಕದಲ್ಲಿಯೂ ಸಮಾನವಾಗಿರುವುದು. ಇದರಲ್ಲಿ ಯಾವ ಅನುಮಾನವನ್ನು ಇಡಬೇಡ ॥೧೭॥ ಸ್ವರ್ಗದಲ್ಲಿ ಇಂದ್ರನಿಗೆ ಉರ್ವಶಿಯಿಂದ ಸಿಗುವ ಸುಖವೇ, ಮಲಮೂತ್ರಗಳಲ್ಲಿ ಉರುಳಾಡುವ ಗಂಡು ಹಂದಿಗೆ ಹೆಣ್ಣುಹಂದಿಯಿಂದ ನಿಶ್ಚಿತವಾಗಿ ಸಿಗುವುದು ॥೧೮॥ ಇದನ್ನರಿತು ಸತ್ಪುರುಷರು ಈ ಎರಡೂ ಪ್ರಕಾರದ ಸುಖಗಳಲ್ಲಿ ಮನಮೆಚ್ಚಿ ಆಸಕ್ತರಾಗುವುದಿಲ್ಲ. ಪ್ರೇತಕ್ಕೆ ಆಲಿಂಗನ ಕೊಡದಂತೆ ಸಾಧುಪುರುಷನು ವಿಷಯಗಳಿಗೆ ಸ್ಪರ್ಶ ಸಹ ಮಾಡುವುದಿಲ್ಲ ॥೧೯॥ ಜೀವಂತ ಸರ್ಪವನ್ನು ಕೈಯಿಂದ ಹಿಡಿಯಬೇಕೆಂದು ಯಾರಿಗೂ ಎಂದಿಗೂ ಮನಸ್ಸಾಗುವುದಿಲ್ಲ. ಅದರಂತೆ ಸಾಧುಪುರುಷನು ವಿಷಯಗಳನ್ನು ಎಂದಿಗೂ ಮುಟ್ಟಲಾರನು ॥೨೦॥ ದುಃಖವು ಕರೆಯದೇ ಪ್ರಾಣಿಗಳತ್ತ ಬರುತ್ತಿರುವುದು. ಅದರಂತೆ ಇಚ್ಛೆ ಇರದಿದ್ದರೂ ಅದೃಷ್ಟವು ಇಂದ್ರಿಯ ಸುಖವನ್ನು ಪ್ರಾಣಿಗಳಿಗೆ ಬಲತ್ಕಾರವಾಗಿ ಭೋಗಿಸಲು ಹಚ್ಚುವುದು ॥೨೧॥ ಯಾವ ಜೀವಕ್ಕಾಗಲೀ ತನಗೆ ದುಃಖವಾಗಬೇಕೆಂಬ ಇಚ್ಛೆ ಇರುವುದಿಲ್ಲ. ಆದರೆ ಪ್ರಾರಬ್ಧವು ಬೇಡದೇ, ಬಿಡದೇ ದುಃಖ ಭೋಗಿಸಲು ಹಚ್ಚುವುದು. ಅದರಂತೆ ಅವರಿಗೆ ಸುಖದ ಲಾಭವನ್ನೂ ತಂದು ಕೊಡುವುದು ॥೨೨॥ ಹೀಗಿದ್ದರು ಲೋಕದ ಜನರು ಅದಕ್ಕಾಗಿ ಸತತವಾಗಿ ಪ್ರಯತ್ನಪಡುತ್ತಿರುವರು. ಇದರಿಂದ ತಮ್ಮ ಅಮೌಲ್ಯವಾದ ಆಯುಷ್ಯವನ್ನು ವ್ಯರ್ಥವಾಗಿ ನಾಶಮಾಡಿಕೊಳ್ಳುವರು. ಆದ್ದರಿಂದ ವಿಷಯಗಳ ಆಸಕ್ತಿಯನ್ನು ತ್ಯಜಿಸಬೇಕು. ಮತ್ತು ಪರಮಾರ್ಥವನ್ನು ಸಾಧಿಸಬೇಕು ॥೨೩॥ ಆದರೆ ಈಗ ನೀನು ಹೀಗೆ ಹೇಳಬಹುದು, ಕೇವಲ ಪರಮಾರ್ಥದ ಮಾರ್ಗವನ್ನು ಅನುಸರಿಸಿದರೆ, ಆಹಾರವಿಲ್ಲದೇ ದೇಹವು ನಡೆಯಲಾರದು. ಅದಕ್ಕಾಗಿಯೇ ಇದನ್ನು ಸಿದ್ಧ ಮಾಡಿಕೊಳ್ಳುವುದಕ್ಕಾಗಿಯೇ ನಾನು "ಅಜಗರ" ಹೆಬ್ಬಾವಿಗೆ ಗುರುವನ್ನಾಗಿ ಮಾಡಿಕೊಂಡೆನು ॥೨೪॥

ಗ್ರಾಸಂ ಸುಮೃಷ್ಟಂ ವಿರಸಂ ಮಹಾಂತಂ ಸ್ತೋಕಮೇವ ವಾ ।
ಯದೃಚ್ಛಯೈವಾಪತಿತಂ ಗ್ರಸೇದಾಜಗರೋಽಕ್ರಿಯಃ ॥೨॥

ಅರ್ಥ:- ಹೆಬ್ಬಾವಿನ ವೃತ್ತಿಯಂತೆ ಅನುಸರಿಸಿ ಪ್ರಾಪಂಚಿಕ ಪ್ರಯತ್ನಗಳನ್ನು ತ್ಯಜಿಸಬೇಕು. ರುಚಿಕಟ್ಟಾಗಿರಲಿ ಅಥವಾ ಇಲ್ಲದಿರಲಿ, ಹೆಚ್ಚಿರಲಿ ಅಥವಾ ಸ್ವಲ್ಪವೇ ಇರಲಿ ತಾನಾಗಿ ಒದಗಿ ಬಂದ ಆಹಾರವನ್ನು ದೇಹ ಪೋಷಣೆಗೆ ಬಳಸಬೇಕು.

ಉದ್ಯೋಗೇವೀಣ ಆಹಾರು । ಅಯಾಚಿತ ಸೇವೀ ಅಜಗರು । ಡಂಡಳೋನಿ ನ ಸಾಂಡೀ ಧೀರು । ನಿಧಡಾ ನಿರ್ಧಾರು ಪೈ ತ್ಯಾಚಾ ॥೨೫॥ ಸ್ವಭಾವೇ ತೋ ಮುಖ ಪಸರೀ । ಸಹಜೇ ಪಡೇ ಜೇ ಭೀತರೀ । ಸರಸ ನೀರಸ ವಿಚಾರು ನ ಕರೀ । ಆಹಾರ ಅಂಗೀಕಾರೀ ಸಂತೋಷೇ ॥೨೬॥ ತೈಶೀಚಿ ಯೋಗಿಯಾಂಚೀ ಗತೀ । ಸದಾ ಭಾವಿತೀ ಆತ್ಮಸ್ಥಿತೀ । ಯದೃಚ್ಛಾ ಆಲೇ ತೇ ಸೇವಿತೀ । ರಸಆಸಕ್ತಿ ಸಾಂಡೂನಿ ॥೨೭॥ ಯೋಗಿಯಾಂಚಾ ಆಹಾರು ಘೇಣೇ ।ಕಾಯ ಸೇವಿಲೇ ಹೇ ರಸನಾ ನೇಣೇ । ರಸನಾ - ಪಂಗಿಸ್ತ ನಾಹೀ ಹೋಣೇ । ಆಹಾರು ಸೇವಣೇ ನಿಜಬೋಧೇ ॥೨೮॥ ಆಂಬಟ ತಿಖಟ ತರೀ ಜಾಣೇ । ಪರೀ ಏಕೇ ಸ್ವಾದೇ ಅವಘೇ ಖಾಣೇ । ಸರಸ ನೀರಸ ಕಾಂಹೀ ನ ಮ್ಹಣೇ । ಗೋಡ ಕರಣೇ ನಿಜಗೋಡಿಯೇ ॥೨೯॥ ಮುಖ ಪಸರಿಲಿಯಾ ನಿರ್ಧಾರಾ । ಸ್ವಭಾವೇ ರಿಘಾಲಿಯಾ ವಾರಾ । ತೋಚಿ ಆಹಾರು ಪೈ ಅಜಗರಾ । ತೇಣೇಂಚೀ ಶರೀರಾ ಪೋಷಣ ॥೩೦॥ ತೈಶೀಚಿ ಯೋಗಿಯಾಂಚೀ ಸ್ಥಿತಿ । ವಾತಾಶನೇ ಸುಖೇ ವರ್ತತೀ । ಆಹಾರಾಲಾಗುನೀ ಪುಢಿಲಾಂಪ್ರತೀ । ನ ಯೇ ಕಾಕುಲತೀ ಸರ್ವಥಾ ॥೩೧॥ ಥೋಡೇ ಬಹು ಸರಸನಿರಸಾಸೀ । ಹೇ ಕಾಂಹೀ ಮ್ಹಣಣೇ ನಾಹೀ ತ್ಯಾಸೀ । ಸ್ವಭಾವೇ ಜೇ ಆಲೇ ಮುಖಾಸೀ । ತೇ ಸಾವಕಾಶೀ ಸೇವಿತು ॥೩೨॥

ಶಯೀತಾಹಾನಿ ಭೂರೀಣಿ ನಿರಾಹಾರೋಽನುಪಕ್ರಮಃ ।
ಯದಿ ನೋಪನಮೇದ್ ಗ್ರಾಸೋ ಮಹಾಹಿರಿವ ದಿಷ್ಟಭುಕ್ ॥೩॥

ಅರ್ಥ :- ಭೋಜನವು ಸಿಗದಿರಲು ಪ್ರಾರಬ್ಧ ಭೋಗವೆಂದು ತಿಳಿದು ಸಮಾಧಾನಿಯಾಗಿರಬೇಕು. ಅನೇಕ ದಿನಗಳವರೆಗೆ ಉಪವಾಸ ಇರುವ ಪ್ರಸಂಗ ಬಂದರೂ ಅಡ್ಡಿ ಇಲ್ಲ. ಈತನು ಹೆಬ್ಬಾವಿನಂತೆ ಕೇವಲ ಪ್ರಾರಬ್ಧದಿಂದ ಪ್ರಾಪ್ತವಾದ ಭೋಜನದಿಂದಲೇ ಸಂತುಷ್ಟನಾಗಿರುವನು.

ಅಜಗರಾಸೀ ಬಹು ಕಾಳೇ । ಯದೃಚ್ಛಾ ಆಹಾರು ನ ಮಿಳೇ । ತರೀ ಧಾರಣೇಸೀ ನ ಟಳೇ । ಪಡಿಲಾ ಲೋಳೇ ನಿಜಸ್ಥಾನೀ ॥೩೩॥ ತೈಸೇ ಯೋಗಿಯಾಸೀ ಅನ್ನ । ಬಹುಕಾಳೇ ನ ಮಿಳೇ ಜಾಣ । ತರೀ ಕರೂನಿಯಾ ಲಂಬಾಸನ । ನಿದ್ರೇವೀಣ ನಿಜತು ॥೩೪॥ ನಿದ್ರಾ ನಾಹೀ ತಯಾಸೀ । ಪರೀ ನಿಜೇ ನಿಜೀ ಅಹರ್ನಿಶೀ । ಬಾಹ್ಯ ನ ಕರೀ ಉಪಾಯಾಸೀ । ಭಕ್ಷ್ಯ ದೇಹಾಸೀ ಅದೃಷ್ಟೇ ॥೩೫॥

ಹೆಬ್ಬಾವು ಆಹಾರಕ್ಕಾಗಿ ಯಾವ ಉದ್ಯೋಗವನ್ನು ಮಾಡದೇ ಸಹಜವಾಗಿ ತಾನಾಗಿಯೇ ಸಿಕ್ಕಿದ್ದನ್ನು ತಿನ್ನುತ್ತಿರುತ್ತದೆ. ಸಿಗದಿದ್ದಾಗ ಭಯಪಟ್ಟು ತನ್ನ ಧೈರ್ಯವನ್ನು ಬಿಟ್ಟುಕೊಡುವುದಿಲ್ಲ. ಅದರ ನಿಶ್ಚಯವು ಬಹುದೃಢವಾಗಿರುವುದು ॥೨೫॥ ಅದು ತನ್ನ ಸ್ವಭಾವದಂತೆ ಮುಖವನ್ನು ತೆರೆಯುವುದು. ಸಹಜವಾಗಿ ತನ್ನ ಮುಖದಲ್ಲಿ ಬಿದ್ದಿರುವುದನ್ನು ರಸಯುಕ್ತ ಅಥವಾ ರಸರಹಿತ ಇದಾವುದು ವಿಚಾರಿಸದೇ ಬಹಳ ಸಂತೋಷದಿಂದ ಗ್ರಹಣ ಮಾಡುವುದು ॥೨೬॥ ಯೋಗಿಗಳ ಸ್ಥಿತಿಯೂ ಹಾಗೆಯೇ ಇರುವುದು. ಅವರು ನಿರಂತರವಾಗಿ ಆತ್ಮಸ್ವರೂಪದಲ್ಲಿ ತನ್ಮಯರಾಗಿರುವರು. ಅವರು ರಸದ ಆಸಕ್ತಿಯನ್ನು ತೊರೆದು ಅದೃಷ್ಟದಿಂದ ಪ್ರಾಪ್ತವಾದದ್ದನ್ನು ಸೇವನೆ ಮಾಡುವರು ॥೨೭॥ ಯೋಗಿಗಳು ರಸನೆಗೆ ಏನು ತಿಂದರೆಂಬುದು ಅರಿಯದಂತೆ ಆಹಾರವನ್ನು ಸ್ವೀಕರಿಸುವರು. ರಸನೇಂದ್ರಿಯಕ್ಕೆ ಅಂಕಿತನಾಗದೇ ಸಮದೃಷ್ಟಿಯಿಂದ ಆಹಾರವನ್ನು ಸ್ವೀಕರಿಸುವರು ॥೨೮॥ ಹುಳಿ, ಉಪ್ಪು, ಖಾರ ಇತ್ಯಾದಿ ಇವುಗಳನ್ನು ಅರಿಯುತ್ತಿದ್ದರೂ ಅವುಗಳೆಲ್ಲವನ್ನೂ ಬ್ರಹ್ಮರಸಸ್ವಾದದಿಂದಲೇ ಸೇವಿಸುವರು. ಸರಸ, ನೀರಸ ಎಂದು ಏನೂ ಹೇಳುವುದಿಲ್ಲ. ಆತ್ಮಸುಖದ ರುಚಿಯಲ್ಲಿ ಎಲ್ಲವನ್ನೂ ರುಚಿಯಾಗಿಯೇ ಕಾಣುವರು ॥೨೯॥ ಅಜಗರವು ಕೇವಲ ಮುಖವನ್ನು ಪಸರಿಸಿದಾಗ ಅದರಲ್ಲಿ ಬರೀ ಗಾಳಿಯು ಹೊಕ್ಕಿದರೂ ಸರಿಯೇ. ಅದಕ್ಕೆ ಅದೇ ಆಹಾರವಾಗುವುದು. ಅದರಿಂದಲೇ ಶರೀರ ಪೋಷಣೆಯಾಗುವುದು ॥೩೦॥ ಅದರಂತೆಯೇ ಯೋಗಿಗಳ ಸ್ಥಿತಿಯಾಗಿರುವುದು. ಇವರು ಸಹ ವಾಯು ಭಕ್ಷಣೆಯನ್ನು ಮಾಡಿ ಆನಂದವಾಗಿ ಇರುವರು. ಆಹಾರಕ್ಕಾಗಿ ಇತರರಲ್ಲಿ ದೀನರಾಗುವುದಿಲ್ಲ ॥೩೧॥ ಕಡಿಮೆಯಾಯಿತು, ಹೆಚ್ಚಾಯಿತು, ರುಚಿಯಾಗಿತ್ತು, ರುಚಿಕೆಟ್ಟಿತ್ತು ಎಂಬುವ ಮಾತುಗಳೇ ಇವರಿಗೆ ಗೊತ್ತಿರುವುದಿಲ್ಲ. ಸಹಜವಾಗಿ ಪ್ರಾಪ್ತವಾದದ್ದನ್ನು ಸ್ವಸ್ಥರಾಗಿ ಸೇವನೆ ಮಾಡುವರು ॥೩೨॥

ಅಜಗರಕ್ಕೆ ಅನೇಕದಿನಗಳವರೆಗೆ ಆಹಾರವು ಸಿಗದಿದ್ದರೂ ಅದು ಅಸ್ವಸ್ಥವಾಗುವುದಿಲ್ಲ. ತನ್ನ ಸ್ಥಳದಲ್ಲಿಯೇ ಉರುಳಾಡುತ್ತ ಬಿದ್ದಿರುವುದು ॥೩೩॥ ಅದೇ ರೀತಿಯಾಗಿ ಯೋಗಿಗೆ ಅನೇಕ ದಿನಗಳವರೆಗೆ ಅನ್ನವು ದೊರೆಯದಿದ್ದರೂ ಆತನು ಲಂಬಾಸನವನ್ನು ಹಾಕಿ ನಿದ್ರೆ ಇಲ್ಲದೇ ಮಲಗಿಕೊಳ್ಳುವನು ॥೩೪॥ ನಿದ್ರೆಯು ಅವರಿಗೆ ಸಾಮಾನ್ಯವಾಗಿ ಇರುವುದಿಲ್ಲ. ಅಹೋರಾತ್ರಿ ಅವರು ನಿಜಸುಖದ ತಂದ್ರಿಯಲ್ಲಿ ಮಲಗಿಕೊಂಡಿರುವರು. ಬಾಹ್ಯ ಉಪಾಯಗಳಾವುದನ್ನೂ ಇವರು ಮಾಡುವುದಿಲ್ಲ. ದೈವಯೋಗದಿಂದ ಸಿಕ್ಕಷ್ಟೇ ಇವರು ಸ್ವೀಕರಿಸುವರು॥೩೫॥

ಅದೃಷ್ಟೀ ಅಸೇಲ ಜೇ ಜೇ ವೇಳೇ । ತೇ ತೇ ಮಿಳೇಲ ತೇಣೇ ಕಾಳೇ । ಯಾಲಾಗೀ ತ್ಯಾಚೇ ಜ್ಞಾನ ನ ಮೈಳೇ । ಧಾರಣಾ ನ ಢಳೇ ನಿಜಬೋಧೇ ।೩೬॥

ಓಜಃ ಸಹೋಬಲಯುತಂ ಬಿಭ್ರದ್‌ದೇಹಮಕರ್ಮಕಮ್ ।
ಶಯಾನೋ ವೀತನಿದ್ರಶ್ಚ ನೇಹೇತೇಂದ್ರಿಯವಾನಪಿ ।೫॥

ಅರ್ಥ :- ಸಾಧು ಪುರುಷನಿಗೆ ಮನೋಬಲವು, ಇಂದ್ರಿಯ ಬಲವು ಮತ್ತು ದೇಹಬಲವು ಇದ್ದರೂ ಕೂಡ ಶಾಂತನಾಗಿರಬೇಕು. ನಿದ್ರೆ ಇಲ್ಲದಿದ್ದರೂ ಮಲಗಿಕೊಂಡಿರಬೇಕು. ಕರ್ಮೇಂದ್ರಿಯಗಳು ಇದ್ದರೂ ಯಾವ ಕೆಲಸ ಮಾಡಕೂಡದು. ಹೇ ರಾಜನೇ, ಅಜಗರದಿಂದನಾನು ಈ ಜ್ಞಾನವನ್ನು ಪಡೆದದೆನು.

ಅಜಗರಾಸೀ ಬಳ ಉದಂಡ । ದೇಹೋ ಪರಾಕ್ರಮೇ ಪ್ರಚಂಡ । ಪರೀ ನ ಕರೀ ಉದ್ಯೋಗಾಚೇ ಬಂಡ ।ಪಸರೂನಿ ತೋಂಡ ಪಡಿಲಾಸೇ ।೩೭॥ ತೈಸಾಚಿ ಯೋಗಿಯಾ ಕೇವಳ । ಶರೀರೀ ಅಸೇ ಶಾರೀರ ಬಳ । ಬುದ್ಧಿ ಹೀ ಅಸೇ ಅತಿಕುಶಳ । ಇಂದ್ರಿಯಬಳ ಪಟುತರ ।೩೮॥ ಆಹಾರಾಲಾಗೀ ಸರ್ವಥಾ । ಹೇತು ಸ್ಫುರೋ ನೇದೀ ಚಿತ್ತಾ ।ಕಾಯಾವಾಚಾ ತತ್ತ್ವತಾ । ನೇದೀ ಸ್ವಭಾವತಾ ಡಂಡಳೂ ।೩೯॥ ಸ್ವಪ್ನ ಜಾಗೃತೀ ಮುಕಲಾ । ಸುಷುಪ್ತೀ ಸಾಂಡೋನಿ ನಿಜೇಲಾ । ಶೂನ್ಯಾಚಾ ಪಾಸೋಡಾ ಝಾಡಿಲಾ । ನಿಜೀ ಪಹುಡಲಾ ನಿಜತ್ವೇ ।೪೦॥

ಮುನಿಃ ಪ್ರಸನ್ನಗಂಭಿರೋ ದುರ್ವಿಗಾಹ್ಯೋ ದುರತ್ಯಯಃ ।
ಅನಂತಪಾರೋ ಹ್ಯಕ್ಷೋಭ್ಯಸ್ತಿಮಿತೋದ ಇವಾರ್ಣವ ।೬॥

ಅರ್ಥ : ಮುನಿಯು ಯಾವಾಗಲೂ ಪ್ರಸನ್ನ ಮತ್ತು ಗಂಭೀರನಾಗಿರಬೇಕು. ಆತನ ಭಾವವು ಅಪಾರ, ಅಸೀಮವಾಗಿರಬೇಕು. ಯಾವುದೇ ನಿಮಿತ್ತದಿಂದ ಉದ್ವೇಗವು ಬರಕೂಡದು. ತರಂಗಗಳ ಏರಿಕೆ, ಇಳಿತ ಇಲ್ಲದ ಸಮುದ್ರದಂತೆ ಶಾಂತನಾಗಿರಬೇಕು.

''ಸಮುದ್ರ'' ಜೋ ಗುರು ಕರಣೇ । ತ್ಯಾಚೇ ಪರಿಸರ ಪಾ ಲಕ್ಷಣೇ । ಗಂಭೀರತ್ವ ಪೂರ್ಣಪಣೇ । ನಿರ್ಮಳ ಅಸಣೇ ಇತ್ಯಾದಿ ।೪೧॥ ಸಮುದ್ರ ಸದಾ ಸುಪ್ರಸನ್ನ । ಯೋಗೀ ಸದಾ ಪ್ರಸನ್ನವದನ । ಕೇಂವಾಹೀ ಧುಸಮುಶಿಲೇಪಣ । ನವ್ಹೇ ಜಾಣನಿಜಬೋಧೇ ।೪೨॥ ಮೀನಲ್ಯಾ ಸರಿತಾಂಚೇ ಸಮಳ ಜಳ । ಸಮುದ್ರ ಡಹುಳೇನಾ ಅತಿನಿರ್ಮಳ । ತೈಸೀ ನಾನಾ ಕರ್ಮೇ ಕರಿತಾ ಸಕಳ । ಸದಾ ಅವಿಕಳ ಯೋಗಿಯಾ ।೪೩॥ ಜಳೇ ಗಂಭೀರ ಸಾಗರ । ಯೋಗಿಯಾ ಸ್ವಾನುಭಾವೇ ಗಂಭೀರ । ವೇಳಾ ನುಲ್ಲಂಘೀ ಸಾಗರ । ನುಲ್ಲಂಘೀ ಯೋಗೀಶ್ವರ ಗುರುಆಜ್ಞಾ ।೪೪॥ ಸಮುದ್ರಿ ನ ರಿಘವೇ ಭಲತ್ಯಾಸೀ । ತೋ ಬುಡವೀ ಜಳಕಲ್ಲೋಳೇಸೀ । ಯೋಗಿಯಾ ಬುಡವೀ ಸಂಸಾರಾಸೀ । ಭಾವೇ ತ್ಯಾ ಪಾಸೀ ಗೇಲಿಯಾ ।೪೫॥

(ದೈವಯೋಗದಲ್ಲಿ ಇದ್ದಂತೆಯೇ ಆಯಾ ವೇಳೆಯಲ್ಲಿ ಆಯಾ ಪದಾರ್ಥಗಳು ಸಿಗುವುದೆಂಬ ದೃಢವಾದ ನಿಶ್ಚಯದಿಂದ)ಇವರ ಜ್ಞಾನವು ಮಲಿನವಾಗುವುದಿಲ್ಲ. ಆತ್ಮ ಸ್ವರೂಪದಿಂದ ಇವರು ವಿಚಲಿತರಾಗುವುದಿಲ್ಲ ।೩೬॥

ಹೆಬ್ಬಾವಿನ ಸಾಮರ್ಥ್ಯವು ಭಯಂಕರವಾಗಿರುವುದು. ಮತ್ತು ಅದರ ಪರಾಕ್ರಮವೂ ಪ್ರಚಂಡವಾಗಿರುವುದು. ಆದರೂ ಅದು ದೇಹಕ್ಕಾಗಿ ಯಾವ ಖಟಾಟೋಪ ಮಾಡುವುದಿಲ್ಲ. ಮುಖ ತೆರೆದುಕೊಂಡು ಸುಮ್ಮನೇ ಕುಳಿತಿರುವುದು ।೩೭॥ ಅದರಂತೆ ಯೋಗಿಗೂ ಶರೀರ ಸಾಮರ್ಥ್ಯವಿರುವುದು. ಅವರ ಬುದ್ಧಿಯು ತೀವ್ರವಾಗಿರುವುದು. ಅವರ ಇಂದ್ರಿಯಗಳ ಬಲವೂ ಅಲೌಕಿಕವಾಗಿರುವುದು ।೩೮॥ ಹೀಗಿದ್ದರೂ ಇವರು ಆಹಾರಕ್ಕಾಗಿ ಮನದಲ್ಲಿ ವಿಚಾರವನ್ನೇ ಮಾಡುವುದಿಲ್ಲ. ದೇಹ ಮತ್ತು ಮನವನ್ನು ಇವರು ನಿಜವಾಗಿಯೂ ತಮ್ಮ ಸ್ವಭಾವದಿಂದ ವಿಚಲಿತಗೊಳಿಸುವುದಿಲ್ಲ ।೩೯॥ ಇವರು ಸ್ವಪ್ನ ಜಾಗೃತಿಗಳಿಂದ ಬೇರೆಯಾಗಿರುವರು. ಸುಷುಪ್ತಿಯನ್ನು ಬಿಟ್ಟು ಮಲಗುವರು. ಮತ್ತು ಶೂನ್ಯದ ಹೊದಿಕೆಯನ್ನು ಝಾಡಿಸಿ ಆತ್ಮಾನಂದದಲ್ಲಿ ಸ್ವರೂಪಾನಂದದಿಂದ ಶಯನ ಮಾಡುವರು ।೪೦॥

ಈಗ ಸಮುದ್ರವನ್ನು ಗುರುವಾಗಿ ಮಾಡಿಕೊಂಡ ಅದರ ಲಕ್ಷಣಗಳನ್ನು ಹೇಳುವೆ, ಕೇಳು. ಸಮುದ್ರದಲ್ಲಿ ಗಾಂಭೀರ್ಯವು, ಪರಿಪೂರ್ಣತೆಯು ಮತ್ತು ನಿರ್ಮಲತ್ವ ಇತ್ಯಾದಿ ಗುಣಗಳಿರುವುವು ।೪೧॥ ಸಮುದ್ರವು ಸದೋದಿತವಾಗಿ ಸುಪ್ರಸನ್ನವಾಗಿರುವುದು. ಅದರಂತೆ ಯೋಗಿಯೂ ಕೂಡ ಯಾವಾಗಲೂ ಪ್ರಸನ್ನವದನರಾಗಿರುವನು. ಆತ್ಮಜ್ಞಾನವಾಗಿರುವುದರಿಂದ ಈತನಿಗೆ ಸಿಟ್ಟಿನಿಂದ ಮಾತನಾಡುವುದು ಗೊತ್ತೇ ಇರುವುದಿಲ್ಲ ।೪೨॥ ಎಲ್ಲ ನದಿಗಳ ನೀರು ಬಂದು ಕೂಡಿದರೂ ಸಹ ಸಮುದ್ರವು ಹೊಲಸಾಗದೇ ಸರ್ವ ಕಾಲಕ್ಕೂ ನಿರ್ಮಲವಾಗಿರುವುದು. ಅದರಂತೆ ಯೋಗಿಯೂ ಸಹ ಅನೇಕ ಪ್ರಕಾರಗಳ ಕರ್ಮಗಳನ್ನು ಮಾಡಿಯೂ ಸಹ ತನ್ನ ಅಂತಃಕರಣವನ್ನು ಯಾವಾಗಲೂ ಶುದ್ಧವಾಗಿಡುವವನು ।೪೩॥ ಸಮುದ್ರವು ಜಲದಿಂದ ತುಂಬಿಕೊಂಡು ಗಂಭೀರವಾಗಿರುವಂತೆ ಯೋಗಿಯೂ ಕೂಡ ಆತ್ಮಜ್ಞಾನದಿಂದ ಗಂಭೀರನಾಗಿರುವನು. ಸಾಗರವು ಯಾವ ಪ್ರಕಾರವಾಗಿ ತನ್ನ ಮರ್ಯಾದೆ ರೇಖೆಯನ್ನು ದಾಟುವುದಿಲ್ಲವೋ, ಅದರಂತೆಯೇ ಯೋಗಿಯೂ ಸಹ ಗುರುಗಳ ಆಜ್ಞೆಯನ್ನು ಉಲ್ಲಂಘಿಸುವುದಿಲ್ಲ ।೪೪॥ ಸಿಕ್ಕ ಸಿಕ್ಕ ಜನರು ಸಮುದ್ರದಲ್ಲಿ ಹೋಗಲರಿಯರು. ತೆರೆಗಳು, ರಭಸದ ಜಲ ಇವರನ್ನು ಮುಳುಗಿಸಿಬಿಡುವುದು. ಅದರಂತೆ ಶುದ್ಧಭಾವದಿಂದ ಯೋಗಿಯವರಲ್ಲಿ ಬಂದವರ ಜನ್ಮ ಮರಣ ರೂಪ ಸಂಸಾರವನ್ನು ಮುಳಗಿಸಿ ಬಿಡುವರು ।೪೫॥

ಜೋ ರಿಘಣೇ ನಿಘಣೇ ಜಾಣೇ ಜಳೀ । ತೋ ಸಮುದ್ರೀ ಕರೀ ಆಂಘೋಳೀ । ಯೇರಾಂಸೀ ಲಾಟಾಂಚ್ಯಾ ಕಲ್ಲೋಳೀ । ಕಾಸಾಕುಳೀ ಕರೀತಸೇ ॥೫೬॥ ತೈಸೀಚಿ ಯೋಗಿಯಾಸೀ । ಸಲಗೀ ನ ಕರವೇ ಭಲತಿಯಾಸೀ । ಆಪಭಯೇ ಭೀತೀ ಆಪೈಸೀ । ತೋ ಭಾವಿಕಾಂಸೀ ಸುಸೇವ್ಯ ॥೫೭॥ ಜಾಹಲ್ಯಾ ಧನವಂತು ವೇವ್ಹಾರಾ । ಉಪಾಯೀ ನುಲ್ಲಂಘವೇ ಸಾಗರಾ । ತೈಸೇ ನುಲ್ಲಂಘವೇ ಯೋಗೀಶ್ವರಾ । ನೃಪಾ ಸುರನರಾ ಕಿನ್ನರಾ ॥೫೮॥ ಮಳು ನ ರಾಹೇ ಸಾಗರೀ । ಲಾಟಾಂಸರಿಸಾ ಟಾಕೀ ದುರೀ । ತೈಸಾಚಿ ಮಳು ಯೋಗಿಯಾಭೀತರೀ । ಧ್ಯಾನೇ ನಿರ್ಧಾರೀ ನ ರಾಹೇ ॥೫೯॥ ಸಮುದ್ರೀ ಮೀನಲೀ ತಾಮ್ರಪರ್ಣೀ । ತೇಥ ಜಾಹಲೀ ಮುಕ್ತಾಫಳಾಂಚೀ ಖಾಣೀ । ಯೋಗಿಯಾ ಮಿನಲೀ ಶ್ರದ್ಧಾ ಯೇಊನೀ । ತೇಥ ಮುಕ್ತಖಾಣೀ ಮುಮುಕ್ಷಾ ॥೬೦॥ ಜೋ ಸಮುದ್ರಾಮಾಜೀ ರಿಘೋನಿ ರಾಹೇ । ತೋ ನಾನಾಪರೀಚೀ ರತ್ನೇ ಲಾಹೇ । ಯೋಗಿಯಾಮಾಜೀ ಜೋ ಸಾಮಾಯೇ । ತ್ಯಾಚೇ ವಂದಿತೀ ಪಾಯೇ ಚಿದ್ರತ್ನೇ ॥೬೧॥ ಜೈಶೀ ಸಮುದ್ರಾಚೀ ಮರ್ಯಾದಾ । ಕೋಣ್ಹಾಸೀ ನ ಕರವೇ ಕದಾ । ತೈಸೀ ಯೋಗಿಯಾಂಚೀ ಮರ್ಯಾದಾ । ಶಾಸ್ತ್ರಾ ವೇದಾ ನ ಕರವೇ ॥೬೨॥ ಪ್ರವಾಹೇವೀಣ ಜಳ । ಸಮುದ್ರಿ ಜೇವೀ ನಿಶ್ಚಳ । ಮೃತ್ಯುಭಯೇವೀಣ ಅಚಂಚಳ । ಅಸೇ ಕೇವಳ ಯೋಗಿಯಾ ॥೬೩॥ ಸಮುದ್ರಿ ಪ್ರವಾಹೋ ನವ್ಹೇ ಕಾಂಹೀ । ಸದಾ ಪೂರ್ಣ ಠಾಯೀಚ್ಯಾ ಠಾಯೀ । ತೈಸೇ ಯೋಗಿಯಾ ಜನ್ಮ ಮರಣ ನಾಹೀ । ಪರಿಪೂರ್ಣ ಪಾಹೀ ಸರ್ವದಾ ॥೬೪॥ ಸಮುದ್ರ ಲಕ್ಷಣೇ ಸಾಧಿತಾ । ಅಧಿಕ ದಶಾ ಆಲೀ ಹಾತಾ । ತೇ ಯೋಗಿಯಾಚೀ ಯೋಗ್ಯತಾ । ಪರಿಸ ತತ್ತ್ವತಾ ಸಾಂಗೇನ ॥೬೫॥ ಸಮುದ್ರಾಮಾಜೀ ಜಳ । ಲಾಟಾಖಾಲೀ ಅತಿಚಂಚಳ । ಯೋಗಿಯಾ ಅಂತರೀ ಅತಿನಿಶ್ಚಳ । ನಾಹೀ ತಳಮಳ ಕಲ್ಪನಾ ॥೬೬॥ ಸಮುದ್ರ ಕ್ಷೋಭೇ ವೇಳೋವೇಳೇ । ಯೋಗಿಯಾ ಕ್ಷೋಭೇನಾ ಕವಣೇ ಕಾಳೇ । ಸರ್ವಥಾ ಯೋಗೀ ನುಚಂಬಳೇ । ಯೋಗಬಳೇ ಸಾವಧು ॥೬೭॥ ಸಮುದ್ರೀ ಭರತೇ ಪರ್ವಸಂಬಂಧೇ । ಯೋಗಿಯಾ ಪರಿಪೂರ್ಣ ಸದಾನಂದೇ । ಸಮುದ್ರೀ ಚಢೂವೋಹಟು ಚಾಂದೇ । ಯೋಗಿಯಾ ನಿಜಬೋಧೇ ಸದಾ ಸಮ ॥೬೮॥

ಸಮುದ್ರದಲ್ಲಿ ಸೇರಬೇಕು ಹೇಗೆ? ಮತ್ತು ಮರಳಿ ಬರುವುದು ಹೇಗೆ? ಈ ಮಾರ್ಗವನ್ನು ಅರಿತವರು ಮಾತ್ರ ಸಮುದ್ರದಲ್ಲಿ ಸ್ನಾನ ಮಾಡಬಲ್ಲರು. ಇತರರಿಗೆ ಯಾವ ಸಮುದ್ರವು ತನ್ನ ಭಯಂಕರ ತೆರೆಗಳಿಂದ ಸಂಕಟಕ್ಕೆ ಗುರಿಮಾಡುವುದು ॥೫೬॥ ಇದೇ ರೀತಿಯಾಗಿ ಯೋಗಿಗಳ ಸಂಗತಿಯು ಸಿಕ್ಕಸಿಕ್ಕ ಜನರಿಗೆ ಆಗುವುದಿಲ್ಲ. ಇವರು ತಮ್ಮಷ್ಟಕ್ಕೆ ತಾವೇ ಭಯಭೀತರಾಗಿರುವರು. ಶ್ರದ್ಧಾವಂತರಿಗೆ ಮಾತ್ರ ಈತನು ಸುಲಭಸಾಧ್ಯನು ॥೫೭॥ ಬೇಕಾದಷ್ಟು ದೊಡ್ಡ ಶ್ರೀಮಂತನಾಗಿರಲಿ, ಆದರೆ ಆತನಿಗೆ ಸಾಗರವನ್ನು ದಾಟುವುದು ಯಾವ ಉಪಾಯದಿಂದಲೂ ಸಾಧ್ಯವಾಗಲಾರದು. ಅದರಂತೆಯೇ, ರಾಜನಾಗಿರಲಿ, ದೇವನಾಗಿರಲಿ, ಕಿನ್ನರನಾಗಿರಲಿ ಯೋಗೇಶ್ವರರ ಉಲ್ಲಂಘನೆಯನ್ನು ಮಾಡಲು ಸಾಧ್ಯವಾಗಲಾರದು ॥೫೮॥ ಸಮುದ್ರದಲ್ಲಿ ಹೊಲಸು ಇರುವುದಿಲ್ಲ. ತೆರೆಗಳು ಎಲ್ಲ ಹೊಲಸನ್ನು ದೂರ ಚೆಲ್ಲಿಬಿಡುವುವು. ಅದರಂತೆಯೇ ಯೋಗಿಗಳ ಮನದಲ್ಲಿಯೂ ಸಹ ಧ್ಯಾನಬಲದಿಂದ ಅವರಲ್ಲಿ ಸ್ವಲ್ಪವೂ ಮಲಿನತೆಯು ಉಳಿಯುವುದಿಲ್ಲ ॥೫೯॥ ತಾಮ್ರಪರ್ಣೀ ನದಿಯು ಸಮುದ್ರಕ್ಕೆ ಕೂಡಿಕೊಳ್ಳಲು ಕೂಡಲೇ ಅದು ಮುತ್ತುಗಳ ಖನಿಜವಾಗುವುದು. ಹೀಗೆಯೇ ಯೋಗಿಯವರಲ್ಲಿ ಶ್ರದ್ಧೆಯಿದ ಬಂದು ಕೂಡಿಕೊಳ್ಳಲು ಆ ಮುಮುಕ್ಷುಗಳವರಿಗೆ ಅವರು ಮುಕ್ತಿಯ ಖನಿಜವಾಗುವರು ॥೬೦॥ ಯಾರು ಸಮುದ್ರದಲ್ಲಿ ಹಾರಿ ಮುಳುಗುವರೋ ಅವರ ಕೈಗಳಲ್ಲಿ ನಾನಾಪ್ರಕಾರಗಳ ರತ್ನಗಳು ದೊರೆಯುವುವು. ಅದರಂತೆ ಯೋಗಿಯವರಲ್ಲಿ ಸಮರಸವಾದವರ ಚರಣಗಳ ಮೇಲೆ ಜ್ಞಾನರತ್ನಗಳ ಮಳೆಗರೆಯುವುದು ॥೬೧॥ ಸಮುದ್ರದ ಮಿತಿಯನ್ನು ಯಾರಿಂದಲೂ ಅಳೆಯಲು ಸಾಧ್ಯವಾಗುವುದಿಲ್ಲ. ಅದರಂತೆ ವೇದ ಶಾಸ್ತ್ರಗಳಿಗೂ ಯೋಗಿಗಳ ಇತಿಮಿತಿಯನ್ನು ಅಳೆಯಲು ಸಾಧ್ಯವಾಗುವುದಿಲ್ಲ ॥೬೨॥ ಸಮುದ್ರವು ಪ್ರವಾಹರಹಿತವಾಗಿ ನಿಶ್ಚಲವಾಗಿರುವುದು. ಅದರಂತೆ ಯೋಗಿಯು ಮೃತ್ಯುವನ್ನು ಗೆದ್ದು ಭಯರಹಿತನಾಗಿ ನಿಶ್ಚಲವಾಗಿ ಇರುವನು ॥೬೩॥ ಸಮುದ್ರವು ನದಿಗಳಂತೆ ಹರಿಯುವುದಿಲ್ಲ. ಅದಕ್ಕೆ ಎಂದೂ ಪ್ರವಾಹವು ಬರುವುದೇ ಇಲ್ಲ. ಅದು ಯಾವಾಗಲೂ ತಾನು ಇದ್ದಂತೆಯೇ ಪರಿಪೂರ್ಣವಾಗಿ ಇರುವುದು. ಅದರಂತೆಯೇ ಯೋಗಿಗಳಿಗೂ ಕೂಡ ಜನ್ಮಮರಣಗಳು ಇರುವುದಿಲ್ಲ. ಇವರು ಸರ್ವಕಾಲದಲ್ಲಿಯೂ ಪರಿಪೂರ್ಣರಾಗಿರುವರು ॥೬೪॥ ಇದರಂತೆ ಸಮುದ್ರಕ್ಕೂ ಯೋಗಿಗಳಿಗೂ ತುಲನೆಯನ್ನು ಮಾಡಲು ಯೋಗಿಗಳವರ ಯೋಗ್ಯತೆಯು ಸಮುದ್ರಕ್ಕಿಂತಲೂ ವಿಶೇಷವಾಗಿ ಕಂಡು ಬಂದಿತು. ಅದನ್ನೀಗ ಹೇಳುವೆನು, ಸರಿಯಾಗಿ ಕೇಳು ॥೬೫॥ ಸಮುದ್ರದ ಜಲವು ತೆರೆಗಳ ಕೆಳಗೆ ಅತಿಶಯವಾಗಿ ಚಂಚಲವಾಗಿರುವುದು. ಆದರೆ ಯೋಗಿಯು ಒಳಗೂ ಸಹ ಅಗದೀ ಶಾಂತನಾಗಿರುವನು. ಆತನ ಮನದಲ್ಲಿ ಯಾವ ಪ್ರಕಾರದ ತಳಮಳವು ಇರುವುದಿಲ್ಲ ॥೬೬॥ ಸಮುದ್ರವು ಮೇಲಿಂದ ಮೇಲೆ ಕ್ಷುಬ್ಧಗೊಳ್ಳುವುದು. ಆದರೆ ಯೋಗಿಗೆ ಎಂದೆಂದಿಗೂ ಕ್ಷೋಭವು ಬರುವುದಿಲ್ಲ. ಯೋಗಿಗಳ ಮನವು ಯಾವುದರಿಂದಲೂ ಉಕ್ಕೇರುವುದಿಲ್ಲ. ಅವರು ಯೋಗಬಲದಿಂದ ಯಾವಾಗಲೂ ಸಾವಧರಾಗಿರುವರು ॥೬೭॥ ಸಮುದ್ರಕ್ಕೆ ಹುಣ್ಣಿಮೆ ಅಮವಾಸ್ಯೆ ಇತ್ಯಾದಿ ಪರ್ವಕಾಲಗಳಲ್ಲಿ ಪೂರ್ಣ ಭರತಿ ಬರುವುದು. ಆದರೆ ಯೋಗಿಯು ಆತ್ಮಾನಂದದಿಂದ ಯಾವಾಗಲೂ ಪರಿಪೂರ್ಣನಾಗಿರುವನು. ಸಮುದ್ರಕ್ಕೆ ಚಂದ್ರನಿಂದ ತೆರೆಗಳಿಗೆ ಇಳಿಕೆಯಾಗುವುದು. ಆದರೆ ಯೋಗಿಯು ಆತ್ಮಬೋಧೆಯಿಂದ ಸದೈವ ಸಮನಾಗಿರುವನು ॥೬೮॥

ಸಮುದ್ರಸರ್ವಾಪ್ರತಿ ಕ್ಷಾರ । ತೈಸಾ ನವ್ಹೇ ಯೋಗೀಶ್ವರ । ತೋ ಸರ್ವಾ ಜೀವಾಂಸೀ ಮಧುರ । ಬೋಧು ಸಾಚಾರ ಪೈ ತ್ಯಾಚಾ ।೫೯॥ ಜಯಾಸೀ ಬೋಧು ನಾಹೀ ಪುರತಾ । ಅನುಭವ ನೇಣೇ ನಿಜಾತ್ಮತಾ । ತ್ಯಾಸೀ ಕೈಚೀ ಮಧುರತಾ ।ಜೇವೀ ಅಪಕ್ವತಾ ಸೇಂದೇಚೀ ।೬೦॥ ಸಾಗರೀ ವರುಷಲ್ಯಾ ಘನ । ವೃಥಾ ಜಾಯೇ ತೇ ಜೀವನ । ತೈಸಾ ಯೋಗಿಯಾ ನವ್ಹೇ ಜಾಣ । ಸೇವಿಲ್ಯಾ ವ್ಯರ್ಥಪಣ ಯೇವೋ ನೇದೀ ।೬೧॥ ಅಲ್ಪ ಹೀ ಯೋಗಿಯಾ ಹೋಯೇ ಘೇತಾ । ತೇಣೇ ನಿವಾರೀ ಭವವ್ಯಥಾ । ಯಾಲಾಗೀ ಮುಮುಕ್ಷಿ ಸರ್ವಥಾ । ಭಗವದ್ಭಕ್ತಾ ಭಜಾವೇ ।೬೨॥

ಸಮೃದ್ಧಕಾಮೋ ಹೀನೋ ವಾ ನಾರಾಯಣಪರೋ ಮುನಿಃ ।
ನೋತ್ಸರ್ಪೇತ ನ ಶುಷ್ಯೇತ ಸರಿದ್ಭಿರಿವ ಸಾಗರಃ ।೬॥

ಅರ್ಥ :- ಸಮುದ್ರವು ವರ್ಷಾ ಋತುವಿನಲ್ಲಿ ನದಿಗಳ ಪೂರದಿಂದ ಬೆಳೆಯುವುದಿಲ್ಲ ಮತ್ತು ಗ್ರೀಷ್ಮ ಋತುವಿನಲ್ಲಿ ಕಡಿಮೆಯಾಗುವುದಿಲ್ಲ. ಅದರಂತೆ ಹರಿಭಕ್ತ ಪರಾಯಣ ಸಾಧಕರು ಪ್ರಾಪಂಚಿಕ ಪದಾರ್ಥಗಳ ಪ್ರಾಪ್ತಿಯಿಂದ ಪ್ರಫುಲ್ಲಿತನಾಗಬಾರದು ಮತ್ತು ಆ ಪದಾರ್ಥಗಳು ಸಿಗದೇ ಇರಲು ದುಃಖಿಯಾಗಬಾರದು.

ವರ್ಷಾಕಾಳೀ ಸರಿತಾ ಸಕಳ । ಘೇಊನಿ ಆಲ್ಯಾ ಅಮೂಪ ಜಳ । ತೇಣೇ ಹರುಷೇಜೇನಾ ಪ್ರಬಳ । ನ ಚಢೇ ಜಳ ಜಳಾಬ್ಧೀ ।೬೩॥ ಗ್ರೀಷ್ಮ ಕಾಳಾಚಿಯೇ ಪ್ರಾಪ್ತೀ । ಸರಿತಾಂಚೇ ಯಾವೇ ರಾಹತೀ । ತೇ ಮಾನೂನಿಯಾ ಖಂತೀ । ಅಪಾಂಪತೀ ವೋಹಟೇನಾ ।೬೪॥ ತೈಸೇಚಿ ಯೋಗಿಯಾಂಚ್ಯಾ ಠಾಯೀ । ನಾನಾ ಸಮೃದ್ಧಿ ಆಲಿಯಾ ಪಾಹೀ । ಅಹಂತಾ ನ ಧರೀ ದೇಹೀ । ಗರ್ವು ಕಾಂಹೀ ಚಢೇನಾ ।೬೫॥ ಸಮೃದ್ಧಿ ವೇಂಚಲಿಯಾ ಪಾಠೀ । ಖಂತೀ ನಾಹೀ ಯೋಗಿಯಾ ಪೋಟೀ । ತೋ ನಾರಾಯಣಪರ ದೃಷ್ಟೀ । ಸುಖಸಂತುಷ್ಟೀ ವರ್ತತು ।೬೬॥ ಸಂಪತ್ತೀಮಾಜೀ ಅಸತಾ । ಮೀ ಸಂಪನ್ನು ಹೇ ನಾಠವೇ ಚಿತ್ತಾ । ದರಿದ್ರ ಆಲಿಯಾ ದರಿದ್ರತಾ । ನೇಣೇ ಸರ್ವಥಾ ಯೋಗಿಯಾ ।೬೭॥ ದರಿದ್ರ ಆಣಿ ಸಂಪನ್ನತಾ । ದೋನ್ಹೀ ಸಮಾನ ತ್ಯಾಚಿಯಾ ಚಿತ್ತಾ । ನಾಹೀ ಪ್ರಪಂಚಾಚೀ ಆಸಕ್ತತಾ । ನಾರಾಯಣಪರ ತತ್ತ್ವತಾ ನಿಜಬೋಧೇ ।೬೮॥ ಯಾ ಪ್ರಪಂಚಾಚಾ ಕಠಿಣ ಲಾಗೂ । ನಾಶಾಸೀ ಮೂಳ ಸ್ತ್ರೀ ಸಂಗು । ಯೇಚಿವಿಷಯೀ ಗುರು ಪತಂಗು । ಕೇಲಾ ಚಾಂಗು ಪರಿಯೇಸಿ ।೬೯॥

ದೃಷ್ಟ್ವಾ ಸ್ತ್ರಿಯಂ ದೇವಮಾಯಾಂ ತದ್ಭಾವೈರಜಿತೇಂದ್ರಿಯಃ ।
ಪ್ರಲೋಭಿತಃ ಪತತ್ಯಂಧೇ ತಮಸ್ಯಗ್ನೌ ಪತಂಗವತ್ ।೭॥

ಅರ್ಥ :- ಇಂದ್ರಿಯಗಳನ್ನು ಅಂಕಿತದಲ್ಲಿಟ್ಟುಕೊಳ್ಳದ ವ್ಯಕ್ತಿಯು ಹರಿಮಾಯಾ ಶಕ್ತಿಯಿಂದ ನಿರ್ಮಿತವಾದ ಸ್ತ್ರೀ ರೂಪವನ್ನು ನೋಡಿದಾಕ್ಷಣವೇ ಆಕರ್ಷಿತನಾಗುತ್ತಾನೆ. ಸ್ತ್ರೀಯು ಪ್ರೀತಿಗೆ ಸಿಲುಕಿಸಿ ಮಾತನಾಡಿದಾಗ ಕಾಮಾತುರನಾಗುವನು. ನಕ್ಕಾಗ ಮನಸ್ಸು ಕೂಡಲೇ ಮಾರು ಹೋಗಿ ಜ್ವಲಿಸುವ ಕಿಚ್ಚಿನಿಂದ ಮೋಹಿತವಾದ ಪತಂಗವು ಉರಿಯಲ್ಲಿ ಬೀಳುವಂತೆ ಆ ವ್ಯಕ್ತಿಯು ಪ್ರಾಪಂಚಿಕ ಕಾಮಜ್ವಾಲೆಯಲ್ಲಿ ಬೀಳುತ್ತಾನೆ.

ಸಮುದ್ರವು ಎಲ್ಲರಿಗೂ ಉಪ್ಪಾಗಿರುವುದು. ಆದರೆ ಯೋಗಿಯು ಹಾಗಿರುವುದಿಲ್ಲ. ಆತನು ಸರ್ವ ಜೀವಿಗಳಿಗೆ ಮಧುರನಾಗಿರುವನು. ಮತ್ತು ಆತನ ಜ್ಞಾನವು ಸತ್ಯವಾಗಿರುವುದು ।೫೯॥ ಯಾರಿಗೆ ಪೂರ್ಣ ಬೋಧೆಯಾಗಿರುವುದಿಲ್ಲವೋ, ಮತ್ತು ಯಾರು ಅನುಭವದಿಂದ ಆತ್ಮಸ್ವರೂಪವನ್ನು ಅರಿಯಲಾರರೋ, ಅವರಿಗೆ ಅಪಕ್ವ ಗುಡುಮಿಕಾಯಿಯಂತೆ ಮಧುರತೆಯು ಎಲ್ಲಿಂದ ಬರಬೇಕು? ।೬೦॥ ಸಮುದ್ರದ ಮೇಲೆ ಮೇಘವು ಮಳೆಗರೆಯಲು ಆ ಜಲವು ವ್ಯರ್ಥವಾಗುವುದು. ಹಾಗೇ ಯೋಗಿಗಳಾಗಿರುವುದಿಲ್ಲ. ಅವರ ಸೇವೆಯನ್ನು ಮಾಡಲು ಅವರು ಅದನ್ನು ಸರ್ವಥಾ ವ್ಯರ್ಥಗೊಳಿಸುವುದಿಲ್ಲ ।೬೧॥ ಯೋಗಿಗಳವರ ಸೇವೆಯನ್ನು ಯತ್‌ಕಿಂಚಿತವಾಗಿ ಮಾಡಿದರೂ ಅಷ್ಟೇ ಗ್ರಹಣದಿಂದ ಅವರು ಭವವ್ಯಥೆಯನ್ನು ನಿವಾರಿಸುವರು. ಆದ್ದರಿಂದ ಮುಮುಕ್ಷಗಳವರು ಭಗವದ್ಭಕ್ತರನ್ನು ಯಾವಾಗಲೂ ಭಜಿಸಬೇಕು ।೬೨॥

ಮಳೆಗಾಲದಲ್ಲಿ ನದಿಗಳು ಅಪರಂಪಾರ ಜಲದೊಂದಿಗೆ ಬಂದು ಕೂಡಿದರೂ ಸಮುದ್ರವು ಹರ್ಷದಿಂದ ಉಬ್ಬುವುದಿಲ್ಲ. ಅಥವಾ ಸಮುದ್ರದ ಜಲವು ಏರುವುದಿಲ್ಲ ।೬೩॥ ಗ್ರೀಷ್ಮ ಋತು ಬಂದಿತೆಂದರೆ ನದಿಗಳ ಪ್ರವಾಹಗಳು ನಿಲ್ಲುವುವು. ಈ ಚಿಂತೆಯಿಂದ ಸಮುದ್ರವು ಒಣಗುವುದಿಲ್ಲ ।೬೩॥ ಈ ಪ್ರಕಾರವಾಗಿ ಯೋಗಿಗಳವರತ್ತ ನಾನಾ ಪ್ರಕಾರಗಳ ಐಶ್ವರ್ಯಗಳು ಕೂಡಿಬಂದರೂ ಆತನು ಅದರ ಅಭಿಮಾನವನ್ನು ಸ್ವಲ್ಪಾದರೂ ಹಿಡಿಯುವುದಿಲ್ಲ. ಮತ್ತು ಯತ್‌ಕಿಂಚಿತ್‌ವಾಗಿ ಗರ್ವವನ್ನು ಧರಿಸುವುದಿಲ್ಲ ।೬೫॥ ಈ ಎಲ್ಲ ಐಶ್ವರ್ಯಗಳು ಇಲ್ಲದಾಗಲು ಆಗಲೂ ಅವರ ಮನದಲ್ಲಿ ಖೇದ ಉಂಟಾಗುವುದಿಲ್ಲ. ಅವರು ಯಾವಾಗಲೂ ನಾರಾಯಣಾತ್ಮಕ ದೃಷ್ಟಿಯಿಂದ ಸುಖಾನಂದದಲ್ಲಿ ವರ್ತಿಸುತ್ತಿರುವರು ।೬೬॥ ಯೋಗಿಯು ಶ್ರೀಮಂತನಾಗಿರಲು "ನಾನು ಶ್ರೀಮಂತನು" ಎಂಬ ಭಾವವು ಆತನ ಮನಸ್ಸನ್ನು ಮುಟ್ಟುವುದಿಲ್ಲ. ಅಥವಾ ದಾರಿದ್ರತೆಯು ಒದಗಿ ಬಂದರೂ ಯೋಗಿಗೆ ಅದು ಗೊತ್ತೇ ಇರುವುದಿಲ್ಲ ।೬೭॥ ದಾರಿದ್ರ್ಯ ಮತ್ತು ಶ್ರೀಮಂತಿಕೆ ಈ ಎರಡೂ ಅವಸ್ಥೆಗಳು ಈತನ ಮನಸ್ಸಿಗೆ ಒಂದೇಯಾಗಿ ಭಾವಿಸುವುವು. ಆತನ ಮನದಲ್ಲಿ ಪ್ರಪಂಚದ ಆಸಕ್ತಿ ಇರುವುದಿಲ್ಲ. ಆತನು ಆತ್ಮಬೋಧೆಯಿಂದ ನಿಜವಾಗಿಯೂ ನಾರಾಯಣಸ್ವರೂಪನಾಗಿರುವನು ।೬೮॥ ಈ ಪ್ರಪಂಚದ ಪಾಶವು ಅತ್ಯಂತ ಕಠಿಣವಾಗಿರುವುದು. ಅದರಲ್ಲಿ ಸ್ತ್ರೀಸಂಗವು ನಾಶಕ್ಕೆ ಮೂಲಕಾರಣವಾಗಿದೆ. ಈ ವಿಷಯಕ್ಕಾಗಿ ನಾನು ಪತಂಗವನ್ನು ಉತ್ತಮ ಗುರುವನ್ನಾಗಿ ಮಾಡಿಕೊಂಡೆನು ಅದನ್ನು ಈಗ ಕೇಳು ।೬೯॥

ದೈವೀ ಗುಣಮಯೀ ಜೇ ಮಾಯಾ । ತಿಚೇ ಸಗುಣಸ್ವರೂಪ ತ್ಯಾಸ್ತ್ರೀಯಾ । ತೇಥ ಪ್ರಲೋಭ ಉಪಜಲಾ ಪ್ರಾಣಿಯಾ । ಭೋಗ ಭೋಗಾವಯಾ ಸ್ತ್ರೀಸುಖೇ ॥೭೦॥ ಹಾವಭಾವವಿಲಾಸಗುಣೇ । ವ್ಯಂಕಟ ಕಟಾಕ್ಷಾಂಚ್ಯಾ ಬಾಣೇ । ಪುರುಷಧೈರ್ಯ ಕವಚ ಭೇದೋನೀ । ಹೃದಯಭುವನೀ ಸಂಚರತೀ ॥೭೧॥ ದಾರುಣ ಕಟಾಕ್ಷಾಂಚ್ಯಾ ಘಾಯೀ । ಪುರುಷಧೈರ್ಯ ಪಾಡಿಲೇ ಠಾಯೀ । ಯೋಷಿತಾಬಂದೀ ಪಾಡಿಲೇ ನಾಹೀ । ಭೋಗ-ಕಾರಾಗೃಹೀ ಘಾತಲೇ ॥೭೨॥ ಸ್ತ್ರೀಭೋಗಾಚೇ ಜೇ ಸುಖ । ತೇ ಜಾಣ ಪಾ ಕೇವಳ ದುಃಖ । ತೋಂಡೀ ಘಾಲಿತಾ ಮಧುರ ವಿಖ । ಪರಿಪಾಕೀ ದೇಖ ಪ್ರಾಣಾಂತು ॥೭೩॥ ದೀಪಾಚಿಯಾ ಅಂಗಸಂಗಾ । ಕೋಣ ಸುಖ ಆಹೇ ಪತಂಗಾ । ಬಳೇ ಆಲಿಂಗೂ ಜಾತಾ ಪೈ ಗಾ । ಮರಣಮಾರ್ಗಾ ಲಾಗಲೇ ॥೭೪॥ ಪುಡಿಲಾ ಪತಂಗ ನಿಮಾಲಾ ದೇಖತೀ । ತರೀ ಮಾಗಿಲ್ಯಾ ದೀಪೀ ಅತಿ ಆಸಕ್ತೀ । ತೇವೀ ಸ್ತ್ರೀಕಾಮೇ ಏಕ ಠಕತೀ । ಏಕಾ ಅತಿಪ್ರೀತೀ ಪತಂಗನ್ಯಾಯೇ ॥೭೫॥ ತೇವೀ ವಿವೇಕಹೀನ ಮೂರ್ಖಾ । ಲೋಲುಪ್ಯ ಉಪಜೇ ಸ್ತ್ರೀಸುಖಾ । ತತ್ಸಂಸರ್ಗೇ ಮರಣ ಲೋಕಾ । ನ ಚುಕೇ ದೇಖಾ ಸರ್ವಥಾ ॥೭೬॥ದೀಪ - ರೂಪಾಚೇನಿ ಕೋಡೇ । ಪತಂಗಜಳೋನಿ ಸ್ನೇಹೀ ಬುಡೇ । ತೇವೀ ಸ್ತ್ರೀಸಂಗೇ ಅವಶ್ಯ ಘಡೇ । ಪತನ ರೋಕಡೇ ಅಂಧತಮೀ ॥೭೭॥

ಯೋಷಿದ್ಧಿರಣ್ಯಾಭರಣಾಂಬರಾದಿದ್ರವ್ಯೇಷು ಮಾಯಾರಚಿತೇಷು ಮೂಢಃ ।
ಪ್ರಲೋಭಿತಾತ್ಮಾ ಹ್ಯುಪಭೋಗಬುದ್ಧ್ಯಾ ಪತಂಗವನ್ನಶ್ಯತಿ ನಷ್ಟದೃಷ್ಟಿಃ ॥೮॥

ಅರ್ಥ :- ವಿವೇಕ ಹೀನ ಮೂರ್ಖನು ಸ್ವರ್ಣಾಭರಣಗಳನ್ನು ತೊಟ್ಟು ಮನೋಹರವಾದ ವಸ್ತ್ರಗಳ ಹಾಗೂ ಪರಿಮಳ ಪ್ರಸಾಧನಗಳಿಂದ ಅಲಂಕೃತಳಾದ ಕಾಮುಕ ಸ್ತ್ರೀಯನ್ನು ಕಂಡಾಕ್ಷಣವೇ ಭಾವೋನ್ಮಾದಕ್ಕೆ ಒಳಗಾಗುತ್ತಾನೆ. ಇಂದ್ರಿಯ ತೃಪ್ತಿಗೆ ಹಾತೊರೆಯುವ ಈ ಮೂಢನು ಬುದ್ಧಿಯನ್ನುಕಳೆದುಕೊಂಡು ಬೆಂಕಿಗೆ ಬೀಳುವ ಪತಂಗದಂತೆ ಹಾಳಾಗುತ್ತಾನೆ.

ಪಹಾ ಪಾ ಕಾಂತಾ ಆಣಿ ಸೋನೇ । ವಸ್ತ್ರೇ ಆಭರಣೇ ರತ್ನೇ । ಮಾಯೇನೇ ರಚಿಲೀ ಪಡಣೇ । ಪತನಾಕಾರಣೇ ಜನಾಂಚ್ಯಾ ॥೭೮॥ ಏಕಲೀ ಯೋಷಿತಾ ನರಕೀ ಘಾಲೀ । ಸುವರ್ಣ ಲೋಭೇ ನರಕು ಬಳೀ । ರತ್ನೇ ಭೂಷಣೇ ತತ್ಕಾಳೀ । ನರಕ ಮೇಳೀ ಘಾಲಿತೀ ॥೭೯॥ ತೇ ಅವಘೇಚಿ ಅನರ್ಥಕಾರೀ । ಮೀನಲೇ ಯೋಷಿತಾಶರೀರೀ । ತೇ ದೇಖತಾಂಚಿ ಪುರಂಧ್ರೀ । ಜನಾಂಸೀ ಉರೀ ಮಗ ಕೈಚೇನಿ ॥೮೦॥ ಅಂಗೀ ವೇತಾಳ ಸಂಚಾರಾ । ತ್ಯಾವರೀ ಪಾಜಿಲಿಯಾ ಮದಿರಾ ।ಮಗ ಡುಲ್ಲತ ನಾಚತಾ ತ್ಯಾ ನರಾ । ವೋಢಾವರಾ ಪೈ ನಾಹೀ ॥೮೧॥ ಕಾ ಭಾಂಡಾಚೇ ತೋಂಡೀ ಭಂಡಪುರಾಣ । ತ್ಯಾವರೀ ಆಲಾ ಶಿಮಗ್ಯಾಚಾ ಸಣ । ಮಗ ಕರಿತಾ ವಾಗ್ವಿಟಂಬನ । ಆವರೀ ಕೋಣ ತಯಾಸೀ ॥೮೨॥

ದೈವೀ ಗುಣಮಯವಾಗಿರುವ ಯಾವ ಈ ಮಾಯೆಯ ಸಗುಣರೂಪವೆಂದರೆ ಸ್ತ್ರೀಯರಾಗಿರುವರು. ಅಲ್ಲಿ ಸ್ತ್ರೀಸುಖದ ಭೋಗವನ್ನು ಭೋಗಿಸುವ ಇಚ್ಛೆಯು ಪ್ರಾಣಿಗಳವರಲ್ಲಿ ಬಲಿಷ್ಠವಾಗಿರುವುದು ॥೭೦॥ ಸ್ತ್ರೀಯರು ತಮ್ಮ ಹಾವಭಾವ ವಿಲಾಸಗಳಿಂದ, ಕುಡಿನೋಟಗಳಿಂದ, ನಯನಕಟಾಕ್ಷದಿಂದ ಪುರುಷರ ಧೈರ್ಯರೂಪವಾದ ಕವಚವನ್ನು ಭೇದಿಸಿ ಅವರ ಹೃದಯ ಮಂದಿರದಲ್ಲಿ ಪ್ರವೇಶಿಸುವರು ॥೭೧॥ ಈ ಭಯಂಕರವಾದ ನಯನಕಟಾಕ್ಷದ ಹೊಡೆತದಿಂದ ಪುರುಷರ ಧೈರ್ಯವು ನೆಲಕ್ಕೆ ಉರುಳಿಸಲ್ಪಟ್ಟು ಸ್ತ್ರೀರೂಪ ಪಾಶದಲ್ಲಿ ಸಿಲುಕಿ ಭೋಗರೂಪ ಕಾರಾಗೃಹದಲ್ಲಿ ಒಳಗಾಗುವರು ॥೭೨॥ ಸ್ತ್ರೀ ಭೋಗದ ಸುಖವು ವಿಚಾರಿಸಿ ನೋಡಿದರೆ ನಿಜವಾಗಿಯೂ ಕೇವಲ ದುಃಖವಾಗಿರುವುದು. ಈವಿಷಯ ರೂಪವಾದ ವಿಷವನ್ನು ಮುಖದಲ್ಲಿ ಹಾಕಲು ತಕ್ಷಣ ಮಧುರವಾಗಿ ತೋರುವುದು. ತಿಂದ ಮೇಲೆ ಪ್ರಾಣವನ್ನು ತೆಗೆದುಕೊಳ್ಳುವುದು ॥೭೩॥ ದೀಪವನ್ನು ಆಲಂಗಿಸಲು ಹಾತೊರೆಯುವ ಪತಂಗಕ್ಕೆ ಯಾವ ಸುಖವನ್ನು ಎಲ್ಲಿಂದ ತರಬೇಕು? ಅದು ದೀಪಕ್ಕೆ ಆಲಿಂಗಿಸುವುದೊಂದೇ ತಡ ಕೂಡಲೇ ಮೃತ್ಯು ಪಥಕ್ಕೆ ಸೇರುವುದು ॥೭೪॥ ತನಗಿಂತ ಮುಂಚಿತವಾಗಿ ಸತ್ತ ಪತಂಗವನ್ನು ಕಣ್ಣಾರೆ ಕಂಡು ಮುಂದಿನ ಪತಂಗವು ದೀಪಕ್ಕೆ ಅತಿಯಾಗಿ ಪ್ರೀತಿಸುವುದು. ಅದರಂತೆ ಸ್ತ್ರೀಸಂಗದಿಂದ ಮೋಸಹೋದವರನ್ನು ಕಣ್ಣಾರೆಕಂಡರೂ ಇನ್ನೊಬ್ಬನು ಈ ಪತಂಗನ್ಯಾಯದಂತೆ ಸ್ತ್ರೀಯರಲ್ಲಿ ಆಸಕ್ತಿ ಇಡುವನು ॥೭೫॥ ಅದರಂತೆ ಅವಿವೇಕಿಗಳಾದ ಮೂರ್ಖರು ಸ್ತ್ರೀ ಸುಖಕ್ಕೆ ಅಂಟಿಕೊಳ್ಳುವರು. ಆದರೆ ಈ ಸ್ತ್ರೀಸಂಗದಿಂದ ಇವರಿಗೆ ಮರಣವು ತಪ್ಪುವುದಿಲ್ಲ ॥೭೬॥ ದೀಪದ ರೂಪಕ್ಕೆ ಭುಲಾಯಿಸಿ ಪತಂಗವು ಸುಟ್ಟು ಎಣ್ಣೆಯಲ್ಲಿ ಮುಳುಗುವುದು. ಅದರಂತೆ ಸ್ತ್ರೀಯರ ಸಂಗತಿಯಿಂದ ಇವರು ನಿಶ್ಚರ್ಯಪೂರ್ವಕವಾಗಿ "ಅಂಧತಮ" ಎಂಬ ನರಕದಲ್ಲಿ ಬೀಳುವರು ॥೭೭॥

ಸ್ತ್ರೀಯರು, ಬಂಗಾರ, ವಸ್ತ್ರಗಳು, ಭೂಷಣೆಗಳು, ರತ್ನಗಳು ಈ ಎಲ್ಲವೂ ಸರ್ವ ಜನರ ಪತನಕ್ಕಾಗಿ ಮಾಯೆಯು ನಿರ್ಮಿಸಿರುವ ಪಾಶಗಳಾಗಿರುವುವು ॥೭೮॥ ಒಬ್ಬ ಸ್ತ್ರೀಯಳು ಮೊದಲೇ ನರಕಕ್ಕೆ ದಬ್ಬುವಳು. ಸುವರ್ಣದ ಲೋಭವು ಕೂಡ ಮಹಾ ನರಕವಾಗಿದೆ. ರತ್ನಾಲಂಕಾರಗಳು ತತ್ಕಾಲದಲ್ಲಿ ನರಕಕುಂಡಗಳಲ್ಲಿ ಒಯ್ದು ಬೀಸಾಡುವುವು ॥೭೯॥ ಈ ಎಲ್ಲ ಅನರ್ಥಗಳು ಸ್ತ್ರೀ ಶರೀರದಲ್ಲಿ ಒಂದುಗೂಡಿರುವುವು. ಹೀಗಿರುವಾಗ ಸ್ತ್ರೀಯು ದೃಷ್ಟಿಗೆ ಬೀಳುತ್ತಲೇ ಜನರಲ್ಲಿ ವಿಧಿನಿಷೇಧಗಳು ಹೇಗೆ ಉಳಿಯುವುವು? ॥೮೦॥ ಮೊದಲೇ ಶರೀರದಲ್ಲಿ ಪಿಶಾಚಿಯು ಸಂಚಾರಗೊಳ್ಳುತ್ತಿರಲು, ಅದರಲ್ಲಿ ಪುನಃ ಮಾದಕ ದ್ರವ್ಯಗಳನ್ನು ಕೂಡಿಸಿರುವ ಪೇಯವನ್ನು ಪ್ರಾಶನ ಮಾಡಿದ ಮನುಷ್ಯನ ತೂಗಾಟಕ್ಕೆ, ಕುಣಿತಕ್ಕೆ ಅಂದಾಜು ಹತ್ತುವುದಿಲ್ಲ ॥೮೧॥ ಅಥವಾ ಒಬ್ಬ ಭಂಡಪುರಾಣವನ್ನು ಬೊಬ್ಬೆ ಇಡುವವನಿಗೆ ಹೋಳಿ ಹುಣ್ಣಿಮೆಯ ಕಾಮದ ಹಬ್ಬವು ಬಂದಿತೆಂದರೆ ಅವನ ಹೇಳಿಕೆಗಳು ನಾಚಿಕೆ ಬಿಡುವುವು. ಆಗ ಅವನಿಗೆ ಯಾರು ಒಡಿಯಬೇಕು? ॥೮೨॥

ಹೋ ಕಾ ಮೋಹಕ ಮದಿರಾ ಸರ್ವಾಸೀ । ತ್ಯಾತು ಘಾತಲೇ ಉನ್ಮಾದದ್ರವ್ಯಾಸೀ । ಸೇವನ ಕರಿತಾ ತ್ಯಾ ರಸಾಸೀ । ಪಾರು ಭ್ರಮಾಸೀ ಪೈ ನಾಹೀ ।।೮೩।। ತೈಸೇ ಸೋಲೀವ ಮೋಹಾಚೇ ರೂಪ । ತೇ ಜಾಣ ಯೋಷಿತಾಸ್ವರೂಪ । ತ್ಯಾಹೀವರೀ ಖಟಾಟೋಪ । ವಸ್ತ್ರೇ ಪಡಪ ಭೂಷಣೇ ।।೮೪।। ಕಾಜಳ ಕುಂಕು ಅಲಂಕಾರ । ಲೇಊನಿ ವಿಚಿತ್ರ ಪಾಟಾಂಬರ । ವನಿತಾಶೋಭತ ಸುಂದರ । ಮಾಯೇಚೇ ವಿಕಾರ ವಿಕಾರಲೇ ।।೮೫।। ಮಾಯಾ ಅಜಿತೇಂದ್ರಿಯಾ ಬಾಧೀ । ದಾಸಾಸಮ್ಮುಖ ನವ್ಹೇ ತ್ರಿಶುದ್ಧೀ । ಜ್ಯಾಚೀ ಅತಿಪ್ರೀತೀ ಗೋವಿಂದೀ । ತ್ಯಾಸೀ ಕೃಪಾನಿಧಿ ರಕ್ಷಿತಾ ।।೮೬।। ಕೈಸಾ ರೀತೀ ರಕ್ಷೀ ಭಕ್ತ । ಮೂಳೀ ಆತ್ಮಾ ಆತ್ಮೀ ನಾಹೀ ತೇಥ । ಸ್ತ್ರೀರೂಪೇ ಭಾಸೇ ಭಗವಂತ । ಭಕ್ತ ರಕ್ಷಿತ ನಿಜಬೋಧೇ ।।೮೭।। ವನಿತಾ ದೇಖೋನಿ ಗೋಮಟೀ । ವಿವೇಕಾಚೀ ಹೋಯ ನಷ್ಟ ದೃಷ್ಟೀ । ಪ್ರಲೋಭೇ ಉಪಭೋಗಾ ದೇತಿಮಿಠೀ । ತೇ ದುಃಖಕೋಟೀ ಭೋಗಿತೀ ।।೮೮।। ದೇಖೋನಿ ದೀಪರೂಪೀ ಝಗಮಗೀ । ಉಪಭೋಗಬುದ್ಧಿ ಪತಂಗಿ । ಉಡೀ ಘಾಲಿತಾ ವೇಗೀ । ಜಳೋನಿ ಆಗೀ ನಾಸತೀ ।೮೯।। ಏವಂ ಯೋಷಿತಾರೂಪೇ ಮಾಯಾ । ಉಪಭೋಗಬುದ್ಧೀ ಭುಲವೀ ಪ್ರಾಣಿಯಾ । ಜೇ ವಿಮುಖ ಹರೀಚ್ಯಾ ಪಾಯಾ । ತ್ಯಾಂಸೀಚ ಮಾಯಾ ಭುಲವಿತು ।।೯೦।। ಮಧುಕರೀಚೇನಿ ವಿಂದಾಣೇ । "ಮಧುಕರ"ಮ್ಯಾ ಗುರು ಕೇಲಾ ಜಾಣೇ । ದುಃಖ ನೇದಿತಾ ಕಾರ್ಯ ಸಾಧಣೇ । ತಿಹೀ ಲಕ್ಷಣೇ ಪರಿಸ ಪಾ ।।೯೧।।

ಸ್ತೋಕಂ ಸ್ತೋಕಂ ಗ್ರಸೇದ್ ಗ್ರಾಸಂ ದೇಹೋ ವರ್ತೇತ ಯಾವತಾ ।
ಗೃಹಾನ ಹಿಂಸನ್ನಾತಿಷ್ಠೇದ್ ವೃತ್ತಿಂ ಮಾಧುಕರೀಂ ಮುನಿಃ ।೯।।

ಅರ್ಥ :- ದೇಹದ ಪೋಷಣೆಗೆ ಅಗತ್ಯವಾದಷ್ಟು ಆಹಾರವನ್ನು ಮಾತ್ರ ಸಾಧುಪುರುಷನು ಸ್ವೀಕರಿಸಬೇಕು. ಅವನು ಮನೆ ಮನೆಗೆ ಹೋಗಿ ಪ್ರತಿ ಗೃಹದಿಂದ ಬಹು ಅಲ್ಪ ಆಹಾರವನ್ನು ಬೇಡಿ ಪಡೆದು ಭ್ರಮರದಂತೆ ಅಭ್ಯಾಸ ಮಾಡಬೇಕು.

ಭ್ರಮರು ರಿಘೋನಿ ಪುಷ್ಪಾಮಧೀ । ಪೂಲ ತರೀ ಕುಚುಂಬೋ ನೇದೀ । ಆಪುಲೀ ಕರೀ ಅರ್ಥಸಿದ್ಧೀ । ಚೋಖಟ ಬುದ್ಧಿ ಭ್ರಮರಾಚೀ ।।೯೨।। ತೈಸೀಚ ಯೋಗಿಯಾಚೀ ಪರೀ । ಗ್ರಾಸಮಾತ್ರ ಘರೋಘರೀ । ಭಿಕ್ಷಾ ಕರೂನಿ ಉದರ ಭರೀ । ಪೀಡಾ ನ ಕರೀ ಗೃಹಸ್ಥಾ ।।೯೩।। ಪ್ರಾಣಧಾರಣೇಪುರತೇ । ಯೋಗಿ ಮಾಗೇ ಭಿಕ್ಷೇತೇ । ಸಮರ್ಥ ದುರ್ಬಳ ವಿಭಾಗಾತೇ । ನ ಮನೂನಿ ಚಿತ್ತೇ ಸರ್ವಥಾ ।।೯೪।। ರಿಘೋನಿ ಕಮಳಿಣಿಪಾಶೀ । ಭ್ರಮರು ಲೋಭಲಾ ಆಮೋದಾಸೀ । ಪದ್ಮ ಸಂಕೋಚೇ ಅಸ್ತಾಸೀ । ತೇಚಿ ಭ್ರಮರಾಸೀ ಬಂಧನ ।।೯೫।।

ಮದ್ಯವು ಮೊದಲೇ ಇದು ಎಲ್ಲರನ್ನೂ ಭ್ರಮಿಷ್ಠರನ್ನಾಗಿ ಮಾಡುವುದು. ಆ ಮದ್ಯದಲ್ಲಿ ಪುನಃ ಮಾದಕ ದ್ರವ್ಯಗಳನ್ನು ಕೂಡಿಸಲು, ಅದನ್ನು ಕುಡಿದವನ ಭ್ರಮಕ್ಕೆ ಯಾವ ಸೀಮೆಯೂ ಉಳಿಯುವುದಿಲ್ಲ ।೮೩।। ಅದರಂತೆ ಶುದ್ಧವಾದ ಮೋಹದ ರೂಪವು ಆ ಯಾವ ಸ್ತ್ರೀರೂಪವಾಗಿರುವುದು. ಅದರಲ್ಲಿ ಪುನಃ ವಸ್ತ್ರಗಳ ಹೊದಿಕೆಗಳ ವೈಭವ ಕೂಡಲು ।೮೪।। ಕಾಡಿಗೆ, ಕುಂಕುಮ, ಅಲಂಕಾರ ಮತ್ತು ವಿವಿಧ ಬಣ್ಣಗಳ ಭಾರೀ ವಸ್ತ್ರಗಳಿಂದ ಸ್ತ್ರೀಯು ಅತ್ಯಂತ ಸುಂದರಳಾಗಿ ಕಾಣುವಳು. ಆಕೆಯಲ್ಲಿ ಮಾಯೆಯ ವಿಕಾರವು ತುಂಬಿಕೊಂಡಿರುವುದು ।೮೫।। ಯಾರಲ್ಲಿ ಇಂದ್ರಿಯಗಳು ಸ್ವಾಧೀನವಾಗಿರುವುದಿಲ್ಲವೋ ಅವರಿಗೆ ಈ ಮಾಯೆಯು ಸಂಕಟಕ್ಕೆ ಗುರಿ ಮಾಡುವುದು. ಭಗವಂತನ ಭಕ್ತನಲ್ಲಿ ಈ ಮಾಯೆಯು ಕಾಲತ್ರಯಕ್ಕೂ ನಿಲ್ಲಲಾರದು. ಕಾರಣವೇನಂದರೆ ಆತನು ಗೋವಿಂದನಲ್ಲಿ ಅತ್ಯಂತ ಶ್ರದ್ಧೆಯನ್ನಿಟ್ಟ ಮೂಲಕ ಆ ಕೃಪಾನಿಧಿ ಗೋವಿಂದನು ತನ್ನ ಭಕ್ತರ ರಕ್ಷಣೆಯನ್ನು ಮಾಡುವನು ।೮೬।। ಭಕ್ತರ ರಕ್ಷಣೆ ಹೇಗಾಗುವುದೆಂಬುದನ್ನು ಹೇಳುವೆ, ಕೇಳು. ಪ್ರಥಮತಃ ಪುರುಷರಲ್ಲಿ ಮತ್ತು ಸ್ತ್ರೀಯರಲ್ಲಿ ಆತ್ಮವು ಭೇದವಾಗಿರುವುದಿಲ್ಲ. ಆದ್ದರಿಂದ ಭಗವಂತನು ಸ್ತ್ರೀ ರೂಪದಿಂದ ಭಕ್ತರಿಗೆ ತೋರುವನು. ಆತ್ಮಾನುಭವವನ್ನು ಕೊಟ್ಟು ರಕ್ಷಿಸುವನು ।೮೭।। ಸುಂದರ ಸ್ತ್ರೀಯಳನ್ನು ನೋಡಿ ವಿವೇಕ ದೃಷ್ಟಿಯನ್ನು ನಷ್ಟಮಾಡಿಕೊಂಡವರು ಮತ್ತು ಕಾಮಾಸಕ್ತಿಯಿಂದ ಉಪಭೋಗಕ್ಕೆ ಲುಬ್ಧರಾದವರು ಕೋಟ್ಯಾವಧಿ ಪ್ರಕಾರಗಳ ದುಃಖವನ್ನು ಭೋಗಿಸುವರು ।೮೮।। ದೀಪದಲ್ಲಿ ಝಗಮಗಿಸುವ ರೂಪವನ್ನು ಕಂಡು ಪತಂಗವು ಅದರ ಭೋಗದ ಲಾಲಸೆಗಾಗಿ ಅದರ ಮೇಲೆ ವೇಗದಿಂದ ಜಿಗಿಯುವುದು. ಅದರಿಂದ ಅಗ್ನಿಯಲ್ಲಿ ಸುಟ್ಟು ಭಸ್ಮವಾಗುವುದು ।೮೯।। ಇದೇ ಪ್ರಕಾರವಾಗಿ ಮಾಯೆಯು ಸ್ತ್ರೀ ರೂಪದಿಂದ ಉಪಭೋಗದ ಲಾಲಸೆಯಿಂದ ಜೀವಿಗಳಿಗೆ ಮಂತ್ರಮುಗ್ಧ ಮಾಡುವುದು. ಯಾರು ಹರಿಚರಣಗಳಿಂದ ವಿಮುಖರಾಗಿರುವರೋ, ಅವರಿಗೆ ಮಾತ್ರ ಮಾಯೆಯು ಮೋಸ ಮಾಡುತ್ತಿರುವಳು ।೯೦।। ಈಗ ನಾನು ಜೇನು ನೊಣಕ್ಕೆ ಮಧುಕರೀ ವೃತ್ತಿಗಾಗಿ ಗುರುವನ್ನಾಗಿ ಮಾಡಿಕೊಂಡಿರುವೆನು. ಇತರರಿಗೆ ಯಾವ ದುಃಖವನ್ನು ಕೊಡದೇ ತನ್ನ ಕಾರ್ಯವನ್ನು ಹೇಗೆ ಸಾಧಿಸಬೇಕೆಂಬುದು ಇರುವುದೋ, ಅದನ್ನು ಈಗ ಹೇಳುವೆ, ಕೇಳು ।೯೧।।

ಭ್ರಮರವು ಹೂವಿನಲ್ಲಿ ಹೊಕ್ಕುವುದು. ಆದರೆ ಆ ಹೂವನ್ನು ಹಿಚುಕಿ ಹರಿಯುವುದಿಲ್ಲ. ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವುದು. ಈ ಪ್ರಕಾರದ ಸಮಬುದ್ಧಿಯು ಭ್ರಮರದ್ದಾಗಿದೆ ।೯೨।। ಇದೇ ರೀತಿಯು ಯೋಗಿಗಳ ಪದ್ಧತಿಯಾಗಿರುವುದು. ಈತನು ಮನೆಯಿಂದ ಮನೆಗೆ ತಿರುಗಿ ಅಲ್ಪ ಭಿಕ್ಷೆಯನ್ನು ಬೇಡುತ್ತ ತನ್ನ ಉದರಭರಣವನ್ನು ಮಾಡುವನು. ಗೃಹಸ್ಥರಿಗೆ ತೊಂದರೆಯನ್ನು ಕೊಡುವುದಿಲ್ಲ ।೯೩।। ಶ್ರೀಮಂತರಿರಲಿ ಅಥವಾ ಬಡವರಾಗಿರಲಿ ಅವರಲ್ಲಿ ಭೇದಭಾವವನ್ನು ಮನದಲ್ಲಿ ಇಡದೇ ಯೋಗಿಯು ತನ್ನ ಪ್ರಾಣರಕ್ಷಣೆಯಾಗುವಷ್ಟೇ ಭಿಕ್ಷೆಯನ್ನು ಎಲ್ಲರಲ್ಲಿಯೂ ಬೇಡುವನು ।೯೪।। ಭ್ರಮರವು ಕಮಲದ ಹೂವಿನಲ್ಲಿ ಸೇರಿಕೊಂಡಾಗ ಅದರ ಸುಗಂಧದಲ್ಲಿ ತಲ್ಲೀನವಾಗುವುದು. ಸಾಯಂಕಾಲದಲ್ಲಿ ಕಮಲದ ಹೂವು ಮುದುಡಿಕೊಳ್ಳುವುದು, ಇದೇ ಅದಕ್ಕೆ ಬಂಧನವಾಗುವುದು ।೯೫।।

ಜೋ ಕೋರಡೇ ಕಾಷ್ಠ ಭೇದೋನಿ ಜಾಯೇ । ತೋ ಕಮಳದಳೀ ಗುಂತಲಾ ಠಾಯೇ । ಪ್ರಿಯಾ ದುಃಖವೇಲ ಮ್ಹಣೌನಿ ರಾಹೇ । ನಿರ್ಗಮು ನ ಪಾಹೇ ಆಪುಲಾ ॥೯೬॥ ತೈಸಾಚಿ ಜಾಣ ಸನ್ಯಾಸೀ । ಏಕೇ ಠಾಯೀ ರಾಹಿಲ್ಯಾ ಲೋಲುಪ್ಯೇಸೀ । ತೇಚಿ ಬಂಧನ ಹೋಯೇ ತ್ಯಾಸೀ । ವಿಷಯ ಲೋಭಾಸೀ ಗುಂತಲಾ ॥೯೭॥

ಅಣುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯಃ ಕುಶಲೋ ನರಃ ।
ಸರ್ವತಃ ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಃ ॥೧೦॥

ಅರ್ಥ :- ಭ್ರಮರವು ಹೂವುಗಳು ಸಣ್ಣದಾಗಿರಲಿ, ದೊಡ್ಡದಾಗಿರಲಿ ಎಲ್ಲದರಿಂದಲೂ ಸಾರವನ್ನು ಗ್ರಹಿಸುವುದು. ಆದರಂತೆ ವಿವೇಕಿ ಪುರುಷನು ಚಿಕ್ಕದೊಡ್ಡ ಶಾಸ್ತ್ರಗಳಿಂದ ಸಾರವನ್ನು ಗ್ರಹಿಸಬೇಕು.

ಅತಿಲಹಾನ ಸುಮನ ಜೇ ಕಾಂಹೀ । ಭ್ರಮರಾ ತೇಥ ಉಪೇಕ್ಷಾ ನಾಹೀ । ರಿಘೋನಿ ತ್ಯಾಚ್ಯಾಹೀ ಠಾಯೀ । ಆಮೋದ ಪಾಹೀ ಸೇವಿತು ॥೯೮॥ ಥೋರಾ ಥೋರಾ ಜ್ಯಾ ಕಮಳಿಣೀ । ವಿಕಾಸಲ್ಯಾ ಸಮರ್ಥಪಣೀ । ತ್ಯಾಂಚ್ಯಾಹೀ ಠಾಯೀ ರಿಘೋನೀ । ಸಾರಾಂಶ ಸೇವೂನಿ ಜಾತಸೇ ॥೯೯॥ ತೈಸಾಚಿ ಯೋಗಿಯಾ ನೇಟಕು । ಶಾಸ್ತ್ರದೃಷ್ಟೀ ಅತಿವಿವೇಕು । ನ ಕರೀ ಲಹಾನ ಥೋರ ತರ್ಕು । ಸಾರಗ್ರಾಹಕು ಹೋತಸೇ ॥೧೦೦॥ ವೇದಾಂತೀ ಬ್ರಹ್ಮಸ್ಥಿತೀ । ಬೋಲಿಲಾ ಮಾನೀ ಯಥಾನಿಗುತೀ । ಇತರ ಸ್ತೋತ್ರೀ ಬ್ರಹ್ಮವ್ಯುತ್ಪತ್ತೀ । ತೇಹೀ ಅತಿಪ್ರೀತೀ ಮಾನಿತು ॥೧೦೧॥ ಪಂಡಿತಾಂಚೇ ವಚನ ಮಾನೀ । ಸಾಧಾರಣು ಬೋಲಿಲಾ ಹಿತವಚನೀ । ತೇಹೀ ಅತಿ ಆದರೇ ಮಾನೂನೀ । ಸಾರ ನಿವಡೂನಿ ಘೇತಸೇ ॥೧೦೨॥ ಪ್ರೀತಿ ಹೋಆವೀ ಪತೀಚ್ಯಾ ಮಾನಸೀ । ಕುಳವಧೂ ಮಾನೀ ಸಾಸುಸಾಸರ್ಯಾಂಸೀ । ಮಾನ ದೇತಸೇ ತ್ಯಾಂಚ್ಯಾ ದಾಸಾಸೀ । ತೇಚಿ ಪ್ರೀತೀಸೀ ಲಕ್ಷೂನಿ ॥೧೦೩॥ ಘೇಸಳಲ್ಯಾ ಕ್ಷೀರನೀರಾಸೀ । ನಿವಡುನಿ ಘೇ ಇಜೇ ರಾಜಹಂಸೀ । ತೈಸಾ ವಿವೇಕಯುಕ್ತ ಮಾನಸೀ । ಸಾರಭಾಗಾಸೀ ಘೇತಸೇ ॥೧೦೪॥ ಸರ್ವಭೂತೀ ಭಗವದ್ಭಾವೋ । ಹಾ ಸಾರಭಾಗು ಮುಖ್ಯ ಪಹಾ ಹೋ । ಹೇ ನಿಷ್ಠಾ ಜ್ಯಾಸೀ ಮಹಾಬಾಹೋ । ತ್ಯಾಸೀ ಅಪಾವೋ ಸ್ವಪ್ನೀ ನಾಹೀ ॥೧೦೫॥ ಭರಲೇಲ್ಯಾ ಜಗಾ ಆಂತು । ಸಾರಭಾಗೀ ತೋ ಯೋಗಯುಕ್ತು । ಯದೂಸೀ ಅವಧೂತ ಸಾಂಗತು । ಗುರುವೃತ್ತಾಂತು ಲಕ್ಷಣೇ ॥೧೦೬॥ ಗುರುತ್ವೇ ಮ್ಯಾ ಮಾನಿಲೀ "ಮಾಶೀ"। ಐಕ ರಾಯಾ ದೋ ಪ್ರಕಾರೇಸೀ । ಏಕ ತೇ ಮೋಹಳಮಾಸೀ । ಗ್ರಾಮವಾಸೀ ದುಸರೀ ॥೧೦೭॥

ಸಾಯಂತನಂ ಶ್ವಸ್ತನಂ ವಾ ನ ಸಂಗೃಹ್ಣೀತ ಭಿಕ್ಷಿತಮ್ ।
ಪಾಣಿಪಾತ್ರೋದರಾಮತ್ರೋ ಮಕ್ಷಿಕೇವ ನ ಸಂಗ್ರಹೀ ॥೧೧॥

ಅರ್ಥ :- ಸನ್ಯಾಸಿಗಳವರು ಸಾಯಂಕಾಲಕ್ಕಾಗಿ ಭಿಕ್ಷೆಯ ಸಂಗ್ರಹ ಮಾಡಕೂಡದು. ಹಸ್ತವೇ ಭಿಕ್ಷಾಪಾತ್ರೆಯಾಗಬೇಕು. ಮತ್ತು ಭಿಕ್ಷೆಯನ್ನು ಇಡಲು ಹೊಟ್ಟೆಯೊಂದೇ ಪಾತ್ರೆಯಾಗಬೇಕು. ಇವರು ಸಂಗ್ರಹ ಮಾಡಬಾರದು. ಹೀಗೆ ನಡೆಯದಿದ್ದರೆ ಜೇನುನೊಣದಂತೆ ಅವರು ಬಂಧನದಲ್ಲಿ ಬೀಳುವರು.

ಭ್ರಮರವು ಒಣ ಕಟ್ಟಿಗೆಯನ್ನೂ ಕೂಡ ತುಂಡು ತುಂಡು ಮಾಡಬಲ್ಲದು. ಆದರೆ ತನಗೆ ಪ್ರಿಯವಾದ ಹೂವು ಮುರಿಯಬಾರದೆಂಬ ಮೋಹದಿಂದ ಅಲ್ಲಿಯೇ ಸಿಕ್ಕಿಕೊಳ್ಳುವುದು. ಅಲ್ಲಿಂದ ಹೊರಬರುವ ಮಾರ್ಗವನ್ನು ಶೋಧಿಸುವುದೇ ಇಲ್ಲ ॥೯೬॥ ಆದರಂತೆ ಯೋಗಿಯು ಒಂದೇ ಸ್ಥಳದಲ್ಲಿ ಆಸಕ್ತನಾಗಿ ಕುಳಿತುಕೊಂಡರೆ ಅದೇ ಸ್ಥಳವು ಆತನಿಗೆ ಬಂಧನಕಾರಕವಾಗುವುದು. ಕಾರಣ ಆತನು ವಿಷಯಗಳ ಲೋಭದಲ್ಲಿ ಸಿಲುಕಿಕೊಂಡು ಬೀಳುವನು ॥೯೭॥

ಭ್ರಮರವು ಬಕುಲಹೂವಿನಂತಹ ಸಣ್ಣ ಹೂವುಗಳಿಗೂ ಉಪೇಕ್ಷೆಯನ್ನು ಮಾಡುವುದಿಲ್ಲ. ಅದರಲ್ಲಿಯೂ ಕೂಡ ಒಳಸೇರಿ ಅದರ ಸುಗಂಧವನ್ನು ಸೇವಿಸುವುದು ॥೯೮॥ ಪೂರ್ಣವಾಗಿ ವಿಕಾಸಗೊಂಡಿರುವ ದೊಡ್ಡದಾದ ಕಮಲದ ಹೂವಿನಲ್ಲಿಯೂ ಒಳಸೇರಿ ಅದರಲ್ಲಿಯ ಸುಗಂಧವನ್ನು ಸೇವಿಸುವುದು ॥೯೯॥ ಆದರಂತೆಯೇ ಯೋಗಿಯೂ ಕೂಡ ಇದು ಚಿಕ್ಕ ಶಾಸ್ತ್ರವಾಗಿದೆ, ಇದು ಮಹಾಶಾಸ್ತ್ರವಾಗಿದೆ ಎಂಬ ತರ್ಕವನ್ನು ಮಾಡುವುದಿಲ್ಲ. ಎಲ್ಲದರಿಂದಲೂ ಅದರಲ್ಲಿರುವ ಸಾರ ಮಾತ್ರವನ್ನು ಗ್ರಹಿಸುವನು ॥೧೦೦॥ ಮಹಾನ ವೇದಾಂತ ಶಾಸ್ತ್ರಗಳಲ್ಲಿ ಹೇಳಿರುವ ಬ್ರಹ್ಮಸ್ಥಿತಿಯನ್ನು ಈತನು ಪ್ರಮಾಣವಾಗಿ ಮನ್ನಿಸುವನು. ಮತ್ತು ಇತರ ಚಿಕ್ಕ ಚಿಕ್ಕ ಸ್ತೋತ್ರಗಳಲ್ಲಿನ ಬ್ರಹ್ಮದ ಉತ್ಪತ್ತಿಯನ್ನು ಅಷ್ಟೇ ಆದರದಿಂದ ಸ್ವೀಕರಿಸುವನು ॥೧೦೧॥ ಪಂಡಿತರ ವಚನಗಳನ್ನು ಈತನು ಮನ್ನಿಸುವನು. ಹಾಗೆಯೇ ಒಬ್ಬ ಸಾಮಾನ್ಯ ಮನುಷ್ಯನು ಹಿತ ವಚನಗಳನ್ನು ನುಡಿಯಲು ಅದನ್ನೂ ಸಹ ಆದರಪೂರ್ವಕವಾಗಿಯೇ ಅದರ ಸಾರವನ್ನು ಗ್ರಹಣ ಮಾಡುವನು ॥೧೦೨॥ ಪತಿಯ ಮನದಲ್ಲಿ ತನ್ನ ವಿಷಯಕ್ಕೆ ಪ್ರೇಮ ಭಾವನೆಯು ಇರಬೇಕೆಂದು ಕುಲವಧು ಅತ್ತೆ ಮಾವಂದಿರ ಮಾನವನ್ನು ರಕ್ಷಿಸುವಳು. ಇವರ ಆಳುಗಳಿಗೂ ಲಕ್ಷ ಕೊಡುವಳು ॥೧೦೩॥ ರಾಜಹಂಸಪಕ್ಷಿಯು ಜಲಮಿಶ್ರಿತ ಹಾಲಿನಲ್ಲಿಯ ಕೇವಲ ಹಾಲನ್ನೇ ಸೇವಿಸುವುದು. ಆದರಂತೆ ಯೋಗಿಯು ವಿವೇಕದಿಂದ ಎಲ್ಲದರಿಂದಲೂ ಸಾರತತ್ವವನ್ನೇ ಗ್ರಹಣ ಮಾಡುವನು ॥೧೦೪॥ ಸರ್ವ ಪ್ರಾಣಿ ಮಾತ್ರರಲ್ಲಿ ಭಗವಂತನ ಭಾವವನ್ನು ಇಡುವುದೇ ಇದು ಮುಖ್ಯ ಸಾರಾಂಶವಾಗಿರುವುದು. ಈ ನಿಷ್ಠೆಯು ಯಾರ ಮನದಲ್ಲಿ ನೆಟ್ಟುಕೊಳ್ಳುವುದೋ, ಆತನಿಗೆ ಸ್ವಪ್ನದಲ್ಲಿಯೂ ಅಪಾಯವಾಗುವುದಿಲ್ಲ ॥೧೦೫॥ ತುಂಬಿಕೊಂಡಿರುವ ಈ ಜಗತ್ತಿನಲ್ಲಿ ಈ ಸಾರವನ್ನು ಸ್ವೀಕರಿಸುವವನೇ ನಿಜವಾದ ಯೋಗಿಯಾಗಿರುವನು. ಈ ಪ್ರಕಾರವಾಗಿ ಅವಧೂತನು ಯದುರಾಜನಿಗೆ ಗುರುಗಳ ಲಕ್ಷಣಗಳನ್ನು ಹೇಳಿದನು ॥೧೦೬॥ ಹೇ ರಾಜನೇ, ನಾನು ಎರಡು ಪ್ರಕಾರಗಳ ನೊಣಗಳನ್ನು ಗುರುಗಳನ್ನಾಗಿ ಮಾಡಿಕೊಂಡೆನು. ಒಂದು ಜೇನು ನೊಣ ಇನ್ನೊಂದು ಊರುಮನೆಯಲ್ಲಿರುವ ನೊಣ ॥೧೦೭॥

ಪಹಾ ಪಾ ಘರೀಚೀ ಮಾಶೀ । ಬೈಸಲ್ಯಾ ಸಾಖರೇಚೀ ರಾಶೀ । ಹಾತೀ ಧರೋನೀ ಘಾಲೀ ಮುಖಾಶೀ । ಸಂಗ್ರಹೋ ತಿಸೀ ಪೈ ನಾಹೀ ॥೧೦೮॥ ಹೇ ಹೋಈಲ ಸಾಯಂಕಾಳಾ । ಹೇ ಭಕ್ಷೀನ ಪ್ರಾತಃಕಾಳಾ । ಐಸಾ ಸಂಗ್ರಹೋ ವೇಗಳಾ । ನಾಹೀ ಕೇಲಾ ಮಕ್ಷಿಕಾ ॥೧೦೯॥ ತೈಶೀ ಯೋಗಸನ್ನ್ಯಾಸಗತೀ । ಪ್ರಾಪ್ತಭಿಕ್ಷಾ ಘೇಊನಿ ಹಾತೀ । ತಿಸೀ ನಿಕ್ಷೇಪು ಮುಖಾಪ್ರತೀ । ಸಂಗ್ರಹಸ್ಥಿತಿ ತ್ಯಾ ನಾಹೀ ॥೧೧೦॥ ಭಿಕ್ಷೇಲಾಗೀ ಪಾಣಿಪಾತ್ರ । ಸಾಂಠವಣ ಉದರಮಾತ್ರ । ಯಾ ವೇಗಳೇ ಸ್ವತಂತ್ರ । ನಾಹೀ ಘರಪಾತ್ರ ಸಾಂಠವಣೇ ॥೧೧೧॥

ಸಾಯಂತನಂ ಶ್ವಸ್ತನಂ ವಾ ನ ಸಂಗೃಹ್ಣೀತ ಭಿಕ್ಷುಕಃ ।
ಮಕ್ಷಿಕಾ ಇವ ಸಂಗೃಹ್ಣನ್ ಸಹ ತೇನ ವಿನಶ್ಯತಿ ॥೧೨॥

ಅರ್ಥ :- ಸನ್ಯಾಸಿಯಾದವನು, ಇಂದು ರಾತ್ರಿಗೆ, ನಾಳೆ ಬೆಳಿಗ್ಗೆ ಎಂದು ಯಾವ ರೀತಿಯಿಂದಲೂ ಸಂಗ್ರಹಿಸಬಾರದು. ಒಂದು ವೇಳೆ ಈತನು ಸಂಗ್ರಹಿಸುತ್ತ ನಡೆದರೆ ಜೇನು ನೊಣದಂತೆ ಸಂಗ್ರಹದೊಂದಿಗೆ ತನ್ನ ಜೀವನದ ನಾಶ ಮಾಡಿಕೊಳ್ಳುವನು.

ಸಾಯಂಕಾಳ-ಪ್ರಾತಃಕಾಳಾಸೀ । ಭಕ್ಷ್ಯಸಂಗ್ರಹೋ ನಸಾವಾ ಭಿಕ್ಷೂಸೀ । ಸಂಗ್ರಹೇ ಪಾವತೀ ನಾಶಾಸೀ । ಯೇ ವಿಷೀ "ಮಧುಮಾಶೀ" ಗುರು ಕೇಲೀ ॥೧೧೨॥ ರಿಘೋನಿ ನಾನಾ ಸಂಕಟಸ್ಥಾನಾಸೀ । ಮಧುಸಂಗ್ರಹೋ ಕರೀ ಮಧುಮಾಶೀ । ತೋ ಸಂಗ್ರಹೋಚೀ ಕರೀ ಘಾತಾಸೀ । ಮಧು ನ್ಯಾವಯಾಸೀ ಜೈ ಯೇತೀ ॥೧೧೩॥ ಸಂಗ್ರಹೋ ಯತ್ನಾಚಿಯಾ ಚಾಡಾ । ಮೋಹಳ ಬಾಂಧಿತೀ ಅವಘಡಾ ಕಡಾ । ತೇ ದುರ್ಗಮೀ ರಿಗೂ ಕರಿತೀ ಗಾಢಾ । ಅರ್ಥ-ಚಾಡಾ ಮಧುಹತೇ ॥೧೧೪॥ ಕಾ ಝೂಡಿತಾ ಮೋಹಳಾಸೀ । ನಾಶು ಹೋತಸೇ ಮಾಸಿಯಾಂಸೀ । ಸಂಗ್ರಹಾಚೀ ಜಾತೀ ಐಶೀ । ಜೀವಘಾತಾಸೀ ಕರವಿತು ॥೧೧೫॥ ಐಸೇ ದೇಖೋನಿಯಾ ಜನೀ । ಭಕ್ತ-ಭಿಕ್ಷು-ಯೋಗೀ-ಸಜ್ಜನೀ । ಸಂಗ್ರಹೋ ನ ಕರಾವಾ ಭರವಸೇನೀ । ನಾಶು ನಿದಾನೀ ದಿಸತುಸೇ ॥೧೧೬॥ ಆಚಾರಾವೇ ಸತ್ಕರ್ಮ । ಸಂಗ್ರಹಾವಾ ಶುದ್ಧ ಧರ್ಮ । ಹೇಚಿ ನೇಣೋನಿಯಾ ವರ್ಮ । ಧನಕಾಮೇ ಅಧಮ ನಾಶತೀ ॥೧೧೭॥ ಅರ್ಥ ವಿನಾಶಾಚೇ ಫಳ । ದುಸರೇ ಏಕ ನಾಶಾಚೇ ಮೂಳ । ವಿಶೇಷ ನಾಶಾಚೇ ಆಹಳಬಾಹಳ । ಸ್ತ್ರೀ ಕೇವಳ ವೋಳಖ ಪಾ ॥೧೧೮॥ ಮೂಳ ನಾಶಾಸೀ ಜೀವಿತಾ । ಕನಕ ಆಣಿ ಯೋಷಿತಾ । ಜಂವ ಜಂವ ಯಾಂಚೀ ಆಸಕ್ತತಾ । ತಂವ ತಂವ ಚಢತಾ ಭವರೋಗು ॥೧೧೯॥ ಕನಕ ಆಣಿ ಕಾಮಿನೀ । ಜ್ಯಾಸೀ ನಾವಡೇ ಮನೀಹುನೀ । ತೋಚಿ ಜನಾರ್ದನು ಜನೀ । ಭರವಸೇನೀ ಓಳಖ ಪಾ ॥೧೨೦॥ ಜೋ ಸುಖ ಇಚ್ಛೀಲ ಆಪಣಾಸೀ । ತೇಣೇ ನಾತಳಾವೇ ಸ್ತ್ರೀಯೇಸೀ । ಯೇಚಿ ವಿಷಯೀ "ಮದಗಜಾಸೀ" । ಗುರು ವಿಶೇಷೀ ಮ್ಯಾ ಕೇಲಾ ॥೧೨೧॥

ಮನೆಯಲ್ಲಿನ ನೊಣವು ಸಕ್ಕರೆಯ ರಾಶಿಯ ಮೇಲೆ ಕುಳಿತುಕೊಂಡರೆ ಅದು ತನಗೆ ಬೇಕಾದಷ್ಟು ತಿನ್ನುವುದು. ಆದರೆ ಇದಕ್ಕೆ ಸಂಗ್ರಹ ಮಾಡಬೇಕೆಂಬುವುದೇ ಗೊತ್ತಿರುವುದಿಲ್ಲ ॥೧೦೮॥ ಇದು ಇಂದು ರಾತ್ರಿಗಾಗಿ, ಇದು ನಾಳೆ ಮುಂಜಾನೆಗಾಗಿ, ಹೀಗೆಂದು ಅದು ಬೇರೆ ಬೇರೆ ಸಂಗ್ರಹ ಎಂದೂ ಮಾಡುವುದಿಲ್ಲ ॥೧೦೯॥ ಯೋಗ ಸನ್ಯಾಸಿಯ ಪದ್ಧತಿಯು ಹೀಗೆಯೇ ಇರುವುದು. ಈತನು ಕೈಯಲ್ಲಿ ಸಿಕ್ಕ ಭಿಕ್ಷೆಯನ್ನು ಮುಖದಲ್ಲಿ ಹಾಕುವನು. ಸಂಗ್ರಹದ ಪ್ರಯತ್ನವನ್ನು ಎಂದೂ ಮಾಡುವುದಿಲ್ಲ ॥೧೧೦॥ ಹಸ್ತವೇ ಆತನ ಭಿಕ್ಷಾಪಾತ್ರಯಾಗಿರುವುದು. ಹೊಟ್ಟೆಯೇ ಆತನ ಸಂಗ್ರಹದ ಸ್ಥಾನವಾಗಿರುವುದು. ಇದನ್ನು ಬಿಟ್ಟು ಸ್ವತಂತ್ರ ಮನೆ ಅಥವಾ ಪಾತ್ರೆಗಳು ಹೀಗೆ ಅನ್ಯ ಸಂಗ್ರಹಗಳು ಆತನಲ್ಲಿ ಇರುವುದಿಲ್ಲ ॥೧೧೧॥

ಭಿಕ್ಷುವಿಗೆ ಮುಂಜಾನೆ, ಸಾಯಂಕಾಲಕ್ಕಾಗಿ ಅನ್ನಸಂಗ್ರಹ ಇರಕೂಡದು. ಸಂಗ್ರಹ ಮಾಡಿದನೆಂದರೆ ಅವನ ನಾಶವಾಗುವುದು. ಈ ವಿಷಯಕ್ಕಾಗಿ ನಾನು ಜೇನು ನೊಣವನ್ನು ಗುರುವನ್ನಾಗಿ ಮಾಡಿಕೊಂಡೆನು ॥೧೧೨॥ ಜೇನು ನೊಣವು ದುಸ್ತರವಾದ ನಾನಾ ಪ್ರಕಾರದ ಸ್ಥಳಗಳಲ್ಲಿ ಓಡಾಡೀ ಜೇನನ್ನು ಸಂಗ್ರಹಿಸುತ್ತಿರುತ್ತದೆ. ಆದರೆ ಜೇನಿನ ಗೂಡನ್ನು ಕಿತ್ತುಕೊಂಡು ಹೋಗಲು ಜನರು ಬಂದಾಗ ಈ ಸಂಗ್ರಹವೇ ಇವುಗಳ ನಾಶಕ್ಕೆ ಕಾರಣವಾಗುವುದು ॥೧೧೩॥ ಬಹು ಕಷ್ಟದಿಂದ ಕೂಡಿಸಿರುವ ಜೇನನ್ನು ಸುರಕ್ಷಿತವಾಗಿರಬೇಕೆಂದು ಅವು ದುರ್ಘಟವಾದ ಎತ್ತರ ಸ್ಥಳಗಳಲ್ಲಿ ಗೂಡನ್ನು ಕಟ್ಟುವುವು. ಹೀಗಿದ್ದರೂ ಜೇನನ್ನು ಹರಣಮಾಡಲು ಜನರು ಬರುವರು ॥೧೧೪॥ ಆ ಜೇನಿನ ಹುಟ್ಟನ್ನು ಅವರು ಉಪಾಯದಿಂದ ಝಾಡಿಸಲು ಎಲ್ಲ ಜೇನು ನೊಣಗಳ ನಾಶವಾಗುವುದು. ಈ ಪ್ರಕಾರವಾಗಿ ಸಂಗ್ರಹ ಮಾಡಲು ಅದು ಪ್ರಾಣಾಘಾತವಾಗುವುದು ॥೧೧೫॥ ಇದನ್ನರಿತು ಭಕ್ತರು, ಭಿಕ್ಷುಗಳು, ಯೋಗಿಗಳು ಹಾಗೂ ಸಜ್ಜನರು ಸಂಗ್ರಹ ಮಾಡುವಲ್ಲಿ ಸ್ವಲ್ಪವೂ ವಿಶ್ವಾಸವನ್ನಿಡಬಾರದು. ಏಕೆಂದರೆ ಇದರ ಪರಿಣಾಮವು ನಾಶಕ್ಕೆ ನಿಶ್ಚಿತವಾಗಿರುವುದು ॥೧೧೬॥ ಸತ್ಕರ್ಮಗಳನ್ನು ಆಚರಿಸಬೇಕು. ಶುದ್ಧವಾದ ಧರ್ಮಗಳನ್ನು ಸಂಗ್ರಹ ಮಾಡಬೇಕು. ಈ ರಹಸ್ಯವನ್ನು ಅರಿಯದೇ ಧನದ ಲಾಲಸೆಯಿಂದ ಅಧಮ ಜನರು ನಾಶರಾಗುವರು ॥೧೧೭॥ ಹಣವು ವಿನಾಶದ ಫಲವಾಗಿರುವುದು. ಹಾಗೆಯೇ ಈ ನಾಶಕ್ಕೆ ಮೂಲಕಾರಣವಾಗಿರುವುದು. ಮತ್ತು ವಿಶೇಷವಾಗಿ ನಾಶದ ವಿಸ್ತೀರ್ಣವೆಂದರೆ ಕೇವಲ ಸ್ತ್ರೀಯಾಗಿರುವಳು ಹೀಗೆ ನೀನು ತಿಳಿದುಕೊ ॥೧೧೮॥ ಜೀವನದ ನಾಶಕ್ಕೆ ಮುಖ್ಯ ಕಾರಣಗಳೇನಂದರೆ, ಕನಕ ಮತ್ತು ಕಾಂತೆ ಆಗಿರುವುವು. ಇವುಗಳ ಆಸಕ್ತಿಯು ಬೆಳೆದಂತೆ ಸಂಸಾರದಲ್ಲಿ ದುಃಖವು ಬೆಳೆಯುತ್ತಾ ಸಾಗುವುದು ॥೧೧೯॥ ಯಾರಿಗೆ ಕನಕ, ಕಾಮಿನಿ ಇವು ಮನಃಪೂರ್ವಕವಾಗಿ ಅಪ್ರಿಯವಾಗಿವೆಯೋ, ಆತನೇ ಜನರಲ್ಲಿ ಜನಾರ್ದನನು. ಇದನ್ನು ನೀನು ನಿಶ್ಚಯಪೂರ್ವಕವಾಗಿ ತಿಳಿ ॥೧೨೦॥ ಯಾರಿಗೆ ಆತ್ಮ ಸುಖದ ಇಚ್ಛೆ ಇರುವುದೋ, ಆತನು ಸ್ತ್ರೀಯರ ಒಡನಾಟ ಇಡಕೂಡದು. ಈ ವಿಷಯಕ್ಕಾಗಿ ನಾನು ಮದ್ದಾನೆಗೆ ಗುರುವಾಗಿ ಮಾಡಿಕೊಂಡಿರುವೆನು ॥೧೨೧॥

ಪದಾಪಿ ಯುವತೀಂ ಭಿಕ್ಷುರ್ನ ಸ್ಪೃಶೇದ್ದಾರವೀಮಪಿ ।
ಸ್ಪೃಶನ್ ಕರೀವ ಬಧ್ಯೇತ ಕರಿಣ್ಯಾ ಅಂಗಸಂಗತಃ ।।೧೩।।

ಅರ್ಥ:- ಸಾಧು ಪುರುಷನು ತರುಣಿಯನ್ನು ಎಂದೂ ಮುಟ್ಟಬಾರದು. ಇಷ್ಟೇ ಅಲ್ಲ, ಸ್ತ್ರೀ ರೂಪದ ಮರದ ಗೊಂಬೆಯನ್ನೂ ಕೂಡ ಕಾಲಿನಿಂದಲೂ ಮುಟ್ಟಬಾರದು. ಆನೆಯು ಹೆಣ್ಣಾನೆಯನ್ನು ಸ್ಪರ್ಶಿಸಬಯಸಿ ಸೆರೆಗೆ ಬೀಳುವಂತೆ ಸ್ತ್ರೀಯೊಂದಿಗೆ ದೈಹಿಕ ಸಂಪರ್ಕದಿಂದ ಸಾಧು ಆನೆಯಂತೆ ಬಂಧಿತನಾಗುವನು.

ಪಹಾ ಪಾ ಷಷ್ಟಿಹಾಯನ ಭದ್ರಜಾತೀ । ತ್ಯಾಪುಢೇ ಮನುಷ್ಯ ತೇ ಕಿತೀ । ತೇ ಹಸ್ತಿಣೀಚೇ ಅಂಗಸಂಗತೀ । ಬಂಧನ ಪಾವತೀ ಮನುಜಾಂಜೇ ।।೧೨೨।। ಜೋ ದೃಷ್ಟೀ ನಾಣೇ ಮನುಷ್ಯಾಂಸೀ । ತೋ ಸ್ತ್ರೀಯಾ ವಶ ಕೇಲಾ ಮಾನವಾಂಸೀ । ತ್ಯಾಂಚೇನಿ ಬೋಲೇ ಉಠೀ ಬೈಸೀ । ಮಾಥಾ ಅಂಕುಶೀ ಮಾರಿಜೇ ।।೧೨೩।। ಏವಂ ಜಿಣಾವಯಾ ಸಂಸಾರಾಸೀ । ಜೇ ಸ್ವಧರ್ಮನಿಷ್ಠ ಸನ್ಯಾಸೀ । ತಿಹೀ ದೇಖೋನಿ ಯೋಷಿತಾಂಸೀ । ಲಾಗವೇಗೇಸೀ ಪಳಾವೇ ।।೧೨೪।। ನಕೋ ಸ್ತ್ರೀಯಾಂಚೀ ಭೇಟೀ । ನಕೋ ಸ್ತ್ರೀಯಾಂಸೀ ಗೋಷ್ಟೀ । ಸ್ತ್ರೀ ದೇಖತಾಂಚಿ ದಿಠೀ । ಉಠಾ ಉಠೀ ಪಳಾವೇ ।।೧೨೫।। ಪಳತಾ ಪಳತಾ ಪಾಯಾತಳೀ । ಆಲ್ಯಾ ಕಾಷ್ಠಾಚೀ ಪುತಳೀ । ತೇಹೀ ನಾತಳಾವೀ ಕುಶಳೀ । ನಿರ್ಜೀವ ಸ್ತ್ರೀ ಛಳೀ ಪುರುಷಾತೇ ।।೧೨೬।। ಅನಿರುದ್ಧೇ ಸ್ವಪ್ನೀ ದೇಖಿಲೀ ಉಖಾ । ತೋ ಧರೂನಿ ನೇಲಾ ಚಿತ್ರರೇಖಾ । ಬಾಣಾಸುರೇ ಬಾಂಧಿಲಾ ದೇಖಾ । ಕೃಷ್ಣ ಸಖಾ ಜಯಾಚಾ ।।೧೨೭।। ತ್ಯಾಸೀ ಸೋಡವಣೇಲಾಗೀ ಹರೀ । ಧಾವಂತಾ ಆಡವಾ ಆಲಾ ಕಾಮಾರೀ । ಯುದ್ಧ ಜಾಹಲೇ ಪರಸ್ಪರೀ । ಶಸ್ತ್ರಾಸ್ತ್ರೀ ದಾರುಣ ।।೧೨೮।। ಏವಂ ಹರಿಹರಾ ಭಿಡತಾ । ಜೋ ಬಾಂಧಲಾ ಸ್ವಪ್ನೀಂಚಿಯಾ ಕಾಂತಾ । ತೋ ಸಹಸಾ ನ ಸುಟೇಚಿ ಸೋಡವಿತಾ । ಇತರಾಂಚಿ ಕಥಾ ಕಾಯಸೀ ।।೧೨೯।। ಪಹಾ ಪಾ ಸ್ವಪ್ನೀಂಚಿಯಾ ಕಾಂತಾ । ಅನಿರುದ್ಧಾಸೀ ಕೇಲೀ ನಿರುದ್ಧತಾ । ಮಾ ಸಾಚಚೀ ಸ್ತ್ರೀ ಹಾತೀ ಧರಿತಾ । ನಿರ್ಗಮತಾ ತ್ಯಾ ಕೈಚೀ ।।೧೩೦।। "ಪುರುಷ" ಆಪಣಯಾ ಮ್ಹಣವಿತೀ । ಸೇಖೀ ಸ್ತ್ರೀಯಾಂಚೇ ಪಾಯ ಧರಿತೀ । ತ್ಯಾಂಸೀ ಕೈಸೇನಿ ಹೋಈಲ ಮುಕ್ತೀ । ಸ್ತ್ರೀಸಂಗತೀ ಅಧಃಪಾತ ।।೧೩೧।।

ನಾಧಿಗಚ್ಛೇತ್ ಸ್ತ್ರಿಯಂ ಪ್ರಾಜ್ಞಃ ಕರ್ಹಿಚಿನ್ಮೃತ್ಯುಮಾತ್ಮನಃ ।
ಬಲಾಧಿಕೈಃ ಸ ಹನ್ಯೇತ ಗಜೈರನ್ಯೈರ್ಗಜೋ ಯತಾ ।।೧೪।।

ಅರ್ಥ:- ತಿಳಿದವನು ಎಂದಿಗೂ ಸುಂದರ ಸ್ತ್ರೀರೂಪವನ್ನು ಇಂದ್ರಿಯ ತೃಪ್ತಿಗೆ ದುರುಪಯೋಗಿಸಬಾರದು. ಹೆಣ್ಣಾನೆಯೊಂದನ್ನು ಭೋಗಿಸಬಯಸುವ ಗಂಡಾನೆಯು ಇದನ್ನೇ ಇಚ್ಛಿಸುವ ಇತರ ಗಂಡಾನೆಗಳಿಂದ ಹತವಾಗುತ್ತದೆ. ಇದೇ ರೀತಿಯಲ್ಲಿ ಸ್ತ್ರೀ ಸುಖ ಬಯಸುವ ಪುರುಷನ ಗತಿ ನಿಶ್ಚಿತವಾಗಿ ಆಗುವುದು.

ಇಲ್ಲಿ ನೋಡು, ಅರವತ್ತು ವರ್ಷಗಳ ಕಾಲ ಬದುಕುವ ಆ ಆನೆಯ ಮುಂದೆ ಮನುಷ್ಯನ ಬಲವು ಎಲ್ಲಿಯದು ? ಆದರೆ ಹೆಣ್ಣಾನೆಯ ಸ್ಪರ್ಶಕ್ಕಾಗಿ ಅದು ಮನುಷ್ಯನ ಬಂಧನದಲ್ಲಿ ಸಿಲುಕಿಕೊಳ್ಳುವುದು ।।೧೨೨।। ಯಾವ ಈ ಮನುಷ್ಯನಿಗೆ ಆನೆಯು ಯಾವುದಕ್ಕೂ ಲೆಕ್ಕಿಸದೇ ಹೊರಳಿ ಸಹ ನೋಡುವುದಿಲ್ಲ. ಆ ಆನೆಯನ್ನು ಸ್ತ್ರೀಯು ಮನುಷ್ಯನಿಗೆ ಅಂಕಿತಗೊಳಿಸಿದಳು. ಆತನಿಂದ ಅಂಕುಶದ ಹೊಡೆತ ತಿನ್ನುತ್ತ ಏಳು ಅಂದರೆ ಏಳಬೇಕು. ಕುಳಿತುಕೋ ಎಂದರೆ ಕುಳಿತುಕೊಳ್ಳಬೇಕು. ಇಷ್ಟೊಂದು ಪರಾಧೀನತೆ ಅದಕ್ಕೆ ಒದಗಿ ಬಂದಿತು ।।೧೨೩।। ಅದಕ್ಕಾಗಿ ಯಾವ ಸ್ವಧರ್ಮನಿಷ್ಠ ಸನ್ಯಾಸಿಗಳು ಈ ಸಂಸಾರವನ್ನು ಜಯಿಸಲು, ಸ್ತ್ರೀಯರು ಕಂಡಾಕ್ಷಣವೇ ಓಡಿ ಹೋಗಬೇಕು ।।೧೨೪।। ಸ್ತ್ರೀಯರನ್ನು ಭೇಟಿಯಾಗಬಾರದು, ಅವರಲ್ಲಿ ಮಾತನಾಡಬಾರದು, ಅವರ ದರ್ಶನ ಮಾಡಬಾರದು, ಅವರು ಕಂಡಾಕ್ಷಣವೇ ಓಡಿ ದೂರ ಹೋಗಬೇಕು ।।೧೨೫।। ಓಡುತ್ತಿರುವಾಗ ಕಾಲಿನ ಕೆಳಗೆ ಒಂದು ವೇಳೆ ಕಟ್ಟಿಗೆಯ ಸ್ತ್ರೀ ರೂಪ ಗೊಂಬೆಯು ತಗಲಿದರೆ ಜಾಣನಾದವನು ಅಲ್ಲಿ ನಿಲ್ಲಲೇಬಾರದು. ಅದನ್ನು ಮುಟ್ಟಲೂ ಬಾರದು. ಏಕೆಂದರೆ ನಿರ್ಜೀವ ಸ್ತ್ರೀಯೂ ಸಹ ಪುರುಷನಿಗೆ ಅತಿ ತೊಂದರೆ ಕೊಡುವುದು ।।೧೨೬।। ಅನಿರುದ್ಧನು ಉಷೆಗೆ ಕೇವಲ ಸ್ವಪ್ನದಲ್ಲಿ ನೋಡಿದನು. ಇಷ್ಟರಿಂದಲೇ ಚಿತ್ರಲೇಖೆಯು ಈತನನ್ನು ಹಿಡಿದು ಒಯ್ದಳು. ಕೃಷ್ಣ ಸಖನಾದ ಈತನನ್ನು ಬಾಣಾಸುರನು ಬಂಧಿಸಿಟ್ಟನು ।।೧೨೭।। ಈತನನ್ನು ಬಿಡಿಸಿಕೊಳ್ಳುವುದಕ್ಕಾಗಿ ಶ್ರೀಹರಿಯು ಧಾವಿಸುತ್ತಾ ಬರುತ್ತಿರಲು ಶ್ರೀಶಂಕರನು ದಾರಿಯಲ್ಲಿ ಅಡ್ಡಕಟ್ಟಿದನು. ಆಗ ಈ ಇಬ್ಬರಲ್ಲಿಯೂ ಶಸ್ತ್ರಾಸ್ತ್ರಗಳಿಂದ ಘನಘೋರ ಯುದ್ಧವಾಯಿತು।।೧೨೮।। ಈ ಪ್ರಕಾರವಾಗಿ ಅನಿರುದ್ಧನನ್ನು ಬಿಡಿಸಿಕೊಳ್ಳಲು ಹರಿಹರರ ಯುದ್ಧವಾಯಿತು. ಆದರೆ ಇಷ್ಟೊಂದು ಪ್ರಯತ್ನಪಟ್ಟರೂ ಸ್ವಪ್ನದ ಸ್ತ್ರೀಯಿಂದ ಬಂಧಿತನಾಗಿರುವ ಅನಿರುದ್ಧನ ಬಿಡುಗಡೆಯಾಗಲಿಲ್ಲ. ಹೀಗಿರಲು ಸಾಮಾನ್ಯ ಜನರ ಯಾವ ಕಥೆ ? ।।೧೨೯।। ಇಲ್ಲಿ ನೋಡು, ಸ್ವಪ್ನದಲ್ಲಿನ ಸ್ತ್ರೀಯಳು ಅನಿರುದ್ಧನಿಗೆ ಅಂದರೆ ಬಂಧನರಹಿತನಿಗೆ ಬಂಧಿಸಿ ಬಿಟ್ಟಳು. ಹಾಗಾದರೆ ನಿಜವಾದ ಸ್ತ್ರೀಯಳ ಕೈಗೆ ಸಿಕ್ಕರೆ ಅವನು ಅಲ್ಲಿಂದ ಹೇಗೆ ಬಿಡುಗಡೆಯಾಗಬೇಕು ? ।।೧೩೦।। ಅಹೋ, ತಾವು ಸ್ವತಃ ನಾವು ಪುರುಷರು ಎಂದು ಹೇಳಿಕೊಳ್ಳುವರು. ಅವರೇ, ಕೊನೆಯಲ್ಲಿ ಸ್ತ್ರೀಯಳ ಕಾಲು ಮುಗಿಯುವರು. ಇವರಿಗೆ ಮುಕ್ತಿಯು ಹೇಗೆ ಸಿಗಬೇಕು ? ಸ್ತ್ರೀ ಸಂಗತಿಯಿಂದ ಅಧಃಪಾತವಾಗುವುದೆಂದು ಪೂರ್ಣವಾಗಿ ಲಕ್ಷದಲ್ಲಿಡಬೇಕು ।।೧೩೧।।

ಕ್ರೀಡತಾ ಗಜೀಮಾಜೀ ಗಜಪತೀ । ತ್ಯಾವರೀ ಸಬಳ ಭದ್ರಜಾತೀ । ಯೇಊನಿಯಾ ಯುದ್ಧಕರಿತೀ । ನಿಜಬಳೀ ಮಾರಿತೀ ತಯಾತೇ ।।೧೩೨।। ತೋ ಮಾರೋನಿಯಾ ಹಸ್ತೀ । ತ್ಯಾ ಹಸ್ತಿಣೀ ಸಮಸ್ತೀ । ಸಬಳ ಭೋಗೀ ಭದ್ರಜಾತೀ । ನಾಶಾಪ್ರತೀ ಸ್ತ್ರೀ ಮೂಳ ।।೧೩೩।। ಅಹಲ್ಯೇಚೀಯಾ ಸಂಗತೀ । ಗೌತಮೇ ವಿಟಂಬಿಲಾ ಅಮರಪತೀ । ಭಸ್ಮಾಸುರಾಸೀ ನಾಶಪ್ರಾಪ್ತೀ । ಸ್ತ್ರೀಸಂಗತೀಸ್ತವ ಜಾಲೀ ।।೧೩೪।। ದೇಖೋನಿ ತಿಲೋತ್ತಮಾ ಉತ್ತಮ ವಧೂ । ಸುಂದ ಉಪಸುಂದ ಸಖೇ ಬಂಧು । ಸ್ತ್ರೀ ಅಭಿಲಾಷೇ ಚಾಲಿಲಾ ಕ್ರೋಧು । ಸುಹೃದಯಸಂಬಂಧೂ ವಿಸರಲೇ ।।೧೩೫।। ಮಗ ಸ್ತ್ರೀ ವಿರಹೇ ಯುದ್ಧಾಚೇ ಠಾಯೀ । ದೋಘೇ ನಿಮಾಲೇ ಯೇರಯೇರಾಂಚೇ ಘಾಯೀ । ಶೇಖೀ ಸ್ತ್ರೀಭೋಗುಹೀ ನಾಹೀ । ಮರಣಮೂಳ ಪಾಹೀ ಯೋಷಿತಾ ।।೧೩೬।। ಐಸೀಚ ಪೂರ್ವಕಲ್ಪೀಚೀ ಕಥಾ । ಅವತಾರೀ ಶ್ರೀಕೃಷ್ಣ ನಾಂದತಾ । ತೇಣೇ ಶಿಶುಪಾಳ ಗಾಂಜೋನಿ ಸರ್ವಥಾ । ಹಿರೋನಿ ಕಾಂತಾ ಪೈ ನೇಲೀ ।।೧೩೭।। ಏವಂ ಸುರನರಪಶೂಂಪ್ರತೀ। ನಾಶಾಸೀ ಮೂಳ ಸ್ತ್ರೀಸಂಗತೀ । ತಿಚೇನೀ ಸಂಗೇ ಗೃಹಾಸಕ್ತೀ । ಕಲಹಪ್ರಾಪ್ತೀ ಸ್ತ್ರೀ ಮೂಳ ।।೧೩೮।। ಗ್ರಾಮ್ಯ ಸ್ತ್ರೀಯಾಂಚೇ ಸಂಗತೀ ಜಾಣೇ । ತೋ ಬೈಸಲಾ ಮರಣಾಧರಣೇ । ಮರಣ ಆಲ್ಯಾಹೀ ನ ಕರಣೇ । ಜೀವೇಪ್ರಾಣೇ ಸ್ತ್ರೀ ಸಂಗು ।।೧೩೯।। ವೇಶ್ಯೇಚೇ ಸಂಗತೀ ಜಾತಾ । ಬಳಾಧಿಕ್ಯ ಕರೀ ಘಾತಾ । ನಿರಂತರ ಸ್ವಪತ್ನೀ ಭೋಗಿತಾ । ನಾಹೀ ಬಾಧಕತಾ ಹೇ ನ ಮ್ಹಣ ।।೧೪೦।। ಅವಿಶ್ರಮ ಸ್ತ್ರೀ ಸೇವಿತಾ । ಕಾಮು ಪಾವೇ ಉನ್ಮತ್ತತಾ । ಉನ್ಮತ್ತಕಾಮೇ ಸರ್ವಥಾ । ಅಧಃಪಾತಾ ನೇಇಜೇ ।।೧೪೧।। ಏವಂ ಹಾ ಠಾವೋವರೀ । ಸ್ತ್ರೀಸಂಗ ಕಠಿಣ ಭಾರೀ । ಕ್ವಚಿತ್ಸಂಗು ಜಾಹಲ್ಯಾವರೀ । ನರಕದ್ವಾರೀ ಘಾಲೀಲ ।।೧೪೨।। ನರಕೀ ಘಾಲೀಲ ಹೇ ವಾರ್ತಾ। ಉದ್ಧಾರಾಚೀ ಕಾಯಸೀ ಕಥಾ । ನರಕರೂಪ ಗ್ರಾಮ್ಯ ಯೋಷಿತಾ । ಪಾಹೇ ಸರ್ವಥಾ ನಿರ್ಧಾರೀ ।।೧೪೩।। ಸ್ತ್ರೀ ಆಣಿ ದುಸರಾ ಅರ್ಥು । ಹಾಚಿ ಯೇ ಲೋಕೀ ಘೋರ ಅನರ್ಥು । ಯೇಣೇ ಅಂತರಲಾ ನಿಜಸ್ವಾರ್ಥು । ಶೇಖೀ ಕರೀ ಘಾತು ಪ್ರಾಣಾಚಾ ।।೧೪೪।।

ನ ದೇಯಂ ನೋಪಭೋಗ್ಯಂ ಚ ಲುಬ್ಧೈರ್ಯದ್ ದುಃಖಸಂಚಿತಮ್ ।
ಭುಂಕ್ತೇ ತದಪಿ ತಚ್ಚಾನ್ಯೋ ಮಧು ಹೇವಾರ್ಥವಿನ್ಮಧು ।।೧೫।।

ಅರ್ಥ :- ಲೋಭಿಯಾದವನು ಬಹು ಶ್ರಮಪಟ್ಟು ಅಪಾರ ಧನವನ್ನು ಕೂಡಿಡುತ್ತಾನೆ. ಆದರೆ ಅದನ್ನು ತಾನೇ ಭೋಗಿಸಲು ಅಥವಾ ದಾನ ನೀಡಲು ಸಾಧ್ಯವಾಗುವುದಿಲ್ಲ. ಶ್ರಮಪಟ್ಟು ಕೂಡಿಡುವ ಜೇನು ನೊಣದಂತೆ ಇವನಾಗುವನು. ಕೂಡಿಟ್ಟ ಜೇನನ್ನು ಯಾರೋ ಕದ್ದು ಸವಿಯುತ್ತಾರೆ. ಅಥವಾ ಹಣಕ್ಕೆ ಮಾರುತ್ತಾರೆ. ಆದರಂತೆ ತಾನು ಶ್ರಮಪಟ್ಟು ಗಳಿಸಿದ ಸಂಪತ್ತನ್ನು ಅರಿತು ಕಳ್ಳನು ಅವುಗಳನ್ನು ಕದಿಯುತ್ತಾನೆ.

ಗಜರಾಜನು ಹೆಣ್ಣಾನೆಯೊಂದಿಗೆ ಕ್ರೀಡಿಸುತ್ತಿರಲು, ಬೇರೆ ಬಲಿಷ್ಠ ಆನೆಯು ಇದಕ್ಕಾಗಿಯೇ ಬರುವದು. ಆಗ ಪರಸ್ಪರರಲ್ಲಿ ಯುದ್ಧವಾಗಿ ಒಂದು ಇನ್ನೊಂದು ಕೊಂದು ಬಿಡುವುದು ।।೧೩೨।।

ಈ ರೀತಿಯಾಗಿ ಆನೆಯನ್ನು ಕೊಂದು ಆ ಬಲಿಷ್ಠ ಆನೆಯು ಹೆಣ್ಣು ಆನೆಗಳ ಭೋಗ ಭೋಗಿಸುವುದು. ತನ್ನ ನಾಶಕ್ಕೆ ಸ್ತ್ರೀಯೇ ಕಾರಣಳಾಗಿರುತ್ತಾಳೆ ।।೧೩೩।। ಅಹಲ್ಯೆಯ ಸಂಬಂಧದಿಂದ ಇಂದ್ರನಿಗೆ ಗೌತಮದಿಂದ ಶಾಪಗ್ರಸ್ಥನಾಗಬೇಕಾಯಿತು. ಸ್ತ್ರೀ ಸಂಗದಿಂದಲೇ ಭಸ್ಮಾಸುರನ ನಾಶವಾಯಿತು ।।೧೩೪।। ಅತ್ಯಂತ ಸುಂದರಳಾಗಿದ್ದ ತಿಲೋತ್ತಮೆಯನ್ನು ಕಂಡು ಸುಂದ ಮತ್ತು ಉಪಸುಂದ ಎಂಬ ಇಬ್ಬರು ಖಾಸ ಅಣ್ಣತಮ್ಮಂದಿರು. ಈ ಸ್ತ್ರೀಯ ಅಭಿಲಾಷೆಯಿಂದ ಪರಸ್ಪರರು ಕ್ರೋಧಾವೇಶಕ್ಕೆ ಬಂದು ತಮ್ಮ ಸಂಬಂಧವನ್ನು ಮರೆತುಬಿಟ್ಟರು ।।೧೩೫।। ಮತ್ತು ಸ್ತ್ರೀ ವಿರಹದಿಂದ ತಪ್ತರಾದ ಈ ಇಬ್ಬರೂ ರಣರಂಗದಲ್ಲಿ ಒಬ್ಬರಿಗೊಬ್ಬರು ಪ್ರಹರಗಳಿಂದ ಗತಪ್ರಾಣರಾದರು. ಕೊನೆಗೂ ಇವರಿಗೆ ಸ್ತ್ರೀ ಭೋಗವು ದೊರೆಯಲಿಲ್ಲ. ಹೀಗೆ ಸ್ತ್ರೀಯು ಮರಣಕ್ಕೆ ಮೂಲಕಾರಣಳೆಂದು ಲಕ್ಷದಲ್ಲಿಡು ।।೧೩೬।। ಹೀಗೆಯೇ ಪೂರ್ವಕಲ್ಪದಲ್ಲಿನ ಒಂದು ಕಥೆ ಇದೆ. ಶ್ರೀಕೃಷ್ಣ ಅವತಾರದಲ್ಲಿ ಈತನು ಶಿಶುಪಾಲನನ್ನು ಕಾಡಿಪೀಡಿಸಿ ಕಾಂತೆಯನ್ನು ಹರಣ ಮಾಡಿದನು ।।೧೩೭।। ಒಟ್ಟಿನಲ್ಲಿ ದೇವನಾಗಿರಲಿ, ಮನುಷ್ಯರಾಗಿರಲಿ ಮತ್ತು ಪಶುಗಳಾಗಿರಲಿ, ಈ ಎಲ್ಲರ ನಾಶದ ಮೂಲವು ಸ್ತ್ರೀಸಂಗವಾಗಿರುವುದು. ಈಕೆಯಿಂದಲೇ ಮನೆಮಾರುಗಳಲ್ಲಿ ಆಸಕ್ತಿಯು ನಿರ್ಮಾಣವಾಗುವುದು. ಮತ್ತು ಕಲಹದ ಮೂಲವೂ ಕೂಡ ಸ್ತ್ರೀಯೇ ಆಗಿರುವಳು ।।೧೩೮।। ಗ್ರಾಮ್ಯ ಸ್ತ್ರೀಯರ ಸಂಗತಿ ಎಂದರೆ ಮರಣದ ಬಾಗಿಲಿಗೆ ಕುಳಿತಂತೆಯೇ ಸರಿ. ಸತ್ತರೂ ಸ್ತ್ರೀ ಸಂಗವನ್ನು ಎಂದೂ ಮಾಡಕೂಡದು ।।೧೩೯।। ಅದರಲ್ಲಿ ವೇಶ್ಯೆಯರ ಸಹವಾಸವು ಮಾತ್ರ ಇನ್ನೂ ಹೆಚ್ಚಿನ ನಾಶ ಮಾಡುವುದು. ಸ್ವಪತ್ನಿಯ ಸಮಾಗಮವು ಸತತವಾಗಿದ್ದರೂ ಯಾವ ಬಾಧೆಯು ಇಲ್ಲ ಎಂದು ಹೀಗೆ ಸರ್ವಥಾ ತಿಳಿಯಬೇಡ ।।೧೪೦।। ನಿರಂತರವಾಗಿ ಸ್ತ್ರೀ ಸೇವನೆಯಿಂದ ಕಾಮದ ಇಚ್ಛೆಯು ಅಧಿಕವಾಗಿಯೇ ಬೆಳೆಯುತ್ತ ಸಾಗುವುದು. ಈ ಕಾಮವಾಸನೆಯು ಬೆಳೆಯಿತೆಂದರೆ ಅಧಃಪತನವು ತಪ್ಪದೇ ಆಗುವುದು ।।೧೪೧।। ಆದ ಕಾರಣ ಸ್ತ್ರೀ ಸಂಗವು ಅತ್ಯಂತ ಕಠಿಣವಾಗಿರುವುದು. ಅಪ್ಪಿ ತಪ್ಪಿಯಾದರೂ ಸ್ತ್ರೀ ಸಂಗವು ನಡೆಯಿತೆಂದರೆ ಅದು ನರಕಕ್ಕೆ ಒಯ್ದು ಹಾಕುವುದು ।।೧೪೨।। ಸ್ತ್ರೀ ಎಂಬ ಈ ವಾರ್ತೆಯೂ ಸಹ ಪುರುಷನಿಗೆ ನರಕಕ್ಕೆ ತಳ್ಳುವುದು ಮತ್ತು ಈಕೆಯಿಂದ ಉದ್ಧಾರದ ಮಾತು ಎತ್ತ? ಗ್ರಾಮ್ಯ ಸ್ತ್ರೀಯರು ಮಾತ್ರ ಸಾಕ್ಷಾತ್ ನರಕವೇ ಆಗಿರುವರೆಂದು ನೀನು ತಿಳಿ ।।೧೪೩।। ಹಣ ಮತ್ತು ಸ್ತ್ರೀ ಈ ಎರಡೂ ಈ ಲೋಕ ಅನರ್ಥ ವಸ್ತುವಾಗಿರುವುವು. ಇವುಗಳಿಂದ ಸ್ವಾರ್ಥವು ಅಂದರೆ ಆತ್ಮ ಪ್ರಾಪ್ತಿಯು ಆಗಲು ಶಕ್ಯವೇ ಇಲ್ಲ. ಮತ್ತು ಕೊನೆಯಲ್ಲಿ ಪ್ರಾಣಘಾತವಾಗುವುದು ನಿಶ್ಚಿತವು ।।೧೪೪

ಸ್ವಯೇ ಖಾಯೇ ನಾ ಧರ್ಮು ನ ಕರೀ । ಘರಚ್ಯಾಂಸೀ ಖಾಊ ನೇದೀ ದರಿದ್ರೀ । ಮಧು ಮಕ್ಷಿಕೇಚ್ಯಾ ಪರೀ । ಸಂಗ್ರಹೋ ಕರೀ ಕಷ್ಟೋನಿ ॥೧೪೫॥ ಮಾಶಾ ಮೋಹಳ ಬಾಂಧಿತೀ ಬಳೇ । ಮಾಜೀ ಸಾಂಚಲೇ ಮಧಾಚೇ ಗೋಳೇ । ತೇ ದೇಖೊನಿ ಜಗಾಚೇ ಡೋಳೇ । ಉಪಾಯಬಳೇ ಘೇವೋ ಪಾಹಾತೀ ॥೧೪೬॥ ಮಗ ಝಾಡೀಖೋಡೀ ಅರಡೀದರಡೀ । ಜೇಥಿಂಚ್ಯಾ ತೇಥ ಜಗು ಝೋಡೀ । ಭರತೀ ಮಧಾಚಿಯಾ ಕಾವಡೀ । ತೇ ಸೇವಿತೀ ಗೋಡೀ ಶ್ರೀಮಂತ ॥೧೪೭॥ ಮಾಶಾ ಮಧು ನ ಖಾತೀ ಕಾಕುಳತೀ । ಝಾಡಿತ್ಯಾ ಚೇ ಹಾತ ಮಾಖಿತೀ । ಸ್ವಾದು ಶ್ರೀಮಂತ ಸೇವಿತೀ । ಜ್ಯಾಸೀ ಲಕ್ಷ್ಮೀಪತೀ ಪ್ರಸನ್ನ ॥೧೪೮॥ ತೈಸೇಚಿ ಕೃಪಣಾಚೇ ಯಕ್ಷಧನ । ನಾಹೀ ದಾನಧರ್ಮಸಂರಕ್ಷಣ । ತ್ಯಾತೇ ತಸ್ಕರ ನೇತೀ ಮಾರೂನ । ತ್ಯಾಂಸಹೀ ದಂಡೂನ ರಾಜಾ ನೇ ॥೧೪೯॥ ಜೇ ಶಿಣೋನಿ ಸಂಗ್ರಹ ಕರಿತೀ । ತ್ಯಾಂಸೀ ನವ್ಹೇ ಭೋಗಪ್ರಾಪ್ತೀ । ತೇ ದ್ರವ್ಯೇ ಅಪರಿಗ್ರಹೀ ಸೇವಿತೀ । ದೈವಗತೀ ವಿಚಿತ್ರ ॥೧೫೦॥ ಪ್ರಯಾಸೇ ಗೃಹಸ್ಥ ಕರವೀ ಅನ್ನ । ತೇ ಸನ್ಯಾಸೀ ನ ಶಿಣತಾ ಜಾಣ। ಕರೂನಿ ಜಾಯ ಭೋಜನ। ಅದೃಷ್ಟ ಪ್ರಮಾಣ ಯೇ ಅರ್ಥೀ ॥೧೫೧॥ ಯಾಲಾಗೀ ದೈವಾಧೀನ ಜೋ ರಾಹೇ । ತೋ ಸಂಗ್ರಹಾಚೀ ಚಾಡ ನ ವಾಹೇ । ತೇ ಅದೃಷ್ಟಚೀ ಸಾಹ್ಯ ಆಹೇ । ಕೃಪಣತಾ ವಾಯೇ ಕರಿತಾತಿ ॥೧೫೨॥

ಸುದುಃಖೋಪಾರ್ಜಿತೈರ್ವಿತ್ತೈರಾಶಾಸಾನಾಂ ಗೃಹಾಶಿಷಃ ।
ಮಧುಹೇವಾಗ್ರತೋ ಭುಂಕ್ತೇ ಯತಿರ್ವೈ ಗೃಹಮೇಧಿನಾಮ್ ॥೧೯॥

ಅರ್ಥ :- ಜೇನು ನೊಣವು ಶ್ರಮಪಟ್ಟು ಕೂಡಿಟ್ಟ ಮಧುವನ್ನು ಬೇಡನು ಹೇಗೆ ಅಪಹರಿಸುವನೋ ಹಾಗೆ, ಸಂಸಾರ ಸುಖ ಲೋಲುಪ್ತರಾದ ಗೃಹಸ್ಥರು ಕಷ್ಟಪಟ್ಟು ಸಂಗ್ರಹಿಸಿಟ್ಟ ಸ್ವತ್ತನ್ನು ಭೋಗಿಸಲು ಬ್ರಹ್ಮಚಾರಿಗಳು ಮತ್ತು ಸಾಧುಪುರುಷರು ಅಧಿಕಾರಿಗಳು.

ದುಃಖೇ ಉಪಾರ್ಜೂನಿ ವಿತ್ತ । ಗೃಹಸಾಮಗ್ರೀ ನಾನಾ ಪದಾರ್ಥ । ತ್ಯಾಚೇ ಪಾಕ ಕರವೀ ಗೃಹಸ್ಥ । ನಿಜಭೋಗಾರ್ಥ ಆವಡೀ ॥೧೫೩॥ ತೇಥ ಸಮಯೀ ಆಲಾ ಅತಿಥ । ಸನ್ಯಾಸೀ ಬ್ರಹ್ಮಚಾರೀ ಅನ್ನಾರ್ಥ । ಗೃಹಸ್ಥ ಆಧೀ ತೋ ಸೇವಿತ । ತೋಂಡ ಪಾಹತ ಗೃಹಮೇಧೀ ॥೧೫೪॥ ತೈಸೇ ದವಡೂನ ಮೋಹಳಮಾಶಿಯಾಂಸೀ । ಮಧುಹರ್ತಾ ಮಧು ಪ್ರಾಶೀ । ತೈಸೇ ಹೋಯ ಗೃಹಸ್ಥಾಸೀ । ನೇತೀ ಸನ್ಯಾಸೀ ಸಿದ್ಧಪಾಕು ॥೧೫೫॥ ಸಮಯೀ ಪರಾಂಗ್‌ಮುಖ ಝಾಲಿಯಾ ಯತೀ । ಸಕಳ ಪುಣ್ಯೇ ಕ್ಷಯಾ ಜಾತೀ । ಯಥಾಕಾಳಿ ಆಲಿಯಾ ಅತಿಥೀ । ಸ್ವಧರ್ಮು ರಕ್ಷಿತೀ ಸರ್ವಥಾ ॥೧೫೬॥

ಕೃಪಣ ಮನುಷ್ಯನು ತಾನೂ ತಿನ್ನುವುದಿಲ್ಲ. ಹಾಗೂ ಮನೆ ಮಂದಿಗೂ ತಿನ್ನಿಸಿಕೊಡುವುದಿಲ್ಲ. ಜೇನುನೊಣದಂತೆ ಕಷ್ಟಪಟ್ಟು ಬೇಕಾದಷ್ಟು ಸಂಗ್ರಹಮಾಡಿ ಇಡುವನು ॥೧೪೫॥ ಜೇನುನೊಣಗಳು ಬಹಳ ಕಷ್ಟದಿಂದ ಜೇನು ಹುಟ್ಟನ್ನು ಕಟ್ಟುವುವು. ಅದರಲ್ಲಿ ಜೇನಿನ ಸಂಗ್ರಹ ಮಾಡುವುವು. ಇದು ಜಗತ್ತಿನ ಜನರಿಗೆ ಗೊತ್ತಾಗಲು ಅವರು ಜೇನನ್ನು ಪಡೆಯಲು ಪ್ರಯತ್ನಿಸುವರು ॥೧೪೬॥ ಆಗ ಗಿಡಗಂಟಿಗಳಲ್ಲಾಗಲಿ ಪರ್ವತದ ಮೇಲ್ಬಂಡೆಯಲ್ಲಾಗಲೀ ಇಟ್ಟಿರುವ ಜೇನುಹುಟ್ಟನ್ನು ಝಾಡಿಸಿ ಅಲ್ಲಿಯೇ ತಮ್ಮ ಪಾತ್ರೆಯಲ್ಲಿ ಜೇನನ್ನು ತುಂಬುವರು. ತದನಂತರ ಶ್ರೀಮಂತರು ಇದರ ಸ್ವಾದವನ್ನು ಸೇವಿಸುವರು ॥೧೪೭॥ ಪಾಪ, ಆ ಜೇನುನೊಣಗಳು ತಾವು ಕೂಡಿಸಿಟ್ಟ ಜೇನನ್ನು ತಿನ್ನದೇ ಜೇನು ಬಿಡಿಸಲು ಬಂದವನ ಕೈಗಳನ್ನು ನೆಕ್ಕುವವು. ಲಕ್ಷ್ಮೀಪತಿಯ ಕೃಪೆ ಇರುವ ಧನಿಕರು ಈ ಜೇನಿನ ಸವಿಯನ್ನು ಸವಿಯುವರು ॥೧೪೮॥ ಅದರಂತೆ ಕೃಪಣನು ಕೂಡಿಸಿಟ್ಟ ಸಂಪತ್ತು ಇರುವುದು. ಇವನಿಗೆ ದಾನ, ಧರ್ಮ, ಪರೋಪಕಾರ ಇವು ಯಾವುವೂ ತಿಳಿದಿರುವುದಿಲ್ಲ. ಈ ಧನವನ್ನು ಕೊನೆಗೆ ಕಳ್ಳರು ಕದ್ದು ಒಯ್ಯುವರು. ಈ ಕಳ್ಳರಿಗೆ ರಾಜನು ದಂಡಿಸಿ ಆ ಧನವನ್ನು ತಾನು ಕಿತ್ತಿಕೊಳ್ಳುವನು ॥೧೪೯॥ ಯಾವನು ಕಷ್ಟಪಟ್ಟು ಅತಿಯಾಗಿ ಸಂಗ್ರಹಿಸುವನೋ ಅವನಿಗೆ ಇದರಿಂದ ಯಾವ ಸುಖವೂ ಲಭಿಸುವುದಿಲ್ಲ ಮತ್ತು ಯಾರು ಸಂಗ್ರಹದ ಗೋಜಿಗೆ ಹೋಗುವುದಿಲ್ಲವೋ, ಅವರು ಇದರ ಉಪಭೋಗವನ್ನು ಸಹಜವಾಗಿ ತೆಗೆದುಕೊಳ್ಳುವರು. ಹೀಗೆ ಇದು ದೇವರ ವಿಚಿತ್ರ ಲೀಲೆಯಾಗಿರುವುದು ॥೧೫೦॥ ಗೃಹಸ್ಥನು ಬಹು ಕಷ್ಟಪಟ್ಟು ಅಡುಗೆಯನ್ನು ಸಿದ್ಧಗೊಳಿಸುವನು. ಆದರೆ ಸನ್ಯಾಸಿಯು ಯಾವುದೇ ಕಷ್ಟಪಡದೆಯೇ ಭೋಜನವನ್ನು ಮಾಡಿ ಹೋಗುವನು. ಈ ಘಟನೆಯಿಂದ ವಿಚಾರಿಸಿದರೆ ಅದೃಷ್ಟವೇ ನಿಜವೆಂದು ನಿಶ್ಚಯವಾಗುವುದು ॥೧೫೧॥ ಆದ್ದರಿಂದ ದೇವರ ಅಧೀನರಾಗಿರುವವರು ಸಂಗ್ರಹದ ಇಚ್ಛೆಯನ್ನು ಧರಿಸುವುದಿಲ್ಲ. ದೇವರೇ ಇವರಿಗೆ ಸಹಾಯವನ್ನು ಮಾಡುತ್ತಿರುವನು. ಆದರೂ ಜನರು ನಿಷ್ಕಾರಣವಾಗಿ ಕೃಪಣತನವನ್ನು ಮಾಡುವರು ॥೧೫೨॥

ಗೃಹಸ್ಥಾಶ್ರಮಿಯು ಬಹು ಸಾಯಾಸಪಟ್ಟು ಹಣವನ್ನು ಕೂಡಿಸುವನು. ಮತ್ತು ಮನೆಯಲ್ಲಿ ಅವಶ್ಯಕವಾಗಿರುವ ಪ್ರಪಂಚದ ಸಾಮುಗ್ರಿಗಳನ್ನು ಮತ್ತು ಅನೇಕ ಪ್ರಕಾರದ ಪದಾರ್ಥಗಳನ್ನು ಕೂಡಿಸಿ ಬಹು ಪ್ರೀತಿಯಿಂದ ಅಡುಗೆಯನ್ನು ತಯಾರಿಸುವನು ॥೧೫೩॥ ಆದರೆ ಭೋಜನದ ವೇಳೆಯಲ್ಲಿ ಸನ್ಯಾಸಿಯಾಗಲೀ, ಬ್ರಹ್ಮಚಾರಿಯಾಗಲಿ ಮನೆಗೆ ಬರಲು ಆಗ ಆ ಗೃಹಸ್ಥನಲ್ಲಿ ಎಲ್ಲರಕ್ಕಿಂತಲೂ ಮೊದಲೇ ಭೋಜನವನ್ನು ಮಾಡಿ ಹೋಗುವನು. ಆಗ ಆ ಗೃಹಸ್ಥನು ಅವರ ಮುಖದತ್ತ ನೋಡುತ್ತಿರುವನು ॥೧೫೪॥ ಹುಟ್ಟಿನಲ್ಲಿರುವ ಜೇನು ನೊಣಗಳನ್ನು ಓಡಿಸಿ ಜೇನು ಲುಪಟಾಯಿಸುವವರು ಆ ಜೇನನ್ನು ತಾವು ಸೇವಿಸುವರು. ಇದೇ ಸ್ಥಿತಿಯು ಈ ಗೃಹಸ್ಥರಿಗಾಗುವುದು. ಸನ್ಯಾಸಿ ಅಥವಾ ಅತಿಥಿ ಪಾಕಗೊಂಡ ಅನ್ನವನ್ನು ಉಂಡು ಹೋಗುವರು ॥೧೫೫॥ ಭೋಜನ ಸಮಯದಲ್ಲಿ ಸನ್ಯಾಸಿಯು ಹಾಗೆಯೇ ಹೋದರೆ ಗೃಹಸ್ಥನ ಸರ್ವ ಪುಣ್ಯದ ಕ್ಷಯವಾಗುವುದು. ಯಥಾಕಾಲದಲ್ಲಿ ಅತಿಥಿ ಬರಲು ಈತನು ಧರ್ಮದ ರಕ್ಷಣೆಯನ್ನು ಮಾಡುತ್ತಿರುವನು ॥೧೫೬॥

ಅರ್ಥ ಸಂಗ್ರಹಾಚೀ ಬಾಧಕತಾ । ತುಜ ಮ್ಯಾ ಸಾಂಗೀತಲಿ ತತ್ತ್ವತಾ । "ಮೃಗ"ಗುರು ಕೇಲಾ ಸರ್ವಥಾ । ತೇಹೀ ಕಥಾ ಪರಿಯೇಸೀ ।।೧೫೭।।

ಗ್ರಾಮ್ಯಗೀತಂನ ಶೃಣುಯಾದ್ ಯತಿರ್ವನಚರಃ ಕ್ವಚಿತ್ ।
ಶಿಕ್ಷೇತ ಹರಿಣಾದ್ ಬದ್ಧಾನ್ಮೃಗಯೋರ್ಗೀತ ಮೋಹಿತಾತ್ ।।೧೭।।

ಅರ್ಥ :- ಅರಣ್ಯದಲ್ಲಿ ವಾಸಿಸುವ ಸನ್ಯಾಸೀ, ಸಾಧು ಪುರುಷನು ವಿಷಯಗಳನ್ನು ಉತ್ತೇಜಿಸುವ ಗಾನ ಸಂಗೀತವನ್ನು ಕೇಳಬಾರದು. ಬೇಡನ ಗಾಯನಕ್ಕೆ ಮೋಹಿತವಾಗಿ ಜಿಂಕೆಯು ಬಲೆಗೆ ಬಿದ್ದು ಸಾಯುವುದನ್ನು ನೋಡಿ ಪಾಠ ಕಲಿಯಬೇಕು.

ಗ್ರಾಮ್ಯ ಜನವಾರ್ತಾ । ಕಾ ಗ್ರಾಮ್ಯ ಸ್ತ್ರೀಯಾಂಚ್ಯಾ ಗೀತಾ । ಐಕೇ ಜೋ ಕಾ ತತ್ತ್ವತಾ । ಬಂಧ ಸರ್ವಥಾ ತೋ ಪಾವೇ ।।೧೫೮।। ಅಖಂಡ ಪಾಹತಾ ದೀಪಾಕಡೇ । ಘಂಟಾನಾದೇ ಝಾಲೇ ವೇಡೇ । ಮೃಗ ಪಾಹೋ ವಿಸರಲಾ ಪುಢೇ । ಫಾಂಸೀ ಪಡೇ ಸರ್ವಥಾ ।।೧೫೯।। ಗ್ರಾಮ್ಯ ಯೋಷಿತಾಂಚೇ ಗೀತ । ಐಕತಾ ಕೋಣಾಚೇ ಭುಲೇನಾ ಚಿತ್ತ । ಮೃಗಾಚ್ಯಾ ಐಸಾ ಮೋಹಿತ । ಹೋಯ ನಿಶ್ಚಿತ ನಿಜಸ್ವಾರ್ಥಾ ।।೧೬೦।। ಜೋ ಬೋಲಿಜೇ ತಾಪಸಾಂಚಾ ಮುಕುಟೀ । ಜ್ಯಾಸಿ ಸ್ತ್ರೀಯಾಂಸೀ ನಾಹೀ ಭೇಟಗೋಷ್ಟೀ । ತೋ ಋಷ್ಯಶೃಂಗ ಉಠಾ ಉಠೀ । ಸ್ತ್ರೀಗೀತಾಸಾಠೀ ಭುಲಲಾ ।।೧೬೧।।

ನೃತ್ಯವಾದಿತ್ರಗೀತಾನಿ ಜುಷನ ಗ್ರಾಮ್ಯಾಣಿ ಯೋಷಿತಾಮ್ ।
ಆಸಾಂ ಕ್ರೀಡನಕೋ ವಶ್ಯ ಋಷ್ಯಶೃಂಗೋ ಮೃಗೀಸುತಃ ।।೧೮।।

ಅರ್ಥ :- ಹೆಣ್ಣು ಜಿಗರೆಯ ಗರ್ಭದಲ್ಲಿ ಹುಟ್ಟಿದ ಋಷ್ಯಶೃಂಗ ಮುನಿಯು ಮಹಾತಪಸ್ವಿಯಾಗಿದ್ದರೂ ಕೂಡ ಸುಂದರಸ್ತ್ರೀಯರ ವಿಷಯೀಕ ಗಾನಗಳನ್ನು ಕೇಳಿ ನರ್ತನಾದಿ ಮನೋರಂಜನೆಗಳಿಂದ ಮೋಹಿತನಾಗಿ ಸಾಕು ಪ್ರಾಣಿಯಂತೆ ಸಂಪೂರ್ಣವಾಗಿ ಅವರ ದಾಸನಾದನು.

ಮಧುರ ವೀಣಾಗುಣಕ್ವಣಿತ । ಗ್ರಾಮ್ಯ ಸ್ತ್ರೀಯಾಂಚೇ ಗೀತ ನೃತ್ಯ । ದೇಖತಾ ಪುರುಷ ವಶ್ಯ ಹೋತ । ಜೈಸೇ ಗಳಬಂಧಸ್ಥ ವಾನರ ।।೧೬೨।। ಜೋ ತಾಪಸಾಮಾಜೀ ಜಗಜೇಠೀ । ಜೋ ಜನ್ಮಲಾ ಮೃಗೀಚ್ಯಾ ಪೋಟೀ । ಜೋ ನೇಣೇ ಸ್ತ್ರೀಯಾಂಚೀ ಭೇಟೀಗೋಠೀ । ನ ಪಾಹೇ ದೃಷ್ಟೀ ಯೋಷಿತಾ ।।೧೬೩।। ತೋ ಋಷ್ಯಶೃಂಗ ಸ್ತ್ರೀದೃಷ್ಟೀ । ವಶ್ಯ ಜಾಹಲಾ ಉಠಾಉಠೀ । ಧಾಂವೇ ಯೋಷಿತಾಂಚೇ ಪಾಠೋವಾಠೀ । ತ್ಯಾಂಚೇ ಗೋಷ್ಟೀಮಾಜೀ ವರ್ತೇ ।।೧೬೪।। ಗಾರುಡ್ಯಾಚೇ ವಾನರ ಜೈಸೇ । ಸ್ತ್ರೀಯಾಸಂಗೇ ನಾಚೇ ತೈಸೇ । ಪ್ರಮದಾದೃಷ್ಟಿ ಜಾಹಲಾ ಪಿಸೇ । ವಿವೇಕು ಮಾನಸೇ ವಿಸರಲಾ ।।೧೬೫।। ವಿಸರಲಾ ತಪಾಚಾ ಖಟಾಟೋಪು । ವಿಸರಲಾ ವಿಭಾಂಡಕ ಬಾಪು । ವಿಸರಲಾ ಬ್ರಹ್ಮಚರ್ಯಕೃತ ಸಂಕಲ್ಪು । ಸ್ತ್ರಿಯಾನುರೂಪು ನಾಚತು ।।೧೬೬।।

ಅರ್ಥ ಸಂಗ್ರಹವು ಹೇಗೆ ಬಾಧಿಸುವುದೆಂಬುವ ತತ್ವವನ್ನು ನಿನಗೆ ಹೇಳಿದೆನು. ಈಗ ಮೃಗವನ್ನು ಗುರು ಮಾಡಿಕೊಂಡು ಏನು ಕಲಿತೆ ಎಂಬುದು ಹೇಳುವೆ, ಈ ಕಥೆಯನ್ನು ಕೇಳು ।।೧೫೭।।

ಗ್ರಾಮ್ಯ ಜನರ ವ್ಯಸನಗಳ ವಾರ್ತೆ ಅಥವಾ ಗ್ರಾಮ್ಯ ಸ್ತ್ರೀಯರ ಹಾಡುಗಳನ್ನು ಕೇಳುವವರು ನಿಜವಾಗಿಯೂ ಬಂಧನದಲ್ಲಿ ಸಿಲುಕಿಕೊಳ್ಳುವರು ।।೧೫೮।। ದೀಪದತ್ತ ಸತತವಾಗಿ ನೋಡುವಾಗ ಘಂಟಾನಾದದಿಂದ ಜಿಗರೆಯು ಮರುಳಾಗಿ ಮುಂದೆ ಯಾವುದೂ ಕಾಣಿಸದಾಗಿ ಬಲೆಯಲ್ಲಿ ಸಿಲುಕಿಕೊಳ್ಳುವುದು ।।೧೫೯।। ಗ್ರಾಮ್ಯ ಸ್ತ್ರೀಯರ ಗಾನಗಳನ್ನು ಕೇಳಿ ಯಾರ ಮನಸ್ಸು ಮರುಳಾಗುವುದಿಲ್ಲ ? ಇವರೂ ಸಹ ಆ ಜಿಗರೆಯಂತೆ ಸ್ವಾರ್ಥದಿಂದ ಮೋಹದಲ್ಲಿ ಬೀಳುವರು ।।೧೬೦।। ತಪಸ್ವೀ ಜನರಲ್ಲಿ ಮುಕುಟಮಣಿಯಾಗಿರುವ ಋಷ್ಯಶೃಂಗನಿಗೆ ಸ್ತ್ರೀಯರ ಭೇಟಿ ಎಂದೂ ಆಗಿದ್ದಿಲ್ಲ. ಹಾಗೆಯೇ ಸ್ತ್ರೀಯರೊಡನೆ ಎಂದೂ ಮಾತನಾಡಿದ್ದಿಲ್ಲ. ಹೀಗಿದ್ದರೂ ಒಂದು ದಿನ ಸ್ತ್ರೀಯರ ಗಾನವನ್ನು ಕೇಳಿ ತಕ್ಷಣ ಮೋಹಿತನಾದನು ।।೧೬೧।।

ವೀಣೆಯಿಂದ ಹೊರಟ ತಂತಿಗಳ ಮಂಜುಳ ನಾದದಿಂದ ಗ್ರಾಮ್ಯ ನರ್ತಕಿಯ ನರ್ತನ, ಗಾಯನಗಳನ್ನು ಕೇಳಿ ಪುರುಷನು ಕೊರಳಲ್ಲಿ ಹಗ್ಗವನ್ನು ಕಟ್ಟಿಕೊಂಡ ಆ ಮರ್ಕಟದಂತೆ ವಶನಾಗುವನು ।।೧೬೨।। ಜಿಗರೆಯ ಗರ್ಭದಲ್ಲಿ ಜನ್ಮಿಸಿರುವ, ತಪಸ್ವಿಗಳವರಲ್ಲಿ ಅತ್ಯಂತ ಶ್ರೇಷ್ಠ ತಪಸ್ವಿಯಾಗಿರುವ, ಸ್ತ್ರೀಯರ ದರ್ಶನ, ಸಂಭಾಷಣ ಅರಿಯದಿರುವ, ಸ್ತ್ರೀಯರನ್ನು ಎಂದೂ ನೋಡದಿರುವ ।।೧೬೩।। ಇಂತಹ ತಪಸ್ವಿಯಾಗಿರುವ ಋಷ್ಯಶೃಂಗನು ಸ್ತ್ರೀಯರು ದೃಷ್ಟಿಗೆ ಬೀಳುತ್ತಲೇ ತತ್ಕಾಲದಲ್ಲಿ ಅವರ ವಶನಾದನು. ಅವರ ಹಿಂದೆ ಹಿಂದೆ ಧಾವಿಸಲಾರಂಭಿಸಿದನು. ಮತ್ತು ಅವರು ಹೇಳಿದಂತೆ ಕೇಳಹತ್ತಿದನು ।।೧೬೪।। ಗಾರುಡಿಯ ಮಂಗನಂತೆ ಈತನು ಸ್ತ್ರೀಯರ ಜೊತೆಯಲ್ಲಿ ಕುಣಿಯ ಹತ್ತಿದನು. ಸ್ತ್ರೀಯರ ದರ್ಶನದಿಂದ ಮೈಮರೆತು ಹುಚ್ಚನಾದನು. ಕೊನೆಗೆ ತನ್ನ ವಿವೇಕವನ್ನೇ ಮರೆತು ಬಿಟ್ಟನು ।।೧೬೫।। ಈತನು ತನ್ನ ತಪವನ್ನು ಮರೆತನು. ತನ್ನ ಪಿತನಾದ ವಿಭಾಂಡಕ ಮುನಿಯನ್ನು ಮರೆತನು. ಬ್ರಹ್ಮಚರ್ಯ ಸಂಕಲ್ಪದ ವ್ರತವನ್ನು ಮರೆತನು. ಈತನೀಗ ಸ್ತ್ರೀಯರಂತೆ ಕುಣಿಯಲಾರಂಭಿಸಿದನು ।।೧೬೬।।

ಸ್ತ್ರೀಬೋಧೇ ಏವಢಾ ಬಾಧು । ಸಂಸಾರೀ ಆಣಿಕ ನಾಹೀ ಗಾ ಸುಬುದ್ಧು । ನಕೋ ನಕೋ ಸ್ತ್ರೀಯಾಂಚಾ ವಿನೋದು । ದುಃಖಿಸಂಬಂಧು ಸರ್ವಾಸೀ ॥೧೬೭॥ ವಾರಿಲೇ ನಾಇಕಾವೇ ಗ್ರಾಮ್ಯ ಗೀತಾ । ಹೇ ಸತ್ಯ ಸತ್ಯ ಗಾ ಸರ್ವಥಾ। ತೇಥೇ ಹರಿಕೀರ್ತನ ಕಥಾ । ಜಾಹಲ್ಯಾ ಪರಮಾರ್ಥತಾ ಐಕಾವೇ ॥೧೬೮॥ ರಾಮನಾಮೇ ವಿವರ್ಜಿತ । ಗ್ರಾಮಣೀ ಬೋಲಿಜೇ ತೇ ''ಗ್ರಾಮ್ಯಗೀತ'' । ತೇ ನಾಇಕಾವೇ ನಿಶ್ಚಿತ । ಕವತುಕೇ ತೇಥ ನ ವಚಾವೇ ॥೧೬೯॥ "ಮೀನ" ಗುರು ಕರಣೇ । ತೇಹೀ ಅವಧಾರಾ ಲಕ್ಷಣೇ । ರಸನೇಚೇನಿ ಲೋಲುಪ್ಯಪಣೇ । ಜೀವೇ ಪ್ರಾಣೇ ಜಾತಸೇ ॥೧೭೦॥

ಜಿಹ್ವಯಾತಿಪ್ರಮಾಥಿನ್ಯಾ ಜನೋ ರಸವಿಮೋಹಿತಃ ।
ಮೃತ್ಯುಮೃಚ್ಛತ್ಯ ಸದ್ಬುದ್ಧಿರ್ಮೀನಸ್ತು ಬಡಿಶೈರ್ಯಥಾ ॥೧೯॥

ಅರ್ಥ :- ಮೀನವು ತನ್ನ ಜಿಹ್ವಾಚಾಪಲ್ಯವನ್ನು ತಣಿಸಿಕೊಳ್ಳುವ ಅಪೇಕ್ಷೆಯಿಂದ ಬೆಸ್ತನ ಪ್ರಾಣಾಂತಿಕವಾದ ಗಾಳಕ್ಕೆ ಸಿಕ್ಕಿ ಸಾಯುತ್ತದೆ. ಅದೇ ರೀತಿಯಾಗಿ ಮೂಢಮತಿಯು ಕೋಲಾಹಲಕಾರಿಯಾದ ಜಿಹ್ವಾಚಾಪಲ್ಯಕ್ಕೆ ಮೋಹಿತನಾಗಿ ನಾಶನಾಗುತ್ತಾನೆ.

ಅರ್ಥ-ಸಂಗ್ರಹೇ ಜೀವಘಾತು । ಸ್ತ್ರೀಯಾ ಆಸಕ್ತೀ ಅಧಃಪಾತು । ರಸನಾಲೋಲುಪ್ಯೇ ಪಾವೇ ಮೃತ್ಯು । ವಿವಿಧ ಘಾತು ಜೀವಾಸೀ ॥೧೭೧॥ ಜ್ಯಾಸೀ ರಸನಾಲೋಲುಪ್ಯತಾ ಗಾಢೀ । ತ್ಯಾಸೀ ಅನರ್ಥುಚಿ ಜೋಡೇ ಜೋಡೀ । ದುಃಖಾಚ್ಯಾ ಭೋಗವೀ ಕೋಡೀ । ರಸನ ಗೋಡೀ ಬಾಧಕ ॥೧೭೨॥ ರಸನಾ ಆಮಿಷಾಚೀ ಗೋಡೀ । ಲೋಲುಪ್ಯೇ ಮೀನು ಗಿಳೀ ಉಂಡೀ । ಸವೇಂಚಿಗಳು ಟಾಳೂ ಫೋಡೀ । ಮಗ ಚರಫಡೀ ಅಡಕಲಿಯಾ ॥೧೭೩॥ ಪಾಹತಾ ರಸ ಉತ್ತಮ ದಿಸತ । ಭೀತರೀ ರೋಗಾಂಚೇ ಗಳ ಗುಪ್ತ । ರಸ ಆಸಕ್ತೀ ಜೇ ಸೇವಿತ । ತೇ ಚಡಫಡಿತ ಭವರೋಗೇ ॥೧೭೪॥ ಗಳೀ ಅಡಕಲಾ ಜೋ ಮಾಸಾ । ತೋ ಜಿತಾ ನ ಮರೇ ಚರಫಡೀ ಜೈಸಾ । ತೇವೀ ರೋಗುಲಾಗಲ್ಯಾ ಮಾಣಸಾ । ದುಃಖದುರ್ದಶಾ ಭೋಗಿತ ॥೧೭೫॥ ಜೋ ರಸನಾಲೋಲುಪ್ಯೇ ಪ್ರಮಾದೀ । ತ್ಯಾಸೀ ಕೈಂಚೀ ಸುಬುದ್ಧೀ । ಜನ್ಮ ಮರಣೇ ನಿರವಧೀ । ಭೋಗೀ ತ್ರಿಶುದ್ಧೀ ರಸದೋಷೇ ॥೧೭೬॥ ರಸ ಸೇವಿಲಿಯಾಸಾಠೀ । ಭೋಗವೀ ಜನ್ಮಾಂಚಿಯಾ ಕೋಟೀ । ಹೇ ನ ಘಡೇ ಮ್ಹಣಸೀ ಪೋಟೀ । ರಾಯಾ ತೇ ಗೋಠೀ ಪರಿಯೇಸೀ ॥೧೭೭॥ ಇಂದ್ರಿಯಾಂಚೀ ಸಜೀವತಾ । ತೇ ರಸನೇ ಆಧೀನ ಸರ್ವಥಾ । ರಸನಾದ್ವಾರೇ ರಸ ಘೇತಾ । ಉನ್ಮತ್ತತಾ ಇಂದ್ರಿಯಾ ॥೧೭೮॥ ಮಾತಲೀ ಜೇ ಇಂದ್ರಿಯಸತ್ತಾ । ತೇ ನೇಊನ ಘಾಲೀ ಅಧಃಪಾತಾ । ರಸನಾ ನ ಜಿಣತಾ ಸರ್ವಥಾ । ಭವವ್ಯಥಾ ಚುಕೇನಾ ॥೧೭೯॥

ಆದ್ದರಿಂದ ಈ ಸಂಸಾರದಲ್ಲಿ ಸ್ತ್ರೀಯರಿಗಿಂತಲೂ ಮಿಗಿಲಾದ ಪ್ರಚಂಡ ಬಾಧಕವು ಇನ್ನೊಂದಿಲ್ಲ. ಅದಕ್ಕಾಗಿಯೇ ಸ್ತ್ರೀಯರಲ್ಲಿ ವಿನೋದ ಚೇಷ್ಟೆಗಳು ಎಂದೂ ಉಪಯೋಗಕ್ಕೆ ಬರಲಾರವು. ಆಕೆಯು ಸರ್ವರಿಗೂ ದುಃಖಗಳನ್ನು ಕೊಡುವವಳಾಗಿರುವಳು ॥೧೬೭॥ ಆದ್ದರಿಂದ ಗ್ರಾಮ್ಯಗೀತಗಳನ್ನು ಎಂದೆಂದಿಗೂ ಕೇಳಬಾರದು. ಇದು ತ್ರಿವಾರ ಸತ್ಯವಾಗಿರುವುದು. ಅಲ್ಲಿ ಒಂದು ವೇಳೆ ಹರಿಕೀರ್ತನವು ನಡೆದಿದ್ದರೆ ಮಾತ್ರ ಅದನ್ನು ಪರಮಾರ್ಥ ದೃಷ್ಟಿಯಿಂದ ಶ್ರವಣವನ್ನು ಮಾಡಬೇಕು ॥೧೬೮॥ ಗ್ರಾಮ್ಯ ಪುರುಷನು ಹಾಡುವ ರಾಮನಾಮರಹಿತ ಗೀತಗಳಿಗೆ ಗ್ರಾಮ್ಯಗೀತಗಳೆಂದು ಹೆಸರು. ಈ ಗೀತೆಗಳನ್ನು ಎಂದಿಗೂ ಕಿವಿಗೆ ಹಾಕಿಕೊಳ್ಳಬಾರದು. ಕೌತುಕದಿಂದಾಗಲೀ ಅಲ್ಲಿ ಹಣಿಕಿ ನೋಡಬಾರದು ॥೧೬೯॥ ಈಗ ನಾನು ಮೀನಕ್ಕೆ ಗುರುವನ್ನಾಗಿ ಮಾಡಿಕೊಂಡೆನು. ಅದರ ಲಕ್ಷಣಗಳನ್ನು ಕೇಳು, ಈ ಮೀನವು ಕೇವಲ ರಸನೆಯ ಲೋಲುಪ್ಯತೆಯಿಂದ ಪ್ರಾಣವನ್ನು ಕಳೆದುಕೊಳ್ಳುವುದು ॥೧೭೦॥

ಸಂಪತ್ತಿನ ಸಂಗ್ರಹದಿಂದ ಜೀವದ ಘಾತವಾಗುವುದು. ಸ್ತ್ರೀಯರ ಸಂಗತಿಯಿಂದ ಅಧಃಪಾತವಾಗುವುದು. ಮತ್ತು ನಾಲಿಗೆಯ ಲೋಲುಪ್ಯತೆಯಿಂದ ಪ್ರಾಣ ಹೋಗುವುದು. ಹೀಗೆ ಜೀವಕ್ಕೆ ಮೂರು ಪ್ರಕಾರಗಳ ಘಾತಕಗಳಿರುವುವು ॥೧೭೧॥ ಯಾರ ನಾಲಿಗೆಗೆ ರಸಗಳ ಚಟ ಹತ್ತಿರುವುದೋ, ಅವನು ಅನರ್ಥಗಳಲ್ಲಿ ಬೀಳುವನು. ಮತ್ತು ಕೋಟ್ಯಾವಧಿ ದುಃಖಗಳನ್ನು ಭೋಗಿಸುವನು. ಹೀಗೆ ನಾಲಿಗೆಯ ರುಚಿಯು ಮಹಾಬಾಧಕವಾಗಿರುವುದು ॥೧೭೨॥ ಮೀನಿನ ನಾಲಿಗೆಗೆ ರುಚಿ ತಿನ್ನುವ ಪ್ರೀತಿ ಇರುವುದು. ಆದ್ದರಿಂದ ಮೀನವು ಬಲೆಗೆ ಹಚ್ಚಿರುವ ಮಾಂಸದ ತುಂಡನ್ನು ನುಂಗುತ್ತಲೇ ತಕ್ಷಣ ಬಲೆಯು ಅದರ ನೆತ್ತಿಯನ್ನೇ ಹೊಡೆಯುವುದು. ಆಗ ಬಲೆಯಲ್ಲಿ ಸಿಕ್ಕ ಮೀನವು ಒದ್ದಾಡುತ್ತಿರುವುದು ॥೧೭೩॥ ರಸವು ಮೇಲ್ನೋಟಕ್ಕೆ ಉತ್ತಮವಾಗಿ ಕಾಣಿಸುವುದು. ಆದರೆ ಅದರಲ್ಲಿ ರೋಗರೂಪವಾದ ಗುಪ್ತ ಬಲೆಯು ಇರುವುದು. ಮತ್ತು ಆಸಕ್ತಿಯಿಂದ ರಸಗಳ ಸೇವನೆ ಮಾಡುವವರು ಭವರೋಗದಿಂದ ಒದ್ದಾಡುತ್ತಿರುವರು ॥೧೭೪॥ ಕುತ್ತಿಗೆಯಲ್ಲಿ ಬಲೆಯನ್ನು ಸಿಲುಕಿಕೊಂಡಿರುವ ಮೀನವು ಬದುಕಲೂ ಆಗದೇ ಸಾಯಲೂ ಆಗದೇ ಇನ್ನೂ ಹೆಚ್ಚಾಗಿಯೇ ಒದ್ದಾಡುತ್ತಿರುವುದು. ಇದರಂತೆಯೇ ರೋಗಗ್ರಸ್ಥ ಮನುಷ್ಯನು ದುಃಖಗಳನ್ನು ಭೋಗಿಸುವನು ॥೧೭೫॥ ಒಮ್ಮೆ ರಸನೆಯ ಲೋಲುಪ್ಯತೆಯ ದೋಷವು ಬಡೆಯಿತೆಂದರೆ ಸುಬುದ್ಧಿಯು ಬೆಳೆಯುವುದಿಲ್ಲ. ನಾಲಿಗೆಯ ಆಧೀನನಾಗಿ ಅವನು ಅನಂತ ಜನ್ಮ ಮರಣಗಳನ್ನು ಭೋಗಿಸುವನು ॥೧೭೬॥ ಕೇವಲ ರಸ ವಿಷಯ ಸೇವನೆಯಿಂದ ಕೋಟ್ಯಾವಧೀ ಜನ್ಮಗಳನ್ನು ಎತ್ತಬೇಕಾಗುವುದು. ಹೀಗಾಗಲು ಸಾಧ್ಯವಿಲ್ಲ ಎಂದು ನೀನು ಹೇಳಬಹುದು. ಆದರೆ ಹೇ ರಾಜನೇ, ಅದರ ಉಪಪತ್ತಿಯನ್ನು ಹೇಳುವೆನು, ಅದನ್ನು ಕೇಳು ॥೧೭೭॥ ಇಂದ್ರಿಯಗಳ ಜೀವನವು ಕೇವಲ ರಸನೆಯ ಸ್ವಾಧೀನವಾಗಿರುವುದು. ರಸನೆಯದ್ವಾರಾ ರಸಗಳ ಸೇವನೆ ಮಾಡುವುದರಿಂದ ಇಂದ್ರಿಯಗಳಿಗೆ ಬಲವು ಪ್ರಾಪ್ತವಾಗುವುದು ॥೧೭೮॥ ಇಂದ್ರಿಯಗಳು ಪ್ರಮತ್ತವಾಗಲು ಅವುಗಳಿಂದ ಅಧಃಪಾತವಾಗುವುದು. ರಸನೇಂದ್ರಿಯವನ್ನು ಜಯಿಸದ ಹೊರತಾಗಿ ಭವವ್ಯಾಧಿಯು ಎಂದಿಗೂ ತಪ್ಪುವುದಿಲ್ಲ ॥೧೭೯॥

ಆಹಾರೇವೀಣ ದೇಹ ನ ಚಲೇ । ಸೇವಿಲ್ಯಾ ಇಂದ್ರಿಯವರ್ಗು ಖವಳೇ । ರಸನಾಜಯಾಚೇ ಮೂಳ ಕಳೇ । ತ್ರೈ ದುಃಖೇ ಸಕಳೇ ಮಾವಳತೀ ॥೧೮೦॥

ಇಂದ್ರಿಯಾಣಿ ಜಯಾಂತ್ಯಾಶು ನಿರಾಹಾರಾ ಮನೀಷಿಣಃ । ವರ್ಜಯಿತ್ವಾ ತು ರಸನಂ ತನ್ನಿರನ್ನಸ್ಯ ವರ್ಧತೇ ॥೨೦॥

ಅರ್ಥ :- ವಿವೇಕಿ ಪುರುಷನು ಭೋಜನವನ್ನು ಬಿಟ್ಟು ಬೇರೆ ಇಂದ್ರಿಯಗಳನ್ನು ತ್ವರಿತವಾಗಿ ಸ್ವಾಧೀನ ಪಡಿಸುವನು. ಆದರೆ, ಆತನ ರಸನೇಂದ್ರಿಯವು ಅಂಕಿತವಾಗುವುದಿಲ್ಲ. ಅನ್ನಗ್ರಹಣ ಮಾಡಲಾರದ ಮನುಷ್ಯನ ರಸನೇಂದ್ರಿಯವು ಬೆಳೆಯುತ್ತದೆ.

ಆಹಾರ ವರ್ಜೂನಿ ಸಾಧಕ । ಇತರ ಇಂದ್ರಿಯೇ ಜಿಂತಿಲೀ ದೇಖ । ತಂವ ತಂವ ರಸನಾ ವಾಢೇ ಅಧಿಕ । ತೇ ಅಂಜಿಕ್ಯ ನ ಜಿಂಕವೇ ॥೧೮೧॥ ಇಂದ್ರಿಯಾಸೀ ಆಹಾರಾಚೇ ಬಳ । ತೀ ನಿರಾಹಾರೇ ಝಾಲೀ ವಿಕಳ । ತಂವ ತಂವ ರಸನಾ ವಾಢೇ ಪ್ರಬಳ । ರಸನೇಚೇ ಬಳ ನಿರನ್ನೇ ॥೧೮೨॥

ತಾವಜ್ಜಿತೇಂದ್ರಿಯೋ ನ ಸ್ಯಾದ್ ವಿಜಿತಾನ್ಯೇಂದ್ರಿಯಃ ಪುಮಾನ್ । ನ ಜಯೇದ್ ರಸನಂ ಯಾವಜ್ಜಿತಂ ಸರ್ವಂ ಜಿತೇ ರಸೇ ॥೨೧॥

ಅರ್ಥ :- ಮನುಷ್ಯನು ತನ್ನ ಸರ್ವ ಇಂದ್ರಿಯಗಳನ್ನು ಗೆಲ್ಲಬಹುದು. ಆದರೆ ರಸನೇಂದ್ರಿಯವನ್ನು ಗೆಲ್ಲುವವರೆಗೆ ಆತನಿಗೆ ಇಂದ್ರಿಯಗಳನ್ನು ಗೆದ್ದನು ಎಂದು ಹೇಳುವಂತಿಲ್ಲ. ರಸನೇಂದ್ರಿಯವನ್ನು ಗೆದ್ದರೆ ಮಾತ್ರ ಅವನು ಎಲ್ಲ ಇಂದ್ರಿಯಗಳನ್ನೂ ನಿಗ್ರಹಿಸಿದ್ದಾನೆ ಎಂದು ಹೇಳಬಹುದು.

ನಿರನ್ನೇ ಇಂದ್ರಿಯೇ ಜಿಂತಿಲೀ । ತೀ ಜಿಂತಿಲೀ ಹೇ ಮಿಥ್ಯಾ ಬೋಲೀ । ಅನ್ನ ಘೇತಾಂಚಿ ಸರಸಾವಲೀ । ಸಾವಧ ಜಾಹಲೀ ನಿಜಕರ್ಮೀ ॥೧೮೩॥ ಜಂವ ರಸನಾ ನಾಹೀ ಜಿಂಕಿಲೀ । ತಂವ "ಜಿತೇಂದ್ರಿಯ "ಮಿಥ್ಯಾ ಬೋಲೀ । ಜೈ ಸಾಚಾರ ರಸನಾ ಜಿಂಕಿಲೀ । ತ್ಯೈ ವಾಟ ಮೋಡಿಲೀ ವಿಷಯಾಂಚೀ ॥೧೮೪॥ ವಿಷಯಾ ಆಂತೀಲ ಗೋಡಪಣ। ರಸನೇ ಆಂತೀಲ ಜಾಣಪಣ । ದೋಹೀಸೀ ಐಕ್ಯ ಕೇಲ್ಯಾಜಾಣ । ರಸನಾ ಸಂಪೂರ್ಣ ಜಿಂತಿಲೀ ॥೧೮೫॥ ಸರ್ವಾ ಗೋಡಯಾಂಚೇ ಗೋಡ ಆಹೇ । ತೇ ಗೋಡೀಸ ಜೋ ಲಾಗಲಾ ರಾಹೇ । ತ್ಯಾಸೀಚಿ ರಸನಾ ವಶ್ಯ ಹೋಯೇ । ರಸ- ಅಪಾಯೇ ನ ಬಾಧಿತೀ ॥೧೮೬॥ ರಸನಾಜಿತಾಚೇ ವಾಧಾವಣೇ । ತೇಣೇ ಬ್ರಹ್ಮ ಸಾಯುಜ್ಯೇ ಪಡೇ ಠಾಣೇ । ಸೋಹಳಾ ಪರಮಾನಂದೇ ಭೋಗಣೇ । ರಸನಾ ಜೇಣೇ ಜಿಂತಿಲೀ ॥೧೮೭॥

ಪಿಂಗಲಾ ನಾಮ ವೇಶ್ಯಾಸೀದ್ ವಿದೇಹನಗರೇ ಪುರಾ । ತಸ್ಯಾ ಮೇ ಶಿಕ್ಷಿತಂ ಕಿಂಚನ್ನಿ ಬೋಧ ನೃಪನಂದನ ॥೨೨॥

ಅರ್ಥ :- ಹೇ ರಾಜಪುತ್ರನೇ, ಪೂರ್ವದಲ್ಲಿ ವಿದೇಹನಗರದಲ್ಲಿ ಪಿಂಗಳೆ ಎಂಬ ವೇಶ್ಯೆಯು ನೆಲೆಸಿದ್ದಳು. ಆಕೆಯಿಂದ ನಾನು ಕಲಿತದ್ದು ಏನೆಂಬುದನ್ನು ಹೇಳುವೆ, ಕೇಳು.

ಅವಧೂತ ಮ್ಹಣೇ ನೃಪನಂದನಾ । ''ವೇಶ್ಯಾ'' ಗುರೂ ಮ್ಯಾ ಕೇಲೀ ಜಾಣಾ । ತಿಚ್ಯಾ ಶಿಕಲೋ ಜ್ಯಾ ಲಕ್ಷಣಾ । ವಿಚಕ್ಷಣಾ ಅವಧಾರೀ ॥೧೮೮॥

ಆಹಾರವಿಲ್ಲದೇ ದೇಹವು ನಡೆಯಲಾರದು. ಆಹಾರದಿಂದ ಇಂದ್ರಿಯಗಳು ಪ್ರಬಲವಾಗುವುವು. ಹೀಗಿರಲು ನಾಲಿಗೆಯನ್ನು ಹೇಗೆ ಜಯಿಸಬೇಕೆಂಬುವುದು ತಿಳಿದರೆ ಮಾತ್ರ ಸರ್ವ ದುಃಖಗಳು ಲಯಗೊಳ್ಳುವುವು ॥೧೮೦॥

ಸಾಧಕನು ಆಹಾರವನ್ನು ತ್ಯಜಿಸಿ ಇತರ ಇಂದ್ರಿಯಗಳನ್ನು ಜಯಿಸುವ ಪ್ರಯತ್ನ ಮಾಡುವನು. ಆಗ ರಸನೇಂದ್ರಿಯು ಇನ್ನೂ ಅಧಿಕವಾಗಿಯೇ ಬಲಿಷ್ಠವಾಗುವುದು. ಇದು ಜಯಿಸಲು ಆಗದೇ ಇರುವ ಅಂಜಿಕ್ಯವಾಗಿರುವುದು ॥೧೮೧॥ ಇತರ ಇಂದ್ರಿಯಗಳಿಗೆ ಆಹಾರದ ಬಲವಿರುವುದು. ಆಹಾರವನ್ನು ಸ್ವೀಕರಿಸದಿರಲು ಅವು ಕ್ರಮೇಣ ದುರ್ಬಲಗೊಳ್ಳುವುವು. ಆದರೆ ರಸನೇಂದ್ರಿಯು ಮಾತ್ರ ಇನ್ನೂ ಹೆಚ್ಚು ಹೆಚ್ಚಾಗಿಯೇ ಪ್ರಬಲವಾಗುವುದು. ಅನ್ನ ದೊರೆಯದ್ದಕ್ಕೆ ರಸನೆಯ ಬಲವು ಬೆಳೆಯುವುದು. ॥೧೮೨॥

ನಿರಾಹಾರದಿಂದ ಇಂದ್ರಿಯಗಳನ್ನು ಜಯಿಸಿದೆನು ಎಂದು ಹೇಳುವಿಕೆಯು ಸುಳ್ಳಾಗಿರುವುದು. ಏಕೆಂದರೆ ಪುನಃ ಅನ್ನಗ್ರಹಣ ಮಾಡಲು ಕೂಡಲೇ ಅವುಗಳಿಗೆ ಶಕ್ತಿಯು ಪ್ರಾಪ್ತವಾಗುವುದು. ಆಗ ಅವು ಪುನಃ ತಮ್ಮ ಕಾರ್ಯಗಳಿಗೆ ಪ್ರವೃತ್ತವಾಗುವುವು ॥೧೮೩॥ ರಸನೇಂದ್ರಿಯವನ್ನು ಜಯಿಸದೇ ನಾನು ಜಿತೇಂದ್ರಿಯನು ಎಂದು ಹೇಳಿಕೊಳ್ಳುವುದು ವ್ಯರ್ಥವಾಗಿರುವುದು. ನಾಲಿಗೆಯನ್ನು ಗೆದ್ದಾಗಲೇ ವಿಷಯಗಳ ಮಾರ್ಗವು ಕುಂಠಿತವಾಗುವುದು ॥೧೮೪॥ ವಿಷಯಗಳಲ್ಲಿನ ರುಚಿಯು ಮತ್ತು ರಸನೆಯ ಜ್ಞಾನವು ಈ ಎರಡರ ಐಕ್ಯವಾಯಿತೆಂದರೆ ರಸನೇಂದ್ರಿಯವನ್ನು ಗೆಲ್ಲಬಹುದಾಗಿದೆ ॥೧೮೫॥ ಸರ್ವ ಮಾಧುರ್ಯದ ಮಾಧುರ್ಯವಾಗಿರುವ ಆ ಯಾವ ಆನಂದವನ್ನು ಅರಿತವನಿಗೆ ರಸನೇಂದ್ರಿಯವು ಸಹಜವಾಗಿ ಅಂಕಿತಗೊಳಿಸಲು ಬರುವುದು ॥೧೮೬॥ ರಸನೇಂದ್ರಿಯವನ್ನು ಜಯಿಸಿದ ವಿಜಯೋತ್ಸವದ ಮೆರವಣಿಗೆಯು ಬ್ರಹ್ಮಸಾಯುಜ್ಯದ ಸ್ಥಾನದಲ್ಲಿ ಸ್ಥಾನವನ್ನು ದೊರಕಿಸಿಕೊಡುವುದು. ಈತನಿಗೆ ಮಾತ್ರ ಪರಮಾನಂದದ ನಿಜಸುಖವನ್ನು ಭೋಗಿಸಲು ದೊರೆಯುವುದು ॥೧೮೭॥

ಅವಧೂತನು ಹೇಳುವನು; ಹೇ ರಾಜನೇ, ನಾನೊಬ್ಬ ವೇಶ್ಯೆಯಳನ್ನು ಗುರುವನ್ನಾಗಿ ಮಾಡಿಕೊಂಡೆನು. ಆಕೆಯಿಂದ ಯಾವುದನ್ನು ಕಲಿತೆ ಎಂಬುವುದನ್ನು ಹೇಳುವೆನು, ಈಗ ಕೇಳು ॥೧೮೮॥

ಪೂರ್ವೀ ವಿದೇಹಾಚೇ ನಗರೀ । ''ಪಿಂಗಲಾ'' ನಾಮೇ ವೇಶ್ಯಾ ವಾಸು ಕರೀ । ತಿಸೀ ಆಸನಿರಾಸೇವರೀ । ವೈರಾಗ್ಯ ಭಾರೀ ಉಪಜಲೇ ॥೧೮೯॥

ಸಾ ಸ್ವೈರಿಣ್ಯೇಕದಾ ಕಾಂತಂ ಸಂಕೇತ ಉಪನೇಷ್ಯತೀ ।
ಅಭೂತ್ ಕಾಲೇ ಬಹಿರ್ದ್ವಾರೇ ಬಿಭ್ರತೀ ರೂಪಮುತ್ತಮಮ್ ॥೭೩॥

ಅರ್ಥ :- ಆ ಸ್ವೈರಿಣೀ ಸುಂದರ ವೇಶ್ಯೆಯು ಒಮ್ಮೆ ತನ್ನ ವಸ್ತ್ರಭೂಷಣಗಳಿಂದ ಶೃಂಗರಿಸಿಕೊಂಡು ಪ್ರಿಯಕರನನ್ನು ಮನೆಗೆ ಬರಮಾಡಿಕೊಳ್ಳಲು ಬಯಸಿ ಬಹಳ ಹೊತ್ತು ಬಾಗಿಲ ಬಳಿ ನಿಂತುಕೊಂಡಳು.

ತೇ ಸ್ವೈರಿಣೀ ಸ್ವೇಚ್ಛಾಚಾರೀ । ಸಾಯಂಕಾಳೀ ಉಭೀ ದ್ವಾರೀ । ನಾನಾ ಅಳಂಕಾರ – ಅಂಬರೀ । ಶೃಂಗಾರ ಕುಸರೀ ಶೋಭತ ॥೧೯೦॥ ಆಧೀಂಚ ರೂಪ ಉತ್ತಮ । ವರೀ ಶೃಂಗಾರಿಲೀ ಮನೋರಮ । ಕರಾವಯಾ ಗ್ರಾಮ್ಯಧರ್ಮ । ಪುರುಷ ಉತ್ತಮ ಪಹಾತಸೇ ॥೧೯೧॥

ಮಾರ್ಗ ಆಗಚ್ಛತೋ ವೀಕ್ಷ್ಯ ಪುರುಷಾನ್ ಪುರುಷರ್ಷಭ ।
ತಾನ್ ಶುಲ್ಕದಾನ್ ವಿತ್ತವತಃ ಕಾಂತಾನ್ ಮೇನೇಽರ್ಥ ಕಾಮುಕಾ ॥೭೪॥

ಅರ್ಥ :- ಹೇ ಪುರುಷ ಶ್ರೇಷ್ಠನೇ, ಆ ವೇಶ್ಯೆಯು ಹಣ ಗಳಿಸಲು ಬಹು ಕಾತರಳಾಗಿದ್ದಳು. ಬೀದಿಯಲ್ಲಿ ಅಡ್ಡಾಡುತ್ತಿರುವ ಎಲ್ಲರನ್ನೂ ಗಮನಿಸುತ್ತ ಓಹೋ ಇವನಲ್ಲಿ ನಿಜಕ್ಕೂ ಹಣವಿದೆ. ಇವನು ನನ್ನ ಬೆಲೆಯನ್ನು ಸಲ್ಲಿಸಬಲ್ಲ ಮತ್ತು ನನ್ನೊಡನೆ ಚೆನ್ನಾಗಿ ಸುಖಪಡಬಲ್ಲ. ಹೀಗೆನ್ನುತ್ತ ಬೀದಿಯಲ್ಲಿನ ಅನೇಕ ಗಂಡಸರ ಬಗೆಗೆ ಯೋಚಿಸುತ್ತಿದ್ದಳು.

ಸಗುಣ ಸುರೂಪ ಧನವಂತ । ಕಾಮಕೌಶಲ್ಯೇ ಪುರವೀ ಆರ್ತ । ಅರ್ಥ ದೇಊನಿ ಕರೀ ಸಮರ್ಥ । ಐಸಾ ಕಾಂತ ಪಹಾತಸೇ ॥೧೯೨॥ ಐಕ ಗಾ ಪುರುಷಶ್ರೇಷ್ಠಾ । ಪುರುಷ ಯೇತಾ ಯೇತಾ ದೇಖೇ ವಾಟಾ । ತ್ಯಾಸೀ ಖುಣಾವೀ ನೇತ್ರವೆಂಕಟಾ । ಕಾಮಚೇಷ್ಟಾ ದಾವೂನಿ ॥೧೯೩॥

ಆಗತೇಷ್ವಪಯಾತೇಷು ಸಾ ಸಂಕೇತೋಪಜೀವಿನೀ ।
ಅಪ್ಯನ್ಯೋ ವಿತ್ವಾನ್ ಕೋಽಪಿ ಮಾಮುಪೈಷ್ಯತಿ ಭೂರಿದಃ ॥೭೫॥

ಅರ್ಥ :- ಹಾದಿಯಲ್ಲಿ ನಡೆಯುತ್ತಿರುವ ಜನರು ಹಾಗೆಯೇ ಮುಂದೆ ಹೋಗುತ್ತಿದ್ದರು. ಯಾರಾದರೂ ಒಬ್ಬ ಶ್ರೀಮಂತನು ನನ್ನತ್ತ ಬರಬಹುದು ಮತ್ತು ನನಗೆ ಹೇರಳವಾಗಿ ಧನವನ್ನು ಕೊಡಬಹುದು ಎಂದು ಆಕೆ ವಿಚಾರಿಸುತ್ತಿದ್ದಳು.

ಯೇತ್ಯಾ ಪುರುಷಾಸ ಹಾಣೇ ಖಡಾ । ಏಕಾಸೀ ಮ್ಹಣೇ ಘ್ಯಾಜೇ ವೀಡಾ । ಡೋಳಾ ಘಾಲೀ ಜಾತ್ಯಾಕಡಾ । ಏಕಾಪುಢಾ ಭವರೀ ದೇ ॥೧೯೪॥ ತೇವ್ಹಾನಿ ಸಂಕೇತೀ ಜೀವಿತ । ಐಸೇ ನಾನಾ ಸಂಕೇತ ದಾವಿತ । ಪುರುಷ ತಿಕಡೇ ನ ಪಾಹಾತ । ಯೇತ ಜಾತ ಕಾರ್ಯಾರ್ಥೀ ॥೧೯೫॥ ಗೇಲ್ಯಾ ಪುರುಷಾತೇ ನಿಂದೀತ । ದ್ರವ್ಯಹೀನ ಹೇ ಅಶಕ್ತ । ರೂಪೇ ವಿರೂಪ ಅತ್ಯಂತ । ಉಪೇಕ್ಷಿತ ಧಿಕ್ಕಾರೇ ॥೧೯೬॥ ಆತಾ ಯೇಈಲ ವಿತ್ತವಂತ । ಅರ್ಥದಾನೀ ಅತಿಸಮರ್ಥ । ಮಾಝಾ ಧರೋನಿಯಾ ಹಾತ । ಕಾಮ ಆರ್ತ ಪುರವೀಲ ॥೧೯೭॥

ಪೂರ್ವಕಾಲದಲ್ಲಿ ಜನಕರಾಜನ ನಗರದಲ್ಲಿ ಪಿಂಗಲಾ ಎಂಬ ಹೆಸರಿನ ಒಬ್ಬ ವೇಶ್ಯೆಯು ಇರುತ್ತಿದ್ದಳು. ಆಕೆಯ ಆಶೆಯು ನಿರಾಶೆಯಾದ್ದರಿಂದ ಆಕೆಗೆ ತೀವ್ರ ವೈರಾಗ್ಯವು ಉತ್ಪನ್ನವಾಯಿತು. ॥೧೮೯॥

ಆಕೆಯು ಮನಬಂದಂತೆ ನಿರ್ಲಜ್ಜಳಾಗಿ ವರ್ತಿಸುವ ವೇಶ್ಯೆಯು. ನಾನಾ ಪ್ರಕಾರದ ವಸ್ತ್ರಾಲಂಕಾರಗಳಿಂದ ಸಿದ್ಧಳಾಗಿ ಹಾಗೆಯೇ ತನ್ನ ಶೃಂಗಾರದ ಅಭಿಮಾನದಿಂದ ಶೋಭಿಸುತ್ತಿದ್ದಳು ॥೧೯೦॥ ಮೊದಲೇ ಆಕೆಯ ರೂಪವು ಸುಂದರವಾಗಿತ್ತು. ಇಂತಹ ಮನೋರಮೆಯು ಶೃಂಗರಿಸಿಕೊಂಡಿದ್ದಳು. ಹೀಗಿರುವ ಆಕೆಯು ತನ್ನ ವಿಲಾಸತೃಪ್ತಿಗಾಗಿ ಉತ್ತಮ ಪುರುಷನ ದಾರಿಕಾಯುತ್ತ ನಿಂತುಕೊಂಡಿದ್ದಳು॥೧೯೧॥

ಗುಣವಂತನು, ರೂಪವಂತನು, ಮತ್ತು ಧನವಂತನು ಇದ್ದು ಕಾಮವಿಲಾಸದಿಂದ ತನ್ನ ಇಚ್ಛೆಯನ್ನು ಪೂರ್ಣಗೊಳಿಸುವವನಾಗಿರುವ ಶ್ರೀಮಂತನಾಗಿರುವ ಅಂತಹ ಪುರುಷನನ್ನು ಆಕೆಯು ದಾರಿಕಾಯುತ್ತಿದ್ದಳು ॥೧೯೨॥ ಹೇ ರಾಜಶ್ರೇಷ್ಠನೇ, ಕೇಳು ದಾರಿಯಲ್ಲಿ ಬರುವ ಹೋಗುವ ಪುರುಷರಿಗೆ ಆಕೆಯು ತನ್ನ ಕುಡಿನೋಟದಿಂದ ನೋಡುತ್ತ ಕಾಮಚೇಷ್ಠೆಯನ್ನು ತೋರಿಸುತ್ತಿದ್ದಳು ॥೧೯೩॥

ಈಕೆಯು ರಸ್ತೆಯಲ್ಲಿ ಬರುವವನಿಗೆ ಹರಳನ್ನು ಒಗೆಯುತ್ತಿದ್ದಳು. ಇನ್ನೊಬ್ಬನಿಗೆ ಕಣ್‌ಸನ್ನೆಯನ್ನು ಮಾಡಿ "ತಾಂಬೂಲ ಸ್ವೀಕರಿಸಿರಿ" ಎಂದು ಸಲಿಗೆಯಿಂದ ನುಡಿಯುತ್ತಿದ್ದಳು ॥೧೯೪॥ ಈ ಪ್ರಕಾರವಾಗಿ ಈಕೆಯು ಅನೇಕರನ್ನು ಅನೇಕ ಸಂಕೇತಗಳಿಂದ ಹಾವಭಾವಗಳನ್ನು ಮಾಡಿ ತೋರಿಸುತ್ತಿದ್ದಳು. ಆದರೆ ಆ ದಾರಿಯಲ್ಲಿ ಬರುವ ಹೋಗುವ ವ್ಯವಹಾರಿ ಜನರು ಆಕೆಯತ್ತ ಯಾರೂ ನೋಡಲಿಲ್ಲ ॥೧೯೫॥ ಈಕೆಯ ಹಾವಭಾವಗಳನ್ನು ನೋಡದೇ ಮುಂದೆ ಹೋಗುವ ಪುರುಷರನ್ನು ಕಂಡು "ಇವನು ದ್ರವ್ಯಹೀನ ದರಿದ್ರನು, ದುರ್ಬಲನು ಎಂದು ಈಕೆಯು ನಿಂದಿಸುತ್ತಿದ್ದಳು. ಇವನ ರೂಪವು ಕುರೂಪವಾಗಿದೆ ಎಂದು ಧಿಕ್ಕರಿಸುತ್ತಿದ್ದಳು ॥೧೯೬॥ ಈಗ ಅರ್ಥದಾನಿಯಾದ ಅತಿ ಸಮರ್ಥನಾದ ಶ್ರೀಮಂತನು ಬರಬಹುದು ಮತ್ತು ಆತನು ನನ್ನ ಕೈ ಹಿಡಿದು ನನ್ನ ಮನೋರಥಗಳನ್ನು ಪೂರ್ಣಮಾಡಿಯಾನು ॥೧೯೭॥

ಏವಂ ದುರಾಶಯಾ ಧ್ವಸ್ತನಿದ್ರಾ ಧ್ವಾರ್ಯವಲಂಬತೀ ।
ನಿರ್ಗಚ್ಛಂತೀ ಪ್ರವಿಶತೀ ನಿಶೀಥಂ ಸಮುಪದ್ಯತ ।೨೬॥

ಅರ್ಥ :- ಈಕೆಯ ಮನದಲ್ಲಿ ಆಶೆಯು ಬೆಳೆಯುತ್ತಸಾಗಿತು. ಇವಳು ಆತುರದಿಂದ ಕೆಲವು ಸಲ ಬೀದಿಯ ತನಕ ಹೋಗುವಳು. ಕೆಲವು ಸಲ ಮನೆಗೆ ಬಂದು ಬಾಗಿಲ ಬಳಿ ನಿಲ್ಲುತ್ತಿದ್ದಳು. ಹೀಗೆಯೇ ಮಧ್ಯರಾತ್ರಿಯಾಯಿತು.

ಐಸೇ ದುರಾಶಾ ಭರಲೇ ಚಿತ್ತ । ನಿದ್ರಾ ನ ಲಗೇ ಉದ್ವೇಗಿತ । ದ್ವಾರ ಧರೋನಿ ತಿಷ್ಠತ । ಕಾಮ ವಾಂಛಿತ ಪುರುಷಾಂಸೀ ॥೧೯೮॥ ರಿಘೋ ಜಾಯ ಘರಾ ಭೀತರೀ । ಸಾಂಚಲ ಐಕೋನಿ ರಿಘೇ ಬಾಹೇರೀ । ರಿಘತಾ ನಿಘತಾ ಯೇರಝಾರೀ । ಮಧ್ಯರಾತ್ರೀ ಪೈ ಝಾಲೀ ॥೧೯೯॥ ಸರಲೀ ಪುರುಷಾಚೀ ವೇಳ । ರಾತ್ರ ಝಾಲೀ ಜೀ ಪ್ರಬಳ । ನಿದ್ರಾವ್ಯಾಪಿಲೇ ಲೋಕ ಸಕಳ । ಪಿಂಗಲಾ ವಿವ್ಹಳ ತೇ ಕಾಳೀ ॥೨೦೦॥

ತಸ್ಯಾ ವಿತ್ತಾಶಯಾ ಶುಷ್ಯ ದ್ವಕ್ತ್ರಾಯಾ ದೀನಚೇತಸಃ ।
ನಿರ್ವೇದಃ ಪರಮೋ ಜಜ್ಞೇ ಚಿಂತಾಹೇತುಃ ಸುಖಾವಃ ।೨೭॥

ಅರ್ಥ:- ಹೇ ರಾಜನೇ, ನಿಜವಾಗಿಯೂ ಧನದ ಆಶೆಯು ಬಲು ಕೆಡಕು. ಈ ಧನದ ಆಶೆಯನ್ನು ಮಾಡಿ ಮಾಡಿ ಆಕೆಯ ಮುಖವು ಒಣಗಿ ಹೋಯಿತು. ಇಂತಹ ಅವಸ್ಥೆಯಯಲ್ಲಿ ಆಕೆಯ ಮನದಲ್ಲಿ ವೈರಾಗ್ಯವು ನಿರ್ಮಾಣಗೊಂಡಿತು. ನನಗಾದ ಈ ದುರಾವಸ್ಥೆಗೆ ಧನದ ಆಶೆಯೇ ಮೂಲಕಾರಣವಾಗಿದೆ ಎಂದರಿತು ಆಕೆಯಲ್ಲಿ ತೀವ್ರ ವೈರಾಗ್ಯವು ಹುಟ್ಟಿಕೊಂಡಿತು.

ತುಟಲಾ ಆಶೇಚಾ ಜಿವ್ಹಾಳಾ । ಸುಕಲೇ ವೋಠ ವಾಳಲಾ ಗಳಾ । ಕಳಾ ಉತರಲೀ ಮುಖಕಮಳಾ । ಖೇದು ಆಗಳಾ ಚಿಂತೇಚಾ ॥೨೦೧॥ ವಿತ್ತ ನ ಯೇಚಿ ಹಾತಾ । ತೇಣೇ ತೇ ಝಾಲೀ ದೀನಚಿತ್ತಾ । ವೈರಾಗ್ಯೇ ಪರಮ ವಾಟಲೀ ಚಿಂತಾ । ಸುಖಸ್ವಾರ್ಥಾ ತೇ ಹೇತು ॥೨೦೨॥

ತಸ್ಯಾ ನಿರ್ವಿಣ್ಣಚಿತ್ತಾಯಾ ಗೀತಂ ಶ್ರುಣು ಯಥಾಮಮ ।
ನಿರ್ವೇದ ಆಶಾಪಾಶಾನಾಂ ಪುರುಷಸ್ಯ ಯಥಾ ಹ್ಯಸಿಃ
ನಹ್ಯಂಗಾಜಾತನಿರ್ವೇದೋ ದೇಹಬಂಧಂ ಜಿಹಾಸತಿ ।೨೮॥

ಅರ್ಥ :- ಯಾವ ಈ ಪಿಂಗಲಾ ವೇಶ್ಯೆಯ ಮನದಲ್ಲಿ ಈ ಪ್ರಕಾರವಾಗಿ ವೈರಾಗ್ಯವು ನಿರ್ಮಾಣಗೊಂಡಾಗ ಆಗ ಆಕೆಯು ಒಂದು ಗೀತವನ್ನು ಹಾಡಿದಳು. ಆ ಗೀತವನ್ನೇ ನಾನು ನಿನಗೆ ಹೇಳುತ್ತೇನೆ. ಹೇ ರಾಜನೇ ಮನುಷ್ಯನು ಆಶೆಯ ಬಲೆಯಲ್ಲಿ ಸಿಕ್ಕಿಕೊಂಡಿರುವನು. ಆ ಬಲೆಯ ದಾರಗಳನ್ನು ವೈರಾಗ್ಯರೂಪ ಖಡ್ಗದಿಂದ ಕೊಯ್ದು ಒಗೆಯಬೇಕು. ಹೀಗೆ ವೈರಾಗ್ಯವು ಆಗದಿದ್ದರೇ ಅವರಿಗೆ ದೇಹಬಂಧವು ಬಿಡಲಾರದು.

ಕೈಸೇ ವೈರಾಗ್ಯ ಉಪಜಲೇ ತಿಸೀ । ಜೇ ಚಿಂತೀತ ಹೋತೀ ವಿಷಯಾಸೀ । ತ್ಯಾ ವಿಟಲೀ ವಿಷಯಸುಖಾಸೀ । ಭೇದಕ ಆಶೇಸೀ ವೈರಾಗ್ಯ ॥೨೦೩॥ ತೇಣೇ ವೈರಾಗ್ಯೇ ವಿವೇಕಯುಕ್ತ । ಪಿಂಗಲೇನೇ ಗಾಇಲೇ ಗೀತ । ತೇ ಆಇಕ ರಾಯಾ ಸಮಸ್ತ । ಚಿತ್ತೀ ಸುಚಿತ್ತ ಹೋಊನಿ ॥೨೦೪॥ ಐಕ ರಾಯಾ ವಿವೇಕ ನಿಧೀ । ವೈರಾಗ್ಯ ನಾಹೀ ಜ್ಯಾಚೇ ಬುದ್ಧೀ । ತ್ಯಾಸೀ ಜನ್ಮ ಮರಣಾಚೀ ಆಧೀವ್ಯಾಧೀ । ಪ್ರತಿಪದೀ ಬಾಧಕು ॥೨೦೫॥

ಹೀಗೆ ದುರಾಶೆಯಿಂದ ಆಕೆಯ ಮನವು ತುಂಬಿ ಹೋಗಿತ್ತು. ಉದ್ವೇಗದಿಂದ ರಾತ್ರಿ ನಿದ್ರೆಯು ಬರದಾಯಿತು. ಪುರುಷ ಸಮಾಗಮದ ಕಾಮಾತುರಳಾಗಿ ಆಕೆಯು ಬಾಗಿಲ ಬಳಿ ಕಾಯುತ್ತ ನಿಂತಳು ।೧೯೮॥ ಕೆಲವೊಮ್ಮೆ ಮನೆಯೊಳಗೆ ಹೋಗುವುದು ಸಂಚಾರ ಶಬ್ದ ಕಿವಿಗೆ ಬೀಳುತ್ತಲೇ ಹೊರಗೆ ಪುನಃ ಬರುವುದು. ಹೀಗೆ ಬರುವ ಹೋಗುವಿಕೆಗಳಿಂದ ಮಧ್ಯರಾತ್ರಿಯು ದಾಟಿ ಹೋಯಿತು ।೧೯೯॥ ಈಗ ಪುರುಷರು ಬರುವ ವೇಳೆಯು ಸಂಪೂರ್ಣವಾಗಿ ಮುಗಿಯಿತು. ಮಧ್ಯರಾತ್ರಿಯಾಗಿರುವುದರಿಂದ ಎಲ್ಲರೂ ನಿದ್ರೆಯಲ್ಲಿ ಮಗ್ನರಾದರು. ಆಗ ಮಾತ್ರ ಪಿಂಗಲೆಯು ಬಹಳ ಖಿನ್ನಳಾದಳು ।೨೦೦॥

ಆಶೆಯು ಪೂರ್ಣಗೊಳ್ಳುವ ಸ್ಥಿತಿಯು ಮುರಿಯಿತು. ಆಗ ಆಕೆಯ ತುಟಿಗಳು ಒಣಗಿ ಹೋದವು, ಕಂಠವೂ ತೇವವನ್ನು ಕಳೆದುಕೊಂಡಿತು. ಮತ್ತು ಮುಖ ಕಮಲವು ಬಾಡಿತು, ಭಯಂಕರವಾಗಿ ಚಿಂತೆಯು ಬೆಳೆಯ ಹತ್ತಿತು ।೨೦೧॥ ಕೈಯಲ್ಲಿ ಹಣವು ಬೀಳಲಿಲ್ಲವೆಂದು ಆಕೆಯು ಮನದಲ್ಲಿ ಅತಿಶಯವಾಗಿ ಖಿನ್ನಳಾದಳು. ಈ ಚಿಂತೆಯಿಂದ ಆಕೆಯ ಮನದಲ್ಲಿ ತಕ್ಷಣವೇ ವೈರಾಗ್ಯವು ಉದಯಕ್ಕೆ ಬಂದಿತು. ಇದೇ ಆಕೆಯ ಆತ್ಮಸುಖಕ್ಕೆ ಕಾರಣವಾಯಿತು ।೨೦೨॥

ಪಿಂಗಲಾ ವೇಶ್ಯೆಗೆ ವೈರಾಗ್ಯವು ಹೇಗೆ ಬಂದಿತು? ಎಂದು ನೀನು ಕೇಳಬಹುದು. ಇದನ್ನು ಕೇಳು, ಈಕೆಯು ಯಾವ ವಿಷಯ ಸುಖಕ್ಕಾಗಿ ಚಿಂತಿಸುತ್ತಿದ್ದಳೋ, ಆ ಸುಖವೇ ಈಕೆಗೆ ಬಲು ಬೇಸರವಾಯಿತು. ಸಾರಾಂಶವೇನೆಂದರೆ ವೈರಾಗ್ಯವೇ ಆಶೆಯ ಭೇದಕವಾಗಿರುವುದು ।೨೦೩॥ ಈ ಯಾವ ವೈರಾಗ್ಯದಿಂದ ವಿವೇಕವು ಉತ್ಪನ್ನವಾಗಿ ಪಿಂಗಲೆಯ ಹೃದಯದಿಂದ ಒಂದು ಗೀತವು ಪ್ರಕಟವಾಯಿತು. ಹೇ ರಾಜನೇ, ಅದೆಲ್ಲವನ್ನೂ ಹೇಳುವೆನು. ಸಾವಧಾನ ಚಿತ್ತದಿಂದ ನೀನು ಶ್ರವಣ ಮಾಡು ।೨೦೪॥ ಹೇ ವಿವೇಕಸಾಗರನಾದ ರಾಜನೇ, ಯಾರ ಬುದ್ಧಿಯಲ್ಲಿ ವೈರಾಗ್ಯವಿಲ್ಲವೋ, ಅವನಿಗೆ ಜನ್ಮ ಮರಣದ ಆಧಿವ್ಯಾಧಿಯು ಸತತವಾಗಿ ಪೀಡೆಯನ್ನು ಕೊಡುವುದು ।೨೦೫॥

ಅನುತಾಪು ನಾಹೀ ಜ್ಯಾಸೀ । ವಿವೇಕ ನುಪಜೇ ಮಾನಸೀ । ತೋ ಸಂಸಾರಾಚೀ ಆಂದಣೀ ದಾಸೀ । ಆಶಾಪಾಶೀ ಬಾಂಧಿಜೇ ॥೨೦೬॥ ತ್ಯಾಸೀ ಮೋಹ ಮಮತೇಚೀ ಗಾಢೀ । ಘಾಲಿಜೇ ದೇಹಬುದ್ಧೀಚೀ ಬೇಡೀ । ಅಹೋರಾತ್ರ ವಿಷಯ ಭರಡೀ । ಅರ್ಧ ಘಡೀ ನ ರಾಹೇ ॥೨೦೭॥ ಜರಾ ಜರ್ಜರಿತ ವಾಕಳೀ। ಮಾಜೀ ಪಡಲೇ ಅಖಂಡ ಲೋಳೇ । ಫುಟಲೇ ವಿವೇಕಾಚೇ ಡೋಳೇ । ಮಾರ್ಗು ನ ಕಳೇ ವಿಧ್ಯುಕ್ತ ॥೨೦೮॥ ತ್ಯಾಸೀ ಅವ್ಹಾಸವ್ಹಾ ಜಾತಾ। ಅಂಧಕೂಪೀ ಪಡೇ ದುಶ್ಚಿತಾ । ತೇಥೂನಿ ನಿಘಾವಯಾ ಮಾಗುತಾ । ಉಪಾವೋ ಸರ್ವಥಾ ನೇಣತೀ ॥೨೦೯॥ ತೇಥ ಕಾಯಾ-ಮನೇ-ವಾಚೇ । ನಿಘಣೇನಾಹೀ ಜೇ ಸಾಚೇ । ತಂವ ಘಣಕಾವಿಲಾ ಲೋಭವಿಂಚೇ । ಚಢಣೇ ತ್ಯಾಚೇ ಅನಿವಾರ ॥೨೧೦॥ ತೇಥ ನಿಂದೇಚಿಯಾ ತಿಡಕಾ । ಆಂತ ಬಾಹೇರ ನಿಘತೀ ದೇಖಾ । ವಿತ್ತಹಾನೀಚಾ ಥೋರ ಭಡಕಾ । ಜಳಜಳ ದೇಖಾ ದ್ವೇಷಾಚೀ ॥೨೧೧॥ ಅಭಿಮಾನಾಚೇ ಆಳೇಪಿಳೇ । ಮೋಹ ಉಮಾಸೇ ಯೇತೀ ಬಳೇ । ತರೀ ವಿಷಯದಳಣೇ ಆಗಳೇ । ದುಃಖೇ ಲೋಳೇ ಗೇಹಸೇಜೇ ॥೨೧೨॥ ಐಶೀ ಅವೈರಾಗ್ಯೇ ಬಾಪುಡೀ। ಪಡಲೀ ದೇಹಾಚೇ ಬಾಂದವಡೀ । ಭೋಗಿತಾ ದುಃಖಕೋಡೀ । ಸಬುಡ ಬುಡೀ ಬುಡಾಲೀ ॥೨೧೩॥ ಪಹಾ ಪಾ ನೀಚ ಸರ್ವ ವರ್ಣಾಸೀ । ನಿಂದ್ಯ ಕರ್ಮೇ ನಿಂದಿತೀ ಕೈಶೀ । ವೈರಾಗ್ಯ ಉಪಜಲೇ ವೇಶ್ಯೇಸೀ । ದೇಹಬಂಧಾಸೀ ಭೇದಿಲೇ ॥೨೧೪॥ ದೇಹಬಂಧ ಭೇದೀ ತ್ಯಾ ಉಕ್ತೀ । ವೇಶ್ಯಾ ಬೋಲಿಲೀ ನಾನಾ ಯುಕ್ತೀ । ಝಾಲೀ ಪಿಂಗಲೇಸಿ ವಿರಕ್ತೀ । ಚಕ್ರವರ್ತೀ ಪರಿಸ ಪಾ ॥೨೧೫॥

ಪಿಂಗಲೋವಾಚ :-

ಅಹೋ ಮೇ ಮೋಹವಿತತಿಂ ಪಶ್ಯತಾವಿಜಿತಾತ್ಮನಃ ।
ಯಾ ಕಾಂತಾದಸತಃ ಕಾಮಂ ಕಾಮಯೇ ಯೇನ ಬಾಲಿಶಾ ॥೯॥

ಅರ್ಥ :- ಹೇ ರಾಜನೇ, ಪಿಂಗಲೆಯು ಹೀಗೆಂದಳು ; ನಾನು ನನ್ನ ಮನವನ್ನು ಅಂಕಿತಗೊಳಿಸಲಿಲ್ಲ. ಹೀಗೆ ನನ್ನ ಮೋಹದ ಪರಿಣಾಮವು ಇದಾಗಿದೆ. ನೋಡಿರಿ, ನಾನೆಷ್ಟು ವಿವೇಕಶೂನ್ಯ, ಮೂರ್ಖಳಾಗಿರುವೆನು ! ಈ ಯಾವ ನನ್ನ ಕೇವಲ ಮೋಹ ಮಾತ್ರದಿಂದ ಯಾವ ತುಚ್ಛ ಮನುಷ್ಯನಲ್ಲಿ ನಾನು ಕಾಮದ ಇಚ್ಛೆಯನ್ನು ಮಾಡಿದೆ.

ಮಿಥ್ಯಾ ಮೋಹಾಚಾ ವಿಸ್ತಾರ । ಮ್ಯಾ ವಾಢವಿಲಾ ಸಾಚಾರ । ಮಾಝ್ಯಾ ಮೂರ್ಖಪಣಾಚಾ ಪಾರ । ಪಾಹತಾ ವಿಚಾರ ಪಾಂಗುಳೇ ॥೨೧೬॥ ನಾಹೀ ಅಂತಃಕರಣಾಸೀ ನೇಮು । ಅಪಾರ ವಾಢವಿಲಾ ಭ್ರಮು । ಅಸಂತಪುರುಷಾಂಚಾ ಕಾಮು । ಮನೋರಮ ಮಾನಿತಾ ॥೨೧೭॥

ಮನದಲ್ಲಿ ಅನುತಾಪವಿಲ್ಲದವರಿಗೆ ಅವರ ಅಂತಃಕರಣದಲ್ಲಿ ವಿವೇಕವು ಹುಟ್ಟಲಾರದು. ಅವನು ಕಾಣಿಕೆ ಕೊಟ್ಟ ದಾಸಿಯಂತೆ ಸಂಸಾರದಲ್ಲಿ ಒಪ್ಪನಾಗುವನು. ಆಶಾಪಾಶದಲ್ಲಿ ಸಿಲುಕಿಕೊಳ್ಳುವನು ॥೨೦೬॥ ಇವನಿಗೆ ಮೋಹಮಮತೆಯು ದೃಢವಾದ ಸಂಕೋಲೆಯನ್ನು ಹಾಕಿರುವುದು. ಇವನು ಹಗಲು ರಾತ್ರಿ ವಿಷಯಗಳಲ್ಲಿಯೇ ನುಚ್ಚು ನೂರಾಗುತ್ತಿರುವನು. ಇವನಿಗೆ ಕ್ಷಣ ಹೊತ್ತು ಸಹ ವಿಶ್ರಾಂತಿಯು ಇರುವುದಿಲ್ಲ ॥೨೦೭॥ ಇವನು ಮುಪ್ಪಿನಿಂದ ಜರ್ಜರತಗೊಂಡ ದೇಹರೂಪ ಕೌದಿಯ ಮೇಲೆ ಉರುಳಾಡುತ್ತ ಬಿದ್ದಿರುವನು. ಇವನ ವಿವೇಕದ ಕಣ್ಣುಗಳು ಒಡೆದಿರುವುವು. ಇದರಿಂದ ಇವನು ಕುರುಡನಾಗಿರುವನು. ಆದ್ದರಿಂದ ಇವನಿಗೆ ಶಾಸ್ತ್ರಸಿದ್ಧ ಮಾರ್ಗವು ತಿಳಿಯುವುದಿಲ್ಲ ॥೨೦೮॥ ಇವನು ಮನಬಂದಂತೆ ತಿರುಗಾಡುವನು. ಕೊನೆಗೆ ಹಾಳು ಬಾವಿಯಲ್ಲಿ ಬೀಳುವನು. ಇಲ್ಲಿಂದ ಮೇಲಕ್ಕೆ ಬರುವ ಮಾರ್ಗವೇ ಆತನಿಗೆ ಗೋಚರಿಸುವುದಿಲ್ಲ ॥೨೦೯॥ ಕಾಯಾ, ವಾಚಾ, ಮನಸಾ ಇವನಿಗೆ ಹೊರ ಬರುವುದಾಗುವುದಿಲ್ಲ. ಇಷ್ಟಲ್ಲದೇ ಪುನಃ ಇವನಿಗೆ ಅಲ್ಲಿ ಲೋಭರೂಪ ಚೇಳು ಕಡಿಯುತ್ತದೆ. ಅದರ ವಿಷದ ಏರುವಿಕೆಯು ಅನಿವಾರ್ಯವಾಗಿರುವುದು ॥೨೧೦॥ ಆಗ ಒಳಗೂ, ಹೊರಗೂ ನಿಂದಾರೂಪ ವೇದನೆಯು ಬೆಳೆಯುತ್ತಿರುವುದು. ಇದರಿಂದ ದ್ರವ್ಯಹಾನಿ ರೂಪ ವಿಷ ಜ್ವಾಲೆಯಿಂದ ದ್ವೇಷರೂಪ ಉರಿಯಿಂದ ನೋವುಂಟಾಗುವುದು ॥೨೧೧॥ ಇವನು ಅಭಿಮಾನ ರೂಪ ಆಕಳಿಸಿ ಮೈಮುರಿಯುವನು. ಮೋಹ ರೂಪ ವಾಕರಿಕೆಯು ಜೋರಾಗಿ ಬರುವುವು. ಹೀಗಾಗಿದ್ದರೂ ಇವನು ವಿಷಯಗಳ ಹಿಟ್ಟು ಬೀಸುತ್ತಲೇ ಮನೆಯಲ್ಲಿನ ಹಾಸಿಗೆಯಲ್ಲಿ ದುಃಖದಿಂದ ಉರುಳಾಡುತ್ತಿರುವನು ॥೨೧೨॥ ಈ ಪ್ರಕಾರವಾಗಿ ಯಾರ ಮನದಲ್ಲಿ ವೈರಾಗ್ಯವು ಇರುವುದಿಲ್ಲವೋ ಈ ಜನರು ದೇಹದ ಕಾರಾಗೃಹದಲ್ಲಿ ಸಿಲುಕಿಕೊಂಡು ಕೋಟ್ಯಾವಧಿ ಪ್ರಕಾರಗಳ ದುಃಖಗಳನ್ನು ಭೋಗಿಸುತ್ತ ಕೊನೆಯಲ್ಲಿ ಮುಳುಗಿಬಿಡುವರು ॥೨೧೩॥ ನಿಂದ್ಯ ಕರ್ಮಗಳು ಸರ್ವ ವರ್ಣದವರಿಗೂ ನಿತ್ಯವೂ ಪೀಡಿಸುತ್ತಿರುವುವು. ವೇಶ್ಯೆಯ ಮನದಲ್ಲಿ ವೈರಾಗ್ಯವು ಉತ್ಪನ್ನವಾಯಿತು. ಆದ್ದರಿಂದ ಆಕೆಯ ದೇಹಬಂಧನವು ಮುರಿಯಿತು ॥೨೧೪॥ ಈ ಯಾವ ವೇಶ್ಯೆಯು ದೇಹಬಂಧನ ಭೇದಕಾರಕ ಭಾಷಣವನ್ನು ಮಾಡಹತ್ತಿದಳು. ಹೇ ಸಾರ್ವಭೌಮರಾಜನೇ, ಪಿಂಗಲೆಗೆ ವೈರಾಗ್ಯವು ಹೇಗೆ ಹುಟ್ಟಿತೆಂಬುದನ್ನು ಕೇಳು ॥೨೧೫॥

ಪಿಂಗಲೆಯು ಹೇಳುವಳು; ನಾನು ನಿಜವಾಗಿಯೂ ಮಾಯೆಯ ಬಜಾರದ ವಿಸ್ತಾರವನ್ನು ಮಾಡಿದೆ. ನನ್ನ ಮೂರ್ಖತನದ ಅಂತಪಾರವನ್ನು ನೋಡಲು ಹೋದರೆ ವಿಚಾರಗಳೇ ಕುಂಠಿತವಾಗುವುವು ॥೨೧೬॥ ನನ್ನ ಅಂತಃಕರಣಗಳಿಗೆ ಯಾವ ನೇಮ ಬಂಧಗಳಿರಲಿಲ್ಲ. ನೀಚ ಪುರುಷರಲ್ಲಿ ವಿಲಾಸ ಮಾಡುವುದರಲ್ಲಿ ನಾನು ಸುಖವೆಂದು ಭಾವಿಸಿದ್ದೆನು. ಈ ನನ್ನ ಭ್ರಮೆಯ ಅತಿರೇಕವಾಯಿತು ॥೨೧೭॥

ಜರೀ ಸ್ತ್ರೀಸೀ ಪುರುಷ ಪಾಹಿಜೇ । ತರೀ ಜವಳೀಲ ಪುರುಷ ನ ಲಾಹಿಜೇ । ಹೇಚಿ ಮೂರ್ಖಪಣ ಮಾಝೇ । ಸದಾ ಭುಂಜೇ ಅಸಂತಾ ॥೨೧೮॥

ಸಂತಂ ಸಮೀಪೇ ರಮಣಂ ರತಿಪದಂ ನಿತ್ಯಮಿಮಂ ವಿಹಾಯ ।
ಅಕಾಮದಂ ದುಃಖಭಯಾದಿಶೋಕಮೋಹಪ್ರದಂ ತುಚ್ಛಮಹಂ ಭಜೇಽಜ್ಞಾ ॥೬೦॥

ಅರ್ಥ:- ನನ್ನ ಹೃದಯಲ್ಲಿರುವ, ರಮಮಾಣ ಮಾಡುವ, ರತಿ ನಿವೃತ್ತಿ ಕೊಡುವ ಪ್ರಭೂವನ್ನು ಬಿಟ್ಟು, ಮೂಢಳಾದ ನಾನು ಇಚ್ಛೆಯನ್ನು ಪೂರ್ಣಗೊಳಿಸದ, ದುಃಖಿ ಭ್ರಮೆಯನ್ನು, ಶೋಕ ಮೋಹವನ್ನು ಕೊಡುವ ತುಚ್ಛ ಮನುಷ್ಯನ ಮೋಹಕ್ಕೆ ಬಲಿಯಾದೆನು.

ಸಂತಪುರುಷಾಚೀ ಪ್ರಾಪ್ತೀ। ಜವಳೀ ಅಸತಾ ನೇಣೇ ಆಸಕ್ತೀ । ಜ್ಯಾಸೀ ಕೇಲಿಯಾ ರತೀ । ಕಾಮನಿವೃತ್ತಿ ತತ್ಕಾಳ ॥೨೧೯॥ ಕಾಮ ನಿವರ್ತವೂನಿ ದೇಖ । ಅನಿವಾರ ಪುರವೀ ನಿತ್ಯಸುಖ । ಚಿತ್ತದಾತಾ ತೋಚಿ ಏಕ । ಅಲೋಲಿಕ ಪೈ ದೇಣೇ ॥೨೨೦॥ ಸಕಳ ಐಶ್ವರ್ಯ ನಿಜಪದೇಸೀ । ಸಂತೋಷೋನಿ ದೇ ರತೀಶೀ । ರಮವೂ ಜಾಣೇ ನರನಾರೀಸೀ । ರಮಣು ಸರ್ವಾಸೀ ತೋ ಏಕು ॥೨೨೧॥ ಸಾಂಡೋನಿ ಐಶಿಯಾ ಕಾಂತಾಸೀ । ಮಾಝೀ ಮೂಢತಾ ಪಹಾ ಕೈಶೀ । ನಿತ್ಯ ಅಕಾಮದಾ ಪುರುಷಾಸೀ । ಕಾಮಪ್ರಾಪ್ತೀಸೀ ಭಜಿನ್ನಲೇ ॥೨೨೨॥ ಆಪುಲಾ ಪೂರ್ಣ ನ ಕರವೇ ಕಾಮ । ತೇ ಮಜ ಕೇವೀ ಕರಿತೀ ನಿಷ್ಕಾಮ । ತ್ಯಾಂಚೇನಿ ಸಂಗೇ ಮೋಹಭ್ರಮ । ದುಃಖ ಪರಮ ಪಾವಲೇ ॥೨೨೩॥ ತ್ಯಾಂಚೇನಿ ಸುಖ ನೇದವೇಚ ಮಾತೇ । ಪರೀ ಝಾಲೇ ದುಃಖಾಚೇನಿ ದಾತೇ । ಭಯ - ಶೋಕ - ಆಧಿವ್ಯಾಧೀತೇ । ತ್ಯಾಂಚೇನೀ ಸಾಂಗಾತೇ ಪಾವಲೇ ॥೨೨೪॥

ಅಹೋ ಮಯಾತ್ಮಾ ಪರಿತಾಪಿತೋ ವೃಥಾ ಸಾಂಕೇತ್ಯವೃತ್ತ್ಯಾತಿವಿಗರ್ಹ್ಯವಾರ್ತಯಾ ।
ಸ್ತ್ರೈಣಾನ್ನರಾದ್ ಯಾರ್ಥತೃಷೋಽನು ಶೋಚ್ಯಾತ್ ಕ್ರೀತೇನ ವಿತ್ತಂ ರತಿಮಾತ್ಮನೇಚ್ಛತೀ ॥೬೧॥

ಅರ್ಥ :- ನಾನು ಆಯುಷ್ಯವೆಲ್ಲವನ್ನು ವೇಶ್ಯಾವಾಟಿಕೆಯಲ್ಲಿ ಕಳೆದೆನು. ಇದು ದುಃಖದ ಮಾತಾಗಿರುವುದು. ನಾನು ಮನಸ್ಸಿಗೂ ಶರೀರಕ್ಕೂ ತ್ರಾಸು ಕೊಟ್ಟೆನು. ಈ ನನ್ನ ಶರೀರವನ್ನು ಮಾರಿಕೊಂಡೆನು. ವಿಷಯ ಲಂಪಟ, ಲೋಭಿ ಮತ್ತು ನಿಂದ್ಯ ಮನುಷ್ಯನು ಈ ಶರೀರವನ್ನು ಖರೀದಿಸಿದನು. ಇಂತಹ ಶರೀರದಿಂದ ಧನದ ಮತ್ತು ರತಿಸುಖದ ಇಚ್ಛೆಯನ್ನು ಮಾಡಿದೆನು. ನಾನೆಂತಹ ಮೂರ್ಖಳು? ನನ್ನ ಜೀವನಕ್ಕೆ ಧಿಃಕ್ಕಾರವು.

ಜಾರಪುರುಷಾಪಾಸೋನಿ ಸುಖ । ಇಚ್ಛಿತೇ ತೇ ಮೀ ಕೇವಳ ಮೂರ್ಖ । ವೃಥಾ ಪರಿತಾಪು ಕೇಲಾ ದೇಖ । ಮಜ ಅಸುಖ ಮ್ಯಾ ದೀಧಲೇ ॥೨೨೫॥ ಸ್ತ್ರೈಣ ಪುರುಷ ತೇ ನರಾಧಮ। ವೇಶ್ಯಾಗಾಮೀ ತ್ಯಾಹೂನಿ ಅಧಮ । ತ್ಯಾಂತ ಕೃಪಣು ತೋ ಅಧಮಾಧಮ । ತಯಾಂಚಾ ಸಂಗಮ ಮೀ ವಾಂಛೀ ॥೨೨೬॥

ಒಂದು ವೇಳೆ ಸ್ತ್ರೀಗೆ ಪುರುಷನು ಬೇಕಾಗಿದ್ದರೆ ಆಕೆಯು ತನ್ನ ಸಮೀಪದ ಪುರುಷನಾದ ಪರಮಾತ್ಮನಿಗೆ ವರಿಸಬೇಕು. ನಾನು ಮಾತ್ರ ಯಾವಾಗಲೂ ದುರ್ವ್ಯಸನೀ ಪುರುಷರ ಸಂಬಂಧವನ್ನು ಬೆಳೆಸಿಕೊಂಡಿದ್ದೆನು. ಇದೇ ನನ್ನ ಮೂರ್ಖತನವಾಗಿರುವುದು ॥೨೧೮॥

ಶಾಶ್ವತ ಪುರುಷನ ಅಂದರೆ ಪ್ರಭೂವಿನ ಲಾಭವು ಅತಿ ಸಮೀಪವಾಗಿದ್ದರೂ ಅದು ನನಗೆ ತಿಳಿಯಲಿಲ್ಲ. ಪ್ರಭುವಿನಲ್ಲಿ ಪ್ರೇಮದಿಂದ ಏಕರೂಪವಾಗಲು, ಅದರಿಂದ ತತ್ಕಾಲದಲ್ಲಿ ಕಾಮನಿವೃತ್ತಿಯಗುವುದು ॥೨೧೯॥ ಕಾಮ ನಿವೃತ್ತಿಯನ್ನು ಮಾಡಿ ಯಾರು ಸಹಜವಾಗಿ ಸುಖವನ್ನು ಕೊಡುವನೋ, ಆತನೇ ನಿಜವಾದ ಧನಿಕನಾಗಿರುವನು. ಆತನ ಕೊಡುಗೆಯು ಅಲೌಕಿಕವಾಗಿರುವುದು ॥೨೨೦॥ ಯಾರು ಸಂತುಷ್ಟರಾಗಿ ಆತ್ಮಪ್ರಾಪ್ತಿ ಸಹ ಸರ್ವ ಐಶ್ವರ್ಯವನ್ನು ಕೊಡುವನೋ, ಸ್ತ್ರೀ ಪುರುಷರನ್ನು ಹೇಗೆ ಸಂತೋಷಗೊಳಿಸಬೇಕೆನ್ನುವುದನ್ನು ಅರಿತಿರುವನೋ, ಆತನೇ ಎಲ್ಲರ ನಿಜವಾದ ರಮಣನಾಗಿರುವನು ॥೨೨೧॥ ನಿಜವಾಗಿಯೂ ನಾನು ಅದೆಂತಹ ಮೂರ್ಖಳಿರಬಹುದು ನೋಡಿರಿ? ಇಂತಹ ಕಾಂತನನ್ನು ಬಿಟ್ಟುಕೊಟ್ಟು ಯಾವನು ಎಂದೆಂದಿಗೂ ತೃಪ್ತಿಗೊಳಿಸಲಾರನೋ, ಅಂತಹ ಪುರುಷನ ಸಂಗತಿ ಮಾಡಿದೆ ॥೨೨೨॥ ಯಾವನಿಗೆ ತನ್ನ ಕಾಮವನ್ನೇ ಪೂರ್ಣಗೊಳಿಸಲಾಗದವನು ನನಗೆ ಹೇಗೆ ನಿಷ್ಕಾಮಳನ್ನಾಗಿ ಮಾಡಿಯಾನು? ಇಂತಹ ಜನರ ಆಸಕ್ತಿಯಿಂದ ನಾನು ಮೋಹ ಭ್ರಮೆಯಲ್ಲಿ ಬಿದ್ದುಕೊಂಡೆ, ಇದರಿಂದ ಅತ್ಯಂತ ದುಃಖ ಮಾತ್ರ ಭೋಗಿಸುತ್ತ ಸಾಗಿದೆ ॥೨೨೩॥ ಇವರು ನನಗೆ ಸುಖವನ್ನು ಕೊಡದೇ, ಬದಲಾಗಿ ದುಃಖವನ್ನೇ ಕೊಟ್ಟರು. ಇವರ ಸಂಗತಿಯಿಂದ ನನಗೆ ಭಯ, ಶೋಕ, ಆಧಿವ್ಯಾಧಿ ಇವುಗಳದ್ದೇ ಪ್ರಾಪ್ತಿಯಾಯಿತು ॥೨೨೪॥

ಜಾರಪುರುಷನಿಂದ ನಾನು ಸುಖದ ಇಚ್ಛೆಯನ್ನು ಮಾಡುತ್ತಿದ್ದೆ. ಇದು ನನ್ನ ಮಹಾ ಮೂರ್ಖತನವಾಗಿರುವುದು. ನಾನು ವ್ಯರ್ಥವಾಗಿ ಜೀವಕ್ಕೆ ತ್ರಾಸು ಮಾಡಿಕೊಂಡೆ ಮತ್ತು ನಾನೇ ನನ್ನನ್ನು ದುಃಖಕ್ಕೆ ಗುರಿ ಮಾಡಿಕೊಂಡೆ ॥೨೨೫॥ ಸ್ತ್ರೀಯ ಆಧೀನನಾದ ಪುರುಷನು ನರಾಧಮನಾಗಿರುವನು. ವೇಶ್ಯೆಯವರಲ್ಲಿ ಹೋಗುವ ಪುರುಷನು ಅವನಿಗಿಂತಲೂ ಅಧಿಕ ಅಧಮನು. ಇದರಲ್ಲಿ ಕೃಪಣನಾದವನು ಮಾತ್ರ ಅಧಮನಾದನು. ಇಂತಹ ದುರ್ಜನರ ಸಮಾಗಮದ ಇಚ್ಛೆಯನ್ನು ನಾನು ಮಾಡುತ್ತಿದ್ದೆ ॥೨೨೬॥

ಜಿತುಕ್ಯಾ ಅತಿನಿಂದಕಾ ವೃತ್ತೀ । ಮಜ ಆತಳತಾ ತ್ಯಾ ಭೀತೀ । ಯೋನಿದ್ವಾರೇ ಜೀವಿಕಾಸ್ಥಿತೀ । ನೀಚ ಯಾತೀ ವ್ಯಭಿಚಾರು ॥೨೨೭॥ ಅಲ್ಪ ದ್ರವ್ಯ ಜೇಣೇ ದೇಣೇ । ತ್ಯಾಚೀ ಜಾತೀ ಕೋಣ ಹೇ ನಾಹೀ ಪಾಹಣೇ । ಯಾಹೋನಿ ಕಾಯ ಲಾಜಿರವಾಣೇ । ನಿಂದಿತ ಜಿಣೇ ಪೈ ಮಾಝೇ ॥೨೨೮॥ ಜಯಾ ಪುರುಷಾಸೀ ದೇಹ ವಿಕಣೇ । ತೇ ಅತ್ಯಂತ ಹೀನದೀನಪಣೇ । ಕಾಯ ಸಾಂಗೋ ತ್ಯಾಚೀ ಲಕ್ಷಣೇ । ಸರ್ವಗುಣೇ ಅಪೂರ್ಣ ॥೨೨೯॥ ವಿತ್ತ ನೇದವೇ ಕೃಪಣತಾ । ಕಾಮ ನ ಪುರವೇ ಪುರತಾ । ಪ್ರೀತಿ ನ ಕರವೇ ತತ್ತ್ವತಾ । ಭೇಟೀ ಮಾಗುತಾ ತೋ ನೇದೀ ॥೨೩೦॥ ಐಸಿಯಾ ಪಾಸಾವ ಸುಖ । ವಾಂಛಿತಾ ವಾಢೇ ಪರಮ ದುಃಖ । ಜಳೋ ತ್ಯಾಚೇ ನ ಪಾಹೇ ಮುಖ । ವೋಕಾರೀ ದೇಖ ಯೇತಸೇ ॥೨೩೧॥ ಏವಂ ಜಾರಪುರಷಾಚೀ ಸ್ಥಿತೀ । ಆಠವಿತಾ ಚಿಳಸೀ ಯೇತೀ । ಪುರೇ ಪುರೇ ತೇ ಸಂಗತೀ । ಚಿತ್ತವೃತ್ತಿ ವೀಟಲೀ ॥೨೩೨॥

ಯದಸ್ಥಿಭಿರ್ನಿಮಿತವಂಶವಂಶ್ಯ ಸ್ಥೂಣಂ ರೋಮನಖೈಃ ಪಿನದ್ಧಮ್ ।
ಕ್ಷರನ್ನವದ್ವಾರಮಗಾರಮೇತದ್ವಿಣ್ಮೂತ್ರಪೂರ್ಣಂ ಮದುಪೈತಿ ಕಾಽನ್ಯಾ ॥೩೨॥

ಅರ್ಥ:- ಎಲುಬಿನ ಹಂದರದಲ್ಲಿ ನಿರ್ಮಿಸಿರುವ, ತ್ವಚೆ, ರೋಮ, ನಖಗಳು ಇವುಗಳಿಂದ ಮುಚ್ಚಿಕೊಂಡಿರುವ, ನವದ್ವಾರಗಳಲ್ಲಿ ಸತತವಾಗಿ ಮಲಸ್ರಾವವಾಗುತ್ತಿರುವ, ಮಲಮೂತ್ರಗಳಿಂದ ತುಂಬಿಕೊಂಡಿರುವ ಇಂತಹ ಮನುಷ್ಯನ ಶರೀರದ ಸೇವನೆಯನ್ನು ಯಾ ಮೂಢಮತಿಯವಳು ಮಾಡಿಯಾಳು?

ನರಶರೀರ ಗೃಹ ಸಾಂಕಡೇ । ಆಧೀ ಪಾಖಾಡ್ಯಾ ನುಸಧೀ ಹಾಡೇ । ಅಸ್ಥೀಚ್ಯಾ ಮೇಢೀ ದೋಹೀಕಡೇ । ವೋಲೇನಿ ಕಾತಡೇ ಮಢಿಯೇಲೇ ॥೨೩೩॥ ತ್ಯಾಸೀ ಸರ್ವಾಂಗೀ ಸಗಳೇ । ದಿಧಲೇ ರೋಮಾವಳಿಚೇಖಿಳೇ । ಘಾಲೂನಿ ನಖಾಚೇ ಖೋಬಳೇ । ಅಗ್ರೀ ಆಂಗವಳೇ ಬೂಜಿಲೇ ॥೨೩೪॥ ಅಸ್ಥಿ-ಮಾಂಸ-ಚರ್ಮಬಾಂಧಾ । ಸರ್ವಾಂಗೀ ಆವಳೂನಿ ದಿಧಲಾ ಸಾಂದಾ । ರಂಗೀತ ಚರ್ಮರಸನಾ ಸ್ವಾದಾ । ಪುಢಿಲೇ ಬಾಂಧಾ ಬಾಂಧಿಲೀ ॥೨೩೫॥ ವಾಯು ಪ್ರಸರಣಪರಿಚಾರೇ । ಕೇಲೀ ಪ್ರಾಣಾಪಾನರಂಧ್ರೇ । ವರೀಲೇ ಡಳಮಳೀತ ಶಿಖರೇ । ಬಾಲಾಂಕುರೇ ಲಾವಿಲೀ ॥೨೩೬॥ ಬುಜೂನಿ ಭೀತರೀಲ ಸವಡೀ । ಬಾಂಧಾಟಿಲೇ ನವನಾಡೀ । ವಿಷ್ಠಾಮೂತ್ರಾಂಚೀ ಗಾಢೀ । ನಿತ್ಯ ಪರವಡೀ ಸಾಂಠವಣ ॥೨೩೭॥ ಭೀತರಿಲೇ ಅವಕಾಶೀ । ದುರ್ಗಂಧಿ ಊಠಲೀ ಕೈಶೀ । ತೇಚೀ ಪ್ರವಾಹ ಅಹರ್ನಿಶೀ । ನವದ್ವಾರಾಂಸೀ ವಾಹತಾತೀ ॥೨೩೮॥ ಅಖಂಡ ಪರ್ಧ್ವವೇ ವಾಹತೀ ಮಳೇ । ದೇಖೋನಿ ಜ್ಯಾಚೇ ತೋ ಕಾಂಟಾಳೇ । ಅಹರ್ನಿಶೀ ಧುತಾ ಜಳೇ । ಕದಾ ನಿರ್ಮಳೇ ತೇ ನವ್ಹತೀ ॥೨೩೯॥

ಅತ್ಯಂತ ನಿಂದ್ಯವಾಗಿರುವ ವೃತ್ತಿಯವರೂ ಸಹ ನನ್ನತ್ತ ಬರಲು ಭಯಪಡುವರು. ಶರೀರವನ್ನು ಮಾರಿಕೊಂಡು ಬದುಕುವ, ವ್ಯಭಿಚಾರ ಜಾತಿ ನನ್ನದಾಗಿತ್ತು ॥೨೨೭॥ ಜಾರನು ಕೊಡುವ ಅಲ್ಪ ಹಣಕ್ಕಾಗಿ ನಾನು ಅವನ ಜಾತಿಯನ್ನೂ ನೋಡುತ್ತಿರಲ್ಲಿಲ. ಇದಕ್ಕಿಂತಲೂ ಲಜ್ಜಾಸ್ಪದ ಮಾತು ಇನ್ನಾವುದಿದೆ? ನಿಜವಾಗಿಯೂ ಈನನ್ನ ಜೀವನಕ್ಕೆ ಧಿಃಕ್ಕಾರವಿರಲಿ ॥೨೨೮॥ ಪರಪುರುಷನಿಗೆ ಶರೀರವನ್ನು ಮಾರಿಕೊಳ್ಳುವುದು ಅದು ಅತ್ಯಂತ ಹೀನ,ದೀನವಾಗಿದೆ. ನಾನು ದೇಹವನ್ನು ಮಾರಿಕೊಂಡ ಪುರುಷನ ಅಂಗದಲ್ಲಿ ಒಂದು ಗುಣ ಸಹ ಪೂರ್ಣವಿರುವುದಿಲ್ಲ. ಇದರ ವರ್ಣನೆಯನ್ನು ಹೇಗೆ ಮಾಡಬೇಕು? ॥೨೨೯॥ ಧನ ಲೋಭದ ಸ್ವಭಾವದಿಂದ ಇವನಿಗೆ ಹಣ ಕೊಡುವುದೇ ಆಗುತ್ತಿದ್ದಿಲ್ಲ. ಕಾಮತೃಪ್ತಿಯೂ ಮಾಡಲಾರದವನು ಮತ್ತು ಪ್ರೇಮದ ಮಾತ್ರ ಹೆಸರೇ ಇಲ್ಲ. ಇಷ್ಟೇ ಅಲ್ಲ; ಅವನು ಪುನಃ ತನ್ನ ಮುಖವನ್ನೇ ತೋರಿಸಲಾರನು ॥೨೩೦॥ ಇಂತಹ ಮನುಷ್ಯನಿಂದ ಸುಖದ ಅಪೇಕ್ಷೆಯನ್ನು ಮಾಡಲು, ದುಃಖ ಮಾತ್ರ ಬೆಳೆಯುತ್ತ ಸಾಗುವುದು. ಇವರಿಗೆ ಧಿಃಕ್ಕಾರವು. ಇವರ ಮುಖವನ್ನೂ ಸಹ ನೋಡಬಾರದು. ನೆನೆಸಿದರೆ ಓಕರಿಕೆಯಾಗುವುದು ॥೨೩೧॥ ಸಾರಾಂಶವೇನಂದರೆ, ಈ ಯಾವ ಜಾರಪುರುಷನನ್ನು ನೆನಪಿಸಿಕೊಂಡರೆ ಸಾಕು, ಮನಸ್ಸಿಗೆ ಹೇಸಿಗೆಯಾಗುವುದು. ಈಗ ನನಗೆ ಅವರ ಸಂಗತಿಯೇ ಬೇಡ. ನನ್ನ ಮನಸ್ಸು ಬಲುಬೇಸರಗೊಂಡಿದೆ ॥೨೩೨॥

ಈ ಮನುಷ್ಯ ರೂಪ ಮನೆಯು ಮಹಾ ಅಮಂಗಲವಾಗಿದೆ. ಇದರ ಸುತ್ತುಮುತ್ತು ಮೇಲೆ ಕೆಳಗೆ ಹೀಗೆ ಎಲ್ಲಕಡೆ ಎಲುಬುಗಳೇ ತುಂಬಿವೆ. ಅದಕ್ಕೆ ಹಸಿ ಚರ್ಮವನ್ನು ಹೊದಿಸಿದೆ ॥೨೩೩॥ ಸರ್ವಾಂಗಕ್ಕೂ ಬಿಗಿಯಾಗಿ ಕೇಶಗಳ ರೂಪ ಮಳೆಗಳನ್ನು ಬಡೆದಿವೆ. ಬಟ್ಟುಗಳ ಛಿದ್ರಗಳಿಗೆ ಉಗುರುಗಳನ್ನು ಕೂಡಿಸಿ ಬಂದ ಮಾಡಿಬಿಟ್ಟಿದೆ ॥೨೩೪॥ ಎಲಬು, ಮಾಂಸ, ಚರ್ಮಗಳನ್ನು ಗಟ್ಟಿಯಾಗಿ ಕಟ್ಟಿ ಅಲ್ಲಲ್ಲಿ ಸಂದುಗಳನ್ನು ಬಿಟ್ಟಿದೆ. ಲಾಲಾರಸದ ಚರ್ಮದ ನಾಲಿಗೆಯು ರಸಗಳನ್ನು ನೆಕ್ಕುವುದಕ್ಕಾಗಿ ಮುಂದೆಯೇ ಸಿದ್ಧಗೊಳಿಸಿ ಇಡಲಾಗಿದೆ ॥೨೩೫॥ ವಾಯು ಒಳ ಹೊರಗೆ ಬರಹೋಗಲು ಪ್ರಾಣ ಮತ್ತು ಅಪಾನಗಳ ಕಿಂಡಿಗಳನ್ನು ತಯಾರ ಮಾಡಿದೆ. ಮೇಲೆ ಅಲುಗಾಡುತ್ತಿರುವ ಶಿಖರಕ್ಕೆ ಕೇಶಗಳ ಆಗಿಗಳನ್ನು ಹಚ್ಚಿದೆ ॥೨೩೬॥ ಒಳಗಿನ ಅವಕಾಶವನ್ನು ಮುಚ್ಚಿ ಒಂಬತ್ತು ನಾಡಿಗಳಿಂದ ಕಟ್ಟಲ್ಪಟ್ಟಿರುವುದು. ಅವುಗಳಲ್ಲಿ ಮಲ ಮೂತ್ರಗಳು ನಿತ್ಯ ನೂತನವಾಗಿ ಸಂಗ್ರಹವಾಗುತ್ತಿರುವುದು ॥೨೩೭॥ ಒಳಗಡೆಯ ಪೊಳ್ಳಿನಲ್ಲಿ ದುರ್ಗಂಧವು ತುಂಬಿಕೊಂಡಿರುವುದು. ನವದ್ವಾರಗಳಿಂದ ಅದರ ಪ್ರವಾಹವು ಹರಿಯುತ್ತಿರುತ್ತದೆ ॥೨೩೮॥ ಇಂತಹ ಬಚ್ಚಲಗಳಲ್ಲಿ ಒಂದೇ ಸಮನಾಗಿ ಹೊಲಸು ಹರಿಯುತ್ತಿರುತ್ತದೆ. ಇದನ್ನು ಕಂಡು ತನಗೆ ತಾನೇ ಹೇಸಿಗೆಯಾಗುವುದು. ಹಗಲು ರಾತ್ರಿನೀರಿನಿಂದ ತೊಳೆದರೂ ಅವು ಎಂದಿಗೂ ಸ್ವಚ್ಛವಾಗಲಾರವು ॥೨೩೯॥

ಸಾಂಗತಾಂಚಿ ಹೇ ಗೋಷ್ಟೀ । ಓಕಾರೀ ಯೇತಸೇ ಪೋಟೀ । ಐಶಿಯಾಸ ಮೀ ಭುಲಲೇ ಕರಂಟೀ । ವಿವೇಕ ದೃಷ್ಟೀ ನ ಪಾಹೇ ।೨೪೦॥ ಅಸ್ಥಿಮಾಂಸಾಂಚಾ ಕೋಥಳಾ । ವಿಷ್ಠಾಮೂತ್ರಾಚಾ ಗೋಳಾ । ಮ್ಯಾ ಆಲಿಂಗಿಲಾ ವೇಳೋವೇಳಾ । ಜಳೋ ಕಂಟಾಳಾ ನ ಯೇಚಿ ।೨೪೧॥

ವಿದೇಹಾನಾಂ ಪುರೇ ಹ್ಯಸ್ಮಿನ್ನಹಮೇಕೈವ ಮೂಢಧೀಃ । ಯಾನ್ಯಮಿಚ್ಛಂತ್ಯಸತ್ಯಸ್ಮಾದಾತ್ಮದಾತ್ಕಾಮಮಚ್ಯುತಾತ್ ।೩೩॥

ಅರ್ಥ:- ಈ ವಿದೇಹ ನಗರದಲ್ಲಿ ನಾನೊಬ್ಬಳೇ ಮೂಢಮತಿಯಾಗಿರುವೆ. ಈ ವಿದೇಹ ನಗರವು ನಿಜವಾಗಿಯೂ ಜೀವನ್ಮುಕ್ತಿಯ ನಗರವಾಗಿದೆ. ಆದರೂ ನಾನು ದುಷ್ಟಳು. ಏಕೆಂದರೆ ಅವಿನಾಶೀ, ಪರಮಪ್ರಿಯ ಪರಮಾತ್ಮನನ್ನು ಬಿಟ್ಟು ಯಾವುದೋ ಪುರುಷನ ಅಭಿಲಾಷೆಯನ್ನು ಮಾಡಿದೆ.

ಯೇ ವಿದೇಹಾಚೇ ನಗರೀ । ಮೂರ್ಖ ಮೀಚಿ ಏಕ ದೇಹಧಾರೀ । ಹೃದಯಸ್ಥ ಸಾಂಡೂನಿ ಶ್ರೀಹರೀ । ಅಸತಾ ನರೀ ವ್ಯಭಿಚಾರು ।೨೪೨॥ ಅಸಂತ ಪುರುಷ ನೇಣೋ ಕಿತೀ । ಮ್ಯಾ ಭೋಗಿಲೇ ಅಹೋರಾತೀ । ಸುಖ ನ ಪವೇಚಿ ನಿಶ್ಚಿತೀ । ರತೀ ಭಗವಂತೀ ಜಂವ ನಾಹೀ ।೨೪೩॥ ಜೋ ನಿಕಟವರ್ತೀ ಹೃದಯಸ್ಥೂ । ಪುರುಷೀ ಪುರಷೋತ್ತಮ ಅಚ್ಯುತು । ವೀರ್ಯಚ್ಯುತೀವೀಣ ರಮವಿತು । ಸಂತೋಷೇ ದೇತು ನಿಜಾತ್ಮನಾ ।೨೪೪॥ ಅಚ್ಯುತೇ ಜ್ಯಾಸೀ ನಿಜಸುಖ ದಿಧಲೇ । ತೇ ಸುಖ ಚ್ಯವೇನಾ ಕಾಂಹೀ ಕೇಲೇ । ಐಶಿಯಾ ಹೃದಯಸ್ಥಾ ವಿಸರಲೇ । ಆಣಿಕ ಭುಲಲೇ ಅಕಾಮದಾ ।೨೪೫॥ ಅಕಾಮದ ತೇ ನಾಶವಂತ । ತ್ಯಾಂಸೀ ಸಂಗ ಕೇಲಿಯಾ ದುಃಖಚಿ ದೇತ । ಕೈಸೇ ಮಾಝೇ ಮೂರ್ಖಚಿತ್ತ । ತ್ಯಾಸೀ ಆಸಕ್ತ ಪೈ ಹೋತೇ ।೨೪೬॥ ತ್ಯಾ ಆಸಕ್ತಿಚೇ ಝಾಲೀ ತಡಾತೋಡೀ । ಲಾಗಲೀ ಅಚ್ಯುತಸುಖಾಚೀ ಗೋಡೀ । ಜ್ಯಾಚೇ ಸುಖ ಭೋಗಿತಾ ಚಢೋವಢೀ । ಘಡಿಯಾಘಡೀ ವಾಢತೆ ।೨೪೭॥

ಸುಹೃತ್ ಪ್ರೇಷ್ಠತಮೋ ನಾಥ ಆತ್ಮಾ ಚಾಯಂ ಶರೀರಿಣಾಮ್ । ತಂ ವಿಕ್ರೀಯಾತ್ಮನೈವಾಹಂ ರಮೇಽನೇನ ಯಥಾ ರಮಾ ।೩೪॥

ಅರ್ಥ:- ಈ ಅಚ್ಯುತನು ದೇಹಧರಿಸಿದ ಜೀವಿಗಳ ಸುಹೃದನು, ಅತ್ಯಂತ ಪ್ರಿಯನು, ನಾಥನು ಮತ್ತು ಆತ್ಮನಾಗಿರುವನು.ನಾನೀಗ ಸ್ವತಃಕ್ಕೆ ಆತನಿಗೆ ಮಾರಿಕೊಂಡು ಆತನಲ್ಲಿ ಲಕ್ಷ್ಮೀಯಂತೆ ರಮಮಾಣಳಾಗಬೇಕಾಗಿದೆ.

ಜೋ ಸೋಯರಾ ಮಾಝಾ ಹೃದಯಸ್ಥು । ಸುಖ ಪ್ರೀತಿ ಪ್ರಿಯ ಅಚ್ಯುತು । ತೋಚಿ ಅಂತರಾತ್ಮಾ ಸರ್ವಗತು । ನಾಥ ಕಾಂತು ತೋ ಮಾಝಾ ।೨೪೮॥ ತ್ಯಾಸೀಚ ಆಪುಲೇ ಸಂವಸಾಟೀ । ವಿಕತ ಘೇಈನ ಉಠಾಉಠೀ । ಪರಮಾನಂದೇ ದೇಈನ ಮಿಠೀ । ಗೋಠೀ ಚಾವಟೀ ಸಾಂಡೋನೀ ।೨೪೯॥ ರಮಾ ಝಾಲೀ ಪಾಯಾಂಚೀ ದಾಸೀ । ಮೀ ಭೋಗೀನ ಅನಾರಿಸೀ । ಸರ್ವಕಾಳ ಸರ್ವದೇಶೀ । ಸರ್ವರೂಪೇಸೀ ಸರ್ವಸ್ವೇ ।೨೫೦॥

ಈ ವಿಷಯಗಳ ಬಗ್ಗೆ ವರ್ಣನೆಯನ್ನು ಮಾಡಲು ಹೊಟ್ಟೆಯಲ್ಲಿ ಕಲಿಸಿದಂತಾಗಿ ವಾಂತಿಯು ಬರುವುದು. ಆದರೆ ನಾನು ದುರ್ದೈವಿಯಾಗಿದ್ದು ಇಂತಹ ಅಪವಿತ್ರ ದೇಹಕ್ಕೆ ಮೋಹಿಸಿದೆ. ವಿವೇಕ ದೃಷ್ಟಿಯಿಂದ ದೇಹದತ್ತ ನೋಡಲೇ ಇಲ್ಲ ।೨೪೦॥ ಹೀಗೆ ಈ ಯಾವ ಅಪವಿತ್ರವಾದ ಎಲಬು ಮಾಂಸಗಳ ಚೀಲಕ್ಕೆ, ಮಲಮೂತ್ರದ ಪಾತ್ರೆಗೆ ನಾನು ಮೇಲಿಂದ ಮೇಲೆ ಆಲಿಂಗಿಸಿದೆನು. ಆ ದೇಹವು ಸುಡಲಿ, ನನಗೆ ಇದರ ಬೇಸರವೂ ಆಗಲಿಲ್ಲ ।೨೪೧॥

ಈ ಯಾವ ವಿದೇಹ ಜನಕ ಮಹಾರಾಜನ ನಗರದಲ್ಲಿ ನಾನೊಬ್ಬ ಮೂಢಳು ಜನ್ಮಕ್ಕೆ ಬಂದಿರುವೆ. ಕಾರಣ ಹೃದಯಸ್ಥನಾದ ಶ್ರೀಹರಿಯನ್ನು ಬಿಟ್ಟು ನಾನು ನೀಚ ಪುರುಷರಲ್ಲಿ ವ್ಯಭಿಚಾರವನ್ನು ಮಾಡಿದೆ ।೨೪೨॥ ನಾನು ಇಂತಹ ನೀಚ ಪುರುಷರಲ್ಲಿ ಅದೆಷ್ಟು ಸಲ ಭೋಗಿಸಿರುವೆನೋ ಅದರ ಗಣಿತವೇ ಇಲ್ಲ. ಎಲ್ಲಿಯವರೆಗೆ ಭಗವಂತನ ಚರಣಗಳಲ್ಲಿ ಪ್ರೇಮವು ಉತ್ಪನ್ನವಾಗುವುದಿಲ್ಲವೋ ಅಲ್ಲಿಯವರೆಗೆನಿಜವಾದ ಸುಖವು ಲಭಿಸಲಾರದು ।೨೪೩॥ ಆ ದೇವನು ಅತಿ ನಿಕಟವರ್ತಿಯು, ಪುರುಷರಲ್ಲಿ ಪುರುಷೋತ್ತಮನು. ವೀರ್ಯಚ್ಯುತಿಯನ್ನು ಮಾಡದೇ ಆನಂದವನ್ನು ಕೊಡುವವನು, ಮತ್ತು ಪರಮ ಸಂತೋಷದಿಂದ ನಿಜಾತ್ಮಪದವನ್ನು ಕೊಡುವವನಾಗಿರುವನು ।೨೪೪॥ ಆ ಯಾವ ಅಚ್ಯುತನು ಯಾರಿಗೆ ನಿಜಸುಖವನ್ನು ಕೊಡುವನೋ, ಆ ಸುಖವು ಎಂದೆಂದಿಗೂ ನಷ್ಟವಾಗುವುದಿಲ್ಲ. ಇಂತಹ ಹೃದಯಸ್ಥ ಪರಮಾತ್ಮನಿಗೆ ನಾನು ಮರೆತೆ ಹಾಗೂ ಅಸಮರ್ಥ ಪುರುಷರಲ್ಲಿ ಮೋಹಿಸಿದೆ ।೨೪೫॥ ಯಾವ ಸುಖವು ತೃಪ್ತಿಯನ್ನು ಕೊಡುವುದಿಲ್ಲವೋ ಅದು ನಾಶಿವಂತವಾಗಿರುವುದು. ಇದರ ಸಹವಾಸದಿಂದ ದುಃಖವೇ ದೊರಕುವುದು. ನೋಡಿರಿ, ನನ್ನ ಚಿತ್ತವು ಎಂತಹ ಮೂಢವಾಗಿರಬೇಕು? ನಾನು ಅಂತಹವರಲ್ಲಿಯೇ ಆಸಕ್ತಳಾದೆ ।೨೪೬॥ ಆದರೆ ಈಗ ಮಾತ್ರ ಈ ಆಸಕ್ತಿಯು ಮುರುಗಡೆಯಾಗಿದೆ. ಅಚ್ಯುತ ಸುಖದ ಅಕ್ಷಯವಾಗಿರುವ ಹರಿಸುಖದ ನನಗೀಗ ರುಚಿ ಹತ್ತಿದೆ. ಈ ಸುಖವನ್ನು ಭೋಗಿಸುತ್ತಿರಲು ಕ್ಷಣಕ್ಷಣಕ್ಕೂ ಅದು ಬೆಳೆಯುತ್ತಲೇ ಸಾಗುತ್ತಿದೆ ।೨೪೭॥

ಯಾವ ನನ್ನ ಹೃದಯದ ಆಪ್ತನು, ನನ್ನ ಸುಖದಾತನು,ನನ್ನ ಪ್ರಿಯಕರನು, ನನ್ನಲ್ಲಿ ಪ್ರೇಮ ಮಾಡುವ ಅಚ್ಯುತನು ಹೀಗಿರುವ ಆತನೇ ಸರ್ವವ್ಯಾಪಿ ಪರಮಾತ್ಮನಾಗಿದ್ದು, ನನ್ನ ಪ್ರಿಯಸ್ವಾಮಿಯಾಗಿರುವನು. ಈತನೇ ನನ್ನ ಪತಿಯು ।೨೪೮॥ ಆತನಿಗೆ ನಾನು ಸ್ವತಃ ಅರ್ಪಿಸಿಕೊಂಡು ಬಹುಬೇಗ ಆತನನ್ನು ಖರೀದಿಸಿಕೊಳ್ಳುವೆನು.ಮತ್ತು ವಿಲಾಸಯುಕ್ತ ಮಾತುಗಳನ್ನು ಬಿಟ್ಟು ಆತನ ಚರಣಗಳಿಗೆ ಪರಮಾನಂದದಿಂದ ಅಪ್ಪಿಕೊಳ್ಳುವೆನು ।೨೪೯॥ ಲಕ್ಷ್ಮೀಯು ಆತನ ಚರಣದಾಸಿಯಾಗಿರುವಳು. ಆದರೆ ನನ್ನದು ಬೇರೆ ಪ್ರಕಾರವಾಗಿದೆ.ನಾನು ನಿಃಸ್ವಾರ್ಥ ಪ್ರೇಮದಿಂದ ಸರ್ವತ್ರವೂ ಸರ್ವ ರೂಪದಿಂದ, ಸರ್ವಸ್ವದಿಂದ ಆತನಲ್ಲಿ ಸುಖವನ್ನು ಭೋಗಿಸುವೆನು ।೨೫೦॥

ಕಿಯತ್‌ಪ್ರಿಯಂ ತೇ ವ್ಯಭಜನ್ ಕಾಮಾ ಯೇ ಕಾಮದಾ ನರಾ : ।
ಆದ್ಯಂತವಂತೋ ಭಾರ್ಯಾಯಾ ದೇವಾ ವಾ ಕಾಲವಿದ್ರುತಾಃ ।।೩೫।।

ಅರ್ಥ:- ಉತ್ಪತ್ತಿ - ವಿನಾಶಗಳಲ್ಲಿರುವ ಪುರುಷರು ವಿಷಯ ಭೋಗವನ್ನು ಕೊಡುವವರು ಅಥವಾ ಸ್ವರ್ಗದ ದೇವತೆಯವರು ತಮ್ಮ ತಮ್ಮ ಹೆಂಡತಿಯವರಿಗೆ ಎಷ್ಟು ಸಂತೋಷಗೊಳಿಸಿರುವವರು ? ಆದ್ದರಿಂದ ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಅಚ್ಯುತನ ಹೊರತಾಗಿ ಯಾರೂ ಸೇವ್ಯರಾಗಿರುವುದಿಲ್ಲ.

ಸಾಂಡೂನಿ ಹೃದಯಸ್ಥಾ ಅಚ್ಯುತಾತೇ । ವರಾವೇ ವರಾ ನಿರ್ದೈವಾಂತೇ । ತಂವ ತೋ ದ್ವೈತಭಯೇ ಭಯಚಕಿತೇ । ಕಾಳಗ್ರಸ್ತೇ ಸರ್ವದಾ ।।೭೫೧।। ಜೇ ನಿಜಭಯೇ ಸರ್ವದಾ ದುಃಖೀ । ತೇ ಭಾರ್ಯೇಸೀ ಕಾಯ ಕರಿತೀ ಸುಖೀ । ಅವಘೀ ಪಡಲೀ ಕಾಳಮುಖೀ । ನ ದಿಸೇ ಯೇ ಲೋಕೀ ಸುಖದಾತಾ ।।೭೫೨।। ಅಸೋ ನರಾಚೀ ಐಶೀ ಗತೀ । ವರೂ ಅಮರಾಮಾಜೀ ಅಮರಪತೀ । ವಿಳಾಂತ ತೇ ಚೌದಾ ನಿಮತೀ । ಪದಚ್ಯುತಿ ಅಮರೇಂದ್ರಾ ।।೭೫೩।। ಏವಂ ಸುರ ನರಲೋಕಲೋಕೀ । ಆತ್ಮಮರಣೇ ಸದಾ ದುಃಖೀ । ತೇ ಕೇವೀ ಭಾರ್ಯೇಸೀ ಕರಿತೀ ಸುಖೀ । ಭಜಾವೇ ಮೂರ್ಖೀ ತೇ ಠಾಯೀ ।।೭೫೪।। ಧನ್ಯ ಮಾಝೀ ಭಾಗ್ಯಪ್ರಾಪ್ತೀ । ಯೇಚಿ ಕ್ಷಣೀ ಯೇಚೀ ರಾತೀ । ಝಾಲೀ ವಿವೇಕವೈರಾಗ್ಯಪ್ರಾಪ್ತೀ । ರಮಾಪತಿ ತುಷ್ಟಲಾ ।।೭೫೫।।

ನೂನಂ ಮೇ ಭಗವಾನ್‌ಪ್ರೀತೋ ವಿಷ್ಣುಃ ಕೇನಾಪಿ ಕರ್ಮಣಾ ।
ನಿರ್ವೇದೋಽಯಂ ದುರಾಶಾಯಾಯನ್ಮೇ ಜಾತಃ ಸುಖಾವಹಃ ।।೩೬।।

ಅರ್ಥ:- ನಿಜವಾಗಿಯೂ ನನ್ನ ಯಾವುದೋ ಜನ್ಮದ ಪುಣ್ಯಕರ್ಮದ ಫಲವಾಗಿ ಭಗವಾನ ವಿಷ್ಣು ನನ್ನ ಮೇಲೆ ಸಂತುಷ್ಟನಾಗಿರುವನು. ಆದ್ದರಿಂದಲೇ ದುರಾಶೆಯಲ್ಲಿ ನನಗೆ ವೈರಾಗ್ಯವು ಪ್ರಾಪ್ತವಾಯಿತು. ಈ ನನ್ನ ವೈರಾಗ್ಯವು ಅವಶ್ಯವಾಗಿ ನನಗೆ ಸುಖವನ್ನು ಕೊಡುವುದಾಗಿದೆ.

ಯೇ ಜನ್ಮೀಚೇ ಮಾಝೇ ಕರ್ಮ । ಪಾಹತಾ ಕೇವಳ ನಿಂದ್ಯ ಧರ್ಮ । ಮಜ ತುಷ್ಟಲಾ ಪುರುಷೋತ್ತಮ । ಪೂರ್ವಜನ್ಮಸಾಮಗ್ರೀ ।।೭೫೬।। ಮಜ ಕೈಚೇ ಪೂರ್ವಜನ್ಮೀ ಸಾಧನ । ಜ್ಯಾಚೇ ನಾಮ "ಪತಿತಪಾವನ" । ಕೃಪಾಳು ಜೋ ಜನಾರ್ದನ । ತ್ಯಾಚೇ ಕೃಪೇನ ಹೇ ಘಡಲೇ ।।೭೫೭।। ದುಷ್ಟ ದುರಾಶಾ ವ್ಯಭಿಚಾರೂ । ಭಗದ್ವಾರಾ ಚಾಲವೀ ಸಂಸಾರೂ । ತಿಸೀ ಮಜ ವೈರಾಗ್ಯಯುಕ್ತ ವಿಚಾರೂ । ವಿಷ್ಣು ಸಾಚಾರೂ ತುಷ್ಟಲಾ ।।೭೫೮।। ಜರೀ ಅಸತೇ ಪೂರ್ವಸಾಧನ । ತರೀ ನಿಂದ್ಯ ನವ್ಹತೇ ಮೀ ಆಪಣ । ಯೋನಿದ್ವಾರಾ ಕರ್ಮಾಚರಣ । ಪತಿತ ಪೂರ್ಣ ಮೀ ಏಕೀ ।।೭೫೯।। ಯಾಪರೀ ಮೀ ಪೂರ್ಣ ಪತಿತ । ಪತಿತಪಾವನ ಜಗನ್ನಾಥ । ತೇಣೇ ಕೃಪಾ ಕರೂನ ಯೇಥ । ಕೇಲೇ ವಿವೇಕಯುಕ್ತ ವೈರಾಗೀ ।।೭೬೦।।

ಹೃದಯಸ್ಥ ಪರಮಾತ್ಮನನ್ನು ಬಿಟ್ಟು ಒಂದು ವೇಳೆ ದೈವಹೀನ ಪುರುಷನನ್ನು ವರಿಸಬೇಕೆಂದರೆ ಅವನು ದ್ವೈತದ ಭಯದಿಂದ ಗಾಬರಿಯಾಗಿರುವನು. ಹಾಗೂ ಯಾವಾಗಲೂ ಕಾಲನಿಂದ ಗ್ರಾಸಿಸಲ್ಪಟ್ಟಿರುವನು ।೭೫೧।। ತನ್ನ ಚಿಂತೆಯಲ್ಲಿಯೇ ಸದಾನಿಮಗ್ನನಾದವನು ತನ್ನ ಪತ್ನಿಗೆ ಯಾವ ಸುಖ ಹೇಗೆ ಕೊಡುವನು? ಇವನು ಮೃತ್ಯುವಿನ ದವಡೆಯಲ್ಲಿ ಸಿಲುಕಿಕೊಂಡಿರುವನು. ಆದ್ದರಿಂದ ಈ ಲೋಕದಲ್ಲಿ ನನಗೆ ಸುಖ ಕೊಡುವವರು ಯಾರೂ ಕಾಣೆಸರು ।೭೫೨।। ಇದು ಮಾನವರ ಸ್ಥಿತಿಯಾಗಿದೆ. ಈಗ ಸ್ವರ್ಗಾಧಿಪತಿಯಾದ ಇಂದ್ರನಿಗೆ ವರಿಸಬೇಕೆಂದರೆ ಒಂದೇ ಕಲ್ಪದಲ್ಲಿ ಹದಿನಾಲ್ಕು ಇಂದ್ರರು ಆಗಿ ಹೋಗುವರು. ಹೀಗೆ ಇಂದ್ರನಿಗೂ ಪದಚ್ಯುತಿ ಉಂಟು ।೭೫೩।। ಹೀಗೆ ದೇವನಾಗಲಿ,ಮನುಷ್ಯನಾಗಲಿ, ಇವರು ಸ್ವತಃದ ಮರಣದ ಚಿಂತೆಯಿಂದ ಯಾವಾಗಲೂ ದುಃಖಿಯಾಗಿರುವರು. ಹೀಗಿರಲು ಇವರು ತಮ್ಮ ಪತ್ನಿಗೆ ಹೇಗೆ ಸುಖ ಕೊಡುವರು ? ಮೂರ್ಖರು ಮಾತ್ರ ಇವರಲ್ಲಿ ಪ್ರೀತಿಸಬೇಕು ।೭೫೪।। ಧನ್ಯ ನನ್ನ ಭಾಗ್ಯವು. ಈ ರಾತ್ರಿಯಲ್ಲೇ ಈ ಕ್ಷಣಕ್ಕೆ ನನಗೆ ವೈರಾಗ್ಯವು ಪ್ರಾಪ್ತವಾಯಿತು. ನನ್ನಲ್ಲಿ ಲಕ್ಷ್ಮೀಪತಿಯು ಸಂತುಷ್ಟನಾದನು ।೭೫೫।।

ಈ ಜನ್ಮದ ನನ್ನ ಕರ್ಮಗಳನ್ನು ನೋಡಿದರೆ ಕೇವಲ ನಿಂದ್ಯ ಕರ್ಮಗಳಾಗಿರುವುವು. ಆದರೆ ಪೂರ್ವಜನ್ಮಗಳ ಯಾವುದೋ ಭಾಗ್ಯದಿಂದ ಪುರುಷೋತ್ತಮನು ನನ್ನಲ್ಲಿ ಪ್ರಸನ್ನನಾಗಿರುವನು ।೭೫೬।। ನನ್ನ ಪೂರ್ವಜನ್ಮದ ಕರ್ಮಗಳು ಹೇಗಿದ್ದವೋ ಯಾರು ಬಲ್ಲರು? ಪತಿತಪಾವನ, ಪರಮ ಕೃಪಾಳು ಜನಾರ್ದನನ ಕೃಪೆಯಿಂದಲೇ ಇದು ನನಗೆ ಸಾಧಿಸಿರಬೇಕು ।೭೫೭।। ನಾನೊಬ್ಬ ದುಷ್ಟಳು, ದುರ್ವ್ಯಸನಿಯು, ವ್ಯಭಿಚಾರಿಣಿಯು, ಭೋಗೇಂದ್ರಿಯದಿಂದ ಸಂಸಾರವನ್ನು ನಡೆಸಿದವಳು. ಇಂಥವಳಿಗೆ ವೈರಾಗ್ಯದ ವಿಚಾರವಾದರೂ ಹೇಗೆ ಹೊಳೆಯಬೇಕು? ವಿಷ್ಣು ಪರಮಾತ್ಮನೇ ನನ್ನಲ್ಲಿ ಪ್ರಸನ್ನನಾಗಿರಲೇಬೇಕು ।೭೫೮।। ಪೂರ್ವ ಜನ್ಮದಲ್ಲಿ ನಾನೇನಾದರೂ ಪುಣ್ಯವನ್ನು ಮಾಡಿದ್ದರೆ ಇಂತಹ ನಿಂದ್ಯ ಕರ್ಮಗಳಲ್ಲಿ ನಾನು ಪ್ರವರ್ತಳಾಗುತ್ತಿದ್ದಿಲ್ಲ. ಯೋನಿದ್ವಾರದಿಂದ ಕರ್ಮಾಚರಣೆಯನ್ನು ಮಾಡಿದ ನಾನೊಬ್ಬ ಪೂರ್ಣ ಪಾಪಿಷ್ಠಳಾಗಿದ್ದೇನೆ ।೭೫೯।। ಹೀಗೆ ನಾನು ಪೂರ್ಣವಾಗಿ ಪತಿತಳಾಗಿದ್ದರೂ ಯಾವ ಈ ಜಗದೀಶ್ವರನು ಪತಿತಪಾವನನಾಗಿರುವುದರಿಂದ ಆತನು ನನ್ನ ಮೇಲೆ ಕೃಪೆದೋರಿ ನನ್ನ ಮನದಲ್ಲಿ ವಿವೇಕಯುಕ್ತ ವೈರಾಗ್ಯವನ್ನು ಉತ್ಪನ್ನಗೊಳಿಸಿದನು ।೭೬೦।।

ತೇಣೇ ವೈರಾಗ್ಯವಿಚಾರೇ ದೇಖ । ದುಷ್ಟ ದುರಾಶೇಚೇ ಫಿಟಲೇ ದುಃಖ । ಮಜ ಝಾಲೇ ಪರಮ ಸುಖ । ನಿಜಸಂತೋಷ ಪಾವಲೇ ।।೨೬೧।। ದುಃಖ ಆದಳತಾ ಅಂಗಾಸೀ । ವೈರಾಗ್ಯ ನುಪಜೇ ಅಭಾಗ್ಯಾಸೀ । ಭಗವಂತೇ ಕೃಪಾ ಕೇಲೀ ಕೈಶೀ । ದುಃಖೇ ನಿಜಸುಖಾಸೀ ದೀಧಲೇ ।।೨೬೨।।

ನೈವಂ ಸ್ಯುರ್ಮಂದಭಾಗ್ಯಾಯಾಃ ಕ್ಲೇಶಾ ನಿರ್ವೇದಹೇತವಃ । ಯೇನಾನುಬಂಧಂ ನಿರ್ಹೃತ್ಯ ಪುರುಷಃ ಶಮಮೃಚ್ಛತಿ ।೩೭।।

ಅರ್ಥ:- ನನ್ನ ಮಂದಭಾಗ್ಯದ ಕ್ಲೇಶಗಳು ಹೀಗೆ ವಿರಕ್ತಿಗೆ ಕಾರಣವಾಗುತ್ತಿರಲಿಲ್ಲ. ನಾನು ಭಾಗ್ಯಹೀನಳಾಗಿದ್ದರೆ ನನಗೆ ಹೀಗೆ ವೈರಾಗ್ಯವನ್ನು ಉತ್ಪನ್ನಗೊಳಿಸುವ ಕ್ಲೇಶಗಳು ಆಗುತ್ತಿದ್ದಿಲ್ಲ. ಯಾವ ವೈರಾಗ್ಯದ ಯೋಗದಿಂದ ಪುರುಷನು ಗೃಹಾದಿಕಗಳ ತ್ಯಾಗವನ್ನು ಮಾಡಿ ಶಾಂತಿಗೆ ಪ್ರಾಪ್ತನಾಗುವನು.

ಅಂಗೀ ಆದಳತಾ ದುಃಖದ್ವಂದ್ವ । ಅಭಾಗ್ಯಾಸೀ ಯೇ ಸಬಳ ಕ್ರೋಧ । ಥಿತಾ ವಿವೇಕ ಹೋಯ ಅಂಧ । ಭಾಗ್ಯಮಂದ ತೇ ಜಾಣಾ ।।೨೬೩।। ದುಃಖ ದೇಖತಾಂಚಿ ದೃಷ್ಟೀ । ಜ್ಯಾಸೀ ವೈರಾಗ್ಯ ವಿವೇಕೇಸೀ ಉಠೀ । ತೇಣೇ ಛೇದೂನಿ ಸ್ನೇಹಹೃದಯಗಾಂಠೀ । ಪಾವೇ ಉಠಾಉಠೀ ನಿಜಸುಖ ।।೨೬೪।। ಪುರುಷಾಂಸೀ ಪರಮನಿಧಾನ । ವಿವೇಕಯುಕ್ತ ವೈರಾಗ್ಯ ಜಾಣ। ತೇಣೇ ಹೋಊನಿಯಾ ಪ್ರಸನ್ನ । ಸಮಾಧಾನ ಪಾವತೀ ।।೨೬೫।। ಮೀ ಪೂರ್ವೀ ಪರಮ ಅಭಾಗ್ಯ । ಮಹಾಪುರುಷಾಂಚೇ ಜೇ ನಿಜಭಾಗ್ಯ । ತೇ ಭಗವಂತೇ ದಿಧಲೇ ವೈರಾಗ್ಯ । ಝಾಲೇ ಶ್ಲಾಘ್ಯ ತಿಹೀ ಲೋಕೀ ।।೨೬೬।।

ತೇನೋಪಕೃತಮಾದಾಯ ಶಿರಸಾ ಗ್ರಾಮ್ಯಸಂಗತಾಃ । ತ್ಯಕ್ತ್ವಾ ದುರಾಶಾಃ ಶರಣಂ ವ್ರಜಾಮಿ ತಮಧೀಶ್ವರಮ್ ।೩೮।।

ಅರ್ಥ:- ಈಗ ನಾನು ಭಗವಂತನ ಈ ಉಪಕಾರವನ್ನು ಆದರಪೂರ್ವಕವಾಗಿ ನಮಸ್ಕರಿಸಿ ಸ್ವೀಕರಿಸುತ್ತಿರುವೆನು. ವಿಷಯ ಭೋಗದ ಇಚ್ಛೆಯನ್ನು ಬಿಟ್ಟು ಆ ಯಾವ ಜಗದೀಶ್ವರನಿಗೆ ಶರಣಾಗುವೆನು.

ಕೃಪಾ ಕರೋನಿ ಭಗವಂತೇ । ನಿಜವೈರಾಗ್ಯ ದಿಧಲೇ ಮಾತೇ । ತೇಣೇ ಸಾಂಡವಿಲೇ ದುರಾಶೇತೇ । ಗ್ರಾಮ್ಯ ವಿಷಯಾತೇ ಛೇದಿಲೇ ।।೨೬೭।। ತೋ ಉಪಕಾರ ಮಾನೂನಿಯಾ ಮಾಥಾ । ತ್ಯಾಸೀ ಮೀ ಶರಣ ಜಾಈನ ಆತಾ । ಜೋ ಸರ್ವಾಧೀಶ ನಿಯಂತಾ । ತ್ಯಾ ಕೃಷ್ಣನಾಥಾ ಮೀ ಶರಣ ।।೨೬೮।।

ಸಂತುಷ್ಟಾ ಶ್ರದ್ದಧತ್ಯೇತದ್ಯಥಾಲಾಭೇನ ಜೀವತೀ । ವಿಹರಾಮ್ಯಮುನೈವಾಹಮಾತ್ಮನಾ ರಮಣೇನ ವೈ ।೩೯।।

ಅರ್ಥ :- ಈಗ ನನಗೆ ಪ್ರಾರಬ್ಧಾನುಸಾರವಾಗಿ ದೊರೆತದ್ದರಲ್ಲಿಯೇ ನನ್ನ ಉದರನಿರ್ವಾಹವನ್ನು ಮಾಡಿಕೊಳ್ಳುತ್ತೇನೆ. ಸಂತೋಷವಾಗಿ ಶ್ರದ್ಧೆಯಿಂದ ಇರುವೆನು. ಈಗ ನಾನು ಪರ ಪುರುಷರತ್ತ ನೋಡದೇ ನನ್ನ ಹೃದಯದ ಈಶ್ವರ, ಆತ್ಮ ಸ್ವರೂಪನಾದ ಪ್ರಭುವಿನಲ್ಲಿ ವಿಹರಿಸುವೆನು.

ಶರಣ ಗೇಲಿಯಾಪಾಠೀ । ಸಹಜ ಸಂತುಷ್ಟ ಮೀ ಯೇ ಸೃಷ್ಟೀ । ಸ್ವಭಾವೇ ಸತ್‌ಶ್ರದ್ಧಾ ಪೋಟೀ । ಜೀವಿಕಾ ಗಾಂಠೀ ಅದೃಷ್ಟ ।।೨೬೯।।

ಈ ವೈರಾಗ್ಯದ ವಿಚಾರಗಳಿಂದ ದುರ್ವ್ಯಸನಗಳಿಂದಾಗುವ ನನ್ನ ದುಃಖಗಳು ದೂರಾದವು. ಈಗ ನಾನು ಪರಮ ಸುಖಿಯಾಗಿರುವೆ. ನನಗೆ ಪರಮಾನಂದದ ಲಾಭವಾಯಿತು ।।೨೬೧।। ಭಾಗ್ಯಹೀನರಿಗೆ ದುಃಖದ ಪರ್ವತವೇ ತಲೆಯ ಮೇಲೆ ಬಿದ್ದರೂ ವೈರಾಗ್ಯದ ಪ್ರಾಪ್ತಿಯು ಆಗುವುದಿಲ್ಲ. ಆದರೆ ಪ್ರಭು ನನಗೆ ಎಂತಹ ಕೃಪೆ ಮಾಡಿದನೆಂದರೆ ದುಃಖದ್ವಾರಾ ಆತ್ಮಸುಖವನ್ನು ತಂದುಕೊಟ್ಟನು ।।೨೬೨।।

ದುಃಖರೂಪವಾದ ದ್ವಂದ್ವಗಳು ಅಂಗಕ್ಕೆ ಬಡೆಯಲು ಅಭಾಗ್ಯ ಮನುಷ್ಯನಿಗೆ ಬಹಳ ಕ್ರೋಧವು ಬರುವುದು. ಅವನಲ್ಲಿಯ ವಿವೇಕವು ಕುರುಡಾಗುವುದು. ಅವನೇ ಭಾಗ್ಯಹೀನನೆಂದು ತಿಳಿಯಬೇಕು ।।೨೬೩।। ದುಃಖವು ದೃಷ್ಟಿಗೆ ಬೀಳುತ್ತಲೇ ಯಾರಿಗೆ ವಿವೇಕಯುಕ್ತ ವೈರಾಗ್ಯವು ಪ್ರಾಪ್ತವಾಗುವುದೋ, ಆತನು ಹೃದಯದಲ್ಲಿನ ಮೋಹ,ಮಮತೆಯ ಗಂಟನ್ನು ಬಿಚ್ಚಿಕೊಂಡು ಆತ್ಮಸುಖಕ್ಕೆ ಪ್ರಾಪ್ತನಾಗುವನು ।।೨೬೪।। ವಿವೇಕಯುಕ್ತ ವೈರಾಗ್ಯವೇ ಮನುಷ್ಯನ ಅಮೂಲ್ಯವಾದ ನಿಧಿಯಾಗಿರುವುದು. ಇದರಿಂದ ಈತನು ಸಂತುಷ್ಟನಾಗಿ ಸಮಾಧಾನವನ್ನು ಪ್ರಾಪ್ತಮಾಡಿಕೊಳ್ಳುವನು ।।೨೬೫।। ನಾನು ಪೂರ್ವದಲ್ಲಿ ಅತ್ಯಂತ ಭಾಗ್ಯಹೀನಳಾಗಿದ್ದೆನು.ಭಾಗ್ಯವಂತ ಪುರುಷನ ಮಹಾಭಾಗ್ಯವಾದ ಯಾವ ವೈರಾಗ್ಯವನ್ನು ಭಗವಂತನು ನನಗೆ ದಯಪಾಲಿಸಿದನು. ಆದ್ದರಿಂದ ನಾನು ಮೂರು ಲೋಕಗಳಲ್ಲಿ ಧನ್ಯ ಧನ್ಯಳಾದೆನು ।।೨೬೬।।

ಭಗವಂತನು ನನಗೆ ಕೃಪೆದೋರಿ ನಿಜವೈರಾಗ್ಯವನ್ನು ಕೊಟ್ಟನು. ಇದರಿಂದ ಕೆಟ್ಟ ವಾಸನೆಗಳ ನಾಶವಾಯಿತು. ಗ್ರಾಮ್ಯ ವಿಷಯಗಳನ್ನು ಮುರಿದೊಗೆದೆನು ।।೨೬೭।। ಇದು ಆತನ ನನ್ನ ಮೇಲೆ ಅನಂತ ಉಪಕಾರವಾಗಿರುವುದು. ಇದನ್ನರಿತುಕೊಂಡು ನಾನು ಸರ್ವೇಶ್ವರ ನಿಯಂತನಿಗೆ ಶರಣು ಬಂದಿರುವೆನು ।।೨೬೮।।

ಪ್ರಭುವಿಗೆ ಶರಣು ಹೋಗುವುದರಿಂದ ನಾನು ಈ ಜಗತ್ತಿನಲ್ಲಿ ಸುಖಿಯಾಗುವೆ. ಮನದಲ್ಲಿ ಸಹಜವಾಗಿಯೇ ಸಾತ್ವಿಕ ಶ್ರದ್ಧೆಯು ಉತ್ಪನ್ನವಾಗುವುದು. ನನ್ನ ಜೀವನದ ಭಾರವನ್ನು ಅದೃಷ್ಟಕ್ಕೆ ಬಿಟ್ಟುಕೊಡುವೆನು ।।೨೬೯।।

ಮುನೀಶ್ವರ ಭೋಗಿತೀ ನಿಜಾತ್ಮಾ । ತ್ಯಾ ಮೀ ಭೋಗೀ ನ ಆತ್ಮ ಯಾರಾಮಾ । ಜೋ ಕಾ ಪುರವೀ ನಿಷ್ಕಾಮಕಾಮಾ । ತೋ ಪರಮಾತ್ಮಾ ವಲ್ಲಭು ॥೭೭೦॥ ಬ್ರಹ್ಮಾದಿಕ ಸಮರ್ಥ ಅಸತೀ । ತೇ ಸಾಂಡೂನಿಯಾ ನಿಶ್ಚಿತೀ । ಭಗವದ್ಭಜನಾಚೀ ಸ್ಥಿತೀ । ಅತಿಪ್ರೀತೀ ಕಾ ಮ್ಹಣಸೀ॥೭೭೧॥ ಮಜಸಾರಿಖಿಯಾ ದುರಾಚಾರೀ । ಜಡ ಜೀವಾಂತೇ ಉದ್ಧರೀ । ತಾರಕು ತೋಚೀ ಭವಸಾಗರೀ । ಸ್ವಾಮೀ ಶ್ರೀಹರಿ ಕೃಪಾಳು ॥೭೭೨॥

ಸಂಸಾರಕೂಪೇ ಪತಿತಂ ವಿಷಯೈರ್ಮುಷಿತೇಕ್ಷಣಮ್ । ಗ್ರಸ್ತಂ ಕಾಲಾಹಿನಾ ಽಽತ್ಮಾನಾಂ ಕೋಽನ್ಯಸ್ತ್ರಾತುಮಧೀಶ್ವರಃ ॥೫೦॥

ಅರ್ಥ:- ಈ ಜೀವವು ಸಂಸಾರರೂಪ ಬಾವಿಯಲ್ಲಿ ಬಿದ್ದಿರುವುದು. ವಿಷಯಗಳು ಇದಕ್ಕೆ ಕುರುಡನ್ನಾಗಿ ಮಾಡಿರುವುದು. ಕಾಲರೂಪ ಹೆಬ್ಬಾವು ಇದಕ್ಕೆ ತನ್ನ ಮುಖದಲ್ಲಿ ಒತ್ತಿ ಹಿಡಿದಿರುವುದು. ಈಗ ಪ್ರಭುವಿನ ಹೊರತಾಗಿ ಇದಕ್ಕೆ ಇದರಿಂದ ಯಾರು ರಕ್ಷಣೆ ಮಾಡಬೇಕು?

ಸಂಸಾರಲಕ್ಷಣ ಕೂಪ ಅಂಧ । ತೇಥ ವಿಷಯದೃಷ್ಟೀ ವಿಷಯಾಂಧ । ಪಡೋನಿ ಗೇಲೇ ಅಂಧಾಂಧ। ಬುದ್ಧಿಮಂದ ಉಪಾಯೀ ॥೭೭೩॥ ತೇ ಕಲ್ಪನಾಜಳೀ ಬುಡಾಲೇ । ವಾಸನಾಕಲ್ಲೋಳೀ ಕವಳಲೇ । ದಂಭಮದಾದಿ ಜಳಚರೀ ತೋಡಿಲೇ । ತೃಷ್ಣೇಚ್ಯಾ ಪಡಲೇ ಕರ್ದಮೀ ॥೭೭೪॥ ದುಃಖಾಚ್ಯಾ ಖಡಕೀ ಆದಳಲೇ। ಸ್ವರ್ಗಪಾಯರೀಸೀ ಅಡಕಲೇ । ತೇಥೂನಹೀ ಏಕ ಪಡಲೇ । ನಿರ್ಬುಜಲೇ ಭವದಳೇ ॥೭೭೫॥ ನಾಸ್ತಿಕೇ ಗೇಲೀ ಸಬುಡ ಬುಡೀ । ಕರ್ಮಠೀ ಧರಿಲ್ಯಾ ಕರ್ಮದರಡೀ । ವೇದಬಾಹ್ಯ ತೀ ಬಾಪುಡೀ । ಪಡಲೀ ದೇವ್ಹಡೀ ತಳವಟೀ ॥೭೭೬॥ ನಿಂದೇಚೇ ಶೂಳ ಕಾಂಟೇ । ಪುಟೋನಿ ನಿಘಾಲೇ ಉಫರಾಟೇ । ದ್ವೇಷಾಚೇ ಪಾಥರ ಮೋಠೇ । ಹೃದಯ ಪುಟೇ ಲಾಗತಾ ॥೭೭೭॥ ಕಾಮಾಚೀ ಉಕಳೀ ಪ್ರಬಳ । ಭರೂನಿ ಬಾಹೇರೀ ಯೇ ಸಬಳ । ತೇಣೇ ಡಹುಳಲೇ ತೇ ಜಳ । ಹೋಯ ಖಳಬಳ ಜೀವಾಸೀ ॥೭೭೮॥ ಸುಟಲೇ ಕ್ರೋಧಾಚೇ ಚಿರೇ । ವರೀ ಪಡಿಲ್ಯಾ ಉರೀ ನುರೇ। ವನಿತಾಮಗರೀ ನೇಲೇ ಪುರೇ । ವಿವರದ್ವಾರೇ ಆಂತೌತೇ॥೭೭೯॥ ತೇಥ ಅವಘಿಯಾಂಸೀ ಏಕಸರೇ । ಗಿಳಿಲೇ ಕಾಳೇ ಕಾಳ ಅಜಗರೇ । ವಿಖೇ ಘೇರಿಲೇ ಥೋರೇ ಥೋರೇ । ಜ್ಞಾನ ಪಾರಿಮೋರೇ ಸರ್ವಾಸೀ ॥೭೮೦॥ ಸರ್ಪ ಚಢಲಿಯಾ ಮಾಣುಸಾ । ಗೂಳ ಕಡೂ ನಾಗೇ ಕೈಸಾ । ನಿಂಬ ಖಾಯೇ ಘುಸಘುಸಾ । ಗೋಡ ಗೂಳಸಾ ಮ್ಹಣೌನಿ ॥೭೮೧॥ ಕೇವಳ ವಿಷಪ್ರಾಯ ವಿಷಯೋ ಕಡೂ । ತೋ ಪ್ರಪಂಚಿಯಾ ಜಾಲಾ ಗೋಡು । ಅಮೃತಪ್ರಾಯ ಪರಮಾರ್ಥ ಗೋಡು । ತೋ ಜಾಹಲಾ ಕಡೂ ವಿಷಯಿಕಾ ॥೭೮೨॥

ಮುನೀಶ್ವರರು ಆತ್ಮಸುಖದ ಅನುಭವವನ್ನು ಪಡೆಯುವರು. ನಾನು ಅದರ ಉಪಭೋಗ ಪಡೆಯುವೆನು. ನಿಷ್ಕಾಮ ಇಚ್ಛೆಯನ್ನು ಪೂರ್ಣಗೊಳಿಸುವ ಆ ಪರಮಾತ್ಮನು ನನ್ನ ಪತಿಯಾಗಿರುವನು ॥೭೭೦॥ ಬ್ರಹ್ಮಾದಿಕ ದೇವತೆಗಳಲ್ಲಿ ಅನೇಕರು ನಿಜವಾಗಿಯೂ ಸಮರ್ಥರಿರುವರು. ಅವರನ್ನು ಬಿಟ್ಟು ಶ್ರೀಹರಿಯನ್ನು ಪ್ರೇಮಪೂರ್ವಕವಾಗಿ ಏಕೆ ಭಜಿಸಬೇಕೆಂದು ನೀನು ಕೇಳಬಹುದು ॥೭೭೧॥ ಏಕೆಂದರೆ ಆ ಕೃಪಾಳೂ ಸ್ವಾಮೀ ಶ್ರೀಹರಿಯು ಮಾತ್ರ ನನ್ನಂತಹ ಜಡಜೀವಿಗಳ ಉದ್ಧಾರವನ್ನು ಮಾಡುವವನಾಗಿ, ಸಂಸಾರಸಾಗರದಿಂದ ಪಾರು ಮಾಡುವನು ॥೭೭೨॥

ಅಂಧಕೂಪದಂತೆ ಸಂಸಾರದ ಸ್ವರೂಪವಾಗಿರುವುದು. ಕೇವಲ ವಿಷಯಗಳಲ್ಲಿ ದೃಷ್ಟಿಯನ್ನಿಟ್ಟು ವಿಷಯ ಭೋಗಗಳಿಂದ ಕುರುಡರಾದ ಜನರು ಆ ಬಾವಿಯಲ್ಲಿ ಬಿದ್ದು ಅಧೋಗತಿಗೆ ಹೋಗುವರು ॥೭೭೩॥ ಇವರು ಕಲ್ಪನೆಗಳೆಂಬ ಜಲದಲ್ಲಿ ಮುಳುಗಿರುವರು. ವಾಸನೆಗಳೆಂಬ ತೆರೆಗಳಲ್ಲಿ ತೇಲಿ ಮುಳುಗುತ್ತಿರುವರು. ದಂಭ, ಮದ ಇತ್ಯಾದಿ ಜಲಚರಗಳು ಅವರನ್ನು ಕಡಿಯುತ್ತಿರುವುವು ಮತ್ತು ಇವರು ತೃಷ್ಣಾರೂಪ ರಜ್ಜುನಲ್ಲಿ ಸಿಲುಕಿಕೊಂಡಿರುವರು ॥೭೭೪॥ ಕೆಲವರು ದುಃಖ ರೂಪ ದಂಡೆಗೆ ಅಪ್ಪಳಿಸುವರು. ಕೆಲವರು ಸ್ವರ್ಗರೂಪ ಪಾವುಟಗೆ ಹಿಡಿದು ಅಲ್ಲಿಂದ ಜಾರಿ ಬಿದ್ದರು. ಮತ್ತು ಸಂಸಾರ ಸಾಗರದಲ್ಲಿ ಉಸಿರುಕಟ್ಟಿ ಒದ್ದಾಡಿದರು ॥೭೭೫॥ ಇವರಲ್ಲಿ ನಾಸ್ತಿಕರಿಗೆ ಜಲಸಮಾಧಿ ದೊರಕಿತು. ಕರ್ಮಠರಾಗಿರುವವರು ಕರ್ಮರೂಪ ಬಂಡೆಯನ್ನು ಹಿಡಿದುಕೊಂಡರು. ಮತ್ತು ವೇದಬಾಹ್ಯರಾಗಿರುವವರು ಅದರ ತಳಕ್ಕೆ ಹೋಗಿ ಬಿದ್ದರು ॥೭೭೬॥ ಅಲ್ಲಿ ನಿಂದೆ ರೂಪ ಮುಳ್ಳುಗಳು ದೊಡ್ಡ ಪ್ರಮಾಣದಲ್ಲಿ ಎತ್ತರವಾಗಿ ಬೆಳದಿದ್ದು ಅವು ಸರ್ವಾಂಗಕ್ಕೂ ಚುಚ್ಚಿದವು. ಹಾಗೆಯೇ ದ್ವೇಷರೂಪ ದೊಡ್ಡ ದೊಡ್ಡ ಕಲ್ಲುಗಳು ಬಡೆಯುತ್ತಲೇ ಹೃದಯದಕವಚವು ತುಂಡು ತುಂಡಾಯಿತು ॥೭೭೭॥ ಕಾಮದ ಪ್ರಬಲವಾದ ಎಸರು ಒಳಗಿನಿಂದ ಬಹು ಶಕ್ತಿಯುತವಾಗಿ ಪ್ರಕಟವಾಯಿತು. ಜಲವೆಲ್ಲ ಕುದಿಯಹತ್ತಲು ಜೀವವು ಬಹು ಕಾಸಾವೀಸವಾಯಿತು ॥೭೭೮॥ ಇಂತಹ ಪ್ರಸಂಗದಲ್ಲಿ ಕ್ರೋಧದಲ್ಲಿ ಉದ್ಭವಿಸಿದ ಹೊಡೆತವು ತಲೆಯ ಮೇಲೆ ಬೀಳಲು ಆಗ ಏನೂ ತಿಳಿಯದಾಗುವುದು. ಅಲ್ಲಿ ಸ್ತ್ರೀ ರೂಪ ಮೊಸಳೆಯು ಒಳಗಿರುವ ಗುಹೆಯಲ್ಲಿ ಎಳೆದೊಯ್ಯುವುದು ॥೭೭೯॥ ಕಾಲರೂಪ ಹೆಬ್ಬಾವು ಎಲ್ಲರನ್ನೂ ಒಂದೇ ಏಟಿಗೆ ನುಂಗಿ ಬಿಡುವುದು. ಅದರ ಭಯಂಕರ ವಿಷವು ಏರಿ ಸರ್ವರಿಗೂ ಜ್ಞಾನವು ನಷ್ಟವಾಯಿತು ॥೭೮೦॥ ಸರ್ಪಕಚ್ಚಿ ವಿಷವೇರಿದ ಮನುಷ್ಯನು ಸಿಹಿಯಾಗಿರುವ ಬೆಲ್ಲಕ್ಕೆ ವಿಷ ಎನ್ನುವನು ಮತ್ತು ವಿಷವಾಗಿರುವ ಬೇವಿಗೆ ಸಿಹಿ ಎಂದು ಬಹುರುಚಿಯಾಗಿ ತಿನ್ನುವನು ॥೭೮೧॥ ಇದರಂತೆಯೇ ಸಂಸಾರೀ ಮನುಷ್ಯನು ವಿಷದಂತಹ ಕಹೀ ವಿಷಯಗಳಿಗೆ ಸಿಹಿಯಾಗಿ ತಿಳಿದು ಅದರ ಸೇವನೆ ಮಾಡುವನು. ಅಮೃತತುಲ್ಯ ಪರಮಾರ್ಥವು ಇವನಿಗೆ ವಿಷವಾಗುವುದು ॥೭೮೨॥

ಕೂಪಾಬಾಹೇರ ವಾಸು ಜ್ಯಾಸೀ । ತೇ ನ ದೇಖತೀ ಕೂಪಾ ಆಂತುಲಾಸೀ । ಕೂಪಾಂತಲೇ ಬಾಹೇರಿಲಾಂಸೀ । ಕದಾಕಾಳೇಸೀ ನ ದೇಖತೀ ।೭೮೩॥ ಐಶಿಯಾ ಪೀಡತಯಾ ಜೇವಾಂಸೀ । ಕಾಢಾವಯಾ ಧಿವಸಾ ನವ್ಹೇ ಕೋಣ್ಹಾಸೀ ।ತುಜವಾಂಚೋನಿ ಹೃಷೀಕೇಶೀ । ಪಾವ ವೇಗೇಸೀ ಕೃಪಾಳುವಾ ।೭೮೪॥ ಏವಂ ದುಃಖಕೂಪಪತಿತಾ । ಹೃದಯಸ್ಥ ಭಗವಂತುಚಿ ತ್ರಾತಾ । ಧಾಂವ ಪಾವ ಕೃಷ್ಣನಾಥಾ । ಭವವ್ಯಥಾ ನಿವಾರೀ ।೭೮೫॥ ಐಸೇ ಜಾಣೋನಿ ತತ್ತ್ವತಾ । ತ್ಯಾಚ್ಯಾ ಚರಣಾ ಶರಣ ಆತಾ । ಶರಣ ಗೇಲಿಯಾ ಸರ್ವಥಾ । ಸಹಜ ಭವವ್ಯಥಾ ನಿವಾರೇ ।೭೮೬॥

ಆತ್ಮೈವ ಹ್ಯಾತ್ಮನೋ ಗೋಪ್ತಾ ನಿರ್ವಿದ್ಯೇತ ಯದಾಖಿಲಾತ್ । ಅಪ್ರಮತ್ತ ಇದಂ ಪಶ್ಯೇದ್ ಗ್ರಸ್ತಂ ಕಾಲಾಹಿನಾ ಜಗತ್ ।೪೧॥

ಅರ್ಥ :- ಯಾವ ಕಾಲದಲ್ಲಿ ಜೀವವು ಸರ್ವ ವಿಷಯಗಳಿಂದ ವಿರಕ್ತವಾಗುವುದೋ, ಆ ಕಾಲಕ್ಕೆ ಅದು ತನ್ನ ಸ್ವತಃದ ರಕ್ಷಣೆಯನ್ನು ಮಾಡುವುದು. ಆದ್ದರಿಂದ ಅತ್ಯಂತ ಲಕ್ಷ್ಯಪೂರ್ವಕವಾಗಿ ಈ ಜಗತ್ತನ್ನು ಕಾಲರೂಪ ಹಬ್ಬಾವು ಗ್ರಾಸಿಸಿರುವುದೆಂದು ತಿಳಿಯಬೇಕು.

ಐಸೇ ಕಳಲೇ ಜೇ ತತ್ತ್ವತಾ । ಯೇಥ ಆಪಣಾಚೀ ಆಪಣಿಯಾ ತ್ರಾತಾ । ಸರ್ವ ಪದಾರ್ಥೀ ಸರ್ವಥಾ । ನಿರ್ವೇದತಾ ದೃಢ ಜಾಹಲ್ಯಾ ।೭೮೭॥ ದೃಢ ವೈರಾಗ್ಯತಾ ತೇ ಐಶೀ । ವಿಷಯೋ ಟೇಂಕಲ್ಯಾ ಅಂಗಾಸೀ । ಚೇತನಾ ನವ್ಹೇ ಇಂದ್ರಿಯಾಂಸೀ । ನಿದ್ರಿತಾಪಾಸೀ ಜೇವೀ ರಂಭಾ ।೭೮೮॥ ಅಥವಾ ವಮಿಲಿಯಾ ಅನ್ನಾ । ಜೇವೀ ವಾಂಛೀನಾ ರಸನಾ । ತೇವೀ ವಿಷಯ ದೇಖೋನಿ ಮನಾ । ನ ಧರೀ ವಾಸನಾ ಆಸಕ್ತೀ ।೭೮೯॥ ತೇ ವೈರಾಗ್ಯ ಕೈಸೇನಿ ಜೋಡೇ । ತರೀ ಸಾವಧಾನ ಪಾಹತಾ ರೋಕಡೇ । ಜಗ ಕಾಳೇ ಗಿಳಿಲೇ ಚಹೂಕಡೇ । ವೇಗಳೇ ಪಡೇ ತೇ ನಾಹೀ ।೭೯೦॥ ಪಿತಾ-ಪಿತಾಮಹ ಕಾಳೇ ನೇಲೇ । ಪುತ್ರಪೌತ್ರಾ ಕಾಳೇ ಗಿಳಿಲೇ । ವೈರಾಗ್ಯ ನುಪಜೇ ಯೇಣೇ ಬೋಲೇ । ತರೀ ನಾಗವಲೇ ನರದೇಹಾ ।೭೯೧॥ ಮೃತ್ಯುಲೋಕ ಯಾಂಚೇ ನಾವ । ಅನಿತ್ಯ ಸ್ವರ್ಗಾಚೇ ಕಾಇಸೀ ಹಾಂವ । ವೈರಾಗ್ಯೇವೀಣ ನಿರ್ದೈವ । ಝಾಲೇ ಸರ್ವ ಸರ್ವಥಾ ।೭೯೨॥

ಬ್ರಾಹ್ಮಣ ಉವಾಚ :-

ಏವಂ ವ್ಯವಸಿತಮತಿರ್ದುರಾಶಾಂ ಕಾಂತತರ್ಷಜಾಮ್ । ಛಿತ್ತ್ವೋಪಶಮಮಾಸ್ಥಾಯ ಶಯ್ಯಾಮುಪವಿವೇಶ ಸಾ ।೪೨॥

ಅರ್ಥ :- ಅವಧೂತ ದತ್ತಾತ್ರೇಯರು ಹೇಳಿದರು ; ಹೇ ರಾಜನೇ, ಪಿಂಗಲಾ ವರಾಂಗನೆಯು ಹೀಗೆ ನಿಶ್ಚಯ ಮಾಡಿ ಧನಿಕರಿಗೆ ಭೇಟಿಯಾಗುವ ಲಾಲಸೆಯನ್ನು ತ್ಯಜಿಸಿ ಶಾಂತಭಾವದಿಂದ ತನ್ನ ಹಾಸಿಗೆಯ ಮೇಲೆ ಬಂದು ಮಲಗಿದಳು.

ಅವಧೂತ ಮ್ಹಣೇ ಯದೂಸೀ । ಧನ್ಯ ಭಾಗ್ಯ ತಯೇ ವೇಶ್ಯೇಸೀ । ವೈರಾಗ್ಯ ಉಪಜಲೇ ತಿಸೀ । ವಿವೇಕೇಸೀ ನಿಜೋತ್ತಮ ।೭೯೩॥

ಈ ಸಂಸಾರರೂಪ ಬಾವಿಯಿಂದ ಹೊರಗೆ ಇದ್ದವರಿಗೆ ಒಳಗಿನ ಸ್ಥಿತಿ ಯಾವುದೂ ತಿಳಿಯುವುದಿಲ್ಲ. ಬಾವಿಯಲ್ಲಿ ಬಿದ್ದವರಿಗೆ ಕಾಲತ್ರಯಕ್ಕೂ ಹೊರಗಿನ ಸ್ಥಿತಿಯು ಕಾಣಿಸುವುದಿಲ್ಲ ।೭೮೩॥ ಹೇ ಹೃಷೀಕೇಶನೇ, ಹೀಗೆ ಒಳಗೆ ಬಿದ್ದಿರುವ ಜೀವಿಗಳಿಗೆ ಹೊರಗೆ ತೆಗೆಯುವ ಧೈರ್ಯವು ನಿನ್ನ ಹೊರತಾಗಿ ಅನ್ಯರಾರಿಗೂ ಇರುವುದಿಲ್ಲ. ಹೇ ದಯಾಘನನೇ, ನನಗೀಗ ಬೇಗನೇ ಕರುಣಿಸು ।೭೮೪॥ ಹೀಗೆ ದುಃಖರೂಪ ಬಾವಿಯಲ್ಲಿ ಬಿದ್ದ ಜನರ ರಕ್ಷಣೆಯನ್ನು ಮಾಡುವವನು ನೀನೊಬ್ಬನೇ ಹೃದಯಸ್ಥ ಪರಮಾತ್ಮನಾಗಿರುವೆ. ಹೇ ಕೃಷ್ಣನಾಥನೇ, ಧಾವಿಸಿ ಬಂದು ನನಗೆ ದರ್ಶನ ನೀಡು, ನನ್ನ ಸಂಸಾರ ದುಃಖವನ್ನು ನಿವಾರಿಸಿಬಿಡು ।೭೮೫॥ ಹೀಗೆ ನಾನು ತಾತ್ವಿಕವಾಗಿ ಅರಿತುಕೊಂಡು ಆತನ ಚರಣಗಳಲ್ಲಿ ಶರಣಾದೆನು. ಈಗ ನನ್ನ ಭವವ್ಯಥೆಯು ಸಹಜವಾಗಿ ನಿವಾರಣೆಯಾಗುವುದು ।೭೮೬॥

ಈ ಜಗತ್ತಿನಲ್ಲಿ ಜೀವವು ತನಗೆ ತಾನೇ ತಾರಕವಾಗಿರುವುದು. ಈ ಯಾವ ತತ್ತ್ವವು ನನಗೆ ತಿಳಿಯಿತು. ಇದರಿಂದ ಸರ್ವ ವಸ್ತುಗಳಲ್ಲಿಯೂ ನನಗೆ ವಿರಕ್ತಿಯು ಪೂರ್ಣವಾಗಿ ಪ್ರಾಪ್ತವಾಯಿತು ।೭೮೭॥ ಗಾಢ ನಿದ್ರೆಯಲ್ಲಿರುವ ಮನುಷ್ಯನ ಹತ್ತಿರ ರಂಭೆಯು ಬಂದರೂ ಅವನು ನಿರ್ವಿಕಾರನಾಗಿರುವನು. ಅದರಂತೆ ವಿಷಯಗಳು ಅಂಗಕ್ಕೆ ಬಂದು ಬಡೆದರೂ ಇಂದ್ರಿಯಗಳಿಗೆ ವಿಕಾರವಾಗುವುದಿಲ್ಲ ।೭೮೮॥ ವಾಂತಿಯನ್ನು ಮಾಡಿಕೊಂಡ ಅನ್ನದ ಮೇಲೆ ನಾಲಿಗೆಯ ವಾಸನೆಯು ಎಂದೂ ಹುಟ್ಟುವುದಿಲ್ಲ. ಅದರಂತೆ ವಿಷಯಗಳನ್ನು ಕಂಡರೂ ಸಹ ಮನವು ಅವುಗಳಲ್ಲಿ ಆಸಕ್ತವಾಗದಿರುವಿಕೆಯೇ ದೃಢವಾದ ವೈರಾಗ್ಯವಾಗಿರುವುದು ।೭೮೯॥ ಈ ವೈರಾಗ್ಯವು ಹೇಗೆ ಪ್ರಾಪ್ತವಾಗುವುದೆಂದು ನೀನು ಕೇಳಬಹುದು. ಅದಕ್ಕಾಗಿ ಹೇಳುವೆ, ಕೇಳು, ವಿವೇಕದಿಂದ ಜಗತ್ತಿನತ್ತ ನೋಡಲು ಅದು ನಾಲ್ಕೂ ಕಡೆಯಿಂದಲೂ ಕಾಲನಿಂದ ಗ್ರಾಸಿಸಲ್ಪಟ್ಟಿರುರುವುದು. ಅಲ್ಲಿಂದ ಬಿಡುಗಡೆಯಾಗಲು ಮಾರ್ಗವೇ ಇರುವುದಿಲ್ಲ ।೭೯೦॥ ತಂದೆ, ಅಜ್ಜ, ಮಗ, ಮೊಮ್ಮಗ ಇವರನ್ನು ಕಾಲನು ನುಂಗಿರುವನು. ಇದನ್ನು ಪ್ರತ್ಯಕ್ಷವಾಗಿ ಕಂಡರೂ ಯಾರ ಮನದಲ್ಲಿ ವಿರಕ್ತಿಯು ಹುಟ್ಟದಿದ್ದರೆ, ಅವರು ಮನುಷ್ಯ ಜನ್ಮಕ್ಕೆ ಬಂದರೂ ವ್ಯರ್ಥವಾಗಿ ಹೋಗುವರು ।೭೯೧॥ ಈ ಜಗತ್ತಿನ ಹೆಸರು ಮೂಲದಲ್ಲಿಯೇ ಮೃತ್ಯುಲೋಕ ಎಂದಿದೆ. ಸ್ವರ್ಗವೂ ಸಹ ಹೀಗೆಯೇ ನಾಶಿವಂತವಾಗಿದೆ. ಇದರ ಅಪೇಕ್ಷೆಯನ್ನಾದರೂ ಏಕೆ ಹಿಡಿಯಬೇಕು? ಒಂದೇ ಒಂದು ವೈರಾಗ್ಯವಿಲ್ಲದೇ ಸರ್ವ ಜೀವಿಗಳು ಸರ್ವಥಾ ದುಃಖಿಗಳಾಗಿರುವುವು ।೭೯೨॥

ಅವಧೂತನು ಯುದುರಾಜನಿಗೆ ಹೇಳಿದನು; ಈ ಯಾವ ವರಾಂಗನೆಯ ಬಹುದೊಡ್ಡ ಭಾಗ್ಯದಿಂಲೇ ಆಕೆಗೆ ವಿರಕ್ತಿಯು ಹುಟ್ಟಿ ಉತ್ತಮವಾದ ವಿವೇಕವು ಪ್ರಾಪ್ತವಾಯಿತು ।೭೯೩॥

ಏವಂ ವಿವಂಚೂನಿ ನಿಜಬುದ್ಧೀ । ಪರಪುರುಷದುರಾಶಾ ಛೇದೀ । ಜ್ಯಾಚೇನಿ ಸಂಗೇ ಆಧಿವ್ಯಾಧೀ । ಬಹು ಉಪಾಧೀ ಬಾಧಕ ।೯೪॥ ಜೇ ಉಪಾಧಿಚೇನಿ ಕೋಡೇ । ಜನ್ಮ ಮೃತ್ಯುಚಾ ಪೂರು ಚಢೇ । ದುಃಖಭೋಗಾಚೇ ಸಾಂಕಡೇ। ಪಾಡೀ ರೋಕಡೇ ಜೀವಾಸೀ ।೯೫॥ ಯೇಣೇ ವೈರಾಗ್ಯವಿವೇಕಬಳೇ । ಛೇದೂನಿ ದುರಾಶೇಚಿ ಮೂಳೇ। ಉಪರಮು ಪಾವಲೀ ಏಕೇ ವೇಳೇ ।ನಿಜಾತ್ಮ ಸೋಹಳೇ ತೇ ಭೋಗೀ ।೯೬॥ ನಿತ್ಯಸಿದ್ಧ ಸುಖದಾತಾ । ತೋ ಹೃದಯಸ್ಥ ಕಾಂತ ಆಶ್ರಿತಾ । ವಿಕಲ್ಪ ಸಾಂಡೂನಿ ಚಿತ್ತಾ । ವೇಗಿ ಹೃದಯಸ್ಥಾ ಮೀನಲೀ ।೯೭॥ ತ್ಯಾಸೀ ದೇಖತಾ ಅನುಭವಾ ಚೇ ದಿಠೀ । ಐಕ್ಯ ಭಾವೇ ಘಾತಲೀ ಮಿಠೀ । ನಿಜಸುಖ ಪಾವಲೀ ಗೋರಟೀ । ಉಠಾ ಉಠೀ ತತ್ಕಾಳ ।೯೮॥ ಬೋಲು ಘೇಊನಿ ಗೇಲಾ ಬೋಲೀ । ಲಾಜ ಲಾಜೋನಿಯಾ ಗೇಲೀ । ದೃಶ್ಯ – ದೃಷ್ಟಾ ದಶಾ ಠೇಲೀ । ವಾಟ ಮೋಡಿಲೀ ವಿಷಯಾಂಚೀ ।೯೯॥ ಸುಖ ಸುಖಾವಲೇ ಮಾನಸ । ತೇ ಸುಖರೂಪ ಜಾಲೇ ನಿಃಶೇಷ। ಸಂಕಲ್ಪ ವಿಕಲ್ಪ ಪಡಿಲೇ ವೋಸ । ದೋಘಾ ಸಾವಕಾಶ ನಿಜ ಪ್ರೀತೀ ।೧೦೦॥ ನಾಬದ ಪಡಲಿಯಾ ಉದಕಾಂತ। ವಿರೋನಿ ತಯಾ ಗೋಡ ಕರಿತ । ತೇವೀ ನಿರಾಶೀ ಪಾವೋನಿ ಭಗವಂತ । ಸಮರಸತ ಸ್ವಾನಂದೇ ।೧೦೧॥ ತೇಥ ಹೇತೂಸೀ ನಾಹೀ ಠಾವೋ । ನಿಮಾಲಾ ಭಾವಾಭಾವೋ । ವೇಡಾವಲಾ ಅನುಭವೋ । ದೋಘಾ ಪ್ರೀತೀ ಪಾಹಾ ಹೋ ಅನಿವಾರ ।೧೦೨॥ ಸಾಂಡೂನಿ ಮೀತೂಪಣಾಸೀ । ಖೇವ ದಿಧಲೇ ಸಮರಸೀ । ಮಗ ಸಮಾಧೀಚಿಯೇ ಸೇಜೇಶೀ । ನಿಜಕಾಂತೇಸೀ ಪಹುಡಲೀ ।೧೦೩॥ ಝಣೇ ಮಾಯೇಚೀ ಲಾಗೇ ದಿಠೀ । ಯಾಲಾಗೀ ಸ್ಫೂರ್ತೀಚಿಯಾ ಕೋಟೀ। ನಿಂಬಲೋಣ ಗೋರಟೀ । ಉಠಾಉಠೀ ವೋವಾಳೀ ।೧೦೪॥ ಐಸೀ ಸಮಾಧಿಶೇಜೇಶೀ । ಪಿಂಗಲಾ ರಿಘೇ ನಿಜಸುಖೇಸೀ । ಅವಧೂತ ಮ್ಹಣೇ ಯದೂಸೀ । ವೈರಾಗ್ಯೇ ವೇಶ್ಯೇಸೀ ಉಪರಮು ।೧೦೫॥ ವೈರಾಗ್ಯೇ ಛೇದಿಲೇ ಆಶಾಪಾಶ । ಪಿಂಗಲಾ ಜಾಹಲೀ ಗಾ ನಿರಾಶ । ನಿರಾಶಾಸೀ ಅಸಮಸಾಹಸ । ಸುಖಸಂತೋಷ ಸರ್ವದಾ ।೧೦೬॥

ಆಶಾ ಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಮ್। ಯಥಾ ಸಂಛಿದ್ಯ ಕಾಂತಾಶಾಂ ಸುಖಂ ಸುಷ್ವಾಪ ಪಿಂಗಲಾ।೪೪॥

ಇತಿಶ್ರೀ ಮದ್ಭಾಗವತೇ ಮಹಾಪುರಾಣೇಏಕಾದಶಸ್ಕಂದೇ ಪಿಂಗಲೋಪಾಖ್ಯಾನೇಷ್ಟಮೋಽಧ್ಯಾಯಃ॥೮॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಅರ್ಥ:- ನಿಜವಾಗಿಯೂ ಆಶೆಯು ಎಲ್ಲಕ್ಕಿಂತಲೂ ದೊಡ್ಡ ದುಃಖವನ್ನು ಕೊಡುವಂತಹದ್ದಾಗಿದೆ. ನಿರಾಶೆಯು ಎಲ್ಲದರಲ್ಲಿಯೂ ಸುಖವನ್ನು ಕೊಡುವಂತಹದಾಗಿದೆ. ಕಾರಣ ಪಿಂಗಲಾ ವೇಶ್ಯೆಯು ಪುರುಷರ ಆಶೆಯನ್ನು ತ್ಯಜಿಸಿದಳು. ಆದ್ದರಿಂದ ಆಕೆಯು ಸುಖಿಯಾದಳು.

ಒಟ್ಟಿನಲ್ಲಿ ಆಕೆಯು ತನ್ನ ಬುದ್ಧಿಯಿಂದಲೇ ವಿವೇಕ ತಾಳಿ, ಯಾವುದರಿಂದ ಆಧಿವ್ಯಾಧೀ ಇತ್ಯಾದಿ ಅನೇಕ ಪ್ರಕಾರದ ಉಪಾಧಿಗಳು ಬಾಧಕವಾಗುತ್ತಿದ್ದವೋ, ಆ ಪುರುಷ ವಿಷಯದ ದುರ್ವಾಸನೆಯನ್ನು ಒಗೆದುಬಿಟ್ಟಳು ।೯೪॥ ಯಾವ ಈ ಉಪಾಧಿಯಿಂದ ಜನ್ಮ ಮೃತ್ಯುಗಳ ಪೂರವು ಉಕ್ಕಿರುವುದು ಮತ್ತು ಜೀವಕ್ಕೆ ದುಃಖಭೋಗಗಳ ಸಂಕಟಗಳು ಒದಗುವುವು ।೯೫॥ ಆ ಯಾವ ದುರಾಶೆಗಳ ಬೇರುಗಳನ್ನು ವಿವೇಕಯುಕ್ತ ವೈರಾಗ್ಯದ ಸಾಮರ್ಥ್ಯದಿಂದ ಎಲ್ಲವನ್ನೂ ಕಿತ್ತೊಗೆದಳು. ಇದರಿಂದ ಆಕೆಗೆ ಶಾಂತಿಯು ದೊರೆಯಿತು. ಮತ್ತು ಆತ್ಮಸುಖದ ಆನಂದವನ್ನು ಆಕೆಯು ಭೋಗಿಸಹತ್ತಿದಳು ।೯೬॥ ನಿತ್ಯವಾದ ಸಿದ್ಧಸುಖವನ್ನು ಕೊಡುವವ, ಹೃದಯಸ್ಥ ಪರಮಾತ್ಮನನ್ನು ತನ್ನ ಪತಿ ಎಂದು ಭಾವಿಸಿ ಆತನ ಆಶ್ರಯವನ್ನು ಮಾಡುತ್ತಲೇ ಚಿತ್ತದಲ್ಲಿನ ಎಲ್ಲ ವಿಕಲ್ಪಗಳು ಇಲ್ಲದಾಗಿ, ಹೃದಯಸ್ಥ ಆತ್ಮಾರಾಮನು ಆಕೆಯನ್ನು ತತ್ಕಾಲದಲ್ಲಿ ಅಂಗೀಕಾರವನ್ನು ಮಾಡಿದನು ।೯೭॥ ಆತನನ್ನು ಅನುಭವದೃಷ್ಟಿಯಿಂದ ನೋಡುತ್ತಲೇ ಐಕ್ಯ ಭಾವದಿಂದ ಆಲಿಂಗಿಸಿದಳು. ಆದ್ದರಿಂದ ಆಕೆಗೆ ಕೂಡಲೇ ನಿಜಸುಖವು ಪ್ರಾಪ್ತವಾಯಿತು ।೯೮॥ ಶಬ್ದಗಳು ವಾಣಿಯನ್ನೇ ಒಯ್ದು ಬಿಟ್ಟವು. ನಾಚಿಕೆಯು ಲಜ್ಜಿತವಾಯಿತು. ದೃಶ್ಯ-ದೃಷ್ಟಾ ಎಂಬ ಭಾವನೆ ಇಲ್ಲದಾಯಿತು. ವಿಷಯಗಳ ಮಾರ್ಗವೇ ಕುಂಠಿತವಾಯಿತು ।೯೯॥ ಮನವು ಆತ್ಮಸುಖದಿಂದ ಸುಖೀಯಾಯಿತು. ಅದು ಪರಿಪೂರ್ಣವಾಗಿ ಸುಖಮಯಗೊಂಡಿತು. ಸಂಕಲ್ಪ ವಿಕಲ್ಪಗಳು ಬರಿದಾದವು. ಈಕೆಯು ಮತ್ತು ಪರಮಾತ್ಮಾ ಇಬ್ಬರೂ ಆತ್ಮ ಪ್ರೇಮದಲ್ಲಿ ನಿಮಗ್ನರಾದರು ।೧೦೦॥ ಸಕ್ಕರೆಯು ನೀರಿನಲ್ಲಿ ಬೀಳಲು ಸ್ವತಃ ತಾನು ಕರಗಿ ನೀರನ್ನೂ ಸಿಹಿ ಮಾಡುವುದು. ಅದರಂತೆ ಈಕೆಯು ಆಶೆಯನ್ನು ತ್ಯಜಿಸಿ ಪರಮಾತ್ಮನಲ್ಲಿ ಐಕ್ಯಳಾದಳು ।೧೦೧॥ ಅಲ್ಲಿ ಕಾರಣ ಎಂಬುವುದಕ್ಕೆ ಸ್ಥಳವೇ ಉಳಿಯಲಿಲ್ಲ. ಭಾವ ಅಭಾವಗಳು ಇಲ್ಲವಾದವು. ಅನುಭವವು ಹುಚ್ಚಾಯಿತು. ಹೀಗೆ ಇವರಿಬ್ಬರ ಪ್ರೀತಿಯು ಗಟ್ಟಿಯಾಗಿ ಕೂಡಿಕೊಂಡಿತು ।೧೦೨॥ ನಾನು ನೀನೆಂಬುವುದನ್ನು ಬಿಟ್ಟು ಆಕೆಯು ಪ್ರಭುವಿನ ಚರಣಗಳಿಗೆ ಅಪ್ಪಿಕೊಂಡಳು. ಮತ್ತು ತನ್ನ ಹೃದಯಸ್ಥ ಆತ್ಮಾರಾಮನೊಂದಿಗೆ ಸಮಾಧಿಯ ಹಾಸಿಗೆಯ ಮೇಲೆ ಈಕೆಯು ಮಲಗಿಕೊಂಡಳು ।೧೦೩॥ ಕದಾಚಿತ್ ಮಾಯೆಯ ದೃಷ್ಟೀ ಬಡೆದೀತೆಂದು ಕೋಟ್ಯಾವಧಿ ಸ್ಫೂರ್ತಿಗಳ ನಿವಾಳಿಗಳನ್ನು ಯಾವ ಈ ವಿಲಾಸಿನಿಯು ತೆಗೆದೊಗೆದಳು ।೧೦೪॥ ಈ ಪ್ರಕಾರವಾಗಿ ಪಿಂಗಲೆಯು ಸಮಾಧಿರೂಪ ಪಲಂಗದ ಮೇಲೆ ನಿಜ ಸುಖದಿಂದ ಮಲಗಿಕೊಂಡಳು. ಈ ರೀತಿಯಾಗಿ ಈ ವೇಶ್ಯೆಗೆ ವೈರಾಗ್ಯದಿಂದ ಶಾಂತಿಯು ದೊರೆಯಿತೆಂದು ಅವಧೂತನು ಯದುರಾಜನಿಗೆ ಹೇಳಿದನು ।೧೦೫॥ ವೈರಾಗ್ಯದಿಂದ ಈಕೆಯು ಆಶಾರೂಪ ಪಾಶವನ್ನು ಮುರಿದೊಗೆದಳು. ಈಗ ಪಿಂಗಲೆಯು ಆಶಾರಹಿತಳಾದಳು. ಈ ಯಾವ ನಿರಿಚ್ಛ ಭಾವದಿಂದ ಈಕೆಗೆ ಅತ್ಯಂತ ಸುಖ ಮತ್ತು ಸಂತೋಷಗಳ ಲಾಭವಾಯಿತು ।೧೦೬॥

ಆಶಾ ತೇಥ ಲೋಲುಪ್ಯತಾ । ಆಶೇಪಾಶೀ ಅಸೇ ದೀನತಾ । ಆಶಾತೇಥ ಮಮತಾ । ಅಸೇ ಸರ್ವಥಾ ನಾಚತೀ ॥೩೦೭॥ ಆಶೇಪಾಶೀ ಮಹಾಶೋಕ । ಆಶಾಕರವೀ ಮಹಾದೋಖ । ಆಶೇಪಾಶೀ ಪಾಪ ಅಶೇಖ । ಅಸೇ ದೇಖ ತಿಷ್ಠತ ॥೩೦೮॥ ಆಶೇಪಾಶೀ ಅಧರ್ಮ ಸಕಳ । ಆಶಾ ಮಾನೀನಾ ವಿಟಾಳ । ಆಶಾನೇಣೇ ಕಾಳವೇಳ । ಕರ್ಮ ಸಕಳ ಉಚ್ಛೇದೀ ॥೩೦೯॥ ಆಶಾ ಅಂತ್ಯ ಜಾತೇ ಉಪಾಸೀ । ನೀಚ ಸೇವನ ಆಶೇಪಾಶೀ । ಆಶಾ ನ ಸಾಂಡೀ ಮೇಲ್ಯಾಸೀ । ಪ್ರೇತಾಪಾಶೀ ನೇತಸೇ ॥೩೧೦॥ ಆಶಾ ಉಪಜಲೀ ಅನಂತಾಸೀ । ನೀಚ ವಾಮನತ್ವ ಆಲೇ ತ್ಯಾಸೀ। ಆಶೇ ದೀನ ಕೇಲೇ ದೇವಾಂಸೀ । ಕಥಾ ಕಾಯಸೀ ಇತರಾಂಚೀ॥೩೧೧॥ ಜಗಾಚಾ ಜೋ ನಿತ್ಯ ದಾತಾ । ತೋ ಆಶೇನೇ ಕೇಲಾ ಭಿಕೇಸವತಾ । ವೈರ್ಯಾಚೇ ದ್ವಾರೀ ಝೂಲಾ ಮಾಗತಾ। ದ್ವಾರಪಾಳತಾ ತೇಣೇ ತ್ಯಾಸೀ ॥೩೧೨॥ ಆಶಾ ತೇಥ ನಾಹೀ ಸುಖ । ಆಶೇಪಾಶೀ ಪರಮ ದುಃಖ । ಆಶಾ ಸರ್ವಾಸೀ ಬಾಧಕ । ಮುಖ್ಯ ದೋಷ ತೇ ಆಶಾ ॥೩೧೩॥ ಜ್ಯಾಚೀ ಆಶಾ ನಿಃಶೇಷ ಜಾಯೇ । ತೋಚಿ ಪರಮ ಸುಖ ಲಾಹೇ । ಬ್ರಹ್ಮಾದಿಕ ವಂದಿತೀ ಪಾಯೇ । ಅಷ್ಟಮಾ ಸಿದ್ಧಿ ರಾಹೇ ದಾಸೀತ್ವೇ ॥೩೧೪॥ ನಿರಾಶಾಂಚಾ ಶುದ್ಧ ಭಾವೋ । ನಿರಾಶಾಪಾಶೀ ತಿಷ್ಠೇ ದೇವೋ । ನಿರಾಶಾಂಚೇ ವಚನ ಪಾಹಾ ಹೋ । ರಾವೋ ದೇವೋ ನುಲ್ಲಂಘೀ ॥೩೧೫॥ ನಿರಾಶ ತೋಚಿ ಸದ್‌ಬುದ್ಧಿ । ನಿರಾಶ ತೋಚಿ ವಿವೇಕನಿಧೀ । ಚಾರೀ ಮುಕ್ತೀ ಪದೋಪದೀ । ನೈರಾಶ್ಯ ಆಧೀ ವಂದಿತೀ ॥೩೧೬॥ ನಿರಾಶಾ ತೀರ್ಥಾಚೇ ತೀರ್ಥ । ನಿರಾಶಾ ಮುಮುಕ್ಷೂಚಾ ಅರ್ಥ । ನಿರಾಶೇಪಾಶೀ ಪರಮಾರ್ಥ । ಅಸೇ ತಿಷ್ಠತ ನಿರಂತರ ॥೩೧೭॥ ಜಾಣ ನೈರಾಶ್ಯತೇಪಾಶೀ । ವೈರಾಗ್ಯ ಹೋಊನ ಅಸೇ ದಾಸೀ । ನಿರಾಶ ಪಹಾವಯಾ ಅಹರ್ನಿಶೀ । ಹೃಷೀಕೇಶೀ ಚಿಂತಿತು ॥೩೧೮॥ ನಿರಾಶಾ ದೇಖೋನಿ ಪಳೇ ದುಃಖ। ನಿರಾಶೇಮಾಜೀ ನಿತ್ಯಸುಖ । ನಿರಾಶೇಪಾಶೀ ಸಂತೋಖ । ಯಥಾಸುಖೇ ಕ್ರೀಡತು ॥ ೩೧೯॥ ನೈರಾಶ್ಯಾಚೇ ಭೇಟಿಸೀ ಪಾಹಾಹೋ । ಧಾಂವೇ ವೈಕುಂಠೀಚಾ ರಾವೋ । ನೈರಾಶ್ಯಾಚಾ ಸಹಜ ಸ್ವಭಾವೋ । ಮಹಾದೇವೋ ಉಪಾಸೀ ॥೩೨೦॥ ನಿರಾಶೇಪಾಶೀ ನ ಯೇ ಆಧೀ । ನಿರಾಶೇಪಾಶೀ ಸಕಳ ವಿಧೀ । ಸಚ್ಚಿದಾನಂದ ಪದೀ । ಮಿರವೇ ತ್ರಿಶುದ್ಧೀ ನಿರಾಶು ॥೩೨೧॥

ಆಶೆ ಇದ್ದಲ್ಲಿ ಲೋಭವಿರುವುದು. ಆಶೆ ಹತ್ತಿರ ದೀನತೆ ಇರುವುದು. ಎಲ್ಲಿ ಆಶೆಯೋ ಅಲ್ಲಿ ಮಮತೆ ಇರುವುದು. ಇವು ಸತತವಾಗಿ ನರ್ತಿಸುತ್ತಿರುವುವು ॥೩೦೭॥ ಆಶೆ ಇದ್ದಲಿ ಮಹಾಶೋಕವಿರುವುದು. ಆಶೆಯು ಮಹಾ ಮಹಾ ಪಾಪಗಳನ್ನು ಮಾಡಿಸುವುದು. ಆಶೆಯಲ್ಲಿ ಸಂಪೂರ್ಣವಾಗಿ ಎಲ್ಲ ಪಾತಕಗಳ ರಾಶಿ ಇರುವುದು ॥೩೦೮॥ ಆಶೆಯ ಹತ್ತಿರ ಸರ್ವ ಅಧರ್ಮಗಳು ವಾಸವಾಗಿರುವುವು. ಆಶೆಯು ಮೈಲಿಗೆಯನ್ನು ಮನ್ನಿಸುವುದಿಲ್ಲ. ಆಶೆಗೆ ಕಾಲ ವೇಳೆಯು ತಿಳಿಯುವುದಿಲ್ಲ. ಆಶೆಯು ಸತ್ಕರ್ಮಗಳನ್ನು ನಾಶ ಮಾಡಿಬಿಡುವುದು ॥೩೦೯॥ ಆಶೆಯು ಅಂತ್ಯಜನ ಸೇವೆ ಮಾಡಲು ಹಚ್ಚುವುದು. ಆಶೆಯು ನೀಚರ ಸೇವೆ ಮಾಡಿಸುವುದು. ಆಶೆಯು ಸತ್ತವರನ್ನೂ ಬಿಡುವುದಿಲ್ಲ. ಆಶೆಯು ಹೆಣದ ಹತ್ತಿರ ಸಹ ಒಯ್ಯುವುದು ॥೩೧೦॥ ಅನಂತನ ಮನದಲ್ಲಿ ಆಶೆಯು ಉತ್ಪನ್ನವಾಗುತ್ತಲೇ ಆತನಿಗೆ ವಾಮನ ಸ್ವರೂಪದ ಚಿಕ್ಕ ವಟುವಿನ ಸ್ವರೂಪವು ಪ್ರಾಪ್ತಯಾಯಿತು. ಈ ಆಶೆಯು ದೇವರಿಗೂ ದೀನನನ್ನಾಗಿ ಮಾಡಿತು. ಅಂದ ಮೇಲೆ ಸಾಮಾನ್ಯ ಮಾನವರ ಯಾವ ಕಥೆ? ॥೩೧೧॥ ಇಡೀ ಜಗತ್ತಿಗೆ ನಿತ್ಯ ದಾತಾನಾಗಿರುವ ಯಾವ ಈ ಜಗದೀಶನಿಗೂ ಆಶೆಯು ಭಿಕಾರಿಯನ್ನಾಗಿ ಮಾಡಿಬಿಟ್ಟಿತು. ವೈರಿಯ ಬಾಗಿಲದಲ್ಲಿ ನಿಂತು ಬೇಡುವ ಸ್ಥಿತಿಯನ್ನು ತಂದಿತು. ಇದರಿಂದಲೇ ಕೊನೆಗೆ ಈತನಿಗೆ ದ್ವಾರಪಾಲಕನಾಗಬೇಕಾಯಿತು ॥೩೧೨॥ ಎಲ್ಲಿ ಆಶೆ ಇದೆಯೋ ಅಲ್ಲಿ ಸುಖವಿಲ್ಲ. ಆಶೆಯ ಹತ್ತಿರ ಪರಮ ದುಖಃವಿರುವುದು. ಆಶೆಯು ಸರ್ವರಿಗೂ ಬಾಧಕವಾಗಿರುವುದು. ಮುಖ್ಯವಾಗಿರುವ ದೋಷವೆಂದರೆ ಆಶೆಯಾಗಿರುವುದು ॥೩೧೩॥ ಯಾರಲ್ಲಿ ಆಶೆಯು ಪರಿಪೂರ್ಣವಾಗಿ ಇಲ್ಲದಾಗಿದೆಯೋ, ಅವರಿಗೆ ಮಾತ್ರ ಪರಮ ಸುಖದ ಲಾಭವಾಗುವುದು. ಬ್ರಹ್ಮದೇವರು ಮೊದಲು ಮಾಡಿ ಆತನ ಪಾದಕ್ಕೆ ಬೀಳುವರು. ಮತ್ತು ಅಷ್ಟ ಮಹಾ ಸಿದ್ಧಿಗಳು ಆತನ ದಾಸೀಯಾಗಿರುವರು ॥೩೧೪॥ ನಿರಿಚ್ಛ ಮನುಷ್ಯನ ಭಾವನೆಯು ಶುದ್ಧವಾಗಿರುವುದು. ಆತನ ಹಿಂದೆ ಮುಂದೆ ಭಗವಂತನು ನಿಂತಿರುವನು. ರಾಜನಾಗಿರಲಿ, ದೇವನಾಗಿರಲಿ ನಿರಿಚ್ಛ ಮನುಷ್ಯನ ಶಬ್ದಗಳನ್ನು ಉಲ್ಲಘಂನೆಯನ್ನು ಮಾಡಲಾರರು ॥೩೧೫॥ ಆಶಾರಹಿತನೇ ಸುಬುದ್ಧಿವಾನನು, ಆಶಾರಹಿತನೇ ವಿವೇಕ ನಿಧಿಯು. ನಿರಾಶನಾದವರನ್ನು ನಾಲ್ಕೂ ಮುಕ್ತಿಗಳು ಹೆಜ್ಜೆ ಹೆಜ್ಜೆಗೂ ವಂದಿಸುವುವು ॥೩೧೬॥ ನಿರಾಶೆಯು ಸರ್ವ ತೀರ್ಥಗಳ ತೀರ್ಥವಾಗಿರುವುದು.ನಿರಾಶೆಯೇ ಮುಮುಕ್ಷುಗಳ ಅರ್ಥವಾಗಿರುವುದು. ಮತ್ತು ನಿರಾಶೆಯುಳ್ಳವರಲ್ಲಿ ಪರಮಾತ್ಮನು ಸರ್ವ ಕಾಲದಲ್ಲಿಯೂ ವಾಸಮಾಡುವನು ॥೩೧೭॥ ನೈರಾಶ್ಯತೆ ಇದ್ದವರಲ್ಲಿ ವೈರಾಗ್ಯವು ದಾಸಿಯಾಗಿರುವುದು. ನಿರಿಚ್ಛ ಭಕ್ತನನ್ನು ನೋಡುವುದಕ್ಕಾಗಿ ಹೃಷೀಕೇಶಿಯು ಹಗಲು ರಾತ್ರಿ ಇಚ್ಛೆಯನ್ನು ಮಾಡುವನು ॥೩೧೮॥ ನಿರಾಶಕ್ಕೆ ಕಂಡಾಕ್ಷಣವೇ ದುಃಖವು ಓಡಿ ಹೋಗುವುದು. ನಿರಾಶವಿದ್ದಲ್ಲಿ ನಿತ್ಯಸುಖವಿರುವುದು. ಇಲ್ಲಿ ಸಂತೋಷವು ಹಾಯಾಗಿ ಆಡುತ್ತಿರುವುದು ॥೩೧೯॥ ಆಶೆ ಇಲ್ಲದವನ ಭೇಟಿಗಾಗಿ ವೈಕುಂಠ ರಾಜನು ಧಾವಿಸುತ್ತ ಬರುವನು. ಸರಳ ಸ್ವಭಾವದ ಮಹಾದೇವರೂ ಸಹ ಇವರ ಉಪಾಸನೆಯನ್ನು ಮಾಡುವನು ॥ ೩೨೦॥ ನಿರಾಶೆ ಇದ್ದವರಲ್ಲಿ ಮಾನಸಿಕ ದುಃಖವು ಎಂದಿಗೂ ಉಂಟಾಗುವುದಿಲ್ಲ. ಸರ್ವ ವಿಹಿತ ಧರ್ಮಗಳು ನಿರಾಶೆಯಲ್ಲಿರುವುವು. ನಿರಿಚ್ಛ ಪುರುಷನು ನಿಶ್ಚಯಪೂರ್ವಕವಾಗಿ ಸಚ್ಚಿದಾನಂದ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುವನು ॥೩೨೧॥

ಐಕೋನಿ ನಿರಾಶೇಚ್ಯಾ ನಾಂವಾ । ಧೋರಲಾ ದೇವ್ರೋ ಘೇತಸೇ ಧಾಂವಾ । ತ್ಯಾ ದೇವ್ರೋನಿಯಾ ಖೇಂವಾ। ರೂಪನಾಂವಾ ವಿಸರಲಾ ।೩೨೨॥ ತೇ ನಿರಾಶೇಚಾ ಜಿವ್ಹಾಳಾ। ಪಾವ್ರೋನಿ ವೇಶ್ಯಾ ಪಿಂಗಲಾ । ಜಾರಪುರುಷಾಶೇಚ್ಯಾ ಮೂಳಾ । ಸ್ವಯೇ ಸಮೂಳಾ ಛೇದಿತೀ ಝಾಲೀ ।೩೨೩॥ ಜೇ ಆಶಾಪಾಂಶಾಂಚೇ ಛೇದನ । ತೇಚಿ ಸಮಾಧೀಚೇ ನಿಜಸ್ಥಾನ । ತೇ ನಿಜ ಸಮಾಧೀ ಪಾವ್ರೋನ । ಪಿಂಗಲಾ ಜಾಣ ಪಹುಡಲೀ ।೩೨೪॥ ಸರ್ವ ವರ್ಣಾಮಾಜೀ ವ್ರೋಖಟೀ । ಕರ್ಮ ಪಾಹತಾ ನಿಂದ್ಯ ದೃಷ್ಟೀ । ತೇ ವೇಶ್ಯಾ ಪಾವನ ಝಾಲೀ ಸೃಷ್ಟೀ । ಮಾಝೇ ವಾಕ್ಪುಟೀ ಕಥಾ ತೀಚೀ ।೩೨೫॥ ಯಾಲಾಗೀ ವೈರಾಗ್ಯಾಪರತೇ। ಆನ ಸಾಧನ ನಾಹೀ ಯೇಥೇ । ಕೃಷ್ಣ ಥಾಪಟೀ ಉದ್ಧವಾತೇ। ಆಲ್ಹಾದ ಚಿತ್ತೇ ಪ್ರಬೋಧೀ ।೩೨೬॥ ಅವಧೂತ ಸಾಂಗೇ ಯದೂಸೀ । ಪ್ರತ್ಯಕ್ಷ ವೇದಬಾಹ್ಯತಾ ವೇಶ್ಯೇಸೀ। ನಿರಾಶ ಹೋತಾ ಮಾನಸೀ । ನಿಜಸುಖಾಸೀ ಪಾವಲಿ ।೩೨೭॥ ಯಲಾಗೀ ಕಾಯಾವಾಚಾ ಚಿತ್ತೇ । ಉಪಾಸಾವೇ ನಿರಾಶೇತೇ । ಯಾಪರತೇ ಪರಮಾರ್ಥಾತೇ । ಸಾಧನ ಯೇಥೇ ದಿಸೇನಾ ।೩೨೮॥ ಇತರ ಜಿತುಕೀ ಸಾಧನೆ। ತಿತುಕೀ ಆಶಾ - ನಿರಾಶೇಕರಣೇ । ತೇ ನಿರಾಶಾ ಸಾಧಿಲೀ ಜೇಣೇ । ಪರಮಾರ್ಥ ತೇಣೇ । ಲುಟೀಲಾ ।೩೨೯॥ ಕೃಪಾ ಜಾಕಳಿಲೇ.ಅವಧೂತಾಸೀ । ಯದೂಸೀ ಧರೋನಿಯಾ ಪೋಟಾಸೀ । ನಿರಾಶಾತಾ ಹೇಜೇ ಐಶೀ। ಅವಶ್ಯತೇಸೀ ಸಾಧಾವೀ ।೩೩೦॥ ಏಕಾ ಜನಾರ್ದನಾ ಶರಣ । ತ್ಯಾಚೀ ಕೃಪಾ ಪರಿಪೂರ್ಣ । ತೋಚಿ ಆಶಾಪಾಶ ಛೇದೂನ । ಸಾಮಾಧಾನ ಪಾವವೀ ।೩೩೧॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಯದ್ವಧೂತಸಂವಾದೇ ಏಕಾಕಾರ ಟೀಕಾಯಾಂ ಅಷ್ಟಮೋ ಧ್ಯಾಯಃ ॥೮॥

॥ಶ್ರೀಕೃಷ್ಣಾರ್ಪಣಮಸ್ತು ॥

ನಿರಾಶೆಯವನ ಹೆಸರನ್ನು ಕೇಳಿದಾಕ್ಷಣವೇ ಮಾಧವನು ಧಾವಿಸುತ್ತ ಬರುವನು. ಮತ್ತು ಆತನಿಗೆ ಪ್ರೇಮದಿಂದ ಅಪ್ಪಿಕೊಂಡು ನಾಮರೂಪವನ್ನು ಮರೆತುಬಿಡುವನು ॥೩೨೨॥ ಇಂತಹ ನಿರಾಶೆಯ ಬಹು ಪ್ರೀತಿಯು ಪಿಂಗಲಾ ವೇಶ್ಯೆಗೆ ಪ್ರಾಪ್ತವಾದ್ದರಿಂದ ಆಕೆಯು ಜಾರ ಪುರುಷರ ಆಶೆಯ ಬೇರುಗಳನ್ನೇ ಕಿತ್ತಿ ಒಗೆದಳು ।೩೨೩॥ ಆಶಾರೂಪ ಪಾಶವನ್ನು ಛೇದಿಸುವುದೇ ಸಮಾಧಿಯ ನಿಜಸ್ಥಾನವಾಗಿರುವುದು. ಇದನ್ನು ಪಿಂಗಲೆಯು ಪ್ರಾಪ್ತಮಾಡಿಕೊಂಡು ಶಯನ ಮಾಡಿದಳು ।೩೨೪॥ ಸರ್ವ ವರ್ಣಗಳಲ್ಲಿ ಹೀನಳೂ, ಆಕೆಯ ಕರ್ಮವೂ ಅತ್ಯಂತ ನೀಚವೂ ಆಗಿರುವ ಆ ವಾರಾಂಗನೆಯು ಈ ಲೋಕದಲ್ಲಿ ಪಾವನಳಾದಳು. ಆದ್ದರಿಂದ ಆಕೆಯು ಕಥೆಯು ನನ್ನ ಮುಖದಿಂದ ಬಂದಿತು ।೩೨೫॥ ಆದ್ದರಿಂದ ವೈರಾಗ್ಯದಂತಹ ಅನ್ಯ ಯಾವ ಸಾಧನೆಯೂ ಇರುವುದಿಲ್ಲ. ಹೀಗೆಂದು ಶ್ರೀಕೃಷ್ಣನು ಉದ್ಧವನ ಬೆನ್ನು ಚಪ್ಪರಿಸಿ ಬಹು ಪ್ರಸನ್ನ ಮನದಿಂದ ಹೇಳಿದನು. ।೩೨೬॥ ಅವಧೂತನು ಯದುರಾಜನಿಗೆ ಹೀಗೆ ಹೇಳಿದನು. ಈಯಾವ ವೇಶ್ಯೆಗೆ ವೇದದ ಅಧಿಕಾರವು ಇಲ್ಲವಾಗಿದ್ದರೂ ಆಕೆಯ ಮನದಲ್ಲಿ ವೈರಾಗ್ಯವು ಉತ್ಪನ್ನವಾಗುತ್ತಲೇ ಆಕೆಗೆ ಆತ್ಮಸುಖದ ಪ್ರಾಪ್ತಿಯಾಯಿತು॥ ೩೨೭॥ ಅದಕ್ಕಾಗಿ ಕಾಯಾ,ವಾಚಾ, ಮನದಿಂದ ನಿರಾಶೆಯು ಉಪಾಸನೆಯನ್ನು ಮಾಡಬೇಕು. ಇದನ್ನು ಬಿಟ್ಟು ಅನ್ಯಯಾವ ಸಾಧನೆಯೂ ಈಜಗತ್ತಿನಲ್ಲಿರುವುದಿಲ್ಲ ॥೩೨೮॥ ಇತರ ಸಾಧನೆಗಳೆಲ್ಲವೂ ನಿರಾಶೆಗಾಗಿಯೇ ಇರುವುವು. ಒಮ್ಮೆ ನಿರಾಶೆಯು ಮನದಲ್ಲಿ ನಟ್ಟಿಕೊಂಡರೆ ಸಾಕು, ಪರಮಾರ್ಥವು ಹಸ್ತಗತವಾಗುವುದು॥ ೩೨೯॥ ಅವಧೂತನ ಮನದಲ್ಲಿ ಪರಮ ಕೃಪೆಯು ಉತ್ಪನ್ನವಾಯಿತು. ಈತನು ಯದುರಾಜನಿಗೆ ಹೃದಯಕ್ಕೆ ಅಪ್ಪಿಕೊಂಡು ಹೀಗೆ ಹೇಳಿದನು. ನೀನು ಅವಶ್ಯವಾಗಿ ಇಂತಹ ವಿರಕ್ತಿಯನ್ನು ಸಂಪಾದಿಸು॥ ೩೩೦॥ ಏಕನಾಥರು ಜನಾರ್ದನರಿಗೆ ಶರಣು ಬಂದರು. ಇವರ ಪೂರ್ಣಕೃಪೆಯೇ ಆಶಾಪಾಶವನ್ನು ಛೇದಿಸಿ ಪೂರ್ಣವಾದ ಸಮಾಧಾನವನ್ನು ನೀಡುವುದು॥ ೩೩೧॥

ಈ ಪ್ರಕಾರವಾಗಿ ಶ್ರೀಮದ್ಭಾಗವತ ಮಹಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಯದು ಅವಧೂತ ಸಂವಾದದ ಏಕನಾಥ ಮಹಾರಾಜರ ಭಾಷ್ಯಯ ಎಂಟನೆಯ ಅಧ್ಯಾಯ ಸಂಪೂರ್ಣ.

(ಶ್ಲೋಕ ॥೪೩ ॥ಓವಿಗಳು ॥೩೩೧ ॥)

॥ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಒಂಭತ್ತನೆಯ ಅಧ್ಯಾಯ

ಶ್ರೀ ಗಣೇಶಾಯ ನಮಃ ಶ್ರೀಕೃಷ್ಣಾಯ ನಮಃ । ಓಂ ನಮೋ ಸದ್ಗುರು ಅಮರಪತೀ । ಅನುಭವು ತೋಚಿ ಐರಾವತೀ । ಸ್ವಾನಂದಮದೇ ಭದ್ರಜಾತೀ । ಉನ್ಮತ್ತ ಸ್ಥಿತೀ ಡುಲ್ಲತ ॥೧॥ ಉಪದೇಶಾಚೇ ವಜ್ರ ತಿಖ । ಛೇದೀ ಸಂಕಲ್ಪವಿಕಲ್ಪ ಪಾಂಖ । ಜಡಜೀವ ತೇ ಪರ್ವತ ದೇಖ । ನಿಜಸ್ಥಾನೀ ಸಮ್ಯಕ ಸ್ಥಾಪಿಸೀ ॥೨॥ ವಿವೇಕಾಚೇ ಪಾರಿಜಾತ। ವೈರಾಗ್ಯಸುಮನೀ ಘಮಘಮಿತ । ಮುಮುಕ್ಷ ಭ್ರಮರ ರಿಘೋನಿ ತೇಥ । ಆಮೋದ ಸೇವಿತೀ ಚಿತ್ಸುಖ ॥೩॥ ಉಪಶಮ ತೋಚಿ ಬೃಹಸ್ಪತೀ । ವಿಶ್ವಾಸೇ ತುಝಾ ನಿಕಟವರ್ತೀ । ತ್ಯಾಸೀ ಮಾನಿಸೀ ಅತಿಪ್ರೀತೀ । ತೋ ಸಭೇಪ್ರತೀ ಸದಸ್ಯ ॥೪॥ ಕೃಪಾಕಾಮಧೇನೂಚೇ ಖಿಲ್ಲಾರೇ । ಶ್ರದ್ಧಾವತ್ಸಾಚೇನಿ ಹುಂಕಾರೇ । ಪೋಳಲ್ಯಾ ಪೋರಸಾಚೇನಿ ಭರೇ । ತೇ ದುಭತೇ ಪುರೇ ಭಾಗವತಾ ॥೫॥ ಸತೇಜ ಚಿಂತಾಮಣೀಚೇ ಖಡೇ । ಸಭೋವತೀ ಲೋಳತೀ ಚಹೂಕಡೇ । ಭಕ್ತ ನ ಪಾಹತೀ ತಯಾಕಡೇ । ಚರಣಸುರವಾಡೇ ಸುಖಾವಲೇ ॥೬॥ ಸ್ವರ್ಗಾಂಗನಾ ಅಷ್ಟಮಾ ಸಿದ್ಧೀ । ತುಜಪುಢೇ ನಾಚತೀ ನಾನಾ ಛಂದೀ । ತ್ಯಾಂತೇ ದಾಸ ನ ಪಾಹತೀ ತ್ರಿಶುದ್ಧೀ । ಮಂದಬುದ್ಧಿ ಭಾಳಲೇ ॥೭॥ ಸಮಸಾಮ್ಯೇ ಸಮಾನ । ಅಢಳ ತುಝೇ ಸಿಂಹಾಸನ । ಸಚ್ಚಿದಾನಂದಾಚೀ ಗಾದೀ ಜಾಣ । ತೇಥೇ ಸುಖಾಸನ ಪೈ ತುಝೇ ॥೮॥ ಪಾವಾವಯಾ ತುಝಿಯಾ ಪದಾಪ್ರತೀ । ಸಾಧನಚತುಷ್ಟಯಸಂಪತ್ತೀ । ಜೋಡೋನಿಯಾ ಯಾಜಕ ಯಜೀತೀ । ಪ್ರತ್ಯಗಾವೃತ್ತೀಚೇನಿ ಯಾಗೇ ॥೯॥ ಜೇ ಮನ ಹೋಮಿತಾತಿ ಸಾವಧಾನೀ । ಐಸೇ ಭಕ್ತಭಜನ ದೇಖೋನಿ । ತೇಣೇ ಭಾವಾರ್ಥಯೋಗೇ ಸಂತೋಷೋನೀ । ನಿಜಪದದಾನೀ ತೂ ಹೋಶೀ ॥೧೦॥ ತ್ಯಾಂಸೀ ನಿಜಾತ್ಮತಾ ದೇಊನೀ । ಬೈಸವಿಸೀ ನಿಜಾಸನೀ । ಮರಣೇವೀಣ ಅಮರ ಕರೂನಿ । ಅಪತನೀ ಸ್ಥಾಪಿಸೀ ॥೧೧॥

ಹೇ ಓಂಕಾರ ರೂಪನಾದ ಸದ್ಗುರುರಾಯನೇ, ನಿನಗೆ ನಮಸ್ಕಾರವು. ನೀನು ದೇವತೆಗಳ ರಾಜ ಇಂದ್ರನಾಗಿರುವೆ. ಅನುಭವವೇ ನಿನ್ನ ಐರಾವತವಾಗಿರುವುದು. ಇಂದ್ರನ ಐರಾವತಕ್ಕೆ ಅಖಂಡವಾಗಿ ಮದಸ್ರಾವವಾಗಿಅದು ನಿರ್ಭಯದಿಂದ ತೂಗಾಡುತ್ತಿರುವುದು. ಹಾಗೆಯೇ ನಿನ್ನ ಅನುಭವದಿಂದ ಬ್ರಹ್ಮಾನಂದದ ಅಖಂಡ ಪ್ರವಾಹವು ಹರಿಯುತ್ತಿರುವುದು. ಮತ್ತು ಜೀವವು ಅದರಲ್ಲಿ ತಲ್ಲೀನವಾಗಿರುವುದು ॥೧॥ ಇಂದ್ರನ ವಜ್ರದಿಂದ ಪರ್ವತಗಳ ರೆಕ್ಕೆಗಳನ್ನು ಮುರಿದು ಅವುಗಳಿಗೆ ಅಚಲ ಮಾಡಿದಂತೆ ನಿನ್ನ ಉಪದೇಶರೂಪ ವಜ್ರವು ಪರ್ವತ ರೂಪ ಜಡ ಜೀವದ ಸಂಕಲ್ಪವಿಕಲ್ಪಗಳರೆಕ್ಕೆಗಳನ್ನು ಮುರಿದು ಅದಕ್ಕೆ ಸ್ಥಿರಗೊಳಿಸಿದೆ ॥೨॥ ವಿವೇಕವು ಪಾರಿಜಾತ ವೃಕ್ಷವಾಗಿರುವುದು. ವೈರಾಗ್ಯವು ಅದರ ಸುಗಂಧ ಪುಷ್ಪವಾಗಿರುವುದು. ಮುಮುಕ್ಷ ರೂಪೀ ಭ್ರಮರವು ಅದರ ಮೇಲೆ ಕುಳಿತು ಚಿತ್ಸುಖದ ಮಕರಂದದ ಸೇವನೆ ಮಾಡುವುದು ॥೩॥ ಇಂದ್ರಿಯ ನಿಗ್ರಹವು ಬೃಹಸ್ಪತಿಯಾಗಿರುವನು. ಆತನು ನಿನ್ನ ವಿಶ್ವಾಸದಿಂದ ನಿನ್ನ ಅತಿ ಸಮೀಪ ಸನ್ನಿಧಿಯಲ್ಲಿರುವನು. ಆತನನ್ನು ನೀನು ಪ್ರೇಮದಿಂದ ಆದರಿಸುವೆ. ಆತನೇ ನಿನ್ನ ಸಭೆಯಲ್ಲಿನ ಮುಖ್ಯ ಸದಸ್ಯನಾಗಿರುವನು ॥೪॥ ನಿನ್ನ ಹತ್ತಿರ ಕಾಮಧೇನುಗಳ ಹಿಂಡುಗಳಿರುವುವು. ಶ್ರದ್ಧಾರೂಪಿ ವತ್ಸಗಳ ಒದರುವಿಕೆಯಿಂದ ಅವುಗಳ ಸ್ತನಗಳಲ್ಲಿ ತೊರೆಗಳು ತುಂಬಿಕೊಂಡು ಹಾಲು ಹರಿಯುವುದು. ಅದು ಭಗವದ್ಭಕ್ತರಿಗೆ ಮುಟ್ಟುವುದು ॥೫॥ ನಿನ್ನ ಸುತ್ತುಮುತ್ತು ತೇಜವುಳ್ಳ ಚಿಂತಾಮಣಿಯ ರತ್ನಗಳು ಹರಡಿಕೊಂಡಿವೆ. ಆದರೆ ನಿನ್ನ ಭಕ್ತರ ಹೃದಯದಲ್ಲಿ ಲೋಭವಿಲ್ಲದ್ದರಿಂದ ಅವುಗಳತ್ತ ಹೊರಳಿಯೂ ನೋಡುವುದಿಲ್ಲ. ನಿನ್ನ ಚರಣಗಳ ಪ್ರೀತಿಯಿಂದ ಇವರು ತೃಪ್ತರಾಗಿರುವರು ॥೬॥ ಸ್ವರ್ಗದಲ್ಲಿ ಅಪ್ಸರೆಯರು ನರ್ತಿಸುತ್ತಿರುವರು. ಅದರಂತೆ ಅಷ್ಟಮಹಾಸಿದ್ಧಿಗಳು ನಿನ್ನೆದುರಿನಲ್ಲಿ ನಾನಾಪ್ರಕಾರವಾಗಿ ನರ್ತಿಸುತ್ತಿರುವುವು. ಆದರೆ ನಿನ್ನ ದಾಸರು ಅವುಗಳತ್ತ ಇಣಿಕಿ ಸಹ ನೋಡಲಾರರು. ಮಂದಬುದ್ಧಿಯವರು ಮಾತ್ರ ಅವರನ್ನು ಮೋಹಿಸಿರುವರು ॥೭॥ ಸರ್ವತ್ರ ಸಮದೃಷ್ಟಿಯ ನಿನ್ನ ಸಿಂಹಾಸನವು ಸ್ಥಿರವಾಗಿರುವುದು. ಅದರ ಮೇಲೆ ಸಚ್ಚಿದಾನಂದದ ಗಾದಿ ಇದೆ. ಅಲ್ಲಿಯೇ ನಿನ್ನ ಸುಖಾಸನವಿರುವುದು ॥೮॥ ನಿನ್ನ ಪರಮಪದವಿಗಾಗಿ ಸಾಧನಚತುಷ್ಟಯ ಸಂಪನ್ನತೆಯಿಂದ ಪೂಜಕ, ಧ್ಯಾನಯೋಗದಿಂದ ನಿನ್ನನ್ನು ಪೂಜಿಸುವರು. ॥೯॥ ಯಾರು ಸಾವಧಾನರಾಗಿ ಮನಸ್ಸಿನ ಹೋಮವನ್ನು ಮಾಡುವ ಆ ಭಕ್ತ ಜನರ ಪ್ರೇಮಮಯ ವರ್ತನೆಯನ್ನು ಕಂಡು ಮತ್ತು ಅವರ ಭಕ್ತಿಭಾವಾರ್ಥಕ್ಕೆ ಮೆಚ್ಚಿ ಸಂತೋಷಗೊಂಡು ನೀನು ಅವರಿಗೆ ನಿನ್ನ ಪದವಿಯನ್ನು ಕೊಡುವೆ ॥೧೦॥ ಅವರಿಗೆ ಸ್ವರೂಪತೆಯನ್ನು ನೀಡಿ ನಿನ್ನ ಆಸನದ ಮೇಲೆ ಕುಳ್ಳಿರಿಸಿಕೊಳ್ಳುವೆ. ಮತ್ತು ಅವರನ್ನು ಅಮರರನ್ನಾಗಿ ಮಾಡುವೆ. ಅವರ ಅಧಃಪತನವನ್ನು ಮಾಡಿಕೊಡುವುದಿಲ್ಲ ॥೧೧॥

ಇಂದ್ರಾ ಅಹಲ್ಯೇಶೀ ವ್ಯಭಿಚಾರು । ತುಜ ವೃಂದೇಶೀ ದುರಾಚಾರು । ಇಂದ್ರ ಜಾಹಲಾ ಸಹಸ್ರನೇತ್ರು । ತೂ ಸರ್ವಾಂಗೇ ಸರ್ವತ್ರು ದೇಖಣಾ ॥೧೨॥ ಇಂದ್ರಾಸೀ ದೈತ್ಯ ಕರೀತೀ ದೀನ । ತ್ಯಾಚೇ ಪದ ಘೇತೀ ಹಿರೋನ । ತುಜ ಭಕ್ತ ಕರೀತೀ ಪ್ರಸನ್ನ । ಪದ ಚಿದ್ಘನ ತೇ ಘೇತೀ ॥೧೩॥ ಕಕುತ್ಸ್ಥ ಬೈಸಲಾ ಇಂದ್ರಾಚೇ ಸ್ಕಂಧೀ । ದುರ್ವಾಸ ಬೈಸಲಾ ತುಝ್ಯಾ ಖಾಂದೀ । ಇಂದ್ರ ವರ್ತೇ ವಿಷ್ಣೂಚೇ ಬುದ್ಧೀ । ತೂ ಭಕ್ತಚ್ಛಂದೀ ವರ್ತಸೀ ॥೧೪॥ ರಾವಣೇ ಬಂದೀ ಘಾತಲೇ ಇಂದ್ರಾಸೀ । ತುಜ ಬಳೀನೇ ರಾಖಿಲೇ ದ್ವಾರಾಸೀ । ಇಂದ್ರ ಯಾಚೇ ಯಾಗಅವದಾನಾಸೀ । ತೂ ಭೂಮಿದಾನಾಸೀ ಯಾಚಿತಾ ॥೧೫॥ ಇಂದ್ರಾಸೀ ಅಗ್ನಿಮುಖೇ ಪ್ರಾಪ್ತೀ । ತುಜ ವಿಶ್ವತೋಮುಖೀ ತೃಪ್ತಿ । ಐಸಾ ಸದ್ಗುರೂ ತೂ ಕೃಪಾಮೂರ್ತೀ । ಅಮರಚಕ್ರವರ್ತೀ ಗುರುರಾಯಾ ॥೧೬॥ ತುಝೀ ಕರಾವೀ ವಿನವಣೀ । ತಂವ ತೇಥೇ ನ ರಿಘೇ ವಾಣೀ । ವಾಣೀ ಪ್ರಕಾಶ ತುಝೇನಿ । ವಕ್ತಾ ವದನೀ ತೂ ಸತ್ಯ ॥೧೭॥ ಏಕಾ ಏಕ ಜನಾರ್ದನೀ । ತೋ ಜನಾರ್ದನ ವಕ್ತಾ ವದನೀ । ಐಸಾ ವಚನಾಮಾಜೀ ಪ್ರವೇಶೋನೀ । ಗ್ರಂಥಕರಣೀ ಕರವಿತಾ ॥೧೮॥ ತೇಥೇ ಮೂಳೀ ನಿಮಾಲೀ ಅಹಂತಾ । ಅಹಂ ದವಡೂನಿ ತೂ ಕವಿ ಕರ್ತಾ । ಏಕಾ ಜನಾರ್ದನು ಅಭಂಗೀ ಸೂತಾ । ಅಭಂಗತಾ ಗುರೂಚರಣೀ ॥೧೯॥ ತ್ಯಾ ಗುರುಚರಣ ಪ್ರಸಾದೇ । ಗುರೂಚೀ ಲಕ್ಷಣೇ ವಿನೋದೇ । ವಾಖಾಣಿಲೀ ಯಥಾಬೋಧೇ । ಯದುಸಂವಾದೇ ಅವಧೂತೇ ॥೨೦॥ ಮಾಗೇ ಅಷ್ಟಮಾಧ್ಯಾಯಾಚ್ಯಾ ಅಂತೀ । ಅಸತಾ ಪಿಂಗಲೇಸಿ ಏಕಾಂತೀ । ವಿವೇಕ - ವೈರಾಗ್ಯ - ನಿವೃತ್ತೀ । ನಿಜಸುಖ ಪ್ರಾಪ್ತೀ ಪಾವಲೀ ॥೨೧॥ ಜಂವ ಜಂವ ಅಪರಿಗ್ರಹ ಹೋಣೇ । ತಂವ ತಂವ ನಿಜಸುಖ ಪಾವಣೇ । ಹೇಚಿ ಪ್ರಸ್ತುತ ಬೋಲಣೇ । ತೇಣೇ ಬ್ರಾಹ್ಮಣೇ ಬೋಲಿಜೇ ॥೨೨॥

ಬ್ರಾಹ್ಮಣ ಉವಾಚ :-

ಪರಿಗ್ರಹೋ ಹಿ ದುಃಖಾಯ ಯದ್‌ಯತ್ಪ್ರಿಯತಮಂ ನೃಣಾಮ್। ಅನಂತಂ ಸುಖಮಾಪ್ನೋತಿ ತದ್ ವಿದ್ವಾನ್ ಯಸ್ತ್ವಕಿಂಚನ॥೧॥

ಅರ್ಥ:- ಅವಧೂತ ದತ್ತಾತ್ರೇಯರು ಹೇಳಿದರು; ಹೇ ರಾಜನೇ, ಮನುಷ್ಯನಿಗೆ ಅತ್ಯಂತ ಪ್ರಿಯವಾದ ವಸ್ತುಗಳನ್ನು ಸಂಗ್ರಹಿಸುವುದರಲ್ಲಿ ದುಃಖಕ್ಕೆ ಕಾರಣವಾಗುವುದು. ಬುದ್ಧಿವಂತ ಪುರುಷನು ಇದನ್ನರಿತು ಸಂಗ್ರಹದಿಂದ ಅಲಿಪ್ತನಾಗುವನು. ಅಂದರೆ ಮನದಲ್ಲಿಯೂ ಕೂಡ ಆ ವಸ್ತುವಿನ ಸಂಗ್ರಹಕ್ಕೆ ಚಿಂತಿಸುವುದಿಲ್ಲ. ಆತನಿಗೆ ಅನಂತಸುಖಸ್ವರೂಪ ಪರಮೇಶ್ವರನ ಪ್ರಾಪ್ತಿಯಾಗುವುದು.

ಇಂದ್ರನು ಅಹಲ್ಯೆಯಲ್ಲಿ, ನೀನು ವೃಂದೆಯಲ್ಲಿ, ನಿಂದ್ಯ ಆಚರಣೆ ಮಾಡಿದಿರಿ. ಇದರಿಂದ ಇಂದ್ರನಿಗೆ ಸಾವಿರ ನೇತ್ರಗಳಾದವು. ನೀನು ಮಾತ್ರ ಸ್ವತಃ ಸರ್ವಾಂಗ ಸುಂದರನಾದೆ ॥೧೨॥ ದೈತ್ಯರು ಇಂದ್ರನನ್ನು ಜಯಿಸಿ ಆತನ ಪದವಿಯನ್ನು ಕಸಿದುಕೊಳ್ಳುವರು. ನಿನ್ನ ಭಕ್ತರು ನಿನ್ನನ್ನು ಪ್ರಸನ್ನಗೊಳಿಸಿ ನಿನ್ನ ಚಿತ್‌ಘನ ಪದವಿಯನ್ನು ಪಡೆಯುವರು ॥೧೩॥ ಇಕ್ಷ್ವಾಕು ಕುಲದಲ್ಲಿನ ಒಬ್ಬ ರಾಜನು ಇಂದ್ರನಿಗೆ ವೃಷಭವನ್ನಾಗಿ ಮಾಡಿ ಆತನ ಬೆನ್ನಿನ ಮೇಲೆ ಕುಳಿತುಕೊಂಡು ಯುದ್ಧವನ್ನು ಮಾಡಿದನು. ಅದಕ್ಕಾಗಿಯೇ ಈ ಕುಲಕ್ಕೆ ಕಕುತ್ಸ್ಥ ಎಂದು ಹೆಸರಾಯಿತು. ಈ ಪ್ರಕಾರವಾಗಿ ಕಕುತ್ಸ್ಥ ರಾಜನು ಇಂದ್ರನ ಹೆಗಲ ಮೇಲೆ ಕುಳಿತನು, ಆದರೆ ದುರ್ವಾಸ ಋಷಿಯು ನಿನ್ನ ಹೆಗಲಮೇಲೆ ಕುಳಿತನು. ಇಂದ್ರನು ವಿಷ್ಣುವಿನ ಬುದ್ಧಿಯಂತೆ ನಡೆಯುವನು. ಆದರೆ ನೀನು ಭಕ್ತರ ಪ್ರೇಮಭಾವದಂತೆ ವರ್ತಿಸುವೆ ॥೧೪॥ ರಾವಣನು ಇಂದ್ರನಿಗೆ ಕಾರಾಗೃಹದಲ್ಲಿಟ್ಟನು. ಬಲಿರಾಜನು ನಿನಗೆ ದ್ವಾರಪಾಲಕನನ್ನಾಗಿ ಮಾಡಿದನು. ಇಂದ್ರನು ಯಜ್ಞದಲ್ಲಿನ ಹವಿರ್ಭಾಗವನ್ನು ಬೇಡಿದನು. ನೀನು ಭೂದಾನವನ್ನು ಬೇಡಿದೆ ॥೧೫॥ ಇಂದ್ರನಿಗೆ ಅಗ್ನಿಯ ಮುಖದಿಂದ ತೃಪ್ತಿಯು, ನೀನು ವಿಶ್ವತೋಮುಖದಿಂದ ತೃಪ್ತನಾಗುವೆ. ಹೇ ಗುರುರಾಯನೇ, ಈಗ ನೀನು ಕೇವಲ ಕೃಪೆಯ ಮೂರ್ತಿಯೇ ಆಗಿರುವೆ. ಮತ್ತು ಅಮರರ ಸಾರ್ವಭೌಮನಾಗಿರುವೆ ॥೧೬॥ ನಿನಗೆ ವಿನಂತಿಸಬೇಕೆಂದರೆ ಶಬ್ದವೇ ಹುಟ್ಟುವುದಿಲ್ಲ. ಏಕೆಂದರೆ ನಿನ್ನಿಂದಲೇ ವಾಣಿಯು ಪ್ರಕಟವಾಗುವುದು. ನಿಜವಾಗಿಯೂ ನನ್ನ ಮುಖದಿಂದ ಹೇಳುವವನು ನೀನೇ ಆಗಿರುವೆ ॥೧೭॥ ಏಕನಾಥನು ಜನಾರ್ದನರಲ್ಲಿ ಏಕರೂಪನಾಗಿರುವನು. ಹೀಗಿರುವಾಗ ನಿಜವಾಗಿ ನೋಡಿದರೆ, ಜನಾರ್ದನ ಸ್ವಾಮೀಯೇ ವಕ್ತಾನಾಗಿರುವನು. ಈತನೇ ಈ ಪ್ರಕಾರವಾಗಿ ಮುಖದಲ್ಲಿ, ಶಬ್ದಗಳಲ್ಲಿ ಪ್ರವೇಶವನ್ನು ಮಾಡಿ, ಗ್ರಂಥ ಕಾರ್ಯವನ್ನು ಮಾಡಿಸುತ್ತಿರುವನು ॥೧೮॥ ಎಲ್ಲಿ ಅಹಂಕಾರವೇ ಮೂಲದಲ್ಲಿ ಇಲ್ಲದಾಗಲು ಮತ್ತು ಅಲ್ಲಿ ನಾನು ಎಂಬುವುದು ಇಲ್ಲದಿರಲು ಕವಿ ಹಾಗೂ ಕರ್ತಾ ನೀನೇ ಆಗಿರುವೆ. ನೀನೇ ಕವಿತೆಯಲ್ಲಿ ಏಕನಾಥನ ಹೆಸರು ಹಾಕಿರುವೆ. ಹೀಗೆ ಜನಾರ್ದನ ಸ್ವಾಮಿಯ ಶಿಷ್ಯ ಏಕನಾಥನು ತಾದಾತ್ಮ್ಯನಾಗಿರುವನು. ಗುರುಚರಣಗಳಲ್ಲಿ ಏಕರೂಪನಾಗಿರುವನು ॥೧೯॥ ಯಾವ ಈ ಗುರುಚರಣ ಪ್ರಸಾದದಿಂದ ಅವಧೂತನು ಯದುರಾಜನಿಗೆ ಹೇಳಿದ ಗುರುಗಳ ಲಕ್ಷಣಗಳನ್ನು ವಿನೋದವಾಗಿ ಯಥಾಮತಿ ವಿಸ್ತರಿಸಿ ವರ್ಣಿಸಿರುವೆ ॥೨೦॥ ಹಿಂದೆ ಎಂಟನೆಯ ಅಧ್ಯಾಯದ ಕೊನೆಯಲ್ಲಿ ಪಿಂಗಲಾ ವೇಶ್ಯೆಗೆ ಏಕಾಂತದಲ್ಲಿ ವಿವೇಕ ವೈರಾಗ್ಯವು ಪ್ರಾಪ್ತವಾಯಿತು. ಆಕೆಯ ಹೃದಯದಲ್ಲಿನ ಇಚ್ಛೆಯು ನಿವೃತ್ತವಾಯಿತು ॥೨೧॥ ಸಂಸಾರದಿಂದ ನಾವು ಹೇಗೆ ಹೇಗೆ ನಿವೃತ್ತರಾಗುವೆವೋ ಹಾಗೆ ಹಾಗೆ ಆತ್ಮಸುಖವು ಸಿಗುತ್ತಸಾಗುವುದು. ಈ ಸಾರವನ್ನೇ ಬ್ರಾಹ್ಮಣನು ಹೇಳಿದನು ॥೨೨ ॥

ಬ್ರಾಹ್ಮಣ ಮ್ಹಣೇ ರಾಯಾಸೀ । ಪರಿಗ್ರಹೋ ಜಯಾಪಾಶೀ । ವಾಢತೇ ದುಃಖ ತಯಾಸೀ । ಅಹರ್ನಿಶೀ ಚಢೋವಢೀ ।।೨೩।। ಕುಟುಂಬ ಪರಿಗ್ರಹಾಚೇ ಆಸಕ್ತೀ । ಕಪೋತಾ ನಿಮಾಲಾ ದುರ್ಮತೀ । ಆತಾ ಏಕಾಕೀ ಪರಿಗ್ರಹೋ ಕರಿತೀ । ತೇಹೀ ಪಾವತೀ ದುಃಖಾತೇ ।।೨೪।। ಗೃಹಪರಿಗ್ರಹೇ ಗೃಹಸ್ಥ । ಪಾಷಾಣಮೃತ್ತಿಕೇಚೇ ಮಮತಾ । ಕಾಡೀಕಾರಣೇ ಕಲಹೋ ಕರಿತಾ । ಸುಹೃದತಾ ಸಾಂಡಿತೀ ।।೨೫।। ನಿಃಸಂಗಾ ಪರಿಗ್ರಹೋ ಲಾಗಲಾ ಕೈಸಾ। ಶಿಷ್ಯ ಸಂಪ್ರದಾಯೇ ಘಾಲೀ ಫಾಂಸಾ । ಶಾಸ್ತ್ರಪುಸ್ತಕಸಂಗ್ರಹವಶಾ । ವಾಢವೀ ಆಶಾ ಮಠಾಚೀ ।।೨೬।। ತ್ಯಾ ಮಠ್ವಶೀಷ್ಯಾಂಚೇ ಸಾಂತ್ವನ । ಕರಿತಾ ಅತ್ಯಂತ ಹೋಯ ದೀನ । ಮಗ ಪರಿಗ್ರಹಾಚೇ ಉಪಶಮನ । ಅಪರಿಗ್ರಹೀ ಜಾಣ ಕರಿತಾತಿ ।।೨೭।। ತ್ಯಾ ಮಠಾಚಿಯಾ ಆಶಾ । ಶಿಷ್ಯಸಂಪ್ರದಾಯವಶಾ।ಕಲಹೋ ಲಾಗೇ ಆಪೈಸಾ । ವಿರೋಧು ಸನ್ಯಾಸಾ ಪರಿಗ್ರಹೇ ।।೨೮।। ಪರಿಗ್ರಹೋ ಜಿಣೋನಿ ಗಾಢಾ । ಲಂಗೋಟೀ ತ್ಯಜೂನಿ ಜಾಹಲಾ ಉಘಡಾ । ನಾಗವೇ ಮಾಥಾ ಘೇಊನಿ ಘುಡಾ । ಲಾವಿಲ್ಯಾ ಝಾಡಾ ಶಿಂಪತ ।।೨೯।। ತಯಾ ವೃಕ್ಷಾಚೇಕೋಣೇ ಪಾನ ತೋಡೀ ।ತ್ಯಾಸೀ ಆಕ್ರೋಶೇ ಕಲಹ ಮಾಂಡೀ । ಘೋರ ಪರಿಗ್ರಹಾಚೇ ಸಾಂಕಡೀ । ದುಃಖೇ ಪೀಡೀ ಸರ್ವಾತೇ ।।೩೦।। ಆವಡೀ ಕೇಲಾ ಜೋ ಪರಿಗ್ರಹೋ । ತೋ ತೋ ಉಪಜವೀ ದುಃಖಕಲಹೋ । ಹಾ ಹೋತಾಂಹೀ ಅನುಭವೋ। ವೈರಾಗ್ಯ ಪಹಾ ಹೋ ಉಪಜೇನಾ ।।೩೧।। ಐಶೀ ಪರಿಗ್ರಹಾಚೀ ಕಥಾ । ದೇಖೋನಿ ದೇಖಣಾ ಜೋ ಜ್ಞಾತಾ । ಆಸಕ್ತೀ ಸಾಂಡೋನಿ ಸರ್ವಥಾ । ಅಂಕಿಚನಪಂಥಾ ಲಾಗಲಾ ।।೩೨।। ಪ್ರಪಂಚ ಅನಿತ್ಯನಾಶವಂತ । ತೇಥೀಲ ಸಂಗ್ರಹ ಕಾಯ ಶಾಶ್ವತ । ಐಸೇ ವಿವಂಚೂನಿ ಸಮಸ್ತ । ಅಕಿಂಚನಚಿತ್ತ ತೇ ಜಾಹಲೇ ।।೩೩।। ಪರಿಗ್ರಹಾಮಾಜೀ ಗಾಢಾ । ದೇಹಪರಿಗ್ರಹಾಚಾ ಖೋಡಾ । ಮಿಥ್ಯಾತ್ವೇಪೋಡೀ ರೋಕಡಾ । ತೋ ವಿವೇಕೀ ಗಾಢಾ ಜ್ಞಾತಾ ಪೈ ।।೩೪।। ಜೇಥ ದೇಹ ಪರಿಗ್ರಹ ಮಿಥ್ಯಾ ಜಾಹಲಾ । ತೋ ಅನಂತ ಸುಖಾಚ್ಯಾ ಘರಾ ಆಲಾ । ಜ್ಯಾ ಸುಖಾಸೀ ಅಂತ ನ ವಚೇ ಕೇಲಾ । ತ್ಯಾ ಪಾವಲಾ ನಿಜಸುಖಾ ।। ೩೫।। ಪರಿಗ್ರಹೋ ದುಃಖವಂತು । ಹಾ ''ಕುರರೀ'' ಗುರುತ್ವೇ ವೃತ್ತಾಂತು । ತುಜ ಸಾಂಗೇನ ಸಾದ್ಯಂತು । ಉಪಹಾಸೇ ಅವಧೂತು ಬೋಲಿಲಾ ।।೩೬।।

ಬ್ರಾಹ್ಮಣನು ರಾಜನಿಗೆ ಹೇಳಿದನು; ಯಾರಲ್ಲಿ ಪರಿಗ್ರಹ ಇರುವುದೋ, ಅಂದರೆ ವಸ್ತುಗಳ ಸಂಗ್ರಹವಿರುವುದೋ, ಆತನ ದುಃಖವು ಹಗಲು ರಾತ್ರಿ ಏರುತ್ತಾ ಬೆಳೆಯುತ್ತಾ ಸಾಗುವುದು ।।೨೩।। ಕುಟುಂಬದ ಆಸಕ್ತಿಯನ್ನು ಹಿಡಿದು ಆ ಯಾವ ಮೂರ್ಖ ಪಕ್ಷಿಯು ನಾಶಹೊಂದಿತು. ಈಗ ಒಬ್ಬನೇ ಇದ್ದರೂಕೂಡ ಈತನು ಪರಿಗ್ರಹದ ಮೋಹಕ್ಕೆ ಬೀಳುವನು. ಇವನೂ ದುಃಖದಲ್ಲಿ ಸಿಲುಕಿಕೊಳ್ಳುವನು ।।೨೪।। ಗೃಹದ ಪರಿಗ್ರಹ ಮಾಡುತ್ತಲೇ ಆತನಿಗೆ ಕಲ್ಲು ಮಣ್ಣಿನ ಲೋಭವು ಬೆಳೆಯುವುದು. ಆಗ ಒಂದು ಕಡ್ಡಿಗಾಗಿಯೇ ಆತನು ತನ್ನ ಸ್ನೇಹ ಸಂಬಂಧವನ್ನು ಮರೆತು ಒಬ್ಬರಿಗೊಬ್ಬರು ಕಲಹ ಮಾಡುವರು ।।೨೫।। ವಿರಕ್ತ ಪುರುಷನಿಗೂ ಕೂಡ ಪರಿಗ್ರಹವು ಹೇಗೆ ಹತ್ತುವುದೆಂಬುದು ಹೇಳುವೆ, ಕೇಳು, ಆತನು ಶಿಷ್ಯ ಸಾಂಪ್ರದಾಯಗಳ ಆಸಕ್ತಿಯಲ್ಲಿ ಸಿಲುಕಿಕೊಳ್ಳುವನು. ಶಾಸ್ತ್ರೀಯ ಗ್ರಂಥಗಳ ಸಂಗ್ರಹದ ವ್ಯಾಮೋಹಕ್ಕೆ ಬಿದ್ದು ಮಠ ಕಟ್ಟುವ ಲೋಭವು ಆತನ ಮನದಲ್ಲಿ ನಿರ್ಮಾಣವಾಗುವುದು ।।೨೬।। ಆಗ ಆ ಮಠದಲ್ಲಿನ ಶಿಷ್ಯರ ಸಮಾಧಾನ ಮಾಡುವುದಕ್ಕಾಗಿ ಆತನಿಗೆ ಅತ್ಯಂತ ದೀನನಾಗಬೇಕಾಗುವುದು. ಆಗ ಆ ಪರಿವಾರಕ್ಕೆ ತ್ರಾಸಿನಿಂದಾಗಿ ಆತನು ಸರ್ವರ ತ್ಯಾಗವನ್ನು ಮಾಡುವನು ।।೨೭।। ಮಠದ ಇಚ್ಛೆಯಿಂದ ಈತನು ಶಿಷ್ಯರ ಸಮುದಾಯವನ್ನು ನಿರ್ಮಾಣಗೊಳಿಸಿದ್ದನು. ಸನ್ಯಾಸಿಗೆ ಮಾತ್ರ ಈ ಪರಿಗ್ರಹದಿಂದ ವಿಕ್ಷೇಪ ನಿರ್ಮಾಣವಾಗುವುದು ।।೨೮।। ಆ ಸಮಯಕ್ಕೆ ಆತನು ಸರ್ವ ಪರಿವಾರವನ್ನು ತ್ಯಜಿಸಿಬಿಡುವನು. ಲಂಗೋಟಿಯನ್ನು ಒಗೆದುಬಿಟ್ಟು ಕೇವಲ ದಿಗಂಬರನಾಗಿ ತಲೆಯ ಮೇಲೆ ಕೊಡವನ್ನು ಹೊತ್ತು ತಾನು ಹಚ್ಚಿದ ಗಿಡಗಳಿಗೆ ನೀರು ಹಣಿಸುವನು ।।೨೯।। ಆ ಗಿಡಗಳ ಎಲೆಯನ್ನು ಯಾರಾದರೂ ಹರಿದರೆಂದರೆ ಆತನು ಅತಿ ಆಕ್ರೋಶದಿಂದ ಸಂಘರ್ಷ ಮಾಡುವನು. ಹೀಗೆ ಪರಿಗ್ರಹದ ಸಂಕಟವು ಬಹು ದೊಡ್ಡದಾಗಿರುವುದು. ಇದು ಎಲ್ಲರನ್ನೂ ದುಃಖ ಕೊಡುವುದು ।।೩೦।। ಬಹು ಪ್ರೀತಿಯಿಂದ ಯಾವ ಯಾವ ಪರಿಗ್ರಹವನ್ನು ಮಾಡುವನೋ, ಅವೆಲ್ಲವೂ ದುಃಖ ಮತ್ತು ಕಲಹ ಉತ್ಪನ್ನ ಮಾಡುವುವು. ಈ ಅನುಭವವು ಬಂದರೂಸಹ ಮಾನವರ ಮನದಲ್ಲಿ ವಿರಕ್ತಿಯು ಉತ್ಪನ್ನವಾಗುವುದಿಲ್ಲ ।।೩೧।। ಪರಿಗ್ರಹದ ಈ ಸ್ಥಿತಿಯನ್ನು ಕಂಡು ಜ್ಞಾನೀ ಜನರು ಎಲ್ಲದರಲ್ಲಿನ ಆಸಕ್ತಿಯನ್ನು ಒಗೆದುಬಿಟ್ಟು ಎಲ್ಲವನ್ನೂ ತ್ಯಾಗ ಮಾಡಿಬಿಡುವರು ।।೩೨।। ಈ ಸಂಸಾರವು ಮೂಲದಲ್ಲಿಯೇ ನಾಶಿವಂತವಾಗಿರುವುದು. ಮತ್ತು ಅನಿತ್ಯವಾಗಿರುವುದು. ಅಂದ ಮೇಲೆ ಅದರಲ್ಲಿಯ ಸಂಗ್ರಹವು ಹೇಗೆ ಶಾಶ್ವತವಾಗಿ ಇರಬೇಕೆಂಬ ವಿಚಾರವನ್ನು ಮಾಡಿ ಜ್ಞಾನಿಗಳು ಸರ್ವಸ್ವವನ್ನೂ ತ್ಯಜಿಸುವರು ।।೩೩।। ಎಲ್ಲ ಪರಿಗ್ರಹದಲ್ಲಿ ದೇಹ ಪರಿಗ್ರಹದ ಬಂಧನವು ಬಹು ಕಠಿಣವಾಗಿರುವುದು. ಇದನ್ನು ಮಿಥ್ಯೆಯಾಗಿದೆ ಎಂದು ವಿಚಾರದಿಂದ ತಿಳಿದು ಮುರಿದೊಗೆಯುವವನೇ ನಿಜವಾದ ಜ್ಞಾನಿಯಾಗಿರುವನು ।।೩೪।। ಒಮ್ಮೆ ದೇಹದ ಪರಿಗ್ರಹವು ಮಿಥ್ಯೆವಾಯಿತೆಂದರೆ ಸಾಕು, ಆ ಮನುಷ್ಯನು ಅನಂತ ಸುಖದ ಮನೆಯಲ್ಲಿ ಬರುವನು. ಆ ಸುಖದ ಗಣನೆಯೇ ಮಾಡಲು ಬರುವುದಿಲ್ಲ. ಅಂತಹ ನಿಜ ಸುಖಕ್ಕೆ ಆತನು ಪ್ರಾಪ್ತನಾಗುವನು ।।೩೫।। ಪರಿಗ್ರಹವು ಹೇಗೆ ದುಃಖಕರವಾಗಿದೆ ಎಂಬುದಕ್ಕೆ ನಾನು ನಿನಗೆ ಟಿಟ್ಟಿಭ ಪಕ್ಷಿಯು ನನಗೆ ಗುರುವಾದ ವೃತ್ತಾಂತವನ್ನು ಸಾದ್ಯಂತವಾಗಿ ಹೇಳುವೆನು ಎಂದು ಅವಧೂತನು ಉಪಹಾಸ್ಯದಿಂದ ಹೇಳಿದನು ।।೩೬।।

ತಂವ ರಾಜಾ ಮನೀ ಚಮತ್ಕಾರಲಾ । ಮ್ಹಣೇ ಮೀ ರಾಜ್ಯ ಪರಿಗ್ರಹೇ ಗುಂತಲಾ । ದೇಹಪರಿಗ್ರಹೇ ಬಂದೀ ಪಡಲಾ । ಪಾಹಿಜೇ ಕೇಲಾ ಹಾ ತ್ಯಾಗು ॥೩೭॥ ಐಸಾ ರಾಜಾ ಸವೈರಾಗ್ಯು । ಕರೂ ಪಾಹೇ ಸರ್ವತ್ಯಾಗು । ಶ್ರವಣೇ ಜಾಹಲಾ ತೋ ಸಭಾಗ್ಯು । ಹೋಯ ಯೋಗ್ಯು ನಿಜಜ್ಞಾನಾ ॥೩೮॥ ಕುರರೀ - ಗುರುತ್ವೇ ಜಾಣಾ । ಪರಿಗ್ರಹತ್ಯಾಗವಿವಂಚನಾ । ಆಣಾವಯಾ ಜೀ ಮನಾ । ಸಾದರ ಶ್ರವಣಾ ಕರೀತಸೇ ॥೩೯॥

ಸಾಮಿಷಂ ಕುರರಂ ಜಘ್ನುರ್ಬಲಿನೋಽನ್ಯೇ ನಿರಾಮಿಷಾಃ । ತದಾಮಿಷಂ ಪರಿತ್ಯಜ್ಯ ಸ ಸುಖಂ ಸಮವಿಂದತ॥೨॥

ಅರ್ಥ:- ಯಾವುದೇ ಮಾಂಸವು ಸಿಕ್ಕದ ಬಲಿಷ್ಠ ಗಿಡುಗಗಳ ಗುಂಪೊಂದು ಮಾಂಸವನ್ನು ಹಿಡಿದಿದ್ದ ದುರ್ಬಲವಾದ ಗಿಡುಗದ ಮೇಲೆ ಎರಗಿತು. ಆಗ ಪ್ರಾಣಾಭಯದಿಂದ ದುರ್ಬಲ ಪಕ್ಷಿಯು ತಾನು ಹಿಡಿದು ಮಾಂಸವನ್ನು ಬಿಟ್ಟುಕೊಟ್ಟು ನಿಜವಾದ ಸುಖವನ್ನು ಅನುಭವಿಸಿತು.

''ಕುರರ'' ಬೋಲಿಜೇ ಟಿಟವಾ । ಪಾವಲಾ ಆಮಿಷಕವಳು ಬರವಾ । ತೇಣೇ ತೇಥೇಂಚೀ ಭಕ್ಷಾವಾ। ತೋ ಲೋಭ - ಸ್ವಭಾವಾ ಠೇವಿಲಾ ॥೪೦॥ ತೇ ಆಮಿಷ ದೇಖೋನಿಯಾ ಫಾರ । ಬಳೀ ಜೇ ನಿರಾಮಿಷ ಕುರರ। ತೇ ಧಾಂವಿನ್ನಲೇ ಅತಿಸತ್ವರ । ಲಹಾನ ಥೋರ ಮಿಳೋನಿ ॥೪೧॥ ಹಿರೋನಿ ಘೇಊ ಪಾಹತೀ ಬಳೇ । ಹೇ ಜಾಣೋನಿಯಾ ತೋ ಪುಢೇ ಪಳೇ । ಪಳತಾ ದೇಖೋನಿ ಏಕವೇಳೇ । ತ್ವರೇ ತತ್ಕಾಳೇ ವೇಢಿಲಾ ॥೪೨॥ ತ್ಯಾ ಆಮಿಷಾಚಿಯಾ ಚಾಡಾ । ಥೋರ ಮಾಂಡಲಾ ಝುಗಡಾ । ಮಾರೂ ಲಾಗಲೇ ಫಡಫಡಾ । ಚಹೂಕಡಾ ನಿಷ್ಠುರ ॥೪೩॥ ಏಕ ಝುಡಪಿತೀ ಪಾಂಖೀ । ಏಕ ಚಪೇಟೇ ಹಾಣಿತೀ ನಖೀ । ಏಕ ವಿದಾರಿತೀ ಮುಖೀ । ಪರಮ ದುಃಖೀ ಹೋತಸೇ ॥೪೪॥ ಆಮಿಷ - ಕವಳೇ ಗುಂತಲೇ ಮುಖ । ಮಾರಿತಾ ದೇಊನ ಠಕೇ ಹಾಕ । ಸ್ವಸ್ತಾವಸ್ತ ಕರಿತಾ ದೇಖ । ಬೋಲಾವಯಾ ಮುಖ ತ್ಯಾ ನಾಹೀ ॥೪೫॥ ಹೇ ಮಾಝೇ ಸ್ವಜಾತೀ ಪಹಾ ಹೋ । ಸಾಂಡೋನಿಯಾ ಸುಹೃದಭಾವೋ । ಮಜ ಕಾ ಕರೂ ಆಲೇ ಅಪಾವೋ । ತೋ ಅಭಿಪ್ರಾವೋ ವಿವಂಚೀ ॥೪೬॥ ಮ್ಹಣೇ ಮಾಝಿಯಾ ದುಃಖಾಸೀ ಮೂಳ । ಮಜಪಾಸೀಲ ಆಮಿಷ - ಕವಳ। ತೋ ತ್ಯಜೋನಿಯಾ ತತ್ಕಾಳ। ಸುಖಿ ಸುನಿಶ್ಚಳ ಬೈಸಲಾ ॥೪೭॥ ಜೇಥ ಆಮಿಷ ಕವಳು ಪಡೇ । ತೇಥ ಕಲಹಾಚಾ ಗೋಂಧಳ ಮಾಂಡೇ । ಪರಸ್ಪರೇ ಪುಟತೀ ಮುಂಡೇ। ಠೇಂಚಿತೀ ತೋಂಡೇ ಯೇರಯೇರಾ ॥೪೮॥ ಆಮಿಷ ತ್ಯಜೋನಿಯಾ ಬೈಸಲಾ ದೇಖ। ತೋ ಪಾಹೇ ಕಲಹಾಚೇ ಕೌತುಕ । ಮೂಳ ಪರಿಗ್ರಹೋ ತೇಥೇ ದುಃಖ । ಪರಮ ಸುಖ ತ್ಯಾಗಿತಾ ॥೪೯॥

ಆಗ ರಾಜನು ಮನದಲ್ಲಿ ವಿಸ್ಮಯಗೊಂಡನು. ನಾನೂ ಕೂಡ ರಾಜ್ಯದ ಪರಿಗ್ರಹ ಮಾಡಿ ಸಿಕ್ಕಿಕೊಂಡಿರುವೆನು. ಮತ್ತು ದೇಹ ಪರಿಗ್ರಹದ ಬಂಧನದಲ್ಲಿ ಬಿದ್ದಿರುವೆನು. ಆದ್ದರಿಂದ ಮೊದಲು ಇವುಗಳ ತ್ಯಾಗವನ್ನು ಮಾಡಬೇಕೆಂದನು ॥೩೭॥ ಈ ಪ್ರಕಾರವಾಗಿ ರಾಜನು ವೈರಾಗ್ಯ ಯುಕ್ತನಾಗಿ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧನಾದನು. ಈತನು ಕಥಾಶ್ರವಣದಿಂದ ಭಾಗ್ಯವಂತನಾಗಿ ಆತ್ಮಜ್ಞಾನಿಯಾಗಲು ಯೋಗ್ಯನಾದನು ॥೩೮॥ ಟಿಟ್ಟಭ ಪಕ್ಷಿಯ ಗುರುತ್ವದಿಂದ ಪರಿಗ್ರಹದ ವಿಚಾರಗಳನ್ನು ಮಾಡುವುದಕ್ಕಾಗಿ ಆತನೀಗ ಚಿತ್ತ ಕೊಟ್ಟು ಕೇಳಲಾರಂಭಿಸಿದನು ॥೩೯॥

ಕುರರ ಎಂದರೆ ಗಿಡುಗ ಪಕ್ಷಿಯು. ಒಮ್ಮೆ ಯಾವ ಈ ಪಕ್ಷಿಗೆ ಭಾರೀ ಮಾಂಸದ ತುಕಡಿಯು ಸಿಕ್ಕಿತು. ಅದು ಕೂಡಲೇ ತಿನ್ನುವುದನ್ನು ಬಿಟ್ಟು ಲೋಭ ಬುದ್ಧಿಯಿಂದ ಹಾಗೆಯೇ ತನ್ನಲ್ಲಿಟ್ಟುಕೊಂಡಿತು ॥೪೦॥ ಆಗ ಆ ಭಾರೀ ಮಾಂಸದ ತುಕಡಿಯನ್ನು ಕಂಡು ಇತರ ಚಿಕ್ಕ ದೊಡ್ಡ ಗಿಡುಗ ಪಕ್ಷಿಗಳು ಬಹು ತ್ವರೆಯಿಂದ ಅಲ್ಲಿಗೆ ಧಾವಿಸುತ್ತ ಬಂದವು ॥೪೧॥ ಈಗ ಇವು ಬಲತ್ಕರಿಸಿ ಈ ನನ್ನ ತುಕಡಿಯನ್ನು ನನ್ನಿಂದ ಕಸಿದುಕೊಳ್ಳುವವೆಂದು ತಿಳಿದು ಅದು ಮುಂದ ಮುಂದಕ್ಕೆ ಓಡ ಹತ್ತಿತ್ತು. ಇದನ್ನು ಕಂಡು ಎಲ್ಲ ಪಕ್ಷಿಗಳು ಇದಕ್ಕೆ ಒಮ್ಮೆಲೆ ಸುತ್ತುವರೆದವು ॥೪೨॥ ಯಾವ ಈ ಆಮಿಷದ ಆಶೆಯಿಂದ ಅವರಲ್ಲಿ ಭಾರೀ ಕಲಹ ಆರಂಭವಾಯಿತು. ಇತರ ಪಕ್ಷಿಗಳು ಇದರ ಮೇಲೆ ಮುಗಿಬಿದ್ದವು. ಮತ್ತು ಅದಕ್ಕೆ ಫಡಫಡಾ ಬಡೆಯ ಹತ್ತಿದವು ॥೪೩॥ ಅದಕ್ಕೆ ಒಂದು ಪಕ್ಷಿಯು ರೆಕ್ಕೆಗಳಿಂದ ಝಾಡಿಸಿ ಹೊಡೆದರೆ ಇನ್ನೊಂದು ತನ್ನ ತೀಕ್ಷ್ಣವಾದ ಉಗುರುಗಳಿಂದ ಅದಕ್ಕೆ ತಿವಿಯ ಹತ್ತಿತು. ಮಗದೊಂದು ಪಕ್ಷಿಯು ತನ್ನ ಚುಂಚುವಿನಿಂದ ಚುಚ್ಚ ಹತ್ತಿತು. ಇದರಿಂದ ಇದಕ್ಕೆ ಅತಿಶಯವಾಗಿ ದುಃಖವಾಗ ಹತ್ತಿತು ॥೪೪॥ ಬಾಯಿಯಲ್ಲಿ ಮಾಂಸದ ತುಕಡಿ ಹಿಡಿದಿದ್ದರಿಂದ ಇತರರು ತನಗೆ ಹೊಡೆಯುತ್ತಿರುವುದನ್ನು ತಿಳಿಸಬೇಕೆಂದರೆ ಒದರಲಿಕ್ಕೆ ಬಾರದಾಗಿತ್ತು. ತನ್ನ ಬಾಯಿಯನ್ನು ಬಿಡಲುಬಾರದಾಗಿತ್ತು ॥೪೫॥ ತನ್ನ ಮನದಲ್ಲಿಯೇ ಹೀಗೆ ವಿಚಾರಿಸಹತ್ತಿತು. ನನ್ನ ಜಾತಿಯವರೇ ಆದ ಇವರು ಸ್ನೇಹ ಭಾವವನ್ನು ಬಿಟ್ಟು ನನಗೆ ಹೇಗೆ ಪೀಡಿಸುತ್ತಿರುವರಲ್ಲಾ? ಈಗೇನು ಮಾಡಬೇಕು?॥ ೪೬॥ ಓಹೋ, ನನ್ನಲ್ಲಿರುವ ಈ ಮಾಂಸದ ತುಕಡಿಯೇ ನನ್ನ ಈ ಸರ್ವ ದುಃಖಕ್ಕೆ ಕಾರಣವಾಗಿದೆ. ಹೀಗೆ ವಿಚಾರಿಸಿ ಅದು ಕೂಡಲೇ ತನ್ನ ಮುಖದಲ್ಲಿರುವ ಮಾಂಸದ ತುಕಡಿಯನ್ನು ಚೆಲ್ಲಿಬಿಟ್ಟಿತು. ಮತ್ತು ಸುಖವಾಗಿ ಒಂದು ಸ್ಥಳದಲ್ಲಿ ಸ್ವಸ್ಥವಾಗಿ ಕುಳಿತುಕೊಂಡಿತು ॥೪೭॥ ಆಗ ಬಿದ್ದ ಮಾಂಸದ ಸ್ಥಳದಲ್ಲಿ ಭಾರೀ ಕಲಹದ ಗೊಂದಲವೇ ನಿರ್ಮಾಣಗೊಂಡಿತು. ಆ ಎಲ್ಲ ಪಕ್ಷಿಗಳು ಕೂಡಿ ಒಬ್ಬರಿಗೊಬ್ಬರು ತಮ್ಮ ಚುಂಚುಗಳಿಂದ ತಲೆಗಳನ್ನು ಕುಕ್ಕಿ ಕುಕ್ಕಿ ಹೊಡೆಯಲಾರಂಭಿಸಿದವು ॥೪೮॥ ಆದರೆ ತನ್ನ ಮುಖದಿಂದ ಮಾಂಸದ ತುಕಡಿಯನ್ನು ಒಗೆದು ಶಾಂತವಾಗಿ ಕುಳಿತುಕೊಂಡ ಆ ಯಾವ ಗಿಡುಗ ಪಕ್ಷಿಯು ಆ ಕಲಹವನ್ನು ಕೌತುಕದಿಂದ ನೋಡುತ್ತಿತ್ತು. ಅದಕ್ಕಾಗಿಯೇ ಸಂಗ್ರಹ ಮಾಡುವುದರಿಂದ ದುಃಖವು ನಿರ್ಮಾಣವಾಗುವುದು. ಮತ್ತು ಅದರ ತ್ಯಾಗದಿಂದ ನಿಶ್ಚಿತವಾಗಿ ಸುಖದ ಪ್ರಾಪ್ತಿಯಾಗುವುದು॥೪೯॥

ಮಾಡ್ಯಾಗೋಪುರೇ ಧವಳಾರಾ । ಧನಧಾನ್ಯ ನಾನಾ ಅಂಬರಾ । ರತ್ನೇ ಪ್ರವಾಲ ಧನ - ಪುತ್ರ - ದಾರಾ । ಹಾ ಸಮುದಾಯೋ ಖರಾ ಪರಿಗ್ರಹೋ ।।೫೦।। ಯಾ ಸಮಸ್ತ ಪರಿಗ್ರಹಾಚೇ ಮೂಳ । ದೇಹಬುದ್ಧಿ ಗಾ ಕೇವಳ । ತೇಹೀ ಅಭಿಮಾನೇ ಸಬಳ । ಏವಂ ಸರ್ವಾಸ ಮೂಳ ಅಭಿಮಾನು ।।೫೧।। ತೋ ಅಭಿಮಾನು ಜೈ ಸಾಂಡೇ । ತೈ ಪ್ರಪಂಚಾಚೇ ಮೂಳ ಖಂಡೇ । ಮೂಳ ಛೇದಿಲ್ಯಾ ಜೇವಿ ಉಲಂಡೇ । ಅತಿ ಪ್ರಚಂಡೇ ತರುವರ ।।೫೨।। ಅಭಿಮಾನ ದೇಹ ಬುದ್ಧಿ ಜೀವನ । ದೇಹ ಬುದ್ಧಿ ಸಂಗಾಸ್ತವ ಗಹನ । ಉಭಯ ಸಂಗು ತೋ ಆಯತನ । ನಿವಾಸಸ್ಥಾನ ಪರಿಗ್ರಹೋ ।।೫೩।। ಏವಂ ಅನ್ಯೋನ್ಯ ಸಾಪೇಕ್ಷಕ । ಯೇರ ಯೇರಾ ಆವಶ್ಯಕ । ಯಾಚೇ ತ್ಯಾಗೀ ಪರಮ ಸುಖ । ಅತಿದುಃಖ ತೋ ಪರಿಗ್ರಹೋ ।।೫೪।। ಪರಿಗ್ರಹ ತ್ಯಾಗಾಚೇ ಮೂಲ ಜಾಣ । ಆಧೀ ತ್ಯಜಾವಾ ಅಭಿಮಾನ । ತೇಣೇವೀಣ ತ್ಯಾಗು ತೋ ವಿಟಂಬನ । ಕೇಲ್ಯಾ ಜಾಣ ಹೋಈಲ ।।೫೫।। ಅಭಿಮಾನ ಸಹಿತ ಸಕಳ ಸಾಂಡೇ । ತೈಪಡತೀ ಸುಖಾಚೇ ಪಾಯಮಾಂಡೇ । ತೇ ಸುಖ ನ ಬೋಲವೇ ತೋಂಡೇ । ಶಬ್ದ ಮುರಡೇ ಲಾಜೋನಿ ।।೫೬।। ಅಭಿಮಾನ ಜಾಲೂನ ವರ್ತನ । ಕೈಸೇ ರಾಯಾ ಮ್ಹಣಸೀ ಜಾಣ । ತೇ ಅರ್ಭಕ - ಗುರುತ್ವಲಕ್ಷಣ । ತುಜ ಸಂಪೂರ್ಣ ಸಾಂಗೇನ ।।೫೭।।

ನ ಮೇ ಮಾನಾಪಮಾನೌ ಸ್ತೋ ನ ಚಿಂತಾ ಗೇಹಪುತ್ರಿಣಾಮ್। ಆತ್ಮಕ್ರೀಡ ಆತ್ಮರತಿರ್ವಿಚರಾಮಿಹ ಬಾಲವತ್ ।।೩।।

ಅರ್ಥ:- ನನಗೆ ಮಾನ ಅಪಮಾನಗಳು ಏನೂ ಅನ್ನಿಸುವುದಿಲ್ಲ. ಮನೆ ಮಾರಿನ, ಪರಿವಾರದ ಯಾವ ಚಿಂತೆಯು ನನಗಿರುವುದಿಲ್ಲ. ನಾನು ನನ್ನ ಆತ್ಮತ್ವದಲ್ಲಿ ರಂಗುಗೊಂಡು, ನಾನು ನನ್ನಲ್ಲಿಯೇ ಕ್ರೀಡಿಸುವೆನು. ಈ ಶಿಕ್ಷಣವನ್ನು ನಾನು ಬಾಲಕನಿಂದ ಕಲಿತೆನು. ಆದ್ದರಿಂದ ನಾನು ಆ ಬಾಲಕನಂತೆ ಲೀಲೆಯಿಂದ ವರ್ತಿಸುವೆನು.

ಬಾಲ ಮಾರ್ಝೇ ತುರ್ಝೇ ನ ಮ್ಹಣೇ । ಉಂಚ ನೀಚ ಕಾಂಹಿ ನೇಣೇ । ಯಾಲಾಗೀ ಮಾನಾಪಮಾನ ತೇಣೇ। ಸುಖೇ ಸಾಹಣೇ ಸರ್ವಥಾ ।।೫೮।। ತಿಮಾಸಾಂಚೇನಿ ಬಾಳಕೇ । ಮಾನು ಕೋಣ ಹೇ ನೋಳಖೇ । ಅಪಮಾನು ತೋಹೀ ನ ದೇಖೇ । ಆಪುಲೇನಿ ಸುಖೇ ಕ್ರೀಡತ ।।೫೯।। ದುಜೇಪಣಾತೇ ನಾತಳೇ । ಬಾಲಕ ಆಪುಲಿಯಾಚಿ ಲೀಳೇ । ಆಪ ಆಪಣೆಯಾಶೀಚ ಖೇಳೇ । ಆಪುಲೇನಿ ಮೇಳೆ ಆಪಣ ।।೬೦।। ದೇಹಗೇಹಾಂಚಿ ಚಿಂತಾ । ಬಾಳಾಸಿ ನಾತಳೇ ಸರ್ವಥಾ । ಸ್ವಭಾವೇಚಿ ನಿಶ್ಚಿಂತತಾ । ಚಿಂತಾಕಥಾ ತಯಾ ನಾಹೀ ।।೬೧।।

ಮಹಡಿ ಮನೆ, ಗೋಪುರಗಳು, ವಾಢೇಗಳು, ಧನಧಾನ್ಯಗಳು, ನಾನಾ ಪ್ರಕಾರದ ವಸ್ತ್ರಗಳು, ರತ್ನಗಳು, ಹವಳಗಳು, ಸಂಪತ್ತು, ಹೆಂಡತಿ, ಮಕ್ಕಳು ಇತ್ಯಾದಿಗಳ ಸಂಗ್ರಹವೇ ನಿಜವಾದ ಪರಿಗ್ರಹವಾಗಿರುವುದು ।।೫೦।। ಈ ಎಲ್ಲ ಪರಿಗ್ರಹದ ಮೂಲವನ್ನು ಶೋಧಿಸಿ ನೋಡಿದರೆ ಇದಕ್ಕೆ ದೇಹಬುದ್ಧಿಯೇ ಕಾರಣವಾಗಿರುವುದು. ಅಂದರೆ ಈ ದೇಹಕ್ಕೆ "ನಾನು" ಎಂದು ತಿಳಿಯುವುದು. ಅಭಿಮಾನದಿಂದ ಈ ಭಾವನೆಯು ಹೆಚ್ಚುತ್ತ ಬೆಳೆಯುವುದು. ಸಾರಾಂಶವೇನೆಂದರೆ ಅಭಿಮಾನವೇ ಸರ್ವಕ್ಕೂ ಮೂಲವಾಗಿರುವುದು ।।೫೧।। ಈ ಅಭಿಮಾನವನ್ನು ನಾವು ಎಂದು ಬಿಟ್ಟು ಬಿಡುವೆವೋ, ಆಗ ಸಂಸಾರದ ಮೂಲವು ಮುರಿದು ಹೋಗುವುದು. ಮತ್ತು ಮೂಲವಾದ ಬೇರು ಕಿತ್ತೆಂದರೆ ಸಂಪೂರ್ಣ ಪ್ರಚಂಡ ವೃಕ್ಷವು ಉರುಳಿ ಬೀಳುವುದು. ಅದರಂತೆ ಸಂಸಾರದ ನಾಶವಾಗುವುದು ।।೫೨।।ಅಭಿಮಾನವು ದೇಹಬುದ್ಧಿಯ ಜೀವನವಾಗಿರುವುದು. ಆಸಕ್ತಿಯಿಂದಲೇ ದೇಹಬುದ್ಧಿಯು ಬೆಳೆಯುತ್ತ ಸಾಗುವುದು. ಅಭಿಮಾನ ಮತ್ತು ದೇಹಬುದ್ಧಿ ಇವೇ ದೇಹದ ಪರಿಗ್ರಹಕ್ಕೆ ಮೂಲವಾಗಿರುವುವು ।।೫೩।। ಒಟ್ಟಿನಲ್ಲಿ ಇವು ಪರಸ್ಪರರ ಅಪೇಕ್ಷೆಯಿಂದ ಪರಸ್ಪರರಿಗೆ ಆವಶ್ಯಕವಾಗಿರುವುವು. ಇವುಗಳ ತ್ಯಾಗವನ್ನು ಮಾಡುವುದರಿಂದ ಪರಮ ಸುಖವು ಪ್ರಾಪ್ತವಾಗುವುದು. ಇವುಗಳ ಪರಿಗ್ರಹವನ್ನು ಮಾಡುವುದರಿಂದ ಪರಮ ದುಃಖವು ಬೆಳೆಯುವುದು ।।೫೪ ।। ಪರಿಗ್ರಹ ತ್ಯಾಗದ ಮೂಲವೆಂದರೆ ಅಭಿಮಾನವಾಗಿರುವುದು. ಇದನ್ನು ಮೊದಲು ಒಗೆದು ಬಿಡಬೇಕು. ಹೀಗೇ ಮಾಡದೇ ತ್ಯಾಗವನ್ನು ಮಾಡಿದರೆಂದರೆ ಅದು ಕೇವಲ ಹಾಸ್ಯಾಸ್ಪದವಾಗುವುದು ।।೫೫।। ಅಭಿಮಾನದೊಂದಿಗೆ ಎಲ್ಲವನ್ನೂ ಬಿಟ್ಟಾಗ ಮಾತ್ರ ಸುಖದ ಸನ್ಮಾನ ಹಾಸಿಗೆ ಪ್ರಾಪ್ತವಾಗುವುದು. ಆ ಸುಖದ ವರ್ಣನೆಯನ್ನು ಮಾಡಲು ಶಬ್ದಗಳು ನಾಚಿಕೆಗೊಳ್ಳುವುವು ।।೫೬।। ಅಭಿಮಾನವನ್ನು ಬಿಟ್ಟು ಹೇಗೆ ನಾವು ವರ್ತಿಸಬೇಕೆಂದು ಹೇ ರಾಜನೇ, ನೀನು ವಿಚಾರಿಸಬಹುದು, ಅದಕ್ಕಾಗಿನಾನು ಬಾಲಕನನ್ನು ಗುರುವನ್ನಾಗಿ ಮಾಡಿಕೊಂಡು ಏನನ್ನೂ ಕಲಿತುಕೊಂಡೆನೆಂಬ ಅದರ ಲಕ್ಷಣಗಳನ್ನು ಸಂಪೂರ್ಣವಾಗಿ ಹೇಳುವೆ, ನೀನೀಗ ಅದನ್ನು ಕೇಳು ।।೫೭।।

ಚಿಕ್ಕಬಾಲಕನು ಇದು ನನ್ನದು ಅದು ನಿನ್ನದು ಎಂದು ಎಂದಿಗೂ ಅನ್ನುವುದಿಲ್ಲ. ಉಚ್ಚನೀಚವೆಂಬ ಭೇದಭಾವವು ಅದಕ್ಕೆ ಗೊತ್ತೇ ಇರುವುದಿಲ್ಲ. ಆದ್ದರಿಂದ ಅದು ಯಾವತ್ತೂ ಮಾನ ಅಪಮಾನಗಳನ್ನು ಬಹು ಆನಂದದಿಂದ ನಿತ್ಯವೂ ಸಹಿಸಿಕೊಳ್ಳುವುದು ।।೫೮।। ಮೂರು ತಿಂಗಳ ಕೂಸಿಗೆ ಮಾನವೆಂದರೆ ಏನೆಂಬುದು ಅದಕ್ಕೆ ತಿಳಿಯದು. ಅಪಮಾನವನ್ನು ಏನೂ ಕಾಣದು. ಅದು ತನ್ನ ಆನಂದದಲ್ಲಿಯೇ ಆಡುತ್ತಿರುವುದು ।।೫೯।। ಭಿನ್ನಭಾವವು ಅದು ಏನೊಂದೂ ಅರಿಯದು. ಆ ಕೂಸು ತನ್ನದೇ ಆದ ಲೀಲೆಯಿಂದ ತನ್ನಲ್ಲಿ ಆಡುತ್ತಿರುವುದು. ತನ್ನಲ್ಲಿ ತಾನೇ ಮನೋರಂಜನೆಯಿಂದ ಉಲ್ಲಾಸಗೊಳ್ಳುವುದು ।।೬೦।। ಅದಕ್ಕೆ ಮನೆ ಮಾರಿನ, ತನ್ನ ಶರೀರದ ಯಾವ ಚಿಂತೆಯೂ ಇರುವುದಿಲ್ಲ. ಅದು ಸ್ವಭಾವದಿಂದಲೇ ನಿಶ್ಚಿಂತವಾಗಿರುವುದು. ಚಿಂತೆಯ ಹೆಸರೂ ಕೂಡ ಅದಕ್ಕೆ ತಿಳಿದಿರುವುದಿಲ್ಲ ।।೬೧।।

ನ ದೇಖತಾ ದುಜೀ ಸ್ಥಿತೀ। ಬಾಳಕಾ ಆಪುಲೀ ಆಪಣಿಯಾ ಪ್ರೀತೀ । ಆಪುಲೀ ಆಪಣಿಯಾ ಅತಿರತೀ। ತೈಸೀ ಗತೀ ಯೋಗಿಯಾ ॥೬೨॥ ಯೋಗಿಯಾಸೀ ಪ್ರಪಂಚಾಚೇ ಭಾನ । ಸತ್ಯತ್ವೇ ನಾಹೀ ಜಾಣ । ಯಾಲಾಗೀ ಮಾನಾಪಮಾನ । ದೊನ್ಹೀ ಸಮಾನ ತಯಾಸೀ ॥೬೩॥ ಚಿತ್ರೀಚೇನಿ ಸಾಪೇ ಖಾದಲಾ । ತೋ ಚಿತ್ರೀಚೇನಿ ಅಮೃತೇ ವಾಂಚಲಾ। ತೇವೀ ಜನ್ಮಾಮರಣ್ಯಾ ಮುಕಲಾ । ನಿಶ್ಚಳ ಠೇಲಾ ನಿರ್ದ್ವಂದ್ವೇ ॥೬೪॥ ಗೃಹದಾರಾಪುತ್ರ ಚಿಂತಾ । ಹೇ ಸಮೂಳ ಮಿಥ್ಯಾ ವಾರ್ತಾ । ಸ್ವದೇಹೋ ಸತ್ಯತ್ವೇ ಅಸತಾ । ತರೀ ಕರೂ ಲಾಹತಾ ಚಿಂತೇತೇ ॥೬೫॥ ಭವಮೂಳ ಕಲ್ಪನಾ ಜಾಣ । ತೇ ಕಲ್ಪನಾ ಮನಾ ಆಧೀನ । ತೇ ಮನ ಸ್ವರೂಪೀ ಜಾಹಲೀಯಾ ಲೀನ । ತೇವ್ಹಾ ವಸ್ತು - ಚಿದ್ಘನ ಸವತ್ರ ॥೬೬॥ ತೇಣೇ ಸ್ವರೂಪಾನುಸಂಧಾನೇ । ಸುಖೇ ಕ್ರೀಡತು ಚಿತ್ಘನೇ । ಕ್ರೀಡಾ ದೈವಯೋಗೇ ಕರಣೇ। ದೇಹಾಭಿಮಾನೇ ವಿರಹಿತ ॥೬೭॥ ಪಾವೋನಿ ನಿಜಸುಖಪ್ರಾಪ್ತೀ । ಮನಾಆದಿ ಇಂದ್ರಿಯೇ ಉಪರಮತೀ। ಅಣುಭರೀ ಸ್ಫುರೇನಾ ವೃತ್ತೀ । ''ಸಮಾಧಿ'' ಬೋಲತೀ ಯಾ ನಾಂವ ॥೬೮॥ ತೇಚಿ ಸ್ವರೂಪೀ ಠೇವೂನಿ ಮನ। ಬಾಹ್ಯ ಸ್ಫೂರ್ತೀಚೇ ಸ್ಫುರೇ ಭಾನ । ತೇ ದಶಾ ಗಾ ''ವ್ಯುತ್ಥಾನ'' । ಸಾಧುಜನ ಬೋಲತೀ ॥೬೯॥ ಉಂಬರ್‍ಯಾವರೀ ಠೇವಿಲಾ ದಿವಾ । ತೋ ಜೇವೀ ದೇಖೇ ದೋಹೀ ಸವಾ। ತೈಸೀ ವ್ಯುತ್ಥಾನದಶಾ ಜೀವ ಭಾವಾ । ಉಭಯ ಸ್ವಭಾವಾ ದೇಖಣೇ॥೭೦॥ ಲವಣ - ಜಳಾ ಸಮರಸತಾ । ತೇವೀ ಸ್ವರೂಪೀ ವಿರವೂನಿ ಚಿತ್ತಾ । ಸಮಾಧಿವ್ಯುತ್ಥಾನಾ ಹಾಣೀ ಲಾಥಾ । ನಿಜೇ ನಿಜಸ್ವರೂಪತಾ ಪಾವೋನಿ ॥೭೧॥ ತ್ಯಾಸೀ ಕೋಣಾಚಾ ಮಾನಾಪಮಾನ । ಗೃಹ ಪುತ್ರಚಿಂತಾ ಕರೀಕೋಣ । ಸ್ವರೂಪೀ ಹಾರಪಲೇ ಮನ । ನಿಜಸಮಾಧಾನ ಪಾವಲಾ ॥೭೨॥ ಮನೇವೀಣ ಜೇ ವಿಹರಣ । ತೇ ಬಾಲಕಾಚ್ಯಾ ಐಸೇ ಜಾಣ। ದೈವಯೋಗೇ ಚಲನವಲನ । ವೃತ್ತಿ ಶೂನ್ಯ ವರ್ತತ ॥೭೩॥

ದ್ವಾವೇವ ಚಿಂತಯಾ ಮುಕ್ತೋ ಪರಮಾನಂದ ಆಪ್ಲುತೌ।
ಯೋ ವಿಮುಗ್ಧೋ ಜಡೋ ಬಾಲೋ ಯೋ ಗುಣೇಭ್ಯಃ ಪರಂ ಗತಃ॥ ೪॥

ಅರ್ಥ:- ಈ ಜಗತ್ತಿನಲ್ಲಿ ಎರಡು ಪ್ರಕಾರದ ವ್ಯಕ್ತಿಗಳು ನಿಶ್ಚಿಂತರಾಗಿ ಮತ್ತು ಪರಮಾನಂದದಲ್ಲಿ ಮಗ್ನರಾಗಿರುವರು. ಒಬ್ಬನೆಂದರೆ ಭೋಳಾ ಬಾಲಕನು, ಇನ್ನೊಬ್ಬ ಯಾವ ಪುರುಷನು ಗುಣಾತೀತನಾಗಿರುವನು.

ಘೋರ ಚಿಂತೇಚಾ ಆವರ್ತ । ಜೇಥ ಬ್ರಹ್ಮಾದಿಕ ಬುಡತ । ತೇ ಆವರ್ತಿ ದೋಘೇ ಮುಕ್ತ । ಪರಿಸ ನಿಶ್ಚಿತ ಯದುವೀರಾ ॥೭೪॥

ಭಿನ್ನ ಭಾವವನ್ನು ಅದು ಕಾಣದ್ದರಿಂದ ತನ್ನಲ್ಲಿಯೇ ಪ್ರೇಮವನ್ನು ಮಾಡುವುದು. ಯೋಗಿಗಳ ಸ್ಥಿತಿಯೂ ಸಹ ಹೀಗೆಯೇ ಇರುವುದು ॥೬೨॥ ಪ್ರಪಂಚವು ಸತ್ಯವಾಗಿ ಇರದೇ ಭಗವಂತನು ಮಾತ್ರ ಸತ್ಯವಾಗಿರುವನೆಂಬ ತಿಳಿವಳಿಕೆಯು ಯೋಗಿಗಳಿಗೆ ಇರುವುದು. ಆದ್ದರಿಂದ ಈತನಿಗೆ ಮಾನ, ಅಪಮಾನ ಎರಡೂ ಸಮವಾಗಿ ತೋರುವುವು ॥೬೩॥ ಚಿತ್ರದಲ್ಲಿನ ಸರ್ಪವೊಂದು ಒಬ್ಬನಿಗೆ ಕಚ್ಚಿದಾಗ ಚಿತ್ರದಲ್ಲಿನ ಅಮೃತದಿಂದ ಅವನು ಬದುಕಿಕೊಂಡನಂತೆ. ಯೋಗಿಯು ಜನ್ಮ ಮೃತ್ಯುರಹಿತನಾಗಿ ಆ ಯಾವ ದ್ವಂದ್ವದಿಂದ ಮುಕ್ತನಾಗಿ ನಿಶ್ಚಲನಾಗಿರುವನು ॥೬೪॥ ಮನೆ ಮಾರಿನ ಸ್ತ್ರೀಪುತ್ರರ ಈ ಎಲ್ಲ ಚಿಂತೆಗಳನ್ನು ಧರಿಸುವುದು ಸರ್ವಥಾ ಮಿಥ್ಯೆಯಾಗಿರುವುದು. ಏಕೆಂದರೆ ತನ್ನ ಯಾವ ಈದೇಹವೇ ಸತ್ಯವಿಲ್ಲದಿರುವಾಗ ಚಿಂತೆಯನ್ನು ಹೊರುವುದು ಸರ್ವಥಾ ವ್ಯರ್ಥವಲ್ಲವೇ? ॥೬೫॥ ಸಂಸಾರದ ಮೂಲವು ಕಲ್ಪನೆಯಾಗಿರುವುದು. ಈ ಕಲ್ಪನೆಯು ಮನಸ್ಸಿನ ಆಧೀನವಾಗಿರುವುದು. ಈ ಮನಸ್ಸೇ ಸ್ವ ಸ್ವರೂಪದಲ್ಲಿ ಲೀನವಾಯಿತೆಂದರೆ ಎಲ್ಲವೂ ಸತ್ ಚಿತ್ ಆನಂದರೂಪವಾಗಿ ದರ್ಶನವಾಗುವುದು ॥೬೬॥ ಆ ಯಾವ ಸ್ವರೂಪದ ಅನುಸಂಧಾನದಿಂದ ಆತನು ಆನಂದ ಚೈತನ್ಯದಲ್ಲಿ ಆನಂದವಾಗಿ ಕ್ರೀಡಿಸುತ್ತಿರುವನು. ದೇಹದ ಅಭಿಮಾನವನ್ನು ಒಗೆದು ದೈವಯೋಗದಿಂದ ಯಾವುದು ದೊರೆಯುವುದೋ, ಅದನ್ನು ಆನಂದದಿಂದ ಸ್ವೀಕರಿಸುತ್ತಿರುವನು ॥೬೭॥ ಈ ಪ್ರಕಾರವಾಗಿ ಆತ್ಮ ಸುಖದ ಪ್ರಾಪ್ತಿಯಾಗಲು, ಮನಸಹಿತವಾಗಿ ಸರ್ವ ಇಂದ್ರಿಯಗಳು ಶಾಂತವಾಗುವುವು. ವೃತ್ತಿಯು ಸ್ವಲ್ಪವೂ ಕೂಡ ಸ್ಫುರಣವಾಗುವುದಿಲ್ಲ. ಈಸ್ಥಿತಿಗೆ ಸಮಾಧಿ ಎಂದು ಹೆಸರುಂಟು ॥೬೮॥ ಅದೇ ಸ್ವರೂಪದಲ್ಲಿ ಮನವಿಟ್ಟು ಬಾಹ್ಯ ಸ್ಫೂರ್ತಿಯ ಭಾನವು ಸ್ಫುರಣವಾಗುವ ಸ್ಥಿತಿಗೆ ಸಾಧು ಜನರು ''ವ್ಯುತ್ಥಾನ'' ಎಂದು ಕರೆಯುವರು ॥೬೯॥ ಹೊಸ್ತಲಿನ ಮೇಲೆ ದೀಪವಿಡಲು ಅದರ ಪ್ರಕಾಶವು ಒಳಹೊರಗೆ ಎರಡೂ ಕಡೆಯಲ್ಲಿ ಬೀಳುವುದು. ಅದರಂತೆ ಈ ವ್ಯುತ್ಥಾನ ಸ್ಥಿತಿಯು ಜೀವ ಮತ್ತು ಆತ್ಮಾ ಈ ಎರಡಕ್ಕೂ ನೋಡುವಂತಹದ್ದಾಗಿದೆ ॥೭೦॥ ಉಪ್ಪು ನೀರಲ್ಲಿ ಬಿದ್ದು ಕರಗಿ ನೀರಿನಲ್ಲಿ ಏಕರೂಪವಾಗುವುದು. ಅದರಂತೆ ಮನವನ್ನು ಆತ್ಮಸ್ವರೂಪದಲ್ಲಿ ಸಮರಸ ಮಾಡಿ ಸ್ವರೂಪದಲ್ಲಿ ತಾದಾತ್ಮ್ಯವನ್ನು ಹೊಂದಿ ಯೋಗಿಯು ಸಮಾಧೀ ಮತ್ತು ವ್ಯುತ್ಥಾನ ಈ ಎರಡೂ ಅವಸ್ಥೆಗಳಿಗೆ ತುಚ್ಛವೆಂದು ತಿಳಿಯುವನು.॥೭೧॥ ಅಂದ ಮೇಲೆ ಈತನಿಗೆ ಮಾನ ಅಪಮಾನಗಳು ಎಲ್ಲಿಯವು. ಮನೆಮಾರು ಸ್ತ್ರೀಪುತ್ರರು ಇತ್ಯಾದಿಗಳ ಚಿಂತೆ ಎಲ್ಲಿಯದು? ಆತ್ಮಸ್ವರೂಪದಲ್ಲಿ ಮನವು ವಿಲೀನಗೊಂಡಿರುವುದರಿಂದ ಆತನು ಆತ್ಮಾನಂದಕ್ಕೆ ಪ್ರಾಪ್ತನಾಗಿರುವನು ॥೭೨॥ ಮನವಿಲ್ಲದೆಯೇ ಚೇಷ್ಟೆಗಳು ಆ ಯಾವ ಚಿಕ್ಕ ಬಾಲಕನಿಂದಾಗುವುವು. ದೈವಯೋಗದಿಂದಾಗುವ ಕರ್ಮಗಳು ಶೂನ್ಯ ವೃತ್ತಿಯಿಂದ ಆಗುತ್ತಿರುವುವು ॥ ೭೩॥

ಚಿಂತೆ ಎಂಬ ತಿರುಗುಣಿಯು ಬಹುಭಯಂಕರವಾಗಿರುವುದು. ಇದರಲ್ಲಿ ಬ್ರಹ್ಮದೇವರಂತಹವರೂ ಸಹ ಮುಳುಗಿ ಬಿಡುವರು. ಆದರೆ ಈ ತಿರುಗುಣಿಯಿಂದ ಬಾಲಕ ಮತ್ತು ಯೋಗಿ ಈ ಇಬ್ಬರೇ ಬದುಕಿ ಉಳಿಯುವರು ॥೭೪॥

ದೋಘಾ ನಾಹೀ ದ್ವೈತಭಾನ । ದೋಘೇ ನೇಣತೀ ಮಾನಾಪಮಾನ । ದೋಘೇ ಸುಖೇ ಸುಖಸಂಪನ್ನ । ದೋಘೇ ಮನೇ ವಿಣ ವರ್ತತೀ ॥೭೫॥ ಏಕಾಸೀ ಪುಢೇ ಭೇಟೇಲ ದುಃಖ । ದುಜೇನಿ ಜಿಂತಿಲೇ ಸುಖದುಃಖ । ಏಕಾಸೀ ಮುಗ್ಧತೇಚೇಸುಖ । ದುಜ್ಯಾ ದೇಖ ನಿಜಜ್ಞಾನ ॥೭೬॥ ಪಾಹತಾ ಬಾಳಕಾಚೇ ಠಾಯೀ । ಗುಪ್ತವಾಸನಾ ಅಸೇ ದೇಹಿ । ತೇ ಅಂಕುರೀಜೋನಿ ಪಾಹೀ । ಅವಶ್ಯ ಅಪಾಯೀ ಘಾಲೀಲ ॥೭೭॥ ತೈಸಾ ನವ್ಹೇ ಯೋಗಿಯಾ ಗುಣಾತೀತ । ಜೋ ಪೂರ್ಣಾನಂದೇ ಪೂರ್ಣಭರಿತ । ತ್ಯಾಸಿ ಸುಖ ದುಃಖಾಚೀ ಮಾತ । ನಾಹೀ ಜಗಾಂತ ಸರ್ವಥಾ ॥೭೮॥ ದೇಹಿ ದಿಸೇ ಜೀವ ವರ್ತತ । ತೋ ಕೇವೀ ಝಾಲಾ ಗುಣಾತೀತ । ಐಸೇ ಮ್ಹಣಸೀ ತೋ ವೃತ್ತಾಂತ । ಐಕ ಸಾಧ್ಯಂತ ಸಾಂಗೇನ ॥೭೯॥ ಸಾಧಕೇ ಸೇವೂನಿ ಸಾಧುಜನ । ವಾಢವಿಲಾ ಸತ್ತ್ವಗುಣ । ವಾಡಲೇನಿ ಸತ್ತ್ವೇಜಾಣ । ಜ್ಞಾನಸಾಧನ ಸಾಧಿಲೇ ॥೮೦॥ ಸಾಧಿಲೇನಿ ಜ್ಞಾನಸಾಧನೇ । ಭೇದೀ ರಜತಮಾಂಚೀ ವಿಂದಾನೇ । ಜೇ ಮೋಹಮಮತೇಚೀ ದಾರುಣೇ । ಉಭಯ ಭೋಗಜನ್ಯೇ ಕರ್ಮತಾ ॥೮೧॥ ಏವಂ ವಾಢಲೇನಿ ಸತ್ತ್ವೋತ್ತಮೇ । ನಿರ್ದಳಲೀ ರಜತಮೇ । ಸತ್ತ್ವ ಏಕಲೇಪಣೇ ನಿಮೇ । ಸ್ವಯೇ ಉಪಶಮೇ ತೇ ಜಾಣಾ ॥೮೨॥ ಜಂವ ಜಂವ ಕಾಷ್ಠಸಂಭಾರ ಅಸೇ । ತಂವ ತಂವ ಅಗ್ನಿ ಜಾಳೀ ಉಲ್ಹಾಸೇ । ಸರಲೇನಿ ಕಾಷ್ಠಲೇಶೇ । ಅಗ್ನಿ ಪ್ರವೇಶೇ ನಿಜತೇಜೀ ॥೮೩॥ ಐಸೀ ಜಿಣೋನಿ ಗುಣಾವಸ್ಥಾ । ಯೋಗೀ ಪಾವಲಾ ಗುಣಾತೀತತಾ । ತ್ಯಾಸಿ ನ ಬಾಧೀ ಭವವ್ಯಥಾ । ಪ್ರಲಯ ಕಲ್ಪತಾ ಝಾಲಿಯಾ ॥೮೪॥ ಜ್ಯಾ ಸುಖಾಸೀ ನಾಹೀ ಅಂತ । ತೇ ಸುಖ ಸ್ವರೂಪೇ ಝಾಲೇ ಪ್ರಾಪ್ತ । ತೇ ದೇಹೀ ವರ್ತತಾದೇಹಾತೀತ । ಚಿಂತಾ ಆವರ್ತ ತ್ಯಾ ನಾಹೀ ॥೮೫॥ ಏಕಾಕೀ ಜಾಹಲ್ಯಾವೀಣ ತತ್ತ್ವತಾ । ತೇ ಅವಸ್ಥಾನ ಚಢೇ ಹಾತಾ । ಯೇಚಿವಿಶೀ ನೃಪನಾಥಾ । ''ಕುಮಾರೀ'' ಗುರುಕಥಾ ಸಾಂಗೇನ ॥೮೬॥

ಕ್ವಚಿತ್ಕುಮಾರೀತ್ವಾತ್ಮಾನಂ ವೃಣಾನಾನ್ಗೃಹಮಾಗತಾನ್ ।
ಸ್ವಯಂ ತಾನರ್ಹಯಾಮಾಸ ಕ್ವಾಪಿ ಯಾತೇಷು ಬಂಧುಷು ॥೮॥

ಅರ್ಥ:- ಒಬ್ಬ ಕುಮಾರಿಯ ಮನೆಗೆ ಆಕೆಯನ್ನು ಮದುವೆ ಮಾಡಿಕೊಳ್ಳುವ ಉದ್ದೇಶದಿಂದ ಕೆಲವುಜನರು ಬಂದಿದ್ದರು. ಆ ದಿನ ಮನೆಯ ಎಲ್ಲರೂ ಹೊರಗೆ ಹೋಗಿದ್ದರು. ಆದ್ದರಿಂದ ಆಕೆಯು ಸ್ವತಃ ಅವರ ಆದರ ಸತ್ಕಾರಗಳನ್ನು ಮಾಡಿದಳು.

ಈ ಇಬ್ಬರಿಗೆ ದ್ವೈತದ ಎಚ್ಚರವಿರುವುದಿಲ್ಲ. ಇಬ್ಬರೂ ಮಾನ ಅಪಮಾನಗಳನ್ನು ಅರಿಯರು. ಇಬ್ಬರೂ ಪೂರ್ಣವಾಗಿ ಸುಖಸಂಪನ್ನರಾಗಿರುವರು. ಇಬ್ಬರೂ ಮನವಿಲ್ಲದೇ ಕರ್ಮಗಳನ್ನು ಮಾಡುತ್ತಿರುವರು॥೭೫॥ ಇವರಲ್ಲಿ ಒಬ್ಬನಿಗೆ ಮುಂದೆ ದುಃಖವು ಪ್ರಾಪ್ತವಾಗುವುದು. ಇನ್ನೊಬ್ಬನು ಸುಖದುಃಖಗಳೆರಡನ್ನೂ ಜಯಿಸಿರುವನು. ಒಬ್ಬನಿಗೆ ತಿಳಿಯದೇ ಇರುವ ಸುಖವಿರುವುದು. ಇನ್ನೊಬ್ಬನಿಗೆ ಆತ್ಮಜ್ಞಾನದ ಸುಖವಿರುವುದು॥೭೬॥ ಬಾಲಕನ ಮನದಲ್ಲಿ ಗುಪ್ತರೂಪದಿಂದ ವಾಸನೆಗಳ ಬೀಜವಿರುವುದು. ಮುಂದೆ ಈಬೀಜಗಳಿಗೆ ಅಂಕುರಗಳು ಹುಟ್ಟಿ ಈ ವಾಸನೆಗಳೇ ಇವನಿಗೆ ಅಪಾಯಗಳಿಗೆ ತಳ್ಳಲ್ಪಡುವುವು॥೭೭॥ ಈ ಪ್ರಕಾರವಾಗಿ ಗುಣಾತೀತ ಯೋಗಿಯು ಇರುವುದಿಲ್ಲ. ಆತನ ವಾಸನೆರೂಪ ಬೀಜವು ಜ್ಞಾನಾಗ್ನಿಯಿಂದ ಸುಟ್ಟುಹೋಗಿರುವುದು. ಆದ್ದರಿಂದ ಆತನ ಹೃದಯವು ಆನಂದದಿಂದ ಪರಿಪೂರ್ಣವಾಗಿ ತುಂಬಿತುಳುಕುತ್ತಿರುವುದು. ಆತನಿಗೆ ಜಗತ್ತಿನ ಸುಖ ದುಃಖಗಳ ವಾರ್ತೆಯೂ ಇರುವುದಿಲ್ಲ॥೭೮॥ ದೇಹದಲ್ಲಿ ಜೀವವು ವರ್ತಿಸುತ್ತಿರುವುದು ತೋರುವುದು. ಇಂತಹ ಅವ್ಯವಸ್ಥೆಯಲ್ಲಿ ಆತನು ಗುಣಾತೀತ ಹೇಗಾಗುವನು? ಇದರ ವೃತ್ತಾಂತವನ್ನು ಹೇಳುವೆನು, ಕೇಳು॥೭೯॥ ಮುಮುಕ್ಷು ಆದವನು ಸತ್ಪುರುಷರ ಸೇವೆಯನ್ನು ಮಾಡುತ್ತ ತನ್ನ ಸತ್ವ ಗುಣವನ್ನು ಬೆಳೆಯಿಸುತ್ತಿರುವನು. ಈ ಯಾವ ಸತ್ವ ಗುಣದಿಂದ ಜ್ಞಾನದ ಸಾಧನೆಯು ಆತನ ಕೈ ಸೇರುವುದು.॥೮೦॥ ಜ್ಞಾನ ಸಾಧನೆಯು ಪ್ರಾಪ್ತವಾಯಿತೆಂದರೆ ಆತನು ಕರ್ಮಠದಲ್ಲಿರುವ ಐಹಿಕ, ಪಾರಲೌಕಿಕ ವಿಷಯಗಳ ರಜೋಗುಣ, ತಮೋಗುಣಗಳಿಂದಾಗುವ ಮೋಹ ಮಮತೆಗಳ ಕಾರ್ಯಗಳನ್ನು ಮುರಿದುಬಿಡುವನು॥೮೧॥ ಈ ಪ್ರಕಾರವಾಗಿ ಉತ್ತಮ ಸತ್ವಗುಣವು ಬೆಳೆಯಿತೆಂದರೆ ರಜೋಗುಣ ಮತ್ತು ತಮೋಗುಣಗಳುನಾಶವಾಗುವುವು. ಕೇವಲ ಸತ್ವಗುಣ ಮಾತ್ರ ಉಳಿಯುವುದು. ಮುಂದೆ ಅದೂ ಕೂಡ ತಾನೇ ತಾನಾಗಿ ಶಾಂತವಾಗುವುದು॥೮೨॥ ಅಗ್ನಿಯಲ್ಲಿ ಕಟ್ಟಿಗೆಗಳನ್ನು ಹೇಗೆ ಹೇಗೆ ಹಾಕಲ್ಪಡುವುವೋ, ಹಾಗೆ ಹಾಗೇ ಆ ಅಗ್ನಿಯು ಹೆಚ್ಚುಹೆಚ್ಚಾಗಿ ಪ್ರಜ್ವಲಿತಗೊಂಡು ಅವುಗಳನ್ನು ಸುಡುವುದು. ಆದರೆ ಕಟ್ಟಿಗೆಯ ಲವಲೇಶವೂ ಇಲ್ಲದಾಗಲು ಅಗ್ನಿಯು ಕೂಡ ತಾನೇ ತಾನಾಗಿ ತನ್ನ ತೇಜದಲ್ಲಿ ವಿಲೀನಗೊಂಡು ಇಲ್ಲದಾಗುವುದು.॥೮೩॥ ಇದೇ ಪ್ರಕಾರವಾಗಿ ಯೋಗಿಯು ಸಾತ್ವಿಕ, ರಾಜಸ, ತಾಮಸ ಈ ಮೂರೂ ಗುಣಗಳನ್ನು ಜಯಿಸಿಗುಣಾತೀತನಾಗುವನು. ಆಗ ಕಲ್ಪಾಂತವಾಗಿ ಪ್ರಳಯಕಾಲವು ಒದಗಿದರೂ ಸಹ ಆತನಿಗೆ ಸಂಸಾರದ ಬಾಧೆಯು ಆಗಲುಸಾಧ್ಯವೇ ಇಲ್ಲ.॥೮೪॥ ಆ ಯಾವ ದಿವ್ಯ ಸುಖಕ್ಕೆ ಅಂತ್ಯವೇ ಇರುವುದಿಲ್ಲ. ಅಂತಹ ಆತ್ಮಸುಖವು ಆತನಿಗೆ ಪ್ರಾಪ್ತವಾಗುವುದು. ಆತನು ದೇಹಧಾರೀಯಾಗಿದ್ದರೂ, ಕೂಡ ದೇಹಾತೀತನಾದವನಂತೆ ವರ್ತಿಸುವನು. ಆದ್ದರಿಂದಲೇ ಆತನಿಗೆ ಚಿಂತೆ ಎಂಬ ತಿರುಗುಣಿಯು ಬಾಧೆಯನ್ನು ಕೊಡಲು ಶಕ್ಯವಾಗದು.॥೮೫॥ ನಿಜವಾಗಿಯೂ ತಾನೊಬ್ಬನೇ ಒಂಟಿಗನಾಗದ ಹೊರತು ಈ ಸ್ಥಿತಿಯು ಪ್ರಾಪ್ತವಾಗಲಾರದು. ಈ ವಿಷಯಕ್ಕೆ ಹೇ ನೃಪಶ್ರೇಷ್ಠನೇ, ಕುಮಾರೀಯನ್ನು ನಾನು ಗುರುವನ್ನಾಗಿ ಮಾಡಿಕೊಂಡ ಮಾತನ್ನು ನಿನಗೆ ಹೇಳುವೆ, ಕೇಳು ॥೮೬॥

ಕೋಣೇ ಏಕೇ ಕುಮಾರಿಸೀ । ಘರೀ ರಾಖಿಣ ಠೇವೂನಿ ತಿಸೀ । ಪಿತಾ ಮಾತಾ ಸ್ವಗೋತ್ರೇಸಿ । ಗೇಲೀ ಯಾತ್ರೇಸೀ ಕುಳದೇವಾ ॥೮೭॥ ತೇ ಕುಮಾರೀಚೇ ವಿವಾಹ ಲಗ್ನ । ಪೂರ್ವೀ ನೇಮಿಲೇ ಹೋತೇ ಜಾಣ । ತ್ಯಾ ನಿಶ್ಚಯಾಲಾಗೀ ಬ್ರಾಹ್ಮಣ । ಘರಾ ಸಂಪನ್ನ ಪೈ ಆಲೇ ॥೮೮॥ ಪುಸತೀ ಘರೀ ಆಹೇ ಕೋಣ । ಲಾಜೇ ನೋವರೀ ಧರೀ ಮೌನ । ತ್ಯಾಂಸೀ ನ ದೇತಾ ದರ್ಶನ । ಪೂಜಾವಿಧಾನ ತೇ ಮಾಂಡೀ ॥೮೯॥ ವಾತಾಯನದ್ವಾರಾ ಆಸನೇ। ದಿಧಲೀ ಸಮಸ್ತಾ ಕಾರಣೇ । ಗಂಧಾಕ್ಷತಾ ಸುಮನೇ ಪಾನೇ । ದಿಧಲೇ ಮೌನೇ ಉಪಚಾರ ॥೯೦॥ ದೇಖೋನಿ ಪೂಜೇಚೇ ವಿಧಾನ । ಜಾಣೋ ಸರಲೇ ತೇ ಬ್ರಾಹ್ಮಣ । ಘರೀ ನೋವರೀಚಿ ಆಹೇಜಾಣ । ಹೇ ಚತುರಲಕ್ಷಣ ತಿಯೇಚೇ ॥೯೧॥ ತ್ಯಾಂಚ್ಯಾ ಪಾಹುಣೇರಾಚೀ ಚಿಂತಾ । ಉಶಿರಾ ಯೇಈಲ ಮಾಝೀ ಮಾತಾ । ತೇ ಕಾಳೀ ಸಾಳೀ ಸಡಿತಾ । ವಿಲಂಬು ಸರ್ವಥಾ ಹೋಈಲ ॥೯೨॥

ತೇಷಾಮಭ್ಯವಹಾರಾರ್ಥಂ ಶಾಲೀನ್ ರಹಸಿ ಪಾರ್ಥಿವ । ಅವಘ್ನಂತ್ಯಾಃ ಪ್ರಕೋಷ್ಠಸ್ಥಾಶ್ಚಕ್ರುಃ ಶಂಖಾಃ ಸ್ವನಂ ಮಹತ್ ॥೬॥

ಅರ್ಥ:- ಇವರ ಭೋಜನಕ್ಕಾಗಿ ಏಕಾಂತದಲ್ಲಿ ಭತ್ತವನ್ನು ಗುಟ್ಟಾಗಿ ಕುಟ್ಟುತ್ತಿದ್ದಂತೆ ಅವಳ ಕೈಗಳಲ್ಲಿದ್ದ ಶಂಖದ ಬಳೆಗಳು ಪರಸ್ಪರವಾಗಿ ತಾಕಿ ಜೋರಾಗಿ ಶಬ್ದವನ್ನು ಮಾಡುತ್ತಿದ್ದವು.

ಐಸೇ ವಿಚಾರೂನಿ ಜಾಣ । ಸಾಳೀ ಕಾಂಡೂ ರಿಘೇ ಆಪಣ । ತೇ ಕಾಂಡಣಕಾಳೀಚೇ ವಿಂದಾನ । ಚತುರ ಲಕ್ಷಣ ಪರಿಯೇಸೀ ॥೯೩॥ ಘಾವೋ ಘಾಲಿತಾ ಕಾಂಡಣಾ । ಉಠೀ ಝಣತ್ಕಾರ ಕರಕಂಕಣಾ । ತೇಣೇ ನಾದೇ ಲಾಜೋನಿ ಜಾಣಾ । ವಿಚಾರೂ ಮನಾಮಾಜೀ ಕರೀ ॥೯೪॥

ಸಾ ತಜ್ಜುಗುಪ್ಸಿತಂ ಮತ್ವಾ ಮಹತೀ ವ್ರೀಡಿತಾ ತತಃ । ಬಭಂಜೈಕೈಕಶಃ ಶಂಖಾನ್ ದ್ವೌ ದ್ವೌ ಪಾಣ್ಯೋರಶೇಷಯತ್ ॥೭॥

ಅರ್ಥ:- ತಾನು ಸ್ವತಃ ಅಕ್ಕಿಯನ್ನು ಕುಟ್ಟುತ್ತಿರುವುದು ಯೋಗ್ಯವಾಗಲಾರದು. ಇದರಿಂದ ನಮ್ಮ ದಾರಿದ್ರ್ಯತನವು ವ್ಯಕ್ತವಾದೀತು. ಹೀಗೆಂದು ವಿಚಾರಿಸಿ ಆಕೆಯು ತನ್ನ ಕೈಗಳಲ್ಲಿರುವ ಬಳೆಗಳನ್ನು ಒಂದೊಂದಾಗಿ ತೆಗೆದು ಪ್ರತಿ ಒಂದು ಕೈಗೆ ಎರಡೆರಡು ಬಳೆಗಳನ್ನು ಮಾತ್ರ ಉಳಿಸಿದಳು.

ಯಾ ಶಂಖವಲಯಾಂಚಾ ಧ್ವನಿ । ಪಡೇಲಪಾಹುಣ್ಯಾಂಚೇ ಕಾನೀ । ತೇ ಅತ್ಯಂತ ಲಾಜ ಮಜಲಾಗುನಿ। ನವವಧೂ ಕಾಂಡಣೇ ಬೈಸಲೀ ॥೯೫॥ ತ್ಯಾಂಚ್ಯಾ ಕಾನೀ ಧ್ವನಿ ನ ಪಡೇ । ಕಾಂಡಣ ತರೀ ಚಾಲೇ ಪುಢೇ । ಐಸೇ ವಿಚಾರೋನಿ ರೋಕಡೇ । ಕಂಕಣಾಕಡೇ ಪಾಹಿಲೇ ॥೯೬॥ ಪಾಹತಾ ದಿಸೇ ತೇ ಅಬಲಾ । ವಿಚಾರ ವೃದ್ಧಾ ಹೋನಿ ಆಗಳಾ । ಕರೀಚಾ ಕಂಕಣ ಖಿಳಾಳಾ । ಯುಕ್ತೀ ವೇಲ್ಹಾಳಾ ವಿಭಾಗೀ ॥೯೭॥

ಒಂದು ಮನೆತನದಲ್ಲಿ ಒಬ್ಬ ಕುಮಾರೀ ಇದ್ದಳು. ಆಕೆಯ ತಂದೆ-ತಾಯಿಯರು ತಮ್ಮ ಆಪ್ತ ವರ್ಗದವರೊಂದಿಗೆ ಕುಲದೇವತೆಯ ಯಾತ್ರೆಗೆ ಕುಮಾರಿಗೆ ಮನೆ ರಕ್ಷಣೆಗೆ ಬಿಟ್ಟು ಹೋಗಿದ್ದರು ॥೮೭॥ ಆ ಕನ್ಯೆಯ ವಿವಾಹ ವಿಚಾರವು ಪೂರ್ವದಲ್ಲಿಯೇ ಆಗಿತ್ತು. ಆ ಸಂಬಂಧವಾಗಿ ಮಾತುಕತೆ ನಿಶ್ಚಯಕ್ಕಾಗಿ ವರಪಕ್ಷದವರು ಬ್ರಾಹ್ಮಣರೊಂದಿಗೆ ಆ ಮನೆಗೆ ಆಗಮಿಸಿದರು ॥೮೮॥ ಅವರು ಮನೆಯಲ್ಲಿ ಯಾರಿದ್ದೀರಿ? ಎಂದುಕೇಳಿದರು. ಆದರೆ ನಾಚಿಕೆಯಿಂದ ಆ ಕನ್ಯೆಯು ಮೌನಳಾದಳು. ಅಲ್ಲದೇ ಅವರ ದೃಷ್ಟಿಗೆ ಬೀಳದೇ ಆಕೆಯು ಆದರಾತಿಥ್ಯದ ಸರ್ವ ಸಾಹಿತ್ಯವನ್ನು ತಯಾರಿಸಿದಳು ॥೮೯॥ ಖಿಡಿಕಿಯಿಂದಲೇ ಎಲ್ಲರನ್ನೂ ಕುಳಿತುಕೊಳ್ಳಲು ಆಸನಗಳನ್ನು ಕೊಟ್ಟಳು. ಗಂಧ, ಅಕ್ಷತೆ, ಹೂವು, ಎಲೆ - ಅಡಿಕೆ ಹೀಗೆ ಎಲ್ಲವನ್ನೂ ಏನೂ ಮಾತನಾಡದೇ ತಂದು ಕೊಟ್ಟಳು ॥೯೦॥ ಪೂಜೆಯ ಸರ್ವ ಸಾಹಿತ್ಯಗಳು ಮುಂದಿರುವುದನ್ನು ಕಂಡು ಬ್ರಾಹ್ಮಣ ಮಂಡಳಿಯವರು ಈಕೆ ಒಬ್ಬಾಕೆಯೇ ಮನೆಯಲ್ಲಿ ಇರುವಳು ಮತ್ತು ಇದೆಲ್ಲವೂ ಈ ವಧುವಿನದ್ದೇ ಚಾತುರ್ಯವಾಗಿರುವುದೆಂದು ಅರಿತುಕೊಂಡರು ॥೯೧॥ ಈ ಕನ್ಯೆಗೆ ಬೀಗರ ಉಪಚಾರದ ಕಾಳಜೀ ಹತ್ತಿತು. ಈಕೆಯು ಹೀಗೆ ಮನದಲ್ಲಿ ವಿಚಾರಿಸಿದಳು. ಮನೆಯಲ್ಲಿ ಅಕ್ಕಿಮುಗಿದಿರುವುವು. ನಮ್ಮ ತಾಯಿ ಬರಲು ಬಹಳ ಹೊತ್ತಾಗುವುದು. ಆಕೆಯೇ ಬಂದು ಭತ್ತ ಕುಟ್ಟಿ ಅಕ್ಕಿ ತಯಾರಿಸಿ ಭೋಜನ ಸಿದ್ಧಗೊಳಿಸಲು ಬಹಳ ತಡವಾಗುವುದು ॥೯೨॥

ಹೀಗೆ ವಿಚಾರಿಸಿ ಆಕೆಯು ತಾನೇ ಬತ್ತವನ್ನು ಕುಟ್ಟಹತ್ತಿದಳು. ಹೀಗೆ ಕುಟ್ಟುತ್ತಿರುವ ಆಕೆಯು ಮಹಾಚಾತುರ್ಯದ ಕಾರ್ಯವನ್ನು ಮಾಡಿದಳು. ಅದನ್ನು ನೀನೀಗ ಶ್ರವಣವನ್ನು ಮಾಡು ॥೯೩॥ ಬತ್ತವನ್ನು ಕುಟ್ಟುತ್ತಿರಲು ಕೈಗಳಲ್ಲಿನ ಬಳೆಗಳು ಬಲು ಸಪ್ಪಳ ಮಾಡತೊಡಗಿದವು. ಇದನ್ನರಿತ ಈಕೆಯು ಬಹು ಲಜ್ಜೆಗೊಂಡು ಪುನಃ ಮನದಲ್ಲಿ ಹೀಗೆ ವಿಚಾರವನ್ನು ಮಾಡಲಾರಂಭಿಸಿದಳು ॥೯೪॥

ಈ ಯಾವ ಬಳೆಗಳ ಸಪ್ಪಳವನ್ನು ಬಂದ ಬೀಗರು ಕೇಳಿದರೆ, ಈ ನವವಧು ಬತ್ತವನ್ನು ಕುಟ್ಟಲು ಕುಳಿತಿದ್ದಾಳೆ ಎಂದು ತಿಳಿದಿರೆ ನನಗಾಗ ಅತಿಶಯವಾಗಿ ಲಜ್ಜೆಯಾಗುವುದು ॥೯೫॥ ಆದ್ದರಿಂದ ಈ ಬಳೆಗಳ ಸಪ್ಪಳವು ಅವರ ಕಿವಿಗೆ ಬೀಳಬಾರದು ಮತ್ತು ನನ್ನ ಬತ್ತ ಕುಟ್ಟುವುದು ನಡೆಯಬೇಕು. ಹೀಗೆಂದು ಮನದಲ್ಲಿ ವಿಚಾರಿಸಿ ತನ್ನ ಬಳೆಗಳತ್ತ ನೋಡಿದಳು ॥೯೬॥ ನೋಡಲು ಮಾತ್ರ ಆಕೆ ಹೆಣ್ಣು ಹುಡುಗಿ ಆಗಿದ್ದಳು. ಆದರೆ ಆಕೆಯ ವಿಚಾರವು ಬುದ್ಧಿವಂತ ಮನುಷ್ಯನಕ್ಕಿಂತಲೂ ಅಧಿಕವಾಗಿತ್ತು. ಈ ಯಾವ ಚತುರ ಕನ್ಯೆಯು ಬಹು ಯುಕ್ತಿಯಿಂದ ಬಳೆಗಳ ಶಬ್ದವನ್ನು ಇಲ್ಲದಾಗಿ ಮಾಡಿದಳು ॥೯೭॥

ಜರೀಕಂಕಣ ಫೋಡೂ ಆತಾ । ತರೀ ತೇ ಮುಹೂರ್ತೀಚ ಅಶುಭತಾ । ಶತಾಯು ಹೋ ಮಾಝಾ ಭರ್ತಾ । ನ ಫೋಡೀ ಸರ್ವಥಾ ಯಾ ಹೇತು ॥೯೮॥ ಅತಿಬುದ್ಧಿಮಂತ ತೇ ಕುಮಾರೀ । ಹಳೂಚಿ ಕಂಕಣೇ ಉತರೀ । ತೇ ಠೇವೀ ಜತನೇವರೀ । ರಾಖೇ ದೋ ಕರೀ ದೋನಿ ॥೯೯॥ ದೋನೀ ಕಂಕಣೇ ಉರವೂನಿ । ಕಾಂಡೂ ಬೈಸಲೀಕಾಂಡಣೀ । ದೋಹಿಮಾಜೀ ಉಠೇ ಧ್ವನೀ । ಐಕೋನಿ ಕಾನೀ ಲಾಜಲೀ ॥೧೦೦॥

ಉಭಯೋರಪ್ಯಭೂದ್ ಘೋಷೋ ಹ್ಯವಘ್ನಂತ್ಯಾಃ ಸ್ಮ ಶಂಖಯೋಃ । ತತ್ರಾಪ್ಯೇಕಂ ನಿರಭಿದದೇಕಸ್ಮಾನ್ನಾಭವದ್ ಧ್ವನಿಃ ॥೮॥

ಅರ್ಥ:- ಈಕೆಯು ಪುನಃ ಬತ್ತವನ್ನು ಕುಟ್ಟುತ್ತಿರಲು ಎರಡೆರಡರ ಬಳೆಗಳ ಸಪ್ಪಳವು ಕೇಳಹತ್ತಿತು. ಆದ್ದರಿಂದ ಈಕೆಯು ಎರಡೂಕೈಗಳಲ್ಲಿನ ಒಂದೊಂದು ಬಳೆಯನ್ನು ತಗೆದಿಟ್ಟಳು. ಆಗ ಕೈಗಳಲ್ಲಿನ ಒಂದೇ ಬಳೆಯಿಂದ ಯಾವ ಸಪ್ಪಳ ಆಗಲಿಲ್ಲ.

ಮ್ಹಣೇ ದೋಘಾಂಚಾ ಸಂಗು ಏಕೇ ಸ್ಥಾನೀ । ತೇಥೇ ಸರ್ವಥಾ ನ ರಾಹೇ ಧ್ವನೀ । ದೋಂತೀಲ ಏಕೇ ವೇಗಳೇ ಕಾಢೋನಿ । ಬಸೇಕಾಂಡಣೇ ಕುಮಾರೀ ॥೧೦೧॥ ಏಕಪಣೇ ಕಾಂಡಿತಾ । ಧ್ವನೀ ನುಠೇಚಿ ತತ್ತ್ವತಾ । ತೋ ಉಪದೇಶು ನೃಪನಾಥಾ । ಝಾಲೋ ಶಿಕತಾ ಮೀ ತೇಥೇ ॥೧೦೨॥

ಅನ್ವಶಿಕ್ಷಮಿಮಂ ತಸ್ಯಾ ಉಪದೇಶಮರಿಂದಮ । ಲೋಕಾನನುಚರನ್ನೇತಾನ್ ಲೋಕತತ್ತ್ವವಿವಿತ್ಸಯಾ ॥೯॥

ಅರ್ಥ:- ಅರಿಮರ್ದನನೇ, ನಾನು ಈ ಲೋಕದ ಸ್ವಭಾವವನ್ನು ಸತತವಾಗಿ ತಿಳಿದುಕೊಳ್ಳುತ್ತ ಭೂ ಪ್ರದೇಶವನ್ನೆಲ್ಲಾ ಸಂಚರಿಸುತ್ತಿದ್ದೇನೆ. ಈ ಕುಮಾರಿಯು ಕಲಿಸಿದ ಪಾಠಕ್ಕೆ ನಾನೇಸಾಕ್ಷಿಯಾದೆ.

ಜಿಣೋನಿ ಪ್ರತಿಸ್ಪರ್ಧೀ ಭೂಪಾಳ । ಕಿಂಕರ ಕೇಲೇ ರಾಜೇ ಸಕಳ । ತೂ ಅರಿಮರ್ದನ ಸಬಳ । ಮಿಥ್ಯಾ ಕೇವಳ ತೋ ಗರ್ವ ॥೧೦೩॥ ಕಾಮಕ್ರೋಧಾದಿ ಅರಿವರ್ಗ । ನ ಜಿಣತಾ ಸಕಳ ಸಾಂಗ । "ಅರಿಮರ್ದನ" ಹಾ ಬೋಲ ವ್ಯಂಗ । ಹೋಈಲ ಚಾಂಗ ಯೇ ಅರ್ಥೀ ॥೧೦೪॥ ಕಾಮಾದಿಕ ಸಹಾ ವೈರೀ । ಯೇಣೇ ಉಪದೇಶ ಶಸ್ತ್ರಧಾರೀ । ಜಿಣೋನಿ ಘಾಲಿತಾ ತೋಡರೀ । ಮಗ ಸಂಸಾರೀ ಅರಿನಾಹೀ ॥೧೦೫॥ ಲೋಕಾವೇಗಳಾ ಅವಧೂತು ।ಮ್ಹಣಸೀ ಕುಮಾರೀ ತೇ ಘರಾ ಆಂತು । ತೋ ಏಕಾಂತಿಚಾ ವೃತ್ತಾಂತು । ಕೈಸೇನಿ ಪ್ರಾಪ್ತ ತುಜಝಾಲಾ ॥೧೦೬॥ ರಾಹೋನಿಯಾ ವಿಜನಸ್ಥಾನೀ । ವಿಶ್ವಾಸೋನಿ ಗುರುವಚನೀ । ದೃಢ ಬೈಸೋನಿ ಆಸನೀ । ನಿಜತತ್ತ್ವ ಧ್ಯಾನೀ ಆಕಳಿಲೇ ॥೧೦೭॥ ತ್ಯಾಚಿ ತತ್ತ್ವ ನಿಶ್ಚಯಾಲಾಗುನೀ । ಮೀ ವಿಚರತಸೇ ಯೇ ಮೇದಿನೀ । ನಿಜಾತ್ಮಭಾವೋ ಜನೀ ವನೀ । ದೃಢ ಕರೋನಿ ಪಾಹತಸೇ ॥೧೦೮॥

ನಾನೀಗ ಬಳೆಗಳನ್ನು ಹೊಡೆದುಕೊಂಡರೆ ಈಯಾವ ಶುಭಮುಹೂರ್ತದಲ್ಲಿ ಮೊದಲೇಅಶುಭ ಕಾರ್ಯ ಎಸಗಿದಂತಾಗುವುದು. ನನ್ನ ಪತಿಯು ನೂರು ವರ್ಷ ಬಾಳಬೇಕೆಂಬ ಬಯಕೆಯಿಂದ ನಾನು ಸರ್ವಥಾ ಈಬಳೆಗಳನ್ನು ಹೊಡೆಯಲಾರೆ ॥೯೮॥ ಹೀಗೆ ವಿಚಾರಿಸಿ ಆ ಯಾವ ಬುದ್ಧಿವಂತಳಾದ ಕನ್ಯೆಯು ಬಳೆಗಳನ್ನು ಮೆಲ್ಲನೇ ತೆಗೆದಳು ಹಾಗೂ ಅವುಗಳನ್ನು ಕಾದಿಟ್ಟಳು. ಪ್ರತಿಯೊಂದು ಕೈಗಳಲ್ಲಿ ಎರಡೆರಡು ಬಳೆಗಳನ್ನು ಮಾತ್ರ ಉಳಿಸಿದಳು ॥೯೯॥ ಈ ಪ್ರಕಾರವಾಗಿ ಎರಡು ಬಳೆಗಳುಳ್ಳ ಕೈಗಳಿಂದ ಆಕೆಯು ಪುನಃ ಬತ್ತವನ್ನು ಕುಟ್ಟಲಾರಂಭಿಸದಳು. ಆದರೂ ಈಗ ಆ ಎರಡೂ ಬಳೆಗಳಿಂದಲೂ ಸಪ್ಪಳವು ಆಗಹತ್ತಿತು. ಆಗ ಈ ಧ್ವನಿಯನ್ನು ಕೇಳಿ ಆಕೆಗೆ ಪುನಃ ಬಹಳ ನಾಚಿಕೆಯಾಯಿತು ॥೧೦೦॥

ಈಕೆಯು ಮನದಲ್ಲಿ ವಿಚಾರಿಸಿದಳು; ಈ ಎರಡು ವಸ್ತುಗಳು ಏಕತ್ರ ಕೂಡಿರುವುದರಿಂದ ಅವುಗಳಿಂದ ಸಪ್ಪಳವು ಬಂದೇಬರುವುದು. ಅದಕ್ಕಾಗಿ ಆ ಎರಡರಲ್ಲಿ ಒಂದೊಂದನ್ನು ತೆಗೆಯಲಾರಂಭಿಸಿದಳು ॥ ೧೦೧॥ ಆಗ ಒಂದೇ ಬಳೆಯಿಂದ ಯಾವ ಸಪ್ಪಳವೂ ಆಗಲಿಲ್ಲ. ಹೇ ರಾಜನೇ, ಇದೇ ಉಪದೇಶವನ್ನು ನಾನು ಆಕೆಯಿಂದ ಕಲಿತುಕೊಂಡೆನು ॥೧೦೨॥

ನೀನು ನಿನ್ನ ಪ್ರತಿಸ್ಪರ್ಧಿ ರಾಜರನ್ನು ಜಯಿಸಿ ಅವರನ್ನು ನಿನ್ನ ದಾಸರನ್ನಾಗಿ ಮಾಡಿ, ಸ್ವತಕ್ಕೆ ಮಹಾಬಲಾಢ್ಯನು ಮತ್ತು ಅಂಜಿಕ್ಯನು ಎಂದು ನೀನು ತಿಳಿದಿರಬಹುದು. ಆದರೆ ಈ ನಿನ್ನ ಗರ್ವವು ಮಿಥ್ಯೆಯಾಗಿರುವುದು ॥೧೦೩॥ ಏಕೆಂದರೆ ಕಾಮಕ್ರೋಧರೂಪ ಶತ್ರುಗಳನ್ನು ಸಂಪೂರ್ಣವಾಗಿ ಜಯಿಸದೇ ಸ್ವಂತಕ್ಕೆ ನಾನು ಶತ್ರುಗಳನ್ನು ಜಯಿಸಿದೆ ಎಂದುತಿಳಿಯುವುದು ಯೋಗ್ಯವಲ್ಲ. ಏಕೆಂದರೆ ಇಲ್ಲಿ ಅರಿಮರ್ದನ ಎಂಬ ಶಬ್ದವು ಸದೋಷವಾಗುವುದು ॥೧೦೪॥ ಕಾಮಕ್ರೋಧಗಳೆಂಬ ಅರಿಷಡ್ವರ್ಗವನ್ನು ಉಪದೇಶರೂಪ ಶಸ್ತ್ರಗಳ ಧಾರೆಯಿಂದ ಜಯಿಸಿದರೆ ಮಾತ್ರ, ಸಂಸಾರದಲ್ಲಿ ಶತ್ರುಗಳಿಲ್ಲವೆಂದು ಹೇಳಲು ಬರುವುದು. ॥೧೦೫॥ ನೀನು ಅವಧೂತನು, ಲೌಕಿಕದಿಂದ ದೂರಾಗಿರುವವನು, ಆ ಯಾವ ಕುಮಾರಿಯು ತನ್ನ ಮನೆಯಲ್ಲಿ ಇದ್ದವಳು. ಹೀಗಿರಲು ಈ ಏಕಾಂತದ ವೃತ್ತಾಂತವು ನಿನಗೆ ಹೇಗೆ ತಿಳಿಯಿತು? ॥೧೦೬॥ ಹೀಗೆ ಅನುಮಾನ ಬಂದರೆ ಕೇಳು, ನಾನುಗುರುವಚನಗಳಲ್ಲಿ ದೃಢವಾದ ವಿಶ್ವಾಸವನ್ನಿಟ್ಟು ನಿರ್ಜನ ವನದಲ್ಲಿ ಆಸನವನ್ನು ಹಾಕಿ ಧ್ಯಾನದಿಂದ ಆತ್ಮತತ್ವವನ್ನು ಪ್ರಾಪ್ತ ಮಾಡಿಕೊಂಡೆನು ॥೧೦೭॥ ಆತ್ಮತತ್ವದ ಬಲದಿಂದ ನಾನು ಪೃಥ್ವಿಯ ಮೇಲೆ ಸಂಚಾರವನ್ನು ಮಾಡುತ್ತೇನೆ. ಆತ್ಮಭಾವವನ್ನು ದೃಢೀಕರಿಸಿ ನಾನು ಸಮಾಜದಲ್ಲಿ ಇಲ್ಲವೇ ವನದಲ್ಲಿ ಕಾಣುತ್ತಿರುತ್ತೇನೆ ॥೧೦೮॥

ಹೋತಾ ದೃಶ್ಯೆಸೀ ಭೇಟೀ । ದೃಶ್ಯ ದೃಶ್ಯತ್ವೇ ನ ಪಡೇ ಮಿಠೀ । ದೃಷ್ಟೇಪಣಹೀ ಫಾಲೋನಿ ಪೋಟೀ । ಐಶಿಯಾ ದೃಷ್ಟೀ ವಿಚರತ ॥೧೦೯॥ ಅಂಗೀಕಾರಿತಾ ಗುರುತ್ವಗುಣ । ದೇಖತಾ ಜಗಾಚೇ ದರ್ಶನ । ಮಜ ಹೋತಸೇ ಚೈತನ್ಯಭಾನ । ಐಸೇನ ಜಾಣ ಮೀ ವಿಚರತ ॥೧೧೦॥ ಐಶಿಯಾ ನಿಜದೃಷ್ಟೀ ವೀರಾ । ಮಜ ವಿಚರತಾ ಚರಾಚರಾ । ಅವಚಟೇ ಕುಮಾರೀ ಮಂದಿರಾ । ತ್ಯಾಚಿ ಅವಸರಾ ಮೀ ಆಲೋ ॥೧೧೧॥ ಕರಿತಾ ಕಂಕಣವಿವಂಚನಾ। ನಿಜಸ್ವಾರ್ಥಾಚಿಯಾ ಖುಣಾ । ಪಾಹೋನಿ ಘೇತಲೇ ಜ್ಯಾ ಲಕ್ಷಣಾ । ತೇ ವಿಚಕ್ಷಣಾ ಪರಿಯೇಸೀ ॥೧೧೨॥

ವಾಸೇ ಬಹೂನಾಂ ಕಲಹೋ ಭವೇದ್ವಾರ್ತಾ ದ್ವಯೋರಪಿ । ಏಕ ಏವ ಚರೇತ್ತಸ್ಮಾತ್‌ಕುಮಾರ್ಯಾ ಇವ ಕಂಕಣಃ ॥೧೦॥

ಅರ್ಥ:- ಅನೇಕರು ಒಂದೇ ಸ್ಥಳದಲ್ಲಿ ವಾಸವಿರಲು ಕಲಹವು ಉಂಟಾಗುವುದು. ಇಬ್ಬರೇ ಇದ್ದರೂ ಹುರುಳಿಲ್ಲದ ಮಾತುಕತೆ ನಡೆಯುವುದು. ಆದ್ದರಿಂದ ಇದನ್ನು ತಪ್ಪಿಸಲು ನಾವು ಕುಮಾರಿಯ ಕಂಕಣದ ಉದಾಹರಣೆಯಿಂದ ಕಲಿತ ಪಾಠದಿಂದ ಒಬ್ಬರೇ ಸಂಚರಿಸುತ್ತಿರಬೇಕು.

ಜೇಥ ಹೋಯ ಬಹುತಾಂಚೀ ವಸ್ತೀ । ತೇಥ ಅನಿವಾರ ಕಲಹಪ್ರಾಪ್ತೀ । ದೋಘೇ ಬೈಸಲ್ಯಾ ಏಕಾಂತೀ । ವಾರ್ತಾ ಕರಿತೀ ಬಹುವಿಧಾ ॥೧೧೩॥ ಜೇಥೇ ಗೋಷ್ಟೀ ಖಾಲೀ ಕಾಳು ಜಾಯೇ । ತೇಥೇ ನಿಜಸ್ವಾರ್ಥು ಹೋ ನ ಲಾಹೇ । ಯಾಲಾಗೀ ಮಿ ಪಾಹೇ । ವಿಚರತ ಆಹೇ ಏಕಾಕೀ ॥೧೧೪॥ ಏಕಾಕೀ ಏಕಾಗ್ರತಾ । ಸಾಧಿಲ್ಯಾ ಥೋರ ಲಾಭು ಯೇ ಹಾತಾ । ಯೇಚ ವಿಷಯೀ ಶರಕರ್ತಾ । ಗುರು ತತ್ತ್ವತಾ ಮ್ಯಾ ಕೇಲಾ ॥೧೧೫॥

ಮನ ಏಕತ್ರ ಸಂಯುಜ್ಯಾಜ್ಜಿತಶ್ವಾಸೋ ಜಿತಾಸನಃ । ವೈರಾಗ್ಯಾಭ್ಯಾಸಯೋಗೇನ ಧ್ರಿಯಮಾಣಮತಂದ್ರಿತಃ ॥೧೧॥

ಅರ್ಥ:- ಹೇ ರಾಜನೇ, ನಾನು ಬಾಣ ತಯಾರಿಸುವವನಿಂದ ಇದನ್ನು ಕಲಿತುಕೊಂಡೆನು. ಏನೆಂದರೆ, ಆಸನ ಮತ್ತು ಪ್ರಾಣವನ್ನು ಜಯಿಸಿ ವೈರಾಗ್ಯ ಮತ್ತು ಅಭ್ಯಾಸದ ಬಲದಿಂದ ತನ್ನ ಮನವನ್ನು ಸ್ವಾಧೀನಗೊಳಿಸಬೇಕು. ತದನಂತರ ಅತ್ಯಂತ ಸಾವಧಪೂರ್ವಕವಾಗಿ ಈ ಮನವನ್ನು ಏಕಾಗ್ರಗೊಳಿಸಬೇಕು.

ವೈರಾಗ್ಯೇ ವೀಣ ಅಭ್ಯಾಸು ಘಡೇ । ತೇಥ ವಿಷಯಚೋರ ಉಠತೀ ಗಾಢೇ । ಕಾಮಾಚಾ ಘಾಲಾ ಪಡೇ । ಮುದ್ದಲ ಬುಡೇ ನಿಜಜ್ಞಾನ ॥೧೧೬॥ ವಿವೇಕದೀಪ ಕರೂನಿ ಧುರೇ । ನಿರಸೀ ಅಜ್ಞಾನಾಚೇ ಅಂಧಾರೇ । ವೈರಾಗ್ಯಾಚೇ ಬಳ ಪುರೇ । ಮಹಾಮುದ್ರೇಚೇನಿ ಯೋಗೇ ॥೧೧೭॥ ಪ್ರಾಣಾಪಾನಾಚೀ ಚುಕಾಮುಕೀ । ಝಾಲೀ ಹೋತೀ ಬಹುಕಾಳ ಕೀ । ತೇ ಅಭ್ಯಾಸಬಳೇ ಏಕಾಏಕೀ । ಕೇಲೀ ವೋಳಖೀ ದೋಘಾಂಸೀ ॥೧೧೮॥ ವೋಳಖೀಸವೇಂಚಿ ಜಾಣ । ಪಾವಲೀ ಜುನಾಟ ಪಹಿಲೀ ಖೂಣ । ದೋಘಾ ಪಡಿಲೇ ಆಲಿಂಗನ । ಸಮಾಧಾನ ಸಮಸಾಮ್ಯೇ ॥೧೧೯॥

ನಾನು ಆತ್ಮರೂಪದಿಂದ ದೃಶ್ಯವನ್ನು ನೋಡಲು ಆಗ ಅದು ದೃಶ್ಯತ್ವದಿಂದ ತೋರುವುದಿಲ್ಲ. ಹಾಗೆಯೇ ದೃಷ್ಟಭಾವವೂ ಇಲ್ಲದಾಗುವುದು. ಈ ದೃಷ್ಟಿಯಿಂದ ನಾನು ತಿರುಗಾಡುತ್ತಿರುತ್ತೇನೆ ॥೧೦೯॥ ಹೀಗೆ ಇಂತಹ ಬ್ರಹ್ಮಸ್ಥಿತಿಯನ್ನು ಸ್ವೀಕಾರ ಮಾಡಲು ಸೃಷ್ಟಿಯ ದರ್ಶನವಾಗುತ್ತಲೇ ನನಗೆ ಚೈತನ್ಯಭಾವವು ಸ್ಫುರಣಗೊಳ್ಳುವುದು ॥೧೧೦॥ ಈ ಪ್ರಕಾರವಾಗಿ ನಾನು ಆತ್ಮದೃಷ್ಟಿಯಿಂದ ಸೃಷ್ಟಿಯ ನಿರೀಕ್ಷಣೆಯನ್ನು ಮಾಡುತ್ತ ಸಾಗುತ್ತಿರಲು ಆಕಸ್ಮಾತ್ತಾಗಿ ಆ ಯಾವ ಕುಮಾರಿಯ ಮನೆಗೆ ಅದೇ ವೇಳೆಗೆ ಹೋದೆನು ॥೧೧೧॥ ಹೇ ಚತುರನಾದ ರಾಜನೇ, ಆ ಯಾವ ಕುಮಾರಿಯು ತನ್ನ ಬಳೆಗಳ ಸಪ್ಪಳವನ್ನು ಸ್ಥಗಿತಗೊಳಿಸಿ ಯಾವ ಪ್ರಕಾರವಾಗಿ ತನ್ನ ಕಾರ್ಯವನ್ನು ಸಾಧಿಸಿದಳೋ, ಅದರಂತೆಯೇ ನಾನಾದರೂ ನನ್ನ ಹಿತವನ್ನು ಸಾಧಿಸುವುದಕ್ಕಾಗಿ ಆ ಬೋಧೆಯನ್ನು ಆಕೆಯಿಂದ ಕಲಿತುಕೊಂಡೆನು ॥೧೧೨॥

ಬಹಳ ಜನರು ಕೂಡಿದಲ್ಲಿ ಅನಿವಾರ್ಯವಾಗಿ ಅಲ್ಲಿ ಜಗಳಗಳು ಆಗುತ್ತಲೇ ಇರುವುವು. ಇಬ್ಬರು ಮನುಷ್ಯರು ಒಂದೇ ಸ್ಥಳದಲ್ಲಿ ಇರಲು ಅವರವರ ಅನೇಕ ಪ್ರಕಾರಗಳ ಮಾತುಗಳು ನಡೆಯುವುವು ॥೧೧೩॥ ಇದರಿಂದ ವೇಳೆಯು ಸುಮ್ಮನೇ ಹೊರಟು ಹೋಗಲು ಆಗ ತನ್ನ ಸ್ವಾರ್ಥವು ಏನೂ ಸಾಧಿಸಲಾರದು. ಅದಕ್ಕಾಗಿಯೇ ನೋಡು, ನಾನು ಹೇಗೆ ಒಂಟಿಗನಾಗಿಯೇ ತಿರುಗುತ್ತಿರುತ್ತೇನೆ ॥೧೧೪॥ ಒಬ್ಬನೇ ಇದ್ದು ಏಕಾಗ್ರತೆಯನ್ನು ಸಾಧಿಸಿದರೆ ಮಾತ್ರ ಬಹು ದೊಡ್ಡ ಲಾಭವಾಗುವುದು. ಈ ವಿಷಯಕ್ಕಾಗಿ ನಾನು ಬಾಣಗಳನ್ನು ತಯಾರಿಸುವ ಮನುಷ್ಯನಿಗೆ ಗುರುವನ್ನಾಗಿ ಮಾಡಿಕೊಂಡೆನು ॥೧೧೫॥

ವೈರಾಗ್ಯವಿಲ್ಲದೇ ಅಭ್ಯಾಸವನ್ನು ಮಾಡಲು ಹೊರಟರೆ, ಅಲ್ಲಿ ವಿಷಯ ರೂಪ ಮಹಾ ಕಳ್ಳರು ಎದ್ದು ಬರುವರು. ಕಾಮವು ಕನ್ನ ಹಾಕಿ ಕಳವು ಮಾಡುವುದು. ಇದರಿಂದ ಮುಖ್ಯವಾಗಿರುವ ಆತ್ಮಜ್ಞಾನವೇ ಇಲ್ಲದಾಗುವುದು ॥೧೧೬॥ ಅದಕ್ಕಾಗಿ ವಿವೇಕರೂಪ ದೀಪವನ್ನು ಹಚ್ಚಿ ಅಜ್ಞಾನದ ಕತ್ತಲೆಯನ್ನು ಕಳೆಯಬೇಕು. ಮತ್ತು ವೈರಾಗ್ಯದ ಬಲವನ್ನು ಸಂಪೂರ್ಣವಾಗಿ ಸಂಪಾದಿಸಬೇಕು ॥೧೧೭॥ ಪ್ರಾಣ, ಅಪಾನಗಳಾದ ಈ ಇಬ್ಬರು ಒಬ್ಬರಿಗೊಬ್ಬರು ಬಹಳ ದಿವಸಗಳಿಂದ ತಪ್ಪಿಸಿಕೊಂಡಿದ್ದರು. ಆದರೆ ಅಭ್ಯಾಸದ ಆಧಾರದಿಂದ ಇವರಿಬ್ಬರ ಏಕಾಏಕೀ ಪರಿಚಯವಾಯಿತು ॥೧೧೮॥ ಇದರೊಂದಿಗೆ ಇವರಿಗೆ ತಮ್ಮ ಹಳೆಯ ಪರಿಚಯದ ಸ್ಮರಣವಾಯಿತು. ಇವರು ಪ್ರೇಮದಿಂದ ಒಬ್ಬರಿಗೊಬ್ಬರು ಆಲಿಂಗನವನ್ನು ಕೊಟ್ಟರು. ಈ ಐಕ್ಯದಿಂದ ಇವರಿಗೆ ಸಮಾಧಾನವು ದೊರಕಿತು ॥೧೧೯॥

ದೃಢ ಬೈಸೋನಿ ಆಸನೀ । ಐಶೀ ಪ್ರಾಣಾಪಾನಮಿಳಣೀ । ಕರೂನಿ ಲಾವಿಲೀ ನಿಶಾಣೀ । ಬ್ರಹ್ಮಸ್ಥಾನೀ ರಿಘಾವಯಾ ॥೧೨೦॥ ಬ್ರಹ್ಮ ಗಿರೀಚಿಯಾ ಕಡಾ । ಶಮದಮೇ ಘಾಲೋನಿಯಾ ವೇಡಾ । ಪ್ರತ್ಯಾಹಾರಾಚಾ ಝುಗಡಾ । ಪುಢಿಲೇ ಕಡಾ ಲಾವಿಲಾ ॥೧೨೧॥ ಪ್ರಾಣಾಪಾನಾಂಚ್ಯಾ ವಿವರೀ । ಪಹಿಲೀವ್ಹೋಳಖೀ ಹೋತೀ ಖರೀ । ಮಾಳ ಲಾವಿಲೀ ಅಬೇಧಕರೀ । ಮನ ಏಕಾಗ್ರೀ ರಾಖೋನಿ ॥೧೨೨॥ ಏಕಾಗ್ರತೇಚೇನಿ ಕಲ್ಲೋಳೇ । ಪುಢಾರೇನ ಢಳವೇ ಚಾಲಿಲೇ ಬಳೇ । ಉಲ್ಹಾಟಯಂತ್ರಾಚೇನಿ ಮೇಳೇ । ಷಟ್‌ಚಕ್ರಪಾಳೇ ಭೇದಿಲೇ ॥೧೨೩॥ ವೈರಾಗ್ಯಾಚೀ ವಜ್ರಕವಚೇ । ನಿಧಡೇವೀರ ಲೇಊನಿ ಸಾಚೇ । ಏಕಾಗ್ರತಾಬಳೇ ಬಳಾಚೇ । ಝುಳಕೇ ಧ್ಯಾನಾಚೇ ಕರೀ ಖಡ್ಗ ॥೧೨೪॥ ನವಲ ಖಡ್ಗಾಚಾ ವಾಹೋ । ಲಹಾನ ಥೋರ ನಿವಟೀ ಪಹಾ ಹೋ । ಸಮ್ಮುಖ ಆಲಿಯಾ ಸಂದೇಹೋ । ನ ಲಗತಾ ಘಾವೋ ಭೇದಿತ ॥೧೨೫॥ ನಿರ್ದಾಳೂನಿ ಆಳಸಾಸೀ । ದಾಸೀ ಕೇಲೇ ನಿದ್ರೇಸೀ । ಐಸೇ ಸಾವಧಾನ ಅಹರ್ನಿಶೀ । ಯೋಗದುರ್ಗಾಸೀ ಝೋಂಬತೀ ॥೧೨೬॥ ರಣರಂಗೀಚೇ ವೀರ ಗಾಢೇ । ನಿಜಬಳೇ ಚಾಲಿಲೇ ಪುಢೇ । ಸತ್ರಾವೀಚೇ ಪಾಣಿಯಾಡೇ । ಜಿಂತಿಲೇ ರೋಕಡೇ ಮಹಾವೀರೀ ॥೧೨೭॥ ತೇಥ ಯುದ್ಧ ಝಾಲೇ ಚಾಂಗ । ಕಾಮಾದಿಕ ಅರಿಷಡ್‌ವರ್ಗ । ರಣೀಪಾಡಿಲೇ ಅಮೋಘ । ಸತೇಜ ಖಡ್ಗ ಝುಳಕತ ॥೧೨೮॥ ಐಸೇ ವೈರೀ ಪಾಡೂನಿ ರಣೀ । ಪ್ರಾಶಿಲೇ ಸತ್ರಾವೀಚೇ ಪಾಣೀ । ತಂವ ಅನುಹತಾಚೀ ಸುಡಾವಣೀ । ದುರ್ಗಾಮಧೋನಿ ಊಠಲೀ ॥೧೨೯॥ ತೇಥ ಸೋಹಂವೀರಾಚೀ ಏಕಾಗ್ರತಾ । ಹೋತಾ ಭೀತರೀಲ ಭೇದು ಆಲಾ ಹಾತಾ । ದುರ್ಗರಾಖತೀ ಅಹಂಮಮತಾ । ಮರೋಸರ್ವಥಾ ಟೇಂಕಲೀ ॥೧೩೦॥

ಯಸ್ಮಿನ್‌ಮನೋ ಲಬ್ಧಪದಂ ಯದ್ವೇತಚ್ಛನೈಃ ಶನೈರ್ಮುಂಚತಿಕರ್ಮರೇಣೂನ್।
ಸತ್ತ್ವೇನ ವೃದ್ಧೇನ ರಜಸ್ತಮಶ್ಚ ವಿಧೂಯ ನಿರ್ವಾಣ ಮುಪೈತ್ಯನಿಂಧನಮ್ ॥೧೨॥

ಅರ್ಥ:- ಪರಮಾನಂದ ಸ್ವರೂಪನಾದ ಪರಮಾತ್ಮನಲ್ಲಿ ಮನವು ಸ್ಥಿರವಾಗಲು, ಮೆಲ್ಲಮೆಲ್ಲನೇ ಕರ್ಮವಾಸನೆಗಳು ಇಲ್ಲದಾಗುವುವು. ಸತ್ವಗುಣದ ಬೆಳವಣಿಗೆಯಿಂದ ರಜೋಗುಣದ, ತಮೋಗುಣದ ವೃತ್ತಿಗಳನ್ನು ತ್ಯಾಗ ಮಾಡಿ ಮನವು ಶಾಂತವಾಗುವುದು. ಉರುವಲು ಮುಗಿದಾಕ್ಷಣವೇ ಅಗ್ನಿಯು ಶಾಂತವಾಗುವಂತೆ.

ಕಾಮಕ್ರೋಧಾದಿ ಮಹಾಶೂರ । ಪುತ್ರ ರಣೀ ಪಡಲೇ ಥೋರ । ತೇಣೇ ದುಃಖೇ ಅತಿಜರ್ಜರ। ಮರಣತತ್ಪರ ದಿಸತಾತೀ॥೧೩೧॥

ಈ ಪ್ರಕಾರವಾಗಿ ಸಾಧಕನು ಆಸನದಲ್ಲಿ ದೃಢವಾಗಿ ಕುಳಿತುಕೊಂಡು ಪ್ರಾಣ ಮತ್ತು ಅಪಾನವನ್ನು ಏಕತ್ರಗೊಳಿಸಿ ಬ್ರಹ್ಮಸ್ಥಾನಕ್ಕೆ ಹೋಗುವುದಕ್ಕಾಗಿ ಧ್ವಜವನ್ನು ಹಾರಿಸಿದನು ॥೧೨೦॥ ಬ್ರಹ್ಮಗಿರಿಯ ದಡದಲ್ಲಿ ಶಮದಮಗಳಿಂದ ಮುತ್ತಿಗೆಯನ್ನು ಹಾಕಿ ಮತ್ತು ಮುಂದಿನ ದಡದಲ್ಲಿ ''ಸೋಹಂ'' ಶಬ್ದದ ಹೊಡೆದಾಟ ನಡೆಸಿದನು ॥೧೨೧॥ ಪ್ರಾಣ ಅಪಾನಗಳ ಗುಹೆಯಲ್ಲಿ ಇವರ ಪೂರ್ವದ ಪರಿಚಯವಿತ್ತು. ಅದಕ್ಕಾಗಿ ಚಿತ್ತವನ್ನು ಏಕಾಗ್ರಗೊಳಿಸಿ ಐಕ್ಯ ಜ್ಞಾನದ ಯೋಗದಿಂದ ಅವರ ಸಂಬಂಧವನ್ನು ಕೂಡಿಸಿಕೊಟ್ಟನು॥೧೨೨॥ ಏಕಾಗ್ರತೆಯ ಹಲ್ಲೆಯಿಂದ ಪ್ರಾಣಕ್ಕೆ ಸ್ವಲ್ಪವೂ ಮುಂದಕ್ಕೆ ಸರಿಯಲು ಬಾರದಾಯಿತು. ಮತ್ತು ಕುಂಡಲಿನಿಯ ದ್ವಾರಾ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ ಮತ್ತು ಆಜ್ಞಾ ಚಕ್ರ ಇವುಗಳನ್ನು ಭೇದಿಸಲಾಯಿತು ॥೧೨೩॥ ಯಾವ ಕೆಚ್ಚೆದೆಯ ವೀರರು ವೈರಾಗ್ಯದ ವಜ್ರ ಕವಚಗಳನ್ನು ಶರೀರದಲ್ಲಿ ಧರಿಸಿ ಏಕಾಗ್ರತೆಯ ಬಲದಿಂದ ಧ್ಯಾನರೂಪ ಖಡ್ಗವನ್ನು ಕೈಯಲ್ಲಿ ಹಿಡಿದು ಅದನ್ನು ಝಳಪಿಸುತ್ತಿದ್ದರು॥೧೨೪॥ ಈ ಖಡ್ಗದ ಚಮತ್ಕಾರವೇನಂದರೆ, ಅಲ್ಲಿರುವ ಚಿಕ್ಕದೊಡ್ಡವರೆನ್ನದೇ ಎಲ್ಲರನ್ನೂ ತುಂಡಾಡಿದರು. ಆಕಸ್ಮಾತ್ತಾಗಿ ಸಂಶಯವು ಮುಂದೆ ಬಂದರೆ ಅದನ್ನೂ ತತ್ಕಾಲದಲ್ಲಿ ತುಂಡು ಮಾಡಿ ಒಗೆದು ಬಿಟ್ಟರು॥೧೨೫॥ ಈ ವೀರರು ಆಲಸ್ಯದ ಹೇಳ ಹೆಸರಿಲ್ಲದಂತೆ ಧೂಳೆಬ್ಬಿಸಿದರು. ನಿದ್ರೆಯನ್ನು ತಮ್ಮ ದಾಸೀಯನ್ನಾಗಿ ಮಾಡಿಬಿಟ್ಟರು. ಈ ಪ್ರಕಾರವಾಗಿ ಇವರು ಯೋಗ ರೂಪ ಕೋಟೆಯಲ್ಲಿ ಅಹೋರಾತ್ರಿ ಯುದ್ಧವನ್ನು ಮಾಡಿದರು॥೧೨೬॥ ಆ ಯಾವ ರಣರಂಗದಲ್ಲಿನ ವೀರರು ಮಹಾ ಪರಾಕ್ರಮಿಗಳಾಗಿದ್ದರು. ಇವರು ತಮ್ಮ ಸಾಮರ್ಥ್ಯದಿಂದ ಮುಂದೆ ನಡೆದರು. ಅಲ್ಲಿ ಸತರಾವೀ ಜೀವನ ಕಲೆ ಅಂದರೆ ಬ್ರಹ್ಮರಂಧ್ರರಿಂದ ಹೊರಟು ಕೂಡಿರುವ ಅಮೃತದ ಕೆರೆಯನ್ನು ಆ ಯಾವ ವೀರರು ತಮ್ಮ ಸ್ವಾಧೀನಮಾಡಿಕೊಂಡು ದೊಡ್ಡ ವಿಜಯವನ್ನು ಪ್ರಾಪ್ತಮಾಡಿಕೊಂಡರು॥೧೨೭॥ ಅಲ್ಲಿ ಭಯಂಕರವಾದ ಯುದ್ಧವು ಜರುಗಿತು. ಈ ಯುದ್ಧದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವರನ್ನು ಕೊಂದುಹಾಕಿದರು. ಇವರ ತೇಜವಾದ ಖಡ್ಗವು ಝಳಪಿಸುತ್ತಿತ್ತು ॥೧೨೮॥ ಈ ಪ್ರಕಾರವಾಗಿ ಶತ್ರುಗಳವರನ್ನು ರಣರಂಗದಲ್ಲಿ ಕೊಂದುಹಾಕಿ ಇವರು ಸತರಾವಿಯಪಾನ ಅಂದರೆ ಅಮೃತದ ಪ್ರಾಶನವನ್ನು ಮಾಡಿದರು. ಆಗ ಕೋಟೆಯಲ್ಲಿನ ಅನಾಹತದ ಧ್ವನಿಯು ಜೋರು ಜೋರಾಗಿ ಕೇಳಿಸಹತ್ತಿತು॥೧೨೯॥ ''ಸೋಹಂ'' ವೀರರ ಏಕಾಗ್ರತೆಯಾಗುತ್ತಲೇ ಕೋಟೆಯಲ್ಲಿನ ಎಲ್ಲ ಭೇದಗಳೂ ಕೈ ಸೇರಿದವು. ಇದನ್ನು ಕೇಳಿದಾಕ್ಷಣವೇ ಈ ಯಾವ ಕೋಟೆಯ ರಕ್ಷಣೆಯನ್ನು ಮಾಡುತ್ತಿರುವ ಅಹಂ, ಮಮತೆ ಇವರು ಸಾಯಲು ನಿಂತರು॥೧೩೦॥

ಕಾಮ ಕ್ರೋಧಾದಿ ಮಹಾ ಮಹಾಶೂರ ಪುತ್ರರು ಯುದ್ಧದಲ್ಲಿ ಮಡಿದಿರುವುದನ್ನು ಕಂಡು ಅಹಂತಾ, ಮಮತಾ ಇವರು ಅತ್ಯಂತ ದುಃಖಿಗಳಾಗಿ ಮರಣದ ಬಾಗಿಲ ಬಳಿ ಬಂದು ಕುಳಿತರು ॥೧೩೧॥

ಐಸೀ ಐಕೋನಿ ದುರ್ಗಾಚಿ ವಾರ್ತಾ । ಉಲ್ಹಾಸು ವೀರಾಂಚಿಯಾ ಚಿತ್ತಾ । ಉಠಾವಾ ದಿಧಲಾ ಮಾಗುತಾ। ದುರ್ಗ ಸರ್ವಥಾ ಘ್ಯಾವಯಾ ॥೧೩೨॥ ನಿಜಧೈರ್ಯೆಂ ವೀರ ಅದಟ । ನಿಜಸತ್ತ್ವೆಂ ಅತಿ ಉದ್ಭಟ । ಪುಢೇ ನಿರ್ಧಾರಿತಾ ವಾಟ । ಥೋರ ಅಚಾಟ ದೇಖಿಲೇ ॥೧೩೩॥ ಕರ್ಮರೇಣೂಂಚೇ ದುರ್ಧರ ಘಾಟ । ವಿಧಿವಾದೇ ಅವಘಡ ವಾಟ । ಹಳೂ ಹಳೂ ಉಲ್ಲಂಘಿತಾ ಅಚಾಟ । ಸಮೂಳ ಸಪಾಟ ತೋಂ ಕೇಲಾ ॥೧೩೪॥ ಪುಢಾ ರಜತಮಾಚೇ ಆಗಡ । ಖೋಲಪಣೇ ಅತ್ಯಂತ ಗೂಢ । ಘಾಲೂನಿ ನಿವೃತ್ತೀಚೇ ದಗಡ । ಸತ್ತ್ವೆಂ ಸದೃಢ ಬೂಜಿಲೇ ॥೧೩೫॥ ಸಾಂಚಲೂ ನವ್ಹತಾ ಬಾಹೇರಿ । ಜಿಂಕೋನಿ ಮನಕರ್ಣೀಕಾ ವೋವರೀ । ಮಾಳ ನ ಚಢವಿಲೀ ಬ್ರಹ್ಮಗಿರೀ । ಬ್ರಹ್ಮರಂಧ್ರೀಂ ಉಸಳಲೇ ॥೧೩೬॥ ತೇಥ ಜೈತಾಚೀ ಏಕ ಘಾಯೀಂ । ಅನುಹತ ನಿಶಾಣ ಲಾಗಲೇ ಪಾಹೀಂ। ಶೋಧಿತಾ ಪಾರಖೇ ಕೋಣೀ ನಾಹೀಂ । ಕೇಲೇ ಠಾಯೀಂ ಸ್ವವಶ ॥೧೩೭॥ ತೇಥ ರಜತಮಾಚ್ಯಾ ವಾಟಾ । ಸಹಜೇ ಝಾಲ್ಯಾ ಸಪಾಟಾ । ಹರಿಖೇ ರಾಮರಾಜ್ಯಾಚಾ ಚೋಹಟಾ । ಧೇಂಡೇ ದಾರವಂಟಾ ಪಿಟಿಲೇ ॥೧೩೮॥ ಪಾರಿಖೇ ಕೋಣೀ ನ ಪಡೇ ದೃಷ್ಟೀಂ । ಧ್ಯಾನ ಖಡ್ಗಾಚೀ ಸೋಡಿಲೀ ಮುಷ್ಟೀಂ । ವೈರಾಗ್ಯ ಕವಚಾಚಿಯಾ ಗಾಂಠೀ । ಸಮದೃಷ್ಟೀಂ ಸೋಡಿಲ್ಯಾ ॥೧೩೯॥ ಧೇಯ ಧ್ಯಾನ ಧ್ಯಾತಾ । ತ್ರಿಪುಟೀ ನ ದಿಸೇ ಪಾಹತಾ । ಧ್ಯಾನ ಖಡ್ಗ ತತ್ತ್ವತಾ । ನ ಧರೀ ಸರ್ವಥಾ ಯಾ ಹೇತು ॥೧೪೦॥ ದಾರುಣ ಯುದ್ಧಸಾಮಗ್ರೀ । ಸತ್ತ್ವೆಂ ಕೇಲಿ ಹೋತೀ ಭಾರೀ । ತೇ ಸಾಧನೇ ಸಾಂಡಿಲೀ ದುರೀ । ಕೋಣೀ ವೈರೀ ಅಸೇನಾ ॥೧೪೧॥ ತನ್ಮಯತೇಚೇ ಛತ್ರ ಧರೂನಿ । ಸಮಸಾಮ್ಯ ಸಿಂಹಾಸನೀ । ಬೈಸಲಾ ಸಹಜ ಸಮಾಧಾನೀ । ತ್ಯಾಗೀ ವೋವಾಳುನೀ ಜೀವಭಾವೋ ॥೧೪೨॥ ಶೋಧಿತ ವಾಢಲಾ ಸತ್ತ್ವಗುಣ । ತೇಣೇ ಸರ್ವಸ್ವೆಂ ಕೇಲೇ ನಿಂಬಲೋಣ । ಪಾಯಾ ಲಾಗೋನಿ ಆಪಣ । ಸ್ವಯೇಂ ಜಾಣ ಉಪರಮಲಾ ॥೧೪೩॥ ಜೈಸಾ ಅಗ್ನಿ ಅಸೇ ಕಾಷ್ಠಾಂಚ್ಯಾ ಮೇಳೀಂ । ಮಂಥಿಲ್ಯಾ ಕಾಷ್ಠಾಚೀ ಕರೀ ಹೋಳೀಂ । ಕಾಷ್ಠ ನಾಶೂನಿ ತತ್ಕಾಳೀಂ । ತ್ಯಜೂನಿ ಇಂಗಳೀ ಉಪಶಮೇ ॥೧೪೪॥ ತೈಸೀ ವಾಢೋನಿ ಸತ್ತ್ವ ಉತ್ತಮ । ನಾಶೂನಿ ಸಾಂಡೀ ರಜತಮ । ಪಾಠೀ ಸತ್ತ್ವಾಚಾಹೀ ಸಂಭ್ರಮ । ಸ್ವಯೇ ಉಪರಮ ಪಾವಲಾ ॥೧೪೫॥ ತೇಥೇ ನಿಮಾಲೇ ಜಿವಾಚೇ ಜೀವಪಣ । ಜ್ಞಾತೃತ್ವೆಂಸೀ ನಿಮಾಲೇ ಜ್ಞಾನ । ನಿಮಾಲೇ ಪ್ರಪಂಚಾಚೇ ಭಾನ । ಚಿನ್ಮಾತ್ರ ಪೂರ್ಣ ಕೋಂದಲೇ ॥೧೪೬॥

ಹೀಗೆ ಕಿಲ್ಲೆಯಲ್ಲಿನ ಈ ಎಲ್ಲ ಸಮಾಚಾರಗಳನ್ನು ಕೇಳಿ ಈ ವೀರರಿಗೆ ಇನ್ನೂ ಹೆಚ್ಚಾದ ಶೌರ್ಯವು ಬೆಳೆಯಿತು. ಮತ್ತು ಈ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಲು ದೃಢನಿಶ್ಚಯ ಮಾಡಿದರು॥೧೩೨॥ ಈ ವೀರರು ಮಹಾಧೈರ್ಯಶಾಲಿಯಾಗಿದ್ದರು. ಇವರ ಪರಾಕ್ರಮವು ಪ್ರಸಿದ್ಧವಾಗಿತ್ತು. ಮುಂದಿನ ಮಾರ್ಗವನ್ನು ಇವರು ನಿಶ್ಚಿತಗೊಳಿಸುತ್ತಿರಲು ಇವರಿಗೆ ದೊಡ್ಡದಾದ ಚಮತ್ಕಾರವು ಕಂಡಿತು ॥೧೩೩॥ ಕರ್ಮರೇಣು ಅಂದರೆ ವಾಸನೆ ಎಂಬ ಬಹು ಅವಘಡವಾದ ಘಾಟವಿತ್ತು. ವಿಧಿವಾದದ ದಾರಿಯು ಸಹ ಅತಿಶಯ ದುರ್ಗಮವಾಗಿತ್ತು. ಆದರೂ ಮೆಲ್ಲಮೆಲ್ಲನೇ ಏರುತ್ತ ಹೋಗಿ ಆ ಎಲ್ಲ ಘಾಟವನ್ನು ಸಪಾಟವನ್ನಾಗಿ ಮಾಡಿದರು॥೧೩೪॥ ತದನಂತರ ಇವರಿಗೆ ರಜತಮಗಳೆಂಬ ಕಂದಕಗಳು ಅಡ್ಡಾದವು. ಅವು ಅತಿಶಯವಾಗಿ ಆಳವಾಗಿದ್ದವು. ಅವುಗಳಲ್ಲಿ ನಿವೃತ್ತಿಗಳ ಕಲ್ಲುಗಳನ್ನು ಒಗೆದು ಬೇಗನೇ ಅವುಗಳನ್ನು ಮುಚ್ಚಿ ಹಾಕಿದರು॥೧೩೫॥ ಹೊರಗಡೆ ಯಾವ ದುರ್ವ್ಯವಹಾರವಿದ್ದಿಲ್ಲ. ಆಗ ಅವರು ಮನೋರೂಪ ಕೋಟೆಯನ್ನು ಜಯಿಸಿದರು. ಬ್ರಹ್ಮಗಿರಿಯ ಮೇಲೆ ವಿಜಯಧ್ವಜವನ್ನು ಏರಿಸಿದರು. ಮತ್ತು ಬ್ರಹ್ಮರಂಧ್ರದಲ್ಲಿ ಸೇರಿಕೊಂಡರು ॥೧೩೬॥ ಆಗ ಅವರ ವಿಜಯೋತ್ಸವವು ಎಲ್ಲೆಲ್ಲಿಯೂ ಗಡಬಡಿಸಿತು. ಅನುಹತದ ನಗಾರಿಯು ಬಾರಿಸಿತು. ಆ ಕೋಟೆಯಲ್ಲಿ ಶೋಧಿಸಿ ನೋಡಿದರೂ ಯಾರೂ ಸಿಗಲಿಲ್ಲ. ಎಲ್ಲವೂ ಇವರ ಸ್ವಾಧೀನವಾಯಿತು॥೧೩೭॥ ಅಲ್ಲಿಯ ರಜತಮಗಳ ದಾರಿಯು ಸಹಜವಾಗಿ ಸಪಾಟವಾಗಿತ್ತು. ನಾಲ್ಕೂ ಕಡೆಗಳಲ್ಲಿ ರಾಮರಾಜ್ಯದ ಡಂಗುರವನ್ನು ಸಾರಲಾಯಿತು॥೧೩೮॥ ಅನ್ಯರಾರೂ ಅಲ್ಲಿ ಕಾಣಿಸದಾಗಲು ಆಗ ಧ್ಯಾನರೂಪ ಖಡ್ಗವನ್ನು ಮುಷ್ಟಿಯಿಂದ ಬಿಡಲಾಯಿತು. ಸಮದೃಷ್ಟಿಯಿಂದ ವೈರಾಗ್ಯದ ಕವಚಗಳ ಗಂಟುಗಳು ಬಿಚ್ಚಲ್ಪಟ್ಟವು. ॥೧೩೯॥ ಧ್ಯೇಯ, ಧ್ಯಾನ ಮತ್ತು ಧ್ಯಾತಾ ಈ ತ್ರಿಪುಟಿಗಳನ್ನು ನೋಡಿದರೂ ಎಲ್ಲಿಯೂ ಕಾಣದಾಯಿತು. ಆಗ ಧ್ಯಾನರೂಪ ಖಡ್ಗದ ಯಾವ ಅವಶ್ಯಕತೆಯೂ ಬೀಳಲಿಲ್ಲ ॥೧೪೦॥ ಸತ್ವವು ಯುದ್ಧದ ಎಲ್ಲ ಸಾಮುಗ್ರಿಗಳನ್ನು ಕೂಡಿಸಿತ್ತು. ಅವುಗಳನ್ನೆಲ್ಲವನ್ನೂ ದೂರ ಚೆಲ್ಲಿಬಿಟ್ಟರು. ಏಕೆಂದರೆ ಇವರೆದುರಿನಲ್ಲಿ ಶತ್ರುಗಳು ಯಾರೂ ಇರಲಿಲ್ಲದಾಯಿತು ॥೧೪೧॥ ಆಗ ತನ್ಮಯತೆ ಎಂಬ ಛತ್ರಿಯನ್ನು ಹಿಡಿದು ಸಮಸಾಮ್ಯದ ಸಿಂಹಾಸನದ ಮೇಲೆ ಜೀವವು ಸಿಂಹಾಸನಾರೂಢವಾಯಿತು. ತನ್ನ ಜೀವಭಾವವನ್ನು ತ್ಯಜಿಸಿಬಿಟ್ಟಿತು ॥೧೪೨॥ ತದನಂತರ ಶುದ್ಧವಾದ ಸತ್ವಗುಣವು ಬೆಳೆಯಿತು. ಅದು ಜೀವದ ಮೇಲಿಂದ ಎಲ್ಲವನ್ನೂ ನಿವಾಳಿಸಿ ಒಗೆಯಿತು. ಮತ್ತು ಆತನ ಚರಣಸ್ಪರ್ಶವನ್ನು ಮಾಡಿ ಅದು ಸ್ವತಃ ಆತ್ಮಸ್ವರೂಪದಲ್ಲಿ ವಿಲೀನವಾಗಿಬಿಟ್ಟಿತು॥೧೪೩॥ ಅಗ್ನಿಯು ಕಟ್ಟಿಗೆಗಳಲ್ಲಿ ಗುಪ್ತರೂಪದಲ್ಲಿ ವಾಸವಾಗಿರುತ್ತದೆ. ಅವುಗಳನ್ನು ಮರ್ದಿಸಲು ಅಗ್ನಿಯು ಪ್ರಕಟವಾಗುವುದು. ಹಾಗೂ ಕಟ್ಟಿಗೆಗಳನ್ನೇ ಸುಟ್ಟು ಹಾಕುವುದು. ಕೊನೆಯಲ್ಲಿ ಅಗ್ನಿಯ ಕಿಡಿಗಳೂ ಕೂಡ ಶಾಂತವಾಗುವುವು॥೧೪೪॥ ಅದರಂತೆ ಸತ್ವಗುಣದ ವೃದ್ಧಿಯಾಯಿತೆಂದರೆ ಅದು ಕೂಡಲೇ ರಜ ಮತ್ತು ತಮ ಗುಣಗಳನ್ನು ನಾಶಮಾಡುವುದು ಮತ್ತು ಕೊನೆಯಲ್ಲಿ ಅದರ ವೇಗವೂ ಕೂಡ ತನಗೆ ತಾನೇ ಶಾಂತವಾಗುವುದು ॥೧೪೫॥ ಆ ಸಮಯದಲ್ಲಿ ಜೀವದ ಜೀವತ್ವವು ಇಲ್ಲದಾಗುವುದು. ಜ್ಞಾತೃತ್ವಸಹ ವರ್ತಮಾನ ಜ್ಞಾನವು ಲಯವಾಗುವುದು. ಪ್ರಪಂಚದ ಪರಿವೆಯು ಇಲ್ಲದಾಗುವುದು. ಚಿನ್ಮಯವಾದ ಸುಖವು ಮಾತ್ರ ಎಲ್ಲೆಲ್ಲಿಯೂ ತುಂಬಿರುವುದು ॥೧೪೬॥

ತದೈವಮಾತ್ಮನ್ಯ ವರುದ್ಧಚಿತ್ತೋ ನ ವೇದ ಕಿಂಚಿತ್ ಬಹಿರಂತರಂ ವಾ।
ಯಥೇಷು ಕಾರೋ ನೃಪತಿಂ ವ್ರಜಂತಮಿಷೌ ಗತಾತ್ಮಾ ನ ದದರ್ಶ ಪಾರ್ಶ್ವೇ ।।೧೩।।

ಅರ್ಥ :- ಈ ಪ್ರಕಾರವಾಗಿ ಯಾರ ಚಿತ್ತವು ತನ್ನ ಆತ್ಮನಲ್ಲಿ ಸ್ಥಿರವಾಗಿದೆಯೋ, ಆತನಿಗೆ ಹೊರಗಿನ ಪದಾರ್ಥಗಳ ಯಾವ ಅರಿವೂ ಇರುವುದಿಲ್ಲ. ಬಾಣಗಳನ್ನು ತಯಾರಿಸುವ ಒಬ್ಬ ಕಮ್ಮಾರನು ಬಾಣವನ್ನು ತಯಾರಿಸುವುದರಲ್ಲಿ ಎಷ್ಟೊಂದು ನಿಮಗ್ನನಾಗಿದ್ದನೆಂದರೆ, ಆತನ ಸಮೀಪವೇ ವಾದ್ಯಗಳ ಘೋಷವನ್ನು ಮಾಡುತ್ತ ನಡೆದಿರುವ ರಾಜನ ಮೆರವಣಿಗೆಯು ಆತನಿಗೆ ಕಾಣಲಿಲ್ಲ.

ಐಸೀ ಚಿನ್ಮಾತ್ರ ಪರಿಪೂರ್ಣತಾ । ತೇಥ ನಿರೋಧೂನಿ ಆಣಿತಾ ಚಿತ್ತಾ । ಚಿತ್ತ ಪಾವೇ ಚೈತನ್ಯತಾ । ಜಾಣ ಸರ್ವಥಾ ನರವೀರಾ ।।೧೪೭।। ತೇವ್ಹಾ ಅಂತರೀ ಚೈತನ್ಯಘನ । ಬಾಹ್ಯ ಚಿನ್ಮಾತ್ರ ಪರಿಪೂರ್ಣ । ಆಣಿಕ ನ ದಿಸೇ ಗಾ ಜಾಣ । ವೃತ್ತೀನೇ ಆಣ ವಾಹಿಲೀ ।।೧೪೮।। ಪಾಹತಾ ಧ್ಯೇಯ ಧ್ಯಾತಾ ಧ್ಯಾನ । ಜೇಥ ಉಲ್ಹಾಸೇ ವಿಗುಂತಲೇ ಮನ । ತೇ "ಸಂಪ್ರಜ್ಞಾತಸಮಾಧೀ" ಜಾಣ । ಗುಣೇವೀಣ ಭೋಗಿತೀ ।।೧೪೯।। ತೇಥ ನಿಃಶೇಷ ಸಮರಸೇ ಮನ । ಝಾಲಾ ಸುಖರೂಪ ಚಿದ್‌ಘನ । ತೇ ಸಮಾಧೀ ಪರಮ ಕಾರಣ । ವಿಲಕ್ಷಣ ಬೋಲತೀ ।।೧೫೦।। ಬ್ರಹ್ಮ ಇಂದ್ರಿಯಾ ಗೋಚರ ನಸೇ । ಗುಣ ಗೇಲಿಯಾ ಡೋಳಾ ದಿಸೇ । ಹೇ ಅನುಭವ್ಯಾಸೀಚಿ ಭಾಸೇ । ಬೋಲಾವೇ ಐಸೇ ತೇ ನವ್ಹೇ ।।೧೫೧।। ಯೇಥ ಶಾಸ್ತ್ರೇ ವಿಷಮ ಝಾಲೀ ವಾದೇ । "ನೇತಿ ನೇತಿ" ಮ್ಹಣಿತಲೇ ವೇದೇ । ಥೋಟಾವಲೀ ಯೋಗಿವೃಂದೇ । ಅನುಭವೀ ನಿಜಬೋಧೇ ಜಾಣತೀ ।।೧೫೨।। ತೇಥ ಹೇತು - ಮಾತು - ದೃಷ್ಟಾಂತು । ಸಮೂಳ ಬುಡಾಲಾ ಸಮಸ್ತು । ಅದ್ವೈತವಾದಾಚೀ ಮಾತು । ಜ್ಯಾ ಠಾಯಾಂತು ಲಾಜಿಲೀ ।।೧೫೩।। ಸಬಾಹ್ಯ ಸಮದರ್ಶನ । ಹೇ ಅನುಭವಾಚೀ ನಿರ್ವಾಣಖೂಣ । "ಶರಕಾರ" ಗುರು ಕೇಲಾ ಜಾಣ । ಹೇಚಿ ಲಕ್ಷಣ ಲಕ್ಷುನಿ ।।೧೫೪।। ತಾವೂನಿ ಉಜೂ ಕರಿತಾ ಬಾಣ । ದೃಢ ಲಾಗಲೇ ಅನುಸಂಧಾನ । ಇತುಕೇನ ಪ್ರಪಂಚಾಚೇ ಭಾನ । ಖುಂಟಲೇ ಜಾಣ ತಯಾಚೇ ।।೧೫೫।। ನಿಶಾಣ ಭೇರಿ ವಾಜಂತರೇ । ರಥ ಗಜ ಸೈನ್ಯ ಸಂಭಾರೇ । ರಾಜಾ ಗೇಲಾ ಅತಿಗಜರೇ । ನೇಣಿಜೇ ಶರಕಾರೇ ಶರದೃಷ್ಟೀ ।।೧೫೬।। ಮಾಗೂನಿ ರಾಯಾಚಾ ಹಡಪೀ ಆಲಾ । ತೋ ಪುಸೇ ಯೇ ಮಾರ್ಗೀ ರಾಜಾ ಗೇಲಾ । ಯೇರು ಮ್ಹಣೇ ನಾಹೀ ದೇಖಿಲಾ । ಗೇಲಾ ಕೀ ನ ಗೇಲಾ ಕೋಣ ಜಾಣೇ ।।೧೫೭।। ತೋ ಶರಕಾರೂ ದೇಖಿಲಾ ದೃಷ್ಟೀ । ಹೇ ಐಕೋನಿ ತಯಾಚೀ ಗೋಷ್ಟೀ । ಜಗೀ ಏಕಾಗ್ರತಾ ಮೋಠೀ । ಪ್ರಪಂಚ ದೃಷ್ಟೀ ಯೇವೋ ನೇದೀ।।೧೫೮।।

ಹೇ ಪುರುಷ ಶ್ರೇಷ್ಠನೇ, ಹೀಗೆ ಪರಿಪೂರ್ಣವಾಗಿ ತುಂಬಿರುವ ಚಿನ್ಮಾತ್ರ ಸ್ವರೂಪದಲ್ಲಿ ಚಿತ್ತಕ್ಕೆ ನಿರೋಧಿಸಿ ತಂದರೆ, ಆಗ ಆ ಚಿತ್ತಕ್ಕೂ ಅಲ್ಲಿ ಚೈತನ್ಯ ಸ್ವರೂಪವು ಪ್ರಾಪ್ತವಾಗುವುದೆಂದು ನೀನು ತಿಳಿ ।।೧೪೭।। ಆ ಸಮಯದಲ್ಲಿ ಒಳಹೊರಗೆ ಪರಿಪೂರ್ಣವಾಗಿ ಚೈತನ್ಯವುತುಂಬಿರುವುದು ತೋರುವುದು. ಬೇರೆ ಏನೂ ಕಾಣುವುದಿಲ್ಲ. ವೃತ್ತಿಯು ವ್ಯಕ್ತವಾಗದಂತೆ ಪ್ರತಿಜ್ಞೆಯನ್ನೇ ಮಾಡಿರುವರು ।।೧೪೮।। ಧ್ಯೇಯ, ಧ್ಯಾತಾ, ಧ್ಯಾನ ಈ ಮೂರನ್ನೂ ಒಂದೇಯಾಗಿ ಕಂಡರು. ಅಂದರೆ ಮನವು ಉತ್ಸಾಹದಿಂದ ಅದರಲ್ಲಿ ಸಿಲುಕಿಕೊಳ್ಳುವುದು. ಇದಕ್ಕೆ ಸವಿಕಲ್ಪ ಸಮಾಧಿ ಎಂದುಹೇಳುವರು. ಯಾವ ಗುಣವಿಲ್ಲದೇ ಇದರ ಉಪಭೋಗವನ್ನು ತೆಗೆದುಕೊಳ್ಳುವರು ।।೧೪೯।। ಅಲ್ಲಿ ಮನವು ಪರಿಪೂರ್ಣವಾಗಿ ಸಮರಸವಾಗುವುದು ಮತ್ತು ಜೀವವು ಸುಖರೂಪ ಚಿತ್‌ಘನವಾಗುವುದು. ಜ್ಞಾನಿ ಜನರು ಈ ಸಮಾಧಿಗೆ ಅತ್ಯಂತ ಶ್ರೇಷ್ಠವೆನ್ನುವರು ।।೧೫೦।। ಬ್ರಹ್ಮವು ಇಂದ್ರಿಯಗಳಿಗೆ ಗೋಚರಿಸುವುದಿಲ್ಲ. ಆದರೆ ಗುಣಾತೀತನಾದ ಮೇಲೆ ನೇತ್ರಗಳಿಗೆ ಅದೆಲ್ಲವೂ ತೋರುವುದು. ಅನುಭವ ಪಡೆಯುವವರಿಗೆ ಅದರ ಪ್ರಚೀತಿ ಬರುವುದು. ಇದನ್ನೂ ಶಬ್ದಗಳಿಂದ ಹೇಳಿ ತಿಳಿಸಲು ಬರುವುದಿಲ್ಲ ।।೧೫೧।। ಈ ವಿಷಯಕ್ಕೆ ವಾದಗಳನ್ನು ಮಾಡಿ ಮಾಡಿ ಶಾಸ್ತ್ರಗಳು ಒಂದಕ್ಕೊಂದು ವಿರೋಧವಾದವು. ವೇದವು ಕೊನೆಗೆ ನೇತಿ ನೇತಿ ಎಂದಿತು. ಸರ್ವ ಯೋಗಿಗಳ ಸಮುದಾಯವು ಸ್ತಬ್ಧಗೊಂಡಿತು. ಇದಕ್ಕೆ ಅನುಭವಿ ಪುರುಷರೇ ಆತ್ಮಜ್ಞಾನದಿಂದ ಅರಿಯಬಲ್ಲರು ।।೧೫೨।। ಇಲ್ಲಿ ಯಾವ ಹೇತು, ಮಾತು, ದೃಷ್ಟಾಂತ ಇತ್ಯಾದಿ ಎಲ್ಲವೂ ಮುಳುಗಿ ಹೋಗುವುವು. ಅದ್ವೈತವಾದವೂ ಅಲ್ಲಿ, ಪ ಹಿ ನಡೆಯಲಾರದು ।।೧೫೩।। ಒಳ ಹೊರಗೆ ಸಮದೃಷ್ಟಿಯನ್ನು ಇಡುವುದೇ ಅನುಭವದ ನಿರ್ವಾಣಿಯ ಗುಟ್ಟಾಗಿರುವುದು. ಅದಕ್ಕಾಗಿ ನಾನು ಬಾಣವನ್ನು ತಯಾರಿಸುವ ಕಮ್ಮಾರನನ್ನು ಗುರುವನ್ನಾಗಿ ಮಾಡಿಕೊಂಡೆನು ।।೧೫೪।। ಅವನು ಬಾಣವನ್ನು ಸರಳವನ್ನಾಗಿ ಮಾಡುತ್ತಿದ್ದನು. ಅವನ ಎಲ್ಲ ಲಕ್ಷವು ಅದರಲ್ಲಿ ಗುಂತಾಯಿಸಿತ್ತು. ಇದರಿಂದ ಇವನಿಗೆ ಆಗ ಪ್ರಪಂಚದ ಅರಿವು ಇಲ್ಲದಾಯಿತು ।।೧೫೫।। ಇವನ ಸಮೀಪದಲ್ಲಿಯೇ ಒಬ್ಬ ರಾಜನ ಸವಾರಿಯು ಅನೇಕ ವಾದ್ಯಗಳಿಂದ, ಆನೆ, ಸೈನ್ಯ ಸಮೇತವಾಗಿ ಬಹು ಸಮಾರಂಭದಿಂದ ಹಾಡುತ್ತಾ ಬಾರಿಸುತ್ತಾ ಹೋಯಿತು. ಆದರೂ ಆ ಯಾವ ಕಮ್ಮಾರನ ದೃಷ್ಟಿಯು ಆ ತಯಾರಿಸುತ್ತಿರುವ ಬಾಣದತ್ತ ಏಕಾಗ್ರತೆಯಾದ್ದರಿಂದ ಆತನಿಗೆ ರಾಜನ ಸವಾರಿಯ ಯಾವ ಪತ್ತೆಯು ಇರಲಿಲ್ಲ ।।೧೫೬।। ಇಷ್ಟರಲ್ಲಿ ಒಬ್ಬ ರಾಜಸೇವಕನು ಬಂದು "ರಾಜನು ಈ ಮಾರ್ಗದಿಂದ ಹೋದನೇ?" ಎಂದು ಆ ಕಮ್ಮಾರನಿಗೆ ಕೇಳಿದನು. ಆಗ ಕಮ್ಮಾರನು "ನಾನೇನೂ ನೋಡಲಿಲ್ಲ ಆತನು ಹೋದನೋ, ಇಲ್ಲವೋ ಎಂಬುದು ಯಾರು ಬಲ್ಲರು?" ಎಂದನು ।।೧೫೭।। ಹೀಗೆ ನಾನು ಆ ಬಾಣ ತಯಾರಿಸುವವನನ್ನು ಪ್ರತ್ಯಕ್ಷವಾಗಿ ಕಂಡೆನು. ಮತ್ತು ಆತನ ಹೇಳಿಕೆಯನ್ನು ಕೇಳಿಕೊಂಡೆನು. ಆಗ ನಾನು ಆತನಿಂದ ಬೋಧವನ್ನು ಸ್ವೀಕರಿಸಿಕೊಂಡೆನು. ಏಕಾಗ್ರತೆಯು ಅತ್ಯಂತ ಶ್ರೇಷ್ಠವಾಗಿರುವುದು. ಅದು ಕಣ್ಣಿಂದೆ ಪ್ರಪಂಚವನ್ನು ತಂದೊಡ್ಡುವುದಿಲ್ಲ ।।೧೫೮।।

ಹೇಚಿ ಸಾಧಾವಯಾ ಸಾಧನ । ಗೃಹರಂಭೇವೀಣ ಏಕಪಣ। "ಸರ್ಪ" ಗುರೂ ಕೇಲಾ ಜಾಣ । ಹೇಚಿ ಲಕ್ಷಣ
ದೇಖೋನಿ ।।೧೫೯।।

ಏಕಚಾರ್ಯನಿಕೇತಃ ಸ್ಯಾದಪ್ರಮತ್ತೋ ಗುಹಾಶಯಃ । ಅಲಕ್ಷ್ಯಮಾಣ ಆಚಾರೈರ್ಮುನಿರೇಕೋಽಲ್ಪಭಾಷಣಃ ।।೧೪।।

ಅರ್ಥ:- ಹೇ ರಾಜನೇ, ನಾನು ಸರ್ಪದಿಂದ ಇದನ್ನು ಕಲಿತುಕೊಂಡೆನು. ಏನೆಂದರೆ ಸನ್ಯಾಸಿಯು ಸರ್ಪದಂತೆ ಒಬ್ಬನೇ ಇರಬೇಕು. ಈತನು ಒಂದೇ ಸ್ಥಾನದಲ್ಲಿ ಸ್ಥಿರವಾಗಿ ಇರಕೂಡದು. ಯಾವಾಗಲೂ ದಕ್ಷತೆಯಿಂದಿರಬೇಕು. ಏಕಾಂತದಲ್ಲಿರಬೇಕು. ತನ್ನ ಸಂಚಾರದಲ್ಲಿ ತನ್ನನ್ನು ಯಾರೂ ಗುರುತಿಸಲಾರದಂತೆ ವರ್ತಿಸಬೇಕು. ಒಬ್ಬನೇ ಇರಬೇಕು. ಮಿತಭಾಷಿಯಾಗಿರಬೇಕು.

ಸರ್ಪ ಸಾಂಘಾತು ನ ಸಾಹೇ । ಏಕಾಕೀ ಸುಖೇ ವಿಚರತ ಜಾಯೇ । ಸದಾ ಸಾವಧಾನ ರಾಹೇ । ಶ್ವಾಸು
ವಾಯೇ ಜಾವೋ ನೇದೀ ।।೧೬೦।। ತೈಸೀಚ ಯೋಗಿಯಾಚೀ ಗತೀ । ನ ಸಾಹೇ ದ್ವೈತಾಚೀ ಸಂಗತೀ । ಏಕಾಕೀ
ವಸೇ ಏಕಾಂತೀ । ಜನಾಪ್ರತೀ ಅಲಕ್ಷ್ಯ ।।೧೬೧।। ವಿಷಮಾಚಾ ಸಂಗು ನ ಕರೀ । ಪರೀ ಸಮಾಚಾಹೀ ಸಂಗು ನ
ಧರೀ । ನಿಘೇ ದೇಹಸಂಗಾಬಾಹೇರೀ । ತ್ವಚೇಚೇ ಪರೀ ಸರ್ಪಾಚೇ ।।೧೬೨।। ಸದಾ ಸಾವಧಾನಬುದ್ಧೀ ।
ಲವನಿಮೇಷ ವಾಯಾ ಜಾವೋನೇದೀ । ಅನುಸಂಧಾನ ತ್ರಿಶುದ್ಧೀ । ತುಟೇ ನೇದೀ ಸರ್ವಥಾ ।।೧೬೩।। ಸರ್ಪ
ಬಿಳಾಮಾಜೀ ರಿಘೇ ಬಳೇ । ಮಾರ್ಗೀ ಮಾಗೂ ದೇಖತೀ ಸಕಳೇ । ಧಾಲಾ ಭುಕೇಲಾ ಹೇ ತ್ಯಾ ನ ಕಳೇ । ಗೇಲಾ
ಕಳೇ ಸರ್ಪಾಸೀ ।।೧೬೪।। ತೈಸಾಚಿ ಯೋಗಿಯಾಹೀ ಯೋಗಬಳೇ । ನ ರಾಹೇ ಜನಾಮಾಜೀ ಜನಮೇಳೇ ।
ಗುಹೇಮಾಜೀ ಪಡಿಲಾ ಲೋಳೇ । ಏಕಲಾ ಖೇಳೇ ಏಕಪಣೇ ।।೧೬೫।। ಹೋ ಕಾ ಯೋಗಿಯಾಂಚಾ ಆಚಾರ ।
ಕರಿತಾ ದೇಖತೀ ಲಹಾನ ಥೋರ । ಸವಿಕಲ್ಪ ನಿರ್ವಿಕಲ್ಪ ವಿಚಾರ । ನ ಕಳೇ ಸಾಚಾರ ಕೋಣಾಸೀ ।।೧೬೬।। ಏಕ
ಮ್ಹಣತೀ ಕರ್ಮಠ । ಏಕ ಮ್ಹಣತೀ ಕರ್ಮಭ್ರಷ್ಟ । ಏಕ ಮ್ಹಣತೀ ಆತ್ಮ ನಿಷ್ಠ । ಕಳೇನಾ ಸ್ಪಷ್ಟ ಕೋಣಾಸೀ ।।೧೬೭।।
ಸರ್ಪಾಸ ಬೋಲಣೇಚಿ ನಾಹೀ । ಬೋಲೇ ತರೀ ಅಲ್ಪ ಕಾಂಹೀ । ತೈಸಾಚ ಯೋಗಿಯಾ ಪಾಹೀ । ವಾಗ್ವಾದೀ
ನಾಹೀ ಸಾದರ ।।೧೬೮।। ಆಂತುಲೇ ಕೃಪೇಚೇನಿ ಬಳೇ । ಬೋಲೇ ಮೃದು ಮಂಜುಳಕೋವಳೇ । ಶ್ರವಣಾಸೀ
ದೋಂದೇ ಏಕವೇಳೇ । ತೇಣೇ ವಚನಮೇಳೇ ನಿಘಾಲೀ।। ೧೬೯ ।। ಬೋಲಣೇ ತರೀ ಅತಿ ಅಲ್ಪ। ಪರೀ ಭೇದೀ
ಸಂಕಲ್ಪ ವಿಕಲ್ಪ। ತ್ಯಾಚ್ಯಾ ಬೋಲಾಚೇ ಸ್ವರೂಪ। ಸತ್ಯ ಸಂಕಲ್ಪ ಜಾಣತೀ।। ೧೭೦।। ಜೋ ಏಕಾಕೀ ಉದಾಸ।
ಜ್ಯಾಚೇ ಪರಮಾರ್ಥೀ ಮಾನಸ । ತೇಣೇ ಗೃಹಾರಂಭಾಚೇ ಆಸ । ವೃಥಾ ಪ್ರಯಾಸ ನ ಕರಾವೇ ।।೧೭೧।।

ಈ ಸಾಧನೆಯನ್ನು ಸಾಧಿಸುವುದಕ್ಕಾಗಿ ಗೃಹಾರಂಭವಿಲ್ಲದೇ ಒಬ್ಬನೇ ಇರುವುದು ಯೋಗ್ಯವೆಂದು ತಿಳಿದು ಸರ್ಪದಲ್ಲಿರುವ ಈ ಲಕ್ಷಣವನ್ನು
ಕಂಡು ನಾನು ಅದನ್ನು ಗುರುವನ್ನಾಗಿ ಮಾಡಿಕೊಂಡೆನು ।।೧೫೯।।

ಸರ್ಪಕ್ಕೆ ಇತರರೊಡನೆ ಕೂಡಿಕೊಂಡು ಇರುವಿಕೆಯು ಸ್ವಲ್ಪವೂ ಸಹಿಸುವುದಿಲ್ಲ. ಅದು ಒಂಟಿಯಾಗಿಯೇ ಸುಖವಾಗಿ
ತಿರುಗಾಡುತ್ತಿರುವುದು. ಇದು ಯಾವಾಗಲೂ ದಕ್ಷತೆಯಿಂದ ಇರುವುದು. ತನ್ನ ಉಸಿರಾಡುವಿಕೆಯನ್ನು ವ್ಯರ್ಥಗೊಳಿಸುವುದಿಲ್ಲ ।।೧೬೦।।
ಯೋಗಿಯ ಸ್ಥಿತಿಯೂ ಕೂಡ ಹಾಗೆಯೇ ಇರುವುದು. ಆತನಿಗೆ ದ್ವೈತದ ಸಂಗತಿಯು ಸಹಿಸುವುದಿಲ್ಲ. ಜನರಿಗೆ ಕಾಣಲಾರದಂತಹ ಏಕಾಂತದಲ್ಲಿ
ಹೋಗಿ ಆತನು ಒಬ್ಬನೇ ಕುಳಿತುಕೊಳ್ಳುವನು ।।೧೬೧।। ಪ್ರತಿಕೂಲವಾಗಿರುವ ಜನರ ಸಂಗತಿಯನ್ನು ಈತನು ಎಂದೂ ಮಾಡುವುದಿಲ್ಲ.
ಅನುಕೂಲಕರವಾಗಿರುವರ ಸಂಗತಿಯಲ್ಲಿಯೂ ಈತನು ಇರಲಾರನು. ಸರ್ಪವು ತನ್ನ ಪರಿಯನ್ನು ಬಿಚ್ಚಿ ಒಗೆಯುವಂತೆ ಯೋಗಿಯು
ದೇಹಸಂಗದಿಂದ ಹೊರಗಾಗುವನು ।।೧೬೨।। ಈತನು ಯಾವಾಗಲೂ ದಕ್ಷನಾಗಿರುವನು, ಒಂದು ಕ್ಷಣವೂ ಕೂಡ ವ್ಯರ್ಥ ಕಳೆಯುವುದಿಲ್ಲ.
ಈತನು ತನ್ನ ಸ್ವರೂಪಾನುಸಂಧಾನವನ್ನು ಎಂದಿಗೂ ಬಿಟ್ಟು ಕೊಡುವುದಿಲ್ಲ ।।೧೬೩।। ಸರ್ಪವು ತಾನಾಗಿಯೇ ತನ್ನ ಹುತ್ತಿನಲ್ಲಿ
ಸೇರಿಕೊಳ್ಳುವುದು. ಆಗ ಅದು ಹೋಗಿರುವ ಮಾರ್ಗದಲ್ಲಿ ಅದರ ಶರೀರದ ಗುರುತು ನೆಲದಲ್ಲಿ ಮೂಡಿರುವುದು. ಇದರಿಂದ ನೋಡಿದವರಿಗೆ
ಅದು ತೃಪ್ತವಾಗಿದೆಯೋ ಹಸಿದುಕೊಂಡಿದೆಯೋ ಎಂಬುದು ಯಾರಿಗೂ ಏನೂ ತಿಳಿಯುವುದಿಲ್ಲ. ಇಲ್ಲಿಂದ ಅಲ್ಲಿಗೆ ಹೋಯಿತೆಂಬುದಷ್ಟೇ
ತಿಳಿಯುವುದು ।।೧೬೪।। ಇದೇ ಪ್ರಕಾರವಾಗಿ ಯೋಗಿಯೂ ಸಹ ತನ್ನ ಯೋಗಬಲದಿಂದ ಜನರ ಸಮೂಹದಲ್ಲಿ ಇರಲಾರನು. ಈತನು
ಗುಹೆಯಲ್ಲಿ ಸುಖವಾಗಿ ಇರುವನು. ಹಾಗೂ ತಾನು ತನ್ನಲ್ಲಿಯೇ ಕ್ರೀಡಿಸುತ್ತಿರುವನು ।।೧೬೫।। ಯೋಗಿಗಳ ವರ್ತನೆಯನ್ನು ಚಿಕ್ಕವರೂ,
ದೊಡ್ಡವರೂ ಹೀಗೆ ಎಲ್ಲರೂ ನೋಡುತ್ತಿರುವರು. ಇಷ್ಟರಿಂದಲೇ ಇವರು ನಿಜವಾಗಿಯೂ ಇದ್ದಾರೆಯೇ? ಅಥವಾ ನಿರ್ವಿಕಾರರೇ?
ಎಂಬುದು ಯಾರಿಗೂ ಏನೂ ತಿಳಿಯಲಾರದು ।।೧೬೬।। ಕೆಲವರು ಇವರಿಗೆ ಕರ್ಮಠರೆನ್ನುವರು, ಕೆಲವರು ಇವರಿಗೆ ಕಾರ್ಯಭ್ರಷ್ಟರೆನ್ನುವರು,
ಆದರೆ ಇನ್ನೂ ಕೆಲವು ಇವರಿಗೆ ಆತ್ಮನಿಷ್ಠರೆನ್ನುವರು. ಸಾರಾಂಶವೇನೆಂದರೆ ನಿಜವಾಗಿದ್ದದ್ದು ಯಾರಿಗೂ ತಿಳಿಯುವುದಿಲ್ಲ ।।೧೬೭।। ಸರ್ಪಕ್ಕೆ
ಮೊದಲೇ ಮಾತನಾಡಲಿಕ್ಕೆ ಬರುವುದಿಲ್ಲ. ಅದು ಕೇವಲ ಧ್ವನಿ ಮಾಡುವುದು. ಅದರಂತೆ ಯೋಗಿಯೂ ಕೂಡ ಯಾರಲ್ಲಿಯೂ ವಾಗ್ವಾದಕ್ಕೆ
ಇಳಿಯುವುದಿಲ್ಲ ।।೧೬೮।। ಹೃದಯದಲ್ಲಿ ಹುಟ್ಟಿದ ಕೃಪೆಯ ಬಲದಿಂದ ಇವರು ಮೃದು, ಮಧುರ ಮತ್ತು ಪ್ರೇಮಳವಾದ ಮಾತುಗಳಿಂದ
ಮಾತನಾಡುವರು. ಇದರಿಂದ ಇವರ ಭಾಷಣವನ್ನು ಕೇಳಿ ಕಿವಿಗಳು ತೃಪ್ತವಾಗುವುವು ।।೧೬೯ ।। ಇವರ ಭಾಷಣವು ಅತ್ಯಲ್ಪವಾಗಿರುವುದು.
ಆದರೆ ಅದನ್ನು ಶ್ರವಣ ಮಾಡಿದವರ ಸಂಕಲ್ಪ - ವಿಕಲ್ಪಗಳು ಮುರಿದೊಗೆಯಲ್ಪಡುವುವು. ಇವರ ಭಾಷಣದ ಅರ್ಥವು ಕೇವಲ ಸತ್ಯನಿಷ್ಠ
ಜನರಿಗೆ ಮಾತ್ರ ತಿಳಿಯಲ್ಪಡುವುದು ।।೧೭೦।। ಆದ್ದರಿಂದ ಯಾರು ಉದಾಸಭಾವದಿಂದ ಒಬ್ಬನೇ ಇರುವನೋ, ಮತ್ತು ಯಾರ ಚಿತ್ತವು
ಪರಮಾರ್ಥದತ್ತ ನಟ್ಟಿಕೊಂಡಿದೆಯೋ, ಆತನು ಮನೆಮಾರು ಮಾಡುವ ವ್ಯರ್ಥವಾದ ಪ್ರಯತ್ನವನ್ನು ಮಾಡಕೂಡದು ।।೧೭೧।।

ಗೃಹಾರಂಭೋಽತಿ ದುಃಖಾಯ ವಿಫಲಶ್ಚಾಧ್ರುವಾತ್ಮನಃ । ಸರ್ಪ ಪರಕೃತಂ ವೇಶ್ಮ ಪ್ರವಿಶ್ಯ ಸುಖಮೇಧತೇ ॥೧೫॥

ಅರ್ಥ:- ಈ ಅನಿತ್ಯ ಶರೀರಕ್ಕಾಗಿ ಗೃಹಾರಂಭವು ಅತಿಶಯವಾಗಿ ದುಃಖಕ್ಕೆ ಕಾರಣವಾಗುವುದು. ಮತ್ತು ಅದು ವ್ಯರ್ಥವಾಗಿರುವುದು. ಸರ್ಪವು ಇನ್ನೊಬ್ಬರು ತಯಾರಿಸಿದ ಹುತ್ತಿನಲ್ಲಿ ಪ್ರವೇಶ ಮಾಡಿ ಬಹಳ ಆನಂದದಿಂದ ಇರುವುದು.

ಮೂಳೀ ಗೃಹಾರಂಭ ತೇ ದುಃಖ । ಕಷ್ಟ ಕರಿತಾ ದುಃಖಕಾರಕ । ನಿಪಜವಿಲೇ ತ್ರಿಮಾಳಿಕ । ತೇ ಅಧ್ರುವ ದೇಖ ಸರ್ವಥಾ ॥ ೧೭೨॥ ಜೇಥೇ ಸಂಸಾರಚಿ ನಾಶವಂತ । ದೇಹ ಪ್ರತ್ಯಕ್ಷಾಕಾರೇ ಅಸಂತ । ತೇಥೀಚೇ ಗೃಹ ಕಾಯ ಶಾಶ್ವತ । ಮೂರ್ಖ ಮಾನಿತ ಸತ್ಯತ್ವೇ ॥೧೭೩॥ ಜೇ ಗರ್ಭೀಚ ನಿಮಾಲೇ । ತೇ ಉಪಜತಾ ಜಾತಕ ಕೇಲೇ । ಮೃತಾಚೇ ಜನ್ಮ ನಾಂವ ಠೇವಿಲೇ । ತೈಸೇ ಗೃಹ ಕೇಲೇ ಅಸಂತ ॥೧೭೪॥ ತೋಹೀ ಅಸಂತು ಆರಂಭ ಕುಡಾ । ಮೃತ್ತಿಕೇಸಾಠೀ ಲಾವೀ ಝಗಡಾ । ಭಾಂಡವೀ ದಗಡಾ ಸಾಠೀ ಕಾ ಲಾಂಕುಡಾ । ಸುಹೃದಭಿಡಾ ಸಾಂಡೋನಿ ॥೧೭೫॥ ವೋಳಂಬಾ ಘರ ಕರೀ ಸಾಯಾಸೇ । ತ್ಯಾಮಾಜೀ ಸರ್ಪ ರಾಹೇ ಸಾವಕಾಶೇ । ನ ಶಿಣತಾ ಅಪ್ರಯಾಸೇ । ಪರಘರವಾಸೇ ಸಂತುಷ್ಟ ॥೧೭೬॥ ತೈಸಾಚಿ ಯೋಗಿಯಾಹೀ ಜಾಣ । ನ ಧರೀ ದೇಹಗೇಹ ಅಭಿಮಾನ । ಪರಗೃಹೀ ವಸೇ ನಿರಭಿಮಾನ । ಸುಖಸಂಪನ್ನ ಸರ್ವದಾ ॥೧೭೭॥ ಏಕಹೀ ಗೃಹ ನ ಕರಾವೇ । ಹೇ ಸತ್ಯ ಮಾನಿಲೇ ಜೀವೇ । ಏವಢೀ ಸೃಷ್ಟಿ ಕೇಲೀ ದೇವೇ । ಬಾಧೂ ನ ಪವೇ ತ್ಯಾ ಕೇವೀ ॥೧೭೮॥ ಸೃಷ್ಟಿ ರಚಿಲೀ ಕೈಸೇನಿ । ನಿಪಜಲೀ ಕೋಣಾಪಾಸೂನೀ । ಯೇಚಿ ಅರ್ಥೀ ಗುರು ಕಾಂತಿಣೇ । ಲಕ್ಷಣ ಲಕ್ಷುನೀ ಮ್ಯಾ ಕೇಲೀ ॥೧೭೯॥

ಏಕೋ ನಾರಾಯಣೋ ದೇವಃ ಪೂರ್ವ ಸೃಷ್ಟಂ ಸ್ವಮಾಯಯಾ। ಸಂಹೃತ್ಯ ಕಾಲಕಲಯಾ ಕಲ್ಪಾಂತ ಇದಮೀಶ್ವರಃ ॥೧೬॥

ಅರ್ಥ:- ಕರ್ತಾ, ಕರ್ಮ, ಕಾರಣ ಇತ್ಯಾದಿ ಕಾರಕಗಳ ಅಪೇಕ್ಷೆಯನ್ನು ಮಾಡಲಾರದ ನಾರಾಯಣನು ತನ್ನ ಮಾಯೆಯಿಂದ ಪೂರ್ವದಲ್ಲಿ ಉತ್ಪನ್ನ ಮಾಡಿದ ಸೃಷ್ಟಿಯನ್ನು ಕಲ್ಪಾಂತದಲ್ಲಿ ತನ್ನ ಕಾಲಶಕ್ತಿಯಿಂದ ಸಂಹಾರವನ್ನು ಮಾಡಿ...

ನರಾಂಚೇ ಆಶ್ರಯಸ್ಥಾನ। ಯಾಲಾಗೀ ಬೋಲಿಜೇ "ನಾರಾಯಣ" । ಜೀವಾಚೇ ತೋಚಿ ಜೀವನ। ಸ್ವಾಮೀ ನಾರಾಯಣ ಸರ್ವಾಂಚಾ॥ ೧೮೦॥ ಐಸಾ ಏಕನಾರಾಯಣ। ತೇಣೇ ಪೂರ್ವೀ ಜಗ ಸೃಜಿಲೇ ಜಾಣ। ಉಪಕರಣಸಾಮಗ್ರೀವೀಣ। ಕೇಲೇ ನಿರ್ಮಾಣ ಜಗಾಚೇ॥ ೧೮೧॥ ಏಕಲೇನಿ ಸಾಮಗ್ರೀವೀಣ । ಕೇವಿ ಕೇಲೇ ಜಗ ಸಂಪೂರ್ಣ । ಸ್ವಮಾಯಾ ಕ್ಷೋಭವೂನಿ ಜಾಣ । ಕರೀ ನಿರ್ಮಾಣ ಜಗಾಚೇ ॥೧೮೨॥ ತೇ ನಿಜಮಾಯೇಚ್ಯಾ ಪೋಟೀ । ಅಸಂಖ್ಯ ಜೀವಸಾಮಗ್ರೀಚ್ಯಾ ಕೋಟೀ । ತೇ ಮಾಯಾ ಅವಲೋಕಿಲೀ ದೃಷ್ಟೀ । ತೋಚಿ ಉಠಾ ಉಠೀ ನಿಜಕಾಳು ॥೧೮೩॥

ಮನೆ ಮಾಡಬೇಕೆಂದರೆ ಮೊದಲೇ ದುಃಖಕ್ಕೆ ಕಾರಣವಾಗುವುದು. ಬಹಳ ಕಷ್ಟಪಟ್ಟು ಮೂರು ಅಂತಸ್ತಿನ ಮನೆಯನ್ನು ಕಟ್ಟಿದರೂ ಅದು ಅಶಾಶ್ವತವೇ ಆಗಿರುವುದು ॥೧೭೨॥ ಇಲ್ಲಿ ಸಂಸಾರವೇ ನಾಶಿವಂತವಾಗಿರುವುದು. ಶರೀರದ ಸ್ವರೂಪವು ಮಿಥ್ಯೆಯಾಗಿರುವುದು ಅಂದಮೇಲೆ ಮನೆಯಾದರೂ ಶಾಶ್ವತ ಹೇಗಾದೀತು? ಮೂರ್ಖ ಜನರು ಇದಕ್ಕೆ ಸತ್ಯ ಎನ್ನುವರು ॥೧೭೩॥ ಗರ್ಭದಲ್ಲಿ ಸತ್ತಿರುವ ಕೂಸಿನ ಹುಟ್ಟಿದಾಕ್ಷಣವೇ ಜಾತಕ ಬರೆಯುವುದು ಅಥವಾ ಮೃತದ ಜನ್ಮ ಹೆಸರು ಇಡುವುದು ವ್ಯರ್ಥವಾಗುವಂತೆ ಮನೆಯಾದರೂ ಅಶಾಶ್ವತವಾಗಿರುವುದು ॥೧೭೪॥ ಈ ಅಶಾಶ್ವತ ಮನೆಯ ಆರಂಭವೇ ಮಿಥ್ಯೆಯಾಗಿರುವುದು. ಕಾರಣ ಅದು ಆರಂಭದಲ್ಲಿಯೇ ಪ್ರೇಮದ ಸಂಬಂಧ ಮರೆತು ಮಣ್ಣಿಗಾಗಿ, ಕಲ್ಲಿಗಾಗಿ, ಕಟ್ಟಿಗೆಗಳಿಗಾಗಿ ಜಗಳ ಹಚ್ಚುವುದು ॥೧೭೫॥ ಗೆದ್ದಲಿಗಳೆಂಬ ಇರುವೆಗಳು ಅತಿಶಯವಾಗಿ ಪ್ರಯತ್ನಪಟ್ಟು ಹುತ್ತನ್ನು ತಯಾರಿಸುವುವು. ಆದರೆ ಸರ್ಪವು ಅದರಲ್ಲಿ ಸುಖವಾಗಿ ಸೇರಿಕೊಳ್ಳುವುದು. ಯಾವ ಪ್ರಯಾಸವನ್ನು ಮಾಡದೇ ಇನ್ನೊಬ್ಬರ ಮನೆಯಲ್ಲಿ ಬಹು ಸಂತೋಷವಾಗಿ ಇರುವುದು ॥೧೭೬॥ ಯೋಗಿಯೂ ಕೂಡ ಹಾಗೆಯೇ ಇರುವನು. ದೇಹದ ಅಭಿಮಾನವನ್ನು ಹಿಡಿಯದೇ ನಿರಭಿಮಾನದಿಂದ ಅನ್ಯರ ಮನೆಯಲ್ಲಿ ಸುಖವಾಗಿ ಇರುವನು ॥೧೭೭॥ ಒಂದೂ ಸಹ ಮನೆಯನ್ನು ಕಟ್ಟಬೇಕಾಗಿಲ್ಲ. ಈ ನಿಶ್ಚಯವನ್ನೇ ನಾನು ಮಾಡಿದೆನು. ಆದರೆ ದೇವನು ಇಷ್ಟೊಂದು ಸೃಷ್ಟಿಯನ್ನು ಮಾಡಿದರೂ ಇದರಿಂದ ಆತನಿಗೆ ಹೇಗೆ ಬಾಧೆಯಾಗುವುದಿಲ್ಲ? ॥೧೭೮॥ ಹಾಗಾದರೆ ಸೃಷ್ಟಿಯು ಹೇಗೆ ರಚನೆಯಾಯಿತು? ಇದು ಯಾರಿಂದ ಉತ್ಪನ್ನವಾಯಿತು? ಇದಕ್ಕಾಗಿಯೇ ನಾನು ಜೇಡರ ಹುಳವನ್ನು ಗುರುವನ್ನಾಗಿ ಮಾಡಿಕೊಂಡೆನು ॥೧೭೯॥

ನರರ ಆಶ್ರಯಸ್ಥಾನನಾಗಿರುವುದರಿಂದ ಆತನಿಗೆ "ನಾರಾಯಣ" ಎಂದು ಹೇಳುವರು. ಸರ್ವ ಜೀವಿಗಳ ಜೀವನನು ಆತನೇ ಆಗಿರುವನು. ಸರ್ವರ ಸ್ವಾಮಿಯು ನಾರಾಯಣನಾಗಿರುವನು ॥೧೮೦॥ ಹೀಗಿರುವ ಒಬ್ಬ ನಾರಾಯಣನು ಈ ಜಗತ್ತನ್ನು ಪೂರ್ವದಲ್ಲಿ ಉತ್ಪನ್ನಮಾಡಿದನು. ಯಾವುದೇ ಬಾಹ್ಯ ಸಾಮಗ್ರಿಗಳನ್ನು ತೆಗೆದುಕೊಳ್ಳದೇ ಈ ವಿಶ್ವದ ಉತ್ಪತ್ತಿಯನ್ನು ಈತನು ಮಾಡಿದನು ॥೧೮೧॥ ಒಬ್ಬನೇ ಮತ್ತು ಯಾವ ಸಾಮಗ್ರಿ ಇಲ್ಲದೇನೇ ಸಂಪೂರ್ಣ ಜಗತ್ತನ್ನು ಹೇಗೆ ನಿರ್ಮಿಸಿದನು? ಎಂದು ನೀನು ಕೇಳಬಹುದು. ಅದಕ್ಕಾಗಿ ಆತನು ತನ್ನ ಮಾಯೆಗೆ ಕ್ಷುಬ್ಧಗೊಳಿಸಿ ವಿಶ್ವದ ರಚನೆಯನ್ನು ಮಾಡಿದನು ॥೧೮೨॥ ಆತನಮಾಯೆಯ ಹೊಟ್ಟೆಯಲ್ಲಿ ಜೀವ ಸಾಮಗ್ರಿಯ ಅಸಂಖ್ಯ ಪ್ರಕಾರಗಳಿರುವುವು. ಆ ಮಾಯೆಯನ್ನು ಈತನು ತನ್ನ ದೃಷ್ಟಿಯಿಂದ ಅವಲೋಕನವನ್ನು ಮಾಡಿದನು. ಈ "ಈಕ್ಷಣ" ಕ್ಕೆ "ಕಾಲ" ಎಂದು ಹೇಳುವರು ॥೧೮೩॥

ಐಶೀ ನಿಜಮಾಯಾ ಅವಲೋಕಿಲೀ । ತೇ ನಿಜಾಂಗಾವರೀ ನಾಂದವಿಲೀ । ಪರೀ ಅಂಗೀ ಲಾಗೋ ನಾಹೀ ದಿಧಲೀ । ಹೇ ಅಲಿಪ್ತತಾ ಕೇಲೀ ತೋ ಜಾಣೇ ।।೧೮೪।। ಧುಈ ದಾಟಲೀ ಆಕಾಶೀ । ಆಕಾಶ ನಾತಳೇ ಧುಈಸೀ। ತೈಸೀ ನಿಜಾಂಗೇ ವಾಢವೂನಿ ಮಾಯೇಸೀ । ಅಲಿಪ್ತ ತಿಯೇಸೀ ವರ್ತತು ।।೧೮೫।। ಉದಕೇ ಕಮಳಿಣೀ ವಾಢವಿಲೀ। ತೇ ಜಳ ಆವರೀ ನಿಜದಳೀ । ತೈಸೀ ಮಾಯಾ ಆನಂದ ಆಕಳೀ । ಚಿತ್ಸತ್ತಾ ಮೋಕಳೀ ಸದಂಶೇಸೀ ।।೧೮೬।। ಸ್ವಮಾಯೇಸೀ ಜೋ ಅಧಿಷ್ಠಾನ । ಮಾಯೇಸೀ ನಾಂದಾವಯಾ ತೋಚಿ ಭುವನ । ಏವಂ ಮಾಯಾನಿಯಂತಾ ನಾರಾಯಣ । ಸತ್ಯ ಜಾಣ ಸರ್ವಥಾ ।।೧೮೭।। ರಜೋಗುಣ ಸೃಜೀ ಸೃಷ್ಟೀಸೀ । ಸತ್ತ್ವಗುಣ ಪ್ರತಿಪಾಳೀ ತಿಸೀ । ಕಲ್ಪಾಂತೀ ಕ್ಷೋಭವೋನಿ ತಮೋಗುಣಾಸೀ । ಕಾಳರೂಪೇಸೀ ಸಂಹಾರೀ ।।೧೮೮।। ಹೇ ಮಾಯೇಚೀ ಕ್ಷೋಭಕ ಶಕ್ತೀ । ಅಸೇ ನಾರಾಯಣಾಚೇ ಹಾತೀ । ಯಾಲಾಗೀ ಸಂಹಾರಿತಾ ಅಂತೀ । ಈಶ್ವರು ಮ್ಹಣತೀ ಯಾ ಹೇತೂ ।।೧೮೯।।

ಏಕ ಏವಾದ್ವಿತೀಯೋಽಭೂದಾತ್ಮಾಧಾರೋಽಖಿಲಾಶ್ರಯಃ । ಕಾಲೇನಾತ್ಮಾನುಭಾವೇನ ಸಾಮ್ಯಂ ನೀತಾಸು ಶಕ್ತಿಷು ।।೧೭।।
ಸತ್ತ್ವಾದಿಷ್ವಾದಿಪುರುಷಃ ಪ್ರಧಾನಪುರುಷೇಶ್ವರಃ । ಪರಾವರಾಣಾಂ ಪರಮ ಆಸ್ತೇ ಕೈವಲ್ಯ ಸಂಜ್ಞಿತಃ ।
ಕೇವಲಾನುಭವಾನಂದ ಸಂದೋಹೋ ನಿರುಪಾಧಿಕಃ ।।೧೮।।

ಅರ್ಥ:- ಒಬ್ಬನೇ ಮತ್ತು ಅದ್ವಿತೀಯ. ಸಜಾತೀಯ, ವಿಜಾತೀಯ, ಸ್ವಗತ, ಭೇದಶೂನ್ಯ ಪರಮಾತ್ಮನು ಸ್ವತಃಕ್ಕೆ ಸ್ವತಃದ ಆಧಾರ ಮತ್ತು ಸರ್ವರಿಗೂ ಆಧಾರನಾದನು. ಆತ್ಮದ ಪ್ರಭಾವವೇ ಇಂತಹ ಕಾಳದಿಂದ ಕಾರಣಭೂತ ತತ್ತ್ವಾದಿ ಶಕ್ತಿಗಳಿಗೂ ಸಾಮ್ಯವನ್ನು ಪ್ರಾಪ್ತಮಾಡಿರಲು ಆ ಆದಿಪುರುಷನು ಗುಣಗಳ ಸಮಾವಸ್ಥೆ ಇದು ಪ್ರಧಾನವು ಮತ್ತು ಈ ಪ್ರಧಾನವೇ ಈತನ ಉಪಾಧಿಯಾಗಿರುವ ಪುರುಷನು. ಈ ಇಬ್ಬರಿಗೂ ಈಶ್ವರನಾಗುವನು. ಈತನು ನಿರ್ವಿಷಯ ಆನಂದ ಸಮೂಹವೆಂದರೆ ಪರಮಾನಂದನಾಗಿರುವದು. ಕಾರಣ ಈತನು ಪೂರ್ವೋಕ್ತ ಉಪಾಧಿರಹಿತನಾಗಿರುವನು. ಆದ್ದರಿಂದಲೇ ಮೋಕ್ಷ ಎಂಬ ಸಂಜ್ಞೆಗೆ ಪ್ರಾಪ್ತನಾಗಿರುವನು. ಯಾವ ಉಪಾಧಿಗಳೂ ಆತನಲ್ಲಿ ಸಂಬಂಧವಿರುವುದಿಲ್ಲ. ಆತನು ಕೇವಲ ಅನುಭವಸ್ವರೂಪ ಮತ್ತು ಆನಂದಘನಮಾತ್ರನಾಗಿದ್ದಾನೆ.

ಏವಂ ಸಂಹಾರೋನಿ ಕಾರ್ಯಕಾರಣ । ಏಕ ಅದ್ವಿತೀಯ ನಾರಾಯಣ । ಏಕಪಣೇ ಪರಿಪೂರ್ಣ। ಗುಣಾಗುಣ ನಿರಸೋನಿ ।।೧೯೦।। ಏಕಲಾ ಏಕು ನಾರಾಯಣ । ಹೇಹೀ ತೇಥ ಮ್ಹಣೇಕೋಣ । ಹೇ ಅದ್ವಿತೀಯ ಲಕ್ಷಣ । ಭೇದಶೂನ್ಯ ಅವಸ್ಥಾ ।।೧೯೧।। "ವಿಜಾತೀಯ ಭೇದ" ತೇ ಠಾಯೀ । ನಸೇ "ಸಜಾತಿಯಭೇದ" ಕಾಂಹೀ । "ಸ್ವಗತಭೇದು" ತೋಹಿ ನಾಹೀ। ಭೇದಶೂನ್ಯ ಪಾಹೀ ಯೇ ರೀತೀ ।।೧೯೨।। ಐಸಾ ಅಭೇದು ಜೋ ಸಾಚಾರು । ತೋಚಿ ಪ್ರಕೃತಿಪುರುಷಾಂಚಾ ಈಶ್ವರು । ನಿಯಂತಾ ತೋ ಪರಾವರು । ತೋಹೀ ನಿರ್ಧಾರು ಪರಿಯೇಸೀ ।।೧೯೩।। ಪ್ರಕೃತಿ ಪುರುಷ ಹೇ ದೋನ್ಹೀ । ಕಲ್ಪಿಲೀ ಜೇಣೇ ಅಮನ - ಮನೀ । ತೋ ಈಶ್ವರ ಹೋಯ ಭರವಸೇನೀ। ತ್ಯಾಚೇ ಸಾಮರ್ಥ್ಯೆಂಕರೂನಿ ವರ್ತತೀ ।।೧೯೪।।

ಈ ಪ್ರಕಾರವಾಗಿ ಆತನು ತನ್ನ ಮಾಯೆಯತ್ತ ನೋಡಿ ತನ್ನ ಮೈಮೇಲೆ ಆಡಲು ಬಿಟ್ಟನು. ಆದರೆ ಆತನು ಮಾಯೆಯಿಂದ ಲಿಪ್ತನಾಗಲಿಲ್ಲ. ಸ್ವತಃ ಅಲಿಪ್ತನಾಗಿಯೇ ಇರುವನು ।।೧೮೪।। ಆಕಾಶದಲ್ಲಿ ದಟ್ಟವಾದ ಇಬ್ಬನಿಯು ಹರಡಿದರೂ ಅದು ಆಕಾಶವನ್ನು ಸ್ಪರ್ಶಮಾಡುವುದಿಲ್ಲ. ಅದರಂತೆ ಆತನು ತನ್ನ ಮಾಯೆಯನ್ನು ತನ್ನ ಮೈಮೇಲೆ ಬೆಳೆಸಿ ಆಕೆಯಿಂದ ಅಲಿಪ್ತನಾಗಿರುವನು ।।೧೮೫।। ಜಲವು ಕಮಲವನ್ನು ಬೆಳೆಸುವುದು. ಆದರೆ ಆ ಕಮಲವು ತನ್ನ ಎಲೆಗಳಿಂದ ಆ ಜಲವನ್ನೇ ಮುಚ್ಚಿ ಹಾಕುವುದು. ಅದರಂತೆ ಮಾಯೆಯು ಆನಂದಕ್ಕೆ ಮುಚ್ಚಿ ಹಾಕುವದು. ಆದರೆ ಪ್ರತ್ಯೇಕ ಜಡಪದಾರ್ಥಗಳಲ್ಲಿ ಸತ್ ಅಂಶದಿಂದ ಚಿತ್‌ಸತ್ತೆಯು ಪ್ರತೀತಿಯಾಗುತ್ತಿರುವುದು ।।೧೮೬।। ಯಾವುದು ತನ್ನ ಮಾಯೆಯ ಅಧಿಷ್ಠಾನವೋ, ಅದೇ ಆಕೆಯು ವರ್ತಿಸುವ ಮನೆಯಾಗಿರುವುದು. ಈ ಪ್ರಕಾರವಾಗಿ ನಾರಾಯಣನು ಮಾಯೆಯ ನಿಯಂತನಾಗಿರುವನು. ಇದನ್ನು ನೀನು ಸತ್ಯವಾಗಿ ತಿಳಿ ।।೧೮೭।। ರಜೋಗುಣವು ಸೃಷ್ಟಿಯನ್ನು ಉತ್ಪನ್ನಗೊಳಿಸುವುದು. ಸತ್ವಗುಣವು ಅದರ ಪಾಲನೆಯನ್ನು ಮಾಡುವುದು ಮತ್ತು ತಮೋಗುಣವು ಕಲ್ಪದ ಅಂತ್ಯದಲ್ಲಿ ಕ್ಷೋಭೆಗೊಂಡು ಕಾಳರೂಪದಿಂದ ಸಂಹಾರ ಮಾಡುವುದು ।।೧೮೮।। ಈ ಮಾಯೆಯ ಕ್ಷೋಭಶಕ್ತಿಯು ನಾರಾಯಣನ ಕೈಯಲ್ಲಿರುವುದು. ಆದ್ದರಿಂದ ಆತನು ಕೊನೆಯಲ್ಲಿ ಸಂಹಾರ ಮಾಡುವ ಈಶ್ವರನು ಎಂದು ಹೀಗೆ ಹೇಳುವರು ।।೧೮೯।।

ಈ ಪ್ರಕಾರವಾಗಿ ಕಾರ್ಯಕಾರಣಗಳ ಸಂಹಾರವನ್ನು ಮಾಡಿ ಗುಣಾಗುಣರಹಿತ ಒಬ್ಬನೇ ಆದ ಅದ್ವಿತಿಯ ಪರಿಪೂರ್ಣ ನಾರಾಯಣನು ಏಕತ್ವದಿಂದ ಇರುವನು ।।೧೯೦।। ಆದರೆ ಅಲ್ಲಿ ಒಬ್ಬನೇ ಒಬ್ಬ ನಾರಾಯಣನು ಇರುವನು ಎಂದು ಹೇಳುವರಾದರೂ ಯಾರಿರುವರು? ಈ ಲಕ್ಷಣವು ಕೇವಲ ಅದ್ವಿತೀಯವಾಗಿರುವುದು. ಭೇದಶೂನ್ಯ ಅವಸ್ಥೆಯು ಇದೇ ಆಗಿರುವುದು ।।೧೯೧।। ಇಲ್ಲಿ ಸಜಾತಿಯ ಭೇದವಿಲ್ಲ. ವಿಜಾತಿಯ ಭೇದವಿಲ್ಲ. ಮತ್ತು ಸ್ವಗತ ಭೇದವೂ ಕೂಡ ಇಲ್ಲ. ಈ ರೀತಿಯಿಂದ ಆತನು ಭೇದಶೂನ್ಯನಾಗಿರುವನು ।।೧೯೨।। ಹೀಗೆನಿಜವಾಗಿಯೂ ಅಭೇದನಾಗಿರುವವನೇ ಪ್ರಕೃತಿ ಪುರುಷರ ಈಶ್ವರನಾಗಿರುವನು. ಈತನೇ ಸರ್ವರ ಶ್ರೇಷ್ಠ ನಿಯಂತನು. ಪರ ಮತ್ತು ಅಪರನಾಗಿರುವನು. ಈ ನಿರ್ಣಯವನ್ನು ಈಗ ಕೇಳು ।।೧೯೩।। ಅಮನ-ಮನದಲ್ಲಿ ಸ್ಫುರಣವಾದ ಸಂಕಲ್ಪದಿಂದ ಆತನು ಪ್ರಕೃತಿ ಪುರುಷರ ಎರಡನ್ನೂ ಉತ್ಪನ್ನಗೊಳಿಸಿದನು. ಆತನೇ ನಿಜವಾಗಿ ಈಶ್ವರನಾಗಿರುವನು. ಆತನ ಸಾಮರ್ಥ್ಯದಿಂದಲೇ ಪ್ರಕೃತಿಪುರುಷರು ವರ್ತಿಸುವರು ।।೧೯೪।।

ಪ್ರಕೃತೀತೇ ಚೇತವಿತೀ ಸತ್ತಾ । ತೇಚಿ ಯಾಚೀ ಪುರುಷತಾ । ಯಾಲಾಗೀ ಪ್ರಕೃತೀಚಾ ಭರ್ತಾ । ಹೋಯ ಸರ್ವಥಾ ಹಾಚಿ ಏಕು ॥೧೯೫॥ "ಪರ" ಜೇ ಅಜ - ಪ್ರಮುಖ। "ಅವರ" ಮನುಮುಖ್ಯ ಸ್ಥಾವರಾಂತಕ । ಯಾಂಚಾ ನಿಯಂತಾ ತೋ ದೇಖ । ಸರ್ವಚಾಳಕ ಸರ್ವಾಂಚಾ ॥೧೯೬॥ ಜ್ಯಾಚೇ ಆಜ್ಞೇವರೀ ಪಾಹೇ । ಸ್ಪೈರಾ ವಾಯು ಜಾಊ ನ ಲಾಹೇ । ಸಮುದ್ರ ವೇಳೇಮಾಜೀ ರಾಹೇ । ಸೂರ್ಯ ವಾಹೇ ದಿನಮಾನ ॥೧೯೭॥ ಜ್ಯಾಚೀ ಆಜ್ಞಾ ಕರೂನಿ ಪ್ರಮಾಣ । ಬಾರಾ ಅಂಗುಳೇ ವಿಚರೇ ಪ್ರಾಣ । ಪರತಾ ಜಾಊ ನ ಶಕೇ ಜಾಣ । ಆಜ್ಞೇಭೇಣೇ ಸರ್ವಥಾ ॥೧೯೮॥ ಆಜ್ಞಾ ಜಾಣೋನಿ ಧಡಪುಡೀ । ಮೇರು ಬೈಸಕಾ ನ ಸೋಡೀ । ಚೇತನಾ ಆಜ್ಞಾ ಕರೀ ಗಾಢೀ । ಅಚೇತನ ಕುಡೀ ಚೇತವೀ ॥೧೯೯॥ ತೋ ಸ್ವಯೇ ತಂವ ನಿರಾಧಾರ । ಪರೀ ಝಾಲಾ ವಿಶ್ವಾಸೀ ಆಧಾರ । ಜೇವೀ ಸರ್ಪಾಭಾಸಾ ದೋರ । ದಿಸೇ ಸಾಚಾರ ಆಶ್ರಯೋ ॥೨೦೦॥ ಸತ್ವಾದಿಕಾ ಜ್ಯಾ ಗುಣಶಕ್ತೀ । ಆವರೂನೀ ನಿಜಕಾಳಗತೀ । ಸಮತ್ವಾ ಆಣಲ್ಯಾ ಸ್ಥಿತೀ । ನಿಜಪ್ರಕೃತೀ ಮಾರಘಾರೀ ॥೨೦೧॥ ತೇಹಿ ಪ್ರಕೃತೀ ಉಪರಮೋನೀ । ರಾಹಿಲೀ ಅಸೇ ನಿರ್ಗುಣಸ್ಥಾನೀ । ಜೇವೀ ವಟ ಬೀಜೀ ಸಾಮಾವೋನೀ । ಕೇವಳಪಣೇ ರಾಹಿಲಾ ॥೨೦೨॥ ತೈಸಾ ಉಪಾಧಿ ಗಿಳೂನಿ ಸಕಳ । ನಿರುಪಾಧಿಕ ಕೇವಳ । ಜೇವೀಕಾಢಿಲಿಯಾ ಮಂದರಾಚಳ । ರಾಹೇ ನಿಶ್ಚಳ ಕ್ಷೀರಾಬ್ಧೀ ॥೨೦೩॥ ನಾನಾ ಅಲಂಕಾರ ಠಸೇ । ಘಾತಲಿಯಾ ಜೇವೀ ಮುಸೇ । ಪೂರ್ವರೂಪ ಸೋನೇ ಜೈಸೇ । ಹೋಯ ತೈಸೇ ಕೇವಳ ॥೨೦೪॥ ನಾನಾ ನಕ್ಷತ್ರಾವಲೋಕು । ನಿಜತೇಜೇ ಲೋಪೀ ಅರ್ಕು । ತೈಸಾ ಉಪಾಧಿ ಗಿಳೂನಿ ಏಕು । ನಿರುಪಾಧಿಕು ಉರಲಾಸೇ ॥೨೦೫॥ ಹೋ ಕಾ ಗ್ರೀಷ್ಮಾ ಚ್ಯಾ ಅಂತೀ । ಬೀಜೇ ಲೀನ ಹೋತೀ ಕ್ಷಿತೀ । ತೈಶೀ ಲೀನ ಹೋಊನಿ ಪ್ರಕೃತಿ। ಕೇವಳ ಸುಖಮೂರ್ತೀ ಉರಲಾಸೇ॥೨೦೬॥ ಐಸಾ ನಿರುಪಾಧಿಕು ಕೇವಳ । ಸುಖಸ್ವರೂಪಾನಂದ ಕಲ್ಲೋಳ । ಚಿನ್ಮಾತ್ರತೇಜೇಜಿ ಬಹಳ । ನಿತ್ಯ ನಿರ್ಮಳ ಸದಂಶೇ ॥೨೦೭॥ ತೇಣೇ ಜ್ಞಾನಸ್ವರೂಪೇ ಅನಂತೇ । ಸೃಜನಕಾಳ ಅವಸ್ಥೇತೇ । ಸೃಜಿತಾ ಝಾಲಾ ಸೃಷ್ಟೀತೇ । ತೇಹೀ ನಿರುತೇ ಅವಧಾರೀ ॥೨೦೮॥

ಸತ್ತೆಯು ಪ್ರಕೃತಿಯನ್ನು ಜಾಗೃತಗೊಳಿಸುವುದು. ಇದೇ ಆತನ ಪುರುಷತ್ವವಾಗಿರುವುದು. ಆದ್ದರಿಂದ ಪ್ರಕೃತಿಯ ಸರ್ವತೋಪರಿ ಪತಿಯು ಈತನೊಬ್ಬನೇ ಆಗಿರುವವನು ॥೧೯೫॥ ಪರ ಎಂದರೆ ಬ್ರಹ್ಮಾದಿಕ ದೇವತೆಗಳು ಮತ್ತು "ಅಪರ" ವೆಂದರೆ ಮನ್ವಾದಿಕರಿಂದ ಸ್ಥಾವರದವರೆಗೆ ಸರ್ವರ ನಿಯಂತನು, ಚಾಲಕನು ಆತನೇ ಆಗಿರುವವನು ॥೧೯೬॥ ಆತನ ಆಜ್ಞೆಯನ್ನು ಬಿಟ್ಟು ಗಾಳಿಯು ಒಂದು ಹೆಜ್ಜೆಯನ್ನೂ ಮುಂದಿಡುವುದಿಲ್ಲ. ಆತನ ಆಜ್ಞೆಯಿಂದಲೇ ಸಮುದ್ರವು ತನ್ನ ಮರ್ಯಾದೆ ರೇಖೆಯಲ್ಲಿರುವುದು. ಮತ್ತು ಸೂರ್ಯನು ದಿನಮಾನವನ್ನು ನಡೆಸುವನು ॥೧೯೭॥ ಈತನ ಆಜ್ಞೆಯನ್ನು ಪ್ರಮಾಣ ಮಾಡಿಕೊಂಡು ಪ್ರಾಣವಾಯುವು ನಾಸಿಕಾಗ್ರದ ಒಳಗೆ ಮತ್ತು ಹೊರಗೆ ಹನ್ನೆರಡು ಅಂಗುಲ ಪ್ರಮಾಣದಲ್ಲಿ ಸಂಚರಿಸುವುದು. ಆತನ ಆಜ್ಞೆಯ ಉಲ್ಲಂಘನೆಯಾದೀತೆಂಬ ಭಯದಿಂದ ಅದು ಬೇರೆ ಕಡೆ ಹೋಗುವುದೇ ಇಲ್ಲ ॥೧೯೮॥ ದೇವನ ಆಜ್ಞೆಯನ್ನು ಸತ್ಯವೆಂದು ಭಾವಿಸಿ ಮೇರುಪರ್ವತವು ಒಂದೇಸ್ಥಳದಲ್ಲಿ ಕುಳಿತಿರುವುದು. ಅದುಅಲ್ಲಿಂದ ಅಲುಗಾಡುವುದಿಲ್ಲ. ಚೇತನಶಕ್ತಿಗೆ ಆತನ ಆಜ್ಞೆಯಾಗಿರುವುದರಿಂದ ಅದು ಅಚೇತನವಾದ ದೇಹವನ್ನು ಚಲಿಸಲು ಹಚ್ಚುವುದು ॥೧೯೯॥ ಯಾವ ಪ್ರಕಾರವಾಗಿ ಸರ್ಪದ ಭಾಸವಾಗಬೇಕಾದರೆ ಮೂಲದಲ್ಲಿ ಹಗ್ಗದ ಆಧಾರವು ಬೇಕಾಗುವುದು. ಅದರಂತೆ ಆತನು ನಿರಾಧಾರನಾಗಿದ್ದು ಸರ್ವ ವಿಶ್ವದ ಆಧಾರನಾಗಿ ಕುಳಿತಿರುವನು ॥೨೦೦॥ ಸತ್ವಾದಿಕ ಗುಣಶಕ್ತಿಯನ್ನು ಆತ್ಮಕಾಲಗತಿಯಿಂದ ಆವರಿಸಿ ಹಿಡಿದುಕೊಂಡು ಆತ್ಮಪ್ರಕೃತಿಯಲ್ಲಿಯೇ ಸಮತ್ವಕ್ಕೆ ತಂದಿಟ್ಟಿರುವನು ॥೨೦೧॥ ಆದರೆ ಆ ಪ್ರಕೃತಿಯೂ ಕೂಡ ಇಲ್ಲದಾಗಿ ನಿರ್ಗುಣದಲ್ಲಿ ಉಳಿದುಕೊಂಡಿದೆ. ಯಾವ ಪ್ರಕಾರವಾಗಿ ವಟವೃಕ್ಷವು ಬೀಜದಲ್ಲಿ ಲೀನವಾಗಿ ಇರುವುದೋ ॥೨೦೨॥ ಅದರಂತೆಯೇ ನಿರುಪಾಧಿಕ ಬ್ರಹ್ಮವು ಸರ್ವ ಉಪಾಧಿಗಳಿಗೆ ನುಂಗಿ ಸ್ವತಃ ಶುದ್ಧ ಸ್ವರೂಪದಲ್ಲಿ ಇರುವುದು. ಯಾವ ಪ್ರಕಾರವಾಗಿ ಮೇರು ಪರ್ವತವನ್ನು ಹೊರಗೆ ತಗೆದರೂ ಸಹ ಕ್ಷೀರಸಾಗರವು ನಿಶ್ಚಲವಾಗಿರುವುದು ॥೨೦೩॥ ಅಥವಾ ಭಿನ್ನ ಭಿನ್ನ ಆಕಾರಗಳುಳ್ಳ ಅಲಂಕಾರಗಳನ್ನು ಮುಸಿಯಲ್ಲಿ ಹಾಕಿ ಕರಗಿಸಲು ಅವುಗಳ ಮೂಲಸ್ವರೂಪ ಬಂಗಾರವಾಗುವುದು ॥೨೦೪॥ ಅಥವಾ ಆಕಾಶದಲ್ಲಿನ ಅಸಂಖ್ಯ ನಕ್ಷತ್ರಗಳು ಸೂರ್ಯನ ಉದಯವಾಗುತ್ತಲೇ ಎಲ್ಲವೂ ಲೋಪಗೊಳ್ಳುವುವು. ಅದರಂತೆ ಸರ್ವ ಉಪಾಧಿಗಳೆಂದರೆ ಮಾಯೆಯು ರಚಿಸಿರುವ ಸೃಷ್ಟಿಯನ್ನು ಗ್ರಾಸಮಾಡಿ ಆ ಪರಮಾತ್ಮನು ಒಬ್ಬನೇ ನಿರುಪಾಧಿಕನಾಗಿ ಉಳಿದುಕೊಂಡಿರುವನು ॥೨೦೫॥ ಬೇಸಿಗೆ ಕಾಲದ ಕೊನೆಯಲ್ಲಿ ಗಿಡಗಳ ಎಲ್ಲ ಬೀಜಗಳು ನೆಲದಲ್ಲಿ ಲೀನವಾಗುವಂತೆ ಪ್ರಕೃತಿಯು ಆತನಲ್ಲಿ ಲೀನವಾಗಿ ಕೇವಲ ಆನಂದರೂಪನಾದ ಆತನು ಒಬ್ಬನೇ ಉಳಿಯುವನು ॥೨೦೬॥ ಹೀಗಿರುವ ಕೇವಲ ನಿರುಪಾಧಿಕ ಆನಂದ ಸ್ವರೂಪದ ಕಲ್ಲೋಳನಾಗಿರುವ, ಚಿನ್ಮಾತ್ರ ತೇಜದಿಂದ ತೇಜಃಪುಂಜನಾಗಿರುವ ಮತ್ತು ಸತ್ಯಸ್ವರೂಪದಿಂದ ಸದಾ ಪವಿತ್ರನಾಗಿರುವ ॥೨೦೭॥ ಇಂತಹ ಯಾವ ಜ್ಞಾನಸ್ವರೂಪನಾದ ಅನಂತನು ಉತ್ಪತ್ತಿಸಮಯಕ್ಕೆ ಸೃಷ್ಟಿಯನ್ನು ಹೇಗೆ ನಿರ್ಮಾಣಗೊಳಿಸಿದನೆಂಬುವುದನ್ನು ಸರಿಯಾಗಿ ಶ್ರವಣವನ್ನು ಮಾಡು ॥೨೦೮॥

ಕೇವಲಾತ್ಮಾನುಭಾವೇನ ಸ್ವಮಾಯಾಂ ತ್ರಿಗುಣಾತ್ಮಿಕಾಮ್। ಸಂಕ್ಷೋಭಯನ್ ಸೃಜತ್ಯಾದೌ ತಯಾ ಸೂತ್ರಮರಿಂದಮ ।೬೯॥
ತಾಮಾಹುಸ್ತ್ರಿಗುಣವ್ಯಕ್ತಿಂ ಸೃಜಂತೀ ವಿಶ್ವತೋಮುಖಮ್ । ಯಸ್ಮಿನ್ ಪ್ರೋತಮಿದಂ ವಿಶ್ವಂ ಯೇನ ಸಂಸರತೇ ಪುಮಾನ್।೭೦॥

ಅರ್ಥ:- ಕೇವಲ ತನ್ನ ವಿಭೂತಿಯಾದ ಕಾಳನ ಯೋಗದಿಂದ ತನ್ನ ತ್ರಿಗುಣಾತ್ಮಕ ಮಾಯೆಯನ್ನು ಕ್ಷುಬ್ಧಗೊಳಿಸುವ ಈಶ್ವರನು ಮಾಯೆಯ ಯೋಗದಿಂದ ಪ್ರಥಮವಾಗಿ ಕ್ರಿಯಾಶಕ್ತಿಯಲ್ಲಿ ಪ್ರಧಾನವಾದ ಮಹತ್ತತ್ತ್ವ ಉತ್ಪನ್ನಗೊಳಿಸುವನು. ನಾನಾ ಪ್ರಕಾರಗಳ ತ್ರಿಗುಣಾತ್ಮಕ ವಿಶ್ವಕ್ಕೆ ಅಹಂಕಾರ ದ್ವಾರಾ ಉತ್ಪನ್ನ ಮಾಡುವ ಶಕ್ತಿಗೆ ತ್ರಿಗುಣವ್ಯಕ್ತಿ ಎನ್ನುವರು. ಈ ಯಾವ ಗುಣತ್ರಯ ಕಾರ್ಯದಲ್ಲಿ ಈ ವಿಶ್ವವು ಓತಪ್ರೋತವಾಗಿ ಆಶ್ರಯಪಡೆದಿದೆ. ಆದ್ದರಿಂದ ಜೀವಕ್ಕೆ ಜನ್ಮಮೃತ್ಯುವಿನ ಚಕ್ರದಲ್ಲಿ ಬರಬೇಕಾಗುವುದು.

ತೇಣೇ ನಿಜಾತ್ಮಕಾಳಸತ್ತೇ । ಅವಲೋಕಿಲೇ ನಿಜಮಾಯೇತೇ । ತೇ ಕ್ಷೋಭೋನಿಯಾ ತೇಥೇ। ನಿಜಸೂತ್ರಾತೇ ಉಪಜವೀ ।೨೦೯॥ ತೇಚಿ ಬೋಲಿಲೀ ''ಕ್ರಿಯಾಶಕ್ತಿ'' । ಕರಿತೀ ಝಾಲೀ ತ್ರಿಗುಣವ್ಯಕ್ತೀ। ಅಹಂಕಾರದ್ವಾರಾ ಸೃಜಿತೀ। ಜಗ ಉತ್ಪತ್ತೀತೇ ಮೂಳ ।೨೧೦॥ ಯೇಥೇ ಗುಣಾಗುಣವಿಭಾಗ। ಸುರ ನರ ಆಣಿ ಪನ್ನಗ । ಅಧ ಊರ್ಧ್ವ ಮಧ್ಯಭಾಗ । ರಚಿಲೇ ಜಗ ತತ್ಕಾಲ ।೨೧೧॥ ಬ್ರಹ್ಮಾಂಡೀ ಸೂತ್ರ ಜಾಣ। ಪಿಂಡೀವರ್ತವೀ ಪ್ರಾಣ । ಪಿಂಡಬ್ರಹ್ಮಾಂಡ - ವಿಂದಾನ । ಕರ್ತ್ರೀ ಜಾಣ ''ಕ್ರಿಯಾಶಕ್ತಿ'' ।೨೧೨॥ ಜೀವ ಕರಾವಯಾ ಸಂಸಾರೀ। ಷಡ್ವಿಕಾರ ವಾಢವೀ ಶರೀರೀ। ಷಡೂರ್ಮೀ ತ್ಯಾಮಾರರಝಾರೀ। ಜೀವ ಸಂಸಾರೀ ಸಂಚರವೀ ।೨೧೩॥ ಏವಢೀ ಸಂಸಾರ ಉತ್ಪತ್ತೀ । ಕರಾವಯಾ ಇಚೀ ವ್ಯುತ್ಪತ್ತೀ । ಯಾಲಾಗೀ ನಾಂವೇ ''ಕ್ರಿಯಾಶಕ್ತಿ'' । ಸಾಂಖ್ಯಸಮ್ಮತೀ ಬೋಲಿಜೇ ।೨೧೪॥ ಯಾ ಕ್ರಿಯಾಶಕ್ತಿಸೂತ್ರಾಚೇ ಠಾಯೀ। ಜಗ ಓತಿಲೇ ಅಸೇ ಪಾಹೀ । ಆಡವೇತಿಡವೇ ಠಾಯಿಲಿಯೀಂಚೇ ಠಾಯೀ । ಗೋಂವೂನ ಲವಲಾಹೀ ವಾಢತ ।೨೧೫॥ ದೃಢಬಂಧ ದೇಹಾಭಿಮಾನಾ। ದೇಊನ ಸಂಸಾರೀ ಕರೀ ಜನಾ । ಉಪಜವೀ ಅನಿವಾರ ವಾಸನಾ। ಯೋನೀ ನಾನಾ ಜನ್ಮವೀ ।೨೧೬॥ ಪಿತ್ಯಾಚೇನಿ ರೇತಮೇಳೇ। ರಜಸ್ವಲೇಚೇನಿ ರುಧಿರಬಳೇ। ಉಕಡತಾ ಜಠರಾಗ್ನಿಜ್ವಾಳೇ ।ಬಹುಕಾಳೇ ಗೋಠಲೇ ।೨೧೭॥ ತೇಥ ನಿಫಾಲೇ ಅವಯವಾಂಕುರ। ಕರಚರಣಾದಿಕ ಲಹಾನ ಥೋರ। ದೇಹ ಝಾಲಾ ಜೇ ಸಾಕಾರ । ತರೀ ಅಪಾರ ಯಾತನಾ ।೨೧೮॥ ಜಠರೀ ಗರ್ಭಾಚೀ ಉಕಡತಾ ಉಂಡೀ । ನಾನಾ ದುಃಖಾಂಚೀ ಹೋಯ ಪೇಂಡೀ। ರಿಘೇ ವಿಷ್ಠಾಕೃಮೀ ನಾಕೀ ತೋಂಡೀ। ತೇಣೇ ಮಸ್ತಕ ಝಾಡೀ ಪುರೇ ಪುರೇ ।೨೧೯॥

ಈತನು ತನ್ನ ಕಾಲಸತ್ತೆಯಿಂದ ಮಾಯೆಯತ್ತ ಅವಲೋಕಿಸಲು ಆಕೆಯು ಕ್ಷುಬ್ಧಳಾಗಿ ವಾಯುರೂಪ ಸೂತ್ರಾತ್ಮಕ್ಕೆ ಉತ್ಪನ್ನಗೊಳಿಸಿದಳು ।೨೦೯॥ ಅದಕ್ಕೆ ''ಕ್ರಿಯಾಶಕ್ತಿ'' ಎಂದು ಹೇಳುವರು. ಆ ಯಾವ ಕ್ರಿಯಾಶಕ್ತಿಯು ಸತ್ವ, ರಜ, ತಮಗಳೆಂಬ ಮೂರು ಗುಣಗಳನ್ನು ಉತ್ಪನ್ನಗೊಳಿಸಿತು. ಮತ್ತು ಅಹಂಕಾರ ದ್ವಾರಾ ಜಗತ್ತಿನ ಉತ್ಪತ್ತಿಯ ಮೂಲವನ್ನು ನಿರ್ಮಾಣಗೊಳಿಸಿತು ।೨೧೦॥ ಆ ಸಮಯದಲ್ಲಿ ಗುಣಾಗುಣಗಳ ವಿಭಾಗದಂತೆ ದೇವ, ಮನುಷ್ಯ, ನಾಗ ಇವುಗಳ ಉತ್ಪತ್ತಿಯಾಗಿ ಅಧವೆಂದರೆ ಪಾತಾಳ ಊರ್ಧ್ವವೆಂದರೆ ಸ್ವರ್ಗಲೋಕ ಮತ್ತು ಮಧ್ಯವೆಂದರೆ ಮೃತ್ಯುಲೋಕ, ಈ ಪ್ರಕಾರವಾಗಿ ತ್ರಿಭುವನದ ರಚನೆಯನ್ನು ಮಾಡಲ್ಪಟ್ಟಿತು ।೨೧೧॥ ಬ್ರಹ್ಮಾಂಡದಲ್ಲಿನ ಆ ಯಾವ ವಾಯುರೂಪ ಸೂತ್ರವು ಪ್ರಾಣರೂಪದಿಂದ ಪಿಂಡಗಳಿಗೆ ಚಾಲನೆಯನ್ನು ಕೊಟ್ಟಿತು. ಕ್ರಿಯಾಶಕ್ತಿಯೇ ಬ್ರಹ್ಮಾಂಡದ ಮತ್ತು ಪಿಂಡದ ರಚನೆಯನ್ನು ಮಾಡುವಂತಹದ್ದಾಗಿದೆ ।೨೧೨॥ ಜೀವಕ್ಕೆ ಸಂಸಾರಿಯನ್ನಾಗಿ ಮಾಡಲು ಅದು ಶರೀರದಲ್ಲಿ ಉತ್ಪತ್ತೀ, ಅಸ್ತಿತ್ವ, ವೃದ್ಧೀ, ಪರಿಣಾಮ, ಕ್ಷಯ ಮತ್ತು ನಾಶ ಹೀಗೆ ಈ ಆರು ವಿಕಾರಗಳನ್ನು ಬೆಳೆಸಿರುವುದು. ಅದರಲ್ಲಿ ಜನ್ಮ, ಮರಣ, ಕ್ಷುಧಾ, ತೃಷಾ, ಶೋಕ ಮತ್ತು ಮೋಹ ಈಯಾವ ಆರು ಊರ್ಮಿಗಳನ್ನು ಉತ್ಪನ್ನಗೊಳಿಸಿತು. ಹಾಗೂ ಜೀವನಿಂದ ಸುಖ ದುಃಖದ ಭೋಗವನ್ನು ಭೋಗಿಸುತ್ತಿರುವುದು ।೨೧೩॥ ಈ ಪ್ರಕಾರವಾಗಿ ಸಂಸಾರದ ಬೆಳವಣಿಗೆ ಮಾಡುವುದು. ಆದ್ದರಿಂದ ಸಾಂಖ್ಯಶಾಸ್ತ್ರಗಳಲ್ಲಿ ಇದನ್ನು ಕ್ರಿಯಾಶಕ್ತಿ ನಾಮದಿಂದ ಉಲ್ಲೇಖ ಮಾಡಲಾಗಿದೆ ।೨೧೪॥ ಈ ಕ್ರಿಯಾಶಕ್ತಿಯ ಸೂತ್ರದಲ್ಲಿಯೇ ಈ ಜಗತ್ತು ಓತಪ್ರೋತವಾಗಿ ತುಂಬಿರುವುದು. ಅದು ಅಡ್ಡತಿಡ್ಡವಾಗಿ ಗುಂತಾಯಿಸಿ ಇದ್ದಲ್ಲಿಯೇ ಇದ್ದು ಹಾಗೆಯೇ ಬೆಳೆಯುತ್ತ ಸಾಗುವುದು ॥ ೨೧೫॥ ಈ ಕ್ರಿಯಾಶಕ್ತಿಯು ದೇಹಾಭಿಮಾನದ ಗಂಟು ಹಾಕಿ ಜನರನ್ನು ಸಂಸಾರಿಯನ್ನಾಗಿ ತಯಾರಿಸುವುದು. ಅದರ ಮನದಲ್ಲಿ ನಾನಾ ಪ್ರಕಾರಗಳ ವಾಸನೆಗಳನ್ನು ನಿರ್ಮಿಸುವುದು ಮತ್ತು ಅನೇಕ ಪ್ರಕಾರದ ಯೋನಿಗಳಲ್ಲಿ ಆತನಿಗೆ ಜನ್ಮಕ್ಕೆ ನೂಕುವುದು ।೨೧೬॥ ತಂದೆಯ ವೀರ್ಯದಲ್ಲಿ ತಾಯಿಯ ರಕ್ತದ ಮಿಶ್ರಣವಾಗಿ ಆ ಮಿಶ್ರಣವು ಬಹುಕಾಲದವರೆಗೆ ಜಠರಾಗ್ನಿಯ ಜ್ವಾಲೆಯಲ್ಲಿ ಕುದ್ದು ಕುದ್ದು ಗಟ್ಟಿಯಾಗುವುದು ।೨೧೭॥ ನಂತರ ಅದಕ್ಕೆ ಕರ ಚರಣ ಇತ್ಯಾದಿ ಚಿಕ್ಕ ದೊಡ್ಡ ಅವಯವಗಳು ಹುಟ್ಟುವುವು. ಆಗ ಸಾಕಾರ ದೇಹವು ಸಿದ್ಧವಾಗುವುದು. ಅದಕ್ಕೆ ಅನೇಕ ಪ್ರಕಾರದ ಯಾತನೆಗಳನ್ನು ಭೋಗಿಸಬೇಕಾಗುವುದು ।೨೧೮॥ ಹೊಟ್ಟೆಯಲ್ಲಿ ಗರ್ಭದ ಗೋಲವು ಕುದಿಯುತ್ತಿರಲು ನಾನಾ ಪ್ರಕಾರದ ದುಃಖಗಳನ್ನು ಸೋಸಬೇಕಾಗುವುದು.ಮೂಗುಬಾಯಿಯಲ್ಲಿ ವಿಷ್ಠಾ, ಜಂತು ವಗೈರೆ ಸೇರುತ್ತಿರುವುವು. ಆಗ ಆ ಜೀವವು ಸಾಕು, ಸಾಕು ಎಂದು ತಲೆಯನ್ನು ಝಾಡಿಸುವುದು ।೨೧೯॥

ಘೋರ ಗರ್ಭೀಂಚೀ ವೇದನಾ । ಆಠವಿತಾ ಥರಕಾಂಪು ಮನಾ । ಭಗದ್ವಾರೇ ಜನ್ಮ ಜಾಣಾ । ಪರಮ ಯಾತನಾ ಜೀವಾಸೀ ।।೨೨೦।। ಐಸೇ ಜನ್ಮ ವೂನಿ ಜನೀ । ಘಾಲೀ ಸ್ವರ್ಗಾಚ್ಯಾ ಬಂದೀಖಾನೀ । ಕಾ ಪಚತೀ ಅಧಃಪತನೀ । ದೇಹಾಭಿಮಾನೇ ಕರೂನಿಯಾ ।।೨೨೧।। ಐಸೀ ಸುಖದುಃಖಾಂಚೀ ಕಡೀ । ಘಾಲೋನಿ ತ್ರಿಗುಣೇ ದೃಢಬೇಡೀ । ಭೋಗವೀ ದುಃಖಾಂಚ್ಯಾ ಕೋಡೀ । ತರೀ ನ ಸೋಡೀ ಅವಿದ್ಯಾ ।।೨೨೨।। ಹಾ ಘೋರಮಾಯೇಚಾ ಖಟಾಟೋಪು । ರಾಯಾ ತುಜ ನಾಹೀ ಭಯಕಂಪು । ತುವಾ ದೃಢ ಧರೋನಿ ಅನುತಾಪು । ಅಭಿಮಾನದರ್ಪು ಭೇದಿಲಾ ।।೨೨೩।। ತುಝೀ ಪಾಲಟಲೀದಿಸೇ ಸ್ಥಿತೀ । ಹೃದಯೀ ಪ್ರಗಟಲೀ ಚಿಚ್ಛಕ್ತೀ । ಮಾವಳಲೀ ಅವಿದ್ಯೇಚೀ ರಾತೀ । ಬೋಧಗಭಸ್ತಿ ಉಗವಲಾ ।। ೨೨೪।। ಜೇಥ ಭೇದಿಲಾ ಅಭಿಮಾನ । ತೇಥೇ ಕಾಮಾದಿ ವೈರೀ ನಿಮಾಲೇ ಜಾಣ । ಜೇವೀ ಶಿರ ಭೇದಿಲ್ಯಾ ಕರಚರಣ । ಸಹಜೇ ಜಾಣ ನಿಮಾಲೇ ।।೨೨೫।। ಯಾಪರೀ ತೂ ''ಅರಿಮರ್ದನ'' । ಬೋಲಿಲೋ ತೇ ಸತ್ಯ ಜಾಣ । ಐಕೋನಿ ಅವಧೂತವಚನ । ಸುಖಸಂಪನ್ನ ನೃಪ ಝಾಲಾ ।।೨೨೬।। ಮ್ಹಣೇ ಧನ್ಯ ಧನ್ಯ ಮೀ ಸನಾಥ । ಮಸ್ತಕೀ ಠೇವಿಲಾ ಹಸ್ತ । ಪ್ರೇಮೇ ವೋಸಂಡಲಾ ಅವಧೂತ । ಹೃದಯೀ ಹೃದಯಾಂತ ಆಲಿಂಗೀ ।।೨೨೭।। ದೋಘಾ ನಿಜಾತ್ಮ ಬೋಧೇ ಜಾಹಲೀ ಭೇಟೀ । ಯಾಲಾಗೀ ಖೇವಾ ಪಡಲೀ ಮಿಠೀ । ತೇಣೇ ಆನಂದೇ ವೋಸಂಡೇ ಸೃಷ್ಟೀ । ಸಭಾಗ್ಯಾ ಭೇಟೀ ಸದ್ಗುರೂಸೀ ।।೨೨೮।। ಬಾಲಕಾ ಕೀಜೇತಿ ಸೋಹಳೇ । ತೇಣೇ ನಿವತೀ ಜನನೀಚೇ ಡೋಳೇ । ಶಿಷ್ಯಾಸೀ ನಿಜಬೋಧು ಆಕಳೇ । ತೇ ಸುಖಸೋಹಳೇ ಸದ್ಗುರೂಸೀ ।।೨೨೯।। ಕರಿತಾ ದೋಘಾಂಸೀ ಸಂವಾದು । ವೋಸಂಡಲಾ ಪರಮಾನಂದು । ಪುಢೀಲ ಕಥೇಚಾ ಸಂವಾದು । ಅತಿವಿಶದು ಸಾಂಗತ ।।೨೩೦।।

ಯಥೋರ್ಣನಾಭಿರ್ ಹೃದಯಾದೂರ್ಣಾಂ ಸಂತತ್ಯ ವಕ್ತ್ರತಃ । ತಥಾ ವಿಹೃತ್ಯ ಭೂಯಸ್ತಾಂ ಗ್ರಸತ್ಯೇವಂ ಮಹೇಶ್ವರಃ ।।೨೧।।

ಅರ್ಥ:- ಜೇಡರ ಹುಳವು ತನ್ನ ಬಾಯಿಯಿಂದ ಎಳೆಯನ್ನು ವಿಸ್ತರಿಸಿ ಕೆಲಕಾಲ ಅದರೊಡನೆ ಕ್ರೀಡಿಸಿ ಕೊನೆಗೆ ಅದನ್ನು ನುಂಗುವಂತೆ ಪರಮಾತ್ಮನು ಸ್ವಶಕ್ತಿಯನ್ನು ತನ್ನೊಳಗಿನಿಂದ ವಿಸ್ತರಿಸುತ್ತಾನೆ. ತನ್ನ ಸಂಕಲ್ಪಾನುಸಾರವಾಗಿ ಅದನ್ನು ಉಪಯೋಗಿಸುತ್ತಾನೆ.ಮತ್ತು ಕೊನೆಗೆ ಸಂಪೂರ್ಣವಾಗಿ ತನ್ನೊಳಗೆ ಸೆಳೆದುಕೊಳ್ಳುತ್ತಾನೆ.

''ಊರ್ಣನಾಭೀ'' ಮ್ಹಣಜೇ ಕಾಂತಿಣೀ । ಹೃದಯತಂತು ಮುಖೇ ಕರೂನೀ । ವಿಸ್ತಾರೀ ಬಾಹೇರ ಕಾಢೂನಿ । ನಿಜಗುಣೇ ಸ್ವಭಾವೇ ।।೨೩೧।।

ಗರ್ಭದಲ್ಲಿನ ವೇದನೆಯು ಬಹು ಭಯಾನಕವಾಗಿರುವುದು. ಅದನ್ನು ಜ್ಞಾಪಿಸಿಕೊಂಡರೆ ಸಾಕು ಮೈನಡುಕುಂಟಾಗುವುದು. ಯೋನಿದ್ವಾರದಿಂದ ಗರ್ಭದ ಜನ್ಮವಾಗುವಕಾಲಕ್ಕೆ ಜೀವಕ್ಕೆ ಅತಿಶಯವಾಗಿ ವೇದನೆಯನ್ನು ಭೋಗಿಸಬೇಕಾಗುವುದು ।೨೨೦।। ಈ ಪ್ರಕಾರವಾಗಿ ಮಾಯೆಯು ಜಗತ್ತಿನಲ್ಲಿ ಜನ್ಮವನ್ನು ಕೊಟ್ಟು ಕೆಲವೊಮ್ಮೆ ಸ್ವರ್ಗದ ಕಾರಾಗೃಹದಲ್ಲಿ ಹಾಕುವುದು ಅಥವಾ ಅಧಃಪತನಗೊಳಿಸಿ ದುಃಖವನ್ನು ಭೋಗಿಸಲು ಹಚ್ಚುವುದು ।೨೨೧।। ಈ ಪ್ರಕಾರವಾಗಿ ಸುಖದುಃಖದ ಸರಪಳಿಯಿಂದ ತಯಾರಿಸಿದ ತ್ರಿಗುಣದ ಬಿಗಿಯಾದ ಬೇಡಿಯ ದುಃಖದ ರಾಶಿಯನ್ನು ಭೋಗಿಸಲು ಹಚ್ಚುವುದು. ಹೀಗಿದ್ದರೂ ಅವಿದ್ಯೆಯು ಬಿಡುವುದಿಲ್ಲ ।೨೨೨।। ಹೇ ರಾಜನೇ, ಈ ಮಾಯೆಯ ಖಟಾಟೋಪವು ಮಹಾಭಯಂಕರವಾಗಿರುವುದು. ಆದರೆ ನೀನು ಮಾತ್ರ ಅದರಿಂದ ಭಯಪಡಬೇಕಾಗಿಲ್ಲ. ಕಾರಣ ನೀನು ವಿರಕ್ತಿಯಿಂದ ಅಭಿಮಾನದ ಗರ್ವವನ್ನು ಮುರಿದೊಗೆದಿರುವೆ ।೨೨೩।। ನಿನ್ನ ವೃತ್ತಿಯು ಬದಲಾಗಿರುವುದು ತೋರುತ್ತಿದೆ. ನಿನ್ನ ಅಂತಃಕರಣದಲ್ಲಿ ಚಿತ್‌ಶಕ್ತಿಯು ಪ್ರಕಾಶವಾಗಿರುವುದು. ಅವಿದ್ಯೆಯ ರಾತ್ರಿಯು ಮುಗಿದುಹೋಗಿ ಜ್ಞಾನಸೂರ್ಯನ ಉದಯವಾಗಿರುವುದು ।೨೨೪।। ಶಿರಚ್ಛೇದನ ಮಾಡುತ್ತಲೇ ಕರ ಚರಣಗಳು ತಮ್ಮಷ್ಟಕ್ಕೆ ತಾವೇ ಬಿದ್ದುಹೋಗುವುವು. ಅದರಂತೆ ಅಭಿಮಾನದ ಭೇದವಾಗುತ್ತಲೇ ಕಾಮಾದಿ ಶತ್ರುಗಳ ನಾಶವು ಸಹಜವಾಗಿ ಆಗುವುದು ।೨೨೫।। ಈ ಪ್ರಕಾರವಾಗಿ ನಾನು ನಿನಗೆ ಅರಿಮರ್ದನ ಎಂದು ಹೇಳಿರುವೆನು, ಇದು ನಿಜವಾಗಿಯೂ ಸರಿಯಾಗಿರುವುದು. ಅವಧೂತನ ಈ ವಚನಗಳನ್ನು ಕೇಳಿ ರಾಜನಿಗೆ ಸಂತೋಷವಾಯಿತು ।೨೨೬।। ಅವಧೂತನಿಗೆ ಪ್ರೇಮದ ಪೂರವು ತುಂಬಿ ಬಂದಿತು. ಆತನು ರಾಜನ ಮಸ್ತಕದ ಮೇಲೆ ವರದ ಹಸ್ತವನ್ನಿಟ್ಟನು. ಹೃದಯದಿಂದ ಹೃದಯಕ್ಕೆ ಆಲಿಂಗಿಸಿದನು. ಆಗ ರಾಜನಿಗೆ ಬಹಳ ಧನ್ಯತೆಯು ಉಂಟಾಯಿತು ।೨೨೭।। ನಿಜಾತ್ಮ ಬೋಧೆಯಿಂದ ಈ ಇಬ್ಬರ ಐಕ್ಯವಾಯಿತು. ಇಬ್ಬರೂ ಒಬ್ಬರಿಗೊಬ್ಬರು ಆಲಿಂಗಿಸಿದರು. ಇವರಿಗೆ ಸರ್ವ ಸೃಷ್ಟಿಯು ಆನಂದರೂಪವಾಗಿ ತೋರಹತ್ತಿತು. ಏಕೆಂದರೆ ನಿಜವಾದ ಭಾಗ್ಯವಂತನಿಗೆ ಮಾತ್ರ ಸದ್ಗುರುಗಳ ಭೇಟಿಯು ಆಗುತ್ತಿರುವುದು ।೨೨೮।। ಯಾವ ಪ್ರಕಾರವಾಗಿ ಬಾಲಕನ ಕೌತಕವನ್ನು ಕಂಡು ತಾಯಿಯ ಕಣ್ಣುಗಳು ತೃಪ್ತವಾಗುವುವೋ, ಅದರಂತೆಯೇ ಶಿಷ್ಯನಿಗೆ ಆತ್ಮ ಬೋಧೆಯು ಆಯಿತೆಂದರೆ ಸದ್ಗುರುಗಳಿಗೆ ಅತ್ಯಂತ ಆನಂದವಾಗುವುದು ।೨೨೯।। ಈ ಪ್ರಕಾರವಾಗಿ ಈ ಉಭಯರ ಸಂವಾದವು ನಡೆಯುತ್ತಿರಲು ಪರಮಾನಂದದ ಪೂರವೂ ಹರಿಯಹತ್ತಿತು. ಈ ಆನಂದದ ಭರದಲ್ಲಿ ಮುಂದಿನ ಕಥೆಯ ಸಂವಾದವನ್ನು ಅವಧೂತನು ಅತ್ಯಂತ ವಿಶದವಾಗಿ ಹೇಳಲಾರಂಭಿಸಿದನು ।೨೩೦।।

ಊರ್ಣನಾಭೀ ಎಂದರೆ ನಾಭಿಯಿಂದ ಎಳೆಯನ್ನು ತೆಗೆಯುವ ಜೇಡರ ಹುಳವು. ಅದು ತನ್ನ ಸ್ವಭಾವದಂತೆ ಹೊಟ್ಟೆಯಲ್ಲಿನ ಎಳೆಯನ್ನು ಬಾಯಿಂದ ಹೊರಗೆ ತೆಗೆದು ಅದರಿಂದ ಬಲೆಯನ್ನು ತಯಾರಿಸುವುದು ।೨೩೧।।

ತ್ಯಾ ವಿಸ್ತಾರಿಲ್ಯಾ ತಂತೂವರೀ । ತಳೀ ಆಣೀ ಉಪರೀ । ಆಪಣಚಿ ಕ್ರೀಡಾ ಕರೀ । ನಾನಾಪರೀ ಸ್ವಲೀಲಾ ।।೨೩೨॥ ತಂತು ವಿಸ್ತಾರೇ ಖೇಳತೀ ಲೀಲಾ । ಪ್ರತ್ಯಕ್ಷ ದೇಖತಾಂಚಿ ಡೋಳಾ । ಗ್ರಾಸುನಿ ನೇ ಹೃದಯಕಮಳಾ । ಅದ್ವೈತಕಳಾ ದಾಖವೀ ।।೨೩೩।। ಯಾಚಿ ರೀತೀ ಸರ್ವೇಶ್ವರು । ಏಕಲಾ ರಚೀ ಸಂಸಾರು । ಅಂತೀ ಕರೂನಿ ಸಂಹಾರು । ಉರೇ ನಿರ್ವಿಕಾರು ನಿಜಾತ್ಮಾ ।।೨೩೪।। ಯಾ ಲಕ್ಷಣಾಚಾ ನಿರ್ಧಾರು । ಧರೂನಿ ಊರ್ಣನಾಭೀ ಕೇಲಾ ಗುರು । ಆತಾ ಸಾರೂಪ್ಯತೇಚಾ ವಿಚಾರು। ಪೇಶಸ್ಕಾರು ಗುರು ಮ್ಯಾ ಕೇಲಾ ।।೨೩೫।।

ಯತ್ರ ಯತ್ರ ಮನೋ ದೇಹೀ ಧಾರಯೇತ್ ಸಕಲಂ ಧಿಯಾ ।
ಸ್ನೇಹಾತ್ದ್ವೇಷಾದ್ಭಯಾದ್ವಾऽಪಿ ಯತಿ ತತ್ತತ್ಸ್ವರೂಪತಾಮ್ ॥ ೨೨॥

ಅರ್ಥ:- ಜೀವವು ತನ್ನ ನಿಶ್ಚಿತವಾದ ಬುದ್ಧಿಯಿಂದ, ಸ್ನೇಹದಿಂದ, ದ್ವೇಷದಿಂದ, ಅಥವಾ ಭಯದಿಂದ ತನ್ನ ಏಕಾಗ್ರಮನವನ್ನು ಯಾವ ಯಾವ ಸ್ಥಳದಲ್ಲಿ ಸ್ಥಿರಗೊಳಿಸುವುದೋ ಆ ವಸ್ತುವಿನ ಸ್ವರೂಪವು ಪ್ರಾಪ್ತವಾಗುವುದು.

ಕಾಯಾ ವಾಚಾ ಆಣಿ ಮನ । ಪುರುಷೇ ಏಕಾಗ್ರ ಕರೂನ । ಜೇ ಜೇ ವಸ್ತೂಚೇ ಕರೀ ಧ್ಯಾನ। ತದ್ರೂಪ ಜಾಣ ತೋ ಹೋಯ ।।೨೩೬।। ಸ್ನೇಹೇ ದ್ವೇಷೇ ಅಥವಾ ಭಯೇ । ದೃಢ ಧ್ಯಾನ ಜೇಣೇ ಹೋಯೇ । ತೇಣೇಚಿ ತದ್ರೂಪತಾ ಲಾಹೇ । ಉಭವೂನಿ ಬಾಹೇ ಸಾಂಗತು ।।೨೩೭।। ದೇಹ ಗೇಲಿಯಾ ತದ್ರೂಪತಾ । ಹೋಈಲ ಹೇ ವಚನ ವೃಥಾ । ಯೇಣೇಚಿ ದೇಹೇ ಯೇಥ ಅಸತಾ । ತದ್ರೂಪತಾ ಪಾವಿಜೇ ।।೨೩೮।।

ಕೀಟಃ ಪೇಶಸ್ಕೃತಂ ಧ್ಯಾಯನ್ ಕಡ್ಯಾ ತೇನ ಪ್ರವೇಶಿತಃ । ಯಾತಿ ತತ್ಸಾತ್ಮತಾ ರಾಜನ್ ಪೂರ್ವರೂಪಮಸಂತ್ಯಜನ್ ।।೨೩।।

ಅರ್ಥ:- ಹೇ ರಾಜನೇ, ಕಣಜದ ಹುಳವು ತನ್ನ ಗೋಡೆಯಮೇಲೆ ಮನೆ ತಯಾರಿಸಿ ಅದರಲ್ಲಿ ತಂದಿಟ್ಟ ಹುಳವು ಭಯದಿಂದ ಅದರ ಧ್ಯಾನವನ್ನು ಮಾಡುವುದು. ಅದ್ದರಿಂದ ತನ್ನ ಮೂಲ ಶರೀರದ ತ್ಯಾಗವನ್ನು ಮಾಡದೇ ಅದು ಕಣಜ ಹುಳದ ಶರೀರವನ್ನು ಪ್ರಾಪ್ತಮಾಡಿಕೊಳ್ಳುವುದು.

ಭಿಂಗುರಟಿ ಕೀಟಕೀತೇ ಧರೀ । ಕೋಂಡೀ ಭಿಂತೀಮಾಜೀಲೇ ಘರೀ । ತೇ ಮರಣಭಯೇ ಧ್ಯಾನ ಕರೀ। ನಿರಂತರೀ ಭ್ರಮರೀಚೇ ।।೨೩೯।। ತೇಣೇ ತೀವ್ರ ಧ್ಯಾನೇ ತೀ ಕೀಟೀ । ಹೋಊನಿ ಠಾಕೇ ಭಿಂಗುರಟೀ । ಗಗನೀ ಚಢೇ ಉಠಾಉಠೀ । ಪ್ರತ್ಯಕ್ಷ ದೃಷ್ಟೀ ದೇಖಿಜೇ।।೨೪೦।। ಭಿಂಗುರಟೀ ಜಡ ಅಸಂತ। ಮೂಢ ಕೀಟೀ ತಿಚೇ ಧ್ಯಾನ ಕರೀತ । ತೇಣೇ ತದ್ರೂಪತಾ ಪ್ರಾಪ್ತ । ತೈಸಾ ಭಗವಂತ ತಂವ ನವ್ಹೇ ।।೨೪೧।। ತೋ ಅಜಡ ಚಿದ್ರೂಪ ಸುಖದಾತಾ । ಜ್ಞಾತಾ ಅಧಿಕಾರೀ ಧ್ಯಾನ ಕರಿತಾ । ತೇಥ ತದ್ರೂಪತಾ ಪಾವತಾ । ವಿಲಂಬೂ ಸರ್ವಥಾ ಪೈ ನಾಹೀ ।।೨೪೨॥

ತದನಂತರ ಆ ಯಾವ ಪಸರಿಸಿರುವ ಬಲೆಯಲ್ಲಿ ಕೆಳಗೆ ಮೇಲೆ ಆಟವಾಡುತ್ತ ನಾನಾ ಪ್ರಕಾರವಾಗಿ ತಾನೇ ತಾನಾಗಿ ಕ್ರೀಡಿಸುವುದು ।।೨೩೨॥ ಆ ಯಾವ ಎಳೆಯ ಬಲೆಯಲ್ಲಿ ಆಡುತ್ತ ಆಡುತ್ತ ಪ್ರತ್ಯಕ್ಷವಾಗಿ ಕಣ್ಣುಗಳಿಂದ ನೋಡುತ್ತಿದ್ದಂತೆಯೇ ಅದು ಎಲ್ಲ ಎಳೆಗಳನ್ನು ತಿಂದು ಹೊಟ್ಟೆಯಲ್ಲಿ ತುಂಬುವುದು. ಹೀಗೆ ಅದ್ವೈತ ಕಲೆಯನ್ನು ತೋರಿಸುವುದು ।೨೩೩। ಇದರಂತೆಯೇ ಸರ್ವೇಶ್ವರನು ಸ್ವತಃತಾನೇ ಪ್ರಪಂಚದ ರಚನೆಯನ್ನು ಮಾಡುವನು. ಮತ್ತು ಸ್ವತಃ ತಾನೇ ನಾಶವನ್ನು ಮಾಡಿ ಆತ್ಮಸ್ವರೂಪದಿಂದ ನಿರ್ವಿಕಾರನಾಗಿರುವನು ।೨೩೪।। ಈ ಲಕ್ಷಣದ ಮೇಲಿಂದ ನಾನು ಊರ್ಣನಾಭಿಯನ್ನು ಗುರುವನ್ನಾಗಿ ಮಾಡಿಕೊಂಡೆನು. ನಂತರ ಸಾಯುಜ್ಯದ ವಿಚಾರವನ್ನು ಮಾಡುವುದಕ್ಕಾಗಿ ನಾನು ಕುಂಬಾರಣೀ ಅಂದರೆ ಕಣಜದ ಹುಳವನ್ನು ಗುರುವನ್ನಾಗಿ ಮಾಡಿಕೊಂಡೆನು ।೨೩೫।।

ಮಾನವನು ಕಾಯಾ ವಾಚಾ ಮತ್ತು ಮನದಿಂದ ಏಕಾಗ್ರತೆಯನ್ನು ಮಾಡಿ ಯಾವ ಯಾವ ವಸ್ತುವಿನ ಧ್ಯಾನವನ್ನು ಮಾಡುವನೋ, ಆ ಯಾವ ವಸ್ತುವಿನ ಸ್ವರೂಪವು ಆತನಿಗೆ ಪ್ರಾಪ್ತವಾಗುತ್ತಿರುವುದು ।೨೩೬।। ಸ್ನೇಹದಿಂದಾಗಲಿ, ದ್ವೇಷದಿಂದಾಗಲಿ, ಅಥವಾ ಭಯದಿಂದಾಗಲಿ ಯಾವ ಯಾವ ವಸ್ತುವಿನ ಸತತವಾಗಿ ಧ್ಯಾನವು ಹತ್ತುವುದೋ, ಆ ಧ್ಯಾನದಿಂದಲೇ ಆತನಿಗೆ ತದ್ರೂಪತೆಯು ಪ್ರಾಪ್ತವಾಗುವುದು. ಇದನ್ನು ನಾನು ಕೈ ಎತ್ತಿ ನಿಶ್ಚಿತವಾಗಿ ಹೇಳುತ್ತೇನೆ ।೨೩೭।। ದೇಹವು ಬಿದ್ದು ಹೋದ ನಂತರ ತದ್ರೂಪತೆಯು ಲಭಿಸಬಹುದೆಂದು ಹೇಳುವುದು, ಇದು ತಪ್ಪಾಗಿರುವುದು. ಏಕೆಂದರೆ (ಮಾನವನು ಇದೇ ದೇಹದಲ್ಲಿ ಇದೇಲೋಕದಲ್ಲಿ ತದ್ರೂಪತೆಯನ್ನು ಪ್ರಾಪ್ತಮಾಡಿಕೊಳ್ಳುವನು) ।೨೩೮॥

ಭಿಂಗುರಟಿ ಎಂದರೆ ಕಣಜದ ಹುಳುವು. ಅದು ಒಂದು ಹಸಿರು ಹುಳುವನ್ನು ತಂದು ಅದನ್ನು ತಾನು ಒಂದು ಗೋಡೆಯ ಮೇಲೆ ಕಟ್ಟಿದ ಮನೆಯಲ್ಲಿ ಮುಚ್ಚಿ ಇಡುವುದು. ಅದರಿಂದ ಆ ಹುಳುವು ಮೃತ್ಯುಭಯದಿಂದ ಸತತವಾಗಿ ಕಣಜ ಹುಳುವಿನ ಧ್ಯಾನವನ್ನು ಮಾಡುವುದು ।೨೩೯।। ಈ ಯಾವ ಅದರ ತೀವ್ರ ಧ್ಯಾನದಿಂದ ಹಸಿರು ಹುಳುವಾಗಿರುವ ತಾನು ಸ್ವತಃಕಣಜದ ಹುಳುವಾಗಿ ಮಾರ್ಪಟ್ಟು ಕೂಡಲೇ ಆಕಾಶದಲ್ಲಿ ಹಾರಿಹೋಗುವುದು. ಇದನ್ನು ನಾವು ನಮ್ಮ ಕಣ್ಣುಗಳಿಂದ ಪ್ರತ್ಯಕ್ಷವಾಗಿ ಕಾಣುತ್ತೇವೆ ।೨೪೦।। ಈ ಯಾವ ಕಣಜದ ಹುಳುವು ಜಡವಾದದ್ದು ಮತ್ತು ನಶ್ವರವಾದದ್ದು, ಇದರ ಧ್ಯಾನವನ್ನು ಮಾಡಿ ಆ ಯಾವ ಮೂಢ ಹಸಿರು ಹುಳುವು ತದ್ರೂಪವಾಗುವುದು. ಆದರೆ ಭಗವಂತನು ಅದರಂತೆ ಅಲ್ಲ ।೨೪೧।। ಪರಮಾತ್ಮನು ಅಜಡನು, ಚಿದ್ರೂಪನು, ಸುಖದಾತನಾಗಿರುವನು. ಇದನ್ನರಿತವರು ಆತನ ಧ್ಯಾನವನ್ನು ಮಾಡಲು ಆತನು ತತ್ಕಾಲದಲ್ಲಿ ತದ್ರೂಪನಾಗುವನು. ಯಾವ ವಿಲಂಬವಾಗುವುದೇ ಇಲ್ಲ ।೨೪೨।।

ಕೀಟಕೀಸ ಭ್ರಮರತ್ವ ಜೋಡೇ । ಹೇ "ತೀವ್ರಧ್ಯಾನೇ"ನ ಘಡತೇ ಘಡೇ । ವಿಚಾರಿತಾ ದೋನ್ಹೀ ಮೂಢೇ । ಜಡಜಡೇ ವೇಧಿಲೇ ॥೨೪೩॥ ಭಗವದ್ಧ್ಯಾನ ನವ್ಹೇ ತೈಸೇ । ಧ್ಯಾತಾ ಭಗವದ್‍ರೂಪಚಿ ಅಸೇ । ಧ್ಯಾನೇ ಭ್ರಮಮಾತ್ರ ನಾಸೇ । ಅನಾಯಾಸೇ ತದ್ರೂಪ ॥೨೪೪॥ ಯೇಣೇ ದೇಹೇ ಯಾಚಿ ವೃತ್ತೀ । ಆಪುಲೀ ಆಪಣ ನ ಜಾಣೇ ಮುಕ್ತೀ । ನೇಘವೇ ಭಗವತ್ಪದ ಪ್ರಾಪ್ತೀ । ತೈ ವೃಥಾ ವ್ಯುತ್ಪತ್ತೀ ನರದೇಹೀ ॥೨೪೫॥ ವೃಥಾ ತ್ಯಾಚೇ ಜ್ಞಾನ ಧ್ಯಾನ । ವೃಥಾ ತ್ಯಾಚೇ ಯಜನ ಯಾಜನ । ವೃಥಾ ತ್ಯಾಚೇ ಧರ್ಮಾಚರಣ । ಚೈತನ್ಯ ಘನ ಜರೀ ನೋಹೇ ॥ ೨೪೬॥

ಏವಂ ಗುರುಭ್ಯ ಏತೇಭ್ಯ ಏಷಾ ಮೇ ಶಿಕ್ಷಿತಾ ಮತಿಃ । ಸಾತ್ಮೋಪಶಿಕ್ಷಿತಾಂ ಬುದ್ಧಿಂ ಶೃಣು ಮೇ ವದತಃ ಪ್ರಭೋ ॥೨೪॥

ಅರ್ಥ:- ಹೇ ರಾಜನೇ, ಈ ಎಲ್ಲ ಗುರುಗಳಿಂದ ನಾನು ಅಗಾಧವಾದ ಜ್ಞಾನವನ್ನು ಸಂಪಾದಿಸಿಕೊಂಡಿದ್ದೇನೆ. ಈಗ ಸ್ವಶರೀರದಿಂದ ನಾನೇನು ಕಲಿತೆ ಎಂಬುದನ್ನು ಹೇಳುತ್ತೇನೆ ಲಕ್ಷಕೊಟ್ಟು ಕೇಳು.

ಅವಧೂತ ಮ್ಹಣೇ ಯದೂಸೀ । ಇತುಕಿಯಾ - ಗುರೂಪಾಶೀ । ಮೀ ಶಿಕಲೋ ಜೇಜೇ ಮತೀಶೀ । ತೇ ತುಜಪಾಶೀ ಸಾಂಗೀತಲೇ ॥ ೨೪೭॥ ನಿಜಬುದ್ಧೀಚಿಯಾ ವ್ಯುತ್ಪತ್ತೀ । ಕಾಹೀ ಏಕ ಶಿಕಲೋ ಯುಕ್ತಿ । ತೇಹೀ ಸಾಂಗೇನ ತುಜಪ್ರತೀ । ಅನನ್ಯ ಪ್ರೀತೀ - ಸ್ವಭಾವೇ ॥೨೪೮॥ ಚೋವೀಸ ಗುರುಂಚಾಹೀ ಗುರು । ವಿವೇಕ ವೈರಾಗ್ಯ ವಿಚಾರು । ಹಾ ನರದೇಹಿ ಲಾಥೇ ಸಧರು । ಯಾಲಾಗೀ ಮುಖ್ಯಗುರು ನರದೇಹೋ ॥೨೪೯॥

ದೇಹೋ ಗುರುರ್ಮಮ ವಿರಕ್ತಿ ವಿವೇಕ ಹೇತುರ್ಬಿಭ್ರತ್ಸ್ಮಸತ್ತ್ವನಿಧನಂ ಸತತಾರ್ತ್ಯುದರ್ಕಮ್‍ಮ್ ।
ತತ್ತ್ವಾನ್ಯನೇನ ವಿಮೃಶಾಮಿ ಯಥಾ ತಥಾಪಿ ಪಾರಕ್ಯಮಿತ್ಯ ವಸಿತೋ ವಿಚರಾಮ್ಯಸಂಗಃ ॥೨೫॥

ಅರ್ಥ: ಈ ಶರೀರವು ನನ್ನ ಗುರುವಾಗಿದೆ.ಕಾರಣ ಇದು ನನಗೆ ವಿವೇಕ ವೈರಾಗ್ಯದ ಶಿಕ್ಷಣವನ್ನು ಕೊಡುತ್ತದೆ. ಇದಕ್ಕೆಜನ್ಮ ಮರಣಗಳುಬೆನ್ನು ಹತ್ತಿರುವುದು. ಈ ಶರೀರಕ್ಕೆ ಹಿಡಿದಿಟ್ಟರೆ ದುಃಖವನ್ನು ಭೋಗಿಸಬೇಕಾಗುವುದು. ಈ ಶರೀರದ ಮಾಧ್ಯಮದಿಂದ ತತ್ವ ವಿಚಾರಗಳನ್ನು ಮಾಡಲುಬರುವುದು. ಆದರೆ ನಾನು ಹೀಗೆ ಮಾಡದೇ ಯಾವಾಗಲೂ ಇದನ್ನೇ ವಿಚಾರಿಸುತ್ತೇನೆ. ಅದೇನೆಂದರೆ ಮೃತ್ಯು ಒದಗಲು ಈ ಶರೀರವನ್ನು ಪ್ರಾಣಿಗಳು ತಿಂದುಬಿಡುವುವು. ಅದಕ್ಕಾಗಿಯೇ ನಾನು ಈ ಶರೀರದ ಆಸಕ್ತಿಯನ್ನು ಹಿಡಿದಿರುವುದಿಲ್ಲ.

ದೇಹಾಸೀ ಜೇ ಗುರುತ್ವ ಜಾಣಾ । ತೇ ದೋ ಪ್ರಕಾರೀ ವಿಚಕ್ಷಣಾ । ಸಾಂಗೇನ ತ್ಯಾಚ್ಯಾ ಲಕ್ಷಣಾ । ಸಂರಕ್ಷಣಾ ಪರಮಾರ್ಥಾ ॥೨೫೦॥ ದೇಹಾಐಸೇ ವೋಖಟೇ । ಪೃಥ್ವಿಮಾಜೀ ನಾಹೀ ಕೋಠೇ । ದೇಹಾಐಸೇ ಗೋಮಟೇ । ಪಾಹತಾ ನ ಭೇಟೇ ತ್ರಿಲೋಕಿ ॥೨೫೧॥ ವೋಖಟೇ ಮ್ಹಣೋನಿ ತ್ಯಾಗಾವೇ । ತೈ ಮೋಕ್ಷ ಸುಖಾಸೀ ನಾಗವಾವೇ । ಹೋ ಕಾ ಗೋಮಟೇ ಮ್ಹಣೋನಿ ಭೋಗಾವೇ । ತೈ ಅವಶ್ಯ ಜಾವೇ ನರಕಾಸೀ ॥೨೫೨॥

ಹಸಿರು ಹುಳಕ್ಕೆ ಹಾರುವ ಕಣಜ ಹುಳದ ಆಕಾರವು ಪ್ರಾಪ್ತವಾಗುವುದು. ಅಂದರೆ ಕೇವಲ ಅತ್ಯಂತ ಧ್ಯಾನದಿಂದಲೇ ಈ ಅವಸ್ಥೆಯು ಪ್ರಾಪ್ತವಾಗುವುದು. ಆಗದೇ ಇದ್ದದ್ದು ಸಾಧಿಸಿಬಿಡುವುದು. ವಾಸ್ತವಿಕವಾಗಿ ವಿಚಾರವನ್ನು ಮಾಡಿ ನೋಡಲು ಅವೆರಡೂ ಮೂಢವಾಗಿದ್ದು ಜಡಕ್ಕೆ ಜಡದ್ದೇ ಪ್ರಾಪ್ತಿಯಾಯಿತು ॥೨೪೩॥ ಆದರೆ ಭಗವಂತನ ಧ್ಯಾನವು ಮಾತ್ರ ಹಾಗಿರುವುದಿಲ್ಲ. ಕಾರಣ ಧ್ಯಾನವನ್ನು ಮಾಡುವವನು ಮೂಲದಲ್ಲಿ ಭಗವದ್ರೂಪನೇ ಆಗಿರುವನು. ಆದರೆ ಧ್ಯಾನದಿಂದ ಆತನ "ನಾನು ದೇಹಿ" ಎಂಬ ಭಾವವು ಮಾತ್ರ ಇಲ್ಲದಾಗುವುದು. ಆಗ ಆತನು ಸಹಜವಾಗಿಯೇ ತದ್ರೂಪನಾಗುವನು ॥೨೪೪॥ ಯಾರಿಗೆ ಇದೇ ದೇಹದಲ್ಲಿ ತಾನೇ ತನ್ನನ್ನು ಮುಕ್ತಗೊಳಿಸುವುದು ತಿಳಿಯುವುದಿಲ್ಲವೋ, ಯಾರಿಗೆ ಭಗವತ್‍ಪ್ರಾಪ್ತಿಯನ್ನು ಮಾಡಿಕೊಳ್ಳಲು ಬರುವುದಿಲ್ಲವೋ ಆತನ ಜನ್ಮವು ವ್ಯರ್ಥವಾಗಿ ಹೋಗುವುದು ॥೨೪೫॥ ಸತ್‍ಚಿತ್ ಆನಂದದಲ್ಲಿ ಐಕ್ಯರೂಪನಾಗದಿದ್ದರೆ ಆತನ ಜ್ಞಾನ,ಧ್ಯಾನ, ಯಜನ ಮತ್ತು ಧರ್ಮಾಚರಣೆಗಳು ಎಲ್ಲವೂ ವ್ಯರ್ಥವಾಗುವುವು ॥೨೪೬॥

ಇಪ್ಪತ್ತೊಂದು ಗುರುಗಳಿಂದ ನಾನು ಯಾವ ಯಾವುದನ್ನು ಯಥಾಮತಿ ಕಲಿತಿರುವೆನೋ, ಅದೆಲ್ಲವನ್ನೂ ನಿನಗೆ ವಿಸ್ತರಿಸಿ ತಿಳಿಸಿದೆನು ಎಂದು ಅವಧೂತನು ಯದುರಾಜನಿಗೆ ಹೇಳಿದನು ॥೨೪೭॥ ಸ್ವತಃದ ಬುದ್ಧಿಸಾಮರ್ಥ್ಯದಿಂದ ನಾನೇನು ಕಲಿತಿರುವೆನೋ, ಅದನ್ನು ನಿನಗೀಗ ಸ್ವಭಾವತಃ ಅನನ್ಯ ಪ್ರೀತಿಯಿಂದ ಹೇಳುವೆ ॥೨೪೮॥ ಆತ್ಮಾನಾತ್ಮ ವಿವೇಕವು ಮತ್ತು ವೈರಾಗ್ಯವು ಇದರ ವಿಚಾರವು ಈ ಯಾವ ಇಪ್ಪತ್ನಾಲ್ಕು ಗುರುಗಳ ಗುರುವಾಗಿರುವುದು. ಈ ನರದೇಹದಲ್ಲಿ ಇದು ಪರಿಪೂರ್ಣವಾಗಿ ಲಭ್ಯವಾಗುವುದು. ಆದ್ದರಿಂದ ನರದೇಹವೇ ಮುಖ್ಯಗುರುವಾಗಿರುವುದು ॥೨೪೯॥

ಹೇ ರಾಜನೇ, ದೇಹಕ್ಕೆ ಎರಡು ಪ್ರಕಾರಗಳ ಗುರುತ್ವವು ಬಂದಿರುವುದು. ಪರಮಾರ್ಥದ ರಕ್ಷಣೆಯನ್ನು ಮಾಡುವುದಕ್ಕಾಗಿ ನಾನು ನಿನಗೆ ಅದರ ಲಕ್ಷಣಗಳನ್ನು ಹೇಳುವೆನು ॥೨೫೦॥ ದೇಹದಂತಹ ಕೆಡಕಾದ ವಸ್ತು ಈಜಗತ್ತಿನಲ್ಲಿ ಬೇರೆ ಯಾವುದೂ ಇರುವುದಿಲ್ಲ. ಆದರೆ ವಿಚಾರಿಸಿ ನೋಡಲು ದೇಹದಂತಹ ಉತ್ತಮ ವಸ್ತು ಈ ತ್ರಿಭುವನದಲ್ಲಿ ಬೇರೆ ಯಾವುದೂ ದೊರೆಯುವುದಿಲ್ಲ ॥೨೫೧॥ ಕೆಡಕಾದದ್ದು ಎಂದು ದೇಹದ ತ್ಯಾಗವನ್ನು ಮಾಡಿದರೆ ಮೋಕ್ಷ ಸುಖವು ಲಭಿಸಲಾರದು. ದೇಹವು ಉತ್ತಮವಾಗಿದೆ ಎಂದು ಅದರ ಮಾಧ್ಯಮದಿಂದ ವಿಷಯ ಭೋಗ ಭೋಗಿಸಿದರೆ ಅವಶ್ಯವಾಗಿ ನರಕಕ್ಕೆ ಹೋಗಬೇಕಾಗುವುದು ॥೨೫೨॥

ತರೀ ಹೇ ತ್ಯಾಗಾವೇ ನಾ ಭೋಗಾವೇ । ಮಧ್ಯಭಾಗೇ ವಿಭಾಗಾವೇ । ಆತ್ಮಸಾಧನೀ ರಾಖಾವೇ । ನಿಜಸ್ವಭಾವೇ
ಹಿತಾಲಾಗೀ ॥೨೫೩॥ ಜೈಸೇ ಭಾಡೀಯಾಚೇ ಘೋಡೇ । ಆಸಕ್ತಿ ಸಾಂಡೋನಿ ಪುಡೇ । ಪೇಣೇವರಿ ನೇಣೇ ಘಡೇ
। ಸ್ವಾರ್ಥಚಾಡೇಲಾಗೂನಿ ॥೨೫೪॥ ಹೇತೂ ಠೇವೂನಿ ಪರಮಾರ್ಥಾ । ಗೇಹೀ ವಸ್ತೀ ಕರೂ ಜೇವೀ ಉಖಿತಾ।
ದೇಹ ಆಸಕ್ತೀಚೀ ಕಥಾ । ಬುದ್ಧೀಚ್ಯಾಪಂಥಾ ಯೇವೋ ನೇದಿ ॥೨೫೫॥ ದೇಹಾಚೀ ನಶ್ವರ ಗತೀ । ನಶ್ವರತ್ವೇ
ಉಪಜೇ ವಿರಕ್ತೀ । ನಾಶವಂತಾಚೀ ಆಸಕ್ತೀ । ಮುಮುಕ್ಷು ನ ಕರಿತೀ ಸರ್ವಥಾ ॥೨೫೬॥ ಜೇಣೇ ಉಪಜೇ ವಿರಕ್ತೀ
। ತೋ ವಿವೇಕ ಜಾಣಾವಾ ನಿಶ್ಚಿತೀ । ಏವಂ ವಿವೇಕ ವೈರಾಗ್ಯ ಪ್ರಾಪ್ತೀ । ನಿಜಯುಕ್ತೀ ನರದೇಹಿ ॥೨೫೭॥ ಇತರ
ದೇಹಾಂಚ್ಯಾ ಠಾಯೀ । ಹಾ ವಿಚಾರೂಚಿ ನಾಹೀ । ಕೇವಳ ಶಿಶ್ನೋದರ ಪಾಹೀ । ವ್ಯವಸಾವೋ ದೇಹೀ ಕರೀತಾತೀ
॥೨೫೮॥ ಯಾಲಾಗೀ ನರದೇಹ ನಿಧಾನ । ಜೇಣೇ ಬ್ರಹ್ಮಸಾಯುಜ್ಯೀ ಘಡೇ ಗಮನ । ದೇವ ವಾಂಛಿತೀ
ಮನುಷ್ಯಪಣ । ದೇವಾಚೇ ಸ್ತವನ ನರದೇಹಾ ॥೨೫೯॥ ಮ್ಹಣಸೀ ನರದೇಹ ಪಾವನ । ಪರೀ ತೋ ಅತ್ಯಂತ
ನಿಂದ್ಯ ಜಾಣ । ಯೋನಿದ್ವಾರೇ ಜ್ಯಾಚೇ ಜನನ । ಪಾಠೀಚ ಮರಣ ಲಾಗಲೇಸೇ ॥೨೬೦॥ ಜಂವ ಜನ್ಮಲೇಚ
ನಾಹೀ । ತಂವ ಮರಣ ಲಾಗಲೇ ಪಾಹೀ । ಗರ್ಭಾಚ್ಯಾಚಿ ಠಾಯೀ । ಮರಣಘಾಯೀ ಧಾಕತೀ ॥೨೬೧॥ ಏವಂ
ಯಾ ದೇಹಾಸರಿಸಾ । ನಿತ್ಯ ಮೃತ್ಯು ಲಾಗಲಾ ಕೈಸಾ । ಪೋಷೂನಿಯಾ ಬಾಲವಯಸಾ । ತಾರುಣ್ಯಾಸರಿಸಾ ಲಾಗಲಾ
॥೨೬೨॥ ವಿಸರೋನಿಯಾ ಆತ್ಮಮರಣ । ತಾರುಣ್ಯ ಚಢಲೇ ಜೇ ದಾರುಣ । ಚತುರ ಶಾಹಣಾ ಸಜ್ಞಾನ । ಬಳೇ
ಸಂಪೂರ್ಣ ಮೀ ಏಕು ॥೨೬೩॥ ತ್ಯಾ ತಾರುಣ್ಯಾಚೇ ನವಾಳಿ । ದೇಠ ನ ಫೇಡಿತಾ ಕಾಳ ಗಿಳೀ । ಮಗ ಜರಾ ಜರ್ಜರಿತ
ಮೇಳೀ । ಮರಣಕಾಳೀ ಪಾತಲೀ ॥೨೬೪॥ ಧವಲ ಚಾಮರೇಸೀ ಆಲೇಜಾಣ । ಜರಾ ಮೃತ್ಯೂಚೇ ಪ್ರಸ್ಥಾನ।
ಮಾಗೂನಿ ಯಾವಯಾ ಆಪಣ । ವೇಳಾ ನಿರೀಕ್ಷಣ ಕರೀತಸೇ ॥೨೬೫॥ ಸರ್ವಾಂಗೀ ಕಂಪಾಯಮಾನ । ತೋ
ಆಲಾ ಮೃತ್ಯುವ್ಯಜನ । ಮಾನ ಕಾಂಪೇ ತೋ ಜಾಣ । ಡೋಲ್ಹಾರಾ ಪೂರ್ಣ ಮೃತ್ಯೂಚಾ ॥೨೬೬॥ ದಾಂತ ಪಾಡೂನಿ
ಸಪಾಟ । ಕಾಳೇ ಮೋಕಳೀ ಕೇಲೀ ವಾಟ । ಮೃತ್ಯು ಸೇನೇಚಾ ಘಡಘಡಾಟ । ವೇಗೀ ಉದ್ಭಟ ರಿಘಾವಯಾ
॥೨೬೭॥

ಆದಕ್ಕಾಗಿ ಇದರ ತ್ಯಾಗವನ್ನೂ ಮಾಡಕೂಡದು ಹಾಗೂ ಭೋಗವನ್ನೂ ಮಾಡಕೂಡದು. ಅದಕ್ಕೆ ಇದರ ಮಧ್ಯಭಾಗದಲ್ಲಿ ವಿಭಾಗಿಸಬೇಕು.
ತನ್ನ ಹಿತಕ್ಕಾಗಿ ಅದಕ್ಕೆ ಆತ್ಮಸಾಧನೆಗೆ ಹಚ್ಚಬೇಕು ॥೨೫೩॥ ನಮ್ಮ ಕಾರ್ಯಕ್ಕಾಗಿ ಭಾಡಿಗೆಯ ಕುದುರೆಯನ್ನು ನಮ್ಮ ಮುಕ್ಕಾಮಿಗೆ
ಒಯ್ಯುವವರೆಗೆ ಕಾಳಜಿ ವಹಿಸುತ್ತೇವೆ. ತದನಂತರ ಅದರ ಕಾಳಜಿಯನ್ನು ನಾವು ಮಾಡುವುದಿಲ್ಲ ॥೨೫೪॥ ಅದರಂತೆ ಪರಮಾರ್ಥದಲ್ಲಿ
ದೃಷ್ಟಿಯನ್ನಿಟ್ಟು ಒಬ್ಬ ಪ್ರವಾಸಿಯಂತೆ ದೇಹದಲ್ಲಿರಬೇಕು. ಮನಸ್ಸಿನಲ್ಲಿ ದೇಹಾಸಕ್ತಿಯ ವಿಚಾರವನ್ನೂ ಕೂಡ ಮಾಡಕೂಡದು ॥೨೫೫॥
ದೇಹವಾದರೂ ನಶ್ವರವಾಗಿರುವುದು. ಇದೇ ಕಾರಣಕ್ಕಾಗಿ ಅದರ ವಿಷಯಕ್ಕೆ ವೈರಾಗ್ಯವು ಹುಟ್ಟುವುದು. ಮುಮುಕ್ಷು ಜನರು ನಾಶವಂತ
ವಸ್ತುಗಳಲ್ಲಿ ಯಾವ ಕಾಲಕ್ಕೂ ಆಸಕ್ತಿಯನ್ನು ಇಡಲಾರರು ॥೨೫೬॥ ಯಾವುದರ ಯೋಗದಿಂದ ವಿರಕ್ತಿಯು ಉತ್ಪನ್ನವಾಗುವುದೋ, ಅದೇ
ವಿವೇಕವೆಂದು ಅರಿಯಬೇಕು. ವಿವೇಕ ಮತ್ತು ವೈರಾಗ್ಯವು ತನ್ನದೇ ಆದ ನರದೇಹದಲ್ಲಿ ವಿಚಾರದಿಂದ ಹುಟ್ಟುವುದು ॥೨೫೭॥ ಇತರ
ಪ್ರಕಾರಗಳ ದೇಹಗಳಲ್ಲಿ ಈ ವಿಚಾರವು ಇರುವುದೇ ಇಲ್ಲ. ಕಾರಣ ಇತರ ಪ್ರಕಾರಗಳ ದೇಹ ಧಾರಣ ಮಾಡಿರುವ ಪ್ರಾಣಿಗಳು ತಮ್ಮ
ಉದರಭರಣ ಮತ್ತು ಸಂತಾನ ಉತ್ಪತ್ತಿ ಎರಡೇ ಕಾರ್ಯಗಳನ್ನು ಮಾಡುವುವು ॥೨೫೮॥ ಆದ್ದರಿಂದಲೇ ಈ ನರದೇಹವು ಅಮೂಲ್ಯವಾದ
ಅಗಣಿತ ನಿಧಿಯಾಗಿರುವುದು. ಇದರ ಮಾಧ್ಯಮದಿಂದ ಬ್ರಹ್ಮಸಾಯುಜ್ಯತೆಯನ್ನು ಪ್ರಾಪ್ತಮಾಡಿಕೊಳ್ಳಲು ಬರುವುದು. ದೇವತೆಗಳೂ ಕೂಡ
ಮನುಷ್ಯಜನ್ಮದ ಇಚ್ಛೆಯನ್ನು ಮಾಡುವರು. ಇವರು ನರದೇಹದ ಸ್ತುತಿ ಮಾಡುತ್ತಿರುವರು ॥೨೫೯॥ ಆದ್ದರಿಂದ ಈ ನರದೇಹವು ಅತ್ಯಂತ
ಪವಿತ್ರವಾಗಿದೆ ಎಂದು ಹೇಳಬಹುದಾಗಿದ್ದರೂ ಇದು ಅತ್ಯಂತ ನಿಂದ್ಯ ಉಳ್ಳದ್ದಾಗಿರುವುದು. ಕಾರಣ ನರದೇಹವು ಯೋನಿದ್ವಾರದಿಂದ
ಜನ್ಮವಾಗುತ್ತಿರುವುದರಿಂದ ಮರಣವು ಅದರ ಬೆನ್ನು ಹತ್ತಿರುವುದು ॥೨೬೦॥ ಇನ್ನೂ ಹುಟ್ಟದೇ ಇರುವಾಗಲೇ ಅದಕ್ಕೆ ಮರಣವು
ಸಿದ್ಧವಾಗಿರುವುದು. ಏಕೆಂದರೆ ಗರ್ಭದಲ್ಲಿರುವಾಗಲೇ ಅದಕ್ಕೆ ಮರಣದ ಭಯವು ಹತ್ತಿರುವುದು ॥೨೬೧॥ ತಾತ್ಪರ್ಯ ಏನೆಂದರೆ ಈ ಮೃತ್ಯು
ಎಂಬುದು ದೇಹದ ಜೊತೆಯಲ್ಲಿಯೇ ಅಂಟಿಕೊಂಡಿರುವುದು. ಬಾಲ್ಯಾವಸ್ಥೆಯಿಂದಲೇ ಅದು ಹಗಲುರಾತ್ರಿ ಪ್ರಾಣಿಗಳ ಅತಿಸಮೀಪ
ಮಗ್ಗಲಿನಲ್ಲಿಯೇ ಕುಳಿತುಕೊಂಡಿರುವುದು ॥೨೬೨॥ ಹೀಗೆ ಪರಿಸ್ಥಿತಿ ಇದ್ದರೂ ಸಹ ಈ ಯಾವ ಮರಣವನ್ನು ಮರೆತು ತಾರುಣ್ಯದಲ್ಲಿ ಮನುಷ್ಯನು
ಎಷ್ಟೊಂದು ಉನ್ಮತ್ತನಾಗುವನೆಂದರೆ, ನಾನೇ ಚತುರನು, ನಾನೇ ಬುದ್ಧಿವಂತನು, ನಾನೇ ಜ್ಞಾನಿಯು, ನಾನೇ ಬಲವಾನನು ಹೀಗೆ ಆತನಿಗೆ
ಅನಿಸುತ್ತಿರುವುದು ॥೨೬೩॥ ಆದರೆ ಕಾಲನು ಆ ತಾರುಣ್ಯದ ಭರಾಟೆಯನ್ನು ನುಂಗಿ ನೀರು ಕುಡಿಯುವನು. ಆಗ ಮುಪ್ಪಾವಸ್ಥೆಯು ಒದಗಿ
ಶರೀರವು ಜರ್ಜರಿತವಾಗಿ ಮರಣಕಾಲವು ಪ್ರಾಪ್ತವಾಗುವುದು ॥೨೬೪॥ ಜರಾವೆಂದರೆ ಬಿಳಿ ಕೂದಲಿನ ರೂಪದಿಂದ ಮೃತ್ಯುವಿನ
ಆಮಂತ್ರಣವಾಗಿರುವುದು. ತದನಂತರ ಅದರತ್ತ ನಾನು ಎಂದು ಹೋಗಬೇಕಾದೀತೆಂದು ದಾರಿ ಕಾಯುತ್ತಿರುವುದು ॥೨೬೫॥
ಮುದುಕತನದಲ್ಲಿ ಸರ್ವಾಂಗವು ಕಂಪಾಯಮಾನ ಆಗುವುದು. ಅದರರ್ಥವೇನೆಂದರೆ ಮರಣದ ಬೀಸಣಿಕೆಯು ಆತನಿಗೆ ಗಾಳಿ ಹೊಡೆದು
ಅಲುಗಾಡಿಸುವುದು. ತಲೆಯು ಅಲ್ಲಾಡುತ್ತಲೇ ಆಗ ಅದು ಮರಣದ ವಾಸ್ತು ಎಂದು ಅರಿಯಬೇಕು ॥೨೬೬॥ ಮೃತ್ಯುವಿನ ಸೈನ್ಯವು ಒಳಗೆ
ಬಹು ಭರಾಟೆಯಿಂದ ನುಗ್ಗಬೇಕೆಂದು ತಿಳಿದು ಕಾಲನು ಆತನ ಸರ್ವ ದಂತಗಳನ್ನು ಕೆಡವಿ ಎಲ್ಲ ರಸ್ತೆಯನ್ನು ಸಪಾಟಗೊಳಿಸುವನು ॥೨೬೭॥

ಪಾಠೀ ಝಾಲೀ ದುಣೇ । ತೇಚಿ ಮೃತ್ಯೂಚೀ ನಿಶಾಣೀ । ದೋನೀ ಕಾನೀ ಖಿಳೇ ದೇಉನೀ । ಸುಬದ್ಧ ಕರೂನಿ ಬಾಂಧಿಲೀ ॥೨೬೮॥ ಯೇತಿ ಯಾ ಮೃತ್ಯೂಸೀ ಪುಢಾರೇ । ನಯನತೇಜ ಧಾಂವೇ ಸಾಮೋರೇ । ಮಗ ನ್ಯಾಹಾಳತೀನಾ ಅಕ್ಷರೇ । ಅಂಜನೋಪಚಾರೇ ಶಿಣತಾಂಹೀ ॥೨೬೯॥ ಉಮಳೀಚಾ ಉಜಗರಾ । ಉಬಗು ಸೇಜಾರಿಲ್ಯಾ ಘರಾ । ಮ್ಹಣತೀ ನ ಮರೇಹಾ ಮ್ಹಾತಾರಾ । ಬಾಳಾಚೀ ನಿದ್ರಾ ಮೋಡಿತೋ ॥೨೭೦॥ ದೇಖೋನಿ ಮೃತ್ಯೂಚೀ ಧಾಡೀ । ಪಾಯಾ ವಳತಸೇ ವೇಂಗಡೀ । ಜಿವ್ಹೇಸೀ ಚಾಲಲೀ ಬೋಬಡೀ । ತುಟಲ್ಯಾ ನಾಡೀ ಸರ್ವಾಂಗೀ ॥೨೭೧॥ ಮರಣ ನ ಯೇತಾ ಜಾಣ । ಘೋರ ಜರೇಚೇ ವಿಟಂಬನ । ವಿಮುಖ ಸ್ತ್ರೀ ಪುತ್ರ ಜನ । ಅತಿದೀನ ತೇ ಕರೀ ॥೨೭೨॥ ಜನ್ಮ ವರೀ ಸಾಯಾಸೀ । ಪ್ರತಿಪಾಳಿಲೇ ಜಯಾಂಸೀ । ತೇಂಚಿ ಉಬಗಲೀ ತ್ಯಾಸೀ । ಜರೇನೇ ದೇಹಾಸೀ ಕವಳಿಲ್ಯಾ ॥೨೭೩॥ ಜರಾ ಲಾಗಲಿಯಾ ಪಾಠೀ । ಕೋಣೀ ನಾಇಕೇ ತ್ಯಾಚೀ ಗೋಷ್ಟೀ । ವಿಟಾವೋ ಲಾಗಲೀ ಧಾಕುಟೀ । ಕುತರೀ ಪಾಠೀ ಭುಂಕತೀ ॥೨೭೪॥ ಶಾಹಣೀ ಸಾಂಗತೀ ಅಬಲಾಂಸೀ । "ಬಾಗುಲ" ಆಲಾ ಮ್ಹಣತೀ ವೃದ್ಧಾಸೀ । ನಿಸುರ ಪಡೋ ನೇದೀ ಢಾಂಸೀ । ಕಾಸಾವಿಸೀ ಹೋತಸೇ ॥೨೭೫॥ "ಮ್ಹಾತಾರಾ ಹೋ" ಆಶೀರ್ವಾದ । ದೀಧಲಾ ತೇಹೀ ಕೇಲೇ ದ್ವಂದ್ವ । ಜರೇ ಏವಢೇ ವಿರುದ್ಧ । ಆಣಿ ದ್ವಂದ್ವ ತೇ ನಾಹೀ ॥೨೭೬॥ ಐಸೀ ಜರೇಚೀ ಜಾಚಣೀ । ದೇಖೋನಿಯಾ ತರುಣಪಣೀ । ಹೇಚಿ ದಶಾ ಮಜಲಾಗೂನಿ । ಹಾತ ಧರೂನಿ ಯೇಈಲ ॥೨೭೭॥ ದೇಹೋ ತಿತುಕಾ ಷಡ್ ವಿಕಾರೀ । ಕೋಟಿ ಅನರ್ಥ ಏಕೇಕೇ ವಿಕಾರೀ । ಷಡೂರ್ಮೀ ಲಾಗಲ್ಯಾ ತ್ಯಾ ಭೀತರೀ । ಜೇವೀ ಅಗ್ನೀವರೀ ಘೃತಧಾರಾ ॥೨೭೮॥ ಯಾ ದುಃಖಾಚೇ ಜೇ ಮೂಳ । ತೇ ದೇಹಾಚೇ ಆಳವಾಳ । ದೇಹೋ ವಾಢವಿತಾ ದುಃಖ ಪ್ರಬಳ । ಉತ್ತರಫಳ ಮಹಾದುಃಖ ॥೨೭೯॥ ಏವಂ ದೇಹಾಚೀ ಜೇ ಸಂಗತೀ । ತೇ ನಿರಂತರ ದುಃಖಪ್ರಾಪ್ತಿ । ಯಾಪರೀ ಸಾಂಡಾವೀ ಆಸಕ್ತೀ । ಯಾ ಹೇತು ವಿರಕ್ತೀ ದೇಹಗುರು ॥೨೮೦॥ ಯಾ ದೇಹಾಚೇನಿ ಸಾಧನೇ । ಅವಿನಾಶ ಪದ ಪಾವಣೇ । ಯಾಹೀವರೀ ಯೇಣೇ ಗುಣೇ । ಗುರುತ್ವ ಮ್ಹಣಣೇ ದೇಹಾಸೀ ॥ ೨೮೧॥ ದೇಹ ಉಪಕಾರೀ ಅಪಕಾರೀ । ಯಾಸೀ ಗುರುತ್ವ ದೋನ್ಹೀಪರೀ । ಯೇಥ ವಿವಂಚೂನಿ ಚತುರೀ । ನಿಜಹಿತ ಕರೀ ತೋ ಧನ್ಯ ॥೨೮೨॥

ಬೆನ್ನು ಬಾಗಿ ಅದರ ಗೂಡು ಏಳಲು ಅದೇ ಮೃತ್ಯುವಿನ ಧ್ವಜವಾಗಿರುವುದು. ಎರಡೂ ಕಿವಿಗಳಲ್ಲಿ ಮಳೆ ಜಡೆದು ಆ ಧ್ವಜವನ್ನು ಬಿಗಿಯಾಗಿ ಕಟ್ಟಲ್ಪಡುವುದು ॥೨೬೮॥ ಮೃತ್ಯು ಮುಂದೆ ಬರುವುದೆಂದು ತಿಳಿದು ನೇತ್ರಗಳ ತೇಜವು ಅದಕ್ಕಿಂತ ಮುಂಚೆಯೇ ಎದುರುಗೊಳ್ಳಲು ಧಾವಿಸುವುದು. ಆಗ ಆ ಕಣ್ಣುಗಳಲ್ಲಿ ಎಷ್ಟೊಂದು ಅಂಜನ ಹಾಕಿದರೂ ಆತನಿಗೆ ಒಂದಕ್ಷರವೂ ಕಾಣಿಸುವುದಿಲ್ಲ ॥೨೬೯॥ ರಾತ್ರಿಯೆಲ್ಲ ಕೆಮ್ಮಿನ ಗೊಂದಲದಿಂದ ಪಕ್ಕದ ಮನೆಯವರಿಗೆ ಇಡೀ ರಾತ್ರಿ ಜಾಗರಣೆಯಾಗುವುದು. ಇವರು ಬಹು ಬೇಸರಪಟ್ಟು ಈ ಮುದುಕನು ಏಕೆ ಸಾಯಲಾರನು? ಇವನಿಂದ ನಮ್ಮ ಕೂಸು ಕಂದಮ್ಮಗಳ ನಿದ್ದೆಗೇಡಾಗುವುದು ಎಂದು ಹೇಳುವರು ॥೨೭೦॥ ಮೃತ್ಯುವಿನ ಮುತ್ತಿಗೆಯು ಬರುತ್ತಿರುವುದು ಕಂಡಾಕ್ಷಣವೇ ನಡೆಯುವಾಗ್ಗೆ ಕಾಲಿನಲ್ಲಿ ಕಾಲು ತೊಡಕಾಗುವುದು. ನಾಲಿಗೆಯು ತೊದಲಾಗುವುದು. ಶರೀರದಲ್ಲಿನ ಸರ್ವ ನಾಡಿಗಳು ಸಡಿಲಗೊಳ್ಳುವುವು ॥೨೭೧॥ ಮರಣವು ಬೇಗ ಬಾರದಿದ್ದರೆ ಮುಪ್ಪಾವಸ್ಥೆಯ ಪೀಡೆಯು ಅತಿಶಯವಾಗಿ ಕಠಿಣವಾಗಿರುವುದು. ತನ್ನದೇ ಆದ ಹೆಂಡತಿ ಮಕ್ಕಳು ಹಾಗೂ ಇತರರೂ ಸಹ ಸಮೀಪಕ್ಕೆ ಬಾರದಾಗುವರು. ಆಗ ಅತ್ಯಂತ ದೀನನಾಗಿ ಇರಬೇಕಾಗುವುದು ॥೨೭೨॥ ತನ್ನ ಆಯುಷ್ಯವೆಲ್ಲವನ್ನು ಕಷ್ಟಪಟ್ಟು ಯಾರನ್ನು ಜೋಪಾನ ಮಾಡಿದನೋ, ಅವರೇ ಈತನಿಗೆ ಮುಪ್ಪು ಒದಗಲು ಬೇಸರಪಡುವರು ॥೨೭೩॥ ಮುಪ್ಪು ಬರಲು ಈ ಮುದುಕನ ಮಾತು ಯಾರೂ ಸರಿಯಾಗಿ ಕೇಳುವುದಿಲ್ಲ. ಹುಡುಗರು ಚೇಷ್ಟೆ ಮಾಡುವರು. ನಾಯಿಗಳು ಬೊಗಳುತ್ತ ಬೆನ್ನು ಹತ್ತುವುವು ॥೨೭೪॥ ದೊಡ್ಡವರು ತಮ್ಮ ಚಿಕ್ಕ ಕಂದಮ್ಮಗಳಿಗೆ ''ಇಲ್ಲಿ ನೋಡು ಬೊಮ್ಮ ಬಂದ'' ಎಂದು ಹೇಳುತ್ತ ಹೆದರುವ ಗೊಂಬೆಯನ್ನಾಗಿ ಮಾಡುವರು. ಕಫಕೂಡಿದ ಕೆಮ್ಮು ಒಂದು ಕ್ಷಣವೂ ಸುಮ್ಮನೇ ಕುಳಿತುಕೊಳ್ಳಲು ಬಿಡುವುದಿಲ್ಲ. ಇದರಿಂದ ಜೀವವು ಕಸಿವಿಸಿಗೊಳ್ಳುವುದು ॥೨೭೫॥ ಚಿಕ್ಕವನಿದ್ದಾಗ ಇವನಿಗೆ ''ನೀನು ಮುದಕನಾಗಿ ಬಾಳು'' ಎಂದು ಆಶೀರ್ವಾದ ಕೊಟ್ಟವರು ನಿಜವಾಗಿಯೂ ಈತನಿಗೆ ಶಾಪವನ್ನು ಕೊಟ್ಟಂತೆಯೇ ಸರಿ. ಏಕೆಂದರೆ ಮುಪ್ಪಾವಸ್ಥೆಯಂತಹ ದುಃಖಕಾರಕವಾದ ಇನ್ನು ಬೇರೆ ಯಾವ ವೈರಿಯೂ ಇರುವುದಿಲ್ಲ ॥೨೭೬॥ ಆದ್ದರಿಂದ ತರುಣರಾದವರು ಮುಪ್ಪಾವಸ್ಥೆಯ ಬವಣೆಯನ್ನು ಕಂಡು ಮುಂದೆ ನನಗಾದರೂ ಈ ಅವಸ್ಥೆಯು ಬಂದೇ ಬರುವುದೆಂದು ತಿಳಿದು ಜಾಗ್ರತರಾಗಬೇಕು ॥೨೭೭॥ ಇರುವ ಸರ್ವ ಶರೀರಗಳು ಆರು ವಿಕಾರಗಳಿಂದ ಕೂಡಿರುವುವು. ಪ್ರತಿಯೊಂದು ವಿಕಾರಗಳಲ್ಲಿ ಕೋಟ್ಯಾವಧಿ ಅನರ್ಥಗಳು ತುಂಬಿಕೊಂಡಿರುವುವು. ಮತ್ತು ಅಗ್ನಿಯ ಮೇಲೆ ತುಪ್ಪದ ಧಾರೆ ಹಿಡಿದಂತೆ ಶರೀರದಲ್ಲಿ ಆರು ಊರ್ಮಿಗಳಿರುವುವು ॥೨೭೮॥ ದೇಹರೂಪ ಮಡಿಗಳು ಇವು ದುಃಖದ ಮೂಲವಾಗಿವೆ. ಆದ್ದರಿಂದ ಈ ಯಾವ ದೇಹವನ್ನು ಬೆಳೆಸಿದಂತೆಲ್ಲಾ ದುಃಖವು ಬೆಳೆಯುತ್ತ ಸಾಗಿ ಕೊನೆಗೆ ಮಹಾದುಃಖವೇ ಫಲವಾಗಿ ಲಭಿಸುವುದು ॥೨೭೯॥ ತಾತ್ಪರ್ಯವೇನಂದರೆ ದೇಹದ ಸಂಗತಿಯು ನಿರಂತರವಾದ ದುಃಖಕಾರಕವಾಗಿರುವುದು. ಇದನ್ನು ಮನದಲ್ಲಿ ತಂದುಕೊಂಡು ದೇಹದ ಆಸಕ್ತಿಯನ್ನು ಬಿಟ್ಟುಬಿಡಬೇಕು. ವಿರಕ್ತಿಯು ಮನದಲ್ಲಿ ಬಿಂಬಿಸಲು ಈ ಯಾವ ದೇಹವು ಗುರುವಾಗಿರುವುದು ॥೨೮೦॥ ಇದಲ್ಲದೇ ಈ ದೇಹದ ಸಾಧನೆಯಿಂದ ಅವಿನಾಶ ಪದವಿಯು ಪ್ರಾಪ್ತವಾಗುವುದು. ಈ ಗುಣಕ್ಕಾಗಿಯೇ ದೇಹಕ್ಕೆ ಗುರುವೆನ್ನಬೇಕು ॥೨೮೧॥ ಈ ಪ್ರಕಾರವಾಗಿ ದೇಹವು ಉಪಕಾರ ಮತ್ತು ಅಪಕಾರ ಹೀಗೆ ಎರಡನ್ನೂ ಮಾಡುತ್ತದೆ. ಆದ್ದರಿಂದ ಅದಕ್ಕೆ ಎರಡೂ ಪ್ರಕಾರಗಳಿಂದ ಗುರುತ್ವವು ಇರುವುದು. ಇದನ್ನು ವಿಚಾರಮಾಡಿ ತಿಳಿದು ತನ್ನ ಆತ್ಮಹಿತವನ್ನು ಸಾಧಿಸಿದವನೇ ಧನ್ಯನು ॥೨೮೨॥

ಕರಿತಾ ತತ್ತ್ವವಿವಂಚನ । ದೇಹಾಚೇ ಮೂಳ ತೇ ಅಜ್ಞಾನ । ನಿಜರೂಪಾಚೇ ಅದರ್ಶನ । ತೇಚಿ ಭಾನ ಪ್ರಕೃತೀಚೇ ।೨೮೩॥ ಪ್ರಕೃತೀಸ್ತವ ತ್ರಿಗುಣಸೂತ್ರ । ತ್ರಿಗುಣೇತ್ರಿವಿಧ ಅಹಂಕಾರ । ಯೇಥೂನಿ ಮಹದ್‌ಭೂತವಿಕಾರ । ಇಂದ್ರಿಯವ್ಯಾಪಾರ ದೇಹೇಸೀ ।೨೮೪॥ ಏವಂ ಪಿಂಡಬ್ರಹ್ಮಾಂಡಖಟಾಟೋಪ । ಹಾ ಅವಘಾಚೇ "ಆರೋಪ" । ದೋರು ಜಾಹಲಾ ನಾಹೀ ಸಾಪ । ಭ್ರಮೇ ಸರ್ಪ ತೋ ಮ್ಹಣತೀ ।೨೮೫॥ ಪಾಹತಾ ದೇಹಾಚೇ ಮೂಳ । ಭಾಸೇ ಜೈಸೇ ಮೃಗಜಳ । ಭ್ರಮಾಚೀ ರಾಣೀವ ಪ್ರಬಳ । ಹಾ ಆರೋಪಚಿ ಕೇವಳ ವಸ್ತೂಚೇ ಠಾಯಿ ।೨೮೬॥ ನಸತೇ ದೇಹ ಆಭಾಸೇ ಜೇಥೇ । "ಆರೋಪು" ಮ್ಹಣಣೇ ಘಡೇ ತ್ಯಾತೇ । ಆತಾ ಸಾಂಗೇನ "ಅಪವಾದಾತೇ" । ಸಾವಚಿತ್ತೇ ಪರಿಯೇಸೀ ।೨೮೭॥ ದೇಹ ಪಾಂಚಭೌತಿಕ ಪ್ರಸಿದ್ಧ । ತೋ "ಮೀ" ಮ್ಹಣಣೇ ಹೇ ಅಬದ್ಧ । ದೇಹೋ ಮಲಿನ ಮೀ ಶುದ್ಧ । ಅತಿವಿರುದ್ಧ ಯಾ ಆಮ್ಹಾ ।೨೮೮॥ ಪೃಥ್ವೀ ಮೀ ನವ್ಹೇ ಜಡತ್ವೇ । ಜಳ ಮೀ ನವ್ಹೇ ದ್ರವತ್ವೇ । ತೇಜ ಮೀ ನವ್ಹೇ ದಾಹಕತ್ವೇ । ಚಂಚಲತ್ವೇ ನವ್ಹೇ ವಾಯು ।೨೮೯॥ ನಭ ಮೀ ನವ್ಹೇ ಶೂನ್ಯತ್ವೇ । ಅಹಂ ಮೀ ನವ್ಹೇ ದೃಶ್ಯತ್ವೇ । ಜೀವ ನವ್ಹೇ ಮೀ ಪರಿಚ್ಛಿನ್ನತ್ವೇ । ಮಾಯಾ ಮಿಥ್ಯಾತ್ವೇ ಮೀ ನವ್ಹೇ ।೨೯೦॥ ದೇಹ ನವ್ಹೇ ಮೀ ನಶ್ವರತ್ವೇ । ವಿಷಯ ನವ್ಹೇ ಮೀ ಬಾಧಕತ್ವೇ । ಯಾ ತತ್ತ್ವಾ ಆಣಿ ಮಾತೇ । ಸಂಬಂಧೂ ಯೇಥೇ ಆಸೇನಾ ।೨೯೧॥ "ಬ್ರಹ್ಮಾಹಮಸ್ಮಿ" ಅಭಿಮಾನ । ಹಂಸಪರಮಹಂಸಾಸೀ ಮಾನ್ಯ । ತೇ ಸತ್ತ್ವಾವಸ್ಥೇಚೇ ಸಾಧನ । ತೋಹಿ ಅಬಿಮಾನ ಮೀ ನವ್ಹೇ ।೨೯೨॥ ಜಿತುಕಾ ತತ್ತ್ವಾಂಚಾ ಅನುವಾದು । ತಿತುಕಾ ಮಜವರೀ "ಅಪವಾದು" । ಹಾ ಮಾಝ್ಯಾ ಬುದ್ಧೀಚಾ ಬೋಧು । ತುಜ ಮ್ಯಾ ಯದು ಸಾಂಗಿತಲಾ ।೨೯೩॥ ಹೇ ಮಾಝೇ ಗುಪ್ತಜ್ಞಾನ । ತುಝೇ ದೇಖೋನಿ ಅನನ್ಯಪಣ । ಕೇಲೇ ಗಾ ನಿರೂಪಣ । ಭಾವೇ ಸಂಪೂರ್ಣ ತೂ ಬಾವಾರ್ಥೀ ।೨೯೪॥ ಯೇರವೀ ಕರಾವಯಾ ಹೇ ಕಥಾ । ಮಜ ಚಾಡ ನಾಹೀ ಸರ್ವಥಾ । ಪರೀ ಬೋಲವೀತಸೇ ತುಝೀ ಆಸ್ಥಾ । ನೃಪನಾಥಾ ಸಭಾಗ್ಯಾ ।೨೯೫॥ ಐಶಿಯಾ ಸಂವಾದಾಚ್ಯಾ ಮೇಳೀ । ಅದ್ವೈತಬೋಧೇ ಪಿಟಲೀ ಟಾಳೀ । ದೋಘೇ ಆನಂದಕಲ್ಲೋಳೀ । ಬ್ರಹ್ಮಸುಖಾಳೀ ಮಾತಲೇ ।೨೯೬॥

ತತ್ವ ವಿಚಾರದಿಂದ ಶೋಧಿಸಿ ನೋಡಲು ಅಜ್ಞಾನವೇ ದೇಹದ ಮೂಲವಾಗಿರುವುದು. ಆತ್ಮಸ್ವರೂಪವು ಕಾಣದಿರುವುದೇ ಪ್ರಕೃತಿಯ ತೋರಿಕೆಗೆ ಕಾರಣವಾಗಿರುವುದು ।೨೮೩॥ ಮಾಯೆಯಿಂದ ಮೂರು ಗುಣಗಳ ಉತ್ಪನ್ನವಾಗುತ್ತಿರುವುದು. ಮೂರು ಗುಣಗಳಿಂದ ಮೂರು ಪ್ರಕಾರದ ಅಹಂಕಾರವು ನಿರ್ಮಾಣವಾಗುತ್ತಿರುವುದು. ಮತ್ತು ಇವುಗಳಿಂದ ಮಹದ್‌ಭೂತಗಳು ವಿಕಾರ ಉತ್ಪನ್ನವಾಗುವುದು. ಮತ್ತು ದೇಹಸಮೇತವಾಗಿ ಇಂದ್ರಿಯಗಳ ವ್ಯವಹಾರವು ನಡೆಯುವುವು ।೨೮೪॥ ತಾತ್ಪರ್ಯವೇನೆಂದರೆ ಹಗ್ಗದಲ್ಲಿ ಸರ್ಪವು ಆಗಿಯೇ ಇಲ್ಲ. ಭ್ರಮದಿಂದ ಅದಕ್ಕೆ ಸರ್ಪವೆನ್ನುವರು. ಅದರಂತೆ ಪಿಂಡಬ್ರಹ್ಮಾಂಡದಲ್ಲಿ ಈ ಆರೋಪವಿರುವುದು ।೨೮೫॥ ದೇಹದ ಮೂಲವನ್ನು ಶೋಧಿಸಲು ಅದು ಮೃಗಜಲದಂತೆ ಭಾಸವಾಗುವುದು. ಸರ್ವತ್ರವೂ ಭ್ರಮದ ರಾಜ್ಯವು ವಿಸ್ತರಿಸಿದೆ. ಪರಬ್ರಹ್ಮದಲ್ಲಿ ಇದು ಕೇವಲ ಆರೋಪವಾಗಿರುವುದು ।೨೮೬॥ ದೇಹವು ಇಲ್ಲದೇ ಇರಲು ಸಹ ಅದರ ಭಾಸವಾಗುವುದು. ಅದಕ್ಕೆ "ಆರೋಪ" ಎಂದು ಹೇಳುವರು. ಈಗ ಅಪವಾದವೆಂದು ಯಾವುದಕ್ಕೆ ಹೇಳುತ್ತಾರೆ ಎಂಬುದು ಹೇಳುವೆನು. ಏಕಾಗ್ರಚಿತ್ತದಿಂದ ಅದರ ಶ್ರವಣವನ್ನು ಮಾಡು ।೨೮೭॥ ಈ ದೇಹವು ಪಂಚಮಹಾಭೂತಗಳಿಂದ ತಯಾರಿಸಲ್ಪಟ್ಟಿರುವುದು. ಇದು ಪ್ರಸಿದ್ಧವಾಗುವುದು. ಹೀಗಿರಲು ಈ ದೇಹಕ್ಕೆ ನಾನು ಎನ್ನುವುದು ಬಹು ಅಯೋಗ್ಯತನವಾಗಿದೆ. ದೇಹವು ಮಲಿನವಾದದ್ದು ಮತ್ತು ನಾನು ಶುದ್ಧನಾಗಿದ್ದೇನೆ ಹೀಗೆ ಹೇಳುವುದು ನಮಗೆ ವಿರುದ್ಧವಾಗಿ ತೋರುವುದು ।೨೮೮॥ ನಾನು ಪೃಥ್ವಿ ಅಲ್ಲ, ಕಾರಣ ಅದು ಜಡವಾಗಿರುವುದು. ನಾನು ಜಲ ಅಲ್ಲ, ಕಾರಣ ಅದು ದ್ರವರೂಪವಾಗಿರುವುದು. ನಾನು ತೇಜ ಅಲ್ಲ, ಕಾರಣ ಅದಕ್ಕೆ ದಾಹಕತ್ವವು ಇರುವುದು. ಅದರಂತೆ ನಾನು ವಾಯು ಅಲ್ಲ, ಕಾರಣ ಅದು ಚಂಚಲವಾಗಿರುವುದು ।೨೮೯॥ ನಾನು ಆಕಾಶ ಅಲ್ಲ, ಕಾರಣ ಅದು ಶೂನ್ಯವಾಗಿರುವುದು. "ಅಹಂ" ಕೂಡ ನಾನಲ್ಲ, ಕಾರಣ ಅದು ದೃಶ್ಯವಾಗಿದೆ. ನಾನು ಜೀವ ಅಲ್ಲ, ಕಾರಣ ಅದು ಮರ್ಯಾದಿತವಾಗಿರುವುದು. ನಾನು ಮಾಯಾ ಅಲ್ಲ, ಕಾರಣ ಅದು ಮಿಥ್ಯೆಯಾಗಿದೆ ।೨೯೦॥ ದೇಹವು ನಾನಲ್ಲ, ಕಾರಣ ಅದು ನಶ್ವರವಾಗಿದೆ. ನಾನು ವಿಷಯ ಅಲ್ಲ, ಕಾರಣ ಅದು ಬಾಧಿತವಾಗಿರುವುದು. ಈ ಸರ್ವ ತತ್ತ್ವಗಳಿಗೆ ನನ್ನ ಯಾವ ಸಂಬಂಧವೂ ಇಲ್ಲ ।೨೯೧॥ ನಾನು ಬ್ರಹ್ಮನು, ಅಂದರೆ ಸಚ್ಚಿದಾನಂದ ಸ್ವರೂಪ ಪರಮಾತ್ಮನು ಎನ್ನುವ ಅಭಿಮಾನವು ಮಹಾ ಮಹಾ ಹಂಸ, ಪರಮಹಂಸರಿಗೆ ಅಂದರೆ ಬ್ರಹ್ಮನಿಷ್ಠ ಸನ್ಯಾಸಿಗಳವರಿಗೆ ಇರುವುದು. ಆದರೆ ಅದು ಒಂದು ಸತ್ತ್ವಾವಸ್ಥೆಯ ಸಾಧನವಾಗಿರುವುದು. ಆ ಅಭಿಮಾನವೂ ನಾನಲ್ಲ ।೨೯೨॥ ಈ ತತ್ವದ ಅಂದರೆ ಮೇಲೆ ಅನುವಾದ ಮಾಡಿರುವ ಆ ಸರ್ವದರಿಂದಲೂ ನನ್ನಲ್ಲಿ ಅಪವಾದ ಅಂದರೆ ಅಭಾವವಿರುವುದು. ಹೇ ಯದು ರಾಜನೇ, ನನ್ನ ಚಿತ್ತಕ್ಕೆ ಯಾವ ಬೋಧೆಯಾಗಿರುವದೋ. ಅದನ್ನೇ ನಿನಗೆ ಹೇಳಿರುವೆನು ।೨೯೩॥ ನಿನ್ನ ಅನನ್ಯ ಭಕ್ತಿ ಮತ್ತು ಭಾವಪ್ರೇಮವನ್ನು ಕಂಡು ನನ್ನಲ್ಲಿರುವ ಸರ್ವ ಗುಹ್ಯ ಜ್ಞಾನವನ್ನು ನಿನಗೆ ವಿಸ್ತಾರಪೂರ್ವಕವಾಗಿ ನಾನು ಹೇಳಿರುವೆನು ।೨೯೪॥ ಇಲ್ಲದಿದ್ದರೆ ಈ ಕಥೆಯನ್ನು ಹೇಳುವ ನನಗೆ ಯಾವ ಅವಶ್ಯಕತೆಯೂ ಇರಲಿಲ್ಲ. ಆದರೆ ಹೇ ಭಾಗ್ಯವಂತನಾದ ರಾಜನೇ, ನಿನ್ನ ಆಸ್ಥೆಯು ನನಗೆ ಹೇಳಲಿಕ್ಕೆ ಹಚ್ಚಿರುವುದು ।೨೯೫॥ ಈ ಪ್ರಕಾರವಾಗಿ ಸಂವಾದ ಸುಖದ ಭರದಲ್ಲಿ ಅವರು ಅದ್ವೈತ ಬೋಧೆಯಿಂದ ಚಪ್ಪಾಳೆ ಬಾರಿಸಿದರು. ಮತ್ತು ಇಬ್ಬರೂ ಆನಂದದಿಂದ ಬ್ರಹ್ಮಸ್ವರೂಪದಲ್ಲಿ ತಲ್ಲೀನರಾದರು ।೨೯೬॥

ಐಸಾ ಉಪಕಾರೀ ದೇಖಾ । ಯಾ ದೇಹಾಸಾರಿಖಾ ನಾಹೀ ಸಖಾ । ಮ್ಹಣಸೀ ರಾಖಾವಾ ನೇಟಕಾ । ತಂವ ತೋ ಪಾರಕಾ ಮುಳೀಂಚಿ ।೯೭॥ ಯಾಸೀ ಅತ್ಯಂತ ಕರಿತಾ ಜತನ । ದಿಸೇ ವಿಪರೀತ ನಿದಾನ । ಶ್ವಾನಶೃಗಾಲಾಂಚೇ ಭೋಜನ । ಕಾ ಹೋಯ ಭಕ್ಷಣ ಅಗ್ನೀಚೇ ।೯೮॥ ಯಾ ದೋಹೀ ಗತೀವೇಗಳೇ ಪಡೇ । ತರೀ ಸುಳಬುಳೀತ ಹೋತೀ ಕಿಡೇ । ಚೌಥೀ ಅವಸ್ಥಾ ಯಾಸೀ ನ ಘಡೇ । ಹೇ ತೂಹೀ ರೋಕಡೇ ಜಾಣಶೀ ।೯೯॥ ಯಾಲಾಗೀ ದೇಹಾಚೀ ಆಸಕ್ತಿ । ಮೀ ನ ಧರೀಚ ಗಾ ನೃಪತೀ । ನಿಃಸಂಗು ವಿಚರತಸೇ ಕ್ಷಿತೀ । ಆತ್ಮಸ್ಥಿತೀಚೇನಿ ಬೋಧೇ ।೧೦೦॥ ದೇಹಾಸೀ ಉಪಭೋಗಸಾಧನೇ । ತಿತುಕೀ ಜಾಣ ಪಾ ಬಂಧನೇ । ದೃಢ ವಾಸನಾ ತೇಣೇ । ಅನಿವಾರಪಣೇ ವಾಢತೇ ।೧೦೧॥

ಜಾಯಾತ್ಮಜಾರ್ಥಪಶುಭೃತ್ಯಗೃಹಾಪ್ತವರ್ಗಾನ್ ಪುಷ್ಣಾತಿಯತ್ ಪ್ರಿಯಚಿಕೀರ್ಷಯಾ ವಿತನ್ವನ್ ।
ಸ್ವಾಂತೇ ಸಕೃಚ್ಛ್ರಮವರುದ್ಧಧನಃ ಸ ದೇಹಃ ಸೃಷ್ಟ್ವಾಸ್ಯ ಬೀಜಮವಸೀದತಿ ವೃಕ್ಷಧರ್ಮಾ: ॥ ೨೬॥

ಅರ್ಥ:- ದೇಹದ ಅಭಿಮಾನವುಳ್ಳವನು ಹೆಂಡತಿ, ಮಕ್ಕಳು, ಸ್ವತ್ತು, ಸಾಕುಪ್ರಾಣಿಗಳು, ಸೇವಕರು, ಮನೆ ಮಠ, ಬಂಧುಮಿತ್ರರು ಮುಂತಾದವರ ಸ್ಥಿತಿಗತಿಯನ್ನು ರಕ್ಷಿಸಿ ಬೆಳೆಸಲು ಬಹಳ ಕಷ್ಟಪಟ್ಟು ಹಣಗಳಿಸುತ್ತಾನೆ. ಅವನು ತನ್ನ ಶರೀರವನ್ನು ತೃಪ್ತಿಗೊಳಿಸಲು ಇಷ್ಟೆಲ್ಲ ಮಾಡುತ್ತಾನೆ. ಮರವೊಂದು ತಾನು ಸಾಯುವ ಮೊದಲು ಮುಂದಿನ ಮರದ ಬೀಜವನ್ನು ಉತ್ಪಾದಿಸುವಂತೆ ಮರಣ ಹೊಂದುವ ಶರೀರವು ತನ್ನ ಸಂಚಿತ ಕರ್ಮರೂಪದಲ್ಲಿ ಮುಂದಿನ ಶರೀರದ ಬೀಜವನ್ನು ಪ್ರಕಟಗೊಳಿಸುತ್ತದೆ. ಈ ರೀತಿ ಭೌತಿಕ ಅಸ್ತಿತ್ವವು ಮುಂದುವರಿಯುವುದೆಂದು ತಿಳಿದು ಶರೀರವು ಕ್ಷೀಣವಾಗಿ ಸಾಯುತ್ತದೆ.

ದೇಹಭೋಗಿ ಮುಖ್ಯ ಗೋಡೀ । ಸ್ತ್ರೀಭೋಗಾಚೀ ಅತಿ ಆವಡೀ । ಸರ್ವಸ್ವವೇಂಚೋನಿ ಜೋಡೀ । ಆಣೀ ರೋಕಡೀ ಯೋಷಿತಾ ।೧೦೨॥ ಸ್ತ್ರೀ ಹಾತೀ ಧರಿತಾ ದೇಖ । ವಾಢೇ ಪ್ರಪಂಚಾಚೇ ಥೋರ ದುಃಖ । ಗೃಹಪಾಹಿಜೇ ಆವಶ್ಯಕ । ಬೋಗಾರ್ಥ ದೇಖ ಸ್ತ್ರೀಯೇಚ್ಯಾ ।೧೦೩॥ ತ್ಯಾ ಗೃಹಾಚೇ ಗೃಹಸಿದ್ಧಿ । ಪಾಹಿಜೇ ಧನ ಧಾನ್ಯ ಸಮೃದ್ಧೀ । ಝಾಲೀ ಪ್ರಜಾಂಚೀ ವೃದ್ಧೀ । ತೇಣೇ ಅತಿ ಆಧೀ ಅನಿವಾರ ।೧೦೪॥ ತ್ಯಾ ಪ್ರಜಾಂಚಾ ಅತಿಲಾಲಸು । ದಾಸದಾಸೀ ಮೇಳವೀ ಪಶು । ಥೋರ ಕಷ್ಟಾಂಚಾ ಪಡೇ ಸೋಸು । ಸುಖಲೇಶು ಪೈ ನಾಹೀ ।೧೦೫॥ ವ್ಯಾಹೀ ಜಾಂವಯಾಂಚ್ಯಾ ವೋಢೀ । ಆಪ್ತವರ್ಗಾಚಿಯಾ ಕೋಡೀ । ಪಡೇ ಉಚಿತಾಚಿಯಾ ಸಾಂಕಡೀ । ಸೋಶಿತಾ ಕೋರಡೀ ದೇಹಾಚೀ ।೧೦೬॥ ಪೋಸಾವಯಾ ಪೋಷ್ಯಾಂಸೀ । ರಚೀ ನಾನಾ ಉಪಾಯರಾಶೀ । ಹಿಂಡೇ ಸ್ವದೇಶೀ ಪರದೇಶೀ । ಅಹರ್ನಿಶೀ ವ್ಯಾಕುಳ ।೧೦೭॥

ಅವಧೂತನು ಹೇಳಿದನು, ಈ ದೇಹದಂತಹ ಉಪಕಾರೀ ಸ್ನೇಹಿತ ಬೇರೇ ಯಾರೂ ಇರುವುದಿಲ್ಲ. ಆದ್ದರಿಂದ ಇದನ್ನು ವ್ಯವಸ್ಥಿತವಾಗಿ ಇಡಬೇಕೆಂದು ನೀನು ಹೇಳಬಹುದು, ಆದರೆ ಅದು ಮೊದಲೇ ಇನ್ನೊಬ್ಬರದ್ದಾಗಿರುವುದು ।೯೭॥ ಇದನ್ನು ಬಹು ಲಕ್ಷದಿಂದ ಜೋಪಾನವನ್ನು ಮಾಡಲು ಅದರ ಪರಿಣಾಮವೇ ವಿಪರೀತವಾಗುವುದು. ಇದು ನರಿನಾಯಿಯ ಭಕ್ಷ್ಯವಾಗುವುದು. ಇಲ್ಲವೇ ಅಗ್ನಿಯ ಮುಖದಲ್ಲಿ ಬೀಳುವುದು ॥೯೮॥ ಈ ದೇಹದಿಂದ ಚೈತನ್ಯವು ತೊಲಗಲು ದೇಹವು ಕ್ರಿಮಿಗಳಿಂದ ಬುಜ್‌ಗುಡುವುದು. ಈ ಮೂರು ಅವಸ್ಥೆ ಬಿಟ್ಟರೆ ಅದಕ್ಕೆನಾಲ್ಕನೆಯ ಅವಸ್ಥೆಯು ಇರುವುದಿಲ್ಲ. ಇದನ್ನು ನೀನು ಉತ್ತಮವಾಗಿ ತಿಳಿದುಕೊಂಡಿರುವೆ ।೯೯॥ ಹೇ ರಾಜನೇ, ಈ ಕಾರಣದಿಂದ ನಾನು ಈ ದೇಹದ ಮೇಲೆ ಆಸಕ್ತಿಯನ್ನು ಇಟ್ಟಿರುವುದಿಲ್ಲ. ಆತ್ಮಜ್ಞಾನದ ಆಧಾರದಿಂದ ನಾನು ಪೃಥ್ವಿಯ ಮೇಲೆ ನಿಃಸಂಗದಿಂದ ಚಲಿಸುತ್ತಿರುತ್ತೇನೆ ।೧೦೦॥ ಈ ದೇಹಕ್ಕೆ ಉಪಭೋಗಕ್ಕಾಗಿ ಇರುವ ಸಾಧನೆಗಳೆಲ್ಲವೂ ಬಂಧನಕಾರಕಗಳಾಗಿರುವುವು. ಇದನ್ನು ನೀನು ನಿಶ್ಚಿತವಾಗಿ ಲಕ್ಷದಲ್ಲಿಡು. ಭೋಗಗಳಿಂದ ವಾಸನೆಗಳು ಪ್ರಬಲವಾಗಿ ಅನಿವಾರ್ಯವಾಗಿ ಬೆಳೆಯುತ್ತಲೇ ಸಾಗುವುವು ।೧೦೧॥

ಸ್ತ್ರೀಭೋಗದ ಅತ್ಯಂತಿಕ ಪ್ರೇಮವೇ ದೇಹದಲ್ಲಿನ ಮುಖ್ಯ ಅಭಿರುಚಿಯಾಗಿರುವುದು. ಸರ್ವಸ್ವವನ್ನೂ ಖರ್ಚಿಸಿ ಪುರುಷನು ತನ್ನ ಸಂಗತಿಗಾಗಿ ಹೆಂಡತಿಯನ್ನು ಮಾಡಿಕೊಳ್ಳುವನು ।೧೦೨॥ ಆದರೆ ಸ್ತ್ರೀಯಳ ಪಾಣಿಗ್ರಹಣ ಮಾಡಿಕೊಳ್ಳುವುದೇ ತಡ, ಪ್ರಪಂಚದಲ್ಲಿನ ದುಃಖಗಳು ಬೆಳೆಯಲು ಆರಂಭಗೊಳ್ಳುವುವು. ಸ್ತ್ರೀಗಾಗಿ ಮನೆಕಟ್ಟುವುದು ಅವಶ್ಯಕವಾಗುವುದು ।೧೦೩॥ ಆ ಮನೆಯ ಪ್ರಂಪಚವು ಉತ್ತಮವಾಗಿ ನಡೆಸಿಕೊಂಡು ಹೋಗಲು ಧನಧಾನ್ಯಗಳ ಸಂಗ್ರಹವನ್ನು ಸತತವಾಗಿ ಸಾಧಿಸಬೇಕಾಗುವುದು. ಅದರಲ್ಲಿ ಸಂತತಿಯ ಪ್ರಮಾಣವು ಬೆಳೆಯುತ್ತ ಸಾಗುವುದು. ಅದರ ಜೊತೆಯಲ್ಲಿ ಚಿಂತೆಯೂ ಬೆಳೆಯುತ್ತಿರುವುದು ।೧೦೪॥ ಇವನು ತನ್ನ ಮಕ್ಕಳು ಮರಿಗಳಲ್ಲಿ ಬಹಳಷ್ಟು ಆಸಕ್ತನಾಗಿ ಅವರಿಗಾಗಿ ದಾಸದಾಸಿಯರನ್ನು, ಪಶುಗಳನ್ನು ಜೋಪಾನಮಾಡಬೇಕಾಗುವುದು. ಇದಕ್ಕಾಗಿ ಇವನಿಗೆ ಅತ್ಯಂತ ಕಷ್ಟಗಳನ್ನು ಸೋಸಬೇಕಾಗುವುದು. ಇವನ ಪಾಲಿಗೆ ಸುಖವು ಲವಲೇಶವೂ ಒದಗುವುದಿಲ್ಲ ।೧೦೫॥ ಬೀಗರ, ಅಳಿಯಂದಿರ ಕಾಳಜೀ ಹತ್ತುವುದು. ಆಪ್ತೇಷ್ಟರ ಸಮುದಾಯವು ಸೇರಿಕೊಳ್ಳುವುದು. ಅವರ ಯಥಾಯೋಗ್ಯ ಸತ್ಕಾರವನ್ನು ಮಾಡುವುದಕ್ಕೆ ಮಹಾಸಂಕಟವಾಗುತ್ತಿರುವುದು. ಇವೆಲ್ಲವನ್ನೂ ಸಹಿಸುತ್ತ ಮುಂದೆ ಸಾಗಲು ಶರೀರವು ಅತಿಶಯವಾಗಿ ಕ್ಷೀಣಗೊಳ್ಳುವುದು ।೧೦೬॥ ಆ ಯಾವ ಆಶ್ರಿತ ವರ್ಗಗಳವರನ್ನು ಸಂಭಾಳಿಸುವ ಕಾರ್ಯಗಳಲ್ಲಿ ಅನೇಕ ಪ್ರಕಾರಗಳ ಉಪಾಯಗಳನ್ನು ಯೋಜಿಸಬೇಕಾಗುವುದು. ಇದರಿಂದ ವ್ಯಾಕುಲನಾಗಿ ದೇಶವಿದೇಶಗಳಲ್ಲಿ ಪರದಾಡುತ್ತಿರುವನು ।೧೦೭॥

ದೇಹಾಸೀ ದ್ಯಾವಯಾ ಸುಖ । ಶತಧಾ ವಾಢವೀ ದುಃಖ । ದೇಹಾಭಿಮಾನೇ ಜನ ಮೂರ್ಖ । ವೃಥಾಭಿಲಾಖ ವಾಢವಿತೀ ॥೩೦೮॥ ದೇಹ ಸುಖಾಚಿಯಾ ಚಾಡಾ । ಪಡೇ ಪರಿಗ್ರಹಾಚೇ ಖೋಡಾ । ದಾರಾಗೃಹಲೋಭೇ ಕೇಲಾ ವೇಡಾ । ನ ದೇಖೇ ಪುಢಾ ನಿಜಸ್ವಾರ್ಥು ॥೩೦೯॥ ದೇಹೇ ವಾಢವಿಲೀ ಪ್ರೀತೀ । ಗೃಹ ದಾರಾ ಪುತ್ರ ಸಂಪತ್ತೀ । ತೇಚಿ ವಾಸನಾ ಹೋಯ ದೇಹಾಂತೀ । ದೇಹಾಂತರಾಪ್ರತೀ ನಿಜಬೀಜ ॥೩೧೦॥ ಜೈಸಾ ಜೋಂಧಳಾ ಕಣಿಸಾ ಚಢೇ । ಕಣಸೀಚಾ ಕ್ಷಿತೀವರೀ ಝಡೇ । ವಾಢೀ ವಾಢಲೇ ಝಾಡ ಮೋಡೇ । ತೇ ಬೀಜ ಗಾಢೇ ಉರಲೇಸೇ ॥೩೧೧॥ ತೇಂಚಿ ಬೀಜ ಜಲಭೂಮೀಚೇ ಸಂಗತೀ । ಸವೇಂಚಿ ಝಾಡ ವಾಢೇ ಪುಢತೀ । ತೈಸೀ ವಾಸನಾ ಉರೇ ದೇಹಾಂತೀ । ದೇಹಾಂತರಾಪ್ರತೀ ನ್ಯಾವಯಾ ॥೩೧೨॥ ತ್ಯಾ ವೃಕ್ಷಾ ಚಿಯಾ ಪರೀ । ವಾಸನಾಬೀಜ ಶರೀರೀ । ಉರವೂನಿ ಸ್ವರ್ಗಸಂಸಾರೀ । ಯೋನಿದ್ವಾರೀ ಜನ್ಮ ವೀ ॥೩೧೩॥ ದೇಹೀ ವಾಸನಾ ಕೇವೀ ವಾಢೇ । ತೇಹೀ ಸಾಂಗೇನ ತುಜ ಪುಢೇ । ವಿಷಯ ಸೇವಿತಾ ವಾಡೇಕೋಡೇ । ವಾಸನಾ ವಾಢೇ ಅನಿವಾರ ॥೩೧೪॥

ಜಿಹವೈಕತೋಽ ಮುಮುಪಕರ್ಷತಿ ಕರ್ಹಿ ತರ್ಷಾ ಶಿಶ್ನೋಽನ್ಯತಸ್ತ್ವಗುದರಂ ಶ್ರವಣಮ್ ಕುತಶ್ಚಿತ್ ।
ಘ್ರಾಣೋಽನ್ಯತಶ್ಚಪಲದೃಕ್ ಕ್ವಚ ಕರ್ಮಶಕ್ತಿರ್ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನಂತಿ ॥೨೭॥

ಅರ್ಥ:- ಅನೇಕ ಹೆಂಡಂದಿರುಳ್ಳವನು ಇರುವ ಒಬ್ಬ ಗಂಡನನ್ನು ತಮ್ಮ ತಮ್ಮ ಕಡೆ ಎಳೆದಾಡುವರು. ಅದರಂತೆ ಜೀವಕ್ಕೆ ನಾಲಗೆಯು ಒಂದೆಡೆ ಸ್ವಾಧಿಷ್ಟ ಪದಾರ್ಥಗಳತ್ತ ಎಳೆಯುವುದು. ನೀರಡಿಕೆಯು ಒಂದೆಡೆ ನೀರಿಗಾಗಿ ಎಳೆಯುವುದು. ಜನನೇಂದ್ರೀಯವು ಸ್ತ್ರೀಸುಖಕ್ಕಾಗಿ ಒಂದೆಡೆ ಎಳೆಯುವುದು. ತ್ವಚೆ, ಹೊಟ್ಟೆ, ಕಿವಿ ಇವು ಕೋಮಲ ಸ್ಪರ್ಶ, ಭೋಜನ, ಮಧುರಶಬ್ದಗಳಿಗಾಗಿ ಎಳೆದಾಡುವವು. ಮೂಗು ಸುಗಂಧದತ್ತ ಎಳೆಯುವುದು. ಚಂಚಲ ನೇತ್ರಗಳು ಸುಂದರ ರೂಪವನ್ನು ನೋಡಲು ಎಳೆಯುವುದು. ಈ ಪ್ರಕಾರವಾಗಿ ಕರ್ಮೇಂದ್ರಿಯಗಳು ಮತ್ತು ಜ್ಞಾನೇಂದ್ರೀಯಗಳು ಪುರುಷನಿಗೆ ಒಂದೇ ಸವನೇ ತೊಂದರೆ ಕೊಡುತ್ತಲೇ ಇರುವುವು.

ಜಿವ್ಹಾ ರಸಾಕಡೇ ವೋಢೀ । ತೃಷಾ ಪ್ರಾಶನಾಲಾಗೀ ತೋಡೀ । ಶಿಶ್ನಾಸೀ ರತಿಸುಖಾಚೀ ಗೋಡೀ । ತೇ ಚರಫಡೀ ರಮಾವಯಾ ॥೩೧೫॥ ತ್ವಜಾ ಪಾಹೇ ಮೃದುಪಣ । ಉದರ ವಾಂಛೀ ಪೂರ್ಣ ಅನ್ನ । ಶ್ರವಣ ಮಾಗತೀ ಗಾಯನ । ಮಧುರಧ್ವನ ಆಲಾಪು ॥೩೧೬॥ ಘ್ರಾಣ ಉದ್ಯತ ಪರಿಮಳಾ । ರೂಪ ಪಹಾವಯಾ ವೋಢೀ ಡೋಳಾ । ಹಸ್ತ ವಾಂಛೀತೀ ಖೇಳಾ । ನಾನಾ ಲೀಳಾ ಸ್ವಭಾವೇ ॥೩೧೭॥ ಪಾಯ ವಾಂಛಿತೀ ಗತೀ । ಐಶೀ ಇಂದ್ರಿಯೇ ವೋಢಾ ವೋಢಿತೀ । ಜೇವೀ ಏಕಾ ಗೇಹಪತೀ । ಬಹುತಾ ಸವತೀ ತೋಡಿತೀ ॥೩೧೮॥ ಏವಂ ಇಂದ್ರಿಯಾಂಸೀ ವಿಷಯಾಸಕ್ತೀ । ತೇಣೇ ವಾಸನಾ ದೃಢ ಹೋತೀ । ತ್ಯಾ ದೇಹದೇಹಾಂತರಾಪ್ರತೀ । ಪುರುಷಾಸೀ ನೇತೀ ಸರ್ವಥಾ ॥೩೧೯॥

ಈ ಪ್ರಕಾರವಾಗಿ ತನ್ನ ದೇಹಕ್ಕೆ ಸುಖವು ಲಭಿಸಲೆಂದು ನೂರುಪಟ್ಟು ದುಃಖಗಳನ್ನು ಬೆಳೆಸುತ್ತಿರುವನು. ದೇಹದ ಅಭಿಮಾನದಿಂದ ಮೂರ್ಖ ಜನರು ವ್ಯರ್ಥವಾಗಿ ಅಭಿಲಾಷೆಗಳನ್ನು ಬೆಳೆಸುತ್ತಿರುವರು ॥೩೦೮॥ ದೇಹಸುಖದ ಆಶೆಯಿಂದ ಇವನು ಪರಿಗ್ರಹದ ತೆಗ್ಗಿನಲ್ಲಿ ಬೀಳುವನು. ಮನೆ ಮತ್ತು ಸ್ತ್ರೀ ಲೋಭದಿಂದ ಇವನು ಹುಚ್ಚನಾಗಿ ತನ್ನ ಮುಂದಿನ ಯಾವ ಸ್ವಾರ್ಥವನ್ನು ನೋಡುವುದೇ ಇಲ್ಲ ॥೩೦೯॥ ಮನೆ, ಸ್ತ್ರೀ,ಮಕ್ಕಳು, ಧನ ಇವುಗಳಲ್ಲಿ ಅತ್ಯಂತ ಆಸಕ್ತಿಯನ್ನು ತನ್ನ ದೇಹವು ಬೆಳೆಸಿತು. ಇದೇ ಮರಣ ಕಾಲದಲ್ಲಿ ವಾಸನಾರೂಪ ತಾಳಿ ಮುಂದಿನ ಜನ್ಮಕ್ಕೆ ಬೀಜವಾಗುವುದು ॥೩೧೦॥ ಜೋಳದ ದಂಟಿಗೆ ತೆನೆ ಹುಟ್ಟುವುದು. ಆಗ ಆ ತೆನೆಯಲ್ಲಿನ ಜೋಳದ ಕಾಳುಗಳು ಕೆಳಗೆ ಬೀಳುವುವು. ಬೆಳೆದ ಆ ಗಿಡವು ಮುರಿದು ಬೀಳುವುದು. ಆದರೆ ಬಿದ್ದ ಬೀಜ ಅಲ್ಲಿಯೇ ಉಳಿದಿರುವುದು ॥೩೧೧॥ ಆ ಬೀಜವು ನೆಲ ಜಲ ಸಂಯೋಗದಿಂದ ಪುನಃ ಹೊಸದಾಗಿ ಗಿಡವಾಗಿ ಹುಟ್ಟುವುದು. ಅದರಂತೆ ದೇಹಾಂತದಲ್ಲಿ ವಾಸನಾರೂಪ ಬೀಜವು ಜೀವಕ್ಕೆ ಬೇರೆ ದೇಹಕ್ಕೆ ಒಯ್ಯಲು ಸಿದ್ಧವಾಗಿರುವುದು ॥೩೧೨॥ ಆ ಗಿಡದಂತೆ ಶರೀರದಲ್ಲಿನ ವಾಸನಾರೂಪ ಬೀಜವು ಲಿಂಗದೇಹದಲ್ಲಿ ಸೇರಿಕೊಂಡು ಸ್ವರ್ಗದಲ್ಲಿ ಅಥವಾ ಸಂಸಾರದಲ್ಲಿ ಪುನಃ ಯೋನಿದ್ವಾರಾ ಜನ್ಮ ಧರಿಸಲು ಹಚ್ಚುವುದು ॥೩೧೩॥ ಈಗ ದೇಹದಲ್ಲಿ ವಾಸನೆಯು ಹೇಗೆ ಬೆಳೆಯುವುದು? ಇದನ್ನು ನಾನು ನಿನಗೆ ಹೇಳುವೆನು. ಬಹು ಆಸಕ್ತಿಯಿಂದ ವಿಷಯಗಳ ಭೋಗವನ್ನು ಭೋಗಿಸಲು ಶರೀರದಲ್ಲಿ ವಾಸನೆಯು ಅನಿವಾರ್ಯವಾಗಿ ಬೆಳೆಯುತ್ತ ಸಾಗುವುದು ॥೩೧೪॥ ನಾಲಿಗೆಯು ಮಧುರವಾದ ರಸಗಳತ್ತ ಜಗ್ಗುವುದು. ತೃಷೆಯು ನೀರನ್ನು ಕುಡಿಯಲು ಎಳೆಯುವುದು. ಶಿಶ್ನವು ರತಿಸುಖಕ್ಕಾಗಿ ಚಡಪಡಿಸುವುದು ॥೩೧೫॥ ತ್ವಚೆಯು ಮೃದುತ್ವವನ್ನು ಶೋಧಿಸುತ್ತಿರುವುದು. ಹೊಟ್ಟೆಯು ಪೂರ್ಣ ಭೋಜನದ ಇಚ್ಛೆ ಮಾಡುತ್ತಿರುವುದು. ಕಿವಿಗಳು ಮಧುರಧ್ವನಿ ಕೇಳಲು ಕಾತುರಪಡುವುವು ॥೩೧೬॥ ಮೂಗು ಸುಗಂಧವನ್ನು ಹೀರಲು ಉತ್ಸುಕವಾಗಿರುವುದು. ಕಣ್ಣುಗಳು ಸುಂದರ ರೂಪ ನೋಡಲು ಆತುರಪಡುವುವು. ನಾನಾಪ್ರಕಾರಗಳ ಆಟಕ್ಕಾಗಿ ಕೈಗಳು ಅಪೇಕ್ಷೆಪಡುವುವು ॥೩೧೭॥ ಕಾಲುಗಳಿಗೆ ಅತ್ತಿತ್ತ ತಿರುಗಾಡಲು ಬೇಕಾಗುವುದು. ಒಬ್ಬ ಗೃಹಸ್ಥನಿಗೆ ಅನೇಕ ಹೆಂಡಂದಿರು ಇರಲು, ಆ ಎಲ್ಲ ಸವತಿಯರು ಕೂಡಿ ಪಾಪ! ಈತನಿಗೆ ನಾಲ್ಕು ಕಡೆಗಳಿಂದಲೂ ಜಗ್ಗುತ್ತಿರುವರು ॥೩೧೮॥ ಇದೇ ಪ್ರಕಾರವಾಗಿ ಸರ್ವ ಇಂದ್ರಿಯಗಳು ಕೂಡಿ ಜೀವನಿಗೆ ನಾಲ್ಕೂ ಕಡೆಯಿಂದಲೂ ಜಗ್ಗುತ್ತಲೇ ಇರುವುವು. ತಾತ್ಪರ್ಯವೇನೆಂದರೆ, ಇಂದ್ರಿಯಗಳ ವಿಷಯಾಸಕ್ತಿಯಿಂದ ವಾಸನೆಯು ದೃಢವಾಗುವುದು. ಇದರಿಂದ ಈ ಪುರುಷನಿಗೆ ಮರು ಜನ್ಮಕ್ಕೆ ಕಾರಣವಾಗುವುದು ॥೩೧೯॥

ಯಾಲಾಗೀ ಕರಾವಯಾ ವಿಷಯತ್ಯಾಗು । ಅವಶ್ಯ ಭೇದಾವಾ ದೇಹಸಂಗು । ಇಯೇ ಅರ್ಥೀ ಮನುಷ್ಯದೇಹ ಚಾಂಗು । ಜ್ಞಾನ ವಿಭಾಗು ಯೇ ದೇಹೀ ।।೩೨೦।।

ಸೃಷ್ಟ್ವಾ ಪುರಾಣಿ ವಿವಿಧಾನ್ಯ ಜಯತ್ಮಶಕ್ತ್ಯಾ ವೃಕ್ಷಾನ್ ಸರೀಸೃಪಪಶೂನ್ ಖಗದಂದಶೂಕಾನ್।
ತೈಸ್ತೈರತುಷ್ಟಹೃದಯಃ ಪುರುಷಂ ವಿಧಾಯ ಬ್ರಹ್ಮಾವಲೋಕಧಿಷಣಂ ಮುದಮಾಪ ದೇವಃ ।೨೮।।

ಅರ್ಥ :- ಭಗವಂತನು ತನ್ನ ಅಚಿಂತ್ಯಮಾಯಾಶಕ್ತಿಯಿಂದ ವೃಕ್ಷ, ಪಶೂ, ಪಕ್ಷಿ, ಹುಳ, ನೊಣ, ಮೀನ ಇತ್ಯಾದಿ ನಾನಾ ಪ್ರಕಾರಗಳ ಶರೀರಗಳನ್ನು ಉತ್ಪನ್ನಗೊಳಿಸಿದನು. ಆದರೆ ಆತನಿಗೆ ಸಮಾಧಾನವು ದೊರಕಲಿಲ್ಲ. ಅದಕ್ಕಾಗಿ ಪರಬ್ರಹ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಲು ಯೋಗ್ಯವಾದ ಬುದ್ಧಿಯುಳ್ಳ ಅಂತಹ ಮನುಷ್ಯ ಶರೀರವನ್ನು ಉತ್ಪನ್ನಗೊಳಿಸಿ ತಾನು ಸಂತುಷ್ಟನಾದನು.

ಹೇಚಿ ಜಾಣಾವಯಾ ನಿಜರೂಪಾತೇ । ಪೂರ್ವೀ ತೇಣೇ ಶ್ರೀ ಅನಂತೇ । ನಿಜಮಾಯೇಚೇನಿ ಹಾತೇ । ಕೇಲೀ ಬಹುತೇ ಶರೀರೇ ।।೩೨೧।। ಏಕೇ ಕೇಲೀ ಭೂಚರೇ । ಏಕೇ ತೇ ಕೇಲೀ ಖೇಚರೇ । ಏಕೇ ಕೇಲಿ ಜಳಚರೇ । ಚರೇ ಅಚರೇ ತೀ ಏಕೇ ।।೩೨೨।। ವೃಕ್ಷ ಸರ್ಪ ಪಶು ದಂಶ । ರಾಕ್ಷಸ ಪಿಶಾಚ ಬಕ ಹಂಸ । ಮತ್ಸ್ಯಕಚ್ಛಾದಿ ಅಶೇಷ । ಸೃಜೀ ಬಹುವಸ ಯೋನೀತೇ ।।೩೨೩।। ಐಸಾ ಚೌರ್‍ಯಾಂಶೀ ಲಕ್ಷ ಯೋನೀ । ಸೃಜೂನಿ ಪಾಹೇ ಪರತೋನೀ । ತಂವ ನಿಜಪ್ರಾಪ್ತೀ ಲಾಗೋನೀ । ನ ದೇಖೇ ಕೋಣೀ ಅಧಿಕಾರೀ ।।೩೨೪।। ಐಶಿಯೇ ದೇಖೋನಿ ಸೃಷ್ಟೀತೇ । ಸುಖ ನ ವಾಟೇಚಿ ದೇವಾತೇ । ಮಗ ಮಾನವೀ ಪ್ರಕೃತೀತೇ । ಆದರೇ ಬಹುತೇ ನಿರ್ಮಿಲೇ ।।೩೨೫।। ಬಾಹುಲ್ಯೇ ಮನುಷ್ಯದೇಹೀ । ನಿಜಜ್ಞಾನ ಘಾತಲೇ ಪಾಹೀ । ಜೇಣೇ ಜ್ಞಾನೇ ದೇಹೀ । ವಿದೇಹ ಪಾಹೀ ಪಾವತೀ ।।೩೨೬।। ಆಹಾರ - ನಿದ್ರಾ - ಭಯ - ಮೈಥುನ । ಸರ್ವಾ ಯೋನೀಸೀ ಸಮಸಮಾನ । ಮನುಷ್ಯದೇಹೀಚೇ ಜ್ಞಾನ । ಅಧಿಕ ಜಾಣ ಸರ್ವಾಂಶೀ ।।೩೨೭।। ದೇಖೋನಿ ಮನುಷ್ಯ ದೇಹಾಸೀ । ಸುಖ ಝಾಲೇ ಭಗವಂತಾಸೀ । ಅಧಿಕಾರ ಬ್ರಹ್ಮಜ್ಞಾನಾಸೀ । ಯೇಣೇ ದೇಹೇಸೀ ಮತ್ಪ್ರಾಪ್ತೀ ।।೩೨೮।। ಪಾವೋನಿಯಾ ಮನುಷ್ಯಪಣಾ । ಜೋ ನ ಸಾಧೀ ಬ್ರಹ್ಮಜ್ಞಾನಾ । ತೋ ದಾಢೀಚಾ ಮೇಂಢಾ ಜಾಣಾ । ವಿಷಯಾಚರಣಾ ವಿಚರತು ।।೩೨೯।। ಮನುಷ್ಯ - ದೇಹೀಂಚೇನಿ ಜ್ಞಾನೇ । ಸಚ್ಚಿದಾನಂದ ಪದವೀ ಘೇಣೇ । ಏವಢಾ ಅಧಿಕಾರ ನಾರಾಯಣೇ । ಕೃಪಾವಲೋಕನೇ ದೀಧಲಾ ।।೩೩೦।। ಮನುಷ್ಯ ದೇಹೀ ಬ್ರಹ್ಮಜ್ಞಾನ । ಪುಢೀಲ ಜನ್ಮೀ ಮೀ ಕರೀನ । ಮ್ಹಣೇ ತೋ ನಾಗವಲಾ ಜಾಣ । ಸೋಲೀವ ಅಜ್ಞಾನ ತ್ಯಾಪಾಸೀ ।।೩೩೧।।

ಆದ್ದರಿಂದ ಈ ವಿಷಯಗಳ ತ್ಯಾಗವನ್ನು ಮಾಡುವುದಕ್ಕಾಗಿ ಪ್ರಾರಂಭದಲ್ಲಿ ದೇಹದ ಮೇಲಿರುವ ಆಸಕ್ತಿಯನ್ನು ತ್ಯಜಿಸಬೇಕಾಗುವುದು. ಹೀಗೆ ಮಾಡುವುದರಿಂದ ಸ್ವಭಾವತಃ ಕೆಡಕಾಗಿದ್ದ ದೇಹವು ಉತ್ತಮವಾಗುವುದು. ಕಾರಣ ಜ್ಞಾನಪ್ರಾಪ್ತಿಯು ಈ ದೇಹದಲ್ಲಿಯೇ ಆಗುವುದು ।।೩೨೦।।

ತನ್ನ ನಿಜರೂಪದ ಅರಿವು ಆಗಬೇಕೆಂದು ಬಯಸಿ ಶ್ರೀ ಅನಂತನು ಆರಂಭದಲ್ಲಿ ತನ್ನ ಮಾಯೆಯ ಆಧಾರದಿಂದ ಅನೇಕ ಪ್ರಕಾರದ ಶರೀರಗಳನ್ನು ನಿರ್ಮಾಣಗೊಳಿಸಿದನು ।।೩೨೧।। ಕೆಲವು ಭೂಮಿಯ ಮೇಲೆ ಸರಿದಾಡುವ, ನಡೆದಾಡುವ ಶರೀರಗಳನ್ನು, ಕೆಲವು ಆಕಾಶದಲ್ಲಿ ಹಾರುವ ಪಕ್ಷಿಗಳ ಶರೀರಗಳನ್ನು ಕೆಲವು ಜಲದಲ್ಲಿ ಇರುವ ಪ್ರಾಣಿಗಳನ್ನು, ಇನ್ನು ಕೆಲವು ಸ್ಥಾವರ, ಜಂಗಮ ಹೀಗೆ ಅನೇಕ ಶರೀರಗಳನ್ನು ನಿರ್ಮಿಸಿದನು ।।೩೨೨।। ವೃಕ್ಷ, ಸರ್ಪ, ಪಶು, ಹುಳು, ರಾಕ್ಷಸ, ಪಿಶಾಚ, ಬಕಪಕ್ಷಿ, ಹಂಸಪಕ್ಷಿ, ಮೀನು, ಆವಿ ಇತ್ಯಾದಿ ಒಟ್ಟಿನಲ್ಲಿ ಬಹು ಜಾತಿಗಳನ್ನು ನಿರ್ಮಿಸಿದನು ।।೩೨೩।। ಈ ಪ್ರಕಾರವಾಗಿ ಎಂಬತ್ತಾಲ್ಕು ಲಕ್ಷ ಯೋನಿಗಳನ್ನು ಉತ್ಪನ್ನಗೊಳಿಸಿದ ನಂತರ ಅವುಗಳತ್ತ ಲಕ್ಷ ಕೊಟ್ಟು ನೋಡಿದನು. ಆದರೆ ಅವುಗಳಲ್ಲಿ ಆತ್ಮಪ್ರಾಪ್ತಿಯ ಅಧಿಕಾರೀ ಯಾರೂ ಕಾಣದಾದರು ।।೩೨೪।। ಹೀಗಿರುವ ಈ ಸೃಷ್ಟಿಯನ್ನು ಅವಲೋಕಿಸಿ ದೇವರಿಗೆ ಸಮಾಧಾನವಾಗಲಿಲ್ಲ. ಆದ್ದರಿಂದ ಆತನು ಬಹಳ ಅಪೇಕ್ಷೆ ಪಟ್ಟು ಮಾನವ ದೇಹದ ರಚನೆಯನ್ನು ಮಾಡಿದನು ।।೩೨೫।। ಈ ಯಾವ ಮನುಷ್ಯ ಶರೀರದಲ್ಲಿ ತನ್ನ ನಿಜಜ್ಞಾನವನ್ನು ಬಹುವಾಗಿ ತುಂಬಿದನು. ಯಾವ ಈ ಜ್ಞಾನದಿಂದ ದೇಹದಲ್ಲಿದ್ದರೂ ವಿದೇಹಾವಸ್ಥೆಗೆ ಮುಟ್ಟಬಹುದಾಗಿರುವುದು ।।೩೨೬।। ಆಹಾರ, ನಿದ್ರಾ, ಭಯ ಮತ್ತು ಮೈಥುನ ಇವು ಸರ್ವ ಪ್ರಕಾರದ ಶರೀರದಲ್ಲಿ ಒಂದೇಸಮವಾಗಿರುವುದು. ಆದರೆ ಅಧಿಕವಾದ ಜ್ಞಾನವು ಮಾತ್ರ ಮನುಷ್ಯದೇಹಕ್ಕೆ ಇರುವುದು ।।೩೨೭।। ಈ ಯಾವ ಮನುಷ್ಯ ದೇಹವನ್ನು ನೋಡಿ ಭಗವಂತನಿಗೆ ಬಹಳ ಸಮಾಧಾನವಾಯಿತು. ಈ ದೇಹವು ಬ್ರಹ್ಮಜ್ಞಾನದ ಅಧಿಕಾರಿಯು. ಈ ದೇಹದಿಂದಲೇ ನನ್ನ ಪ್ರಾಪ್ತಿಯಾಗುವುದೆಂದು ಹೇಳಿದನು ।।೩೨೮।। ಅದಕ್ಕಾಗಿಯೇ ಈ ನರದೇಹಕ್ಕೆ ಬಂದು ಯಾವನು ಬ್ರಹ್ಮಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವುದಿಲ್ಲವೋ, ಅವನು ವಿಷಯದಲ್ಲಿ ರಮಮಾಣಗೊಂಡಿರುವ ಗಡ್ಡ ಬೆಳೆದ ಹೋತು ಎಂದು ತಿಳಿಯಬೇಕು ।।೩೨೯।। ಮನುಷ್ಯ ದೇಹದ ಜ್ಞಾನದಿಂದ ಸಚ್ಚಿದಾನಂದ ಸ್ವರೂಪವನ್ನು ಪ್ರಾಪ್ತಮಾಡಿಕೊಳ್ಳಲು ಬರುವುದು. ಇಂತಹ ಅಧಿಕಾರವನ್ನು ನಾರಾಯಣನು ಕೃಪೆ ಮಾಡಿಕೊಟ್ಟಿರುವನು ।।೩೩೦।। ಮನುಷ್ಯ ದೇಹದಲ್ಲಿ ಬ್ರಹ್ಮಜ್ಞಾನವು ಸಿಗುವುದಾಗಿದ್ದರೆ, ಅದನ್ನು ನಾನು ಮುಂದಿನ ಜನ್ಮದಲ್ಲಿ ಸಾಧಿಸುವೆನು ಎಂದು ಹೇಳುವ ಮನುಷ್ಯನು ಅವನು ಪರಿಪೂರ್ಣ ದುಃಖದಲ್ಲಿ ಬಿದ್ದನು ಎಂದು ತಿಳಿಯಬೇಕು. ಅವನಲ್ಲಿ ಇರುವ ಶುದ್ಧ ಅಜ್ಞಾನವೇ ಇದಾಗಿರುವುದು ।।೩೩೧।।

ಲಬ್ಧ್ವಾ ಸುದುರ್ಲಭಮಿದಂ ಬಹುಸಂಭವಾಂತೇ ಮನುಷ್ಯಮರ್ಥದಮನಿತ್ಯಮಪೀಹ ಧೀರಃ।
ತೂರ್ಣಂ ಯತೇತ ನ ಪತೇದನುಮೃತ್ಯು ಯಾವನ್ನಿಃ ಶ್ರೇಯಸಾಮ ವಿಷಯಃ ಖಲು ಸರ್ವತಃ ಸ್ಯಾತ್॥೨೯॥

ಅರ್ಥ:- ವಿಚಾರಿಸಿ ನೋಡಲು ಈ ಮನುಷ್ಯ ಶರೀರವು ಅನಿತ್ಯವಾಗಿರುವುದು. ಮರಣವು ಯಾವಾಗಲೂ ಬೆನ್ನು ಹತ್ತಿರುವುದು. ಆದರೆ ಈ ಶರೀರದಿಂದ ಪರಮ ಪುರುಷಾರ್ಥದ ಪ್ರಾಪ್ತಿಯಾಗುವುದು. ಅದಕ್ಕಾಗಿ ಅನೇಕ ಜನ್ಮಗಳ ನಂತರ ಪ್ರಾಪ್ತವಾದ ಮನುಷ್ಯಜನ್ಮವನ್ನು ಬುದ್ಧಿವಂತ ಪುರುಷನು ವ್ಯರ್ಥಗೊಳಿಸಬಾರದು. ಅತ್ಯಂತ ತೀವ್ರವಾಗಿ ಮರಣದ ಪೂರ್ವದಲ್ಲಿಯೇ ಮೋಕ್ಷ ಪ್ರಾಪ್ತಿಯ ಪ್ರಯತ್ನವನ್ನು ಮಾಡಬೇಕು. ಈ ಜೀವನದ ಮುಖ್ಯ ಉದ್ದೇಶವು ಇದೇ ಆಗಿದೆ. ವಿಷಯ ಭೋಗಗಳು ಸರ್ವ ಪ್ರಾಣಿ ಪಶುಪಕ್ಷಿಗಳಲ್ಲಿ ಪ್ರಾಪ್ತವಾಗುತ್ತಿರುವುವು. ಆದ್ದರಿಂದ ವಿಷಯ ಭೋಗದ ಸಂಗ್ರಹದಲ್ಲಿ ಅಮೌಲ್ಯವಾದ ಜೀವನವನ್ನು ವ್ಯರ್ಥಗೊಳಿಸಬಾರದು.

ಚೌರ್‍ಯಾಂಶೀ ಲಕ್ಷಯೋನೀಪ್ರತೀ । ಜೈ ಕೋಟಿ ಕೋಟಿ ಫೇರೇ ಹೋತೀ । ತೈ ನರದೇಹಾಚೀ ಪ್ರಾಪ್ತೀ
। ಅವಚಟೇ ಲಾಹತೀ ನಿಜಭಾಗ್ಯೇ ।॥೩೩೨॥ ಜೋ ಮನುಷ್ಯದೇಹೀ ಜನ್ಮಲಾ । ತೋ ಪರಮಾರ್ಥಾಸೀ ಲಿಗಟಲಾ
। ಏವಢಾ ಅಲಭ್ಯ ಲಾಭ ಝಾಲಾ । ಪಿತರೀ ಮಾಂಡಿಲಾ ಉತ್ಸಾಹೋ ।॥೩೩೩॥ ಝಾಲಿಯಾ ಮನುಷ್ಯ ದೇಹ
ಪ್ರಾಪ್ತೀ । ಪರಮಾರ್ಥ ಸಾಧೂ ಭೋಗಾಅಂತೀ । ಏವಢೀ ಯೇಥ ನಾಹೀ ನಿಶ್ಚಿತೀ । ಮೃತ್ಯುಪ್ರಾಪ್ತಿ ಅನಿವಾರ
।॥೩೩೪॥ ಮೃತ್ಯು ನ ವಿಚಾರೀ ಗುಣ - ದೋಷ । ನೌಮ್ದೃಣೇ ದೇಶ - ವಿದೇಶ । ನ ಪಾಹೇ ರಾತ್ರ - ದಿವಸ । ಕರಿತ
ನಾಶ ತತ್ಕಾಳ ।॥೩೩೫॥ ದೇಹ ಜೈಪಾಸೋನಿ ಝಾಲಾ । ತೈಪಾಸೂನಿ ಮೃತ್ಯು ಲಾಗಲಾ । ಜೇವೀ ಸಾಪ ಬೇಡೂಕ
ಧರಿಲಾ । ಗಿಳೂ ಲಾಗಲಾ ಲವನಿಮಿಷೇ ।॥೩೩೬॥ ಸಾಪ ಬೇಡುಕಾತೇಗಿಳೀ । ಬೇಡೂಕ ಮುಖೀಮಾಶಾತೇ ಕವಳೀ
। ತೈಶೀ ಮೃತ್ಯುಮುಖೀ ಪಡಲೀ । ವಿಷಯ ಭುಲೀ ಝೋಂಬತೀ ।॥೩೩೭॥ ಯೇಥ ಆಳಸು ಜೇಣೇ ಕೇಲಾ । ತೋ
ಸರ್ವಸ್ವೇ ನಾಗವಲಾ । ಥಿತಾ ಪರಮಾರ್ಥ ಹಾತೀಚಾ ಗೇಲಾ । ಆವರ್ತಿ ಪಡಲಾ ಭವಚಕ್ರೀ ।॥೩೩೮॥
ಐಸೇಜಾಣೋನಿ ಯದುರಾಯಾ । ದೇಹಾಚಿಯಾ ಲವಲಾಹ್ಯಾ । ಪರಮಾರ್ಥ ಸಾಧಾವಯಾ । ಬ್ರಹ್ಮೋಪಾಯಾ
ಉದ್ಯತ ವ್ಹಾವೇ ।॥೩೩೯॥ ಛೇದೋನಿಯಾ ಆಳಸಾಸೀ । ದವಡೂನಿಯಾ ನಿದ್ರೇಸೀ । ಆತ್ಮಚಿಂತನ ಅಹರ್ನಿಶಿ
ಅವಿಶ್ರಮೇಸೀ ಸಾಧಾವೇ ।॥೩೪೦॥ ರಣೀ ರಿಘಾಲಿಯಾ ಶೂರಾಸೀ । ನ ಜಿಣತಾ ಪರಚಕ್ರಾಸೀ । ವಿಸಾಂವಾ ನಾಹೀ
ಕ್ಷತ್ರಿಯಾಂಸೀ । ತೇಣೇ ವೇಗೇಸೀ ಸಾಧಾವೇ ।॥೩೪೧॥ ಸಾಧಾವಯಾ ಆತ್ಮಲಗ್ನ । ಸಾವಧಾನ ಬಿಜವರಾಚೇ ಮನ
। ತೇಣೇ ಸಾಕ್ಷೇಪೇ ಆಪಣ । ಸಾಯುಜ್ಯಲಗ್ನ ಸಾಧಾವೇ ।॥೩೪೨॥ ರಾಯಾಚೇ ಏಕುಲತೇ ಏಕ । ಚುಕಲ್ಯಾ ಅವಚಟೇ
ಬಾಳಕ । ತೋ ಜೇವಿ ಶೋಧೀ ಸಕಳ ಲೋಕ । ತೇವೀ ನಿಜಸುಖ ಸಾಧಾವೇ ।॥೩೪೩॥

(ಎಂಬತ್ತಾಲ್ಕು ಲಕ್ಷ ಜೀವ ಯೋನಿಗಳಲ್ಲಿ ಕೋಟಿ ಕೋಟಿ ಸಾರೆ ಸುತ್ತಬೇಕಾಗುವುದು. ಆಗ ಮಹಾಭಾಗ್ಯದಿಂದ ಆಕಸ್ಮಾತ್ತವಾಗಿ ಮನುಷ್ಯದೇಹವು ಪ್ರಾಪ್ತವಾಗುವುದು ।॥೩೩೨॥ ಯಾವನು ಮನುಷ್ಯ ದೇಹದಲ್ಲಿ ಜನ್ಮ ಧರಿಸುವನೋ, ಅವನು ಮಾತ್ರ ಪರಮಾರ್ಥವನ್ನು ಪಡೆದುಕೊಳ್ಳುವನು. ಇಂತಹ ಅಲಭ್ಯ ಲಾಭವಾದದನ್ನು ಕಂಡು ಅವರ ಪಿತೃಗಳವರು ದೊಡ್ಡ ಉತ್ಸವವನ್ನೇ ಹಮ್ಮಿಕೊಳ್ಳುವರು ।॥೩೩೩॥ ಮನುಷ್ಯ ದೇಹವು ಪ್ರಾಪ್ತವಾದ ನಂತರ ಮೊದಲು ಎಲ್ಲ ವಿಷಯಗಳ ಉಪಭೋಗ ತೆಗೆದುಕೊಂಡ ಮೇಲೆ ಕೊನೆಯಲ್ಲಿ ಪರಮಾರ್ಥವನ್ನು ಸಾಧಿಸೋಣ ಎಂಬ ಈ ವಿಚಾರವು ಅಯೋಗ್ಯವಾಗಿರುವುದು. ಏಕೆಂದರೆ ಈ ದೇಹದ ಯಾವ ಶಾಶ್ವತವೂ ಇರುವುದಿಲ್ಲ. ಅನಿವಾರ್ಯವಾಗಿ ಮೃತ್ಯುವು ಇದಕ್ಕಾಗಿ ಜಪ್ಪಿಸಿ ಕುಳಿತಿರುವುದು ।॥೩೩೪॥ ಮೃತ್ಯು ಎಂದೂ ಯಾವ ಗುಣದೋಷಗಳನ್ನು ನೋಡುವುದಿಲ್ಲ. ದೇಶ, ಪರದೇಶಗಳ ವಿಚಾರವನ್ನೂ ಮಾಡುವುದಿಲ್ಲ. ಇದು ಹಗಲೋ, ರಾತ್ರಿಯೋ ಇದೂ ಕೂಡ ನೋಡುವುದಿಲ್ಲ. ಆಯುಷ್ಯವು ಮುಗಿಯಿತೆಂದರೆ ತತ್ಕಾಲದಲ್ಲಿ ನುಂಗಿಬಿಡುವುದು ।॥೩೩೫॥ ಸರ್ಪವು ಕಪ್ಪೆಯನ್ನು ಹಿಡಿದು ತಕ್ಷಣ ನುಂಗಿ ಬಿಡುವಂತೆ ದೇಹವು ಹುಟ್ಟಿದ ಜೊತೆಯಲ್ಲಿಯೇ ಮರಣವು ಅದಕ್ಕೆ ಬೆನ್ನು ಹತ್ತಿರುವುದು ।॥೩೩೬॥ ಸರ್ಪವು ಕಪ್ಪೆಯನ್ನು ಹಿಡಿಯಲು ಆಗ ಆ ಕಪ್ಪೆಯು ತಾನೊಂದು ನೊಣವನ್ನು ಹಿಡಿಯುವುದು. ಅದರಂತೆಯೇ ಮೃತ್ಯುವಿನ ಮುಖದಲ್ಲಿ ಬಿದ್ದಿರುವ ಮನುಷ್ಯರು ವಿಷಯಗಳನ್ನು ಅಪ್ಪಿಕೊಳ್ಳುತ್ತಿರುವರು ।॥೩೩೭॥ ಅದಕ್ಕಾಗಿ ಈ ದೇಹದಲ್ಲಿ ಆಲಸ್ಯತನ ಮೂಡಿದರೆ ಸರ್ವದೃಷ್ಟಿಯಿಂದ ಮುಳುಗಿದರೆಂದು ತಿಳಿಯಬೇಕು. ಸಹಜವಾಗಿ ಸಾಧಿಸುವಂತಹ ಪರಮಾರ್ಥವನ್ನು ಇವರು ಹಾಳು ಮಾಡಿಕೊಳ್ಳುವರು. ಇದರಿಂದ ಭವಚಕ್ರದಲ್ಲಿ ಸಿಲುಕಿಕೊಳ್ಳುವರು ।॥೩೩೮॥ ಹೇ ಯದು ರಾಜನೇ, ಇದನ್ನೆಲ್ಲವನ್ನೂ ಲಕ್ಷಕ್ಕೆ ತಂದು ಲಗುಬಗೆಯಿಂದ ಪರಮಾರ್ಥವನ್ನು ಸಾಧಿಸಬೇಕು. ಅಂದರೆ ಬ್ರಹ್ಮಪ್ರಾಪ್ತಿಯನ್ನು ಮಾಡಿಕೊಳ್ಳಲು ಯಾವಾಗಲೂ ತತ್ಪರರಾಗಿರಬೇಕು ।॥೩೩೯॥ ಆಲಸ್ಯಕ್ಕೆ ಛೇದಿಸಿ ಒಗೆಯಬೇಕು. ನಿದ್ರೆಯನ್ನು ಬದಿಗಿಟ್ಟು ಹಗಲು ರಾತ್ರಿ ಎನ್ನದೇ ಒಂದೇ ಸಮನೆ ಆತ್ಮಚಿಂತನೆಯನ್ನು ಮಾಡುತ್ತಿರಬೇಕು ॥೩೪೦॥ ಯುದ್ಧಕ್ಕೆ ಹೊರಟ ಶೂರನಾದ ಕ್ಷತ್ರಿಯನಿಗೆ ಶತ್ರುವನ್ನು ಜಯಿಸದೇ ಒಂದು ಕ್ಷಣ ಸಹಿತವಾಗಿ ಆತನು ವಿಶ್ರಾಂತಿ ಪಡೆಯಲಾರನು. ಅದೇ ಪ್ರಕಾರವಾಗಿ ತ್ವರೆಯಿಂದ ಆತ್ಮಜ್ಞಾನದ ಸಾಧನೆಯನ್ನು ಮಾಡಬೇಕು ।॥೩೪೧॥ ಎರಡನೆಯ ಲಗ್ನದ ಮದುಮಗನಿಗೆ ಲಗ್ನ ಪುತ್ವರೆಯಾಗಿ ಸಾಧಿಸುವುದಕ್ಕಾಗಿ ಬಹು ಅವಸರಪಡುತ್ತಿರುವನು. ಅದರಂತೆ ಜೀವ ಶಿವ ಇವರ ಲಗ್ನ ಸಾಧಿಸುವುದಕ್ಕಾಗಿ ಅವಸರಪಡಬೇಕು ।॥೩೪೨॥ ರಾಜನ ಒಬ್ಬನೇ ಆದ ಬಾಲಕನು ಎಲ್ಲಿಯಾದರೂ ತಪ್ಪಿಸಿಕೊಂಡಿರಲು ಆಗ ಆ ರಾಜನು ಆತನ ಶೋಧಕ್ಕಾಗಿ ಸಂಪೂರ್ಣ ನಗರವನ್ನೆಲ್ಲಾ ಹುಡಕಲು ಹಚ್ಚುವನು. ಅದರಂತೆಯೇ ಆತ್ಮಸುಖವನ್ನು ಶೋಧಿಸಬೇಕು ।॥೩೪೩॥

ಕಾಳಾಚಾ ಚಪೇಟಘಾತ । ಜಂವ ವಾಜಲಾ ನಾಹೀ ಯೇಥ । ತಂವ ಸಾಧಾವಯಾ ಪರಮಾರ್ಥ । ಆಯುಷ್ಯ ವ್ಯರ್ಥ ನ ಕರಾವೇ ॥೩೪೪॥ ನರದೇಹೀಚೇನಿ ಆಯುಷ್ಯೇ । ಪ್ರಪಂಚಾಚೇನಿ ಆವೇಶೇ । ವಿಷಯಾಚೇನಿ ವಿಲಾಸೇ । ಭೋಗಪಿಸೇ ನರ ಝಾಲೇ ॥೩೪೫॥ ಪಶ್ವಾದಿಯೋನೀಂಚ್ಯಾ ಠಾಯೀ । ವಿಷಯಾವಾಂಚೋನಿ ಆನ ನಾಹೀ । ತೋಚಿ ವಿಷಯೋ ನರದೇಹೀ । ವಾಢವಿಲ್ಯಾ ಕಾಯೀ ಹಿತ ಝಾಲೇ ॥೩೪೬॥ ವಿಚಾರಿತಾ ವಿವೇಕದೃಷ್ಟೀ । ವಿಷಯಾಂಸೀ ಪ್ರಾರಬ್ಧೇ ಭೇಟೀ । ವೃಥಾ ಕರಿತಾ ಆಟಾಟೀ । ಮುದ್ದಲತುಟೀ ನರದೇಹಾ ॥೩೪೭॥ ನರದೇಹ ಪರಮಪಾವನ । ಪಾವೋನಿ ನ ಸಾಧೀ ಬ್ರಹ್ಮಜ್ಞಾನ । ತೋ ಲಾಂಡಾ ಗರ್ದಭ ಜಾಣ । ಪುಚ್ಛೇವೀಣ ದುಪಾಯೀ ॥೩೪೮॥ ಅಪರೋಕ್ಷ ಜ್ಞಾನೇವಿಣ ಶಾಸ್ತ್ರಜ್ಞ । ತೇ ಅಂಧಾರೀಚೇ ಖದ್ಯೋತ ಜಾಣ । ಅಜ್ಞಾನ ನಿಶೀಮಾಜೀ ತೇಜ ಗಹನ । ಸೂರ್ಯೋದಯೀಕೋಣ ತ್ಯಾ ದೇಖೇ ॥೩೫೦॥ ಬಹ್ಮಜ್ಞಾನೇವೀಣ ವಾಂಝುಟ । ಉದರಾರ್ಥ ದಂಭ ಖಟಪಟ । ಜೇವೀ ಮದಿರಾಪಾನೀ ಮರ್ಕಟ । ಉಡೇ ಉದ್‌ಭಟ ತಡತಡಾ ॥೩೪೯॥ ಬ್ರಹ್ಮಜ್ಞಾನೇವೀಣ ಸನ್ಯಾಸೀ । ನಟಾಚ್ಯಾ ಐಸೇ ಮುಂಡಣ ತ್ಯಾಂಸೀ । ಸೋಂಕಲೇ ಮಿಷ್ಟಾನ್ನ ಭಿಕ್ಷೇಸೀ । ವೃಥಾ ಗೇರೂಸೀ ನಾಶಿಲೇ ॥೩೫೧॥ ಮನೀ ವಿಷಯಾಂಚೇ ಅಭಿಲಾಷಣ । ಧರೂನಿ ಕರಿತೀ ವೇದಾಧ್ಯಯನ । ತೇ ವರ್ಷಾಕಾಳೀಚೇ ದರ್ದುರ ಜಾಣ । ಕರ್ದಮಪಾನೇ ಜಲ್ಪತೀ ॥ ೩೫೨॥ ವಿಷಯಪ್ರಾಪ್ತೀಲಾಗೀ ಮೌನ । ತೇ ಬಕಾಚೇ ಬಕಧ್ಯಾನ । ವಿಷಯಬುದ್ಧೀ ಜೇ ಗಾಯನ । ತೇ ಖರೀ ದೇಖೋನ ಖರ ಭುಂಕೇ ॥೩೫೩॥ ವಿಷಯಾಲಾಗೀ ಉಪನ್ಯಾಸ । ನಾನಾ ಯುಕ್ತಿಂಚೇ ವಿಲಾಸ । ಜೇವೀ ಪಿಂಡ ದೇಖೋನಿ ವಾಯಸ । ಕರಿತೀಬಹುವಸ ಅತಿಶಬ್ದ ॥೩೫೪॥ ಪೋಟ ಭರಾವಯಾ ಭಾಂಡ । ಸೈರಾ ವಾಜವೀತೀ ತೋಂಡ । ತೈಸೇ ವಿಷಯಾಲಾಗೀ ವಿತಂಡ । ಶಾಸ್ತ್ರ ಪಾಖಂಡ ಬೋಲತೀ ॥೩೫೫॥ ವಿಷಯವಾಸನಾ ಧರೂನಿ ಥೋರ । ಬಾಹ್ಯ ಮಿರವಿತಿ ಆಚಾರ । ಜೇವೀ ಕಾಗಾಚಾ ಶೌಚಾಚಾರ । ವಿಷ್ಠಾತತ್ಪರ ಮಾನಸೀ ॥೩೫೬॥ ಹೃದಯೀ ಧರೂನಿ ಜೀವಿಕಾ ಚಾಂಗ । ಕರಿತೀ ಅಗ್ನಿಹೋತ್ರಯಾಗ । ಜೇವೀ ವೇಶ್ಯಾ ವಿಕೋನಿ ಅಂಗ । ಚಾಲವೀ ಸಾಂಗ ಸಂಸಾರಾ ॥೩೫೭॥

ಯಮನ ದೃಷ್ಟಿಯು ನಮ್ಮ ಮೇಲೆ ಬೀಳುವ ಮುಂಚಿತವಾಗಿಯೇ ಪರಮಾರ್ಥವನ್ನು ಸಾಧಿಸಿ ಪಡೆಯಬೇಕು. ನಮಗೆ ಸಿಕ್ಕ ಆಯುಷ್ಯವನ್ನು ವ್ಯರ್ಥವಾಗಿ ಕಳೆಯಕೂಡದು ॥೩೪೪॥ ಈ ಯಾವ ಅಮೌಲ್ಯವಾದ ನರದೇಹಕ್ಕೆ ಪ್ರಂಪಚದಲ್ಲಿನ ವಿಷಯಗಳ ಭೋಗದ ಆಸಕ್ತಿಯನ್ನು ಹಚ್ಚುತ್ತ ಸರ್ವ ಜನರು ವಿಷಯಾಂಧರಾಗಿರುವರು ॥೩೪೫॥ ಪಶು ಪಕ್ಷಿ ಇತ್ಯಾದಿ ಎಲ್ಲ ಶರೀರಗಳಲ್ಲಿ ವಿಷಯಗಳ ಹೊರತಾಗಿ ಬೇರೆ ಯಾವುದೂ ಇರುವುದಿಲ್ಲ. ಅದೇ ವಿಷಯಗಳನ್ನು ಈ ಯಾವ ಅಮೌಲ್ಯವಾದ ನರದೇಹಕ್ಕೆ ಹಚ್ಚಿದರೆ ಆಗುವ ಹಿತವಾದರೂ ಏನು? ॥೩೪೬॥ ವಿವೇಕ ದೃಷ್ಟಿಯಿಂದ ವಿಚಾರವನ್ನು ಮಾಡಲು ಈ ಯಾವ ವಿಷಯಗಳು ಪ್ರಾರಬ್ಧಾನುಸಾರವಾಗಿ ಪ್ರಾಪ್ತವಾಗುತ್ತಿರುವುವು. ಇದಕ್ಕಾಗಿ ಮಾಡುವ ಎಲ್ಲ ಸಾಹಸಗಳು ವ್ಯರ್ಥವಾಗುವುವು. ಕೊನೆಗೆ ನರದೇಹದ ನಾಶವಾಗುವುದು ॥೩೪೭॥ ನರದೇಹವು ಮಹಾ ಪವಿತ್ರವಾಗಿರುವುದು. ಇದು ಪ್ರಾಪ್ತವಾಗಿದ್ದರೂ ಯಾರು ಬಹ್ಮಜ್ಞಾನವನ್ನು ಸಾಧಿಸಲಾರರೋ, ಅವರು ಎರಡು ಕಾಲುಗಳ, ಬಾಲವಿಲ್ಲದ, ತೋಳ, ಕತ್ತೆ ಎಂದು ತಿಳಿಯಬೇಕು ॥೩೪೮॥ ಆತ್ಮ ಸಾಕ್ಷಾತ್ಕಾರ ರಹಿತ ಕೇವಲ ಉದರ ಭರಣಕ್ಕಾಗಿ ಅಹಂಕಾರದಿಂದ ವ್ಯರ್ಥವಾಗಿ ಖಟಪಟಿ ಮಾಡುತ್ತಿರುವುದೆಂದರೆ ಸೆರೆ ಕುಡಿದ ಕೋತಿಯ ಹಾರಾಟದಂತೆಯೇ ಸರಿ ॥೩೪೯॥ ಬ್ರಹ್ಮಜ್ಞಾನವಿಲ್ಲದೇ ಶಾಸ್ತ್ರಗಳನ್ನು ಅರಿತವರು ಕತ್ತಲದಲ್ಲಿನ ಮಿಂಚುಹುಳದಂತೆ ಇರುವರು. ಇದರ ಪ್ರಕಾಶವು ಕೇವಲ ಕತ್ತಲಲ್ಲಿ ಮಾತ್ರ ಪ್ರಕಾಶಿಸುವುದು. ಸೂರ್ಯೋದಯವಾಯಿತೆಂದರೆ ಅವು ಯಾರಿಗೂ ಕಾಣಿಸಲಾರವು. ಇದರಂತೆ ಕತ್ತಲರೂಪ ಅಜ್ಞಾನಿಗಳವರಲ್ಲಿ ಈ ಶಾಸ್ತ್ರಜ್ಞರು ಬಡಬಡಿಸುತ್ತಿರುವರು. ಜ್ಞಾನಸೂರ್ಯನೆದುರು ಇವರನ್ನು ಯಾರು ಕೇಳಬೇಕು? ॥೩೫೦॥ ಬ್ರಹ್ಮಜ್ಞಾನವಿಲ್ಲದ ಸನ್ಯಾಸಿಯು ತಲೆಬೋಳಿಸಿಕೊಂಡ ನಟನಂತೆ ಇರುವನು. ಮೃಷ್ಟಾನ್ನದ ಭಿಕ್ಷೆಯ ಚಟವು ಇವರಿಗೆ ಹತ್ತಿರುವುದು. ಇವರು ಕ್ಯಾವಿಯನ್ನು ವ್ಯರ್ಥವಾಗಿ ನಾಶ ಮಾತ್ರ ಮಾಡುವರು ॥೩೫೧॥ ಮನದಲ್ಲಿ ವಿಷಯಾಭಿಲಾಷೆಯನ್ನು ಇಟ್ಟುಕೊಂಡು ವೇದಾಧ್ಯಯನ ಮಾಡುವವರು, ಮಳೆಗಾಲದಲ್ಲಿ ರಾಡಿ ನೀರನ್ನು ಕುಡಿದು ಒಟಗುಟ್ಟುವ ಕಪ್ಪೆಗಳಂತೆ ಎಂದು ತಿಳಿಯಬೇಕು ॥೩೫೨॥ ವಿಷಯ ಪ್ರಾಪ್ತಿಗಾಗಿ ಮೌನವನ್ನು ಧರಿಸಿ ಧ್ಯಾನವನ್ನು ಮಾಡುವರು. ಅವರ ಈ ಧ್ಯಾನವು ಬಕಪಕ್ಷಿಯಂತಿರುವುದು. ವಿಷಯ ಬುದ್ಧಿಯನ್ನು ಮನದಲ್ಲಿ ಹಿಡಿದು ಗಾನ ಮಾಡುವವರು, ಹೆಣ್ಣು ಕತ್ತೆಯನ್ನು ಕಂಡು ಗಂಡು ಕತ್ತೆಯು ಒದರುವಂತೆ ಎಂದು ತಿಳಿಯಬೇಕು ॥೩೫೩॥ ವಿಷಯ ಪ್ರಾಪ್ತಿಗಾಗಿ ಅನೇಕ ಯುಕ್ತಿ ಪ್ರಯುಕ್ತಿ ಹಾಗೂ ಉದ್ಯೋಗ ಮಾಡುವವರು ಶ್ರಾದ್ಧ ಪಿಂಡವನ್ನು ಕಂಡು ಕಾವ ಕಾವ ಎನ್ನುವ ಕಾಗೆಯ ಸಮಾನರು ॥೩೫೪॥ ತನ್ನ ಹೊಟ್ಟೆಯನ್ನು ತುಂಬಿಕೊಳ್ಳಲು ಹಾಸ್ಯಗಾರನೊಬ್ಬನು ತನ್ನ ಮನಬಂದಂತೆ ಮಾತುಗಳನ್ನಾಡುತ್ತ ಸಾಗುವನು. ಅದರಂತೆಯೇ ವಿತಂಡವಾದಿಯವರು ತಮ್ಮ ಹೊಟ್ಟೆಪಾಡಿಗಾಗಿ ಏನೇನೋ ತಿಳಿದಂತೆ ಅರ್ಥಮಾಡಿ ಹೇಳುವರು ॥೩೫೫॥ ಕಾಗೆಯು ಹೊಲಸು ತಿನ್ನುವುದನ್ನು ಮನದಲ್ಲಿ ಚಿಂತಿಸುವುದು. ಮೇಲ್ನೋಟಕ್ಕೆ ತಾನು ಶುದ್ಧವಾಗಿದ್ದಂತೆ ಡೌಲು ತೋರಿಸುವುದು. ಅದರಂತೆಯೇ ಢೋಂಗೀ ಜನರು ಮನದಲ್ಲಿ ದೃಢವಾಗಿ ವಿಷಯ ವಾಸನೆಯನ್ನು ಹಿಡಿದು ಹೊರಗೆ ಮಾತ್ರ ಸದಾಚಾರರಂತೆ ನಟಿಸುತ್ತಿರುವರು ॥೩೫೬॥ ವೇಶ್ಯೆಯು ತನ್ನ ಶರೀರವನ್ನು ಮಾರಿಕೊಂಡು ಸಂಸಾರವನ್ನು ನಡೆಸುವಳು. ಅದರಂತೆ ತಮ್ಮ ಜೀವನವನ್ನು ನಡೆಸಿಕೊಂಡು ಹೋಗಲು ಅಗ್ನಿಹೋತ್ರ ಮತ್ತು ಯಜ್ಞಗಳನ್ನು ಮಾಡುತ್ತಿರುವರು ॥೩೫೭॥

ನರದೇಹೀಚಾ ಹಾಚಿ ಸ್ವಾರ್ಥ । ಸಾಧಾವಾ ಚೌಥಾ ಪುರುಷಾರ್ಥ । ತೋ ನ ಕರಿತಾ ಜೋ ಕಾ ಅರ್ಥ । ತೋ ಅನರ್ಥ ಜಾಣಾವಾ ।।೩೫೮।। ಸಾಧೀನಾ ದೇಹೀ ಬ್ರಹ್ಮಜ್ಞಾನ । ತೋ ಶ್ವಾನಸೂಕರಾಸಮಾನ । ಅಥವಾ ತ್ಯಾಹೋನಿ ಹೀನ । ತೇ ವಿವೇಚನ ಪರಿಯೇಸಿ ।।೩೫೯।। ಪಶೂಸೀ ಹಾಣಿಲ್ಯಾ ಲಾಥಾ । ದ್ವೇಷ ನ ಧರೀ ಸರ್ವಥಾ । ಮನುಷ್ಯಾಸೀ "ತೂ"ಮ್ಹಣತಾ । ಜೀವಘಾತಾ ಪ್ರವರ್ತೆ ।।೩೬೦।। ಪಶೂಸೀ ಲೋಭ ನಾಹೀ ಸಂಗ್ರಹತಾ । ಏಕ ಆಹಾರ ಹೋಯ ಭಕ್ಷಿತಾ । ಮಗ ಉರಲಿಯಾ ಅರ್ಥಾ । ತ್ಯಾಗೀ ಸರ್ವಥಾ ತತ್ಕಾಳ ।।೩೬೧।। ಮನುಷ್ಯಾಚೇ ಲೋಭಿಷ್ಠಪಣ । ಗಾಂಠೀ ಅಸಲ್ಯಾ ಕೋಟಿ ಧನ । ಪೋಟಾ ನ ಖಾಯಾ ಆಪಣ । ಮಾ ತ್ಯಾಗಿತಾ ಪ್ರಾಣ ತ್ಯಜೀಲ ।।೩೬೨।। ಸಾಯಂಪ್ರಾತರ್ಚಿಂತಾ । ಪಶೂಸೀ ನಾಹೀ ಸರ್ವಥಾ । ಮನುಷ್ಯಾಚೀ ಚಿಂತಾ ಪಾಹತಾ । ಜನ್ಮಶತಾ ನ ರಾಹೇ ।।೩೬೩।। ಅಮಿತ ಧನ ಅಸತಾ ಗಾಠೀ । ತರೀ ಚಿಂತಾ ಅನಿವಾರ ಮೋಠೀ । ನಾಥಿಲೇಂಚಿ ಭಯ ಘೇ ಪೋಟೀ । ಅವಿಶ್ವಾಸೀ ಸೃಷ್ಟೀ ನರದೇಹೀ ।।೩೬೪।। ಜರೀ ಮರೋ ಟೇಕಲೇ ಶರೀರ । ತರೀ ವ್ಯವಹಾರೀ ಸಾಧೀ ವೃತ್ತಿಕ್ಷೇತ್ರ । ಪಾಯಾ ಶೋಧೋನಿ ಬಾಂಧೀಘರ । ಪುತ್ರಪೌತ್ರ ನಾಂದಾವಯಾ ।।೩೬೫।। ಐಸೀ ದುಸ್ತರ ಚಿಂತಾ । ಪಶೂಸಿ ನಾಹೀ ಸರ್ವಥಾ । ಆತಾ ಮೈಥುನಾಚೀ ಕಥಾ । ಏಕ ತತ್ತ್ವತಾ ಸಾಂಗೇನ ।।೩೬೬।। ಪಶೂಸೀ ಋತುಕಾಳೀ ಮೈಥುನ । ಮಗ ಸ್ತ್ರೀಯೇಸೀ ನಾತಳೇ ಆಪಣ । ಪುರುಷಾಸೀ ನಿತ್ಯ ಸ್ತ್ರೀಸೇವನ । ಗರೋದರಹೀ ಜಾಣ ನ ಸೋಡೀ ।।೩೬೭।। ಕಾಮ ಕ್ರೋಧ ಸಲೋಭತಾ । ಚಿಂತಾ ನಿಂದಾ ಅತಿಗರ್ವತಾ । ಹೇ ಮನುಷ್ಯಾಚೇಚಿ ಮಾಥಾ । ಪಶೂಸೀ ಸರ್ವಥಾ ಅಸೇನಾ ।।೩೬೮।। ನ ಸಾಧಿತಾ ಆತ್ಮಜ್ಞಾನ । ಕೇವಳ ಜೇ ವಿಷಯೀ ಜನ । ತೇ ಶ್ವಾನಸೂಕರಾಪರೀಸ ಹೀನ । ಮಾಣುಸಪಣ ತ್ಯಾ ನಾಹೀ ।।೩೬೯।। ವಿಷಯಾಚೇ ಜೇ ಸುಖ ಜಾಣ । ತೇ ಸ್ವರ್ಗೀ ನರಕೀ ಸಮಾನ । ಜೇ ಇಹಲೋಕೀ ಭೋಗೀ ಶ್ವಾನ । ತೇ ಸ್ವರ್ಗೀ ಜಾಣ ಇಂದ್ರಾಸೀ।।೩೭೦।। ಮನುಷ್ಯ ದೇಹಾವಾಂಚೋನೀ । ಪಶುಪಕ್ಷ್ಯಾದಿ ನಾನಾ ಯೋನೀ । ತ್ಯಾ ವಿಷಯಭೋಗಾ ಲಾಗೋನಿ । ವಿಷಯಚ್ಛೇದಿನೀ ನರದೇಹ ।।೩೭೧।।

ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಲ್ಲಿನ ನಾಲ್ಕನೆಯ ಮೋಕ್ಷ ಪುರುಷಾರ್ಥವನ್ನು ಸಾಧಿಸಬೇಕು. ಇದೇ ಮನುಷ್ಯ ಧರ್ಮದ ನಿಜವಾದ ಸ್ವಾರ್ಥವಾಗಿರುವುದು. ಆದರೆ ಮೋಕ್ಷವನ್ನು ಬಿಟ್ಟು ಕೇವಲ ಅರ್ಥ (ಧನ) ಸಂಪಾದನೆ ಮಾಡುವವರ ಅರ್ಥವು ಅರ್ಥವಲ್ಲದೇ ಅನರ್ಥವಾಗಿರುವುದೆಂದು ತಿಳಿಯಬೇಕು ।।೩೫೮।। ನರದೇಹವನ್ನು ಪ್ರಾಪ್ತಮಾಡಿಕೊಂಡು ಯಾವನು ಬ್ರಹ್ಮಜ್ಞಾನವನ್ನು ಸಾಧಿಸುವುದಿಲ್ಲವೋ, ಅವನು ನಾಯಿ, ಹಂದಿಯಂತೆ, ಇಷ್ಟೇ ಅಲ್ಲ, ಅವುಗಳಿಗಿಂತಲೂ ಹೀನನು ಎಂಬುದಕ್ಕೆ ಈ ವಿಚಾರವನ್ನು ಕೇಳು ।।೩೫೯।। ಪಶುವಿಗೆ ಜಗಿದು ಒದ್ದರೆ ಅದು ಅದಕ್ಕಾಗಿ ದ್ವೇಷವನ್ನು ಮಾಡುವುದಿಲ್ಲ. ಆದರೆ ಮನುಷ್ಯನಿಗೆ ಕೇವಲ ''ನೀನು'' ಎಂದರೆ ಸಾಕು ಅವನು ಅದಕ್ಕಾಗಿ ಜೀವವನ್ನು ತೆಗೆದುಕೊಳ್ಳಲು ಸಿದ್ಧನಾಗುವನು ।।೩೬೦।। ಪಶುವಿಗೆ ಸಂಗ್ರಹ ಮಾಡುವ ಲೋಭವಿರುವುದಿಲ್ಲ. ಅದು ಹೊಟ್ಟೆ ತುಂಬಾ ತಿಂದು ಉಳಿದದ್ದು ಅಲ್ಲಿಯೇ ಬಿಟ್ಟು ಬಿಡುವುದು ।।೩೬೧।। ಆದರೆ ಮನುಷ್ಯನ ಲೋಭವು ಬಹು ದೊಡ್ಡದಾಗಿರುವುದು. ಕೋಟ್ಯಾಧಿ ಧನವಿದ್ದರೂ ಅವನು ತನ್ನ ಹೊಟ್ಟೆ ತುಂಬ ತಿನ್ನುವುದಿಲ್ಲ. ಹೀಗಿರಲು ಆ ಧನವನ್ನು ಕೊಡುವ ಪ್ರಸಂಗವು ಒದಗಲು ಅವನು ತನ್ನ ಪ್ರಾಣವನ್ನೇ ಬಿಟ್ಟು ಬಿಡುವನು ।।೩೬೨।। ಪಶುವಿಗೆ ಯಾವಾಗಲೂ ಮುಂಜಾನೆಯ, ಸಾಯಂಕಾಲದ ಯಾವ ವಿಚಾರವೂ ಇರುವುದಿಲ್ಲ. ಆದರೆ ಮನುಷ್ಯನ ವಿಚಾರವು ಜನ್ಮ ಜನ್ಮಕ್ಕೂ ಮುಗಿಯುವುದಿಲ್ಲ ।।೩೬೩।। ಮನುಷ್ಯನಲ್ಲಿ ಹೇರಳವಾಗಿ ಧನ ಸಂಪತ್ತು ಇದ್ದರೆ, ಅವನ ಮನದಲ್ಲಿ ಅನಿವಾರ್ಯವಾಗಿ ಚಿಂತೆಯು ಹುಟ್ಟಿಕೊಳ್ಳುವುದು. ಧನವು ಇಲ್ಲದ ಭಯವನ್ನು ಹುಟ್ಟಿಸುವುದು. ಸೃಷ್ಟಿಯಲ್ಲಿನ ಎಲ್ಲರನ್ನೂ ಅವಿಶ್ವಾಸ ಮಾಡುವನು ।।೩೬೪।। ಶರೀರವು ಮರಣೋನ್ಮುಖವಾಗಿದ್ದರೂ ಇವನು ತನ್ನ ಮನೆ ಮಾರು, ಹೊಲಗದ್ದೆಗಳ ವ್ಯವಹಾರವನ್ನು ಮಾಡುತ್ತಲೇ ಇರುವನು. ಮಕ್ಕಳು, ಮೊಮ್ಮಕ್ಕಳು ಸುಖವಾಗಿರಬೇಕೆಂದು ಬುನಾದಿಯನ್ನು ಬಿಗಿಯಾಗಿ ರಚಿಸಿ ಮನೆಯನ್ನು ಕಟ್ಟಿಸುವನು ।।೩೬೫।। ಇಂತಹ ದುರ್ಧರವಾದ ಚಿಂತೆಗಳು ಪಶುಗಳಿಗೆ ಇರುವುದೇ ಇಲ್ಲ. ಈಗ ಮೈಥುನದ ಕಥೆಯನ್ನು ಹೇಳುವೆನು, ಕೇಳು ।।೩೬೬।। ಪಶುಗಳು ಕೇವಲ ಋತುಕಾಲದಲ್ಲಿ ಮಾತ್ರ ಮೈಥುನ ಮಾಡುವುವು.ತದನಂತರ ಅವು ಹೆಣ್ಣುಗಳಿಗೆ ಸ್ಪರ್ಶ ಸಹ ಮಾಡುವುದಿಲ್ಲ. ಮನುಷ್ಯನು ಮಾತ್ರ ನಿತ್ಯದಲ್ಲಿಯೂ ಸ್ತ್ರೀಸಂಗವನ್ನು ಮಾಡುತ್ತಿರುವನು. ಗರ್ಭಿಣಿ ಸ್ತ್ರೀಯಳನ್ನೂ ಕೂಡ ಇವನು ಬಿಡುವುದಿಲ್ಲ ।।೩೬೭।। ಕಾಮ , ಕ್ರೋಧ, ಲೋಭ, ಚಿಂತೆ, ನಿಂದೆ, ಅತಿಗರ್ವ ಈ ಎಲ್ಲ ವಿಕಾರಗಳು ಮನುಷ್ಯನ ತಲೆಯ ಮೇಲಿರುವುವು. ಪಶುಗಳಿಗೆ ಇವು ಯಾವುವೂ ಎಂದೂ ಇರುವುದಿಲ್ಲ ।।೩೬೮।। ಆತ್ಮ ಜ್ಞಾನವನ್ನು ಮಾಡಿಕೊಳ್ಳದೇ ಯಾರು ಕೇವಲ ವಿಷಯೀಗಳಾಗಿರುವರೋ ಅವರು ನಾಯಿ ಹಂದಿಗಿಂತಲೂ ಹೀನರಾಗಿರುವರು. ಅವರಿಗೆ ಮನುಷ್ಯತನವೇ ಇಲ್ಲವೆಂದು ತಿಳಿಯಬೇಕು ।।೩೬೯।। ವಿಷಯ ಸುಖವೆಂಬುದು ಸ್ವರ್ಗದಲ್ಲಿಯೂ ನರಕದಲ್ಲಿಯೂ ಒಂದೇಯಾಗಿರುವುದು. ಇಲ್ಲಿ ಜೋಡಿ ನಾಯಿಗಳು ಯಾವ ವಿಷಯ ಸುಖವನ್ನು ಭೋಗಿಸುತ್ತಿರುವುವೋ ಅದೇ ವಿಷಯ ಸುಖವನ್ನು ಇಂದ್ರನು ಸ್ವರ್ಗದಲ್ಲಿ ಭೋಗಿಸುತ್ತಿರುವನು ।।೩೭೦।। ಮನುಷ್ಯ ದೇಹ ಒಂದು ಬಿಟ್ಟು ಇತರ ಎಲ್ಲ ಪಶು ಪಕ್ಷಿ ಇತ್ಯಾದಿ ಅನೇಕ ಯೋನಿಗಳಿರುವುವು. ಇವು ಎಲ್ಲವೂ ಕೇವಲ ವಿಷಯ ಭೋಗಗಳಿಗಾಗಿಯೇ ಇರುವುವು. ಆದರೆ ಮನುಷ್ಯ ದೇಹವು ಈ ವಿಷಯಗಳ ತ್ಯಾಗಕ್ಕಾಗಿಯೇ ಇರುವುದು ।।೩೭೧।।

ತೋ ನರದೇಹ ಕೈಸೇನಿ ಜೋಡೇ । ತೇ ಪ್ರಾಪ್ತೀಚೇ ಕಠಿಣ ಗಾಢೇ । ತೇ ಸಾಂಗೇನ ತುಜಪುಢೇ । ಪರಿಸ ನಿವಾಡೇ ವಿಭಾಗು ।।೩೭೨।। ಅತ್ಯಂತ ಸುಕೃತೇ ಸ್ವರ್ಗಾ ಚಢೇ । ಅತ್ಯಂತ ಪಾಪೇ ಅಧೋಗತೀ ಘಡೇ । ಪಾಪಪುಣ್ಯ ನಿಃಶೇಷ ಝಡೇ । ತೈ ಆತುಡೇ ನಿಜಮುಕ್ತಿ ।।೩೭೩।। ಜೈ ಪಾಪಪುಣ್ಯ ಸಮಾನ ಸಮೀ । ತೈ ಮನುಷ್ಯ ದೇಹ ಆಕ್ರಮೀ । ಜನ್ಮ ಪಾವೇ ಕರ್ಮಭೂಮೀ । ಆಶ್ರಮ ಧರ್ಮೀ ಸುಮೇಧಾ ।।೩೭೪।। ಸಾಕ್ಷೇಪೇ ಮನುಷ್ಯದೇಹ ಜೋಡೇ । ಐಸೇ ಕರಿತಾ ತಂವ ನ ಘಡೇ । ಅವಚಟ ಹಾತಾ ಚಢೇ । ಭಾಗ್ಯ ಚೋಖಡೇ ಜಯಾಚೇ ।।೩೭೫।। ಮೋಲೇ ಅನರ್ಘ್ಯ ರತ್ನೇಯೇತೀ । ತೈಸಾ ಚಿಂತಾಮಣೀ ನ ಯೇ ಹಾತೀ । ಬಹುತ ಯೋನಿಯೇ ಜನ್ಮ ಹೋತೀ । ಪರೀ ಮನುಷ್ಯ ದೇಹಪ್ರಾಪ್ತೀ ದುರ್ಲಭ ।।೩೭೬।। ಐಸಾ ನರದೇಹ ಪಾವೋನಿ ದೇಖ । ಜೋ ನ ಸಾಧೀಚಿ ಬ್ರಹ್ಮಸುಖ । ತೋ ಜನಾಮಾಜೀ ಪರಮ ಮೂರ್ಖ । ವಿಶ್ವಾಸಘಾತಕ ದೇವಾಚಾ ।।೩೭೭।। ನಿಜಾತ್ಮಾ ಪ್ರಾಪ್ತೀ ಲಾಗೋನಿ । ಜೀವೇ ಕೇಲೀ ಮನುಷ್ಯಯೋನೀ । ತೋ ದೇವಾಚಾ ವಿಶ್ವಾಸ ಬುಡವೋನೀ । ವಿಷಯ ಸೇವನೀ ನಿಜಪತನ ।।೩೭೮।। ಹೋತೇ ಪಿತರಾಂಚೇ ಮನೋಗತ । ಪುತ್ರ ಹೋಈಲ ಹರಿಭಕ್ತ । ಕುಳ ಉದ್ಧರೀಲ ಸಮಸ್ತ । ವಿಷಯೀ ಪ್ರತಿಹತ ತೇ ಕೇಲೇ ।।೩೭೯।। ಹೋ ಕಾ ಸಕಳ ಭಾಗ್ಯಾಚೇ ಫಳ । ಮನುಷ್ಯ ದೇಹ ಗಾ ಕೇವಳ । ತೇ ಕರಾವಯಾ ಸಫಳ । ವೈರಾಗ್ಯ ಅಢಳ ಮ್ಯಾ ಕೇಲೇ ।।೩೮೦।।

ಏವಂ ಸಂಜಾತ ವೈರಾಗ್ಯೋ ವಿಜ್ಞಾನಾಲೋಕ ಆತ್ಮನಿ । ವಿಚರಾಮಿ ಮಹಿಮೇತಾಂ ಮುಕ್ತಸಂಗೋಽನ ಹಂಕೃತಃ ।। ೩೦।।

ಅರ್ಥ:- ಹೇ ರಾಜನೇ, ಹೀಗೆ ವಿಚಾರ ಮಾಡಿ ನನಗೆ ಜಗತ್ತಿನಿಂದ ವೈರಾಗ್ಯವು ನಿರ್ಮಾಣವಾಯಿತು. ನನ್ನ ಹೃದಯದಲ್ಲಿ ಜ್ಞಾನವಿಜ್ಞಾನದ ಜ್ಯೋತಿಯು ಪ್ರಕಾಶಿಸುತ್ತಿರುವುದು. ನನಗೆ ಯಾವುದರಲ್ಲಿಯೂ ಆಸಕ್ತಿಯು ಇರುವುದಿಲ್ಲ. ಯಾವ ಪ್ರಕಾರದ ಅಹಂಕಾರವೂ ಇಲ್ಲ. ನಾನು ಸ್ವಚ್ಛಂದದಿಂದ ಈ ಭೂಮಿಯಲ್ಲಿ ಸಂಚರಿಸುತ್ತಿರುತ್ತೇನೆ.

ದೇಹೋ ನಿಜಾತ್ಮ ಸಾಧನೀ ಸಾಧಕ । ತೋಚಿವಿಷಯಭೋಗೀ ಬಾಧಕ । ಐಸೇ ದೇಖೋನಿಯಾ ದೇಖ । ಕೇಲೇನಿಷ್ಟಂಕ ವೈರಾಗ್ಯ ।। ೩೮೧।। ತ್ಯಾ ವೈರಾಗ್ಯಾಚೇನಿ ಬಳೇ । ಗುರುಕೃಪಾವಚನ ಮೇಳೇ । ವಿಷಯ ಇಂದ್ರಿಯಾಂಚೇ ಪಾಳೇ । ಏಕೇಚಿ ವೇಳೇ ವಿಭಾಂಡಿಲೇ ।।೩೮೨।। ಅವಿದ್ಯಾ ಜಂವ ಧ್ಯಾವೀ ಜೀವೇ । ತಂವ "ಅವಿದ್ಯಾ"ಯೇಣೇ ನಾಂವೇ । ಸ್ವಾಂಗೇ ಮೀ ವಿದ್ಯಮಾನ ನೋಹೇ । ಹೇಹೀ ಅನುಭವೇ ಜಾಣತಲೇ ।।೩೮೩।।

ಇಂತಹ ಮನುಷ್ಯ ದೇಹವು ಹೇಗೆ ಪ್ರಾಪ್ತವಾಗುವುದು? ಏಕೆಂದರೆ ಮನುಷ್ಯ ದೇಹವು ಪ್ರಾಪ್ತವಾಗುವುದು ಅತ್ಯಂತ ಕಠಿಣವಾಗಿರುತ್ತದೆ. ನಿನಗೀಗ ನಾನು ಇದನ್ನು ತಿಳಿಸುವೆ, ಸರಿಯಾಗಿ ಕೇಳು ।।೩೭೨।। ಜೀವಕ್ಕೆ ಅತಿಶಯ ಪುಣ್ಯದಿಂದ ಸ್ವರ್ಗವು ಸಿಗುವುದು. ಮತ್ತು ಅತಿಶಯ ಪಾಪದಿಂದ ಪಶುಪಕ್ಷ್ಯಾದಿ ಹೀನ ಯೋನಿಗಳು ಪ್ರಾಪ್ತವಾಗುವುವು. ಪುಣ್ಯ ಮತ್ತು ಪಾಪ ಇವು ಸಮಾನವಾದಾಗ ಮನುಷ್ಯ ದೇಹವು ಲಭಿಸುವುದು. ಪುಣ್ಯ ಪಾಪಗಳೆರಡೂ ಮುಕ್ತಾಯಗೊಳ್ಳಲು ಆಗ ಮುಕ್ತಿಯು ದೊರೆಯುವುದು ।।೩೭೩।। ಹೀಗೆ ಪಾಪ ಪುಣ್ಯಗಳು ಸಮಾನವಾದಾಗ ಜೀವವು ಮನುಷ್ಯದೇಹವನ್ನು ಪಡೆದು ಈ ಮೃತ್ಯುಲೋಕದಲ್ಲಿ ಬರುವುದು. ಆ ಸಮಯದಲ್ಲಿ ಬುದ್ಧಿವಂತನಾದವನು ತನ್ನ ಆಶ್ರಮ ಧರ್ಮವನ್ನು ಪಾಲಿಸುವನು ।।೩೭೪।। ಮನುಷ್ಯ ದೇಹವು ಪ್ರತಿಸಾರಿಯೂ ಸಿಗುವುದೆಂಬುದಕ್ಕೆ ಯಾವ ಭರವಸೆಯೂ ಇಲ್ಲ. ಮಹಾಭಾಗ್ಯವಂತನಿಗೆ ಮಾತ್ರ ಮನುಷ್ಯ ದೇಹವು ಆಕಸ್ಮಾತ್ತಾಗಿ ಪ್ರಾಪ್ತವಾಗುವುದು ।।೩೭೫।। ಉತ್ತಮ ಪ್ರಕಾರದ ರತ್ನಗಳನ್ನು ಅದರ ಬೆಲೆಯನ್ನು ಕೊಟ್ಟುಕೊಳ್ಳಲು ಬರುವುದು. ಚಿಂತಾಮಣಿಯನ್ನು ಅದರಂತೆ ಕೊಳ್ಳಲು ಬರುವುದಿಲ್ಲ. ಅದರಂತೆ ಅನೇಕ ಯೋನಿಗಳಲ್ಲಿ ಜನ್ಮ ಧರಿಸಲು ಬರುವುದು. ಆದರೆ ಮನುಷ್ಯ ದೇಹವು ದೊರೆಯುವುದು ಅತ್ಯಂತ ದುರ್ಲಭವಾಗಿರುವುದು ।।೩೭೬।। ಇಂತಹ ಅಮೌಲ್ಯವಾದ ನರದೇಹವು ಪ್ರಾಪ್ತವಾಗಿದ್ದರೂ ಕೂಡ ಯಾರು ಬ್ರಹ್ಮಾನಂದವನ್ನು ಪಡೆಯಲಾರರೋ, ಅವರು ಜಗತ್ತಿನಲ್ಲಿ ಮಹಾಮೂರ್ಖರೇ ಸರಿ. ದೇವರಿಗೆ ವಿಶ್ವಾಸಘಾತಕತನವನ್ನು ಇವರು ಮಾಡಿದವರಾಗುವರು ।।೩೭೭।। ಆತ್ಮಜ್ಞಾನದ ಪ್ರಾಪ್ತಿಗಾಗಿಯೇ ಭಗವಂತನು ಈ ಮನುಷ್ಯ ದೇಹವನ್ನು ನಿರ್ಮಿಸಿರುವನು. ಆದರೆ ಆ ದೇವರ ವಿಶ್ವಾಸನ್ನು ಶೂನ್ಯಗೊಳಿಸಿ, ವಿಷಯಗಳ ಸೇವನೆಯಿಂದ ತಮ್ಮ ಅಧಃಪಾತವನ್ನು ಮಾಡಿಕೊಳ್ಳುವರು ।।೩೭೮।। ನಮ್ಮ ಪುತ್ರನು ಹರಿಭಕ್ತನಾಗಿ ನಮ್ಮ ಕುಲವನ್ನು ಉದ್ಧರಿಸುವನು ಎಂದು ಅವನ ತಂದೆ - ತಾಯಿಯವರು ಯಾವಾಗಲೂ ಇಚ್ಛಿಸುತ್ತಿರುವರು. ಆದರೆ ಈ ಪುತ್ರರು ವಿಷಯಾಸಕ್ತರಾಗಿ ಅವರ ಇಚ್ಛೆಯನ್ನು ಭಂಗಗೊಳಿಸುವರು ।।೩೭೯।। ಈ ಮನುಷ್ಯ ದೇಹವು ಸರ್ವಭಾಗ್ಯದ ಫಲವಾಗಿರುವುದು. ಇದನ್ನು ಸಫಲಗೊಳಿಸಲು ನಾನು ದೃಢವಾದ ವೈರಾಗ್ಯವನ್ನು ಧರಿಸಿದೆನು ।।೩೮೦।।

ಆತ್ಮ ಸಾಧನೆಯನ್ನು ಮಾಡಲು ಈ ದೇಹವು ಸಾಧನವಾಗಿರುವುದು. ಆದರೆ ವಿಷಯಭೋಗಗಳಿಂದ ಇದೇ ದೇಹವು ಬಾಧಕವಾಗುವುದು. ಹೀಗೆ ನಾನು ಅರಿತುಕೊಂಡು ನಿಶ್ಚಯಪೂರ್ವಕವಾಗಿ ವೈರಾಗ್ಯವನ್ನು ತಾಳಿದೆನು ।।೩೮೧।। ಈ ಯಾವ ವೈರಾಗ್ಯದ ಬಲದಿಂದ ಮತ್ತು ಗುರುಕೃಪೆಯ ವಚನಗಳ ಸಹಾಯದಿಂದ ವಿಷಯಗಳ ಮತ್ತು ಇಂದ್ರಿಯಗಳ ಒಂದೇ ಹೊಡೆತಕ್ಕೆ ವಿಭಾಗಿಸಿ ಬೇರೆ ಬೇರೆ ಮಾಡಿದೆನು ।।೩೮೨।। ಜೀವನು ಅವಿದ್ಯೆಯನ್ನು ಸ್ವೀಕರಿಸಿದರೆ ಕೂಡಲೇ ಅವನು ಅವಿದ್ಯಾವಾನನಾಗುವನು. ಮತ್ತು ನಾನು ಯಾವಾಗಲೂ ವಿದ್ಯಮಾನನಲ್ಲನೆಂದು ಹೇಳುವನು. ಇದನ್ನು ನಾನು ಅನುಭವದಿಂದ ತಿಳಿದುಕೊಂಡಿರುವೆನು ।।೩೮೩।।

ಐಶೀ ಮಿಥ್ಯಾತ್ವೇ ಅವಿದ್ಯಾ ಆತಾ । ಚಿತ್ಪ್ರಕಾಶ ಪೂರ್ಣ ಲಾಭೇ ಹಾತಾ । ತೇಣೇ ಸ್ವದೇಹಸ್ಥ ಅಹಂತಾ । ಗೇಲೀ ಸರ್ವಥಾ ನಿಃಶೇಷ ॥೩೮೪॥ ಜ್ಞಾನಸಾಧನ ಜೋ ನಿಜದೇಹೋ । ತಯಾಚ್ಯಾ ಠಾಯೀ ವೈರಾಗ್ಯ ಪಹಾ ಹೋ । ಮಾ ದೇಹಸಂಬಂಧಾಚಾ ಸ್ನೇಹೋ । ಕೈಸೇನಿ ರಾಹೋ ಶಕೇಲ ॥೩೮೫॥ ಐಸೇನಿ ಅನುಭವೇ ಪಾಹೀ । ನಿಃಸಂಗ ಮೀ ವಿಚರೇ ಮಹೀ । ಅಹಂತಾ ಸ್ವದೇಹೀ ನಾಹೀ । ಪುಸಿಲೇ ತೇ ಪಾಹೀ ಸಾಂಗಿತಲೇ ರಾಯಾ ॥೩೮೬॥ ಜೈ ಪುರುಷಾಸೀ ಅಹಂತಾ ಗಳೇ । ತೈ ದೇಹ ಅದೃಷ್ಟಯೋಗೇಚಳೇ । ಜೇವೀ ಸುಕಲೇ ಪಾನ ವಾಯುಬಳೇ । ಪಡಿಲೇ ಲೋಳೇ ಸರ್ವತ್ರ ॥೩೮೭॥ ಯಾಲಾಗೀ ಬ್ರಹ್ಮಸಾಕ್ಷಾತ್ಕಾರಾ । ವೃತ್ತಿ ಲಯ ಪಾವೇ ಜಂವ ವೀರಾ । ತಂವವರೀ ಜೋ ವೈರಾಗ್ಯೇ ಖರಾ । ಅಭಂಗ ಪುರಾ ಪುರುಷಾರ್ಥೀ ತೋ ॥೩೮೮॥ ಮ್ಹಣಸೀ ಏಕಾ ಗುರೂಚೇ ಠಾಯೀ । ತುಜ ಸರ್ವಥಾ ವಿಶ್ವಾಸ ನಾಹೀ । ಯೇ ಅರ್ಥೀ ಸಾವಧ ಹೋಈ । ವಿಶದ ಪಾಹೀ ಸಾಂಗೇನ ॥೩೮೯॥ ಗುರೂನೇ ಸಾಂಗತಾಂಚಿ ಕಾನೀ । ಜ್ಯಾಚೀ ವೃತ್ತಿ ಜಾಯ ವಿರೋನಿ । ಜೇವೀ ಮಿಳತಾ ಲವಣಪಾಣೀ । ಅಭಿನ್ನಪಣೇ ಸಮರಸೇ ॥೩೯೦॥ ಕೇಲ್ಯಾಸೀ ಸಾಧಕಬಾಧಕತಾಬಾಧ । ಹೇ ಬೋಲಣೇ ಅತಿಅಬದ್ಧ । ಜೇವೀ ನಿಮಾಲಿಯಾಸೀ ಔಖದ । ನ ಪಾಜವೇ ದುಗ್ಧ ಗರ್ಭಸ್ಥಾ ॥೩೯೧॥ ಯಾಪರೀ ತ್ಯಾಸೀ ಕರ್ತವ್ಯತಾ । ನಾಹೀ ನಾಹೀ ಗಾ ಸರ್ವಥಾ । ಪರಿ ಐಶೀ ಹೇ ಅವಸ್ಥಾ । ಜ್ಯಾಸೀ ತತ್ತ್ವತಾ ನ ಲಭೇಚಿ ॥೩೯೨॥ ಗುರುನೇ ಸಾಂಗಿತಲೇ ಕಾನೀ । ಸ್ವರೂಪಾವ ಬೋಧ ಝಾಲಾ ಮನೀ । ಪರಿ ತೇ ನ ರಾಹೇಚಿ ನಿಶ್ಚಳಪಣೀ । ಬಾಹ್ಯದರ್ಶನೀ ವಿಕ್ಷೇಪು ॥೩೯೩॥ ಆಸನೀ ಬೈಸಲ್ಯಾ ಸ್ವರೂಪಸ್ಥಿತೀ । ಆಸನ ಸೋಡಿಲ್ಯಾ ಪ್ರಪಂಚ ಸ್ಫೂರ್ತೀ । ಐಶೀ ಏಕದೇಶೀ ಸ್ಥಿತೀ । ನಾತಳತೀ ನಿಜಯೋಗೀ ॥೩೯೪॥ ದೇಹ ಆಸನೀ ನಿಶ್ಚಳ । ಅಥವಾ ಕರ್ಮೀ ಹೋ ಚಂಚಳ । ಪರಿ ವೃತ್ತಿ ಸರ್ವದಾ ನಿಶ್ಚಳ । ತೇಚೀ ನಿರ್ಮಳ ನಿಜಯೋಗೀ ॥೩೯೫॥ ಪರಶುರಾಮೇಸೀ ರಣಾಂಗಣೀ । ಭೀಷ್ಮ ಭಿಡಲಾ ನಿರ್ವಾಣಬಾಣೀ । ತೋಡರೀ ಘಾತಿಲಾ ಜಿಣೋನೀ । ವೃತ್ತಿ ಸಮಾಧಾನೀ ಅಚಂಚಳ ॥೩೯೬॥ ಕರಿತಾ ನಿರ್ವಾಣಯುದ್ಧೀ । ಜ್ಯಾಚೀ ನ ಮೋಡೇ ಸಮಾಧೀ । ಹೇಚಿ ಸಾಧಾವಯಾ ತ್ರಿಶುದ್ಧೀ । ಚೋವೀಸ ಗುರು ವಿಧೀ ವಂದಿಲೇ ಮ್ಯಾ ॥೩೯೭॥ ದೇಹನಿಶ್ಚಳತ್ವೇ ವೃತ್ತಿ ನಿಶ್ಚಳ । ದೇಹಚಂಚಳತ್ವೇ ವೃತ್ತಿ ಚಂಚಳ । ತರೀ ತೇ ದೇಹಬುದ್ಧೀಚಿ ಸಬಳ । ನವ್ಹೇ ಕೇವಳ ನಿಜಬೋಧು ॥೩೯೮॥

ಹೀಗೆ ಮಿಥ್ಯತ್ವದಿಂದ ಅವಿದ್ಯೆಯು ನಾಶವಾಯಿತು. ಆದ್ದರಿಂದ ಚಿತ್‌ಪ್ರಕಾಶದ ಪೂರ್ಣ ಲಾಭವಾಯಿತು. ಹೀಗಾಗಲು ದೇಹದಲ್ಲಿರುವ ಅಹಂಕಾರವು ಸಂಪೂರ್ಣವಾಗಿ ಹೊರಟುಹೋಯಿತು ॥೩೮೪॥ ಜ್ಞಾನದ ಸಾಧನೆಯಾಗಿರುವ ತನ್ನ ದೇಹಕ್ಕೆ ವಿರಕ್ತಿಯು ಬರಲು ಆಗ ದೇಹದ ಮಮತೆಯಾದರೂ ಹೇಗೆ ಉಳಿದೀತು? ॥೩೮೫॥ ಈ ಅನುಭವದಿಂದ ನಾನು ನಿಃಸಂಗನಾಗಿ ಪೃಥ್ವಿಯ ಮೇಲೆ ಸಂಚಾರವನ್ನು ಮಾಡುತ್ತಿದ್ದೇನೆ. ನನ್ನ ಅಹಂಕಾರವು ಉಳಿದಿರುವುದೇ ಇಲ್ಲ. ಹೇ ರಾಜನೇ, ನೀನು ಕೇಳಿದ್ದನ್ನು ನಾನು ಹೇಳಿರುವೆನು ॥೩೮೬॥ ಒಣಗಿದ ಎಲೆಗಳು ಗಾಳಿ ಬೀಸಿದಂತೆ ಅಲ್ಲಲ್ಲಿ ಧಾವಿಸುತ್ತಿರುವುವು. ಅದರಂತೆ ಮನುಷ್ಯನ ಅಹಂಕಾರವು ಇಲ್ಲದಾಗಲು ಆಗ ದೈವಯೋಗದಂತೆ ದೇಹವು ಚಲಿಸುತ್ತಿರುವುದು ॥೩೮೭॥ ಅದಕ್ಕಾಗಿ ಹೇ ವೀರ ಶ್ರೇಷ್ಠನೇ, ಎಲ್ಲಿಯವರೆಗೆ ಆತ್ಮತತ್ವದಲ್ಲಿ ವೃತ್ತಿಯು ಲೀನವಾಗುವುದಿಲ್ಲವೋ ಅಲ್ಲಿಯವರೆಗೂ ದೃಢವಾದ ವೈರಾಗ್ಯದಿಂದ ಇರುವವರೇ ನಿಜವಾದ ಸ್ಥಿರ ಪುರುಷಾರ್ಥಿಗಳಾಗಿರುವರು ॥೩೮೮॥ ನನ್ನಲ್ಲಿ ಒಂದು ಗುರುವಿನಲ್ಲಿಯೂ ವಿಶ್ವಾಸವಿಲ್ಲವೆಂದು ನೀನು ಹೇಳಬಹುದು. ಅದಕ್ಕಾಗಿಯೂ ಸ್ಪಷ್ಟಮಾಡಿ ಹೇಳುವೆನು. ನೀನೀಗ ಚಿತ್ತವನ್ನು ಸ್ಥಿರಗೊಳಿಸಿ ಕೇಳು ॥೩೮೯॥ ಉಪ್ಪು ನೀರಿನಲ್ಲಿ ಬಿದ್ದಾಕ್ಷಣಕ್ಕೆ ಅದು ನೀರಿನಲ್ಲಿ ಕರಗಿ ಏಕರೂಪವಾಗುವುದು. ಅದರಂತೆ ಗುರುವಾಕ್ಯವು ಕಿವಿಗೆ ಬಿದ್ದಾಕ್ಷಣವೇ ವೃತ್ತಿಯು ಕರಗಿ ಹೋಯಿತೆಂದರೆ ॥೩೯೦॥ ಆತನಿಗೆ ಸಾಧಕ ಬಾಧಕಗಳಿಂದ ಪೀಡೆಯಾಗುವುದೆಂದು ಹೇಳುವುದು ಅಸಂಬದ್ಧವಾಗುವುದು. ಸತ್ತವನಿಗೆ ಔಷಧ ಕೊಡಲು ಬರುವುದಿಲ್ಲ ಅಥವಾ ಗರ್ಭದಲ್ಲಿರುವ ಕೂಸಿಗೆ ಹಾಲು ಕುಡಿಸಲು ಬರುವುದಿಲ್ಲ ॥೩೯೧॥ ಈ ಪ್ರಕಾರವಾಗಿ ಆತನಿಗೆ ಕರ್ತವ್ಯವೆಂಬುದು ಏನೂ ಉಳಿದಿರುವುದಿಲ್ಲ. ಆದರೆ ಇಂತಹ ಅವಸ್ಥೆಯು ಎಲ್ಲರಿಗೂ ಪ್ರಾಪ್ತವಾಗುವುದಿಲ್ಲ ॥೩೯೨॥ ಗುರುಗಳು ಕಿವಿಯಲ್ಲಿ ಮಂತ್ರವನ್ನು ಉಚ್ಚರಿಸಿ ಮತ್ತು ಆದರಿಂದ ಆತ್ಮಸ್ವರೂಪದ ಬೋಧೆಯಾದರೂ ಆತನ ಮನಸ್ಸು ನಿಶ್ಚಲವಾಗಿ ಇರುವುದಿಲ್ಲ. ಬಾಹ್ಯ ವಿಷಯಗಳತ್ತ ಲಕ್ಷ ಹೋಗಲು ಅದು ವಿಕ್ಷೇಪವಾಗುವುದು ॥೩೯೩॥ ಆಸನವನ್ನು ಹಾಕಿ ಕುಳಿತುಕೊಳ್ಳಲು ಆತ್ಮಸ್ವರೂಪದ ಪ್ರಾಪ್ತಿಯಾಗುವುದು ನಿಜ. ಆದರೆ ಆಸನವನ್ನು ಬಿಟ್ಟು ಏಳಲು ಪ್ರಪಂಚದ ವಿಚಾರಗಳು ಮನದಲ್ಲಿ ಸುಳಿದಾಡುವುವು. ಹೀಗೆ ಏಕದೇಶೀಯ ಸ್ಥಿತಿಯು ನಿಜವಾದ ಯೋಗಿಗಳಿಗೆ ಎಂದೂ ಒದಗುವುದಿಲ್ಲ ॥೩೯೪॥ ದೇಹವು ಆಸನದಲ್ಲಿ ಸ್ಥಿರಗೊಂಡಿರಲಿ ಅಥವಾ ಕರ್ಮಗಳಲ್ಲಿ ವರ್ತಿಸುತ್ತಿರಲಿ, ಆದರೂ ಯಾರ ವೃತ್ತಿಯು ಸರ್ವ ಕಾಲಕ್ಕೂ ನಿಶ್ಚಲವಾಗಿರುವುದೋ, ಆತನೇ ನಿರ್ಮಲನಾದ ಆತ್ಮಯೋಗಿಯಾಗಿರುವನು ॥೩೯೫॥ ರಣರಂಗದಲ್ಲಿ ಭೀಷ್ಮನು ಪರಶುರಾಮನ ಎದುರಾಳಿಯಾಗಿ ನಿಂತುಯುದ್ಧಮಾಡುತ್ತ ಆತನ ಮೇಲೆ ನಿರ್ವಾಣೆಯ ಬಾಣವನ್ನು ಬಿಟ್ಟು ಆತನನ್ನು ಜಿದ್ದಿನಿಂದ ಗೆದ್ದನು. ಆದರೂ ಭೀಷ್ಮನ ಸಮಾನ ವೃತ್ತಿಯಲ್ಲಿ ಅಂತರವಾಗಲಿಲ್ಲ. ಈತನು ಸಮಾಧಾನದಿಂದ ಪೂರ್ಣ ಸ್ಥಿರನಾಗಿದ್ದನು ॥೩೯೬॥ ನಿರ್ವಾಣ ಯುದ್ಧದಂತಹ ಘೋರವಾದ ಕರ್ಮಗಳಲ್ಲಿಯೂ ಕೂಡ ಸಮಾಧಿಯು ಭಂಗಗೊಳ್ಳದಿರುವುದನ್ನೇ ನಿಜವಾಗಿ ಸಾಧಿಸುವುದಕ್ಕಾಗಿಯೇ ನಾನು ಇಪ್ಪತ್ನಾಲ್ಕು ಗುರುಗಳವರಿಗೆ ವಿಧಿಪೂರ್ವಕವಾಗಿ ವಂದಿಸಿದೆನು ॥೩೯೭॥ ದೇಹವು ನಿಶ್ಚಲವಾಗಲು ವೃತ್ತಿಯು ನಿಶ್ಚಲವಾಗುವಿಕೆ, ಮತ್ತು ದೇಹವು ಚಂಚಲವಾಗಲು ವೃತ್ತಿಯೂ ಸಹ ಚಂಚಲವಾಗುವಿಕೆ, ಹೀಗಾಯಿತೆಂದರೆ ಆತನಲ್ಲಿ ದೇಹಬುದ್ಧಿಯು ಬಲಿಷ್ಠವಾಗಿರುವುದೆಂದು ತಿಳಿಯಬೇಕು. ಅದು ದೃಢವಾದ ಆತ್ಮಬೋಧೆಯಾಗಲಾರದು ॥೩೯೮॥

ಹೋತಾ ಪ್ರಪಂಚದರ್ಶನ । ವೃತ್ತೀಸೀ ವಿಕ್ಷೇಪ ಹೋಯ ಜಾಣ । ತೋ ವಿಕ್ಷೇಪ ಕರಾವಯಾ ಛೇದನ । ಬಹುಗುರುಸಾಧನ ಮ್ಯಾ ಕೇಲೇ ।೩೯೯॥ ನಿಜಗುರೂನೀ ಸಾಂಗಿತಲ್ಯಾ ಅರ್ಥಾ । ತ್ಯಾ ಸಾಧಾವಯಾ ಪರಮಾರ್ಥಾ ।ನಾನಾ ಪ್ರಪಂಚಪದಾರ್ಥಾ ಗುರುಸಂಸ್ಥಾ ಮ್ಯಾ ಕೇಲೀ ।೪೦೦॥ ಜೇಥೋನಿಯಾ ವಿಕ್ಷೇಪತಾ । ತೇಚಿ ಲಾವಿಲೀ ಗುರುತ್ವಪಥಾ । ಐಸೇನಿ ಸಾಧನೇ ಸಾಧಿತಾ । ಜಗ ಸ್ವಭಾವತಾ ಪರಬ್ರಹ್ಮ ॥೪೦೧॥ ಪೂರ್ವೀ ಗುರೂನಿ ಬೋಧಿಲೇ ನಾಹೀ । ತರೀ ಪೃಥ್ವ್ಯಾದಿಕೇ ಬೋಧಿತೀಲ ಕಾಯೀ । ತೋಚಿ ನಿಜಾರ್ಥ ಸಾಧಾವಯಾ ಪಾಹೀ । ಗುರು ಉಪಾಯೀ ಪ್ರವರ್ತಲೋ ॥೪೦೨॥

ನ ಹ್ಯೇಕಸ್ಮಾದ್ ಗುರೋರ್ಜ್ಞಾನಂ ಸುಸ್ಥಿರಂ ಸ್ಯಾತ್ ಸುಪುಷ್ಕಲಮ್ । ಬ್ರಹ್ಮೈತದದ್ವಿತೀಯಂ ವೈ ಗೀಯತೇ ಬಹುಧರ್ಷಿಭಿಃ ॥೩೧॥

ಅರ್ಥ:- ಹೇ ರಾಜನೇ, ಕೇವಲ ಗುರುವಾಕ್ಯದಿಂದ ಸಂಪೂರ್ಣ ಬೋಧವಾಗುವುದಿಲ್ಲ. ತನ್ನ ಬುದ್ಧಿಯಿಂದ ಅನೇಕ ವಿಷಯಗಳನ್ನು ತಿಳಿದುಕೊಳ್ಳುವ ಅವಶ್ಯಕತೆವಿರುವುದು. ಋಷಿಗಳು ಅದ್ವಿತೀಯ ಬ್ರಹ್ಮವನ್ನು ಅನೇಕ ಪ್ರಕಾರಗಳಿಂದ ವರ್ಣಿಸಿರುವರು. ಆದಕ್ಕಾಗಿ ನೀವು ವಿಚಾರಮಾಡಿ ಬ್ರಹ್ಮದ ನಿರ್ಣಯವನ್ನು ಮಾಡದಿದ್ದರೆ, ಅದರ ನಿಜಸ್ವರೂಪವು ತಿಳಿಯಲಾರದು.

ಗುರೂನೇ ಸಾಂಗಿತಲೇ ಜ್ಞಾನ । ಹೃದಯೀ ಪ್ರಕಾಶಲೇ ಚಿದ್ಘನ । ತೇ ವಿದ್ಯುತ್ಪ್ರಾಯ ಚಂಚಳ ಜಾಣ । ಸ್ಥೈರ್ಯಪಣ ತ್ಯಾ ನಾಹೀ ॥೪೦೩॥ ಜೇ ಮೂಳೀಂಚಿ ಚಂಚಳ । ತೇ ಕದಾ ನವ್ಹೇ ಪುಷ್ಕಳ । ಕ್ಷಣಾ ಭಾಸೇ ಕ್ಷಣಾ ಚಪಳ । ತೇಣೇ ತಳಮಳ ಸಾಧಕಾ ॥೪೦೪॥ ಜೈಸೇ ಮುಖೀಚೇ ಆಮಿಷ ಜಾಯೇ । ತೇಣೇ ಸರ್ಪ ಡಂವಖಾಈಲಾ ರಾಹೇ । ತೈಸೀ ವೇದನಾ ಸಾಧಕಾ ಹೋಯೇ । ವಿಯೋಗು ನ ಸಾಹೇ ಸರ್ವಥಾ ॥೪೦೫॥ ಯೇರವೀ ಬ್ರಹ್ಮ ಅದ್ವಿತೀಯ ನಿತ್ಯ । ಹೇ ಸಕಳ ಋಷೀಂಚೇ ಸಮ್ಮತ । ತ್ಯಾಂಸಿಹೀ ಪುಸೋ ಜಾತಾ ಬಹುತ । ವಿಕ್ಷೇಪ ತೇಥ ಉಠತೀ ॥೪೦೬॥ ಏಕ ಮ್ಹಣತೀ ಬ್ರಹ್ಮ ಸಗುಣ । ಏಕ ಮ್ಹಣತೀ ತೇ ನಿರ್ಗುಣ । ಐಸೇ ವಾದ ಕರಿತೀ ದಾರುಣ । ಯುಕ್ತಿ ಖಂಡಣ ಅಭಿಮಾನೇ ॥೪೦೭॥ ಏಕ ಮ್ಹಣತೀ ಬ್ರಹ್ಮ ಸಪ್ರಪಂಚ । ಏಕ ಮ್ಹಣತೀ ನಿಷ್ಪ್ರಪಂಚ । ಮಿಳೋನಿಯಾ ಪಾಂಚಪಾಂಚ । ಶಬ್ದಕಚಕಚ ವಾಢವಿತೀ ॥೪೦೮॥ ಪ್ರಪಂಚದರ್ಶನೇ ವಿಕ್ಷೇಪತಾ । ತೇಥ ಸಾಧಾವಯಾ ನಿಜಐಕ್ಯತಾ । ಸುಬುದ್ಧೀನೇ ನಾನಾ ಪದಾರ್ಥಾ । ಗುಣಗ್ರಾಹಕತಾ ಗುರುರೂಪೇ ॥೪೦೯॥ ತೇಥ ಸಾಧಕಾಂಚೇ ಪ್ರಶ್ನ । ಸಹಸಾ ನ ಪವತೀ ಸಮಾಧಾನ । ಯಾಲಾಗೀ ಪುಸಾವಯಾ ಮನ । ನ ರಿಘೇ ಜಾಣ ತೇ ಠಾಯೀ ॥೪೧೦॥

ಪ್ರಪಂಚವನ್ನು ನೋಡಲು ವೃತ್ತಿಗೆ ವಿಕ್ಷೇಪವು ಪ್ರಾಪ್ತವಾಗುವುದು. ಅದನ್ನು ಮುರಿದೊಗೆಯಲು ನಾನು ಅನೇಕ ಗುರುಗಳನ್ನೇ ಸಾಧನೆಯನ್ನಾಗಿ ಮಾಡಿಕೊಂಡೆನು ।೩೯೯॥ ನಿಜಗುರುಗಳು ಹೇಳಿಕೊಟ್ಟಿರುವ ಪರಮಾರ್ಥವನ್ನು ಸಾಧಿಸುವುದಕ್ಕಾಗಿಯೇ ಪ್ರಪಂಚದಲ್ಲಿನ ಅನೇಕ ಪದಾರ್ಥಗಳಿಗೆ ನಾನು ಗುರುಪದವನ್ನು ಕೊಟ್ಟಿರುವೆನು ।೪೦೦॥

ಯಾವುದರಿಂದ ವಿಕ್ಷೇಪವು ಉಂಟಾಗುವುದೋ, ಅದಕ್ಕೇನೇ ನಾನು ಗುರುತ್ವವನ್ನು ಕೊಟ್ಟೆನು. ಇಂತಹ ಸಾಧನೆಗಳಿಂದ ಆತ್ಮಬೋಧೆಯು ಸಾಧಿಸುತ್ತಲೇ ಸರ್ವ ಜಗತ್ತು ಪರಬ್ರಹ್ಮಮಯವಾಗಿ ತೋರಹತ್ತಿತು ।೪೦೧॥ ಪೂರ್ವದಲ್ಲಿ ಗುರುಗಳು ನನಗೆ ಬೋಧೆಯನ್ನು ಮಾಡದೇ ಇದ್ದರೆ ಪೃಥ್ವಿ ಇತ್ಯಾದಿ ಯಾವ ವಸ್ತುಗಳು ನನ್ನನ್ನು ಏನೆಂದು ಬೋಧಿಸುತ್ತಿದ್ದವು? ನಿಜ ಬೋಧೆಯನ್ನು ಸಾಧಿಸುವುದಕ್ಕಾಗಿ ನಾನು ಹೀಗೆ ಗುರುಸಾಧನೆಯಲ್ಲಿ ಪ್ರವರ್ತನಾದೆನು ।೪೦೨॥

ಗುರುಗಳು ಆತ್ಮಜ್ಞಾನವನ್ನು ತಿಳಿಸಿ ಹೇಳಲು ಅದು ಅಂತಃಕರಣದಲ್ಲಿ ಚಿತ್‌ಘನವು ಪ್ರಕಾಶಿಸುವುದು. ಅದು ವಿದ್ಯುತ್‌ಪ್ರಾಯದಂತೆ ಚಂಚಲವಾಗಿರುವುದು. ಅದಕ್ಕೆ ಸ್ಥಿರತೆಯು ಇರುವುದಿಲ್ಲ ॥೪೦೩॥ ಯಾವುದು ಮೂಲದಲ್ಲಿಯೇ ಚಂಚಲವಾಗಿರುವುದರಿಂದ ಅದು ಎಂದಿಗೂ ದೃಢವಾಗಲು ಶಕ್ಯವೇ ಇಲ್ಲ. ಅದು ಒಂದು ಕ್ಷಣದಲ್ಲಿ ಭಾಸವಾದರೆ ಇನ್ನೊಂದು ಕ್ಷಣದಲ್ಲಿ ಇಲ್ಲದಾಗುವುದು. ಇದರಿಂದ ಸಾಧಕರಿಗೆ ತಳಮಳವು ಉಂಟಾಗುವುದು ।೪೦೪॥ ಸರ್ಪದ ಮುಖದಲ್ಲಿನ ಆಮಿಷವು ಹೊರಟು ಹೋಗಲು ಆಗ ಆ ಸರ್ಪವು ಚಡಪಡಿಸುವುದು. ಅದರಂತೆಯೇ ಸಾಧಕರಿಗೆ ವೇದನೆಯುಂಟಾಗುವುದು. ಇವರಿಗೆ ಆತ್ಮಭಾವನೆಯ ವಿಯೋಗವು ಸಹಿಸುವುದಾಗುವುದಿಲ್ಲ ।೪೦೫॥ ಬ್ರಹ್ಮವು ನಿತ್ಯ ಮತ್ತು ಅದ್ವಿತೀಯವಾಗಿದೆ. ಇದು ಸರ್ವ ಋಷಿಗಳಿಗೆ ಸಮ್ಮತವಾಗಿದೆ. ಆದರೆ ಅವರನ್ನು ಕೇಳಲು ಹೋದರೆ ಅವರು ಅನೇಕ ಪ್ರಕಾರದ ಅನುಮಾನಕ್ಕೆ ಗುರಿಪಡಿಸುವರು ।೪೦೬॥ ಕೆಲವರು ಬ್ರಹ್ಮವು ಸಗುಣವೆನ್ನುವರು. ಇನ್ನು ಕೆಲವರು ಬ್ರಹ್ಮವು ನಿರ್ಗುಣವೆನ್ನುವರು. ಹೀಗೆ ಅತಿಶಯವಾಗಿ ವಾದಗಳನ್ನು ಮಂಡಿಸಿ ಅವರು ತಮ್ಮದೇ ಆದ ಮತಗಳ ಅಭಿಮಾನದಿಂದ ಬೇರೆಯವರ ಮತಗಳನ್ನು ಖಂಡಿಸುತ್ತಿರುವರು ।೪೦೭॥ ಕೆಲವರು ಬ್ರಹ್ಮವು ಪ್ರಪಂಚಯುಕ್ತವಾಗಿದೆ ಎನ್ನುವರು. ಇನ್ನು ಕೆಲವರು ಬ್ರಹ್ಮವು ಪ್ರಪಂಚರಹಿತವಾಗಿದೆ ಎನ್ನುವರು. ಹೀಗೆ ಐವರ ಸಮುದಾಯವು ಕೂಡಿ ಶಬ್ದಗಳ ಬಾಹ್ಯ ಅರ್ಥ ಸಂಬಂಧದ ವಾದವನ್ನು ಮಾಡುತ್ತಲಿರುವರು ।೪೦೮॥ ಪ್ರಪಂಚವು ದೃಷ್ಟಿಗೆ ಬೀಳುತ್ತಲೇ ಮನಸ್ಸಿಗೆ ವಿಕ್ಷೇಪವು ಹುಟ್ಟುವುದು. ಅದಕ್ಕಾಗಿ ಆತ್ಮದ ಐಕ್ಯವನ್ನು ಸಾಧಿಸುವುದಕ್ಕಾಗಿ ಸುಬುದ್ಧಿಯಿಂದ ನಾನಾ ಪದಾರ್ಥಗಳಲ್ಲಿನ ಗುಣಗಳನ್ನು ಗುರುರೂಪದಲ್ಲಿ ಗ್ರಹಣ ಮಾಡಬೇಕಾಗುವುದು ॥ ೪೦೯॥ ವಿದ್ವಾನ್ ಜನರಲ್ಲಿ ಸಾಧಕರ ಪ್ರಶ್ನೆಗಳಿಗೆ ಸಮಾಧಾನವು ದೊರಕಲಾರದು. ಆದ್ದರಿಂದ ಅಲ್ಲಿ ಕೇಳಲು ಮನಸ್ಸಾಗುವುದಿಲ್ಲ ॥೪೧೦॥

ಜೇಥೂನಿ ವಿಕ್ಷೇಪತಾ ವಾಢೇ । ತೇಥೇಂಚಿ ಐಕ್ಯತಾ ಜೋಡೇ । ತೇ ನಾನಾಗುರುತ್ವೇ ರೋಕಡೇ । ಸಾಧನ ಚೋಖಡೇ ಯೋಜಿಲೇ ॥೪೧೧॥ ಜೇ ಜೇ ಸಾಂಗಿತಲೀ ಗುರುಲಕ್ಷಣೇ । ತೀ ತೀ ನಿಜಬುದ್ಧೀಚೀ ಸಾಧನೇ । ಸಮೂಳ ವಿಕ್ಷೇಪು ತೇಣೇ । ತೀವ್ರ ಧಾರಣೇ ಭೇದಿಲಾ ॥೪೧೨॥ ತೇಣೇ ಚಂಚಲತ್ವೇ ನಿಶ್ಚಲ । ಫಾವಲೇ ನಿಜಬೋಧಾಚೇ ಮೂಳ । ದೃಶ್ಯ ದೇಖತಾ ಕೇವಳ । ಭಾಸೇ ಸಕಳ ಚಿನ್ಮಾತ್ರ ॥೪೧೩॥ ಜೇ ಮಾಝ್ಯಾ ನಿಜಗುರೂನೀ । ಪೂರ್ವೀ ದಿಧಲೇ ಹೋತೇ ಬೋಧುನೀ । ತೇಂಚಿ ನಾನಾ ಗುರುತ್ವೇ ಸಾಧುನೀ । ವಿಕ್ಷೇಪ ಭೇದುನೀ ಪಾವಲೋ ॥೪೧೪॥ ನಿಜಗುರು ತೋ ಏಕುಚಿ ಜಾಣ । ಇತರ ಗುರು ಸಾಧಕತ್ವೇ ಸಾಧನ । ಹೇ ಯಥಾತಥ್ಯ ಲಕ್ಷಣ । ತುಜ ನಿರೂಪಣ ಮ್ಯಾ ಕೇಲೇ ॥೪೧೫॥ ಯೇಥ ಪ್ರಪಂಚಾಚೇ ಭಾನಾಭಾನ । ಕರ್ಮ ಕರಿತಾ ನ ಕಳೇ ಜಾಣ । ಲಾಧಲೀ ನಿಜಬೋಧಾಚೀ ಖೂಣ । ಸಮದರ್ಶನ ಸರ್ವದಾ ॥೪೧೬॥ ದೃಶ್ಯ ದೇಖತಾ ದೃಷ್ಟೀ । ನವ್ಹೇ ದೃಶ್ಯೇಸೀ ಭೇಟೀ । ಹಾರಪಲೀ ಕರ್ಮತ್ರಿಪುಟೀ । ಬೋಧ ಕಸವಟೀ ಅಭಿನವ ॥೪೧೭॥ ಯಥೇಷ್ಟ ಕರಿತಾ ಭೋಜನ । ಉಪ್ಷೇನಾ ನಿರಾಹಾರಲಕ್ಷಣ । ಜಗೇಸೀ ವಾಗತಾ ಜಾಣ । ಏಕಲೇಪಣ ಮೋಡೇನಾ ॥೪೧೮॥ ತರಂಗ ಸಾಗರಾಮಾಜೀ ಕ್ರೀಡತಾ । ನ ಮೋಡೇ ಉದಕಾಚೀ ಏಕಾತ್ಮತಾ । ತೇವೀ ಜಗಾಮಾಜೀ ವರ್ತತಾ । ದುಜೀ ವಾರ್ತಾ ಮಜ ನಾಹೀ ॥೪೧೯॥ ನವಲ ಸದ್ಗುರುಚೀ ನವಾಯೀ । ಸರ್ವೀ ಸರ್ವ ತೋಚಿ ಪಾಹೀ । ಗುರುವೇಗಳೇ ರಿತೇ ಕಾಂಹೀ । ಉರಲೇ ನಾಹೀ ಸರ್ವಥಾ ॥೪೨೦॥ ಆತಾ ಮಾಝೇ ಜೇ ಮೀಪಣ । ತೇ ಸದ್ಗುರು ಝಾಲಾ ಆಪಣ । ಬೋಲತೇ ತುಝೇ ಜೇ ತೂಪಣ । ತೇಹೀ ಜಾಣ ಸದ್ಗುರುಚಿ ॥೪೨೧॥ ಯಾಹೀಪರೀ ಪಾಹತಾ । ಮಾಝಾ ಗುರು ಏಕ ಏಕುಲತಾ । ತೇಥೇ ದುಜೇಪಣಾಚೀ ವಾರ್ತಾ । ನಾಹೀ ಸರ್ವಥಾ ಯದುರಾಯಾ ॥೪೨೨॥ ಐಶೀ ಸದ್ಗುರುಕಥಾ । ತುಜ ಸಾಂಗೀತಲೀ ಪರಮಾರ್ಥಾ । ಹರಿಖೇ ಆಲಿಂಗಿಲೇ ನೃಪನಾಥಾ । ದೋಘಾ ಐಕ್ಯತಾ ನಿಜಬೋಧೇ ॥೪೨೩॥ ಜೀವೀ ಜೀವಾ ಪಡಲೀ ಮಿಠೀ । ಆನಂದೇ ವೋಸಂಡಲೀ ಸೃಷ್ಟೀ । ತೇಣೇ ವಾಚೇಸೀ ಪಡಲೀ ಬೇಲವಟೀ । ಬೋಲೋ ಉಫರಾಟೀ ವಿಸರಲೀ ॥೪೨೪॥ ಹರಿಖು ನ ಸಂಠವೇ ಹೃದಯಭವನೀ । ಬಾಹೇರ ವೋಸಂಡೇ ಸ್ವೇದೇಜೋನೀ । ಆನಂದ ಘನ ವೋಳಲಾ ನಯನೀ । ಸ್ವಾನಂದ ಜೀವನೀ ವರ್ಷತು ॥೪೨೫॥

ಆದಕ್ಕಾಗಿ ಎಲ್ಲಿ ವಿಕ್ಷೇಪವು ಉತ್ಪನ್ನವಾಗುವುದೋ ಅಲ್ಲಿಯೇ ಐಕ್ಯವು ಸಾಧಿಸುವುದು. ಆದ್ದರಿಂದ ಅನೇಕ ಪದಾರ್ಥಗಳ ಗುರುತ್ವ ಮಾಡಿಕೊಳ್ಳುವ ಸಾಧನೆಯನ್ನು ನಾನು ಯೋಜಿಸಿದೆನು ॥೪೧೧॥ ಹೇಳಿರುವ ಗುರುಗಳ ಲಕ್ಷಣಗಳೆಲ್ಲವೂ ಆತ್ಮಸಾಧನೆಯ ಸಾಧನೆಗಳಾಗಿರುವುವು. ಇವುಗಳ ತೀವ್ರ ಧಾರಣೆಯಿಂದ ಸರ್ವ ಪ್ರಕಾರದ ವಿಕ್ಷೇಪಗಳನ್ನು ಸಮೂಲವಾಗಿ ಭೇದಿಸಿ ಒಗೆಯಬೇಕು ॥೪೧೨॥ ಈ ಯಾವ ಚಂಚಲತ್ವದಿಂದಲೇ ಆತ್ಮಜ್ಞಾನದ ನಿಶ್ಚಲತ್ವದ ಮೂಲವು ದೊರೆಯಿತು. ದೃಶ್ಯ ಪದಾರ್ಥಗಳನ್ನು ಅವಲೋಕಿಸಿದರೂ ಕೂಡ ಎಲ್ಲವೂ ಚಿತ್ಸ್ವರೂಪವಾಗಿಯೇ ತೋರಲಾರಂಭಿಸಿದವು ॥೪೧೩॥ ಪೂರ್ವದಲ್ಲಿ ನನ್ನ ಗುರುಗಳು ನನ್ನನ್ನು ಉಪದೇಶವನ್ನು ಮಾಡಿ ಯಾವ ಜ್ಞಾನವನ್ನು ನನಗೆ ಕೊಟ್ಟಿದ್ದರೋ, ಅದೇ ಜ್ಞಾನವನ್ನು ನಾನು ಅನೇಕ ಗುರುಗಳನ್ನು ಮಾಡಿಕೊಂಡು ವಿಕ್ಷೇಪದ ಭೇದವನ್ನು ಮಾಡಿಕೊಂಡಿರುವೆನು ॥೪೧೪॥ ಮೋಕ್ಷ ಗುರುಗಳು ಒಬ್ಬರೇ ಇರುವರು. ಇತರ ಗುರುಗಳು ಸಾಧಕ ರೂಪಗಳಿಂದಲೇ ಕೇವಲ ಬೋಧದ ಸಾಧನೆಗಳಾಗಿರುವರು. ಅವರ ಯಥಾತಥ್ಯ ಸ್ವರೂಪವನ್ನು ನಾನು ನಿನಗೆ ಹೇಳಿರುವೆನು ॥೪೧೫॥ ಆತ್ಮಜ್ಞಾನದ ರಹಸ್ಯವೇನಂದರೆ ದ್ವೈತವು ಅಸ್ತವಾಗಿ ಸರ್ವಕಾಲಕ್ಕೂ ಸಮಾನವಾಗಿ ಕಾಣುವುದಾಗಿದೆ. ಈ ಅವಸ್ಥೆಯಲ್ಲಿ ಕರ್ಮಗಳನ್ನು ಮಾಡುತ್ತಿದ್ದರೂ ಪ್ರಪಂಚದ ಭಾನಾಭಾನವು ಇರುವುದಿಲ್ಲ ॥೪೧೬॥ ದೃಶ್ಯ ಪದಾರ್ಥಗಳು ಅವು ಕಣ್ಮುಂದೆ ಇದ್ದರೂ ಕೂಡ ಕಾಣಿಸುವುದಿಲ್ಲ. ಕರ್ಮಗಳ ತ್ರಿಪುಟಿಯು ಇಲ್ಲದಾಗುವುದು. ಇಷ್ಟೊಂದು ಜ್ಞಾನದ ಪ್ರಭಾವವು ಅಪೂರ್ವವಾಗಿರುವುದು ॥೪೧೭॥ ಉಂಡು ಉಪವಾಸಿಯಂತೆ ಹೊಟ್ಟೆ ತುಂಬ ಭೋಜನ ಮಾಡಿದರೂ ಸಹ ನಿರಾಹಾರಿಯ ಲಕ್ಷಣವು ಇಲ್ಲದಾಗುವುದಿಲ್ಲ. ಜಗತ್ತಿನಲ್ಲಿ ವರ್ತಿಸುತ್ತಿದ್ದರೂ ಸಹ ನಾನೊಬ್ಬನೇ ಎಂಬ ಭಾವವು ಮುರಿಯುವುದಿಲ್ಲ ॥೪೧೮॥ ಸಮುದ್ರದಲ್ಲಿನ ತೆರೆಗಳು ಉಕ್ಕೇರುತ್ತಿದ್ದರೂ ಅವುಗಳಲ್ಲಿನ ಜಲದ ಏಕರೂಪತೆಯು ಇದ್ದೇ ಇರುವುದು. ಅದರಂತೆಯೇ ನಾನು ಜಗತ್ತಿನಲ್ಲಿ ವರ್ತಿಸುತ್ತಿದ್ದರೂ ನನಗೆ ಇನ್ನೊಂದು ಎಂಬ ವಾರ್ತೆಯೂ ಕೂಡ ಗೊತ್ತಿರುವುದಿಲ್ಲ ॥೪೧೯॥ ಸದ್ಗುರು ಚಮತ್ಕಾರಿಯಾಗಿ ಬಹು ಅಪೂರ್ವನಾಗಿರುವನು. ಎಲ್ಲೆಲ್ಲಿಯೂ ಸಂಪೂರ್ಣವಾಗಿ ತಾನೇ ತುಂಬಿಕೊಂಡಿರುವನು. ಆತನಿಲ್ಲದ ಬರಿದಾದ ಯಾವ ಸ್ಥಳವೂ ಇರುವುದಿಲ್ಲ ॥೪೨೦॥ ಈಗ ನನ್ನಲ್ಲಿರುವ ಯಾವ ನನ್ನದೆಂಬುವುದು ಅದು ಕೂಡ ಸದ್ಗುರು ತಾನೇ ಆಗಿರುವನು. ಮತ್ತು ನಿನ್ನದು ಎಂದು ಹೇಳುವವನ ನೀನೆಂಬುವುದು ಅದೂ ಕೂಡ ಸದ್ಗುರುವೇ ಆಗಿರುವನು ಎಂದು ತಿಳಿಯಬೇಕು ॥೪೨೧॥ ಹೇ ಯದುರಾಜನೇ, ಈ ರೀತಿಯಲ್ಲಿ ನೋಡಲು ನನ್ನ ಗುರು ಒಬ್ಬನೇ ಒಬ್ಬನಾಗಿರುವನು. ಅಲ್ಲಿ ಇನ್ನೊಂದು ಎಂಬ ಮಾತೇ ಇರುವುದಿಲ್ಲ ॥೪೨೨॥ ಈ ಯಾವ ಸದ್ಗುರುಗಳ ಕಥೆಯನ್ನು ಪರಮಾರ್ಥಪ್ರಾಪ್ತಿಗಾಗಿ ಹೇಳಲ್ಪಟ್ಟಿರುವುದು. ಹೀಗೆ ಹೇಳುತ್ತ ಅವಧೂತನು ಆನಂದದಿಂದ ರಾಜನಿಗೆ ಆಲಿಂಗಿಸಿದನು ॥೪೨೩॥ ಆತ್ಮಜ್ಞಾನದಿಂದ ಈ ಈರ್ವರೂ ತದ್ರೂಪರಾದರು. ಸೃಷ್ಟಿಗೆ ಆನಂದದ ಪೂರವು ಬಂದಿತು. ಆದ್ದರಿಂದ ವಾಣಿಯು ಕುಂಠಿತವಾಯಿತು. ಹೇಳುವುದನ್ನು, ಕೇಳುವುದನ್ನು ಇವರು ಮರೆತುಬಿಟ್ಟರು ॥೪೨೪॥ ಅಂತಃಕರಣದಲ್ಲಿ ಆನಂದವು ಹಿಡಿಸಲಾರದಂತಾಗಿ ಅದು ಬೆವರಿನ ರೂಪದಿಂದ ಹೊರಗೆ ಚೆಲ್ಲಿತು. ಅತಿಶಯ ಆನಂದದಿಂದ ಅವರ ಮೈಮೇಲೆ ರೋಮಾಂಚನಗಳು ಎದ್ದು ನಿಂತವು. ಆನಂದರೂಪ ಮೇಘವು ನೇತ್ರಗಳಲ್ಲಿ ತುಂಬಿಬಂದಿತು. ಅದು ಪ್ರೇಮಾಶ್ರುಗಳ ಮಳೆಗರೆಯಿತು ॥೪೨೫॥

ತುಟಲೀ ಅಹಂಕಾರಾಚೀ ಬೇಡೀ । ಪಾವಲೋ ಭವಾರ್ಣವಪರಥಡೀ । ಮ್ಹಣೌನಿ ರೋಮಾಂಚೀ ಉಭವಿಲೀ ಗುಢೀ। ಜಿಂತಿಲೀ ಗಾಢೀ ಅವಿದ್ಯಾ ।೪೨೬।। ಸಮೂಳ ದೇಹಭಾವೋ ಪಳಾಲಾ । ಯಾಲಾಗೀ ಗಾತ್ರಕಂಪು ಚಳಚಳಾ । ಸಂಕಲ್ಪ ವಿಕಲ್ಪ ನಿಮಾಲಾ । ಮನೇಸೀ ಬುಡಾಲಾ ಮನೋರಥು ।೪೨೭।। ಜೀವಭಾವೋ ಉಖಿತಾ । ಯದೂನೇ ಅರ್ಪಿಲಾ ಗುರುನಾಥಾ । ತೇ ಚಿನ್ಹ ಬಾಹೇರೀ ತತ್ತ್ವತಾ । ದಾವೀ ಸರ್ವಥಾ ನಿಜಾಂಗೀ ।೪೨೮।। ತೋ ಅವಧೂತ ಜಾಣ ದತ್ತಾತ್ರೇಯಾ । ತೇಣೇ ಆಲಿಂಗೂನಿ ಯದುರಾಯಾ । ನಿಜರೂಪಾಚಾ ಬೋಧು ತಯಾ । ಅನುಭವಾವಯಾ ದೀಧಲಾ ।೪೨೯।। ದತ್ತಾತ್ರೇಯ ಶಿಷ್ಯ ಪರಂಪರಾ । ಸಹಸ್ರಾರ್ಜುನ ಯದು ದುಸರಾ । ತೇಣೇ ಜನಾರ್ದನು ತಿಸರಾ । ಶಿಷ್ಯ ಕೇಲಾ ಖರಾ ಕಲಿಯುಗೀ ।೪೩೦।। ಗುರುಪ್ರಾಪ್ತಿಲಾಗೀ ಸರ್ವಥಾ । ಥೋರ ಜನಾರ್ದನಾಸೀ ಚಿಂತಾ । ವಿಸರಲಾ ತಿನ್ಹೀ ಅವಸ್ಥಾ । ಸದ್ಗುರು ಚಿಂತಿತಾ ಚಿಂತನೀ ।೪೩೧।। ದೇವೋ ಭಾವಾಚಾ ಭೋಕ್ತಾ । ದೃಢ ಜಾಣೋನಿ ಅವಸ್ಥಾ । ಯೇಣೇ ಜಾಹಲೇ ಶ್ರೀದತ್ತಾ । ತೇಣೇ ಹಾತು ಮಾಥಾ ಠೇವಿಲಾ ।೪೩೨।। ಹಾತು ಠೇವಿಚಾಂಚಿ ತತ್ಕಾಳ । ಬೋಧು ಆಕಳಿಲಾ ಸಕಳ । ಮಿಥ್ಯಾ ಪ್ರಪಂಚಾಚೇ ಮೂಳ । ಸ್ವರೂಪ ಕೇವಳ ಸ್ವಬೋಧೇ ।೪೩೩।। ಕರ್ಮ ಕರೂನಿ ಅಕರ್ತಾ । ತೋಚಿ ಅಕರ್ತಾತ್ಮ ಬೋಧು ಜಾಹಲಾ ದೇತಾ । ದೇಹೀ ಅಸೋನಿ ವಿದೇಹತಾ ।ತೇಹೀ ತತ್ತ್ವತಾ ಆಕಳಿಲೀ ।೪೩೪।। ಗೃಹಾಶ್ರಮು ನ ಸಾಂಡಿತಾ । ಕರ್ಮರೇಖಾ ನೋಲಾಂಡಿತಾ । ನಿಜವ್ಯಾಪಾರೀ ವರ್ತತಾ । ಬೋಧು ಸರ್ವಥಾ ನ ಮೈಳೇ ।।೪೩೫।। ತೋ ಬೋಧು ಆಕಳತಾ ಮನಾ । ಮನ ಮುಕಲೇ ಮನಪಣಾ ।ಅವಸ್ಥಾ ನಾವರೇಚಿ ಜನಾರ್ದನಾ । ಮೂರ್ಛಾಪನ್ನ ಪಡಿಯೇಲಾ ।೪೩೬।। ತ್ಯಾಸೀ ಸಾವಧ ಕರೂನಿ ತತ್ತ್ವತಾ । ಮ್ಹಣೇ ಪ್ರೇಮಾ ಆಹೇ ಸತ್ತ್ವಾವಸ್ಥಾ । ತೋಹೀ ಗಿಳೋನಿ ಸರ್ವಥಾ । ಹೋಯೀ ವರ್ತತಾ ನಿಜಬೋಧೇ ।೪೩೭।। ಪೂಜಾವಿಧಿ ಕರೋನಿಯಾ । ಜಂವ ಜನಾರ್ದನು ಲಾಗಲಾ ಪಾಯಾ । ತಂವ ಅದೃಶ್ಯ ಜಾಹಲಾ ದತ್ತಾತ್ರೇಯಾ। ಯೋಗಮಾಯಾಚೇನಿ ಯೋಗೇ ।೪೩೮।। ಕಥೇಸೀ ಥಾಂಕಲೋ ಸರ್ವಥಾ । ತೋ ಕೋಪು ನ ಮನಾವಾ ಶ್ರೋತಾ। ಪ್ರಸಂಗೇ ಗುರುವಿವಂಚನಾ ಹೋತಾ । ಮೀಹೀ ಗುರುಕಥಾ ಬೋಲಿಲೋ ।೪೩೯।।

ಅಹಂಕಾರ ರೂಪ ಬೇಡಿಯು ಮುರಿದು ಬಿದ್ದಿತು. ನಾವು ಭವಸಾಗರದ ಆಚೆ ದಂಡೆಯನ್ನು ಸೇರಿದೆವು ಎಂಬ ಸಂಜ್ಞೆಗಾಗಿ ರೋಮಾಂಚ ಪತಾಕೆಗಳು ಏರಿಸಲ್ಪಟ್ಟವು. ಅವಿದ್ಯೆಯನ್ನು ಗೆದ್ದುಕೊಂಡರು ।೪೨೬।। ದೇಹಭಾವವು ಪೂರ್ಣವಾಗಿ ಇಲ್ಲದಾಯಿತು. ಆದ್ದರಿಂದ ಶರೀರವು ಗಡಗಡನೇನಡುಗಹತ್ತಿತು. ಸಂಕಲ್ಪ ವಿಕಲ್ಪಗಳ ಭಾವವು ಮುಗಿದು ಹೋಯಿತು. ಹಾಗೂ ಮನೋರಥವು ಮುಳುಗಿ ಹೋಯಿತು ।೪೨೭।। ಯದುರಾಜನು ತನ್ನ ಜೀವಭಾವವನ್ನು ಸಂಪೂರ್ಣವಾಗಿ ಗುರುಚರಣಗಳಲ್ಲಿ ಸಮರ್ಪಿಸಿದನು. ಈ ಚಿನ್ಹವು ಹೊರಗಿನಿಂದ ಆತನ ಶರೀರದಲ್ಲಿ ಎದ್ದು ತೋರುತ್ತಿತ್ತು ।೪೨೮।। ಆ ಅವಧೂತನು ಸಾಕ್ಷಾತ್ ದತ್ತಾತ್ರೇಯನಾಗಿದ್ದನು. ಈತನು ಯದುರಾಜನಿಗೆ ಆಲಿಂಗನವನ್ನು ಕೊಟ್ಟು ಆತ್ಮಜ್ಞಾನದ ಅನುಭವವನ್ನು ದಯಪಾಲಿಸಿದನು ।೪೨೯।। ಈ ಪ್ರಕಾರವಾಗಿ ದತ್ತಾತ್ರೇಯರ ಶಿಷ್ಯ ಪರಂಪರೆಯಾಗಿರುವುದು. ಮೊದಲನೆಯದಾಗಿ ಸಹಸ್ರಾರ್ಜುನನು, ಎರಡನೆಯದಾಗಿ ಯದುರಾಜನು ಮತ್ತು ಈ ಕಲಿಯುಗದಲ್ಲಿ ಈತನು ಜನಾರ್ದನಸ್ವಾಮಿಯವರನ್ನು ಮೂರನೆಯ ಶಿಷ್ಯನನ್ನಾಗಿ ಮಾಡಿಕೊಂಡನು ।೪೩೦।। ನನಗೆ ಗುರುಪ್ರಾಪ್ತಿ ಹೇಗೆ, ಎಂದಾದೀತೆಂದು ಜನಾರ್ದನನಿಗೆ ಬಹು ದೊಡ್ಡ ಚಿಂತೆಯಾಗಿತ್ತು. ಈ ಯಾವ ಸದ್ಗುರುವಿನ ಚಿಂತೆಯಲ್ಲಿ ಜಾಗೃತ, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಗಳನ್ನು ಮರೆತನು ।೪೩೧।। ದೇವನು ಭಾವದ ಭೋಕ್ತಾನಾಗಿರುವನು. ಜನಾರ್ದನರ ತಳಮಳ ಹಾಗೂ ತೀವ್ರ ಅಪೇಕ್ಷೆಯನ್ನು ಅರಿತು ಸಾಕ್ಷಾತ್ ದತ್ತಾತ್ರೇಯರು ಆತನಲ್ಲಿಗೆ ಬಂದರು. ಮತ್ತು ಆತನ ಮಸ್ತಕದ ಮೇಲೆ ವರದಹಸ್ತವನ್ನಿಟ್ಟರು ।೪೩೨।। ಈ ವರದಹಸ್ತವನ್ನಿಡುವುದೇ ತಡ, ಆತನಿಗೆ ಆತ್ಮಜ್ಞಾನವು ಪ್ರಾಪ್ತವಾಯಿತು. ಈ ಆತ್ಮಜ್ಞಾನದಿಂದ ಸರ್ವ ಪ್ರಪಂಚದ ಮೂಲವು ಮಿಥ್ಯೆಯಾಯಿತು ।೪೩೩।। ಕರ್ಮಗಳನ್ನು ಮಾಡಿ ಅಕರ್ತನಾಗುವ ಆ ಅಕರ್ತತನದ ಬೋಧೆಯನ್ನು ಶ್ರೀ ದತ್ತಾತ್ರೇಯನು ಈತನಿಗೆ ಕೊಟ್ಟನು. ದೇಹದಲ್ಲಿದ್ದರೂ ಸಹ ವಿದೇಹಿಯಾಗಿರುವ ಈ ಅವಸ್ಥೆಯನ್ನು ಸ್ವೀಕರಿಸಿದನು ।೪೩೪।। ಗೃಹಾಶ್ರಮದ ತ್ಯಾಗವನ್ನು ಮಾಡದೇ, ಕರ್ಮ ಮರ್ಯಾದೆಯನ್ನು ಉಲ್ಲಂಘಿಸದೇ, ತನ್ನ ವ್ಯವಹಾರದಲ್ಲಿ ವರ್ತನೆ ಮಾಡುತ್ತಿರಲು ಆತನ ಆತ್ಮಜ್ಞಾನವು ಮಲಿನಗೊಳ್ಳುವುದಿಲ್ಲ ।೪೩೫।। ಈ ಜ್ಞಾನವನ್ನು ಮನದಿಂದ ಅರಿಯುತ್ತಲೇ ಆತನ ಮನತ್ವವು ಇಲ್ಲದಾಯಿತು. ಈ ಅವಸ್ಥೆಯನ್ನು ಜನಾರ್ದನರಿಗೆ ಆವರಿಸುವುದಾಗಲಿಲ್ಲ. ಆದ್ದರಿಂದ ಅವರು ಮೂರ್ಛೆ ಹೋದರು ।೪೩೬।। ಆಗ ದತ್ತಾತ್ರೇಯರು ಎಚ್ಚರಗೊಳಿಸಿ ಹೀಗೆ ಹೇಳಿದರು. ಸತ್ವಾವಸ್ಥೆಯಲ್ಲಿ ಪ್ರೇಮವಿರುವುದು. ಅದಕ್ಕಾಗಿ ಅದನ್ನು ಬಿಟ್ಟುಕೊಟ್ಟು ನೀನು ಆತ್ಮಜ್ಞಾನದಿಂದ ವರ್ತಿಸುತ್ತ ನಡೆ ।೪೩೭।। ಆಗ ಜನಾರ್ದನರು ಅವರನ್ನು ಯಥಾವಿಧಿಯಿಂದ ಪೂಜಿಸಿ ಅವರ ಚರಣ ಕಮಲಗಳಲ್ಲಿ ತಮ್ಮ ಮಸ್ತಕವನ್ನಿಟ್ಟರು. ತದನಂತರ ಶ್ರೀ ದತ್ತಾತ್ರೇಯರು ತಮ್ಮ ಯೋಗಮಾಯೆಯಿಂದ ಅದೃಶ್ಯರಾದರು ।೪೩೮।। ಮೂಲ ಕಥೆಯನ್ನು ಬಿಟ್ಟು ನಡುವೆಯೇ ವಿಷಯಾಂತರವು ಬಹಳಾಯಿತೆಂದು ಶ್ರೋತೃಗಳವರು ಕೋಪ ತಾಳಬಾರದು. ಪ್ರಸಂಗಾನುಸಾರವಾಗಿ ಗುರುಸಂಬಂಧದ ವಿಷಯವು ಹೊರಟಿದ್ದಕ್ಕೆ ನಾನೂ ಕೂಡ ನನ್ನ ಗುರುವಿನ ವೃತ್ತಾಂತವನ್ನು ಹೇಳಿದೆನು ।೪೩೯।।

ಮಜ ತಂವ ಚುಕೀ ಪಡಿಲೀ ಮೋಠೀ । ಚುಕೂನಿ ಸಾಂಗಿತಲೀ ಗುರುಗೋಠೀ । ತೇಹೀ ಸಂಸ್ಕೃತ ನವ್ಹೇ ಮರಾಠೀ ।ವೃಥಾ ಚಾವಟೀ ನ ಮ್ಹಣಾವೀ ।।೪೪೦।। ಜೋ ಅಸೇಲ ಗುರುಭಕ್ತ । ತೋ ಹೇ ಜಾಣೇಲ ಮನೋಗತ । ಜೋ ಗುರುಸ್ಮರಣೀ ಸದೋದಿತ । ತ್ಯಾಸಿ ಹೇ ಹೃದ್ಗತ ಕಳೇಲ ।।೪೪೧।। ಜ್ಯಾಂಸೀ ಗುರುಚರಣೀ ಶ್ರದ್ಧಾ ಗಾಢೀ । ಜ್ಯಾಂಸೀ ಗುರುಭಜನೀ ಅತಿ ಆವಡೀ । ಜೆಂಹೀ ಗುರುಪ್ರೇಮ ಜೋಡಿಲೇಜೋಡೀ । ಹೇ ಗೋಡೀ ಜಾಣತೀ ।।೪೪೨।। ಜ್ಯಾ ಸದ್ಗುಚೇ ನಾಂವ ಘೇತಾ । ಚಾರೀ ಮುಕ್ತೀ ವೋಡವಿತೀ ಮಾಥಾ । ಮುಕ್ತೀ ನಾವಡೇ ಗುರುಭಕ್ತಾ । ನಿತ್ಯಮುಕ್ತತಾ ಗುರುಚರಣೀ ।।೪೪೩।। ಜ್ಯಾಚೇ ಘೇತಾ ಚರಣತೀರ್ಥ । ಚಾರೀ ಮುಕ್ತೀ ಪವಿತ್ರಹೋತ । ಪಾಯಾ ಲಾಗತೀ ಪುರುಷಾರ್ಥ । ಧನ್ಯ ಗುರುಭಕ್ತ ತ್ರಿಲೋಕೀ ।।೪೪೪।। ಚೈತನ್ಯ ನಿತ್ಯ ನಿರಾಧಾರ । ನಿರ್ಧರ್ಮಕ ನಿರ್ವಿಕಾರ । ತ್ಯಾಚಾ ಕೇಲಾ ಜೀರ್ಣೋದ್ಧಾರ । ಸತ್ಯ ಸಾಚಾರ ಜಗದ್ಗುರು ।।೪೪೫।। ಸದ್ಗುರು ಕೃಪಾ ನವ್ಹತಾ । ನವ್ಹತೀ ದೇವಾಚೀ ಕಥಾವಾರ್ತಾ । ದೇವಾಸೀ ದೇವಪಣೇ ಸ್ಥಾಪಿತಾ । ಸತ್ಯ ಸರ್ವಥಾ ಸದ್ಗುರು ।।೪೪೬।। ಸದ್ಗುರು ಕೃಪೇವೀಣ ಪಾಹೀ । ದೇವೋ ಅಸತುಚಿ ಝಲಾ ಹೋತಾ ನಾಹೀ । ತ್ಯಾಸಿ ದೇವಪಣೇ ಠೇವೂನಿ ಠಾಯೀ । ಭಜವಿತಾ ಪಾಹೀ ಗುರುರಾವೋ ।।೪೪೭।। ತ್ಯಾ ಸದ್ಗುರೂಚೀ ಕಥಾ । ಚುಕೋನಿ ಝಾಲೋ ಬೋಲತಾ । ಘೋರ ಅಪರಾಧು ಹಾ ಮಾಝೇ ಮಾಥಾ । ಕ್ಷಮಾ ಶ್ರೋತಾ ಕರಾವೀ ।।೪೪೮।। ವೃಥಾ ಬೋಲಿಲೋ ನಾಹೀ ಜಾಣ । ಝಾಲೇ ಬೋಲಾವಯಾ ಕಾರಣ । ದತ್ತಾತ್ರೇಯ ಶಿಷ್ಯ ಕಥನ । ಕರಿತಾ ಜನಾರ್ದನ ಆಠವಲಾ ।।೪೪೯।। ಮೀ ಜರೀ ನಾಠವೀ ಜನಾರ್ದನಾಸೀ । ಪರೀ ತೋ ವಿಸರೋ ನೇದೀಚ ಆಪಣಾಸೀ । ಹಟೇ ದೇತುಸೇ ಆಠವಣೇಸೀ । ಅಹರ್ನಿಶೀ ಸರ್ವದಾ ।।೪೫೦।। ಜಿಕಡೇ ಮೀ ವಿಸರೋ ಜಾಯೇ । ತಿಕಡೇಚಿ ತೋ ಯೇಊನಿ ಠಾಹೇ । ಮೀ ಜರೀ ತ್ಯಾಜಕಡೇ ನ ಪಾಹೇ । ತೇ ನ ಪಾಹಣೇ ಹೋಯೇ ತೋ ಮಾಝೇ ।।೪೫೧।। ಘಟು ಸಾಂಡೂ ಪಾಹೇ ಆಕಾಶಾಸೀ । ತಂವ ಆಕಾಶ ನ ಸಾಂಡೀ ಘಟಾಸೀ । ತೇವೀ ಜನಾರ್ದನು ಆಮ್ಹಾಸೀ । ಅಹರ್ನಿಶೀ ಲಾಗಲಾ ।।೪೫೨।। ಮೀ ನ ಕರೀ ತ್ಯಾಚೀ ಕಥಾ । ತಂವ ತೋಚಿ ಹೋಯೇ ಮುಖೀ ವಕ್ತಾ । ಐಸೇನಿ ಬಲತ್ಕಾರೇ ಬೋಲವಿತಾ । ಕಾಯ ಮ್ಯಾ ಆತಾ ಕರಾವೇ ।।೪೫೩।।

ನನ್ನಿಂದ ಇದು ಒಂದು ದೊಡ್ಡದಾದ ತಪ್ಪು ಆಯಿತು. ನನ್ನ ಗುರುಗಳ ಕಥೆಯನ್ನು ನಾನು ತಪ್ಪಿ ಹೇಳಿದೆನು. ಅದೂ ಸಹ ಸಂಸ್ಕೃತ ಭಾಷೆ ಅಲ್ಲದೇ ಮರಾಠಿಯಲ್ಲಿ! ಆದರೆ ಇದನ್ನು ನಾನು ಸುಮ್ಮನೇ ಬಡಬಡಿಸಿದೆನು ಎಂದು ಮಾತ್ರ ಹೇಳಬೇಡಿರಿ ।।೪೪೦।। ಗುರುಭಕ್ತನಾಗಿರುವವನಿಗೆ ಮಾತ್ರ ನನ್ನ ಹೃದ್ಗತವು ತಿಳಿಯುವುದು. ಗುರುಗಳನ್ನು ನಿತ್ಯದಲ್ಲಿ ಸ್ಮರಿಸುವವನಿಗೆ ಮಾತ್ರ ಇದರಲ್ಲಿನ ಮರ್ಮವು ತಿಳಿಯಬಲ್ಲದು ।।೪೪೧।। ಗುರುಚರಣಗಳಲ್ಲಿ ಯಾರ ಶ್ರದ್ಧೆಯು ದೃಢವಾಗಿರುವುದೋ, ಯಾರಿಗೆ ಗುರುಭಜನೆಯು ಅತ್ಯಂತ ಪ್ರಿಯಕರವೋ, ಯಾರು ಗುರುಪ್ರೇಮವನ್ನು ಪ್ರಾಪ್ತಮಾಡಿಕೊಂಡಿರುವರೋ, ಅವರಿಗೆ ಮಾತ್ರ ಇದರಲ್ಲಿಯ ರುಚಿಯು ತಿಳಿಯುವುದು ।।೪೪೨।। ಸದ್ಗುರುಗಳ ನಾಮವನ್ನು ಸ್ಮರಿಸುತ್ತಲೇ ನಾಲ್ಕೂ ಮುಕ್ತಿಗಳು ನತಮಸ್ತಕವಾಗುವುವು. ಗುರುಭಕ್ತರಿಗೆ ಮುಕ್ತಿಯು ಪ್ರಿಯವಾಗುವುದಿಲ್ಲ. ಏಕೆಂದರೆ ಗುರುಚರಣಗಳಲ್ಲಿ ನಿತ್ಯ ಮುಕ್ತತೆಯು ಇರುವುದು ।।೪೪೩।। ಇವರ ಚರಣಗಳ ತೀರ್ಥವನ್ನು ಸ್ವೀಕರಿಸಲು ನಾಲ್ಕೂ ಮುಕ್ತಿಗಳು ಪವಿತ್ರಗೊಳ್ಳುವುವು. ಮತ್ತು ಪುರುಷಾರ್ಥಗಳು ಇವರ ಕಾಲಿಗೆ ಬೀಳುವುವು. ನಿಜವಾಗಿಯೂ ಗುರುಭಕ್ತರು ಈ ಮೂರು ಲೋಕಗಳಲ್ಲಿಯೂ ಧನ್ಯರು ।।೪೪೪।। ನಿತ್ಯ, ನಿರಾಧಾರ, ಧರ್ಮರಹಿತ, ನಿರ್ವಿಕಾರ ಹೀಗಿರುವ ಚೈತನ್ಯಕ್ಕೆ ಸದ್ಗುರುಗಳು ಜೀರ್ಣೋದ್ಧಾರವನ್ನು ಮಾಡಿದ್ದಕ್ಕೆ ಇವರೇ ಸತ್ಯ ಸ್ವರೂಪರಾಗಿರುವರು ।।೪೪೫।। ಸದ್ಗುರುಗಳ ಕೃಪೆಯಾಗದೇ ದೇವರ ಕಥೆ, ವಾರ್ತೆ ಯಾವುದೂ ಸಂಭವಿಸುವುದಿಲ್ಲ. ಆದ್ದರಿಂದ ದೇವರಿಗೆ ದೇವತ್ವವನ್ನು ಕೊಡುವವರು ಒಬ್ಬ ಸದ್ಗುರುವೇ ಆಗಿರುವನು ।।೪೪೬।। ನಿಜವಾಗಿಯೂ ಸದ್ಗುರುವಿನ ಕೃಪೆಯಿಲ್ಲದೇ ದೇವರಿದ್ದರೂ ಇಲ್ಲದಂತಾಗುತ್ತಿತ್ತು. ಆತನನ್ನು ದೇವತ್ವದಿಂದ ಒಂದು ಸ್ಥಾನಕ್ಕೆ ತಂದು ಆತನ ಭಜನೆಯನ್ನು ಮಾಡಲು ಹಚ್ಚುವವನು ಆ ಗುರುರಾಜನೇ ಆಗಿರುವನು ।।೪೪೭।। ಹೀಗಿರುವ ಯಾವ ಈ ಸದ್ಗುರುವಿನ ಕಥೆಯನ್ನು ನಾನು ತಪ್ಪಿ ಹೇಳಿದೆನು. ಇದು ನನ್ನ ಕೈಯಿಂದ ಮಹಾಅಪರಾಧವಾಗಿರುವುದು. ಅದಕ್ಕಾಗಿ ಉದಾರ ಅಂತಃಕರಣದಿಂದ ಶ್ರೋತೃಗಳವರು ನನ್ನನ್ನು ಕ್ಷಮಿಸಿರಿ ।।೪೪೮।। ನಾನು ಇದನ್ನು ಸುಮ್ಮನೇ ಹೇಳಿರುವುದಿಲ್ಲ. ಹೇಳಲಿಕ್ಕೆ ಅಂತಹ ಕಾರಣವು ಒದಗಿತು. ದತ್ತಾತ್ರೇಯರ ಶಿಷ್ಯ ಎಂದು ಕಥೆಯನ್ನು ಹೇಳುತ್ತಿರಲು ನನಗೆ ಜನಾರ್ದನಸ್ವಾಮಿಯವರ ನೆನಪಾಯಿತು ।।೪೪೯।। ನಾನು ಅವರ ನೆನಪನ್ನು ಮಾಡದಿದ್ದರೂ ಅವರು ಸ್ವತಃ ಕ್ಕೆ ಮರೆಯಲು ಬಿಡುವುದಿಲ್ಲ. ಅವರು ನಿರಂತರವಾಗಿ ಹಗಲು ರಾತ್ರಿ ನನಗೆ ಸ್ಮರಣೆಯನ್ನು ಕೊಡುತ್ತಿರುವರು ।।೪೫೦।। ನಾನು ಎಲ್ಲೆಲ್ಲಿ ನೋಡುವೆನೋ, ಅಲ್ಲಲ್ಲಿ ನನಗೆ ಅವರೇ ಕಾಣಿಸುವರು. ನಾನು ಅವರತ್ತ ನೋಡದಿದ್ದರೂ ನನ್ನ ನೋಡದಿರುವಿಕೆಯನ್ನು ಅವರೇ ಆಗುವರು ।।೪೫೧।। ಘಟವು ಆಕಾಶಕ್ಕೆ ಬಿಟ್ಟು ಬಿಡಲು ಪ್ರಯತ್ನಿಸಿದರೆ ಆಕಾಶವೇ ಘಟಕ್ಕೆ ಬಿಡಲು ಸಿದ್ಧವಿಲ್ಲ. ಅದರಂತೆ ಜನಾರ್ದನರು ನನಗೆ ಹಗಲು ರಾತ್ರಿಯಲ್ಲಿಯೂ ಬಿಡಲು ಸಿದ್ಧರಿಲ್ಲ ।।೪೫೨।। ನಾನು ಒಂದು ವೇಳೆ ಅವರ ಕಥೆಯನ್ನು ಹೇಳಲಿಲ್ಲವೆಂದರೆ, ಆಗ ಅವರೇ ನನ್ನ ಮುಖದಲ್ಲಿ ವಕ್ತಾ ಆಗುವರು. ತಮ್ಮ ಸತ್ತೆಯಿಂದಲೇ ಅವರು ನನ್ನಿಂದ ಹೇಳಲು ಹಚ್ಚುವರು. ಹೀಗಾದರೆ ಈಗ ನಾನೇನು ಮಾಡಲೀ? ।।೪೫೩।।

ದೃಶ್ಯ ಮೀ ದೇಖಾವಯಾ ಬೈಸೇ । ತಂವ ದೃಶ್ಯಾ ಸಬಾಹ್ಯ ಜನಾರ್ದನು ದಿಸೇ । ಶ್ರವಣೀ ಐಕತಾ ಸೌರಸೇ । ಶಬ್ದೀ ಪ್ರವೇಶೇ ಜನಾರ್ದನು ॥೪೫೪॥ ಆತಾ ನಾಇಕೇ ನ ಪಾಹೇ । ಮ್ಹಣೌನಿ ಮೀ ಉಗಾ ರಾಹೇ । ತಂವ ಉಗೇಪಣಾಚೇನಿ ಅನ್ವಯೇ । ಜನಾರ್ದನು ಪಾಹೇ ಲಾಗಲಾ ॥೪೫೫॥ ಐಸಾ ಅಡಕಲೋ ತ್ರಿಶುದ್ಧೀ । ಜನಾರ್ದನು ಉಗಂಡೂ ನೇದೀ । ಶ್ರೋತಾ ಸಾಂಗಾವೀ ಜೇ ಬುದ್ಧೀ । ಮೀ ಅಪರಾಧೀ ಸರ್ವಥಾ ॥೪೫೬॥ ಶ್ರೋತೆ ಮ್ಹಣತೀ ನವಲಾವೋ । ಯೇಥ ನ ದೇಖೋ ಅಹಂಭಾವೋ । ಪಾಹತಾ ಬೋಲಾಚಾ ಅಭಿಪ್ರಾವೋ । ಪ್ರೇಮ ಪಹಾ ಹೋ ಲೋಟತ ॥೪೫೭॥ ಯೇಥೀಲ ವಿಚಾರಿತಾ ಬೋಲ । ಕ್ಷೀರಾಬ್ಧಿ ಹೂನ ಸಖೋಲ । ನವಲ ಪ್ರೇಮಾಚಿ ಬೋಲ । ಯೇತಾತಿ ಡೋಲ ಸ್ವಾನಂದೇ ॥೪೫೮॥ ಜೇ ತ್ವಾ ಕೇಲೇ ಗುರುನಿರೂಪಣ । ತೇ ಸಪ್ರೇಮ ಬ್ರಹ್ಮಜ್ಞಾನ । ಥೋರ ನಿವವಿಲೋ ಜಾಣ । ನಾಹೀ ದೂಷಣ ನಿರೂಪಣಾ ॥೪೫೯॥ ನಿತ್ಯ ಕರಾವೇ ಗುರುಸ್ಮರಣ । ತೇ ಗುರೂನೇ ಕೇಲೇ ನಿಜಕಥನ । ಕರಿತಾ ಅಮೃತಾಚೇ ಆರೋಗಣ । ಪುರೇ ಕೋಣ ಮ್ಹಣೇಲ ॥೪೬೦॥ ಜನಾರ್ದನೀ ದೃಢ ಭಾವೋ । ಹಾಹೀ ಕಳಳಾ ಅಭಿಪ್ರಾವೋ । ನಿರೂಪಣಾಚಾ ನವಲಾವೋ । ರಸಾಳ ಪಹಾ ಹೋ ವೋಡವಲಾ ॥೪೬೧॥ ತೂ ಮೂಳಕಥಾ ನಿರೂಪಿಸೀ । ಅಥವಾ ಆಡಕಥಾ ಸಾಂಗಸೀ । ಪರೀ ಗೋಡೀ ಯಾ ನಿರೂಪಣಾಐಸೀ । ನ ದೇಖೋ ಅಣಿಕಾಂಸೀ ಸರ್ವಥಾ ॥೪೬೨॥ ಶುದ್ಧ ನಿರೂಪಣೇ ಗುರು ವರ್ಣಿಸೀ । ವರ್ಣೂನೀ ಅಪರಾಧೀ ಮ್ಹಣವಿಸೀ । ಐಕ್ಯೇ ಘೋಳಲೀ ಬುದ್ಧೀ ಕೈಸೀ । ಮಾನು ಶ್ರೋತ್ಯಾಂಸೀ ವಾಢವಿಲಾ ॥೪೬೩॥ ತುಝೀ ಜೇ ಅಪರಾಧಬುದ್ಧೀ । ತೇ ಪ್ರವೇಶಲೀ ಭಗವತ್ಪದೀ । ಜಾಹಲೀ ಅಪರಾಧಾಚೀ ಶುದ್ಧೀ । ದೇಖಣಾ ತ್ರಿಶುದ್ಧೀ ತೂ ಹೋಸೀ ॥೪೬೪॥ ಗುರುಸ್ತವನೀ ರತಸೀ । ತೇವ್ಹಾ ಮೂಳಕಥಾ ವಿಸರಸೀ । ಪ್ರೇಮಾಚೀ ಜಾತೀ ಐಸೀ । ಕಳಲೇ ಆಮ್ಹಾಸೀ ಸರ್ವಥಾ ॥೪೬೫॥ ಶ್ರೋತೇ ಮ್ಹಣತೀ ಆತಾ । ವಿಸ್ಮಯೋ ದಾಟಲಾ ಚಿತ್ತಾ । ವೇಗೀ ಚಾಲವಾವೇ ಗ್ರಂಥಾ । ಪೂರ್ವಕಥಾ ಮೂಳೀಂಚೀ ॥೪೬೬॥ ಹೇ ಸಂತವಚನ ಮಾನೂನಿ ಮಾಥಾ । ಚರಣ ವಂದೂನಿ ತತ್ತ್ವತಾ । ಸಾವಧಾನ ವ್ಹಾವೇ ಚಿತ್ತಾ । ಪುಢೀಲ ಕಥಾ ಸಾಂಗೇನ ॥೪೬೭॥

ನಾನೇನಾದರೂ ಶೂನ್ಯ ವಸ್ತುವನ್ನು ನೋಡುತ್ತಿರಲು ಆಗ ಆ ವಸ್ತುವಿನ ಒಳಗೆ ಹೊರಗೆ ನನಗೆ ಜನಾರ್ದನರೇ ಕಾಣಿಸುವರು. ಕಿವಿಗಳಿಂದ ಏನಾದರೂ ಕೇಳಲು ಹೋದರೆ ಆಗ ಶಬ್ದಗಳಲ್ಲಿ ಜನಾರ್ದನರೆ ಒಳಹೊಕ್ಕು ಕುಳಿತಿರುವರು ॥೪೫೪॥ ಈಗ ನಾನು ಕೇಳಬಾರದು, ನೋಡಬಾರದು ಎಂದು ಹೇಳುತ್ತ ಸುಮ್ಮನೇ ಕುಳಿತರೆ, ಆಗ ಸ್ವಸ್ಥವಾಗಿ ಕುಳಿತಿರುವ ರೂಪದಲ್ಲಿ ಜನಾರ್ದನರೇ ಕಾಣುತ್ತಿರುವರು ॥೪೫೫॥ ನಾನು ನಿಜವಾಗಿಯೂ ಸದ್ಗುರುವಿನ ಪ್ರೇಮದಲ್ಲಿ ಸಿಲುಕಿಕೊಂಡಿರುವೆನು. ಜನಾರ್ದನರು ನನಗೆ ಏನನ್ನೂ ಮರೆಯಿಸಿಕೊಡುವುದಿಲ್ಲ. ನಿಜವಾಗಿಯೂ ನಾನು ಅಪರಾಧಿಯಾಗಿರುವೆನು. ಶ್ರೋತೃಗಳವರು ನನಗೇನಾದರೂ ಇದಕ್ಕೆ ಉಪಾಯವನ್ನು ಹೇಳಬೇಕು ॥೪೫೬॥ ಆಗ ಶ್ರೋತೃಗಳವರು ಹೀಗೆಂದರು; ಇದೊಂದು ದೊಡ್ಡ ಆಶ್ಚರ್ಯಕರವಾಗಿದೆ! ಈ ಹೇಳುವಿಕೆಯಲ್ಲಿ ಸ್ವಲ್ಪವೂ ಅಹಂಕಾರವು ಕಾಣಿಸುವುದಿಲ್ಲ. ಇವರು ಹೇಳುವ ಅಭಿಪ್ರಾಯ ನೋಡಿದರೆ ನಮಗೆ ಪ್ರೇಮವು ಉಕ್ಕೇರುವುದು ॥೪೫೭॥ ನಿಮ್ಮ ಶಬ್ದಗಳ ವಿಚಾರವನ್ನು ಮಾಡಲು ಹೋದರೆ ಅವು ಕ್ಷೀರಸಾಗರಕ್ಕಿಂತಲೂ ಆಳವಾಗಿರುವುವು. ನಿಮ್ಮ ಪ್ರೇಮದ ಜೇವಾಳವು ಅಪೂರ್ವವಾಗಿರುವುದು. ನಮಗಂತೂ ಸ್ವಾನಂದದಿಂದ ತೂಗಾಡಬೇಕೆನ್ನಿಸುವುದು ॥೪೫೮॥ ನೀವು ಗುರುಗಳ ವಿಷಯಕ್ಕೆ ವರ್ಣಿಸಿರುವುದು, ಅದು ಪ್ರೇಮಳ ಬ್ರಹ್ಮಜ್ಞಾನದ ಸ್ವರೂಪವಾಗಿರುವುದು. ಇದರಿಂದ ನಮಗೆ ಅತ್ಯಂತ ಸಮಾಧಾನವು ಲಭಿಸಿತು. ನಿಮ್ಮ ನಿರೂಪಣಕ್ಕೆ ಯಾವ ಪ್ರಕಾರದ ದೋಷವನ್ನು ಕೊಡಲು ಬರುವುದಿಲ್ಲ ॥೪೫೯॥ ನಿತ್ಯದಲ್ಲಿಯೂ ಗುರುಸ್ಮರಣೆಯನ್ನು ಮಾಡಬೇಕಾಗುವುದು. ಆ ಗುರುಗಳ ಕಥೆಯನ್ನು ನೀವು ಪ್ರೇಮದಿಂದ ಹೇಳಿರುವಿರಿ. ಇಂತಹ ಅಮೃತದ ಊಟೋಪಚಾರಕ್ಕೆ ಯಾರು ಸಾಕೆಂದು ಹೇಳಬೇಕು? ॥೪೬೦॥ ನಿಮ್ಮ ಭಕ್ತಿಯು ಜನಾರ್ದನರಲ್ಲಿ ಎಷ್ಟೊಂದು ದೃಢವಾಗಿದೆ ಎಂಬುದೂ ಕೂಡ ನಮಗೆ ತಿಳಿಯಿತು. ಆದ್ದರಿಂದ ಈನಿರೂಪಣವು ಅಪೂರ್ವವಾಗಿ ರಸಾಳವಾಯಿತು ॥೪೬೧॥ ನೀನು ಮೂಲ ಕಥೆಯಾದರೂ ಹೇಳಲಿ ಅಥವಾ ಆದರ ಆಡ್ಡ ಕಥೆಯಾದರೂ ಹೇಳಲಿ, ಆದರೂ ಆ ನಿನ್ನ ನಿರೂಪಣೆಯಂತಹ ಮಧುರತ್ವವು ಅನ್ಯ ಯಾವುದರಿಂದಲೂ ದೊರೆಯಲು ಸಾಧ್ಯವಿಲ್ಲ ॥೪೬೨॥ ಶುದ್ಧವಾದ ನಿರೂಪಣೆಯಿಂದ ನೀನು ಗುರುಗಳ ವರ್ಣನೆಯನ್ನು ಮಾಡಿರುವೆ. ಹೀಗೆ ಮಾಡಿ ನಾನು ಅಪರಾಧಿ ಎಂದು ಹೇಳಿಕೊಳ್ಳುವೆ, ಇದರಿಂದ ನಿನ್ನ ವಿನಯಬುದ್ಧಿಯು ಇದರಲ್ಲಿ ಅಡಕವಾಗಿರುವುದು ತೋರುತ್ತಿದೆ. ಶ್ರೋತೃಗಳವರ ಮಾನವನ್ನು ಹೆಚ್ಚಿಸುವೆ ॥೪೬೩॥ ನಿನ್ನ ಅಪರಾಧಬುದ್ಧಿಯು ಭಗವಂತನ ಚರಣದಲ್ಲಿ ಲೀನವಾಗಿರುವುದು. ಇದರಿಂದ ಅಪರಾಧದ ಶುದ್ಧಿಯಾಯಿತು. ಆದರಿಂದ ನೀನು ಶುದ್ಧವಾಗಿ ನಿರ್ದೋಷನಾಗಿರುವೆ ॥೪೬೪॥ ಗುರುಗಳ ಸ್ತವನದಲ್ಲಿ ತಲ್ಲೀನನಾಗುವೆ. ಆಗ ಮೂಲ ಕಥೆಯನ್ನು ಮರೆತುಬಿಡುವೆ. ಪ್ರೇಮದ ಜಾತಿಯೇ ಈ ಪ್ರಕಾರದ್ದಾಗಿರುವುದು. ಇದು ನಮಗೆ ಸಂಪೂರ್ಣವಾಗಿ ತಿಳಿದಿದೆ ॥೪೬೫॥ ಪುನಃ ಶ್ರೋತೃಗಳವರು ಹೇಳಿದರು; ಇದರಿಂದ ನಮ್ಮ ಮನಸ್ಸಿಗೆ ಬಹಳ ಆಶ್ಚರ್ಯವಾಗುವುದು ಇರಲಿ, ಈಗ ಮುಂದಿನ ಕಥೆಯನ್ನು ಆರಂಭಿಸಿ ಮೂಲ ಕಥೆಯನ್ನು ಹೇಳಿರಿ ॥೪೬೬॥ ಸಂತರ ಈ ಹೇಳಿಕೆಯನ್ನು ಮಾನ್ಯ ಮಾಡಿ ಅವರ ಚರಣಗಳನ್ನು ವಂದಿಸಿ ಈಗ ನಾನು ಮುಂದಿನ ಕಥೆಯನ್ನು ಹೇಳುವೆನು. ಆದ್ದರಿಂದ ನೀವು ಲಕ್ಷಕೊಟ್ಟು ಕೇಳಿರಿ ॥ ೪೬೭॥

ಯಾ ಪರೀ ತೋ ಅವಧೂತು। ಯದೂಸೀ ಸಾಂಗೇ ಪರಮಾರ್ಥು । ಸಂವಾದೇ ನಿವಾಲಾ ಪರಮಾದ್ಭುತು।ಮಗ ನಿವಾಂತು ರಾಹಿಲಾ ।।೪೬೮।।

ಶ್ರೀ ಭಗವಾನುವಾಚ :-

ಇತ್ಯುಕ್ತ್ವಾ ಸ ಯದುಂ ವಿಪ್ರಸ್ತಮಾಮಂತ್ರ್ಯ ಗಭೀರಧೀಃ ।
ವಂದಿತಃ ಸ್ವರ್ಚಿತೋ ರಾಜ್ಞಾ ಯಯೌ ಪ್ರೀತೋ ಯಥಾಗತಮ್ ॥ ೩೨॥

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು :- ಪ್ರಿಯ ಉದ್ಧವನೇ, ಅವಧೂತ ದತ್ತಾತ್ರೇಯನು ಯದುರಾಜನಿಗೆ ಈ ಪ್ರಕಾರವಾಗಿ ಉಪದೇಶವನ್ನು ಮಾಡಿದನು. ಯದುರಾಜನು ಅವರ ಪೂಜೆಯನ್ನು ಮಾಡಿದನು ಹಾಗೂ ವಂದಿಸಿದನು. ದತ್ತಾತ್ರೇಯರು ಪ್ರಸನ್ನರಾದರು. ಮತ್ತು ಆತನನ್ನು ಕೇಳಿ ತಮ್ಮ ಮಾರ್ಗದಿಂದ ಹೊರಟುಹೋದರು.

ಉದ್ಧವಾಸೀ ಮ್ಹಣೇ ಶ್ರೀಕೃಷ್ಣ । ರಾಯಾಸೀ ಸಾಂಗೋನಿ ಬ್ರಹ್ಮಜ್ಞಾನ । ಜಾಹಲೇ ದೇಖೋನಿ ಸಮಾಧಾನ । ಮಗ ಪುಸೋನ ನಿಘಾಲಾ ।।೪೬೯।। ರಾಜಾ ಧಾಂವೋನಿ ಲಾಗಲಾ ಚರಣಾ। ಪರಮ ಪ್ರೇಮೇ ಕರೀ ಪೂಜನಾ। ಕರೋನಿಯಾ ಪ್ರದಕ್ಷಿಣಾ । ಮಾಗುತಾ ಚರಣಾ ಲಾಗಲಾ ।।೪೭೦।। ''ಜಾಯ'' ಐಸೇ ನ ಬೋಲವೇ ಸರ್ವಥಾ। ''ರಾಹೇ'' ಮ್ಹಣತಾ ದಿಸೇ ಸ್ವಾಮಿತಾ । ವಿಯೋಗು ನ ಸಾಹವೇ ತತ್ತ್ವತಾ । ಬೋಲು ಸರ್ವಥಾ ಖುಂಟಲಾ ।।೪೭೧।। ತೇ ದೇಖೋನಿ ಅವಸ್ಥಾ । ಕೃಪಾ ಉಪಜಲೀ ಶ್ರೀದತ್ತಾ । ಹಾತ ಠೇವೂನಿ ಮಾಥಾ । ಪ್ರಸನ್ನತಾ ಉಪಜಲೀ ।।೪೭೨।। ''ಯೇಥೂನ ತುಜ ಮಜ ಆತಾ । ವಿಯೋಗು ನಾಹೀ ಸರ್ವಥಾ'' । ಐಸೇ ಆಶ್ವಾಸೋನಿ ನೃಪನಾಥಾ। ಹೋಯ ನಿಘತಾ ಶ್ರೀದತ್ತ ।।೪೭೩।। ಜೇಣೇ ಸುಖೇ ಹೋತಾ ಆಲಾ । ತೇಣೇಂಚಿ ಸುಖೇ ನಿಘತಾ ಝಾಲಾ । ರಾಜಾ ಅತಿಪ್ರೀತೀ ನಿವಾಲಾ । ಸುಖೀ ಝಾಲಾ ನಿಜಬೋಧೇ ।।೪೭೪ ।।

ಅವಧೂತವಚ : ಶ್ರುತ್ವಾ ಪೂರ್ವೇಷಾಂ ನ : ಸ ಪೂರ್ವಜಃ । ಸರ್ವಸಂಗವಿನಿರ್ಮುಕ್ತ : ಸಮಚಿತ್ತೋ ಬಭೂವ ಹ ॥೩೩॥

ಅರ್ಥ:- ನಮ್ಮ ಪೂರ್ವಜರ ಪೂರ್ವಜನಾದ ಯದುರಾಜನು ಅವಧೂತ ದತ್ತಾತ್ರೇಯರ ಈ ವಚನಗಳನ್ನು ಕೇಳಿ ಸಮಸ್ತ ಆಸಕ್ತಿಯಿಂದ ಮುಕ್ತರಾದರು ಮತ್ತು ಸಮದರ್ಶಿಯಾದರು.

ಪಾಹೋನಿ ಉದ್ಧವಾ ಉಜೂ । ಬೋಲತಾ ಜಾಲಾ ಅಧೋಕ್ಷಜು । ಮ್ಹಣೇ ಆಮಚೇ ಪೂರ್ವಜಾಂಚಾ ಪೂರ್ವಜು । ರಾಜಧ್ವಜು ಯದುವೀರು ॥೪೭೫॥ ಮ್ಹಣಸೀ ಮೀ ನೇಣೇ ತ್ಯಾಚೇ ನಾಂವ । ತೂ ಸಾಂಗತೋಸೀ ಹೇ ಅಪೂರ್ವ । ಪರೀ ಜ್ಯಾಚೇನಿ ನಾಮೇ ಆಮ್ಹೀ ಸರ್ವ । ''ವೀರ'' ಯಾದವ ಮ್ಹಣವಿತೋ ।।೪೭೬ ।। ಹರಿಖೇ ಮ್ಹಣೇ ನಂದನಂದು । ತೋ ಆಮಚಾ ಪೂರ್ವಜ ಯದು । ಬ್ರಹ್ಮಜ್ಞಾನಾಚಾ ಸಂವಾದು । ದತ್ತಾತ್ರೇಯೇಸೀ ಪೈ ಕೇಲಾ ।।೪೭೭।।

ಈ ಪ್ರಕಾರವಾಗಿ ಯಾವ ಅವಧೂತನು ಯದುರಾಜನಿಗೆ ಪರಮಾರ್ಥವನ್ನು ಹೇಳಿದನು. ಈ ಯಾವ ಪರಮಾದ್ಭುತವಾದ ಸಂವಾದವನ್ನು ಕೇಳಿ ಆತನ ಚಿತ್ತವು ಶಾಂತವಾಯಿತು. ಆಗ ಆತನು ಸ್ವಸ್ಥನಾಗಿ ಕುಳಿತುಕೊಂಡನು ।।೪೬೮।।

ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು. ಈ ಪ್ರಕಾರವಾಗಿ ರಾಜನಿಗೆ ಬ್ರಹ್ಮಜ್ಞಾನವನ್ನು ಹೇಳಿ ಆತನಿಗೆ ಸಮಾಧಾನವಾಗಿರುವುದನ್ನು ನೋಡಿ ಅವಧೂತನು ರಾಜನಿಗೆ ಕೇಳಿ ಹೋಗಲು ಹೊರಟನು ।।೪೬೯।। ಆಗ ರಾಜನು ಧಾವಿಸುತ್ತಾ ಹೋಗಿ ಆತನ ಚರಣಗಳನ್ನು ಹಿಡಿದನು. ಮತ್ತು ಬಹು ಪ್ರೇಮದಿಂದ ಆತನ ಪೂಜೆಗೈದನು. ಆತನಿಗೆ ಪ್ರದಕ್ಷಿಣೆಯನ್ನು ಹಾಕಿದನು. ಪುನಃ ಅವರ ಚರಣಗಳಲ್ಲಿ ಮಸ್ತಕವನ್ನಿಟ್ಟನು ।।೪೭೦।। ''ಹೋಗಿರಿ'' ಎಂದು ಹೇಳಲು ಮುಖದಿಂದ ಶಬ್ದವು ಹೊರಡದಾಯಿತು. ''ಇರಬೇಕು'' ಎಂದು ಹೇಳಬೇಕೆಂದರೆ ಅವರಲ್ಲಿ ಸ್ವಾಮಿತ್ವದ ಅಂದರೆ ಅಧಿಕಾರವನ್ನು ನಡೆಸಿದಂತಾಗುವುದು. ಅವರ ವಿಯೋಗವು ಸಹಿಸುವುದಾಗುತ್ತಿಲ್ಲ. ಆದ್ದರಿಂದ ಮುಖದಿಂದ ಯಾವ ಶಬ್ದವೂ ಹೊರಗೆ ಬಾರದಾಯಿತು ।।೪೭೧।। ಈಯಾವ ರಾಜನ ಅವಸ್ಥೆಯನ್ನು ಕಂಡು ದತ್ತಾತ್ರೇಯರಿಗೆ ಕರುಣೆಯು ಉತ್ಪನ್ನವಾಯಿತು. ಪುನಃ ಆತನ ಮಸ್ತಕದ ಮೇಲೆ ಪ್ರೇಮದಿಂದ ಹಸ್ತವನ್ನಿಟ್ಟು ಪ್ರಸನ್ನಮುದ್ರೆಯಿಂದ ಹೀಗೆ ಹೇಳಿದರು ।।೪೭೨।। ಹೇ ರಾಜನೇ, ಇಂದಿನಿಂದ ನಿನ್ನ ಮತ್ತು ನನ್ನ ಎಂದಿಗೂ ವಿಯೋಗವಾಗಲಾರದು. ಹೀಗೆ ರಾಜನಿಗೆ ಭರವಸೆಯನ್ನು ನೀಡಿ ಶ್ರೀ ದತ್ತಾತ್ರೇಯರು ಹೊರಟರು ।।೪೭೩।। ಯಾವ ಆನಂದದಿಂದ ಅವರು ಬಂದಿದ್ದರೋ ಅದೇ ಆನಂದದಿಂದ ಅವರು ಹೊರಟು ಹೋದರು. ರಾಜನು ಅತಿಶಯ ಪ್ರೇಮದಿಂದ ಶಾಂತನಾದನು. ಮತ್ತು ಆತ್ಮಜ್ಞಾನದಿಂದ ಆನಂದಿತನಾದನು ।।೪೭೪ ।।

ಎದುರಿನಲ್ಲಿದ್ದ ಉದ್ಧವನನ್ನು ಕಂಡು ಶ್ರೀಕೃಷ್ಣನು ಹೀಗೆ ಹೇಳಿದನು. ಯದುರಾಜನು ನಮ್ಮ ಪೂರ್ವಜರ ಪೂರ್ವಜನು. ಆತನು ಸರ್ವ ರಾಜರ ಮುಕುಟಮಣಿಯಾಗಿದ್ದನು ।।೪೭೫।। ನನಗೆ ಈತನ ಹೆಸರೇ ಗೊತ್ತಿಲ್ಲ. ನೀನು ಇದನ್ನು ಅಪೂರ್ವವಾಗಿ ಹೇಳುವೆ ಎಂದು ನೀನು ಅಂದುಕೊಳ್ಳಬಹುದು. ಆದರೆ ನಾವೆಲ್ಲ ವೀರರು ಆತನ ಹೆಸರಿನಿಂದಲೇ ಯಾದವರೆಂದು ಕರೆಯಿಸಿಕೊಳ್ಳುತ್ತಿದ್ದೇವೆ ।।೪೭೬।। ಆ ಯಾವ ನಂದನ ಕಂದನಾದ ಶ್ರೀಕೃಷ್ಣನು ಆನಂದದಿಂದ ಪುನಃ ಹೇಳಿದನು. ಯದುರಾಜನೇ ನಮ್ಮ ಪೂರ್ವಜನು. ಈತನೇ ದತ್ತಾತ್ರೇಯರಲ್ಲಿ ಬ್ರಹ್ಮಜ್ಞಾನದ ಸಂವಾದವನ್ನು ಮಾಡಿದನು ।।೪೭೭।।

ಶ್ರೀದತ್ತಾತ್ರೇಯಾಚ್ಯಾ ವಚನಾರ್ಥಾ । ವಿಶ್ವಾಸೋನಿ ಜಾಹಲಾ ಘೇತಾ । ತೇಣೇ ಸರ್ವಸಂಗವಿನಿರ್ಮುಕ್ತತಾ । ಆಲೀ ಹಾತಾ ಯದೂಚ್ಯಾ ॥೪೭೮॥ ಜೋ ಸಂಗು ಸಾಂಡೂನಿ ದೂರ ಗೇಲಾ । ತೇಣೇ ''ಸಂಗತ್ಯಾಗು'' ಚೀ ಕೇಲಾ। ಸಂಗೀ ಅಸೋನಿ ಸ್ನೇಹ ಸಾಂಡಿಲಾ । ''ಸಂಗಮುಕ್ತ'' ಝಾಲಾ ತೋ ಜಾಣ ॥೪೭೯॥ ಆಕಾಶ ಸರ್ವ ಪದಾರ್ಥಾಸೀ । ಮಿಳಾಲೇ ಅಸೇ ಸರ್ವ ದೇಶೀ । ಪರೀ ನಾತಳೇಚಿ ಸರ್ವಸಂಗಾಸೀ । ''ಸಂಗಮುಕ್ತತಾ'' ತ್ಯಾಸೀ ಬೋಲಿಜೇ ॥೪೮೦॥ ಯಾಹೂನಿ ವಿಶೇಷ ಸಂಗಮುಕ್ತತಾ । ಆಲೀ ಯದೂಚಿಯಾ ಹಾತಾ। ತೇಹೀ ಸಾಂಗೇನ ಕಥಾ। ಪರಿಸೇ ತತ್ತ್ವತಾ ಉದ್ಧವಾ ॥೪೮೧॥ ದತ್ತಾತ್ರೇಯಬೋಧೇ ತತ್ತ್ವತಾ । ಸರ್ವಸಂಗಾಮಾಜೀ ಅಸತಾ। ನ ದೇಖೇ ಸಂಗಾಚೀ ಕಥಾವಾರ್ತಾ । ''ವಿಶೇಷಮುಕ್ತತಾ'' ಯಾ ನಾಂವ ॥೪೮೨॥ ''ಮಜ ಪೂರ್ವೀ ದ್ವೈತಸಂಗು ಹೋತಾ । ತೋ ಜಾಲೂನಿ ನಿಃಸಂಗ ಝಾಲೋ ಆತಾ'' । ಯಾ ದೋನೀ ಸಮೂಳ ಮಿಥ್ಯಾ ವಾರ್ತಾ । ವಿನಿರ್ಮುಕ್ತತಾ ಪಾವಲೋ ॥೪೮೩॥ ದೋರ ಸಾಪು ನಾಹೀ ಝಾಲಾ ।ಪರೀ ಸಾಪುಪಣಾಚಾ ಆಳ ಆಲಾ । ತೋಹೀ ದೋರೇ ನಾಹಿಸಾ ಕೇಲಾ । ಭ್ರಾಂತೀ ಕಲ್ಪಿಲಾ ನಿಜಭ್ರಮು ॥೪೮೪॥ ದೋರು ದೋರಪಣೇ ಅಸೇ । ಸರ್ಪು ತೋ ಭ್ರಾಂತಾ ಮನೀ ವಸೇ । ಐಸೇ ಸಾಂಡೂನಿ ದ್ವೈತಪಿಸೇ । ರಾಯಾಸೀ ಸಾವಕಾಶೇ ಸಮಾಧೀ ॥೪೮೫॥ ಸಮಸಾಮ್ಯೇ ಸಮಾನ ಬುದ್ಧೀ । ತೇ ಬೋಲಿಜೇ ''ನಿಜಸಮಾಧೀ'' । ತೇ ಸಮಾಧೀ ಪಾವೋನಿ ತ್ರಿಶುದ್ಧೀ । ರಾಜಾ ನಿಜಪದೀ ಪಾವಲಾ ॥೪೮೬॥ ಕೃಷ್ಣ ಮ್ಹಣೇ ಉದ್ಧವಾಸೀ । ತೂ ಜನ್ಮೋನಿ ಐಶಿಯೇ ವಂಶೀ । ಜರೀ ಬ್ರಹ್ಮಜ್ಞಾನ ನ ಸಾಧಿಶೀ । ತರೀ ಉಣೇ ಪೂರ್ವಜಾಂಸೀ ಯೇಈಲ ॥೪೮೭॥ ಯಾಪರೀ ಹೃಷೀಕೇಶೀ । ತಿರಸ್ಕಾರೋನಿ ಉದ್ಧವಾಸೀ । ಝೋಂಬಾವಯಾ ಅದ್ವೈತಾಸೀ । ಪುಟ ಬುದ್ಧೀಸಿ ದೇತುಸೇ ॥೪೮೮॥ ಆಧೀಂಚಿ ವಿಖಾರೂ ಕಾಳಿಯಾಣಾ । ತ್ಯಾಂಚೇಹೀ ಪುಚ್ಛ ರಗಡಿಲ್ಯಾ ಜಾಣಾ । ಮಗ ಝೋಂಬಿನ್ನಲ್ಯಾ ಸತ್ರಾಣಾ । ನಾವರೇ ಕೋಣಾ ಸರ್ವಥಾ ॥೪೮೯॥ ಆಧೀಂಚಿ ಅನುತಾಪ ಉದ್ಧವಾಸೀ । ವರೀ ತಿರಸ್ಕಾರಿಲಾ ಹೃಷೀಕೇಶೀ । ತೋ ಗಿಳಾವಯಾ ಚಿದ್‌ಬ್ರಹ್ಮಾಸೀ । ನಿಜಮಾನಸೀ ಖವಳಲಾ ॥೪೯೦॥ ಪುಢಿಲೇ ಅಧ್ಯಾಯೀ ನಿರೂಪಣ । ಕೃಷ್ಣ ಉದ್ಧವ ಸಂವಾದ ಜಾಣ । ಸಾಂಗೇಲ ಗುರುಶಿಷ್ಯ ಲಕ್ಷಣ । ಶ್ರೋತ್ರೇ ವಿಚಕ್ಷಣ ಪರಿಸತು ॥೪೯೧॥

ಶ್ರೀದತ್ತಾತ್ರೇಯರ ವಚನಗಳಲ್ಲಿ ಪೂರ್ಣವಾದ ವಿಶ್ವಾಸವನ್ನಿಟ್ಟು ಶಬ್ದಗಳ ಹೃದ್ಗತವನ್ನು ಅರಿತುಕೊಂಡನು. ಆದ್ದರಿಂದ ಸರ್ವ ಸಂಗದಿಂದ ಆತನಿಗೆ ಮುಕ್ತತೆಯು ಲಭಿಸಿತು ॥೪೭೮॥ ಯಾರು ಸಂಗವನ್ನು ತ್ಯಾಗ ಮಾಡಿ ದೂರ ಹೋಗುವನೋ, ಆತನಿಗೆ ಕೇವಲ ಸಂಗತ್ಯಾಗ ಮಾಡಿದನು ಎಂದು ಹೇಳಬೇಕು. ಆದರೆ ಸಂಗದಲ್ಲಿದ್ದು ಯಾರು ಅದರ ಸ್ನೇಹವನ್ನು ತ್ಯಜಿಸುವನೋ, ಆತನು ಸಂಗಮುಕ್ತನಾದನು ಎಂದು ಹೇಳಬೇಕು ॥೪೭೯॥ ಆಕಾಶವು ಸರ್ವ ವಸ್ತುಗಳಲ್ಲಿ ಸರ್ವಭಾಗಗಳಿಂದಲೂ ವ್ಯಾಪಿಸಿಕೊಂಡಿರುವುದು. ಆದರೆ ಆ ವಸ್ತುಗಳ ಲೇಪವು ಅದಕ್ಕೆ ಎಂದಿಗೂ ಆಗುವುದಿಲ್ಲ. ಇದಕ್ಕೇನೇ ನಿಃಸಂಗವೆಂದು ಹೇಳುವರು ॥೪೮೦॥ ಆದರೆ ಇದಕ್ಕಿಂತಲೂ ವಿಶೇಷವಾಗಿರುವ ಸಂಸಾರಮುಕ್ತತೆಯು ಯದುರಾಜನ ಹಸ್ತಗತವಾಗಿತ್ತು. ಹೇ ಉದ್ಧವನೇ, ಆ ಕಥೆಯನ್ನು ಈಗ ಹೇಳುವೆನು, ಕೇಳು ॥೪೮೧॥ ನಿಜವಾಗಿಯೂ ಆತನು ಸರ್ವ ಸಂಗದಲ್ಲಿದ್ದರೂ ಕೂಡ ದತ್ತಾತ್ರೇಯರ ಬೋಧದಿಂದ ಸಂಗದ ಕಥೆ ವಾರ್ತೆಯೂ ಆತನಿಗೆ ತೋರುತ್ತಿದ್ದಿಲ್ಲ. ಅದಕ್ಕಾಗಿ ಇದರ ನಾಮವೇ ವಿಶೇಷಮುಕ್ತತೆಯಾಗಿರುವುದು ॥೪೮೨॥ ನನಗೆ ಪೂರ್ವದಲ್ಲಿ ದ್ವೈತಸಂಗವಿತ್ತು. ಈಗ ನಾನು ಅದನ್ನೆಲ್ಲ ಬಿಟ್ಟುಕೊಟ್ಟು ನಿಃಸಂಗನಾಗಿರುವೆನು ಎಂದು ಹೇಳುವ ಈ ಎರಡೂ ಮಾತುಗಳು ಮೂಲತಃ ಅಸತ್ಯವಾಗಿರುವುವು. ವಾಸ್ತವಿಕವಾಗಿ ನಾನು ಮುಕ್ತನೇ ಆಗಿರುವೆನು ॥೪೮೩॥ ಹಗ್ಗವು ಎಂದೆಂದಿಗೂ ಸರ್ಪವಾಗಿರುವುದಿಲ್ಲ. ಆದರೆ ಅದರಲ್ಲಿ ಸರ್ಪದ ಆರೋಪವು ಮಾತ್ರ ಆಗುತ್ತಿರುವುದು. ಆಗ ಆ ಆರೋಪವನ್ನು ಹಗ್ಗದ ಜ್ಞಾನದಿಂದ ತಳ್ಳಿಹಾಕಲು ಸರ್ಪವು ಮಿಥ್ಯೆಯಾಗುವುದು ॥೪೮೪॥ ನಿಜವಾಗಿ ನೋಡಲು ಹಗ್ಗವು ತಾನು ತನ್ನ ಸ್ವರೂಪದಲ್ಲಿಯೇ ಇರುವುದು. ಆದರೆ ಭ್ರಮಿಷ್ಠ ಜನರ ಮನದಲ್ಲಿ ಮಾತ್ರ ಸರ್ಪವಾಗಿರುವುದು. ಹೀಗಿರುವ ದ್ವೈತದ ಹುಚ್ಚು ಬಿಟ್ಟುಹೋಗಲು ರಾಜನಿಗೆ ಸಾವಕಾಶವಾಗಿ ಸಮಾಧಿಯು ಹತ್ತಿತು ॥೪೮೫॥ ಐಕ್ಯ ಭಾವದಿಂದ ಸಮಬುದ್ಧಿಯನ್ನು ಪಡೆದರೆ ಅದಕ್ಕೆ ನಿಜಸಮಾಧಿ ಎಂದು ಹೇಳುವರು. ಈ ಸಮಾಧಿಯೇ ರಾಜನಿಗೆ ಪ್ರಾಪ್ತವಾದ್ದರಿಂದ ಆತನು ಬ್ರಹ್ಮಸ್ವರೂಪಕ್ಕೆ ಮುಟ್ಟಿಕೊಂಡನು ॥೪೮೬॥ ಕೃಷ್ಣನು ಉದ್ಧವನಿಗೆ ಹೇಳಿದನು: ನೀನು ಇಂತಹ ದೊಡ್ಡ ವಂಶದಲ್ಲಿ ಜನ್ಮವನ್ನು ಪಡೆದು ಬ್ರಹ್ಮಜ್ಞಾನವನ್ನು ಪ್ರಾಪ್ತಮಾಡಿಕೊಳ್ಳದಿದ್ದರೆ ನಿನ್ನ ಪೂರ್ವಜರಿಗೆ ಸಣ್ಣತನ ಬಂದೀತು ॥೪೮೭॥ ಈ ಪ್ರಕಾರವಾಗಿ ಶ್ರೀಕೃಷ್ಣನು ಉದ್ಧವನಿಗೆ ತಿರಸ್ಕಾರ ರೂಪದಲ್ಲಿ ಹೇಳಿ ಅದ್ವೈತಕ್ಕೆ ಅಪ್ಪಿಕೊಳ್ಳುವುದಕ್ಕಾಗಿ ಆತನ ಬುದ್ಧಿಗೆ ಪುಟವನ್ನು ಕೊಟ್ಟನು ॥೪೮೮॥ ಮೊದಲೇ ವಿಷಾಕಾರೀ ಕರಿನಾಗರ ಸರ್ಪವು. ಅದರ ಬಾಲವನ್ನು ಕಾಲಿನಿಂದ ಹತ್ತಿಕ್ಕಲು, ಕೇಳುವುದೇನು? ಅದು ಕೂಡಲೇ ಕೋಪತಾಳಿ ಧ್ವಂಸ ಮಾಡಲು ಧಾವಿಸುವುದು. ಇದನ್ನು ಯಾರಿಗೂ ಆವರಿಸುವುದಾಗುವುದಿಲ್ಲ ॥೪೮೯॥ ಮೊದಲೇ ಉದ್ಧವನಿಗೆ ಅನುತಾಪವಾಗಿತ್ತು. ಅದರ ಮೇಲೆ ಶ್ರೀಕೃಷ್ಣನು ಆತನನ್ನು ಬೇಕೆಂತಲೇ ತಿರಸ್ಕರಿಸಿ ಮಾತನಾಡಿದನು. ಆದ್ದರಿಂದ ಆತನಿಗೆ ಪರಬ್ರಹ್ಮವನ್ನು ಪ್ರಾಪ್ತಮಾಡಿಕೊಳ್ಳಬೇಕೆಂಬ ಭಾವವು ಅಂತಃಕರಣದಲ್ಲಿ ಉಕ್ಕೇರಿತು ॥೪೯೦॥ ಈ ಯಾವ ಕೃಷ್ಣನ ಮತ್ತು ಉದ್ಧವನ ಸಂವಾದವು ಮುಂದಿನ ಅಧ್ಯಾಯದಲ್ಲಿದೆ. ಅದರಲ್ಲಿ ಗುರುಶಿಷ್ಯರ ಲಕ್ಷಣಗಳನ್ನು ಹೇಳಿರುವುದು. ಚತುರ ಶ್ರೋತೃಗಳವರು ಅದನ್ನು ಶ್ರವಣ ಮಾಡಬೇಕು ॥೪೯೧॥

ಏಕಾ ಜನಾರ್ದನು ಮ್ಹಣೇ । ಅಗಾಧ ಕೃಷ್ಣ ಮುಖೀಚೇ ಬೋಲಿಣೇ । ತೇ ಮೀ ಜರೀ ನಿರೋಪು ನೇಣೇ । ಪರೀ ತೇ ಗೋಡಪಣೇ ನಿವವಿತ ॥೪೯೨॥ ಸಾಖರೇಚಾ ಬೋಳೂ ಕೇಲಾ । ಪರೀ ಕಡೂಪಣಾ ನಾಹೀ ಆಲಾ । ತೈಸಾ ಗ್ರಂಥೂ ಪ್ರಾಕೃತಭಾಷಾ ಝಾಲಾ । ಅಸೇ ಸಂಚಲಾ ಸ್ವಾನಂದು ॥೪೯೩॥ ಜರೀ ಸೋನ್ಯಾಚೇ ಪೇಂಡುಕೇ ಕೇಲೇ । ಪರೀ ತೇ ದಗಡಮೋಲಾ ನಾಹೀ ಆಲೇ । ತೈಸೇ ಭಾಗವತ ಪ್ರಾಕೃತ ಝಾಲೇ । ಪರೀ ನಾಹಿ ಚುಕಲೇ ನಿಜಜ್ಞಾನಾ ॥೪೯೪॥ ಮುಕ್ತಾಫಳಾಲಾಗೀ ಸಾಗರೀ । ಬುಡ್ಯಾ ದೇತೀ ನಾನಾಪರೀ । ತೇ ಸಾಂಪಡಲಿಯಾ ಘರೀಚ್ಯಾ ವಿಹಿರೀ । ಜೋ ಅವ್ಹೇರೀ ತೋ ಮುರ್ಖ ॥೪೯೫॥ ತೈಶೀ ಸಂಸ್ಕೃತ ವ್ಯಾಖ್ಯಾನ ಆಟಾಟೀ । ಅತಿಕಷ್ಟೇ ಪರಮಾರ್ಥಿ ಭೇಟೀ । ತೇ ಜೋಡಿಲ್ಯಾ ಮರಾಠೀಸಾಠೀ । ಉಪೇಕ್ಷಾ ದೃಷ್ಟಿ ನ ಕರಾವೀ ॥೪೯೬॥ ಧನವಂತು ರತ್ನ ಪಾರಖೀ ಪುರಾ । ತೇಣೇ ಧುಳಿಮಾಜೀ ದೇಖಿಲ್ಯಾ ಹಿರಾ । ಗಾಂಠೀ ಬಾಂಧೋನಿ ಆಣೀ ಘರಾ । ಪಾರಖೀ ಖರಾ ನಿಜಜ್ಞಾನೇ ॥೪೯೭॥ ತೈಸೇ ಜ್ಞಾತೇ ವಿದ್ವಜ್ಜನ । ಗ್ರಂಥು ಮರಾಠೀ ದೇಖೋನ । ಉಪೇಕ್ಷಾ ನ ಕರಿತಾ ಕರಾವಾ ಯತ್ನ । ಪಾರಖೋನಿ ಚಿದ್ರತ್ನ ಸಾಧಾವಯಾ ॥೪೯೮॥ ಕ್ಷುದ್ರದೃಷ್ಟೀ ಪಹಾಣೇ ಪಾಹತಾ । ಬೋಲು ಲಾಗೇಲ ವ್ಯಾಸಾಚೇ ಗ್ರಂಥಾ । ಮಾ ಹೇ ತರೀ ಮರಾಠೀ ಕವಿತಾ । ಸಾಂಡೂನಿ ಕುಟಿಲತಾ ಪಾಹಾವೀ ॥೪೯೯॥ ಜ್ಯಾಂಸೀ ನಿಜಸುಖಾಚೀ ಆವಡೀ । ತೇ ಪ್ರಾಕೃತೀ ನ ಕಾಢಿತೀ ಖೋಡೀ । ಘೇತಿಲ ಜ್ಞಾನಗರ್ಭಾಚೀ ಗೋಡೀ । ಆವಸ್ಥಾ ಗಾಢೀ ಪರಮಾರ್ಥೀ ॥೫೦೦॥ ಜೇ ಸಾಚಾರ ಪರಮಾರ್ಥೀ । ತೇ ಅಧಿಕಾರೀ ಯೇ ಗ್ರಂಥೀ । ಜ್ಯಾಂಸೀ ಭಾಗವತೀ ಭಕ್ತೀ । ತೇ ಪಾವತೀ ನಿಜಸುಖ ॥೫೦೧॥ ಜ್ಯಾಸೀ ಭಾಗವತೀ ನಾಹೀ ಭಕ್ತಿ । ಕೋರಡೀ ವ್ಯುತ್ಪತ್ತೀ ಮಿರವಿತೀ । ತೇಹೀ ಜರೀ ನಿಂದಾ ನ ಕರಿತೀ । ತರೀ ಪುಢೇ ಪಾವತೀ ಭಕ್ತೀತೇ ॥೫೦೨॥ ನಿಂದಾ ವಸೇ ಜ್ಯಾಚೇ ಚಿತ್ತಾ । ತ್ಯಾಸ ಗತಿ ನಾಹೀ ಸರ್ವಥಾ । ನಿಂದಾ ಸಕಳ ಪಾಪಾಂಚೇ ಮಾಥಾ । ದೋಷ ಈಪರತಾ ಅಸೇನಾ ॥೫೦೩॥ ನಿಂದಕಾಚೇ ನಾಂವ ಘೇತಾ । ದೋಷ ವಾಚೇಸಿ ಹೋಯ ಲಾಗತಾ । ತಿಶೀದ್ಯಾವಯಾ ಪ್ರಾಯಶ್ಚಿತ್ತಾ । "ರಾಮ ರಾಮ "ಸರ್ವಥಾ ಮ್ಹಣಾವೇ ॥೫೦೪॥

ಜನಾರ್ದನ ರೂಪ ಏಕನಾಥನು ಹೀಗೆ ಹೇಳಿದನು. ಶ್ರೀಕೃಷ್ಣ ಮುಖದಲ್ಲಿನ ವಚನಗಳು ಅತ್ಯಂತ ಗೂಢವಾಗಿರುವುವು. ಅದರ ನಿರೂಪಣೆಯನ್ನು ಸರಿಯಾಗಿನನಗೆ ಮಾಡಲು ಬಾರದಿದ್ದರೂ ಅದರ ಮಾಧುರ್ಯದಿಂದ ಅಂತಃಕರಣವು ತೃಪ್ತವಾಗುವುದು ॥೪೯೨॥ ಒಂದು ವೇಳೆ ಸಕ್ಕರೆಯ ಹಾಗಲಕಾಯಿಯನ್ನು ತಯಾರಿಸಲು ಅದು ಕಹಿಯಾಗಲಾರದು. ಅದರಂತೆ ಈ ಗ್ರಂಥವು ಪ್ರಾಕೃತ ಭಾಷೆಯಲ್ಲಿದ್ದರೂ ಆತ್ಮಾನಂದವು ಅದರಲ್ಲಿ ಪರಿಪೂರ್ಣವಾಗಿ ತುಂಬಿ ತುಳುಕುತ್ತಿರುವುದು ॥೪೯೩॥ ಬಂಗಾರದ ಗೋಲನ್ನು ಅಬಡಾದಬಡಾ ತಯಾರಿಸಿದರೆ ಅದರ ಬೆಲೆಯು ಕಲ್ಲು ಮಣ್ಣಿನಂತಾಗುವುದಿಲ್ಲ. ಅದರಂತೆ ಭಾಗವತವನ್ನು ಪ್ರಾಕೃತ ಭಾಷೆಯಲ್ಲಿ ಹೇಳಿದರೂ ಅದರಲ್ಲಿನ ಆತ್ಮಜ್ಞಾನವು ಅಲ್ಪವೂ ಕಡಿಮೆಯಾಗುವುದಿಲ್ಲ ॥೪೯೪॥ ಮುತ್ತಿಗಾಗಿ ಸಮುದ್ರದಲ್ಲಿ ನಾನಾ ಪ್ರಕಾರವಾಗಿ ನೀರಿನಲ್ಲಿ ಮುಳುಗಿ ಏಳುವರು. ಅದರೆ ಅದೇ ಮುತ್ತುಗಳು ಮನೆಯಲ್ಲಿನ ಬಾವಿಯಲ್ಲಿ ದೊರಕಲು ಆದರ ತ್ಯಾಗವನ್ನು ಮಾಡುವವನು ಮೂರ್ಖನೆಂದು ತಿಳಿಯಬೇಕು ॥೪೯೫॥ ಅದರಂತೆ ಬಹು ಪರಿಶ್ರಮದಿಂದ ಸಂಸ್ಕೃತ ಭಾಷೆಯನ್ನು ತಿಳಿದುಕೊಂಡ ನಂತರ ಆಗುವ ಪರಮಾರ್ಥದ ಲಾಭವೇ ಮರಾಠೀ ಭಾಷೆಯಲ್ಲಿ ಆಗುತ್ತಿದ್ದರೆ ಅದರ ಉಪೇಕ್ಷೆಯನ್ನು ಎಂದಿಗೂ ಮಾಡಬಾರದು ॥೪೯೬॥ ರತ್ನ ಪರೀಕ್ಷಕನಾಗಿರುವ ಒಬ್ಬ ಧನಿಕನು ಮಣ್ಣಿನಲ್ಲಿ ಬಿದ್ದಿರುವ ಒಂದು ರತ್ನವನ್ನು ನೋಡಿ ಅದನ್ನು ತನ್ನ ಸೆರಗಿನಲ್ಲಿ ಕಟ್ಟಿಕೊಂಡನು. ಏಕೆಂದರೆ ಆತನು ಜ್ಞಾನದಿಂದ ನಿಜವಾದ ರತ್ನ ಪರೀಕ್ಷಕನಾಗಿದ್ದನು ॥೪೯೭॥ ಅದರಂತೆ ಜ್ಞಾನ ಮತ್ತು ವಿದ್ವಾನರು ಈ ಗ್ರಂಥವು ಮರಾಠಿಯಲ್ಲಿದೆ ಎಂದು ನೋಡಿ ಅದರ ಉಪೇಕ್ಷೆಯನ್ನು ಮಾಡದೇ ಸರಿಯಾಗಿ ಪರೀಕ್ಷಿಸಿ ಚಿತ್ಸ್ವರೂಪ ರತ್ನವು ಸಿಗುವ ಯತ್ನವನ್ನು ಮಾಡಬೇಕು ॥೪೯೮॥ ದೋಷ ದೃಷ್ಟಿಯಿಂದ ನೋಡಲು ಹೊರಟರೆ ಪ್ರತ್ಯಕ್ಷವಾಗಿ ವ್ಯಾಸರ ಗ್ರಂಥಗಳಿಗೂ ಹೆಸರಿಡಲು ಬರುವುದು. ಹೀಗಿರಲು ಇದು ಕೇವಲ ಮರಾಠೀ ಕಾವ್ಯವಾಗಿರುವುದು. ಅದಕ್ಕಾಗಿ ಕುಟಿಲತನವನ್ನು ಬಿಟ್ಟು ಈ ಗ್ರಂಥವನ್ನು ಓದಬೇಕು ॥೪೯೯॥ ಯಾರಿಗೆ ಆತ್ಮಸುಖದ ಪ್ರೇಮವಿದೆಯೋ ಅವರು ಪ್ರಾಕೃತ ಭಾಷೆಯ ದೋಷವನ್ನು ಎಣಿಸುವುದಿಲ್ಲ. ಅವರು ಅದರಲ್ಲಿಯ ಗೂಢವಾಗಿರುವ ಆತ್ಮಜ್ಞಾನದ ಮಾಧುರ್ಯವನ್ನು ಸೇವಿಸುತ್ತಿರುವರು. ಅವರಿಗೆ ಪರಮಾರ್ಥ ವಿಷಯಕ್ಕೆ ಬಹು ತಳಮಳವಿರುವುದು. ಮತ್ತು ಆಸ್ಥೆಯಿರುವುದು ॥೫೦೦॥ ಯಾರು ನಿಜವಾಗಿಯೂ ಅಂತಃಕರಣದಿಂದ ಶುದ್ಧ ಮತ್ತು ಪರಮಾರ್ಥಿ ಆಗಿರುವರೋ ಅವರೇ ಈ ಗ್ರಂಥದ ಅಧಿಕಾರಿಯಾಗಿರುವರು. ಯಾರಿಗೆ ಭಾಗವತದಲ್ಲಿ ಭಕ್ತಿ ಇರುವುದೋ ಅವರಿಗೆ ನಿಜಾನಂದವು ಪ್ರಾಪ್ತವಾಗುತ್ತಿರುವುದು ॥೫೦೧॥ ಯಾರಲ್ಲಿ ಭಾಗವತದಲ್ಲಿ ಭಕ್ತಿ ಇರುವುದಿಲ್ಲವೋ ಆ ವಿದ್ವಾನ ಜನರು ಅಹಂಕಾರವನ್ನು ಮೆರೆಯಿಸುತ್ತಿರುವರು. ಇವರು ನಿಂದೆ ಮಾಡುವುದು ನಿಲ್ಲಿಸಿದರೆ ಮುಂದೆ ಅವರ ಮನದಲ್ಲಿ ಭಕ್ತಿಯ ಉದಯವಾಗಬಹುದು ॥೫೦೨॥ ಯಾರ ಮನದಲ್ಲಿ ಯಾವಾಗಲೂ ನಿಂದೆಯೇ ಇದ್ದಲ್ಲಿ ಅವರಿಗೆ ಎಂದಿಗೂ ಸದ್ಗತಿಯು ಲಭಿಸಲಾರದು. ನಿಂದೆಯೇ ಸರ್ವ ಪಾಪಗಳ ಪಾಪವಾಗಿರುವುದು. ಇದಕ್ಕಿಂತಲೂ ಹೆಚ್ಚಿನ ದೋಷವೇ ಇಲ್ಲ ॥೫೦೩॥ ನಿಂದಕರ ನಾಮವನ್ನು ಉಚ್ಚರಿಸಿದರೆ ವಾಣಿಯು ದೋಷಯುಕ್ತವಾಗುವುದು. ಆ ವಾಣಿಗೆ ಪ್ರಾಯಶ್ಚಿತ್ತವನ್ನು ಕೊಡಲು ''ರಾಮ, ರಾಮ'' ಎನ್ನಬೇಕು ॥೫೦೪॥

ನಿಂದೇಮಾಜೀ ದೇಖೀಲೇ ಸ್ವಾರ್ಥಾ । ನಿಂದಕ ಪ್ರವರ್ತಲೇ ಭಕ್ತಹಿತಾ । ಬುಡವೂನಿ ಆಪುಲೇ ಸ್ವಾರ್ಥಾ । ಪರದೋಷ ಸರ್ವಥಾ ಕ್ಷಾಳಿಲೇ ॥೫೦೫॥ ಸಾಂಡೂನಿಯಾ ಗುಣದೋಷ । ಶ್ರೋತಾ ಹೋಆವೇ ಸಾವಕಾಶ । ಜೇಥ ವಕ್ತಾ ಹೃಷೀಕೇಶ । ಅತಿಸುರಸ ತೇ ಜ್ಞಾನ ॥೫೦೬॥ ಕೃಷ್ಣ ಉದ್ಧವಾಂಚೇ ಜ್ಞಾನ । ತತ್ಕಾಳ ನಿರಸೀ ಅಜ್ಞಾನ । ಏಕಾ ವಿನವೀ ಜನಾರ್ದನ । ಸಾವಧಾನ ಪರಿಯೇಸಾ ॥೫೦೭॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವ ಸಂವಾದೇ
ಏಕಾಕಾರಟೀಕಾಯಾಂ ನವಮೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಆದರೆ ನಿಂದೆಯಲ್ಲಿಯೂ ಸ್ವಾರ್ಥವು ತೋರುವುದು. ನಿಂದಕರಾದ ಇವರು ಭಕ್ತನ ಹಿತವನ್ನು ಮಾಡುತ್ತಿರುವರು. ಕಾರಣ ಅವರು ತಮ್ಮ ಹಿತವನ್ನು ಮುಳುಗಿಸಿ ಇನ್ನೊಬ್ಬರ ದೋಷವನ್ನು ತೊಳೆದುಬಿಡುವರು ॥೫೦೫॥ ಆದ್ದರಿಂದ ಶ್ರೋತೃಗಳವರು ಗುಣ ಮತ್ತು ದೋಷ ಈ ಎರಡನ್ನೂ ಬಿಟ್ಟುಕೊಟ್ಟು ಶಾಂತರಾಗಿರಬೇಕು. ಎಲ್ಲಿ ಸಾಕ್ಷಾತ್ ಶ್ರೀಕೃಷ್ಣನು ವಕ್ತಾನಾಗಿರುವನೋ ಅಲ್ಲಿನ ಜ್ಞಾನವು ಅತ್ಯಂತ ಸುರಸವಾಗಿರುವುದು ನಿಶ್ಚಿತವು ॥೫೦೬॥ ಶ್ರೀಕೃಷ್ಣನು ಉದ್ಧವನಿಗೆ ಹೇಳಿರುವ ಯಾವ ಜ್ಞಾನವು ಅಜ್ಞಾನದ ನಿರಸನೆಯನ್ನು ತತ್ಕಾಲದಲ್ಲಿ ಮಾಡಿಬಿಡುವುದು. ಆದ್ದರಿಂದ ಏಕಾಜನಾರ್ದನನು ವಿನಂತಿಸುವುದೇನೆಂದರೆ, ಏಕಾಗ್ರಚಿತ್ತದಿಂದ ಶ್ರವಣವನ್ನು ಮಾಡಿರಿ ॥೫೦೭॥

ಈ ಪ್ರಕಾರವಾಗಿ ಶ್ರೀಮದ್ಭಾಗವತ ಮಹಾಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದಲ್ಲಿನ
(ಯದು- ಅವಧೂತದ) ಏಕನಾಥ ಮಹಾರಾಜ ಭಾಷ್ಯದ ಒಂಬತ್ತನೆಯ ಅಧ್ಯಾಯ ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಹತ್ತನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ಧನ್ವಂತರೀ । ಜ್ಯಾಚೀ ದೃಷ್ಟೀಚಿ ನಿರುಜ ಕರೀ । ತ್ಯಾವಾಂಚೋನಿ ಸಂಸಾರೀ । ಭವರೋಗು ದುರೀ ನ ಕರವೇ ॥೧॥ ಜ್ಯಾ ಭವರೋಗಾಚೇನಿ ದರ್ಪೇ। ಪುಘಾಂತ ತಾಪಲೀ ತ್ರಿವಿಧತಾಪೇ । ''ಮೀ ಮಾಝೇ'' ಯೇಣೇ ಸಂಕಲ್ಪೇ । ವಾಗ್ಜಲ್ಪೇ ಜಲ್ಪತೀ ॥೨॥ ಪಡಿಲೀ ದ್ವೈತಾಚಿಯಾ ದುಖಣಾ । ತೊಂಡೀಚೀ ಚವೀ ಗೇಲೀ ಜಾಣಾ । ಮುಖಾ ಆಲಾ ಕಡವಟಪಣಾ । ಕಟು ವಚನಾ ಬೋಲತು ॥೩॥ ಜೇಥೇ ವ್ಯಾಧಿಚೇನಿ ಸನ್ನಿಪಾತೇ । ವಿವೇಕ ಹಾಣೋನಿಯಾ ಲಾತೇ । ಉಮರುಡೂನಿ ಧೈರ್ಯ ಹಾತೇ । ವಾಸನಾವನಾತೇ ಹಿಂಡತೀ ॥೪॥ ಮನೋರಥಕರ್ದಮೀ ಚರಫಡಿತ । ಸಂಕಲ್ಪ ಮೃಗಜಳೀ ಬುಡತ। ವೇಗೀ ನಿರಸೋನಿಯಾ ಪಡತ । ಟೇಂಕ ಚಢತಾ ಸ್ವರ್ಗಾಚೇ ॥೫॥ ವೋರಬಡತ ಸ್ನೇಹಾಚೇ ಆರಟೀ। ಗೋವಿತ ಲೋಭಾಚೇ ಬೋರಾಂಟೀ । ಖಿಳಿಲಾ ಪ್ರಪಂಚಾಚಿಯಾ ಕಂಠೀ । ಮಾರಿತಾ ನುಠೀ ತೇಥೂನಿ ॥೬॥ ಭವರೋಗಭ್ರಮೇ ಭ್ರಮಲೇ ಕೈಸೇ । ಖಾವೋ ನಯೇ ತೇ ಖಾವೋ ಬೈಸೇ । ಕರೂ ನಯೇ ತೇ ಕರಿತಾ ದಿಸೇ। ಯೋಷಿತಾಸರಿಸೇ ಧಾಂವತ ॥೭॥ ತೇಥ ಧನಭಯಾಚೇ ಶಾರೇ ಯೇತ । ತೇಣೇ ಥರಥರಾ ಕಾಂಪತ । ಧಾಕೇ ಧಾಕೇ ಘಾಮೇಜತ । ದಡೀ ದೇತ ಗುಪ್ತತ್ವೇ ॥೮॥ ಭೋಗಾಭಿಮಾನು ಚಢೇ ದೇಹೀ । ತೇಂವ್ಹಾನ ರಾಹೇ ಖಾಟೇ ಭುಈ । ವಿಧೀಚೇ ಪಾಂಘರೂಣ ಟಾಕೀ ಪಾಹೀ। ಡೋಳಾ ಡಾಯೀ ಲಾಗೇನಾ॥೯॥ ಉಭೇ ನ ರಾಹವೇ ಐಕ್ಯವೃತ್ತೀ । ಕ್ಷೀಣ ಝಾಲೀ ಜ್ಞಾನಶಕ್ತೀ । ಪಡಲೀ ಜಡತ್ವೇ ಲೋಳತೀ। ಪಾಣೀ ಮಾಗತೀ ವಿಷಯಾಂಚೇ ॥೧೦॥ ಅಲ್ಪಅಲ್ಪ ದೇತಾ ತೇ ಜಳ । ಕಡಕಡೂನಿ ಝೋಂಬತೀ ಪ್ರಬಳ । ''ಆಮ್ಹಾಸೀ ಘಾರ ದ್ಯಾಗಾ ಜಳ । ತೃಷಾ ಕೇವಳ ವೋಳೇನಾ'' ॥೧೧॥

ಹೇ ಓಂಕಾರರೂಪ ಸದ್ಗುರು ರಾಯನೇ, ನಿನಗೆ ನನ್ನ ನಮಸ್ಕಾರವು. ನೀನು ಧನ್ವಂತರಿಯಾಗಿರುವೆ. ನಿನ್ನ ಕೃಪಾದೃಷ್ಟಿಯು ಜೀವಿಗಳನ್ನು ರೋಗಗಳಿಂದ ಮುಕ್ತಗೊಳಿಸುವುದು. ಇದನ್ನು ಬಿಟ್ಟರೇ, ಅನ್ಯರಾರೂ ಈ ಸಂಸಾರದಲ್ಲಿನ ದುಃಖವನ್ನು ದೂರ ಮಾಡಲು ಸಾಧ್ಯವಿಲ್ಲ ॥೧॥ ಈ ಭವರೋಗದಿಂದ ಮಾನವನು ತ್ರಿವಿಧ ತಾಪಗಳಿಂದ ಬೆಂದುಹೋಗುತ್ತಿರುವನು. ''ನಾನು ಮತ್ತು ನನ್ನದು'' ಎಂಬ ಸಂಕಲ್ಪದಿಂದ ವ್ಯರ್ಥವಾಗಿ ಬಡಬಡಿಸುತ್ತಿರುವನು ॥೨॥ ದ್ವೈತಭಾವನೆಯ ವಿಕಾರವು ಹುಟ್ಟಿಕೊಂಡಿರುವುದರಿಂದ ಆತನ ಮುಖದಲ್ಲಿನ ರುಚಿಯು ಇಲ್ಲದಾಗುವುದು. ಮುಖವೆಲ್ಲ ಕಹಿಯಾಗುವುದು. ಆದ್ದರಿಂದ ಅವನ ಮುಖದಿಂದ ಹೊರಬೀಳುವ ಶಬ್ದಗಳೂ ಕೂಡ ಕಹಿಯಾಗಿರುವುವು. ಮುಖದಿಂದ ವಿಷವು ಹೊರಬೀಳುತ್ತಿರುತ್ತದೆ ॥೩॥ ವ್ಯಾಧಿಯ ಸನ್ನಿಪಾತದಲ್ಲಿ ವಿವೇಕಕ್ಕೆ ಒದ್ದೋಡಿಸುವರು. ಧೈರ್ಯಕ್ಕೆ ತಳ್ಳಿಬಿಡುವರು ಮತ್ತು ವಾಸನಾರೂಪ ವನದಲ್ಲಿ ತಿರುಗಾಡುತ್ತಿರುವರು ॥೪॥ ಆಗ ಇವರು ಮನೋರಥರೂಪ ಜಿಗುಟಾದ ಕೆಸರಿನಲ್ಲಿ ಸಿಕ್ಕಿಕೊಳ್ಳುವರು, ಸಂಕಲ್ಪರೂಪ ಮೃಗಜಲದಲ್ಲಿ ಮುಳುಗುವರು. ಮತ್ತು ಸ್ವರ್ಗದ ಶಿಖರವನ್ನು ಏರುತ್ತಿರಲು ತತ್ಕಾಲದಲ್ಲಿ ಕಾಲು ಜಾರಿ ಕೆಳಗೆ ಬೀಳುವರು ॥೫॥ ಸ್ನೇಹರೂಪ ಮುಳ್ಳಿನ ಗಿಡಗಂಟೆಗಳು ಅವರಿಗೆ ಚುರಿಕೊಳ್ಳುತ್ತವೆ. ಲೋಭರೂಪ ಬಾರೀಕಂಟಿಯ ಮುಳ್ಳುಗಳು ಚುಚ್ಚುತ್ತಿವೆ. ಆದರೂ ಪ್ರಪಂಚದ ಕೊರಳಿಗೆ ಗಟ್ಟಿಯಾಗಿ ಅಪ್ಪಿಕೊಂಡು ಬಿಡುವರು. ತ್ರಾಸಾಗಿದ್ದರೂ ಅಲ್ಲಿಂದ ಅಗಲಲಾರರು ॥೬॥ ಈ ಭವರೋಗದ ಭ್ರಮೆಯಿಂದ ಇವರು ಹುಚ್ಚುಚ್ಚಾರ ನಡೆಸುವರು. ತಿನ್ನಬಾರದ್ದೆಲ್ಲ ತಿನ್ನುವರು. ಮಾಡಬಾರದ್ದನ್ನೆಲ್ಲಾ ಮಾಡುವರು. ಮತ್ತು ಸ್ತ್ರೀಯರ ಛಂದದಲ್ಲಿ ಕುಣಿಯುತ್ತಿರುವರು ॥೭॥ ದ್ರವ್ಯದ ಭಯದಿಂದ ಇವರ ಮೈಮೇಲೆ ಕೂದಲುಗಳು ಎದ್ದು ನಿಲ್ಲುವುವು. ಮತ್ತು ಇವರು ಗಡಗಡನೇ ನಡುಗುತ್ತಿರುವರು. ಭಯದಿಂದ ಸರ್ವಾಂಗಕ್ಕೂ ಬೆವರು ಬರುವುದು. ಇಂತಹ ಅವಸ್ಥೆಯಲ್ಲಿ ಎಲ್ಲಿಯಾದರೂ ಗುಪ್ತಸ್ಥಳದಲ್ಲಿ ಅಡುಗಿಕೊಳ್ಳುವರು ॥೮॥ ಶರೀರದಲ್ಲಿ ಉಪಭೋಗದ ಅಭಿಮಾನವು ನಿರ್ಮಾಣವಾಗಲು ಆಗ ಅವರು ನೆಲದಲ್ಲಾಗಲಿ, ಮಂಚದ ಮೇಲಾಗಲೀ ಮಲಗಲಾರರು. ಅವರು ವಿಧಿಯ ಹೊದಿಕೆ ಒಗೆದು ಬಿಡುವರು. ಅವರ ದೃಷ್ಟಿಯು ತಿರುವು ಮುರುವು ಆಗಿ ಕಣ್ಣಿಗೆ ಕಣ್ಣು ಹತ್ತುವುದಿಲ್ಲ ॥೯॥ ಐಕ್ಯವೃತ್ತಿಯಿಂದ ಇವರು ಒಂದು ಕ್ಷಣ ಸಹ ನಿಂತುಕೊಳ್ಳಲಾರರು. ಇವರ ಜ್ಞಾನಶಕ್ತಿಯು ಕ್ಷೀಣವಾಗಿಬಿಡುವುದು. ಇವರು ಜಡಬುದ್ಧಿಯಿಂದ ಉರುಳಾಡುತ್ತಿರುವರು. ವಿಷಯ ರೂಪ ನೀರನ್ನು ಬೇಡುತ್ತಿರುವರು ॥೧೦॥ ಅಲ್ಪಸ್ವಲ್ಪ ನೀರನ್ನು ಕೊಟ್ಟರೆ ಅದರಿಂದ ಇವರಿಗೆ ತೃಪ್ತಿಯಾಗದೇ ನಮಗೆ ವಿಷಯ ರೂಪ ನೀರನ್ನು ಕುಡಿಯಲು ಕೊಡಿರಿ, ನಮ್ಮ ನೀರಡಿಕೆ ನೀಗದಾಗಿದೆ, ಎಂದು ಹೇಳುತ್ತ ಒದರುತ್ತಿರುವರು ॥೧೧॥

ಕುಪಥ್ಯ ಕರಿತಾ ನಿರಂತರ । ತಂವ ತೋ ಝಾಲಾ ಜೀರ್ಣಜ್ವರ । ಕ್ಷಯೋ ಲಾಗಲಾ ಜೀ ಘೋರ । ಕ್ಷೀಣ ಶರೀರ ಪಡಿಯೇಲೇ ॥೧೨॥ ಕ್ಷಣಕ್ಷಣಾ ಅತಿಕ್ಷೀಣತಾ । ವಿಕಾರ ಸಂಚರಲೇ ಜೀವಿತಾ । ತೇಣೇ ಪ್ರಬಳ ವಾಢಲೀ ಚಿಂತಾ । ಸುಖ ಸರ್ವಥಾ ಬುಡಾಲೇ ॥೧೩॥ ನವಲ ರೋಗಾಚಾ ಪಡಿಪಾಡು । ಗೋಡ ಪರಮಾರ್ಥ ತೋ ಜಾಲಾ ಕಡೂ । ಕೇವಳ ವಿಷಪ್ರಾಯ ವಿಷಯ ಕಡೂ । ತೋಚಿ ಗೋಡು ಪೈ ಝಾಲಾ ॥೧೪॥ ತೇ ವ್ಯಾಧೀಚಿಯಾ ಉಫಾಡಾ । ದೇತಾ ಸತ್ಕಥಾಕಾಢಾ । ಶ್ರವಣಮುಖೀಚ್ಯಾ ಭಾವಾರ್ಥದಾಢಾ । ಪಾಡೀ ಪುಢಾ ದಾಂತಖಿಳೀ ॥೧೫॥ ದೇತಾ ತುಲಸೀಮಕರಂದ ನಸೂ । ವರತಾ ಜಾವ್ಯೋ ನೇದೀ ಶ್ವಾಸು । ಮಸ್ತಕ ಝಾಡೀ ಮಾನೀ ತ್ರಾಸು । ರೋಗೇ ಬಹುವಸು ವ್ಯಾಪಿಲಾ ॥೧೬॥ ಐಸಾ ರೋಗ ದೇಖೋನಿಯಾ ಗಾಢಾ । ವೈದ್ಯ ಆಚಾರ್ಯ ಧಡಪುಡಾ । ಕೃಪಾ ಪಾಹೇ ಜಯಾಕಡಾ । ತೋ ರೋಕಡಾ ವಾಂಚವೀ ॥೧೭॥ ನಿಧಡಾ ವೈದ್ಯ ತೋ ಸುಬುದ್ಧಿ । ಜೀವು ಗೇಲಿಯಾ ಮರೋ ನೇದೀ । ಜೀವೇವೀಣ ವಾಂಚವೀ ತ್ರಿಶುದ್ಧಿ । ಅಗಾಧ ಸಿದ್ಧಿ ತಯಾಚೀ ॥೧೮॥ ಶುದ್ಧ ಭಾಗ್ಯೇಕರೂನಿ ಜಾಣ । ತೋ ಕರೀ ಕೃಪಾಕೂರ್ಮಾವಲೋಕನ । ತೇಚಿ ರೋಗಿಯಾ ಅಮೃತಪಾನ । ಹೋಯ ಸಾವಧಾನ ತತ್ಕಾಳ ॥೧೯॥ ಏವಂ ಝಾಲಿಯಾ ಸಾವಧಾನ । ರೋಗೀ ಆಪಣೆಯಾ ಆಪಣ । ನಿತ್ಯಾನಿತ್ಯಾಚೇ ಪಾಚನ । ಕರೀ ಸೇವನ ಸಾಕ್ಷೇಪೇ ॥೨೦॥ ತೇಣೇ ನ ಫಿಟೇಚಿ ಜೀರ್ಣಜ್ವರು । ನ ತುಟೇ ಕ್ಷಯಾಚಾ ಮಹಾಮಾರು । ಹೇ ದೇಖೋನಿಯಾ ವೈದ್ಯಸದ್ಗುರು । ರಸೋಪಚಾರು ಮಾಂಡಿಲಾ ॥೨೧॥ ತೇಣೇ ಅಕ್ಷರರಸ - ಅರ್ಧಮಾತ್ರಾ । ದೇತಾ ಕ್ಷಯಾಚಾ ಥಾರಾ । ಮೋಡೂನಿಯಾ ಶರೀರಾ । ಪೂರ್ವಪರಂಪರಾ ಅಕ್ಷಯ ಕೇಲೇ ॥೨೨॥ ದಾರುಣ ಚುಕವಾವಯಾ ಕುಪಥ್ಯ । ವೈರಾಗ್ಯ ರಾಖಣ ಠೇವಿಲೇ ನಿತ್ಯ । ಲಾವೂನಿ ಅನುಸಂಧಾನಾಚೇ ಪಥ್ಯ । ನಿರ್ದಾಳಿಲಾ ತೇಥ ಭವರೋಗು ॥೨೩॥ ರೋಗೀ ಉಪಚಾರಿಲ್ಯಾವರೀ । ಪ್ರಬಳ ಕ್ಷುಧಾ ಖವಳೇ ಭಾರೀ । ಚಿತ್ತಚಿಂತೇಚ್ಯಾ ಲಾಹ್ಯಾ ಕರೀ । ಕ್ಷಣಾಮಾಝಾರೀ ಖಾದಲ್ಯಾ ॥೨೪॥ ಕಾಳೇ ಗೋರೇ ಚತುರ್ವರ್ಣಚಣೇ । ಆಶ್ರಮೇಸೀ ಭಾಜಿಲೇ ಫುಟಾಣೇ । "ಅಹಂಸೋಹಂ" ಗುಳೇಸೀ ತೇಣೇ । ನಿಃಶೇಷ ಖಾಣೇ ತತ್ಕಾಳ ॥೨೫॥

ಈ ಪ್ರಕಾರವಾಗಿ ನಿರಂತರವಾಗಿ ಕುಪಥ್ಯವನ್ನೇ ಮಾಡಿದ್ದರಿಂದ ಇವರಿಗೆ ಜೀರ್ಣಜ್ವರ ಹುಟ್ಟುವುದು. ಕೊನೆಗೆ ಕ್ಷಯರೋಗವು ಹತ್ತಿಕೊಂಡು ಅವರ ಶರೀರವು ಕ್ಷೀಣವಾಗಿ ಬಿಡುವುದು ॥೧೨॥ ಕ್ಷಣಕ್ಷಣಕ್ಕೆ ಅಶಕ್ತತೆಯು ಬೆಳೆಯುತ್ತ ಸಾಗುವುದು. ಜೀವಕ್ಕೆ ಅನೇಕ ವಿಕಾರಗಳು ಅಂಟಿಕೊಳ್ಳುವುವು. ಇದರಿಂದ ಚಿಂತೆಗಳು ಹೆಚ್ಚಾಗುತ್ತ ಹೋಗುವುವು. ಕೊನೆಗೆ ಯಾವ ಸುಖವು ಇಲ್ಲದಾಗುವುದು ॥೧೩॥ ರೋಗದ ಸ್ಥಿತಿಯು ಬಹು ವಿಲಕ್ಷಣವಾಗಿರುವುದು. ಸಿಹಿಯಾಗಿರುವ ಪರಮಾರ್ಥವು ಕಹಿಯಾಗುವುದು. ಮತ್ತು ವಿಷಪ್ರಾಯವಾಗಿರುವ ವಿಷಯಗಳು ಸಿಹಿಯಾಗುವುವು ॥೧೪॥ ಈ ರೋಗವನ್ನು ಕಳೆಯಬೇಕೆಂದು ಆತನಿಗೆ ಸತ್ಕಥಾರೂಪ ಕಾಢೆಯನ್ನು ಕೊಡಬೇಕೆಂದರೆ ಆತನ ಕಿವಿಗಳ ಮುಖವು ತೆರೆಯುವುದೇ ಇಲ್ಲ. ಇವನು ಸತ್ಕಥೆಯನ್ನು ಕೇಳುವುದಿಲ್ಲ ॥೧೫॥ ತುಳಸಿಯ ರಸ ಮತ್ತು ಜೇನುತುಪ್ಪವನ್ನು ಮೂಗಿನಲ್ಲಿ ಹಾಕಲು ಅವನು ಸೀನುವುದಿಲ್ಲ. ಮಸ್ತಕವನ್ನು ಝಾಡಿಸುವನು. ಈತನಿಗೆ ಬಹಳ ತ್ರಾಸಾಗುವುದು. ಈ ಪ್ರಕಾರವಾಗಿ ಈತನು ಪರಿಪೂರ್ಣವಾಗಿ ರೋಗಗ್ರಸ್ತನಾಗುವನು ॥೧೬॥ ಈತನ ಯಾವ ಈ ಭಯಂಕರವಾದ ರೋಗವನ್ನು ನೋಡಿ ಸದ್ಗುರುರೂಪ ವೈದ್ಯನು ಮುಂದೆ ಬರುವನು. ಮತ್ತು ಕೃಪಾದೃಷ್ಟಿಯಿಂದ ಆತನಿಗೆ ನಿಜವಾಗಿಯೂ ಬದುಕಿಸುವನು ॥೧೭॥ ಯಾವ ಈ ಸದ್ಗುರುರೂಪ ವೈದ್ಯನು ಬಹಳ ಬುದ್ಧಿವಂತನಾಗಿರುವುದರಿಂದ ರೋಗಿಯ ಜೀವವು ಹೋಗುತ್ತಿದ್ದರೂ ಆತನಿಗೆ ಸಾಯಲು ಬಿಡಲಾರನು. ಜೀವವಿಲ್ಲದೇ ಆತನಿಗೆ ಜೀವಂತನಿಡುವನು. ಇಂತಹ ವಿಲಕ್ಷಣವಾದ ಸಿದ್ಧಿಯು ಸದ್ಗುರುಗಳದ್ದಾಗಿರುವುದು ॥೧೮॥ ಕೂರ್ಮವು ಕೇವಲ ತಾನು ಪ್ರೇಮದಿಂದ ಅವಲೋಕನೆಯನ್ನು ಮಾಡುತ್ತ ತನ್ನ ಮರಿಗಳನ್ನು ಜೋಪಾನ ಮಾಡುವುದು. ಅದರಂತೆ ಮಹಾಭಾಗ್ಯವಂತರಾದ ರೋಗಿಯನ್ನು ಸದ್ಗುರುಗಳು ಅವರತ್ತ ಕೃಪಾದೃಷ್ಟಿಯಿಂದ ನೋಡುವರು. ಈ ಸದ್ಗುರುಗಳು ಕೇವಲ ಪ್ರೇಮದ ಅವಲೋಕನವೇ ರೋಗಿಯ ಭ್ರಮೆಯನ್ನು ನಾಶಮಾಡಿ ಆತನಿಗೆ ಪರಿಪೂರ್ಣವಾಗಿ ಎಚ್ಚರಿಸುವುದು ॥೧೯॥ ಹೀಗೆ ಎಚ್ಚರಾದಮೇಲೆ ಆ ರೋಗಿಯು ನಿತ್ಯ - ಅನಿತ್ಯವನ್ನು ಜೀರ್ಣಿಸಿಕೊಂಡು ಕಾಳಜಿಯಿಂದ ಅದರ ಸೇವೆಯನ್ನು ಮಾಡಲಾರಂಭಿಸುವನು ॥೨೦॥ ಆದರೆ, ಇಷ್ಟರಿಂದಲೇ ಆತನ ಜೀರ್ಣಜ್ವರವು ಇಲ್ಲದಾಗುವುದಿಲ್ಲ. ಹಾಗೆಯೇ ಕ್ಷಯದ ಲಕ್ಷಣಗಳೂ ಕಡಿಮೆಯಾಗುವುದಿಲ್ಲ. ಆಗ ಸದ್ಗುರು ರೂಪ ವೈದ್ಯನು ರಸದ ಉಪಚಾರವನ್ನು ಮಾಡಲಾರಂಭಿಸುವನು ॥೨೧॥ ಸದ್ಗುರುಗಳು ರೋಗಿಗೆ "ಅರ್ಧಮಾತ್ರಾರೂಪ ಅಕ್ಷರರಸ" ಅಂದರೆ ಪ್ರಣವದ ಅರ್ಧಮಾತ್ರೆಯನ್ನು ಕೊಡುತ್ತಲೇ ಕ್ಷಯರೋಗವು ಇಲ್ಲದಾಗಿ ಆತನು ಪೂರ್ಣವಾಗಿ ಅಕ್ಷಯನಾಗುವನು ॥೨೨॥ ರೋಗಿಯು ದಾರುಣವಾದ ಅಪಥ್ಯವನ್ನು ಮಾಡಬಾರದೆಂದು ಆತನಿಗೆ ವೈರಾಗ್ಯವೆಂಬ ಕಾವಲು ಇಡುವನು. ಮತ್ತು ಸತತವಾಗಿ ಆತ್ಮಚಿಂತನದ ಪಥ್ಯವನ್ನು ಆರಂಭಿಸುವನು. ಇದರಿಂದ ಭವರೋಗವು ಇಲ್ಲದಾಗುವುದು ॥೨೩॥ ಈ ಪ್ರಕಾರವಾಗಿ ಉಪಚಾರವನ್ನು ಮಾಡಿದ ನಂತರ ರೋಗಿಯು ಪೂರ್ಣವಾಗಿ ಗುಣಮುಖನಾಗುವನು. ಆಗ ಆತನಿಗೆ ಅತಿಶಯವಾಗಿ ಹಸಿವೆಯಾಗುವುದು. ಆಗ ಆತನು ಮಾನಸಿಕ ಚಿಂತೆಗಳ ಅರಳು ಮಾಡಿ ಒಂದೇ ಕ್ಷಣದಲ್ಲಿ ಎಲ್ಲವನ್ನೂ ತಿಂದು ಬಿಡುವನು ॥೨೪॥ ತದನಂತರ ನಾಲ್ಕು ವರ್ಣ ನಾಲ್ಕು ಆಶ್ರಮ ರೂಪ ಕಪ್ಪು ಹಾಗೂ ಬಿಳುಪು ಕಡಲೆಗಳನ್ನು ಹುರಿದು ಅವುಗಳನ್ನು ಅಹಂ, ಸೋಹಂ ಎಂಬ ಬೆಲ್ಲದ ಜೊತೆಮಾಡಿ ತಿಂದುಬಿಡುವನು ॥೨೫॥

ಫಳಾಭಿಲಾಷೇಸೀ ಆಶಾ । ಬೋಂಡೇ ಭರಲೀ ಹೋತೀ ಖಸಖಸಾ । ತೀಹೀ ಖಾದಲೀ ಘಸಘಸಾ । ನ ಲಾಗತಾ ಘಾಸಾ ಗಿಳಿಯೇಲೀ ।೨೬॥ ಗೂಳ ಸಾಖರೇಚಾ ಪಡಿಪಾಡೂ । ಖಾದಲೇ ಕರ್ಮಾಕರ್ಮಾಚೇ ಲಾಡೂ । ಖಾತಾ ನ ಮ್ಹಣೇ ಗೋಡ ಕಡೂ । ಲಾಗಲಾ ಝೋಡೂ ಸ್ವಇಚ್ಛಾ ।೨೭॥ "ಬ್ರಹ್ಮಾಹಮಸ್ಮೀ" ಚೀ ಗೋಮಟೀ । ಪಕ್ವಾನ್ನೇ ದೇಖಿಲೀ ದಿಠೀ । ತೀಹೀ ಖಾಊನೀ ಉಠಾಉಠೀ । ಮಾಯೇಪಾಠೀ ಲಾಗಲಾ ।೨೮॥ ತೇ ಧಾಕೇ ಧಾಕೇಚಿ ನಿಮಾಲೀ । ಮಿಥ್ಯಾತ್ವೇ ನಾಸೋನಿ ಗೇಲೀ । ಸ್ವಾನಂದೇ ಪುಷ್ಟಿ ಆಲೀ । ಝಾಡೀ ಕೇಲೀ ಭವರೋಗಾ ।೨೯॥ ಐಸಾ ಸದ್ಗುರು ವೈದ್ಯ ಗಾಢಾ । ಜೇಣೇ ಉಪಚಾರೋನಿ ಕೇಲೋ ನಿಧಡಾ । ಶರಣ ರಿಘಾವೇ ತುಜಪುಢಾ । ತಂವ ಚಹೂಕಡಾ ತೂಂಚಿ ತೂ ।೩೦॥ ತುಜವೇಗಳೇ ಆಪಣೆಯಾತೇ । ದೇಖೋನಿ ಶರಣ ಯಾವೇ ತೂತೇ । ತಂವ ಮೀತೂಪಣ ಹಾರಪಲೇ ಥಿತೇ । ಕೈಸೇನಿ ತೂತೇ ಭಜಾವೇ ।೩೧॥ ಜ್ಯಾಂಚ್ಯಾ ಸುಟಲ್ಯಾ ಜೀವಗ್ರಂಥೀ । ಝಾಲೇ ಆತ್ಮಾರಾಮ ನಿಶ್ಚಿತೀ । ತೇಹೀ ಅಹೇತುಕ ಭಕ್ತೀ ಕರಿತೀ । ಪ್ರಾಪ್ತಾಂಚೀ ಸ್ಥಿತಿ ಹೇ ಜಾಣಾ ।೩೨॥ ಗುರುಭಜನಾ ಪರತೇ ಸುಖ । ಮೋಕ್ಷ ಮಾನಿತೀ ತೇಹೀ ಮೂರ್ಖ । ಮೋಕ್ಷ ಗುರುಚರಣೇಂಚಾ ರಂಕ । ವಿರಳಾ ಲೋಕ ಹೇ ಜಾಣತೀ ।೩೩॥ ಆಮ್ಹಾ ಸದ್ಗುರುದೃಷ್ಟೀ ಪರಮಾರೋಗ್ಯ । ಆಮ್ಹೀ ಸದ್ಗುರುಕೃಪಾ ಸದಾ ಶ್ಲಾಘ್ಯ । ಗುರುಸೇವೇ ಆಮ್ಹೀ ಸಭಾಗ್ಯ । ಪರಮ ಯೋಗ್ಯ ಗುರುಸ್ತವನೇ ।೩೪॥ ಸದ್ಗುರೂಚೇ ನಾಮಮಾತ್ರ । ತೇಚಿ ಆಮ್ಹಾ ವೇದಶಾಸ್ತ್ರ । ಸಕಳ ಮಂತ್ರಾ ವರಿಷ್ಠ ಮಂತ್ರ । ನಾಮ ಸರ್ವತ್ರ ಗುರೂಚೇ ।೩೫॥ ಸದ್ಗುರೂಚೇ ತೀರ್ಥ ಮಾತ್ರ । ಸಕಳ ತೀರ್ಥಾ ಕರೀ ಪವಿತ್ರ । ಗುರುಚರಣ ತೇ ಆಮುಚೇ ಕ್ಷೇತ್ರ । ವೃತ್ತಿ ಸ್ವತಂತ್ರ ತೇ ಆಮ್ಹಾ ।೩೬॥ ತೂ ಪುರೇ ಪುರೇ ಮ್ಹಣಸೀ ಸ್ತವನ । ಪರೀ ವರ್ಣಿತಾ ತುಝೇ ಉದಾರ ಗುಣ । ಅತೃಪ್ತ ಸರ್ವಥಾ ಸುಠೀ ಮನ । ತುಝೀ ಆಣ ವಾಹಾತಸೇ ।೩೭॥ ತುಝೇ ಗುಣ ವರ್ಣಾವಯಾ ತತ್ತ್ವತಾ । ಮೀ ಪ್ರವರ್ತಲೋ ಶ್ರೀ ಭಾಗವತಾ । ತ್ವಾಂ ಮಜ ಲಾವಿಲೇ ಭಕ್ತಿಪಂಥಾ । ನಿಜಕಥಾಕೀರ್ತನೀ ।೩೮॥ ಜಯ ಜಯ ಸದ್ಗುರು ಜನಾರ್ದನಾ । ಭವಗಜಪಂಚಾನನಾ । ಏಕಾಕೀ ಶರಣ ಆಲೋ ಜಾಣಾ । ತುಝ್ಯಾ ಶ್ರೀಚರಣಾ ಪಾವಲೋ ।೩೯॥ ಪಾವಲೋ ಶಾಸ್ತ್ರ ಶ್ರೀಭಾಗವತ । ಅವಧಾರಾ ತೇಥೀಚಾ ಮಥಿತಾರ್ಥ । ಉದ್ಧವಾಸೀ ಶ್ರೀಕೃಷ್ಣನಾಥ । ಪರಮ ಪರಮಾರ್ಥ ಸಾಂಗೇಲ ।೪೦॥

ಫಲಾಸಕ್ತಿ ಮತ್ತು ಆಶಾ ಎಂಬ ಕಸಕಸಿಯ ಬೋಂಡಾ ತುಂಬಿದ್ದನ್ನು ಕಂಡು ಅವೆಲ್ಲವನ್ನೂ ಗಬಗಬನೇ ನುಂಗಿ ಬಿಡುವನು ।೨೬॥ ಬೆಲ್ಲ ಸಕ್ಕರೆಯ ಪಾಕದಲ್ಲಿನ ಕರ್ಮ ಮತ್ತು ಅಕರ್ಮರೂಪ ಲಾಡೂಗಳನ್ನು ಸಿಹಿ ಕಹಿ ಎನ್ನದೇ ತನ್ನ ಇಚ್ಛೆಯಂತೆ ತಿಂದುಬಿಡುವನು ।೨೭॥ "ನಾನು ಬ್ರಹ್ಮನಿದ್ದೇನೆ" ಎಂಬ ಸುಂದರ ಪಕ್ವಾನ್ನಗಳನ್ನು ನೋಡಿದಾಕ್ಷಣವೇ ಅಲ್ಲಿಯೇ ಭಕ್ಷಿಸಿ ಮಾಯೆಯ ಬೆನ್ನು ಹತ್ತಿದನು ।೨೮॥ ಆಗ ಆ ಮಾಯೆಯು ಭಯದಿಂದ ಓಡಲು ಆರಂಭಿಸಿದಳು ಮತ್ತು ಆಕೆಯು ಮೂಲದಲ್ಲಿಯೇ ಮಿಥ್ಯೆಯಾಗಿರುವುದರಿಂದ ಇಲ್ಲದಾದಳು. ಆಗ ಸ್ವಾನಂದದ ಪುಷ್ಟಿಯು ಬಂದು ಭವರೋಗವು ಸಂಪೂರ್ಣವಾಗಿ ಇಲ್ಲದಾಯಿತು ।೨೯॥ ಹೀಗೆ ಸದ್ಗುರುನಾದ ನೀನು ಬಹು ನಿಷ್ಣಾತ ವೈದ್ಯನಾಗಿರುವೆ. ನೀನು ಜೀವಕ್ಕೆ ಹೀಗೆ ಉಪಚಾರಗಳಿಂದ ನಿರೋಗಿಯನ್ನಾಗಿ ಮಾಡುವೆ. ನಿನಗೆ ಶರಣಾಗಬೇಕೆಂದರೆ ನೀನು ನಾಲ್ಕು ದಿಕ್ಕಿನಲ್ಲಿಯೂ ನೀನೇ ತುಂಬಿಕೊಂಡಿರುವೆ ।೩೦॥ ನಾನು ಸ್ವತಃ ನಿನ್ನಿಂದ ಭಿನ್ನನಾಗಿರುವೆನು ಎಂದು ಕಲ್ಪನೆಯನ್ನು ಮಾಡಿ ನಿನಗೆ ಶರಣಾಗಬೇಕೆಂದರೆ "ನಾನು ನೀನು" ಎಂಬುದು ಇಲ್ಲದಾಗುವುದು. ಅಂದ ಮೇಲೆ ಈಗ ನಿನ್ನನ್ನು ಹೇಗೆ ಭಜಿಸಬೇಕು? ।೩೧॥ "ನಾನು ಜೀವನು" ಎಂಬ ಈ ಕಲ್ಪನೆಯನ್ನು ನಾಶಮಾಡಿಕೊಂಡು ಯಾರು ಆತ್ಮಾರಾಮರಾಗಿರುವರೋ, ಅವರೂ ಕೂಡ ನಿನ್ನ ನಿಷ್ಕಾಮ ಭಕ್ತಿಯನ್ನು ಮಾಡುವರು. ಪೂರ್ಣಾವಸ್ಥೆಗೆ ಮುಟ್ಟಿದವರ ಸ್ಥಿತಿಯು ಹೀಗಾಗುವುದೆಂದು ನೀನು ತಿಳಿ ।೩೨॥ ಗುರುಭಜನೆಗಿಂತಲೂ ಮೋಕ್ಷವು ಶ್ರೇಷ್ಠವೆಂದು ತಿಳಿಯುವರು ಅಜ್ಞಾನಿಗಳಾಗಿರುವರು. ಮೋಕ್ಷವು ಗುರುಚರಣಗಳ ದಾಸವಾಗಿರುವುದು. ಇದನ್ನು ಅತ್ಯಲ್ಪ ಜನರು ಮಾತ್ರ ಅರಿತುಕೊಂಡಿರುವರು ।೩೩॥ ನಮಗೆ ಸದ್ಗುರುವಿನ ದೃಷ್ಟಿ ಮತ್ತು ಕೃಪೆಯು ಸರ್ವದಾ ಪೂಜ್ಯವೆನಿಸುವುದು. ಗುರುಸೇವೆಯಿಂದ ನಾವು ಭಾಗ್ಯವಂತರೆಂದು ತಿಳಿಯುತ್ತೇವೆ ಮತ್ತು ಗುರುಸ್ತುತಿಯು ಪರಮ ಯೋಗ್ಯವೆಂದು ಭಾವಿಸುತ್ತೇವೆ ।೩೪॥ ಸದ್ಗುರುಗಳ ನಾಮವೇ ನಮ್ಮ ವೇದಶಾಸ್ತ್ರಗಳಾಗಿರುವುದು. ಮತ್ತು ಆತನೇ ಸರ್ವಮಂತ್ರಗಳಲ್ಲಿ ಶ್ರೇಷ್ಠವಾದ ಮಂತ್ರನಾಗಿರುವನು ।೩೫॥ ಸದ್ಗುರುಗಳ ಕೇವಲ ಚರಣ ತೀರ್ಥವು ಸರ್ವ ತೀರ್ಥಗಳನ್ನು ಪಾವನಗೊಳಿಸುವುದು. ಗುರುಚರಣವೇ ನಮ್ಮ ಪರಮ ಕ್ಷೇತ್ರವಾಗಿರುವುದು. ಆ ಕ್ಷೇತ್ರದ ಒಡೆತನವು ನಮ್ಮದಾಗಿರುವುದು ।೩೬॥ ಹೇ ಗುರುರಾಯನೇ, ನೀನು ಈಗ ಈ ಸ್ತುತಿ ಸಾಕಾಯಿತು ಎಂದು ಹೇಳಬಹುದು. ಆದರೆ ನಿನ್ನ ಉದಾರ ಗುಣಗಳ ವರ್ಣನೆಯನ್ನು ಮಾಡುತ್ತಿರಲು ನನ್ನ ಮನಸ್ಸಿಗೆ ಎಂದಿಗೂ ತೃಪ್ತಿಯಾಗುವುದಿಲ್ಲ. ಇದನ್ನು ನಾನು ಆಣೆಮಾಡಿ ಹೇಳುತ್ತೇನೆ ।೩೭॥ ನಿಜವಾಗಿಯೂ ನಿನ್ನ ಗುಣವರ್ಣನೆಯನ್ನು ಮಾಡಲು ಸಿಗುವುದೆಂದು ನಾನು ಭಾಗವತವನ್ನು ಹೇಳಲು ಪ್ರವರ್ತನಾಗಿರುವೆನು. ನೀನು ನನಗೆ ನಿನ್ನ ಕಥೆ ಕೀರ್ತನೆಗಳಿಂದ ಭಕ್ತಿಮಾರ್ಗಕ್ಕೆ ಹಚ್ಚಿರುವೆ ।೩೮॥ ಹೇ ಜನಾರ್ದನ ಸದ್ಗುರು ಸ್ವಾಮಿಯೇ, ಭವರೂಪ ಆನೆಯ ಸಂಹಾರ ಮಾಡುವ ಸಿಂಹಶ್ರೇಷ್ಠನೇ, ನಿನಗೆ ಜಯ ಜಯಕಾರವು. ನಾನು ಒಬ್ಬನೇ ನಿನಗೆ ಶರಣು ಬಂದೆನು ಮತ್ತು ನಿನ್ನ ಚರಣಗಳನ್ನು ಪ್ರಾಪ್ತಮಾಡಿಕೊಂಡೆನು ।೩೯॥ ಶ್ರೀಭಾಗವತ ಶಾಸ್ತ್ರವು ನನಗೆ ಗುರುಕೃಪೆಯಿಂದ ಲಭಿಸಿತು. ಈಗ ಅದರಲ್ಲಿನ ಮಥಿತಾರ್ಥವನ್ನು ಶ್ರವಣ ಮಾಡಿರಿ. ಶ್ರೀಕೃಷ್ಣನು ಉದ್ಧವನಿಗೆ ಪರಮಾರ್ಥವನ್ನು ಉಪದೇಶಿಸುವನು ।೪೦॥

ಯದು ಅವಧೂತ ಸಂವಾದೇಸೀ । ಲಕ್ಷಣೋಕ್ತ ಚೋವಿಸಾ ಗುರೂಂಸೀ । ಪರಿಸೋನಿಯಾ ಉದ್ಧವಾಸೀ । ಭಾವನಾ ಬ್ರಹ್ಮೇಸೀ ಲಿಗಟಲೀ ।।೪೧।। ಬ್ರಹ್ಮ ಸರ್ವಗತ ಸತ್ಯಹೋಯೇ । ಮಜ ಸಬಾಹ್ಯ ಕೋಂದಲೇ ಆಹೇ । ತೇಚಿ ಮಾಝೇ ಮಜ ಠಾ ಉಕೇ ನೋಹೇ । ಕೋಣ ಉಪಾಯೇ ಕರಾವಾ ।।೪೨।। ಐಸೀ ಉದ್ಧವಾಚೀ ಚಿಂತಾ । ಕಳೋ ಸರಲೀ ಕೃಷ್ಣನಾಥಾ । ತೋಚಿ ಉಪಾವೋ ಸರ್ವಥಾ । ಹೋಯ ಸಾಂಗತಾ ಅವಿರೋಧೇ ।।೪೩।।

ಶ್ರೀಭಗವಾನುವಾಚ : -

ಮಯೋದಿತೇಷ್ವವಹಿತಃ ಸ್ವಧರ್ಮೇಷು ಮದಾಶ್ರಯಃ । ವರ್ಣಾಶ್ರಮಕುಲಾಚಾರಮಕಾಮಾತ್ಮಾ ಸಮಾಚರೇತ್ ॥ ೧॥

ಅರ್ಥ:- ಶ್ರೀ ಭಗವಾನನು ಹೇಳಿದನು, ಹೇ ಉದ್ಧವನೇ, ಸಾಧಕನು ಸರ್ವ ಭಾವದಿಂದ ನನಗೆ ಶರಣಾಗಿ ಸ್ವಧರ್ಮವನ್ನು ಲಕ್ಷಕೊಟ್ಟು ಪಾಲಿಸಬೇಕು. ನನ್ನನ್ನೇ ಆಶ್ರಯಿಸಿರುವ ವೈಷ್ಣವರು ವಿರೋಧವಾಗಲಾರದಂತೆ ವರ್ಣ, ಆಶ್ರಮ ಮತ್ತು ಕುಲದ ಆಚಾರದ ಅನುಷ್ಠಾನಗೈಯ್ಯಬೇಕು.

ಪೂರ್ವೀ ವೇದರೂಪೇ ವರ್ಣಾಶ್ರಮ । ಮೀಚಿ ಬೋಲಿಲೋ ಸ್ವಧರ್ಮ। ಪಂಚರಾತ್ರಾದಿ ವೈಷ್ಣವಧರ್ಮ । ಹೇ ಉಪಾಸನಾವರ್ಮ ಗುಹ್ಯ ಮಾಝೇ ।।೪೪।। ಜೋ ವರ್ಣ ಜೋ ಆಶ್ರಮ । ತೇಣೇಂಚೀ ತೇ ಕರಾವೇ ಸ್ವಧರ್ಮ । ಆಚರತಾ ಪರಧರ್ಮ । ದುಃಖ ಪರಮ ಪಾವಿಜೇ ।।೪೫।। ಉದ್ಧವಾ ಯೇಥ ಜಾಣ । ಕರ್ತಾ ಪಾಹಿಜೇ ಸಾವಧಾನ । ತೇ ಸಾವಧಾನತೇಚೇ ಲಕ್ಷಣ । ಅತಿವಿಚಕ್ಷಣ ಜಾಣತೀ ।।೪೬।। ಕರ್ಮ ಚತುರ್ವಿಧ ಯೇಥ । ''ನಿತ್ಯ ಆಣಿ ನೈಮಿತ್ತ'' । ''ಕಾಮ್ಯ ಆಣಿ ಪ್ರಾಯಶ್ಚಿತ್ತ'' । ಜಾಣ ನಿಶ್ಚಿತ ವಿಭಾಗ ।।೪೭।। ಯೇಥ ಕರ್ಮ ಆಚರತೀ ಸ್ಥಿತೀ । ಸಾವಧಾನ ರಾಖಾವೀ ವೃತ್ತೀ । ಆಚರಾವಯಾಚೀ ವ್ಯುತ್ಪತ್ತೀ । ವಿಚಿತ್ರ ಸ್ಥಿತೀ ಸಾಂಗೇನ ।।೪೮।। ನಿತ್ಯ ಆಣಿ ನೈಮಿತ್ತಿಕ । ಹೇ ಕರ್ಮ ಜಾಣ ಆವಶ್ಯಕ । ಸಾಂಡೋನಿಯಾ ಫಲಾಭಿಲಾಖ । ವಿಧಿಪ್ರಮುಖ ಆಚರಾವೇ ।।೪೯।। ನಿತ್ಯಕರ್ಮ ಅಧಿಕವಾಡೇ । ತೈ ನೈಮಿತ್ತಿಕಾಚೇ ಅಂಗಾ ಚಢೇ । ಕಾಮ್ಯ ಉಚಂಬಳಲೇ ವಿಷಯಚಾಡೇ । ತೈಂಚಿ ಪಡೇ ''ನಿಷಿದ್ಧೀ'' ।।೫೦।। ಫಲಾಭಿಲಾಷೇವಿಣ । ನಿತ್ಯ ನೈಮಿತ್ತಿಕ ಜಾಣ । ಕರಾವೇ ಗಾ ಕೃಷ್ಣಾರ್ಪಣ । ಅರ್ಪಿತೀ ಖೂಣ ಜಾಣೋನಿ ।।೫೧।। ಕಾಮ್ಯ ಕರ್ಮ ಆವಶ್ಯಕ । ತ್ಯಜಾವೇ ಗಾ ನಿಃಶೇಖ । ಜೇವಿ ಕಾ ವಮಿಲೇ ವಮಕ । ಪರತೋನಿ ಲೋಕ ನ ಪಾಹತೀ ।।೫೨।। ಸಮೂಳೀ ಕಾಮನೇತೇ ದಂಡಾವೇ । ತೈಂಚಿ ಕಾಮ್ಯ ಕರ್ಮ ಸಾಂಡಾವೇ । ಯೇರ್ಹವೀ ಕಾಮ್ಯತ್ಯಾಗು ನ ಸಂಭವೇ । ಕಾಮನಾ ಜೀವೇ ರಾಖಿತಾ ।।೫೩।।

ಯದೂ ಮತ್ತು ಅವಧೂತ ಇವರ ಸಂವಾದದಲ್ಲಿ ಬಂದಿರುವ ಇಪ್ಪತ್ನಾಲ್ಕು ಗುರುಗಳ ಲಕ್ಷಣಗಳನ್ನು ಕೇಳಿ ಉದ್ಧವನ ಭಾವನೆಯು ಬ್ರಹ್ಮಮಯವಾಯಿತು ।।೪೧।। ಬ್ರಹ್ಮವು ಸರ್ವವ್ಯಾಪೀ ಮತ್ತು ಸತ್ಯವಾಗಿರುವುದು. ನನಗೆ ಸ್ವತಃಕ್ಕೆ ಅದು ಒಳಹೊರಗೆ ವ್ಯಾಪಿಸಿರುವುದು. ಆದರೆ ಇದುವರೆಗೂ ನನ್ನದಾಗಿರುವುದು ನನಗೆ ತಿಳಿಯುತ್ತಿಲ್ಲ. ಇದಕ್ಕೇನು ಉಪಾಯ ಮಾಡಬೇಕು? ।।೪೨।। ಉದ್ಧವನ ಈ ಚಿಂತೆಯನ್ನು ಶ್ರೀಕೃಷ್ಣನು ಅರಿತುಕೊಂಡನು. ಮತ್ತು ಅದಕ್ಕಾಗಿಯೇ ಉಪಾಯವನ್ನು ಅವಿರೋಧವಾಗಿ ಆತನು ಹೇಳಲಿಕ್ಕೆ ಪ್ರಾರಂಭಿಸಿದನು ।।೪೩।।

ಪೂರ್ವದಲ್ಲಿ ವೇದರೂಪದಿಂದ ವರ್ಣಾಶ್ರಮದ ಸ್ವಧರ್ಮವನ್ನು ನಾನೇ ಹೇಳಿರುವೆನು. ನಾರದಪಂಚರಾತ್ರಾದಿ ವೈಷ್ಣವಧರ್ಮವಂತೂ ನನ್ನ ಉಪಾಸನಸೆಯಲ್ಲಿನ ಗುಹ್ಯ ಮರ್ಮವಾಗಿದೆ ।।೪೪।। ಯಾರ ವರ್ಣವು, ಯಾರ ಆಶ್ರಮವು ಯಾವುದಿರುವುದೋ ಆತನು ಆ ಯಾವ ವರ್ಣಾಶ್ರಮದ ಧರ್ಮದಂತೆ ಆಚರಿಸಬೇಕು. ಪರಧರ್ಮವನ್ನು ಆಚರಿಸಿದರೆ ದುಃಖವಾಗುವುದು ।।೪೫।। ಹೇ ಉದ್ಧವನೇ, ಕರ್ತನಾಗಿರುವನು ಬಹಳ ಜಾಗರೂಕತೆಯಿಂದ ವರ್ತಿಸಬೇಕಾಗುವುದು. ಜ್ಞಾನಿ ಜನರು ಜಾಗರೂಕತೆಯ ಲಕ್ಷಣಗಳನ್ನು ಅರಿತಿರುವರು ।।೪೬।। ಕರ್ಮಗಳು ಇವು ನಾಲ್ಕು ಪ್ರಕಾರಗಳಾಗಿರುವುವು. ನಿತ್ಯ, ನೈಮಿತ್ತಿಕ, ಕಾಮ್ಯ ಮತ್ತು ಪ್ರಾಯಶ್ಚಿತ್ತ ಹೀಗೆ ಇದರ ವಿಭಾಗಗಳಾಗಿವೆ ।।೪೭।। ಈ ಕರ್ಮಗಳ ಆಚರಣೆಯನ್ನು ಮಾಡುತ್ತಿರಲು ವೃತ್ತಿಯನ್ನು ಜಾಗರೂಕತೆಯಿಂದ ಕಾಪಾಡಬೇಕು. ಕರ್ಮಗಳನ್ನು ಹೇಗೆ ಆಚರಿಸಬೇಕೆಂಬುವುದನ್ನು ನಾನು ನಿನಗೆ ಅನೇಕ ಪ್ರಕಾರಗಳಿಂದ ಹೇಳುವೆನು ।।೪೮।। ನಿತ್ಯ ಮತ್ತು ನೈಮಿತ್ತಿಕ ಕರ್ಮಗಳನ್ನು ಪ್ರತಿಯೊಬ್ಬರೂ ಅವಶ್ಯವಾಗಿ ಮಾಡಲೇಬೇಕು. ಈ ಕರ್ಮಗಳಲ್ಲಿ ಫಲಾಸಕ್ತಿಯನ್ನು ಹಿಡಿಯದೇ ಯಥಾವಿಧಿಯಾಗಿ ಆಚರಿಸಬೇಕು ।।೪೯।। ನಿತ್ಯಕರ್ಮಗಳು ಹೇಗೇಗೆ ಬೆಳೆಯುತ್ತ ಸಾಗುವವೋ ಹಾಗಾಗೇ ನೈಮಿತ್ತಿಕ ಕರ್ಮಗಳೂ ಕೂಡ ಬೆಳೆಯುತ್ತ ಸಾಗುವುವು. ಆಗ ವಿಷಯಪ್ರಾಪ್ತಿಯ ಇಚ್ಛೆಯಿಂದ ಕಾಮ್ಯ ಕರ್ಮಗಳು ಉಕ್ಕೇರುವುವು. ಆಗ ಅವರು ನಿಷಿದ್ಧದಲ್ಲಿ ಹೋಗಿ ಬೀಳುವರು ।।೫೦।। ಅದಕ್ಕಾಗಿಯೇ ಫಲದ ಅಭಿಲಾಷೆಯನ್ನು ಹಿಡಿಯದೇ ನಿತ್ಯ ನೈಮಿತ್ತಿಕ ಕರ್ಮಗಳನ್ನು ಅರ್ಪಿಸುವ ಮರ್ಮವನ್ನು ಅರಿತು ಕೃಷ್ಣಾರ್ಪಣೆಯನ್ನು ಮಾಡಬೇಕು ।।೫೧।। ವಾಂತಿಯನ್ನು ಮಾಡಿಕೊಂಡವನು ಅದರತ್ತ ಯಾವ ಪ್ರಕಾರವಾಗಿ ನೋಡುವುದಿಲ್ಲವೋ ಅದರಂತೆ ಕಾಮ್ಯಕರ್ಮ ಅಂದರೆ ಫಲಾಶೆಯನ್ನು ಹಿಡಿದು ಆಚರಿಸಿದ ಕರ್ಮಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು ।।೫೨।। ಇಚ್ಛೆಯನ್ನು ಯಾವ ಸಮಯದಲ್ಲಿ ಸಂಪೂರ್ಣವಾಗಿ ತ್ಯಜಿಸಲ್ಪಡುವುದೋ, ಆಗಲೇ ಕಾಮ್ಯ ಕರ್ಮದ ತ್ಯಾಗವಾಗುವುದು. ಕಾರಣ ಮನದಲ್ಲಿ ಇಚ್ಛೆಯನ್ನು ಹಿಡಿದರೆ ಕಾಮ್ಯ ಕರ್ಮದ ತ್ಯಾಗವು ಸಂಭವಿಸಲಾರದು।।೫೩।।

ಅಂತರೀ ಅನಿವಾರ ಕಾಮನಾ । ಬಾಹ್ಯ ವಿರಕ್ತೀ ದಾವಿ ಜನಾ । ತೇ ಸಾವಿಯಾ ವಿಟಂಬನಾ । ತ್ಯಾಗು ವಿಚಕ್ಷಣಾ ತೋ ನವ್ಹೇ ।।೫೪।। ಕಾಮನೇಚೇನಿ ಅಧಿಕ ಮದೇ । ಕರ್ಮೇ ನಿಪಜತೀ ನಿಷಿದ್ಧೇ । ಸಮೂಳ ಕಾಮನೇಚೇನಿ ಛೇದೇ । ಸರ್ವ ನಿಷಿದ್ಧೇ ಮಾವಳತೀ ।।೫೫।। ಅಥವಾ ದೇಖತಾಂಚೀ ನಿಷಿದ್ಧ ದಿಠೀ । ಜೋ ಹರಿನಾಮೇ ಗರ್ಜತ ಉಠೀ । ನಿಷಿದ್ಧ ಪಳೇ ಬಾರಾ ವಾಟೀ । ಪ್ರಾಯಶ್ಚಿತ್ತ ಕೋಟೀ ಹರಿನಾಮೇ ।।೫೬।। ಜೇಥ ಹರಿನಾಮಾಚೇ ಉಮಾಳೇ । ತೇಥ ನಿಷಿದ್ಧ ತತ್ಕಾಳ ಜಳೇ। ನಿಷಿದ್ಧ ಅಭಕ್ತಾ ಆದಳೇ । ಭಕ್ತಾ ಜವಳೇ ತೇ ನ ಯೇ ।।೫೭।। ಕಾಮ್ಯ ನಿಷಿದ್ಧಾಚೀ ಕಥಾ। ಭಕ್ತಾಂಸೀ ನಾತಳೇ ಸರ್ವಥಾ । ಭಗವಂತು ರಕ್ಷೀ ನಿಜಭಕ್ತಾ । ದೋಷು ತತ್ತ್ವತಾ ತ್ಯಾನಾಹೀ ।।೫೮।। ನಾಮೇ ಪ್ರಾಯಶ್ಚಿತ್ತಾಂಚ್ಯಾ ಕೋಟೀ । ಹೇ ಮ್ಯಾ ಸಾಂಗಿತಲೀ ಗುಹ್ಯ ಗೋಠೀ । ಪ್ರಕಟ ನ ಕರಾವೀ ಸೃಷ್ಟೀ। ಗುಪ್ತ ಪೋಟೀ ರಾಖಾವೀ ।।೫೯।। ಕಾಮ್ಯ ನಿಷಿದ್ಧಾಚೇ ತ್ಯಾಗ । ತುಜ ಮ್ಯಾ ಸಾಂಗೀತಲೇ ಸಾಂಗ । ನಿತ್ಯನೈಮಿತ್ತ ವಿಭಾಗ । ತೋಹೀ ವಿನಿಯೋಗ ಪರಿಯೇಸೀ ।।೬೦।। ಮದರ್ಪಣೇ ಆವಶ್ಯಕ । ಕರಾವೇ ನಿತ್ಯ ನೈಮಿತ್ತಿಕ । ತೇಚೀ ಚಿತ್ತಾಚೇ ಶೋಧಕ । ಸಾಧನ ಮುಖ್ಯ ಪರಮಾರ್ಥೀ ।।೬೧।। ಏಕ ಮ್ಹಣತೀ ಸ್ವಧರ್ಮ ನಿರ್ಫಳ । ಮರ್ಮ ನೇಣತೀಚ ತೇ ಬರಳ । ಸ್ವಧರ್ಮ ಹೋಯ ಜನ್ಮ ಸಫಳ । ಪರಮಾರ್ಥಫಳ ಸ್ವಧರ್ಮೇ ।।೬೨।। ಕಿಡಾಳ ಝಾಡಾವಯಾ ದೃಷ್ಟೀ । ರಜ ದೇಊನಿ ಪಾಠೀಪೋಟೀ । ಸುವರ್ಣ ಘಾಲಿತಾ ಪುಟೀ । ಝಳಕತ ಉಠೀ ನಿಜತೇಜೇ ।।೬೩।। ತೈಸಾ ಮಜಅರ್ಪಿತಾ ಸ್ವಧರ್ಮ । ತ್ಯಾಚೇ ಸಫಳ ಹೋಯ ನಿಜಕರ್ಮ । ಐಸೇ ನೇಣೋನಿಯಾ ನಿಜಮರ್ಮ । ಕರ್ಮ ಭ್ರಮ ಕರ್ಮಠಾ ।।೬೪।। ಮಜ ಅರ್ಪಿತೀ ಹಾತವಟೀ। ಅವಘಡ ವಾಟೇಲ ಜಗಜೇಠೀ । ಜ್ಯಾಸೀ ಆವಡೀ ಮಾಝೀ ಮೋಠೀ । ತ್ಯಾಚೇ ದೃಷ್ಟೀ ಮದರ್ಪಣ ।।೬೫।। ಕೃಷ್ಣೀ ನಿಶ್ಚಳ ಜ್ಯಾಚೇ ಮನ । ತ್ಯಾಚೇ ಕರ್ಮ ತಿತುಕೇ ಕೃಷ್ಣಾರ್ಪಣ । ತ್ಯಾಸೀ ನ ಅರ್ಪಿತಾಹೀ ಜಾಣ । ಸಹಜೇ ಮದರ್ಪಣ ಹೋತಸೇ ।।೬೬।। ಜೋ ರಥೀ ನಿಶ್ಚಳ ಹೋಊನಿಯಾ ಬೈಸೇ । ತೋ ನ ಚಳತಾಹೀ ಚಾಲತು ದಿಸೇ । ಜಾಣ ಸ್ವಕರ್ಮ ತ್ಯಾಚೇ ತೈಸೇ । ಅನಾಯಾಸೇ ಮಜ ಅರ್ಪೇ ।।೬೭।।

ಮನದಲ್ಲಿ ಅನಿವಾರ್ಯವಾದ ಇಚ್ಛೆಯು ಇರುವುದು. ಹೊರನೋಟಕ್ಕೆ ಮಾತ್ರ ಜನರಿಗೆ ವಿರಕ್ತಿಯನ್ನು ತೋರಿಸುವಿಕೆಯು ಇದು ತ್ಯಾಗದ ಕೇವಲ ಅವಹೇಳನವಾಗಿರುವುದು. ಹೇ ಚತುರನಾದ ಉದ್ಧವನೇ, ಅದುನಿಜವಾದ ತ್ಯಾಗವಾಗಲಾರದು ।।೫೪।। ಕಾಮನೆಗಳು ಬಹುವಾಗಿ ಬೆಳೆಯಿತೆಂದರೆ ಆತನ ಕೈಗಳಿಂದ ನಿಷಿದ್ಧ ಕರ್ಮಗಳು ಆಗ ಹತ್ತುವುವು. ಅದಕ್ಕಾಗಿ ಕಾಮನೆಗಳನ್ನೇ ಇಲ್ಲದಾಗಿ ಮಾಡಿದರೆ ನಿಷಿದ್ಧ ಕರ್ಮಗಳು ಆಗುವುದೇ ಇಲ್ಲ ।।೫೫।। ನಿಷಿದ್ಧ ಕರ್ಮಗಳು ದೃಷ್ಟಿಗೆ ಬೀಳುತ್ತಲೇ ಆತನು ಹರಿನಾಮದ ಘೋಷಮಾಡುವನು. ಆಗ ಆ ನಿಷಿದ್ಧ ಕರ್ಮಗಳು ಹನ್ನೆರಡು ದಿಕ್ಕುಗಳಿಂದ ಓಡಿ ಹೋಗುವುವು. ಹರಿನಾಮದ ಗರ್ಜನೆಯಿಂದ ಕೋಟಿ ಪ್ರಾಯಶ್ಚಿತ್ತಗಳ ಶ್ರೇಯವು ದೊರಕುವುದು ।।೫೬।। ಎಲ್ಲಿ ಹರಿನಾಮಕ್ಕೆ ಪ್ರೇಮದ ಪೂರವು ಬರುತ್ತದೆಯೋ, ಅಲ್ಲಿ ನಿಷಿದ್ಧ ಕರ್ಮಗಳು ಸುಟ್ಟು ಭಸ್ಮವಾಗುವುವು. ನಿಷಿದ್ಧ ಕರ್ಮಗಳು ಅಭಕ್ತನ ಮೇಲೆ ಬಂದು ಅಪ್ಪಳಿಸುವುವು. ಆದರೆ ಭಕ್ತನ ಹತ್ತಿರ ಅವು ಎಂದಿಗೂಬರಲಾರವು ।।೫೭।। ಕಾಮ್ಯ ಕರ್ಮದ, ನಿಷಿದ್ಧ ಕರ್ಮದ ಗಾಳಿಯೂ ಕೂಡ ಭಕ್ತರಿಗೆ ಹತ್ತುವುದಿಲ್ಲ. ಭಗವಂತನು ತನ್ನ ಭಕ್ತರ ರಕ್ಷಣೆಯನ್ನು ಮಾಡುವನು. ಅಂದಮೇಲೆ ಆತನಿಗೆ ದೋಷಗಳ ಸಂಪರ್ಕ ಹೇಗಾಗವುದು ? ।।೫೮।। ಕೋಟ್ಯಾವಧಿ ಪ್ರಾಯಶ್ಚಿತ್ತಗಳು ಒಂದು ಹರಿನಾಮೋಚ್ಚಾರದಿಂದ ಸಾಧಿಸುವುವು. ಈ ಯಾವ ಗುಪ್ತವಾಗಿರುವ ಮಾತನ್ನು ನಾನು ನಿನಗೆ ಹೇಳಿರುವೆನು. ಈ ಮಾತನ್ನು ನೀನು ಜಗತ್ತಿನಲ್ಲಿ ಪ್ರಕಟಿಸದಿರು. ಮನದಲ್ಲಿ ಗುಪ್ತವಾಗಿಡು ।।೫೯।। ಕಾಮ್ಯ ಮತ್ತು ನಿಷಿದ್ಧ ಕರ್ಮಗಳ ತ್ಯಾಗವನ್ನು ನಾನು ನಿನಗೆ ಸ್ಪಷ್ಟವಾಗಿ ಹೇಳಿರುವೆನು. ಈಗ ನಿತ್ಯ ಮತ್ತು ನೈಮಿತ್ತಿಕ ಕರ್ಮ ವಿಭಾಗವನ್ನು ಮತ್ತು ಅವುಗಳ ಪ್ರಕಾರವನ್ನು ಹೇಳುವೆನು, ಕೇಳು ।।೬೦।। ನಿತ್ಯನೈಮಿತ್ತಿಕ ಕರ್ಮಗಳನ್ನು ಈಶ್ವರಾರ್ಪಣ ಬುದ್ಧಿಯಿಂದ ಅವಶ್ಯವಾಗಿಮಾಡಬೇಕು. ಇದು ಚಿತ್ತಶುದ್ಧಿಯನ್ನು ಮಾಡುವುದು. ಹಾಗೆಯೇ ಇದು ಪರಮಾರ್ಥದ ಮುಖ್ಯ ಸಾಧನವಾಗಿರುವುದು ।।೬೧।। ಕೆಲವು ಜನರು ಸ್ವಧರ್ಮವು ನಿಷ್ಫಲವಾಗಿರುವುದೆಂದು ಹೇಳುವರು. ಆದರೆ ಅವರು ಅದರ ಮರ್ಮವನ್ನು ತಿಳಿಯದೇ ಹೇಳುತ್ತಿರುವರು. ಸ್ವಧರ್ಮದಿಂದ ಜನ್ಮವು ಸಫಲವಾಗುವುದು. ಪರಮಾರ್ಥದ ಫಲವು ಸ್ವಧರ್ಮದಿಂದ ಪ್ರಾಪ್ತವಾಗುವುದು ।।೬೨।। ಬಂಗಾರದಲ್ಲಿನ ಹೀನಧಾತುಗಳನ್ನು ತೆಗೆದುಹಾಕುವುದಕ್ಕಾಗಿಯೇ ಅದರ ಸುತ್ತ ಟಂಕಣಕಾರನ ಲೇಪವನ್ನು ಹಚ್ಚಿ ಮುಶಿಯಲ್ಲಿ ಹಾಕಿ ಪುಟಕೊಡಲು ಆಗ ಆ ಬಂಗಾರವು ತನ್ನ ಮೂಲ ತೇಜದಿಂದ ಝಳಪಿಸುವುದು ।।೬೩।। ಅದರಂತೆ ನನಗೆ ಅರ್ಪಣೆಯನ್ನು ಮಾಡಿ ಸ್ವಧರ್ಮವನ್ನು ಆಚರಿಸಲು ಆ ಕರ್ಮವು ಸಫಲವಾಗುವುದು. ಈ ಗುಹ್ಯ ಮರ್ಮವು ಕರ್ಮಠರಿಗೆ ತಿಳಿಯದೇ ಇರುವುದರಿಂದ ಅವರಿಗೆ ಕರ್ಮದ ದೊಡ್ಡ ಭ್ರಮೆಯಾಗುತ್ತಿರುವುದು ।।೬೪।। ಕರ್ಮಗಳನ್ನು ನನಗೆ ಅರ್ಪಿಸುವುದು ಪ್ರಾರಂಭದಲ್ಲಿ ಕಠಿಣವೆನಿಸುವುದು. ಆದರೆ ನನ್ನಲ್ಲಿ ಪ್ರೀತಿ ಇರುವವರ ದೃಷ್ಟಿಯು ಸಹಜವಾಗಿಯೇ ಮದರ್ಪಣೆಯಾಗಿರುವುದು ।।೬೫।। ಯಾವ ಮನವು ಶ್ರೀಕೃಷ್ಣನ ಚರಣಗಳಲ್ಲಿ ನಿಶ್ಚಲವಾಗಿರುವುದೋ, ಆತನ ಸರ್ವ ಕರ್ಮಗಳು ಕೃಷ್ಣಾರ್ಪಣೆಯಾಗುವುವು. ಆತನು ನನಗೆ ಒಂದು ವೇಳೆ ಕರ್ಮಗಳನ್ನು ಅರ್ಪಿಸದಿದ್ದರೂ ಸಹಜವಾಗಿಯೇ ನನಗೆ ಅರ್ಪಣೆಯಾಗುವುವು ।। ೬೬।। ರಥದಲ್ಲಿಕುಳಿತವನು ಅಲ್ಲಿಂದ ಅಲುಗಾಡದಿದ್ದರೂ ಆತನು ನಡೆಯುತ್ತಿದ್ದಂತೆ ತೋರುವನು. ಅದೇ ಪ್ರಕಾರವಾಗಿ ಭಕ್ತರ ಕರ್ಮಗಳು ಸಹಜವಾಗಿಯೇ ನನಗೆ ಅರ್ಪಣೆಯಾಗುತ್ತಿರುವುವು ।।೬೭।।

ಯಾಪರೀ ಹೋಊನಿ ಅಕಾಮಾತ್ಮಾ । ಸುಖೇ ಆಚರಾವೇ ಸ್ವಧರ್ಮಾ । ತೇಣೇ ಸಾಂಡೂನಿ ರಜತಮಾ । ಸತ್ತ್ವೇ ಪುರುಷೋತ್ತಮಾ ಪಾವತೀ ॥ ೧೮॥ ವರ್ಣಾಶ್ರಮ ಸಮುದ್ಭವಾ । ಮೂಳ ಆಶ್ರಯೋ ಮೀ ವೋಳಖಾವಾ। ಕುಳಕರ್ಮನಿಜ- ಸ್ವಭಾವಾ । ಉಪಾಸಾವಾ ಮೀ ಏಕು ॥೧೯॥ ವರ್ಣಾಸೀ ಆಶ್ರಯೋ ಮೀ ಪ್ರಸಿದ್ಧ । ಜೇ ಜನ್ಮಲೇ ಮುಖಬಾಹೂರುಪಾದ । ಆಶ್ರಮಾ ಆಶ್ರಯೋ ಮೀ ವಿಶದ । ಗರ್ಜತೀ ವೇದ ಯೇ ಅರ್ಥೀ ॥ ೨೦॥ ದೇವೋ ದೇವೀ ಕುಳಾಚಾರ । ಯಾಂಚೇ ವಸ್ತೀಚೇ ಮೀ ಘರ । ಏವಂ ಮೀ ಸರ್ವಾಧಾರ । ಹಾ ಕರ್ಮೀ ವಿಚಾರ ದೇಖಾವಾ ॥೨೧॥ ಗುಜ ಪರಿಯೇಸೀ ಉದ್ಧವಾ । ಕರ್ಮಾಕರ್ಮಾಧ್ಯಕ್ಷ ಮೀ ಜಾಣಾವಾ । ಕರ್ಮೀ ಮೀಚಿ ಅಭಿಲಾಷಾವಾ । ಕ್ರಿಯೇನೇ ಧರಾವಾ ಮೀ ಏಕು॥೨೨॥ ಏವಂ ಆದಿ - ಮಧ್ಯ - ಅಂತೀ । ಮೀ ಅವಿನಾಶು ಧರಿತಾ ಚಿತ್ತೀ ।ತೀ ಕರ್ಮೇಚಿ ನಿಷ್ಕರ್ಮೇ ಹೋತಿ । ಜಾಣ ನಿಶ್ಚಿತೀ ಉದ್ಧವಾ ॥೨೩॥

ಅನ್ವೀಕ್ಷೇತ ವಿಶುದ್ಧಾತ್ಮಾ ದೇಹಿನಾಂ ವಿಷಯಾತ್ಮನಾಮ್ । ಗುಣೇಷು ತತ್ತ್ವಧ್ಯಾನೇನ ಸರ್ವಾರಂಭವಿಪರ್ಯಮ್ ॥೨॥

ಅರ್ಥ:- ಸ್ವಧರ್ಮಾನುಷ್ಠಾನದಿಂದ ಯಾರ ಚಿತ್ತವು ಶುದ್ಧವಾಗಿದೆಯೋ, ಆತನು ವಿಷಯಾಸಕ್ತ ಮನುಷ್ಯನ ವಿಷಯಗಳಲ್ಲಿನ ಸತ್ಯತ್ವಭಾವದಿಂದ ಆಗುತ್ತಿರುವ ಎಲ್ಲ ಕರ್ಮಗಳ ವೈಪರಿತ್ಯವನ್ನು ಕಾಣಬೇಕು. ಅವರ ಫಲದಲ್ಲಿ ಅಸ್ಥಿರತ್ವ ಎಂಬ ಮಹಾದೋಷವಿರುವುದು. ಇದನ್ನು ಅರಿತುಕೊಂಡು ಸ್ವತಃ ನಿಷ್ಕಾಮನಾಗಬೇಕು.

ಯಾಪರೀ ಸ್ವಧರ್ಮೇ ಜಾಣ । ಜ್ಯಾಂಚೇ ವಿಶುದ್ಧ ಅಂತಃಕರಣ । ತೇ ವಿಷಯೀ ಉದಾಸೀನ । ಹೇ ವೋಳಖಣ ತಯಾಂಚೇ ॥೨೪॥ ತಯಾಂಸೀ ವಿಷಯಾಚೀ ಆಸ್ಥಾ । ನಾಹೀ ನಾಹೀ ಗಾ ಸರ್ವಥಾ । ಪರೀ ಸರ್ವಾರ್ಥವಿಪರೀತತಾ । ವಿಷಯಾಸಕ್ತಾ ದೇಖತೀ ॥೨೫॥ ಭರಲೀ ಮೃಗಜಳಾಚೀ ತಳೀ । ತೇಣೇ ನ ಪಿಕತೀ ಸಾಳೀ ಕೇಳೀ । ತೈಸೀ ವಿಷಯಬುದ್ಧೀ ಜವಳೀ । ಸ್ವಸುಖಫಳೀ ಫಳೇನಾ ॥೨೬॥ ಪಾಹೇ ಪಾ ವಿಷಯಾಸಕ್ತ । ಕರ್ಮಾರಂಭೀ ಸಂಕಲ್ಪ ಕರಿತ । ಆಯುಃಕಾಮಾರ್ಥ ಕ್ಷೇಮಾರ್ಥ । ಧನಧ್ಯಾನಾರ್ಥಸಮೃದ್ಧೀ ॥೨೭॥ ಯಾ ಹೇತೂಕರ್ಮ ಆರಂಭಿತ । ತೇ ಸ್ವಕರ್ಮ ನವ್ಹೇ ನಿಶ್ಚಿತ । ಸ್ವಧರ್ಮಮಿಷೇಮನೋರಥ । ಉಪಾಸಿತ ಸರ್ವದಾ॥೨೮॥ ಬೈಲಾಚೀ ಕಾಂಸ ದುಹಿತಾ । ಶಿಂಪೀಭರೀ ದೂಧ ನ ಯೇ ಹಾತಾ । ತೇವೀ ಮನೋರಥ ಉಪಾಸಿತಾ । ನ ಲಭೇ ಸರ್ವಥಾ ''ನಿಜಸುಖ'' ॥೨೯॥

ಈ ಪ್ರಕಾರವಾಗಿ ನಿಷ್ಕಾಮನಾಗಬೇಕು. ಮತ್ತು ಸುಖವಾಗಿ ಸ್ವಧರ್ಮವನ್ನು ಆಚರಿಸಬೇಕು. ಇದರಿಂದ ರಜೋಗುಣ ಮತ್ತು ತಮೋಗುಣಗಳು ಇಲ್ಲದಾಗಿ ಸತ್ವಗುಣದಿಂದ ಭಕ್ತನು ಆ ಯಾವ ಪುರುಷೋತ್ತಮನನ್ನು ಪ್ರಾಪ್ತಮಾಡಿಕೊಳ್ಳುವನು ॥೧೮॥ ವರ್ಣ ಅಶ್ರಮಗಳ ಉದ್ಭವಕ್ಕೆ ಮೂಲನಾಗಿರುವ ನನ್ನನ್ನು ಅರಿಯಬೇಕು. ಕುಲಧರ್ಮದಿಂದ ನನ್ನನ್ನೇ ಉಪಾಸಿಸಬೇಕು ॥೧೯॥ ವರ್ಣದ ಆಧಾರನು ನಾನಾಗಿರುವೆನು. ಬ್ರಾಹ್ಮಣರು ನನ್ನ ಮುಖದಿಂದ ಕ್ಷತ್ರಿಯರು ಬಾಹುಗಳಿಂದ, ವೈಶ್ಯರು ತೊಡೆಯಿಂದ, ಶೂದ್ರರು ಕಾಲುಗಳಿಂದ ಉತ್ಪನ್ನರಾದರು. ಶ್ರುತಿವಚನ ಪ್ರಮಾಣದಂತೆ ನಾನು ವರ್ಣಾಶ್ರಮದ ಆಧಾರನಾಗಿರುವುದನ್ನು ವೇದವೂ ಸಹ ಗರ್ಜಿಸಿ ಹೇಳುವುದು ॥೨೦॥ ದೇವ, ದೇವಿ ಕುಲ ಧರ್ಮದಲ್ಲಿ ನಾನೇ ಇರುವೆನು. ಈ ಪ್ರಕಾರವಾಗಿ ನಾನು ಎಲ್ಲಕ್ಕೂ ಆಧಾರನಾಗಿರುವೆನು. ಇದೇ ದೃಷ್ಟಿಯಿಂದ ಕರ್ಮಗಳನ್ನು ಮಾಡಬೇಕು ॥೨೧॥ ಹೇ ಉದ್ಧವನೇ, ನಿನಗೆ ಗುಟ್ಟಾಗಿರುವ ಮಾತನ್ನು ಹೇಳುವೆನು, ಕೇಳು. ನಾನು ಸರ್ವಕರ್ಮಗಳ ಅಧ್ಯಕ್ಷನು.ಕರ್ಮದ ಯೋಗದಿಂದ ನನ್ನ ಅಭಿಲಾಷೆಯನ್ನು ಹಿಡಿಯಬೇಕು. ಮತ್ತು ಕರ್ಮಗಳನ್ನು ಮಾಡುತ್ತಿರಲು ನನ್ನ ಚಿಂತನವನ್ನೇ ಮಾಡುತ್ತಿರಬೇಕು ॥೨೨॥ ಈ ರೀತಿಯಿಂದ ಕರ್ಮದ ಆರಂಭ, ಮಧ್ಯಮತ್ತು ಅಂತ್ಯಗಳಲ್ಲಿ ನನ್ನ ಅವಿನಾಶೀ ಈಶ್ವರನ ಚಿಂತನೆಯನ್ನು ಮಾಡಲು ಆ ಕರ್ಮಗಳೆಲ್ಲವೂ ನಿಷ್ಕರ್ಮವಾಗುವುವು. ಇದನ್ನು ನಿಶ್ಚಿತವಾಗಿ ತಿಳಿ ॥ ೨೩ ॥

ಹೀಗೆ ಸ್ವಧರ್ಮದ ಯೋಗದಿಂದ ಯಾರ ಅಂತಃಕರಣವು ಶುದ್ಧವಾಗಿರುವುದೋ, ಅವರು ವಿಷಯಗಳ ವಿಷಯದಲ್ಲಿ ಉದಾಸೀನರಾಗಿರುವರು. ಸರ್ವತ್ರವೂ ತುಂಬಿರುವ ಆನಂದದ ಅನುಭವವನ್ನು ಪಡೆಯುವರು. ಅವರನ್ನು ಕಂಡುಹಿಡಿಯುವ ಈ ಚಿನ್ಹೆಯಾಗಿರುವುದು ॥೨೪॥ ಇವರಿಗೆ ಸ್ವಲ್ಪವೂ ಕೂಡ ವಿಷಯಗಳ ಆಸಕ್ತಿ ಇರುವುದಿಲ್ಲ. ಆದರೆ ವಿಷಯಾಸಕ್ತ ಜನರಿಗೆ ತಮ್ಮ ಸರ್ವಕರ್ಮಗಳು ವಿಪರೀತವಾಗಿ ಕಾಣುವುವು ॥೨೫॥ ಮೃಗಜಲದ ತುಂಬಿದ ಕೆರೆಯ ನೀರಿನಿಂದ ಬತ್ತ ಬಾಳೆ ಬೆಳೆಯಲು ಸಾಧ್ಯವೇ ಇಲ್ಲ. ಅದರಂತೆ ವಿಷಯ ಲಂಪಟತನದ ಬುದ್ಧಿಯು ಇದ್ದವರಲ್ಲಿ ಆತ್ಮಲಾಭವು ಆಗಲು ಸಾಧ್ಯವೇ ಇಲ್ಲ ॥೨೬॥ ವಿಷಯಾಸಕ್ತ ಜನರತ್ತ ಅವಲೋಕಿಸಲು, ಅವರು ಕರ್ಮದ ಆರಂಭದಲ್ಲಿಯೇ, ತಮ್ಮ ಆಯುಷ್ಯವು ಬೆಳೆಯಬೇಕು, ಆರೋಗ್ಯವಾಗಿರಬೇಕು, ಧನಧಾನ್ಯಗಳ ಸಮೃದ್ಧಿಯಾಗಬೇಕು ಇತ್ಯಾದಿ ಪ್ರಕಾರಗಳ ಸಂಕಲ್ಪವನ್ನು ಮಾಡುವರು ॥೨೭॥ ಹೀಗೆ ಮಾಡುವುದರಿಂದ ಆ ಕರ್ಮವು ಹೇತುಪೂರ್ವಕವಾಗಿರುವುದು. ಆದ್ದರಿಂದ ಅದು ಸ್ವಧರ್ಮವೇ ಅಲ್ಲ. ಕಾರಣ ಇವರು ಸ್ವಧರ್ಮದ ನಿಮಿತ್ತದಿಂದ ನಿತ್ಯಮನೋರಥದ ಉಪಾಸನೆಯನ್ನು ಮಾಡುತ್ತಿರುವರು ॥೨೮॥ ಎತ್ತಿನ ಕೆಚ್ಚಲು ಹಿಂಡಲು ಒಂದು ಹನಿಯೂ ಸಹ ಹಾಲು ಹೊರಡಲಾರದು. ಅದರಂತೆ ಮನೋರಥಗಳ ಉಪಾಸನೆಯಿಂದ ಆತ್ಮಾನಂದವು ಎಂದಿಗೂ ಲಭಿಸಲಾರದು ॥೨೯॥

ಏವಂ ಕರ್ಮಚಿ ತೇ ಕರ್ಮ ನವ್ಹೇ । ಕೇಲ್ಯಾಹೀ ಸಿದ್ಧೀ ನ ಪವೇ । ತೇ ವಿಘ್ನಬಾಹುಲ್ಯೇ ನಾಶ ಪಾವೇ । ವಿಘ್ನ ಸಂಭವೇ ದೇವಾಂಚೇ ।।೮೦।। ವಿಷಯಸೇವನೀ ಆಹೇ ಸುಖ । ಯಾ ಬುದ್ಧೀ ಶಿಣಶಿಣೋನಿ ಮೂರ್ಖ । ಪಾವಲೇ ಪರಮ ದುಃಖೇ ದುಃಖ । ಮುಖ್ಯ ಯಾಜ್ಞಿಕ ಘಾಲೂನಿ ।।೮೧।। ವೇದತ್ರಯೀ ಜಾಣೂನಿ ಸಕಳ । ಯಜ್ಞಕರ್ಮೀ ಅತಿಕುಶಲ । ವಾಂಛಿತಾ ಸ್ವರ್ಗಾದಿಕ ಫಳ । ಪತನ ಕೇವಳ ಅಧೋಮುಖೇ ।।೮೨।। ಐಸೇನೀ ವಿವೇಕೇ ನಿಪುಣದೃಷ್ಟೀ । ಜೋ ಸ್ವರ್ಗು ನೇಘೇ ತೃಣಾಸಾಠೀ । ವೈರಾಗ್ಯ ಲಾಗೇ ತ್ಯಾಪಾಠೀ । ಉಠಾಉಠೀ ಘರ ರಿಘೇ ।।೮೩।। ತೋ ವೈರಾಗ್ಯಾಚೇ ಮಾಹೇರ । ವಿಶ್ರಾಂತೀಚೇ ವಿಸಾವತೇ ಘರ । ತೋ ನರರೂಪೇ ಸಾಚಾರ । ''ವಿವೇಕು'' ಸಾಕಾರ ಪೈ ಝಾಲಾ ।।೮೪।। ಐಸೇನಿ ವಿವೇಕೇ ವಿವೇಕದೃಷ್ಟೀ । ಸ್ವರ್ಗಾದಿ ವಿಷಯ ಮಿಥ್ಯಾ ಸೃಷ್ಟೀ । ತೇ ಮಿಥ್ಯತ್ವಾಚೀ ಗೋಠೀ । ಐಕ ಜಗಜೇಠೀ ಉದ್ಧವಾ ।।೮೫।।

ಸುಪ್ತಸ್ಯ ವಿಷಯಾಲೋಕೋ ಧ್ಯಾಯತೋ ವಾ ಮನೋರಥಃ । ನಾನಾತ್ಮಕತ್ವಾದ್ ವಿಫಲಸ್ತಥಾ ಭೇದಾತ್ಮಧೀರ್ಗುಣೈಃ ।।೩।।

ಅರ್ಥ:- ಸ್ವಪ್ನದಲ್ಲಿ ಅಥವಾ ಜಾಗೃತಾವಸ್ಥೆಯಲ್ಲಿ ಮನುಷ್ಯನು ತನ್ನ ಮನದಲ್ಲಿ ಅನೇಕ ಪ್ರಕಾರದ ಮನೋರಥಗಳ ಅನುಭವ ಕಾಣುವನು. ಆದರೆ ಅವುಗಳೆಲ್ಲವೂ ವಸ್ತುಶೂನ್ಯವಾಗಿರುವುದರಿಂದ ವ್ಯರ್ಥವಾಗಿರುವುವು. ಹಾಗೆಯೇ ಇಂದ್ರಿಯಗಳ ಮುಖಾಂತರ ಆಗುತ್ತಿರುವ ಭೇದಬುದ್ಧಿಯೂಕೂಡ ವ್ಯರ್ಥವಾಗಿರುವುದು. ಕಾರಣ ಇವೂ ಸಹ ಇಂದ್ರಿಯಜನ್ಯ ಮತ್ತು ನಾನಾ ವಸ್ತುವಿಷಯಕವಾಗಿರುವುದರಿಂದ ಪೂರ್ವವತ್ ಅಸತ್ಯವಾಗಿರುವುವು.

ಸ್ವಪ್ನ ಆಣಿ ಮನೋರಥ । ಮನೋಮಾತ್ರ ವಿಲಸಿತ । ತೇ ನಿದ್ರಿತಾಸೀ ಸತ್ಯ ಪದಾರ್ಥ । ಮಿಥ್ಯಾ ಹೋತ ಜಾಗೃತೀ ।।೮೬।। ತೈಸೇ ಕಾಮನೇಚೇನಿ ಉಲ್ಹಾಸೇ । ಇಂದ್ರಿಯಾಂಚೇನಿ ಸೌರಸೇ । ಉಭಯ ಭೋಗಪಿಸೇ । ನಾಥಿಲೇ ವಸೇ ಬುದ್ಧೀಸೀ ।।೮೭।। ಶಿಂಪೀ ಶಿಂಪಪಣೇ ಅಸೇ । ಧನಲೋಭ್ಯಾ ರುಪೇ ಭಾಸೇ । ತೇವೀ ವಿಷಯಾಚೇನಿ ಅಭಿಲಾಷೇ । ಭೇದಪಿಸೇ ನಸತೇಚಿ ।।೮೮।। ಸ್ವಪ್ನೀ ದೇಖಿಲೇ ಆತ್ಮಮರಣ । ಜಾಗೃತೀ ಮಿಥ್ಯಾ ಮ್ಹಣೇ ಆಪಣ । ತೈಸಾ ಸ್ವರೂಪೀ ಜಾಗಾ ಝಾಲ್ಯಾ ಜಾಣ । ಜನ್ಮಮರಣ ತಯಾ ನಾಹೀ ।।೮೯।। ಜಂವವರೀ ಭೇದಾಚೀ ಭೇದಸಿದ್ಧೀ । ತಂವವರೀ ಜನ್ಮಮರಣ ಬಾಧೀ । ಭೇದು ಮಿಥ್ಯಾ ಝಾಲಿಯಾ ತ್ರಿಶುದ್ಧೀ । ಅಭೇದೀ ಬಾಧೀ ತೇ ನಾಹೀ ।।೯೦।। ತೋ ಭೇದು ಕೈಸೇನಿ ತುಟೇ । ನಿಜಸ್ವರೂಪ ಕೈಸೇನಿ ಭೇಟೇ । ತೇ ಅರ್ಥೀ ಸಾಧನ ಗೋಮಟೇ । ಐಕ ಚೋಖಟೇ ವಿಭಾಗೇ ।।೯೧।।

ವಸ್ತುತಃ ಅವು ಕರ್ಮಗಳೇ ಅಲ್ಲ. ಆದ್ದರಿಂದ ಅವುಗಳನ್ನು ಆಚರಿಸಿದರೂ ಕೂಡ ಸಿದ್ಧಿಯು ಪ್ರಾಪ್ತವಾಗಲಾರದು. ಆ ಕರ್ಮಗಳಲ್ಲಿ ಅನೇಕ ಪ್ರಕಾರಗಳ ವಿಘ್ನಗಳು ಉದ್ಭವಿಸಿ ಅವರ ನಾಶವಾಗುವುದು. ದೈವೀ ವಿಘ್ನಗಳ ಸಂಭವವೂ ಉಂಟಾಗುವುದು ।।೮೦।। ವಿಷಯ ಸೇವನೆಯಲ್ಲಿ ಸುಖವು ತುಂಬಿರುವುದೆಂಬ ಈ ಕಲ್ಪನೆಯಿಂದ ಮುಖ್ಯವಾಗಿ ಯಜ್ಞವನ್ನು ಆರಂಭಿಸಿ ಅಜ್ಞಾನಿ ಜನರು ಅನೇಕ ಪ್ರಕಾರಗಳ ಕಷ್ಟಗಳನ್ನು ಸೋಸುತ್ತ ದುಃಖಿಯಾಗುವರು ।।೮೧।। ಮೂರೂ ವೇದಗಳನ್ನು ತಿಳಿದು ಪಂಡಿತರಾಗಿರುವವರು ಯಜ್ಞಕರ್ಮಗಳಲ್ಲಿ ಅತಿಶಯವಾಗಿ ನಿಷ್ಣಾತರಾಗಿರುವರು. ಇವರು ಸ್ವರ್ಗಾದಿ ಫಲದ ಇಚ್ಛೆಯನ್ನು ಮಾಡುವರು. ಆದರೆ ಅವರ ಅಧಃಪತನವಾಗುತ್ತಿರುವುದು ।।೮೨।। ವಿವೇಕದಿಂದ ಯಾರ ದೃಷ್ಟಿಯು ಶುದ್ಧವಾಗಿ, ಯಾರು ಸ್ವರ್ಗಕ್ಕೆ ತೃಣವತ್ ಎಂದು ತಿಳಿದು ಅದರ ಸ್ವೀಕಾರವನ್ನು ಮಾಡಲಾರರೋ, ಅವರ ಬೆನ್ನಿಗೆ ವೈರಾಗ್ಯವು ಹತ್ತಿಕೊಂಡು ಅವರ ಮನೆಯನ್ನು ಸೇರಿಕೊಳ್ಳುವುದು ।।೮೩।। ಇದುವೇ ವೈರಾಗ್ಯದ ತವರು ಮನೆಯಾಗಿರುವುದು; ವಿಶ್ರಾಂತಿಯ ವಿಶ್ರಾಂತಿಸ್ಥಾನವಾಗಿರುವುದು. ಇದುವೇ ಮನುಷ್ಯರೂಪದ ಮೂರ್ತಿಮಂತ್ರ ವಿವೇಕವಾಗಿರುವುದು ।।೮೪।। ಹೀಗೆಲ್ಲ ವಿಚಾರಗಳನ್ನು ಮಾಡಿ ವಿವೇಕ ದೃಷ್ಟಿಯಿಂದ ಅವಲೋಕಿಸಲು ಸ್ವರ್ಗಾದಿ ವಿಷಯಗಳೆಲ್ಲವೂ ಮಿಥ್ಯೆಯಾಗಿರುವುದು ತೋರುವುದು. ಹೇಜಗನ್ಮಾನ್ಯ ಉದ್ಧವನೇ, ಆ ಮಿಥ್ಯೆಯ ವಿಷಯವನ್ನು ಹೇಳುವೆನು, ಕೇಳು ।।೮೫।।

ಸ್ವಪ್ನ ಮತ್ತು ಮನೋರಥಗಳು ಇವು ಎರಡೂ ಮನಸ್ಸಿನ ಆಟವಾಗಿರುವುವು. ನಿದ್ರೆಯಲ್ಲಿ ಸ್ವಪ್ನವು ನಿಜವೆನಿಸುವುದು. ಆದರೆ ಎಚ್ಚರಾದ ಕೂಡಲೇ ಎಲ್ಲವೂ ಸುಳ್ಳೆಂದು ತಿಳಿಯುವುದು ।।೮೬।। ಅದರಂತೆ ಕಾಮನೆಯ ಉಲ್ಹಾಸದಿಂದ ಮತ್ತು ಇಂದ್ರಿಯಗಳ ಆಸಕ್ತಿಯಿಂದ ಇಹಲೋಕದ ಮತ್ತು ಪರಲೋಕದ ಭೋಗಗಳ ಹುಚ್ಚು ಸುಳ್ಳೇ ಬುದ್ಧಿಗೆ ಅಂಟಿಕೊಂಡಿರುವುದು ।।೮೭।। ಕಪ್ಪೇಚಿಪ್ಪು ವಾಸ್ತವಿಕವಾಗಿ ತನ್ನ ಸ್ವರೂಪದಲ್ಲಿರುವುದು. ಆದರೆ ಹಣದ ಲೋಭವುಳ್ಳ ಮನುಷ್ಯನಿಗೆ ಆ ಯಾವ ಕಪ್ಪೇಚಿಪ್ಪು ಬೆಳ್ಳಿಯಂತೆ ತೋರುವುದು. ಅದರಂತೆ ವಿಷಯಗಳ ಆಸಕ್ತಿಯಿಂದ ಇಲ್ಲದ ಭೇದದ ಹುಚ್ಚು ಮನುಷ್ಯನಿಗೆ ಅಂಟಿಕೊಳ್ಳುವುದು ।।೮೮।। ಕೆಲವೊಂದು ವೇಳೆಯಲ್ಲಿ ಸ್ವಪ್ನದಲ್ಲಿ ತಾನು ಮರಣನಾಗುವನು. ಜಾಗೃತನಾದ ಮೇಲೆ ತಾನು ಅದಕ್ಕೆ ಸುಳ್ಳೆಂದು ತಿಳಿಯುವನು. ಅದರಂತೆ ಆತ್ಮಸ್ವರೂಪದಲ್ಲಿ ಜಾಗೃತನಾಗಲು ಆತನಿಗೆ ಜನ್ಮಮರಣಗಳು ತೋರುವುದೇ ಇಲ್ಲ ।।೮೯।। ಎಲ್ಲಿಯವರೆಗೆ ಜೀವ ಮತ್ತು ಶಿವ ಈ ಎರಡರ ಭೇದ ನಿವೃತ್ತಿಯಾಗುವುದಿಲ್ಲವೋ, ಅಲ್ಲಿಯವರೆಗೆ ಜನ್ಮಮರಣದ ಬಾಧೆಯು ತಪ್ಪುವುದೇ ಇಲ್ಲ. ಆ ಬೇಧವು ಮಿಥ್ಯೆಯಾಗಲು ಅದ್ವೈತದಲ್ಲಿ ಜನ್ಮ ಮರಣದ ಬಾಧೆಯು ಇರುವುದಿಲ್ಲ ।।೯೦।। ಈಗ ಈ ಭೇದವು ಯಾವುದರಿಂದ ಇಲ್ಲದಾಗುವುದು ಮತ್ತು ಸ್ವರೂಪ ದರ್ಶನವು ಯಾವುದರಿಂದ ಆಗುವುದು ಎಂಬುದಕ್ಕೆ ಒಂದು ಉತ್ತಮವಾದ ಸಾಧನೆಯನ್ನು ಹೇಳುವೆನು. ಅದನ್ನು ಏಕಾಗ್ರಚಿತ್ತದಿಂದ ಆಲಿಸು ।।೯೧।।

ನಿವೃತ್ತಂ ಕರ್ಮ ಸೇವೇತ ಪ್ರವೃತ್ತಂ ಮತ್ಪರಸ್ತ್ಯಜೇತ್।
ಜಿಜ್ಞಾಸಾಯಾಂ ಸಂಪ್ರವೃತ್ತೋ ನಾದ್ರಿಯೇತ್ ಕರ್ಮಚೋದನಾಮ್ ॥೪॥

ಅರ್ಥ:- ಯಾವ ಪುರುಷನು ನನಗೆ ಶರಣು ಬರುವನೋ, ಆತನಿಗೆ ಅಂತರ್ಮುಖಿಗೊಳಿಸುವ ನಿಷ್ಕಾಮ, ನಿತ್ಯಕರ್ಮ ಮಾಡಬೇಕಾಗುವುದು. ವಿಷಯಾಸಕ್ತಿ ಕರ್ಮಗಳನ್ನು ಪರಿತ್ಯಾಗ ಮಾಡಬೇಕು. ಸಕಾಮವಾಗಿರುವ, ಬಹಿರ್ಮುಖಿಗೊಳಿಸುವ, ಆತ್ಮಜ್ಞಾನದ ಉತ್ಕಟ ಇಚ್ಛೆಯು ಜಾಗೃತವಾದಾಗ ಕರ್ಮಸಂಬಂಧದ ವಿಧಿವಿಧಾನಗಳ ಆದರ ಮಾಡಬಾರದು.

ಚಿತ್ತೀ ವಾಸನಾಂಚೇ ಮಳ । ತೇಣೇ ಭೇದು ಭಾಸೇ ಸಬಳ । ತೋ ನಾಶಾವಯಾ ಚಿತ್ತಮಳ । ಕರ್ಮ ನಿರ್ಮಳ ಸೇವಾವೇ ॥೯೨॥ ಮಾಗಾ ಸಾಂಗೀತಲೇ ನಿಶ್ಚಿತ । ಜೇ ಕಾ ನಿತ್ಯ ನೈಮಿತ್ಯ । ತೇಂಚಿ ಕರ್ಮ ಗಾ "ನಿವೃತ್ತ"। ಸಾಧಕೀ ಪ್ರಸ್ತುತ ಸೇವಾವೇ ॥೯೩॥ ಜೋ ಪ್ರವರ್ತಲಾ ಮಾಝ್ಯಾ ಭಜನೀ । ತೇಣೇ "ಕಾಮ್ಯ" ಸಾಂಡಾವೇ ನಿಪಟೋನೀ । ಹೇ ಮಾಗಾ ಸಾಂಗಿತಲೇ ವಿವಂಚೂನೀ । ಕಾಮನಾ ಮನೀ ನ ಧರಾವೀ ॥೯೪॥ ಧರೋನಿ ಮದರ್ಪಣಾಚೇ ಬಳ । "ನಿತ್ಯ" ಆಚರತಾ ನಿರ್ಮಳ । ಚಿತ್ತಾಚೇ ಚೈತ್ಯ - ಮಳ । ಜಾತೀ ತತ್ಕಾಳ ನಾಸೋನಿ ॥೯೫॥ ಕೃಷೀವಳು ಕರೀ ಶೇತಾಸೀ । ಯಥಾರ್ಥ ದ್ರವ್ಯ ದೇ ರಾಜಯಾಸೀ । ತೋ ನ ಭೀ ಗ್ರಾಮ ಕಂಟಕಾಂಸೀ । ತೇವೀ ಕೃಷ್ಣಾರ್ಪಣೇಸೀ ಹೋತಸೇ ॥೯೬॥ ಜಾಹಲ್ಯಾ ಚಿತ್ತಮಳಕ್ಷಾಳಣೇ । ನಿತ್ಯವಿವೇಕು ಉಪಜೇ ತೇಣೇ । ಇಹಾಮುತ್ರಾ ಲಾತಾ ಹಾಣೇ । ಅನಿತ್ಯ ತ್ಯಜಣೇ ವೈರಾಗ್ಯೇ ॥೯೭॥ ಏವಂ ವೈರಾಗ್ಯ ಝಾಲಿಯಾ ಅಢಳ । ತೇಣೇ ಸತ್ತ್ವ ಹೋಯ ಪ್ರಬಳ । ತೇವ್ಹಾ ಮಜ ಜಾಣಾವಯಾ ಕೇವಳ । ವೃತ್ತಿ ನಿರ್ಮಳ ತೇ ಕಾಳೀ ॥೯೮॥ ಕರಿತಾ ಮಾಝೀ ಚಿಂತಾ । ಕಾಮಕ್ರೋಧ ನಾತವತೀ ಚಿತ್ತಾ । ಥೋರಲಾಗಲೀ ಮಾಝೀ ಅವಸ್ಥಾ । ನ ರಾಹೇ ಸರ್ವಥಾ ಅಣುಭರೀ ॥೯೯॥ ಹೋ ಕಾ ಐಶಿಯೇ ಅವಸ್ಥೇಸೀ । ಕರ್ಮ ಕ್ರಿಯಾ ನಾವಡೇ ಜ್ಯಾಸೀ । ತೇಣೇ ಸನ್ಯಾಸೂನಿ ಸರ್ವ ಕರ್ಮಾಸೀ । ಬ್ರಹ್ಮಜ್ಞಾನಾಸೀ ರಿಘಾವೇ ॥೧೦೦॥ ಶ್ರವಣ ಮನನ ಕರಿತಾ । ಕರ್ಮಾಸೀ ಝಾಲಿಯಾ ವಿಗುಣತಾ। ಬಾಧಕ ನವ್ಹೇ ಮಾಝ್ಯಾ ಭಕ್ತಾ । ಕರ್ಮಕಿಂಕರತಾ ತಯಾ ನಾಹೀ ॥೧೦೧॥ ಸ್ವಧರ್ಮ ಕೇಲಿಯಾ ಫಳ ಕಾಯೀ । ಚಿತ್ತಾಚಾ ಮಳಮಾತ್ರ ಜಾಯೀ । ಭಕ್ತು ಭಜನೇ ನಿರ್ಮಳ ಆಹೇ । ಬಾಧೂ ನ ಲಾಹೇ ಸ್ವಕರ್ಮ ॥೧೦೨॥ ಏವಂ ಕರ್ಮಾಚೀ ಚೋದನಾ । ಮದ್ಭಕ್ತಾಸೀ ನಾಹೀ ಜಾಣಾ। ಕರಿತಾ ಶ್ರವಣ ಕೀರ್ತನಾ । ಕರ್ಮಬಂಧನಾ ನಾ ತಳತೀ ॥೧೦೩॥ ಐಶಿಯಾ ಜಿಜ್ಞಾಸಾವಸ್ಥೇಸೀ । ಕರ್ಮಬಾಧಾ ನಾಹೀ ತ್ಯಾಸೀ । ಮುಖ್ಯ ತಾತ್ಪರ್ಯ ಬ್ರಹ್ಮಜ್ಞಾನಾಸೀ । ಹೇಚಿ ಉದ್ಧವಾಸೀ ಸಾಂಗತು ॥೧೦೪॥

ಚಿತ್ತದಲ್ಲಿ ವಾಸನೆಗಳ ಹೊಲಸು ತುಂಬಿರುವುದು. ಅದರಿಂದಲೇ ಪ್ರಬಲವಾದ ಭೇದವು ತೋರುತ್ತಿರುವುದು. ಈ ಚಿತ್ತದ ಮಲಿನತೆಯನ್ನು ನಾಶಮಾಡುವುದಕ್ಕಾಗಿ ಸತ್ಕರ್ಮಗಳನ್ನು ಆಚರಿಸಬೇಕು ॥೯೨॥ ಈ ಹಿಂದೆ ನಿತ್ಯ ನೈಮಿತ್ತಿಕ ಕರ್ಮಗಳ ವಿಷಯ ಹೇಳಲಾಗಿದೆ. ಅದೇ ನಿವೃತ್ತಿ ಕರ್ಮವಾಗಿರುವುದು. ಸಾಧಕರು ಅದನ್ನೇ ಸತತವಾಗಿ ಆಚರಿಸಬೇಕು ॥೯೩॥ ಯಾರು ನನ್ನ ಭಜನೆಯನ್ನು ಮಾಡಲು ಪ್ರವೃತ್ತರಾಗಿರುವರೋ, ಅವರು ಕಾಮ್ಯ ಕರ್ಮಗಳ ತ್ಯಾಗವನ್ನು ನಿಶ್ಚಿತವಾಗಿ ಮಾಡಬೇಕು. ಮನದಲ್ಲಿ ಯಾವ ಪ್ರಕಾರದ ಇಚ್ಛೆಯನ್ನು ಧರಿಸಕೂಡದು. ಈಹಿಂದೆ ಇದನ್ನು ಸ್ಪಷ್ಟವಾಗಿಯೇ ಹೇಳಿರುವುದು ॥೯೪॥ ಪ್ರತ್ಯೇಕ ಕರ್ಮಗಳನ್ನು ನನಗೆ ಅರ್ಪಿಸಿ ನಿರಂತರವಾಗಿ ನಿರ್ಮಲವಾದ ಕರ್ಮಗಳನ್ನೇ ಮಾಡಬೇಕು. ಹೀಗೆ ಮಾಡುವುದರಿಂದ ಚಿತ್ತದಲ್ಲಿನ ಮಲಿನವು ತತ್ಕಾಲದಲ್ಲಿ ಇಲ್ಲದಾಗುವುದು ॥೯೫॥ ಒಕ್ಕಲಿಗನು ಹೊಲವನ್ನು ಬಿತ್ತಿ ಬೆಳೆದು ಅದರ ಕರವನ್ನು ಸರಕಾರಕ್ಕೆ ಮುಟ್ಟಿಸುವನು. ಗ್ರಾಮಕಂಟಕರಿಗೆ ಇವನು ಸ್ವಲ್ಪವೂ ಭಯಪಡುವುದಿಲ್ಲ. ಕೃಷ್ಣಾರ್ಪಣ ಬುದ್ಧಿಯಿಂದ ಹೀಗೆಯೇ ಆಗುವುದು ॥೯೬॥ ಚಿತ್ತದ ಮಲಿನವು ತೊಳೆಯಲ್ಪಟ್ಟಾಗ ನಿತ್ಯ ವಸ್ತು ವಿಷಯದ ವಿವೇಕವು ಉತ್ಪನ್ನವಾಗುವುದು. ಇಹಪರಲೋಕದ ಸುಖವನ್ನು ತುಚ್ಛಗೊಳಿಸಿ ಸಾಧಕನು ವಿರಕ್ತಿಯಿಂದ ಅನಿತ್ಯ ವಸ್ತುಗಳ ತ್ಯಾಗ ಮಾಡುವನು ॥೯೭॥ ಈ ಪ್ರಕಾರವಾಗಿ ವೈರಾಗ್ಯವು ಬೆಳೆಯಲು ಸತ್ತ್ವಗುಣವು ಬೆಳೆಯುವುದು. ಆಗ ಮಾತ್ರ ನನ್ನನ್ನು ಅರಿಯುವ ವೃತ್ತಿಯು ನಿರ್ಮಲವಾಗುವುದು॥೯೮॥ ನನ್ನ ಚಿಂತನೆಯನ್ನು ಮಾಡುತ್ತಿರಲು ಚಿತ್ತಕ್ಕೆ ಕಾಮಕ್ರೋಧಗಳ ಸ್ಮರಣೆಯೂ ಕೂಡ ಆಗುವುದಿಲ್ಲ. ಸತತವಾಗಿ ನನ್ನ ಧ್ಯಾಸವೇ ಹತ್ತಿಕೊಂಡಿರುವುದರಿಂದ ಚಿತ್ತವು ಕ್ಷಣ ಹೊತ್ತು ಸಹ ಬೇರೆ ಕಡೆಗೆ ಹೋಗುವುದಿಲ್ಲ ॥೯೯॥ ಹೀಗಾದ ಚಿತ್ತದ ಅವಸ್ಥೆಯಲ್ಲಿ ಆತನಿಗೆ ಕರ್ಮಕ್ರಿಯೆಗಳಲ್ಲಿ ಪ್ರೀತಿಯು ಇಲ್ಲದಾಗುವುದು. ಆಗ ಆತನು ಸರ್ವ ಕರ್ಮಗಳ ಸನ್ಯಾಸ ಮಾಡಿ ಬ್ರಹ್ಮಜ್ಞಾನದಲ್ಲಿ ಸೇರಬೇಕು ॥೧೦೦॥ ಶ್ರವಣ ಮನನವನ್ನು ಮಾಡುತ್ತಿರಲು ಕರ್ಮಗಳಲ್ಲಿ ಅಡಚಣೆ ಒದಗಿದರೆ ಆ ನನ್ನ ಭಕ್ತನಿಗೆ ಬಾಧಿಸಲಾರದು. ಏಕೆಂದರೆ ಆತನು ಕರ್ಮದ ದಾಸನಾಗಿರುವುದಿಲ್ಲ ॥೧೦೧॥ ಸ್ವಧರ್ಮ ಆಚರಣೆಯ ಫಲವೇನು? ಇದರಿಂದ ಚಿತ್ತದ ಮಲಿನತೆ ಮಾತ್ರ ಇಲ್ಲದಾಗುವುದು, ಆದರೆ ಭಕ್ತನ ಚಿತ್ತವು ಭಜನೆಯಿಂದಲೇ ನಿರ್ಮಲವಾಗುವುದರಿಂದ ಆತನಿಗೆ ಸ್ವಕರ್ಮದ ಬಾಧೆಯು ಆಗುವುದೇ ಇಲ್ಲ ॥೧೦೨॥ ಸಾರಾಂಶವೇನೆಂದರೆ ನನ್ನ ಭಕ್ತರಿಗೆ ಕರ್ಮಗಳ ವಿಧಿಯು ಇರುವುದಿಲ್ಲ. ಅವರು ಶ್ರವಣ ಕೀರ್ತನೆಗಳನ್ನು ಮಾಡುತ್ತಿರುವರು. ಕರ್ಮಬಂಧನವು ಇವರಿಗೆ ಸ್ಪರ್ಶ ಮಾಡುವುದಿಲ್ಲ ॥೧೦೩॥ ಯಾರು ಜಿಜ್ಞಾಸು ಅವಸ್ಥೆಯಲ್ಲಿ ಇರುವರೋ ಅವರಿಗೆ ಕರ್ಮವು ಬಾಧಿಸುವುದಿಲ್ಲ. ಬ್ರಹ್ಮಜ್ಞಾನದ ಮುಖ್ಯ ತಾತ್ಪರ್ಯವು ಇದೇ ಆಗಿರುವುದು. ಹೀಗೆ ಭಗವಂತನು ಉದ್ಧವನಿಗೆ ಹೇಳಿದನು ॥೧೦೪॥

ಯಮಾನಭೀಕ್ಷ್ಣಂ ಸೇವೇತ ನಿಯಮಾನ್ಮತ್ಪರಃ ಕ್ವಚಿತ್ । ಪದಭಿಜ್ಞಂ ಗುರುಂ ಶಾಂತಮುಪಾಸೀತ ಮದಾತ್ಮಕಮ್ ॥೫॥

ಅರ್ಥ:- ಅಹಿಂಸಾದಿ ಯಮ ನಿಯಮವನ್ನು ಆದರರಿಂದ ಸೇವಿಸಬೇಕು. ಆದರೆ ಮತ್ಪರಾಯಣರಾಗಿ ಶೌಚಾದಿ ನಿಯಮಗಳನ್ನು ಕ್ವಚಿತವಾಗಿ ಸೇವಿಸಬೇಕು. ಜಿಜ್ಞಾಸು ಜನರಿಗಾಗಿ ಯಮ ನಿಯಮಗಳ ಪಾಲನೆಗಿಂತಲೂ ಮುಖ್ಯವಾಗಿ ಅವರಿಗೆ ತಮ್ಮ ಗುರುಗಳನ್ನು ನನ್ನ ಸ್ವರೂಪವೇ ಎಂದು ತಿಳಿದು ಸೇವೆಯನ್ನು ಮಾಡಬೇಕಾಗುವುದು.

ಹೋಆವಯಾ ವೃತ್ತೀಚಾ ಉಪರಮ । ಅಹಿಂಸಾ - ಸತ್ಯಾದಿ ಧರ್ಮ। ಆಚರಾವೇ ಅವಿಶ್ರಮ । ಬಾಹ್ಯ ನೇಮ ಅವಿರೋಧೇ ॥೧೦೫॥ ಆಚರತಾ ಅಹಿಂಸಾ - ಸತ್ಯಾದಿಕಾಂಸೀ । ತಂವ ತಂವ ದಶಾ ಉಜಳೇ ಕೈಸೀ। ಅತಿಪ್ರೀತಿ ಗುರುಭಕ್ತೀಸೀ। ಅಹರ್ನಿಶೀ ಗುರು ಚಿಂತೀ ॥೧೦೬॥ ಸದ್ಗುರುವೀಣ ಬ್ರಹ್ಮಜ್ಞಾನ । ಸರ್ವಥಾ ನವ್ಹೇ ನವ್ಹೇ ಜಾಣ। ಹೇ ಉಪನಿಷದರ್ಥೀ ಪ್ರಮಾಣ । ಪರಮ ನಿರ್ವಾಣ ಸಾಧಿಲೇ॥೧೦೭॥ ಡೋಳಾ ದೇಖಣಾಚಿ ಆಹೇ । ತ್ಯಾಸೀ ಸೂರ್ಯ ನವ್ಹತಾ ಸಾಹ್ಯೇ । ಸಿದ್ಧ ಪದಾರ್ಥ ದೇಖೋ ನ ಲಾಹೇ । ಸ್ತಬ್ಧ ರಾಹೇ ಅಂಧಾರೀ ॥೧೦೮॥ ನಾವ ತಾರೀ ಹೇ ಸಾಚಾರ। ಮಾಜೀ ಬೈಸಲೇ ಥೋರ ಥೋರ । ಪರೀ ತಾರಕೇವೀಣ ಪರಪಾರ। ಸಮರ್ಥ ನರ ನ ಪಾವತೀ ॥೧೦೯॥ ಪರ್ಜನ್ಯೇ ಭೂಮೀ ಮಾರ್ದವಾ ಆಲೀ । ಬೀಜೇ ಕಣಿಂಗ ಅಸೇ ಭರಲೀ । ಪರೀ ಜ್ಞಾತೇನ ಪೇರಣೀ ನಾಹೀ ಕೇಲೀ। ತಂವ ಪಿಕಾಚೀ ಬೋಲೀ ಪೋಂಚಟ ॥೧೧೦॥ ರತ್ನ ಸಾಂಪಡಲೇ ಅವಚಿತೇ । ಪರೀ ಖರೇ ಖೋಟೇ ಸಂಶಯ ತೇಥೇ । ರತ್ನ ಪಾರಖೀ ಕರೀ ವೋಲಾತೇ । ಅತಿಯತ್ನ ತ್ಯಾತೇ ಮಗ ಕರಿತೀ ॥೧೧೧॥ ತೈಸೇ ನಿಜಸ್ವರೂಪ ಆಇತೇ । ಶ್ರದ್ಧಾ - ಸದ್ಗುರುಚೇನಿ ಹಾತೇ । ಖರೇ ಕರೂನಿಯಾ ಜ್ಞಾತೇ। ನಿಜಸುಖಾತೇ ಪಾವಲೇ ॥೧೧೨॥ ಸಾಧಾವಯಾ ನಿಜಜ್ಞಾನ । ಕರಿತಾ ಸದ್ಗುರೂಚೇ ಸೇವನ । ನಿವಾಲೇ ಸಂತ ಸಜ್ಜನ । ಆನಂದಘನ ಸದ್ಗುರು ॥೧೧೩॥ ಮ್ಹಣಸೀ ಸಾಧನೇ ಕೇಲೀ ಅನೇಕ। ತೈಸೇ ಸದ್ಗುರೂಹೀ ಸಾಧನ ಏಕ। ಮ್ಹಣತಾ ಮುಮುಕ್ಷು ಝಾಲಾ ಮೂರ್ಖ । ನಿಜಾತ್ಮ ಸುಖ ಬುಡಾಲೇ॥೧೧೪॥ ಸದ್ಗುರು ಕೇಲಾ ತೋ ಸಾಧನ। ತ್ಯಾಹೂನಿ ಪರತೇ ಸಾಧ್ಯ ಆನ । ಮ್ಹಣತಾ ಆಲೀ ನಾಗವಣ । ನಾಗವಲಾ ಜಾಣ ಸರ್ವಸ್ವೇ ॥೧೧೫॥ ಜೋ ಚಿತ್ಸುಖೇ ಸದಾ ಸಂಪನ್ನ। ಚಿದ್ರೂಪೇ ಜ್ಯಾಸೀ ಸಮಾಧಾನ। ತೋ ಚಿನ್ಮಾತ್ರಾ ಹೋನಿ ಭಿನ್ನ । ನವ್ಹೇ ಜಾಣ ಸರ್ವಥಾ ॥೧೧೬॥ ಲವಣ ಸಾಗರೀ ರಿಘಾಲೇ । ತೇವ್ಹಾಂಚಿ ತೇ ಸಮುದ್ರ ಝಾಲೇ । ದೀಪೇ ವಣವಯಾ ಆಲಿಂಗಿಲೇ । ವಣವಾಚಿ ಝಾಲೇ ತೇ ತೇಜ ॥೧೧೭॥

ವೃತ್ತಿಯು ಶಾಂತವಾಗುವುದಕ್ಕಾಗಿ ಅಹಿಂಸೆ - ಸತ್ಯ ಇತ್ಯಾದಿ ಧರ್ಮವನ್ನು ಯಾವಾಗಲೂ ಆಚರಿಸಬೇಕು. ಮತ್ತು ಬಾಹ್ಯ ನಿಯಮಗಳನ್ನು ಪಾಲಿಸಬೇಕು ॥೧೦೫॥ ಅಹಿಂಸಾ, ಸತ್ಯ ಇತ್ಯಾದಿ ಧರ್ಮವನ್ನು ಯಾವ ರೀತಿಯಾಗಿ ಪಾಲಿಸುವನೋ, ಅದೇ ರೀತಿಯಲ್ಲಿ ಆತನ ವೃತ್ತಿಯು ಶಾಂತವಾಗುತ್ತ ಸಾಗುವುದು. ಇದಲ್ಲದೇ ಗುರುಭಕ್ತಿಯ ಅತ್ಯಂತಿಕ ಪ್ರೇಮವು ಉತ್ಪನ್ನವಾಗುವುದು ಮತ್ತು ಹಗಲು ರಾತ್ರಿ ಗುರುವಿನ ಚಿಂತನೆಯನ್ನೇ ಈತನು ಮಾಡುತ್ತಿರುವನು ॥೧೦೬॥ ಬ್ರಹ್ಮಜ್ಞಾನವು ಸದ್ಗುರುವಿನ ಹೊರತಾಗಿ ಎಂದೆಂದಿಗೂ ಪ್ರಾಪ್ತವಾಗಲಾರದು. ಇದನ್ನು ನಾನು ಉಪನಿಷತ್‌ಗಳ ಆಧಾರದಿಂದ ನಿನಗೆ ಹೇಳುತ್ತಿರುವೆನು. ಉಪನಿಷತ್‌ವು ಎಲ್ಲಕ್ಕಿಂತಲೂ ಶ್ರೇಷ್ಠ ಪ್ರಮಾಣವಾಗಿರುವುದು ॥೧೦೭॥ ಕಣ್ಣುಗಳಿಗೆ ನೋಡುವ ಶಕ್ತಿಯು ಉತ್ತಮವಾಗಿ ಇದ್ದರೂ ಸೂರ್ಯನ ಬೆಳಕಿನ ಸಹಾಯವಿಲ್ಲದೇ ಆತನು ಸಮೀಪದಲ್ಲಿರುವ ಪದಾರ್ಥಗಳನ್ನು ನೋಡಲಾರನು. ಕತ್ತಲದಲ್ಲಿ ಸ್ವಸ್ಥವಾಗಿ ಇರುವನು ॥೧೦೮॥ ದೋಣಿಯೇ ನೀರಿನಲ್ಲಿ ಪಾರು ಮಾಡುವುದು ಸತ್ಯವಾಗಿದೆ. ಅದರಲ್ಲಿ ದೊಡ್ಡ ದೊಡ್ಡ ಜನರು ಕುಳಿತುಕೊಂಡಿದ್ದರೂ ಇವರ ಸಾಮರ್ಥ್ಯದಿಂದ ಅಂಬಿಗನಿಲ್ಲದೇ ಆಚೆ ದಂಡೆಯನ್ನು ತಲುಪಲು ಸಾಧ್ಯವಾಗುವುದಿಲ್ಲ ॥ ೧೦೯॥ ಮಳೆಯು ಭೂಮಿಯನ್ನು ತೋಯಿಸಿ ಹದಗೊಳಿಸಿರುವುದು ಮತ್ತು ಬೀಜಗಳೂ ಸಹ ಕಣಜದಲ್ಲಿ ತುಂಬಿರುವುವು. ಆದರೂ ತಜ್ಞ ಒಕ್ಕಲಿಗನು ಬಿತ್ತದ ಹೊರತಾಗಿ ಬೆಳೆಯ ಅಪೇಕ್ಷೆ ಪಡುವುದು ಯೋಗ್ಯವಾಗಲಾರದು ॥೧೧೦॥ ಒಬ್ಬನಿಗೆ ಅಕಸ್ಮಾತವಾಗಿ ರತ್ನವು ಸಿಗಲು ಅದು ನಿಜವಾದ ರತ್ನವು ಹೌದೋ ಅಲ್ಲವೋ ಎಂಬುದಕ್ಕೆ ಸಂಶಯವಾಗುವುದು. ಆಗ ರತ್ನ ಪರೀಕ್ಷಕನು ಅದನ್ನು ಪರೀಕ್ಷಿಸಿ ಅದರ ಬೆಲೆಯನ್ನು ಕಟ್ಟಲು ಆಗ ಆ ರತ್ನವನ್ನು ಕೊಳ್ಳಲು ಅತೀ ಪ್ರಯತ್ನಿಸುವರು ॥೧೧೧॥ ಇದರಂತೆಯೇ ಆತ್ಮಸ್ವರೂಪವು ಸಹಜವಾಗಿಯೇ ದೊರೆತಿರುವುದು. ಇದನ್ನು ಶ್ರದ್ಧಾಯುಕ್ತ ಮನಸ್ಸಿನಿಂದ ಸದ್ಗುರು ಮುಖದಿಂದ ಅದನ್ನು ನಿಜವೆಂದು ನಿಶ್ಚಯಿಸಿ ಜ್ಞಾನಿಗಳು ಆತ್ಮಸುಖವನ್ನು ಪಡೆಯುವರು ॥೧೧೨ ॥ ಆತ್ಮಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕಾಗಿ ಸದ್ಗುರುಗಳ ಸೇವೆಯನ್ನು ಮಾಡಿ ಸಂತ ಸಜ್ಜನರು ಶಾಂತರಾಗುವರು. ಕಾರಣ ಸದ್ಗುರುಗಳು ಆನಂದಘನ ಸ್ವರೂಪರಾಗಿರುವರು ॥೧೧೩॥ ಅನೇಕ ಪ್ರಕಾರದ ಸಾಧನೆಗಳಲ್ಲಿ ಸದ್ಗುರು ಸೇವೆಯೂ ಒಂದು ಸಾಧನೆಯಾಗಿದೆ ಎಂದು ನಿನ್ನ ಮನದಲ್ಲಿ ಕದಾಚಿತ್ ಮೂಡಬಹುದು. ಆದರೆ ಹೀಗೆನ್ನುವ ಮುಮುಕ್ಷು ಅಜ್ಞಾನಿಯಾಗಿರುವನು. ಆತನಿಗೆ ಆತ್ಮಸುಖವು ಪ್ರಾಪ್ತವಾಗಲಾರದು ॥೧೧೪॥ ಸದ್ಗುರುಗಳನ್ನು ಮಾಡಿಕೊಂಡರೆ ಇದೊಂದು ಸಾಧನೆಯಾಗುವುದು ಮತ್ತು ಸಾಧ್ಯ ವಸ್ತು ಇದಕ್ಕಿಂತಲೂ ಭಿನ್ನವಾಗಿರುವುದು. ಹೀಗೆನ್ನುವವನಿಗೆ ಏನೂ ತಿಳಿಯಲು ಸಾಧ್ಯವಿಲ್ಲ ॥೧೧೫॥ ಸದ್ಗುರುಗಳು ಚಿತ್ಸುಖದಿಂದ ಸದೈವ ಸಂಪನ್ನರಾಗಿರುವರು. ಚಿದ್ರೂಪದಿಂದ ಇವರಿಗೆ ಸಮಾಧಾನವಾಗಿರುವುದು. ಇವರು ಚಿನ್ಮಾತ್ರದಿಂದ ಭಿನ್ನರಾಗಿರುವುದಿಲ್ಲ. ಹೀಗೆಂದು ನೀನು ನಿಶ್ಚಯಪೂರ್ವಕವಾಗಿ ತಿಳಿ ॥೧೧೬॥ ಉಪ್ಪು ಸಮುದ್ರದಲ್ಲಿ ಬಿದ್ದಾಕ್ಷಣವೇ ಅದು ಸಮುದ್ರರೂಪವಾಗುವುದು. ದೀಪವು ಕಾಡಿಗೆ ಆಲಿಂಗಿಸಲು ಕೂಡಲೇ ಅದು ಭಯಂಕರ ಕಾಡ ಬೆಂಕಿಯಾಗಿ ಪರಿವರ್ತಿಸುವುದು ॥೧೧೭॥

ಏವಂ ಚಿದ್ರೂಪಾಚೇ ಜ್ಯಾಸೀ ಜ್ಞಾನ । ತೋ ಚಿದ್ರೂಪಚಿ ಸತ್ಯ ಸಂಪೂರ್ಣ । ಗುರುಬ್ರಹ್ಮ ಅಭಿನ್ನ ಜಾಣ । ಯೇ ಅರ್ಥೀ ಪ್ರಮಾಣ ಉಪನಿಷದೇ ॥೧೧೮॥ ಹೋ ಕಾ ಘೃತಾಚೀ ಪುತಳೀ । ನವ್ಹತಾ ಘೃತಪಣಾವೇಗಳೀ। ಘೃತರೂಪೇ ರೂಪಾ ಆಲೀ । ತೈಸೀ ಮೂರ್ತೀ ಝಾಲೀ ಸದ್ಗುರೂಚೀ ॥೧೧೯॥ ತೋ ಚಿತ್ಸುಖಾಚಾ ಪುತಳಾ। ಕೀ ಸಚ್ಚಿದಾನಂದಾಚಾ ಸೋಹಳಾ । ಪ್ರತ್ಯಕ್ಷ ದೇಖಾವಯಾ ಡೋಳಾ। ಧರೀ ಲೀಲಾವಿಗ್ರಹೋ ॥೧೨೦॥ ತ್ಯಾಚೀ ಹೋಆವಯಾ ಭೇಟೀ। ಪಾಹಿಜೇತಿ ಭಾಗ್ಯಾಚಿಯಾ ಕೋಟೀ। ಹೇ ಬೋಲಣೇವರೀ ದಿಸೇ ದಿಠೀ । ತೈಸೀ ಗೋಠೀ ತೇ ನಾಹೀ ॥೧೨೧॥ ಸದ್ಗುರು ಜೇಉತೀ ವಾಸ ಪಾಹೇ । ತೇಉತೀ ಸುಖಾಚೀ ಸೃಷ್ಟೀ ಹೋಯೇ । ತೋ ಮ್ಹಣೇ ತೇಥ ಲವಲಾಹೇ । ಮಹಾಬೋಧು ರಾಹೇ ಸ್ವಾನಂದೇ ॥೧೨೨॥ ತ್ಯಾ ಸದ್ಗುರೂಚೇ ದೇಖಿಲ್ಯಾ ಪಾಯೇ । ತಹಾನಭೂಕ ತತ್ಕಾಳ ಜಾಯೇ । ಕಲ್ಪನಾ ಉರೇಂಚಿ ನ ಲಾಹೇ । ನಿಜಸುಖ ಆಹೇ ಗುರುಚರಣೀ ॥೧೨೩॥ ತಯಾ ಸದ್ಗುರೂಚೇ ಲಕ್ಷಣ । ಸಾಂಗತಾ ಶಬ್ದು ಥೋಂಟಾವೇ ಜಾಣ। ಜೋ ಸನಾತನ ಬ್ರಹ್ಮ ಪೂರ್ಣ। ಊಣಖೂಣ ತ್ಯಾ ನಾಹೀ ॥೧೨೪॥ ತರ್ಹೀ ಸ್ಫುರಲೀ ಏಕೀ ಸ್ಫೂರ್ತೀ । ತ್ಯಾಸೀ ಸರ್ವಾರ್ಥೀ ದಿಸೇ ಶಾಂತೀ । ಶಾಂತಿ ವೇಗಳೀ ಉಪಪತ್ತೀ । ಪ್ರಮಾಣ ನಿಶ್ಚಿತೀ ರಿಘೇನಾ ॥೧೨೫॥ ಶಾಂತಿ ತೇಚಿ ಸಮಾಧಾನ । ಶಾಂತಿ ತೇಚಿ ಬ್ರಹ್ಮಜ್ಞಾನ । ಶಾಂತೀ ತೇಚಿ ಬ್ರಹ್ಮ ಪೂರ್ಣ । ಸತ್ಯ ಜಾಣ ಉದ್ಧವಾ ॥೧೨೬॥ ಐಸೀ ಸದ್ಗುರೂಚೀ ಸ್ಥಿತೀ । ಐಕೋನಿ ಶಿಷ್ಯಾಚ್ಯಾ ಚಿತ್ತೀ । ವಾಢಲೀ ಅತಿಪ್ರೀತೀ । ಗುರುಭಕ್ತೀ ಲಾಗೋನೀ ॥೧೨೭॥ ಯಾಲಾಗೀ ಗುರುಗವೇಷಣಾ। ಉಸಂತು ಘೇವೋ ನೇದೀ ಅಂತಃಕರಣಾ । ಅಷ್ಟಾಪ್ರಹರ ವಿಚಕ್ಷಣಾ । ಗುರುಲಕ್ಷಣಾ ಲಕ್ಷಿತು ॥೧೨೮॥ ಕೈ ತೋ ಸ್ವಾಮೀ ದೇಖೇನ ಐಸಾ। ಕೈ ಹಾ ಮಾಝಾ ಫಿಟೇಲ ಫಾಂಸಾ । ಕೈ ಉಪರಮು ಹೋಈಲ ಮಾನಸಾ । ಸದ್ಗುರುಪಿಸಾ ತೋ ಝಾಲಾ ॥೧೨೯॥ ಆಯುಷ್ಯ ವೇಂಚತೇ ಉಠಾಉಠೀ । ಅಝೂನಿ ನವ್ಹೇ ಸದ್ಗುರೂಸೀ ಭೇಟೀ । ಝಾಲ್ಯಾ ಮನುಷ್ಯ ದೇಹಾಸೀ ತುಟೀ । ಸರ್ವಸ್ವ ಶೇವಟೀ ಬುಡೇಲ ॥೧೩೦॥ ಐಕತಾ ಗುರೂಚೇ ನಾಂವ । ಮನಾಪುಢೇ ಘೇತ ಧಾಂವ । ತೋ ಗೋಠೀಸೀಚ ದೇತ ಖೇವ । ಯೇವಢೀ ಹಾಂವ ಜಯಾಚೀ ॥೧೩೧॥ ಸದ್ಗುರು ಪ್ರತ್ಯಕ್ಷ ನ ಭೇಟತಾ । ಮನೇಚಿ ಪೂಜೀ ಗುರುನಾಥಾ । ಪರಮಾದರೇ ಪೂಜಾ ಕರಿತಾ । ಪ್ರೇಮ ತತ್ತ್ವತಾ ನ ಸಂಟೇ ॥೧೩೨॥

ಈ ಪ್ರಕಾರವಾಗಿ ಚಿದ್ರೂಪದ ಜ್ಞಾನವು ಪ್ರಾಪ್ತವಾಯಿತೆಂದರೆ ಆತನು ಸ್ವತಃ ಚಿದ್ರೂಪನಾಗುವನು. ಗುರು ಮತ್ತು ಬ್ರಹ್ಮವು ಭಿನ್ನವಿಲ್ಲ. ಇದಕ್ಕೆ ಉಪನಿಷತ್‌ಗಳ ಪ್ರಮಾಣವಿರುವುದು ॥೧೧೮॥ ತುಪ್ಪದ ಪ್ರತಿಮೆಯನ್ನು ಮಾಡಲು ಅದು ತುಪ್ಪದಿಂದ ಭಿನ್ನವಾಗಲಾರದು. ತುಪ್ಪದ ರೂಪದಿಂದಲೇ ಆ ಪ್ರತಿಮೆಯು ಸಿದ್ಧವಾಗಿರುವುದು. ಅದರಂತೆ ಸದ್ಗುರುಗಳು ಪರಬ್ರಹ್ಮದ ಮೂರ್ತಿಯೇ ಆಗಿರುವರು ॥೧೧೯॥ ಮೂರ್ತಿಮಂತ ಚಿತ್ಸುಖದ ಮೂರ್ತಿ ಅಥವಾ ಸಚ್ಚಿದಾನಂದದ ವೈಭವವನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳಲು ಸದ್ಗುರುಗಳು ಲೀಲಾಶರೀರವನ್ನು ಧರಿಸಿರುವರು ॥೧೨೦॥ ಬಹಳಷ್ಟು ಮಹಾಭಾಗ್ಯವಿಲ್ಲದೇ ಅವರ ದರ್ಶನವಾಗಲಾರದು. ಸಹಜವಾಗಿ ಮಾತನಾಡುತ್ತಿರಲು ಸಹಜವಾಗಿಯೇ ಸಿಗುವರೆಂಬ ಈ ಮಾತು ವ್ಯರ್ಥವಾಗಿರುವುದು ॥೧೨೧॥ ಸದ್ಗುರುಗಳು ಎಲ್ಲಿ ನೋಡುವರೋ, ಅಲ್ಲಿ ಸುಖದ ಸೃಷ್ಟಿಯೇ ಉತ್ಪನ್ನವಾಗುತ್ತಿರುವುದು. ಅವರು ಎಲ್ಲಿ ಹೇಳುವರೋ, ಅಲ್ಲಿ ಮಹಾಬೋಧೆಯು ಅತ್ಯಂತ ಆನಂದದಿಂದ ಇರುವುದು ॥೧೨೨॥ ಆ ಯಾವ ಸದ್ಗುರುಗಳ ಚರಣಗಳು ದೃಷ್ಟಿಗೆ ಬೀಳುತ್ತಲೇ ಹಸಿವೆ ನೀರಡಿಕೆಗಳು ಇಲ್ಲದಾಗುವುವು. ಈ ಪ್ರಕಾರದ ಆತ್ಮಸುಖವು ಸದ್ಗುರುವಿನ ಚರಣಗಳಲ್ಲಿರುವುದು ॥೧೨೩॥ ಆ ಯಾವ ಸದ್ಗುರುಗಳ ವರ್ಣನೆಯನ್ನು ಶಬ್ದಗಳಿಂದ ಮಾಡಲು ಬರುವುದಿಲ್ಲ. ಅವರು ಸನಾತನ ಬ್ರಹ್ಮರಾಗಿರುವುದರಿಂದ ಅವರ ನಿಶ್ಚಿತವಾದ ಯಾವುದೇ ಚಿನ್ಹೆಗಳನ್ನು ಹೇಳಲು ಬರುವುದಿಲ್ಲ ॥೧೨೪॥ ತಥಾಪಿ ಒಂದು ಲಕ್ಷಣವು ಮಾತ್ರ ಸ್ಪಷ್ಟವಾದ ಸ್ವರೂಪದಲ್ಲಿ ತೋರುವುದು. ಅವರಲ್ಲಿ ಸರ್ವತೋಪರೀ ಶಾಂತಿಯು ಕಾಣುವುದು. ಶಾಂತಿಯ ಹೊರತಾಗಿ ಬೇರೆ ಪ್ರಮಾಣವು ನಿಶ್ಚಿತವಾಗಿ ತೋರಲಾರದು ॥೧೨೫॥ ಹೇ ಉದ್ಧವನೇ, ಶಾಂತಿಯೆಂದರೇನೇ ಸಮಾಧಾನವಾಗಿರುವುದು. ಶಾಂತಿ ಇದುವೇ ಬ್ರಹ್ಮಜ್ಞಾನವು. ಶಾಂತಿಯೇ ಪೂರ್ಣ ಬ್ರಹ್ಮವೆಂದು ನೀನು ನಿಶ್ಚಯ ಪೂರ್ವಕವಾಗಿ ತಿಳಿ ॥೧೨೬॥ ಈ ಪ್ರಕಾರವಾಗಿ ಸದ್ಗುರುಗಳ ವರ್ಣನೆಯನ್ನು ಕೇಳಿ ಶಿಷ್ಯನ ಮನದಲ್ಲಿ ಗುರುಭಕ್ತಿ ವಿಷಯದಲ್ಲಿ ಅಧಿಕ ಪ್ರೇಮವು ಉಂಟಾಯಿತು ॥೧೨೭॥ ಹೀಗಾದ್ದರಿಂದ ಗುರುಶೋಧನೆಗಾಗಿ ಆತನಿಗೆ ಆತುರತೆಯು ಹೆಚ್ಚಾಯಿತು. ಆತನ ಮನಸ್ಸು ಆತನಿಗೆ ಸ್ವಸ್ಥವಾಗಿರಲು ಬಿಡದಾಯಿತು. ಯಾರಲ್ಲಿ ಈ ಗುರುಲಕ್ಷಣಗಳಿವೆ? ಎಂದು ಹಗಲು ರಾತ್ರಿ ಶೋಧಿಸಲಾರಂಭಿಸಿದನು ॥೧೨೮॥ ನಾನು ನನ್ನ ಸ್ವಾಮಿಯನ್ನು ಎಂದು ಕಂಡೇನು? ನನ್ನ ಭವಪಾಶವು ಎಂದು ಖಂಡಾದೀತು? ನನ್ನ ಮನಸ್ಸಿಗೆ ಶಾಂತಿಯು ಎಂದು ಲಭ್ಯವಾದೀತು? ಈ ಪ್ರಕಾರದ ಗುರುವಿನ ಪ್ರೇಮದ ಹುಚ್ಚು ಆತನಿಗೆ ಹಿಡಿಯಿತು ॥೧೨೯॥ ಆಯುಷ್ಯವು ನೋಡು ನೋಡುತ್ತಿದ್ದಂತೆಯೇ ಮುಗಿದು ಹೋಗುವುದು. ಆದರೆ ಸದ್ಗುರುಗಳ ಭೇಟಿಯು ಇಲ್ಲಿಯವರೆಗೂ ಆಗಲೇ ಇಲ್ಲ. ಈ ಮನುಷ್ಯ ದೇಹವು ಹೊರಟು ಹೋಯಿತೆಂದರೆ ಎಲ್ಲವೂ ಮುಗಿದು ಹೋಗುವುದು ॥೧೩೦॥ ಗುರುವಿನ ಕೇವಲ ಹೆಸರೆತ್ತಿದರೆ ಸಾಕು, ಆತನು ಮನಸ್ಸಿನ ಮುಂದೆ ಧಾವಿಸುವನು. ಮತ್ತು ಆತನ ಮಾತಿನತ್ತ ಎಲ್ಲ ಲಕ್ಷವನ್ನು ಕೊಡುವನು. ಇಷ್ಟೊಂದು ಈತನ ಉತ್ಸುಕತೆ ಇರುವುದು ॥೧೩೧॥ ಸದ್ಗುರುಗಳ ಪ್ರತ್ಯಕ್ಷವಾದ ಭೇಟಿಯು ಆಗದೇ ಇದ್ದರೂ ಆತನು ಆ ಯಾವ ಸದ್ಗುರುರಾಯರ ಪೂಜೆಯನ್ನು ಮನದಲ್ಲಿಯೇ ಮಾಡುವನು. ಮತ್ತು ಈ ಪೂಜೆಯನ್ನು ಮಾಡುತ್ತಿರಲು ಆಗುವ ಪ್ರೇಮವು ಆತನ ಹೃದಯಕ್ಕೆ ಹಿಡಿಸಲಾರದಂತಾಗುವುದು ॥೧೩೨॥

ಸದ್ಗುರು ಭೇಟಾವಯಾಕಾರಣೇ । ಹಿಂಡೇ ತೀರ್ಥೇ ತಪೋವನೇ । ಗುರೂ ನ ವಿಸಂಬೇ ಮನೇ । ನಿತ್ಯವಿಧಾನೇ ಆಚರತಾ ॥೧೩೩॥ ಸದ್ಗುರೂ ಪ್ರಾಪ್ತೀಚಿಯಾ ಕಾಜಾ । ಲಹಾನ ಥೋರಾಂಚೀ ಕರೀ ಪೂಜಾ । ಅತ್ಯಾದರೇ ಮಾನೀ ದ್ವಿಜಾ । ಗುರು ಮಜ ಮಾರ್ಝಾ ಭೇಟಾವಾ ॥೧೩೪॥ ಅಸ್ವಲಾಚಿಯಾ ಪರೀ । ಗುರುನಾಮಾಚಾ ಜಪ ಕರೀ। ಗುರುವಾಂಚೋನಿ ನಿರಂತರೀ । ಚಿಂತಾ ನ ಕರೀ ಆನಾಚೀ ॥೧೩೫॥ ಆಸನೀ ಭೋಜನೀ ಶಯನೀ । ಗುರೂತೇ ನ ವಿಸಂಬೇ ಮನೀ । ಜಾಗೃತೀ ಆಣಿ ಸ್ವಪ್ನೀ । ನಿಧಿಧ್ಯಾಸನೀ ಗುರು ಕೇಲಾ ॥೧೩೬॥ ಗುರುಸ್ಮರಣ ಕರಿತಾ ದೇಖ। ಸ್ಮರಣೇ ವಿಸರೇ ತಹಾನಭೂಕ । ವಿಸರಲಾ ದೇಹಗೇಹಸುಖ । ಸದಾ ಸಂಮುಖ ಪರಮಾರ್ಥಾ ॥೧೩೭॥ ಐಸೀ ಸದ್ಗುರೂಚೀ ಆವಡೀ । ಜ್ಯಾಚೀ ಆಸ್ಥಾ ಚಢೋವಢೀ । ತ್ಯಾಸೀ ಗುರುರೂಪೇ ತಾಂತಡೀ । ಭೇಟೀ ರೋಕಡೀ ಮೀ ದೇತೋ ॥೧೩೮॥ ಜಂವ ಜಂವ ಆಸ್ಥಾ ಅಧಿಕ । ತಂವ ತಂವ ಭೇಟೀಚೀ ಜವಳಿಕ । ಸಾಧನಾಮಾಜೀ ಹೇ ಸಾಧನ ಮುಖ್ಯ । ಆಸ್ಥಾಚಿ ಏಕ ವಿಶೇಷ ॥೧೩೯॥ ಕರಿತಾ ವರಿಷ್ಠ ಸಾಧನಕೋಡೀ । ಬೋಧಾಚೀ ಜೋಡೇನಾ ಕವಡೀ। ಸದ್ಗುರುಭಜನಾಚೀ ಅರ್ಧ ಘಡೀ । ಜೋಡೀ ಕೋಡೀ ಬೋಧಾಚ್ಯಾ ॥೧೪೦॥ ಸದ್ಗುರು ಭಜನೀ ಲಾಗವೇಗೇ । ಮೋಕ್ಷ ಯೇಊನಿ ಪಾಯಾ ಲಾಗೇ । ಗುರುಭಕ್ತ ತೋಹೀ ನೇಘೇ । ಚರಣರಂಗೇ ರಂಗಲಾ ॥೧೪೧॥ ಶ್ರೀಗುರುಚರಣಾಚೀ ಗೋಡೀ। ವಿಸರವೀ ಮೋಕ್ಷಸುಖಾಚ್ಯಾ ಕೋಡೀ । ಗುರುಭಜನೀ ಜಯಾ ಅನಾವಡೀ । ತೇ ಸಂಸಾರ ಬಾಂದವಡೀ ಪಡಿಯೇಲೇ ॥೧೪೨॥ ಛೇದಾವಯಾ ಸಂಸಾರಬಂಧನ । ಕರಾವೇ ಸದ್ಗುರು ಸೇವನ । ಸದ್ಗುರುಸೇವಾ ತೇ ಮಾರ್ಝೇ ಭಜನ । ಗುರು - ಆಮ್ಹಾ ಭಿನ್ನಭಾವೋ ನಾಹೀ ॥೧೪೩॥ ಗುರುಭಕ್ತಾಂಚೀ ಶ್ರದ್ಧಾ ಗಾಢೀ । ಆಣಿ ಗುರುಭಜನಾಚೀ ಗೋಡೀ । ತೇ ಸಾಂಗಿತಲೀ ಆವಡೀ । ಪ್ರತ್ಯಕ್ಷ ಉಘಡೀ ಕರೂನಿ ॥೧೪೪॥ ಸಹಜ ಪ್ರಸಂಗೇ ಯೇಣೇ । ಶಿಷ್ಯಾಂಚಿಹೀ ಲಕ್ಷಣೇ । ಸಾಂಗೇನ ತುಜಕಾರಣೇ । ಕೃಷ್ಣ ಮ್ಹಣೇ ಉದ್ಧವಾ ॥೧೪೫॥

ಅಮಾನ್ಯ ಮತ್ಸರೋ ದಕ್ಷೋ ನಿರ್ಮಮೋ ದೃಢಸೌಹೃದಃ । ಅಸತ್ತರೋ ऽರ್ಥಜಿಜ್ಞಾಸುರನಸೂಯುರಮೋಘವಾಕ್ ॥೬॥

ಅರ್ಥ:- ಶಿಷ್ಯನು ಸ್ವಲ್ಪವೂ ಅಭಿಮಾನವನ್ನು ಹಿಡಿಯಬಾರದು. ಯಾರಲ್ಲಿಯೂ ಮತ್ಸರವನ್ನು ಮಾಡಬಾರದು. ಯಾರ ವಿಷಯಕ್ಕೂ ಕೆಟ್ಟ ವಿಚಾರವನ್ನು ಮಾಡಬಾರದು. ಆತನು ಯಾವುದೇ ಕಾರ್ಯದಲ್ಲಿ ಕುಶಲನಾಗಿರಬೇಕು. ಸ್ವಲ್ಪವೂ ಆಲಸ್ಯತನವಿರಬಾರದು. ಆತನ ಮನಸ್ಸಿನಲ್ಲಿ ಮಮತೆಯಿರಬಾರದು. ಗುರುಗಳ ಚರಣಗಳಲ್ಲಿ ದೃಢವಾದ ವಿಶ್ವಾಸವನ್ನಿಡಬೇಕು. ಯಾವುದೇ ಕೆಲಸವನ್ನು ಗಡಿಬಿಡಿಯಿಂದ ಮಾಡಕೂಡದು. ಯಾವುದೇ ಮಾತಾಗಿರಲಿ ಲಕ್ಷ್ಯಕೊಟ್ಟು ಮಾಡಬೇಕು. ಪರಮಾರ್ಥ ಜ್ಞಾನವನ್ನು ಮಾಡಿಕೊಳ್ಳುವ ಇಚ್ಛೆಯಿರಬೇಕು. ಯಾರ ಗುಣದೋಷವನ್ನೂ ಎಣಿಸಬಾರದು. ವ್ಯರ್ಥವಾದ ಮಾತುಗಳನ್ನು ನುಡಿಯಬಾರದು.

ಸದ್ಗುರುಗಳ ಭೇಟಿಯಾದೀತೆಂದು ಆತನು ತೀರ್ಥಯಾತ್ರೆಗಳಿಗೆ ಹೋಗುವನು. ತಪೋವನಗಳಲ್ಲಿ ತಿರುಗಾಡುವನು. ತನ್ನ ನಿತ್ಯ ಕರ್ಮಗಳಲ್ಲಿ ಸದ್ಗುರುಗಳನ್ನು ಒಂದು ಕ್ಷಣ ಸಹ ಮರೆಯಲಾರನು ॥೧೩೩॥ ಸದ್ಗುರುಗಳ ಪ್ರಾಪ್ತಿಯಾಗಬೇಕೆಂದು ಆತನು ಚಿಕ್ಕವರ, ದೊಡ್ಡವರ ಪೂಜೆಯನ್ನು ಮಾಡುವನು. ನನ್ನ ಗುರು ಭೇಟಿಯಾಗಲೆಂದು ಆತನು ಬ್ರಾಹ್ಮಣರ ಸತ್ಕಾರವನ್ನು ಮಾಡುವನು ॥೧೩೪॥ ಕರಡಿಯು ಯಾವಾಗಲೂ "ಗುರು, ಗುರು" ಎನ್ನುತ್ತಿರುವುದು. ಅದರಂತೆಯೇ ಆತನು ಹಗಲು ರಾತ್ರಿ ಗುರುಗಳ ಜಪವನ್ನು ಮಾಡುತ್ತಿರುವನು. ಗುರುವಿನ ಹೊರತಾದ ಇತರ ಯಾವ ಚಿಂತನೆಯನ್ನೂ ಮಾಡುವುದಿಲ್ಲ ॥೧೩೫॥ ಕುಳಿತುಕೊಳ್ಳುವಾಗ, ಊಟ ಮಾಡುವಾಗ, ಮಲಗುವಾಗ ಮನಸ್ಸಿನಿಂದ ಎಂದಿಗೂ ಗುರುಗಳನ್ನು ಮರೆಯಲಾರನು. ಜಾಗೃತಾವಸ್ಥೆಯಲ್ಲಿಯೂ, ಸ್ವಪ್ನದಲ್ಲಿಯೂ ಏಕಾಗ್ರ ಮನಸ್ಸಿನಿಂದ ಗುರುಗಳ ಚಿಂತನೆಯನ್ನು ಮಾಡುತ್ತಿರುವನು ॥೧೩೬॥ ಗುರುಸ್ಮರಣೆಯಲ್ಲಿ ಆತನು ಹಸಿವೆ ನೀರಡಿಕೆಗಳನ್ನು ಮರೆತುಬಿಡುವನು. ದೇಹ ಸುಖ ಮನೆಮಾರಿನ ಸುಖ ಎಲ್ಲವನ್ನೂ ಮರೆತು ಬಿಡುವನು. ಪರಮಾರ್ಥ ವಿಷಯದಲ್ಲಿ ಯಾವಾಗಲೂ ತತ್ಪರನಾಗಿರುವನು ॥೧೩೭॥ ಹೀಗೆ ಯಾರ ಪ್ರೀತಿಯು ಗುರುಗಳ ವಿಷಯಕ್ಕೆ ಅತ್ಯಂತಿಕವಾಗಿರುವುದೋ, ಆತನ ಶ್ರದ್ಧೆಯು ಅಧಿಕಾಧಿಕವಾಗಿ ಬೆಳೆಯುವುದು. ಆಗ ಆತನಿಗೆ ಗುರುರೂಪದಲ್ಲಿ ನಾನೇ ಭೇಟಿಯನ್ನು ಕೊಡುವೆನು ॥೧೩೮॥ ಆಸ್ಥೆಯು ಹೆಚ್ಚಾಗಿ ಬೆಳೆದಂತೆ ನನ್ನ ಭೇಟಿಯು ಸಮೀಪವಾಗುವುದು. ಸರ್ವ ಸಾಧನೆಗಳಲ್ಲಿ ಇದೇ ಸಾಧನೆಯು ಮುಖ್ಯವಾಗಿರುವುದು. ಇದರಲ್ಲಿ ಆಸ್ಥೆಯೇ ವಿಶೇಷವಾಗಿರುವುದು ॥೧೩೯॥ ಕೋಟ್ಯಾವಧಿ ಪ್ರಕಾರಗಳ ಮಹಾ ಮಹಾ ಸಾಧನೆಗಳನ್ನು ಮಾಡಿದರೂ ಆತ್ಮಜ್ಞಾನದ ಲಾಭವಾಗುವುದಿಲ್ಲ. ಆದರೆ ಗುರು ಭಜನೆಯನ್ನು ಅರ್ಧ ಘಳಿಗೆ ಮಾಡಿದರೂ ಸಹ ಆತ್ಮಜ್ಞಾನದ ರಾಶಿಯೇ ಪ್ರಾಪ್ತವಾಗುವುದು ॥೧೪೦॥ ಸದ್ಗುರುಗಳ ಭಜನೆಯನ್ನು ಮಾಡಲು ಮೋಕ್ಷವು ಲಗು - ಬಗೆಯಿಂದ ಬಂದು ಕಾಲಿಗೆ ಬೀಳುವುದು. ಆದರೆ ಗುರುಭಕ್ತನು ಆ ಮೋಕ್ಷ ಸುಖವನ್ನೂ ಸ್ವೀಕರಿಸುವುದಿಲ್ಲ. ಕಾರಣ ಆತನು ಗುರುಚರಣ ಪ್ರೇಮದಲ್ಲಿ ತನ್ಮಯನಾಗಿರುವನು ॥೧೪೧॥ ಶ್ರೀಗುರು ಚರಣಗಳ ಸುಖವು ಕೋಟ್ಯಾವಧಿ ಮೋಕ್ಷ ಸುಖವನ್ನು ಮರೆಯಲು ಹಚ್ಚುವದು. ಯಾರಿಗೆ ಗುರುಭಜನೆಯಲ್ಲಿ ಪ್ರೇಮವಿರುವುದಿಲ್ಲವೋ, ಅವರು ಸಂಸಾರ ಬಂಧನದಲ್ಲಿ ಸಿಲುಕಿಕೊಳ್ಳುವರು ॥೧೪೨॥ ಸಂಸಾರ ಬಂಧನವನ್ನು ನಾಶಗೊಳಿಸಲು ಸದ್ಗುರುಗಳ ಸೇವೆಯನ್ನು ಮಾಡಬೇಕು. ಸದ್ಗುರುಗಳ ಸೇವೆಯೇ ನನ್ನ ಭಜನೆಯಾಗಿರುವುದು. ಗುರುಗಳಲ್ಲಿ ಮತ್ತು ನನ್ನಲ್ಲಿ ಯಾವ ಭೇದವಿರುವುದಿಲ್ಲ ॥೧೪೩॥ ಈ ಪ್ರಕಾರವಾಗಿ ಗುರುಭಕ್ತರ ಶ್ರದ್ಧೆಯು ಎಷ್ಟೊಂದು ನಿಸ್ಸೀಮವಾಗಿರುವುದು ಮತ್ತು ಅವರ ಹೃದಯದಲ್ಲಿ ಗುರು ಭಜನತೆಯ ಎಷ್ಟೊಂದು ಪ್ರೇಮವಿರುವುದೆಂಬುದನ್ನು ನಾನು ನಿನಗೆ ಬಿಚ್ಚಿ ಹೇಳಿರುವೆನು ॥೧೪೪॥ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು ; ಸಹಜವಾದ ಈ ಪ್ರಸಂಗದಲ್ಲಿ ನಾನು ನಿನಗೆ ಶಿಷ್ಯನ ಲಕ್ಷಣಗಳನ್ನೂ ಸಹ ಹೇಳುವೆನು ॥೧೪೫॥

ಮಾನ ದೇಖೋನಿ ಸಹಸಾ । ಶಿಷ್ಯ ಸಾಂಕಡೋ ಲಾಗೇ ಕೈಸಾ । ಜೇವೀ ಗಳೀ ಲಾಗಲಾ ಮಾಸಾ । ಚರಫಡೀ ತೈಸಾ ಸನ್ಮಾನೇ ॥೧೪೬॥ ನಾಂವೇ ಐಕೋನಿ ಬಾಗುಲಾತೇ । ಬಾಳ ಸಾಂಡೂ ಪಾಹೇ ಪ್ರಾಣಾತೇ । ತೇವೀ ಐಕತಾಂಚಿ ಸನ್ಮಾನಾತೇ । ಭಯೇ ಪ್ರಾಣಾತೇ ಸಾಂಕಡೇ ॥೧೪೭॥ ಚಂಡವಾತೇ ಜೇವೀ ಕೇಳೀ । ಸಮೂಳ ಕಾಂಪೇ ಚಳವಳೀ । ಕಾ ಲಹರೀಂಚ್ಯಾ ಕಲ್ಲೋಳೀ । ಕಾಂಪೇ ಜಳೀ ರವಿಬಿಂಬ ॥೧೪೮॥ ಸನ್ಮಾನು ತೇಣೇ ಪಾಡೇ । ದೃಷ್ಟೀ ದೇಖೋನಿ ನಾವಡೇ । ಮಹತ್ತ್ವೀ ಘೋರ ಸಾಂಕಡೇ । ಅಂಗಾಕಡೇ ಯೇವೋ ನೇದೀ ॥೧೪೯॥ ಆದರೇ ಘೇತಾ ಸನ್ಮಾನ । ದೃಢ ಹೋಈಲ ದೇಹಾಭಿಮಾನ । ಸಾಂಡೋನಿ ಮಾನಾಭಿಮಾನ । ಹೀನ ದೀನ ಹೋಊನಿ ಅಸೇ ॥೧೫೦॥ ಸಮೂಳ ನಾಮರೂಪ ಜಾಯೇ । ಮಜ ಕೋಣೀ ದೇಖೋ ನ ಲಾಹೇ । ಐಸೀ ದಶಾ ಜೇಣೇ ಹೋಯೇ । ತೇ ತೇ ಉಪಾಯೇ ಕರೀತಸೇ ॥೧೫೧॥ ಲೌಕಿಕ ದೇಖೋನಿ ಉದ್ವೇಗು । ದೇಹಗೇಹಾಂಚಾ ಉಬಗು । ಏಕಲೇಪಣೇ ಅತಿಚಾಂಗು । ನ ಧರೀ ಸಂಗು ದ್ವೈತಾಚಾ ॥೧೫೨॥ ಮಜ ಕೋಣೀ ನ ದೇಖಾವೇ । ಮಜ ಕೋಣೀ ನ ವೋಳಖಾವೇ । ಮಜ ಕೋಣೀ ನ ಲಾಜಾವೇ । ಐಸೇ ಜೀವೇ ವಾಂಛಿತು ॥೧೫೩॥ ಮಾನ ದೇಖೋನಿಯಾ ದಿಠೀ । ಲಪೇ ದೇಹ ಉಪೇಕ್ಷೇಚ್ಯಾ ಪೋಟೀ । ಜೇವೀ ಚೋರ ಲಾಗಲಿಯಾ ಪಾಠೀ । ಲಪೇ ಸಂಕಟೀ ಧನವಂತು ॥೧೫೪॥ ಮೀ ಏಕು ಲೌಕಿಕೀ ಆಹೇ । ಐಸೇ ಕೋಣಾ ಠಾವೇ ನೋಹೇ । ಐಶೀ ಐಶೀ ದಶಾ ಪಾಹೇ । ಮಾನು ನ ಸಾಹೇ ಯಾಲಾಗೀ ॥೧೫೫॥ ಸಾಂಡಾವಯಾ ಅಹಂ ಮಮತಾ । ಮಾನು ನ ಪಾಹೇ ಸರ್ವಥಾ । ಲೌಕಿಕೀ ಸನ್ಮಾನು ಘೇತಾ । ದೃಢ ಅಹಂತಾ ಹೋಈಲ ॥೧೫೬॥ ಜ್ಯಾಂಚೇ ಪೋಟೀ ದೃಢ ಅಭಿಮಾನ । ತೇ ಸದಾ ವಾಂಚ್ಛಿತೀ ಸನ್ಮಾನ । ಜೋ ಸಾಂಡೂ ನಿಘೇ ಅಭಿಮಾನ । ತೋ ಮಾನಾಪಮಾನ ನ ಪಾಹೇ ॥೧೫೭॥ ಜೇಣೇ ಘೇತಲಾ ಸನ್ಮಾನ । ತ್ಯಾಸಿ ನೇಘವೇ ಅಪಮಾನ । ತೇಥ ಸಹಜೇ ಆಲಾ ದೇಹಾಭಿಮಾನ । ಯಾಲಾಗೀ ಸನ್ಮಾನ ನಾವಡೇ ॥೧೫೮॥ ಸನ್ಮಾನು ಘ್ಯಾವಯಾ ತತ್ತ್ವತಾ । ಜ್ಞಾತೇಪಣ ಮಿರವೀ ಜ್ಞಾತಾ । ತೇ ಸಂಧೀ ವಸೇ ಮಮತಾ । ಅರ್ಥಸ್ವಾರ್ಥಾಚೇನಿ ಲೋಭೇ ॥೧೫೯॥ ಏವಂ ನಾಪೇಕ್ಷೀ ಸನ್ಮಾನ । ಹೇ ಪ್ರಥಮ ಶಿಷ್ಯಾಚೇ ಲಕ್ಷಣ । ಆತಾ ''ನಿರ್ಮತ್ಸರತ್ವ'' ಸಂಪೂರ್ಣ । ತೇ ಸುಲಕ್ಷಣ ಪರಿಯೇಸೀ ॥೧೬೦॥

ಗಂಟಲಿಗೆ ಗಾಣ ಬಿದ್ದ ಮೀನವು ಚಡಪಡಿಸುವಂತೆ ಶಿಷ್ಯನು ಮಾನ ಸನ್ಮಾನಗಳಿಂದ ಬಹು ಸಂಕಟಕ್ಕೆ ಸಿಕ್ಕಿಕೊಳ್ಳುವನು ॥೧೪೬॥ ಅಂಜಿಕೆ ಬರುವ ಬೊಮ್ಮನ ಹೆಸರು ಕೇಳುತ್ತಲೇ ಚಿಕ್ಕ ಬಾಲಕನ ಜೀವವು ಕಸಿವಿಸಿಯಾಗುವಂತೆ ಸನ್ಮಾನದ ಹೆಸರು ಕೇಳುತ್ತಲೇ ಪ್ರಾಣ ಸಂಕಟ ಒದಗಿದಂತಾಗಿ ಶಿಷ್ಯನು ಭಯಭೀತನಾಗುವನು ॥೧೪೭॥ ಬಿರುಗಾಳಿಯು ಬೀಸಲು ಬಾಳೆಗಿಡಗಳು ಸಮೂಲವಾಗಿ ಕಂಪಿಸುವಂತೆ ಅಥವಾ ನೀರಿನಲ್ಲಿ ತೆರೆಗಳ ತರಂಗಗಳಿಂದ ಅದರಲ್ಲಿ ಬಿದ್ದ ಸೂರ್ಯನ ಪ್ರತಿಬಿಂಬವು ನಡುಗುತ್ತಿರುವಂತೆ ತೋರುವುದು ॥೧೪೮॥ ಈ ಪ್ರಕಾರವಾಗಿ ಆತನಿಗೆ ಸನ್ಮಾನವು ದೃಷ್ಟಿಗೆ ಬಿದ್ದರೂ ಹಿಡಿಸದಂತಾಗಿ ನಡುಗುವನು. ದೊಡ್ಡಸ್ತಿಕೆಯು ಆತನಿಗೆ ದೊಡ್ಡ ಸಂಕಟಕ್ಕೆ ಗುರಿಯಾದಂತಾಗುವುದು. ಅದು ತನ್ನತ್ತ ಬಾರದಂತೆ ಮಾಡುವನು ॥೧೪೯॥ ಸನ್ಮಾನವನ್ನು ಪ್ರೇಮದಿಂದ ಸ್ವೀಕರಿಸಿದರೆ ದೇಹದ ಅಭಿಮಾನವು ದೃಢವಾದೀತೆಂದು ತಿಳಿದು ಆತನು ಸನ್ಮಾನದ ಅಭಿಮಾನವನ್ನು ಬಿಟ್ಟು ಹೀನದೀನನಾಗಿರುವನು ॥೧೫೦॥ ತನ್ನ ನಾಮ ರೂಪಗಳೆಲ್ಲವೂ ಇಲ್ಲದಾಗಬೇಕು ಮತ್ತು ತನ್ನತ್ತ ಯಾರೂ ನೋಡಬಾರದು. ಇಂತಹ ಸ್ಥಿತಿಯನ್ನು ನಿರ್ಮಾಣಗೊಳಿಸುವ ಪ್ರಯತ್ನಗಳನ್ನು ಆತನು ಮಾಡುತ್ತಿರುವನು ॥೧೫೧॥ ಲೌಕಿಕವನ್ನು ಕಂಡು ಆತನಿಗೆ ಉದ್ವೇಗವು ಉತ್ಪನ್ನವಾಗುತ್ತಿರುವುದು. ದೇಹದ ಮತ್ತು ಮನೆಮಾರಿನ ವಿಷಯಗಳಿಗೆ ಬಲು ಬೇಸರಪಡುವನು. ಏಕಾಂತದಲ್ಲಿ ಆತನು ಆನಂದಿತನಾಗುವನು. ದ್ವೈತದ ಸಂಗತಿಯನ್ನು ಎಂದೂ ಮಾಡಲಾರನು ॥೧೫೨॥ ನನ್ನನ್ನು ಯಾರೂ ನೋಡಬಾರದು, ನನ್ನನ್ನು ಯಾರೂ ಗುರುತಿಸಿಕೊಳ್ಳಬಾರದು, ನನಗೆ ಯಾರೂ ನಾಚಿಕೆಪಡಬಾರದು, ಇವು ಆತನ ಮನಃಪೂರ್ವಕ ಆಂತರಿಕ ಇಚ್ಛೆಯಾಗಿರುವುದು ॥೧೫೩॥ ಕಳ್ಳನು ಬೆನ್ನು ಹತ್ತಲು, ಧನಿಕ ಮನುಷ್ಯನು ಯಾವ ಪ್ರಕಾರವಾಗಿ ಮಹಾ ಸಂಕಟದಿಂದ ಅಡಗಿಕೊಳ್ಳುವನೋ, ಅದೇ ಪ್ರಕಾರವಾಗಿ ಶಿಷ್ಯನು ತನ್ನ ಮಾನವು ಆಗುವುದೆಂಬುದನ್ನು ಅರಿತು ಇದರಿಂದ ದೇಹದ ಸನ್ಮಾನವಾಗುವ ಭಯದಿಂದ ಏಕಾಂತದಲ್ಲಿ ಹೋಗಿ ಅಡಗಿಕೊಳ್ಳುವನು ॥೧೫೪॥ ನಾನೊಬ್ಬನು ಹೀಗಿರುವೆನೆಂಬುದು ಜನರಿಗೆ ತಿಳಿಯಬಾರದೆಂದು ಅಂತಹ ಸ್ಥಿತಿಯಲ್ಲಿ ಆತನಿರುವನು. ಆದ್ದರಿಂದ ಆತನಿಗೆ ಮಾನ ಸನ್ಮಾನಗಳು ಸಹನೆಯಾಗುವುದಿಲ್ಲ ॥೧೫೫॥ ನಾನು ಮತ್ತು ನನ್ನದು ಇದನ್ನು ಬಿಟ್ಟು ಬಿಡಬೇಕೆಂದು ಆತನು ಮಾನಗಳತ್ತ ನೋಡಲಾರನು. ಏಕೆಂದರೆ ಜನರಲ್ಲಿ ಸನ್ಮಾನವನ್ನು ಪಡೆಯಲು ಅಹಂಕಾರವು ಬೆಳೆಯುತ್ತ ಸಾಗುವುದೆಂದು ಆತನು ತಿಳಿಯುವನು ॥ ೧೫೬ ॥ ಮನದಲ್ಲಿ ಅಭಿಮಾನವಿದ್ದವರಿಗೆ ಸನ್ಮಾನದ ಇಚ್ಛೆ ಆಗುತ್ತಿರುವುದು. ಆದರೆ ಈತನಿಗೆ ಅಭಿಮಾನವನ್ನು ಬಿಡಬೇಕಾಗಿರುವುದು. ಅದಕ್ಕಾಗಿಯೇ ಈತನು ಮಾನಾಪಮಾನಗಳತ್ತ ತಪ್ಪಿಯೂ ನೋಡುವುದಿಲ್ಲ ॥೧೫೭॥ ಒಂದು ಸಾರೆ ಸನ್ಮಾನವನ್ನು ಸ್ವೀಕರಿಸಲು, ತದನಂತರ ಅಪಮಾನವನ್ನು ಸಹಿಸುವುದಾಗುವುದಿಲ್ಲ. ಅಲ್ಲಿ ಸಹಜವಾಗಿಯೇ ದೇಹದ ಅಭಿಮಾನವು ನಿರ್ಮಾಣಗೊಳ್ಳುವುದು. ಆದ್ದರಿಂದಲೇ ಆತನಿಗೆ ಸನ್ಮಾನದ ಪ್ರೀತಿಯು ಸ್ವಲ್ಪಾದರೂ ಸಹ ಇರುವುದಿಲ್ಲ ॥೧೫೮॥ ನಿಜವಾಗಿ ನೋಡಲು ಶಾಸ್ತ್ರಜ್ಞಾನಿಯು ತನಗೆ ಸನ್ಮಾನ ದೊರಕಬೇಕೆಂದು ತನ್ನ ಜ್ಞಾನವನ್ನು ಪ್ರದರ್ಶಿಸುತ್ತಿರುವನು. ಇಂತಹ ಸಂಧಿಯನ್ನು ಸಾಧಿಸಿ ಸ್ವಾರ್ಥದ ಲೋಭದಿಂದ ಮಮತೆಯು ವಾಸ್ತವ್ಯ ಹೂಡುವುದು ॥೧೫೯॥ ತಾತ್ಪರ್ಯವೇನೆಂದರೆ, ಸನ್ಮಾನದ ಇಚ್ಛೆಯನ್ನು ಎಂದಿಗೂ ಮಾಡಿದಿರುವುದೇ ಶಿಷ್ಯನ ಇದು ಮೊದಲನೆಯ ಲಕ್ಷಣವಾಗಿರುವುದು. ಈಗ ನಿರ್ಮತ್ಸರತ್ವ ಎಂದರೆ ಏನು? ಇದರ ಲಕ್ಷಣಗಳನ್ನು ನಿನಗೆ ಹೇಳುವೆನು, ಕೇಳು ॥೧೬೦॥

ಸಜ್ಞಾನಾಮಾಜೀ ವೈರ। ಜ್ಞಾತೃತ್ವಾಚಾಚಿ ಮತ್ಸರ। ತೇಥೇ ದೇಹಾಭಿಮಾನೇ ಕೇಲೇ ಘರ। ಅತಿದುಸ್ತರ ಜೀವಾಸೀ
॥೧೬೧॥ ಜ್ಞಾನಾಭಿಮಾನಾಚೀ ಗೋಷ್ಟೀ। ವೆಂಚುನೀ ತಪಾಚಿಯಾ ಕೋಟೀ। ದುಜೀ ಕರೀತ ಹೋತಾ ಸೃಷ್ಟೀ
। ಅಭಿಮಾನ ಪೋಟೀ ಜ್ಞಾನಾಚಾ ॥೧೬೨॥ ಜ್ಞಾನಾಭಿಮಾನು ದುರ್ವಾಸಾಸೀ। ವ್ಯರ್ಥ ಶಾಪಿಲೇ ಅಂಬರೀಷಾಸೀ
। ಮ್ಯಾ ಸೋಶಿಲೇ ಗರ್ಭವಾಸಾಸೀ। ಜ್ಞಾನಾಭಿಮಾನಸೀ ಭೀಊನಿ ॥೧೬೩॥ ಜ್ಞಾನಾಭಿಮಾನು ಬ್ರಹ್ಮಯಾಸೀ
। ನೇಲೇ ಗೋಪಾಲವತ್ಸಾಂಸೀ। ಮಜ ಹೋಣೇ ಪಡಿಲೇ ತ್ಯಾ ವೇಷಾಂಸೀ। ಜ್ಞಾನಾಭಿಮಾನಾಸೀ ಭಿಊನಿ ॥೧೬೪॥
ಉದ್ಧವಾ ಜ್ಞಾನಾಭಿಮಾನ। ಸರ್ವಾ ಅಭಿಮಾನಾಮಾಜೀ ಕಠಿಣ। ವಸಿಷ್ಠ ವಿಶ್ವಾಮಿತ್ರ ಜಾಣ। ಜ್ಞಾನಾಭಿಮಾನೇ
ಭಾಂಡತೀ ॥೧೬೫॥ ಏವಂ ಜ್ಞಾನಾಭಿಮಾನಾಭೇಣ। ಮ್ಯಾ ಘೇತಲೇ ಗೋವಳೇಪಣ।ಮಜ ಮೂರ್ಖ ಮ್ಹಣತೀ
ಯಾಜ್ಞಿಕ ಬ್ರಾಹ್ಮಣ। ತ್ಯಾಂಸೀ ಜ್ಞಾನಾಭಿಮಾನ ಕರ್ಮಾಚಾ ॥೧೬೬॥ ಮುಖ್ಯ ಮ್ಯಾರ್ಯಿಚ ಹೇ ಐಶೀ ದಶಾ।
ತೇಥೆ ಇತರಾಂಚಾ ಪಾಡು ಕಾಯಸಾ। ಜ್ಞಾನಾಭಿಮಾನಾಚಾ ದೃಢ ಫಾಂಸಾ। ನುಗವೇ ಸಹಸಾ ಜ್ಞಾತ್ಯಾಸೀ ॥೧೬೭॥
ಜ್ಞಾನಾಭಿಮಾನಾಚೀ ಜಾತೀ ಕೈಶೀ। ಉಭಾ ನ ಠಾಕೇ ಮೂರ್ಖಾಪಾಶೀ। ವೈರ ಲಾವೀ ಸಜ್ಞಾನಾಸೀ।
ಸಮತ್ಸರೇಸೀ ವರ್ತವೀ ॥೧೬೮॥ ಏವಂ ನಿರ್ಮತ್ಸರ ಹೋಣೇ ಜ್ಯಾಸೀ। ತೇಣೇ ಸಾಂಡಾವೇ ಜ್ಞಾನಾಭಿಮಾನಾಸೀ
। ಯೇರವೀ ತೋ ಜ್ಞಾತಯಾಸೀ। ಸಮತ್ಸರೇಸೀ ನಾಂದವೀ ॥೧೬೯॥ ಐಕ ಮತ್ಸರಾಚೀ ಸಾಮುಗ್ರೀ। ದೇಹೀ
ದೇಹಾಭಿಮಾನ ದೃಢ ಕರೀ। ತೋಹೀ ಜ್ಞಾತೇಪಣಾಚೇ ಬಳ ಧರೀ। ಲೋಭ ಮಾರಘಾರೀ ಅರ್ಥಸ್ವಾರ್ಥೀ
॥೧೭೦॥ ಇತುಕೀ ಸಾಮುಗ್ರೀ ಜೇಥೇ ಹೋಯೇ। ತೋಚಿ ಸಮತ್ಸರ ದ್ವೇಷು ವಾಹೇ। ಶುದ್ಧ ಶಿಷ್ಯ ಹೇ ನ ಸಾಹೇ
। ತ್ಯಾಗೋನಿ ಜಾಯೇ ಮತ್ಸರು ॥೧೭೧॥ ಮತ್ಸರಾಚೀ ಜಾತೀ ಕೈಶೀ। ಅವಶ್ಯ ವಸೇ ಜ್ಞಾತ್ಯಾಪಾಶೀ। ಮತ್ಸರ
ಥೋರ ಪಂಡಿತಾಂಶೀ। ಯಾವಜ್ಜನ್ಮೇಸೀ ನ ಸಂಡಿತೀ ॥೧೭೨॥ ಪಂಡಿತ ಭೇಟತೀ ಸಮತ್ಸರ। ಲವಣಭಂಜನ
ಅತಿನಮ್ರ। ಬೋಲತೀ ಅತಿಮಧುರ। ಸಮತ್ಸರ ಭಳಣೋಕ್ತೀ ॥೧೭೩॥ ಮತ್ಸರೇ ಪಂಡಿತ ಯೇತೀ ಕ್ರೋಧಾ।
ಅಸದಾರೋಪಣೇ ಕರಿತೀ ನಿಂದಾ। ಏವಢೀ ಮತ್ಸರಾಚೀ ಬಾಧಾ। ನಾತಳೇ ಕದಾ ಸಚ್ಛಿಷ್ಯ ॥೧೭೪॥

ಜ್ಞಾತೃತ್ವದ ಮತ್ಸರದಿಂದ ಸಜ್ಞಾನ ಜನರಲ್ಲಿ ಪರಸ್ಪರ ವಿಷಯಗಳಲ್ಲಿ ವೈರತ್ವವು ಹುಟ್ಟುತ್ತಿರುವುದು. ಅವರಲ್ಲಿ ದೇಹದ ಅಭಿಮಾನವು ಮನೆಮಾಡಿಕೊಂಡಿರುವುದು. ಇದನ್ನು ಜಯಿಸಲು ಜೀವಕ್ಕೆ ಅತ್ಯಂತ ಕಠಿಣವಾಗುವುದು ॥೧೬೧॥ ಜ್ಞಾನಾಭಿಮಾನದ ಮಾತನ್ನು ಏನೆಂದು ಹೇಳಬೇಕು? ವಿಶ್ವಾಮಿತ್ರನು ತನ್ನ ಅಪಾರವಾದ ತಪವನ್ನು ಖರ್ಚಿಸಿ ಪ್ರತಿಸೃಷ್ಟಿಯನ್ನು ನಿರ್ಮಾಣ ಮಾಡಿದನು. ಇಷ್ಟೊಂದು ಜ್ಞಾನದ ಅಭಿಮಾನವು ಆತನ ಮನದಲ್ಲಿ ತುಂಬಿಕೊಂಡಿತ್ತು ॥೧೬೨॥ ದುರ್ವಾಸ ಋಷಿಯು ಜ್ಞಾನದ ಅಭಿಮಾನದಿಂದಲೇ ಅಂಬರೀಷನಿಗೆ ವೃಥಾ ಶಾಪವನ್ನುಕೊಟ್ಟನು. ಮತ್ತು ಜ್ಞಾನದ ಅಭಿಮಾನಕ್ಕೆ ಹೆದರಿ ಆತನ ಶಾಪದ ಹತ್ತು ಗರ್ಭವಾಸವನ್ನು ನಾನು ಸೋಸಿದೆನು ॥೧೬೩॥ ಬ್ರಹ್ಮದೇವನಿಗೆ ಜ್ಞಾನದ ಅಭಿಮಾನವಾಗಿತ್ತು. ಆದ್ದರಿಂದ ಆತನು ಗೋಪಾಲಕರನ್ನು, ಆಕಳುಗಳನ್ನು ಹರಣ ಮಾಡಿದನು. ಆಗ ನನಗೆ ಜ್ಞಾನಾಭಿಮಾನಕ್ಕೆ ಹೆದರಿ ಅವುಗಳ ರೂಪವನ್ನು ಧರಿಸಬೇಕಾಯಿತು ॥೧೬೪॥ ಹೇ ಉದ್ಧವನೇ, ಸರ್ವ ಅಭಿಮಾನಗಳಲ್ಲಿ ಜ್ಞಾನದ ಅಭಿಮಾನವು ಬಹಳ ಕಠಿಣವಾಗಿರುವುದು. ವಸಿಷ್ಠ ಮತ್ತು ವಿಶ್ವಾಮಿತ್ರ ಇವರಲ್ಲಿ ಜ್ಞಾನದ ಅಭಿಮಾನದಿಂದಲೇ ಜಗಳವಾಗುತ್ತಿತ್ತು ॥೧೬೫॥ ಇಂತಹ ಯಾವ ಈ ಜ್ಞಾನದ ಅಭಿಮಾನದ ಭಯದಿಂದ ನಾನು ಗೌಳಿಗರ ವೇಶವನ್ನು ಧರಿಸಿದೆನು. ಆದರೆ ಯಾಜ್ಞಿಕ ಬ್ರಾಹ್ಮಣರು ನನಗೆ ಮೂರ್ಖನೆಂದರು. ಕಾರಣ ಅವರಿಗೆ ಕರ್ಮದ ಜ್ಞಾನಾಭಿಮಾನವಾಗಿತ್ತು ॥೧೬೬॥ ನನ್ನ ಸ್ಥಿತಿಯೇ ಹೀಗಾಗಿರಲು, ಇತರರ ಯಾವ ಕಥೆ? ಇವರಿಗೆ ಜ್ಞಾನಾಭಿಮಾನದ ಬಿಕ್ಕಟ್ಟಾದ ಪಾಶವನ್ನು ಬಿಡಿಸಲು ಬಾರದಾಗಿರುವುದು ॥೧೬೭॥ ಜ್ಞಾನಾಭಿಮಾನದ ಲಕ್ಷಣವು ಹೇಗಿದೆ ನೋಡಿರಿ, ಅದು ಮೂರ್ಖ ಜನರಲ್ಲಿ ಎಂದಿಗೂ ನಿಲ್ಲುವುದೇ ಇಲ್ಲ. ಆದರೆ ಸಜ್ಞಾನ ಜನರಲ್ಲಿ ವೈರತ್ವವನ್ನು ಹುಟ್ಟಿಸಿ ಮತ್ಸರದಿಂದ ವರ್ತಿಸುವಂತೆ ಮಾಡುವುದು ॥೧೬೮॥ ಸಾರಾಂಶವೇನಂದರೆ ಯಾರಿಗೆ ತಮ್ಮ ಹೃದಯದಲ್ಲಿನ ಮತ್ಸರವನ್ನು ಸಂಪೂರ್ಣವಾಗಿ ಇಲ್ಲದಾಗಿ ಮಾಡಬೇಕಾದರೆ ಆತನು ಪ್ರಾರಂಭದಲ್ಲಿ ಜ್ಞಾನದ ಅಭಿಮಾನವನ್ನು ಬಿಟ್ಟು ಬಿಡಬೇಕಾಗುವುದು. ಇಲ್ಲದಿದ್ದರೆ ಅದು ಸಜ್ಞಾನ ಜನರಿಗೂ ಮತ್ಸರದಿಂದ ವರ್ತಿಸಲು ಹಚ್ಚುವುದು ॥೧೬೯॥ ಈಗ ಮತ್ಸರದ ಸಾಮುಗ್ರಿಗಳ ಬಗ್ಗೆ ಕೇಳು. ಅದು ಶರೀರದಲ್ಲಿನ ದೇಹಾಭಿಮಾನವನ್ನು ದೃಢಗೊಳಿಸುವುದು. ಮತ್ತು ಜ್ಞಾನದ ಗರ್ವವನ್ನು ಹೊರುವುದು. ಅದರಲ್ಲಿ ಗರ್ವದ ಲೋಭದಿಂದ ಸ್ವಾರ್ಥವು ಸೇರುವುದು ॥೧೭೦॥ ಇಷ್ಟೊಂದು ಸಾಮುಗ್ರಿಗಳಿದ್ದಲ್ಲಿ ಅಲ್ಲಿ ಮತ್ಸರ ಮತ್ತು ದ್ವೇಷ ಪ್ರವೃತ್ತವಾಗುವುವು. ಪವಿತ್ರನಾಗಿರುವ ಶಿಷ್ಯನು ಇದನ್ನು ಸಹಿಸಲಾರನು. ಆತನು ಮತ್ಸರವನ್ನು ಬಿಟ್ಟು ಬಿಡುವನು ॥೧೭೧॥ ಮತ್ಸರದ ಲಕ್ಷಣವು ಹೇಗೆ ಇರುವುದೆಂಬುದು ಈಗ ಕೇಳು . ವಿದ್ವಾನ್ ಜನರಲ್ಲಿ ಇದು ಅವಶ್ಯವಾಗಿರುವುದು. ಮಹಾ ಮಹಾ ಪಂಡಿತರಿಗೆ ಮಾತ್ರ ಸಾಯುವವರೆಗೂ ಬಿಡುವುದಿಲ್ಲ ॥೧೭೨॥ ಮತ್ಸರಯುಕ್ತ ಪಂಡಿತರು ಒಬ್ಬರಿಗೊಬ್ಬರು ಕೂಡುವರು. ಪರಸ್ಪರರಲ್ಲಿ ಮೇಲ್ನೋಟಕ್ಕೆ ನಮ್ರತೆಯನ್ನು ತೋರಿಸುವರು. ಒಬ್ಬರಿಗೊಬ್ಬರು ಸುಮ್ಮನೇ ಪ್ರಶಂಸೆ ಮಾಡುವರು. ಅವರ ಮನದಲ್ಲಿ ಮತ್ಸರವಿರುವುದರಿಂದ ಇದೆಲ್ಲವೂ ಕಪಟಾಚರಣೆಯಾಗಿರುವುದು ॥೧೭೩॥ ಮತ್ಸರದಿಂದ ಪಂಡಿತರಿಗೆ ಅತಿಶಯವಾಗಿ ಕ್ರೋಧವು ಉತ್ಪನ್ನವಾಗುತ್ತಿರುವುದು. ಅವರು ಪರಸ್ಪರರಲ್ಲಿ ಸುಳ್ಳು ಆರೋಪಗಳನ್ನು ಹೊರಿಸುವರು. ಇವರು ಒಬ್ಬರಿಗೊಬ್ಬರು ನಿಂದಿಸುತ್ತಿರುವರು. ಆದರೆ ಈ ಮತ್ಸರದ ಬಾಧೆಯು ಸತ್‌ಶಿಷ್ಯನಿಗೆ ಆಗುವುದಿಲ್ಲ ॥೧೭೪॥

ಮತ್ಸರೂ ಜ್ಞಾತ್ಯಾತೇ ನ ಸೋಡೀ । ಮಾ ಇತರ ಕಾಇಸೀ ಬಾಪುಡೀ । ಶಿಷ್ಯ ದ್ವೇಷಾಚೀ ಗೋಷ್ಟೀ ಸೋಡೀ । ಮತ್ಸರೂ ತೋಡೀ ಸರ್ವಸ್ವೇ ॥೧೭೫॥ ಮತ್ಸರ ಸಾಂಡೂನಿ ತತ್ತ್ವತಾ । ಶಿಷ್ಯೇ ರಹಾವೇ ಸರ್ವಥಾ । ನಿರ್ಮತ್ಸರತೇಚೀ ಕಥಾ। ಐಕ ಆತಾ ಸಾಂಗೇನ ॥೧೭೬॥ ಪುಢೂನಿ ಸ್ವಾರ್ಥು ನೇತಾ । ದ್ವೇಷು ಉಪಜೋ ನೇದಿ ಚಿತ್ತಾ । ಭೂತೀ ಭಗವಂತು ಭಾವಿತಾ । ದ್ವೇಷು ಸರ್ವಥಾ ಯೇವೋ ನೇದೀ ॥೧೭೭॥ ನಿಂದೇಚಿಯಾ ವಾಗ್ಬಾಣೀ । ದಾರುಣ ವಿಂಧಿಲ್ಯಾ ದುರ್ಜನೀ । ದ್ವೇಷು ಉಪಜೋ ನೇದೀ ಮನೀ । ಹಿತ ಮಾನೀ ನಿಂದೇಚೇ ॥೧೭೮॥ ಜೇಣೇ ಜೇಣೇ ನಿಜನಿಂದಾ ಕೇಲೀ । ತೋ ತೋ ಮಾನೀ ಹಿತ ಮಾಉಲೀ । ಪಾಪಮಳಾಂಚಿ ಕ್ಷಾಳಣತಾ ಝಾಲೀ । ಶುದ್ಧ ಕೇಲೀ ಮಾಝೀ ವೃತ್ತಿ ॥೧೭೯॥ ಐಸಐಶಿಯಾ ವಿವಂಚನಾ । ದ್ವೇಷು ಆಳೋ ನೇದೀ ಮನಾ । ನಿರ್ಮತ್ಸರತಾ ತೇ ಹೇ ಜಾಣಾ । ದುಸರೀ ಲಕ್ಷಣಾ ಶಿಷ್ಯಾಚೀ ॥೧೮೦॥ ಯಾವರೀ ಜೇ ''ದಕ್ಷತಾ'' । ತೇಹೀ ತುಜ ಸಾಂಗೋ ಆತಾ । ಶಿಷ್ಯಾಚೇ ಪ್ರಾಗಲ್ಭ್ಯತಾ । ನಿಜಸ್ವಾರ್ಥಾಲಾಗೋನಿ ॥೧೮೧॥ ಉಗವಲ್ಯಾ ಸಾವಧಾನ-ಭಾಸ್ಕರಾ । ನಾಶೀ ನಿದ್ರೇತಂದ್ರೇಚ್ಯಾ ಅಂಧಾರಾ । ಹೋಯ ಧಾರಣೇಚಾ ದಿವಸು ಖರಾ। ಧೃತೀಚ್ಯಾ ದುಪಾರಾ ವರ್ತತು ॥೧೮೨॥ ತ್ಯಾ ದಿವಸಾಚೇನಿ ಲವಲಾಹೇ । ಶಮದಮಾದಿ ಸಮುದಾಯೇ । ಭಕ್ತಿಪಂಥೇ ಚಾಲತಾಹೇ । ಮಾರ್ಗೀ ನ ರಾಹೇ ಕ್ಷಣಭರೀ ॥೧೮೩॥ ತೇಥ ಉಚಲತಾ ಪಾಉಲೀ । ನಿಜಬೋಧಾಚೀ ಪವ್ಹೇ ಠಾಕಿಲೀ । ಜೇಥ ಪಾಂಥಿಕಾಂಚೀ ನಿವಾಲೀ । ತೃಷಾ ಹರಲೀ ತೃಷ್ಣೇಚೀ ॥೧೮೪॥ ತೇಥ ನಿಜಗ್ರಾಮೀಚೇ ಭೇಟಲೇ । ಸೋಹಂಸಾಂಗಾತೀ ಏಕವಟಲೇ । ತೇಥೂನಿ ಚುಕಣಯಾ ಮುಕಲೇ । ನೀಟ ಲಾಗಲೇ ನಿಜಪಂಥೀ ॥೧೮೫॥ ಐಕೇ ಬಾಪಾ ವಿಚಕ್ಷಣಾ । ಆಳಸ ವಿಲಂಬು ನಾತಳೇ ಮನಾ । ತ್ಯಾ ನಾಂವ ''ದಕ್ಷತಾ'' ಜಾಣಾ । ''ತಿಸರೀ'' ಲಕ್ಷಣಾ ಶಿಷ್ಯಾಚೇ ॥೧೮೬॥ ಜುನಾಟ ಸಂಗ್ರಹೋ ಸವೇ ಹೋತಾ । ತೇ ಸರ್ವ ಸಾಂಡಿಲೀ ಮಮತಾ । ಸಾಂಡಿಲ್ಯಾಚಿ ಕ್ಷಿತೀ ಮಾಗುತಾ । ನ ಕರೀ ಸರ್ವಥಾ ನಿಜಬೋಧೇ ॥೧೮೭॥ ದೇಹೀ ದೃಢ ಧರಾವೀ ಅಹಂತಾ । ತೇಣೇ ದೇಹಸಂಬಂಧೀಯಾಂಚೇ ಮಮತಾ । ದೇಹಾಭಿಮಾನು ನಾತಳೇ ಚಿತ್ತಾ । ಗೇಲೀ ಮಮತಾ ನ ಲಗತಾ ॥೧೮೮॥

ಹೀಗೆ ಪಂಡಿತರಿಗೆ ಮತ್ಸರವು ಬಿಡದೇ ಇರಲು ಸಾಮಾನ್ಯ ಜನರ ಯಾವ ಕಥೆ ? ಸತ್‌ಶಿಷ್ಯನು ದ್ವೇಷದ ವಾರ್ತೆಯನ್ನೇ ಬಿಟ್ಟು ಬಿಡುವನು. ಮತ್ತು ಸರ್ವ ಮತ್ಸರವನ್ನು ಇಲ್ಲದಂತೆ ಮಾಡಿಬಿಡುವನು ॥೧೭೫॥ ಶಿಷ್ಯನು ಸಂಪೂರ್ಣವಾಗಿ ಮತ್ಸರವನ್ನು ಒಗೆದುಬಿಡಬೇಕು. ಆತನು ನಿರ್ಮತ್ಸರನು ಹೇಗಾಗಬೇಕು ? ಇದನ್ನು ನಾನು ನಿನಗೆ ಈಗ ಹೇಳುವೆನು ॥೧೭೬॥ ತನ್ನೆದುರಿನಲ್ಲಿಯೇ ಬಂದ ಲಾಭವನ್ನು ಯಾರಾದರೂ ತೆಗೆದುಕೊಂಡು ಹೋದರೆ, ಚಿತ್ತದಲ್ಲಿ ಆತನು ದ್ವೇಷವನ್ನು ಹುಟ್ಟಿಸಿಕೊಳ್ಳುವುದಿಲ್ಲ. ಪ್ರಾಣಿ ಮಾತ್ರರಲ್ಲಿ ಭಗವಂತನೇ ತುಂಬಿರುವನೆಂಬ ಭಾವನೆಯು ಹೃದಯದಲ್ಲಿರುವುದರಿಂದ ದ್ವೇಷವು ನಿರ್ಮಾಣಗೊಳ್ಳುವುದೇ ಇಲ್ಲ ॥೧೭೭॥ ದುರ್ಜನರು ನಿಂದೆಯ ವಾಕ್‌ಬಾಣದಿಂದ ಎಷ್ಟೇ ಕಠೋರವಾಗಿ ಪ್ರಹಾರ ಮಾಡಿದರೂ ಮನದಲ್ಲಿ ಸ್ವಲ್ಪವೂ ಕೂಡ ದ್ವೇಷವು ಹುಟ್ಟುವುದಿಲ್ಲ. ಆತನು ನಿಂದೆಯನ್ನು ತನ್ನ ಹಿತಕಾರಿ ಎಂದು ತಿಳಿಯುವನು ॥೧೭೮॥ ಯಾರು ಯಾರು ತನ್ನ ನಿಂದೆಯನ್ನು ಮಾಡುವರೋ, ಅವರೆಲ್ಲರೂ ನನ್ನ ಹಿತಕಾರಿ ತಾಯಿ ಸಮಾನರು ಎಂದು ತಿಳಿಯುವನು. ಏಕೆಂದರೆ ಅವರು ನನ್ನ ಪಾಪಗಳನ್ನು ತೊಳೆದು ಸ್ವಚ್ಛಗೊಳಿಸಿ, ನನ್ನ ವೃತ್ತಿಯನ್ನು ನಿರ್ಮಲಗೊಳಿಸುವರೆಂಬ ತಿಳುವಳಿಕೆಯು ಈತನಿಗೆ ಇರುವುದು ॥೧೭೯॥ ಹೀಗೆ ವಿಚಾರವನ್ನು ಮಾಡಿ ಆತನು ದ್ವೇಷದ ಸ್ಪರ್ಶವನ್ನು ಮನಸ್ಸಿಗೆ ಸ್ವಲ್ಪವೂ ಮಾಡಿಕೊಡುವುದಿಲ್ಲ. ನಿರ್ಮತ್ಸರ ಎಂದರೆ ಇದೇ ಆಗಿರುವುದು. ಇದು ಶಿಷ್ಯನ ಎರಡನೆಯ ಲಕ್ಷಣವಾಗಿರುವುದು ॥೧೮೦॥ ಇದರ ಮುಂದಿನ ಲಕ್ಷಣವೆಂದರೆ ದಕ್ಷತೆಯಾಗಿರುವುದು. ಗುರುಗಳು ಹೇಳಿರುವ ಜ್ಞಾನ ವಿಷಯದಲ್ಲಿ ತತ್ಪರತೆಯು. ಇದನ್ನು ಈಗ ನಾನು ನಿನಗೆ ಹೇಳುವೆನು. ತನ್ನ ಹಿತವನ್ನು ಸಾಧಿಸುವುದಕ್ಕಾಗಿ ಶಿಷ್ಯನು ಯಾವಾಗಲೂ ಜಾಗೃತನಾಗಿರುವುದೇ ದಕ್ಷತೆಯಾಗಿರುವುದು ॥೧೮೧॥ ಏಕಾಗ್ರಚಿತ್ತರೂಪ ಸೂರ್ಯನ ಉದಯವಾಗಲು ನಿದ್ರಾ ತಂದ್ರಾರೂಪ ಅಂಧಕಾರವು ಇಲ್ಲದಾಗುವುದು. ಧಾರಣಾ ಎಂದರೆ ಮನಸ್ಸು ಅಭ್ಯಾಸದಿಂದ ದೂರ ಹೋಗಲು ಬಿಡದಿರುವಿಕೆ. ಹೀಗೆ ಧಾರಣಾರೂಪ ಉದಯವಾಗಿ ಧೃತಿ ರೂಪ ಮಧ್ಯಾಹ್ನವಾಗುವುದು ॥೧೮೨॥ ಈ ಪ್ರಕಾರದ ದಿವಸವು ಬೆಳಕಾಗುತ್ತಲೇ ಶಮದಮಾದಿ ಸಮುದಾಯವು ಭಕ್ತಿಯ ಮಾರ್ಗದಲ್ಲಿ ನಡೆಯಲಾರಂಭಿಸುವುವು. ಇವರು ದಾರಿಯಲ್ಲಿ ಕ್ಷಣ ಹೊತ್ತು ಸಹ ನಿಲ್ಲುವುದಿಲ್ಲ ॥೧೮೩॥ ಅಲ್ಲಿ ಹೆಜ್ಜೆ ಹೆಜ್ಜೆಗೆ ನಿಜಬೋಧರೂಪ ಅರವಟ್ಟಿಗೆಯನ್ನು ಹಾಕಿರುವರು. ಇದು ಪ್ರವಾಸಿಗರ ಕೇವಲ ನೀರಡಿಕೆ ಮಾತ್ರ ನೀಗಿಸದೇ ತೃಷ್ಣೆಯನ್ನೂ ಸಹ ಶಾಂತಗೊಳಿಸುವುದು ॥೧೮೪॥ ಆ ಮಾರ್ಗದಲ್ಲಿ ತಮ್ಮ ಊರಿನವರೇ ಆದ ಶುದ್ಧ ಬ್ರಹ್ಮಜ್ಞಾನಿಗಳ ಭೇಟಿಯಾಯಿತೆಂದರೆ ಅವರೆಲ್ಲರೂ ''ಸೋಹಂ'' ಭಾವದಿಂದ ಒಂದಾಗುವರು. ಆಗ ದಾರಿತಪ್ಪುವ ಭಯವೇ ಉಳಿಯಲಾರದು. ಇವರು ಸರಳವಾಗಿ ನಿಜಮಾರ್ಗಕ್ಕೆ ಹತ್ತುವರು ॥೧೮೫॥ ಹೇ ಚತುರನಾದ ಉದ್ಧವನೇ, ಆಲಸ್ಯ ಅಥವಾ ವಿಲಂಬತೆ ಇವುಗಳು ಮನಸ್ಸಿಗೆ ಸ್ಪರ್ಶ ಮಾಡದಿರುವಿಕೆಯೇ ದಕ್ಷತೆ ಎಂದು ಕರೆಯುವರು. ಇದು ಶಿಷ್ಯನ ಮೂರನೆಯ ಲಕ್ಷಣವಾಗಿರುವುದು ॥೧೮೬॥ ಪೂರ್ವದ ಹಳೆಯದಾದ ಸಂಗ್ರಹವು ತನ್ನಲ್ಲಿದ್ದು ಅದರ ಸರ್ವ ಮಮತೆಯನ್ನು ಬಿಟ್ಟುಕೊಟ್ಟು ಮತ್ತು ಆತ್ಮಜ್ಞಾನದ ಅನುಭವದಿಂದ ಈ ಹಿಂದೆ ಬಿಟ್ಟುಕೊಟ್ಟ ವಿಷಯಕ್ಕೆ ಎಂದಿಗೂ ಚಿಂತೆ ಮಾಡುವುದಿಲ್ಲ ॥೧೮೭॥ ದೇಹದಲ್ಲಿ ''ಅಹಂ'' ತೆಯನ್ನು ದೃಢಗೊಳಿಸಲು ಆಗ ದೇಹ ಸಂಬಂಧಗಳಲ್ಲಿ ''ಮಮತಾ'' ನಟ್ಟಿಕೊಳ್ಳುವುದು. ಅದಕ್ಕಾಗಿ ದೇಹಾಭಿಮಾನವೇ ಚಿತ್ತಕ್ಕೆ ಮುಟ್ಟದಿರಲು ಆಗ ಮಮತೆಯು ಕೂಡಲೇ ಇಲ್ಲದಾಗುವುದು ॥೧೮೮॥

ದೇಹ ನಶ್ವರತ್ವೇ ದೇಖಿಲಾ । ವಿಷ್ಠಾಮೂತ್ರಾಂಚಾ ಮೋದಳಾ। ಯಾಲಾಗೀ ಅಹಂಕಾರು ಗೇಲಾ।
''ಸೋಹಂ'' ಲಾಗಲಾ ದೃಢಭಾವೋ ॥೧೮೯॥ ದೃಢ ವಾಢವೂನಿ ಸೋಹಂತಾ । ತೇಣೇ ಸಾಂಡವಿಲೀ ಅಹಂ
ಮಮತಾ। ಹೇ ''ಚೌಥೀ'' ಗಾ ಅವಸ್ಥಾ । ಜಾಣ ತತ್ತ್ವತಾ ಶಿಷ್ಯಾಚೀ ॥೧೯೦॥ ಗುರು ಮಾತಾ ಗುರು ಪಿತಾ। ಗುರು
ಗಣಗೋತ ತತ್ತ್ವತಾ। ಗುರು ಬಂಧು ಸುಹೃದತಾ। ನಿಜಸ್ವಾರ್ಥಾ ಶಿಷ್ಯಾಚಾ ॥೧೯೧॥ ಗುರುಪರಿಚರ್ಯಾ ನಿತ್ಯಕರ್ಮ
। ಗುರುಸೇವಾ ಹಾಚಿ ಸ್ವಧರ್ಮ । ಗುರು ತೋಚಿ ಆತ್ಮಾರಾಮ । ಸುಹೃದಸಂಭ್ರಮ ಸದ್ಗುರೂಸೀ ॥೧೯೨॥ ಐಸೇ
ಸದ್ಗುರೂಸೀ ''ಸುಹೃದ'' ಪಣ । ಅಸಾವೇ ಶಿಷ್ಯಾಸೀ ಸಂಪೂರ್ಣ । ಹೇ ''ಪಾಂಚವೇ'' ಗಾ ಲಕ್ಷಣ। ಸತ್ಯ ಜಾಣ
ಉದ್ಧವಾ ॥೧೯೩॥ ಚಂಚಳತ್ವೇ ಚಳು ಚಿತ್ತಾ । ಯೇವೋ ನೇದೀಚ ಸರ್ವಥಾ । ನಿಜೀ ನಿಜರೂಪನಿಶ್ಚಳತಾ।
ಸಾಧೀ ಸರ್ವಥಾ ಸರ್ವಸ್ವೇ ॥೧೯೪॥ ಜರ್ಹೀ ಚಂಚಳ ಝಾಲೇ ಅಂಗ । ಚಿತ್ತ ಗುರುಚರಣೀ ನಿಶ್ಚಳ ಚಾಂಗ।
ಅಂಗೀ ವಾಜತಾ ಲಗಬಗ। ವೃತ್ತಿ ಅಭಂಗ ಗುರುಚರಣೀ ॥೧೯೫॥ ಶರೀರ ವರ್ತತಾ ವ್ಯಾಪಾರಾ। ಜ್ಯಾಚೇ ಹೃದಯೀ
ನಾಹೀ ತ್ವರಾ । ಗುರುಚರಣೀ ಧರಿಲಾ ಥಾರಾ। ಹಾ ಶಿಷ್ಯ ಖರಾ ಪರಮಾರ್ಥಿ ॥೧೯೬॥ ಜ್ಯಾಸೀ ಹೃದಯೀ
ಚಂಚಳತಾ। ತೋ ಶಿಷ್ಯ ನವ್ಹೇ ನಿಜಸ್ವಾರ್ಥಾ। ಜ್ಯಾಚೇ ಅಂತರೀ ''ನಿಶ್ಚಳತಾ'' । ತೋಚಿ ಪರಮಾರ್ಥಾ ಸಾಧಕು
॥೧೯೭॥ ಐಸೀ ಸಾಧೂನಿ ನಿಶ್ಚಳತಾ। ಜ್ಯಾಸೀ ನಿಜಸ್ವಾರ್ಥೀ ಜಿಜ್ಞಾಸುತಾ। ತೋಚಿ ಕ್ಷಣಾರ್ಧೇ ಪರಮಾರ್ಥಾ।
ಪಾವೇ ತತ್ತ್ವತಾ ಗುರುವಾಕ್ಯೇ ॥೧೯೮॥ ಜೈಸಾ ದೀಪು ದೀಪೇ ಲಾವಿಲಾ । ಲಾವಿತಾಂಚಿ ತತ್ಸಮಾನ ಝಾಲಾ।
ತೈಸಾ ನಿಶ್ಚಳಾಸ ಗುರು ಭೇಟಲಾ। ತೋ ತತ್ಕಾಳ ಝಾಲಾ ತದ್ರೂಪ ॥೧೯೯॥ ಏವಂ ಅಂತರೀ ಜೇ ನಿಶ್ಚಳಪಣ।
ತೇ ಶಿಷ್ಯಾಚೇ ಶ್ರೇಷ್ಠ ಲಕ್ಷಣ। ತೋ ''ಸಹಾವಾ'' ಗಾ ಗುಣ ಜಾಣ। ತೇಣೇ ನಿರ್ದಳಣ ಷಡ್ವಿಕಾರಾ ॥೨೦೦॥
ಷಡ್ವಿಕಾರ ದೇಹಾವರೀ। ಶಿಷ್ಯ ದೇಹಬುದ್ಧೀ ಹಾತೀ ನ ಧರೀ। ಯಾಲಾಗೀ ಮಾವಳಿಜೇ ವಿಕಾರೀ। ಗುರುವಾಕ್ಯೇ
ಕರೀ ವರ್ತತಾ ॥೨೦೧॥ ಐಸೀ ಸಾಧ್ಯ ಕರೂನಿ ''ನಿಶ್ಚಳತಾ'' । ಸಾಧೂ ರಿಘೇ ಜೋ ಪರಮಾರ್ಥಾ । ಧರೋನಿಯಾ
ಅರ್ಥಜಿಜ್ಞಾಸುತಾ। ಹೋಯೇ ಭಜತಾ ಗುರುಚರಣೀ ॥೨೦೨॥ ಜ್ಯಾಸೀ ಅರ್ಥಜಿಜ್ಞಾಸಾ ನಾಹೀ। ತೋ ಭಜೇನಾ
ಗುರೂಚ್ಯಾ ಠಾಯೀ । ಜರೀ ಭಜೇಲ ಕಹೀಬಹೀ । ತರೀ ಸ್ವಾರ್ಥೇ ಪಾಹೀ ವಿಷಯಾಚ್ಯಾ ॥೨೦೩॥

ಈ ದೇಹವು ಮಲಮೂತ್ರದ ಮೂಟೆಯಾಗಿರುವುದು. ಇದನ್ನು ತಿಳಿದು ನೋಡಲು ಯಾವ ಈ ನಾಶಿವಂತ ದೇಹಸಂಬಂಧದಲ್ಲಿ ಅಹಂಕಾರವು ಇಲ್ಲದಾಗುವುದು. ಮತ್ತು ''ಸೋಹಂ'' ಅಂದರೆ ನಾನೇ ಬ್ರಹ್ಮನು ಎಂಬ ದೃಢಭಾವನೆಯಾಗುವುದು ॥೧೮೯॥ ಅದಕ್ಕಾಗಿ ಸೋಹಂ ಭಾವನೆಯನ್ನು ದೃಢವಾಗಿ ಬೆಳೆಸುತ್ತ ಅಹಂ, ಮಮತೆ ಭಾವನೆಯನ್ನು ಬಿಟ್ಟುಕೊಟ್ಟಿರುವನು. ಇದು ಶಿಷ್ಯನ ಅಂಗದಲ್ಲಿನ ''ನಿರ್ಮಮತಾ'' ಇದು ನಾಲ್ಕನೆಯ ಗುಣವಾಗಿರುವುದು ॥೧೯೦॥ ಶಿಷ್ಯನು ತನ್ನ ಹಿತಕ್ಕಾಗಿ ತನ್ನ ಸದ್ಗುರುವಿಗೆನೇ ತನ್ನ ತಾಯಿ, ತಂದೆ, ಆಪ್ತ, ಬಂಧು, ಬಳಗ, ಮಿತ್ರನೆಂದು ತಿಳಿಯಬೇಕು ॥೧೯೧॥ ಗುರುಪೂಜೆಯೇ ನಿತ್ಯ ಕರ್ಮವಾಗಿರುವುದು. ಗುರುಸೇವೆಯೇ ಸ್ವಧರ್ಮವಾಗಿರುವುದು. ಗುರುವೇ ಆತ್ಮಾರಾಮನು. ಮಿತ್ರರ ಸರ್ವ ಗೌರವವು ಸದ್ಗುರುವೇ ಆಗಿರುವನು ॥೧೯೨॥ ಈ ಪ್ರಕಾರವಾಗಿ ಸದ್ಗುರುವಿನಲ್ಲಿ ಸರ್ವ ಆಪ್ತತ್ವವನ್ನು ಭಾವಿಸಬೇಕು. ಹೇ ಉದ್ಧವನೇ, ಇದು ಶಿಷ್ಯನ ಐದನೆಯ ಲಕ್ಷಣವಾಗಿರುವುದು. ಇದನ್ನು ನೀನು ತಿಳಿ ॥೧೯೩॥ ಚಿತ್ತಕ್ಕೆ ಚಂಚಲತ್ವದಿಂದ ಅಸ್ಥಿರವನ್ನಾಗಿ ಮಾಡಕೂಡದು. ಅದಕ್ಕೆ ಸರ್ವ ಪ್ರಕಾರಗಳಿಂದ ಯಾವಾಗಲೂ ಆತ್ಮತತ್ವದಲ್ಲಿ ಸ್ಥಿರಗೊಳಿಸಬೇಕು ॥೧೯೪॥ ಅಂಗವು ಚಂಚಲವಾದರೂ ಚಿತ್ತ ಮಾತ್ರ ಗುರುಚರಣಗಳಲ್ಲಿ ಸ್ಥಿರವಾಗಿಡಬೇಕು. ವಿಕ್ಷೇಪವನ್ನು ತಂದೊಡ್ಡುವ ಎಷ್ಟೇ ಪ್ರಸಂಗಗಳು ಒದಗಿದರೂ ತನ್ನ ವೃತ್ತಿಯನ್ನು ಗುರುಚರಣಗಳಲ್ಲಿ ದೃಢವಾಗಿಡಬೇಕು ॥೧೯೫॥ ಶರೀರವು ನಾನಾ ಪ್ರಕಾರಗಳ ವ್ಯವಹಾರಗಳನ್ನು ಮಾಡುತ್ತಿದ್ದರೂ ಚಿತ್ತವು ಚಂಚಲವಾಗದೇ ಗುರುಚರಣಗಳಲ್ಲಿ ವಿಶ್ವಾಸವನ್ನಿಟ್ಟವನೇ ನಿಜವಾದ ಪರಮಾರ್ಥಿ ಶಿಷ್ಯನಾಗಿರುವನು ॥೧೯೬॥ ಮನದಲ್ಲಿ ಚಂಚಲತ್ವವು ಇದ್ದವನಿಗೆ ಸ್ವಹಿತವನ್ನು ಸಾಧಿಸಲು ಸಾಧ್ಯವೇ ಇಲ್ಲ. ಮನಸ್ಸನ್ನು ನಿಶ್ಚಲವನ್ನಾಗಿ ಮಾಡಿದವನೇ ನಿಜವಾದ ಪರಮಾರ್ಥಿಯಾಗಿರುವನು ॥೧೯೭॥ ಈ ಪ್ರಕಾರವಾಗಿ ನಿಶ್ಚಲತೆಯನ್ನು ಸಾಧಿಸಿ ಯಾರು ತಮ್ಮ ನಿಜವಾದ ಹಿತದ ಇಚ್ಛೆಯನ್ನು ಮಾಡುವರೋ, ಅವರು ಗುರು ಉಪದೇಶದಿಂದ ಕ್ಷಣಾರ್ಧದಲ್ಲಿ ಪರಮಾರ್ಥಕ್ಕೆ ಪ್ರಾಪ್ತರಾಗುವರು ॥೧೯೮॥ ಒಂದು ದೀಪದಿಂದ ಇನ್ನೊಂದು ದೀಪವನ್ನು ಹಚ್ಚಲು ಅದು ಮೊದಲಿನ ದೀಪದಂತೆಯೇ ಪ್ರಕಾಶವನ್ನು ಕೊಡುವುದು. ಅದರಂತೆಯೇ ಆತನು ನಿಶ್ಚಲತ್ವದಿಂದ ಸದ್ಗುರುವಿಗೆ ಭೇಟಿಯಾಗಿ, ಶಿಷ್ಯನು ತದ್ರೂಪನಾಗುವನು ॥೧೯೯॥ ಸಾರಾಂಶವೇನಂದರೆ, ಅಂತಃಕರಣದ ನಿಶ್ಚಲತ್ವವೇ ಶಿಷ್ಯನ ಶ್ರೇಷ್ಠ ಲಕ್ಷಣವಾಗಿರುವುದು. ಇದು ಆರನೆಯ ಗುಣವಾಗಿರುವುದು. ಇದನ್ನು ಲಕ್ಷದಲ್ಲಿಡು. ಇದರಿಂದಲೇ ಷಡ್ವಿಕಾರಗಳ ನಾಶವಾಗುವುದು ॥೨೦೦॥ ದೇಹಕ್ಕೆ ಷಡ್ವಿಕಾರಗಳು ಇದ್ದೇ ಇರುವುವು. ಆದರೆ ಶಿಷ್ಯನು ದೇಹಬುದ್ಧಿಗೆ ಸ್ಪರ್ಶವನ್ನೇ ಮಾಡುವುದಿಲ್ಲ. ಆದ್ದರಿಂದ ಗುರುವಿನ ಉಪದೇಶದಂತೆ ಸದಾಚಾರಗಳಿಂದ ವರ್ತಿಸುತ್ತಿರುವುದರಿಂದ ಆತನ ವಿಕಾರಗಳೆಲ್ಲವೂ ಇಲ್ಲದಾಗುವುವು ॥೨೦೧॥ ಈ ಪ್ರಕಾರದ ನಿಶ್ಚಲತ್ವವನ್ನು ಸಾಧ್ಯ ಮಾಡಿಕೊಂಡು ಅರ್ಥ (ಜ್ಞಾನ) ಜಿಜ್ಞಾಸೆಯನ್ನು ಮನದಲ್ಲಿ ಧರಿಸಿ ಪರಮಾರ್ಥವನ್ನು ಸಾಧಿಸಲು ಹೊರಟವರು ಗುರುಚರಣಗಳ ಸೇವಕರಾಗಿ ಇರುವರು ॥೨೦೨॥ ಯಾರಿಗೆ ಅರ್ಥದ ಜಿಜ್ಞಾಸೆಯು ಇರುವುದಿಲ್ಲವೋ ಆತನು ಗುರುವಿನ ಭಜನೆಗೆ ಹತ್ತಲಾರನು ಮತ್ತು ಎಂದಾದರೂ ಒಂದು ವೇಳೆ ಗುರುವಿನ ಭಜನೆಗೆ ಹತ್ತಿಕೊಂಡರೆ ಆತನು ವಿಷಯಗಳ ಲಾಲಸೆಯಿಂದ ಕೂಡಿರುವನು ॥೨೦೩॥

ಸಾಂಡೋನಿಯಾ ವಿಷಯಸ್ವಾರ್ಥಾ । ಇತ್ಥಂಭೂತ ಜಾಣಾವಯಾ ಅರ್ಥಾ । ಜೋ ಭಜೇ ಪರಮಾರ್ಥಾ । "ಜಿಜ್ಞಾಸತಾ" ತ್ಯಾ ನಾಂವ ।।೨೦೪।। ಐಶೀ ಧರೋನಿ ಜಿಜ್ಞಾಸತಾ । ಚಢತೀ ಆವಡೀ ಪರಮಾರ್ಥಾ । ಆರಾಣುಕ ನಾಹೀ ಚಿತ್ತಾ । ನಿಜಸ್ವಾರ್ಥಾಚೇನಿ ಲೋಭೇ ।।೨೦೫।। ಅತಿಪ್ರೀತೀ ಪರಮಾರ್ಥಾ । ಚಢತೀ ವಾಢತೀ ಆಸ್ಥಾ । ಹೇ "ಸಾತವೀ" ಲಕ್ಷಣತಾ । ಜಾಣ ತತ್ತ್ವತಾ ಶಿಷ್ಯಾಚೀ ।।೨೦೬।। ಹೇ ಸಾತವೇ ಲಕ್ಷಣ । ಪರಮಾರ್ಥಾಚೇ ಅಂಗಣ । ಪಾವಲೇ ಅಸೇ ಜಾಣ । ಜಿಜ್ಞಾಸುಪಣಾಚೇನಿ ನೇಟೇ ।।೨೦೭।। ಗುರು ಬಹುತಾಂಚೀ ಸಾಉಲೀ । ಶಿಷ್ಯವರ್ಗಾಚೀ ಮಾಉಲೀ । ತೇಥ ಅಸೂಯಾ ಜೇಣೇ ಕೇಲೀ । ತ್ಯಾಚೀ ಬುಡಾಲೀ ನಿಜಪ್ರಾಪ್ತೀ ।।೨೦೮।। ಯಾಲಾಗೀ ಗುರೂಚಾ ಜೋ ಜೋ ಅಂಕಿತ । ತೋ ತೋ ಗುರುತ್ವೇಚಿ ಮಾನಿತ । ಅಸೂಯಾ ನಾಠವೇ ಮನಾಂತ । ಅತಿವಿನೀತ ಸರ್ವಾಸೀ ।।೨೦೯।। ಗುರುಬಂಧು ಕನಿಷ್ಠ ದೀನ । ತ್ಯಾಚ್ಯಾ ಠಾಯೀ ಉತ್ತಮ ಗುಣ । ಜಾಣೋನಿ ನ ಮನೀ ಆಪಣ । ಅಸದಾರೋಪಣ ತೇಥೇ ಕರೀ ।।೨೧೦।। ಪುಢಿಲಾಂಚಾ ಉತ್ತಮ ಗುಣ। ತ್ಯಾಸೀ ಮಿಥ್ಯಾ ಲಾವೂನಿ ದೂಷಣ । ಲಟಿಕೇ ಮ್ಹಣೇ ತಯಾಚೇ ಜ್ಞಾನ । "ಅಸೂಯಾ" ಜಾಣ ತ್ಯಾ ನಾಂವ ।।೨೧೧।। ಪ್ರತ್ಯಕ್ಷ ಭೇಟಲ್ಯಾ ವರ್ಣೀ ಗುಣ। ನಮ್ರ ಹೋವೋನಿ ವಂದೀ ಚರಣ । ಸವೇಂಚಿ ಮಾಗೇ ಕರೀ ಛಳಣ । "ಅಸೂಯಾ" ಸಂಪೂರ್ಣ ಯಾ ನಾಂವ ।।೨೧೨।। ಸಚ್ಛಿಷ್ಯ ಯೇ ಅರ್ಥೀ ನಿರ್ಮಳ । ಹೋ ನೇದೀ ಅಸೂಯೇಚಾ ವಿಟಾಳ । ಉತ್ತಮ - ಮಧ್ಯಮ - ಪ್ರಾಕೃತಮೇಳ । ವಂದೀ ಪರೀ ಛಳ ಕರೂ ನೇಣೇ ।।೨೧೩।। ಗುರೂನೇ ಶಿಕವಿಲೀ ವಸ್ತುಸಮತಾ । ತೇಥ ನಿರಂತರ ಠೇವೂನಿ ಚಿತ್ತಾ । ಸಮಭಾವೇ ವಂದೀ ಸಮಸ್ತಾ । ಛಳೂ ಸರ್ವಥಾ ತೋ ನೇಣೇ ।।೨೧೪।। ಯಾಪರೀ ಗಾ ಉದ್ಧವಾ । ಛಳೂ ನೇಣೇ ಕೋಣಾ ಜೀವಾ । ಹಾ "ಅನಸೂಯು" ಮ್ಹಣಾವಾ । ಗುಣ ಆಠವಾ ಶಿಷ್ಯಾಚಾ ।।೨೧೫।। ಹೇ ಅಷ್ಟೌ ಮಹಾಮಣಿಮಾಳೀ । ಅಖಂಡ ಜ್ಯಾಚ್ಯಾ ಹೃದಯಕಮಳೀ । ತೋ ಪಾವೇ ಸದ್ಗುರೂ ಜವಳೀ । ನವೀ ನವ್ಹಾಳೀ ಭೇಟೀಚೀ ।।೨೧೬।। ಯಾವರೀ ನವವೇ ಲಕ್ಷಣ । ತೇ ಜಾಣ ನವವಿಧಾನ । ಸತ್ಯಧೂತ ಸಂಭಾಷಣ । ವಾಗ್ವಿಲಾಪನ ಸಾಂಡೂನಿ ।।೨೧೭।। ಸದ್ಗುರೂ ಪ್ರತಿ ಜಾಣ । ಮೃದು ವಿನೀತ ಕರೀ ಪ್ರಶ್ನ। ಸತ್ಯಾಚೇ ಸತ್ಯ ತೇ ಗುರುವಚನ । ಮಾನೀ ಜಾಣ ನಿಜಭಾವೇ ।।೨೧೮।।

ವಿಷಯಗಳ ಸ್ವಾರ್ಥವನ್ನು ಬಿಟ್ಟುಕೊಟ್ಟು ಕೇವಲ ಆತ್ಮಜ್ಞಾನವನ್ನು ತಿಳಿದುಕೊಳ್ಳುವುದಕ್ಕಾಗಿ ಪರಮಾರ್ಥದ ಸಾಧನೆಯನ್ನು ಮಾಡುವವನಿಗೆ ಜಿಜ್ಞಾಸು ಎಂದು ಕರೆಯುವರು ।।೨೦೪।। ಹೀಗೆ ತತ್ವ ಜಿಜ್ಞಾಸೆಯನ್ನು ಮನದಲ್ಲಿ ಧರಿಸಿ ಪರಮಾರ್ಥದ ಪ್ರೇಮವನ್ನು ಬೆಳೆಸುತ್ತಿರುವನು. ಈ ಪ್ರಕಾರವಾಗಿ ಸ್ವಹಿತದ ಲೋಭದಿಂದ ಆತನ ಚಿತ್ತಕ್ಕೆ ಒಂದು ಕ್ಷಣವೂ ವಿಶ್ರಾಂತಿ ಇರುವುದಿಲ್ಲ ।।೨೦೫।। ಪರಮಾರ್ಥ ವಿಷಯದಲ್ಲಿ ಅತಿಶಯವಾಗಿ ಪ್ರೇಮವು ಮತ್ತು "ಬೆಳೆಯುತ್ತಿರುವ ಆಸ್ಥೆ" ಇದು ಶಿಷ್ಯನ "ಏಳನೆಯ" ಲಕ್ಷಣವಾಗಿರುವುದು ।।೨೦೬।। ಈ ಏಳನೆಯ ಲಕ್ಷಣವು ಜಿಜ್ಞಾಸುತನದ ಬಲದಿಂದಲೇ ಪರಮಾರ್ಥದ ಶಿಖರವನ್ನು ಏರಲು ಸಮರ್ಥವಾಯಿತು ।।೨೦೭।। ಸದ್ಗುರುಗಳು ಅನೇಕರ ನೆರಳಾಗಿರುವರು. ಶಿಷ್ಯನಿಗೆ ಮಾತ್ರ ಮಾತೃರಾಗಿರುವರು. ಇವರಲ್ಲಿ ಯಾರಾದರೂ ಅಸೂಯೆಯನ್ನು ಮಾಡಲು ಅವರಿಗೆ ಆತ್ಮಜ್ಞಾನದ ಪ್ರಾಪ್ತಿಯು ಎಂದಿಗೂ ಆಗಲಾರದು ।।೨೦೮।। ಆದಕ್ಕಾಗಿ ಗುರುಗಳ ಅನುಗ್ರಹಕ್ಕೆ ಪಾತ್ರರಾದವರನ್ನು ಆತನು ಗುರುಸಮಾನವಾಗಿ ಭಾವಿಸುವನು. ಆತನ ಚಿತ್ತದಲ್ಲಿ ಅಸೂಯೆಯು ಹುಟ್ಟುವುದೇ ಇಲ್ಲ. ಆತನು ಸರ್ವರಲ್ಲಿಯೂ ನಮ್ರತೆಯಿಂದ ವರ್ತಿಸುವನು ।।೨೦೯।। ಒಂದು ವೇಳೆ ತನ್ನ ಗುರುಬಂಧು ಆದವನು ಕಡಿಮೆ ದರ್ಜೆಯವನಾಗಿದ್ದರೂ ಆತನಲ್ಲಿಯ ಉತ್ತಮ ಗುಣವನ್ನು ಈತನು ಕಾಣುವನು. ನಾನು ಆತನಿಗಿತಲೂ ಶ್ರೇಷ್ಠನಾಗಿರುವೆನು ಎಂದು ಎಂದಿಗೂ ಹೇಳಲಾರನು ।।೨೧೦।। ಇನ್ನೊಬ್ಬರಲ್ಲಿ ಇರುವ ಉತ್ತಮ ಗುಣಗಳಿಗೆ ಮಿಥ್ಯೆಯಾದ ದೂಷಣಗಳನ್ನು ಮಾಡಿ ಅವರ ಜ್ಞಾನವು ಸುಳ್ಳಾಗಿರುವುದು ಎಂದು ಹೇಳುವುದಕ್ಕೆ "ಅಸೂಯೆ" ಎಂದು ಕರೆಯುವರು ।।೨೧೧।। ಅವರ ಪ್ರತ್ಯಕ್ಷವಾಗಿ ಭೇಟಿಯಾಗಲು ಅವರ ಗುಣಗಳನ್ನು ಸ್ತುತಿಮಾಡುವುದು, ಅವರಲ್ಲಿ ನಮ್ರನಾಗಿ ಅವರ ಚರಣಗಳಿಗೆ ವಂದಿಸುವುದು, ಆತನು ಅಲ್ಲಿಂದ ಹೊರಟು ಹೋದ ನಂತರ ಆತನನ್ನು ನಿಂದಿಸುವುದು. ಈ ಕಪಟತನದ ವರ್ತನೆಗೆ ಅಸೂಯೆ ಎಂದು ಹೇಳುವರು ।।೨೧೨।। ಸತ್‌ಶಿಷ್ಯನ ವರ್ತನೆಯು ಈ ವಿಷಯಕ್ಕೆ ಅತ್ಯಂತ ಶುದ್ಧವಾಗಿರುವುದು. ಈತನು ಅಸೂಯೆಯ ಮೈಲಿಗೆಯನ್ನು ಆಗಗೊಡುವುದಿಲ್ಲ. ಉತ್ತಮ, ಮಧ್ಯಮ, ಕನಿಷ್ಠ ಈ ಸರ್ವ ಸಮುದಾಯಕ್ಕೆ ಈತನು ಪ್ರೇಮದಿಂದ ಸಮಾನವಾಗಿ ವಂದಿಸುತ್ತಿರುವನು. ಇನ್ನೊಬ್ಬರನ್ನು ಪೀಡಿಸುವುದು ಈತನಿಗೆ ಗೊತ್ತೇ ಇರುವುದಿಲ್ಲ ।।೨೧೩।। ಗುರುಗಳು ಈತನಿಗೆ ಸರ್ವತ್ರವೂ ಸಮಪ್ರಮಾಣದಲ್ಲಿ ಬ್ರಹ್ಮವಿರುವುದೆಂಬ ಜ್ಞಾನವನ್ನು ತಿಳಿಸಿ ಕೊಟ್ಟಿರುವರು. ಈ ಜ್ಞಾನವನ್ನು ಈತನು ಹೃದಯದಲ್ಲಿ ಧರಿಸಿ ಸರ್ವರನ್ನೂ ಸಮಭಾವದಿಂದ ವಂದಿಸುವನು. ಇನ್ನೊಬ್ಬರನ್ನು ಪೀಡಿಸುವುದು ಈತನಿಗೆ ತಿಳಿಯುವುದೇ ಇಲ್ಲ ।।೨೧೪।। ಹೇ ಉದ್ಧವನೇ, ಯಾವ ಪ್ರಾಣಿಗೂ ಎಷ್ಟು ಮಾತ್ರಕ್ಕೂ ಪೀಡೆಯನ್ನು ಕೊಡದಿರುವುದೇ ಶಿಷ್ಯನ ಅನುಸೂಯೆ ಎಂಬುವ ಎಂಟನೆಯ ಲಕ್ಷಣವಾಗಿರುವುದು ।।೨೧೫।। ಈ ಎಂಟು ಸದ್ಗುಣ ರೂಪ ಉತ್ತಮ ಮಣಿಗಳ ಮಾಲೆಯು ಯಾರ ಹೃದಯದ ಮೇಲೆ ಅಖಂಡವಾಗಿರುವುದೋ, ಆತನು ತತ್ಕಾಲದಲ್ಲಿ ಗುರುಸನ್ನಿಧಿಯನ್ನು ಪಡೆಯುವನು. ಈ ಭೇಟಿಯ ಅಪೂರ್ವತೆಯನ್ನು ಹೇಗೆ ವರ್ಣಿಸಬೇಕು? ।।೨೧೬।। ಇನ್ನು ಮುಂದಿನ ಒಂಬತ್ತನೆಯ ಲಕ್ಷಣವು ಅದೊಂದು ಹೊಸ ವಿಧಾನವಾಗಿರುವುದು. ನಿಷ್ಫಲವಾದ ಬಡಬಡಿಸುವ ಮಾತುಗಳನ್ನು ಬಿಟ್ಟು ಸತ್ಯವಾದ ಮತ್ತು ಪವಿತ್ರವಾದ ಭಾಷಣವನ್ನು ಮಾಡಬೇಕು ।।೨೧೭।। ಶಿಷ್ಯನು ಸದ್ಗುರುಗಳಿಗೆ ಅತ್ಯಂತ ನಮ್ರತೆಯಿಂದ ಮೃದು ಶಬ್ದಗಳಿಂದ ಪ್ರಶ್ನಿಸುವನು ಮತ್ತು ಗುರುಗಳ ವಚನಗಳು ಸಂಪೂರ್ಣ ಸತ್ಯವೆಂದು ಮನ್ನಿಸುವನು ।।೨೧೮।।

ಯುಕ್ತಿ ವಾಢವೂನ ಉದಂಡ । ನಾನಾ ಮತೇ ಅಕಾಂಡತಾಂಡ । ಸಾಹ್ಯ ಸಂಚರೂನಿ ಪಾಖಾಂಡ । ಗರ್ಜತ ತೋಂಡ ಮಹಾವಾದೇ ।೨೧೯॥ ಸಾಧಕಾ ಬಾಧಕಾ ಯುಕ್ತೀ । ಮಾಜೀ ಸಂಚರೂನಿ ಛಳಣೋಕ್ತೀ । ಆಪುಲೀ ಮಿರವಾವೀ ಯುಕ್ತೀ । ಹೇ ನಾಹೀ ಚಿತ್ತೀ ಶಿಷ್ಯಾಚೇ ।೨೨೦॥ ಸದ್ಗುರೂಪುಢೇ ಅತಿಜಲ್ಪ । ಕರಣೇ ತೇಚಿ ಮಹಾಪಾಪ । ಜಾಣೋನಿ ಸಾಂಡೀ ವೃಥಾಲಾಪ । ಮಿಥ್ಯಾ ಜಲ್ಪ ಬೋಲೇನಾ ।೨೨೧॥ ಶಿಷ್ಯಾಚೇ ಬೋಲಣೇ ಕೈಸೇ । ವಾಚಾ ಪರಿಪಕ್ವ ಅಮೃತ ಜೈಸೇ । ಬೋಲ ಘೋಳತೀ ಪ್ರೇಮರಸೇ । ಪ್ರಶ್ನ ಪುಸೇ ಏಕಾಂತೀ ।೨೨೨॥ ಮಿಥ್ಯಾವಾದಾಚೀ ಅಪಕ್ವ ಫಳೇ । ತುರಟೇ ತಿಖಟೇ ತೋಂಡಾಳೇ । ಸದೇಠೀ ಝಡಲೀ ಪೂರ್ವಕಾಳೇ । ಬೋಲೇ ಪ್ರಾಂಜಳೇ ಪರಿಪಕ್ವ ।೨೨೩॥ ಬೋಲೋ ನೇಣೇ ಛಳ ಛದ್ಮ । ಸ್ಪರ್ಶೋ ನೇಣೇ ಪರಮರ್ಮ । ಬೋಲಿಲೀ ನುಪಜವೀ ಅಧರ್ಮ । ಮನೋಧರ್ಮಕ್ಷೋಭಕ ।೨೨೪॥ ವ್ಯರ್ಥ ನ ಕರೀ ಆಶಂಕಾ । ನಿಂದೇಲಾಗೀ ತೋ ಮುಕಾ । ಝಕವೂ ನೇಣೇ ಲೋಕಾ । ಬಾಳಾ ಮೂರ್ಖಾ ಪಂಡಿತಾ ।೨೨೫॥ ಬೋಲೋ ನೇಣೇ ಅತಿಕರ್ಕಶ । ಕರೂ ನೇಣೇ ಉಪಹಾಸ । ಬೋಲಾಮಾಜೀ ನ ಧರೀ ಆಸ । ಬೋಲೇ ನೈರಾಶ್ಯ ವೈರಾಗ್ಯ ।೨೨೬॥ ಬೋಲಿಲೀ ಬೋಲೂ ನೇಣೇ ಆಟೂ । ಛಳಣೋಕ್ತೀ ನವ್ಹೇ ಶಠೂ । ಬಹು ಬೋಲತಾ ಮಾನೀ ವಿಟೂ । ಮೌನನಿಷ್ಠ ಹೋಊನಿ ರಾಹೇ ।೨೨೭॥ ವಾದವಿವಾದ ಅತಿವಾದ । ನಾವಡೇ ಕೋಣಾಚಾ ಸಂವಾದ । ನ ಕರೀ ಬೋಲಾಚಾ ವಿನೋದ । ಲೌಕಿಕ ಶಬ್ದ ನ ಬೋಲೇ ।೨೨೮॥ ವಕ್ರೋಕ್ತೀ ನಾಹೀ ಜಾಣ । ಬೋಲಿಲೀ ನ ಬೋಲೇ ವಿಂದಾಣ । ಕರೂ ನೇಣೇ ಪ್ರತಾರಣ । ಮಿಥ್ಯಾ ವಚನ ನ ಬೋಲೇ ।೨೨೯॥ ಪೋಟೀ ಕಾರ್ಯ ನಾಹೀ ಕರಣೇ । ಹೋ ಹೋ ಮ್ಹಣವೂನಿ ಝಕವಿಣೇ । ಹೇ ಹೀ ನಾಹೀ ತಯಾ ಬೋಲಣೇ । ಸದಾ ಪಠಣೇ ಹರಿನಾಮ ।೨೩೦॥ ಪಶ್ಚಿಮದ್ವಾರೀಚೇ ಕವಾಡ । ಸದಾ ವಾರೇನಿ ಕರೀ ಖಡಖಡ । ತೈಶೀ ನ ಕರೀ ಬಡಬಡ । ವೃಥಾ ತೋಂಡ ಪಿಟೀನಾ ।೨೩೧॥ ಕರಿತಾ ಶಬ್ದಬ್ರಹ್ಮಸಂವಾದು । ಯುಕ್ತಿಬಾಧೇ ವಿದ್ವಾಂಸಾ ಕ್ರೋಧು । ಅನಿವಾರ ದೇಖೋನಿ ಬಾಧು । ನ ಬೋಲೇ ಶಬ್ದು ಶಾಬ್ದಿಕ ।೨೩೨॥

ಅನೇಕ ಪ್ರಕಾರದ ವಾದವಿವಾದಗಳನ್ನು ಮಾಡುವಿಕೆ, ಅನೇಕ ಪ್ರಕಾರದ ಯುಕ್ತಿ ಹೂಡುವಿಕೆ, ಅನೇಕ ಪ್ರಕಾರದ ಮತಗಳನ್ನು ಪ್ರತಿಪಾದಿಸಲು ಪಾಖಂಡಿಗಳ ಸಹಾಯ ಸ್ವೀಕರಿಸಿ ವಾದ ವಿವಾದಗಳನ್ನು ಹುಟ್ಟಿಸುವಿಕೆ ।೨೧೯॥ ಸಾಧಕ ಬಾಧಕ ಯುಕ್ತಿಗಳ ಸಹಾಯದಿಂದ ಶಬ್ದಪ್ರಹಾರ ಮಾಡುತ್ತಿರುವಿಕೆ, ಮತ್ತು ತನ್ನ ಮತವನ್ನು ಪ್ರದರ್ಶಿಸುವಿಕೆ ಇವು ಶಿಷ್ಯನ ಮನದಲ್ಲಿ ಎಂದಿಗೂ ಬರುವುದಿಲ್ಲ ।೨೨೦॥ ಸದ್ಗುರುಗಳ ಎದುರಿನಲ್ಲಿ ನಿರರ್ಥಕವಾಗಿ ಬಡಬಡಿಸುವುದು ಮಹಾಪಾಪವಾಗಿರುವುದು. ಇದನ್ನರಿತು ಆತನು ವ್ಯರ್ಥವಾದ ಬಡಬಡಿಸುವುದನ್ನು ಬಿಟ್ಟು ಬಿಡುವನು. ನಿಷ್ಫಲವಾದ ಯಾವ ಭಾಷಣವನ್ನೂ ಮಾಡಲಾರನು ।೨೨೧॥ ಶಿಷ್ಯನು ಹೇಗೆ ಮಾತನಾಡುವನೆಂಬುದನ್ನು ಕೇಳು, ಆತನು ನುಡಿದರೆ ಆತನ ವಾಣಿಯಿಂದ ಪರಿಪಕ್ವವಾದ ಅಮೃತದ ಮಳೆಯು ಸುರಿಯುತ್ತಿರುವುದು. ಏಕಾಂತದಲ್ಲಿ ಗುರುಗಳಿಗೆ ಪ್ರಶ್ನೆಗಳನ್ನು ಕೇಳುವನು ।೨೨೨॥ ಮಿಥ್ಯಾವಾದವೆಂಬ ಹುಳಿ, ಒಗರು ಅಪಕ್ವ ಫಲಗಳು ತುಂಬು ಸಮೇತವಾಗಿ ಎಂದೋ ಉದುರಿ ಹೋಗಿರುವುವು. ಈಗ ಆತನು ಶುದ್ಧವಾದ ಪರಿಪಕ್ವವಾದ ಭಾಷಣವನ್ನು ಮಾಡುವನು ।೨೨೩॥ ಕಪಟತನದಿಂದ ಆತನು ಎಂದಿಗೂ ಮಾತನಾಡಲಾರನು. ಮನಸ್ಸಿಗೆ ನೋವು ಆಗುವಂಥ ಮರ್ಮಭೇದಕ ಭಾಷಣವೂ ಆತನಿಗೆ ತಿಳಿಯುವುದೇ ಇಲ್ಲ. ಇತರರಿಗೆ ಪೀಡಾಕಾರಕ ಮಾತುಗಳನ್ನು ಆಡಲಾರನು. ಅಧರ್ಮಹುಟ್ಟಿಸುವ, ಮನನೊಂದುವ ಮಾತುಗಳನ್ನು ಬೆಳೆಸಲಾರನು ।೨೨೪॥ ವ್ಯರ್ಥವಾಗಿ ಅನುಮಾನಗಳನ್ನು ಹುಟ್ಟಿಸಲಾರನು. ನಿಂದೆ ಮಾಡುವಂತಹ ಪ್ರಸಂಗ ಬಂದರೂ ಏನೂ ಹೇಳಲಾರನು. ಸಣ್ಣ ಹುಡುಗರಾಗಲಿ, ಮೂರ್ಖರಾಗಿರಲಿ, ಪಂಡಿತರಾಗಿರಲಿ ಯಾರನ್ನೂ ಮೋಸಗೊಳಿಸಲಾರನು ।೨೨೫॥ ಆತನು ಕರ್ಕಶವಾದ ಶಬ್ದಗಳಿಂದ ಮಾತನಾಡಲಾರನು. ಯಾರನ್ನೂ ಅಪಹಾಸ್ಯಮಾಡಲಾರನು. ಅತಿಯಾಗಿ ಮಾತನಾಡಬೇಕೆಂಬ ಇಚ್ಛೆಯನ್ನು ಮಾಡದೇ ಆತನು ವೈರಾಗ್ಯ ಪೂರ್ಣವಾಗಿ ಮಾತನಾಡುವನು ।೨೨೬॥ ಆತನು ಅರ್ಥಹೀನ, ಪೊಳ್ಳಾದ ಮಾತುಗಳನ್ನು ಆಡಲರಿಯನು ಮತ್ತು ಆತನು ಶಠನಂತೆ ಪೀಡಾಕಾರಕ ಮಾತುಗಳನ್ನು ಆಡಲರಿಯನು. ಅತಿಯಾಗಿ ಮಾತನಾಡಲು ಆತನು ಬೇಸರಪಡುವನು. ಆತನು ಮೌನವನ್ನೇ ಪರಿಪಾಲಿಸುವನು ।೨೨೭॥ ಆತನಿಗೆ ವಾದ, ವಿವಾದಗಳು ಒಡಿಸಲಾರವು. ವಿತಂಡವಾದ, ಸಂವಾದಗಳೂ ಸಹ ಆತನಿಗೆ ಸಹಿಸಲಾರವು. ನಕಲಿ, ಹಾಸ್ಯ ಇತ್ಯಾದಿ ಲೌಕಿಕ ಶಬ್ದಗಳನ್ನು ಬಳಸಲಾರನು ।೨೨೮॥ ವ್ಯಂಗ್ಯ ಶಬ್ದಗಳ ಬಳಕೆ ಆತನಿಗೆ ಗೊತ್ತೇ ಇರುವುದಿಲ್ಲ. ಆತನ ಮುಖದಿಂದ ಕಪಟ ವಾಕ್ಯಗಳು ಎಂದಿಗೂ ಹೊರಗೆ ಬೀಳುವುದಿಲ್ಲ. ಮೋಸವಂತೂ ಎಂದಿಗೂ ಮಾಡಲರಿಯನು. ಸುಳ್ಳು ನುಡಿಯುವುದು ಆತನಿಂದ ಆಗುವುದೇ ಇಲ್ಲ ।೨೨೯॥ ಒಬ್ಬನ ಮನದಲ್ಲಿ ಕೆಲಸವನ್ನು ಮಾಡುವುದು ಇರುವುದೇ ಇಲ್ಲ. ಆದರೆ, ಓಹೋ, ಆ ಕೆಲಸ ಮಾಡುವೆನು ಎಂದು ಸುಳ್ಳು ಆಶ್ವಾಸನೆಯನ್ನು ಕೊಟ್ಟು ಮೋಸಗೊಳಿಸುವಿಕೆ, ಹೀಗೆ ಆತನ ಹೇಳಿಕೆ ಇರುವುದಿಲ್ಲ. ಆತನ ಮುಖದಲ್ಲಿ ಯಾವಾಗಲೂ ಹರಿನಾಮವೇ ಇರುವುದು ।೨೩೦॥ ಗಾಳಿಯು ಪಶ್ಚಿಮ ದಿಕ್ಕಿನಲ್ಲಿ ಬೀಸುತ್ತಿರುವುದು. ಪಶ್ಚಿಮ ದಿಕ್ಕಿನಲ್ಲಿಯ ಕಿಡಿಕಿ ಬಾಗಿಲುಗಳು ತೆರೆದರೆ ಅವು ಗಾಳಿಯಿಂದ ಖಡಖಡಿಸುವುವು. ಇವುಗಳಂತೆ ಆತನು ವ್ಯರ್ಥವಾಗಿ ಬಡಬಡಿಸಲಾರನು ।೨೩೧॥ ಶಬ್ದಬ್ರಹ್ಮದ ಸಂವಾದವನ್ನು ಮಾಡುತ್ತಿರಲು ಆತನ ಮತಕ್ಕೆ ವಿರೋಧವಾದರೆ ಪಂಡಿತರಿಗೆ ಕ್ರೋಧವು ಬಹುವಾಗಿ ಹುಟ್ಟುವುದು. ಇದನ್ನರಿತು ಆತನು ಶಾಬ್ದಿಕ ವಾದವನ್ನು ಮಾಡುತ್ತ ಕುಳಿತುಕೊಳ್ಳಲಾರನು ।೨೩೨॥

ನ ಮಿರವೀ ಶಬ್ದ ಜ್ಞಾನ । ನ ದಾಖವೀ ಆತ್ಮ ಮೌನ । ನ ದರೀ ವಚನಾಭಿಮಾನ । ಸದಾ ಸ್ಮರಣ ಗುರೂಚೇ ॥೨೩೩॥ ಬೋಲೇ ನುಪಜವೀ ಉದ್ವೇಗ । ಬೋಲಾವಯಾ ನ ಕರಿ ಉದ್ಯೋಗ । ಬೋಲಿ ನುಠವೀ ಮಹಾವೇಗ । ಅನುದ್ವೇಗ ಬೋಲಣೇ ॥೨೩೪॥ ಸತ್ಯ ಆಣಿ ಅತಿಮಧುರ । ಆಇಕತಾ ಆಹ್ಲಾದಕರ । ಸರ್ವಾಸೀ ಹಿತತ್ವೇ ಸಾಚಾರ । ಬೋಲೇ ಸನಾಗರ ಹರಿಕಥಾ ॥೨೩೫॥ ಪ್ರಾರ್ಥೂನಿಯಾ ಸದ್ಗುರೂಸೀ । ಬಹು ಬೋಲಣೇ ನಾಹೀ ತ್ಯಾಸೀ । ಪುಸಣೇ ಏಕಾಕ್ಷರಾಸೀ । ನಿಜಸುಖಾಸೀ ಸೇವಾವಯಾ ॥೨೩೬॥ ಏವಂ ಶಿಷ್ಯಾಚೀ ನವ ಲಕ್ಷಣೇ । ನವಖಂಡ ಪೃಥ್ವೀಚೀ ಆಭರಣೇ । ನಿಜ ಕೃಪೇನೇ ನಾರಾಯಣೇ । ಭಕ್ತಾಕಾರಣೇ ದಿಧಲೀ ॥೨೩೭॥ ಹೇ ನವರತ್ನ ಮಾಳಾ ಗೋಮಟೀ । ಜೋ ಘಾಲೀ ಸದ್ಗುರೂಚ್ಯಾ ಕಂಠೀ । ತೋ ಬೈಸೇ ಸಾಯುಜ್ಯಾಚ್ಯಾ ಪಾಟೀ । ಉಠಾಉಠೀ ತತ್ಕಾಳ ॥೨೩೮॥ ಯಾ ನವರತ್ನಾಂಚೇ ಪದಕ । ಜ್ಯಾ ಶಿಷ್ಯಾಚೇ ಹೃದಯೀ ದೇಖ । ತೋ ಸದ್ಗುರೂಚಾ ಆವಶ್ಯಕ । ವಿಶ್ವಾಸಿಕ ಸರ್ವಾರ್ಥೀ ॥೨೩೯॥ ಯಾ ನವರತ್ನಾಂಚೀ ಅಭಿನವ ಗಾಂಠೀ । ಜೋ ಸದ್ಗುರೂಸೀ ಆಣೀ ಭೇಟೀ । ತೋ ಸ್ವರಾಜ್ಯಾಚ್ಯಾ ಮುಕುಟೀ । ಝಳಕತ ಉರೀ ಮಹಾಮಣೀ ॥೨೪೦॥ ಉದ್ಧವಾ ಯೇಥೇ ಆಶಂಕಾ ಧರಿಸೀ । ನಾದಂತಾ ಸ್ತ್ರೀ ಪುತ್ರ ಧನಧಾನ್ಯೇಸೀ । ನಿರ್ಮಮತಾ ಶಿಷ್ಯಾಸೀ । ಕೈಸೇನಿ ತಯಾಸೀ ಉಪಜಲೀ ॥೨೪೧॥

ಜಾಯಾಪತ್ಯಗೃಹಕ್ಷೇತ್ರ-ಸ್ವಜನದ್ರವಿಣಾದಿಷು । ಉದಾಸೀನಃ ಸಮ ಪಶ್ಯನ್ ಸರ್ವೇಷ್ವರ್ಥಮಿವಾಽಽತ್ಮನಃ ॥೭॥

ಅರ್ಥ:- ಜಿಜ್ಞಾಸುವಿನ ಪರಮ ಧನವು ಆತ್ಮವಾಗಿರುವುದು. ಆದ್ದರಿಂದ ಆತನು ಸ್ತ್ರೀ, ಪುತ್ರ, ಮನೆಮಾರು, ಸ್ವಜನ ಮತ್ತು ಧನ ಇತ್ಯಾದಿ ಎಲ್ಲ ಪದಾರ್ಥಗಳಲ್ಲಿಯೂ ಆತ್ಮ ತತ್ವದಿಂದ ನೋಡುವನು. ಮತ್ತು ಯಾರಲ್ಲಿಯೂ ಮಮತೆಯನ್ನಿಡದೇ ಆತನು ಉದಾಸೀನನಾಗಿರುವನು.

ಯೇ ವಿಖೀ ಸಾದರ ಐಕ । ಶಿಷ್ಯ ನಿರಸಾವಯಾ ನಿಜದುಃಖ । ಪಾವಾವಯಾ ಆತ್ಮಸುಖ । ಸಾಧೀ ವಿವೇಕಸಾಧನೇ ॥೨೪೨॥ ವಿಚಾರಿತಾ ಆತ್ಮಸುಖ । ಸರ್ವ ದೇಹೀ ಸಮಾನ ದೇಖ । ವಿಜಾತೀಯ ಸ್ತ್ರೀ ಪುರುಷವೇಖ । ಸುಖ ವಿಶೇಖ ತೇಥ ನಾಹೀ ॥೨೪೩॥ ಪಾಹೇ ಪಾ ಸ್ತ್ರೀ ಪುರುಷದೇಹೀ । ಆತ್ಮಾ ಆತ್ಮೀ ಹೇ ತಂವ ನಾಹೀ । ಆತ್ಮಸುಖ ಆಪುಲ್ಯಾ ಠಾಯೀ । ಅಸೇ ಪಾಹೀ ಸ್ವತಃ ಸಿದ್ಧ ॥೨೪೪॥ ಸುಖಾಚಿಲಾಗೀ ಸರ್ವಥಾ । ಝೋಂಬತೀ ಪ್ರಪಂಚ ಪದಾರ್ಥಾ । ಜ್ಯಾಸೀ ಗುರುವಾಕ್ಯ ಆಲೇ ಹಾತಾ । ಅದ್ವೈತತಾ ನಿಜಸುಖ ॥೨೪೫॥ ಏಕಪಣೇ ನಿಜಾತ್ಮ ಸುಖ । ಹಾತಾ ಆಲೇ ನಿತ್ಯ ನಿರ್ದೋಖ । ಆತಾ ದ್ವೈತ ವಾಂಛೀ ತೋ ಅತಿಮೂರ್ಖ । ಥಿತೇ ಸುಖ ನಾಸಾವಯಾ ॥೨೪೬॥

ಶಬ್ದಜ್ಞಾನದ ಅಭಿಮಾನವನ್ನು ಆತನು ತೋರಿಸಲಾರನು. ಅಥವಾ ತನ್ನ ಮತದ ಪ್ರೌಢತ್ವವನ್ನು ಸಹ ಪ್ರದರ್ಶಿಸಲಾರನು. ತನ್ನ ಮಾತಿನ ವಿಷಯಕ್ಕೆ ಯಾವ ಅಹಂಕಾರವೂ ಇರುವುದಿಲ್ಲ. ಆತನ ಮನದಲ್ಲಿ ಯಾವಾಗಲೂ ಸದ್ಗುರುಗಳ ಸ್ಮರಣೆಯಿರುವುದು ॥೨೩೩॥ ತನ್ನ ಭಾಷಣದಲ್ಲಿ ಉದ್ವೇಗವಾಗುವಂತಹ ಯಾವ ಶಬ್ದಗಳನ್ನೂ ಆತನು ನುಡಿಯಲಾರನು. ನುಡಿಯುತ್ತಿರಲು ಯಾವ ಪ್ರಕಾರದ ಆವೇಶವನ್ನೂ ತೋರಿಸಲಾರನು. ಇತರರಿಗೆ ತೊಂದರೆಯಾಗುವಂತಹ ನುಡಿಗಳನ್ನು ಆತನು ನುಡಿಯಲಾರನು ॥೨೩೪॥ ಸತ್ಯ, ಅತಿಶಯ ಮಧುರ, ಆಹ್ಲಾದಕಾರಕ ಸರ್ವರಿಗೂ, ಹಿತಕಾರಕವಾದ ಇಂತಹ ಮಧುರಯುಕ್ತ ಕಥೆಯನ್ನು ಈತನು ಹೇಳುವನು ॥೨೩೫॥ ಸದ್ಗುರುಗಳ ಪ್ರಾರ್ಥನೆಯನ್ನು ಮಾಡುವಾಗಲೂ ಈತನು ಹೆಚ್ಚಿಗೆ ಮಾತನಾಡಲಾರನು. ಆತ್ಮತತ್ವದ ಅನುಭವವನ್ನು ಪಡೆಯುವುದಕ್ಕಾಗಿ ಈತನು ಒಂದೇ ಓಂಕಾರ ವಿಷಯಕ್ಕೆ ಕೇಳುವನು ॥೨೩೬॥ ಹೀಗೆ ಈ ಶಿಷ್ಯನ ಒಂಬತ್ತು ಲಕ್ಷಣಗಳಿರುವುವು. ಇವು ಪೃಥ್ವಿಯ ನವಖಂಡ ಭೂಷಣೆಗಳಾಗಿರುವುವು. ಇವುಗಳನ್ನು ನಾರಾಯಣನು ಕೃಪೆ ಮಾಡಿ ಭಕ್ತರಿಗೆ ನೀಡಿರುವನು ॥೨೩೭॥ ಈ ಯಾವ ನವರತ್ನದ ಸುಂದರ ಮಾಲೆಯನ್ನು ಯಾರು ಸದ್ಗುರುಗಳ ಕೊರಳಿಗೆ ಹಾಕುವರೋ, ಆತನು ತತ್ಕಾಲದಲ್ಲಿ ಸಾಯುಜ್ಯ ಪದವಿಗೆ ಮುಟ್ಟುವನು ॥೨೩೮॥ ಈ ಯಾವ ನವರತ್ನದ ಪದಕವು ಯಾವ ಶಿಷ್ಯನ ಹೃದಯದ ಮೇಲೆ ಝಳಪಿಸುವುದೋ, ಆತನೇ ಸದ್ಗುರುವಿನ ಸರ್ವತೋಪರಿ ನಿಶ್ಚಿತ ಸ್ವರೂಪದ ವಿಶ್ವಾಸಿಕನಾಗಿರುವನು ॥೨೩೯॥ ಈ ಯಾವ ನವರತ್ನದ ಶಾಶ್ವತ ಮಾಲೆಯನ್ನು ಯಾರು ಸದ್ಗುರುಗಳಿಗೆ ಸಮರ್ಪಿಸುವರೋ, ಆತನು ಆತ್ಮಸ್ವರೂಪದ ಮುಕುಟದಲ್ಲಿ ಮಹಾಮಣಿಯಾಗಿ ಪ್ರಕಾಶಿಸುವನು ॥೨೪೦॥ ಹೇ ಉದ್ಧವನೇ, ಸ್ತ್ರೀ, ಪುತ್ರ, ಧನ - ಧಾನ್ಯ ಇವುಗಳೊಂದಿಗೆ ಇರುವ ಶಿಷ್ಯನಿಗೆ ನಿರ್ಮಮತೆಯು ಹೇಗೆ ಪ್ರಾಪ್ತವಾದೀತೆಂದು ನಿನಗೆ ಅನುಮಾನವು ಹುಟ್ಟಬಹುದು ॥೨೪೧॥

ಈ ವಿಷಯಕ್ಕಾಗಿ ಹೇಳುವೆ, ಲಕ್ಷಕೊಟ್ಟು ಕೇಳು, ತನ್ನ ದುಃಖ ನಿವೃತ್ತಿಗಾಗಿ ಮತ್ತು ಆತ್ಮಸುಖ ಪ್ರಾಪ್ತಿಗಾಗಿ ಶಿಷ್ಯನು ಈ ಯಾವ ವಿವೇಕಯುಕ್ತ ಸಾಧನೆಗಳನ್ನು ಸಾಧಿಸುತ್ತಿರುವನು ॥೨೪೨॥ ಆತ್ಮಸುಖದ ವಿಚಾರವನ್ನು ಮಾಡಲು ಅದು ಸರ್ವ ದೇಹಗಳಲ್ಲಿ ಸಮಾನ ಸ್ವರೂಪದಲ್ಲಿರುವುದು. ಸ್ತ್ರೀ, ಪುರುಷರ ದೇಹಗಳಲ್ಲಿ ಭೇದವಿದ್ದರೂ ಕೂಡ ಆ ಇಬ್ಬರಲ್ಲಿಯೂ ಆತ್ಮಸುಖವು ಒಂದೇ ಆಗಿರುವುದು ॥೨೪೩॥ ಪುರುಷರ ದೇಹದಲ್ಲಿ ಆತ್ಮವಾಗಿರುವುದು ಮತ್ತು ಸ್ತ್ರೀಯ ದೇಹದಲ್ಲಿ ಆತ್ಮೀಯಾಗಿರುವುದೆಂಬುದು ಈ ಭೇದವೂ ಸರ್ವಥಾ ಇರುವುದಿಲ್ಲ ಆತ್ಮತತ್ವವು ಇದು ತನ್ನ ಸ್ಥಾನದಲ್ಲಿ ಸ್ವತಃ ಸಿದ್ಧವಾಗಿಯೇ ಇರುವುದು ॥೨೪೪॥ ಸುಖಕ್ಕಾಗಿ ಸರ್ವ ಜನರು ಪ್ರಪಂಚದಲ್ಲಿನ ವಿಷಯಗಳಿಗೆ ಅಪ್ಪಿಕೊಳ್ಳುತ್ತಿರುವರು. ಆದರೆ, ಯಾರಿಗೆ ಗುರು ಉಪದೇಶವು ಪ್ರಾಪ್ತವಾಗಿರುವುದೋ, ಆತನಿಗೆ ಅದ್ವೈತದ ಮತ್ತು ಆತ್ಮಸುಖದ ಪ್ರಾಪ್ತಿಯಾಗುವುದು ॥೨೪೫॥ ಏಕತ್ವದಿಂದ ನಿತ್ಯ ಮತ್ತು ನಿರ್ದೋಷವಾಗಿರುವ ಆತ್ಮಸುಖವು ಕೈಸೇರಿದ್ದರೂ, ಈ ಸುಖವನ್ನು ಇಲ್ಲದಾಗಿ ಮಾಡಿಕೊಳ್ಳಲು ಯಾವನು ದ್ವೈತದ ಇಚ್ಛೆಯನ್ನು ಮಾಡಿದರೆ ಅವನು ಅತಿಮೂರ್ಖನಾಗುವನು ॥೨೪೬॥

ಪ್ರಪಂಚಾಮಾಜೀ ಅಸತೇ ಸುಖ । ತರೀ ಕಾ ತ್ಯಜಿತೇ ಸನಾಕಾದಿಕ । ದ್ವೈತ ತಿತುಕೇ ಕೇವಳ ದುಃಖ । ಪರಮ ಸುಖ ಅದ್ವೈತೀ ॥೨೪೭॥ ಹೇಚಿ ಸಾಧಕೀ ಸಾಧೂನಿ ಜ್ಞಾನ । ಸ್ತ್ರೀ ಪುತ್ರ ಸ್ವಜನ ಧನ । ತ್ಯಾಂಸೀ ಝಾಲೇ ಉದಾಸೀನ। ಅದ್ವೈತೀ ಮನ ಲಾಗಲೇ ॥೨೪೮॥ ತೇಥ ಕೋಣಾಚೇ ಗೃಹ ಕ್ಷೇತ್ರ । ಕೋಣ ಪುಸೇ ಕಲತ್ರ ಪುತ್ರ । ಧನಧಾನ್ಯ ಸಮೃದ್ಧಿ ವಿಚಿತ್ರ । ಮಾಝೀ ಸ್ವತಂತ್ರ ದೇಹ ನ ಮ್ಹಣೇ ॥೨೪೯॥ ಐಕೇ ಉದ್ಧವಾ ಯಾಪರೀ । ಮಾಝೀ ಭಕ್ತ ಸಂಸಾರೀ । ಉದಾಸ ಝಾಲೇ ಘರದಾರೀ । ತತ್ತ್ವವಿಚಾರೀ ಲಿಗಟೋನಿ ॥೨೫೦॥ ಲಿಗಟೋನಿಯಾ ಗುರುಚರಣೀ । ಕೇಲೀ ಪ್ರಪಂಚಾಚೀ ಝಾಡಣೀ । ಮಗ ಅತ್ಯಾದರೇ ಗುರುಭಜನೀ । ನಿಜಸುಖದಾನೀ ಗುರುರಾವೋ ॥೨೫೧॥ ಗುರುಸೇವೇಸೀ ಅತ್ಯಾದರ । ಕರಿತಾ ನ ರಾಹೇ ಆಠೌ ಪ್ರಹರ । ಠೇವಿಲೇ ಗುರುಚರಣೀ ಅಂತರ । ನಿರಂತರ ನಿಜಭಾವೇ ॥೨೫೨॥ ಉದ್ಧವಾ ಯೇಥ ಆಶಂಕಾ ಧರಿಸೀ । ''ಜೇ ದೇಹಾವೇಗಳೇ ಕೋಣ ವಸ್ತೂ ಸೀ । ದೇಖೋನಿ ಪಾವಲಾ ನಿಜಸುಖಾಸೀ । ವಿದೇಹತ್ವಾಸೀ ಅನುಭವು'' ॥೨೫೩॥ ದೇಹೀ ಅಸೋನಿ ವಿದೇಹತಾ । ಪ್ರಪಂಚೀ ಅಸೋನಿ ಅದ್ವೈತತಾ । ಆಲೀ ಶಿಷ್ಯಾಚಿಯಾ ಹಾತಾ । ತೇಹೀ ಕಥಾ ಪರಿಯೇಸೀ ॥೨೫೪॥

ವಿಲಕ್ಷಣ : ಸ್ಥೂಲಸೂಕ್ಷ್ಮಾದ್‌ದೇಹಾದಾತ್ಮೇಕ್ಷಿತಾ ಸ್ವದೃಕ್ ।
ಯಥಾಗ್ನಿರ್ದಾರುಣೋ ದಾಹ್ಯಾದ್ ದಾಹಕೋಽನ್ಯಃ ಪ್ರಕಾಶಕಃ ॥೮॥

ಅರ್ಥ:- ಸುಡುವ ಮತ್ತು ಬೆಳಗುವ ಬೆಂಕಿಯು ಪ್ರಕಾಶವನ್ನು ನೀಡುತ್ತದೆ. ಆದರೆ ಸುಡುತ್ತಿರುವ ಮರ (ಕಟ್ಟಿಗೆ)ದಿಂದ ಬೇರೆಯಾಗಿರುತ್ತದೆ. ಅದರಂತೆ ದೃಷ್ಟಾರನಾದ ಸ್ವಪ್ರಕಾಶಕನಾದ ಚೇತನಾತ್ಮನು ಪ್ರಜ್ಞೆಯಿಂದ ಪ್ರಕಾಶಿತವಾಗುವ ದೇಹದಿಂದ ಬೇರೆಯಾಗಿರುವನು. ಹೀಗೆ ಆತ್ಮ ಮತ್ತು ದೇಹಗಳು ವಿಭಿನ್ನ ಲಕ್ಷಣಗಳನ್ನುಳ್ಳವು ಹಾಗೂ ಪ್ರತ್ಯೇಕ ವಸ್ತುಗಳಾಗಿರುವುವು.

ಸ್ಥೂಲಸೂಕ್ಷ್ಮದೇಹಾಹೂನ । ಆತ್ಮಾ ತೋ ಸರ್ವದಾ ಭಿನ್ನ । ತೇಣೇ ವೇಗಳೇಪಣೇ ಜಾಣ। ಕರೀ ವರ್ತನ ಪ್ರಪಂಚೀ ॥೨೫೫॥ ಜೀವ ಉಭಯ ದೇಹೀ ವರ್ತತಾ । ಪ್ರಾಣಿಯಾಂಸೀ ದೇಹಾತೀತತಾ । ಸ್ಫುರತ ಅಸೇ ಸರ್ವಥಾ । ತೋಚಿ ತತ್ತ್ವತಾ ನೇಣತೀ ॥೨೫೬॥ ಮ್ಹಣೇ ''ಮಾಝಾ ಡೋಳಾ ದುಖೋ ಲಾಗಲಾ'' । ಪರೀ ನ ಮ್ಹಣೇ ''ಮೀಚಿ ದುಖೋ ಆಲಾ'' । ಮಾಝಾ ಪಾವೋಚಿ ಮೋಡಲಾ'' । ಪರೀ ''ಮೀ ಮೋಡಲಾ'' ಹೇ ನ ಮ್ಹಣೇ ॥೨೫೭॥ ಯಾಪರೀ ದೇಹೀ ವರ್ತತಾ । ಪ್ರತ್ಯಕ್ಷ ಸಾಂಗೋ ದೇಹಾತೀತತಾ । ಹೇ ಆಪುಲೀ ಆಪಣಾ ಅವಸ್ಥಾ । ನ ಕಳೇ ಭ್ರಾಂತಾ ದೇಹಭ್ರಮೇ ॥೨೫೮॥

ಪ್ರಪಂಚದಲ್ಲಿಯೇ ಒಂದು ವೇಳೆ ಸುಖವು ಇದ್ದದ್ದಾದರೆ ಸನಕಾದಿಕರಂತಹವರು ಅದನ್ನು ಏಕೆ ಬಿಡುತ್ತಿದ್ದರು? ಅದಕ್ಕಾಗಿ ದ್ವೈತ ಎಂಬುವುದು ಇರುವುದೆಲ್ಲವೂ ಪರಿಪೂರ್ಣವಾಗಿ ಕೇವಲ ದುಃಖವೇ ಆಗಿರುವುವು. ಮತ್ತು ಅದ್ವೈತದಲ್ಲಿ ಮಾತ್ರ ಪರಮಸುಖವಿರುವುದು ॥೨೪೭॥ ಸಾಧಕರು ಈ ಜ್ಞಾನದ ಪ್ರಾಪ್ತಿಯನ್ನು ಮಾಡಿಕೊಂಡರು. ಮತ್ತು ಅವರು ಸ್ತ್ರೀ, ಪುತ್ರ, ಆಪ್ತ, ಧನ ಇತ್ಯಾದಿ ಸರ್ವ ವಿಷಯದಲ್ಲಿ ಉದಾಸೀನರಾದರು. ತದನಂತರ ಅದ್ವೈತದಲ್ಲಿ ಅವರ ಮನವು ನಿಮಗ್ನವಾಯಿತು ॥೨೪೮॥ ಹೀಗಾಗಲೂ ಎಲ್ಲಿಯ ಮನೆ? ಎಲ್ಲಿಯ ಹೊಲವು? ಪುತ್ರ ಪತ್ನಿಯರನ್ನು ಯಾರು ವಿಚಾರಿಸಬೇಕು? ನಾನಾ ಪ್ರಕಾರದ ಧನಧಾನ್ಯಗಳ ಸಮೃದ್ಧಿಯಾದರೂ ಅವು ''ನನ್ನವು'' ಮತ್ತು ಈ ದೇಹವು ''ನನ್ನದು'' ಅನ್ನಲಾರನು ॥೨೪೯॥ ಹೇ ಉದ್ಧವನೇ, ಕೇಳು, ಈ ಪ್ರಕಾರವಾಗಿ ನನ್ನ ಭಕ್ತರು ಈ ತತ್ತ್ವ ವಿಚಾರಕ್ಕೆ ಅಂಟಿಕೊಂಡಿರುವುದರಿಂದ ಮನೆಮಾರುಗಳಿಗೆ ಮತ್ತು ಸಂಸಾರಕ್ಕೆ ಉದಾಸೀನರಾಗಿರುವರು ॥೨೫೦॥ ಇವರು ಗುರುಗಳ ವಿಚಾರವನ್ನು ಅರಿತುಕೊಂಡು ಪ್ರಪಂಚದಲ್ಲಿನ ಸರ್ವ ದುಃಖಗಳನ್ನು ಮರೆತು, ಆತ್ಮಸುಖವನ್ನು ಕೊಡುವ ಗುರುರಾಯನ ಭಜನೆಯಲ್ಲಿ ಅತ್ಯಂತ ಆದರದಿಂದ ತತ್ಪರರಾಗುವರು ॥೨೫೧॥ ಈ ಭಕ್ತರು ಎಂಟೂ ಪ್ರಹರಗಳಲ್ಲಿ ಭಕ್ತಿಭಾವದಿಂದ ಗುರುಸೇವೆಯನ್ನು ಮಾಡುತ್ತಿರುವರು. ಇವರು ತಮ್ಮ ಅಂತಃಕರಣವನ್ನು ಯಾವಾಗಲೂ ಗುರುಚರಣಗಳಲ್ಲಿ ಅರ್ಪಿಸುವರು ॥೨೫೨॥ ಹೇ ಉದ್ಧವನೇ, ದೇಹದಿಂದ ಭಿನ್ನವಾಗಿರುವ ಅದೆಂತಹ ವಸ್ತುವನ್ನು ಕಂಡು ಇವರಿಗೆ ಆತ್ಮಸುಖವು ಲಭಿಸುವುದು? ಮತ್ತು ವಿದೇಹತ್ವದ ಅನುಭವವು ಹೇಗೆ ಬರುವುದೆಂಬ ಶಂಕೆಯು ನಿನಗೆ ಹುಟ್ಟಬಹುದು ॥೨೫೩॥ ಆದ್ದರಿಂದ ದೇಹದಲ್ಲಿದ್ದು ವಿದೇಹತೆಯು ಮತ್ತು ಪ್ರಪಂಚದಲ್ಲಿದ್ದು ಅದ್ವೈತತೆಯು ಶಿಷ್ಯನ ಕೈಯಲ್ಲಿ ಹೇಗೆ ಪ್ರಾಪ್ತವಾಗುವುದೆಂಬುವ ವೃತ್ತಾಂತವನ್ನು ಈಗ ಹೇಳುವೆನು, ಅದನ್ನು ಕೇಳು ॥೨೫೪॥

ಆತ್ಮವು ಸ್ಥೂಲ ಮತ್ತು ಸೂಕ್ಷ್ಮ ದೇಹಗಳಿಂದ ಸರ್ವಥಾ ಭಿನ್ನವಾಗಿರುವುದು. ಹೀಗೆ ಭಿನ್ನತ್ವದಿಂದಲೇ ಈತನು ಸರ್ವಕಾಲದಲ್ಲಿಯೂ ಪ್ರಪಂಚದಲ್ಲಿ ವರ್ತಿಸುತ್ತಿರುವನು ॥೨೫೫॥ ಸ್ಥೂಲ ಮತ್ತು ಸೂಕ್ಷ್ಮ ಈ ಎರಡೂ ದೇಹಗಳಲ್ಲಿ ಜೀವವು ಇದ್ದುಕೊಂಡಿದ್ದರೂ ಅದರ ದೇಹಾತೀತ ಸ್ವರೂಪವು ಸ್ಪಷ್ಟವಾಗಿರುವುದು. ಆದರೂ ಸಾಮಾನ್ಯ ಜನರಿಗೆ ತಾತ್ತ್ವಿಕವಾಗಿ ಇದು ತಿಳಿಯುವುದಿಲ್ಲ ॥೨೫೬॥ ನನ್ನ ಕಣ್ಣು ನೋವಾಗಿದೆ ಎಂದು ಮನುಷ್ಯನು ಹೇಳುವನು. ಆದರೆ ನಾನೇ ನೋವಾಗಿದೆ ಎಂದು ಹೇಳಲಾರನು. ಕಾಲು ಮುರಿದರೆ ನನ್ನ ಕಾಲು ಮುರಿಯಿತು ಎಂದು ಹೇಳುವನು. ಆದರೆ ನಾನೇ ಮುರಿದೆ ಎಂದು ಎಂದೂ ಹೇಳಲಾರನು ॥೨೫೭॥ ಈ ಪ್ರಕಾರವಾಗಿ ದೇಹದಲ್ಲಿ ವರ್ತಿಸುತ್ತಿರಲು ನಾನು ಈ ದೇಹದಿಂದ ಭಿನ್ನವಾಗಿರುವೆನು ಎಂದು ಪ್ರತ್ಯಕ್ಷವಾಗಿ ಹೇಳುವನು ನಿಜ. ಆದರೆ, ''ಈ ದೇಹವೇ ನಾನು'' ಎಂಬ ಭ್ರಾಂತಿಯಿಂದ ತನ್ನ ನಿಜಸ್ವರೂಪವು ತನಗೆ ತಿಳಿಯಲಾರದಂತಾಗಿರುವುದು ॥೨೫೮॥

ದ್ರಷ್ಟಾ ದೃಶ್ಯ ನವ್ಹೇ ಸರ್ವಥಾ । ತೇ ಜಡ ತೋ ಚೇತವಿತಾ । ಏವಂ ಆತ್ಮ್ಯಾಸೀ ವಿಲಕ್ಷಣತಾ । ಜಾಣ ತತ್ತ್ವತಾ ಯಾ ಹೇತೂ ॥೨೫೯॥ ವಿಲಕ್ಷಣತಾ ದೋ ಪ್ರಕಾರೇಸೀ । ಏಕ ತೇ ಜಾಣ ದ್ರಷ್ಟೇಪಣೇಸೀ । ದುಸರೀ ತೇ ಸ್ವಪ್ರಕಾಶೇಸೀ । ದೇಹದ್ವಯಾಸೀ ವಿಲಕ್ಷಣ ॥೨೬೦॥ ದ್ರಷ್ಟಾ ದೃಶ್ಯಾಹೂನಿ ಭಿನ್ನ । ತರೀ ''ತೋ ಮ್ಹಣಸೀ ಝಾಲಾ ಮನ'' । ತೇ ಚಾರ್ವಾಕಮತ ಜಾಣ । ಮನಪಣ ತಯಾ ನಾಹೀ ॥೨೬೧॥ ಅಕರಾ ಇಂದ್ರಿಯಾಮಾಜೀ ಜಾಣ । ಮನ ತೇಹೀ ಏಕ ಕರಣ । ಕರಣತ್ವೇ, ತ್ಯಾ ಜಡಪಣ । ಆತ್ಮಾ ನವ್ಹೇ ಜಾಣ ಯಾ ಹೇತೂ ॥೨೬೨॥ ಪ್ರಪಂಚೀ ಮನಾಚೀ ದಕ್ಷತಾ । ತೇ ಮನಪಣೇಚಿ ನವ್ಹೇ ತತ್ತ್ವತಾ । ಜೇವೀ ಪ್ರಾಣೇವೀಣ ನೃಪನಾಥಾ । ನ ದಿಸೇ ಸರ್ವಥಾ ನಿಜಭಾಗ್ಯ ॥೨೬೩॥ ಶಸ್ತ್ರಾಚೇನೀ ಏಕೇ ಘಾಯೇ । ಭೇದಿಲೇ ಲೋಹಾರ್ಗಳ ಸಮುದಾಯೇ । ತೇ ಶಸ್ತ್ರಾಚೇ ಸಾಮರ್ಥ್ಯ ನೋಹೇ । ಬಳ ಪಾಹೇ ಶೂರಾಚೇ ॥೨೬೪॥ ಲೋಹಾಚಾ ಲೋಹಗೋಳ । ಅಗ್ನಿಸಂಗೇ ಝಾಲಾ ಇಂಗಳ । ಧಡಧಡಾ ನಿಘತೀ ಜ್ವಾಳ । ತೇ ನವ್ಹೇ ಬಳ ಲೋಹಾಚೇ ॥೨೬೫॥ ತ್ಯಾ ಲೋಖಂಡಾ ಐಸೇ ಜಡ ಮನ । ತ್ಯಾಸೀ ಚಿತ್ಪ್ರಭಾ ಪ್ರಕಾಶೂನ । ಪ್ರಕೃತೀಮಾಜೀ ಪ್ರವರ್ತನ । ಕರವೀ ಜಾಣ ಶ್ರೇಷ್ಠತ್ವೇ ॥೨೬೬॥ ಪಾವ್ಯಾಮಾಜೀ ರಾಗಜ್ಞಾನ । ಕೇಲ್ಯಾ ಅತಿಮಧುರ ಗಾಯನ । ತೋ ಪಾವ್ಯಾಚಾ ನವ್ಹೇ ಗುಣ । ಕಳಾ ಜಾಣ ಗಾತ್ಯಾಚೀ ॥೨೬೭॥ ತೈಸಾ ಮನಾಚಾ ಜೋ ವ್ಯಾಪಾರ । ತೋ ಜಾಣ ಪಾ ಪರತಂತ್ರ । ನವ್ಹೇ ಯಾಚಾ ತೋ ಸ್ವತಂತ್ರ । ಜಡ ವಿಚಾರ ಮನಾಚಾ ॥೨೬೮॥ ಸೂರ್ಯಾಚೇನಿ ಕಿರಣಸಂಗೇ । ಸೂರ್ಯಕಾಂತೀ ಅಗ್ನಿ ನಿಘೇ । ತೈಸೇ ಆತ್ಮಾಚೇನಿ ಪ್ರಕಾಶಯೋಗೇ । ಮನ ಸವೇಗೇ ವರ್ತತ ॥೨೬೯॥ ಮನ ಜಡತ್ವೇ ಜಡ ಜಾಣ । ಆತ್ಮಾ ಸ್ವಪ್ರಕಾಶೇ ಪ್ರಕಾಶಘನ । ಮನ ತೇ ಆತ್ಮ್ಯಾಆಧೀನ । ಆತ್ಮಾ ಸ್ವಾಧೀನ ಆತ್ಮತ್ವೇ ॥೨೭೦॥ ಪ್ರತ್ಯಕ್ಷ ಮ್ಹಣೇ ''ಮಾಝೇ ಮನ'' । ಪರೀ ''ಮೀಚಿ ಮನ'' ನ ಮ್ಹಣೇ ಜಾಣ । ಯಾಲಾಗೀ ಮನಾಹೂನಿ ಆತ್ಮಾ ಭಿನ್ನ । ವೇಗಳೇಪಣೇ ಸಾಕ್ಷಿತ್ವೇ ॥೨೭೧॥ ದೇಹದ್ವಯಾಹೂನಿ ಭಿನ್ನ । ದೃಢ ಸಾಧೂನಿ ಆತ್ಮಜ್ಞಾನ । ದೇಹಾತ್ಮಬುದ್ಧೀಚೇ ಭೇದನ । ಕೇಲೇ ಜಾಣ ಶಿಷ್ಯಾಚೇ ॥೨೭೨॥

ನೋಡುವವನಾದ ಈತನು ದೃಶ್ಯವಸ್ತುವಾಗಲಾರನು. ಏಕೆಂದರೆ ಆ ಯಾವ ವಸ್ತುವು ಜಡವಾಗಿರುವುದು. ಮತ್ತು ನೋಡುವವನಾದ ಈತನು ಚೈತನ್ಯಯುಕ್ತನಾಗಿರುವನು. ಅದರಂತೆ ಆತ್ಮವು ನೋಡುವ ಮತ್ತು ದೇಹವು ದೃಶ್ಯವಾಗಿರುವುದು. ಅದಕ್ಕಾಗಿ ಆತ್ಮವು ಈ ದೇಹದಿಂದ ಭಿನ್ನವಾಗಿರುವುದೆಂದು ನಿಶ್ಚಯವಾಗಿ ತಿಳಿ ॥೨೫೯॥ ಆತ್ಮದ ವಿಲಕ್ಷಣತೆಯು ಎರಡು ಪ್ರಕಾರಗಳದ್ದಾಗಿದೆ. ಮೊದಲನೆಯದೆಂದರೆ ನೋಡುವ ಸಾಕ್ಷಿಸ್ವರೂಪನು ಮತ್ತು ಎರಡನೆಯದೆಂದರೆ ಸ್ವಯಂ ಪ್ರಕಾಶ ಜ್ಞಾನರೂಪನು. ಆದ್ದರಿಂದ ಸ್ಥೂಲ ಮತ್ತು ಸೂಕ್ಷ್ಮ ಈ ಎರಡೂ ದೇಹಗಳಿಂದ ಆತ್ಮವು ಭಿನ್ನವಾಗಿರುವುದು ॥೨೬೦॥ ದೃಶ್ಯದಿಂದ ದ್ರಷ್ಟಾ ಭಿನ್ನವಾಗಿರುವುದು. ಹಾಗಾದರೆ ಅದು ಮನಸ್ಸಾಗಬಹುದೆಂದು ನೀನು ಹೇಳಿದರೆ ಅದು ಚಾರ್ವಾಕರ ಮತವಾಗಿರುವುದು. ಆತ್ಮಕ್ಕೆ ಮನಸ್ಸು ಎಂದು ಹೇಳಲು ಬರುವುದಿಲ್ಲ ॥೨೬೧॥ ಕಾರಣ, ಹನ್ನೊಂದು ಇಂದ್ರಿಯಗಳಲ್ಲಿ ಮನಸ್ಸಿಗೂ ಒಂದು ಇಂದ್ರಿಯವೆಂದು ಹೇಳಲಾಗಿದೆ. ಇಂದ್ರಿಯವಾದ್ದರಿಂದ ಅದು ಜಡವಾಗಿರುವುದು ಆದ್ದರಿಂದ ಮನಸ್ಸು ಆತ್ಮ ಅಲ್ಲ ॥೨೬೨॥ ಶರೀರದಲ್ಲಿ ಪ್ರಾಣವು ಇಲ್ಲದಾಗಲು ರಾಜನಿಗೂ ಸಹ ತನ್ನ ವೈಭವವನ್ನು ನೋಡಲಾಗುವುದಿಲ್ಲ. ಆದರೂ ಪ್ರಪಂಚದಲ್ಲಿ ಮನಸ್ಸಿನ ಭಾರಿ ದಕ್ಷತೆಯು ಎದ್ದು ತೋರುವುದು. ಆದರೆ ವಸ್ತುತಃ ಅದು ಮನಸ್ಸಿನ ಧರ್ಮವಲ್ಲ ॥೨೬೩॥ ಶಸ್ತ್ರದ ಒಂದೇ ಒಂದು ಪ್ರಹರದಿಂದ ಕಬ್ಬಿಣದ ಸರಪಳಿಯು ತುಂಡು ತುಂಡಾಗುವುದು. ಆದರೆ, ಈ ಸಾಮರ್ಥ್ಯವು ಶಸ್ತ್ರದ್ದಾಗಿರುವುದಿಲ್ಲ. ಇದು ಒಬ್ಬ ಶೂರನ ಸಾಮರ್ಥ್ಯವಾಗಿರುವುದು ॥೨೬೪॥ ಕಬ್ಬಿಣದ ಒಂದು ದೊಡ್ಡ ಗುಂಡನ್ನು ಅಗ್ನಿಯಲ್ಲಿ ಹಾಕಲು ಅದು ಕಾದು ಕೆಂಪಗಾಗಿ ಅಗ್ನಿಯಂತೆಯೇ ಪ್ರಜ್ವಲಿಸುವುದು. ಆದರೆ ಈ ಶಕ್ತಿಯು ಕಬ್ಬಿಣದ್ದಲ್ಲ ॥೨೬೫॥ ಅದು ಅಗ್ನಿಯ ಸಾನಿಧ್ಯದಿಂದ ತಪ್ತವಾಗುವುದು. ಆ ಕಬ್ಬಿಣದಂತೆಯೇ ಮನವು ಜಡವಾಗಿರುವುದು. ಅದಕ್ಕೆ ಜ್ಞಾನ ಪ್ರಭೆಯು ಪ್ರಕಾಶಿತಗೊಳಿಸಿ, ಅದಕ್ಕೆ ಶ್ರೇಷ್ಠತ್ವವನ್ನು ನೀಡಿ ಪ್ರಕೃತಿಯಲ್ಲಿ ಪರಿವರ್ತನೆಗೊಳಿಸುತ್ತಿರುವುದು ॥೨೬೬॥ (ಮುರಲೀ) ಕೊಳಲಿನಿಂದ ಮಧುರವಾಗಿ ಬಾರಿಸಲ್ಪಡುವುದು. ನಾನಾ ಪ್ರಕಾರದ ರಾಗಗಳಲ್ಲಿ ನುಡಿಸಲ್ಪಡುವುದು. ಆದರೆ ಇದೆಲ್ಲವೂ ಕೊಳಲಿನ ಗುಣವಲ್ಲ. ಅಲ್ಲಿ ನುಡಿಸುವವನ ಕಲಾಕೌಶಲ್ಯವಾಗಿರುವುದು ॥೨೬೭॥ ಅದರಂತೆಯೇ ಮನಸ್ಸಿನ ವ್ಯಾಪಾರವು ಪರತಂತ್ರವಾಗಿರುವುದು. ಮನವು ಸ್ವತಂತ್ರವಲ್ಲ. ಆದ್ದರಿಂದ ವಿಚಾರಿಸಿ ನೋಡಲು ಮನವು ಜಡವಾಗಿರುವುದು ॥೨೬೮॥ ಸೂರ್ಯ ಕಿರಣಗಳ ಸಂಯೋಗವಾಗಲು ಸೂರ್ಯಕಾಂತ ಮಣಿಯಿಂದ ಅಗ್ನಿಯು ಉತ್ಪನ್ನವಾಗುವುದು. ಅದರಂತೆ ಆತ್ಮದ ಪ್ರಕಾಶದಲ್ಲಿ ಮನವು ತತ್ಪರವಾಗಿ ಕಾರ್ಯವನ್ನು ನಿರ್ವಹಿಸುವುದು ॥೨೬೯॥ ಜಡತ್ವದಿಂದ ಮನಸ್ಸು ಜಡವೇ ಆಗಿರುವುದು. ಮತ್ತು ಆತ್ಮವು ಸ್ವಪ್ರಕಾಶದಿಂದ ಪ್ರಕಾಶಘನವಾಗಿರುವುದು. ಆದ್ದರಿಂದ ಮನಸ್ಸು ಆತ್ಮದ ಆಧೀನವಾಗಿರುವುದು. ಮತ್ತು ಆತ್ಮವು ತನ್ನ ಆತ್ಮತ್ವದಿಂದ ಸ್ವಾಧೀನವಾಗಿರುವುದು ॥೨೭೦॥ ನಾವು ಯಾವಾಗಲೂ ''ನನ್ನ ಮನಸ್ಸು'' ಎಂದು ಹೇಳುತ್ತಲೇ ಇರುತ್ತೇವೆ. ಆದರೆ ನಾನೇ ಮನಸ್ಸು ಎಂದು ಎಂದೂ ಹೇಳಲಾರೆವು. ಆದ್ದರಿಂದ ಮನಸ್ಸಿನಿಂದ ಆತ್ಮವು ಭಿನ್ನವಾಗಿರುವುದು. ಅದು ಬೇರೆಯಾಗಿ ಅಂದರೆ ಸಾಕ್ಷಿತ್ವದಿಂದಿರುವುದು ॥೨೭೧॥ ಸ್ಥೂಲ ಮತ್ತು ಸೂಕ್ಷ್ಮ ಹೀಗೆ ಎರಡು ದೇಹಗಳಿಂದ ಭಿನ್ನವಾಗಿರುವ ಆತ್ಮದ ಜ್ಞಾನವನ್ನು ಪರಿಪೂರ್ಣವಾಗಿ ಅರಿತುಕೊಂಡು ಶಿಷ್ಯರ ದೇಹಬುದ್ಧಿಯು ಇಲ್ಲದಾಗಿರುವುದು ॥೨೭೨॥

ಯಾಲಾಗೀ ದೇಹಾತ್ಮವಾದೀ । ಜೇ ಸತ್ಯ ಮಾನಿತೀ ಉಪಾಧೀ । ತೇ ಮಿಥ್ಯಾ ಕೇಲೀ ತ್ರಿಶುದ್ಧೀ । ಶುದ್ಧ ಬುದ್ಧಿ ತೇ ನವ್ಹೇ ।।೨೭೩।। ಮನಾವೇಗಳಾ ಸಾಧಿಲಾ ಪಾಹಾ ಹೋ । ತೋ ತೂ ಮ್ಹಣಸೀ ಪಿತಾಮಹೋ । ತೋ ದೇವಾಮಧ್ಯೇ ಶ್ರೇಷ್ಠ ದೇವೋ । ಹಾಹೀ ಸಂದೇಹೋ ನ ಧರಾವಾ ।।೨೭೪।। ಹೋ ಕಾ ಕಲ್ಪಾಚಿಯೇ ಆದೀ । ಬ್ರಹ್ಮಯಾಸೀ ಮೌಢ್ಯ ಹೋತೆ ಆಧೀ । ಕರೂ ನ ಶಕೇ ಸೃಜನವಿಧೀ । ಜಡ ಬುದ್ಧಿ ತಯಾಚೀ ।।೨೭೫।। ತಯಾಸೀ ಕರೂನಿ ಸಾವಧಾನ । ಮ್ಯಾಂಚಿ ಪ್ರಕಾಶಿಲೇ ನಿಜಜ್ಞಾನ । ತೇವ್ಹಾ ತೋ ಝಾಲಾ ಜ್ಞಾನಸಂಪನ್ನ । ಸೃಷ್ಟಿ ಸೃಜನ ಕರಾವಯಾ ।।೨೭೬।। ನಾಭಿಕಮಳೀ ಜನ್ಮಲೇ ಕೇವಳ । ಬ್ರಹ್ಮಾ ಮಾಝೇ ಪೋಟ... ಬಾಳ । ಮಾಝ್ಯಾ ದೋಂದಾವರೀ ಖೇಳೇ ಖೇಳ । ಆತ್ಮಾ ಕೇವಳ ತೋ ನವ್ಹೇ ।।೨೭೭।। ಜಿತುಕಾ ದೇವಾಂಚಾ ಸಮುದಾವೋ । ತಿತುಕಾ ಪ್ರಕಾಶ್ಯಚಿ ಪಾಹಾ ಹೋ । ಮೀ ಪ್ರಕಾಶಕು ಅನಾದಿ ದೇವೋ । ಸ್ವಪ್ರಕಾಶಸ್ವಭಾವೋ ಆತ್ಮಾ ತೋ ಮೀ ।।೨೭೮।। ದೇಹದ್ವಯ ಆಣಿ ಮನ । ತ್ಯಾಂಹೂನಿ ಆತ್ಮಾ ವಿಲಕ್ಷಣ । ಹಿರಣ್ಯ ಗರ್ಭಾಹೂನಿ ಜಾಣ । ವಿಲಕ್ಷಣಪಣ ಆತ್ಮ್ಯಾಚೇ ।।೨೭೯।। ಹಿರಣ್ಯಗರ್ಭಚಿ ಪರಮಾತ್ಮಾ । ಹೇಹೀ ನ ಘಡೇ ಗಾ ಭಕ್ತೋತ್ತಮಾ । ಮೀ ಹಿರಣ್ಯ ಗರ್ಭಾಚಾಹೀ ಆತ್ಮಾ । ಮಾಝೀ ಮಹಿಮಾ ತ್ಯಾ ಕೈಚೀ ।।೨೮೦।। ಏವಂ ಹಿರಣ್ಯಗರ್ಭ – ಉಪಾಸನಾ । ತೇ ಸಾಧನರೂಪೇಚಿ ಸೇವನಾ । ಪರೀ ಕೇವಳ ಆತ್ಮಪಣಾ । ನ ಯೇ ಜಾಣಾ ಮಾಯಿಕತ್ವೇ ।।೨೮೧।। ತೇಚಿ ವಿಲಕ್ಷಣತಾ । ಆಣೋನಿಯಾ ದೃಷ್ಟಾಂತಾ । ಸಾಧೀತಸೇ ತತ್ತ್ವತಾ । ಭಕ್ತಾಂಚ್ಯಾ ಹಾತಾ ಚಢೇ ಜೇಣೇ ।।೨೮೨।। ಅಗ್ನಿ ಕಾಷ್ಠಾ ಮಾಜೀ ವಸೇ । ಪರೀ ತೋ ಕಾಷ್ಠಚಿ ಹೋಊನಿ ನಸೇ । ಮಥಿಲ್ಯಾ ಕಾಷ್ಠೀ ಪ್ರಕಟ ದಿಸೇ । ಜಾಳೀ ಉಲ್ಹಾಸೇ ಕಾಷ್ಠಾತೇ ।।೨೮೩।। ತೈಸಾ ಆತ್ಮಾ ದೇಹೀ ಅಸೇ । ತೋ ದೇಹೋಚಿ ಹೋಊನಿ ನಸೇ । ಬ್ರಹ್ಮಜ್ಞಾನೇ ಜೇಂವ್ಹಾ ಪ್ರಕಾಶೇ । ಜಾಳೀ ಅನಾಯಾಸೇ ದೇಹಭಾವ ।।೨೮೪।। ಅಸೋನಿ ಏಕೇ ಠಾಯೀ ಜಾಣ । ದಾಹ್ಯಾಹೂನಿ ದಾಹಕ ಭಿನ್ನ । ತೈಸೇ ಪ್ರಕಾಶ್ಯಹೂನಿ ಜಾಣ । ಭಿನ್ನಪಣ ಸ್ವಪ್ರಕಾಶ ।। ೨೮೫।। ಅಗ್ನಿದೃಷ್ಟಾಂತೇ ನಿಶ್ಚಿತ । ಆತ್ಮಯಾಚೇ ನಿಜತತ್ತ್ವ । ನಿತ್ಯತ್ವ ಆಣಿ ವಿಭುತ್ವ । ಅಸೇ ಸಾಧಿತ ನಿಜಬೋಧೇ ।। ೨೮೬।। ಕಾಷ್ಠಾ ಚೇನಿ ಯೋಗೇ ಅಗ್ನೀಸೀ । ಜನ್ಮ ನಿರೋಧು ನಾಮರೂಪಾಸೀ । ಪಾವೇ ತೇವೀ ಆತ್ಮಯಾಸೀ । ವಿಕಾರತಾ ತೈಸೀ ದೇಹಯೋಗೇ ।। ೨೮೭।।

ದೇಹವೇ ಆತ್ಮವು ಎಂದು ತಿಳಿದುಕೊಂಡವರು ಉಪಾಧಿಗೆ ಅಂದರೆ ಮಾಯೆಗೆ ಸತ್ಯವೆನ್ನುವರು. ಆದರೆ ಆ ಮಾಯೆಯು ಸಂಪೂರ್ಣವಾಗಿ ಮಿಥ್ಯೆಯಾಗಿರುವುದು. ಇದು ಯಾವ ಶುದ್ಧವಾದ ಜ್ಞಾನವಲ್ಲ ।।೨೭೩।। ಮನಸ್ಸಿಗಿಂತ ಬೇರೆಯಾಗಿರುವ ಆತ್ಮವು ಬ್ರಹ್ಮದೇವನಾಗಿರಬಹುದು. ಕಾರಣ ಆತನು ದೇವತೆಗಳವರಲ್ಲಿ ಸರ್ವಶ್ರೇಷ್ಠನಾಗಿರುವನು. ಹೀಗೆಂದು ಅಕಸ್ಮಾತ್ತಾಗಿ ನಿನಗೆ ಅನಿಸಬಹುದು. ಆದರೆ ಈ ಪ್ರಕಾರದ ಸಂದೇಹವನ್ನು ನೀನು ಮನದಲ್ಲಿ ತರಬೇಡ ।।೨೭೪।। ಕಲ್ಪದ ಆರಂಭದಲ್ಲಿ ಬ್ರಹ್ಮದೇವನು ಉತ್ಪನ್ನನಾಗಿದ್ದರೂ, ಆತನು ಮೂಢನಾಗಿದ್ದನು. ಆತನಿಗೆ ಸೃಷ್ಟಿಯನ್ನು ರಚಿಸುವ ಜ್ಞಾನವು ಇದ್ದಿಲ್ಲ. ಆತನು ಜಡಬುದ್ಧಿಯವನಾಗಿದ್ದನು ।।೨೭೫।। ಬ್ರಹ್ಮದೇವನಿಗೆ ಎಚ್ಚರಿಸಿ ಆತನಿಗೆ ಆತ್ಮಜ್ಞಾನವನ್ನು ಕೊಟ್ಟಾಗ ಆತನು ಜ್ಞಾನಸಂಪನ್ನನಾದನು. ಆಗ ಆತನು ಸೃಷ್ಟಿಯ ರಚನೆಯನ್ನು ಮಾಡಹತ್ತಿದನು ।।೨೭೬।। ಬ್ರಹ್ಮದೇವನು ನನ್ನ ನಾಭಿಕಮಲದಲ್ಲಿ ಜನಿಸಿರುವನು. ಆತನು ಕೇವಲ ನನ್ನ ಹೊಟ್ಟೆಯ ಮಗನಾಗಿರುವನು. ನನ್ನ ಅಂಗದಮೇಲೆಯೇ ಬೆಳೆದಿರುವನು. ಆಡಿರುವನು, ನಿಜ ಆದರೂ ಬ್ರಹ್ಮದೇವನು ಆತ್ಮನಲ್ಲ ।।೨೭೭।। ದೇವತೆಗಳ ಸಮುದಾಯವು ಎಷ್ಟಿದೆಯೋ, ಅವೆಲ್ಲವೂ ನನ್ನಿಂದಲೇ ಪ್ರಕಾಶವನ್ನು ಹೊಂದಿರುವುವು. ಅನಾದಿ ದೇವನಾಗಿರುವ ಯಾವ ಸ್ವಪ್ರಕಾಶ ಸ್ವರೂಪ ಆತ್ಮವು ನಾನಾಗಿರುವೆನು ।।೨೭೮।। ಸ್ಥೂಲ, ಸೂಕ್ಷ್ಮ ಶರೀರ ಮತ್ತು ಮನಸ್ಸು ಇವುಗಳಿಂದ ಆತ್ಮವು ಭಿನ್ನವಾಗಿರುವುದು. ಹಿರಣ್ಯಗರ್ಭವೆಂದರೆ ಬ್ರಹ್ಮಾಂಡದ ಸೂಕ್ಷ್ಮ ಗರ್ಭವು. ಇದರಿಂದಲೂ ಆತ್ಮವು ಭಿನ್ನವಾಗಿರುವುದು ।।೨೭೯।। ಹೇ ಭಕ್ತೋತ್ತಮ ಉದ್ಧವನೇ, ಹಿರಣ್ಯಗರ್ಭವು ಪರಮಾತ್ಮವೆನ್ನುವುದು ಸರಿಯಲ್ಲ. ನಾನು ಹಿರಣ್ಯಗರ್ಭದ ಆತ್ಮವೂ ಆಗಿರುವೆನು. ನನ್ನ ಸಾಮರ್ಥ್ಯವು ಅದಕ್ಕೆ ಹೇಗೆ ತಿಳಿಯಬೇಕು? ।।೨೮೦।। ಸಾರಾಂಶವೇನೆಂದರೆ ಹಿರಣ್ಯಗರ್ಭದ ಉಪಾಸನೆಯನ್ನು ಕೇವಲ ಸಾಧನೆ ರೂಪದಿಂದ ಆಚರಿಸಬೇಕು. ಏಕೆಂದರೆ ಅದು ಮಾಯಿಕವಾಗಿರುವುದರಿಂದ ಅದಕ್ಕೆ ನಿಜವಾದ ಆತ್ಮದ ಸ್ವರೂಪವು ಬರಲಾರದು ।।೨೮೧।। ಯಾವ ಈ ಆತ್ಮದ ವಿಲಕ್ಷಣ ಸ್ವರೂಪವು ಭಕ್ತರಿಗೆ ತಿಳಿಸುವ ಉದ್ದೇಶದಿಂದಲೇ ನಾನು ಅನೇಕ ದೃಷ್ಟಾಂತಗಳನ್ನು ತಾತ್ವಿಕವಾಗಿ ವ್ಯಕ್ತಮಾಡುತ್ತಿರುವೆನು ।।೨೮೨।। ಕಟ್ಟಿಗೆಯಲ್ಲಿ ಅಗ್ನಿಯು ಇರುವುದು. ಆದರೆ ಅದು ಕಟ್ಟಿಗೆಯಾಗಿಯೇ ಇರುವುದಿಲ್ಲ. ಕಟ್ಟಿಗೆಗಳನ್ನು ಮಂಥಿಸಲು ಕೂಡಲೇ ಪ್ರಕಟವಾಗಿ ಬೇಗನೇ ಕಟ್ಟಿಗೆಯನ್ನು ಸುಟ್ಟುಹಾಕುವುದು ।।೨೮೩।। ಅದರಂತೆ ಆತ್ಮವು ದೇಹದಲ್ಲಿರುವುದು. ಆದರೆ ಅದು ದೇಹವಲ್ಲ, ಆತ್ಮಜ್ಞಾನದಿಂದ ಪ್ರಕಾಶಿಸಿ ದೇಹಭಾವವನ್ನು ಸುಟ್ಟುಹಾಕುವುದು ।।೨೮೪।। ಒಂದೇ ಸ್ಥಳದಲ್ಲಿದ್ದು ಸುಡಿಸಿಕೊಳ್ಳುವ ವಸ್ತುವಿಗಿಂತಲೂ ಸುಡುವ ವಸ್ತುವು ಭಿನ್ನವಾಗಿರುವುದು. ಅದರಂತೆ ಪ್ರಕಾಶಗೊಳ್ಳುವ ವಸ್ತುವಿಗಿಂತಲೂ ಪ್ರಕಾಶವನ್ನು ಕೊಡುವ ಸ್ವಯಂಪ್ರಕಾಶೀ ಆತ್ಮವು ಭಿನ್ನವಾಗಿರುವುದು ।।೨೮೫।। ಅಗ್ನಿಯ ದೃಷ್ಟಾಂತದಿಂದ ಆತ್ಮದ ನಿಜವಾದ ಸ್ವರೂಪವು ವ್ಯಕ್ತವಾಗುವುದು. ಅದರ ನಿತ್ಯತ್ವವು ಮತ್ತು ವಿಭುತ್ವವು ಆತ್ಮಬೋಧೆಯಿಂದ ಸಿದ್ಧವಾಗುವುದು ।।೨೮೬।। ಕಟ್ಟಿಗೆಯ ಯೋಗದಿಂದ ಅಗ್ನಿಗೆ ಜನ್ಮ, ನಾಶ, ನಾಮರೂಪಗಳು ಪ್ರಾಪ್ತವಾಗುತ್ತಿರುವುವು. ಅದರಂತೆ ಆತ್ಮಕ್ಕೂ ದೇಹದ ಯೋಗದಿಂದ ವಿಕಾರತ್ವವು ಪ್ರಾಪ್ತವಾಗುವುದು ।।೨೮೭।।

ನಿರೋಧೋತ್ಪತ್ತ್ಯ ಣುಬೃಹನ್ನಾನಾತ್ವಂ ತತ್ಕೃತಾನ್ ಗುಣಾನ್ । ಅಂತಃಪ್ರವಿಷ್ಟ ಆಧತ್ತ ಏವಂ ದೇಹಗುಣಾನ್ ಪರಃ ॥೯॥

ಅರ್ಥ:- ಅಗ್ನಿಯು ಸುಪ್ತ, ವ್ಯಕ್ತ, ದುರ್ಬಲ, ಪ್ರಕಾಶಮಯ ಇತ್ಯಾದಿಯಾಗಿ ಇಂಧನದ ಸ್ಥಿತಿಗನುಸಾರವಾಗಿ ಗೋಚರಿಸುವುದು. ಅದರಂತೆಯೇ ಚೇತನಾತ್ಮನು ಭೌತಿಕ ಶರೀರವನ್ನು ಪ್ರವೇಶಿಸಿ ವಿಶಿಷ್ಟ ದೈಹಿಕ ಲಕ್ಷಣಗಳನ್ನು ಹೊಂದುತ್ತಾನೆ.

ನಾನಾ ಕಾಷ್ಠಾಂಚ್ಯಾ ಸಂಯೋಗಿ । ಕಾಷ್ಠಾಂಚೇ ಗುಣ ಅಗ್ನೀಚ್ಯಾ ಅಂಗೀ । ಆಲೇ ದಿಸತೀ ಪ್ರತ್ಯಕ್ಷ ಜಗೀ । ಅಗ್ನಿ ತೇ ಸಂಗೀ ಅಲಿಪ್ತ ॥೨೮೮॥ ಕಾಷ್ಠಮಥನೇ ಅಗ್ನಿ ಪ್ರಕಟಲಾ । ತ್ಯಾ ನಾಂವ ಮ್ಹಣತೀ ''ಉಪಜಲಾ'' । ಕಾಷ್ಠಾಕಾರೀ ಆಕಾರಲಾ । ಲಹಾನ ಥೋರ ಝಾಲಾ ತದ್ಯೋಗೇ ॥೨೮೯॥ ಅಗ್ನಿ ಕಾಷ್ಠವಿಕಾರವಶೇ । ತ್ರಿಕೋಣ ವರ್ತುಳ ವಕ್ರ ಆಭಾಸೇ । ಕಾಷ್ಠಾ ಚೇನಿ ನಿಃಶೇಷ ನಾಶೇ । "ನಾಶಲಾ" ಐಸೇ ಮಾನಿತೀ ॥೨೯೦॥ ತೈಸಾ ಅಜ ನಿತ್ಯ ಅವ್ಯಯೋ । ತ್ಯಾಸೀ ಆಕಾರ - ವಿಕಾರ ಜನ್ಮ - ಲಯೋ । ಹಾ ದೇಹಾದಿ ಸಂಬಂಧಸ್ವಭಾವೋ । ಮಿಥ್ಯಾ ಪಹಾ ಹೋ ಮಾನಿತೀ ॥೨೯೧॥ ಜೇ ಸಾಧಿಲೇ ಅಗ್ನಿದೃಷ್ಟಾಂತೇ । ತೇ ಉದ್ಧವಾಸೀ ನ ಮನೇಲ ಚಿತ್ತೇ । ಯಾಲಾಗೀ ನಿರೂಪಣೇ ಮಾಗುತೇ । ಶ್ರೀ ಅನಂತೇ ಮಾಂಡಿಲೇ ॥೨೯೨॥ ಉದ್ಧವಾ ತೂ ಐಸೇ ಮ್ಹಣಸೀ । ''ಮೂಳೀ ಸಿದ್ಧಸಂಯೋಗು ಅಗ್ನಿಕಾಷ್ಠಾಂಸೀ । ತೋ ಕಾಷ್ಠಧರ್ಮು ಲಾಗಲಾ ಅಗ್ನೀಸೀ । ಹೇ ಆಮ್ಹಾಸೀ ಮಾನಲೇ ॥೨೯೩॥ ಆತ್ಮಾ ನಿತ್ಯಸಿದ್ಧು ಅವಿಕಾರೀ ಸ್ವಾಂಗೇ । ಜೋ ಗಗನಾಸೀ ನಾತಳೇ ಅಂಗೇ । ತ್ಯಾಸೀ ದೇಹಸಂಗು ಕೇವೀ ಲಾಗೇ । ಮನ ತದ್ಯೋಗೇ ವಿಕಾರೀ ॥೨೯೪॥ ಆತ್ಮ್ಯಾಸೀ ದೇಹಸಂಗು ಘಡೇ । ಹೇ ಬೋಲಣೇಚಿ ತಂವ ಕುಡೇ । ಐಸೇ ನ ಘಡತೇಹೀ ಜರೀ ಘಡೇ । ತರಿ ತೋ ಸಾಂಪಡೇ ದೇಹಬುದ್ಧೀ ॥೨೯೫॥ ಜೋ ದೇಹಬುದ್ಧೀಮಾಜೀ ಆಲಾ । ತೋ ಕೇವಳ ದೇಹಧಾರೀ ಝಾಲಾ । ಪುಢೇ ಕೇವೀ ಜಾಯ ತ್ಯಾಗು ಕೇಲಾ। ಐಸಾ ಉಪಜಲಾ ಸಂದೇಹೋ ॥೨೯೬॥ ಕೃಷ್ಣ ಮ್ಹಣೇ ಉದ್ಧವಾಸೀ । ಐಸೀ ಶಂಕಾ ಝಣೇ ಧರಿಸೀ । ಮನ ಘಾಲೋನಿ ಮನಾಚೇ ಮಾನಸೀ । ಯಾ ಅರ್ಥಾಸೀ ಪರಿಯೇಸೀ ॥೨೯೭॥ ಹೇ ಶಬ್ದಚಾತುರ್ಯಾಸಾಠೀ । ಹಾತಾ ನ ಯೇ ಗಾ ಜಗಜೇಠೀ । ಹೇ ಮಾಝ್ಯಾ ಗುಪ್ತಾಚಿಹೀ ಗುಪ್ತ ಗೋಠೀ । ತುಜಸಾಠೀ ಬೋಲತೋ ॥೨೯೮॥

ಯೋಽಸೌ ಗುಣೈರ್ವಿರಚಿತೋ ದೇಹೋಽಯಂ ಪುರುಷಸ್ಯ ಹಿ ।
ಸಂಸಾರಸ್ತನ್ನಿ ಬಂಧೋಽಯಂ ಪುಂಸೋಽವಿದ್ಯಾಚ್ಛಿದಾತ್ಮನಃ ॥೧೦॥

ಅರ್ಥ:- ಸ್ಥೂಲ ಮತ್ತು ಸೂಕ್ಷ್ಮವಾದ ಭೌತಿಕ ಶರೀರಗಳು ಪರಮ ಪುರುಷನ ಶಕ್ತಿಯಿಂದ ವಿಸ್ತರಿಸುವ ಪ್ರಕೃತಿ ಗುಣಗಳಿಂದ ವಿರಚಿತವಾದವು. ಜೀವಿಯು ಸ್ಥೂಲ ಮತ್ತು ಸೂಕ್ಷ್ಮ ಶರೀರ ಗುಣಗಳನ್ನು ತನ್ನ ಸ್ವರೂಪವೆಂದು ತಪ್ಪಾಗಿ ತಿಳಿದಾಗ ಐಹಿಕ ಅಸ್ತಿತ್ವವು ಸಂಭವಿಸುತ್ತದೆ. ಈ ಭ್ರಾಮಿಕ ಅವಸ್ಥೆಯು ನಿಜವಾದ ಜ್ಞಾನದಿಂದ ನಾಶವಾಗುತ್ತದೆ.

ಅಗ್ನಿಯ ಮತ್ತು ನಾನಾ ಪ್ರಕಾರಗಳ ಕಾಷ್ಠಗಳ ಸಂಯೋಗದಿಂದ ಆ ಯಾವ ಕಾಷ್ಠಗಳ ಗುಣವು ಅಗ್ನಿಯಲ್ಲಿ ಬರುವುದು ಪ್ರತ್ಯಕ್ಷವಾಗಿ ಕಾಣುವುದು. ಆದರೆ ವಾಸ್ತವಿಕವಾಗಿ ಅಗ್ನಿಯು ಅದರಿಂದ ಅಲಿಪ್ತವಾಗಿರುವುದು ॥೨೮೮॥ ಒಂದರ ಮೇಲೊಂದು ಕಟ್ಟಿಗೆಯನ್ನು ತಿಕ್ಕಲು ಅಗ್ನಿಯು ಪ್ರಗಟವಾಗುವುದು. ಅದಕ್ಕೆ ನಾವು ಅಗ್ನಿಯು ಹುಟ್ಟಿತು ಎಂದು ಹೇಳುತ್ತೇವೆ. ಅದಕ್ಕೆ ಕಟ್ಟಿಗೆಯಂತೆ ಆಕಾರವು ಬರುವುದು. ಆದ್ದರಿಂದ ಅದು ಚಿಕ್ಕ - ದೊಡ್ಡದಾಗಿ ತೋರುತ್ತಿರುವುದು ॥೨೮೯॥ ಅಗ್ನಿಯು ಕಟ್ಟಿಗೆಯ ಆಕಾರದಂತೆ ತ್ರಿಕೋಣ, ವರ್ತುಲ, ಅಂಕಡೊಂಕ ಇರುವಂತೆ ತೋರುವುದು, ಕಟ್ಟಿಗೆಯು ಪೂರ್ಣವಾಗಿ ಸುಟ್ಟು ಹೋಗಲು ಅಗ್ನಿಯು ಆರಿತು ಎಂದು ನಾವು ಹೇಳುತ್ತೇವೆ ॥೨೯೦॥ ಅದರಂತೆ ನಾವು ಅಜ, ಅವ್ಯಯ, ನಿತ್ಯವಾಗಿರುವ ಆತ್ಮನಲ್ಲಿ ಆಕಾರ, ವಿಕಾರ, ಜನ್ಮ ನಾಶ ಇತ್ಯಾದಿ ಸರ್ವ ದೇಹಸಂಬಂಧದಲ್ಲಿ ಗುಣಗಳ ಮಿಥ್ಯಾರೋಪವನ್ನು ಮಾಡುತ್ತಿರುತ್ತೇವೆ ॥೨೯೧॥ ಅಗ್ನಿಯ ದೃಷ್ಟಾಂತವನ್ನು ಕೊಟ್ಟು ಹೇಳಿರುವುದು ಉದ್ಧವನ ಮನಸ್ಸಿಗೆ ಸರಿ ಕಾಣಲಿಲ್ಲ. ಅದಕ್ಕಾಗಿಯೇ ಇದೇ ನಿರೂಪಣೆಯನ್ನು ಶ್ರೀಅನಂತನು ಪುನಃ ಹೇಳಲಾರಂಭಿಸಿದನು ॥೨೯೨॥ ಶ್ರೀಕೃಷ್ಣನು ಹೇಳಿದನು. ಹೇ ಉದ್ಧವನೇ, ನೀನು ಹೀಗೆ ಹೇಳಬಹುದು. ಅಗ್ನಿಯ ಮತ್ತು ಕಟ್ಟಿಗೆಯ ಸಂಯೋಗವು ಸ್ವಾಭಾವಿಕವಾಗಿರುವುದು. ಅಂದ ಮೇಲೆ ಕಟ್ಟಿಗೆಯ ವಿಕಾರವು ಅಗ್ನಿಯಲ್ಲಿ ತೋರುವುದು. ಇದನ್ನು ನಾನು ಮಾನ್ಯ ಮಾಡುವೆನು ॥೨೯೩॥ ಆದರೆ ಆತ್ಮನು ನಿತ್ಯ, ಶುದ್ಧ,ನಿರ್ವಿಕಾರ ಸ್ವರೂಪನಾಗಿದ್ದು ಆಕಾಶಕ್ಕೂ ಇದಕ್ಕೆ ಸ್ಪರ್ಶಮಾಡುವುದಾಗುವುದಿಲ್ಲ. ಹಾಗಾದರೆ ಇದಕ್ಕೆ ದೇಹದ ಸಂಗವು ಹೇಗಾಗಬೇಕು? ದೇಹಸಂಬಂಧದಿಂದ ಅದು ವಿಕಾರೀ ಹೇಗಾಗುವುದು? ॥೨೯೪॥ ಆತ್ಮಕ್ಕೆ ದೇಹದ ಸಂಗವು ಘಟಿಸುವುದೆಂಬ ನಿಮ್ಮ ವಿಚಾರವು ನನಗೆ ಪೂರ್ಣವಾಗಿ ಸುಳ್ಳು ಅನಿಸುವುದು. ಹೀಗೆ ಘಟಿಸದೇ ಇರುವುದು ಒಂದು ವೇಳೆ ನಿಜವಾಗಿಯೂ ಘಟಿಸಿದರೆ ಆತ್ಮವು ದೇಹಬುದ್ಧಿಯಲ್ಲಿ ಸಿಲುಕಿಕೊಳ್ಳಬಹುದು ॥೨೯೫॥ ಮತ್ತು ದೇಹಬುದ್ಧಿಯಲ್ಲಿ ಬರುವುದರಿಂದ ದೇಹ ಧಾರಣೆ ಮಾಡುವವನಾಗುವನು. ತದನಂತರ ಅದರ ತ್ಯಾಗವಾದರೂ ಹೇಗಾಗಬೇಕು? ಹೀಗೆ ಸಂಶಯವು ಮನದಲ್ಲಿ ಹುಟ್ಟುವುದು ॥೨೯೬॥ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು; ಇಂತಹ ಸಂಶಯವನ್ನು ನೀನು ಮನದಲ್ಲಿ ಸ್ವಲ್ಪವೂ ತರಬೇಡ. ಮನಕ್ಕೆ ಮನವನ್ನು ಹಚ್ಚಿ ಆಳವಾಗಿ ಈ ಅರ್ಥದ ವಿಚಾರವನ್ನು ಮಾಡು ॥೨೯೭॥ ಕೇವಲ ಶಬ್ದ ಚಾತುರ್ಯದಿಂದ ಈ ವಿಷಯವು ಕೈಗೆಟಕಲಾರದು. ಈ ಯಾವ ನನ್ನ ಗುಪ್ತದಲ್ಲಿಯೇ ಗುಪ್ತವಾಗಿರುವ ರಹಸ್ಯವನ್ನು ಕೇವಲ ನಿನಗಾಗಿಯೇ ಹೇಳುತ್ತಿರುವೆನು ॥೨೯೮॥

ಐಕೇ ಪುರುಷ ಜೋ ಪುರುಷೋತ್ತಮ । ಜ್ಯಾ ಆಧೀನ ಮಾಯಾಗುಣಗ್ರಾಮ । ಜ್ಯಾಸೀ ''ಈಶ್ವರ'' ಐಸಾ ನಾಮಧರ್ಮ । ಶಾಸ್ತ್ರಾನುಕ್ರಮ ಬೋಲತೀ ॥೨೯೯॥ ತ್ಯಾ ಈಶ್ವರಾಚೀ ಜೇ ಮಾಯಾ । ತ್ಯಾ ಉಪಜವಿಲೇ ನಾನಾ ಕಾರ್ಯಾ । ಜೀವ ಸಂಸಾರೀ ಕರಾವಯಾ । ಭ್ರಮು ವಾಯಾ ವಾಢವಿಲಾ ॥೩೦೦॥ ತೇಥೇ ಚೈತನ್ಯ ಜೇ ಪ್ರತಿಬಿಂಬಲೇ । ತೇಚೀ ''ಜೀವ'' ಪಣೇ ವಾಚ್ಯ ಝಾಲೇ । ಜೇವೀ ಥಿಲ್ಲರೀ ಚಂದ್ರಬಿಂಬ ಬುಡಾಲೇ । ದಿಸೇ ನಾಥಿಲೇ ಮೂರ್ಖಾಸೀ ॥೩೦೧॥ ತ್ಯಾ ಥಿಲ್ಲರಾಸೀ ನಾತಳತ । ಚಂದ್ರಮಾ ಅಸೇ ಗಗನೀ ಅಲಿಪ್ತ । ತೈಸಾ ಆತ್ಮಾ ಅವಿದ್ಯಾತೀತ । ಅವಿದ್ಯಾ ನಾತಳತ ಪ್ರತಿಬಿಂಬಲಾ ॥೩೦೨॥ ''ಅಹಮಿತಿ'' ಪ್ರಥಮಾಧ್ಯಾಸೇ । ಸೂಕ್ಷ್ಮ ಲಿಂಗದೇಹ ಮಾಯಾವಶೇ । ನಾನಾ ಅನರ್ಥಕಾರೀ ಕೈಸೇ । ವಾಸನಾಸೌರಸೇ ಉಪಜಲೇ ॥೩೦೩॥ ಜರೀ ಲಿಂಗದೇಹ ಝಾಲೇ ಸಬಳ । ವಿಷಯಭೋಗಾ ದೃಢ ಮೂಳ । ತರೀ ಭೋಗು ನವ್ಹೇ ಸ್ಥೂಳ । ಸೂಕ್ಷ್ಮ ಭೂತಗೋಳ ಸ್ಥೂಳಾವಲಾ ॥೩೦೪॥ ಸ್ಥೂಳಾಪಾಸೋನಿ ಸ್ಥೂಳ ದೇಹೋ । ಪಾಂಚಭೌತಿಕ ಘಡಲಾ ಪಹಾ ಹೋ । ಏವಂ ಉಭಯದೇಹ ಅಭಿಪ್ರಾವೋ । ಝಾಲಾ ನಿರ್ವಾಹೋ ಯಾ ರೀತೀ ॥೩೦೫॥ ಐಸಾ ಉಭಯ ದೇಹೀ ವರ್ತತಾ । ದೃಢ ಲಾಗಲೀ ದೇಹಾತ್ಮತಾ । ತೇಣೇ ವಾಢಲೀ ಅಹಂಮಮತಾ । ಮೀ ಕೋಣ ಹೇ ತತ್ತ್ವತಾ ವಿಸರಲಾ ॥೩೦೬॥ ನ ಕಳೇ ನಿಜಸುಖಾಚೀ ಗೋಡೀ । ಪಡಲಾ ವಿಷಯಾಂಚಿಯೇ ವೋಢೀ । ಪಾಪಪುಣ್ಯಾಂಚಿಯಾ ಜೋಡೀ ಕೋಡೀ । ಪಡಿಲೀ ಬೇಡೀ ಸುಬುದ್ಧಾ ॥೩೦೭॥ ದೇಹಾಧ್ಯಾಸೇ ದೇಹಧರ್ಮ । ಸತ್ಯ ಮಾನೀ ವರ್ಣಾಶ್ರಮ । ಮಗ ಆಚರೋ ಲಾಗೇ ಕರ್ಮ । ಫಳಸಂಭ್ರಮ ವಾಂಛೂನಿ ॥೩೦೮॥ ರಾಜಾ ಚಕ್ರವರ್ತೀ ನಿಜಮಂದಿರೀ । ನಿಜೇಲಾ ಸುಮನಶೇಜೇವರೀ । ತೋ ಸ್ವಪ್ನೀ ಹೋಊನಿ ಭಿಕಾರೀ । ಅಂತ್ಯಜಾಘರೀ ಅನ್ನ ಮಾಗೇ ॥೩೦೯॥ ತೇಥ ಕುಟಕಾ ಏಕು ಯಾವಯಾ ಹಾತಾ । ನೀಚಾಸೀ ಮ್ಹಣೇ ರಾಜಾ ರೇ ತೂ ತತ್ತ್ವತಾ । ಪರೀ ಮೀ ರಾಜಾ ಹೇ ನಾಠವೇ ಚಿತ್ತಾ । ಸ್ವಪ್ನೀ ಭಿಕ್ಷುಕತಾ ದೃಢ ಝಾಲೀ ॥೩೧೦॥ ತೈಸೀ ವಿಸರೋನಿ ನಿಜಾತ್ಮತಾ । ಫಳೇ ಮಾಗೇ ದೇವಾ ದೇವತಾ । ಮೀ ದೇವಾಂಚಾ ದೇವೋ ತತ್ತ್ವತಾ । ಹೇ ತ್ಯಾಸೀ ಸರ್ವಥಾ ನಾಠವೇ ॥೩೧೧॥

ಹೇ ಉದ್ಧವನೇ, ಕೇಳು ಯಾವುದಕ್ಕೆ ಪುರುಷೋತ್ತಮವೆನ್ನುವರೋ, ಮಾಯೆಯ ಸರ್ವ ಗುಣಗಳ ಸಮುದಾಯವು ಯಾರ ಸ್ವಾಧೀನದಲ್ಲಿರುವುದೋ, ಶಾಸ್ತ್ರಗಳಲ್ಲಿಯೂ ಯಾರಿಗೆ ಈಶ್ವರ ಎಂಬ ನಾಮವು ಕೊಟ್ಟಿರುವುದೋ ॥೨೯೯॥ ಆ ಈಶ್ವರನ ಮಾಯೆಯು ಅನೇಕ ಪ್ರಕಾರಗಳ ಕಾರ್ಯಗಳನ್ನು ಉತ್ಪನ್ನಗೊಳಿಸಿ ಜೀವಕ್ಕೆ ಸಂಸಾರದಲ್ಲಿ ಪ್ರವೃತ್ತಗೊಳಿಸುವುದು. ಮತ್ತು ವ್ಯರ್ಥವಾಗಿ ಭ್ರಮೆಯನ್ನು ಬೆಳೆಸುವುದು ॥೩೦೦॥ ಆ ಯಾವ ಮಾಯೆಯಲ್ಲಿ ಚೈತನ್ಯದ ಪ್ರತಿಬಿಂಬವು ಬಿದ್ದಾಗ ಅದಕ್ಕೆ ಜೀವ ಎಂದು ಕರೆಯುವರು. ಚಂದ್ರನ ಪ್ರತಿಬಿಂಬವು ಚಿಕ್ಕದಾದ ನೀರಿನ ಮಡುವಿನಲ್ಲಿ ಮುಳುಗಿದಂತೆ ತೋರುವುದು. ಅದರಂತೆ ಅವಿವೇಕ ಮಾನವರಿಗೆ ಈ ಮಿಥ್ಯೆಯಾದ ಜೀವಭಾವವು ತೋರುತ್ತಿರುವುದು ॥೩೦೧॥ ಆ ಯಾವ ಚಿಕ್ಕ ಮಡುವಿನಲ್ಲಿ ಯಾವ ಸ್ಪರ್ಶವಿಲ್ಲದೇ ಚಂದ್ರನು ಆಕಾಶದಲ್ಲಿ ಅಲಿಪ್ತನಾಗಿರುವನು. ಅದರಂತೆಯೇ ಆತ್ಮನಾದರೂ ಮಾಯೆಯಿಂದ ಅಲಿಪ್ತನಾಗಿರುವನು. ಅದು ಆತ್ಮ ಪ್ರತಿಬಿಂಬಕ್ಕೆ ಸ್ಪರ್ಶ ಸಹ ಮಾಡುವುದಿಲ್ಲ ॥೩೦೨॥ ಅಹಂ ಎಂಬ ಮೊದಲನೆಯ ತಪ್ಪು ತಿಳಿಯುವಿಕೆಯಿಂದ ಮಾಯಾವಶದಲ್ಲಿ ಸೂಕ್ಷ್ಮ ಲಿಂಗ ದೇಹವು ಅನೇಕ ಪ್ರಕಾರಗಳ ಅನರ್ಥವನ್ನು ಉತ್ಪನ್ನಗೊಳಿಸುವುದು. ವಾಸನೆಯ ಆಸಕ್ತಿಯಿಂದ ಈ ಎಲ್ಲ ಕಾರ್ಯಗಳು ಹುಟ್ಟಿಕೊಳ್ಳುತ್ತಿರುವುವು ॥೩೦೩॥ ಲಿಂಗ ದೇಹವು ಬಲಿಷ್ಠವಾಗಿ ವಿಷಯ ಭೋಗದ ಬೇರನ್ನು ದೃಢಗೊಳಿಸುವುದು. ಆದರೆ ಲಿಂಗ ದೇಹವು ಸ್ಥೂಲ ಭೋಗಗಳನ್ನು ಸ್ವೀಕರಿಸಲಾರದು. ಆದ್ದರಿಂದ ಸೂಕ್ಷ್ಮ ಭೂತ ಸಮೂಹವು ಸ್ಥೂಲ ಭೂತಾಕಾರವಾಯಿತು ॥೩೦೪॥ ತದನಂತರ ಸ್ಥೂಲವಾದ ಪಂಚ ಮಹಾಭೂತಗಳಿಂದ ಪಂಚಭೌತಿಕ ದೇಹವನ್ನು ಧರಿಸಿ ಆ ಎರಡು ದೇಹಗಳಿಂದ ಸರ್ವ ಸಂಸಾರವು ಆರಂಭಗೊಳ್ಳುವುದು ॥೩೦೫॥ ಈ ಪ್ರಕಾರವಾಗಿ ಈ ಎರಡೂ ದೇಹದಲ್ಲಿ ವರ್ತಿಸುವಾಗ್ಗೆ ಜೀವದ ದೇಹಬುದ್ಧಿಯು ದೃಢವಾಗಿರುವುದು. ಅದರಿಂದ ಅಹಂ ಮಮತೆಯು ಬೆಳೆಯುತ್ತ ಸಾಗುವುದು. ಮತ್ತು ''ನಾನು ಯಾರು'' ಎಂಬುವುದನ್ನು ನಿಜವಾಗಿಯೂ ಮರೆಯಲ್ಪಡುವುದು ॥೩೦೬॥ ಈತನಿಗೆ ಆತ್ಮ ಸುಖದ ರುಚಿಯು ತಿಳಿಯುವುದಿಲ್ಲ. ಈತನಿಗೆ ವಿಷಯಗಳು ಅತಿಶಯವಾಗಿ ಮಧುರವಾಗುವುವು. ಇದರಿಂದ ಈತನು ಪಾಪ ಪುಣ್ಯಗಳ ಅನೇಕ ರಾಶಿಗಳನ್ನು ಕೂಡಿಸುವನು. ಈ ಪ್ರಕಾರವಾಗಿ ಜೀವವು ಬದ್ಧವಾಗಿ ಅದರ ಕಾಲಿಗೆ ಪ್ರಪಂಚದ ಬೇಡಿಯು ಬೀಳುವುದು ॥೩೦೭॥ ''ದೇಹವೇ ನಾನು'' ಎಂಬ ಭಾವನೆಯು ದೃಢವಾಗಿರುವುದರಿಂದ ದೇಹದ ಸರ್ವ ಧರ್ಮಗಳನ್ನು ಹಾಗೂ ವರ್ಣಾಶ್ರಮಗಳ ಧರ್ಮಗಳನ್ನು ನಿಜವೆಂದು ಭಾವಿಸುವನು. ಮತ್ತು ಫಲದ ಇಚ್ಛೆಯನ್ನು ಮನದಲ್ಲಿ ಧರಿಸಿ ಕರ್ಮಗಳ ಆಚರಣೆಯನ್ನು ಮಾಡುವನು ॥೩೦೮॥ ಒಂದು ಸಾರೆ ಸಾರ್ವಭೌಮ ರಾಜನು ತನ್ನ ರಾಜ ಮಹಲಿನಲ್ಲಿ ಪುಷ್ಪಶಯನದ ಮೇಲೆ ಮಲಗಿಕೊಂಡಿದ್ದನು. ಆಗ ಆತನಿಗೆ ಸ್ವಪ್ನದಲ್ಲಿ ತಾನು ಭಿಕ್ಷುಕನಾಗಿ ಕೇವಲ ಬಡವನ ಮನೆಗೆ ಭಿಕ್ಷೆ ಬೇಡಲು ಹೊರಡುವನು ॥೩೦೯॥ ಅಲ್ಲಿ ತಂಗಳ ರೊಟ್ಟಿಯ ತುಂಡು ಬೇಕೆಂಬ ಬಯಕೆಯಿಂದ ಆ ಬಡ ಮನುಷ್ಯನಿಗೆ ಹೇ ರಾಜನೇ, ಎಂದು ಕರೆಯುವನು. ಆದರೆ ತಾನೆ ನಿಜವಾದ ರಾಜನಾಗಿರುವುದು ಆತನಿಗೆ ವಿಸ್ಮರಣೆಯಾಗಿರುವುದು. ಕಾರಣ ತಾನು ಭಿಕಾರೀ ಎಂಬ ಭಾವನೆಯು ಸ್ವಪ್ನದಲ್ಲಿ ದೃಢವಾಗಿರುವುದು ॥೩೧೦॥ ಈ ಪ್ರಕಾರವಾಗಿ ಜೀವವು ತನ್ನ ಮೂಲ ಸ್ವರೂಪವನ್ನು ಮರೆತು ಬಿಡುವುದು ಮತ್ತು ದೇವ ದೇವತೆಗಳವರಲ್ಲಿ ಫಲದ ಅಪೇಕ್ಷೆಯನ್ನು ಮಾಡುವುದು. ತಾನು ಸ್ವತಃ ಸರ್ವ ದೇವತೆಗಳ ದೇವನಾಗಿರುವುದು ಇದು ಜೀವಕ್ಕೆ ಸ್ವಲ್ಪವೂ ಸ್ಮರಿಸದಾಗುವುದಿಲ್ಲ ॥೩೧೧॥

ತ್ಯಾ ಸ್ವಪ್ನಾಚೇನಿ ಅತಿ ಅಧ್ಯಾಸೇ । ರಾಜಾ ವೋಸಣಾವೇ ''ಮೀ ಭಿಕಾರೀ'' ಐಸೇ । ಐಕೋನಿ ಸೇವಕಾ ಯೇತ ಹಾಂಸೇ । ರಾಜಾ ಸ್ವಪ್ನಾವತೇ ಜಲ್ಪತು ॥೩೧೨॥ ಯೇಥ ಗಾಢ ಮೂಳ ಅವಸ್ಥಾ ಘೋರೇ । ಸರ್ವಾಂಗ ಗಡಬಡೀ ನಿದಸುರೇ। ನಾಗವೇ ಉಘಡೇ ನ ಸ್ಮರೇ । ನಿದ್ರಾಭರೇ ಘೋರತ ॥೩೧೩॥ ತ್ಯಾಸೀ ಥಾಪಟೀ ಪುರೋಹಿತು । ಜಾಗಾ ಹೋತಾ ಹೋಯ ವಿಸ್ಮಿತು । ಮಗ ನಾಗವೇಪಣಾ ಆಚ್ಛಾದಿತು । ಸಾಂಗೋ ಲಾಜತು ಭಿಕ್ಷುಕತಾ ॥೩೧೪॥ ತೇವೀ ಅವಿದ್ಯಾ ನಿದ್ರಾ ಉದ್ಧಟಾ । ಜಲ್ಪೇ ಮೀ ದೇಹೀ ಮೀ ಕರಂಟಾ । ಮೀ ಸಂಪನ್ನು ಮೀ ಜ್ಞಾತಾ ಮೋಠಾ ।ದೇಹಾತ್ಮನಿಷ್ಠಾ ಬಡಬಡೀ ॥೩೧೫॥ ತೇಣೇ ನಿದಸುರಪಣಾಚೇ ಲಾಹೇ । ಕರ್ಮಾಕರ್ಮಾಚೇ ಪಸರೀ ಪಾಯೇ ।ಹಿತಾಹಿತ ಕೋಣ ಪಾಹೇ । ದೇಹಮೋಹೇ ಮೋಹಿತು ॥೩೧೬॥ ತೋ ಗಾಢಮೂಢ ಅವಸ್ಥೆ ಆಂತು । ಹೋತಾ ಧೀರ್ಘಸಂಕಲ್ಪೇ ಲೋಳತು । ಲೋಭೇ ಅತಿಜಲ್ಪೇ ಜಲ್ಪತು । ವೋಸಣತು ''ಮೀ ಮಾಝೇ'' ॥೩೧೭॥ ತೇಥೇ ದೈವಯೋಗೇ ಗಡಬಡಿತು । ಅವಚಟೇ ಗುರುಚರಣೀ ಆದಳತು । ನಿಕಟತಾ ದೇಖೋನಿ ಕೃಪಾವಂತು । ಥಾಪಟಿತು ನಿಜಬೋಧೇ ॥೩೧೮॥ ''ಬ್ರಹ್ಮಾಹಮಸ್ಮಿ'' ಐಸೀ ವಾಣೀ । ಏಕ ವೇಳ ಪಡಲೀ ಕಾನೀ । ಅವಿದ್ಯಾ ನಿದ್ರಾ ಗೇಲೀ ಪಳೋನೀ। ತೋ ತತ್ಕ್ಷಣೀ ಜಾಗಿನ್ನಲಾ ॥೩೧೯॥ ಜಾಗತಾಂಚಿ ಹೋಯ ವಿಸ್ಮಿತ । "ಮೀ ದೇಹ" ಮ್ಹಣತಾ ಲಾಜತ । ದೇಹಕರ್ಮ ದೇಖೇ ನಿಂದಿತ । ಕರ್ಮಾತೀತ ಬ್ರಹ್ಮ ಮೀ ॥೩೨೦॥ ಹೋಆವಯಾ ಸಂಸಾರಬಂಧನ । ಯಾಸೀ ಅವಿದ್ಯಾಚಿ ಗಾ ಕಾರಣ । ತಿಸೀ ಛೇದಾವಯಾ ಜಾಣ। ಖಡ್ಗ ತೀಕ್ಷ್ಣ ಬ್ರಹ್ಮವಿದ್ಯಾ ॥೩೨೧॥ ಅವಿದ್ಯಾ ನಿರಸೀ ಬ್ರಹ್ಮಜ್ಞಾನ । ತೇ ಅವಶ್ಯ ಬ್ರಹ್ಮಾ ಹೋನಿ ಭಿನ್ನ । ಮೋಡಲೇ ಮ್ಹಣಸೀ ಅದ್ವೈತಪಣ । ತೇ ನವ್ಹೇ ಜಾಣ ಸಿದ್ಧಾಂತೀ ॥೩೨೨॥ ಪ್ರಪಂಚು ಅಜ್ಞಾನೇ ಲಾಠಾ । ಜ್ಞಾನ ಅಜ್ಞಾನಾಚ್ಯಾ ಸತ್ತ್ವವಾಟಾ । ಫೇಡಿಜೇ ಕಾಂಟೇನ ಕಾಂಟಾ । ಮಗ ಖಟಪಟಾ ನಿಮಾಲ್ಯಾ ॥೩೨೩॥ ಅವಿದ್ಯಾ ಜೀವಬಂಧನೀ । ಬ್ರಹ್ಮವಿದ್ಯಾ ಬಂಧಛೇದನೀ । ಯಾ ಸಮೂಳ ತುಜಲಾಗುನೀ । ಸಾಂಗೀತಲ್ಯಾ ದೋನೀ ಸವಿಸ್ತರ ॥೩೨೪॥ ತೇಚೀ ಬ್ರಹ್ಮವಿದ್ಯಾ ಜಾಣಾ । ಕೈಸೇನಿ ಪ್ರಾಪ್ತ ಹೋಯ ಆಪಣಾ । ತೇ ಪೂರ್ವಪೀಠವಿವಂಚನಾ । ಸಾವಧಮನಾ ಪರಿಯೇಸೀ ॥೩೨೫॥

ಆ ಯಾವ ರಾಜನು ಯಾವ ಸ್ವಪ್ನದಲ್ಲಿ ''ನಾನು ಭಿಕಾರಿಯು'' ಎಂದು ಬಡಬಡಿಸುತ್ತಿರಲು, ಅದನ್ನು ಕೇಳಿ ರಾಜನ ಪರಿಚಾರಕರು ನಗುವರು. ರಾಜನಿಗೆ ಸ್ವಪ್ನವಾಗಿದೆ ಎಂದು ತಿಳಿಯುವರು ॥೩೧೨॥ ಕಾರಣ ರಾಜನಿಗೆ ಗಾಢವಾದ ನಿದ್ರೆಯು ಆವರಿಸಿರುವುದು. ಆ ನಿದ್ರೆಯಲ್ಲಿ ಆತನು ಹಾಗೊಮ್ಮೆ ಹೀಗೊಮ್ಮೆ ಉರಳಾಡುತ್ತಿರುವನು. ನಿದ್ರೆಯ ಗುಂಗಿನಲ್ಲಿ ಆತನಿಗೆ ತನ್ನ ಬಟ್ಟೆ ಬರೆಯ ಅರಿವು ಇರುವುದಿಲ್ಲ ॥೩೧೩॥ ಇಂತಹ ಸ್ಥಿತಿಯಲ್ಲಿ ಪುರೋಹಿತನು ರಾಜನಿಗೆ ಅಲುಗಾಡಿಸಿ ಜಾಗೃತಗೊಳಿಸುವನು. ಎಚ್ಚರಾದ ಮೇಲೆ ಆತನಿಗೆ ಆಶ್ಚರ್ಯವಾಗವುದು. ಆತನು ತನ್ನ ವಸ್ತ್ರಗಳನ್ನು ಸರಿಪಡಿಸಿಕೊಳ್ಳುವನು. ಸ್ವಪ್ನದಲ್ಲಿ ತಾನು ನಿಜವಾಗಿಯೂ ಭಿಕಾರೀಯಾಗಿದ್ದನ್ನು ಹೇಳಲು ನಾಚಿಕೆಪಡುವನು ॥೩೧೪॥ ಅದರಂತೆಯೇ ಈ ಯಾವ ಮಾಯಾರೂಪವಾದ ನಿದ್ರೆಯು ಅತಿಶಯವಾಗಿ ಭಯಾನಕವಾಗಿರುವುದು. ಅದು ಜೀವಕ್ಕೆ ''ನಾನು ದೇಹಿ, ನಾನು ಬಡವ, ನಾನು ಶ್ರೀಮಂತ, ನಾನು ಮಹಾಜ್ಞಾನೀ'' ಹೀಗೆ ದೇಹಕ್ಕೆ ಆತ್ಮವೆಂದು ತಿಳಿದು ವ್ಯರ್ಥವಾಗಿ ಬಡಬಡಿಸಲು ಹಚ್ಚುವುದು ॥೩೧೫॥ ಅಜ್ಞಾನರೂಪವಾದ ನಿದ್ರೆಯು ಆವರಿಸಿರುವುದರಿಂದ ಕರ್ಮ ಮತ್ತು ಅಕರ್ಮಗಳ ಕಾಲುಗಳನ್ನು ಪಸರಿಸುವನು. ದೇಹದ ಮೋಹದಿಂದ ಮೋಹಿತನಾಗಿರುವುದರಿಂದ ಆತನಿಗೆ ಹಿತ ಯಾವುದು? ಅಹಿತ ಯಾವುದು? ಇದು ತಿಳಿಯುವುದಿಲ್ಲ ॥೩೧೬॥ ಆತನು ಗಾಢ, ಮೂಢ ಅಜ್ಞಾನರೂಪ ನಿದ್ರೆಯಲ್ಲಿ ದೀರ್ಘಕಾಲದವರೆಗೆ ಉರುಳಾಡುತ್ತ ಮಲಗಿರುವನು. ''ನಾನು ಮತ್ತು ನನ್ನದು'' ಈ ಲೋಭದಿಂದ ಆತನು ಬಡಬಡಿಸುತ್ತಿರುವನು ॥೩೧೭॥ ಇಂತಹ ಸ್ಥಿತಿಯಲ್ಲಿ ಗಡಗಡನೇ ಉರುಳಾಡುತ್ತಿರಲು ದೈವಯೋಗದಿಂದ ಅಕಸ್ಮಾತ್ತಾಗಿ ಗುರುಚರಣ ಸಮೀಪಕ್ಕೆ ಬಂದು ಬೀಳುವನು. ಆಗ ಆ ಕೃಪಾಳೂ ಸದ್ಗುರುಗಳು ಅತೀ ಸಮೀಪವಾಗಿ ಬಂದಿರುವುದನ್ನು ಕಂಡು ಆತನಿಗೆ ನಿಜಬೋಧೆಯೊಂದಿಗೆ ಬಡೆದು ಜಾಗೃತಗೊಳಿಸುವರು ॥೩೧೮॥ ''ನಾನೇ ಬ್ರಹ್ಮನು'' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ನಿದ್ರೆಯು ಓಡಿ ಹೋಗುವುದು. ಮತ್ತು ತತ್ಕಾಲದಲ್ಲಿ ಜಾಗೃತವು ಪ್ರಾಪ್ತವಾಗುವುದು ॥೩೧೯॥ ಜಾಗೃತನಾಗುತ್ತಲೇ ಆತನು ಆಶ್ಚರ್ಯಚಕಿತನಾಗುವನು. ಈಗ ದೇಹವೇ ನಾನು ಎಂದು ಮನ್ನಿಸಲು ಆತನು ನಾಚುವನು. ಮತ್ತು ದೇಹ ಕರ್ಮಗಳನ್ನು ನಿಂದಿಸುವನು. ''ನಾನು ಸರ್ವ ಕರ್ಮಗಳ ಅತೀತನಾದ ಬ್ರಹ್ಮನಾಗಿರುವೆ'' ಎಂದು ಆತನು ತಿಳಿಯುವನು ॥೩೨೦॥ ನಿಜವಾಗಿಯೂ ಈ ಸಂಸಾರ ಬಂಧನದ ಕರ್ಮಗಳೆಂದರೆ ಕೇವಲ ಮಾಯೆಯೇ ಆಗಿರುವುದು. ಇದನ್ನು ಮುರಿದು ಹಾಕುವ ತೀಕ್ಷ್ಣವಾದ ಶಸ್ತ್ರವು ಬ್ರಹ್ಮವಿದ್ಯೆಯಾಗಿರುವುದು ॥೩೨೧॥ ಬ್ರಹ್ಮಜ್ಞಾನವು ಅವಿದ್ಯೆಯನ್ನು ನಾಶಗೊಳಿಸುವುದು. ಕಾರಣ ಅದು ಬ್ರಹ್ಮದಿಂದ ಭಿನ್ನವಾಗಿರುವುದು. ಆದರೆ ಮಾಯೆಗೆ ಭಿನ್ನವೆಂದ ಕೂಡಲೇ ಅದ್ವೈತ ಸಿದ್ಧಾಂತಕ್ಕೆ ಬಾಧೆ ಬರುವುದು. ಆದ್ದರಿಂದ ನಿಜವಾಗಿಯೂ ಈ ಸಿದ್ಧಾಂತವು ನಿಜವಲ್ಲ ॥೩೨೨॥ ಅಜ್ಞಾನದಿಂದ ಪ್ರಪಂಚವು ಬೆಳೆದಿರುವುದು. ಆ ಯಾವ ಜ್ಞಾನದ ಮತ್ತು ಅಜ್ಞಾನದ ಸೂಕ್ಷ್ಮವಾದ ಮಾರ್ಗಗಳಿರುವುವು. ಅದಕ್ಕಾಗಿ ಮುಳ್ಳಿನಿಂದಲೇ ಮುಳ್ಳನ್ನು ತೆಗೆಯಲು ಸರ್ವ ಪರಿಶ್ರಮವು ಇಲ್ಲದಾಗುವುದು ॥೩೨೩॥ ಅವಿದ್ಯೆಯು ಜೀವಕ್ಕೆ ಬಂಧನಗೊಳಿಸುವುದು. ಮತ್ತು ಬ್ರಹ್ಮವಿದ್ಯೆಯು ಬಂಧನದ ಛೇಧಕಾರಕವಾಗಿರುವುದು. ಈ ಎರಡೂ ವಿದ್ಯೆಗಳನ್ನು ನಿನಗೆ ಸವಿಸ್ತಾರವಾಗಿ ಹೇಳಿದೆನು ॥೩೨೪॥ ಇದೇ ಬ್ರಹ್ಮವಿದ್ಯೆಯು ಆತ್ಮವನ್ನು ಹೇಗೆ ಪ್ರಾಪ್ತ ಮಾಡಿಕೊಳ್ಳುವುದೆಂಬ ಅತ್ಯಂತ ಮಹತ್ವದ ವಿಚಾರವನ್ನು ಈಗ ಶಾಂತ ಚಿತ್ತದಿಂದ ಶ್ರವಣವನ್ನು ಮಾಡು ॥೩೨೫॥

ತಸ್ಮಾಜ್ಜಿಜ್ಞಾಸಯಾತ್ಮಾನಮಾತ್ಮಸ್ಥಂ ಕೇವಲಂ ಪರಮ್ । ಸಂಗಮ್ಯ ನಿರಸೇದೇತದ್ವಸ್ತುಬುದ್ಧಿಂ ಯಥಾಕ್ರಮಮ್ ॥೧೧॥

ಅರ್ಥ:- ಪ್ರಿಯ ಉದ್ಧವನೇ, ಈ ಯಾವ ಜನ್ಮ ಮರಣ ಸಂಸಾರದ ಬೇರೆ ಯಾವ ಕಾರಣವೂ ಇಲ್ಲ. ಕೇವಲ ಅಜ್ಞಾನವೇ ಮೂಲ ಕಾರಣವಾಗಿರುವುದು. ಆದ್ದರಿಂದ ನಮ್ಮ ನಿಜವಾದ ಸ್ವರೂಪವಾದ ಆತ್ಮವನ್ನು ತಿಳಿಯುವ ಇಚ್ಛೆಯನ್ನು ಮಾಡಬೇಕು. ತಮ್ಮ ಯಾವ ಈ ಸತ್ಯ ಸ್ವರೂಪವು ಸರ್ವ ಪ್ರಕೃತೀ ಮತ್ತು ಪ್ರಾಕೃತ ಜಗತ್ತಿನ ಅತೀತ, ದ್ವೈತರಹಿತ ತಥಾ ತನ್ನಲ್ಲಿ ಸ್ಥಿತವಾಗಿರುವುದು. ಅದಕ್ಕೆ ಬೇರೆ ಯಾವ ಆಧಾರವೂ ಇಲ್ಲ. ಆತನಿಗೆ ಅರಿತು ಮೆಲ್ಲಮೆಲ್ಲನೇ ಸ್ಥೂಲ ಶರೀರ, ಸೂಕ್ಷ್ಮ ಶರೀರ ಇತ್ಯಾದಿಯಲ್ಲಿ ಸತ್ಯತ್ವ ಬುದ್ಧಿಯಾಗಿರುವುದನ್ನು ಕ್ರಮವಾಗಿ ಅಳಕಿಸಿ ಹಾಕಬೇಕು.

ಉದ್ಧವಾ ಯಾಚಿಲಾಗೀ ನಿತ್ಯ । ಜಿಜ್ಞಾಸೇ ಬೈಸವಾವೇ ಚಿತ್ತ । ತಿಸೀ ವಿವೇಕ ಉಪಜವಿತ । ಸತ್ಯಾಸತ್ಯ ವಿಭಾಗೇ ॥೩೨೬॥ ತೇಥ ಅಸತ್ಯ ತಿತಕೀ ''ಅವಿದ್ಯಾ'' । ಜಿಚೇನಿ ಜೀವಾಸೀ ಪರಮ ಬಾಧಾ । ತಿಚ್ಯಾ ಸಮೂಳ ಕರಾವಯಾ ಛೇದಾ । ''ಸದ್ವಿದ್ಯಾ'' ಸಾಧಾವೀ ॥೩೨೭॥ ಸದ್ವಿದ್ಯಾ ಸಾಧಿಲಿಯಾ ಪಾಹೀ । ಕೇವಳ ವಸ್ತು ತೇ ದೂರೀ ನಾಹೀ । ಅಸೇ ಆಪುಲ್ಯಾಚಿ ಠಾಯೀ । ಯೇಚಿ ದೇಹೀ ಕೂಟಸ್ಥ ॥೩೨೮॥ ಕಾರ್ಯಕಾರಣಸಂಘಾತ । ಯಾಮಾಜೀ ವಸ್ತು ಅಸೇ ವ್ಯಾಪ್ತ । ವ್ಯಾಪೂನಿಯಾ ಅಲಿಪ್ತ । ನಿತ್ಯ ಮುಕ್ತ ಸ್ವಭಾವೇ ॥೩೨೯॥ ಕರೂನಿ ಸದ್ವಿದ್ಯಾ ಸಾಧನ । ಧರೂನಿ ಆತ್ಮಾನುಸಂಧಾನ । ದೇಹದ್ವಯಾಚೇ ನಿರಸನ । ಸಾಧಕೇ ಜಾಣ ಸಾಧಾವೇ ॥೩೩೦॥ ಸ್ಥೂಲ ನಶ್ವರತ್ವೇ ಮಿಥ್ಯಾ ಝಾಲೇ । ಸೂಕ್ಷ್ಮ ವಾಸನಾಮಯ ಕಲ್ಪಿಲೇ । ತೇ ಕಲ್ಪನೇಸೀ ಮಿಥ್ಯಾತ್ವ ಆಲೇ । ಬ್ರಹ್ಮ ಉರಲೇ ನಿರ್ವಿಕಲ್ಪ ॥೩೩೧॥ ಜೈಶಾ ಗಗನೀ ನಾನಾ ಮೇಘಪಂಕ್ತೀ । ನಿಜಬಳೇ ತ್ಯಾ ವರ್ಷತೀ । ತ್ಯಾಚೀ ಶಾರದಿಯೇಚೇ ಅಂತೀ । ಹರಪೋನಿ ಜಾತೀ ಆಕಾಶೀ ॥೩೩೨॥ ತೈಸೀ ದೇಹೀ ದೇಹತ್ಮಾಬುದ್ಧೀ । ದೃಢ ಕೇಲೀ ಹೋತೀ ತ್ರಿಶುದ್ಧೀ । ತೇಚಿ ವಿವೇಕಾಚಿಯಾ ಪ್ರಬೋಧೀ । ನಾಸ್ತಿಕಸಿದ್ಧೀ ಪಾವಲೀ ॥೩೩೩॥ ದೇಹ – ಅಸದ್ಭಾವಾಚೀ ಪದವೀ । ಬ್ರಹ್ಮವಿದ್ಯೇಚ್ಯಾ ಸದ್ಭಾವೀ । ಖದ್ಯೋತತೇಜಾಚೀ ದಿವೀ । ಸೂರ್ಯೇ ದೇಖಾವೀ ಕೈಸೇನೀ ॥೩೩೪॥ ದೋರ ಭಾಸಲಾ ಹೋತಾ ವಿಖಾರ । ತ್ಯಾಚಾ ಕರಿತಾ ನಿಜನಿರ್ಧಾರ । ಹಾರಪೋನಿಯಾ ಸರ್ಪಾಕಾರ । ಉರೇ ದೋರ ನಿಜರೂಪೇ ॥೩೩೫॥ ಪಾಹತಾ ವಿವೇಕಾಚೇನಿ ನಿವಾಡೇ । ದೋರಾಚೇ ಸರ್ಪತ್ವ ಜೇವೀ ಉಡೇ । ತೇವೀ ಬ್ರಹ್ಮಸದ್ಭಾವೀ ರೋಕಡೇ । ದೇಹ ನಾತುಡೇ ಸತ್ಯತ್ವೇ ॥೩೩೬॥ ''ನರದೇಹ ಆಶ್ರಯೂನ । ಬ್ರಹ್ಮವಿದ್ಯಾ ವಾಢಲೀ ಜಾಣ । ತೇ ಆಪುಲೇ ಜನ್ಮಸ್ಥಾನ । ದೇಹನಿರ್ದಳಣ ಕೇವೀ ಕರೀ'' ॥೩೩೭॥ ಉದ್ಧವಾ ತೂ ಐಸಐಸೀ । ಆಶಂಕಾ ಝಣೇ ಧರಿಸಿ । ತೇ ಅಗ್ನಿ ಉತ್ಪತ್ತಿದೃಷ್ಟಾಂತೇಸೀ । ತುಜಪಾಶೀ ಸಾಂಗೇನ ॥೩೩೮॥

ಹೇ ಉದ್ಧವನೇ, ಇದಕ್ಕಾಗಿಯೇ ಜಿಜ್ಞಾಸು ಆದವನು ತನ್ನ ಚಿತ್ತವನ್ನು ಯಾವಾಗಲೂ ಸ್ಥಿರವಾಗಿಡಬೇಕು. ಸತ್ಯಾಸತ್ಯದ ವಿಭಾಗದಿಂದ ವೃತ್ತಿಯಲ್ಲಿ ವಿಚಾರಗಳು ಹುಟ್ಟಿಕೊಳ್ಳುವುವು ॥೩೨೬॥ ಇರುವ ಅಸತ್ಯಗಳೆಲ್ಲವೂ ಅವಿದ್ಯೆಯಾಗಿರುವುವು ಎಂದು ತಿಳಿಯಬೇಕು. ಇದರಿಂದಲೇ ಜೀವಕ್ಕೆ ಅತಿಶಯವಾಗಿ ಪೀಡೆಯಾಗುವುದು. ಈ ಯಾವ ಅವಿದ್ಯೆಯನ್ನು ಪರಿಪೂರ್ಣವಾಗಿ ಮುರಿದು ಹಾಕಲು ಬ್ರಹ್ಮವಿದ್ಯೆಯನ್ನು ಸಂಪಾದಿಸಬೇಕು ॥೩೨೭॥ ಒಂದು ಸಾರಿ ಇದನ್ನು ಪ್ರಾಪ್ತಮಾಡಿಕೊಂಡರೆ ಸಾಕು, ಆಗ ಸದ್‌ವಸ್ತುವು ದೂರವೇನೂ ಇರುವುದಿಲ್ಲ. ಅದು ಇದೇ ದೇಹದಲ್ಲಿ ತನ್ನದೇ ಆದ ಹೃದಯದಲ್ಲಿ ಕೂಟಸ್ಥರೂಪದಲ್ಲಿ ಇರುವುದು. ॥೩೨೮॥ ಶರೀರ ಇಂದ್ರಿಯಗಳಲ್ಲಿ ಬ್ರಹ್ಮವು ವ್ಯಾಪ್ತವಾಗಿರುವುದು. ಆದರೆ, ಸ್ವಭಾವತಃ ನಿತ್ಯಮುಕ್ತವಾಗಿರುವುದರಿಂದ ಅವುಗಳಲ್ಲಿ ವ್ಯಾಪಿಸಿಕೊಂಡಿದ್ದರೂ ಅಲಿಪ್ತವಾಗಿರುವುದು ॥೨೯॥ ಸಾಧಕನು ಬ್ರಹ್ಮವಿದ್ಯೆಯನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಮತ್ತು ಆತ್ಮಾನುಸಂಧಾನದಿಂದ ಎರಡೂ ದೇಹಗಳ ನಿರಸನೆಯನ್ನು ಮಾಡಬೇಕು ॥೩೩೦॥ ಸ್ಥೂಲ ದೇಹವು ನಾಶಿವಂತವಾಗಿರುವುದು. ಆದ್ದರಿಂದ ಅದು ಮಿಥ್ಯೆಯಾಯಿತು. ವಾಸನಾಮಯ ಸೂಕ್ಷ್ಮ ದೇಹವು ಇದೊಂದು ಕಲ್ಪಿತವಾಗಿರುವುದು. ಆದ್ದರಿಂದ ಅದೂ ಕೂಡ ಮಿಥ್ಯೆಯಾಯಿತು. ಅಂದಮೇಲೆ ಉಳಿದಿರುವುದು ನಿರ್ವಿಕಲ್ಪ ಬ್ರಹ್ಮವೇ ಆಗಿರುವುದು ॥೩೩೧॥ ಆಕಾಶದಲ್ಲಿ ಪ್ರಚಂಡವಾದ ಮೇಘ ಪಂಕ್ತಿಗಳು ಏಕತ್ರ ಬಂದು ತಮ್ಮ ಸಾಮರ್ಥ್ಯದಿಂದ ಮಳೆಗರೆಯುವುವು. ಆದರೆ ಅವು ಶರದ್ ಋತುವಿನ ಅಂತ್ಯದಲ್ಲಿ ಆಕಾಶದಲ್ಲಿ ಲುಪ್ತಗೊಳ್ಳುವುವು ॥೩೩೨॥ ಅದರಂತೆಯೇ ನಾನು ಆ ಯಾವ ದೇಹಬುದ್ಧಿಯನ್ನು ದೃಢಗೊಳಿಸಿದ್ದೆನೋ ಅದು ವಿವೇಕದ ಉದಯವಾಗುತ್ತಲೇ ಇಲ್ಲದಂತಾಗಿ ಹೋಗುವುದು ॥೩೩೩॥ ಮಿಂಚಿನ ಹುಳದ ಪ್ರಕಾಶ ತೇಜವು ಸೂರ್ಯನಿಗೆ ಕಾಣಲು ಶಕ್ಯವಿಲ್ಲ. ಅದರಂತೆ ಬ್ರಹ್ಮವಿದ್ಯೆಯು ಉದಯವಾಗುತ್ತಲೇ ದೇಹದ ಸತ್ಯತ್ವವು ಕಾಣಲು ಶಕ್ಯವಿಲ್ಲ ॥೩೩೪॥ ಹಗ್ಗದಲ್ಲಿ ಸರ್ಪದ ಭಾಸವು ಆಗುತ್ತಿತ್ತು. ಆದರೆ ಅದರ ನಿಜನಿರ್ಧಾರ ಮಾಡಲು, ಆಗ ಸರ್ಪದ ಆಕಾರವು ಇಲ್ಲದಾಗಿ ಹಗ್ಗವು ಅದರ ಮೂಲ ಸ್ವರೂಪದಿಂದ ಉಳಿದುಕೊಳ್ಳುವುದು ॥೩೩೫॥ ವಿವೇಕದಿಂದ ನೋಡಲು ಹಗ್ಗದಲ್ಲಿನ ಸರ್ಪದ ಭಾಸವು ಹೇಗೆ ಇಲ್ಲದಾಯಿತೋ, ಅದರಂತೆಯೇ ಬ್ರಹ್ಮದ ಸತ್ಯತತ್ವದ ಮುಂದೆ ದೇಹದ ಸತ್ಯತ್ವವು ಉಳಿದುಕೊಳ್ಳಲು ಶಕ್ಯವೇ ಇಲ್ಲ ॥೩೩೬॥ ದೇಹದ ಆಶ್ರಯವನ್ನು ಮಾಡಿ ಬ್ರಹ್ಮವಿದ್ಯೆಯ ಬುದ್ಧಿಯು ಆಗುವಂತಿರಲು, ಅದುವೇ ತನ್ನ ಉತ್ಪತ್ತಿಸ್ಥಾನವಾದ ಯಾವ ಶರೀರವನ್ನೇ ನಾಶವನ್ನು ಹೇಗೆ ಮಾಡುವುದು ॥೩೩೭॥ ಹೇ, ಉದ್ಧವನೇ, ಈ ಪ್ರಕಾರದ ಸಂದೇಹವು ನಿನ್ನ ಮನದಲ್ಲಿ ಬರಬಹುದು. ಅದಕ್ಕಾಗಿ ಅಗ್ನಿಯು ಉತ್ಪತ್ತಿಯ ದೃಷ್ಟಾಂತವನ್ನು ಕೊಟ್ಟು ನಿನಗೆ ತಿಳಿಸಿ ಹೇಳುವೆನು ॥೩೩೮॥

ಆಚಾರ್ಯೋಽರಣಿರಾದ್ಯಃ ಸ್ಯಾದಂತೇ ವಾಸ್ಯುತ್ತರಾರಣಿಃ । ತತ್ಸಂಧಾನಂ ಪ್ರವಚನಂ ವಿದ್ಯಾಸಂಧಿ : ಸುಖಾವಹಃ ॥೧೨॥

ಅರ್ಥ :- ಆಚಾರ್ಯನು ಕೆಳಗಿನ ಅರಣಿಯಾಗಿರುವನು. ಶಿಷ್ಯನು ಮೇಲಿನ ಅರಣಿಯಾಗಿರುವನು. ಆಚಾರ್ಯರ ಉಪದೇಶವು ಈ ಎರಡು ಅರಣಿಗಳ ಮಧ್ಯಭಾಗದ ಮಂಥನ ಕಾಷ್ಠವಾಗಿರುವುದು. ವಿದ್ಯೆ ಎಂಬುದು ಸುಖಾವಹ ಸಂಧಿಯಾಗಿರುವುದು. ಅರಣಿಯನ್ನು ಮಂಥಿಸಲು ಅಗ್ನಿಯು ಹುಟ್ಟುವುದು. ಅದರಂತೆಯೇ ವಿದ್ಯೆಯು ಉತ್ಪನ್ನವಾಗುವುದು.

ದೋ ಕಾಷ್ಠಾಂಚಿಯಾ ಘಸಣೇ । ಅಗ್ನಿ ಕಾಢಿಲಾ ಮಂಥೋನಿ । ತೋ ಕಾಷ್ಠೇ ಕಾಷ್ಠ ಜಾಳೂನೀ । ಅಗ್ನಿ ಅಗ್ನಿಪಣೇ ಪ್ರಜ್ವಳಲಾ ॥೩೩೯॥ ತೈಸೀ ಬ್ರಹ್ಮವಿದ್ಯಾ ಜಾಣ। ಗುರುಶಿಷ್ಯ ಸಂವಾದಮಂಥನ । ತ್ಯಾ ಮಂಥನಾಚೇ ನಿರೂಪಣ । ಸಾವಧಾನ ಪರಿಯೇಸೀ ॥೩೪೦॥ ಯೇಥ ಆಚಾರ್ಯ ಆದ್ಯ ಅರಣೀ । ಶಿಷ್ಯ ತೋ ಝಾಲಾ ಉತ್ತರಾರಣೀ । ಉಪದೇಶ ತೋ ಮಂಥಾಸ್ಥಾನೀ । ಸಂವಾದಮಂಥನೀ ಮಂಥಾವೇ ॥೩೪೧॥ ಯೇ ಮಂಥನೀ ಜರೀ ಆಳಸು ಕೇಲಾ । ತರೀ ಜ್ಞಾನಾಗ್ನೀಚಾ ಆವಿರ್ಭಾವ ಗೇಲಾ । ಆಪಣಿಯಾ ಆಪಣ ವಂಚಲಾ । ಥಿತ್ಯಾ ಮುಕಲಾ ಸಾಧನಾ ॥೩೪೨॥ ಧರಿತಾ ಆಳಸಾಚೀ ಮಾಗೀ । ಯೇವ್ಹಡಾ ಅನರ್ಥು ವಾಜೇ ಅಂಗೀ । ಆಠಹೀ ಪ್ರಹರ ಶಿಣತಾತಿ ಯೋಗೀ । ಯಾ ಯೋಗಾಲಾಗೀ ಸಾಧಾವಯಾ ॥೩೪೩॥ ನಿಜಸ್ವಾರ್ಥಾಲಾಗೀ ಸಾವಧಾನ । ಗುರುವಚನಾಚೇ ಅನುಸಂಧಾನ । ಅವಿಶ್ರಮು ಕರಿತಾ ಮಂಥನ । ಬ್ರಹ್ಮಜ್ಞಾನ ತೈ ಪ್ರಕಟೇ ॥೩೪೪॥ ಪ್ರಕಟಲೇ ಬ್ರಹ್ಮಜ್ಞಾನ । ಉರೋ ನೇದಿ ದೇಹಾಚೇ ಭಾನ । ದೃಶ್ಯ ದ್ರಷ್ಟಾ ದರ್ಶನ । ಕರೀ ಪ್ರಾಶನ ತತ್ಕಾಳ ॥೩೪೫॥ ಕಾರ್ಯ ಕರ್ಮ ಆಣಿ ಕರ್ತಾ । ಜ್ಞಾನ ಜ್ಞೇಯ ಆಣಿ ಜ್ಞಾತಾ । ಹೇ ಉರೋ ನೇದೀ ಸರ್ವಥಾ । ನಿಜಾತ್ಮತಾ ನಿಜಬೋಧೇ ॥೩೪೬॥ ನಿಜಬೋಧೇ ಸಂಸಾರದುಃಖ । ನಿರಸೂನಿ ದಿಧಲೇ ನಿಜಸುಖ । ನಿಜಾತ್ಮಸುಖೀ ನಿಃಶೇಖ । ಮಾಯಾಗುಣ ದೇಖ ನಾಸಿಲೇ ॥೩೪೭॥

ವೈಶಾರದೀ ಸಾತಿವಿಶುದ್ಧಬುದ್ಧಿರ್ಧುನೋತಿ ಮಾಯಾಂ ಗುಣಸಂಪ್ರಸೂತಾಮ್ ।
ಗುಣಾಂಶ್ಚ ಸಂದಹ್ಯ ಯದಾತ್ಮಮೇತತ್ ಸ್ವಯಂ ಚ ಶಾಮ್ಯತ್ಯ ಸಮಿದ್ ಯಥಾಗ್ನಿಃ ॥೧೩॥

ಅರ್ಥ :- ಈ ಯಜ್ಞದಲ್ಲಿ ಬುದ್ಧಿಮಾನ ಶಿಷ್ಯನು ಸದ್ಗುರುವಿನಿಂದ ಅತ್ಯಂತ ವಿಶುದ್ಧ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವನು. ಅದು ಗುಣಗಳಿಂದ ಸಿದ್ಧವಾದ ವಿಷಯಗಳ ಮಾಯೆಯನ್ನು ಭಸ್ಮಮಾಡಿಬಿಡುವುದು. ತದನಂತರ ಯಾವುದರಿಂದ ಈ ಸಂಸಾರವು ನಿರ್ಮಾಣವಾಗಿದೆಯೋ, ಆ ಗುಣಗಳೂ ಸಹ ಭಸ್ಮವಾಗುವುವು. ಈ ಪ್ರಕಾರವಾಗಿ ಎಲ್ಲವೂ ಭಸ್ಮವಾದಾಗ ಆತ್ಮದ ಹೊರತಾಗಿ ಯಾವುದೂ ಉಳಿಯುವುದಿಲ್ಲ. ಆ ಜಾನಾಗ್ನಿಯೂ ಕೂಡ ತನ್ನ ನಿಜಸ್ವರೂಪದಲ್ಲಿ ಶಾಂತವಾಗುವುದು. ಸಮಿಧಾ ಮುಗಿಯುತ್ತಲೇ ಅಗ್ನಿಯು ಆರಿಹೋಗುವಂತೆ... ॥೧೩.॥

ನಾಶಾವಯಾ ನಿಜಮಾಯಾಗುಣ । ಶಿಷ್ಯ ವಿಶಾರದ ಬುದ್ಧಿನಿಪುಣ । ದೈವೀ ಸಂಪದೇಚೇ ಅಧಿಷ್ಠಾನ । ಸದ್ಗುಣೀ ಸಂಪನ್ನ ಸರ್ವದಾ ॥೩೪೮॥

ಎರಡು ಕಾಷ್ಠಗಳನ್ನು ಒಂದರ ಮೇಲೊಂದು ತಿಕ್ಕುತ್ತ ಆ ಘರ್ಷಣೆಯಿಂದ ಅಗ್ನಿಯನ್ನು ಉತ್ಪನ್ನಗೊಳಿಸಲು ಅದು ಆ ಕಾಷ್ಠಗಳನ್ನು ಸುಟ್ಟು ಅಗ್ನಿಯ ರೂಪದಿಂದ ಪ್ರಜ್ವಲಿತವಾಗುವುದು ॥೩೩೯॥ ಅದರಂತೆಯೇ ಗುರು-ಶಿಷ್ಯರ ಸಂವಾದ ರೂಪವಾದ ಮಂಥನದಿಂದ ಬ್ರಹ್ಮವಿದ್ಯೆ ಪ್ರಕಟಗೊಳ್ಳುತ್ತಿರುವುದು. ಆ ಮಂಥನದ ನಿರೂಪಣೆಯನ್ನು ಏಕಾಗ್ರ ಚಿತ್ತದಿಂದ ಆಲಿಸು ॥೩೪೦॥ ಅದರಲ್ಲಿಯ ಆದ್ಯ ಅರಣಿ, ಅಂದರೆ ಅಗ್ನಿಯನ್ನು ಉತ್ಪನ್ನಗೊಳಿಸುವ ಕೆಳಗಿನ ಕಾಷ್ಠ ಗುರುವಾಗಿರುವನು, ಹಾಗೆಯೇ ಉತ್ತರ ಅರಣಿ ಅಂದರೆ ಮೇಲಿನ ಕಾಷ್ಠವು ಶಿಷ್ಯನಾಗಿರುವನು. ಉಪದೇಶವೇ ರವಿಯಾಗಿರುವುದು. ಆವರಿಬ್ಬರ ಸುಖಸಂವಾದವೇ ಮಂಥನಕ್ರಿಯೆಯಾಗಿರುವುದು ॥೩೪೧॥ ಈ ಮಂಥನದಲ್ಲಿ ಅಂದರೆ ಸುಖಸಂವಾದದಲ್ಲಿ ಒಂದು ವೇಳೆ ಆಲಸ್ಯತನವನ್ನು ಮಾಡಿದರೆ ಜ್ಞಾನಾಗ್ನಿಯು ಉತ್ಪನ್ನವಾಗಲು ಶಕ್ಯವಿಲ್ಲ. ತಾನೇ ತನ್ನನ್ನು ವಂಚಿಸಿಕೊಂಡು ತನ್ನ ಕೈಯಲ್ಲಿನ ಸಾಧನೆಯನ್ನು ಕಳೆದುಕೊಂಡಂತಾಗುವುದು ॥೩೪೨॥ ಆಲಸ್ಯದ ಮಾರ್ಗ ಹಿಡಿಯಲು ಇಷ್ಟೊಂದು ಅನರ್ಥವು ಒದಗುವುದು. ಈ ಯೋಗವನ್ನು ಸಾಧಿಸುವುದಕ್ಕಾಗಿ ಯೋಗಿಗಳವರು ಎಂಟೂ ಪ್ರಹರಗಳಲ್ಲಿ ಆಪಾರವಾದ ಕಷ್ಟಗಳನ್ನು ಸೋಸುತ್ತಿರುವರು ॥೩೪೩॥ ತನ್ನ ಹಿತಕ್ಕಾಗಿ ಎಚ್ಚರವಾಗಿದ್ದು ಗುರುವಚನಗಳನ್ನು ಏಕಾಗ್ರ ಚಿತ್ತದಿಂದ ಮನನಮಾಡಿ ಅವಿಶ್ರಮವಾಗಿ ಮಂಥನ ಮಾಡಲು ಬ್ರಹ್ಮಜ್ಞಾನವು ಪ್ರಕಟವಾಗುವುದು ॥೩೪೪॥ ಈ ಯಾವ ದಿವ್ಯಜ್ಞಾನವು ಒಂದು ಸಾರೆ ಪ್ರಕಟವಾಯಿತೆಂದರೆ ಅದು ದೇಹದ ಭಾನವನ್ನು ಉಳಿಯಗೊಡುವುದಿಲ್ಲ. ಅದು ದೃಶ್ಯ, ದ್ರಷ್ಟಾ, ದರ್ಶನ ಎಂಬ ತ್ರಿಪುಟಿಯನ್ನು ಕ್ಷಣದಲ್ಲಿಯೇ ನಾಶಗೊಳಿಸುವುದು ॥೩೪೫॥ ಆತ್ಮಜ್ಞಾನದಿಂದ ಆತ್ಮಸ್ವರೂಪವು ಲಭಿಸುವುದು. ಆದ್ದರಿಂದ ಕಾರ್ಯ - ಕರ್ಮ - ಕರ್ತಾ ಅಥವಾ ಜ್ಞಾನ - ಜ್ಞೇಯ - ಜ್ಞಾತಾ ಹೀಗೆ ಭೇದವು ಉಳಿಯುವುದಿಲ್ಲ ॥೩೪೬॥ ಆತ್ಮಜ್ಞಾನವು ಪ್ರಾಪ್ತವಾಗುತ್ತಲೇ ಸಂಸಾರ ದುಃಖದ ನಾಶವಾಗಿ ಆತ್ಮಸುಖದ ಪ್ರಾಪ್ತಿಯಾಗುವುದು. ಮತ್ತು ಈ ಯಾವ ಆತ್ಮಸುಖದಲ್ಲಿ ಮಾಯೆಯ ಗುಣದೋಷಗಳು ಕೂಡಲೇ ನಾಶಹೊಂದುವುವು ॥೩೪೭॥

ಆತ್ಮಮಾಯೆಯ ಗುಣಗಳ ನಾಶ ಮಾಡುವುದಕ್ಕಾಗಿ ಶಿಷ್ಯನು ಚತುರನಾಗಿ ಮತ್ತು ಬುದ್ಧಿವಂತನಾಗಿ ಹಾಗೂ ನಿರಂತರವಾಗಿ ದೈವೀ ಸಂಪತ್ತಿನ ಆಶ್ರಯ ಹೊಂದಿ ಯಾವಾಗಲೂ ಸದ್ಗುಣಸಂಪನ್ನನಾಗಿರಬೇಕಾಗುವದು ॥೩೪೮॥

ಐಸಾ ಮುಮುಕ್ಷು ಅಧಿಕಾರವಂತು । ತ್ಯಾಸೀ ಶಾಬ್ದ ಪರ ನಿಷ್ಣಾತು । ಗುರೂನೀ ಮಾಥಾ ಠೇವಿಲಾ ಹಾತು । ನಿಜಬೋಧು ಪ್ರಾಪ್ತ ತತ್ಕಾಳೀ ।।೩೪೯।। ನಿಜಬೋಧೀ ಬೈಸತಾ ದೃಷ್ಟೀ । ಗುಣಕಾರ್ಯ ರಿಘೇ ಗುಣಾಂಚ್ಯಾ ಪೋಟೀ । ತೇವ್ಹಾ ಗುಣುಚಿ ಗುಣಾತೇ ಆಟೀ । ತಮಾತೇ ಘೋಟೀ ಮಧ್ಯಮು ।।೩೫೦।। ತಮ ಖಾಊನ ರಜೋಗುಣ । ಅತ್ಯಂತ ಉನ್ಮತ್ತ ಝಾಲಾ ಜಾಣ । ತ್ಯಾಚೇ ದೇಖೋನಿ ಉನ್ಮತ್ತಪಣ । ಸತ್ತ್ವೇ ಸತ್ತ್ವಗುಣ ಖವಳಲಾ ।।೩೫೧।। ಜೇವ್ಹಾ ಖವಳಲಾ ಸತ್ತ್ವಗುಣ। ತ್ಯಾಸೀ ನ ಸಾಹೇ ದುಜೇಪಣ । ರಜೋಗುಣಾಂಚೇ ಪ್ರಾಶನ । ಕೇಲೇ ಜಾಣ ತತ್ಕಾಳ ।।೩೫೨।। ಕೇವಳ ಸತ್ತ್ವಾಚಾ ಸ್ವಭಾವೋ । ತೇಣೇ ನಿಜಸುಖಾಚಾ ಅನುಭವೋ । ಕ್ಷಣಕ್ಷಣಾ ನೀಚನವಾ ಪಹಾವೋ । ಅತಿನವಲಾವೋ ಅನುಭವೀ ।।೩೫೩।। ತೇಣೇ ಸುಖಾನುಭವೇ ದೇಖಾ । ರಜತಮಾಚ್ಯಾ ಬೀಜಕಣಿಕಾ । ಜ್ಯಾ ಸೃಷ್ಟಿಸೃಜನೀ ಉನ್ಮುಖಾ । ತ್ಯಾಹೀ ನಿಃಶೇಖಾ ಜಾಳಿಲ್ಯಾ ।।೩೫೪।। ತೇವ್ಹಾ ಗುಣ ಪ್ರಸವತೀ ಮಾಯಾ । ಶೋಧಿತ ಸತ್ತ್ವೇ ಆಣಿಲೀ ಲಯಾ । ತೇ ಸತ್ತ್ವವೃತ್ತಿ ಏಕಲಿಯಾ । ಅದ್ವೈತತಯಾ ಉರಲೀಸೇ ।।೩೫೫।। ತೇವ್ಹಾ ''ಬ್ರಹ್ಮಾಹಮಸ್ಮಿ'' ಲಕ್ಷಣ । ತೇಹೀ ಹೋ ಲಾಗಲೇ ಕ್ಷೀಣ । ಸೋಹಂಹಂಸಾಚೀ ಬೋಳವಣ । ತೇ ಸಂಧೀ ಜಾಣ ಹೋತಸೇ ।।೩೫೬।। ತೇಥ ದೇಹೀಚೇ ಗೇಲೇ ದೇಹಪಣ । ಜನ್ಮ ಮರಣಾ ಆಲೇ ಮರಣ । ವಿಶ್ವಾಚೇ ನ ದಿಸೇ ಭಾನ । ಆನಂಧಘನ ಕೋಂದಲಾ ।।೩೫೭।। ತೇಣೇ ಸುಖಸ್ವರೂಪ ಝಾಲೀ ದೃಷ್ಟೀ । ಆನಂದಮಯ ಝಾಲೀ ಸೃಷ್ಟೀ । ಪರಮಾನಂದೇ ಚಢಲೀ ಪುಷ್ಟೀ । ಸ್ವಾನಂದೇ ಮಿಠೀ ಘಾತಲೀ ।।೩೫೮।। ತ್ಯಾ ಸುಖಾಚೀ ಮರ್ಯಾದಾ । ಕಾಇಸೇನಿಹೀ ನವ್ಹೇ ಕದಾ । ಜೇಥ ಮೌನ ಪಡಿಲೇ ವೇದಾ । ವೃತ್ತಿ ತತ್ಪದಾ ಪಾವಲೀ ।।೩೫೯।। ದ್ವೈತ ಸರ್ವಥಾ ನಾಹೀ ಪುಢೇ । ಯಾಲಾಗೀ ವೃತ್ತೀಚೀ ವಾಢೀ ಮೋಡೇ । ತೇವ್ಹಾ ತೇಹೀ ಸುಖಸ್ವರೂಪೀ ಬುಡೇ । ಪುಢೇ ವಾಢೇ ತೇ ನಾಹೀ ।।೩೬೦।। ಜೈಸಾ ನಿರಿಂಧನ ಅಗ್ನೀ । ಜಾಯ ನಿಜತೇಜೀ ಮಿಳೂನೀ । ತೈಶೀ ವೃತ್ತಿ ಅದ್ವೈತಪಣೀ । ಮಿಳೇಮಿಳಣೀ ಸುಖರೂಪೀ ।।೩೬೧।। ಗಂಗಾ ಸಾಗರ ಮೀನಲೀ । ತೇ ಸಮುದ್ರಚಿ ಹೋಊನಿ ಠೇಲೀ । ಕಾ ಲವಣಜಳಾ ಭೇಟೀ ಝಾಲೀ । ಮಿಠೀ ಪಡಲೀ ಜಳತ್ವೇ ।।೩೬೨।। ದೀಪೀ ದೀಪು ಏಕವಟಲಾ । ಮಿಳಣೀ ಏಕುಚೀ ಹೋಊನಿ ಠೇಲಾ । ತೈಸಾ ವೃತ್ತೀಚಾ ಲಯೋ ಝಾಲಾ । ನಿರ್ವ್ಯಂಗ ಪಾವಲಾ ನಿಜಸುಖ ।।೩೬೩।।

ಈ ಪ್ರಕಾರದ ಅಧಿಕಾರೀ ಮುಮುಕ್ಷು ಪರೋಕ್ಷ ಮತ್ತು ಅಪರೋಕ್ಷ ಜ್ಞಾನದಲ್ಲಿ ಪಾರಾಂಗತನಾಗಿರುವನು. ಹೀಗಿರಲು ಸದ್ಗುರುಗಳು ಆತನ ಮಸ್ತಕದ ಮೇಲೆ ವರದ ಹಸ್ತವನ್ನಿಡುವರು. ಆಗ ತತ್ಕಾಲದಲ್ಲಿ ಆತನಿಗೆ ಆತ್ಮಜ್ಞಾನದ ಪ್ರಾಪ್ತಿಯಾಗುವುದು ।।೩೪೯।। ಆತ್ಮಜ್ಞಾನದಲ್ಲಿ ದೃಷ್ಟಿಯು ಸ್ಥಿರವಾಗುತ್ತಲೇ ಗುಣಗಳ ಕಾರ್ಯವು ಗುಣಗಳಲ್ಲಿಯೇ ಲುಪ್ತವಾಗುವುವು. ಗುಣಗಳು ಗುಣಗಳಿಗೆ ಕರಗಿಸಿಬಿಡುವುವು. ರಜೋಗುಣವು ತಮೋಗುಣವನ್ನು ನುಂಗಿಬಿಡುವುದು ।।೩೫೦।। ತಮೋ ಗುಣವನ್ನು ತಿಂದು ರಜೋಗುಣವು ಅತ್ಯಂತ ಉನ್ಮತ್ತವಾಗಲು ಅದನ್ನು ಕಂಡು ಸತ್ವಗುಣವು ಉಗ್ರವಾಗುವುದು ।।೩೫೧।। ಸತ್ವಗುಣವು ಉಗ್ರವಾಗಲು ಅದಕ್ಕೆ ಭಿನ್ನ ಭಾವವು ಸಹಿಸುವುದಾಗುವುದಿಲ್ಲ. ಆದಕ್ಕಾಗಿ ಅದು ಕೂಡಲೇ ರಜೋಗುಣವನ್ನು ನುಂಗಿಬಿಡುವುದು ।।೩೫೨।। ಶುದ್ಧ ಸತ್ವಗುಣದ ಸ್ವಭಾವವೇ ಹೀಗಿರುವುದು. ಇದರಿಂದಲೇ ಆತ್ಮಸುಖದ ಅನುಭವವು ಬರುವುದು. ಆ ಅನುಭವದ ಎಂತಹ ಆಶ್ಚರ್ಯ! ಅದು ನಿರಂತರವಾಗಿ ನಿತ್ಯ ನೂತನವಾಗಿ ತೋರುವುದು ।।೩೫೩।। ಸುಖದ ಅನುಭವದಿಂದ ಸೃಷ್ಟಿ ಉತ್ಪನ್ನ ಮಾಡಲು ಕಾರಣೀಭೂತವಾಗಿರುವ ರಜ, ತಮ ಈ ಗುಣಗಳ ಬೀಜಕಣಗಳು ಉಳಿದಿರುವುವು. ಅವೂ ಕೂಡ ಸುಟ್ಟು ಹೋಗುವುವು ।।೩೫೪।। ಆ ಸಮಯದಲ್ಲಿ ಗುಣಗಳಿಗೆ ಹುಟ್ಟಿಸುವ ಮಾಯೆಯು ಶುದ್ಧ ಸತ್ತ್ವದಿಂದ ಲಯವಾಗುವುದು. ಮತ್ತು ಕೇವಲ ಸತ್ವಗುಣ ಒಂದೇ ಒಂದು ಅದ್ವೈತರೂಪದಿಂದ ಉಳಿದುಕೊಳ್ಳುವುದು ।।೩೫೫।। ಆಗ ''ನಾನು ಬ್ರಹ್ಮನು'' ಎಂಬ ಈ ಭಾವನೆಯು ಸಹ ಮೆಲ್ಲಮೆಲ್ಲನೆ ಲಯಗೊಳ್ಳುವುದು ಮತ್ತು ಅದೇ ವೇಳೆಯಲ್ಲಿ ಆ ಪರಮ ತತ್ವವು ನಾನಾಗಿರುವೆನು ಇತ್ಯಾದಿ ಮಹಾ ವಾಕ್ಯಗಳ ಆವಶ್ಯಕತೆಯೂ ಉಳಿಯುವುದಿಲ್ಲ. ಅವು ನಿವೃತ್ತವಾಗುವುವು ।।೩೫೬।। ಆ ಸಮಯದಲ್ಲಿ ದೇಹದ ದೇಹತ್ವವು ಇಲ್ಲದಾಗುವುದು. ಮತ್ತು ಜನ್ಮ ಮರಣಗಳಿಗೆ ಮರಣ ಬರುವುದು. ಜಗತ್ತಿನ ಭಾನವು ಇಲ್ಲದಾಗುವುದು ಮತ್ತು ಸರ್ವತ್ರವೂ ಆನಂದಘನವು ತುಂಬಿಕೊಂಡಿರುವುದು ।।೩೫೭।। ಆಗ ದೃಷ್ಟಿಯು ಸುಖಮಯವಾಗುವುದು. ಸರ್ವಸೃಷ್ಟಿಯು ಆನಂದಮಯವಾಗಿ ತೋರಹತ್ತುವುದು. ಪರಮಾನಂದಕ್ಕೆ ಪೂರವು ಬರುವುದು. ಮತ್ತು ಆತ್ಮಾನಂದವು ಆಲಿಂಗಿಸುವುದು ।।೩೫೮।। ಆ ಸುಖದ ಪರಿಸಾಟಿಯನ್ನು ಯಾವುದರಿಂದಲೂ ಎಂದಿಗೂ ಮಾಡಲಾಗುವುದಿಲ್ಲ. ಅಲ್ಲಿ ವೇದಗಳಿಗೂ ಮೌನವಾಗುವಂತಹ ವೃತ್ತಿಯು ತತ್ಪದಕ್ಕೆ ಮುಟ್ಟುವುದು ।।೩೫೯।। ತದನಂತರ ದ್ವೈತವೆಂಬುವ ವಸ್ತು ಯಾವುದೂ ಉಳಿಯುವುದಿಲ್ಲ. ಆದ್ದರಿಂದ ವೃತ್ತಿಯ ಬೆಳವಣಿಗೆಯು ಮುಗಿಯುವುದು ಮತ್ತು ಅದೂ ಸಹ ಆತ್ಮಸ್ವರೂಪದಲ್ಲಿ ಲೀನಗೊಂಡಿರುವುದರಿಂದ ಮುಂದೆ ಬೆಳೆಯುವುದಿಲ್ಲ ।।೩೬೦।। ಕಾಷ್ಠಗಳು ಇಲ್ಲದಾಗಲು ಅಗ್ನಿಯು ಯಾವ ಪ್ರಕಾರವಾಗಿ ತನ್ನ ಮೂಲ ತೇಜದಲ್ಲಿ ಕೂಡಿಕೊಳ್ಳುವುದೋ, ಅದರಂತೆ ವೃತ್ತಿಯೂ ಕೂಡ ಅದ್ವೈತತನದಿಂದ ಸುಖಸ್ವರೂಪದಲ್ಲಿ ಕೂಡಿಕೊಳ್ಳುವುದು ।।೩೬೧।। ಗಂಗಾ ನದಿಯು ಸಮುದ್ರವನ್ನು ಸೇರಲು ತಕ್ಷಣವೇ ಸಮುದ್ರರೂಪವಾಗುವುದು. ಅಥವಾ ಉಪ್ಪು ನೀರಿನಲ್ಲಿ ಕೂಡಲು ಆಗ ಅದು ಎಲ್ಲವೂ ನೀರಿನ ಸ್ವರೂಪವಾಗುವುದು ।।೩೬೨।। ಒಂದು ದೀಪವು ಇನ್ನೊಂದು ದೀಪವನ್ನು ಹೊತ್ತಿಸಲು ಮೊದಲನೆಯ ಪ್ರಕಾಶದಲ್ಲಿ ಎರಡನೆಯ ಪ್ರಕಾಶವು ಕೂಡಲೇ ಕೂಡಿಕೊಳ್ಳುವುದು. ಅದರಂತೆ ಆತ್ಮಸ್ವರೂಪದಲ್ಲಿ ವೃತ್ತಿಯು ಲಯಗೊಳ್ಳಲು ಕೂಡಲೇ ಆತ್ಮಸುಖದ ಅನುಭವವು ಬರುವುದು ।।೩೬೩।।

ತೇವ್ಹಾ ಆತ್ಮಾ ಏಕ ಅದ್ವೈತ । ತೇಹೀ ಮ್ಹಣಣೇ ನಾಹೀ ತೇಥ । ಏವಂ ದ್ವೈತಾದ್ವೈತಾತೀತ । ನಿತ್ಯ ನಿಶ್ಚಿತ ನಿಜಾತ್ಮಾ ॥೩೬೪॥ ತೋ ಜ್ಞಾನಸ್ವರೂಪ ಸ್ವಪ್ರಕಾಶ । ಅವಿಕಾರೀ ಅವಿನಾಶ । ಅಕರ್ತಾ ಅಭೋಕ್ತಾ ಉದಾಸ । ನಿರ್ವಿಶೇಷ ನಿಜರೂಪ ॥೩೬೫॥ ತೋ ಅದೇಹೀ ಅಗೋತ್ರ । ಅಚಕ್ಷು ಅಶ್ರೋತ್ರ । ಅಮನಸ್ಕ ಅಮಂತ್ರ । ಸರ್ವಮಂತ್ರ - ಮಂತ್ರಾರ್ಥ ಜೋ ॥೩೬೬॥ ಜೋ ಅಜ ಆದ್ಯ ಅಪ್ರಮೇಯ । ಅತರ್ಕ್ಯ ಅಲಕ್ಷ್ಯ ಅವ್ಯಯ । ನಾಮರೂಪಾದಿ ಅಭಾವ್ಯ । ಭಾವನಾ ಭಾವ ತೇ ಶೂನ್ಯ ॥೩೬೭॥ ಜೋ ಭೋಗ್ಯ ಭೋಗ ನವ್ಹೇ ಭೋಕ್ತಾ । ಜೋ ಕಾರ್ಯಕರ್ಮ ನವ್ಹೇ ಕರ್ತಾ । ಕರ್ತಾ ಅಕರ್ತಾ ಯಾ ವಾರ್ತಾ । ಜೇಥ ಸರ್ವಥಾ ನಿಮಾಲ್ಯಾ ॥೩೬೮॥ ಜೋ ಅವಿನಾಶೀ ಅಭಂಗ । ಜೋ ಶುದ್ಧ ಬುದ್ಧ ಅಸಂಗ । ದೇಹದ್ವಯಾಚಾ ಸಂಗ । ಜ್ಯಾಜೇ ಅಂಗ ಸ್ಪರ್ಶೇನಾ ॥೩೬೯॥ ಆತ್ಮ್ಯಾವೇಗಳೇ ತೇ ಅನಿತ್ಯ । ಹಾ ಪೂರ್ವನಿಶ್ಚಯ ಹೋತಾ ಸತ್ಯ । ಆತಾ ಬುಡಾಲೇ ನಿತ್ಯಾನಿತ್ಯ । ಸಬರಾಭರಿತ ನಿಜಾತ್ಮಾ ॥೩೭೦॥ ನೇಣಪಣ ನಿಮಾಲೇ ಸರ್ವಥಾ । ಬುಡಾಲೀ ಜಾಣಪಣಾಚೀ ಅವಸ್ಥಾ । ಗುಣಗುಣೀಗುಣಾತೀತತಾ । ಹೇಹೀ ತತ್ತ್ವತಾ ತೇಥ ನಾಹೀ ॥೩೭೧॥ ಉದ್ಧವಾ ಪರಮಾತ್ಮಾ ತೋ ತತ್ತ್ವತಾ । ಹಾ ಮಾಝಾ ನಿಶ್ಚಯೋ ಸರ್ವಥಾ । ತೋಚಿ ಉಪನಿಷದರ್ಥೀ ಅರ್ಥಿತಾ । ನಿಜಾತ್ಮತಾ ಪ್ರತಿಪಾದ್ಯ ॥೩೭೨॥ ಯೇಥ ಪಾವಲಿಯಾಹಿ ವೃತ್ತಿ । ಹೋಯ ಸಂಸಾರನಿವೃತ್ತೀ । ಹಾಚಿ ವೇದಾಂತೀ ಸಿದ್ಧಾಂತೀ । ನಿಶ್ಚಯೋ ನಿಶ್ಚಿತೀ ಕೇಲಾ ಅಸೇ ॥೩೭೩॥ ಯೇಥೂನಿ ಕಾರ್ಯ - ಕರ್ಮ ಕರ್ತವ್ಯತಾ । ನಿಃಶೇಷ ಖುಂಟಲೀ ಸರ್ವಥಾ । ನಿಜೇ ನಿಜರೂಪ ನಿಜಾತ್ಮತಾ । ಜಾಣ ತತ್ತ್ವತಾ ಪಾವಲ್ಯಾ ॥೩೭೪॥ ಹೇ ಅದ್ವೈತಶ್ರುತಿಸುರವಾಡೇ । ಸದ್ಗುರುಕೃಪಾ - ಉಜಿಯೇಡೇ । ವೃತ್ತಿ ನಿಜಾತ್ಮಪದಾ ಚಢೇ । ಭಾಗ್ಯ ಕೇವ್ಢಡೇ ಪಾಹೇ ಪಾ ॥೩೭೫॥ ಮೀ ವಂದ್ಯ ದೇವಾದಿದೇವಾ । ತ್ಯಾ ಮಾಝಾಹೀ ನಿಜಜ್ಞಾನಠೇವಾ । ಪರಮ ಕೃಪೇನೇ ಉದ್ಧವಾ । ತುಜಮ್ಯಾ ಆಘವಾ ದೀಧಲಾ ॥೩೭೬॥ ತುಜ ಹೋಆವಯಾ ನಿವೃತ್ತೀ । ಹಾಚಿ ಅರ್ಥು ನಾನಾ ಸಮ್ಮತೀ । ಸಾಂಗಿತಲಾ ಪರಮ ಪ್ರೀತೀ । ಜಾಣ ನಿಶ್ಚಿತೀ ಉದ್ಧವಾ ॥೩೭೭॥ ಆತಾ ದೇಹಾದಿಕ ಜೇ ಅಸಂತ । ಅತಿನಿಂದ್ಯತ್ವೇ ಕುತ್ಸಿತ । ತೇಥ ಆತಳೋ ನೇದೀ ಚಿತ್ತ । ಹೋಈ ಅಲಿಪ್ತ ಪರಮಾರ್ಥೀ ॥೩೭೮॥

ಆಗ ಆತ್ಮವು ಅದ್ವೈತವಾಗಿದೆ ಎಂದು ಹೇಳಲೂ ಸಹ ಅಲ್ಲಿ ಅವಕಾಶ ಇರುವುದಿಲ್ಲ. ಕಾರಣ ದ್ವೈತ, ಅದ್ವೈತ ಇವುಗಳನ್ನು ದಾಟಿ ನಿಶ್ಚಿತ ಮತ್ತು ನಿತ್ಯ ಆತ್ಮದ ಸ್ವರೂಪವಿರುವುದು ॥೩೬೪॥ ಆ ಆತ್ಮವು ಜ್ಞಾನಸ್ವರೂಪ, ಸ್ವಯಂಪ್ರಕಾಶೀ, ಅವಿಕಾರೀ, ಅವಿನಾಶೀ, ಅಕರ್ತಾ, ಅಭೋಕ್ತಾ ಉದಾಸ ಮತ್ತು ನಿರ್ವಿಶೇಷ ಹೀಗೆ ನಿಜಾತ್ಮ ಸ್ವರೂಪವಾಗಿದೆ ॥೩೬೫॥ ಅದಕ್ಕೆ ದೇಹವಿಲ್ಲ, ಕುಲವಿಲ್ಲ. ಅದಕ್ಕೆಕಣ್ಣುಗಳಿಲ್ಲ, ಕಿವಿಗಳಿಲ್ಲ, ಅದಕ್ಕೆ ಮನವಿಲ್ಲ, ಮಂತ್ರರಹಿತವಾಗಿದ್ದು ಮಂತ್ರದಲ್ಲಿನ ಮಂತ್ರಾರ್ಥವಾಗಿರುವುದು ॥೩೬೬॥ ಆತ್ಮವು ಅಜ, ಆದ್ಯ, ಅಪ್ರಮೇಯ, ಅತರ್ಕ್ಯ, ಅಲಕ್ಷ್ಯ, ಅವ್ಯಯ, ನಾಮರೂಪ ರಹಿತ, ಭಾವ - ಅಭಾವಶೂನ್ಯವಾಗಿರುವುದು ॥೩೬೭॥ ಆತ್ಮವು ಭೋಕ್ತಾ, ಭೋಗ್ಯ ಮತ್ತು ಭೋಗ ಇವುಗಳಲ್ಲ ಮತ್ತು ಕರ್ತಾ, ಕಾರ್ಯ ಹಾಗೂ ಕರ್ಮವೂ ಅಲ್ಲ. ಅಲ್ಲಿ ಕರ್ತಾ ಹಾಗೂ ಅಕರ್ತಾ ಎಂಬೆರಡರ ವಾರ್ತೆಯೂ ಇಲ್ಲದಾಯಿತು ॥೩೬೮॥ ಆತ್ಮವು ಅವಿನಾಶೀ, ಅಭಂಗ, ಶುದ್ಧಬುದ್ಧ, ಅಸಂಗವಾಗಿರುವುದು. ಅದಕ್ಕೆ ಸ್ಥೂಲ ಮತ್ತು ಸೂಕ್ಷ್ಮ ಈ ದೇಹದ್ವಯದ ಸ್ಪರ್ಶವು ಎಂದೂ ಆಗಲಾರದು ॥೩೬೯॥ ಆತ್ಮವನ್ನು ಬಿಟ್ಟು ಇತರ ಎಲ್ಲವೂ ನಶ್ವರವಾಗಿರುವುವು. ಈಪೂರ್ವ ನಿಶ್ಚಯವು ದೃಢವಾಯಿತೆಂದರೆ, ನಿತ್ಯ ಮತ್ತು ಅನಿತ್ಯ ಎರಡೂ ಇಲ್ಲದಾಗಿ ಅಂತರ್ಬಾಹ್ಯ ಆತ್ಮಸ್ವರೂಪ ಒಂದೇ ಉಳಿದುಕೊಳ್ಳುವುದು ॥೩೭೦॥ ಅಜ್ಞಾನತನವು ಎಲ್ಲವೂ ಮುಗಿದ್ಹೋಯಿತು ಮತ್ತು ಜ್ಞಾನತನವೂ ಲೋಪಗೊಂಡಿತು. ಗುಣ, ಗುಣಿ, ಗುಣಾತೀತತ್ವ ಇವು ಸಹ ವಸ್ತುತಃ ಅಲ್ಲಿರಲಾರವು ॥೩೭೧॥ ಹೇ ಉದ್ಧವನೇ, ನಿಜವಾಗಿಯೂ ಪರಮಾತ್ಮನು ಮಾತ್ರ ಸತ್ಯವಾಗಿರುವನು. ಇದು ನನ್ನ ಪೂರ್ಣವಾದ ನಿಶ್ಚಯವಾಗಿರುವುದು. ಉಪನಿಷತ್‌ನಲ್ಲಿ ಹೇಳಿರುವ ಆತ್ಮತತ್ವವು ಇದೇ ಆಗಿರುವುದು ॥೩೭೨॥ ವೃತ್ತಿಯು ಎಲ್ಲಿಯವರೆಗೆ ಬಂದು ಮುಟ್ಟಿದೆ ಎಂದರೆ, ಅಲ್ಲಿ ಸಂಸಾರದ ಸಹಜ ನಿವೃತ್ತಿಯಾಗುವುದು. ಇದೇ ನಿಶ್ಚಯವನ್ನು ವೇದಾಂತದಲ್ಲಿ ಸಿದ್ಧಾಂತದಲ್ಲಿ ದೃಢಗೊಳಿಸಲಾಗಿದೆ॥೩೭೩॥ ನಿಜಾತ್ಮ ಸ್ವರೂಪದ ಪ್ರಾಪ್ತಿಯಾಯಿತೆಂದರೆ ಕಾರ್ಯ, ಕರ್ಮ ಮತ್ತು ಕರ್ತವ್ಯ ಇವೆಲ್ಲವೂ ನಿಃಶೇಷವಾಗಿ ಇಲ್ಲದಾಗುವುವು ॥೩೭೪॥ ಅದ್ವೈತ ಪ್ರತಿಪಾದಕ ವೇದವಾಕ್ಯದ ಮನನದಿಂದ ಮತ್ತು ಗುರುಕೃಪೆಯ ಪ್ರಕಾಶದಿಂದ ವೃತ್ತಿಶೂನ್ಯ ಅವಸ್ಥೆಯು ಪ್ರಾಪ್ತವಾಗುವುದು ಮತ್ತು ಅದು ಆತ್ಮಸ್ವರೂಪಕ್ಕೆ ಹೋಗಿ ಮುಟ್ಟುವುದು. ಇದು ಎಂತಹ ಪರಮ ಭಾಗ್ಯ! ನೋಡು ॥೩೭೫॥ ಹೇ ಉದ್ಧವನೇ, ನಾನು ಯಾವ ದೇವತೆಗಳ ಆದಿದೇವನಿಗೂ ವಂದ್ಯನಾಗಿರುವೆನು. ಆ ಯಾವ ನನ್ನ ಜ್ಞಾನರೂಪವಾದ ಎಲ್ಲ ನಿಧಿಯನ್ನು ನಾನು ನಿನಗೆ ಪರಮ ಕೃಪೆಯಿಂದ ನೀಡಿರುವೆನು ॥೩೭೬॥ ಹೇ ಉದ್ಧವನೇ, ನೀನು ಪ್ರಪಂಚದಿಂದ ನಿವೃತ್ತನಾಗಬೇಕೆಂದು ನಾನು ಈ ವಿಷಯಕ್ಕಾಗಿಯೇ ಅನೇಕ ಶ್ರುತಿಗಳ ಆಧಾರವನ್ನು ತೆಗೆದುಕೊಂಡು ನಿನಗೆ ಅತ್ಯಂತ ಪ್ರೇಮದಿಂದ ಹೇಳಿರುವೆನು ॥೩೭೭॥ ಹೇ ಉದ್ಧವನೇ, ಈಗ ದೇಹ ಮೊದಲು ಮಾಡಿ ಮಿಥ್ಯೆಯಾಗಿರುವುದೆಲ್ಲವನ್ನು, ಅತ್ಯಂತ ನಿಂದ್ಯ, ತಿರಸ್ಕಾರಕ, ಇವುಗಳಲ್ಲಿ ನೀನು ನಿನ್ನ ಚಿತ್ತವನ್ನು ಇಡಬೇಡ. ನೀನು ಇವುಗಳಿಂದ ಅಲಿಪ್ತನಾಗಿ ಪರಮಾರ್ಥಿಯಾಗು ॥೩೭೮॥

ಹೇ ತುಜ ಝಾಲೀ ಅಲಭ್ಯ ಪ್ರಾಪ್ತೀ । ಪರೀ ಯತ್ನ ಕರಾವಾ ಅತಿನಿಗುತೀ । ಯೇಥ ಮತಾಂತರೇ ಭಳೂ ಯೇತೀ । ತೇಹೀ ಉಪಪತ್ತಿ ಪರಿಯೇಸೀ ।೩೭೯॥

ಅಥೈಷಾಂ ಕರ್ಮಕರ್ತೄಣಾಂ ಭೋಕ್ತೄಣಾಂ ಸುಖದುಃಖಯೋಃ ।
ನಾನಾತ್ವಮಥ ನಿತ್ಯತ್ವಂ ಲೋಕಕಾಲಾಗಮಾತ್ಮನಾಮ್ ।೧೪॥

ಅರ್ಥ :- ಈಗ ಈ ಕರ್ಮಗಳನ್ನು ಮಾಡುವ ಮತ್ತು ಸುಖ ದುಃಖಗಳನ್ನು ಭೋಗಿಸುವ ಜೀವಕ್ಕೆ ನಾನಾತ್ವವು ಇದೆ ಎಂದು ನೀನು ಮನ್ನಿಸಬಹುದು. ಅಥವಾ ಲೋಕ, ಕಾಲ, ವೇದ ಮತ್ತು ಆತ್ಮಗಳಿಗೆ ನಿತ್ಯತ್ವವು ಇದೆ ಎಂದು ನೀನು ಮನ್ನಿಸಬಹುದು. ಭೋಗ್ಯ ಪದಾರ್ಥಗಳ ವಿಚ್ಛೇದವಾಗುತ್ತಿರುವುದರಿಂದ ಅವುಗಳಿಗೆ ಮಾಯಾ ಮಮತ್ವವು ಇದೆ. ಆದ್ದರಿಂದ ಆ ವಿಷಯದಲ್ಲಿ ವೈರಾಗ್ಯವು ಉತ್ಪನ್ನವಾಗಬಹುದೆಂದು ಹೀಗೆ ಹೇಳಿದರೆ ಅದು ಕೂಡ ಸರಿಯಲ್ಲ.

ನಾನಾ ಫಳೇ ಅಭಿಲಾಷಿತೇ । ಕರ್ಮಾಚೇ ಜೇ ಕರ್ಮಕರ್ತೇ । ಸುಖದುಃಖಾಚೇ ಜೇ ಭೋಕ್ತೇ । ಅನೇಕತ್ವೇ ಯೇಥೇ ಅನಂತ ।೩೮೦॥ ಮ್ಹಣತೀ ಜೇ ಮಾನಿತೀ ಏಕಾತ್ಮತಾ । ತರೀ ಏಕಾಚೇನಿ ಸುಖೇ ಸುಖ ಸಮಸ್ತಾ । ಕಾ ಏಕಾಚೇನಿ ಪಾಪೇ ಪಾಪತಾ । ನ ಘಡೇ ಸರ್ವಥಾ ಸಕಳಾಂಸೀ ।೩೮೧॥ ಐಸೇ ಕರ್ಮವಾದಿಯಾಂಚೇ ಮತ । ಜೀವ ನಿತ್ಯ ಆಣಿ ಅನಂತ । ಮುಖ್ಯ ಈಶ್ವರಚಿ ನಾಹೀ ಮ್ಹಣತ । ಕರ್ತೇ ಯೇಥ ನಿಜಕರ್ಮ ।೩೮೨॥ ಮೀಪಣೇ ಜೇ ಸ್ಫುರೇ ಸ್ಫುರಣ । ತೇ ಪ್ರತಿಶರೀರೀ ಜೀವ ಭಿನ್ನ । ತ್ಯಾಂಚ್ಯಾ ಸ್ವರೂಪಾಚೇ ಪ್ರಮಾಣ । ಕರ್ತಾ ಭೋಕ್ತಾ ಜಾಣ ಮ್ಹಣತಾತಿ ।೩೮೩॥ ಐಕೇ ವಿವಂಚನಾ ಸಾವಚಿತ್ತ । ಲೋಕ ಕಾಳ ಶ್ರುತಿ ಜೀವಿತ । ಅನೇಕತ್ವೇ ಅನಿತ್ಯ । ಹೇ ವೇದಾಂತಮತ ಪೈ ಮಾಝೇ ।೩೮೪॥ ಉದ್ಧವಾ ಕರ್ಮವಾದ್ಯಾಂಚೇ ಐಸೇ ಮತ । ಸತ್ಯ ಮಾನೀಲ ತುಝೇ ಚಿತ್ತ । ತರೀ ಬುಡವೀಲ ನಿಜಸ್ವಾರ್ಥ । ಅಂಗೀ ಅನರ್ಥ ವಾಜೇಲ ।೩೮೫॥ ತೋಚಿ ಅನರ್ಥ ಮ್ಹಣಸೀ ಕೈಸಾ । ತರೀ ಕರ್ಮವಾದ್ಯಾಂಚಾ ಭಾವೋ ಐಸಾ । ಹಾ ಪೂರ್ವಪಕ್ಷಾ ಚಾ ಠಸಾ । ಅಭಿಪ್ರಾವೋ ಐಸಾ ಪರಿಯೇಸೀ ।೩೮೬॥ ಪರಮಾತ್ಮಾ ನಿರ್ವಿಕಾರ ರೂಪ । ಏಕ ನ ಮಾನಿತೀ ಸರ್ವಸ್ವರೂಪ । ಸನ್ಯಾಸು ಐಕತಾ ಮ್ಹಣತೀ ಪಾಪ । ಮತಜಲ್ಪ ಮತವಾದ್ಯಾ ।೩೮೭॥ ತ್ಯಾಗ ಸನ್ಯಾಸ ಜೇ ಕರಿತೀ । ತ್ಯಾಂತೇ ಅನಧಿಕಾರೀ ಮ್ಹಣತೀ । ಕರ್ಮ ಮುಖ್ಯತ್ವೇ ಮಾನಿತೀ । ವೈರಾಗ್ಯ ನಿಂದಿತೀ ನಿಜಮತೇ ।೩೮೮॥ ಕರ್ಮ ಕರೋನಿ ಭೋಗಿಜೇ ಸುಖ । ತೇ ಕರ್ಮ ತ್ಯಜತೀ ನಿಃಶೇಖ । ನಿಷ್ಕರ್ಮಾಸೀ ಕೈಚೇ ಸುಖ । ಪರಮ ದುಃಖ ತೋ ತ್ಯಾಗು ।೩೮೯॥

ನಿನಗೆ ಇದೊಂದು ಅಲಭ್ಯ ಲಾಭವಾಗಿರುವುದು. ಆದ್ದರಿಂದ ಈಗ ಅದಕ್ಕಾಗಿ ಬಹು ಲಕ್ಷ ಕೊಟ್ಟು ಪ್ರಯತ್ನವನ್ನು ಮಾಡು. ಅವುಗಳಲ್ಲಿ ಅನೇಕ ಪ್ರಕಾರದ ಮತಭೇದಗಳು ನಿನ್ನನ್ನು ಪೀಡಿಸಲು ಬರುವುವು. ಅದಕ್ಕಾಗಿ ಅವುಗಳ ವಿಚಾರವನ್ನೂ ಈಗ ಕೇಳು ।೩೭೯॥

ಅನೇಕ ಪ್ರಕಾರಗಳ ಫಲಗಳ ಇಚ್ಛೆಯನ್ನು ಧರಿಸಿ, ಅನೇಕ ಕರ್ಮಗಳನ್ನು ಮಾಡುವವರು ಮತ್ತು ಅದಕ್ಕೆ ಅನುಸರಿಸಿ ಸುಖದುಃಖಗಳನ್ನು ಭೋಗಿಸುವವರು ಅಸಂಖ್ಯರಾಗಿರುವರು ।೩೮೦॥ ಸರ್ವ ಜೀವಿಗಳು ಒಂದೇ ಎಂದು ಕೆಲವರು ಹೇಳುವರು. ಆದರೆ ಹೀಗೆ ಹೇಳುವುದು ಬರೋಬರೀಯಲ್ಲ. ಕಾರಣ ಹಾಗಿದ್ದರೆ ಒಬ್ಬರ ಸುಖದಿಂದ ಎಲ್ಲರಿಗೂ ಸುಖವಾಗುತ್ತಿತ್ತು. ಅಥವಾ ಒಬ್ಬರ ಪಾಪದಿಂದ ಎಲ್ಲರೂ ಪಾತಕೀಗಳಾಗುತ್ತಿದ್ದರು. ಆದರೆ ಹೀಗೆ ಎಲ್ಲರಿಗೂ ಆಗುವುದಿಲ್ಲ ।೩೮೧॥ ಕರ್ಮವಾದಿಗಳ ಮತವು ಹೇಗಿರುವುದೆಂದರೆ, ಜೀವವು ನಿತ್ಯ ಮತ್ತು ಅನಂತವಾಗಿರುವುದು. ಪ್ರತ್ಯೇಕರಿಗೆ ಸುಖದುಃಖಗಳ ಅನುಭವವು ಭಿನ್ನ ಭಿನ್ನವಾಗಿರುವುದು. ಮುಖ್ಯವಾಗಿ ಈಶ್ವರನೇ ಇಲ್ಲ.ನಮ್ಮ ಕರ್ಮಗಳಲ್ಲಿಯೇ ಎಲ್ಲ ಕರ್ತೃತ್ವವು ಇರುವುದು ।೩೮೨॥ ಮನದಲ್ಲಿ ನಾನು ಎಂಬುವ ಯಾವ ಅಹಂಭಾವವು ಉತ್ಪನ್ನವಾಗುವುದೋ, ಅದು ಪ್ರತ್ಯೇಕ ಶರೀರದಲ್ಲಿ ಭಿನ್ನವಾಗಿರುವುದು. ಆದ್ದರಿಂದ ಜೀವಿಗಳೂ ಭಿನ್ನವಾಗಿರುವುವು. ಕರ್ತಾ ಮತ್ತು ಬೋಕ್ತಾ ಎಂಬುದು ಅದರ ಸ್ವರೂಪದ ಪ್ರಮಾಣವಾಗಿರುವುದು. ಹೀಗೆ ಅವರು ಹೇಳುವರು ।೩೮೩॥ ಹೇ ಉದ್ಧವನೇ, ಈಗ ಮುಂದಿನ ವಿವೇಚನವನ್ನು ಏಕಾಗ್ರತೆಯಿಂದ ಶ್ರವಣ ಮಾಡು. ಲೋಕ, ಕಾಲ, ಶ್ರುತೀ ಮತ್ತು ಜೀವಿತವು ಇವು ಅನೇಕವಾಗಿರುವುದರಿಂದ ಅವು ಅನಿತ್ಯವಾಗಿರುವುವು. ಇದು ನನ್ನ ವೇದಾಂತಿಕ ಮತವಾಗಿದೆ ।೩೮೪॥ ಉದ್ಧವಾ, ಕರ್ಮವಾದಿಗಳವರ ಮತವನ್ನು ನಿಜವೆಂದು ತಿಳಿದರೆ ನೀನು ನಿನ್ನ ನಿಜಸ್ವಾರ್ಥವನ್ನು ಕಳೆದುಕೊಳ್ಳುವೆ ಮತ್ತು ಅನರ್ಥಕ್ಕೆ ಗುರಿಯಾಗುವೆ ।೩೮೫॥ ಆ ಅನರ್ಥವು ಯಾವುದೆಂಬುದು ಕೇಳು. ಕರ್ಮವಾದಿಗಳ ಈ ಭಾವವು ಕೇವಲ ಪೂರ್ವಪಕ್ಷವೇ ಆಗಿರುವುದು ।೩೮೬॥ ಪರಮಾತ್ಮನು ನಿರ್ವಿಕಾರ ರೂಪನಾಗಿದ್ದು ಆತನೊಬ್ಬನು ಸರ್ವಾತ್ಮನಾಗಿರುವನು. ಇದು ಅವರಿಗೆ ಮಾನ್ಯವಿಲ್ಲ. ಸನ್ಯಾಸ ಎಂಬ ಶಬ್ದವನ್ನು ಕೇಳುತ್ತಲೇ ಅವರಿಗೆ ಮಹಾಪಾಪವೆನಿಸುವುದು. ತಮ್ಮ ಈ ಮತದ ಅಭಿಮಾನವು ಇದ್ದವರಿಗೆ ಇಂತಹ ಬಡಬಡಿಕೆ ಆರಂಭವಿರುವುದು ।೩೮೭॥ ತ್ಯಾಗ ಅಥವಾ ಸನ್ಯಾಸ ಸ್ವೀಕರಿಸುವವರಿಗೆ ಅವರು ಇವರಿಗೆ ಅನಧಿಕಾರೀ ಎನ್ನುವರು. ಅವರು ಕೇವಲ ಕರ್ಮಗಳನ್ನೇ ಮನ್ನಿಸುವರು. ಮತ್ತು ವೈರಾಗ್ಯದ ನಿಂದೆ ಮಾಡುವರು ।೩೮೮॥ ಅವರು ಹೇಳುವುದೇನೆಂದರೆ ಕರ್ಮಗಳನ್ನು ಮಾಡಬೇಕು,ಮತ್ತು ಸುಖವನ್ನು ಭೋಗಿಸಬೇಕು. ಯಾರು ಕರ್ಮಗಳನ್ನು ಪೂರ್ಣವಾಗಿ ತ್ಯಜಿಸುವರೋ, ಅವರಿಗೆ ಸುಖವಾದರೂ ಹೇಗೆ ಸಿಗಬೇಕು? ತ್ಯಾಗವು ಅತ್ಯಂತ ದುಃಖದಾಯಕವಾಗಿರುವುದು ಎಂದು ಹೇಳುವರು ।೩೮೯॥

ವೈರಾಗ್ಯ ನ ಘಡಾವಯಾ ಕಾರಣ । ಚೌ ಪ್ರಕಾರೀ ಬೋಲತೀ ಜಾಣ । ತೇಹೀ ಸಾಂಗೇನ ಮೀ ಲಕ್ಷಣ । ಸಾವಧಾನ ಪರಿಯೇಸೀ ।೪೯೦॥ ಮ್ಹಣತೀ ಅನಿತ್ಯ ಅಸತೇ ಕಾಂಹೀ । ತರೀ ವೈರಾಗ್ಯ ಘಡತೇ ತೇ ಠಾಯೀ । ಯೇಥ ಅನಿತ್ಯಚಿ ನಾಹೀ । ವೈರಾಗ್ಯೇ ಕಾಯೀ ತ್ಯಜಾವೇ ।೪೯೧॥ ವೈರಾಗ್ಯ ಹೋಯೇ ಚೌ ಪ್ರಕಾರೀ । ಮೀಮಾಂಸಕ ನಿತ್ಯ ಮಾನಿತೀ ಚಾರೀ । ನಿಜಮತಾಚಾ ಗರ್ವ ಭಾರೀ । ಚಾರ್ಹೀ ಖರೀ ನಿತ್ಯತ್ವೇ ।೪೯೨॥ ಕರ್ಮ ಪ್ರಕಾಶಕ ವೇದ ಮೂಳ । ತೋ ಆಗಮ ನಿತ್ಯ ಮಾನೀ ಅಢಳ । ಜೀವ ನಿತ್ಯಚಿ ಮ್ಹಣೇ ಸಕಳ । ಭೋಗಕಾಳ ತೋಹೀ ನಿತ್ಯ ।೪೯೩॥ ಸ್ವರ್ಗಾದಿ ಲೋಕ ಭೋಗಸ್ಥಾನ । ವೇದು ಬೋಲಿಲಾ ಆಪಣ । ಮಿಥ್ಯಾ ನವ್ಹೇ ವೇದವಚನ । ಚಾರ್ಹೀ ಪ್ರಮಾಣ ನಿತ್ಯತ್ವೇ ।೪೯೪॥ ಉದ್ಧವಾ ಯಾಪರೀ ಪಾಹೀ । ಮ್ಹಣತೀ ಅನಿತ್ಯ ಯೇಥ ನಾಹೀ । ವೈರಾಗ್ಯೇ ಕರಾವೇ ಕಾಯೀ । ಮಿಥ್ಯಾ ಪಾಹೀ ವೈರಾಗೀ ।೪೯೫॥ ಹೋ ಕಾ ಭೋಗ್ಯ ಜರೀ ನಶ್ವರ ಹೋತೇ । ಅಥವಾ ಮಾಯಿಕ ಕಾಂಹೀ ಅಸತೇ । ತರೀ ವೈರಾಗ್ಯ ಸಂಭವತೇ । ತೇ ತಂವ ಯೇಥೇ ಅಸೇನಾ ।೪೯೬॥

ಮನ್ಯಸೇ ಸರ್ವಭಾವಾನಾಂ ಸಂಸ್ಥಾ ಹ್ಯೌತ್ಪತ್ತಿಕೀ ಯಥಾ । ತತ್ತದಾಕೃತಿಭೇದೇನ ಜಾಯತೇ ಬಿದ್ಯತೇ ಚ ಧೀಃ ।೧೫॥

ಅರ್ಥ :- ಸ್ತ್ರೀ-ಪುತ್ರಾದಿ ಸರ್ವ ಪದಾರ್ಥಗಳ ಸ್ಥಿತಿಯು ಪ್ರವಾಹರೂಪದಿಂದ ನಿತ್ಯವಾಗಿರುವುದು. ಈ ಪದಾರ್ಥಗಳ ಸ್ಥಿತಿಯು ಸತ್ಯವಾಗಿರುವುದು. ಇವು ಮಾಯಾಮಯವಲ್ಲ. ಭಿನ್ನ ಭಿನ್ನ ಪದಾರ್ಥಗಳ ಆಕಾರಗಳಿಂದ ಜ್ಞಾನವು ಉತ್ಪನ್ನವಾಗುವುದು ಹಾಗೂ ನಾಶವಾಗುವುದು.

ಜೀವಾಚ್ಯಾ ಭೋಗ್ಯಪದಾರ್ಥಾ । ಸ್ರಕ್ - ಚಂದನಾದಿ - ವನಿತಾ । ತ್ಯಾಂಸೀ ಪ್ರವಾಹರೂಪೇ ನಿತ್ಯತಾ । ಮ್ಹಣತೀ ತತ್ತ್ವತಾ ಸ್ವಮತೇ ।೪೯೭॥ ಆತ್ಮಾ ಆಹೇ ಜಗನಾಹೀ । ಹೇ ಘಡಲೇಚಿ ನಾಹೀ ಕಾಂಹೀ ।ಜಳೇವೀಣ ಸಮುದ್ರ ಪಾಹೀ । ಉರಲಾ ನಾಹೀ ಸರ್ವಥಾ ।೪೯೮॥ ಸೃಷ್ಟಿ ಪ್ರವಾಹರೂಪೇ ನಿತ್ಯ । ಪಿತೃಪುತ್ರತ್ವೇ ಅಖಂಡ ವಾಹತ । ಕರ್ಮಾಸ್ತವ ಯಾತಾಯಾತ । ಸೃಷ್ಟಿ ಅನಿತ್ಯ ಹೇ ನ ಘಡೇ ।೪೯೯॥ ನಿತ್ಯಾಸೀ ಈಶ್ವರು ಕರ್ತಾ । ಹೇಹೀ ನಘಡೇ ಗಾ ತತ್ತ್ವತಾ । ನಿತ್ಯಾಚಾ ಕೋಣ ನವ್ಹೇ ಕರ್ತಾ । ಈಶ್ವರು ಸರ್ವಥಾ ಯೇಥ ನಾಹೀ ।೫೦೦॥ ವೇದಾಂತೀ ಸ್ವರೂಪಭೂತ । ಆತ್ಮಾ ಜ್ಞಾನಸ್ವರೂಪ ಮ್ಹಣತ । ಹೇಹೀ ನ ಘಡೇ ಗಾ ಯೇಥ । ಐಸೇ ಸ್ವಮತ ಬೋಲತೀ ।೫೦೧॥

ವೈರಾಗ್ಯವು ಮೂಲತಃ ಸಾಧಿಸುವುದಿಲ್ಲ. ಇದಕ್ಕೆ ನಾಲ್ಕು ಕಾರಣಗಳನ್ನು ಹೇಳುವರು. ಅದರ ಸ್ವರೂಪವನ್ನು ಈಗ ಹೇಳುವೆ, ಅದನ್ನು ಲಕ್ಷಪೂರ್ವಕವಾಗಿ ಕೇಳು ।೪೯೦॥ ಅನಿಷ್ಟವೆಂದರೆ ಅಶಾಶ್ವತವೆಂಬುದು ನಿಜವಾಗಿ ಏನಾದರೂ ಇದ್ದಿದ್ದರೆ ಅದಕ್ಕಾಗಿ ವೈರಾಗ್ಯ ಮಾಡಲು ಬರುವುದಾಗಿತ್ತು. ಆದರೆ, ಇಲ್ಲಿ ಅನಿತ್ಯ ಎಂಬುವುದು ಏನೂ ಇರುವುದಿಲ್ಲ. ಅಂದಮೇಲೆ ವೈರಾಗ್ಯದಿಂದ ಯಾವುದನ್ನು ಬಿಡಬೇಕು? ।೪೯೧॥ ಮೀಮಾಂಸಕರ ಮತವು ಹೇಗಿರುವುದೆಂದರೆ, ವೈರಾಗ್ಯವು ನಾಲ್ಕು ಪ್ರಕಾರಗಳಿಂದ ಆಗುವುದು. ಆ ನಾಲ್ಕನ್ನೂ ನಿತ್ಯ ಎಂದು ತಿಳಿಯುವರು. ನಿತ್ಯತ್ವದಿಂದ ನಾಲ್ಕೂ ಪ್ರಕಾರಗಳು ನಿಜವಾಗಿರುವುವು. ಹೀಗೆ ಅವರಿಗೆ ತಮ್ಮ ಮತದ ದೊಡ್ಡ ಅಹಂಕಾರವಿರುವುದು ।೪೯೨॥ ಕರ್ಮಕ್ಕೆ ಪ್ರಕಾಶವನ್ನು ಕೊಡುವುದು ಮೂಲತಃ ವೇದವಾಗಿರುವುದು. ಆ ಯಾವ ವೇದವು ನಿತ್ಯವಾಗಿ, ದೃಢವಾಗಿದೆ ಹೀಗೆ ಅವರು ಮಂಡಿಸುವರು. ಜೀವವು ಯಾವಾಗಲೂ ನಿತ್ಯತ್ವವಾಗಿದೆ. ಅದರಂತೆ ಭೋಗವು, ಕಾಲವು ಸಹ ನಿತ್ಯವಾಗಿರುವವು. ಹೀಗೆ ಅವರ ಹೇಳಿಕೆಯಾಗಿರುವುದು ।೪೯೩॥ ಸ್ವರ್ಗಾದಿ ಲೋಕಗಳು ಇವು ಭೋಗಗಳನ್ನು ಭೋಗಿಸುವ ಸ್ಥಾನಗಳೆಂದು ವೇದವೇ ಸ್ವತಃ ಹೇಳಿರುವುದು. ಅಂದಮೇಲೆ ವೇದವಾಕ್ಯವು ಸುಳ್ಳಾಗಿರುವುದಿಲ್ಲ. ಆದ್ದರಿಂದ ಈ ನಾಲ್ಕೂ ಪದಾರ್ಥಗಳು ನಿತ್ಯವಾಗಿವೆ ಎಂದು ಸಿದ್ಧವಾಗುವುದು।೪೯೪॥ ಹೇ ಉದ್ಧವನೇ, ಹೀಗೆ ಜಗತ್ತಿನಲ್ಲಿ ಅನಿತ್ಯವೆಂಬುದು ಯಾವುದೂ ಇಲ್ಲ ಎಂದು ಹೇಳುವರು. ಹಾಗಾದಲ್ಲಿ ವೈರಾಗ್ಯದ ಯಾವ ಉಪಯೋಗ? ವೈರಾಗ್ಯವು ಮಿಥ್ಯೆಯಾಗಿದೆ ।೪೯೫॥ ಅಹೋ! ಭೋಗಿಸಲ್ಪಡುವ ವಸ್ತುಗಳು ನಶ್ವರ ಅಥವಾ ಮಾಯಿಕವಾಗಿದ್ದರೆ ಮಾತ್ರ ವೈರಾಗ್ಯವು ಸಂಭವಿಸುತ್ತಿತ್ತು. ಆದರೆ ಹಾಗೆ ಯಾವುದೂ ಇರುವುದಿಲ್ಲ. ಹೀಗೆ ಅವರ ಮತವಾಗಿದೆ ।೪೯೬॥

ಗಂಧ, ಪುಷ್ಪ ಹಾಗೂ ಸ್ತ್ರೀ ಇವು ಜೀವದ ಭೋಗ್ಯ ಪದಾರ್ಥಗಳಾಗಿವೆ. ಇವು ಪ್ರವಾಹರೂಪವಿರುವುದರಿಂದ ಇವಕ್ಕೆ ನಿತ್ಯತ್ವವಿದೆ. ಹೀಗೆ ಅವರು ತಮ್ಮ ಮತ ಪ್ರಮಾಣವಾಗಿ ಹೇಳುವರು ।೪೯೭॥ ನೀರು ಬಿಟ್ಟು ಸಮುದ್ರವು ಹೇಗೆ ಇರಲು ಶಕ್ಯವಿಲ್ಲವೋ, ಅದರಂತೆಯೇ ಆತ್ಮಾ ಇದೆ, ಜಗತ್ತು ಇಲ್ಲ, ಇದು ಎಂದಿಗೂ ಹೀಗಾಗಲು ಶಕ್ಯವಿಲ್ಲ ।೪೯೮॥ ಸೃಷ್ಟಿಯಲ್ಲಿ ಸರ್ವವೂ ಸತತವಾಗಿ ಪ್ರವಾಹ ರೂಪದಲ್ಲಿ ಕಾರ್ಯಗಳಾಗುತ್ತಿರುವುವು. ಇವು ಎಲ್ಲವೂ ನಿತ್ಯತ್ವವಾಗಿದೆ. ಪಿತಪುತ್ರ ರೂಪದಿಂದ ಅವರ ವ್ಯವಹಾರವು ಸತತವಾಗಿ ನಡೆದಿರುವುದು. ಕರ್ಮದಿಂದಲೇ ಈ ಎಲ್ಲ ಪರಿಶ್ರಮ ನಡೆದಿದೆ. ಅಂದಮೇಲೆ ಸೃಷ್ಟಿಯು ಅನಿತ್ಯವೆಂದು ನಿಶ್ಚಯವಾಗಲಾರದು ।೪೯೯॥ ನಿತ್ಯ ವಸ್ತುಗಳ ಕರ್ತಾ ಈಶ್ವರನಾಗಲು ಶಕ್ಯವಿಲ್ಲ. ಏಕೆಂದರೆ ನಿತ್ಯ ವಸ್ತುಗಳಿಗೆ ಕಾರ್ಯದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಇಲ್ಲಿ ಈಶ್ವರ ಎನ್ನುವವರು ಯಾರೂ ಇರುವುದಿಲ್ಲ ।೫೦೦॥ ವೇದಾಂತಿ ಜನರು ಆತ್ಮಕ್ಕೆ ಜ್ಞಾನಸ್ವರೂಪವೆನ್ನುವರು. ಆದರೆ ಅದು ನಿಜವಲ್ಲ. ಹೀಗೆಂದು ಅವರು ತಮ್ಮ ಮತವನ್ನು ಪ್ರತಿಪಾದಿಸುವರು ।೫೦೧॥

ಘಟಪಟಾಕಾರ ಪಾಹಾತಾ । ಜ್ಞಾನಾಸೀ ತ್ರಿಕ್ಷಣಾವಸ್ಥಾ । ಆತ್ಮಾ ಜ್ಞಾನಸ್ವರೂಪ ಮ್ಹಣತಾ । ಲಾಜ ಸರ್ವಥಾ ತ್ಯಾ ನ ಯೇ ॥೪೦೨॥ ಏವಂ ವೇದಂತ್ಯಾಚ್ಯಾ ಠಾಯೀ । ಆತ್ಮನಿಶ್ಚಯೋ ದೃಢನಾಹೀ । "ಮೋಕ್ಷ" ಮ್ಹಣತೀ ಜೋಕಾಂಹೀ । ತೋಹೀ ಪಾಹೀ ಮಿಥ್ಯಾಚೀ ॥೪೦೩॥ ಇಂದ್ರಿಯಸುಖೇವೀಣ ಸುಖ । ಮೋಕ್ಷ ಮ್ಹಣತೀ ತೇ ಅವಿವೇಕ । ಇಂದ್ರಿಯದ್ವಾರಾ ಜೀವಾಂಸೀ ಹರಿಖ । ಭೋಗಿತಾಹೀ ಮೂರ್ಖ ನ ಮಾನಿತೀ ॥೪೦೪॥ ದೇಹೇವೀಣ ವಿದೇಹೀ । ಸುಖ ಭೋಗಿಜೇ ಕೋಣೇ ಕಾಂಹೀ । ಅದ್ವೈತವಾದೀ ಜಲ್ಪತೀ ಕಾಂಹೀ । ತೇ ಸತ್ಯ ನಾಹೀ ಸರ್ವಥಾ ॥೪೦೫॥ ಜೀವಾಸೀ ಜೇಣೇ ಸುಖಪ್ರಾಪ್ತೀ । ತೇ ಇಂದ್ರಿಯೇಚಿ ನಾಹೀ ಮ್ಹಣತೀ । ಡೋಳೇ ಫೋಡೂನಿ ದೇಖಣೇ ಹೋತೀ । ತೈಸೀ ವದಂತೀ ವೇದಾಂತ್ಯಾ ॥೪೦೬॥ ಯೇಥ ಈಶ್ವರುಚಿನಾಹೀ ಫುಡಾ । ಮಾ ತೋ ಫಳ ದೇಈಲ ಹಾ ಬೋಲ ಕುಡಾ। ಅದ್ವೈತವಾದೀ ಮೂರ್ಖ ಗಾಢಾ । ನಾಗವೀ ಮೂಢಾ ವೈರಾಗ್ಯೇ ॥೪೦೭॥ ಗಾಂವ ಠಾವೋ ನಾ ಪದವೀ । ತೋ ಮಿಥ್ಯಾ ಈಶ್ವರು ಧರೋನಿ ಜೀವೀ । ಕರ್ಮಫಳೀ ನೈರಾಶ್ಯ ಕರವೀ । ಅಥವಾ ಸಾಂಡವೀ ಕರ್ಮಾರ್ತೇ ॥೪೦೮॥ ನರದೇಹೀ ಜ್ಞಾನ ಉಪಜಲೇ । ತೇಣೇ ದೇಹಚಿ ನಾಶಿಲೇ । ಫಳೇ ವೃಕ್ಷಮೂಲ ಛೇದಿಲೇ । ಕೋಣೇ ದೇಖಿಲೇ ಕೋಠೇಹೀ ॥೪೦೯॥ ಜ್ಞಾನಾಚೇ ಪರಿಪಾಕದಶೇ । ಮ್ಹಣತೀ ಅವಘಾ ಸಂಸಾರುಚಿ ನಾಶೇ । ಸೃಷ್ಟಿ ಪ್ರವಾಹರೂಪೇ ನಿತ್ಯ ಅಸೇ । ನಿತ್ಯ ನಾಸೇ ಕೈಸೇನಿ ॥೪೧೦॥ ಮನುಷ್ಯಾಚೇ ಹೃದಯೀಚೇ ಜ್ಞಾನ । ತೇಣೇ ಸಂಸಾರಾಚೇ ನಿರ್ದಳಣ । ತರೀ ಖದ್ಯೋತತೇಜೇ ಜಾಳಿಲೇ ಜಾಣ । ಗ್ರಹಗಣ ಶಶೀ ಸೂರ್ಯ ॥೪೧೧॥ ಏವಂ ಕರೂ ಜಾತಾ ನಿವೃತ್ತೀ । ಕೇಲೇ ಕಷ್ಟ ತೇ ಮಿಥ್ಯಾ ಹೋತೀ । ಇಂದ್ರಿಯೇವೀಣ ಸುಖಪ್ರಾಪ್ತಿ । ನವ್ಹೇ ನಿಶ್ಚಿತೀ ಜೀವಾಸಿ ॥೪೧೨॥ ಯಾಲಾಗೀ ನಿವೃತ್ತಿ ತೇ ವೃಥಾ ಕಷ್ಟ । ಸರ್ವಾಸೀ ಪ್ರವೃತ್ತಿಚ ಅತಿಶ್ರೇಷ್ಠ । ಕರ್ಮೇ ಕರೋನಿಯಾ ಉದ್ಭಟ । ಫಳೇ ವರಿಷ್ಠ ಭೋಗಾವೀ ॥೪೧೩॥ ಸಂಸಾರ ಮ್ಹಣತೀ ಮಾಯಿಕ । ತೇ ಜಾಣಾವೇ ಕೇವಳ ಮೂರ್ಖ । ಸಂಸಾರಾವೇಗಳೇ ಸುಖ । ನಾಹೀ ದೇಖ ಜೀವಾಸಿ ॥೪೧೪॥ ಮನುಷ್ಯಾಧಿಕಾರೇ ಸುಖಪ್ರಾಪ್ತಿ । ಯಾಲಾಗೀ ದೇವ ಮನುಷ್ಯತ್ವ ವಾಂಛಿತೀ । ವೇದಾಂತೀ ಮನುಷ್ಯತ್ವ ನಿಂದಿತೀ । ಕೇವೀ ತೇ ಯುಕ್ತಿ ಮಾನಾವೀ ॥೪೧೫॥

ಘಟ ಪಟ ಇತ್ಯಾದಿ ಆಕಾರಗಳನ್ನು ನೋಡುತ್ತಿರಲು ಜ್ಞಾನಕ್ಕೆ ಕ್ಷಣಭಂಗುರತ್ವವು ಇದೆ ಎಂದು ತೋರುವುದು. ಹೀಗಿರಲು ಆತ್ಮವು ಜ್ಞಾನಸ್ವರೂಪವಿದೆ ಎಂದು ಹೇಳಲು ಇವರಿಗೆ ನಾಚಿಕೆ ಏಕೆ ಬರುವುದಿಲ್ಲ? ॥೪೦೨॥ ವೇದಾಂತದಲ್ಲಿಯೂ ಆತ್ಮಸ್ವರೂಪದ ಹೀಗೆ ದೃಢನಿಶ್ಚಯವಿಲ್ಲ. ಮೋಕ್ಷ ಎಂದು ಯಾವುದನ್ನು ಪ್ರತಿಪಾದಿಸುವರೋ ಅದೂ ಕೂಡ ಮಿಥ್ಯೆಯಾಗಿದೆ ॥೪೦೩॥ ಇಂದ್ರೀಯ ಜನ್ಯ ಸುಖದ ಹೊರತಾಗಿ ಮೋಕ್ಷ ಸುಖ ಸಿಗುವುದು ಎಂದು ಹೇಳುವಿಕೆಯು ಅವಿಚಾರದಿಂದ ಕೂಡಿರುವುದು. ಕಾರಣ ಇಂದ್ರಿಯ ದ್ವಾರವಾಗಿ ಸುಖದ ಪ್ರತ್ಯಕ್ಷ ಅನುಭವವಾಗುತ್ತಿರಲೂ ಸಹ ಅಜ್ಞಾನಿ ಜನರು ಅದಕ್ಕೆ ಮಿಥ್ಯೆ ಎನ್ನುವರು ॥೪೦೪॥ ದೇಹವನ್ನು ಬಿಟ್ಟುಕೊಟ್ಟು ವಿದೇಹತ್ವದಿಂದ ಯಾರಾದರೂ ಎಂದಾದರೂ ಸುಖವನ್ನು ಭೋಗಿಸಿರುವರೇ? ಅದ್ವೈತವಾದಿಗಳು ಏನೇನೋ ಹೇಳುತ್ತಿರುವರು, ಇವು ಮೂಲತಃ ನಿಜವಿರುವುದಿಲ್ಲ ॥೪೦೫॥ ಜೀವಕ್ಕೆ ಯಾವುದರಿಂದ ಸುಖವು ಪ್ರಾಪ್ತವಾಗುವುದೋ, ಆ ಯಾವ ಇಂದ್ರಿಯಗಳೇ ಮಿಥ್ಯಾ ಎಂದು ತಿಳಿಯುವರು. ಕಣ್ಣುಗಳನ್ನು ಹೊಡೆದುಕೊಂಡು ನೋಡುವಿಕೆಯಾಗಬೇಕು ಎನ್ನುವಂತೆ ಈ ಯಾವ ವೇದಾಂತಿಗಳ ವ್ಯರ್ಥ ಬಡಬಡಿಸುವಿಕೆಯಾಗಿದೆ ॥೪೦೬॥ ಮೂಲತಃ ಈಶ್ವರನೇ ಇಲ್ಲದಿರಲು ಆತನು ಫಲ ಕೊಡುವನು ಎಂದು ಹೇಳುವುದು ಸುಳ್ಳಾಗಿರುವುದು. ಅದ್ವೈತವಾದಿ ಜನರು ಅಜ್ಞಾನಿಗಳಾಗಿರುವರು. ಆದ್ದರಿಂದ ಅಜ್ಞಾನಿ ಜನರಿಗೆ ವೈರಾಗ್ಯದ ನಿಮಿತ್ತದಿಂದ ತಪ್ಪು ಮಾರ್ಗವನ್ನು ತೋರಿಸುವರು ॥೪೦೭॥ ಯಾರಿಗೆ ಊರು ಇಲ್ಲ, ಸ್ಥಳವಿಲ್ಲ ಹಾಗೂ ಯಾವ ಸತ್ತೆಯೂ ಇಲ್ಲ. ಈ ಪ್ರಕಾರದ ಸುಳ್ಳಾಗಿರುವ ಈಶ್ವರನ ಕಲ್ಪನೆಯನ್ನು ಮನದಲ್ಲಿ ದೃಢಮಾಡಿಕೊಂಡು ಕರ್ಮದ ಹಾಗೂ ಕರ್ಮಫಲದ ತ್ಯಾಗ ಮಾಡುವರು ॥೪೦೮॥ ಮನುಷ್ಯ ದೇಹದಲ್ಲಿ ಜ್ಞಾನವು ಪ್ರಾಪ್ತವಾಯಿತು ಮತ್ತು ಈ ಜ್ಞಾನದಿಂದಲೇ ದೇಹದ ನಾಶವಾಯಿತು.ವೃಕ್ಷಕ್ಕೆ ಫಲ ಬರುತ್ತಲೇ ಆ ಫಲವು ವೃಕ್ಷದ ಬೇರನ್ನೇ ಮುರಿದು ಹಾಕಿತು ಎನ್ನುವುದು ಯಾರಾದರೂ ಕಂಡಿರುವರೇ? ॥೪೦೯॥ ಜ್ಞಾನವು ಪರಿಪಕ್ವವಾಗಲು ಸರ್ವ ಸಂಸಾರವು ನಾಶಹೊಂದುವುದು. ಹೀಗೆ ಅವರ ಹೇಳಿಕೆಯಾಗಿರುವುದು. ಆದರೆ ಸೃಷ್ಟಿಯು ಪ್ರವಾಹರೂಪದಿಂದ ನಿತ್ಯವಾಗಿರುವುದು. ಹಾಗಾದರೆ ನಿತ್ಯತ್ವದ ನಾಶವು ಯಾವುದರಿಂದ ಆಗಬೇಕು? ॥೪೧೦॥ ಮನುಷ್ಯನ ಹೃದಯದ ಜ್ಞಾನವು ಸಂಸಾರವನ್ನು ಭೇದಿಸುವುದು ಎಂದು ಹೇಳುವಿಕೆಯು ಒಂದು ಮಿಂಚಿನ ಹುಳವು ನವಗ್ರಹಗಳ ಸಮುದಾಯ,ಚಂದ್ರ ಸೂರ್ಯರನ್ನು ಸುಟ್ಟು ಹಾಕಿತು ಎಂದು ಹೇಳಿದಂತಾಗುವುದು ॥೪೧೧॥ ತಾತ್ಪರ್ಯವೇನಂದರೆ, ನಿವೃತ್ತಿಯನ್ನು ಸ್ವೀಕರಿಸಲು ಹೋದರೆ ಮಾಡಿದ ಕಷ್ಟವು ವ್ಯರ್ಥವಾಗುವುದು. ಕಾರಣವೇನಂದರೆ, ಇಂದ್ರಿಯಗಳ ಹೊರತಾಗಿ ಜೀವಕ್ಕೆ ಎಂದಿಗೂ ಸುಖಪ್ರಾಪ್ತಿಯಾಗಲು ಶಕ್ಯವಿಲ್ಲ ॥೪೧೨॥ ಆದ್ದರಿಂದ ನಿವೃತ್ತಿ ಎಂದರೆ ವ್ಯರ್ಥವಾದ ಕಷ್ಟವಾಗಿದೆ. ಎಲ್ಲರಿಗೂ ಪ್ರವೃತ್ತಿಯೇ ಶ್ರೇಷ್ಠವಾಗಿರುವುದು. ಅದಕ್ಕಾಗಿ ಅನೇಕ ಪ್ರಕಾರಗಳ ಕರ್ಮವನ್ನು ಮಾಡಿ ಸ್ವರ್ಗಪ್ರಾಪ್ತಿಯಂತಹ ಉತ್ತಮೋತ್ತಮ ಫಲಗಳನ್ನು ಸತತವಾಗಿ ಭೋಗಿಸಬೇಕು ॥೪೧೩॥ ಸಂಸಾರವು ಮಾಯಿಕ ಎನ್ನುವವರು ಅಜ್ಞಾನಿಗಳಾಗಿರುವರು. ಜೀವಕ್ಕೆ ಸಂಸಾರವನ್ನು ಬಿಟ್ಟರೆ ಸುಖಕ್ಕಾಗಿ ಅನ್ಯ ಮಾರ್ಗವಿಲ್ಲ ॥೪೧೪॥ (ಮನುಷ್ಯದೇಹದಲ್ಲಿಯೇ ಸುಖದ ಪ್ರಾಪ್ತಿಯಾಗುವುದೆಂದು ದೇವಾದಿಕರೂ ಕೂಡ ಮನುಷ್ಯಜನ್ಮದ ಇಚ್ಛೆಯನ್ನು ಮಾಡುವರು.) ಆದರೆ ಈ ವೇದಾಂತಿ ಮನುಷ್ಯರು ಈ ಜನ್ಮದ ನಿಂದೆಯನ್ನು ಮಾಡುತ್ತ ಕೂಡ್ರುವರು ॥೪೧೫॥

ವೇದೇ ಅಧಿಕಾರು ಬೋಲಿಲಾ । ತೋ ವೈದುಚಿ ಇಹೀ ವೇಡಾ ಕೇಲಾ । ಯಾಂಚೇ ಲಾಗಲಾ ಜೋ ಬೋಲಾ । ತೋ ನಾಗವಲಾ ಸರ್ವಸ್ವೇ ॥೪೧೬॥ ವೇದಾಚೇ ವೇದವಚನ । ಸರ್ವಾರ್ಥೀ ತೇ ಪ್ರಮಾಣ । ಮಿಥ್ಯಾ ಮ್ಹಣತೋ ತೇ ವೇದವಚನ । ಘೋರ ಸಜ್ಞಾನ ಹೇ ಝಾಲೇ ॥೪೧೭॥ ಐಶೀ ಮೀಮಾಂಸಕಾಂಚೀ ವದಂತೀ । ನಾನಾ ಪರೀಂಚ್ಯಾ ಚಾಳಿತೀ ಯುಕ್ತೀ । ಆಪುಲೇ ಮತ ಸ್ಥಾಪಿತೀ । ತೇ ಮಿಥ್ಯಾ ನಿಶ್ಚಿತೀ ಉದ್ಧವಾ ॥೪೧೮॥ ಲಾಪನಿಕಾ ಐಸೇ ಮಿಥ್ಯಾ ತ್ಯಾಂಚೇ ಮತ । ಅಂಗೀಕರೂನಿ ಪ್ರಸ್ತುತ । ಪ್ರಪಂಚ ಅನರ್ಥತಾ ದಾವಿತ । ದೃಢ ಸ್ಥಾಪಿತ ವೈರಾಗ್ಯ ॥೪೧೯॥

ಏವಮಪ್ಯಂಗ ಸರ್ವೇಷಾಂ ದೇಹಿನಾಂ ದೇಹಯೋಗತಃ ।
ಕಾಲಾವಯುವತಃ ಸಂತಿ ಭಾವಾ ಜನ್ಮಾದಯೋಽಸಕೃತ್॥೧೬॥

ಅರ್ಥ:- ಹೇ ಉದ್ಧವನೇ, ಹೀಗೆ ಇರುವುದರಿಂದಲೇ ಸರ್ವ ಪ್ರಾಣಿಗಳ ದೇಹಸಂಬಂಧದಿಂದ ಹಾಗೂ ಕಾಲನ ಸಂವತ್ಸರಾದಿರೂಪ ಅವಯುವಗಳಿಂದ ಜನ್ಮಾದಿ ಭವವಿಕಾರವು ಮೇಲಿಂದಮೇಲೆ ಆಗುತ್ತಿರುವುವು.

ಮ್ಹಣೇ ಆಇಕೇ ಬಾಪಾ ಉದ್ಧವಾ । ಹಾ ಮಿಥ್ಯಾ ಮತವಾದು ಆಘವಾ । ಮ್ಹಣಸೀ ಕೈಸೇನಿ ಜಾಣಾವಾ । ವಿವೇಕ ಕರಾವಾ ಮತಾಂಚಾ ॥೪೨೦॥ ನಿವೃತ್ತಿ ತೇ ಕೇವಳ ಕಷ್ಟ । ಮ್ಹಣತೀ ಪ್ರವೃತ್ತಿ ಅತಿಶ್ರೇಷ್ಠ । ಪ್ರವೃತ್ತಿ ಮಾಜೀ ಪರಮ ಕಷ್ಟ । ಮರಣ ಅರಿಷ್ಟ ಅನಿವಾರ ॥೪೨೧॥ ಧರೋನಿಯಾ ಜನ್ಮಮೂಳ । ಅಖಂಡ ಲಾಗಲಾಸೇ ಕಾಳ । ಲವನಿಮಿಷ ಪಳಪಳ । ಕಾಳ ವೇಳ ಸಾಧಿತ ॥೪೨೨॥ ಜೈಸೇ ಸಂವಚೋರಾಚೇ ಸಾಜಣೇ । ತೈಸೇ ಕಾಳಾಚೇ ಜೋಗವಣೇ । ವೇಳ ಆಲ್ಯಾ ಜೀವೇಪ್ರಾಣೇ । ನಾಹೀ ರಾಖಣೇ ಸರ್ವಸ್ವೇ ॥೪೨೩॥ ಕಾಳು ನ ಮ್ಹಣೇ ಹಾಟ ಘಾಟ । ನ ಮ್ಹಣೇ ಅವಸೀ ಪಹಾಟ । ನ ಮ್ಹಣೇ ದೇಶ ವಿದೇಶ ವಾಟ । ನಾಶೀ ಉದ್ಭಟ ನಿಜತೇಜೇ ॥೪೨೪॥ ಕರಿತಾ ಪ್ರವೃತ್ತೀಚೇ ಕಷ್ಟ । ಅವಚಿತಾ ಮೃತ್ಯೂಚಾ ಚಪೇಟ । ಅಂಗೀ ವಾಜೇ ಜೇ ಉದ್ಭಟ । ಅಹಾ ಕಟಕಟ ತೇ ಕಾಳೀ ॥೪೨೫॥ ಜೀವೀ ವಾಸನೇಚಾ ಘೋರ ಹಾಂವಾ । ಮ್ಹಣೇ ಗೇಲೋ ಮೇಲೋ ಧಾಂವಾ ಪಾವಾ । ಕೋಣ ನಿವಾರೀ ಮೃತ್ಯುಪ್ರಭಾವಾ । ಉಪಾವೋ ತೇವ್ಹಾ ಚಾಲೇನಾ ॥೪೨೬॥ ಕಾಳು ಮಾರೋನಿ ನೋಸಂಡಿ । ಯಾತನಾ ಭೋಗವೀ ಗಾಢೀ । ಸವೇಂಚಿ ಗರ್ಭವಾಸೀ ಪಾಡೀ । ಜೇಥ ದುಃಖಕೋಡೀ ಅನಿವಾರ ॥೪೨೭॥

ಹೀಗಿರಲು ಇವರ ಮತವು ನಿಜವೆಂದು ಹೇಗೆ ನಂಬಬೇಕು? ವೇದವು ಅಧಿಕಾರ ವಿಷಯಕ್ಕೆ ಹೇಳಿರುವುದು. ಆ ವೇದಕ್ಕೆ ಇವರು ಹುಚ್ಚನನ್ನಾಗಿ ಮಾಡಿರುವರು. ಇವರ ಬೆನ್ನು ಹತ್ತಿದರೆ ಅವರ ಸರ್ವಸ್ವವೂ ಮುಳುಗಿದಂತೆಯೇ ಎಂದು ತಿಳಿಯಬೇಕು ॥೪೧೬॥ ವೇದವಚನವೆಂಬುವುದು ಅದು ಸರ್ವರೀತಿಯಲ್ಲಿ ಪ್ರಮಾಣವಾಗಿರುವುದು. ಈ ವೇದವಚನಗಳಿಗೆ ಇವರು ಮಿಥ್ಯೆ ಎನ್ನುವರು. ಹಾಗಾದರೆ ಇವರೇ ಮಹಾಜ್ಞಾನಿಗಳಾಗಿರುವರೇ? ॥೪೧೭॥ ಹೀಗೆ ಪೂರ್ವಮೀಮಾಂಸವಾದಿಗಳವರ ವಿಚಾರಗಳಿರುವುವು. ಅವರು ತಮ್ಮ ಮತವನ್ನು ಅನೇಕ ಪ್ರಕಾರದ ಯುಕ್ತಿ ಪ್ರಯುಕ್ತಿಗಳಿಂದ ಪ್ರಸ್ಥಾಪಿಸುತ್ತಿರುವರು. ಹೇ ಉದ್ಧವನೇ, ಅದು ಸರ್ವತೋಪರೀ ಮಿಥ್ಯೆಯಾಗಿರುವುದೆಂದು ನೀನು ನಿಶ್ಚಯವಾಗಿ ತಿಳಿದುಕೋ ॥೪೧೮॥ ಈ ಪ್ರಕಾರವಾಗಿ ಪೂರ್ವಮೀಮಾಂಸವಾದಕರ ಶಬ್ದ ಪಾಂಡಿತ್ಯವನ್ನು ಅಂಗೀಕರಿಸಿ ಪ್ರಪಂಚದಲ್ಲಿ ಬೇರೆ ಬೇರೆ ಪ್ರಕಾರಗಳ ಅನರ್ಥಗಳು ಹೇಗಾಗುತ್ತಿವೆ ಎಂಬುದನ್ನು ಭಗವಾನನು ತೋರಿಸಿಕೊಟ್ಟು ವೈರಾಗ್ಯದ ದೃಢತೆಯನ್ನು ಮಾಡುವನು ॥೪೧೯॥

ಶ್ರೀಕೃಷ್ಣನು ಹೇಳಿದನು, ಹೇ ಉದ್ಧವಾ, ಈ ಎಲ್ಲ ಮತಗಳು ಮಿಥ್ಯೆಯಾಗಿರುವುವು. ಇದನ್ನು ಹೇಗೆ ತಿಳಿಯಬೇಕೆಂದರೆ ಅವರ ಮತದ ಬಗ್ಗೆ ವಿಚಾರಮಾಡಿ ತಿಳಿಯಬೇಕು ॥೪೨೦॥ ಮೀಮಾಂಸಕರು, ನಿವೃತ್ತಿಯು ಕೇವಲ ಅತಿಶಯ ಕಷ್ಟದಾಯಕವಾಗಿದೆ ಮತ್ತು ಪ್ರವೃತ್ತಿಯು ಅತಿಶಯವಾಗಿ ಶ್ರೇಷ್ಠವಾಗಿದೆ ಎಂದು ಹೇಳುವರು. ವಿಚಾರಿಸಿ ನೋಡಲು ಪ್ರವೃತ್ತಿಯೇ ಅಧಿಕ ಕಷ್ಟಕರವಾಗಿರುವುದು. ಅದರಲ್ಲಿ ಮರಣವೆಂಬುದು ಅನಿವಾರ್ಯವಾದ ಅರಿಷ್ಟವಾಗಿರುವುದು ॥೪೨೧॥ ಜನ್ಮದ ಮೂಲದಿಂದಲೇ ಕಾಲನು ಸತತವಾಗಿ ಬೆನ್ನು ಹತ್ತಿರುವನು. ಆತನು ಘಳಿಗೆ ಲವನಿಮಿಷ ಹೀಗೆ ಒಂದೊಂದು ಕ್ಷಣ ಸಹಿತ ಸಾಧಿಸುತ್ತಿರುವನು ॥೪೨೨॥ ತನ್ನ ಜೊತೆಗೂಡಿರುವ ಕಳ್ಳನ ಮೈತ್ರಿಯು ಮೇಲ್ನೋಟಕ್ಕೆ ಬಹುಪ್ರಿಯವಾಗಿ ತೋರುವುದು. ಅದರಂತೆಯೇ ಕಾಲನ ಲಾಲನೆ ಪಾಲನೆಯಾಗಿರುವುದು ॥೪೨೩॥ ಕಾಲನು ಇದು ಬಜಾರವಿದೆ, ಇದು ನದಿಯ ದಡವಾಗಿದೆ, ಈಗ ಪೂರ್ವರಾತ್ರಿಯಾಗಿದೆ, ಈಗ ಬೆಳಗಾಗಿದೆ, ಇದು ಸ್ವದೇಶ, ಪರದೇಶ ಹೀಗೆ ಏನೇನೂ ನೋಡುವುದಿಲ್ಲ. ತನ್ನ ಯಾವ ಪ್ರಖರವಾದ ತೇಜದಿಂದ ಆತನು ಸರ್ವರನ್ನೂ ನಾಶಗೊಳಿಸುವನು ॥೪೨೪॥ ಪ್ರಪಂಚದಲ್ಲಿ ಕಷ್ಟಪಡುತ್ತಿರುವಾಗ್ಗೆ ಅಕಸ್ಮಾತ್ತಾಗಿ ಮೃತ್ಯು ಬಲವಾಗಿ ಬಂದು ಬಡೆಯುವುದು. ಆಗ ಮಾತ್ರ ಅತಿಶಯವಾಗಿ ಕಷ್ಟವಾಗುವುದು ॥೪೨೫॥ ಜೀವಿಯಲ್ಲಿ ಅನೇಕ ತರಹದ ವಾಸನೆಗಳು ತುಂಬಿರುವುವು. ಆದ್ದರಿಂದ ಆತನು ಮರಣಕಾಲದಲ್ಲಿ ಹೋಗುವೆ, ಸಾಯುವೆ, ಧಾವಿಸಿರಿ, ಕಾಪಾಡಿರಿ ಎಂದು ಬಹುವಾಗಿ ಆಕ್ರೋಶ ಮಾಡುವನು. ಇಂತಹ ಸ್ಥಿತಿಯಲ್ಲಿ ಮೃತ್ಯುವಿನ ಪ್ರಭಾವವನ್ನು ಯಾರು ನಿವಾರಿಸಬೇಕು? ಆಗ ಯಾರಿಂದಲೂ ಯಾವ ಉಪಾಯವೂ ನಡೆಯದು ॥೪೨೬॥ ಕಾಲನು ಕೇವಲ ಸಾಯಿಸಿ ಬಿಡುವುದಿಲ್ಲ. ಆತನು ಭಯಂಕರವಾದ ಯಾತನೆಗಳನ್ನು ಭೋಗಿಸಲು ಹಚ್ಚುವನು. ಯಾವುದರಲ್ಲಿ ಅನೇಕ ಕಷ್ಟದ ರಾಶಿಯೇ ತುಂಬಿರುವುದೋ, ಅಂತಹ ಗರ್ಭವಾಸದಲ್ಲಿ ಕೂಡಲೇ ದಬ್ಬುವನು ॥೪೨೭॥

ಮಾತೇಚ್ಯಾ ಜಠರಕುಹರೀ । ವಿಷ್ಠಾ ಮೂತ್ರಾಂಚ್ಯಾ ದಾಥರೀ । ಅಧೋಮುಖ ನವಮಾಸವರೀ । ಉಕಡೀ ಭಾರೀ ಜಠರಾಗ್ನೀ ॥೪೨೮॥ ವಿಷ್ಠಾ ಲೇಪು ಚಹೂಕಡೇ । ನಾಕೀ ತೋಂಡೀ ಕೃಮೀ ಕಿಡೇ । ಗರ್ಭವಾಸೀಚೇ ಕಷ್ಟ ಗಾಢೇ । ಕೋಣಾಪುಢೇ ಸಾಂಗೇಲ ॥೪೨೯॥ ಕಟುಮ್ಲ ಲವಣಮೇಳೇ । ಗರ್ಭವತೀಚೇ ಪುರತೀ ಡೋಹಳೇ । ತ್ವಚೇವಿಣ ಗರ್ಭಾಂಗ ಪೋಳೇ । ತೇಣೇ ದುಃಖೇ ಲೋಳೇ ಅತಿದುಃಖೀ ॥೪೩೦॥ ತೇ ಗರ್ಭೋದರೀಚೀ ವ್ಯಥಾ । ನೇಣತೀ ಮಾತಾ ಆಣಿ ಪಿತಾ । ತೇಥ ನಾಹೀ ಕೋಣೀ ಸೋಡವಿತಾ । ಜೀವೀಚೀ ವ್ಯಥಾ ಜೀವ ಜಾಣೇ ॥೪೩೧॥ ಜ್ಯಾ ಠಾಯಾಚೀ ಕರೂ ನಯೇ ಗೋಠೀ । ಪ್ರಕಟ ದಾವೂ ನಯೇ ದಿಠೀ । ತೇ ಯೋನಿದ್ವಾರೇ ಅತಿಸಂಕಟೀ. । ಜನ್ಮ ಶೇವಟೀ ಜೀವಾಸೀ ॥೪೩೨॥ ಜೇ ನಿತ್ಯ ಮೂತ್ರಾಚೀ ಸ್ಥಾಣೀ । ಕೀ ನವಿಯಾ ನರಕಾಚೀ ಖಾಣೀ । ಜೇ ರಜಸ್ವಲಾರುದಿರಾಚೀ ಶ್ರೇಣಿ । ಜನ್ಮ ತೇಥೂನಿ ಪಾವತೀ ॥೪೩೩॥ ಅಪವಿತ್ರ ವಿಟಾಳಶೀಚೇ ರುಧಿರ। ತೇ ಗೋಠೋನಿ ಝಾಲೇ ಜೇ ಶರೀರ । ನಿಂದ್ಯದ್ವಾರೇ ಜನ್ಮೋನಿ ನರ । ಆಮ್ಹೀ ಪವಿತ್ರ ಮ್ಹಣವಿತೀ ॥೪೩೪॥ ಗರ್ಭವಾಸಾಹೂನಿ ಗಾಢೇ । ದುಃಖ ಕೋಣ ಆಹೇ ಪುಢೇ । ಮತವಾದೀ ಬೋಲೇ ತೇ ಕುಡೇ । ಸುಖ ನಾತುಡೇ ಪ್ರವೃತ್ತೀ ॥೪೩೫॥ ಏಕೇ ಜನ್ಮೇ ಜನ್ಮ ನ ಸರೇ । ಏಕೇಮರಣೇ ಮರಣ ನೋಸರೇ । ಕೋಟಿ ಕೋಟಿಜನ್ಮಾಂಚೇ ಫೇರೇ । ಕಾಳ ಯೋನಿದ್ವಾರೇ ಕರವಿತು ॥೪೩೬॥ ಪುಢತೀ ಜನ್ಮ ಪುಢತೀ ಮರಣ। ಅನಿವಾರ ಲಾಗಲೇ ಜಾಣ। ಪ್ರವೃತ್ತಿ ಮಾಜೀ ಸುಖ ಕೋಣ । ದುಃಖ ದಾರುಣ ಭೋಗವೀ ॥೪೩೭॥ ಜನ್ಮ ಮರಣಾಮಾಜಿಲೇ ಸಂಧೀ । ಆಣಿಕಹೀ ಘೋರ ದುಃಖ ಬಾಧೀ । ತ್ಯಾ ದುಃಖಾಚೀ ದುಃಖಸಿದ್ಧೀ । ಐಕ ತ್ರಿಶುದ್ಧೀ ಸಾಂಗೇನ ॥೪೩೮॥ ಧಾಡೀಭೇಣೇ ಪಳತಾ ಥೋರ । ಆಡವೇ ನಾಗವತೀ ಚೋರ । ತೈಸೇ ಜನ್ಮ ಮರಣಾಂಚೇ ಅಂತರ । ಷಡ್ವಿಕಾರ ರಾಖಿತೀ ॥೪೩೯॥ ಷಡ್ವಿಕಾರಾಂಚ್ಯಾ ಪತಿವ್ರತಾ । ಷಡೂರ್ಮೀ ಲಾಗಲ್ಯಾ ಜೀವಿತಾ । ಏವಂ ಪ್ರವೃತ್ತಿ ಮಾಜೀ ಪರಮ ವ್ಯಥಾ। ಸುಖ ಸರ್ವಥಾ ಅಸೇನಾ ॥೪೪೦॥ ಕರ್ಮವಾದಿಯಾಂಚ್ಯಾ ಮತಾ । ಜೀವು ಸ್ವತಂತ್ರ ಕರ್ಮಕರ್ತಾ । ಮ್ಹಣತೀ ತೇ ಮಿಥ್ಯಾ ವಾರ್ತಾ । ಪರತಂತ್ರತಾ ಪ್ರತ್ಯಕ್ಷ ॥೪೪೧॥

ತಾಯಿಯ ಉದರರೂಪ ಗುಹೆಯಲ್ಲಿನ ಮಲಮೂತ್ರದ ಕೆಸರಿನಲ್ಲಿ ಒಂಬತ್ತು ತಿಂಗಳವರೆಗೆ ಕೆಳಗೆ ಮುಖಮಾಡಿ ಆತನಿಗೆ ಜಠರಾಗ್ನಿಯು ಕುದಿಸುತ್ತಿರುವುದು ॥೪೨೮॥ ಆಗ ನಾಲ್ಕೂ ಕಡೆಯಲ್ಲಿ ಮಲಮೂತ್ರದ ಲೇಪವಾಗಿರುವುದು. ಬಾಯಿ ಮೂಗಿನಲ್ಲಿ ಕ್ರಿಮಿಹುಳಗಳು ಸೇರಿರುವುವು. ಈ ಪ್ರಕಾರದ ಗರ್ಭವಾಸದಲ್ಲಿನ ದುಃಖವನ್ನು ಯಾರಲ್ಲಿ ಹೇಳಬೇಕು? ॥೪೨೯॥ ಗರ್ಭಿಣಿ ಸ್ತ್ರೀಯು ಹುಳಿ, ಖಾರ, ಕಹಿ ಇತ್ಯಾದಿಪದಾರ್ಥಗಳನ್ನು ತಿಂದು ತನ್ನ ಬಯಕೆಗಳನ್ನು ಪೂರೈಸುವಳು. ಆಗ ಗರ್ಭದ ಅಂಗಕ್ಕೆ ಪೂರ್ಣವಾಗಿ ಚರ್ಮವು ಇಲ್ಲದಿರುವುದರಿಂದ ಅದರ ಸರ್ವ ಅಂಗವು ಸುಡುತ್ತಿರುವುದು. ಆ ದುಃಖದಿಂದ ಅತ್ಯಂತ ದುಃಖಿಯಾಗಿ ಗಡಗಡಾ ಉರುಳಾಡುತ್ತಿರುವುದು ॥೪೩೦॥ ಉದರದಲ್ಲಿ ಗರ್ಭಕ್ಕೆ ಆಗುವ ದುಃಖವು ತಾಯಿ ತಂದೆಯವರಿಗೆ ತಿಳಿಯುವುದಿಲ್ಲ. ಅಲ್ಲಿ ಆಗುತ್ತಿರುವ ದುಃಖದಿಂದ ಬಿಡಿಸುವವರು ಅನ್ಯರು ಯಾರೂ ಇರುವುದಿಲ್ಲ. ಆ ಜೀವದ ಕ್ಲೇಶವನ್ನು ಆ ಜೀವವೇ ಮಾತ್ರ ಅರಿಯುವುದು ॥೪೩೧॥ ಯಾವ ಸ್ಥಾನದ ಮಾತನ್ನೂ ಸಹ ಯಾರೂ ಮುಖದಿಂದ ಹೇಳಲಾರರು, ಯಾವ ಸ್ಥಾನವನ್ನು ಪ್ರತ್ಯಕ್ಷವಾಗಿ ಯಾರೂ ಕಣ್ಣಿಗೆ ತೋರಿಸಲಾರರು, ಅಂತಹ ಯಾವ ಯೋನಿದ್ವಾರದಿಂದ ಬಹು ಸಂಕಟದಿಂದ ಕೊನೆಗೆ ಜೀವದ ಜನ್ಮವಾಗುವುದು ॥೪೩೨॥ ಯಾವುದು ಮೂತ್ರದ ಬಚ್ಚಲ, ಅಥವಾ ಒಂಬತ್ತನೆಯ ನರಕದ ಕಣಜ ಮತ್ತು ಮುಟ್ಟಾಗುವ ರಕ್ತದ ಡೋಣಿ, ಇದರಲ್ಲಿ ಪ್ರಾಣಿಯು ಜನ್ಮಕ್ಕೆ ಬರುವನು ॥೪೩೩॥ ಮುಟ್ಟಿನ ಅಪವಿತ್ರ ರಕ್ತವು ಹೆಪ್ಪುಗಟ್ಟಿ ಈ ಶರೀರವು ಸಿದ್ಧಗೊಂಡಿರುವುದು. ಇಂತಹ ಅಮಂಗಲವಾದ ದ್ವಾರದಿಂದ ಜನ್ಮಕ್ಕೆ ಬಂದು ಮನುಷ್ಯನು ತಾನು ಮಹಾ ಪವಿತ್ರನು ಎಂದು ಹೇಳಿಕೊಳ್ಳುವನು ॥೪೩೪॥ ಗರ್ಭವಾಸಕ್ಕಿಂತಲೂ ಅಧಿಕವಾದ ಬೇರೆ ಯಾವ ದುಃಖವಿದೆ? ತಾತ್ಪರ್ಯವೇನೆಂದರೆ ಈ ಯಾವ ಜಡ ಕರ್ಮವಾದಿ ಮೀಮಾಂಸಕ ಜನರು ಹೇಳುವುದೆಲ್ಲವೂ ಸುಳ್ಳಾಗಿರುವುದು. ಪ್ರವೃತ್ತಿಯಲ್ಲಿ ಸುಖವು ಮೂಲತಃ ಇರುವುದಿಲ್ಲ ॥೪೩೫॥ ಒಂದೇ ಜನ್ಮದಿಂದ ಮುಂದಿನ ಜನ್ಮದ ಗರ್ಭವಾಸವು ಮುಗಿಯುವುದಿಲ್ಲ ಅಥವಾ ಒಮ್ಮೆ ಮರಣವಾಗುತ್ತಲೇ ಮುಂದಿನ ಮರಣವು ಮುಗಿಯುವುದಿಲ್ಲ. ಕಾಲನು ಕೋಟಿ ಕೋಟಿ ಸಾರೆ ಜನ್ಮ ಮರಣಗಳ ಸುತ್ತುವಿಕೆಯನ್ನು ಯೋನಿದ್ವಾರದಿಂದ ಮಾಡಿಸುತ್ತಿರುವನು ॥೪೩೬॥ ಜನ್ಮವಾಗುತ್ತಲೇ ಮರಣವು ಮತ್ತು ಮರಣವಾಗುತ್ತಲೇ ಜನ್ಮವು. ಈ ಚಕ್ರವು ಸತತವಾಗಿ ನಡೆದಿರುವುದು. ಇಂತಹ ಪ್ರವೃತ್ತಿಯಲ್ಲಿ ಸುಖವು ಹೇಗೆ ಇರಬೇಕು? ಅಪಾರವಾದ ದುಃಖಮಾತ್ರ ಭೋಗಿಸಬೇಕಾಗುತ್ತದೆ ॥೪೩೭॥ ಜನ್ಮ ಮತ್ತು ಮರಣ ಈ ಎರಡರ ಮಧ್ಯದ ಕಾಲದಲ್ಲಿಯೂ ಅತಿಶಯವಾದ ದಾರುಣ ದುಃಖವನ್ನು ಭೋಗಿಸಬೇಕಾಗುವುದು. ಆ ದುಃಖಗಳ ಪ್ರಕಾರಗಳನ್ನು ಈಗ ಹೇಳುವೆ ॥೪೩೮॥ ಕಳ್ಳರಿಂದ ಸುಲಿಗೆಯಾದೀತೆಂದು ಭಯಪಟ್ಟು ಗಡಿಬಿಡಿಯಿಂದ ಓಡುತ್ತಿರಲು ಮಧ್ಯದಲ್ಲಿಯೇ ಕಳ್ಳರು ಬಂದು ಲಟಾಯಿಸಿ ಒಯ್ಯುವಂತೆ ಜನ್ಮ ಮರಣದ ಮಧ್ಯ ಕಾಲವನ್ನು ಷಡ್ವಿಕಾರರೂಪ ಕಳ್ಳರು ಲುಟಾಯಿಸಿ ಒಯ್ಯುವರು ॥೪೩೯॥ ಷಡ್ವಿಕಾರಗಳ ಪತಿವ್ರತೆ ಸ್ತ್ರೀಯರೆಂದರೆ ಷಡೂರ್ಮಿಗಳಾಗಿರುವುವು. ಕ್ಷುಧಾ - ತೃಷಾ, ಜನ್ಮ ಮರಣ, ಸುಖ, ದುಃಖ ಈ ಆರು ಜೀವಕ್ಕೆ ಜಿಗುಳೆ ಹುಳದಂತೆ ಅಂಟಿಕೊಂಡಿರುವುವು. ಈ ಪ್ರಕಾರವಾಗಿ ಪ್ರವೃತ್ತಿಯಲ್ಲಿ ಅತಿಶಯ ದುಃಖವು ತುಂಬಿರುವುದು. ಸುಖವು ಇಲ್ಲವೇ ಇಲ್ಲ ॥೪೪೦॥ ಈಗ ಕರ್ಮವಾದಿಗಳ ಮತದಂತೆ ಜೀವವು ಸ್ವತಂತ್ರವಾಗಿ ಕರ್ಮಕರ್ತಾ ಎಂದಿದೆ. ಆದರೆ ಹೀಗೆ ಹೇಳುವಿಕೆಯು ಸುಳ್ಳಾಗಿರುವುದು. ಕಾರಣ ಜೀವಕ್ಕೆ ಪರತಂತ್ರವಿರುವುದು ಪ್ರತ್ಯಕ್ಷವಾಗಿ ತೋರುತ್ತದೆ ॥೪೪೧॥

ತತ್ರಾಪಿ ಕರ್ಮಣಾಂ ಕರ್ತುರಸ್ವಾತಂತ್ರ್ಯಂ ಚ ಲಕ್ಷ್ಯತೇ ।
ಭೋಕ್ತುಶ್ಚ ದುಃಖಸುಖಯೋಃ ಕೋನ್ವರ್ಥೋ ವಿವಶಂಭಜೇತ್ ।೧೭॥

ಅರ್ಥ:- ಕಾಮ್ಯ ಕರ್ಮ ಮಾಡುವವರು ಶಾಶ್ವತ ಸುಖ ಬಯಸಿದರೂ ಪ್ರಪಂಚದಲ್ಲಿ ಅನೇಕ ಸಲ ಅತೃಪ್ತರಾಗಿರುತ್ತಾರೆ. ಕೆಲವೊಮ್ಮೆ ಮಾತ್ರ ತೃಪ್ತರಾಗಿರುತ್ತಾರೆ. ಇವರು ಸ್ವತಂತ್ರರಲ್ಲ. ಪರಾಧೀನರಾಗಿರುವ ಪ್ರಾಣಿಗಳಿಗೆ ಯಾವ ಅರ್ಥವು ಪ್ರಾಪ್ತವಾಗುವುದು?

ಜೀವಾಸೀ ಅಸತೀ ಸ್ವತಂತ್ರತಾ । ತರೀ ತೋ ದುಃಖಭೋಗು ನ ಭೋಗಿತಾ । ಸದಾ ಸುಖೀಚಿ ಅಸತಾ । ಪಾಪೇ ನ ಕರಿತಾ ಅಳುಮಾಳು ॥೪೪೨॥ ಜೀವು ಬಾಪುಡೇ ಸದಾ ದೀನ । ಕರ್ಮೇ ಕರೂನಿ ಕರ್ಮಾಧೀನ । ಕರ್ಮಫಳದಾತಾ ತೋ ಭಿನ್ನ । ಸುಖದುಃಖೇ ಜಾಣ ತೋ ಭೋಗವೀ ॥೪೪೩॥ ಯಾಲಾಗೀ ಈಶ್ವರಾಚೀ ಸತ್ತಾ । ತೋ ಕರ್ಮಫಳಾಚಾ ದಾತಾ । ಜೀವು ಸುಖದುಃಖಾಂಚಾ ಭೋಕ್ತಾ । ಸ್ವತಂತ್ರತಾ ತ್ಯಾ ನಾಹೀ ॥೪೪೪॥ ಐಸೇ ಲಕ್ಷಿತಾ ಲಕ್ಷಣ । ಜೀವು ತಿತಕಾ ಪರಾಧೀನ । ಪರಾಧೀನಪಣೇಜಾಣ । ಭೋಗೀ ದಾರುಣ ಸುಖದುಃಖ ॥೪೪೫॥ ಮಜಲಾಗೀ ದುಃಖ ಹೋಆವೇ । ಐಸೇ ಕೋಣೇ ಭಾವನಾ ಜೀವೇ । ನ ವಾಂಛಿತಾ ದುಃಖ ಪಾವೇ । ಯೇಣೇ ನ ಸಂಭವೇ ಸ್ವತಂತ್ರತಾ ॥೪೪೬॥ ಶ್ರುತಿಸ್ಮೃತೀತೇ ವಿಚಾರಿತಾ । ಜೀವಾಸೀ ನಾಹೀ ಸ್ವತಂತ್ರತಾ । ಪರಾಧೀನಪಣೇ ವರ್ತತಾ । ಭೋಗೀ ಅಪ್ರಾರ್ಥಿತಾ ಸುಖದುಃಖ ॥೪೪೭॥ ವಾದೀ ಪರಿಹಾರ ಕರಿತೀ । ಸಾಂಗ ಕರ್ಮ ಜೇ ನೇಣತೀ । ತೇ ತೇ ಜೀವ ದುಃಖೀ ಹೋತೀ । ಸುಖ ಪಾವತೀ ಕರ್ಮಜ್ಞ ॥೪೪೮॥ ಜೇ ಸದಾಚಾರ ಶ್ರೋತ್ರೀ । ಜೇ ಯಾಜ್ಞಿಕ ಅಗ್ನಿಹೋತ್ರೀ । ಜೇ ಉಭಯಲೋಕವ್ಯಾಪಾರೀ । ಸಾಂಗ ಕರೀ ಕರ್ಮಾತೇ ॥೪೪೯॥ ಜೇ ಅವಿಕಳ ಅವ್ಯಂಗ । ಕರ್ಮೇ ಕರೂನಿಯಾ ಸಾಂಗ । ಉಭಯ ಲೋಕೀ ಸುಖಭೋಗ । ಕರ್ಮಯೋಗ ಭೋಗಿತೀ ॥೪೫೦॥ ಕರ್ಮೀ ಜ್ಯಾಚೀ ಯೋಗ್ಯತಾ । ತೋ ಸುಖಭೋಗಾಚಾ ಭೋಕ್ತಾ । ಹೇಹೀ ನ ಘಡೇ ಗಾ ಸರ್ವಥಾ । ಐಕ ಆತಾ ಸಾಂಗೇನ ॥೪೫೧॥

ನ ದೇಹಿನಾಂ ಸುಖಂ ಕಿಂಚಿದ್ವಿದ್ಯತೇ ವಿದುಷಾಮಪಿ । ತಥಾ ಚ ದುಃಖಂ ಮೂಢಾನಾಂ ವೃಥಾಹಂಕರಣಂ ಪರಮ್ ।೧೮॥

ಅರ್ಥ :- ಮಹಾ ಮಹಾ ಕರ್ಮಕುಶಲ ವಿದ್ವಾನರಿಗೂ ಸಹ ಸುಖವು ದೊರೆಯುವುದಿಲ್ಲ. ಕೆಲವೊಮ್ಮೆ ಮಹಾಮೂರ್ಖನೂ ಕೂಡ ಸುಖಿಯಾಗಿರುತ್ತಾನೆ. ಆದ್ದರಿಂದ ಯಾರು ತಮ್ಮ ಬುದ್ಧಿಯಿಂದ ಕರ್ಮದ್ವಾರಾ ಸುಖಪ್ರಾಪ್ತಿ ಮಾಡಿಕೊಳ್ಳುವ ಗರ್ವವನ್ನು ಮಾಡುವರೋ ಅವರ ಆ ಅಭಿಮಾನವು ವ್ಯರ್ಥವಾಗಿರುವುದು.

ಕರ್ಮಾಚೇ ಜೇ ತತ್ತ್ವತಾ ಜ್ಞಾತೇ । ತೇಹೀ ದುಃಖೀ ದೇಖೋ ಯೇಥೇ । ಸುಖಿ ದೇಖಿಜೇ ಮೂರ್ಖಾತೇ । ಜೇ ಕರ್ಮಾತೇ ನಾತಳತೀ ॥೪೫೨॥

ಜೀವಕ್ಕೆ ಒಂದು ವೇಳೆ ಸ್ವಾತಂತ್ರ್ಯವಿದ್ದರೆ ಆತನು ಎಂದಿಗೂ ದುಃಖವನ್ನು ಭೋಗಿಸುತ್ತಿದ್ದಿಲ್ಲ. ಆತನು ಸದಾ ಸರ್ವಕಾಲದಲ್ಲಿಯೂ ಸುಖಿಯಾಗಿಯೇ ಇರುತ್ತಿದ್ದನು. ಪಾಪದ ಲೇಶಕೂಡ ಆತನು ಆಚರಿಸುತ್ತಿದ್ದಿಲ್ಲ ॥೪೪೨॥ ಆದರೆ, ಜೀವವು ಪಾಪ; ಯಾವಾಗಲೂ ದೀನವಾಗಿರುವುದು. ಆತನು ಕರ್ಮಗಳನ್ನು ಮಾಡಿದರೂ ಸಹ ಕರ್ಮದ ಅಧೀನನಾಗುವನು.ಕರ್ಮಫಲವನ್ನು ಕೊಡುವವನು ಬೇರೆಯೇ ಇದ್ದಾನೆ. ಆತನೇ ಸುಖದುಃಖಗಳನ್ನು ಭೋಗಿಸಲು ಹಚ್ಚುವನು. ಇದನ್ನು ಲಕ್ಷದಲ್ಲಿಡು ॥೪೪೩॥ ಅದಕ್ಕಾಗಿ ಈಶ್ವರನ ಸತ್ತೆಯನ್ನು ಒಪ್ಪಿಕೊಳ್ಳಲೇಬೇಕು. ಈಶ್ವರನು ಕರ್ಮಫಲವನ್ನು ಕೊಡುವವನು ಮತ್ತು ಯಾವ ಈ ಜೀವನು ಸುಖದುಃಖವನ್ನು ಭೋಗಿಸುವವನು. ಜೀವಕ್ಕೆ ಸ್ವಾತಂತ್ರ್ಯ ಇರುವುದಿಲ್ಲ ॥೪೪೪॥ ಈ ಲಕ್ಷಣವನ್ನು ನೋಡಲು ಜೀವವು ಎಷ್ಟೊಂದು ಪರಾಧೀನವಾಗಿರುವುದೆಂಬುದು ತಿಳಿಯುವುದು. ಈ ಪರಾಧೀನತೆಯಿಂದಲೇ ಜೀವವು ದಾರುಣವಾದ ದುಃಖಗಳನ್ನು ಭೋಗಿಸುತ್ತಿರುವುದು ॥೪೪೫॥ ನನಗೆ ದುಃಖವಾಗಬೇಕೆಂದು ಹೀಗೆ ಯಾರೂ ಮನಸ್ಸಿನಿಂದ ಇಚ್ಛೆಪಡುವುದಿಲ್ಲ. ಆದರೆ ದುಃಖವು ಇಚ್ಛೆಪಡದಿದ್ದರೂ ಪ್ರಾಪ್ತವಾಗುವುದು. ಇದರಿಂದ ಇವನಿಗೆ ಸ್ವತಂತ್ರತೆಯು ಸಂಭವಿಸಲಾರದು ॥೪೪೬॥ ಶ್ರುತೀ ಸ್ಮೃತಿಗಳನ್ನು ವಿಚಾರಿಸಿ ನೋಡಲು ಜೀವಕ್ಕೆ ಸ್ವತಂತ್ರತೆಯು ಇಲ್ಲವೆಂಬುದು ಸಿದ್ಧವಾಗುವುದು. ಅವನು ಪರಾಧೀನತೆಯಿಂದಲೇ ವರ್ತಿಸುತ್ತಿರುವನು. ಅವನಿಗೆ ಬೇಡದೆಯೇ ಸುಖದುಃಖಗಳನ್ನು ಭೋಗಿಸಬೇಕಾಗುವುದು ॥೪೪೭॥ ಇದರಿಂದ ಪ್ರತಿವಾದಿಗಳು ಹೀಗೆ ಉತ್ತರಿಸಬಹುದು. ಯಾರಿಗೆ ಯಥಾಸಾಂಗ ಕರ್ಮಗಳನ್ನು ಆಚರಿಸುವುದು ತಿಳಿಯುವುದಿಲ್ಲ ಅಲ್ಲಿ ಜೀವವು ದುಃಖಿಯಾಗುವುದು ಮತ್ತು ಕರ್ಮಗಳನ್ನು ಬಲ್ಲವರು ಮಾತ್ರ ಸುಖಿಗಳಾಗುವರು ॥೪೪೮॥ ಸದಾಚಾರ ಸಂಪನ್ನ ಶ್ರೋತ್ರೀಯ ಅಥವಾ ಯಾಜ್ಞಿಕ, ಅಗ್ನಿಹೋತ್ರಿ ಇವರು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖಪ್ರಾಪ್ತಿಗಾಗಿ ಯಥಸಾಂಗ ಕರ್ಮಗಳನ್ನು ಆಚರಿಸುತ್ತಿರುವರು ॥೪೪೯॥ ಸದೃಢವಾಗಿರುವರು ಮತ್ತು ನಿರೋಗಿಗಳು ಯಥಾಸಾಂಗ ಕರ್ಮಗಳಿಂದ ಅವರು ಎರಡೂ ಲೋಕಗಳಲ್ಲಿನ ಸುಖದ ಉಪಭೋಗಗಳನ್ನು ಪಡೆಯುವರು ॥೪೫೦॥ ಆದರೆ ಕರ್ಮಗಳನ್ನು ಆಚರಿಸುವ ಯೋಗ್ಯತೆ ಇದ್ದವರೂ ಕೂಡ ಕೇವಲ ಸುಖವನ್ನೇ ಭೋಗಿಸುವರೆಂಬುದು ಸಾಧ್ಯವಿಲ್ಲ. ಅದರ ಪ್ರಕಾರಗಳನ್ನು ಈಗ ನಿನಗೆ ಹೇಳುವೆ, ಅದನ್ನು ಕೇಳು ॥೪೫೧॥

ಕರ್ಮಗಳನ್ನು ತತ್ವತಃ ತಿಳಿದವರಿದ್ದರೂ ಕೂಡ ಅವರು ದುಃಖಿಗಳಾಗಿರುವರು. ಮತ್ತು ಅಜ್ಞಾನಿ ಜನರು ಕರ್ಮಗಳಿಗೆ ಮುಟ್ಟದಿದ್ದರೂ ಸಹ ಅವರು ಸುಖಿಗಳಾಗಿರುವರು ॥೪೫೨॥

ಚುಕೋನಿ ಯಜ್ಞಪುರುಷಾ ಅಚ್ಯುತಾತೇ । ಅಗ್ನಿಹೋತ್ರೀ ಕರಿತೀ ಯಾಗಾತೇ । ತೇ ಸ್ವಕರ್ಮಚಿ ತ್ಯಾಂಚೇ ತ್ಯಾಂತೇ । ವಿಪರೀತಾರ್ಥೇ ಫಳತಸೇ ॥೪೫೩॥ ಅಗ್ನಿ ತೋ ತಂವ ಸ್ವರೂಪ ಮಾಝೇ । ಶ್ರುತಿಮಂತ್ರ ತೇ ತಂವ ಮಾಝೀ ಬೀಜೇ । ಆಣಿ ಹೋಮದ್ರವ್ಯ ಜೇ ಜೇ । ತೇಹೀ ಮಾಝೇ ಸ್ವರೂಪ ॥೪೫೪॥ ಐಶಿಯಾ ಮಜ ಸರ್ವಗತಾತೇ । ನಾಸ್ತಿಕ್ಯ ದೇವೂನಿ ನಿಜಚಿತ್ತೇ । ಅನೀಶ್ವರವಾದೀ ಕರಿತೀ ಯಾಗಾತೇ । ತೋಚಿ ತ್ಯಾಂತೇ ಬದ್ಧಕ ॥೪೫೫॥ ಸ್ರುಕ್‌ಸುವಾ ಆಣಿ ಪ್ರಣೀತಾಪಾತ್ರ । ಮಾಂಡೂ ಶಿಕಲೇ ಕರ್ಮತಂತ್ರ । ಮಜ ನಿಜಾತ್ಮ್ಯಾಚೇ ಚುಕಲೇ ಸೂತ್ರ । ತೇಣೇಚಿ ಅಪವಿತ್ರ ತೋ ಯಾಗು ॥೪೫೬॥ ಸಕಳ ಹೇ ಸರ್ವಮುಖೀ । ಮಜ ಅರ್ಪಿತಸೇ ಯಜ್ಞಪುರುಖೀ । ಹೇ ನ ಮನಿಜೇ ಯಾಜ್ಞಿಕೀ । ಬುದ್ಧೀ ಅಲ್ಪ ಕೀ ಸಕಾಮ ॥೪೫೭॥ ಮಜ ನ ಅರ್ಪಿತಾ ಜೇ ಸುಕೃತ । ತೇಚಿ ಜಾಣ ದುಃಖ ದುರಿತ । ವಿಷಾ ನಾಂವ ಅಮೃತ ಮ್ಹಣತ । ತೈಸೇ ಸುಕೃತ ಸಕಾಮ ॥೪೫೮॥ ಮಾತೇ ನ ಪವತಾ ಜೋ ಸ್ವರ್ಗ । ತೋ ಜಾಣಾವಾ ಉಪಸರ್ಗ । ತೇಥಿಚಾ ಭೋಗ ತೋ ಮಹಾರೋಗ । ಮೂಢ ಉದ್ಯೋಗ ಯಾಜ್ಞಿಕಾ ॥೪೫೯॥ ಕರ್ಮಿ ಕರ್ಮ ವಿಗುಣ ಹೋತ । ತೇಥ ಸ್ಮರಾವಾ ಮೀ ಅಚ್ಯುತ । ನಾಮೇ ನ್ಯೂನ ತೇ ಸಂಪೂರ್ಣ ಹೋತ । ಹೇ ಸಾಮರ್ಥ್ಯ ನಾಮಾಚೇ ॥೪೬೦॥ ತೋ ಮೀ ಅಂಗೇ ಆಪಣ । ಯಾಜ್ಞಿಕಾ ಮಾಗೋ ಗೇಲೋ ಅನ್ನ । ಮಜ ನೇದಿತೀಚ ತೇ ಬ್ರಾಹ್ಮಣ । ಕರ್ಮಠಪಣ ತೇ ಕರ್ಮಾಚೇ ॥೪೬೧॥ ಮಜ ಯಜ್ಞಪುರುಷಾತೇ ಸಾಂಡೂನ । ಕರಿತೀ ಇಂದ್ರಾದಿಕಾಚೇ ಭಜನ । ತೇ ಇಂದ್ರಾದಿಕ ಮಜಅಧೀನ । ಕರ್ಮವೈಗುಣ್ಯ ಹೇ ತ್ಯಾಂಸೀ ॥೪೬೨॥ ಜೇ ಕರ್ಮ ನ ಕರಿತೀ ಕೃಷ್ಣಾರ್ಪಣ । ತ್ಯಾಂಚೇ ಮಳಿಣ ಪ್ರಾಕ್ತನ । ತೇಣೇ ಇಹಲೋಕೀ ದರಿದ್ರತಾ ಜಾಣ । ಪಡೇ ವಿಘ್ನ ಪರಲೋಕೀ ॥೪೬೩॥ ಚುಕವೂನಿಯಾ ನಿಜಮುಖ । ಸರ್ವಾಂಗೀ ಖಿರೀಸಾಕರೇಚಾ ದೇಖ । ಲೇಪು ದೇತಾ ನ ವಚೇ ಭೂಕ । ಅಧಿಕ ದುಃಖ ತೇಣೇ ಹೋಯ ॥೪೬೪॥ ತೈಸೇ ಮಜ ಚುಕವೂನಿ ಯಜ್ಞಪತಿ । ಜೇ ಯಾಗಾತೇ ಆಚರತೀ । ಬಾಳವಿಧವೇ ಗರ್ಭಪ್ರಾಪ್ತೀ । ತೈಶೀ ಫಳೇ ಯೇತೀ ತ್ಯಾ ಯಾಗಾ ॥೪೬೫॥ ಕರ್ಮ ಉದ್ದೇಶೇ ದ್ರವ್ಯ ಮಾಗತಾ । ಯಜ್ಞಫಳ ನೇ ದ್ರವ್ಯದಾತಾ । ಯಾಜ್ಞಿಕ ತೋ ರಾಹೇ ರಿತಾ । ಮೀ ಕರ್ತಾ ಹಾ ಅಭಿಮಾನು ॥೪೬೬॥

ಯಜ್ಞಪುರುಷನಾದ ಭಗವಂತನನ್ನು ಬಿಟ್ಟು ಅಗ್ನಿಹೋತ್ರಿಯವರು ಯಜ್ಞವನ್ನು ಮಾಡುತ್ತಾರೆ. ಅವರ ಈ ಸ್ವಕರ್ಮವು ಅವರಿಗೆ ವಿಪರೀತ ಫಲವನ್ನು ಕೊಡುತ್ತದೆ ॥೪೫೩॥ ಅವರ ಯಾವ ಅಗ್ನಿಯು ನನ್ನ ಸ್ವರೂಪವಾಗಿರುವುದು. ಯಾವ ಶ್ರುತಿಯಲ್ಲಿನ ಮಂತ್ರಗಳೂ ಕೂಡ ನನ್ನವೇ ಬೀಜಗಳಾಗಿರುವುವು. ಇರುವ ಹೋಮದ್ರವ್ಯಗಳೆಲ್ಲವೂ ನನ್ನ ಸ್ವರೂಪವೇ ಆಗಿರುವುವು ॥೪೫೪॥ ಹೀಗಿರುವ ನನ್ನ ಸರ್ವ ವ್ಯಾಪಕತ್ವಕ್ಕೆ ಅವರು ತಮ್ಮ ಮನಸ್ಸಿನಿಂದ ನಾಸ್ತಿಕತ್ವವನ್ನು ಕೊಟ್ಟು ಅನೀಶ್ವರವಾದಿಯವರು ಯಜ್ಞವನ್ನು ಮಾಡುವರು. ಮತ್ತು ಅದೇ ಯಜ್ಞವು ಅವರಿಗೆ ಬಂಧಕಾರಕವಾಗುವುದು ॥೪೫೫॥ ಯಾವ ಸ್ರುಕ್ ಸ್ರುವಾ ಪ್ರಣೀತಾಪಾತ್ರ ಇತ್ಯಾದಿ ಯಜ್ಞದಲ್ಲಿನ ಉಪಕರಣಗಳ ವ್ಯವಸ್ಥೆ ಮಾಡುವುದನ್ನು ಕಲಿತಿರುವರು. ಅವರು ಕರ್ಮಗಳ ತಂತ್ರವನ್ನು ಅರಿತಿರುವರು. ಆದರೆ ನನ್ನ ಆತ್ಮರಾಮನ ಆತ್ಮಜ್ಞಾನದ ಮಾರ್ಗವನ್ನು ತಿಳಿಯಲಾರರು. ಆದ್ದರಿಂದ ಅವರ ಯಜ್ಞವು ಅಪವಿತ್ರವಾಗುವುದು ॥೪೫೬॥ ನಿಜವಾಗಿ ನೋಡಿದರೆ, ಅವರ ಆ ಎಲ್ಲ ಕರ್ಮಗಳು ನನ್ನ ವಿಶ್ವತೋಮುಖ ಯಜ್ಞಪುರುಷನಿಗೆ ಪ್ರಾಪ್ತವಾಗುವುದು. ಆದರೆ ಯಾಜ್ಞಿಕ ಜನರು ಇದನ್ನು ಮಾನ್ಯ ಮಾಡುವುದಿಲ್ಲ. ಕಾರಣ ಅವರ ಬುದ್ಧಿಯು ಅಲ್ಪವಿದ್ದು ಅವರು ಸಕಾಮರಾಗಿರುವರು ॥೪೫೭॥ ಯಾವ ತಮ್ಮ ಸುಕೃತವನ್ನು ನನಗೆ ಅರ್ಪಿಸುವುದಿಲ್ಲ. ಇದೇ ಅವರ ದುಃಖಮಯ ಪಾತಕವಾಗಿರುವುದು. ಸಕಾಮ ಕರ್ಮಗಳಿಗೆ ಪುಣ್ಯಕಾರಕ ಎಂದು ಹೇಳಿದರೆ ವಿಷಕ್ಕೆ ಅಮೃತವೆಂದು ಹೇಳಿದಂತಾಗುವುದು ॥೪೫೮॥ ನನ್ನನ್ನು ಪ್ರಾಪ್ತಮಾಡಿಕೊಳ್ಳದೇ ಸಿಗುವ ಸ್ವರ್ಗವು ಒಂದು ಪ್ರಕಾರದ ವಿಘ್ನವಾಗಿರುವುದು ಎಂದು ತಿಳಿಯಬೇಕು. ಸ್ವರ್ಗದಲ್ಲಿನ ಭೋಗವೆಂದರೆ ಅದೊಂದು ಮಹಾರೋಗವೇ ಆಗಿರುವುದು. ಯಜ್ಞ ಆಚರಿಸುವ ಈ ವ್ಯವಹಾರವು ಕೇವಲ ಅಜ್ಞಾನತನದ್ದಾಗಿರುವುದು ॥೪೫೯॥ ಕರ್ಮಗಳನ್ನು ಆಚರಿಸುತ್ತಿರಲು ಒಂದು ವೇಳೆ ಆ ಕರ್ಮಗಳಲ್ಲಿ ದೋಷ ಉಂಟಾದರೆ ಆಗ ಅಚ್ಯುತನ ಸ್ಮರಣೆಯನ್ನು ಮಾಡಬೇಕಾಗುವುದು. ಅಂದರೆ ಕೇವಲ ನನ್ನ ನಾಮದಿಂದಲೇ ಯಾವತ್ತೂ ನ್ಯೂನತೆಯು ಪೂರ್ಣವಾಗುವುದು. ಇಷ್ಟೊಂದು ಆ ನಾಮದಲ್ಲಿ ಪ್ರಚಂಡವಾದ ಸಾಮರ್ಥ್ಯವಿರುವುದು ॥೪೬೦॥ ಯಾರ ನಾಮದಲ್ಲಿ ಇಂತಹ ಸಾಮರ್ಥ್ಯವಿರುವ ನಾನು ಸ್ವತಃ ಯಾಜ್ಞಿಕರಲ್ಲಿ ಅನ್ನವನ್ನು ಬೇಡಲು ಹೋದಾಗ್ಗೆ, ಆ ಬ್ರಾಹ್ಮಣರು ನನಗೆ ಅನ್ನವನ್ನು ಕೊಡಲಿಲ್ಲ. ಇದಕ್ಕೇನೇ ಕರ್ಮದ ಕರ್ಮಠತನವೆನ್ನುವರು ॥೪೬೧॥ ನಾನೇ ಯಜ್ಞಪುರುಷನಾಗಿದ್ದರೂ, ಅದನ್ನು ಬಿಟ್ಟು ಇಂದ್ರಾದಿಕ ದೇವತೆಗಳ ಭಜನೆಯನ್ನು ಮಾಡುವರು. ಆದರೆ ಆ ಇಂದ್ರಾದಿಕರೆಲ್ಲರೂ ನನ್ನ ಆಧೀನರಾಗಿರುವರು. ಅವರ ಕರ್ಮಗಳಲ್ಲಿ ಇದೇ ನ್ಯೂನತೆ ಇರುವುದು ॥೪೬೨॥ ಯಾರು ತಮ್ಮ ಕರ್ಮಗಳನ್ನು ಕೃಷ್ಣಾರ್ಪಣ ಮಾಡುವುದಿಲ್ಲವೋ, ಅವರ ದೈವವು ಖೊಟ್ಟಿಯಾಗಿರುವುದು. ಆದ್ದರಿಂದ ಈ ಜನರು ದಾರಿದ್ರ್ಯವನ್ನು ಭೋಗಿಸುವರು. ಮತ್ತು ಪರಲೋಕದಲ್ಲಿ ಸಂಕಟಕ್ಕೆಗುರಿಯಾಗುವರು ॥೪೬೩॥ ತನ್ನ ಮುಖವನ್ನು ಬಿಟ್ಟುಕೊಟ್ಟು ಉಳಿದ ಸರ್ವಾಂಗಕ್ಕೂ ಖೀರು, ಸಕ್ಕರೆಯನ್ನು ಲೇಪಿಸಿದರೆ, ಅದರಿಂದ ಹಸಿವೆಯು ಎಂದಿಗೂ ಶಾಂತವಾಗಲಾರದು. ಪ್ರತಿಯಾಗಿ ಅತಿಶಯ ದುಃಖ ಮಾತ್ರ ಉಂಟಾಗುವುದು ॥೪೬೪॥ ಅದರಂತೆ ಯಜ್ಞಮಾಡುವವರು ನನ್ನನ್ನು ಬಿಟ್ಟು ಯಜ್ಞ ಮಾಡುವರು. ಅವರಿಗೆ ಬಾಲ ವಿಧವೆಗೆ ಗರ್ಭದಾರಣೆಯಾದಂತೆ ವಿಪರೀತ ಫಲಪ್ರಾಪ್ತವಾಗುವುದು ॥೪೬೫॥ ನನಗೆ ಯಜ್ಞವನ್ನು ಮಾಡಬೇಕಾಗಿದೆ ಎಂದು ಹೇಳಿ ಧನವನ್ನು ಕೇಳಿ ಪಡೆಯಲು ಆ ಯಜ್ಞದ ಫಲವನ್ನು ದಾನಿಯು ಪಡೆಯುವನು. ಯಜ್ಞವನ್ನು ಮಾಡಿದವನು ಬರಿಗೈಯಾಗುವನು. ನಾನು ಯಜ್ಞಕರ್ತನೆಂಬ ಈ ಅಭಿಮಾನವು ಮಾತ್ರ ತಲೆಯ ಮೇಲೆ ಉಳಿಯುವುದು ॥೪೬೬॥

ಜೈಸಾ ಚಾಟು ಖಿರೀ ಅಂತು । ಚಾಟುವೇಚಿ ಖಿರೀ ವಾಢಿಜೇತು । ಚಾಟು ಖಿರಕಟಲ್ಯಾ ಸಾಂಡಿತು । ಭೋಕ್ತೆ ಭೋಗಿತು ಪರಮಾನ್ನ ।।೪೬೭।। ಸರಸ ಊಂಸ ಘಾಲಿಜೇ ಘಾಣಾ । ರಸ ಪಿಳೂನಿ ಭರೇ ಭಾಣಾ । ರಿತಾ ಚೋಪಟೀ ಕರಕರೀ ಘಾಣಾ । ತೇ ಗತಿ ಜಾಣಾ ಯಾಜ್ಞಿಕಾ ।।೪೬೮।। ತೈಸೇ ಯಾಜ್ಞಿಕ ಯಜ್ಞ ಆಚರತ । ದ್ರವ್ಯದಾತ್ಯಾಸೀ ತೇ ಫಲ ಹೋತ । ಪಶುಹಿಂಸಾ ಯಾಜ್ಞಿಕಾ ಪ್ರಾಪ್ತ । ದೋಷೀ ಹೋತ ಅಭಿಮಾನೇ ।।೪೬೯।। ಏವಂ ಕರ್ಮಕುಶಳ ಯಾಜ್ಞಿಕ ಯಾಪರೀ ತೇ ಭೋಗಿತೀ ದುಃಖ । ಕರ್ಮ ನೇಣತೀ ಜೇ ಮೂರ್ಖ । ತೇ ಪರಮ ಸುಖ ಭೋಗಿತೀ ।।೪೭೦।। ನೇಣತೀ ಕರ್ಮಾಚ್ಯಾ ಘಡಾಮೋಡೀ । ಪರೀ ಮಾಝೀ ಶ್ರದ್ಧಾ ಪೋಟೀ ಗಾಢೀ । ತೇಣೇ ಉಲ್ಲಂಘೋನಿ ದುಃಖಕೋಡೀ । ನಿಜಾತ್ಮ ಗೋಡೀ ಭೋಗಿತೀ ।।೪೭೧।। ಕರ್ಮೀ ಕರ್ಮಾದರು ನೇಣತ । ಮಾಝ್ಯಾ ಠಾಯೀ ಶ್ರದ್ಧಾಯುಕ್ತ । ಭಾಳೇ ಭೋಳೇ ಮಾಝೇ ಭಕ್ತ । ಸುಖ ಅನಂತ ಪಾವಲೇ ।।೪೭೨।। ಕಾಯ ಕರ್ಮ ಕೇಲೇ ಗೋಪಾಳೀ । ಜೇ ಅಖಂಡ ಮಜಸವೇ ಗೋಕುಳೀ । ಭೋಗಿಲೀ ನಿಜಸುಖ ನವ್ಹಾಳೀ । ಕರೋನಿ ಹೋಳೀ ಕರ್ಮಾಚೀ ।।೪೭೩।। ಪಾಹತಾ ಗೋಪಿಕಾಚೇ ಕರ್ಮ । ಕರ್ಮಮಾರ್ಗೀ ನಿಂದ್ಯ ಧರ್ಮ । ಪಾವಲ್ಯಾ ಮಾಝೇ ಪರಮ ಧಾಮ । ಜೀವೀ ಪುರುಷೋತ್ತಮ ಆವಡಲಾ ।।೪೭೪।। ಖಗ - ಮೃಗ - ಗೋ - ಸರ್ಪಾದಿ ಸಮಸ್ತ । ಮಾಝೇ ನಿಜಪದೀ ಝಾಲೇ ಪ್ರಾಪ್ತ । ಯಾಜ್ಞಿಕಾ ಕರ್ಮಾಭಿಮಾನ ಬಹುತ । ದುಃಖ ಭೋಗಿತ ನಿಜಕರ್ಮೀ ।।೪೭೫।। ಕೇವಳ ಕರ್ಮಠ ಕರ್ಮಜಡ । ಆಮ್ಹೀ ಸರ್ವಜ್ಞ ಜ್ಞಾತೇ ದೃಢ । ಹಾ ಅಭಿಮಾನ ಧರಿತೀ ಮೂಢ । ದುಃಖ ವಾಡ ತಯಾಂಸೀ ।।೪೭೬।। ದೀಪೀ ಪತಂಗಾ ಮರಣ ದೇಖ । ತೋ ಉಡೀ ಘಾಲಿತಾ ಮಾನೀ ಸುಖ । ತೈಸೇ ಕರ್ಮಠಾ ಕರ್ಮ ಕೇವಳ ದುಃಖ । ಮಾನಿತೀ ಸುಖ ಅಭಿಮಾನೇ ।।೪೭೭।। ಅಭಿಮಾನೇಚಿ ಸರ್ವಥಾ । ನಸತೀ ಜೀವಾಸೀ ಮ್ಹಣೇ ಸ್ವತಂತ್ರತಾ । ತೇಹೀ ನ ಘಡೇ ವಿಚಾರಿತಾ । ಐಕ ಆತಾ ಸಾಂಗೇನ ।।೪೭೮।।

ಯದಿ ಪ್ರಾಪ್ತಿಂ ವಿಘಾತಂ ಚ ಜಾನಂತಿ ಸುಖದುಃಖಯೋಃ ।
ತೇಪ್ಯದ್ಧಾ ನ ವಿದುರ್ಯೋಗಂ ಮೃತ್ಯುರ್ನ ಪ್ರಭವೇದ್ ಯಥಾ ।೯॥

ಅರ್ಥ :- ಸುಖವನ್ನು ಹೇಗೆ ಪಡೆಯಬೇಕು ಮತ್ತು ದುಃಖವನ್ನು ಹೇಗೆ ತಡೆಯಬೇಕು ಎಂಬುದನ್ನು ಜನರು ತಿಳಿದಿದ್ದರೂ ಕೂಡ ಅವರಿಗೆ ಮೃತ್ಯುವನ್ನು ಜಯಿಸುವ ಉಪಾಯವು ಸಿಗಲು ಶಕ್ಯವಿಲ್ಲ.

ಖೀರನ್ನು ಬಡಿಸುವ ಸೌಟು ಖೀರಿನಲ್ಲಿಯೇ ಇರುವುದು. ಆ ಸೌಟು ಖೀರನ್ನು ಬಡಿಸುತ್ತಲೇ ಇರುವುದು. ಕೊನೆಗೆ ಅದನ್ನು ಮುಸುರಿಯಾಗಿದೆಂದು ಒಗೆದುಬಿಡುವರು. ಖೀರನ್ನು ಭುಂಜಿಸುವವರು ಮಾತ್ರ ತೃಪ್ತರಾಗುತ್ತಿರುವರು ।।೪೬೭।। ಉತ್ತಮವಾಗಿರುವ ಕಬ್ಬನ್ನು ಗಾಣದಲ್ಲಿ ಹಾಕಲು, ಆ ಗಾಣವು ರಸವನ್ನು ಹಿಂಡಿ ಭಾಂಡೆಯಲ್ಲಿ ತುಂಬುವುದು. ತಾನು ಮಾತ್ರ ಖಾಲಿಯಾಗಿ ನೀರಸವಾದ ಸಿಪ್ಪೆಯೊಂದಿಗೆ ಕರಕರವೆಂದು ಮೆಲ್ಲುತ್ತಿರುವುದು. ಈ ಗಾಣದಂತೆ ಯಾಜ್ಞಿಕರ ಸ್ಥಿತಿಯಾಗಿರುತ್ತದೆ ।।೪೬೮।। ಇದರಂತೆಯೇ ಯಾಜ್ಞಿಕರು ಯಜ್ಞವನ್ನು ಮಾಡುವರು. ಯಜ್ಞದ ಫಲವನ್ನು ದ್ರವ್ಯ ಕೊಟ್ಟವರಿಗೆ ಸಿಗುತ್ತಿರುವುದು. ಯಜ್ಞದಲ್ಲಿ ಮಾಡಿದ ಪಶು ಹಿಂಸೆ ಮತ್ತು ಅಭಿಮಾನದ ದೋಷವು ಯಾಜ್ಞಿಕರಿಗೆ ಹತ್ತುವುದು ।।೪೬೯।। ಈ ಪ್ರಕಾರವಾಗಿ ಕರ್ಮ ಮಾಡುವುದರಲ್ಲಿ ನಿಷ್ಣಾತರಾಗಿರುವ ಯಾಜ್ಞಿಕರು ಹೀಗೆ ದುಃಖವನ್ನು ಭೋಗಿಸುವರು. ಮತ್ತು ಕರ್ಮಗಳನ್ನು ಮಾಡಲಾರದ ಮೂಢ ಜನರು ಪರಮ ಸುಖದ ಪ್ರಾಪ್ತಿಯನ್ನು ಮಾಡಿಕೊಳ್ಳುವರು ।।೪೭೦।। ಇವರಿಗೆ ಕರ್ಮಗಳ ಖಟಾಟೋಪವು ಗೊತ್ತೇ ಇರುವುದಿಲ್ಲ. ಆದರೆ ನನ್ನಲ್ಲಿ ಮಾತ್ರ ಅವರ ಅತ್ಯಂತಿಕವಾದ ದೃಢವಿಶ್ವಾಸವಿರುವುದು. ಆದ್ದರಿಂದ ಇವರು ದುಃಖದ ರಾಶಿಯಿಂದ ಪಾರಾಗಿ ಆತ್ಮ ಸುಖದ ಆನಂದನ್ನು ಅನುಭವಿಸುವರು ।।೪೭೧।। ಕರ್ಮಗಳಲ್ಲಿ ಆದರವನ್ನು ಹೇಗೆ ಇಡಬೇಕೆಂಬುದು ಇವರಿಗೆ ಏನೂ ತಿಳಿಯದು. ಆದರೆ ನನ್ನಲ್ಲಿ ಅವರ ಭಕ್ತಿಯು ಅತಿಶಯವಾಗಿರುವುದು. ಆದ್ದರಿಂದ ನನ್ನವರಾದ ಈ ಭಾಳೇ ಭೋಳೇ ಭಕ್ತರು ಪರಮ ಸುಖವನ್ನು ಪ್ರಾಪ್ತಮಾಡಿಕೊಳ್ಳುವರು ।।೪೭೨।। ಗೋಕುಲದಲ್ಲಿ ಯಾವಾಗಲೂ ನನ್ನ ಜೊತೆಯಲ್ಲಿರುವ ಆ ಗೋಪಾಲಕರು ಯಾವ ಕರ್ಮಗಳನ್ನು ಮಾಡಿದ್ದರು? ಆದರೆ ಅವರು ಕರ್ಮಗಳನ್ನು ಸುಟ್ಟು ಹಾಕಿ ನಿತ್ಯ ನೂತನವಾದ ಆತ್ಮ ಸುಖದ ಅನುಭವ ಪಡೆದರು ।।೪೭೩।। ಗೋಪಿಯರ ಕರ್ಮದ ವಿಚಾರವನ್ನು ಮಾಡಲು, ಅವರ ಧರ್ಮವು ನಿಂದಾಸ್ಪದವಾಗಿತ್ತು. ಆದರೆ ಅವರ ಜೀವಗಳಿಗೆ ಪುರಷೋತ್ತಮನಲ್ಲಿ ಪ್ರೇಮವಿದ್ದದ್ದರಿಂದ ಅವರು ನನ್ನ ನಿಜಧಾಮಕ್ಕೆ ಬಂದು ಮುಟ್ಟಿದರು ।।೪೭೪।। ಇವರೇ ಏಕೇ? ಪಶು - ಪಕ್ಷಿ -ಗೋವು - ಸರ್ಪ ಇತ್ಯಾದಿ ಸರ್ವಪ್ರಾಣಿಗಳು ನನ್ನ ಪದವಿಯನ್ನು ಪಡೆದವು. ಆದರೆ ಯಾಜ್ಞಿಕರಿಗೆ ಕರ್ಮದ ಅಭಿಮಾನವು ಇರುವುದರಿಂದ ಅವರು ತಮ್ಮ ಕರ್ಮಗಳಿಂದಲೇ ದುಃಖಿಯಾದರು ।।೪೭೫।। ಕೇವಲ ಕರ್ಮಗಳಲ್ಲಿಯೇ ನಿಮಗ್ನರಾಗಿರುವ ಆ ಕರ್ಮಠರು ಅಜ್ಞಾನಿಗಳಾಗಿರುವರು. ಆದರೂ ಅವರು ನಾವು ಸರ್ವಜ್ಞರು, ಮಹಾ ತಿಳಿದವರು ಎಂಬ ಅಭಿಮಾನವನ್ನು ಹಿಡಿಯುವರು. ಆದ್ದರಿಂದ ಅವರಿಗೆ ಬಹಳ ದುಃಖಗಳನ್ನು ಭೋಗಿಸಬೇಕಾಗುವುದು ।।೪೭೬।। ದೀಪದ ಮೇಲೆ ಜಿಗಿಯುತ್ತಲೇ ಪತಂಗ ಹುಳವು ತತ್ಕಾಲದಲ್ಲಿಯೇ ಮರಣ ಹೊಂದುವುದು. ಆದರೆ ಅದು ಜಿಗಿಯುವುದರಲ್ಲಿ ಸುಖವಿದೆ ಎಂದು ತಿಳಿದಿರುತ್ತದೆ. ಅದರಂತೆಯೇ ಕರ್ಮಠರ ಕರ್ಮಗಳು ಕೇವಲ ದುಃಖದಲ್ಲಿ ಬೀಳಿಸುವ ಕಾರ್ಯವಾಗಿದ್ದು, ಆ ಅಭಿಮಾನಿಗಳು ಅದಕ್ಕೆ ಮಹಾಸುಖವೆನ್ನುವರು ।।೪೭೭।। ಅವರು ಕೇವಲ ಅಭಿಮಾನದಿಂದಲೇ ಜೀವಕ್ಕೆ ಇಲ್ಲದ ಸ್ವಾತಂತ್ರ್ಯವು ಇದೆ ಎಂದು ತಿಳಿಯುವರು. ಆದರೆ ವಿಚಾರಿಸಿನೋಡಲು ಅದು ನಿಜವಲ್ಲ. ಅದನ್ನೇ ಈಗ ಹೇಳುವೆನು ಸರಿಯಾಗಿ ಕೇಳು ।।೪೭೮।।

ದುಃಖ ನಿರಸೂನಿ ಸುಖಪ್ರಾಪ್ತೀ । ಯಾಲಾಗೀ ಕರ್ಮೇ ಆಚರತೀ । ಕರ್ಮವಾದೀ ಜ್ಞಾತೇ ಮ್ಹಣವಿತೀ । ತೇಹೀ ನೇಣತೀ ದುಃಖನಾಶು ॥೪೭೯॥ ಕರ್ಮೇ ಕರಿತಾ ನಾಶು ನೋಹೇ । ಐಸೇ ದುಃಖ ಕೋಣ ಆಹೇ । ಪುಸಶೀಲ ತರೀ ಪಾಹೇ । ಯಥಾನ್ವಯೇ ಸಾಂಗೇನ ॥೪೮೦॥ ಮರಣಾವರತೇ ದುಃಖ ಚಢೇ । ಐಸೇ ದುಃಖ ತಂವ ನಾಹೀ ಪುಢೇ । ತೇ ನಿವಾರೂ ನೇಣತೀ ಬಾಪುಡೇ । ಅತಿ ಬಳ ಗಾಢೇ ಮೃತ್ಯೂಚೇ ॥೪೮೧॥ ಆಂತು ಫಾಲಿತಾ ಹಾತು ಪೋಳೇ । ತೇಣೇ ಉಷ್ಣವಣೇನ ಘರ ನ ಜಳೇ । ತೈಸಾ ಕರ್ಮೇ ಮೃತ್ಯು ನ ಟಳೇ । ಪ್ರಬಳ ಬಳೇ ಅನಿವಾರ ॥೪೮೨॥ ಮಾರಿತಾ ಮೃತ್ಯು ಜೇಣೇ ಮಾರಿಜೇ । ತೋ ಉಪಾವೋ ಕರ್ಮಠೀ ನೇಣೋಜೇ । ಕರ್ಮಾಮಾಜೀ ಜೇಣೇ ಅಸಿಜೇ । ಅಚುಕ ಪಾವಿಜೇ ತೇಣೇ ಮೃತ್ಯು ॥೪೮೩॥ ಅಂತೀ ಯೇಈಲ ಮರಣದುಃಖ । ಜಂವ ಜೀಜೇ ತಂವ ಭೋಗಿಜೇಲ ಸುಖ । ಹೇ ಬೋಲಣೇ ಬೋಲತೀ ಮೂರ್ಖ । ಜಿತಾ ಸುಖ ತ್ಯಾ ಕೈಚೇ ॥೪೮೪॥

ಕೋನ್ವರ್ಥಃ ಸುಖಯತ್ಯೇನಂ ಕಾಮೋ ವಾ ಮೃತ್ಯುರಂತಿಕೇ ।
ಆಘಾತಂ ನೀಯಮಾನ್ಯಸ ವಧ್ಯಸ್ಯೇ ವ ನ ತುಷ್ಟಿದಃ ॥೨೦॥

ಅರ್ಥ:- ಮೃತ್ಯುವಿನ ಕೂಗು ಮನದಲ್ಲಿ ಸತತವಾಗಿ ಇದ್ದೇ ಇರುವುದು. ಹೀಗಿರಲು ಆತನಿಗೆ ಅವು ಯಾವ ಭೋಗ ಸಾಮಗ್ರಿಗಳು ಸುಖ ಕೊಡಲು ಶಕ್ಯವಿದೆ? ಯಾವ ಮನುಷ್ಯನಿಗೆ ಗಲ್ಲು ಶಿಕ್ಷೆ ಕೊಡುವುದಕ್ಕಾಗಿ ಒಯ್ಯುತ್ತಿರಲು, ಆಗ ಆತನಿಗೆ ಹೂವು, ಚಂದನ, ಸ್ತ್ರೀ ಇತ್ಯಾದಿ ಪದಾರ್ಥಗಳು ಸಂತುಷ್ಟಗೊಳಿಸಲು ಶಕ್ಯವಿಲ್ಲ.

ಜಿತಾಂಹೀ ಸುಖಾಚೀ ವಾರ್ತಾ । ಕರ್ಮಠಾ ನಾಹೀ ಸರ್ವಥಾ । ತೇಹೀ ಸಾಂಗೇನ ಮೀ ಕಥಾ । ಐಕ ಆತಾ ಉದ್ಧವಾ ॥೪೮೫॥ ವಿಖೇ ರಾಂಧಿಲೇ ಮಿಷ್ಟಾನ್ನ । ತೇ ಗೋಡ ನ ಮ್ಹಣತೀ ಸಜ್ಞಾನ । ಪುಢೇ ದೇಖೋನಿಯಾ ಮರಣ । ನಿಃಶೇಷ ತೇ ಅನ್ನ ಸಾಂಡಿತೀ ॥೪೮೬॥ ಆಗೀ ಲಾಗಲಿಯೇ ಘರೀ । ಕ್ಷಣ ನ ರಾಹಿಜೇ ಚತುರೀ । ಮರಣ ನಾದಳತಾ ಉರೀ । ಸಾಂಡೂನಿ ದೂರೀ ಪಳತಾತಿ ॥೪೮೭॥ ಧಾಡೀ ಆಲ್ಯಾ ನಿಜದ್ವಾರೀ । ಗೋಡ ನ ಲಗೇ ಸಾಖರಖಿರೀ । ತೈಸಾ ಮೃತ್ಯು ಜಾಣತಲಿಯಾ ಶರೀರೀ । ವಿಷಯಾಕಾರೀ ಸುಖ ಕೈಸೇ ॥೪೮೮॥ ದಾಢೀಸೀ ಲಾಗಲಿಯಾ ಆಗೀ । ತೋ ಶೃಂಗಾರು ನ ಮನೀ ಮುಖಾಲಾಗೀ । ತೈಸಾ ನೀಚ ನವಾ ಮೃತ್ಯು ಅಂಗೀ । ವಿಷಯಸಂಗೀ ಸುಖ ಕೈಚೇ ॥೪೮೯॥ ಉಠಿಲ್ಯಾ ಮರಣಾಂತ ವ್ಯಥಾ । ಜನ ಧನ ಅನ್ನ ಆಣಿ ಕಾಂತಾ । ಸುಖ ನೇದಿತೀಚ ಸರ್ವಥಾ । ಝಾಲೀ ವೃಥಾ ಸಮೂಳ ॥೪೯೦॥

ದುಃಖದ ನಿವೃತ್ತಿಯಾಗಿ ಸುಖದ ಪ್ರಾಪ್ತಿಯಾಗಬೇಕೆಂದು ಕರ್ಮವಾದಿಯವರು ಕರ್ಮಗಳನ್ನು ಆಚರಿಸುವರು. ಹಾಗೂ ನಾವು ದೊಡ್ಡವರು ಎಂದು ತಿಳಿದಿರುವರು. ಆದರೆ ನಿಜವಾಗಿಯೂ ಇವರಿಗೆ ದುಃಖದ ನಾಶವು ಯಾವುದರಿಂದಾಗುವುದೆಂಬುದು ಮಾತ್ರ ತಿಳಿದಿರುವುದಿಲ್ಲ ॥೪೭೯॥ ಕರ್ಮಗಳನ್ನು ಮಾಡಿಯೂ ಕೂಡ ಯಾವ ದುಃಖದ ನಾಶವಾಗುವುದಿಲ್ಲ. ಹಾಗಾದರೆ ಆ ದುಃಖ ಯಾವುದು? ಹೀಗೆಂದು ನೀನು ಪ್ರಶ್ನೆ ಕೇಳಬಹುದು. ಅದರ ಉತ್ತರವನ್ನು ಕ್ರಮವಾಗಿ ಹೇಳುವೆನು ॥೪೮೦॥ ಮರಣಕ್ಕಿಂತಲೂ ದೊಡ್ಡದಾದ ಅನ್ಯ ಯಾವ ದುಃಖವೂ ಇಲ್ಲ. ಈ ಮೃತ್ಯುವಿನ ನಿವಾರಣೆಯನ್ನು ಹೇಗೆ ಮಾಡಬೇಕೆಂಬುದು ಪಾಪ, ಇವರಿಗೆ ತಿಳಿಯದು. ಮೃತ್ಯುವಿನ ಸಾಮರ್ಥ್ಯವು ಅನಿವಾರ್ಯವಾಗಿ ಅತ್ಯಂತವಾಗಿರುವುದು ॥೪೮೧॥ ಚೆನ್ನಾಗಿ ಕಾದ ನೀರಿನಲ್ಲಿ ಕೈ ಇಡಲು ಅದು ಸುಡುವುದು ನಿಜ, ಆದರೆ ಆ ಕಾದ ನೀರಿನಿಂದ ಮನೆ ಏನಾದರೂ ಸುಟ್ಟು ಹೋಗಲಾರದು ॥೪೮೨॥ ಎಲ್ಲರಿಗೂ ಮಾರಕವಾಗಿರುವ ಮೃತ್ಯುವು ಯಾವುದರಿಂದ ಮರಣವಾದಿತೆಂಬುವ ಉಪಾಯವು ಕರ್ಮಠರಿಗೆ ತಿಳಿಯಲು ಶಕ್ಯವಿಲ್ಲ. ಯಾರು ಕರ್ಮಗಳನ್ನು ಮಾಡುತ್ತಿರುವರೋ, ಅವರಿಗೂ ತಪ್ಪದೇ ಮೃತ್ಯು ಒದಗುವುದು ॥೪೮೩॥ ಮರಣದ ದುಃಖವು ಕೊನೆಯಲ್ಲಿ ಬಂದೇ ಬರುವುದು. ಅದಕ್ಕಾಗಿ ಜೀವಂತವಾಗಿ ಇರುವವರೆಗೆ ಸುಖವನ್ನು ಭೋಗಿಸಬೇಕು. ಈ ಪ್ರಕಾರದ ಮಾತುಗಳನ್ನು ಮೂರ್ಖರು ಮಾತನಾಡುವರು. ಆದರೆ ಅವರಿಗೆ ಬದುಕಿರುವಾಗಲೂ ಸಹ ಸುಖದ ಪ್ರಾಪ್ತಿಯಾದರು ಹೇಗಾಗುವುದು? ॥೪೮೪॥

ಹೇ ಉದ್ಧವನೇ, ಕರ್ಮಠ ಜನರಿಗೆ ಜೀವಂತವಿರುವಾಗಲೂ ಶುದ್ಧ ಸುಖದ ಲೇಶವೂ ಕೂಡ ದೊರೆಯುವುದಿಲ್ಲ. ಈ ಮಾತನ್ನು ನಾನೀಗ ನಿನಗೆ ಹೇಳುತ್ತಿದ್ದೇನೆ ॥೪೮೫॥ ಉತ್ತಮ ಪ್ರಕಾರದ ಮೃಷ್ಟಾನ್ನವನ್ನು ವಿಷ ಹಾಕಿ ಸಿದ್ಧಗೊಳಿಸಲು, ಅದನ್ನು ತಿಳಿದವರು ಅದಕ್ಕೆ ಬಹಳ ಒಳ್ಳೆಯ ಅನ್ನ ಎನ್ನುವುದಿಲ್ಲ. ಈ ಮೃಷ್ಟಾನ್ನವನ್ನು ಭುಂಜಿಸಿದರೆ ತನ್ನ ಮರಣವಾಗುವುದೆಂದು ತಿಳಿದು ಅದನ್ನು ಒಗೆದು ಬಿಡುವರು ॥೪೮೬॥ ಅಥವಾ ಆಕಸ್ಮಾತ್ತಾಗಿ ಮನೆಗೆ ಬೆಂಕಿ ಹತ್ತಲು ಜಾಣ ಮನುಷ್ಯನು ಆ ಮನೆಯಲ್ಲಿ ಒಂದು ಕ್ಷಣವೂ ಸಹ ಇರಲಾರನು. ಮೃತ್ಯು ತನಗೆ ಒದಗುವ ಪೂರ್ವದಲ್ಲಿಯೇ ಅವನು ಅಲ್ಲಿಂದ ದೂರ ಓಡಿಹೋಗುವನು ॥೪೮೭॥ ತನ್ನ ಮನೆಯ ಮೇಲೆ ದಾಳಿ ಬರಲು, ಆಗ ಸಕ್ಕರೆಯ ಖೀರು ರುಚಿಯಾಗುವುದಿಲ್ಲ. ಅದರಂತೆ ಈ ಶರೀರಕ್ಕೆ ಮೃತ್ಯು ಇದೆ ಎಂದು ತಿಳಿದರೆ ಸಾಕು, ವಿಷಯಗಳು ರುಚಿಯಾಗಲಾರವು ॥೪೮೮॥ ತನ್ನ ಗಡ್ಡಕ್ಕೆ ಬೆಂಕಿ ಹತ್ತಲು ಆಗ ಆ ಮನುಷ್ಯನು ತನ್ನ ಮುಖ ಶೃಂಗರಿಸುವ ಪ್ರಕಾರಕ್ಕೆ ಸುಖವೆನ್ನುವುದಿಲ್ಲ. ಅಂದರಂತೆ ಮೃತ್ಯುವಿನ ಛಾಯೆಯು ಸರ್ವತ್ರವೂ ಕಾಣುತ್ತಿರಲು ವಿಷಯ ಸಂಗದಲ್ಲಿ ಸುಖವೆನಿಸಲಾರದು ॥೪೮೯॥ ಮರಣದ ಯಾತನೆಯು ಆರಂಭಗೊಂಡರೆ ಆಗ ಆಪ್ತರು, ದ್ರವ್ಯ, ಅನ್ನ, ಪತ್ನಿ ಇತ್ಯಾದಿ ಯಾವುದರಿಂದಲೂ ಜೀವಕ್ಕೆ ಸುಖ ದೊರೆಯುವುದಿಲ್ಲ. ಅವೆಲ್ಲವೂ ವ್ಯರ್ಥವಾಗಿ ಹೋಗುವುವು ॥೪೯೦॥

ಅಂತಕಾಳೀ ಸ್ತ್ರೀಧನ । ಝಾಲೀ ದುಃಖಾಸೀಚ ಕಾರಣ । ತ್ಯಾಂಸೀ ಸಾಂಡೂನಿ ನ ನಿಘತೀ ಪ್ರಾಣ । ತಳಮಳೀ ಜಾಣ ಪ್ರಾಣಾಂತೀ ।।೪೯೧।। ಜೈಸಾ ಸುಳೀ ದ್ಯಾವಯಾ ಜೋ ನೇಇಜೇ । ತ್ಯಾಸೀ ನಾನಾ ಸಮಾರಂಭು ಕೀಜೇ । ಮುಖೀ ಘಾಲಿತೀ ಪಂಚಖಾಜೇ । ತೇಣೇ ತೋ ನಿವ್ವಿಜೇ ಸುಖಿಯಾ ಕೀ ।।೪೯೨।। ತೈಸೇ ಸಮ್ಮುಖ ಅಸತಾ ಮರಣ । ವಿಷಯಸುಖೇ ಸುಖಾವೇ ಕೋಣ । ವಿಷಯ ತ್ಯಾಗಿತೀ ಸಜ್ಞಾನ । ಮುರ್ಖಾಸೀ ಜಾಣ ಆಸಕ್ತೀ ।।೪೯೩।। ದೇಹದುಃಖಾಚೀ ಅರ್ಧಘಡೀ । ನಾಶೀ ವಿಷಯಸುಖಾಚೀ ಕೋಡೀ । ವಿಷಯಾಲಾಗೀ ಶಿಣತೀ ವೇಡೀ । ಅವಿನಾಶ ಗೋಡೀ ನಿರ್ವಿಷಯೀ ।।೪೯೪।। ಏವಂ ಯಾ ಲೋಕಾಂಚ್ಯಾ ಠಾಯೀ । ಸುಖ ಸರ್ವಥೈವ ನಾಹೀ । ಲೋಕಾಂತರೀ ಮ್ಹಣತೀ ಕಾಂಹೀ । ನ ಘಡೇ ತೇಹೀ ಉದ್ಧವಾ ।।೪೯೫।।

ಶ್ರುತಂ ಚ ದೃಷ್ಟವದ್ದುಷ್ಟಂ ಸ್ಪರ್ಧಾಸೂಯಾತ್ಯಯವ್ಯಯೈಃ । ಬಹ್ವಂತರಾಯಕಾಮತ್ವಾತ್ಕೃಷಿವಚ್ಚಾಪಿ ನಿಷ್ಫಲಮ್ ।।೨೧।।

ಅರ್ಥ :- ಪ್ರಿಯ ಉದ್ಧವನೇ, ಲೌಕಿಕ ಸುಖದಂತೆ ಪಾರಲೌಕಿಕ ಸುಖವೂ ಕೂಡ ದೋಷಯುಕ್ತವಾಗಿರುವುದು. ಅಲ್ಲಿಯೂ ಅನೇಕ ಸಂಘರ್ಷಗಳಿರುವುವು. ಅಧಿಕ ಸುಖವಾಗಿರುವುದನ್ನು ಕಂಡು ಅಸೂಯೆಯು ಹುಟ್ಟುವುದು. ಉತ್ತಮ ಗುಣ ಉಳ್ಳವರಲ್ಲಿ ದೋಷಗಳನ್ನು ಎಣಿಸುವರು. ಚಿಕ್ಕಜನರಲ್ಲಿ ತಿರಸ್ಕಾರವು ಹುಟ್ಟುವುದು. ಪ್ರತಿದಿನವೂ ಪುಣ್ಯವು ಕ್ಷೀಣಿಸುವುದು. ಸುಖವೂ ಸಹ ಇಳಿಮುಖವಾಗುವುದು. ಹಾಗೆಯೇ ಆ ಸುಖದಲ್ಲಿ ವೈಗುಣ್ಯಾದಿ ಅನೇಕ ವಿಘ್ನಗಳಿರುವುವು. ಆದ್ದರಿಂದ ಬೆಳೆ ಬೆಳೆಯಲು ಹತ್ತು ಕುತ್ತುಗಳಿರುವಂತೆ ಶ್ರುತವಿರುವ ಸ್ವರ್ಗಾದಿ ಸುಖಗಳು ನಿಷ್ಫಲವಾಗುವುವು.

ಜೈಸಾ ದೇಖಿಲಾ ಹಾ ಲೋಕ । ತೈಸಾಚಿ ಶ್ರುತ ಸ್ವರ್ಗಾದಿಕ । ಅನಾದಿ ದೋಷಯುಕ್ತ ದೇಖ । ಸದೋಷ ಮೂರ್ಖ ವಾಂಛಿತೀ ।।೪೯೬।। ಸ್ವರ್ಗೀ ಮ್ಹಣಸೀ ದೋಷ ಕೋಣ । ಐಕ ತಯಾಂಚೇ ಲಕ್ಷಣ । ಸ್ಪರ್ಧಾ ಅಸೂಯಾ ನಾಶ ಜಾಣ । ತಪ ಕ್ಷೀಣ ದಿವಿಭೋಗೇ ।।೪೯೭।। ತಪಸಂಪತ್ತಿ ಸಮಾನ ಪಾಹೀ । ಸ್ಪರ್ಧಾ ಮಾಂಡೀ ತ್ಯಾಚ್ಯಾ ಠಾಯೀ । ಮಜಸಮಾನ ಭೋಗು ಪಾಹೀ । ತೈ ಸುಖ ನಾಹೀ ಮಾನಸೀ ।।೪೯೮।। ಆಪಣಾಹೋನಿ ಅಧಿಕ ಪದೀ । ತ್ಯಾಸೀ ದೋಷ ಆರೋಪೋನಿ ನಿಂದೀ । ತೇಥಹೀ ಐಸೀ ವಿಷಮಬುದ್ಧೀ । ಸುಖ ತ್ರಿಶುದ್ಧೀ ತೇಥೇ ಕೈಚೇ ।।೪೯೯।। ಯಾಲಾಗೀ ಸ್ವರ್ಗಭೋಗೇ ಜೇ ಸುಖ । ಸಕಳಾ ಸಾರಿಖೇ ನಾಹೀ ದೇಖ । ತಪಾನುಸಾರೇ ನ್ಯೂನಾಧಿಕ । ಭೋಗಿತೀ ಲೋಕ ನಿಜಕರ್ಮೇ ।।೫೦೦।। ಏಕ ಊರ್ವಶೀ ಭೋಗು ಲಾಗಲಾ । ಏಕ ಕಾಳೀ ವಿದ್ರೂಪ ಪಾವಲಾ । ಭೋಗೇ ತಪಕ್ಷಯೋ ಝಾಲಾ । ನಾಶು ಆಲಾ ಅನಿವಾರ ।।೫೦೧।।

ಅಂತ್ಯ ಕಾಲಕ್ಕೆ ಕನಕ ಮತ್ತು ಕಾಮಿನಿಯು ದುಃಖಕ್ಕೆ ಕಾರಣೀಭೂತವಾಗುವುದು. ವಾಸನೆಯಿಂದ ಅವರನ್ನುಬಿಟ್ಟು ಅಗಲಲು ಪ್ರಾಣವು ಒಪ್ಪುವುದಿಲ್ಲ. ಅದಕ್ಕಾಗಿ ಅಂತ್ಯಕಾಲದಲ್ಲಿ ಜೀವಕ್ಕೆ ವಿಯೋಗದ ಅತಿಶಯವಾಗಿ ತಳಮಳವು ಉಂಟಾಗುವುದು ।।೪೯೧।। ಒಬ್ಬ ವ್ಯಕ್ತಿಯನ್ನು ಶೂಲಕ್ಕೇರಿಸಲು ಒಯ್ಯುವಾಗ ಆತನಿಗಾಗಿ ನಾನಾ ಪ್ರಕಾರದ ಸಮಾರಂಭವನ್ನುಮಾಡಿದರೂ, ಆತನ ಮುಖದಲ್ಲಿ ರುಚಿ ರುಚಿಯಾದ ಪದಾರ್ಥಗಳನ್ನು ಹಾಕಿದರೂ ಆ ವ್ಯಕ್ತಿಗೆ ಸುಖವಾಗುವುದಿಲ್ಲ ।।೪೯೨।। ಅದರಂತೆ ಮೃತ್ಯುವು ಎದುರಿನಲ್ಲಿ ಕಾಣುತ್ತಿರಲು ವಿಷಯ ಸಂಗದಿಂದ ಯಾರಿಗೆ ಸುಖವು ಲಭಿಸಬೇಕು? ಅದಕ್ಕಾಗಿ ವಿಚಾರವಂತರು ಆ ವಿಷಯಗಳ ತ್ಯಾಗವನ್ನು ಮಾಡುವರು. ಮತ್ತು ಮೂರ್ಖ ಜನರು ಮಾತ್ರ ಅದರಲ್ಲಿ ಆಸಕ್ತರಾಗುವರು ।।೪೯೩।। ದೇಹಕ್ಕೆ ಅರ್ಧಘಳಿಗೆ ದುಃಖವಾದರೆ ಕೋಟ್ಯಾವಧಿ ವಿಷಯ ಸುಖಗಳೆಲ್ಲವೂ ವ್ಯರ್ಥವಾಗುವುವು. ಆದ್ದರಿಂದ ಯಾವಾಗಲೂ ವಿಷಯಸುಖಗಳ ಬೆನ್ನುಹತ್ತುವವರು ಮೂರ್ಖರಾಗಿರುವರು. ನಿರ್ವಿಷಯ ಬ್ರಹ್ಮದಲ್ಲಿ ಅಖಂಡವಾದ ಆನಂದವಿರುವುದು ।।೪೯೪।। ಸಾರಾಂಶವೇನಂದರೆ, ಈ ಲೋಕದಲ್ಲಿ ಸುಖವೆಂಬುದು ಇಲ್ಲವೇ ಇಲ್ಲ, ಕೆಲವರು ಪರಲೋಕದಲ್ಲಿ ಸುಖವಿದೆ ಎನ್ನುವರು. ಆದರೆ ಹೇ ಉದ್ಧವನೇ, ಅಲ್ಲಿಯೂ ಕೂಡ ಸುಖವು ದೊರೆಯುವುದಿಲ್ಲ ।।೪೯೫।।

ನಾವು ಇಹಲೋಕದಲ್ಲಿ ಪ್ರತ್ಯಕ್ಷವಾಗಿ ಹೇಗೆ ಕಾಣುತ್ತೇವೆಯೋ, ಅದರಂತೆಯೇ ಸ್ವರ್ಗಾದಿ ಲೋಕವಿರುವವೆಂದು ನಾವು ಕೇಳುತ್ತೇವೆ. ಆದರೆ ಅವೂ ಕೂಡ ಮೊದಲಿನಿಂದಲೇ ದೋಷಯಕ್ತವಾಗಿರುವುವು. ಮೂರ್ಖ ಜನರು ಯಾವಾಗಲೂ ಸ್ವರ್ಗಾದಿಕ ಲೋಕಗಳ ಇಚ್ಛೆಪಡುವರು ।।೪೯೬।। ಸ್ವರ್ಗದಲ್ಲಿ ಯಾವ ದೋಷಗಳಿವೆ ಎಂದು ನೀನು ಕೇಳಬಹುದು, ಅದರ ಲಕ್ಷಣಗಳನ್ನು ಹೇಳುವೆ, ಕೇಳು. ಸ್ವರ್ಗದಲ್ಲಿಯೂ ಸಹ ಸ್ಪರ್ಧೆ ,ಮತ್ಸರ, ನಾಶ ಇವು ಇರುವುವು. ಹಾಗೆಯೇ ಅಲ್ಲಿ ಭೋಗದ ಯೋಗದಿಂದ ತಪಸ್ಸೂ ಕೂಡ ಕ್ಷೀಣಿಸುತ್ತ ಸಾಗುವದು ।।೪೯೭।। ತನ್ನ ಜೊತೆಯಲ್ಲಿ ಇನ್ನೊಬ್ಬರ ತಪದ ಪ್ರಭಾವವು ಹೆಚ್ಚಾಗಿ ತೋರಲು, ಅವನಲ್ಲಿ ಸ್ಪರ್ಧೆಗೆ ಇಳಿಯುವನು. ತನ್ನಂತೆಯೇ ಇನ್ನೊಬ್ಬನು ಸುಖವನ್ನು ಭೋಗಿಸುತ್ತಿರಲು, ಅವನಲ್ಲಿ ಮತ್ಸರವು ಹುಟ್ಟುವುದು. ಆಗ ತನಗೆ ಸಿಕ್ಕ ಸುಖವು ಇಲ್ಲದಂತಾಗುವುದು ।।೪೯೮।। ತನಗಿಂತಲೂ ಶ್ರೇಷ್ಠವಾದ ಸ್ಥಾನವನ್ನು ಯಾರಾದರೂ ಆರೂಢರಾಗಲು ಆಗ ಆತನಲ್ಲಿ ಯಾವುದಾದರೂ ದೋಷವನ್ನು ಹುಡುಕಿ ಆತನನ್ನು ನಿಂದಿಸುವರು. ಹೀಗೆ ಅಲ್ಲಿ ಭೇದಬುದ್ಧಿಯು ಇರುವುದು. ಅಂದಮೇಲೆ ಅಲ್ಲಿ ಸುಖವು ಎಲ್ಲಿಂದ ಸಿಗಬೇಕು? ।।೪೯೯।। ಸ್ವರ್ಗಲೋಕದ ಸುಖಭೋಗಗಳು ಸರ್ವರಿಗೂ ಸಮವಾಗಿ ಸಿಗುವುದಿಲ್ಲ. ತಮ್ಮ ತಮ್ಮ ತಪ, ಕರ್ಮ ಪ್ರಕಾರ ಹೆಚ್ಚು ಕಡಿಮೆ ಸುಖವನ್ನು ಭೋಗಿಸುವರು ।।೫೦೦।। ಒಬ್ಬನಿಗೆ ಸುಂದರ ಊರ್ವಶೀ ಸಿಗಲು, ಇನ್ನೊಬ್ಬನಿಗೆ ಕಪ್ಪು ಬಣ್ಣದ ಕುರೂಪಿ ಕರ್ಕಶೀ ಸಿಕ್ಕಿರುವಳು. ಭೋಗದಿಂದ ತಪದ ಕ್ಷಯವಾಗುತ್ತ ಕೊನೆಗೆ ನಾಶವಾಗುವುದು ।।೫೦೧।।

ಜಂವ ಜಂವ ಸ್ವರ್ಗಭೋಗ ಭೋಗಿತೀ । ತಂವ ತಂವ ತಪಾಚಿ ಕ್ಷೀಣಶಕ್ತೀ । ತಪಕ್ಷಯೇ ಕ್ಷಯಾ ಜಾತೀ । ನಾಶು
ಪಾವತೀ ಸ್ವರ್ಗಸ್ಥ ॥೫೦೨॥ ಸ್ವರ್ಗಪ್ರಾಪ್ತೀಚಿಯೇ ವಿಧೀ । ಕರ್ಮೆ ಕರಿತಾ ವಿಘ್ನ ಬಾಧೀ । ತೇಣೇ ನವ್ಹೇ
ಸ್ವರ್ಗಸಿದ್ಧೀ । ಜಾಣ ತ್ರಿಶುದ್ಧೀ ಉದ್ಧವಾ ॥೫೦೩॥ ಜೇ ಗರ್ಭೀಚ ಸಟವಲೇ । ತ್ಯಾಚೇ ಬಾರಸೇ ನ ವಚೇ ಕೇಲೇ
। ತೇವೀ ಕರ್ಮೀಚಿ ವಿಘ್ನ ಉದ್ಭವಲೇ । ಪಾವಣೇ ಠೇಲೇ ಸ್ವರ್ಗಾಚೇ ॥೫೦೪॥ ಮ್ಹಣಸೀ ವಿಘ್ನ ಕರೀ ಕೋಣ।
ಕರ್ಮ ಕರಿತಾ ಹೋಯ ವಿಗುಣ । ತೇ ಕರ್ಮಚಿ ಕರ್ಮಾಸೀ ಜಾಣ । ವಿಘ್ನ ದಾರುಣ ಉಪಜವೀ ॥೫೦೫॥
ಕರ್ಮಚಿ ಕರ್ಮಾಸೀ ಸಾಧಕ । ಕರ್ಮಚಿ ಕರ್ಮಾಸೀ ಬಾಧಕ । ಕರ್ಮಚೀ ಕರ್ಮಾಸೀ ಮೋಚಕ । ಹೇ ನೇಣೋನಿ
ಲೋಕ ಗುಂತಲೇ ॥೫೦೬॥ ಕಾಮ್ಯ ಕರ್ಮೀ ವಿಘ್ನ ವಿಚಿತ್ರ । ದೇಶ ಕಾಳಮಂತ್ರ ತಂತ್ರ । ದ್ರವ್ಯ ದಕ್ಷಿಣಾ ವಿಧಿ
ಪಾತ್ರ । ಶುದ್ಧಿ ಸರ್ವತ್ರ ಪಾಹಿಜೇ ॥೫೦೭॥ ಜೈಸೇ ಕ್ಷಯರೋಗಾಚೇ ರೋಗಿಯಾಸೀ । ಅಲ್ಪ ಕುಪಥ್ಯ ಬಾಧೀ
ತ್ಯಾಸೀ । ತೈಸೇ ಜಾಣ ಕಾಮ್ಯಕರ್ಮಾಸೀ । ಅಲ್ಪದೋಷೀ ಸವಿಘ್ನ ॥೫೦೮॥ ಪ್ರಚಂಡ ದುಧಾಚೇ ಭಾಂಡೇ।
ಮಾಜೀ ಥೇಂಬು ಏಕು ಕಾಂಜೀ ಪಡೇ । ತೇಣೇ ದಹೀ ದೂಧ ನಾ ತೂಪ ಜೋಡೇ । ಕರೀ ಖವಡೇ ದುಧಾಚೇ
॥೫೦೯॥ ತೈಸೇ ಕಾಮ್ಯ ಕರ್ಮ ಜಾಣ । ಅಲ್ಪಹೀ ಹೋತಾ ವಿಗುಣ । ಫಳ ನವ್ಹೇ ಪರೀ ದಾರುಣ । ತೇ ಕರ್ಮಚಿ
ವಿಘ್ನ ಉಪಜವೀ ॥೫೧೦॥ ಕಷ್ಟೋನಿಯಾ ಬಾರಾ ಮಾಸೀ । ಜೈಸಾ ಕೃಷೀವಳೂ ಕರೀ ಕೃಷೀ । ತ್ಯಾಚ್ಯಾ ಫಲಾ ಆಡ
ವಿಘ್ನೇ ಕೈಶೀ । ಕೇಲ್ಯಾ ಕಷ್ಟಾಸೀ ನಾಶಕ ॥೫೧೧॥ ಭೂಮಿ ಶುದ್ಧ ಶುದ್ಧ ಬೀಜ । ಕಾಳೀ ಪರ್ಜನ್ಯ ಕರ್ತಾ ನಿರುಜ।
ಉಪಕರಣ ಸಾಮಗ್ರೀಸಮಾಜ । ಪಹಿಲೇ ಹೇ ವೋಜ ಪಾಹಿಜೇ ॥೫೧೨॥ ಪೇರಣೀ ಝಾಲಿಯಾಪಾಠೀ।
ದೇಖಣೇ ರಾಖಣೇ ಕೂಪಕಾಂಟೀ । ಸೋಂಕರಾವೇ ಆವಶೀ ಪಾಹಾಟೀ । ಆಳಸು ಪೋಟೀ ಸಾಂಡೂನೀ ॥೫೧೩॥
ಪೀಕ ಯೇತಯೇತಾ ಕಣಶೀ । ಆಭಾಳೇ ಹಿಂಸಳಾ ಪಡೇ ತ್ಯಾಸೀ । ಕಾ ಕಾನ್ಹೀ ಪಡೇ ಪಿಕಾಸೀ । ಫಾಲೀ ಶೇತಾಸೀ
ನಿಂದಣೇ ॥೫೧೪॥ ಗರ್ವಾಚಾ ತಾಂಬಾರಾ ಪಡೇ । ಕಾ ಅಹಂತೇಚಾ ರೋಗ ಪಡೇ । ಕೀ ಅಧರ್ಮಾಚೀ ಆಳೀ
ವಾಢೇ । ಪೀಕ ಬುಡೇ ತೇಣೇ ಹೀ ॥೫೧೫॥

ಸ್ವರ್ಗ ಸುಖವನ್ನು ಭೋಗಿಸಿದಂತೆ ತಪದ ಸಾಮರ್ಥ್ಯವು ಕ್ಷೀಣಿಸುತ್ತ ಸಾಗುವುದು. ತಪದ ಪೂರ್ಣ ಕ್ಷಯವಾಗುತ್ತಲೇ ಸ್ವರ್ಗದ ಜನರು ನಾಶಹೊಂದುವರು ।೫೦೨॥ ಹೇ ಉದ್ಧವನೇ, ಸ್ವರ್ಗಪ್ರಾಪ್ತಿಗಾಗಿ ವಿಧಿಪೂರ್ವಕದಿಂದ ಕರ್ಮಗಳನ್ನು ಮಾಡುತ್ತಿರಲು ವಿಘ್ನಗಳ ಬಾಧೆಗಳು ಬೆಳೆಯುತ್ತ ನಡೆಯುವುವು. ಆದ್ದರಿಂದ ಸ್ವರ್ಗಪ್ರಾಪ್ತಿಯು ಆಗುವುದಿಲ್ಲ ।೫೦೩॥ ಗರ್ಭದಲ್ಲಿರುವಾಗಲೇ ಕೂಸು ಸಾಯಲು ಅದರ ತೊಟ್ಟಿಲ ಕಾರ್ಯವನ್ನು ಯಾರಿಗೂ ಮಾಡಲಾಗುವುದಿಲ್ಲ. ಅದರಂತೆ ಕರ್ಮಗಳಲ್ಲಿ ವಿಘ್ನಗಳು ಒದಗಲು ಸ್ವರ್ಗಕ್ಕೆ ಹೋಗುವ ರಸ್ತೆಯೇ ಬಂದಾಗುವುದು ।೫೧೪॥ ಕರ್ಮಗಳಲ್ಲಿ ಯಾರು ವಿಘ್ನಗಳನ್ನು ತರುವರು? ಎಂದು ಕೇಳಿದರೆ ಅದಕ್ಕಾಗಿ ಕೇಳು. ಕರ್ಮವನ್ನು ಮಾಡುತ್ತಿರಲು ದೋಷ- ಉಂಟಾದರೆ, ಆ ಕರ್ಮವೇ ಕರ್ಮದಲ್ಲಿ ಭಯಂಕರವಾದ ವಿಘ್ನವನ್ನು ಹುಟ್ಟಿಸುವುದು ।೫೧೫॥ ಕರ್ಮವೇ ಕರ್ಮದ ಸಾಧಕವಾಗಿರುವುದು. ಕರ್ಮವೇ ಕರ್ಮದ ಬಾಧಕವಾಗಿರುವುದು. ಕರ್ಮವೇ ಕರ್ಮದಿಂದ ಬಿಡುಗಡೆ ಮಾಡುವುದಾಗಿರುವುದು. ಆದರೆ ಈ ಕರ್ಮದ ರಹಸ್ಯವನ್ನು ಅರಿಯದೇ ಅಜ್ಞಾನಿ ಜನರು ಅದರಲ್ಲಿ ಸಿಕ್ಕಿ ಬಿದ್ದಿರುವರು ।೫೦೬॥ ಕಾಮ್ಯ ಕರ್ಮದಲ್ಲಿ ವಿಲಕ್ಷಣವಾದ ವಿಘ್ನಗಳು ಹುಟ್ಟಿಕೊಳ್ಳುವುವು. ಇವುಗಳಲ್ಲಿ ದೇಶ, ಕಾಲ, ಮಂತ್ರ-ತಂತ್ರ, ದ್ರವ್ಯ, ದಕ್ಷಿಣೆ, ವಿಧಿ, ಪಾತ್ರಗಳು ಈ ಎಲ್ಲವೂ ಶುದ್ಧವಾಗಿರಬೇಕಾಗುವುದು ।೫೦೭॥ ಯಾವ ಪ್ರಕಾರವಾಗಿ ಕ್ಷಯ ರೋಗಿಯೂ ಅಲ್ಪ ಕುಪಥ್ಯ ಮಾಡಿದರೆ ಸಾಕು, ಆತನಿಗೆ ಹೇಗೆ ಬಹು ಬಾಧೆಯುಂಟಾಗುವುದೋ, ಅದರಂತೆ ಕಾಮ್ಯ ಕರ್ಮದಲ್ಲಿ ಸ್ವಲ್ಪಾದರೂ ದೋಷ ಉಂಟಾದರೆ ಸಾಕು ವಿಘ್ನಗಳು ಹುಟ್ಟಿಕೊಳ್ಳುವುವು ।೫೦೮॥ ಹಾಲಿನಿಂದ ತುಂಬಿದ ದೊಡ್ಡ ಭಾಂಡೆಯಲ್ಲಿ ಕ್ಷಾರಹನಿಯು ತಪ್ಪಿ ಬೀಳಲು ಆ ಹಾಲಿನಿಂದ ಮೊಸರು, ಹಾಲು ಅಥವಾ ತುಪ್ಪ ಇವು ಏನೂ ದೊರಕಲಾರವು. ಪ್ರತಿಯಾಗಿ ಆ ಹಾಲಿನ ಎಲ್ಲವೂ ಕೆಲಸಕ್ಕೆ ಬಾರದ ಪಿಸರು, ನೀರು ಆಗುವುದು ।೫೦೯॥ ಅದರಂತೆ ಕಾಮ್ಯ ಕರ್ಮಗಳಲ್ಲಿ ಸ್ವಲ್ಪ ದೋಷವು ಆಯಿತೆಂದರೆ ಸಾಕು, ಆ ಕರ್ಮದ ಫಲವು ಸಿಗುವುದಿಲ್ಲ ಮತ್ತು ಅದೇ ಕರ್ಮವು ಭಯಂಕರವಾದ ವಿಘ್ನವನ್ನು ನಿರ್ಮಾಣಗೊಳಿಸುವುದು ।೫೧೦॥ ಒಕ್ಕಲಿಗನು ಹನ್ನೆರಡು ತಿಂಗಳವರೆಗೆ ಕಷ್ಟಪಟ್ಟು ಹೊಲವನ್ನು ಬಿತ್ತಿ ಬೆಳೆಸುವನು. ಆದರೆ ಅವನ ಪೀಕಿನ ಅಡ್ಡವಾಗಿ ಅನೇಕ ವಿಘ್ನಗಳು ಬರುವುವು. ಆದ್ದರಿಂದ ಆತನು ಮಾಡಿದ ಕಷ್ಟವು ವ್ಯರ್ಥವಾಗುವುದು ।೫೧೧॥ ಆರಂಭದಲ್ಲಿ ಹೊಲವು ಉತ್ತಮ ಪೈಕಿಯಾಗಿರಬೇಕು. ಬಿತ್ತಲು ಬೀಜಗಳು ಶುದ್ಧವಾಗಿರಬೇಕು. ಯಥಾಕಾಲದಲ್ಲಿ ಮಳೆಯಾಗಬೇಕಾಗುವುದು. ಹೊಲಕ್ಕೆ ಹುಳಗಳು ಬೀಳಬಾರದು. ಒಕ್ಕಲುತನದ ಎಲ್ಲ ಉಪಕರಣಗಳು ಸರಿಯಾಗಿರಬೇಕಾಗುವುದು. ಪ್ರಾರಂಭದಲ್ಲಿಯೇ ಈ ಎಲ್ಲವೂ ಉತ್ತಮವಾಗಿ ಕೂಡಿಸಬೇಕಾಗುವುದು ।೫೧೨॥ ಬಿತ್ತಿಗೆಯು ಆದನಂತರ ಸುತ್ತಲೂ ಮುಳ್ಳಿನ ಬೇಲಿ ಹಚ್ಚಿ ಪುನಃ ಆಗಾಗ ನೋಡುತ್ತಿರುವುದು ಮತ್ತು ಕಾಯಲು ಹಚ್ಚಬೇಕಾಗುವುದು. ಬೆಳಿಗ್ಗೆ ಎದ್ದು ಹೋಗಿ ಅವೆಲ್ಲವನ್ನೂ ಆಲಸ್ಯ ಮಾಡದೇ ನೋಡಬೇಕಾಗುವುದು ।೫೧೩॥ ಬೆಳೆಗೆ ತೆನೆಗಳು ಹುಟ್ಟಲು ಮೋಡಕವಿದು ಬೆಳೆಗೆ ಒಂದು ಪ್ರಕಾರದ ರೋಗ ಬಡೆದು ತೆನೆಗಳು ಕಪ್ಪಾಗುವುವು. ಸರ್ವ ಹೊಲವು ಕೆಟ್ಟು ಹೋಗವುದು ।೫೧೪॥ ಅದರಂತೆ ಕರ್ಮದಲ್ಲಿ ಅಹಂಕಾರ ಕೆಂಪೇರುವುದು ಅಥವಾ ಗರ್ವದ ರೋಗವು ಬಡೆದುಕೊಳ್ಳುವುದು ಅಥವಾ ಅಧರ್ಮದ ಹುಳ ಬೀಳುವುದು . ಹೀಗಾಗಿ ಬಂದ ಬೆಳೆಯು ಹಾಳಾಗಿಬಿಡುವುದು ।೫೧೫॥

ಸಬಳ ಸೋಂಕರಣೇ ನ ಘಡೀ । ತರೀ ಆಶೇತೃಷ್ಣೇಚ್ಯಾ ಭೋರಡೀ । ಕೀಜೇ ಪಿಕಾಚೀ ಓರಬಡೀ । ದಾಣಾ ಬುಡೀ ಉರೇನಾ ॥೩೧೬॥ ದಂಭಾಚೀ ಘಾಂಟೀ ಪಡಿಲ್ಯಾ ಠಾಯೀ । ಘಾಂಟಾ ದಿಸೇ ಪರೀ ದಾಣಾ ನಾಹೀ । ಕಾಮಕ್ರೋಧಾಂಚ್ಯಾ ಉಂದರೀ ಪಾಹೀ । ಮೂಳಾಚ್ಯಾ ಠಾಯೀ ಕರಾಂಡಿಲೇ ॥೩೧೭॥ ಆಲ್ಯಾ ವಿಕಲ್ಪಾಚೀ ಧಾಡೀ । ಶೇತಾಮಾಜೀ ನುರೇ ಕಾಡೀ । ಕುವಾಸನಾ ಟೋಳಾಂಚೀ ವಡೇ ಉಡೀ । ಸಮೂಳ ಸತೇಂಡೀ ಖುರಾಟ ॥೩೧೮॥ ಏವಂ ಕೃಷೀ ಬಳಾಚೇಪರಿ । ಸಕಾಮಾಸೀ ವಿಘ್ನೇ ಭಾರೀ । ಫಳ ಅಂತರಲೇ ದೂರೀ । ವಿಘ್ನಸಾಗರೀ ಬುಡಾಲೇ ॥೩೧೯॥ ಸ್ವರ್ಗು ಏಕು ಯಾಜ್ಞಿಕ ಬಹುತ। ಯಾಗೀ ದೇವ ವಿಘ್ನೇ ಕರಿತ । ಮುಖ್ಯ ಇಂದ್ರಚಿ ವಿಘ್ನಾ ಪ್ರವರ್ತತ । ಸ್ವರ್ಗ ರಾಖಿತ ನಿಜಭೋಗಾ ॥ ೩೨೦॥ ಏಕೀ ವೇಶ್ಯಾ ಏಕೀ ರಾತೀ । ಯೇಥ ಸಕಾಮ ಬಹುತ ಯೇತೀ । ತೇ ಜೈಸೇ ಕಲಹೋ ಕರಿತೀ । ತೈಶೀ ಗತೀ ಯಾಜ್ಞಿಕಾ ॥೩೨೧॥ ಕಾ ಶುನಿ ಜೈಸಿ ಋತುಸ್ನಾತ । ತಿಸೀ ಭೋಗೂ ಯೇತೀ ಶ್ವಾನ ಬಹುತ । ಪರಸ್ಪರೇ ಗುರಗುರಿತ । ತೈಸಾ ಸ್ವರ್ಗ ಭೋಗತ ಸಕಾಮ ॥೩೨೨॥ ತೇಥ ಜ್ಯಾಸೀ ಭೋಗ ಘಡೇ । ಭೋಗೂ ಜಾತಾ ಅಡಕೋನಿ ಪಡೇ । ಭಾಂಡಿಮಾ ಹೋಯೇ ಜಗಾಪುಢೇ । ಸಜ್ಞಾನ ತೋಂಡೇ ಥುಂಕಿತೀ ॥೩೨೩॥ ಜಿಚೇ ಭೋಗೂ ಜಾಯ ಸುಖ । ಅಡಕಲ್ಯಾ ತೇ ಹೋಯ ವಿಮುಖ । ಮೈಥುನದ್ವಾರೇ ಗುಂತಲ್ಯಾ ದೇಖ । ಥುಂಕಿತೀ ಲೋಕ ಮುಖಾಮುಖೀ ॥೩೨೪॥ ತೈಶೀ ಯಾಜ್ಞಿಕಾ ಸ್ವರ್ಗ ಪ್ರಾಪ್ತೀ । ಭೋಗೇ ಹೋಯ ತಪಚ್ಯುತಿ । ಸ್ವರ್ಗ ಭೋಗೀ ಗುಂತಲೀ ಆಸಕ್ತೀ । ವಿಮುಖ ಪಡತೀ ಇಹಲೋಕೀ ॥೩೨೫॥ ಏವಂ ಕೃಷೀ ವಳಾಚಿಯಾ ಪರೀ । ಸ್ವರ್ಗ ಪ್ರಾಪ್ತೀಸೀ ವಿಘ್ನೇ ಭಾರೀ । ಕೇಲೇ ಕಷ್ಟ ವೃಥಾ ಕರೀ । ಭೋಗು ಕೈಶಾಪರೀ ಘಡೇಲ ॥೩೨೬॥ ಏಕ ಮ್ಹಣತೀ ಕರ್ಮಕುಶಳ । ಆಮ್ಹೀ ಕರ್ಮ ಹೋ ನೇದೂ ವಿಕಳ । ಅಚ್ಛಿದ್ರ ಸಾಧೂನಿ ಸಕಳ । ಸ್ವರ್ಗ ಸುಖಫಳ ಭೋಗೂ ॥೩೨೭॥ ಉದ್ಧವಾ ಐಸೇ ಹೀ ನ ಘಡೇ । ತೇ ಮೀ ಸಾಂಗೇನ ತುಜ ಪುಢೇ । ಪಂಚಶ್ಲೋಕೀ ಫಾಡೋವಾಡೇ । ವಿಶದ ನಿವಾಡೇ ಪರಿಯೇಸೀ ॥೩೨೮॥

ಯೋಗ್ಯ ಪ್ರಕಾರಗಳಲ್ಲಿ ಅದರ ರಕ್ಷಣೆಯನ್ನು ಮಾಡದಿದ್ದರೆ, ಕರ್ಮಕ್ಕೆ ಆಶಾಮತ್ತು ತೃಷ್ಣರೂಪ ಹುಳಹತ್ತಿಕೊಂಡು ಹೊಲದಲ್ಲಿ ಒಂದು ಕಾಳೂ ಕೂಡ ಉಳಿಯುವುದಿಲ್ಲ ॥೩೧೬॥ ದಂಭರೂಪ ಹುಳಗಳು ಬಿದ್ದರೆ ಅವು ಎಲ್ಲ ಧಾನ್ಯಗಳನ್ನು ತಿಂದು ಬಿಡುವುವು. ಕಡಲೆ ಬೆಳೆಯಲ್ಲಿ ಬುಡ್ಡಿಗಳು ಕಣ್ಣಿಗೆ ತೋರುವುವು. ಆದರೆ ಅವುಗಳಲ್ಲಿ ಒಂದೂ ಬೀಜವಿರುವುದಿಲ್ಲ. ಕಾಮ ಕ್ರೋಧರೂಪ ಇಲಿಗಳು ಅವು ಮಾತ್ರ ಬೆಳೆಯ ಬೇರನ್ನೇ ಕಡಿದು ತಿಂದು ಕೆಡಿಸುವುವು ॥೩೧೭॥ ವಿಕಲ್ಪದ ಮುತ್ತಿಗೆಯು ಒದಗಿತೆಂದರೆ ಆ ಹೊಲದಲ್ಲಿ ಒಂದು ಕಡ್ಡಿಯೂ ಸಹ ಉಳಿಯುವುದಿಲ್ಲ. ಕುವಾಸನೆಯ ಅಡವಿ ಕಳ್ಳರ ಗುಂಪು ಹೊಲಕ್ಕೆ ಮುತ್ತಿಕೊಳ್ಳಲು ಆಗ ಬೇರಿನಿಂದ ಹಿಡಿದು ತುದಿಯವರೆಗೆ ಎಲ್ಲವೂ ಸಪಾಟವಾಗಿ ಬಿಡುವುವು ॥೩೧೮॥ ಈ ಪ್ರಕಾರವಾಗಿ ಸಕಾಮ ಕರ್ಮಗಳನ್ನು ಮಾಡುವವರ ಮಾರ್ಗದಲ್ಲಿ ಒಕ್ಕಲಿಗರಿಗೆ ಒದಗುವಂತೆ ಅಸಂಖ್ಯ ವಿಘ್ನಗಳು ಒದಗುವುವು. ಅವರಿಗೆ ಸಿಗುವ ಫಲವು ಮಾತ್ರ ದೂರ ಉಳಿಯುವುದು. ಆದರೆ ಅವರು ವಿಘ್ನಗಳ ಸಮುದ್ರದಲ್ಲಿ ಮುಳುಗುವರು ॥೩೧೯॥ ಸ್ವರ್ಗವು ಒಂದೇ ಇರುವುದು. ಆದರೆ ಅದರ ಪ್ರಾಪ್ತಿಗಾಗಿ ಯಜ್ಞಮಾಡುವವರು ಅನೇಕರಿರುವರು. ಆದ್ದರಿಂದ ಆ ಯಜ್ಞಕ್ಕೆ ದೇವತೆಗಳು ವಿಘ್ನಗಳನ್ನು ಹುಟ್ಟಿಸುವರು. ಮುಖ್ಯವಾಗಿ ಇಂದ್ರನೇ ವಿಘ್ನಗಳನ್ನು ಒಡ್ಡಲು ಸಿದ್ಧನಾಗಿರುವನು. ಸ್ವರ್ಗವನ್ನು ಸ್ವತಃ ಭೋಗಿಸುವುದಕ್ಕಾಗಿ ರಕ್ಷಿಸಿಕೊಳ್ಳುವನು ॥೩೨೦॥ ವೇಶ್ಯೆಯು ಒಬ್ಬಳೇ, ರಾತ್ರಿಯೂ ಒಂದೇ ಇರುವುದು. ಆದರೆ ಆಕೆಯ ಕಡೆ ಬರುವವರು ಮಾತ್ರ ಕಾಮುಕರು ಅನೇಕರಿರುವರು . ಆದ್ದರಿಂದ ಇವರು ಪರಸ್ಪರರಲ್ಲಿ ಕಲಹ ಮಾಡುವರು. ಸ್ವರ್ಗಕ್ಕಾಗಿ ಯಜ್ಞ ಮಾಡಿದವರ ಸ್ಥಿತಿಗತಿಯೂ ಕೂಡ ಹೀಗೆಯೇ ಆಗಿರುವುದು ॥೩೨೧॥ ಬೆದಿಗೆ ಬಂದ ಹೆಣ್ಣು ನಾಯಿಯ ಭೋಗಕ್ಕಾಗಿ ಅನೇಕ ಗಂಡು ನಾಯಿಗಳು ಆಕೆಯಲ್ಲಿ ಬಂದು ಒಂದಕ್ಕೊಂದು ಗುರ್ ಗುರ್ ಎಂದು ಕಚ್ಚಾಡುವುವು. ಅದರಂತೆ ಸ್ವರ್ಗದ ಅಭಿಲಾಷೆಯಿಂದ ಸಕಾಮ ಜನರ ಸ್ಥಿತಿಯಾಗಿರುವುದು ॥೩೨೨॥ ಅವುಗಳಲ್ಲಿ ಯಾವ ನಾಯಿಯು ಸಂಗವನ್ನು ಸಾಧಿಸುವುದೋ, ಅದು ಅಲ್ಲಿಯೇ ಸಿಕ್ಕಿಕೊಳ್ಳುವುದು. ಆಗ ಜನರಲ್ಲಿ ಅದರ ದುರ್ದಶೆಯಾಗುವುದು. ಇದನ್ನು ಕಂಡ ಸಭ್ಯ ಜನರು ಮನಸ್ಸಿಗೆ ಹೇಯವಾಗಿ ಅವರು ಅವುಗಳತ್ತ ಉಗುಳುವರು ॥೩೨೩॥ ಯಾವುದರ ಸುಖ ಭೋಗಿಸಲು ಹೋಗಿ ಅಲ್ಲಿಯೇ ಇಂದ್ರಿಯವು ಸಿಕ್ಕಿಕೊಂಡು ವಿಮುಖವಾಗುವುದು. ಮೈಥುನ ದ್ವಾರದಲ್ಲಿ ಸಿಕ್ಕಿ ಹಾಕಿಕೊಂಡಿದ್ದನ್ನು ಕಂಡ ಹೋಗಬರುವವರು ಛೀ, ಥೂ ಎಂದು ತಿರಸ್ಕರಿಸುವರು ॥೩೨೪॥ ಯಾಜ್ಞಿಕ ಸ್ವರ್ಗಪ್ರಾಪ್ತಿಯ ಸ್ಥಿತಿಯು ಹೀಗೆಯೇ ಇರುವುದು. ಅಲ್ಲಿನ ಭೋಗಗಳನ್ನು ಭೋಗಿಸುತ್ತಿರಲು ಕೂಡಲೇ ತಪವು ಕ್ಷೀಣಿಸುವುದು. ಆದರೂ ಅವರ ಮನವು ಸ್ವರ್ಗ ಭೋಗದಲ್ಲಿ ಸಿಕ್ಕಿಕೊಂಡಿರುವುದು. ಆಗ ಅವರು ಅಲ್ಲಿಂದ ವಿಮುಖರಾಗಿ, ಅಲ್ಲದೇ ಇಹಲೋಕಕ್ಕೆ ತಲೆ ಕೆಳಗಾಗಿ ಬಂದು ಬೀಳುವರು ॥೩೨೫॥ ಈ ಪ್ರಕಾರವಾಗಿ ಒಕ್ಕಲಿಗನಂತೆ ನಾನಾ ಪ್ರಕಾರಗಳ ವಿಘ್ನಗಳು ಬಂದೊದಗುವುವು. ಇವುಗಳ ಮಾಡಿದ ಎಲ್ಲ ಶ್ರಮವನ್ನು ವ್ಯರ್ಥಗೊಳಿಸುವುವು. ಆಗ ಭೋಗವಾದರೂ ಹೇಗೆ ದೊರಕಬೇಕು? ॥೩೨೬॥ ಕೆಲವರು ತಾವು ಕರ್ಮಗಳನ್ನು ಮಾಡುವುದರಲ್ಲಿ ಮಹಾ ಚತುರರೆಂದು ತಿಳಿದಿರುವರು. ನಾವು ಕರ್ಮಗಳಲ್ಲಿ ಸ್ವಲ್ಪವೂ ಹೆಚ್ಚು ಕಡಿಮೆ ಮಾಡಲಾರೆವು ಎನ್ನುವರು. ನಾವು ಎಲ್ಲವನ್ನೂ ಸರಿಯಾಗಿ ಆಚರಿಸಿ ಸ್ವರ್ಗ ಲೋಕದಲ್ಲಿನ ಫಲಗಳನ್ನು ಭೋಗಿಸುವೆವು ಎಂದು ಹೇಳುವರು ॥೩೨೭॥ ಆದರೆ ಹೇ ಉದ್ಧವನೇ, ಹಾಗೆಯೂ ಅವರಿಂದ ಆಗಲಾರದು. ಮುಂದೆ ಐದು ಶ್ಲೋಕಗಳಲ್ಲಿ ಅದರ ವಿವೇಚನೆ ಮಾಡಿ ಹೇಳುವೆನು, ಅದನ್ನು ಈಗ ಲಕ್ಷಕೊಟ್ಟು ಕೇಳು ॥೩೨೮॥

ಅಂತರಾಯೈರವಿಹಿತೋ ಯದಿ ಧರ್ಮಃ ಸ್ವನುಷ್ಠಿತಃ । ತೇನಾಪಿ ನಿರ್ಜಿತಂ ಸ್ಥಾನಂ ಯಥಾ ಗಚ್ಛತಿ ತಚ್ಛೃಣು ॥೨೨॥

ಅರ್ಥ:- ಯಜ್ಞಯಾಗಗಳನ್ನು ಯಾವ ದೋಷವಿಲ್ಲದೇ ಮಾಡಿದಾತನು ಮುಂದಿನ ಜನ್ಮದಲ್ಲಿ ಸ್ವರ್ಗಸುಖವನ್ನು ಪಡೆಯುತ್ತಾನೆ. ಈ ಫಲವೂ ಕೂಡ ಕಾಲಾಂತರದಲ್ಲಿ ನಾಶವಾಗುವುದು. ಈಗ ಅದನ್ನು ಕೇಳು.

ಜೇಣೇ ಅಂತರಾಯ ನ ಪವತಿ। ಐಶೀ ಅಚ್ಛಿದ್ರಕರ್ಮೇ ನವ್ಹತೀ । ಜರೀ ಝಾಲೀ ದೈವಗತೀ । ತರೀ ಸ್ಥಾನಪ್ರಾಪ್ತೀ ತೇ ನಶ್ವರ॥೧೨೯॥ ಕರ್ಮೇ ಜ್ಯಾ ಸ್ಥಾನಾಪ್ರತಿ ಜಾಯೇ । ತೇಥ ಗೇಲಿಯಾ ಜೇ ಜೇ ಲಾಹೇ । ತೇ ತೇ ಸಾಂಗೇನ ಮೀ ಪಾಹೇ । ಸಾವಧ ಹೋಯೇ ಉದ್ಧವಾ ॥೧೩೦॥

ಇಷ್ಟ್ವೇಹ ದೇವತಾ ಯಜ್ಞೈಃ ಸ್ವರ್ಲೋಕಂ ಯಾತಿಯಾಜ್ಞಿಕಃ । ಭುಂಜೀತ ದೇವವತ್ತತ್ರ ಭೋಗಾನ್ ದಿವ್ಯಾನ್ನಿಜಾರ್ಜಿತಾನ್ ॥೨೩॥

ಅರ್ಥ:- ದೇವತೆಗಳ ಸಂತೃಪ್ತಿಗಾಗಿ ವ್ಯಕ್ತಿಯು ಭೂಲೋಕದಲ್ಲಿ ಯಜ್ಞಗಳನ್ನಾಚರಿಸಿದರೆ ಅವನು ಸ್ವರ್ಲೋಕಗಳಿಗೆ ಹೋಗುತ್ತಾನೆ. ಅಲ್ಲಿ, ಅವನು ತನ್ನ ಆಚರಣೆಗಳಿಂದ ಅರ್ಜಿಸಿದ ಎಲ್ಲ ಸ್ವರ್ಗಸುಖಗಳನ್ನು ದೇವತೆಯಂತೆ ಭೋಗಿಸುತ್ತಾನೆ.

ಪಾವೋನಿ ಕರ್ಮಭೂಮೀ ಉತ್ತಮ । ವರ್ಣವರಿಷ್ಠ ಬ್ರಾಹ್ಮಣಜನ್ಮ । ಜ್ಯೋತಿಷ್ಟೋಮಾದಿಕ ಕರಿತೀ ಕರ್ಮ । ನಿತ್ಯ ಕಾಮ್ಯ ಅಗ್ನಿಹೋತ್ರ॥೧೩೧॥ ತ್ರಯೀವಿದ್ಯಾ ಜಾಣತೀ ಸಕಳ । ಕರ್ಮಕಲಾಪೀ ಅತಿಕುಸಳ। ಐಸೇ ಸಜ್ಞಾನ ಮೂರ್ಖ ಕೇವಳ । ಸ್ವರ್ಗಫಳ ವಾಂಛಿತೀ ॥೧೩೨॥ ಜೇಣೇ ಪುಣ್ಯೇ ಮೀ ನ ಜೋಡೇ । ತೇ ಪುಣ್ಯ ಮ್ಹಣತಾ ವಾಚಾ ರಡೇ । ಯಾಜ್ಞಿಕ ವಿಷಯಾಸಕ್ತ ಗಾಢೇ । ಸ್ವರ್ಗಭೋಗಾಕಡೇ ಧಾಂವಿನ್ನಲೇ ॥೧೩೩॥ ಯಜೂನಿ ಇಂದ್ರಾದಿ ದೇವಾಂಸೀ । ಜೇಣೇ ಅಂತರ ಪಡೇ ಮಜಸೀ । ತ್ಯಾಪಾವಲೇ ಸ್ವರ್ಗಲೋಕಾಸೀ । ದಿವ್ಯ ಭೋಗಾಸೀ ಭೋಗಾವಯಾ ॥೧೩೪॥ ಬಹುತೀ ಚಘಳಿಲೇ ಜುನೇ ಹಾಡ । ತೇ ಶ್ವಾನ ಸ್ವಲಾಳಾ ಕರೀ ಗೋಡ । ತೈಸೇ ಯಾಜ್ಞಿಕಾ ಸ್ವರ್ಗಕೋಡ । ಸ್ವಪುಣ್ಯೇ ಗೋಡ ಕರಿತಾತೀ ॥೧೩೫॥ ಕಾ ಸ್ಮಶಾನಬಳೀಚೇ ಅನ್ನ । ಕಲಹೇ ಶ್ವಾನಶೇಷ ಖಾಯ ಶ್ವಾನ । ತೈಸಾಚಿ ಸ್ವರ್ಗಭೋಗ ಜಾಣ ।ಶೇಷ ಭಾಜನ ಬಹುತಾಂಚೇ ॥೧೩೬॥ ಗಾಂಠೀಚೇ ವೇಂಚೂನ ಶುದ್ಧ ಸುಕೃತ । ಉಚ್ಛಿಷ್ಟ ಭೋಗ ವಿಕತ ಘೇತ । ಯಾಜ್ಞಿಕ ಪವಿತ್ರ ಮ್ಹಣವಿತ । ಮೋಲೇ ಸೇವಿತ ಬಹುಶೇಷ ॥೧೩೭॥ ಕೇವಳ ವಾಯಸಾಚೇ ಮಾಂಸ । ತೇಹೀ ಶ್ವಾನಮುಖೀಚೇ ಶೇಷ । ಮೋಲೇ ನ ಮಿಳೇಚಿ ಬಹುವಸ । ತೈಸೀ ರಸಕಸ ಯಾಜ್ಞಿಕಾ ॥೧೩೮॥ ಸ್ವರ್ಗ ಉಚ್ಛಿಷ್ಟ ಬಹುತಾಂಚೇ । ತ್ಯಾಸೀ ಮೋಲ ವೇಚೇ ಅತಿಕಷ್ಟಾಂಚೇ । ತೇಹೀ ನ ಮಿಳೇಚಿ ಧಣೀಚೇ । ಭಯ ಪತನಾಚೇ ಅಹರ್ನಿಶೀ ॥೧೩೯॥

ವಿಘ್ನಗಳು ಬಾರದೇ ಇರುವ ನಿರ್ದೋಷ ಕರ್ಮಗಳು ಎಂದಿಗೂ ಸಾಧಿಸಲಾರವು. ಆದರೂ ದೈವಯೋಗದಿಂದ ಅದು ಸಾಧಿಸಿತೆಂದರೆ ಸಿಕ್ಕ ಸ್ವರ್ಗವು ನಶ್ವರವೇ ಆಗಿರುವುದು ॥೧೨೯॥ ಕರ್ಮಗಳನ್ನು ಮಾಡಿ ಯಾರು ಯಾವ ಪದವಿಯನ್ನು ಪಡೆಯುವರು, ಅಲ್ಲಿ ಹೋದ ನಂತರ ಯಾವುದು ಹೇಗೆ ಪ್ರಾಪ್ತವಾಗುವುದೆಂಬುದು ನಾನು ನಿನಗೆ ಹೇಳುವೆನು. ಅದಕ್ಕಾಗಿ ಉದ್ಧವಾ, ಸರಿಯಾಗಿ ಕೇಳು ॥೧೩೦॥

ಉತ್ತಮವಾಗಿರುವ ಕರ್ಮಭೂಮಿಯನ್ನು ಅಂದರೆ ಮೃತ್ಯು ಲೋಕವನ್ನು ಪಡೆದುಕೊಂಡು ಶ್ರೇಷ್ಠವಾದ ಬ್ರಾಹ್ಮಣ ಕುಲದಲ್ಲಿ ಜನ್ಮ ಧರಿಸಿ, ಇವರು ಜ್ಯೋತಿಷ್ಟೋಮಾದಿ ಯಜ್ಞ ಅಥವಾ ಅಗ್ನಿಹೋತ್ರ ಆಚರಿಸುವರು ॥೧೩೧॥ ಇವರು ಮೂರೂ ವೇದಗಳನ್ನು ಅರಿತಿರುವರು. ಮತ್ತು ಯಾವತ್ತೂ ಕರ್ಮಗಳ ಆಚರಣೆಯಲ್ಲಿ ಬಹಳ ಚತುರರಾಗಿರುವರು. ಆದರೆ ಹೀಗೆ ವಿದ್ವಾನರಾಗಿದ್ದರೂ ಕೂಡ ಕೇವಲ ಮೂರ್ಖರಾಗಿರುವರು. ಕಾರಣ ಇವರು ನಶ್ವರವಾದ ಸ್ವರ್ಗಫಲದ ಇಚ್ಛೆಯನ್ನು ಮಾಡುವರು ॥೧೩೨॥ ಯಾವ ಪುಣ್ಯದ ಯೋಗದಿಂದ ನಾನು ಪ್ರಾಪ್ತನಾಗುವುದಿಲ್ಲವೋ, ಅದಕ್ಕೆ ಪುಣ್ಯ ಎಂದು ಹೇಳಲಿಕ್ಕೆ ವಾಣಿಗೆ ಅಳು ಬರುವುದು. ಯಜ್ಞಗಳನ್ನು ಆಚರಿಸುವವರು ವಿಷಯಗಳ ಆಸಕ್ತಿಯಲ್ಲಿ ಸಿಲುಕಿರುವರು. ಆದ್ದರಿಂದ ಅವರು ಭೋಗಕ್ಕಾಗಿ ಸ್ವರ್ಗದತ್ತ ಧಾವಿಸುತ್ತಿರುವರು ॥೧೩೩॥ ಯಾವುದರಿಂದ ನಾನು ದೂರಾಗುವೆನೋ, ಅಂತಹ ಇಂದ್ರಾದಿ ದೇವರಿಗಾಗಿ ಯಜ್ಞಗಳನ್ನು ಮಾಡಿ ದಿವ್ಯ ಭೋಗಗಳನ್ನು ಭೋಗಿಸಲು ಇವರು ಸ್ವರ್ಗಲೋಕಕ್ಕೆ ಹೋಗುವರು ॥೧೩೪॥ ಅನೇಕ ನಾಯಿಗಳು ತಿಂದು ಬಿಟ್ಟು ಒಣಗಿದ ಎಲುಬನ್ನು ಒಂದು ನಾಯಿಯು ಅದನ್ನೇ ತನ್ನ ನಾಲಿಗೆಯಿಂದ ನೆಕ್ಕಿ ನೆಕ್ಕಿ ತನ್ನದೇ ಲಾಲಾರಸದಿಂದ ಅದನ್ನು ರುಚಿಯಾಗಿ ತಿಳಿಯುವುದು. ಅದರಂತೆಯೇ ಯಜ್ಞ ಮಾಡುವವರಿಗೆ ಸ್ವರ್ಗಭೋಗದ ರುಚಿಯಾಗಿರುವುದು. ಅದಕ್ಕಾಗಿ ಸ್ವತಃದ ಪುಣ್ಯವನ್ನು ಖರ್ಚಿಸಿ ಅವರು ಸ್ವರ್ಗಸುಖವನ್ನು ರುಚಿಯನ್ನಾಗಿ ಮಾಡಿಕೊಳ್ಳುವರು ॥೧೩೫॥ ಅಥವಾ ಸ್ಮಶಾನದಲ್ಲಿ ಬಲಿಕೊಟ್ಟ ಅನ್ನವಿರುವುದು. ಆ ಅನ್ನಕ್ಕೆ ನಾಯಿಗಳು ಮುಗಿಬಿದ್ದು ಪರಸ್ಪರರಲ್ಲಿ ಕಾದಾಡಿ ಪರಸ್ಪರರ ಉಳಿದ ಎಂಜಲ ಅನ್ನವನ್ನು ತಿನ್ನುವುವು. ಸ್ವರ್ಗದಲ್ಲಿನ ಭೋಗವು ಹೀಗೆಯೇ ಎಂಜಲಾದ ಅವಶೇಷವಿದೆ ಎಂದು ತಿಳಿ ॥೧೩೬॥ ತಮ್ಮ ಗಳಿಕೆಯ ಪುಣ್ಯವನ್ನು ಖರ್ಚಿಸಿ ಯಾಜ್ಞಿಕರು ಸ್ವರ್ಗದಲ್ಲಿನ ಎಂಜಲ ಭೋಗಗಳನ್ನು ಖರೀದಿಸುವರು. ತಾವು ಸ್ವತಃಕ್ಕೆ ಪವಿತ್ರರೆಂದು ತಿಳಿದಿರುವರು. ಆದರೆ ಪುಣ್ಯದ ಬೆಲೆಯನ್ನು ಕೊಟ್ಟು ಇತರರ ಎಂಜಲ ಭೋಗವನ್ನು ಭೋಗಿಸುವರು ॥೧೩೭॥ ಮೊದಲೇ ಕೇವಲ ಕಾಗೆಯ ಮಾಂಸವು, ಅದು ಕೂಡ ನಾಯಿಗಳು ತಿಂದು ಬಿಟ್ಟ ಎಂಜಲ. ಇದನ್ನು ಮಾರಲು ತೆಗೆದುಕೊಳ್ಳಬೇಕೆಂದರೆ ಬೇಕಾದಷ್ಟು ಸಿಗುವಂತಿಲ್ಲ. ಅದರಂತೆ ಯಜ್ಞ ಮಾಡುವವರ ಸ್ವರ್ಗ ಪ್ರಾಪ್ತಿ ವಿಷಯದ ಸ್ಥಿತಿಯೂ ಕೂಡ ಹೀಗೆಯೇ ಇರುವುದು ॥೧೩೮॥ ಸ್ವರ್ಗವು ಬಹಳ ಜನರ ಎಂಜಲವಾಗಿರುವುದು. ಹೀಗಿದ್ದರೂ ಅದಕ್ಕೆ ಅತ್ಯಂತ ಕಷ್ಟದ ಮೌಲ್ಯವನ್ನು ಕೊಟ್ಟು ಪಡೆಯಬೇಕಾಗುವುದು. ಆದರೂ ಅದು ಯಥೇಚ್ಛವಾಗಿ ಸಿಗಲಾರದು. ಏಕೆಂದರೆ ಆತನಿಗೆ ಹಗಲು ರಾತ್ರಿ ಪತನದ ಭಯವಿರುವುದು ॥೧೩೯॥

ಸ್ವರ್ಗಭೋಗ ಭೋಗಿತೀ ದೇವ । ತೇಹೀ ಮ್ಹಣತಾತಿ ಆಮ್ಹೀ ನಿರ್ದೈವ । ಯಾಜ್ಞಿಕಾಚಾಯೀ ಥೋರ ಹಾಂವ । ದಿವ್ಯ ವೈಭವ ಭೋಗಾರ್ಥ ।।೫೪೦।। ಏವಂ ಝಾಲಿಯಾ ಸ್ವರ್ಗಪ್ರಾಪ್ತೀ । ತೇಥ ಜೇ ಜೇ ಭೋಗ ಭೋಗಿತೀ । ತೇ ಮೀ ಸಾಂಗೇನ ತುಜಪ್ರತೀ । ಐಕ ನಿಶ್ಚಿತೀ ಉದ್ಧವಾ ।।೫೪೧।। ಸ್ವರ್ಗೀ ಸಮಾನ ಭೋಗು ಸಮಸ್ತಾ । ನಾಹೀ ಜಾಣ ಗಾ ಸರ್ವಥಾ ಜ್ಯಾಸೀ ಜೈಸೀ ಪುಣ್ಯಅವಸ್ಥಾ । ತೈಶೀ ಪ್ರಾಪ್ತತಾ ತಯಾಸೀ ।।೫೪೨।।

ಸ್ವಪುಣ್ಯೋಪಚಿತೇ ಶುಭ್ರೇ ವಿಮಾನ ಉಪಗೀಯತೇ ।
ಗಂಧರ್ವೈರ್ವಿಹರನ್ ಮಧ್ಯೇ ದೇವೀನಾಂ ಹೃದ್ಯವೇಷಧೃಕ್ ।।೨೪।।

ಅರ್ಥ:- ಯಾಜ್ಞಿಕನು ಭೂಲೋಕದಲ್ಲಿ ತಾನು ಮಾಡಿದ ಪುಣ್ಯ ಕರ್ಮಗಳಿಂದ ಸ್ವರ್ಗಾದಿ ಲೋಕಗಳನ್ನು ಸೇರಿ ಅಲ್ಲಿ ಪ್ರಕಾಶಮಾನ ವಿಮಾನಗಳಲ್ಲಿ ಸಂಚರಿಸುತ್ತಾನೆ. ಗಂಧರ್ವರು ಹಾಡಿದ ಸುಂದರ ಗಾಯನವನ್ನು ಕೇಳುತ್ತಾನೆ, ಸುಂದರ ವಸ್ತ್ರಗಳಿಂದ ಭೂಷಿತನಾಗಿ ಅಪ್ಸರೆಯರ ಸಮೂಹದಲ್ಲಿ ವಿಹರಿಸುತ್ತ ಭೋಗವನ್ನು ಅನುಭವಿಸುತ್ತಾನೆ.

ಆಪುಲೇ ಪುಣ್ಯಾಚೇನಿ ಮೋಲೇ । ಚಂದ್ರಪ್ರಭ ವಿಮಾನ ಆಲೇ । ತ್ಯಾಮಾಜೀ ಆರೂಢಲೇ । ಭೋಗೂ ಲಾಗಲೇ ದಿವ್ಯ ಭೋಗು ।।೫೪೩।। ತೇಥೇ ದಿವ್ಯ ದೇಹಾಚೀ ಪ್ರಾಪ್ತೀ । ಮನೋಹರವೇಷಾತೇ ಧರಿತೀ । ಅತಿಮಧುರ ಗಂಧರ್ವ ಗಾತೀ । ಸ್ವೇಚ್ಛಾ ಕ್ರೀಡತೀ ಸ್ತ್ರೀಯಾಂಸೀ ।।೫೪೪।। ತ್ಯಾ ಸ್ವರ್ಗೀಚ್ಯಾ ಸ್ವರ್ಗಾಂಗನಾ । ದೇಖತಾ ಭುಲೀ ಪಡಿಲೀ ಮನಾ । ತ್ಯಾಂಚೇನಿ ಛಂದೇ ಜಾಣಾ । ನಾನಾ ಸ್ಥಾನಾ ಕ್ರೀಡತು ।।೫೪೫।।

ಸ್ತ್ರೀಭಿಃ ಕಾಮಗಯಾನೇನ ಕಿಂಕಿಣೀಜಾಲಮಾಲಿನಾ । ಕ್ರೀಡನ್ ನ ವೇದಾತ್ಮಪಾತಂ ಸುರಾಕ್ರೀಡೇಷು ನಿರ್ವೃತಃ ।।೨೫।।

ಅರ್ಥ:- ರಮಣೀಯವಾದ ಕಿರುಗಂಟೆಗಳ ಮಾಲೆಗಳಿಂದ ಅಲಂಕೃತವಾದ, ಇಚ್ಛೆ ಇದ್ದಲ್ಲಿಗೆ ಗಮನಿಸುವ ಅದ್ಭುತ ವಿಮಾನದಲ್ಲಿ ವಿಹರಿಸುತ್ತಾನೆ. ಸ್ವರ್ಗದ ನಂದನವನದಲ್ಲಿ ಸ್ತ್ರೀಯರೊಂದಿಗೆ ಕ್ರೀಡಿಸುತ್ತಿರಲು ಸ್ವತಃದ ಪುಣ್ಯ ಕ್ಷೀಣವಾಗುತ್ತಿರುವುದು. ತನ್ನ ಪುಣ್ಯವು ಮುಗಿದು, ತನಗೆ ಮೃತ್ಯುಲೋಕಕ್ಕೆ ತಳ್ಳಲ್ಪಡುವುದನ್ನು ಇವನು ಮರೆತುಬಿಡುವನು.

ತ್ಯಾ ಸ್ತ್ರೀಯಾಸಮವೇತ ಆಪಣ । ವಿಮಾನೀ ಕರೋನಿ ಆರೋಹಣ । ಸ್ವೇಚ್ಛಾಗಾಮೀ ಗಮನ । ಶೋಭೇ ವಿಮಾನ ತೇ ಕೈಸೇ ।।೫೪೬।। ಘಂಟಾಘಂಟಿಕಾ ಜಾಳಮಾಳಾ । ಕ್ಷುದ್ರ ಘಂಟಿಕಾ ರತ್ನಮೇಖಳಾ । ಕಿಂಕಣೀ ಲಾವಿಲಿಯಾ ಸಕಳಾ । ವಿಮಾನಲೀಲಾ ವಿಚಿತ್ರ ।।೫೪೭।। ಇಚ್ಛಿಲ್ಯಾ ಠಾಯಾ ನೇ ವಿಮಾನಾ । ಚೈತ್ರವನಾ ಕಾ ನಂದನವನಾ । ಭೋಗಾವಯಾ ಸ್ವರ್ಗಾಂಗನಾ । ಆಸಕ್ತ ಜಾಣಾ ಝಾಲಾಸೇ ।।೫೪೮।। ವನೀ ಸುಮನಾಂಚೇ ಸಂಭಾರ । ಪರಾಗ ಉಧಳತ ಸುಂದರ। ಕೋಕಿಳಾಂಚೇ ಮಧುರ ಸ್ವರ । ಝುಣತ್ಕಾರ ಭ್ರಮರಾಂಚೇ ।।೫೪೯।।

ದೇವತೆಗಳು ಸ್ವರ್ಗದ ಭೋಗಗಳನ್ನು ಭೋಗಿಸುತ್ತಿರುವರು. ಆದರೂ ಅವರು ನಾವು ದುರ್ದೈವಿಗಳು ಎಂದು ಹೇಳುವರು. ಆದರೆ ಯಾಜ್ಞಿಕರ ಸ್ವರ್ಗದಲ್ಲಿನ ದಿವ್ಯ ಐಶ್ವರ್ಯವನ್ನು ಭೋಗಿಸುವ ಇಚ್ಛೆಯು ಮಹತ್ತರವಾಗಿರುವುದು ।।೫೪೦।। ಈ ಪ್ರಕಾರವಾಗಿ ಸ್ವರ್ಗಪ್ರಾಪ್ತಿಯಾದ ನಂತರ ಅಲ್ಲಿ ಯಾವ ಭೋಗಗಳನ್ನು ಭೋಗಿಸುವರೆಂಬುದನ್ನು ಎಲ್ಲವೂ ನಿನಗೆ ನಾನು ಹೇಳುವೆನು. ಹೇ ಉದ್ಧವನೇ, ಲಕ್ಷಕೊಟ್ಟು ಕೇಳು ।।೫೪೧।। (ಸ್ವರ್ಗದಲ್ಲಿ ಯಾದರೂ ಎಲ್ಲರಿಗೂ ಒಂದೇ ಸಮಾನವಾಗಿ ಭೋಗ ಭೋಗಿಸಲು ದೊರೆಯುವುದಿಲ್ಲ. ಆದ್ದರಿಂದ ಯಾರ ಪುಣ್ಯವು ಹೇಗೆ ಇರುವುದೋ, ಆ ಪುಣ್ಯ ಪ್ರಕಾರವಾಗಿ ಭೋಗವು ಪ್ರಾಪ್ತವಾಗುವುದು ।।೫೪೨।।)

ತಮ್ಮ ಪುಣ್ಯವನ್ನು ಖರ್ಚಿಸಿ ಪ್ರಾಪ್ತಿ ಮಾಡಿಕೊಂಡಿರುವ, ಚಂದ್ರ ಪ್ರಭಾದಂತಿರುವ ಶುಭ್ರ ವಿಮಾನವು ಆಗಮಿಸುವುದು. ಅದರಲ್ಲಿ ಕುಳಿತುಕೊಂಡು ಇವರು ದಿವ್ಯ ಭೋಗಗಳನ್ನು ಭೋಗಿಸುವರು ।।೫೪೩।। ಸ್ವರ್ಗದಲ್ಲಿ ಇವರಿಗೆ ದಿವ್ಯ ಶರೀರವು ದೊರಕುವುದು. ಅದಕ್ಕೆ ವಿಶೇಷವಾಗಿ ಸುಂದರಿಸುವರು. ಗಂಧರ್ವರು ಅತ್ಯಂತ ಮಧುರವಾಗಿ ಗಾಯನವನ್ನು ಮಾಡುತ್ತಿರುವರು. ಇವರು ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಸ್ತ್ರೀಯರೊಂದಿಗೆ ಕ್ರೀಡೆಗಳನ್ನು ಮಾಡುತ್ತಿರುವರು ।।೫೪೪।। ಆ ಸ್ವರ್ಗದಲ್ಲಿನ ಅಪ್ಸರೆಯರನ್ನು ಕಂಡಾಕ್ಷಣವೇ ಅವರ ಮನದಲ್ಲಿ ಮಂತ್ರಮುಗ್ಧತೆ ನಿರ್ಮಾಣವಾಗುವುದು. ತದನಂತರ ಅವರ ಹವ್ಯಾಸದಿಂದ ಅನೇಕ ಸ್ಥಾನಗಳಲ್ಲಿ ಕ್ರೀಡೆಯಾಡುತ್ತಿರುವರು ।।೫೪೫।।

ಇವರು ಆ ಸ್ತ್ರೀಯರೊಂದಿಗೆ ವಿಮಾನದಲ್ಲಿ ಕುಳಿತು ತಮ್ಮ ಇಚ್ಛೆ ಪ್ರಕಾರವಾಗಿ ವಿಹಾರ ಮಾಡುವರು. ಆ ವಿಮಾನವು ಹೇಗೆ, ಎಷ್ಟೊಂದು ಶೋಭಾಯಮಾನವಾಗಿರುವುದೆಂಬುದನ್ನು ಹೇಳುವೆ, ಕೇಳು ।।೫೪೬।। ಅದಕ್ಕೆ ಅನೇಕ ಚಿಕ್ಕ ದೊಡ್ಡ ಗಂಟೆಗಳನ್ನು ಕಟ್ಟಿರುವರು. ಅವುಗಳು ರತ್ನಗಳಿಂದ ಅಲಂಕೃತವಾಗಿರುವುವು. ಸಂಪೂರ್ಣ ವಿಮಾನವು ಗೆಜ್ಜೆಗಳಿಂದ ತುಂಬಿಕೊಂಡಿರುವುದು ಮತ್ತು ಅದರ ಗತಿಯು ಬಹು ವಿಚಿತ್ರವಾಗಿರುವುದು ।।೫೪೭।। ತಾನು ಮನದಲ್ಲಿ ಇಚ್ಛಿಸಿದ ಸ್ಥಾನಕ್ಕೆ ಆ ವಿಮಾನವು ಬಂದು ಮುಟ್ಟುವುದು. ಇಂದ್ರನ ನಂದನವನಕ್ಕೆ ಅಥವಾ ಗಂಧರ್ವರ ಚೈತ್ರವನಕ್ಕೆ ಅದು ಒಯ್ದು ಮುಟ್ಟಿಸುವುದು. ಅಲ್ಲಿ ಈತನು ಸ್ತ್ರೀಯರ ಉಪಭೋಗ ಪಡೆಯಲು ಆಸಕ್ತನಾಗುವನು ।।೫೪೮।। ವನದಲ್ಲಿ ಹೂವುಗಳ ರಾಶಿಯೇ ಬಿದ್ದಿರುವುದು. ಅಲ್ಲಿಂದ ಸುಂದರವಾದ ಸುಗಂಧ ಪರಾಗವು ಹೊರಹೊಮ್ಮುತ್ತಿರುವುದು. ಕೋಗಿಲೆಯು ಮಧುರ ಸ್ವರದಿಂದ ಗಾನ ಮಾಡುವುದು. ಅಲ್ಲಿ ಭ್ರಮರಗಳ ಝುಣುರುಣು ಶಬ್ದವು ನಡೆದಿರುವುದು ।।೫೪೯।।

ಮಂದ ಸುಗಂಧ ಸುಶೀತಳ । ಝುಳಕತಸೇ ಮಲಯಾನಿಳ । ಸ್ವರ್ಗಾಂಗನಾಸೀ ಗದಾರೋಳ । ಕಾಮಸುಕಾಳ ಸಕಾಮಾ ।।೫೫೦।। ಆಗೀ ಕಾಪುರಾ ಹೋತಾ ಭೇಟೀ । ಏಕವೇಳೇ ಭಡಕಾ ಉಠೀ । ತೈಸೇ ಪುಣ್ಯ ವೇಂಚಲೇ ಉಠಾಉಠೀ। ಭೋಗಾಸಾಠೀ ಸಕಾಮಾ।।೫೫೧।। ಮಜ ಪತನ ಹೋಈಲ ಯೇಥ । ಭೋಗ ಜಾತೀಲ ಸಮಸ್ತ । ಹೇಹೀ ನಾಠವೀ ತ್ಯಾಚೇ ಚಿತ್ತ । ಕಾಮಾಸಕ್ತ ಝಾಲಾಸೇ ।।೫೫೨।। ದೀಪಾಸೀ ದೇತಾ ಆಲಿಂಗನ । ಪತಂಗಾ ನಾಠವೇ ನಿಜಮರಣ। ತೈಸೇ ನಾಠವೇ ಆತ್ಮ ಪತನ । ಭೋಗೀ ಮನ ವಿಗುಂತಲೇ ।।೫೫೩।।

ತಾವಾತ್ಪ್ರಮೋದತೇ ಸ್ವರ್ಗೇ ಯಾವತ್‌ಪುಣ್ಯಂ ಸಮಾಪ್ಯತೇ । ಕ್ಷೀಣ ಪುಣ್ಯಃ ಪತತ್ಯರ್ವಾಗನಿಚ್ಛನ್‌ಕಾಲಚಾಲಿತಃ ।।೨೬।।

ಅರ್ಥ :- ಅವನ ಪುಣ್ಯ ಫಲಗಳು ಮುಗಿಯುವವರೆಗೂ ಯಾಜ್ಞಿಕನು ಸ್ವರ್ಗಲೋಕದಲ್ಲಿ ಭೋಗಗಳನ್ನು ಅನುಭವಿಸುತ್ತಿರುವನು. ಪುಣ್ಯವು ತೀರಿದ ನಂತರ ತನಗೆ ಇಚ್ಛೆ ಇಲ್ಲದಿದ್ದರೂ ಒತ್ತಾಯದಿಂದಾಗಿ ಕೆಳಗೆ ಬೀಳುತ್ತಾನೆ. ಕಾಲದ ವರ್ತನೆಯೇ ಹೀಗಿರುವುದು.

ಜಂವ ಅಸೇ ಪುಣ್ಯಸಂಪತ್ತೀ । ತಂವ ಸ್ವರ್ಗಭೋಗ ಭೋಗಿತೀ । ಕ್ಷೀಣ ಝಾಲ್ಯಾ ಪುಣ್ಯಶಕ್ತೀ । ಪತನ ಪಾವತೀ ತತ್ಕಾಳ ।।೫೫೪।। ಜಂವವರೀ ಗಾಂಠೀ ಅಸೇ ಧನ । ತಂವವರೀ ವೇಶ್ಯೇಚೇ ಸೌಜನ್ಯ । ನಿಃಶೇಷ ವೇಂಚಲ್ಯಾ ಧನ । ಮುಖ ಪರತೋನ ಪಾಹೇನಾ ।।೫೫೫।। ತೈಶೀಚ ಸ್ವರ್ಗೀಚೀ ವಸ್ತೀ । ನಿಜಪುಣ್ಯೇ ಬೋಗ ಭೋಗಿತೀ। ಪುಣ್ಯಕ್ಷಯೇ ಕ್ಷಯಾ ಜಾತೀ । ಪತನ ಪಾವತೀ ಅನಿಚ್ಛಾ ।।೫೫೬।। ಕಷ್ಟ ಕರೂನಿಯಾ ಯಾಜ್ಞಿಕೀ । ಸ್ವರ್ಗು ಸಾಧಿಲಾ ಹೋಆವಯಾ ಸುಖೀ । ತೇ ಝಾಲೇಚೀ ಪರಮ ದುಃಖೀ । ಪತನ ಅಧೋಮುಖೀ ಪಾವಲೇ ।।೫೫೭।। ಉಡಾಲೇ ಸ್ವರ್ಗಭೋಗಾಚೇ ಸುಖ । ಆಲೇ ಗರ್ಭವಾಸಾಚೇ ದುಃಖ । ಜಳೋ ಸಕಾಮಾಚೇ ಸುಖ । ಠಕಲೇ ಯಾಜ್ಞಿಕ ಸುಖಲೋಭೇ ।।೫೫೮।। ಉದ್ಧವಾ ಜೇ ಮ್ಹಣತೀ ಸ್ವರ್ಗಸುಖ । ತೇ ಯಾ ರೀತೀ ಪಾವಲೇ ದುಃಖ । ಸ್ವರ್ಗಸುಖ ಮಾನಿತೀ ಮೂರ್ಖ । ನವ್ಹೇ ನಿರ್ದೋಖ ತೋ ಮಾರ್ಗು ।।೫೫೯।। ವಿಧಿಯುಕ್ತ ಆಚರತಾ ಯಾಜ್ಞಿಕ । ಪುಢತೀ ಪಾವಲೇ ಘೋರ ದುಃಖ । ತರೀ ಅವಿಧೀನೇ ಹೋಈಲ ಸುಖ । ಝಣೇ ದೇಖ ಮ್ಹಣಶೀಲ ।।೫೬೦।। ಯೇಥ ಕರ್ಮಮಾರ್ಗೀಚೀ ಪ್ರವೃತ್ತೀ । ದೋ ಪ್ರಕಾರೇ ಅಸೇ ವರ್ತತೀ । ಏಕೀ ವಿಧಿರೂಪೇ ಆಚರತೀ । ದುಜೀ ಸ್ಥಿತಿ ಅವಿಧೀನೇ ।।೫೬೧।।

ಹಿಮಾಲಯ ಪರ್ವತದಿಂದ ಶೀತ ಸುಗಂಧಿತ ಮಂದ ವಾಯುವು ಬೀಸುತ್ತಿರುತ್ತದೆ. ಸ್ವರ್ಗದ ಅಪ್ಸರೆಯರು ನಗುತ್ತ ಚೇಷ್ಟೆ ಮಾಡುತ್ತಿರುವರು. ಇದನ್ನು ಕೇಳಿ ಕಾಮುಕರಿಗೆ ವಿಲಾಸ ಭೋಗದ ಸುಕಾಳವಾಗುವುದು ।।೫೫೦।। ಕರ್ಪೂರಕ್ಕೆ ಅಗ್ನಿಯ ಸ್ಪರ್ಶವಾಗುತ್ತಲೇ ಕೂಡಲೇ ಹೊತ್ತಿಕೊಳ್ಳುವುದು. ಹಾಗೂ ಭಡಕಾಯಿಸುವುದು. ಅದರಂತೆ ಸಕಾಮ ಜೀವಿಗಳ ಪುಣ್ಯವು ಈ ಭೋಗದಲ್ಲಿ ಕೂಡಲೇ ಸಮಾಪ್ತಿಯಾಗುವುದು ।।೫೫೧।। ಈಗ ಈ ಎಲ್ಲ ಭೋಗಗಳು ನನಗಾಗಿ ಇಲ್ಲದಾಗುವುವು ಹಾಗೂ ನನ್ನ ಪತನವಾಗುವುದು ಎಂಬ ಸ್ಮರಣೆಯು ಇವನಿಗೆ ಇರುವುದಿಲ್ಲ. ಇವನು ಇಷ್ಟೊಂದು ಕಾಮದಲ್ಲಿ ಆಸಕ್ತನಾಗಿರುವನು ।।೫೫೨।। ದೀಪವನ್ನು ಕಂಡು ಅದರಲ್ಲಿ ಜಿಗಿಯುವ ಪತಂಗ ಹುಳಕ್ಕೆ ಇದರಿಂದ ನನಗೆ ಮರಣವಾದೀತೆಂಬುದನ್ನು ಮರೆಯುವಂತೆ ಜೀವವು ಪುಣ್ಯವು ಮುಗಿಯುತ್ತಲೇ ನನಗೆ ಅಧಃಪಾತವಾಗುವುದೆಂಬುದನ್ನು ಮರೆಯುವುದು. ಇಷ್ಟೊಂದು ಅವನ ಮನಸ್ಸು ಭೋಗಗಳಲ್ಲಿ ಆಸಕ್ತವಾಗಿರುವುದು ।।೫೫೩।।

ಎಲ್ಲಿಯವರೆಗೆ ಪುಣ್ಯದ ಪ್ರಭಾವವಿರುವುದೋ, ಅಲ್ಲಿಯವರೆಗೆ ಜೀವವು ಸ್ವರ್ಗಭೋಗವನ್ನು ಭೋಗಿಸುವುದು. ಪುಣ್ಯದ ಸಾಮರ್ಥ್ಯವು ಮುಗಿಯುತ್ತಲೇ ತತ್ಕಾಲದಲ್ಲಿ ಅದರ ಪತನವಾಗುವುದು ।।೫೫೪।। ಎಲ್ಲಿಯವರೆಗೆ ತನ್ನಲ್ಲಿ ಹಣವಿರುವುದೋ, ಅಲ್ಲಿಯವರೆಗೆ ವೇಶ್ಯೆಯು ಆತನಲ್ಲಿ ಪ್ರೇಮದಿಂದ ವರ್ತಿಸುವಳು. ಆದರೆ ಆತನ ಹಣವು ಮುಗಿಯಿತೆಂದರೆ ಆಕೆಯು ಅವನ ಮುಖವನ್ನೂ ಸಹ ನೋಡಲಾರಳು ।।೫೫೫।। ಅದರಂತೆಯೇ ಸ್ವರ್ಗದ ವಸ್ತಿ ಎಂದು ತಿಳಿಯಬೇಕು (ಪುಣ್ಯವು ಇರುವವರೆಗೆ ಸ್ವರ್ಗದ ಪ್ರಾಪ್ತಿಯು, ಪುಣ್ಯವು ತೀರಿತೆಂದರೆ ಸ್ವರ್ಗ ಭೋಗವು ಇಲ್ಲದಾಗುವುದು ಹಾಗೂ ಇಚ್ಛೆ ಇಲ್ಲದಿದ್ದರೂ ಪತನವಾಗುವುದು) ।।೫೫೬।। ಯಾಜ್ಞಿಕ ಜನರು ಸುಖೀಯಾಗಬೇಕೆಂದು ಕಷ್ಟವನ್ನು ಸೋಸಿ ಸ್ವರ್ಗವನ್ನು ಪಡೆಯುವರು. ಕೊನೆಗೆ ಅತಿಶಯವಾಗಿ ದುಃಖಿಗಳಾಗಿ ಕೆಳಗೆ ಮುಖಮಾಡಿ ಪತನ ಹೊಂದುವರು ।।೫೫೭।। ಸ್ವರ್ಗವಾಸದ ಸುಖವು ಮುಗಿಯುತ್ತಲೇ ಗರ್ಭವಾಸದ ದುಃಖವು ಆರಂಭವಾಗುವುದು. ಇಂತಹ ಯಾವ ಕಾಮುಕರ ಸುಖಕ್ಕೆ ಬೆಂಕಿ ಹತ್ತಲಿ. ಸುಖದ ಆಸೆಯಿಂದ ಯಜ್ಞ ಮಾಡುವ ಜನರು ಸುಳ್ಳೇ ನಾಶವಾಗುವರು ।।೫೫೮।। ಹೇ ಉದ್ಧವನೇ, ಸ್ವರ್ಗಸುಖವು ಹೀಗೆಂದು ತಿಳಿದವರು, ಅವರು ಈ ರೀತಿಯಲ್ಲಿ ದುಃಖವನ್ನು ಹೊಂದುವರು. ಮೂರ್ಖ ಜನರೇ ಸ್ವರ್ಗಕ್ಕೆ ಸುಖವೆನ್ನುವರು. ಆದರೆ ಆ ಮಾರ್ಗವು ನಿರ್ದೋಷವಾಗಿರುವುದಿಲ್ಲ ।।೫೫೯।। ಯಾಜ್ಞಿಕರು ವಿಧಿಯುಕ್ತವಾಗಿ ಕರ್ಮ ಮಾಡಿಯೂ ಕೂಡ ಅವರಿಗೆ ಮಹಾದುಃಖವು ಪ್ರಾಪ್ತವಾಗುವುದು. ಅಂದಮೇಲೆ ಅವಿಧಿಯಿಂದ ಕರ್ಮ ಮಾಡಲು ಸುಖವಾದೀತೆಂದು ನೀನು ಹೀಗೆ ತಿಳಿಯಬೇಡ ।।೫೬೦।। ಇಲ್ಲಿ ಕರ್ಮ ಮಾರ್ಗದ ಪ್ರಕೃತಿಯು ಎರಡು ಪ್ರಕಾರಗಳಾಗಿರುವುದು. ಒಂದು ವಿಧಿಯುಕ್ತವಾಗಿ ಆಚರಣೆಯಾಗುವುದು ಮತ್ತು ಎರಡನೆಯದಾಗಿ ಅವಿಧಿಯುಕ್ತವಾಗಿರುವುದು ।।೫೬೧।।

ಆತಾ ಸಾಂಗಿತಲೀ ತುಜಪ್ರತೀ । ತೇ ವೇದೋಕ್ತ ವಿಧಾನಸ್ಥಿತೀ । ಜೇ ವಿಧಿನೇ ಸ್ವರ್ಗಪ್ರಾಪ್ತೀ । ಹೇ ಪ್ರವೃತ್ತೀ ಉತ್ಕಟ ॥೫೬೨॥ ಪುಣ್ಯಕ್ಷಯೇ ಸ್ವರ್ಗಪತನ । ತೇಹೀ ಸಾಂಗೀತಲೇ ಕಥನ । ಆತಾ ಅವಿಧೀ ಜೇ ಆಚರಣ । ತೇಹೀ ಲಕ್ಷಣ ಪರಿಯೇಸೀ ॥೫೬೩॥ ವೇದ ಉಲ್ಲಂಘನೇ ಕುಮತೀ । ಕುತ್ಸಿತ ಜನಾಂಚೇ ಸಂಗತೀ। ಅಪ್ರವೃತ್ತೀಚೀ ಪ್ರವೃತ್ತೀ । ಅಧರ್ಮಸ್ಥಿತೀ ಅವಧಾರೀ ॥೫೬೪॥

ಯದ್ಯಧರ್ಮರತಃ ಸಂಗಾದಸತಾಂ ವಾಜಿತೇಂದ್ರಿಯ : । ಕಾಮಾತ್ಮಾ ಕೃಪಣೋ ಲುಬ್ಧಃ ಸ್ತ್ರೈಣೋ ಭೂತವಿಹಿಂಸಕಃ ॥೭೭॥

ಅರ್ಥ :- ಯಾವ ಪುರುಷನು ದುಷ್ಟರ ಸಂಗತಿಯಿಂದ ಅಧರ್ಮ ಪರಾಯಣನಾಗಲು ಅಥವಾ ಇಂದ್ರಿಯಗಳ ಅಧೀನನಾಗಿ ಹೇಗೋ ವರ್ತಿಸುತ್ತಿರಲು ಆದರಿಂದ ಅವನು ಕೃಪಣನಾಗಿ ಭೋಗ ತೃಷ್ಣೆಯಿಂದ ವ್ಯಾಕುಲನಾಗಿ ಸ್ತ್ರೀಲಂಪಟ ಮತ್ತು ಸರ್ವಕಾರಣಗಳಿಂದ ಭೂತಗಳ ಹಿಂಸಕನಾಗುವನು.

ಸಹಜ ಪ್ರಾಣೀ ಕಾಮಾಸಕ್ತ । ಪ್ರಾಪ್ತಕಾಮೇ ಅತಿಲುಬ್ಧ ಹೋತ । ಕಾಮ ನ ಪವತಾ ದೀನಚಿತ್ತ । ಸ್ವಭಾವೋ ನಿತ್ಯ ಜೀವಾಂಚಾ ॥೫೬೫॥ ಐಶಿಯಾ ಸ್ವಭಾವನಿಷ್ಠಾಸೀ । ಜರೀ ಸಂಗ ಹೋಯ ಅಸಂತ ಪುರುಷೇಸೀ। ತರೀ ರತೀ ವಾಢೇ ಅಧರ್ಮಾಸೀ । ಅಕರ್ಮಾಸೀ ಪ್ರವರ್ತೇ ॥೫೬೬। ಚಂಚಲತ್ವೇ ಮರ್ಕಟ ಮನ । ತ್ಯಾಸೀ ಅಸತ್ಸಂಗ - ಮದಿರಾಪಾನ । ಕಾಮವೃಶ್ಚಿಕೇ ದಂಶಿಲೇ ಜಾಣ । ತೇವ್ಹಾ ವರ್ತನ ಯದ್ವಾತದ್ವಾ ॥೫೬೭॥ ಪಿಶಾಹತೇ ಧೆಂಡೇವಾಳೀ । ಧೀಧಲ್ಯಾ ತೋ ಸರ್ವತ್ರ ಜಾಳೀ । ತೇವೀ ಅಸತ್ಸಂಗೇ ಕರೀ ಹೋಳೀ । ಸ್ವಧರ್ಮ ಸಮೂಳೀಜಾಳಿತೀ ॥೫೬೮॥ ಬಾಳಕಾಹಾತೀ ದೀಧಲೇ ಶಸ್ತ್ರ। ಖೋಂಚಿತಾ ನ ಮ್ಹಣೇ ಆಪ ಪರ । ಭೇದೀ ಆಪುಲೇಂಚಿ ಶರೀರ । ಹಿತವಿಚಾರ ತೇ ನೇಣೇ ॥೫೬೯॥ ಜೇವೀ ಜಾನೀ ಅವತರೇ ದೇವ್ಹಾರಾ । ತಿಚ್ಯಾ ತೋಂಡಾ ನಾಹೀ ವಾಢಾವಾರಾ । ಕಾ ಬಹುರೂಪ್ಯಾಚ್ಯಾ ದಿಗಂಬರಾ । ನಾಹೀ ಥಾರಾ ವೈರಾಗ್ಯಾ ॥೫೭೦॥ ತೈಸಾ ಅಸತ್ಸಂಗೇ ಖರಾ । ಘಾಲೀ ದಂಭಾಚಾ ಪಸಾರಾ । ನಾಹೀ ವಿವೇಕಾಚಾ ಥಾರಾ । ಕಾಮಶಾಸ್ತ್ರಾ ಪ್ರವರ್ತೇ ॥೫೭೧॥ ಕಾಮಶಾಸ್ತ್ರೇ ಅತಿಸಕಾಮ । ಕಾಮಾಸ್ತವ ಯೋಜೀ ಅಧರ್ಮ । ಅಧರ್ಮಾಸ್ತವ ಅಕರ್ಮ । ನಿಂದ್ಯ ಧರ್ಮ ಆಚರೇ ॥೫೭೨॥ ನಿಂದ್ಯ ಧರ್ಮಾಚಾ ಸಂಯೋಗ । ಯಾಸೀ ಮುದ್ದಲ ಲುಬ್ಧ ಭೋಗ । ಲುಬ್ಧ ಭೋಗಾಮಾಜೀ ಚಾಂಗ । ಅಧರ್ಮ ಸಾಂಗ ಸವಿಸ್ತಾರ ॥೫೭೩॥

ಈಗ ನಾನು ನಿನಗೆ ಹೇಳಿರುವುದು, ಅದು ವೇದೋಕ್ತ ವಿಧಾನದ ಸ್ಥಿತಿಯಾಗಿರುವುದು. ಯಾವ ವಿಧಿಯಿಂದ ಸ್ವರ್ಗದ ಪ್ರಾಪ್ತಿಯಾಗುವುದೋ, ಅದು ಮುಖ್ಯ ಪ್ರವೃತ್ತಿಯಾಗಿರುವುದು ॥೫೬೨॥ ತದನಂತರ ಪುಣ್ಯ ಕ್ಷಯದಿಂದ ಪತನವು ಹೇಗಾಗುವುದೆಂಬುದನ್ನು ನಿನಗೆ ಹೇಳಿರುವೆನು. ಈಗ ಅವಿಧಿಯಿಂದ ಮಾಡುವ ಆಚರಣೆಯ ಲಕ್ಷಣವನ್ನು ಕೇಳು ॥೫೬೩॥ ಯಾವ ದುರ್ಬುದ್ಧಿ ಜನರು ವೇದವನ್ನು ಉಲ್ಲಂಘಿಸಿ ದುಷ್ಟ ಜನರ ಸಂಗತಿಯಿಂದ ಅಪ್ರವೃತ್ತಿಯನ್ನು ಪ್ರವೃತ್ತಿಯನ್ನಾಗಿ ಮಾಡಿ ಅಧರ್ಮವನ್ನು ಹೇಗೆ ಬೆಳೆಸುವರೆಂಬ ವಿಷಯಕ್ಕೆ ಹೇಳುವೆನು, ಅದನ್ನು ಕೇಳು ॥೫೬೪॥

ಪ್ರಾಣಿಯು ಸ್ವಭಾವತವಾಗಿಯೇ ಕಾಮಾಸಕ್ತನಾಗಿರುವನು. ಬಯಸಿದ ವಿಷಯವು ಪ್ರಾಪ್ತವಾಯಿತೆಂದರೆ ಅದರಲ್ಲಿ ಅತಿಶಯವಾಗಿ ಲಂಪಟನಾಗಿ ಬಿಡುವನು. ಇಚ್ಛಿತ ವಸ್ತು ಸಿಗದಿರಲು ಅತಿಶಯವಾಗಿ ವ್ಯಾಕುಲನಾಗುವನು. ಇದು ಪ್ರಾಣಿಮಾತ್ರರ ನಿತ್ಯ ಸ್ವಭಾವವಾಗಿರುವುದು ॥೫೬೫॥ ಇಂತಹ ಸ್ವಭಾವದ ಮಾನವನಿಗೆ ದುರ್ಜನರ ಸಂಗತಿಯು ಲಭಿಸಲು ಅವನಿಗೆ ಅಧರ್ಮ ವಿಷಯದಲ್ಲಿ ಪ್ರೀತಿ ಹುಟ್ಟುವುದು. ಅವನು ಅಕರ್ಮಕ್ಕೆ ಪ್ರವೃತ್ತನಾಗುವನು ॥೫೬೬॥ ಮನವು ಮೊದಲೇ ಚಂಚಲತ್ವದಿಂದ ಮರ್ಕಟದಂತಾಗಿರುವುದು. ಅದರಲ್ಲಿ ಅವನು ದುರ್ಜನ ಸಂಗತಿಯಿಂದ ಮದ್ಯಪಾನವನ್ನು ಮಾಡಲು ಹಾಗೂ ಕಾಮರೂಪ ಚೇಳು ಅವನಿಗೆ ಕಡಿಯಲು, ಆಗ ಅವನು ಮನಬಂದಂತೆ ಹೇಗೋ ವರ್ತಿಸುವನು ॥೫೬೭॥ ಹುಚ್ಚನ ಕೈಯಲ್ಲಿ ದೀವಟಿಗೆಯನ್ನು ಕೊಡಲು, ಅವನು ಎಲ್ಲ ಕಡೆಗಳಲ್ಲಿಯೂ ಉರಿ ಹಚ್ಚುತ್ತ ನಡೆಯುವನು. ಅದರಂತೆ ಜೀವವು ದುರ್ಜನರ ಸಂಗತಿಯಿಂದ ಸ್ವಧರ್ಮದ ಹೋಳಿ ಮಾಡಿ ಅದನ್ನು ಸಂಪೂರ್ಣವಾಗಿ ಇಲ್ಲದಾಗಿ ಮಾಡುವುದು ॥೫೬೮॥ ಚಿಕ್ಕ ಬಾಲಕನ ಕೈಯಲ್ಲಿ ಶಸ್ತ್ರವನ್ನು ಕೊಡಲು ಅವನು ಆಪ ಪರ ಭಾವವಿಲ್ಲದೇ ಸಿಕ್ಕವರಿಗೆ ಅದನ್ನು ತಿವಿಯುವನು. ಇದರಿಂದ ಆ ಬಾಲಕನು ತನ್ನ ಶರೀರವನ್ನು ಸಹ ಛೇದಿಸಿಕೊಳ್ಳುವನು. ಹಿತ, ಅಹಿತದ ವಿಚಾರವನ್ನು ತಿಳಿಯಲಾರನು ॥೫೬೯॥ ಮೈಯಲ್ಲಿ ದೇವರು ಬಂದ ಮನುಷ್ಯನ ಬಾಯಿಗೆ ಯಾವ ಅಡತಡೆಯೂ ಇರುವುದಿಲ್ಲ. ಅಥವಾ ಸನ್ಯಾಸಿಯ ವೇಶವನ್ನು ಧರಿಸಿ ಓಡಾಡುವ (ಬಹುರೂಪಿ) ಸೋಗು ಹಾಕುವವನಲ್ಲಿ ವಿರಕ್ತಿಯು ಅಣುಮಾತ್ರವೂ ಇರುವುದಿಲ್ಲ ॥೫೭೦॥ ಅದರಂತೆ ಈ ಜೀವವು ದುಸ್ಸಂಗತಿಯಿಂದಲೇ ಡಾಂಭಿಕತನವನ್ನು ಪ್ರದರ್ಶಿಸುವುದು. ಅದರಲ್ಲಿ ವಿವೇಕಕ್ಕೆ ಅವಕಾಶವೇ ಇರದು. ಮತ್ತು ಇವನು ಕಾಮಶಾಸ್ತ್ರದ ಬೆನ್ನು ಹತ್ತುವನು ॥೫೭೧॥ ಕಾಮಶಾಸ್ತ್ರದ ಅಭಿರುಚಿಯಿಂದ ಈತನ ವಾಸನೆಯು ಬೆಳೆಯುತ್ತ ಸಾಗುತ್ತಿರುವುದು. ಈ ವಾಸನೆಯಿಂದ ಇವನು ಅಧರ್ಮದ ಯೋಜನೆಗಳನ್ನು ರೂಪಿಸುವನು. ಅಧರ್ಮದಿಂದ ಅಕರ್ಮಗಳನ್ನು ಮಾಡಿ ನಿಂದ್ಯ ಕರ್ಮಗಳನ್ನು ಆಚರಿಸುವನು ॥೫೭೨॥ ನಿಂದ್ಯ ಕರ್ಮಗಳಲ್ಲಿ ಪ್ರವೃತ್ತನಾಗುವ ಮೂಲ ಕಾರಣವು ಭೋಗದ ಆಸಕ್ತಿಯಾಗಿರುವುದು. ಭೋಗದ ಆಸಕ್ತಿಯಲ್ಲಿ ಅಧರ್ಮದ ವಿಸ್ತಾರವಾಗುವುದು ॥೫೭೩॥

ಅಧರ್ಮ ವಾಢತಾ ಉಭಾರಾ । ಪರದ್ರವ್ಯ ಆಣಿ ಪರದಾರಾ । ಯಾಚಿಲಾಗೀ ಶರೀರಾ । ಉಪಾಯದ್ವಾರಾ ಕಷ್ಟವೀ ॥೫೭೪॥ ಅಂಗನೇಲಾಗೀ ಅತಿ ದೀನ । ಸ್ತ್ರೀ ಧ್ಯಾನೇ ಹೋಯ ಸ್ತ್ರೈಣ । ಸ್ತ್ರೀ ಸಾಧವಯಾ ಜಾಣ । ಭೂತಹನನ ಆರಂಭೀ ॥೫೭೫॥

ಪಶೂನವಿಧಿನಾಲಭ್ಯ ಪ್ರೇತಭೂತಗಣಾನ್ ಯಜನ್ । ನರಕಾನವಶೋ ಜಂತುರ್ಗತ್ವಾ ಯಾತ್ಯುಲ್ಬಣಂ ತಮಃ ॥೧೫॥

ಅರ್ಥ :- ಶಾಸ್ತ್ರವಿಧಿಗಳನ್ನು ಬಿಟ್ಟು, ಪಶುಗಳ ಹಿಂಸೆ ಮಾಡುತ್ತ, ಪ್ರೇತ ಮತ್ತು ಭೂತ ಸಮುದಾಯಗಳಿಗೆ ಉದ್ದೇಶಿಸಿ, ಯಾಗವನ್ನು ಮಾಡುವವರು, ಪಾಪಪರಾಯಣರಾಗಿರುವ ಪ್ರಾಣಿಪಶುಗಳಿಗಿಂತಲೂ ಕೆಳಗಿನ ಅವಸ್ಥೆಗೆ ಹೋಗಿ ಮುಟ್ಟುವರು. ಇವರು ಅವಶ್ಯವಾಗಿ ನರಕಕ್ಕೆ ಹೋಗುವರು. ಇವರಿಗೆ ಕೊನೆಯಲ್ಲಿ ಘೋರವಾದ ಅಂಧಃಕಾರದಲ್ಲಿ ಸ್ವಾರ್ಥ ವ ಪರಮಾರ್ಥ ರಹಿತ ಅಜ್ಞಾನದಲ್ಲಿ ತಿರುಗುತ್ತಿರಬೇಕಾಗುವುದು.

ವಿಧಿಮ್ಹಣೇ ತೇ ನ ಕರಾವೇ । ವೇದು ಬೋಲೇ ತೇ ನಾಇಕಾವೇ । ಸ್ಮೃತಿಶಾಸ್ತ್ರ ನಾವಡೇ ಜೀವೇ । ಕರ್ಮ ಕರಾವೇ ಸ್ವೇಚ್ಛಾ ॥೫೭೬॥ ಜಾರಣ ಮಾರಣ ಉಚ್ಚಾಟನ । ಸ್ತಂಭನ ಮೋಹನ ವಶೀಕರಣ । ಅಸಾಧ್ಯ ಸಾಧೂನಿ ಅಂಜನ । ಕರೀ ಲಾವಗಣ ಸ್ತ್ರೀಯಾಂಸೀ ॥೫೭೭॥ ಲೋಣ ರಾಈ ಆಣಿ ಬಿಬವೇ । ಮಧುರಸೀ ಕಾಲವೀ ಆಘವೇ । ಶಾಬರೀ ಮಂತ್ರಾಚೇನಿ ವೈಭವೇ । ಹೋಮು ಕರೂ ಧಾಂವೇ ತಾಮಸ ॥೫೭೮॥ ಕರ್ಮ ಕರಾವಯಾ ಅಭಿಚಾರ । ಮೇಷ ಜಂಬೂಕ ವಾನರ । ಸರಡ ಬೇಡೂಕ ಮತ್ಸ್ಯ ಮಗರ । ಗೀಧ ಘಾರ ಹೋಮಿತೀ ॥೫೭೯॥ ನಗ್ನ ಭೈರವ ವೇತಾಳ । ಝೋಟಿಂಗ ಪಿಶಾಚ ಕಂಕಾಳ । ಮಾರಕೋ ಮೇಸಕೋ ಮೈರಾಳ । ಭೂತೇ ಪ್ರಬಳ ಉಪಾಸೀ ॥೫೮೦॥ ಕಾಳೀ ಚಿಡೀ ಟೋಂಕಣ ಘಾರೀ । ಕಾಗ ಬಕ ಉಲೂಕ ಮಾರೀ । ಆವಂತೂನಿ ಕಾಳೀ ಮಾಂಜರೀ । ಶಾಬರಮಂತ್ರೀ ಹೋಮಿತೀ ॥೫೮೧॥ ವಾಹತ್ಯಾ ಘಾಣ್ಯಾಚೇ ತೇಲ ಚೋರೀ । ಪ್ರದೋಷಸಂಧೀ ನ್ಹಾಯೇ ಶನಿವಾರೀ । ಶಾಕಿನೀ ಡಾಕಿನೀ ಮಧ್ಯರಾತ್ರೀ । ಹೋಮಾಮಾಝಾರೀ ಚೇತವೀ ॥೫೮೨॥ ಮದ್ಯಾಚೇ ಘಟ ಪೂರ್ಣ ಭರೀ । ಮಾತಂಗೀಚೀ ಪೂಜಾ ಕರೀ । ರುಧಿರ ಘಾಲೀ ಪ್ರೇತಯಾತ್ರೀ । ಮೋಹಿನೀಮಂತ್ರೀ ಮಂತ್ರೂನೀ ॥೫೮೩॥ ಘೇತೀ ಹಳದೀಚೀ ಉಟೀ । ಸೇಂದೂರ ಲಾವಿತೀ ಲಲಾಟೀ । ಕಾಮ ಸಾಧಾವಯಾ ಹಟೀ । ಅಂಜನ ಕಷ್ಟೀ ಸಾಧಿತೀ ॥೫೮೪॥ ಹೋಮಪಾತ್ರೇ ಕರಾವಯಾ ತಾಂತಡೀ । ಸಮೂಳ ಅಶ್ವತ್ಥಾತೇ ತೋಡೀ । ಫಳಿತ ಪುಷ್ಪಿತ ಔಷಧೀ ಉಪಡೀ । ಆಸನಾಬುಡೀ ಘಾಲಾವಯಾ ॥೫೮೫॥

ಅಧರ್ಮವು ಉತ್ಪನ್ನವಾಯಿತೆಂದರೆ ಸಾಕು, ಪರಧನ, ಪರಸ್ತ್ರೀಗಾಗಿ ಅನೇಕ ಉಪಾಯಗಳನ್ನು ಯೋಜಿಸಿ ಶರೀರಕ್ಕೆ ಕಷ್ಟವನ್ನು ಕೊಡುತ್ತಿರುವನು ॥೫೭೪॥ ಸ್ತ್ರೀಗಾಗಿ ಇವನು ಅತಿ ದೀನನಾಗುವನು. ಸ್ತ್ರೀಧ್ಯಾನದಿಂದ ಸ್ತ್ರೈಣನಾಗುವನು. ಮತ್ತು ಸ್ತ್ರೀ ಪ್ರಾಪ್ತಿಗಾಗಿ ಇವನು ಪ್ರಾಣಿಗಳ ಹಿಂಸೆ ಮಾಡಲು ಆರಂಭಿಸುವನು ॥೫೭೫॥

ಅಧರ್ಮೀ ಜನರು ವಿಧಿ ಪ್ರಮಾಣದಂತೆ ವರ್ತಿಸುವುದಿಲ್ಲ. ವೇದಗಳಲ್ಲಿನ ವಚನಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲ. ಶ್ರುತಿ ಶಾಸ್ತ್ರಗಳು ಇವರ ಚಿತ್ತಕ್ಕೆ ರುಚಿಸುವುದಿಲ್ಲ. ಇವರು ತಮ್ಮ ಮನಸ್ಸಿಗೆ ಬಂದಂತೆ ವರ್ತಿಸುತ್ತಿರುವರು ॥೫೭೬॥ ಜಾರಣ, ಮಾರಣ, ಉಚ್ಚಾಟನ, ಸ್ತಂಭನ, ಮೋಹ, ವಶೀಕರಣ ಇತ್ಯಾದಿ ಸಾಧನೆಗಳಿಂದ ಅಸಾಧ್ಯವಾಗಿರುವ ಅಂಜನವನ್ನು ಇವರು ಪ್ರಾಪ್ತ ಮಾಡಿಕೊಳ್ಳುವರು. ಮತ್ತು ಸ್ತ್ರೀಯರ ಬೆನ್ನು ಹತ್ತುವರು ॥೫೭೭॥ ಲವಣ, ಸಾಸ್ವಿ, ಕೇರು ಇವುಗಳನ್ನು ಜೇನಿನಲ್ಲಿ ಕಲಿಸಿ, ಶಾಬರೀ ಮಂತ್ರದ ಪ್ರಭಾವದಿಂದ ಇವರು ತಾಮಸ ಪ್ರಕಾರದ ಹೋಮವನ್ನು ಮಾಡಲು ಧಾವಿಸುವರು ॥೫೭೮॥ ಜಾರಣ ಮಾರಣಾದಿ ಕರ್ಮಗಳನ್ನು ಮಾಡಲು ಹೋತು, ನರೀ, ವಾನರ, ಓತಿಕಾಟ, ಕಪ್ಪೆ, ಮೀನ, ಮೊಸಳೆ, ಹದ್ದು ಇವುಗಳ ಹೋಮ ಮಾಡುವರು ॥೫೭೯॥ ಹಾಗೆಯೇ ಇವರು ನಗ್ನ ಭೈರವ ವೇತಾಳ, ಝೋಟಿಂಗ, ಪಿಶಾಚ, ಕಂಕಾಳ, ಮಾರಕೋ, ಮೇಸಕೋ, ಭೈರಾಳ ಇತ್ಯಾದಿ ಪ್ರಬಳ ಭೂತಗಳ ಉಪಾಸನೆಯನ್ನು ಮಾಡುವರು ॥೫೮೦॥ ಕಪ್ಪು ಬಣ್ಣದ ಗುಬ್ಬಿ, ತೀಕ್ಷ್ಣವಾದ ಹದ್ದು, ಕಾಗೆ, ಬಕಪಕ್ಷಿ, ಗೂಗೆ ಇವುಗಳನ್ನು ಶಾಬರೀ ಮಂತ್ರದಿಂದ ಕೊಲ್ಲುವರು. ಕಪ್ಪು ಬಣ್ಣದ ಬೆಕ್ಕನ್ನು ಸಮಾರಂಭದಿಂದ ತಂದು ಶಾಬರೀ ಮಂತ್ರದಿಂದ ಹೋಮ ಮಾಡುವರು ॥೫೮೧॥ ಗಾಣದಲ್ಲಿ ಹರಿಯುತ್ತಿರುವ ಎಣ್ಣೆಯನ್ನು ಕದ್ದು ತರುವರು. ಮತ್ತು ಶನಿವಾರದಂದು ಪ್ರದೋಷ ಸಮಯದಲ್ಲಿ ಅಭ್ಯಂಗ ಸ್ನಾನ ಮಾಡುವರು ಮತ್ತು ಮಧ್ಯರಾತ್ರಿಯಲ್ಲಿ ಹೋಮವನ್ನು ಮಾಡುತ್ತ ಡಾಕಿನೀ ಮತ್ತು ಶಾಕಿನೀ ಇವರನ್ನು ಜಾಗೃತಗೊಳಿಸುವರು ॥೫೮೨॥ ಮದ್ಯವನ್ನು ಭಾಂಡೆಯಲ್ಲಿ ಪೂರ್ಣವಾಗಿ ತುಂಬಿಡುವರು. ಮಾದಿಗಳ ಪೂಜೆಯನ್ನು ಮಾಡುವರು. ಮೋಹಿನೀ ಮಂತ್ರದ ಜಪವನ್ನು ಮಾಡಿ ಪ್ರೇತದ ತಲೆಬುರುಡೆಯಲ್ಲಿ ರಕ್ತವನ್ನಿಡುವರು ॥೫೮೩॥ ತಮ್ಮ ಶರೀರಕ್ಕೆ ಸಂಪೂರ್ಣವಾಗಿ ಅರಿಷಿಣ ಮೆತ್ತಿಕೊಳ್ಳುವರು. ಹಣೆ ತುಂಬ ಶೇಂದೂರ ಹಚ್ಚಿಕೊಳ್ಳುವರು. ತಮ್ಮ ಕಾಮ ಇಚ್ಛೆಯನ್ನು ಸಾಧಿಸುವುದಕ್ಕಾಗಿ ಹಟಯೋಗದ ಭಯಂಕರ ಬಿಕ್ಕಟ್ಟಾದ ಸಾಧನೆಯನ್ನು ಮಾಡಿ ಅಂಜನವನ್ನು ಸಾಧ್ಯಮಾಡಿಕೊಳ್ಳುವರು ॥೫೮೪॥ ಹೋಮವನ್ನು ಲಗುಬಗೆಯಿಂದ ಸಿದ್ಧಗೊಳಿಸಲು ಬೇರು ಸಮೇತವಾಗಿ ಅಶ್ವತ್ಥವೃಕ್ಷವನ್ನು ಮುರಿಯುವರು. ಆಸನದ ಕೆಳಗೆ ಹಾಕಲು, ಫಲ, ಪುಷ್ಪವಿರುವ ವನಸ್ಪತೀಗಳನ್ನು ಕಿತ್ತಿಕೊಳ್ಳುವರು ॥೫೮೫॥

ಬೀಜ ಜಪಾವಯಾ ಮಂತ್ರಾಚೇ । ವೋಲೇ ಕಾತಡೇ ಪ್ರೇತಾಚೇ । ಆಣವೀ ಮೃಗ ಅಸ್ವಲಾಂಚೇ । ಭಯ ಪಾಪಾಚೇ ಮಾನೀನಾ ।।೫೮೬।। ಖೇಚರ ಭೂಚರ ಜಳಚರ । ಜೀವ ಪೀಡಿತೀ ಅಪಾರ । ಘೇಊನಿ ಬ್ರಾಹ್ಮಣಾಚೇ ರುಧಿರ । ಅಭಿಚಾರ ಆಚರತೀ ।।೫೮೭।। ಗಾಯೀ ಬ್ರಾಹ್ಮಣಾಂಸೀ ಜಾಣ । ಪೀಡಾ ಕರಿತೀ ದಾರುಣ। ಕ್ಷೇತ್ರ ವಿತ್ತದಾರಾಹರಣ । ಸ್ವಾರ್ಥೇ ಪ್ರಾಣ ಘೇತಾತಿ ।।೫೮೮।। ದೇವಾಲಯೀಚೇ ದೇವಲೇಶ । ಕಾ ಶಿವಾಲಯೀಚೇ ಶಿವಶೇಷ । ಘೇತಾ ನ ಕರಿತೀ ಆಳಸ । ವಾಸನಾ ಅಸೋಸ ಅಧರ್ಮೀ ।।೫೮೯।। ಏವಂ ಕರ್ಮ ಕರಿತಾ ಐಸೇ । ತೇಣೇ ಅಕರ್ಮ ಕರ್ಮವಶೇ । ಅಂಧತಮೀ ತೋ ಪ್ರವೇಶೇ । ಜೇವೀ ಕಾ ಅವಸೇ ಚಂದ್ರಮಾ ।।೫೯೦।। ಅಕರ್ಮ ಜಾಣ ಆತುರ್ಬಳೀ । ಜೀವಾಚೇ ನಿಜಜ್ಞಾನ ಛಳೀ । ಅತಿಮೂಢ ಕರೂನಿ ತೇ ಕಾಳೀ । ನಿರಯಕಲ್ಲೋಳೀ ಘಾಲಿತ ।।೫೯೧।। ತೇ ನರಕೀಚೀ ನವಲ ಕಥಾ । ಕೋಟಿ ವರ್ಷೇ ತಳೀ ಜಾತಾ । ಠಾವ ನ ಲಗೇ ಗಾ ಸರ್ವಥಾ । ಕೇವೀ ವರುತಾ ಯೇಈಲ ।।೫೯೨।। ತ್ಯಾತೇ ''ಅಂಧತಮ'' ಮ್ಹಣತೀ । ಜೇ ದೇಖತಾ ಅಂಧ ಹೋಯ ವೃತ್ತೀ । ನಿಘತಾ ನಿರ್ಗಮು ವಿಸರತೀ । ನರಕೀ ವಸತೀ ಮೂಢತ್ವೇ ।।೫೯೩।। ಜಂವ ಹೋಯ ಕರ್ಮಭೋಗಾಂತ । ತಂವ ನರಕ ಭೋಗೀ ಆಕಲ್ಪಾಂತ । ಮಗ ಸ್ಥಾವರತ್ವ ಪಾವತ । ವೃಕ್ಷ ಹೋತ ಕಾ ಪಾಷಾಣ ।।೫೯೪।। ಐಶೀ ಅವಸ್ಥಾ ಗಾಢಮೂಢ । ಕೇವಳ ಜಾಡ್ಯ ರ್ಝಾಲೇ ಜಡ । ಸ್ವಪ್ನೀ ಸುಖ ನೇಣತೀ ಗೋಡ । ದುಃಖ ದುರ್ವಾಡ ಭೋಗಿತೀ ।।೫೯೫।। ಏವಂ ಅಧರ್ಮವೃತ್ತೀ ವರ್ತತಾ । ಸುಖಲೇಶ ನ ಲಭೇ ಸರ್ವಥಾ । ದುಃಖ ಅನಿವಾರ ಭೋಗಿತಾ । ನಿರ್ಗಮತಾ ತ್ಯಾ ನಾಹೀ ।।೫೯೬।।

ಕರ್ಮಾಣಿ ದುಃಖೋದರ್ಕಾಣಿ ಕುರ್ವನ್ ದೇಹೇನ ತೈಃ ಪುನಃ । ದೇಹಮಾಭಜತೇ ತತ್ರ ಕಿಂ ಸುಖಂ ಮರ್ತ್ಯಧರ್ಮಿಣಃ ।।೧೯।।

ಅರ್ಥ :- ಇರುವ ಸಕಾಮ ಕರ್ಮಗಳೆಲ್ಲವೂ ಹಾಗೂ ಬಹಿರ್ಮುಖಿಗೊಳಿಸುವ ಕರ್ಮಗಳೆಲ್ಲವೂ ಕೊಡುವ ಫಲಗಳು ಕೇವಲ ದುಃಖಕಾರಕಗಳಾಗಿರುವುವು. ಯಾವ ಈ ಜೀವವು ಶರೀರದಲ್ಲಿ ಮಮತೆಯನ್ನಿಟ್ಟುಕೊಂಡಿರುವುದರಿಂದ ಅದಕ್ಕೆ ಪುನಃ ಪುನಃ ಜನ್ಮವನ್ನು ಧರಿಸಬೇಕಾಗುವುದು. ಈ ಜನ್ಮ ಮೃತ್ಯುವಿನ ಚಕ್ರದಲ್ಲಿ ತಿರುಗುತ್ತಿರುವ ಜೀವಕ್ಕೆ ಸುಖವು ಪ್ರಾಪ್ತವಾಗದು.

ಐಕೇ ಬಾಪಾ ಉದ್ಧವಾ । ಮರಣಧರ್ಮಾತ್ಮಕಾ ಜೀವಾ । ಸುಖ ನ ಭೇಟೇ ತ್ಯಾಚ್ಯಾ ಭಾವಾ । ದುಃಖಪ್ರಭವಾಮಾಜೀ ವಾಸು ।।೫೯೭।।

ಮಂತ್ರಬೀಜದ ಜಪವನ್ನು ಮಾಡಲು ಚಿಗರೆಯ ಅಥವಾ ಕರಡಿಯ ತಾಜಾ ಚರ್ಮವನ್ನು ತರುವರು. ಪಾಪದ ಭಯವನ್ನು ಮನಸ್ಸಿನಲ್ಲಿಯೂ ತರುವುದಿಲ್ಲ ।।೫೮೬।। ಇದಲ್ಲದೇ ಆಕಾಶದಲ್ಲಿ ವಿಹರಿಸುತ್ತಿರುವ ಪಕ್ಷಿಗಳಿಗೆ, ಭೂಮಿಯ ಮೇಲೆ ನಡೆದಾಡುವ ಪಶುಗಳಿಗೆ, ನೀರಿನಲ್ಲಿರುವ ಜಲಚರ ಪ್ರಾಣಿಗಳಿಗೆ ಅತಿಶಯವಾಗಿ ಪೀಡೆಯನ್ನು ಕೊಡುವರು. ಬ್ರಾಹ್ಮಣರ ರಕ್ತವನ್ನು ಪಡೆದು ಜಾರಣ ಮಾರಣಾದಿ ಕ್ರಿಯೆಗಳನ್ನು ಮಾಡುತ್ತಿರುವರು ।।೫೮೭।। ಗೋ ಬ್ರಾಹ್ಮಣರಿಗೆ ಬಹು ಪೀಡೆಯನ್ನು ಕೊಡುವರು. ಇಷ್ಟಲ್ಲದೇ ಹೆಣ್ಣು, ಹೊನ್ನು, ಮಣ್ಣನ್ನು ಅಪಹರಿಸುವುದಕ್ಕಾಗಿ ಅವರ ಪ್ರಾಣಗಳನ್ನು ಕೂಡ ತೆಗೆದುಕೊಳ್ಳುವರು ।।೫೮೮।। ದೇವಾಲಯಗಳಲ್ಲಿ ದೇವರ ಮುಂದಿಟ್ಟ ಅಥವಾ ಶಿವಾಲಯದಲ್ಲಿ ಶಿವನ ಮುಂದಿಟ್ಟ ಧನ, ಧಾನ್ಯ, ತೈಲ ಇತ್ಯಾದಿ ವಸ್ತುಗಳನ್ನು ಕದಿಯಲು ಹೆದರುವುದಿಲ್ಲ. ಇಷ್ಟೊಂದು ಇವರ ಅಧರ್ಮದ ಅತೃಪ್ತ ಇಚ್ಛೆಯು ದೊಡ್ಡದಾಗಿರುವುದು ।।೫೮೯।। ಅಮಾವಾಸ್ಯೆಯ ದಿನದಲ್ಲಿ ಚಂದ್ರನು ಲೋಪನಾಗುವಂತೆ, ಈ ಪ್ರಕಾರದ ಅಘೋರ ಕರ್ಮಗಳನ್ನು ಮಾಡುವ ದುರಾಚಾರಿಗಳು ಅಕರ್ಮದ ಯೋಗದಿಂದ ನರಕದ ಅಂಧಃಕಾರದಲ್ಲಿ ಹೋಗಿ ಬೀಳುವರು ।।೫೯೦।। ಯಾವ ಈ ಅಕರ್ಮವು ಮಹಾ ಪ್ರಬಳವಾಗಿರುವುದು. ಇದು ಜೀವದ ಜ್ಞಾನವನ್ನು ನಾಶಗೊಳಿಸುತ್ತದೆ. ಜೀವಕ್ಕೆ ಅತ್ಯಂತ ಮೂಢಗೊಳಿಸಿ ನರಕದ ಭಯಂಕರ ತೆರೆಗಳಲ್ಲಿ ಒಗೆದುಬಿಡುವುದು ।।೫೯೧।। ಆ ನರಕದ ಸ್ಥಿತಿಯು ಅತ್ಯಂತ ವಿಲಕ್ಷಣವಾಗಿರುವುದು. ಕೋಟ್ಯಾವಧಿ ವರ್ಷಗಳವರೆಗೆ ಕೆಳಗೆ ಹೋಗುತ್ತಿದ್ದರೂ ಅದರ ತಳವೇ ಹತ್ತುವುದಿಲ್ಲ. ಅಂದ ಮೇಲೆ ಆ ಜೀವವು ಮೇಲಕ್ಕೆ ಹೇಗೆ ಬರಬೇಕು ? ।।೫೯೨।। ಅದಕ್ಕೆ ವಿಲಕ್ಷಣ 'ಅಂಧತಮ' ಎನ್ನುವರು. ಅದನ್ನು ಕಾಣುತ್ತಲೇ ವೃತ್ತಿಯು ಅಧಮವಾಗುವುದು. ಹೊರಗೆ ಬರುವ ಮರುವು ಉಂಟಾಗುವುದು. ಮತ್ತು ಜೀವವು ಮೂರ್ಖತನದಿಂದ ನರಕದಲ್ಲಿಯೇ ಬಿದ್ದು ಉರುಳಾಡುತ್ತಿರುವುದು ।।೫೯೩।। ಈ ಪ್ರಕಾರವಾಗಿ ಕರ್ಮಭೋಗದ ಅಂತ್ಯವಾಗುವವರೆಗೆ ಕಲ್ಪಕ್ಕೂ ನರಕವನ್ನೇ ಭೋಗಿಸುವನು. ಮತ್ತು ಭೋಗವು ಕೊನೆಗೊಂಡಾಗ ಸ್ಥಾವರದಲ್ಲಿನ ಪಾಷಾಣ, ಗಿಡಗಂಟಿಗಳ ಜನ್ಮ ಪ್ರಾಪ್ತವಾಗುವುದು ।।೫೯೪।। ಹೀಗೆ ಇವನ ಗಾಢವಾದ ಮೂಢಾವಸ್ಥೆ ಒದಗುವುದು. ಕೇವಲ ಜಾಡ್ಯತನವು ಜಡತ್ವಕ್ಕೆ ಪ್ರಾಪ್ತವಾಗುವುದು. ಇವನಿಗೆ ಸ್ವಪ್ನದಲ್ಲಿಯೂ ಕೂಡ ಎಂದಿಗೂ ಸುಖ ತೋರದು. ಯಾವಾಗಲೂ ಇವನು ದುಃಖವನ್ನೇ ಭೋಗಿಸುತ್ತಿರುವನು ।।೫೯೫।। ಈ ಪ್ರಕಾರವಾಗಿ ಅಧರ್ಮದಿಂದ ವರ್ತಿಸುತ್ತಿರಲು ಅಣುಮಾತ್ರವೂ ಸುಖವು ಲಭಿಸಲಾರದು. ಪ್ರತಿಯಾಗಿ ಅನಿವಾರ್ಯ ದುಃಖವನ್ನು ಭೋಗಿಸುವ ಈ ಜೀವಕ್ಕೆ ಇದರಿಂದ ಎಂದಿಗೂ ಬಿಡುಗಡೆಯಾಗಲಾರದು ।।೫೯೬।।

ಹೇ ಉದ್ಧವನೇ, ಕೇಳು. ಯಾವ ಈ ಜೀವವು ಮರಣ ಧರ್ಮದಿಂದ ಕೂಡಿರುವುದು. ಅದಕ್ಕೆ ಸುಖವೆಂಬುದು ಎಂದಿಗೂ ಲಭಿಸುವುದೇ ಇಲ್ಲ. ದುಃಖದ ಸ್ಥಿತಿಯಲ್ಲಿಯೇ ಯಾವಾಗಲೂ ಅದರ ವಾಸ್ತವ್ಯವಾಗಿರುವುದು ।।೫೯೭।।

ನರದೇಹಾ ಯೇವೂನಿ ಕೇವಳ । ಕ್ರೂರ ಕರ್ಮೇ ಕರಿತೀ ಪ್ರಬಳ । ಜ್ಯಾಂಸೀ ಉತ್ತರೋತ್ತರ ದುಃಖಫಳ । ಯಾತನಾ ಸಬಳ ಭೋಗವೀ ॥೫೯೮॥ ಮರಮರೋ ದುಃಖ ಭೋಗೀ ದಾರುಣ। ಉಪಜೋನಿ ಕರ್ಮೇ ಕರೀ ಹೀನ। ದುಃಖಾವರ್ತೀ ಪಡೇ ಜಾಣ। ಆಪಣಿಯಾ ಆಪಣ ಘಾತಕ ।೫೯೯॥ ಜೇ ಸಂತಚರಣೇ ವಿಮುಖ । ತ್ಯಾಂಸೀ ಸ್ವಪ್ನೀಹಿ ನಾಹೀ ಸುಖ । ಕ್ರೂರ ಕರ್ಮೇ ಕರೀ ಕಾಮುಕ । ಚಢತೇ ದುಃಖ ಸಕಾಮಾ ॥೬೦೦॥ ಏವಂ ಪ್ರವತ್ತೀಮಾಜೀ ಅಸತಾ । ಸಕಾಮ ಕರ್ಮೇ ಆಚರತಾ ।ಸವಿಧಿ ಕರ್ಮೇ ಕರಿತಾ । ದುಃಖ ಸರ್ವಥಾ ಅನಿವಾರ ॥೬೦೧॥ ಸವಿಧಿ ಕಾಮ್ಯೇ ಸ್ವರ್ಗಪತನ । ಅವಿಧಿ ಕಾಮ್ಯೇ ನರಕ ದಾರುಣ। ಏವಂ ಪ್ರವತ್ತೀಮಾಜೀ ಜಾಣ। ಸುಖ ಕೋಣ ಸಕಾಮಾ ॥೬೦೨॥ ಮ್ಹಣಶೀ ಲೋಕಪಾಳಾಂಚ್ಯಾ ಠಾಯೀ । ನಿತ್ಯ ಸುಖ ಅಸೇಲ ಪಾಹೀ । ತ್ಯಾಂಸೀ ಜನ್ಮ ಮರಣ ನಾಹೀ। ಅಮರತ್ವ ಆಮ್ಹೀಹೀ ಸಾಧಾವೇ ॥೬೦೩॥ ಲೋಕಪಾಳಾಂಚೇ ನಿತ್ಯ ಲೋಕ । ಲೋಕಪಾಳಹೀ ನಿತ್ಯ ದೇಖ। ತೇಥೇ ಅಸೇಲ ನಿತ್ಯ ಸುಖ । ಐಸೇ ಮೂರ್ಖ ಕಲ್ಪಿತೀ ॥೬೦೪॥

ಲೋಕಾನಾಂ ಲೋಕಪಾಲಾನಾಂ ಮದ್‌ಭಯಂ ಕಲ್ಪಜೀವಿನಾಮ್।
ಬ್ರಹ್ಮಣೋಽಪಿ ಭಯಂ ಮತ್ತೋ ದ್ವಿಪರಾರ್ಧಪರಾಯುಷಃ ॥೩೦॥

ಅರ್ಥ :- ಸರ್ವ ಲೋಕಗಳು ಮತ್ತು ಲೋಕಪಾಲರ ಆಯುಷ್ಯವು ಕೇವಲ ಒಂದು ಕಲ್ಪ ಮಾತ್ರ ಇರುವುದು. ಆದ್ದರಿಂದ ಅವರು ಪರಮೇಶ್ವರನಲ್ಲಿ ಭಯಭೀತರಾಗಿರುವರು. ಸ್ವಯಂ ಬ್ರಹ್ಮದೇವನೂ ಕೂಡ ನನ್ನಲ್ಲಿ ಭಯಭೀತನಾಗಿರುವನು. ಕಾರಣ ಆತನ ಆಯುಷ್ಯವು ಕಾಲನಿಂದ ಸೀಮಿತವಾಗಿದ್ದು, ಕೇವಲ ಎರಡು ಪರಾರ್ಧವಾಗಿದೆ.

ಲೋಕಪಾಳಾಮಾಜೀ ಅಮರೇಂದ್ರ । ಮರುದ್ಗಣಾಂಚಾ ರಾಜಾ ಇಂದ್ರ । ಜ್ಯಾಸೀ ಮಾನಿತೀ ಸೂರ್ಯಚಂದ್ರ । ವರುಣ ಕುಬೇರ ಯಮಾದಿ ॥೬೦೫॥ ಜ್ಯಾ ಅಮರಾವತೀ ಸಿಂಹಾಸನ । ಐರಾವತಾಚೇ ಆರೋಹಣ । ಉಚ್ಚೈಃಶ್ರವಾ ಅಶ್ವ ಜಾಣ। ಪುಢೇ ಆಪಣ ಖೋಲಣಿಯೇ ॥೬೦೬॥ ಜ್ಯಾಸೀ ಉರ್ವಶೀ ಭೋಗಪತ್ನೀ ।ರಂಭಾ ಮುಖ್ಯ ವಿಲಾಸಿನೀ । ಜೇಥ ತಿಲೋತ್ತಮಾ ನಾಚಣೀ । ಚಿಂತಾಮಣೀ ಲೋಳತೀ ॥೬೦೭॥ ಅಷ್ಟಮಾಸಿದ್ಧೀಂಚೇ ಭಾಂಡಾರೇ । ರತ್ನಜಡಿತ ಧವಳಾರೇ । ಮರ್ಗಜಾಚೇ ಡೋಲ್ಹಾರೇ । ಸುವರ್ಣಸೂತ್ರೇ ಲಾವಿಲೇ ॥೬೦೮॥

ಮಾನವರು ಜನ್ಮಕ್ಕೆ ಬಂದು ಯಾವ ಭಯಂಕರವಾದ ಕ್ರೂರಕರ್ಮಗಳನ್ನು ಮಾಡುವರು. ಆದ್ದರಿಂದ ಅವರಿಗೆ ಉತ್ತರೋತ್ತರವಾಗಿ ದುಃಖಗಳೇ ಫಲವಾಗಿ ಪ್ರಾಪ್ತವಾಗುವುವು. ಇದರಿಂದ ಯಾವತ್ತೂ ಯಾತನೆಗಳನ್ನು ಭೋಗಿಸಬೇಕಾಗುವುದು ।೫೯೮॥ ಮರಣವಾಗುವವರೆಗೂ ಭಯಂಕರವಾದ ದುಃಖಗಳನ್ನು ಭೋಗಿಸುವರು. ಮತ್ತು ಜನ್ಮಕ್ಕೆ ಬಂದರೆಂದರೆ ಪುನಃ ಅದೇ ಪ್ರಕಾರವಾಗಿ ಕೆಟ್ಟ ಕರ್ಮಗಳನ್ನು ಮಾಡುವರು. ತಾವೇ ತಮ್ಮ ಘಾತವನ್ನು ಮಾಡಿಕೊಂಡು ದುಃಖದ ತಿರುಗಣೆಯಲ್ಲಿ ಬೀಳುವರು ।೫೯೯॥ ಯಾರು ಸಂತ ಚರಣಗಳಿಂದ ವಿಮುಖರಾಗುವರೋ ಅವರಿಗೆ ಸ್ವಪ್ನದಲ್ಲಿಯೂ ಸಹ ಎಂದೆಂದಿಗೂ ಸುಖವು ಲಭಿಸಲು ಸಾಧ್ಯವೇ ಇಲ್ಲ. ಕಾಮುಕ ಜನರು ಕ್ರೂರಕರ್ಮಗಳನ್ನು ಮಾಡುವರು. ಆದ್ದರಿಂದಲೇ ಅವರಿಗೆ ಬೆಳೆಯುವ ದುಃಖಗಳನ್ನು ಭೋಗಿಸಬೇಕಾಗುವುದು ॥೬೦೦॥ ಈ ಪ್ರಕಾರವಾಗಿ ಪ್ರವೃತ್ತಿಯಲ್ಲಿದ್ದು ವಿಧಿಯುಕ್ತವಾಗಲೀ, ಅವಿಧಿಯುಕ್ತವಾಗಲಿ ಸಕಾಮ ಕರ್ಮಗಳನ್ನು ಮಾಡುವವರಿಗೆ ಅನಿವಾರ್ಯವಾಗಿ ದುಃಖಗಳನ್ನು ಭೋಗಿಸಬೇಕಾಗುವುದು ॥೬೦೧॥ ಕಾಮ್ಯ ಕರ್ಮಗಳನ್ನು ವಿಧಿಯುಕ್ತವಾಗಿ ಆಚರಿಸಲು ಸ್ವರ್ಗದಿಂದ ಪತನವಾಗುವುದು. ಅವೇ ಕರ್ಮಗಳನ್ನು ಅವಿಧಿಯಿಂದ ಮಾಡಲು ಭಯಂಕರವಾದ ನರಕವಾಸವಾಗುವುದು. ಅಂದ ಮೇಲೆ ಸಕಾಮ ಮಾನವನಿಗೆ ಪ್ರವೃತ್ತಿಯಲ್ಲಿ ಸುಖವು ಹೇಗೆ ಲಭಿಸಬೇಕು? ॥೬೦೨॥ ದಿಕ್ಪಾಲಕರಲ್ಲಿ ನಿತ್ಯ ಸುಖವಿರಬಹುದು. ಇಂದ್ರ, ಅಗ್ನೀ, ಯಮ, ನಿರ್ಋತಿ, ವರುಣ, ವಾಯೂ, ಕುಬೇರ, ಈಶಾನ ಈ ಎಂಟು ಜನ ಲೋಕಪಾಲಕರಿಗೆ ಸುಖವಿರಬಹುದು. ಕಾರಣ ಇವರಿಗೆ ಜನ್ಮ ಮರಣವಿಲ್ಲ. ಆದ್ದರಿಂದ ನಾವೂ ಕೂಡ ಅವರ ಸರಿಸಮಾನ ಅಮರತ್ವವನ್ನು ಸಾಧಿಸಬೇಕು. ಓಗೆಂದು ನೀನು ಹೇಳಬಹುದು ॥೬೦೩॥ ಆದರೆ, ದಿಕ್ಪಾಲಕರ ಲೋಕಗಳು ನಿತ್ಯವಾಗಿವೆ. ಅವರಿಗೆ ಲಭಿಸುವ ಸುಖವೂ ನಿತ್ಯವಾಗಿದೆ ಎಂದು ಕಲ್ಪಿಸುವವರು ಮೂರ್ಖರಾಗಿರುವರು ॥೬೦೪॥

ಲೋಕಪಾಲಕರಲ್ಲಿ ಅಮರೇಂದ್ರ ಎಂದರೆ ಮರುದ್ಗಣರ ರಾಜನಾಗಿರುವ ಇಂದ್ರನು ಶ್ರೇಷ್ಠನು. ಈತನಿಗೆ ಚಂದ್ರ, ಸೂರ್ಯ, ವರುಣ, ಕುಬೇರ, ಯಮ ಮೊದಲು ಮಾಡಿ ಎಲ್ಲರೂ ಮಾನ್ಯತೆಯನ್ನು ಕೊಡುವರು ॥೬೦೫॥ ಈತನ ಸಿಂಹಾಸನವು ಅಮರಾವತಿ ನಗರದಲ್ಲಿರುವುದು. ಈತನಿಗೆ ಕುಳಿತುಕೊಳ್ಳಲು ಐರಾವತ ಆನೆ ಇರುವುದು. ಉಚ್ಚೈಃಶ್ರವಾ ಎಂಬ ಶ್ರೇಷ್ಠ ಕುದುರೆ ಇರುವುದು ॥೬೦೬॥ ಈತನಿಗೆ ಉರ್ವಶಿಯು ಭೋಗಪತ್ನಿಯಾಗಿರುವಳು. ರಂಭೆಯು ಮುಖ್ಯವಾಗಿ ವಿಲಾಸಿನಿಯಾಗಿರುವಳು, ತಿಲೋತ್ತಮೆಯು ನರ್ತಕಿಯಾಗಿರುವಳು. ಮತ್ತು ಚಿಂತಾಮಣಿಯಂತಹ ರತ್ನಗಳು ಈತನ ಕಾಲುಗಳಲ್ಲಿ ಉರುಳಾಡುತ್ತಿರುವುವು ॥೬೦೭॥ ಅಷ್ಟಮಹಾಸಿದ್ಧಿಗಳ ಭಾಂಡಾರಗಳು, ರತ್ನಜಡಿತ್ವ ಶುಭ್ರ ರಾಜಭವನ, ಸುವರ್ಣ ಸರಪಳಿಯಿಂದ ಕಟ್ಟಿದ ಹಸಿರು ರತ್ನಗಳ ತೂಗುಮಂಚಗಳು ॥೬೦೮॥

ವೈದೂರ್ಯಾಚೇ ಶಾಹಾಡೇ । ಕಾಮಧೇನೂಂಚೇ ವಾಡೇ। ಕಲ್ಪದ್ರುಮಾಂಚೇ ಮಾಂದೋಡೇ। ಚಹೂಕಡೇ ಶೋಭತೀ ॥೬೦೯॥ ಲೋಕಪಾಳ ಆಜ್ಞೇಚೇ । ಸುರಸೇನಾ ಸೈನ್ಯ ಜ್ಯಾಚೇ । ಏವಡೇ ಐಶ್ವರ್ಯ ಜಯಾಚೇ । ರಾಜ್ಯ ಸ್ವರ್ಗೀಚೇ ಭೋಗಿತ ॥೬೧೦॥ ತ್ಯಾಸೀ ಮಾಝೀ ಕಾಳಶಕ್ತೀ । ಬ್ರಹ್ಮಯಾಚೇ ದಿನಾಂತೀ । ಚೌದಾ ಇಂದ್ರ ಕ್ಷಯಾ ಜಾತೀ । ಯೇರಾಂಚಿ ಗತಿ ಕಾಯಶೀ ॥೬೧೧॥ ಬ್ರಹ್ಮಾಯು ಮ್ಹಣತೀ ಸಮತಾ । ಜೋ ದ್ವಿಪರಾರ್ಧ ಆಯುಷ್ಯವಂತಾ । ಜಂವ ನ ಪವೇ ಮಾಝೀ ಕಾಳಸತ್ತಾ । ತಂವ ಶ್ಲಾಘ್ಯತಾ ಆಯುಷ್ಯಾಚೀ ॥೬೧೨॥ ಜ್ಯಾಸೀ ಅಗ್ರಪೂಜೇಚೀ ಮಾನ್ಯತಾ । ಜೋ ಲೋಕ ಲೋಕಪಾಳಾಂಚಾ ಕರ್ತಾ । ತ್ಯಾ ಬ್ರಹ್ಮಯಾಸೀ ಮಾಝೀ ಕಾಳಸತ್ತಾ । ಗ್ರಾಸೀ ಸರ್ವಥಾ ಸಲೋಕೇ ॥೬೧೩॥ ಮೀ ಕಾಳಾತ್ಮಾ ದಂಡಧರು । ಶಾಸ್ತಾ ನಿಯಂತಾ ಈಶ್ವರು । ಅಂತರ್ಯಾಮೀ ಸರ್ವೇಶ್ವರು । ಅತಿದುರ್ಧರು ವ್ಯಾಪಕು ॥೬೧೪॥ ಮಾಝಾ ಕಾಳಕ್ಷೋಭ ದಾರುಣ । ತ್ಯಾತೇ ಆವರೂ ಶಕೇ ಕೋಣ । ಧರ್ಮ ಅರ್ಥ ಕಾಮ ಜಾಣ। ನಿವಾರಣ ತ್ಯಾ ನವ್ಹೇ ॥೬೧೫॥ ಪ್ರಳಯಕರ್ತ್ಯಾ ಮಹಾಕಾಳಾಸೀ । ಮಾಝೀ ಕಾಳಸತ್ತಾ ಗ್ರಾಸೀ । ಮಾಝೇ ಮಹಾಭಯ ಸರ್ವಾಸೀ । ಲೋಕಪಾಳಾಸೀ ಸುಖ ಕೈಚೇ ॥೬೧೬॥ ಲವನಿಮೇಷ - ಪಳಪಳೇ । ಮಾಝೇನಿ ಭಯೇ ಸೂರ್ಯ ಚಳೇ । ಮಾಝೇನಿ ಭಯೇ ಪ್ರಾಣ ಖೇಳೇ । ವಾಯುಚಳೇ ಮಾಝೇನಿ ಭೇಣೇ ॥೬೧೭॥ ಮಾಝೇ ಆಜ್ಞೇವರೀ ಅಗ್ನಿ ಜಾಣ। ವಸವೀತಸೇ ಜಠರಸ್ಥಾನ । ಮದ್ಭಯೇ ನವ್ಹೇ ಅಧಿಕ ನ್ಯೂನ । ಪಚವೀ ಅನ್ನ ಚತುರ್ವಿಧ ॥೬೧೮॥ ಯಥಾಕಾಳೀ ಪರ್ಜನ್ಯ ಧಾರೀ । ಇಂದ್ರ ವರ್ಷೇ ಮದ್ಭಯೇ ಕರೀ । ಮೃತ್ಯು ಸ್ವಕಾಳೇ ಪ್ರಳಯ ಕರೀ । ಭಯ ಭಾರೀತ್ಯಾ ಮಾಝೇ ॥೬೧೯॥ ಮಾಝೇನಿ ಭಯೇಕರೀ ದೇಖಾ । ಸಮುದ್ರ ನೋಲಾಂಡೀ ನಿಜರೇಖಾ । ಮಾಝಿಯಾ ಭಯಾಚೇ ಥೋರ ಶಂಕಾ । ತಿಹೀ ಲೋಕಾ ಕಾಂಪವೀ ॥೬೨೦॥ ತಿಹೀ ಲೋಕಾಂಚಾ ಶಾಸ್ತಾ । ಈಶ್ವರ ತೋ ಮೀ ನಿಯಂತಾ । ಯೇಣೇ ಕರ್ಮಜಡಾಚೀ ವಾರ್ತಾ । ಅನೀಶ್ವರತಾ ಛೇದಿಲೀ ॥೬೨೧॥ ಪ್ರವೃತ್ತೀಸೀ ಅನರ್ಥತಾ । ಮಾಗಾ ದಾವಿಲೀ ತತ್ತ್ವತಾ । ವೈರಾಗ್ಯ ಸ್ಥಾಪಿಲೇ ಸದೃಢತಾ । ನಿವೃತ್ತಿ ಸರ್ವಥಾ ಅತಿಶ್ರೇಷ್ಠ ॥೬೨೨॥ ಆಪುಲ್ಯಾ ಐಶ್ವರ್ಯಾಚ್ಯಾ ಆವಿಷ್ಕಾರೇ । ಸಾಧೂನಿ ಈಶ್ವರತ್ವ ಕೇಲೇ ಖರೇ । ಮೀಮಾಂಸಕಮತ -ನಿರಾಕಾರೇ । ನಿರೂಪಣ ಪುಧಾರೇ ಚಾಲವೀ ॥೬೨೩॥

ವೈಡೂರ್ಯಗಳ ಮಹಾ ವೃಕ್ಷಗಳು, ಕಾಮಧೇನುಗಳ ಹಿಂಡುಗಳು ಮತ್ತು ಕಲ್ಪವೃಕ್ಷಗಳ ವನಗಳು ನಾಲ್ಕೂ ಕಡೆಗಳಲ್ಲಿ ಶೋಭಿಸುತ್ತಿರುವುವು ॥೬೦೯॥ ಈತನಲ್ಲಿ ಲೋಕಪಾಲಕರು ಕೈ ಜೋಡಿಸಿ ನಿಲ್ಲುವರು. ದೇವತೆಗಳ ಸೈನಿಕರೇ ಈತನ ಚತುರಂಗ ಸೈನ್ಯವು, ಇಂತಹ ಐಶ್ವರ್ಯ ಉಳ್ಳ ಆ ಯಾವ ಇಂದ್ರನು ಸ್ವರ್ಗದ ರಾಜ್ಯ ಭೋಗವನ್ನು ಭೋಗಿಸುವನು ॥೬೧೦॥ ಈತನಿಗೂ ಸಹ ಬ್ರಹ್ಮದೇವನ ದಿನವು ಪೂರ್ಣಗೊಳ್ಳಲು ನನ್ನ ಕಾಲನ ಶಕ್ತಿಯು ಗ್ರಾಸಿಸುವುದು. ಬ್ರಹ್ಮದೇವನ ಒಂದೇ ಒಂದು ದಿನದಲ್ಲಿ ಹದಿನಾಲ್ಕು ಇಂದ್ರರು ಕ್ಷಯಗೊಳ್ಳುವರು. ಅಂದ ಮೇಲೆ ಇತರರ ಯಾವ ಕಥೆ? ॥೬೧೧॥ ಬ್ರಹ್ಮದೇವನ ಆಯುಷ್ಯವು ಎಲ್ಲರಕ್ಕಿಂತಲೂ ದೊಡ್ಡದು ಎಂದು ಹೇಳುವರು. ಆತನಿಗೆ ಎರಡುಪರಾರ್ಧ ಆಯುಷ್ಯವಿರುವುದು. ಆದರೆ ಕಾಲನ ದೃಷ್ಟಿಯು ಎಲ್ಲಿಯವರೆಗೆ ಬೀಳುವುದಿಲ್ಲವೋ, ಅಲ್ಲಿಯವರೆಗೆ ಆತನ ಆಯುಷ್ಯದ ದೊಡ್ಡಸ್ತಿಕೆವಿರುವುದು ॥೬೧೨॥ ಅಗ್ರಪೂಜೆಗೆ ಮಾನ್ಯನಾಗಿರುವ, ಲೋಕಗಳ, ಲೋಕಪಾಲಕರ ಕರ್ತನಾಗಿರುವ, ಆ ಬ್ರಹ್ಮದೇವನಿಗೂ ಕೂಡ ನನ್ನ ಕಾಲಸತ್ತೆಯು ಆತನ ಲೋಕಸಹಿತವಾಗಿ ನುಂಗಿಬಿಡುವುದು ॥೬೧೩॥ ನಾನು ದಂಡ ಧರಿಸಿರುವ ಕಾಲನ ಆತ್ಮವೂ ಆಗಿರುವೆನು. ಶಾಸನವನ್ನು ಮಾಡುವವ, ನಿಯಮನವನ್ನು ಮಾಡುವವ, ಈಶ್ವರ, ಅಂತರ್ಯಾಮೀ, ಸರ್ವೇಶ್ವರ, ಅತಿದುರ್ಧರ ಮತ್ತು ಸರ್ವವ್ಯಾಪಿಯಾಗಿರುವೆನು ॥೬೧೪॥ ನನ್ನ ಕಾಲನ ಕ್ಷೋಭೆಯು ಅತಿಶಯವಾಗಿ ಭಯಂಕರವಾಗಿರುವುದು. ಆತನಿಗೆ ಯಾರು ತಡೆಯಲು ಶಕ್ತರು? ಧರ್ಮ, ಅರ್ಥ, ಕಾಮ ಇವುಗಳಿಂದ ಈತನನ್ನು ನಿವಾರಿಸಲು ಶಕ್ಯವಿಲ್ಲ. ॥೬೧೫॥ ಪ್ರಳಯವನ್ನು ಮಾಡುವ ಮಹಾಕಾಲನನ್ನೂ ಕೂಡ ನನ್ನ ಸತ್ತೆಯು ನುಂಗಿಬಿಡುವುದು. ನನ್ನ ಮಹಾಭಯವು ಎಲ್ಲರಿಗೂ ಇದೆ. ಅಂದ ಮೇಲೆ ಲೋಕಪಾಲಕರಿಗೆ ಸುಖವು ಎಲ್ಲಿಂದ ದೊರಕಬೇಕು? ॥೬೧೬॥ ನನ್ನ ಭಯದಿಂದ ಸೂರ್ಯನು ಲವ-ನಿಮಿಷ-ಪಳ-ವಿಪಳಗಳಿಗೆ ಮುಂದು ಮುಂದು ಸತತವಾಗಿ ನಡೆಸುತ್ತಿರುವನು. ನನ್ನ ಭಯದಿಂದ ಪ್ರಾಣವು ಆಡುವುದು ಮತ್ತು ಗಾಳಿಯು ಬೀಸುತ್ತಿರುವುದು ॥೬೧೭॥ ನನ್ನ ಆಜ್ಞೆಯಿಂದಲೇ ಅಗ್ನಿಯು ಜಠರದಲ್ಲಿರುವನು. ನನ್ನ ಭಯದಿಂದಲೇ ಆತನು ಚತುರ್ವಿಧ ಅನ್ನವನ್ನು ಪಚನಗೊಳಿಸುವನು ॥೬೧೮॥ ಇಂದ್ರನು ನನ್ನ ಭಯದಿಂದಲೇ ಯೋಗ್ಯ ಕಾಲದಲ್ಲಿ ಮಳೆಗರೆಯುವನು. ಮೃತ್ಯು ಅವನ ವೇಳೆಯು ಮುಗಿಯುತ್ತಲೇ ಪ್ರಳಯ ಮಾಡುವುದು. ಏಕೆಂದರೆ ಆತನಿಗೂ ನನ್ನ ಭಾರೀ ಭಯವಿರುವುದು ॥೬೧೯॥ ನನ್ನ ಭಯದಿಂದ ಸಮುದ್ರವು ತನ್ನ ಮರ್ಯಾದೆ ರೇಖೆಯನ್ನು ಉಲ್ಲಂಘಿಸುವುದಿಲ್ಲ. ನನ್ನ ಭಯವು ಮೂರು ಲೋಕಗಳನ್ನು ನಡುಗಿಸಿಬಿಡುವುದು ॥೬೨೦॥ ತ್ರೈಲೋಕ್ಯದ ಶಾಸನವನ್ನು ಮಡುವ ಈಶ್ವರನಾಗಿರುವ ನಾನೇ ಸರ್ವ ನಿಯಾಮಕನಾಗಿರುವೆನು. ಇಷ್ಟು ಹೇಳಿ ಜಡಬುದ್ಧಿಯ ಕರ್ಮಠರ ಕರ್ಮಠತನವನ್ನು ಮತ್ತು ಅನೀಶ್ವರವಾದಿತ್ವವನ್ನು ಭಗವಂತನು ಮುರಿದುಹಾಕಿದನು ॥೬೨೧॥ ಪ್ರವೃತ್ತಿ ಮಾರ್ಗದಲ್ಲಿ ಅದೆಷ್ಟು ಅನರ್ಥವಿದೆ ಎಂಬುದನ್ನು ಈ ಹಿಂದೆ ನಿನಗೆ ತಿಳಿಸಿ ಹೇಳಿದೆ. ಹಾಗೆಯೇ ವೈರಾಗ್ಯದ ದೃಢವಾದ ಸ್ಥಾಪನೆ ಮಾಡಿದೆ. ನಿವೃತ್ತಿಯು ಇದೇ ಎಲ್ಲದರಲ್ಲಿ ಶ್ರೇಷ್ಠವಾಗಿದೆ ಎಂದು ಹೇಳಿದೆ ॥೬೨೨॥ ಐಶ್ವರ್ಯದ ಆವಿಷ್ಕಾರವನ್ನು ಮಾಡಿ ನನ್ನ ಈಶ್ವರರೂಪವನ್ನು ನಿಜವನ್ನಾಗಿ ಮಾಡಿ ತೋರಿಸಿರುವೆನು. ಈಗ ಮೀಮಾಂಸಕರ ಮತಮತಾಂತರಗಳ ನಿರಾಶೆಯಾಗಿ ಮಾಡಲು ಈ ನಿರೂಪಣೆಯನ್ನೇ ಮುಂದು ನಡೆಸಲಾಗಿದೆ ॥೬೨೩॥

ಮೀಮಾಂಸಕಮತವಾರ್ತಾ । ಬೋಲಿಲೇ ಜೀವಾಸೀ ಅನೇಕತಾ । ತೋಚಿ ಕರ್ತಾ ಆಣಿ ಭೋಕ್ತಾ । ಹೇಚಿ ಸರ್ವಥಾ ನಿರಾಕಾರೀ ॥೬೨೪॥

ಗುಣಾಃ ಸೃಜಂತಿ ಕರ್ಮಾಣಿ ಗುಣೋಽನುಸೃಜತೇ ಗುಣಾನ್ ।
ಜೀವಸ್ತು ಗುಣಸಂಯುಕ್ತೋ ಭುಂಕ್ತೇ ಕರ್ಮಫಲಾನ್ಯಸೌ ॥೩೧॥

ಅರ್ಥ:- ಇಂದ್ರಿಯಗಳು ಪುಣ್ಯ ಅಥವಾ ಪಾಪ ಕರ್ಮಗಳನ್ನು ಸೃಷ್ಟಿಸುತ್ತವೆ. ಮತ್ತು ಪ್ರಕೃತಿ ಗುಣಗಳು ಇಂದ್ರಿಯಗಳಿಗೆ ಚಾಲನೆ ನೀಡುತ್ತವೆ. ಇಂದ್ರಿಯಗಳಿಂದ, ಪ್ರಕೃತಿಗುಣಗಳಿಂದ ಜೀವಿಯು ಪೂರ್ತಿಯಾಗಿ ಲೋಕದಲ್ಲಿ ತೊಡಗುತ್ತಾನೆ. ಅದರ ಫಲವಾಗಿ ಬಗೆ ಬಗೆಯಾದ ಕರ್ಮಫಲಗಳನ್ನು ಅನುಭವಿಸುತ್ತಾನೆ.

ಕೃಷ್ಣ ಮ್ಹಣೇ ಉದ್ಧವಾತೇ । ಏಕಾದಶ ಇಂದ್ರಿಯೇ ಸಮಸ್ತೇ । ಕರಿತೀ ನಾನಾವಿಧ ಕರ್ಮಾತೇ । ಆತ್ಮಾ ತೋ ಯೇಥೇ ಸರ್ವಸಾಕ್ಷೀ ॥೬೨೫॥ ದೀಪು ಉಜಳಲಿಯಾ ಘರೀ । ಲೋಕ ವರ್ತತೀ ವ್ಯಾಪಾರೀ । ತೋ ನೇಮೀನಾ ನಿವಾರೀ । ತೈಶಾಪರೀ ಜೀವು ಯೇಥೇ ॥೬೨೬॥ ಜೀವು ಪ್ರೇರೋನಿ ಇಂದ್ರಿಯಾಂತೇ । ಮ್ಹಣಾಲ ಕರವಿತಸೇ ಕರ್ಮಾತೇ । ಜೇವೀ ಕುರ್‍ಹಾಡೀ ಘೇಊನಿ ಹಾತೇ । ಛೇದೀ ವೃಕ್ಷಾತೇ ಕೃಷೀವಳು ॥೬೨೭॥ ಐಶೀ ಇಂದ್ರಿಯಾಂಚೀ ಪ್ರೇರಕತಾ । ಜೀವಾಸೀ ನ ಘಡೇ ಸರ್ವಥಾ । ತೇ ನ ಘಡಾಯಾಚೀ ಐಕ ಕಥಾ । ತುಜ ತತ್ತ್ವತಾ ಸಾಂಗೇನ ॥೬೨೮॥ ಇಂದ್ರಿಯಾ ಕರ್ಮೀ ಪ್ರೇರಣ। ಕರಿತೇ ಸತ್ತ್ವಾದಿಕ ಗುಣ। ಜೀವು ಉಭಯಸಾಕ್ಷೀ ಜಾಣ ।ಕರ್ಮಕಾರಣ ತ್ಯಾ ನಾಹೀ ॥೬೨೯॥ ಅಂಗೇ ನಾತಳತಾ ಆಪಣ । ಚುಂಬಕ ಸನ್ನಿಧಿಮಾತ್ರೇ ಕಾರಣ । ಅಚೇತನ ಲೋಹಾ ಕರೀ ಚಳಣ । ತೈಸಾ ಜಾಣ ಜೀವ ಯೇಥೇ ॥೬೩೦॥ ಕಾ ಉಗವಲ್ಯಾ ದಿವಾಕರ । ಸುಷ್ಟುದುಷ್ಟು ಲೋಕವ್ಯಾಪಾರ । ತೋ ಸೂರ್ಯಾಸೀ ನಾತಳೇ ಕರ್ಮಭಾರ । ಸಾಕ್ಷೀ ಸಾಚಾರ ಕರ್ಮಾಚಾ ॥೬೩೧॥ ತೈಸೀ ಜೋ ವಾಸೀ ಕರ್ತವ್ಯತಾ। ಸತ್ಯ ನಾಹೀ ಗಾ ಸರ್ವಥಾ । ದಿಸೇ ಜೇ ಕಾಂಹೀ ಆಪಾತತಾ ತೇ ಆಧ್ಯಾಸಿಕತಾ ಮಿಥ್ಯಾತ್ವೇ ॥೬೩೨॥ ಕವಳೀ ಅಧ್ಯಾಸಿಲಾ ಡೋಳಾ । ತೋ ಚಂದ್ರಮಾ ದೇಖೇ ಪಿಂವಳಾ । ತೇವೀ ಆತ್ಮಾ ಕರ್ತಾ ಭಾಸೇ ಸ್ಥೂಳಾ । ಕೇವಳ ನಿಶ್ಚಳಾ ನೇಣತೀ ॥೬೩೩॥ ಸವೇಗ ಚಾಲತಾ ಆಭಾಳೇ । ಬಾಳೇ ಮ್ಹಣತೀ ಚಂದ್ರಮಾ ಪಳೇ । ತೇವೀ ಆತ್ಮಾ ಕರ್ತಾ ಮಾನಿತೀ ಸ್ಥೂಳೇ । ಉಪಾಧಿಮೇಳೇ ಅಧ್ಯಾಸು ॥೬೩೪॥ ದೇಹ ಮೀ ಕರ್ಮ ಮಾಝೀ । ಹೇ ಆತ್ಮೇನಿ ಸ್ವಪ್ನೀ ನೇಣಿಜೇ । ಮೃಗಜಳೀ ಬುಡಾಲೇ ರಾಜೇ । ಸತ್ಯ ಮಾನಿಜೇ ತೈಸೇ ಹೇ ॥೬೩೫॥

ಮೀಮಾಂಸಕರ ಮತವು ಹೇಗಿದೆ ಎಂದರೆ, ಜೀವಕ್ಕೆ ಅನೇಕತ್ವವು ಉಂಟು, ಅದುವೇ ಕರ್ತಾ ಮತ್ತು ಭೋಕ್ತಾ ಆಗಿರುವುದು. ಈಗ ಇದನ್ನು ಪೂರ್ಣವಾಗಿ ನಿರಸನಗೊಳಿಸಲಾಗುವುದು ॥೬೨೪॥

ಶ್ರೀಕೃಷ್ಣನು ಉದ್ಧವನಿಗೆ ಹೀಗೆ ಹೇಳಿದನು. ಈ ಸರ್ವ ಹನ್ನೊಂದು ಇಂದ್ರಿಯಗಳು ಭಿನ್ನ ಭಿನ್ನ ಪ್ರಕಾರದ ಕರ್ಮಗಳನ್ನು ಮಾಡುವುವು. ಮತ್ತು ಆತ್ಮವು ಇವುಗಳಿಗೆಲ್ಲ ಸಾಕ್ಷಿಯಾಗಿರುವುದು ॥೬೨೫॥ ಮನೆಯಲ್ಲಿ ದೀಪವನ್ನು ಹಚ್ಚುತ್ತಲೇ ಜನರು ತಮ್ಮ ತಮ್ಮ ಕಾರ್ಯಕ್ಕೆ ಹತ್ತುವರು. ಆದರೆ ದೀಪವು ಯಾರಿಗೂ ಕೆಲಸ ಮಾಡಲು ಹೇಳುವುದಿಲ್ಲ. ಅಥವಾ ಬೇಡ ಎಂದೂ ಹೇಳುವುದಿಲ್ಲ. ಅದರಂತೆ ಶರೀರದಲ್ಲಿ ಆತ್ಮವಿರುವುದು ॥೬೨೬॥ ಒಕ್ಕಲಿಗನು ಯಾವ ಪ್ರಕಾರವಾಗಿ ಕೈಯಲ್ಲಿ ಕೊಡ್ಲಿಯನ್ನು ತೆಗೆದುಕೊಂಡು ಗಿಡಗಳನ್ನು ಕಡಿಯುವಂತೆ ಜೀವವು ಇಂದ್ರಿಯಗಳಿಗೆ ಪ್ರೇರಣೆಯನ್ನು ಕೊಟ್ಟು ಅವುಗಳಿಂದ ಕರ್ಮಗಳನ್ನು ಮಾಡಿಸಬಹುದೆಂದು ಆಕಸ್ಮಾತವಾಗಿ ನೀನು ಹೀಗೆ ಹೇಳಬಹುದು ॥೬೨೭॥ ಆದರೆ ಜೀವಕ್ಕೆ ಇಂದ್ರಿಯಗಳ ಪ್ರೇರಕತೆಯು ಸಂಭವಿಸಲು ಸಾಧ್ಯವೇ ಇಲ್ಲ. ಅದರ ಕಾರಣವನ್ನು ನಾನು ನಿನಗೆ ತಾತ್ವಿಕವಾಗಿ ತಿಳಿಸಿ ಹೇಳುವೆ, ನೀನು ಅದನ್ನು ಶ್ರವಣ ಮಾಡು ॥೬೨೮॥ ಸತ್ವ, ರಜ, ತಮ, ಈ ಮೂರು ಗುಣಗಳು ಇಂದ್ರಿಯಗಳಿಗೆ ಪ್ರೇರಣೆಯನ್ನು ಕೊಡುವುವುದಾಗಿವೆ ಮತ್ತು ಆತ್ಮವು ಗುಣ ಮತ್ತು ಇಂದ್ರಿಯಗಳಿಗೆ ಸಾಕ್ಷಿಯಾಗಿರುವುದು. ಅದಕ್ಕೆ ಕರ್ಮದ ಪ್ರೇರಕತೆಯು ಇರುವುದಿಲ್ಲ ॥೬೨೯॥ ಲೋಹಚುಂಬಕವು ಯಾವ ಪ್ರಕಾರವಾಗಿ ತಾನು ಸ್ಪರ್ಶವನ್ನು ಮಾಡದೇ ಕಬ್ಬಿಣಕ್ಕೆ ಆಕರ್ಷಿತಗೊಳಿಸುವುದೋ, ಅದರಂತೆಯೇ ಆತ್ಮವೂ ಕೂಡ ಸಾಕ್ಷಿತ್ವದಿಂದ ಶರೀರದಲ್ಲಿ ಕರ್ಮಗಳನ್ನು ಮಾಡುತ್ತಿರುವುದು ॥೬೩೦॥ ಸೂರ್ಯನು ಉದಯವಾಗುತ್ತಲೇ ಜನರು ಒಳ್ಳೆಯ ಮತ್ತು ಕೆಟ್ಟ ಕರ್ಮಗಳನ್ನು ಮಾಡಲಾರಂಭಿಸುವರು. ಆದರೆ ಅವರ ಕರ್ಮಗಳ ಪ್ರೇರಕತೆಯು ಸೂರ್ಯನ ಕಡೆ ಬರುವುದಿಲ್ಲ. ಆತನು ಕೇವಲ ಸರ್ವ ಕರ್ಮಗಳ ಸಾಕ್ಷಿಯಾಗಿರುವನು ॥೬೩೧॥ ಅದರಂತೆ ನಿಜವಾಗಿಯೂ ಜೀವನಿಗೆ ಕರ್ತವ್ಯತೆಯು ಇರುವುದಿಲ್ಲ. ನಮಗೆ ಹೊರಗಿನಿಂದ ಕಾಣುವುದೆಲ್ಲವೂ ಕೇವಲ ಮಿಥ್ಯೆಯಾಗಿರುವುದು ॥೬೩೨॥ ಕಾಮಿಣೆಯಾದ ಮನುಷ್ಯನ ಕಣ್ಣಿಗೆ ಚಂದ್ರನು ಹಳದಿಯಾಗಿ ಕಾಣುವನು. ಅದರಂತೆ ಮಂದಬುದ್ಧಿಯವರಿಗೆ ಆತ್ಮವು ಕರ್ತಾನಾಗಿರುವುದೆಂದು ತೋರುವುದು. ಆತ್ಮವು ಕೇವಲ ನಿಶ್ಚಲವಾಗಿರುವುದು ಅವರಿಗೆ ತಿಳಿಯುವುದಿಲ್ಲ ॥೬೩೩॥ ಆಕಾಶದಲ್ಲಿ ಮೋಡಗಳು ವೇಗದಿಂದ ಚಲಿಸುತ್ತಿರಲು ಚಿಕ್ಕ ಬಾಲಕರಿಗೆ ಚಂದ್ರನು ಓಡುತ್ತಿರುವಂತೆ ಕಾಣುವುದು. ಅದರಂತೆ ಮಂದಬುದ್ಧಿಯ ಜನರು ಆತ್ಮನಿಗೆ ಕರ್ತಾ ಎಂದು ತಿಳಿಯುವರು. ಮಾಯೆಯ ಉಪಾಧಿಯಿಂದ ಅವರಿಗೆ ಈ ರೀತಿಯ ಭ್ರಮೆಯಾಗಿರುವುದು ॥೬೩೪॥ ದೇಹವೆಂದರೆ ನಾನು, ಮತ್ತು ಕರ್ಮಗಳು ನನ್ನವು ಎಂಬುವುದು ಆತ್ಮಕ್ಕೆ ಸ್ವಪ್ನದಲ್ಲಿಯೂ ಕೂಡ ತಿಳಿದಿರುವುದಿಲ್ಲ. ಮೃಗಜಲದಲ್ಲಿ ರಾಜರು ಮುಳುಗಿದರು ಎಂಬುದು ನಿಜವೆಂದು ತಿಳಿಯುವಂತೆ ಇದಾಗಿದೆ ॥೬೩೫॥

ಏವಂ ಆತ್ಮ್ಯಾಸೀ ಕರ್ತವ್ಯತಾ । ಸತ್ಯ ನಾಹೀ ಗಾ ಸರ್ವಥಾ । ತ್ಯಾಸೀ ಮ್ಹಣತಾತೀ ಫಳಭೋಕ್ತಾ । ತೇಹೀ ವಾರ್ತಾಮಿಥ್ಯಾತ್ವೇ ।।೬೩೬।। ಸ್ವಪ್ನೀ ಜೋಡಿಲ್ಯಾ ಸಹಸ್ರಗಾಯೀ । ಜಾಗೃತೀ ತ್ಯಾಂಚೇ ದುಭತೇ ನಾಹೀ । ಆತ್ಮಾ ಭೋಕ್ತಾ ತೈಸಾ ಪಾಹೀ । ಉಪಾಧೀಚ್ಯಾ ಠಾಯೀ ಮಿಥ್ಯಾರೂಪೇ ।।೬೩೭।। ಡಬಕೀ ಪ್ರತಿಬಿಂಬಲಾ ರವೀ । ತೋ ಜೈ ತೇಥಿಲ ಕರ್ದಮ ಸೇವೀ । ತೈ ಭೋಕ್ತಾ ಆತ್ಮಾ ದೇಹಗಾಂವೀ । ಸತ್ಯ ಮಾನವೀ ಮಾನಾವಾ ।।೬೩೮।। ಮೃಗಜಳಾಮಾಜಿಲೇನಿ ಮತ್ಸ್ಯೇ । ಬಿಂಬಲಾ ಚಂದ್ರ ಗಿಳಿಜೇ ಆವೇಶೇ । ತೈಸಾ ಆತ್ಮಾ ದೇಹಾಭಿನಿವೇಶೇ । ಭೋಗವಿಶೇಷೇ ಭೋಗಿತಾ ।।೬೩೯।। ಏವಂ ಆತ್ಮಾ ಜೋ ಭೋಕ್ತಾ । ತೇ ಸೋಪಾಧಿಕ ವಾರ್ತಾ । ಉಪಾಧಿ ಮಿಥ್ಯಾ ಗಾ ತತ್ತ್ವತಾ । ಆತ್ಮಾ ಭೋಕ್ತಾ ಕೈಸೇನಿ।।೬೪೦।। ಅತ್ಮಾ ಅಕರ್ತಾ ಅಭೋಕ್ತಾ । ಸದೃಢ ಸಾಧಿಲೇ ತತ್ತ್ವತಾ । ಜೀವಾಸೀ ಬೋಲಿಲೀ ಅನೇಕತಾ । ತೇ ಮಿಥ್ಯಾ ಆತಾ ಸಾಧಿತು ।।೬೪೧।।

ಯಾವತ್‌ಸ್ಯಾದ್‌ಗುಣವೈಷಮ್ಯಂ ತಾವಾನ್ನಾತ್ವಮಾತ್ಮನಃ । ನಾನಾತ್ವಮಾತ್ಮನೋಯಾವತ್ ಪಾರತಂತ್ರ್ಯಂ ತದೈವ ಹಿ ।।೩೨।।

ಅರ್ಥ :- ಎಲ್ಲಿಯವರೆಗೆ ಗುಣಗಳ ವೈಷಮ್ಯವಿರುವುದೋ, ಅರ್ಥಾತ ಶರೀರದಲ್ಲಿ ನಾನು ಮತ್ತು ನನ್ನದು ಇದರ ಅಭಿಮಾನವಿರುವದೋ, ಅಲ್ಲಿಯವರೆಗೆ ಆತ್ಮನ ಏಕತ್ವದ ಅನುಭವವು ಬರುವುದಿಲ್ಲ. ಅದು ಅನೇಕ ಪ್ರಕಾರದ್ದಾಗಿದೆ ಎಂದು ಅನಿಸುವುದು. ಈ ಭಾವನೆಯು ಎಲ್ಲಿಯವರೆಗೆ ಇರುವುದೋ, ಅಲ್ಲಿಯವರೆಗೆ ಅವನಿಗೆ ಕಾಲ ಅಥವಾ ಕರ್ಮಗಳ ಆಧೀನನಾಗಿರಬೇಕಾಗುವುದು.

ಸತ್ವ-ರಜ-ತಮಾಂಚಾ । ಅಂತರೀ ದುಮಾಡೂ ಗುಣಕರ್ಮಾಚಾ । ತಂವ ಜೀವಾಸೀ ಅನೇಕತ್ವಾಚಾ । ಆಭಾಸು ಸಾಚಾ ಮಾನಲಾ ।।೬೪೨।। ಅಹಂಕಾರಾದಿ ದೇಹಪರ್ಯಂತ । ಜಂವ ಜೀವಾಸೀ ಮೀಪಣ ಭಾಸತ । ತಂವ ನಾನಾತ್ವ ಮಾನೀ ಸತ್ಯ । ತೇ ಮಿಥ್ಯಾ ನಿಶ್ಚಿತ ಉದ್ಧವಾ ।।೬೪೩।। ಜೈಸೇ ಆಪುಲೇಚಿ ಮುಖ। ಆರಿಸಾ ಕರೀ ಆಪಣಾಸನ್ಮುಖ । ತೈಸೇ ಅವಿದ್ಯಾಯೋಗೇ ಮಾಯಿಕ। ದ್ವೈತ ದೇಖ ದಾಖವೀ ।।೬೪೪।। ಆರಿಶಾಮಾಜೇ ಆಪುಲಾ । ಜೋ ದ್ವೈತಭಾವೇ ಸ್ವಯೇ ದೇಖಿಲಾ । ತೇಣೇ ಆಪಣ ನಾಹೀ ದ್ವಿಧಾ ಝಾಲಾ । ಮಿಥ್ಯಾ ಭಾಸಲಾ ಆಭಾಸು ।।೬೪೫।। ತೋ ಆಭಾಸ ಝಾಲಿಯಾ ಸಮೋರ । ತ್ರಿಗುಣ ಗುಣಾಂಚೇ ವಿಕಾರ । ಏಕಚಿ ದಾವೀ ನಾನಾಕಾರ । ದಿಸೇ ಸಾಚಾರ ಗುಣಕ್ಷೋಭೇ ।।೬೪೬।। ಜೈಸೇ ಆಪುಲೇಂಚಿ ಮುಖ ಕೇವಳ । ಶಸ್ತ್ರ ಆದರ್ಶ ಆಣಿ ಜಳ । ಲಾಂಬ ನಿಶ್ಚಳ ಚಂಚಳ । ಕರೀ ಪ್ರಬಳ ವಿಕಾರೀ ।।೬೪೭।।

ಈ ಪ್ರಕಾರವಾಗಿ ನಿಜವಾಗಿಯೂ ಆತ್ಮಕ್ಕೆ ಕರ್ತೃತ್ವವು ಇಲ್ಲ. ಅದಕ್ಕೆ ಫಲದ ಭೋಕ್ತಾ ಎಂದು ಹೇಳುವರು. ಆದರೆ ಅದೂ ಕೂಡ ನಿಜವಲ್ಲ ।।೬೩೬।। ಸ್ವಪ್ನದಲ್ಲಿ ಸಾವಿರಾರು ಆಕಳಗಳನ್ನು ಸಂಗ್ರಹಿಸಿದರೂ ಜಾಗೃತನಾದಾಗ ಅವುಗಳ ಹಾಲು ದೊರಕುವುದಿಲ್ಲ. ಅದರಂತೆ ಆತ್ಮವು ಭೋಕ್ತಾನಲ್ಲ. ಉಪಾಧಿಯಿಂದ ಅದರ ಸುಳ್ಳಾದ ಭೋಕ್ತೃತ್ವವು ತೋರುವುದು ।।೬೩೭।। ಮಡುವಿನಲ್ಲಿ ಬಿದ್ದ ಸೂರ್ಯನ ಪ್ರತಿಬಿಂಬವು ಅಲ್ಲಿನ ಕೆಸರು ಸೇವಿಸದು. ಅದರಂತೆ ಮನುಷ್ಯ ದೇಹದಲ್ಲಿನ ಆತ್ಮವು ಭೋಕ್ತಾನಾಗಿರುವುದಿಲ್ಲ ।।೬೩೮।। ಮೃಗಜಲದಲ್ಲಿನ ಮೀನಗಳು ಚಂದ್ರಬಿಂಬವನ್ನು ತೀವ್ರವಾಗಿ ನುಂಗುವಂತೆ ಆತ್ಮವೂ ಕೂಡಾ ದೇಹದ ಅಭಿಮಾನದಿಂದ ಅನೇಕ ಪ್ರಕಾರದ ಭೋಗಗಳನ್ನು ಭೋಗಿಸುವುದು ।।೬೩೯।। ಆತ್ಮಕ್ಕೆ ಭೋಕ್ತಾ ಎಂದು ಹೇಳುವರು. ಈ ಮಾತು ನಿಜವಾಗಿಯೂ ಉಪಾಧಿಯಿಂದ ಕೂಡಿದೆ. ಆದರೆ ಉಪಾಧಿಯು ಕೇವಲ ಮಿಥ್ಯೆಯಾಗಿದೆ. ಅಂದಮೇಲೆ ಆತ್ಮವು ಭೋಕ್ತಾ ಹೇಗಾಗಬೇಕು? ।।೬೪೦।। ಈ ಪ್ರಕಾರವಾಗಿ ಆತ್ಮವು ಅಕರ್ತಾ-ಅಭೋಕ್ತಾ ಇರುವುದು. ಇದು ಪ್ರಮಾಣಯುಕ್ತವಾಗಿ ಸಿದ್ಧಗೊಳಿಸಲಾಗಿರುವುದು. ಈಗ ಜೀವಕ್ಕೆ ಅನೇಕತ್ವವು ಇದೆ ಎಂಬ ಮಾತೂ ಸಹ ಮಿಥ್ಯೆಯಾಗಿದೆ ಎಂದು ತೋರಿಸಲಾಗುವುದು ।।೬೪೧।।

ಸತ್ವ, ರಜ, ತಮ ಮತ್ತು ಇವುಗಳ ಗುಣಕರ್ಮಗಳು ಅಂತಃಕರಣದಲ್ಲಿ ಉಪದ್ರವ ಕೊಡುವುವು. ಅಲ್ಲಿಯವರೆಗೂ ಜೀವಕ್ಕೆಅನೇಕತ್ವದ ಭ್ರಮವು ನಿಜವೆಂದು ತೋರುವುದು ।।೬೪೨।। ಅಹಂಕಾರದಿಂದ ಹಿಡಿದು ಶರೀರದವರೆಗೆ ಜೀವಕ್ಕೆ ಎಲ್ಲಿಯವರೆಗೆ "ನಾನು" ಎಂಬುದು ಭಾಸವಾಗುವುದೋ, ಅಲ್ಲಿಯವರೆಗೆ ಜೀವವು ಅನೇಕತ್ವವನ್ನು ನಿಜವೆನ್ನುವುದು. ಆದರೆ ಹೇ ಉದ್ಧವನೇ, ಇದೆಲ್ಲವೂ ಅಪ್ಪಟ ಸುಳ್ಳಾಗಿರುವುದು ।।೬೪೩।। ಕನ್ನಡಿಯು ಯಾವ ಪ್ರಕಾರವಾಗಿ ನಮ್ಮ ಮುಖವನ್ನೇ ನಮಗೆ ತೋರಿಸಿ, ನಾವು ಇಬ್ಬರಾಗಿದ್ದಂತೆ ಭಾಸಿಸುವುದು. ಅದರಂತೆಯೇ ಮಾಯೆಯು ಅವಿದ್ಯೆಯಿಂದ ಜೀವಕ್ಕೆಮಿಥ್ಯೆಯಾಗಿರುವ ದ್ವೈತವನ್ನು ತೋರಿಸುತ್ತಿರುವುದು ।।೬೪೪।। ಕನ್ನಡಿಯಲ್ಲಿ ನಮ್ಮ ರೂಪವನ್ನೇ ನಾವು ನೋಡುತ್ತಿರಲು ನಿಜವಾಗಿಯೂ ನಾವು ಎರಡು ವ್ಯಕ್ತಿಯಾಗಲು ಶಕ್ಯವೇ ಇಲ್ಲ. ಆತನಿಗೆ ಮಿಥ್ಯಾ ಭಾಸವಾಗುವುದು ।।೬೪೫।। ಈ ಯಾವ ಭಾಸವು ಮುಂದೆ ನಿಂತು ತೋರುತ್ತಿರಲು ತ್ರಿಗುಣಗಳ ವಿಕಾರವು ಒಂದೇ ಇದ್ದರೂ ಅನೇಕವಾಗಿ ಕಾಣತೊಡಗುವುವು. ಮತ್ತು ಗುಣಕ್ಷೋಭೆಯಿಂದ ಈ ಎಲ್ಲವೂ ನಿಜವೆಂದೇ ಅನಿಸುವುದು ।।೬೪೬।। ಯಾವ ಪ್ರಕಾರವಾಗಿ ತನ್ನ ಮುಖವನ್ನು ಶಸ್ತ್ರ (ಝಳಪಿಸುವ ಖಡ್ಗ) ದಲ್ಲಿ ನೋಡಲು ಆಗ ಮುಖವು ಉದ್ದವಾಗಿ ಕಾಣುವುದು. ಅದೇ ಮುಖವನ್ನುಕನ್ನಡಿಯಲ್ಲಿ ನೋಡಲು ಇದ್ದ ರೂಪದಂತೆ ತೋರುವುದು.ಮತ್ತು ಈ ಮುಖದ ಪ್ರತಿಬಿಂಬವು ನೀರಿನಲ್ಲಿ ಚಂಚಲವಾಗಿ ಕಾಣುವುದು ।।೬೪೭।।

ಏವಂ ತ್ರಿಪ್ರಕಾರ ಕಾರ್ಯ ವಿಶೇಖೇ । ಮುಖಚಿ ದೇಖಿಜೇ ನಿಜಮುಖೇ । ತೈಸೇ ತೇ ನಾನಾತ್ವ ಲಟಿಕೇ। ಗುಣಕ್ಷೋಭಕೇ ಭಾಸತು ॥೬೪೮॥ ಸೂತ್ರಚಿ ವಿಣಿಲೇ ಪಟಾಕಾರೀ । ಪಟಾವರೀ ತಂತೂಚ್ಯಾ ಹಾರೀ। ದಿಸತೀ ತೇವೀ ಚರಾಚರೀ । ನಾನಾಕರೀ ಏಕುಚಿ ॥೬೪೯॥ ಸಾಕರೇಚಾ ಕೇಲಾ ಊಂಸು । ಪರೀ ಕಠಿಣ ಆಂತ ಬಾಕಸು। ಮಧೀಲ ಪಿಳೂನ ಘ್ಯಾವಾ ರಸು । ಹಾ ತ್ರಿಗುಣ ದೋಷು ತ್ಯಾ ನಾಹೀ ॥೬೫೦॥ ತೈಸಾ ಪರಮಾತ್ಮಾ ಶ್ರೀಹರೀ। ಅದ್ವಿತೀಯ ಏಕು ಚರಾಚರೀ । ತ್ಯಾಸೀ ಅನೇಕತ್ವಾಚೀ ಪರೀ । ಸತ್ತ್ವಾದಿ ಕರೀ ಗುಣಕ್ಷೋಭು ॥೬೫೧॥ ಜೈಸಾ ಬಹುರೂಪೀ ಆಪುಲ್ಯಾ ಠಾಯೀ । ನಾನಾ ಸೋಂಗೇ ಧರೀ ದೇಹೀ । ತಿತುಕೀ ರೂಪೇ ತ್ಯಾಸೀ ನಾಹೀ । ಏಕಲಾ ಪಾಹೀ ಅದ್ವೈತ ॥೬೫೨॥ ತೈಸಾ ಸಚ್ಚಿದಾನಂದ ಶ್ರೀಹರೀ । ಆತ್ಮಾ ಏಕ ಚರಾಚರೀ । ನಾಂದತಾಹೇ ನಾನಾಕಾರೀ ।ದ್ವೈತಮಾಝಾರೀ ಅದ್ವೈತ ॥೬೫೩॥ ಅದ್ವೈತ ಸಾಧಿಲೇ ಜೇವಾಸೀ । ಸತ್ಯ ಮಾನಿಲೇ ಆಮ್ಹಾಸೀ । ಪರೀ ಏಕ ಆಶಂಕಾ ಐಸೀ । ನಿಜಮಾನಸೀ ವರ್ತತ ॥೬೫೪॥ ತೂಂಚಿ ಮ್ಹಣಸೀ ''ಜೀವ ಪರತಂತ್ರ''। ಆತಾ ಅದ್ವೈತಪಣೇ ''ಸ್ವತಂತ್ರ''। ಬೋಲಸೀ ಬೋಲಣೇ ವಿಚತ್ರ। ಕೇವೀ ಸಾಚಾರ ಮಾನಾವೇ ॥೬೫೫॥ ಅದ್ವೈತಪಣ ಸಂಪಾದಿಸೀ ।ಮಾಝೇ ಭಯ ಲೋಕಪಾಳಾ ಮ್ಹಣಸೀ । ಹೇ ನ ಮನೇ ಗಾ ಆಮ್ಹಾಸೀ । ಅದ್ವೈತಾಸೀ ಭಯ ಕೈಚೇ ॥೬೫೬॥ ಐಶಿಯಾ ರೀತೀ ಉದ್ಧವಾ । ಝಾಲ್ಯಾ ಸಂದೇಹಾಸೀ ರಿಘಾವಾ । ತೋ ತೂ ಆತಳೋ ನೇದೀ ಜೀವಾ । ಏಕ ಬರವಾ ನಿರ್ಧಾರು ॥೬೫೭॥ ಜೀವಾಸೀ ಉಪಾಧೀಸೀ ತಾದಾತ್ಮ್ಯತಾ । ತಂವ ತಂವ ಆಭಾಸೇ ನಾನಾತ್ಮತಾ। ನಾನಾತ್ವೀ ಪರತಂತ್ರತಾ । ಈಶ್ವರಸತ್ತಾ ನಿಯಾಮಕ ॥೬೫೮॥ ಅಮಿತ ಮೀನಲಿಯಾ ದಳ । ಸೇನಾಪತೀವೀಣ ವಿಕಳ । ಆಂಬಾ ಪಿಕಲಿಯಾ ರಸಾಳ । ರಾಖಣ ಸಬಳ ತ್ಯಾಪಾಸೀ ॥೬೫೯॥ ತೈಸೀ ಜೀವಾಸೀ ಜಂವ ಅನೇಕತಾ।ತಂವ ಸೃಷ್ಟಿಸೀ ಕರ್ತಾ ಹರ್ತಾನಿಯಂತಾ । ಜಾಣ ಈಶ್ವರಚಿ ಸರ್ವಥಾ । ಪರತಂತ್ರತಾ ತೇ ಜೀವಾಸೀ ॥೬೬೦॥ ಅನೇಕತ್ವೇ ಪರತಂತ್ರತಾ । ಯಾಲಾಗೀ ಈಶ್ವರ ನಿಯಂತಾ । ಐಸೀ ದೇಖೋನಿ ಈಶ್ವರಸತ್ತಾ । ಭಯ ಸಮಸ್ತಾ ಜೀವಾಸೀ ॥೬೬೧॥

ಈ ಯಾವ ಮೂರು ಪ್ರಕಾರಗಳ ಭಿನ್ನ ಭಿನ್ನ ಪದಾರ್ಥಗಳಿಂದ ನಮ್ಮ ಮುಖವು ಬೇರೆ ಬೇರೆಯಾಗಿ ಕಾಣುತ್ತಿರುವುದು. ಅದರಂತೆಯೇ ಗುಣಕ್ಷೋಭಗಳಿಂದ ಭಾಸವಾಗುತ್ತಿರುವ ನಾನಾತ್ವವು ಸುಳ್ಳಾಗಿರುವುದು ॥೬೪೮॥ ಸಂಪೂರ್ಣ ವಸ್ತ್ರವನ್ನು ನೂಲಿನಿಂದಲೇ ನೇಯಲಾಗಿರುವುದು. ಆ ಯಾವ ವಸ್ತ್ರದಲ್ಲಿ ನೂಲಿನ ಸಾಲುಗಳು ಒಂದೇಯಾಗಿ ಕಾಣುತ್ತಿರುವುವು. ಅದರಂತೆ ಈ ಯಾವ ಚರಾಚರ ಸೃಷ್ಟಿಯಲ್ಲಿ ಭಿನ್ನ ಭಿನ್ನ ಪ್ರಕಾರಗಳ ಆಕಾರಗಳು ಭಾಸವಾಗುತ್ತಿದ್ದರೂ ಅವುಗಳ ಮುಖ್ಯ ತತ್ತ್ವವು ಒಂದೇಯಾಗಿರುವುದು ॥೬೪೯॥ ಸಕ್ಕರೆಯ ಕಬ್ಬನ್ನು ಸಿದ್ಧಗೊಳಿಸಲು, ಮೇಲಿನಿಂದ ಕಠಿಣತನವು ಕಾಣುವುದು, ಒಳಗಡೆಯಲ್ಲಿ ಟೊಳ್ಳಾಗಿರುವುದು. ಅದರಲ್ಲಿನ ರಸವನ್ನು ಹಿಂಡಿಕೊಳ್ಳಲು ಯಾವ ತ್ರಿಗುಣದ ದೋಷವು ಅದರಲ್ಲಿರುವುದಿಲ್ಲ ॥೬೫೦॥ ಅದರಂತೆ ಪರಮಾತ್ಮನಾದ ಶ್ರೀಹರಿಯು ಯಾವತ್ತೂ ಚರಾಚರಗಳಲ್ಲಿ ತುಂಬಿ ಹೆಚ್ಚಾಗಿ ಉಳಿದಿರುವನು. ಸತ್ವ, ರಜ ಮತ್ತು ತಮ ಗುಣಗಳ ಕ್ಷೋಭೆಯಿಂದ ಆತನಲ್ಲಿ ಅನೇಕ ಪ್ರಕಾರಗಳು ಭಾಸವಾಗುತ್ತಿರುವುವು ॥೬೫೧॥ ಯಾವ ಪ್ರಕಾರವಾಗಿ ವೇಶಹಾಕುವವನು ತನ್ನ ಒಂದೇ ದೇಹಕ್ಕೆ ನಾನಾ ಪ್ರಕಾರಗಳ ವೇಶವನ್ನು ಧರಿಸುವನು. ಆದರೆ ಅಷ್ಟೊಂದು ರೂಪಗಳು ಆತನಿಗೆ ಇರುವುದಿಲ್ಲ. ಆತನ ರೂಪವು ಸ್ವಾಭಾವಿಕವಾಗಿ ಒಂದೇಯಾಗಿರುವುದು ॥೬೫೨॥ ಅದರಂತೆಯೇ ಸಚ್ಚಿದಾನಂದ ಶ್ರೀಹರಿಯು ಚರಾಚರಗಳಲ್ಲಿ ಆತ್ಮ ರೂಪದಿಂದ ಒಂದೇಯಾಗಿದ್ದು ಅನೇಕ ರೂಪದಿಂದ ಭಾಸಿಸುತ್ತಿರುವನು. ಇದುವೇ ದ್ವೈತದಲ್ಲಿನ ಅದ್ವೈತವಾಗಿರುವುದು ॥೬೫೩॥ ಜೀವವು ಅದ್ವೈತರೂಪವಾಗಿದೆ ಎಂಬುದು ನಮ್ಮ ಮನಸ್ಸಿಗೆ ಮಾನ್ಯವಾಯಿತು. ಆದರೆ ನಮ್ಮ ಮನಸ್ಸಿನಲ್ಲಿ ಒಂದು ಸಂದೇಹವಿದೆ ॥೬೫೪॥ ನೀನು ಜೀವವು ಪರತಂತ್ರವಿದೆ ಎಂದು ಹೇಳಿರುವೆ. ಮತ್ತು ಈಗ ನೋಡಿದರೆ ಜೀವವು ಅದ್ವೈತವಾಗಿರುವುದರಿಂದ ಸ್ವತಂತ್ರವಾಗಿದೆ ಎಂದು ಹೇಳುತ್ತಿರುವೆ. ಈ ಹೇಳುವಿಕೆಯು ಪರಸ್ಪರವಾಗಿ ವಿರೋಧವಾಗಿದೆ. ಅಂದ ಮೇಲೆ ಯಾವುದಕ್ಕೆ ನಿಜವೆನ್ನಬೇಕು ? ॥೬೫೫॥ ನೀನು ಅದ್ವೈತವನ್ನು ಪ್ರತಿಪಾದಿಸುವೆ ಮತ್ತು ಲೋಕಪಾಲಕರಿಗೆ ನನ್ನ ಭಯವಿದೆ ಎಂದು ಹೇಳುವೆ, ಆದರೆ ಇದು ಒಪ್ಪಿಗೆಯಾಗದ ಮಾತಾಗಿದೆ. ಅದ್ವೈತಕ್ಕೆ ಎಲ್ಲಿಯ ಭಯ? ॥೬೫೬॥ ಹೇ ಉದ್ಧವನೇ, ಈ ಪ್ರಕಾರದ ಸಂದೇಹವು ನಿನ್ನ ಮನದಲ್ಲಿ ಬಂದಿರಬಹುದು. ಇದನ್ನು ನಿನ್ನ ಮನದಿಂದ ತೆಗೆದುಹಾಕು. ಇದೇ ವಿಷಯಕ್ಕೆ ಈಗ ಅದರ ನಿರ್ಣಯವನ್ನು ಚೆನ್ನಾಗಿ ಆಲಿಸು ॥೬೫೭॥ ಯಾವ ಈ ಜೀವವು ಉಪಾಧಿಯೊಂದಿಗೆ ಯಾವ ರೀತಿಯಲ್ಲಿ ತಾದಾತ್ಮ್ಯ ಹೊಂದುವುದೋ, ಅದೇ ರೀತಿಯಲ್ಲಿ ಅನೇಕತ್ವದ ಭಾಸವಾಗಹತ್ತುವುದು. ಅನೇಕತ್ವದ ಭಾಸವಾಗುತ್ತಲೇ ಅಲ್ಲಿ ಪರತಂತ್ರತೆಯು ಬಂದೇ ಬರುವುದು. ಪರತಂತ್ರ ಬರುತ್ತಲೇ ಈಶ್ವರನ ಸತ್ತೆಯೂ ಸಹ ಬಂದೇ ಬರುವುದು. ಆದ್ದರಿಂದ ಜೀವವು ಪರತಂತ್ರವಾಗಿದೆ ॥೬೫೮॥ ಅಸಂಖ್ಯ ಸೈನ್ಯವು ಒಂದೆಡೆ ಸೇರಿದರೂ ಸೇನಾಪತಿ ಹೊರತಾಗಿ ವ್ಯರ್ಥವಾಗುವುದು. ಮಾವಿನ ಮರಕ್ಕೆ ಅಸಂಖ್ಯ ಫಲಗಳು ಬರಲು ಅಲ್ಲಿ ಕಾವಲು ಇಡಬೇಕಾಗುವುದು ॥೬೫೯॥ ಅದರಂತೆ ಎಲ್ಲಿಯವರೆಗೆ ಜೀವದ ಅನೇಕತ್ವವು ಭಾಸವಾಗುವದೋ, ಅಲ್ಲಿಯವರೆಗೆ ಸೃಷ್ಟಿಗೆ ಉತ್ಪತ್ತಿ, ಸ್ಥಿತಿ ಮತ್ತು ಲಯ ಮಾಡುವ ನಿಯಂತಾ ಈಶ್ವರನು ಸರ್ವಥೈವ ಇರುವನು. ಆದ್ದರಿಂದ ಜೀವವು ಪರತಂತ್ರವಾಗಿರುವುದು ॥೬೬೦॥ ಅನೇಕತ್ವದಿಂದ ಅದಕ್ಕೆ ಪರತಂತ್ರತೆಯು ಪ್ರಾಪ್ತವಾಗುತ್ತಿರುವುದು. ಆದ್ದರಿಂದ ಈಶ್ವರನು ನಿಯಂತಕನಾಗಿರುವನು. ಹೀಗೆ ಈಶ್ವರನ ಸತ್ತೆಯನ್ನು ನೋಡುತ್ತಲೇ ಸರ್ವ ಜೀವಿಗಳಿಗೆ ಭಯ ಉಂಟಾಗುವುದು ॥೬೬೧॥

ಮಾಝೋ ಈಶ್ವರೀ ಸತ್ತೇಚೇ ಭಯೇ । ದೇಖೋನಿ ಅಂತಕು ಹೀ ಭೀತಾಹೇ । ಇಂದ್ರಾದಿಕಾಂಚಾ ಪಾಡು ಕಾಯೇ । ಭಯ ವಾಹೇ ವಿಧಾತಾ ॥೯೬೨॥ ಮಾಝೀ ಅತ್ಯಂತ ಪ್ರಳಯೀಚೀ ಸತ್ತಾ । ವಾಜೇ ಹರಿಹರಾಂಚೇ ಮಾಥಾ । ಅನೇಕತ್ವಾಚಾ ಸಂಹರ್ತಾ । ಮೀಚಿ ಸರ್ವಥಾ ನಿಜಕಾಳು ॥೯೬೩॥ ಯಾಲಾಗೀ ಅನೇಕತ್ವ ಜಂವ ಆಹೇ । ತಂವವರೀ ದುಸ್ತರ ಕಾಳಭಯೇ । ಜೇಂವ್ಹಾ ಅನೇಕತ್ವ ನಾಹೀ ಹೋಯೇ । ತೇಂವ್ಹಾ ಕಾಳೂ ಕಾಯೇ ನಾಶೀಲ ॥೯೬೪॥ ಏವಂ ಅನೇಕತ್ವಾಚೇ ಮಾಥಾ । ಈಶ್ವರಭಯಾಚೀ ಕಾಳಸತ್ತಾ । ಅನೇಕತ್ವೇ ಪರತಂತ್ರತಾ । ಜಾಣ ಸರ್ವಥಾ ಉದ್ಧವಾ ॥೯೬೫॥ ತೇ ಅನೇಕತ್ವ ಜೈ ಜಾಯೇ । ತೈ ಕಾಳ ನಾಹೀ ಮಾ ಕೈಚೇ ಭಯೇ । ಪರ ನಸತಾ ಪರತಂತ್ರ ನ ಹೋಯೇ । ಏಕತ್ವೀ ಆಹೇ ಸ್ವಾನಂದ ॥೯೬೬॥ ಜೇಥ ದ್ವೈತಾಚಾ ಮಳು ನುರೀ । ಐಕ್ಯ ದೇಖೇ ಸಕಳ ಸೃಷ್ಟೀ । ತೇಂವ್ಹಾ ಸ್ವಾನಂದಾಚಿಯಾ ಕೋಟೀ । ಭೋಗೀ ಉಠಾಉಠೀ ನಿಜಬೋಧೇ ॥೯೬೭॥ ಜ್ಯಾ ಸುಖಾಚೀ ಮರ್ಯಾದಾ । ದೇಶೇ ಕಾಳೇ ನ ಕರವೇ ಕದಾ । ತ್ಯಾ ಸುಖಾಚೀ ಸುಖಸಂಪದಾ । ಭೋಗಿತೀ ಸದಾ ಅದ್ವೈತೇ ॥೯೬೮॥ ನಿಜಾತ್ಮ ಜ್ಞಾನೇ ಅಲೋಲಿಕ । ದುಜೇನವೀಣ ಅದ್ವೈತಸುಖ । ತೇ ಸಾಂಡೂನಿ ಕರ್ಮವಾದೀ ಪರಮ ಮೂರ್ಖ । ನಾನಾ ಲೋಕ ವಾಂಛಿತೀ ॥೯೬೯॥ ಮಾಗಾ ಕರ್ಮವಾದೀ ಕರ್ಮಠ । ಬೋಲಿಲೇ ಪ್ರವತ್ತಿ ಅತಿಶ್ರೇಷ್ಠ । ಕರ್ಮೇ ಕರೂನಿಯಾ ಉದ್ಭಟ । ಭೋಗ ವರಿಷ್ಠ ಭೋಗಾವೇ ॥೯೭೦॥ ತೇಚಿ ನಿರಸೋನಿ ಆತಾ । ಪುಢಾರೀ ಚಾಲವಿಲೀ ಕಥಾ । ಉದ್ಧವಾಸೀ ಅದ್ವೈತತಾ । ದೃಢ ಸರ್ವಥಾ ಸಾಂಗತ ॥೯೭೧॥

ಯಾವದಸ್ಯಾಽಸ್ವತಂತ್ರತ್ವಂ ತಾವದೀಶ್ವರತೋ ಭಯಮ್ । ಯ ಏತತ್ಸಮುಪಾಸೀರಂಸ್ತೇ ಮುಹ್ಯಂತಿ ಶುಚಾರ್ಪಿತಾಃ ॥೩೩॥

ಅರ್ಥ :- ಎಲ್ಲಿಯವರೆಗೆ ಪರತಂತ್ರತೆಯೋ, ಅಲ್ಲಿಯವರೆಗೆ ಈಶ್ವರನಿಂದ ಭಯವಿರುವುದು. ಯಾವ ನಾನು ಮತ್ತು ನನ್ನದು ಎಂಬ ಭಾವನೆಯಿಂದ ಕೂಡಿಕೊಂಡು ಆತ್ಮನಲ್ಲಿ ಅನೇಕತೆ, ಪರತಂತ್ರತೆ ಇತ್ಯಾದಿ ಮನ್ನಿಸುವರು. ಮತ್ತು ವೈರಾಗ್ಯವನ್ನು ಧರಿಸದೇ ಬಹಿರ್ಮುಖಿ ಮಾಡುವ ಕರ್ಮಗಳನ್ನು ಮಾಡುವರು. ಇವರಿಗೆ ಶೋಕ, ಮೋಹವು ಪ್ರಾಪ್ತವಾಗುವುದು.

ಗುಣವೈಷಮ್ಯ ಜ್ಯಾಚೇ ಠಾಯೀ । ತೇ ನರ ಭೋಗಾಸಕ್ತ ಪಾಹೀ । ಯಾಗಾದಿ ಕರ್ಮೇ ಕರೂನಿ ದೇಹೀ । ಭೋಗ-ಸ್ಥಾನ ತಿಹೀ ಠಾಕಿಲೇ ॥೯೭೨॥ ಜೇ ಜೇ ಠಾಕೂನಿ ಗೇಲೇ ಲೋಕ । ತೇಥೂನಿ ಯಾಜ್ಞಿಕಾ ಪತನಧಾಕ । ತಂವ ದುಃಖೀ ದೇಖೇ ಲೋಕನಾಯಕ । ಅನಿತ್ಯ ಲೋಕ ದೇಖೋನಿ ॥೯೭೩॥

ನನ್ನ ಈಶ್ವರ ಸತ್ತೆಯ ಭಯದಿಂದ ಯಮನೂ ಕೂಡ ಗಡಗಡನೇ ನಡುಗುವನು. ಅಂದ ಮೇಲೆ ಇಂದ್ರಾದಿಕರ ಯಾವ ಕಥೆ? ಬ್ರಹ್ಮದೇವನಿಗೂ ಕೂಡ ನನ್ನ ಭಯವಿರುವುದು ॥೯೬೨॥ ನನ್ನ ಮಹಾಪ್ರಳಯದ ಸತ್ತೆಯು ಹರಿಹರರ ಮಸ್ತಕಕ್ಕೆ ಬಡೆಯುವುದು. ಅನೇಕತ್ವದ ಸಂಹಾರವನ್ನು ಮಾಡುವ ಮಹಾಕಾಲನು ನಾನೇ ಆಗಿರುವೆನು ॥೯೬೩॥ ಆದ್ದರಿಂದ ಅನೇಕತ್ವವಿರುವವರೆಗೆ ಕಾಲನ ಭಯವಿರುವುದು. ಆ ಅನೇಕತ್ವವು ನಷ್ಟವಾದಮೇಲೆ ಕಾಲನು ಯಾವುದನ್ನು ನಾಶಗೊಳಿಸುವನು? ॥೯೬೪॥ ತಾತ್ಪರ್ಯವೇನಂದರೆ ಅನೇಕತ್ವದ ತಲೆಯ ಮೇಲೆ ಈಶ್ವರ ಭಯದ ಕಾಲಸತ್ತೆ ವಿರುವುದು. ಉದ್ಧವಾ, ಈ ಅನೇಕತ್ವದಿಂದಲೇ ಜೀವಕ್ಕೆ ಸದಾ ಪರತಂತ್ರತೆ ಇರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೯೬೫॥ ಈ ಅನೇಕತ್ವವು ಎಂದು ನಾಶವಾಗುವುದೋ, ಆಗ ಕಾಲನೂ ಇಲ್ಲದಾಗುವನು. ಅಂದಮೇಲೆ ಭಯ ಎಲ್ಲಿಯದು? ಬೇರೆ ಯಾರೂ ಇಲ್ಲದಿರಲು ಪರತಂತ್ರಯಾರಾಗಬೇಕು? ಏಕತ್ವದಲ್ಲಿಯೇ ಆನಂದವು ಇರುವುದು ॥೯೬೬॥ ದ್ವೈತದ ಭೇದಬುದ್ಧಿ ಇಲ್ಲದಲ್ಲಿ ಸರ್ವ ಸೃಷ್ಟಿಯು ಐಕ್ಯರೂಪದಿಂದ ತೋರುವುದು. ಆಗ ತತ್ಕಾಲದಲ್ಲಿ ಆತ್ಮಜ್ಞಾನದಿಂದ ಸ್ವಾನಂದದ ರಾಶಿಯೇ ಪ್ರಾಪ್ತವಾಗುವುದು ॥೯೬೭॥ ಯಾವ ಈ ಆನಂದವನ್ನು ದೇಶ ಕಾಲಗಳಿಗೂ ಎಂದೆಂದಿಗೂ ಗಣಿತ ಮಾಡಲು ಬರುವುದಿಲ್ಲ. ಯಾವ ಈ ಆನಂದದ ಭೋಗವು ಅದ್ವೈತದಲ್ಲಿ ನಿರಂತರವಾಗಿ ಪ್ರಾಪ್ತವಾಗುವುದು ॥೯೬೮॥ ಆತ್ಮಜ್ಞಾನದಿಂದ ಪ್ರಾಪ್ತವಾಗುವ ವಿಲಕ್ಷಣವಾದ ಅದ್ವಿತೀಯ ಅದ್ವೈತ ಸುಖವನ್ನು ಬಿಟ್ಟು ಅತ್ಯಂತ ಮೂರ್ಖರಾದ ಕರ್ಮವಾದಿ ಜನರು ಸ್ವರ್ಗಾದಿ ನಾನಾ ಪ್ರಕಾರ ಲೋಕಗಳ ಇಚ್ಛೆಯನ್ನು ಮಾಡುತ್ತಿರುವರು ॥೯೬೯॥ ಈ ಹಿಂದೆ ಕರ್ಮವಾದಿ ಕರ್ಮಠರು ''ಪ್ರವೃತ್ತಿ ಮಾರ್ಗ'' ವೇ ಅತಿ ಶ್ರೇಷ್ಠವಾಗಿದೆ. ಆದಕ್ಕಾಗಿ ಉತ್ತಮ ಕರ್ಮಗಳನ್ನು ಮಾಡಿ ಉಚ್ಚ ದರ್ಜೆಯ ಭೋಗಗಳನ್ನು ಭೋಗಿಸಬೇಕು ಎಂದು ಹೇಳಿದ್ದರು ॥೯೭೦॥ ಇದನ್ನೇ ನಿರಸನೆಗೊಳಿಸುತ್ತ ಭಗವಾನನು ಈಗ ಉದ್ಧವನ ಮನದಲ್ಲಿ ಪೂರ್ಣವಾಗಿ ಅದ್ವೈತವನ್ನು ಬಿಂಬಿಸಲು ತನ್ನ ನಿರೂಪಣೆಯನ್ನು ಮುಂದುವರೆಸಿ ಹೇಳುತ್ತಿರುವನು ॥೯೭೧॥

ಯಾವ ಮನುಷ್ಯನಲ್ಲಿ ಗುಣಗಳ ವೈಷಮ್ಯವಿರುವುದೋ, ಅವನೇ ಭೋಗಗಳಲ್ಲಿ ಆಸಕ್ತನಾಗುತ್ತಿರುವನು. ಈ ದೇಹದಿಂದ ಯಜ್ಞಯಾಗಾದಿ ಕರ್ಮಗಳನ್ನು ಮಾಡಿ ಭೋಗದ ಸ್ಥಾನವನ್ನು ಪಡೆಯುವರು ॥೯೭೨॥ ಆದಾಗ್ಯೂ ಇವರು ಯಾವ ಯಾವ ಲೋಕಗಳಿಗೆ ಹೋಗಿ ತಲುಪುವರೋ, ಅಲ್ಲಿಂದ ಪತನವಾಗುವ ಭಯವಿರುವುದು. ಆದ್ದರಿಂದ ಸ್ವರ್ಗವೂ ಕೂಡ ಅನಿತ್ಯವಾಗಿದೆ ಎಂದು ಅಲ್ಲಿನ ಅಧಿಪತಿಯಾದ ಇಂದ್ರನೂ ಸಹ ದುಃಖಿಯಾಗಿರುವನು ॥೯೭೩॥

ಪದಚ್ಯುತೀ ಲೋಕಚ್ಯುತೀ । ಭೋಗಕರ್ಮೇ ಭೋಗಚ್ಯುತೀ । ಕೇಲೇ ಕಷ್ಟ ವೃಥಾ ಜಾತೀ । ದುಃಖೀ ಹೋತಿ ನಿಜಪತನೇ ॥೬೭೪॥ ಘಾಯಾಳಾ ಕೀಜೇ ತರಟವಾರ । ತೈಸೇ ಓತಪ್ರೋತ ದುಃಖ ಘಾರ । ಭಂವೇ ಜನ್ಮ ಮರಣವ್ಯವಹಾರ । ಭೋಗೀ ಅಘೋರ ಗರ್ಭವಾಸ ॥೬೭೫॥ ರಾಹಾಟಮಾಳೇಚೇ ಕರೇ । ಪುಢತೀ ರಿತಾ ಪುಢತೀ ಭರೇ । ತೈಸಾ ಅವಿಶ್ರಮ ಫಿರೇ । ಗರ್ಭದ್ವಾರೇ ಮರಣಾಂತೀ ॥೬೭೬॥ ವಿಂಚೇ ಖಾದಿಲ್ಯಾ ದುಃಖಿತಾಸೀ । ದಾಢಿಸಿ ಆಗ ಲಾಗೇ ತ್ಯಾಸೀ । ತೇವೀ ಭೋಗಕ್ಷಯೇ ಪತಿತಾಸೀ । ಗರ್ಭವಾಸೀ ಪೀಡಾ ಹೋಯ ॥೬೭೭॥ ಲೋಕಾಂಚೀ ಅನಿತ್ಯತಾ ನೇಣತೀ । ಯಾಲಾಗೀ ಪರಮದುಃಖೀ ಹೋತೀ । ಕಷ್ಟಾಂಚೇ ಫಳ ದುಃಖಪ್ರಾಪ್ತೀ । ಸಂಸಾರಾವರ್ತೀ ಅಡಕಲೇ ॥೬೭೮॥ ಕೇವಳ ಲೋಕ ಭೋಗ ಅನಿತ್ಯ । ಹೇಹೀ ನ ಘಡೇ ಗಾ ಯೇಥ । ಭೋಗಲೋಕ ಹೋತ ಸತ್ಯ । ತರೀ ಅನಿತ್ಯ ಮ್ಹಣಾವೇ ॥೬೭೯॥ ಜೇವೀ ದೋರೀ ಸರ್ಪಾಭಾಸ । ತೇವೀ ಲೋಕ ಚತುರ್ದಶ । ಕೇವಳ ಮಾಯಾಮಯ ವಿಲಾಸ । ಸುಖಲೇಶ ತೇಥ ಕೈಚಾ ॥೬೮೦॥ ಕೇವಳ ಜೇ ಕಾ ಮಾಯಿಕ । ಸತ್ಯಾಮಾಜೀ ಕೈಚೇ ಭೋಗಸುಖ । ಕರ್ಮಠ ತೇ ಕೇವಳ ಮೂರ್ಖ । ವಿಷಯ ಮಾಯಿಕ ವಾಂಛಿತೀ ॥೬೮೧॥ ಭರಲೇ ಮೃಗಜಳಾಚೇ ತಳೇ । ತೇಣೇ ಜೈ ಪಿಕತೀ ಸಾಳೀಕೇಳೇ । ತೈ ವಿಷಯಭೋಗೀ ಸುಖ ಫಳೇ । ಹೇ ನ ಕಳೇ ಭ್ರಾಂತಾಸೀ ॥೬೮೨॥ ಜಗ ದುಮದುಮಿತ ಭರಲೇ ದಿಸೇ । ತೇ ತೂ ಮಾಯಿಕ ಮ್ಹಣಸೀ ಕೈಸೇ । ಹೇಚಿ ಕಳೇ ಅನಾಯಾಸೇ । ತುಜ ಮೀ ತೈಸೇ ಸಾಂಗೇನ ॥೬೮೩॥

ಕಾಲ ಆತ್ಮಾಽಽಗಮೋ ಲೋಕಃ ಸ್ವಭಾವೋ ಧರ್ಮ ಏವ ಚ । ಇತಿ ಮಾಂ ಬಹುಧಾ ಪ್ರಾಹುರ್ಗುಣವ್ಯತಿಕರೇ ಸತಿ ॥೩೪॥

ಅರ್ಥ:- ಪ್ರಿಯ ಉದ್ಧವನೇ, ಮಾಯೆಯ ಗುಣಗಳಲ್ಲಿ ಕ್ಷೋಭವು ಉತ್ಪನ್ನವಾದಾಗ ಆತ್ಮನಾದ ನನಗೆ ಕಾಲ, ಜೀವ, ವೇದ, ಲೋಕ, ಸ್ವಭಾವ ಮತ್ತು ಧರ್ಮ ಇತ್ಯಾದಿ ಅನೇಕ ನಾಮದಿಂದ ಕರೆಯುವರು. ಆದರೆ ಇದೆಲ್ಲವೂ ಮಾಯಾಮಯವಾಗಿದೆ. ವಾಸ್ತವಿಕವಾಗಿ ನಾನು ಸತ್ಯ, ಆತ್ಮಾನಾಗಿರುವೆನು.

ಕೇವಳ ಮಾಯಾಮಯ ಕಲ್ಪಿತ । ಸಂಸಾರ ತೋ ಅಜ್ಞಾನಜನಿತ । ಏಕಾತೇ ಅನೇಕ ಮ್ಹಣತ । ಚಿತ್ತೀ ದುಶ್ಚಿತ ಹೋಉನೀ ॥೬೮೪॥ ಕನಕಬೀಜಸೇವನೇ ಜೈಸೇ । ಶಹಾಣೇ ಮಾಣೂಸ ಹೋಯ ಪಿಸೇ । ಮಗ ತ್ಯಾಸೀ ನಸತೇಚಿ ಆಭಾಸೇ । ಸಸೇ ಮಾಸೇ ಗೋ ಸರ್ಪ ॥೬೮೫॥

ಅಲ್ಲಿ ಎಲ್ಲರೂ ತಮ್ಮ ತಮ್ಮ ಪದವಿಗಳಿಂದ ಚ್ಯುತರಾಗುವರು, ಸ್ವರ್ಗಲೋಕದಿಂದ ಚ್ಯುತರಾಗುವರು, ಭೋಗ ಕರ್ಮಗಳಿಂದ ಅವರ ಭೋಗವು ಚ್ಯುತವಾಗುವುದು. ಹೀಗಾಗಿ ಮಾಡಿದ ಎಲ್ಲ ಕರ್ಮಗಳು ವ್ಯರ್ಥವಾಗಿ ಅಧಃಪತನದಿಂದ ಇವರು ದುಃಖಿಗಳಾಗುವರು ॥೬೭೪॥ ಶರೀರವೆಲ್ಲ ಗಾಯಗೊಂಡ ಮನುಷ್ಯನಿಗೆ ಬಾರಕೋಲಿನಿಂದ ಹೊಡೆಯಲು ಓತಪ್ರೋತವಾಗಿ ತಡೆಯಲಾರದಷ್ಟು ವೇದನೆಯಾಗುವುದು. ಇಂತಹ ವೇದನೆಗಳು ಜನ್ಮಮರಣದ ಚಕ್ರದಲ್ಲಿ ಸುತ್ತುತ್ತಿರಲು ಮತ್ತು ಗರ್ಭವಾಸವನ್ನು ಭೋಗಿಸುತ್ತಿರಲು ಜೀವಕ್ಕೆ ಆಗುತ್ತಿರುವುದು ॥೬೭೫॥ ಬಾವಿಯ ಮೇಲಿನ ರಾಟಿಗಡಿಗೆ ಯಂತ್ರದಲ್ಲಿ ಕ್ರಮವಾಗಿ ಗಡಿಗೆಗಳು ತುಂಬುವುವು ಪುನಃ ಬರಿದಾಗುವುವು. ಇದೇ ಪ್ರಕಾರವಾಗಿ ಮರಣನಂತರ ಗರ್ಭವಾಸದ ಸುತ್ತು ಸತತವಾಗಿ ಸುರು ಇರುವುದು ॥೬೭೬॥ ಚೇಳು ಕಡಿಸಿಕೊಂಡು ತಳಮಳಿಸುತ್ತಿರುವ ಮನುಷ್ಯನ ಗಡ್ಡಕ್ಕೆ ಬೆಂಕಿ ಹತ್ತಲು ಆ ದುಃಖಕ್ಕೆ ಕೊನೆಯೇ ಇರುವುದಿಲ್ಲ. ಅದರಂತೆ ಭೋಗವು ಮುಗಿಯುತ್ತಲೇ ಕೆಳಗೆ ಬೀಳುವ ಜೀವಕ್ಕೆ ಗರ್ಭವಾಸದ ಅಸಹ್ಯ ಪೀಡೆಯಾಗುತ್ತಿರುವುದು ॥೬೭೭॥ ಸ್ವರ್ಗವು ಅಶಾಶ್ವತವಾಗಿದೆ ಎಂದು ಇವರಿಗೆ ತಿಳಿಯುವುದಿಲ್ಲ. ಆದ್ದರಿಂದ ಇವರು ಹೀಗೆ ಅತ್ಯಂತ ದುಃಖಿಯಾಗುತ್ತಿರುವರು. ಕಷ್ಟದಿಂದ ಸಿಗುವ ಫಲವು ದುಃಖಪ್ರಾಪ್ತಿಯಾಗಿರುವುದು. ದುಃಖರೂಪದ ತಿರುಗಣೆಯಲ್ಲಿ ಇವರು ಸಿಕ್ಕಿಕೊಳ್ಳುವರು ॥೬೭೮॥ ಯಾವ ಸ್ವರ್ಗಲೋಕದಲ್ಲಿ ಭೋಗಗಳು ಭೋಗಿಸಲು ದೊರೆಯುವುವು. ಆ ಸ್ವರ್ಗವು ನಿತ್ಯ ಎನ್ನಬೇಕೆಂದರೆ ಅದೂ ಕೂಡ ಸತ್ಯವಲ್ಲ. ಸ್ವರ್ಗಭೋಗವು ಸತ್ಯವಾಗಿದ್ದರೆ, ಅವುಗಳಿಗೆ ಅಶಾಶ್ವತವೆಂದು ಏಕೆ ಹೇಳುತ್ತಿದ್ದರು ? ॥೬೭೯॥ ಹಗ್ಗದಲ್ಲಿ ಸರ್ಪದ ಭಾಸವಾಗುವಂತೆ ಈ ಯಾವ ಹದಿನಾಲ್ಕು ಲೋಕಗಳು ಮಾಯೆಯ ಆಟವಾಗಿರುವುದು. ಅಲ್ಲಿ ಕ್ಷಣವೂ ಸಹ ಸುಖ ಲಭಿಸುವುದಿಲ್ಲ ॥೬೮೦॥ ಯಾವುದು ಕೇವಲ ಮಿಥ್ಯೆಯಾಗಿರಲು ಅಲ್ಲಿ ಭೋಗದ ಸುಖವಾದರೂ ಹೇಗೆ ಲಭಿಸಬೇಕು? ಹೀಗಿದ್ದರೂ ಕರ್ಮಠ ಜನರು ನಿಜವಾಗಿಯೂ ಮೂರ್ಖರಾಗಿರುವರು. ಆದ್ದರಿಂದ ಅಶಾಶ್ವತ, ಮಾಯಿಕ ವಿಷಯಗಳ ಇಚ್ಛೆಯನ್ನು ಇವರು ಮಾಡುತ್ತಿರುವರು ॥೬೮೧॥ ಮೃಗಜಲದಿಂದ ತುಂಬಿದ ಕೆರೆಯ ನೀರಿನಿಂದ ಯಾವ ಪ್ರಕಾರವಾಗಿ ಬತ್ತದ ಗದ್ದೆ ಮತ್ತು ಬಾಳೆಯ ತೋಟ ಬೆಳೆಯುವಂತೆ ಈ ಯಾವ ವಿಷಯ ಭೋಗದಲ್ಲಿನ ಸುಖವಾಗಿರುವುದು. ಆದರೆ ಭ್ರಾಂತರಿಗೆ ಇದು ತಿಳಿಯುವುದಿಲ್ಲ ॥೬೮೨॥ ಹೇ ಉದ್ಧವನೇ, ನೀನು ಹೀಗೆ ಹೇಳಬಹುದು, ಯಾವ ಈ ಜಗತ್ತು ಎಲ್ಲವೂ ಗಜಿಬಿಜಿಯಾಗಿ ತುಂಬಿಕೊಂಡದ್ದು ಸ್ಪಷ್ಟವಾಗಿ ತೋರುತ್ತದೆ. ಹೀಗಿರಲು ನೀನು ಇದಕ್ಕೆ ಮಾಯಿಕ ಎಂದು ಹೇಗೆ ಹೇಳುವೆ? ಈಗ ಅದೇ ವಿಷಯವನ್ನು ಸಹಜವಾಗಿ ನಿನಗೆ ತಿಳಿಯುವಂತೆ ನಾನು ಹೇಳುವೆನು ॥೬೮೩॥

ಈ ಸಂಸಾರವು ಅಜ್ಞಾನದಿಂದ ಉತ್ಪನ್ನವಾಗಿದ್ದು ಕೇವಲ ಮಾಯಿಕವಾಗಿ ಕಾಲ್ಪನಿಕವಾಗಿರುವುದು. ಮನದಲ್ಲಿ ವಿಕಲ್ಪವಿರುವುದರಿಂದ ಅದು ಒಂದಕ್ಕೆ ಅನೇಕವೆಂದು ಹೇಳುತ್ತಿರುವುದು ॥೬೮೪॥ ಧತ್ತೂರಿ ಬೀಜವನ್ನು ಸೇವಿಸಲು ಬುದ್ಧಿವಂತ ಮನುಷ್ಯನು ಭ್ರಮಿಷ್ಟನಾಗುವನು. ಮತ್ತು ಆತನಿಗೆ ಇಲ್ಲದ ಮೊಲ, ಮೀನ, ಆಕಳು, ಸರ್ಪ, ವಗ್ಯೆರೇ ಪ್ರಾಣಿಗಳ ಭಾಸವಾಗುತ್ತಿರುವುದು ॥೬೮೫॥

ತೈಸೇ ಮಾಯವಶೇ ಅತಿಭ್ರಾಂತಾ । ನಸತೇ ಅನೇಕತ್ವ ಭಾಸೇ ಚಿತ್ತಾ । ನಭೀ ಗಂಧರ್ವನಗರ ಪಾಹತಾ । ದಿಸೇ ಶೋಭಿತಾ ಪುರದುರ್ಗ ॥೬೮೬॥ ಕಾ ಅಂಧಾರೀ ದೋರು ದಿಸೇ ಡೋಳಾ । ಮ್ಹಣೇ ಸರ್ಪ ದಂಡ ಕೀ ಸುಮನಮಾಳಾ । ನಾನಾ ಏಕಾವಳೀ ಮುಕ್ತಫಳಾ । ಕೋಣೇ ಅಬಳಾ ವಿಸರಲೀ ॥೬೮೭॥ ತೇವೀ ನಿಜಾತ್ಮಾ ಮೀ ಪುರುಷೋತ್ತಮು । ತ್ಯಾ ಮಜ ನಾನಾರೂಪೇ ನಾನಾಕರ್ಮ । ಕಾಳು ಆತ್ಮಾ ಆಗಮು । ಸ್ವಭಾವಧರ್ಮ ಮಜ ಮ್ಹಣತೀ ॥೬೮೮॥ ''ಕಾಳು'' ಮ್ಹಣತೀ ಪ್ರಕೃತಿಕ್ಷೋಭಕು । ''ಆತ್ಮಾ'' ಮ್ಹಣತೀ ಪ್ರಕೃತಿ ನಿಯಾಮಕು । ''ವೇದ'' ಮ್ಹಣತೀ ಕರ್ಮಬೋಧಕು । ಅದೃಷ್ಟದ್ಯೋತಕು ''ಧರ್ಮ'' ಮ್ಹಣತೀ ॥೬೮೯॥ ಅದೃಷ್ಟ ದೃಷ್ಟ ಕರೂನಿ ಭೋಗವಿಜೇ । ಯಾಲಾಗೀ ''ಧರ್ಮ'' ತೋ ಮ್ಹಣಿಜೇ । ಆತಾ ''ಸ್ವಭಾವೋ'' ಜೇಣೇ ಬೋಲಿಜೇ । ತೇಹೀ ಸಹಜೇ ಪರಿಯೇಸೀ ॥೬೯೦॥ ಆತ್ಮಾ ಭೋಕ್ತಾ ಹಾ ''ಸ್ವಭಾವೋ''। ಜೇಣೇ ಪರಿಣಾಮೇ ದೇವಾಧಿದೇವೋ । ಇತ್ಯಾದಿಕಾ ಹೇತು ಪಹಾ ಹೋ । ಮಜಚಿ ''ಸ್ವಭಾವೋ'' ಮ್ಹಣತಾತೀ ॥೬೯೧॥ ಅದೃಷ್ಟಾಚೇ ಫಳ ನಾನಾ ಲೋಕ । ''ಲೋಕ'' ಮ್ಹಣಾವಯಾ ಹೇತು ಹೇ ದೇಖ । ಏವಂ ಮಜ ಏಕಾತೇ ಅನೇಕ । ಮಿಥ್ಯಾ ಮೂರ್ಖ ಮಾನಿತೀ ॥೬೯೨॥ ನಾನಾರಂಗಾಚಿಯಾ ವೃತ್ತೀ । ಚಿತ್ರ ಲಿಹಿಲೇ ಯಥಾನಿಗುತೀ । ತೇಹೀ ನಾನಾಕಾರೇ ದಿಸೇ ಭೀಂತೀ । ಸರ್ವವ್ಯಕ್ತಿದ್ಯೋತಕ ॥೬೯೩॥ ತೈಸೇ ನಾನಾಕಾರ ನಾನಾ ಧರ್ಮ । ನಾನಾ ನಾಮೇ ನಾನಾ ಕರ್ಮ । ತೇ ಮೀ ಅವಘಾ ಆತ್ಮಾರಾಮು । ಸರ್ವೋತ್ತಮು ಸರ್ವಥಾ ॥೬೯೪॥ ಮಜವೇಗಳಾ ರಿತಾ ಕಾಂಹೀ । ಅಣುಭರೀ ಠಾವ ಉರಲಾ ನಾಹೀ । ಮೀ ಸರ್ವಾತ್ಮಾ ಸರ್ವ ದೇಹೀ । ಸರ್ವಗತ ಪಾಹೀ ಸರ್ವದಾ ॥೬೯೫॥ ಜೈಸೇ ಸಾಗರಾಮಾಜೇ ತರಂಗ । ತೈಸೇ ಮಜಮಾಜೇ ದಿಸೇ ಜಗ । ಜಗ ನವ್ಹೇ ತೇ ಮೀಚಿ ಚಾಂಗ । ಸುಖ ಅವ್ಯಂಗ ಮಜಮಾಜೇ ॥೬೯೬॥ ಮೀ ಶುದ್ಧ ಬುದ್ಧ-ಮುಕ್ತಸ್ವಭಾವ । ತ್ಯಾ ಮಜ ನಾನಾತ್ವೇ ಠೇವಿತೀ ನಾಂವ । ಉದ್ಧವಾ ಜ್ಯಾಸೀ ಜೈಸಾ ಭಾವ । ತೈಸಾ ಮೀ ದೇವ ತಯಾಸೀ ॥೬೯೭॥ ನಾಸ್ತಿಕ್ಯ ವಸೇ ಜ್ಯಾಚೇ ಠಾಯೀ । ತ್ಯಾಸೀ ಮೀ ಸರ್ವಥಾ ಕೋಠೇ ನಾಹೀ । ಆಸ್ತಿಕ್ಯವಂತಾಲಾಗಿ ಪಾಹೀ । ಮೀ ಸರ್ವಾಠಾಯೀ ತಿಷ್ಠತು ॥೬೯೮॥ ಭಾವಾರ್ಥೇ ಜೋ ಮಜ ಜೇಥೇ ಪಾಹೇ । ತ್ಯಾಸೀ ಮೀ ತೇಂವ್ಹಾಚಿ ತೇಥೇ ಆಹೇ । ಮಜ ಪಾವಾವಯಾ ಉಪಾಯೇ । ಬಹುತ ಪಾಹೇ ನ ಲಗತೀ ॥೬೯೯॥

ಅದರಂತೆ ಮಾಯೆಯ ಪಾಶದಲ್ಲಿ ಸಿಲುಕಿಕೊಂಡು ಜೀವಕ್ಕೆ ಭ್ರಮವಾಗಿ ಇಲ್ಲದ ಅನೇಕತ್ವವು ಚಿತ್ತಕ್ಕೆ ಭಾಸವಾಗುವುದು. ಆಕಾಶದಲ್ಲಿ ಮೋಡಗಳನ್ನು ನೋಡುತ್ತಿದ್ದಂತೆ ಸುಂದರ ನಗರಗಳು, ಕೋಟೆಗಳಂತೆ ತೋರುವುವು ॥೬೮೬॥ ಅಥವಾ ಕತ್ತಲಲ್ಲಿ ಯಾವುದೋ ಒಂದು ಹಗ್ಗವು ಬಿದ್ದಿರಲು, ಇದೇನು ಸರ್ಪವೋ? ಕೋಲೋ? ಹೂವಿನ ಮಾಲೆಯೋ? ಅಥವಾ ಯಾವ ಸ್ತ್ರೀಯು ಮರೆತು ಬಿಟ್ಟಿರುವ ಮುತ್ತಿನ ಹಾರವೋ? ಎಂದು ಹೇಳುವರು ॥೬೮೭॥ ಅದರಂತೆ ನಾನು ಆತ್ಮರೂಪದಿಂದ ಪುರಷೋತ್ತಮನು ಸರ್ವತ್ರವಿರಲು ನನಗೆ ನಾನಾ ಪ್ರಕಾರದ ರೂಪಗಳನ್ನು, ನಾಮಗಳನ್ನು ಮತ್ತು ಕರ್ಮಗಳನ್ನು ಕಲ್ಪಿಸಿ ನನಗೆ ಕಾಲ, ಆತ್ಮಾ, ಸ್ವಭಾವ, ಧರ್ಮ ಇತ್ಯಾದಿಯಾಗಿ ಹೇಳುವರು ॥೬೮೮॥ ನಾನು ಪ್ರಕೃತಿಯನ್ನು ಕ್ಷುಬ್ಧಗೊಳಿಸುವವನೆಂದು ಕೆಲವರು ನನಗೆ ಕಾಲನು ಎನ್ನುವರು. ಪ್ರಕೃತಿಯ ನಿಯಾಮಕನೆಂದು ನನಗೆ ಆತ್ಮಾ ಎನ್ನುವರು. ಕರ್ಮಗಳ ಬೋಧೆ ಮಾಡುವವನೆಂದು ವೇದವೆನ್ನುವರು. ಮತ್ತು ಅದೃಷ್ಟದ ದ್ಯೋತಕನೆಂದು ಧರ್ಮವೆಂದು ಹೇಳುವರು ॥೬೮೯॥ ನಾನು ಅದೃಷ್ಟಕ್ಕೆ ದೃಶ್ಯರೂಪದಿಂದ ಭೋಗಿಸುವೆ ಎಂದು ನನಗೆ ಧರ್ಮವೆಂದು ಹೇಳುವರು. ಈಗ ಯಾವುದರಿಂದ ನನಗೆ ಸ್ವಭಾವ ಎನ್ನುವರೆಂಬ ಕಾರಣವನ್ನೂ ಕೇಳು ॥೬೯೦॥ ಆತ್ಮಾ ಭೋಕ್ತಾ ಇದು ಸ್ವಭಾವವಾಗಿದೆ. ಯಾವ ಪರಿಣಾಮದಿಂದ ದೇವಾಧಿದೇವನು ಆತ್ಮಾ, ಭೋಕ್ತಾ, ಸ್ವಭಾವ ಇತ್ಯಾದಿಗಳ ಕಾರಣನಾಗುವನೋ ಆ ನನ್ನ ಪರಿಣಾಮಕ್ಕೆ ಸ್ವಭಾವವೆಂದು ಹೇಳುವರು ॥೬೯೧॥ ಅನೇಕ ಪ್ರಕಾರಗಳ ಲೋಕಗಳು ಪ್ರಾಪ್ತವಾಗುವಿಕೆಗೆ ಅದೃಷ್ಟದ ಫಲವಾಗಿರುವುದು. ನನಗೆ ಲೋಕ ಎಂದು ಕರೆಯುವ ಕಾರಣವೂ ಇದೇ ಆಗಿದೆ. ಸಾರಾಂಶವೇನಂದರೆ ನಾನು ಒಬ್ಬನೇ ಇದ್ದರೂ ಮೂರ್ಖ ಜನರು ನನಗೆ ಅನೇಕ ಎನ್ನುವರು ॥೬೯೨॥ ಆನೇಕ ಪ್ರಕಾರದ ಬಣ್ಣಗಳಿಂದ ವ್ಯವಸ್ಥಿತವಾಗಿ ಚಿತ್ರಗಳನ್ನು ಬರೆಯಲು ಗೋಡೆಯ ಮೇಲೆ ಅದು ಅನೇಕ ಆಕೃತಿಗಳನ್ನು ತೋರಿಸುವುದು. ಅನೇಕ ವ್ಯಕ್ತಿಗಳನ್ನು ತೋರಿಸಿಕೊಡುವುದು. ಆದರೆ ವಸ್ತುತಃ ಅದು ಒಂದೇ ಒಂದು ಗೋಡೆಯಾಗಿರುವುದು ॥೬೯೩॥ ಅದರಂತೆ ಅಸಂಖ್ಯ ರೂಪಗಳು, ನಾನಾ ಪ್ರಕಾರಗಳ ಧರ್ಮಗಳು, ವಿವಿಧ ನಾಮಗಳು, ನಾನಾವಿಧ ಕರ್ಮಗಳು, ಈ ಎಲ್ಲವೂ ನಾನೇ ಆತ್ಮಾರಾಮನು, ಸರ್ವೋತ್ತಮನಾಗಿರುವೆನು ॥೬೯೪॥ ನನಗಿಂತಲೂ ಬೇರೆಯಾಗಿರುವ ಅಂತಹ ಒಂದು ಕಣವೂ ಕೂಡ ಸ್ಥಳವಿಲ್ಲ. ನಾನು ಸರ್ವರ ಶರೀರದಲ್ಲಿ ಇರುವ ಸರ್ವರ ಆತ್ಮಾನಾಗಿರುವೆನು. ನಾನು ಯಾವಾಗಲೂ ಸರ್ವವ್ಯಾಪಿಯಾಗಿರುವೆನು ॥೬೯೫॥ ಸಮುದ್ರದಲ್ಲಿ ಯಾವ ಪ್ರಕಾರವಾಗಿ ತೆರೆಗಳು ತೋರುವುವೋ, ಅದರಂತೆ ನನ್ನಲ್ಲಿ ಈ ಎಲ್ಲ ಜಗತ್ತು ತೋರುವುದು. ಈ ಎಲ್ಲವೂ ಜಗತ್ತಾಗಿರದೇ ವಾಸ್ತವಿಕವಾಗಿ ನಾನೇ ಆಗಿರುವೆನು. ಅಖಂಡವಾದ ಆನಂದವು ನನ್ನ ಸ್ವರೂಪವಾಗಿರುವುದು ॥೬೯೬॥ ನಾನು ಶುದ್ಧ, ಬುದ್ಧ, ಮುಕ್ತ, ಸ್ವಭಾವನಾಗಿದ್ದರೂ ನನಗೆ ಅನೇಕ ಪ್ರಕಾರಗಳ ನಾಮಗಳನ್ನು ಕೊಡುವರು. ಹೇ ಉದ್ಧವನೇ, ಯಾರ ಶ್ರದ್ಧೆಯು ಹೇಗಿರುವುದೋ, ಅದರಂತೆಯೇ ದೇವನಾದ ನಾನು ಕಾಣುವೆನು ॥೬೯೭॥ ನಾಸ್ತಿಕ ಮಾನವನಿಗೆ ನಾನು ಎಲ್ಲಿಯೂ ಕಾಣಲು ಶಕ್ಯವೇ ಇಲ್ಲ. ಆಸ್ತಿಕ ಮನುಷ್ಯನಿಗೆ ನಾನು ಸರ್ವತ್ರವೂ ಕಾಣುವೆನು ॥೬೯೮॥ ಭಕ್ತಿಭಾವದಿಂದ ಯಾರು ನನ್ನನ್ನು ಎಲ್ಲಿ ನೋಡಬೇಕೆಂದು ಇಚ್ಛಿಸುವರೋ, ಅಲ್ಲಿ ನಾನು ಅವರಿಗೆ ಕಾಣುವೆನು. ನನ್ನ ಪ್ರಾಪ್ತಿ ಮಾಡಿಕೊಳ್ಳಲು ಬಹಳಷ್ಟು ಕಷ್ಟಪಡಬೇಕಾಗಿಲ್ಲ ॥೬೯೯॥

ಮೀ ಸರ್ವಾತ್ಮಾ ಸರ್ವಗತ ಏಕು । ಐಸಾ ಜಯಾಚಾ ಭಾವ ನಿಷ್ಟಂಕು । ತೋಚಿ ಪಢಿಯಂತಾ ಮಜ ಏಕು । ಜ್ಞಾನ ತಿಲಕು ತೋ ಮಾಝಾ ॥೭೦೦॥ ತೋ ಆತ್ಮಾ ಮೀ ತ್ಯಾಚೇ ದೇಹ । ಮೀ ಧ್ಯಾತಾ ತೋ ಮಾಝೇ ಧ್ಯೇಯ । ಮೀ ಜ್ಞಾತಾ ತೋ ಶುದ್ಧ ಜ್ಞೇಯ । ಐಸಾ ಪಢಿಯೇ ತೋ ಆಮ್ಹಾ ॥೭೦೧॥ ಉದ್ಧವಾ ಹೇ ಏಕಾತ್ಮತಾ ಭಕ್ತೀ । ಸಜ್ಞಾನ ಜ್ಞಾತೇ ಯೇಣೇ ಭಜತೀ । ತಯಾ ಮಜ ಅಭೇದ ಪ್ರೀತೀ । ತುವಾಹೀ ಯಾ ರೀತೀ ಭಜಾವೇ ॥೭೦೨॥ ಪರಮಾತ್ಮಾ ಏಕ ನಿತ್ಯ ಶುದ್ಧ । ತ್ಯಾಸೀ ಮಾಯಾಮಯ ಸಂಸಾರಬಂಧ । ಮಿಥ್ಯಾ ಜಾಣ ದೇಹಸಂಬಂಧ । ಹಾ "ನಿಜಾತ್ಮಾಬೋಧ" ಪೈ ಮಾಝಾ ॥೭೦೩॥ ಹಾ ಮಿಥ್ಯಾಸಂಬಂಧ ಪಡೇ ಜೀವಾಸೀ । ಆತ್ಮಜ್ಞಾನೇ ಮುಕ್ತಿ ತ್ಯಾಸೀ । ಹೇ ಮಾಗೇ ಬೋಲಿಲೋ ತುಜಪಾಶೀ । ತೇಚಿ ಮತನಿರಾಸೀ ದೃಢ ಕೇಲೇ ॥೭೦೪॥ ಧರೋನಿ ಶ್ಲೋಕ ಚೌದಾವಾ । ಅಂತೀ ಶ್ಲೋಕ ಚೌತೀಸಾವಾ । ಮೀಮಾಂಸಕಮತಾಚಾ ಆಘವಾ । ನಿರಾಸು ಬರವಾ ಯೇಣೇ ಕೇಲಾ ॥೭೦೫॥ ಏವಂ ನಿರಸೋನಿ ಮತಾಂತರ । ಅದ್ವೈತ ಸ್ಥಾಪಿಲೇ ದೃಢತರ । ಹೇಚಿ ನಿಜಜ್ಞಾನ ಸಾಚಾರ । ಚರಾಚರವರಿಷ್ಠ ॥೭೦೬॥ ಅದ್ವೈತಜ್ಞಾನ ಶುದ್ಧ ಚೋಖ । ಐಕೋನಿ ಉದ್ಧವಾ ಜಾಹಲೇ ಸುಖ । ಹೃದಯೀ ದಾಟಲಾ ಜೀ ಹರಿಖ। ಪಾಹೇ ಶ್ರೀಮುಖ ಕೃಷ್ಣಾಚೇ ॥೭೦೭॥ ಚಾಲಿಲೇ ಸಾತ್ತ್ವಿಕಾಚೇ ಭರಿತೇ । ಚಿತ್ತ ವಿಸರಲೇ ಚಿಂತನಾತೇ । ಅಶ್ರು ಲೋಟಲೇ ಜೀ ತೇಥೇ । ಆಪ- ಆಪಣೆಯಾತೇ ವಿಸರಲಾ ॥೭೦೮॥ ಉದ್ಧವಾಸೀ ನಾವೇಕ। ಪಡೋನಿ ಠೇಲೇ ಜೀ ಟಕ । ಸಾವಧ ಹೋಊನಿಯಾ ದೇಖ । ಕೃಷ್ಣಸಂಮುಖ ತೋ ಝಾಲಾ ॥೭೦೯॥ ಅದ್ವೈತಭಜನೇ ಜೇ ಭಜತೇ । ತೇ ಭಕ್ತ ಕೃಷ್ಣಾಸೀ ಆವಡತೇ । ತೇ ಕೇವೀ ಪ್ರಾಪ್ತ ಹೋಯ ಮಾತೇ । ಯಾಲಾಗೀ ಹರೀತೇ ಪುಸತು ॥೭೧೦॥

ಉದ್ಧವ ಉವಾಚ :-

ಗುಣೇಷು ವರ್ತಮಾನೋಽಪಿ ದೇಹಜೇಷ್ವನಪಾವೃತಃ । ಗುಣೈರ್ನ ಬಧ್ಯತೇ ದೇಹೀ ಬಧ್ಯತೇ ವಾ ಕಥಂ ವಿಭೋ ॥೩॥

ಅರ್ಥ :- ಉದ್ಧವನು ಕೇಳಿದನು; ಹೇ ದೇವನೇ, ಈ ಜೀವವು, ದೇಹವು ಮತ್ತು ರೂಪವು ಗುಣಗಳಲ್ಲಿರುವುವು. ಆದರೂ ದೇಹದಿಂದಾಗುವ ಕರ್ಮಗಳು ಅಥವಾ ಸುಖ ದುಃಖಾದಿ ರೂಪವು ಫಲದಲ್ಲಿ ಏಕೆ ಬಂಧಿಸಲಾರವು? ಅಥವಾ ಆತ್ಮವು ಗುಣಗಳಿಂದ ನಿರ್ಲಿಪ್ತವಾಗಿದೆ. ದೇಹ ಇತ್ಯಾದಿ ಸಂಪರ್ಕದಿಂದ ಸರ್ವಥಾ ಅಲಿಪ್ತವಾಗಿರುವುದು. ಹೀಗಿರಲು ಅದಕ್ಕೆ ಬಂಧನದ ಪ್ರಾಪ್ತಿಯು ಹೇಗಾಗುವುದು?

ಸರ್ವಾತ್ಮಾ ಸರ್ವ ವ್ಯಾಪಕನಾದ ನಾನು ಒಬ್ಬನೇ ಇರುವೆನು. ಹೀಗೆ ಯಾರು ನಿಶ್ಚಯಪೂರ್ವಕವಾಗಿ ತಿಳಿದುಕೊಳ್ಳುವರೋ, ಅವರು ನನಗೆ ಪ್ರಿಯ ಭಕ್ತರು ಮತ್ತು ಅವರೇ ನನ್ನ ಜ್ಞಾನದ ತಿಲಕರು ॥೭೦೦॥ ಹೀಗೆ ನನ್ನ ಭಕ್ತನು ನನ್ನ ಆತ್ಮಾನಾಗಿರುವನು. ಮತ್ತು ನಾನು ಆತನ ದೇಹನಾಗಿರುವೆನು. ಆತನು ನನ್ನ ಧ್ಯಾನದ ವಿಷಯನಾಗಿರುವನು. ಮತ್ತು ನಾನು ಆತನ ಧ್ಯಾನವನ್ನು ಮಾಡುತ್ತಿರುವೆನು. ಆತನು ಪವಿತ್ರ ಜ್ಞಾನದವಿಷಯನು ಮತ್ತು ನಾನು ಅದನ್ನು ಅರಿಯುವವನು. ಇಷ್ಟೊಂದು ಆತನು ನನಗೆ ಪ್ರಿಯನು ॥೭೦೧॥ ಹೇ ಉದ್ಧವನೇ, ಅನನ್ಯ ಭಕ್ತಿಯು ಇದೇ ಆಗಿರುವುದು. ಜ್ಞಾನ ಸಂಪನ್ನನಾದ ಜ್ಞಾನಿಯು ಇದೇ ಭಕ್ತಿಯಿಂದ ನನ್ನ ಭಜನೆಯನ್ನು ಮಾಡುವನು. ಆತನಲ್ಲಿ ಮತ್ತು ನನ್ನಲ್ಲಿ ಅಭೇದ ಪ್ರೀತಿ ಇರುವುದು. ಆದ್ದರಿಂದ ನೀನೂ ಸಹ ಇದೇ ರೀತಿಯಲ್ಲಿ ಭಜನೆಯನ್ನು ಮಾಡು ॥೭೦೨॥ ಪರಮಾತ್ಮನು ಒಬ್ಬನೇ, ನಿತ್ಯ ಮತ್ತು ಶುದ್ಧನಾಗಿರುವನು. ಆತನಿಗೆ ಮಾಯಾಮಯ ಸಂಸಾರ ಬಂಧನವು ಇರುವುದಿಲ್ಲ. ದೇಹದ ಸಂಬಂಧವು ಇದು ಮಿಥ್ಯೆಯಾಗಿರುವುದು. ಇದನ್ನು ಲಕ್ಷದಲ್ಲಿಡು. ಇದೇ ನನ್ನ ನಿಜವಾದ ಆತ್ಮಬೋಧೆಯಾಗಿರುವುದು ॥೭೦೩॥ ಜೀವಕ್ಕೆ ಮಿಥ್ಯೆಯಾಗಿರುವ ಸಂಬಂಧವು ಒದಗುತ್ತಿರುವುದು. ಆತ್ಮಜ್ಞಾನದಿಂದ ಅದು ಮುಕ್ತವಾಗುವುದು. ಇದನ್ನು ನಾನು ಈ ಪೂರ್ವದಲ್ಲಿಯೇ ಹೇಳಿರುವೆನು. ಇದನ್ನೇ ಈಗ ಇತರ ಮತಗಳನ್ನು ಖಂಡನೆಯನ್ನು ಮಾಡಿ ದೃಢೀಕರಿಸಲಾಯಿತು ॥೭೦೪॥ ಈ ಅಧ್ಯಾಯದ ಹದಿನಾಲ್ಕನೆಯ ಶ್ಲೋಕದಿಂದ ಹಿಡಿದು ಮೂವತ್ತು ನಾಲ್ಕು ಶ್ಲೋಕದವರೆಗೆ ಕರ್ಮವಾದೀ ಪೂರ್ವ ಮೀಮಾಂಸಕರ ಮತದ ಸವಿಸ್ತಾರವಾಗಿ ಖಂಡನೆ ಮಾಡಿದ್ದೇನೆ ॥೭೦೫॥ ಅದರಂತೆಯೇ ಇತರ ವಿರುದ್ಧವಾಗಿರುವ ಮತಗಳ ಖಂಡನೆಯನ್ನು ಮಾಡಿ ಅದ್ವೈತವನ್ನು ದೃಢವಾಗಿ ಸ್ಥಾಪಿಸಿರುವೆನು. ಇದೇ ಈ ಜಗತ್ತಿನಲ್ಲಿ ಶ್ರೇಷ್ಠವಾದ, ನಿಜವಾದ ಆತ್ಮಜ್ಞಾನವಾಗಿರುವುದು ॥೭೦೬॥ ಇಂತಹ ಯಾವ ಈ ಶುದ್ಧವಾದ ಮತ್ತು ಪವಿತ್ರವಾದ ಆತ್ಮಜ್ಞಾನವನ್ನು ಕೇಳಿ ಉದ್ಧವನಿಗೆ ಪರಮ ಸಂತೋಷವಾಯಿತು. ಆತನ ಅಂತಃಕರಣವು ಪ್ರೇಮದಿಂದ ತುಂಬಿಕೊಂಡಿತು. ಆತನು ಶ್ರೀಕೃಷ್ಣನ ಮುಖದತ್ತ ನೋಡಿದನು ॥೭೦೭॥ ಆತನ ಪ್ರೇಮಕ್ಕೆ ಪೂರವು ಬಂದಿತು. ಆತನ ಚಿತ್ತವು ಚಿಂತನೆಯನ್ನು ಮರೆಯಿತು. ಆತನ ನೇತ್ರಗಳಿಂದ ಪ್ರೇಮಾಶ್ರು ಹರಿಯಹತ್ತಿತು ಮತ್ತು ದೇಹಭಾನವು ಮರೆತುಹೋಯಿತು ॥೭೦೮॥ ಉದ್ಧವನಿಗೆ ಕ್ಷಣಹೊತ್ತು ದೇಹದ ಎಚ್ಚರ ತಪ್ಪಿತು. ಪುನಃ ಸಾವಧನಾಗಿ ಶ್ರೀಕೃಷ್ಣನ ಎದುರು ಸ್ಥಿರನಾದನು ॥೭೦೯॥ ಅದ್ವೈತ ಭಕ್ತಿಯಿಂದ ಭಜಿಸುವ ಭಕ್ತರು ಭಗವಂತನಿಗೆ ಪ್ರಿಯರಾದರೆ, ಭಕ್ತಿಯು ನನಗೆ ಹೇಗೆ ಸಾಧ್ಯವಾಗುವುದೆಂಬುದನ್ನು ಹೇಳಿರಿ. ಹೀಗೆ ಆತನು ಶ್ರೀಕೃಷ್ಣನಿಗೆ ವಿಚಾರಿಸಿದನು ॥೭೧೦॥

ಉದ್ಧವ ಮ್ಹಣೇ ಕೃಷ್ಣನಾಥಾ । ಆತ್ಮಾ ದೇಹಾಮಾಜೀ ಅಸತಾ । ಬಂಧನ ಪಾವೇ ಜೇ ತತ್ತ್ವತಾ । ಕೀ ಸರ್ವಥಾ ಪಾವೇನಾ ॥೭೧೧॥ ಗುಣ ಅಸತಾ ಮುಕ್ತಿ ಘಡೇ । ಕೀ ಗುಣ ಗೇಲಿಯಾ ಮುಕ್ತಿ ಜೋಡೇ । ಹೇಚಿ ಸಾಂಗಾವೇ ಮಜ ಪುಢೇ । ಅತಿನಿವಾಡೇ ನಿಶ್ಚಿತ ॥೭೧೨॥ ಗುಣ ಅಸತಾ ಮುಕ್ತಿ ಘಡೇ । ಹೇ ಸರ್ವಥಾ ಬೋಲಣೇ ಕುಡೇ । ಜ್ವರ ಅಸತಾ ಆರೋಗ್ಯ ನ ಘಡೇ । ವೃಕ್ಷ ನ ವಾಢೇ ಭಿರುಂಡೇಸೀ ॥೭೧೩॥ ಬಾಹಿ ಬಾಂಧೋನಿ ಪಾಷಾಣ । ಸಮುದ್ರಾಮಾಜೀ ತರೇ ಕೋಣ । ತೈಸೇ ದೇಹೀ ಅಸತಾ ತ್ರಿಗುಣ । ಮುಕ್ತಪಣ ಕೈಸೇನಿ॥೭೧೪॥ ಗುಣ ಜೇ ರಜತಮಾದಿಕ । ತ್ಯಾಂಚೇ ಕಾರ್ಯ ದೇಹ ದೇಖ । ಗುಣಾಸಾರಿಖೀ ಆವಶ್ಯಕ । ಕರ್ಮೇ ಅನೇಕ ಆಚರೇ ॥೭೧೫॥ ಕರ್ಮಾಚೇ ಫಳ ಸುಖದುಃಖ । ಭೋಗಣೇ ಪಡೇ ಗಾ ಅಚುಕ । ಗುಣಾಂಸೀ ಮುಕ್ತಿ ನ ಘಡೇ ದೇಖ । ಹೇ ಜ್ಞಾತೇ ಲೋಕ ಮ್ಹಣತಾತಿ ॥೭೧೬॥ ಗುಣ ಗೇಲಿಯಾ ಮುಕ್ತೀ । ಹೇ ಹೀ ನ ಘಡೇ ಗಾ ಶ್ರೀಪತೀ । ಯೇಹೀ ವಿಷಯೀ ವಿನಂತೀ। ಕೃಪಾಮೂರ್ತೀ ಅವಧಾರೀ ॥೭೧೭॥ ಗುಣಾಂಚೇ ಕಾರ್ಯ ದೇಹೇಂದ್ರಿಯೇ । ತೇ ಗುಣ ಜಾಊನಿ ದೇಹ ರಾಹೇ । ಭೂಮೀವಿಣ ವೃಕ್ಷ ಹೋಯೇ । ಹೇ ಅಬದ್ಧ ಪಾಹೇ ಬೋಲಣೇ ॥೭೧೮॥ ಕಾರಣ ಜಾಊನಿ ಕಾರ್ಯ ರಾಹೇ । ಹೇ ಬೋಲಣೇ ಘಡೇ ಕಾಯೇ । ಗುಣ ಜಾತಾ ದೇಹೋಚಿ ಜಾಯೇ । ಮುಕ್ತ ವರ್ತತಾಹೇ ಕೈಸೇನಿ ॥೭೧೯॥ ಏವಂ ಗುಣ ಅಸತಾ ನಸತಾ । ಮುಕ್ತಿ ನ ಘಡೇ ಗಾ ಸರ್ವಥಾ । ಯೇಚಿವಿಷಯೀ ಕೃಷ್ಣನಾಥಾ । ತುಜ ಮೀ ತತ್ತ್ವತಾ ಪುಸತು ॥೭೨೦॥ ಆಣಿಕ ಏಕ ಜಗನ್ನಾಥಾ । ತುಜ ಮೀ ವಿನಂತೀ ಕರೀನ ಆತಾ । ಗುಣ ಆತ್ಮ್ಯಾಸೀ ಏಕತ್ರತಾ । ನ ಘಡೇ ಸರ್ವಥಾ ನಿಶ್ಚಿತ ॥೭೨೧॥ ಭರಲೇ ಮೃಗಜಳಾಚೇ ತಳೇ । ಚಂದ್ರಮಾ ಬಿಂಬೇನಾ ತೇಣೇ ಜಳೇ । ತೇವೀ ಆತ್ಮಾ ಗುಣಾಂಸೀ ನಾಕಳೇ । ಸ್ವಭಾವೇ ನಾತಳೇ ಗುಣಾಂತೇ ॥೭೨೨॥ ಗುಣ ತೇ ಅಜ್ಞಾನಾಚೀ ರಾತೀ । ಆತ್ಮಾ ಸ್ವಪ್ರಕಾಶ ಗಭಸ್ತೀ । ತ್ಯಾಸಮೋರ ತೇ ಕೈಚೇ ಯೇತೀ । ಮಗ ಬಾಧಿತೀ ಆತ್ಮ್ಯಾತೇ ॥೭೨೩॥ ಅಂಧಾರ ಸೂರ್ಯಾತೇ ಗಿಳೀ । ಕಾಉಳಾ ಕೈಲಾಸ ಆತಳೀ । ಬಾಗುಲ ಹನುಮಂತಾತೇ ಸಳೀ । ಮಶಕ ಗಿಳೀ ಗಜಾತೇ ॥೭೨೪॥

ಉದ್ಧವನು ನುಡಿದನು ; ಹೇ ಕೃಷ್ಣನಾಥಾ, ಆತ್ಮವು ದೇಹದಲ್ಲಿ ಇರುತ್ತಿರಲು ನಿಜವಾಗಿಯೂ ಬಂಧನದಲ್ಲಿ ಸಿಲುಕಿಕೊಳ್ಳುವುದೋ? ಅಥವಾ ಅದಕ್ಕೆ ಬಂಧನವು ಸರ್ವಥಾ ಇಲ್ಲವೋ? ॥೭೧೧॥ ಗುಣಗಳು ಇದ್ದಾಗ ಮುಕ್ತಿಯು ದೊರೆಯುವುದೋ? ಇಲ್ಲವೇ ಗುಣಗಳು ಇಲ್ಲದಾಗಲು ಮುಕ್ತಿಯು ದೊರೆಯುವುದೋ? ಇದನ್ನು ನೀನು ಸ್ಪಷ್ಟವಾಗಿ ನಿಶ್ಚಯಪೂರ್ವಕವಾಗಿ ಹೇಳು ॥೭೧೨॥ ಗುಣಗಳಿದ್ದಾಗ ಮುಕ್ತಿಯು ದೊರೆಯುವುದೆಂದು ಹೇಳಲು ಹೋದರೆ, ಅದು ಅಸಂಬದ್ಧವಾಗುವುದು. ಕಾರಣ ರೋಗಿಯ ಅಂಗದಲ್ಲಿ ಜ್ವರವಿದ್ದಾಗ ಆತನಿಗೆ ಆರೋಗ್ಯವು ಲಭಿಸುವುದಿಲ್ಲ. ಹಾಗೆಯೇ ಗಿಡಗಳಿಗೆ ಹುಳಗಳು ಬಿದ್ದಾಗ ಅವು ಬೆಳೆಯುವುದಿಲ್ಲ ॥೭೧೩॥ ಬಾಹುಗಳಿಗೆ ಕಲ್ಲುಗಳನ್ನು ಕಟ್ಟಿಕೊಂಡು ಸಮುದ್ರದಲ್ಲಿ ಈಸಲು ಬರುವುದೇ? ಅದರಂತೆ ದೇಹದಲ್ಲಿ ಸತ್ವ,ರಜ, ತಮ, ಈ ಮೂರು ಗುಣಗಳಿರಲು ಜೀವವು ಮುಕ್ತ ಹೇಗಾಗಬೇಕು? ॥೭೧೪॥ ಸತ್ವ, ರಜ, ತಮ, ಈ ಮೂರು ಗುಣಗಳ ಕಾರ್ಯವು ದೇಹವಾಗಿರುವುದು. ಆದ್ದರಿಂದಲೇ ನಾನು ಗುಣಗಳಂತೆ ಅನೇಕ ಕರ್ಮಗಳನ್ನು ಮಾಡುತ್ತಿರುತ್ತೇನೆ ॥೭೧೫॥ ಕರ್ಮಗಳ ಫಲವು ಸುಖ ದುಃಖಗಳಾಗಿವೆ. ಇದನ್ನು ತಪ್ಪದೇ ಭೋಗಿಸಬೇಕಾಗುವುದು. ಆದ್ದರಿಂದ ಗುಣಗಳಿಂದ ಕೂಡಿಕೊಂಡಾಗ ಮುಕ್ತಿ ದೊರೆಯುವುದು ಶಕ್ಯವಿಲ್ಲ. ಹೀಗೆ ವಿದ್ವಾನರ ಮತವಾಗಿದೆ ॥೭೧೬॥ ಹೇ ಶ್ರೀಪತಿಯೇ, ಗುಣಗಳು ತೀರಿದಾಗ ಮುಕ್ತಿಯು ಸಿಗಬಹುದೆಂದು ಅದೂ ಕೂಡ ಸಾಧಿಸುವುದಿಲ್ಲ. ಹೇ ಕೃಪಾಮೂರ್ತಿಯೇ, ಆ ವಿಷಯಕ್ಕೆ ವಿನಂತಿಸಿಕೊಳ್ಳುವೆ, ಅದನ್ನು ಕೇಳು ॥೭೧೭॥ ದೇಹದ ಇಂದ್ರಿಯಗಳು ಇವು ಗುಣಗಳಕಾರ್ಯವಾಗಿದೆ. ಅಂದಮೇಲೆ ಗುಣಗಳು ತೀರಿದಾಗ ದೇಹವು ಇರುವುದು ಎಂದು ಹೇಳುವಿಕೆಯು ಭೂಮಿ ಇಲ್ಲದೇ ವೃಕ್ಷವು ನಿಂತುಕೊಳ್ಳುವುದು ಎಂಬ ಹೇಳಿಕೆಯಂತೆ ವಿಪರೀತವಾಗುವುದು ॥೭೧೮॥ ಕಾರಣ ಗುಣಗಳು ಇಲ್ಲದಾಗಿ ಕಾರ್ಯವು ಉಳಿಯುವುದು, ಹೀಗೆ ಎಂದಾದರೂ ಹೇಳಲು ಸಾಧ್ಯವೇ? ಗುಣಗಳು ಹೊರಟು ಹೋಗಲು ಅವುಗಳೊಂದಿಗೆ ದೇಹವೂ ಕೂಡ ಹೋಗುವುದು. ಆಗ ಮುಕ್ತನಾಗುವವನು ಏನೆಂದು ವರ್ತಿಸಬಲ್ಲನು? ॥೭೧೯॥ ಈ ಪ್ರಕಾರವಾಗಿ ಗುಣಗಳಿದ್ದರೇನು? ಅಥವಾ ಗುಣಗಳು ಇಲ್ಲದಿದ್ದರೇನು? ಮುಕ್ತಿ ಎಂಬುದು ಎಂದಿಗೂ ದೊರಕಲಾರದು ಎಂದು ನನಗೆ ಹೀಗೆ ಅನಿಸುತ್ತದೆ. ಆದ್ದರಿಂದ ಹೇ ಕೃಷ್ಣನಾಥನೇ, ಈ ವಿಷಯಕ್ಕೆ ನಿಜವಾದ ತತ್ವವು ಯಾವುದು? ಎಂದು ನಾನು ನಿನಗೆ ವಿಚಾರಿಸುವೆನು ॥೭೨೦॥ ಹೇ ಜಗನ್ನಾಥನೇ, ನಾನು ಇನ್ನೊಂದು ನಿನಗೆ ವಿನಂತಿಸುವೆನು. ಗುಣ ಮತ್ತು ಆತ್ಮಾ ಇವರ ವಾಸ್ತವ್ಯವು ಒಂದೇ ಕಡೇ ಇರುವುದು ನಿಶ್ಚಿತವಾಗಿ ಎಂದಿಗೂ ಸಂಭವಿಸಲಾರದು ॥೭೨೧॥ ಮೃಗಜಲದಿಂದ ತುಂಬಿದ ಕೆರೆಯಲ್ಲಿ ಚಂದ್ರನ ಪ್ರತಿಬಿಂಬವು ಎಂದಿಗೂ ಬೀಳುವುದಿಲ್ಲ. ಅದರಂತೆ ಆತ್ಮವು ಗುಣಗಳಿಂದ ಎಂದಿಗೂ ಬದ್ಧವಾಗುವುದಿಲ್ಲ. ಕಾರಣ ಗುಣಗಳಿಗೆ ಸ್ಪರ್ಶ ಕೂಡ ಮಾಡದೇ ಇರುವುದು ಅದರ ಸ್ವಭಾವ ಧರ್ಮವಾಗಿರುವುದು ॥೭೨೨॥ ಗುಣಗಳೆಂದರೆ ಅಜ್ಞಾನದ ರಾತ್ರಿಯಾಗಿರುವುದು. ಮತ್ತು ಆತ್ಮವೆಂದರೆ ಸ್ವಯಂ ಪ್ರಕಾಶೀ ಸೂರ್ಯನಾಗಿರುವುದು. ಅಂದ ಮೇಲೆ ಗುಣಗಳು ಆತ್ಮನ ಎದುರು ಬರುವುದಾದರೂ ಹೇಗೆ? ಅದರ ಮುಂದೆ ಬಾರಲು ಶಕ್ಯವಿಲ್ಲದಲ್ಲಿ, ಅದಕ್ಕೆ ಬಾಧೆಯಾಗುವುದಾದರೂ ಹೇಗೆ? ॥೭೨೩॥ ಅಂಧಕಾರವು ಸೂರ್ಯನನ್ನು ನುಂಗುವದು. ಕಾಗೆಯು ಕೈಲಾಸಕ್ಕೆ ಮುತ್ತಿಗೆ ಹಾಕುವುದು, ಬೆದರುಗೊಂಬೆಯು ಹನುಮಂತನಿಗೆ ಬೆದರಿಸುವುದು ನೊಣವು ಆನೆಯನ್ನು ನುಂಗುವುದು ॥೭೨೪॥

ಮಾಶೀ-ಪಾಂಖೇ ಗಗನ ಉಡೇ । ಸಗಳಾ ಮೇರು ಥಿಲ್ಲರೀ ಬುಡೇ । ಮೃಗಜಳೀ ಜೈ ತಾರೂ ಪಡೇ।ತೈ ಆತ್ಮಾ ಸಾಂಪಡೇ ಗುಣಾಂತ ॥೭೨೫॥ ಜೇವೀ ಆಕಾಶ ನಾತುಡೇ ಜಾಳೀ । ತೇವೀ ಆತ್ಮಾ ನಾಕಳೇ ಗುಣಮೇಳೀ। ಮಾ ಸುಖದುಃಖಾಂಚೀ ನವಾಳೀ । ಗುಣಕಲ್ಲೋಳೀ ಕಾ ಭೋಗೀ ॥೭೨೬॥ ಯಾಪರೀ ನ ಘಡೇ ಗಾ ಬದ್ಧತಾ। ಮಾ ಮುಕ್ತಾಚೀ ಕಾಯಸೀ ಕಥಾ । ಕೈಸೇನಿ ಬದ್ಧಮುಕ್ತವ್ಯವಸ್ಥಾ । ಘಡೇ ಕೃಷ್ಣನಾಥಾ ತೇ ಸಾಂಗ ॥೭೨೭॥ ಯೇಥ ಬದ್ಧಾಸೀ ಕಾಯ ಕಾರಣ । ಆಣಿ ಮುಕ್ತಾಚೀ ಕೋಣ ಖೂಣ । ಏವಂ ಬುದ್ಧಮುಕ್ತ ಲಕ್ಷಣ । ಮಜ ಸಂಪೂರ್ಣ ಸಾಂಗಾವೇ ॥೭೨೮॥

ಕಥಂ ವರ್ತೇತ ವಿಹರೈತ್ಕೈರ್ವಾ ಜ್ಞಾಯೇತ ಲಕ್ಷಣೈಃ । ಕಿಂ ಭುಂಜೀತೋತ ವಿಸೃಜೇಚ್ಛಯೀತಾಸೀತ ಯಾತಿ ವಾ ॥೩೬॥

ಅರ್ಥ :- ಬದ್ಧ ಅಥವಾ ಮುಕ್ತ ಪುರುಷರು ಹೇಗೆ ಆಚರಿಸುವರು? ಹೇಗೆ ವಿಹರಿಸುವರು? ಅಥವಾ ಯಾವ ಯಾವ ಲಕ್ಷಣಗಳಿಂದ ತಿಳಿಯಲ್ಪಡುವರು? ಹೇಗೆ ಭುಂಜಿಸುವರು? ಹೇಗೆ ವಿಸರ್ಜಿಸುವರು? ಹೇಗೆ ಕುಳಿತುಕೊಳ್ಳುವರು? ಹೇಗೆ ನಡೆಯುವರು?

ಆತಾ ಬದ್ಧ ಮುಕ್ತಾಂಚೀ ಸ್ಥಿತೀ । ಮಜ ಸಾಂಗಾವೀ ಶ್ರೀಪತಿ । ಕೋಣೇ ಲಕ್ಷಣೇ ಜಾಣಿಜೇತೀ । ದೋಘೇ ಕಳತೀ ಕೈಸೇನಿ ॥೭೨೯॥ ಪಾವೋನಿಯಾ ವಿದೇಹಾವಸ್ಥಾ । ದೇಹೀ ಕೈಸೇನಿ ವರ್ತತಾ । ವಶ ಕರೂನಿ ಗುಣಾತೀತಾ । ಗುಣೀ ಕ್ರೀಡತಾ ಕೈಸೇನಿ ॥೭೩೦॥ ಪಾವೋನಿಯಾ ಮುಕ್ತ ದಶಾ । ದೇಹೀ ಭೋಗ ಭೋಗತೀ ಕೈಸಾ । ತ್ಯಾಸೀ ತ್ಯಾಗಾಚಾ ಕೋಣ ಠಸಾ । ಹೃಷೀಕೇಶಾ ಸಾಂಗಿಜೇ ॥೭೩೧॥ ತ್ಯಾಚೇ ನಿದ್ರೇಚೇ ಕೋಣ ಲಕ್ಷಣ । ಕೋಣ ಬೈಸಣ ಕೋಣ ಆಸನ । ವಸ್ತು ಜಾಣೋನಿ ಸಂಪೂರ್ಣ । ಗಮನಾಗಮನ ತ್ಯಾ ಕೈಸೇ ॥೭೩೨॥ ಐಶೀ ಮುಕ್ತಾಂಚೀ ಲಕ್ಷಣೇ । ತ್ಯಾಹೋನಿ ಬದ್ಧಾಂಚೀ ವಿಲಕ್ಷಣೇ । ಕೃಪಾ ಕರೋನಿ ನಾರಾಯಣೇ । ಮಜಕಾರಣೇ ಸಾಂಗಿಜೇ ॥೭೩೩॥

ಏತದಚ್ಯುತ ಮೇ ಬ್ರೂಹಿ ಪ್ರಶ್ನಂ ಪ್ರಶ್ನವಿದಾಂ ವರ । ನಿತ್ಯಮುಕ್ತೋ ನಿತ್ಯಬದ್ಧ ಏಕ ಏವೇತಿ ಮೇ ಭ್ರಮಃ ॥೩೭॥

ಅರ್ಥ :- ಹೇ ಅಚ್ಯುತನೇ, ಪ್ರಶ್ನೆಯ ಮರ್ಮವನ್ನು ತಿಳಿಯುವುದರಲ್ಲಿ ತಾವು ಶ್ರೇಷ್ಠರಾಗಿರುವಿರಿ. ಆದ್ದರಿಂದ ತಾವು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಿರಿ. ಒಂದೇ ಆತ್ಮವು ಅನಾದೀ ಗುಣಗಳಿಂದ ನಿತ್ಯಬದ್ಧವೂ ಆಗಿದೆ ಮತ್ತು ಅಸಂಗದಿಂದ ನಿತ್ಯ ಮುಕ್ತವೂ ಆಗಿದೆ. ಈ ಎರಡೂ ಮಾತುಗಳಲ್ಲಿ ನನಗೆ ಭ್ರಮವಾಗುತ್ತಿದೆ.

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ । ಭಗವದುದ್ಧವ ಸಂವಾದೇ ದಶಮೋಽಧ್ಯಾಯ : ॥೧೦॥

ಯಾ ಪ್ರಶ್ನೋತ್ತರಾಂಚೀ ಉತ್ಕಂಠಾ । ಥೋರ ವರ್ತತಸೇ ವೈಕುಂಠಾ । ಪ್ರಶ್ನವೇತ್ಯಾಮಾಜೀ ಶ್ರೇಷ್ಠಾ। ಅತಿವರಿಷ್ಠಾ ಗೋವಿಂದಾ ॥೭೩೪॥

ನೊಣವು ತನ್ನ ರೆಕ್ಕೆಗಳಿಂದ ಆಕಾಶದೆತ್ತರ ಹಾರಿದರೆ ಮೇರು ಪರ್ವತವು ಚಿಕ್ಕ ಮಡುವಿನಲ್ಲಿ ಮುಳುಗಿದ್ದರೆ, ಅಥವಾ ಹಡಗವು ಮೃಗಜಲದಲ್ಲಿ ಮುಳುಗಿ ಹೋದರೆ ಮಾತ್ರ ಆತ್ಮವು ಗುಣಗಳಲ್ಲಿ ಬದ್ಧವಾದೀತು ॥೭೨೫॥ ಯಾವ ಪ್ರಕಾರವಾಗಿ ಆಕಾಶವು ಬಲೆಯಲ್ಲಿ ಬೀಳುವುದಿಲ್ಲವೋ, ಅದೇ ಪ್ರಕಾರವಾಗಿ ಆತ್ಮವು ಗುಣಗಳ ಆಧೀನದಲ್ಲಿ ಸಿಲುಕಿಕೊಳ್ಳುವುದಿಲ್ಲ. ಅಂದಮೇಲೆ ಅದಕ್ಕೆ ಗುಣಗಳ ಕ್ಷೋಭೆಯಿಂದ ಸುಖದುಃಖದ ಪ್ರಾಪ್ತಿಯು ಹೇಗಾದೀತು? ॥೭೨೬॥ ಈ ರೀತಿಯಲ್ಲಿ ವಿಚಾರಿಸಿ ನೋಡಲು ಆತ್ಮವು ಬದ್ಧ ಆಗಲು ಶಕ್ಯವೇ ಇಲ್ಲ. ಅಂದಮೇಲೆ ಮುಕ್ತನಾಗುವ ಮಾತೇಕೆ? ಅದಕ್ಕಾಗಿ ಹೇ ಕೃಷ್ಣನಾಥನೇ, ಬದ್ಧ ಮತ್ತು ಮೋಕ್ಷ ಇವುಗಳ ಯಾವ ವ್ಯವಸ್ಥೆ ಇದೆ ಎಂಬುದು ನನಗೆ ಹೇಳು ॥೭೨೭॥ ಬಂಧನದ ಕಾರಣ ಯಾವುದು? ಮತ್ತು ಮುಕ್ತನಾಗುವ ಯಾವ ಲಕ್ಷಣ? ಒಟ್ಟಿನಲ್ಲಿ ಬದ್ಧಮುಕ್ತರ ಲಕ್ಷಣವನ್ನು ನನಗೆ ಸವಿಸ್ತಾರವಾಗಿ ತಿಳಿಸು ॥೭೨೮॥

ಹೇ ಶ್ರೀಪತಿಯೇ, ಈಗ ನನಗೆ ಬದ್ಧ ಮತ್ತು ಮುಕ್ತ ಇವುಗಳ ಸ್ಥಿತಿಯನ್ನು ಹೇಳಿರಿ. ಬದ್ಧನು ಯಾರು? ಮತ್ತು ಮುಕ್ತನು ಯಾರು? ಯಾವ ಲಕ್ಷಣಗಳಿಂದ ಇವರನ್ನು ತಿಳಿಯಬೇಕು? ॥೭೨೯॥ ಹಾಗೆಯೇ ವಿದೇಹ ಅವಸ್ಥೆ ಪ್ರಾಪ್ತವಾದವರು ದೇಹದಲ್ಲಿ ಹೇಗೆ ವರ್ತಿಸುವರು? ಇವರು ಗುಣಾತೀತರಾಗಿ ಗುಣಗಳಲ್ಲಿ ಹೇಗೆ ವರ್ತನೆ ಮಾಡುವರು ? ॥೭೩೦॥ ಮುಕ್ತರಾಗಿ ದೇಹದಲ್ಲಿ ಭೋಗವನ್ನು ಹೇಗೆ ಭೋಗಿಸುವರು? ಅವರ ತ್ಯಾಗದ ಲಕ್ಷಣವು ಹೇಗಿರುವುದು? ಹೇ ಹೃಷೀಕೇಶಿಯೇ, ಇದೆಲ್ಲವನ್ನೂ ನನಗೆ ತಿಳಿಸಿ ಹೇಳು ॥೭೩೧॥ ಅವರ ನಿದ್ರೆಯ ಸ್ವರೂಪವು ಹೇಗಿರುವುದು? ಹೇಳಿರಿ ಆತನ ಆಸನವು ಹೇಗಿರುವುದು? ಹೇಗೆ ಕುಳಿತುಕೊಳ್ಳುವನು ? ಪೂರ್ಣ ಬ್ರಹ್ಮವನ್ನು ಅರಿತಿರುವವರ ಗಮನಾಗಮನ ಹೇಗಿರುವುದು? ॥೭೩೨॥ ಹೀಗೆ ಇರುವ ಮುಕ್ತರ ಲಕ್ಷಣಗಳನ್ನು ಮತ್ತು ಇರುವ ಬದ್ಧರ ಲಕ್ಷಣಗಳನ್ನು ನೀವು ಕೃಪೆದೋರಿ ನನಗೆ ಹೇಳಿರಿ ॥೭೩೩॥

ಹೇ ಸರ್ವಶ್ರೇಷ್ಠನಾದ ವೈಕುಂಠಾಧಿಪತಿ ಗೋವಿಂದನೇ, ಈ ಪ್ರಶ್ನೆಗಳ ಉತ್ತರಗಳನ್ನು ಕೇಳಲು ನನಗೆ ಬಹಳ ಕುತೂಹಲವಾಗಿದೆ ॥೭೩೪॥

ಅನಾದಿ ಅಸೇ ಗುಣ ಸಂಬಂಧು । ತೇಣೇ ಆತ್ಮಾ ಝಾಲಾ ನಿತ್ಯಬದ್ದು । ನಿತ್ಯಮುಕ್ತ ಹಾ ಶಬ್ದು । ಅಸಂಬದ್ದು ಸರ್ವಥಾ ॥೭೩೫॥ಜರೀ ಆತ್ಮಾ ್ಯಸೀ ನಿತ್ಯಮುಕ್ತತಾ । ತರೀ ಬೋಲೋಂಚಿ ನಯೇ ಬದ್ಧತಾ । ಏಕುಚಿ ಬದ್ಧಮುಕ್ತ ಮ್ಹಣತಾ । ಭ್ರಮ ಅಚ್ಯುತಾ ವಾಟತ ॥೭೩೬॥ ಆತ್ಮಾ ಏಕಚಿ ತತ್ತ್ವತಾ । ತ್ಯಾಸೀ ಬದ್ಧತಾ ಆಣಿ ಮುಕ್ತತಾ । ಏಕಾಸೀಚ ದೋನೀ ಅವಸ್ಥಾ । ಕೃಷ್ಣನಾಥಾ ಕೈಸೇನಿ ॥೭೩೭॥ ಜೋ ಧಾಲಾ ತೋಚಿ ಭುಕೇಲಾ । ಜಾಗತಾ ತೋಚಿ ನಿಜೇಲಾ । ಜೋ ಜಿತಾ ತೋಚಿ ಮೇಲಾ । ಸತ್ಯತ್ವ ಯಾ ಬೋಲಾ ಕೈಸೇನಿ ॥೭೩೮॥ ಕಾಳೇ ತೇಚಿ ಧವಳೇ । ದೇಖಣೇ ತೇಚಿ ಆಂಧಳೇ । ಅರ್ಧೇ ತೇಚಿ ಸಗಳೇ । ಕುಹಿರ್‍ಯಾ ಕೇಳೇ ಕೇವೀ ಹೋತೀ ॥೭೩೯॥ ಲೋಣ ತೇಚಿ ಅಲವಣೇ । ಕೋರಡೇ ತೇ ಪಾಣೇ । ಅತಿಶೀತಳ ತೋ ದಾರುಣ ಅಗ್ನಿ । ಮುಕೇ ಪುರಾಣೇ ಬೋಲಿಗಡೇ ॥೭೪೦॥ ಲುಗಡೇ ನಾಗೀವಪಣೇ ಲಾಜಾಳೂ । ಅನ್ನ ಭುಕೇಲೇಪಣೇ ಭುಕಾಳೂ । ಮುಕ್ತೀಸೀ ಮುಕ್ತೀಚಾ ದುಕಾಳೂ । ಕಾಪುರಾ ಪರಿಮಳೂ ಮಿಳೇನಾ ॥೭೪೧॥ ತೈಸೇ ಸಂತ ತೇಚಿ ಅಸಂತ । ಅದ್ವೈತ ತೇಚಿ ಹೋಯ ದ್ವೈತ । ತೇವ್ಹಾ ಹಿತ ತೇಚಿ ಅನಹಿತ । ದಿಸೇ ಪ್ರಸ್ತುತ ಆಮ್ಹಾಸೀ ॥೭೪೨॥ ಆತ್ಮಾ ನಿತ್ಯಮುಕ್ತ - ಶುದ್ಧ - ಬುದ್ಧ । ಐಸಾ ತುವಾಂಚಿ ಮಜ ಕೇಲಾ ಬೋಧ । ತೋ ಗುಣ ಸಂಗೇ ಮ್ಹಣಸೀ ಬದ್ಧ । ಭ್ರಮು ಅಗಾಧ ಯೇಣೇ ಮಜ ॥೭೪೩॥ ಏಕಾಸಚಿ ಬದ್ಧಮುಕ್ತತಾ । ಕೈಸೇನಿ ಘಡೇ ಕೃಷ್ಣನಾಥಾ । ಕೃಪಾಳುವಾ ಜೀ ಅನಂತಾ । ಹೇ ಮಜ ತತ್ತ್ವತಾ ಸಾಂಗಾವೇ ॥೭೪೪॥ ಮ್ಹಣಸೀ ಮುಕ್ತೀಸೀ ಆಗಂತುಕತಾ । ತೇಣೇ ಮೋಕ್ಷಾಸಿ ಆಲೀ ಅನಿತ್ಯತಾ । ಬದ್ಧ ಆಗಂತುಕ ಮ್ಹಣತಾ । ತ್ಯಾಸೀ ಸಾದಿತಾ ಯೇಊ ಪಾಹೇ ॥೭೪೫॥ ಪೂರ್ವೀ ಬದ್ಧಚೀ ನವ್ಹತಾ । ಯೇಥೂನಿ ಉಪಜಲಾ ಆತಾ । ಐಶೀ ಸಾದಿತಾ ಬೋಲತಾ । ಹೋಈಲ ಶಾಸ್ತ್ರಾರ್ಥಾ ವಿರುದ್ಧ ॥೭೪೬॥ ಶ್ರುತಿಸ್ಮೃತಿ ಶಾಸ್ತ್ರಸಿದ್ಧ । ಅನಾದಿ ಮುಕ್ತಿ ಅನಾದಿ ಬದ್ಧ । ಆತ್ಮಾ ಏಕ ಅವಸ್ಥಾ ದ್ವಿವಿಧ । ತ್ಯಾಹೀ ವಿರುದ್ಧ ಪರಸ್ಪರೇ ॥೭೪೭॥ ಉಠಿಲೀ ಬದ್ಧತಾ ಮುಕ್ತೀ ತೇ ಛಳೀ । ಖವಳಲೀ ಮುಕ್ತೀ ಬದ್ಧತಾ ಗಿಳೀ । ಐಸಾ ವಿರುದ್ಧತಾ ಆತ್ಮಾ ್ಯ ಜವಳೀ । ಕೇವೀ ವನಮಾಳೀ ರಾಹತಾತಿ ॥೭೪೮॥

ಗುಣಗಳ ಸಂಬಂಧವು ಮಾತ್ರ ಅನಾದಿಯಾಗಿರುವುದು. ಅವುಗಳಿಂದ ಆತ್ಮವು ನಿತ್ಯಬದ್ಧವಾಗಿರುವುದು. ಆದ್ದರಿಂದ ಆತನಿಗೆ ನಿತ್ಯಮುಕ್ತನೆಂದು ಹೇಳುವುದು ಅಸಂಬದ್ಧವಾಗಿದೆ ॥೭೩೫॥ ಆತ್ಮವು ಒಂದು ವೇಳೆ ನಿತ್ಯಮುಕ್ತವಾಗಿದ್ದರೆ ಬದ್ಧ ಎಂಬ ಶಬ್ದವು ಮುಖದಿಂದ ಹೊರಬೀಳಲು ಯಾವ ಕಾರಣವೂ ಇದ್ದಿಲ್ಲ. ಬದ್ಧ ಮತ್ತು ಮುಕ್ತ ಒಬ್ಬನೇ ಎಂದು ಹೇಳಲು ನನಗೆ ಭ್ರಮವೆನಿಸುವುದು ॥೭೩೬॥ ಹೇ ಶ್ರೀಕೃಷ್ಣನಾಥನೇ, ಆತ್ಮವು ಮಾತ್ರ ನಿಜವಾಗಿಯೂ ಒಂದೇಯಾಗಿರುವುದು. ಹೀಗಿರಲು ಅದಕ್ಕೆ ಬದ್ಧ ಮತ್ತು ಮುಕ್ತ ಎಂಬ ಎರಡು ಅವಸ್ಥೆಗಳು ಹೇಗೆ? ॥೭೩೭॥ ಊಟವನ್ನು ಮಾಡಿ ತೃಪ್ತನಾದವನೇ ಹಸಿದುಕೊಂಡನು. ಅಥವಾ ಮಲಗಿಕೊಂಡವನೇ ಎಚ್ಚರಾಗಿರುವನು ಅಥವಾ ಜೀವಂತವಾಗಿರುವವನೇ ಮರಣವನ್ನು ಹೊಂದಿದನು ಹೀಗೆ ಹೇಳುವಂತೆ ಅದರಲ್ಲಿ ಸತ್ಯ ತೋರುವುದು ॥೭೩೮॥ ಯಾವುದು ಕಪ್ಪು ವರ್ಣವೋ, ಅದೇ ಶುಭ್ರ ವರ್ಣ, ಅಥವಾ ಯಾವನು ಕಣ್ಣುಗಳಿಂದ ನೋಡುವನೋ, ಅವನೇ ಕುರುಡನು, ಯಾವುದು ಅರ್ಧವೋ, ಅದೇ ಪೂರ್ಣವು. ಹೀಗೆ ಹೇಳಲು ಬರುವುದೇ? ಬೇವಿನಮರಕ್ಕೆ ಬಾಳೇ ಫಲ ಹೇಗೆ ಬರುವುದು? ॥೭೩೯॥ ಅಪ್ಪಟ ಉಪ್ಪು ಅದೇ ಸಪ್ಪೇ ಸಪ್ಪು, ಒಣಗಿಕೊಂಡದ್ದೇ ಹಸಿಯಾಗಿದೆ, ಅತ್ಯಂತ ತಂಪೇ ಸುಡುವ ಅಗ್ನಿ, ಮೂಕನೇ ಪುರಾಣ ಹೇಳುವವ ॥೭೪೦॥ ಸೀರೆಯೇ ನಾನು ಬತ್ತಲು ಎಂದು ನಾಚಿಕೊಳ್ಳುವುದು, ಹಸಿದುಕೊಂಡವನು ಅನ್ನಕ್ಕೆ ಹಸಿದುಕೊಂಡಿದೆ ಎಂದು ಹೇಳುವುದು, ಅಥವಾ ಮುಕ್ತಿಗೆ ಮುಕ್ತಿಯ ದುಷ್ಕಾಳವಾಗುವುದು, ಅಥವಾ ಕರ್ಪುರಕ್ಕೆ ಅದರ ಪರಿಮಳ ಸಿಗದೇ ಇರುವುದು ॥೭೪೧॥ ಸಜ್ಜನನೇ ದುರ್ಜನನು, ಅದ್ವೈತವೇ ದ್ವೈತವು, ಅಥವಾ ಅಹಿತವೇ ಹಿತವು. ಹೀಗೆ ಈಪ್ರಕಾರಗಳಂತೆ ನಮಗೆ ತೋರುತ್ತಿದೆ ॥೭೪೨॥ ಹೇ ಶ್ರೀಕೃಷ್ಣನಾಥನೇ, ಆತ್ಮವು ನಿತ್ಯ, ಮುಕ್ತ ಶುದ್ಧ, ಬುದ್ಧವಾಗಿದೆ ಎಂದು ನೀನೇ ನನಗೆ ಉಪದೇಶವನ್ನು ಮಾಡಿರುವೆ. ಆದರೆ ಈಗ ಅದೇ ಆತ್ಮವು ಗುಣಗಳಿಂದ ಬದ್ಧವಾಗುವುದು ಎಂದು ಹೀಗೆ ಹೇಳುವೆ. ಆದ್ದರಿಂದ ನನ್ನ ಮನದಲ್ಲಿ ದೊಡ್ಡ ಸಂಶಯವು ನಿರ್ಮಾಣಗೊಂಡಿದೆ ॥೭೪೩॥ ಹೇ ಅನಂತನೇ, ಒಬ್ಬಾತನಿಗೆ ಬದ್ಧ,ಮುಕ್ತತೆಯು ಹೇಗೆ ಸಂಭವಿಸುವುದು? ಇದನ್ನು ನೀನು ಕೃಪೆ ಮಾಡಿ ತಿಳಿಸಿ ಹೇಳಬೇಕು ॥೭೪೪॥ ನೀವು ಒಂದು ವೇಳೆ ಮುಕ್ತಿಯು ಆಗಾಂತುಕವಾಗಿದೆ ಎಂದು ಹೀಗೆ ಹೇಳಿದರೆ ಮೋಕ್ಷಕ್ಕೆ ಅನಿತ್ಯವು ಒದಗುವುದು. ಹಾಗೆಯೇ ಬಂಧವು ಆಗಾಂತುಕ ಎಂದು ಹೇಳಲು ಹೋದರೆ ಅದು ಉತ್ಪನ್ನವಾಗುವುದೆಂದು ನಿರ್ಣಯವಾಗುವುದು ॥೭೪೫॥ ಪೂರ್ವದಲ್ಲಿ ಬಂಧನವು ಇದ್ದಿಲ್ಲ, ಅದು ಈಗ ಉತ್ಪನ್ನವಾಯಿತು. ಜೀವವು ಪೂರ್ವದಲ್ಲಿ ಬದ್ಧವಾಗಿದ್ದಿಲ್ಲ. ಅದು ಈಗ ಇಲ್ಲಿಂದ ಜನ್ಮಕ್ಕೆ ಬಂದಿತು. ಹೀಗೆ ಅದರ ಆದಿತ್ವವನ್ನು ಹೇಳಿದರೆ ಅದು ಶಾಸ್ತ್ರಾರ್ಥಕ್ಕೆ ವಿರುದ್ಧವಾಗುವುದು ॥೭೪೬॥ ಮುಕ್ತಿಯು ಅನಾದಿಯಾಗಿದೆ ಮತ್ತು ಬಂಧನವೂ ಅನಾದಿಯಾಗಿದೆ, ಹೀಗೆ ಶ್ರುತಿ, ಸ್ಮೃತಿ ಹಾಗೂ ಇತರ ಶಾಸ್ತ್ರಗಳು ಸಿದ್ಧಮಾಡಿರುವುವು. ಆತ್ಮವು ಒಂದೇ ಇರುವುದು. ಆದರೆ ಅವಸ್ಥೆಗಳು ಎರಡಾಗಿರುವುವು. ಮತ್ತು ಅವೂ ಕೂಡ ಒಂದಕ್ಕೊಂದು ವಿರುದ್ಧವಾಗಿವೆ ॥೭೪೭॥ ಬದ್ಧತೆಯು ಪ್ರಬಲಗೊಂಡಾಗ ಅದು ಮುಕ್ತಿಯನ್ನು ಪೀಡಿಸುತ್ತದೆ ಮತ್ತು ಮುಕ್ತಿಯು ಕೋಪಿಸಿಕೊಳ್ಳಲು ಅದು ಬದ್ಧತೆಯನ್ನು ನುಂಗಿಬಿಡುವುದು. ಶ್ರೀಹರಿಯೇ, ಹಾಗಾದರೆ ಆತ್ಮನಲ್ಲಿ ಈ ಎರಡು ವಿರೋಧ ಅವಸ್ಥೆಗಳು ಇರುವುದಾದರೂ ಹೇಗೆ? ॥೭೪೮॥

ಜೈ ಸಾಂಜವೇಳೇ ಭೇಟೇ ಪಾಹಾಟ । ತೈ ವಿದ್ಯಾ ಅವಿದ್ಯಾ ಹೋಯ ಏಕವಟ । ಸೂರ್ಯ ಅಂಧಾರಾಚಿ ಬಾಂಧೀ ಮೋಟ । ತೈ ಆತ್ಮಾ ನಿಕಟ ಅವಸ್ಥಾ ॥೭೪೯॥ ಹಿಂಗಾಸೀ ಕಾಪುರಾಚಾ ವಾಸು ಜೋಡೇ । ತೈ ಅವಿದ್ಯಾ ವಿದ್ಯೆ ಮಾಜೀ ಪಡೇ । ಸಸಾ ಸಿಂಹಾವರೀ ಜೈ ಚಢೇ । ತೈ ಆತ್ಮ್ಯಾ ಪುಢೇ ಅವಸ್ಥಾ ॥೭೫೦॥ ಉದ್ಧವ ಮ್ಹಣೇ ಕೃಷ್ಣನಾಥಾ । ಯಾ ಜೈ ಕಳಲ್ಯಾ ದೋನಿ ಅವಸ್ಥಾ । ತೈಚಿ ಮುಕ್ತಿ ಆಲೀ ಹಾತಾ । ಮಜ ಸರ್ವಥಾ ಮಾನಲೇ ॥೭೫೧॥ ಮಗ ಮ್ಹಣೇ ಶ್ರೀ ಅನಂತಾ । ವಿಶದ ಸಾಂಗಾವ್ಯಾ ಅವಸ್ಥಾ । ಮ್ಹಣೋನಿ ಚರಣೀ ಠೇವಿಲಾ ಮಾಥಾ । ಮೋಕ್ಷದಾತಾ ತೂ ಮಜ ॥೭೫೨॥ ಸಖೋಲ ಉದ್ಧವಾಚಾ ಪ್ರಶ್ನ । ಐಕೋನ ಸುಖಾವಲಾ ನಾರಾಯಣ । ಮರ್ಝಾ ಉದ್ಧವು ಜಾಹಲಾ ಸಜ್ಞಾನ । ಹರಿಖೇ ಜಗಜ್ಜೀವನ ಡೋಲತು ॥೭೫೩॥ ಪರಮಾರ್ಥೀ ಅವಸ್ಥಾ ಗಾಢೀ । ದೇಖೋನಿ ಪ್ರಶ್ನಾಚೀ ಅತಿಗೋಡೀ । ಉದ್ಧವಾಸೀ ಓವಾಳಾವಯಾ ಆವಡೀ । ಜೀವ ಕುರವಂಡೀ ಕರೂ ಪಾಹೇ ॥೭೫೪॥ ನುಲ್ಲಂಘೀ ಭಕ್ತಾಚೇ ಉತ್ತರ । ಫೋಡಿಲೇ ಗುಹ್ಯ ಜ್ಞಾನಭಾಂಡಾರ । ಭಕ್ತಕೃಪಾ ಜೇ ಅಪಾರ । ಹರಿ ಸಾಚಾರ ತುಷ್ಟಲಾ ॥೭೫೫॥ ಉದ್ಧವಾಚಾ ಪ್ರಶ್ನ ಗಹನ । ಕೃಪಾ ದ್ರವಲಾ ಜಗಜ್ಜೀವನ । ಏಕಾ ವಿನವೀ ಜನಾರ್ದನ । ಆನಂದಘನ ವೋಳಲಾ ॥೭೫೬॥ ತ್ಯಾ ಆನಂದಾಚಾ ಮಹಾಪೂರು । ಶಿಷ್ಯಸರಿತೇಸೀ ಯೇಈಲ ಥೋರು । ತೇಣೇ ಚಿದ್ಗಂಗಾಸಾಗರು । ಶಿಷ್ಯ ಸತ್ವರು ಠಾಕೀಲ ॥೭೫೭॥ ಟಾಕೋನಿಯಾ ಸಂಸಾರ ಆಸ್ಥಾ । ಜೋ ಲಾಗಲಾ ಭಕ್ತಿಪಂಥಾ । ತೋಚಿ ಅಧಿಕಾರೀ ಭಾಗವತಾ । ಪರಮಾರ್ಥಾ ಗ್ರಾಹಕು ॥೭೫೮॥ ಜ್ಯಾಚೇ ಪೋಟಿ ಸಂಸಾರಚಿಂತಾ । ತೋ ಕಥಾ ಐಕತಾಂಚಿ ದುಶ್ಚಿತಾ । ಚಿತ್ತ ಚಿಂತೀ ಜ್ಯಾ ಜ್ಯಾ ಅರ್ಥಾ । ತೋ ಸರ್ವಥಾ ತೇಥೇ ಅಸೇ ॥೭೫೯॥ ಚಿತ್ತ ಜಂವ ನಾಹೀ ಸುಚಿತ್ತ । ತಂವ ನ ಕಳೇ ಶ್ರೀಭಾಗವತ । ಗುರುವಾಂಚೂನಿ ಶ್ರೀಭಾಗವತಾರ್ಥ । ನವ್ಹೇ ಪ್ರಾಪ್ತ ಪುಣ್ಯಾಸೀ ॥೭೬೦॥ ಜೋ ಸಂಸಾರಾಪಾಸೋನಿ ವಿರಕ್ತ । ಗುರುಚರಣೀ ಅತಿ ಅನುರಕ್ತ । ತ್ಯಾಸೀ ಫಾವಲಾ ಏಕ ಪರಮಾರ್ಥ । ಫಳೇ ಭಾಗವತ ತಯಾಸೀ ॥೭೬೧॥ ದೇಖತಾ ಕೃಷ್ಣಾಚೇ ಶ್ರೀಮುಖ । ಉದ್ಧವಾ ನೀಚ ನವೇ ಸಮಾಧಿಸುಖ । ತರೀ ಶ್ರವಣಾಚೀ ಶ್ರದ್ಧಾ ಅಧಿಕ । ಆವಡೀ ದೇಖ ಅನಿವಾರ ॥೭೬೨॥

ಸಾಯಂಕಾಲವು ಮುಂಜಾನೆಗೆ ಭೇಟಿಯಾದರೆ ವಿದ್ಯೆ ಮತ್ತು ಅವಿದ್ಯೆಗಳು ಏಕತ್ರವಾಗಬಹುದು. ಸೂರ್ಯನು ಕತ್ತಲೆಯನ್ನು ಗಂಟುಕಟ್ಟಿಕೊಳ್ಳಲು ಆತ್ಮನಲ್ಲಿ ಅವಸ್ಥೆಗಳು ಇರಬಹುದು ॥೭೪೯॥ ಹಿಂಗಿಗೆ ಕರ್ಪೂರದ ಸುವಾಸನೆ ಬಂದಲ್ಲಿ ಅವಿದ್ಯೆಯು ವಿದ್ಯೆಯ ಹತ್ತಿರ ಇರಬಹುದು. ಮೊಲವು ಸಿಂಹದ ಮೇಲೆ ಏರಿ ಹೋದರೆ ಆಗ ಆತ್ಮನಲ್ಲಿ ಈ ಅವಸ್ಥೆಗಳು ಬರಬಹುದು ॥೭೫೦॥ ಉದ್ಧವನು ಹೇಳಿದನು, ಹೇ ಕೃಷ್ಣನಾಥನೇ, ಈ ಎರಡು ಅವಸ್ಥೆಗಳು ಎಂದು ತಿಳಿಯುವುವೋ ಆಗ ಮಾತ್ರ ಮುಕ್ತಿಯು ಪ್ರಾಪ್ತವಾಗುವುದು. ಇದು ನನಗೆ ಪೂರ್ಣ ಮಾನ್ಯವಿದೆ ॥೭೫೧॥ ಹೇ ಶ್ರೀ ಅನಂತನೇ, ಈಗ ಎರಡು ಅವಸ್ಥೆಗಳನ್ನು ನನಗೆ ಸ್ಪಷ್ಟಮಾಡಿ ಹೇಳಬೇಕು. ನೀನೇ ನನಗೆ ಮೋಕ್ಷವನ್ನು ಕೊಡುವವನಾಗಿರುವೆ. ಹೀಗೆ ಹೇಳುತ್ತ ಉದ್ಧವನು ಶ್ರೀಕೃಷ್ಣನ ಚರಣಗಳಲ್ಲಿ ಮಸ್ತಕವನ್ನಿಟ್ಟನು ॥೭೫೨॥ ಉದ್ಧವನ ಪ್ರಶ್ನೆಯನ್ನು ಕೇಳಿ ನಾರಾಯಣನಿಗೆ ಪರಮ ಸಂತೋಷವಾಯಿತು. ಈಗ ನನ್ನ ಉದ್ಧವನು ಜ್ಞಾನೀಯಾದನು ಎಂದು ಜಗಜ್ಜೀವನನು ಆನಂದದಿಂದ ತೂಗಾಡಹತ್ತಿದನು ॥೭೫೩॥ ಪರಮಾರ್ಥಕ್ಕಾಗಿ ಆತನಲ್ಲಿರುವ ಅತ್ಯಂತ ತಳಮಳವನ್ನು ಮತ್ತು ಆತನಲ್ಲಿ ಪ್ರಶ್ನೆ ಕೇಳುವ ಪ್ರೀತಿಯನ್ನು ಕಂಡು ಶ್ರೀಕೃಷ್ಣನು ಉದ್ಧವನ ಮೇಲಿನಿಂದ ತನ್ನ ಜೀವವನ್ನೇ ನಿವಾಳಿಸಿ ಒಗೆಯಲು ಸಿದ್ಧನಾದನು ॥೭೫೪॥ ಭಗವಂತನು ಭಕ್ತನ ಶಬ್ದಗಳನ್ನು ಎಂದಿಗೂ ಉಲ್ಲಂಘಿಸಲಾರನು. ಈತನೀಗ ತನ್ನ ಗುಪ್ತವಾಗಿರುವ ಜ್ಞಾನಭಾಂಡಾರವನ್ನು ತೆರೆದನು. ಹೀಗೆ ಶ್ರೀಹರಿಯು ನಿಜವಾಗಿಯೂ ಪ್ರಸನ್ನನಾಗಿ ತನ್ನ ಭಕ್ತನ ಮೇಲೆ ಅಪಾರವಾದ ಕೃಪೆ ಮಾಡಿದನು ॥೭೫೫॥ ಉದ್ಧವನು ಗಹನವಾದ ಪ್ರಶ್ನೆಯನ್ನು ಮಾಡಿದನು. ಇದರಿಂದ ಜಗಜ್ಜೀವನ ಶ್ರೀಕೃಷ್ಣನಿಗೆ ಕೃಪೆಯು ದ್ರವಿಸಿತು. ಏಕಾಜನಾರ್ದನನು ವಿನಯಪೂರ್ವಕವಾಗಿ ಹೇಳುವುದೇನಂದರೆ ಆಗ ಆನಂದದ ಮೋಡಗಳೇ ತುಂಬಿ ಬಂದವು ॥೭೫೬॥ ಈತನ ಆನಂದರೂಪ ದೃಷ್ಟಿಯಿಂದ ಶಿಷ್ಯ ರೂಪ ನದಿಗೆ ಪ್ರಚಂಡ ಪೂರವು ಬರುವುದು ಹಾಗೂ ಆ ಶಿಷ್ಯನು ಜ್ಞಾನಗಂಗೆಯ ಸಮುದ್ರವನ್ನು ತೀವ್ರವಾಗಿ ತಲುಪುವನು ॥೭೫೭॥ ಯಾರು ಸಂಸಾರದ ಆಸಕ್ತಿಯನ್ನು ಬಿಟ್ಟುಕೊಟ್ಟು ಭಕ್ತಿಮಾರ್ಗಕ್ಕೆ ಹತ್ತುವರೋ, ಅವರೇ ಭಾಗವತದ ಅಧಿಕಾರಿಯಾಗುವರು ಮತ್ತು ಅವರೇ ಪರಮಾರ್ಥದ ನಿಜವಾದ ಗ್ರಹಿಸುವವರಾಗಿರುವರು ॥೭೫೮॥ ಯಾರ ಮನದಲ್ಲಿ ಸಂಸಾರದ ಚಿಂತೆಯು ಇರುವುದೋ, ಅವನು ಈ ಕಥೆಯನ್ನು ಕೇಳುತ್ತಲೇ ವಿಪರೀತ ಭಾವನೆಗೆ ತುತ್ತಾಗುವನು. ಕಾರಣ ಮನವು ಯಾವ ಮಾತಿನ ಚಿಂತೆಯನ್ನು ಮಾಡುತ್ತಿರುತ್ತದೆಯೋ, ಅದೇ ವಿಷಯದಲ್ಲಿ ಏಕರೂಪವಾಗುತ್ತಿರುವುದು ॥೭೫೯॥ ಚಿತ್ತವು ಎಲ್ಲಿಯವರೆಗೆ ಸುಚಿತ್ತವಾಗುವುದಿಲ್ಲವೋ, ಅಲ್ಲಿಯವರೆಗೆ ಭಾಗವತವು ತಿಳಿಯಲು ಶಕ್ಯವಿಲ್ಲ. ಹಾಗೆಯೇ ಶ್ರೀಗುರುಗಳ ಹೊರತಾಗಿ ಭಾಗವತದ ಅರ್ಥವು ತಿಳಿಯುವುದು ಕಠಿಣವಾಗಿದೆ॥೭೬೦॥ ಯಾವನು ಸಂಸಾರದಿಂದ ವಿರಕ್ತನಾಗಿ, ಗುರುಚರಣಗಳಲ್ಲಿ ಆಸಕ್ತನಾಗಿರುವನೋ, ಅವನಿಗೆ ಪರಮಾರ್ಥದ ಪ್ರಾಪ್ತಿಯಾಗುವುದು. ಮತ್ತು ಭಾಗವತವು ಫಲದ್ರೂಪವಾಗುವುದು ॥೭೬೧॥ ಶ್ರೀಕೃಷ್ಣನ ಮುಖ ಕಂಡು ಉದ್ಧವನಿಗೆ ನಿತ್ಯ ನೂತನವಾದ ಸಮಾಧಿ ಸುಖ ಪ್ರಾಪ್ತವಾಗುತ್ತಿತ್ತು. ಆದರೂ ಸಹ ಆತನಿಗೆ ಇನ್ನೂ ಹೆಚ್ಚಿಗೆ ಶ್ರವಣದ ಶ್ರದ್ಧೆವಿತ್ತು ಮತ್ತು ಪ್ರೀತಿಯೂ ಬಹಳಿತ್ತು ॥೭೬೨॥

ಜೋ ಶ್ರುತಿಪ್ರತಿಪಾದ್ಯ ಚಿದ್‌ಘನ । ತ್ಯಾ ಕೃಷ್ಣಾಚೇ ಗುಹ್ಯ ಜ್ಞಾನ । ಪುಢತಪುಢತೀ ಹೋಆವಯಾ ಶ್ರವಣ । ಕರೀ ಪ್ರಶ್ನ ಅತಿಯೋಗ್ಯ ॥೭೬೩॥ ವಿದ್ಯಾ ಅವಿದ್ಯೇಚಾ ನಿರಾಸು । ಶ್ರೀಕೃಷ್ಣ ಸಾಂಗೇಲ ಪರೇಶು । ಪುಢೀಲ ಅಧ್ಯಾಯ ಅತಿಸುರಸು । ಶ್ರೋತಾ ಅವಕಾಶು ಮಜ ದ್ಯಾವಾ ॥೭೬೪॥ ತೋ ಕೃಷ್ಣ ಉದ್ಧವ ಸಂವಾದು । ಪುಢಿಲೇ ಕಥೇಚಾ ಅತಿವಿನೋದು । ಏಕಾ ಜನಾರ್ದನೀ ಮಹಾಬೋಧು । ಪರಮಾನಂದು ಪ್ರಕಟೇಲ ॥೭೬೫॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಶ್ರೀಕೃಷ್ಣೋದ್ಧವಸಂವಾದೇ ಪರಮಹಂಸ ಸಂಹಿತಾಯಾಂ
ಏಕಾಕಾರ ಟೀಕಾಯಾಂ ದಶಮೋಽಧ್ಯಾಯಃ ॥೧೦॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರುತಿಯು ಯಾವುದನ್ನು ಕುರಿತು ಪ್ರತಿಪಾದನೆಯನ್ನು ಮಾಡಿದೆಯೋ, ಅಂತಹ ಜ್ಞಾನರೂಪ ಪರಮಾತ್ಮ ಶ್ರೀಕೃಷ್ಣನ ಗುಹ್ಯ ಜ್ಞಾನವು ಅಧಿಕವಾಗಿಯೇ ತಿಳಿಯಬೇಕೆಂದು ಉದ್ಧವನು ಯಥಾಯೋಗ್ಯ ಪ್ರಶ್ನೆಯನ್ನು ಮಾಡಿದನು ॥೭೬೩॥ ಶ್ರೀಕೃಷ್ಣನು ಈಗ ವಿದ್ಯಾ ಮತ್ತು ಅವಿದ್ಯಾ ಇವುಗಳ ನಿರಸನೆಯನ್ನು ಮಾಡುವವನಿದ್ದಾನೆ. ಮುಂದಿನ ಅಧ್ಯಾಯವು ಅತಿಸುರಸವಾಗಿರುವುದು, ಕಾರಣ ಶ್ರೋತೃಗಳು ಆದರತ್ತ ಲಕ್ಷವನ್ನು ಕೊಡಬೇಕು ॥೭೬೪॥ ಶ್ರೀಕೃಷ್ಣ ಮತ್ತು ಉದ್ಧವರ ಸಂವಾದದ ಈ ಕಥೆಯು ಬಹು ರಮಣೀಯವಾಗಿದೆ. ಕಾರಣ ಏಕನಾಥ ಜನಾರ್ದನರಲ್ಲಿಯೂ ಆತ್ಮಬೋಧ ಮತ್ತು ಪರಮಾನಂದವು ಪ್ರಕಟವಾಗುವುದು ॥೭೬೫॥

ಈ ಪ್ರಕಾರವಾಗಿ ಶ್ರೀಭಾಗವತದ ಹನ್ನೊಂದನೆಯ ಸ್ಕಂಧದಲ್ಲಿನ ಏಕನಾಥ ಮಹಾರಾಜರ ಭಾಷ್ಯೆಯ ಹತ್ತನೆಯ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಹನ್ನೊಂದನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ಸಚ್ಚಿದ್‌ಘನ । ವರ್ಷತಾಹೇ ಸ್ವಾನಂದ ಜೀವನ । ಮುಮುಕ್ಷುಮಯೂರಕುಳೇ ಜಾಣ । ಹರಿಖೇ ಉಡ್ಡಾಣ ಕರಿತಾತೀ ॥೧॥ ತೋ ಸಜಲ ದೇಖೋನೀಮೇಹೋ । ''ಸೋಹಂಭಾವೇ'' ಫೋಡಿತೀ ಟಾಹೋ । ರೋಮಾಂಚಪಿಸೀ ಪಸರೂನಿ ಪಹಾ ಹೋ। ಸತ್ತ್ವೇಲವಲಾಹೋ ನೃತ್ಯಾಚಾ ॥೨॥ ನಾಚತೀ ಸ್ವಾನಂದಾಚೇನಿ ಮೇಳೇ । ತೇಣೇ ಸರ್ವಾಂಗೀ ನಿಘಾಲೇ ಡೋಳೇ । ಪಿಸೇ ದೇಖಣೆ ಜಾಹಲೀ ಸಕಳೇ । ತೇ ಶಿರೀ ಗೋಪಾಳೇ ವಾಹಿಲೀ ॥೩॥ ತೋ ಮೇಘ ದೇಖೋನಿ ಸಂಮುಖ । ಆರ್ತ ಚಾತಕ ಪಸರಿತೀ ಮುಖ । ಬಿಂದುಮಾತ್ರೇ ಪಾವಲೇ ಸುಖ । ನಿತ್ಯ ನಿರ್ದೋಖ ತೇ ಜಾಹಲೇ ॥೪॥ ಆರ್ತತೃಷಾ ತತ್ಕಾಳ ವೋಳೇ । ನಿವಾಲೇ ತೇಣೇ ಸ್ವಾನಂದಜಳೇ । ಮಗ ಹರಿಖಾಚೇನಿ ಕಲ್ಲೋಳೇ । ಸುಖಸೋಹಳೇ ಭೋಗಿತೀ ॥೫॥ ಸುಭೂಮಿ ದೇಖೋನಿ ನಿರ್ಮಳ । ಜಾಣೋನಿ ವರ್ಷತೀ ಕಾಳವೇಳ । ವರ್ಷೋ ಲಾಗಲೇ ಜೀ ಪ್ರಬಳ । ಜಲಕಲ್ಲೋಳ ಅನಿವಾರ ॥೬॥ ತೇಣೇ ವೋಳಲೇನಿ ಕೃಪಾಭರೇ । ಶಿಷ್ಯಸರಿತೇಸೀ ಪೂರು ಭರೇ। ವಿಕಲ್ಪವೋಸಣೇ ಏಕಸರೇ । ಮಹಾಪೂರೇ ವಾಹವಿಲೀ ॥೭॥ ತೇಣೇ ಪ್ರವಾಹನಿರ್ಮಳಜಳೇ । ಚಿದೈಕ್ಯಸಾಗರೀ ಸರಿತಾ ಮಿಳೇ । ಮಗ ಸಮರಸೋನಿ ತೇಣೇ ಜಳೇ । ರಾಹೇ ನಿಶ್ಚಳೇ ನಿಜರೂಪೇ ॥೮॥ ವೈರಾಗ್ಯರಾಬೇ ಶುದ್ಧ ಕೇಲೀ । ಪೃಥ್ವೀ ನಿಜವೋಲಾ ವೋಳಲೀ । ಕಠಿಣತ್ವೇವೀಣ ಮಾರ್ದವಾ ಆಲೀ ।ನಾಹೀ ಅಂಕುರಲೀ ಬಹುಬೀಜೇ ॥೯॥ ಅಖಂಡ ವರ್ಷತಾ ಜಳಮೇಳೀ । ವಾಸನೇಚೇ ಢೇಪೇ ವಿರಾಲೀ । ಸದ್‌ಭಾವಾಚೇ ವೋಲ ಜಾಹಲೀ । ವಾಫ ಲಾಗಲೀ ಬೋಧಾಚೀ ॥೧೦॥ ತೇಥೇ ನ ಪೇರಿತಾಂಚಿ ಜಾಣ । ಸಹಜ ನಿಜಬೀಜೇ ಪರಿಪೂರ್ಣ । ಅಂಕುರಲೀ ಆಪಣಿಯಾ ಆಪಣ । ಸಿದ್ಧಸಂಪೂರ್ಣ ಸ್ವಭಾವೇ ॥೧೧॥

ಹೇ ಓಂಕಾರ ಸ್ವರೂಪ ಸದ್ಗುರುವೇ, ನಿನಗೆ ನಮಸ್ಕಾರಗಳು. ಹೇ ಸದ್ಗುರುರಾಯನೇ, ನೀನು ಸತ್, ಚಿತ್‌ರೂಪ ಮೇಘನಾಗಿರುವೆ. ನೀನು ಸ್ವಾನಂದರೂಪ ಜಲವನ್ನು ಮಳೆಗರೆಯುವೆ. ಆದ್ದರಿಂದ ಮುಮುಕ್ಷುರೂಪ ಮಯೂರಗಳು ಆನಂದದಿಂದ ಕುಪ್ಪಳಿಸಿ ಕುಣಿಯುವುವು ॥೧॥ ಜಲಯುಕ್ತ ಮೇಘಗಳನ್ನು ಕಂಡಾಕ್ಷಣವೇ ಅವು ಸೋಹಂ ಭಾವದಿಂದ ಚೀತ್ಕಾರ ಮಾಡುವುವು. ತಮ್ಮ ರೋಮಾಂಚಕಾರಕ ಗರಿಗಳನ್ನು ಪಸರಿಸಿ ಸತ್ವದ ನೃತ್ಯವನ್ನು ಮಾಡತೊಡಗುವುವು ॥೨॥ ಅವು ಸ್ವಾನಂದದ ಭರದಲ್ಲಿ ಕುಣಿಯುತ್ತಿರುವುದರಿಂದ ಅವುಗಳ ಎಲ್ಲ ಮೈತುಂಬ ಕಣ್ಣುಗಳು ಹುಟ್ಟಿಕೊಂಡು ಆಗ ಎಲ್ಲ ಗರಿಗಳೂ ಸುಂದರವಾಗಿ ತೋರುತ್ತಿರುವುವು. ಆದ್ದರಿಂದ ಶ್ರೀಕೃಷ್ಣನು ಆ ಗರಿಯನ್ನು ತನ್ನ ಮಸ್ತಕದಲ್ಲಿ ಧರಿಸುವನು ॥೩॥ ಈ ಮೇಘವನ್ನು ಎದುರಿನಲ್ಲಿ ಕಂಡು ಆರ್ತರೂಪ ಚಾತಕ ಪಕ್ಷಿಗಳು ಮುಖ ತೆರೆಯುವುವು. ಆಗ ಅವುಗಳ ಮುಖಗಳಲ್ಲಿ ಹನಿ ಒಂದು ಬಿದ್ದರೆ ಸಾಕು, ಅವು ಸುಖಿಗಳಾಗಿ ಸದೈವ ನಿರ್ದೋಷಿಗಳಾಗುವುವು ॥೪॥ ನೀರಡಿಸಿದವರ ನೀರಡಿಕೆಯು ತತ್ಕಾಲದಲ್ಲಿ ನಿರ್ನಾಮವಾಗುವುದು. ಸ್ವಾನಂದ ಜಲದಿಂದ ಇವರು ತೃಪ್ತರಾಗುವರು. ಮತ್ತು ಆನಂದದ ಭರದಲ್ಲಿ ಸುಖೋತ್ಸವವನ್ನು ಭೋಗಿಸುವರು. ॥೫॥ ಉತ್ತಮ ಮತ್ತು ಹದಗೊಂಡ ನೆಲವನ್ನು ಕಂಡು ಆ ಯಾವ ಮೇಘವು ಯೋಗ್ಯ ಕಾಲದಲ್ಲಿ ಬಹಳಷ್ಟು ಮಳೆಗರೆಯುವುದು. ನೀರಿನ ಶಿಷ್ಯರೂಪ ದೊಡ್ಡ ತೆರೆಗಳು ನಿರ್ಮಾಣಗೊಳ್ಳುವುವು ॥೬॥ ಆ ಯಾವ ಕೃಪೆಯ ಮಳೆಯು ಆರಂಭವಾಗಲು ಶಿಷ್ಯರೂಪ ನದಿಗೆ ಮಹಾಪೂರವು ಬರುವುದು. ಆ ಮಹಾಪೂರವು ವಿಕಲ್ಪಗಳ ಕಸಕಡ್ಡಿಗಳನ್ನು ಕೊಚ್ಚಿಕೊಂಡು ಹೋಗುವುದು ॥೭॥ ತದನಂತರ ನಿರ್ಮಲ ಪ್ರವಾಹದ ನದಿಯು ಚಿದೈಕ ಸಾಗರಕ್ಕೆ ಹೋಗಿ ಕೂಡುವುದು. ಅಲ್ಲಿ ಅದರಲ್ಲಿ ಸಮರಸಗೊಂಡು ತನ್ನ ಮೂಲದ ಆತ್ಮಸ್ವರೂಪದಲ್ಲಿ ಸ್ಥಿರವಾಗುವುದು ॥೮॥ ಆಮೇಲೆ ವೈರಾಗ್ಯದ ಪರಿಶ್ರಮದಿಂದ ಶುದ್ಧ ಮಾಡಿದ ಭೂಮಿಯು ತನ್ನ ಮೂಲದ ಹಸಿಯಿಂದ ತನ್ನಷ್ಟಕ್ಕೆ ತಾನೇ ತೋಯುವುದು. ಅದರಿಂದ ಅದರ ಕಠಿಣತನವು ಇಲ್ಲದಾಗಿ ಈಗ ಮೃದುವಾಗಿರುವುದು. ಆದರೆ ಅದರಲ್ಲಿ ಇನ್ನೂ ಬೀಜವನ್ನು ಬಿತ್ತಿ ಬೆಳೆದಿರುವುದಿಲ್ಲ ॥೯॥ ಆ ಭೂಮಿಯ ಮೇಲೆ ಸತತವಾಗಿ ಮಳೆಗರೆಯಲು ವಾಸನಾರೂಪದ ಮಣ್ಣಿನ ಹೆಂಟೆಗಳು ಸಹಜವಾಗಿ ಕರಗಿ ಹೋಗುವುವು. ಸದ್ಭಾವದ ಹಸಿಯಾಗಿ ಅದರಿಂದ ಜ್ಞಾನದ ಉಗಿ ಹೊರಡುವುದು ॥೧೦॥ ಆಗ ಅಲ್ಲಿ ಆತ್ಮಬೀಜವನ್ನು ಬಿತ್ತದೇ ಅದಕ್ಕೆ ಸಹಜವಾಗಿ ಅಂಕುರಗಳು ಹುಟ್ಟುವುವು. ಹೊಲವು ಸ್ವಭಾವತಃವೇ ಜೋರಾಗಿ ಬೆಳೆಯುವುದು. ಅವುಗಳಲ್ಲಿ ಧಾನ್ಯಗಳು ತುಂಬಿರುವುವು ॥೧೧॥

ತೇ ಪರಮ ಕೃಪೇಚಿಯೇಪುಷ್ಟೀ । ಸ್ವಾನಂದೇ ಪಿಕಲೀ ಸಮದೃಷ್ಟೀ । ಪರಮಾನಂದೇ ಕೋಂದಲೀ ಸೃಷ್ಟೀ । ಐಕ್ಯೆ ಸಂವಸಾಟೇ ಜೀವಶಿವಾ ॥೧೨॥ ಫಿಟಲಾ ದುಃಖದುಷ್ಕಾಳು । ಪಾಹಲಾ ಸುಖಾಚಾ ಸುಕಾಳು । ವೋಳಲಾ ಸದ್ಗುರು ಕೃಪಾಳು । ಆನಂದ - ಕಲ್ಲೋಳು ಸಚ್ಛಿಷ್ಯಾ ॥೧೩॥ ವರ್ಷತಾ ನಿಜಪರ್ಜನ್ಯಧಾರಾ । ವರ್ಷಲಾ ನಾನಾ ಅವತಾರ - ಗಾರಾ । ಕಾರ್ಯಾನುರೂಪೇ ತದಾಕಾರಾ । ವಿರೋನಿ ನಿರಾಕಾರಾ ತ್ಯಾ ಹೋತೀ ॥೧೪॥ ತ್ಯಾ ಪರ್ಜನ್ಯಾಚಾ ವೋಸಾಡಾ । ದೈವೇ ಲಾಗಲ್ಯಾ ಜಡಮೂಢಾ । ತೋ ಸರತಾ ಹೋಯ ಸಂತಾಪುಢಾ । ಅವಚಟೇ ಶಿಂತೋಡಾ ಜೈ ಲಾಗೇ ॥೧೫॥ ತೋ ಮಹಾಮೇಘ ಶ್ರೀಹರೀ । ಸದ್ಗುರು ಕೃಪಾ ವೋಳೇ ಜಯಾವರೀ । ತೋಚಿ ಧನ್ಯ ಚರಾಚರೀ । ಪೂಜ್ಯ ಸುರನರೀ ತೋ ಕೀಜೇ ॥೧೬॥ ಗುರುನಾಮೇ ಅತಿ ಘನವಟು । ಶಿಷ್ಯ ತಾರೂನಿ ಅತಿ ಹಳುವಟು । ಜ್ಯಾಚಾ ಆದಿ - ಮಧ್ಯ - ಶೇವಟು । ನ ಕಳೇ ಸ್ಪಷ್ಟು ವೇದಾಂಸೀ ॥೧೭॥ ತೋ ಸದ್ಗುರು ಶ್ರೀಜನಾರ್ದನು । ವೋಳಲಾಸೇ ಆನಂದಘನು । ತೇಣೇ ಏಕಾ ಏಕು ಕೇಲಾ ಪಾವನು । ಸಾಂಡವೋನು ಏಕಪಣ ॥೧೮॥ ಏಕ ತೇಚಿ ಅನೇಕ । ಅನೇಕ ತೇಚಿ ಏಕ । ಹೇ ಹೀ ಕೇಲೇ ನಿಷ್ಟಂಕ । ಸ್ವಬೋಧೇ ದೇಖ ಬೋಧೋನಿ ॥೧೯॥ ಬೋಧೋನಿಯಾ ನಿಜ ಐಕ್ಯತಾ । ಐಕ್ಯೇ ಲಾವಿಲೇ ಭಕ್ತಿಪಂಥಾ । ಮಜ ಪ್ರವರ್ತವಿಲೇ ಶ್ರೀಭಾಗವತಾ । ನಿಜ ಕಥಾ ಗಾವಯಾ॥೨೦॥ ತೇಚಿ ಶ್ರೀಭಾಗವತೀಚೀ ಕಥಾ । ದಶಮಾಧ್ಯಾವೋ ಸಂಪತಾ । ತೇ ಬದ್ಧ ಮುಕ್ತಾಂಚೀ ವ್ಯವಸ್ಥಾ । ಉದ್ಧವೇ ಕೃಷ್ಣನಾಥಾ ಪೂಶಿಲೀ ॥೨೧॥ ಸಖೋಲ ಉದ್ಧವಾಚಾ ಪ್ರಶ್ನ । ಐಕೋನಿಯಾ ಶ್ರೀಕೃಷ್ಣ । ನಿಜಹೃದಯೀಚೇ ಗುಹ್ಯಜ್ಞಾನ । ಉದ್ಧವಾಸೀ ಜಾಣ ಸಾಂಗೇಲ ॥೨೨॥ ಯೇಣೇ ಪ್ರಶ್ನೋತ್ತರಶ್ರವಣೇ । ಉಠೇ ಜನ್ಮಮರಣಾಂಚೇ ಧರಣೇ । ಸಂಸಾರಾಚೇ ಖತ ಫಾಡಣೇ । ಫಿಟಲೇ ಲಾಹಣೇ ವಿಷಯಾಂಚೇ ॥೨೩॥ ಮೋಕ್ಷಮಾರ್ಗೀಚೇ ಕಾಪಡೀ । ಸಾಧನಿ ಶಿಣತೀ ಬಾಪುಡೀ । ತಿಹೀ ಶೀಘ್ರ್ಯಾಯಾವೇ ತಾಂತಡೀ । ಜಿಣಾವಯಾ ವೋಢೀ ಬಂಧಮೋಕ್ಷಾಂಚ್ಯಾ ॥೨೪॥ ಜೇ ಕಷ್ಟತೀ ಜಪತಪಸಾಧನೇ । ಶಿಣತೀ ಧ್ಯೇಯ - ಧ್ಯಾನ - ಅನುಷ್ಠಾನೇ । ತೇ ತೇ ಶೀಘ್ರ ಯಾ ವಿಂದಾನೇ । ಜ್ಞಾನಾಜ್ಞಾನೇ ಜಿಣಾವಯಾ ॥೨೫॥ ಐಶೀ ಕಥಾ ಆಹೇ ಗಹನ । ಶ್ರೋತೀ ವ್ಹಾವೇ ಸಾವಧಾನ । ಏಕಾ ವಿನವೀ ಜನಾರ್ದನ । ಸ್ವಾನಂದಘನ ತುಷ್ಟಲಾ ॥೨೬॥

ಇಂತಹ ಆ ಯಾವ ಪರಮ ಕೃಪೆಯ ಪೋಷಣೆಯಿಂದ ಬೆಳೆಗೆ ಸಮದೃಷ್ಟಿಯ ತೆನೆಗಳು ಹುಟ್ಟುವುವು. ಸರ್ವ ಸೃಷ್ಟಿಯು ಪರಮಾನಂದದಿಂದ ತುಂಬಿ ತುಳುಕುವುದು ಹಾಗೂ ಜೀವಶಿವರ ಐಕ್ಯವಾಗುವುದು ॥೧೨॥ ದುಃಖರೂಪ ಬರಗಾಲವು ಇಲ್ಲದಾಗುವುದು. ಮತ್ತು ಸುಖದ ಸುಗ್ಗಿಯು ಉದಯಕ್ಕೆ ಬರವುದು. ಈ ಪ್ರಕಾರವಾಗಿ ಕೃಪಾವಂತರಾದ ಸದ್ಗುರುಗಳು ಪ್ರೇಮದ ಮಳೆಗರೆದರೆಂದರೆ ಸಚ್ಛಿಷ್ಯನಲ್ಲಿ ಆನಂದದ ತೆರೆಗಳು ಉತ್ಪನ್ನವಾಗುವುವು ॥೧೩॥ ಆತ್ಮಜ್ಞಾನರೂಪ ಪರ್ಜನ್ಯದ ಧಾರೆಗಳು ಬೀಳುತ್ತಿರಲು ಅವುಗಳೊಂದಿಗೆ ಅವತಾರರೂಪ ಆಣೆಕಲ್ಲುಗಳ ವೃಷ್ಟಿಯು ಆಗುವುದು. ಆ ಆಣೆಕಲ್ಲುಗಳು ಬೇರೆ ಬೇರೆ ರೂಪಗಳಲ್ಲಿ ಹುಟ್ಟಿ ಕೊನೆಗೆ ಕರಗಿ ನಿರಾಕಾರವಾಗುವುವು ॥೧೪॥ ಆ ಯಾವ ಮಳೆಯ ಹನಿಯು ಒಂದು ವೇಳೆ ಅಜ್ಞಾನಿ ಮನುಷ್ಯನ ಮೇಲೆ ಸಹಜವಾಗಿ ದೈವಯೋಗದಿಂದ ಹಾರಿಬಂದು ಆತನ ಮುಖದಲ್ಲಿ ಬಿದ್ದಿದ್ದೇ ನಿಜವಾದರೆ, ಆತನು ಸಂತಶ್ರೇಷ್ಠನಾಗುವನು ॥೧೫॥ ಹೀಗೆ ಶ್ರೀಹರಿರೂಪ ಸದ್ಗುರು ಮಹಾಮೇಘದಕೃಪೆಯು ಯಾರಿಗಾಗುವುದೋ ಅವನು ಸರ್ವ ಚರಾಚರಗಳಲ್ಲಿ ಧನ್ಯನಾಗುವನು. ದೇವಮಾನವರಿಗೆ ಆತನು ಪೂಜ್ಯನಾಗುವನು ॥೧೬॥ ಗುರು ಶಬ್ದದ ಅರ್ಥವು ಅತ್ಯಂತ ಜಡವಾಗಿರುವುದು. ಆದರೆ ಭವಸಾಗರದಲ್ಲಿ ಸ್ವತಃ ಪಾರಾಗಿ ಶಿಷ್ಯನನ್ನೂ ಪಾರುಗೊಳಿಸುವಷ್ಟು ಹಗುರನಾಗಿರುವನು. ಈತನ ಆದಿ,ಮಧ್ಯ, ಅಂತ ವೇದಗಳಿಗೂ ತಿಳಿಯಲಾರದು ॥೧೭॥ ಆ ಯಾವ ಆನಂದಘನನಾದ ಸದ್ಗುರು ಜನಾರ್ದನಸ್ವಾಮಿಯು ಪ್ರಸನ್ನನಾಗಿ ತಾನು ಏಕತ್ವವನ್ನು ಮುರಿದು ಏಕನಾಥನಿಗೆ ಪಾವನಗೊಳಿಸಿದನು ॥೧೮॥ ಆತ್ಮಜ್ಞಾನದ ಬೋಧೆಯಿಂದ ಆತನು ಒಂದೇ ಅನೇಕವು ಮತ್ತು ಅನೇಕವೇ ಒಂದು ಎಂದು ನಿಶ್ಚಯಗೊಳಿಸಿ ತಿಳಿಸಿಕೊಟ್ಟನು ॥೧೯॥ ಆತನು ತನ್ನ ಐಕ್ಯದ ಜ್ಞಾನವನ್ನು ಮಾಡಿಕೊಟ್ಟನು. ಐಕ್ಯದಿಂದಲೇ ಭಕ್ತಿಮಾರ್ಗಕ್ಕೆ ಹಚ್ಚಿಕೊಟ್ಟನು. ಮತ್ತು ಶ್ರೀಭಾಗವತ ಎಂಬ ತಮ್ಮ ಕಥೆಯನ್ನು ನನಗೆ ನುಡಿಯಲು ಪ್ರವರ್ತಮಾಡಿದನು ॥೨೦॥ ಈ ಭಾಗವತದ ಕಥೆಯು, ಹತ್ತನೆಯ ಅಧ್ಯಾಯದ ಕೊನೆಯಲ್ಲಿ ಉದ್ಧವನು ಶ್ರೀಕೃಷ್ಣನಿಗೆ ಬದ್ಧ ಮತ್ತು ಮುಕ್ತ ಇವರ ಸ್ಥಿತಿಯನ್ನು ಹೇಳಬೇಕೆಂಬ ವಿಷಯಕ್ಕೆ ಪ್ರಶ್ನೆಯನ್ನು ಮಾಡಿದನು. ಕಥೆಯು ಇಲ್ಲಿಯವರೆಗೆ ಬಂದಿರುವುದು ॥೨೧॥ ಉದ್ಧವನ ಪ್ರಶ್ನೆಯು ಬಹಳ ಗಹನವಾಗಿತ್ತು. ಅದನ್ನು ಶ್ರೀಕೃಷ್ಣನು ಕೇಳಿ, ಈಗ ಆತನು ತನ್ನ ಅಂತಃಕರಣದಲ್ಲಿನ ಗುಹ್ಯಜ್ಞಾನವನ್ನು ಉದ್ಧವನಿಗೆ ಹೇಳುವವನಿದ್ದಾನೆ ॥೨೨॥ ಈ ಯಾವ ಪ್ರಶ್ನೋತ್ತರಗಳನ್ನು ಕೇಳಲು, ಜನ್ಮಮರಣಗಳ ಆಣೆಕಟ್ಟು ಇಲ್ಲದಾಗುವುದು. ಸಂಸಾರದ ಜಮಾಖರ್ಚು ಖಾತೆಯು ಹರಿದುಹೋಗುವುದು. ವಿಷಯಗಳ ವ್ಯವಹಾರವೂ ಮುಗಿಯುವುದು ॥೨೩॥ ಮೋಕ್ಷಮಾರ್ಗದಲ್ಲಿನ ಪಾಪ, ಯಾತ್ರಿಕರು ಅನೇಕ ಸಾಧನೆಗಳನ್ನು ಮಾಡುತ್ತ ಸಾಕು ಸಾಕಾಗಿರುವರೋ, ಅವರು ಈ ಯಾವ ಬದ್ಧ ಮೋಕ್ಷದ ಜಗ್ಗಾಟವನ್ನು ಗೆದಿಯಲು ತ್ವರೆಯಾಗಿ ಈ ಕಡೆ ಬರುವವರಾಗಬೇಕು ॥೨೪॥ ಇನ್ನೂ ಕೆಲವರು ಜಪತಪಾದಿ ಸಾಧನೆಗಳನ್ನುಮಾಡಿ ಅಥವಾ ಧ್ಯೇಯ ಧ್ಯಾನಾದಿ ಅನುಷ್ಠಾನಗಳನ್ನುಮಾಡಿ ದಣಿದುಕೊಂಡವರು, ಇವರೂ ಕೂಡ ಬಹು ಕೌಶಲ್ಯದಿಂದ ಜ್ಞಾನ, ಅಜ್ಞಾನ ಈ ಎರಡನ್ನೂ ಗೆಲ್ಲುವುದಕ್ಕಾಗಿ ತ್ವರೆಮಾಡಿ ಬರಬೇಕು ॥೨೫॥ ಹೀಗೆ ಈ ಕಥೆಯು ಬಹು ಗಹನವಾಗಿರುವುದು. ಆದ್ದರಿಂದ ಶ್ರೋತೃಗಳವರು ಸಾವಧಾನರಾಗಬೇಕು. ಆನಂದಘನರಾದ ಶ್ರೀಜನಾರ್ದನಸ್ವಾಮಿಗಳವರು ಈಗ ಪ್ರಸನ್ನರಾಗಿರುವರೆಂದು ಏಕನಾಥರು ವಿನಂತಿಸಿಕೊಳ್ಳುವರು ॥೨೬॥

ಅಕರಾವೇ ಅಧ್ಯಾಯೀ ಜಾಣ । ಇತುಕೇ ಸಾಂಗೇಲ ಶ್ರೀಕೃಷ್ಣ । ಬದ್ಧಮುಕ್ತಾಂಚೇ ವೈಲಕ್ಷಣ್ಯ । ಆಣಿಕ ಲಕ್ಷಣ ಸಾಧೂಚೇ ।೨೭।। ತೇಣೇಂಚ ಪ್ರಸಂಗೇ ಜಾಣ । ಸಾಂಗೇಲ ಭಕ್ತೀಚೇ ಲಕ್ಷಣ । ಅಕರಾಹೀ ಪೂಜೇಸೀ ಅಧಿಷ್ಠಾನ । ಇತುಕೇ ನಿರೂಪಣ ಹರಿ ಬೋಲೇ ।೨೮।।

ಶ್ರೀ ಭಗವಾನುವಾಚ :-

ಬದ್ಧೋ ಮುಕ್ತ ಇತಿ ವ್ಯಾಖ್ಯಾ ಗುಣತೋ ಮೇನ ವಸ್ತುತಃ ।
ಗುಣಸ್ಯ ಮಾಯಾಮೂಲತ್ವಾನ್ನ ಮೇ ಮೋಕ್ಷೋ ನ ಬಂಧನಮ್ ।।೧।।

ಅರ್ಥ :- ಭಗವಾನ ಶ್ರೀಕೃಷ್ಣನು ನುಡಿದನು ; ಪ್ರಿಯ ಉದ್ಧವಾ, ಆತ್ಮವು ಬದ್ಧವಾಗಿದೆ ಮತ್ತು ಮುಕ್ತವಾಗಿದೆ. ಇದು ನನ್ನ ಆಧೀನದಲ್ಲಿರುವ ತತ್ತ್ವಾದಿ ಗುಣರೂಪ ಉಪಾಧಿಯಿಂದ ಇರುವುದಾಗಿದೆ. ವಸ್ತುತಃ ಅದು ಬದ್ಧವೂ ಅಲ್ಲ, ಮುಕ್ತವೂ ಅಲ್ಲ, ಸರ್ವಗುಣಗಳು ಮಾಯಾ ಮೂಲಕ ಇರುವುವು. ಇಂದ್ರಜಾಲ, ಜಾದೂ ಆಟಸಮಾನವಾಗಿರುವುವು. ಆದ್ದರಿಂದ ನನಗೆ ಮೋಕ್ಷವೂ ಇಲ್ಲ, ಬಂಧನವೂ ಇಲ್ಲ.

ಉದ್ಧವಾ ಬದ್ಧ-ಮುಕ್ತ ಅವಸ್ಥಾ । ಜರೀ ಸತ್ಯ ಮ್ಹಣಸೀ ವಸ್ತುತಾ । ತರೀ ನ ಘಡೇ ಗಾ ಸರ್ವಥಾ । ಐಕ ಆತಾ ಸಾಂಗೇನ ।೨೯।। ಬದ್ಧ - ಮುಕ್ತ ಅವಸ್ಥಾ । ಮಾಝ್ಯೇ ಸ್ವರೂಪೀ ನಾಹೀ ತತ್ತ್ವತಾ । ಹೇ ಗುಣ ಕಾರ್ಯಾಚೀ ವಾರ್ತಾ । ಸಂಬಂಧು ತತ್ತ್ವತಾ ಮಜ ನಾಹೀ ।೩೦।। ಮಾಝ್ಯಾ ನಿಜಸ್ವರೂಪಾಚ್ಯಾ ಠಾಯೀ । ಬದ್ಧಮುಕ್ತತಾ ದೋನೀ ನಾಹೀ । ಬದ್ಧತಾ ಮುಕ್ತತಾ ಗುಣಾಂಚ್ಯಾ ಠಾಯೀ । ಆಭಾಸೇ ಪಾಹೀ ಗುಣಕಾರ್ಯೇ ।೩೧।। ಗುಣ ತೇ ಸಮೂಳ ಮಾಯಿಕ । ಮೀ ಗುಣಾತೀತ ಅಮಾಯಿಕ । ಸತ್ಯಾಸೀ ಜೈ ಬಾಧೇ ಲಟಿಕ । ತೈ ಮೃಗಜಳೀ ಲೋಕ ಬುಡಾಲೇ ।೩೨।। ಚಿತ್ರಿಚೇನಿ ಹುತಾಶನೇ । ಜೈ ಜಾಳಿಜತೀ ಪುರೇ ಪಟ್ಟಣೇ । ಕಾ ಸ್ವಪ್ನೀಚೇನಿ ಮಹಾಧನೇ । ವೇವ್ಹಾರಾ ಹೋಣೇ ಜಾಗೃತೀ ।೩೩।। ಸೂರ್ಯಾಸೀ ಪ್ರತಿಬಿಂಬ ಗಿಳೀ । ಛಾಯಾ ಪುರಾಷಾತೇ ಆಕಳೀ । ಸಮುದ್ರ ಬುಡೇ ಮೃಗಜಳೀ । ತೈ ಮಜ ಗುಣಮೇಳಿ ಬದ್ಧತಾ ।೩೪।। ಜೈ ಜಿಭೇಸೀ ಕೇಸು ನಿಘೇ । ಜೈ ತಳಹಾತೀ ವೃಕ್ಷ ಲಾಗೇ । ಡೋಳ್ಯಾ ಮಾಜೀ ಪರ್ವತ ರಿಗೇ । ತೈ ಮೀ ಗುಣಸಂಗೇ ಅತಿಬದ್ಧು ।೩೫।। ಆಕಾಶ ಖೋಂಚೇ ಸಾಂಬಳೀ । ಕಾಜಳ ಲಾಗೇ ವಾರಯಾ ನಿಡಳೀ । ಕಾ ವಿಜೂಚೇ ಕಪಾಳೀ । ಬಾಶಿಂಗ ಸಬಳೀ ಬಾಂಧಾವೇ ।೩೬।। ಗಗನ ತುಟೋನಿ ಸಮುದ್ರೀ ಬುಡೇ । ಸಪರ್ವತ ಧರಾ ವಾರೇಸಿ ಉಡೇ । ಸೂರ್ಯ ಅಡಖಳೋನಿ ಅಂಧಾರೀ ಪಡೇ । ತರೀ ಮೀ ಸಾಂಪಡೇ ಗುಣಾಂತ ।೩೭।।

ಈ ಯಾವ ಹನ್ನೊಂದನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಬದ್ಧ - ಮುಕ್ತರ ಭೇದವನ್ನು ಮತ್ತು ಸಾಧೂ ಲಕ್ಷಣಗಳನ್ನು ಹೇಳುವನು ।೨೭।। ಇದೇ ಪ್ರಸಂಗದಲ್ಲಿ ಸಾಧಿಸಿ ಭಕ್ತಿಯ ಲಕ್ಷಣಗಳನ್ನು ಹಾಗು ಹನ್ನೊಂದು ಪೂಜೆಯ ಅನುಷ್ಠಾನವನ್ನು ವಿವರಿಸುವ ನಿರೂಪಣೆಯನ್ನು ಶ್ರೀಹರಿಯು ಮಾಡುವನು ।೨೮।।

ಹೇ ಉದ್ಧವನೇ, ಬದ್ಧ ಮತ್ತು ಮುಕ್ತ ಈ ಅವಸ್ಥೆಗಳು ನಿಜವಿರುವುವು ಎಂದು ನೀನು ಮನದಲ್ಲಿ ತಿಳಿಯಬಹುದು. ಆದರೆ ಅವು ವಾಸ್ತವಿಕವಾಗಿ ಹಾಗೆ ನಿಜ ಸ್ಥಿತಿಯಲ್ಲಿಲ್ಲ. ಅದನ್ನೇ ನಿನಗೆ ಹೇಳುವೆನು ಕೇಳು ।೨೯।। ನನ್ನ ಸ್ವರೂಪದಲ್ಲಿ ಬದ್ಧ ಮತ್ತು ಮುಕ್ತ ಎಂಬ ಈ ಸ್ವರೂಪಗಳೇ ಇರುವುದಿಲ್ಲ. ಇವು ಎಲ್ಲವೂ ಗುಣಗಳ ಕಾರ್ಯದ ಪರಿಣಾಮವಾಗಿರುವುದು. ಅವುಗಳ ಯಾವ ಸಂಬಂಧವೂ ಇಲ್ಲ ।೩೦।। ನನ್ನ ಆತ್ಮಸ್ವರೂಪದ ಸ್ಥಾನದಲ್ಲಿ ಬದ್ಧತನವೂ ಇಲ್ಲ ಮತ್ತು ಮುಕ್ತತೆಯೂ ಇರುವುದಿಲ್ಲ. ಗುಣಗಳ ಕಾರ್ಯಗಳಿಂದ ಗುಣಗಳಲ್ಲಿಯೇ ಬದ್ಧತೆಯ ಮತ್ತು ಮುಕ್ತತೆಯ ಭಾಸವಾಗುವುದು ।೩೧।। ಗುಣಗಳಲ್ಲಿ ಸರ್ವಥಾ ಮಾಯಿಕವಾಗಿರುವುವು. ನಾನು ಗುಣಗಳಿಂದ ಭಿನ್ನನು ಮತ್ತು ಮಾಯಾರಹಿತನಾಗಿರುವೆನು. ಸತ್ಯಕ್ಕೆ ಒಂದು ವೇಳೆ ಅಸತ್ಯದ ಬಾಧಕವಾಯಿತೆಂದರೆ ಎಲ್ಲ ಜನರು ಮೃಗಜಳದಲ್ಲಿ ಮುಳುಗಿದಂತಾಗುವುದು ।೩೨।। ಚಿತ್ರದಲ್ಲಿನ ಅಗ್ನಿಯು ಗ್ರಾಮ ಪಟ್ಟಣಗಳನ್ನು ಸುಟ್ಟು ಭಸ್ಮ ಮಾಡಿತೆಂದರೆ, ಅಥವಾ ಸ್ವಪ್ನದಲ್ಲಿ ದೊರೆತ ಮಹಾಧನದಿಂದ ಜಾಗೃತದಲ್ಲಿ ಅದರ ವ್ಯವಹಾರವು ಆಗುತ್ತಿದ್ದರೆ ।೩೩।। ಅಥವಾ ಸೂರ್ಯನಿಗೆ ಆತನ ಪ್ರತಿಬಿಂಬವು ನುಂಗಿಬಿಟ್ಟರೆ, ಹಾಗೂ ಮನುಷ್ಯನಿಗೆ ತನ್ನದೇ ಆದ ನೆರಳು ಆತನಿಗೆ ಕಟ್ಟಿಹಾಕಿದರೆ, ಅಥವಾ ಸಮುದ್ರವು ಮೃಗಜಲದಲ್ಲಿ ಮುಳುಗಿಹೋಯಿತೆಂದರೆ ಆಗ ನಾನು ಗುಣಗಳಸಮುದಾಯದಿಂದ ಬದ್ಧನಾದಂತೆ ತಿಳಿ ।೩೪।। ಅಥವಾ ನಾಲಿಗೆಯ ಮೇಲೆ ರೋಮಗಳು ಹುಟ್ಟಿಕೊಂಡರೆ, ಅಂಗೈಯಲ್ಲಿ ಗಿಡಗಳು ಬೆಳೆದರೆ, ಕಣ್ಣಿನಲ್ಲಿ ಪರ್ವತವು ಸೇರಿಕೊಂಡರೆ, ಆಗ ಮಾತ್ರ ನಾನು ಗುಣಗಳಿಂದ ಬದ್ಧನಾಗುವೆನು ।೩೫।। ಕಬ್ಬಿಣದ ಹಾರೆಯು ಆಕಾಶಕ್ಕೆ ತಿವಿದರೆ, ಕಾಡಿಗೆಯನ್ನು ಗಾಳಿಯ ಹಣೆ, ಹುಬ್ಬುಗಳಿಗೆ ಹಚ್ಚಲು ಬಂದರೆ, ಅಥವಾ ಮಿಂಚಿನ ಮಸ್ತಕಕ್ಕೆ ಒಡಿದು ಬಾಸಿಂಗವನ್ನು ಕಟ್ಟಿದರೆ ।೩೬।। ಅಥವಾ ಆಕಾಶವು ಮುರಿದು ಬಿದ್ದು ಸಮುದ್ರದಲ್ಲಿ ಮುಳುಗಿದರೆ, ಗಾಳಿಯಿಂದ ಪರ್ವತಗಳ ಸಮೇತವಾಗಿ ಪೃಥ್ವಿಯು ಹಾರಿ ಹೋದರೆ, ಸೂರ್ಯನು ಕತ್ತಲಿನಲ್ಲಿ ಸಿಕ್ಕಿಹಾಕಿಕೊಂಡರೆ, ಆಗ ನಾನು ಗುಣಗಳಲ್ಲಿ ಸಿಕ್ಕಿಕೊಳ್ಳುವೆ ।೩೭ ।।

ಅಂತರಿಕ್ಷ ಗಗನೀ ಸರೋವರ । ತ್ಯಾಮಾಜೀ ಕಮಳೇ ಮನೋಹರ । ತೋ ಆಮೋದ ಸೇವಿತೀ ಭ್ರಮರ । ಐಸೇ ಸಾಚಾರ ಜೈ ಘಡೇ ।।೩೮।। ತೈ ಮೀ ಆತ್ಮಾ ಗುಣಸಂಗೇ । ನಾನಾ ವಿಷಯಭೋಗ ಸಂಭೋಗೇ । ಮಗ ತ್ಯಾ ವಿಷಯಾಂಚೇನಿ ಪಾಂಗೇ । ಹೋ ಈನ ಅಂಗೇ ಗುಣಬದ್ಧು ।।೩೯।। ತ್ರಿಗುಣ ಅಂಗೀಕಾರೇ ವರ್ತತಾ । ಗುಣಕಾರ್ಯ - ತದಾತ್ಮತಾ । ತೇಣೇ ಬದ್ಧ - ಮುಕ್ತ - ಅವಸ್ಥಾ । ಭಾಸೇ ವೃಥಾ ಭ್ರಾಂತಾಸೀ ।।೪೦।। ಗುಣಾ ಆತ್ಮ್ಯಾಸೀ ಭಿನ್ನತಾ । ಮ್ಹಣಸೀ ಮಾನಲೀ ತತ್ತ್ವತಾ । ಪರೀ ಗುಣಸಂಗೇ ಆತ್ಮಾ ಅಸತಾ । ಅವಶ್ಯ ವಿಕಾರಿತಾ ಯೇಈಲ ।।೪೧।। ಅಗ್ನಿಸಂಗೇ ಪಾತ್ರ ತಪ್ತ । ಪಾತ್ರತಾಪೇ ಜಳ ಸಂತಪ್ತ । ಜಳತಾಪೇ ಧಾನ್ಯಪಾಕು ಹೋತ । ತೇವೀ ವಿಕಾರವಂತ ನವ್ಹೇ ಆತ್ಮಾ ।।೪೨।। ಅಗ್ನಿತಾಪಾ ಆಂತ । ಆಕಾಶ ನವ್ಹೇ ಸಂತಪ್ತ । ತೇವೀ ಗುಣಸಂಗಾ ಆಂತ । ವಿಕಾರವಂತ ನವ್ಹೇ ಆತ್ಮಾ ।।೪೩।। ನಟ ಅಂಧತ್ವೇ ಅವಗಲಾ । ಪರೀ ತೋ ಆಂಧಳಾ ನಾಹೀ ಜಾಹಲಾ । ತೈಸಾ ಆತ್ಮಾ ಗುಣಸಂಗೇ ಕ್ರೀಡಲಾ । ತರೀ ಅಸೇಸಂಚಲಾ ನಿರ್ಗುಣತ್ವೇ ।।೪೪।। ನಟು ಅಂಧತ್ವೇ ನವ್ಹೇ ಅಂಧು । ಆತ್ಮಾ ಗುಣಸಂಗೇ ನವ್ಹೇ ಬದ್ಧು । ಗುಣ ಮಾಯಿಕ ಆತ್ಮಾ ಶುದ್ಧು । ಯಾ ತ್ಯಾ ಸಂಬಂಧು ಅಸೇನಾ ।।೪೫।। ಆತ್ಮಾ ವ್ಯಾಪಕ ಗುಣ ಪರಿಚ್ಛಿನ್ನ । ಯಾಹೀ ಹೇತು ನ ಘಡೇ ಬಂಧನ । ಸಕಳ ಸಮುದ್ರಾಚೇ ಪ್ರಾಶನ । ಕೇವೀ ರಾಂಜಣ ಕರೂಶಕೇ ।।೪೬।। ಮೋಹರೀಮಾಜೀ ಮೇರು ರಾಹೇ । ಪಶಾಮಾಜೀ ಪೃಥ್ವೀ ಸಮಾಯೇ । ಮುಂಗೀ ಗಜ ಗಿಳೋನಿ ಜಾಯೇ । ಖದ್ಯೋತ ಖಾಯೇ ಸೂರ್ಯಾತೇ ।।೪೭।। ಮಶಕು ಬ್ರಹ್ಮಾಂಡಾತೇ ಆಕಳೀ । ಪತಂಗು ಪ್ರಳಯಾನಳ ಗಿಳೀ । ತರೀ ಆತ್ಮಾ ಗುಣಾಚೇ ಮೇಳೀ । ಗುಣಕಲ್ಲೋಳೀ ಬಾಂಧವೇ ।।೪೮।। ಯಾಪರೀ ನ ಸಂಭವೇ ಬದ್ಧತಾ । ಬದ್ಧತೇಸವೇ ಗೇಲೀ ಮುಕ್ತತಾ ।ಬದ್ಧ ಮುಕ್ತ ಅವಸ್ಥಾ ಪರತಾ । ಜಾಣ ತತ್ತ್ವತಾ ಆತ್ಮಾ ಮೀ ।।೪೯।। ಸ್ವಪ್ನಿಂಚಾ ಅತ್ಯಂತ ಸುಕೃತೀ । ಅಥವಾ ಮಹಾಪಾಪೀ ದುಷ್ಕೃತೀ । ದೋನ್ಹೀ ಮಿಥ್ಯಾ ಜೇವೀ ಜಾಗೃತೀ । ತೇವೀ ಬದ್ಧ ಮುಕ್ತೀ ಆತ್ಮತ್ವೀ ।।೫೦।। ಹೋ ಕಾ ಜೀವಾತ್ಮ್ಯಾಸೀಚಿ ಬದ್ಧತಾ । ಸತ್ಯ ನಾಹೀ ಗಾ ತತ್ತ್ವತಾ । ಮಾ ಮಜ ಪರಮಾತ್ಮ್ಯಾಸೀ ಅವಸ್ಥಾ । ಬದ್ಧ ಮುಕ್ತತಾ ತೇ ಕೈಚೀ ।।೫೧।।

ಅಂತರಿಕ್ಷದಲ್ಲಿನ ಆಕಾಶದಲ್ಲಿ ಒಂದು ಸರೋವರವು ಇದ್ದು, ಅದರಲ್ಲಿ ಸುಂದರವಾದ ಕಮಲ ಪುಷ್ಪಗಳು ಬೆಳೆದು ಮತ್ತು ಅವುಗಳ ಮಕರಂದವನ್ನು ಸೇವಿಸಲು ಭ್ರಮರಗಳು ಬಂದರೆ, ಆಗ ಮಾತ್ರ ನಿಜವಾಗಿಯೂ ನಾನು ಗುಣಗಳಲ್ಲಿ ಸಿಲುಕುವೆ ।।೩೮।। ಆಗ ನಾನು ಮತ್ತು ಆತ್ಮ ಗುಣಗಳ ಸಂಗತಿಯಿಂದ ಅನೇಕ ಪ್ರಕಾರದ ವಿಷಯ ಭೋಗಗಳನ್ನು ಭೋಗಿಸಿ ಮತ್ತು ವಿಷಯಾಸಕ್ತಿಯಿಂದ ಸ್ವತಃ ಗುಣಗಳಿಂದ ಬಂಧಿಸಲ್ಪಡುವೆನು ।।೩೯।। ಮೂರು ಗುಣಗಳ ಆಧೀನರಾಗಿ ವರ್ತನೆಯನ್ನು ಮಾಡಲು ಗುಣಗಳ ಕಾರ್ಯದಲ್ಲಿ ತಾದಾತ್ಮ್ಯ ಹೊಂದುವುದು. ಆದ್ದರಿಂದ ಭ್ರಾಂತ ಮನುಷ್ಯನಿಗೆ ಬದ್ಧ ಮತ್ತು ಮುಕ್ತ ಅವಸ್ಥೆಯ ಅಸತ್ಯವಾದ ಭಾಸವಾಗುವುದು ।।೪೦।। ಆತ್ಮನು ಈ ಗುಣಗಳಿಂದ ಪೂರ್ಣವಾಗಿ ಬಿನ್ನನಾಗಿರುವನು. ಇದನ್ನು ನೀನು ನಿಜವೆಂದು ತಿಳಿದೂ ಕೂಡ ಆತ್ಮವು ಗುಣಗಳ ಜೊತೆಯಲ್ಲಿ ಇರುವುದರಿಂದ ಅದು ವಿಕಾರ ಹೊಂದುವುದು ಎಂದು ನೀನು ಹೇಳಬಹುದು, ಅದಕ್ಕಾಗಿ ಕೇಳು ।।೪೧।। ಅಗ್ನಿಯ ಸಂಗದಿಂದ ಪಾತ್ರೆಯು ಬಿಸಿಯಾಗುವುದು, ಈ ಪಾತ್ರೆಯ ಸಂಗದಿಂದ ನೀರು ಬಿಸಿಯಾಗುವುದು. ಈ ಯಾವ ನೀರಿನಿಂದ ಅನ್ನವು ಕುದಿಯಲ್ಪಡುವುದು, ಆದರೆ ಇದರಿಂದ ಅಗ್ನಿಗೆ ಯಾವ ವಿಕಾರವೂ ಆಗುವುದಿಲ್ಲ. ಅದರಂತೆ ಆತ್ಮಕ್ಕೆ ಗುಣಗಳ ಕಾರ್ಯದಿಂದ ವಿಕಾರಸ್ತವಾಗಲು ಶಕ್ಯವೇ ಇಲ್ಲ ।।೪೨।। ಅಗ್ನಿಯ ಉಷ್ಣತೆಯಿಂದ ಆಕಾಶವು ಎಂದಿಗೂ ತಪ್ತಗೊಳ್ಳುವುದಿಲ್ಲ. ಅದರಂತೆ ಆತ್ಮವು ಗುಣಗಳ ಸಂಗತಿಯಿಂದ ಇದ್ದರೂ ಸಹ ವಿಕಾರವನ್ನು ಹೊಂದುವುದಿಲ್ಲ ।।೪೩।। ಒಂದು ವೇಳೆ ನಟನು ಕುರುಡನ ವೇಶವನ್ನು ಧರಿಸಲು ಅವನೇನಾದರೂ ಕುರುಡನಾಗುವುದಿಲ್ಲ. ಅದರಂತೆ ಆತ್ಮವು ಗುಣಗಳ ಸಂಗತಿಯಿಂದ ಎಂದಿಗೂ ಬದ್ಧವಾಗಲು ಶಕ್ಯವಿಲ್ಲ ।।೪೪।। ಆತ್ಮವು ಇದು ಶುದ್ಧವಾಗಿದೆ ಮತ್ತು ಈ ಗುಣಗಳು ಮಾಯಿಕವಾಗಿರುವುವು. ಅಂದ ಮೇಲೆ ಈ ಎರಡರ ಪರಸ್ಪರ ಸಂಬಂಧವು ಬರುವುದೇ ಇಲ್ಲ ।।೪೫।। ಆತ್ಮವು ಅತಿ ವ್ಯಾಪಕವಾಗಿರುವುದು. ಆದರೆ ಗುಣಗಳು ಏಕದೇಶಿಯವಾಗಿವೆ. ಈ ದೃಷ್ಟಿಯಿಂದ ನೋಡಿದರೂ ಕೂಡ ಅದು ಬದ್ಧವಾಗಲು ಶಕ್ಯವೇ ಇಲ್ಲ. ಏಕೆಂದರೆ ನೀರಿನ ತೊಟ್ಟಿಯು ಸಮುದ್ರದ ನೀರೆಲ್ಲವನ್ನು ತನ್ನ ಹೊಟ್ಟೆಯಲ್ಲಿ ಹೇಗೆ ಇಟ್ಟುಕೊಳ್ಳಲು ಸಾಧ್ಯ ? ।।೪೬।। ಸಾಸಿವೆಕಾಳಿನಲ್ಲಿ ಮೇರು ಪರ್ವತವು ಸೇರಿಕೊಂಡರೆ, ತನ್ನ ಕೈಯಲ್ಲಿ ಪೃಥ್ವಿಯು ನಿಂತುಕೊಂಡರೆ, ಇರುವೆಯು ಆನೆಯನ್ನು ನುಂಗಿದರೆ, ಬೆಂಕಿಹುಳವು ಸೂರ್ಯನನ್ನು ಭಕ್ಷಿಸಿದರೆ ।।೪೭।। ನೊಣವು ಬ್ರಹ್ಮಾಂಡವನ್ನು ಬಗಲಿನಲ್ಲಿ ಹಿಡಿದುಕೊಂಡರೆ, ಪತಂಗ ಹುಳವು ಪ್ರಳಯಾನಲಕ್ಕೆ ಸ್ವಾಹಾ ಮಾಡಿದರೆ ಮಾತ್ರ, ಆತ್ಮವು ಗುಣ ಸಮೂಹದಲ್ಲಿ ಗುಣಗಳಿಂದ ಬಂಧಿಸಲ್ಪಡುವುದು ।।೪೮।। ಈ ಪ್ರಕಾರವಾಗಿ ಆತ್ಮಕ್ಕೆ ಬದ್ಧತೆಯು ಪ್ರಾಪ್ತವಾಗಲು ಸಾಧ್ಯವೇ ಇಲ್ಲ. ಅರ್ಥಾತ ಬಂಧದ ಜೊತೆಯಲ್ಲಿ ಮುಕ್ತಿಯೂ ಕೂಡ ಹೊರಟು ಹೋಗುವುದೆಂದು ಆತ್ಮನಾದ ನಾನು ಬದ್ಧ ಮತ್ತು ಮುಕ್ತ ಈ ಎರಡೂ ಅವಸ್ಥೆಗಳ ಆಚೆ ಇರುವೆನು ।।೪೯।। ಸ್ವಪ್ನದಲ್ಲಿ ಒಂದು ವೇಳೆ ಮಹಾಪುಣ್ಯದ ಕೃತ್ಯಗಳು ಎಸಗಲು ಅಥವಾ ಮಹಾಪಾತಕಗಳು ಒದಗಲು ನಿದ್ದೆಯಿಂದ ಎದ್ದಾಗ ಅವೆಲ್ಲವೂ ಸುಳ್ಳಾಗಿಬಿಡುವುವು. ಅದರಂತೆ ಆತ್ಮನಲ್ಲಿ ಬದ್ಧತೆ ಮತ್ತು ಮುಕ್ತತೆ ಈ ಎರಡೂ ಮಿಥ್ಯೆಯಾಗಿರುವುವು ।।೫೦।। ಆದ್ದರಿಂದ ಜೀವಾತ್ಮಕ್ಕೆ ಬಂಧನವು ಇದೆ ಎಂದು ಹೇಳುವಿಕೆಯು ಅದು ನಿಜವಲ್ಲ. ಅಂದ ಮೇಲೆ ಪರಮಾತ್ಮನಾದ ನನಗೆ ಬದ್ಧ ಮುಕ್ತ ಅವಸ್ಥೆಗಳು ಹೇಗಿರಲು ಸಾಧ್ಯ? ।।೫೧।।

ಬಿಂಬೀ ಪ್ರತಿಬಿಂಬೀ ನಾಹೀ । ಮಧ್ಯೇಚಿ ಆರಿಸಾಚೇ ಠಾಯೀ । ಮಳ ಬೈಸಲೇ ತೇ ಪಾಹೀ । ಪ್ರತಿಬಿಂಬಾಚೇ ದೇಹೀ ಲಾಗಲೇ ದಿಸತಿ ।೫೨।। ತೋ ಮಳು ಜೈ ಪಡೇ ಫೇಡಾವಾ । ತೈ ಆರಿಸಾಚೇ ಸಾಹಣೇ ತೋಡಾವಾ। ಪರೀ ಪ್ರತಿಬಿಂಬ ತ್ಯಾ ಸಾಹಣೇ ಧರಾವಾ । ಹೇ ಸದ್ಭಾವಾ ಮಿಳೇನಾ ।೫೩ ।। ತೇವೀ ಜೀವಿ ಶಿವೀ ದೋಷ ನಾಹೀ । ದೋಷ ಅಂತಃಕರಣಾಚ್ಯಾ ಠಾಯೀ । ಚಿತ್ತ ಶುದ್ಧ ಕೇಲ್ಯಾ ಪಾಹೀ । ಬಂಧಮೋಕ್ಷಾ ದೋಹೀ ಬೋಳವಣ ।೫೪।। ತೈಸೇ ಅವಿದ್ಯಕ ಹೇ ಸಕಳ। ಗುಣಕಾರ್ಯ ನಾನಾಮಳ । ಜೀವಾ ಅಂಗೀ ಪ್ರಬಳ । ಮೂಢಮತೀ ಸ್ಥೂಳ ಸ್ಥಾಪಿತೀ ।೫೫।। ಜೈ ಸತ್ತ್ವೇ ಗುಣ ನಿರಸೇ ಸಬಳ । ತೈ ಆವಿದ್ಯಕ ಫಿಟತೀ ಮಳ । ತೇಚಿ ಸದ್ವಿದ್ಯಾ ಹೋಯ ನಿರ್ಮಳ । ಜೀವಚಿ ಕೇವಳ ಶಿವ ಹೋಯೇ ।೫೬।। ತೇಂವ್ಹಾ ಜೀವಶಿವ ಹೀ ನಾಮೇ ದೋನೀ । ಜಾತೀ ಮಜಮಾಜೀ ಸಮರಸೋನೀ । ತೈ ಮೀಚ ಏಕವಾಂಚೂನೀ । ಆನ ಜನೀ ವನೀ ಅಸೇನಾ ।೫೭।। ಜೀವಭಾವನೇ ಮೀಚಿ ಜೀವು। ಶಿವಭಾವನೇ ಮೀಚಿ ಶಿವು । ಮೀ ಏಕಲಾ ನಾ ನವ್ಹೇ ಬಹು । ಮಾಝಾ ಅನುಭವು ಮೀಚಿ ಜಾಣೇ ।೫೮।। ಝಣೇ ಆಶಂಕಾ ಧರಿಶೀ ಯೇಥ । ಜರೀ ಜೀವ ಶಿವ ತೂಂಚಿ ಸಮಸ್ತ । ತರಿ ತೇ ಶುಕವಾಮದೇವಚಿ ಕಾ ಮುಕ್ತ । ಯೇರಾ ಮ್ಹಣತ ಜಡ ಜೀವ ।೫೯।। ಜರೀ ತೂಂಚಿ ಜೀವರೂಪೇ ತತ್ತ್ವತಾ । ತರಿ ಹೇ ಐಶಿ ಕಾ ವಿಷಮತಾ। ಶುಕವಾಮದೇವಾಂಚೀ ಅವಸ್ಥಾ । ವೇದಶಾಸ್ತ್ರಾರ್ಥಾ ಸಮ್ಮತ ।೬೦।। ತಿಹೀ ಲೋಕಾಮಾಜೀ ಜಾಣ । ವೇದವಚನ ತಂವ ಪ್ರಮಾಣ। ಹೇ ಬೋಲಣೇ ವಿಲಕ್ಷಣ । ಅಪ್ರಮಾಣ ಜೈ ಮಾನಿಶೀ ।೬೧।। ಹೋ ಕಾ ವೇದ ಮ್ಹಣೇ ಜೇ ನಿಶ್ಚಿತ । ತೇ ಬೋಲಣೇ ಮಾಝೇ ನಿಃಶ್ವಸಿತ । ತೋ ಮೀ ಸ್ವಮುಖೀ ಜೇ ಬೋಲತ । ತೇ ತೂ ಅಯುಕ್ತ ಮ್ಹಣತೋಸೀ ।೬೨।। ಜೋ ಮೀ ವೇದಾಂಚಾ ವೇದವಕ್ತಾ । ಸಕಳ ಶಾಸ್ತ್ರಾಂಚಾ ಮೂಳಕರ್ತಾ । ತ್ಯಾ ಮಾಝೇ ವಚನ ಮ್ಹಣಸೀ ವೃಥಾ । ಅತಿಯೋಗ್ಯತಾ ತುಜ ಆಲೀ ।೬೩।। ವೇದಾಂಚೇ ಜಾಣ ತ್ರಿವಿಧ ಬಂಡ । ತ್ರಿಕಾಂಡೀ ಕೇಲಾ ತೋ ತ್ರಿಖಂಡ । ವೇದಬಳೇ ಬಾ ಪಾಖಂಡ । ವಾಜವೀ ತೋಂಡ ಅವ್ಹಾ ಸವ್ಹಾ ।೬೪।। ಭಾಸಲೇ ಬಹುಸಾಲ ಮತಭೇದ । ವೇದಬಳೇ ನಾನಾ ವಾದ । ತೋ ವೇದ ಮಾಝಾ ಪರೋಕ್ಷವಾದ । ತೇಣೇ ತತ್ತ್ವಾವಬೋಧ ಕೇವೀ ಹೋಯ ।೬೫।।

ಮೂಲ ಬಿಂಬದಲ್ಲಿ ಅಥವಾ ಆತನ ಪ್ರತಿಬಿಂಬದಲ್ಲಿ ಮಲಿನತೆಯು ಇರುವುದಿಲ್ಲ. ಆದರೆ ಕನ್ನಡಿಯು ಮಲಿನವಾಗಿದ್ದರೆ, ಆಗ ಪ್ರತಿಬಿಂಬವು ಮಲಿನವಾಗಿಯೇ ತೋರುವುದು ।೫೨।। ಅದಕ್ಕಾಗಿ ಕನ್ನಡಿಯಲ್ಲಿನ ಮಲಿನತೆ ಇಲ್ಲದಾಗಿ ಮಾಡಲು ಅದಕ್ಕೆ ಸಾಣೆ ಹಿಡಿದು ತಿಕ್ಕಿ ತೊಳೆದು ಸ್ವಚ್ಛಗೊಳಿಸಬೇಕು. ಇದನ್ನು ಬಿಟ್ಟು ಪ್ರತಿಬಿಂಬಕ್ಕೆ ಸಾಣೆ ಹಿಡಿದು ತೊಳೆಯಲು ಬರುವುದಿಲ್ಲ ।೫೩।। ಅದರಂತೆ ಜೀವ ಶಿವರಲ್ಲಿ ಯಾವ ಭೇದವು ಇರುವುದಿಲ್ಲ. ಆದರೆ ಅಂತಃಕರಣದಲ್ಲಿ ದೋಷವಿರುವುದು. ಆ ದೋಷವನ್ನು ಚಿತ್ತಶುದ್ಧಿಯಿಂದ ನಿವಾರಿಸಿದರೆ ಆಗ ಬಂಧ ಮತ್ತು ಮೋಕ್ಷ ಈ ಎರಡೂ ಇಲ್ಲದಾಗುವುವು ।೫೪।। ಅದರಂತೆ ಗುಣಗಳ ಕಾರ್ಯದಿಂದ ನಿರ್ಮಾಣಗೊಳ್ಳುವ ನಾನಾ ಪ್ರಕಾರದ ದೋಷಗಳಿರುವುವು. ಇವೆಲ್ಲವೂ ಅವಿದ್ಯಾತ್ಮಕವಾಗಿರುವುವು. ಈ ದೋಷಗಳನ್ನು ಅಜ್ಞಾನಿ ಜನರು ಸ್ಥೂಲ ಬುದ್ಧಿಯಿಂದ ಜೀವಾತ್ಮ ಅಂಗಕ್ಕೆ ಹಚ್ಚುವರು ।೫೫।। ಆದರೆ ಪುರುಷನು ತನ್ನ ಪ್ರಬಲವಾದ ಸತ್ವಗುಣದಿಂದ ಅದರ ನಿರಸನೆಯನ್ನು ಮಾಡುವನು. ಆಗ ಅವಿದ್ಯೆಯಿಂದ ಉತ್ಪನ್ನವಾಗುವ ದೋಷಗಳು ಇಲ್ಲದಾಗುವುವು. ಇದೇ ಪವಿತ್ರವಾದ ಸದ್ವಿದ್ಯೆಯಾಗಿರುವುದು. ಇದರಿಂದ ಜೀವವೇ ಶಿವವಾಗುವುದು ।೫೬।। ಜೀವ ಮತ್ತು ಶಿವ ಈ ಎರಡೂ ನಾಮಗಳು ನನ್ನಲ್ಲಿ ಸಮರಸವಾಗುವುವು. ಆಗ ನನ್ನ ಒಬ್ಬನ ಹೊರತಾಗಿ ಬೇರೆ ಯಾವುದೂ ಜನರಲ್ಲಿ, ವನದಲ್ಲಿ ಉಳಿಯುವುದಿಲ್ಲ ।೫೭।। ಜೀವ ಭಾವನೆಯಲ್ಲಿ ನಾನೇ ಜೀವನಾಗಿರುವೆನು. ಮತ್ತು ಶಿವ ಭಾವನೆಯಲ್ಲಿ ನಾನೇ ಶಿವನಾಗಿರುವೆನು. ನಾನು ಒಬ್ಬನೂ ಅಲ್ಲ ಅನೇಕನೂ ಅಲ್ಲ. ನನ್ನ ಅನುಭವವನ್ನು ನಾನೇ ತಿಳಿಯಬಲ್ಲೆನು ।೫೮।। ಈಗ ನೀನು ಹೀಗೆ ಸಂದೇಹ ಮಾಡಬಹುದು, ಏನಂದರೆ, ಜೀವ ಮತ್ತು ಶಿವ ಎರಡೂ ನೀನೆ ಒಬ್ಬನಾಗಿರುವೆ. ಹಾಗಾದರೆ ಶುಕವಾಮದೇವ ಇವರು ಮಾತ್ರ ಮುಕ್ತರೇಕೇ? ಮತ್ತು ಇತರರಿಗೆ ಬದ್ಧ, ಜಡ ಜೀವ ಎಂದು ಏಕೆ ಹೇಳುವರು? ।೫೯।। ನೀನೇ ನಿಜವಾಗಿಯೂ ಜೀವರೂಪದಿಂದ ಇರುವೆಯಾದರೆ ಅದರಲ್ಲಿ ವಿಷಮತೆ ಏಕೆ ಇರಬೇಕು? ಶುಕವಾಮದೇವರಂತಹ ಜೀವನ್ಮುಕ್ತ ಸಿದ್ಧರ ಸ್ಥಿತಿಯನ್ನು ವೇದ ಮತ್ತು ಶಾಸ್ತ್ರಗಳೂ ಕೂಡ ಮಾನ್ಯ ಮಾಡುವುವು ।೬೦।। ವೇದ ವಚನವು ಮೂರು ಲೋಕಗಳಲ್ಲಿ ಪ್ರಸಿದ್ಧವಾಗಿದೆ. ಪ್ರಮಾಣವಾಗಿದೆ. ಆದರೆ ನಿನ್ನ ಈ ಹೇಳುವಿಕೆಯು ಸುಳ್ಳಾಗಿರುವುದೆಂದು ನೀನು ಹೀಗೆ ಹೇಳಬಹುದು ।೬೧।। ಹಾಗಾದರೆ ಅದರಂತೆಯೇ ಆಗಲಿ! ವೇದವು ಹೇಳುವುದು ನಿಜವೇ ಆಗಿರುವುದು. ಆ ವೇದದ ಹೇಳುವಿಕೆ ಎಂದರೆ ನನ್ನ ಶ್ವಾಸೋಚ್ಛ್ವಾಸವಾಗಿರುವುದು. ಆದರೆ ಅದೇ ನಾನು ಸ್ವತಃ ನನ್ನ ಮುಖದಿಂದಲೇ ಹೇಳುತ್ತಿರುವುದಕ್ಕೆ ಸುಳ್ಳು ಎಂದು ಏಕೆ ಹೇಳುವೆ? ।೬೨।। ವೇದಗಳಿಗೆ ನುಡಿಸುವವನು ನಾನು, ಸರ್ವಶಾಸ್ತ್ರಗಳ ಮೂಲಕರ್ತನು ನಾನು, ಹೀಗಿರಲು ಈಗ ನನ್ನ ಹೇಳುವಿಕೆಯು ಯೋಗ್ಯವಲ್ಲವೆಂದು ತಿಳಿಯಬೇಕಾದರೆ ನೀನು ಮಹಾ ವಿದ್ವಾನನಾಗಿರುವಂತೆ ತೋರುತ್ತದೆ।೬೩।। ವೇದಗಳ ಮೂರು ಪ್ರಕಾರಗಳಿವೆ. ಅದರಲ್ಲಿ ಕರ್ಮಕಾಂಡ, ಉಪಾಸನಾಕಾಂಡ ಮತ್ತು ಜ್ಞಾನಕಾಂಡ ಹೀಗೆ ಮೂರು ಭಾಗಗಳನ್ನಾಗಿ ಮಾಡಿರುವುದು. ಆದ್ದರಿಂದ ಪಾಖಂಡೀ ನಾಸ್ತಿಕ ಜನರು ವೇದವಾಕ್ಯದ ಆಧಾರವನ್ನು ಹಿಡಿದು ಹೇಗೋ ಹೇಳುತ್ತ ಹೊರಟಿರುವರು ।೬೪।। ವೇದದ ಸಂಬಂಧದಿಂದ ನಾನಾ ಭೇದಗಳು, ನಾನಾ ಪ್ರಕಾರದ ಮತಭೇದಗಳು ಮಾತ್ರ ಉಪಸ್ಥಿತವಾಗುವುವು. ಆ ವೇದವು ನನ್ನ ಪರೋಕ್ಷವಾದವಾಗಿರುವುದು. ಅಂದರೆ ಕೇವಲ ಶಬ್ದಜ್ಞಾನವಾಗಿರುವುದು. ಅದರಿಂದ ತತ್ವಜ್ಞಾನದ ಬೋಧವು ಹೇಗಾಗಬೇಕು? ।೬೫।।

ಶಬ್ದಜ್ಞಾನ ಬ್ರಹ್ಮಜ್ಞಾನ । ಬಾಹ್ಯದೃಷ್ಟೀ ಸಮಸಮಾನ । ಜೇವೀ ವಾಲ ಆಣಿ ವಾಲಭರ ಸುವರ್ಣ। ತುಕಿತಾ ಪೂರ್ಣ ಸಮತಾ ಆಲೀ ।।೧೬।। ಪರೀ ವಾಲಾ ಸುವರ್ಣಾ ಸಮತಾ । ಮೋಲೇ ಕದಾ ನವ್ಹೇ ತತ್ತ್ವತಾ । ತೇವೀ ವೇದವಾದ ಯೋಗ್ಯತಾ । ಬ್ರಹ್ಮಾನುಭವಿತಾ ಸಮ ನವ್ಹೇ ।।೧೭।। ಜೋ ಮೀ ಹರಿಹರಾ ಪ್ರಮಾಣ । ತ್ಯಾ ಮಾಝೇ ವಚನ ಅಪ್ರಮಾಣ । ತೂ ಮ್ಹಣಶೀ ಹಾ ಜ್ಞಾನಾಭಿಮಾನ । ಹೇಹೀ ಜಾಣಪಣ ಸಾಂಡಾವೇ ।।೧೮।। ಮಾಝೇ ವಚನ ಸತ್ಯಾಚೇ ಸತ್ಯ । ಸತ್ಯ ಮಾನೂನಿ ನಿಶ್ಚಿತ । ಯೇಣೇ ಭಾವೇ ಸಾಧೇ ಪರಮಾರ್ಥ । ಹೇ ಬ್ರಹ್ಮಲಿಖಿತ ಮದ್ವಾಕ್ಯ ।।೧೯।। ಉದ್ಧವಾ ಮಜ ಪಾಹತಾ । ವಸಿಷ್ಠವಾಮದೇವಾದಿ ಸಮಸ್ತಾ । ನ ದೇಖೇ ಬದ್ಧ ಆಣೇ ಮುಕ್ತತಾ । ಹಾ ಮಾಝಾ ತತ್ತ್ವತಾ ನಿಜಬೋಧು ।।೨೦।। ಮುಕ್ತಾಂಚಿಯೇ ದೃಷ್ಟೀ । ಮುಕ್ತಚ ದಿಸೇ ಸಕಲ ಸೃಷ್ಟೀ । ತೇಥೇ ಶುಕವಾಮದೇವಾಂಚೀ ಗೋಷ್ಟೀ । ವೇಗಳೀ ಪಾಠೀ ಕೇವೀ ರಾಹೇ ।।೨೧।। ಬದ್ಧಮುಕ್ತಾ ಹೂನಿ ಭಿನ್ನ । ಪರಮಾತ್ಮಾ ಮೀ ಚಿತ್‌ಘನ । ಜರೀ ಮ್ಹಣಸೀ ಜೇವಾಸೀ ಬಂಧನ । ತೇಹೀ ಸತ್ಯತ್ವೇ ಜಾಣ ಘಡೇನಾ ।।೨೨।।

ಶೋಕ ಮೋಹೌ ಸುಖಂ ದುಃಖಂ ದೇಹೋತ್ಪತ್ತಿಶ್ಚ ಮಾಯಯಾ ।
ಸ್ವಪ್ನೋ ಯಥಾಽಽತ್ಮನಃ ಖ್ಯಾತಿಃ ಸಂಸೃತಿರ್ನತು ವಾಸ್ತವೀ ।೨॥

ಅರ್ಥ:- ಶೋಕ, ಮೋಹ, ಸುಖದುಃಖ ಮತ್ತು ದೇಹದ ಉತ್ಪತ್ತಿಯು ಮಾಯೆಯಿಂದಾಗುವುದು. ಸ್ವಪ್ನವು ಇದು ಬುದ್ಧಿಯ ಅನ್ಯಥಾ ಪರಿಣಾಮವಾಗಿರುವುದು. ಅದರಂತೆ ಶೋಕ ಮೋಹಾದಿಗಳು ಮಾಯಾ ವಿವರ್ತವಾಗಿವೆ. ವಾಸ್ತವಿಕವಾಗಿ ಸಂಸಾರವು ಇಲ್ಲ.

ದೋನ ಮುಹೂರ್ತ ಸ್ವಪ್ನವೃತ್ತೀ । ತ್ಯಾಮಾಜೀ ದೇಖೇ ಜನ್ಮಪಂಕ್ತಿ । ತೇಥೇ ಪಾವಲಾ ನಾನಾ ಯಾತೀ । ತೇವೀ ಮಿಥ್ಯಾ ಪ್ರತೀತೀ ಭವಭಾವಾ ।।೨೩।। ನಸತಾ ಆಭಾಸು ಮಾವಳೇ ಠಾಯೀ । ತ್ಯಾಲಾಗೀ ಹಾಹಾಕಾರು ಉಠೇ ದೇಹೀ । ಗೇಲೇ ಮೇಲೇ ನಾಹೀ ನಾಹೀ । ''ಶೋಕ'' ಪಾಹೀ ತ್ಯಾ ನಾಂವ ।।೨೪।। ಭಗ್ನಪಾತ್ರೀ ಭರಿಲೇ ಜಳ । ತೇಥೇ ಬಿಂಬಲೇ ಚಂದ್ರಮಂಡಳ । ತೈ ಪಾತ್ರ ಪೋಟೇಶೀ ಧರೀ ಬಾಳ। ರತ್ನ ಪ್ರಬಳ ಹೇ ಮಾಝೇ ।।೨೫।। ಜಳ ಗಳೋನಿ ಜಾಯ ಸಕಳ । ಚಂದ್ರಮಾ ಹರಪೇ ತತ್ಕಾಳ । ತ್ಯಾಲಾಗೀ ತಳಮಳೀ ತೇ ಬಾಳ । ''ಶೋಕು'' ಕೇವಳ ಯಾ ನಾಂವ ।।೨೬।। ಅಥವಾ ಘಟಚಂದ್ರ ಧರೂ ಜಾತಾ । ತೋ ನ ಯೇ ಬಾಲಕಾಚೇ ಹಾತಾ । ಯಾಲಾಗೀ ಕರೀ ಜೇ ಜೇ ವ್ಯಥಾ । ''ಶೋಕ '' ಸರ್ವಥಾ ಯಾ ನಾಂವ ।।೨೭।। ಕಾಢಾವಯಾ ಆರಶಾಂತೀಲ ಧನ । ಕರೀ ದರ್ಪಣಾಮಾಜೀ ಖನನ । ಫುಟಲ್ಯಾ ನಾಗವಲೋ ಮ್ಹಣೇ ಜಾಣ । ''ಶೋಕ'' ದಾರುಣ ಯಾ ನಾಂವ ।।೨೮।।

ಶಬ್ದ ಜ್ಞಾನವು ಮತ್ತು ಬ್ರಹ್ಮಜ್ಞಾನವು ಈ ಎರಡೂ ಬಾಹ್ಯ ದೃಷ್ಟಿಯಿಂದ ಒಂದೇ ಕಾಣುವುವು. ಮೂರು ಗುಂಜಿಯ ತೂಕ (ವಾಲ) ಮತ್ತು ಅದರಷ್ಟೇ ತೂಕದ ಸುವರ್ಣ, ಈ ಎರಡೂ ತೂಕದಲ್ಲಿ ಒಂದೇ ಆಗಿರುವುವು ।।೧೬।। ಆದರೆ ತೂಕದ ಗುಂಡಿನ ಮತ್ತು ಬಂಗಾರದ ಮೌಲ್ಯವು ಮಾತ್ರ ಎಂದಿಗೂ ಒಂದೇ ಆಗಲಾರದು. ಅದರಂತೆ ವೇದವಾದವು ಮತ್ತು ಬ್ರಹ್ಮಸ್ವರೂಪದ ಅನುಭವವು ಇವು ಒಂದೇ ಆಗಲಾರವು।।೧೭।। ನಾನು ಹರಿಹರಿಗೂ ಮಾನ್ಯನಾಗಿರುವೆನು. ಹೀಗಿರುವ ನನ್ನ ಮಾತಿಗೆ ಅಪ್ರಮಾಣವೆನ್ನುವೆ. ಇದು ನಿನ್ನ ಕೇವಲ ಜ್ಞಾನಾಭಿಮಾನವಾಗಿರುವುದು. ಈ ಅಭಿಮಾನವನ್ನು ನೀನು ಬಿಟ್ಟುಬಿಡು ।।೧೮।। ನನ್ನ ವಚನವೆಂದರೆ ಸತ್ಯದಲ್ಲಿನ ಸತ್ಯವಾಗಿರುವುದೆಂದು ನೀನು ನಿಶ್ಚಯವಾಗಿ ತಿಳಿ. ಅಂದರೇನೇ ನಿನಗೆ ಪರಮಾರ್ಥದ ಪ್ರಾಪ್ತಿಯಾಗುವುದು. ಈ ನನ್ನ ವಾಕ್ಯವು ಬ್ರಹ್ಮಲಿಖಿತವೆಂದು ಅರಿತುಕೋ ।।೧೯।। ಹೇ ಉದ್ಧವನೇ, ನನ್ನ ದೃಷ್ಟಿಯಿಂದ ವಸಿಷ್ಠ ವಾಮದೇವಾದಿಗಳೆಲ್ಲರಿಗೂ ನನಗೆ ಬದ್ಧ ಅಥವಾ ಮುಕ್ತ ಎಂಬ ಹೀಗೆ ಭೇದವೇ ಕಾಣುವುದಿಲ್ಲ. ಇದೇ ನನ್ನ ನಿಜವಾದ ಆತ್ಮಜ್ಞಾನ ಆಗಿರುವುದು ।।೨೦।। ಮುಕ್ತರ ಕಣ್ಣುಗಳಿಗೆ ಏನೆಲ್ಲವೂ ಮುಕ್ತವಾಗಿಯೇ ತೋರುವುವು. ಅಂದಮೇಲೆ ಶುಕ, ವಾಮನ, ದೇವಾದಿಕರ ಮಾತನ್ನು ಬೇರೆಯಾಗಿ ಹೇಳುವುದು ಯಾವ ಕಾರಣ? ।।೨೧।। ಬದ್ಧ ಮುಕ್ತ ಇವುಗಳಿಂದ ಮುಕ್ತನಾಗಿರುವ ಚಿದ್‌ಘನ ಪರಮಾತ್ಮನು ನಾನಾಗಿರುವೆನು. ಈಗ ನೀನು ಜೀವಕ್ಕೆ ಬಂಧನವು ಉಂಟು ಎಂದು ಹೀಗೆ ಹೇಳಬಹುದು. ಆದರೆ ಅದೂ ಕೂಡ ನಿಜವಲ್ಲ ।।೨೨।।

ಸ್ವಪ್ನದ ಸ್ಥಿತಿಯು ಕೇವಲ ಎರಡು ಘಳಿಗೆ ಮಾತ್ರ ಇರುವುದು. ಆದರೆ ಅಷ್ಟೇ ವೇಳೆಯಲ್ಲಿ ಅನೇಕ ಜನ್ಮ, ಅನೇಕ ಜಾತಿಗಳಲ್ಲಿ ಆದ ಹಾಗೆ ಆಗುವುದು. ಅದರಂತೆಯೇ ಸಂಸಾರವು ಮತ್ತು ಅದರ ಅನುಭಾವವು ಮಿಥ್ಯೆಯಾಗಿರುವುದು ।।೨೩।। ಇಲ್ಲದ ಭಾಸವು ಇದ್ದಲ್ಲಿಯೇ ಇಲ್ಲದಾಗುವುದು. ಅದರಿಂದ, ಹೋದರು, ಸತ್ತರು ಎಂದು ಇಲ್ಲದ ಹಾಹಾಕಾರವು ಏಳುವುದು. ಇದಕ್ಕೆ ''ಶೋಕ''ವೆಂದು ಹೆಸರು ಇರುವುದು ।।೨೪।। ಒಡಕು ಮಡಿಕೆಯಲ್ಲಿ ನೀರನ್ನು ತುಂಬಲು ಆ ನೀರಿನಲ್ಲಿ ಚಂದ್ರನ ಪ್ರತಿಬಿಂಬವು ತೋರಲು ಚಿಕ್ಕ ಬಾಲಕನು ಇದು ನನ್ನ ರತ್ನವು ಎಂದು ತಿಳಿದು ಅದನ್ನು ತನ್ನ ಹೊಟ್ಟೆಗೆ ಅಪ್ಪಿಕೊಳ್ಳುವನು ।।೨೫।। ಆಗ ಅದರಲ್ಲಿನ ಎಲ್ಲ ನೀರು ಸೋರಿಹೋಗಲು ಚಂದ್ರಬಿಂಬವು ತನ್ನಷ್ಟಕ್ಕೆ ತಾನೇ ಇಲ್ಲದಾಗುವುದು. ಆಗ ಆ ಬಾಲಕನಿಗೆ ಬಹಳ ತಳಮಳವಾಗುವುದು. ಇದಕ್ಕೇನೇ ಶೋಕವೆನ್ನುವರು ।।೨೬।। ಅಥವಾ ನೀರಿನಲ್ಲಿ ಬದ್ಧ ಚಂದ್ರನ ಪ್ರತಿಬಿಂಬವನ್ನು ಚಿಕ್ಕ ಬಾಲಕನು ಹಿಡಿಯಲು ಹೋಗಲು, ಅದು ಸಿಗದೇ ಇರುವುದರಿಂದ ಅವನ ಮನಸ್ಸಿಗೆ ವ್ಯಥೆಯಾಗುವುದು. ಅದಕ್ಕೆ ಶೋಕವೆನ್ನುವರು ।।೨೭।। ಕನ್ನಡಿಯೊಳಗಿನ ದ್ರವ್ಯವನ್ನು ಹೊರಗೆ ತೆಗೆಯುವುದಕ್ಕಾಗಿ ಕನ್ನಡಿಯನ್ನೇ ಅಗಿಯುತ್ತಿರಲು, ಆಗ ಕನ್ನಡಿಯು ಒಡೆಯಿತೆಂದರೆ ಎಲ್ಲವೂ ಮುಳುಗಿತು ಎನ್ನುವನು. ಇದಕ್ಕೆ ಭಯಂಕರವಾದ ಶೋಕವೆನ್ನುವರು ।।೨೮।।

ನಸತೇ ವಸ್ತೂಚ್ಯಾ ಠಾಯೀ ಜಾಣ । ಮೀ ಮಾಝೇ ಹಾ ಅಭಿಮಾನ । ತೇಚಿ ''ಮೋಹಾಚೇ'' ಲಕ್ಷಣ । ಮಮತಾ ದಾರುಣ ತೇ ಸಂಧೀ ॥೭೯॥ ದೇಖೋನಿ ಮೃಗಜಳಾಚೇ ತಳೇ । ಯೇಣೇ ಪಿಕತೀ ರಾಯಕೇಳೇ । ಯಾಲಾಗೀ ಮೃಗತೃಷ್ಣೇಚೀ ಜಳೇ । ಆಶ್ರೈ ಕಾಳೇ ರಾಖಿತು ॥೮೦॥ ಮೃಗಜಳಾಕಡೇ ಕೋಣೇ ಭಂವೇ । ತ್ಯಾಸೀ ಸಕ್ರೋಧೇ ಭಾಂಡೂ ಧಾಂವೇ । ಅತಿಮೋಹಿತ ಮೋಹಸ್ವಭಾವೇ । ವಿವೇಕು ನ ಕರವೇ ಸತ್ಯಾಚಾ ॥೮೧॥ ತೇವೀ ಪುತ್ರಾಪಾಸೋನ ಸುಖಪ್ರಾಪ್ತೀ । ಮಾತಾ ಪಿತಾ ಹೋಈಲ ಮ್ಹಣತೀ । ಶೇಖೀ ಪುತ್ರ ಅಂಗೋಠಾ ದಾವಿತೀ । ಕೇವಳ ಭ್ರಾಂತಿಪುತ್ರ ಮೋಹೋ ॥೮೨॥ ಗಂಧರ್ವನಗರೀಚೀ ರಚನಾ । ದೇಖೋನಿ ಅಭಿಲಾಷ ಹೋಯ ಮನಾ । ತೇ ಘ್ಯಾವಯಾ ಮೇಳವೀ ಸೇನಾ । ನಾನಾಸೂಚನಾ ಉಪಾಯೇ ॥೮೩॥ ತೈಸಾ ಮಿಥ್ಯಾ ದೇಹೀ ಅಭಿಮಾನ । ದೇಹಸಂಬಂಧಾಚೀ ಮಮತಾ ಗಹನ । ಹೇಚಿ ಮೋಹಾಚೇ ಮೂಳ ಲಕ್ಷಣ । ಮಮತಾಭಿಮಾನ ಪ್ರಾಣಿಯಾ ॥೮೪॥ ಏವಂ ಅಹಂ ಆಣಿ ಮಮತಾ । ಹೇಚಿ ಮೋಹಾಚೀ ಮಾತಾಪಿತಾ । ತ್ಯಾಚೇನಿ ಉತ್ತರೋತ್ತರ ವಾಢತಾ । ಜನಮೋಹಿತಾ ವ್ಯಾಮೋಹ ॥೮೫॥ ಪ್ರಿಯವಿಷಯೀ ಆಸಕ್ತಿ ದೇಖ । ತ್ಯಾಚೀ ನಿತ್ಯಪ್ರಾಪ್ತೀ ಅನೇಕ । ತ್ಯಾಚಿ ನಾಂವ ಮ್ಹಣತೀ ''ಸುಖ'' । ಜೇವೀ ಚಾಖಿತಾ ವಿಖ ಅತಿ ಮಧುರ ॥೮೬॥ ವಿಷಯಪ್ರಾಪ್ತೀ ಜೋ ಹರಿಖ । ತಯಾ ನಾಂವ ಮ್ಹಣತೀ ಸುಖ । ವಿಷಯವಿನಾಶ ತೇಚಿ ''ದುಃಖ'' । ಪರಮ ಅಸುಖ ತ್ಯಾ ನಾಂವ ॥೮೭॥ ಶೋಕ - ಮೋಹ - ಸುಖ - ದುಃಖ ಯೇಣೇಂಚಿ ''ದೇಹಾಚಿ ಪ್ರಾಪ್ತಿ'' ದೇಖ । ದೇಹಾಭಿಮಾನೇ ದೇಹ ಅನೇಕ । ದುಃಖದಾಯಕ ಭೋಗವೀ ॥೮೮॥ ಜೋ ಜೇಣೇ ತೀವ್ರಧ್ಯಾನೇ ಮರೇ । ತೋ ತೇಚಿ ಹೋಊನಿ ಅವತರೇ । ಕಾ ಜೋ ನಿಮೇ ಅತಿದ್ವೇಷಾಕಾರೇ । ತೋ ದ್ವೇಷಾನುಸಾರೇ ಜನ್ಮತು ॥೮೯॥ ಸರ್ಪ ಮುಂಗುಸ ಪೂರ್ವವೃತ್ತೀ । ವೈರಾಕಾರೇ ಜನ್ಮ ಪಾವತೀ । ಜೇ ಜೇ ವಸನಾ ಉರೇ ಅಂತೀ । ತೇ ತೇ ಗತೀ ಪ್ರಾಣ್ಯಾಸಿ ॥೯೦॥ ಯಾಲಾಗೀ ಹೃದಯಾಮಾಜೀ ನಿಶ್ಚಿತೀ । ಜೇ ಸಬಳ ವಾಸನಾ ಉರೇ ಅಂತೀ । ತೋ ತೋ ಪ್ರಾಣೇ ಪಾವೇ ತಿಯೇ ಗತೀ । ಶ್ರುತಿ ಬೋಲತೀ ಪುರಾಣೇ ॥೯೧॥

ಇಲ್ಲದ ವಸ್ತುವಿನಲ್ಲಿ ''ನಾನು'' ಮತ್ತು ''ನನ್ನದು'' ಎಂಬ ಈ ಅಭಿಮಾನವನ್ನು ಹಿಡಿಯುವನು. ಇದುವೇ ಮೋಹದ ಲಕ್ಷಣವಾಗಿರುವುದು. ಆ ಸಮಯಕ್ಕೆ ಭಯಂಕರವಾದ ಮಮತೆಯು ಉತ್ಪನ್ನವಾಗುವುದು॥೭೯॥ ಮೃಗಜಲದ ಕೆರೆಯನ್ನು ಕಂಡು ಯಾವ ಈ ನೀರಿನಿಂದ ಉತ್ತಮವಾದ ಬಾಳೆ ಬೆಳೆಯುತ್ತವೆ, ಎಂಬ ಆಶೆಯಿಂದ ಆ ಕೆರೆಯನ್ನು ಕಾಯುತ್ತ ಕುಳಿತಿರುವನು ॥೮೦॥ ಈ ಯಾವ ಮೃಗಜಲದತ್ತ ಯಾರಾದರೂ ನೋಡಿದರೆ ಸಾಕು, ಅವರಲ್ಲಿ ಇವನು ಕ್ರೋಧದಿಂದ ಜಗಳವಾಡಲು ನಿಲ್ಲುವನು. ಇಂತಹ ಭ್ರಾಂತಿಯಿಂದ ಮೋಹಾಂಧನಾಗಿರುವುದರಿಂದ ಸತ್ಯದ ವಿವೇಕವು ಹುಟ್ಟಲಾರದು ॥೮೧॥ ಅದರಂತೆಯೇ ಪುತ್ರನಿಂದ ಮಹಾ ಸುಖವು ಪ್ರಾಪ್ತವಾಗುವುದೆಂದು ತಂದೆ ತಾಯಿಯವರು ಹೇಳುತ್ತಿರುವರು. ಈ ಭ್ರಾಂತಿಯಿಂದ ಇವರಿಗೆ ಕೇವಲ ಮೋಹವು ಸುತ್ತಿಕೊಂಡಿರುವುದು. ಕೊನೆಗೆ ಪುತ್ರನು ತನ್ನ ಹೆಬ್ಬೆರಳು ತೋರಿಸಿ ಲೇಶಮಾತ್ರಕ್ಕೂ ಸುಖವನ್ನು ಕೊಡಲಾರನು ॥೮೨॥ ಮೇಘಗಳಲ್ಲಿನ ಗಂಧರ್ವ ನಗರದ ರಚನೆಯನ್ನು ಕಂಡು, ಅದರ ಮೇಲೆ ಅಭಿಲಾಷೆಯು ಉತ್ಪನ್ನವಾಗಿ, ಆ ನಗರವನ್ನು ಪ್ರಾಪ್ತ ಮಾಡಿಕೊಳ್ಳಲು ಅನೇಕ ಉಪಾಯಗಳನ್ನು ಹಾಗೂ ಕಲ್ಪನೆಗಳನ್ನು ಮಾಡುತ್ತ ಸೈನ್ಯವನ್ನು ಕೂಡಿಸಿದರೆ ಹೇಗೋ ॥೮೩॥ ಅದರಂತೆಯೇ ದೇಹದ ಮೇಲಿನ ಅಭಿಮಾನವು ವ್ಯರ್ಥವಾಗಿರುವುದು. ದೇಹದ ವಿಷಯಕ್ಕೆ ಮಮತೆ ಎಂಬುದು ಮಹಾಕಠಿಣವಾಗಿರುವುದು. ಮಮತೆ ಮತ್ತು ಅಭಿಮಾನವು ಇವೇ ಪ್ರಾಣಿಗಳ ಮೋಹಕ್ಕೆ ಮೂಲ ಕಾರಣಗಳಾಗಿರುವುವು ॥೮೪॥ ಹೀಗೆ ಮಮತೆ ಮತ್ತು ಅಹಂಕಾರ (ನಾನು, ನನ್ನದು) ಇವೇ ಮೋಹದ ತಂದೆ ತಾಯಿಗಳಾಗಿವೆ. ಇವರ ಬೆಳವಣಿಗೆಯು ಹೇಗಾಗುತ್ತ ಸಾಗುವುದೋ, ಅದರಂತೆಯೇ ಮೋಹವೂ ಕೂಡ ಹೆಚ್ಚು ಹೆಚ್ಚಾಗಿ ಬೆಳೆಯುತ್ತ ಸಾಗುವುದು ॥೮೫॥ ಪ್ರಿಯವಾದ ವಿಷಯಗಳ ಆಸಕ್ತಿ ಇದ್ದು ಅದರ ಸತತ ಪ್ರಾಪ್ತಿಯಾಗುತ್ತಿರಲು ಅದಕ್ಕೆ ಸುಖವೆನ್ನುವರು. ಆದರೆ ವಿಷವನ್ನು ನೆಕ್ಕಿನೋಡಲು ಮಧುರವಾಗಿ ತೋರುವಂತೆ ಇದಾಗಿರುವುದು ॥೮೬॥ ವಿಷಯ ಪ್ರಾಪ್ತಿಯಿಂದ ಆಗುವ ಸಂತೋಷಕ್ಕೆ ಸುಖವೆಂದು ಹೇಳುವರು. ವಿಷಯಗಳ ನಾಶವೇ ದುಃಖ ಅಥವಾ ಅಸುಖವೆಂದು ಹೆಸರು ಕೊಡುವರು ॥೮೭॥ ಶೋಕ, ಮೋಹ, ಸುಖ, ದುಃಖ ಇವುಗಳಿಂದಲೇ ದೇಹದ ಪ್ರಾಪ್ತಿಯಾಗುವುದು. ದೇಹದ ಅಭಿಮಾನದಿಂದಲೇ ಅನೇಕ ಪ್ರಕಾರಗಳ ಜನ್ಮವನ್ನು ಧರಿಸಬೇಕಾಗುವುದು ॥೮೮॥ ಯಾವ ಪ್ರಾಣಿಯು ಯಾವ ಮಾತನ್ನು ಸತತವಾಗಿ ಧ್ಯಾನಿಸುತ್ತ ಮರಣನಾಗುವನೋ, ಅವನು ಅದೇ ಸಂಸ್ಕಾರವನ್ನು ಹೊತ್ತು ಪುನಃ ಜನ್ಮವನ್ನು ಧರಿಸುವನು. ಅಥವಾ ಯಾವನು ಅತ್ಯಂತ ದ್ವೇಷದಿಂದ ಸಾಯುವನೋ, ಅವನು ಆ ದ್ವೇಷಾನುಸಾರವಾಗಿ ಜನ್ಮಕ್ಕೆ ಬರುತ್ತಿರುವನು ॥೮೯॥ ಸರ್ಪ ಮತ್ತು ಮುಂಗುಲಿ ಇವುಗಳ ಪೂರ್ವಜನ್ಮದ ವೃತ್ತಿಯು ವೈರದಿಂದ ಕೂಡಿರುವುದು. ಆದ್ದರಿಂದ ಇವು ವೈರಭಾವನೆಯಿಂದಲೇ ಜನ್ಮಕ್ಕೆ ಬರುವವು. ಮೃತ್ಯು ಸಮಯಕ್ಕೆ ಮನುಷ್ಯನಿಗೆ ಯಾವ ವಾಸನೆ ಇರುವುದೋ, ಅದರಂತೆಯೇ ಜೀವಕ್ಕೆ ಮುಂದಿನ ಜನ್ಮವು ಲಭಿಸುವುದು ॥೯೦॥ ಅಂತ್ಯಕಾಲದಲ್ಲಿ ಅಂತಃಕರಣದಲ್ಲಿ ಯಾವ ವಾಸನೆಯು ಪ್ರಬಲವಾಗಿರುತ್ತದೆಯೋ, ಅದರಂತೆಯೇ ಮುಂದಿನ ಜನ್ಮದಲ್ಲಿ ಮನುಷ್ಯನಿಗೆ ಪ್ರಾಪ್ತವಾಗುವುದು. ವಾಸನೆಯಂತೆಯೇ ಮುಂದಿನ ಜನ್ಮವು ಸಿಗುವುದೆಂದು ಶ್ರುತಿ, ಪುರಾಣಗಳು ಹೇಳುವುವು ॥೯೧॥

ಪುರಾಪಾಸವೇ ವೃಥಾ ಛಾಯಾ । ತೈಶೀ ಬ್ರಹ್ಮೀ ಮಿಥ್ಯಾ ಮಾಯಾ । ತೇ ಉಪಜವೀ ಗುಣಕಾರ್ಯಾ । ದೇಹ ಭಾಸಾವಯಾ ಮೂಳ ತೇ ॥೯೨॥ ಜೇವೀ ಕಾ ಸ್ವಪ್ನೀ ಏಕಲೇ ಮನ । ನಾನಾಕಾರ ಹೋಯ ಆಪಣ । ತೇವೀ ಚೈತನ್ಯಾಚೇ ಅನ್ಯಥಾಭಾನ । ತೇ ಹೇ ಜಾಣ ಚರಾಚರ ॥೯೩॥ ಏವಂ ವಸ್ತುತಾ ಸಂಸಾರ ನಾಹೀ । ತೇಥೇ ಸುಖದುಃಖ ಕೈಚೇ ಕಾಯೀ । ದೇಹೇವೀಣ ಛಾಯಾ ಪಾಹೀ । ಕೋಣೇ ಠಾಯೀ ಉಪಜೇಲ ॥೯೪॥ ಜೇ ಉಪಜಲೇಚ ನಾಹೀ । ತೇ ಕಾಳೇ ಗೋರೇ ಸಾಂಗೋ ಕಾಯೀ । ಅವಘೇ ಸ್ವಪ್ನಪ್ರಾಯ ಪಾಹೀ । ವಸ್ತುತಾ ನಾಹೀ ಸಂಸಾರು ॥೯೫॥ ಇಹೀ ದೋಹೀ ಶ್ಲೋಕೀ ಅಗಾಧು । ಪರಿಹರಿಲಾ ವಸ್ತುವಿರೋಧು । ಆತಾ ಪ್ರತೀತೀನೇ ಜೋ ಅನುರೋಧು । ತೋ ಸತ್ಯಾಸೀ ಬಾಧು ಕರೂ ನ ಶಕೇ ॥೯೬॥ ಡೋಳಾ ಅಂಗುಳೀ ಲಾವಿತೀ । ತೇಣೇ ದೋನ ಚಂದ್ರ ಆಭಾಸತೀ । ಗಗನೀ ದೋ ಚಂದ್ರಾ ನಾಹೀ ವಸ್ತೀ । ಮಿಥ್ಯಾ ಪ್ರತೀತೀ ನಿರಾಕಾರೀ ॥೯೭॥

ವಿದ್ಯಾವಿದ್ಯೇ ಮಮ ತನೂ ವಿದ್ಧ್ಯುದ್ಧವ ಶರೀರಿಣಾಮ್ । ಮೋಕ್ಷಬಂಧಕರೀ ಆದ್ಯೇ ಮಾಯಯಾ ಮೇ ವಿನಿರ್ಮಿತೇ ॥೩॥

ಅರ್ಥ:- ಹೇ ಉದ್ಧವನೇ, ಜ್ಞಾನ ಮತ್ತು ಅಜ್ಞಾನ ಎಂಬ ಎರಡೂ ನನ್ನಮಾಯೆಯಿಂದ ಉತ್ಪನ್ನವಾದವುಗಳಾಗಿದ್ದು, ನನ್ನ ಶಕ್ತಿಯ ವಿಸ್ತರಣೆಗಳಾಗಿವೆ. ಜ್ಞಾನ ಮತ್ತು ಅಜ್ಞಾನ ಎರಡೂ ಅನಾದಿಯಾಗಿವೆ. ಮತ್ತು ದೇಹಧಾರಿ ಜೀವಿಗಳಿಗೆ ನಿರಂತರವಾಗಿ ಬಂಧನವನ್ನು ಮತ್ತು ಮೋಕ್ಷವನ್ನು ನೀಡುತ್ತವೆ.

ನಿಜಬೋಧೇ ಯೇತ ಬೋಧಾ । "ಬ್ರಹ್ಮಾಹಮಸ್ಮಿ" ಸ್ಫುರೇ ಸದಾ । ತೇ ಜಾಣ ಶುದ್ಧ "ವಿದ್ಯಾ" । ಜೇ ಅವಿದ್ಯಾ ಛೇದಕ ॥೯೮॥ ಮೀ ಪಾಪೀ ಮೀ ಸದಾ ನಿರ್ದೈವೋ । ಐಸಾ ನಿತ್ಯ ಸ್ಫುರೇಭಾವೋ । ತೇಚಿ ಸಬಳ "ಅವಿದ್ಯಾ" ಪಹಾ ಹೋ । ಜೇ ನಾನಾ ಸಂದೇಹೋ ಉಪಜವೀ ॥೯೯॥ ಏಕೀ ಜೀವಾತೇ ಘಾಲೀ ಬಂದೀ । ಏಕೀ ಜೀವಾಚೇ ಬಂಧನ ಛೇದೀ । ಯಾ ದೋನೀ ಮಾಝ್ಯಾ ಶಕ್ತಿ ಅನಾದೀ । ಜಾಣ ತ್ರಿಶುದ್ಧೀ ಉದ್ಧವಾ ॥೧೦೦॥ "ತೂ ಚಿನ್ಮಾತ್ರ ಚೈತನ್ಯಘನ । ಚಿತ್‌ಸ್ವರೂಪೇ ವೃತ್ತಿಶೂನ್ಯ । ತುಜ ಶಕ್ತೀ ಕೈಚ್ಯಾ ಜಾಣ । ನಿರ್ಧರ್ಮಕಪಣ ಸರ್ವದಾ" ॥೧೦೧॥ ಉದ್ಧವಾ ಹೇ ಆಶಂಕಾ ವಾಯಾ । ಕಾರಣ ನಾಹೀ ಕರಾವಯಾ । ಯಾ ಶಕ್ತೀ ಜನ್ಮವೀ ಮಾಝೀ ಮಾಯಾ । ಜೇ ನ ಯೇ ಆಯಾ ಸುರನರಾ ॥೧೦೨॥ "ಸತ್" ಮ್ಹಣೋ ತರೀ ತತ್ಕಾಳ ನಾಸೇ । "ಅಸತ್" ಮ್ಹಣೋ ತರೀ ಆಭಾಸೇ । ಜಿಣೇ ನಾಮರೂಪಾಂಚೇ ಪಿಸೇ । ಲಾವಿತೀ ಅಸೇ ಜಗಾಸೀ ॥೧೦೩॥

ಮನುಷ್ಯನ ಜೊತೆಯಲ್ಲಿ ಇರುವ ಅವನ ಛಾಯೆಯು ಹೇಗೆ ಮಿಥ್ಯೆಯಾಗಿದೆಯೋ, ಹಾಗೆಯೇ ಬ್ರಹ್ಮನಲ್ಲಿ ಇರುವ ಮಾಯೆಯೂ ಕೂಡ ಮಿಥ್ಯೆಯಾಗಿರುವುದು. ಈ ಮಾಯೆಯು ಗುಣಗಳ ಕಾರ್ಯವನ್ನು ಹುಟ್ಟಿಸುತ್ತಿರುವುದು. ದೇಹದ ಭಾಸವಾಗುವುದಕ್ಕೆ ಇದೇ ಕಾರಣವಾಗಿರುವುದು ॥೯೨॥ ಸ್ವಪ್ನದಲ್ಲಿ ಒಂದೇ ಇರುವ ಮನಸ್ಸು ಯಾವ ಪ್ರಕಾರವಾಗಿ ಅನೇಕ ಪ್ರಕಾರದ ರೂಪಗಳನ್ನು ಧರಿಸುವುದೋ, ಅದೇ ಪ್ರಕಾರವಾಗಿ ಚೈತನ್ಯದ ಮಿಥ್ಯಾಭಾಸವು ಇದೇ ಚರಾಚರ ವಿಶ್ವವಾಗಿರುವುದು ॥೯೩॥ ಎಲ್ಲಿ ನಿಜವಾಗಿಯೂ ಸಂಸಾರವೇ ಇಲ್ಲದಿರಲು ಅಲ್ಲಿ ಸುಖದುಃಖಗಳಾದರೂ ಎಲ್ಲಿಂದ ಇರಬೇಕು? ದೇಹವಿಲ್ಲದೇ ಅದರ ಛಾಯೆಯು ಎಲ್ಲಿಂದ ಹುಟ್ಟಬೇಕು? ॥೯೪॥ ನಿಜವಾಗಿಯೂ ಇದೆಲ್ಲವೂ ಸ್ವಪ್ನದಂತಿರುವುವು. ಯಾವುದು ಉತ್ಪನ್ನವೇ ಆಗಿಲ್ಲ, ಅದಕ್ಕೆ ಕಪ್ಪು, ಗೌರ ಹೇಗೆ ಎಂದು ಹೇಳಬೇಕು? ಆದ್ದರಿಂದ ನಿಜವಾಗಿಯೂ ಸಂಸಾರವು ಇಲ್ಲ ॥೯೫॥ ಈ ಪ್ರಕಾರವಾಗಿ ಈ ಯಾವ ಎರಡು ಶ್ಲೋಕಗಳಿಂದ ವಸ್ತುವಿರೋಧದ ಉತ್ಕೃಷ್ಟರೀತಿಯಲ್ಲಿ ಪರಿಹಾರವನ್ನು ಮಾಡಲಾಯಿತು. ಈಗ ಅನುಭವದಿಂದ ಯಾವುದು ತೋರುವುದೋ, ಆ ಸತ್ಯಕ್ಕೆ ಯಾವ ಬಾಧೆಯು ಎಂದಿಗೂ ಆಗಲಾರದು ॥೯೬॥ ನಾವು ಕಣ್ಣಿನಲ್ಲಿ ಬಟ್ಟು ಒಡಿಯಲು ಚಂದ್ರನು ಎರಡಾಗಿ ಕಾಣಿಸುವನು. ಆದರೆ ಆಕಾಶದಲ್ಲಿ ಎಂದಿಗೂ ಎರಡು ಚಂದ್ರರು ಇರುವುದಿಲ್ಲ. ಅದರಂತೆ ನಿರಾಕಾರದಲ್ಲಿ ಮಿಥ್ಯಾಭಾಸವಾಗುತ್ತಿರುವುದು ॥೯೭॥

ಯಾವ ಅನುಭವವು ಆತ್ಮಜ್ಞಾನದಿಂದ ಬರುವುದೋ, ಅಹಂ ಬ್ರಹ್ಮಾಸ್ಮಿ ಭಾವನೆಯು ನಿರಂತರವಾಗಿ ಇರುವುದೋ, ಅದೇ ಶುದ್ಧವಾದ ವಿದ್ಯೆಯಾಗಿರುವುದು. ಇದೇ ಅವಿದ್ಯೆಯ ನಾಶಕಾರಕವೆಂದು ತಿಳಿ ॥೯೮॥ ನಾನು ಪಾತಕೀ, ನಾನು ದುರ್ದೈವಿ ಹೀಗೆ ಸತತವಾಗಿ ಭಾವನೆಯು ಉಂಟಾಗುವುದಕ್ಕೆ ಕಾರಣ ಪ್ರಬಲವಾದ ಅವಿದ್ಯೆಯಾಗಿರುವುದು. ಇದು ಅನೇಕ ಪ್ರಕಾರದ ಸಂಶಯಗಳನ್ನು ಮೂಡಿಸುತ್ತಿರುವುದು ॥೯೯॥ ಅವಿದ್ಯೆಯು ಜೀವಕ್ಕೆ ಬಂಧನದಲ್ಲಿ ಸಿಲುಕಿಸುವುದು. ಮತ್ತು ವಿದ್ಯೆಯು ಜೀವದ ಬಂಧನವನ್ನು ಬಿಡಿಸುವುದು. ಈ ಎರಡೂ ನನ್ನ ಅನಾದೀ ಶಕ್ತಿಯಾಗಿವೆ. ಇದನ್ನು ನೀನು ನಿಶ್ಚಯವಾಗಿ ಅರಿತುಕೋ ॥೧೦೦॥ ನೀನು ಚಿನ್ಮಾತ್ರನು, ಚೈತನ್ಯಘನನಾಗಿರುವೆ, ಚಿತ್‌ಸ್ವರೂಪನಾಗಿರುವುದರಿಂದ ನೀನು ವೃತ್ತಿಶೂನ್ಯನಾಗಿರುವೆ. ಸದಾ ಸರ್ವದಾ ನಿರ್ಧರ್ಮತನದಿಂದ ಇರುವವನಾಗಿರುವೆ. ಹೀಗಿರಲು ನಿನ್ನ ಶಕ್ತಿಯು ಹೇಗೆ ಸಂಭವಿಸುವುದು? ॥೧೦೧॥ ಉದ್ಧವಾ, ನೀನು ಹೀಗೆ ಹೇಳಬಹುದು. ಇದಕ್ಕಾಗಿ ಸಂದೇಹಪಡುವ ಯಾವ ಕಾರಣವೂ ಇಲ್ಲ. ನನ್ನ ಮಾಯೆಯು ಈ ಶಕ್ತಿಯನ್ನು ನಿರ್ಮಾಣಗೊಳಿಸುವುದು. ಈ ಮಾಯೆಯು ಸುರನರರಿಗೆ ನಿಲುಕದು ॥೧೦೨॥ ಈ ಮಾಯೆಗೆ ಸತ್ ಎನ್ನಬೇಕೆಂದರೆ ಕೂಡಲೇ ನಾಶವಾಗುವುದು. ಅಸತ್ ಎನ್ನಬೇಕೆಂದರೆ ಅದು ಭಾಸವಾಗುವುದು. ಇದು ಜಗತ್ತಿಗೆ ನಾಮ ರೂಪಗಳ ಹುಚ್ಚನ್ನು ಹಚ್ಚಿರುವುದು ॥೧೦೩॥

ನಾತುಡೇ ಸಂತಾಸಂತಬೋಲಿೀ । ಮಾಯಾ ''ಅನಿರ್ವಚನೀಯ'' ಝಾಲೀ । ತಿಣೇ ವಿದ್ಯಾ ಅವಿದ್ಯಾ ಇಯೇ ಪಿಲೀ । ವಾಢವಿಲೀ ನಿಜಪಕ್ಷೀ ।।೧೦೪।। ಆಜಿ ಕಾಳೀಂಚ್ಯಾ ಕೇಲ್ಯಾ ನವ್ಹತೀ । ವಿದ್ಯಾ ಅವಿದ್ಯಾ ಅನಾದೀ ಶಕ್ತೀ। ಬಂಧಮೋಕ್ಷಾಂತೇ ಭಾಸವಿತೀ । ಯಾ ದೋನೀ ವೃತ್ತೀ ಮಾಯೇಚ್ಯಾ ।।೧೦೫।। ತೇ ''ಮಾಯಾ'' ತೂ ಮ್ಹಣಸೀ ಕೋಣ । ತುಝೀ ''ಕಲ್ಪನಾ'' ತೇ ಮಾಯಾ ಪೂರ್ಣ । ಬದ್ಧ ಮುಕ್ತತಾ - ಸ್ಫುರಣ । ತೀಮಾಜೀ ಜಾಣ ಸ್ಫುರತಾತಿ ।।೧೦೬।। ಬಂಧಮೋಕ್ಷಾಂಚೀ ರಾಹತೀ ಸ್ಥಿತೀ । ತೇ ಮೀ ಸಾಂಗೇನ ತುಜಪ್ರತೀ । ಐಕ ಉದ್ಧವಾ ನಿಶ್ಚಿತೀ। ಯಥಾ ನಿಗುತೀ ನಿವಾಡೇ ।।೧೦೭।। ಸ್ವಪ್ನೀ ನ ದೇಖೇ ಆರಾಧನ । ಜ್ಯಾಸೀ ನಾಹೀ ಮಾಝೇ ಭಜನ । ಅವಿದ್ಯಾ ತ್ಯಾಮಾಜೀ ಸಂಪೂರ್ಣ। ಪ್ರಬಳ ಜಾಣ ವಾಢತ ।।೧೦೮।। ಜೋ ಮಾಝ್ಯಾ ಠಾಯೀ ಅತಿಸಾದರ । ಭಜನಶೀಳ ಆಠೌ ಪ್ರಹರ । ತೇಚಿ ಬ್ರಹ್ಮವಿದ್ಯೇಚೇ ಘರ । ತೇಥೇ ನಿರಂತರ ತೇ ವಾಢೇ ।।೧೦೯।। ಜೇಥ ಮಾಝ್ಯಾ ಭಜನಾಚಾ ಉಲ್ಲಾಸು । ತೇಥ ಅವಿದ್ಯೇಚಾ ನಿರಾಸು । ತೋಚಿ ಬ್ರಹ್ಮವಿದ್ಯೇಚಾ ಪ್ರವೇಶು । ಹಾ ಅತಿವಿಶ್ವಾಸು ಭಕ್ತಾಂಚಾ ।।೧೧೦।। ಯೇಥ ಬದ್ಧಾಚೇ ಕಾರಣ । ಆಣಿ ಮೋಕ್ಷಾಚೇ ಸಾಧನ । ಭಕ್ತೀಚೇ ದೃಢ ಸ್ಥಾಪನ । ಅರ್ಥಾಸ್ತವ ಜಾಣ ಬೋಲಿಲೋ ।।೧೧೧।। ''ಜ್ಯಾ ಬಂಧ ಮೋಕ್ಷ ದೋನೀ ವೃತ್ತೀ । ತ್ಯಾ ತೂ ಮಾಯೇಚ್ಯಾ ಮ್ಹಣಸೀ ಶಕ್ತೀ। ತೇಂವ್ಹಾ ಮಾಯಾ ಝಾಲೀ ಮೋಕ್ಷದಾತೀ । ಹೇ ಕೇವೀ ಶ್ರೀಪತೀ ಘಡೇಲ ।।೧೧೨।। ಜರೀ ಮಾಯಾ ಝಾಲೀ ಮೋಕ್ಷದಾತೀ । ತರೀ ಕಾ ಕರಾವೀ ತುಝೀ ಭಕ್ತೀ । ಹೇಚಿ ಸತ್ಯ ಕಾಯ ಶ್ರೀಪತೀ । ಸಾಂಗ ನಿಶ್ಚಿತೀ ನಿವಾಡು'' ।।೧೧೩।। ಕೃಷ್ಣ ಮ್ಹಣೇ ಉದ್ಧವಾಸೀ । ಸ್ವಯೇ ಚಲನ ನಾಹೀ ಛಾಯೇಸೀ । ತೇವೀ ಸಾಮರ್ಥ್ಯ ನಾಹೀ ಮಾಯೇಸೀ । ಕೇವೀ ಮೋಕ್ಷಾಸೀ ತೇ ದೇಈಲ ।।೧೧೪।। ಜೋ ಮಾಯೇಚಾ ನಿಯಂತಾ । ತೋ ವಿಷ್ಣು ಮೋಕ್ಷಾಚಾ ದಾತಾ। ತೋಡೂನಿ ಜೀವಾಚೀ ಬದ್ಧತಾ। ಸಾಯುಜ್ಯತಾ ದೇತಸೇ ।।೧೧೫।। ಮ್ಹಣಶೀ ಅವಿದ್ಯಾ - ಕಾಮಕರ್ಮಾದೃಷ್ಟೇ। ಜೀವಾಸೀ ಬಂಧನ ಲಾಗೇ ಮೋಠೇ । ತೇ ಬ್ರಹ್ಮವಿದ್ಯಾ-ನಿಷ್ಕರ್ಮೇ ತುಟೇ । ಹಾ ಬೋಧ ಕರೀ ನೇಟೇ ಗುರು ಶ್ರುತಿದ್ವಾರಾ ।।೧೧೬।। ''ಯೇಥ ವಿಷ್ಣು ಕಾಯ ಝಾಲಾ ಕರ್ತಾ । ಮಾ ತೋ ಹೋಈಲ ಮೋಕ್ಷದಾತಾ'' । ಹೇ ವಿಕಲ್ಪಾಚೀ ವಾರ್ತಾ । ನ ಘಡೇ ಸರ್ವಥಾ ಉದ್ಧವಾ ।।೧೧೭।।

ಮಾಯೆಗೆ ಸತ್ ಅಥವಾ ಅಸತ್ ಎಂದು ಹೇಳಲು ಬರುವುದಿಲ್ಲ. ಆದ್ದರಿಂದ ಈ ಮಾಯೆಯು ಅನಿರ್ವಚನೀಯವಾಗಿದೆ. ಈ ಮಾಯೆ ಎಂಬ ಪಕ್ಷಿಯು ತನ್ನ ರೆಕ್ಕೆ ಕೆಳಗೆ ವಿದ್ಯಾ, ಅವಿದ್ಯಾ ಎಂಬ ಎರಡು ಮರಿಗಳನ್ನು ಬೆಳೆಸಿರುವುದು ।।೧೦೪।। ವಿದ್ಯಾ ಮತ್ತು ಅವಿದ್ಯಾ ಇವು ಇಂದು ನಿನ್ನೆಯದ್ದಲ್ಲ. ಇವು ಅನಾದಿ ಶಕ್ತಿಗಳಾಗಿವೆ. ಮಾಯೆಯ ಈ ಎರಡು ಶಕ್ತಿಗಳು ಬಂಧ ಮತ್ತು ಮೋಕ್ಷ ಇವುಗಳನ್ನು ತೋರಿಸಿಕೊಡುವುವು ।।೧೦೫।। ಈಗ ನೀನು ಮಾಯಾ ಎಂದರೆ ಯಾರು? ಎಂದು ಕೇಳಬಹುದು. ಹಾಗಾದರೆ ಕೇಳು. ನಿನ್ನ ಕಲ್ಪನೆಯೇ ಅದೇ ಮಾಯೆಯಾಗಿರುವುದು. ಈಕೆಯಿಂದಲೇ ಬದ್ಧ ಮತ್ತು ಮುಕ್ತ ಈ ಅವಸ್ಥೆಗಳು ಸ್ಫುರಣಗೊಳ್ಳುವುವು ।।೧೦೬।। ಹೇ ಉದ್ಧವನೇ, ಈಗ ನಿನಗೆ ಬಂಧ ಮೋಕ್ಷಗಳ ಸ್ವರೂಪವನ್ನು ಸ್ಪಷ್ಟವಾಗಿ ವಿಸ್ತಾರಪೂರ್ವಕ ತಿಳಿಸುವೆ, ಅದನ್ನು ನೀನು ಲಕ್ಷ ಕೊಟ್ಟು ಕೇಳು ।।೧೦೭।। ಯಾವನಿಗೆ ಸ್ವಪ್ನದಲ್ಲಿಯೂ ನನ್ನ ಆರಾಧನೆಯು ತಿಳಿದಿರುವುದಿಲ್ಲ, ಯಾವನ ಕೈಗಳಿಂದ ನನ್ನ ಭಜನೆಯು ನಡೆದಿಲ್ಲ, ಅವನಲ್ಲಿ ಅವಿದ್ಯಾ ಅಂದರೆ ಪೂರ್ಣ ಅಜ್ಞಾನವು ನಿರಂತರವಾಗಿ ಬೆಳೆಯುತ್ತಿರುವುದು ।।೧೦೮।। ಯಾರು ನನ್ನಲ್ಲಿ ಅತ್ಯಂತ ತತ್ಪರರಾಗಿರುವರೋ, ಮತ್ತು ಎಂಟೂ ಪ್ರಹರಗಳಲ್ಲಿ ಭಜನೆಯೊಳಗೆ ತಂದ್ರಿತರಾಗಿರುವರೋ, ಅವರು ಬ್ರಹ್ಮವಿದ್ಯೆಯ ಸಾಕ್ಷಾತ್ ಮನೆಯಾಗಿರುವರು. ಅವರಲ್ಲಿ ವಿದ್ಯೆಯು ನಿರಂತರವಾಗಿ ಬೆಳೆಯುತ್ತಿರುವುದು ।।೧೦೯।। ಎಲ್ಲಿ ನನ್ನ ಭಜನೆಯು ನಡೆಯುವುದೋ ಅಲ್ಲಿ ಅವಿದ್ಯೆಯು ಇಲ್ಲದಾಗುವುದು. ಅಲ್ಲಿಯೇ ಬ್ರಹ್ಮವಿದ್ಯೆಯ ಪ್ರವೇಶವಾಗುವುದು. ಹೀಗೆ ಭಕ್ತರ ದೃಢವಿಶ್ವಾಸವಿರುವುದು ।।೧೧೦।। ಇಲ್ಲಿಯವರೆಗೆ ಭಕ್ತಿಯ ದೃಢವಾದ ಸ್ಥಾಪನೆಯಾಗಬೇಕೆಂದು ನಾನು ಬಂಧದ ಕಾರಣ ಮತ್ತು ಮೋಕ್ಷದ ಸಾಧನೆಯನ್ನು ಹೇಳಿದೆನು ।।೧೧೧।। ಬಂಧ ಮೋಕ್ಷದ ಈ ಎರಡು ವೃತ್ತಿಗಳಿರುವುವು. ಇವುಗಳಿಗೆ ನೀನು ಮಾಯಾಶಕ್ತಿ ಎನ್ನುವೆ, ಹಾಗಾದರೆ ಮಾಯೆಯು ಮೋಕ್ಷದಾತಳಾದಳು. ಆದರೆ ಹೇ ಶ್ರೀಕೃಷ್ಣನೇ, ಹೀಗೆ ಹೇಗಾಗಲು ಸಾಧ್ಯ? ।।೧೧೨।। ಒಂದು ವೇಳೆ ಮಾಯೆಯೇ ಮೋಕ್ಷವನ್ನು ಕೊಡುವುದಾದರೆ ನಿನ್ನ ಭಕ್ತಿಯನ್ನು ಏತಕ್ಕಾಗಿ ಮಾಡಬೇಕು? ಹೇ ಕೃಷ್ಣನೇ, ಇದರಲ್ಲಿ ಯಾವುದು ನಿಜವೆಂಬುದು ನೀನು ನನಗೆ ನಿಶ್ಚಿತವಾಗಿ ಹೇಳಬೇಕು ।।೧೧೩।। ಆಗ ಶ್ರೀಕೃಷ್ಣನು ಉದ್ಧವನಿಗೆ ಹೀಗೆ ಹೇಳಿದನು. ನೆರಳಿಗೆ ಯಾವ ಚಲನವಲನೆಯು ಇರುವುದಿಲ್ಲ. ಅದರಂತೆ ಮಾಯೆಗೂ ತನ್ನದೇ ಆಗಿರುವ ಯಾವ ಸಾಮರ್ಥ್ಯವೂ ಇಲ್ಲ. ಅದು ಮೋಕ್ಷವನ್ನು ಹೇಗೆ ಕೊಟ್ಟೀತು? ।।೧೧೪।। ಮಾಯೆಯ ನಿಯಂತಕನಾದ ಯಾವ ವಿಷ್ಣು ಮೋಕ್ಷದಾತಾ ಆಗಿರುವನು. ಆತನು ಜೀವದ ಬದ್ಧತೆಯನ್ನು ಮುರಿದು ಹಾಕುವನು, ಆತನಿಗೆ ಸಾಯುಜ್ಯ ಮುಕ್ತಿಯನ್ನು ಕೊಡುವನು ।।೧೧೫।। ಇದನ್ನರಿತು ನೀನು ಹೀಗೆ ಹೇಳಬಹುದು, ಏನೆಂದರೆ, ಅವಿದ್ಯಾ ಮತ್ತು ಕಾಮ, ಕರ್ಮ ಮತ್ತು ಅದೃಷ್ಟ ಇವು ಜೀವಕ್ಕೆ ಬಿಗಿಯಾದ ಬಂಧನವಾಗುವುವು ಮತ್ತು ಅವು ಬ್ರಹ್ಮವಿದ್ಯಾ ಮತ್ತು ನಿಷ್ಕರ್ಮದಿಂದ ಇಲ್ಲದಾಗುವುವು. ಗುರುಗಳೂ ಸಹ ಇದೇ ಉಪದೇಶವನ್ನು ಶ್ರುತಿ ಮುಖಾಂತರ ನಿಶ್ಚಯಪೂರ್ವಕವಾಗಿ ಮಾಡುವರು ।।೧೧೬।। ಇದರಲ್ಲಿ ವಿಷ್ಣು ಕರ್ತಾ ಹೇಗೆ ಆಗವನು? ಇಲ್ಲ, ಅಂದಮೇಲೆ ಆತನು ಮೋಕ್ಷದಾತಾ ಹೇಗಾಗುವನು? ಆದರೆ ಉದ್ಧವಾ, ಇಂತಹ ವಿಕಲ್ಪದ ಮಾತೇ ಎತ್ತಬೇಡ ।।೧೧೭।।

ಗುರುರೂಪೇ ವಿಷ್ಣು ಜಾಣ । ಶ್ರುತ್ಯರ್ಥ ವಿಷ್ಣುಚಿ ಆಪಣ । ಶಮದಮಾದಿ ಸಾಧನ । ತೇಹೀ ಜಾಣ ವಿಷ್ಣುಚೀ ॥೧೧೮॥ ಶಿಷ್ಯ ಬುದ್ಧೀಸೀ ಬೋಧಕತಾ । ವಿಷ್ಣುಚಿ ಜಾಣ ತತ್ತ್ವತಾ । ಯಾಪರೀ ಗಾ ನಿಜಭಕ್ತಾ । ಮೋಕ್ಷದಾತಾ ಶ್ರೀವಿಷ್ಣು ॥೧೧೯॥ ತ್ಯಾ ಮೋಕ್ಷಾಚಾ ಜೋ ಪರಿಪಾಕ । ತೇ ಸಮಾಧಿ ಶ್ರೀವಿಷ್ಣುಚಿ ದೇಖ । ಸಮಾಧೀಚೇ ಸುಮಾಧಿ ಸುಖ । ಆವಶ್ಯಕ ಶ್ರೀ ವಿಷ್ಣು ॥೧೨೦॥ ಪರಮಾತ್ಮಾ ಪರಿಪೂರ್ಣ । ತೋ ಮೀ ವಿಷ್ಣು ಬ್ರಹ್ಮಸನಾತನ । ಭಕ್ತಭವಪಾಶಮೋಚನ । ಕೃಪಾಳೂ ಜಾಣ ಕರಿತೇಸೇ ॥೧೨೧॥ ಗತ ಶ್ಲೋಕೀಚೇನಿ ಅನುವಾದೇ । ''ಶರೀರಿಣಾಮ್'' ಯೇಣೇ ಪದೇ । ಜೀವಾಸೀ ಬದ್ಧಪಣ ಉದ್‌ಬೋಧೇ । ತೇಹೀ ವಿನೋದೇ ನಿವಾರಿತಸೇ ॥೧೨೨॥ ಏಕಾಶೀಚ ಬದ್ಧಮುಕ್ತತಾ । ಘಡೇ ನ ಘಡೇ ತತ್ತ್ವತಾ । ಯಾ ಉದ್ಧವಾಚ್ಯಾ ಪ್ರಶ್ನಾರ್ಥಾ । ವಿಶದ ಆತಾ ಕರಿತಕಸೇ ॥೧೨೩॥

ಏಕಸ್ಯೈವ ಮಮಾಂಶಸ್ಯ ಜೀವಸ್ಯೈವ ಮಹಾಮತೇ । ಬಂಧೋಽಸ್ಯಾವಿದ್ಯಯಾನಾದಿರ್ವಿದ್ಯಯಾ ಚ ತಥೇತರಃ ॥೪॥

ಅರ್ಥ:- ನೀನು ಮಹಾಬುದ್ಧಿಶಾಲಿಯಾಗಿರುವೆ, ವಿಚಾರಿಸಿ ನೋಡು, ಜೀವವು ಒಂದೇಯಾಗಿರುವುದು. ಅದು ವ್ಯವಹಾರಕ್ಕಾಗಿ ನನ್ನ ಅಂಶದ ರೂಪದಲ್ಲಿ ಕಲ್ಪಿತವಾಗಿರುವುದು. ವಸ್ತುತಃ ಅದು ನನ್ನಸ್ವರೂಪವೇ ಆಗಿರುವುದು. ಆತ್ಮಜ್ಞಾನದಿಂದ ಅದಕ್ಕೆ ಮುಕ್ತವೆನ್ನುವರು. ಆತ್ಮಜ್ಞಾನವು ಇಲ್ಲದಿರಲು ಅದಕ್ಕೆ ಬದ್ಧವೆನ್ನುವರು. ಈ ಅಜ್ಞಾನವು ಅನಾದಿಯಾಗಿರುವುದರಿಂದ ಬಂಧನವೂ ಅನಾದಿಯಾಗಿರುವುದು.

ರಿತೀ ವಾಢೀ ಅಸೇ ಅಗ್ನೀಶೀ । ತೇಥ ಪುಣಗೇ ಉಸಳಣೇ ಆಕಾಶೀ । ರಿತೀ ವಾಢೀ ನಾಹೀ ಸ್ವರೂಪಾಸೀ । ಅಂಶ ಭಾಸಾವಯಾಸೀ ಠಾವೋ ಕೈಚಾ ॥೧೨೪॥ ಜೇಣೇ ಪಾವಿಜೇ ನಿಜಬೋಧಾತೇ । ತೇ ಬುದ್ಧೀ ಉದ್ಧವಾಪಾಶೀ ವರ್ತೇ । ಯಾಲಾಗೀ ಕೃಷ್ಣಮ್ಹಣೇ ''ಮಹಾಮತೇ'' । ಉದ್ಧವಾತೇ ಅತಿಪ್ರೀತೀ ॥೧೨೫॥ ಅತಿಪ್ರೀತೀ ಪುರಸ್ಕರೂನ । ಉದ್ಧವಾಸೀ ಮ್ಹಣೇ ಸಾವಧಾನ । ಯೇ ಶ್ಲೋಕೀಚಾ ಅರ್ಥ ಗಹನ । ತೇ ಧಾರಣಾ ಜಾಣ ಧರಾವೀ ॥೧೨೬॥ ಯಾಲಾಗೀ ಕೃಷ್ಣ-ಜಗಜೇಠೀ । ಉದ್ಧವಾಚೀ ಪಾಠೀ ಥಾಪಟೀ । ಅತಿಗುಹ್ಯಾಚೀ ಗುಹ್ಯ ಗೋಷ್ಟೀ । ತುಝೀ ಕೃಪೇಸಾಠೀ ಮೀ ಬೋಲತೋ ॥೧೨೭॥ ಪಾಠೀ ಥಾಪಟಾವಯಾಮಿಸೇ ಜಾಣ । ಕರಿತ ಸ್ವಶಕ್ತಿ ಸಂಚರಣ । ತೇಣೇ ಅದ್ವಯ ಬೋಧಲಕ್ಷಣ । ಉದ್ಧವಾಸೀ ಜಾಣ ಪ್ರಕಾಶೀ ॥೧೨೮॥ ಜೀವ ಏಕಚಿ ತ್ರಿಜಗತೀ । ಹೇ ಜಾಣ ಉದ್ಧವಾ ನಿಶ್ಚಿತೀ । ಜೇವೀ ನಾನಾ ದೀಪಾಂಚಿಯಾ ದೀಪ್ತೀ । ತೇಜಾಚೀ ಜ್ಯೋತಿ ಅಭಿನ್ನ ॥೧೨೯॥

ಕಾರಣ ಗುರುರೂಪದಿಂದ ವಿಷ್ಣುನೇ ಇರುವನು. ಶ್ರುತಿಯ ಅರ್ಥವೂ ಕೂಡ ಸ್ವತಃ ವಿಷ್ಣುವೇ ಆಗಿದೆ ಮತ್ತು ಶಮದಮಾದಿಕ ಯಾವ ಸಾಧನೆಗಳೂ ಕೂಡ ವಿಷ್ಣುವೇ ಎಂದು ನೀನು ನಿಶ್ಚಯದಿಂದ ಅರಿತುಕೋ ॥೧೧೮॥ ಶಿಷ್ಯನ ಬುದ್ಧಿಗೆ ಆಗುವ ಜ್ಞಾನವೂ ಕೂಡ ವಿಷ್ಣುರೂಪವೇ ಆಗಿರುವುದು. ಅದರಂತೆ ತನ್ನ ಭಕ್ತರಿಗೆ ಮೋಕ್ಷವನ್ನು ಕೊಡುವವನು ಶ್ರೀ ವಿಷ್ಣುವೇ ಆಗಿರುವನು ॥೧೧೯॥ ಮೋಕ್ಷದಪೂರ್ಣ ಅವಸ್ಥೆಯು ಸಮಾಧಿಯಾಗಿರುವುದು. ಅದೂ ಕೂಡ ವಿಷ್ಣುವೇ ಆಗಿರುವನು. ಸಮಾಧಿಯಲ್ಲಿನ ಸಮಾಧಿ ಸುಖವೂ ಕೂಡ ನಿಜವಾಗಿಯೂ ಆ ವಿಷ್ಣುವೇ ಆಗಿರುವನು ॥೧೨೦॥ ಸನಾತನ ಬ್ರಹ್ಮ, ಪರಿಪೂರ್ಣ ಪರಮಾತ್ಮಾ ಹೀಗಿರುವ ವಿಷ್ಣು ನಾನೇ ಆಗಿರುವೆನು. ನಾನು ಕೃಪೆ ಪೂರ್ವಕವಾಗಿ ಭಕ್ತರನ್ನು ಸಂಸಾರಪಾಶದಿಂದ ಮುಕ್ತರನ್ನಾಗಿ ಮಾಡುತ್ತಿರುವೆನು ॥೧೨೧॥ ಈಗ ಈ ಹಿಂದೆ ಮೂರನೆಯ ಶ್ಲೋಕದಲ್ಲಿರುವ ''ಶರೀರಿಣಾಮ್'' ಎಂಬ ಶಬ್ದದಿಂದ, ಜೀವಕ್ಕೆ ಬಂಧನವು ಒದಗುವುದು. ಇದರ ನಿರಸನೆಯನ್ನು ನಾನು ಸಹಜವಾಗಿ ಮಾಡುವೆ ॥೧೨೨॥ ಒಬ್ಬನಿಗೇ ಬಂಧಮೋಕ್ಷಗಳು ಸಾಧಿಸುವೋವೋ? ಅಥವಾ ಇಲ್ಲವೋ? ಎಂಬ ಉದ್ಧವನ ಪ್ರಶ್ನೆಗೆ ಈಗ ಸ್ಪಷ್ಟವಾಗಿ ಉತ್ತರವನ್ನು ಕೊಡುವವನು ॥೧೨೩॥

ಕಟ್ಟಿಗೆಯ ಸಂಯೋಗ, ವಿಯೋಗಗಳಿಂದ ಅಗ್ನಿಯು ಕಡಿಮೆಯಾಗುವುದು, ಹೆಚ್ಚಾಗುವುದು ಮಾಡುತ್ತದೆ. ಅದರ ಕಿಡಿಗಳು ಆಕಾಶದಲ್ಲಿ ಹಾರಿಹೋಗುತ್ತಿರುವುವು. ಆದರೆ ಅಗ್ನಿಯ ಮೂಲಸ್ವರೂಪದಲ್ಲಿ ಯಾವ ಹೆಚ್ಚು ಕಡಿಮೆ ಆಗುವುದಿಲ್ಲ. ಹೀಗಿರಲು ಅದರ ಅಂಶವನ್ನು ಭಾಸವಾಗುವುದಕ್ಕೆ ಎಲ್ಲಿಯ ಅವಕಾಶ? ॥೧೨೪॥ ಆತ್ಮಜ್ಞಾನವನ್ನು ಮಾಡಿಕೊಳ್ಳುವಷ್ಟು ಸೂಕ್ಷ್ಮಬುದ್ಧಿಯು ಉದ್ಧವನಲ್ಲಿರುವುದರಿಂದ ಶ್ರೀಕೃಷ್ಣನು ಬಹುಪ್ರೀತಿಯಿಂದ ಆತನಿಗೆ ''ಮಹಾಮತೇ'' ಎಂದು ಕರೆದನು ॥೧೨೫॥ ಹೀಗೆ ಹೇಳಿ ಪುನಃ ಅತಿಶಯ ಪ್ರೇಮದಿಂದ ಸರಿಯಾಗಿ ಲಕ್ಷಕೊಟ್ಟು ಕೇಳು, ಏಕೆಂದರೆ ಈ ಶ್ಲೋಕದ ಅರ್ಥವು ಬಹಳ ಗಹನವಾಗಿರುವುದು. ಅದಕ್ಕಾಗಿ ಚೆನ್ನಾಗಿ ಆಲಿಸು ಎಂದನು ॥೧೨೬॥ ಹೀಗೆ ಹೇಳುತ್ತ ಜಗಜೇಠಿಯಾದ ಶ್ರೀಕೃಷ್ಣನು ಉದ್ಧವನ ಬೆನ್ನು ಚಪ್ಪರಿಸಿದನು. ನಿನ್ನಮೇಲೆ ನನ್ನ ಅತ್ಯಂತ ಕೃಪೆ ಇರುವುದರಿಂದ ಅತಿಗುಹ್ಯ ಗೋಷ್ಟಿಯನ್ನು ಹೇಳುವೆ, ಕೇಳೆಂದನು ॥೧೨೭॥ ಉದ್ಧವನ ಬೆನ್ನನ್ನು ಚಪ್ಪರಿಸಿ ಭಗವಂತನು ತನ್ನ ಶಕ್ತಿಯನ್ನು ಉದ್ಧವನ ಅಂಗದಲ್ಲಿ ಸಂಚಾರಗೊಳಿಸಿದನು. ಆಗ ಉದ್ಧವನ ಅಂತಃಕರಣದಲ್ಲಿ ಅದ್ವೈತಜ್ಞಾನವು ಪ್ರಕಟವಾಯಿತು ॥೧೨೮॥ ಹೇ ಉದ್ಧವನೇ, ದೀಪಗಳು ಅನೇಕವಾಗಿದ್ದರೂ ಅವುಗಳಲ್ಲಿನ ಪ್ರಕಾಶವು ಒಂದೇ ಅಭಿನ್ನವಾಗಿರುವುದು. ಅದರಂತೆ ಈ ತ್ರೈಲೋಕ್ಯದಲ್ಲಿ ಆತ್ಮವು ಒಂದೇ ಇರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೨೯॥

ದೋನೀ ದೀಪ ಏಕ ಹೋತೀ । ತೈಸೀ ಟಿವಳೀ ಐಕ್ಯಾ ನ ಯೇತೀ । ಜಡತ್ವಾಪಾಶೀ ಭೇದಪ್ರಾಪ್ತೀ । ಐಕ್ಯವೃತ್ತೀ ಅಜಡತ್ವೀ ॥೧೩೦॥ ಚಂದನಕುಟಕೇ ಬಹುವಸ । ಪರೀ ಸರ್ವೀ ಏಕುಚಿ ಸುವಾಸ । ತೇವೀ ಜೀವರೂಪೇ ಮೀ ಅವಿನಾಶ । ಪರಮಪರೇಶ ಆಭಾಸೇ ॥೧೩೧॥ ''ಜೀವರೂಪೇ ತೂ ಶ್ರೀಕೃಷ್ಣ । ಹೇ ಸತ್ಯ ಮಾನಾವೇ ವಚನ । ತ್ರೈ ಭವಪಾಶಾದಿ ಬಂಧನ । ತುಜಚಿ ಜಾಣ ಆದಳಲೇ'' ॥೧೩೨॥ ಐಶೀ ಕಲ್ಪಶೀ ಜರೀ ವಾರ್ತಾ । ತೇ ಮಜ ನ ಘಡೇ ಗಾ ಸರ್ವಥಾ । ಜೇವೀ ಶರೀರಾಸೀ ಪ್ರಾಣ ಚಾಳಿತಾ । ಶರೀರ ಅವಸ್ಥಾ ತ್ಯಾ ನಾಹೀ ॥೧೩೩॥ ಲಿಂಗಶರೀರೀ ಸ್ವಯಂಭ । ಜೀವ ತೋ ಮದಂಶೇ ಪ್ರತಿಬಿಂಬ । ತ್ಯಾಸೀ ದೇಹಾದಿ ಬಂಧನಭಾಂಬ । ಮಿತ್ಯಾ ವಿಡಂಬ ಆಭಾಸೇ ॥೧೩೪॥ ಘಟೇ ಆವರಿಲಾ ಅವಕಾಶ । ತ್ಯಾ ನಾಂವ ಮ್ಹಣತೀ ''ಘಟಾಕಾಶ''। ಘಟಭಂಗೇ ತ್ಯಾ ನವ್ಹೇ ನಾಶ । ತೇವೀ ಮೀ ಅವಿನಾಶ ಜೀವತ್ವೀ ॥೧೩೫॥ ಥಿಲ್ಲರೀ ಪ್ರತಿಬಿಂಬಲಾ ಸವಿತಾ । ತೋ ಗಗನ ಸಾಂಡೋನಿ ಥಿಲ್ಲರಾ-ಅಂತೌತಾ । ನಾಹೀ ರಿಘಾಲಾ ತತ್ತ್ವತಾ । ತೇವೀ ಮೀ ಜೀವತ್ವಾ ಅಲಿಪ್ತ ॥೧೩೬॥ ರವಿ ಥಿಲ್ಲರೀ ಬಿಂಬಲಾ ದಿಸೇ । ತೇವೀ ಮೀ ಲಿಂಗದೇಹೀ ಆಭಾಸೇ । ಮಿಥ್ಯಾ ತೇಥೀಚೆ ಭೋಗಪಿಸೇ । ತೇ ಬಂಧನ ಕೈಸೇ ಮಜ ಲಾಗೇ ॥೧೩೭॥ ಯೇಥೇ ಬೋಲಣೇ ನ ಲಗೇ ಬಹು । ಪ್ರತಿಬಿಂಬಾ ನಾಂವ ''ಜೀವು'' । ಮುಖ್ಯ ಬಿಂಬ ತೋ ಮೀ ''ಶಿವು'' । ವಿಶದ ಉಗವು ಹಾ ಜಾಣ ॥೧೩೮॥ ತಳಾವ ವಿಹಿರೀ ನಾನಾ ಥಿಲ್ಲರೀ । ಸೂರ್ಯ ಪ್ರತಿಬಿಂಬೇ ತ್ಯಾ ಮಾಝಾರೀ । ತಿತುಕೀ ರೂಪೇ ದಿವಾಕರೀ । ಪಾಹತಾ ಅಂಬರೀ ತಂವ ನಾಹೀ ॥೧೩೯॥ ತೈಸೇ ಏಕಾಸೀ ಜೇ ಅನೇಕತ್ವ । ತೇ ಮಿಥ್ಯಾ ಜಾಣ ಜೀವತ್ವ । ಹೇ ಭಾಗವತಾಚೇ ನಿಜತತ್ತ್ವ । ಶುದ್ಧ ಸತ್ತ್ವ ಜ್ಞಾನಾಚೇ ॥೧೪೦॥ ಥಿಲ್ಲರೀ ಪ್ರತಿಬಿಂಬಲಾ ಸವಿತಾ । ಚಂಚಲ ನಿಶ್ಚಲ ಮಳಿನತಾ । ಹೇ ಥಿಲ್ಲರಾಚೇ ಗುಣ ತತ್ತ್ವತಾ । ಪ್ರತಿಬಿಂಬಮಾಥಾ ಮಾನಿತೀ ॥೧೪೧॥ ತೇವೀ ಶಿವಾಸೀ ಬಾಧಕತಾ। ಪಾಹತಾ ನಾಹೀ ಗಾ ಸರ್ವಥಾ। ಹೇ ಅವಿದ್ಯಾಕಾರ್ಯ ತತ್ತ್ವತಾ । ಜೀವಾಚೇ ಮಾಥಾ ಮಾನಿತೀ ॥೧೪೨॥ ಏವಂ ಮಿಥ್ಯಾ ಜೀವಭೇದ ಸರ್ವಥಾ । ತ್ಯಾಸೀ ಬದ್ಧತಾ ಆಣಿ ಮುಕ್ತತಾ । ವಿದ್ಯಾ ಅವಿದ್ಯಾ ನಿಜಪಕ್ಷಪಾತಾ । ದಾವೀ ತತ್ತ್ವತಾ ನಿಜಕರ್ಮೇ ॥೧೪೩॥

ಎರಡು ಜ್ಯೋತಿಗಳು ಒಂದಾಗುವುವು. ಆದರೆ ಎರಡು ಪಣತಿಗಳು ಒಂದಾಗಲಾರವು. ಭೇದವು ಜಡತ್ವದಲ್ಲಿರುವುದು. ಅಜಡತ್ವದಲ್ಲಿ ಐಕ್ಯವೃತ್ತಿ ವಿರುವುದು ॥೧೩೦॥ ಚಂದನವನ್ನು ಬೇಕಾದಷ್ಟು ತುಂಡುಗಳನ್ನಾಗಿ ಮಾಡಿದರೂ ಅದರ ಸುಗಂಧವು ಮಾತ್ರ ಒಂದೇ ಇರುವುದು. ಅದರಂತೆ ಜೀವರೂಪದಿಂದ ಅವಿನಾಶಿ, ಪರಮಾತ್ಮನಾದ ನಾನು ಭಾಸವಾಗುವೆನು ॥೧೩೧॥ ಈಗ ಜೀವರೂಪದಿಂದ ಶ್ರೀಕೃಷ್ಣನಾದ ನೀನು ಇರುವುದನ್ನು ಸತ್ಯವೆಂದು ತಿಳಿದರೆ, ಸಂಸಾರಪಾಶಾದಿ ಬಂಧನಗಳು ನಿನಗಿರುವುವು ಎಂದು ಹೇಳಬೇಕಾದೀತು ॥೧೩೨॥ ಹೀಗೆಂದು ನೀನು ತಿಳಿದುಕೊಂಡರೆ, ಆ ಬಂಧನವು ನನಗೆ ಎಂದಿಗೂ ಒದಗುವುದಿಲ್ಲ. ಪ್ರಾಣವು ಶರೀರದ ಚಲನೆವಲನೆ ಮಾಡಿಸುವುದು. ಆದರೆ ಶರೀರದ ಅವಸ್ಥೆಯು ಅದಕ್ಕಿರುವುದಿಲ್ಲ ॥೧೩೩॥ ಸೂಕ್ಷ್ಮ ಶರೀರದಲ್ಲಿ ಸ್ವಯಂಭುನಾಗಿರುವ ಯಾವ ಜೀವವು, ಅದು ನನ್ನ ಅಂಶದಿಂದ ಪ್ರತಿಬಿಂಬವಾಗಿರುವುದು. ಅದಕ್ಕೆ ದೇಹಾದಿಕ ಬಂಧನವು ಮಿಥ್ಯೆಯಾಗಿ ತೋರುವುವು ॥೧೩೪॥ ಘಟವು ಆಕಾಶದಿಂದ ತುಂಬಿಕೊಂಡಿರುವುದರಿಂದ ಅದಕ್ಕೆ ಘಟಾಕಾಶವೆನ್ನುವರು. ಆದರೆ ಆ ಘಟವು ಒಡೆದು ಹೋಗಲು ಆಕಾಶದ ನಾಶವಾಗುವುದಿಲ್ಲ. ಅದರಂತೆ ನಾನೂ ಕೂಡ ಜೀವಾತ್ಮನಲ್ಲಿ ಅವಿನಾಶಿರೂಪದಿಂದ ಇರುವೆನು ॥೧೩೫॥ ಚಿಕ್ಕ ಮಡುವಿನಲ್ಲಿ ಸೂರ್ಯನ ಪ್ರತಿಬಿಂಬವು ಬೀಳಲು ಆಗ ಸೂರ್ಯನು ಆಕಾಶವನ್ನು ಬಿಟ್ಟು ಆ ಮಡುವಿನಲ್ಲಿ ಪ್ರವೇಶವನ್ನು ಮಾಡಿರುವುದಿಲ್ಲ. ಅದರಂತೆಯೇ ನಾನು ಜೀವತ್ವಕ್ಕೆ ಅಲಿಪ್ತನಾಗಿರುವೆನು ॥೧೩೬॥ ಸೂರ್ಯನು ಮಡುವಿನಲ್ಲಿ ಪ್ರತಿಬಿಂಬಿತನಾದದ್ದು ತೋರುವಂತೆ ನಾನಾದರೂ ಸೂಕ್ಷ್ಮ ದೇಹದಲ್ಲಿ ಭಾಸನಾಗುತ್ತೇನೆ. ಅದರಲ್ಲಿನ ಸರ್ವಭೋಗಗಳ ಹುಚ್ಚು ಮಿಥ್ಯೆಯಾಗಿರುವುದು. ಆ ಮಿಥ್ಯೆಯಾದ ಭೋಗಗಳಿಂದ ನಾನು ಹೇಗೆ ಬದ್ಧನಾಗುವೆ? ॥೧೩೭॥ ಈಗ ಹೆಚ್ಚಿನ ಮಾತೇಕೆ? ಪ್ರತಿಬಿಂಬದ ನಾಮವು ಜೀವವಾಗಿರುವುದು. ಮತ್ತು ಮುಖ್ಯ ಬಿಂಬವು ಶಿವವಾಗಿರುವುದು. ಇದೇ ಜೀವಶಿವರ ಮುಖ್ಯವಾದ ಸ್ಪಷ್ಟೀಕರಣವಾಗಿರುವುದು ॥೧೩೮॥ ಅನೇಕ ಪ್ರಕಾರದ ಕೆರೆಗಳು, ಬಾವಿಗಳು, ಮಡುಗಳು, ಇವುಗಳಲ್ಲಿ ಸೂರ್ಯನ ಪ್ರತಿಬಿಂಬವು ಬೀಳುವುದು. ಆದರೆ ನಿಜವಾಗಿಯೂ ಆಕಾಶದಲ್ಲಿ ಅಷ್ಟೊಂದು ಸೂರ್ಯರು ಇರುವುದಿಲ್ಲ ॥೧೩೯॥ ಅದರಂತೆ ಒಂದಕ್ಕೆ ಅನೇಕತ್ವವಾಗುವ ಯಾವ ಈ ಜೀವರೂಪವು ಮಿಥ್ಯೆಯಾಗಿದೆ. ಇದನ್ನು ನೀನು ದೃಢವಾಗಿ ಲಕ್ಷದಲ್ಲಿಡು. ಭಾಗವತದಲ್ಲಿ ಮುಖ್ಯವಾದ ಜ್ಞಾನದ ಶುದ್ಧವಾದ ತತ್ವವು ಇದೇ ಆಗಿದೆ ॥೧೪೦॥ ಮಡುವಿನಲ್ಲಿ ಸೂರ್ಯನ ಪ್ರತಿಬಿಂಬವು ಬೀಳಲು ಅದು ಚಲಿಸುವುದು, ನಿಶ್ಚಲವಾಗಿರುವುದು, ಮಲಿನವಾಗುವುದು, ಇದೆಲ್ಲವೂ ವಸ್ತುತಃ ಆ ಮಡುವಿನ ಗುಣವಾಗಿರುವುದು. ಆದರೆ ಜನರು ಮಾತ್ರ ಭ್ರಮದಿಂದ ಆ ಗುಣಗಳು ಪ್ರತಿಬಿಂಬದ್ದಾಗಿದೆ ಎಂದು ತಿಳಿಯುವರು ॥೧೪೧॥ ಅದರಂತೆ ಸೂಕ್ಷ್ಮವಾಗಿ ವಿಚಾರಿಸಿ ನೋಡಲು ಶಿವನಿಗೆ ಬಾಧಕತೆಯು ಇಲ್ಲವೇ ಇಲ್ಲ. ಆದರೂ ವಸ್ತುತಃ ಅವಿವೇಕಿ ಜನರು ಈಯಾವ ಅವಿದ್ಯೆಯ ಕಾರ್ಯವನ್ನು ಜೀವಕ್ಕೆ ಆರೋಪಿಸುವರು ॥೧೪೨॥ ಆದ್ದರಿಂದ ಯಾವ ಈ ಜೀವಭೇದವು ನಿಜವಾಗಿಯೂ ಮಿಥ್ಯೆಯಾಗಿರುವುದು. ಆದರೆ ವಿದ್ಯಾ ಮತ್ತು ಅವಿದ್ಯಾ ತಮ್ಮ ತಮ್ಮ ಪಕ್ಷಪಾತದಿಂದ ಜೀವಕ್ಕೆ ಅದರ ಕರ್ಮಾನುಸಾರವಾಗಿ ಬದ್ಧತ್ವ, ಮುಕ್ತತ್ವ ತೋರಿಸುವುವು ॥೧೪೩॥

ತ್ಯಾ ಜೀವ ಆಭಾಸಾಸೀ ಪ್ರಸ್ತುತ । ನಿತ್ಯಬದ್ಧ ನಿತ್ಯಮುಕ್ತ । ಏಕಾಸೀ ದೋನಿ ಅವಸ್ಥಾ ಯೇಥ । ಅಸೇ ದಾವಿತ ವಿದ್ಯಾ ಅವಿದ್ಯಾ ॥೧೪೪॥ ಜೇವೀ ಜಳೀ ಬಿಂಬಲಾ ಸವಿತಾ । ತ್ಯಾ ಜಳಾಚೀ ಚಂಚಳನಿಶ್ಚಳತಾ । ಯಾ ಪ್ರತಿಬಿಂಬಾಸೀಚ ಅವಸ್ಥಾ । ಮುಖ್ಯ ಸವಿತಾ ತೇ ನೇಣೇ ॥೧೪೫॥ ತೇವೀ ಜೇವಾಂಚೀ ಬದ್ಧಮುಕ್ತತಾ । ಪರಮಾತ್ಮ್ಯಾಸೀ ನಲಗೇ ಸರ್ವಥಾ । ಜೇವೀ ಕಾ ಅಂಧಾರೀಚ್ಯಾ ಖದ್ಯೋತಾ । ನ ದೇಖೇ ಸವಿತಾ ಕಲ್ಪಾಂತೀ ॥೧೪೬॥ ಜಳೀ ಆಕಾಶ ದಿಸೇ ಬುಡಾಲೇ । ಪರೀ ತೇ ಕಾಂಹೀ ನಾಹೀ ಝಾಲೇ ವೋಲೇ । ತೇವೀ ಅವಿದ್ಯೇಸೀ ಅಲಿಪ್ತ ಠೇಲೇ । ಅಸೇ ಸಂಚಲೇ ನಿಜರೂಪ ॥೧೪೭॥ ಏಕ ಬದ್ಧ ಏಕ ಮುಕ್ತ । ಹೇ ಜೇವಾಮಾಜೀ ಭಾಸತ । ತೇಹೀ ಮೀ ಸಾಂಗೇನ ನಿಶ್ಚಿತ । ಸಾವಚಿತ್ತ ಪರಿಯೇಸೀ ॥೧೪೮॥ ಸಹಸ್ರಘಟೀ ಜಳ ಭರಿತಾ । ಏಕಚಿ ಸಹಸ್ರಧಾ ದಿಸೇ ಸವಿತಾ । ತೇಥ ಯೇ ಘಟೀಚೀ ಜೇ ಅವಸ್ಥಾ । ತ್ಯಾ ಘಟಸ್ಥಾ ಲಾಗೇನಾ ॥೧೪೯॥ ತೇಥ ಜೋ ಘಟ ಹೋಯ ಚಂಚಳು ॥ ತ್ಯಾಂತೀಲ ಪ್ರತಿಬಿಂಬ ಲಾಗೇ ಅಂದೋಳೂ । ಪರೀ ದುಜೇ ಘಟೀ ಜೇ ನಿಶ್ಚಳು । ತೇ ನವ್ಹೇ ಚಂಚಳು ಯಾಚೇನೀ ॥೧೫೦॥ ತೇಥ ಏಕೇ ದೈವಬಳೇ । ಸೂಕ್ಷ್ಮ ಛಿದ್ರೇ ಘಟಜಳ ಗಳೇ । ತೇ ಪ್ರತಿಬಿಂಬ ನಿಜಬಿಂಬೀ ಮಿಳೇ । ಯೇರ ಸಕಳೇ ತೈಸೀಚಿ ॥೧೫೧॥ ತೇವೀ ಗುರುಕೃಪಾ ಉಜಿಯೇಡೇ । ಜ್ಯಾಚೇ ಲಿಂಗದೇಹ ವಿಘಡೇ । ತ್ಯಾಸೀ ಪರಮಾತ್ಮ್ಯಾಸೀ ಐಕ್ಯ ಘಡೇ । ಯೇರ ತೇ ಬಾಪುಡೇ ದೇಹಬಂಧೀ ॥೧೫೨॥ ಹೇಚಿ ನಿರೂಪಣ ಪುಢೇ । ಶ್ಲೋಕ ಸಂಗತೀ ಸುರವಾಡೇ । ತೇ ಮೀ ಸಾಂಗೇನ ವಾಡೇಕೋಡೇ । ಅತಿನಿವಾಡೇ ನಿಶ್ಚಿತ ॥೧೫೩॥

ಅಥ ಬದ್ಧಸ್ಯ ಮುಕ್ತಸ್ಯ ವೈಲಕ್ಷಣ್ಯಂ ವದಾಮಿ ತೇ । ವಿರುದ್ಧ ಧರ್ಮಿಣೋಸ್ತಾತ ಸ್ಥಿತಯೋರೇಕಧರ್ಮಿಣಿ ॥೮॥

ಅರ್ಥ :- ಹೀಗೆ ಒಂದೇ ದೇಹದಲ್ಲಿ ಮಹಾಸುಖ ಮತ್ತು ದುಃಖ ಎಂಬ ವಿರುದ್ಧ ಗುಣಧರ್ಮಗಳನ್ನು ಕಾಣುತ್ತೇವೆ. ಏಕೆಂದರೆ ದೇಹದಲ್ಲಿ ನಿತ್ಯಮುಕ್ತನಾದ ಪರಮಪುರುಷನು ಮತ್ತು ಬದ್ಧಾತ್ಮನು ಇಬ್ಬರೂ ಇರುತ್ತಾರೆ. ನಾನೀಗ ಅವರ ಬೇರೆ ಬೇರೆ ಗುಣಧರ್ಮಗಳನ್ನು ಹೇಳುವೆನು.

ಯೇಣೇಂಚಿ ಪ್ರಸಂಗೇ ಜಾಣ । ಮಾಗೀಲ ತುಝೋ ಜೇ ಪ್ರಶ್ನ । ಬದ್ಧಮುಕ್ತಾಂಚೇ ಲಕ್ಷಣ । ತೇಹೀ ನಿರೂಪಣ ಸಾಂಗೇನ ॥೧೫೪॥ ದೋಘಾಂಹೀ ದೇಹೀ ಅಸತಾ । ದಿಸೇ ವಿರುದ್ಧ ಧರ್ಮ ಸ್ವಭಾವತಾ । ಏಕ ತೋ ಸದಾ ಸುಖೀ ಸರ್ವಥಾ । ಏಕ ದುಃಖಭೋಕ್ತಾ ಅಹರ್ನಿಶೀ ॥೧೫೫॥ ಯೇಥ ವಿಲಕ್ಷಣತಾ ದೋ ಪ್ರಕಾರೀ । ಏಕ ತೇ ಜೇವ - ಈಶ್ವರಮಾಝಾರೀ । ಏಕ ತೇ ಜೇವಾಂಸೀ ಪರಸ್ಪರೀ । ಬದ್ಧ ಮುಕ್ತ ನಿರ್ಧಾರೀ ನಿಶ್ಚಿತ ॥೧೫೬॥

ವಿದ್ಯಾ ಮತ್ತು ಅವಿದ್ಯಾ ಒಂದೇಯಾಗಿರುವ ಜೀವಭಾವಕ್ಕೆ ನಿತ್ಯಬದ್ಧ ಮತ್ತು ನಿತ್ಯಮುಕ್ತ ಹೀಗೆ ಎರಡೂ ಅವಸ್ಥೆಗಳನ್ನು ತೋರಿಸುವುವು ॥೧೪೪॥ ಜಲದಲ್ಲಿ ಸೂರ್ಯನ ಪ್ರತಿಬಿಂಬವು ಬೀಳಲು ಜಲದ ಚಂಚಲತೆ ಅಥವಾ ಸ್ಥಿರತೆ ಈ ಅವಸ್ಥೆಯು ಈ ಯಾವ ಪ್ರತಿಬಿಂಬಕ್ಕೆ ಭಾಸವಾಗುವುದು. ಮೂಲದ ಸೂರ್ಯನಿಗೆ ಇದಾವುದೂ ತಿಳಿದಿರುವುದಿಲ್ಲ ॥೧೪೫॥ ಯಾವ ಪ್ರಕಾರವಾಗಿ ಕತ್ತಲಿನಲ್ಲಿರುವ ಮಿಣುಕು ಹುಳಕ್ಕೆ ಸೂರ್ಯನು ಕಲ್ಪಾಂತಕ್ಕೂ ಕಾಣಲಾರನೋ, ಅದರಂತೆ ಜೀವಕ್ಕಿರುವ ಬದ್ಧಮುಕ್ತ ಅವಸ್ಥೆಯು ಪರಮಾತ್ಮನಿಗೆ ಎಂದಿಗೂ ಹತ್ತಲಾರದು ॥೧೪೬॥ ಆಕಾಶವು ನೀರಿನಲ್ಲಿ ಮುಳುಗಿದಂತೆ ತೋರುವುದು. ಆದರೆ ಅದು ನಿಜವಾಗಿಯೂ ಮುಳುಗಿ ತೋಯಿಸಿಕೊಂಡಿರುವುದಿಲ್ಲ. ಅದರಂತೆ ಆತ್ಮಸ್ವರೂಪವು ಅವಿದ್ಯೆಯಿಂದ ಅಲಿಪ್ತವಾಗಿದ್ದುಕೊಂಡು ತನ್ನ ಸ್ವರೂಪದಲ್ಲಿಯೇ ಸ್ಥಿರವಾಗಿರುವುದು ॥೧೪೭॥ ಈಗ ಒಂದು ಬದ್ಧ ಇನ್ನೊಂದು ಮುಕ್ತ ಇದು ಜೀವದ ಭಾಸವಾಗಿರುವುದು. ಇದನ್ನು ನಾನು ನಿಶ್ಚಿತವಾಗಿ ಹೇಳುವೆನು, ಏಕಾಗ್ರಚಿತ್ತದಿಂದ ಕೇಳು ॥೧೪೮॥ ಸಾವಿರ ಮಡಿಕೆಗಳಲ್ಲಿ ನೀರನ್ನು ತುಂಬಲು ಒಬ್ಬನೇ ಆದ ಸೂರ್ಯನು ಸಾವಿರ ಮಡಿಕೆಗಳಲ್ಲಿ ಪ್ರತಿಬಿಂಬನಾಗಿ ಆತನಸಾವಿರ ರೂಪಗಳು ಭಾಸವಾಗುವುವು. ಆದರೆ ಒಂದು ಮಡಿಕೆಯ ಅವಸ್ಥೆಯು ಇನ್ನೊಂದು ಮಡಿಕೆಗೆ ಸರಿಬೀಳುವುದಿಲ್ಲ ॥೧೪೯॥ ಅವುಗಳಲ್ಲಿ ಯಾವ ಮಡಿಕೆಯಲ್ಲಿನ ಜಲವು ಚಲಿಸಲು, ಪ್ರತಿಬಿಂಬವೂ ಚಲಿಸುವುದು. ಆದರೆ ಬೇರೆ ಮಡಿಕೆಯಲ್ಲಿ ಪ್ರತಿಬಿಂಬವು ನಿಶ್ಚಲವಾಗಿರುವುದು. ಈ ಚಂಚಲತೆಯು ಸೂರ್ಯನಿಂದಾಗುವದಿಲ್ಲ ॥೧೫೦॥ ಅವುಗಳಲ್ಲಿನ ಒಂದು ಮಡಿಕೆಗೆ ಛಿದ್ರಬಿದ್ದು ನೀರೆಲ್ಲ ಸೋರಿ ಹೋಗಲು ಆಗ ಪ್ರತಿಬಿಂಬವು ಬಿಂಬದಲ್ಲಿ ಕೂಡಿಕೊಳ್ಳುವುದು. ಆದರೆ ಇತರ ಮಡಿಕೆಗಳಲ್ಲಿನ ಪ್ರತಿಬಿಂಬಗಳು ಹಾಗೆಯೇ ಇರುವುವು ॥೧೫೧॥ ಅದರಂತೆ ಸದ್ಗುರುಗಳು ಉದಯರಾಗಲು ಅವರ ಕೃಪೆಯಿಂದ ಸೂಕ್ಷ್ಮದೇಹವು ಇಲ್ಲದಾಗುವುದು. ಆಗ ಜೀವಾತ್ಮವು ಪರಮಾತ್ಮನಲ್ಲಿ ಐಕ್ಯವಾಗುವುದು. ಆದರೆ ಇತರ ಜೀವಿಗಳು ದೇಹದ ಕಾರಾಗೃಹದಲ್ಲಿ ಬಿದ್ದುಕೊಂಡಿರುವುವು ॥೧೫೨॥ ಇದೇ ನಿರೂಪಣೆಯನ್ನು ಮುಂದಿನ ಶ್ಲೋಕದ ಅನುಸಾರವಾಗಿ ಬಹು ಪ್ರೀತಿಯಿಂದ, ಆನಂದದಿಂದ ಅಗದೀ ಸ್ಪಷ್ಟಮಾಡಿ ಹೇಳುವೆನು ॥೧೫೩॥

ಬದ್ಧ ಮತ್ತು ಮುಕ್ತ ಇವುಗಳ ಲಕ್ಷಣ ವಿಷಯಕ್ಕೆ ನಿನ್ನಯಾವ ಹಿಂದಿನ ಪ್ರಶ್ನೆಯಾಗಿರುವುದು. ಅದರ ನಿರೂಪಣೆಯನ್ನು ಮಾಡುತ್ತಿದ್ದೇನೆ ॥೧೫೪॥ ಆತ್ಮವು ಮತ್ತು ಜೀವವು ಇವು ಎರಡೂ ದೇಹದಲ್ಲಿದ್ದು, ಅವರ ಸ್ವಭಾವವು ಒಂದೇ ಸಮನಾಗಿರದೇ ಪರಸ್ಪರ ವಿರೋಧವಾಗಿ ತೋರುತ್ತದೆ. ಒಬ್ಬನು ಯಾವಾಗಲೂ ಸುಖಿಯಾಗಿರುವನು. ಮತ್ತು ಇನ್ನೊಬ್ಬನು ಹಗಲು ರಾತ್ರಿ ದುಃಖವನ್ನು ಭೋಗಿಸುತ್ತಿರುವನು ॥೧೫೫॥ ಹೀಗೆ ಇವುಗಳ ಎರಡು ಪ್ರಕಾರಗಳ ಎರಡು ಭೇದಗಳಿರುವವು. ಒಂದು ಜೀವ ಈಶ್ವರ ಭೇದ, ಇನ್ನೊಂದು ಜೀವ ಜೀವಗಳಲ್ಲಿ ಪರಸ್ಪರ ಭೇದ. ಈ ಪ್ರಕಾರವಾಗಿ ಬದ್ಧಮುಕ್ತರ ಸಹ ಭೇದವು ನಿಶ್ಚಿತವಾಗಿದೆ ॥೧೫೬॥

ಪಹಿಲೀ ಜೀವೇಶ್ವರಾಂಚೀ ಕಥಾ । ತುಜ ಮೀ ಸಾಂಗೇನ ವಿಲಕ್ಷಣತಾ । ಮಗ ಜೀವಾಚೀ ಬದ್ಧಮುಕ್ತತಾ । ವಿಶದ ವ್ಯವಸ್ಥಾ ಸಾಂಗೇನ ॥೧೫೭॥ ಜೀವೇಶ್ವರಾಂಚೇ ವೈಲಕ್ಷಣ್ಯ । ಅಡೀಚ ಶ್ಲೋಕೀ ನಿರೂಪಣ । ಸ್ವಯೇ ಸಾಂಗತಾಹೇ ನಾರಾಯಣ । ಭಾಗ್ಯಪೂರ್ಣ ಉದ್ಧವಾಚೇ ॥೧೫೮॥

ಸುಪರ್ಣಾವೇತೌ ಸದೃಶೌ ಸಖಾಯೌ ಯದೃಚ್ಛಯೈತೌ ಕೃತನೀಡೌ ಚ ವೃಕ್ಷೇ ।
ಏಕಸ್ತಯೋಃ ಖಾದತಿ ಪಿಪ್ಪಲಾನ್ನಮನ್ಯೋ ನಿರನ್ನೋऽಪಿ ಬಲೇನ ಭೂಯಾನ್ ॥೬॥

ಅರ್ಥ:- ಜೀವ ಮತ್ತು ಈಶ್ವರ, ಬದ್ಧ ಮತ್ತು ಮುಕ್ತಿಯ ಭೇದದಿಂದ ಭಿನ್ನ ಭಿನ್ನವಾಗಿದ್ದರೂ ಒಂದೇ ಶರೀರದಲ್ಲಿ ನಿಯಂತಾ ಮತ್ತು ನಿಯಂತ್ರಿತಾದ ರೂಪದಲ್ಲಿ ಸ್ಥಿತವಾಗಿರುವರು. ಹೀಗೆ ತಿಳಿ; ಶರೀರವು ಒಂದು ವೃಕ್ಷವಾಗಿದೆ. ಇದರಲ್ಲಿ ಹೃದಯದ ಗೂಡನ್ನು ಕಟ್ಟಿ ಜೀವ ಮತ್ತು ಈಶ್ವರ ನಾಮದ ಎರಡು ಪಕ್ಷಿಗಳಿರುವುವು. ಇವು ಎರಡೂ ಚೇತನವಾಗಿರುವುದರಿಂದ ಸಮಾನವಾಗಿರುವುವು ಎಂದೂ ಬೇರೆಯಾಗಿ ಇರದೇ ಮಿತ್ರರಾಗಿರುವುವು. ಇವುಗಳ ಇರುವಿಕೆಯ ಕಾರಣವು ಕೇವಲ ಲೀಲೆಯಾಗಿದೆ. ಹೀಗೆ ಸಮಾನವಾಗಿದ್ದರೂ ಜೀವವು ಶರೀರರೂಪ ವೃಕ್ಷದ ಫಲಗಳ ಸುಖದುಃಖಾದಿಗಳನ್ನು ಭೋಗಿಸುವುದು. ಆದರೆ ಈಶ್ವರನು ಇದನ್ನು ಭೋಗಿಸದೇ ಕರ್ಮಫಲ, ಸುಖದುಃಖ ಇವುಗಳಿಂದ ಅಸಂಗನಾಗಿರುವನು. ಆತನಿಗೆ ಈತನು ಸಾಕ್ಷಿಮಾತ್ರ ಇರುವುದು. ಅಭೋಕ್ತಾನಾಗಿದ್ದರೂ ಕೂಡ ಈಶ್ವರನ ವಿಲಕ್ಷಣತೆ ಏನಂದರೆ, ಆತನು ಜ್ಞಾನ, ಐಶ್ವರ್ಯ, ಆನಂದ ಮತ್ತು ಸಾಮರ್ಥ್ಯ ಇವುಗಳಲ್ಲಿ ಜೀವಕ್ಕಿಂತಲೂ ಅಧಿಕ ಭೋಕ್ತಾನಾಗಿರುವನು.

''ಸುಪರ್ಣ''ಮ್ಹಣಿಜೇ ಪಕ್ಷೀ । ಯೇ ವೃಕ್ಷೀಚಾ ಜಾಯ ತೇ ವೃಕ್ಷೀ । ತೈಸಾ ದೇಹೀ ದೇಹಾಂತರಾಚೇ ಲಕ್ಷೀ । ಯಾಲಾಗೀ ''ಪಕ್ಷೀ'' ಮ್ಹಣಿಜೇತ ॥೧೫೯॥ ಪಕ್ಷ್ಯಾಂಚ್ಯಾ ಐಸೀ ಯಾಂಚೀ ಗತೀ । ಹಾ ದೇಹ ಸಾಂಡೂನಿ ತ್ಯಾ ದೇಹಾ ಜಾತೀ । ''ಪಕ್ಷೀ'' ಮ್ಹಣಾವಯಾ ಹೇ ಉಪಪತ್ತಿ । ಜಾಣ ನಿಶ್ಚಿತೀ ಉದ್ಧವಾ ॥೧೬೦॥ ಏವಂ ಆತ್ಮಾ ದೇಹಾಹೂನಿ ಭಿನ್ನ । ತೇ ಸಾಂಗಿತಲೇ ಉಪಲಕ್ಷಣ । ದೇಹಾತ್ಮವಾದಾಚೇ ಖಂಡನ । ಪ್ರಸಂಗೀ ಜಾಣ ದಾಖವಿಲೇ ॥೧೬೧॥ ಆತ್ಮಾ ದೇಹ ಸರ್ವಥಾ ನ ಘಡೇ । ದೇಹಬುದ್ಧೀ ಧರಣೇ ತೇ ತಂವ ಕುಡೇ । ಹೇ ಉದ್ಧವಾಸೀ ಫಾಡೋವಾಡೇ । ನಿಜನಿವಾಡೇ ದಾವಿತ ॥೧೬೨॥ ದೇಹಬುದ್ಧೀಚಿಯಾ ಪೋಟೀ । ಜನ್ಮಮರಣಾಂಚಿಯಾ ಕೋಟೀ । ಸ್ವರ್ಗನರಕಾಂಚೀ ಆಟಾಟೀ । ದೇಹಬುದ್ಧಿ ಗಾಂಠೀ ಜೀವಶಿವಪಣೇ ॥೧೬೩॥ ದೋಘೇಹೀ ಚಿದ್ರೂಪೇ ಸಾರಖೇ । ಕಧೀ ನ ಹೋತೀ ಆನಾಸಾರಿಖೇ । ಅನಾದಿ ಹೇ ದೋಘೇ ಸಖೇ । ಅತಿ ನೇಟಕೇ ಜೀವಲಗ ॥೧೬೪॥ ಕಾಳೇ ಅಕಾಳೇ ಸಕಾಳೇ । ನವ್ಹತೀ ಯೇರಯೇರಾವೇಗಳೇ । ಏಕತ್ರ ವರ್ತತೀ ಖೇಳೇಮೇಳೇ । ನಿಜಪ್ರಾಂಜಳೇ ಸಖ್ಯತ್ವೇ ॥೧೬೫॥ ಪ್ರಭಾದೀಪು ದವಡಿನಾ ವೇಗಳಾ । ದೀಪು ಪ್ರಭೇಸೀ ನವ್ಹೇ ನಿರಾಳಾ । ತೇವೀ ಜೀವಶಿವಾಂಚಾ ಮೇಳಾ । ಏಕತ್ರ ಸ್ವಲೀಳಾ ನಾಂದತೀ ಸ್ವಯೇ ॥೧೬೬॥ ಜೀವು ಇಚ್ಛೀ ಜೇ ಜೇ ಕಾಂಹೀ । ತೇ ತೇ ವಾಸನೇ ಸರಿಸೇ ಪಾಹೀ । ಈಶ್ವರ ಪುರವೀ ಸರ್ವಹೀ । ವಿಮುಖ ಕಾಂಹೀ ಹೋ ನೇಣೇ ॥೧೬೭॥

ಮೊದಲನೆಯದಾಗಿ ನಿನಗೆ ಜೀವೇಶ್ವರರ ಕಥೆಯನ್ನು ಮತ್ತು ಅವರಲ್ಲಿನ ಭೇದವನ್ನು ಹೇಳುವೆನು. ತದನಂತರ ಜೀವದ ಬದ್ಧ ಮತ್ತು ಮುಕ್ತತೆಯನ್ನು ಸ್ಪಷ್ಟಮಾಡಿ ಹೇಳುವೆನು ॥೧೫೭॥ ಮುಂದಿನ ಎರಡುವರೆ ಶ್ಲೋಕಗಳಲ್ಲಿ ನಾರಾಯಣನು ಸ್ವತಃ ಜೀವ ಮತ್ತು ಈಶ್ವರ ಇವರ ಭೇದವನ್ನು ಹೇಳುವನು. ಇದು ಉದ್ಧವನ ಮಹಾಭಾಗ್ಯವಾಗಿರುವುದು ॥೧೫೮॥

ಸುಪರ್ಣವೆಂದರೆ ಪಕ್ಷಿಯಾಗಿರುವುದು. ಇದು ಒಂದು ವೃಕ್ಷದಿಂದ ಇನ್ನೊಂದು ವೃಕ್ಷಕ್ಕೆ ಹೋಗುತ್ತಿರುವುದು. ಅದರಂತೆ ದೇಹಧಾರೀ ಜೀವನು ಕೂಡ ಒಂದು ಶರೀರದಿಂದ ಹೊರಟು ಇನ್ನೊಂದು ಶರೀರಕ್ಕೆ ಹೋಗುತ್ತಿರುವನು. ಆದ್ದರಿಂದ ಆತನಿಗೆ ಪಕ್ಷಿ ಎಂದು ಕರೆಯಲಾಗಿದೆ ॥೧೫೯॥ ಪಕ್ಷಿಯಂತೆಯೇ ಇದರ ಸ್ಥಿತಿಗತಿಯಾಗಿರುವುದು. ಒಂದು ದೇಹವನ್ನು ಬಿಡುವುದು ಮತ್ತು ಪುನಃ ಇನ್ನೊಂದು ದೇಹದಲ್ಲಿ ಸೇರುವುದು. ಪಕ್ಷಿ ಎಂದು ಕರೆಯಲು ಇದೇ ಕಾರಣವಾಗಿರುವುದು ॥೧೬೦॥ ಈ ಪ್ರಕಾರವಾಗಿ ಆತ್ಮವು ದೇಹದಿಂದ ಭಿನ್ನವಾಗಿರುವುದು. ಇದರ ಉಪಲಕ್ಷಣವನ್ನು ಹೇಳಿ ಓಘಾನುಸಾರವಾಗಿ ದೇಹಾತ್ಮವಾದದ ಖಂಡನೆಯನ್ನು ಮಾಡಿದನು ॥೧೬೧॥ ಆತ್ಮವೇ ದೇಹವು ಎಂದು ಹೀಗೆ ಹೇಳುವುದು ಎಂದೂ ಆಗಲು ಶಕ್ಯವಿಲ್ಲ. ಅದಕ್ಕಾಗಿ ದೇಹಬುದ್ಧಿಯನ್ನು ಧರಿಸುವುದು ಬಲು ಕೆಟ್ಟದ್ದು ಎಂದು ಭಗವಾನನು ಉದ್ಧವನಿಗೆ ಸ್ಪಷ್ಟವಾಗಿ ಮತ್ತು ತನ್ನ ನಿರ್ಣಯದೊಂದಿಗೆ ತೋರಿಸುತ್ತಿರುವನು ॥೧೬೨॥ ದೇಹಬುದ್ಧಿಯನ್ನು ಧರಿಸಿದರೆ, ಕೋಟ್ಯಾವಧಿ ಜನ್ಮಮರಣಗಳ ಸುತ್ತುಗಳ ಮತ್ತು ಸ್ವರ್ಗ - ನರಕಗಳ ಭೋಗಗಳು ಬೆನ್ನಿಗೆ ಬೀಳುವುವು. ದೇಹಬುದ್ಧಿಯೇ ಜೀವ ಮತ್ತು ಶಿವ ಎಂಬ ಭೇದವನ್ನು ಹುಟ್ಟಿಸುವುದು ॥೧೬೩॥ ಈ ಎರಡೂ ಚಿತ್‌ಘನದಿಂದ ಸಮಾನವಾಗಿರುವುವು. ಇವು ಜಡವಾದ ದೇಹಾದಿಕದಂತೆ ಎಂದಿಗೂ ಆಗಲಾರವು. ಇವರಿಬ್ಬರೂ ಅನಾದಿಯಾಗಿ ಪ್ರೀತಿಯ ಮಿತ್ರರಾಗಿರುವುವು ॥೧೬೪॥ ವೇಳೆಯಾಗಿರಲಿ, ಅವೇಳಿಯಾಗಿರಲಿ, ಇವು ಒಬ್ಬರಿಂದೊಬ್ಬರು ಎಂದಿಗೂ ಬೇರೆ ಯಾಗುವುದೇ ಇಲ್ಲ. ಇವರಿಬ್ಬರೂ ಪ್ರೀತಿಯ ಸಲಿಗೆಯಿಂದ, ಸಖ್ಯತ್ವದಿಂದ ಮತ್ತು ಸರಳತನದಿಂದ ಒಂದೇಯಾಗಿರುವರು ॥೧೬೫॥ ಪ್ರಕಾಶವು ದೀಪವನ್ನು ಬಿಟ್ಟು ಎಂದೂ ಇರುವುದಿಲ್ಲ. ಮತ್ತು ದೀಪವಾದರೂ ಪ್ರಕಾಶವನ್ನು ಬಿಟ್ಟು ಎಂದು ಇರುವುದಿಲ್ಲ. ಅದರಂತೆ ಜೀವ ಶಿವರ ಸ್ವರೂಪವಾಗಿರುವುದು. ತಮ್ಮದೇ ಆದ ಲೀಲೆಯಿಂದ ಇವರು ಏಕತ್ರರಾಗಿ ವರ್ತಿಸುವರು ॥೧೬೬॥ ಜೀವವು ಯಾವುದರ ಇಚ್ಛೆಯನ್ನು ಮಾಡುವುದೋ ಅದೆಲ್ಲವನ್ನೂ ಆಯಾ ವಾಸನೆಗೆ ತಕ್ಕಂತೆ ಎಲ್ಲವನ್ನೂ ಈಶ್ವರನು ಪೂರೈಸುವನು. ಅದಕ್ಕೆ ಇಲ್ಲವೆಂದು ಎಂದೂ ಹೇಳಲಾರನು ॥೧೬೭॥

ಅಂತಕಾಳೀ ಜೇ ಜೀವ ಮಾಗೇ । ತೇ ಅಲೋಟ ಈಶ್ವರ ದೇವ್ರೋ ಲಾಗೇ । ಆಣಿ ಈಶ್ವರ ಆಜ್ಞೇಚೇನಿ ಯೋಗೇ । ಜೀವು ಸರ್ವಾಂಗೇ ವರ್ತತ ॥೧೬೮॥ ಈಶ್ವರ ಆಜ್ಞಾ ತ್ರಿಶುದ್ಧೀ । ಜೀವೇ ಜೀವ ಸರ್ವಸ್ವೇ ಬಂದೀ । ಹೋಯ ನವ್ಹೇ ನ ಮ್ಹಣೇ ಕಧೀ । ಅಭಿನವ ಸಿದ್ಧೀ ಸಖೇಪಣಾಚೀ ॥೧೬೯॥ ನವಲ ಸಖ್ಯಿತ್ವಾಚೀಪರೀ । ಈಶ್ವರು ಜೈಸೇ ಜೈಸೇ ಪ್ರೇರೀ । ಜೀವು ತೈಸೇ ತೈಸೇ ಕರೀ । ನಿಮೇಷಭರೀ ಢಳೇನಾ ॥೧೭೦॥ ನಿಮೇಷಆರಂಭೋನಿ ಜನ್ಮವರೀ । ಜೀವು ಈಶ್ವರಾಚೀ ಆಜ್ಞಾ ಕರೀ । ಈಶ್ವರು ಜೀವಾಚಾ ಸಾದ್ಯಕಾರೀ । ಪರಸ್ಪರೀ ನಿಜಸಖೇ ॥೧೭೧॥ ಜೀವು ಅತ್ಯಂತ ಅಡಲೇಪಣೇ । ಈಶ್ವರಾಸೀ ಧಾಂವ ಧಾಂವ ಮ್ಹಣೇ । ತೋ ತತ್ಕಾಳ ಪಾವೇ ಧಾಂವಣೇ । ಕರೀ ಸೋಡವಣೇ ಜೀವಾಚೇ ॥೧೭೨॥ ಏವಂ ಶಿವಾಚೇ ಆಜ್ಞೇ ಜೀವು ರಾಹೇ । ಜೀವಪಣ ಗೇಲಿಯಾ ಶಿವೀ ಸಮಾಯೇ । ಜೀವಾಲಾಗೀ ಹಾ ಶಿವಪಣಾ ಪಾಹೇ । ಯೇರವೀ ರಾಹೇ ಸಾಂಡೂನಿ ॥೧೭೩॥ ಐಸೇ ಸಖೇಪಣ ಯಾಂಚೇ । ಕೇವೀ ಅನುವಾದವೇ ವಾಚೇ । ಉದ್ಧವಾ ಹೇ ಮೀಚಿ ಜಾಣೇ ಸಾಚೇ । ಯಾ ಸಖೇಪಣಾಚೇ ಸೌಜನ್ಯ ॥೧೭೪॥ ಜೀವ ಈಶ್ವರಾ ಆಧೀನ । ಹೇ ದೃಢ ಕೇಲೇ ಸಂಸ್ಥಾಪನ । ಅನೀಶ್ವರವಾದಾಚೇ ಖಂಡಣ । ಪ್ರಸಂಗೇ ಜಾಣ ದಾವಿಲೇ ॥೧೭೫॥ ಅನೀಶ್ವರವಾದು ಖಂಡಿತಾ । ಖಂಡಿಲೀ ಕರ್ಮಪಾಖಂಡ ವಾರ್ತಾ । ಕರ್ಮಪಾಖಂಡಾಚ್ಯಾ ಮತಾ। ಈಶ್ವರತಾ ನ ಮಾನಿತೀ ॥೧೭೬॥ ಮ್ಹಣತೀ ಚಿತ್ತಧರ್ಮ ಈಶ್ವರಾಸೀ । ತಂವ ಚಿದ್ರೂಪತಾ ಸ್ಥಾಪೂನಿ ತ್ಯಾಸೀ । ನಿರಾಕರಿತೀ ಚಿತ್ತ ಧರ್ಮಾಸೀ । ಅನಾಯಾಸೀ ಚಿದ್ರೂಪೇ ॥೧೭೭॥ ನಾನಾ ಪರೀಚೇ ಅತಿಚಿಂತನ । ತ್ಯಾಚಿ ನಾಂವ "ಚಿತ್" ಜಾಣ । ಚಿತ್ತೇವೀಣ ನಿಶ್ಚಳಪಣ । ತೇಚೀ "ಚೈತನ್ಯ" ಉದ್ಧವಾ ॥೧೭೮॥ ಧರ್ಮಾಧರ್ಮ ನ ವಿಚಾರಿತಾ । ಮ್ಹಣತೀ ಈಶ್ವರು ಮೋಕ್ಷದಾತಾ । ಹೇ ಭಕ್ತಪಾಖಂಡೀ ಕಥಾ । ಸ್ಥಾಪೂನಿ ಚಿದ್ರೂಪತಾ ನಿವಾರೀ ॥೧೭೯॥ ಟಿಳೇ - ಮಾಳಾ - ಮುದ್ರಾ - ಧಾರಣೇ । ಲಾವೂನಿ ಸಂತಾಸೀ ನಿಂದಿಲೇಜೇಣೇ । ಪಾಪ ರಾಹಟೇ ಭಕ್ತಪಣೇ । ತ್ಯಾಸೀ ನಾರಾಯಣೇ ನುದ್ಧರಿಜೇ ॥೧೮೦॥ ಅಂತರೀಚೇ ಸರ್ವ ಜಾಣತಾ ಮೀ । ಯಾಲಾಗೀ ನಾಂವೇ "ಅಂತರ್ಯಾಮೀ" । ತೋ ಶಾಬ್ದಿಕವಚನ ಧರ್ಮೀ । ಚಾಳವಿಲಾ ಅಧರ್ಮೀ ಕೇವೀ ಜಾಯೇ ॥೧೮೧॥

ಅಂತ್ಯಕಾಲದಲ್ಲಿ ಜೀವವು ಯಾವುದನ್ನು ಬೇಡುವುದೋ, ಈಶ್ವರನು ಅದನ್ನು ಕೊಡುವನು. ಈಶ್ವರನ ಆಜ್ಞೆಯಂತೆ ಜೀವವು ಸರ್ವರೀತಿಯಲ್ಲಿ ವರ್ತಿಸುವುದು ॥೧೬೮॥ ಈಶ್ವರನ ಆಜ್ಞೆಯನ್ನು ಜೀವನು ಮನಃಪೂರ್ವಕವಾಗಿ ಪಾಲಿಸುತ್ತಿರುವನು. ಒಮ್ಮೆ ಒಪ್ಪಿಕೊಳ್ಳುವುದು ಇನ್ನೊಮ್ಮೆ ಇಲ್ಲವೆನ್ನುವುದು ಹೀಗೆ ಮಾಡಲಾರನು. ಇದು ಆತನ ಪ್ರೇಮದ ಮಿತ್ರತ್ವದ ಮಾತು ಬಹು ಅಪೂರ್ವವಾಗಿರುವುದು ॥೧೬೯॥ ಅವರ ಪ್ರೇಮದ ಸ್ನೇಹವು ಮಹಾ ಆಶ್ಚರ್ಯಕಾರಕವಾಗಿರುವುದು. ಈಶ್ವರನು ಹೇಗೆ ಪ್ರೇರಣೆಯನ್ನು ನೀಡುವನೋ, ಅದರಂತೆಯೇ ಜೀವನು ವರ್ತಿಸುತ್ತಿರುವನು. ಆತನಿಂದ ಒಂದು ಕ್ಷಣವೂ ಕೂಡ ಅಗಲಲಾರನು ॥೧೭೦॥ ಹುಟ್ಟಿದಾರಭ್ಯ ಆ ಕ್ಷಣದೊಂದಿಗೆ ಜೀವನು ಈಶ್ವರನ ಆಜ್ಞೆಗೆ ಪ್ರಮಾಣವೆನ್ನುವನು. ಪರಸ್ಪರರಲ್ಲಿ ಮುರಿಯದ ಸಂಬಂಧವಿರುವುದರಿಂದ ಈಶ್ವರನು ಜೀವನ ಸಹಾಯಕರ್ತನಾಗಿರುವನು ॥೧೭೧॥ ಜೀವನು ತೊಂದರೆಯ ಪ್ರಸಂಗದಲ್ಲಿ ಈಶ್ವರನನ್ನು ಮನಮುಟ್ಟಿ ಕರೆಯುವನು. ಆಗ ಈಶ್ವರನು ಧಾವಿಸಿ ಬಂದು ಜೀವನನ್ನು ಆತನ ಸಂಕಟದಿಂದ ಪಾರು ಮಾಡುವನು ॥೧೭೨॥ ಈ ಪ್ರಕಾರವಾಗಿ ಶಿವನ ಆಜ್ಞೆಯಲ್ಲಿ ಜೀವನಿರುತ್ತಿರುವನು. ತನ್ನ ಜೀವತ್ವವು ಇಲ್ಲದಾಗಲು ಆತನು ಶಿವನಲ್ಲಿ ಏಕರೂಪನಾಗುವವನು. ಜೀವನಿಗಾಗಿಯೇ ಆತನು ಶಿವತ್ವವನ್ನು ಧರಿಸುವನು. ಇಲ್ಲದಿದ್ದರೆ ಆತನು ತನ್ನ ಶಿವತ್ವವನ್ನು ಬಿಟ್ಟು ಜೀವರೂಪದಲ್ಲಿಯೇ ಇರುವನು ॥೧೭೩॥ ಹೀಗೆ ಇವರ ಅಲೌಕಿಕ ಮಿತ್ರತ್ವವಾಗಿರುವುದು. ಇದನ್ನು ವಾಣಿಯಿಂದ ಹೇಗೆ ವರ್ಣಿಸಲು ಬರುವುದು? ಹೇ ಉದ್ಧವನೇ, ಆ ಯಾವ ಸೌಜನ್ಯದ ಸ್ನೇಹವನ್ನು ನಾನು ಮಾತ್ರ ಅರಿಯುವೆನು ॥೧೭೪॥ ಈ ಪ್ರಕಾರವಾಗಿ ಜೀವವು ಯಾವ ಈಶ್ವರನ ಆಧೀನದಲ್ಲಿರುವುದು ಸಿದ್ಧಗೊಳಿಸಿದನು. ಇದರಲ್ಲಿ ಅನೀಶ್ವರವಾದದ ಖಂಡನೆ ಇರುವುದು ॥೧೭೫॥ ಅನೀಶ್ವರವಾದಿಗಳ ಖಂಡನೆಯನ್ನು ಮಾಡುತ್ತಲೇ, ನಾಸ್ತಿಕರ ಕರ್ಮವಾದ ಪಾಖಂಡವಾದವೂ ಖಂಡಿಸಲ್ಪಟ್ಟಿತು. ಕರ್ಮ ಪಾಖಂಡವಾದಿಗಳ ಮತವು ಈಶ್ವರನ ಅಸ್ತಿತ್ವವನ್ನು ಮಾನ್ಯ ಮಾಡುವುದಿಲ್ಲ ॥೧೭೬॥ ಇವರು ಈಶ್ವರನಲ್ಲಿ ಚಿತ್ತಧರ್ಮವಿರುವುದೆಂದು ಹೇಳುವರು. ಈಶ್ವರನು ಸಹಜವಾಗಿಯೇ ಚಿತ್‌ಸ್ವರೂಪನಾಗಿರುವನು ಎಂದು ಹೀಗೆ ಹೇಳುತ್ತ ಆತನ ಚಿತ್ತಧರ್ಮದ ನಿರಾಕರಣೆಯನ್ನು ಮಾಡಿದನು ॥೧೭೭॥ ಹೇ ಉದ್ಧವನೇ, ಅನೇಕ ಪ್ರಕಾರದ ಚಿಂತನೆಗಳಿಗೆ ಚಿತ್ತವೆಂದು ಕರೆಯುವರು, ಚಿಂತನರಹಿತವಾದ ನಿಶ್ಚಲತ್ವವೇ ಚೈತನ್ಯವಾಗಿರುವುದು ॥೧೭೮॥ ಕೆಲವರು ಧರ್ಮಾಧರ್ಮಗಳ ವಿಚಾರವನ್ನು ಮಾಡದೇ ಈಶ್ವರನು ಮೋಕ್ಷದಾತಾ ಎಂದು ಹೇಳುವರು. ಪಾಖಂಡೀ ಭಕ್ತರ ವಿಚಾರವೂ ಹೀಗೆಯೇ ಇರುವುದು. ಚಿದ್ರೂಪದ ಸಿದ್ಧಗೊಳಿಸಿ ಇದನ್ನು ಅಗೆದು ತೆಗೆಯಲಾಗಿದೆ ॥೧೭೯॥ ಸ್ವತಃ ನಾಮ ಮುದ್ರೆಗಳನ್ನು ಧರಿಸಿ ಯಾವನು ಸಂತರ ನಿಂದೆ ಮಾಡುವನೋ, ಮತ್ತು ಭಕ್ತರ ವೇಶಗಳನ್ನು ಧರಿಸಿ ಪಾಪಗಳನ್ನು ಬೆಳಸುವನೋ, ಅವನ ಉದ್ಧಾರವನ್ನು ನಾರಾಯಣನು ಎಂದಿಗೂ ಮಾಡಲಾರನು ॥೧೮೦॥ ನಾನು ಅಂತಃಕರಣದಲ್ಲಿನ ಎಲ್ಲವನ್ನೂ ಅರಿಯುವವನಾಗಿರುವುದರಿಂದ ನನಗೆ ಅಂತರ್ಯಾಮಿ ಎನ್ನುವರು. ಹೀಗಿರುವ ನನ್ನ ವಿಷಯಕ್ಕೆ ಕೇವಲ ಶಬ್ದಗಳಿಂದ ಬೇಕಾದಷ್ಟು ವಿಕಲ್ಪ ಮಾಡಿದರೂ ನಾನು ಅವರ ವಿಕಲ್ಪರೂಪ ಅಧರ್ಮದಿಂದ ಹೇಗೆ ಕೂಡಿಕೊಳ್ಳುವೆನು? ॥೧೮೧॥

ಮೀ ಜ್ಞಾನಸ್ವರೂಪ ತತ್ತ್ವತಾ । ಸರ್ವದ್ರಷ್ಟಾ ಸರ್ವಜ್ಞಾತಾ । ತೋ ಮೀ ಧರ್ಮಾಧರ್ಮ ನ ವಿಚಾರಿತಾ । ಮೋಕ್ಷದಾತಾ ಹೇ ನ ಘಡೇ ॥೧೮೨॥ ಧರೋನಿಯಾ ಭಕ್ತಭಾವೋ । ಪಾಪ ರಾಹಾಟೇ ಜೋ ಸ್ವಯ ಮೇವೋ । ಯಾಚಿ ನಾಮೀ ''ದಾಂಭಿಕ'' ಪಹಾ ಹೋ । ತ್ಯಾತೇ ದೇವೋ ನುದ್ಧರೀ ॥೧೮೩॥ ''ಸದೃಶೌ'' ಆಣಿ ''ಸಖಾಯೌ'' । ಧರೋನಿ ಯಾ ಪದಾಂಚಾ ಅನ್ವಯೋ । ಪಾಖಂಡ ಮಾತ್ರಾತೇ ಪಹಾ ಹೋ । ಸ್ವಯೇ ದೇವೋ ಉಚ್ಛೇದೀ ॥೧೮೪॥ ನಿರಸೋನಿ ನಾನಾ ಮತಾಂತರೇ । ಸ್ವಮತ ಕರಾವಯಾ ಖರೇ । ಶ್ಲೋಕೀಚೀ ಪದೇ ಅತಿಗಂಭೀರೇ । ಶಾರ್ಙ್ಗಧರೇ ವರ್ಣಿಲೀ ॥೧೮೫॥ ತೇ ದೋನಿ ಮಿಳೋನಿಯಾ ಪಕ್ಷೀ । ನೀಡ ಕೇಲೇ ದೇಹವೃಕ್ಷೀ । ವೃಕ್ಷ ಮ್ಹಣಿಜೇ ಕೋಣೇ ಪಕ್ಷೀ । ತಿಹೀ ಲಕ್ಷೀ ಲಕ್ಷಣೇ ॥೧೮೬॥ ಜನನೀ ಉದರ ತೇಚಿ ಆಳ । ಪಿತ್ಯಾಚೇ ರೇತ ಬೀಜ ಸಕಳ । ಗರ್ಭಾದಾನ ಪೇರಣೇ ಕೇವಳ । ಸಂಕಲ್ಪ ಜಳ ವೃದ್ಧೀಸೀ ॥೧೮೭॥ ಸೋಹಂಭಾವಾಚಾ ಗುಪ್ತ ಅಂಕುರು । ತ್ರಿಗುಣ - ಭೂಮೀ ತಿವಣಾ ಡೀರು । ಕೋಹಂಭಾವೇ ವಾಢಲಾ ಥೋರು । ವೃಕ್ಷ ಸಾಕಾರು ತೇಣೇ ಝಾಲಾ ॥೧೮೮॥ ಕರಚರಣಾದಿ ನಾನಾ ಶಾಖಾ । ಪ್ರಬಳಬಳೇ ವಾಢಲ್ಯಾ ದೇಖಾ । ಅಧ ಊರ್ಧ್ವ ನಖಶಿಖಾ । ವೃಕ್ಷಾಚಾ ನಿಕಾ ವಿಸ್ತಾರು ॥೧೮೯॥ ತಯಾ ದೇಹಬುದ್ಧೀಚೀ ದೃಢ ಮೂಳೇ । ವಿಕಲ್ಪ-ಪಾರಂಭ್ಯಾ ತೇಣೇ ಮೇಳೇ । ಭೂಮೀ ರುತಲ್ಯಾ ಪ್ರಬಳಬಳೇ । ಕಾಮಾಚೇ ಕೋವಳೇ ಫುಟತೀ ಕೋಂಬ ॥೧೯೦॥ ತೇಥ ಕರ್ಮಾಚೀ ಪಾನೇ । ನಿಬಿಡ ದಾಟಲೀ ಅತಿಗಹನೇ । ಮೋಹಮಮತೇಚೇ ಘೋಸ ತೇಣೇ । ಸಲೋಭಪಣೇ ದಾಟಲೇ ॥೧೯೧॥ ಜ್ಯಾ ಉಂಚಾವಲ್ಯಾ ಥೋರ ಶಾಖಾ । ತ್ಯಾ ಫಳೀ ಫಳೋನಿ ಸುಖ ದುಃಖಾ । ಉತರಲ್ಯಾ ಜೇ ಅಧೋಮುಖಾ । ಅಧಃಪತನೇ ದೇಖಾ ಲೋಳತೀ ॥೧೯೨॥ ಐಶಿಯಾ ವೃಕ್ಷಾ ಮಾಜೇ ಜಾಣ । ಅತಿಗೂಢ ಗುಪ್ತ ಗಹನ । ನೀಡ ಕೇಲೇ ಹೃದಯಸ್ಥಾನ । ಜೀವಶಿವ ಆಪಣ ಬೈಸಾವಯಾ ॥೧೯೩॥ ಜೇಥ ಜೀವ ಪರಮಾತ್ಮಾ ವಸತೀ । ತರೀ ದೇಹಾಚೀ ಜಾಹಲೀ ಸತ್ಯ ಪ್ರಾಪ್ತೀ । ಐಸೇ ಕೋಣೇ ಕೋಣೇ ಮ್ಹಣತೀ । ತೇ ಮತ ಶ್ರೀಪತಿ ನಿರಾಕರೀ ॥೧೯೪॥ ಪುರುಷಾಸವೇ ಲಟಕೀ ಛಾಯಾ । ತೋಡಿತಾ ಮೋಡಿತಾ ನಯೇ ಛಾಯಾ । ತೈಶೀ ಅನಿರ್ವಚನೀಯ ಮಾಝೀ ಮಾಯಾ । ತೇಣೇ ಯದೃಚ್ಛಯಾ ನೀಡ ಕೇಲೇ ॥೧೯೫॥ ಜೇವಿ ಸ್ವಪ್ನೀ ಗೃಹಾಚಾರು ನಿದ್ರಿತಾ । ತೇವೀ ಜೀವಾತ್ಮಾ ನೀಡೀ ವಸತಾ । ಹೇ ಮಾಯಾಮಯ ಸರ್ವಥಾ । ನವ್ಹೇ ವಸ್ತುತಾ ಸಾಚಾರ ॥೧೯೬॥

ನಾನು ತತ್ವತಃ ಜ್ಞಾನಸ್ವರೂಪನು, ಸರ್ವಸಾಕ್ಷಿಯು, ಮತ್ತು ಸರ್ವಜ್ಞನಾಗಿರುವೆನು. ಅಂದ ಮೇಲೆ ನಾನು ಧರ್ಮಾಧರ್ಮಗಳ ವಿಚಾರವನ್ನು ಮಾಡದೇ ಮೋಕ್ಷದಾತಾ ಹೇಗಾಗುವೆನು ? ॥೧೮೨॥ ಮೇಲ್ನೋಟಕ್ಕೆ ಭಕ್ತರಂತೆ ಢೋಂಗೀತನ ಮಾಡುತ್ತ ಯಾವನು ಪಾಪಕಾರ್ಯಗಳನ್ನು ಮಾಡುವನೋ, ಅವನಿಗೆ ಡಾಂಭಿಕನೆನ್ನುವರು. ಈತನ ಉದ್ಧಾರವನ್ನು ದೇವನು ಹೇಗೆ ಮಾಡುವನು? ॥೧೮೩॥ ಶ್ಲೋಕದಲ್ಲಿನ ''ಸದೃಶೌ ಸಖಾಯೌ'' ಈ ಎರಡು ಪದಗಳಿಂದ ಅಂದರೆ ಸಮಾನ ಮತ್ತು ಸ್ನೇಹ ಈ ಎರಡು ಶಬ್ದಗಳಿಂದ ದೇವನು ಸ್ವತಃ ಪಾಖಂಡಿಗಳ ಮತವನ್ನು ಖಂಡಿಸಿದನು ॥೧೮೪॥ ಭಿನ್ನ ಭಿನ್ನ ಮತಗಳ ಖಂಡನೆಯನ್ನು ಮಾಡಿ ತನ್ನ ಮತವನ್ನು ಸ್ಥಾಪನೆಗೊಳಿಸಲು ಶ್ರೀಕೃಷ್ಣನು ಶ್ಲೋಕದಲ್ಲಿನ ಎರಡು ಶಬ್ದಗಳನ್ನು ವಿಚಾರಪೂರ್ವಕವಾಗಿ ಯೋಜಿಸಿರುವನು ॥೧೮೫॥ ಜೀವ ಮತ್ತು ಆತ್ಮಾ ಎಂಬ ಎರಡು ಪಕ್ಷಿಗಳು ಕೂಡಿಕೊಂಡು ದೇಹರೂಪ ವೃಕ್ಷದಲ್ಲಿ ಒಂದು ಗೂಡನ್ನು ಕಟ್ಟಿರುವುವು. ದೇಹಕ್ಕೆ ವೃಕ್ಷದ ಉಪಮೆಯನ್ನು ಏಕೆ ಕೊಟ್ಟಿದೆ ಎಂಬುವ ಲಕ್ಷಣಗಳನ್ನು ಈಗ ಕೇಳು ॥೧೮೬॥ ಮಾತೆಯ ಉದರವು ಒಂದು ಮಡಿಯಾಗಿದೆ. ಪಿತನ ವೀರ್ಯವು ಬೀಜವಾಗಿದೆ. ಗರ್ಭದಾನವು ಬಿತ್ತಿಗೆಯಾಗಿದೆ. ಸಂಕಲ್ಪವೇ ಅದರ ಬೆಳವಣಿಗೆಗಾಗಿ ಜಲವಾಗಿದೆ ॥೧೮೭॥ ಆಗ ಅದಕ್ಕೆ "ಸೋಹಂ" ಭಾವದ ಗುಪ್ತ ಅಂಕುರವು ಹುಟ್ಟುವುದು. ಸತ್ವ, ರಜ, ತಮ, ಈ ಮೂರು ಪ್ರಕಾರಗಳ ಗುಣಗಳಿಂದ ಅದರ ಮೂರು ಭಾಗಗಳಾಗುವುವು. ಮತ್ತು ಕೋಹಂ ಭಾವದಿಂದ ಅದು ಬೆಳೆದು ಸಾಕಾರ ವೃಕ್ಷವಾಗುವುದು ॥೧೮೮॥ ಅದಕ್ಕೆ ಕೈ, ಕಾಲು ಇತ್ಯಾದಿ ಅವಯವಗಳ ಅನೇಕ ಶಾಖೆಗಳು ಹುಟ್ಟುವುವು. ಅದಕ್ಕೆ ಮೇಲೆ, ಕೆಳಗೆ ಹೀಗೆ ಬೆಳೆದು ನಖಶಿಖಾಂತರವಾಗಿ ಹಬ್ಬಿಕೊಳ್ಳುವುದು ॥೧೮೯॥ ಇದರ ದೇಹಬುದ್ಧಿಯ ಬೇರುಗಳು ದೃಢವಾಗಿರುವುವು. ಅವುಗಳ ಜೊತೆಯಲ್ಲಿ ವಿಕಲ್ಪದ ಟೊಂಗೆಗೆ ಬಿಟ್ಟ ಬೇರುಗಳು ಜೋತಾಡುತ್ತಿರುವುವು. ಅವು ಗಟ್ಟಿಯಾಗಿ ನೆಲದಲ್ಲಿ ಹೂತುಕೊಳ್ಳಲು ಅವಕ್ಕೆ ವಾಸನೆಯ ಕೋಮಲ ಅಂಕುರಗಳು ಹುಟ್ಟುವುವು ॥೧೯೦॥ ಕರ್ಮ, ಅಕರ್ಮಗಳ ಭಾರೀ ಎಲೆಗಳು ಸಂಪೂರ್ಣವಾಗಿ ತುಂಬಿಕೊಳ್ಳುವುವು. ಅವುಗಳಲ್ಲಿ ಮೋಹಮಮತೆಯ ಪ್ರಚಂಡ ಹೂವು ಗೊಂಚಲಗಳು ತುಂಬಿ ತುಳುಕುವುವು ॥೧೯೧॥ ಇದರ ಶಾಖೆಗಳು ಭಾರೀ ಎತ್ತರಕ್ಕೆ ಹೋಗಿರುವುವು. ಅವುಗಳಿಗೆ ಸುಖದುಃಖಗಳ ಫಲಗಳು ಹತ್ತಿಕೊಂಡು ಅವುಗಳ ಭಾರದಿಂದ ಕೆಳಕ್ಕೆ ಬಾಗುವುವು ಹಾಗೆಯೇ ನೆಲಕ್ಕೆ ಉರುಳುತ್ತಾ ಬೀಳುವುವು ॥೧೯೨॥ ಇಂತಹ ವೃಕ್ಷದ ಗುಪ್ತವಾದ ಮತ್ತು ಗಹನವಾದ ಸ್ಥಳದಲ್ಲಿ ಅಂದರೆ ಹೃದಯದಲ್ಲಿ ಈ ಯಾವ ಜೀವ ಶಿವರು ತಮ್ಮ ಇರುವಿಕೆಗಾಗಿ ಗೂಡನ್ನು ಕಟ್ಟಿರುವರು ॥೧೯೩॥ ಎಲ್ಲಿ ಜೀವ ಮತ್ತು ಪರಮಾತ್ಮನ ವಸತಿಯಾಗುವುದೋ, ಅಲ್ಲಿ ದೇಹದ ಪ್ರಾಪ್ತಿ ಎಂಬುವುದು ನಿಜವಾಯಿತು ಎಂದು ಅನೇಕರು ಹೇಳುವರು. ಶ್ರೀಕೃಷ್ಣನು ಆ ಮತವನ್ನೂ ಕೂಡ ಖಂಡಿಸುವನು ॥೧೯೪॥ ಮನುಷ್ಯನ ಜೊತೆಗಿರುವ ಆತನ ನೆರಳು ಮಿಥ್ಯೆಯಾಗಿರುವುದು. ಆದ್ದರಿಂದ ಅದಕ್ಕೆ ಶಸ್ತ್ರ ಪ್ರಯೋಗಿಸಿ ತುಂಡುಗೊಳಿಸಲು ಬರುವುದಿಲ್ಲ. ಅದರಂತೆ ನನ್ನ ಮಾಯೆಯ ಅನಿರ್ವಚನೀಯವಾಗಿರುವುದು. ಅದು ಅಲ್ಲಿ ಸಹಜವಾಗಿ ಗೂಡುಕಟ್ಟಿತು ॥೧೯೫॥ ಮಲಗಿಕೊಂಡ ಮನುಷ್ಯನ ಸ್ವಪ್ನದಲ್ಲಿ ಇರುವ ವರ್ತನೆಯಂತೆ ಈ ಜೀವ, ಆತ್ಮರ ಗೂಡಿನಲ್ಲಿಯ ಇರುವಿಕೆಯಾಗಿದೆ. ಇವರ ಇರುವಿಕೆಯು ಕೇವಲ ಮಾಯಾಮಯವಾಗಿದೆ. ವಾಸ್ತವಿಕವಾಗಿ ನಿಜವಿರುವುದಿಲ್ಲ ॥೧೯೬॥

ಯೇಣೇ ನಿರೂಪಣೇ ಗೋವಿಂದು । ನೈಯಾಯಿಕ ಮತಾಚಾ ಕಂದು । ಸಮೂಳ ಕೇಲಾ ತ್ಯಾಚಾ ಉಚ್ಛೇದು । ದೇಹಸಂಬಂಧು ಮಿಥ್ಯಾತ್ವೇ ॥೧೯೭॥ ಐಶಿಯಾಹೀ ಯಾ ವೃಕ್ಷಾಸೀ । ಜನ್ಮಾದಿ ನಿಮಿಷೋನ್ಮೇಷೀ । ಕಾಳು ಭೇದಿತಸೇ ಅಹರ್ನಿಶೀ । ಬಾಳಾದಿ ವಯಸಾಂಸೀ ಭೇದಕು ॥೧೯೮॥ ತಯಾ ವೃಕ್ಷಾಚೀ ಫಳೇ । ತುರಟೇ ನಿಖಟೇ ತೋಡಾಳೇ । ಪಕ್ವೇ ಅಪಕ್ವೇ ಸಕಳೇ । ಜ್ಯಾಂಸೀ ''ಪಿಪ್ಪಲೆ'' ಮ್ಹಣತಾತೀ ॥೧೯೯॥ ತ್ಯಾ ದೋ ಪಕ್ಷ್ಯಾಮಾಜೀ ತತ್ತ್ವತಾ । ಜೋ ಜೀವಪಣೇ ಬೋಲಿಜೇತಾ । ತೋ ಯಾ ಕರ್ಮಫಳಾಂಚಾ ಭೋಕ್ತಾ । ಜೇ ನಾನಾ ವ್ಯಥಾದಾಯಕೇ ॥೨೦೦॥ ಜೇ ಫಳೇ ಖಾತಾ ಪೋಟ ನ ಭರೇ । ಖಾದಲ್ಯಾ ದಾರುಣ ದುರ್ಜರೇ । ಜೇಣೇ ಭವಚಕ್ರೀ ಪಡೋನಿ ಫಿರೇ । ತರೀ ಅತ್ಯಾದರೇ ಸೇವಿತ ॥೨೦೧॥ ದುಜಾ ಫಳೇ ಖಾತಾ ಖಿಣಾ ವಾರೀ । ಜೇವಾಸೀ ತ್ಯಾ ಫಳಾಚೀ ಗೋಡೀ ಭಾರೀ । ಅಖಂಡ ಜಾಹಲಾ ಫಳಾಹಾರೀ । ವಾರಿಲೇ ನ ಕರೀ ಶಿವಾಚೇ ॥೨೦೨॥ ಫಳೇ ಸೇವಿತಾ ಅಹರ್ನಿಶೀ । ತಿಳಭರೀ ಶಕ್ತಿ ನಾಹೀ ಜೇವಾಸೀ । ಅಶಕ್ತ ದೇಖೋನಿಯಾ ತ್ಯಾಸೀ । ಕಾಳ ಪಾಶೀ ಬಾಂಧಿತು ॥೨೦೩॥ ಜೋ ಇಯೇ ಸೇವೀ ಕರ್ಮಫಳೇ । ತೋ ತತ್ಕಾಳ ಬಾಂಧಿಜೇ ಕಾಳೇ । ದುಜಾ ಕರ್ಮಫಳಾ ನಾತಳೇ । ತ್ಯಾ ತೇ ದೇಖೋನಿ ಪಳೇ ಕಳಿಕಾಳೂ ॥೨೦೪॥ ಜೋ ಕರ್ಮಫಳಾತೇ ನ ಸೇವಿತು । ತೋ ಜ್ಞಾನಶಕ್ತೀನೇ ಅಧಿಕ ಅನಂತು । ಸದಾ ಪರಮಾನಂದೇ ತೃಪ್ತು । ಅಸೇ ಡುಲ್ಲತು ಸ್ವಾನಂದೇ ॥೨೦೫॥ ಉದ್ಧವಾಸೀ ಹೋಯ ನಿಜಬೋಧು । ಯಾಲಾಗೀ ಜೀವಶಿವಾಚಾ ಭೇದು । ಅತ್ಯಾದರೇ ಸಾಂಗೇ ಗೋವಿಂದು । ನಿಜಾತ್ಮ ಬೋಧು ಪ್ರಾಂಜಳು ॥೨೦೬॥

ಆತ್ಮಾನಮನ್ಯಂ ಚ ಸ ವೇದ ವಿದ್ವಾನಪಿಪ್ಪಲಾದೋ ನ ತು ಪಿಪ್ಪಲಾದಃ ।
ಯೋಽವಿದ್ಯಯಾ ಯುಕ್ ಸ ತು ನಿತ್ಯಬದ್ಧೋ ವಿದ್ಯಾಮಯೋ ಯಃ ಸ್ ತು ನಿತ್ಯಮುಕ್ತಃ ॥೭॥

ಅರ್ಥ :- ಮರದ ಹಣ್ಣುಗಳನ್ನು ತಿನ್ನದಿರುವ ಪಕ್ಷಿ ಆತ್ಮನು. ಅವನು ತನ್ನ ಸರ್ವಜ್ಞತ್ವದಿಂದ ತನ್ನ ಸ್ಥಿತಿಯನ್ನು ಮತ್ತು ತಿನ್ನುತ್ತಿರುವ ಪಕ್ಷಿಯಿಂದ ಪ್ರತಿನಿಧಿಸಲಾದ ಬದ್ಧ ಜೀವಿಯ ಸ್ಥಿತಿಯನ್ನು ಪೂರ್ತಿಯಾಗಿ ತಿಳಿದಿರುತ್ತಾನೆ. ಆದರೆ ಜೀವಿಯು ತನ್ನನ್ನಾಗಲೀ, ಆತ್ಮನನ್ನಾಗಲೀ ಅರಿತುಕೊಳ್ಳಲಾರನು, ಅಜ್ಞಾನದಿಂದ ಆವೃತನು, ನಿತ್ಯಬದ್ಧನು, ಆದರೆ ಆತ್ಮನು ಪೂರ್ಣ ಜ್ಞಾನಭರಿತನು, ನಿತ್ಯಮುಕ್ತನು.

ಜೋ ಕರ್ಮಫಳಾತೇ ನ ಸೇವಿತಾ । ಜೋ ಸ್ವರೂಪಾಚಾ ಜಾಣತಾ । ದ್ರಷ್ಟಾ ಜೀವ - ಪ್ರಪಂಚಾಚಾ ತತ್ತ್ವತಾ । ಅಲಿಪ್ತತಾ ನಿಜಜ್ಞಾನೇ ॥೨೦೭॥ ಜೀವು ಪ್ರಪಂಚಾಚಾ ಜ್ಞಾತಾ । ಪರೀ ಪರಮಾತ್ಮಾ ನೇಣೇ ತತ್ತ್ವತಾ । ಯಾಲಾಗೀ ಭೋಗೀ ಭವ-ವ್ಯಥಾ । ಕರ್ಮಫಳೇ ಖಾತಾ ಅತಿಬದ್ಧು ॥೨೦೮॥

ಈ ಪ್ರಕಾರವಾಗಿ ದೇಹಸಂಬಂಧವು ಮಿಥ್ಯೆಯಾಗಿರುವುದು. ಈ ರೀತಿಯಾಗಿ ಶ್ರೀಕೃಷ್ಣನು ನಿರೂಪಣೆಯನ್ನು ಮಾಡಿ ನೈಯಾಯಿಕರ ಮುಖ್ಯ ಸಿದ್ಧಾಂತವನ್ನು ಬೇರುಸಮೇತವಾಗಿ ಕಿತ್ತು ಹಾಕಿದನು ॥೧೯೭॥ ಇಂತಹ ಯಾವ ದೇಹರೂಪ ವೃಕ್ಷಕ್ಕೆ ಕಾಲನು ಹುಟ್ಟಿದಾರಭ್ಯ ಅಹೋರಾತ್ರಿ ಭೇದಿಸುತ್ತಿರುವನು. ನಿಜವಾಗಿಯೂ ಬಾಲ್ಯ, ಯೌವನ, ಮುಪ್ಪು ಈ ಅವಸ್ಥೆಗಳ ಭೇದಕನು ಕಾಲನೇ ಆಗಿರುವನು॥೧೯೮॥ ಆ ವೃಕ್ಷದ ಒಗರು, ಖಾರ, ಮಾಗಿದ, ಮಾಗಿಲ್ಲದ ಇತ್ಯಾದಿ ಆ ಎಲ್ಲ ಫಲಗಳಿಗೆ ''ಪಿಪ್ಪಲೆ'' ಎಂದು ಹೇಳುವರು॥೧೯೯॥ ಆ ಎರಡು ಪಕ್ಷಿಗಳ ಪೈಕಿ ಯಾವುದಕ್ಕೆ ಜೀವ ಎಂದು ಹೇಳುವರೋ, ಅದು ನಿಜವಾಗಿಯೂ ಅನೇಕ ಪ್ರಕಾರದ ದುಃಖದಾಯಕ ಇಂತಹ ಕರ್ಮಫಲದ ಭೋಕ್ತಾನಾಗಿರುವುದು ॥೨೦೦॥ ಈ ಜೀವವು ಫಲಗಳನ್ನು ತಿಂದರೂ ಕೂಡ ಅದರ ಹೊಟ್ಟೆಯು ತುಂಬದು, ತೃಪ್ತಿಯಂತು ಎಂದಿಗೂ ಆಗದು. ಈ ಫಲಗಳು ಪಚನವಾಗದಿದ್ದಕ್ಕೆ ಸಂಸಾರ ಚಕ್ರದಲ್ಲಿ ಭ್ರಮಣ ಮಾಡಬೇಕಾಗುವುದು. ಹೀಗಿದ್ದರೂ ಜೀವವು ಆ ಫಲಗಳ ಸೇವನೆ ಮಾಡುತ್ತಲೇ ಇರುವುದು ॥೨೦೧॥ ಜೀವವು ಆ ಫಲಗಳನ್ನು ತಿನ್ನುತ್ತಿರಲು ಆಗ ಆತ್ಮವು ಬೇಡ ಎಂದು ಸೊನ್ನೆ ಮಾಡಿ ಹೇಳುವುದು. ಆದರೆ ಜೀವಕ್ಕೆ ಆ ಫಲಗಳ ಚಟವು ಅತಿಶಯವಾಗಿ ಹತ್ತಿರುವುದು. ಆದ್ದರಿಂದ ಜೀವವು ಶಿವನ ಮಾತು ಕೇಳದೇ ಸತತವಾಗಿ ಫಲಗಳನ್ನು ಸೇವಿಸುತ್ತಿರುವುದು ॥೨೦೨॥ ಜೀವವು ಆ ಫಲಗಳನ್ನು ಹಗಲು ರಾತ್ರಿ ಸೇವಿಸುತ್ತಿರುವುದು. ಆದರೆ ಅದಕ್ಕೆ ಯಾವ ಶಕ್ತಿಯು ಪ್ರಾಪ್ತವಾಗುವುದಿಲ್ಲ. ಈ ಪ್ರಕಾರವಾಗಿ ಆತನು ಅಶಕ್ತನಾಗಿರುವುದನ್ನು ಕಂಡು, ಕಾಲನು ಅವನನ್ನು ತನ್ನ ಪಾಶದಲ್ಲಿ ಬಂಧಿಸಿ ಇಡುವನು ॥೨೦೩॥ ಈ ಯಾವ ಕರ್ಮಫಲಗಳನ್ನು ಯಾವನು ಸೇವಿಸುತ್ತಿರುವನೋ, ಅವನನ್ನು ಕಾಲನು ತತ್ಕಾಲದಲ್ಲಿ ಬಂಧಿಸಿಬಿಡುವನು. ಈ ಯಾವ ಕರ್ಮಫಲಕ್ಕೆ ಸ್ಪರ್ಶವೂ ಕೂಡ ಮಾಡದವರನ್ನು ಕಂಡು ಕಾಲನು ಓಡಲಾರಂಭಿಸುವನು ॥೨೦೪॥ ಯಾವನು ಕರ್ಮಫಲವನ್ನು ಸೇವಿಸುವುದಿಲ್ಲವೋ, ಅವನು ತನ್ನ ಜ್ಞಾನಶಕ್ತಿಯಿಂದ ಅಧಿಕವಾಗಿ ಪ್ರಬಲನಾಗುವನು. ಅವನು ಯಾವಾಗಲೂ ಪರಮಾನಂದದಿಂದ ತೃಪ್ತನಾಗುವನು. ಮತ್ತು ಸ್ವಾನಂದದಿಂದ ತೂಗಾಡುತ್ತಿರುವನು ॥೨೦೫॥ ಉದ್ಧವನಿಗೆ ಆತ್ಮಜ್ಞಾನದ ಪ್ರಾಪ್ತಿಯಾಗುವುದಕ್ಕಾಗಿ ಗೋವಿಂದನು ಜೀವ ಮತ್ತು ಶಿವ ಇವರ ಭೇದ ಮತ್ತು ಆತ್ಮಜ್ಞಾನದ ಬೋಧೆಯನ್ನು ಅತ್ಯಂತ ಆದರದಿಂದ ಮತ್ತು ಪ್ರೇಮದಿಂದ ಸ್ಪಷ್ಟವಾಗಿ ಹೇಳಿದನು ॥೨೦೬॥

ಯಾರು ಕರ್ಮಫಲದ ಸೇವನೆಯನ್ನು ಮಾಡುವುದಿಲ್ಲವೋ, ಮತ್ತು ಯಾರು ಆತ್ಮಸ್ವರೂಪವನ್ನು ತಿಳಿದುಕೊಂಡಿರುವರೋ, ಆತನೇ ನಿಜವಾಗಿಯೂ ಪ್ರಪಂಚದ ದ್ರಷ್ಟಾನಾಗಿರುವನು. ಆತ್ಮಜ್ಞಾನದಿಂದ ಆತನು ಅದರಿಂದ ಅಲಿಪ್ತನಾಗಿರುವನು ॥೨೦೭॥ ಜೀವನು ಪ್ರಪಂಚವನ್ನು ಅರಿಯುವವನಾಗಿರುವನು. ಆದರೆ ಆತನು ಪರಮಾತ್ಮನನ್ನು ತತ್ವತಃ ಅರಿಯಲಾರನು. ಆದ್ದರಿಂದ ಆತನು ಸಂಸಾರದಲ್ಲಿನ ದುಃಖ ಭೋಗಿಸುವನು ಮತ್ತು ಕರ್ಮಫಲಗಳ ಭೋಗದ ಆಸಕ್ತಿಯಿಂದ ಅತಿಶಯವಾಗಿ ಬದ್ಧನಾಗುವನು ॥೨೦೮॥

ಜೋ ಕರ್ಮಫಳೇ ಸೇವೀ ಬಾಪುಡಾ । ತೋ ಅಂಧಪಂಗು ಝಾಲಾ ವೇಡಾ । ಮೀ ಕೋಣ ಹೇ ನೇಣೇ ಪುಡಾ। ಪಡಿಲಾ ಖೋಡಾ ದೇಹಾಚೇ ॥೨೦೯॥ ದೇಹಸಂಬಂಧಾ ಆಂತು । ಪ್ರತಿಪದೀ ಹೋಯ ಆತ್ಮಘಾತು । ನಾಹೀ ಜನ್ಮಮರಣಾಂಸೀ ಅಂತು । ದುಃಖೀ ಹೋತು ಅತಿದುಃಖೇ ॥೨೧೦॥ ನಶ್ವರ ವಿಷಯಾಂಚಾ ಛಂದು । ತೇಣೇ ಜೀವು ಜಾಹಲಾ ಅತಿಬದ್ಧು । ಹಾ ಅವಿದ್ಯೇಚಾ ಸಂಬಂಧು । ಲಾಗಲಾ ಸುಬದ್ಧು ದೇಹವಂತಾ ॥೨೧೧॥ ಜಿತುಕಿ ವಿಷಯಾಚೀ ಅವಸ್ಥಾ । ತಿತುಕೀ ಜೀವಾಸೀ ''ನಿತ್ಯಬದ್ಧತಾ'' । ಜೋ ವಿಷಯಾತೀತ ಸರ್ವಥಾ । ''ನಿತ್ಯಮುಕ್ತತಾ'' ತೇ ಠಾಯೀ ॥೨೧೨॥ ಜೋ ವಿದ್ಯಾಪ್ರಾಧಾನ್ಯೇ ನಿತ್ಯಮುಕ್ತು । ಜೋ ಜ್ಞಾನಶಕ್ತೀನೇ ಶಕ್ತಿವಂತು । ಸರ್ವವ್ಯಾಪಕು ಸರ್ವೀ ಅಲಿಪ್ತು । ತೋ ''ನಿತ್ಯಮುಕ್ತು'' ಬೋಲಿಜೇ ॥೨೧೩॥ ಸಾಂಗಿತಲೀ ಜೀವಾಚೀ ನಿತ್ಯಬದ್ಧತಾ । ಪ್ರಗಟಕೇಲೀ ಶಿವಾಚೀ ಮುಕ್ತತಾ । ಜೀವಾಚೀ ಜೇ ಬದ್ಧಮುಕ್ತತಾ । ತೇಹೀ ಆತಾ ಸಾಂಗತು ॥೨೧೪॥ ಉದ್ಧವಾಪ್ರತೀ ಶ್ರೀಕೃಷ್ಣ । ಬದ್ಧಮುಕ್ತಾಂಚೇ ಲಕ್ಷಣ । ದೋಘಾಂಚಿಹೀ ಊಣಖೂಣ । ವಿಚಿತ್ರ ಜಾಣ ಸಂಗೇಲ ॥೨೧೫॥

ದೇಹಸ್ಥೋಽಪಿ ನ ದೇಹಸ್ಥೋ ವಿದ್ವಾನ್ ಸ್ವಪ್ನಾದ್ಯ ಥೋತ್ಥಿತಃ । ಅದೇಹಸ್ಥೋಽಪಿ ದೇಹಸ್ಥಃ ಕುಮತಿಃ ಸ್ವಪ್ನದೃಗ್ಯಥಾ ॥೮॥

ಅರ್ಥ :- ಸ್ವಪ್ನವು ತೀರಿದ ನಂತರ ಎಚ್ಚರಗೊಂಡ ಪುರುಷನು ಸ್ವಪ್ನಕ್ಕೆ ಯಾವ ಸಂಬಂಧವನ್ನು ಇಡುವುದಿಲ್ಲ. ಆದರಂತೆ ಜ್ಞಾನಸಂಪನ್ನ ಪುರುಷನು ಮುಕ್ತನಾಗಿರುವನು. ಈತನು ಈ ಸ್ಥೂಲ ಮತ್ತು ಸೂಕ್ಷ್ಮ ಶರೀರದಲ್ಲಿದ್ದರೂ ಸಹ ಅದರೊಂದಿಗೆ ಯಾವ ಪ್ರಕಾರದ ಸಂಬಂಧವನ್ನು ಇಡುವುದಿಲ್ಲ. ಆದರೆ ಸ್ವಪ್ನವನ್ನು ಕಾಣುವವನು ಸ್ವಪ್ನದಲ್ಲಿ ಬಂಧಿಸಲ್ಪಡುವಂತೆ ಅಜ್ಞಾನಿ ಜನರು ಅಜ್ಞಾನದಿಂದ ಬಂಧಿಸಿರುವರು.

ಬದ್ಧಮುಕ್ತಾಂಚೇ ಮಿಶ್ರ ಲಕ್ಷಣ । ತೀ ಶ್ಲೋಕೀ ಸಾಂಗೇಲ ಜಾಣ । ಕೇವಳ ಮುಕ್ತಾಚೇ ಸುಲಕ್ಷಣ। ಗೋಡ ನಿರೂಪಣ ಸಾತ ಶ್ಲೋಕೀ ॥೨೧೬॥ ದೇಹೀ ಅಸೋನಿ ದೇಹಬುದ್ಧಿ ನಾಹೀ । ಹೇ ಮುಕ್ತಾಚೇ ''ಮುಕ್ತಲಕ್ಷಣ'' ಪಾಹೀ । ಯಾಲಾಗೀ ದೇಹೀ ಅಸೋನಿ ''ವಿದೇಹೀ'' । ಮ್ಹಣಿಪೇ ಪಾಹೀ ಯಾ ಹೇತೂ ॥೨೧೭॥ ಸ್ವಪ್ನೀಚೇ ರಾಜ್ಯ ಆಣಿ ಭೀಕ । ಜಾಗೃತಿ ಮಿಥ್ಯಾ ದೋನ್ಹೀ ದೇಖ । ತೈಸೇ ದೇಹಾದಿ ಜೇ ಸುಖದುಃಖ। ತೇ ಮಿಥ್ಯಾ ದೇಖ ಮುಕ್ತಾಸೀ ॥೨೧೮॥ ಜೋ ಸ್ವಪ್ನೀ ಮರೋನಿ ಜಾಳಿಲಾ । ತೋ ಜಾಗೃತೀ ನಾಹೀ ರಾಖ ಜಾಹಲಾ । ತೈಸಾ ಪ್ರಪಂಚ ಮಿಥ್ಯಾ ಜಾಣಿತಲಾ । ''ಮುಕ್ತ'' ಬೋಲಿಲಾ ತ್ಯಾ ನಾಂವ ॥೨೧೯॥ ಸ್ವಪ್ನೀಚೇ ಸಾಧಕಬಾಧಕ । ಜಾಗೃತೀ ಆಠವೇ ಸಕಳಿಕ । ತ್ಯಾಚೇ ಬಾಧೀನಾ ಸುಖದುಃಖ । ತೈಸೇ ಸಂಸಾರಿಕ ಮುಕ್ತಾಸೀ ॥೨೨೦॥

ಪಾಪ, ಯಾವನು ಕರ್ಮಫಲಗಳನ್ನು ಸೇವಿಸುವನೋ, ಅವನು ಕುರುಡ, ಕುಂಟ, ಹುಚ್ಚನಾಗಿಬಿಡುವನು. ತಾನು ಯಾರು ಎಂಬುದು ಆತನಿಗೆ ಏನೂ ತಿಳಿಯದು. ಆತನು ದೇಹದ ಪ್ರತಿಬಂಧದಲ್ಲಿ ಸಿಲುಕಿಕೊಳ್ಳುವನು ॥೨೦೯॥ ದೇಹಸಂಬಂಧದಲ್ಲಿ ಪ್ರತಿಕ್ಷಣದಲ್ಲಿಯೂ ಆತ್ಮಘಾತವಾಗುತ್ತಿರುವುದು. ಆತನ ಜನ್ಮಮರಣಕ್ಕೆ ಅಂತ್ಯವೇ ಇರುವುದಿಲ್ಲ. ಆದ್ದರಿಂದ ಅವನು ಅತಿಶಯ ದುಃಖದಿಂದ ತಳಮಳಿತನಾಗುವನು ॥೨೧೦॥ ನಶ್ವರವಾದ ವಿಷಯಗಳ ರುಚಿಯು ಹಾಗೂ ಅದರ ಆಸಕ್ತಿಯು ಅಂಟಿಕೊಂಡಿರುವುದರಿಂದ ಜೀವವು ಅತ್ಯಂತ ಬದ್ಧವಾಗುವುದು. ಈ ಅವಿದ್ಯೆಯ ಸಂಬಂಧವು ಬುದ್ಧಿವಂತ ದೇಹಧಾರಿಗೂ ಕೂಡ ಹತ್ತಿಕೊಂಡಿರುವುದು ॥೨೧೧॥ ಜೀವಕ್ಕೆ ವಿಷಯಗಳ ಪ್ರೀತಿಯು ಬೆಳೆದಂತೆ ಅದಕ್ಕೆ ಅದರಂತೆಯೇ ನಿತ್ಯಬದ್ಧತೆ ಇರುವುದು. ಮತ್ತು ವಿಷಯಗಳಿಂದ ಅಲಿಪ್ತನಾದವನಿಗೆ ನಿತ್ಯಮುಕ್ತತೆ ಇರುವುದು ॥೨೧೨॥ ಯಾರು ವಿದ್ಯಾಪ್ರಾಧಾನ್ಯವಾಗಿ ನಿತ್ಯ ಮುಕ್ತನಾಗಿರುವನೋ, ಯಾರು ಜ್ಞಾನಶಕ್ತಿಯಿಂದ ಸಮರ್ಥನಾಗಿರುವನೋ, ಯಾರು ಸರ್ವವ್ಯಾಪಿಯಾಗಿ ಸರ್ವ ಅಲಿಪ್ತನಾಗಿರುವನೋ, ಆತನಿಗೆ ಮಾತ್ರ ನಿತ್ಯಮುಕ್ತ ಎಂದು ಹೇಳುವರು ॥೨೧೩॥ ಈ ಪ್ರಕಾರವಾಗಿ ಜೀವದ ನಿತ್ಯಬದ್ಧತೆಯನ್ನು ಹೇಳಲಾಯಿತು ಮತ್ತು ಶಿವನ ಮುಕ್ತತೆಯನ್ನೂ ವ್ಯಕ್ತಗೊಳಿಸಲಾಯಿತು. ಈಗ ಜೀವದ ಬದ್ಧಮುಕ್ತತೆಯನ್ನು ಹೇಳುವೆನು ॥೨೧೪॥ ಇನ್ನು ಮೇಲೆ ಶ್ರೀಕೃಷ್ಣನು ಉದ್ಧವನಿಗೆ, ಬದ್ಧಮುಕ್ತರ ಲಕ್ಷಣಗಳನ್ನು ಮತ್ತು ಅವರಿಬ್ಬರ ವಿಚಿತ್ರವಾದ ರಹಸ್ಯವನ್ನು ಹೇಳುವನು ॥೨೧೫॥

ಈಗ ಮೂರು ಶ್ಲೋಕಗಳಲ್ಲಿ ಶ್ರೀಕೃಷ್ಣನು ಬದ್ಧಮುಕ್ತರ ಮಿಶ್ರ ಲಕ್ಷಣಗಳನ್ನು ಹೇಳುವನು. ಮತ್ತು ಕೇವಲ ಮುಕ್ತರ ಉತ್ತಮ ಲಕ್ಷಣಗಳ ಮನೋಹರ ನಿರೂಪಣೆಯನ್ನು ಏಳು ಶ್ಲೋಕಗಳಿಂದ ಮಾಡುವನು ॥೨೧೬॥ ದೇಹದಲ್ಲಿದ್ದೂ ಕೂಡ ದೇಹಬುದ್ಧಿಯ ಇಲ್ಲದಿರುವಿಕೆಯೇ ಮುಕ್ತನ ಲಕ್ಷಣವಾಗಿದೆ. ಆತನಿಗೆ ಅದೇ ಕಾರಣದಿಂದ ದೇಹದಲ್ಲಿ ಇದ್ದೂ ಕೂಡ ವಿದೇಹೀ ಎನ್ನುವರು ॥೨೧೭॥ ಸ್ವಪ್ನದಲ್ಲಿನ ರಾಜ್ಯಭಾರ, ಅಥವಾ ಭಿಕ್ಷೆ ಬೇಡುವಿಕೆ ಇವು ಎಚ್ಚರಾದ ಮೇಲೆ ಎರಡೂ ಮಿಥ್ಯೆಯಾಗುವುವು. ಅದರಂತೆ ದೇಹದ ಸುಖ ದುಃಖಗಳನ್ನು ಮುಕ್ತನಿಗೆ ನಿಜವಾಗಿಯೂ ಮಿಥ್ಯೆಯಾಗಿ ತೋರುವುವು ॥೨೧೮॥ ಒಬ್ಬ ಮನುಷ್ಯನು ಸ್ವಪ್ನದಲ್ಲಿ ಮೃತನಾಗಿ ಆತನಿಗೆ ಅಗ್ನಿಸಂಸ್ಕಾರ ಮಾಡಿದಂತಾಗಲು, ಆಗ ಆತನು ಎಚ್ಚರಾದ ಮೇಲೆ ನಿಜವಾಗಿಯೂ ಬೂದಿಯಾಗಿರುವುದು ಕಾಣುವುದಿಲ್ಲ. ಅದರಂತೆ ಪ್ರಪಂಚಕ್ಕೆ ಸ್ವಪ್ನದಂತೆ ಮಿಥ್ಯೆ ಎಂದು ತಿಳಿದವನಿಗೆ ಮುಕ್ತ ಎಂದು ಹೇಳುವರು ॥೨೧೯॥ ಸ್ವಪ್ನದಲ್ಲಿನ ಸಾಧಕಬಾಧಕಗಳು ಇತ್ಯಾದಿ ಎಲ್ಲವೂ ಎಚ್ಚರಾದ ಮೇಲೆ ನೆನಪಿಗೆ ಬರುವುವು. ಆದರೆ ಅದರಲ್ಲಿನ ಸುಖದುಃಖಗಳು ಯಾವುದೂ ಬಾಧಿಸುವುದಿಲ್ಲ. ಅದರಂತೆ ಸಂಸಾರ ಸಂಬಂಧವಾಗಿ ಏನಿರುವುದೆಲ್ಲವೂ ಮುಕ್ತನಿಗೆ ಬಾಧಿಸುವುದಿಲ್ಲ ॥೨೨೦॥

ಆತಾ ಐಕ ಬದ್ಧಾಚೇ ಸ್ಥಿತೀ । ತೋ ವಸ್ತುತಾ ಅಸೇ ದೇಹಾತೀತೀ । ಪರೀ ''ಮೀ ದೇಹ'' ಹೇ ಮಾನೀ ಕುಮತೀ ।ದುಃಖಪ್ರಾಪ್ತೀ ತೇಣೇ ತ್ಯಾಸೀ ।೨೨೧॥ ಜಳೀ ದೇಖೇ ಪ್ರತಿಬಿಂಬಾತೇ । ಮೀ ಬುಡಾಲೋ ಮ್ಹಣೋನಿ ಕುಂಥೇ । ಕೋಣೀ ಕಾಢಾ ಕಾಢಾ ಮಾತೇ । ಪುಣ್ಯ ತುಮತೇ ಲಾಗೇಲ ।೨೨೨॥ ಸ್ವಪ್ನಿ ಘಾಯ ಲಾಗಲೇ ಖಡ್ಗಾಚೇ । ತೇಣೇ ಜಾಗೃತೀ ಮ್ಹಣೇ ಮೀ ನ ವಾಚೇ । ಐಶೇ ನಿಬಿಡ ಭರೀತೇ ಭ್ರಮಾಚೇ । ತೇ ಬದ್ಧತೇಚೇ ಲಕ್ಷಣ ।೨೨೩॥ ಸ್ವಪ್ನೀಚೇ ಸುಖದುಃಖ ನಸತೇ । ತೇ ಸ್ವಪ್ನಭ್ರಮೇ ಭೋಗಿತಾ ಕುಂಥೇ । ತೇವೀ ''ದೇಹ ಮೀ'' ಮ್ಹಣೋನಿ ಯೇಥೇ । ನಾನಾ ದುಃಖಾತೇ ಭೋಗಿತು ।೨೨೪॥ ಸ್ವಸ್ವರೂಪಾಚೇ ವಿಸ್ಮರಣ । ತೇಣೇ ವಿಷಯಾಸಕ್ತಿ ದೃಢ ಜಾಣ ।ಸಂಕಲ್ಪ ವಿಕಲ್ಪ ಅತಿಗಹನ । ತೇಚಿ ಲಕ್ಷಣ ಬದ್ಧಾಚೇ ।೨೨೫॥ ಆಣಿಕೇ ಲಕ್ಷಣೇ ತ್ಯಾಚೇ ಆತಾ । ಸಾಂಗತು ಅಸೇ ತತ್ತ್ವತಾ । ಭೋಗ ಭೋಗೋನಿ ಅಭೋಕ್ತಾ । ತೇ ''ಮುಕ್ತಾವಸ್ಥಾ'' ಪರಿಯೇಸೀ ।೨೨೬॥

ಇಂದ್ರಿಯೈರಿಂದ್ರಿಯಾರ್ಥೇಷು ಗುಣೈರಪಿ ಗುಣೇಷು ಚ । ಗೃಹ್ಯಮಾಣೇಷ್ವಹಂ ಕುರ್ಯಾನ್ನ ವಿದ್ವಾನ್ಯಸ್ತ್ವವಿಕ್ರಿಯಃ ।೯॥

ಅರ್ಥ:- ವ್ಯವಹಾರದಲ್ಲಿ ಇಂದ್ರಿಯಗಳು ಶಬ್ದಸ್ಪರ್ಶಾದೀ ವಿಷಯಗಳನ್ನು ಗ್ರಹಣ ಮಾಡುವುವು. ಕಾರಣ ಗುಣವೇ ಗುಣಗಳಿಗೆ ಗ್ರಹಣ ಮಾಡುವ ಹೀಗೆ ನಿಯಮವಿರುವುದು. ಆತ್ಮವು ಹೀಗೆ ಮಾಡುವುದಿಲ್ಲ. ಯಾರು ತನ್ನ ನಿರ್ವಿಕಾರ ಆತ್ಮಸ್ವರೂಪವನ್ನು ತಿಳಿದಿರುವನೋ, ಆತನು ವಿಷಯಗಳ ಗ್ರಹಣ ಅಥವಾ ಅವುಗಳಲ್ಲಿ ಯಾವ ಪ್ರಕಾರದ ಅಭಿಮಾನವನ್ನು ಇಡಲಾರನು.

ಅವಶೇಷ ಪ್ರಾರಬ್ಧಸ್ಥಿತೀ । ಮುಕ್ತಾಂಚೇ ದೇಹೀ ದಿಸೇ ವಸ್ತೀ । ಪರೀ ಜಾಗೃತೀ- ಸ್ವಪ್ನ-ಸುಷುಪ್ತೀ । ದೇಹಸ್ಥಿತೀ ನಾತಳೇ ।೨೨೭॥ ಛಾಯಾ ಪುರುಷಾಚೇನಿ ಚಳೇ । ತೇ ಛಾಯೇಸೀ ಪುರುಷ ನಾತಳೇ । ತೇವೀ ಮಿಥ್ಯಾ ದೇಹ ಮುಕ್ತಾ ಜವಳೇ । ಕಲ್ಪಾಂತಕಾಳೇ ಯೇವೋ ನ ಶಕೇ ।೨೨೮॥ ಆಪುಲೇ ಛಾಯೇಸೀ ಜಾಣ । ಜೇವೀ ಬೈಸೋ ನ ಶಕೇ ಆಪಣ । ತೇವೀ ಮಾಯಾದಿ ತಿನ್ಹೀ ಗುಣ । ಜವಳೀ ಅಸೋನ ಸ್ಪರ್ಶೇನಾ ।೨೨೯॥ ಇಂದ್ರಿಯದ್ವಾರಾ ಯಥಾನಿಗುತೀ । ಪ್ರಾಪ್ತ ವಿಷಯಾಂತೇ ಸೇವಿತೀ । ಪರೀ ಸೇವಿಲೇ ಐಸೇಹೀ ನೇಣತೀ । ವಿಷಯಸ್ಫೂರ್ತೀ ಸ್ಫುರೇನಾ ।೨೩೦॥ ಗುಣ ಪೋಖಿತೀ ಗುಣಾವಸ್ಥಾ । ಇಂದ್ರಿಯೇ ಘೇತೀ ಇಂದ್ರಿಯಾರ್ಥಾ । ಮೀ ಉಭಯಸಾಕ್ಷೀ ಅಕರ್ತಾ ।ಚಿನ್ಮಾತ್ರತಾ ಅಲಿಪ್ತ ।೨೩೧॥ ತೋ ಇಂದ್ರಿಯಾಚೇನಿ ಖೇಳೇಮೇಳೇ । ಸುಖೇ ವಿಷಯಾಮಾಜೀ ಜರೀ ಲೋಳೇ ।ತರೀ ವಿಕಾರಾಚೇನಿ ವಿಟಾಳೇ । ಕದಾಕಾಳೇ ಮೈಳೇನಾ ।೨೩೨॥

ಈಗ ಬದ್ಧನ ಸ್ಥಿತಿಯನ್ನು ಕೇಳು. ಆತನು ವಾಸ್ತವಿಕವಾಗಿ ದೇಹಾತೀತನೇ ಆಗಿರುವನು. ಆದರೆ ಅವನು ಅಜ್ಞಾನದಿಂದ ನಾನೇ ದೇಹವು ಎಂದು ತಿಳಿಯುವನು. ಆದ್ದರಿಂದ ಆತನಿಗೆ ದುಃಖವು ಆಗುತ್ತಿರುವುದು ।೨೨೧॥ ನೀರಿನಲ್ಲಿ ಬಿದ್ದಿರುವ ತನ್ನದೇ ಆದ ಪ್ರತಿಬಿಂಬವನ್ನು ಕಂಡು ತಾನೇ ಮುಳುಗಿದೆನು ಎಂದು ತಿಳಿಯುವನು. ಅರೇ, ನಾನು ಮುಳುಗಿರುವೆ, ಯಾರಾದರೂ ನನ್ನನ್ನು ಬೇಗನೇ ಹೊರಕ್ಕೆ ತೆಗೆಯಿರಿ ನಿಮಗೆ ಪುಣ್ಯ ಬರುವುದು ಎಂದು ಕೂಗುವನು ।೨೨೨॥ ಸ್ವಪ್ನದಲ್ಲಿ ಖಡ್ಗದ ಹೊಡೆತವು ಬಿದ್ದು ಘಾಯವಾಗಲು ಎಚ್ಚರಾದ ಬಳಿಕ ನಾನೀಗ ಬದುಕಲಾರೆ ಎಂದು ಹೇಳುವನು. ಹೀಗೆ ಭ್ರಮದ ದಟ್ಟವಾದ ಆವರಣವು ಇದೇ ಬದ್ಧತೆಯ ಲಕ್ಷಣವಾಗಿರುವುದು ।೨೨೩॥ ಸ್ವಪ್ನದಲ್ಲಿ ಇಲ್ಲದ ಸುಖದುಃಖಗಳನ್ನು ಭೋಗಿಸುತ್ತಿರಲು, ಅಲ್ಲಿ ಭ್ರಮದಿಂದ ತಳಮಳಿಸುತ್ತಿರುವನು. ಅದರಂತೆ ಇಲ್ಲಿ ''ದೇಹವೇ ನಾನು'' ಹೀಗೆ ತಿಳಿದುಕೊಂಡು ಅನೇಕ ಪ್ರಕಾರದ ದುಃಖಗಳನ್ನು ಭೋಗಿಸುವನು ।೨೨೪॥ ಆತ್ಮಸ್ವರೂಪದ ವಿಸ್ಮರಣೆಯಾಯಿತೆಂದರೆ ವಿಷಯಗಳ ಆಸಕ್ತಿಯು ಬೆಳೆಯುತ್ತ ಸಾಗುತ್ತದೆ. ಸಂಕಲ್ಪ ವಿಕಲ್ಪಗಳು ಬೆಳೆಯುತ್ತವೆ. ಇದುವೇ ಬದ್ಧತೆಯ ಲಕ್ಷಣವಾಗಿದೆ ।೨೨೫॥ ಈಗ ಪುನಃ ಅದರ ಲಕ್ಷಣಗಳನ್ನು ಹೇಳುವೆನು. ಭೋಗಗಳನ್ನು ಭೋಗಿಸಿಯೂ ಅಭೋಕ್ತನಾಗಿರುವ ಇಂತಹ ಮುಕ್ತಾವಸ್ಥೆಯು ಹೇಗೆ ಪ್ರಾಪ್ತವಾಗುವುದು ಎಂಬುದನ್ನು ಕೇಳು ।೨೨೬॥

ಬಾಕಿ ಉಳಿದಿರುವ ಪ್ರಾರಬ್ಧದ ಸ್ಥಿತಿಯಿಂದ ಮುಕ್ತನು ದೇಹದಲ್ಲಿದ್ದಂತೆ ದೃಷ್ಟಿಗೆ ತೋರುವನು. ಆದರೆ ಜಾಗೃತ, ಸ್ವಪ್ನ, ಸುಷುಪ್ತಿಯಲ್ಲಿಯೂ ಆತನಿಗೆ ದೇಹದ ಭಾನವಿರುವುದಿಲ್ಲ ।೨೨೭॥ ಮನುಷ್ಯನು ನಡೆದಾಡುತ್ತಿರಲು ಆತನ ನೆರಳು ಹೋಯ್ದಾಡುತ್ತಿರುವುದು. ಆದರೆ ಆತನು ಆ ನೆರಳಿಗೆ ಸ್ಪರ್ಶವೂ ಕೂಡ ಮಾಡುವುದಿಲ್ಲ. ಅದರಂತೆ ಮಿಥ್ಯೆಯಾಗಿರುವ ದೇಹಬುದ್ಧಿಯು ಮುಕ್ತನತ್ತ ಬರುವುದಿಲ್ಲ ।೨೨೮॥ ತನ್ನದೇ ಆದ ನೆರಳಿನಲ್ಲಿ ತನಗೆ ಕುಳಿತುಕೊಳ್ಳಲು ಹೇಗೆ ಬರುವುದಿಲ್ಲವೋ, ಅದರಂತೆಯೇ ಮಾಯಾದಿ ಮೂರು ಗುಣಗಳ ಸಮೀಪನಿದ್ದರೂ ಅವುಗಳಿಗೆ ಸ್ಪರ್ಶ ಕೂಡ ಮಾಡಲಾರನು ।೨೨೯॥ ಇಂದ್ರಿಯಗಳ ಮುಖಾಂತರ ಪ್ರಸಂಗಾನುಸಾರವಾಗಿ ಇಂದ್ರಿಯಗಳ ವಿಷಯಗಳನ್ನು ಸೇವಿಸುತ್ತ ಇರುವನು. ಆದರೆ ನಾನು ಸೇವನೆಯನ್ನು ಮಾಡಿದೆನು ಎಂಬ ಅರಿವು ಆತನಿಗೆ ಇರುವುದಿಲ್ಲ. ಒಟ್ಟಿನಲ್ಲಿ ಇಂದ್ರಿಯಗಳ ಸ್ಫೂರ್ತಿಯೂ ಕೂಡ ಇರುವುದಿಲ್ಲ ।೨೩೦॥ ಗುಣಗಳು ಗುಣಗಳ ಪೋಷಣೆಯನ್ನು ಮಾಡುತ್ತಿರುವುವು. ಇಂದ್ರಿಯಗಳು ವಿಷಯಗಳ ಉಪಭೋಗವನ್ನು ಸೇವಿಸುವುವು. ನಾನು ಈ ಎರಡರ ಸಾಕ್ಷೀಯಾಗಿಯೂ ಅಕರ್ತನಾಗಿರುವೆನು. ನಾನು ಚಿತ್‌ಸ್ವರೂಪನಾಗಿರುವೆನು, ಆದ್ದರಿಂದ ಎಲ್ಲದರಿಂದಲೂ ಅಲಿಪ್ತನಾಗಿರುವೆನು. ಹೀಗೆ ಆತನ ನಿಶ್ಚಯವಾಗಿರುವುದು ।೨೩೧॥ ಆತನು ಇಂದ್ರಿಯಗಳ ಸಂಗತಿಯಿಂದ ವಿಷಯಗಳಲ್ಲಿ ಉರುಳಾಡುತ್ತಿದ್ದರೂ ಸಹ ವಿಷಯಗಳ ಮೈಲಿಗೆಯಿಂದ ಎಂದಿಗೂ ಮಲಿನನಾಗಲು ಶಕ್ಯವಿಲ್ಲ ।೨೩೨॥

ಜೇಥ ಕಾಮಾಚೀ ಅತಿಪ್ರೀತೀ । ತೇಥ ಲೋಭಾಚೀ ದೃಢ ವಸ್ತೀ । ಅಥವಾ ಕಾಮಾಚೀ ಜೇಥ ಅಪ್ರಾಪ್ತೀ । ತೇಥ ಮಹಾಖ್ಯಾತೀ ಕ್ರೋಧಾಚೀ ।೬೩೩॥ ಮುಕ್ತ ಜಾಹಲಾ ನಿತ್ಯ ನಿಷ್ಕಾಮ । ಕ್ರೋಧಲೋಭೇಸೀ ನಿಮಾಲಾ ಕಾಮ । ತೋ ಸ್ವಯೇ ಜಾಹಲಾ ''ಆತ್ಮಾರಾಮ'' । ವಿಶ್ರಾಮಧಾಮ ಜಗಾಚೇ ।೬೩೪॥ ಏವಂ ಮುಕ್ತಾಚ್ಯಾ ಠಾಯೀ ಜಾಣ । ಉಪಜೋ ನ ಶಕೇ ಪಾಪಪುಣ್ಯ । ಕಾಮಕ್ರೋಧಾದಿವೃತ್ತಿಶೂನ್ಯ । ಜಾಹಲಾ ಪರಿಪೂರ್ಣ ಚಿದ್‌ಬ್ರಹ್ಮ ।೬೩೫॥ ಮುಕ್ತಾಚೀ ವಿಷಯಸ್ಥಿತೀ । ವಿಷಯೀ ಸ್ಫುರೇ ಬ್ರಹ್ಮಸ್ಫೂರ್ತೀ । ಯಾಲಾಗೀ ಪಾಪಪುಣ್ಯೇ ನುಪಜತೀ । ನಿತ್ಯಮುಕ್ತಿ ತೇಣೇ ತ್ಯಾಸೀ ।೬೩೬॥ ಐಶೀ ಮುಕ್ತಾಚೀ ಹೇ ಕಥಾ । ಐಕ ಬದ್ಧಾಚೀಹೀ ವಾರ್ತಾ । ಅಕರ್ತಾಚಿ ಮ್ಹಣೇ ಮೀ ಕರ್ತಾ । ಯೇಣೇಂಚಿ ಸರ್ವಥಾ ಗುಂತಲಾ ।೬೩೭॥

ದೈವಾಧೀನೇ ಶರೀರೇಽಸ್ಮಿನ್ ಗುಣಭಾವ್ಯೇನ ಕರ್ಮಣಾ । ವರ್ತಮಾನೋಽಬುಧಸ್ತತ್ರ ಕರ್ತಾಽಸ್ಮೀತಿ ನಿಬಧ್ಯತೇ ।೧೦॥

ಅರ್ಥ:- ಈ ಶರೀರವು ಪ್ರಾರಬ್ಧಾಧೀನವಾಗಿರುವುದು. ಇದರಲ್ಲಿ ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಆಗುವ ಕರ್ಮಗಳೆಲ್ಲವೂ ಗುಣಗಳ ಪ್ರೇರಣೆಯಿಂದ ಆಗುವುವು. ಅಜ್ಞಾನಿ ಪುರುಷನು ನಾನು ಕರ್ಮಕರ್ತನು ಎಂದು ಭಾವಿಸುವನು. ಮಿಥ್ಯಾಹಂಕಾರದಿಂದ ಭ್ರಾಂತನಾಗಿ ಕಾಮ್ಯಕರ್ಮಗಳಿಂದ ಬದ್ಧನಾಗುವನು.

ಅದೃಷ್ಟಾ ಅಧೀನ ಜೇ ಶರೀರ । ತೇಥ ಆಲಿಯಾಹಿ ಹರಿಹರ । ಅನ್ಯಥಾ ನ ಕರವೇ ಅಣುಮಾತ್ರ । ಹೇ ವೇದಶಾಸ್ತ್ರ ಸಂಮತ ।೬೩೮॥ ದೇಹೀ ಜ್ಯಾ ಗುಣಾಚೇ ಪ್ರಾಧಾನ್ಯ । ತೈಸೇಚಿ ಕರ್ಮ ನಿಪಜೇ ಜಾಣ । ಇಂದ್ರಿಯೇ ತೀ ಗುಣಾಧೀನ । ತದನುಸಾರೇ ಜಾಣ ವರ್ತತೀ ।೬೩೯॥ ಏವಂ ದೈವಗುಣೇ ದೇಹವರ್ತನ । ತೇಥ ಮೀ ಕರ್ತಾ ಮ್ಹಣವೀ ಆಪಣ । ತೇಚಿ ತ್ಯಾಸೀ ದೃಢ ಬಂಧನ । ಆಪಣಾ ಆಪಣ ಘಾತಕ ।೬೪೦॥ ನಳೀಮಾಜಿಲ್ಯಾ ಚಣ್ಯಾಂಚಾ ಆಶಾ । ವಾನರೇ ಮುಠೀ ಧರಣೇ ತೋಚಿ ಫಾಂಸಾ । ತೇವೀ ದೇಹೀಚ್ಯಾ ವಿಷಯ ವಿಲಾಸಾ । ಅಭಿಮಾನೇ ತೈಸಾ ಗುಂತಲಾ ।೬೪೧॥ ಜೇ ದೇಹಾತೀತ ವಸ್ತುತಾ । ಜೋ ಗುಣಕರ್ಮಾಚಾ ಅಕರ್ತಾ । ತೋ ಮ್ಹಣೇ ''ಮೀ ದೇಹ'' ''ಮೀ ಕರ್ಮಕರ್ತಾ'' । ಅಹಂ ಮಮತಾ ಭೂಲಲಾ ।೬೪೨॥ ಜೋ ನ ಕರಿತಾಂಚಿ ಚೋರೀ । ಮೀ ಚೋರು ಮ್ಹಣೇ ರಾಜದ್ವಾರೀ । ತೋ ಮಾರಿಜೇ ಲಹಾನಥೋರೀ । ತೈಶೀ ಪರೀ ಜಡಜೀವಾ ।೬೪೩॥

ಎಲ್ಲಿ ಕಾಮದ ಪ್ರೀತಿಯು ಅತಿಶಯವಾಗಿರುವುದೋ, ಅಲ್ಲಿ ಲೋಭದ ವಸತಿ ಇರುವುದು. ಅಥವಾ ಎಲ್ಲಿ ಕಾಮದ ಪ್ರಾಪ್ತಿಯಾಗುವುದಿಲ್ಲವೋ, ಅಲ್ಲಿ ಕ್ರೋಧದ ದೊಡ್ಡ ಬಂಡಾಯವೇ ನಿರ್ಮಾಣವಾಗುವುದು ।೬೩೩॥ ಮುಕ್ತನು ನಿತ್ಯ ನಿಷ್ಕಾಮವಾಗಿಯೇ ಇರುವುದರಿಂದ ಕ್ರೋಧ ಲೋಭ ಸಹ ಆತನ ವಾಸನೆಯು ಇಲ್ಲದಾಗಿರುವುದು. ಆತನು ಸ್ವತಃ ಆತ್ಮಾರಾಮನಾಗಿ ಸಂಪೂರ್ಣ ಜಗತ್ತಿನ ವಿಶ್ರಾಮಧಾಮನಾಗುವನು ।೬೩೪॥ ಈ ಪ್ರಕಾರವಾಗಿ ಮುಕ್ತನಿಗೆ ಪಾಪ ಅಥವಾ ಪುಣ್ಯ ಇವು ಉತ್ಪನ್ನವಾಗಲು ಶಕ್ಯವಿಲ್ಲ. ಆತನು ಕಾಮ, ಕ್ರೋಧಾದಿ ವೃತ್ತಿ ಶೂನ್ಯನಾಗಿರುವುದರಿಂದ ಚಿದ್‌ಬ್ರಹ್ಮನಾಗುವನು ।೬೩೫॥ ಮುಕ್ತನ ವಿಷಯ ಸೇವನೆಯು ಹೇಗಿರುವುದೆಂದರೆ, ವಿಷಯಗಳಲ್ಲಿಯೂ ಕೂಡ ಆತನಿಗೆ ಸಹಜವಾಗಿಯೇ ಬ್ರಹ್ಮ ಭಾವವು ಸ್ಫುರಣಗೊಳ್ಳುತ್ತಿರುವುದು. ಆದ್ದರಿಂದ ಆತನಿಗೆ ಪಾಪ ಪುಣ್ಯಗಳು ನಿರ್ಮಾಣವಾಗುವುದಿಲ್ಲ. ಆದ್ದರಿಂದ ಆತನಿಗೆ ನಿತ್ಯ ಮುಕ್ತಿಯು ಪ್ರಾಪ್ತವಾಗುವುದು ।೬೩೬॥ ಹೀಗೆ ಮುಕ್ತರ ಕಥೆಯಾಗಿರುವುದು. ಈಗ ಬದ್ಧರ ಕಥೆಯನ್ನು ಕೇಳು, ಆತನು ಅಕರ್ತನಾಗಿದ್ದರೂ ಸ್ವತಃಕ್ಕೆ ನಾನು ಕರ್ತಾ ಎಂದು ತಿಳಿದಿರುವನು. ಆದ್ದರಿಂದ ಆತನು ಎಲ್ಲ ರೀತಿಯಿಂದಲೂ ಸಿಲುಕಿಕೊಳ್ಳುವನು ।೬೩೭॥

ಈ ಶರೀರವು ಅದೃಷ್ಟದ ಆಧೀನವಾಗಿದೆ. ಇಲ್ಲಿ ಹರಿಹರರಿಂದಲೂ ಅದರಲ್ಲಿನ ಅಣುಮಾತ್ರವೂ ಕೂಡ ಬದಲಿಸಲಾಗುವುದಿಲ್ಲ. ಈ ತತ್ವವು ವೇದಶಾಸ್ತ್ರ ಸಮ್ಮತವಾಗಿದೆ ।೬೩೮॥ ಸತ್ವ, ರಜ ಮತ್ತು ತಮ ಈ ಮೂರು ಗುಣಗಳಲ್ಲಿನ ಯಾವ ಗುಣವು ಯಾವ ಶರೀರದಲ್ಲಿ ಅಧಿಕ ಪ್ರಾಬಲ್ಯವಾಗಿರುವುದೋ, ಅದರಂತೆ ಕರ್ಮಗಳಾಗುತ್ತಿರುತ್ತವೆ. ಇಂದ್ರಿಯಗಳು ಗುಣಗಳ ಆಧೀನವಾಗಿರುವುವು. ಆದ್ದರಿಂದ ಅವು ಗುಣಾನುಸಾರವಾಗಿ ವರ್ತಿಸುವುವು ।೬೩೯॥ ಈ ಪ್ರಕಾರವಾಗಿ ದೇಹವು ಪೂರ್ವಕರ್ಮಾನುಸಾರವಾಗಿ ವರ್ತಿಸುತ್ತಿರುವುದು. ಜೀವವು ''ನಾನು ಕರ್ತನು'' ಎಂದು ಸ್ವತಃ ಹೇಳಿಕೊಳ್ಳುವುದು. ಇದೇ ಇದರ ದೃಢವಾದ ಬಂಧನವಾಗಿ ತನಗೆ ತಾನೇ ಘಾತಮಾಡಿಕೊಳ್ಳುವುದು ।೬೪೦॥ ಮಂಗವು ಕೊಳವೆಯಲ್ಲಿನ ಕಡಲೆಯ ಆಶೆಯಿಂದ ಕೊಳವೆಯನ್ನು ಕೈಯಿಂದ ಹಿಡಿಯುತ್ತಲೇ ಅದು ಆ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವುದು. ಅದರಂತೆ ಜೀವವು ದೇಹದಲ್ಲಿನ ವಿಷಯಾದಿ ವಿಲಾಸಗಳಲ್ಲಿ ಅಭಿಮಾನದಿಂದ ಸಿಕ್ಕಿಹಾಕಿಕೊಳ್ಳುತ್ತಿರುವುದು ।೬೪೧॥ ವಾಸ್ತವಿಕವಾಗಿ ನೋಡಲು ಜೀವವು ದೇಹಾತೀತ ಮತ್ತು ಗುಣಕರ್ಮಗಳ ಅಕರ್ತನಾಗಿರುವುದು. ಆದರೆ ಅದೇ ಜೀವವು ''ನಾನು ದೇಹಿಯು, ನಾನು ಕರ್ಮಕರ್ತನು'' ಎಂದು ಹೇಳುತ್ತ ಅಹಂಕಾರ, ಮಮಕಾರಗಳಿಂದ ಮಾರುಹೋಗುವನು ।೬೪೨॥ ಯಾವನು ತಾನು ಕಳ್ಳತನವನ್ನು ಮಾಡದೇ, ನಾನು ಕಳ್ಳನು ಎಂದು ರಾಜಬೀದಿಯಲ್ಲಿ ಹೇಳಲು, ಅವನಿಗೆ ಚಿಕ್ಕವರು, ದೊಡ್ಡವರೂ ಹೀಗೆ ಎಲ್ಲರೂ ಹೊಡೆಯಲಾರಂಭಿಸುವರು. ಇದೇ ಗತಿಯು ಜಡಜೀವಕ್ಕೆ ಆಗುತ್ತಿರುವುದು ।೬೪೩॥

ಪ್ರಕೃತೀಚೇ ಕರ್ಮ ಆಪುಲೇ ಮಾಥಾ । ಘೇಊನಿ ನಾಚೇ ಅಹಂ ಮಮತಾ । ತೇಣೇ ಅಭಿಮಾನೇ ದೃಢ ಬದ್ಧತಾ । ಆಕಲ್ಪಾಂತಾ ಅನಿವಾರ ।।೭೪೪।। ತಳೀ ಮಾಂಡೂನಿ ಕಾಜಳಾ । ವರೀ ಠೇವಿಲಾ ಸ್ಫಟಿಕು ಸೋಜ್ವಳಾ । ಶ್ವೇತತಾ ಲೋಪೂನಿ ದಿಸೇ ಕಾಳಾ । ತೇವೀ ಆಂಧಳಾ ಜೀವು ಝಾಲಾ ।।೭೪೫।। ಕಾ ಆಂಧಳೇ ಮಾತಲೇ ಹಾತಿರು । ನೇಣೇ ನಿಜಪತನ ನಿರ್ಧಾರು । ತೈಸಾ ಜೀವು ಲಾಗೇ ಕರ್ಮ ಕರೂ । ಪತನವಿಚಾರು ತೋ ನ ದೇಖೇ ।।೭೪೬।। "ಮೀ ದೇಹ ಮೀ ಕರ್ಮಕರ್ತಾ । ಮೀ ಜ್ಞಾತಾ ಮೀ ವಿಷಯಭೋಕ್ತಾ" । ಐಶೀ ಜೇ ಕಾ ದೇಹಾತ್ಮತಾ । "ದೃಢಬದ್ಧತಾ" ತಿಯೇ ನಾಂವ ।।೭೪೭।। ಏವಂ ಬದ್ಧ - ಮುಕ್ತ - ವರ್ತನ । ವಿಶದ ಕೇಲೇ ನಿರೂಪಣ । ಆತಾ ಕೇವಳ ಮುಕ್ತಾಚೇ ಲಕ್ಷಣ । ಆವಡೀ ಶ್ರೀಕೃಷ್ಣ ಸಾಂಗತು ।।೭೪೮।। "ಜ್ಞಾನಿಯಾ ತೋ ತಂವ ಆತ್ಮಾ ಮಾಝಾ" । ಹೇ ಅತಿಪ್ರೀತೀ ಗರುಡಧ್ವಜಾ । ಹೇ ಗುಹ್ಯ ಸಾಂಗೀತಲೇ ಕಪಿಧ್ವಜಾ । ರಣಸಮಾಜಾ ರಣರಂಗೀ ।।೭೪೯।। ತೇಚಿ ಆತಾ ಉದ್ಧವಾ ಪ್ರತೀ । ಅತ್ಯಾದರೇ ಸಾಂಗೇ ಶ್ರೀಪತೀ । ಜ್ಞಾನಿಯಾಂಚೇ ಮುಕ್ತಸ್ಥಿತೀ । ಯಥಾನಿಗುತೀ ನಿಜಗುಹ್ಯ ।।೭೫೦।। ಜ್ಞಾನಲಕ್ಷಣೇ ಸಾಂಗತಾ । ಧಣೀ ನಪುರೇ ಶ್ರೀಕೃಷ್ಣನಾಥಾ । ನಿರೋಪಣಮಿಸೇ ಜ್ಞಾನಕಥಾ । ಮಾಗುತಮಾಗುತಾ ಸಾಂಗತು ।।೭೫೧।। ಯಾಲಾಗೀ ಜ್ಞಾನಭಕ್ತಾಂಚೀ ಗೋಡೀ । ಶ್ರೀಕೃಷ್ಣಚಿ ಜಾಣೇ ಪುಢೀ । ಕೃಷ್ಣಭಜನಾಚೀ ಆವಡೀ । ಭಕ್ತ ತೇ ಗೋಡೀ ಜಾಣತೀ ।।೭೫೨।। ಆಧೀಂಚ ತಂವ ಹೇ ಮುಕ್ತಾಚೀ ಕಥಾ । ವರೀ ಶ್ರೀಕೃಷ್ಣಾ ಸಾರಿಖಾ ವಕ್ತಾ । ಉದ್ಧವಾಚೇ ಭಾಗ್ಯ ವರ್ಣಿತಾ । ನ ವರ್ಣವೇ ಸರ್ವಥಾ ಶೇಷಾದಿಕಾ ।।೭೫೩।। ಉದ್ಧವ ಅರ್ಜುನಾಸಮಾನ । ತ್ಯಾಹೂನಿ ಹಾ ದಿಸೇ ಗಹನ । ತೇ ಪರಸ್ಪರೇ ನರನಾರಾಯಣ । ಗುಹ್ಯ ಜ್ಞಾನ ಬೋಲಿಲೇ ।।೭೫೪।। ತೇಚಿ ಉಲಥೂನ ಜ್ಞಾನ ಕಥಾ । ಉದ್ಧವಾಸೀ ಹೋಯ ಸಾಂಗತಾ । ಉದ್ಧವಾ ಐಸೇ ಭಾಗ್ಯ ತತ್ತ್ವತಾ । ನ ದಿಸೇ ಸರ್ವಥಾ ಆನಾಸೀ ।।೭೫೫।। ಜಾಣೇ ಸಾಂಡೂನಿ ನಿಜಧಾಮಾ ।ಮಾಗೇ ಠೇವೂನಿ ಆಪಲ್ಯಾ ಕಾಮಾ। ಉದ್ಧವ ಆವಡಲಾ ಪುರುಷೋತ್ತಮಾ । ತ್ಯಾಚಿಯಾ ಪ್ರೇಮಾ ವಿಗುಂತಲಾ ।।೭೫೬।। ಯಾಲಾಗೀ ಉದ್ಧವಾಚೇ ಶುದ್ಧ ಪುಣ್ಯ । ಜಗೀ ಉದ್ಧವುಚಿ ಧನ್ಯ ಧನ್ಯ । ಜಯಾಲಾಗೀ ಸ್ವಯೇ ನಾರಾಯಣ । ಸ್ವಾನಂದಘನ ವೋಳಲಾ ।।೭೫೭।।

ನಿಜವಾಗಿ ನೋಡಲು ಕರ್ಮವು ಇದು ಪ್ರಕೃತಿಯದ್ದಾಗಿರುವುದು. ಆದರೆ ಅಜ್ಞಾನಿಯು ಆ ಕರ್ಮವನ್ನು ತನ್ನ ತಲೆಯ ಮೇಲೆ ಹೊತ್ತು ಅಹಂ ಮಮತೆಯಿಂದ ಕುಣಿಯುತ್ತಿರುವನು. ಯಾವ ಈ ಅಭಿಮಾನದಿಂದಲೇ ಅದಕ್ಕೆ ಕಲ್ಪಾಂತ್ಯದವರೆಗೂ ಅನಿವಾರ್ಯವಾಗಿ ಬದ್ಧತೆಯು ಪ್ರಾಪ್ತವಾಗುವುದು ।।೭೪೪।। ನೆಲಕ್ಕೆ ಕಾಡಿಗೆಯನ್ನು ಒರೆಸಿ, ಅದರ ಮೇಲೆ ಸ್ವಚ್ಛವಾದ ಸ್ಫಟಿಕವನ್ನು ಇಡಲು, ಆಗ ಅದು ತನ್ನ ಶುಭ್ರತೆಯನ್ನು ಬಿಟ್ಟು ಕಪ್ಪಾಗಿ ಕಾಣಿಸುವುದು. ಅದರಂತೆಯೇ ಈ ಜೀವವು ಕುರುಡಾಗಿರುವುದು ।।೭೪೫।। ಅಥವಾ ಕುರುಡ ಆನೆಗೆ ಮತ್ತೇರಲು ಅದು ಯಾವ ವಿಚಾರವನ್ನು ಮಾಡದೇ ಭಾರೀ ತೆಗ್ಗಿನಲ್ಲಿ ಜಿಗಿದು ಬೀಳುವುದು. ಅದರಂತೆ ಯಾವ ಈ ಜೀವವು ಪತನದ ವಿಚಾರವನ್ನು ಮಾಡದೇ ಕರ್ಮಗಳನ್ನು ಮಾಡುತ್ತಿರುವುದು ।।೭೪೬।। ನಾನು ದೇಹಿ, ನಾನು ಕರ್ಮಕರ್ತನು, ನಾನು ಜ್ಞಾನೀ, ನಾನು ವಿಷಯ ಭೋಕ್ತಾ, ಈ ಪ್ರಕಾರದ ಯಾವ ದೇಹದ ಅಹಂತನದ ನಾಮವೇ "ದೃಢಬಂಧನ" ಎಂದಾಗಿರುವುದು ।।೭೪೭।। ಈ ಪ್ರಕಾರವಾಗಿ ಬದ್ಧಮುಕ್ತರ ಆಚರಣೆಯನ್ನು ನಿರೂಪಣೆಯಿಂದ ಸ್ಪಷ್ಟಮಾಡಿ ತೋರಿಸಲ್ಪಟ್ಟಿತು. ಈಗ ಕೇವಲ ಮುಕ್ತನ ಲಕ್ಷಣಗಳನ್ನು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳುತ್ತಿರುವನು ।।೭೪೮।। ಜ್ಞಾನಿಯು ನನ್ನ ಆತ್ಮನಾಗಿರುವನು ಎಂಬ ಗುಪ್ತ ರಹಸ್ಯವನ್ನು ಭಗವಾನ ಶ್ರೀಕೃಷ್ಣನು ರಣಭೂಮಿಯಲ್ಲಿ ಸೈನ್ಯದ ಎದುರಿನಲ್ಲಿ ತನ್ನ ಗುಟ್ಟನ್ನು ಹೇಳಿರುವನು ।।೭೪೯।। ಇದೇ ಗುಟ್ಟನ್ನು ಅತ್ಯಂತ ಪ್ರೀತಿಯಿಂದ ಈ ಸಮಯದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು. ಜ್ಞಾನಿಗಳ ಮುಕ್ತಸ್ಥಿತಿಯು ಹೇಗಿರುವುದೆಂದು ಯಥಾರ್ಥರೀತಿಯಲ್ಲಿ ಹೇಳುವುದೇ ಅದರ ಆತ್ಮಗುಹ್ಯವಾಗಿರುವುದು ।।೭೫೦।। ಜ್ಞಾನದ ಲಕ್ಷಣಗಳನ್ನು ಹೇಳುತ್ತಿದ್ದಂತೆ ಶ್ರೀಕೃಷ್ಣನಿಗೆ ತೃಪ್ತಿಯೇ ಆಗುತ್ತಿಲ್ಲ. ಆದ್ದರಿಂದ ನಿರೂಪಣೆಯ ನಿಮಿತ್ತದಿಂದ ಜ್ಞಾನದ ಲಕ್ಷಣಗಳನ್ನು ಪುನಃ ಪುನಃ ಹೇಳುತ್ತಿರುವನು ।।೭೫೧।। ನಿಜವಾಗಿ ನೋಡಿದರೆ ಜ್ಞಾನೀ ಭಕ್ತರ ಮಾಧುರ್ಯವನ್ನು ಶ್ರೀಕೃಷ್ಣನು ಅರಿತಿರುವನು. ಶ್ರೀಕೃಷ್ಣನ ಭಜನೆಯ ಮಾಧುರ್ಯವನ್ನು ಭಕ್ತರು ಮಾತ್ರ ಅರಿತಿರುವರು ।।೭೫೨।। ಮೊದಲೇ ಇದು ಮುಕ್ತರ ಕಥೆ, ಅದರಲ್ಲಿ ಶ್ರೀಕೃಷ್ಣನಂತಹ ವಕ್ತಾ ಅಂದಮೇಲೆ ಉದ್ಧವನ ಭಾಗ್ಯದ ವರ್ಣನೆಯನ್ನು ಹೇಗೆ ಮಾಡಬೇಕು ? ಇದನ್ನು ಶೇಷನಿಗೂ ಕೂಡ ವರ್ಣಿಸಲುಬಾರದು ।।೭೫೩।। ಉದ್ಧವನು ಅರ್ಜುನನ ಸಮಾನನು ಎಂದು ಹೇಳುವುದಕ್ಕಿಂತಲೂ ಆತನಿಗಿಂತಲೂ ದೊಡ್ಡವನು ಎಂದು ಹೇಳಬೇಕಾಗುವುದು. ಕಾರಣ ಶ್ರೀಕೃಷ್ಣ ಮತ್ತು ಅರ್ಜುನ ಇವರು ನರನಾರಾಯಣರ ಅವತಾರವಾದ್ದರಿಂದ ಶ್ರೀಕೃಷ್ಣನು ಅರ್ಜುನನಿಗೆ ಗೂಢ ಜ್ಞಾನವನ್ನು ಹೇಳಿದನು ।।೭೫೪।। ಆದರೆ ಈಗ ಅದೇ ಜ್ಞಾನದ ಕಥೆಯನ್ನು ಪುನಃ ಉದ್ಧವನಿಗೆ ಹೇಳಿದನು. ಉದ್ಧವನು ಕೇವಲ ಭಕ್ತನಾಗಿದ್ದನು. ಇದನ್ನು ನೋಡಿದರೆ ಉದ್ಧವನಂತಹ ಭಾಗ್ಯವಾನನು ಬೇರೆ ಯಾರೂ ಕಾಣರು ।।೭೫೫।। ಈ ಯಾವ ಪುರುಷೋತ್ತಮನು ತಾನು ನಿಜಧಾಮಕ್ಕೆ ಹೋಗುವುದನ್ನು ಬಿಟ್ಟುಕೊಟ್ಟು, ತನ್ನ ಮಹತ್ವದ ಕಾರ್ಯಗಳನ್ನೂ ಬದಿಗೆ ಸರಿಸಬೇಕಾದರೆ, ಈತನಿಗೆ ಉದ್ಧವನು ಇಷ್ಟೊಂದು ಪ್ರೀತಿಗೆ ಪಾತ್ರನಾಗಿದ್ದು ಆತನ ಪ್ರೇಮದಲ್ಲಿ ಸಿಕ್ಕಿಹಾಕಿಕೊಂಡಿದ್ದನು ।।೭೫೬।। ಆದ್ದರಿಂದ ಉದ್ಧವನ ಪುಣ್ಯವು ಬಹು ಶ್ರೇಷ್ಠವಾಗಿರುವುದು. ಜಗತ್ತಿನಲ್ಲಿಯೇ ಉದ್ಧವನು ಧನ್ಯ ಧನ್ಯನು. ಈತನಿಗಾಗಿ ನಾರಾಯಣನು ಸ್ವಾನಂದರೂಪದ ಮಳೆಗರೆದನು ! ।।೭೫೭।।

ಜೋ ನಾತುಡೇ ಯೋಗ ಯಾಗಸಂಕಟೀ । ತೋ ಉದ್ಧವಾಚ್ಯಾ ಬೋಲಾಸಾಠೀ । ಜೇವೀ ವ್ಯಾಲೀ ಧೇನು ವತ್ಸಾಚಾಟೀ । ತೇವೀ ಗುಹ್ಯ ಗೋಠೀ ಸಾಂಗತು ॥೭೫೮॥ ಜೋ ನಿಜಕುಳಾಸೀ ಕಾಳು । ತೋ ಉದ್ಧವಾಸೀ ಅತಿಸ್ನೇಹಾಳು । ಬಾಪು ಭಕ್ತಕಾಜಕೃಪಾಳು । ಜ್ಞಾನಕಲ್ಲೋಳು ತುಷ್ಟಲಾ ॥೭೫೯॥ ಯಾಲಾಗೀ ಉದ್ಧವಾಚೇ ನಾಂವ ಘೇತಾ । ಶ್ರೀಕೃಷ್ಣ ನಿವಾರೀ ಭವವ್ಯಥಾ । ಐಸೀ ಭಕ್ತಪ್ರೀತೀ ಭಗವಂತಾ । ಭಕ್ತಾ ತೇ ಸ್ಮರತಾ ಹರಿ ತಾರೀ ॥೭೬೦॥ ಮುಕ್ತಾಚೀ ಲಕ್ಷಣೇ ನಿರ್ಧಾರಿತಾ । ಲಾಭೇ ಆಪುಲೀ ನಿಜಮುಕ್ತತಾ । ಏಕಾ ಜನಾರ್ದನು ವಿನವೀ ಸಂತಾ । ಮುಕ್ತಕಥಾ ಹರಿ ಬೋಲೇ ॥೭೬೧॥ ಕೃಷ್ಣ ಉದ್ಧವಾಸೀ ಮ್ಹಣೇ ಮೀ ತುಜ । ಸಾಂಗೇನ ಆಪುಲೇ ನಿಜಗುಜ । ಮುಕ್ತಲಕ್ಷಣಾಚೀ ಭೋಜ । ನವಲ ಚೋಜ ಪರಿಯೇಸೀ ॥೭೬೨॥

ಏವಂ ವಿರಕ್ತ: ಶಯನ ಆಸನಾಟನಮಜ್ಜತೇ । ದರ್ಶನ ಸ್ಪರ್ಶನ ಘ್ರಾಣ-ಭೋಜನ ಶ್ರವಣಾದಿಷು ॥೧೧॥

ಅರ್ಥ :- ಪ್ರಿಯ ಉದ್ಧವನೇ, ವಿವೇಕಿ ಪುರುಷನು ಸಮಸ್ತ ವಿಷಯಗಳಿಂದ ವಿರಕ್ತನಾಗಿರುವನು. ಮಲಗುವುದು, ಕುಳಿತುಕೊಳ್ಳುವುದು, ತಿರುಗಾಡುವುದು, ಸ್ನಾನ ಮಡುವುದು, ಸ್ಪರ್ಶ ಮಾಡುವುದು, ಮೂಸಿ ನೋಡುವುದು, ಭೋಜನ ಮಾಡುವುದು, ಕೇಳುವುದು ಇತ್ಯಾದಿ ಕ್ರಿಯೆಗಳಲ್ಲಿ ತನಗೆ ಕರ್ತನೆಂದು ತಿಳಿಯುವುದಿಲ್ಲ. ಆದರೆ, ಗುಣಗಳಿಗೆ ಮಾತ್ರ ಕರ್ತನೆನ್ನುವನು.

ಐಕೇ ಮುಕ್ತಾಚೇ ಲಕ್ಷಣ । ಆಸನ , ಭೋಜನ, ಶಯನ । ದರ್ಶನ, ಸ್ಪರ್ಶನ, ಘ್ರಾಣ । ಅಟನ, ಮಜ್ಜನ, ಕರೀ ಕೈಸೇ ॥೭೬೩॥ ಮಾಗೀಲ ಶ್ಲೋಕಾರ್ಥು ಸಂಪತಾ । ಪ್ರಕೃತಿಕರ್ಮು ಅಭಿಮಾನತಾ । ತೇಣೇ ಲಾಗಲೀ ದೃಢಬದ್ಧತಾ । ತೋ ಅಹಂಕಾರು ಜ್ಞಾತಾ ನಾತಳೇ ॥೭೬೪॥ ಸರ್ವಕರ್ಮೀ ಸ್ವಭಾವತಾ । ಜ್ಞಾತ್ಯಾಚೀ ನಿರಭಿಮಾನತಾ । ತೇ ಮೀ ಸಮೂಳ ಸಾಂಗೇನ ಕಥಾ । ಸಾವಧಾನತಾ ಅವಧಾರೀ ॥೭೬೫॥ ಜೇವೀ ಛಾಯೇಚಾ ಮಾನಾಪಮಾನ । ಪುರುಷಾ ನ ಬಾಧೀ ಅಣುಪ್ರಮಾಣ । ತೇವೀ ದೇಹಾಚೇ ಕರ್ಮಾಚರಣ । ನಿರಭಿಮಾನ ಮುಕ್ತಾಸೀ ॥೭೬೬॥ ಸ್ವಾಧಿಷ್ಠಾನ ತೇಚೀ ''ಆಸನ'' । ಅಖಂಡ ತ್ಯಾವರೀ ಆರೋಹಣ । ತೇಥೇ ಯೇವೋಚ ನೇಣೇ ಅಭಿಮಾನ । ಬೈಸಲೇ ಮನ ಉಠೇನಾ ॥೭೬೭॥ ನವಲ ಆಸನಾಚೇ ಮಹಿಮಾನ । ಹಾರಪೋನಿ ಗೇಲೇ ವಿಸ್ಮರಣ । ಕದಾ ಏಕಾಂತು ನ ಮೋಡೇ ಜಾಣ । ಹೇ ''ಸಹಜಾಸನ'' ಮುಕ್ತಾಚೇ ॥೭೬೮॥ ಜೇ ಆಸನೀಚೇ ಸಮಾಧಾನ । ಸಮಾಧಿ ಆಣಿ ವ್ಯುತ್ಥಾನ । ಕರೀ ದೋಹೀಂಚೀ ಬೋಳವಣ । ಹೇ ಚಾಲತೇ ''ಆಸನ'' ಮುಕ್ತಾಚೇ ॥೭೬೯॥

ಈತನು ಯೋಗಯಾಗಾದಿಕರಿಗೂ ಸಿಗನು, ಉದ್ಧವನ ಪ್ರೇಮಕ್ಕಾಗಿ ಹಡೆದ ಆಕಳು ತನ್ನ ಮರಿಗೆ ನೆಕ್ಕುವಂತೆ ಗುಹ್ಯಗೋಷ್ಟಿಯನ್ನು ಹೇಳುತ್ತಿರುವನು ॥೭೫೮॥ ತನ್ನ ಕುಲದ ಸಂಹಾರಕನಾದ ಶ್ರೀಕೃಷ್ಣನೇ ಅತಿಶಯ ಪ್ರೇಮಳ ಭಕ್ತ ಕೈವಾರಿಯಾದನು. ಈತನು ಉದ್ಧವನಲ್ಲಿ ಪ್ರಸನ್ನನಾದನು ॥೭೫೯॥ ಆದ್ದರಿಂದ ಉದ್ಧವನ ಕೇವಲ ಹೆಸರನ್ನು ನುಡಿದರೆ ಶ್ರೀಕೃಷ್ಣನು ಈ ಸಂಸಾರ ದು:ಖದಿಂದ ಮುಕ್ತ ಮಾಡುವನು. ಹೀಗೆ ಪ್ರಭುವಿನ ಭಕ್ತಿಯಾಗಿರುವುದು. ಭಕ್ತನ ಸ್ಮರಣೆಯನ್ನು ಮಾಡಿದರೂ ಆತನಿಗೆ ಭಗವಾನನು ಉದ್ಧರಿಸುವನು ॥೭೬೦॥ ಏಕನಾಥ ಜನಾರ್ದನರು ವಿನಂತಿಸಿಕೊಳ್ಳುವುದೇನಂದರೆ, ಮುಕ್ತನ ಲಕ್ಷಣಗಳನ್ನು ನಿರ್ಧರಿಸಲು, ತಮಗೆ ಮುಕ್ತಿಯು ಲಭಿಸುವುದು. ಈ ಮುಕ್ತಿ ಕಥೆಯನ್ನೇ ಶ್ರೀಹರಿಯು ಹೇಳುತ್ತಿರುವನು ॥೭೬೧॥ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು, ನಾನು ನನ್ನ ಅತಿ ಗುಹ್ಯವಾದ ಮುಕ್ತನ ಲಕ್ಷಣಗಳ ರಹಸ್ಯವನ್ನು ಹೇಳುವೆ, ಅದರ ಚಮತ್ಕಾರವನ್ನು ಕೇಳು ॥೭೬೨॥

ಈಗ ಮುಕ್ತನ ಲಕ್ಷಣಗಳನ್ನು ಕೇಳು, ಆತನ ಕುಳಿತುಕೊಳ್ಳುವಿಕೆ, ಮಲಗುವಿಕೆ, ನೋಡುವಿಕೆ, ಸ್ಪರ್ಶ ಮಾಡುವಿಕೆ, ಮೂಸಿ ನೋಡುವಿಕೆ, ತಿರುಗಾಡುವಿಕೆ, ಸ್ನಾನ ಮಾಡುವಿಕೆ, ಇವು ಹೇಗಿರುವುವು ಎಂಬುದನ್ನು ಹೇಳುವೆ ॥೭೬೩॥ ಹಿಂದಿನ ಶ್ಲೋಕದ ಕೊನೆಯಲ್ಲಿ ಪ್ರಕೃತಿ ಕರ್ಮಗಳ ಅಭಿಮಾನವನ್ನು ಹಿಡಿದರೆ ದೃಢಬಂಧನವು ಒದಗುವುದು ಎಂದು ಹೇಳಿದೆ. ಆದರೆ ಜ್ಞಾನಿಯು ಆ ಯಾವ ಅಹಂಕಾರಕ್ಕೆ ಸ್ಪರ್ಶ ಕೂಡ ಮಾಡನು ॥೭೬೪॥ ಜ್ಞಾನೀ ಪುರುಷನು ಸರ್ವ ಕರ್ಮಗಳಲ್ಲಿ ನಿರಭಿಮಾನಿಯಾಗಿರುವನು. ಈಗ ಇದೇ ಕಥೆಯನ್ನು ಸಮಗ್ರವಾಗಿ ಹೇಳುವೆನು. ಅದಕ್ಕಾಗಿ ಏಕಾಗ್ರಚಿತ್ತದಿಂದ ಕೇಳು ॥೭೬೫॥ ಒಬ್ಬ ಮನುಷ್ಯನ ನೆರಳಿಗೆ ಮಾನ – ಅಪಮಾನ ಮಾಡಲು ಆತನಿಗೆ ಸ್ವಲ್ಪವೂ ಹರ್ಷವಿಷಾದವಾಗುವುದಿಲ್ಲ. ಅದರಂತೆ ದೇಹದ ಕರ್ಮಾಚರಣೆಗಳಲ್ಲಿ ಮುಕ್ತ ಪುರುಷನು ಸ್ವಲ್ಪವೂ ಅಭಿಮಾನವನ್ನು ಹಿಡಿಯುವುದಿಲ್ಲ ॥೭೬೬॥ ಸ್ವತ: ತನ್ನದೇ ಆತ್ಮಸತ್ತೆಯೇ ಆತನ ಆಸನವಾಗಿರುವುದು. ಆ ಆಸನದಲ್ಲಿ ಆತನು ಸತತವಾಗಿ ಕುಳಿತಿರುವನು. ಅಲ್ಲಿ ಅಭಿಮಾನವು ಪ್ರವೇಶವನ್ನು ಮಾಡಲು ಶಕ್ಯವಿಲ್ಲ. ಅಲ್ಲಿ ಕುಳಿತಿರುವ ಮನಸ್ಸು ಏಳುವುದಿಲ್ಲ ॥೭೬೭॥ ಈ ಆಸನದ ಪ್ರಭಾವವು ವಿಲಕ್ಷಣವಾಗಿರುವುದು. ಅಲ್ಲಿ ವಿಸ್ಮರಣೆಯು ಇಲ್ಲದಾಗುವುದು. ಏಕಾಂತವು ಎಂದಿಗೂ ಭಂಗವಾಗಲಾರದು. ಇದುವೇ ಮುಕ್ತನ ಸಹಜ ಆಸನವಾಗಿರುವುದು ॥೭೬೮॥ ಈ ಆಸನದ ಸಮಾಧಾನವು ಹೇಗಿರುವುದೆಂದರೆ ಸಮಾಧೀ ಹಚ್ಚುವಿಕೆ ಮತ್ತು ಸಮಾಧೀ ಇಳಿಸುವಿಕೆ ಈ ಎರಡೂ ಇಲ್ಲಿಂದ ದೂರ ಸರಿಯುವುವು. ಸಮಾಧಾನವೇ ಮುಕ್ತನ ನಡೆದಾಡುವ ಆಸನವಾಗಿರುವುದು ॥೭೬೯॥

ಜೇ ಬೈಸಲ್ಯಾ ಆಸನೀ ಸಮಾಧಾನ । ತ್ಯಾಚೀ ಸ್ಥಿತೀ ''ಗಮನಾಗಮನ'' । ಉಠಿಲೋ ಬೈಸಲೋ ನಾಠವೇ ಜಾಣ । ಚಾಲತೇಪಣ ಸ್ಫುರೇನಾ ॥೨೭೦॥ ಚಾಲತಾಹೀ ಚಪಳ ಪದೀ । ಮೀ ಚಾಲತೋ ಹೇ ನಾಠವೇ ಬುದ್ಧೀ । ಚಾಲತಾ ನ ಮೋಡೇ ಸಮಾಧೀ । ಹೇ ಲಕ್ಷಣಸಿದ್ಧೀ ಮುಕ್ತಾಚೀ ॥೨೭೧॥ ಜರೀ ತ್ರೈಲೋಕ್ಯ ಹಿಂಡಲಾ । ತರೀ ಠಾಯೀ ಹೂನಿ ನಾಹೀ ಹಾಲಲಾ । ಐಸಾ ನ ಚಲೋನಿ ಮುಕ್ತ ಚಾಲಲಾ । ಜೇವೀ ಅಭ್ರೀ ಧಾಂವಲಾ ದಿಸೇ ಚಂದ್ರ ॥೨೭೨॥ ಕುಲಾಲಚಕ್ರೀ ಬೈಸಲೀ ಮಾಶೀ । ತೇ ನ ಹಾಲತಾ ಭಂವೇ ಚಕ್ರಾಸರಸೀ । ಮುಕ್ತಾಂಚೀ ಗಮನಸಿದ್ಧೀ ತೈಶೀ । ದೇಹಗಮನೇಸೀ ಆಭಾಸೇ ॥೨೭೩॥ ದೇಹೋ ಪ್ರಾರಬ್ಧಾಸ್ತವ ಹಿಂಡೇ । ಬೈಸಕಾ ಸ್ವಸ್ವರೂಪೀಚೀ ನ ಸಂಡೇ । ಜೇವೀ ರಥೀ ಧಾವತಾ ಸವೇಗ ಘೋಡೇ । ನಿದ್ರಾ ನ ಮೋಡೇ ರಥಸ್ಥಾಚೀ ॥೨೭೪॥ ಐಸೇ ನ ಚಳತಾ ಜೇ ಚಳಣ । ತೇ ಜಾಣ ಮುಕ್ತಾಚೇ ''ಗಮನ'' । ಆತಾ ಐಕ ತ್ಯಾಚೇ ''ಸ್ನಾನ'' । ನಿಮಜ್ಜನ ನಿಜರೂಪೀ ॥೨೭೫॥ ಸ್ನಾನ ಕರೀ ಗಂಗಾಜಳೇ । ಪರೀ ಗಂಗೋದಕಾತೇ ನಾತಳೇ । ಮನ ''ಚಿತ್‌ಸ್ವರೂಪೀ'' ಕೇಲೇ ಸೋವಳೇ । ತೇ ಫೋವಳೇ ಹೋ ನೇಣೇ ॥೨೭೬॥ ತ್ಯಾಸೀ ನಿಜಸ್ವರೂಪೀ ನಾಹತಾ । ಜಾಹಲೀ ಪರಮ ಪವಿತ್ರತಾ । ತೀರ್ಥೇಮಾಗತೀ ಚರಣತೀರ್ಥಾ । ಐಶೀ ಸುಸ್ನಾತತಾ ಮುಕ್ತಾಚೀ ॥೨೭೭॥ ತೋ ಚಿನ್ಮಾತ್ರಚಿ ದೇಖೇ ಜೀವನ । ಅಖಂಡ ಚಿದ್ರೂಪೀ ಅವಗಾಹನ । ಇತರ ಮ್ಹಣತೀ ಕೇಲೇ ಸ್ನಾನ । ತ್ಯಾಸೀ ನಿಮಜ್ಜನ ನಿಜರೂಪೀ ॥೨೭೮॥ ತ್ಯಾಚೇ ಚರಣೀಚೇ ರಜಃಕಣ । ಲಾಹೋನಿ ಧರಾ ಪರಮ ಪಾವನ । ತ್ಯಾಚೇನಿ ಪ್ರಾಣಸಂಗೇ ಜಾಣ । ಪವಿತ್ರಪಣ ವಾಯೂಸೀ ॥೨೭೯॥ ತ್ಯಾಚೇನಿ ಚರಣಸ್ಪರ್ಶೇ ತತ್ತ್ವತಾ । ಪವಿತ್ರ ಝಾಲ್ಯಾ ಗಂಗಾದಿ ಸರಿತಾ । ತ್ಯಾಚೇನಿ ಜಠರಸಂಗೇ ಸರ್ವಥಾ । ಅತಿಪವಿತ್ರತಾ ಅಗ್ನೀಸೀ ॥೨೮೦॥ ತ್ಯಾಚ್ಯಾ ಹೃದಯಾವಕಾಶೀ ಆಕಾಶ । ಸಗಳೇ ರಾಹಿಲೇ ಸಾವಕಾಶ । ತೇಣೇ ಪವಿತ್ರ ಜಾಹಲೇ ಆಕಾಶ । ಅಲಿಪ್ತ ಉದಾಸ ಸರ್ವತ್ರ ॥೨೮೧॥ ಜೇ ಚಡೋನಿ ಬೈಸಲೇ ವೈಕುಂಠೀ । ತೇ ಸದಾ ವಾಂಛಿತೀ ತ್ಯಾಚೀ ಭೇಟೀ । ವೇದು ಐಕೋ ಧಾಂವೇ ಗೋಠೀ । ತೋ ಪಹಾವಯಾ ದಿಠೀ ದೇವ ಯೇತೀ ॥೨೮೨॥

ಯಾವುದೇ ಆಸನದ ಮೇಲೆ ಕುಳಿತುಕೊಂಡಾಗ್ಗೆ ಇರುವ ಸಮಾಧಾನವೇ ನಡೆದಾಡುವಾಗ್ಗೆ, ತಿರುಗಾಡುವಾಗ್ಗೆ ಆಗುತ್ತಿರುವುದು. ಎದ್ದೆನು, ಕುಳಿತೆನು ಎಂಬ ಸ್ಮರಣವೇ ಇರುವುದಿಲ್ಲ. ನಡೆದಾಡಿದ ಭಾನವೂ ಉಳಿಯುವುದಿಲ್ಲ ॥೨೭೦॥ ಕಾಲುಗಳಿಂದ ಭರಭರನೇ ನಡೆಯುತ್ತಿರುವಾಗಲೂ ನಾನು ನಡೆಯುತ್ತಿದ್ದೇನೆ ಎಂಬ ಭಾನವು ಬುದ್ಧಿಯಲ್ಲಿರುವುದಿಲ್ಲ. ನಡೆಯುತ್ತಿದ್ದರೂ ಕೂಡ ಆತನ ಸಮಾಧಿಯು ಮುರಿಯುವುದಿಲ್ಲ. ಈತನಲ್ಲಿ ಮುಕ್ತ ಲಕ್ಷಣಗಳು ಸಿದ್ಧವಾಗಿರುವುವು ॥೨೭೧॥ ಮೋಡಗಳಲ್ಲಿ ಚಂದ್ರನು ನಡೆಯುತ್ತಿದ್ದಂತೆ ತೋರುವನು. ಅದರಂತೆಯೇ ಮುಕ್ತ ಪುರುಷನು ಮೂರು ಲೋಕಗಳಲ್ಲಿಯೂ ತಿರುಗುತ್ತಿದ್ದರೂ ಕೂಡ ತನ್ನ ಆತ್ಮಸ್ವರೂಪದಿಂದ ಎಂದಿಗೂ ಕದಲಲಾರನು. ಹಾಗೆಯೇ ಮುಕ್ತ ಪುರುಷನು ನಡೆಯದಿದ್ದರೂ ನಡೆಯುತ್ತಿರುವನು ॥೨೭೨॥ ಕುಂಬಾರನ ಚಕ್ರದ ಮೇಲೆ ಕುಳಿತುಕೊಂಡಿರುವ ನೊಣವು ಕುಳಿತಲ್ಲಿಯೇಕುಳಿತುಕೊಂಡು ಅಲುಗಾಡದಿದ್ದರೂ ಅದು ಆ ಚಕ್ರದಂತೆ ತಿರುಗುತ್ತಿರುವುದು. ಅದರಂತೆ ಮುಕ್ತನ ಗಮನವಾಗಿರುವುದು. ದೇಹದ ಗಮನದೊಂದಿಗೆ ಹಾಗೆ ಭಾಸವಾಗುತ್ತಿರುವುದು ॥೨೭೩॥ ದೇಹವು ತಾನು ತನ್ನ ಪ್ರಾರಬ್ಧ ಭೋಗದಂತೆ ತಿರುಗುತ್ತಿರುವುದು. ಆದರೆ ಮುಕ್ತನ ಆತ್ಮಸ್ವರೂಪದಲ್ಲಿನ ಇರುವಿಕೆಯು ಎಂದಿಗೂ ಕದಲಲು ಶಕ್ಯವಿಲ್ಲ. ಯಾವ ಪ್ರಕಾರವಾಗಿ ರಥದ ಕುದುರೆಗಳು ಬಹು ವೇಗದಿಂದ ಓಡುತ್ತಿದ್ದರೂ ಅದರಲ್ಲಿ ಮಲಗಿಕೊಂಡ ಮನುಷ್ಯನ ನಿದ್ರಾಭಂಗವಾಗುವುದಿಲ್ಲ ॥೨೭೪॥ ಹೀಗೆ ಆತ್ಮಸ್ವರೂಪದಲ್ಲಿ ಸ್ಥಿರವಾಗಿ ಇದ್ದುಕೊಂಡು ತಿರುಗಾಡುವಿಕೆಯು ಇದೇ ಮುಕ್ತನ ಗಮನವಾಗಿರುವುದು. ಈಗ ಈತನು ಆತ್ಮಸ್ವರೂಪದಲ್ಲಿ ಹೇಗೆ ಮುಳುಗಿ ಸ್ನಾನ ಮಾಡುವನೆಂಬುದನ್ನು ಕೇಳು ॥೨೭೫॥ ಈತನು ಗಂಗೆಯ ನೀರಿನಲ್ಲಿ ಸ್ನಾನವನ್ನು ಮಾಡುವನು, ಆದರೆ ಗಂಗೆಯ ನೀರಿಗೆ ಸ್ಪರ್ಶ ಕೂಡ ಮಾಡಲಾರನು. ಚಿತ್‌ಸ್ವರೂಪದಿಂದ ಒಮ್ಮೆ ಈತನ ಮನವು ಪವಿತ್ರವಾಗಿರುವುದು. ಆದ್ದರಿಂದ ಈತನು ಎಂದಿಗೂ ಅಪವಿತ್ರನಾಗಲಾರನು ॥೨೭೬॥ ಈತನು ಆತ್ಮಸ್ವರೂಪದಲ್ಲಿರುವುದರಿಂದ ಯಾವಾಗಲೂ ಪರಮ ಪವಿತ್ರನಾಗಿರುವನು. ಆದ್ದರಿಂದ ತೀರ್ಥಗಳು ಈತನ ಚರಣತೀರ್ಥದ ಅಪೇಕ್ಷೆಯನ್ನು ಮಾಡುವುವು. ಹೀಗೆ ಮುಕ್ತನ ಸ್ನಾನವು ಪವಿತ್ರವಾಗಿರುವುದು ॥೨೭೭॥ ಈತನು ನೀರಿಗೂ ಕೂಡ ಚಿತ್‌ಸ್ವರೂಪವಾಗಿ ತಿಳಿದಿರುವನು. ಈತನು ಚಿತ್‌ಸ್ವರೂಪದಲ್ಲಿ ಅಖಂಡವಾಗಿ ಮುಳುಗಿ ಪೂರ್ಣ ಪವಿತ್ರನಾಗಿರುವನು. ಇತರ ಜನರು ಆತನು ಸ್ನಾನ ಮಾಡಿದನು ಎಂದು ಹೇಳುವರು. ಆದರೆ ಆತನು ನಿಜಾತ್ಮಸ್ವರೂಪದಲ್ಲಿಯೇ ಮುಳುಗಿಪೂರ್ಣ ಪವಿತ್ರನಾಗಿರುವನು ॥೨೭೮॥ ಈತನ ಪರಮ ಪವಿತ್ರವಾದ ಚರಣದ ಧೂಳು ಹತ್ತಲು ಪೃಥ್ವಿಯು ಪವಿತ್ರವಾಗುವುದು. ಈತನ ಉಸಿರಾಡುವಿಕೆಯಿಂದ ವಾಯುವು ಪವಿತ್ರವಾಗುವುದು ॥೨೭೯॥ ಈತನ ಚರಣ ಸ್ಪರ್ಶದಿಂದ ಗಂಗೆಯಂತಹ ನದಿಗಳೂ ಸಹ ಪವಿತ್ರವಾಗುವುವು. ಈತನ ಜಠರ ಸಂಗತಿಯಿಂದ ಅಗ್ನಿಗೂ ಕೂಡ ಪವಿತ್ರತೆಯು ಪ್ರಾಪ್ತವಾಗುವುದು ॥೨೮೦॥ ಈತನ ಪರಮ ಪವಿತ್ರ ಹೃದಯದ ಅವಕಾಶದಲ್ಲಿ ಆಕಾಶವು ತುಂಬಿಕೊಂಡಿರುವುದು. ಆದ್ದರಿಂದ ಅದು ಪವಿತ್ರವಾಗಿ ಸರ್ವತ್ರ ಅಲಿಪ್ತ ಮತ್ತು ಉದಾಸವಾಗಿರುವುದು ॥೨೮೧॥ ಯಾರು ವೈಕುಂಠಕ್ಕೆ ಹೋಗಿ ಕುಳಿತಿರುವರೋ, ಅವರೂ ಕೂಡ ಮುಕ್ತ ಪುರುಷನ ಭೇಟಿಗಾಗಿ ನಿತ್ಯವೂ ಇಚ್ಛಿಸುತ್ತಿರುವರು. ಈತನ ಮಾತು ಕೇಳುವುದಕ್ಕಾಗಿ ವೇದವೂ ಕೂಡ ಧಾವಿಸಿ ಬರುತ್ತಿರುವುದು. ಈತನನ್ನು ಕಣ್ತುಂಬ ನೋಡುವುದಕ್ಕಾಗಿ ದೇವತೆಗಳೂ ಸಹ ಬರುತ್ತಿರುವರು ॥೨೮೨॥

ಏವಂ ಚಿತ್ಸ್ವರೂಪೀ ಕರೂನಿ ಸ್ನಾನ । ಜಾಹಲಾ ಸರ್ವವಂದ್ಯ ಅತಿಪಾವನ । ಹೇ ಮುಕ್ತಾಚೇ ಸ್ನಾನಲಕ್ಷಣ । ಆತಾ "ನಿರೀಕ್ಷಣ" ತೇ ಐಕ ॥೭೮೩॥ ಅವಘೇ ಚರಾಚರ ದೇಖತಾ । ತೋ ದೇಖೋನೀಚಿ ನ ದೇಖತಾ । ದೃಷ್ಟೀಸಿ ದೃಶ್ಯಾಸೀ ಅಲಿಪ್ತತಾ । ದೃಶ್ಯ ದೇಖತಾ ಹರಿ ದಿಸೇ ॥೭೮೪॥ ದೃಶ್ಯೇ ದುಮದುಮಿತದಿಸೇ ಸೃಷ್ಟೀ । ಪರೀ ದೃಶ್ಯ ನ ಪಡೇ ತ್ಯಾಚೇ ದೃಷ್ಟೀ । ಹೋತಾಂಹೀ ದೃಶ್ಯೇಸೀ ಭೇಟೀ । ಪಡೇ ಮಿಠೀ ಅದೃಶ್ಯೀ ॥೭೮೫॥ ದೃಷ್ಟಿ ಪ್ರಕಾಶೇ ದೇಖಣೇಪಣೀ । ತೇ ದೇಖಣೇ ದೇಖೇ ದೃಶ್ಯಸ್ಥಾನೀ । ಜೇವೀ ಡೋಳ್ಯಾ ಡೋಳಾ ದರ್ಪಣೀ । ನಿಜ ದರ್ಶನಿ ದೇಖತು ॥೭೮೬॥ ಡೋಳೇನಿ ದರ್ಪಣು ಪ್ರಕಾಶೇ । ತ್ಯಾಮಾಜೀ ಡೋಳೇನಿ ಡೋಳಾ ದಿಸೇ । ಮುಕ್ತಾಚೇ ದೇಖಣೇ ತೈಸೇ । ಆಪಣಯಾ ಐಸೇಜಗ ದೇಖೇ ॥೭೮೭॥ ದೃಶ್ಯ - ದೃಷ್ಟಾ - ದರ್ಶನೀ । ತ್ರಿಪುಟೀ ಗೇಲೀ ಹಾರಪೋನೀ । ದೇಖಣೇ ದೇಖೇ ದೇಖಣೇನೀ । ದೇಖಣಾ ಹೋಉನೀ ಸರ್ವಾಂಗೇ ॥೭೮೮॥ ಹೋತಾ ನಾನಾ ಪದಾರ್ಥೇಸಿ ಭೇಟೀ । ತೇ ದೇಖಣೇಪಣಾ ದೃಶ್ಯ ಲೋಟೀ । ದೃಶ್ಯಾತೀತ ನಿಜದೃಷ್ಟೀ । ಸುಖೇ ಸೃಷ್ಟೀ ದೇಖತು ॥೭೮೯॥ ಮುಕ್ತಾಚೀ ಹೇ ದೇಖತೀ ಸ್ಥಿತೀ । ದೇಖಣೇಪಣೇ ಯಥಾನಿಗುತೀ । ಉದ್ಧವಾ ಯೇ ದೃಷ್ಟೀಚೀ ಜ್ಯಾಸೀ ಪ್ರಾಪ್ತೀ । ತೋಚಿ ತ್ರಿಜಗತೀ ಪಾವನ ॥೭೯೦॥ ಯಾ ದೃಷ್ಟೀ ಜೇ ನಿತ್ಯ ವರ್ತತ । ತೇ ಜಾಣ ಪಾ ಪರಮ ಮುಕ್ತ । ಯಾ ದೃಷ್ಟೀ ಜೇ ಮಜ ಪಾಹತ । ಪರಮ ಭಾಗವತ ಪ್ರಿಯ ಮಾಝೇ ॥೭೯೧॥ ಪರಾದಿವಾಚಾ ಮಾಜೀ ವಚನ । ಉಪಜೇ ತೇಥ ಯಾಚೇ "ಶ್ರವಣ" । ಶ್ರೋತಾ ವಕ್ತಾ ಕಥಾ ಕಥನ । ಅವಘೇ ಆಪಣ ಹೋಊನಿ ಐಕೇ ॥೭೯೨॥ ಶಬ್ದ ಜಾತೇಸೀ ಕಾನ । ಅಖಂಡ ಜಡಲೇ ಸಾವಧಾನ । ಶ್ರವಣಾಮಾಜೀ ಹಾರಪೇ ಗಗನ । ಪರಮ ಸಮಾಧಾನ ಶ್ರವಣಾಚೇ ॥೭೯೩॥ ಐಕತಾ ಲೌಕಿಕ ಶಬ್ದ । ಕಾ ನಾರಾಯಣ - ಉಪನಿಷದ । ಪರಿಸತಾ ನಾಮ ಹರಿ-ಗೋವಿಂದ । ಅರ್ಥಾವ ಬೋಧ ಸಮತ್ವೇ ॥೭೯೪॥ ಬೋಲಾತೇ ಜೋ ಬೋಲವಿತಾ । ತೋಚಿ ಶ್ರಾವಣಾಮಾಜೀ ಶ್ರೋತಾ । ಯೇಣೇ ಅನ್ವಯೇ ಶ್ರವಣ ಕರಿತಾ । ಶಬ್ದೀ ನಿಃಶಬ್ದತಾ ಅತಿಗೋಡ ॥೭೯೫॥ ಜೋ ಜೋ ಶ್ರವಣೀ ಪಡೇ ಶಬ್ದು । ತೋ ತೋ ಹೋತ ಜಾಯ ನಿಃಶಬ್ದು । ಯಾಪರೀ ಶ್ರವಣೀ ಪರಮಾನಂದು । ಸ್ವಾನಂದಬೋಧು ಮುಕ್ತಾಚಾ ॥೭೯೬॥

ಈ ಪ್ರಕಾರವಾಗಿ ಈ ಮುಕ್ತನು ಆತ್ಮಸ್ವರೂಪದಲ್ಲಿ ಸ್ನಾನವನ್ನು ಮಾಡಿ ಅತ್ಯಂತ ಪಾವನನಾಗಿರುವನು. ಈತನು ಸರ್ವ ಜಗತ್ತಿಗೆ ವಂದ್ಯನಾಗಿರುವನು. ಇದು ಮುಕ್ತನ ಸ್ನಾನದ ಲಕ್ಷಣವಾಗಿರುವುದು. ಈಗ ಆತನ ನಿರೀಕ್ಷಣೆಯು ಹೇಗೆ ಇರುವುದೆಂಬುದನ್ನು ಕೇಳು ॥೭೮೩॥ ಈ ಯಾವ ಸರ್ವ ಚರಾಚರ ವಿಶ್ವವನ್ನು ಕಂಡು ಆತನು ಅದನ್ನು ಕಾಣಲಾರದಂತೆ ಇರುವನು. ಆತನ ದೃಷ್ಟಿಗೆ ದೃಶ್ಯವು ಬೇರೆಯಾಗಿ ತೋರುವುದಿಲ್ಲ. ಆತನು ದೃಶ್ಯವನ್ನು ಕಂಡಾಕ್ಷಣವೇ ಅಲ್ಲಿ ಹರಿಯು ತೋರುವನು ॥೭೮೪॥ ಸಂಪೂರ್ಣ ಸೃಷ್ಟಿಯು ದೃಶ್ಯ ಪದಾರ್ಥಗಳಿಂದ ದುಮದುಮಿತವಾಗಿ ತುಂಬಿಕೊಂಡಿರುವುದು. ಆದರೆ ಆತನ ದೃಷ್ಟಿಗೆ ದೃಶ್ಯವು ಕಾಣುವುದಿಲ್ಲ. ದೃಶ್ಯ ಪದಾರ್ಥಗಳ ಭೇಟಿಯಾದರೂ ಅಲ್ಲಿ ಆತನಿಗೆ ಅದೃಶ್ಯವೇ ಅಪ್ಪಿಕೊಳ್ಳುವುದು ॥೭೮೫॥ ಯಾವ ಪ್ರಕಾರವಾಗಿ ನಾವು ಕನ್ನಡಿಯಲ್ಲಿ ನಮ್ಮ ಕಣ್ಣುಗಳಿಂದಲೇ ನಮ್ಮ ಕಣ್ಣುಗಳನ್ನು ನೋಡುತ್ತೇವೆಯೋ, ಅದರಂತೆಯೇ ದೃಷ್ಟಿಯು ಚೈತನ್ಯದ ಪ್ರಕಾಶವನ್ನು ಪಡೆಯುವದು ಮತ್ತು ದೃಶ್ಯಸ್ಥಾನದಲ್ಲಿ ಚೈತನ್ಯವನ್ನೇ ಕಾಣುವುದು ॥೭೮೬॥ ಕಣ್ಣುಗಳಿಂದಲೇ ಕನ್ನಡಿಯು ಕಾಣುವುದು. ಅದರಲ್ಲಿ ಕಣ್ಣಿನಿಂದಲೇ ಕಣ್ಣನ್ನು ಕಾಣಲು ದೊರೆಯುವುದು. ಮುಕ್ತನ ನೋಡುವಿಕೆಯು ಹೀಗೆಯೇ ಇರುವುದು. ಆತನು ಎಲ್ಲ ಜಗತ್ತನ್ನು ತನ್ನಂತೆಯೇ ಕಾಣುವನು ॥೭೮೭॥ ದೃಶ್ಯ, ದೃಷ್ಟಾ ಮತ್ತು ದರ್ಶನ ಈ ತ್ರಿಪುಟಿಯು ಇಲ್ಲದಾಗಿರುವುದು. ಆದ್ದರಿಂದ ಸರ್ವಾಂಗದಿಂದ ಚೈತನ್ಯನಾಗಿ ಆ ಚೈತನ್ಯದಿಂದಲೇ ಚೈತನ್ಯವನ್ನು ಕಾಣುವನು ॥೭೮೮॥ ನಾನಾವಿಧ ಪದಾರ್ಥಗಳ ಭೇಟಿಯಾದರೂ ನೋಡುವ ಆ ದೃಶ್ಯಕ್ಕೆ ದೂರ ಮಾಡಿ ದೃಶ್ಯದಲ್ಲಿನ ಆತ್ಮತತ್ತ್ವವು ಸರ್ವತ್ರ ಸೃಷ್ಟಿಯಲ್ಲಿ ತುಂಬಿಕೊಂಡಿದ್ದು ಆತನಿಗೆ ತೋರುವುದು ॥೭೮೯॥ ಇದು ಮುಕ್ತನ ನೋಡುವಿಕೆಯ ರೀತಿಯಾಗಿರುವುದು. ಹೇ ಉದ್ಧವನೇ, ಚೈತನ್ಯ ರೂಪದಿಂದ ಈ ದೃಷ್ಟಿಯು ಯಾರಿಗೆ ಪ್ರಾಪ್ತವಾಗುವುದೋ, ಅವನು ತ್ರಿಭುವನದಲ್ಲಿ ಪಾವನನಾಗುವನು ॥೭೯೦॥ ಈ ಯಾವ ಪರಮ ಪವಿತ್ರ ದೃಷ್ಟಿಯಿಂದ ಯಾವಾಗಲೂ ನೋಡುವವರು, ಅವರೇ ಮುಕ್ತರೆಂದು ನೀನು ಹೀಗೆ ತಿಳಿ. ಯಾರು ಈ ದೃಷ್ಟಿಯಿಂದ ನನ್ನನ್ನು ನೋಡುವರೋ, ಅವರು ಶ್ರೇಷ್ಠ ಭಗವತ್‌ಭಕ್ತರಾಗಿ ಅವರು ನನಗೆ ಅತ್ಯಂತ ಪ್ರಿಯರಾಗಿರುವರು ॥೭೯೧॥ ಪರಾದಿ ವಾಣಿಯಲ್ಲಿ ಉತ್ಪನ್ನವಾಗುವ ಸ್ಥಾನದಲ್ಲಿ ಆತನ ಶ್ರವಣವಿರುವುದು. ಶ್ರೋತಾ, ವಕ್ತಾ, ಕಥಾ ಮತ್ತು ನಿರೂಪಣೆ ಈ ಎಲ್ಲವೂ ತಾನೇ ಆಗಿ ಆತನು ಕೇಳುತ್ತಿರುವನು ॥೭೯೨॥ ಸರ್ವ ಶಬ್ದಗಳನ್ನು ಕೇಳಲು ಆತನ ಕಿವಿಗಳು ಅಖಂಡವಾಗಿ ಜಾಗೃತವಾಗಿರುವುವು. ಆತನ ಕಿವಿಗಳಲ್ಲಿ ಆಕಾಶವು ಕಳೆದುಹೋಗಿರುವುದು. ಹೀಗೆ ಆತನ ಶ್ರವಣದ ಅತ್ಯಂತ ಸಮಾಧಾನವಿರುವುದು ॥೭೯೩॥ ಕೆಲವು ಲೌಕಿಕ ಶಬ್ದಗಳು ಕಿವಿಗೆ ಬೀಳಲು ಅಥವಾ ನಾರಾಯಣನ ನಾಮವನ್ನು ಕೇಳಲು, ಉಪನಿಷತ್‌ಗಳಲ್ಲಿನ ಜ್ಞಾನ ಕೇಳಲು, ಹರಿಗೋವಿಂದ ಎಂಬ ನಾಮ ಕೇಳಲು, ಇವುಗಳೆಲ್ಲವೂ ಆತನಿಗೆ ಸಮಾನವಾಗಿರುವುವು ॥೭೯೪॥ ಯಾರು ಶಬ್ದಗಳನ್ನು ನುಡಿಸುವನೋ, ಆತನೇ ಕಿವಿಗಳಿಂದ ಕೇಳುವವನಾಗಿರುವನು. ಈ ಪ್ರಕಾರವಾಗಿ ಶ್ರವಣವನ್ನು ಮಾಡುತ್ತಿರಲು ಶಬ್ದಗಳಲ್ಲಿ ಅತಿ ಮಧುರ ನಿಃಶಬ್ದತೆಯು ಬರುವುದು ॥೭೯೫॥ ಕಿವಿಗಳಿಗೆ ಬೀಳುವ ಪ್ರತಿಯೊಂದು ಶಬ್ದಗಳು ಅವುಗಳೆಲ್ಲವೂ ನಿಃಶಬ್ದವೇ ಆಗುವುವು. ಈ ಪ್ರಕಾರವಾಗಿ ಮುಕ್ತನ ಶ್ರವಣದಲ್ಲಿಯೂ ಪರಮಾನಂದವು ಮತ್ತು ಆತ್ಮಬೋಧವು ತುಂಬಿರುವುದು ॥೭೯೬॥

ಅಕಾರಾದಿ ವರ್ಣತ್ರಿಪುಟೀ । ಪ್ರಣವು ಮೂಳಶಬ್ದ ಸೃಷ್ಟೀ । ತೋ ಓಂಕಾರ ಬ್ರಹ್ಮರೂಪೇ ಉರೀ । ಹೇ ಶ್ರವಣಸಂತುಷ್ಟೀಮುಕ್ತಾಚೀ ॥೯೭॥ ಶ್ರವಣೀ ಪಡತಾ ಶಬ್ದಜ್ಞಾನ । ಸಹಜೇ ಶಾಬ್ದಿಕ ಜಾಯ ಉಡೋನ । ಶ್ರವಣೀ ಠಸಾವೇ ಬ್ರಹ್ಮ ಪೂರ್ಣ । ಸ್ವಾನಂದ ಶ್ರವಣ ಮುಕ್ತಾಚೇ ॥೯೮॥ ಪರಿಸತಾ ಉಪನಿಷದ । ಕಾ ಲೌಕಿಕಾದಿ ನಾನಾ ಶಬ್ದ । ಮುಕ್ತಾಚಾ ಪಾಲಟೇನಾ ಬೋಧ । ಶ್ರವಣೀ ಸ್ವಾನಂದ ಕೋಂದಲಾ ॥೯೯॥ ಏಕ ಅದ್ವಿತೀಯ ಬ್ರಹ್ಮ । ಹೇ ವೇದಶಾಸ್ತ್ರಾಂಚೇ ಗುಹ್ಯವರ್ಮ । ತೇ ಮುಕ್ತಾಂಸೀ ಜಾಹಲೇ ಸುಗಮ । ಶಬ್ದೀ ಪರಬ್ರಹ್ಮ ಕೋಂದಲೇ ॥೧೦೦॥ ಲೌಕಿಕ ವೈದಿಕ ಶಬ್ದ ಜಾಣ । ಶಬ್ದಮಾತ್ರೀ ಬ್ರಹ್ಮ ಪೂರ್ಣ । ಐಸೇ ಮುಕ್ತಾಚೇ ಹೇ ಶ್ರವಣ । "ಘ್ರಾಣಲಕ್ಷಣ" ಪರಿಯೇಸೀ ॥೧೦೧॥ ಘ್ರಾಣಾಸೀ ಯೇತಾ ಸುಗಂಧು । ಮುಕ್ತಾಸೀ ನೋಹೇ ವಿಷಯಬೋಧು । ಗಂಧಮಿಸೇ ಸ್ವಾನಂದಕಂದು । ಪರಮಾನಂದು ಉಲ್ಲಾಸೇ ॥೧೦೨॥ ಘ್ರಾಣ - ಸುಮನ-ಚಂದನ । ಅವಘೇ ತೋ ಹೋಯ ಆಪಣ । ಯಾಪರೀ ಗಂಧ ಭೋಗೀ ಜಾಣ । ಭೋಕ್ತೇಪಣ ಸಾಂಡೋನಿ ॥೧೦೩॥ ಘ್ರಾಣಾ ಯೇತಾಂಚಿ ಸುವಾಸು । ಸುವಾಸೀ ಪ್ರಕಟೇ ಪರೇಶು । ತೇಂವ್ಹಾ ಸುವಾಸು ಆಣಿ ದುರ್ವಾಸು । ಹಾ ವಿಷಯವಿಲಾಸು ಸ್ಫುರೇನಾ ॥೧೦೪॥ ಮಲಯಾನಿಲಾಸಂಗೇ ಜಾಣ । ಜೇಥ ಜೇಥ ಗಂಧಾಚೇ ಗಮನ । ತೇಥ ತೇಥ ಮುಕ್ತಾಚೇ ಘ್ರಾಣ । ಅಗಮ್ಯಪಣ ಯಾ ಭೋಗಾ ॥೧೦೫॥ ಜಿತುಕಾ ಚಳತಾ ವಾಯು ಜಾಣ। ತಿತುಕೇ ಮುಕ್ತಾಚೇ ಘ್ರಾಣ । ಯಾಪರೀ ಗಂಧಗ್ರಹಣ । ಸ್ವಭಾವೇ ಜಾಣ ಹೋತಸೇ ॥೧೦೬॥ ಯಾಪರೀ ಜಾಣ ತತ್ತ್ವತಾ । ಹೋಯ ತೋ ಗಂಧಾಚಾ ಭೋಕ್ತಾ । ಹೇ ಘ್ರಾಣಕ್ರಿಯಾ ಜಾಣ ಮುಕ್ತಾ । "ರಸಭೋಗ್ಯತಾ" ಅವಧಾರೀ ॥೧೦೭॥ ರಸ - ರಸನಾ - ಭೋಜನ । ತೋ ಸ್ವಯೇಚಿ ಆಹೇ ಆಪಣ । ಹಾತು ನ ಮಾಖಿತಾ ಸರ್ವಾಪೋಶನ । ರಸನೇವಿಣ ಸೇವಿತು ॥೧೦೮॥ ಷಡ್‌ರಸಾಂಚಾ ಸ್ವಾದು ಜಾಣೇ । ಪರೀ ಏಕೀಚಿ ಚವೀ ಅವಘೇ ಖಾಣೇ । ಭೋಕ್ತೇಪಣಾ ಆತಳೋ ನೇಣೇ । ಐಸೇನಿ ಭೋಜನೇ ನಿತ್ಯತೃಪ್ತ ॥೧೦೯॥ ಭೂಕ ಉಪಜೇಚಿ ನೇಣೇ । ಜೇವೂ ಬೈಸಲ್ಯಾ ಪುರೇ ನ ಮ್ಹಣೇ । ಸರ್ವಭಕ್ಷೀ ನಖಾತೇಪಣೇ । ಉಚ್ಛಿಷ್ಟ ಹೋಣೇ ತ್ಯಾ ನಾಹೀ ॥೧೧೦॥

ಅಕಾರ, ಉಕಾರ, ಮಕಾರ ಈ ಮೂರು ವರ್ಣಗಳ ತ್ರಿಪುಟಿಯಿಂದ ಶಬ್ದಸೃಷ್ಟಿಯಲ್ಲಿನ ಮೂಲ ಶಬ್ದವಾದ ಯಾವ ಓಂಕಾರ ಅಂದರೆ ಪ್ರಣವವು ಮುಕ್ತನಿಗೆ ಬ್ರಹ್ಮ ರೂಪದಿಂದ ತೋರುವುದು. ಇದುವೇ ಮುಕ್ತನ ಶ್ರವಣಸಮಾಧಾನವಾಗಿರುವುದು ॥೯೭॥ ಶಬ್ದಜ್ಞಾನವು ಕಿವಿಗೆ ಬೀಳುತ್ತಲೇ ಶಾಬ್ದಿಕ ಸೃಷ್ಟಿಯು ಕರಗಿ ಹೋಗುವುದು. ಮತ್ತು ಕಿವಿಗಳಲ್ಲಿ ಪೂರ್ಣ ಬ್ರಹ್ಮವು ತುಂಬಿರುವುದು. ಇದೇ ಮುಕ್ತನ ಸ್ವಾನಂದ ಶ್ರವಣವಾಗಿರುವುದು ॥೯೮॥ ಉಪನಿಷದವನ್ನು ಕೇಳಿದರೇನು ಅಥವಾ ಲೌಕಿಕದಲ್ಲಿನ ಭಿನ್ನ ಭಿನ್ನ ಶಬ್ದಗಳನ್ನು ಕೇಳಿದರೇನು, ಮುಕ್ತನ ಯಾವ ಜ್ಞಾನವು ಬದಲಾಗುವುದಿಲ್ಲ. ಆತನ ಶ್ರವಣದಲ್ಲಿ ಸ್ವಾನಂದವು ತುಂಬಿಕೊಂಡಿರುವುದು ॥೯೯॥ ಒಂದೇ ಒಂದು ಅದ್ವಿತೀಯ ಬ್ರಹ್ಮವೇ ಸರ್ವತ್ರವೂ ತುಂಬಿಕೊಂಡಿರುವುದು, ಇದು ವೇದಶಾಸ್ತ್ರಗಳಲ್ಲಿನ ಗುಪ್ತ ಮರ್ಮವಾಗಿರುವುದು. ಇದು ಮುಕ್ತನಿಗೆ ಸುಗಮವಾಗಿರುವುದು. ಶಬ್ದಗಳಲ್ಲಿ ಪರಬ್ರಹ್ಮವು ತುಂಬಿಕೊಂಡಿರುವುದು ಇವರಿಗೆ ತೋರುತ್ತಿರುವುದು ॥೧೦೦॥ ಪ್ರಾಪಂಚಿಕ ಶಬ್ದಗಳಾಗಿರಲಿ, ಅಥವಾ ವೈದಿಕ ಶಬ್ದಗಳಾಗಿರಲಿ, ಅವುಗಳಲ್ಲಿ ಪೂರ್ಣಬ್ರಹ್ಮವು ತುಂಬಿರುವುದು ತೋರುತ್ತಿರುವುದು. ಈ ಪ್ರಕಾರ ಮುಕ್ತನ ಶ್ರವಣವಾಗಿರುವುದು. ಈಗ ಆತನ ಮೂಸಿನೋಡುವಿಕೆಯ ಲಕ್ಷಣಗಳನ್ನು ಕೇಳು ॥೧೦೧॥ ಮೂಗಿಗೆ ಸುಗಂಧ ವಾಸನೆಯು ಬರಲು ಮುಕ್ತನಿಗೆ ಗಂಧವಿಷಯದ ಭಾವನೆಯು ಉತ್ಪನ್ನವಾಗುವುದಿಲ್ಲ. ಆ ಸುಗಂಧದ ರೂಪದಿಂದ ಸ್ವಾನಂದಕಂದ ಪರಬ್ರಹ್ಮವೇ ಅವರ ಅನುಭವಕ್ಕೆ ಬರುತ್ತಿರುವುದು ॥೧೦೨॥ ಮೂಗು, ಪುಷ್ಪ, ಚಂದನ ಇತ್ಯಾದಿ ಎಲ್ಲವನ್ನೂ ಆತನು ಸ್ವತಃ ತಾನೇ ಆಗುವನು. ಈ ಪ್ರಕಾರವಾಗಿ ಭೋಕ್ತೃತ್ವವನ್ನು ಬಿಟ್ಟು ಆತನು ಸುಗಂಧ ಭೋಗವನ್ನು ಸ್ವೀಕರಿಸುವನು ॥೧೦೩॥ ಹೀಗೆ ಮೂಗಿಗೆ ಸುಗಂಧವು ಬರುತ್ತಲೇ ಆ ಸುವಾಸನೆಯಲ್ಲಿ ಪರಮೇಶ್ವರನು ಪ್ರಕಟನಾಗುವನು. ಆದ್ದರಿಂದ ಇದು ಸುಗಂಧವೋ ಅಥವಾ ದುರ್ಗಂಧವೋ, ಎಂಬ ವಿಷಯ ಜ್ಞಾನವು ಈತನಿಗೆ ಆಗಲು ಶಕ್ಯವೇ ಇಲ್ಲ ॥೧೦೪॥ ಮಲಯಾಪರ್ವತದಿಂದ ವಾಯುದೊಂದಿಗೆ ಸುಗಂಧವು ಎಲ್ಲೆಲ್ಲಿ ಹೋಗುತ್ತಿರುವುದೋ, ಅಲ್ಲಲ್ಲಿ ಮುಕ್ತನ ಘ್ರಾಣವಿರುವುದು. ಆತನ ಮುಸುನೋಡುವಿಕೆಯು ಬಹು ದೊಡ್ಡ ಅತರ್ಕ್ಯವಾಗಿರುವುದು ॥೧೦೫॥ ಗಾಳಿಯು ಎಷ್ಟು ಬೀಸುತ್ತಿರುವುದೋ ಅಷ್ಟೊಂದು ಮುಕ್ತನ ಮೂಸಿನೋಡುವಿಕೆಯು ಸಹಜವಾಗಿರುವುದು ॥೧೦೬॥ ಈ ಪ್ರಕಾರವಾಗಿ ಮುಕ್ತನು ಗಂಧ ವಿಷಯದ ಭೋಕ್ತಾನಾಗಿರುವನು. ಇದು ಮುಕ್ತನ ಮೂಸಿನೋಡುವಿಕೆಯಾಗಿರುವುದು. ಈಗ ಮುಕ್ತನು ರಸವನ್ನು ಹೇಗೆ ಸೇವನೆ ಮಾಡುವನೆಂಬುವ ಪ್ರಕಾರವನ್ನು ಕೇಳು ॥೧೦೭॥ ರಸ, ರಸನೆ ಮತ್ತು ಭೋಜನ ಈ ಮೂರನ್ನೂ ಈತನು ಸ್ವತಃ ತಾನೇ ಆಗುವನು. ಈತನು ನಾಲಿಗೆ ಇಲ್ಲದೇ ಕೈಗೆ ಲೇಪಿಸಿಕೊಳ್ಳದೇ ಭೋಜನವನ್ನು ಮಾಡುತ್ತಿರುವನು ॥೧೦೮॥ ಈತನು ಆರೂ ರಸಗಳ ಆಸ್ವಾದವನ್ನು ಸ್ವೀಕರಿಸುವನು. ಆದರೆ ಅವುಗಳೆಲ್ಲವನ್ನೂ ಒಂದೇ ರುಚಿಯಲ್ಲಿ ಭುಂಜಿಸುವನು. ಭೋಕ್ತೃತ್ವಕ್ಕೆ ಸ್ಪರ್ಶ ಮಾಡುವುದು ಈತನು ಅರಿಯಲಾರನು. ಈ ಪ್ರಕಾರದ ಭೋಜನದಿಂದ ಈತನು ನಿತ್ಯ ತೃಪ್ತನಾಗಿರುವನು ॥೧೦೯॥ ಈತನಿಗೆ ಹಸಿವೆಯ ಅರಿವು ಇರುವುದಿಲ್ಲ. ಆದರೆ ಭೋಜನ ಮಾಡಲು ಕುಳಿತುಕೊಂಡರೆ, ಸಾಕು ಎನ್ನುವುದಿಲ್ಲ. ಈತನು ಏನನ್ನೂ ತಿನ್ನದೇ ಎಲ್ಲವನ್ನೂ ತಿಂದುಬಿಡುವನು. ಆದರೂ ಈತನಿಗೆ ಎಂಜಲು ಇರುವುದಿಲ್ಲ ॥೧೧೦॥

ತಾಟ ಅನ್ನ ಆಣಿ ಆಪಣ । ತೋ ನ ದೇಖೇ ಭಿನ್ನಪಣ । ರಸಮಿಸೇ ಸ್ವಾನಂದಪೂರ್ಣ । ಸರ್ವಾಂಗ ಜಾಣ ಸೇವಿತ ।೩೧೧॥ ಜಂವ ರಸನಾ ಘೇವೋ ಜಾಯ ರಸಸ್ವಾದು । ತಂವ ತೇಥೇ ಪ್ರಕಟೇ ಪರಮಾನಂದು । ಕರೂನಿ ರಸರಸನೇಃ ಉಚ್ಛೇದು । ನಿಜಾನಂದು ಸೇವಿತು ।೩೧೨॥ ಸಕಳ ಗೋಡಿಯಾಂಚೀ ಮೂಳ ಗೋಡೀ। ತೇಥ ಬೈಸಲೀ ನಿಜ ಆವಡೀ । ಸೇವಿತಾ ನಾನಾ ಪರವಡೀ । ತೇಚಿ ಗೋಡಿ ಗೋಡಪಣೇ ।೩೧೩॥ ಸಕಳ ಗೋಡಿಯಾ ಜೇ ಗೋಡ ಆಹೇ । ತೇ ಗೋಡೀಚ ತೋ ಝಾಲಾ ಸ್ವಯೇ । ಆತಾ ಜೋ ಜೋ ರಸವಿಷಯೋ ಖಾಯೇ । ತೇಥ ತೇಥ ಆಹೇ ತೇ ಗೋಡೀ ।೩೧೪॥ ಕೈಸಾ ಮುಕ್ತಾಚಾ ನಿಜಬೋಧು । ಘೇವೋ ಜಾತಾ ರಸಸ್ವಾದು । ರಸತ್ವ ಲೋಪೂನಿ ಸ್ವಾನಂದಕಂದು । ಪರಮಾನಂದು ವೋಸಂಡೇ ।೩೧೫॥ ಯಾಲಾಗೀ ಜೋಜೋ ರಸ ಸೇವೂ ಜಾಯೇ । ತೋ ತೋ ಬ್ರಹ್ಮರಸುಚ ಹೋಯೇ । ಮುಕ್ತಾಚೀ ರಸನಾ ಯಾಪರೀ ಪಾಹೇ। ಘೇತ ಆಹೇ ರಸಾತೇ ।೩೧೬॥ ಏವಂ ಮುಕ್ತಾಚೇ ಜೇ ಭೋಜನ । ತೇ ಕರಿತೀ ಕ್ರಿಯಾ ಐಶೀ ಜಾಣ । ಆತಾ ತಯಾಚೇ ಜೇ "ಸ್ಪರ್ಶನ" । ತೇಹೀ ಲಕ್ಷಣ ಪರಿಯೇಸೀ ।೩೧೭॥ ಮುಕ್ತಾ ಶೀತ ಲಾಗತಾಂಚಿ ಜಾಣ । ಶೀತ ಸಾಂಡೀ ಶೀತಳಪಣ । ಸ್ಪರ್ಶೇ ಉಷ್ಣತ್ವಾ ಮುಕಲೇ ಉಷ್ಣ । ಸ್ಪರ್ಶಲಕ್ಷಣ ಹೇ ತ್ಯಾಚೇ ।೩೧೮॥ ಜೇವೀ ಕಾ ಟೇಕಿತಾ ಅಗ್ನೀಶೀ । ಧುರೇ ಆಣೀ ಚಂದನಾಶೀ । ಜಾಳೂನಿ ತ್ಯಾಂಚ್ಯಾ ವಿಕಾರಾಶೀ । ಆಪಣಾಐಶೀ ಕರೀ ವನ್ಹೀ ।೩೧೯॥ ತೇವೀ ಮುಕ್ತಾಸೀ ದ್ವಂದ್ವೇ ಆದಳತಾ । ದ್ವಂದ್ವಾಚೀ ಬುಡಾಲೀ ದ್ವಂದ್ವತಾ । ತೋ ಸರ್ವೀ ಸರ್ವಪಣೇ ಅಸತಾ । ಸಹಜೇ ದ್ವಂದ್ವತಾ ನಿಮಾಲೀ ।೩೨೦॥ ತೇಥ ಕೈಚೇ ಮೃದು ಕೈಚೇ ಕಠಿಣ । ಕೈಚೇ ಶೀತ ಕೈಚೇ ಉಷ್ಣ । ಸರ್ವೀ ಸರ್ವಾತ್ಮಾ ತೋ ಜಾಣ । ದ್ವಂದ್ವಾಚೇ ಭಾನ ಸ್ಪರ್ಶೇನಾ ।೩೨೧॥ ಆಗೀಸೀ ಪೋಳೀನಾ ಉನ್ಹಾಳಾ । ಹೀವ ಪೀಡೀನಾ ಹಿಮಾಚಳಾ । ತೈಶೀ ದ್ವಂದ್ವಾಚೀ ಹೇ ಮಾಳಾ। ಮುಕ್ತಾಚೇ ಗಳಾ ಪಡೇನಾ ।೩೨೨॥ ಸುವರ್ಣಾಚೇ ಅಲಂಕಾರ ಭಲೇ । ಸುವರ್ಣಪೇಟಿಮಾಜೀ ಝಾಂಕಿಲೇ। ಝಾಂಕಿಲೇ ಮ್ಹಣತಾ ಉಘಡೇ ಠೇಲೇ । ತೇವೀ ದ್ವಂದ್ವೇ ಸಕಳ ಪರಬ್ರಹ್ಮ ।೩೨೩॥ ಅಂಗೀ ಜೇ ಜೇ ಆದಳೇ। ತೇ ಅಂಗಚಿ ಹೋಯ ತತ್ಕಾಳೇ । ಕಾಂಹೀ ನುರೇ ತ್ಯಾವೇಗಳೇ । ದ್ವಂದ್ವೇ ಸಕಳೇ ನಿಮಾಲೀ ।೩೨೪॥

ತಾಟು, ಅನ್ನ ಮತ್ತು ತಾನು ಇವುಗಳಲ್ಲಿ ಈತನಿಗೆ ಯಾವುದೂ ಭಿನ್ನವಾಗಿ ಕಾಣುವುದಿಲ್ಲ. ರಸ ವಿಷಯದ ನಿಮಿತ್ತದಿಂದ ಸರ್ವಾಂಗದಿಂದ ಈತನು ಪೂರ್ಣವಾಗಿ ಸ್ವಾನಂದದ ಉಪಭೋಗವನ್ನು ಪಡೆಯುತ್ತಿರುವನು ।೩೧೧॥ ನಾಲಿಗೆಯು ರಸದ ರುಚಿಯನ್ನು ನೆಕ್ಕುತ್ತಿರಲು ಅಲ್ಲಿ ಪರಮಾನಂದವು ಪ್ರಕಟವಾಗುವುದು. ಆದ್ದರಿಂದ ಈತನು ರಸ ಮತ್ತು ರಸನೆ ಈ ಎರಡನ್ನೂ ಬಿಟ್ಟುಕೊಟ್ಟು ನಿಜಾನಂದವನ್ನು ಸೇವಿಸುತ್ತಿರುವನು ।೩೧೨॥ ಸರ್ವ ರುಚಿಗಳಿಗೆ ಮಾಧುರ್ಯವನ್ನು ತಂದು ಕೊಡುವ ಮೂಲ ಮಾಧುರ್ಯವು ಅಲ್ಲಿಯೇ ಆತನ ಅಂತಃಕರಣದಲ್ಲಿಯೇ ನಿರ್ಮಾಣಗೊಂಡಿರುವುದು. ಆದ್ದರಿಂದ ಆತನು ಅನೇಕ ಪ್ರಕಾರದ ಪದಾರ್ಥಗಳನ್ನು ಭುಂಜಿಸಿದರೂ ಎಲ್ಲದರಲ್ಲಿಯೂ ಆತನಿಗೆ ಒಂದೇ ಮಾಧುರ್ಯವು ದೊರಕುವುದು ।೩೧೩॥ ಎಲ್ಲ ಮಾಧುರ್ಯಗಳ ಮಾಧುರ್ಯವು ತಾನು ಸ್ವತಃತಾನೇ ಆಗಿರುವನು. ಆದ್ದರಿಂದ ಆತನು ಯಾವ ಯಾವ ರಸದ ಪದಾರ್ಥಗಳನ್ನು ಭುಂಜಿಸುವನೋ, ಅವುಗಳೆಲ್ಲದರಲ್ಲಿಯೂ ಮುಕ್ತನಿಗೆ ಅದೇ ಮಾಧುರ್ಯವು ಅನುಭವಕ್ಕೆ ಬರುತ್ತಿರುವುದು ।೩೧೪॥ ಮುಕ್ತನ ಆತ್ಮಬೋಧವು ಹೇಗಿರುವುದು ನೋಡಿರಿ ! ಆತನು ರಸಸ್ವಾದವನ್ನು ಸೇವಿಸುತ್ತಿರಲು, ಅದರಲ್ಲಿಯ ರಸತ್ವವು ಲೋಪವಾಗಿ, ಅಲ್ಲಿ ಸ್ವಾನಂದಕಂದ ಪರಮಾನಂದವು ತುಂಬಿ ಹರಿಯುವುದು ।೩೧೫॥ ಆದಕಾರಣ ಆತನು ಯಾವ ಯಾವ ರಸಗಳ ಸೇವನೆಯನ್ನು ಮಾಡುತ್ತಿರುವನೋ, ಅದೆಲ್ಲವೂ ಬ್ರಹ್ಮರಸವೇ ಆಗುವುದು. ಈ ಪ್ರಕಾರವಾಗಿ ಮುಕ್ತನ ರಸನೆಯು ರಸದ ಗ್ರಹಣ ಮಾಡುತ್ತಿರುವುದು ।೩೧೬॥ ಮುಕ್ತನ ಭೋಜನ ಮಾಡುವ ಪದ್ಧತಿಯು ಹೀಗಿರುವುದು. ಇದನ್ನು ಲಕ್ಷ್ಯದಲ್ಲಿಡು. ಈಗ ಆತನ ಸ್ಪರ್ಶ ಗ್ರಹಣವು ಹೇಗಿರುವುದೆಂಬ ಅದರ ಲಕ್ಷಣಗಳನ್ನು ಏಕಾಗ್ರಚಿತ್ತದಿಂದ ಕೇಳು ॥೩೧೭॥ ಮುಕ್ತನಿಗೆ ಚಳಿಯು ಹತ್ತಲು ಅದರ ಚಳಿಯೇ ಇಲ್ಲದಾಗಿಬಿಡುವುದು. ಹಾಗೆಯೇ ಉಷ್ಣವು ಈತನಿಗೆ ಸ್ಪರ್ಶ ಮಾಡಲು ಉಷ್ಣದ ಉಷ್ಣತ್ವವು ಇಲ್ಲದಾಗಿಬಿಡುವುದು. ಇದು ಆತನ ಸ್ಪರ್ಶದ ಲಕ್ಷಣವಾಗಿದೆ ।೩೧೮॥ ಯಾವ ಪ್ರಕಾರವಾಗಿ ಸುಗಂಧಯುಕ್ತ ಚಂದನ ಮತ್ತು ದುರ್ಗಂಧಯುಕ್ತ ಕಾಷ್ಠಗಳಿಗೆ ಅಗ್ನಿಯ ಸಂಬಂಧ ಬರಲು ಅದು ಅವುಗಳಲ್ಲಿನ ಸುಗಂಧ ಮತ್ತು ದುರ್ಗಂಧಗಳನ್ನು ಸುಟ್ಟುಹಾಕಿ ಅವುಗಳಿಗೆ ತನ್ನಂತೆ ಮಾಡಿಕೊಳ್ಳುವುದು ।೩೧೯॥ ಅದರಂತೆಯೇ ಮುಕ್ತನಲ್ಲಿ ಸುಖದುಃಖ ದ್ವಂದ್ವಗಳು ಬರಲು ಅವುಗಳ ಗುಣಧರ್ಮಗಳನ್ನು ಇಲ್ಲದಂತೆ ಮಾಡಿ ಅವುಗಳಿಗೆ ಸಮತ್ವವನ್ನು ತಂದುಕೊಡುವನು. ಆತನು ಎಲ್ಲದರಲ್ಲಿಯೂ ಎಲ್ಲ ಪ್ರಕಾರಗಳಿಂದ ಇರುವುದರಿಂದ ಆತನ ದ್ವಂದ್ವತ್ವವು ಸಹಜವಾಗಿ ಇಲ್ಲದಾಗುವುದು ।೩೨೦॥ ಆಗ ಅಲ್ಲಿ ಮೃದು, ಕಠಿಣ ಎಂಬ ಭೇದವು ಉಳಿಯಲಾರದು. ಶೀತ, ಉಷ್ಣ ಭೇದವು ಉಳಿಯದಂತಾಗುವುದು. ಆತನು ಸರ್ವರ ಆತ್ಮನಾಗಿರುವುದರಿಂದ ಯಾವುದೇ ಪ್ರಕಾರದ ದ್ವಂದ್ವಗಳು ಆತನಿಗೆ ಭಾಸವಾಗುವುದಿಲ್ಲ ।೩೨೧॥ ಅಗ್ನಿಗೆ ಬೇಸಿಗೆಯು ಸುಡುವುದಿಲ್ಲ. ಹಿಮಾಲಯಕ್ಕೆ ಎಂದಿಗೂ ಶೀತವು ಬಾಧಿಸುವುದಿಲ್ಲ. ಅದರಂತೆ ದ್ವಂದ್ವದ ಮಾಲೆಯು ಮುಕ್ತನ ಕೊರಳಿಗೆ ಎಂದಿಗೂ ಬೀಳುವುದಿಲ್ಲ ।೩೨೨॥ ಬಂಗಾರದ ಮೋಹಕ ಅಲಂಕಾರಗಳನ್ನು ಬಂಗಾರದ ಪೆಟ್ಟಿಗೆಯಲ್ಲಿಡುವುದು ಅಥವಾ ಹೊರಗೆ ಇಡುವುದು ಎರಡೂ ಒಂದೇಯಾಗಿದೆ. ಅದರಂತೆ ಮುಕ್ತನಿಗೆ ಸರ್ವದ್ವಂದ್ವಗಳು ಪರಬ್ರಹ್ಮಸ್ವರೂಪವಾಗಿವೆ ।೩೨೩॥ ಯಾವ ಯಾವ ದ್ವಂದ್ವಗಳು ಮುಕ್ತನಲ್ಲಿ ಬರುವುವೋ ಅವೆಲ್ಲವೂ ಆತನಂತೆಯೇ ಆಗುವುವು. ಆತನಿಂದ ಭಿನ್ನವಾಗಿ ಬೇರೆಯಾವುದೂ ಉಳಿಯುವುದಿಲ್ಲ. ಎಲ್ಲ ಪ್ರಕಾರದ ದ್ವಂದ್ವಗಳು ಇಲ್ಲದಾಗುವುವು ।೩೨೪॥

ತ್ಯಾಸೀ ಹಾತೀ ಲೀಲಾಕಮಳ ಸಾಂಪಡೇ । ತಂವ ಕಮಳೀ ಕಮಳತ್ವಚಿ ಉಡೇ । ಕಮಳಜನ್ಮಾ ತೋಹೀ ಬುಡೇ । ಕರೀ ರೋಕಡೇ ನಿಜರೂಪ ॥೩೨೫॥ ಸ್ಪರ್ಶ-ಸ್ಪರ್ಶತೇ-ಸ್ಪರ್ಶಾವೇ । ಹೇಹೀ ತ್ರಿಪುಟೀ ನ ಸಂಭವೇ । ಕಿಂಬಹುನಾ ಆಪಣಚಿ ಆಘವೇ । ನಿಜಸ್ವಭಾವೇ ಹೋಊನಿ ಠೇಲಾ ॥೩೨೬॥ ತೋ ದೇವಪೂಜಾ ಹಾತೀ ಧರೀ । ತರೀ ಮೀಚಿ ತೇ ದೇವಪೂಜೇ ಭೀತರೀ । ಅಥವಾ ಖೇಳೋ ರಿಘಾಲ್ಯಾ ಪಾಥರೀ । ತ್ಯಾಹೀಮಾಝಾರೀ ಮೀ ತ್ಯಾಸೀ ॥೩೨೭॥ ಭಿಂತೀ ನಾನಾವರ್ಣ ಚಿತ್ರಾಕೃತೀ । ತೇಥೇ ಜೇ ಜೇ ಸ್ಪರ್ಶೇ ತೇ ತೇ ಭಿಂತೀ । ತೇವೀ ಮುಕ್ತಾಚೀ ಸ್ಪರ್ಶನಸ್ಥಿತೀ । ಪೂರ್ಣ ಅದ್ವೈತೀ ನಿಜಬೋಧು ॥೩೨೮॥ ಯಾಪರೀ ಗಾ ತತ್ತ್ವತಾ । ಸ್ಪರ್ಶಲಕ್ಷಣ ವರ್ತೇ ಮುಕ್ತಾ । ತ್ಯಾಚೇ "ಬೋಲಣೇ" ಜೇ ಸರ್ವಥಾ । ಐಕ ಆತಾ ಸಾಂಗೇನ ॥೩೨೯॥ ಸುರಸ ಕಥಾ ಸಾಂಗೇ ವಾಡೇಕೋಡೇ । ಅಥವಾ ಲೌಕಿಕ ಬೋಲಣೇ ಘಡೇ । ಪರೀ ತ್ಯಾಚೀ ಸಮಾಧಿಮುದ್ರಾ ನ ಖಂಡೇ । ಮೌನ ನ ಮೋಡೇ ಬೋಲತಾ ॥೩೩೦॥ ಬೋಲತಾಂಹೀ ನ ಮೋಡೇ ಮೌನ । ಹೇಚಿ ಅನುಭವಾಚೀ ಆಂತುಲೀ ಖೂಣ । ಶಬ್ದಾಮಾಜೀ ನಿಃಶಬ್ದ ಗುಣ । ಸಜ್ಞಾನ ಜಾಣ ಜಾಣತೀ ॥೩೩೧॥ ಸ್ತ್ರೀಪುರುಷೇ ಅಬೋಲಾ ಚಾಲತೀ । ತೋ ಅಬೋಲಾ ಕೀ ಅತಿಪ್ರೀತೀ । ತೇವೀ ಮುಕ್ತಾಚೀ ಬೋಲತೀ ಸ್ಥಿತಿ। ಶಬ್ದ ಶಬ್ದಾರ್ಥೀ ನಿಃಶಬ್ದ ॥೩೩೨॥ ಜಯಾಚೀ ಬೋಲತೀ ಅಕ್ಷರೇ । ಅಕ್ಷರರೂಪೇಂಚಿ ಸಾಚಾರೇ । ತ್ಯಾಚೀ ಐಕತಾ ಉತ್ತರೇ । ಚಮತ್ಕಾರೇ ಮನ ನಿವೇ ॥೩೩೩॥ ಮೀ ಏಕು ಚತುರ ಬೋಲಕಾ । ಹಾಹೀ ನಾಹೀ ಆವಾಂಕಾ । ಅಥವಾ ರಂಜವಾವೇ ಲೋಕಾ । ಹೇಹೀ ದೇಖಾ ಸ್ಮರೇನಾ ॥೩೩೪॥ ನಿಃಶಬ್ದೀ ಉಠತೀ ಶಬ್ದ । ಶಬ್ದಾಮಾಜೀ ತೇ ನಿಃಶಬ್ದ । ಯಾಪರೀ ಕರಿತಾಂಹೀ ಅನುವಾದ । ಬೋಲೋನಿ ಶುದ್ಧ ಅಬೋಲಣಾ ॥೩೩೫॥ ಜಳಾಮಾಜೀ ಉಪಜೇ ತರಂಗ । ಜಳ ತರಂಗಾಚೇ ನಿಜಾಂಗ। ತೇವೀ ನಿಃಶಬ್ದೀ ಶಬ್ದ ಸಾಂಗ । ಶಬ್ದಾಚೇ ಸರ್ವಾಂಗ ನಿಃಶಬ್ದ ॥೩೩೬॥ ವಾಚ್ಯ-ವಾಚಾ-ವಾಚಕತಾ ತ್ರಿಪುಟೀ । ಲೋಪೂನಿ ಸಾಂಗೇ ಗೋಡ ಗೋಠೀ । ಕರಿತಾ ಸ್ವೈರಾಟ ಚಾವಟೀ । ನ ಸುಟೇ ಮಿಠೀ ಮೌನಾಚೀ ॥೩೩೭॥ ಮ್ಯಾ ಸತ್ಯಚಿ ಬೋಲಾವೇ । ಹೇಹೀ ತ್ಯಾಸೀ ಜೀವೇ ನಾಠವೇ । ಮಿಥ್ಯಾ ಬೋಲೋ ಲೋಭಸ್ವಭಾವೇ । ಹೇಹೀ ನ ಸಂಭವೇ ಮುಕ್ತಾಸೀ ॥೩೩೮॥

ಆತನಿಗೆ ಒಂದು ವೇಳೆ ಲೀಲಾಕಮಲವು ಹಸ್ತಕ್ಕೆ ಒದಗಲು, ಆ ಕಮಲದ ಕಮಲತ್ವವು ಇಲ್ಲದಾಗಿಬಿಡುವುದು. ಕಮಲಜನ್ಮನಾದ ಬ್ರಹ್ಮದೇವನೂ ಅದರಲ್ಲಿ ಮುಳುಗಿ ಹೋಗುವನು ಮತ್ತು ಸಾಕ್ಷಾತ್ ಆತ್ಮರೂಪನಾಗುವನು ॥೩೨೫॥ ಸ್ಪರ್ಶವು, ಸ್ಪರ್ಶ ಮಾಡುವವನು, ಮತ್ತು ಸ್ಪರ್ಶದ ವಿಷಯವು ಈ ತ್ರಿಪುಟಿಯೇ ಸಂಭವಿಸಲಾರದು. ಮುಕ್ತನು ಎಲ್ಲವನ್ನು ತಾನೇ ಆಗಿ ತನ್ನ ಸ್ವಭಾವದಲ್ಲಿ ಇರುತ್ತಿರುವನು ॥೩೨೬॥ ಆತನು ಪೂಜೆಗಾಗಿ ಮೂರ್ತಿಯನ್ನು ಕೈಗೆತ್ತಿಕೊಳ್ಳಲು, ಅದರಲ್ಲಿ ತಾನು ಸ್ವತಃ ಇರುವೆ ಎಂಬ ಅರಿವು ಆತನಿಗಿರುವುದು. ಹಾಗೆಯೇ ಆತನು ಯಾವುದಾದರೂ ಕಲ್ಲಿನ ಜೊತೆಯಲ್ಲಿ ಆಡುತ್ತಿರಲು, ಅದರಲ್ಲಿಯೂ ಕೂಡ ನಾನೇ ಇರುವೆ ಎಂಬ ಅರಿವು ಆತನಿಗಿರುವುದು ॥೩೨೭॥ ಗೋಡೆಯ ಮೇಲೆ ಭಿನ್ನ ಭಿನ್ನ ಪ್ರಕಾರಗಳ ರಂಗುರಂಗಿನ ಚಿತ್ರಗಳನ್ನು ಬರೆದಿದ್ದರೂ, ಆ ಗೋಡೆಯ ಮೇಲೆ ಕೈ ಇಡಲು ಎಲ್ಲೆಲ್ಲಿಯೂ ಗೋಡೆಯೇ ಇರುವುದು. ಅದರಂತೆಯೇ ಮುಕ್ತನು ಎಲ್ಲೆಲ್ಲಿ ಸ್ಪರ್ಶವನ್ನು ಮಾಡುವನೋ ಅಲ್ಲಲ್ಲಿ ಆತನಿಗೆ ಆತ್ಮಸತ್ತೆಯೇ ಅನುಭವಕ್ಕೆ ಬರುತ್ತಿರುವುದು ॥೩೨೮॥ ಈ ಪ್ರಕಾರವಾಗಿ ನಿಜವಾಗಿಯೂ ಮುಕ್ತನ ಸ್ಪರ್ಶ ಲಕ್ಷಣವಾಗಿರುವುದು. ಈಗ ಆತನ ನುಡಿಯುವಿಕೆಯು ಹೇಗಿರುವುದೆಂಬುದು ಕೇಳು ॥೩೨೯॥ ಮುಕ್ತನು ಪ್ರೇಮಭಾವದಿಂದ ಸುರಸವಾದ ಕಥೆಯನ್ನು ಹೇಳುತ್ತಿರಲಿ, ಅಥವಾ ಪ್ರಾಪಂಚಿಕ ಮಾತುಗಳನ್ನು ಆಡುತ್ತಿರಲಿ, ಆದರೆ ಆತನ ಸಮಾಧಿ ಮುದ್ರೆಯಲ್ಲಿ ಎಂದಿಗೂ ಬದಲಾವಣೆಯಾಗುವುದಿಲ್ಲ. ಮಾತನಾಡುತ್ತಿದ್ದರೂ ಆತನ ಮೌನವು ಎಂದಿಗೂ ಭಂಗವಾಗುವುದಿಲ್ಲ ॥೩೩೦॥ ಮಾತನಾಡುತ್ತಿರಲೂ ಸಹ ಮೌನವನ್ನು ಮುರಿಯದಿರುವಿಕೆಯೇ ಇದು ಅನುಭವದ ಒಳಗಿನ ರಹಸ್ಯವಾಗಿದೆ. ಶಬ್ದಗಳಲ್ಲಿಯೇ ನಿಃಶಬ್ದವು ಹೇಗಿರುವುದೆಂಬುದನ್ನು ಜ್ಞಾನಿಗಳವರು ತಿಳಿದಿರುವರು ॥೩೩೧॥ ಪತಿ ಪತ್ನಿಯರು ಮನೆಯಲ್ಲಿ ಜನರೆದುರು ಮಾತನಾಡದೇ ವರ್ತಿಸುವರು. ಇದು ಅವರ ಮೌನವೋ? ಅತಿಪ್ರೀತಿಯೋ? ಅದರಂತೆ ಮುಕ್ತರ ಮಾತನಾಡುವ ಸ್ಥಿತಿಯಾಗಿರುವುದು. ಅವರ ಶಬ್ದಗಳು ಶಬ್ದಾರ್ಥಗಳಲ್ಲಿ ನಿಃಶಬ್ದವಾಗುವುದು ॥೩೩೨॥ ಇವರ ಮುಖದಿಂದ ಹೊರಬೀಳುವ ಅಕ್ಷರಗಳು ನಿಜವಾಗಿಯೂ ಅಕ್ಷರರೂಪ ಬ್ರಹ್ಮವಾಗಿರುವುವು. ಅವರ ವಾಣಿಯನ್ನು ಕೇಳುತ್ತಲೇ ಮನವು ಆಶ್ಚರ್ಯದಿಂದ ದಂಗಾಗುವುದು ॥೩೩೩॥ ನಾನೊಬ್ಬ ಚತುರ ವಾಗ್ಮೀ ಎಂಬ ಇಂತಹ ಅಭಿಮಾನವು ಇವರಿಗೆ ಇರುವುದಿಲ್ಲ. ಅಥವಾ ತಾನು ಮಾತನಾಡಿ ಜನರ ಮನೋರಂಜನೆ ಮಾಡಬೇಕೆಂಬ ಈ ವಿಚಾರವೂ ಅವರ ಮನದಲ್ಲಿರುವುದಿಲ್ಲ ॥೩೩೪॥ ನಿಃಶಬ್ದ ಸ್ವರೂಪದಲ್ಲಿ ಶಬ್ದಗಳು ಏಳುತ್ತಿರುವುವು ಶಬ್ದಗಳಲ್ಲಿಯೂ ಅವು ನಿಃಶಬ್ದ ಸ್ವರೂಪವಾಗಿರುವುವು. ಈ ಪ್ರಕಾರವಾಗಿ ಆತನ ಮಾತನಾಡುವಿಕೆ ಇರುವುದರಿಂದ ಆತನು ಮಾತನಾಡಿದರೂ ನಿಜವಾಗಿ ಮೌನಿಯಾಗಿರುವನು ॥೩೩೫॥ ನೀರಿನಲ್ಲಿ ಅನೇಕ ತರಂಗಗಳು ನಿರ್ಮಾಣವಾಗುತ್ತಿರುವವು. ಆದರೆ ಆ ತರಂಗಗಳ ಸ್ವರೂಪವು ನೀರೇ ಆಗಿರುವುದು. ಅದರಂತೆ ನಿಃಶಬ್ದಗಳಿಂದ ಶಬ್ದಗಳು ಹುಟ್ಟುವುವು. ಆದರೆ ಶಬ್ದಗಳ ಸರ್ವಾಂಗವು ನಿಃಶಬ್ದಗಳಾಗಿರುವವು ॥೩೩೬॥ ವಾಚ್ಯ, ವಾಚಾ ಮತ್ತು ವಾಚಕತಾ ಈ ತ್ರಿಪುಟಿಯನ್ನು ಬಿಟ್ಟು ಆತನು ಪ್ರೇಮದಿಂದ ನುಡಿಯುತ್ತಿರುವನು ಅಥವಾ ಗಡಿಬಿಡಿಯಿಂದ ಹೆಚ್ಚಾಗಿ ಮಾತನಾಡಿದರೂ ಸಹ ಆತನ ಮೌನದ ಗಂಟು ಬಿಚ್ಚುವುದಿಲ್ಲ ॥೩೩೭॥ ನಾನು ಸತ್ಯವಾಗಿ ಮಾತನಾಡಬೇಕು ಎನ್ನುವದೂ ಕೂಡ ಆತನಿಗೆ ನೆನಪಿರುವುದಿಲ್ಲ. ಅಥವಾ ಲೋಭದಿಂದ ಸುಳ್ಳು ಮಾತನಾಡಬೇಕೆಂದು ಮುಕ್ತನಿಗೆ ಎಂದಿಗೂ ಅನಿಸುವುದಿಲ್ಲ ॥೩೩೮॥

ಸತ್ಯ ಮಿಥ್ಯಾ ಜೇ ಬೋಲಣೇ । ನಿಃಶೇಷ ಪ್ರಾಶೂನಿ ನೇಲಿೀ ದೋನೀ । ಮುಳಿಂಚ್ಯಾ ಮೌನೇ ಜಾಹಲಾ ಮೌನೀ । ನಾನಾ ವಚನೀ ಬೋಲತಾ ॥೩೩೯॥ ತೇಥ ಸೈರಾಟ ಹಾಕ ದೇತಾ । ಕಾ ಸಿಂಹನಾದೇ ಗರ್ಜತಾ । ಶಬ್ದೀ ಠಸಾವಲೀ ನಿಃಶಬ್ದತಾ । ಮೌನ ಸರ್ವಥಾ ಮೋಡೇನಾ ॥೩೪೦॥ ಜರೀ ತೋ ಮಾಝೇ ಸ್ತವನ ಕರೀ । ತರೀ ಮೀ ತ್ಯಾಚ್ಯಾ ಸ್ತವನಾಮಾಝಾರೀ। ತೋಜರೀ ಸೈರಾ ಬಡಬಡ ಕರೀ। ತ್ಯಾಹೀ ಮಾಝಾರೀಮೀ ತ್ಯಾಸೀ ॥೩೪೧॥ ಜರೀ ತ್ಯಾಸೀ ಯೇಊನಿ ಭಾಂಡಣ ಪಡೇ । ತರೀ ಭಾಂಡಣಹೀ ಕರಣೇ ಘಡೇ । ತ್ಯಾ ಕಳಹಾಮಾಜೀ ಮಾಗೇಪುಢೇ। ಚಹೂಕಡೇ ಮಜ ದೇಖೇ ॥೩೪೨॥ ತ್ಯಾಚೇ ವಾಂಕುಡೇ ತಿಕುಡೇ ವ್ಯಂಗ ಬೋಲ । ತೇ ಜಾಣ ಬ್ರಹ್ಮಚಿ ಕೇವಳ । ತಯಾ ಆಮ್ಹಾ ಅಭಿನ್ನ ಮೇಳ । ನಿಜಾತ್ಮಸಾಲ ವಸ್ತೀಸೀ ॥೩೪೩॥ ಅವಚಟೇ ಯೇ ತ್ಯಾಚ್ಯಾಮುಖಾಬಾಹೇರೀ । ಜ್ಯಾಸೀ ಮ್ಹಣೇ "ತುಜ ದೇವೋ ತಾರೀ" ॥ ತ್ಯಾಸೀ ಮೀ ವಾಊನಿಯಾ ಶಿರೀ। ಬ್ರಹ್ಮಸಾಕ್ಷಾತ್ಕಾರೀ ಪಾವವೀ ॥೩೪೪॥ ಯಾಲಾಗೀ ತ್ಯಾಚ್ಯಾ ವಚನಾಽಧೀನ । ಮೀ ಸರ್ವಥಾ ಅಸೇ ಜಾಣ । ತ್ಯಾಚೇ ವಚನ ತೇ ಪ್ರಮಾಣ । ಸರ್ವಸ್ವೇ ಜಾಣ ಮೀ ಮಾನೀ ॥೩೪೫॥ ಆತಾ "ತೋ" "ಮೀ" ಹೇ ಐಶೀ ಬೋಲೀ । ಬಾಹೇರಸವಡೀ ವಾಢಿನ್ನಲೀ। "ಮೀ ತೋಚಿ ತೋ" ಹೇ ಕಿಲೀ। ಮಾಗೀ ಚೋಜವಲೀ ಮದ್ಭಕ್ತಾ ॥೩೪೬॥ ಯಾಲಾಗೀ ತೋ ಮಾಝಾ ಜೀವಪ್ರಾಣ । ಮೀ ತ್ಯಾಚೇ ನಿಜಜೀವನ । ತಯಾಸೀ ಮಜ ಭಿನ್ನಪಣ । ಕಲ್ಪಾಂತೀಜಾಣ ಅಸೇನಾ ॥೩೪೭॥ ಏವಂ ತೋ ಸಗಳಾ ಮಜಭೀತರೀ । ಮೀ ತಯಾ ಆಂತುಬಾಹೇರೀ । ಐಸೇನಿ ಅಭಿನ್ನಪಣೇಕರೀ । ಸುಖೇ ಸಂಸಾರೀ ನಾಂದತು ॥೩೪೮॥ ತ್ಯಾಚೇಮುಖೀಚೇ ಜೇ ಜೇ ಬೋಲ। ತೇ ಮೀಚಿ ಬೋಲತಾ ಸಕಳ । ಮುಕ್ತಾಚೇ ಬೋಲಣೇ ಕೇವಳ । ತುಜಪ್ರತೀ ವಿವಳ ಮ್ಯಾಕೇಲೇ ॥೩೪೯॥ "ಹಾತೀ" ಕಾಂಹೀ ಘೇವೋ ಜಾಯೇ । ತಂವ ತೇ ಘೇಣೇ ದೇವೋಚಿ ಹೋಯೇ । ದೇತಾ ಕಾಂಹೀ ದೇವೋ ಪಾಹೇ । ತೇಹೀ ಹೋಯೇ ತದ್ರೂಪ ॥೩೫೦॥ ತೇಂವ್ಹಾ ದಾನ ಆಣಿ ದೇತೇ - ಘೇತೇ । ಭಿನ್ನಪಣೇ ನ ದೇಖೇ ತೇಥೇ । ಯಾಲಾಗೀ ಕರೋನಿಯಾ ಅಕರ್ತೇ । ಯಾಪರೀ ಕರಾಂತೇ ವರ್ತವೀ ॥೩೫೧॥ ನಿಜಸ್ವಭಾವೇ ತೇ ಕರ । ಜೋ ಕಾಂಹೀ ಕರಿತೀ ವ್ಯಾಪಾರ । ತೇಥ ನಕೇಲೇಪಣಾಚೇ ಸೂತ್ರ । ಸಹಜೇ ಸಾಚಾರ ಠಸಾವೇ ॥೩೫೨॥ ಕರೀ ಪಡಲಿಯಾ ಶಸ್ತ್ರ। ಕರೂ ಜಾಣೇ ತೋ ವ್ಯಾಪಾರ । ಪರೀ "ಮೀ ಕರ್ತಾ" ಹಾ ಅಹಂಕಾರ । ಅಣುಮಾತ್ರ ಅಸೇನಾ ॥೩೫೩॥

ಸತ್ಯ ಅಥವಾ ಮಿಥ್ಯ ನುಡಿಯುವುದನ್ನು ಅತನು ಪ್ರಾಶನ ಮಾಡಿರುವನು. ಆದ್ದರಿಂದ ಆತನು ಮೂಲವಾದ ಮೌನದಿಂದ ಅನೇಕ ವಚನಗಳನ್ನು ನುಡಿಯುತ್ತಿದ್ದರೂ ಮೌನಿಯಾಗಿರುವನು ॥೩೩೯॥ ಆತನು ಮನಬಂದಂತೆ ಗಟ್ಟಿಯಾಗಿ ಕೂಗಲಿ, ಅಥವಾ ಸಿಂಹದಂತೆ ಗರ್ಜಿಸಲಿ, ಆದರೂ ಆ ಶಬ್ದಗಳಲ್ಲಿ ನಿಃಶಬ್ದವೇ ನಟ್ಟಿಕೊಂಡಿರುವುದರಿಂದ ಆತನ ಮೌನವು ಎಂದಿಗೂ ಮುರಿಯುವುದಿಲ್ಲ ॥೩೪೦॥ ಆತನು ಒಂದು ವೇಳೆ ನನ್ನ ಸ್ತುತಿ ಮಾಡಿದರೂ ಕೂಡ ಆತನ ಆ ಸ್ತವನದಲ್ಲಿ ನಾನೇ ಇರುವೆನು. ಅಥವಾ ವ್ಯರ್ಥವಾಗಿ ಬಡಬಡಿಸಿದರೂ ಅದರಲ್ಲಿ ಆತನಿಗೆ ನಾನೇ ಕಾಣಿಸುವೆನು ॥೩೪೧॥ ಒಂದು ವೇಳೆ ಆತನಲ್ಲಿ ಜಗಳದ ಪ್ರಸಂಗವು ಒದಗಿದರೆ ಆತನು ಮೇಲ್ನೋಟಕ್ಕೆ ಜಗಳವನ್ನೂ ಮಾಡುವನು. ಆದರೆ ಆ ಜಗಳದಲ್ಲಿ ಆತನು ಹಿಂದೆ, ಮುಂದೆ, ನಾಲ್ಕೂ ಕಡೆಗಳಲ್ಲಿಯೂ ನನ್ನನ್ನೇ ನೋಡುತ್ತಿರುವನು ॥೩೪೨॥ ಆತನ ಮಾತುಗಳು ಅಡ್ಡ ತಿಡ್ಡಗಳಾಗಿದ್ದರೂ ಅಥವಾ ವ್ಯಂಗ ಮಾತುಗಳನ್ನಾಡಿದರೂ ಅವುಗಳಲ್ಲಿ ಪೂರ್ಣವಾಗಿ ಪರಬ್ರಹ್ಮವೇ ತುಂಬಿರುವುದು. ಮುಕ್ತ ಪುರುಷನಲ್ಲಿ ಮತ್ತು ನನ್ನಲ್ಲಿ ಯಾವ ಭೇದವೂ ಇರಲಾರದ್ದಕ್ಕೆ ನಾವು ಇಬ್ಬರೂ ಒಂದೇ ಸ್ಥಳದಲ್ಲಿ ಇರುತ್ತಿರುವೆವು ॥೩೪೩॥ ಈತನು ಯಾರಿಗಾದರೂ "ಭಗವಂತನು ನಿನಗೆ ರಕ್ಷಿಸುವನು" ಎಂದು ಸಹಜವಾಗಿ ಶಬ್ದಗಳನ್ನು ನುಡಿಯಲು, ಆತನ ನುಡಿಗಳನ್ನು ನಾನು ಶಿರಸಾ ವಹಿಸಿ ಆತನನ್ನು ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿಸಿಕೊಡುವೆನು ॥೩೪೪॥ ಇದಕ್ಕಾಗಿಯೇ ನಾನು ಮುಕ್ತನ ವಚನಗಳಲ್ಲಿ ಯಾವಾಗಲೂ ಇರುವೆನು. ಆತನ ವಚನಗಳಿಗೆ ನಾನು ಸರ್ವಕಾಲದಲ್ಲಿಯೂ ಪ್ರಮಾಣವೆಂದು ಮನ್ನಿಸುವೆನು ॥೩೪೫॥ ಈಗ "ಆತನು, ನಾನು" ಎಂದು ಹೇಳುವುದು ವಾಡಿಕೆಯ ಮಾತಾಗಿರುವುದು. ಅದನ್ನು ತೊರೆದು ನೋಡಲು ಆತನು ಮತ್ತು ನಾನು ಒಂದೇಯಾಗಿರುವೆವು. ಈ ಗುರುಕೀಲಿಯು ನನ್ನ ಭಕ್ತರಿಗೆ ತಿಳಿದಿರುವುದು ॥೩೪೬॥ ಅದಕ್ಕಾಗಿ ಆತನು ನನ್ನ ಜೀವ, ಪ್ರಾಣನಾಗಿರುವನು. ನಾನು ಆತನ ನಿಜಜೀವನವಾಗಿರುವೆನು. ಆತನಲ್ಲಿ ಮತ್ತು ನನ್ನಲ್ಲಿ ಕಲ್ಪಾಂತಕ್ಕೂ ಭಿನ್ನತ್ವವು ಬರಲಾರದು ॥೩೪೭॥ ಆತನು ಸರ್ವಾಂಗದಿಂದ ನನ್ನಲ್ಲಿರುವನು. ಮತ್ತು ನಾನು ಆತನನ್ನು ಒಳಗಿನಿಂದಲೂ ಹೊರಗಿನಿಂದಲೂ ವ್ಯಾಪಿಸಿರುವೆನು. ಹೀಗೆ ಪ್ರೇಮದ ಏಕತ್ವದಿಂದ ಆತನು ಸಂಸಾರದಲ್ಲಿ ಸುಖವಾಗಿ ವರ್ತಿಸುತ್ತಿರುವನು ॥೩೪೮॥ ಆತನ ಮುಖದಲ್ಲಿ ಪ್ರಕಟವಾಗುವ ಯಾವ ಶಬ್ದಗಳನ್ನು ನಾನೇನುಡಿಯುತ್ತಿರುತ್ತೇನೆ. ಮುಕ್ತನ ಮಾತನಾಡುವಿಕೆಯು ಹೇಗಿರುವುದೆಂಬುದನ್ನು ನಾನು ನಿನಗೆ ಸ್ಪಷ್ಟವಾಗಿ ಹೇಳಿದೆನು ॥೩೪೯॥ ಆತನು ಹಸ್ತಗಳಿಂದ ಏನಾದರೂ ಸ್ವೀಕರಿಸಲು, ಆ ಸ್ವೀಕರಿಕೆಯು ದೇವನಾಗುವನು. ಹಾಗೆಯೇ ಏನಾದರೂ ಕೊಡುತ್ತಿರಲು ಅದು ಕೂಡ ದೇವನೇ ಆಗಿರುವನು ॥೩೫೦॥ ದಾನ, ದಾನ ಕೊಡುವವ ಮತ್ತು ದಾನವನ್ನು ಸ್ವೀಕರಿಸುವವ ಈ ಮೂರನ್ನೂ ಆತನು ಭಿನ್ನತ್ವದಿಂದ ಕಾಣಲಾರನು. ತನ್ನ ಕೈಯಿಂದ ದಾನವನ್ನು ಮಾಡಿಯೂ ಆತನು ತನ್ನ ಕೈಗಳಿಗೆ ಅಕರ್ತತ್ವದಿಂದ ವರ್ತಿಸುವನು ॥೩೫೧॥ ಸ್ವಭಾವದಂತೆ ಆತನ ಕೈಗಳು ಯಾವ ಕಾರ್ಯಗಳನ್ನು ಮಾಡುವುವೋ, ಅಲ್ಲಿ ನಾನು ಏನೂ ಮಾಡಿಲ್ಲವೆಂಬ ಸೂತ್ರವು ಸಹಜವಾಗಿ ನೆಟ್ಟಿರುವುದು ॥೩೫೨॥ ಆತನ ಕೈಯಲ್ಲಿ ಶಸ್ತ್ರವು ಬರಲು, ಅದರ ಉಪಯೋಗವನ್ನು ಹೇಗೆ ಮಾಡಬೇಕೆಂಬ ತಿಳಿವಳಿಕೆ ಆತನಿಗಿರುವುದು. ಆದರೆ ನಾನು ಕರ್ತನು ಎಂಬ ಅಭಿಮಾನವು ಆತನ ಮನದಲ್ಲಿ ಒಂದು ಕಣದಷ್ಟೂ ಇರದು ॥೩೫೩॥

ಪುಢೇ ವೋಢವಲೇ ಅವಚಿತೇ । ತರೀ ಖೇಳೋ ಜಾಣೇ ದ್ಯೂತಕರ್ಮಾತೇ । ಹಾರೀ ಜೈತ ನಾಠವೇ ಚಿತ್ತೇ ।
ನಿಜಸ್ವಭಾವೇ ತೇ ಖೇಳತು ।।೩೫೪।। ವೋಢವಲ್ಯಾ ಬ್ರಾಹ್ಮಣಪೂಜಾ । ಕರೂ ಜಾಣೇ ಅತಿವೋಜಾ । ಪೂಜ್ಯ
ಪೂಜಕತ್ವೇ ಭಾವೋದುಜಾ । ನ ಮಾನುನಿ ದ್ವಿಜಾ ಪೂಜಿತು ।।೩೫೫।। ಧನುಷೀ ಕಾಢೂ ಜಾಣೇ ವೋಢೀ ।
ಅನುಸಂಧಾನೇ ಬಾಣ ಸೋಡೀ । ಅಲಕ್ಷ್ಯ ಲಕ್ಷ್ಯೂನಿ ಭೇದೀ ನಿರವಡೀ । ಪರೀ ನ ಧರೀ ಗೋಡೀ ಶ್ಲಾಘೇಚೀ
।।೩೫೬।। ಕೈಸೇ ಕರ್ಮ ನಿಪಜೇ ಕರೀ । ಜೈಸಾ ಸಮುದ್ರಾಮಾಜೀ ಲಹರೀ । ತೈಸಾ ನಿಜಸ್ವರೂಪಾಮಾಝಾರೀ ।
ನಾನಾ ವ್ಯಾಪಾರೀ ನಿಶ್ಚಳು ।।೩೫೭।। ಸೂರ್ಯ ಮೃಗಜಳಾತೇ ಭರೀ । ತೈಸಾ ವ್ಯಾಪಾರು ನಿಜನಿರ್ವಿಕಾರೀ । ಪರೀ
ಕೇಲೇಪಣ ಠರೀರೀ । ತಿಳಭರೀ ಅಸೇನಾ ।।೩೫೮।। ಸೂರ್ಯಕಾಂತೀ ಅಗ್ನೀ ಖವಳೇ । ತೇ ಕರ್ಮ ಮ್ಹಣತೀ
ಸೂರ್ಯೇ ಕೇಲೇ । ತೈಸೇ ಹಸ್ತವ್ಯಾಪರೇ ಜೇ ಜೇ ಜಾಹಲೇ । ನಾಹೀ ಕೇಲೇ ತೇ ತ್ಯಾಣೇ ।।೩೫೯।। ಸೂರ್ಯಕಾಂತೀ
ಪಾಡಾವಾ ಅಗ್ನೀ । ತೇ ನಾಹೀ ಸೂರ್ಯಾಚೇ ಮನೀ । ತೇವೀ ಮುಕ್ತ ನಿರಭಿಮಾನೀ । ಕ್ರಿಯಾಕರಣೀ ವಿಚರತು
।।೩೬೦।। ತ್ಯಾಸೀ ಚಾಲವೂ ಜಾತಾ ''ಪಾಯೇ'' । ತಳೀ ಪೃಥ್ವೀ ನಾಹೀ ಹೋಯೇ । ಆಪಣ ಆಪಣಿಯಾವರೀ
ಪಾಹೇ । ಚಾಲತು ಜಾಯೇ ಸ್ವಾನಂದೇ ।।೩೬೧।। ಜಳೀಚಾ ಜಳಾವರೀ ತರಂಗ । ಅಭಿನ್ನಪಣೇ ಚಾಲೇ ಚಾಂಗ ।
ತೈಸಾ ತೋ ನಿಜರೂಪೀ ಸಾಂಗ । ಚಾಲವೀ ಅಂಗ ಚಿದ್ರೂಪೇ ।।೩೬೨।। ತಯಾಸೀ ಅಸತಾಂಹೀ ಚರಣ । ಆವಡೀ
ಚಾಲೇ ಚರಣೇವಿಣ । ಕರೀ ಸರ್ವಾಂಗೇ ಗಮನ । ಸರ್ವತ್ರ ಜಾಣ ಝಾಲಾಸೇ ।।೩೬೩।। ಜೇವೀ
ಅಖಂಡದಂಡಾಯಮಾನ । ಪಾಯೇವೀಣ ಚಾಲೇ ಜೀವನ । ತೇವೀ ಚರಣೇವೀಣ ಗಮನ । ನಿತ್ಯ ಸಾವಧಾನ
ಮುಕ್ತಾಚೇ ।।೩೬೪।। ಸರ್ವಥಾ ಪಾಯೇವಿಣ । ವಾಯೂಚೇ ಸರ್ವತ್ರ ''ಗಮನ'' । ತೈಸೇಚ ಮುಕ್ತಾಚೇ ಲಕ್ಷಣ ।
ಸ್ವರೂಪೀ ಜಾಣ ಸರ್ವತ್ರ ।।೩೬೫।। ಯಾಪರೀ ನ ಹಾಲತಾ ಜಾಣ । ತ್ಯಾಚೇ ಸರ್ವತ್ರ ''ಗಮನ'' । ನಾಠವೇ
ಚಾಲತೇಪಣ । ಐಸೇಚ ಲಕ್ಷಣ ಮುಕ್ತಾಚೇ ।।೩೬೬।। ಮೂಳಿ ಆತ್ಮಾ ಆತ್ಮೀ ನಾಹೀ ಜಾಣಾ । ಯಾಲಾಗೀ
ಸ್ತ್ರೀಪುರುಷಭಾವನಾ । ತ್ಯಾಸೀ ಸರ್ವಥಾ ಆಠವೇನಾ । ದೈವೇ ''ಅಂಗನಾ'' ತೋ ಭೋಗೀ ।।೩೬೭।।

ಎಂದಾದರೂ ಆಕಸ್ಮಾತವಾಗಿ ಪ್ರಸಂಗವು ಒದಗಲು ಆತನಿಗೆ ಜೂಜು ಸಹ ಆಡಲು ಬರುವುದು. ಆದರೆ ಆ ಜೂಜಿನಲ್ಲಿ ಸೋಲುವ, ಗೆಲ್ಲುವ, ಈ ವಿಚಾರವೇ ಆತನ ಮನದಲ್ಲಿ ಇರುವುದಿಲ್ಲ. ಕೇವಲ ಸ್ವಭಾವದಂತೆ ಜೂಜನ್ನು ಆಡುತ್ತಿರುವನು ।।೩೫೪।। ಬ್ರಾಹ್ಮಣರ ಪೂಜೆಯನ್ನು ಮಾಡುವ ಪ್ರಸಂಗವು ಬರಲು, ಆಗ ಯಥಾವಿಧಿಯಾಗಿ ಅವರ ಪೂಜೆ ಮಾಡುವುದನ್ನು ಆತನು ತಿಳಿದಿರುವನು. ಇವರು ಪೂಜ್ಯರು ನಾನು ಪೂಜಕನು ಎಂಬ ಭಾವನೆಯನ್ನು ಮನದಲ್ಲಿ ಇಡದೇ ಆತನು ಬ್ರಾಹ್ಮಣರ ಪೂಜೆಯನ್ನು ಮಾಡುತ್ತಿರುವನು ।।೩೫೫।। ಆತನಿಗೆ ಧನುಷ್ಯವನ್ನು ಹೆದಿಗೇರಿಸಿ ಬಾಣವನ್ನು ಬಿಡಲು ಬರುವುದು. ಆತನು ನಿಯಮಬದ್ಧನಾಗಿ ಲಕ್ಷದ ಭೇದವನ್ನು ಮಾಡಬಲ್ಲನು. ಆದರೆ ಇದರಿಂದ ತನ್ನ ಕೀರ್ತಿಯು ಬೆಳೆಯಬೇಕೆಂಬ ಬಯಕೆ ಆತನಿಗೆ ಇರದು ।।೩೫೬।। ಸಮುದ್ರದಲ್ಲಿ ತೆರೆಗಳು ಸಹಜವಾಗಿನಿರ್ಮಾಣವಾಗುವಂತೆ ಆತನ ಕೈಗಳಿಂದ ಭಿನ್ನ ಭಿನ್ನ ಪ್ರಕಾರಗಳ ಕರ್ಮಗಳು ಸಹಜವಾಗಿ ಆಗುತ್ತಿರುವುವು. ಅನೇಕ ಪ್ರಕಾರದ ಕಾರ್ಯಗಳನ್ನು ಮಾಡಿದರೂ ಕೂಡ ಆತನು ಆತ್ಮಸ್ವರೂಪದಲ್ಲಿ ನಿಶ್ಚಲನಾಗಿರುವನು ।।೩೫೭।। ಸೂರ್ಯನು ಮೃಗಜಲದಂತೆ ಭಾಸವಾಗುವನು. ಅದರಂತೆಯೇ ಮುಕ್ತ ಪುರುಷನು ನಿರ್ವಿಕಾರದಲ್ಲಿ ಸರ್ವ ವ್ಯಾಪಾರವನ್ನು ಮಾಡುತ್ತಿರುವನು. ಆದರೂ ಅವುಗಳ ಅಭಿಮಾನವನ್ನು ತಿಲಮಾತ್ರಕ್ಕೂ ಹಿಡಿಯಲಾರನು ।।೩೫೮।। ಸೂರ್ಯಕಾಂತ ಮಣಿಯಿಂದ ಅಗ್ನಿಯು ನಿರ್ಮಾಣವಾಗುವುದು. ಮತ್ತು ಈ ಕಾರ್ಯವನ್ನು ಸೂರ್ಯನು ಮಾಡಿದನು ಎಂದು ಹೇಳುವರು. ಅದರಂತೆ ಮುಕ್ತನ ಕೈಯಿಂದ ಯಾವ ಯಾವ ಕರ್ಮಗಳು ಆಗುವುವೋ, ಅವುಗಳನ್ನು ಆತನು ಮಾಡಿರುವುದಿಲ್ಲ ।।೩೫೯।। ಸೂರ್ಯಕಾಂತ ಮಣಿಯಿಂದ ಅಗ್ನಿಯನ್ನು ಹುಟ್ಟಿಸಬೇಕೆಂದು ಸೂರ್ಯನ ಮನದಲ್ಲಿರುವುದಿಲ್ಲ. ಅದರಂತೆ ಮುಕ್ತ ಪುರುಷನು ಯಾವ ಪ್ರಾಪ್ತ ಕರ್ಮಗಳನ್ನು ನಿರಭಿಮಾನದಿಂದ ಮಾಡುತ್ತಿರುವನು ।।೩೬೦।। ಆತನಿಗೆ ಆತನ ಕಾಲುಗಳು ನಡೆಯುತ್ತಿರಲು, ಆತನ ಕಾಲುಗಳ ಕೆಳಗೆ ನೆಲವು ಇರುವುದಿಲ್ಲ. ಆತನು ಸ್ವತಃ ತನ್ನಲ್ಲಿಯೇ ಸ್ವಾನಂದದಿಂದ ನಡೆಯುತ್ತಿರುವನು ।।೩೬೧।। ಜಲಾಶಯದ ತೆರೆಗಳು ಜಲಾಶಯದ ಮೇಲೆ ಅಭಿನ್ನವಾಗಿ ನಡೆಯುತ್ತಿರುವುವು. ಅದರಂತೆ ಮುಕ್ತನು ಯಾವ ಆತ್ಮಸ್ವರೂಪದಲ್ಲಿ ತಿರುಗಾಡುತ್ತಿರುವನು ।।೩೬೨।। ಆತನಿಗೆ ಕಾಲುಗಳಿರುವುವು. ಆದರೂ ಆತನು ಪ್ರೀತಿಯಿಂದ ಕಾಲುಗಳಿಲ್ಲದೇ ನಡೆಯುತ್ತಿರುವನು. ಆತನು ಸರ್ವಾಂಗದಿಂದ ನಡೆಯುತ್ತಿರುವನು. ಕಾರಣ, ಆತನು ಸರ್ವವ್ಯಾಪಕನಾಗಿರುವನು ।।೩೬೩।। ಯಾವ ಪ್ರಕಾರವಾಗಿ ನೀರು ಕಾಲುಗಳಿಲ್ಲದೇ ಅಖಂಡವಾಗಿ ಹರಿಯುತ್ತಿರುವುದೋ, ಅದರಂತೆಯೇ ನಿತ್ಯವೂ ಸಾವಧರಾಗಿರುವ ಮುಕ್ತನ ನಡೆದಾಡುವಿಕೆಯು ಕಾಲುಗಳಿಲ್ಲದೇ ನಡೆಯುತ್ತಿರುವುದು ।।೩೬೪।। ಕೇವಲ ಕಾಲುಗಳಿಲ್ಲದೇ ವಾಯುವು ಸರ್ವತ್ರವೂ ಗಮನ ಮಾಡುತ್ತಿರುವುದು. ಅದರಂತೆಯೇ ಆತ್ಮಸ್ವರೂಪದಲ್ಲಿ ಸಂಚರಿಸುವಿಕೆಯು ಮುಕ್ತನ ಲಕ್ಷಣವಾಗಿರುವುದು ।।೩೬೫।। ಈ ಪ್ರಕಾರವಾಗಿ ಸ್ಥಳದಿಂದ ಅಲುಗಾಡದೇ ಆತನ ಗಮನವು ಸರ್ವತ್ರವೂ ಆಗುತ್ತಿರುವುದು. ಆತನಿಗೆ ನಾನು ನಡೆಯುತ್ತಿರುವೆ ಎಂಬ ಸ್ಮರಣವೂ ಸಹ ಇರುವುದಿಲ್ಲ. ಮುಕ್ತನ ಲಕ್ಷಣವು ಈ ಪ್ರಕಾರವಾಗಿರುವುದು ।।೩೬೬।। ಪುರುಷನಲ್ಲಿ ಆತ್ಮನು ಮತ್ತು ಸ್ತ್ರೀಯಲ್ಲಿ ಆತ್ಮಳು ಎಂದು ಹೀಗೆ ಭೇದಭಾವವು ಮೂಲತಃ ಇರುವುದೇ ಇಲ್ಲ. ಆದ್ದರಿಂದ ಆತನಿಗೆ ಸ್ತ್ರೀ - ಪುರುಷ ಎಂಬ ಭಾವನೆಯು ಹುಟ್ಟುವುದಿಲ್ಲ. ಪ್ರಾರಬ್ಧದ ಯೋಗದಿಂದ ಆತನು ಸ್ತ್ರೀಯಳ ಉಪಭೋಗವನ್ನು ಪಡೆಯುವನು ।।೩೬೭।।

ನಟು ನಾಟಕು ಅವಗಮಲಾ । ಪುರುಷ ಸ್ತ್ರೀವೇಷೇ ದಿಸೋ ಆಲಾ । ಸ್ತ್ರೀಪುರುಷಭಾವೋ ಸಂಪಾದಿಲಾ । ತೇವಿ ಹಾ ಜಾಹಲಾ ಗೃಹಸ್ಥು ॥೩೬೮॥ ಕಾ ಅರ್ಧನಾರೀನಟೇಶ್ವರೀ । ಜೋ ಪುರುಷ ತೋಚಿ ನಾರೀ । ಮುಕ್ತಾಸಿ ಜಾಣ ತೈಶಾಪರೀ । ಸ್ತ್ರೀಪುರುಷಕಾರೀ ನಿಜಬೋಧು ॥೩೬೯॥ ಜೇವೀ ಕಾ ಆಪುಲೀ ಸಾಉಲೀ । ಆವಡೀ ಆಪಣ ಆಲಿಂಗಿಲೀ । ತೇವೀ ಮುಕ್ತೇ ಸ್ತ್ರೀ ಭೋಗಿಲೀ । ದ್ವೈತಾಚಿ ಭುಲೀ ಸಾಂಡೋನೀ ॥೩೭೦॥ ಛಾಯಾ ಕೋಠೇ ಅಸೇ ಕೋಠೇ ವಸೇ । ಪರಶೀ ಅಸತಾ ಜ್ಯಾಚೀ ತೋ ನ ಪುಸೇ । ಮುಕ್ತಾಸೀ ಜಾಣ ತೈಸೇ । ಲೋಲುಪ್ಯ ನಸೇ ಸ್ತ್ರೀಯೇಚೇ ॥೩೭೧॥ ಏವಂ ಸ್ತ್ರೀಪುರುಷವಿಕಾರಪ್ರಾಪ್ತೀ । ತ್ಯಾಚೀ ನ ಮೋಡೇ ಆತ್ಮಸ್ಥಿತೀ । ದೈವೇ ಜಾಹಲಿಯಾ ಸಂತತೀ । ಆತ್ಮ ಪ್ರತೀತಿ ತೇಥೇಹೀ ॥೩೭೨॥ "ಆತ್ಮಾ ವೈ ಪುತ್ರನಾಮಾಸಿ" । ಸತ್ಯತ್ವ ಆಲೇ ಯೇ ಶ್ರುತೀಸೀ । ಪುತ್ರತ್ವೇ ದೇಖೇ ಆಪಣಾಸೀ । ನಿಜರೂಪೇಸೀ ಸರ್ವದಾ ॥೩೭೩॥ ಸ್ವಯೇ ಜನಕು ಸ್ವಯೇ ಜನನೀ। ಸ್ವಯಂ ಕ್ರೀಡೇ ಪುತ್ರಪಣೀ । ಆಪಣಾವಾಂಚೂನಿ ಜನೀವನೀ । ಆಣಿಕ ಕೋಣೀ ದೇಖೇನಾ ॥೩೭೪॥ ಏವಂ ಸ್ತ್ರೀಪುತ್ರಸಂಪತ್ತೀ । ಜೇವೀ ಆಕಾಶೀ ಮೇಘಪಂಕ್ತೀ । ಕಾಳೇಂಯೇತೀ ಕಾಳೇ ಜಾತೀ । ತೈಶೀ ಸ್ಥಿತೀ ಮುಕ್ತಾಚೀ ॥೩೭೫॥ ಸ್ತ್ರೀಸಂಭೋಗೀ ಜೇ ಹೋಯ ಸುಖ । ತೇ ಸುಖ ಮುಕ್ತಾಸೀ ಸದಾ ದೇಖ । ಯಾಲಾಗೀ ಸ್ತ್ರೀಕಾಮ ಅಭಿಲಾಖ । ನಾಹೀ ವಿಶೇಖ ಮುಕ್ತಾಸೀ ॥೩೭೬॥ ಜೈಸೇ ರಾಜಹಂಸಾಪಾಶೀ ಶೇಣ । ತೈಸೇ ಮುಕ್ತಾಪಾಸೀ ಜಾಣ "ಧನ" । ತ್ಯಾವರೀ ತ್ಯಾಚೇ ನಾಹೀಮನ । ಉದಾಸೀನ ಸರ್ವದಾ ॥೩೭೭॥ ವ್ಯಾಘ್ರಾಸೀ ವಾಢಿಲೇ ಮಿಷ್ಟಾನ್ನ । ತೇ ತ್ಯಾಸೀ ಜೈಸೇ ನಾವಡೇ ಜಾಣ। ತೈಸೇ ಮುಕ್ತಾಸೀ ನಾವಡೇ ಧನ । ಧನಲೋಭೀಪಣ ತ್ಯಾ ನಾಹೀ ॥೩೭೮॥ ಪೋತಾಸ ಕಾಪುರಾಚಾ ಡಲಾ । ಜೇವೀ ನಾತಳೇ ಕಾಉಳಾ । ತೇವೀ ಅನರ್ಘ್ಯರತ್ನ ಮಾಳಾ । ಮುಕ್ತೇ ಸಾಂಡಿಲ್ಯಾ ಥುಂಕೋನಿ ॥೩೭೯॥ ಜ್ಯಾಸೀ ಧನಲೋಭಾಚೀ ಆಸ್ಥಾ । ತ್ಯಾಸೀ ಕಲ್ಪಾಂತೀ ನ ಘಡೇ ಮುಕ್ತತಾ । ತೈಸೇ ಸ್ತ್ರೀಕಾಮಿಯಾ ಸರ್ವಥಾ । ನಘ್ಡೇ ಪರಮಾರ್ಥತಾ ನಿಜಬೋಧು ॥೩೮೦॥ ಮುಕ್ತಾಚಿಯೇ ನಿದ್ರೇಪಾಶೀ । ಸಮಾಧಿಯೇ ವಿಶ್ರಾಂತೀಸೀ । ಶಿಣಲೀ ಧಾಂವೇ ಮಾಹೇರಾ ಜೈಶೀ । ತೈಸೀ ವಿಸಾವ್ಯಾಸೀ ಯೇತಸೇ ॥೩೮೧॥

ನಟನು ಅಭಿನಯವನ್ನು ಕಲಿತು ಆಗ ಆತನು ಸ್ತ್ರೀ ವೇಷವನ್ನು ಧರಿಸಿ, ಸ್ತ್ರೀಯಂತೆ ಕಾಣಿಸುವನು. ಆ ಸಮಯದಲ್ಲಿ ಸ್ತ್ರೀ ಮತ್ತು ಪುರುಷ ಈ ಎರಡೂ ಭಾವಗಳು ಆತನಲ್ಲಿರುವುವು. ಅದರಂತೆ ಯಾವ ಮುಕ್ತನು ಗೃಹಸ್ಥಾಶ್ರಮಿಯಾಗಿರುವನು ॥೩೬೮॥ ಅಥವಾ ಅರ್ಧನಾರೀನಟೇಶ್ವರನಲ್ಲಿ ಯಾವನು ಪುರುಷನೋ ಆತನೇ ಸ್ತ್ರೀಯಾಗಿರುವನು. ಅದರಂತೆ ಮುಕ್ತನಿಗೆ ಸ್ತ್ರೀ ಅಥವಾ ಪುರುಷ ಈ ಎರಡೂ ಆಕಾರಗಳು ಆತ್ಮ ಬೋಧೆಯಲ್ಲಿ ಆಗುತ್ತಿರುವುವು ॥೩೬೯॥ ತನ್ನ ನೆರಳನ್ನು ತಾನೇ ಆಲಿಂಗಿಸಿದರೆ ಹೇಗೋ, ಅದರಂತೆಯೇ ದ್ವೈತದ ಕಲ್ಪನೆಯನ್ನು ತ್ಯಜಿಸಿ ಆತನು ಸ್ತ್ರೀಯನ್ನು ಉಪಭೋಗಿಸುವನು ॥೩೭೦॥ ನೆರಳು ತನ್ನ ಅತಿಸಮೀಪವಾಗಿದ್ದರೂ ಅದು ಎಲ್ಲಿ ಬಿದ್ದಿದೆ ಎಂದು ಯಾರೂ ವಿಚಾರಿಸುವುದಿಲ್ಲ. ಅದರಂತೆಯೇ ಮುಕ್ತನಿಗೆ ಸ್ತ್ರೀಯಳ ಆಸಕ್ತಿ ಇರುವುದಿಲ್ಲ ॥೩೭೧॥ ಒಟ್ಟಿನಲ್ಲಿ ಸ್ತ್ರೀ- ಪುರುಷರ ವಿಕಾರವು ಉತ್ಪನ್ನಗೊಳ್ಳಲು, ಆಗಲೂ ಆತನ ಆತ್ಮಸ್ಥಿತಿಯು ಮುರಿಯಲಾರದು. ಹಾಗೆಯೇ ದೈವಯೋಗದಿಂದ ಸಂತತಿ ಪ್ರಾಪ್ತವಾದರೆ ಅದರಲ್ಲಿ ಆತನು ಆತ್ಮಸ್ವರೂಪವನ್ನೇ ಕಾಣುವನು ॥೩೭೨॥ ಆದ್ದರಿಂದ "ಆತ್ಮಾ ವೈ ಪುತ್ರನಾಮಾಸೀ" ಅಂದರೆ ತನ್ನ ಪುತ್ರನು ತನ್ನ ಆತ್ಮನಾಗಿರುವನು ಎಂಬ ಶ್ರುತಿ ವಾಕ್ಯವನ್ನು ಸತ್ಯಗೊಳಿಸಿದನು. ಆತನು ಸರ್ವಕಾಲದಲ್ಲಿಯೂ ಪುತ್ರರಿಗೂ ಆತ್ಮ ಭಾವನೆಯಿಂದಲೇ ನೋಡುತ್ತಿರುವನು ॥೩೭೩॥ ಆತನು ತಾನೇ ತಾಯಿಯಾಗಿರುವನು ಮತ್ತು ತಾನೇ ತಂದೆಯಾಗಿರುವನು. ಮತ್ತು ಪುತ್ರರೂಪದಿಂದ ತಾನೇ ಕ್ರೀಡಿಸುವನು. ಆತನಿಗೆ ಜನರಲ್ಲಿ ಅಥವಾ ವನದಲ್ಲಿ ತನ್ನನ್ನು ಬಿಟ್ಟು ಅನ್ಯರಾರೂ ಕಾಣಿಸಲಾರರು ॥೩೭೪॥ ಯಾವ ಪ್ರಕಾರವಾಗಿ ಆಕಾಶದಲ್ಲಿ ಕಾಲತಕ್ಕಂತೆ ಮೋಡಗಳು ಬರುತ್ತಿರುವುವು ಮತ್ತು ಹೋಗುತ್ತಿರುವುವು. ಅದರಂತೆ ಸ್ತ್ರೀಪುತ್ರರ ಅವಸ್ಥೆಯೂ ಕೂಡ ಹಾಗೆಯೇ ಇರುವುದು. ಈ ಭಾವನೆಯು ಮುಕ್ತನ ಮನದಲ್ಲಿರುವುದು ॥೩೭೫॥ ಸ್ತ್ರೀ ಸಂಭೋಗದಿಂದ ಯಾವ ಸುಖವಾಗುತ್ತದೆಯೋ, ಆ ಸುಖವು ಮುಕ್ತನಲ್ಲಿ ಯಾವಾಗಲೂ ಇರುವುದು. ಆದ್ದರಿಂದಲೇ ಮುಕ್ತನಿಗೆ ಸ್ತ್ರೀಯಿಂದ ಸಿಗುವ ಸುಖದ ವಿಶೇಷ ಆಸಕ್ತಿಯು ಇರುವುದಿಲ್ಲ ॥೩೭೬॥ ರಾಜಹಂಸ ಪಕ್ಷಿಗೆ ಸೆಗಣಿಯು ಹೇಗೆ ಕಾಣುವುದೋ, ಅದರಂತೆ ಮುಕ್ತನಿಗೆ ಧನವು ಕಾಣಿಸುವುದು. ಆತನ ಮನವು ಧನದಲ್ಲಿ ಎಂದಿಗೂ ಆಸಕ್ತಿಯಾಗುವುದಿಲ್ಲ. ಆತನು ಯಾವಾಗಲೂ ಉದಾಸೀನ ವೃತ್ತಿಯಿಂದ ಇರುತ್ತಿರುವನು ॥೩೭೭॥ ಹುಲಿಯ ಎದುರಿಗೆ ಮೃಷ್ಟಾನ್ನವನ್ನು ಬಡಿಸಿಡಲು ಅದಕ್ಕೆ ಅದು ಪ್ರಿಯವಾಗುವುದಿಲ್ಲ. ಅದರಂತೆಯೇ ಮುಕ್ತನ ಎದುರಿನಲ್ಲಿ ಧನವನ್ನಿಡಲು ಅದಕ್ಕೆ ಆತನು ಮುಟ್ಟಲಾರನು. ಏಕೆಂದರೆ ಆತನ ಮನದಲ್ಲಿ ದ್ರವ್ಯದ ಲೋಭವು ಇರುವುದಿಲ್ಲ ॥೩೭೮॥ ಕಾಗೆಯು ಬಿಳಿದಾದ ಶುಭ್ರ ಅರಳೆಯ ರಾಶಿಯನ್ನು ಕಂಡರೂ ಅದು ಅದಕ್ಕೆ ಮುಟ್ಟುವುದಿಲ್ಲ. ಅದರಂತೆಯೇ ಮುಕ್ತನು ನವರತ್ನಗಳ ರಾಶಿಯನ್ನು ಕಂಡರೂ ಆತನು ಅವುಗಳ ಸ್ಪರ್ಶ ಕೂಡ ಮಾಡುವುದಿಲ್ಲ ॥೩೭೯॥ ಧನಲೋಭದ ಅತ್ಯಂತಿಕ ಅಭಿಲಾಷೆ ಇದ್ದವರಿಗೆ ಕಲ್ಪಾಂತದವರೆಗೂ ಅವರಿಗೆ ಮುಕ್ತಿಯು ಪ್ರಾಪ್ತವಾಗಲು ಶಕ್ಯವಿಲ್ಲ. ಅದರಂತೆ ಸ್ತ್ರೀವಾಸನೆಯು ಮನದಲ್ಲಿದ್ದವರಿಗೆ ಪರಮಾರ್ಥದ ಅಥವಾ ಆತ್ಮಜ್ಞಾನದ ಪ್ರಾಪ್ತಿಯು ಎಂದಿಗೂ ಆಗಲು ಶಕ್ಯವಿಲ್ಲ ॥೩೮೦॥ ಅತ್ತೆಯ ಮನೆಯಲ್ಲಿ ಬೇಸತ್ತ ಸೊಸೆಯು ವಿಶ್ರಾಂತಿಗಾಗಿ ತವರು ಮನೆಗೆ ಬರುವಂತೆ ಮುಕ್ತನ ನಿದ್ರೆಯಲ್ಲಿ ಯಾವ ಸಮಾಧಿಯು ವಿಶ್ರಾಂತಿಗಾಗಿ ಬರುತ್ತಿರುವುದು ॥೩೮೧॥

ಜಾಗೃತಿಸ್ವಪ್ನಸುಷುಪ್ತೀಸೀ । ನಾತಳೋನಿ ತೀಹೀ ಅವಸ್ಥಾಂಸೀ । ನಿಜೇ ನಿಜೇ ನಿಜತ್ವೇಸೀ । ಅಹರ್ನಿಶೀ ನಿಜರೂಪೇ ॥೩೮೨॥ ನಿಜೇ ನಿಜೋ ಜಾತಾ ನಿರ್ಧಾರಾ । ತಳೀ ಹರಪಲೀ ಧರಾ । ವರೀ ಠಾವೋ ನಾಹೀ ಅಂಬರಾ । ಐಶಿಯಾ ಸೇಜಾರಾಮಾಜೀ ನಿಜೇ ॥೩೮೩॥ ನವಲ ನಿಜತೀ ತ್ಯಾಚೀ ವೋಜ । ಚಾಲತಾ ಬೋಲತಾ ನ ಮೋಡೇ ನೀಜ । ಖಾತಾ ಜೇವಿತಾ ಅಖಂಡ ನೀಜ । ಸಹಜೇ ಸಹಜ ನಿಜರೂಪ ॥೩೮೪॥ ನಿಜವಿತೇ ಕಾ ಉಠವಿತೇ । ದೋನೀ ತೋಚಿ ಆಹೇ ತೇಥೇ । ಕೋಣ ಕೋಣಾ ಜಾಗವಿತೇ । ನಿಜೇ ಸುಚಿತ್ತೇ ನಿಜರೂಪೇ ॥೩೮೫॥ ಜಾಗತಾ ನಿಜೇಶೀ ವಾಗೇ । ವಾಗತಾಂಹೀ ನೀಜ ಲಾಗೇ । ಏವಂ ನಿಜರೂಪ ಜಾಹಲಾ ಅಂಗೇ । ನಿದ್ರೇಚೇನಿ ಪಾಂಗೇ ಪಾಂಗೇನಾ ॥೩೮೬॥ ಶಯ್ಯಾಶಯನ-ಸೇಜಾರ । ಅವಘೇ ತೋಚಿ ಅಸೇ ಸಾಚಾರ । ಆಪುಲ್ಯಾ ನಿಜಾಚೇ ಆಪಣ ಘರ । ನಿತ್ಯ ನಿರಂತರ ನಿಜೇ ನಿಜೇ ॥೩೮೭॥ ಐಸೇ ಜೇ ಜೇ ಕರೂ ಜಾಯ ಕರ್ಮ । ತೇಥ ತೇಥ ಪ್ರಕಟೇ ಪರಬ್ರಹ್ಮ । ಮುಕ್ತಾಸೀ ಏಕುಹೀ ನಾಹೀ ನೇಮ । ಹೇ ಮುಖ್ಯ ವರ್ಮ ಮುಕ್ತಾಚೇ ॥೩೮೮॥ ಮುಕ್ತಾಸೀ ನೇಮಬಂಧನ । ತೇ ಅಂಗೀ ಲಾಗಲೇ ಸಾಧನ । ಸಾಧನ ಅಸತಾ ಮುಕ್ತಪಣ । ನ ಘಡೇ ಜಾಣ ಸರ್ವಥಾ ॥೩೮೯॥ ಮುಕ್ತಾಸೀ ತಂವ ಆಸಕ್ತೀ । ಸರ್ವದಾ ನಾಹೀ ಸರ್ವಾರ್ಥೀ । ಶೇಷ ಪ್ರಾರಬ್ಧಾಚೇ ಸ್ಥಿತೀ । ಕರ್ಮೇ ನಿಫಜತೀ ನಿರಪೇಕ್ಷ ॥೩೯೦॥ ಜ್ಯಾಚಾ ನಿಮಾಲಾ ಅಹಂಕಾರು । ತೋ ಮಾಝೇ ಸ್ವರೂಪ ಸಾಚಾರು । ಯೇ ಅರ್ಥೀ ನ ಲಗೇ ವಿಚಾರು । ವೇದಶಾಸ್ತ್ರಸಂಮತ ॥೩೯೧॥ ಜೋ ನಿತ್ಯಮುಕ್ತ ನಿರ್ವಿಕಾರೀ । ತೋ ವರ್ತತಾ ವರ್ತೇ ಮಜಮಾಝಾರೀ । ಮೀ ತಯಾ ಆಂತುಬಾಹೇರೀ । ಜೇವೀ ಸಾಗರೀ ಕಲ್ಲೋಳ ॥೩೯೨॥ ಯಾಪರೀ ಝಾಲಾ ಜೋ ಪರಬ್ರಹ್ಮ । ತ್ಯಾಸೀ ಸ್ವಪ್ನಪ್ರಾಯ ಧರ್ಮಾಧರ್ಮ । ಬಾಧೂ ನ ಶಕೇ ಇಂದ್ರಿಯಕರ್ಮ । ಹೇ ತ್ಯಾಚೇ ವರ್ಮ ತೋ ಜಾಣೇ ॥೩೯೩॥

ನ ತಥಾ ಬಧ್ಯತೇ ವಿದ್ವಾನ್ ತತ್ರ ತತ್ರಾದಯನ್ ಗುಣಾನ್ । ಪ್ರಕೃತಿಸ್ಥೋಽಪ್ಯ ಸಂಸಕ್ತೋ ಯಥಾ ಖಂ ಸವಿತಾನಿಲಃ ॥೧೨॥

ಅರ್ಥ :- ಗುಣಗಳು ಸರ್ವ ಕರ್ಮಗಳ ಕರ್ತೃ, ಭೋಕ್ತೃವಾಗಿರುವುವು, ಇದನ್ನರಿತ ವಿದ್ವಾನ ಪುರುಷನು ಕರ್ಮವಾಸನೆ ಮತ್ತು ಕರ್ಮಫಲಗಳಿಂದ ಬಂಧಿಸಲ್ಪಡಲಾರನು. ಆಕಾಶವು ಸರ್ವತ್ರವೂ ಇದ್ದೂ ಎಲ್ಲಿಯೂ ಆಸಕ್ತವಾಗಿರುವುದಿಲ್ಲ. ಸೂರ್ಯನು ಜಲದಲ್ಲಿ ಪ್ರತಿಬಿಂಬಿತನಾದರೂ ಲಿಪ್ತನಾಗುವುದಿಲ್ಲ. ವಾಯುವು ಸರ್ವತ್ರವೂ ಸಂಚರಿಸುತ್ತಿದ್ದರೂ ಅಲಿಪ್ತವಾಗಿರುವುದು. ಆದರಂತೆ ವಿದ್ವಾನನು ಪ್ರಕೃತಿ ಪರಿಣಾಮರೂಪ ಶರೀರದಲ್ಲಿದ್ದರೂ ಶರೀರ ಧರ್ಮದಿಂದ ಕೂಡಿರುವುದಿಲ್ಲ.

ಜಾಗೃತೀ, ಸ್ವಪ್ನ ಮತ್ತು ಸುಷುಪ್ತಿ ಈ ಮೂರು ಅವಸ್ಥೆಗಳಿಗೆ ಸ್ವಲ್ಪವೂ ಸ್ಪರ್ಶ ಮಾಡದೇ ಆತನು ಹಗಲು ರಾತ್ರಿ ಆತ್ಮಸ್ವರೂಪದಲ್ಲಿ ಸ್ಥಿತನಾಗಿರುವನು. ಆತನು ಆತ್ಮಸತ್ತೆಯಲ್ಲಿಯೇ ಮಲಗಿಕೊಂಡಿರುವನು ॥೩೮೨॥ ಈ ರೀತಿಯಾಗಿ ಆತನು ಮೂಲಸ್ವರೂಪದಲ್ಲಿ ನಿದ್ರಿಸುತ್ತಿರಲು ಕೆಳಗೆ ನೆಲವಿರುವುದಿಲ್ಲ, ಮೇಲೆ ಆಕಾಶವಿರುವುದಿಲ್ಲ. ಇಂತಹ ಹಾಸಿಗೆಯ ಮೇಲೆ ಆತನು ಮಲಗುತ್ತಿರುವನು ॥೩೮೩॥ ಈತನ ನಿದ್ರೆಯ ಪದ್ಧತಿಯು ಬಲು ಆಶ್ಚರ್ಯಕಾರಕವಾಗಿರುವುದು. ಮಾತನಾಡುತ್ತಿದ್ದರೂ, ನಡೆಯುತ್ತಿದ್ದರೂ, ಆತನ ನಿದ್ರೆಯು ಭಂಗವಾಗುವುದಿಲ್ಲ. ಉಣ್ಣು ತಿನ್ನುವಾಗಲೂ ಸ್ವಭಾವತವೇ ಆತ್ಮಸ್ವರೂಪದಲ್ಲಿ ಅಖಂಡವಾಗಿ ಮಲಗಿರುವನು ॥೩೮೪॥ ಮಲಗುವವ ಮತ್ತು ಎಚ್ಚರಿಸುವವ ಈ ಇಬ್ಬರೂ ತಾನೇ ಆಗಿರುವನು. ಅಲ್ಲಿ ಯಾರು ಯಾರಿಗೆ ಎಬ್ಬಿಸಬೇಕು? ಆತನು ಶಾಂತ ಪ್ರಸನ್ನ ಚಿತ್ತದಿಂದ ನಿಜಸ್ವರೂಪದಲ್ಲಿ ಮಲಗಿಕೊಂಡಿರುವನು ॥೩೮೫॥ ಆತನು ಎಚ್ಚರವಾಗಿದ್ದರೂ ಆತ್ಮಸ್ವರೂಪದಲ್ಲಿ ಮಲಗಿರುವನು. ಹಾಗೆಯೇ ನಿದ್ರೆಯಲ್ಲಿದ್ದರೂ ಆತ್ಮಜ್ಞಾನದಿಂದ ಎಚ್ಚರಾಗಿರುವನು. ಈ ಪ್ರಕಾರವಾಗಿ ಆತನು ಸ್ವತಃ ಆತ್ಮಸತ್ತೆಯಲ್ಲಿ ಒಂದಾಗಿರುವುದರಿಂದ ನಿದ್ರೆಯ ಅಧೀನನಾಗುವುದಿಲ್ಲ ॥೩೮೬॥ ಶಯ್ಯೆ, ಶಯನ ಮತ್ತು ಶಯನಗೃಹ ಈ ಎಲ್ಲವೂ ವಸ್ತುತಃ ತಾನೇ ಆಗಿರುವನು. ಆತನು ತನ್ನ ಆತ್ಮಸ್ವರೂಪದ ತನ್ನದೇ ಆದ ಮನೆಯಲ್ಲಿ ನಿತ್ಯ ನಿರಂತರವಾಗಿ ಆತ್ಮಸ್ವರೂಪದಲ್ಲಿ ಮಲಗಿರುವನು ॥೩೮೭॥ ಈ ಪ್ರಕಾರವಾಗಿ ಮುಕ್ತನು ಯಾವ ಯಾವ ಕರ್ಮಗಳನ್ನು ಮಾಡುತ್ತಿರುವನೋ, ಅಲ್ಲಲ್ಲಿ ಪರಬ್ರಹ್ಮವು ಪ್ರಕಟವಾಗುವುದು. ಮುಕ್ತನಿಗೆ ನಿಯಮ ಎನ್ನುವುದು ಒಂದೂ ಇರುವುದಿಲ್ಲ. ಇದೇ ಆತನ ಮುಖ್ಯ ಮರ್ಮವಾಗಿರುವುದು ॥೩೮೮॥ ಮುಕ್ತನಿಗೆ ನಿಯಮಗಳ ಬಂಧನವು ಇರುವುದಾದರೆ, ಆಗ ಆತನಿಗೆ ಸಾಧನೆಗಳು ಅಂಟಿಕೊಳ್ಳುವುವು. ಸಾಧನೆ ಬರಲು ಮುಕ್ತಿಯು ಪ್ರಾಪ್ತವಾಗಲಾರದು ॥೩೮೯॥ ಮುಕ್ತನಿಗೆ ಯಾವುದರಲ್ಲಿಯೂ ಆಸಕ್ತಿಯು ಇರುವುದಿಲ್ಲ. ಆತನ ಪ್ರಾರಬ್ಧ ಕರ್ಮಾನುಸಾರವಾಗಿ ಆತನು ನಿರಪೇಕ್ಷ ಭಾವದಿಂದ ಕರ್ಮಗಳನ್ನು ಮಾಡುತ್ತಿರುವನು ॥೩೯೦॥ ಯಾರ ಅಹಂಕಾರವು ಇಲ್ಲದಾಗಿರುವುದೋ, ಆತನು ನಿಜವಾಗಿಯೂ ನನ್ನ ಸ್ವರೂಪವೇ ಆಗಿರುವನು. ಈ ವಿಷಯಕ್ಕೆ ಯಾವ ವಿಚಾರವನ್ನೂ ಮಾಡುವ ಕಾರಣವಿಲ್ಲ. ಕಾರಣ ಇದು ವೇದಶಾಸ್ತ್ರಗಳಿಗೂ ಮಾನ್ಯವಾಗಿರುವುದು ॥೩೯೧॥ ಯಾರು ನಿತ್ಯಮುಕ್ತರಾಗಿರುವರೋ ಮತ್ತು ನಿರ್ವಿಕಾರಿಯಾಗಿರುವರೋ, ಅವರು ವ್ಯವಹಾರದಲ್ಲಿ ಕರ್ಮಗಳನ್ನು ಮಾಡುತ್ತಿರಲು ನನ್ನಲ್ಲಿ ಏಕರೂಪರಾಗಿರುವರು. ತೆರೆಗಳ ಒಳಹೊರಗೆ ಸಮುದ್ರವೇ ಇರುವಂತೆ ಅವರ ಒಳಹೊರಗೆ ನಾನೇ ಇರುವೆನು ॥೩೯೨॥ ಈ ಪ್ರಕಾರವಾಗಿ ಯಾರು ಪರಬ್ರಹ್ಮನಲ್ಲಿ ಏಕರೂಪರಾಗಿರುವರೋ, ಅವರಿಗೆ ಧರ್ಮಾಧರ್ಮಗಳು ಸ್ವಪ್ನದಂತೆ ಭಾಸವಾಗುವುವು. ಇಂದ್ರಿಯಗಳ ವ್ಯಾಪಾರವು ಅವರಿಗೆ ಬಾಧಕವಾಗಲು ಶಕ್ಯವಿಲ್ಲ. ಅವರ ಈ ರಹಸ್ಯವನ್ನು ಅವರೇ ಬಲ್ಲರು ॥೩೯೩॥

ಜೆಂಹೀ ಇಂದ್ರಿಯೀ ಕರ್ಮ ಕರಿತಾ । ಮೂರ್ಖಾಸೀ ಝಾಲೀ ದೃಢಬದ್ಧತಾ । ತಿಹೀ ಇಂದ್ರಿಯೀ ವರ್ತತಾ ಜ್ಞಾತಾ । ನಿತ್ಯಮುಕ್ತತಾ ಅನಿವಾರ ।೯೯೪॥ ಮೂರ್ಖಾಸೀ ಕರ್ಮೀ ಅಭಿಮಾನ । ಜ್ಞಾತಾ ಸರ್ವ ಕರ್ಮೀ ನಿರಭಿಮಾನ । ಬಂಧಮೋಕ್ಷಾ ಚೇ ಕಾರಣ । ಅಹಂಕಾರು ಜಾಣ ಜೀವಾಂಸೀ ।೯೯೫॥ "ಅಹಂ ಕರ್ತಾ" "ಅಹಂ ಭೋಕ್ತಾ "। ಹೇಚಿ ಮೂರ್ಖಾಚೀ ದೃಢಬದ್ಧತಾ । ತೇ ಪ್ರಕೃತಿಕರ್ಮ ಆಪುಲೇ ಮಾಥಾ । ನೇಘೇ ಜ್ಞಾತಾ ಅಭಿಮಾನೇ ।೯೯೬॥ ತೇಚಿ ಜ್ಞಾತ್ಯಾಚೀ ನಿರಭಿಮಾನತಾ । ತುಜ ಮ್ಯಾ ಸಾಂಗಿತಲೀ ಆತಾ । ಇಂದ್ರಿಯಾ ವಿಷಯೋ ಭೋಗವಿತಾ । ಆಪುಲೀ ಅಭೋಕ್ತೃತಾ ತೋ ಜಾಣೇ ।೯೯೭॥ ಆಪುಲೀ ಛಾಯಾ ವಿಷ್ಠೇವರೀ ಪಡೇ । ಅಥವಾ ಪಾಲಖೀಮಾಜೀ ಚಢೇ । ತೋ ಭೋಗು ಆಪಣಿಯಾ ನ ಘಡೇ । ತೈಸೇಚಿ ದೇಹ ರೋಕಡೆ ಮುಕ್ತಾಸೀ ।೯೯೮॥ ಮಜ ಹೋಆವೀ ವಿಷಯಪ್ರಾಪ್ತೀ । ಹೇಹೀ ಜ್ಞಾತೇ ನ ವಾಂಛಿತೀ । ವಿಷಯ ಮಿಥ್ಯಾತ್ವೇ ದೇಖತೀ । ಜೇವೀ ಕಾ ಸಂಪತ್ತೀ ಚಿತ್ರೀಚೀ ।೯೯೯॥ ಯಾಲಾಗೀ ಅಸೋನಿಯಾ ದೇಹೀ । ತೋ ನಿತ್ಯಮುಕ್ತ ವಿದೇಹೀ । ತ್ಯಾಸೀ ಪ್ರಕೃತಿಗುಣಾಂಚ್ಯಾ ಠಾಯೀ । ಅಭಿಮಾನು ನಾಹೀ ಸರ್ವಥಾ ।೧೦೦೦॥ ಮ್ಹಣಸೀ ''ಅಸೋನಿಯಾ ದೇಹೀ। ಕೋಣ್ಯಾ ಹೇತು ತೋ ವಿದೇಹೀ'' । ಉದ್ಧವಾ ಐಸೇ ಕಲ್ಪಿಶೀ ಕಾಂಹೀ । ತೋ ದೃಷ್ಟಾಂತು ಪಾಹೀ ಸಾಂಗೇನ ।೧೦೦೧॥ ಆಕಾಶ ಸರ್ವಾಮಾಜೀ ಅಸೇ । ಸರ್ವ ಪದಾರ್ಥೀ ಲಾಗಲೇ ದಿಸೇ । ಪರೀ ಏಕೇ ಹೀ ಪದಾರ್ಥದೋಷೇ । ಮಲಿನ ಕೈಸೇ ಹೋ ನೇಣೇ ।೧೦೦೨॥ ತ್ಯಾ ಗಗನಾಚೇಪರೀ ಪಾಹೀ । ಜ್ಞಾತಾ ಅಸೋನಿಯಾ ದೇಹೀ। ದೇಹಕರ್ಮಾಚ್ಯಾ ಠಾಯೀ । ಅಲಿಪ್ತ ಪಾಹೀ ಸರ್ವದಾ ।೧೦೦೩॥ ಪ್ರಚಂಡ ಆಣೋನಿ ಪಾಷಾಣೇ । ಆಕಾಶ ನ ಚೇಪೇ ಚೇಪಣೇ । ತೇವೀ ಕ್ಷೋಭಲಿಯಾಹೀ ಪ್ರಕೃತಿಗುಣೇ । ಜ್ಞಾತಾ ಜಡಪಣೇ ನ ಬಂಧವೇ ।೧೦೦೪॥ ಆಕಾಶ ಅಸೋನಿಯಾ ಜನೀ । ಕದಾ ರುಳೇನಾ ಜನಘಸಣೀ । ತೈಸಾ ಪ್ರಕೃತಿಕರ್ಮೀ ವರ್ತೋನಿ । ಪ್ರಕೃತಿಗುಣೀ ಅಲಿಪ್ತ ।೧೦೦೫॥ ಗಗನ ಜಳೀ ಬುಡಾಲೇ ದಿಸೇ । ಪರೀ ತೇ ಜಳಾಮಾಜೀ ಕೋರಡೇ ಅಸೇ । ತೇವೀ ಪುತ್ರಕಲತ್ರೀ ಜ್ಞಾತಾ ವಸೇ । ತೇಣೇ ದೋಷೇ ಅಲಿಪ್ತ ।೧೦೦೬॥ ಆಕಾಶಾ ಮಸೀ ಲಾವೂ ಜಾತಾ । ಮಸೀ ಮಾಖೇ ತೋ ಲಾವಿತಾ॥ ತೇವೀ ಮುಕ್ತಾಸೀ ದೋಷೀ ಮ್ಹಣತಾ । ದೋಷ ಸರ್ವಥಾ ಮ್ಹಣತ್ಯಾಸೀ ।೧೦೦೭॥

ಯಾವ ಇಂದ್ರಿಯಗಳಿಂದ ಕರ್ಮಗಳನ್ನು ಮಾಡಲು ಮೂರ್ಖನಿಗೆ ದೃಢಬಂಧನವು ಪ್ರಾಪ್ತವಾಗುವುದು. ಅದೇ ಇಂದ್ರಿಯಗಳಿಂದ ಜ್ಞಾನಿಯು ಕರ್ಮಗಳನ್ನು ಮಾಡಲು ಸಹಜವಾಗಿಯೇ ಮುಕ್ತನಾಗುವನು ।೯೯೪॥ ಮೂರ್ಖ ಮನುಷ್ಯನಿಗೆ ತನ್ನ ಕರ್ಮದ ಅಭಿಮಾನವು ಇರುವುದು. ಆದರೆ ಜ್ಞಾನಿಯು ಮಾತ್ರ ಸರ್ವಕರ್ಮಗಳ ವಿಷಯಕ್ಕೆ ಅಭಿಮಾನರಹಿತನಾಗಿರುವನು. ಜೀವದ ಬಂಧಮೋಕ್ಷಕ್ಕೆ ಅಹಂಕಾರವು ಕಾರಣವಾಗಿರುವುದು. ಇದನ್ನು ಲಕ್ಷದಲ್ಲಿಡು ।೯೯೫॥ ''ನಾನು ಕರ್ತನು'' ''ನಾನು ಭೋಕ್ತನು'' ಎಂದು ತಿಳಿಯುವುದೇ ಮೂರ್ಖನ ದೃಢಬಂಧನವಾಗಿರುವುದು. ಆದರೆ ಜ್ಞಾನಿಯು ಮಾತ್ರ ಈಮಾಯೆಯ ಕಾರ್ಯವನ್ನು ತನ್ನ ತಲೆಯ ಮೇಲೆ ಎಂದಿಗೂ ಹೊತ್ತುಕೊಳ್ಳುವುದಿಲ್ಲ ।೯೯೬॥ ಈ ಯಾವ ಜ್ಞಾನಿಯ ನಿರಭಿಮಾನದ ಅವಸ್ಥೆಯನ್ನು ನಾನು ನಿನಗೆ ಈಗ ಹೇಳಿದೆನು. ಇಂದ್ರಿಯಗಳಿಗೆ ವಿಷಯ ಭೋಗಗಳನ್ನು ಭೋಗಿಸಲು ಬಿಟ್ಟಾಗ ಆತನು ತನ್ನ ಅಭೋಕ್ತತೆಯನ್ನು ಪೂರ್ಣವಾಗಿ ಅರಿಯುತ್ತಿರುವನು ।೯೯೭॥ ತನ್ನ ನೆರಳು ಮಲದ ಮೇಲೆ ಬಿದ್ದಿರಲಿ, ಅಥವಾ ಪಾಲಖಿಯಲ್ಲಿ ಏರಿ ಕುಳಿತಿರಲಿ, ಏನಾಗಿದ್ದರೂ ಅದರ ಸುಖ ದುಃಖಗಳು ಅಥವಾ ಮಾನಾಪಮಾನಗಳು ಬಾಧೆಯನ್ನು ಕೊಡಲಾರವು ।೯೯೮॥ ನನಗೆ ವಿಷಯ ಸುಖವು ಸಿಗಬೇಕೆಂಬ ಬಯಕೆಯು ಜ್ಞಾನೀ ಜನರಿಗೆ ಸ್ವಲ್ಪವೂ ಇರುವುದಿಲ್ಲ. ಅವರು ಚಿತ್ರದಲ್ಲಿನ ಸಂಪತ್ತಿನಂತೆ ವಿಷಯಗಳಿಗೆ ಮಿಥ್ಯೆಯಾಗಿ ತಿಳಿಯುವರು ।೯೯೯॥ ಈ ಪ್ರಕಾರವಾಗಿ ಜ್ಞಾನಿಯು ದೇಹದಲ್ಲಿದ್ದರೂ ಕೂಡ ನಿತ್ಯ ಮುಕ್ತ ವಿದೇಹೀ ಅವಸ್ಥೆಯಲ್ಲಿ ಇರುವನು. ಆತನ ಮನದಲ್ಲಿ ಮಾಯಾಗುಣಗಳ ಕರ್ಮಗಳ ವಿಷಯವಾಗಿ ಮೂಲತಃ ಅಭಿಮಾನವು ಇರುವುದಿಲ್ಲ ।೧೦೦೦॥ ಹೇ ಉದ್ಧವನೇ, ಆತನು ದೇಹದಲ್ಲಿದ್ದು ವಿದೇಹೀ ಹೇಗಾಗುವನು? ಎಂಬ ವಿಚಾರವು ನಿನ್ನ ಮನದಲ್ಲಿ ಬರಬಹುದು. ಆದ್ದರಿಂದ ಆ ವಿಷಯಕ್ಕಾಗಿ ಒಂದು ದೃಷ್ಟಾಂತವನ್ನು ಹೇಳುವೆನು।೧೦೦೧॥ ಆಕಾಶವು ಇದು ಎಲ್ಲದರಲ್ಲಿಯೂ ಇರುವುದು. ಸರ್ವ ಪದಾರ್ಥಗಳಲ್ಲಿ ಹತ್ತಿಕೊಂಡಿರುವಂತೆ ತೋರುತ್ತಿರುವುದು. ಆದರೆ ಒಂದು ಪದಾರ್ಥಗಳಿಂದಲೂ ಅದರ ದೋಷದಿಂದ ಅದು ಎಂದಿಗೂ ಮಲಿನವಾಗುವುದಿಲ್ಲ ।೧೦೦೨॥ ಆ ಆಕಾಶದಂತೆ ಜ್ಞಾನಿಯು ದೇಹದಲ್ಲಿದ್ದರೂ ದೇಹಕರ್ಮಗಳ ವಿಷಯದಲ್ಲಿ ಯಾವಾಗಲೂ ಅಲಿಪ್ತನಾಗಿರುವನು ।೧೦೦೩॥ ದೊಡ್ಡದಾದ ಒಂದು ಕಲ್ಲನ್ನು ತಂದು ಆಕಾಶಕ್ಕೆ ತಿವಿಯುವ ಪ್ರಯತ್ನ ಮಾಡಲು ಆ ಕಲ್ಲು ಆಕಾಶದಲ್ಲಿ ಸಿಕ್ಕಿಕೊಳ್ಳಲಾರದು. ಅದರಂತೆ ಮಾಯೆಯು ಗುಣಗಳೊಂದಿಗೆ ಬೇಕಾದಷ್ಟು ಕ್ಷುಬ್ಧಗೊಂಡರೂ, ಅದರಿಂದ ಜ್ಞಾನಿಯು ಎಂದಿಗೂ ಬದ್ಧನಾಗಲಾರನು ।೧೦೦೪॥ ಆಕಾಶವು ಜನರಲ್ಲಿ ಸರ್ವತ್ರವು ಇದ್ದೂ ಕೂಡ ಜನರ ಘರ್ಷಣೆಯಿಂದ ಘರ್ಷಣೆಗೆ ಒಳಪಡುವುದಿಲ್ಲ. ಆದರಂತೆ ಜ್ಞಾನಿಯು ಪ್ರಕೃತಿಯ ಸರ್ವ ಕರ್ಮಗಳನ್ನು ಮಾಡಿಯೂ ಕೂಡ ಪ್ರಕೃತಿಯ ಗುಣಗಳಿಂದ ಅಲಿಪ್ತನಾಗಿರುವನು ।೧೦೦೫॥ ಆಕಾಶವು ನೀರಿನಲ್ಲಿ ಮುಳುಗಿದಂತೆ ತೋರುವುದು. ಆದರೆ ಅದು ನೀರಿನಲ್ಲಿ ತೋಯದೇ ಇದ್ದಂತೆಯೇ ಇರುವುದು. ಅದರಂತೆಯೇ ಜ್ಞಾನಿಯು ಅಲಿಪ್ತನಾಗಿರುವನು ।೧೦೦೬॥ ಆಕಾಶಕ್ಕೆ ಕಪ್ಪುಮಸಿಯನ್ನು ಬಳೆಯಲು ಹೋದರೆ, ಆ ಕಪ್ಪು ಮಸಿಯು ಬಳೆಯುವವನಿಗೆಯೇ ಹತ್ತುವುದು. ಅದರಂತೆ ಜ್ಞಾನೀ ಪುರುಷನಿಗೆ ಯಾರಾದರೂ ದೋಷಿ ಎಂದರೆ, ಹೇಳುವವನೇ ದೋಷಿಯಾಗುವನು. ಜ್ಞಾನಿಯು ನಿರ್ದೋಷಿಯಾಗಿರುವನು ।೧೦೦೭॥

ಶೀತ ಉಷ್ಣ ಪರ್ಜನ್ಯಧಾರಾ । ಅಂಗೀ ನ ಲಾಗತೀ ಅಂಬರಾ । ತೇವೀ ನಾನಾ ದ್ವಂದ್ವಸಂಭಾರಾ । ಮುಕ್ತಾಚಾ ಉಭಾರಾ ನಿರ್ದ್ವಂದ್ವ ॥೫೦೮॥ ಯೇಊನಿ ನಾನಾ ಮೇಘಪಟಳೇ । ಗಡಗರ್ಜನೇ ಗಗನ ಝಾಂಕೋಳೇ । ತ್ಯಾಮಾಜೇ ಅಸೋನಿಯಾ ವೇಗಳೇ । ಗಗನ ನಾತಳೇ ಮೇಘಾತೇ ॥೫೦೯॥ ತೇವೀ ಮೋಹಮಮತೇಚ್ಯಾ ಕಡಾಡೀ । ಮುಕ್ತಾಸೀ ಕರಿತೀ ತಾಡಾತೋಡೀ । ತೇ ತಂವ ತ್ಯಾಸ ಲಗೇ ವೋಢೀ । ಪರಾಪರ ಥಡೀ ಅಲಿಪ್ತ ॥೫೧೦॥ ಗಗನಾಸೀ ಆಗೀ ಲಾವೂ ಜಾತಾ । ಅಗ್ನಿ ವಿರೆಝೋನಿ ಜಾಯ ಸರ್ವಥಾ । ತೇವೀ ತ್ರಿಗುಣೇ ಮುಕ್ತಾಸೀ ಬಾಂಧತಾ । ಗುಣೇ ಸಗುಣತಾ ನಿಮಾಲೀ ॥೫೧೧॥ ಪ್ರಳಯವಾಯೂಚೇನಿ ಝಡಾಡೇ । ಆಕಾಶ ನಿಜಸ್ವಭಾವೇ ನುಡೇ । ಸಗಳಾ ವಾಯು ಗಗನೀ ಬುಡೇ । ಪಾಹತಾ ನಾತುಡೇ ಗಗನೀಹೀ ॥೫೧೨॥ ತೇವೀ ಅವಿದ್ಯಾನಿಜಸ್ವಭಾವತಾ । ಮುಕ್ತಾಸೀ ನ ಕರವೇಚಿ ಬದ್ಧತಾ । ''ಅವಿದ್ಯಾ'' ನಾಂವೇ ಮಿಥ್ಯಾ ವಾರ್ತಾ । ಮುಕ್ತ ತತ್ತ್ವತಾ ದೇಖೇನಾ ॥೫೧೩॥ ಗಗನಾಚ್ಯಾ ಐಶೀ ಅಲಿಪ್ತತಾ । ಸರ್ವ ಕರ್ಮೀ ವರ್ತೇ ಜ್ಞಾತಾ । ಜನೀ ಅಲಿಪ್ತ ವರ್ತೇ ಸವಿತಾ । ತೇವೀ ಮುಕ್ತತಾ ಅವಧಾರೀ ॥೫೧೪॥ ಘೃತಮದ್ಯಜಳಾ ಆಂತೌತಾ । ಬಿಂಬೋನಿ ಅಲಿಪ್ತ ಸವಿತಾ । ತೇವೀ ಬಾಲ್ಯ - ತಾರುಣ್ಯ - ವೃದ್ಧತಾ । ವಯಸಾ ಚಾಳಿತಾ ಅಲಿಪ್ತ ॥೫೧೫॥ ನಾತರೀ ಸೂರ್ಯಾಚೇನಿ ಪ್ರಕಾಶೇ । ಶುಭಾಶುಭ ಕರ್ಮ ವಾಢಲೇ ಅಸೇ । ಸವಿತಾ ಅಲಿಪ್ತ ತೇಣೇ ದೋಷೇ । ನಿಜಪ್ರಕಾಶೇ ಪ್ರಕಾಶಕು ॥೫೧೬॥ ತೇವೀ ಆಶ್ರಮಧರ್ಮೀ ಅಸತಾ । ನಿತ್ಯಾದಿ ಕರ್ಮೇ ಆಚರಿತಾ । ಮುಕ್ತಾಸೀ ನಾಹೀ ಕರ್ಮಬದ್ಧತಾ । ಅಕರ್ತಾತ್ಮತಾ ನಿಜಬೋಧೇ ॥೫೧೭॥ ಸೂರ್ಯಕಾಂತೀ ಸವಿತಾ । ಅಗ್ನಿ ಉಪಜವೂನಿ ಅಕರ್ತಾ । ತೈಸಾ ನಿಜತತ್ತ್ವಾಚಾ ಜ್ಞಾತಾ । ಕರೋನಿ ಅಕರ್ತಾ ಕರ್ಮಾಚಾ ॥೫೧೮॥ ಜಳೀ ಸವಿತಾ ಪ್ರತಿಬಿಂಬಲಾ । ಪರೀ ತೋ ನಾಹೀ ವೋಲಾ ಝಾಲಾ । ತೈಸಾ ಸ್ತ್ರೀಸಂಗೇ ಪ್ರಜಾ ವ್ಯಾಲಾ । ನಾಹೀ ಮುಕಲಾ ಬ್ರಹ್ಮಚರ್ಯಾ ॥೫೧೯॥ ಸವಿತ್ಯಾಚೇ ಅಲಿಪ್ತಪಣ । ತೇ ನಿರೂಪಿಲೇ ನಿರೂಪಣ । ಆತಾ ದೇಹೀ ಅಸೋನಿ ಅಲಿಪ್ತಪಣ । ತೇಹೀ ಲಕ್ಷಣ ಅವಧಾರೀ ॥೫೨೦॥ ಜೇವೀ ದೇಹಾಮಾಜೇ ಅಸೇ ಪ್ರಾಣ । ಪ್ರಾಣಾಸ್ತವ ದೇಹ ಚಲನ । ಪರೀ ದೇಹದೋಷಾ ನಾತಳೇ ಪ್ರಾಣ । ಅಲಿಪ್ತ ಜಾಣ ಸುಖದುಃಖಾ ॥೫೨೧॥

ಚಳಿ, ಬಿಸಿಲು, ಅಥವಾ ಮಳೆಯ ಧಾರೆಗಳು ಆಕಾಶದ ಅಂಗಕ್ಕೆ ಹತ್ತುವುದಿಲ್ಲ. ಅದರಂತೆ ಅನೇಕ ಪ್ರಕಾರದ ದ್ವಂದ್ವದ ಸಮುದಾಯದಲ್ಲಿ ಜ್ಞಾನಿಯು ದ್ವಂದ್ವರಹಿತನಾಗಿರುವನು ॥೫೦೮॥ ಮೋಡಗಳ ವಿವಿಧ ಪ್ರಕಾರದ ಗುಡುಗು ಮತ್ತು ಮಿಂಚಿನ ಕಡಕಡಾಟವು ಇವು ಆಕಾಶವನ್ನು ಮುತ್ತಿಕೊಳ್ಳುವುವು. ಆದರೆ ಆಕಾಶವು ಆ ಮೋಡಗಳಿಗೆ ಅಥವಾ ಮಿಂಚುಗಳಿಗೆ ಸ್ಪರ್ಶ ಕೂಡ ಮಾಡುವುದಿಲ್ಲ ॥೫೦೯॥ ಅದರಂತೆ ಮೋಹ ಮಮತೆಗಳ ಉರ್ಮಿಯು ಮುಕ್ತನಿಗೆ ತೊಂದರೆ ಕೊಡುವ ಪ್ರಯತ್ನ ಮಾಡುವುವು. ಆದರೆ ಆತನು ಅವುಗಳಲ್ಲಿ ಸಿಲುಕಿಕೊಳ್ಳಲು ಶಕ್ಯವಿಲ್ಲ. ಆತನು ಎರಡು ದಂಡೆಗಳಲ್ಲಿಯೂ ಅಲಿಪ್ತನಾಗಿರುವನು ॥೫೧೦॥ ಆಕಾಶಕ್ಕೆ ಬೆಂಕಿಯನ್ನು ಹೆಚ್ಚುವ ಪ್ರಯತ್ನ ಮಾಡಲು ಅದಕ್ಕೆ ಬೆಂಕಿ ಹತ್ತುವುದು ಸಾಧ್ಯವೇ ಇಲ್ಲ. ಬೆಂಕಿಯು ಮಾತ್ರ ಆರಿಹೋಗುವುದು. ಅದರಂತೆ ಮೂರು ಗುಣಗಳು ಮುಕ್ತನಿಗೆ ಬಂಧಿಸಲು ಹೋದರೆ, ಆ ಗುಣಗಳ ಗುಣತ್ವವೇ ಇಲ್ಲದಾಗುವುದು ॥೫೧೧॥ ಭಯಂಕರವಾದ ಪ್ರಳಯ ವಾಯುವಿನಿಂದ ಆಕಾಶವು ಹಾರಿಹೋಗಲಾರದು. ಎಲ್ಲ ವಾಯುವು ಆಕಾಶದಲ್ಲಿ ಮುಳುಗಿ ಹೋಗುವುದು. ಆ ವಾಯುವನ್ನು ಕಾಣುವ ಪ್ರಯತ್ನ ಮಾಡಲು ಅದು ಆಕಾಶದಲ್ಲಿಯೂ ಕೈಗೆ ಸಿಗುವುದಿಲ್ಲ ॥೫೧೨॥ ಅದರಂತೆ ಅವಿದ್ಯೆಗೆ ತನ್ನ ಸ್ವಭಾವದಂತೆ ಮುಕ್ತನಿಗೆ ಬದ್ಧಗೊಳಿಸಲು ಬರುವುದಿಲ್ಲ. ಅವಿದ್ಯೆಯು ಈ ನಾಮದಿಂದಲೇ ಅದು ಮಿಥ್ಯೆಯಾಗಿರುವುದೆಂದು ಸ್ಪಷ್ಟವಾಗುತ್ತದೆ. ಇದು ಮುಕ್ತನಿಗೆ ಕಾಣುವುದಿಲ್ಲ ॥೫೧೩॥ ಯಾರು ಆಕಾಶದಂತೆ ಸರ್ವ ಕರ್ಮಗಳಲ್ಲಿ ಅಲಿಪ್ತನಾಗಿರುವನೋ, ಆತನು ನಿಜವಾದ ಜ್ಞಾನೀ ಪುರುಷನಾಗಿರುವನು. ಸೂರ್ಯನು ಹೇಗೆ ಸೃಷ್ಟಿಯಿಂದ ಅಲಿಪ್ತನಾಗಿರುವನೋ, ಅದರಂತೆ ಮುಕ್ತನ ಸ್ಥಿತಿಯಾಗಿರುವುದು. ಇದನ್ನು ಲಕ್ಷದಲ್ಲಿಡು ॥೫೧೪॥ ತುಪ್ಪ, ಮದ್ಯ ಮತ್ತು ಜಲ, ಇವುಗಳಲ್ಲಿ ಸೂರ್ಯನ ಪ್ರತಿಬಿಂಬವು ಬೀಳಲು, ಯಾವ ಪ್ರಕಾರವಾಗಿ ಸೂರ್ಯನು ಅವುಗಳಿಂದ ಅಲಿಪ್ತನಾಗಿರುವನೋ, ಅದರಂತೆ ಬಾಲ್ಯ, ತಾರುಣ್ಯ ಹಾಗೂ ವಾರ್ಧಕ್ಯ ಇವುಗಳಲ್ಲಿ ಪ್ರಾಪ್ತ ವಿಷಯಗಳನ್ನು ಭೋಗಿಸಿ ಮುಕ್ತ ಪುರುಷನು ಅಲಿಪ್ತನಾಗಿರುವನು ॥೫೧೫॥ ಸೂರ್ಯನ ಪ್ರಕಾಶದಲ್ಲಿ ಶುಭಾಶುಭ ಕರ್ಮಗಳು ಆಗುತ್ತಿರುವವು. ಆದರೆ ಸೂರ್ಯನು ಈ ಎಲ್ಲ ದೋಷಗಳಿಂದ ಅಲಿಪ್ತನಾಗಿರುವನು. ತನ್ನ ಸ್ವಯಂಪ್ರಕಾಶದಿಂದ ಆತನು ಸದೈವ ಪ್ರಕಾಶಮಾನನಾಗಿರುವನು ॥೫೧೬॥ ಇದರಂತೆ ಆಶ್ರಮ ಧರ್ಮದಲ್ಲಿದ್ದುಕೊಂಡು ನಿತ್ಯ ನೈಮಿತ್ತಿಕ ಕರ್ಮಗಳನ್ನು ಆಚರಿಸುತ್ತಿರಲು ಮುಕ್ತನಿಗೆ ಕರ್ಮಗಳಿಂದ ಬಂಧನವಾಗುವುದಿಲ್ಲ. ಆತ್ಮಜ್ಞಾನದ ಪ್ರಕಾಶದಿಂದ ಆತನು ಅಕರ್ತನಾಗಿರುವನು ॥೫೧೭॥ ಸೂರ್ಯಕಾಂತ ಮಣಿಯಲ್ಲಿ ಸೂರ್ಯನು ಅಗ್ನಿಯನ್ನು ನಿರ್ಮಾಣಗೊಳಿಸಿ ತಾನು ಅಕರ್ತನಾಗಿರುವನು. ಅದರಂತೆ ಆತ್ಮಜ್ಞಾನಿಯು ಕರ್ಮಗಳನ್ನು ಮಾಡಿದರೂ ಸಹ ಅಕರ್ತನಾಗಿರುವನು ॥೫೧೮॥ ನೀರಿನಲ್ಲಿ ಸೂರ್ಯನ ಪ್ರತಿಬಿಂಬವು ಬೀಳುತ್ತಿರುತ್ತದೆ. ಆದರೆ ಆ ಸೂರ್ಯನು ನೀರಿನಿಂದ ಸ್ವಲ್ಪವೂ ತೋಯುವುದಿಲ್ಲ. ಅದರಂತೆ ಸ್ತ್ರೀ ಸಂಗತಿಯಿಂದ ಸಂತತಿಯನ್ನು ಉತ್ಪನ್ನಗೊಳಿಸಿದರೂ ಆತನ ಬ್ರಹ್ಮಚರ್ಯವು ಭಂಗವಾಗುವುದಿಲ್ಲ ॥೫೧೯॥ ಇಲ್ಲಿಯವರೆಗೆ ಸೂರ್ಯನ ಅಲಿಪ್ತತೆಯ ನಿರೂಪಣೆಯನ್ನು ಮಾಡಲಾಯಿತು. ದೇಹದಲ್ಲಿ ಇದ್ದುಕೊಂಡು ಆತನು ಅಲಿಪ್ತನಾಗಿ ಹೇಗಿರುವನೆಂಬ ಇದರ ಲಕ್ಷಣವನ್ನು ಈಗ ಕೇಳು ॥೫೨೦॥ ಶರೀರದಲ್ಲಿ ಪ್ರಾಣವು ಇರುವುದರಿಂದ ಆ ಪ್ರಾಣದಿಂದ ದೇಹದ ಎಲ್ಲ ವ್ಯಾಪಾರಗಳಾಗುತ್ತಿರುವುವು. ಆದರೆ ಪ್ರಾಣವು ದೇಹದ ದೋಷಗಳಿಗೆ ಎಂದಿಗೂ ಸ್ಪರ್ಶ ಮಾಡುವುದಿಲ್ಲ. ಅದು ಸುಖದುಃಖಗಳಿಂದ ಪೂರ್ಣ ಅಲಿಪ್ತವಾಗಿರುವುದು ॥೫೨೧॥

ತೈಸಾ ಮುಕ್ತ ಅಸೋನಿ ಸಂಸಾರೀ । ಸಂಸಾರವ್ಯವಹಾರ ಸರ್ವ ಕರೀ । ಪರೀ ಸಂಸಾರದೋಷು ಅಂಗಾವರೀ। ತಿಳಹೀಭರೀ ಲಾಗೇನಾ ।।೪೨೨।। ವಾಯು ಸರ್ವಾತೇ ಸ್ಪರ್ಶತು । ಪರೀ ಸ್ಪರ್ಶದೋಷಾಂಸೀ ಅಲಿಪ್ತು । ತೇವೀ ಅಹಂಮಮತಾ ನಾತಳತು । ಮುಕ್ತ ವರ್ತತು ದೇಹಗೇಹೀ ।।೪೨೩।। ವಾಯೂಸೀ ಜೇವೀ ಸರ್ವತ್ರ ಗಗನ । ಪರೀ ಕೋಠೇಹೀ ಆಸಕ್ತ ನವ್ಹೇ ಜಾಣ । ತೇವೀ ವಿಷಯೀ ನಹೋನಿ ಆಪಣ । ವಿಷಯ ಸೇವನ ಮುಕ್ತಾಚೇ।।೪೨೪।। ವಾಯೂಸೀ ಏಕೇ ಠಾಯೀ ನಾಹೀ ವಸ್ತೀ । ಮುಕ್ತಾಸೀ ದೇಹಗೇಹೀ ನಾಹೀ ಆಸಕ್ತೀ । ವಾಯೂಸೀ ನಭಾಮಾಜೀ ವಿಶ್ರಾಂತೀ । ಮುಕ್ತಾಸೀ ಗುಣಾತೀತೀ ವಿಶ್ರಾಮ ।।೪೨೫।। ಏವಢೇ ಜೇ ಅಗಾಧಪಣ । ತೇ ಮುಕ್ತಾಚೇ ಮುಕ್ತಿಕಾರಣ । ಉದ್ಧವಾಸೀ ಮ್ಹಣೇ ಶ್ರೀಕೃಷ್ಣ । ಪ್ರಥಮ ಜಾಣ ವಿವೇಕು ।।೪೨೬।।

ವೈಶಾರದ್ಯೇಕ್ಷಯಾಸಂಗಶಿತಯಾ ಛಿನ್ನಸಂಶಯಃ । ಪ್ರತಿಬುದ್ಧ ಇವ ಸ್ವಪ್ನಾನ್ನಾನಾತ್ವಾದ್ ವಿನಿವರ್ತತೇ ।।೧೩।।

ಅರ್ಥ :- ವೈರಾಗ್ಯದಿಂದ ತೀಕ್ಷ್ಣಗೊಳಿಸಿರುವ ಅತಿ ನಿಪುಣವಾದ ಆತ್ಮಜ್ಞಾನದಿಂದ ಯಾರ ಸಂಶಯ ಮತ್ತು ಅಸಂಭಾವಾದಿ ದೋಷಗಳು ನಿವೃತ್ತವಾಗಿರುವುವೋ ಅಂತಹ ಜ್ಞಾನಿಯು ಸ್ವಪ್ನದಿಂದ ಎಚ್ಚರಾದ ಮನುಷ್ಯನಂತೆ ದೇಹಾದಿ ದ್ವೈತಗಳಿಂದ ಸಹಜವಾಗಿಯೇ ನಿವೃತ್ತನಾಗುತ್ತಿರುವನು.

ವಿವೇಕೇ ಬುದ್ಧಿ ಅತಿಸಂಪನ್ನ । ತಿಸೀ ಉಪಜೇ ನಿತ್ಯಾ ನಿತ್ಯಜ್ಞಾನ । ಪರೀ ತೇ ಖಿರಂಗಟಲೇ ಅಸೇ ಜಾಣ। ವೈರಾಗ್ಯೇವೀಣ ವಾಢೇನಾ ।।೪೨೭।। ವಿವೇಕೇವೀಣ ವೈರಾಗ್ಯ ಗಹನ । ತೇ ಕೇವಳ ಆಂಧಳೇ ಜಾಣ । ನೇಣೇ ಆಪುಲೇ ನಿಜಾಸತ್ಮ ಪತನ । ಆಂಧಕೂಪೀ ಜಾಣ ತೇ ಪಡೇ ।।೪೨೮।। ಮಾತಲೇ ಹಾತಿರೂ ಅಂಧ । ಸ್ವೈರಾ ಧಾಂವೇ ಸುಬದ್ಧ । ನೇಣೇ ನಿಜಾತ್ಮ ಪತನಬಾಧ । ತೇವೀ ವೈರಾಗ್ಯ ಮಂದ ವಿವೇಕೇವೀಣ ।।೪೨೯।। ಜೇಥ ವಿವೇಕ ವೈರಾಗ್ಯ ಸಂಯೋಗ । ತೇಥ ನಿತ್ಯ ಸಂಗ್ರಹೋ ಅನಿತ್ಯತ್ಯಾಗ । ತೇಚಿ ''ಸದ್ವಿದ್ಯಾಲಕ್ಷಣ'' ಖಡ್ಗ । ಝಳಕತ ಚಾಂಗ ನೈರಾಶ್ಯೇ ।।೪೩೦।। ತೇಚಿ ಗುರುವಚನ ಸಹಾಣೇಸೀ । ಲಾವೂನಿ ಅತಿತೀಕ್ಷ್ಣ ಕೇಲೇ ತ್ಯಾಸೀ । ಘಾಯೇ ಭೇದಿಲೇ ಸಂಶಯಾಸೀ। ಸಂಕಲ್ಪವಿಕಲ್ಪೇಸೀ ಸಮೂಳ ।।೪೩೧। ಅಸಂಭಾವನಾ ವಿಪರೀತ ಭಾವನಾ । ನಿಃಶೇಷ ತುಟಲಿಯಾ ವಾಸನಾ। ನಿಜಸ್ವರೂಪೀ ತೇಂವ್ಹಾ ಜಾಣಾ । ಜಾಗೇಪಣಾ ತೋ ಆಲಾ ।।೪೩೨।। ಜೋ ಅವಿದ್ಯಾಲಕ್ಷಣ ದೀರ್ಘ ಸ್ವಪ್ನ। ನಾನಾತ್ವೇ ಭೋಗಿತಾ ಆಪಣ । ತೋ ಅದ್ವೈತೀ ಜಾಗಾ ಝಾಲಾ ಜಾಣ । ಕೃಪಾ ಥಾಪಟೂನ ಗುರುವಚನೇ।।೪೩೩।।

ಅದರಂತೆ ಮುಕ್ತನು ಯಾವ ಈ ಪ್ರಪಂಚದಲ್ಲಿದ್ದುಕೊಂಡು ಸರ್ವ ವ್ಯವಹಾರವನ್ನು ಮಾಡುವನು. ಆದರೆ ಸಂಸಾರದಲ್ಲಿನ ದೋಷಗಳಿಂದ ಆತನು ಸ್ವಲ್ಪವೂ ಲಿಪ್ತನಾಗುವುದಿಲ್ಲ ।।೪೨೨।। ವಾಯುವು ಎಲ್ಲವನ್ನೂ ಸ್ಪರ್ಶಿಸುವುದು. ಆದರೆ ಸ್ಪರ್ಶದ ದೋಷವು ಅದಕ್ಕೆ ತಗಲುವುದಿಲ್ಲ. ಅದರಂತೆ ನಾನು ಎನ್ನುವುದಕ್ಕೆ ಮುಟ್ಟದೇ ಮುಕ್ತನು ಈ ದೇಹದಲ್ಲಿ ವ್ಯವಹರಿಸುವನು ।।೪೨೩।। ವಾಯುವು ಎಲ್ಲ ಸ್ಥಳಗಳಲ್ಲಿಯೂ ಹೋಗುತ್ತಿರುವುದು. ಆದರೆ ಎಲ್ಲಿಯೂ ಆಸಕ್ತವಾಗುವುದಿಲ್ಲ. ಅದರಂತೆ ತಾನು ವಿಷಯೀಯಾಗದೇ ಮುಕ್ತನ ವಿಷಯ ಸೇವನೆಯಾಗುತ್ತಿರುವುದು ।।೪೨೪।। ವಾಯುವು ಒಂದೇ ಸ್ಥಳದಲ್ಲಿ ವಸತಿ ಮಾಡುವುದಿಲ್ಲ. ಅದರಂತೆ ಮುಕ್ತನ ಆಸಕ್ತಿಯು ದೇಹದಲ್ಲಿರುವುದಿಲ್ಲ. ವಾಯುವು ಆಕಾಶದಲ್ಲಿ ವಿಶ್ರಾಂತಿಯನ್ನು ಪಡೆಯುವುದು. ಮುಕ್ತನು ಗುಣಾತೀತನಾಗಿ ವಿಶ್ರಾಂತಿಯನ್ನು ಪಡೆಯುತ್ತಿರುವನು ।।೪೨೫।। ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು, ಹೀಗೆ ಅಗಾಧವಾದ ಸ್ಥಿತಿಯು ಮುಕ್ತನಿಗೆ ಮುಕ್ತಿಗೆ ಕಾರಣೀಭೂತ ಆಗಿರುವುದು. ಅದರಲ್ಲಿ ವಿವೇಕವು ಮುಖ್ಯವಾಗಿರುವುದು. ಇದನ್ನು ನೀನು ಲಕ್ಷದಲ್ಲಿಡು ।।೪೨೬।।

ವಿವೇಕದಿಂದ ಬುದ್ಧಿಯು ಅತ್ಯಂತ ಗಂಭೀರವಾಗುವುದು. ಅದಕ್ಕೆ ನಿತ್ಯ ಅಂದರೇನು? ಮತ್ತು ಅನಿತ್ಯವೆಂದರೇನು? ಎಂಬ ಜ್ಞಾನವಾಗುವುದು. ಆದರೆ ಆ ಜ್ಞಾನವು ಕುಂಠಿತವಾಗಿರುವುದು. ವೈರಾಗ್ಯವಿಲ್ಲದೇ ಆ ಜ್ಞಾನವು ಬೆಳೆಯುವುದಿಲ್ಲ. ಇದನ್ನು ಲಕ್ಷದಲ್ಲಿಡು ।।೪೨೭।। ಯಾವ ಈ ವೈರಾಗ್ಯವು ಎಷ್ಟೇ ಗಹನವಾಗಿರಲಿ, ತೀವ್ರವಾಗಿರಲಿ, ಅದು ವಿವೇಕವಿಲ್ಲದೇ ಕೇವಲ ಕುರುಡಾಗಿರುವುದು. ವಿವೇಕ ರಹಿತ ಮನುಷ್ಯನ ಅಧಃಪಾತವಾಗಿ ಅವನು ಅಜ್ಞಾನ ಅಂಧಃಕಾರದಲ್ಲಿ ಬೀಳುವನು ।।೪೨೮।। ಕುರುಡು ಆನೆಗೆ ಮದವೇರಲು, ಅದು ಮನಬಂದಂತೆ ಯದ್ವಾತದ್ವಾ ಧಾವಿಸುವುದು. ನಾನು ತೆಗ್ಗಿಗೆ ಬಿದ್ದು ಸಂಕಟಕ್ಕೆ ಗುರಿಯಾಗುವೆ ಎಂಬುದು ಅದಕ್ಕೆ ತಿಳಿಯುವುದಿಲ್ಲ, ಅದರಂತೆ ವಿವೇಕವಿಲ್ಲದ ವೈರಾಗ್ಯವು ಕುರುಡಾಗಿರುವುದು ।।೪೨೯।। ಯಾರಲ್ಲಿ ವಿವೇಕ ಮತ್ತು ವೈರಾಗ್ಯ ಈ ಎರಡೂ ಇರುವುವೋ ಅಲ್ಲಿ ನಿತ್ಯದ ಸಂಗ್ರಹವಿರುವುದು. ಮತ್ತು ಅನಿತ್ಯದ ತ್ಯಾಗವು ಸಾಧಿಸುತ್ತಿರುವುದು. ಅದುವೇ ಸದ್ವಿದ್ಯಾ ಲಕ್ಷಣರೂಪ ಖಡ್ಗವಾಗಿರುವುದು . ನೈರಾಶ್ಯದ ತೇಜದಿಂದ ಆ ಖಡ್ಗವು ಝಳಪಿಸುತ್ತಿರುವುದು ।।೪೩೦।। ಆ ಖಡ್ಗಕ್ಕೆ ಆತನು ಗುರುವಾಕ್ಯ ರೂಪ ಸಾಣೇಕಲ್ಲಿನ ಮೇಲೆ ತಿಕ್ಕಿ ತೀಕ್ಷ್ಣಗೊಳಿಸುತ್ತಿರುವನು. ಹಾಗೂ ಅದಕ್ಕೆ ಹರಿತಗೊಳಿಸುತ್ತಿರುವನು. ಇದರ ಸಹಾಯದಿಂದ ಸಂಕಲ್ಪ ವಿಕಲ್ಪ ಸಹ ವರ್ತಮಾನ ಸಂಶಯಗಳಿಗೆ ಬೇರು ಸಮೇತವಾಗಿ ಛೇದಿಸಿ ಒಗೆಯುವನು ।।೪೩೧।। ಅಸಂಭಾವನೆ ಎಂದರೆ ಸತ್ಯ ವಸ್ತು ಅಸತ್ಯವಾಗಿ ತೋರುವಿಕೆಯು. ವಿಪರೀತ ಭಾವನೆ ಎಂದರೆ ದೇಹವೇ ಆತ್ಮವೆಂದು ತಿಳಿಯುವುದು. ಈ ಎಲ್ಲ ಭಾವನೆಗಳನ್ನು ಮತ್ತು ವಾಸನೆಗಳನ್ನು ಕತ್ತರಿಸಲ್ಪಡುವುವು. ಆಗ ನಿಜಸ್ವರೂಪದಲ್ಲಿ ಪುರುಷನು ಎಚ್ಚರಾದನೆಂದು ತಿಳಿಯಬೇಕು ।।೪೩೨।। ಯಾವನು ಅಜ್ಞಾನರೂಪ ಯಾವ ದೀರ್ಘ ಸ್ವಪ್ನದಲ್ಲಿ ದೇಹಾದಿ ಪ್ರಪಂಚವನ್ನು ಭೋಗಿಸುತ್ತಿರುವನೋ, ಅವನು ಗುರುವಾಕ್ಯದ ಚಪ್ಪರಿಸಿದ ಕೃಪೆಯಿಂದ ಅದ್ವೈತದಲ್ಲಿ ಎಚ್ಚರಾಗುವನು ।।೪೩೩।।

ತೇಂವ್ಹಾ ನಾನಾತ್ವಾಸೀ ನಾಹೀ ಠಾವೋ । ''ಮೀ ಮಾಝೇ'' ಹೇ ಝಾಲೇ ವಾವೋ । ಫಿಟಲಾ ಅವಿದ್ಯಾಭೇದ ಸಂದೇಹೋ । ಆತ್ಮಾನುಭವೋ ತೋ ಭೋಗೀ ।।೪೩೪।। ಜಾಗಾ ಝಾಲ್ಯಾ ಸ್ವಪ್ನ ಭಾಸೇ । ಪರೀ ತೇ ಮಿಥ್ಯಾ ಝಾಲೇ ಅನಾಯಾಸೇ । ಮುಕ್ತಾಸೀ ಜಗ ತೈಸೇ ದಿಸೇ । ಯಾಲಾಗೀ ತೇಣೇ ದೋಷೇ ಅಲಿಪ್ತ ।।೪೩೫।। ಏವಂ ಮುಕ್ತಾಚೇ ಜೇ ಜೇ ವರ್ತನ । ತೇ ಅಲಿಪ್ತಪಣೇ ಐಸೇ ಜಾಣ । ''ಕಥಂ ವರ್ತೇತ'' ಹಾ ಪ್ರಶ್ನ । ಪ್ರಸಂಗೇ ಲಕ್ಷಣ ಸಾಂಗಿತಲೇ ।।೪೩೬।। ''ಕಥಂ ವಿಹರೇತ್'' ಯಾ ಪ್ರಶ್ನಾಚೇ। ಉತ್ತರ ಐಕಾವಯಾ ಸಾಚೇ । ಉದಿತ ಮನ ಉದ್ಧವಾಚೇ । ಜಾಣೋನಿ ಜೀವೀಚೇ ಹರಿ ಬೋಲೇ ।।೪೩೭।।

ಯಸ್ಯ ಸ್ಯುರ್ವೀತ ಸಂಕಲ್ಪಾ: ಪ್ರಾಣೇಂದ್ರಿಯಮನೋಧಿಯಾಮ್।
ವೃತ್ತಯಃ ಸವಿನಿರ್ಮುಕ್ತೋ ದೇಹಸ್ಥೋಽಪಿ ಹಿ ತದ್ಗುಣೈ:।।೧೪।।

ಅರ್ಥ:- ಯಾರ ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳ ಎಲ್ಲ ಪ್ರಯತ್ನಗಳು ಸಂಕಲ್ಪವಿಲ್ಲದೇ ಆಗುವುವು, ಇವರು ದೇಹದಲ್ಲಿ ಸ್ಥಿರರಾಗಿದ್ದು, ಅದರ ಗುಣಗಳಿಂದ ಮುಕ್ತರಾಗಿರುವರು.

ವಿದ್ಯಮಾನ ದೇಹೀ ಅಸತಾ । ದೇಹಸ್ಥ ಗುಣ ನಾತಳತೀ ಮುಕ್ತಾ । ಪಾಪಪುಣ್ಯಾದಿ ಹೇ ಕಥಾ । ಸುಖದುಃಖವಾರ್ತಾ ತೋ ನೇಣೇ ।।೪೩೮।। ಸಾಂಡಿಲ್ಯಾ ಸಂಕಲ್ಪ ವಿಕಲ್ಪಾಸೀ । ಕಲ್ಪಾಂತೀಹೀ ನಾತಳೇ ತ್ಯಾಸೀ । ಜೇವೀ ಕಾ ಓಕಿಲ್ಯಾ ಓಕಾಸೀ । ಪರತೋನಿ ಕೋಣ್ಹಾಸೀ ನ ಘೇವವೇ ।।೪೩೯।। ಯಾಲಾಗೀ ಮನ ಬುದ್ಧಿ ಇಂದ್ರಿಯ ಪ್ರಾಣ । ಮುಕ್ತಾಚೇ ಜಾಹಲೀ ಸಂಕಲ್ಪಶೂನ್ಯ । ಯಾಚಿಲಾಗೀ ಪಾಪಪುಣ್ಯ । ನ ಲಗೇ ಜಾಣ ಮುಕ್ತಾಸೀ ।।೪೪೦।। ಇಂದ್ರಿಯೀ ವಿಷಯಕ್ರೀಡನ । ಕರಿತಾ ಸಂಕಲ್ಪ ಶೂನ್ಯ । ಮುಕ್ತಾಸೀ ಮನಪಣೇ ನಾಹೀ ಮನ । ವೃತ್ತಿ ಶೂನ್ಯ ಯಾಲಾಗೀ ।।೪೪೧।। ಬಾಳಕ ಲೇಣೆಯಾ ಪ್ರಮಾಣ ನೇಣೇ । ತರೀ ಅಂಗೀ ಶೋಭೇ ಲೇಇಲೇಪಣೇ । ತೇವೀ ಕರ್ಮೇ ವಿಗುಂತಲೀ ಕರಣೇ । ಮುಕ್ತ ಅಕರ್ತೇಪಣೇ ಅಲಿಪ್ತ ।।೪೪೨।। ಸಂಕಲ್ಪವಿರಹಿತ ವಿಹಾರ । ತೋಚಿ ಮುಕ್ತ ಜಾಣ ಪಾ ಸಾಚಾರ । ಕಥಂ ''ವಿಹರಿತ'' ಹೇ ಉತ್ತರ । ಥೋಡೇನಿ ಥಾರ ಸಾಂಗಿತಲೇ ।।೪೪೩।। ಮ್ಯಾ ಸಾಂಗಿತಲೀ ಜೀ ಜೀ ಲಕ್ಷಣೇ । ತೀ ತೀ ಮುಕ್ತಾಚೇ ಮುಕ್ತಚಿ ಜಾಣೇ । ಆಣಿಕಾಸೀ ವ್ಯುತ್ಪತ್ತಿಪಣೇ । ಮುಕ್ತ ಜಾಣಣೇ ಹೇ ನ ಘಡೇ ।।೪೪೪।।

ಆಗ ನಾನಾತನದ ಭಾವಕ್ಕೆ ಅಂದರೆ ದ್ವೈತಭಾವನೆಗೆ ಸ್ಥಳವೇ ಇಲ್ಲದಾಗುವುದು. ನಾನು ಮತ್ತು ನನ್ನದೆಂಬ ಭಾವನೆಯು ನಷ್ಟವಾಗುವುದು. ಅವಿದ್ಯಾ ಭೇದದ ಸಂಶಯವು ಮುಗಿಯುವುದು. ಆಗ ಆತನು ಆತ್ಮಸತ್ತೆಯಲ್ಲಿನ ಆನಂದದ ಅನುಭವವನ್ನು ಸ್ವೀಕರಿಸುತ್ತಿರುವನು ।।೪೩೪।। ನಿದ್ರೆಯಿಂದ ಎಚ್ಚರಾದಮೇಲೆ ಸ್ವಪ್ನದ ನೆನಪಾಗುವುದು. ಆಗ ಸ್ವಪ್ನವು ಸಹಜವಾಗಿಯೇ ಸುಳ್ಳೆನಿಸುವುದು. ಅದರಂತೆ ಮುಕ್ತನಿಗೆ ಈ ಎಲ್ಲ ಜಗತ್ತು ತೋರಿ ಅಡಗುವಂತೆ ಸುಳ್ಳಾಗಿ ತೋರುವುದು. ಆದ್ದರಿಂದ ಆತನು ಆ ದೋಷಗಳಿಂದ ಅಲಿಪ್ತನಾಗಿರುವನು ।।೪೩೫।। ಈ ಪ್ರಕಾರವಾಗಿ ಮುಕ್ತನ ಆಚರಣೆಯು ಅಲಿಪ್ತತೆಯಿಂದ ವರ್ತಿಸಲ್ಪಡುವುದು. ''ಕಥಂ ವರ್ತತೇ'' ಅಂದರೆ ಹೇಗೆ ವರ್ತಿಸುವನು? ಎಂದು ಪ್ರಶ್ನಿಸಿದ್ದಕ್ಕೆ ಪ್ರಸಂಗಾನುಸಾರವಾಗಿ ಈ ಲಕ್ಷಣಗಳನ್ನು ಹೇಳಲ್ಪಟ್ಟವು ।।೪೩೬।। ಈಗ ''ಕಥಂ ವಿಹರೇತ್'' ಅಂದರೆ ಆತನು ಹೇಗೆ ವಿಹರಿಸುವನು? ಈ ಪ್ರಶ್ನೆಯ ಉತ್ತರವನ್ನು ಕೇಳಲು ಉದ್ಧವನು ಉತ್ಸುಕತನಾಗಿದ್ದು ಅರಿತುಕೊಂಡು ಶ್ರೀ ಕೃಷ್ಣನು ತನ್ನ ಜೀವದ ಮಾತುಗಳನ್ನು ಹೇಳಲಾರಂಭಿಸಿದನು ।।೪೩೭।।

ಮುಕ್ತ ಪುರುಷನು ಸಧ್ಯದ ಈ ದೇಹದಲ್ಲಿದ್ದರೂ ಕೂಡ ಗುಣಗಳು ಆತನಿಗೆ ಸ್ಪರ್ಶ ಮಾಡಲಾರವು. ಪಾಪಪುಣ್ಯ ಸುಖದುಃಖ ಇವುಗಳಲ್ಲಿಯ ಯಾವ ವಾರ್ತೆಯೂ ಆತನು ಅರಿಯನು ।।೪೩೮।। ಯಾವ ಪ್ರಕಾರವಾಗಿ ವಾಂತಿಯನ್ನು ಮಾಡಿಕೊಂಡ ಪದಾರ್ಥವನ್ನು ಪುನ: ಯಾರೂ ಅದನ್ನು ಭುಂಜಿಸಲಾರರು. ಅದರಂತೆಯೇ ಮುಕ್ತ ಪುರುಷನು ಒಮ್ಮೆ ತ್ಯಜಿಸಿದ ಸಂಕಲ್ಪ ವಿಕಲ್ಪಗಳನ್ನು ಪುನಃ ಸ್ಪರ್ಶ ಮಾಡಲಾರನು ।।೪೩೯।। ಈ ಪ್ರಕಾರವಾಗಿ ಮುಕ್ತ ಪುರುಷನ ಮನಸ್ಸು, ಬುದ್ಧಿ, ಇಂದ್ರಿಯಗಳು ಮತ್ತು ಪ್ರಾಣ ಈ ಎಲ್ಲವೂ ಸಂಕಲ್ಪ ಶೂನ್ಯವಾಗಿರುವುವು. ಆದ್ದರಿಂದ ಆತನಿಗೆ ಯಾವ ಪ್ರಕಾರದ ಪಾಪಪುಣ್ಯಗಳು ಹತ್ತಲಾರವು ।।೪೪೦।। ಇಂದ್ರಿಯಗಳು ಯಾವ ಸಮಯದಲ್ಲಿ ವಿಷಯಗಳ ಭೋಗವನ್ನು ಪಡೆಯುತ್ತಿರುವುವೋ ಆಗ ಮುಕ್ತನು ಸಂಕಲ್ಪಶೂನ್ಯನಾಗಿರುವನು. ಆತನ ಮನಸ್ಸಿಗೆ ಮನತ್ವವು ಇರುವುದಿಲ್ಲ. ಆದ್ದರಿಂದ ಆತನು ವೃತ್ತಿಶೂನ್ಯನಾಗಿರುವನು ।।೪೪೧।। ಚಿಕ್ಕ ಬಾಲಕನಿಗೆ ಆಭರಣಗಳ ಬೆಲೆಯು ತಿಳಿಯುವುದಿಲ್ಲ. ಆದರೂ ಆತನ ಅಂಗದ ಮೇಲೆ ಆಭರಣಗಳನ್ನು ಹಾಕಲು ಆತನು ಶೋಭಿಸುತ್ತಿರುವನು. ಈ ಪ್ರಕಾರವಾಗಿ ಇಂದ್ರಿಯಗಳು ವಿಷಯಗಳಲ್ಲಿ ತಲ್ಲೀನವಾಗಿದ್ದರೂ ಮುಕ್ತನು ಅಕರ್ತತ್ವದಿಂದ ಆ ಎಲ್ಲ ಪ್ರಕಾರದ ವಿಷಯಗಳಿಂದ ಅಲಿಪ್ತನಾಗಿರುವನು ।।೪೪೨।। ಯಾರು ಸಂಕಲ್ಪ - ವಿಕಲ್ಪಗಳಿಂದ ಅಲಿಪ್ತನಾಗಿರುವನೋ, ಆತನೇ ನಿಜವಾದ ಮುಕ್ತನು, ''ಕಥಂ ವಿಹರಿತ'' ಈ ಪ್ರಶ್ನೆಯ ಉತ್ತರವನ್ನು ಸ್ವಲ್ಪದರಲ್ಲಿಯೇ ಹೇಳಿದೆನು ।।೪೪೩।। ಈ ಯಾವ ಮುಕ್ತನ ಲಕ್ಷಣಗಳನ್ನು ಹೇಳಿದ ಎಲ್ಲವನ್ನೂ ಮುಕ್ತನೇ ತಿಳಿಯುವನು. ಕೇವಲ ವಿದ್ವತ್ತದ ಬಲದಿಂದ ಮುಕ್ತನ ಲಕ್ಷಣಗಳು ತಿಳಿಯಲು ಸಾಧ್ಯವಿಲ್ಲ ।।೪೪೪।।

ಸಕಳ ವೇದಶಾಸ್ತ್ರಸಂಪನ್ನ । ತ್ಯಾಸೀಹೀ ಮುಕ್ತ ನ ಕಳೇ ಜಾಣ । ದೇಹೀ ಅಸೇ ಜ್ಯಾಸೀ ದೇಹಾಭಿಮಾನ । ತ್ಯಾಸೀ ಮುಕ್ತಲಕ್ಷಣ ಕಳೇನಾ ॥೪೪೫॥ ಮ್ಯಾ ಬೋಲಿಲೇ ಲಕ್ಷಣಾಂಚೀ ಪೋಥೀ । ಸಾಕ್ಷೇಪೇ ಘೇಊನಿ ಹಾತೀ। ಜರ್ಹೀ ಹಿಂಡಿನ್ನಲಾ ತ್ರಿಜಗತೀ । ತರ್ಹೀ ಮುಕ್ತಾಚೀ ಸ್ಥಿತಿ ಕಳೇನಾ । ೪೪೬॥ ಜೇಣೇ ಸಾಚಾರ ಮುಕ್ತ ಜಾಣಿತಲಾ । ತೋಹೀ ಸತ್ಯಜಾಣ ಮುಕ್ತ ಝಾಲಾ । ಅನುಮಾನ - ಯೋಗ್ಯ ತೇಚ್ಯಾ ಬೋಲಾ । ಮುಕ್ತ ಜಾಣವಲಾ ಹೇ ಮಿಥ್ಯಾ ॥೪೪೭॥ ಜೇಣೇ ಸೂರ್ಯ ದೇಖಿಲಾ ಯಥಾರ್ಥತಾ । ತೋ ಜಗ ದೇಖೇ ತತ್ಪ್ರಕಾಶತಾ । ಜೇಣೇ ಮುಕ್ತ ಜಾಣಿತಲಾ ತತ್ತ್ವತಾ । ತೋ ನಿತ್ಯ ಮುಕ್ತತಾ ಜಗ ದೇಖೇ ॥೪೪೮॥ ತೇಥ ಹಾ ಮುಕ್ತ ಹಾ ಬದ್ಧ । ದೇಖಣೇ ಹೇ ಅತಿಅಬದ್ಧ । ಐಸೇ ದೇಖತಿ ತೇ ಮಹಾಮಂದ । ಅಜ್ಞಾನಾಂಧ ಅಜ್ಞಾನೀ ॥೪೪೯॥ ಮುಕ್ತ ನ ಕಳೇ ಸರ್ವಥಾ। ಐಸೇ ಬೋಲಣೇ ಐಕತಾ । ಉದ್ಧವಾಸೀ ಹೋ ಲಾಗಲೀ ಚಿಂತಾ । ತೇ ಕೃಷ್ಣನಾಥಾ ಕಳೋ ಸರಲೇ ॥೪೫೦॥ ಮಾಗಾ ಸಾಂಗಿತಲೀ ಮುಕ್ತಲಕ್ಷಣೇ । ತೀ ಮುಕ್ತಾಚೀ ಮುಕ್ತಚಿ ಜಾಣೇ । ಲೌಕಿಕೀ ಮುಕ್ತ ಕಳೇ ಜೇಣೇ । ತೀಹೀ ಲಕ್ಷಣೇ ಪರಿಯೇಸೀ ॥೪೫೧॥ ಆಶ್ವಾಸಾವಯಾ ಉದ್ಧವಾಚೇ ಮನ । ಮುಕ್ತಾಚೇ ಜಾಣತೇ ಲಕ್ಷಣ । ಸಾಂಗೇನ ಮ್ಹಣೇ ಶ್ರೀಕೃಷ್ಣ । ಯೇರೂ ಸಾವಧಾನ ಸರ್ವಸ್ವೇ ॥೪೫೨॥ ಕಳತೀ ಮುಕ್ತಾಚೀ ಲಕ್ಷಣೇ । ಉದ್ಧವು ಐಕವಯಾ ಉದಿತ ಮನೇ । ತೇ ಜಾಣೋನಿಯಾ ಶ್ರೀಕೃಷ್ಣೇ । ವಿಚಿತ್ರ ನಿರೂಪಣೇ ನಿರೂಪೀ ॥೪೫೩॥

ಯಸ್ಯಾತ್ಮಾ ಹಿಂಸ್ಯತೇ ಹಿಂಸ್ರೈರ್ಯೇನ ಕಿಂಚಿದ್ ಯದೃಚ್ಛಯಾ ।
ಅರ್ಚ್ಯತೇ ವಾ ಕ್ವಚಿತ್ ತತ್ರ ನ ವ್ಯತಿಕ್ರಿಯತೇ ಬುಧಃ ॥೧೫॥

ಅರ್ಥ:- ಆ ಯಾವ ತತ್ತ್ವಜ್ಞ ಮುಕ್ತ ಪುರುಷನ ಶರೀರಕ್ಕೆ ಹಿಂಸಕ ಜನರು ಪೀಡೆಯನ್ನು ಕೊಡಲು ಅಥವಾ ಕೆಲವರು ಆತನ ಪೂಜೆಯನ್ನು ಮಾಡಲು, ಆತನು ತೊಂದರೆ ಕೊಟ್ಟವನಿಂದ ದುಃಖಿಯಾಗುವುದಿಲ್ಲ ಮತ್ತು ಪೂಜೆ ಮಾಡುವವನಿಂದ ಸುಖಿಯಾಗುವುದಿಲ್ಲ.

ಜ್ಯಾಚಿಯಾ ದೇಹಾಸೀ ಜಾಣ । ಹಿಂಸಾ ಕರಿತೀ ಹಿಂಸಕ ಜನ । ಛೇದ ಭೇದ ದಂಡ ಮುಂಡಣ । ಗರ್ಜನ ತರ್ಜನ ಜರ್ಹೀ ಕೇಲೇ॥೪೫೪॥ ತರ್ಹೀ ತೇ ದೇಹಾಚೀ ವ್ಯಥಾ । ಮುಕ್ತಾಸೀ ನಾಹೀ ಸರ್ವಥಾ । ನಾನಾ ಉಪಚಾರೀ ಪೂಜಿತಾ । ನೇಘೇ ಶ್ಲಾಘ್ಯತಾ ಸನ್ಮಾನೇ ॥೪೫೫॥ ದೇಹೀ ವರ್ತಮಾನ ಅಸತಾ । ದೇಹಬುದ್ಧೀ ನಾಹೀ ಸರ್ವಥಾ । ತ್ಯಾಸೀಚ ಬೋಲಿಜೇ ಜೀವನ್ಮುಕ್ತತಾ । ಯಾಲಾಗೀ ದೇಹವ್ಯಥಾ ತ್ಯಾ ನಾಹೀ ॥೪೫೬॥

ಒಂದು ವೇಳೆ ಸರ್ವ ವೇದಶಾಸ್ತ್ರ ಸಂಪನ್ನನಾಗಿದ್ದರೂ ಆತನಿಗೆ ಮುಕ್ತ ಪುರುಷನ ಲಕ್ಷಣಗಳು ತಿಳಿಯಲು ಶಕ್ಯವಿಲ್ಲ. ಯಾರ ದೇಹದಲ್ಲಿ ಅಭಿಮಾನವು ಇರುವುದೋ, ಆತನಿಗೂ ಮುಕ್ತನ ಲಕ್ಷಣಗಳು ತಿಳಿಯಲು ಶಕ್ಯವಿಲ್ಲ ॥೪೪೫॥ ನಾನು ಹೇಳಿರುವ ಈ ಮುಕ್ತನ ಲಕ್ಷಣಗಳ ಒಂದು ದೊಡ್ಡ ಗ್ರಂಥವನ್ನು ಕೈಯಲ್ಲಿ ಹಿಡಿದುಕೊಂಡು ಯಾರಾದರೂ ಮೂರು ಲೋಕಗಳಲ್ಲಿ ತಿರುಗಾಡಿದರೂ ಆತನಿಗೆ ಮುಕ್ತನ ಲಕ್ಷಣಗಳು ತಿಳಿಯುವುದಿಲ್ಲ ॥೪೪೬॥ ಯಾರು ನಿಜವಾಗಿ ಮುಕ್ತನನ್ನು ತಿಳಿಯುವನೋ, ಆತನು ಮುಕ್ತನೇ ಆಗುವನು. ಅನುಭವವಿಲ್ಲದೇ ಶಾಸ್ತ್ರೀಯ ಅನುಮಾನ ಯೋಗ್ಯತೆಯಿಂದ ಏಕಾತ್ಮಾ ಮುಕ್ತನ ವಿಷಯಕ್ಕೆ ಎಷ್ಟು ಮಾತನಾಡಿದರೂ ಆ ಮುಕ್ತನ ಅವಸ್ಥೆಯು ತಿಳಿಯುವುದಿಲ್ಲ ॥೪೪೭॥ ಸೂರ್ಯನನ್ನು ಕಾಣುವವನೇ ಸೂರ್ಯನು ಪ್ರಕಾಶಿತ ಮಾಡಿರುವ ಜಗತ್ತನ್ನು ಕಾಣುವನು. ಅದರಂತೆ ಯಾರು ನಿಜವಾಗಿಯೂ ಮುಕ್ತನನ್ನು ಅರಿಯುವನೋ, ಆತನಿಗೆ ಎಲ್ಲವೂ ನಿತ್ಯಮುಕ್ತವಾಗಿರುವುದು ತೋರುವುದು ॥೪೪೮॥ ಈತನು ಮುಕ್ತನು, ಆತನು ಬದ್ಧನು ಎಂದು ತಿಳಿಯುವವರು ಅವರು ಮಂದಬುದ್ಧಿಯ ಜನರು ಅಜ್ಞಾನದಿಂದ ಕುರುಡಾಗಿರುವರು ॥೪೪೯॥ "ಮುಕ್ತನು ಸರ್ವಥಾ ತಿಳಿಯಲಾರನು" ಎಂಬ ಈ ವಚನವನ್ನು ಕೇಳಿ ಉದ್ಧವನ ಮನದಲ್ಲಿ ಚಿಂತೆಯು ಉತ್ಪನ್ನವಾಯಿತು. ಇದನ್ನು ಶ್ರೀ ಕೃಷ್ಣನು ಅರಿತು ಕೊಂಡನು ॥೪೫೦॥ ಶ್ರೀ ಕೃಷ್ಣನು ಹೇಳಿದನು; ಇಲ್ಲಿಯವರೆಗೆ ಯಾವ ಮುಕ್ತನ ಲಕ್ಷಣಗಳನ್ನು ಹೇಳಿರುವುದನ್ನು ಮುಕ್ತನೇ ಅರಿಯಬಲ್ಲನು. ಈಗ ಲೌಕಿಕದಲ್ಲಿ ಮುಕ್ತನು ಹೇಗೆ ಅರಿಯಲ್ಪಡುವನು ಎಂಬುದನ್ನು ಹೇಳುವೆನು, ಕೇಳು ॥೪೫೧॥ ಉದ್ಧವನ ಮನಸ್ಸಿಗೆ ಧೈರ್ಯವನ್ನು ತುಂಬಲು ಶ್ರೀಕೃಷ್ಣನು ಹೇಳಿದನು. ಮುಕ್ತನನ್ನು ಅರಿಯುವಂತಹ ಲಕ್ಷಣಗಳನ್ನು ಹೇಳುವೆನು, ಈಗ ಅದನ್ನು ಶ್ರವಣಮಾಡು. ಆಗ ಉದ್ಧವನು ಏಕಾಗ್ರ ಚಿತ್ತದಿಂದ ಕೇಳಲಾರಂಭಿಸಿದನು ॥೪೫೨॥ ಈಗ ತನಗೆ ಮುಕ್ತನ ಲಕ್ಷಣಗಳನ್ನು ಕೇಳಲು ದೊರಕುವುದೆಂದು, ಉದ್ಧವನು ಅದನ್ನು ಕೇಳಲು ಉತ್ಸುಕನಾಗಿರುವುದನ್ನು ಕಂಡು ಶ್ರೀಕೃಷ್ಣನು ತನ್ನ ನಿರೂಪಣೆಯನ್ನು ಮಾಡಲಾರಂಭಿಸಿದನು ॥೪೫೩॥

ಶ್ರೀಕೃಷ್ಣನು ಹೇಳಿದನು; ಮುಕ್ತನ ದೇಹಕ್ಕೆ ಹಿಂಸಕ ಜನರು ಹೊಡೆಯಲಿ, ಬಡೆಯಲಿ, ಛಿನಾಛಿದ್ರಗೊಳಿಸಲಿ, ತಲೆ ಬೋಳಿಸಲಿ, ಸಿಟ್ಟಿನಿಂದ ಸಿಕ್ಕಹಾಗೆ ಬೈಯಲಿ, ಅಥವಾ ತಿರಸ್ಕಾರವನ್ನು ಮಾಡಲಿ ॥೪೫೪॥ ಆದರೂ ಸಹ ದೇಹಕ್ಕೆ ಆಗುವ ಆ ಯಾವ ಪೀಡೆಯು ಮುಕ್ತನಿಗೆ ಎಂದಿಗೂ ಆಗುವುದಿಲ್ಲ. ಹಾಗಾಯೇ ಯಾರಾದರೂ ಅವರನ್ನು ಅತ್ಯಂತ ಆದರಭಾವದಿಂದ ಯಥಾವಿಧಿಯಾಗಿ ಪೂಜೆಯನ್ನು ಮಾಡಲು ಯಾವ ಸನ್ಮಾನದಿಂದ ಆತನು ಹಿಗ್ಗುವುದಿಲ್ಲ ॥೪೫೫॥ ದೇಹದಲ್ಲಿದ್ದರೂ ಸಹ ಅವರಿಗೆ ದೇಹದ ಅಭಿಮಾನವು ಇರುವುದಿಲ್ಲ. ಅವರಿಗೆ ದೇಹ ವ್ಯಥೆಯ ಕಲ್ಪನೆ ಇರುವುದಿಲ್ಲ. ಆದ್ದರಿಂದ ಅವರಿಗೆ ಜೀವನ್ಮುಕ್ತ ಎಂದು ಹೇಳುವರು ॥೪೫೬॥

ಜೈಸೀ ಪುರುಷಾಸವೇ ಛಾಯಾ ಅಸೇ । ಪುರುಷಯೋಗೇ ಚಳತೀ ದಿಸೇ । ತೇ ಛಾಯೇಚೀ ಅಹಂಮಮತಾ ನಸೇ । ನಿಜಮಾನಸೇ ಪುರುಷಾಸೀ ॥೪೫೭॥ ತೈಸಾಚೀಮುಕ್ತಾ ಚಾ ದೇಹೋ । ಮುಕ್ತಾ ಸವೇ ವರ್ತೇ ಪಹಾಹೋ । ಪರೀ ತ್ಯಾಸೀ ನಾಹೀ ಅಹಂ ಭಾವೋ । ಹಾನಿತ್ಯಸ್ವಭಾವೋ ಮುಕ್ತಾ ಚಾ ॥೪೫೮॥ ತ್ಯಾಸೀ ಚೋರು ಹೇರು ಕಾತರು । ಮ್ಹಣೌನಿ ದಂಡು ಕೇಲಾ ಥೋರು । ಕಾ ಪೂಜಿಲಾ ಈಶ್ವರು । ಪುರುಷ ಶ್ರೇಷ್ಠತರು ಮ್ಹಣೌನಿ ॥೪೫೯॥ ಪರೀ ಕಾ ಪೂಜಿತಾ ಕಾ ಗಾಂಜಿತಾ । ತ್ಯಾಚೀ ಡಂಡಳೀನಾ ಸಮತಾ । ಜೇವೀ ಛಾಯೇಚೀ ಮಾನಾಪಮಾನತಾ । ನ ಕರೀ ವ್ಯಥಾ ಪುರುಷಾಸೀ ॥೪೬೦॥ ದೇಹೋ ವ್ಯಾಘ್ರಾಮುಖೀ ಸಾಂಪಡಲಾ । ಕಾ ದೈವೇ ಪಾಲಖೀಮಾಜೀ ಚಢಲಾ । ತೋ ಹರುಷವಿಷಾದಾ ನಾಹೀ ಆಲಾ । ಸಮತ್ವೇ ಝಾಲಾ ನಿರ್ದ್ವಂದ್ವ ॥೪೬೧॥ ದೇಹೋ ದ್ಯಾವಯಾ ನೇತಾ ಸುಳೀ । ಮೀ ಮರತೋ ಐಸೇ ನ ಕಳವಳೀ । ಕಾ ಗಜಸ್ಕಂಧೀ ಪೂಜಿಲಾ ಸಕಳೀ । ತೇಣೇ ಸುಖಾವಲೀ ವೃತ್ತೀ ನವ್ಹೇ ॥೪೬೨॥ ಸುಖದುಃಖಾದಿ ನಾನಾ ವ್ಯಥಾ । ಆಗಾಮಾಪಾಯೀ ಅವಿದ್ಯಕತಾ । ದೇಹಾಚೇ ಮಿಥ್ಯಾತ್ವ ಜಾಣತಾ । ಯಾಲಾಗೀ ವ್ಯಥಾ ಪಾವೇನಾ ॥೪೬೩॥ ಅತಿಸನ್ಮಾನು ಜೇಥ ದೇಖೇ । ತೇಥ ನ ರಾಹೇ ತೇಣೇ ಸುಖೇ । ಅಪಮಾನಾಚಿಯೇ ಆಡಕೇ । ದೇಖೋನಿ ನ ಫಡಕೇ ಭಯಭೀತು ॥೪೬೪॥ ದೇಹಾಸೀ ನಾನಾ ವಿಪತ್ತಿ ಹೋಯೇ । ತೋಹೀ ತ್ಯಾ ದೇಹಾಚೇ ಕೌತುಕ ಪಾಹೇ । ದೇಹ ಮಾಝೇ ಮಜ ವ್ಯಥಾ ಆಹೇ । ಹೇ ಠಾವೇ ನೋಹೇ ಮುಕ್ತಾಸೀ ॥೪೬೫॥ ಯೇಥವರ ದೇಹಾತೀತತಾ । ದೃಢ ಬಾಣಲೀ ಜೀವನ್ಮುಕ್ತಾ । ಯಾಲಾಗೀ ದೇಹದುಃಖಾಚೀ ವ್ಯಥಾ । ತ್ಯಾಸೀ ಸರ್ವಥಾ ಬಾಧೀನಾ ॥೪೬೬॥ ನಾನಾ ಜನಪದವಾರ್ತಾ । ಅತಿಸ್ತವನೇ ಸ್ತುತಿ ಕರಿತಾ । ಕಾ ಪಾರುಷ್ಯವಚನೇ ನಿಂದಿತಾ । ಮುಕ್ತಾಸೀ ವ್ಯಥಾ ಉಪಜೇನಾ ॥೪೬೭॥

ನ ಸ್ತುವೀತ ನ ನಿಂದೇತ ಕುರ್ವತಃ ಸಾಧ್ವಸಾಧು ವಾ ।
ವದತೋ ಗುಣದೋಷಾಭ್ಯಾಂ ವರ್ಜಿತಃ ಸಮದೃಂಙ ಮುನಿಃ ॥೧೬॥

ಅರ್ಥ:- ಯಾವ ಸಮದರ್ಶೀ ಮಹಾತ್ಮರು ಗುಣ ಮತ್ತು ದೋಷಗಳ ಆಚೆಕಡೆ ಹೋಗಿರುವರು. ಇವರು ಒಳ್ಳೆಯ ಕಾರ್ಯ ಮಾಡಿದವರನ್ನು ಹೊಗಳುವುದಿಲ್ಲ. ಮತ್ತು ಕೆಟ್ಟ ಕಾರ್ಯ ಮಾಡಿದವರನ್ನು ನಿಂದಿಸುವುದಿಲ್ಲ. ಹಾಗೆಯೇ ಇವರು ಕೆಲವರ ಒಳ್ಳೆಯ ಮಾತುಗಳನ್ನು ಕೇಳಿ ಆತನನ್ನು ಸ್ತುತಿಸುವುದಿಲ್ಲ. ಮತ್ತು ಕೆಲವರ ಕೆಟ್ಟ ಮಾತುಗಳನ್ನು ಕೇಳಿ ತಿರಸ್ಕರಿಸುವುದಿಲ್ಲ.

ಯಾವ ಪ್ರಕಾರವಾಗಿ ಮನುಷ್ಯನ ಜೊತೆಯಲ್ಲಿ ನೆರಳಿದ್ದು, ಆ ನೆರಳು ದೇಹದ ಜೊತೆಯಲ್ಲಿ ನಡೆದಾಡುವುದು. ಆದರೆ ಆ ನೆರಳಿನ ಮೇಲೆ ಮನುಷ್ಯನ ಅಹಂಮಮತೆಯು ಸ್ವಲ್ಪವೂ ಇರುವುದಿಲ್ಲ ॥೪೫೭॥ ಅದರಂತೆ ಮುಕ್ತನ ದೇಹದ ಸರ್ವ ಪ್ರಕಾರದ ವ್ಯವಹಾರಗಳು ಆತನಿಂದ ಆಗುತ್ತಿದ್ದರೂ ದೇಹದ ವಿಷಯಕ್ಕೆ ಆತನಿಗೆ ಸ್ವಲ್ಪವೂ ಅಭಿಮಾನವಿರುವುದಿಲ್ಲ. ಮುಕ್ತನ ಈ ನಿತ್ಯ ಸ್ವಭಾವವಾಗಿರುವುದು ॥೪೫೮॥ ಆತನಿಗೆ ನೀನು ಕಳ್ಳನಾಗಿರುವೆ, ಬೇಹುಗಾರನಾಗಿರುವೆ, ಜೇಬುಕಳ್ಳನಾಗಿರುವೆ, ಹೀಗೆ ಆರೋಪವನ್ನು ಹೊರಿಸಿ ದಂಡಿಸಿದರೂ ಅಥವಾ ಈತನು ಅತ್ಯಂತ ಶ್ರೇಷ್ಠ ಪುರುಷನು ಎಂದು ಹೊಗಳಿ ಈಶ್ವರನಿಗೆ ಪೂಜಿಸುವಂತೆ ಯಥಾವಿಧಿಯಾಗಿ ಪೂಜಿಸಿದರೂ ॥೪೫೯॥ ಯಾವ ಪ್ರಕಾರವಾಗಿ ನೆರಳಿನ ಮಾನಾಪಮಾನದಿಂದ ಪುರುಷನಿಗೆ ಖೇದವಾಗಲು ಶಕ್ಯವಿಲ್ಲವೋ, ಅದರಂತೆ ಶಿಕ್ಷೆಯನ್ನು ಭೋಗಿಸುತ್ತಿರಲಿ ಅಥವಾ ಸತ್ಕಾರನ್ನು ಮಾಡುತ್ತಿರಲಿ ಆತನ ಮನಸ್ಸಿನ ಸಮತೆಯು ಅಲುಗಾಡಲು ಸಾಧ್ಯವಿಲ್ಲ ॥೪೬೦॥ ಮುಕ್ತ ಪುರುಷನ ದೇಹವು ಹುಲಿಯ ಬಾಯಿಗೆ ಬೀಳಲಿ ಅಥವಾ ಪಾಲಿಖಿಯ ಮೇಲೆ ಕುಳಿತಿರಲಿ ಆದರೂ ಆತನ ಸುಖದುಃಖಗಳು ಆತನಿಗೆ ಏನೂ ಅನಿಸುವುದಿಲ್ಲ. ಆತನು ಸಮತ್ವದಿಂದ ದ್ವಂದ್ವರಹಿತನಾಗಿರುವನು ॥೪೬೧॥ ಆತನ ದೇಹವನ್ನು ಶೂಲಕ್ಕೇರಿಸಲು ಒಯ್ಯುತ್ತಿರಲಿ, ಆಗ ಆತನು ನಾನೀಗ ಸಾಯುವೆನಲ್ಲಾ? ಎಂದು ಸ್ವಲ್ಪವೂ ಚಿಂತಿಸುವುದಿಲ್ಲ. ಮುಕ್ತನಿಗೆ ಆನೆಯ ಅಂಬಾರಿಯಲ್ಲಿ ಕುಳ್ಳರಿಸಿ ಆತನಿಗೆ ಗೌರವಿಸಿದರೂ ಆತನು ಆ ಸನ್ಮಾನದಿಂದ ಸುಖಿಯಾಗುವುದಿಲ್ಲ ॥೪೬೨॥ ನಾನಾ ಪ್ರಕಾರಗಳ ಸುಖದುಃಖಾದಿ ವ್ಯಥೆಯು ಅವಿದ್ಯಕವಾಗಿರುವುದರಿಂದ ಆಗಮಾಪಾಯೀ ಎಂದರೆ ಬರು ಹೋಗುವುದಾಗಿವೆ, ಅನಿತ್ಯವಾಗಿವೆ. ಈ ಪ್ರಕಾರವಾಗಿ ದೇಹದ ಮಿಥ್ಯೆತ್ವವನ್ನು ಆತನು ಪರಿಪೂರ್ಣವಾಗಿ ಅರಿತುಕೊಂಡಿರುವನು. ಆದ್ದರಿಂದ ಆತನಿಗೆ ಯಾವ ಪ್ರಕಾರದಿಂದಲೂ ವ್ಯಥೆಯಾಗುವುದಿಲ್ಲ ॥೪೬೩॥ ಎಲ್ಲಿ ಆತನಿಗೆ ಅತ್ಯಂತ ಸತ್ಕಾರವಾಗುತ್ತಿರುವುದೋ ಅಲ್ಲಿ ಆತನು ಸುಖದಿಂದ ಇರಲಾರನು. ಅಥವಾ ಎಲ್ಲಿ ಆತನಿಗೆ ಬಹಳ ಅಪಮಾನವಾಗುವುದೋ, ಅಲ್ಲಿ ಆತನು ಭಯಪಟ್ಟು ಓಡಿ ಹೋಗಲಾರನು ॥೪೬೪॥ ದೇಹದಲ್ಲಿ ಅನೇಕ ಪ್ರಕಾರಗಳ ಆಪತ್ತುಗಳು ಒದಗುತ್ತಿರುವುವು. ಆದರೆ ಆತನು ಅವುಗಳನ್ನು ಕಾತರದಿಂದ ನೋಡುತ್ತಿರುವನು. ಈ ದೇಹವು ನನ್ನದು, ನನಗೆ ದುಃಖವಾಗುತ್ತಿದೆ ಎಂಬುದು ಮುಕ್ತನಿಗೆ ಎಂದಿಗೂ ಗೊತ್ತೇ ಆಗುವುದಿಲ್ಲ ॥೪೬೫॥ ಜೀವನ್ಮುಕ್ತ ಪುರುಷನ ಶರೀರದಲ್ಲಿ ಇಂತಹ ವಿದೇಹೀ ಅವಸ್ಥೆಯು ನಾಟಿಕೊಂಡಿರುವುದು. ಆದ್ದರಿಂದ ದೇಹಕ್ಕಾಗುವ ವ್ಯಥೆಯ ಬಾಧೆಯು ಆತನಿಗೆ ಆಗುವುದೇ ಇಲ್ಲ ॥೪೬೬॥ ಆತನ ಅತ್ಯಂತ ಸ್ತುತಿ ಮಾಡುವ, ಅಥವಾ ಕಠೋರ ಶಬ್ದಗಳಿಂದ ನಿಂದಿಸುವ ಲೋಕವಾರ್ತೆಯನ್ನು ಕೇಳಿ ಮುಕ್ತನ ಮನಸ್ಸಿಗೆ ಏನೊಂದೂ ಸುಖ ಅಥವಾ ದುಃಖವಾಗಲಾರದು ॥೪೬೭॥

ನಿಂದೇಚ್ಯಾ ತಿಖಟ ಬಾಣೀ । ದೃಢ ವಿಂಧಿಲ್ಯಾ ದುರ್ಜನೀ । ಹೇ ಅಸಾಧು ಹೇ ನುಪಜೇ ಮನೀ । ನ ಬೋಲೇ ವಚನೀ ತೇ ದೋಷ ॥೪೬೮॥ ಭಾವಿಕ ಸಾತ್ತ್ವಿಕ ಸಾಧು । ಮಿಳೋನಿ ಕರಿತೀ ಸ್ತುತಿವಾದು । ತೂ ಈಶ್ವರೀ ಪುರುಷ ಶುದ್ಧು । ಹಾ ಗುಣಾನುವಾದು ಐಕೋನಿ ॥೪೬೯॥ ಮೀ ಉತ್ತಮ ಹೇ ನುಪಜೇ ಮನೀ । ಉಂಚ ನೀಚ ನ ದೇಖೇ ಜನೀ । ಹೇ ಸಾಧುಲೋಕ ಭಲೇ ಗುಣೀ । ಹೇ ಮುಕ್ತಾಚೀ ವಾಣೀ ವದೇನಾ ॥೪೭೦॥ ಸಾಧು ಅಸಾಧು ಪಾಹತಾ ಜನೀ । ತೋ ಬ್ರಹ್ಮರೂಪ ದೇಖೇ ದೋನೀ । ದೇಖತೇ ದೇಖೇ ತದ್ರೂಪಪಣೀ । ನಿಜಾತ್ಮದರ್ಶನೀ ನಿಜಬೋಧು ॥೪೭೧॥ ತೇಥ ಕೋಣಾಚೀ ಕರಾವೀ ನಿಂದಾ । ಕೋಣಾಚ್ಯಾ ಕರಾವೇ ಗುಣಾನುವಾದಾ । ಮೀಚಿ ವಿಶ್ವ ಹೇ ಆಲೇ ಬೋಧಾ । ಸ್ತುತಿನಿಂದಾ ನಿಮಾಲೀ ॥೪೭೨॥ ತ್ಯಾಸೀ ಆತ್ಮಸಾಕ್ಷಾತ್ಕಾರೀ ವಿಶ್ರಾಮ । ನಿತ್ಯ ನಿಜಾತ್ಮಪದೀ ಆರಾಮ । ಸಾಧು ಅಸಾಧು ಹಾ ಫಿಟಲಾ ಭ್ರಮ । ಸ್ವಯೇ ಆತ್ಮಾರಾಮ ತೋ ಜಾಹಲಾ ॥೪೭೩॥ ಅಸಾಧುತ್ವೇ ನಿಂದಾವೇ ಜ್ಯಾಸೀ । ತಂವ ಆತ್ಮಸ್ವರೂಪೇ ದೇಖೇ ತ್ಯಾಸೀ । ಸಾಧು ಮ್ಹಣೌನಿ ವರ್ಣಿತಾ ಗುಣಾಸೀ । ದೇಖೇ ತ್ಯಾಸೀ ನಿಜರೂಪೇ ॥೪೭೪॥ ಉಜವ್ಯಾ ವಂದ್ಯತ್ವೇ ಶುದ್ಧಭಾವೋ । ಡಾವ್ಯಾ ನಿಂದತ್ವೇ ನಿಜನಿರ್ವಾಹೋ । ಪುರುಷಾಸೀ ದೋಹೀಚಾ ಸಮಭಾವೋ । ವಂದ್ಯ ನಿಂದ್ಯ ಪಹಾ ಹೋ ಸಮತ್ವೇ ತೈಸೇ ॥೪೭೫॥ ತೇಥ ಸಾಧು ಅಸಾಧು ಅನುವಾದಾ । ವರ್ಜಿಲೀ ಸ್ತುತಿ ಆಣಿ ನಿಂದಾ । ಸಮತ್ವೇ ಪಾವಲಾ ಸಮಪದಾ । ಸುಖಸ್ವಾನಂದಾಚೇನಿ ಬೋಧೇ ॥೪೭೬॥ ಮುಕ್ತಾಚೀ ಹೇ ವೋಳಖಣ । ಯಾಪರೀ ಉದ್ಧವಾ ತೂ ಜಾಣ । ಆತಾ ಆಣಿಕಹೀ ಲಕ್ಷಣ । ತುಜ ಮೀ ಖೂಣ ಸಾಂಗೇನ ॥೪೭೭॥ ಪ್ರಕಟ ಮುಕ್ತಾಚೇ ಲಕ್ಷಣ । ಮ್ಯಾ ತುಜ ಸಾಂಗಿತಲೇ ಜಾಣ । ತೇ ಲೌಕಿಕೀ ಮಾನೀ ಕೋಣ । ವಿಕಲ್ಪ ಗಹನ ಜನಾಚೇ ॥೪೭೮॥ ಪ್ರಾರಬ್ಧವಶಾಸ್ತವ ಜಾಣ । ಏಕಾದೇ ಅವಚಟೇ ದಿಸೇ ಚಿನ್ಹ । ಇತುಕ್ಯಾಸಾಠೀ ಮುಕ್ತಪಣ । ಮಾನೀ ಕೋಣ ಜಗಾಮಾಜೀ ॥೪೭೯॥ ಮುಕ್ತ ಮುಕ್ತಪಣಾಚೀ ಪದವೀ । ಸರ್ವಥಾ ಜಗಾಮಾಜೀ ಲಪವೀ । ಜೋ ಆಪುಲೀ ಮುಕ್ತತಾ ಮಿರವೀ । ತೋ ಲೋಭ ಸ್ವಭಾವೀ ದಾಂಭಿಕು ॥೪೮೦॥ ಶುಕ ವಾಮದೇವ ಮುಕ್ತ ಮ್ಹಣತಾ । ಸರ್ವಾಸೀ ನ ಮ್ಹಣವೇ ಸರ್ವಥಾ । ಮಾ ಇತರಾಂಚೀ ಕಾಯ ಕಥಾ । ಮಾಝೀ ಹೀ ಮುಕ್ತತಾ ನ ಮಾನಿತೀ ॥೪೮೧॥

ನಿಂದೆ ಎಂಬ ತೀಕ್ಷ್ಣ ಬಾಣಗಳಿಂದ ದುರ್ಜನರು ಮುಕ್ತನ ಹೃದಯಕ್ಕೆ ಘಾಸಿ ಮಾಡಿದರೂ ಇವನೊಬ್ಬ ದುಷ್ಟನೆಂಬ ಭಾವನೆಯು ಆತನ ಮನದಲ್ಲಿ ಮೂಡುವುದಿಲ್ಲ. ಇವರು ದೋಷಗಳನ್ನು ತಮ್ಮ ಮುಖದಿಂದ ಎಂದಿಗೂ ಉಚ್ಚರಿಸುವುದಿಲ್ಲ ॥೪೬೮॥ ಭಾವಿಕರು, ಸಾತ್ವಿಕರು, ಸಜ್ಜನರು ಎಲ್ಲರೂ ಕೂಡಿ ''ನೀವು ಸಾಕ್ಷಾತ್ ಈಶ್ವರಸ್ವರೂಪರು'' ಎಂದು ಆತನ ಸ್ತುತಿಯನ್ನು ಮಾಡಲು ತನ್ನ ಗುಣಗಾನವನ್ನು ಕೇಳಿ ॥೪೬೯॥ ನಾನು ಉತ್ತಮನು ಎಂಬ ವಿಚಾರ ಕೂಡ ಆತನ ಮನದಲ್ಲಿ ಹುಟ್ಟಲಾರದು. ಆತನು ಜನರಲ್ಲಿ ಉಚ್ಚ ನೀಚ ಭಾವನೆಯಿಂದ ಎಂದೂ ನೋಡಲಾರನು. ಆತನಲ್ಲಿ ದ್ವೈತವಿರುವುದಿಲ್ಲ. ಜನರು ದೊಡ್ಡವರು, ಸಜ್ಜನರು, ಗುಣವಾನರು ಹೀಗೆ ಆತನ ಮುಖದಲ್ಲಿ ಹೊರುಡುವುದೇ ಇಲ್ಲ ॥೪೭೦॥ ಜನ ಸಮೂಹದಲ್ಲಿ ಸಜ್ಜನನಾಗಲಿ ಅಥವಾ ದುರ್ಜನನಾಗಲಿ ಇವರನ್ನು ಬ್ರಹ್ಮರೂಪವಾಗಿ ಕಾಣುವನು. ಸರ್ವತ್ರವೂ ಆತನು ಚೈತನ್ಯ ಸ್ವರೂಪದಿಂದ ನೋಡುವನು. ಆತನಿಗೆ ಸರ್ವತ್ರ ಆತ್ಮದರ್ಶನವಾಗುತ್ತಿರುವುದು ॥೪೭೧॥ ನಾನು ಸ್ವತಃ ಸರ್ವ ವಿಶ್ವನಾಗಿರುವೆ ಎಂಬ ವಿಶಾಲ ಬೋಧೆಯಾಗಿರಲು ಯಾರ ನಿಂದೆಯನ್ನು ಅಥವಾ ಯಾರ ಸ್ತುತಿಯನ್ನು ಹೇಗೆ ಮಾಡಬೇಕು? ಆತನಲ್ಲಿ ಸ್ತುತಿನಿಂದೆಗಳ ಭಾವನೆಯು ಇಲ್ಲದಾಗಿ, ಸರ್ವ ವೃತ್ತಿಯು ಶಾಂತಗೊಂಡಿರುವುದು ॥೪೭೨॥ ಮುಕ್ತನಿಗೆ ಆತ್ಮ ಸಾಕ್ಷಾತ್ಕಾರದಲ್ಲಿಯೇ ಅಖಂಡ ವಿಶ್ರಾಂತಿಯು ಲಭಿಸುತ್ತಿರುವುದು. ಆತ್ಮಜ್ಞಾನದಲ್ಲಿ ಆತನು ರಮಮಾಣನಾಗಿರುವನು. ಒಳ್ಳೆಯ, ಕೆಟ್ಟ ಈ ದ್ವೈತ ಭಾವನೆಯು ನಷ್ಟವಾಗಿರುವುದು. ಆತನು ಸ್ವತಃ ಆತ್ಮಾರಾಮನಾಗಿ ವಿಶ್ವದೊಂದಿಗೆ ಏಕರೂಪನಾಗಿರುವನು ॥೪೭೩॥ ದುರ್ಜನನ ನಿಂದೆಯನ್ನು ಮಾಡಲಾರನು, ಕಾರಣ ಮುಕ್ತನಿಗೆ ಆತ್ಮ ಸ್ವರೂಪನಾಗಿ ತೋರುತ್ತಿರುವನು. ಸಜ್ಜನನ ಗುಣಗಳನ್ನೂ ಸ್ತುತಿಸಲಾರನು, ಕಾರಣ ಆತನೂ ಕೂಡ ಮುಕ್ತನಿಗೆ ಆತ್ಮಸ್ವರೂಪನಾಗಿ ತೋರುತ್ತಿರುವನು ॥೪೭೪॥ ತನ್ನ ಬಲಭಾಗವು ವಂದ್ಯವಾಗಿ, ಎಡಭಾಗವು ನಿಂದ್ಯವಾಗಿ ಯಾರಿಗೂ ತೋರಲಾರವು. ಏಕೆಂದರೆ ಆತನ ಎರಡೂ ಭಾಗಗಳಲ್ಲಿ ಸಮಭಾವಿರುವುದು. ಅದರಂತೆ ಮುಕ್ತನು ವಂದಿಸುವವರನ್ನು ಮತ್ತು ನಿಂದಿಸುವವರನ್ನು ಸಮಭಾವದಿಂದ ಕಾಣುವನು ॥೪೭೫॥ ಇವನು ಸಾಧು, ಅವನು ಅಸಾಧು ಎಂದು ಸ್ತುತಿ ಮಾಡುವದು ಅಥವಾ ನಿಂದಿಸುವುದು ಮುಕ್ತನ ಸ್ವಭಾವವಾಗಿರುವುದಿಲ್ಲ. ಸ್ವಾನಂದ ಸುಖದಿಂದ ಹಾಗೂ ಸಮಭಾವನೆಯಿಂದ ಆತನು ಸಮಪದವಿಯ ಮೇಲೆ ಆರೂಢನಾಗಿರುವನು ॥೪೭೬॥ ಹೇ ಉದ್ಧವನೇ, ಈಗ ಹೇಳಿರುವ ಮುಕ್ತನ ಲಕ್ಷಣಗಳನ್ನು ಲಕ್ಷದಲ್ಲಿಡು. ಈಗ ಪುನಃ ಕೆಲವು ಲಕ್ಷಣಗಳ ಚಿನ್ಹೆಯನ್ನು ನಿನಗೆ ಹೇಳುವೆ. ಲಕ್ಷ ಕೊಟ್ಟು ಕೇಳು ॥೪೭೭॥ ಮುಕ್ತನ ಲಕ್ಷಣಗಳನ್ನು ನಾನು ನಿನಗೆ ಸ್ಪಷ್ಟವಾಗಿ ಹೇಳಿರುವೆನು. ಆದರೆ ಈ ಲಕ್ಷಣಗಳನ್ನು ಲೌಕಿಕರಲ್ಲಿ ಯಾರು ಮನ್ನಿಸಬೇಕು? ಕಾರಣ ಜನರು ತಮ್ಮದೇ ಆದ ಬುದ್ಧಿಯಿಂದ ಅನೇಕ ಪ್ರಕಾರಗಳ ತರ್ಕ ವಿತರ್ಕಗಳನ್ನು ನಿರ್ಮಾಣಗೊಳಿಸುತ್ತಿರುವರು ॥೪೭೮॥ ದೈವಯೋಗದಿಂದ ಒಬ್ಬರಲ್ಲಿ ಮುಕ್ತನ ಲಕ್ಷಣಗಳನ್ನು ಕಾಣಲು, ಅಷ್ಟರಿಂದಲೇ ಆತನಿಗೆ ಈ ಜಗತ್ತಿನಲ್ಲಿ ಮುಕ್ತನೆಂದು ಯಾರು ಮನ್ನಿಸುವರು? ॥೪೭೯॥ ಯಾವನು ನಿಜವಾ ಮುಕ್ತನೋ, ಆತನು ತನ್ನ ಮುಕ್ತತನದ ಯೋಗ್ಯತೆಯನ್ನು ಈ ಜಗತ್ತಿನ ಎಲ್ಲರಿಂದಲೂ ಮುಚ್ಚಿಡುತ್ತಿರುವನು. ಯಾವನು ತನ್ನ ಮುಕ್ತತೆಯನ್ನು ಪ್ರದರ್ಶಿಸುವನೋ, ಅವನು ಲೋಭಿಯು, ಡಾಂಭಿಕನಾಗಿರುವನು ॥೪೮೦॥ ಶುಕ ವಾಮದೇವರವರ ಮುಕ್ತತೆಯನ್ನು ಎಲ್ಲರೂ ಮನ್ನಿಸುವುದಿಲ್ಲ. ಅಂದ ಮೇಲೆ ಇತರರ ಯಾವ ಕಥೆ? ನನ್ನ ಮುಕ್ತತೆಯನ್ನೂ ಕೂಡ ಅನೇಕರು ಅರಿತಿರುವುದಿಲ್ಲ ॥೪೮೧॥

ಮ್ಯಾ ಗೋವರ್ಧನು ಉಚಲಿಲಾ । ದಾವಾಗ್ನಿ ಪ್ರಾಶಿಲಾ । ಅಘ ಬಕ ವಿದಾರಿಲಾ । ಪ್ರತ್ಯಕ್ಷ ನಾಶಿಲಾ ಕಾಳಿಯಾ ।।೪೮೨।। ಜೋ ಜೋ ಹಾ ದೇಹಾಡಾ । ತೋ ತೋ ನೀಚ ನವಾ ಪವಾಡಾ। ನಿಜಸುಖಾಚಾ ಉಘಡಾ । ಕೇಲಾ ರೋಕಡಾ ಸುಕಾಳು ।।೪೮೩।। ತ್ಯಾ ಮಾಝೇ ಮುಕ್ತಪಣ । ನ ಮಾನಿತೀ ಯಾಜ್ಞಿಕ ಬ್ರಾಹ್ಮಣ । ಇತರಾಂಚಿ ಕಥಾ ಕೋಣ । ವಿಕಲ್ಪ ದಾರುಣ ಲೌಕಿಕಿ ।।೪೮೪।। ಯಾಲಾಗೀ ಮುಕ್ತಾಚೇ ಮುಕ್ತಪಣ । ಮುಕ್ತಚಿ ಜಾಣೇ ಆಪಣ । ಇತರಾಂಸೀ ನ ಕಳೇ ತೇ ಲಕ್ಷಣ । ಅತಿವಿಚಕ್ಷಣ ಜರ್ಹೀ ಝಾಲಾ ।।೪೮೫।। ಮುಕ್ತ ಲೌಕಿಕೀ ವರ್ತತ । ಜಡ - ಮೂಕ - ಪಿಶಾಚವತ । ತಿಹೀ ಚಿನ್ಹೇ ಸಮಸ್ತ । ಐಕ ನಿಶ್ಚಿತ ಸಾಂಗೇನ ।।೪೮೬।।

ನ ಕುರ್ಯಾನ್ನ ವದೇತ್ ಕಿಂಚಿನ್ನ ಧ್ಯಾಯೇತ್ ಸಾಧ್ವಸಾಧು ವಾ।
ಆತ್ಮಾರಾಮೋಽನಯಾ ವೃತ್ತ್ಯಾ ವಿಚರೇಜ್ಜಡವನ್ಮುನಿಃ ।।೧೭।।

ಅರ್ಥ:- ಜೀವನ್ಮುಕ್ತ ಪುರುಷನು ಕೆಟ್ಟ ಅಥವಾ ಒಳ್ಳೆಯ ಕಾರ್ಯಗಳನ್ನು ಮಾಡುವುದಿಲ್ಲ. ಕೆಟ್ಟ ಅಥವಾ ಒಳ್ಳೆಯ ಮಾತುಗಳನ್ನು ಆಡುವುದಿಲ್ಲ. ಕೆಟ್ಟ ಅಥವಾ ಒಳ್ಳೆಯ ವಿಚಾರ ಮಾಡುವುದಿಲ್ಲ. ಆತನು ವ್ಯವಹಾರದಲ್ಲಿ ತನ್ನ ವೃತ್ತಿಯನ್ನು ಸಮಾನವಾಗಿ ಇಟ್ಟುಕೊಂಡು ಆತ್ಮಾನಂದದಲ್ಲಿ ತಲ್ಲೀನನಾಗುವನು. ಮುನಿಯು ಇಂತಹ ವೃತ್ತಿಯಿಂದ ಜಡ ಜೀವಿಗಳಂತೆ ಪ್ರಪಂಚದಲ್ಲಿ ವರ್ತಿಸಬೇಕು.

ಕಾಯಿಕ - ವಾಚಿಕ - ಮಾನಸಿಕ । ಉದ್ದೇಶೇ ಕರ್ಮ ನ ಕರೀ ಏಕ । ಜೇ ನಿಫಜೇ ತೇ ಸ್ವಾಭಾವಿಕ । ''ಅಹೇತುಕ'' ತ್ಯಾ ನಾಂವ ।।೪೮೭।। ಹೇತು ಠೇವೂನಿ ಗುಣಾಗುಣೀ । ಸ್ತುತಿನಿಂದೇಚೀ ಬೋಲಣೀ । ಸಾಂಡೋನಿಯಾ ಝಾಲಾ ಮೌನೀ । ಪರೀ ಮೌನಾಭಿಮಾನೀ ಹೇತು ನಾಹೀ ।।೪೮೮।। ಜರೀ ತೋ ಮೌನಾಭಿಮಾನೀ । ತರೀ ಮುಕ್ತ ಪಡಲಾ ಬಂಧನೀ । ಯಾಲಾಗೀ ಬೋಲಣೇ ನ ಬೋಲಣೇ ದೋನ್ಹೀ । ಸಾಂಡೂನಿ ಮೌನೀ ತೋ ಝಾಲಾ ।।೪೮೯।। ಅತದ್‌ವ್ಯಾವೃತ್ತೀನೇ ಜಾಣ । ಕರಾವೇ ಅಸಂತನಿರಸನ । ಮಗ ಸದ್ವಸ್ತೂಚೇ ಧ್ಯಾನ । ಅಖಂಡ ಜಾಣ ಕರಾವೇ ।।೪೯೦।। ತಂವ ಪಾವಲೀ ಸದ್ಗುರುಚೀ ಖೂಣ । ಉಡಾಲೇ ಧ್ಯೇಯ - ಧ್ಯಾತಾ - ಧ್ಯಾನ । ಬುಡಾಲೇ ಭೇದಾಚೇ ಭೇದಭಾನ । ಚೈತನ್ಯಘನ ಕೋಂದಲೇ ।।೪೯೧।। ಮೇಳವೂನಿ ಶಾಸ್ತ್ರಸಂಭಾರಾ । ಬಾಂಧಲಾ ಸಂತಾ ಬಾಂಧಾರಾ । ತೋ ಚೈತನ್ಯಾಚಾ ಮಹಾಪುರಾ । ಮಾಜೀ ಖಿರಾ ವಿರಾಲಾ ।।೪೯೨।। ತೇಂವ್ಹಾ ಬುಡಾಲೇ ಸಂತಾ ಸಂತಭಾನ। ನಿಬಿಡ ದಾಟಲೇ ಚೈತನ್ಯಘನ । ಮೋಡಲೇ ಮನಾಚೇ ಮನಪಣ ।ವೃತ್ತಿಶೂನ್ಯ ಅವಸ್ಥಾ ।।೪೯೩।।

ನಾನು ಗೋವರ್ಧನ ಗಿರಿಯನ್ನು ಕೈಬೆರಳಿನ ಮೇಲೆ ಎತ್ತಿ ಹಿಡಿದೆ, ದಾವಾಗ್ನಿಯನ್ನು ನುಂಗಿ ತೋರಿಸಿದೆ, ಅಘಾಸುರ, ಬಕಾಸುರ ಎಂಬ ಮಹಾ ರಾಕ್ಷಸರ ಸಂಹಾರ ಮಾಡಿದೆ, ಕಾಲಿಯಾ ಮಹಾಸರ್ಪದ ನಾಶ ಮಾಡಿದೆ ।।೪೮೨।। ಹೀಗೆ ಎಲ್ಲಿಯವರೆಗೆ ನಾನು ದೇಹಧಾರಣೆಯನ್ನು ಮಾಡುವೆನೋ, ಅಲ್ಲಿಯವರೆಗೆ ನಿತ್ಯ ನೂತನ ಪವಾಡಗಳನ್ನು ಮಾಡುತ್ತಿರುವೆನು. ಆತ್ಮ ಸುಖದ ಸುಕಾಳವನ್ನು ಮಾಡಿರುವೆನು ।।೪೮೩।। ಆದರೂ ಇಂತಹ ನನ್ನ ಮುಕ್ತತೆಯನ್ನು ಯಾಜ್ಞಿಕರು, ಬ್ರಾಹ್ಮಣರು ಮಾನ್ಯ ಮಾಡುವುದಿಲ್ಲ. ಅಂದ ಮೇಲೆ ಇತರರ ಮಾತೇಕೆ? ಈ ಪ್ರಕಾರವಾಗಿ ಪ್ರಪಂಚಿಕರ ತರ್ಕ ವಿತರ್ಕಗಳು ದಾರುಣವಾಗಿರುವುವು ।।೪೮೪।। ಆದ್ದರಿಂದ ಮುಕ್ತನ ಮುಕ್ತತೆಯನ್ನು ಸ್ವತಃ ಮುಕ್ತರಿರುವವರೇ ಅರಿಯುವರು. ಅನ್ಯರು ಎಷ್ಟೇ ಚತುರರಾಗಿರಲಿ, ಅವರಿಗೆ ಮುಕ್ತನ ಲಕ್ಷಣಗಳು ತಿಳಿಯಲು ಶಕ್ಯವಿಲ್ಲ ।।೪೮೫।। ಮುಕ್ತನು ಈ ಪ್ರಪಂಚದಲ್ಲಿನ ವ್ಯವಹಾರಗಳಲ್ಲಿ ಜಡ, ಮೂಢ, ಪಿಶಾಚಗಳಂತೆ ವರ್ತಿಸುತ್ತಿರುವರು. ಅವುಗಳ ಯಾವ ಸರ್ವ ಲಕ್ಷಣಗಳನ್ನು ಯಥಾರ್ಥವಾಗಿ ವರ್ಣನೆ ಮಾಡುವೆನು. ಅದನ್ನು ಈಗ ಕೇಳು ।।೪೮೬।।

ಮುಕ್ತ ಪುರುಷನು ಕಾಯಿಕ, ವಾಚಿಕ ಅಥವಾ ಮಾನಸಿಕವಾಗಿ ಯಾವುದೇ ಕರ್ಮಗಳನ್ನು ಸಹೇತುಕವಾಗಿ ಮಾಡುತ್ತಿರುವುದಿಲ್ಲ. ಆತನಿಂದ ಆಗುವ ಕರ್ಮಗಳು ಸ್ವಾಭಾವಿಕವಾಗಿರುವುವು. ಇದರ ನಾಮವೇ ''ಅಹೇತುಕ'' ಕರ್ಮವಾಗಿರುವುದು ।।೪೮೭।। ಗುಣಾಗುಣಗಳಲ್ಲಿ ದೃಷ್ಟಿಯನ್ನಿಟ್ಟು, ಸ್ತುತಿಯ ಅಥವಾ ನಿಂದೆಯ ಮಾತುಗಳನ್ನು ಬಿಟ್ಟುಕೊಟ್ಟು ಆತನು ಮೌನವನ್ನು ಧರಿಸಿ ಕುಳಿತಿರುವನು. ಮೌನದ ಅಭಿಮಾನವನ್ನು ಧರಿಸುವುದು ಆತನ ಉದ್ದೇಶವಾಗಿರುವುದಿಲ್ಲ ।।೪೮೮।। ಆತನು ಒಂದು ವೇಳೆ ಮೌನದ ಅಭಿಮಾನವನ್ನು ಧರಿಸಿದರೆ, ಆ ಮುಕ್ತನು ಬಂಧನದಲ್ಲಿ ಬಿದ್ದಂತಾಗುವುದು. ಆದ್ದರಿಂದ ಆತನು ಮಾತನಾಡುವಿಕೆ ಮತ್ತು ಮಾತನಾಡದಿರುವಿಕೆ ಇವುಗಳನ್ನು ಬಿಟ್ಟು ಪೂರ್ಣವಾಗಿ ಮೌನಿಯಾಗಿರುವನು ।।೪೮೯।। ಅತದ್‌ವ್ಯಾವೃತ್ತಿಯಿಂದ ಅಂದರೆ ಅನಾತ್ಮ ವಸ್ತುವಿನ ನಿಷೇಧದಿಂದ ಅಶಾಶ್ವತಗಳ ನಿರಸನೆಯನ್ನು ಮಾಡಬೇಕು. ಮತ್ತು ಸದ್ ವಸ್ತುವಿನ ಅಂದರೆ ಪರಬ್ರಹ್ಮನ ಅಖಂಡವಾಗಿ ಚಿಂತನೆಯನ್ನು ಮಾಡುತ್ತಿರಬೇಕು ।।೪೯೦।। ಈತನಿಗೆ ಸದ್ಗುರುಗಳ ರಹಸ್ಯವು ದೊರೆಯಿತೆಂದರೆ ಧೇಯ, ಧ್ಯಾತಾ, ಧ್ಯಾನ ಈ ಎಲ್ಲವೂ ಇಲ್ಲದಾಗುವುವು. ಭೇದದ ಭೇದತ್ವವು ಇಲ್ಲದಾಗುವುದು ಮತ್ತು ಸರ್ವತ್ರವೂ ಸತ್ ಚಿತ್ ಆನಂದದ ಅನುಭವವು ಬರಲಾಗುವುದು ।।೪೯೧।। ಶಾಸ್ತ್ರದ ಮತ್ತು ಶಾಶ್ವತ ಅಶಾಶ್ವತದ ಅಡ್ಡ ಗೋಡೆಯು ಚೈತನ್ಯದ ಮಹಾಪೂರಿನಲ್ಲಿ ಸಂಪೂರ್ಣವಾಗಿ ಕರಗಿ ಇಲ್ಲದಾಗುವದು ।।೪೯೨।। ಆಗ ಸಂತರು, ಅಸಂತರು ಎಂಬ ಭಾನವೇ ಇಲ್ಲದಾಗಿ ಎಲ್ಲೆಲ್ಲಿಯೂ ಚೈತನ್ಯವೇ ತುಂಬಿರುವದು. ಮನಸ್ಸಿನ ಮನತ್ವವು ಇಲ್ಲದಾಗಿ ವೃತ್ತಿಶೂನ್ಯ ಅವಸ್ಥೆಯು ಪ್ರಾಪ್ತವಾಗುವುದು ।।೪೯೩।।

ಮನೇ ಧ್ಯಾವೇ ಚೈತನ್ಯ ಘನ । ತಂವ ಚೈತನ್ಯಚಿ ಜಾಹಲೇ ಮನ । ಸಹಜೇಚಿ ಖುಂಟಲೇ ಧ್ಯಾನ । ಹೇ ಮುಖ್ಯ ಲಕ್ಷಣ ಮುಕ್ತಾಚೇ ॥೨೯೪॥ ಚೈತನ್ಯೀ ಹರಪಲೇ ಚಿತ್ತ । ಜಡ - ಮೂಕ - ಪಿಶಾಚವತ । ಲೌಕಿಕೀ ವರ್ತತಾ ದಿಸೇ ಮುಕ್ತ । ಜಾಣ ನಿಶ್ಚಿತ ಉದ್ಧವಾ ॥೨೯೫॥ ಮುಕ್ತ ಲೌಕಿಕೀ ವರ್ತತ । ಜಡ - ಮೂಕ - ಪಿಶಾಚವತ । ಮ್ಹಣೌನಿ ಕಳೇ ಇತ್ಥಂಭೂತ । ತೇಹೀ ಚಿನ್ಹ ಯದರ್ಥ ಸಾಂಗೇನ ॥೨೯೬॥ ನೈಷ್ಕರ್ಮ್ಯ ಬ್ರಹ್ಮ ಪಾವಲಾ ದೃಢು । ಅಂತರೀ ನಿಜಬೋಧೇ ಅತಿಗೋಡು । ಬಾಹ್ಯ ಲೌಕಿಕೀ ದಿಸೇ ಜಡು । ಅಚೇತನ ದಗಡು ಹೋಊನಿ ಅಸೇ ॥೨೯೭॥ ಉಠೀಬೈಸೀ ಕರಿತೇ ಮನ । ತೇ ಸ್ವರೂಪೀ ಝಾಲೇ ಲೀನ । ಪಡಲೇ ಠಾಯೀಹೂನಿ ನುಠೀ ಜಾಣ । ಯಾಲಾಗೀ "ಜಡಪಣ" ಆಭಾಸೇ ॥೨೯೮॥ ಶಬ್ದಬ್ರಹ್ಮ ಗಿಳೋನಿ ವೇಗೇ । ನಿಃಶಬ್ದ ವಸ್ತು ಝಾಲಾ ಅಂಗೇ । ನಿಂದಾಸ್ತುತೀಚೇ ನಾಂವ ನೇಘೇ । "ಮುಕಾ" ಸರ್ವಾಂಗೇ ಸರ್ವದಾ ॥೨೯೯॥ ಬ್ರಹ್ಮ ಸರ್ವಥಾ ನ ಬೋಲವೇ ಕೋಣಾ । ಜರೀ ಸಾಂಗೇ ತರೀ ದಾವೀ ಖುಣಾ । ಯಾಲಾಗೀ ಮುಕಾ ಮ್ಹಣತೀ ಜಾಣಾ । ಅಬೋಲಣಾ ಸ್ತುತಿನಿಂದಾ ॥೩೦೦॥ ದ್ರವ್ಯಲೋಭ ನಾಹೀ ಚಿತ್ತೀ । ಕದಾ ದ್ರವ್ಯ ನಾತಳತೀ । ಯಾಲಾಗೀ ಲೋಕ "ಪಿಶಾಚ" ಮ್ಹಣತೀ । ಜಾಣ ನಿಶ್ಚಿತೀ ಉದ್ಧವಾ ॥೩೦೧॥ ನವಲ ತ್ಯಾಚೇ ಪಿಸೇಪಣ । ಜಗಾಸ ನ ಕರವೇ ಜೇ ಪ್ರಾಶನ । ತೇ ವಸ್ತೂಚೇ ಕರೀ ಅಪೇಯಪಾನ । ಅಭಕ್ಷ್ಯ ಜಾಣ ಭಕ್ಷಿತು ॥೩೦೨॥ ಜೇಥೇ ಜಗಾಸೀ ಗಮನ ನವ್ಹೇ ಜಾಣ । ತೇಥ ಹಾ ಕರೀ ಅಗಮ್ಯಾಗಮನ । ಜಗಾಚೇ ಜೇಥ ನ ರಿಘೇ ಮನ । ತೇಥ ಸರ್ವಾಂಗೇ ಜಾಣ ಹಾ ವೇಘೇ ॥೩೦೩॥ ನ ಧರೀ ವಿಧಿನಿಷೇಧ ವಿಭಾಗ । ನ ಕರೀ ಕರ್ಮಾಕರ್ಮಾಚಾ ಪಾಂಗ । ಸ್ವಾನಂದೇ ನಾಚವೀ ಸರ್ವಾಂಗ । ಯಾಲಾಗಿ ಜಗ "ಪಿಸೇ" ಮ್ಹಣೇ ॥೩೦೪॥ ಏವಂ ಜಡ - ಮೂಕ - ಪಿಶಾಚ । ಸಮೂಳ ಲಕ್ಷಣೇ ತೋಚಿ ಸಾಚ । ಮಿಥ್ಯಾ ನವ್ಹೇ ಅಹಾಚವಹಾಚ । ವೃಥಾ ಕಚಕಚ ತೋ ನೇಣೇ ॥೩೦೫॥ ಜಾಣ ಪಾ ಮುಕ್ತಾಚ್ಯಾ ಠಾಯೀ । ಕೋಣೇ ವಿಷಯೀ ಆಗ್ರಹ ನಾಹೀ । ಜೋ ಅತಿಶಯೇಸೀ ಆಗ್ರಹೀ । ತೋ ಬದ್ಧ ಪಾಹೀ ನಿಶ್ಚಿತ ॥೩೦೬॥ ಜೇ ಬೋಲಿಲೀ ಮುಕ್ತಾಚೀ ಲಕ್ಷಣೇ । ತೀಂಚಿ ಸಾಧಕಾಂಚೀ ಸಾಧನೇ । ಸಿದ್ಧಾಸೀ ಅಸತೀ ಸಹಜಗುಣೇ । ಸಾಧಕೇ ಕರಣೇ ದೃಢನಿಷ್ಠಾ ॥೩೦೭॥

ಆ ಯಾವ ಚೈತನ್ಯದ ಧ್ಯಾನವನ್ನು ಮನಃಪೂರ್ವಕವಾಗಿ ಮಾಡಬೇಕು. ಆಗ ಆ ಮನವು ಚೈತನ್ಯವೇ ಆಗಿ ಬಿಡುವುದು. ಆಗ ಧ್ಯಾನವನ್ನು ಮಾಡುವಿಕೆಯು ಸಹಜವಾಗಿಯೇ ನಿಲ್ಲುವುದು. ಹೀಗೆ ಈ ಮುಕ್ತನ ಸಹಜವಾದ ಲಕ್ಷಣವಾಗಿರುವುದು ॥೨೯೪॥ ಹೇ ಉದ್ಧವನೇ, ಚಿತ್ತವು ಚೈತನ್ಯದಲ್ಲಿ ಮುಳುಗಿತೆಂದರೆ ಮುಕ್ತ ಪುರುಷನು ಲೌಕಿಕದಲ್ಲಿ ಜಡ, ಮೂಕ, ಪಿಶಾಚಗಳಂತೆ ವರ್ತಿಸುತ್ತಿರುವುದು ತೋರುವುದು ॥೨೯೫॥ ಮುಕ್ತ ಪುರುಷನು ಜನರಲ್ಲಿ ಜಡ, ಮೂಕ, ಪಿಶಾಚದಂತೆ ವರ್ತಿಸುತ್ತಿರುವುದರಿಂದ ಆತನು ಪೂರ್ಣವಾಗಿ ತಿಳಿಯಲ್ಪಡುವನು. ಅದಕ್ಕಾಗಿ ಆ ಚಿನ್ಹೆಯನ್ನೂ ಸಹ ಈಗ ನಿನಗೆ ಹೇಳುವೆನು ॥೨೯೬॥ ನೈಷ್ಕರ್ಮ್ಯ ಬ್ರಹ್ಮದ ದೃಢವಾದ ಪ್ರಾಪ್ತಿಯು ಆತನಿಗಾಗಿರುವುದು. ಆತನ ಅಂತಃಕರಣವು ಅತ್ಯಂತ ಮಧುರವಾಗಿರುವುದು. ಲೌಕಿಕದಲ್ಲಿ ಮಾತ್ರ, ಆತನು ಜಡವಾಗಿರುವಂತೆ ತೋರುವನು. ಅಚೇತನ ಕಲ್ಲು ಎಂಬಂತೆ ಇರುವನು ॥೨೯೭॥ ಸಂಕಲ್ಪ ವಿಕಲ್ಪ ಉತ್ಪನ್ನಗೊಳಿಸುವ ಮನವು ಆತ್ಮಸ್ವರೂಪದಲ್ಲಿ ಲೀನವಾಗಿರುವುದು. ಆದ್ದರಿಂದ ಸ್ಥಿರವಾಗಿರುವ ಸ್ಥಳದಿಂದ ಅಲುಗಾಡಲಾರನು. ಈ ಸ್ಥಿತಿಯಿಂದ ಜಡತ್ವದ ಭಾಸವಾಗುತ್ತಿರುವುದು ॥೨೯೮॥ ಆತನು ಶಬ್ದಬ್ರಹ್ಮಕ್ಕೆ ನುಂಗಿ ಸ್ವತಃ ನಿಃಶಬ್ದನಾಗಿರುವನು. ಆದ್ದರಿಂದ ಆತನ ಮುಖದಿಂದ ಸ್ತುತಿ ಅಥವಾ ನಿಂದೆ ಆಗುವುದಿಲ್ಲ. ಯಾವಾಗಲೂ ಆತನು ಸರ್ವಾಂಗದಿಂದ "ಮೂಕ" ನಾಗಿರುವನು ॥೨೯೯॥ ಬ್ರಹ್ಮವನ್ನು ಎಂದಿಗೂ ಯಾರಿಗೂ ಹೇಳಿ ತೋರಿಸಲು ಬರುವುದಿಲ್ಲ. ಆದ್ದರಿಂದ ಆತನು ತೋರಿಸಬೇಕಾಗಿದ್ದರೆ ಚಿನ್ಹೆಯಿಂದ ತೋರಿಸುವನು. ಯಾರನ್ನೂ ಸ್ತುತಿ ನಿಂದೆಗಳನ್ನು ಮಾಡಲಾರನು. ಆದ್ದರಿಂದ ಆತನಿಗೆ "ಮೂಕ" ಎನ್ನುವರು ॥೩೦೦॥ ಆತನ ಮನದಲ್ಲಿ ದ್ರವ್ಯದ ಲೋಭವು ಎಂದಿಗೂ ಇರುವುದಿಲ್ಲ. ಆತನು ದ್ರವ್ಯಕ್ಕೆ ಸ್ಪರ್ಶ ಕೂಡ ಮಾಡುವುದಿಲ್ಲ. ಅದಕ್ಕಾಗಿ ಜನರು ಈತನಿಗೆ ಪಿಶಾಚವೆನ್ನುವರು ॥೩೦೧॥ ಈತನ ಈ ಪಿಶಾಚತನವು ಬಹು ಚಮತ್ಕಾರಕವಾಗಿರುವುದು, ಜಗತ್ತಿನ ಜನರಿಗೆ ಪ್ರಾಶನ ಮಾಡಲು ಬಾರದ ಆ ಬ್ರಹ್ಮರಸದ ಪಾನವನ್ನು ಮಾಡುವನು. ಮತ್ತು ಭಕ್ಷಿಸಲು ಬಾರದ ಆ ಯಾವ ಅಭಕ್ಷ್ಯದ ಭಕ್ಷಣ ಮಾಡುವನು ॥೩೦೨॥ ಜಗತ್ತಿನ ಜನರಿಗೆ ಎಲ್ಲಿ ಪ್ರವೇಶವನ್ನು ಮಾಡಲು ಸಾಧ್ಯವಿಲ್ಲವೋ, ಆ ಅಗಮ್ಯ ಸ್ಥಾನದಲ್ಲಿ ಮುಕ್ತನು ಸಹಜವಾಗಿ ಪ್ರವೇಶಿಸುವನು. ಜಗತ್ತಿನ ಜನರ ಮನವು ಎಲ್ಲಿ ಪ್ರವೇಶಿಸುವುದಿಲ್ಲವೋ, ಅಲ್ಲಿ ಆತನು ಸರ್ವಾಂಗದಿಂದ ಪ್ರವೇಶಿಸುವನು ॥೩೦೩॥ ಸರ್ವ ಪ್ರಕಾರಗಳ ದ್ವೈತವು ಇಲ್ಲದಾಗಿರಲು ಆತನ ಮನಸ್ಸಿಗೆ ವಿಧಿನಿಷೇಧಗಳು ಮುಟ್ಟಲಾರವು. ಕರ್ಮಾಕರ್ಮಗಳ ಖಟಾಟೋಪವನ್ನು ಆತನು ಮಾಡಲಾರನು. ಸ್ವಾನಂದದಿಂದ ಆತನು ಸರ್ವಾಂಗವನ್ನು ಕುಣಿಸುತ್ತಿರುವನು. ಆದ್ದರಿಂದ ಜಗತ್ತು ಆತನಿಗೆ ಹುಚ್ಚನೆನ್ನುವುದು ॥೩೦೪॥ ಮುಕ್ತನ ಅಂಗದಲ್ಲಿ ಜಡ, ಮೂಕ, ಪಿಶಾಚ ಈ ಲಕ್ಷಣಗಳಿರುವುವು. ಇವು ಮಿಥ್ಯೆಯಾಗಿರದೇ ಸತ್ಯವಾಗಿರುವುವು. ನಿಜವಾಗಿಯೂ ಆತನು ಸ್ವಭಾವತಃ ಹೀಗೆ ವರ್ತಿಸುವನು. ವ್ಯರ್ಥವಾದ ಜಗಳ, ಚೀರಾಟ ಆತನಿಗೆ ಹಿಡಿಸುವುದಿಲ್ಲ ॥೩೦೫॥ ಮುಕ್ತನು ಯಾವುದೇ ಮಾತಿನ ಆಗ್ರಹ ಹಿಡಿಯಲಾರನು. ಯಾವನು ಅತಿಶಯವಾಗಿ ಆಗ್ರಹಿಯಾಗಿರುವನೋ, ಅವನು ನಿಜವಾಗಿಯೂ ಬದ್ಧನಾಗಿರುವನು ॥೩೦೬॥ ಈ ಯಾವ ಮುಕ್ತನ ಲಕ್ಷಣಗಳನ್ನು ಹೇಳಿರುವುದೇ ಸಾಧಕರ ಸಾಧನೆಗಳಾಗಿರುವುವು. ಸಿದ್ಧರಿಗೆ ಇವು ಸಹಜವಾಗಿಯೇ ಪ್ರಾಪ್ತವಾಗಿರುವುವು. ಸಾಧಕರಿಗೆ ಇವು ಅತ್ಯಂತ ದೃಢವಾದ ನಿಷ್ಠೆಯಿಂದ ಸಾಧ್ಯಮಾಡಿಕೊಳ್ಳಬೇಕಾಗುವುದು ॥೩೦೭॥

ಬೋಲಿಲಿಯಾ ಲಕ್ಷಣಾ । ಸಿದ್ಧಚಿ ಭೋಕ್ತಾ ಜಾಣಾ । ಸಾಧಕುಹಿ ಯೇಥ ಲಾಹಾಣಾ । ಜೋ ಯಾ ಸಾಧನಾ ಸಾಧೂ ಜಾಣೇ ।೫೦೮॥ ಇತರ ಜೇ ಪಂಡಿತಾಭಿಮಾನೀ । ಆಮ್ಹೀ ಶಾಸ್ತ್ರಜ್ಞ ಜ್ಞಾತೇ ಮ್ಹಣೌನೀ । ತೇ ವಾಳಿಲೇ ಯೇಥೂನೀ । ಜೇವೀ ಸಜ್ಜನೀ ದುರ್ಬುದ್ಧೀ ।೫೦೯॥ ಜೋ ನ ಸಾಧೀ ಯೇಥೀಚ್ಯಾ ಸಾಧನಾ । ಕೋರಡಾ ಶಾಸ್ತ್ರಾಭಿಮಾನೀ ಜಾಣಾ । ಸದಾ ವಾಂಛಿತಾ ಧನಮಾನಾ । ತೋ ಯೇಥಿಚ್ಯಾ ಜ್ಞಾನಾ ಅಲಿಪ್ತ ।೫೧೦॥ ಆಮ್ಹೀ ಕರ್ಮಕುಶಳ ಯಾಜ್ಞಿಕ । ಶಾಸ್ತ್ರಸಂಪನ್ನ ವೇದಪಾಠಕ । ಸದಾ ಅರ್ಥಕಾಮಕಾಮುಕ । ತ್ಯಾಂಸೀ ಹೇ ಸುಖ ಅಪ್ರಾಪ್ತ ।೫೧೧॥ ತಿಹೀ ಜೇ ಕಷ್ಟ ಕೇಲೇ ಸರ್ವಥಾ । ತೇ ಸಮಸ್ತ ಜಾಣ ಝಾಲೇ ವೃಥಾ । ಉದ್ಧವಾ ತೇಹೀ ವಿಖೀ ತತ್ತ್ವತಾ । ಐಕ ಆತಾ ಸಾಂಗೇನ ।೫೧೨॥

ಶಬ್ದಬ್ರಹ್ಮಣಿ ನಿಷ್ಣಾತೋ ನ ನಿಷ್ಣಾಯಾತ್ ಪರೇ ಯದಿ । ಶ್ರಮಸ್ತಸ್ಯ ಶ್ರಮಫಲೋ ಹ್ಯ ಧೇನುಮಿವ ರಕ್ಷತಃ ।೧೮॥

ಅರ್ಥ:- ಹೇ ಉದ್ಧವನೇ, ಯಾವನು ವೇದಗಳಲ್ಲಿ ಪಾರಾಂಗತ ವಿದ್ವಾನನಾಗಿಯೂ ಪರಬ್ರಹ್ಮ ಜ್ಞಾನದಿಂದ ಶೂನ್ಯನಾಗಿರುವವನು, ಆತನ ಪರಿಶ್ರಮದ ಫಲವು ಪ್ರಾಪ್ತವಾಗದು. ಹಾಲು ಕೊಡದ ಆಕಳಿಗೆ ಪಾಲನೆ ಮಾಡಿದಂತೆ ಆವನಿರುವನು.

ಶಬ್ದಬ್ರಹ್ಮ ವೇದಶಾಸ್ತ್ರಾರ್ಥ । ಪಢೋನಿ ವಾಚೋನಿ ಅತಿ ಪಂಡಿತ । ಚಾರೀ ವೇದ ಮೂರ್ತಿಮಂತ । ಸದಾ ತಿಷ್ಠತ ವಾಚೇಸೀ ।೫೧೩॥ ಸಂಹಿತಾ ಪದ ಕ್ರಮ ಸ್ವರಯುಕ್ತ । ಅರಣ ಬ್ರಾಹ್ಮಣ ಸೂತ್ರ ನಿರುಕ್ತ । ಜಟಾವಳೀ ಧ್ವಜ ರಥ । ಪಢೋ ಜಾಣತ ವಣಪೂರ್ವಕ ।೫೧೪॥ ಆಯುರ್ವೇದ ಧನುರ್ವೇದ । ಗಾಂಧರ್ವವೇದೀಚಾ ಜಾಣೇ ಭೇದ । ಕಾವ್ಯನಾಟಕೀ ಅತಿಶುದ್ಧ । ವೇದ ಉಪವೇದ ತೋ ಜಾಣೇ ।೫೧೫॥ ವ್ಯಾಕರಣೀ ಅತಿ ನೇಟಕ । ಸಾಂಖ್ಯ ಪಾತಂಜಳ ಜಾಣೇ ತರ್ಕ । ಶಾಸ್ತ್ರ ಜಾಣೇ ವೈಶೇಷಿಕ । ಕರ್ಮಮೀಮಾಂಸಕ ಯಜ್ಞಾಂತ ।೫೧೬॥ ವಿವರ್ಣ ವಾಚಸ್ಪತಿ ವೇದಾಂತ । ಶಾಸ್ತ್ರ ಜಾಣೇ ವಾರ್ತಿಕಾಂತ । ತಿನ್ಹೀ ಪ್ರಸ್ಥಾನೇ ಮೂರ್ತಿಮಂತ । ಪುಢಾ ತಿಷ್ಠತ ಯೋಗ್ಯತ್ವೇ ।೫೧೭॥ ಶಿಲ್ಪಶಾಸ್ತ್ರಿ ಅತಿನಿಪುಣ । ಸೂಪಶಾಸ್ತ್ರಾಮಾಜೀ ಪ್ರವೀಣ । ರತ್ನಪರೀಕ್ಷಾ ಲಕ್ಷಣ । ಜಾಣೇ ಆಪಣ ವಾಜಿವಾಹ ।೫೧೮॥ ಆಗಮೀ ನೇಟಕಾ ಮಂತ್ರತಂತ್ರೀ । ಶೈವೀ ವೈಷ್ಣವೀ ದೀಕ್ಷೇಚೀ ಪರೀ । ಸೌರ ಶಾಕ್ತ ಅಭಿಚಾರೀ । ನಾನಾ ಮಂತ್ರೀ ಪ್ರವೀಣ ।೫೧೯॥

ಈ ಲಕ್ಷಣಗಳ ಭೋಕ್ತನೆಂದರೆ ಕೇವಲ ಒಬ್ಬ ಸಿದ್ಧನೇ ಆಗಿರುವನು. ಇದನ್ನು ನಿಶ್ಚಿತವಾಗಿ ತಿಳಿ. ಈ ಸಾಧನೆಗಳನ್ನು ಹೇಗೆ ಸಾಧಿಸಬೇಕೆಂಬ ಅರಿವು ಇದ್ದ ಸಾಧಕನೂ ಕೂಡ ಇದರ ಪಾಲುಗಾರನಾಗಿರುವನು ।೫೦೮॥ ಇವರಲ್ಲದೆ ಇತರರು ನಾನು ಶಾಸ್ತ್ರಜ್ಞನು, ಪಂಡಿತನು ಎಂದು ಅಭಿಮಾನವನ್ನು ಕೊಟ್ಟುವವರಾದ ಈ ಎಲ್ಲ ವಿದ್ವಾನರು ಈ ಮುಕ್ತನ ಪಂಕ್ತಿಯಿಂದ ದೂರಾಗಿರುವರು ।೫೦೯॥ ಇಲ್ಲಿ ಹೇಳಿದ ಸಾಧನೆಗಳನ್ನು ಪ್ರಾಪ್ತ ಮಾಡಿಕೊಳ್ಳದೇ ಯಾವ ಶಾಸ್ತ್ರಗಳ ಒಣ ಅಭಿಮಾನವನ್ನು ಹಿಡಿದು ಧನಮಾನ ಸನ್ಮಾನಗಳನ್ನು ಇಚ್ಛಿಸುವವನು ಈ ಆತ್ಮಜ್ಞಾನದಿಂದ ಅಲಿಪ್ತನಾಗಿರುವನು ।೫೧೦॥ ನಾವು ಕರ್ಮ ಮಾಡುವುದರಲ್ಲಿ ಮಹಾ ಕುಶಲರು, ಯಾಜ್ಞಿಕರು, ಶಾಸ್ತ್ರ ಸಂಪನ್ನರು, ವೇದಪಾಠಕರು ಎಂಬ ಅಭಿಮಾನದಿಂದ ದ್ರವ್ಯ, ಕಾಮ ಇವುಗಳ ಇಚ್ಛೆ ಮಾಡುವರು. ಇವರಿಗೆ ಈ ಆತ್ಮಸುಖವು ಎಂದೆಂದಿಗೂ ದೊರಕಲಾರದು ।೫೧೧॥ ಹೇ ಉದ್ಧವನೇ ಈ ಜನರು ಕರ್ಮಗಳನ್ನು ಮಾಡಲು ಪಡುವ ಯಾವ ಕಷ್ಟಗಳು, ಎಲ್ಲವೂ ವ್ಯರ್ಥವಾಗುವುವು. ಈ ವಿಷಯಕ್ಕೆ ಸತ್ಯ ವಿಚಾರಗಳನ್ನು ಹೇಳುವೆ, ಅದನ್ನು ಕೇಳು ।೫೧೨॥

ವೇದಗಳ ಪಠಣೆಯನ್ನು ಮಾಡಿ, ವೇದಶಾಸ್ತ್ರಗಳ ಅರ್ಥವನ್ನು ತಿಳಿದು, ಒಬ್ಬನು ಮಹಾಪಂಡಿತನಾಗುವನು. ಆತನ ನಾಲಿಗೆಯ ಮೇಲೆ ನಾಲ್ಕೂ ವೇದಗಳು ಯಾವಾಗಲೂ ಮೂರ್ತಿಮಂತವಾಗಿ ನಿಂತುಕೊಂಡಿರುವುವು ।೫೧೩॥ ಸ್ವರಯುಕ್ತ ಸಂಹಿತಾ, ಪದಗಳು, ಕ್ರಮ ಅರಣ, ಬ್ರಾಹ್ಮಣ, ಸೂತ್ರ, ನಿರುಕ್ತ, ಜಟಾಪಾಠ, ಧ್ವಜರಥ, ಇತ್ಯಾದಿಗಳ ಸವರ್ಣಕವಾಗಿ ನುಡಿಯಲು ಬರುವುವು ।೫೧೪॥ ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಇವುಗಳಲ್ಲಿನ ಸರ್ವ ಭೇದಗಳನ್ನು ಈತನು ಅರಿತಿರುವನು. ಕಾವ್ಯ, ನಾಟಕದ ಮರ್ಮ ಈತನಿಗೆ ಗೊತ್ತಿರುವುದು. ವೇದ ಮತ್ತು ಉಪವೇದಗಳು ಈತನಿಗೆ ಪ್ರಾಪ್ತವಾಗಿರುವುವು ।೫೧೫॥ ವ್ಯಾಕರಣ, ಸಾಂಖ್ಯ, ಯೋಗಶಾಸ್ತ್ರ, ನ್ಯಾಯಶಾಸ್ತ್ರ, ವೈಶೇಷಿಕ ಶಾಸ್ತ್ರ, ಇವು ಎಲ್ಲವುಗಳಲ್ಲಿಯೂ ನಿಷ್ಣಾತನಾಗಿರುವನು. ಈತನು ಯಜ್ಞದಲ್ಲಿನ ಕರ್ಮ ಮೀಮಾಂಸಗಳನ್ನು ತಿಳಿದವನಾಗಿರವನು ।೫೧೬॥ ವೇದಗಳ ವಿವರಣೆಯನ್ನು ಮಾಡುವುದರಲ್ಲಿ ಕೇವಲ ಬೃಹಸ್ಪತಿಯೇ ಆಗಿರುವನು. ವಾರ್ತಿಕದವರೆಗೆ ಸರ್ವ ಶಾಸ್ತ್ರಗಳಲ್ಲಿ ಪಾರಾಂಗತನಾಗಿರುವನು. ಪ್ರಸ್ಥಾನತ್ರಯೀ ಮಾತ್ರ ಆತನ ಎದುರಿನಲ್ಲಿ ಕೈ ಜೋಡಿಸಿ ನಿಂತಿರುವುವು ।೫೧೭॥ ಶಿಲ್ಪ ಶಾಸ್ತ್ರಗಳಲ್ಲಿ ಈತನು ನಿಪುಣನಾಗಿರುವನು. ಪಾಕಶಾಸ್ತ್ರಗಳಲ್ಲಿಯೂ ಪ್ರವೀಣನಾಗಿರುವನು. ಈತನು ಉತ್ತಮ ಪ್ರಕಾರವಾಗಿ ರತ್ನಗಳನ್ನು ಪರೀಕ್ಷಿಸಬಲ್ಲನು. ಅಶ್ವವಿದ್ಯೆಯಲ್ಲಿ ಈತನು ಮಹಾ ಚತುರನಾಗಿರುವನು ।೫೧೮॥ ಆಗಮೋಕ್ತ ಮಂತ್ರತಂತ್ರಗಳಲ್ಲಿ ತಜ್ಞನಾಗಿರುವನು. ಶೈವ ದೀಕ್ಷೆ ಮತ್ತು ವೈಷ್ಣವ ದೀಕ್ಷೆ ಇವುಗಳಲ್ಲಿನ ಸಾರವನ್ನು ಈತನು ಅರಿತಿರುವನು. ಹಾಗೆಯೇ ಸೌರ, ಶಾಕ್ತ, ಜಾರಣ, ಮಾರಣ, ಉಚ್ಚಾಟಣ ಇತ್ಯಾದಿ ನಾನಾ ಪ್ರಕಾರಗಳ ಮಂತ್ರಗಳಲ್ಲಿ ಈತನು ಪರಿಣಿತನಾಗಿರುವನು ।೫೧೯॥

ಕೋಕಶಾಸ್ತ್ರೀಚೀ ಅಧಿಷ್ಠಾತ್ರೀ । ಅತಿ ಪ್ರವೀಣ ಸಂಗೀತಶಾಸ್ತ್ರೀ । ಪ್ರಬಂದ ಕರೂ ಜಾಣೇ ಕುಸರೀ । ರಾಜಮಂತ್ರೀ ರಾಜಸು ॥೫೨೦॥ ನಿಘಂಟು ವಸೇ ಪ್ರಜ್ಞೇಪುಢಾ । ಚಮತ್ಕಾರು ಜಾಣೇ ಗಾರುಡಾ । ಪಂಚಾಕ್ಷರೀ ಅತಿಗಾಢಾ। ವೈದ್ಯ ಧಡಪುಡಾ ರಸಜ್ಞ ॥೫೨೧॥ ರಸೌಷಧೀ ಸಾಧಾವೀ ತೇಣೇ । ಭೂತ ಭವಿಷ್ಯ ಜ್ಯೋತಿಷ್ಯ ಜಾಣೇ। ಅಮರಕೋಶ ಅಭಿಧಾನೇ । ಅಠರಾ ಪುರಾಣೇ ಮುಖೋದ್ಗತ ॥೫೨೨॥ ಪ್ರಶ್ನಾವಲೀ ಪಾಹೋ ಜಾಣೇ। ಸ್ವಪ್ನಾಧ್ಯಾಯೋ ಸಾಂಗಾವಾ ತೇಣೇ । ಇತಿಹಾಸಾದೀ ಪ್ರಕರಣೇ । ಜಾಣೇ ಲಕ್ಷಣೇ ಗರ್ಭಾಚೀ ॥೫೨೩॥ ಶಬ್ದಜ್ಞಾನಾಚೀ ವ್ಯುತ್ಪತ್ತೀ । ಜಾಣೇ ಸಾಧಕ-ಬಾಧಕ ಯುಕ್ತೀ । ಸಮಯೀಂಚೀ ಸಮಯೀ ಸ್ಫುರೇ ಸ್ಫೂರ್ತೀ। ಅಪರ ಬೃಹಸ್ಪತಿ ಬೋಲಾವಯಾ ॥೫೨೪॥ ಜೇವೀ ತಳಹಾತೀಚಾ ಆವಳಾ । ತೇವೀ ಬ್ರಹ್ಮಜ್ಞಾನ ಬೋಲೇ ಪ್ರಾಂಜಳಾ । ಪರೀ ಅಪರೋಕ್ಷ ಸಾಕ್ಷಾತ್ಕಾರೀ ಆಂಧಳಾ । ನೇಣೇ ಜಿವ್ಹಾಳಾ ತೇಥೀಚಾ ॥೫೨೫॥ ಮೋರಾಅಂಗೀ ಅತಿಡೋಳಸೇ । ಅಂಗಭರೀ ಭರಲೀ ಪಿಸೇ । ಏಕೇ ದೃಷ್ಟೀವೀಣ ಆಂಧಳೇ ಜೈಸೇ । ಜಾಹಲೇ ತೈಸೇ ವಿದ್ವಾಂಸಾ ॥೫೨೬॥ ಜೇಥೂನಿ ಕ್ಷೀರ ಸ್ರವತೀ ಸಡ । ತೇಥೀಂಚಿ ಲಾಗೋನಿ ಗೋಚಿಡ । ಅಶುದ್ಧ ಸೇವಿತಾತಿ ಮೂಢ। ತೇವೀ ವಿದ್ವಾಂಸ ದೃಢ ವಿಷಯಾಂಸೀ ॥೫೨೭॥ ಗೋಚಿಡಾಚೇ ಮುಖೀ ಕ್ಷೀರ ರಿಘೇ । ತೋ ಅಶುದ್ಧಾ ವಾಂಚೋನಿ ತೇ ನೇಘೇ । ತೇವೀ ಜ್ಞಾನ ವಿಕೂನಿ ಅಂಗೇ । ವಿದ್ವಾಂಸು ಮಾಗೇ ವಿಷಯಾಂತೇ ॥೫೨೮॥ ಸಾಂಡೂನಿ ಸುಗಂಧಚಂದನಾಸೀ । ಆವಡೀ ದುರ್ಗಂಧಾ ಧಾಂವೇ ಮಾಶೀ । ತೇವೀ ಸಾಂಡೂನಿ ನಿಜಾತ್ಮಜ್ಞಾನಾಸೀ । ಪಂಡಿತ ವಿಷಯಾಂಸೀ ಝೋಂಬತ ॥೫೨೯॥ ಅಸೋನಿ ಕಮಳ ಆಮೋದಾಪಾಶೀ । ದರ್ದುರ ಸೇವಿತೀ ಕರ್ದಮಾಸೀ। ತೇವೀ ಸಾಂಡೂನಿ ನಿಜಾತ್ಮಜ್ಞಾನಾಸೀ । ಪಂಡಿತ ವಿಷಯಾಂಸೀ ಲೋಲುಪ ॥೫೩೦॥ ಕರೂನಿ ಅದ್ವೈತವ್ಯುತ್ಪತ್ತೀ । ತೇ ಜ್ಞಾನ ವಿಕೂ ದೇಶಾಂತರಾ ಜಾತೀ । ಮೂರ್ಖ ಜ್ಞಾತ್ಯಾತೇ ಉಪಹಾಸಿತೀ । ತರ್ಹೀ ವಾಂಛಿತೀ ಸನ್ಮಾನು ॥೫೩೧॥ ಸಾಂಗತಾ ಬ್ರಹ್ಮನಿರೂಪಣ । ಸಾತ್ತ್ವಿಕಾಚೇ ಪರಮಾರ್ಥೀ ಮನ । ವ್ಯಾಖ್ಯಾತಾ ತೋ ವಾಂಛೀ ಧನ। ವಿಪರೀತ ಜ್ಞಾನ ವಿದ್ವಾಂಸಾ ॥೫೩೨॥ ಸಾಂಗೇ ಆನ ಕರೀ ಆನ । ತೇಥೇ ಕೈಚೇ ಬ್ರಹ್ಮಜ್ಞಾನ । ಜೇಥ ವಸೇ ಧನಮಾನ । ತೇಥ ಆತ್ಮಜ್ಞಾನ ಅಸೇನಾ ॥೫೩೩॥

ಕಾಮಶಾಸ್ತ್ರದಲ್ಲಿ ಈತನು ನಿಷ್ಣಾತನಾಗಿರುವನು. ಸಂಗೀತ ಶಾಸ್ತ್ರದಲ್ಲಿ ಈತನು ಪ್ರವೀಣನಾಗಿರುವನು. ಕಾವ್ಯಗಳನ್ನು ರಚಿಸುವುದರಲ್ಲಿ ಈತನು ಕುಶಲನಾಗಿರುವನು. ರಾಜಕಾರಣದಲ್ಲಿ ಈತನು ಮುತ್ಸದ್ದಿಯಾಗಿರುವನು ॥೫೨೦॥ ಈತನಿಗೆ ನಿಘಂಟು ಅಂದರೆ ವೇದದ ಶಬ್ದಕೋಶವು ಮುಖೋದ್ಗತವಾಗಿರುವುದು. ಇಂದ್ರಜಾಲ ಇತ್ಯಾದಿ ಗಾರುಡಿಗ ಚಮತ್ಕಾರಗಳನ್ನು ಪೂರ್ಣವಾಗಿ ತಿಳಿದಿರುವನು. ಈತನು ಪ್ರಖ್ಯಾತ ವೈದ್ಯನಾಗಿರುವನು. ರಸಾಯನಶಾಸ್ತ್ರಜ್ಞನಾಗಿರುವನು ॥೫೨೧॥ ಈತನು ಅನೇಕ ಪ್ರಕಾರಗಳ ಔಷಧಗಳನ್ನು ತಯಾರಿಸುವನು. ಈತನು ಭೂತ ಭವಿಷ್ಯ ಮತ್ತು ಜೋತಿಷ್ಯವನ್ನು ಹೇಳುವುದರಲ್ಲಿ ಅತಿಶಯ ನಿಷ್ಣಾತನಾಗಿರುವನು. ಅಮರ ಕೋಶದಲ್ಲಿನ ಶಬ್ದ ಮತ್ತು ಹದಿನೆಂಟು ಪುರಾಣಗಳು ಆತನ ನಾಲಿಗೆಯ ಮೇಲೆ ವಿರಾಜಮಾನವಾಗಿರುವುವು ॥೫೨೨॥ ಈತನಿಗೆ ಪ್ರಶ್ನಾವಳೀ ನೋಡಲು ಬರುವುದು. ಹಾಗೆಯೇ ಸ್ವಪ್ನ ಫಲಗಳನ್ನು ಹೇಳಲು ಬರುವುದು. ಇತಿಹಾಸದ ಸರ್ವ ಪ್ರಕರಣಗಳು ಮುಖೋದ್ಗತವಾಗಿರುವುವು. ಗರ್ಭದ ಲಕ್ಷಣಗಳನ್ನು ಈತನು ತಪ್ಪದೇ ಹೇಳುತ್ತಿರುವನು ॥೫೨೩॥ ಈತನಿಗೆ ಶಬ್ದ ಉತ್ಪತ್ತಿಯ ಸಖೋಲ ಜ್ಞಾನವಿರುವುದು. ಈತನು ಸಾಧಕ, ಬಾಧಕ ಯುಕ್ತಿಗಳನ್ನು ಅರಿತುಕೊಂಡಿರುವನು. ಸಮಯ ಸೂಚಕತೆಯು ಈತನ ಹಿಂದೆ ಮೂರ್ತಿಮಂತವಾಗಿ ನಿಂತಿರುವದು. ಭಾಷಣದಲ್ಲಿ ಮಾತ್ರ ಪ್ರತಿ ಬೃಹಸ್ಪತಿಯ ಅವತಾರನಾಗಿರುವನು ॥೫೨೪॥ ಅಂಗೈಯಲ್ಲಿನ ನೆಲ್ಲಿಕಾಯಿಯಂತೆ ಈತನು ಬ್ರಹ್ಮಜ್ಞಾನದ ಮಾತುಗಳನ್ನು ಸ್ಪಷ್ಟವಾಗಿ ಹೇಳುವನು. ಆದರೆ ಸ್ವತಃ ತನಗೆ ಅದರ ಯಾವ ಅನುಭವವು ಇಲ್ಲದಕ್ಕೆ ಆತ್ಮಜ್ಞಾನವಿಷಯಕ್ಕೆ ಈತನು ಕುರುಡಾಗಿರುವನು ॥೫೨೫॥ ನವಿಲಿನ ಸರ್ವಾಂಗದಲ್ಲಿ ಕಣ್ಣುಗಳು ಪಸರಿಸಿರುವುವು. ಆದರೆ ಮುಖ್ಯವಾಗಿ ಕಣ್ಣುಗಳಿಲ್ಲದಿದ್ದರೆ ಅದು ಕುರುಡಾಗುವಂತೆ ವಿದ್ವಾನರ ಅವಸ್ಥೆಯಾಗಿರುವುದು ॥೫೨೬॥ ಆಕಳಿನ ಕೆಚ್ಚಲದಲ್ಲಿ ಹಾಲು ಬರುತ್ತಿರುವುದು. ಅಲ್ಲಿ ಉಣ್ಣೆ ವಿರುವುದು. ತಿಳಿಯದೆ ರಕ್ತಪ್ರಾಶನ ಮಾಡುವುದು. ಅದರಂತೆ ವಿದ್ವಾನರು ವಿಷಯಗಳಿಗೆ ತೆಕ್ಕೆ ಬಿದ್ದಿರುವರು ॥೫೨೭॥ ಉಣ್ಣೆಯ ಮುಖದಲ್ಲಿ ಹಾಲೆರೆದರೂ ಅದು ಅದನ್ನು ಬಿಟ್ಟು ರಕ್ತಮಾತ್ರ ಗ್ರಹಿಸುತ್ತಿರುವುದು. ಅದರಂತೆ ವಿದ್ವಾನನು ತನ್ನ ಜ್ಞಾನವನ್ನು ಕೊಟ್ಟು ವಿಷಯಗಳನ್ನು ಕೊಳ್ಳುವನು ॥೫೨೮॥ ಚಂದನದ ಸುಗಂಧವನ್ನು ಬಿಟ್ಟು ನೊಣವು ಹೊಲಸಾದ ದುರ್ಗಂಧದತ್ತ ಪ್ರೇಮದಿಂದ ಧಾವಿಸುವುದು. ಅದರಂತೆ ಪಂಡಿತ ಜನರು ಈ ಯಾವ ಆತ್ಮಜ್ಞಾನವನ್ನು ಬಿಟ್ಟುಕೊಟ್ಟು ವಿಷಯಗಳಲ್ಲಿ ರಮಮಾಣರಾಗುವರು ॥೫೨೯॥ ಕಮಲದ ಪರಿಮಳ ಸಮೀಪವಿದ್ದರೂ ಸಹ ಕಪ್ಪೆಯು ರಾಡಿಯನ್ನೇ ಸೇವಿಸುತ್ತಿರುವುದು. ಅದರಂತೆ ಆತ್ಮಜ್ಞಾನವನ್ನು ಬಿಟ್ಟು ವಿದ್ವಾನ ಜನರು ವಿಷಯಗಳಲ್ಲಿ ಆಸಕ್ತರಾಗಿರುವರು ॥೫೩೦॥ ಅದ್ವೈತ ಮತವನ್ನು ಸಿದ್ಧಗೊಳಿಸಿ ಇವರು ಈ ಜ್ಞಾನವನ್ನು ಮಾರಿಕೊಳ್ಳಲು ಪರದೇಶಕ್ಕೆ ಪ್ರಯಾಣಿಸುವರು. ಮೂರ್ಖ ಜನರು ಜ್ಞಾನಿಗಳವರನ್ನು ಚೇಷ್ಟೆ ಮಾಡುವರು. ಆದರೂ ಇವರು ಸನ್ಮಾನಗಳ ಇಚ್ಛೆಯನ್ನು ಮಾಡುತ್ತಲೇ ಇರುವರು ॥೫೩೧॥ ಬ್ರಹ್ಮ ನಿರೂಪಣೆಯನ್ನು ಹೇಳುತ್ತಿರಲು ಸಾತ್ವಿಕ ಶ್ರೋತೃಗಳವರ ಮನವು ಪರಮಾರ್ಥದತ್ತ ಓಲೈಸುತ್ತಿರುವುದು. ಆದರೆ ವಕ್ತಾನ ಅಂಗದಲ್ಲಿ ದ್ರವ್ಯದ ಅಭಿಲಾಷೆಯು ನಿರ್ಮಾಣವಾಗುತ್ತಿರುವುದು. ಈ ಯಾವ ವಿದ್ವಾನರ ಜ್ಞಾನವು ಬಹು ವಿಪರೀತವಾಗಿರುವುದು ॥೫೩೨॥ ಯಾವನು ಹೇಳುವುದೊಂದು ಮತ್ತು ಮಾಡುವುದು ಇನ್ನೊಂದಾದರೆ, ಅಲ್ಲಿ ಬ್ರಹ್ಮಜ್ಞಾನವು ಇರುವುದಾದರೂ ಹೇಗೆ? ಎಲ್ಲಿ ಧನ, ಮಾನ, ಸನ್ಮಾನಗಳ ಇಚ್ಛೆವಿರುವುದೋ ಅಲ್ಲಿ ಆತ್ಮಜ್ಞಾನವು ಇರುವುದಿಲ್ಲ ॥೫೩೩॥

ದೃಢ ಧನಮಾನ ಧರೋನಿ ಪೋಟೀ । ಸಾಂಗತಾ ಬ್ರಹ್ಮಜ್ಞಾನಗೋಠೀ । ತ್ಯಾಸ ಆತ್ಮಸಾಕ್ಷಾತ್ಕಾರ ಭೇಟೀ । ನವ್ಹೇ ಕಲ್ಪಕೋಟೀ ಗೇಲಿಯಾ ।।೫೩೪।। ನಾನಾ ಪದವ್ಯುತ್ಪತ್ತಿ ವಿಂದಾನ । ಏಕೇ ಶ್ಲೋಕೀ ದಶಧಾ ವ್ಯಾಖ್ಯಾನ । ಪೋಟೀ ಅಸತಾ ಮಾನಾಭಿಮಾನ । ಬ್ರಹ್ಮಜ್ಞಾನ ತ್ಯಾ ಕೈಚೇ ।।೫೩೫।। ಮೀ ಪಂಡಿತು ಅತಿಜ್ಞಾತಾ । ಐಶಿಯಾ ನಾಗವಲೇ ಅಹಂತಾ । ಜೇವೀ ಆಂಧಳೇ ನೋಳಖೇ ಪಿತಾ । ನಿತ್ಯ ಅಸತಾ ಏಕತ್ರ ।।೫೩೬।। ತೈಶೀ ಗತಿ ವಿದ್ವಾಂಸಾಸೀ । ನಿತ್ಯ ಅಸತೀ ಆತ್ಮಸಮರಸೀ । ತೇಚಿ ವಾಖಾಣಿತೀ ಅಹರ್ನಿಶೀ । ಪರೀ ತ್ಯಾ ಸ್ವರೂಪಾಸೀ ನೇಣತೀ ।।೫೩೭।। ಕರಾವಯಾ ವಿಷಯಭರಣ । ಕೇಲೇ ಶಾಸ್ತ್ರವ್ಯುತ್ಪತ್ತಿ ವ್ಯಾಖ್ಯಾನ । ತೇ ವೃಥಾ ಕಷ್ಟ ಗೇಲೇ ಜಾಣ । ಜೇವೀ ವಂಧ್ಯಾಧೇನು ಪೋಶಿಲೇ ।।೫೩೮।। ಜೇ ಕಧೀ ವೋಳೇ ನಾ ಫಳೇ । ಸುಟಲೀ ತರೀ ಸ್ವೈರಾ ಪಳೇ । ನಿತ್ಯ ವೋಢಾಳೀ ರಾಜಮಳೇ । ತೇ ದುಃಖ ಆದಳೇ ಸ್ವಾಮೀಸೀ ।।೫೩೯।। ತೈಶೀ ಗತಿ ಪಂಡಿತಂಮನ್ಯಾಸೀ । ವ್ಯುತ್ಪತ್ತಿ ಪೋಶಿಲೇ ವಾಚೇಸೀ । ತೇ ವೋಢಾಳ ಝಾಲೀ ವಿಷಯಾಂಸೀ । ಜ್ಯಾಚೀ ತ್ಯಾಸೀ ನಾವರೇ ।।೫೪೦।। ಜೇವೀ ಕಾ ನಿರ್ದೈವಾಹತೀ । ಕನಕ ಪಡಲೇ ತೇ ಹೋಯ ಮಾತೀ । ತೇವೀ ಪಂಡಿತಂಮನ್ಯಾಚೀ ವ್ಯುತ್ಪತ್ತೀ । ವಿಷಯಾಸಕ್ತೀ ನಾಶಿಲೀ ।।೫೪೧।। ದ್ವಿಜಾ ದೀಧಲಾ ಭದ್ರಜಾತೀ । ತ್ಯಾಸೀ ನ ಪೋಸವೇ ತೋ ನಿಶ್ಚಿತೀ । ಮಗ ಫುಕಾಸಾಠೀ ವಿಕಿತೀ । ತೇವೀ ವ್ಯುತ್ಪತ್ತೀ ವಿದ್ವಾಂಸಾ ।।೫೪೨।। ಅದ್ವೈತ ಶಾಸ್ತ್ರಾಚೀ ವ್ಯುತ್ಪತ್ತೀ । ಹೇ ತ್ಯಾಸೀ ಝಾಲೀ ಅಲಭ್ಯಪ್ರಾಪ್ತೀ । ಜೇ ವಿಷಯಾಲಾಗೀ ವಿಕಿತೀ । ತೇ ಮೂರ್ಖ ನಿಶ್ಚಿತೀ ವಿದ್ವಾಂಸ ।।೫೪೩।। ಮುಖೀ ಊಂಸ ಘಾಲಿಜೇ ಘಾಣಾ । ತೋ ರಸ ಪಿಳೂನಿ ಭರೇ ಭಾಣಾ । ಫಿಕಾ ಚೋಪಟೀ ಕರಕರೀ ಘಾಣಾ । ತೇ ಗತಿ ಜಾಣಾ ವಿದ್ವಾಂಸಾ ।।೫೪೪।। ವಿದ್ವಾಂಸ ಕರಿತೀ ಜ್ಞಾನಕಥನ । ಸಾರಾಂಶ ಸಾತ್ತ್ವಿಕೀ ನೇಲಾ ಜಾಣ । ಶಬ್ದ ಸೋಪಟೀ ಕರಕರೀ ವದನ । ಗೋಡಪಣ ತೇಥೇ ಕೈಚೇ ।।೫೪೫।। ಜೇವೀ ಕಾ ನಪುಂಸಕಾಚ್ಯಾ ಕರೀ । ವೋಪಿಲೀ ಪದ್ಮಿಣೀ ಸುಂದರೀ । ತೇ ಅಖಂಡ ರಡೇ ಜಯಾಪರೀ । ತೇವೀ ವಿದ್ವಾಂಸಾಘರೀ ವ್ಯುತ್ಪತ್ತೀ ।।೫೪೬।।

ಅಂತಃಕರಣದಲ್ಲಿ ಧನ ಮತ್ತು ಮಾನ ಇವುಗಳ ಆಸಕ್ತಿಯನ್ನು ಇಟ್ಟುಕೊಂಡು ಬ್ರಹ್ಮಜ್ಞಾನದ ಮಾತುಗಳನ್ನು ಎಷ್ಟೇ ಆಡಿದರೂ, ಆತನಿಗೆ ಕೋಟ್ಯಾವಧಿ ಕಲ್ಪಾಂತದವರೆಗೂ ಆತ್ಮ ಸಾಕ್ಷಾತ್ಕಾರವು ಪ್ರಾಪ್ತವಾಗಲಾರದು ।।೫೩೪।। ಒಂದೊಂದೇ ಪದಗಳನ್ನು ಅನೇಕ ಪ್ರಕಾರಗಳಲ್ಲಿ ವಿಭಾಗಿಸಿ ಹೇಳುತ್ತಿರಲಿ ಅಥವಾ ಒಂದೊಂದೇ ಶ್ಲೋಕದ ಅರ್ಥವನ್ನು ಹತ್ತು ಹತ್ತು ಪ್ರಕಾರಗಳಿಂದ ತಿಳಿಸುತ್ತಿರಲಿ, ಆದರೆ ಮನದಲ್ಲಿ ಮಾನ, ಸನ್ಮಾನಗಳ ಇಚ್ಛೆಯು ಇದ್ದರೆ, ಆತನಿಗೆ ಬ್ರಹ್ಮಜ್ಞಾನವು ಹೇಗೆ ಪ್ರಾಪ್ತವಾಗಬೇಕು? ।।೫೩೫।। ನಾನೊಬ್ಬ ಪಂಡಿತನು, ನಾನು ಶ್ರೇಷ್ಠಜ್ಞಾನಿಯು ಎಂಬ ಈ ಅಹಂಕಾರದಿಂದ ಆತನು ತನ್ನ ಸರ್ವಸ್ವವನ್ನು ಕಳೆದುಕೊಂಡು ಕೂಡುವನು. ನಿತ್ಯವೂ ಒಂದೇ ಸ್ಥಳದಲ್ಲಿ ಕೂಡಿಯೇ ಇರುತ್ತಿದ್ದರೂ ಕುರುಡ ಬಾಲಕನು ತನ್ನ ತಂದೆಯನ್ನು ಅರಿಯಲು ಶಕ್ಯವಾಗುವುದಿಲ್ಲ ।।೫೩೬।। ಅದರಂತೆಯೇ ವಿದ್ವಾಂಸರ ಸ್ಥಿತಿಯಾಗಿರುವುದು. ಇವರು ಯಾವಾಗಲೂ ಆತ್ಮನಲ್ಲಿ ಐಕ್ಯರೂಪದಿಂದಿರುವರು. ಹಗಲು ರಾತ್ರಿ ಇವರು ಅದರ ವರ್ಣನೆಯನ್ನು ಮಾಡುತ್ತಿರುವರು. ಆದರೆ, ಅವರು ಆ ಸ್ವರೂಪವನ್ನು ಅರಿತುಕೊಂಡಿರುವುದಿಲ್ಲ ।।೫೩೭।। ವಿಷಯಗಳನ್ನು ಬೆಳೆಸುವುದಕ್ಕಾಗಿಯೇ ವಿದ್ವಾಂಸರು ಶಾಸ್ತ್ರ- ಉತ್ಪತ್ತಿಗಳ ವ್ಯಾಖ್ಯಾನವನ್ನು ಮಾಡುತ್ತಿರುವರು. ಆದರೆ ಬಂಜೆ ಆಕಳನ್ನು ಪೋಷಣೆ ಮಾಡಿದಂತೆ ಅವರ ಶ್ರಮವು ವ್ಯರ್ಥವಾಗುವುದು ।।೫೩೮।। ಬಂಜೆ ಆಕಳು ಎಂದಿಗೂ ಹಿಂಡುವುದಿಲ್ಲ, ಹಡೆಯುವುದೂ ಇಲ್ಲ. ಒಮ್ಮೆ ಹೊರಬಿಟ್ಟರೆ ಸಿಕ್ಕ ಸಿಕ್ಕಲ್ಲಿ ಧಾವಿಸುತ್ತಿರುವುದು. ಉಢಾಳತನದಿಂದ ರಾಜನ ತೋಟದಲ್ಲಿ ನುಗ್ಗುವುದು. ಅದರಿಂದ ಅದರ ಪ್ರಾಯಶ್ಚಿತ್ತವನ್ನು ಸಾಕಿದ ಧಣಿಗೆ ಭೋಗಿಸಬೇಕಾಗುವುದು ।।೫೩೯।। ಇದೇ ಪ್ರಕಾರದ ಪಂಡಿತರ ಸ್ಥಿತಿಯಾಗಿರುವುದು. ಅವರು ವಿದ್ವತ್ತತೆಯಿಂದ ವಾಣಿಯನ್ನು ಪೋಷಿಸಿರುವರು. ಇದು ಉಡಾಳತನಕ್ಕೆ ಬಿದ್ದು ವಿಷಯಗಳ ಹಿಂದೆ ಬೆನ್ನಹತ್ತುವುದು. ಮತ್ತು ಅವುಗಳನ್ನು ಅದಕ್ಕೇನೇ ಆವರಿಸುವುದಾಗುವುದಿಲ್ಲ ।।೫೪೦।। ಯಾವ ಪ್ರಕಾರವಾಗಿ ದುರ್ದೈವಿ ಮನುಷ್ಯನ ಕೈಯಲ್ಲಿ ಬಂಗಾರವು ಬಿದ್ದರೂ ಅದು ಮಣ್ಣಾಗಿ ಪರಿವರ್ತಿಸುವುದೋ, ಅದರಂತೆಯೇ ಪಂಡಿತ ಮಹಾಶಯರ ವಿದ್ವತ್ತವು ವಿಷಯಾಸಕ್ತಿಯಿಂದ ನಾಶವಾಗುತ್ತಿರುವುದು ।।೫೪೧।। ಬ್ರಾಹ್ಮಣನಿಗೆ ಆನೆಯ ದಾನವನ್ನು ಮಾಡಲು, ಅದಕ್ಕೆ ಆತನು ಪೋಷಿಸಲಾರನು. ಆಗ ಆತನು ಆ ಆನೆಯನ್ನು ಪುಕ್ಕಟ್ಟೆಯಾಗಿ ಮಾರಿಬಿಡುವನು. ಅದರಂತೆಯೇ ವಿದ್ವಾಂಸರ ವಿದ್ವತ್ತವಾಗಿರುವುದು ।।೫೪೨।। ಅದ್ವೈತ ಶಾಸ್ತ್ರದ ಅಲಭ್ಯ ಲಾಭವಾಗಿರುವುದು. ಸರ್ವ ಸಿದ್ಧಾಂತಗಳು ಇವರಿಗೆ ತಿಳಿಯುವುವು. ಆದರೆ ಇವರು ವಿಷಯ ಸುಖಕ್ಕಾಗಿ ಎಲ್ಲವನ್ನು ಮಾರಿಕೊಳ್ಳುವರು. ಈ ಪ್ರಕಾರವಾಗೀ ವಿದ್ವಾಂಸರು ನಿಜವಾಗಿಯೂ ಮೂರ್ಖರಾಗಿರುವರು ।।೫೪೩।। ಕಬ್ಬಿನ ಗಾಣದ ಮುಖದಲ್ಲಿ ಕಬ್ಬನ್ನು ಹಾಕಲು ಅದು ಅದರಲ್ಲಿನ ರಸವನ್ನು ಹಿಂಡಿ ಭಾಂಡೆಯಲ್ಲಿ ತುಂಬುವುದು. ತಾನು ಮಾತ್ರ ನಿರಸವಾಗಿರುವ ಸಿಪ್ಪೆಗಳನ್ನು ಮೆಲ್ಲುತ್ತ ಸುಮ್ಮನೇ ಕರಕರ ಶಬ್ದ ಮಾಡುತ್ತ ತಿರುಗುತ್ತಿರುವುದು. ವಿದ್ವಾಂಸರ ಸ್ಥಿತಿಯು ಹೀಗೆಯೇ ಆಗಿರುವುದು ।।೫೪೪।। ವಿದ್ವಾನ್ ಜನರು ಜ್ಞಾನವನ್ನು ಹೇಳುತ್ತಿರಲು ಸ್ವಾತಿಕ ಭಕ್ತರು ಅದರಲ್ಲಿನ ತತ್ತ್ವ ಜ್ಞಾನಗಳನ್ನು ಗ್ರಹಣ ಮಾಡುವರು. ಆದರೆ ಈ ವಿದ್ವಾನನು ಮಾತ್ರ ಒಣ ಶಬ್ದಗಳನ್ನು ಉಚ್ಚರಿಸುತ್ತ ಮುಖವನ್ನು ಅಲುಗಾಡಿಸುವನು. ಅದರಲ್ಲಿನ ಯಾವ ಮಾಧುರ್ಯವು ಇರುವುದಿಲ್ಲ ।।೫೪೫।। ಯಾವ ಪ್ರಕಾರವಾಗಿ ನಪುಂಸಕನ ಕೈಯಲ್ಲಿ ಪದ್ಮಿಣೀ ಸುಂದರಿಯನ್ನು ಕೊಡಲು, ಆಕೆಯು ತನ್ನ ಆಯುಷ್ಯವೆಲ್ಲ ಅಳುತ್ತ ಕುಳಿತುಕೊಳ್ಳಬೇಕಾಗುವುದೋ, ಅದರಂತೆಯೇ ವಿದ್ವಾಂಸರ ಮನೆಯಲ್ಲಿ ವಿದ್ವತ್ತವು ಅಳುತ್ತಿರುವುದು ।।೫೪೬।।

ಪಾಹೇ ಪಾ ಬ್ರಹ್ಮಜ್ಞಾನೇ ವೀಣ । ಶಬ್ದಜ್ಞಾನೇ ಸನ್ಯಾಸಗ್ರಹಣ । ಕೇಲೇ ತೇಹೀ ವೃಥಾ ಜಾಣ । ಜರೀ ಧಾರಣಾಧ್ಯಾನ ಕರೀನಾ ।।೫೪೭।। ಜೈಸೀ ಜೈಸೀ ಶಬ್ದಜ್ಞಾನವ್ಯುತ್ಪತ್ತೀ । ತೈಶೀ ತೈಶೀ ನ ಕರೀತಾ ಸ್ಥಿತೀ । ವರ್ತಣೇ ಜೈ ವಿಷಯಾಸಕ್ತೀ । ತೈಶಿ ನಿಜಮುಖೀ ಮಾತೀ ಘಾತಲೀ ।।೫೪೮।। ವೇದ ಶಾಸ್ತ್ರಸಂಪನ್ನ ಝಾಲಾ । ತ್ಯಾವರೀ ಪೋಟ ಭರೂ ಲಾಗಲಾ । ತರೀ ತೋ ಉದಮೀ ಥೋರ ಝಾಲಾ । ಪರೀ ಥಿತ್ಯಾ ಮುಕಲಾ ಮುದಲಾಸೀ ।।೫೪೯।। ರತ್ನ ದೇಊನಿ ಕೋಂಡಾ ಘೇತಲಾ । ಕಾ ಅಮೃತ ದೇಊನಿ ಕಾಂಜೀ ಪ್ಯಾಲಾ । ತೈಸಾ ಪರಿಪಾಕು ಪಂಡಿತಾಂಚಾ ಝಾಲಾ । ಥಿತ್ಯಾ ನಾಗವಲಾ ನಿಜಜ್ಞಾನಾ ।।೫೫೦।। ಶಬ್ದಜ್ಞಾನ ಜೋಡಿಲೇ ಕಷ್ಟೇ । ತೇಣೇಂಚೀ ಸಾಧನೇ ಪರಬ್ರಹ್ಮ ಭೇಟೇ । ಇಟೇ ಸಾಠೀ ಪರೀಸ ಪಾಲಟೇ । ಮೂರ್ಖ ವೋಖಟೇ ಮಾನಿತೀ ।।೫೫೧।। ಪೋಟ ಭರಾವಯಾಚಿಯಾ ಯುಕ್ತೀ । ಆಪುಲೀ ಮಿರವಾಯಾ ವ್ಯುತ್ಪತ್ತೀ । ಪತ್ರಾವಲಂಬನೇ ಕರಿತೀ । ದ್ವಾರಾಪ್ರತೀ ಸಾಧನಾಢ್ಯಾ ।।೫೫೨।। ಜೇವೀ ಪೋಟ ಭರಾವಯಾ ಭಾಂಡ । ನಾನಾ ಪರೀ ವಾಜವೀ ತೋಂಡ । ತೇವೀ ನಾನಾ ವ್ಯುತ್ಪತ್ತೀ ವಾದವಿತಂಡ । ಕರತೀ ಅಖಂಡ ಉದರಾರ್ಥ ।।೫೫೩।। ಕರೂನಿ ವ್ಯುತ್ಪತ್ತೀ ಶಬ್ದಬ್ರಹ್ಮ । ಜರೀ ನ ಸಾಧೀಚಿ ಪರಬ್ರಹ್ಮ । ತರೀ ತ್ಯಾ ಶ್ರಮಾಚೇ ಫಳಹೀ ಶ್ರಮು । ಜೇವೀ ರತ್ನೇ ಉತ್ತಮ ಘಾಣಾ ಗಾಳೀ ।।೫೫೪।। ತೇಥೇ ತೇಲ ನ ಪೇಂಡೀ । ಝಾಲೀ ರತ್ನಾಂಚೀ ರಾಖೋಡೀ । ತೈಶೀ ವಿದ್ವಾಂಸೇ ಝಾಲೀ ವೇಡೀ । ಶ್ರಮೇ ಶ್ರಮಕೋಡೀ ಭೋಗಿತೀ ।।೫೫೫।। ಶ್ರಮೇ ಶಮ್ರುಚಿ ಪಾವತೀ । ದುಃಖೇ ದುಃಖಚಿ ಭೋಗಿತೀ । ಹೇಚಿ ಕಥನ ಬಹು ದೃಷ್ಟಾಂತೀ । ಉದ್ಧವಾಪ್ರತೀ ಹರಿ ಬೋಲೇ ।।೫೫೬।।

ಗಾಂ ದುಗ್ಧದೋಹಾಮಸತೀಂ ಚ ಭಾರ್ಯಾಂ ದೇಹಂ ಪರಾಧೀನಮಸತ್ಪ್ರಜಾಂ ಚ ।
ವಿತ್ತಂ ತ್ವತೀರ್ಥೀಕೃತಮಂಗ ವಾಚಂ ಹೀನಾಂ ಮಯಾ ರಕ್ಷತಿ ದುಃಖದುಃಖೀ ।।೯।।

ಅರ್ಥ :- ಹಾಲು ಹಿಂಡದ ಆಕಳು, ವ್ಯಭಿಚಾರಿಣೀ ಹೆಂಡತಿ, ಪರಾಧೀನ ಶರೀರ, ದುಷ್ಟ ಪುತ್ರ, ಸತ್ಪಾತ್ರ ಪ್ರಾಪ್ತವಾದರೂ ದಾನಕೊಡದ ಹಣ ಮತ್ತು ಗುಣಗಳಿಂದ ರಹಿತವಾದ ವಾಣೀ, ಇವು ವ್ಯರ್ಥವಾಗಿರುವುವು. ಈ ವಸ್ತುಗಳನ್ನು ಉಪಯೋಗಿಸುವವನು ಕೇವಲ ದುಃಖವನ್ನೇ ಭೋಗಿಸುತ್ತಿರುವನು.

ದುಗ್ಧಾಚಿಯಾ ಲೋಲುಪ್ಯತಾ । "ಭಾಕಡ ಗಾಯ" ದೋಹೂ ಜಾತಾ । ಶಿಂಪೀಭರೀ ದೂಧ ನ ಯೇ ಹಾತಾ । ಹಾಣೇ ಲಾತಾ ತತ್ಕಾಳ ।।೫೫೭।।

ಬ್ರಹ್ಮಜ್ಞಾನವಿಲ್ಲದೇ ಕೇವಲ ಶಬ್ದ ಜ್ಞಾನದಿಂದ ಸನ್ಯಾಸವನ್ನು ಸ್ವೀಕರಿಸಿದರೂ ಧ್ಯಾನಧಾರಣಾ ಮಾಡಿದರೆ, ಆ ಸನ್ಯಾಸವು ವ್ಯರ್ಥವಾಗುವುದು ।।೫೪೭।। ಶಬ್ದಜ್ಞಾನವನ್ನು ಹೇಗೆ ಹೇಗೆ ಹೇಳುತ್ತಿದ್ದಂತೆಯೇ ತಾನೂ ಸಹ ಅದರಂತೆಯೇ ಇರದಿರಲು ಹಾಗೆಯೇ ವಿಷಯಾಸಕ್ತಿಯಿಂದ ವರ್ತಿಸುತ್ತಿರಲು ಆಗ ಅವನು ತನ್ನ ಮುಖದಲ್ಲಿ ತಾನೇ ಮಣ್ಣನ್ನು ಹಾಕಿಕೊಂಡಂತೆಯೇ ಎಂದು ತಿಳಿಯಬೇಕು ।।೫೪೮।। ತಾನು ವೇದಶಾಸ್ತ್ರ ಸಂಪನ್ನನಾಗಿ ಮತ್ತು ಆ ಜ್ಞಾನದಿಂದಲೇ ಹಣ ಗಳಿಸುತ್ತ ತನ್ನ ಹೊಟ್ಟೆಯನ್ನು ತುಂಬುತ್ತ ಸಾಗಲು ಆಗ ಆತನು ದೊಡ್ಡ ವ್ಯಾಪಾರಿಯಾಗುವನು. ಆದರೆ ತನ್ನ ಸಮೀಪವೇ ಇರುವ ಜ್ಞಾನರೂಪ ನಿಧಿಯನ್ನು ಮಾತ್ರ ಕಳೆದು ಕೊಳ್ಳುವನು ।।೫೪೯।। ರತ್ನವನ್ನು ಕೊಟ್ಟು ತೌಡನ್ನು ಪಡೆದಂತೆ ಅಥವಾ ಅಮೃತವನ್ನು ಕೊಟ್ಟು ಗಂಜಿಯನ್ನು ಸ್ವೀಕರಿಸಿದಂತೆ ಈ ಪಂಡಿತನ ಸ್ಥಿತಿಗತಿಯಾಗುವುದು. ಇವನು ನಿಜಜ್ಞಾನಕ್ಕೆ ವಂಚಿತನಾಗುವನು ।।೫೫೦।। ಅತಿಶಯವಾಗಿ ಕಷ್ಟವನ್ನು ಸೋಸಿ ಶಬ್ದಜ್ಞಾನವನ್ನು ಕೂಡಿಸಿರುವನು. ಅಷ್ಟೇ ಸಾಧನೆಗಳಿಂದ ಪರಬ್ರಹ್ಮನ ದರ್ಶನವಾಗುವುದು. ಹೀಗಿದ್ದರೂ ಇವನು ಇದರ ಬದಲಾಗಿ ಪರಿಸಮಣಿಯನ್ನು ಕೊಟ್ಟು ಇಟ್ಟಂಗಿ ಪಡೆದರೆ ಜನರು ಇವನಿಗೆ ಮೂರ್ಖನೆನ್ನದೇ ಬಿಡರು ।।೫೫೧।। ಪಂಡಿತ ಜನರು ಹಣ ಸಂಗ್ರಹಕ್ಕಾಗಿ ತಮ್ಮ ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಹಾಗೆಯೇ ತಮ್ಮ ವಿದ್ವತ್ತೆಯನ್ನು ಪ್ರಸಿದ್ಧಗೊಳಿಸುವುದಕ್ಕಾಗಿ ತಮ್ಮ ಸ್ತುತಿಪತ್ರಗಳನ್ನು ಹಿಡಿದುಕೊಂಡು ಶ್ರೀಮಂತರ ಮನೆ ಬಾಗಿಲಿಗೆ ಹೋಗುವರು ।।೫೫೨।। ಹಿಂದಿನ ಇತಿಹಾಸದ ಹೊತ್ತಿಗೆ ಹೇಳುವರು (ಭಾಟ) ಯಾವ ಪ್ರಕಾರವಾಗಿ ತನ್ನ ಹೊಟ್ಟೆಯನ್ನು ತುಂಬಿಕೊಳ್ಳುವುದಕ್ಕಾಗಿ ಸದಾ ಬಡಬಡಿಸುವನೋ, ಅದೇ ಪ್ರಕಾರವಾಗಿ ವಿದ್ವಾಂಸನು ತನ್ನ ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಅಖಂಡನಾಗಿ ವಿತಂಡ ವಾದವನ್ನು ಮಾಡುತ್ತಿರುವನು ।।೫೫೩।। ಆದರೆ ರಚನಾತ್ಮಕದ ಬಲದಿಂದ ಶಬ್ದ ಬ್ರಹ್ಮವನ್ನು ಅರಿತುಕೊಂಡು ಪರಬ್ರಹ್ಮನನ್ನು ಪ್ರಾಪ್ತಮಾಡಿಕೊಳ್ಳದವನ ಶ್ರಮದ ಫಲವು ಕೇವಲ ಶ್ರಮವೇ ಆಗಿರುವುದು. ಯಾವ ಪ್ರಕಾರವಾಗಿ ಉತ್ತಮವಾದ ರತ್ನಗಳನ್ನು ಗಾಣದಲ್ಲಿ ಹಾಕಿ ತಿರುಗಿಸುತ್ತಿರಲು ।।೫೫೪।। ಆಗ ಅಲ್ಲಿ ಯಾವ ತೈಲವೂ ಇಲ್ಲ, ಹಿಂಡಿಯೂ ಇಲ್ಲ. ಆದರೆ ರತ್ನಗಳು ಮಾತ್ರ ಛಿನಛಿದ್ರವಾಗಿ ಬಿಡುವುವು. ಅದರಂತೆಯೇ ವಿದ್ವಾಂಸ ಜನರು ಹುಚ್ಚರಾಗಿರುವರು. ಇವರೆಲ್ಲರೂ ಶ್ರಮಪಟ್ಟು ಶ್ರಮದ ರಾಶಿಯನ್ನೇ ಭೋಗಿಸುತ್ತಿರುವರು ।।೫೫೫।। ಪಂಡಿತ ಜನರು ಶ್ರಮಪಟ್ಟು ಶ್ರಮವನ್ನು ಪಡೆಯುವರು, ದುಃಖದಿಂದ ದುಃಖವನ್ನು ಭೋಗಿಸುವರು. ಈ ಮಾತನ್ನೇ ಶ್ರೀ ಕೃಷ್ಣನು ಅನೇಕ ಪ್ರಕಾರಗಳ ದೃಷ್ಟಾಂತಗಳಿಂದ ಉದ್ಧವನಿಗೆ ಹೇಳುವನು ।।೫೫೬।।

ಹಾಲು ಬೇಕೆಂಬ ಇಚ್ಛೆಯಿಂದ ಬಂಜೆ ಆಕಳನ್ನು ಹಿಂಡಲು ಹೋದರೆ, ಕಪ್ಪೇಚಿಪ್ಪಿನಷ್ಟೂ ಸಹ ಹಾಲು ಕೈಗೆ ಸಿಗಲಾರದು. ಬದಲಾಗಿ ಅದರ ಒದೆತವನ್ನು ತಿನ್ನಬೇಕಾಗುವುದು ।।೫೫೭।।

ಜೇ ಕುಡೀ ಕುಚರ ಡೀವರೀ । ವಿಷಯಮೇಳವಣಾ ಅತಿಖಾಇರೀ । ಅಧರ್ಮಶೀಳ ಲಾತರೀ । ಸರ್ವಾಪರೀ ಅನಾಡ ।೫೫೮।। ಸುಟಲೀ ರಾಜಾಗಾರೀ ಭರೇ । ಧರ್ಮದಂಡೇ ಮಾಗೇ ನ ಸರೇ । ಸದ್‌ಬುದ್ಧಿ ಧರಿತಾ ನ ಧರೇ । ಸ್ವೈರ ಚರೇ ಸುನಾಟ ।೫೫೯।। ಜಿಚೇ ಕಧೀ ನವ್ಹೇ ದುಭತೇ । ಜೇ ಧರೂ ನೇಣೇ ಗರ್ಭಾತೇ । ಪೋಷಿತಾ ಐಶಾ ಗಾಯೀತೇ । ಪಾವೇ ದುಃಖಾತೇ ಪೋಷಕು ।೫೬೦।। ಗೃಹಿಣೀ ಲಾಗಲಾ ಗೃಹಾಚಾರ । ತೇ ಸ್ತ್ರೀ ಅನುಕೂಳ ನಸತಾ ನರ । ಅತಿದುಃಖೇ ದುಃಖೀ ಘೋರ । ಸದಾ ಕರಕರ ಕಪಾಳೀ ।೫೬೧।। ನಿಂದಾ ಅವಜ್ಞಾ ಹೇಳಣ । ಭ್ರತಾರಾಚೇ ಕರೀ ಜಾಣ । ಸ್ವಯೇ ಭಕ್ಷೀ ಮಿಷ್ಟಾನ್ನ । ಹೇ ''ಅಸಂತಲಕ್ಷಣ ಸ್ತ್ರೀಯಾಂಚೇ'' ।೫೬೨।। ಖಾತಾ ಜೇವಿತಾ ದ್ರವ್ಯ ದೇತಾ । ಗೋಡ ಗೂಳಸೀ ಬೋಲೇ ಸರ್ವಥಾ । ಧರ್ಮ ದೇಖೋನಿ ಪೋಡೀ ಮಾಥಾ । ತೇಹೀ ಸರ್ವಥಾ ಅಸತೀಚೀ ।೫೬೩।। ಜೇ ನ ವಿಚಾರೀ ಪಾಪಪುಣ್ಯ । ಕಾಮಾಚಾರೀ ಧರ್ಮಶೂನ್ಯ । ಹೇ ಅಸತೀಚೇ ಲಕ್ಷಣ । ಉದ್ಧವಾ ಜಾಣ ನಿಶ್ಚಿತ ।೫೬೪।। ಅಸತೀಚಿಯೇ ಸಂಗತೀ । ಕೈಚೀ ಹೋಈಲ ಸುಖಪ್ರಾಪ್ತೀ । ಅತಿದುಃಖೇ ದುಃಖೀ ಹೋತೀ । ಜಾಣ ನಿಶ್ಚಿತೀ ತೇ ನರ ।೫೬೫।। ಜ್ಯಾಚೇ ದೇಹ ''ಪರಾಧೀನ'' । ತೋ ಜೇವೇ ಜಿತಾ ಸದಾ ದೀನ । ಪರಾಧೀನಾ ಸಮಾಧಾನ । ನವ್ಹೇ ಜಾಣ ಕಲ್ಪಾಂತೀ ।೫೬೬।। ಸಾಂಡೋನಿ ಅಪಲೀ ನಿಜಸತ್ತಾ । ಜ್ಯಾಸೀ ಲಾಗಲೀ ಪರಾಧೀನತಾ । ತೋ ಸ್ವಪ್ನೀಹೀ ಸುಖಾಚೀ ವಾರ್ತಾ । ನ ದೇಖೇ ಸರ್ವಥಾ ನಿಶ್ಚಿತ ।೫೬೭।। ''ಪರ'' ಮ್ಹಣಿಜೇ ಮಾಯಾ ಜಾಣ । ಜೋ ರಿಘಾಲಾ ತಿಚೇ ಆಧೀನ । ತ್ಯಾಸೀ ಸುಖಾಚೇ ನ ದಿಸೇ ಸ್ವಪ್ನ । ದುಃಖ ಸಂಪೂರ್ಣ ಸರ್ವದಾ ।೫೬೮।। ಪರಾಧೀನಾಸೀ ಸುಖ । ಆಹೇ ಮ್ಹಣೇ ತೋ ಕೇವಳ ಮೂರ್ಖ । ಸೋಲೀವ ದುಃಖಾಚೇ ದುಃಖ । ಅವಶ್ಯ ದೇಖ ಪರಾಧೀನಾ ।೫೬೯।। ಐಕ ''ಪ್ರಜಾಂಚಾ ವಿವೇಕ'' । ಏಕ ಪುತ್ರ, ಏಕ ಲೇಕ । ಏಕ ತೇ ಕೇವಳ ಮೂರ್ಖ । ದುಃಖದಾಯಕ ಪಿತರಾಂಸೀ ।೫೭೦।। ಜೋ ನರಕಾಪಾಸೋನಿ ತಾರೀ । ಜೋ ಪೂರ್ವಜಾಂತೇ ಉದ್ಧರೀ । ಜೋ ಮಾತಾಪಿತ್ಯಾಂಚೀ ಭಕ್ತಿ ಕರೀ । ಅವ್ಯಭಿಚಾರೀ ಹರಿರೂಪೇ ।೫೭೧।।

ತುಂಟ, ಮೈಗಳ್ಳ, ಹಾಯುವ, ಅತಿತಿನುಸುಬಕ್ಕ, ಗಿಡ್ಡ, ಅಧರ್ಮೀ, ಒದೆಯುವ, ಬಹು ಉಢಾಳ ।೫೫೮।। ಬಿಟ್ಟರೆ ಸಾಕು, ನೀಟಾಗಿ ರಾಜವಾಡೆಯಲ್ಲಿ ನುಗ್ಗಿ ಬಿಡುವ, ಎಷ್ಟು ಹೊಡೆದರೂ ಹಿಂದಕ್ಕೆ ಸರಿಯದ ತನ್ನ ಮನಬಂದಂತೆಯೇ ಸ್ವೈರಾಸ್ವೈರಾ ತಿರುಗುತ್ತಿರುವ ।೫೫೯।। ಈ ಆಕಳಿನಿಂದ ಹಾಲು ಎಂದಿಗೂ ಒದಗಲಾರದು. ಇದು ಎಂದಿಗೂ ಬಸರಾಗದು. ಇಂತಹ ಆಕಳಿನ ಲಾಲನೆ ಪಾಲನೆ ಮಾಡಲು, ಇದರ ಮಾಲಕನು ಕೇವಲ ದುಃಖಿಯಾಗುವನು ।೫೬೦।। ಸುಶೀಲ ಗೃಹಿಣಿಯು ಲಭಿಸಲು ಮನೆ ಎಲ್ಲ ವ್ಯವಸ್ಥೆಯು ಸರಿಯಾಗಿ ನಡೆಯುತ್ತಿರುವುದು. ಆದರೆ ಒಂದುವೇಳೆ ಪ್ರತಿಕೂಲ ಸ್ತ್ರೀಯು ಲಭಿಸಲು, ಪಾಪ, ಆ ಪುರುಷನಂತಹ ದುಃಖಿಯು ಇನ್ನು ಬೇರೆ ಯಾರೂ ಇರುವುದಿಲ್ಲ. ಅವನ ಪ್ರಾರಬ್ಧಕ್ಕೆ ಆ ಸ್ತ್ರೀಯು ಯಾವಾಗಲೂ ಕಿರಿ ಕಿರಿ ಮಾಡುತ್ತಲೇ ಇರುವಳು ।೫೬೧।। ಪತಿಯ ನಿಂದೆಯನ್ನು ಮಾಡುವವಳು, ಪತಿಯ ಆಜ್ಞೆಯನ್ನು ಪಾಲಿಸಲಾರದವಳು, ಅಪಮಾನ ಮಾಡುವವಳು, ಸ್ವತಃ ತಾನೇ ತನಗೆ ಬೇಕಾದ ರುಚಿ ರುಚಿ ಪದಾರ್ಥಗಳನ್ನು ಮಾಡಿ ತಾನೇ ತಿನ್ನುವುದು, ಇವು ಸ್ತ್ರೀಯರ ಕೆಟ್ಟ ಲಕ್ಷಣವಾಗಿರುವುವು ।೫೬೨।। ಯಥೇಚ್ಛವಾಗಿ ತಿನ್ನಲು ಉಣ್ಣಲು ಕೊಡಲು, ದ್ರವ್ಯದಾಗೀನೆಗಳನ್ನು ಮುಟ್ಟಿಸಲು ಆಗ ಆಕೆಯು ಬೆಲ್ಲದಂತೆ ಸಿಹಿಯಾಗಿ ಮಾತನಾಡುವಳು. ಒಂದು ವೇಳೆ ತನ್ನ ಪತಿಯು ಧರ್ಮಕಾರ್ಯಕ್ಕೆ ಹತ್ತಿದ್ದು ನೋಡಿದಳೆಂದರೆ ತನ್ನ ಹಣೆಹಣೆಯನ್ನು ಬಡೆದುಕೊಳ್ಳುವಳು. ಈ ಸ್ತ್ರೀಯು ನಿಜವಾಗಿಯೂ ಸತಿ ಅಲ್ಲದವಳು ।೫೬೩।। ಈಕೆಯು ಯಾವ ಪಾಪಪುಣ್ಯಗಳ ವಿಚಾರವನ್ನೇ ಮಾಡಲಾರಳು, ಕಾಮಾಚರಣೆಯಲ್ಲಿ ಧರ್ಮ ಬಂಧನಗಳ ಶೂನ್ಯಗಳಾಗಿರುವಳು. ಇದು ನಿಜವಾಗಿಯೂ ದುರಾಚಾರೀ ಸ್ತ್ರೀಯಳ ಲಕ್ಷಣವಾಗಿರುವುದು. ಇದನ್ನು ನೀನು ಲಕ್ಷದಲ್ಲಿಡು ।೫೬೪।। ಇಂತಹ ಅಸಾಧ್ವೀ ಸ್ತ್ರೀಯಳ ಸಂಗತಿಯಿಂದ ಸುಖಪ್ರಾಪ್ತಿಯು ಹೇಗಾಗಲು ಸಾಧ್ಯ? ಅವಳ ಪತಿಯು ನಿಜವಾಗಿಯೂ ಅತಿಶಯವಾಗಿ ದುಃಖದಿಂದ ಕಷ್ಟಕ್ಕೊಳಪಡುವನು. ಇದನ್ನು ನಿಶ್ಚಯಪೂರ್ವಕವಾಗಿ ತಿಳಿದುಕೋ ।೫೬೫।। ಯಾವನ ದೇಹವು ಪರಾಧೀನವಾಗಿರುವುದೋ, ಆ ಮನುಷ್ಯನಿಗೆ ಕಲ್ಪಾಂತಕ್ಕೂ ಸಹ ಸಮಾಧಾನವು ಪ್ರಾಪ್ತವಾಗಲಾರದು ।೫೬೬।। ತನ್ನ ಯಾವ ಅಧಿಕಾರವನ್ನು ಕಳೆದುಕೊಂಡು ಯಾವನು ಪರಾಧೀನನಾಗುವನೋ, ಆತನಿಗೆ ಸ್ವಪ್ನದಲ್ಲಿಯೂ ಕೂಡ ನಿಶ್ಚಯಪೂರ್ವಕವಾಗಿ ಸುಖದ ಲೇಶ ಮಾತ್ರವೂ ಪ್ರಾಪ್ತವಾಗಲಾರದು. ಇದನ್ನು ನೀನು ದೃಢವಾಗಿ ಅರಿತುಕೋ ।೫೬೭।। ಪರ ಎಂದರೆ ಮಾಯಾ. ಈಕೆಯ ಆಧೀನನಾಗುವವನೇ ಪರಾಧೀನನು ನಿಜ. ಇವನಿಗೆ ಸ್ವಪ್ನದಲ್ಲಿಯೂ ಸಹ ಸುಖವು ಲಭಿಸುವುದಿಲ್ಲ. ಇವನು ಯಾವಾಗಲೂ ದುಃಖಿಗಳಲ್ಲಿಯೇ ಇರುತ್ತಿರುವನು ।೫೬೮।। ಪರಾಧೀನದಲ್ಲಿ ಸುಖವಿದೆ ಎನ್ನುವವನು, ಅವನು ಕೇವಲ ಮೂರ್ಖನಾಗಿರುವನು. ದುಃಖದಲ್ಲಿನ ಪರಿಶುದ್ಧವಾದ ದುಃಖವನ್ನು ಪರಾಧೀನನು ಅವಶ್ಯವಾಗಿ ಭೋಗಿಸಬೇಕಾಗುವುದು ।೫೬೯।। ಈಗ ಸಂತತಿಯ ವಿಚಾರವನ್ನು ಹೇಳುವೆ, ಕೇಳು. ಒಬ್ಬ ಮನುಷ್ಯನಿಗೆ ಒಬ್ಬ ಮಗನಿರುವನು, ಒಬ್ಬಾಕೆ ಮಗಳಿರುವಳು, ಆ ಒಬ್ಬ ಮಗನು ಎಷ್ಟೊಂದು ಮೂರ್ಖನಾಗಿರುವನೆಂದರೆ, ಅವನಿಂದ ತಂದೆ ತಾಯಿಯವರು ಹಗಲೂ ರಾತ್ರಿ ದುಃಖವನ್ನು ಭೋಗಿಸಬೇಕಾಗುವುದು ।೫೭೦।। ಯಾ ಪುತ್ರನು ನರಕದಿಂದ ಬಿಡಿಸಿ ರಕ್ಷಿಸುವವನು, ಪೂರ್ವಜರ ಉದ್ಧಾರವನ್ನು ಮಾಡುವವನು, ಏಕನಿಷ್ಠೆಯಿಂದ ತಾಯಿತಂದೆಯವರಿಗೆ ಪರಮೇಶ್ವರ ಭಾವದಿಂದ ಭಕ್ತಿ ಮಾಡುವವನು ।೫೭೧।।

ಜೋ ಸಾಂಡೋನಿಯಾ ಮಾತಾಪಿತಾ । ಜಾಊ ನೇಣೇ ಆಣಿಕೇ ತೀರ್ಥಾ । ತ್ಯಾಚೇನಿ ಚರಣತೀರ್ಥೇ ಪವಿತ್ರತಾ । ಮಾನಿತೀ ಸರ್ವಥಾ ಅನಿವಾರ ॥೫೭೨॥ ಜೈಶೀ ರಮಾ ಆಣಿ ನಾರಾಯಣ । ತೈಶೀ ಮಾತಾಪಿತಾ ಮಾನೀ ಜಾಣ। ಚಢತ್ಯಾ ಆವಡೀ ಕರೀ ಭಜನ । ನುಬಗೇ ಮನ ಸೇವೇಸೀ ॥೫೭೩॥ ಜೋ ಅತಿಸತ್ತ್ವೇ ಸಾತ್ತ್ವಿಕು । ಜೋ ಪಿತೃವಚನಪಾಳಕು । ಜಾಣೇ ಧರ್ಮಾಧರ್ಮ ವಿವೇಕು । ಹಾ ನೈಸರ್ಗಿಕು ಸ್ವಭಾವೋ ॥೫೭೪॥ ಜೋ ಮಾತಾಪಿತ್ಯಾಂಚೇ ಸೇವೇವರೀ। ಆಪ ಆಪಣಿಯಾತೇ ತಾರೀ । ಸಕಳ ಪೂರ್ವಜಾಂತೇ ಉದ್ಧರೀ । ತೋ ಸಂಸಾರೀ ಸುಪುತ್ರ ॥೫೭೫॥ ಐಶಿಯಾ ಪುತ್ರಾಸೀ ಪ್ರತಿಪಾಳಿತಾ । ಸುಖ ಪಾವೇ ಮಾತಾಪಿತಾ । ಪೂರ್ವಜಾಂತೇ ಉದ್ಧರಿತಾ। ಸ್ವಯೇ ತರತಾ ಪಿತೃಭಕ್ತೀ ॥೫೭೬॥ ಝಾಲಿಯಾ ಸುಪುತ್ರಸಂತತಿ । ಏವಡೀ ಹೋಯ ಸುಖಪ್ರಾಪ್ತೀ । ಆತಾ ಅಸತ್ಪುಜಾಂಚೀ ಸ್ಥಿತೀ । ಐಕ ತುಜಪ್ರತೀ ಸಾಂಗೇನ ॥೫೭೭॥ ಮೂಳೀಂಚೇ ಪದ ''ಅಸತ್ಪುಜ'' । ತ್ಯಾಂಚೇವರ್ತಣುಕೇಚೀ ವೋಜ । ಸಾಂಗತಾ ಅತ್ಯಂತ ನಿರ್ಲಜ್ಜ । ತೇಹೀ ಮೀ ತುಜ ಸಾಂಗೇನ ॥೫೭೮॥ ಪೋಟೀ ಉಪಜಲೇ ಜೇ ಲೇಕ । ತ್ಯಾಂಚೀ ವರ್ತಣುಕ ಐಶೀ ದೇಖ । ಆವಡೇ ಕಾಂತಾ ಆಣಿ ಕನಕ । ಉಪೇಕ್ಷಿತೀ ನಿಃಶೇಖ ಮಾತಾ - ಪಿತಾ ॥೫೭೯॥ ಜೇ ಕುಡೇ ಕುಚರ ಕುಲಟ । ಜೇ ಕಾ ಅತ್ಯಂತ ಶಠ ನಷ್ಟ । ಜೇ ಅನಾಚಾರೀ ಕರ್ಮಭ್ರಷ್ಟ । ಅತಿ - ದುಷ್ಟ ದುರ್ಜನ ॥೫೮೦॥ ತ್ಯಾಂಸೀ ಭಾಂಡವಲ ಲಟಿಕ । ಲಟಿಕೀ ದ್ಯಾವೀ ಆನಭಾಕ । ಮಾತಾ ಪಿತಾ ಠಕಾವೀ ದೇಖ । ಸಾತ್ತ್ವಿಕ ಲೋಕ ನಾಡಾವೇ ॥೫೮೧॥ ಆಪಣ ನರಕಾ ಜಾವೇ ತೇ ಜಾತೀ । ಪರೀ ಪೂರ್ವಜ ನೇಲೇ ಅಧೋಗತೀ । ಐಶಿಯಾ ಪ್ರಜಾಂತೇ ಪ್ರತಿಪಾಳಿತೀ । ತೇ ದುಃಖೀ ಹೋತಿ ಅತಿದುಃಖೇ ॥೫೮೨॥ ಪೋಟಾಮಾಜೀ ಉಠಿಲಾ ಫೋಡೂ । ತ್ಯಾಸೀ ಕರಿತಾ ನ ಯೇ ಫಾಡೂ । ತೈಸಾ ಅಸತ್ಪ್ರಜೇ ಸಂಸಾರ ಕಡೂ। ದುಃಖ ದುರ್ವಾಡು ಭೋಗವೀ ॥೫೮೩॥ ಐಶಿಯಾ ಪುತ್ರಾಂಚೇ ಜಿತಾ ದುಃಖ । ಮೇಲ್ಯಾಪಾಠೀ ದೇತೀ ನರಕ। ಅಸತ್ಪ್ರಜಾಂಚೇ ಕವತಿಕ । ದುಃಖೇ ದುಃಖ ಅನಿವಾರ ॥೫೮೪॥ ಗಾಂಠೀ ಅಸೋನಿಯಾ ''ಧನ'' । ಜೋ ಸತ್ಪಾತ್ರೀ ನ ಕರೀ ದಾನ । ತೇ ಸರ್ವ ದುಃಖಾಚೇ ಮೂಳ ಜಾಣ । ದುಃಖ ದಾರುಣ ಧನಲೋಭ್ಯಾ ॥೫೮೫॥

ಯಾವ ಪುತ್ರನು ತಾಯಿ ತಂದೆಯವರನ್ನು ಬಿಟ್ಟುಕೊಟ್ಟು ಇತರ ತೀರ್ಥಕ್ಷೇತ್ರಗಳನ್ನು ಅರಿಯನು. ಮಾತಾಪಿತೃಗಳ ಚರಣ ತೀರ್ಥಕ್ಕೆ ಪವಿತ್ರಭಾವದಿಂದ ಕಾಣುವನು ॥೫೭೨॥ ಈತನು ತಾಯೀ ತಂದೆಯವರಿಗೆ ಲಕ್ಷ್ಮೀನಾರಾಯಣರು ಎಂದು ತಿಳಿದಿರುವನು. ಅವರನ್ನು ಅಧಿಕಾಧಿಕ ಭಾವನೆಯಿಂದ ಭಜಿಸುವನು. ಅವರ ಸೇವೆಯಲ್ಲಿ ಈತನಿಗೆ ಎಂದಿಗೂ ಬೇಸರವಾಗುವುದಿಲ್ಲ ॥೫೭೩॥ ಈತನು ಸ್ವಭಾವದಲ್ಲಿ ಅತ್ಯಂತ ಸಾತ್ವಿಕನು, ಈತನು ಪಿತೃವಚನವನ್ನು ಪಾಲಿಸುವವನು, ಧರ್ಮವೆಂದರೇನು? ಮತ್ತು ಅಧರ್ಮವೆಂದರೇನು? ಎಂಬ ಇವುಗಳ ವಿಚಾರ ಮಾಡುವಿಕೆಯು ಈತನ ಹುಟ್ಟು ಸ್ವಭಾವವಾಗಿರುವುದು ॥೫೭೪॥ ಈತನು ತಾಯಿ ತಂದೆಯವರ ಸೇವೆಯನ್ನು ಮನಃಪೂರ್ವಕವಾಗಿ ಮಾಡಿ, ತಾನೇ ತನ್ನ ಉದ್ಧಾರವನ್ನು ಮಾಡಿಕೊಳ್ಳುವನು. ಹಾಗೆಯೇ ಸರ್ವ ಪೂರ್ವಜರ ಉದ್ಧಾರವನ್ನೂ ಮಾಡುವನು. ಈತನೇ ಸಂಸಾರದಲ್ಲಿ ನಿಜವಾಗಿಯೂ ಸುಪುತ್ರನಾಗಿರುವನು ॥೫೭೫॥ ಇಂತಹ ಪ್ರಕಾರದ ಪುತ್ರನ ಪಾಲನೆ ಪೋಷಣೆ ಮಾಡಲು ತಾಯಿತಂದೆಯವರಿಗೆ ಅತಿಶಯವಾಗಿ ಸುಖವಾಗುವುದು. ಈತನು ಪಿತೃಭಕ್ತಿಯನ್ನು ಮಾಡಿ ಸ್ವತಃ ಉದ್ಧಾರನಾಗುವುದಲ್ಲದೇ ಪೂರ್ವಜರ ಉದ್ಧಾರವನ್ನೂ ಮಾಡುವನು ॥೫೭೬॥ ''ಸತ್ಪುತ್ರನು'' ಹೊಟ್ಟೆಯಲ್ಲಿ ಹುಟ್ಟಲು ಈ ಪ್ರಕಾರದ ಸುಖಪ್ರಾಪ್ತಿಯಾಗುವುದು. ಈಗ ಕುಪುತ್ರನ ಸ್ಥಿತಿಗತಿಯನ್ನು ನಿನಗೆ ಹೇಳುವೆನು, ಅದನ್ನು ಕೇಳು ॥೫೭೭॥ ಮೂಲದ ಶ್ಲೋಕದಲ್ಲಿ ''ಅಸತ್ಪುಜ'' ಎಂಬ ಪದವಿರುವುದು. ಇಂತಹ ಕೆಟ್ಟ ಸಂತತಿಯ ವರ್ತನೆಯ ವರ್ಣನೆಯನ್ನು ಮಾಡಲುಮನಸ್ಸಿಗೆ ಬಹು ನಾಚಿಕೆಯಾಗುವುದು. ಆದರೂ ಸಹ ನಾನದನ್ನುನಿನಗೆ ಹೇಳುವೆನು ॥೫೭೮॥ ಹೊಟ್ಟೆಯಲ್ಲಿ ಹುಟ್ಟಿದ ಮಗನ, ಯಾವ ಅವನ ವರ್ತನೆಯು ಹೇಗಿರುವುದು? ಅವನ ಅಪೇಕ್ಷೆಯಾವುದು? ಎಂಬುದನ್ನು ಕೇಳು. ಈತನಿಗೆ ಸ್ತ್ರೀ ಮತ್ತು ದ್ರವ್ಯ ಇವುಗಳಲ್ಲಿ ಅತ್ಯಂತ ಪ್ರೇಮವಿರುವುದು. ತಾಯೀ ತಂದೆಯವರನ್ನು ಇವನು ಪೂರ್ಣವಾಗಿ ಉಪೇಕ್ಷೆ ಮಾಡುವನು ॥೫೭೯॥ ಇವನು ಮಹಾಜಗಳಗಂಟ, ಪೈಗಳ್ಳ, ವ್ಯಭಿಚಾರೀ, ಮೋಸಗಾರ ಠಕ್ಕ, ಹಾನಿಕಾರಕ, ಅನಾಚಾರೀ, ಕರ್ಮಭ್ರಷ್ಟ, ಅತ್ಯಂತ ದುಷ್ಟ, ದುರ್ಜನನಾಗಿರುವನು ॥೫೮೦॥ ಇವನ ಭಾಂಡವಲವೇನೆಂದರೆ ಸುಳ್ಳು ಮಾತನಾಡುವಿಕೆ ಆಗಿರುವುದು. ಸುಳ್ಳೇ ವಚನ ಕೊಡುವುದು, ಆಣೆ ಮಾಡುವುದು, ತಾಯಿ ತಂದೆಯವರಿಗೆ ಮೋಸ ಮಾಡುವುದು, ಸಾತ್ವಿಕ ಜನರನ್ನು ಪೀಡಿಸುವುದು ॥೫೮೧॥ ಇವನು ತಾನು ಸ್ವತಃ ನರಕಕ್ಕೆ ಹೋಗುವುದು ನಿಶ್ಚಿತ, ಜೊತೆಗೆ ತನ್ನ ಸಂಗಡ ಪೂರ್ವಜರಿಗೂ ಒಯ್ಯುವನು. ಇಂತಹ ಕೆಟ್ಟ ಪುತ್ರನನ್ನು ಸಂಭಾಳಿಸುವವರು ತಮ್ಮ ಜೀವನದಲ್ಲೆಲ್ಲ ಅತ್ಯಂತ ದುಃಖದಿಂದ ಕಷ್ಟಪಡಬೇಕಾಗುವುದು ॥೫೮೨॥ ಹೊಟ್ಟೆಯಲ್ಲಿ ಹುಣ್ಣಾಗಲು ಅದನ್ನು ಅಲ್ಲಿ ಒಡೆಯಲು ಬರುವುದಿಲ್ಲ. ಅದರಂತೆ ಕೆಟ್ಟ ಸಂತತಿಯ ಸಂಸಾರವು ವಿಷಮಯವಾಗಿ ಅನೇಕ ಪ್ರಕಾರಗಳ ದುಃಖ ಯಾತನೆಗಳನ್ನು ಭೋಗಿಸಲು ಹತ್ತುವುದು ॥೫೮೩॥ ಇಂತಹ ಪುತ್ರರು ಬದುಕಿದ್ದಾಗ ದುಃಖ ಭೋಗಿಸಲು ಹಚ್ಚುವರು. ಮತ್ತು ಮರಣವಾದನಂತರ ನರಕಕ್ಕೆ ಒಯ್ಯುವರು. ಅನಿವಾರ್ಯವಾಗಿರುವ ಈ ದುಃಖಪ್ರಾಪ್ತಿಯೇ ಕುಪುತ್ರನ ಕೌತುಕವಾಗಿರುವುದು ॥೫೮೪॥ ಇದೇ ರೀತಿಯಾಗಿ ತಮ್ಮ ಹತ್ತಿರ ಹಣವಿದ್ದರೂ ಕೂಡ ಸತ್ಪಾತ್ರಕ್ಕೆ ದಾನ ಮಾಡದಿರುವಿಕೆಯೇ ಸರ್ವದುಃಖಕ್ಕೆ ಮೂಲ ಕಾರಣವಾಗುವುದು. ಆದ್ದರಿಂದ ದ್ರವ್ಯ ಲೋಭದಿಂದ ಕೂಡಿದವನಿಗೆ ಅತಿಶಯವಾಗಿ ದುಃಖಗಳನ್ನು ಭೋಗಿಸಬೇಕಾಗುವುದು ॥೫೮೫॥

ಧನ ಅರ್ಜಾವಯಾ ಅನೇಕ । ಉಪಾಯ ಅಪಾಯ ಕರಿತೀ ಲೋಕ । ನಾನಾ ಕ್ಲೇಶ ಭೋಗೋನಿ ದುಃಖ । ದ್ರವ್ಯದೇಖ
ಸಾಂಚಿಲೇ ।೫೮೬॥ ಪ್ರಥಮ ದುಃಖ ದ್ರವ್ಯ ಸಾಂಚಿತಾ । ದುಸರೇ ದುಃಖ ದ್ರವ್ಯ ರಕ್ಷಿತಾ । ಸ್ತ್ರೀಪುತ್ರ ಪ್ರವರ್ತೇ
ಘಾತಾ । ಇತರ ಕಥಾ ತೇ ಭಿನ್ನ ।೫೮೭॥ ಸತ್ಪಾತ್ರೀ ನ ಕರಿತಾ ದಾನ । ಜೇಣೇ ರಕ್ಷಿಲೇ ಯಕ್ಷಧನ । ತೇಥೇ
ದುಃಖಬಾಹುಲ್ಯೇ ಉಠೀ ವಿಘ್ನ । ಧರ್ಮರಕ್ಷಣ ತೇಥ ನಾಹೀ ।೫೮೮॥ ಐಸೇಹೀ ಧನ ಗೇಲಿಯಾಸಾಠೀ ।
ಅತಿದುಃಖೇ ಭಡಕಾ ಉಠೀ । ಧನವಂತಾ ಜನ್ಮ ಸಾಟೀ । ದುಃಖಕೋಟೀ ಭೋಗೀತೀ ।೫೮೯॥ ಯೇವೋನಿಯಾ
ನರದೇಹಾಸೀ । ಅವಿಕಳ ವಾಚಾ ಅಸೇ ಜ್ಯಾಸೀ । ಜೋ ನುಚ್ಚಾರೀ ಹರಿನಾಮಾಸೀ । ಪಾಪ ತ್ಯಾಪಾಶೀ ಖತೇಲೇ
।೫೯೦॥ ಪುರಿಲೇ ಲೋಹಾ ಮಾತೀ ಖಾಯೇ । ತೇ ಉಪೇಗಾ ನ ಯೇ ವಾಯಾ ಜಾಯೇ । ತೈಶೀ ನಾಮೇವಿಣ
ವಾಚಾ ಪಾಹೇ । ವೃಥಾ ಜಾಯೇ ಸರ್ವಥಾ ।೫೯೧॥ ಆಸನಧ್ಯಾನ ಪರಿಶ್ರಮ । ನ ಕರೂನಿ ಮ್ಹಣೇ ಜೋ ರಾಮ
ರಾಮ । ತೇಣೇ ಕೋಟಿ ಜನ್ಮಾಂಚಾ ಹರೇ ಶ್ರಮ । ಉತ್ತಮೋತ್ತಮ ತೇ ವಾಣೀ ।೫೯೨॥ ಜೋ ನಿತ್ಯ ಜಪೇ
ರಾಮನಾಮ । ತೋ ಜಾಣಾವಾ ಮಜಚಿಸಮ । ತೇಣೇಂಚಿ ಕೇಲೇ ಸಕಳಹೀ ನೇಮ । ಪುರುಷೀ ಪುರುಷೋತ್ತಮ
ತೋ ಜಾಣ ।೫೯೩॥ ಚತುರ್ವರ್ಣಾಮಾಜೀ ಜೋ ಕೋಣೀ । ಅವಿಶ್ರಮ ರಾಮೂ ಜಪೇ ವಾಣೀ । ತೋಚಿ
ಪಢಿಯಂತಾ ಮಜಲಾಗುನೀ । ಆನ ತ್ರಿಭುವನೀ ನಾವಡೇ ।೫೯೪॥ ಐಸೇ ರಾಮನಾಮ ನಾವಡೇ ಜ್ಯಾಸೀ । ತೈ
ಪಾಪಮುಖರೋಗ ಆಲಾ ಮುಖಾಸೀ । ತೋ ಸ್ವಯೇ ಮುಕಲಾ ನಿಜಸುಖಾಸೀ । ಆಪ ಆಪಣಾಸೀ ಘಾತಕೂ
।೫೯೫॥ ರಾಮನಾಮೇವಿಣ ಜೇ ತೋಂಡ । ತೇಜಾಣಾವೇ ಚರ್ಮಕುಂಡ । ಭೀತರೀಜಿವ್ಹಾ ತೇ ಚಾಮಖಂಡ ।
ಅಸತ್ಯಕಾಂಡ ಕಾಟಲೀ ।೫೯೬॥ ಹೋ ಕಾ ಹರಿನಾಮೇವಿಣ ಜೇ ವಾಣೀ । ತೇ ಗಲಿತಕುಷ್ಠೇ ಜಾಲೀ ಕೋಢಿಣೀ
। ಅಸತ್ಯಕುಷ್ಠಾಚೇ ಗಳೇ ಪಾಣೀ । ಉಠೀ ಪೋಹಣೇ ನಿಂದೇಚೀ।೫೯೭॥ ಐಶಿಯೇ ವಾಚೇಸೀ ರೋಕಡೇ । ಪಡತೀ
ಅಧರ್ಮಾಚೇ ಕಿಡೇ । ಸುಳಬುಳೀತ ಚಹೂಕಡೇ । ಮಾಗೇಪುಢೇ ವಳವಳಿತ ।೫೯೮॥

ಜನರು ಹಣ ಕೂಡಿಸಲು ಅನೇಕ ಕೆಟ್ಟ ಒಳ್ಳೆಯ ಉದ್ಯೋಗ ದಂಧೆಗಳನ್ನು ಮಾಡುವರು. ನಾನಾ ಪ್ರಕಾರಗಳ ಕಷ್ಟ, ದುಃಖಗಳನ್ನು ಸೋಸಿ
ಹಣದ ಸಂಚಯ ಮಾಡುವರು ।೫೮೬॥ ಪ್ರಾರಂಭದಲ್ಲಿಯೇ ಹಣ ಪ್ರಾಪ್ತ ಮಾಡಿಕೊಳ್ಳಲು ಕಷ್ಟವನ್ನು ಸೋಸಬೇಕಾಗುವುದು. ತದನಂತರ
ಆ ಹಣವನ್ನು ರಕ್ಷಣೆ ಮಾಡುವುದಕ್ಕಾಗಿ ಕಷ್ಟವನ್ನು ಸೋಸುವರು. ಪ್ರಸಂಗ ಬರಲು ಆ ಹಣಕ್ಕಾಗಿ ಸ್ತ್ರೀಪುತ್ರರು ಘಾತ ಮಾಡಲು
ಪ್ರವರ್ತರಾಗುವರು. ಅಂದ ಮೇಲೆ ಇತರ ಬೇರೆ ಮನುಷ್ಯರ ಯಾವ ಕಥೆ? ।೫೮೭॥ ಸತ್ಪಾತ್ರಕ್ಕೆ ದಾನವನ್ನು ಕೊಡದೇ ಇವನು ಕುಬೇರನ
ಧನವನ್ನು ಕೇವಲ ರಕ್ಷಣೆ ಮಾಡುತ್ತಾ ಇಟ್ಟಿರುವನು. ಆತನಲ್ಲಿ ಅತಿಶಯದುಃಖಗಳಿಂದ ವಿಘ್ನಗಳು ಉತ್ಪನ್ನವಾಗುವುವು. ಅಲ್ಲಿ ಧರ್ಮದ
ರಕ್ಷಣೆಯಾಗಲು ಶಕ್ಯವಿಲ್ಲ ।೫೮೮॥ ಈ ಪ್ರಕಾರವಾಗಿ ಜೋಪಾನ ಮಾಡಿದ ಹಣವು ಹೋಯಿತೆಂದರೆ ಆತನ ಅಂಗದಲ್ಲಿ ಕೇವಲ ಉರಿ
ಏಳುವುದು. ಈ ರೀತಿಯಿಂದ ಶ್ರೀಮಂತ ಜನರಿಗೆ ನೂರಾರು ಜನ್ಮಗಳನ್ನು ಎತ್ತಬೇಕಾಗುವುದು. ಇವರು ಕೋಟ್ಯಾವಧಿ ಪ್ರಕಾರಗಳ
ದುಃಖಗಳನ್ನು ಭೋಗಿಸುತ್ತಿರುವರು ।೫೮೯॥ ನರದೇಹವು ಪ್ರಾಪ್ತಿಯಾಗಿ ಯಾರಿಗೆ ಅವ್ಯಂಗ ವಾಣಿಯು ಲಭಿಸಿರುವುದು, ಹೀಗಿದ್ದರೂ
ಅವರಿಗೆ ಹರಿನಾಮದಲ್ಲಿ ಪ್ರೀತಿ ಇಲ್ಲ, ಅದರ ಉಚ್ಚಾರ ಮಾಡುವುದಿಲ್ಲ, ಇವರಲ್ಲಿ ಪಾಪಗಳ ಸಂಚಯವಾಗುವುದು ।೫೯೦॥ ಮಣ್ಣಿನಲ್ಲಿ
ಹುಗಿದಿಟ್ಟ ಕಬ್ಬಿಣವು ಜಂಗುತಿಂದು ಆ ಕಬ್ಬಿಣವು ಉಪಯೋಗಕ್ಕೆ ಬಾರದಾಗುವುದು. ಅದರಂತೆ ಹರಿನಾಮವಿಲ್ಲದ ವಾಣಿಯು ಸರ್ವಥಾ
ವ್ಯರ್ಥವಾಗಿ ಹೋಗುತ್ತಿರುವುದು ।೫೯೧॥ ಆಸನ, ಧ್ಯಾನ, ಧಾರಣ ಇತ್ಯಾದಿ ಯಾವ ಪರಿಶ್ರಮ ಮಾಡದೇ ಯಾವನು ಕೇವಲ ಮುಖದಿಂದ
ಪ್ರೇಮಪೂರ್ವಕವಾಗಿ ''ರಾಮ ರಾಮ'' ನುಡಿಯುವನೋ, ಅವನ ಕೋಟ್ಯಾವಧೀ ಜನ್ಮಗಳಲ್ಲಿನ ಶ್ರಮವು ಇಲ್ಲದಾಗುವುದು. ಈ ವಾಣಿಯೇ
ಅತಿ ಪವಿತ್ರವು ।೫೯೨॥ ಯಾವನು ನಿರಂತರವಾಗಿ ರಾಮನಾಮದ ಜಪವನ್ನು ಮಾಡುವನೋ, ಆತನಿಗೆ ನನ್ನಂತೆಯೇ ತಿಳಿಯಬೇಕು. ಆತನು
ಧರ್ಮದ ನೇಮವನ್ನು ಪಾಲಿಸದಂತಾಗಿರುವುದು. ಮತ್ತು ಆತನೇ ಸರ್ವ ಪುರುಷರಲ್ಲಿ ಶ್ರೇಷ್ಠ ಪುರುಷನಾಗಿರುವನು ಎಂದು ತಿಳಿಯಬೇಕು
।೫೯೩॥ ನಾಲ್ಕೂ ವರ್ಣಗಳಲ್ಲಿ ಯಾರೇ ಆಗಲಿ ರಾಮನಾಮದ ಜಪವನ್ನು ಮಾಡುತ್ತಿದ್ದರೆ ಆತನೇ ನನ್ನ ಪ್ರಿಯನಾಗಿರುವನು. ಸಂಪೂರ್ಣವಾಗಿ
ತ್ರಿಭುವನದಲ್ಲಿ ಆತನಿಗಿಂತ ಇತರರು ಯಾರೂ ನನಗೆ ಪ್ರಿಯರಲ್ಲ ।೫೯೪॥ ಹೀಗೆ ಪವಿತ್ರ, ಪಾವನಗೊಳಿಸುವ ರಾಮನಾಮವು ಯಾರಿಗೆ
ಪ್ರಿಯವಾಗುವುದಿಲ್ಲವೋ, ಆತನಿಗೆ ಪಾಪರೂಪ ಮುಖರೋಗವೇ ಬಡೆದುಕೊಂಡಿದೆ ಎಂದು ತಿಳಿಯಬೇಕು. ಅವನು ತನಗೆ ತಾನೇ ಸುಖಕ್ಕೆ
ವಂಚಿಸಿಕೊಂಡಿರುವನು. ತನಗೆ ತಾನೇ ಘಾತವನ್ನು ಮಾಡುತ್ತಿರುವನು ।೫೯೫॥ ರಾಮನಾಮವಿಲ್ಲದ ಯಾವ ಮುಖವು ಅದು ಚರ್ಮದ
ಕುಂಡವೇ ಆಗಿರುವುದೆಂದು ತಿಳಿಯಬೇಕು. ಮತ್ತು ಆ ಮುಖದಲ್ಲಿರುವ ಯಾವ ನಾಲಿಗೆಯೂ ಸಹ ಚರ್ಮದ ಒಂದು ತುಕಡಿಯಾಗಿರುವುದು.
ಅಸತ್ಯಮಲದ ಪುಟದಿಂದ ಈ ನಾಲಿಗೆಯು ತುಂಬಿಕೊಂಡಿದೆ ಎಂದು ತಿಳಿಯಬೇಕು ।೫೯೬॥ ಅಥವಾ ಹರಿನಾಮವಿಲ್ಲದ ವಾಣಿಯು, ಅದು
ಗಲಿತಕುಷ್ಠದಿಂದ ಕುಷ್ಠಯುಕ್ತವಾಗಿದೆ ಎಂದು ತಿಳಿಯಬೇಕು. ಅಲ್ಲಿಂದ ಅಸತ್ಯರೂಪ ಹುಣ್ಣಿನ ರಸಿಗೆಯು ಸೋರುತ್ತಿರುವುದು ಮತ್ತು ನಿಂದೆಯ
ದುರ್ಗಂಧವು ಹರಡುವುದು ।೫೯೭॥ ಇಂತಹ ಪ್ರಕಾರದ ನಾಲಿಗೆಯಲ್ಲಿ ನಿಜವಾಗಿಯೂ ಅಧರ್ಮದ ಹುಳಗಳು ಬೀಳುವುವು. ಅವು ನಾಲ್ಕೂ
ಕಡೆಗಳಲ್ಲಿ ಹಬ್ಬಿಕೊಂಡು ಬುಜುಗುಡುತ್ತಿರುವುವು ।೫೯೮॥

ತೇ ವಾಚಾ ಹೋಯ ಜ್ಯಾಸಮೋರ । ದೇಖೇ ತೋ ಪಾಠಿಮೋರಾ ಠಾಕೇ ನರ । ನಾಕ ಝಾಂಕೂನಿ ಮ್ಹಣೇ ಹರಹರ । ಲಹಾನ ಥೋರ ಥುಂಕಿತೀ ॥೫೯೯॥ ತೇ ವಾಚೇಚೀ ಜೇ ದುರ್ಗಂಧೀ । ಮಜಹೀ ನ ಸಾಹವೇ ತ್ರಿಶುದ್ಧೀ । ಹೇ ವಾಚಾ ವಾಹೇ ತೋ ದುರ್ಬುದ್ಧೀ । ಅನರ್ಥಸಿದ್ಧಿ ಅತಿದುಃಖ ॥೬೦೦॥ ಸೋಲೀವ ದುಃಖಾಚೇ ಆತಿದುಃಖ । ತ್ಯಾ ನರಾಚೀ ವಾಚಾ ದೇಖ । ಕೇವಳ ನಿರಯ ತೇ ತ್ಯಾಚೇ ಮುಖ । ನಾಮೀ ವಿನ್ಮುಖ ಜೇ ವಾಣೀ ॥೬೦೧॥ ಹೋ ಕಾ ವೇದಶಾಸ್ತ್ರ ಸಂಪನ್ನ ವಾಣೀ । ಕರೂನಿ ನಿಂದಕೂ ನಾಮಕೀರ್ತನೀ । ತೋ ಪಾಪೀ ಮಹಾಪಾಪ್ಯಾಹೂನೀ । ತ್ಯಾಚೇನೀ ಅವನೀ ಅತಿದುಃಖೀ ॥೬೦೨॥ ನಾಮಕೀರ್ತನೇ ಧನ್ಯ ವಾಣೀ । ಯೇಚಿ ಅರ್ಥೀ ಸಾರಂಗಪಾಣೀ । ಪ್ರವರ್ತಲಾ ನಿರೂಪಣೀ । ವಿಶದ ಕರೂನೀ ಸಾಂಗಾವಯಾ ॥೬೦೩॥

ಯಸ್ಯಾಂ ನ ಮೇ ಪಾವನಮಂಗಕರ್ಮ ಸ್ಥಿತ್ಯುದ್ಭವಪ್ರಾಣನಿರೋಧಮಸ್ಯ ।
ಲೀಲಾವತಾರೇಪ್ಸಿತಜನ್ಮ ವಾ ಸ್ಯಾದ್‌ವಂಧ್ಯಾಂ ಗಿರಂ ತಾಂ ಬಿಭೃಯಾನ್ನ ಧೀರಃ ॥೨೦॥

ಅರ್ಥ :- ಹೇ ಉದ್ಧವನೇ, ಯಾವ ವಾಣಿಯಲ್ಲಿ ಜಗತ್ತಿಗೆ ಪಾವನಗೊಳಿಸುವ ನನ್ನ ಚರಿತ್ರೆ, ಅಂದರೆ ಜಗತ್ತಿನ ಉತ್ಪತ್ತೀ, ಸ್ಥಿತೀ, ಮತ್ತು ಲಯ ಇವುಗಳಿಗೆ ಕಾರಣರಾಗಿರುವ ಲೀಲಾವತಾರಗಳಲ್ಲಿನ ಪ್ರೇಮಕ್ಕೆ ಪಾತ್ರರಾಗುವ ಶ್ರೀರಾಮಕೃಷ್ಣಾದಿ ಜನ್ಮ ಇವುಗಳಲ್ಲಿ ಯಾವುದೂ ಇಲ್ಲದಿರಲು, ಆ ವಾಣಿಯನ್ನು ಬುದ್ಧಿವಂತನು ಧಾರಣೆ ಮಾಡಬಾರದು.

ಜಗಾತೇ ಪವಿತ್ರ ಕರಿತೀ । ಮಹಾದೋಷಾತೇ ಹರಿತೀ । ಮಾಝೀ ನಾಮಕರ್ಮೇ ಗುಣಕೀರ್ತೀ । ಜಡ ಉದ್ಧರತೀ ಹರಿನಾಮೇ ॥೬೦೪॥ ಮ್ಹಣಸೀ ತೂ ಬೋಲಿಲಾಸೀ ನಿಜವರ್ಮ । ಮೀ ವಿದ್ಯಾವಿದ್ಯಾತೀತ ಬ್ರಹ್ಮ । ತ್ಯಾ ತುಜ ಕೈಚೇ ಗುಣನಾಮ ಕರ್ಮ । ಕೀರ್ತನಧರ್ಮ ಕೇವೀ ಘಡೇ ॥೬೦೫॥ ಉದ್ಧವಾ ಹೇ ಮನೀ ನ ಧರೀ । ಮೀ ಸ್ವಲೀಲಾ ಸ್ವಮಾಯೇ ಕರೀ । ನಾನಾ ಅವತಾರಾಂತೇ ಧರೀ । ನ ಕರೂನಿ ಕರೀ ಸ್ಥಿತ್ಯಂತೂ ॥೬೦೬॥ ತ್ರಿಗುಣಗುಣೇ ಗುಣಾವತಾರ । ಬ್ರಹ್ಮಾ ಆಣಿ ಹರಿಹರ । ತಿಹೀ ರೂಪೀ ಮೀಚ ಸಾಚಾರ । ಚರಾಚರ ಕರೀ ಹರೀ ॥೬೦೭॥ ಸ್ರಷ್ಟಾರೂಪೇ ಮೀ ಸ್ರಜಿತಾ । ವಿಷ್ಣುರೂಪೇ ಮೀ ಪ್ರತಿಪಾಳಿತಾ । ರುದ್ರರೂಪೇ ಮೀ ಸಂಹರ್ತಾ । ಜಾಣ ತತ್ತ್ವತಾ ಮೀ ಏಕೂ ॥೬೦೮॥ ಬಾಲ್ಯತಾರುಣ್ಯವಾರ್ಧಕ್ಯಾಂಸೀ । ಏಕ ಪುರುಷ ತಿಹೀ ಅವಸ್ಥಾಂಸೀ । ತೇವೀ ಉತ್ಪತ್ತಿ ಸ್ಥಿತಿ ಪ್ರಳಯಾಂಸೀ । ಗುಣಕರ್ಮಾಸೀ ಮೀ ಕರ್ತಾ ॥೬೦೯॥

ಈ ವಾಣಿಯು ಯಾರಿಗಾದರೂ ಎದುರಾದರೆ ಆ ಮನುಷ್ಯನು ಅಲ್ಲಿಂದ ದೂರ ಸರಿಯುವನು. ಮೂಗು ಮುಚ್ಚಿಕೊಂಡು ಶಿವಶಿವಾ ಎನ್ನುವನು. ಇದನ್ನು ಕಂಡು ಸಣ್ಣವರು, ದೊಡ್ಡವರು ಹೀಗೆ ಎಲ್ಲರೂ ಉಗುಳುವರು ॥೫೯೯॥ ನಿಜವಾಗಿಯೂ ನನಗೂ ಕೂಡ ಈ ಯಾವ ವಾಣಿಯ ದುರ್ಗಂಧವು ಸಹನವಾಗುವುದಿಲ್ಲ. ಇಂತಹ ವಾಣಿಯನ್ನು ಪಾಲಿಸುವವನು ದುರ್ಬುದ್ಧಿಯಾಗಿರುವನು. ಅವನಿಗೆ ಅನೇಕ ಪ್ರಕಾರದ ಅನರ್ಥಗಳು ಒದಗುವುವು. ಹಾಗೆಯೇ ಅನೇಕ ದುಃಖಗಳೂ ಪ್ರಾಪ್ತವಾಗುವುವು ॥೬೦೦॥ ಆ ಪುರುಷನ ವಾಣಿ ಎಂದರೆ ದುಃಖಗಳಲ್ಲಿನ ಮಹಾ ದುಃಖವಾಗಿರುವುದು. ಹರಿನಾಮಕ್ಕೆ ವಿಮುಖವಾಗಿರುವ ವಾಣಿ ಎಂದರೆ ಅದು ಶುದ್ಧ ನರಕವಾಗಿರುವುದು ॥೬೦೧॥ ಅಂದ ಮೇಲೆ ಆ ಮನುಷ್ಯನು ವೇದಶಾಸ್ತ್ರ ಸಂಪನ್ನನಾಗಿರಲಿ, ಆತನ ವಾಣಿಯು ನಾಮಸಂಕೀರ್ತನದ ನಿಂದೆಯನ್ನು ಮಾಡುತ್ತಿದ್ದರೆ, ಅವನು ಮಹಾಪಾಪಿಗಳವರಲ್ಲಿ ಪಾತಕಿಯಾಗಿರುವನು. ಇವನಿಂದ ಪೃಥ್ವಿಗೂ ಅತಿಶಯವಾಗಿ ಪೀಡೆಯಾಗುತ್ತಿರುವುದು॥೬೦೨॥ ನಾಮ ಸಂಕೀರ್ತನದಿಂದಲೇ ವಾಣೀಯು ಧನ್ಯವಾಗುವುದು. ಇದೇ ವಿಷಯವಾಗಿ ಈಗ ಶ್ರೀಕೃಷ್ಣನು ನಿರೂಪಣೆಯನ್ನು ಸ್ಪಷ್ಟಮಾಡಿ ಹೇಳುವನು ॥೬೦೩॥

ಶ್ರೀಕೃಷ್ಣನು ಹೀಗೆ ಹೇಳಿದನು; ನನ್ನ ಕರ್ಮ ಮತ್ತು ಗುಣಗಳ ಕೀರ್ತಿಯು ಜಗತ್ತನ್ನು ಪವಿತ್ರಗೊಳಿಸುವುದಾಗಿರುವುದು. ಈ ನಾಮದಿಂದ ಮಹಾದೋಷಗಳು ನಷ್ಟವಾಗುವುವು. ಹರಿನಾಮದಿಂದ ಜಡಜೀವಿಗಳ ಉದ್ಧಾರವಾಗುವುದು ॥೬೦೪॥ ನೀನು ಈಗ ಹೀಗೆ ಹೇಳಬಹುದು, "ನೀನು ನಿನ್ನ ನಿಜ ಮರ್ಮವನ್ನು ಹೀಗೆ ಹೇಳಿರುವೆ" ಏನೆಂದರೆ "ನಾನು ವಿದ್ಯಾ ಮತ್ತು ಅವಿದ್ಯಾ ಇವುಗಳ ಅತೀತನಾಗಿರುವ ಬ್ರಹ್ಮಸ್ವರೂಪನಾಗಿರುವೆ" ಹಾಗಾದರೆ ನಿನಗೆ ಗುಣ, ನಾಮ ಮತ್ತು ಕರ್ಮಗಳನ್ನು ಎಲ್ಲಿಂದ ತರಬೇಕು? ಮತ್ತು ಅವುಗಳ ಕೀರ್ತನೆಯನ್ನಾದರೂ ಹೇಗೆ ಮಾಡಬೇಕು? ॥೬೦೫॥ ಅದಕ್ಕಾಗಿ ಹೇ ಉದ್ಧವನೇ, ಹೀಗೆ ನೀನು ಮನದಲ್ಲಿ ವಿಚಾರಿಸಬೇಡ. ನಾನು ನನ್ನ ಮಾಯೆಯ ಆಶ್ರಯದಲ್ಲಿ ನನ್ನದೇ ಆದ ಲೀಲೆಗಳನ್ನು ಮಾಡುತ್ತಿರುವೆನು. ನಾನು ನಾನಾ ಪ್ರಕಾರಗಳ ಅವತಾರಗಳನ್ನು ಧರಿಸುವೆನು.ಮತ್ತು ಅಕರ್ತನಾಗಿಯೇ ಅನೇಕರ ಪಾಲನೆ ಹಾಗೂ ಅನೇಕರ ಸಂಹಾರವನ್ನೂ ಮಾಡುವೆನು ॥೬೦೬॥ ಬ್ರಹ್ಮಾ, ವಿಷ್ಣು ಮತ್ತು ಮಹೇಶ್ವರ ಇವು ತ್ರಿಗುಣಾತ್ಮಕ ಮೂರು ಗುಣಾವತಾರವಾಗಿರುವವು. ಹಾಗೆಯೇ ಈ ಯಾವ ಮೂರು ಸ್ವರೂಪದಲ್ಲಿ ವಾಸ್ತವಿಕವಾಗಿ ನಾನೇ ಇದ್ದುಕೊಂಡು ಸರ್ವಸೃಷ್ಟಿಯ ಉತ್ಪತ್ತಿ ಮತ್ತು ಲಯಗೊಳಿಸುವೆನು ॥೬೦೭॥ ಬ್ರಹ್ಮದೇವನ ರೂಪದಿಂದ ಸೃಷ್ಟಿಯನ್ನು ಉತ್ಪನ್ನ ಮಾಡುವವನು ನಾನೇ ಆಗಿರುವೆನು. ವಿಷ್ಣುರೂಪದಿಂದ ಸಂರಕ್ಷಣೆಯನ್ನು ಮಾಡುವವನು ಮತ್ತು ರುದ್ರನ ರೂಪದಿಂದ ಸಂಹಾರವನ್ನು ಮಾಡುವವನು ನಾನೇ ಒಬ್ಬನೇ ಆಗಿರುವೆನು ॥೬೦೮॥ ಬಾಲ್ಯ, ತಾರುಣ್ಯ ಮತ್ತು ವಾರ್ಧಕ್ಯ ಈ ಮೂರೂ ಅವಸ್ಥೆಗಳು ಹೇಗೆ ಒಬ್ಬ ಪುರುಷನಿಗೆ ಇರುವುವೋ, ಇದರಂತೆ ಉತ್ಪತ್ತೀ, ಸ್ಥಿತಿ ಮತ್ತು ಲಯ, ಈ ಮೂರೂ ಗುಣ ಕರ್ಮಗಳ ಕರ್ತನು ನಾನೊಬ್ಬನೇ ಆಗಿರುವೆನು ॥೬೦೯॥

ಮೀ ಕರ್ತಾಚಿ ಅಕರ್ತಾ । ಅಕರ್ತೇಪಣೇ ಕರ್ತಾ । ಹೇಮಾಝೀ ಮೀಚಿ ಜಾಣೇ ತತ್ತ್ವತಾ । ಆಣಿಕಾಸೀ ಸರ್ವಥಾ ಕಳೇನಾ ॥೯೧೦॥ ಹೀಚೀ ಮಾಝೀ ನಾಮಕರ್ಮೇ ಗಾತಾ । ಮಾಝೀ ಪದವೀ ಲಾಭೇ ವಕ್ತಾ । ಮಾಝೀ ಲೀಲಾವತಾರ ಕೀರ್ತಿತಾ । ಕೀರ್ತಿಮಂತಾ ನಿಜಲಾಭೂ ॥೯೧೧॥ ಅವತಾರಾಮಾಜೀ ಉತ್ತಮೋತ್ತಮ । ಶ್ರೀರಾಮಕೃಷ್ಣಾದಿಜನ್ಮಕರ್ಮ । ನಾನಾ ಚರಿತ್ರೇ ಸಂಭ್ರಮ । ಅವಿತ್ರಮ ಜೇ ಗಾತೀ ॥೯೧೨॥ ಸೇತು ಬಾಂಧಿಲಾ ಅವಲೀಳಾ । ಸಾಗರೀ ತಾರಿಲ್ಯಾ ಶಿಳಾ । ಗೋವರ್ಧನು ಉಚಲಿಲಾ ಹೇಳಾ । ದಾವಾನಳಾ ಪ್ರಾಶಿಲೇ ॥೯೧೩॥ ತಾಟಿಕಾ ವಧಿಲೀ ಏಕೇ ಬಾಣೇ । ಪೂತನಾ ಶೋಖಿಲೀ ತಾನೇಪಣೇ । ಅಹಲ್ಯಾ ತಾರಿಲೀ ಚರಣೇ । ಯಮಲಾರ್ಜುನ ದೋನ್ಹೀ ಉದ್ಧರಿಲೇ ॥೯೧೪॥ ರಾವಣೂ ಆದಳಲಾ ಧನುಷ್ಯ ವಾಹತಾ । ತೇ ಭಂಗೋನಿ ಪರ್ಣಿಲೀ ಸೀತಾ । ಮಥೂನಿ ವೈದ್ಯಾದಿ ಸಮಸ್ತಾ । ಭೀಮಕದುಹಿತಾ ಆಣಿಲೀ ॥೯೧೫॥ ಮಾರಿಲಾ ಸುಬಾಹು ಖರ ದೂಷಣೂ । ಅಘ ಬಕ ಕೇಶಿಯಾ ಮಾರೀ ಶ್ರೀಕೃಷ್ಣೂ । ಸುಗ್ರೀವೂ ಸ್ಥಾಪಿಲಾ ರಾಜ್ಯ ದೇಊನೂ । ಯೇರೇ ಉಗ್ರಸೇನೂ ಸ್ಥಾಪಿಲಾ ॥೯೧೬॥ ಮೆಳವೂನಿ ವಾನರಾಂಚಾ ಪಾಳಾ । ವಧೂ ಕೇಲಾ ರಾಕ್ಷಸಕುಳಾ । ಮೆಳವೂನ ಬಾಳಾ ಗೋಪಾಳಾ । ಮಲ್ಲಾ ಸಕಳಾ ಮರ್ದಿಲೇ ॥೯೧೭॥ ರಾವಣ ಕುಂಭಕರ್ಣಾ ಕೇಲಾ ಮಾರೂ । ಮಾರಿಲಾ ಕಂಸ ಚಾಣೂರೂ । ರಾಮೇ ಠಕಿಲಾ ವಾಳೀ ವಾನರೂ । ಠಕಿಲಾ ಮಹಾವೀರೂ ಕಾಳಯವನೂ ॥೯೧೮॥ ರಾಮೇ ಬಿಭೀಷಣ ಸ್ಥಾಪಿಲಾ । ಕೃಷ್ಣೇ ಧರ್ಮ ಸಂಸ್ಥಾಪಿಲಾ । ಏಕ ಪಿತೃವಚನೇ ವನಾ ಗೇಲಾ । ಏಕ ಘೇಊನಿ ಆಲಾ ಗತಪುತ್ರ ॥೯೧೯॥ ಹೀ ಅವತಾರಚರಿತ್ರೇ ವರ್ಣಿತಾ । ಚೋರಟಾ ವಾಲ್ಮೀಕೀ ಝಾಲಾ ತತ್ತ್ವತಾ । ವ್ಯಾಸ ಜಾರಪುತ್ರ ಸರ್ವಥಾ । ಕೇಲಾ ಸರತಾ ತಿಹೀ ಲೋಕೀ ॥೯೨೦॥ ಯಾ ದೋಹೀ ಅವತಾರಾಂಚೀ ಪದವೀ । ವರ್ಣಿತಾ ದೋನ್ಹೀ ಝಾಲೇ ಮಹಾಕವೀ । ವ್ಯಾಸ ವಾಲ್ಮೀಕಿ ವಂದಿಜೇ ದೇವೀ । ಕೀರ್ತಿಗೌರವೀ ಗೌರವಿಲೇ ॥೯೨೧॥ ತ್ಯಾ ಮಹಾಕವೀಂಚೀ ಕವಿತ್ವಕಥಾ । ಶೇಷ ನೇತ್ರದ್ವಾರೇ ಶ್ರವಣ ಕರಿತಾ । ದೋನ ಸಹಸ್ರ ನಯನೀ ಆ ಇಕತಾ । ಧಣೇ ಸರ್ವಥಾ ಬಾಣೇನಾ ॥೯೨೨॥

ನಾನು ಕರ್ತನಾಗಿದ್ದರೂ ಕೂಡ ಅಕರ್ತನಾಗಿರುವೆನು. ಅಕರ್ತನಾಗಿದ್ದರೂ ಕರ್ತನಾಗಿರುವೆನು. ಇದರಲ್ಲಿನ ನನ್ನ ಈ ರಸಹ್ಯವನ್ನು ನಾನೇ ಮಾತ್ರ ತಿಳಿದಿರುವೆನು. ಇತರರಿಗೆ ಇದು ಸರ್ವಥಾ ತಿಳಿಯಲಾರದು ॥೯೧೦॥ ಹೀಗಿರುವ ನನ್ನ ನಾಮಗಳನ್ನು ಮತ್ತು ಕರ್ಮಗಳನ್ನು ವರ್ಣಿಸಲು, ಆತನಿಗೆ ನನ್ನ ಪದವಿಯು ದೊರಕುವುದು. ಯಾರು ನನ್ನ ಅವತಾರ ಲೀಲೆಗಳ ಕೀರ್ತನೆಯನ್ನು ಮಾಡುವರೋ, ಅವರಿಗೆ ಆತ್ಮಪ್ರಾಪ್ತಿಯ ಲಾಭವಾಗುವುದು ॥೯೧೧॥ ನನ್ನ ಸರ್ವ ಅವತಾರಗಳಲ್ಲಿ ಶ್ರೀರಾಮ ಮತ್ತು ಶ್ರೀಕೃಷ್ಣ ಅವತಾರಗಳು ಉತ್ತಮೋತ್ತಮವಾಗಿರುವುವು. ಆ ಅವತಾರಗಳ ಜನ್ಮ ಕರ್ಮಗಳ ಅಲೌಕಿಕ ಚರಿತ್ರೆಗಳನ್ನು ಹಗಲು ರಾತ್ರಿ ಹಾಡಿ ಹೊಗಳುವರೋ, ಅವರು ಸಹಜವಾಗಿಯೇ ನನ್ನ ಪದವಿಯನ್ನು ಪ್ರಾಪ್ತಮಾಡಿಕೊಳ್ಳುವರು ॥೯೧೨॥ ರಾಮ ಅವತಾರದಲ್ಲಿ ನಾನು ಸಹಜಲೀಲೆಯಿಂದ ಸಮುದ್ರದಲ್ಲಿ ಕಲ್ಲುಗಳನ್ನು ತೇಲಿಸಿ ಸೇತುವೆಯನ್ನು ಕಟ್ಟಿದೆನು. ಶ್ರೀಕೃಷ್ಣ ಅವತಾರದಲ್ಲಿ ಗೋವರ್ಧನ ಪರ್ವತವನ್ನು ಒಂದೇ ಬೆರಳಿನ ಮೇಲೆ ಎತ್ತಿ ಹಿಡಿದೆನು. ದಾವಾಗ್ನಿಯನ್ನು ಪ್ರಾಶನಮಾಡಿ ತೋರಿಸಿದೆನು ॥೯೧೩॥ ರಾಮನು ಕೇವಲ ಒಂದೇ ಬಾಣದಿಂದ ತಾಟಿಕೆಯಳನ್ನು ವಧೆ ಮಾಡಿದನು. ನಾನು ಬಾಲ ವಯಸ್ಸಿನಲ್ಲಿಯೇ ಪೂತನೆಗೆ ಶೋಷಿಸಿಬಿಟ್ಟೆನು. ರಾಮನು ತನ್ನ ಚರಣ ಸ್ಪರ್ಶದಿಂದ ಅಹಿಲ್ಯೆಯ ಉದ್ಧಾರ ಮಾಡಿದನು.ಮತ್ತು ನಾನು ಯಮಲಾರ್ಜುನ ಈ ಇಬ್ಬರ ಉದ್ಧಾರವನ್ನು ಮಾಡಿದೆನು ॥೯೧೪॥ ಶಿವಧನಸ್ಸು ಎತ್ತುವ ಕಾಲಕ್ಕೆ ರಾವಣನೂ ಸಹ ನೆಲಕ್ಕೆ ಬಿದ್ದನು. ಅದೇ ಶಿವಧನಸ್ಸನ್ನು ಶ್ರೀರಾಮನು ಎತ್ತಿ ಸೀತೆಯನ್ನು ವರಿಸಿದನು. ನಾನು ಶಿಶುಪಾಲಾದಿ ಎಲ್ಲರನ್ನೂ ಗೆದ್ದು ಭೀಮಕ ರಾಜನ ಕನ್ಯಾ ರುಕ್ಮಿಣೀಯನ್ನು ತಂದೆನು ॥೯೧೫॥ ಶ್ರೀರಾಮನು ಸುಬಾಹು, ಖರ,ದೂಷಣ ಇವರನ್ನು ಕೊಂದನು. ಮತ್ತು ನಾನು ಅಘಾಸುರ, ಬಕಾಸುರ, ಕೇಶೀ ಇವರನ್ನು ಕೊಂದೆನು. ಶ್ರೀರಾಮನು ಸುಗ್ರೀವನಿಗೆ ರಾಜ್ಯವನ್ನು ಕೊಟ್ಟು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಅದರಂತೆ ನಾನು ಉಗ್ರಸೇನನಿಗೆ ಸಿಂಹಾಸನದ ಮೇಲೆ ಕುಳ್ಳಿರಿಸಿದೆನು ॥೯೧೬॥ ಶ್ರೀರಾಮಚಂದ್ರನು ವಾನರ ಸಮುದಾಯವನ್ನು ಒಂದುಗೂಡಿಸಿ, ರಾಕ್ಷಸ ಕುಳವನ್ನು ನಾಶ ಮಾಡಿದನು. ನಾನು ಬಾಳ ಗೋಪಾಳರನ್ನು ಕೂಡಿಸಿ, ಸರ್ವ ಜಟ್ಟಿಗಳ ನಾಶ ಮಾಡಿದೆನು ॥೯೧೭॥ ಶ್ರೀರಾಮಚಂದ್ರನು ರಾವಣ ಮತ್ತು ಕುಂಭಕರ್ಣ ಇವರ ವಧೆಯನ್ನು ಮಾಡಿದನು. ನಾನು ಕಂಸ ಮತ್ತು ಚಾಣೂರ ಇವರ ವಧೆಯನ್ನು ಮಾಡಿದೆನು. ಶ್ರೀರಾಮನು ವಾಲಿ ವಾನರನಿಗೆ ವಂಚಿಸಿದನು. ಶ್ರೀಕೃಷ್ಣನೂ ಸಹ ಮಹಾಘೋರನಾಗಿರುವ ಕಾಲಯವನನನ್ನು ವಂಚಿಸಿದನು ॥೯೧೮॥ ಶ್ರೀರಾಮಚಂದ್ರನು ವಿಭೀಷಣನಿಗೆ ಲಂಕೆಯ ರಾಜ್ಯದ ಮೇಲೆ ಕುಳ್ಳಿರಿಸಿದನು. ಮತ್ತು ನಾನಾದರೂ ಧರ್ಮರಾಜನನ್ನು ರಾಜ್ಯದಲ್ಲಿ ಸ್ಥಾಪನೆ ಮಾಡಿದೆನು. ಒಬ್ಬನು ತಂದೆಯ ಆಜ್ಞೆ ಪಾಲನೆಗಾಗಿ ವನವಾಸಕ್ಕೆ ಹೋದನು. ಆದರೆ ಇನ್ನೊಬ್ಬನು ತಾಯಿಯ ಮೃತ ಪುತ್ರರನ್ನು ತಂದುಕೊಟ್ಟನು ॥೯೧೯॥ ಈ ಪ್ರಕಾರವಾಗಿ ಅವತಾರ ಚರಿತ್ರೆಗಳನ್ನು ವರ್ಣಿಸಿ, ಪ್ರಾರಂಭದಲ್ಲಿ ದಾರಿಬಡಕ ಕಳ್ಳನಾಗಿರುವ ವಾಲ್ಮೀಕಿಯು ರಾಮಾಯಣ ಕಥನದಿಂದ ಮಹಾನ ತತ್ವಜ್ಞಾನಿಯಾದನು. ಮತ್ತು ವ್ಯಾಸನು ಜಾರಿಣಿಯ ಮಗನು. ಆದರೆ ಈ ಯಾವ ಅವತಾರ ಚರಿತ್ರೆಗಳನ್ನು ಹಾಡಿ ಹೊಗಳಿ ತ್ರಿಭುವನದಲ್ಲಿಯೇ ಶ್ರೇಷ್ಠನಾದನು ॥೯೨೦॥ ಈ ಪ್ರಕಾರವಾಗಿ ಈ ಎರಡೂ ಅವತಾರಗಳ ಮಹತ್ವವನ್ನು ವರ್ಣನೆ ಮಾಡಿ ವಾಲ್ಮೀಕಿ - ವ್ಯಾಸರು ಮಹಾಕವಿಯಾದರು. ಈ ಇಬ್ಬರನ್ನೂ ದೇವತೆಗಳೂ ಸಹ ವಂದಿಸಿ ಕೀರ್ತಿಯ ಮುಖಾಂತರ ಇವರ ಬಹುದೊಡ್ಡದಾಗಿ ಗೌರವಿಸಿದರು ॥೯೨೧॥ ಈ ಮಹಾಕವಿಯವರು ರಚಿಸಿರುವ ಮಹಾ ಕಾವ್ಯಗಳನ್ನು ಶೇಷನು ತನ್ನ ಎರಡು ಸಾವಿರ ನೇತ್ರದ್ವಾರಾ ಶ್ರವಣ ಮಾಡ ಹತ್ತಿದನು. ಆದರೆ ಎಷ್ಟು ಕೇಳಿದರೂ ಆತನಿಗೆ ತೃಪ್ತಿಯೇ ಆಗಲಿಲ್ಲ ॥೯೨೨॥

ಹೇಚಿ ಕಥಾ ಸ್ವರ್ಗಾಚ್ಯಾ ಠಾಯೀ । ಶ್ರವಣ ಕರಾವಯಾ ಪಾಹೀ । ಇಂದ್ರ ಲಾಗೇ ಬೃಹಸ್ಪತೀಚೇ ಪಾಯೀ । ಕೀರ್ತಿ ಲೋಕತ್ರಯೀ ವರ್ಣಿತೀ ॥೬೨೩॥ ಅಸೋ ಕಥೇಚಾ ಮಹಿಮಾನ । ಮಾಝೇನಿ ನಾಮಮಾತ್ರೇ ಜಾಣ । ತಾರಿಲಾ ಅಜಾಮಿಳ ಬ್ರಾಹ್ಮಣ । ಗಜೇಂದ್ರ ಉದ್ಧರಣ ಹರಿನಾಮೇ ॥೬೨೪॥ ಪಕ್ಷ್ಯಾಚೇ ಮಿಷೇಕರೂನೀ । ರಾಮು ಯಾ ದೋ ಅಕ್ಷರಸ್ಮರಣೇ । ಮಹಾದೋಷಾಂಚೀ ಶ್ರೇಣೀ । ತತ್ಕಾಳ ಕುಂಟಿಣೀ ತಾರಿಲೀ ॥೬೨೫॥ ಮಾಝಿಯಾ ನಾಮಾಸಮಾನ । ನವ್ಹೇ ವೇದಶಾಸ್ತ್ರ ಶಬ್ದಜ್ಞಾನ । ವೇದಶಾಸ್ತ್ರಾಂಚಾ ಬೋಧು ಕಠಿಣ । ತೈಸೇ ಜಾಣ ನಾಮ ನವ್ಹೇ ॥೬೨೬॥ ಪಠಣಮಾತ್ರೇ ವೇದಶಾಸ್ತ್ರವಕ್ತಾ । ನವ್ಹೇ ಮಜಮಾಜೀ ಯೇಣೇಂಚಿ ಸರತಾ । ಸ್ವಭಾವೇ ಮಾಝೇನಾಮ ಘೇತಾ । ಅತಿಪಢಿಯಂತಾ ಮಜ ಹೋಯೇ ॥೬೨೭॥ ವೇದಶಾಸ್ತ್ರೀ ಅಧಿಕಾರೀ ಬ್ರಾಹ್ಮಣ । ನಾಮಾಸೀ ಅಧಿಕಾರೀ ಚಾರ್ಹೀ ವರ್ಣ । ಜಗ ಉದ್ಧಾರಾವಯಾ ಕಾರಣ । ನಾಮ ಜಾಣ ಪೈ ಮಾಝೇ ॥೬೨೮॥ ಜೇಥ ನಿತ್ಯ ನಾಮಾಚಾ ಉಚ್ಚಾರ । ತೇಥ ಮೀ ಅಸೇ ಸಾಚಾರ । ಯೇಥ ಕರಣೇ ನ ಲಗೇ ವಿಚಾರ । ನಾಮ ಸಧರ ತಾರಾವಯಾ ॥೬೨೯॥ ತೇ ಮಾಝೇ ಜನ್ಮ ನಾಮ ಕೀರ್ತಿ ಗುಣ । ಜೇ ವಾಚೇಸೀ ನಾಹೀ ಪಠಣ । ತೇ ವಾಚಾ ಪಿಶಾಚಿಕಾ ಜಾಣ । ವೃಥಾಲಾಪನ ವಟವಟೀ ॥೬೩೦॥ ಮಾಝೇ ಕೀರ್ತೀವೀಣ ಜೇ ವದನ । ತೇ ಕೇವಳ ಮದ್ಯಾಚೇ ಭಾಜನ । ತ್ಯಾ ಉನ್ಮಾದವಿಟಾಳಾಭೇಣ । ನಾಮ ಜಾಣ ತೇಥ ನ ಯೇ ॥೬೩೧॥ ಜೇಥ ಉಚ್ಚಾರೂ ನಾಹೀ ನಾಮಾಚಾ । ತೇ ಜಾಣಾವೀ ವಾಂಝ ವಾಚಾ । ಗರ್ಭ ನ ಧರೀ ಹರಿಕಥೇಚಾ । ನಿಷ್ಫಳ ತಿಚಾ ಉದ್ಯೋಗೂ ॥೬೩೨॥ ಉದ್ಧವಾಸೀ ಮ್ಹಣೇ ಶ್ರೀರಂಗೂ । ಆಇಕೇ ಬಾಪಾ ಉಪಾವೋ ಚಾಂಗೂ । ಮಾಝಾ ನಾಮಮಾರ್ಗ ಸುಗಮೂ ಸಾಂಗೂ । ನ ಪಡೇ ಪಾಂಗೂ ಆಣಿಕಾಂಚಾ ॥೬೩೩॥ ಹರಿನಾಮೇವೀಣ ವಾಣೀ । ಕದಾ ನ ರಾಖಾವೀ ಸಜ್ಜನೀ । ಹಾಚಿ ಅಭಿಪ್ರಾವೋ ಚಕ್ರಪಾಣೀ । ಪ್ರೀತಿಕರೋನಿ ಸಾಂಗೀತಲಾ ॥೬೩೪॥ ಕರೂನಿಯಾ ಶಬ್ದಜ್ಞಾನ । ಅತಿಯೋಗ್ಯತಾ ಪಂಡಿತಪಣ । ತೇಣೇ ಮಾಝೀ ಪ್ರಾಪ್ತಿ ನವ್ಹೇ ಜಾಣ । ವೈರಾಗ್ಯೇವೀಣ ಸರ್ವಥಾ ॥೬೩೫॥ ಅಥವಾ ವೈರಾಗ್ಯಹೀ ಜಾಲೇ । ಪರೀ ತೇ ವಿವೇಕಹೀನ ಉಪಜಲೇ । ಜೈಸೇ ಧೃತರಾಷ್ಟ್ರಾ ಜ್ಯೇಷ್ಠತ್ವ ಆಲೇ । ನೇತ್ರೇವೀಣ ಗೇಲೇ ಸ್ವರಾಜ್ಯ ॥೬೩೬॥

ಈ ಯಾವ ಮಹಾನ್ ಕಥೆಗಳನ್ನು ಕೇಳಲು ಇಂದ್ರನು ಸ್ವರ್ಗದಲ್ಲಿ ಬೃಹಸ್ಪತಿಯ ಚರಣಗಳಿಗೆ ಬಿದ್ದನು. ಈ ಪ್ರಕಾರವಾಗಿ ಅವತಾರ ಚರಿತ್ರೆಗಳ ಕೀರ್ತಿಯು ತ್ರಿಭುವನದಲ್ಲಿ ವರ್ಣಿಸುತ್ತಿರುವರು ॥೬೨೩॥ ಈ ಕಥೆಯ ಮಹಿಮೆಯು ಇರಲಿ. ನನ್ನ ಕೇವಲ ನಾಮದಿಂದಲೇ ಬ್ರಾಹ್ಮಣನಾದ ಅಜಾಮಿಳನ ಉದ್ಧಾರವಾಯಿತು. ಹರಿನಾಮದಿಂದ ಗಜೇಂದ್ರನ ಉದ್ಧಾರವಾಯಿತು ॥೬೨೪॥ ಗಿಣಿಯ ನಿಮಿತ್ತದಿಂದ ''ರಾಮ'' ಎಂಬ ಎರಡು ಅಕ್ಷರಗಳ ಸ್ಮರಣೆಯು ಸಾಧಿಸಲು ಮಹಾದೋಷದ ಖಣಿಯಾಗಿದ್ದ ಗಣಿಕೆಯ ಉದ್ಧಾರವು ತತ್ಕಾಲದಲ್ಲಾಯಿತು ॥೬೨೫॥ ವೇದಶಾಸ್ತ್ರಗಳಲ್ಲಿನ ಶಬ್ದ ಜ್ಞಾನಕ್ಕೂ ಸಹ ನನ್ನ ನಾಮದ ಸರಿಸಮಾನ ಮಾಡಲು ಶಕ್ಯವಿಲ್ಲ. ಕಾರಣ ವೇದಶಾಸ್ತ್ರಗಳ ಅರ್ಥವನ್ನು ತಿಳಿಯುವುದು ಬಹು ಕಠಿಣವಾಗಿರುವುದು. ಹಾಗೆ ನನ್ನ ನಾಮವಿರುವುದಿಲ್ಲ. ಇದು ಅತ್ಯಂತ ಸುಲಭವಾಗಿರುವುದು ॥೬೨೬॥ ವೇದಶಾಸ್ತ್ರವೇತ್ತನು ಕೇವಲ ಪಠಣಮಾತ್ರದಿಂದ ನನ್ನಲ್ಲಿ ಒಂದುಗೂಡಲು ಶಕ್ಯವಿಲ್ಲ. ಆದರೆ ನನ್ನ ನಾಮವನ್ನು ನುಡಿಯುವವನು ಸ್ವಭಾವತಃವೇ ನನಗೆ ಅತ್ಯಂತ ಪ್ರಿಯನಾಗಿರುವನು ॥೬೨೭॥ ವೇದಶಾಸ್ತ್ರದ ಅಧಿಕಾರವು ಬ್ರಾಹ್ಮಣರಿಗೆ ಮಾತ್ರ ಇರುವುದು. ಆದರೆ ನಾಮದ ಅಧಿಕಾರವು ನಾಲ್ಕೂ ವರ್ಣದವರಿಗೂ ಇರುವುದು. ಜಗತ್ತಿನ ಉದ್ಧಾರವು ನನ್ನ ನಾಮದಿಂದಲೇ ಆಗುತ್ತಿರುವುದು ॥೬೨೮॥ ಎಲ್ಲಿ ನಿತ್ಯವೂ ನಾಮದ ಉಚ್ಚಾರವಿರುವುದೋ, ಅಲ್ಲಿ ನಾನು ನಿಶ್ಚಯಪೂರ್ವಕವಾಗಿ ಇರುವೆನು. ಇದಕ್ಕಾಗಿ ವಿಚಾರವನ್ನು ಮಾಡುವ ಕಾರಣವೇ ಇಲ್ಲ. ನನ್ನ ನಾಮವು ಭಕ್ತರ ರಕ್ಷಣೆಯನ್ನು ಮಾಡಲು ಸಮರ್ಥವಾಗಿರುವುದು ॥೬೨೯॥ ಯಾವ ವಾಣಿಯು ನನ್ನ ಜನ್ಮ ನಾಮ ಮತ್ತು ಗುಣ ಇವುಗಳ ಕೀರ್ತಿಯ ವರ್ಣನೆಯನ್ನು ಮಾಡುವುದಿಲ್ಲ, ಅದು ಕೇವಲ ಪಿಶಾಚಿಯಾಗಿರುವುದು. ಮತ್ತು ವ್ಯರ್ಥವಾಗಿ ವಟಗುಡುತ್ತಿರುವುದು ॥೬೩೦॥ ಯಾವ ಮುಖವು ನನ್ನ ಕೀರ್ತಿಯ ಉಚ್ಚಾರವನ್ನು ಮಾಡುವುದಿಲ್ಲ, ಅದು ಕೇವಲ ಮದ್ಯದಿಂದ ತುಂಬಿದ ಭಾಂಡೆಯಾಗಿರುವುದು. ಆ ಮದ್ಯದಿಂದ ನಿರ್ಮಾಣವಾಗುವ ನಿಶೆಯ ಮೈಲಿಗೆಯಾದೀತೆಂದು ಈ ಭಯದಿಂದ ನಾಮವು ಅಲ್ಲಿ ಬರುವುದೇ ಇಲ್ಲ ॥೬೩೧॥ ಯಾವ ವಾಣಿಯು ನನ್ನ ನಾಮದ ಉಚ್ಚಾರವನ್ನು ಮಾಡುವುದಿಲ್ಲ, ಅದು ಕೇವಲ ಬಂಜೆಯಾಗಿರುವುದು. ಇದು ಹರಿಕಥೆಯ ಗರ್ಭವನ್ನು ಧರಿಸುವುದಿಲ್ಲ. ಈ ವಾಣಿಯ ಇತರ ಎಲ್ಲ ವ್ಯವಹಾರಗಳು ನಿಷ್ಫಲವೆಂದು ತಿಳಿಯಬೇಕು ॥೬೩೨॥ ಶ್ರೀಕೃಷ್ಣನು ಉದ್ಧವನಿಗೆ ಹೀಗೆ ಹೇಳಿದನು; ಹೇ ಉದ್ಧವನೇ, ಈಗ ಉತ್ತಮ ಉಪಾಯವನ್ನು ಹೇಳುವೆನು, ಅದನ್ನು ಕೇಳು. ನನ್ನ ನಾಮದ ಮಾರ್ಗವು ಅತ್ಯಂತ ಸುಲಭವಾಗಿರುವುದು. ಇಲ್ಲಿ ಇತರ ಉಪಾಯಗಳ ಅವಶ್ಯಕತೆಯೇ ಇಲ್ಲ ॥೬೩೩॥ ಸಜ್ಜನರಾದ ಜನರು ತಮ್ಮ ವಾಣಿಯನ್ನು ಹರಿಯ ನಾಮವನ್ನು ಬಿಟ್ಟಿರಬಾರದು. ಹೀಗೆ ತನ್ನ ಅಭಿಪ್ರಾಯವನ್ನು ಭಗವಂತನು ಅತ್ಯಂತ ಪ್ರೇಮದಿಂದ ಹೇಳಿದನು ॥೬೩೪॥ ಶಬ್ದಜ್ಞಾನವು ಬೆಳೆದು ಪಾಂಡಿತ್ಯವು ಪ್ರಾಪ್ತವಾದರೂ ವೈರಾಗ್ಯವು ಪ್ರಾಪ್ತವಾಗಲಾರದು. ವೈರಾಗ್ಯವಿಲ್ಲದೇ ನನ್ನ ಪ್ರಾಪ್ತಿಯಾಗಲು ಸಾಧ್ಯವೇ ಇಲ್ಲ ॥೬೩೫॥ ಧೃತರಾಷ್ಟ್ರನಿಗೆ ಜ್ಯೇಷ್ಠತ್ವವು ಒದಗಿತು. ಆದರೆ ಆತನ ಕುರುಡುತನದಿಂದ ಆತನು ತನ್ನ ರಾಜ್ಯವನ್ನು ಕಳೆದುಕೊಂಡನು. ಅದರಂತೆ ವೈರಾಗ್ಯವಿರುವುದು ॥೬೩೬॥

ತೈಸೇ ವೈರಾಗ್ಯ ವಿವೇಕೇವೀಣ । ಕೇವಳ ಆಂಧಳೇ ಅನಧಿಕಾರೀ ಜಾಣ । ನಾಹೀ ಸನ್ಮಾರ್ಗದೇಖಣೇಪಣ । ವೃಥಾ ಪರಿಭ್ರಮಣ ತಯಾಚೇ ॥೬೩೭॥ ಜೋ ವಿವೇಕೇ ಪೂರ್ಣಭರಿತ । ತ್ಯಾವರೀ ವೈರಾಗ್ಯ ವೋಸಂಡತ । ಮಾಝೀ ಜಿಜ್ಞಾಸಾ ಅದ್ಭುತ । ತೇಚಿ ನಿಶ್ಚಿತ ಸಾಂಗತು ॥೬೩೮॥

ಏವಂ ಜಿಜ್ಞಾಸಯಾऽಪೋಹ್ಯ ನಾನಾತ್ವಭ್ರಮಮಾತ್ಮನಿ । ಉಪಾರಮೇತ ವಿರಜಂ ಮನೋಮಯ್ಯರ್ಪ್ಯ ಸರ್ವಗೇ ॥೨೧॥

ಅರ್ಥ :- ಈ ಪ್ರಕಾರವಾಗಿ ಜಿಜ್ಞಾಸು ಆತ್ಮಸ್ವರೂಪದಲ್ಲಿ ನಿಶ್ಚಯ ಮಾಡಿ ಆತ್ಮನಲ್ಲಿ ಆಗಿರುವ ಯಾವ ದೇಹಾದಿ ಅಧ್ಯಾಸರೂಪ ನಾನಾತ್ವ ಭ್ರಮವನ್ನು ವಿಚಾರದಿಂದ ನಿರಸನಗೊಳಿಸಿ ಮತ್ತು ನನ್ನ ಸರ್ವವ್ಯಾಪಿ ಪರಮಾತ್ಮಾ ರೂಪದಲ್ಲಿ ಮನವನ್ನು ಸ್ಥಿರಗೊಳಿಸಿ ಶಾಂತರೂಪನಾಗಬೇಕು. ಕೇವಲ ಶಾಸ್ತ್ರಪಾಂಡಿತ್ಯದಿಂದ ಈ ಶಾಂತಿಯು ಸಿಗಲು ಶಕ್ಯವಿಲ್ಲ.

ನಿತ್ಯಮುಕ್ತ ಅವ್ಯಯೋ । ಸ್ವರೂಪ ಜಾಣಾವಯಾ ಪಹಾ ಹೋ । ಜ್ಯಾಚಾ ಲಾಗಲಾ ದೃಢ ಭಾವೋ । ಆನ ಆಠವೋ ನಾಠವೇ ॥೬೩೯॥ ಐಶೀ ಮಜ ಜಾಣಾವಯಾಚೀ ಅವಸ್ಥಾ । ತ್ಯಾ ನಾಂವ ಬೋಲೀಚೇ ಜಿಜ್ಞಾಸತಾ । ಮಾಝೀ ಪ್ರಾಪ್ತೀಲಾಗೀ ಸರ್ವಥಾ । ಪಾಂಡಿತ್ಯ ಮಾನ್ಯತಾ ತೋ ನೇಘೇ ॥೬೪೦॥ ದೇಹಾದಿ ಅಧ್ಯಾಸೂ ಆಪುಲ್ಯಾ ಠಾಯೀ । ಶ್ರವಣೇ ಮನನೇ ಮಿಥ್ಯಾ ಕೇಲಾ ಪಾಹೀ । ದೃಢ ವಿಶ್ವಾಸ ಗುರೂಚ್ಯಾ ಪಾಯೀ । ಪೂರ್ಣಬ್ರಹ್ಮಾಚ್ಯಾ ಠಾಯೀ ನಿರ್ಧಾರೂ ॥೬೪೧॥ ತೇಥ ಪುಢಾರೀ ಚಾಲಾವಯಾ ವಾಟ । ಭಗವದ್ಭಜನೀ ಅತಿ ಉದ್ಭಟ । ಕಾ ಸಾಂಡೋನೀ ಕರ್ಮಕಚಾಟ । ಧ್ಯಾನನಿಷ್ಠ ತೋ ಹೋಯ ॥೬೪೨॥ ತೇಥ ಧ್ಯೇಯ ಧ್ಯಾತಾ ಧ್ಯಾನ । ನ ದಿಸೇ ತ್ರಿಪುಟೀಚೇ ಭಾನ । ಕೋಂದಲೇ ಚೈತನ್ಯ ಘನ । ವಸ್ತು ಸನಾತನ ತೋ ಪಾವೇ ॥೬೪೩॥ ತೇಥ ಕೈಚಾ ಕರ್ತಾ ಕ್ರಿಯಾ ಕರ್ಮ । ಫಿಟಲಾ ನಾನಾತ್ವಾಚಾ ಭ್ರಮ । ಸಬಾಹ್ಯ ಕೋಂದಲೇ ಪರಬ್ರಹ್ಮ । ಜಾಲಾ ಉಪರಮ ಗುರುಕೃಪಾ ॥೬೪೪॥ ಸರ್ವಗತ ಸರ್ವಕಾಳ । ಸರ್ವದೇಶೀ ಸರ್ವೀ ಸಕಳ । ವಸ್ತು ಅಸೇ ಜೇ ಕೇವಳ । ತೇಥ ನಿಶ್ಚಳ ನಿಜಬೋಧೂ ॥೬೪೫॥ ಐಶಿಯೇ ವಸ್ತೂಚೀ ಧಾರಣಾ । ಜ್ಯಾಚೇನಿ ನ ಕರವೇ ಜಾಣಾ । ತರೀ ಸುಗಮ ಉಪಾಯಾ ಆನಾ । ಐಕ ವಿಚಕ್ಷಣಾ ಸಾಂಗೇನ ॥೬೪೬॥

ಯದ್ಯನೀಶೋ ಧಾರಯಿತುಂ ಮನೋ ಬ್ರಹ್ಮಣಿ ನಿಶ್ಚಲಮ್ । ಮಯಿ ಸರ್ವಾಣಿ ನಿರಪೇಕ್ಷಃ ಸಮಾಚರ ॥೨೨॥

ಅರ್ಥ :- ಒಂದು ವೇಳೆ ನೀನು ನಿನ್ನ ಮನವನ್ನು ಪರಬ್ರಹ್ಮನಲ್ಲಿ ಸ್ಥಿರವಾಗಿಡಲು ಸಾಧ್ಯವಾಗದಿದ್ದರೆ, ಸರ್ವ ಕರ್ಮಗಳ ಕರ್ತೃತ್ವ ಅಹಂಕಾರವನ್ನು ಬಿಟ್ಟು ನನಗಾಗಿ ಕರ್ಮಗಳನ್ನು ಮಾಡು.

ಈ ವೈರಾಗ್ಯವು ವಿವೇಕವಿಲ್ಲದೇ ಇರಲು, ಅದು ಕುರುಡ ಹಾಗೂ ವ್ಯರ್ಥವಾಗಿರುವುದು. ವಿವೇಕಶೂನ್ಯ ವಿರಕ್ತನಿಗೆ ಸನ್ಮಾರ್ಗವು ಎಂದಿಗೂ ತೋರುವುದಿಲ್ಲ. ಅವನು ವ್ಯರ್ಥವಾಗಿ ತಿರುಗಾಡುತ್ತಿರುವನು. ಅವನ ಪರಿಶ್ರಮವೆಲ್ಲವೂ ವ್ಯರ್ಥವಾಗುವವು ॥೬೩೭॥ ಯಾವನ ಹೃದಯದಲ್ಲಿ ವಿವೇಕವು ಕಟ್ಟಲ್ಪಟ್ಟಿದೆಯೋ ಹಾಗೂ ಪ್ರಕಟವಾಗಿರುವುದೋ, ಅವನಲ್ಲಿ ವೈರಾಗ್ಯವು ತನ್ನಷ್ಟಕ್ಕೆ ತಾನೇ ಉಕ್ಕಿ ಬರುವುದು. ಆತನಿಗೆ ನನ್ನ ವಿಲಕ್ಷಣವಾದ ಜಿಜ್ಞಾಸು ಇರುವುದು. ಅದನ್ನೇ ಈಗ ನಾನು ನಿಶ್ಚಯವಾಗಿ ಹೇಳುವೆನು, ಅದನ್ನು ಕೇಳು ॥೬೩೮॥

ನನ್ನ ಸ್ವರೂಪವು ನಿತ್ಯಮುಕ್ತ ಹಾಗೂ ನಾಶರಹಿತವಾಗಿರುವುದು. ಈ ಸ್ವರೂಪವನ್ನು ತಿಳಿಯಬೇಕೆಂಬ ಯಾರ ಅಂತಃಕರಣದಲ್ಲಿ ಉತ್ಕಟ ಇಚ್ಛೆಯಿರುವುದೋ, ಆತನಿಗೆ ಬೇರೆ ಯಾವುದೂ ಸ್ಮರಣಕ್ಕೆ ಬರುವುದಿಲ್ಲ ॥೬೩೯॥ ಈ ಪ್ರಕಾರವಾಗಿ ನನ್ನನ್ನು ಅರಿಯಬೇಕೆಂಬ ಉತ್ಕಟ ಇಚ್ಛೆಗೆ ಜಿಜ್ಞಾಸು ಎಂದು ಹೇಳುವರು. ನನ್ನ ಪ್ರಾಪ್ತಿಗಾಗಿ ಆತನು ತನ್ನ ಪಾಂಡಿತ್ಯ ಅಥವಾ ಮಾನ್ಯತೆ ಯಾವುದನ್ನೂ ಸ್ವೀಕರಿಸುವುದಿಲ್ಲ ॥೬೪೦॥ ಆತನು ತನ್ನ ದೇಹಾದಿಕ ಭ್ರಮೆಯನ್ನು ಶ್ರವಣ ಮನನಗಳಿಂದ ಮಿಥ್ಯೆಗೊಳಿಸುತ್ತಿರುವನು. ಸದ್ಗುರುಗಳ ಚರಣಗಳಲ್ಲಿ ದೃಢವಾದ ವಿಶ್ವಾಸವಿರುವುದು. ಪೂರ್ಣಬ್ರಹ್ಮನಲ್ಲಿ ಆತನ ನಿಷ್ಠೆ ಇರುವುದು ॥೬೪೧॥ ಆತನು ಮುಂದಿನ ಮಾರ್ಗವನ್ನು ಆಕ್ರಮಿಸಲು ಭಗವದ್ಭಜನೆಯಲ್ಲಿ ಅತ್ಯಂತ ತತ್ಪರನಾಗುವನು. ಕರ್ಮಗಳ ಖಟಾಟೋಪಗಳನ್ನು ಬಿಟ್ಟುಕೊಟ್ಟು ಆತನು ಧ್ಯಾನನಿಷ್ಠನಾಗುತ್ತಿರುವನು ॥೬೪೨॥ ಧ್ಯೇಯ, ಧ್ಯಾತಾ ಮತ್ತು ಧ್ಯಾನ ಈ ತ್ರಿಪುಟಿಗಳ ಎಚ್ಚರವು ಈತನಿಗಿರುವುದಿಲ್ಲ. ನೋಡಿದಲ್ಲೆ ಸರ್ವತ್ರವೂ ಚೈತನ್ಯವೇ ತುಂಬಿಕೊಂಡಿರುವುದರಿಂದ ಈತನೂ ಸಹ ಸನಾತನ ಪರಬ್ರಹ್ಮನಲ್ಲಿ ತುಂಬಿಕೊಂಡಿರುವನು ॥೬೪೩॥ ಆಗ ಅಲ್ಲಿ ಕರ್ತಾ, ಕರ್ಮ ಮತ್ತು ಕ್ರಿಯಾ ಇವು ಇರುವುದಿಲ್ಲ. ಅನೇಕತ್ವದ ಭ್ರಮವು ಸಹಜವಾಗಿಯೇ ಇಲ್ಲದಾಗುವುದು. ಅಂತರ್ಬಾಹ್ಯದಲ್ಲಿ ಪರಬ್ರಹ್ಮನು ತುಂಬಿಕೊಂಡಿರುವುದು. ಮತ್ತು ಸದ್ಗುರುಗಳ ಕೃಪೆಯಿಂದ ಆತನು ಶಾಂತನಾಗಿರುವನು ॥೬೪೪॥ ಸರ್ವ ದೇಶದಲ್ಲಿ ಸರ್ವವಸ್ತುಗಳಲ್ಲಿ ಮತ್ತು ಸರ್ವಕಾಲದಲ್ಲಿ ಕೇವಲ ಪರಬ್ರಹ್ಮವೇ ವ್ಯಾಪಿಸಿರುವುದು. ಅಲ್ಲಿಯೇ ಆತ್ಮಜ್ಞಾನವು ಸ್ಥಿರವಾಗುತ್ತಿರುವುದು ॥೬೪೫॥ ಇಂತಹ ಆತ್ಮಸ್ವರೂಪದ ಧ್ಯಾನವನ್ನು ಯಾರಿಗೆ ಮಾಡುವುದಾಗುವುದಿಲ್ಲವೋ, ಅವರಿಗಾಗಿ ಪುನಃ ಇನ್ನೊಂದು ಸಾದಾ ಸುಲಭ ಉಪಾಯವನ್ನು ಹೇಳುವೆನು. ಹೇ ಚತುರನಾದ ಉದ್ಧವನೇ, ಈಗ ಅದನ್ನು ಏಕಾಗ್ರಚಿತ್ತದಿಂದ ಆಲಿಸು ॥೬೪೬॥

ಸ್ವಭಾವತಾ ಮನ ಚಂಚಳ । ವಿಷಯವಾಸನಾ ಅತಿಚಪಳ । ನಿರ್ಗುಣ ಬ್ರಹ್ಮೀಕೇವಳ । ನಾಹೀ ಬಳ ಪ್ರವೇಶಾವಯಾ ॥೬೪೭॥ ತರೀ ಸಾಂಖ್ಯ ಯೋಗ ಸನ್ಯಾಸೂ । ಹಾ ನ ಕರಾವಯಾ ಆಯಾಸೂ । ಮಾಝೇಯಾ ಭಕ್ತೀಚಾ ವಿಲಾಸೂ । ಅತಿ ಉಲ್ಹಾಸೂ ಕರಾವಾ ॥೬೪೮॥ ಮಾಗೇ ಬದ್ಧ ಮುಕ್ತಾಂಚೇ ನಿರೂಪಣ । ಸಾಂಗೀತಲೇ ಮುಕ್ತಾಂಚೇ ಲಕ್ಷಣ । ವೃಥಾ ಶಾಬ್ದಿಕಾಂಚೇ ಶಬ್ದ ಜ್ಞಾನ । ತೇಹೀ ವ್ಯಾಖ್ಯಾನ ದಾವಿಲೇ ॥೬೪೯॥ ಆತಾ ಆಪುಲೀ ನಿಜಭಕ್ತೀ । ಸಾಂಗಾವಯಾ ಉದ್ಧವಾಪ್ರತೀ । ಅತಿ ಆದರೇ ಶ್ರೀಪತೀ । ಭಕ್ತೀಚೀ ಸ್ಥಿತಿ ಸಾಂಗತು ॥೬೫೦॥ ಉದ್ಧವಾ ಚಢತ್ಯಾ ಆವಡೀ ಮತ್ಕರ್ಮ । ಜೇ ಭಕ್ತೀಸೀ ವಿಕಾವಾ ಮನೋಧರ್ಮ ।ಮಾಝೇ ಸ್ಮರಾವೇ ಗುಣಕೀರ್ತಿನಾಮ । ನಾನಾ ಸಂಭ್ರಮವಿನೋದೇ ॥೬೫೧॥ ಮಾಝೇನಿ ಭಜನೇ ಕೃತಕೃತ್ಯತಾ । ದೃಢ ವಿಶ್ವಾಸ ಧರೋನಿ ಚಿತ್ತಾ । ಭಜನೀ ಪ್ರವರ್ತಾವೇ ಸರ್ವಥಾ । ಅವಿಶ್ರಮತಾ ಅಹರ್ನಿಶೀ ॥೬೫೨॥ ಮಾಝ್ಯಾ ಭಜನಾಚ್ಯಾ ಆವಡೀ । ಸುರೇಚಿ ಆರಾಣುಕೇಸೀ ವಾಡೀ । ವಾಯಾ ಜಾವೋ ನೇದೀ ಅರ್ಧಘಡೀ । ಭಜನಪರವಡೀ ಯಾ ನಾಂವ ॥೬೫೩॥ ಮಾಝ್ಯಾ ಭಜನೀ ಪ್ರೇಮ ಅಧಿಕ । ನ ಸಾಂಡಾವೇ ನಿತ್ಯನೈಮಿತ್ತಿಕ । ವೈದಿಕ - ಲೌಕಿಕ - ದೈಹಿಕ । ಭಕ್ತಾಂಸೀ ಬಾಧಕ ನವ್ಹೇ ಕರ್ಮ ॥೬೫೪॥ ಆಚರತಾ ಸಕಳ ಕರ್ಮ । ನ ಕಲ್ಪಾವಾ ಫಳಸಂಭ್ರಮ । ಹೇಚಿ ಭಕ್ತೀಚೇ ಗುಹ್ಯ ವರ್ಮ । ಉತ್ತಮೋತ್ತಮ ಅಧಿಕಾರೂ ॥೬೫೫॥ ಉಬಗೂ ನ ಮನೂನಿ ಅಂತರೀ । ಮಾಝ್ಯಾ ಪ್ರೀತೀ ಸರ್ವ ಕರ್ಮಾತೇ ಕರೀ । ಜೋ ಫಳಾಶೇತೇ ಕಂಹೀ ನ ಧರೀ । ಭಕ್ತೀಚಾ ಅಧಿಕಾರೀ ತೋ ಜಾಣಾ ॥೬೫೬॥ ಪಿಂಪುರೇ ಖಾವಯಾಚೇ ಚಾಡೇ । ನ ಲಾವಿತೀ ಪಿಂಪಳಾಚೀ ಝಾಡೇ । ತೇವೀ ಕರ್ಮೇ ಕರಿತಾ ವಾಡೇಕೋಡೇ । ಫಳಾಶಾ ಪುಢೇ ಉಠೇನಾ ॥೬೫೭॥ ಮಾಝೇ ಭಜನ ಕರಿತಾ । ನ ಪಡೇ ಜ್ಞಾನಾಚೀ ಪಂಗಿಸ್ತತಾ। ಮಾಝೇ ಭಜನೇ ನಿತ್ಯಮುಕ್ತತಾ । ಜಾಣ ಮದ್ಭಕ್ತಾ ಮದ್ಭಾವೇ ॥೬೫೮॥ ಜ್ಞಾನೇವೀಣ ಭಕ್ತೀ ನ ಘಡೇ । ಮ್ಹಣತೀ ತೇ ಶಬ್ದ ಜ್ಞಾನ ಧಡಪುಡೇ । ಭಕ್ತೀಸ್ತವ ಜಾಣ ರೋಕಡೇ । ಜ್ಞಾನ ಜೋಡೇ ಅಪರೋಕ್ಷ ॥೬೫೯॥ ಯಾಲಾಗೀ ಮಾಝೇ ಭಜನ ಕರಿತಾ । ಜ್ಞಾನಾಚಾ ಪಾಂಗ ನ ಪಡೇ ಭಕ್ತಾ । ದೇಹಗೇಹಾಮಾಜೀ ವರ್ತತಾ । ಬಂಧನ ಮದ್ಭಕ್ತಾ ಲಾಗೇನಾ ॥೬೬೦॥

ಈ ಮನವೆಂಬುದು ಸ್ವಭಾವತಃ ಅತಿಶಯವಾಗಿ ಚಂಚಲವಾಗಿರುವುದು. ವಿಷಯ ವಾಸನೆಗಳು ಅದಕ್ಕಿಂತಲೂ ಹೆಚ್ಚು ಚಂಚಲವಾಗಿವೆ. ಆದ್ದರಿಂದ ನಿರ್ಗುಣವಾಗಿರುವ ಇಂತಹ ಪರಬ್ರಹ್ಮನಲ್ಲಿ ಪ್ರವೇಶ ಮಾಡುವ ಸಾಮರ್ಥ್ಯವು ಆ ಮನಸ್ಸಿಗೆ ಇರುವುದಿಲ್ಲ ॥೬೪೭॥ ಅದಕ್ಕಾಗಿ ಸಾಂಖ್ಯ, ಯೋಗ ಮತ್ತು ಸನ್ಯಾಸ ಇವುಗಳ ಪರಿಶ್ರಮಮಯ ಕಷ್ಟದ ಸಾಧನೆಗಳನ್ನು ಮಾಡುವುದಕ್ಕಿಂತಲೂ ಅತ್ಯಂತ ಪ್ರೇಮದಿಂದ ನನ್ನ ಭಕ್ತಿಯನ್ನು ಮಾಡಬೇಕು ॥೬೪೮॥ ಈ ಪೂರ್ವದಲ್ಲಿ ಬದ್ಧ ಮತ್ತು ಮುಕ್ತ ಇವರುಗಳ ನಿರೂಪಣೆಯನ್ನು ಮಾಡುವಾಗ್ಗೆ ಮುಕ್ತನ ಲಕ್ಷಣಗಳನ್ನು ಹೇಳಿರುವುದು. ಶಬ್ದ ಪಾಂಡಿತ್ಯವನ್ನು ಮಾಡುವವರ ಕೇವಲ ಪೊಳ್ಳು ಶಬ್ದ ಜ್ಞಾನದ ವಿವೇಚನವನ್ನೂ ಮಾಡಿರುವುದು ॥೬೪೯॥ ಈಗ ತನ್ನ ಆತ್ಮಭಕ್ತಿಯನ್ನು ಉದ್ಧವನಿಗೆ ಹೇಳುವುದಕ್ಕಾಗಿ ಅತ್ಯಂತ ಆದರದಿಂದ ಶ್ರೀಕೃಷ್ಣನು ಭಕ್ತಿಯ ಸ್ವರೂಪವನ್ನು ಹೇಳುವನು ॥೬೫೦॥ ಶ್ರೀಕೃಷ್ಣನು ನುಡಿದನು; ಹೇ ಉದ್ಧವನೇ, ಅತ್ಯಂತ ಆದರದಿಂದ ನನ್ನ ಕರ್ಮಗಳನ್ನು ಮಾಡಬೇಕೆಂದರೆ ನಿನ್ನ ಮನೋಧರ್ಮ ಎಲ್ಲವನ್ನೂ ಭಕ್ತಿಗಾಗಿಯೇ ಮಾರಿಬಿಡು ಮತ್ತು ಆನಂದದಿಂದ ನನ್ನ ಗುಣ, ಕೀರ್ತಿ ಮತ್ತು ನಾಮ ಇವುಗಳನ್ನು ಸ್ಮರಿಸುತ್ತ ಸಾಗು ॥೬೫೧॥ ನನ್ನ ಭಜನೆಯಿಂದ ನಿನ್ನ ಜೀವನವು ಕೃತಕೃತ್ಯವಾಗುವುದು. ಇದನ್ನು ನೀನು ಪೂರ್ಣವಾಗಿ ವಿಶ್ವಾಸವಿಟ್ಟು ಹಗಲು ರಾತ್ರಿ ಎನ್ನದೇ ನನ್ನ ಭಜನೆಯಲ್ಲಿ ಪ್ರವರ್ತನಾಗಬೇಕು ॥೬೫೨॥ ನನ್ನ ಭಜನೆಯ ಪ್ರೇಮದಿಂದ ಮನದಲ್ಲಿ ಸಮಾಧಾನಕ್ಕೂ ಕೂಡ ಸ್ಥಳ ಉಳಿಯುವುದಿಲ್ಲ. ಅಂದರೆ ಭಜನೆಯು ಪೂರ್ಣವಾಯಿತೆಂದು ಅದನ್ನು ನಿಲ್ಲಿಸಲು ಮನಸ್ಸಾಗುವುದಿಲ್ಲ. ಅರ್ಧಘಳಿಗೆ ಸಹ ವ್ಯರ್ಥವಾಗಿ ಹೋಗಗೊಡದ ಇದರ ಹೆಸರೇ ಭಜನೆಯ ಸುಕಾಳವಾಗಿರುವುದು ॥೬೫೩॥ ಅಂತಃಕರಣದಲ್ಲಿ ಭಜನೆಯ ಪ್ರೇಮವು ಅತಿಶಯವಾಗಿದ್ದರೂ ಕೂಡ ನಿತ್ಯ ನೈಮಿತ್ತಿಕ ಕರ್ಮಗಳನ್ನು ಎಂದಿಗೂ ಬಿಡಬಾರದು. ಕಾರಣ ವೈದಿಕ, ಲೌಕಿಕ ಮತ್ತು ಶಾರೀರಿಕ ಕರ್ಮಗಳು ಭಕ್ತನಿಗೆ ಎಂದಿಗೂ ಬಾಧೆ ಕೊಡಲು ಶಕ್ಯವಿಲ್ಲ ॥೬೫೪॥ ಯಾವುದೇ ಕರ್ಮವನ್ನು ಆಚರಿಸುತ್ತಿರಲು ಫಲದ ಅಪೇಕ್ಷೆಯನ್ನು ಮಾಡಬಾರದು. ಇದು ಭಕ್ತಿಯ ರಹಸ್ಯವಾಗಿರುವುದು. ಮತ್ತು ಇದುವೇ ಉತ್ತಮೋತ್ತಮ ಅಧಿಕಾರಯುಕ್ತವಾಗಿರುವುದು ॥೬೫೫॥ ಯಾವನು ಮನದಲ್ಲಿ ಸ್ವಲ್ಪವೂ ಖೇದಗೊಳ್ಳದೇ ನನ್ನ ಮೇಲೆ ಪ್ರೇಮವಿಟ್ಟು ಸರ್ವ ಕರ್ಮಗಳನ್ನು ಮಾಡುತ್ತಿರುವನು. ಹಾಗೆಯೇ ಯಾವುದೇ ಪ್ರಕಾರದ ಫಲದ ಅಪೇಕ್ಷೆಯನ್ನು ಮಾಡುವುದಿಲ್ಲ. ಅವನೇ ಭಕ್ತಿಯ ಅಧಿಕಾರಿಯಾಗಿರುವನೆಂದು ತಿಳಿ ॥೬೫೬॥ ಅಶ್ವತ್ಥವೃಕ್ಷದ ಗಿಡಗಳನ್ನು ಹಚ್ಚುವಾಗ ನಮಗೆ ಆ ಗಿಡಗಳ ಫಲಗಳು ತಿನ್ನಲು ಸಿಗುವುವು ಎಂದು ಹೀಗೆ ಯಾರೂ ಆಶೆಯನ್ನು ಮಾಡುವುದಿಲ್ಲ. ಅದರಂತೆ ಅತ್ಯಂತ ಪ್ರೇಮದಿಂದ ಕರ್ಮಗಳನ್ನು ಮಾಡಿದರೂ ಫಲಾಶೆಯು ಉತ್ಪನ್ನವಾಗುವುದಿಲ್ಲ ॥೬೫೭॥ ನನ್ನ ಭಜನೆಯನ್ನು ಮಾಡುತ್ತಿರಲು ಜ್ಞಾನಕ್ಕಾಗಿ ಪ್ರಯತ್ನವನ್ನು ಮಾಡಬೇಕಾಗಿರುವುದಿಲ್ಲ. ಕಾರಣ ನನ್ನ ಭಕ್ತನಿಗೆ ಕೇವಲ ನನ್ನ ಭಕ್ತಿಯಿಂದಲೇ ನಿತ್ಯಮುಕ್ತತೆಯು ಪ್ರಾಪ್ತವಾಗುವುದು ॥೬೫೮॥ ಜ್ಞಾನದ ಹೊರತಾಗಿ ಭಕ್ತಿಯು ಪ್ರಾಪ್ತವಾಗುವುದಿಲ್ಲವೆಂದು ಕೆಲವು ಜನರು ಹೀಗೆ ಹೇಳುವರು, ಆದರೆ ಅವರ ಈ ಹೇಳುವಿಕೆಯು ಕೇವಲ ಟೊಳ್ಳಾಗಿರುವ ಶಬ್ದಪಾಂಡಿತ್ಯವಾಗಿರುವುದು. ಭಕ್ತಿಯಿಂದಲೇ ಸಾಕ್ಷಾತ್ ಜ್ಞಾನವು ಪ್ರಾಪ್ತವಾಗುವುದು. ಹೀಗೆ ನೀನು ನಿಶ್ಚಯವಾಗಿ ತಿಳಿದುಕೋ ॥೬೫೯॥ ಅದಕ್ಕಾಗಿ ಪ್ರೇಮದಿಂದ ನನ್ನ ಭಜನೆಯನ್ನು ಮಾಡುತ್ತಿರಲು ಭಕ್ತನಿಗೆ ಎಂದಿಗೂ ಜ್ಞಾನದ ಕೊರತೆಯಾಗುವುದಿಲ್ಲ. ದೇಹರೂಪ ಮನೆಯಲ್ಲಿ ವರ್ತಿಸುತ್ತಿರಲು ನನ್ನ ಭಕ್ತನಿಗೆ ಯಾವ ಬಂಧನವು ಆಗುವುದಿಲ್ಲ ॥೬೬೦॥

ಜ್ಯಾಚ್ಯಾ ಮುಖೀ ಮಾಝೇ ನಾಮ । ಜ್ಯಾಸೀ ಮಾಝಾ ಭಜನಸಂಭ್ರಮ । ಜ್ಯಾಚ್ಯಾ ಮನೀ ಮೀ ಆತ್ಮಾರಾಮ । ತ್ಯಾಚೇ ದಾಸೀ ಕಾಮ ಮುಕ್ತಿ ಕರೀ ॥೬೬೧॥ ಮುಕ್ತೀಮಾಜೀ ವಿಶೇಷ ಕಾಯೀ । ವೃತ್ತಿ ನಿರ್ವಿಷಯ ಅಸೇ ಪಾಹೀ । ಭಕ್ತಾಂಸೀ ಸರ್ವ ಕರ್ಮಾಚ್ಯಾ ಠಾಯೀ । ಸ್ಫುರಣ ನಾಹೀ ವಿಷಯಾಂಚೇ ॥೬೬೨॥ ಭಕ್ತಾಂಚೇ ವಿಷಯೀ ನಾಹೀ ಚಿತ್ತ । ತ್ಯಾಂಚಾ ವಿಷಯ ತೋ ಮೀ ಭಗವಂತ । ತೇ ಸದಾ ಮಜಮಾಜೀ ಲೋಲುಪ್ತ । ನಿತ್ಯಮುಕ್ತ ಯಾಲಾಗೀ ॥೬೬೩॥ ಭಕ್ತ ವಿಷಯೋ ಸೇವಿತೀ । ತೇ ಗ್ರಾಸೋಗ್ರಾಸೀ ಮಜ ಅರ್ಪಿತೀ । ತೇಣೇಂಚಿ ತ್ಯಾಂಸೀ ವಂದೀ ಮುಕ್ತೀ । ಸರ್ವ ಭೂತೀ ಮದ್ಭಾವೋ ॥೬೬೪॥ ಯಾಲಾಗೀ ಕರ್ಮಬಂಧನ । ಮದ್ಭಕ್ತಾಂಸೀ ನ ಲಗೇ ಜಾಣ । ಕರಿತಾ ಮಾಝೇ ಸ್ಮರಣ ಕೀರ್ತನ । ಜಗಾಚೇ ಬಂಧನ ಛೇದಿತೀ ॥೬೬೫॥ ಮಾಝ್ಯಾ ಭಕ್ತಾಂಚೇ ವಸತೇ ಘರ । ತೇ ಜಾಣ ಮಾಝೇ ನಿಜಮಂದಿರ । ಮುಕ್ತಿ ತೇಥೇ ಆಠೌ ಪ್ರಹರ । ವೋಳಗೇ ದ್ವಾರ ತಯಾಂಚೇ ॥೬೬೬॥ ಮಾಝೇ ಭಜನ ಕರಿತಾ । ಕೋಣ್ಯಾ ಅರ್ಥಾಚೀ ನಾಹೀ ದುರ್ಲಭತಾ । ಚಹೂ ಪುರುಷಾರ್ಥಾಚೇ ಮಾಥಾ । ಭಕ್ತಿ ಸರ್ವಥಾ ಮಜ ಪಢಿಯಂತೀ ॥೬೬೭॥ ಜ್ಞಾನ ನಿತ್ಯಾನಿತ್ಯ ವಿವೇಕ । ಭಕ್ತೀಮಾಜೀ ಮಾಝೇ ಪ್ರೇಮ ಅಧಿಕ । ತೈಸೇ ಪ್ರೇಮಳಾಚೇ ಮಜಲಾಗೀ ಸುಖ । ಚಡತೇ ದೇಖ ಅಹರ್ನಿಶೀ ॥೬೬೮॥ ಜೇವೀ ಏಕಲುತೇ ಬಾಳಕ । ಜನನೀಸೀ ಆವಡೇ ಅಧಿಕ । ತೈಸೇ ಪ್ರೇಮಳಾಚೇ ಕೌತುಕ । ಚಢತೇ ಸುಖ ಮಜಲಾಗೀ ॥೬೬೯॥ ಯಾಲಾಗೀ ಆಪುಲಿಯೇ ಸಂವಸಾಟೀ । ಮೀ ಪ್ರೇಮಳ ಘೇ ಉಠಾಉಠೀ । ವರೀ ನಿಜಸುಖ ದೇ ಸದೇಠೀ । ನ ಘೇ ತೈ ಶೇವಟೀ ಸೇವಕೂ ಹೋಯೇ ॥೬೭೦॥ ಪ್ರೇಮಾಚಿಯಾ ಪರಮ ಪ್ರೀತೀ । ಜೇಣೇ ಮಜ ಅರ್ಪಿಲೀ ಚಿತ್ತವೃತ್ತೀ । ತೇವ್ಹಾಂಚಿ ತ್ಯಾಚೇ ಸೇವೇಚೀ ಸುತೀ । ಜಾಣ ನಿಶ್ಚಿತೀ ಮ್ಯಾ ಘೇತಲೀ ॥೬೭೧॥ ಪ್ರೇಮಳಾಚೇ ಶೇಷ ಖಾತಾ । ಮಜ ಲಾಜ ನಾಹೀ ಘೋಡೀ ಧುತಾ । ಶೇಖೀ ಉಚ್ಛಿಷ್ಟ ಕಾಢಿತಾ । ಲಾಜ ಸರ್ವಥಾ ಮಜ ನಾಹೀ ॥೬೭೨॥ ಮಜ ಸಪ್ರೇಮಾಚೀ ಆಸ್ಥಾ । ತ್ಯಾಚೇ ಮೋಚೇ ಮೀ ವಾಹೇ ಮಾಥಾ । ಐಶೀ ಪ್ರೇಮಳಾಚೀ ಸಾಂಗತಾ ಕಥಾ । ಪ್ರೇಮ ಕೃಷ್ಣನಾಥಾ ಚಾಲಿಲೇ ॥೬೭೩॥ ಕಂಠ ಜಾಲಾ ಸದ್ಗದಿತ । ಅಂಗ ಝಾಲೇ ರೋಮಾಂಚಿತ । ಧಾಂವೋನಿ ಉದ್ಧವಾಸೀ ಖೇವ ದೇತ । ಪ್ರೇಮ ಅದ್ಭುತ ಹರೀಚೇ ॥೬೭೪॥

ಯಾವನ ಮುಖದಲ್ಲಿ ನನ್ನ ನಾಮವಿರುವುದೋ, ಯಾವನಿಗೆ ನನ್ನ ಭಜನೆಯ ಅತ್ಯಂತಿಕವಾಗಿ ಪ್ರೇಮವಿರುವುದೋ, ಆತ್ಮಾರಾಮನಾದ ನಾನು ಆತನ ಮನದಲ್ಲಿ ಸ್ಥಿರವಾಗಿರುವೆನು. ಆತನ ಮನೆಯಲ್ಲಿ ಮುಕ್ತಿಯೂ ಕೂಡ ದಾಸಿಯಾಗಿ ಕೆಲಸಗಳನ್ನು ಮಾಡುತ್ತಿರುವುದು ॥೬೬೧॥ ಯಾರ ವೃತ್ತಿಯು ನಿರ್ವಿಷಯವಾಗಿರುವುದೋ, ಆತನಿಗೆ ಮುಕ್ತಿಯಲ್ಲಿ ಯಾವ ವಿಶೇಷತೆಯೂ ಅನಿಸುವುದಿಲ್ಲ. ಭಕ್ತನಿಗೆ ಯಾವುದೇ ಕರ್ಮಗಳಲ್ಲಿ ವಿಷಯದ ಸ್ಫುರಣವು ಇರುವುದಿಲ್ಲ ॥೬೬೨॥ ಭಕ್ತನ ಮನವು ವಿಷಯಗಳಲ್ಲಿರುವುದಿಲ್ಲ. ಭಗವಂತನಾದ ನಾನೇ ಆತನ ವಿಷಯವಾಗಿರುವುದು. ಆತನು ಯಾವಾಗಲೂ ನನ್ನಲ್ಲಿಯೇ ಆಸಕ್ತನಾಗಿರುವನು. ಆದ್ದರಿಂದ ಆತನು ನಿತ್ಯಮುಕ್ತನಾಗಿರುವನು ॥೬೬೩॥ ಭಕ್ತರು ವಿಷಯ ಸೇವನೆಯನ್ನು ಮಾಡುತ್ತಿರುವರು, ಆದರೆ ಆ ವಿಷಯಗಳನ್ನು ಭಗವಂತನಿಗೆ ಅರ್ಪಿಸುವರು. ಅವರು ಸರ್ವ ಭೂತ ಮಾತ್ರರಲ್ಲಿ ನನ್ನದೇ ಭಾವವನ್ನು ಇಟ್ಟಿರುವರು. ಆದ್ದರಿಂದ ಮುಕ್ತಿಯು ಅವರಿಗೆ ವಂದಿಸುತ್ತಿರುವುದು ॥೬೬೪॥ ಆದಕ್ಕಾಗಿ ನನ್ನ ಭಕ್ತರು ಕರ್ಮ ಬಂಧನಗಳಲ್ಲಿ ಎಂದಿಗೂ ಸಿಲುಕಿಕೊಳ್ಳುವುದಿಲ್ಲ. ನನ್ನ ಸ್ಮರಣೆಯನ್ನು ಮತ್ತು ಕೀರ್ತನೆಯನ್ನು ಮಾಡುತ್ತ ಜಗತ್ತಿನ ಬಂಧನವನ್ನು ಮುರಿದು ಹಾಕುವರು ॥೬೬೫॥ ನನ್ನ ಭಕ್ತನು ಯಾವ ಮನೆಯಲ್ಲಿರುವನೋ, ಅದೇ ನನ್ನ ಮಂದಿರವಾಗಿರುವುದು. ಎಂಟೂ ಪ್ರಹರಗಳಲ್ಲಿ ಮುಕ್ತಿಯು ಆತನ ಬಾಗಿಲದಲ್ಲಿ ಸೇವೆಯನ್ನು ಮಾಡುತ್ತ ನಿಂತಿರುವುದು ॥೬೬೬॥ ನನ್ನ ಭಜನೆಯನ್ನು ಮಾಡುವವರಿಗೆ ಯಾವ ಪ್ರಕಾರದ ನ್ಯೂನತೆಯು ಇರುವುದಿಲ್ಲ. ನಿಜವಾಗಿಯೂ ನನಗೆ ನಾಲ್ಕೂ ಪುರುಷಾರ್ಥಗಳಿಗಿಂತಲೂ ಭಕ್ತಿಯೇ ಅಧಿಕವಾಗಿ ಪ್ರಿಯವಾಗುತ್ತದೆ ॥೬೬೭॥ ಜ್ಞಾನಕ್ಕಿಂತಲೂ ಮತ್ತು ನಿತ್ಯಾನಿತ್ಯ ವಿವೇಕಗಿಂತಲೂ ನನಗೆ ಭಕ್ತಿಯೇ ಅಧಿಕವಾಗಿ ಪ್ರಿಯವೆನಿಸುವುದು. ಈ ಪ್ರಕಾರವಾಗಿ ಪ್ರೇಮಳ ಭಕ್ತರ ಪ್ರೇಮ ಸುಖವು ನನಗೆ ಅಹೋರಾತ್ರಿ ಬೆಳೆಯುತ್ತಲೇ ಸಾಗುತ್ತಿರುವುದು ॥೬೬೮॥ ಯಾವ ಪ್ರಕಾರವಾಗಿ ಒಬ್ಬನೇ ಒಬ್ಬ ಮಗನಿರಲು, ಆ ಮಗನ ಮೇಲೆ ತಾಯಿಯ ಅತ್ಯಂತ ಪ್ರೇಮವಿರುವುದು. ಅದರಂತೆ ಪ್ರೇಮಳ ಭಕ್ತನ ಕೌತುಕ ಮಾಡುವುದರಲ್ಲಿ ನನಗೆ ಅತಿಶಯವಾಗಿ ಸುಖವಾಗುವುದು ॥೬೬೯॥ ಅದಕ್ಕಾಗಿಯೇ ನಾನು ಪ್ರೇಮಳ ಭಕ್ತನಿಗೆ ತತ್ಕಾಲದಲ್ಲಿ ನನ್ನ ಆಶ್ರಯದಡಿಯಲ್ಲಿ ಸ್ವೀಕರಿಸುವೆನು. ಮತ್ತು ಆತನಿಗೆ ಆತ್ಮಸುಖವನ್ನು ಕೊಡುವೆನು. ಇದನ್ನು ಆತನು ಸ್ವೀಕಾರವನ್ನು ಮಾಡದಿರಲು ನಾನು ಆತನ ಸೇವಕನಾಗುವೆನು ॥೬೭೦॥ ಯಾವನು ಅತ್ಯಂತ ಪ್ರೇಮದಿಂದ ತನ್ನ ಚಿತ್ತವೃತ್ತಿಯನ್ನು ನನಗೆ ಅರ್ಪಣೆಯನ್ನು ಮಾಡುವನೋ, ಆತನ ಸೇವೆಯನ್ನು ಮಾಡುವ ನಿಶ್ಚಯವನ್ನು ಆ ಕ್ಷಣದಲ್ಲಿಯೇ ಮಾಡುವೆನು ॥೬೭೧॥ ಪ್ರೇಮಳ ಭಕ್ತರ ಎಂಜಲವನ್ನು ನಾನು ಭುಂಜಿಸುವೆನು, ಅರ್ಜುನನಂತಹ ಜೀವದ ಮಿತ್ರನ ಕುದುರೆಗಳನ್ನು ತೊಳೆಯುವೆನು. ಅವರ ಎಂಜಲ ಪತ್ರಾವಳಿ ಎತ್ತಲು ನನಗೆ ಸ್ವಲ್ಪವೂ ನಾಚಿಕೆಯಾಗುವುದಿಲ್ಲ ॥೬೭೨॥ ನನಗೆ ಪ್ರೇಮಳ ಭಕ್ತನು ಅತಿಶಯವಾಗಿ ಪ್ರಿಯನಾಗಿರುವನು. ಆತನ ಕಾಲ್ಪರೀ ಸಹ ನಾನು ನನ್ನ ತಲೆಯ ಮೇಲೆ ಹೊರುವೆನು. ಹೀಗೆ ಪ್ರೇಮಳ ಭಕ್ತರ ಮಾತುಗಳನ್ನು ಹೇಳುತ್ತಿರಲು ಶ್ರೀಕೃಷ್ಣನಿಗೆ ಅತಿಶಯವಾಗಿ ಪ್ರೇಮವು ಉಕ್ಕಿ ಬಂದಿತು ॥೬೭೩॥ ಶ್ರೀಕೃಷ್ಣನ ಕಂಠವು ಸದ್ಗದಿತವಾಯಿತು. ಆತನ ಶರೀರದಲ್ಲಿ ರೋಮಾಂಚನಗಳು ಎದ್ದು ನಿಂತವು. ಈತನು ಧಾವಿಸಿ ಬಂದು ಉದ್ಧವನಿಗೆ ಬಿಗಿಯಾಗಿ ಆಲಿಂಗಿಸಿದನು. ಶ್ರೀ ಹರಿಯ ಪ್ರೇಮವು ಈ ಪ್ರಕಾರವಾಗಿ ಅಲೌಕಿಕವಾಗಿರುವುದು ॥೬೭೪॥

ಸಜಲ ಜಾಹಲೇ ಲೋಚನ । ವರುಷತಾತೀ ಸ್ವಾನಂದಜೀವನ । ಭಕ್ತಿಸಾಮ್ರಾಜ್ಯ – ಪಟ್ಟಾಭಿಷಿಂಚನ । ಉದ್ಧವಾಸೀ ಜಾಣ ಹರಿ ಕರೀ ॥೬೭೫॥ ಸಹಜೇ ಪ್ರೇಮಳಾಚೀ ಕರಿತಾ ಗೋಠೀ । ಸಂಮುಖ ಉದ್ಧವ ದೇಖಿಲಾ ದೃಷ್ಟೀ । ಧಾಂವೋನಿಯಾ ಘಾತಲೀ ಮಿಠೀ । ಆವಡೀ ಮೋಠೀ ಭಕ್ತಾಂಚೀ ॥೬೭೬॥ ಆವಡೀ ಪಡಿಲೇ ಆಲಿಂಗನ । ವಿಸರಲಾ ಕಾರ್ಯಕಾರಣ । ವಿಸರಲಾ ಸ್ವಧಾಮಗಮನ । ಮೀತೂಪಣ ನಾಠವೇ ॥೬೭೭॥ ನಾಠವೇ ದೇವಭಕ್ತಪಣ । ನಾಠವೇ ಕಥಾನಿರೂಪಣ । ನಾಠವೇ ಉದ್ಧವಾ ಉದ್ಧವಪಣ । ಕೃಷ್ಣಾ ಕೃಷ್ಣಪಣ ನಾಠವೇ ॥೬೭೮॥ ಪ್ರೇಮಳಾಚೀ ಗೋಠೀಸಾಠೀ । ಪರಾತ್ಪರ ಪರತಟೀ । ದೋಘಾ ಐಕ್ಯೇ ಪಡಲೀ ಮಿಠೀ । ಆವಡೀ ಮೋಠೀ ಪ್ರೇಮಾಚೀ ॥೬೭೯॥ ಆಜಿ ಭಕ್ತೀಚೇ ನಿಜ ಸುಖ । ಉದ್ಧವಾಸೀ ಫಾವಲೇ ದೇಖ । ಭಕ್ತೀಚೇ ಪ್ರೇಮ ಅಲೋಲಿಕ । ಉದ್ಧವೇ ಸಮ್ಯಕ ವಿಸ್ತಾರಿಲೇ ॥೬೮೦॥ ಶ್ರೀಕೃಷ್ಣ ನಿಜಧಾಮಾಸೀ ಜಾತಾ । ಉದ್ಧವ ಜರೀ ಹೇ ನ ಪುಸತಾ । ತರೀ ಜ್ಞಾನವೈರಾಗ್ಯ ಭಕ್ತಿಕಥಾ । ಕಾ ಸಾಂಗತಾ ಶ್ರೀಕೃಷ್ಣ ॥೬೮೧॥ ವಿಶೇಷ ಭಕ್ತಿಪ್ರೇಮ ಅಚುಂಬಿತ । ಉದ್ಧವೇ ಕಾಢಿಲೇ ನಿಶ್ಚಿತ । ಉದ್ಧವಪ್ರಶ್ನೇ ಶ್ರೀಭಾಗವತ । ಝಾಲೇ ಸನಾಥ ತಿಹೀ ಲೋಕೀ ॥೬೮೨॥ ಯಾಲಾಗೀ ತನುಮನಪ್ರಾಣೇ । ಉದ್ಧವೂ ಜೀವೇ ಓವಾಳಣೇ । ಯಾಹೂನ ಅಧಿಕ ವಾನಣೇ । ತೇ ಬೋಲಣೇ ನ ಸಾಹೇ ॥೬೮೩॥ ಜೇ ಬೋಲಾ ಬುದ್ಧೀ ನ ಯೇ ಸಹಜ । ತೇ ಭಕ್ತಿಪ್ರೇಮ ನಿಜಗುಜ । ಉದ್ಧವಾ ದ್ಯಾವಯಾ ಗರುಡಧ್ವಜ । ಕೇಲೇ ವ್ಯಾಜ ಖೇವಾಚೇ ॥೬೮೪॥ ಭಕ್ತೀಚೇ ಶೋಧಿತ ಪ್ರೇಮ । ಉದ್ಧವಾಸೀ ಅತಿ ಉತ್ತಮ । ದೇತಾ ಝಾಲಾ ಪುರುಷೋತ್ತಮ । ಮೇಘಶ್ಯಾಮ ತುಷ್ಟಲಾ ॥೬೮೫॥ ಪ್ರೇಮಳಾಚೀ ಗೋಠೀ ಸಾಂಗತಾ । ವಿಸರಲೋ ಮೀ ಶ್ಲೋಕಾರ್ಥಾ । ಕೃಷ್ಣಾಸೀ ಆವಡಲೀ ಪ್ರೇಮಕಥಾ । ತೇ ಆವರಿತಾ ನಾವರೇ ॥೬೮೬॥ ಪ್ರೇಮಾಚೀ ತಂವ ಜಾತೀ ಐಶೀ । ಆಠವೂ ಯೇಊ ನೇದೀ ಆಠವಣೇಶೀ । ಹಾ ಭಾವೋ ಜಾಣಾವೇ ಸಜ್ಜನಾಂಸೀ । ತೇ ಭಕ್ತಿಪ್ರೇಮಾಸೀ ಜಾಣತೇ ॥೬೮೭॥ ಹೋ ಕಾ ಐಸೇಹೀ ಅಸತಾ । ಮಾಝಾ ಅಪರಾಧೂ ಜೀ ಸರ್ವಥಾ । ಚುಕೋನಿ ಘಾಂಕಲೋ ಶ್ಲೋಕಾರ್ಥಾ । ಕ್ಷಮಾಶ್ರೋತಾ ಕರಾವೀ ॥೬೮೮॥

ಈತನ ನೇತ್ರಗಳು ಆನಂದಾಶ್ರುಗಳಿಂದ ತುಂಬಿಕೊಂಡವು. ಅವುಗಳಿಂದ ಸ್ವಾನಂದದ ಜಲವು ಹರಿಯತೊಡಗಿತು. ಆ ಜಲದಿಂದ ಶ್ರೀಕೃಷ್ಣನು ಉದ್ಧವನಿಗೆ ಭಕ್ತಿ ಸಾಮ್ರಾಜ್ಯದ ಪಟ್ಟಾಭಿಷೇಕವನ್ನು ಮಾಡಿದನು ॥೬೭೫॥ ಸಹಜವಾಗಿಯೇ ಭಕ್ತರ ಪ್ರೇಮದ ವರ್ಣನೆಯನ್ನು ಮಾಡುತ್ತಿರಲು ಎದುರಿನಲ್ಲಿಯೇ ಈತನಿಗೆ ಉದ್ಧವನು ಕಂಡನು. ಶ್ರೀಕೃಷ್ಣನು ತತ್ಕಾಲದಲ್ಲಿ ಧಾವಿಸುತ್ತ ಸಾಗಿ ಉದ್ಧವನಿಗೆ ಬಿಗಿದು ಅಪ್ಪಿಕೊಂಡನು. ಈ ಪ್ರಕಾರವಾಗಿ ಶ್ರೀಕೃಷ್ಣನಿಗೆ ಭಕ್ತರ ಪ್ರೀತಿಯು ಮಹತ್ತರವಾಗಿರುವುದು ॥೬೭೬॥ ಅತ್ಯಂತ ಪ್ರೇಮದಿಂದ ಆಲಿಂಗನವನ್ನು ಕೊಡುತ್ತಲೇ ಶ್ರೀಕೃಷ್ಣನು ತನ್ನ ಕರ್ತವ್ಯಗಳನ್ನು ಮರೆತುಬಿಟ್ಟನು. ತನಗೆ ನಿಜಧಾಮಕ್ಕೆ ಹೋಗುವ ಸ್ಮರಣೆಯೂ ಆತನಿಗೆ ಉಳಿಯಲಿಲ್ಲ. ನಾನು-ನೀನೆಂಬುವ ಭಾವನೆಯೂ ಸಹ ಉಳಿಯಲಿಲ್ಲ ॥೬೭೭॥ ನಾನು ದೇವನಾಗಿರುವೆ ಮತ್ತು ಉದ್ಧವನು ನನ್ನ ಭಕ್ತನಾಗಿರುವನು ಎಂಬ ಭಾವವು ಇಲ್ಲದಾಯಿತು. ಕಥಾ ನಿರೂಪಣೆಯ ಸ್ಮರಣವೂ ಸಹ ಈತನಿಗೆ ಇಲ್ಲದಾಯಿತು. ಉದ್ಧವನಿಗೆ ತಾನು ಉದ್ಧವನೆಂಬ ಪ್ರಜ್ಞೆಯು ಮತ್ತು ಕೃಷ್ಣನಿಗೆ ತಾನು ಕೃಷ್ಣನೆಂಬ ಪ್ರಜ್ಞೆಯೂ ಸಹ ಇಲ್ಲದಾಯಿತು ॥೬೭೮॥ ಪ್ರೇಮಳ ಭಕ್ತರ ಮಾತುಗಳನ್ನು ಹೇಳುತ್ತಿರಲು ಇಬ್ಬರಿಗೂ ಪರಾತ್ಪರದ ಆಚೆ ಕಡೆಯಲ್ಲಿ ಐಕ್ಯಭಾವದ ಆಲಿಂಗನವಾಯಿತು. ಪ್ರೇಮದ ಬಯಕೆಯು ಹೀಗೆ ಬಹು ದೊಡ್ಡದಾಗಿರುವುದು ॥೬೭೯॥ ಭಕ್ತಿಯ ನಿಜವಾದ ಸುಖವು ಇಂದು ಉದ್ಧವನಿಗೆ ಪ್ರಾಪ್ತವಾಯಿತು. ಭಕ್ತಿಯ ಯಾವ ಅಲೌಕಿಕ ಪ್ರೇಮವನ್ನು ಉದ್ಧವನು ಇಂದು ಪ್ರಕಟಿಸಿದನು ॥೬೮೦॥ ಶ್ರೀಕೃಷ್ಣನು ನಿಜಧಾಮಕ್ಕೆ ಹೋಗುವ ಪ್ರಸಂಗದಲ್ಲಿ ಉದ್ಧವನು ಆತನಿಗೆ ಒಂದು ವೇಳೆ ಈ ಪ್ರಶ್ನೆಯನ್ನು ಕೇಳದಿದ್ದರೆ, ಶ್ರೀಕೃಷ್ಣನು ಜ್ಞಾನ, ವೈರಾಗ್ಯ ಹಾಗೂ ಭಕ್ತಿ ಇವುಗಳ ಕಥೆಯನ್ನು ಏಕೆ ಹೇಳುತ್ತಿದ್ದನು? ॥೬೮೧॥ ನಿಜವಾಗಿಯೂ ಉದ್ಧವನು ಭಕ್ತಿ ಪ್ರೇಮವನ್ನು ಸಹಜವಾಗಿಯೇ ಕಿತ್ತುಕೊಂಡನು. ಉದ್ಧವನ ಈ ಪ್ರೇಮದಿಂದಲೇ ಶ್ರೀ ಭಾಗವತವು ಮೂರು ಲೋಕಗಳಲ್ಲಿ ಪೂಜ್ಯವಾಯಿತು ॥೬೮೨॥ ಆದಕ್ಕಾಗಿಯೇ ತನ,ಮನ, ಪ್ರಾಣವನ್ನು ಉದ್ಧವನ ಮೇಲೆ ನಿವಾಳಿಸಿ ಒಗೆಯಬೇಕು. ಇಷ್ಟೊಂದು ಆತನ ಅಲೌಕಿಕ ಮಹತ್ವವಾಗಿರುವುದು. ಇದಕ್ಕಿಂತಲೂ ಆತನನ್ನು ಹೆಚ್ಚಿಗೆ ವರ್ಣಿಸಲು ವಾಣಿಯು ಸಮರ್ಥವಿಲ್ಲ ॥೬೮೩॥ ಯಾವುದು ಶಬ್ದಗಳಿಂದ ಸಹಜವಾಗಿ ಹೇಳಲು ಬರುವಂತೆ ಇರುವುದಿಲ್ಲ. ಬುದ್ಧಿಗೂ ಕೂಡ ಗ್ರಹಿಸುವುದಾಗುವುದಿಲ್ಲ, ಇಂತಹ ಭಕ್ತಿಯ ರಹಸ್ಯವನ್ನು ಅಂದರೆ ಶುದ್ಧವಾದ ಪ್ರೇಮವನ್ನು ಉದ್ಧವನಿಗೆ ಅನುಭವಕ್ಕೆ ಬರಬೇಕೆಂಬ ಉದ್ದೇಶದಿಂದ ಆಲಿಂಗನದ ಕೇವಲ ನಿಮಿತ್ತ ಮಾಡಿದನು ॥೬೮೪॥ ಪುರುಷೋತ್ತಮನು ಉಚ್ಚ ಭಕ್ತಿಯ ನಿಃಸ್ವಾರ್ಥ, ಪವಿತ್ರ, ಶುದ್ಧ ಪ್ರೇಮವನ್ನು ಉದ್ಧವನಿಗೆ ಕೊಟ್ಟನು. ಮೇಘಶ್ಯಾಮನು ಉದ್ಧವನಿಗೆ ಪ್ರಸನ್ನನಾದನು ॥೬೮೫॥ ನಾನಾದರೂ ಈ ಉಚ್ಚವಾದ ಪ್ರೇಮದ ಮಾತುಗಳನ್ನು ಹೇಳುತ್ತಿರಲು ಶ್ಲೋಕಾರ್ಥದ ವಿವರಣೆ ಮಾಡುವುದನ್ನು ಮರೆತುಬಿಟ್ಟಿರುವೆನು. ಶ್ರೀಕೃಷ್ಣನಿಗೂ ಕೂಡ ಭಕ್ತರ ಪ್ರೇಮವು ಎಷ್ಟೊಂದು ಪ್ರಿಯವಾಗಿದೆ ಎಂದರೆ, ಆತನಿಗೆ ಆ ಪ್ರೇಮದ ಸೆಳೆತವನ್ನು ತಡೆಯುವುದಾಗುತ್ತಿಲ್ಲ ॥೬೮೬॥ ಪ್ರೇಮದ ಸ್ವಭಾವವೇ ಹೀಗಿರುವುದು. ಅದು ಬೇರೆ ಯಾವುದನ್ನೂ ಸ್ಮರಿಸಿಕೊಡುವುದಿಲ್ಲ. ಈ ಮಾತನ್ನು ಸಜ್ಜನರು ಅರಿತಿರುವರು. ಕಾರಣ ಅವರಿಗೆ ಭಕ್ತಿ ಪ್ರೇಮದ ಅನುಭವವಿರುವುದು ॥೬೮೭॥ ಇದು ಒಂದು ವೇಳೆ ನಿಜವಾಗಿದ್ದರೂ ನನ್ನಿಂದಲೂ ಸ್ವಲ್ಪ ಅಪರಾಧವಾಗಿದೆ. ಶ್ಲೋಕದ ಅರ್ಥವನ್ನು ಹೇಳುವುದನ್ನು ಬಿಟ್ಟುಕೊಟ್ಟು ಯಾವುದೋ ಹಾದಿಗೆ ಹೋಗಿರುವೆನು. ಆದ್ದರಿಂದ ಶ್ರೋತೃಗಳು ಉದಾರ ಅಂತಃಕರಣದಿಂದ ನನ್ನನ್ನು ಕ್ಷಮಿಸಬೇಕು ॥೬೮೮॥

ತಂವ ಶ್ರೋತೇ ಮ್ಹಣತೀ ರಾಹೇ । ಜೇಥೇ ನಿರೂಪಣೀ ಸುಖ ಆಹೇ । ತ್ಯಾವರೀ ಬೋಲಣೇ ಹೇ ನ ಸಾಹೇ । ಐಸೇ ರಹಸ್ಯ ಆಹೇ ಅತಿಗೋಡ ॥೮೯॥ ಆಧೀಂಚ ಭಾಗವತ ಉತ್ತಮ । ತೇಥೇ ಹೇ ವಾಖಾಣಿಲೇ ಭಕ್ತಿಪ್ರೇಮ । ತೇಣೇ ಉಲ್ಹಾಸಲೇ ಪರಬ್ರಹ್ಮ । ಆಮುಚೇ ಮನೋಧರ್ಮ ನಿವಾಲೇ ॥೯೦॥ ಶ್ಲೋಕ ಸಂಗತೀಚೀ ಭಂಗೀ । ದೂರ ಠೇಲೀ ಕಥೇಚಿ ಮಾಗೀ । ಹೇ ಪ್ರಾರ್ಥನಾ ನ ಲಗೇ ಆಮ್ಹಾಲಾಗೀ । ಆಮ್ಹೀ ಹರಿರಂಗೀ ರಂಗಲೋ ॥೯೧॥ ಐಕತಾ ಭಕ್ತಿಪ್ರೇಮಾಚಾ ಜಿವ್ಹಾಳಾ । ಶ್ರವಣಸುಖಾಚಾ ಪೂರೂ ಆಲಾ । ಝಾಡಾ ನ ಸೂಚಿ ಉಗಲಾ । ನಿರೂಪಣ ವಹಿಲಾ ಚಾಲವೀ ॥೯೨॥ ಸಾಂಗತಾ ಪ್ರೇಮಳಾಂಚೀ ಗೋಠೀ । ಕೃಷ್ಣ ಉದ್ಧವಾ ಏಕ ಗಾಂಠೀ । ಪ್ರೇಮೇ ಪಡಲೀ ಹೋತೀ ಮಿಠೀ । ತೇ ಕೃಷ್ಣ ಜಗಜೇಠೀ ಸೋಡವೀ ॥೯೩॥ ಮ್ಹಣೇ ಹೇ ಅನುಚಿತ ಸರ್ವಥಾ । ಆತಾಂಚಿ ಉದ್ಧವೂ ಐಕ್ಯಾ ಯೇತಾ । ತರೀ ಕಥೇಚಾ ನಿಜಭೋಕ್ತಾ । ಐಸಾ ಶ್ರೋತಾ ಕೈಚಾ ಮಗ ॥೯೪॥ ಮಾಝಿಯಾ ಭಕ್ತಿಜ್ಞಾನವಿಸ್ತಾರಾ । ಉದ್ಧವೂಚಿ ನಿಜಾಂಚಾ ಸೋಯರಾ । ಯಾಲಾಗೀ ಬ್ರಹ್ಮಶಾಪಾಬಾಹಿರಾ । ಕಾಢಿತೂ ಖರಾ ನಿಜಬೋಧೇ ॥೯೫॥ ಜಿತುಕೀ ಗುಹ್ಯಜ್ಞಾನಗೋಡೀ । ಭಕ್ತಿಪ್ರೇಮಾಚೀ ಆವಡೀ । ತೇ ಉದ್ಧವಾಚಿಕಡೇ ರೋಕಡೀ । ದಿಸತೇ ಗಾಢೀ ಕೃಷ್ಣಾಚೀ ॥೯೬॥ ಭಕ್ತಿಪ್ರೇಮಾಚಾ ಕೃಷ್ಣಚಿ ಭೋಕ್ತಾ । ಕೃಷ್ಣಕೃಪಾ ಕಳಲೀಸೇ ಭಕ್ತಾ । ಹೇ ಅನಿರ್ವಚನೀಯ ಕಥಾ । ನ ಯೇ ಬೋಲತಾ ಬೋಲಾಸೀ ॥೯೭॥ ಕೃಷ್ಣ ಉದ್ಧವಾಸೀ ಮ್ಹಣೇ ಆತಾ । ಸಾವಧೂ ಹೋಈಗಾ ಸರ್ವಥಾ । ಪುಢಾರೀ ಪರಿಯೇಸೀ ಕಥಾ । ಜೇ ಭಕ್ತಿಪಥಾ ಉಪಯೋಗೀ ॥೯೮॥ ಸರ್ವ ಕರ್ಮೇ ಮದರ್ಪಣ । ಫಳತ್ಯಾಗೇ ನ ಕರವೇ ಜಾಣ । ತರೀ ಅತಿಸೋಪೇ ನಿರೂಪಣ । ಪ್ರೇಮಲಕ್ಷಣ ಸಾಂಗೇನ ॥೯೯॥

ಶ್ರದ್ಧಾಲುರ್ಮೇ ಕಥಾಃ ಶೃಣ್ವನ್‌ಸುಭದ್ರಾ ಲೋಕಪಾವನೀಃ । ಗಾಯನ್ನನುಸ್ಮರನ್ಕರ್ಮ ಜನ್ಮ ಚಾಭಿನಯನ್ಮುಹುಃ ॥೨೩॥

ಅರ್ಥ :- ನನ್ನ ಕಥೆಯು ಅತಿಶಯ ಕಲ್ಯಾಣಕಾರಕವು ಮತ್ತು ಎಲ್ಲರನ್ನೂ ಪಾವನಗೊಳಿಸುವುದಾಗಿದೆ. ಅತ್ಯಂತ ದೃಢ ಶ್ರದ್ಧೆಯಿಂದ ಈ ಕಥೆಯ ಶ್ರವಣವನ್ನು ಮಾಡಬೇಕು. ಮತ್ತು ಅಭಿನಯದೊಂದಿಗೆ ಕಥೆಯನ್ನು ವ್ಯಕ್ತ ಮಾಡಬೇಕು.

ಕರಿತಾ ಮಾಝೀ ಕಥಾ ಶ್ರವಣ । ಕಾಳಾಸೀ ರಿಗಮೂ ನಾಹೀ ಜಾಣ । ಇತರಾಂಚಾ ಪಾಡೂ ಕೋಣ । ಕರ್ಮಬಂಧನ ತೇಥೇ ಕೈಚೇ ॥೨೦೦॥

ಆಗ ಶ್ರೋತೃಗಳವರು ಹೀಗೆ ನುಡಿದರು, ನಿಲ್ಲಿರಿ; ಯಾವ ಭಕ್ತಿಪ್ರೇಮದ ನಿರೂಪಣೆಯಿಂದ ಆನಂದವಾಗುವುದು. ಅಂದ ಮೇಲೆ ಈ ವಿಷಯಕ್ಕೆ ಹೀಗೆ ಹೇಳುವುದು ಯೋಗ್ಯವಾಗಲಾರದು. ಈ ಯಾವ ಭಕ್ತಿ ಪ್ರೇಮದ ರಹಸ್ಯವು ಅಮೃತಮಧುರವಾಗಿರುವುದು ॥೮೯॥ ಈ ಯಾವ ಭಾಗವತವು ಮೊದಲೇ ಉತ್ತಮ ಗ್ರಂಥವಾಗಿರುವುದು. ಇದರಲ್ಲಿ ಅತಿ ಉಚ್ಚವಾದ ಭಕ್ತಿ ಪ್ರೇಮದ ವರ್ಣನೆಯನ್ನು ಮಾಡಲಾಗಿದೆ. ಇದರಲ್ಲಿ ಪರಬ್ರಹ್ಮವೇ ಪ್ರಗಟವಾದಂತೆ ತೋರುವುದು. ನಮ್ಮ ಸರ್ವ ಚಿತ್ತ ವೃತ್ತಿಯು ಶಾಂತವಾಗಿದೆ ॥೯೦॥ ಅದಕ್ಕಾಗಿ ಶ್ಲೋಕದ ಸಂಬಂಧ ಮುರಿದು ಕಥೆಯ ಭಾಗವು ಬೇರೆಯಾಯಿತೆಂದು ವಿನಂತಿ ಮಾಡಿಕೊಳ್ಳುವ ಯಾವ ಕಾರಣವೂ ಉಳಿದುಕೊಂಡಿಲ್ಲ. ಏಕೆಂದರೆ ನಾವೂ ಸಹ ಶ್ರೀಕೃಷ್ಣನ ಪ್ರೇಮದಲ್ಲಿ ತಲ್ಲೀನರಾಗಿದ್ದೇವೆ ॥೯೧॥ ಈ ಯಾವ ನಿಮ್ಮ ಅತ್ಯಂತ ಜೇವ್ಹಾಳದ, ಭಕ್ತಿ ಪ್ರೇಮದ ನಿರೂಪಣೆಯನ್ನು ಕೇಳಿ ಶ್ರವಣ ಸುಖವು ಉಕ್ಕೇರಿ ಬಂದಿದೆ. ಇದು ಮುಗಿಯಬೇಕೆಂಬ ಬಯಕೆಯೂ ಆಗುತ್ತಿಲ್ಲ. ಆದ್ದರಿಂದ ಈ ಪ್ರೇಮದ ಕಥೆಯು ಹೀಗೆಯೇ ಮುಂದುವರೆಯಲಿ ॥೯೨॥ ಪ್ರೇಮಳ ಭಕ್ತರ ಪ್ರೇಮಳ ಕಥೆಯನ್ನು ವರ್ಣಿಸುತ್ತಿರುವಾಗ ಶ್ರೀಕೃಷ್ಣ ಮತ್ತು ಉದ್ಧವನು ಏಕರೂಪವಾಗಿ ಪರಸ್ಪರರ ಬಿಗಿಯಾದ ಆಲಿಂಗನವನ್ನು ಶ್ರೀಕೃಷ್ಣನು ಬಿಡಿಸಿಕೊಂಡನು ॥೯೩॥ ಶ್ರೀಕೃಷ್ಣನು ಹೀಗೆ ಹೇಳಿದನು ; ಇದು ಸರ್ವಥಾ ಅನುಚಿತವಾಗಿರುವುದು. ಕಾರಣ ಉದ್ಧವನ ಮತ್ತು ನನ್ನ ಐಕ್ಯವಾದರೆ ಈ ಯಾವ ಪ್ರೇಮದ ಕಥೆಯನ್ನು ಪ್ರೀತಿಯಿಂದ ಕೇಳುವ ಶ್ರೋತೃ ಯಾರಿರುವರು? ॥೯೪॥ ನನ್ನ ಭಕ್ತಿ ಪ್ರೇಮದ ವಿಸ್ತಾರವನ್ನು ಮಾಡಲು ನನ್ನ ಸಖನಾದ ಉದ್ಧವನೊಬ್ಬನೇ ಇರುವನು. ಆದ್ದರಿಂದ ಆತ್ಮಜ್ಞಾನದ ಬೋಧೆಯನ್ನು ಮಾಡಿ ಆತನನ್ನು ಬ್ರಹ್ಮಶಾಪದಿಂದ ಮುಕ್ತ ಮಾಡಬೇಕಾಗಿದೆ ॥೯೫॥ ಗುಹ್ಯಜ್ಞಾನದ ಸರ್ವಪ್ರಕಾರದ ಆನಂದ, ಹಾಗೆಯೇ ಶ್ರೀಕೃಷ್ಣನ ನಿಃಸ್ವಾರ್ಥ ಭಕ್ತಿ ಪ್ರೇಮದ ಪೂರ್ಣ ಪ್ರೀತಿಯು ಉದ್ಧವನಲ್ಲಿ ದೃಢವಾಗಿ ಸ್ಥಾಪಿತವಾಗಿರುವುದು ತೋರುತ್ತಿತ್ತು ॥೯೬॥ ಭಕ್ತಿ ಪ್ರೇಮದ ಭೋಕ್ತನು ಒಬ್ಬ ಶ್ರೀಕೃಷ್ಣನೇ ಇರುವನು. ಶ್ರೀಕೃಷ್ಣನ ಕೃಪೆಯು ಭಕ್ತರಿಗೆ ಮಾತ್ರ ತಿಳಿಯುವುದು. ಇದು ಅನಿರ್ವಚನೀಯ ಮಾತಾಗಿರುವುದು. ಇದನ್ನು ಶಬ್ದದಿಂದ ಹೇಳಲು ಬರುವುದಿಲ್ಲ ॥೯೭॥ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು; ಈಗ ನೀನು ಸಾವಧನಾಗು, ಭಕ್ತಿ ಮಾರ್ಗಕ್ಕೆ ಉಪಯೋಗವಾಗುವಂತಹ ಮುಂದಿನ ಕಥೆಯನ್ನು ಶಾಂತತೆಯಿಂದ, ಏಕಾಗ್ರಚಿತ್ತದಿಂದ ಶ್ರವಣ ಮಾಡು ॥೯೮॥ ಫಲದ ಅಪೇಕ್ಷೆಯನ್ನು ಬಿಟ್ಟು ಸರ್ವ ಕರ್ಮಗಳನ್ನು ನನಗೆ ಅರ್ಪಿಸುವುದಾಗದಿದ್ದರೆ, ಅದಕ್ಕಿಂತಲೂ ಸುಲಭವಾದ ಪ್ರೇಮಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು ॥೯೯॥

ನನ್ನ ಕಥೆಯನ್ನು ಕೇಳುತ್ತಿರಲು ಅಲ್ಲಿ ಕಾಲನು ಬರಲು ಶಕ್ಯವಿಲ್ಲ. ಅಂದಮೇಲೆ ಅಲ್ಲಿ ಇತರರ ಯಾವ ಪಾಡು? ಅಲ್ಲಿ ಕರ್ಮಬಂಧನವಾದರೂ ಹೇಗೆ ಹುಟ್ಟಿಕೊಳ್ಳುವುದು? ॥೨೦೦॥

ಜೋ ಹರಿಕಥೇನೇ ಗೇಲಾ ಕ್ಷಣ । ತೋ ಕಾಳಾಸೀ ನವ್ಹೇ ಪ್ರಾಶನ । ಕಾಳಸಾರ್ಥಕತಾ ತ್ಯಾನಾಂವ ಜಾಣ । ಜೇ ಶ್ರದ್ಧಾಶ್ರವಣ ಹರಿಕಥಾ ॥೨೦೦॥ ಪರಿಸ ಕಥೇಚೇ ಮಹಿಮಾನ । ಶ್ರದ್ಧಾಯುಕ್ತ ಕರಿತಾ ಶ್ರವಣ । ತಿಹೀ ಲೋಕೀಂಚ ದೋಷದಹನ । ಅಕ್ಷರೇ ಜಾಣ ಹೋತಸೇ॥೨೦೧॥ ಐಕ ಶ್ರದ್ಧೇಚೇ ಲಕ್ಷಣ । ಕರಿತಾ ಹರಿಕಥಾಶ್ರವಣ । ಜ್ಯಾಚೇ ಅರ್ಥಾರೂಢಮನ । ಶ್ರದ್ಧಾಶ್ರವಣ ತ್ಯಾನಾಂವ ॥೨೦೨॥ ಶ್ರವಣ ಐಕೋನಿ ನಾಸ್ತಿಕ । ದೇವೋಚಿ ನಾಹೀ ಮ್ಹಣತೀ ದೇಖ । ಆಹೇ ಮ್ಹಣತೀ ತೇ ಪೋಟವಾಈಕ । ಆಮ್ಹಾ ಸೀ ನಿಃಶೇಖ ಠಾಕೇನಾ ॥೨೦೩॥ ಯಾ ನಾಸ್ತಿಕಾ ದೇವೋನಿ ತಿಳೋದಕ । ಜ್ಯಾಚೇ ವಾಢಲೇ ಆಸ್ತಿಕ್ಯ ದೇಖ । ಶ್ರದ್ಧಾ ತ್ಯಾನಾಂವ ಅಲೋಲಿಕ । ಅಗಾಧ ಸುಖಿ ತೀಮಾಜೀ ॥೨೦೪॥ ಶ್ರವಣೀ ಧ್ಯಾನೀ ಅಂತರಾಯ । ಲಯ ವಿಕ್ಷೇಪ ಕಷಾಯ । ಕಾ ರಸಸ್ವಾದುಹೀಹೋಯ । ಹೇ ಚಾರೀ ಅಪಾಯ ಚುಕವಾವೇ ॥೨೦೫॥ ಐಕತಾಂಹೀ ಹರಿಕಥಾ । ವಿಷಯಚಿಂತನೀ ಗೋಡೀ ಚಿತ್ತಾ । ತೇ ಶ್ರದ್ಧಾ ನವ್ಹೇ ಗಾ ಸರ್ವಥಾ । ಮುಖ್ಯವಿಕ್ಷೇಪತಾ ತೀ ನಾಂವ ॥೨೦೬॥ ಹಾವಭಾವ ಕಟಾಕ್ಷಗುಣ । ಸುರತಕಾಮನಿರೂಪಣ । ತೇಥ ಜ್ಯಾಚೇ ಶ್ರದ್ಧಾಶ್ರವಣ । ರಸಸ್ವಾದನ ತ್ಯಾ ನಾಂವ ॥೨೦೭॥ ಹರಿಕಥೇಪಾಶೀ ಬೈಸಲಾ ದಿಸೇ । ಪರೀ ಕಥೇಪಾಶೀ ಮನಹೀ ನಸೇ । ಚಿತ್ತ ಭಂವೇ ಪಿಸೇ ಜೈಸೇ । ತೋ ಮರ್ಕಟವೇಷೇ ವಿಕ್ಷೇಪು ॥೨೦೮॥ ನಾತರೀ ನಾನಾ ಉದ್ವೇಗೇ । ಐಕತಾ ಕಥಾ ಮನೀ ನ ಲಗೇ । ಕಾ ಕಥೇಮಾಜೀ ಝೋಂಪ ಲಾಗೇ । ತೋ ಜಾಣಾವಾ ವೇಗೇ ಲಯವಿಕ್ಷೇಪೂ ॥೨೦೯॥ ಶ್ರವಣೀ ಧ್ಯಾನೀ ಬೈಸಲ್ಯಾಪಾಠೀ । ಸಗುಣ ನಿರ್ಗುಣ ಕಾಂಹೀ ನುಠೀ । ನಿಳೇ ಪಿಂವಳೇ ಪಡೇದಿಠೀ । ಗುಣಕ್ಷೋಭ ತ್ರಿಪುಟೀ ಕಷಾಯ ॥೨೧೦॥ ಶ್ರವಣೀ ಧ್ಯಾನೀ ಹೇ ಅವಗುಣ । ತೈಸಾಚ ತ್ರಿವಿಧ ಪ್ರೇಮಾಜಾಣ । ತೋ ವೋಳಖತೀ ವಿಚಕ್ಷಣ । ಐಕ ಲಕ್ಷಣ ಸಾಂಗೇನ ॥೨೧೧॥ ಮಹಾವೀರಾಂಚೇ ಶೌರ್ಯಪಣ । ಐಕೋನಿ ಯುದ್ಧ ದಾರುಣ । ಅತ್ಯಂತ ಹರಿಖೇ ಉಲ್ಹಾಸೇ ಮನ । ತೋ ಪ್ರೇಮಾ ಜಾಣ ರಾಜಸ ॥೨೧೨॥ ದುಃಖಶೋಕಾಂಚೀ ಅವಸ್ಥಾ । ಕಾ ಗೇಲ್ಯಾಮೇಲ್ಯಾಂಚೀ ವಾರ್ತಾ । ಅತ್ಯಂತ ವಿಲಾಪಾಚೀ ಕಥಾ । ಜ್ಯಾಸೀ ಐಕತಾ ನ ಸಂಠೇ ॥೨೧೩॥

ಹರಿಕಥೆಯನ್ನು ಮಾಡುತ್ತಿರಲು ಆಗ ಹೋಗುವ ಒಂದು ಕ್ಷಣವನ್ನು ಕಾಲನೂ ಸಹ ಗ್ರಾಸಿಸಲಾರನು. ಅದಕ್ಕಾಗಿ ಹರಿಕಥೆಯನ್ನು ಶ್ರದ್ಧೆಯಿಂದ ಶ್ರವಣ ಮಾಡಲು ತಮ್ಮ ಆ ವೇಳೆಯು ಸಾರ್ಥಕವಾಯಿತೆಂದು ತಿಳಿಯಬೇಕು ॥೨೦೦॥ ಈಗ ಕಥೆಯ ಮಹಾತ್ಮ್ಯ ಹೇಳುವೆನು, ಕೇಳು. ಶ್ರದ್ಧಾಯುಕ್ತ ಅಂತಃಕರಣದಿಂದ ಕಥೆಯನ್ನು ಶ್ರವಣ ಮಾಡಲು ಕಥೆಯಲ್ಲಿನ ಪ್ರತಿಯೊಂದು ಅಕ್ಷರಗಳಿಂದ ಮೂರು ಲೋಕಗಳಲ್ಲಿನ ಪಾಪಗಳು ಭಸ್ಮವಾಗುವುವು ॥೨೦೧॥ ಈಗ ಶ್ರದ್ಧೆಯ ಲಕ್ಷಣವನ್ನೂ ಹೇಳುವೆನು. ಅದನ್ನೂ ಸಹ ನೀನು ಕೇಳು. ಹರಿಕಥೆಯ ಶ್ರವಣವನ್ನು ಮಾಡುತ್ತಿರಲು ಯಾರ ಮನವು ಅದರ ಅರ್ಥದತ್ತ ನಟ್ಟಿಕೊಂಡರೆ, ಅದರ ಹೆಸರು ಶ್ರದ್ಧಾಯುಕ್ತ ಶ್ರವಣವೆಂದು ಹೇಳುವರು ॥೨೦೨॥ ಹರಿಕಥೆಯ ಶ್ರವಣವನ್ನು ಮಾಡಿ ನಾಸ್ತಿಕ ಜನರು ಈ ಜಗತ್ತಿನಲ್ಲಿಯೇ ದೇವರೇ ಇಲ್ಲವೆಂದು ಹೇಳುವರು. ದೇವರು ಇದ್ದಾನೆ ಎಂದು ಹೇಳುವ ಜನರು ಕೇವಲ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುವವರಾಗಿರುವರು. ಅವರಲ್ಲಿ ಸ್ವಲ್ಪವೂ ವಿಶ್ವಾಸವು ನಮ್ಮದು ಇರುವುದಿಲ್ಲ ॥೨೦೩॥ ಈ ಪ್ರಕಾರದ ನಾಸ್ತಿಕರು ಹೇಳುವಿಕೆಗೆ ನೀರನ್ನು ಬಿಟ್ಟು, ಯಾರಲ್ಲಿ ಆಸ್ತಿಕ್ಯ ಬುದ್ಧಿಯು ಬೆಳೆಯುತ್ತ ಸಾಗುವುದೋ, ಅದಕ್ಕೆ ಮಾತ್ರ ಶ್ರೇಷ್ಠಶ್ರದ್ಧೆ ಎಂದು ಹೇಳುವರು. ಈ ಶ್ರದ್ಧೆಯಲ್ಲಿ ಅಪ್ರತಿಮ ಸುಖವು ತುಂಬಿಕೊಂಡಿರುವುದು ॥೨೦೪॥ ಶ್ರವಣದಲ್ಲಿ ಅಥವಾ ಧ್ಯಾನದಲ್ಲಿ ಲಯ, ವಿಕ್ಷೇಪ, ಕಷಾಯ ಮತ್ತು ರಸಸ್ವಾದ ಇವುಗಳಿಂದ ವಿಘ್ನಗಳುಂಟಾಗುವುವು. ಆದ್ದರಿಂದ ಈ ನಾಲ್ಕೂ ಅಪಾಯಗಳನ್ನು ತಪ್ಪಿಸಬೇಕು ॥೨೦೫॥ ಹರಿಯ ಕಥೆಯನ್ನು ಕೇಳುವಾಗಲೂ ಸಹ ಮನಸ್ಸಿಗೆ ವಿಷಯ ಚಿಂತನದಲ್ಲಿ ಪ್ರೀತಿಯಾಗುತ್ತಿದ್ದರೆ ಅದು ಮೂಲತಃ ಶ್ರದ್ಧೆಯೇ ಅಲ್ಲ. ಮುಖ್ಯವಾಗಿ ಇದೇ ವಿಕ್ಷೇಪವಾಗಿರುವುದು ॥೨೦೬॥ ಸ್ತ್ರೀಯರ ಹಾವಭಾವಗಳ ಮತ್ತು ನೇತ್ರ ಕಟಾಕ್ಷಗಳ ವರ್ಣನೆ ಮತ್ತು ಶೃಂಗಾರ ಚೇಷ್ಟೆಗಳ ವರ್ಣನೆಗಳನ್ನು ಕೇಳುವ ವಿಷಯಗಳಲ್ಲಿ ಇರುವ ಆ ಯಾವ ಆಸಕ್ತಿಯೇ ರಸಸ್ವಾದವಾಗಿರುವುದು ॥೨೦೭॥ ಅಕಸ್ಮಾತ್ತಾಗಿ ಶಾಂತರೀತಿಯಿಂದ ಹರಿಕಥೆಯನ್ನು ಕೇಳಲು ಕುಳಿತಿದ್ದು ಕಂಡುಬರುವುದು ನಿಜ, ಆದರೆ ಆತನ ಮನಸ್ಸು ಕಥೆಯದತ್ತ ಇರುವುದೇ ಇಲ್ಲ. ಆತನ ಮನವು ಹುಚ್ಚನಂತೆ ಎಲ್ಲಿಯೋ ಅಲೆದಾಡುತ್ತಿರುವುದು. ಇದಕ್ಕೆ ಮರ್ಕಟರೂಪ ವಿಕ್ಷೇಪವೆನ್ನುವರು ॥೨೦೮॥ ಪ್ರಪಂಚದಲ್ಲಿನ ಅನೇಕ ಉದ್ವೇಗಗಳ ವಿಚಾರಗಳು ಸತತವಾಗಿ ಮನದಲ್ಲಿ ಹುಟ್ಟುತ್ತಿರುವುದರಿಂದ ಅವನ ಲಕ್ಷವು ಕಥೆಯಲ್ಲಿ ನಿಲ್ಲುವುದಿಲ್ಲ. ಕಥೆಯನ್ನು ಕೇಳುತ್ತಿರುವಾಗ ನಿದ್ರೆಯು ಬರುತ್ತಿರುವುದು. ಇದಕ್ಕೆ ಲಯ ವಿಕ್ಷೇಪವೆನ್ನುವರು ॥೨೦೯॥ ಕಥೆಯನ್ನು ಶ್ರವಣ ಮಾಡುತ್ತಿರಲು ಅಥವಾ ಧ್ಯಾನವನ್ನು ಮಾಡುತ್ತಿರಲು ಸಗುಣ ಅಥವಾ ನಿರ್ಗುಣ ರೂಪವು ಮನದಲ್ಲಿ ನಿರ್ಮಾಣವಾಗದೇ, ನೀಲಿ, ಹಳದಿ ಬಣ್ಣಗಳು ಮಾತ್ರ ಕಣ್ಣುಂದೆ ಕಾಣುತ್ತಿರುವವು. ಇದು ಮೂರು ಗುಣಗಳ ಕ್ಷೋಭದ ಮಿಶ್ರಣವಾಗಿರುವುದು. ಇದಕ್ಕೇನೇ ಕಷಾಯವೆಂದು ಹೇಳುವರು ॥೨೧೦॥ ಶ್ರವಣ ಮತ್ತು ಧ್ಯಾನ ಇವುಗಳಲ್ಲಿ ಹೇಗೆ ದೋಷಗಳಿರುವುವೋ, ಅದರಂತೆಯೇ ಪ್ರೇಮಗಳಲ್ಲಿಯೂ ಮೂರು ಪ್ರಕಾರಗಳಿರುವುವು. ಈ ಮೂರು ಪ್ರಕಾರಗಳನ್ನು ಚತುರ ಜನರು ತಿಳಿದಿರುವರು. ಅವುಗಳ ಲಕ್ಷಣವನ್ನು ಈಗ ಹೇಳುವೆನು, ಏಕಾಗ್ರ ಚಿತ್ತದಿಂದ ಕೇಳು ॥೨೧೧॥ ಮಹಾವೀರನ ರಣರಂಗದಲ್ಲಿನ ಅವನ ಪರಾಕ್ರಮವನ್ನು ಮತ್ತು ಭಯಾನಕ ಯುದ್ಧದ ವರ್ಣನೆಯನ್ನು ಕೇಳಿ ಮನದಲ್ಲಿ ಸುಖದ ತರಂಗಗಳು ಹುಟ್ಟುವುವು. ಇದಕ್ಕೇನೇ ರಾಜಸಪ್ರೇಮವೆನ್ನುವರು ॥೨೧೨॥ ಶೋಕದ ಅಥವಾ ದುಃಖದ ಸ್ಥಿತಿಗತಿಯನ್ನು ಹಾಗೆಯೇ ಹೋದವನ, ಸತ್ತವನ ವಾರ್ತೆಯನ್ನು ಅಥವಾ ಶೋಕಮಯ ಕಥೆಯನ್ನು ಕೇಳಲು ಯಾವನಿಗೆ ಸಹಿಸುವುದಾಗುವುದಿಲ್ಲ ॥೨೧೩॥

ನೇತ್ರೀ ಅಶ್ರೂಂಚಿಯಾ ಧಾರಾ । ಸ್ಫುಂದನೇ ಕಾಂಪೇ ಥರಥರಾ । ಪ್ರೇಮವಿಲಾಪ ಅವಸರಾ । ತೋ ಜಾಣ ಖರಾ ತಾಮಸೂ ॥೭೧೫॥ ಸಗುಣಮೂರ್ತೀಚೀ ಸಂಪದಾ । ಶಂಖ ಚಕ್ರ ಪದ್ಮ ಗದಾ । ಪೀತಾಂಬರಧಾರೀ ಗೋವಿಂದಾ । ಐಕೋನಿ ಆನಂದಾ ಜೋ ಭರೇ ॥೭೧೬॥ ನೇತ್ರೀ ಆನಂದಜೀವನ । ಹೃದಯೀ ನ ಸಂಠೇ ಸ್ಫುಂದನ । ಕೃಷ್ಣಮಯ ಜಾಲೇ ಮನ । ತೋ ಪ್ರೇಮಾ ಜಾಣ ಸಾತ್ತ್ವಿಕ ॥೭೧೭॥ ಯಾವರೀ ಜೋ ಪ್ರೇಮಾ ಚೌಥಾ । ಅತರ್ಕ್ಯ ತರ್ಕೇನಾ ಸರ್ವಥಾ । ಉದ್ಧವಾ ತೂ ಮಜಲಾಗೀ ಪಢಿಯಂತಾ । ತೋಹೀ ಆತಾ ಸಾಂಗೇನ ॥೭೧೮॥ ತುಝ್ಯಾ ಭಾವಾರ್ಥಾಚೀ ಅವಸ್ಥಾ ಮೋಠೀ । ತೇ ಬೋಲವೀತೇ ಗುಹ್ಯ ಗೋಠೀ । ತುಜವೇಗಳಾ ಪಾಹತಾ ದೃಷ್ಟೀ । ಅಧಿಕಾರೀ ಸೃಷ್ಟೀ ದಿಸೇನಾ ॥೭೧೯॥ ಶ್ರೀಕೃಷ್ಣ ಮ್ಹಣೇ ಸಾವಧಾನ । ಐಕೋನಿ ನಿರ್ಗುಣಶ್ರವಣ । ಜ್ಯಾಚೇ ಚಿನ್ಮಾತ್ರೀ ಬುಡೇ ಮನ । ಉನ್ಮಜ್ಜನ ಹೋಊ ನೇಣೇ ॥೭೨೦॥ ಜೇವೀ ಕಾ ಸೈಂಧವಾಚಾ ಖಡಾ । ಪಡಲಾ ಸಿಂಧೂಮಾಜಿವಡಾ । ತೋ ಝಾಲಾ ಸಿಂಧೂಚಿಯೇವಢಾ । ತೇವೀ ತೋ ಧಡಪುಡಾ ಬ್ರಹ್ಮ ಹೋಯ ॥೭೨೧॥ ಚಿತ್ತಚೈತನ್ಯಾ ಪಡತಾ ಮಿಠೀ । ಸುಟತಾ ಲಿಂಗದೇಹಾಚೀ ಗಾಂಠೀ । ನೇತ್ರೀ ಅಶ್ರೂಂಚಾ ಪೂರ ದಾಟೇ । ರೋಮಾಂಚ ಉಠೀ ಸರ್ವಾಂಗೀ ॥೭೨೨॥ ಜೀವಭಾವಾಚೀ ದಶಾ ಆಟೇ । ಅನಿವಾರ ಬಾಷ್ಪ ಕಂಠೀ ದಾಟೇ । ಕಾಂಹೀ ಕೇಲ್ಯಾ ಶಬ್ದ ನ ಫುಟೇ । ಪೂರು ಲೋಟೇ ಸ್ವೇದಾಚಾ ॥೭೨೩॥ ನೇತ್ರ ಝಾಲೇ ಉನ್ಮೀಲಿತ । ಪುಂಜಾಳಲೇ ಜೇಥೀಚೇ ತೇಥ । ವಿಸ್ಮಯಾಚೇ ಭರತೇ ಯೇತ । ವೋಸಂಡತ ಸ್ವಾನಂದೇ ॥೭೨೪॥ ಹಾ ಜಾಣ ಪಾ ಪ್ರೇಮಾ ಚೌಥಾ । ಉತ್ತಮ ಭಾಗವತ ಅವಸ್ಥಾ । ತುಜ ಮ್ಯಾ ಸಾಂಗೀತಲೀ ತತ್ತ್ವತಾ । ಇಚಾ ಜಾಣತಾ ಮೀ ಏಕೂ ॥೭೨೫॥ ನಿರ್ಗುಣೀ ಜೋ ಪ್ರೇಮಾ ಜಾಣ । ತೇ ಶೋಧಿತಸತ್ತ್ವಾಚೇ ಲಕ್ಷಣ । ತೇ ಮೀ ಜಾಣೇ ಉಣಖೂಣ । ಕಾ ಬ್ರಹ್ಮಸಂಪನ್ನ ಜಾಣತೀ ॥೭೨೬॥ ಉದ್ಧವಾ ಶ್ರದ್ಧಾಯುಕ್ತ ಶ್ರವಣ । ತೇಣೇ ಯೇವಢೀ ಪ್ರಾಪ್ತೀ ಆಹೇ ಜಾಣ । ಶ್ರದ್ಧಾಶ್ರವಣಾಚೇ ಮಹಿಮಾನ । ಅತಿಗಹನ ತಿಹೀ ಲೋಕೀ ॥೭೨೭॥ ಸವಿವೇಕನೈರಾಶ್ಯ ವಕ್ತಾ । ಜೋಡಲ್ಯಾ ಶ್ರದ್ಧೇನೇ ಐಕಾವೀ ಕಥಾ । ಕಾ ಸಜ್ಞಾನ ಮೀನಲಿಯಾ ಶ್ರೋತಾ । ಸ್ವಯೇ ಕಥಾ ಸಾಂಗಾವೀ ॥೭೨೮॥

ಅಪುಗಳಲ್ಲಿನ ಒಂದೊಂದೇ ಪ್ರಸಂಗಗಳನ್ನು ಕೇಳುತ್ತಿರಲು ಕಣ್ಣುಗಳಿಂದ ಕಣ್ಣೀರಿನ ಹನಿಗಳು ಉದುರುತ್ತಿರುವುವು. ಬಿಕ್ಕಿ ಬಿಕ್ಕಿ ಅಳುತ್ತಿರಲು ಶರೀರವು ಥರಥರನೇ ನಡುಗುತ್ತಿರುವುದು. ಇದು ತಾಮಸಪ್ರೇಮವೆಂದು ತಿಳಿ ॥೭೧೫॥ ಪೀತಾಂಬರಧಾರೀ, ಶಂಖ,ಚಕ್ರ, ಗದಾ, ಪದ್ಮಧಾರಿಯಾದ ಸಗುಣ ಮೂರ್ತಿಯ ಸೌಂದರ್ಯಯುಕ್ತ ಗೋವಿಂದನ ವರ್ಣನೆಯನ್ನು ಕೇಳಿ ಯಾವನಿಗೆ ಪ್ರೇಮದ ಪೂರವು ಬರುವುದೋ ॥೭೧೬॥ ನೇತ್ರಗಳಿಂದ ಆನಂದಾಶ್ರೂಗಳು ಹರಿಯತೊಡಗುವುವು. ಅಂತಃಕರಣದಲ್ಲಿ ನಿರ್ಮಾಣಗೊಳ್ಳುವ ಬಿಕ್ಕಿ ಬಿಕ್ಕಿ ಅಳುವುದನ್ನು ತಡೆಯುವದಾಗುವುದಿಲ್ಲ. ಮತ್ತು ಮನವೆಲ್ಲವೂ ಶ್ರೀಕೃಷ್ಣರೂಪವಾಗಿಬಿಡುವುದು. ಇದು ಸಾತ್ವಿಕ ಪ್ರೇಮವಾಗಿರುವುದು ॥೭೧೭॥ ಇದಕ್ಕಿಂತಲೂ ನಾಲ್ಕನೆಯ ಪ್ರಕಾರದ ಪ್ರೇಮವು ಅತಿಶಯವಾಗಿ ಅಲೌಕಿಕವಾಗಿರುವುದು. ಸಹಜವಾಗಿ ಈ ಪ್ರೇಮದ ಕಲ್ಪನೆಯನ್ನು ಯಾರಿಗೂ ಮಾಡಲು ಬರುವುದಿಲ್ಲ. ಆದರೆ ಹೇ ಉದ್ಧವನೇ, ನೀನು ನನಗೆ ಅತ್ಯಂತ ಪ್ರಿಯನಾಗಿರುವೆ. ಆದ್ದರಿಂದ ನಾನು ನಿನಗೆ ಈ ಪ್ರೇಮವನ್ನೂ ಹೇಳುವೆನು ॥೭೧೮॥ ನಿನ್ನ ಭಕ್ತಿ ಪ್ರೇಮವು ಅತಿ ವಿಲಕ್ಷಣೆಯಾಗಿರುವುದು. ಆ ಯಾವ ಪ್ರೇಮದ ಬಲದಿಂದ ನನ್ನ ಹೃದಯದಿಂದ ಗುಹ್ಯ ಮಾತುಗಳು ಸಹಜವಾಗಿಯೇ ಹೊರಬರುತ್ತಿರುವುವು. ಸರ್ವ ಸೃಷ್ಟಿಯಲ್ಲಿ ನನಗೆ ನೀನೊಬ್ಬನೇ ಅಧಿಕಾರಿಯಾಗಿ ತೋರುತ್ತಿರುವೆ ॥೭೧೯॥ ಶ್ರೀಕೃಷ್ಣನು ಹೀಗೆ ನುಡಿದನು ; ಇದನ್ನು ನೀನು ಅತ್ಯಂತ ಏಕಾಗ್ರತೆಯಿಂದ ಕೇಳು. ನಿರ್ಗುಣ ಪರಬ್ರಹ್ಮನ ಸ್ವರೂಪ ವರ್ಣನೆಯನ್ನು ಶ್ರವಣ ಮಾಡಿ ಮನವು ಚಿತ್ಸ್ವರೂಪದಲ್ಲಿ ಮುಳುಗಿಹೋಗುವುದು. ಅದಕ್ಕೆ ಪುನಃ ದೇಹಭಾನಕ್ಕೆ ಬರುವ ಪ್ರಶ್ನೆಯೇ ಇರುವುದಿಲ್ಲ ॥೭೨೦॥ ಯಾವ ಪ್ರಕಾರವಾಗಿ ಉಪ್ಪಿನ ಹರಳು ಸಮುದ್ರದಲ್ಲಿ ಬೀಳಲು ಅದು ಸಮುದ್ರರೂಪವಾಗುವುದು. ಅದರಂತೆ ಭಕ್ತನು ಸಾಕ್ಷಾತ್ ಬ್ರಹ್ಮಸ್ವರೂಪನಾಗುವನು ॥೭೨೧॥ ಚಿತ್ತ ಮತ್ತು ಚೈತನ್ಯಗಳ ಭೇಟಿಯಾಯಿತೆಂದರೆ, ಲಿಂಗದೇಹದ ಗಂಟು ಬಿಚ್ಚುತ್ತದೆ. ನೇತ್ರಗಳಿಂದ ಆನಂದಾಶ್ರುಗಳು ಹರಿಯತೊಡಗುವುವು. ಸರ್ವಾಂಗದಲ್ಲಿ ರೋಮಾಂಚನಗಳು ಎದ್ದು ನಿಲ್ಲುವವು ॥೭೨೨॥ ಜೀವಭಾವದ ಅವಸ್ಥೆಯು ಮುಗಿದುಹೋಗುವುದು. ಕಂಠವು ಬಿಗಿದುಕೊಳ್ಳುವುದು. ಮುಖದಿಂದ ಶಬ್ದಗಳು ಬರುವುದಿಲ್ಲ. ಸರ್ವಾಂಗಕ್ಕೂ ಬೆವರು ಬರುವುದು ॥೭೨೩॥ ನೇತ್ರಗಳು ಅರ್ಧೋನ್ಮೀಲಿತವಾಗುವುವು. ಅವು ನಿಂತಲ್ಲೇ ನಿಂತುಬಿಡುವುವು. ವಿಸ್ಮಯಗಳು ತುಂಬಿ ಬರುವುವು ಮತ್ತು ಸ್ವಾನಂದವು ಉಕ್ಕಿ ಬರುವುದು ॥೭೨೪॥ ಇದು ನಾಲ್ಕನೆಯ ಪ್ರೇಮದ ಭಾಗವತ ಅವಸ್ಥೆಯಾಗಿರುವುದು. ನಿನಗಾಗಿಯೇ ನಾನು ಇದನ್ನು ಹೇಳಿರುವೆನು. ನಾನೊಬ್ಬನೇ ಈ ರಹಸ್ಯವನ್ನು ತಿಳಿದಿರುವೆನು ॥೭೨೫॥ ನಿರ್ಗುಣದಲ್ಲಿ ಹೀಗೆ ಪ್ರೇಮವು ನಿರ್ಮಾಣವಾಗುತ್ತದೆ. ಇದುವೇ ಶುದ್ಧ ಸತ್ವದ ಪ್ರೇಮ ಲಕ್ಷಣವಾಗಿರುವುದು. ಇದರ ಲಕ್ಷಣವನ್ನು ನಾನು ಅರಿಯುವೆನು. ಇಲ್ಲವೇ ಬ್ರಹ್ಮಜ್ಞಾನಿಗಳವರು ತಿಳಿದಿರುವರು ॥೭೨೬॥ ಹೇ ಉದ್ಧವನೇ, ಶ್ರದ್ಧಾಯುಕ್ತ ಅಂತಃಕರಣದಿಂದ ಶ್ರವಣವನ್ನು ಮಾಡಲು ಇಷ್ಟೊಂದು ಮಹಾಲಾಭವಾಗುವುದು. ಶ್ರದ್ಧೆಯಿಂದ ಶ್ರವಣ ಮಾಡಿದ ಮಹಾತ್ಮೆಯು ಮೂರು ಲೋಕಗಳಲ್ಲಿ ಅತಿ ದೊಡ್ಡದಾಗಿರುವುದು ॥೭೨೭॥ ವಿಚಾರವಂತ ಹಾಗೂ ನಿರಪೇಕ್ಷನಾಗಿರುವ ವಕ್ತಾ ಲಭಿಸಿದರೆ ಕಥೆಯನ್ನು ಶ್ರದ್ಧೆಯಿಂದ ಶ್ರವಣ ಮಾಡಬೇಕು. ಸಜ್ಞಾನ ಶ್ರೋತಾ ಲಭಿಸಿದರೆ ಈ ಕಥೆಯನ್ನು ಸ್ವತಃ ಹೇಳಬೇಕು ॥೭೨೮॥

ಜೈ ಶ್ರೋತಾ ವಕ್ತಾ ದೋನ್ಹೀ ನಾಹೀ । ತೈ ರಿಘಾವೇ ಮನಾಚ್ಯಾ ಠಾಯೀ । ಕಾ ಮಾಝೀ ಜನ್ಮಕರ್ಮೇ ಜೀ ಕಾಂಹೀ । ಏಕಲಾಹೀ ವಿಚಾರೀ ॥೭೨೯॥ ಸಾಂಡೂನಿ ವಿಷಯಾಂಚೀ ಆಸ । ಘಾಲೋನಿ ಕಳಿಕಾಳಾವರೀ ಕಾಂಸ। ಮಾಝ್ಯಾ ಕೀರ್ತನೀ ನ ಹೋನಿ ಉದಾಸ । ಅತಿ ಉಲ್ಹಾಸ ಕರಾವಾ ॥೭೩೦॥ ತ್ಯಜೂನಿಯಾ ಕಾಮಾಚೇ ಬೀಜ। ಸಾಂಡೂನಿ ಲೌಕಿಕಾಚೀ ಲಾಜ । ಕೀರ್ತನೀ ನಾಚಾವೇ ಭೋಜ । ಗರುಡಧ್ವಜ ಸ್ಮರೋನಿ ॥೭೩೧॥ ರಾಮಕೃಷ್ಣ ಹರಿ ಗೋವಿಂದ । ಐಶಿಯಾ ನಾಮಾಂಚೇ ಪ್ರಬಂಧ । ಗಾತಾ ನಾನಾ ಪದೇ ಛಂದಬಂಧ । ಕರಾವಾ ವಿನೋದ ಕೀರ್ತನೀ ॥೭೩೨॥ ಜೇಣೇ ಆತ್ಮತತ್ತ್ವ ಜೋಡೇ ಜೋಡೀ । ಐಶಿಯಾ ಪದಾಂಚೀ ಘಡಿಮೋಡೀ । ಕೀರ್ತನೀ ಗಾವೀ ಗಾ ಆವಡೀ । ಸಂತಪರವಡೀ ಬೈಸವೂನೀ ॥೭೩೩॥ ಶ್ರುತಿ ಮೃದಂಗ ಟಾಳ ಘೋಳ । ಮೇಳವೂನಿ ವೈಷ್ಣವಾಂಚಾ ಮೇಳ । ಕೀರ್ತನೀ ಕರಾವಾ ಗದಾರೋಳ । ಕಾಳವೇಳ ನ ಮ್ಹಣಾವಾ ॥೭೩೪॥ ದಶಮೀ ದಿಂಡೀ ಜಾಗರಣೇ । ಆಳಸ ಸಾಂಡೂನಿ ಗಾವೇ ವಾಣೇ । ಹಾವಭಾವೋ ದಾಖವಣೇ । ಕರ್ಮಸ್ಮರಣೇ ಮಾಝೇನಿ ॥೭೩೫॥ ಓಢೂನಿ ಧನುಷ್ಯಾಚೀ ವೋಢೀ । ತ್ರ್ಯಂಬಕ ಮೋಡಿಲೇ ಕಡಾಡೀ । ಮೀ ರಾಮ ಮ್ಹಣೋನಿ ಹಾಂಕ ಫೋಡೀ। ಜೈತಾಚೀ ಗುಢೀ ಕೀರ್ತನೀ ॥೭೩೬॥ ಗೋವರ್ಧನ ಉಚಲಿಲಾ । ದಾವಾಗ್ನಿ ಪ್ರಾಶಿಯೇಲಾ । ತೋ ತೋ ವಿನ್ಯಾಸು ದಾವಿಲಾ । ಸೇತು ಬಾಂಧಿಲಾ ಅನುಕಾರೂ ॥೭೩೭॥ ಆಳಸ ದವಡೂನಿ ದೂರೀ । ಅಭಿಮಾನ ಘಾಲೋನಿಯಾ ಬಾಹೇರೀ । ಅಹರ್ನಿಶೀ ಕೀರ್ತನ ಕರೀ । ಗರ್ವ ನ ಧರೀ ಗಾಣಿವೇಚಾ ॥೭೩೮॥ ಗಾಣೀವ ಜಾಣೀವ ಶಹಾಣೀವ । ವೋವಾಳೂನಿ ಸಾಂಡಾವೇ ಸರ್ವ । ಸಪ್ರೇಮ ಸಾಬಡೀ , ಕಥಾಗೌರವ । ಸುಖ ಅಭಿನವ ತೇಣೇ ಮಜ ॥೭೩೯॥ ಗರ್ಜತ ನಾಮಾಚ್ಯಾ ಕಲ್ಲೋಳೀ । ನಾಮಾಸರಸೀ ವಾಜೇ ಟಾಳೀ । ಮಹಾಪಾತಕಾ ಜಾಲೀ ಹೋಳೀ । ತೇ ವೈಷ್ಣವಮೇಳೀ ಮೀ ಉಭಾ ॥೭೪೦॥ ಜೇ ಸುಖ ಕ್ಷೀರಸಾಗರೀ ನಸೇ । ಪಾಹತಾ ವೈಕುಂಠೀಹೀ ನ ದಿಸೇ । ತೇ ಸುಖ ಮಜ ಕೀರ್ತನೀ ಅಸೇ । ಕೀರ್ತನವಶೇ ಡುಲ್ಲತು ॥೭೪೧॥

ಇಂತಹ ಶ್ರೋತಾ - ವಕ್ತಾ ಇಬ್ಬರೂ ಇಲ್ಲದಿದ್ದರೆ, ಆಗ ತಾನು ಸ್ವತಃ ಮನದಲ್ಲಿ ಸೇರಿಕೊಂಡು ಚಿಂತನೆಯನ್ನು ಮಾಡುತ್ತಿರಬೇಕು. ನನ್ನ ಅವತಾರವನ್ನು ಮತ್ತು ಅವತಾರ ಕಾರ್ಯಗಳನ್ನು ಹೀಗೆ ಎಲ್ಲವನ್ನೂ ಒಬ್ಬನೇ ಪ್ರಸನ್ನ ಮನದಿಂದ ವಿಚಾರ ಮಾಡುತ್ತಿರಬೇಕು ॥೭೨೯॥ ಮನದಲ್ಲಿನ ವಿಷಯಗಳ ಆಸಕ್ತಿಯನ್ನು ಬಿಟ್ಟು ಬಿಡಬೇಕು. ಕಲಿಕಾಲನ ಮೇಲೆ ನಡುಕಟ್ಟಿ ನಿಲ್ಲಬೇಕು. ಹಾಗೂ ಅತ್ಯಂತ ಉಲ್ಹಾಸಭರಿತನಾಗಿ ಕೀರ್ತನೆಯನ್ನು ಮಾಡಬೇಕು. ಎಲ್ಲ ಪ್ರಕಾರಗಳ ಉದಾಸತನವನ್ನು ದೂರವಿಡಬೇಕು ॥೭೩೦॥ ಕಾಮದ ಬೀಜವನ್ನು ತ್ಯಜಿಸಬೇಕು. ಪ್ರಪಂಚಿಕರ ನಾಚಿಕೆಯನ್ನು ಬಿಟ್ಟು ಒಗೆಯಬೇಕು. ಶ್ರೀಕೃಷ್ಣನ ನಾಮವನ್ನು ಜಪಿಸುತ್ತಾ ಕೀರ್ತನದಲ್ಲಿ ಪ್ರೇಮದಿಂದ ನರ್ತಿಸಬೇಕು ॥೭೩೧॥ ರಾಮ-ಕೃಷ್ಣ-ಹರಿ-ಗೋವಿಂದ ಇತ್ಯಾದಿ ಈ ನಾಮಗಳ ಅನೇಕ ಅಭಂಗಗಳನ್ನು ಅನೇಕ ರೀತಿಗಳಲ್ಲಿ ರಚಿಸಿ ಕೀರ್ತನದಲ್ಲಿ ಆನಂದದಿಂದ ವಿನೋದ ಮಾಡಬೇಕು ॥೭೩೨॥ ಸಂತ ಸಮುದಾಯವನ್ನು ಮುಂದೆ ಕುಳ್ಳಿರಿಸಿ ಆತ್ಮಜ್ಞಾನವು ಪ್ರಕಟವಾಗುವ ರೀತಿಯಲ್ಲಿ ಪ್ರೇಮಳ ವಚನಗಳ ಭಿನ್ನ ಭಿನ್ನ ಪ್ರಕಾರವಾಗಿ ಕೀರ್ತನೆಯಲ್ಲಿ ಅತ್ಯಂತ ಪ್ರೇಮಪೂರ್ವಕವಾಗಿ ಹಾಡಬೇಕು ॥೭೩೩॥ ಮೃದಂಗ, ತಾಳ, ವೀಣೆ ಹೀಗೆ ವಾದ್ಯಗಳನ್ನು ಕೂಡಿಸಿ, ವೈಷ್ಣವರ ಮಂಡಳಿಯನ್ನು ಏಕತ್ರಗೊಳಿಸಿ ಕೀರ್ತನೆಯಲ್ಲಿ ಹರಿನಾಮದ ಮಹಾಘೋಷವನ್ನು ಮಾಡಬೇಕು. ಕಾಲ,ವೇಳೆಯದತ್ತ ಲಕ್ಷವನ್ನು ಕೊಡಬಾರದು ॥೭೩೪॥ ದಶಮಿಯ ದಿನದಂದು ದಿಂಡಿಯ ಜಾಗರಣೆಯನ್ನು ಮಾಡಿ, ಆಲಸ್ಯವನ್ನು ತೊರೆದು, ಕೀರ್ತನದಲ್ಲಿ ಹರಿನಾಮದ ಗಾಯನವನ್ನು ಮಾಡಬೇಕು. ನನ್ನ ಅವತಾರಗಳನ್ನು ಸ್ಮರಿಸಿಕೊಂಡು ಪ್ರಸಂಗಾನುಸಾರವಾಗಿ ಅವುಗಳಲ್ಲಿನ ಕಾರ್ಯಗಳನ್ನು ಹಾವಭಾವ ಮಾಡಿ ತೋರಿಸುತ್ತ ಹೇಳಬೇಕು ॥೭೩೫॥ ಶ್ರೀರಾಮನು ಧನುಷ್ಯದ ದಾರವನ್ನು ಎಳೆದು ಶಂಕರನ ಧನುಷ್ಯವನ್ನು ಹೇಗೆ ಮುರಿದು ಒಗೆದನು ಎಂಬ ವಿಷಯಕ್ಕೆ ಹಾವ ಭಾವ ಮಾಡಿ ತೋರಿಸಬೇಕು. ನಾನೇ ರಾಮನಾಗಿರುವೆ ಎಂದು ಹೀಗೆ ಹೇಳುತ್ತ, ಗರ್ಜನೆ ಮಾಡುತ್ತ ಕೀರ್ತನದಲ್ಲಿ ಆನಂದದ ಪತಾಕೆಯನ್ನೇ ಹಾರಿಸಬೇಕು ॥೭೩೬॥ ನಾನು ಗೋವರ್ಧನ ಪರ್ವತವನ್ನು ಹೇಗೆ ಎತ್ತಿ ಹಿಡಿದುಕೊಂಡೆನು, ದಾವಾಗ್ನಿಯನ್ನು ಯಾವ ಪ್ರಕಾರವಾಗಿ ಪ್ರಾಶನ ಮಾಡಿದೆನು ಎಂಬುವುದನ್ನು ಹಾವಭಾವದೊಂದಿಗೆ ತೋರಿಸುತ್ತ ಹೇಳಬೇಕು. ಶ್ರೀರಾಮನು ಸೇತುವೆಯನ್ನು ಹೇಗೆ ಕಟ್ಟಿದನು ಎಂಬುದನ್ನು ಸಹ ಅನುಕರಣೆಮಾಡಿ ತೋರಿಸಿ ಹೇಳಬೇಕು ॥೭೩೭॥ ಆಲಸ್ಯವನ್ನು ದೂರ ಮಾಡಿ, ಅಭಿಮಾನವನ್ನು ತ್ಯಜಿಸಿ, ಹಗಲು ರಾತ್ರಿಯನ್ನದೇ ಕೀರ್ತನೆಯನ್ನು ಮಾಡಬೇಕು. ನಾನೊಬ್ಬ ಉತ್ತಮ ಹಾಡುಗಾರನು ಎಂಬ ಅಭಿಮಾನವು ಇರಕೂಡದು ॥೭೩೮॥ ಹಾಡುವಿಕೆಯ ಪ್ರೌಢತನ, ನಾನು ತಿಳಿದವ ಜ್ಞಾನಿ ಎಂಬ ಅಭಿಮಾನ, ಮತ್ತು ಚತುರತನದ ಬಿಂದಾನ ಇವೆಲ್ಲವನ್ನೂ ನಿವಾಳಿಸಿ ಒಗೆಯಬೇಕು. ಶುದ್ಧ ಭಾವನೆಯಿಂದ ಮತ್ತು ಸಾದಾ ರೀತಿಯಲ್ಲಿ ಕಥೆಯ ಗೌರವವನ್ನು ಮಾಡಬೇಕು. ಇದರಿಂದ ನನಗೆ ಅತಿಶಯವಾಗಿ ಸುಖವಾಗುವುದು ॥೭೩೯॥ ನಾಮಸಂಕೀರ್ತನೆಯ ಘೋಷವನ್ನು ಮಾಡುತ್ತಿರಲು ಆ ನಾಮದ ಜೊತೆಯಲ್ಲಿ ಬಾರಿಸುತ್ತಿರುವ ತಾಳಗಳ ನಾದದಿಂದ ಮಹಾಪಾಪಗಳು ಸುಟ್ಟು ಭಸ್ಮವಾಗುವುವು ಮತ್ತು ನಾನು ಈ ವೈಷ್ಣವರ ಸಮುದಾಯದಲ್ಲಿ ಸ್ವತಃ ನಿಂತಿರುವೆನು ॥೭೪೦॥ ನನಗೆ ಕ್ಷೀರಸಾಗರದಲ್ಲಿಯೂ ಈ ಸುಖವು ದೊರೆಯುವುದಿಲ್ಲ. ವೈಕುಂಠದಲ್ಲಿಯೂ ಕೂಡ ಈ ಸುಖವು ತೋರುವುದಿಲ್ಲ. ಇಂತಹ ಯಾವ ಈ ಸುಖವು ನನಗೆ ಕೀರ್ತನದಲ್ಲಿ ಪ್ರಾಪ್ತವಾಗುತ್ತಿರುವುದು. ನಾನು ಕೀರ್ತನರಂಗದಲ್ಲಿ ತೂಗಾಡುತ್ತಿರುವೆನು ॥೭೪೧॥

ಮಜ ಸಪ್ರೇಮಾಚೀ ಆವಡೀಭಾರೀ । ಭಕ್ತ ಭಾವಾಚಿಯಾ ಕುಸರೀ । ಮೀಹೀ ಕೀರ್ತನೀ ನೃತ್ಯ ಕರೀ । ಛಂದತಾಲಾವರೀ ವಿನೋದೇ ॥೭೪೨॥ ಐಶಿಯಾ ಕೀರ್ತನಪರಿಪಾಟೀ । ಬುಡಲ್ಯಾ ಪ್ರಾಯಶ್ಚಿತ್ತಾಂಚ್ಯಾ ಕೋಟೀ । ಖುಂಟಲೀ ಯಮದೂತರಾಹಾಟೀ । ಕಾಢಿಲೀ ಕಾಂಟೀ ಪಾಪಾಚೀ ॥೭೪೩॥ ನಾಮಸ್ಮರಣಾಚ್ಯಾ ಆವಡೀ । ಲಾಜಲ್ಯಾ ಮಂತ್ರಬೀಜಾಂಚ್ಯಾ ಕೋಡೀ । ತಪಾದಿ ಸಾಧನೇ ಬಾಪುಡೀ । ಜಾಲೀ ವೇಡೀ ಹರಿನಾಮೇ ॥೭೪೪॥ ಐಕೋನಿ ಹರಿನಾಮಾಚಾ ಘೋಖ । ಯೋಗಯಾಗೀ ಲಪವಿಲೇ ಮುಖ । ಧಾಕೇ ಪಳಾಲೇ ವಿಷಯಸುಖ । ವಿರಾಲೇ ದೇಖ ಅಧರ್ಮ ॥೭೪೫॥ ಹರಿನಾಮಾಚ್ಯಾ ಕಡಕಡಾಟೀ । ದೋಷ ರಿಘಾಲೇ ದಿಕ್ಕಟೀ । ತೀರ್ಥಾಚೀ ಉತರಲೀ ಉಟೀ । ಕೀರ್ತನಕಸವಟೀ ಹರಿಪ್ರಿಯ ॥೭೪೬॥ ಮಾಝೇನಿ ಪ್ರೇಮೇ ಉನ್ಮತ್ತ ಹೋ ಊನೀ । ಆವಡೀ ಕೀರ್ತನ ಅನುದಿನೀ । ಮನಸಾ ವಾಚಾ ಕರ್ಮೇ ಕರೂನೀ । ಮಜವಾಂಚೂನೀ ನೇಣತೀ ॥೭೪೭॥

ಮದರ್ಥೇ ಧರ್ಮಕಾಮಾರ್ಥಾನಾಚರನ್ಮದಪಾಶ್ರಯಃ । ಲಭತೇ ನಿಶ್ಚಲಾಂ ಭಕ್ತಿಂ ಮಯ್ಯುದ್ಧವ ಸನಾತನೇ ॥೨೪॥

ಅರ್ಥ :- ನನ್ನನ್ನು ಆಶ್ರಯಿಸಿ ಧರ್ಮ, ಕಾಮ ಮತ್ತು ಅರ್ಥದ ಸೇವನೆ ಮಾಡಬೇಕು. ಹೀಗೆ ಯಾರು ವರ್ತಿಸುವರೋ ಆತನಿಗೆ ನನ್ನ ಅನನ್ಯ ಪ್ರೇಮದ ಭಕ್ತಿಯ ಪ್ರಾಪ್ತವಾಗುವುದು.

ಮಾಝೇ ಭಕ್ತ ಜೇ ಉತ್ತಮ । ತ್ಯಾಂಚಾ ಧರ್ಮ ಅರ್ಥ ಮೀಚಿ ಕಾಮ । ಮಜವೇಗಳಾ ಮನೋಧರ್ಮ । ಅನ್ಯಥಾ ಕರ್ಮ ಕರೂ ನೇಣೇ ॥೭೪೮॥ ಮಾಝೇ ಭಜನಿ ಉತ್ತಮ ಕರ್ಮ । ಮಜ ಅರ್ಪೇ ತೋ ಶುದ್ಧ ಧರ್ಮ । ಮಜ ಕಾಮಣೇ ಹಾ ಶುದ್ಧ ಕಾಮ । ಜ್ಯಾಚಾ ಆರಾಮ ಮಜಮಾಜೀ ॥೭೪೯॥ ವೇಂಚೂನಿಯಾ ನಾನಾ ಅರ್ಥ । ಸಂಗ್ರಹೋ ಕರಿತೀ ಪರಮಾರ್ಥ । ನಶ್ವರ ಅರ್ಥ ಜೇ ವಿತ್ತ । ತೇ ಮಾಝೇ ಭಕ್ತ ನ ಸಂಚಿತೀ ॥೭೫೦॥ ಜ್ಯಾಚೇ ಧನಾವರೀ ಚಿತ್ತ । ತೇ ಕೇವಳ ಜಾಣ ಅಭಕ್ತ । ತೇ ಜೇ ಜೇ ಕಾಂಹೀ ಭಜನ ಕರಿತ । ತೇ ದ್ರವ್ಯಾರ್ಥ ನಟನಾಟ್ಯ ॥೭೫೧॥ ಮನಸಾ ವಾಚಾ ಕರ್ಮೇ ಜಾಣ । ಜೇಥ ನಾಹೀ ಮದರ್ಪಣ । ತೇ ತೇ ದಾಂಭಿಕ ಭಜನ । ಕೇವಳ ಜಾಣ ಉದರಾರ್ಥ ॥೭೫೨॥ ಭಕ್ತೀಮಾಜೀ ವಿರುದ್ಧಪಣ । ವಿರುದ್ಧ ಧರ್ಮಾಚೇ ಲಕ್ಷಣ । ತೇಹೀ ಕರೀನ ನಿರೂಪಣ । ಸಾವಧಾನ ಅವಧಾರೀ ॥೭೫೩॥ ಮಾಝೇ ಭಜನ ಕರೂನಿ ಗೌಣ । ಜೋ ಕರೂ ರಿಘೇ ಧನಾರ್ಜನ । ಹೇ ಭಜನವಿರುದ್ಧ ಲಕ್ಷಣ । ಮುಖ್ಯ ಜಾಣ ಭಕ್ತಾಚೇ ॥೭೫೪॥

ಪ್ರೇಮಳ ಭಕ್ತರಲ್ಲಿ ನನಗೆ ಬಹು ಪ್ರೀತಿವಿರುವುದು. ಭಕ್ತರ ವಿವಿಧ ಪ್ರಕಾರದ ಭಕ್ತಿಯ ಕೌಶಲ್ಯಕ್ಕಾಗಿ ನಾನೂಕೂಡ ಕೀರ್ತನ ಛಂದದಲ್ಲಿ ತಾಳಕ್ಕೆ ತಕ್ಕಂತೆ ಆನಂದದಿಂದ ನರ್ತಿಸುವೆನು ॥೭೪೨॥ ಇಂತಹ ಪ್ರೇಮಮಯ ಕೀರ್ತನದಲ್ಲಿ ಕೋಟ್ಯಾವಧಿ ಪ್ರಾಯಶ್ಚಿತ್ತಗಳು ಮುಳುಗಿ ಹೋಗುವುವು. ಯಮದೂತರ ಬೆಳವಣಿಗೆಯು ಕುಂಠಿತವಾಗುವದು. ಪಾಪದ ಬೇಲಿಯು ಇಲ್ಲದಾಗುವುದು ॥೭೪೩॥ ನಾಮಸ್ಮರಣೆಯ ಪ್ರೀತಿಯಲ್ಲಿ ಕೋಟ್ಯಾವಧಿ ಬೀಜಮಂತ್ರಗಳು ಲಜ್ಜಾಸ್ಪದವಾಗುವುವು. ತಪಾದಿ ಸಾಧನೆಗಳಂತೂ ಹರಿನಾಮದಿಂದ ಹುಚ್ಚಾಗಿ ಹೋಗುವುವು ॥೭೪೪॥ ಹರಿನಾಮದ ಘೋಷವನ್ನು ಕೇಳಿ ಯೋಗ ಮಾರ್ಗವು ಮುಖ ತೋರಿಸದಂತಾಯಿತು. ವಿಷಯ ಸುಖವು ಅಂಜಿಕೊಂಡು ದೂರ ಓಡಿಹೋಯಿತು. ಅಧರ್ಮವು ತಾನು ಇದ್ದಲ್ಲೇ ಇದ್ದು ಕರಗಿ ಹೋಯಿತು ॥೭೪೫॥ ಹರಿನಾಮದ ಘನ ಗರ್ಜನೆಯನ್ನು ಕೇಳುತ್ತಲೇ ಸರ್ವ ಪ್ರಕಾರದ ದೋಷಗಳು ದಿಕ್ಕೆಟ್ಟು ಓಡಿಹೋದವು. ತೀರ್ಥಗಳ ಅಭಿಮಾನವು ಇಲ್ಲದಾಯಿತು. ಹೀಗೆ ಈ ಯಾವ ಪ್ರೇಮಮಯ ಕೀರ್ತನೆಯು ಶ್ರೀಹರಿಗೆ ಅತ್ಯಂತ ಪ್ರಿಯವಾಗಿರುವುದು ॥೭೪೬॥ ನನ್ನ ಪ್ರೇಮದ ಭರದಲ್ಲಿ ಉನ್ಮತ್ತರಾಗಿ ಅತ್ಯಂತ ಪ್ರೇಮದಿಂದ ಅಹೋರಾತ್ರಿ ಕೀರ್ತನೆಯನ್ನು ಮಾಡುವವರು, ಮನಸ್ಸಿನಿಂದ ಅಥವಾ ವಾಣಿಯಿಂದ ಅನೇಕ ಪ್ರಕಾರದ ಕರ್ಮಗಳನ್ನು ಮಾಡಿದರೂ ಕೂಡ ನನ್ನ ಹೊರತಾಗಿ ಅನ್ಯ ಯಾವುದನ್ನೂ ಅರಿಯಲಾರರು ॥೭೪೭॥

ನನ್ನ ಯಾವ ಉತ್ತಮ ಭಕ್ತರ ಧರ್ಮ, ಅರ್ಥ, ಕಾಮ ಇತ್ಯಾದಿ ಸರ್ವವೂ ನಾನೇ ಆಗಿರುವೆನು. ನನ್ನನ್ನು ಬಿಟ್ಟು ಬೇರೆ ಯಾವುದೇ ಕರ್ಮವನ್ನು ಮಾಡಲು ಅವರ ಮನಸ್ಸು ಅರಿಯುವುದಿಲ್ಲ ॥೭೪೮॥ ನನ್ನ ಭಜನೆಯೇ ಅವರ ಉತ್ತಮ ಕರ್ಮವಾಗಿರುವುದು. ಅದನ್ನು ನನಗೆ ಅರ್ಪಿಸುವುದೇ ಅವರ ಶುದ್ಧ ಧರ್ಮವಾಗಿರುವುದು. ನನ್ನನ್ನು ಪ್ರೀತಿಸುವುದೇ ಅವರ ಪವಿತ್ರ ಇಚ್ಛೆಯಾಗಿರುವುದು. ನನ್ನ ಸ್ಮರಣೆಯಲ್ಲಿಯೇ ಅವರಿಗೆ ವಿಶ್ರಾಂತಿಯು ದೊರೆಯುತ್ತಿರುವುದು ॥೭೪೯॥ ಅನೇಕ ಪ್ರಕಾರದ ಧರ್ಮ ಕಾರ್ಯಗಳಲ್ಲಿ ಹಣವನ್ನು ವಿನಿಯೋಗಿಸಿ ಅವರು ಪರಮಾರ್ಥದ ಸಂಗ್ರಹವನ್ನು ಮಾಡುವರು. ಅಶಾಶ್ವತವಾಗಿರುವ ಯಾವ ಧನ ಸಂಪತ್ತನ್ನು ನನ್ನ ಭಕ್ತರು ಎಂದಿಗೂ ಸಂಗ್ರಹಿಸುವುದಿಲ್ಲ ॥೭೫೦॥ ಯಾರ ಲಕ್ಷವು ಕೇವಲ ಹಣದ ಮೇಲೆಯೇ ಇರುವುದೋ ಅವರು ಕೇವಲ ಅಭಕ್ತರಾಗಿರುವರೆಂದು ತಿಳಿಯಬೇಕು. ಇವರು ಮಾಡುವ ಭಜನೆ ಎಲ್ಲವೂ ಕೇವಲ ಧನ ಕೂಡಿಸುವ ಇಚ್ಛೆಯಿಂದ ಆಡುವ ನಾಟಕವಾಗಿರುವುದು ॥೭೫೧॥ ಮನಸ್ಸಿನಿಂದ ಮತ್ತು ವಾಣಿಯಿಂದ ಆಚರಿಸಿದ ಕರ್ಮಗಳನ್ನು ನನಗೆ ಅರ್ಪಿಸದಿದ್ದರೆ ಅವು ಎಲ್ಲವೂ ಡಾಂಭಿಕ ಭಜನೆ ಎಂದು ತಿಳಿಯಬೇಕು. ಈ ಭಜನೆ ಎಲ್ಲವೂ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವದಕ್ಕಾಗಿಯೇ ಇರುವುವು ॥೭೫೨॥ ಭಕ್ತಿಯಲ್ಲಿಯೂ ವಿರೋಧವಿರುವುದು. ಈಗ ಆ ವಿರೋಧ ಧರ್ಮಗಳ ನಿರೂಪಣೆಯನ್ನು ಮಾಡುವೆನು. ಅದನ್ನು ಲಕ್ಷಪೂರ್ವಕವಾಗಿ ಕೇಳಬೇಕು ॥೭೫೩॥ ನನ್ನ ಭಜನೆಯನ್ನು ಗೌಣಗೊಳಿಸಿ, ಯಾವನು ಹಣ ಸಂಪಾದಿಸಲು ಹೊರಡುವನೋ, ಆ ಭಕ್ತನ ಈ ಲಕ್ಷಣವು ಮುಖ್ಯವಾಗಿ ಭಜನವಿರುದ್ಧವಾಗಿರುವುದು ॥೭೫೪॥

ಗಾಂಠೀಚೇ ವೇಚೂ ನೇಣೇ ಧನ । ಕೋರಡೇ ಕರೀ ಮಾಝೇ ಭಜನ । ಮಜಸೀ ಜೇಣೇ ಕೇಲೇ ವಂಚನ। ವಿರುದ್ಧ ಲಕ್ಷಣ ಮುಖ್ಯತ್ವೇ ॥೭೫೫॥ ಯಾ ನಾಂವ ಅರ್ಥವಿರುದ್ಧತಾ । ಆತಾ ದುಷ್ಟಕಾಮೀ ಜೋ ವಿಚರತಾ। ಮೀ ಭಜತಸೇ ಭಗವಂತಾ । ದೋಷ ಸರ್ವಥಾ ಮಜ ನ ಲಗೇ ॥೭೫೬॥ ಐಸ ಐಸಿಯಾ ಭಾವನಾ । ಜೋ ದುಷ್ಟ ಕಾಮೀ ವಿಚರೇ ಜಾಣಾ । ಹೇ ಭಜನೀ ವಿರುದ್ಧಲಕ್ಷಣಾ । ಭಕ್ತಾ ಅಭಕ್ತಪಣಾ ಆಣೇತ ॥೭೫೭॥ ಮಜ ನಾರ್ಪಿತಾ ಜೇ ಜೇ ಶ್ರಾದ್ಧ । ತೇ ತ್ಯಾಚೀ ಕಲ್ಪನಾ ವಿರುದ್ಧ । ಶ್ರಾದ್ಧಸಂಕಲ್ಪ ಅವಿರುದ್ಧ । ಮದರ್ಪಣೇ ವೇದ ಗರ್ಜತೀ ॥೭೫೮॥ ಶ್ರಾದ್ಧೀ ಮುಖ್ಯ ಸಂಕಲ್ಪ ಜಾಣ । ಪಿತರಸ್ವರೂಪೀ ಜನಾರ್ದನ । ಐಸೇ ಅಸೋನಿಯಾ ಜಾಣ । ನೈವೇದ್ಯ ಮದರ್ಪಣ ನ ಕರಿತೀ ॥೭೫೯॥ "ಅನ್ನ ಬ್ರಹ್ಮ ಅಹಂ ಬ್ರಹ್ಮ"। ಹೇ ಶ್ರಾದ್ಧೀಂಚೇ ಗುಹ್ಯವರ್ಮ । ಐಸೇ ನೇಣೋನಿ ಶುದ್ಧ ಕರ್ಮ । ವೃಥಾ ಭ್ರಮ ವಾಢವಿತೀ ॥೭೬೦॥ ಮೀ ಸಕಳ ಜಾಗಾಚಾ ಜನಿತಾ । ಮುಖ್ಯ ಪಿತರಾಂಚಾಹೀ ಮೀ ಪಿತಾ । ತ್ಯಾ ಮಜ ಕರ್ಮ ನಾರ್ಪಿತಾ । ವಿರುದ್ಧ ಸರ್ವಥಾ ತೇ ಶ್ರಾದ್ಧ ॥೭೬೧॥ ಮಜ ನಾರ್ಪಿತಾ ಜೇ ಜೇ ಕರಣೇ । ತೇ ತೇ ಉಪಜೇ ಅಭಕ್ತಪಣೇ । ವಿರುದ್ಧ ಧರ್ಮಾಚೀ ಲಕ್ಷಣೇ । ದುಃಖ ದಾರುಣೇ ಅನಿವಾರ ॥೭೬೨॥ ಉತ್ತಮ ಭಕ್ತಾಂಚೇ ಲಕ್ಷಣ । ಸಂಕಲ್ಪೇವೀಣ ಜಾಣ । ಅನ್ನಪಾನಾದೀ ಮದರ್ಪಣ । ಕರಿತೀ ಖೂಣ ಜಾಣತೀ ॥೭೬೩॥ ಧ್ರುವಾಚ್ಯಾಪರೀ ಅಢಳ । ತೇ ಮಾಝ್ಯಾ ಠಾಯೀ ಭಜನಶೀಳ । ತೇ ಮಾಝೀ ಭಕ್ತಿ ಅಚಂಚಳ । ಅತಿನಿಶ್ಚಳ ಪಾವತೀ ॥೭೬೪॥ ಆರ್ತಜಿಜ್ಞಾಸು ಅರ್ಥಾರ್ಥೀ । ಯಾ ತಿಘಾಂಸೀ ಜೇ ನವ್ಹೇಚಿ ಪ್ರಾಪ್ತೀ । ತೇ ಮಾಝೀ ಜೇ ಚೌಥೀ ಭಕ್ತೀ । ಪ್ರೇಮೇ ಪಾವತೀ ಉದ್ಧವಾ ॥೭೬೫॥ ಆರ್ತ ಆರ್ತಿಹರಣಕಾಜೇ । ಜಿಜ್ಞಾಸು ಜಾಣಪಣಾಲಾಗೀ ಭಜೇ । ತಿಜೇನಿ ವಾಂಛಿಜೇ । ಅತಿವೋಜೇ ಅರ್ಥಸಿದ್ಧೀ ॥೭೬೬॥ ಯಾವರೀ ಚೌಥಿಯಾಚೇ ಠಾಯೀ । ಯಾ ಕಲ್ಪನಾಂಚಾ ಮಾಗಮೋಸ ನಾಹೀ । ಯಾಲಾಗೀ ಚೌಥೀ ಭಕ್ತಿ ಪಾಹೀ । ತ್ಯಾಚ್ಯಾ ಠಾಯೀ ಘರ ರಿಘೇ ॥೭೬೭॥ ಜಯಾ ಭಕ್ತೀಮಾಜೀ ಪಾಡೇಕೋಡೇ । ಮೀಚ ಮೀ ಚಹೂಕಡೇ । ಜೇಥೀಚ್ಯಾ ತೇಥೇ ಸಾಂಪಡೇ । ಹೇ ಭಜನೇಜೋಡೇ ತಯಾಸೀ ॥೭೬೮॥

ತನ್ನಲ್ಲಿರುವ ಯಾವ ಹಣವನ್ನು ಖರ್ಚು ಮಾಡದೇ ಕೇವಲ ಒಣ ಭಜನೆಯನ್ನು ಮಾಡುವವನೋ, ಅವನು ನನಗೆ ವಂಚಿಸಿದಂತಾಗುವುದು. ಇದೇ ಮುಖ್ಯವಾದ ವಿರುದ್ಧ ಲಕ್ಷಣವಾಗಿರುವುದು ॥೭೫೫॥ ಇದರ ಹೆಸರೇ ಅರ್ಥವಿರುದ್ಧತ್ವ ಎಂದಾಗಿರುವುದು. ಮನದಲ್ಲಿ ದುಷ್ಟವಾಸನೆಗಳನ್ನು ಇಟ್ಟುಕೊಂಡವನು ನಾನು ಭಗವಂತನ ಭಜನೆಯನ್ನು ಮಾಡುತ್ತಿರುವೆನು. ಆದ್ದರಿಂದ ನನಗೆ ಯಾವ ದೋಷಗಳೂ ಹತ್ತಲಾರವು ಎಂದು ತಿಳಿದಿರುವವನು ॥೭೫೬॥ ಈ ಪ್ರಕಾರದ ವಾಸನೆಗಳಲ್ಲಿ ದುಷ್ಟನಾದವನು ಯಾವಾಗಲೂ ಸಿಲುಕಿಕೊಂಡಿರುವನು. ಇವನ ವರ್ತನೆಯು ಭಜನೆಯ ವಿರುದ್ಧ ಲಕ್ಷಣವಾಗಿರುವುದು. ಭಜನೆಯಲ್ಲಿನ ವಿರುದ್ಧ ಭಾವನೆಯೇ ಭಕ್ತನಿಗೆ ಅಭಕ್ತನನ್ನಾಗಿ ಮಾಡುವುದು ॥೭೫೭॥ ನನಗೆ ಅರ್ಪಣೆಯನ್ನು ಮಾಡದೇ ಶ್ರಾದ್ಧವನ್ನು ಮಾಡುವವರ ಶ್ರಾದ್ಧದ ಕಲ್ಪನೆಯೇ ವಿರುದ್ಧವಾಗಿರುವುದು. ಶ್ರಾದ್ಧದ ಸಂಕಲ್ಪವನ್ನು ನನಗೆ ಅರ್ಪಿಸಿದರೆ ಮಾತ್ರ, ಅದು ವಿರುದ್ಧವಾಗುವುದಿಲ್ಲ. ಹೀಗೆ ವೇದವು ಗರ್ಜಿಸಿ ಹೇಳಿರುವುದು ॥೭೫೮॥ ಶ್ರಾದ್ಧದಲ್ಲಿನ ಮುಖ್ಯ ಸಂಕಲ್ಪವು ಪಿತರಸ್ವರೂಪಿ ಜನಾರ್ದನನೇ ಆಗಿರುವನು. ಹೀಗಿದ್ದರೂ ಕೂಡ ನನಗೆ ನೈವೇದ್ಯದ ಅರ್ಪಣೆಯನ್ನು ಮಾಡುವುದಿಲ್ಲ ॥೭೫೯॥ ''ಅನ್ನ ಬ್ರಹ್ಮ, ಅಹಂ ಬ್ರಹ್ಮ'' ಎಂದರೆ ಅನ್ನವು ಬ್ರಹ್ಮವಾಗಿರುವುದು ಮತ್ತು ನಾನು ಬ್ರಹ್ಮನಾಗಿರುವೆನು. ಇದು ಶ್ರಾದ್ಧದ ಮುಖ್ಯ ಮರ್ಮವಾಗಿರುವುದು. ಹೀಗೆ ಶುದ್ಧ ಕರ್ಮವನ್ನು ಅರಿಯದೇ ಅಜ್ಞಾನಿ ಜನರು ವ್ಯರ್ಥವಾಗಿ ಭ್ರಮೆಯನ್ನು ಬೆಳೆಸುವರು ॥೭೬೦॥ ನಾನು ಸರ್ವ ವಿಶ್ವವನ್ನು ಉತ್ಪನ್ನಗೊಳಿಸುವವನಾಗಿರುವೆನು. ಸರ್ವ ಪಿತರರ ಪಿತಾ ನಾನಾಗಿರುವೆನು. ಹೀಗಿರುವ ನನಗೆ ಮಾಡುವ ಕರ್ಮವನ್ನು ನನಗೆ ಅರ್ಪಿಸದೇ ಶ್ರಾದ್ಧವನ್ನು ಮಾಡುವುದು ಸರ್ವಥಾ ವಿರುದ್ಧವಾಗಿರುವುದು ॥೭೬೧॥ ನನಗೆ ಅರ್ಪಣೆಯನ್ನು ಮಾಡದೇ ಯಾವ ಯಾವ ಕರ್ಮಗಳನ್ನು ಮಾಡುವರೋ, ಅದರಿಂದ ಅಭಕ್ತತ್ವವು ನಿರ್ಮಾಣವಾಗುವುದು. ಹೀಗೆ ವಿರುದ್ಧ ಧರ್ಮದ ಲಕ್ಷಣಗಳನ್ನು ಯಾವನು ಆಚರಿಸುವನೋ, ಅವನಿಗೆ ಅನಿವಾರ್ಯವಾಗಿ ದಾರುಣವಾದ ದುಃಖವನ್ನು ಭೋಗಿಸಬೇಕಾಗುವುದು ॥೭೬೨॥ ಸಂಕಲ್ಪವಿಲ್ಲದೇ ಅನ್ನಪಾನಾದಿ ಎಲ್ಲವನ್ನೂ ನನಗೆ ಅರ್ಪಿಸುವವನು, ಇದು ಉತ್ತಮ ಭಕ್ತನ ಲಕ್ಷಣವಾಗಿರುವುದು. ಇದರಲ್ಲಿನ ಯಾವ ರಹಸ್ಯವನ್ನು ಇವನು ಅರಿತಿರುವನು ॥೭೬೩॥ ಯಾರು ನನ್ನಲ್ಲಿ ಧ್ರುವನಂತೆ ದೃಢವಾಗಿ ಭಜನಶೀಲರಾಗಿರುವರೋ, ಅವರಿಗೆ ನನ್ನ ಸ್ಥಿರವಾದ ಮತ್ತು ಅತ್ಯಂತ ಅಚಲವಾದ ಭಕ್ತಿಯು ಪ್ರಾಪ್ತವಾಗುವುದು ॥೭೬೪॥ ಹೇ ಉದ್ಧವನೇ, ಆರ್ತ, ಜಿಜ್ಞಾಸು ಮತ್ತು ಅರ್ಥಾರ್ಥೀ ಈ ಮೂರು ಪ್ರಕಾರದ ಭಕ್ತರಿಗೆ ಯಾವ ನನ್ನ ಪ್ರಾಪ್ತಿಯಾಗುವುದಿಲ್ಲ. ಆದರೆ ನನ್ನ ನಾಲ್ಕನೆಯ ಭಕ್ತಿಯು, ಭಕ್ತರಿಗೆ ಕೇವಲ ನಿಃಸ್ವಾರ್ಥ ಪ್ರೇಮದಿಂದ ನನ್ನ ಪ್ರಾಪ್ತಿಯಾಗುವುದು ॥೭೬೫॥ ಆರ್ತ ಭಕ್ತನು ತನ್ನ ದುಃಖಗಳು ದೂರಾಗಬೇಕೆಂಬ ಬಯಕೆಯಿಂದ ನನಗೆ ಭಜಿಸುವನು. ಜಿಜ್ಞಾಸೂ ಭಕ್ತನು ತನಗೆ ಜ್ಞಾನ ಪ್ರಾಪ್ತಿಯಾಗಬೇಕೆಂಬ ಅಪೇಕ್ಷೆಯಿಂದ ನನ್ನನ್ನು ಭಜಿಸುವನು. ಮೂರನೆಯವನಾದ ಅರ್ಥಾರ್ಥೀ ಭಕ್ತನು ತನಗೆ ಹೇರಳವಾಗಿ ಧನ ದೊರೆಯಬೇಕೆಂಬ ಆಶೆಯಿಂದ ನನ್ನನ್ನು ಭಜಿಸುತ್ತಿರುವನು ॥೭೬೬॥ ಈ ಮೂವರಿಂದ ಭಿನ್ನನಾಗಿರುವ ಯಾವ ನನ್ನ ನಾಲ್ಕನೆಯ ಜ್ಞಾನೀ ಭಕ್ತನಾಗಿರುವನು. ಆತನ ಮನದಲ್ಲಿ ಈ ಪ್ರಕಾರಗಳ ಕಲ್ಪನೆಯೂ ಸಹ ಎಂದಿಗೂ ಬರುವುದಿಲ್ಲ. ಆದ್ದರಿಂದ ನಾಲ್ಕನೆಯ ಭಕ್ತಿಯು ಆತನಲ್ಲಿ ಇದು ನನ್ನ ಮನೆ ಎಂದು ತಿಳಿದು ವಾಸಿಸುವುದು ॥೭೬೭॥ ಯಾರಿಗೆ ಭಕ್ತಿಯಲ್ಲಿ ಅತಿಶಯವಾಗಿ ಪ್ರೀತಿ ಇರುವುದೋ, ನಾಲ್ಕು ಕಡೆಯಲ್ಲೆಲ್ಲಿಯೂ ನಾನೇ ಕಾಣುವೆನೋ, ಇಂತಹ ಭಜನೆಯಿಂದ ಅವರಿಗೆ ನಾನು ಪ್ರಾಪ್ತನಾಗುವೆನು ॥೭೬೮॥

ಸಂಕಲ್ಪ ಕೇಲಿಯಾವೀಣ । ಸಹಜೇ ಹೋತಸೇ ಮದರ್ಪಣ । ಹೇ ಚವಥೇ ಭಕ್ತೀಚೇ ಲಕ್ಷಣ । ಅತರ್ಕ್ಯಭಜನ ಪೈ ಮಾಝೇ ॥೭೬೯॥ ತೇಥ ಜೇ ಕರಣೇ ತೇಚಿ ಪೂಜಾ । ಜೇ ಬೋಲಣೇ ತೋ ಜಪೂ ಮಾಝಾ । ಜೇ ದೇಖಣೇ ತೇ ಅಧೋಕ್ಷಜಾ । ದರ್ಶನ ವೋಜಾ ಹೋತಸೇ ॥೭೭೦॥

ತೇಥ ಚಾಲಣೇ ತೇ ಯಾತ್ರಾ ಮಾಝೀ । ಜೇ ಭಕ್ಷೀ ತೇ ಮಜಚಿ ಯಜೀ । ತ್ಯಾಚೀ ನಿದ್ರಾ ತೇ ಸಮಾಧಿ ಮಾಝೀ । ಐಸಾ ಮಜಮಾಜೀ ಭಜತಸೇ ॥೭೭೧॥ ಯಾಪರೀ ಅನಾಯಾಸೇ ಜಾಣ । ಸಹಜೇ ಹೋತಸೇ ಮದರ್ಪಣ । ಹೇಚೌಥೀ ಭಕ್ತೀ ಸನಾತನ । ಉದ್ಧವಾ ಸಂಪೂರ್ಣ ತೋ ಲಾಭೇ ॥೭೭೨॥ ಉದ್ಧವಾ ಐಸೇ ಮಾನಿಸೀ ಚಿತ್ತೀ । ಜೇ ಮುಳೀಹೂನಿ ಚಾರೀ ಭಕ್ತೀ । ಪಹಿಲೀ ದುಜೀ ತಿಜೀ ಚೌಥೀ । ಮಿಥ್ಯಾವದಂತೀ ಕಲ್ಪನಾ ॥೭೭೩॥ ಸಹಜ ಮಾಝೀ ಜೇ ಪ್ರಕಾಶಸ್ಥಿತೀ । ತೇ ಭಕ್ತೀ ಬೋಲಿಜೇ ಭಾಗವತೀ । ಸಂವಿತೀ ಬೋಲಿಜೇ ವೇದಾಂತೀ । ಶೈವೀ ಶಕ್ತೀ ಬೋಲಿಜೇ ॥೭೭೪॥ ಬೌದ್ಧ ಜಿನೇಶ ನೇಮಿನಾಥ । ಜೋಗೀ ಮ್ಹಣತೀ ಆದಿನಾಥ । ಭೈರವ ಖಂಡೇರಾವ ಗಾಣಪತ್ಯ । ಅವ್ಯಕ್ತ ಮ್ಹಣತ ಏಕ ಪೈ ॥೭೭೫॥ ಏಕ ಮ್ಹಣತೀ ಹೇ ಆದಿಮಾತಾ । ಸೌರ ಮ್ಹಣತೀ ತೋ ಹಾ ಸವಿತಾ । ಅಸೋ ನಾಂವಾಂಚೀ ಬಹು ಕಥಾ । ಉಪಾಸಕತಾ ವಿಭಾಗೇ ॥೭೭೬॥ ಐಸೀ ಜೇ ಕಾ ಪ್ರಕಾಶಸ್ಥಿತೀ । ತ್ಯಾ ನಾಂವ ಬೋಲಿಜೇ ಭಕ್ತೀ । ಜೇಣೇ ಪ್ರಕಾಶೇ ತ್ರಿಜಗತೀ । ಉತ್ಪತ್ತೀ ಸ್ಥಿತಿ ಲಯ ಭಾಸೇ ॥೭೭೭॥ ಮಾಝ್ಯಾ ನಾನಾ ಅವತಾರಮಾಳಾ । ಯೇಣೇ ಪ್ರಕಾಶೇ ಪ್ರಕಾಶತೀ ಸೋಜ್ಜ್ವಳಾ । ದೇವೋ ದೇವೀ ಸಕಳಾ । ಯೇಣೇ ಪ್ರಕಾಶಮೇಳಾ ಭಾಸತೀ ॥೭೭೮॥ ಮಾಝ್ಯಾ ಅವತಾರಾಂಚೀ ಉತ್ಪತ್ತೀ । ತೇಣೇ ಪ್ರಕಾಶೇ ಅಸೇ ಹೋತೀ । ನಾನಾ ಚರಿತ್ರೇ ಅಂತೀ । ಪ್ರವೇಶತೀ ತೇ ಪ್ರಕಾಶೀ ॥೭೭೯॥ ಐಶಿಯಾ ಪ್ರಕಾಶಾಚೀ ಜೇ ಪ್ರಾಪ್ತೀ । ತೇ ಜಾಣ ಸನಾತನ ಮಾಝೀ ಭಕ್ತೀ । ಉದ್ಧವಾ ಮ್ಯಾ ಹೇ ತುಜಪ್ರತೀ । ಯಥಾನಿಗುತೀ ಸಾಂಗಿತಲೀ ॥೭೮೦॥ ನಿಶ್ಚಳಭಕ್ತೀ ಸನಾತನ । ಹೇ ಮುಳೀಚೇ ಪದವ್ಯಾಖ್ಯಾನ । ಯಾಲಾಗೀ ಭಕ್ತಿ ಸನಾತನ । ಸಮೂಳ ಜಾಣ ಬೋಲಿಲೋ ॥೭೮೧॥ ಸಾಂಡೂನೀ ಪದಪದಾರ್ಥಾ । ನಾಹೀ ಬೋಲಿಲೋ ಜೇ ವೃಥಾ । ಸಾವಧಾನ ವ್ಹಾವೇ ಶ್ರೋತಾ । ಪುಢೀಲ ಕಥಾ ಅನುಪಮ ॥೭೮೨॥

ಸಂಕಲ್ಪವನ್ನು ಮಾಡದೇ ಆತನ ಎಲ್ಲ ಕರ್ಮಗಳೂ ನನಗೆ ಸಹಜವಾಗಿಯೇ ಅರ್ಪಣೆಯಾಗುವುವು. ಇದು ನಾಲ್ಕನೆಯ ಭಕ್ತಿಯ ಲಕ್ಷಣವಾಗಿರುವುದು. ಈ ಭಕ್ತಿಯಲ್ಲಿನ ನನ್ನ ಭಜನೆಯು ಅತರ್ಕ್ಯವಾಗಿರುವುದು ॥೭೬೯॥ ಜ್ಞಾನೀ ಭಕ್ತನು ಯಾವುದೇ ಕರ್ಮವನ್ನು ಮಾಡಲಿ, ಅದು ನನ್ನ ಪೂಜೆಯಾಗಿರುವುದು. ಆತನು ಮಾತನಾಡುವುದೆಲ್ಲವೂ ನನ್ನ ಜಪವಾಗಿರುವುದು. ಆತನು ನೋಡುವುದೆಲ್ಲವೂ ನನ್ನ ಅಧೋಕ್ಷಜನ ಪವಿತ್ರ ದರ್ಶನವಾಗಿರುವುದು ॥೭೭೦॥ ಆತನ ನಡೆಯುವಿಕೆಯು ನನ್ನ ಯಾತ್ರೆಯಾಗಿರುವುದು. ಆತನ ಭೋಜನವು ಯಜ್ಞದಲ್ಲಿ ಅರ್ಪಿಸುವ ಆಹುತಿಯಾಗಿರುವುದು. ಆತನ ನಿದ್ರೆಯು ನನ್ನ ಸಮಾಧಿಯಾಗಿರುವುದು. ಈ ಪ್ರಕಾರವಾಗಿ ಆತನು ನನ್ನಲ್ಲಿಯೇ ಭಜನೆಯನ್ನು ಮಾಡುತ್ತಿರುವನು ॥೭೭೧॥ ಜ್ಞಾನೀ ಭಕ್ತನ ಸರ್ವ ಕರ್ಮಗಳು ನನಗೆ ಸಹಜವಾಗಿಯೇ ಅರ್ಪಣೆಯಾಗುತ್ತಿರುವುವು. ಹೇ ಉದ್ಧವನೇ ಆತನಿಗೆ ಈ ಯಾವ ಸನಾತನ ನಾಲ್ಕನೆಯಭಕ್ತಿಯು ಸಹಜವಾಗಿಯೇ ಪ್ರಾಪ್ತವಾಗುವುದು ॥೭೭೨॥ ಹೇ ಉದ್ಧವನೇ, ನಿನ್ನ ಮನದಲ್ಲಿ ಕದಾಚಿತ್ ಹೀಗೆ ಬರಬಹುದು. ಏನೆಂದರೆ, ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಭಕ್ತಿ, ಇವು ಮೊದಲಿನಿಂದಲೇನಡೆಯುತ್ತ ಬಂದಿರುವುವು. ಆದರೆ ಹೀಗೆ ಹೇಳುವುದೆಲ್ಲವೂ ಕಾಲ್ಪನಿಕ, ಮಿಥ್ಯೆಯಾಗಿರುವುದು ॥೭೭೩॥ ಇನ್ನು ನನ್ನ ಯಾವ ಸಹಜಪ್ರಕಾಶ ಸ್ಥಿತಿಗೇನೇ ''ಭಾಗವತ ಭಕ್ತಿ'' ಎಂದು ಹೇಳಿರುವುದು. ವೇದದಲ್ಲಿ ಇದಕ್ಕೇನೇ ''ಸಂವಿತಿ'' ಎಂದು ಹೇಳಿರುವುದು. ಮತ್ತು ಶೈವದಲ್ಲಿ ಇದಕ್ಕೆ ''ಶಕ್ತಿ'' ಎಂಬ ನಾಮದಿಂದ ಕರೆಯುವರು ॥೭೭೪॥ ಬೌದ್ಧರು ''ಜಿನೇಶ'' ''ನೇಮಿನಾಥ'' ಎಂದು ಹೇಳುವರು. ಜೋಗಿಯವರು ''ಆದಿನಾಥ'' ಎನ್ನುವರು. ಕೆಲವರು ''ಭೈರವ'' ಕೆಲವರು ''ಖಂಡೇರಾಯ'' ಕೆಲವರು ''ಗಾಣಪತ್ಯ'' ಎಂದು ಹೇಳುವರು. ಇನ್ನು ಕೆಲವರು ''ಅವ್ಯಕ್ತ'' ಎಂದೂ ಸಹ ಹೇಳುವರು ॥೭೭೫॥ ಕೆಲವರು ಈಕೆಯು ''ಆದಿಮಾತಾ'' ಎಂದು ಹೇಳುವರು. ಸೌರರು ಈತನೇ ''ಸೂರ್ಯ'' ನಿರುವನೆಂದು ಹೇಳುವರು. ಈ ಪ್ರಕಾರವಾಗಿ ಉಪಾಸನೆಯ ಭೇದಪ್ರಮಾಣದಂತೆ ನಾಮಗಳ ಬಹಳಷ್ಟು ಪ್ರಕಾರಗಳಿರುವುವು ॥೭೭೬॥ ಹೀಗಿರುವ ಯಾವ ಪ್ರಕಾಶಸ್ಥಿತಿಗೇನೇ ಭಕ್ತಿ ಎನ್ನುವರು. ಇದರ ಪ್ರಕಾಶದಿಂದ ತ್ರಿಭುವನದಲ್ಲಿ ಉತ್ಪತ್ತೀ ಸ್ಥಿತೀ ಮತ್ತು ಲಯ ಇವುಗಳ ಭಾಸವಾಗುತ್ತಿರುವುದು ॥೭೭೭॥ ನನ್ನ ಅನೇಕ ಪ್ರಕಾರದ ಯಾವ ಅವತಾರ ಮಾಲಿಕೆಯು ಇದೇ ಪ್ರಕಾಶದಿಂದ ಪ್ರಕಾಶಿತವಾಗಿರುವುದು. ದೇವ - ದೇವಿ ಇತ್ಯಾದಿ ಎಲ್ಲವೂ ಇದೇ ಪ್ರಕಾಶದಿಂದ ಭಾಸಿಸುತ್ತಿರುವುವು ॥೭೭೮॥ ಇದೇ ಪ್ರಕಾಶದಿಂದಲೇ ನನ್ನ ಅವತಾರಗಳಾಗುವುವು. ಇದೇ ಪ್ರಕಾಶದಿಂದಲೇ ಕೊನೆಯಲ್ಲಿ ನನ್ನ ಅನೇಕ ಪ್ರಕಾರದ ಚರಿತ್ರೆಗಳು ಪ್ರಕಾಶಮಾನವಾಗುವುವು ॥೭೭೯॥ ಇಂತಹ ಪ್ರಕಾಶದ ಯಾವ ಪ್ರಾಪ್ತಿಯು, ಇದೇ ನನ್ನ ಸನಾತನ ಭಕ್ತಿಯಾಗಿರುವುದು. ಹೇ ಉದ್ಧವನೇ, ಇದನ್ನು ನಾನು ನಿನಗೆ ಯಥಾರ್ಥ ರೀತಿಯಿಂದ ಹೇಳಿರುವೆನು ॥೭೮೦॥ ನಿಶ್ಚಲ ಭಕ್ತಿಗೆ ಮೂಲ ಶ್ಲೋಕದಲ್ಲಿ ''ಸನಾತನ'' ಎಂದು ಹೇಳಿರುವುದು. ಅದಕ್ಕಾಗಿ ನಿನಗೆ ಸನಾತನ ಭಕ್ತಿಯನ್ನು ಸವಿಸ್ತಾರವಾಗಿ ಹೇಳಿರುವೆನು ॥೭೮೧॥ ಮೂಲ ಶ್ಲೋಕದಲ್ಲಿನ ಪದವನ್ನು ಮತ್ತು ಪದದ ಅರ್ಥವನ್ನು ಬಿಟ್ಟು ನಾನು ಯಾವ ವ್ಯರ್ಥವಾಗಿ ಹೇಳಿರುವುದಿಲ್ಲ. ಈಗ ಶ್ರೋತೃಗಳವರು ಮುಂದಿನ ಅನುಪಮ್ಯ ಕಥೆಯನ್ನು ಕೇಳುವುದಕ್ಕಾಗಿ ಸಿದ್ಧರಾಗಬೇಕು ॥೭೮೨॥

ಉದ್ಧವಾ ಹೇ ಐಶೀ ಮಾಝೀ ಭಕ್ತೀ । ಕೈಸೇನಿ ಮ್ಹಣಸೀ ಹೋಯೇ ಪ್ರಾಪ್ತೀ । ಭಾವೇ ಧರಿಲಿಯಾ ಸತ್ಸಂಗತೀ । ಮಾಝೀ ಭಕ್ತೀ ಉದ್‌ಬೋಧೇ ॥೭೮೩॥

ಸತ್ಸಂಗಲಬ್ಧಯಾ ಭಕ್ತ್ಯಾಮಯಿ ಮಾಂ ಸಮುಪಾಸಿತಾ । ಸ ವೈ ಮೇ ದರ್ಶಿತಂ ಸದ್ಭಿರಂಜಸಾ ವಿಂದತೇ ಪದಮ್ ।೨೫॥

ಅರ್ಥ:- ಭಕ್ತಿಯ ಪ್ರಾಪ್ತಿಯು ಸತ್ಸಂಗದಿಂದಾಗುವುದು. ಯಾವನಿಗೆ ಭಕ್ತಿಯು ಪ್ರಾಪ್ತವಾಗುವುದೋ ಅವನು ನನ್ನ ಉಪಾಸನೆಯನ್ನು ಮಾಡುವವನು. ನನ್ನ ಸನ್ನಿಧಾನದ ಅನುಭವವನ್ನು ಪಡೆಯುವನು. ಈ ಪ್ರಕಾರವಾಗಿ ಆತನ ಅಂತಃಕರಣವು ಶುದ್ಧವಾದಾಗ, ಆತನು ಸಂತರ ಉಪದೇಶದ ಅನುಸಾರವಾಗಿ ನನ್ನ ಪರಂಪರೆಯ ಸಾತ್ವಿಕ ಸ್ವರೂಪಕ್ಕೆ ಸಹಜವಾಗಿ ಪ್ರಾಪ್ತನಾಗುವನು.

ಮುಖ್ಯತ್ವೇ ಸಂತಾಂಚೀ ಸೇವಾ । ಹೇಚಿ ಸಾಧನ ಆವಡೇ ದೇವಾ । ಸಂತವಚನೇ ನಿಜಭಾವಾ । ದೇತುಸೇ ತೇಂವ್ಹಾ ನಿಜಭಕ್ತೀ ॥೭೮೪॥ ಜ್ಯಾಸೀ ಆವಡೇ ಸಂತಸಂಗಾಚಾ ಮೇಳೂ । ಜೋ ಸಾಧುವಚನೀ ಅತಿಭುಕಾಳೂ । ಜೋ ಪಡಿಲೇ ವಚನ ನೇಣೇ ಉಗಳೂ । ತೋಚಿ ಪಾಯಾಳೂ ನಿಜಭಕ್ತೀ ॥೭೮೫॥ ಸಾಧುವಚನೀ ಶ್ರದ್ಧಾ ಭಾರೀ । ದೇಖೋನಿಯಾ ನಿಜನಿರ್ಧಾರೀ । ತ್ಯಾವರೀ ಸದ್‌ಗುರು ಕೃಪಾ ಕರೀ । ಸಾಧು ಚರಾಚರೀ ಗುರುರಾವೋ ॥೭೮೬॥ ಗುರುವಾಂಚೋನಿ ತತ್ತ್ವತಾ । ನಾಹೀ ಸಂಸಾರೀ ತಾರಿತಾ । ಗುರುವಚನೇ ನಿಜಭಕ್ತಿದಾತಾ । ಮೀಚೀ ಸರ್ವಥಾ ಭಕ್ತಾಂಸೀ ॥೭೮೭॥ ಸದ್ಗುರು ಜೋ ಸಂಸಾರೀ । ತ್ಯಾಚಿ ಆಜ್ಞಾ ಮೀ ವಾಹೇ ಶಿರೀ । ತೋ ಜ್ಯಾವರೀ ಕೃಪಾ ಕರೀ । ತೋ ಮೀ ಉದ್ಧರೀ ತಾತ್ಕಾಳ ॥೭೮೮॥ ತ್ಯಾ ಸದ್‌ಗುರುಚೇ ಭಜನ । ಜೋ ಮದ್ರೂಪೇ ಕರೀ ಜಾಣ । ತ್ಯಾಚೇ ಮಜ ಪಢಿಯಂತೇಪಣ । ಮಾಝೇನಿಹೀ ಜಾಣ ನ ಬೋಲವೇ ॥೭೮೯॥ ತ್ಯಾಚಾ ಇಹಲೋಕ ಪರಲೋಕ । ದೋನ್ಹೀ ಚಾಲವಿತಾ ಮೀಚಿ ದೇಖ । ತ್ಯಾಚೇ ಮಜ ಅತ್ಯಂತ ಸುಖ । ಹರಿಖೇಹರಿಖ ವೋಸಂಡೇ ॥೭೯೦॥ ತ್ಯಾಸಿ ಗುರೂನೇ ಜೋ ದಾವಿಲಾ ಮಾರ್ಗ । ಚಾಲತಾ ನ ಪಡೇ ಪ್ರಯಾಸಪಾಂಗ । ಮೀ ಸಾಮೋರಾ ಧಾಂವೇ ಶ್ರೀರಂಗ । ಆಪುಲೇ ಸರ್ವಾಂಗ ಮೀ ವೋಡವೀ ॥೭೯೧॥ ತೇಣೇ ಜಾವೇ ಜ್ಯಾ ಪದಾಸೀ । ತೇ ಪದಚಿ ಮೀ ಆಣೀ ತ್ಯಾಪಾಸೀ । ಸಂತಭಜನೀ ಪ್ರೀತಿ ಐಶೀ । ಹೃಷೀಕೇಶೀ ಸಾಂಗತು ॥೭೯೨॥ ಐಸೇ ಐಕೋನಿಯಾ ವಚನ । ಉದ್ಧವಾಚೇ ಕಳವಳಲೇ ಮನ । ಕೋಣ ಕೋಣ ತೇ ಸಾಧುಜನ । ತ್ಯಾಂಚೇ ನಿಜಚಿನ್ಹ ಪುಸೋ ಪಾ ॥೭೯೩॥ ಕೋಣ ತೇ ಭಕ್ತೀಚೇ ಲಕ್ಷಣ । ಭಜತೀ ಖೂಣ ತೇ ಕೋಣ ಕೋಣ । ತೇ ಸಮೂಳ ಜಾಣಾವಯಾ ಆಪಣ । ಉದ್ಧವೇ ಪ್ರಶ್ನ ಮಾಂಡಿಲಾ ॥೭೯೪॥

ಹೇ ಉದ್ಧವನೇ, ಈ ನನ್ನ ಭಕ್ತಿಯು ಯಾವುದರಿಂದ ಪ್ರಾಪ್ತವಾಗುವುದೆಂದು ನೀನು ಹೀಗೆ ಕೇಳಬಹುದು. ಅದಕ್ಕಾಗಿ ಶ್ರದ್ಧೆಯಿಂದ ಸತ್ಸಂಗತಿಯನ್ನು ಹಿಡಿಯಲು, ಅದರ ಯೋಗದಿಂದ ನನ್ನ ಭಕ್ತಿಯು ಸಹಜವಾಗಿಯೇ ದೊರೆಯುವುದು ॥೭೮೩॥

ಪ್ರಾಮುಖ್ಯವಾಗಿ ಸಂತರ ಸೇವೆ ಎಂಬ ಸಾಧನೆಯು ದೇವರಿಗೆ ಬಹಳ ಪ್ರಿಯಕರವು. ಈ ಸಾಧನೆಯು ಸಾಧಿಸಿದಾಗ ಸಂತರ ವಚನ ಪ್ರಮಾಣದಂತೆ ದೇವನು ಆತ್ಮಭಾವವನ್ನು ಮತ್ತು ಆತ್ಮಭಕ್ತಿಯನ್ನು ಕೊಡುವನು ॥೭೮೪॥ ಯಾರಿಗೆ ಸಂತಸಂಗತಿಯ ಮೇಳದಲ್ಲಿ ಇರುವುದು ಅತಿಶಯವಾಗಿ ಪ್ರಿಯವಾಗುವುದೋ, ಸಾಧುಗಳ ವಚನಗಳಂತೆ ನಡೆಯಲು ಯಾರಿಗೆ ಅತ್ಯಂತ ಹಸಿವೆಯಾಗಿದೆಯೋ, ಸಾಧುಗಳ ವಚನಗಳನ್ನು ಯಾರು ಎಂದಿಗೂ ಅಮಾನ್ಯಮಾಡಲಾರನೋ, ಆತನಿಗೆ ಕಾಲು ಮುಂದೆ ಮಾಡಿ ಹುಟ್ಟಿದವನಿಗೆ ಹುಗಿದಿರುವ ಗುಪ್ತ ಧನವು ಕಾಣುವಂತೆ, ನಿಜ ಭಕ್ತಿಯ ರಹಸ್ಯವು ಲಭಿಸುವುದು ॥೭೮೫॥ ಸಾಧು ವಚನಗಳಲ್ಲಿ ಇರುವ ದೃಢವಾದ ನಿಶ್ಚಯವನ್ನು ಕಂಡು ಆಗ ಆತನಲ್ಲಿ ಸದ್ಗುರುಗಳು ಕೃಪೆ ಮಾಡುವರು. ಸಾಧುಗಳು ಈ ಚರಾಚರಗಳಲ್ಲಿ ಶ್ರೇಷ್ಠ ಗುರುವಾಗಿರುವರು ॥೭೮೬॥ ನಿಜವಾಗಿಯೂ ಈ ಸಂಸಾರದಿಂದ ಪಾರು ಮಾಡಲು ಗುರುಗಳ ಹೊರತಾಗಿ ಅನ್ಯರಾರೂ ಇರುವುದಿಲ್ಲ. ಗುರುಗಳ ವಚನಗಳಿಂದ ಭಕ್ತರಿಗೆ ನನ್ನ ಭಕ್ತಿಯನ್ನು ಕೊಡುವವನು. ವಾಸ್ತವಿಕವಾಗಿ ನಾನೇ ಆಗಿರುವೆನು ॥೭೮೭॥ ಈ ಸಂಸಾರದಲ್ಲಿನ ಸದ್ಗುರುಗಳ ಆಜ್ಞೆಯನ್ನು ನಾನು ಶಿರಸಾ ವಂದಿಸುವೆನು. ಸದ್ಗುರುಗಳು ಯಾರ ಮೇಲೆ ಕೃಪೆದೋರುವರೋ, ಆತನನ್ನು ನಾನು ತತ್ಕಾಲದಲ್ಲಿ ಉದ್ಧರಿಸುವೆನು ॥೭೮೮॥ ಆ ಯಾವ ಸದ್ಗುರುವಿನಲ್ಲಿ ನನ್ನ ಸ್ವರೂಪವನ್ನು ಸ್ಥಿರಗೊಳಿಸಿ, ಯಾವನು ಪ್ರೇಮದಿಂದ ಭಜನೆಯನ್ನು ಮಾಡುವನೋ, ಆತನು ನನಗೆ ಎಷ್ಟು ಪ್ರಿಯ ಎಂಬುದು ಸ್ವತಃ ನನಗೆ ಪೂರ್ಣವಾಗಿ ಹೇಳಲಿಕ್ಕೆ ಬಾರದು ॥೭೮೯॥ ಆತನ ಇಹಲೋಕದ ಮತ್ತು ಪರಲೋಕದ ಯೋಗ ಕ್ಷೇಮವನ್ನು ನಾನು ನಡೆಸಿಕೊಡುವೆನು. ಆತನಿಂದ ನನಗೆ ಅತ್ಯಂತ ಸುಖವು ಲಭಿಸುವುದು. ಮತ್ತು ಆನಂದಕ್ಕೆ ಪೂರವು ಬಂದು ಅದು ಹರಿಯತೊಡಗುವುದು ॥೭೯೦॥ ಶ್ರೀಗುರುಗಳು ತೋರಿಸಿರುವ ಸನ್ಮಾರ್ಗದಲ್ಲಿ ನಡೆಯುತ್ತಿರಲು ಆತನಿಗೆ ಸ್ವಲ್ಪವೂ ಪ್ರಯಾಸ ಅಥವಾ ಶ್ರಮವಾಗುವುದಿಲ್ಲ. ಒಂದು ವೇಳೆ ಆತನಿಗೆ ಯಾವುದಾದರೂ ಸಂಕಟ ಒದಗಲು ಆಗ ನಾನು ಆತನಲ್ಲಿ ಧಾವಿಸಿ ಹೋಗುವೆನು ಮತ್ತು ನನ್ನ ಸರ್ವಾಂಗವನ್ನು ಮುಂದು ಮಾಡುವೆನು ॥೭೯೧॥ ಆತನಿಗೆ ಯಾವ ಪದವಿಗೆ ಹೋಗಬೇಕಾಗಿರುವುದೋ, ಆ ಪದವಿಯನ್ನು ನಾನು ಆತನಲ್ಲಿಗೆ ತಂದು ಕೊಡುವೆನು. ಸಂತರ ಸೇವೆಯಲ್ಲಿ ಹೀಗೆ ನನ್ನ ಪ್ರೀತಿವಿರುವುದೆಂದು ಶ್ರೀಕೃಷ್ಣನು ಹೇಳುತ್ತಿರುವನು ॥೭೯೨॥ ಈ ವಚನಗಳನ್ನು ಕೇಳಿ ಉದ್ಧವನ ಮನಸ್ಸು ಕಳವಳಗೊಂಡಿತು. ಈತನು ಮನದಲ್ಲಿ ಹೀಗೆ ವಿಚಾರಿಸಿದನು, ಏನೆಂದರೆ ಇಂತಹ ಸಾಧು ಪುರುಷರು ಯಾರಿರಬಹುದು? ಅವರ ಸ್ವರೂಪವನ್ನು ಕೇಳಬೇಕು ॥೭೯೩॥ ಇವರ ಭಕ್ತಿಯ ಲಕ್ಷಣ ಹೇಗಿರುವುದು? ಅವರ ಭಜನೆಯ ಚಿನ್ಹೆ ಎಂತಹದ್ದು? ಈ ಎಲ್ಲವನ್ನೂ ವಿಸ್ತಾರವಾಗಿ ತಿಳಿಯುವುದಕ್ಕಾಗಿ ಉದ್ಧವನು ಪ್ರಶ್ನಿಸಿದನು ॥೭೯೪॥

ಉದ್ಧವ ಉವಾಚ :-

ಸಾಧುಸ್ತವೋತ್ತಮಶ್ಲೋಕ ಮತಃ ಕೀದೃಗ್ವಿಧಃ ಪ್ರಭೋ ।
ಭಕ್ತಿಸ್ತ್ವಯ್ಯುಪಯುಜ್ಯೇತ ಕೀದೃಶೀ ಸದ್ಭಿರಾದೃತಾ ।೨೬॥

ಅರ್ಥ:- ಉದ್ಧವನು ವಿಚಾರಿಸಿದನು; ಹೇ ಭಗವಂತನೇ, ಮಹಾ ಮಹಾ ಸಂತರು ನಿಮ್ಮ ಕೀರ್ತಿಯ ಗುಣಗಾನವನ್ನು ಮಾಡುವರು. ಸಂತ ಪುರುಷನ ಯಾವ ಲಕ್ಷಣ? ಎಂಬುದನ್ನು ಕೃಪೆ ಮಾಡಿ ತಿಳಿಸಿರಿ. ನಾರದಾದಿ ಸತ್ಪುರುಷರು ಆದರದಿಂದ ಕಾಣುವ ಅಂತಹ ಯಾವ ಪ್ರಕಾರದ ಭಕ್ತಿಯು ನಿನ್ನಲ್ಲಿ ಉಪಯುಕ್ತವಾಗುವುದು?

ಜ್ಞಾತೇ ವಕ್ತೇ ಆಹೇತ ಬಹುತ । ಪರೀ ತೇ ರಜತಮಗುಣಯುಕ್ತ । ಗುಣಾನುಸಾರೇ ನಿರೂಪೀತ । ತ್ಯಾಂಸೀ ಪುಸೋ ಚಿತ್ತ ಮಾನಿನಾ ॥೭೯೫॥ ಅಥವಾ ಸಾತ್ತ್ವಿಕ ಕೇವಳ । ತೋ ಸತ್ತ್ವಗುಣೇ ವಿವ್ಹಳ । ಬೋಲಣೇ ಬೋಲತಾ ಜಾಯೇ ಬರಳ । ನವ್ಹೇ ಕೇವಳ ನಿಜಬೋಧೂ ॥೭೯೬॥ ತೈಸಾ ತೂ ನವ್ಹೇಸೀ ಕೃಷ್ಣನಾಥಾ । ತುಜಆಧೀನ ಗುಣ ತತ್ತ್ವತಾ । ಲೀಲಾವಿಗ್ರಹೇ ದೇಹಧರಿತಾ । ನಿಜಜ್ಞಾನವಕ್ತಾ ತೂಂಚಿ ಏಕ ॥೭೯೭॥ ಯಾಲಾಗೀ ಜೇ ಉತ್ತಮ ಶ್ಲೋಕ । ತುಜ ಮ್ಹಣತೀ ತೀನೀ ಲೋಕ । ತುಜವೇಗಳಾ ಆಣಿಕ । ಆಮ್ಹಾಸೀ ದೇಖ ಮಾನೇನಾ ॥೭೯೮॥ ಮಾಝಿಯಾ ಪ್ರಶ್ನಾಚಾ ವಕ್ತಾ । ತೂಂಚಿ ಏಕ ಕೃಷ್ಣನಾಥಾ । ತರೀ ಸಾಧು ಕೋಣ ತತ್ತ್ವತಾ । ತುಜ ಸರ್ವಥಾ ಮಾನಲಾ ॥೭೯೯॥ ತುಜ ಮಾನಲೇ ಜೇ ಸಾಧುಜನ । ತ್ಯಾಂಚೇ ಸಂಪೂರ್ಣ ಸಾಂಗ ಲಕ್ಷಣ । ತುಜ ಪಢಿಯಂತೀ ಭಕ್ತಿ ಕೋಣ । ತೇಹೀ ಲಕ್ಷಣ ಸಾಂಗಾವೇ ॥೮೦೦॥ ಭಕ್ತೀಮಾಜೀ ಭಕ್ತಿ ಸಧರ । ಜೇ ಕಾ ತುಝೀ ಪ್ರಾಪ್ತಿಕರ । ಅತಿ ಉತ್ತಮ ಪರಾತ್ಪರ । ಸಂತೀ ನಿರಂತರ ಆದರಿಲೀ ॥೮೦೧॥ ಸಂತೀ ಆದರಿಲೇ ಜೇ ಭಕ್ತೀಸೀ । ಸಂತಾಸೀ ಪುಸೂ ಜಾಯೇ ಮ್ಹಣಸೀ । ಮಜ ವಿಶ್ವಾಸ ತುಝಿಯಾ ವಚನಾಸೀ । ಪುಸೋ ಆಣಿಕಾಂಸೀ ಮಾನೇನಾ ॥೮೦೨॥ ಜೇ ಜ್ಯಾ ದೇವತಾಂತರಾ ಭಜತೀ । ತೇ ತೀ ಉತ್ತಮ ಭಕ್ತಿ ಮ್ಹಣತೀ । ತುಜ ಮಾನಲೀ ಜೇ ಶ್ರೀಪತೀ । ತೇ ಮಜಪ್ರತೀ ಸಾಂಗಾವೀ ॥೮೦೩॥ ಸಮಾನ ಕುಳಶೀಳ ಸಂವಾದು । ತೈಸಿಯಾಸೀಚ ಮ್ಹಣತೀ ಸಾಧು । ತೂ ನಿಜಮುಖೇ ಜೋ ಮ್ಹಣಸೀ ಶುದ್ಧು । ತೀ ಮಜ ವಂದ್ಯ ಸರ್ವಥಾ ॥೮೦೪॥ ತೀ ಸಂಬೋಧನೀ ಸಾರಂಗಧರೂ । ಉದ್ಧವ ಪ್ರಾರ್ಥೂನಿ ಕರೀ ಸಾದರೂ । ತೀ ವಿಶೇಷಣೇ ನಿಜವಿಚಾರೂ । ಶ್ರವಣಾಧಿಕಾರೂ ಸಾಂಗತು ॥೮೦೫॥

ಯಾವ ಈ ಜಗತ್ತಿನಲ್ಲಿ ಜ್ಞಾನೀ ಜನರು, ಪ್ರವಚನ, ಕೀರ್ತನಕಾರರು ಬೇಕಾದಷ್ಟು ಸಂಖ್ಯೆಯಲ್ಲಿರುವರು. ಆದರೆ ಅವರು ರಾಜಸ ಮತ್ತು ತಾಮಸ ಗುಣಗಳಿಂದ ಕೂಡಿರುವರು. ತಮ್ಮ ಯಾವ ರಾಜಸ ಮತ್ತು ತಾಮಸ ಗುಣಗಳಂತೆ ನಿರೂಪಣೆಯನ್ನು ಮಾಡುತ್ತಿರುವರು. ಇವರಿಗೆ ಇದನ್ನು ಕೇಳಲು ಮನಸ್ಸಾಗುತ್ತಿಲ್ಲ ।೭೯೫॥ ಹಾಗೆಯೇ ಸಾತ್ವಿಕ ಪುರುಷನಾದವನು, ಈತನು ಸತ್ವಗುಣದಿಂದ ವ್ಯಾಪಿಸಿರುವನು. ಆದ್ದರಿಂದ ಈತನು ಹೇಳಲು ಹೊರಟರೆ ಎಲ್ಲಿಯೋ ತಿಳಿಯದಂತೆ ಹೋಗಿಬಿಡುವುದು. ಆದ್ದರಿಂದ ಶುದ್ಧ ಆತ್ಮಜ್ಞಾನವು ಈತನಿಂದ ಪ್ರಾಪ್ತವಾಗುವುದಿಲ್ಲ ।೭೯೬॥ ಹೇ ಕೃಷ್ಣನಾಥನೇ, ನೀನು ಮಾತ್ರ ಹಾಗಿರುವುದಿಲ್ಲ. ನಿಜವಾಗಿಯೂ ನೀನು ಲೀಲಾರ್ಥವಾಗಿ ಅವತಾರವನ್ನು ಧರಿಸಿರುವೆ. ಸಾತ್ವಿಕ, ರಾಜಸ, ತಾಮಸ ಈ ಮೂರೂ ಗುಣಗಳು ನಿನ್ನ ಆಧೀನದಲ್ಲಿವೆ. ಆತ್ಮಜ್ಞಾನವನ್ನು ಹೇಳುವವನು ನೀನೊಬ್ಬನೇ ಇರುವೆ ।೭೯೭॥ ಆದ್ದರಿಂದ ನಿನಗೆ ಈ ಮೂರು ಲೋಕಗಳಲ್ಲಿ ''ಉತ್ತಮ ಶ್ಲೋಕ'' ಅಂದರೆ ಸ್ವರೂಪ ಜ್ಞಾನವನ್ನು ಹೇಳುವವನು ಎಂದು ಹೇಳುವರು. ಆದ್ದರಿಂದ ನಿನ್ನ ಹೊರತಾಗಿ ಅನ್ಯರು ನನಗೆ ಯಾರೂ ಮಾನ್ಯರಾಗಲಾರರು ।೭೯೮॥ ಹೇ ಕೃಷ್ಣನಾಥನೇ, ನನ್ನ ಪ್ರಶ್ನೆಗಳಿಗೆ ಯಥಾಯೋಗ್ಯ ಉತ್ತರವನ್ನು ಹೇಳುವವನು ನೀನೇ ಆಗಿರುವೆ. ಅದಕ್ಕಾಗಿ ಈಗ ನಿನಗೆ ಸರ್ವಪ್ರಕಾರವಾಗಿ ಮಾನ್ಯನಾಗಿರುವ ಸಾಧು ಯಾರಿರುವರು? ।೭೯೯॥ ನಿನಗೆ ಯಾವ ಯಾವ ಸಾಧು ಪುರುಷರು ಮಾನ್ಯರಾಗಿರುವರೋ, ಅವರ ಲಕ್ಷಣಗಳನ್ನು ಪೂರ್ಣವಾಗಿ ನನಗೆ ಹೇಳು. ಹಾಗೆಯೇ ನಿನ್ನ ಪ್ರೇಮದ ಭಕ್ತಿಯ ಲಕ್ಷಣಗಳು ಯಾವುವು? ಅವುಗಳ ಲಕ್ಷಣಗಳನ್ನು ಸಹ ನನಗೆ ಹೇಳು ।೮೦೦॥ ನಿನ್ನ ಪ್ರಾಪ್ತಿಯನ್ನು ಮಾಡಿಕೊಡುವ, ಶ್ರೇಷ್ಠದಲ್ಲಿ ಶ್ರೇಷ್ಠವಾಗಿರುವ, ಮತ್ತು ಸಂತರು ನಿರಂತರವಾಗಿ ಆದರದಿಂದ ಸ್ವೀಕರಿಸುವ ಅಂತಹ ಭಕ್ತಿಯಲ್ಲಿನ ಶ್ರೇಷ್ಠ ಭಕ್ತಿಯು ಯಾವುದು? ।೮೦೧॥ ಸಂತರು ಯಾವ ಭಕ್ತಿಯನ್ನು ಅತ್ಯಂತ ಆದರದಿಂದ ಸ್ವೀಕಾರವನ್ನು ಮಾಡಿರುವರು? ಇದನ್ನು ಸಂತರಿಗೇ ಕೇಳು ಎಂದು ನೀನು ಹೀಗೆ ಹೇಳಬಹುದು. ಆದರೆ ಹೇ ಶ್ರೀಕೃಷ್ಣನೇ, ಈಗ ನನ್ನ ಸರ್ವ ವಿಶ್ವಾಸವು ನಿನ್ನಲ್ಲಿರುವುದು. ಆದ್ದರಿಂದ ಇತರರಿಗೆ ಕೇಳಲು ನನ್ನ ಮನಸ್ಸು ಸಿದ್ಧವಿಲ್ಲ ।೮೦೨॥ ಭಿನ್ನ ಭಿನ್ನ ದೇವರನ್ನು ಭಜಿಸುವವರು ತಮ್ಮ ತಮ್ಮ ದೇವರ ಭಕ್ತಿಯೇ ಉತ್ತಮವು ಎಂದು ಹೇಳುವರು. ಹೇ ಶ್ರೀಕೃಷ್ಣನೇ, ನಿನಗೆ ಯಾವ ಭಕ್ತಿಯು ಮಾನ್ಯವಾಗಿದೆಯೋ ಅದೇ ಭಕ್ತಿಯನ್ನು ನೀನೆ ನನಗೆ ಹೇಳಬೇಕು ।೮೦೩॥ ಕುಲಶೀಲ ಮತ್ತು ಭಾಷಣ. ಇವು ಯಾರಲ್ಲಿ ಸಮಾನವಾಗಿರುವುದೋ, ಅಂತಹ ಪುರುಷನಿಗೆ ಸಾಧು ಎಂದು ಹೇಳುವರು. ಆದರೆ ನೀನು ನಿನ್ನ ಮುಖದಿಂದ ಯಾರನ್ನು ಶುದ್ಧ ಎನ್ನುವಿಯೋ, ಆತನೇ ನನಗೆ ಸರ್ವಥಾ ಪೂಜ್ಯನಾಗಿರುವನು ।೮೦೪॥ ಈ ಪ್ರಕಾರವಾಗಿ ಉದ್ಧವನು ಶ್ರೀಕೃಷ್ಣನನ್ನು ಮೂರು ಸಂಬೋಧನಗಳಿಂದ ಪ್ರಾರ್ಥನೆಯನ್ನು ಮಾಡಿದನು. ಮತ್ತು ಮೂರು ಸಂಬೋಧನಗಳ ವಿಶೇಷಣಗಳಿಂದ ತಾನು ಶ್ರವಣ ಮಾಡಲು ಅಧಿಕಾರಿಯಾಗಿರುವೆನು ಎಂದೂ ಸಹ ಅದರಲ್ಲಿ ಹೇಳಿದನು ।೮೦೫॥

ಏತನ್ಮೇ ಪುರುಷಾಧ್ಯಕ್ಷ ಲೋಕಾಧ್ಯಕ್ಷ ಜಗತ್ಪ್ರಭೋ । ಪ್ರಣತಾಯಾನುರಕ್ತಾಯ ಪ್ರಪನ್ನಾಯ ಚ ಕಥ್ಯತಾಮ್ ॥೨೭॥

ಅರ್ಥ :- ಹೇ ಭಗವಂತನೇ, ನೀವು ಬ್ರಹ್ಮರಾಗಿರುವಿರಿ. ಶ್ರೇಷ್ಠ ದೇವರಾಗಿರುವಿರಿ. ಸತ್ಯಾದಿ ಲೋಕಗಳ ಮತ್ತು ಚರಾಚರ ದೇವತೆಗಳ ಒಡೆಯರಾಗಿರುವಿರಿ. ನಾನು ನಿಮ್ಮ ವಿನೀತನು. ಶರಣಾಗತನು ಮತ್ತು ಪ್ರೇಮದ ಭಕ್ತನು. ತಾವು ನನಗೆ ಭಕ್ತಿ ಮತ್ತು ಭಕ್ತರ ರಹಸ್ಯವೇನೆಂಬುದನ್ನು ಹೇಳಬೇಕು.

ಪುರುಷೀ ಪುರುಷೋತ್ತಮ ತೂಂಚಿ ಕೀ । ಕರ್ಮಧರ್ಮಾಚಾ ವಿವೇಕೀ । ಯಾಲಾಗೀ ಬೋಲಿಜೇ ಪುರುಷಾಧ್ಯಕ್ಷೀ । ಸರ್ವಸಾಕ್ಷೀ ಗೋವಿಂದಾ ॥೮೦೬॥ ಜೈಸೇ ಕರ್ಮ ತೈಸಾ ಫಳದಾತಾ । ಯಾಲಾಗೀ ಬೋಲಿಜೇ ಲೋಕಾಧ್ಯಕ್ಷತಾ । ತೂಂಚಿ ಬ್ರಹ್ಮಾದಿಕಾಂಚಾ ನಿಯಂತಾ । ಪ್ರತಿಪಾಳಿತಾ ಜಗಾಚಾ ॥೮೦೭॥ ಹೋ ಕಾ ಮೀ ಜಗಾಚಾ ಪ್ರತಿಪಾಳಿತಾ । ತ್ಯಾ ಜಾಗಾಮಾಜೀ ತೂಂಹೀ ಅಸತಾ । ತುಜಚಿ ಸಾಂಗಾವೀ ಜ್ಞಾನಕಥಾ । ಹೇ ಅಧಿಕತಾ ಕಾ ಮ್ಹಣಸೀ ॥೮೦೮॥ ಜರೀ ತೂ ಸರ್ವಜ್ಞ ಸರ್ವೇಶ್ವರೂ । ಅಂತರ್ಯಾಮೀ ನಿಯಂತಾ ಈಶ್ವರೂ । ಜರೀ ದೇಖಸೀ ಮಾಝಾ ಅಧಿಕಾರೂ । ತರೀ ಜ್ಞಾನನಿರ್ಧಾರೂ ಸಾಂಗಾವಾ ॥೮೦೯॥ ಹೋ ಕಾ ಮಜ ಅಧಿಕಾರೂ ನಾಹೀ । ತರೀ ಶರಣ ಆಲೋ ತುಜ ಪಾಹೀ । ಶರಣಾಗತಾಚೀ ತುಝ್ಯಾ ಠಾಯೀ । ಉಪೇಕ್ಷಾ ನಾಹೀ ಸರ್ವಥಾ ॥೮೧೦॥ ವಿಷಯೀ ದೇಖೋನಿ ಘೋರ ದುಃಖ । ಝಾಲೋ ತುಝಿಯಾ ಚರಣಾಸಂಮುಖ । ಅತಿದೀನ ಮೀ ತುಝೇ ರಂಕ । ಪಾ ಆವಶ್ಯಕ ತುವಾ ಕೀಜೇ ॥೮೧೧॥ ಮಾಝ್ಯಾ ದುರ್ಜಯ ವಾಸನಾ । ಅನಿವಾರ ಮಜ ನಿವಾರತೀನಾ । ತ್ಯಾ ತೂ ನಿವಾರೀ ಶ್ರೀಕೃಷ್ಣಾ । ಶರಣ ಚರಣಾ ಯಾಲಾಗೀ ॥೮೧೨॥ ಮೀ ಏಕ ಭಕ್ತ ಅನುರಕ್ತ । ಐಸೇ ಬೋಲತಾ ಬಹು ಗರ್ವ ದಿಸತು । ತೂ ಸರ್ವಜ್ಞ ಶ್ರೀಅನಂತು । ಕೃಪಾವಂತು ದೀನಾಚಾ ॥೮೧೩॥ ಮೀ ಏಕು ಶ್ರವಣಾಧಿಕಾರೀ । ಹೇಹೀ ನ ಮ್ಹಣವೇ ಗಾ ಮುರಾರೀ । ಐಸೇ ಬೋಲೋನಿಯಾ ಪಾಯ ಧರೀ । ಕೃಪಾ ಕರೀ ಕೃಪಾನಿಧಿ ॥೮೧೪॥ ಆಮ್ಹೀ ಸ್ವಗೋತ್ರ, ಸಖೇ ಸಹಜ । ಪಾಯ ಧರಣೇ ನ ಘಡೇ ತುಜ । ಯಾ ಮ್ಹಣಣೆಯಾಚೇ ನಿಜಬೀಜ । ಕಳಲೇ ಮಜ ಗೋವಿಂದಾ ॥೮೧೫॥

ತ್ವಾಂ ಬ್ರಹ್ಮ ಪರಮಂ ವ್ಯೋಮ ಪುರುಷಃ ಪ್ರಕೃತೇಃ ಪರಃ । ಅವತೀರ್ಣೋಽಸಿ ಭಗವನ್ ಸ್ವೇಚ್ಛೋಪಾತ್ತಪೃಥಗ್ವಪುಃ ॥೨೮॥

ಅರ್ಥ :- ಹೇ ಪ್ರಿಯ ಪ್ರಭುವೇ, ನೀನು ಪರತತ್ವನು, ಚಿದಾಕಾಶ ಸ್ವರೂಪ ಪರಬ್ರಹ್ಮನು. ಆಕಾಶದಂತೆ ನೀನು ಯಾವ ಪ್ರಕಾರದ ತೊಡಕಿನಲ್ಲಿ ಬಿದ್ದವನಲ್ಲ. ಆದರೂ ಭಕ್ತರ ಪ್ರೇಮಕ್ಕೆ ವಶನಾಗಿ, ನಿನ್ನ ಭಕ್ತರ ಇಚ್ಛೆಗಳಿಗೆ ಅನುಸಾರವಾಗಿ, ಅವತಾರಗಳನ್ನು ತಾಳುತ್ತ, ಬಗೆಬಗೆಯ ಅನೇಕ ರೂಪಗಳನ್ನು ಕೈಕೊಳ್ಳುವೆ.

ಹೇ ಗೋವಿಂದನೇ, ಸರ್ವ ಪುರುಷರಲ್ಲಿ ಉತ್ತಮ ಪುರುಷನು ನೀನೇ ಇರುವೆ. ಕರ್ಮದ ಮತ್ತು ಧರ್ಮದ ವಿಚಾರವನ್ನು ಮಾಡುವವನು ನೀನೇ ಇರುವೆ. ಅದಕ್ಕಾಗಿ ನಿನಗೆ ಪುರುಷಾಧ್ಯಕ್ಷ ಸರ್ವಸಾಕ್ಷಿ ಎಂದು ಹೇಳುವರು ॥೮೦೬॥ ಯಾರ ಕರ್ಮವು ಹೇಗಾಗುವುದೋ, ಅದರಂತೆ ನೀನು ಆತನಿಗೆ ಫಲವನ್ನು ಕೊಡುವವನಾಗಿರುವೆ. ಆದ್ದರಿಂದ ನಿನಗೆ ಲೋಕಾಧ್ಯಕ್ಷ ಎಂದು ಹೇಳುವರು. ನೀನು ಬ್ರಹ್ಮಾದಿಕರನ್ನು ನಿಯಂತ್ರಣಗೊಳಿಸುವವನಾಗಿರುವೆ.ಹಾಗೆಯೇ ಜಗತ್ತಿನ ಪ್ರತಿಪಾಲನೆಯನ್ನು ನೀನೇ ಮಾಡುವೆ ॥೮೦೭॥ ಹೇ ಶ್ರೀಕೃಷ್ಣನೇ "ಜಗತ್ತನ್ನು ಪ್ರತಿಪಾಲಿಸುವವನು ನಾನು. ಆ ಜಗತ್ತಿನಲ್ಲಿ ನೀನೂ ಇರುವೆ ನಿನಗೆ ಮಾತ್ರ ಈ ಜ್ಞಾನ ಕಥೆಯನ್ನು ಹೇಳುವಷ್ಟು ಅಧಿಕವಾದದ್ದು ನಿನ್ನಲ್ಲೇನಿದೆ?" ಎಂದು ನೀನು ಹೇಳಬಹುದು ॥೮೦೮॥ ಹಾಗಾದರೆ, ನೀನು ಸರ್ವಜ್ಞನು, ಸರ್ವೇಶ್ವರನು, ಅಂತರಾತ್ಮನು ಮತ್ತು ಸರ್ವರನ್ನು ನಿಯಮನ ಮಾಡುವ ಈಶ್ವರನು. ಅಂದ ಮೇಲೆ ನನ್ನ ಅಧಿಕಾರವು ನಿನಗೆ ಯೋಗ್ಯ ಕಂಡರೆ ಮಾತ್ರ ನನಗೆ ಈ ಜ್ಞಾನದ ವಿಷಯವನ್ನು ಹೇಳು ॥೮೦೯॥ ಹೇ ಶ್ರೀಕೃಷ್ಣನೇ, ಒಂದು ವೇಳೆ ನನಗೆ ಈ ಅಧಿಕಾರವು ಇರಲಿಕ್ಕಿಲ್ಲ. ಆದರೆ ನಾನು ನಿನಗೆ ಶರಣು ಬಂದಿರುವೆನಲ್ಲ? ನೀನು ಶರಣು ಬಂದ ಭಕ್ತರನ್ನು ಎಂದಿಗೂ ಉಪೇಕ್ಷೆ ಮಾಡುವುದಿಲ್ಲ ॥೮೧೦॥ ವಿಷಯಗಳಲ್ಲಿ ಅತ್ಯಂತ ದುಃಖವಿರುವುದನ್ನು ನಾನು ಅರಿತುಕೊಂಡು ನಿನ್ನ ಚರಣಕಮಲದಡಿಯಲ್ಲಿ ಬಂದಿರುವೆನು. ನಾನು ದೀನನು, ನಿನ್ನ ದಾಸನು, ನನ್ನ ಮೇಲೆ ಕೃಪೆ ಮಾಡು ॥೮೧೧॥ ನನ್ನಲ್ಲಿರುವ ವಿಷಯ ವಾಸನೆಗಳು ನನಗೆ ಜಯಿಸಲು ಆಗುತ್ತಿಲ್ಲ. ಹೇ ಶ್ರೀಕೃಷ್ಣನೇ, ಆ ವಾಸನೆಗಳನ್ನೆಲ್ಲ ನೀನೇ ನಿವಾರಿಸು. ಅದಕ್ಕಾಗಿ ನಾನು ನಿನ್ನ ಚರಣಗಳಲ್ಲಿ ಬಂದಿರುವೆನು ॥೮೧೨॥ ನಾನು ನಿನ್ನ ಒಬ್ಬ ಪ್ರೇಮಳ ಭಕ್ತನಾಗಿರುವೆನು, ನಿನ್ನಲ್ಲಿ ಮೋಹಿತನಾಗಿರುವೆನು, ಎಂದು ಹೇಳುವುದೂ ಸಹ ಒಂದು ಪ್ರಕಾರದ ಗರ್ವವಾಗುವುದು. ಆದರೆ, ಶ್ರೀ ಅನಂತನೇ, ನೀನು ಸರ್ವಜ್ಞನಾಗಿರುವೆ, ಮತ್ತು ದೀನರಲ್ಲಿ ಕೃಪಾವಂತನಾಗಿರುವೆ ॥೮೧೩॥ ಹೇ ಶ್ರೀಕೃಷ್ಣನೇ, ನಾನೊಬ್ಬನೇ ಶ್ರವಣದ ಅಧಿಕಾರಿಯಾಗಿರುವೆ ಎಂದು ಹೀಗೆಯೂ ನಾನು ಹೇಳಲಾರೆನು. ಆದ್ದರಿಂದ ಹೇ ಕೃಪಾನಿಧಿಯೇ, ನನ್ನ ಮೇಲೆ ಕೃಪೆದೋರು ಎಂದು ಹೇಳುತ್ತ ಉದ್ಧವನು ಶ್ರೀಕೃಷ್ಣನ ಚರಣಗಳನ್ನು ಹಿಡಿದನು ॥೮೧೪॥ ನಾನು ನಿನ್ನದೇ ಗೋತ್ರದಲ್ಲಿ ಜನಿಸಿರುವ ನಿನ್ನ ಸ್ನೇಹೀ ಆಪ್ತನಾಗಿರುವೆನು. ಅಂದ ಮೇಲೆ "ನೀನು ನನ್ನ ಕಾಲುಗಳನ್ನು ಹಿಡಿಯುವುದು ಯೋಗ್ಯವಲ್ಲ" ವೆಂದು ನೀನು ನನಗೆ ಹೇಳಬಹುದು. ಆದರೆ ಹೇ ಗೋವಿಂದನೇ, ಆ ಹೇಳುವಿಕೆಯ ಮರ್ಮವೇನೆಂಬುದು ನಾನು ಬಲ್ಲೆನು ॥೮೧೫॥

ತೂ ನಿರ್ಗುಣ ನಿರ್ವಿಶೇಷ । ಚಿನ್ಮಾತ್ರೈಕ ಚಿದಾಕಾಶ । ಪುರುಷಾಮಾಜೀ ಉತ್ತಮ ಪುರುಷ । ವಂದ್ಯ ಸರ್ವಾಸ ತೂ ಏಕ॥೮೧೬॥ ತೂ ಬ್ರಹ್ಮ ಗಾ ನಿರ್ವಿಕಾರ । ಪ್ರಕೃತಿ ಪುರುಷಾಹೋನಿ ಪರ । ತುಝಾ ವೇದಶಾಸ್ತ್ರಾಂ ನ ಕಳೇ ಪಾರ । ಅಗೋಚರ ಇಂದ್ರಿಯಾ ॥೮೧೭॥ ಏಕ ಆಮುಚೆ ಭಾಗ್ಯಾಚೀ ಕಳಾ । ತ್ಯಾ ತುಜ ಪ್ರತ್ಯಕ್ಷ ದೇಖತೋ ಡೋಳಾ । ಮುಕುಟಕುಂಡಲೇ ವನಮಾಳಾ । ಘನಸಾಂವಳಾ ಶೋಭತು ॥೮೧೮॥ ಸುಂದರ ರಾಜೀವಲೋಚನ । ಪೀತಾಂಬರ ಪರಿಧಾನ । ದೇಖೋನಿ ನಿವತಾಹೇ ತನುಮನ । ತೂ ಜಗಜ್ಜೀವನ ಜಗಾಚಾ ॥೮೧೯॥ ತ್ಯಾ ತುಝೇ ದರ್ಶನ ಅತಿಗೋಡ । ದೇಖತಾ ಪುರೇ ಜಗಾಚೇ ಕೋಡ । ತ್ಯಾಹೀ ದೇಹಾಚೀ ತುಜ ನಾಹೀ ಚಾಡ । ಐಸಾ ನಿಚಾಡ ತೂ ದೇವಾ ॥೮೨೦॥ ತರೀ ಭಕ್ತಕೃಪೇಚಾ ಕಳವಳಾ । ಧರಿಸೀ ನಾನಾವತಾರಮಾಳಾ । ಭಕ್ತ ಇಚ್ಛಾ ತೂ ಸ್ವಲೀಳಾ । ದೇಹಾಚಾ ಸೋಹಳಾ ದಾವಿಸೀ ॥೮೨೧॥ ಭಕ್ತಕೃಪೇನೇ ತತ್ತ್ವತಾ । ತೂ ಅವತರಲಾಸೀ ಕೃಷ್ಣನಾಥಾ ।ತರೀ ಮಾಝಿಯಾ ಪ್ರಶ್ನಾಚಾ ವಕ್ತಾ । ನ ಪ್ರಾರ್ಥಿತಾ ಜಾಲಾಸೀ ॥೮೨೨॥ ಜೇವೀ ವತ್ಸಹುಂಕಾರೇ ಗಾಯೇ । ವೋರಸಲೀ ಧಾಂವತಾಹೇ । ತೇವೀ ಉದ್ಧವಾಪ್ರಶ್ನೀ ದೇವ ಪಾಹೇ । ವೋಳಲಾ ಹೇ ನಿಜಬೋಧೇ ॥೮೨೩॥ ಧನ್ಯಾಸೀ ದುಭತೇ ದೋನೀ ಸಾಂಜೇ । ತೇಹೀ ವತ್ಸಯೋಗೇ ಪಾವಿಜೇ । ವತ್ಸಾಸೀ ವೋಳಲೀ ಸದಾ ಸಹಜೇ । ತೇವೀ ಅಧೋಕ್ಷಜೇ ಉದ್ಧವಾಸೀ ॥೮೨೪॥ ಉದ್ಧವ ಆವಡಲಾ ಆವಡೀ । ತ್ಯಾಚ್ಯಾ ಪ್ರಶ್ನಾಚೀ ಅತಿಗೋಡೀ । ಬಾಪು ಭಾಗ್ಯಾಚೀ ಪರವಡೀ । ಜೋಡಿಲ್ಯಾ ಜೋಡೀ ಶ್ರೀಕೃಷ್ಣ ॥೮೨೫॥ ಜೇ ಜೇ ಕಾಂಹೀ ಉದ್ಧವ ಪುಸತೂ । ತ್ಯಾಸೀ ಅಂಜುಳೀ ವೋಡವೀ ಶ್ರೀಕೃಷ್ಣನಾಥೂ । ಆವಡೀ ತ್ಯಾತೇ ಚಾಟೂ ಪಾಹತೂ । ಭಾವಾರ್ಥಾ ಅನಂತೂ ಭುಲಲಾ ॥೮೨೬॥ ಜೈಸೀ ಅಜಾತಪಕ್ಷ ಪಿಲೀ । ತ್ಯಾಂಸೀ ಪಕ್ಷಿಣೀ ಮುಖೀ ಚಾರಾ ಘಾಲೀ । ತೈಸೀ ನಿಜಜ್ಞಾನ ಗುಹ್ಯಬೋಲೀ । ಕೃಷ್ಣ ಹೃದಯೀ ಘಾಲೀ ಉದ್ಧವಾಚೇ ॥೮೨೭॥ ಉದ್ಧವ ಪ್ರಶ್ನಾಚೇ ಉತ್ತರ । ಪಾಂಚ ಶ್ಲೋಕೀ ಶಾರ್ಙ್ಗಧರ । ಸಾಧುಲಕ್ಷಣೇ ವಿಚಿತ್ರ । ಅತಿಪವಿತ್ರ ಸಾಂಗೇಲ ॥೮೨೮॥ ಸಾಧುಲಕ್ಷಣೇ ಅಪಾರ ಜಾಣ। ತ್ಯಾಂತ ಉತ್ತಮೋತ್ತಮ ತೀಸ ಗುಣ । ನಿವಡೋನಿಯಾ ಶ್ರೀಕೃಷ್ಣ । ಉದ್ಧವಾಸೀ ಆಪಣ ಸಾಂಗತು ॥೮೨೯॥

ನೀನು ನಿರ್ಗುಣನು, ಸರ್ವತ್ರ ಸಮಾನನು. ನೀನು ಚಿತ್ಸ್ವರೂಪದಿಂದ ಚಿದಾಕಾಶದಲ್ಲಿರುವವನು. ಪುರುಷರಲ್ಲಿ ಉತ್ತಮ ಪುರುಷನು ಮತ್ತು ಸರ್ವರಿಗೂ ವಂದ್ಯನಾಗಿರುವವನು ॥೮೧೬॥ ಪ್ರಕೃತೀ ಪುರುಷರಿಗಿಂತಲೂ ಆಚೆ ಇರುವ ಶ್ರೇಷ್ಠವಾದ ಯಾವ ನಿರ್ವಿಕಾರ ಪರಬ್ರಹ್ಮ ನೀನಾಗಿರುವೆ. ವೇದಶಾಸ್ತ್ರಗಳಿಗೆ ನಿನ್ನ ಕೊನೆ ಹತ್ತಲಾರದು. ನಿನಗೆ ಯಾವ ಇಂದ್ರಿಯಗಳಿಂದ ತಿಳಿಯಲು ಸಾಧ್ಯವಾಗದು ॥೮೧೭॥ ನಮ್ಮ ಭಾಗ್ಯವು ದೊಡ್ಡದಾಗಿರುವುದರಿಂದ ನಾವು ನಿನ್ನನ್ನು ಕಣ್ಣುಗಳಿಂದ ಕಾಣುತ್ತಿದ್ದೇವೆ. ಮುಕುಟ, ಕಂಡಲಗಳು, ವೈಜಯಂತೀ ಮಾಲೆ ಇವುಗಳಿಂದ ನಿನ್ನ ಶ್ಯಾಮ ಮೂರ್ತಿಯು ಶೋಭಾಯಮಾನವಾಗಿ ತೋರುತ್ತಿರುವುದು ॥೮೧೮॥ ನಿನ್ನ ಕಮಲದಂತಿರುವ ಸುಂದರ ನೇತ್ರಗಳು, ಪೀತಾಂಬರಧಾರಿಯಾಗಿರುವ ನಿನ್ನ ರೂಪವನ್ನು ಕಂಡು ನನ್ನ ಮನವು ತೃಪ್ತವಾಗಿದೆ. ನೀನು ಸರ್ವ ಜಗತ್ತಿನ ಜಗಜ್ಜೀವನನಾಗಿರುವೆ ॥೮೧೯॥ ನಿನ್ನ ಯಾವ ದರ್ಶನವು ಬಹು ಮಧುರವಾಗಿರುವುದು. ನಿನ್ನನ್ನು ನೋಡಿದಾಕ್ಷಣವೇ ಸರ್ವ ಜಗತ್ತಿನ ಬೇಡಿಕೆಗಳು ಪೂರ್ಣಗೊಳ್ಳುವುವು. ಆದರೆ ಹೇ ದೇವನೇ, ಹೀಗಿರುವ ನಿನ್ನ ದೇಹದ ಮೇಲೆ ನಿನ್ನ ಯಾವ ಆಸಕ್ತಿಯು ಇರುವುದಿಲ್ಲ, ನೀನು ನಿಜವಾದ ಅನಾಸಕ್ತನಾಗಿರುವೆ ॥೮೨೦॥ ಹೀಗಿದ್ದರೂ ಸಹ ಭಕ್ತರಲ್ಲಿ ಕೃಪೆ ಮಾಡುವ ತಳಮಳಿತ ಅಂತಃಕರಣದಿಂದ ನೀನು ಅನೇಕ ಪ್ರಕಾರಗಳ ಅವತಾರಗಳನ್ನು ಧರಿಸುವೆ. ಭಕ್ತರ ಇಚ್ಛೆಗಾಗಿಯೇ ನೀನು ನಿನ್ನ ಲೀಲಾ ಮಾತ್ರದಿಂದ ದೇಹದ ವೈಭವವನ್ನು ಪ್ರಕಟಗೊಳಿಸುವೆ ॥೮೨೧॥ ಹೇ ಶ್ರೀಕೃಷ್ಣನೇ, ನಿಜವಾಗಿಯೂ ನೀನು ಭಕ್ತರಲ್ಲಿ ಕೃಪೆ ಮಾಡುವುದಕ್ಕಾಗಿಯೇ ಅವತಾರವನ್ನು ಧರಿಸಿರುವೆ. ಆದ್ದರಿಂದಲೇ ನಾನು ಪ್ರಾರ್ಥನೆಯನ್ನು ಮಾಡದಿದ್ದರೂ ಸಹ ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವ ವಕ್ತಾನಾಗಿರುವೆ ॥೮೨೨॥ ಯಾವ ಪ್ರಕಾರವಾಗಿ ಆಕಳು ತನ್ನ ಕರುವಿನ ತಳಮಳೀತ ಕರೆಯನ್ನು ಕೇಳಿ ಹಾಲು ತುಂಬಿದ ಕೆಚ್ಚಲದೊಂದಿಗೆ ಧಾವಿಸಿ ಬರುವಂತೆ, ಉದ್ಧವನ ಪ್ರೇಮಳ ಪ್ರಶ್ನೆಗಳ ಕೇಳುವಿಕೆಯಿಂದ ಶ್ರೀಕೃಷ್ಣನಿಗೆ ಆತ್ಮಜ್ಞಾನವು ಉಕ್ಕೇರಿತು ॥೮೨೩॥ ಆಕಳಕರುವಿನ ನಿಮಿತ್ತದಿಂದ ಆಕಳದ ಯಜಮಾನನಿಗೆ ಮುಂಜಾನೆ, ಸಾಯಂಕಾಲ ಹಾಲು ಅನಾಯಾಸವಾಗಿ ದೊರೆಯುವುದು. ಈ ಪ್ರಕಾರವಾಗಿ ಉದ್ಧವನ ನಿಮಿತ್ತದಿಂದ ಶ್ರೀಕೃಷ್ಣನ ಮುಖದಿಂದ ಈ ಯಾವ ಅಪ್ರತಿಮ ರಹಸ್ಯವು ಪ್ರಕಟವಾಯಿತು ॥೮೨೪॥ ಶ್ರೀಕೃಷ್ಣನಿಗೆ ಉದ್ಧವನಲ್ಲಿ ಪ್ರೇಮವಿರುವುದರಿಂದ ಆತನಿಗೆ ಉದ್ಧವನ ಪ್ರಶ್ನೆಗಳು ಬಹು ಮಧುರವಾದವು. ಇಂತಹ ಉದ್ಧವನ ಭಾಗ್ಯವನ್ನು ಹೇಗೆ ವರ್ಣಿಸಬೇಕು ? ಆತನು ಶ್ರೀಕೃಷ್ಣನಂತಹ ಅಮೌಲ್ಯ ನಿಧಿಯನ್ನು ಪಡೆದುಕೊಂಡಿದ್ದನು ॥೮೨೫॥ ಉದ್ಧವನು ಯಾವ ಯಾವುದನ್ನು ಏನೇ ಕೇಳುತ್ತಿರಲಿ, ಅದನ್ನು ಸ್ವೀಕರಿಸಲು ಶ್ರೀಕೃಷ್ಣನು ತನ್ನ ಎರಡೂ ಕೈಗಳನ್ನು ಮುಂದೆ ಒಡ್ಡುತ್ತಿದ್ದನು. ಆಕಳು ಪ್ರೇಮದಿಂದ ತನ್ನ ಕರುವನ್ನು ನೆಕ್ಕುವಂತೆ, ಶ್ರೀಕೃಷ್ಣನಿಗೆ ಹೃದಯದಲ್ಲಿ ಪ್ರೇಮವು ನಿರ್ಮಾಣವಾಗುತ್ತಿತ್ತು. ಇಷ್ಟೊಂದು ಉದ್ಧವನ ಭಕ್ತಿಗೆ ಮಾರು ಹೋಗಿದ್ದನು ॥೮೨೬॥ ಇನ್ನೂ ರೆಕ್ಕೆ ಮೂಡದ ತನ್ನ ಮರಿಗಳಿಗೆ ಪಕ್ಷಿಯು ತನ್ನ ಚುಂಚಿನಿಂದ ಆಹಾರವನ್ನು ಹಾಕುವುದು. ಅದರಂತೆ ಆತ್ಮಜ್ಞಾನದ ಗುಹ್ಯಗೋಷ್ಠಿಯನ್ನು ಉದ್ಧವನ ಅಂತಃಕರಣದಲ್ಲಿ ಹಾಕಲಾರಂಭಿಸಿದನು ॥೮೨೭॥ ಮುಂದಿನ ಐದು ಶ್ಲೋಕಗಳಲ್ಲಿ ಶ್ರೀಕೃಷ್ಣನು ಉದ್ಧವನ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವನು. ಅವುಗಳಲ್ಲಿ ಸಾಧುಗಳ ಅದ್‌ಭೂತ ಮತ್ತು ಪವಿತ್ರ ಲಕ್ಷಣಗಳನ್ನು ಹೇಳುವನು ॥೮೨೮॥ ಸಾಧುಗಳ ಲಕ್ಷಣಗಳು ಅಪಾರವಾಗಿರುವುವು. ಅವುಗಳಲ್ಲಿನ ಉತ್ತಮೋತ್ತಮವಾದ ಮೂವತ್ತು ಲಕ್ಷಣಗಳನ್ನು ಆರಿಸಿ ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ॥೮೨೯॥

ಶ್ರೀ ಭಗವಾನುವಾಚ :-

ಕೃಪಾಲುರಕೃತದ್ರೋಹಸ್ತಿತಿಕ್ಷುಃಸರ್ವದೇಹಿನಾಮ್ ।
ಸತ್ಯಸಾರೋಽನವದ್ಯಾತ್ಮಾ ಸಮಃ ಸರ್ವೋಪಕಾರಕಃ ।।೨೯।।

ಅರ್ಥ :- ಶ್ರೀಕೃಷ್ಣನು ನುಡಿದನು ; ಹೇ ಪ್ರಿಯ ಉದ್ಧವನೇ, ನನ್ನ ಭಕ್ತನು ಕೃಪೆಯ ಮೂರ್ತಿಯಾಗಿರುವನು ಆತನು ಯಾವ ಪ್ರಾಣಿಯಲ್ಲಿಯೂ ವೈರಭಾವವನ್ನು ಇಡಲಾರನು. ಮಹಾ ದುಃಖಗಳನ್ನು ಆತನು ಪ್ರಸನ್ನ ಚಿತ್ತದಿಂದ ಸ್ವೀಕರಿಸುವನು. ಆತನ ಜೀವನದ ಸಾರವು ಸತ್ಯವಾಗಿರುವುದು. ಆತನ ಮನದಲ್ಲಿ ಯಾವ ಪ್ರಕಾರದ ಪಾಪವಾಸನೆ ಇರದು. ಆತನು ಸಮದರ್ಶಿ ಮತ್ತು ಸರ್ವರ ಕಲ್ಯಾಣಕಾರಕನಾಗಿರುವನು.

ಕೃಪೇಸೀ ಸ್ವತಂತ್ರ ಜನ್ಮ ನಾಹೀ । ಜೇಥ ಉಪಜೇ ತೋ ಸಾಧು ಪಾಹೀ । ಕೃಪಾ ವಸೇ ಸಂತಾಂಚ್ಯಾ ದೇಹೀ । ತ್ಯಾಂಚೇನಿ ತೇ ಪಾಹೀ ದಾಟುಗೀ ಜಗೀ ।।೫೩೦।। ಕೃಪಾ ತ್ಯಾಂಚೇನಿ ಮಹಿಮಾ ಆಲೀ । ದಯಾ ತ್ಯಾಂಚೇನಿ ಜೀವೇ ಜ್ಯಾಲೀ । ಕಠಿಣತ್ವಾಚೀ ಕಾಂಟೀ ಕಾಡಿಲೀ । ಸಮೂಳೀ ಉಪಟಿಲೀ ನಿಷ್ಠುರತಾ ।।೫೩೧।। ಕೃಪಾ ಭೂತಮಾತ್ರಾಚ್ಯಾ ಠಾಯೀ । ಸಾರಖೀಚ ಸರ್ವ ದೇಹೀ । ಯೇಥತೇಥ ಹೇ ತ್ಯಾ ನಾಹೀ । ಅವಕೃಪಾ ಠಾಯೀ ನಿಮಾಲೀ ।।೫೩೨।। ನವಲ ಕೃಪಾಳುತ್ವಾಚೇ ಚಿತ್ತ । ಜೀವಾಚಾ ಜೀವ ಜೀವೀ ಸ್ಯೂತ । ದುಃಖ ಹರೋನಿ ಸುಖ ದೇತ । ಕೃಪಾ ಅದ್ಭುತ ಯಾಪರೀ ।।೫೩೩।। ಜೇಣೇ ಆಪಣಾಸೀ ಹೋಯ ದುಃಖ । ತೇ ಪರಾಸೀ ನ ಕರೀ ನಿಃಶೇಖ । ಜೇಣೇ ಆಪಣಿಯಾ ಹೋಯ ಸುಖ । ತೇ ಕರೀ ಆವಶ್ಯಕ ಪ್ರಾಣಿಮಾತ್ರಾ ।।೫೩೪।। ಯಾ ನಾಂವ ಕೃಪಾಳುತಾ। ಹೇ ಪಹಿಲೇ ಲಕ್ಷಣ ಸಂತಾ । ದುಸರೇ ತೇ ಅದ್ರೋಹತಾ । ಐಕ ಆತಾ ಸಾಂಗೇನ ।।೫೩೫।। ಲೋಕೀ ಹಿಂಡತಾ ಅದ್ರೋಹತಾ । ಠಾವೋ ನ ಲಭೇಚಿ ಸರ್ವಥಾ । ಮಗ ಶರಣ ಆಲೀ ಸಾಧುಸಂತಾ । ಸಾವಕಾಶತಾ ವಸ್ತಿಸೀ ।।೫೩೬।। ತೇ ದಯಾಳು ಶರಣಾಗತಾ । ತಿಹೀ ಪ್ರತಿಪಾಳಿಲೀ ಅದ್ರೋಹತಾ । ಭೂತೀ ಭಗವಂತೂ ದೇಖತಾ। ದ್ರೋಹಾಚೀ ವಾರ್ತಾ ನಿಮಾಲೀ ।।೫೩೭।। ವ್ಯಾಘ್ರಸರ್ಪಾದಿ ದೇಹಾಂಸೀ । ಕದಾ ದ್ವೇಷ ನುಪಜೇ ತ್ಯಾಸೀ। ಜರೀ ದೇಊ ಆಲೇ ಉಪದ್ರವಾಸೀ । ತರೀ ದ್ವೇಷಾಸೀ ಕರೀನಾ ।।೫೩೮।। ದೇಹಾಸ ಆಲಿಯಾ ಆಪದಾ । ತೇಣೇ ಝಾಡಿಕರೀ ಪ್ರಾರಬ್ಧಾ । ದ್ವೇಷ ಯೇಊ ನೇದೀ ಕದಾ । ನಾತಳೇ ಕ್ರೋಧಾ ನಿಜಬೋಧೇ ।।೫೩೯।। ಹೇ ಜಾಣ ಪಾ ಅದ್ರೋಹತಾ । ದುಸರೇ ಲಕ್ಷಣ ತತ್ತ್ವತಾ । ತಿತಿಕ್ಷಾ ತೇ ಐಕ ಆತಾ । ಸಹನಶೀಲತಾ ಸಾಧೂಂಚೀ ।।೫೪೦।।

ಕೃಪೆ ಎಂಬುದು ತಾನು ಸ್ವತಂತ್ರವಾಗಿ ಜನ್ಮಕ್ಕೆ ಬರುವುದಿಲ್ಲ. ಅದು ಯಾರಲ್ಲಿ ಹುಟ್ಟುವುದೋ, ಆತನೇ ಸಾಧು ಎಂದು ತಿಳಿಯಬೇಕು. ಕೃಪೆಯು ಸಂತರ ಶರೀರದಲ್ಲಿ ವಾಸಮಾಡುವುದು. ಆದ್ದರಿಂದ ಅದಕ್ಕೆ ಜಗತ್ತಿನಲ್ಲಿ ಇಷ್ಟೊಂದು ಮಹತ್ವವು ಪ್ರಾಪ್ತವಾಗಿರುವುದು ।।೫೩೦।। ಕೃಪೆಯು ಸಂತರಿಂದಲೇ ಮಹತ್ವಕ್ಕೆ ಬಂದಿತು, ಅವರ ಜೀವದಲ್ಲಿಯೇ ದಯೆಯು ಜೀವ ಪಡೆಯಿತು. ಇವು ಕಠೋರತನದ ಮುಳ್ಳನ್ನು ತೆಗೆದೊಗೆದವು, ನಿಷ್ಠೂರತೆಯನ್ನು ಬೇರು ಸಮೇತವಾಗಿ ಕಿತ್ತೊಗೆದವು ।।೫೩೧।। ಸಾಧುಗಳ ಕೃಪೆಯು ಸರ್ವಪ್ರಾಣಿಮಾತ್ರರಲ್ಲಿ ಸಮಾನವಾಗಿರುವುದು. ಕೃಪೆಯು ಒಬ್ಬರ ಮೇಲಿದೆ, ಇನ್ನೊಬ್ಬರಿಗೆ ಇಲ್ಲ ಎಂಬುದು ಎಂದೂ ಆಗುವುದಿಲ್ಲ. ಆದ್ದರಿಂದ ಅವಕೃಪೆ ಎಂಬುದು ತಾನಿದ್ದ ಸ್ಥಳದಲ್ಲಿಯೇ ಕರಗಿ ಇಲ್ಲದಾಯಿತು ।।೫೩೨।। ದಯಾಳೂ ಪುರುಷನ ಚಿತ್ತವು ಅತಿಶಯ ವಿಲಕ್ಷಣವಾಗಿರುವುದು. ಆತನು ಪ್ರಾಣಿಮಾತ್ರರ ಜೀವದಲ್ಲಿ ತಾನು ಏಕರೂಪನಾಗಿ ಅವರ ದುಃಖಗಳನ್ನು ದೂರ ಮಾಡುವನು. ಸುಖವನ್ನು ಬೆಳೆಸುವನು. ಈ ಪ್ರಕಾರವಾಗಿ ಅವರ ಕೃಪೆಯು ಅದ್ಭುತವಾಗಿರುವುದು ।।೫೩೩।। ಯಾವುದರಿಂದ ತನಗೆ ದುಃಖವಾಗುವುದೋ, ಅದನ್ನು ಪರರಿಗೆ ಎಂದಿಗೂ ಮಾಡಲಾರನು. ಮತ್ತು ಯಾವುದರಿಂದ ತನಗೆ ಸುಖವಾಗುವುದೋ, ಅದನ್ನು ಸರ್ವಪ್ರಾಣಿಮಾತ್ರರಿಗೆ ಮುಟ್ಟಿಸುವನು ।।೫೩೪।। ಹೀಗೆ ನಡೆದುಕೊಳ್ಳುವಿಕೆಯ ಹೆಸರೇ ಕೃಪಾಳುತನವಾಗಿರುವುದು. ಇದು ಸಂತರ ಮೊದಲನೆಯ ಲಕ್ಷಣವಾಗಿರುವುದು. ಎರಡನೆಯ ಲಕ್ಷಣವು ಅದ್ರೋಹತ್ವವಾಗಿರುವುದು. ಅದನ್ನೂ ಕೂಡ ಈಗ ಹೇಳುವೆನು, ಕೇಳು ।।೫೩೫।। ಅದ್ರೋಹತ್ವವು ಜಗತ್ತಿನಲ್ಲಿ ತಿರುಗಾಡುತ್ತಿರಲು ಅದಕ್ಕೆ ವಾಸಮಾಡಲು ಎಲ್ಲಿಯೂ ಸ್ಥಳ ಸಿಗದಾಯಿತು. ಆಗ ಅದು ಸಾಧುಸಂತರಿಗೆ ಶರಣಾಯಿತು. ಆಗ ಅವರಲ್ಲಿ ವಸತಿಯಾಯಿತು ।।೫೩೬।। ಸಾಧು ಸತ್ಪುರುಷರು ಶರಣಾದವರಿಗೆ ದಯೆ ತೋರುವರು. ಅವರು ಅದ್ರೋಹವನ್ನು ಸಂಪೂರ್ಣವಾಗಿ ಪ್ರತಿಪಾಲಿಸಿದರು. ಅವರು ಪ್ರತ್ಯೇಕ ಪ್ರಾಣಿಮಾತ್ರರಲ್ಲಿ ದೇವರನ್ನು ಕಾಣುತ್ತಿರುವುದರಿಂದ ದ್ರೋಹದ ಹೇಳ ಹೆಸರಿಲ್ಲದಂತಾಯಿತು ।।೫೩೭।। ಹುಲಿ, ಸರ್ಪ ಇತ್ಯಾದಿ ಭಿನ್ನ ಭಿನ್ನ ಪ್ರಕಾರಗಳ ದೇಹಗಳಿದ್ದರೂ ಸಾಧುವಿನ ಮನದಲ್ಲಿ ದ್ವೇಷವು ಉತ್ಪನ್ನವಾಗುವುದಿಲ್ಲ. ಒಂದು ವೇಳೆ ಅವುಗಳಿಂದ ಪೀಡೆಯಾದರೂ ಸಹ ಸಾಧು ಸಂತರು ಅವುಗಳನ್ನು ದ್ವೇಷಿಸುವುದಿಲ್ಲ ।।೫೩೮।। ಸಂತರ ದೇಹದ ಮೇಲೆ ಒಂದು ವೇಳೆ ಆಪತ್ತುಗಳು ಬಂದೊದಗಿದರೂ ಇದು ನನ್ನ ಪ್ರಾರಬ್ಧ ಭೋಗ ಎಂದು ತಿಳಿದು ಅವರ ಮನದಲ್ಲಿ ಕ್ರೋಧವು ಹುಟ್ಟುವುದಿಲ್ಲ. ಹಾಗೆಯೇ ಆತ್ಮಜ್ಞಾನದಿಂದ ಕ್ರೋಧವನ್ನು ಅವರು ಎಂದಿಗೂ ಮುಟ್ಟಲಾರರು ।।೫೩೯।। ಇದರ ಹೆಸರೇ ಅದ್ರೋಹತೆ ಎಂದು ತಿಳಿದುಕೊ. ಇದು ಸಂತರ ಎರಡನೆಯ ಲಕ್ಷಣವಾಗಿರುವುದು. ಈಗ ತಿತಿಕ್ಷಾ ವಿಷಯವಾಗಿ ಹೇಳುವೆನು, ಕೇಳು, ತಿತಿಕ್ಷಾ ಎಂದರೆ ಸಾಧುವಿನ ಅಂಗದಲ್ಲಿರುವ ಸಹನಶೀಲತೆಯಾಗಿರುವುದು ।।೫೪೦।।

ಶಾಂತಿ ಪರದೇಶೀ ಝಾಲೀ ಹೋತೀ । ಜೇಥೇ ಜಾಯೇ ತೋ ದವಡೀ ಪರತೀ । ಮಗ ಅತಿದೀನ ಯೇತಾ ಕಾಕುಳತೀ । ನಿಜಧಾಮಾ ಸಂತೀ ಆಣಿಲೀ ॥೮೪೧॥ ಸಂತೀ ವಾಢವಿಲೀ ಅತಿಪ್ರೀತೀ । ತೇ ಭಗವಂತಾಚೀ ಝಾಲೀ ಪಢಿಯಂತೀ । ತೇಣೇ ಆಪುಲೀ ನಿಜಸಂಪತ್ತೀ । ಶಾಂತೀಚ್ಯಾ ಹಾತೀ ದಿಧಲೀ ॥೮೪೨॥ ಶಾಂತೀ ಸಕಳ ವೈಭವೇಸೀ । ಅಖಂಡ ಅಸೇ ಸಂತಾಪಾಶೀ । ಯಾಲಾಗೀ ಸಹನಶೀಲತಾ ತಯಾಂಸೀ । ಅಹರ್ನಿಶೀ ಅನಿವಾರ ॥೮೪೩॥ ಲಾಗತಾ ಸಕಳ ಭೂತಾಂಚಾ ಝಟಾ । ನ ಮ್ಹಣೇ ಹಾ ಭಲಾ ವೋಖಟಾ । ನಾಚತೂ ನಿಜಶಾಂತೀಚೇ ಚೋಹಟಾ । ಸಂತ ಗೋಮಟಾ ತ್ಯಾ ನಾಂವ ॥೮೪೪॥ ಐಶೀ ಜೇ ಸಹನಶೀಲತಾ । ತೇ ತಿತಿಕ್ಷಾ ಜಾಣ ತತ್ತ್ವತಾ । ಹೇ ತಿಸರೀ ಲಕ್ಷಣತಾ । ಸತ್ಯಾಚೀ ಸತ್ಯತಾ ಅವಧಾರೀ ॥೮೪೫॥ ಸತ್ಯ ಅಲ್ಪಾಯುಷೀ ಝಾಲೇ ಯೇಥೇ । ಮರೇ ಉಪಜೇ ಜೇಥಿಂಚ್ಯಾ ತೇಥೇ । ಕೋಠೇಹೀ ನವ್ಹೇ ವಾಢತೇ । ತೇಣೇ ಸಂತಾತೇ ಠಾಕಿಲೇ ॥೮೪೬॥ ಸತ್ಯಾಸೀ ಸಂತಾಸೀ ಹೋತಾ ಭೇಟೀ । ತಂವ ಸತ್ಯಸ್ವರೂಪೀ ಪಡಲೀ ಗಾಂಠೀ । ಸತ್ಯ ಸಂತತ್ವೇ ಉಠೀ । ಝಾಲೇ ಸೃಷ್ಟೀ ಚಿರಾಯು ॥೮೪೭॥ ಯಾಪರೀ ಸತ್ಯ ಸಂತದೃಷ್ಟೀ । ಸತ್ಯ ಸಾರೇ ಆಲೇ ಪುಷ್ಟೀ । ಸಂತಬಳೇ ವಾಢಲೇ ಸೃಷ್ಟೀ । ಸತ್ಯೇ ಭೇಟೀ ಪರಬ್ರಹ್ಮೀ ॥೮೪೮॥ ಸಂತಾಸೀ ಹೋಆವಯಾ ಉತರಾಯೀ । ಸತ್ಯ ಲಾಗಲೇ ತ್ಯಾಂಚೇ ಪಾಯೀ । ಸಂತಚರಣಾವೇಗಳಾ ಪಾಹೀ । ಥಾರಾ ನಾಹೀ ಸತ್ಯಾಸೀ ॥೮೪೯॥ ಐಸೇ ಸತ್ಯಾಸ ಆಧಾರಭೂತ । ಜ್ಯಾಂಚೇ ಪಾಖೋವಾ ಸತ್ಯಜೀತ । ಜ್ಯಾಂಚೇನಿ ಬಳೇ ಸತ್ಯ ಸಮರ್ಥ । ತೇ ಶುದ್ಧ ಸಂತ ಜಾಣಾವೇ ॥೮೫೦॥ ಜ್ಯಾಂಸೀ ಸಬಾಹ್ಯ ಸತ್ಯತ್ವೇ ತುಷ್ಟೀ । ಜೇ ಸತ್ಯಸ್ವರೂಪೇ ಆಲೇ ಪುಷ್ಟೀ । ಸತ್ಯೇ ಧಾಲೀ ದೇ ಢೇಂಕರ ದೃಷ್ಟೀ । ಜ್ಯಾಂಚೀ ವಾಚಾ ಉಠೀ ಸತ್ಯತ್ವೇ ॥೮೫೧॥ ಯಾ ನಾಂವ ಜಾಣ ಸತ್ಯಾಚೇ ಸಾರ । ಹೇ ಸಂತಾಂಚೇ ವಸತೇ ಘರ । ಹೇ ಮಜ ಮಾನ್ಯ ಸಂತ ಸಾಚಾರ । ಮೀ ನಿರಂತರ ತ್ಯಾಪಾಶೀ ॥೮೫೨॥ ಜೆಂಹೀ ಅಸತ್ಯಾಚೀ ವಾಹೂನಿ ಆಣ । ಜ್ಯಾಮಾಜೀ ಸತ್ಯ ಸಪ್ರಮಾಣ । ಜೇ ಸದಾ ಸತ್ಯತ್ವೇ ಸಂಪನ್ನ । ಹೇ ಮುಖ್ಯ ಲಕ್ಷಣ ಸಾಧೂಂಚೇ ॥೮೫೩॥ ಯಾ ನಾಂವ ಸತ್ಯಸಾರ । ಸಂತಲಕ್ಷಣ ಸಾಚಾರ । ಹಾ ಚೌಥಾ ಗುಣ ಸಧರ । ಅನವದ್ಯ ಅಪಾರ ತೇ ಐಕಾ ॥೮೫೪॥

ಶಾಂತಿ ಎಂಬುದಕ್ಕೆ ಗಡಿಪಾರು ಮಾಡಲಾಗಿತ್ತು. ಇದು ಯಾರಲ್ಲಿಯೇ ಹೋಗಲಿ, ಅವರು ಅದಕ್ಕೆ ಓಡಿಸಿಬಿಡುತ್ತಿದ್ದರು. ಕೊನೆಗೆ ಶಾಂತಿಯು ಅತ್ಯಂತ ದೀನವಾಯಿತು. ಹಾಗೆಯೇ ಸಂತರ ಸಮೀಪ ಬಂದಿತು. ಆಗ ಸಂತರು ಅದನ್ನು ಕಾರುಣ್ಯಭಾವದಿಂದ ತಮ್ಮ ಮನೆಗೆ ತಂದಿಟ್ಟರು ॥೮೪೧॥ ಸಂತರು ಈ ಶಾಂತಿಯನ್ನು ಅತಿಶಯ ಪ್ರೇಮದಿಂದ ಬೆಳೆಸಿದರು. ಆದ್ದರಿಂದ ಇದು ಭಗವಂತನಿಗೆ ಅತ್ಯಂತ್ರ ಪ್ರಿಯವಾಯಿತು. ದೇವನು ತನ್ನ ಸರ್ವ ವೈಭವವನ್ನು ಶಾಂತಿಯ ಕೈಯಲ್ಲಿ ಕೊಟ್ಟನು ॥೮೪೨॥ ಅಂದಿನಿಂದಲೂ ಶಾಂತಿಯು ಭಗವಂತನ ಐಶ್ವರ್ಯ ಸಹ ಸಂತರಲ್ಲಿ ನಿರಂತರವಾಗಿ ಇರುತ್ತಿರುವುದು. ಆದ್ದರಿಂದ ಸಂತರಲ್ಲಿ ಅಪಾರವಾದ ಸಹನಶೀಲತೆಯು ಹಗಲು ರಾತ್ರಿ ಇರುವುದು ॥೮೪೩॥ ಸರ್ವ ಪ್ರಾಣಿಗಳ ಸಮುದಾಯವು ಏಕತ್ರವಾಗಿ ಸಾಧುವಿಗೆ ಉಪದ್ರವ ಕೊಟ್ಟರೂ ಕೂಡ ಸಾಧು ಎಂದಿಗೂ ಇವನು ಒಳ್ಳೆಯವನು, ಇವನು ಕೆಟ್ಟವನು ಎಂದು ಹೀಗೆ ಹೇಳಲಾರನು. ಈತನು ಆತ್ಮ ಶಾಂತಿಯ ಬೋಧೆಯಲ್ಲಿ ಕುಣಿಯುತ್ತಿರುವನು. ಈತನಿಗೆ ಉತ್ತಮ ಸಂತ ಎಂದು ಹೇಳುವರು ॥೮೪೪॥ ಹೀಗಿರುವ ಸಹನಶೀಲತೆಗೆ ತಿತಿಕ್ಷಾ ಎಂದು ಹೆಸರು ಇರುವುದು. ಇದು ಸಂತರ ಮೂರನೆಯ ಲಕ್ಷಣವಾಗಿರುವುದು. ಈಗ ಸತ್ಯದ ಸತ್ವವನ್ನು ಕೇಳು ॥೮೪೫॥ ಈ ಸತ್ಯವು ಜಗತ್ತಿನಲ್ಲಿ ಅಲ್ಪಾಯುಷಿಯಾಗಿತ್ತು. ಅದು ಹುಟ್ಟಿದ ಕೂಡಲೇ ಅಲ್ಲಿಯೇ ಮರಣವಾಗುತ್ತಿತ್ತು. ಅದರ ಬೆಳವಣಿಗೆಯು ಎಲ್ಲಿಯೂ ಆಗಲಿಲ್ಲ. ಆದ್ದರಿಂದ ಇದು ಸಂತರ ಮುಂದೆ ಬಂದು ನಿಂತುಕೊಂಡಿತು ॥೮೪೬॥ ಸಂತರ ಮತ್ತು ಸತ್ಯದ ಭೇಟಿಯಾಗಲು ಸತ್ಯ ಸ್ವರೂಪದ ಗಂಟು ಬಿದ್ದಿತು. ಸತ್ಯವು ಸಂತಸ್ವರೂಪವಾಗಿ ಬಿಟ್ಟಿತು. ಆಗ ಸೃಷ್ಟಿಯಲ್ಲಿ ಇದು ಚಿರಂಜೀವಿಯಾಗಿ ಉಳಿದುಕೊಂಡಿತು ॥೮೪೭॥ ಈ ಪ್ರಕಾರವಾಗಿ ಸತ್ಯವು ಸಂತರ ಕೃಪಾದೃಷ್ಟಿಯಿಂದಲೇ ಸತ್ಯತ್ವದಿಂದ ಪುಷ್ಟಗೊಂಡಿತು. ಇದು ಸಂತರ ಬಲದಿಂದ ಜಗತ್ತಿನಲ್ಲಿ ಸರ್ವತ್ರವೂ ಪಸರಿಸಿತು. ಆದ್ದರಿಂದ ಇದರಿಂದಲೇ ಪರಬ್ರಹ್ಮನ ಭೇಟಿಯಾಗಲು ಶಕ್ಯವಾಯಿತು ॥೮೪೮॥ ಸಂತರಿಂದ ಋಣಮುಕ್ತವಾಗಲು ಸತ್ಯವು ಸಂತಚರಣಕಮಲದ ಆಶ್ರಯ ಮಾಡಿತು. ಇದಕ್ಕೆ ಸಂತರ ಚರಣ ಬಿಟ್ಟರೆ ಅನ್ಯ ಸ್ಥಳವು ಇಲ್ಲವೇ ಇಲ್ಲದಾಯಿತು ॥೮೪೯॥ ಹೀಗೆ ಸತ್ಯಕ್ಕೆ ಆಧಾರಭೂತರಾದವರ ರೆಕ್ಕೆಯ ನೆರಳಿನಲ್ಲಿ ಸತ್ಯವು ಜೀವ ಹಿಡಿದು ಬದುಕಿರುವುದು. ಅವರ ಬಲದಿಂದಲೇ ಸತ್ಯವು ಸಮರ್ಥವಾಗುವುದು. ಇವರೇ ಶುದ್ಧ ಸಂತರು ಎಂದು ತಿಳಿಯಬೇಕು ॥೮೫೦॥ ಯಾರಿಗೆ ಸತ್ಯದ ವರ್ತನೆಯಿಂದ ಒಳಹೊರಗೆ ಸಂತೋಷವಾಗುವುದೋ, ಯಾರು ಸತ್ಯ ಸ್ವರೂಪದಿಂದಲೇ ಸಾಮರ್ಥ್ಯ ಸಂಪನ್ನರಾಗಿರುವರೋ, ಅವರ ದೃಷ್ಟಿಯು ಸತ್ಯದಿಂದ ತೃಪ್ತವಾಗಿ ತೇಗುವುದು. ಹಾಗೆಯೇ ಸತ್ಯವಾದ ಭಾಷಣದಿಂದ ಅವರ ವಾಣಿಯು ಕಾರ್ಯಗತವಾಗುವುದು ॥೮೫೧॥ ಇದರ ಹೆಸರೇ ಸತ್ಯದ ಶ್ರೇಷ್ಠತ್ವವಾಗಿರುವುದು. ಸಂತರಿರುವ ಮನೆಯು ಸತ್ಯವಾಗಿರುವುದು. ಇಂತಹ ಸಂತರು ನಿಜವಾಗಿಯೂ ನನಗೆ ಮಾನ್ಯರು. ನಾನು ನಿರಂತರವಾಗಿ ಅವರಲ್ಲಿರುವೆನು ॥೮೫೨॥ ಇವರು ಅಸತ್ಯ ವರ್ತನೆಯನ್ನು ಎಂದಿಗೂ ಆಗದಂತೆ ನಿಶ್ಚಯಿಸಿರುವರು ಇವರಲ್ಲಿ ಸತ್ಯವು ಸಪ್ರಮಾಣವಾಗಿ ಇರುವುದು. ಯಾರು ನಿರಂತರವಾಗಿ ಸತ್ಯಸಂಪನ್ನರಾಗಿರುವರೋ, ಅದುವೇ ಸಾಧುವಿನ ಮುಖ್ಯ ಲಕ್ಷಣವಾಗಿರುವುದು ॥೮೫೩॥ ಸತ್ಯಸಾರ ಎಂದು ಇದರ ಹೆಸರಾಗಿರುವುದು. ಇದುವೇ ಸಂತರ ನಿಜವಾದ ಲಕ್ಷಣವಾಗಿರುವುದು. ಇದು ಸಂತರ ಮಹತ್ವದ ಗುಣವಾಗಿರುವುದು. ಈಗ ಶುದ್ಧ ಮತ್ತು ಅಪಾರ, ಹೀಗಿರುವ ಗುಣವನ್ನು ಹೇಳುವೆನು. ಇದು ನಾಲ್ಕನೆಯ ಗುಣವಾಗಿದೆ, ಕೇಳು ॥೮೫೪॥

ನಿಂದಾ ಅಸೂಯಾದಿ ದೋಷ ಸಮಸ್ತ । ನಿಜಾತ್ಮ ಬೋಧೇ ಪ್ರಕ್ಷಾಳೀತ । ಅತ್ಯಂತ ಪವಿತ್ರ ಕೇಲೇ ಚಿತ್ತ । ಅನಿಂದಿತ ನಿಜಬೋಧೇ ।।೮೫೫।। ಗುರು ಆಜ್ಞಾ ತೀರ್ಥೀ ನ್ಹಾಲಾ । ನ್ಹಾವೋನಿ ಸರ್ವಾಂಗೀ ನಿವಾಲಾ । ತ್ರಿವಿಧತಾಪೇ ಸಾಂಡವಲಾ । ಪವಿತ್ರ ಝಾಲಾ ಮದ್ರೂಪೇ ।।೮೫೬।।ಕಾಯ ಸಾಂಗೂ ತ್ಯಾಚೀ ಪವಿತ್ರತಾ । ತೀರ್ಥೇ ಮಾಗತೀ ಚರಣತೀರ್ಥಾ । ಮೀಹೀ ಪದರಜ ವಾಂಛಿತಾ । ಇತರಾಂಚೀ ಕಥಾ ಕಾಯಸೀ ।।೮೫೭।। ಕೃಷ್ಣ ಮ್ಹಣೇ ಉದ್ಧವಾ । ಹಾ ಅನವದ್ಯ ಗುಣ ಪಾಂಚವಾ । ಏಕ ಆತಾ ಸಹಾವಾ । ಸಮ ಸರ್ವಾ ಸಮಭಾವೇ ।।೮೫೮।। ನಿಜರೂಪೇ ಸರ್ವಸಮತಾ । ಸಮಚಿ ದೇಖೇ ಸರ್ವಾ ಭೂತಾ । ನಿಃಶೇಷ ನಿಮಾಲೀ ವಿಷಮತಾ । ಜೇವೀ ಸೈಂಧವತಾ ಸಾಗರೀ ।।೮೫೯।। ನಾನಾ ಅಲಂಕಾರ ಪದಾರ್ಥಾ । ಸೋನೇಪಣೇ ಏಕತ ಘೇತಾ । ತೇ ತೇ ಪದಾರ್ಥನ ಮೋಡಿತಾ । ಸ್ವಭಾವತಾ ಸಮ ಸೋನೇ ।।೮೬೦।। ತೈಸೇ ನಾನಾ ಆಕಾರ ನಾನಾ ನಾಮ । ಅವಘೇ ಜಗ ದಿಸೇ ವಿಷಮ । ಸಾಧೂಚಿ ಚಿದ್ರೂಪೇ ಸರ್ವ ಸಮ । ನ ದೇಖೇ ವಿಷಮ ನಿಜಬೋಧೇ ।।೮೬೧।। ಐಶಿಯಾ ಸಮಸಾಮ್ಯಾವಸ್ಥೇಸೀ । ದೈವೇ ಆಲಿಯಾ ಸುಖದುಃಖಾಸೀ । ತೇಹೀ ಮುಕಲೀ ದ್ವಂದ್ವಭಾವಾಸೀ । ಸಹಜೇ ಸಮರಸೀ ನಿಜಸಾಮ್ಯೇ ।।೮೬೨।। ಸವ್ಯೇ ಮಿನಲ್ಯಾ ಮಹಾನದೀಸೀ । ಅಪಸವ್ಯೇ ಆಲ್ಯಾ ಗಾಂವರಸಾಸೀ । ಗಂಗಾ ದೋಹೀತೇಹೀ ಸಮರಸೀ । ಗುಣದೋಷಾಂಸೀ ಉಡವೂನೀ ।।೮೬೩।। ತೇಥ ಪವಿತ್ರ ಅಪವಿತ್ರತಾ । ಬೋಲೂಂಚಿ ನ ಯೇ ಸರ್ವಥಾ । ಗೋಡಕಡೂಪಣಾಂಚೀ ವಾರ್ತಾ । ನಿಜಾಂಗೇ ಸಮತಾ ಕರೀ ಗಂಗಾ ।।೮೬೪।। ತೈಸೇ ಸುಖದುಃಖಾಚೇ ಭಾನ । ಸಾಧೂಂಸೀ ಸಮತ್ವೇ ಸಮಾನ । ಸದಾ ನಿಜಬೋಧೇ ಸಂಪನ್ನ । ಹೇ ಅಗಾಧ ಲಕ್ಷಣ ಸಂತಾಂಚೇ ।।೮೬೫।। ನಟಿಯಾ ಏಕಚಿ ಏಕಲಾ । ಗಾಯವ್ಯಾಘ್ರಾಂಚೇ ಸೋಂಗ ಅವಗಲಾ । ಭೀತರೀಲ ಖೇಳ್ಯಾ ಜೈ ವೋಳಖಿಲಾ । ತೈ ಫಿಟಲಾ ಭವಭ್ರಮೂ ।।೮೬೬।। ತೈಶೀ ಭಯಾಭಯವಾರ್ತಾ । ದ್ವೈತಭಾವೇ ಉಠೀ ಸರ್ವಥಾ । ಸಾಧು ಉಭಯಸಾಮ್ಯೇ ಪುರತಾ । ಭಯ ನಿರ್ಭಯತಾ ತೋ ನೇಣೇ ।।೮೬೭।।

ಯಾರು ನಿಂದೆ, ಮತ್ಸರ ಇತ್ಯಾದಿ ಸರ್ವ ದೋಷಗಳನ್ನು ಆತ್ಮಜ್ಞಾನದಿಂದ ಇಲ್ಲದಂತೆ ಮಾಡಿರುವರೋ, ಮತ್ತು ನಿರ್ದೋಷ ಆತ್ಮ ಬೋಧೆಯಿಂದ ಯಾರು ತಮ್ಮ ಅಂತಃಕರಣವನ್ನು ಅತ್ಯಂತ ಪವಿತ್ರ ಮಾಡಿರುವರೋ ।।೮೫೫।। ಯಾರು ಗುರು ಆಜ್ಞಾ ರೂಪ ತೀರ್ಥದಲ್ಲಿ ಮಿಂದು ಶಾಂತರಾಗಿರುವರೋ, ಯಾರು ತ್ರಿವಿಧ ತಾಪಗಳಿಂದ ಮುಕ್ತರಾಗಿ ನನ್ನ ಸ್ವರೂಪದಿಂದ ಪಾವನರಾಗಿರುವರೋ ।।೮೫೬।। ಅವರ ಪವಿತ್ರತೆಯನ್ನು ಎಷ್ಟೊಂದು ಹೇಗೆ ವರ್ಣಿಸಬೇಕು? ಇವರ ಚರಣ ತೀರ್ಥವನ್ನು ತೀರ್ಥಗಳು ಅಪೇಕ್ಷಿಸುವುವು. ನಾನೂ ಸಹ ಅವರ ಚರಣಧೂಳಿನ ಇಚ್ಛೆ ಮಾಡುವೆನು. ಅಂದ ಮೇಲೆ ಇತರರ ಯಾವ ಕಥೆ? ।।೮೫೭।। ಶ್ರೀಕೃಷ್ಣನು ಹೇಳಿದನು; ಹೇ ಉದ್ಧವನೇ, ಅನವದ್ಯ ಎಂದರೆ ಶುದ್ಧತೆಯಾಗಿರುವುದು. ಇದು ಸಂತರ ಐದನೆಯ ಲಕ್ಷಣವಾಗಿರುವುದು. ಸರ್ವರನ್ನು ಸಮದೃಷ್ಟಿಯಿಂದ ನೋಡುವುದು ಇದು ಆರನೆಯ ಗುಣವಾಗಿರುವುದು ।।೮೫೮।। ಆತ್ಮ ಸ್ವರೂಪದಿಂದ ಸಾಧುವಿಗೆ ಸರ್ವತ್ರದಲ್ಲಿ ಸಮತೆಯು ಪ್ರಾಪ್ತವಾಗಿರುವುದು. ಆದ್ದರಿಂದಲೇ ಆತನು ಸರ್ವ ಪ್ರಾಣಿಮಾತ್ರರಲ್ಲಿ ಸಮದೃಷ್ಟಿಯಿಂದ ನೋಡುತ್ತಿರುವನು. ಸಮುದ್ರದಲ್ಲಿ ಉಪ್ಪಿನ ಹರಳನ್ನು ಒಗೆಯಲು ಅದು ಅದರಲ್ಲಿ ಕರಗಿ ಹೋಗುವುದು. ಅದರಂತೆ ಸಾಧುವಿನ ಅಂತಃಕರಣದಲ್ಲಿನ ವಿಷಮತೆಯು ಸಂಪೂರ್ಣವಾಗಿ ಇಲ್ಲದಾಗಿರುವುದು ।।೮೫೯।। ಅನೇಕ ಪ್ರಕಾರಗಳ ಅಲಂಕಾರಗಳನ್ನು ಬಂಗಾರದಿಂದ ತಯಾರಿಸಿದ್ದನ್ನು ಖರೀದಿಸಿ ಮತ್ತು ಅವುಗಳನ್ನು ಮುರಿದು ಒಂದುಗೂಡಿಸದಿದ್ದರೂ ಅವು ಸ್ವಭಾವತಃ ಬಂಗಾರವಾಗಿಯೇ ಇರುವುವು ।।೮೬೦।। ಅದರಂತೆಯೇ ನಾನಾ ಪ್ರಕಾರಗಳ ನಾನಾ ರೂಪಗಳಿಂದ ಜಗತ್ತು ವಿಷಮವಾಗಿ ತೋರುವುದು. ಆದರೆ ಸಾಧುವಿನ ಚಿತ್ಸ್ವರೂಪ ದೃಷ್ಟಿಗೆ ಸರ್ವ ಜಗತ್ತು ಒಂದೇ ಆಗಿ ತೋರುತ್ತಿರುವುದು. ಆತ್ಮಜ್ಞಾನದಿಂದ ಇವರಿಗೆ ಯಾವ ವಿಷಮತೆ ತೋರುವುದಿಲ್ಲ ।।೮೬೧।। ಇಂತಹ ಸಮಸ್ಥಿತಿಯಲ್ಲಿ ದೈವಯೋಗದಿಂದ ಸುಖ ದುಃಖಗಳು ಪ್ರಾಪ್ತವಾಗಲು, ಆಗ ಅವರು ದ್ವಂದ್ವ ಭಾವದಿಂದ ಬಿಡುಗಡೆಯಾಗಿರುವರು. ಸ್ವಾಭಾವಿಕವಾಗಿ ಆತ್ಮಸಾಮ್ಯದಿಂದ ಸಮರಸರಾಗುವರು ।।೮೬೨।। ಗಂಗಾನದಿಗೆ ಬಲಭಾಗದಿಂದ ಒಂದು ಮಹಾನದಿಯು ಬಂದು ಕೂಡಲು ಅಥವಾ ಎಡಭಾಗದಿಂದ ಗಲಿತ ಜಲವುಳ್ಳ ಹಳ್ಳವು ಬಂದು ಕೂಡಲು ಈ ಎರಡರಲ್ಲಿಯ ಗುಣದೋಷಗಳನ್ನು ಎಣಿಸದೇ ಗಂಗೆಯು ಅವರನ್ನು ಸ್ವತಃ ತನ್ನಲ್ಲಿ ಸಮರಸವನ್ನಾಗಿ ಮಾಡಿಕೊಳ್ಳುವಳು ।।೮೬೩।। ಅಲ್ಲಿ ಪವಿತ್ರ ಮತ್ತು ಅಪವಿತ್ರ ಎಂಬ ಭಾವನೆಯು ಇರುವುದೇ ಇಲ್ಲ. ಸಿಹಿ ಮತ್ತು ಕಹಿ ಎಂಬ ವಾರ್ತೆಯನ್ನು ಗಂಗೆಯು ತನ್ನ ಸ್ವರೂಪದಲ್ಲಿ ಏಕರೂಪವನ್ನಾಗಿ ಮಾಡುವಳು ।।೮೬೪।। ಅದರಂತೆ ಸಂತರ ಸುಖದುಃಖಗಳ ಭಾವನೆಯು ಸಮಾನತ್ವದಿಂದ ಸಮಾನವಾಗುವುವು. ಆತ್ಮಜ್ಞಾನದಿಂದ ಯಾವಾಗಲೂ ಜಾಗರೂಕರಾಗಿರುವುದೇ ಇದು ಸಾಧುವಿನ ಅಗಾಧವಾದ ಲಕ್ಷಣವಾಗಿರುವುದು ।।೮೬೫।। ಭಿನ್ನ ಭಿನ್ನ ಪ್ರಕಾರಗಳ ವೇಶಗಳನ್ನು ಹಾಕುವ ನಟನು ಒಬ್ಬನೇ ಆಗಿರುವನು. ಆತನು ಆಕಳು, ಹುಲಿ ಇತ್ಯಾದಿ ಬಹುವಿಧ ಪ್ರಕಾರಗಳ ವೇಶಗಳನ್ನು ಧರಿಸುವನು. ಆದರೆ ಆ ಎಲ್ಲ ವೇಶಗಳಲ್ಲಿಯೂ ನಟನಾಗಿರುವವನು ಯಾರು ಎಂಬುದನ್ನು ಯಾರು ಅರಿತಿರುವರೋ, ಆತನಿಗೆ ಯಾವುದೇ ಪ್ರಕಾರದ ಭ್ರಮವು ಇಲ್ಲದಾಗುವುದು ।।೮೬೬।। ಅದರಂತೆ ಭಯ ಮತ್ತು ಅಭಯವು ಇದು ದ್ವೈತಭಾವದಿಂದ ಉತ್ಪನ್ನವಾಗುವುದು. ಸಾಧು ಆ ಎರಡೂ ವಿಷಯಗಳಲ್ಲಿ ಸಮನಾಗಿರುವನು. ಆದ್ದರಿಂದ ಆತನಿಗೆ ಭಯವಾಗಲೀ ಅಥವಾ ಅಭಯವಾಗಲೀ ಏನೂ ತೋರುವುದಿಲ್ಲ ।।೮೬೭।।

ದ್ವಂದ್ವಸಸಾಮ್ಯೇ ಪರಿಪೂರ್ಣ । ಸಾಧೂಚಾ ಹಾ ಸಹಾವಾ ಗುಣ । ಐಕ ಸಾತವೇ ಲಕ್ಷಣ । ಪರೋಪಕಾರೀ ಪಣ ತಯಾಚೇ ॥೮೬೮॥ ಪತ್ರ ಪುಷ್ಪ ಛಾಯಾ ಫಳ । ತ್ವಚಾ ಕಾಷ್ಠ ಸಮೂಳ । ವೃಕ್ಷ ಸರ್ವಾಂಗೇ ಸಫಳ । ಸರ್ವಾಸೀ ಕೇವಳ ಉಪಕಾರೀ ॥೮೬೯॥ ಜೋ ವೃಕ್ಷಾ ಪ್ರತಿಪಾಳೀ । ಕಾ ಜೋ ಘಾವೋ ಘಾಲೀ ಮೂಳೀ । ದೋನೀತೇ ವೃಕ್ಷ ಪುಷ್ಪೀ ಫಳೀ । ಸಮಾನಮೇಳೀ ಸಂತುಷ್ಟ ॥೮೭೦॥ ಮೋಡೂನಿ ಫಳೇ ಆಲಿಯಾ ವೃಕ್ಷೀ । ವೃಕ್ಷು ಏಕಹೀ ಸ್ವಯೇ ನ ಚಾಖೇ । ತೇವೀ ಕರ್ಮಫಳಾ ಜೋ ನ ಟೇಕೇ । ತೋ ಯಥಾಸುಖೇ ಪರಬ್ರಹ್ಮ ॥೮೭೧॥ ತೈಸಾ ಕಾಯಾವಾಚಾಮನೇ ಪ್ರಾಣೇ । ಸಾಧು ವಾಢಲಾ ಉಪಕಾರಾಕಾರಣೇ । ಆಪುಲೇ ಪರಾವೇ ಮ್ಹಣೋ ನೇಣೇ । ಉಪಕಾರೂ ಕರಣೇ ಸರ್ವಾಸೀ ॥೮೭೨॥ ಹೋ ಕಾ ಚಂದ್ರ ಉಗವೋನಿ ಅಂಬರೀ । ಜೇವೀ ಜಗಾಚೇ ಆಂಧಾರೇ ನಿವಾರೀ । ವಿಶ್ವಾಚಾ ತಾಪ ದೂರ ಕರೀ । ನಿವವೀ ನಿಜಕರೀ ಸರ್ವಾತೇ ॥೮೭೩॥ ತೇಥ ಚಂದ್ರಾಮೃತ ಚಕೋರೀ ಸೇವಾವೇ । ಯೇರಾಂಸೀ ಚಂದ್ರ ನ ಮ್ಹಣೇ ನ ದ್ಯಾವೇ । ಜೋ ಜೋ ಭಜೇ ಜೇಣೇ ಭಾವೇ । ತೋ ತೋ ಪಾವೇ ತೇ ಸುಖ ॥೮೭೪॥ ತೈಸೇಚಿ ಜಾಣ ಸಾಧೂಪಾಶೀ । ಜೋ ಜೋ ಶ್ರದ್ಧಾ ಕರೀ ಜೈಶೀ । ತ್ಯಾ ತ್ಯಾ ದೇತಸೇ ಸುಖಾಸೀ । ಹೋತ ಜಗಾಸೀ ಉಪಕಾರೀ ॥೮೭೫॥ ಕಾಉಳೇ ಚಂದ್ರಾಸೀ ಹೆಳಸಿತೀ । ಚಕೋರ ಚಂದ್ರಾಮೃತ ಸೇವಿತೀ । ತೇವೀ ದುಷ್ಟ ಸಾಧೂತೇ ಧಿಕ್ಕಾರಿತೀ । ಭಾವಾರ್ಥೀ ಪಾವತೀ । ನಿಜಲಾಭೂ ॥೮೭೬॥ ಸಾತವ್ಯಾ ಲಕ್ಷಣಾಚಾ ಉಭಾರಾ । ಸಾಂಗಿತಲೇ ಪರೋಪಕಾರಾ । ಪುಢೀಲ ಶ್ಲೋಕೀ ಲಕ್ಷಣೇ ಅಕರಾ । ಸಾಧುನಿರ್ಧಾರಾ ಸಾಂಗತ ॥೮೭೭॥

ಕಾಮೈರಹತಧೀರ್ದಾಂತೋ ಮೃದುಃ ಶುಚಿರಕಿಂಚನಃ । ಅನಿಹೋ ಮಿತಭುಕ್ ಶಾಂತಃ ಸ್ಥಿರೋ ಮಚ್ಛರಣೋ ಮುನಿಃ ॥೩೦॥

ಅರ್ಥ :-ಸಾಧುವಿನ ಬುದ್ಧಿಯು ಕಾಮನೆಗಳಿಂದ ಕಲುಷಿತವಾಗಿರುವುದಿಲ್ಲ, ಆತನು ಸಂಯಮೀ, ಮಧುರಸ್ವಭಾವೀ, ಪವಿತ್ರನಾಗಿರುವನು. ಎಂದಿಗೂ ಸಂಗ್ರಹವನ್ನು ಮಾಡಲಾರನು, ಯಾವ ವಸ್ತುವಿಗಾಗಿಯೂ ಪ್ರಯತ್ನಿಸಲಾರನು, ಮಿತಭೋಜನ ಮಾಡುವವನು ಮತ್ತು ಶಾಂತನಾಗಿರುವನು, ಆತನ ಬುದ್ಧಿಯು ಸ್ಥಿರವಾಗಿರುವುದು. ಆತನಿಗೆ ಕೇವಲ ನನ್ನ ಭರವಸೆ ಇರುವುದು. ಆತನು ಆತ್ಮಚಿಂತನೆಯಲ್ಲಿ ಯಾವಾಗಲೂ ನಿಮಗ್ನನಾಗಿರುವನು.

ಉರ್ವಶಿ ಆಲಿಯಾ ಸೇಜೇಸೀ । ಕಾಮಕ್ಷೋಭ ನುಪಜೇ ಜ್ಯಾಸೀ । ಸ್ವಾನಂದ ಭೋಗಿತಾ ಅಹರ್ನಿಶೀ । ವಿಷಯಕಾಮಾಸೀ ವಿಸರಲಾ ॥೮೭೮॥

ಸರ್ವ ಪ್ರಕಾರದ ದ್ವಂದ್ವವಿಷಯಗಳಲ್ಲಿ ಸಮಭಾವವನ್ನು ಇಡುವುದು ಸಂತರ ಆರನೆಯ ಗುಣವಾಗಿರುವುದು. ಈಗ ಪರೋಪಕಾರ ಎಂಬ ಏಳನೆಯ ಗುಣವನ್ನು ಕೇಳು ॥೮೬೮॥ ವೃಕ್ಷವು ತನ್ನ ಎಲೆಗಳು, ಪುಷ್ಪಗಳು, ನೆರಳು, ಫಲಗಳು, ತೊಗಟೆ, ಕಟ್ಟಿಗೆ ಇತ್ಯಾದಿ ಭಿನ್ನ ಭಿನ್ನ ಅವಯವಗಳಿಂದ ಜನರ ಉಪಯೋಗಿಯಾಗಿ ಎಲ್ಲರಲ್ಲಿಯೂ ನಿರಂತರವಾಗಿ ಉಪಕಾರವನ್ನು ಮಾಡುತ್ತ ನಿಂತಿರುವುದು ॥೮೬೯॥ ಯಾರು ವೃಕ್ಷವನ್ನು ಸಾಕಿ ಸಲುಹಿ ಬೆಳೆಸುವನೋ ಅಥವಾ ಯಾವನು ವೃಕ್ಷದ ಬೇರಿಗೆ ಘಾಯ ಮಾಡುವನೋ, ಆ ಈರ್ವರಿಗೂ ವೃಕ್ಷವು ಫಲಪುಷ್ಪಗಳನ್ನು ಕೊಟ್ಟು ಸಮವಾಗಿಯೇ ಸಂತೋಷಪಡಿಸುವುದು ॥೮೭೦॥ ವೃಕ್ಷವು ಫಲಗಳಿಂದ ಪರಿಪೂರ್ಣವಾಗಿ ತುಂಬಿ ತುಳುಕುತ್ತಿದ್ದರೂ ಅದು ಒಂದು ಫಲವನ್ನಾದರೂ ತಾನು ತಿಂದು ನೆಕ್ಕುವುದಿಲ್ಲ. ಅದರಂತೆ ಸಂತರು ಕರ್ಮಗಳಿಂದ ಹುಟ್ಟುವ ಫಲಗಳ ಸ್ಪರ್ಶವನ್ನೂ ಮಾಡುವುದಿಲ್ಲ. ಆದ್ದರಿಂದ ಅವರು ಸ್ವತಃ ಪರಬ್ರಹ್ಮ ಸ್ವರೂಪರಾಗುವರು ॥೮೭೧॥ ಸಾಧು ಕಾಯಾ, ವಾಚಾ ಮತ್ತು ಮನದಿಂದ ಪರೋಪಕಾರಕ್ಕಾಗಿಯೇ ಬೆಳೆದಿರುವನು. ಇವರು ನಮ್ಮವರು, ಅವರು ಬೇರೆಯವರು ಹೀಗೆ ಮನದಲ್ಲಿ ತರಲಾರನು. ಎಲ್ಲರಲ್ಲಿಯೂ ಉಪಕಾರವನ್ನು ಮಾಡುವುದು ಮಾತ್ರ ಅರಿತಿರುವನು ॥೮೭೨॥ ಚಂದ್ರನು ಆಕಾಶದಲ್ಲಿ ಉದಯವಾಗಿ ಕತ್ತಲೆಯನ್ನು ಕಳೆಯುವನು. ವಿಶ್ವದ ತಾಪವನ್ನು ದೂರ ಮಾಡುವನು. ತನ್ನ ಶೀತಲ ಕಿರಣಗಳಿಂದ ಎಲ್ಲರನ್ನೂ ಶಾಂತಪಡಿಸುವನು ॥೮೭೩॥ ಚಂದ್ರನ ಅಮೃತವನ್ನು ಚಕೋರ ಮಾತ್ರ ಸೇವಿಸಬೇಕು, ಇತರರು ಸೇವಿಸಬಾರದೆಂದು ಚಂದ್ರನು ಎಂದೂ ಹೇಳಲಾರನು. ಯಾರು ಯಾವ ಭಾವನೆಯಿಂದ ಭಜಿಸುವರೋ ಅವರಿಗೆ ಅದರಂತೆ ಸುಖವು ಪ್ರಾಪ್ತವಾಗುವುದು ॥೮೭೪॥ ಅದರಂತೆ ಸಾಧುವಿನಲ್ಲಿ ಇಟ್ಟ ಶ್ರದ್ಧೆಯಿಂದ ಆತನು ಸುಖವನ್ನು ಕೊಡುತ್ತಿರುವನು. ಇದರಂತೆ ಸಾಧು ಸತತವಾಗಿ ಜಗತ್ತಿನ ಮೇಲೆ ಉಪಕಾರದ ಮಳೆಗರೆಯುತ್ತಿರುವನು ॥೮೭೫॥ ಕಾಗೆಯು ಚಂದ್ರನಿಗೆ ತುಚ್ಛವಾಗಿ ಕಾಣುವುದು. ಚಕೋರವು ಚಂದ್ರಾಮೃತವನ್ನು ಸೇವಿಸುತ್ತಿರುವುದು. ಅದರಂತೆ ದುಷ್ಟರು ಸಾಧುವಿಗೆ ಧಿಕ್ಕರಿಸುವರು ಮತ್ತು ಸಜ್ಜನರು ಸಂತರಿಂದ ಆತ್ಮಜ್ಞಾನವನ್ನು ಕಲಿಯುವರು ॥೮೭೬॥ ಹೀಗೆ ಪರೋಪಕಾರ ಎಂಬ ಏಳನೆಯ ಲಕ್ಷಣವನ್ನು ವಿಸ್ತರಿಸಿ ಹೇಳಲಾಯಿತು. ಈಗ ಮುಂದಿನ ಶ್ಲೋಕದಲ್ಲಿ ಸಾಧುಗಳ ಪುನಃ ಹನ್ನೊಂದು ಲಕ್ಷಣಗಳನ್ನು ಶ್ರೀಕೃಷ್ಣನು ಹೇಳುವನು ॥೮೭೭॥

ಒಂದು ವೇಳೆ ಉರ್ವಶಿಯು ತನ್ನ ಹಾಸಿಗೆಯಲ್ಲಿ ಬಂದರೂ ಸಹ ಆತನು ಕಾಮವಿಕಾರದಿಂದ ಎಂದಿಗೂ ಕ್ಷುಬ್ಧನಾಗುವುದಿಲ್ಲ. ಹಗಲು ರಾತ್ರಿ ಸ್ವಾನಂದದಲ್ಲಿ ತಲ್ಲೀನನಾಗಿರುವುದರಿಂದ ಆತನಿಗೆ ವಿಷಯದ ಪೂರ್ಣ ವಿಸ್ಮರಣೆಯಾಗಿರುವುದು ॥೮೭೮॥

ರಂಕೂ ಪಾಲಖಿಯೇ ಬೈಸಲಾ । ತೋ ಪೂರ್ವೀಲ ವಾಹನಾ ವಿಸರಲಾ । ತೇವಿ ಹಾ ನಿಜಾನಂದೇ ತೃಪ್ತ ಝಾಲಾ । ಕಾಮ ವಿಸರಲಾ ತುಚ್ಛತ್ವೇ ॥೮೭೯॥ ಕಾಂಹೀ ಅಪ್ರಾಪ್ತ ಪಾವಾವಯಾ ಕಾಮಾವೇ । ಸಾಧುಸೀ ಅಪ್ರಾಪ್ತತಾ ನ ಸಂಭವೇ । ಪ್ರಾಪ್ತ ಪದೀ ಯಥಾಗೌರವೇ । ನಿಜಾನುಭವೇ ವಿರಾಜತೂ ॥೮೮೦॥ ಖದ್ಯೋತಾ ಸೂರ್ಯ ಭೇಟೋ ಜಾತಾ । ಖದ್ಯೋತಾ ನ ದೇಖೇ ಸವಿತಾ । ಸೂರ್ಯಾಸೀನ ಭೇಟವೇ ಖದ್ಯೋತಾ । ತೇವೀ ಅಪ್ರಾಪ್ತತಾ ಸಾಧೂಸೀ ॥೮೮೧॥ ಏವಂ ಉಭಯ ಪರೀ ಪಾಹತಾ । ಕಾಮೂ ನಿಮಾಲಾ ಸರ್ವಥಾ । ಹೇ ಆಠವೇ ಲಕ್ಷಣ ತತ್ತ್ವತಾ । ಅಕಾಮತಾ ಸಾಧೂಚೀ ॥೮೮೨॥ ಸಾವಧಾನೇ ಅಂತರ ನೇಮಿತಾ । ತೇಚಿ ಬಾಹ್ಯೇಂದ್ರಿಯಾ ನಿಯಾಮಕತಾ । ಜೇವೀ ಕಾ ಲೇಕಿೀಸೀ ಶಿಕವಣ ದೇತಾ । ಸೂನ ಸರ್ವಥಾ ಚಳೀ ಕಾಂಪೇ ॥೮೮೩॥ ಮುಖ್ಯ ಧೂರ ರಣೀ ಲಾಗಲ್ಯಾ ಹಾತಾ । ಯೇರ ಕಟಕ ಜಿಂತಿಲೇ ನ ಜುಂಝತಾ । ಕಾ ಮೂಳ ಛೇದಿಲೇ ಅಸತಾ । ಶಾಖಾ ಸಮಸ್ತ ಛೇದಿಲ್ಯಾ ॥೮೮೪॥ ಏವಂ ಅಂತರವೃತ್ತೀಚಾ ಜೋ ನೇಮ । ತೋಚಿ ಬಾಹ್ಯೇಂದ್ರಿಯಾ ಉಪರಮ । ಐಸೇನಿಹೀ ಜೇ ನಿಪಜೇ ಕರ್ಮ । ತೇ ನಿರ್ಭ್ರಮ ಅಹೇತುಕ ॥೮೮೫॥ ಅಂತರ ಜಡಲೇ ಆತ್ಮಸ್ಥಿತೀ । ಬಾಹ್ಯ ರಂಗಲೇ ಮದ್ಭಕ್ತೀ । ತೇಥೇ ಜೇ ಜೇ ಕಾಮೇ ನಿಪಜತೀ । ತೀ ತೀ ಹೋತೀ ಬ್ರಹ್ಮ ರೂಪ ॥೮೮೬॥ ಬಾಹ್ಯೇಂದ್ರಿಯೇ ಕರಿತಾ ನೇಮ । ಅಂತರೀಚೇ ಕರ್ಮೀ ಪ್ರಕಟೇ ಬ್ರಹ್ಮ । ಹಾ ಬ್ಯಾಹೇಂದ್ರಿಯಾಂಚಾ ನೇಮ । ಆತ್ಮಾರಾಮ ಜಾಣತೀ ॥೮೮೭॥ ಐಶೀ ಬಾಹ್ಯೇಂದ್ರಿಯನಿಯಾಮಕತಾ । ಹೇ ಜಾಣಾವೀ ಸಾಧೂಚೀ ದಾಂತತಾ । ಹಾ ನವವಾ ಗುಣ ತತ್ತ್ವತಾ । ಐಕ ಆತಾ ದಶಮಾತೇ ॥೮೮೮॥ ಆಕಾಶ ಸರ್ವಾಸೀಹೀ ಲಾಗೇ । ಪರೀ ಕಠಿಣ ನವ್ಹೇ ಕೋಣೇಹೀ ಭಾಗೇ । ತೇವೀ ಸಾಧು ಜಾಣ ಸರ್ವಾಂಗೇ । ಮೃದು ಲಾಗೇ ಸರ್ವಾಸೀ ॥೮೮೯॥ ಪಿಂಜಲ್ಯಾ ಕಾಪುಸಾಚಾ ಗೋಳಾ । ಫೋಡೂ ನೇಣೇ ಕೋಣಾಚ್ಯಾ ಕಪಾಳಾ । ತೈಸಾಚಿ ಸಾಧೂಚಾ ಜಿವ್ಹಾಳಾ । ಅತಿಕೋವಳಾ ಸರ್ವಾಸೀ ॥೮೯೦॥ ಪಾಹೇ ಪಾಜೈಸೇ ಗಂಗಾಜಳ । ಗಾಯೀವ್ಯಾಘ್ರಾಂಸೀ ಕರೀ ಶೀತಳ । ತೈಸಾಚಿ ಸಾಧುಹೀ ಕೇವಳ । ಮೃದು ಮಂಜುಳ ಸರ್ವಾಂಸೀ ॥೮೯೧॥ ಸಾಧೂಚೀ ಅತಿಮೃದುತಾ । ಯಾ ನಾಂವ ಜಾಣ ಸರ್ವಥಾ । ಹೇ ದಶಮಲಕ್ಷಣಯೋಗ್ಯತಾ । ಐಕ ಆತಾ ಅಕರಾವೇ ॥೮೯೨॥

ಒಬ್ಬ ಭಿಕ್ಷುಕನು ಒಂದು ವೇಳೆ ಪಾಲಖಿಯಲ್ಲಿ ಕುಳಿತುಕೊಳ್ಳಲು ಆಗ ಆತನು ಪೂರ್ವದ ಕ್ಷುದ್ರ ವಾಹನಗಳನ್ನು ಮರೆತುಬಿಡುವನು. ಅದರಂತೆ ಸಾಧು ತನ್ನ ಆತ್ಮಾನಂದದ ಅನುಭವವನ್ನು ಪಡೆಯಲು ಆಗ ಆತನು ಕಾಮವನ್ನು ತುಚ್ಛಗೊಳಿಸಿ ಅದನ್ನು ಮರೆತುಬಿಡುವನು ॥೮೭೯॥ ದುರ್ಲಭವಾದ ವಸ್ತುಗಳನ್ನು ಪಡೆಯಬೇಕೆಂಬ ಇಚ್ಛೆಯಿರುವುದು. ಸಾಧುವಿಗೆ ಅಪ್ರಾಪ್ಯವೆಂಬುವುದು ಯಾವುದೂ ಇರುವುದಿಲ್ಲ. ಆದ್ದರಿಂದ ಯಾವುದೇ ಪ್ರಾಪ್ತಸ್ಥಿತಿಯಲ್ಲಿ ಆತನು ಬಹಳ ಆನಂದದಿಂದ ಆತ್ಮಾನುಭವದೊಂದಿಗೆ ಶೋಭಿಸುತ್ತಿರುವನು ॥೮೮೦॥ ಸೂರ್ಯನು ಮಿಂಚುಹುಳಕ್ಕೆ ಭೇಟಿಯಾಗಲು ಹೊರಟರೆ, ಆಗ ಆ ಸೂರ್ಯನು ಆ ಮಿಂಚು ಹುಳವನ್ನು ನೋಡಲಾರನು. ಹಾಗೆಯೇ ಮಿಂಚು ಹುಳಕ್ಕೂ ಕೂಡ ಸೂರ್ಯನ ಭೇಟಿಯಾಗಲಾರದು. ಅದರಂತೆ ಸಾಧುವಿನ ಅಪ್ರಾಪ್ಯತೆಯಾಗಿರುವುದು ॥೮೮೧॥ ಈ ಪ್ರಕಾರವಾಗಿ ಎರಡೂ ಭಾಗಗಳಿಂದ ನೋಡಲು, ಸಾಧುವಿನ ವಿಷಯ ವಾಸನೆಗಳು ಸಂಪೂರ್ಣವಾಗಿ ನಷ್ಟವಾಗಿರುವುವು. ಈ ಯಾವ ನಿರಿಚ್ಛೆಯು ಸಾಧುವಿನ ಎಂಟನೆಯ ಗುಣವಾಗಿರುವುದು ॥೮೮೨॥ ಮನಸ್ಸಿನ ನಿಯಮನ ಮಾಡಲು ಆಗ ಬಾಹ್ಯ ಇಂದ್ರಿಯಗಳ ಸಹಜವಾಗಿಯೇ ನಿಯಮನವಾಗುವುದು. ಯಾವ ಪ್ರಕಾರವಾಗಿ ತನ್ನ ಮಗಳಿಗೆ ಸಿಟ್ಟಿನಿಂದ ಬೈಯ್ಯುತ್ತಿರಲು ಆಗ ಸೊಸೆಯು ಗಡಗಡನೇ ನಡುಗುವಳು ॥೮೮೩॥ ಅಥವಾ ಸೇನಾಪತಿಯು ತನ್ನ ಕೈಗೆ ಸಿಕ್ಕಿ ಬೀಳಲು, ಆಗ ಯಾವ ಯುದ್ಧವಿಲ್ಲದೆಯೇ ಸೈನಿಕರನ್ನು ಸಹಜವಾಗಿ ಗೆದ್ದಂತಾಗುವುದು. ಅಥವಾ ವೃಕ್ಷದ ಬೇರನ್ನೇ ಕಡಿದು ಹಾಕಲು ಆಗ ಎಲ್ಲ ಟೊಂಗೆಗಳು ಮುರಿದು ಬೀಳುವುವು ॥೮೮೪॥ ಅದರಂತೆಯೇ ಮನಸ್ಸಿನ ನಿಯಮನವನ್ನು ಮಾಡಲು, ಆಗ ಬಾಗ್ಯ ಇಂದ್ರಿಯಗಳ ನಿಯಮನವು ಸಹಜವಾಗಿಯೇ ಸಾಧಿಸುವುದು. ಇಂತಹ ಸ್ಥಿತಿಯಲ್ಲಿ ಯಾವ ಯಾವ ಕರ್ಮಗಳು ನಡೆಯುವುವೋ, ಅವು ನಿಶ್ಚಿತವಾಗಿ ನಿಷ್ಕಾಮವಾಗಿರುವುವು ॥೮೮೫॥ ಮನವು ಆತ್ಮಸ್ವರೂಪದಲ್ಲಿ ಏಕರೂಪವಾಗಲು ಮತ್ತು ಬಾಹ್ಯ ಇಂದ್ರಿಯಗಳು ನನ್ನ ಭಕ್ತಿಯಲ್ಲಿ ರಮಮಾಣವಾಗಲು, ಆಗ ಯಾವ ಯಾವ ಕರ್ಮಗಳಾಗುವುವೋ ಅವೆಲ್ಲವೂ ಬ್ರಹ್ಮ ಸ್ವರೂಪವೇ ಆಗುವುವು ॥೮೮೬॥ ಅಥವಾ ಬಾಹ್ಯ ಇಂದ್ರಿಯಗಳ ನಿಯಮನವನ್ನು ಮಾಡಲು ಆಗ ಮನೋಮಯ ಕರ್ಮಗಳಲ್ಲಿ ಸಹಜವಾಗಿಯೇ ಪರಬ್ರಹ್ಮವು ಪ್ರಕಟವಾಗುವುದು. ಆತ್ಮದಲ್ಲಿ ರಮಮಾಣರಾಗುವ ಜನರು ಈ ಯಾವ ಬಾಹ್ಯ ಇಂದ್ರಿಯಗಳ ನಿಯಮವನ್ನು ಅರಿತಿರುವರು ॥೮೮೭॥ ಈ ಪ್ರಕಾರವಾಗಿ ಬಾಹ್ಯ ಇಂದ್ರಿಯಗಳ ನಿಯಮನವನ್ನು ಮಾಡುವ ಗುಣವೇ ಸಾಧುವಿನ ''ದಾಂತತೆ'' ಅಂದರೆ ನಿಗ್ರಹಶಕ್ತಿ ಎಂದು ತಿಳಿಯಬೇಕು. ಇದು ಒಂಬತ್ತನೆಯ ಗುಣವಾಗಿರುವುದು. ಈಗ ಹತ್ತನೆಯ ಗುಣವನ್ನು ಕೇಳು ॥೮೮೮॥ ಆಕಾಶವು ಎಲ್ಲ ಭಾಗಗಳಲ್ಲಿಯೂ ಎಲ್ಲ ವಸ್ತುಗಳಿಗೂ ಹತ್ತಿಕೊಂಡಂತೆ ತೋರುವುದು. ಆದರೆ ಎಲ್ಲೆಲ್ಲಿಯೂ ಕಠಿಣವಾಗಿರುವುದಿಲ್ಲ ಅದರಂತೆ ಸಾಧು ಎಲ್ಲರಲ್ಲಿಯೂ ಮೃದು ಸ್ವಭಾವದಿಂದ ವರ್ತಿಸುವನು. ಎಂದಿಗೂ ಕಠೋರನಾಗುವುದಿಲ್ಲ ॥೮೮೯॥ ಹಿಂಜಿದ ಅರಳೆಯ ಉಂಡೆಯನ್ನು ಮಾಡಿ, ಅದನ್ನು ಯಾರದೇ ತಲೆಗೆ ಹೊಡೆದರೂ ಅದರಿಂದ ಯಾರ ತಲೆಯೂ ಒಡೆಯುವುದಿಲ್ಲ ಅದರಂತೆ ಸಾಧುವಿನ ಅಂತಃಕರಣವು ಸರ್ವವಿಷಯಗಳಲ್ಲಿ ಕೋಮಲವಾಗಿರುವುದು ॥೮೯೦॥ ಗಂಗೆಯ ನೀರು ಹುಲಿಗೂ, ಆಕಳಿಗೂ ತೃಪ್ತಿಪಡಿಸುವುದು. ಅದರಂತೆ ಸಾಧು ಎಲ್ಲರಲ್ಲಿಯೂ ಮೃದು, ಮಧುರವಾಗಿ ವರ್ತಿಸುವನು ॥೮೯೧॥ ಸಾಧುವಿನ ಅಂತಃಕರಣದಲ್ಲಿನ ಕೋಮಲ ಭಾವವು, ಇದು ಹತ್ತನೆಯ ಗುಣವಾಗಿರುವುದು. ಈಗ ಹನ್ನೊಂದನೆಯ ಗುಣವನ್ನು ಕೇಳು ॥೮೯೨॥

ಸಾಧೂಂಚೀ ಜೇ ಶುಚಿಷ್ಮಂತತಾ । ತೇ ಭಗವದ್ಭಜನೇಚಿ ತತ್ತ್ವತಾ । ವ್ರತತಪದಾನಾದಿತೀರ್ಥಾ । ಶುಚಿಷ್ಮಂತತಾ ತ್ಯಾಂಚೇನೀ ।।೫೯೩।। ಪರದಾರಾ ಆಣಿ ಪರಧನ । ಸರ್ವಥಾ ನಾತಳೇ ಜ್ಯಾಚೇ ಮನ । ಗಂಗಾದಿ ತೀರ್ಥೇ ತ್ಯಾಚೇ ಜಾಣ । ಚರಣಸ್ಪರ್ಶನ ವಾಂಛಿತೀ ।।೫೯೪।। ಸ್ವದಾರಾಸ್ವಧನ ಸಲೋಭತಾ । ಅವಶ್ಯ ಜಾಣೇ ಅಧಃಪಾತಾ । ದ್ರವ್ಯದಾರಾನಿರಪೇಕ್ಷತಾ । ಶುಚಿಷ್ಮಂತತಾ ಸಾಧೂಚಿ ।।೫೯೫।। ಐಶೀ ಅಸೋನಿ ಶುಚಿಷ್ಮಂತತಾ । ತೋ ನಿಂದೀನಾ ವ್ರತತಪಾದಿತೀರ್ಥಾ । ತೇ ತೇ ವಿಧೀತೆ ಆಚರಿತಾ । ಸದಾಚಾರತಾ ಅತಿಶ್ರೋತ್ರೀ ।।೫೯೬।। ಪಡಲಿಯಾ ಮಗರಮಿಠೀ । ತೇ ನ ಸೋಡೀ ಪ್ರಾಣಸಂಕಟೀ । ಸಾಂಪಡೇ ತೇ ಸಗಳೇಚಿ ಘೋಟೀ । ತೈಶೀ ಪಡಲೀ ಮಿಠೀ । ಜೀವಬ್ರಹ್ಮಾ ।।೫೯೭।। ಹೇ ಪುಢೇಸೂನಿ ಪರಬ್ರಹ್ಮ । ಆಶ್ರಮಧರ್ಮಾದಿ ಸ್ವಕರ್ಮ । ಆಚರೋನಿ ದಾವಿ ಉತ್ತಮೋತ್ತಮ । ಕರ್ಮೀ ಬ್ರಹ್ಮಪ್ರತೀತೀ ।।೫೯೮।। ಕರ್ಮ ಕರಿತೋ ಲೋಕ ಮ್ಹಣತೀ । ತೋ ವರ್ತತಾಹೇ ಬ್ರಹ್ಮಸ್ಥಿತೀ । ಹೇ ಜ್ಯಾಚೇ ತೋ ಜಾಣೇ ನಿಶ್ಚಿತೀ । ಲೋಕಾ ಪ್ರತೀತೀ ಕಳೇನಾ ।।೫೯೯।। ಕುಲಾಲ ಭಾಂಡೇ ಕರೂನಿ ಉತರೀ । ಚಕ್ರ ಭೋವೇ ಪೂರ್ವಿಲಾ ಭಂವರೀ । ತೈಸಾ ಸಾಧೂ ಪೂರ್ವಸಂಸ್ಕಾರೀ । ಸ್ವಕರ್ಮೇ ಕರೀ ವೃತ್ತಿಶೂನ್ಯ ।।೬೦೦।। ಹೇ ಸಾಧುಲಕ್ಷಣ ಅತ್ಯಂತ ಥೋರ । ಐಕತಾ ಸುಗಮ ಕರಿತಾ ದುರ್ಧರ । ಹೇ ಅಕರಾವೇ ಅತಿಪವಿತ್ರ । ಐಕ ವಿಚಿತ್ರ ತೇ ಬಾರಾವೇ ।।೬೦೧।। ಸಾಧೂಚೇ ಅಪರಿಗ್ರಹತಾ । ಪರಿಗ್ರಹೋ ನಾತಳೇ ಚಿತ್ತಾ । ದೇಹಗೇಹೇ ನಿಃಸಂಗತಾ । ಅಕಿಂಚನತಾ ತ್ಯಾಸೀ ನಾಂವ ।।೬೦೨।। ಸ್ಫಟಿಕು ಕಾಜಳೀ ದಿಸೇ ಕಾಳಾ । ಆರಕ್ತೀ ಆರಕ್ತ ಕೀಳಾ । ನೀಳವರ್ಣೀ ಭಾಸೇ ನಿಳಾ । ತರೀ ತೋ ವೇಗಳಾ ಶುದ್ಧತ್ವೇ ।।೬೦೩।। ಸ್ಫಟಿಕ ಜಪಾಕುಸುಮೀ ಠೇವಿಲಾ । ಪಾಹತಾ ದಿಸೇ ತಾಂಬಡಾ ಝಾಲಾ । ಪರೀ ತೋ ಅಲಿಪ್ತಪಣೇ ಸಂಚಲಾ । ನಾಹೀ ಮಾಖಲಾ ತೇಣೇ ರಂಗೇ ।।೬೦೪।। ತೈಸಾ ಸಾಧು ಪರಿಗ್ರಹಾಮಾಜೀ ವಸೇ । ಪರಿಗ್ರಹೀ ಝಾಲಾಹೀ ದಿಸೇ । ಪರೀ ಜಾಗ್ರತಿಸ್ವಪ್ನಸುಷುಪ್ತಿವಶೇ । ಪರಿಗ್ರಹೋ ನಸ್ಪರ್ಶೇ ನಿಜಬೋಧೇ ।।೬೦೫।। ಪರೀಸ ಸರ್ವ ಧಾಂತೂಸೀ ಖೇವ ದೇತಾ । ಮಿಳಣೇ ಸೋನೇ ಕರೀ ತತ್ತ್ವತಾ । ತೋ ಸುವರ್ಣಾ ವಾಂಚೂನಿ ಸರ್ವಥಾ । ಆಣಿಕಾಪದಾರ್ಥಾ ನಾತಳೇ ।।೬೦೬।।

ಸಾಧುವಿಗೆ ಭಗವದ್‌ಭಜನೆಯಿಂದ ಪವಿತ್ರತೆಯು ಪ್ರಾಪ್ತವಾಗುವುದು. ವ್ರತ, ತಪ, ದಾನ, ತೀರ್ಥ ಇವುಗಳಿಗೆ ಸಾಧುವಿನಿಂದಲೇ ಪವಿತ್ರತೆಯು ಪ್ರಾಪ್ತವಾಗಿರುವುದು ।।೫೯೩।। ಪರಸ್ತ್ರೀ ಮತ್ತು ಪರಧನ ಇವುಗಳ ವಿಚಾರಗಳು ಯಾರ ಮನದಲ್ಲಿ ನಿರ್ಮಾಣ ಆಗುವುದಿಲ್ಲವೋ ಅವರ ಚರಣ ಸ್ಪರ್ಶದ ಇಚ್ಛೆಯನ್ನು ಗಂಗಾದಿಕ ತೀರ್ಥಗಳು ಮಾಡವು'ವು ।।೫೯೪।। ಸ್ವಸ್ತ್ರೀ ಮತ್ತು ಸ್ವಧನ ಇವುಗಳ ಮೇಲೆ ಲೋಭಾಸಕ್ತಿಗಳಿರಲು, ಅದೂ ಕೂಡ ನರಕಕ್ಕೆ ತಳ್ಳುವುದು. ಸ್ತ್ರೀ ಮತ್ತು ಧನ ಈ ವಿಷಯಗಳಲ್ಲಿ ನಿರಪೇಕ್ಷವಾಗಿರುವುದೇ ಸಾಧುವಿನ ಶುದ್ಧತೆಯಾಗಿರುವುದು ।।೫೯೫।। ತನ್ನಲ್ಲಿ ಸ್ವತಃ ಇಷ್ಟೊಂದು ಪಾವಿತ್ರತೆಯು ಇದ್ದರೂ ಕೂಡ ಆತನು ವ್ರತ,ತಪ,ದಾನ ಮತ್ತು ತೀರ್ಥಗಳ ನಿಂದೆಯನ್ನು ಮಾಡಲಾರನು. ಬದಲಾಗಿ ತಾನೇ ಆ ಎಲ್ಲ ವಿಧಿಗಳ ಆಚರಣೆಯ ಪ್ರಸಂಗ ಬರಲು ಆ ಜ್ಞಾನಿಯು ಸದಾಚಾರದಿಂದ ವೈದಿಕವಿಧಿಯಿಂದ ಆ ಕರ್ಮಗಳನ್ನು ಆಚರಿಸುವನು ।।೫೯೬।। ಮೊಸಳೆಯು ಒಮ್ಮೆ ಹಿಡಿಯಿತೆಂದರೆ, ಆಗ ಅದು ತನಗೆ ಪ್ರಾಣಸಂಕಟ ಒದಗಿದರೂ ಬಿಡಲಾರದು. ಅದು ಸಿಕ್ಕಿದ್ದನ್ನು ನುಂಗಿಬಿಡುವುದು. ಅದರಂತೆ ಒಮ್ಮೆ ಬ್ರಹ್ಮದ ಗಂಟು ಅಂಟಿಕೊಳ್ಳಲು, ಅದು ಎಂದಿಗೂ ಬಿಡದು ।।೫೯೭।। ಆ ಯಾವ ಬ್ರಹ್ಮವನ್ನು ಮುಂದು ಮಾಡಿ, ಆತನು ಆಶ್ರಮ ಧರ್ಮಾದಿ ತನ್ನ ಎಲ್ಲ ಕರ್ಮಗಳನ್ನು ಉತ್ತಮ ರೀತಿಯಲ್ಲಿ ಮಾಡುತ್ತಿರುವನು. ಆತನಿಗೆ ಕರ್ಮಗಳಲ್ಲಿಯೂ ಬ್ರಹ್ಮವೇ ಪ್ರತೀತಿಯಾಗಿ ತೋರುತ್ತಿರುವುದು ।।೫೯೮।। ಈತನು ಕರ್ಮಗಳನ್ನು ಮಾಡುವನು ಎಂದು ಹೀಗೆ ಜನರು ಹೇಳುತ್ತಿರುವರು. ಆದರೆ ಆತನು ಬ್ರಹ್ಮಸ್ವರೂಪದಲ್ಲಿ ರಮಮಾಣನಾಗಿರುವನು. ಆತನು ಒಳಗಿನಿಂದ ಆನಂದಿತನಾಗಿರುವನು. ಆತನ ಅನುಭವವು ಜನರಿಗೆ ಬಾರದು ।।೫೯೯।। ಕುಂಬಾರನು ತಿರುಗುತ್ತಿರುವ ಚಕ್ರದ ಮೇಲಿನಿಂದ ಮಡಿಕೆಯನ್ನು ಇಳಿಸಿಕೊಂಡರೂ ಚಕ್ರವು ಹಾಗೆಯೇ ತಿರುತ್ತಿಗುರುವುದು. ಅದರಂತೆ ಸಾಧು ಪೂರ್ವಸಂಸ್ಕಾರದಿಂದ ಶೂನ್ಯವೃತ್ತಿಯಿಂದ ತನ್ನ ಸರ್ವ ಕರ್ಮಗಳನ್ನು ಮಾಡುತ್ತಿರುವನು ।।೬೦೦।। ಇದು ಅತ್ಯಂತ ಶ್ರೇಷ್ಠವಾದ ಸಾಧು ಲಕ್ಷಣವಾಗಿರುವುದು. ಇದನ್ನು ಕೇಳಲು ಬಹಳ ಸುಲಭವಾಗಿದೆ. ಆದರೆ ಆಚರಿಸಲು ಅತ್ಯಂತ ಕಠಿಣವಾಗಿದೆ. ಹೀಗೆ ಈ ಹನ್ನೊಂದನೆಯ ಲಕ್ಷಣವು ಅತ್ಯಂತ ಪವಿತ್ರವಾಗಿದೆ. ಈಗ ಸಾಧುವಿನ ಅಪರಿಗ್ರಹದ ಹನ್ನೆರಡನೆಯ ಲಕ್ಷಣವನ್ನು ಹೇಳುವೆನು, ಅದನ್ನು ಕೇಳು ।।೬೦೧।। ಯಾವುದೇ ಪ್ರಕಾರದ ವಸ್ತುಗಳ ಸಂಗ್ರಹವನ್ನು ಮಾಡದಿರುವಿಕೆಯೇ ಅಪರಿಗ್ರಹವಾಗಿರುವುದು. ಪರಿಗ್ರಹದ ವಿಚಾರವು ಸಾಧುವಿನ ಮನದಲ್ಲಿ ನಿರ್ಮಾಣವಾಗುವುದೇ ಇಲ್ಲ. ದೇಹ ಮತ್ತು ಮನೆಮಾರಿನ ಮೇಲೆ ಆಸಕ್ತಿಯು ಇಲ್ಲದಿರುವಿಕೆಯೇ ಅಕಿಂಚಿನತಾ ಎಂದು ಕರೆಯಲ್ಪಡುವುದು ।।೬೦೨।। ಸ್ಫಟಿಕ ಮಣಿಯನ್ನು ಕಾಡಿಗೆಯ ಮೇಲಿಟ್ಟರೆ ಕಪ್ಪು ಬಣ್ಣವಾಗಿ ಕಾಣುವುದು. ನೀಲಿ ಬಣ್ಣದ ಮೇಲಿಡಲು ನೀಲಿಯಾಗಿ ಕಾಣುವುದು, ಆದರೆ ಅದು ಸ್ವಭಾವತವೇ ಈ ಎಲ್ಲ ಬಣ್ಣಗಳಿಂದ ಭಿನ್ನವಾಗಿರುವುದು. ಅತ್ಯಂತ ಶುದ್ಧ ಮತ್ತು ಸ್ವಚ್ಛವಾಗಿರುವುದು ।।೬೦೩।। ಅದನ್ನು ದಾಸಾಳ ಹೂವಿನ ಮೇಲಿಡಲು ಕೆಂಪು ಬಣ್ಣವಾಗಿ ತೋರುವುದು. ಆದರೆ ಅದು ಮಾತ್ರ ಆ ಹೂವಿನಿಂದ ಪೂರ್ಣ ಅಲಿಪ್ತವಾಗಿರುವುದು. ಆ ಹೂವಿನ ಬಣ್ಣವು ಅದಕ್ಕೆ ಹಚ್ಚಲ್ಪಡುವುದಿಲ್ಲ ।।೬೦೪।। ಸಾಧು ಪರಿಗ್ರಹದಲ್ಲಿ ಇದ್ದನೆಂದರೆ ಈತನು ಸಂಗ್ರಹ ಮಾಡುವವನು ಎಂದು ಜನರಿಗೆ ತೋರುವುದು. ಆದರೆ ಈತನು ಜಾಗೃತ, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿ ಆತ್ಮತತ್ವದಲ್ಲಿ ರಮಮಾಣನಾಗಿರುವನು. ಆದ್ದರಿಂದ ಈತನಿಗೆ ಪರಿಗ್ರಹವು ಸ್ಪರ್ಶ ಸಹ ಮಾಡಲಾರದು ।।೬೦೫।। ಪರೀಸ ಮಣಿಯು ಸರ್ವಧಾತುಗಳಿಗೆ ಅಪ್ಪಿಕೊಂಡು ಅದನ್ನು ಬಂಗಾರವನ್ನಾಗಿ ಮಾಡುವುದು. ಬಂಗಾರ ಆಗ ಬೇರೆ ಪದಾರ್ಥಕ್ಕೆ ಸ್ಪರ್ಶ ಮಾಡುವುದಿಲ್ಲ ।।೬೦೬।।

ತೈಸಾ ಸಾಧೂ ಮ್ಹಣೇ ಜೇ ಜೇ ಮಾಝೇ । ತೇ ತೇ ತ್ಯಾಸೀ ನಾಠವೇ ದುಜೇ । ಐಕ್ಯ ಭಾವಾಚೇ ನಾಚವೀ ಭೋಜೇ । ಅಧೋಕ್ಷಜೇ ಅಂಕಿತು ॥೯೦೭॥ ಚಿನ್ಮಾತ್ರೀ ಜಡಲೇ ಮನ । ವಿಶ್ವ ಜಾಹಲೇ ಚೈತನ್ಯಘನ । ಬುಡಾಲೇ ಪರಿಗ್ರಹಾಚೇ ಭಾನ । ಅಕಿಂಚನಪಣ ಯಾ ನಾಂವ ॥೯೦೮॥ ಸಕಳ ಸಾಂಡೂನಿ ವನಾ ಗೇಲಾ । ವನೀ ವನಿತಾ ಚಿಂತೂ ಲಾಗಲಾ । ತೋ ತ್ಯಾಗಚಿ ಬಾಧಕತ್ವಾ ಆಲಾ । ಉಲಥೋನ ಪಡಿಲಾ ಪರಿಗ್ರಹೀ ॥೯೦೯॥ ಉಂಡಣೀ ಭಿಂತೀ ಚಢೋ ಲಾಹೇ । ಚಢತೇ ಕಷ್ಟ ವ್ಯರ್ಥ ಪಾಹೇ । ತೇ ಪೂರ್ವಿಲ್ಯಾಪರೀಸ ತಳೀ ಜಾಯೇ । ಉಲಂಡೂನಿ ಠಾಯೇ ಅತಿದುಃಖೀ ॥೯೧೦॥ ತೈಶೀ ಮುಂಗೀ ನವ್ಹೇ ಪಾಹೇ । ಉಂಡಣೀ ಘೇಊನಿ ವೃಕ್ಷಾವರೀ ಜಾಯೇ । ಸತ್ಸಂಗತೀ ಮೂರ್ಖ ಉದ್ಧರೋ ಲಾಹೇ । ಪರೀ ತೇ ಉಪಾಯೇ ನ ಕರಿತೀ ॥೯೧೧॥ ಮುಂಗೀ ಲಹಾನ ಉಂಡಣೀ ಥೋರ । ತೇ ತಿಚಾ ಕರೂ ಶಕೇ ಉದ್ಧಾರ । ತೈಸೇ ಅಕಿಂಚನ ಜೇ ನರ । ತೇ ಕರಿತೀ ಉದ್ಧಾರ ಸಕಳಾಂಚಾ ॥೯೧೨॥ ಅಸೋ ಮೂರ್ಖಾಚೀ ಜೇ ತ್ಯಾಗಿತೀ ಗತೀ । ತೇ ಅತ್ಯಂತಬಾಧೇ ಬಾಧಕಾ ಹೋತೀ । ಜಂವ ಧರಿಲೀ ನಾಹೀ ಸತ್ಸಂಗತೀ । ತಂವ ತ್ಯಾಗಸ್ಥಿತೀ ಕಳೇನಾ ॥೯೧೩॥ ಪ್ರಪಂಚ ಸಾಂಡೂನಿ ವನಾ ಗೇಲಾ । ತೋ ದೇಹಪ್ರಪಂಚೀ ದೃಢ ಅಡಕಲಾ । ದೇಹೀ ದೇಹೋ ಜೇಣೇ ಮಿಥ್ಯಾ ಕೇಲಾ । ತೋ ಸತ್ಯ ಝಾಲಾ ಅಕಿಂಚನ ॥೯೧೪॥ ಮೂರ್ಖಾಸೀ ತ್ಯಾಗ ತೋ ಝಾಲಾ ಬಾಧೂ । ಪರಿಗ್ರಹೀ ಅಸೋನಿ ಮುಕ್ತ ಸಾಧೂ । ಸಬಾಹ್ಯ ತ್ಯಾಗೇ ಅತಿಶುದ್ಧು । ಶುಕನಾರದೂ ತಿಹೀ ಲೋಕೀ ॥೯೧೫॥ ತೇ ದೋಘೇಹೀ ಲಾಗತೀ ಜನಕಾಚ್ಯಾ ಪಾಯೀ । ತೋ ರಾಜ್ಯ ಕರಿತಾಂಹೀ ವಿದೇಹೀ । ತ್ಯಾಸೀ ಮೀಹೀ ಮಾನೀತಸೇ ಪಾಹೀ । ಅಭಿನವ ನವಾಈ ಸಾಧೂಚೀ ॥೯೧೬॥ ಯಾ ನಾಂವ ಮುಖ್ಯ ಅಕಿಂಚನತಾ । ತುಜ ಮ್ಯಾ ಸಾಂಗೀತಲೀ ತತ್ತ್ವತಾ । ಹೇ ಬಾರಾವೀ ಲಕ್ಷಣತಾ । ಐಕ ಆತಾ ಅನೀಹಾ ॥೯೧೭॥ ಅನೀಹಾ ಝಾಲೀ ಬಾಪುಡೀ । ಜೇಥ ಜಾಯ ತೋ ದೂರ ದವಡೀ । ಕೋಣೀ ರಾಹೋ ನೇದೀ ಅರ್ಧಘಡೀ । ಅತಿ ಚರಫಡೀ ನಿರಾಶ್ರಯೇ ॥೯೧೮॥ ಅನೀಹಾ ಹಿಂಡತಾ ಲೋಕೀ ತಿಹೀ । ತಿಳಭರೀ ಠಾವೋ ಬಸಾವಯಾ ನಾಹೀ । ಈಹಾ ವೈರಿಣೀ ಲಾಗಲೀ ಪಾಹೀ । ಠಾಯೀಚ್ಯಾ ಠಾಯೀ ದಂಡವೀ ॥೯೧೯॥

ಅದರಂತೆ ಸಾಧು ಯಾವ ಯಾವುದನ್ನು ನನ್ನದೆನ್ನುವನೋ ಅವು ಆತನಿಗೆ ಅನ್ಯರಾಗಿ ಕಾಣುವುದಿಲ್ಲ. ಆತನಿಗೆ ಶ್ರೀಕೃಷ್ಣನು ಅಂಕಿತನನ್ನಾಗಿ ಮಾಡಿದ್ದಕ್ಕೆ ಆತನು ಐಕ್ಯಭಾವದಿಂದ ಮಹತ್ವವನ್ನು ಮರೆಯಿಸುವನು ॥೯೦೭॥ ಚೈತನ್ಯ ಸ್ವರೂಪದಲ್ಲಿ ಮನವು ಏಕತ್ರವಾಗಲು ಸರ್ವವಿಶ್ವವು ಚೈತನ್ಯದ ಲೀಲಾ ವಿಲಾಸವಾಗಿದೆ ಎಂದು ಭಾಸವಾಗುವುದು. ಪರಿಗ್ರಹದ ಸ್ಮರಣೆಯು ಇಲ್ಲದಾಗಲು, ಆಗಾಗುವ ಸ್ಥಿತಿಗೆ ಅಕಿಂಚನ ಎಂದು ಹೆಸರಾಗಿರುವುದು ॥೯೦೮॥ ಒಬ್ಬ ಸಾಧಕನು ಸರ್ವಸ್ವವನ್ನೂ ತ್ಯಾಗ ಮಾಡಿ ವನವನ್ನು ಸೇರಿದನು. ಅಲ್ಲಿ ಆತನ ಮನದಲ್ಲಿ ಸ್ತ್ರೀಚಿಂತನೆ ಉದ್ಭವಿಸಲು, ಆ ತ್ಯಾಗವು ಆತನಿಗೆ ಬಾಧಕವಾಗುವುದು. ಹಾಗೆಯೇ ಆತನು ಪರಿಗ್ರಹದಲ್ಲಿ ಸಿಕ್ಕಿಕೊಳ್ಳುವನು ॥೯೦೯॥ ಯಾವುದೋ ಒಂದು ಹುಳವು ಗೋಡೆಯ ಮೇಲೆ ಹತ್ತುತ್ತ ಮೇಲಿನಿಂದ ಕೆಳಗೆ ಬೀಳುವುದು. ಗೋಡೆಯ ಮೇಲೆ ಹತ್ತುವ ಅದರ ಪರಿಶ್ರಮವು ವ್ಯರ್ಥವಾಗುವುದು. ಪುನಃ ಪೂರ್ವಕ್ಕಿಂತಲೂ ಹೆಚ್ಚಿನ ಆಳದಲ್ಲಿ ಅಂಗಾತವಾಗಿ ಬಿದ್ದು ತಳಮಳಿಸುವುದು ॥೯೧೦॥ ಆದರೆ ಇರುವೆಯು ಮಾತ್ರ ಹಾಗಾಗುವುದಿಲ್ಲ. ಅದು ಒಂದು ಹುಳವನ್ನು ಹಿಡಿದುಕೊಂಡು ವೃಕ್ಷದ ಮೇಲೇರುವುದು. ಅದರಂತೆ ಸತ್ಸಂಗತಿಯಿಂದ ಅಜ್ಞಾನಿ ಜನರ ಉದ್ಧಾರವಾಗುವುದು. ಆದರೆ ಅಜ್ಞಾನಿಯವರು ಇದಕ್ಕಾಗಿ ಯಾವ ಉಪಾಯವನ್ನೇ ಮಾಡಲರಿಯರು ॥೯೧೧॥ ನಿಜವಾಗಿ ನೋಡಲು ಇರುವೆಯು ಚಿಕ್ಕದಾಗಿರುವುದು ಮತ್ತು ಹುಳವು ದೊಡ್ಡದಾಗಿರುವುದು. ಆದರೆ ಆ ಇರುವೆಯು ಚಿಕ್ಕದಾಗಿದ್ದರೂ ಆ ಹುಳವನ್ನು ಉದ್ಧರಿಸುವುದು. ಅದರಂತೆ ಅಕಿಂಚನ ಪುರುಷನು ಈ ಯಾವ ಸರ್ವರ ಉದ್ಧಾರವನ್ನು ಮಾಡಬಲ್ಲನು ॥೯೧೨॥ ಅಜ್ಞಾನಿ ಜನರು ಮಾಡಿರುವ ತ್ಯಾಗವು ಅವರನ್ನೇ ಬಾಧಿಸುವುದು. ಇವರು ಎಲ್ಲಿಯವರೆಗೆ ಸತ್ಸಂಗತಿಯನ್ನು ಮಾಡುವುದಿಲ್ಲವೋ, ಅಲ್ಲಿಯವರಗೆ ಇವರಿಗೆ ತ್ಯಾಗದ ನಿಜಸ್ವರೂಪವು ತಿಳಿಯಲಾರದು ॥೯೧೩॥ ಕೆಲವರು ಪ್ರಪಂಚವನ್ನು ಬಿಟ್ಟು ವನವನ್ನು ಸೇರುವರು. ಆದರೆ ಅಲ್ಲಿ ದೇಹದ ಪ್ರಪಂಚದಲ್ಲಿ ಸಿಕ್ಕಿಹಾಕಿಕೊಳ್ಳುವರು. ಯಾರು ದೇಹದಲ್ಲಿದ್ದರೂ ಪ್ರಪಂಚವು ಮಿಥ್ಯೆ ಎಂದು ತಿಳಿಯುವರೋ, ಆತನೇ ನಿಜವಾದ ಅಕಿಂಚನನಾಗಿರುವನು ॥೯೧೪॥ ಅಜ್ಞಾನದಿಂದ ತ್ಯಾಗವನ್ನು ಮಾಡಿದರೂ ಅದು ಬಾಧಕವಾಗುವುದು. ಆದರೆ ಸಾಧು ಪರಿಗ್ರಹದಲ್ಲಿದ್ದರೂ ಕೂಡ ಮುಕ್ತನಾಗಿರುವನು. ಅಂತರ್ಬಾಹ್ಯ ತ್ಯಾಗದಿಂದ ಶುಕಾಚಾರ್ಯ ಮತ್ತು ನಾರದಮುನಿಯವರು ಮೂರು ಲೋಕಗಳಲ್ಲಿ ಪವಿತ್ರರಾದರು ॥೯೧೫॥ ಹೀಗಿದ್ದರೂ ಈ ಈರ್ವರೂ ಜನಕರಾಜನ ಪಾದ ಹಿಡಿದರು. ಕಾರಣ ಜನಕನು ರಾಜ್ಯವಾಳುತ್ತಲೇ ದೇಹಾತ್ಮ ಬುದ್ಧಿಯಿಂದ ಅಲಿಪ್ತನಾಗಿದ್ದನು. ಹೆಚ್ಚಿಗೇನು ಹೇಳಬೇಕು? ನಾನೂ ಸಹ ಆತನಿಗೆ ಪೂಜ್ಯನೆಂದು ಮನ್ನಿಸುವೆನು. ಹೀಗೆ ಸಾಧುವಿನ ಮಹಿಮೆಯು ಅಗಾಧವಾಗಿರುವುದು ॥೯೧೬॥ ಇದಕ್ಕೇನೇ ಅಕಿಂಚನೆ ಎಂದು ಹೇಳುವರು. ಇದನ್ನು ನಾನು ನಿನಗೆ ತತ್ವತಃ ಹೇಳಿರುವೆನು. ಇದು ಸಾಧುವಿನ ಹನ್ನೆರಡನೆಯ ಲಕ್ಷಣವಾಗಿರುವುದು. ಈಗ ''ಅನೀಹಾ'' ವಿಷಯಕ್ಕೆ ಕೇಳು ॥೯೧೭॥ ಅನೀಹಾ ಎಂದರೆ ನಿರಿಚ್ಛೆಯಾಗಿರುವುದು. ಇದು ದೀನವಾಗಿತ್ತು. ಇದು ಯಾರ ಯಾರಲ್ಲಿ ಹೋಗುತ್ತಿತ್ತೋ, ಅವರೆಲ್ಲರೂ ಇದಕ್ಕೆ ದೂರ ಓಡಿಸುತ್ತಿದ್ದರು. ಅರ್ಧ ಘಳಿಗೆ ಕೂಡ ಯಾರೂ ಇದಕ್ಕೆ ಆಶ್ರಯ ನೀಡಲಿಲ್ಲ. ಆಗ ಇದು ಎಲ್ಲಿಯೂ ಆಶ್ರಯವು ದೊರೆಯದ್ದಕ್ಕೆ ಬಹುವಾಗಿ ತಳಮಳಿಸುತ್ತಿತ್ತು ॥೯೧೮॥ ಇದು ಮೂರು ಲೋಕಗಳಲ್ಲಿಯೂ ತಿರುಗಾಡಿತು. ಆದರೂ ಇದಕ್ಕೆ ಕುಳಿತುಕೊಳ್ಳಲು ಯಾರೂ ಸ್ಥಳಾವಕಾಶವನ್ನು ಮಾಡಿಕೊಡಲಿಲ್ಲ. ಇಚ್ಛೆ ಎಂಬ ಇದರ ವೈರಿಯು ಇದರ ಬೆನ್ನು ಹತ್ತಿ ಅನೇಕ ಸ್ಥಳಗಳಿಂದ ಇದಕ್ಕೆ ಓಡಿಸುತ್ತಿತ್ತು ॥೯೧೯॥

ಕೋಣೀ ಯೇವೋ ನೇದೀ ದಾರಾಕಡೇ । ಅತಿದೀನ ಜಾಲೀ ಬಾಪುಡೇ । ಧಾಯ ಮೋಕಲೋನಿ ರಡೇ । ಗಾರ್ಹಾಣೇ ಸಂತಾಪುಢೇ ದೇವೋ ಆಲೀ ।೯೨೦॥ ತೇ ಕೃಪಾಳೂ ದಯಾಮೇಳೇ । ನಿಜಕರೇ ಪುಸೋನಿ ಡೋಳೇ । ಪ್ರತಿಪಾಳಿಲೀ ಸ್ವಹಿತಕಾಳೇ । ಸಂತಬಳೇ ವಾಢಲೀ ।೯೨೧॥ ತ್ಯಾ ಪೂರ್ವಿಲ ವೈರ ಸ್ಮರೋನಿಯಾ । ಈಹಾ ವೈರಿಣೀ ಸಾಧಾವಯಾ । ಸಂತಾಸೀ ಪುಸೋನಿ ಉಪಾಯಾ । ತಿಚ್ಯಾ ಅಪಾಯಾ ಪ್ರವರ್ತಲೀ ।೯೨೨॥ ಈಹೇಸೀ ನಾನಾ ಚೇಷ್ಟೀ ಚೇಷ್ಟವಿತಾ । ಅಹಂ ಆಣಿ ಜಾಣ ಮಮತಾ । ಕಾಮೇ ಅಂಗೀ ಘಾತಲೀ ತತ್ತ್ವತಾ । ಕಾಮಕಾಂತಾ ತೇ ಝಾಲೀ ।೯೨೩॥ ಈಹಾ ಕಾಮಬಳೇ ವಾಢಲೀ ಥೋರ । ವ್ಯಾಪೂನಿ ರಾಹಿಲೀ ಘರೋಘರ । ತಿಸೀ ಸಾಧಾವಯಾ ವೈರ । ಅನೀಹಾ ಸತ್ವರ ಚಾಲಿಲೀ ।೯೨೪॥ ಅಸಂಗ ಶಸ್ತ್ರ ಮಾಗೋನಿ ಸಂತಾ । ಈಹೇಚ್ಯಾ ಕರಾವಯಾ ಘಾತಾ । ಆಧೀ ಮಾರೂ ಧಾಂವೇ ಅಹಂಮಮತಾ । ದೋಘೇ ಧಾಕತಾ ನಿಮಾಲೀ ।೯೨೫॥ ಅನೀಹಾ ಪಾಠೀ ಲಾಗಲ್ಯಾ ಜಾಣ । ಅಹಂ ಮಮತೇಸೀ ಮ್ಹಾತಾರಪಣ । ಥರಥರಾ ಕಾಂಪೋನಿ ಪ್ರಾಣ । ಘಾಯೇವೀಣ ಸಾಂಡಿಲಾ ।೯೨೬॥ ಅನೀಹಾ ದೇಖೋನಿ ದಿಠೀ । ಕಾಮ ಪಳೇ ಬಾರಾ ವಾಟೀ । ಸಂಕಲ್ಪಾಚೇ ಶೇವಟಿಲೇ ಗೋಟೀ । ಉಠಾಉಠೀ ಪಾಡಿಲಾ ।೯೨೭॥ ಕಾಮೂ ಪಡತಾ ರಣಾಂಗಣೀ । ಕ್ರೋಧಾದಿ ಶೂರ ಪಡಿಲೇ ರಣೀ । ಈಹೇಚಾ ಕೈವಾರೀ ನುರೇಚ ಕೋಣೀ । ಏಕೇಕ ಶೋಧೂನೀ ಮಾರಿಲೇ ।೯೨೮॥ ಏವಂ ಅನೀಹೇಸಮೋರ । ರಾಹೀ ಐಸಾ ನಾಹೀ ವೀರ । ಮಾರೂನಿ ಅವಘ್ಯಾಂಚಾ ಕೇಲಾ ಚೂರ । ಕ್ರಿಯಾ ಕರಣಾರ ಕೋಣೀ ನಾಹೀ ।೯೨೯॥ ಕಾಮ ನಿಮಾಲ್ಯಾ ಸರ್ವಥಾ । ಈಹಾ ರಾಂಡವಲೀ ವಸ್ತುತಾ । ಮುಖ ನ ದಾವೀಚ ಸಂತಾ । ಅಧೋಗಮನತಾ ಪಳಾಲೀ ।೯೩೦॥ ಯಾಲಾಗೀ ಈಹೇಸವೇ ಜೋ ಲಾಗಲಾ । ತೋ ಜಾಣಾವಾ ಅಧೋಗತೀ ಗೇಲಾ । ಅನೀಹೇಚಾ ಜೋ ಅಂಕಿತ ಝಾಲಾ । ತೋ ಆವಡಲಾ ಗೋವಿಂದಾ ।೯೩೧॥ ಮ್ಹಣಸೀ ಅನೀಹಾ ತೇ ಕೋಣ । ಕಾಯ ತೇ ಈಹೇಚೇ ಲಕ್ಷಣ । ಐಕ ಸಾಂಗೇನ ಸಂಪೂರ್ಣ । ಜೇಣೇ ಬಾಣೇ ಖೂಣ ಜಿವ್ಹಾರೀ ।೯೩೨॥ ಕಾಮ್ಯ ಕರ್ಮಾದಿ ಕ್ರಿಯಾಜಾಳ । ತೇಚಿ ಈಹಾ ಜಾಣಾವೀ ಅತಿಚಪಳ । ಅಂತರೀ ಜೇ ಸುನಿಶ್ಚಳ । ತೇಚಿ ಕೇವಳ ಅನೀಹಾ ।೯೩೩॥

ಈ ಯಾವ ಅನೀಹಕ್ಕೆ ಯಾರೂ ತಮ್ಮ ಬಾಗಿಲಿಗೆ ಕಾಲಿಡಲು ಕೊಡುತ್ತಿದ್ದಿಲ್ಲ. ಹೀಗಾಗಿ ಇದು ಅತಿಶಯವಾಗಿ ದೀನವಾಗಿ ಬಿಕ್ಕಿ ಬಿಕ್ಕಿ ಅಳಹತ್ತಿತು. ಕೊನೆಗೆ ಸಂತರಲ್ಲಿ ತನ್ನ ಬವಣೆಯನ್ನು ಹೇಳಲು ಹೊರಟಿತು ।೯೨೦॥ ಸಂತರು ಇವರು ಮೂಲತಃ ದಯಾಳು, ಕೃಪಾಳು ಇರುವುದರಿಂದ ಇವರಿಗೆ ಅದರ ದಯೆಯು ಬಂದಿತು. ಇವರು ತಮ್ಮ ಕೈಗಳಿಂದ ಇದರ ಕಣ್ಣೀರು ಒರೆಸಿದರು. ತಮ್ಮ ಹಿತಕ್ಕಾಗಿ ಅವರು ಇದನ್ನು ಸಂಭಾಳಿಸಿದರು. ಹೀಗೆ ಅನೀಹಾ ಸಂತರ ಬಲದಿಂದ ಬೆಳೆಯಿತು ।೯೨೧॥ ಆ ಯಾವ (ಈಹಾ) ಇಚ್ಛೆಯ ಪೂರ್ವದ ವೈರವನ್ನು ಮನದಲ್ಲಿ ತಂದು ಅದರ ನಾಶವನ್ನು ಮಾಡುವುದಕ್ಕಾಗಿ ಸಂತರಿಗೆ ಉಪಾಯವನ್ನು ಕೇಳಹತ್ತಿತು ।೯೨೨॥ ಅಹಂ ಮತ್ತು ಮಮತೆ ಇವು ಇಚ್ಛೆಯ ಮೈತ್ರಿಣಿಯಾಗಿ, ಇವರು ಇಚ್ಛೆಯಲ್ಲಿ ಅನೇಕ ಪ್ರಕಾರಗಳಿಂದ ಆಟವಾಡುತ್ತ ಇರಲು ಆಕೆಗೆ ಕಾಮನು ತನ್ನ ವಶದಲ್ಲಿ ತಗೆದುಕೊಂಡನು. ಈಕೆಯು ಕಾಮನ ಸ್ತ್ರೀಯಾದಳೂ ।೯೨೩॥ ಕಾಮದ ಬೆಂಬಲವು ಸಿಗುತ್ತಲೇ ಇಚ್ಛೆ ಎಂಬ ಸ್ತ್ರೀಯು ಅತಿಶಯವಾಗಿ ಪ್ರಬಲಳಾದಳು ಮತ್ತು ಮನೆ ಮನೆಗೂ ವ್ಯಾಪಿಸಿದಳು. ಈಕೆಯ ವೈರವನ್ನು ಸಾಧಿಸಲು ಅನೀಹಾ ಬಹು ಲಗುಬಗೆಯಿಂದ ಹೊರಟಳು ।೯೨೪॥ ಈಕೆಯು ಸಂತರಿಂದ ಅಸಂಗತ್ವ ಎಂಬ ಶಸ್ತ್ರವನ್ನು ಕೇಳಿ ಪಡೆದಳು. ಇಚ್ಛೆಯನ್ನು ಕೊಲ್ಲುವುದಕ್ಕಾಗಿ ಈಕೆಯು ಪ್ರಾರಂಭದಲ್ಲಿ ''ಅಹಂ'' ಮತ್ತು ''ಮಮತೆ'' ಈ ಇಬ್ಬರನ್ನು ಕೊಲ್ಲಲು ಧಾವಿಸಿದಳು. ಆಗ ಅವರೀರ್ವರೂ ಭಯದಿಂದಲೇ ಮರಣಹೊಂದಿದರು ।೯೨೫॥ ಅನೀಹಾ ಬೆನ್ನು ಹತ್ತಿದ್ದು ಕಂಡು ಮೊದಲೇ ವೃದ್ಧರಾಗಿದ್ದ ಪಾಪ ಅಹಂ ಮತ್ತು ಮಮತೆ ಇವರು ಗಡಗಡನೇ ನಡುಗುತ್ತ, ಹೊಡೆತ ಬೀಳುವುದಕ್ಕಿಂತ ಮುಂಚೆಯೇ ಪ್ರಾಣವನ್ನು ಬಿಟ್ಟರು ।೯೨೬॥ ಅನೀಹಾಳನ್ನು ಕಂಡಾಕ್ಷಣವೇ ಕಾಮನು ದಿಕ್ಕೆಟ್ಟು ಓಡಿಹತ್ತಿದನು. ಈಕೆಯು ಆತನಿಗೆ ಸಂಕಲ್ಪದ ಕೊನೆಯ ಗೋಟಿಯಲ್ಲಿ ಸಿಕ್ಕಿಸಿ ಇದ್ದ ಇದ್ದಲ್ಲಿಯೇ ಗತಪ್ರಾಣ ಮಾಡಿದಳು ।೯೨೭॥ ಕಾಮನು ಈ ರೀತಿಯಲ್ಲಿ ರಣರಂಗದಲ್ಲಿ ಬೀಳುವುದರಿಂದ ಅದರ ಕ್ರೋಧಾದಿಯೋದ್ಧರು ಸಹಜವಾಗಿ ಕೊಲ್ಲಲ್ಪಟ್ಟರು. ಇಚ್ಛೆಯ ಕೈವಾರೀಯಾಗಿ ಯಾರೂ ಉಳಿಯಲಿಲ್ಲ. ಅನೀಹಾಳು ಒಬ್ಬಬ್ಬರನ್ನೇ ಹೀಗೆ ಹುಡುಕುತ್ತಾ ಕೊಂದುಹಾಕಿದಳು ।೯೨೮॥ ಈಗ ಅನೀಹಾಳ ಮುಂದೆ ನಿಂತುಕೊಳ್ಳುವಂತಹ ಒಬ್ಬ ವೀರನೂ ಉಳಿಯಲಿಲ್ಲ. ಈಕೆಯು ಎಲ್ಲರನ್ನೂ ಕೊಂದು ಛಿನ್ನಾಭಿದ್ರಗೊಳಿಸಿದಳು. ಇವರ ಅಂತ್ಯಕ್ರಿಯಾದಿ ಕಾರ್ಯ ಮಾಡಲು ಯಾರೂಬ್ಬರೂ ಉಳಿಯಲಿಲ್ಲ ।೯೨೯॥ ಕಾಮದ ಸರ್ವನಾಶವಾದ ನಂತರ ಇಚ್ಛೆ ಎಂಬುವಳು ನಿಜವಾಗಿಯೂ ವಿಧವೆಯಾದಳು. ಈಕೆಯು ಸಂತರಿಗೆ ಮುಖವನ್ನು ತೋರಿಸದೇ ಅಧೋ ಮುಖಳಾಗಿ ಓಡಿ ಹೋದಳು ।೯೩೦॥ ಆದ್ದರಿಂದ ಯಾರು ಇಚ್ಛೆಯ ಬೆನ್ನು ಹಿಡಿಯುವರೋ, ಅವರು ಅಧೋಗತಿಯಾದರೆಂದು ತಿಳಿಯಬೇಕು. ಯಾರು (ಅನೀಹಾ) ನಿರಿಚ್ಛೆಯ ಅಂಕಿತರಾಗುವರೋ, ಅವರು ಗೋವಿಂದನಿಗೂ ಪ್ರಿಯರಾಗುವರೆಂದು ತಿಳಿಯಬೇಕು ।೯೩೧॥ ಈಗ ನೀನು ಅನೀಹಾ ಎಂದರೆ ಯಾರು? ಮತ್ತು ಈಹಾದ ಲಕ್ಷಣವೇನು? ಎಂದು ಕೇಳಬಹುದು ಅದಕ್ಕಾಗಿ ಅವರ ಚಿನ್ಹೆಗಳು ಅಂತಃಕರಣದಲ್ಲಿ ಮೂಡುವಂತೆ ಹೇಳುವೆನು ಅದನ್ನು ಕೇಳು ।೯೩೨॥ ಕಾಮ್ಯ ಕರ್ಮಗಳ ಅನುಷ್ಠಾನವೇ ಈ ಯಾವ ಚಂಚಲ ಈಹಾ ಅಂದರೆ ಇಚ್ಛೆಯಾಗಿರುವುದು. ಅಂತಃಕರಣದಲ್ಲಿ ದೃಢವಾಗಿರುವ ಯಾವ ವೃತ್ತಿಯು ಅದೇ ಅನೀಹಾ (ನಿರಿಚ್ಛೆ) ಎಂದು ತಿಳಿಯಬೇಕು ।೯೩೩॥

ಅಂತರೀ ಕಾಮಾಚೀ ವಾರ್ತಾ । ನುಪಜೇ ಕರ್ಮಾಚೀ ಕರ್ಮಾವಸ್ಥಾ । ಅಣುಭರೀ ನ ರಿಘೇ ಉದ್ವೇಗತಾ । ಅನೀಹಾ ತತ್ತ್ವತಾ ತೇ ಜಾಣ ॥೯೩೪॥ ಐಶೀ ಅನೀಹಾ ಅಸೇ ಜ್ಯಾಸೀ । ದೇವೋ ಆಜ್ಞಾಧಾರಕೂ ತ್ಯಾಪಾಶೀ । ತೇ ಅನೀಹಾ ಸಂತಾಂಚೀ ದಾಸೀ । ಅಹರ್ನಿಶೀ ಜೀವೇಭಾವೇ ॥೯೩೫॥ ಹೇ ಅನೀಹಾ ಅತಿಗೌರವೇ । ಸಾಧುಲಕ್ಷಣ ತೇರಾವೇ । ಮಿತಭೋಜನ ತೇ ಚೌದಾವೇ । ಲಕ್ಷಣ ವೈಭವೇ ಅವಧಾರೀ ॥೯೩೬॥ ನ ಕೋಡೇ ರಸನೇಚಿಯಾ ಚಾಡಾ । ನ ಪಡೇ ಕ್ಷುಧೇಚ್ಯಾ ಪಾಂಗಡಾ । ಅವಡೀನಾವಡೀಚಾ ಉಪಾಡಾ । ಕರೂನಿ ನಿಧಡಾ ಭೋಜನೀ ॥೯೩೭॥ ಪ್ರಾಣು ಆಕಾಂಕ್ಷೀ ಅನ್ನಾತೇ । ಜಠರಾಗ್ನಿ ಭಕ್ಷೀ ತ್ಯಾತೇ । ಉಭಯಸಾಕ್ಷೀ ಮೀ ಯೇಥೇ । ಜಾಣೋನಿ ನಿರುತೇ ರಸ ಸೇವೀ ॥೯೩೮॥ ಜೇ ಜೇ ಆಲೇ ಭೋಜನಾಸೀ । ದೃಷ್ಟೀನೇ ತ್ಯಾಚೇ ದೋಷ ನಿರಸೀ । ಅತಿಪವಿತ್ರ ಕರೂನಿ ತ್ಯಾಸೀ । ನಿಜಸಮರಸೀ ಸೇವಿತು ॥೯೩೯॥ ನ ದೇಖೇ ಭೋಗ್ಯ ಪದಾರ್ಥಾ । ನಾಠವೇ ಮೀ ಏಕ ಭೋಕ್ತಾ । ಗ್ರಾಸೀ ಸಮರಸೀ ಅಚ್ಯುತಾ । ಭೋಗೂನಿ ಅಭೋಕ್ತಾ ಮಿತಭೋಜೀ ॥೯೪೦॥ ಅಗ್ನಿ ಆಧೀ ಆಪಣಯಾ ಐಸೇ ಕರೀ । ಮಗ ತ್ಯಾ ಆಹಾರಾತೇ ಅಂಗೀಕಾರೀ । ಸಾಧು ಆಧೀ ದ್ವೈತಾತೇ ನಿವಾರೀ । ಮಗ ಸ್ವೀಕಾರೀ ಆಹಾರಾತೇ ॥೯೪೧॥ ಯಾಚಿ ನಾಂವ ಮಿತಭೋಜನ । ಸಾಧೂಚೇ ಆಹಾರಾಚೇ ಲಕ್ಷಣ । ಯುಕ್ತೀವೀಣ ಅಲ್ಪಭೋಜನ । ತೇ ಪಥ್ಯ ಜಾಣ ರೋಗಿಯಾಚೇ ॥೯೪೨॥ ಗ್ರಾಸೋಗ್ರಾಸೀ ಬ್ರಹ್ಮಾರ್ಪಣ । ತ್ಯಾ ನಾಂವ ಪರಿಮಿತ ಭೋಜನ । ಹೇ ಚೌದಾವೇ ಲಕ್ಷಣ । ಸಾಧೂಚೇ ಜಾಣ ಉದ್ಧವಾ ॥೯೪೩॥ ಸಮಳಜಳಸಂಭಾರೀ । ಸರಿತಾಮೇಳೂ ಮಿಳೇ ಸಾಗರೀ । ತೋ ಡಹುಳೇನಾ ತಿಳಭರೀ । ನಿರ್ವಿಕಾರೀ ನಿರ್ಮಳೂ ॥೯೪೪॥ ತೈಶಾ ಆಲಿಯಾ ನಾನಾ ಊರ್ಮೀ । ಜ್ಯಾಂಸಿ ಗಜಬಜು ನಾಹೀ ಮನೋಧರ್ಮೀ । ಶಾಂತೀ ಸಂತಾಂಚೇ ಪರಾಕ್ರಮೀ । ಉಪಕ್ರಮೀ ನಿಜಶಕ್ತೀ ॥೯೪೫॥ ಜೇವೀ ಕಾ ನಾಗವೇಲೀಚೀ ವೇಲೀ । ಆಧಾರಾವೀಣ ನ ವಚೇ ವೇಂಗಲೀ । ತೈಸೀ ಸಂತಬಳೇ ಶಾಂತೀ ವಾಢಲೀ । ಮಂಡಪಾ ಚಢಲೀ ಚಿನ್ಮಾತ್ರ ॥೯೪೬॥ ಝೊಂಕಳೋನಿ ದಶದಿಶಾಂಸೀ । ಆಭಾಳ ದಾಟಲ್ಯಾ ಆಕಾಶೀ । ಗಗನ ಅವಿಕಾರೀ ತ್ಯಾ ದೋಷಾಸೀ । ಆಭಾಳಾಸೀ ನಾತಳೇ ॥೯೪೭॥

ಅಂತಃಕರಣದಲ್ಲಿ ಇಚ್ಛೆಯ ವಿಚಾರವೇ ಹುಟ್ಟದಿರುವಿಕೆ, ಅಥವಾ ಕರ್ಮಗಳ ಕರ್ಮಾವಸ್ಥೆ ಉತ್ಪನ್ನವಾಗದಿರುವಿಕೆ, ಉದ್ವೇಗವು ಅಣುವಿನಷ್ಟು ಉತ್ಪನ್ನವಾಗದಿರುವಿಕೆ, ಇದೇ ನಿಜವಾದ ಅನೀಹಾ ಎಂದರೆ ನಿರಿಚ್ಛತಾ ಆಗಿರುವುದು ॥೯೩೪॥ ಹೀಗೆ ನಿರಿಚ್ಛೆಯು ಯಾವನ ಅಂತಃಕರಣದಲ್ಲಿ ನಿರ್ಮಾಣವಾಗುವುದೋ, ಆತನಿಗೆ ದೇವರೂ ಸಹ ಸಹಾಯ ಮಾಡುವನು. ಈ ನಿರಿಚ್ಛೆಯು ಸಂತರಲ್ಲಿ ಜೀವಭಾವದಿಂದ ದಾಸಿಯಾಗಿ ಇರುವಳು ॥೯೩೫॥ ಈ ಯಾವ "ಅನೀಹಾ" ಅಂದರೆ ನಿರಿಚ್ಛೆಯು ಅತಿ ಗೌರವದೊಂದಿಗೆ ಸಂತರ ಹದಿಮೂರನೆಯ ಲಕ್ಷಣವಾಗಿದೆ. ಈಗ ಹದಿನಾಲ್ಕನೆಯ ಲಕ್ಷಣವೆಂದರೆ ಮಿತಭೋಜನವಾಗಿದೆ. ಅದನ್ನೂ ಸಹ ಅದರ ಶ್ರೇಷ್ಠ ಗುಣದೊಂದಿಗೆ ಹೇಳುವನು, ಕೇಳು ॥೯೩೬॥ ಸಾಧು ನಾಲಿಗೆಯ ಪ್ರೀತಿಗೆ ಎಂದೂ ದಾಸನಾಗುವುದಿಲ್ಲ. ಹಸಿವೆಯ ಆಧೀನನು ಎಂದೂ ಆಗುವುದಿಲ್ಲ. ಅದು ಬೇಕು ಇದು ಬೇಡ ಎಂಬ ಗೋಜಿಗೂ ಹೋಗುವುದಿಲ್ಲ. ಹೀಗೆ ಭೋಜನದಲ್ಲಿ ಧೀರನಾಗಿರುವನು ॥೯೩೭॥ ಅನ್ನದ ಇಚ್ಛೆಯನ್ನು ಪ್ರಾಣ ಮಾಡುವುದು, ಜಠರಾಗ್ನಿಯು ಅನ್ನದ ಭಕ್ಷಣೆಯನ್ನು ಮಾಡುತ್ತಿರುವುದು. ಇವರಿಬ್ಬರಿಗೂ ನಾನು ಕೇವಲ ಸಾಕ್ಷಿಯಾಗಿರುವೆನು. ಹೀಗೆ ತಿಳಿದುಕೊಂಡು ಈತನು ಎಲ್ಲ ರಸಗಳ ಸೇವನೆಯನ್ನು ಮಾಡುವನು ॥೯೩೮॥ ತನ್ನೆದುರು ಬಂದ ಪ್ರತಿಯೊಂದು ಭೋಜನ ಪದಾರ್ಥಗಳನ್ನು ತನ್ನ ದೃಷ್ಟಿ ಮಾತ್ರದಿಂದ ದೋಷ ಮುಕ್ತಗೊಳಿಸಿ ಅತಿ ಪವಿತ್ರವನ್ನಾಗಿ ಮಾಡಿ ಆತ್ಮೈಕ್ಯದಲ್ಲಿ ಏಕರೂಪನಾಗಿ ಅವುಗಳ ಸೇವನೆಯನ್ನು ಮಾಡುವನು ॥೯೩೯॥ ಇವು ಭೋಗ್ಯ ಪದಾರ್ಥಗಳೆಂದು ಹೀಗೆ ನೋಡುವುದಿಲ್ಲ. ಅಥವಾ ನಾನು ಇವುಗಳ ಭೋಕ್ತಾ ಎಂಬ ಅಭಿಮಾನವೂ ಇರುವುದಿಲ್ಲ. ಶ್ರೀಕೃಷ್ಣನ ಸ್ಮರಣೆಯನ್ನು ಮಾಡುತ್ತ ಆತನು ಪ್ರತಿಯೊಂದು ತುತ್ತನ್ನು ಸೇವಿಸುವನು. ಹೀಗೆ ಪರಿಮಿತ ಭೋಜನವನ್ನು ಮಾಡುವವನು ಅಭೋಕ್ತಾನಾಗಿರುವನು ॥೯೪೦॥ ಅಗ್ನಿಯು ಯಾವ ಪ್ರಕಾರವಾಗಿ ತನ್ನ ಆಹಾರಕ್ಕೆ ಮೊದಲು ಸ್ವಸ್ವರೂಪಗೊಳಿಸಿ, ತದನಂತರ ಅದರ ಗ್ರಹಣವನ್ನು ಮಾಡುವುದು. ಅದರಂತೆ ಸಾಧು ಮೊದಲು ದ್ವೈತದ ನಿವಾರಣೆಯನ್ನು ಮಾಡಿ, ತದನಂತರ ಆಹಾರವನ್ನು ಸೇವಿಸುವನು ॥೯೪೧॥ ಇದರ ನಾಮವೇ ಮಿತಭೋಜನವಾಗಿರುವುದು. ಇದು ಸಾಧುವಿನ ಆಹಾರದ ಲಕ್ಷಣವಾಗಿರುವುದು. ಈ ಯುಕ್ತಿಯನ್ನು ಸಾಧಿಸದೇ ಕೇವಲ ಅಲ್ಪಭೋಜನ ಮಾಡಿದರೆ ಅದು ರೋಗಿಯ ಪಥ್ಯದ ಊಟವೆಂದು ತಿಳಿಯಬೇಕು ॥೯೪೨॥ ಪ್ರತಿಯೊಂದು ತುತ್ತನ್ನು ಬ್ರಹ್ಮಾರ್ಪಣೆಯನ್ನು ಮಾಡಿ ಭುಂಜಿಸುವುದಕ್ಕೆ ಪರಿಮಿತ ಭೋಜನ ಎಂದು ಹೇಳುವರು. ಹೇ ಉದ್ಧವನೇ ಸಾಧುವಿನ ಇದು ಹದಿನಾಲ್ಕನೆಯ ಲಕ್ಷಣವಾಗಿರುವುದು. ಇದನ್ನು ನೀನು ತಿಳಿದುಕೊ ॥೯೪೩॥ ಮಲಿನ ನೀರಿನ ಹಳ್ಳಕೊಳ್ಳಗಳು ನದಿಗೆ ಬಂದು ಸೇರುವುವು. ಆ ನದಿಗಳು ಸಮುದ್ರಕ್ಕೆ ಬಂದು ಏಕರೂಪವಾಗುವುವು. ಆದರೆ ಸಮುದ್ರವು ಮಾತ್ರ ಸ್ವಲ್ಪವೂ ಮಲಿನವಾಗುವುದಿಲ್ಲ. ಅದು ನಿರ್ವಿಕಾರವಾಗಿ ನಿರ್ಮಲವಾಗಿರುವುದು ॥೯೪೪॥ ಅದರಂತೆ ಸಾಧುವಿನಲ್ಲಿ ಎಷ್ಟೇ ಊರ್ಮಿಗಳು ಬಂದು ಒದಗಿದರೂ ಆತನ ಮನದಲ್ಲಿ ಗಜಿಬಿಜಿಯಾಗುವುದಿಲ್ಲ. ಸಂತರ ಶಾಂತಿಯು ಪರಾಕ್ರಮಿಯಾಗಿರುವುದು. ಇದು ಅವರ ಆತ್ಮಶಕ್ತಿಯನ್ನು ಪ್ರೇರಿಸುವುದು ॥೯೪೫॥ ಯಾವ ಪ್ರಕಾರವಾಗಿ ವೀಳ್ಯದ ಎಲೆಗಳ ಬಳ್ಳಿಯು ವೃಕ್ಷದ ಆಧಾರದಿಂದ ಮೇಲಕ್ಕೆ ಏರುತ್ತಿರುವುದೋ, ಅದರಂತೆಯೇ ಶಾಂತಿಯು ಸಂತರ ಆಧಾರದಿಂದ ಬೆಳೆದು ಚಿತ್ಸ್ವರೂಪದ ಮಂಟಪದಲ್ಲಿ ಹಬ್ಬಿಕೊಂಡಿರುವುದು ॥೯೪೬॥ ಆಕಾಶದಲ್ಲಿ ಮೋಡಗಳು ಬಂದು ಅವು ದಶದಿಕ್ಕುಗಳನ್ನು ಮುಚ್ಚಿಬಿಟ್ಟರೂ ಸಹ ಆಕಾಶವು ಅವುಗಳಿಂದ ಅಲಿಪ್ತವಾಗಿರುವುದು. ಆ ಮೋಡಗಳಿಗೆ ಸ್ಪರ್ಶವೂ ಕೂಡ ಮಾಡುವುದಿಲ್ಲ ॥೯೪೭॥

ಶೀತ ಉಷ್ಣ ಪರ್ಜನ್ಯ ಧಾರಾ । ಅಂಗೀ ನ ಲಗತೀ ಅಂಬರಾ । ತೇವೀ ಸಾಧೂಚಾ ಉಭಾರಾ । ದ್ವಂದ್ವಸಂಭಾರಾ ನಿರ್ದ್ವಂದ್ವ ॥೯೪೮॥ ತೈಶಾ ಉಂಚ ನೀಚ ನಾನಾ ಅವಸ್ಥಾ । ನಿಬಿಡ ದಾಟಲ್ಯಾ ಮೋಹ ಮಮತಾ । ಕ್ಷೋಭು ನುಪಜೇ ಜ್ಯಾಚ್ಯಾ ಚಿತ್ತಾ । ತ್ಯಾ ನಾಂವ ತತ್ತ್ವತಾ ನಿಜಶಾಂತೀ ॥೯೪೯॥ ಸಂತಾಂಚೇನಿ ಶಾಂತಿ ಗಹನ । ಶಾಂತೀಚೇನಿ ಸಂತ ಪಾವನ । ಹೇ ಅನನ್ಯ ನಿಜಲಕ್ಷಣ । ಪಂಧರಾವಾ ಗುಣ ಸಂತಾಂಚಾ ॥೯೫೦॥ ಜೈ ಮೀಪಣೇ ನವ್ಹೇತೇ ಜನ್ಮನಾಮ । ತೈಚ ಪೂರ್ವಜಾಂಚೇ ನಿಜಧಾಮ । ಆಪುಲೀ ಮಿರಾಸೀ ಜೇ ಉತ್ತಮ । ತೇಥ ಮನೋಧರ್ಮ ಸ್ಥಿರು ಜ್ಯಾಚಾ ॥೯೫೧॥ ಮಜ ಜನ್ಮ ಚಿ ನಾಹೀ ಝಾಲೇ । ಮರಣ ಮ್ಯಾ ನಾಹೀ ದೇಖಿಲೇ । ಐಸೇ ಮನ ಮೂಳೀ ಸ್ಥಿರಾವಲೇ । ಸ್ಥಿರತಾ ಬೋಲಿಲೇ ಯಾ ನಾಂವ ॥೯೫೨॥ ಚಹೂ ಆಶ್ರಮಾಹೂನಿ ಉತ್ತಮ । ಆಪುಲಾ ಜೋ ನಿಜಾಶ್ರಮ । ತೇಥೇ ಸ್ಥಿರಾವೋನಿ ಮನೋಧರ್ಮ । ವರ್ಣಾಶ್ರಮ ಚಾಲವೀ ॥೯೫೩॥ ಚಹೂ ವರ್ಣಾಮಾಜೀ ಪವಿತ್ರತಾ । ಜೇಣೇ ಬ್ರಾಹ್ಮಣಾಂಚೇ ಬ್ರಾಹ್ಮಣತಾ । ತೇಥೇ ಸ್ಥಿರಾವಿಲೇ ಜೇಣೇ ಚಿತ್ತಾ । ಜಾಣ ಸ್ಥಿರತಾ ತೀ ನಾಂವ ॥೯೫೪॥ ತಿಹೀ ಲೋಕೀ ಸ್ಥಿರತಾ । ಮರೋ ಟೇಕಲೀ ಸರ್ವಥಾ । ಕೋಣೀ ನಾಹೀ ಪ್ರತಿಪಾಳಿತಾ । ಹಾತೀ ಧರಿತಾ ನ ದೇಖೇ ॥೯೫೫॥ ದಾರೀ ರಾಹೋ ನೇದೀ ಕೋಣೀ । ಕೋಣ ದೇಈಲ ಪಥ್ಯಪಾಣೀ । ಅವಘೀ ಟಾಕಿಲೀ ನಿರಂಜನೀ । ತೇ ಸಜ್ಜನೀ ಪ್ರತಿಪಾಳಿಲೀ ॥೯೫೬॥ ಸ್ಥಿರತಾ ವಾಢಲೀ ಸಂತಬಳೇ । ಜಿಣೋನಿ ವರ್ಣಾಶ್ರಮಾದಿ ಟವಾಳೇ । ಭೇದೋನಿ ಆಕಾರಾದಿವರ್ಣಪಟಳೇ । ಏಕೇ ವೇಳೇ ವಾಢಲೀ ॥೯೫೭॥ ಸ್ವಸ್ವರೂಪೀ ಸಾಯುಜ್ಯತಾ । ಪಾವೋನಿ ಸ್ಥಿರಾವಲೀ ಸ್ಥಿರತಾ । ತೇಥ ವಾಟ ಮೋಕಳೀ ಸಂತಾ । ಸ್ವಭಾವತಾ ತ್ಯಾ ಕೇಲೀ ॥೯೫೮॥ ತೇಥ ಸ್ವಸ್ವರೂಪೇ ಸ್ವಕರ್ಮ । ಸ್ವಸ್ವರೂಪೇ ವರ್ಣಾಶ್ರಮ । ಸ್ವಸ್ವರೂಪೇ ಸ್ವಧರ್ಮ । ಸ್ಥಿರತಾ ಸಂಭ್ರಮ ಯಾ ನಾಂವ ॥೯೫೯॥ ಐಸೀ ಸ್ವಧರ್ಮಕರ್ಮೀ ಅವಸ್ಥಾ । ತೀ ನಾಂವ ಉತ್ತಮ ಸ್ಥಿರತಾ । ಹೇ ಸೋಳಾವೀ ಲಕ್ಷಣತಾ । ಮಚ್ಛರಣತಾ ತೇ ಐಕ ॥೯೬೦॥ ಸರಿತಾ ಸಾಗರಾ ಶರಣ ಆಲೀ । ತೇ ಸಮರಸೋನಿ ಸಿಂಧೂ ಝಾಲೀ । ತೈಸೀ ಶರಣ ಜೇ ವೃತ್ತಿ ಮಜ ಆಲೀ । ತೇ ಪಾವಲೀ ದಶಾ ಮಾಝೀ ॥೯೬೧॥

ಆಕಾಶದಲ್ಲಿ ಶೀತ, ಉಷ್ಣ ಅಥವಾ ಮಳೆಯ ಧಾರೆಗಳು ಇವು ಯಾವುವೂ ಅದರ ಅಂಗಕ್ಕೆ ಎಂದಿಗೂ ಹತ್ತಲಾರವು. ಅದರಂತೆ ಸಾಧುವಿನ ಸ್ವರೂಪವು ದ್ವಂದ್ವಗಳಲ್ಲಿ ನಿರ್ದ್ವಂದ್ವವಾಗಿರುವುದು ॥೯೪೮॥ ಉಚ್ಚವಾಗಲಿ ಅಥವಾ ನೀಚವಾಗಲಿ ಇಂತಹ ನಾನಾ ಪ್ರಕಾರದ ಅವಸ್ಥೆಗಳು ಪ್ರಾಪ್ತವಾದರೂ ಅಥವಾ ಮೋಹ ಮಮತೆಗಳು ಎಷ್ಟೇ ಬಂದೊದಗಿದರೂ, ಯಾರ ಚಿತ್ತದಲ್ಲಿ ಶೋಕವು ಉತ್ಪನ್ನವಾಗುವುದಿಲ್ಲವೋ, ನಿಜವಾಗಿಯೂ ಇದರ ನಾಮವೇ ಆತ್ಮಶಾಂತಿಯಾಗಿರುವುದು ॥೯೪೯॥ ಸಂತರಿಂದ ಶಾಂತಿಗೆ ಮಹತ್ವವು ಬಂದಿರುವುದು. ಶಾಂತಿಯಿಂದ ಸಂತರು ಪಾವನರಾಗುವರು. ಈ ಪ್ರಕಾರವಾಗಿ ಪರಸ್ಪರ ಆಧಾರದಿಂದ ಇರುವಿಕೆಯೇ ಈ ಹದಿನೈದನೆಯ ಲಕ್ಷಣವಾಗಿರುವುದು ॥೯೫೦॥ ಎಲ್ಲಿ ನಾನು ಎಂಬ ತನ್ನ ಜನ್ಮನಾಮವೇ ಇರುವುದಿಲ್ಲ. ಅದುವೇ ತನ್ನ ಪೂರ್ವಜರ ಮೂಲ ಮನೆಯಾಗಿರುವುದು. ಉತ್ತಮ ರೀತಿಯ ವತನದಾರವು ಅದೇ ಆಗಿರುವುದು. ಅಲ್ಲಿಯೇ ಆತನ ಮನೋಧರ್ಮವು ಸ್ಥಿರವಾಗುವುದು ॥೯೫೧॥ ನಾನು ಜನ್ಮವನ್ನೂ ಪಡೆದಿಲ್ಲ, ಮೃತ್ಯುವನ್ನೂ ಹೊಂದಿರುವುದಿಲ್ಲ. ಹೀಗೆಂದು ಮೂಲದಲ್ಲಿಯೇ ಮನವು ಸ್ಥಿರಗೊಂಡಿತೆಂದರೆ, ಅದೇ ಸ್ಥಿರತೆಯಾಗುವುದು ॥೯೫೨॥ ತನ್ನ ಆಶ್ರಮವು ಈ ಯಾವ ನಾಲ್ಕೂ ಆಶ್ರಮಕ್ಕಿಂತ ಶ್ರೇಷ್ಠವಾಗಿರುವುದು ಎಂದು ತಿಳಿದು ಅದರಲ್ಲಿ ತನ್ನ ಮನೋಧರ್ಮವನ್ನು ಸ್ಥಿರಗೊಳಿಸಿ, ಆತನು ವರ್ಣಾಶ್ರಮವನ್ನು ನಡೆಸುವನು ॥೯೫೩॥ ನಾಲ್ಕೂ ವರ್ಣಗಳಲ್ಲಿ ಯಾವುದಕ್ಕೆ ಪವಿತ್ರತೆ ಬಂದಿರುವುದು. ಯಾವುದರಿಂದ ಬ್ರಾಹ್ಮಣಕ್ಕೆ ಬ್ರಾಹ್ಮಣತ್ವವು ಬಂದಿರುವುದು, ಅಂತಹ ಬ್ರಹ್ಮತತ್ವದಲ್ಲಿ ಚಿತ್ತವು ಸ್ಥಿರವಾಯಿತೆಂದರೆ, ಅದಕ್ಕೆ ಸ್ಥಿರತೆ ಎಂದು ನಾಮವು ಪ್ರಾಪ್ತವಾಗುವುದು ॥೯೫೪॥ ಈ ಯಾವ ಸ್ಥಿರತೆಯು ತ್ರಿಭುವನದಲ್ಲಿ ಮೃತಪ್ರಾಯವಾಗಿತ್ತು. ಇದನ್ನು ಸಂಭಾಳಿಸುವವರು ಯಾರೂ ಇರಲಿಲ್ಲ. ಇದಕ್ಕೆ ಯಾರೂ ಆಶ್ರಯವನ್ನು ಕೊಡಲಿಲ್ಲ ॥೯೫೫॥ ಇದಕ್ಕೆ ಯಾರೂ ತಮ್ಮ ಬಾಗಿಲದಲ್ಲಿಯೂ ಕೂಡ ನಿಲ್ಲಲು ಕೊಡಲಿಲ್ಲ. ಇದರ ಉಟೋಪಚಾರ ಮಾಡಿಸಲು ಯಾರೂ ಸಿದ್ಧರಾಗಲಿಲ್ಲ. ಎಲ್ಲರೂ ಇದರ ಮರಣದ ದಾರಿಯನ್ನು ಕಾಯುತ್ತಿದ್ದರು. ಆಗ ಸಜ್ಜನರು ಇದರ ಪ್ರತಿಪಾಲನೆಯನ್ನು ಮಾಡಿದರು ॥೯೫೬॥ ಈ ಪ್ರಕಾರವಾಗಿ ಸ್ಥಿರತೆಯು ಸಂತರ ಬಲದ ಮೇಲೆ ಸೊಗಸಾಗಿ ಪುಷ್ಟವಾಯಿತು. ವರ್ಣಾಶ್ರಮಾದಿ ಸುಳ್ಳಾದ ಭೇದವನ್ನು ನಷ್ಟಮಾಡಿ, ಆಕಾರಾದಿ ಸರ್ವ ಮಾತೃಕೆಗಳನ್ನು ಭೇದಿಸಿ ಅದು ತೀವ್ರವಾಗಿ ಬೆಳೆದು ನಿಂತಿತು ॥೯೫೭॥ ಸ್ವಸ್ವರೂಪದಲ್ಲಿ ಸಾಯುಜ್ಯತೆಯನ್ನು ಕೂಡಿಸಿ ಆ ಯಾವ ಸ್ಥಿರತೆಯು ಅಲ್ಲಿ ಸ್ಥಿರವಾಗಿ ಕುಳಿತುಕೊಂಡಿತು. ಆಗ ಅದು ಸಹಜವಾಗಿಯೇ ಆ ಯಾವ ಸಂತರಿಗೆ ಮಾರ್ಗವನ್ನು ಸಸಾರವಾಗಿ ಮಾಡಿಕೊಟ್ಟಿತು ॥೯೫೮॥ ಆಗ ಸ್ವಸ್ವರೂಪದಿಂದಲೇ ಸ್ವಕರ್ಮಗಳನ್ನು ಮಾಡುವುದು, ಸ್ವಸ್ವರೂಪದಿಂದಲೇ ವರ್ಣಾಶ್ರಮವನ್ನು ನಡೆಸುವುದು ಮತ್ತು ಸ್ವಸ್ವರೂಪದಿಂದಲೇ ಸ್ವಧರ್ಮವನ್ನು ಪಾಲಿಸುವುದು. ಇದಕ್ಕೇನೇ ಸ್ಥಿರತೆ ಎಂದು ಕರೆಯುವರು ॥೯೫೯॥ ಹೀಗೆ ಯಾವ ಸ್ವಧರ್ಮ ಮತ್ತು ಸ್ವಕರ್ಮ ಇವುಗಳಲ್ಲಿನ ಸ್ಥಿತಿಗೇನೇ ಉತ್ತಮ ಸ್ಥಿರತೆ ಎಂದು ಹೇಳುವರು. ಈಗ ''ನನಗೆ ಶರಣಾಗುವಿಕೆ'' ಎಂಬುದು ಇದು ಹದಿನಾರನೆಯ ಲಕ್ಷಣವಾಗಿರುವುದು, ಅದನ್ನು ಕೇಳು ॥೯೬೦॥ ನದಿಯು ಸಮುದ್ರಕ್ಕೆ ಶರಣಾಗಿ ಅದರಲ್ಲಿ ಏಕರೂಪದಿಂದ ತಾನು ಸಮುದ್ರವೇ ಆಗಿಬಿಡುವುದು. ಅದರಂತೆ ಯಾವ ವೃತ್ತಿಯು ನನಗೆ ಶರಣಾಗುವುದೋ, ಅದು ನನ್ನಲ್ಲಿ ಏಕರೂಪವಾಗುವುದೆಂದು ಹೀಗೆ ತಿಳಿಯಬೇಕು ॥೯೬೧॥

ಲವಣ ಜೀವನಾ ಆಲೇ ಶರಣ । ತೇ ತತ್ಕಾಳ ಜಾಹಲೇ ಜೀವನ । ತೈಸಾ ಅನನ್ಯ ಮಜ ಜೋ ಶರಣ । ತೋ ಮೀಚಿ ಜಾಣ ಹೋಊನಿ ಠಾಕೇ ॥೯೬೨॥ ಮಜ ರಿಘೋನಿಯಾ ಶರಣ । ಜೋ ವಾಂಛೀ ಮಹಿಮಾ ಸನ್ಮಾನ । ತೋ ಗುಳಾಂತೀಲ ಪಾಷಾಣ । ಕೇವಳ ಜಾಣ ಗುಳದಗಡೂ ॥೯೬೩॥ ಜೋ ಕಾ ಗುಳೇ ಮಾಖಿಲಾ ದಗಡೂ । ತೋ ಪಾಹತಾ ದಿಸೇ ವರೀ ವರೀ ಗೋಡೂ । ಶೇಖೀ ಪರಿಪಾಕೀ ನಿವಾಡೂ । ಅತಿಜಡೂ ಕಠಿಣತ್ವೇ ॥೯೬೪॥ ತೈಸೇ ವರೀ ವರೀ ದಾವೀ ಮಾಝೇ ಭಜನ । ಹೃದಯೀ ವಿಷಯ ಆಭಿಲಾಷಣ । ತೋ ನವ್ಹೇ ಮಾಝಾ ಅನನ್ಯಶರಣ । ಅತಿದೂಷಣ ಲೋಭಾಚೇ ॥೯೬೫॥ ಸರ್ವಾಂಗೀ ಸುಂದರ ಸುರೇಖ । ಜಿಚ್ಯಾ ನಾಕಾವರೀ ಪಾಂಢರೇ ಟೀಕ । ತಿಸೀ ವರೀನಾ ಸಾಧು ಲೋಕ । ತೈಸಾ ವಿಷಯಲೋಭು ದೇಖ ಮದ್ಭಜನೀ ॥೯೬೬॥ ರಾಂಡವಾ ಕೇಲೇ ಕಾಜಳಕುಂಕೂ । ದೇಖೋನಿ ಜಗ ಲಾಗೇ ಥುಂಕೂ । ತೈಸಾ ವಿಷಯಾಂಚಾ ಅಭಿಲಾಖೂ । ಜೇವೀ ವೋಕಿಲಾ ವೋಕೂ ಅತಿನಿಂದ್ಯ ॥೯೬೭॥ ತ್ರೈಲೋಕ್ಯಸಾಮ್ರಾಜ್ಯ ವೈಭವ ಜಾಣ । ಜೋ ಥುಂಕೋನಿ ರಿಘಾಲಾ ಮಜ ಶರಣ । ತೋ ಸಮರಸೇ ಮೀಚಿ ಜಾಣ । ಮಾನಾಪಮಾನ ತ್ಯಾ ಕೈಚಾ ॥೯೬೮॥ ಯಾ ನಾಂವ ಮಚ್ಚರಣ । ಹೇ ಸತಾರಾವೇ ಲಕ್ಷಣ । ಉದ್ಧವಾ ಜಾಣ ಸಂಪೂರ್ಣ । ಮನನಗುಣ ತೋ ಐಕ ॥೯೬೯॥ ಶ್ರುತಿ ಗುರುವಾಕ್ಯನಿರೂಪಣ । ಐಕತಾ ಅದ್ವೈತಶ್ರವಣ । ಯುಕ್ತಿಪ್ರಯುಕ್ತೀ ಪರ್ಯಾಲೋಚನ । ಮನನ ಗುಣ ತ್ಯಾ ನಾಂವ ॥೯೭೦॥ ಅಗ್ನಿಕಾಪುರಾ ಭೇಟೀ ಹೋತಾ । ತೋ ಅಗ್ನೀಚಿ ಹೋಯ ವಸ್ತುತಾ । ತೇವೀ ಮಾಝೇ ಸ್ವರೂಪೀ ಮನ ಠೇವಿತಾ । ಮನ ಚಿತ್ಸ್ವರೂಪತಾ ಪಾವಲೇ ॥೯೭೧॥ ಮನ ಚಿದಂಶೇ ಅಸೇ ಜಾಣ । ತೇ ಚಿನ್ಮಾತ್ರ ಜಾಹಲೇ ಕರಿತಾ ಮನನ । ಜೇವೀ ಜೀವನೀ ಜನ್ಮಲೇ ಲವಣ । ತೇ ಹೋಯ ಜೀವನ ನಿಜಮಿಳಣೀ ॥೯೭೨॥ ಅಸೋ ಮನನಾಚೇನಿ ಲವಲಾಹೇ । ಮನ ಜೇಥವರೀ ಜಾವೋ ಪಾಹೇ । ತೇಥವರೀ ತಯಾ ಮೀಚಿ ಆಹೇ । ನ ವಚತಾ ರಾಹೇ ತೇಥಹೀ ಮೀ ॥೯೭೩॥ ದೀಪ ಜೇ ಉತಾ ಜಾಊ ಬೈಸೇ । ತೇಉತಾ ಪ್ರಕಾಶಚಿ ತಯಾ ಅಸೇ । ಕೋಠೇಹೀ ನ ವಚೋನಿ ಠಾಯೀ ವಸೇ । ತೇಥೇಹೀ ವಸೇ ಪ್ರಕಾಶೂ ॥೯೭೪॥

ಉಪ್ಪು ನೀರಿಗೆ ಶರಣಾಗುವುದೊಂದೇ ತಡ, ಅದು ಕೂಡಲೇ ಜಲರೂಪವಾಗಿಬಿಡುವುದು. ಅದರಂತೆ ನನಗೆ ಯಾರು ಅನನ್ಯಭಾವದಿಂದ ಶರಣಾಗುವರೋ, ಅವರು ನನ್ನಲ್ಲಿ ಏಕರೂಪರಾಗಿಬಿಡುವರು ॥೯೬೨॥ ಯಾವನು ನನಗೆ ಶರಣಾಗಿ, ಮಾನ ಸನ್ಮಾನಗಳ ಅಥವಾ ಕೀರ್ತಿಯ ಇಚ್ಛೆಯನ್ನು ಮಾಡುವನೋ, ಅವನು ಬೆಲ್ಲದಲ್ಲಿನ ಕಲ್ಲಾಗಿದ್ದು, ಕೇವಲ ''ಬೆಲ್ಲದ ಕಲ್ಲು'' ಆಗಿರುವನು ॥೯೬೩॥ ಬೆಲ್ಲದಿಂದ ಮೆತ್ತಿರುವ ಕಲ್ಲು ಮೇಲಿನಿಂದ ಉತ್ತಮ ಸಿಹಿಯಾಗಿರುವುದು. ಆದರೆ ಒಳಗೆ ಕಠಿಣತ್ವದಿಂದ ತುಂಬಿರುವುದು. ಬೆಲ್ಲದಂತೆ ಅದು ಕರಗಲಾರದು. ಅದನ್ನು ಪಾಕ ಮಾಡಲು ಆಗ ಅದರ ಭೇದವು ತಿಳಿಯುವುದು ॥೯೬೪॥ ಅದರಂತೆ ಯಾವನು ಮೇಲ್ನೋಟಕ್ಕೆ ತುಟಿಗಳಿಂದ ನನ್ನ ಭಜನೆಯನ್ನು ಮಾಡುತ್ತ, ಒಳಗಡೆಯಲ್ಲಿ ವಿಷಯದ ಮೇಲೆ ಪ್ರೀತಿ ಇಟ್ಟವನು ನಿಜವಾಗಿಯೂ ನನಗೆ ಅನನ್ಯಭಾವದಿಂದ ಶರಣಾಗಿರುವುದಿಲ್ಲ. ಆತನ ಹೃದಯದಲ್ಲಿ ಲೋಭದ ಮಹಾದೋಷವೇ ಇರುವುದು ॥೯೬೫॥ ಒಬ್ಬ ಸ್ತ್ರೀಯು (ಕನ್ಯಾ) ಸರ್ವಾಂಗದಿಂದ ಸುಂದರಳಾಗಿ, ಸುಶೋಭಿತಳಾಗಿದ್ದರೂ ಕೂಡ ಆಕೆಯ ಮೂಗಿನ ಮೇಲೆ ಮಾತ್ರ ಬಿಳಿ ತೊನ್ನಿನ ಕಲೆ ತುಂಬಿರಲು ಆಕೆಯನ್ನು ತಿಳಿದ ಯಾವ ವರನೂ ವರಿಸಲಾರನು. ಅದರಂತೆ ನನ್ನ ಭಜನೆಯಲ್ಲಿ ವಿಷಯ ಲೋಭವು ದೋಷಯುಕ್ತವೆಂದು ನೀನು ದೃಢವಾಗಿ ತಿಳಿದುಕೋ ॥೯೬೬॥ ವಿಧವಾ ಸ್ತ್ರೀಯಳು ಕಣ್ಣಿಗೆ ಕಾಡಿಗೆ, ಹಣೆಗೆ ಕುಂಕುಮ ಹಚ್ಚಲು ಜಗತ್ತಿನ ಎಲ್ಲ ಜನರೂ ಆಕೆಯನ್ನು ಕಂಡು ಉಗುಳುವರು. ವಾಂತಿ ಮಾಡಿಕೊಂಡ ಪದಾರ್ಥವು ಅತಿನಿಂದ್ಯವು. ಅದರಂತೆ ವಿಷಯಗಳ ಅಭಿಲಾಷೆಯು ಅತ್ಯಂತ ನಿಂದ್ಯವಾಗಿರುವುದು ॥೯೬೭॥ ತ್ರೈಲೋಕ್ಯದ ಸಾಮ್ರಾಜ್ಯವನ್ನು ತ್ಯಜಿಸಿ ಯಾರು ನನಗೆ ಶರಣು ಬರವರೋ, ಅವರು ನನ್ನಲ್ಲಿ ಏಕರೂಪರಾಗುವರು. ಆಗ ಅವರಿಗೆ ಮಾನಾಪಮಾನಗಳು ಹೇಗಾಗಬೇಕು? ॥೯೬೮॥ ಇದರ ಹೆಸರೇ ಶರಣು ಬರುವುದು ಎಂದಾಗುವುದು. ಹೇ ಉದ್ಧವನೇ, ಇದು ಹದಿನೇಳನೆಯ ಲಕ್ಷಣವಾಗಿರುವುದು. ಈಗ ಯಾವ ''ಮನನ'' ಗುಣವನ್ನು ಹೇಳುವೆನು, ಕೇಳು ॥೯೬೯॥ ವೇದಶಾಸ್ತ್ರಗಳಲ್ಲಿನ ಸೂತ್ರಗಳು ಅಥವಾ ಗುರುಮುಖದಿಂದ ಕೇಳಿದ ನಿರೂಪಣೆ ಹಾಗೂ ಅದ್ವೈತದ ಶ್ರವಣ ಮಾಡಿದ ನಂತರ ಅದನ್ನು ಮೇಲಿಂದ ಮೇಲೆ ವಿಚಾರ ಮಾಡುವುದಕ್ಕೆ ''ಮನನ'' ಎಂದು ಕರೆಯುವರು ॥೯೭೦॥ ಯಾವ ಪ್ರಕಾರವಾಗಿ ಕರ್ಪೂರವು ಅಗ್ನಿಯನ್ನು ಕೂಡಿಕೊಳ್ಳಲು ಆ ಕರ್ಪೂರವು ಅಗ್ನಿರೂಪವಾಗುವದೋ, ಅದರಂತೆ ನನ್ನ ಸ್ವರೂಪದಲ್ಲಿ ಮನವನ್ನಿಡಲು, ಆಗ ಆ ಮನವು ಚಿತ್‌ಸ್ವರೂಪದಲ್ಲಿ ಏಕರೂಪವಾಗುವುದು ॥೯೭೧॥ ಲವಣವು ಸಮುದ್ರದ ನೀರಿನಿಂದ ಉತ್ಪನ್ನಗೊಳ್ಳುವುದು. ಆದ್ದರಿಂದ ಅದನ್ನು ಸಮುದ್ರದಲ್ಲಿ ಹಾಕುತ್ತಲೇ ಆ ನೀರಿನಲ್ಲಿ ಕರಗಿಹೋಗುವುದು. ಅದರಂತೆ ಮನವು ನಿಜವಾಗಿಯೂ ಚಿತ್‌ಸ್ವರೂಪದ ಅಂಶವಾಗಿರುವುದು. ಆದ್ದರಿಂದ ಮನನ ಮಾಡುವುದರಿಂದ ಅದು ಚಿತ್‌ಸ್ವರೂಪವೇ ಆಗುವುದು ॥೯೭೨॥ ಮನನದ ಸಾಮರ್ಥ್ಯದಿಂದ ಮನವು ಎಲ್ಲಿಯವರೆಗೆ ಹೋಗುತ್ತಿರುವುದೋ, ಅಲ್ಲಿಯವರೆಗೆ ಅದರ ಜೊತೆಯಲ್ಲಿ ನಾನೇ ಇರುವೆನು. ಅದು ಎಲ್ಲಿಯೂ ಹೋಗದೇ ಸ್ಥಿರವಾಗಿದ್ದರೆ, ಅಲ್ಲಿಯೂ ಕೂಡ ನಾನೇ ಇರುವೆನು ॥೯೭೩॥ ದೀಪವು ಹೋದಲ್ಲೆಲ್ಲ ಅದರ ಪ್ರಕಾಶವು ಇರುವುದು. ಅಥವಾ ಎಲ್ಲಿಯೂ ಹೋಗದೇ ಇದ್ದಲ್ಲೇ ಇದ್ದರೆ ಅಲ್ಲಿಯೂ ಪ್ರಕಾಶವು ಇರುವುದು ॥೯೭೪॥

ತೈಸೇ ಮಾಝೀ ಕರಿತಾ ಮನನ । ಮದ್ರೂಪಚಿ ಜಾಹಲೇ ಮನ । ಮಗ ಕರಿತಾ ಗಮನಾಗಮನ । ಮದ್ರೂಪತಾ ಜಾಣ ಮೋಡೇನಾ ॥೯೭೫॥ ಏವಂ ಮಾಝೇ ಸ್ವರೂಪ ಜೇ ಕೇವಳ । ತೇಥೇ ಮದ್ರೂಪೇ ಮನ ನಿಶ್ಚಳ । ಧ್ರುವಾಚೇ ಪರೀ ಅಚಂಚಳ । ಮನನಶೀಳ ತ್ಯಾ ನಾಂವ ॥೯೭೬॥ ಮುನಿ ಯಾ ಪದಾಚೇ ವ್ಯಾಖ್ಯಾನ । ಮನನಶೀಲತಾ ಜಾಣ । ಹೇ ಅಠರಾವೇ ಲಕ್ಷಣ । ತೇ ಹೀ ನಿರೂಪಣ ಸಾಂಗಿತಲೇ ॥೯೭೭॥ ಅತ್ಯಂತ ಗೋಡ ನಿರೂಪಣ । ಪುಢಿಲೇ ಶ್ಲೋಕೀ ದಶಲಕ್ಷಣ । ತೇ ಐಕಾವಯಾ ಉದ್ಧವ ಸಾವಧಾನ । ಸರ್ವಾಂಗೀ ಕಾನ ಹೋಊನಿ ಠೇಲಾ ॥೯೭೮॥

ಅಪ್ರಮತ್ತೋ ಗಭೀರಾತ್ಮಾ ಧೃತಿಮಾಞ್ಜಿತಷಡ್ಗುಣ: । ಅಮಾನೀ ಮಾನದ: ಕಲ್ಯೋ ಮೈತ್ರ: ಕಾರುಣಿಕ: ಕವಿ: ॥೩೧॥

ಅರ್ಥ :- ಆತನು ಪ್ರಮಾದ ರಹಿತ, ಗಂಭೀರ ಸ್ವಭಾವದ ಮತ್ತು ಧೈರ್ಯವಾನನಾಗಿರುವನು, ಹಸಿವೆ-ನೀರಡಿಕೆ, ಶೋಕ-ಮೋಹ, ಮತ್ತು ಜನ್ಮ -ಮರಣ ಈ ಆರು ಆತನ ಸ್ವಾಧೀನದಲ್ಲಿರುವುವು. ಆತನು ಯಾರಿಂದಲೂ ಸನ್ಮಾನದ ಇಚ್ಛೆಯನ್ನು ಮಾಡಲಾರನು. ಆದರೆ ಬೇರೆಯವರನ್ನು ಸನ್ಮಾನಿಸುವನು. ನನ್ನ ಸಂಬಂಧವಾದ ಮಾತುಗಳನ್ನು ಇತರರಿಗೆ ತಿಳಿಸಿ ಹೇಳುವುದರಲ್ಲಿ ಚತುರನಾಗಿರುವನು. ಎಲ್ಲರಲ್ಲಿಯೂ ಸ್ನೇಹ ಮಾಡುವನು. ಆತನ ಹೃದಯವು ಕರುಣೆಯಿಂದ ತುಂಬಿರುವುದು. ನನ್ನ ತತ್ವದ ಯಥಾರ್ಥ ಜ್ಞಾನವು ಆತನಿಗಿರುವುದು.

ಜಂವವರೀ ವೃತ್ತಿಶೂನ್ಯ ನವ್ಹೇ ಮನ । ತಂವವರೀ ವಿಶ್ವಾಸೇನಾ ವಿಚಕ್ಷಣ । ವೃತ್ತಿರೂಪೇ ಸಿಂತರೀಲ ಮನ । ಯಾಲಾಗಿ ಸಾವಧಾನ ನಿಜಬೋಧೇ ॥೯೭೯॥ ಹಾ ಹೋ ದುರ್ವಾಸಾಐಸಾ ಸಜ್ಞಾನ । ತ್ಯಾಸೀ ಕ್ಷಣಕ್ಷಣಾ ಕ್ಷೋಭವೀ ಮನ । ನ ವಿಚಾರಿತಾ ಗುಣಾಗುಣ । ಶಾಪ ದಾರುಣ ದೇವೋ ಧಾಂವೇ ॥೯೮೦॥ ದುರ್ಗಂಧಾ ಜನ್ಮಲೀ ಮತ್ಸ್ಯಾಚೇ ಪೋಟೀ । ಪರಾಶರ ನಾಡಲಾ ತೀಸಾಠೀ । ನಾರದ ಕೌತುಕ ಪಾಹತಾ ದಿಠೀ । ಕೇಲಾ ಗಂಗಾತಟೀ ನಾರದೀ ॥೯೮೧॥ ಆಪುಲೀ ಕನ್ಯಾ ದೇಖೋನಿ ಗೋಮಟೀ । ಮನಕ್ಷೋಭೇ ಭೋಗಾವಯಾ ಉಠೀ । ಬ್ರಹ್ಮಾ ಧಾಂವೇ ಸರಸ್ವತೀಪಾಠೀ । ಜೋ ಕಾ ಸೃಷ್ಟಿಪಿತಾಮಹೋ ॥೯೮೨॥ ಯಾ ಮನಾಐಸೇ ನಾಡಕ । ಜಗಾಮಾಜೀ ನಾಹೀ ಆಣಿಕ । ಛಳಛದ್ಮೇ ನಾಡೀ ಜ್ಞಾತೇ ಲೋಕ । ಸಾಧು ಘಾತಕ ಮನಾಚೇ ॥೯೮೩॥ ಮ್ಹಣಾಲ ಮನೇವೀಣ ಭೋಗ ಘಡೇ । ತರೀ ವೃತ್ತೀಸೀ ಕ್ಷೋಭು ಕಾ ಪಾ ಚಢೇ । ಹೇ ಬೋಲ ಬೋಲತೀ ತೇ ಸಜ್ಞಾನ ವೇಡೇ । ಸಾಧೂಸೀ ನಾವಡೇ ಹೇ ಗೋಷ್ಟೀ ॥೯೮೪॥ ಅದಿಷ್ಠೂನಿ ಸತ್ತ್ವಗುಣ । ಸೂಕ್ಷ್ಮರೂಪೇ ವೃತ್ತಿ ಜಾಣ । ತೇ ಕ್ಷೋಭವೂನಿಯಾ ಮನ । ಮೀ ಮುಕ್ತ ಮ್ಹಣೋನ ವಿಷಯೀ ಕರೀ ॥೯೮೫॥

ಅದರಂತೆ ನನ್ನ ಮನನವನ್ನು ಮಾಡುತ್ತಿದ್ದಾಗ ಮನವು ಮದ್ರೂಪವಾಗಲು, ಆಗ ಆ ಮನವು ಎಲ್ಲಿಯಾದರೂ ಹೋಗಲಿ, ಅಥವಾ ಎಲ್ಲಿಯೂ ಹೋಗದಿರಲಿ ಮದ್ರೂಪತೆಯು ಎಂದಿಗೂ ಮುರಿಯಲು ಶಕ್ಯವಿಲ್ಲ ॥೯೭೫॥ ಈ ಪ್ರಕಾರವಾಗಿ ನನ್ನ ಯಾವ ಶುದ್ಧ ಸ್ವರೂಪದಲ್ಲಿ ಯಾರ ಮನವು ನನ್ನ ಸ್ವರೂಪದಲ್ಲಿ ಸ್ಥಿರವಾಗಿ ಧ್ರುವನಂತೆ ದೃಢವಾಗುವುದೋ ಅದಕ್ಕೆ ''ಮನನಶೀಲ'' ಎಂದು ಹೇಳುವರು ॥೯೭೬॥ ''ಮುನಿ'' ಎಂಬ ಶಬ್ದದ ಅರ್ಥವು ಮನನಶೀಲತೆಯಾಗಿರುವುದು. ಇದನ್ನು ನೀನು ತಿಳಿ. ಈ ಯಾವ ಹದಿನೆಂಟನೆಯ ಲಕ್ಷಣವನ್ನು ನಿನಗೆ ಸ್ಪಷ್ಟವಾಗಿ ಹೇಳಿದೆನು ॥೯೭೭॥ ಮುಂದಿನ ಶ್ಲೋಕದಲ್ಲಿ ಹತ್ತು ಲಕ್ಷಣಗಳ ಅತ್ಯಂತ ಮಧುರವಾದ ನಿರೂಪಣೆವಿರುವುದು. ಇದನ್ನು ಕೇಳುವುದಕ್ಕಾಗಿ ಉದ್ಧವನು ಸರ್ವಾಂಗವನ್ನು ಕಿವಿಯನ್ನಾಗಿ ಮಾಡಿದನು ॥೯೭೮॥

ಎಲ್ಲಿಯವರೆಗೆ ಮನವು ವೃತ್ತಿಶೂನ್ಯವಾಗುವುದಿಲ್ಲವೋ, ಅಲ್ಲಿಯವರೆಗೆ ಬುದ್ಧಿವಂತ ಮನುಷ್ಯನು ಆ ಮನದಲ್ಲಿ ವಿಶ್ವಾಸವನ್ನು ಇಡುವುದಿಲ್ಲ. ವೃತ್ತಿಯ ರೂಪದಿಂದ ಮನವು ಎಂದು ಮೋಸಮಾಡುವುದೋ ಅದರ ನೇಮವಿಲ್ಲ. ಆದ್ದರಿಂದ ಆತನು ಆತ್ಮಜ್ಞಾನದಿಂದ ಯಾವಾಗಲೂ ದಕ್ಷನಾಗಿರುವನು ॥೯೭೯॥ ಅಹೋ! ದುರ್ವಾಸ ಋಷಿಯಂತಹ ಜ್ಞಾನಿಯ ಮನದಲ್ಲಿಯೂ ಸಹ ಕ್ಷಣಕ್ಷಣಕ್ಕೂ ಕ್ರೋಧವು ನಿರ್ಮಾಣವಾಗುತ್ತಿತ್ತು. ಗುಣ ಅವಗುಣಗಳ ವಿಚಾರವನ್ನು ಮಾಡದೇ ಆತನು ಭಯಂಕರ ಶಾಪ ಕೊಡುತ್ತಿದ್ದನು ॥೯೮೦॥ ಮೀನಿನ ಹೊಟ್ಟೆಯಲ್ಲಿ ದುರ್ಗಂಧಾ ಜನ್ಮಕ್ಕೆ ಬಂದಳು. ಈಕೆಗಾಗಿ ಪರಾಶರಮುನಿಯು ಈ ವೃತ್ತಿಯಿಂದ ಕೆಡಲ್ಪಟ್ಟನು. ನಾರದಮುನಿಯು ಕೇವಲ ಕೌತುಕವನ್ನು ಕಾಣುತ್ತ ಗಂಗೆಯ ದಡದಲ್ಲಿ ನಿಂತುಕೊಂಡಿದ್ದನು. ಇಷ್ಟರಿಂದಲೇ ಆತನಿಗೆ ಅದೇ ಗಂಗಾ ದಡದಲ್ಲಿ ನಾರದೀಯಾಗಬೇಕಾಯಿತು ॥೯೮೧॥ ಸರ್ವ ವಿಶ್ವದ ಪಿತಾಮಹನಾದ ಬ್ರಹ್ಮದೇವನು ತನ್ನ ಸುಸ್ವರೂಪದ ಕನ್ಯಾ ಸರಸ್ವತೀಯಳನ್ನು ಕಂಡು ಲುಬ್ಧನಾಗಿ ಆಕೆಯ ಹಿಂದೆ ಧಾವಿಸಿದನು ॥೯೮೨॥ ಅದಕ್ಕಾಗಿ ಕೆಡಕು ಮಾಡುವುದರಲ್ಲಿ ಮನಸ್ಸಿನಂತಹ ಬೇರೆ ಯಾವುದೂ ಇರುವುದಿಲ್ಲ. ಅದು ಅನೇಕ ಪ್ರಕಾರವಾಗಿ ಪೀಡೆಯನ್ನು ಕೊಟ್ಟು ಉತ್ತಮ ವಿದ್ವಾಂಸರಿಗೂ ಕೇಡು ಮಾಡುವುದು. ಸಾಧುಗಳು ಮಾತ್ರ ಆ ಮನವನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡಿರುವರು ॥೯೮೩॥ ಮನವಿಲ್ಲದೇ ಒಂದು ವೇಳೆ ಭೋಗವು ಸಾಧಿಸುವುದು. ಹಾಗಾದರೆ ವೃತ್ತಿಗೆ ಕ್ಷೋಭವೇಕೆ ಬರಬೇಕು? ಹೀಗೆ ನಿನ್ನ ಮನದಲ್ಲಿ ಮೂಡಬಹುದು, ಆದರೆ, ಹೀಗೆ ಹೇಳುವವರು ಅಜ್ಞಾನಿಯಾಗಿರುವರು. ಸಾಧುಗಳಿಗೆ ಈ ಮಾತು ಸ್ವಲ್ಪವೂ ಸೇರುವುದಿಲ್ಲ ॥೯೮೪॥ ವೃತ್ತಿಯು ಸತ್ವಗುಣದ ಆಶ್ರಯವನ್ನು ಪಡೆದು ಸೂಕ್ಷ್ಮರೂಪದಲ್ಲಿ ಇರುತ್ತಿರುವುದು. ಇದು ಮನಸ್ಸಿಗೆ ಕ್ಷುಬ್ಧಗೊಳಿಸಿ ''ನಾನು ಮುಕ್ತನು'' ಹೀಗೆ ತಿಳಿಸಿ ಅವರನ್ನು ವಿಷಯೀಯನ್ನಾಗಿ ಮಾಡುವುದು ॥೯೮೫॥

ಮುಕ್ತಾಭಿಮಾನೇ ವಿಷಯಾಸಕ್ತಿ । ಹೇಚಿ ಮನಕ್ಷೋಭಾಚೀ ಪ್ರಾಪ್ತೀ । ವೃತ್ತಿ ಅಸೋನಿಯಾ ಮುಕ್ತೀ । ಸಾಧುನ ಮಾನಿತೀ ಸರ್ವಥಾ ॥೯೮೬॥ ಅತಿ ನಾಟಕೀ ನಾಟಕ ಮನ । ಮುಕ್ತತ್ವೇ ಧರೀ ಅಭಿಮಾನ । ತ್ಯಾಚೇ ಕರಾವಯಾ ನಿರ್ದಳಣ । ಸಾಧು ಸಾವಧಾನ ನಿಜಬೋಧೇ ॥೯೮೭॥ ಮುಖೀ ಧರಿಲ್ಯಾ ಕೃಷ್ಣಸರ್ಪಾಸೀ । ಢಿಲೇ ಕರಿತಾ ತೋ ತತ್ಕಾಳ ಗ್ರಾಸೀ । ಮರೇ ತಂವವರೀ ಆಂವಳಾವೇ ತ್ಯಾಸೀ । ತೇವೀ ಮನಾಸೀ ನಿರ್ದಾಳಿತೀ ॥೯೮೮॥ ಮನ ನಿರ್ದಾಳಾವೇ ಸಾವಧಾನತಾ । ಬೋಲಿಲೀ ತೇ ಹೇ ಸಾಧುಲಕ್ಷಣತಾ । ಹಾ ಏಕುಣಿಸಾವಾ ಗುಣ ಸರ್ವಥಾ । ಐಕ ಆತಾ ವಿಸಾವಾ ॥೯೮೯॥ ವರ್ಷಾಕಾಳೀ ಜಳಬಳೇ ಸರಿತಾ । ಆಲ್ಯಾ ಸಮುದ್ರ ನುಚಂಬಳೇ ಶ್ಲಾಘ್ಯತಾ । ಉಷ್ಣಕಾಳೀ ತ್ಯಾ ನ ಯೇತಾ । ಕ್ಷೋಭೋನಿ ಸರ್ವಥಾ ಆಟೇನಾ ॥೯೯೦॥ ತೈಸೇ ಜಾಹಲಿಯಾ ಸಮೃದ್ಧಿ ಧನ । ಸಾಧೂಚೇ ಉಲ್ಹಾಸೇನಾ ಮನ । ಸಕಳ ಜಾಊನಿ ಜಾಲ್ಯಾ ನಿರ್ಧನ । ದೀನವದನ ಹೋ ನೇಣೇ ॥೯೯೧॥ ದಿವಸರಾತೀ ಯೇತಾಜಾತಾ । ಪ್ರಕಾಶೇ ಪಾಲಟೇನಾ ಸವಿತಾ । ತೇವೀ ಆಲ್ಯಾಗೇಲ್ಯಾ ನಾನಾ ಅವಸ್ಥಾ । ಗಂಭೀರತಾ ಅಕ್ಷೋಭ್ಯ ॥೯೯೨॥ ಕಡಕಡೀತ ವಿಜೇಚೇ ಕಲ್ಲೋಳ । ತೇಣೇ ಗಗನಾಸೀ ನವ್ಹೇ ಖಳಬಳ । ತೈಸಾ ನಾನಾ ಊರ್ಮಿಮಾಜೀ ನಿಶ್ಚಳ । ಗಾಂಭೀರ್ಯ ಕೇವಳ ತೇ ನಾಂವ ॥೯೯೩॥ ಹೇ ಸಂತಾಚೀ ಗಂಭೀರತಾ । ವಿಸಾಂವಾ ಜೀವಶಿವಾಂಸೀ ತತ್ತ್ವತಾ । ಹೇ ವಿಸಾವೀ ಸಂತಾಚೀ ಅವಸ್ಥಾ । ಧೃತೀಚೀ ವ್ಯವಸ್ಥಾ ಅವಧಾರೀ ॥೯೯೪॥ ಮನಬುದ್ಧ್ಯಾದಿ ಇಂದ್ರಿಯೇ ಪ್ರಾಣ । ನಿಜಧೈರ್ಯೇ ಧರೋನಿ ಆಪಣ । ನಿತ್ಯ ಕೇಲಿಯಾ ಆತ್ಮಪ್ರವಣ । ಪರತೋನಿ ಜಾಣ ಯೇವೋ ನೇದೀ ॥೯೯೫॥ ಸ್ವಯಂವರೀ ಜಿಣೋನಿ ಅರಿರಾಯಾಸೀ । ಬಳೇ ಆಣಿಲೇ ನೋವರೀಸೀ । ತೋ ಜಾಊ ನೇದೀ ಆಣಿಕಾಪಾಶೀ । ತೇವೀ ವೃತ್ತೀಸೀ ನಿಜಧೈರ್ಯ ॥೯೯೬॥ ವಾಗುರೇ ಬಾಂಧಿಲ್ಯಾ ಮೃಗಾಸೀ । ಪಾರಧೀ ಜಾಊ ನೇದೀ ತ್ಯಾ ವನಾಸೀ । ತೇವೀ ಧೈರ್ಯೇ ಆಕಳೂನಿ ಮನಾಸೀ । ದೇಹಪಾಶೀ ಯೇಊ ನೇದೀ ॥೯೯೭॥ ದೇಹಾಸೀ ನಾನಾ ಭೋಗಸಮೃದ್ಧೀ । ವಾವೂನಿಯಾ ಗಜಸ್ಕಂಧೀ । ಐಸೇ ಸುಖ ಹೋತಾ ತ್ರಿಶುದ್ಧೀ । ಮನಾಸೀ ದೇಹಬುದ್ಧೀ ಧರೂ ನೇದೀ ॥೯೯೮॥

ಮುಕ್ತಿಯ ಅಭಿಮಾನದಿಂದ ಆಗುವ ವಿಷಯಾಸಕ್ತಿಯೇ ಮನಕ್ಷೋಭೆಯ ಕಾರಣವಾಗಿರುವುದು. ಆದ್ದರಿಂದ ಎಲ್ಲಿಯವರೆಗೆ ವೃತ್ತಿವಿರುವುದೋ, ಅಲ್ಲಿಯವರೆಗೆ ಸಾಧೂ ಮುಕ್ತಿಯನ್ನು ಮನ್ನಿಸಲಾರನು ॥೯೮೬॥ ಮನವು ಮಹಾ ನಾಟಕೀಯಾಗಿ ನಾಟಕವಾಡುತ್ತಿರುವುದು. ಈ ಮನವೇ ನಾನು ಮುಕ್ತನಾದೆ ಎಂಬ ಕಲ್ಪನೆಯಿಂದ ಅಭಿಮಾನಪಡುವುದು. ಆದ್ದರಿಂದ ಇದರ ನಾಶವನ್ನು ಮಾಡುವುದಕ್ಕಾಗಿ ಸಾಧೂ ಆತ್ಮಜ್ಞಾನದಿಂದ ಬಹು ಎಚ್ಚರದಿಂದಿರುವನು ॥೯೮೭॥ ಕಾಳಿಂಗ ಸರ್ಪದ ದಮನಕ್ಕಾಗಿ ಅದರ ಮುಖವನ್ನು ಗಟ್ಟಿಯಾಗಿ ಹಿಡಿಯಬೇಕಾಗುವುದು. ಅಕಸ್ಮಾತ್ ಸ್ವಲ್ಪ ಸಡಿಲಿಸಿದರೆ ಕೂಡಲೇ ಅದು ಕಚ್ಚಿ ಬಿಡುವುದು. ಅದಕ್ಕೆ ಅದು ಸಾಯುವವರೆಗೂ ಅದರ ಮುಖವನ್ನು ಗಟ್ಟಿಯಾಗಿಯೇ ಹಿಡಿಯಬೇಕು. ಅದರಂತೆ ಸಾಧು ತನ್ನ ಮನವನ್ನು ನಾಶಮಾಡುವನು ॥೯೮೮॥ ಮನವನ್ನು ನಾಶ ಮಾಡಬೇಕೆಂದರೆ ಸತತವಾಗಿ ಬಹು ಎಚ್ಚರದಿಂದಿರಬೇಕಾಗುವುದು. ಇದೇ ಸಾಧುವಿನ ಲಕ್ಷಣವಾಗಿರುವುದು. ಇದು ಸಾಧುವಿನ ಹತ್ತೊಂಬತ್ತನೆಯ ಗುಣವಾಗಿರುವುದು. ಈಗ ಇಪ್ಪತ್ತನೆಯ ಗುಣವನ್ನು ಕೇಳು ॥೯೮೯॥ ಮಳೆಗಾಲದಲ್ಲಿ ನೀರಿನಿಂದ ತುಂಬಿಕೊಂಡ ನದಿಗಳು ಸಮುದ್ರಕ್ಕೆ ಬಂದು ಸೇರುವುವು. ಆದರೆ ಸಮುದ್ರಕ್ಕೆ ಈ ಐಶ್ವರ್ಯದ ಅಭಿಮಾನವಾಗುವುದಿಲ್ಲ. ಅಥವಾ ಬೇಸಿಗೆಯಲ್ಲಿ ಆ ನದಿಗಳು ಬಾರದ್ದಕ್ಕೆ ಸಮುದ್ರವು ಕೋಪಾವೇಶದಿಂದ ಒಣಗುವುದಿಲ್ಲ ॥೯೯೦॥ ಅದರಂತೆ ದ್ರವ್ಯವು ಸಮೃದ್ಧವಾಗಿ ಪ್ರಾಪ್ತವಾದರೂ ಸಾಧುಗೆ ಇದರಿಂದ ಯಾವ ಹರ್ಷವಾಗುವುದಿಲ್ಲ. ಅದರಂತೆ ಸಂಪತ್ತು ಸರ್ವನಾಶವಾಗಿ ನಿರ್ಧನನಾದರೂ ದೀನವದನನಾಗುವುದಿಲ್ಲ ॥೯೯೧॥ ಹಗಲು ಮತ್ತು ರಾತ್ರಿ ಬರುವುವು, ಹೋಗುವುವು, ಆದರೆ ಸೂರ್ಯನ ಪ್ರಕಾಶದಲ್ಲಿ ಯಾವ ಬದಲಾವಣೆಯಾಗುವುದಿಲ್ಲ. ಅದರಂತೆ ಸುಖದುಃಖಗಳ ಭಿನ್ನ ಭಿನ್ನ ಅವಸ್ಥೆಗಳು ಬಂದರೂ ಕೂಡ ಸಾಧುವಿನ ಗಾಂಭೀರ್ಯವು ಸ್ಥಿರವಾಗಿರುವುದು ॥೯೯೨॥ ಆಕಾಶದಲ್ಲಿ ಎಷ್ಟೇ ಮಿಂಚುಗಳು ಮಿಂಚುತ್ತಿರಲಿ, ಆದರೆ ಆಕಾಶವು ಅವುಗಳಿಂದ ಗಾಬರಿಯಾಗುವುದಿಲ್ಲ. ಅದರಂತೆ ವಿಕಾರಗಳ ಊರ್ಮಿಯು ಹೃದಯದಲ್ಲಿ ಬೇಕಾದಷ್ಟು ಹುಟ್ಟುತ್ತಿರಲಿ, ಆದರೆ ಆತನು ದೃಢವಾಗಿರುವನು. ಇದರ ಹೆಸರೇ ಗಾಂಭೀರ್ಯವಾಗಿರುವುದು ॥೯೯೩॥ ಸಂತರ ಗಾಂಭೀರ್ಯವೆಂದರೆ ಇದೇ ಆಗಿರುವುದು. ಇದು ನಿಜವಾಗಿಯೂ ಜೀವನಿಗೂ, ಶಿವನಿಗೂ ವಿಶ್ರಾಂತಿಯಾಗಿರುವುದು. ಇದು ಸಂತರ ಇಪ್ಪತ್ತನೆಯ ಲಕ್ಷಣವಾಗಿರುವುದು. ಈಗ ಧೈರ್ಯದ ಸ್ವರೂಪವನ್ನು ಹೇಳುವೆನು, ಕೇಳು ॥೯೯೪॥ ಆತನು (ಸಾಧು) ಮನ, ಇಂದ್ರಿಯಗಳು ಮತ್ತು ಪ್ರಾಣ, ಇವುಗಳನ್ನು ಧೈರ್ಯದಿಂದ ತನ್ನ ಅಂಕಿತದಲ್ಲಿಟ್ಟುಕೊಳ್ಳುವನು. ನಿತ್ಯತ್ವದಿಂದ ಆತ್ಮಸಮ್ಮುಖಮಾಡಿ ಅವುಗಳಿಗೆ ಅಲ್ಲಿಂದ ಕದಲಿಸಲಾರನು ॥೯೯೫॥ ಅಥವಾ ಸ್ವಯಂವರದಲ್ಲಿ ಬಲಾಢ್ಯ ಶತ್ರುವನ್ನು ಜಯಿಸಿ, ತನ್ನ ತೇಜಸ್ವಿ ಪರಾಕ್ರಮದಿಂದ ವಧೂ ಪ್ರಾಪ್ತವಾದನಂತರ ಆತನು ಆಕೆಗೆ ಬೇರೆಯವರತ್ತ ಬಿಡಲಾರನು. ಅದರಂತೆ ಸಾಧೂ ಕೂಡ ತನ್ನ ವೃತ್ತಿಯಿಂದ ಧೈರ್ಯವನ್ನು ಬಿಟ್ಟುಕೊಡಲಾರನು ॥೯೯೬॥ ತನ್ನ ಬಲೆಯಲ್ಲಿ ಹಿಡಿದಿಟ್ಟ ಮೃಗವನ್ನು ಬೇಟೆಗಾರನು ಪುನಃ ಅದಕ್ಕೆ ವನದತ್ತ ಹೋಗಲು ಬಿಡುವುದಿಲ್ಲ. ಅದರಂತೆ ಸಾಧೂ ಸಹ ಅತ್ಯಂತ ಧೈರ್ಯದಿಂದ ಮನಸ್ಸನ್ನು ಆವರಿಸಿಕೊಂಡು ಅದಕ್ಕೆ ದೇಹದತ್ತ ಹೋಗಲು ಬಿಡುವುದಿಲ್ಲ ॥೯೯೭॥ ದೇಹಕ್ಕೆ ಅನೇಕ ಪ್ರಕಾರವಾಗಿ ಭೋಗ ಸಮೃದ್ಧಿ ಪ್ರಾಪ್ತವಾಗಲಿ, ಅಥವಾ ಆತನಿಗೆ ಆನೆಯ ಮೇಲೆ ಮೆರೆಯಿಸಲಿ, ನಿಜವಾಗಿ ಇಷ್ಟೊಂದು ಸುಖವು ಸಾಧುವಿಗೆ ಪ್ರಾಪ್ತವಾದರೂ ಕೂಡ ಆತನು ಮನಕ್ಕೆ ದೇಹಬುದ್ಧಿಯನ್ನು ಹಿಡಿಯಲು ಕೊಡುವುದಿಲ್ಲ ॥೯೯೮॥

ಪ್ರಳಯಕಾಳಾಚ್ಯಾ ಕಡಕಡಾಟೀ । ಮಹಾಭೂತಾ ಹೋತಾ ಆಟಾಟೀ । ತರೀ ಮನಾಸೀ ದೇಹಾಚೀ ಭೇಟೀ । ಧೈರ್ಯೀ ಜಗಜೇಠೀ ಹೋಚಿ ನೇದೀ ॥೯೯೯॥ ತೇಥ ಕಾಳಾಚೇನಿ ಹಟತಟೇ । ವೃತ್ತಿ ಪರಬ್ರಹ್ಮಾ ಚಿಯೇ ವಾಟೇ । ಲಾವೂನಿಯಾ ನೇಟೇಪಾಟೇ । ಚಿನ್ಮಾತ್ರಪೇಠೇ ವಿಕಿಲೀ ॥೧೦೦೦॥ ತೇಥ ಸ್ವಾನಂದಾಚಾ ಗ್ರಾಹಕು । ತತ್ಕಾಳ ಭೇಟಲಾ ನೇಟಕು । ತ್ಯಾಸೀ ಜೀವೇಸಹಿತ ವಿವೇಕು । ಘಾಲೂನಿ ಆಂಖೂ ಸಂವಸಾಟೀ ಕೇಲೀ ॥೧೦೦೧॥ ಯಾ ನಾಂವ ಧೃತೀಚೇ ಲಕ್ಷಣ । ಹಾ ಏಕವಿಸಾವಾ ಸಾಧುಚಾ ಗುಣ। ಆತಾ ಜಿಂತಿಲೇ ಜೇ ಷಡ್‌ಗುಣ । ತೇಹೀ ಲಕ್ಷಣ ಅವಧಾರೀ ॥೧೦೦೨ ॥ ಸ್ವಾನಂದೇ ತೃಪ್ತ ಜಾಲಾ । ಯಲಾಗೀ ಕ್ಷುಧೇಸೀ ಮುಕಲಾ । ಜಗಾಚೇ ಜೀವನೀ ನಿವಾಲಾ । ತೃಷಾ ವಿಸರಲಾ ನಿಃಶೇಷ ॥೧೦೦೩॥ ಭೋಗಿತಾ ನಿಜಾತ್ಮ ಸುಖ । ವಿಸರಲಾ ಶೋಕದುಃಖ । ಚಿನ್ಮಾತ್ರಜ್ಞಾನೇ ನಿಷ್ಟಂಕ । ತ್ಯಾ ಸಂಮುಖ ಮೋಹೋ ನ ಯೇ ॥೧೦೦೪॥ ತಿಹೀ ಅವಸ್ಥಾಬಾಹಿರಾ । ವಸಿನ್ನಲಾ ನಿಜಬೋಧವ್ರೋವರಾ । ತೇಥೇ ಜರಾ ಆಲೀ ಅತಿಜರ್ಜರಾ । ಕಾಂಪತ ಥರಥರಾ ಪಳಾಲೀ ॥೧೦೦೫॥ ಮಿಥ್ಯಾ ಜಾಹಲೇ ಕಾರ್ಯಕಾರಣ। ದೇಹಾಚೇ ದೇಹಪಣೇ ನ ದೇಖೇ ಭಾನ । ತಂವ ಮರಣಾಸೀಚೇ ಆಲೇ ಮರಣ । ಕಾಳಾಚೇ ಪ್ರಾಶನ ತೇಣೇ ಕೇಲೇ ॥೧೦೦೬॥ ಯಾಪರೀ ಗಾ ಹೇ ಷಡ್‌ಗುಣ । ಅನಾಯಾಸೇ ಜಿಂತೋನ । ಸುಖೇ ವರ್ತತೀ ಸಾಧುಜನ । ಹೇ ಲಕ್ಷಣ ಬಾವಿಸಾವೇ ॥೧೦೦೭॥ ಆಪುಲಾ ಸ್ವಾಮೀ ದೇಖೇ ಸರ್ವಾ ಭೂತೀ । ತೇಥೇ ಮಾನ ಇಚ್ಛಾವಾ ಕವಣಾಪ್ರತೀ । ಮಾನಾಭಿಮಾನ ಸಾಂಡಿಲೇ ನಿಶ್ಚಿತೀ । ಅತಿನಮ್ರ ವೃತ್ತೀ ವರ್ತಣೇ ॥೧೦೦೮॥ ಆಧೀ ದೇಹೀ ಧರಾವಾ ಅಭಿಮಾನ । ಮಗ ಇಚ್ಛಾವಾ ಅತಿಸನ್ಮಾನ । ತಂವ ದೇಹಾಚೇ ಖುಂಟಲೇ ಭಾನ । ಮಾನಾಭಿಮಾನ ಬುಡಾಲೇ ॥೧೦೦೯॥ ಯಾ ನಾಂವ ಗಾ ಅಮಾನಿತಾ । ಹೇ ತೇವಿಸಾವೀ ಲಕ್ಷಣತಾ । ಸಾಧು ಸನ್ಮಾನಾಚಾ ದಾತಾ । ತೇಹೀ ಕಥಾ ಅವಧಾರೀ ॥೧೦೧೦॥ ಬ್ರಹ್ಮಾದಿ ಮಶಕವರೀ । ಸರ್ವಾತೇ ವಂದೀ ಶಿರೀ । ಏಕನಿಷ್ಠತಾ ಚರಾಚರೀ । ಬುದ್ಧೀ ದುಸರೀ ಜಾಣೇನಾ ॥೧೦೧೧॥ ಸರ್ವ ಭೂತೀ ಸ್ವಾಮೀ ದೇಖೇ । ಲೋಟಾಂಗಣೇ ಘಾಲೀ ಹರಿಖೇ । ಸುರ ನರ ಖರ ಹೇ ನೋಳಖೇ । ಅತಿಸಂತೋಖೇ ವಂದಿತ ॥೧೦೧೨॥

ಕಾಲದ ಭಯಂಕರ ಗರ್ಜನೆಯಲ್ಲಿ ಪಂಚ ಮಹಾಭೂತಗಳ ನಾಶವಾಗುವ ಪ್ರಸಂಗವು ಒದಗಿದರೂ ಆಗ ಆತನು ಮನಸ್ಸಿನ ಮತ್ತು ದೇಹದ ಭೇಟಿಯನ್ನು ಮಾಡಿಸಲಾರನು ॥೯೯೯॥ ಅಲ್ಲಿ ಆ ಯಾವ ಕಾಲನ ಶಕ್ತಿಶಾಲಿ ಹೊಡೆತಕ್ಕೆ ಆತನು ತನ್ನ ವೃತ್ತಿಯನ್ನು ಪರಬ್ರಹ್ಮದ ದಾರಿಯತ್ತ ನಿಶ್ಚಯಪೂರ್ವಕವಾಗಿ ಹಚ್ಚಿ, ಚಿನ್ಮಾತ್ರದ ಬಜಾರದಲ್ಲಿ ಅದನ್ನು ಮಾರಿಕೊಂಡಿರುವನು ॥೧೦೦೦॥ ಅಲ್ಲಿ ಆತನಿಗೆ ಸ್ವಾನಂದರೂಪ ಉತ್ತಮ ಗ್ರಾಹಕನು ಸಿಕ್ಕನು. ಆಗ ಆತನು ಜೀವಸಹ ಮನ, ಬುದ್ಧಿ, ಪ್ರಾಣ ಇತ್ಯಾದಿ ವಿವೇಕವನ್ನು ಆತನ ಸೆರಗಿನಲ್ಲಿ ಹಾಕಿ ಅದರ ಬೆಲೆಯಲ್ಲಿ ಸ್ವಾನಂದವನ್ನು ಪಡೆದನು ॥೧೦೦೧॥ ಇದರ ನಾಮವೇ ಧೈರ್ಯ ಎಂದಾಗುವುದು. ಇದು ಸಾಧುವಿನ ಇಪ್ಪತ್ತೊಂದನೆಯ ಗುಣವಾಗಿರುವುದು. ಈಗ ಷಡ್‌ವಿಕಾರಗಳನ್ನು ಜಯಿಸುವಿಕೆ, ಇವುಗಳ ಲಕ್ಷಣಗಳನ್ನು ಹೇಳುವೆನು, ಕೇಳು ॥೧೦೦೨॥ ಆ ಯಾವ ಸಾಧು ಸ್ವಾನಂದದಿಂದ ತೃಪ್ತನಾಗಿರುವನು. ಆದ್ದರಿಂದ ಆತನಿಗೆ ಹಸಿವೆಯಾಗುವುದಿಲ್ಲ. ಜಗತ್ತಿನ ಜೀವನದಿಂದ ಆತನು ಸಂತುಷ್ಟನಾಗಿರುವನು. ಆದ್ದರಿಂದ ತೃಷೆಯೂ ಕೂಡ ಮರೆತುಬಿಟ್ಟಿರುವನು ॥೧೦೦೩॥ ಆತ್ಮ ಸುಖದ ಅನುಭವವನ್ನು ಪಡೆಯುತ್ತಿರಲು ಆತನು ಶೋಕ ದುಃಖವನ್ನು ಮರೆತನು. ಚಿತ್‌ಸ್ವರೂಪದ ಪ್ರತ್ಯಕ್ಷ ದರ್ಶನದಿಂದ ಆತನ ಸರ್ವ ಪ್ರಕಾರದ ಸಂಶಯಗಳು ಕೊನೆಗೊಂಡಿರುವುವು. ಮೋಹವೂ ಕೂಡ ಆತನ ಎದುರಿನಲ್ಲಿ ಬಾರದಂತಾಯಿತು ॥೧೦೦೪॥ ಆತನು ಜಾಗೃತ, ಸ್ವಪ್ನ ಮತ್ತು ಸುಷುಪ್ತಿ ಈ ಮೂರು ಅವಸ್ಥೆಗಳ ಆಚೆಗಿರುವ ಆತ್ಮಜ್ಞಾನದ ಗುಹೆಯಲ್ಲಿ ಇರುವನು. ಅಲ್ಲಿ ಮುದುಕಿಯಾಗಿರುವ ಜರ್ಜರ ಶರೀರದ ಜರಾ ಬಂದಿತೆಂದರೆ ಅದೇ ಗಡಗಡನೇ ನಡುಗುತ್ತ ಓಡಿಹೋಗುವುದು ॥೧೦೦೫॥ ಆತನ ಕಾರ್ಯ ಮತ್ತು ಕಾರಣ ಈ ಎರಡೂ ಮಿಥ್ಯೆಯಾಗಿರುವುವು. ದೇಹತ್ವದಿಂದ ದೇಹದ ಭಾನವೂ ಇರುವುದಿಲ್ಲ. ಆತನು ಕಾಲನನ್ನು ಜಯಿಸಿರುವುದರಿಂದ ಮರಣಕ್ಕೂ ಮರಣ ಬಂದಿರುವುದು ॥೧೦೦೬॥ ಈ ಪ್ರಕಾರವಾಗಿ ಈ ಯಾವ ಷಡ್‌ವಿಕಾರಗಳನ್ನು ಜಯಿಸಿ, ಸಾಧು ಆನಂದದಿಂದ ಇರುವನು. ಇದು ಆತನ ಇಪ್ಪತ್ತೆರಡನೆಯ ಲಕ್ಷಣವಾಗಿರುವುದು ॥೧೦೦೭॥ ಆತನ ಸ್ವಾಮಿಯು ಆತನಿಗೆ ಸರ್ವ ಭೂತಮಾತ್ರರಲ್ಲಿ ಕಾಣುತ್ತಿರುವನು. ಅಂದ ಮೇಲೆ ಮನದ ಇಚ್ಛೆಯನ್ನು ಯಾರಿಂದ ಪೂರೈಸಬೇಕು? ಮನಸ್ಸಿನ ಇಚ್ಛೆಯನ್ನು ಸ್ವಲ್ಪವೂ ಇಡದೇ ಆತನು ಸರ್ವರಲ್ಲಿಯೂ ನಮ್ರಭಾವದಿಂದ ವರ್ತಿಸುತ್ತಿರುವನು ॥೧೦೦೮॥ ಮೊದಲು ದೇಹದ ಅಭಿಮಾನವನ್ನು ಹಿಡಿಯಬೇಕು. ಆಗ ಮಾನ ಸನ್ಮಾನಗಳ ಇಚ್ಛೆಯನ್ನು ಮಾಡಲು ಬರುವುದು. ಹೀಗೆ ಸರ್ವಸಾಧಾರಣವಾಗಿ ನೇಮವಿರುವುದು. ಆದರೆ ಇಲ್ಲಿ ದೇಹದ ಭಾನವೇ ಸಂಪೂರ್ಣವಾಗಿ ಇಲ್ಲದಾಗಿರಲು, ಮಾನ ಸನ್ಮಾನಗಳ ವಿಚಾರವೇ ಬುಡಮೇಲಾಗುವುದು ॥೧೦೦೯॥ ಇದರ ಹೆಸರೇ ಅಮಾನಿತಾ ಅಂದರೆ ನಿರಭಿಮಾನವಾಗಿರುವುದು. ಇದು ಸಾಧುವಿನ ಇಪ್ಪತ್ಮೂರನೆಯ ಲಕ್ಷಣವಾಗಿರುವುದು. ಈಗ ಸಾಧು ಸನ್ಮಾನವನ್ನು ಕೊಡುವವನು ಹೇಗೆ ಇರುವನೆಂಬುದನ್ನು ಕೇಳು ॥೧೦೧೦॥ ಆ ಯಾವ ಸಾಧು ಬ್ರಹ್ಮದೇವನಿಂದ ಹಿಡಿದು ಕ್ಷುದ್ರವಾದ ನೊಣದವರೆಗೆ ಎಲ್ಲರಿಗೂ ಶಿರಸಾ ವಂದನೆಯನ್ನು ಮಾಡುವನು. ಆತನು ಚರಾಚರದತ್ತ ಸರ್ವತ್ರ ಏಕನಿಷ್ಠೆಯಿಂದ ಕಾಣುವನು. ಆತನಿಗೆ ಸರ್ವತ್ರವೂ ಬ್ರಹ್ಮಚೈತನ್ಯದ ದರ್ಶನವಾಗುತ್ತಿರುವುದು ॥೧೦೧೧॥ ಸರ್ವ ಪ್ರಾಣಿ ಮಾತ್ರರಲ್ಲಿ ಆತನು ಬ್ರಹ್ಮರೂಪ ಕಾಣುವನು. ಆದ್ದರಿಂದ ಆತನು ಎಲ್ಲರನ್ನೂ ಆನಂದದಿಂದ ಲೋಟಾಂಗಣವನ್ನು ಹಾಕುವನು. ಈತನು ದೇವನು, ಈತನು ಮನುಷ್ಯನು, ಇದು ಕತ್ತೆಯು, ಎಂಬ ಭೇದವನ್ನು ಅರಿಯುವುದೇ ಇಲ್ಲ. ಸರ್ವರನ್ನು ಆತನು ಶುದ್ಧ ಅಂತಃಕರಣದಿಂದ, ಪರಮ ಸಂತೋಷದಿಂದ ವಂದನೆಯನ್ನು ಮಾಡುತ್ತಿರುವನು ॥೧೦೧೨॥

ನಾನಾ ಅಲಂಕಾರ ಘಡಿಲೇ ಗುಣೇ । ಸೋನೇ ಸೋನೇಪಣಾ ನವ್ಹೇಚ ಉಣೇ । ತೇವೀ ನಾಮರೂಪಾಂಚೇ ವಿಂದಾಣೇ । ಪಾಲಟು ಮನೇ ಘೇಊ ನೇಣೇ ॥೧೦೧೩॥ ಸಾಕರೇಚಿ ನಿಂಬೋಳೀ ಕೇಲೀ । ಪರೀ ತೇ ಕಡೂಪಣಾ ನಾಹೀ ಆಲೀ । ತೇವೀ ಸೂಕರಾದಿ ಯೋನಿ ಜರೀ ಜಾಲೀ । ತರೀ ನಾಹೀ ಭಂಗಲೀ ಚಿತ್ಸತ್ತಾ ॥೧೦೧೪॥ ಸಾಗರೀ ನಾನಾ ಪರೀಚೇ ವಿಕ್ರಾಳ । ಜರೀ ಉಠಿಲೇ ಅನಂತ ಕಲ್ಲೋಳ । ತೇ ಜೇವೀ ಗಾ ಕೇವಳ ಜಳ । ತೇವೀ ವಸ್ತು ಸಕಳ ಭೂತಮಾತ್ರೀ ॥೧೦೧೫॥ ಯಾಪರೀ ಸಕಳ ಭೂತಾ । ಸಾಧು ಸನ್ಮಾನಾತೇ ದೇತಾ । ಹೇ ಚೋವಿಸಾವೀ ಲಕ್ಷಣತಾ । ಪರಬೋಧಕತಾ ತೇ ಐಕ ॥೧೦೧೬॥ ಜೈಸಾ ಭಾವೋ ಜೈಶೀ ಶ್ರದ್ಧಾ । ತೈಸತೈಸಾ ಕರೂ ಜಾಣೇ ಬೋಧಾ । ಜ್ಞಾನ ಪಾವೋನಿ ನವ್ಹೇ ಮೇಧಾ । ಸ್ವರೂಪಶ್ರದ್ಧಾ ಪ್ರಬೋಧೀ ॥೧೦೧೭॥ ಏಕ ಜ್ಞಾನ ಪಾವೋನಿ ಜಾಹಲಾ ಪಿಸಾ । ಪಡಿಲಾ ಅವ್ಯವಸ್ಥ ಠಸಾ । ನೊಳಖೇಚಿ ಸಚ್ಛಿಷ್ಯಾಚೇ ದಶಾ । ಯೋಗ್ಯ ಉಪದೇಶಾ ತೋ ನವ್ಹೇ ॥೧೦೧೮॥ ಏಕ ಜ್ಞಾನ ಆಶ್ಚರ್ಯೇ ಕೋಂದಲಾ । ವಿಸ್ಮಯೇ ತಟಸ್ಥ ಹೋಊನಿ ಠೇಲಾ । ಕಾಷ್ಠಲೋಷ್ಟಾಂಚೇಪರೀ ಪಡಲಾ । ನಾಹೀ ಉರಲಾ ಉಪದೇಶ ॥೧೦೧೯॥ ಏಕ ಜ್ಞಾನ ಪಾವೋನಿ ಅತಿಕೃಪಣ । ಜೀವ ಗೇಲಿಯಾ ನ ಬೋಲೇ ಜಾಣ । ಭೇಣೇಭೇಣೇ ಧರೋನಿ ಮೌನ । ನ ಬೋಲೇ ವಚನ ಸರ್ವಥಾ ॥೧೦೨೦॥ ಜ್ಯಾಸಿ ಧನಕೋಡಿ ಜೋಡಿ ಜಾಹಲೀ । ತೇ ಪುರೂನಿ ವರೀ ದಗಡ ಘಾಲೀ । ದಾನ ನ ದೇತಾ ವೃಥಾ ಗೇಲೀ । ಸಂಪತ್ತಿ ಕೇಲೀ ಭೂಮಿಸವತೀ ॥೧೦೨೧। ತೈಸೇ ಕಷ್ಟೀ ಜೋಡೂನಿ ನಿಜಜ್ಞಾನ । ಸತ್ಪಾತ್ರೀ ನ ಕರೀಚ ದಾನ । ಹೇ ಜ್ಞಾತ್ಯಾಚೇ ಕೃಪಣಲಕ್ಷಣ । ವಂಚಕಪಣ ಸ್ವಭಾವೇ ॥೧೦೨೨॥ ಏಕ ಜ್ಞಾನ ಪಾವೋನಿ ಸಾಂಗೋ ಜಾಯೇ । ಉಪದೇಶೀ ಶಿಷ್ಯಾ ಬೋಧೂನೋಹೇ । ತೇ ಜ್ಞಾನ ಅಬೀಜ ಜಾಹಲೇ ಪಾಹೇ । ಅಂಕುರಾ ನ ಲಾಹೇ ಸತ್ಕ್ಷೇತ್ರೀ ॥೧೦೨೩॥ ಸಧನ ಶಿಷ್ಯ ಕರಾವಯಾ ಜಾಣ । ಸ್ವಯೇ ಪ್ರಯತ್ನ ಕರೀ ಪೂರ್ಣ । ಆಮುಚೀ ದೀಕ್ಷಾ ಅನುಭವ ಗಹನ । ಯಾಪರೀ ಜ್ಞಾನ ವಿಕರಾ ಘಾಲೀ ॥೧೦೨೪॥ ಜೈಸೇನಿ ಪ್ರಲೋಭೇ ತ್ಯಾಚೇ ಮನ । ತೈಸೇ ನಿರೂಪೀ ನಿರೂಪಣ । ಅರ್ಥಸ್ವಾರ್ಥೇ ಉಪದೇಶ ಪೂರ್ಣ । ಧನಲೋಭೇ ಜ್ಞಾನ ನಿರ್ವೀರ್ಯ ಹೋಯೇ ॥೧೦೨೫॥

ಬಂಗಾರದ ಭಿನ್ನ ಭಿನ್ನ ಪ್ರಕಾರಗಳ ಅಲಂಕಾರಗಳನ್ನು ಮಾಡಿದರೂ ಕೂಡ ಬಂಗಾರದ ಬಂಗಾರತ್ವವು ಕಡಿಮೆಯಾಗಲಾರದು. ಅದರಂತೆ ನಾಮ ಮತ್ತು ರೂಪ ಇವುಗಳ ಭೇದದಿಂದ ಸಾಧುವಿನ ಮನವು ಬದಲಾಗುವುದಿಲ್ಲ ॥೧೦೧೩॥ ಸಕ್ಕರೆಯ ಬೇವಿನ ಮರವನ್ನು ತಯಾರಿಸಲು ಅದರಲ್ಲಿ ಯಾವ ಕಹಿಯು ಹುಟ್ಟುವುದಿಲ್ಲ. ಅದರಂತೆ ಹಂದಿಯ ಕುಲದಲ್ಲಿ ಜನ್ಮವಾದರೂ ಕೂಡ ಅದರಲ್ಲಿಯ ಬ್ರಹ್ಮಸ್ವರೂಪವು ಇಲ್ಲದಾಗುವುದಿಲ್ಲ ॥೧೦೧೪॥ ಸಮುದ್ರದಲ್ಲಿ ಒಂದು ವೇಳೆ ಚಿಕ್ಕ ದೊಡ್ಡ ತೆರೆಗಳು ಉದ್ಭವಿಸಿ ಅವು ಉಕ್ಕೇರಿದರೂ, ಅವುಗಳಲ್ಲಿ ಶುದ್ಧವಾದ ನೀರೇ ಇರುವುದು. ಅದರಂತೆ ಯಾವುದೇ ಭೂತಮಾತ್ರರಲ್ಲಿ ಕೇವಲ ಬ್ರಹ್ಮಸ್ವರೂಪವೇ ತುಂಬಿರುವುದು ॥೧೦೧೫॥ ಈ ಪ್ರಕಾರದ ವಿಶ್ವ ಚೈತನ್ಯದ ಅರಿವಿಕೆಯಿಂದ ಸಾಧು ಸರ್ವ ಪ್ರಾಣಿಮಾತ್ರಕ್ಕೆ ಸನ್ಮಾನವನ್ನು ಕೊಡುವನು. ಇದು ಆತನ ಇಪ್ಪತ್ನಾಲ್ಕನೆಯ ಲಕ್ಷಣವಾಗಿರುವುದು. ಈಗ ಆತನ ''ಪರಬೋಧಕತೆ'' ಅಂದರೆ ಬೇರೆಯವರಿಗೆ ಬೋಧ ಮಾಡುವ ಸಾಮರ್ಥ್ಯವನ್ನು ಹೇಳುವೆನು, ಅದನ್ನು ಕೇಳು ॥೧೦೧೬॥ ಯಾರ ಭಾವನೆಯು ಹೇಗಿರುವುದೋ, ಯಾರ ಶ್ರದ್ಧೆಯು ಎಂತಿರುವುದೋ, ಅದರಂತೆ ಸಾಧು ಆತನಿಗೆ ಉಪದೇಶವನ್ನು ಮಾಡುತ್ತಿರುವನು. ಜ್ಞಾನ ಪ್ರಾಪ್ತಿಯಾಗಿದ್ದರೂ ಕೂಡ ಯಾರ ಬುದ್ಧಿಯು ಅದರತ್ತ ಹೊರಳುವುದಿಲ್ಲವೋ, ಆತನಿಗೆ ಸ್ವರೂಪದಲ್ಲಿ ಶ್ರದ್ಧೆಯನ್ನಿಡುವ ಉಪದೇಶವನ್ನು ಮಾಡುವನು ॥೧೦೧೭॥ ಕೆಲವರು ಜ್ಞಾನ ಪ್ರಾಪ್ತಿ ಮಾಡಿಕೊಂಡು ಹುಚ್ಚರಾಗುವರು ಮತ್ತು ಅವರ ಅಂತಃಕರಣದಲ್ಲಿ ಆ ಜ್ಞಾನದ ಅಯೋಗ್ಯ ಚಿನ್ಹೆ ಮೂಡಲು, ಆಗ ಸಚ್ಛಿಷ್ಯರ ನಿಜ ಸ್ಥಿತಿಯು ಅವರಿಗೆ ತಿಳಿಯಲಾರದು. ಹೀಗೆ ಗುರು ಉಪದೇಶ ಮಾಡಲು ಯೋಗ್ಯರಿರುವುದಿಲ್ಲ ॥೧೦೧೮॥ ಜ್ಞಾನದ ಆಶ್ಚರ್ಯವು ಅಂತಃಕರಣದಲ್ಲಿ ತುಂಬಿಕೊಳ್ಳಲು ಆಗ ಕೆಲವರು ತಟಸ್ಥರಾಗುವರು ಕೆಲವರು ಕಟ್ಟಿಗೆಯಂತೆ, ಕಬ್ಬಿಣ ಛಡಿಯಂತೆ ಬಿದ್ದುಕೊಂಡಿರುವರು. ಇಂತಹ ಗುರುವಿಗೆ ಉಪದೇಶದ ಸ್ಥಿತಿಯು ಎಲ್ಲಿಂದ ಬರಬೇಕು ॥೧೦೧೯॥ ಇನ್ನು ಕೆಲವರು ಜ್ಞಾನ ಪ್ರಾಪ್ತಿಯಾದನಂತರ ಅತಿಶಯವಾಗಿ ಕೃಪಣರಾಗುವರು. ತಮ್ಮ ಜೀವ ಹೋದರೂ ಸರಿಯೇ, ಏನೊಂದೂ ಹೇಳಲಾರರು. ಭಯದಿಂದ ಮೌನವನ್ನು ಧರಿಸಿ ಕುಳಿತುಕೊಳ್ಳುವರು. ಮುಖದಿಂದ ಒಂದು ಶಬ್ದವನ್ನಾದರೂ ಪ್ರಕಟಗೊಳಿಸುವುದಿಲ್ಲ ॥೧೦೨೦॥ ಒಬ್ಬ ಮನುಷ್ಯನಿಗೆ ಬಹಳಷ್ಟು ಸಂಪತ್ತು ದೊರೆಯಿತು. ಆಗ ಆತನು ಅದನ್ನು ಮಣ್ಣಿನಲ್ಲಿ ಹುಗಿದು ಅದರ ಮೇಲೆ ಕಲ್ಲನ್ನು ಇಡುವನು. ದಾನ ಧರ್ಮ ಮಾಡಿದರೆ ತನ್ನ ಸಂಪತ್ತು ವ್ಯರ್ಥವಾದೀತೆಂದು ತಿಳಿಯುವನು. ತನ್ನ ಸಂಪತ್ತನ್ನು ಮಣ್ಣಿನ ಜೊತೆಗೂಡಿಸುವನು ॥೧೦೨೧॥ ಅದರಂತೆ ಅತ್ಯಂತ ಕಷ್ಟದಿಂದ ಆತ್ಮಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ಯಾವನು ಸತ್ಪಾತ್ರದಲ್ಲಿ ದಾನ ಮಾಡಲಾರನೋ, ಇದೇ ಜ್ಞಾನದ ಕೃಪಣತನದ ಲಕ್ಷಣವಾಗಿರುವುದು, ಇದೇ ಸ್ವಾಭಾವಿಕವಾದ ಮೋಸಗಾರಿಕೆಯಾಗಿದೆ ॥೧೦೨೨॥ ಯಾರೋ ಒಬ್ಬನು ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವನು ಮತ್ತು ಬೇರೆಯವರಿಗೆ ಹೇಳಲು ಹೋಗುವನು. ಆದರೆ ಶಿಷ್ಯರಿಗೆ ಆ ಉಪದೇಶವು ಏನೂ ತಿಳಿಯುವುದಿಲ್ಲ. ಇಂತಹ ಜ್ಞಾನಕ್ಕೆ ನಿಃಸತ್ವಜ್ಞಾನವೆನ್ನುವರು. ಕಾರಣ ಆ ಯಾವ ಜ್ಞಾನರೂಪ ಬೀಜದಿಂದ ಶಿಷ್ಯರೂಪ ಹೊಲದಲ್ಲಿ ಒಂದೂ ಸಹ ಅಂಕುರವು ಹುಟ್ಟುವುದಿಲ್ಲ ॥೧೦೨೩॥ ಕೆಲವರು ಶ್ರೀಮಂತ ಶಿಷ್ಯನನ್ನು ಮಾಡಿಕೊಳ್ಳಲು ಪ್ರಯತ್ನಿಸುವರು. ನಮ್ಮ ಅನುಭವವು ಮತ್ತು ದೀಕ್ಷೆಯು ಬಹಳ ಗೂಢವಾಗಿದೆ ಎಂದು ಹೇಳುತ್ತ ತಮ್ಮ ಜ್ಞಾನದ ಮಾರಾಟ ಮಾಡುವರು ॥೧೦೨೪॥ ಯಾವುದರಿಂದ ಶಿಷ್ಯನ ಮನವು ತಮ್ಮತ್ತ ಆಕರ್ಷಿಸಲ್ಪಡುವುದೋ, ಅದರಂತೆಯೇ ಅವರು ಉಪದೇಶವನ್ನು ಮಾಡುವರು. ಧನದ ಲೋಭದಿಂದ ಇವರ ಜ್ಞಾನವು ನಿಃಸತ್ವವಾಗುವುದು ೨೫॥

ಪೇವೀ ರಿಘಾಲಿಯಾ ಪಾಣೀ । ತ್ಯಾ ಧಾನ್ಯಾಚೀ ನವ್ಹೇ ಪೇರಣೀ । ತೇವೀ ಧನಲೋಭ ರಿಘಾಲಿಯಾ ಜ್ಞಾನೀ । ಉಪದೇಶೇ ಕೋಣೀ ಸುಖೀ ನವ್ಹೇ ॥೧೦೨೬॥ ಶಿಷ್ಯ ಬೋಧೇವೀಣ ಝುರೇ ಅಂತರೀ । ಗುರು ಗುರುಪಣೇ ಗುರಗುರೀ। ತೇ ಬೋಧಕತಾ ನವ್ಹೇ ಖರೀ । ಘರಚ್ಯಾ ಘರೀ ಚುಕಾಮುಕೀ ॥೧೦೨೭॥ ಶಬ್ದಜ್ಞಾನೇ ಪಾರಾಂಗತ । ಜೋ ಬ್ರಹ್ಮಾನಂದೇ ಸದಾ ಡುಲ್ಲತ । ಶಿಷ್ಯ ಪ್ರಬೋಧನೀ ಸಮರ್ಥ । ತೋ ಮೂರ್ತಿಮಂತ ಸ್ವರೂಪ ಮಾಝೇ ॥೧೦೨೮॥ ಹೋ ಕಾ ಮೀ ಜೈಸಾ ಅವತಾರಧಾರೀ । ತೈಸಾಚಿ ತೋಹೀ ಅವತಾರೀ । ಚಿದ್ರತ್ನಾಂಚ್ಯಾ ಅಲಂಕಾರೀ । ಅಲಂಕಾರೀ ಕುಸರೀ ಸಚ್ಛಿಷ್ಯಾ ॥೧೦೨೯॥ ತೋ ಮೀ ಯಾ ಶಬ್ದಕುಸರೀ । ನಾಂವಾಚೀ ಅಂತರೇ ಬಾಹೇರೀ । ಆಂತುವಟೇ ನಿಜನಿರ್ಧಾರೀ । ಏಕೇ ಘರೀ ನಾಂದತ ॥೧೦೩೦॥ ಏಕಚಿ ಬಹುತಾಂತೇ ಉಪದೇಶೀ । ಏಕಾಚೀ ಪ್ರಾಪ್ತೀ ಸುಟಂಕ ಕೈಶೀ। ಏಕೇ ಅಜ್ಞಾನೇ ಜೈಶೀ ತೈಶೀ । ಹಾ ಬೋಲೂ ಕೋಣಾಸೀ ಮ್ಹಣಾಲ ॥೧೦೩೧॥ ಕೃಷೀವಲ ಪೇರಣೇ ಕರೀ । ಭೂಮಿಪಾಡೇ ಪಿಕತೀ ಘುಮರೀ । ಅಂಕುರೇನಾ ಕ್ಷಿತಿತಳೀ ಉಖರೀ । ತೇ ಬೀಜ ನಿರ್ಧಾರೀ ಅತಿಶುದ್ಧ ॥೧೦೩೨॥ ಭೂಮೀಚಿ ಸಖರ-ನಿಖರ । ಬೀಜ ಪಾವನ ಗಾ ಸಾಚಾರ । ಭಾವಿಕೀ ಉಪದೇಶಾ ವಿಸ್ತರ । ವಿಕಲ್ಪೀ ನರ ಸುನಾಟ ॥೧೦೩೩॥ ಜೋ ಜೈಸಾ ದೇಖೇ ಅರ್ಥ । ತೋಚಿ ಬೋಧೂನಿ ಕರೀ ಪರಮಾರ್ಥ । ಐಸಾ ಪರಬೋಧನೀ ಸಮರ್ಥ । ಗುಣ ವಿಖ್ಯಾತ ಪಂಚವಿಸಾವಾ ॥೧೦೩೪॥ ಸಾಧೂಚೀ ಮೈತ್ರೀ ಚೋಖಟ । ವೋಳಖೀ ಸರ್ವಾಸೀ ಜುನಾಟ । ಸರ್ವಾಂಚಾ ಸಖಾ ಶ್ರೇಷ್ಠ । ಸರ್ವಾಸೀ ಸಕಟ ಸಾರಿಖಾ ॥೧೦೩೫॥ ಸುಹೃದ ಸರ್ವಾಂಚಾ ಸೋಯರಾ । ಸರ್ವಾಂಚಾ ಜಿವಲಗು ಖರಾ । ಹೋಊನಿ ಸರ್ವಾಹೀ ಬಾಹಿರಾ । ಮಿತ್ರಾಚಾರಾ ಚಾಲವೀ ॥೧೦೩೬॥ ಸಾಂಗತಾ ಆಪುಲೀ ಗುಹ್ಯ ಗೋಷ್ಟೀ । ಆಳೋಂಚಾವಯಾ ವೇಗಳಾ ನುರೀ । ಆಪ್ತಭಾವೇ ದೇಖೇ ಸೃಷ್ಟೀ । ಅವಂಚಕ ಪೋಟೀ ಸರ್ವಾಸೀ ॥೧೦೩೭॥ ಕ್ಷೀರನೀರಾಂಚೀ ಮೈತ್ರೀ ಜೈಶೀ । ಭೇದ ನಾಹೀ ಮಿಳಣೀಪಾಶೀ । ಸಾಧು ಸರ್ವ ಜೀವ ಸಮರಸೀ । ಅಭೇದಭಾವೇಸೀ ಮಿತ್ರತ್ವೇ ॥೧೦೩೮॥

ಧಾನ್ಯದ ಹಗೆಯಲ್ಲಿ ನೀರು ಸೇರಿಕೊಳ್ಳಲು, ಆ ಧಾನ್ಯವು ಬಿತ್ತಲಿಕ್ಕೆ ಬರುವುದಿಲ್ಲ. ಅದರಂತೆ ಜ್ಞಾನಿಯ ಮನದಲ್ಲಿ ಹಣದ ಲಾಲಸೆಯು ನಿರ್ಮಾಣವಾಗಲು, ಆತನ ಉಪದೇಶದಿಂದ ಯಾರೂ ಸುಖಿಯಾಗಲಾರರು ॥೧೦೨೬॥ ಜ್ಞಾನವಿಲ್ಲದೇ ಶಿಷ್ಯನು ಮನದಲ್ಲಿ ಕೊರಗುತ್ತಿರುವನು. ಆದರೆ ಗುರುಮಾತ್ರ ತನ್ನ ನಿರೂಪಣೆಯ ಗುರ್‌ಗುರ್ ಮಾಡುತ್ತಿರುವನು. ಇದು ಯಾವ ನಿಜವಾದ ಉಪದೇಶವಾಗಲಾರದು. ಇದು ಮನೆಯಲ್ಲಿಯೇ ತಪ್ಪಿಸಿಕೊಂಡಂತಾಗಿರುವುದು ॥೧೦೨೭॥ ಯಾರು ಶಬ್ದಜ್ಞಾನದ ಪಾರಾಂಗತನಾಗಿದ್ದು ಬ್ರಹ್ಮಾನಂದದಲ್ಲಿ ಸತತವಾಗಿ ರಮಮಾಣನಾಗಿರುವವನು, ಶಿಷ್ಯನಿಗೆ ಈ ಯಾವ ಉಪದೇಶವನ್ನು ಮಾಡುವ ಸಾಮರ್ಥ್ಯ ಇದ್ದವನು, ಆತನು ಸಾಕ್ಷಾತ್ ನನ್ನ ಸ್ವರೂಪನೇ ಆಗಿರುವನು ॥೧೦೨೮॥ ನಾನು ಹೇಗೆ ಅವತಾರವನ್ನು ಧರಿಸಿರುವೆನೋ, ಹಾಗೆಯೇ ಆತನೂ ಕೂಡ ಅವತಾರೀಯಾಗಿರುವನು. ಆದ್ದರಿಂದ ಆತನು ಚಿತ್ಸ್ವರೂಪ ಭೂಷಣದಿಂದ ಸಚ್ಛಿಷ್ಯನಿಗೆ ಕೌಶಲ್ಯದಿಂದ ಅಲಂಕೃತ ಮಾಡುವನು ॥೧೦೨೯॥ ಆತನು ಮತ್ತು ನಾನು ಈ ಎರಡು ಹೆಸರುಗಳಲ್ಲಿ ಕೇವಲ ಶಬ್ದ ಮಾತ್ರ ಅಂತರವಿರುವುದು. ಕೇವಲ ಬಾಹ್ಯದೃಷ್ಟಿಯಿಂದ ಭಿನ್ನವಾಗಿ ತೋರುತ್ತಿರುವುದು. ಆದರೆ ಅಂತರಂಗದಿಂದ ನಾವಿಬ್ಬರೂ ಒಂದೇ ಮನೆಯಲ್ಲಿ ವರ್ತಿಸುತ್ತೇವೆ ॥೧೦೩೦॥ ಆತನು ಒಬ್ಬನೇ ಇದ್ದು ಅನೇಕರಿಗೆ ಉಪದೇಶವನ್ನು ಮಾಡುವನು. ಆದರೆ ಆ ಉಪದೇಶದಿಂದ ಒಬ್ಬನು ಜ್ಞಾನಿಯಾಗುವನು ಮತ್ತು ಇನ್ನೊಬ್ಬನು ಅಜ್ಞಾನಿಯಾಗಿಯೇ ಉಳಿಯುವನು. ಅದರ ದೋಷವು ಯಾರದೆಂಬುದು ಈಗ ಕೇಳು ॥೧೦೩೧॥ ಒಕ್ಕಲಿಗನು ಬೀಜಗಳನ್ನು ಬಿತ್ತುವನು. ಆಗ ಭೂಮಿಯು ಉತ್ತಮ, ಹದವಾಗಿರಲು ಬೆಳೆಯು ಜೋರಾಗಿ ಬರುವುದು. ಪಡಾಬಿದ್ದ ಭೂಮಿಯಲ್ಲಿ ಒಂದು ಕಾಳೂ ಸಹ ಹುಟ್ಟುವುದಿಲ್ಲ. ಬೀಜವು ಮಾತ್ರ ಪರಿಶುದ್ಧವಾಗಿಯೇ ಇರುವುದು ॥೧೦೩೨॥ ಭೂಮಿಯು ಉತ್ತಮ - ಕೆಟ್ಟ ಇರುವುದು ಬೀಜವು ಪವಿತ್ರವಾಗಿರುವುದು. ಅದರಂತೆ ಭಾವಿಕ ಜನರ ಅಂತಃಕರಣದಲ್ಲಿ ಉಪದೇಶದ ವಿಸ್ತಾರವು ಉತ್ತಮ ಪ್ರಕಾರವಾಗಿ ಆಗುವುದು. ವಿಕಲ್ಪರಾಗಿರುವವರು ಪಡಾಭೂಮಿಯಂತಿರುವರು ॥೧೦೩೩॥ ಯಾವ ಶಿಷ್ಯನು ಯಾವ ರೀತಿಯಲ್ಲಿ ಅರ್ಥವನ್ನು ತಿಳಿಯಬಲ್ಲನೋ, ಅದೇ ರೀತಿಯಲ್ಲಿ ಆತನಿಗೆ ಬೋಧೆಯನ್ನು ಮಾಡಿ ಆತನಿಗೆ ಪರಮಾರ್ಥದ ಮಾರ್ಗ ಹಚ್ಚುವ ಉಪದೇಶ ಮಾಡುವ ತಂತ್ರವನ್ನು ಅರಿತವನೇ ''ಪರಬೋಧಕತೆ'' ಎಂಬ ನಾಮದ ಇಪ್ಪತ್ತೈದನೆಯ ಪ್ರಸಿದ್ಧ ಗುಣವಾಗಿರುವುದು ॥೧೦೩೪॥ ಸಾಧುವಿನ ಮೈತ್ರಿಯು ಶ್ರೇಷ್ಠವು. ಈತನಲ್ಲಿ ಎಲ್ಲರ ಹಳೆಯ ಪರಿಚಯವಿರುವುದು. ಈತನು ಎಲ್ಲರಲ್ಲಿಯೂ ಸಮಾನ ಸ್ನೇಹದಿಂದ ವರ್ತಿಸುತ್ತಿರುವುದರಿಂದ ಎಲ್ಲರಿಗೂ ಪ್ರೇಮಿಯಾಗುವನು ॥೧೦೩೫॥ ಈತನು ಎಲ್ಲರ ಸುಹೃದ, ಆಪ್ತ, ಪ್ರೀತಿಯುಳ್ಳವನಾಗಿರುವನು. ಈತನು ಎಲ್ಲರಿಂದಲೂ ಭಿನ್ನನಾಗಿಯೇ ಮಿತ್ರತ್ವವನ್ನು ನಡೆಸುವನು ॥೧೦೩೬॥ ತನ್ನ ಅತಿ ಗುಪ್ತ ವಿಷಯವನ್ನೂ ಸಹ ಮೆಲ್ಲನೇ ಕಿವಿಯಲ್ಲಿ ಹೇಳಲು, ಆ ಭೇದಭಾವವನ್ನು ಮನ್ನಿಸಲಾರನು. ಸರ್ವ ಜಗತ್ತಿನತ್ತ ತನ್ನ ಆಪ್ತಬಂಧು - ಬಳಗದಂತೆ ಕಾಣುವನು. ಆತನ ಮನದಲ್ಲಿ ಯಾವ ಕಪಟ ವಿಷಯವೂ ಇರುವುದಿಲ್ಲ ॥೧೦೩೭॥ ಹಾಲು ಮತ್ತು ನೀರು ಇವುಗಳ ಒಂದೇ ಜೀವವಾಗಿರುವುದು. ಅವೆರಡೂ ಏಕತ್ರವಾಗಲು ಅವುಗಳಲ್ಲಿ ಯಾವ ಭೇದವೂ ಉಳಿಯಲಾರದು. ಅದರಂತೆ ಸಾಧೂ ಕೂಡ ಸರ್ವಪ್ರಾಣಿಗಳಲ್ಲಿ ಏಕರೂಪನಾಗಿರುವನು. ಆತನ ಮೈತ್ರಿಯು ಅಭೇದಭಾವದ್ದಾಗಿರುವುದು ॥೧೦೩೮॥

ಪರಮ ಮೈತ್ರೀಚಾ ಭಾವೋ ದೇಖ । ದುಃಖ ಹಿರೋನಿ ದ್ಯಾವೇ ಸುಖ । ಸಾಧೂ ಜೀವಾಂಚೇ ನಿರಸೋನಿ ದುಃಖ
। ಪರಮ ಸುಖ ದೇತಸೇ ॥೧೦೪೯॥ ನವಲ ಮೈತ್ರೀಚೇ ಮಹಿಮಾನ । ಸಖಾ ಸರ್ವಾಂಚಾ ಪುರಾತನ । ಸರ್ವಾಸೀ
ನೀಚ ನವೇ ಸೌಜನ್ಯ । ಅವಂಚಕಪಣ ಸರ್ವದಾ ॥೧೦೫೦॥ ಬಂಧೂಹೂನಿ ಮಿತ್ರ ಅಧಿಕು । ಪುತ್ರಾಹೂನಿ ವಿಶ್ವಾಸಿಕು
। ತೋ ಮಿತ್ರ ಜೈ ಜಾಹಲಾ ವಂಚಕು । ತೈ ಕೇವಳ ಠಕು ತೋ ಜಾಣಾವಾ ॥೧೦೫೧॥ ಮನೇ ಧನೇ ಕರ್ತವ್ಯತಾ।
ಜ್ಯಾಚೀ ಅನನ್ಯ ಅವಂಚಕತಾ । ತ್ಯಾ ನಾಂವ ಪರಮ ಮಿತ್ರತಾ । ಹೇ ಖೂಣ ತತ್ತ್ವತಾ ಜಾಣಾವೀ ॥೧೦೫೨॥
ಸಮೂಳ ಮೈತ್ರೀಚೇ ನಿರೂಪಣ । ವಿಶದ ಸಾಂಗೀತಲೇ ಜಾಣ । ಹೇ ಸವ್ವಿಸಾವೇ ಸಾಧುಲಕ್ಷಣ । ಕಾರುಣ್ಯ ಪಣ
ತೇ ಐಕಾ ॥೧೦೫೩॥ ಪ್ರತ್ಯುಪಕಾರ ನ ವಾಂಛಿತಾ । ಮೀ ಕಾರುಣಿಕ ಹೇ ನಾಹೀ ಅಹಂತಾ । ಐಸೇನಿ ದೀನದುಃಖ
ನಿವಾರಿತಾ । ಕಾರುಣ್ಯ ಸರ್ವಥಾ ತ್ಯಾ ನಾಂವ ॥೧೦೫೪॥ ರಸಪೂಜಾ ಧರೋನಿ ಪೋಟೀ । ವೈದ್ಯ ವೋಖದಾಂಚ್ಯಾ
ಸೋಡೀ ಗಾಂಠೀ । ಕಾ ಸಂಭಾವನಾ ಸೂನಿ ದಿಠೀ । ಸಾಂಗೇ ಗೋಠೀ ಪುರಾಣಿಕ ॥೧೦೫೫॥ ಐಸೀ ವರ್ತಣೂಕ
ಸರ್ವಥಾ । ತೇ ಲಾಗಲೀ ವಿಷಯಸ್ವಾರ್ಥಾ । ಸಾಧೂಚೀ ನವ್ಹೇ ತೈಶೀ ಕಥಾ । ನೈರಾಶ್ಯತಾ ದಯಾಳೂ ॥೧೦೫೬॥
ದಯಾರ್ಣವೇ ದ್ರವಲೀ ದೃಷ್ಟೀ । ತನುಮನ ಧನ ವೇಂಚೂನಿ ಗಾಂಠೀ । ಅನಾಥಾವರೀ ಕರುಣಾ ಮೋಟೀ ।
ಉದ್ಧರೀ ಸಂಕಟೀ ದೀನಾತೇ ॥೧೦೫೭॥ ಜೈಸಾ ಕಳವಳಾ ನಿಜಸ್ವಾರ್ಥಾ । ತ್ಯಾಹೂನ ಅಧಿಕ ಆನಾಥಭೂತಾ ।
ತಿಯೇ ನಾಂವ ಪರಮ ಕಾರುಣಿಕತಾ । ಜಾಣ ತತ್ತ್ವತಾ ಉದ್ಧವಾ ॥೧೦೫೮॥ ಹೇ ಸತ್ತಾವಿಸಾವೇ ಲಕ್ಷಣ ।
ಸಾಧೂಚೇ ಜಾಣ ಸಂಪೂರ್ಣ । ಕವಿಪದಾಚೇ ವ್ಯಾಖ್ಯಾನ । ಸಾವಧಾನ ಅವಧಾರೀ ॥೧೦೫೯॥ ವೇದಶಾಸ್ತ್ರಾಂಚಾ
ಮಥಿತಾರ್ಥ । ಜಾಲಾ ಕರತಳಾಮಳಕವತ । ತೈಸಾಚ ಬ್ರಹ್ಮಾನಂದೇ ಡುಲ್ಲತ । ಕವಿ ನಿಶ್ಚಿತ ಯಾ ನಾಂವ ॥೧೦೬೦॥
ಉಪನಿಷದಾಂಚಾ ಮಥಿತಾರ್ಥ । ಜ್ಯಾಚ್ಯಾ ಮುಖಾಚೀ ವಾಸ ಪಹಾತ । ಪರೋಕ್ಷಾಪರೋಕ್ಷ ಜ್ಯಾಚೇನಿ ಸತ್ಯ ।
ಕವಿ ವಿಖ್ಯಾತ ತ್ಯಾ ನಾಂವ ॥೧೦೬೧॥ ಕವಿ ಯಾ ಪದಾಚೇ ವ್ಯಾಖ್ಯಾನೇ । ಝಾಲೀ ಅಠ್ಠಾವೀಸ ಲಕ್ಷಣೇ । ಉರಲೀ
ದೋನೀ ಅತಿಗಹನೇ । ತೋ ದೋ ಶ್ಲೋಕೀ ಶ್ರೀಕೃಷ್ಣೇ ಆದರಿಲೇ ಸಾಂಗೋ ॥೧೦೬೨॥

ಬೇರೆಯವರ ದುಃಖವನ್ನು ಅರಿತು ಅದನ್ನು ಇಲ್ಲದಂತೆ ಮಾಡುವುದು ಮತ್ತು ಆತನಿಗೆ ಸುಖವನ್ನು ಕೊಡುವುದು. ಇದೇ ಉತ್ಕಟ ಮೈತ್ರಿಯ ಲಕ್ಷಣವಾಗಿರುವುದು. ಅದರಂತೆ ಸಾಧು ಜೀವಿಗಳ ದುಃಖವನ್ನು ನಿವಾರಿಸಿ, ಅವರಿಗೆ ಸುಖವನ್ನು ಕೊಡುವ ಸತತ ಪ್ರಯತ್ನ ಮಾಡುವನು ॥೧೦೪೯॥ ಸಾಧುವಿನ ಮೈತ್ರಿಯ ಮಹಿಮೆಯು ಹೀಗೆ ಅಗಾಧವಾಗಿರುವುದು. ಆತನು ಎಲ್ಲರ ಹಳೆಯ ಸ್ನೇಹಿತನಾಗಿರುವನು. ಆದ್ದರಿಂದ ಆತನ ಸೌಜನ್ಯವು ಎಲ್ಲರಲ್ಲಿಯೂ ನಿತ್ಯ ನೂತನವಾಗಿರುವುದು. ಆತನು ಸದಾ ಸರ್ವಕಾಲದಲ್ಲಿಯೂ ನಿಷ್ಕಪಟನಾಗಿರುವನು ॥೧೦೫೦॥ ಆಪ್ತಬಂಧುಕ್ಕಿಂತಲೂ ಮಿತ್ರನು ಅಧಿಕ ಪ್ರೇಮಳನಾಗಿರುವನು. ಪುತ್ರನಕ್ಕಿಂತಲೂ ಹೆಚ್ಚಾಗಿ ವಿಶ್ವಾಸಿಕನಾಗಿರುವನು. ಅದೇ ಮಿತ್ರನು ವಂಚಕನಾಗಲು ಅವನು ಕೇವಲ ಠಕ್ಕನೆಂದು ತಿಳಿಯಬೇಕು ॥೧೦೫೧॥ ಮನಸ್ಸಿನಿಂದ, ಧನದಿಂದ ಮತ್ತು ಕರ್ತವ್ಯ ಕರ್ಮದಿಂದ ಯಾರ ವೃತ್ತಿಯು ಅತ್ಯಂತ ನಿಷ್ಕಪಟವಾಗಿರುವುದೋ, ಆ ಮೈತ್ರಿಯ ನಾಮವೇ ನಿಜವಾದ ಮೈತ್ರಿಯಾಗಿರುವುದು. ಇದೇ ಅದರ ಮುಖ್ಯ ಚಿನ್ಹೆ ಎಂದು ತಿಳಿಯಬೇಕು ॥೧೦೫೨॥ ಈ ಪ್ರಕಾರವಾಗಿ ಮೈತ್ರಿ ಲಕ್ಷಣದ ವಿಸ್ತಾರವನ್ನು ವಿಚಾರಪೂರ್ವಕವಾಗಿ ಮಾಡಲಾಯಿತು. ಇದು ಸಾಧುವಿನ ಇಪ್ಪತ್ತಾರನೆಯ ಲಕ್ಷಣವಾಗಿರುವುದು. ಈಗ ಕಾರುಣ್ಯದ ಲಕ್ಷಣವನ್ನು ಕೇಳು ॥೧೦೫೩॥ ಯಾರು ತಾನು ಮಾಡಿದ ಉಪಕಾರಕ್ಕಾಗಿ ಪ್ರತಿ ಉಪಕಾರದ ಇಚ್ಛೆಯನ್ನು ಮಾಡುವುದಿಲ್ಲ, ನಾನೊಬ್ಬ ದಯಾಳು ಎಂಬ ಅಭಿಮಾನವು ಆತನ ಮನದಲ್ಲಿ ಇರುವುದಿಲ್ಲ. ಈ ಪ್ರಕಾರವಾಗಿ ದೀನ ಜನರ ದುಃಖವನ್ನು ದೂರು ಮಾಡುವುದಕ್ಕೆ ಕಾರುಣ್ಯವೆಂದು ಹೇಳುವರು ॥೧೦೫೪॥ ಮನಸ್ಸಿನಲ್ಲಿ ಹಣದ ಲೋಭವನ್ನು ಇಟ್ಟುಕೊಂಡು ವೈದ್ಯನು ಔಷಧಗಳ ಗಂಟನ್ನು ಉಚ್ಚುತ್ತಿರುವನು. ಅಥವಾ ಸಂಭಾವನೆಯ ಮೇಲೆ ದೃಷ್ಟಿಯನ್ನಿಟ್ಟು ಪುರಾಣಿಕನು ಧಾರ್ಮಿಕ ವ್ಯಾಖ್ಯಾನವನ್ನು ಮಾಡುತ್ತಿರುವನು ॥೧೦೫೫॥ ಈ ಪ್ರಕಾರದ ಆಚರಣೆಯು ಕೇವಲ ವಿಷಯಗಳ ಸ್ವಾರ್ಥಕ್ಕಾಗಿರುವುದು. ಆದರೆ ಸಾಧುವಿನ ಆಚರಣೆಯು ಹೀಗಿರುವುದಿಲ್ಲ. ಆತನು ನಿರಿಚ್ಛನಾಗಿದ್ದು ದಯಾವಂತನಾಗಿರುವನು ॥೧೦೫೬॥ ದಯಾರೂಪ ಸಾಗರದಿಂದ ಆತನ ದೃಷ್ಟಿಯು ತುಂಬಿ ತುಳುಕುತ್ತಿರುವುದು. ಆತನು ತನ್ನ ತನ,ಮನ,ಧನವನ್ನು ಖರ್ಚಿಸಿ ಅನಾಥರಲ್ಲಿ ದಯೆಯ ಮಳೆಗರೆಯುವನು. ದೀನ ದುರ್ಬಲರನ್ನು ಅವರ ಸಂಕಟಗಳಿಂದ ಬಿಡಿಸುವನು ॥೯೫೭॥ ಆತನಿಗೆ ತನ್ನ ಸ್ವಾರ್ಥದ ಕಳಕಳಿಯು ಎಷ್ಟಿರುವುದೋ, ಅದಕ್ಕಿಂತಲೂ ಅಧಿಕವಾದ ಕಳಕಳಿಯು ಅನಾಥವಾಗಿರುವ ಪ್ರಾಣಿಗಳಲ್ಲಿರುವುದು. ಹೇ ಉದ್ಧವನೇ, ನಿಜವಾಗಿಯೂ ಇದರ ಹೆಸರೇ ಪೂರ್ಣವಾದ ದಯೆಯಾಗಿರುವುದು ॥೧೦೫೮॥ ಇದು ಸಾಧುವಿನ ಇಪ್ಪತ್ತೇಳನೆಯ ಲಕ್ಷಣವಾಗಿರುವುದು. ಇದನ್ನು ಲಕ್ಷದಲ್ಲಿಡು. ಈಗ ಕವಿ ಎಂಬ ಶಬ್ದದ ಪ್ರತಿಪಾದನೆಯನ್ನು ಏಕಾಗ್ರ ಚಿತ್ತದಿಂದ ಆಲಿಸು ॥೧೦೫೯॥ ವೇದಶಾಸ್ತ್ರಗಳ ಮಥಿತಾರ್ಥವನ್ನು ಯಾರಿಗೆ ಅಂಗೈಯಲ್ಲಿನ ನೆಲ್ಲಿಕಾಯಿಯಂತೆ ಪ್ರತ್ಯಕ್ಷವಾಗಿ ತಿಳಿಯಲ್ಪಟ್ಟಿರುವುದೋ, ಯಾರು ಬ್ರಹ್ಮಾನಂದದಲ್ಲಿ ಸತತವಾಗಿ ತೂಗಾಡುತ್ತಿರುವನೋ, ಆತನಿಗೆ ಮಾತ್ರ ನಿಜವಾದ ಕವಿ ಎಂದು ಹೇಳುವರು ॥೧೦೬೦॥ ಉಪನಿಷದ್‌ಗಳ ಮಥಿತಾರ್ಥವು ಯಾರ ಮುಖದಿಂದ ಪ್ರಕಟವಾಗಬೇಕೆಂದು ದಾರಿಯನ್ನು ಕಾಯುವುದೋ, ಶಬ್ದಜ್ಞಾನವು ಮತ್ತು ಅನುಭವ ಜ್ಞಾನವು ಯಾರಿಂದ ಸತ್ಯವಾಗುವವೋ, ಆತನಿಗೆ ಮಾತ್ರ ಕವಿ ಎಂಬ ಪ್ರಸಿದ್ಧವಾದ ಹೆಸರು ದೊರಕುವುದು ॥೧೦೬೧॥ ಕವಿ ಎಂಬ ಶಬ್ದದ ವರ್ಣನೆಯಿಂದ ಈಗ ಇಪ್ಪತ್ತೆಂಟನೆಯ ಲಕ್ಷಣವು ಪೂರ್ಣವಾಯಿತು. ಅತ್ಯಂತ ಗಹನವಾಗಿರುವ ಇನ್ನೂ ಎರಡು ಲಕ್ಷಣಗಳು ಉಳಿದಿವೆ. ಅವುಗಳನ್ನು ಮುಂದಿನ ಎರಡು ಶ್ಲೋಕಗಳಲ್ಲಿ ಶ್ರೀಕೃಷ್ಣನು ಅತ್ಯಂತ ಆದರದಿಂದ ಹೇಳುವನು ॥೧೦೬೨॥

ಆಜ್ಞಾಯೈವಂ ಗುಣಾನ್‌ದೋಷಾನ್‌ಮಯಾ ದ್ವಿಷ್ಟಾನಪಿ ಸ್ವಕಾನ್ ।
ಧರ್ಮಾನ್ ಸಂತ್ಯಜ್ಯ ಯಃ ಸರ್ವಾನ್ ಮಾಂ ಭಜೇತ ಸ ಸತ್ತಮಃ ।೩೨॥

ಅರ್ಥ :- ಪ್ರಿಯ ಉದ್ಧವನೇ, ದೇವನಾದ ನಾನು ಶಾಸ್ತ್ರಗಳ ರೂಪದಿಂದ ಮಾನವರಿಗೆ ಧರ್ಮದ ಉಪದೇಶವನ್ನು ಮಾಡಿರುವೆನು. ಧರ್ಮದ ಪಾಲನೆಯನ್ನು ಮಾಡಲು ಅಂತಃಕರಣದ ಶುದ್ಧಿಯಾಗುವುದು. ಅದನ್ನು ಉಲ್ಲಂಘಿಸಲು ನರಕ ಇತ್ಯಾದಿ ದುಃಖಗಳ ಪ್ರಾಪ್ತಿಯಾಗುವುದು. ಆದರೆ ನನ್ನ ಭಕ್ತನು ನಾನು ಹೇಳಿರುವ ಧರ್ಮದ ತ್ಯಾಗವನ್ನು ಮಾಡಿ ನನ್ನ ಭಕ್ತಿಯನ್ನು ಮಾಡುವುದರಿಂದ ಅವನೇ ಶ್ರೇಷ್ಠಭಕ್ತನಾಗಿರುವನು. ನಾನು ಯಾರಿದ್ದೇನೆ? ಎಷ್ಟು ದೊಡ್ಡವನಾಗಿದ್ದೇನೆ? ಹೇಗೆ ಇರುವೆ? ಎಂಬ ಈ ಮಾತುಗಳನ್ನು ತಿಳಿಯುತ್ತಲೇ, ನನ್ನ ಭಜನೆಯನ್ನು ಅನನ್ಯಭಾವದಿಂದ ಯಾರು ಮಾಡುವವರೋ, ಅವನೇ ನನ್ನ ವಿಚಾರದಿಂದ ಪರಮಭಕ್ತನಾಗಿರುವನು.

ಪ್ರಪಂಚನಗರಾಸಭೋಂವತೀ । ಕರ್ಮನದೀಚೀ ಮಹಾಖ್ಯಾತೀ । ತಿಚೇನಿ ಜಳೇ ಜೀವ ವರ್ತತೀ । ಉತ್ಪತ್ತಿಸ್ಥಿತಿ ಅರತೀರೀ ।।೧೦೫೩।। ತೇ ನದೀಚೇನಿ ಜೀವನವೋಳೇ । ಕರ್ಮಾಸೀ ಯೇತೀ ಕರ್ಮಫಳೇ । ಸ್ವರ್ಗನರಕಾದಿ ಸೋಹಳೇ । ತೇಣೇ ಜಳಬಳೇ ಭೋಗಿತೀ ।।೧೦೫೪।। ಪ್ರಪಂಚನಗರೀಹೂನಿ ನಿಘತಾ । ವೇಗೇ ಪರಮಾರ್ಥಾಸೀ ಯೇತಾ । ಜೋ ತೋ ಕರ್ಮನದೀ - ಆಂತೌತಾ । ಬುಡೇ ಸರ್ವಥಾ ನಿರ್ಬುಜಲಾ ।।೧೦೫೫।। ಏಕ ತರಲೋ ಐಸೇ ಜ್ಞಾತೇ ಮ್ಹಣತೀ । ತೇಹೀ ಕರ್ಮೀ ಕರ್ಮಗುಚಕಿಯಾ ಖಾತೀ । ಸ್ವಯೇ ಬುಡೋನಿ ಆಣಿಕಾ ಬುಡವಿತೀ । ತರಲೋ ಮ್ಹಣತೀ ತೋಂಡಾಳ ।।೧೦೫೬।। ಐಸೇ ಬುಡಾಲೇ ನೇಣೋ ಕಿತೀ । ಬುಡತಾ ಶಿಕವಣ ತೇಚಿ ದೇತೀ । ಕರ್ಮಚಿ ಉಪಾವೋ ತರುಣೋಪಾಯಪ್ರಾಪ್ತೀ । ಮ್ಹಣೋನಿ ಬುಡವಿತೀ ಸರ್ವಾಂತೇ ।।೧೦೫೭।। ''ನ ಕರ್ಮಣಾ'' ಹೇ ವೇದವಚನ । ಕರ್ಮೇ ನವ್ಹೇ ಬ್ರಹ್ಮಜ್ಞಾನ । ತೇ ನ ಮಾನಿತೀ ಕರ್ಮಠ ಜನ । ತ್ಯಾಂಸೀ ಕರ್ಮಾಭಿಮಾನ ಕರ್ಮಾಚಾ ।।೧೦೫೮।। ಕರ್ಮ ದೇಹಾಚೇ ಮಾಥಾ ಪೂರ್ಣ । ತೋ ನ ಸಾಂಡಿತಾ ದೇಹಾಭಿಮಾನ । ಕರ್ಮಾಚಾ ತ್ಯಾಗ ನವ್ಹೇ ಜಾಣ । ಕರ್ಮಬಂಧನ ದೇಹಬುದ್ಧೀ ।।೧೦೫೯।। ಏಕ ಅರತೀರೀ ಅಸತೀ ನಷ್ಟ । ತರಲೋ ಮ್ಹಣತೀ ಅಕರ್ಮನಿಷ್ಠ । ಸ್ವಕರ್ಮತ್ಯಾಗೀ ಕರ್ಮಭ್ರಷ್ಟ । ಜಾಣ ಪಾಪಿಷ್ಠ ಪಾಷಾಂಡೀ ।।೧೦೬೦।। ಯೇ ಕರ್ಮನದೀತೇ ತರಲಾ । ಐಸಾ ನ ದೇಖೋ ದಾದುಲಾ । ಬುಡಾಲ್ಯಾ ಧುರಾಚಿ ಮುದಲಾ । ಪಾಡು ಕೇತುಲಾ ಇತರಾಂಚಾ ।।೧೦೬೧।। ಯೇ ಕರ್ಮನದೀಚೀ ಉತ್ಪತ್ತೀ । ಮಜಚಿಪಾಸೋನಿ ನಿಶ್ಚಿತೀ । ತೇಹೀ ಸಾಂಗೇನ ತುಜಪ್ರತೀ । ಯಥಾನಿಗುತೀ ನಿಜಬೋಧೇ ।।೧೦೬೨।।

ಪ್ರಪಂಚವೆಂಬ ನಗರದ ಸುತ್ತಮುತ್ತ ದುಸ್ತರವಾದ ನದಿವಿರುವುದು. ಇದು ಬಹು ಪ್ರಸಿದ್ಧವಾಗಿರುವುದು. ಈಕೆಯ ಜಲದಲ್ಲಿ ಜೀವಿಗಳು ಇರುವುವು. ಉತ್ಪತ್ತೀ, ಸ್ಥಿತೀಗಳು ಈಕೆಯ ಆಚೆ ದಂಡೆಯ ಮೇಲಿರುವುವು ।೧೦೫೩॥ ಈ ನದಿಯ ನೀರಿನಿಂದ ಕರ್ಮಗಳಿಗೆ ಕರ್ಮಫಲಗಳು ಬರುವುವು. ಈ ನೀರಿನ ಪ್ರವಾಹದ ವೇಗದಿಂದ ಸ್ವರ್ಗ ನರಕಾದಿ ಭೋಗಗಳನ್ನು ಭೋಗಿಸಬೇಕಾಗುವುದು ।೧೦೫೪॥ ಪ್ರಪಂಚ ನಗರದಿಂದ ಹೊರಗೆ ಬಿದ್ದು ಪರಮಾರ್ಥದತ್ತ ವೇಗದಿಂದ ಬರುತ್ತಿರಲು, ಅವನು ಕರ್ಮನದಿಯಲ್ಲಿ ಬೀಳುವನು ಮತ್ತು ಅದರಲ್ಲಿಯೇ ಸಿಲುಕಿಕೊಂಡು ಮುಳುಗಿಬಿಡುವನು ।೧೦೫೫॥ ಕೆಲವು ಜ್ಞಾನಿಗಳು ನಾವು ಉದ್ಧಾರವಾಗಿರುವೆವು ಎಂದು ಹೇಳುವರು. ಆದರೆ ಅವರೂ ಕೂಡ ಕರ್ಮದ ಹೊಡೆತಗಳನ್ನು ತಿಂದು ಸ್ವತಃ ಮುಳುಗುವರು ಮತ್ತು ಇತರರಿಗೂ ಅದರಲ್ಲಿ ಮುಳುಗಿಸುವರು. ನಾವು ಪಾರಾದೆವು, ಉದ್ಧಾರರಾಗಿರುವೆವು ಎಂದು ವ್ಯರ್ಥವಾಗಿ ಬಡಬಡಿಸುವರು ।೧೦೫೬॥ ಇಂದಿನವರೆಗೆ ಹೀಗೆ ಅದೆಷ್ಟು ಜನರು ಮುಳುಗಿರುವರೋ, ಅದರ ಗಣತವನ್ನು ಮಾಡಲು ಬರುವುದಿಲ್ಲ. ಆದರೆ ಅವರು ಮುಳುಗುವ ಸಮಯಕ್ಕೆ ಜನರಿಗೆ ಉದ್ಧಾರವಾಗಲಿಕ್ಕೆ ಕರ್ಮ ಒಂದೇ ಉಪಾಯವಾಗಿರುವುದೆಂದು ಕಲಿಸುವರು. ಹೀಗೆ ಹೇಳುತ್ತ ಅವರು ಸರ್ವರನ್ನೂ ಮುಳುಗಿಸಿಬಿಡುವರು ।೧೦೫೭॥ ''ನ ಕರ್ಮಣಾ'' ಅಂದರೆ ಕರ್ಮದಿಂದ ಮೋಕ್ಷ ಪ್ರಾಪ್ತಿಯಾಗಲಾರದು ಎಂದು ಹೀಗೆ ಸ್ಪಷ್ಟವಾದ ವೇದವಚನವಿರುವುದು. ಕರ್ಮದಿಂದ ಬ್ರಹ್ಮಜ್ಞಾನವು ಎಂದಿಗೂ ಆಗಲು ಶಕ್ಯವಿಲ್ಲ. ಆದರೆ ಕರ್ಮಠರು ಮಾತ್ರ ಇದನ್ನು ಮನ್ನಿಸುವುದಿಲ್ಲ. ಅವರ ಅಂತಃಕರಣದಲ್ಲಿ ಕರ್ಮದ ದೊಡ್ಡ ಅಭಿಮಾನವು ಅಡುಗಿಕೊಂಡಿರುವುದು ।೧೦೫೮॥ ಕರ್ಮ ಎಂಬುದು ಪರಿಪೂರ್ಣವಾಗಿ ದೇಹದ ತಲೆಯ ಮೇಲೆ ಹೊರಿಸಿರುವುದು. ಆದ್ದರಿಂದ ದೇಹದ ಅಭಿಮಾನವನ್ನು ಬಿಡದ ಹೊರತು ಕರ್ಮದ ತ್ಯಾಗವು ಆಗುವುದೇ ಇಲ್ಲ. ದೇಹದ ಅಭಿಮಾನವೇ ಕರ್ಮಬಂಧನವಾಗಿರುವುದು ।೧೦೫೯॥ ಕೆಲವು ಅಜ್ಞಾನಿ ಜನರು ಯಾವ ಕರ್ಮಗಳನ್ನೂ ಮಾಡದೇ ಆಚೆಯ ದಂಡೆಯ ಮೇಲೆ ಇದ್ದುಕೊಂಡು "ನಾವು ಪಾರಾದೆವು" ಎಂದು ಹೇಳುತ್ತಿರುವರು. ಇವರು ಸ್ವಕರ್ಮಗಳನ್ನು ತ್ಯಾಗ ಮಾಡಿದ ಕರ್ಮಭ್ರಷ್ಟರು ಅತ್ಯಂತ ಪಾತಕಿಗಳಾಗಿರುವರು, ಪಾಖಂಡೀಗಳಾಗಿರುವರು ।೧೦೬೦॥ ಈ ಯಾವ ಕರ್ಮನದಿಯಿಂದ ಒಬ್ಬ ಬಹಾದ್ದೂರ ವೀರನೂ ಕೂಡ ಪಾರಾಗಿರುವುದು ಕಾಣಿಸುವುದಿಲ್ಲ. ಮಹಾ ಮಹಾ ನಾನು, ನಾನು ಎನ್ನುವ ಪುಢಾರಿಗಳೂ ಸಹ ಮುಳುಗಿಹೋಗಿರುವರು. ಅಂದ ಮೇಲೆ ಇಲ್ಲಿ ಇತರರ ಯಾವ ಕಥೆ? ।೧೦೬೧॥ ಈ ಯಾವ ಕರ್ಮನದಿಯ ಉತ್ಪತ್ತಿಯು ನಿಜವಾಗಿ ನನ್ನಿಂದಲೇ ಆಗಿರುವುದು. ಇದನ್ನು ನಿನಗೆ ಆತ್ಮಜ್ಞಾನದಿಂದ ಯಥಾರ್ಥವಾಗಿ ಹೇಳುವೆನು ।೧೦೬೨॥

''ಅಜ್ಞಾಯೈವಂ'' ಹೇ ಮುಳೀಂಚೇ ಮೂಳ । ಶ್ಲೋಕೀಚೇ ಪ್ರಥಮ ಪದ ಕೇವಳ । ಯೇಣೇಂಚಿ ಕರ್ಮನದೀ ಝಾಲೀ ಸ್ಥೂಳ । ಕರೂನಿ ವಿವಳ ಸಾಂಗತ ॥೧೦೬೩॥ ಮದಾಜ್ಞಾ ಮೇಘಗಂಭೀರಾ । ನಿಃಶ್ವಸಿತಪವನದ್ವಾರಾ । ಚತುರ್ವೇದವಿಧೀಚ್ಯಾ ಧಾರಾ । ಅತಿಅನಿವಾರಾ ವರ್ಷಲೇ ॥೧೦೬೪॥ ತೇಣೇ ಕರ್ಮನದೀ ಆಂತೌತೇ । ಅನಿವಾರ ಉಲಥಲೇ ಭರತೇ । ಪೂರ ದಾಟಲಾ ಜೇಥೀಂಚಾ ತೇಥೇ । ಉತಾರ ಕೋಣಾತೇ ಕಳೇನಾ ॥೧೦೬೫॥ ತೇಥ ಗುಣದೋಷಾಂಚಾ ವಳಸಾ । ವಿಧಿನಿಷೇಧಾಂಚಾ ಧಾರಸಾ । ಕರ್ಮಾಕರ್ಮಾಚಾ ಆವರ್ತ ಕೈಸಾ । ಸಬಾಹ್ಯ ಸರಿಸಾ ಭಂವತಸೇ ॥೧೦೬೬॥ ಸಂಕಲ್ಪವಿಕಲ್ಪಾಂಚೇ ಹುಡೇ । ನದೀ ದಾಟಲೀ ಚಹೂಕಡೇ । ತರೋ ಜಾಯ ತೋ ಗುಂತೋನಿ ಬುಡೇ । ಪಾಊಲ ಪುಡೇ ನ ಘಾಲವೇ ॥೧೦೬೭॥ ಪ್ರತ್ಯವಾಯಾಚೀ ಮಗರಮಿಠೀ । ಪಡಲ್ಯಾ ಸಗಳೇಚಿ ಘಾಲೀ ಪೋಟೀ । ಉಗಳೋನಿ ನ ಸೋಡೀ ಸಂಕಟೀ । ನೇ ಉತಾಉತೀ ಅಧೋಗತಿ ॥೧೦೬೮॥ ಅಂಗವಿಕಳತೇಚೇ ಮಾಸೇ । ತಳಪತಾತೀ ಘ್ಯಾವಯಾ ಆವಿಸೇ । ಕರ್ಮಠತೇಚೇ ಕಮಠ ಕೈಸೇ । ಖಡಕ ತೈಸೇ ನಿಬರ ॥೧೦೬೯॥ ಕಾಳವಿಕ್ಷೇಪಸರ್ಪಾಸೀ । ಏಕ ಸಾಂಪಡಲೇ ವಿಲಾಸ ಆಳಶೀ । ವಿಕಲ ಉಚ್ಛ್ವಾರ ಚೊಂಢಿಯೇಸೀ । ಏಕ ವ್ಯಗ್ರ ತೇಸೀ ಬುಡಾಲೇ ॥೧೦೭೦॥ ಏಕ ತರಾವಯಾಚ್ಯಾ ಆಶಾ । ಪಡಿಲೇ ಕರ್ಮಾಚ್ಯಾ ಧಾರಸಾ । ತೇ ವಿಧನಿಷೇಧವಳಸಾ । ಪಡಿಲೇ ಸಹಸಾ ನುಗಂಡತೀ ॥೧೦೭೧॥ ಏಕ ಸ್ವಕರ್ಮಧಾರೀ । ಪಡೋನಿ ವಾಹಾವಲೇ ದೂರೀ । ತೇ ಸತ್ಯಲೋಕಮಗರೀ । ಅಪುಲ್ಯಾ ವಿವರೀ ಸೂದಲೇ ॥೧೦೭೨॥ ಏಕಾ ನ ವಚವೇಚಿ ಪರತಟೀ । ಮಾರ್ಝಾರೀಂಚಿ ಫಳೇ ಗೋಮಟೀ । ದೇಖೋನಿ ಥಾಂವಿನ್ನಲೇ ಅವ್ಹಾಟೀ । ತೇ ಸ್ವರ್ಗಸಂಕಟೀ ಗುಂತಲೇ ॥೧೦೭೩॥ ಆಮ್ಹೀ ತರೋ ಯುಕ್ತಿಬಳೇ । ಮ್ಹಣೋನಿ ರಿಘಾಲೇ ಏಕೇ ವೇಳೇ । ತೇ ಅಹಂಕಾರಖಳಾಳೇ । ಮಹಾತಿಮಿಂಗಿಳೇ ಗಿಳಿಲೇ ॥೧೦೭೪॥ ಏಕೀ ವೇದತ್ರಯಾಚೀ ಪೇಟೀ । ದೀಕ್ಷೇಚಿ ದೋರಿ ಬಾಂಧಲೀ ಪೋಟೀ । ತೇ ಸ್ವರ್ಗಾಂಗನಾಕುಚಕಪಾಟೀ । ಗುಂತೋನಿ ಶೇವಟೀ ಬುಡಾಲೇ ॥೧೦೭೫॥ ಮಂತ್ರತಂತ್ರಾದಿದೀಕ್ಷಿತೇ । ಗುಂತೋನಿ ಬುಡಾಲೀ ಜೇಥಿಂಚ್ಯಾ ತೇಥೇ । ಕರ್ಮನದೀಚ್ಯಾ ಪರಪಾರತೇ । ಕೋಣೇ ಪಾವತೇ ದಿಸೇನಾ ॥೧೦೭೬॥

''ಆಜ್ಞಾಯೈವಂ'' ಈ ಮೂಲ ಶ್ಲೋಕದಲ್ಲಿನ ಮೊದಲಿನ ಶಬ್ದವಾಗಿರುವುದು. ಅದಕ್ಕಾಗಿ ಕರ್ಮನದಿಯು ಇಷ್ಟೊಂದು ಪ್ರಬಲವಾಗಿರುವುದು. ಅದರ ವಿವೇಚನವನ್ನೇ ಮಾಡಿ ಈಗ ನಿನಗೆ ಹೇಳುವೆನು ॥೧೦೬೩॥ ನನ್ನ ಆಜ್ಞಾರೂಪ ಗಂಭೀರ ಮೇಘಗಳು ನನ್ನ ಶ್ವಾಸೋಚ್ಛ್ವಾಸದ ವಾಯುವಿನ ಯೋಗದಿಂದ ಚತುರ್ವೇದ ವಿಧಿಯ ಧಾರೆಗಳನ್ನು ಅನಿವಾರ್ಯವಾಗಿ ವೃಷ್ಟಿಮಾಡಿದವು ॥೧೦೬೪॥ ಆದ್ದರಿಂದ ಕರ್ಮನದಿಗೆ ಮಹಾಪೂರವು ಬಂದಿತು. ಇದನ್ನು ಎಲ್ಲಿಂದ ಹೇಗೆ ಇಳಿಸಬೇಕೆಂಬುದು ಯಾರಿಗೂ ಏನು ಮಾಡಿದರೂ ತಿಳಿಯದಾಯಿತು ॥೧೦೬೫॥ ಅಲ್ಲಿ ಗುಣದೋಷಗಳ ಸುತ್ತರಿಲ್ಪಟ್ಟಿತು. ವಿಧಿನಿಷೇಧಗಳ ಧಾರೆಯಲ್ಲಿ ಕರ್ಮಾಕರ್ಮದ ಸುಳಿಗಳು ಒಳಗಡೆಯಲ್ಲಿ ಸತತವಾಗಿ ತಿರುಗುತ್ತಿರುವುವು ॥೧೦೬೬॥ ಸಂಕಲ್ಪ ವಿಕಲ್ಪಗಳ ಕೋಟೆಯಿಂದ ನದಿಯ ಪ್ರವಾಹವು ಅಲ್ಲಲ್ಲಿ ನಿಂತುಕೊಳ್ಳುವುದು. ಆಗ ಯಾರು ಇದರಿಂದ ಪಾರಾಗುವ ಪ್ರಯತ್ನವನ್ನು ಮಾಡುವನೋ, ಅವನು ಅಲ್ಲಿಯೇ ಸಿಲುಕಿಕೊಂಡು ಮುಳುಗಿಬಿಡುವನು ॥೧೦೬೭॥ ಇಂತಹ ಅವಸ್ಥೆಯಲ್ಲಿ ಆತನಿಗೆ ಆತಂಕವೆಂಬ ಮೊಸಳೆಯು ಹಿಡಿಯಿತೆಂದರೆ ಸಾಕು, ಅದು ಏನೆಲ್ಲವನ್ನೂ ನುಂಗಿ ಹೊಟ್ಟೆಯಲ್ಲಿ ಹಾಕುವುದು. ಸಂಕಟದಲ್ಲಿಯೂ ಸಹ ಹೊರಗೆ ಬಿಡುವುದಿಲ್ಲ. ನೋಡು ನೋಡುತ್ತಲೇ ಅಧೋಗತಿಗೆ ಒಯ್ಯುವುದು ॥೧೦೬೮॥ ಅಂಗವಿಕಲತೆ ಎಂಬ ಮೀನಗಳು ಆಮಿಷಕ್ಕಾಗಿ ಅತ್ತಂದಿತ್ತ ಸತತವಾಗಿ ತಿರುಗುತ್ತಿರುವುವು. ಕರ್ಮಠತನದ ಆವಿಯು ಮಾತ್ರ ಕಲ್ಲಿನಕ್ಕಿಂತಲೂ ಕಠಿಣವಾಗಿರುವುದು ॥೧೦೬೯॥ ಕೆಲವರು ವಿಲಾಸಗಳನ್ನು ಭೋಗಿಸಿ ಮೈಗಳ್ಳರಾಗಿರುವರು. ಅವರು ಕಾಳ ವಿಕ್ಷೇಪರೂಪ ಭಯಂಕರ ಸರ್ಪದ ಹಿಡಿತದಲ್ಲಿ ಸಿಕ್ಕಿಕೊಂಡಿರುವರು. ಕೆಲವರ ಮುಖ ಮೂಗಿನಲ್ಲಿ ನೀರು ಸೇರಿಕೊಂಡು ಅವರ ಮುಖದಿಂದ ಯಾವ ಶಬ್ದವೂ ಪ್ರಕಟವಾಗುವುದಿಲ್ಲ. ಕೆಲವರು ಚಿಂತೆಗಳಿಂದಲೇ ಮುಳುಗಿಹೋಗಿರುವರು ॥೧೦೭೦॥ ಕೆಲವರು ಇದರಿಂದ ಪಾರಾಗಬೇಕೆಂಬ ಆಶೆಯಿಂದ ಪ್ರವಾಹದಲ್ಲಿ ಸಿಕ್ಕಿಕೊಳ್ಳುವರು. ಇವರು ವಿಧಿನಿಷೇಧಗಳೆಂಬ ತಿರಗುಣಿಯಲ್ಲಿ ಸಿಕ್ಕಿ ಬೀಳುವರು. ಅಲ್ಲಿಂದ ಹೊರಗೆ ಬೀಳುವುದೇ ಇಲ್ಲ ॥೧೦೭೧॥ ಕೆಲವರು ಸ್ವಕರ್ಮದ ಪ್ರವಾಹದಲ್ಲಿ ಸಿಕ್ಕಿಕೊಂಡು ಎಲ್ಲಿಯೋ ಬಹುದೂರ ತೇಲುತ್ತ ಹೋಗುವರು. ಅವರನ್ನು ಸತ್ಯಲೋಕ ಮೊಸಳೆಯು ತನ್ನ ಗೂಡಿನಲ್ಲಿ ಒಯ್ದು ಒಗೆಯುವುದು ॥೧೦೭೨॥ ಕೆಲವರಿಗೆ ಆಚೆದಂಡೆಗೆ ಹೋಗುವ ಮಾರ್ಗಕ್ಕೆ ಹತ್ತುವದೇ ಇಲ್ಲ. ಅವರು ಮಧ್ಯದಲ್ಲಿಯೇ ಮೋಹಕ ಮಧುರ ಫಲಗಳನ್ನು ಕಂಡು ಅಡ್ಡಮಾರ್ಗದಲ್ಲಿ ನಿಲ್ಲುವರು. ಮತ್ತು ಸ್ವರ್ಗದ ಸಂಕಟದಲ್ಲಿ ಸಿಲುಕಿಕೊಂಡು ಬೀಳುವರು ॥೧೦೭೩॥ ನಾವು ಯುಕ್ತಿಯ ಆಧಾರದಿಂದ ಪಾರಾಗುತ್ತೇವೆ ಎಂದು ಹೇಳಿ, ಇವರು ಒಮ್ಮೆಲೆ ಗಡಿಬಿಡಿಯಿಂದ ಹೊರಡುವರು. ಆದರೆ ಇವರು ಅಹಂಕಾರರೂಪ ಮಡುವಿನಲ್ಲಿ ಬೀಳುತ್ತಲೇ ಅಲ್ಲಿಯ ದೊಡ್ಡ ದೊಡ್ಡ ತಿಮಿಂಗಿಲಗಳು ಅವರನ್ನು ನುಂಗಿಬಿಡುವುವು ॥೧೦೭೪॥ ಕೆಲವರು ಮೂರು ವೇದಗಳ ರೂಪ ಪೆಟ್ಟಿಗೆಯನ್ನು ದೀಕ್ಷೆ ರೂಪ ಹಗ್ಗದಿಂದ ಹೊಟ್ಟೆಯಡಿಯಲ್ಲಿ ಕಟ್ಟುವರು. ಅವರು ಅಪ್ಸರೆಯರ ಕುಚರೂಪ ಗುಹೆಯಲ್ಲಿ ಸಿಲುಕಿ ಬೀಳುವರು, ಕೊನೆಗೆ ಮುಳುಗಿಹೋಗುವರು ॥೧೦೭೫॥ ಮಂತ್ರ ತಂತ್ರಗಳ ದೀಕ್ಷೆಯನ್ನು ಕೊಡುವವರು ಮಾತ್ರ ಅದರಲ್ಲಿ ಸಿಲುಕಿಕೊಂಡು ಅಲ್ಲಿಂದಲ್ಲಿಯೇ ಮುಳುಗಿ ಹೋಗುವರು. ನಿಜವಾಗಿಯೂ ಕರ್ಮನದಿಯ ಆಚೆ ದಂಡೆಯನ್ನು ಮುಟ್ಟಿಕೊಂಡವರು ಯಾರೂ ಕಾಣರು ॥೧೦೭೬॥

ವಿರಳಾ ಕೋಣಏಕ ಸಭಾಗ್ಯ ಯೇಥೇ । ಸಕಳ ಉಪಾಯ ಸಾಂಡೂನಿ ಪರತೇ । ಜೋ ಅನನ್ಯ ಪ್ರೀತೀ ಭಜೇ ಮಾತೇ । ಕರ್ಮನದೀ ತ್ಯಾತೇ ಕೋರಡೀ ॥೧೦೭೭॥ ಮಾಝೀ ಭಕ್ತೀಚೇ ತಾರೂ ನಾತುಡೇ । ಜಂವ ಸಪ್ರೇಮಾಚೇ ಶೀಡ ನ ಚಢೇ । ತಂವ ತರಣೋಪಾಯ ಬಾಪುಡೇ । ವೃಥಾ ಕಾ ವೇಡೇ ಶಿಣತಾತೀ ॥೧೦೭೮॥ ಧರೂನಿ ಅನನ್ಯಭಕ್ತೀಚಾ ಮಾರ್ಗು । ಕರೂನಿ ಸರ್ವಧರ್ಮಕರ್ಮತ್ಯಾಗು । ಹಾ ತರಣೋಪಾಯ ಚಾಂಗು । ಯೇರು ತೋ ವ್ಯಂಗು ಅಧಃಪಾತೀ ॥೧೦೭೯॥ ನೇಣೋನಿ ಸ್ವಧರ್ಮಕರ್ಮಾತೇ । ಕಾ ನಾಸ್ತಿಕ್ಯ ಮಾನೂನಿ ಚಿತ್ತೇ । ಕಿಂವಾ ಧರೋನಿಯಾ ಆಳಸಾತೇ । ತ್ಯಾಗೀ ಕರ್ಮಾತೇ ತೈಸಾ ನವ್ಹೇ ॥೧೦೮೦॥ ಅಥವಾ ಶರೀರಕ್ಲೇಶಾಭೇಣ । ಕಿಂವಾ ಸರ್ವಥಾ ಉಬಗೋನ । ಕಾ ಧರೋನಿ ಜ್ಞಾನಾಭಿಮಾನ । ಸ್ವಕರ್ಮ ಜಾಣ ಸಾಂಡೀನಾ ॥೧೦೮೧॥ ಮಾಝೀ ವೇದರೂಪ ಆಜ್ಞಾ ಶುದ್ಧ । ತೇ ವೇದವಿವಂಚನಾ ವಿಶದ । ಸ್ವಧರ್ಮಕರ್ಮಾಚೇ ಕರ್ಮವಾದ । ಅತಿ ಅವಿರುದ್ಧ ಜಾಣತಾ ॥೧೦೮೨॥ ಸ್ವಧರ್ಮಾಚಾ ಉತ್ತಮ ಗುಣ । ಪ್ರತ್ಯವಾಯೇ ಅಧಃಪತನ । ಯಾ ದೋಹೀತೇ ಜಾಣೋನ । ಮದ್ಭಕ್ತೀಸೀ ಪ್ರಾಣ ವಿಕಿಲಾ ॥೧೦೮೩॥ ವಿಸರೋನಿ ಆನ ಆಠವಣ । ಅಖಂಡತಾ ಹರಿಸ್ಮರಣ । ತ್ಯಾ ನಾಂವ ಭಕ್ತೀಸೀ ವಿಕಿಲಾ ಪ್ರಾಣ । ಇತರ ಭಜನ ಆನುಮಾನಿಕ ॥೧೦೮೪॥ ಮಾಝೇನಿ ಭಜನಪ್ರೇಮೇ ಜಾಣ । ವಿಸರಲಾ ಕರ್ಮಾಚೀ ಆಠವಣ । ಕರ್ಮ ಬಾಪುಡೇ ರಂಕ ಕೋಣ । ಬಾಧಕ ಜಾಣ ನವ್ಹೇ ಭಕ್ತಾ ॥೧೦೮೫॥ ಸಪ್ರೇಮ ಕರಿತಾ ಭಜನವಿಧೀ । ಸರ್ವ ಕರ್ಮಾತೇ ವಿಸರಲೀ ಬುದ್ಧೀ । ತೇ ಜಾಣಾವೀ ಭಜನಸಮಾಧೀ । ತೇಥ ಕರ್ಮ ತ್ರಿಶುದ್ಧೀ ಬಾಧೇನಾ ॥೧೦೮೬॥ ಜ್ಯಾಚೀ ಶ್ರದ್ಧಾ ಕರ್ಮಾವರೀ । ತೋಚಿ ಕರ್ಮಾಚಾ ಅಧಿಕಾರೀ । ಜ್ಯಾಚೀ ಶ್ರದ್ಧಾ ಶ್ರೀಧರೀ । ತೋ ನವ್ಹೇ ಅಧಿಕಾರೀ ಕರ್ಮಾಚಾ ॥೧೦೮೭॥ ಜೋ ಜೀವೇಪ್ರಾಣೇ ಭಕ್ತೀಸೀ ವಿಕಿಲಾ । ತೋ ತೇವ್ಹಾಂಚಿ ಕರ್ಮಾವೇಗಳಾ ಜಾಲಾ । ತ್ಯಾಚ್ಯಾ ಭಾವಾರ್ಥಾ ಮೀ ವಿಕಿಲಾ । ತೋ ಕರ್ಮೀ ಬಾಂಧಲಾ ಕೇವೀ ಜಾಯೇ ॥೧೦೮೮॥ ಗುಣದೋಷಾಂಚೀ ಜನನೀ । ತೇ ನಿಃಶೇಷ ಅವಿದ್ಯಾ ನಿರಸೂನೀ । ಜೋ ಪ್ರವರ್ತಲಾ ಮಾಝೇ ಭಜನೀ । ತೋ ಸಾಧು ಮೀ ಮಾನೀ ಮಸ್ತಕೀ ॥೧೦೮೯॥

ಈ ಲೋಕದಲ್ಲಿ ಯಾರು ಈ ಎಲ್ಲ ಉಪಾಯಗಳನ್ನು ಬಿಟ್ಟುಕೊಟ್ಟು ಅನನ್ಯ ಪ್ರೇಮದಿಂದ ನನ್ನನ್ನು ಭಜಿಸುವನೋ, ಅಂತಹ ಭಾಗ್ಯವಾನನು ವಿರಳನಾಗಿರುವನು. ಇಂತಹ ನನ್ನ ಭಕ್ತನಿಗೆ ಈ ಕರ್ಮನದಿಯು ಬರಿದಾಗಿರುವುದು ॥೧೦೭೭॥ ಎಲ್ಲಿಯವರೆಗೆ ನನ್ನ ಭಕ್ತಿರೂಪ ಹಡಗವು ಸಿಗುವುದಿಲವೋ, ಅಲ್ಲಿಯುವರೆಗೆ ಪ್ರೇಮದ ಪಟವು ಏರುವುದಿಲ್ಲ. ಹಾಗೂ ಸರ್ವ ಪ್ರಕಾರದ ತರಣೋಪಾಯಗಳ ಉಪಯೋಗವಾಗುವುದಿಲ್ಲ. ಹುಚ್ಚ ಜನರು ವ್ಯರ್ಥವಾದ ಖಟಪಟಿಯನ್ನು ಏಕೆ ಮಾಡುತ್ತಾರೋ ತಿಳಿಯದು ॥೧೦೭೮॥ ಅನನ್ಯ ಭಕ್ತಿಯ ಮಾರ್ಗವನ್ನು ಅನುಸರಿಸಿ, ಸರ್ವ ಧರ್ಮಕರ್ಮಗಳ ತ್ಯಾಗವನ್ನು ಮಾಡುವುದೇ ನಿಜವಾದ ತರಣೋಪಾಯವಾಗಿರುವುದು. ಇತರ ಸರ್ವ ಪ್ರಕಾರಗಳ ಉಪಾಯಗಳು ಗೌಣವಾಗಿದ್ದು ಅಧೋಗತಿಗೆ ಒಯ್ಯಲ್ಪಡುವುವು ॥೧೦೭೯॥ ಅಜ್ಞಾನಿ ಮನುಷ್ಯನು ತನ್ನ ಸ್ವಧರ್ಮವನ್ನು ಮತ್ತು ಕರ್ಮವನ್ನು ಅರಿಯದೇ ಅಥವಾ ತನ್ನ ಮನಸ್ಸಿನಿಂದಲೇ ನಾಸ್ತಿಕ ಭಾವವನ್ನು ಸ್ವೀಕರಿಸಿ, ಇಲ್ಲವೇ ಆಲಸ್ಯತನವನ್ನು ಸ್ವೀಕರಿಸಿ ಕರ್ಮವನ್ನು ಬಿಟ್ಟುಬಿಡುವನು. ಈ ಪ್ರಕಾರದ ನನ್ನ ಭಕ್ತನಿರುವುದಿಲ್ಲ ॥೧೦೮೦॥ ಶರೀರಕ್ಕೆ ಕ್ಲೇಶವಾದೀತೆಂಬ ಭಯದಿಂದ ಅಥವಾ ಕೇವಲ ಬೇಸರದಿಂದ ಇಲ್ಲವೇ ಜ್ಞಾನದ ಅಭಿಮಾನವನ್ನು ಹಿಡಿದು ಆತನು ಕರ್ಮದ ತ್ಯಾಗವನ್ನು ಮಾಡುವುದಿಲ್ಲ. ಇದನ್ನು ಲಕ್ಷದಲ್ಲಿಡು ॥೧೦೮೧॥ ನನ್ನ ವೇದರೂಪ ಆಜ್ಞೆಯು ಅತ್ಯಂತ ಪವಿತ್ರವಾಗಿರುವುದು. ವೇದದ ವಿಚಾರಗಳು ಅತಿ ಶುದ್ಧ ಹಾಗೂ ಪವಿತ್ರವಾಗಿವೆ. ಜ್ಞಾನಿಯು ಮಾತ್ರ ಸ್ವಧರ್ಮ ಮತ್ತು ಕರ್ಮಗಳ ಅರ್ಥವನ್ನು ಅವಿರೋಧವಾಗಿ ತಿಳಿದಿರುವನು ॥೧೦೮೨॥ ಸ್ವಧರ್ಮದ ಗುಣವು ಅತ್ಯಂತ ಉತ್ತಮವಾಗಿರುವುದು. ಆದರೆ ಅದರಲ್ಲಿ ದೋಷಗಳಾಗಲು ಅಧಃಪಾತವಾಗುವುದು. ಈ ಎರಡೂ ಸ್ಥಿತಿಗಳನ್ನು ಅರಿತುಕೊಂಡು ನನ್ನ ಭಕ್ತನು ನನ್ನ ಭಕ್ತಿಗೆ ಮಾತ್ರ ತನ್ನ ಪ್ರಾಣವನ್ನು ಅರ್ಪಿಸುತ್ತಿರುವನು ॥೧೦೮೩॥ ಇಂತಹ ಭಕ್ತನು ಇನ್ನಿತರ ಯಾವುದೇ ವಿಷಯಗಳನ್ನು ಸ್ಮರಿಸದೇ ಪ್ರೇಮದಿಂದ ಅಖಂಡವಾಗಿ ಶ್ರೀಹರಿಯ ಭಜನೆಯನ್ನು ಮಾಡುವನು. ಇದರ ಹೆಸರೆ ಭಕ್ತಿಗಾಗಿ ಪ್ರಾಣವನ್ನು ಕೊಡುವಿಕೆ ಎಂದಾಗಿದೆ. ಇತರ ಯಾವ ಭಜನೆಗಳು ಕೇವಲ ಅನುಮಾನಕರವಾಗಿರುವುವು ॥೧೦೮೪॥ ನನ್ನ ಭಜನೆಯ ಪ್ರೇಮದಲ್ಲಿ ಆತನು ಕರ್ಮದ ನೆನಪನ್ನೇ ಮರೆತುಬಿಡುವನು. ಪಾಪ, ಕರ್ಮಗಳು ಬಡಕಲವಾಗಿದ್ದು, ಇವು ಭಕ್ತರಿಗೆ ಯಾವ ಬಾಧೆಯನ್ನು ಕೊಡಬೇಕು? ॥೧೦೮೫॥ ನನ್ನ ಭಜನೆಯಲ್ಲಿ ಪ್ರೇಮದಿಂದ ತಲ್ಲೀನವಾಗಲು, ಆಗ ಆತನು ಸರ್ವಕರ್ಮಗಳನ್ನು ಮರೆತುಬಿಡುವನು. ಇದುವೇ ಭಜನೆಯ ಸಮಾಧಿಯಾಗಿರುವುದು. ಹೀಗೆಂದು ತಿಳಿಯಬೇಕು. ಇಲ್ಲಿ ಕರ್ಮವು ಎಂದಿಗೂ ಬಾಧಿಸಲಾರದು ॥೧೦೮೬॥ ಯಾರ ಶ್ರದ್ಧೆಯು ಕರ್ಮದ ಮೇಲಿರುವುದೋ, ಆತನೇ ಕರ್ಮದ ಅಧಿಕಾರಿಯಾಗಿರುವನು. ಮತ್ತು ಯಾರ ಶ್ರದ್ಧೆಯು ಶ್ರೀಧರನಲ್ಲಿ ಇರುವುದೋ, ಆತನು ಕರ್ಮದ ಅಧಿಕಾರಿಯಾಗಲಾರನು ॥೧೦೮೭॥ ಯಾವನು ತನ್ನ ಜೀವ ಪ್ರಾಣಗಳನ್ನು ಭಕ್ತಿಯಲ್ಲಿ ಮಾರಿಕೊಂಡಿರುವನೋ, ಆತನು ಅದೇ ಸಮಯದಲ್ಲಿಯೇ ಕರ್ಮಗಳಿಂದ ಭಿನ್ನನಾಗಿರುವನು ಎಂದು ತಿಳಿಯಬೇಕು. ಆತನ ಭಾವ ಪ್ರೇಮಕ್ಕೆ ನಾನು ಆತನಿಗೆ ಮಾರಿಕೊಂಡಿರುವೆನು. ಅಂದ ಮೇಲೆ ಆತನು ಕರ್ಮದಿಂದ ಹೇಗೆ ಬದ್ಧನಾಗುವನು? ॥೧೦೮೮॥ ಗುಣದೋಷಗಳ ಸಾಕ್ಷಾತ್ ಜನನೀ ಎಂದರೆ ಅವಿದ್ಯೆಯಾಗಿರುವುದು. ಇಂತಹ ಅವಿದ್ಯೆಯ ನಿರಸನೆಯನ್ನು ಮಾಡಿ ಯಾರು ನನ್ನ ಭಜನೆಯಲ್ಲಿ ಪ್ರೇಮದಿಂದ ತಲ್ಲೀನನಾಗುವನೋ, ಆ ಯಾವ ಪ್ರೇಮಳ ಭಕ್ತನಿಗೆ ನಾನು ಶಿರಸಾ ವಂದ್ಯನೆಂದು ಮನ್ನಿಸುವೆನು ॥೧೦೮೯॥

ನಿಜ ಕಲ್ಪನಾ ಜೇ ದೇಹೀ । ತೇಚೀ ಮುಖ್ಯತ್ವೇ ಅವಿದ್ಯಾ ಪಾಹೀ । ತೇ ಕಲ್ಪನಾ ನಿಮಾಲಿಯಾ ಠಾಯೀ । ಜಗೀ ಅವಿದ್ಯಾ ನಾಹೀ ನಿಶ್ಚಿತ ॥೧೦೯೦॥ ಅವಿದ್ಯೇಚಾ ತ್ಯಾಗಾಸವೇ । ಧರ್ಮಾಧರ್ಮಾದಿ ಆಘವೇ । ನ ತ್ಯಜಿತಾಂಚ ಸ್ವಭಾವೇ । ತ್ಯಾಗ ಘಾವೇ ಅನಾಯಾಸೇ ॥೧೦೯೧॥ ಶಿರ ತುಟಲಿಯಾಪಾಠೀ । ಶರೀರ ನಿಜಕರ್ಮಾಸೀ ಸುಠೀ । ತೇವೀ ಅವಿದ್ಯಾ ತ್ಯಾಗಿತಾ ಶೇವಟೀ । ತ್ಯಜಿಲೇ ಉಠಾಉಠೀ ಸರ್ವ ಧರ್ಮ ॥೧೦೯೨॥ ದಿವಸಾ ಚಂದ್ರ ಉದಯೋ ಪಾಹೇ । ತೋ ಝಾಲಾ ತೈಸಾ ನಾಹೀ ಹೋಯೇ । ತೇವೀ ಅವಿದ್ಯೇಚೇನಿ ವಿಲಯೇ । ಸರ್ವ ಧರ್ಮ ಲಾಹೇ ತೇ ದಶಾ ॥೧೦೯೩॥ ಖದ್ಯೋತ ಸೂರ್ಯೋದಯಾಪಾಠೀ । ಶೋಧೂನಿ ಪಾಹತಾ ನ ಯೇ ದಿಠೀ । ತೇವೀ ಅವಿದ್ಯೇಚ್ಯಾ ಶೇವಟೀ । ಧರ್ಮಾಧರ್ಮಕೋಟೀ ಮಾವಳಲ್ಯಾ ॥೧೦೯೪॥ ಗ್ರಹಗಣ ನಕ್ಷತ್ರಮಾಳಾ । ಖದ್ಯೋತತೇಜ ಉಮಾಳಾ । ರಾತ್ರೀಸಕಟ ಬೋಳವಣ ಸಕಳಾ । ತೇವೀ ಧರ್ಮಾಧರ್ಮಕಳಾ ಅವಿದ್ಯೇಸವೇ ॥೧೦೯೫॥ ಸರ್ವ ಧರ್ಮತ್ಯಾಗಾಚೀ ಖೂಣ । ಉದ್ಧವಾ ಮುಖ್ಯತ್ವೇ ಹೇಚಿ ಜಾಣ । ಯಾಹೀವರೀ ಮಾಝೇ ಭಜನ । ಮುಖ್ಯ ಭಾಗವತಪಣ ಯಾ ನಾಂವ ॥೧೦೯೬॥ ಮ್ಹಣಸೀ ಅವಿದ್ಯಾ ಚಿ ಕೇವೀ ನಾಸೇ । ಮಾ ಅಧರ್ಮ ನಾಸತೀ ತೀ ಸರಿಸೇ । ತೇ ಅವಿದ್ಯಾ ನಾಶೇ ಅನಾಯಾಸೇ । ಭಕ್ತಿ ಉಲ್ಹಾಸೇ ಮಾಝೇನಿ ॥೧೦೯೭॥ ಸುರ್ಯೋದಯ ದೇಖತಾ ದೃಷ್ಟೀ । ಸಚಂದ್ರ ನಕ್ಷತ್ರಾಂಚೀ ಮಾವಳೇ ಸೃಷ್ಟೀ । ತೇವೀ ಮಾಝ್ಯಾ ಭಕ್ತಿ ಉಲ್ಹಾಸಾಪಾಠೀ । ಅವಿದ್ಯಾ ಉಠಾಉಠೀ ನಿಮಾಲೀ ॥೧೦೯೮॥ ಅವಿದ್ಯೇಚ್ಯಾ ನಾಶಾಸವೇ । ನಾಸತೀ ಧರ್ಮಾಧರ್ಮ ಆಘವೇ । ಜೇವೀ ಗರೋದರ ಮಾರಿತಾ ಜೀವೇ । ಗರ್ಭಹೀ ತೀಸವೇ ನಿಮಾಲಾ ॥೧೦೯೯॥ ಜೇಂವ್ಹಾ ಮಾಝೀ ಭಕ್ತೀಚಾ ಉಲ್ಹಾಸೂ । ತೇಂವ್ಹಾಂಚಿ ಅವಿದ್ಯೇಚಾ ನಿರಾಸೂ । ಅವಿದ್ಯೇ ಸವೇ ಹೋಯ ನಾಶೂ । ಅನಾಯಾಸೂ ಸರ್ವ ಧರ್ಮಾ ॥೧೧೦೦॥ ತೇ ತೂ ಭಕ್ತಿ ಮ್ಹಣಸೀ ಕೋಣ । ಜಿಚೇ ಮಾಗಾ ಕೇಲೇ ನಿರೂಪಣ । ತೇ ಮಾಝೀ ಚೌಥಿ ಭಕ್ತೀ ಜಾಣ । ಅವಿದ್ಯಾನಿರಸನ ತಿಚೇನಿ ॥೧೧೦೧॥ ಯೇರ ಆರ್ತ ಜಿಜ್ಞಾಸು ಅರ್ಥಾರ್ಥೀ । ಜೇ ಜೇ ಭಕ್ತೀತೇ ಆದರಿತೀ । ತೇ ಅವಿದ್ಯಾಯುಕ್ತ ನಿಶ್ಚಿತೀ । ಚೌಥೀ ಭಕ್ತಿ ಮುಖ್ಯತ್ವೇ ಮಾಝೀ ॥೧೧೦೨॥ ಜೇ ಭಕ್ತೀಮಾಜೀ ಕಂಹೀ । ಅವಿದ್ಯೇಚಾ ವಿಟಾಳೂ ನಾಹೀ । ಭಜನ ತರೀ ಠಾಯಿಂಚ್ಯಾ ಠಾಯೀ । ಅನಾಯಾಸೇ ಪಾಹೀ ಹೋತಸೇ ॥೧೧೦೩॥

"ದೇಹವೆಂದರೆ ನಾನು" ಈ ಯಾವ ಮುಖ್ಯವಾದ ಕಲ್ಪನೆಯು ಇದೇ ಪ್ರಾಮುಖ್ಯವಾಗಿ ಅವಿದ್ಯೆಯಾಗಿರುವುದು. ಈ ಯಾವ ಕಲ್ಪನೆಯು ತಾನು ಇದ್ದಲ್ಲಿಯೇ ಕರಗಿ ಹೋಗಲು ಅವಿದ್ಯೆಯು ಜಗತ್ತಿನಿಂದ ನಿಶ್ಚಿತವಾಗಿ ಇಲ್ಲದಾಗುವುದು ॥೧೦೯೦॥ ಅವಿದ್ಯೆಯ ತ್ಯಾಗವಾಗುತ್ತಲೇ ಅದರ ಜೊತೆಯಲ್ಲಿ ಧರ್ಮ ಮತ್ತು ಅಧರ್ಮ ಇವುಗಳು ತ್ಯಾಗ ಮಾಡದೇನೇ ತಮ್ಮಷ್ಟಕ್ಕೆ ತಾವೇ ತ್ಯಜಿಸುವುವು ॥೧೦೯೧॥ ಒಮ್ಮೆ ಶಿರಚ್ಛೇದನವಾಯಿತೆಂದರೆ ಆಗ ಆ ಶರೀರವು ಯಾವ ಕರ್ಮವನ್ನೂ ಮಾಡಲು ಏಳುವುದಿಲ್ಲ. ಅದರಂತೆ ಅವಿದ್ಯೆಯ ತ್ಯಾಗವಾಯಿತೆಂದರೆ ಸರ್ವಧರ್ಮಗಳ ತ್ಯಾಗವು ತಕ್ಷಣವಾಗುವುದು ॥೧೦೯೨॥ ಹಗಲಿನಲ್ಲಿ ಚಂದ್ರೋದಯವನ್ನು ನೋಡಲು, ಅದು ಪ್ರತ್ಯಕ್ಷವಾಗಿ ಆಗಿದ್ದರೂ ಆಗಿರುವುದಿಲ್ಲವೆಂಬುವಂತೆ ತೋರುವುದು. ಅದರಂತೆ ಅವಿದ್ಯೆಯು ಇಲ್ಲದಾಗಲು ಸರ್ವ ಧರ್ಮಗಳಿಗೆ ಇದೇ ಗತಿಯಾಗುವುದು ॥೧೦೯೩॥ ಸೂರ್ಯೋದಯವಾದ ನಂತರ ಮಿಂಚಿನ ಹುಳುವು ಹುಡುಕಿದರೂ ಸಿಗುವುದಿಲ್ಲ. ಅದರಂತೆ ಅವಿದ್ಯೆಯ ನಾಶವಾದ ನಂತರ ಧರ್ಮಾಧರ್ಮದ ರಾಶಿಯು ಅಸ್ತಂಗತವಾಗುವುದು ॥೧೦೯೪॥ ನವಗ್ರಹದ ಸಮುದಾಯವು, ನಕ್ಷತ್ರ ಮಂಡಲವು ಮತ್ತು ಮಿಂಚು ಹುಳುವಿನ ಪ್ರಕಾಶವು ಇವೆಲ್ಲವೂ ರಾತ್ರಿ ಮುಗಿದಾಕ್ಷಣವೇ ಮರೆಯಾಗುವುವು. ಅದರಂತೆ ಅವಿದ್ಯೆಯು ಇಲ್ಲದಾಗುತ್ತಲೇ ಧರ್ಮಾಧರ್ಮಗಳು ಮರೆಯಾಗುವುವು ॥೧೦೯೫॥ ಹೇ ಉದ್ಧವನೇ, ಇದೇ ಧರ್ಮತ್ಯಾಗದ ಮುಖ್ಯ ಗುರುತಾಗಿರುವುದು. ಇದರಲ್ಲಿ ನನ್ನ ಭಜನೆಯು ನಡೆಯಿತೆಂದರೆ, ಇದಕ್ಕೇನೇ ಭಾಗವತ ಸ್ಥಿತಿ ಎಂದು ಕರೆಯುವರು ॥೧೦೯೬॥ ಅಧರ್ಮವನ್ನು ನಾಶಮಾಡುವಂತಹ ಈ ಅವಿದ್ಯೆಯು ಹೇಗೆ ನಾಶವಾದೀತೆಂದು ನೀನು ಕೇಳಬಹುದು. ಈ ಯಾವ ಅವಿದ್ಯೆಯು ನನ್ನ ಭಕ್ತಿಯ ಬೆಳವಣಿಗೆಯಿಂದ ಸಹಜವಾಗಿಯೇ ನಾಶಹೊಂದುವುದು ॥೧೦೯೭॥ ಸೂರ್ಯನ ಉದಯವಾಗುತ್ತಲೇ ಚಂದ್ರಸಹ ಸರ್ವ ನಕ್ಷತ್ರಗಳು ಅಸ್ತವಾಗುವುವು. ಅದರಂತೆ ನನ್ನ ಭಕ್ತಿಯ ಉಲ್ಹಾಸವು ಕಣ್ಣಿಗೆ ಬೀಳುತ್ತಲೇ ಅವಿದ್ಯೆಯು ತತ್ಕಾಲದಲ್ಲಿ ಇಲ್ಲದಾಗುವುದು ॥೧೦೯೮॥ ಗರ್ಭಿಣಿ ಸ್ತ್ರೀಯಳನ್ನು ಕೊಲ್ಲಲು ಆಕೆಯ ಸಂಗಡವೇ ಗರ್ಭವೂ ಕೂಡ ಮರಣವಾಗುವುದು. ಅದರಂತೆ ಅವಿದ್ಯೆಯು ನಾಶವಾಗುತ್ತಲೇ ಸರ್ವಧರ್ಮಾಧರ್ಮಗಳ ನಾಶವಾಗುವುದು ॥೧೦೯೯॥ ನನ್ನ ಭಕ್ತಿಯ ವಿಕಾಸವಾಗುತ್ತಲೇ ತತ್ಕಾಲದಲ್ಲಿ ಅವಿದ್ಯೆಯ ನಾಶವಾಗುವುದು. ಅವಿದ್ಯೆಯು ನಾಶವಾಗುತ್ತಲೇ ಅದರ ಜೊತೆಯಲ್ಲಿ ಸರ್ವ ಧರ್ಮಗಳೂ ನಾಶವಾಗುವುವು ॥೧೧೦೦॥ ಅಂತಹ ನಿನ್ನ ಭಕ್ತಿಯು ಯಾವುದು? ಎಂದು ಈಗ ನೀನು ಕೇಳಬಹುದು. ಹಾಗಾದರೆ ಅದನ್ನು ಕೇಳು. ಇದರ ನಿರೂಪಣೆಯನ್ನು ಈ ಹಿಂದೆ ನಾನು ಮಾಡಿರುವೆನು. ಇದೇ ನನ್ನ ನಾಲ್ಕನೆಯ ಭಕ್ತಿಯಾಗಿರುವುದು ಎಂದು ನೀನು ತಿಳಿ. ಇದರ ಸಹಾಯದಿಂದ ಅವಿದ್ಯೆಯ ನಿರಸನೆಯಾಗುವುದು ॥೧೧೦೧॥ ಇತರ ಯಾವ ಆರ್ತ, ಜಿಜ್ಞಾಸೂ ಮತ್ತು ಅರ್ಥಾರ್ಥೀ ಭಕ್ತರು ನನ್ನ ಭಕ್ತಿಯನ್ನು ಮಾಡುವರು ನಿಜ. ಆದರೆ ಅದು ನಿಜವಾಗಿಯೂ ಅವಿದ್ಯೆಯುಕ್ತವಾಗಿರುವುದು. ಆದ್ದರಿಂದ ನಾಲ್ಕನೆಯ ಭಕ್ತಿ ಎಂಬುದು ಶ್ರೇಷ್ಠವಾಗಿರುವುದು ॥೧೧೦೨॥ ಆ ಭಕ್ತಿಯಲ್ಲಿ ಸ್ವಲ್ಪವೂ ಸಹ ಅವಿದ್ಯೆವಿರುವುದಿಲ್ಲ. ಭಜನೆಯು ಮಾತ್ರ ಎಲ್ಲಿ ಬೇಕಾದಲ್ಲಿ ಅನಾಯಾಸವಾಗಿ ಆಗುತ್ತಿರುವುದು ॥೧೧೦೩॥

ತೇ ಮಾಝೀ ಆವಡತೀ ಭಕ್ತೀ । ಉದ್ಧವಾ ಜಾಣ ನಿಶ್ಚಿತೀ । ಜಿಸೀ ಅವಿದ್ಯಾ ಅಸೇ ಧಾಕತೀ । ಸರ್ವ ಧರ್ಮ ಕಾಂಪತೀ ಸರ್ವದಾ ॥೧೧೦೪॥ ತೇ ಭಕ್ತೀಚೀ ದೇಖೋನಿ ಗುಢೀ । ಅವಿದ್ಯಾ ಧಾಕೇಚಿ ಪ್ರಾಣ ಸಾಂಡೀ । ಸರ್ವ ಧರ್ಮಾಚೀ ಆವಡೀ । ಘಾಯೇವೀಣ ಬಾಪುಡೀ ನಿಮಾಲೀ ॥೧೧೦೫॥ ಹಾ ಮದ್ಭಕ್ತೀಚಾ ಪರ್ಯಾವೋ । ಆವಡೀಚ್ಯಾ ಗೋಡಿಯಾ ಸಾಂಗೇ ದೇವೋ । ಐಕ ಭಕ್ತಾಚಾ ಭಜನಭಾವೋ । ಜೇಣೇ ನಿರ್ವಾಹೋ ಭಕ್ತೀಚಾ ॥೧೧೦೬॥ ಮಾಝೇನಿ ಅನುಸಂಧಾನೇವೀಣ । ಸ್ನಾನ ಸಂಧ್ಯಾ ಜಪ ಹೋಮ ದಾನ । ತೇ ಅವಘೇಚಿ ಅಧರ್ಮ ಜಾಣ । ಮದ್ಭಜನ ತೇ ನವ್ಹೇ ॥೧೧೦೭॥ ಗೋಡೀ ಆವಡೀ ತೇ ಪರಪುರುಷೀ । ಮಿಥ್ಯಾ ಲುಡಬುಡೀ ನಿಜಪತೀಪಾಶೀ । ತೇ ಪತಿವ್ರತಾ ನವ್ಹೇ ಜೈಶೀ । ಜಾಣ ಭಕ್ತಿ ತೈಶೀ ವ್ಯಭಿಚಾರೀ ॥೧೧೦೮॥ ನಾನಾ ವಿಷಯೀ ಠೇವೂನಿ ಮನ । ಜೋ ಕರೀ ಧ್ಯಾನ ಅನುಷ್ಠಾನ । ತೇ ಜಾರಸ್ತ್ರೀಯೇಚಾ ಐಸೇ ಜಾಣ । ನವ್ಹೇ ಪಾವನ ತೇ ಭಕ್ತೀ ॥೧೧೦೯॥ ಕಾಯಾ ವಾಚಾ ಮನಸಾ । ಮಾಝೇ ಭಕ್ತೀಚಾ ಪಡಲಾ ಠಸಾ । ಭಜತಾ ನಾಠವೇ ದಿವಸನಿಶಾ । ಭಕ್ತೀಚೀ ದಶಾ ಯಾ ನಾಂವ ॥೧೧೧೦॥ ಜಪೇವೀಣ ನಾಮ ವದನೀ । ಧಾರಣೇವೀಣ ಧ್ಯಾನ ಮನೀ । ಸಂಕಲ್ಪೇವೀಣ ಮದರ್ಪಣೀ । ಸರ್ವ ಕರ್ಮೇ ಕರೂನೀ ಸರ್ವದಾ ॥೧೧೧೧॥ ನಿರೋಧೇವೀಣ ವಾಯುರೋಧೂ । ಮರ್ಯಾದೇವೀಣ ಸ್ವರೂಪಬೋಧೂ । ವಿಷಯೇವೀಣ ಸದಾ ಸ್ವಾನಂದೂ । ಮದ್ಭಕ್ತ ಶುದ್ಧೂ ಯಾ ನಾಂವ ॥೧೧೧೨॥ ಭಕ್ತ ಮ್ಹಣವಿತಾ ಗೋಡ ವಾಟೇ । ಪರೀ ಭಜನಮಾರ್ಗೀ ಹೃದಯ ಫುಟೇ । ಅಕೃತ್ರಿಮ ಭಕ್ತಿ ಜೈ ಉಮಟೇ । ತೈ ಮೀ ಭೇಟೇ ಉದ್ಧವಾ ॥೧೧೧೩॥ ಐಸೇನಿ ಭಜನೇ ಜೋ ಭಜತ । ತೋ ಮಜಮಾಜೀ ಮೀ ತ್ಯಾ ಆಂತ । ಭಕ್ತಾಮಾಜೀ ಜೋ ಉತ್ತಮ ಭಕ್ತ । ಸಾಧು ನಿಶ್ಚಿತ ಯಾ ನಾಂವ ॥೧೧೧೪॥ ತೋ ಪುರುಷಾಮಾಜೀ ಪುರುಷೋತ್ತಮ । ಸಾಧೂಮಾಜೀ ಅತಿ ಉತ್ತಮ । ತೋ ಮಾಝೇ ವಿಶ್ರಾಮಧಾಮ । ಅಕೃತ್ರಿಮ ಉದ್ಧವಾ ॥೧೧೧೫॥ ತಯಾಲಾಗೀ ಮೀ ಆಪಣ । ಕರೀ ಸರ್ವಾಂಗಾಚೇ ಆಂಥರೂಣ । ಜೀವೇ ಸರ್ವಸ್ವೇ ನಿಂಬಲೋಣ । ಪ್ರತಿಪದೀ ಜಾಣ ಮೀ ಕರೀ ॥೧೧೧೬॥ ತೋ ಮಜ ಆವಡೇ ಮ್ಹಣಶೀ ಕೈಸಾ । ಜೀವಾಸೀ ಪಢಿಯೇ ಪ್ರಾಣ ಜೈಸಾ । ಸಾಂಗತಾ ಉತ್ತಮಭಕ್ತದಶಾ । ಪ್ರೇಮಪಿಸಾ ದೇವೋ ಜಾಲಾ ॥೧೧೧೭॥

ಹೇ ಉದ್ಧವನೇ, ಯಾವುದಕ್ಕೆ ಅವಿದ್ಯೆಯು ಭಯಪಡುವುದೋ, ಅದುವೇ ನನ್ನ ನಿಜವಾದ ಪ್ರೇಮದ ಭಕ್ತಿಯಾಗಿರುವುದು. ಎಲ್ಲ ಧರ್ಮಗಳು ಆ ಭಕ್ತಿಯ ಎದುರಿನಲ್ಲಿ ಥರಥರನೇ ನಡುಗುತ್ತಿರುವುವು ॥೧೧೦೪॥ ಆ ಯಾವ ಭಕ್ತಿಯ ಧ್ವಜವು ಹಾರುವುದನ್ನು ಕಂಡು ಅವಿದ್ಯೆಯು ಅಂಜಿಕೊಂಡು ತಕ್ಷಣ ತನ್ನ ಪ್ರಾಣವನ್ನು ಬಿಡುವುದು. ಸರ್ವ ಧರ್ಮಗಳ ಪ್ರೇಮವೂ ಸಹ ಘಾಯವಿಲ್ಲದೇ ಮರಣಹೊಂದುವುದು ॥೧೧೦೫॥ ಈ ಯಾವ ತನ್ನ ಭಕ್ತಿಯ ಪ್ರಕಾರವನ್ನು ದೇವನು ಅತ್ಯಂತ ಪ್ರೇಮದಿಂದ ಹೇಳಿದನು. ಈಗ ಭಕ್ತಿಯ ನಿರ್ವಹಣೆ ಮಾಡುವ ಭಕ್ತರ ಭಜನ ಭಾವವನ್ನು ಕೇಳು ॥೧೧೦೬॥ ನನ್ನ ಅನುಸಂಧಾನವಿಲ್ಲದ ಸ್ನಾನ, ಸಂಧ್ಯಾ, ಜಪ, ಹೋಮ, ದಾನ ಇತ್ಯಾದಿ ಎಲ್ಲವೂ ಅಧರ್ಮವೇ ಆಗಿರುವುವು. ಅವು ನನ್ನ ಭಜನೆಯಾಗಿರುವುದಿಲ್ಲ ॥೧೧೦೭॥ ಮನದಲ್ಲಿ ಪರಪುರುಷನ ಪ್ರೀತಿಯನ್ನು ಇಟ್ಟುಕೊಂಡು, ತನ್ನ ಪತಿಯಲ್ಲಿ ಸುಳ್ಳೇ ಪ್ರೀತಿಸುವ, ಹೊಗಳುವುದನ್ನು ಮಾಡುವ ಸ್ತ್ರೀಯು ಪತಿವ್ರತೆಯಾಗಲಾರಳು. ಅದರಂತೆ ಆ ಭಕ್ತಿಗಳು ವ್ಯಭಿಚಾರಿಯಾಗಿರುವುವು ॥೧೧೦೮॥ ಅನೇಕ ತರಹದ ವಿಷಯಗಳಲ್ಲಿ ಲಕ್ಷವನ್ನಿಟ್ಟು ಯಾವನು ಧ್ಯಾನ ಮತ್ತು ಅನುಷ್ಠಾನವನ್ನು ಮಾಡುವನೋ, ಅವನ ಈ ವೃತ್ತಿಯು ಜಾರಿಣೀ ಸ್ತ್ರೀಯಳಂತಿರುವುದು. ಯಾವ ಈ ಭಕ್ತಿಯು ಪವಿತ್ರವಾಗಿರುವುದಿಲ್ಲ ॥೧೧೦೯॥ ಕಾಯಾ, ವಾಚಾ, ಮನದಿಂದ ಆತನು ನನ್ನ ಭಕ್ತಿಯನ್ನು ಮಾಡುವನು. ಭಜನೆಯನ್ನು ಮಾಡಲು ಹಗಲು, ರಾತ್ರಿ ನೋಡಲಾರನು. ಇದರ ನಾಮವೇ ಭಕ್ತಿಯ ನಿಜಸ್ಥಿತಿಯಾಗಿರುವುದು ॥೧೧೧೦॥ ಯಾವ ಜಪವಿಲ್ಲದೇ ಆತನ ಮುಖದಲ್ಲಿ ನನ್ನ ನಾಮವು ನಿರಂತರವಾಗಿರುವುದು. ಧಾರಣೆವಿಲ್ಲದೇ ನನ್ನ ಧ್ಯಾನವು ಇರುವುದು. ಮತ್ತು ಯಾವ ಸಂಕಲ್ಪವಿಲ್ಲದೇ ಎಲ್ಲ ಕರ್ಮಗಳು ನನಗೆ ಅರ್ಪಣೆಯಾಗುವುವು ॥೧೧೧೧॥ ಪ್ರಾಣಾಯಾಮವಿಲ್ಲದೇ ನಿರೋಧವಾಗುತ್ತಿರುವುದು. ಮರ್ಯಾದೇ ಹೊರತಾಗಿ ಸ್ವರೂಪ ಜ್ಞಾನವು ಪ್ರಾಪ್ತವಾಗುವುದು. ಯಾವ ವಿಷಯಗಳಿಲ್ಲದೇ ಆತನಿಗೆ ಸತತವಾಗಿ ಸ್ವಾನಂದವು ಪ್ರಾಪ್ತವಾಗುವುದು. ಹೀಗೆ ಶುದ್ಧ ಅಂತಃಕರಣದ ಮಾನವನಿಗೆ ನನ್ನ ಭಕ್ತನೆಂದು ಹೇಳುವರು ॥೧೧೧೨॥ ಭಕ್ತನೆಂದು ಹೇಳಿಸಿಕೊಳ್ಳಲು ಬಹಳ ಆನಂದವಾಗುವುದು. ಆದರೆ ಭಜನೆಯ ಮಾರ್ಗದಲ್ಲಿ ಹೃದಯವು ಗಟ್ಟಿಯಾಗಿ ಹಿಂಡಲ್ಪಡುವುದು. ಯಾವ ಸಮಯಕ್ಕೆ ಅಂತಃಕರಣದಲ್ಲಿ ಅಕೃತ್ರಿಮ ಭಕ್ತಿಯು ಹುಟ್ಟುವುದೋ, ಹೇ ಉದ್ಧವನೇ, ಆಗ ಮಾತ್ರ ನನ್ನ ಭೇಟಿಯಾಗುವುದು ॥೧೧೧೩॥ ಈ ಪ್ರಕಾರವಾಗಿ ಯಾರು ನನ್ನ ಭಜನೆಯನ್ನು ಮಾಡುವರೋ, ಆತನು ನನ್ನಲ್ಲಿ ಮತ್ತು ನಾನು ಆತನಲ್ಲಿ ಇರುವೆನು. ಹೀಗೆ ಆತನು ಉತ್ತಮರಲ್ಲಿ ಉತ್ತಮ ಭಕ್ತನಾಗಿರುವನು. ಸಾಧು ಎಂಬ ನಾಮವು ಆತನಿಗೆ ಶೋಭಿಸುವುದು ॥೧೧೧೪॥ ಪುರುಷರಲ್ಲಿ ಉತ್ತಮ ಪುರುಷನು ಆತನೇ ಆಗಿರುವನು. ಸಾಧುಗಳವರಲ್ಲಿ ಉತ್ತಮ ಸಾಧು ಆತನೇ ಆಗಿರುವನು. ಹೇ ಉದ್ಧವನೇ, ಆತನೇ ನನ್ನ ಅಕೃತ್ರಿಮ ವಿಶ್ರಾಂತಿ ಸ್ಥಾನನಾಗಿರುವನು ॥೧೧೧೫॥ ಆತನಿಗಾಗಿ ನಾನು ಸ್ವತಃ ಸರ್ವಾಂಗದಿಂದ ಹಾಸಿಗೆಯನ್ನು ಮಾಡುವೆನು. ಹೆಜ್ಜೆ ಹೆಜ್ಜೆಗೂ ನನ್ನ ಜೀವವನ್ನು ಆತನ ಮೇಲಿನಿಂದ ನಿವಾಳಿಸಿ ಒಗೆಯುವೆನು. ಇದನ್ನು ನೀನು ಲಕ್ಷದಲ್ಲಿಡು ॥೧೧೧೬॥ ಆತನು ನನಗೆ ಎಷ್ಟು ಪ್ರಿಯನೆಂದು ನೀನು ಕೇಳಬಹುದು. ಜೀವಕ್ಕೆ ಪ್ರಾಣವು ಎಷ್ಟು ಪ್ರಿಯವೋ ಅಷ್ಟೇ ಪ್ರಿಯ ಆತನಾಗಿರುವನು. ಹೀಗೆ ಉತ್ತಮ ಭಕ್ತನ ಲಕ್ಷಣವನ್ನು ಹೇಳುತ್ತಿರಲು ದೇವನೂ ಸಹ ಪ್ರೇಮದಿಂದ ಹುಚ್ಚನಾದನು ॥೧೧೧೭॥

ಮಗ ನ ಧರತು ನ ಸಾಂವರತು । ಉದ್ಧವಾಸೀ ಕಡಿಯೇ ಘೇತು । ಭುಲಲಾ ಸ್ವಾನಂದೇ ನಾಚತು । ವಿಸ್ಮಯೇ ಸ್ಫುಂದತು ಉದ್ಧವೂ ॥೧೧೧೮॥ ಮೀ ಏಕು ದೇವೋ ಹಾ ಏಕು ಭಕ್ತು । ಹೇಹೀ ವಿಸರಲಾ ಶ್ರೀಕೃಷ್ಣನಾಥು । ಹಾ ದೇವೋ ಮೀ ಏಕು ಭಕ್ತು । ತೇ ಉದ್ಧವಾ ಆಂತು ನುರೇಚೀ ॥೧೧೧೯॥ ಐಶಾ ಭಕ್ತಿಸಾಮ್ರಾಜ್ಯಪಟೀ । ದೋಘಾ ಪಡಲೀ ಐಕ್ಯಗಾಂಠೀ । ತಂವ ದೇವೋಚಿ ಕಳವಳಲಾ ಪೋಟೀ। ನಿಜಭಕ್ತಗೋಠೀ ಸಾಂಗಾವಯಾ ॥೧೧೨೦॥ ಐಶೀ ಉತ್ತಮ ಭಕ್ತಾಂಚೀ ಕಥಾ । ಅತಿಶಯೇ ಆವಡೇ ಕೃಷ್ಣನಾಥಾ । ರುಚಲೇಪಣೇ ತತ್ತ್ವತಾ । ಮಾಗುತಾ ಮಾಗುತಾ ಸಾಂಗತೂ ॥೧೧೨೧॥ ಶ್ಲೋಕೀ ಪ್ರಮೇಯೇ ದಿಸತಾ ಅನೇಗೇ । ತೇ ಶ್ರೀಕೃಷ್ಣೇ ಸಾಂಡೂನಿ ಮಾಗೇ। ಹಾ ಗ್ರಂಥಾರ್ಥು ಶ್ರೀರಂಗೇ । ಸಾಕ್ಷೇಪೇ ಸ್ವಾಂಗೇ ಲಿಹವಿಲಾ ॥೧೧೨೨॥ ಹೇ ಮಾಝೀ ಯುಕ್ತೀ ಚೀ ಕಥಾ। ನವ್ಹೇ ನವ್ಹೇ ಜೀ ಸರ್ವಥಾ । ಸತ್ಯ ಮಾನಾವೇ ಶ್ರೋತಾ । ಯೇ ಅರ್ಥೀಚಾ ವಕ್ತಾ ಶ್ರೀಕೃಷ್ಣ ॥೧೧೨೩॥ ಶ್ರೋತಾ ವ್ಹಾವೇ ಸಾವಧಾನ । ಮಾಗೀಲ ಕಥಾ ಅನುಸಂಧಾನ । ದೋಘಾ ಪಡಿಲೇ ಹೋತೇ ಆಲಿಂಗನ । ವಿಸ್ಮಯೇ ಪೂರ್ಣ ಉದ್ಧವೂ ॥೧೧೨೪॥ ಚಢತ ಪ್ರೇಮಾಚೇ ಭರತೇ । ತೇ ಆವರೋನಿ ಕೃಷ್ಣನಾಥೇ । ಥಾಪಟೂನಿ ಉದ್ಧವಾತೇ। ಸಾವಧ ತ್ಯಾತೇ ಕರೀ ಹರೀ ॥೧೧೨೫॥ ಉದ್ಧವಾತೇ ಮ್ಹಣೇ ತತ್ತ್ವತಾ । ತುಜ ಆವಡಲೀ ಭಕ್ತಿಕಥಾ । ತೇಚಿ ಮೀ ಸಾಂಗೇನ ಆತಾ । ಸಾವಧಾನತಾ ಅವಧಾರೀ ॥೧೧೨೬॥ ಏಕ ಜಾಣೋನಿ ಭಜತೀ ಮಾತೇ । ಏಕ ತೇ ಕೇವಳ ಭಾವಾರ್ಥೇ । ಮೀ ದೋಹೀಚ್ಯಾ ಭುಲಲೋ ಭಾವಾತೇ । ದೋಘೇ ಮಾತೇ ಪಢಿಯಂತೇ ॥೧೧೨೭॥

ಜ್ಞಾತ್ವಾಽಜ್ಞಾತ್ವಾಽಥ ಯೇ ವೈ ಮಾಂ ಯಾವಾನ್ ಯಶ್ಚಾಸ್ಮಿ ಯಾದೃಶಃ ।
ಭಜಂತ್ಯ ನನ್ಯಭಾವೇನ ತೇ ಮೇ ಭಕ್ತತಮಾ ಮತಾಃ ॥೩೩॥

ಅರ್ಥ :- ನಾನು ಯಾರು? ಎಷ್ಟು ದೊಡ್ಡವನು? ಹೇಗೆ ಇರುವೆ? ಈ ವಿಷಯಗಳನ್ನು ಅರಿತಿರಲಿ, ಇಲ್ಲವೇ ಅರಿತಿಲ್ಲದಿರಲಿ, ಯಾವ ಭಕ್ತನು ಅನನ್ಯ ಭಾವದಿಂದ ನನ್ನ ಭಜನೆಯನ್ನು ಮಾಡುವನೋ, ನನ್ನ ದೃಷ್ಟಿಯಲ್ಲಿ ಆತನೇ ಪರಮ ಭಕ್ತನಾಗಿರುವನು.

ಮೀ ಸ್ವಸ್ವರೂಪೀ ಸಚ್ಚಿದಾನಂದ । ಜಗದಾದೀ ಆನಂದಕಂದ । ನಿತ್ಯ ಸಿದ್ಧ ಪರಮ ಶುದ್ಧ । ಮಾಝೀ ಸ್ವರೂಪ ವಿಶದ ಜಾಣತೀ ॥೧೧೨೮॥ ದೇಶ ಕಾಳ ವರ್ತಮಾನ । ಸರ್ವೀ ಸರ್ವದಾ ಅನವಚ್ಛಿನ್ನ । ಸರ್ವಾತ್ಮಾ ಸಚ್ಚಿದಾನಂದಘನ । ಭೇದಶೂನ್ಯ ಮೀ ಏಕ ॥೧೧೨೯॥ ಸತ್ಯ ಜ್ಞಾನ ಅನಂತ । ಪರಬ್ರಹ್ಮ ಮೀ ನಿಶ್ಚಿತ । ಐಸೇ ಜಾಣೂನಿ ಮಜ ಭಜತ । ಉತ್ತಮ ಭಾಗವತ ತೇ ಜಾಣ ॥೧೧೩೦॥

ದೇವನಿಗೆ ಪ್ರೇಮವು ಉಕ್ಕೇರಿ, ಒಡಿಯಲು ಸಾಧ್ಯವಾಗದೇ ಅಂತಃಕರಣವು ತುಂಬಿಹೋಯಿತು. ಉದ್ಧವನಿಗೆ ತೊಡೆಯ ಮೇಲೆ ಎತ್ತಿಕೊಂಡನು. ಆಗ ಆತನು ಆನಂದದಿಂದ ಕುಣಿಯಹತ್ತಿದನು. ಆಗ ಉದ್ಧವನಿಗೆ ಆಶ್ಚರ್ಯವಾಗಿ ಕಂಠವು ಪೂರ್ಣವಾಗಿ ಬಿಗಿದುಕೊಂಡಿತು ॥೧೧೧೮॥ ನಾನು ದೇವನು ಈತನು ಭಕ್ತನು ಎಂಬ ಈ ಭಾವವು ಶ್ರೀಕೃಷ್ಣನಿಗೆ ಮರೆತು ಹೋಯಿತು. ಈತನು ದೇವನು ನಾನು ಭಕ್ತನು ಎಂಬ ಈ ಭಾವವು ಉದ್ಧವನ ಮನದಲ್ಲಿಯೂ ಇಲ್ಲದಾಯಿತು ॥೧೧೧೯॥ ಇಂತಹ ಭಕ್ತೀ ಸಾಮ್ರಾಜ್ಯದ ಪಟದಲ್ಲಿ ಇಬ್ಬರ ಐಕ್ಯದ ಭೇಟಿಯಾಯಿತು. ಆಗ ತನ್ನ ಭಕ್ತನ ವಿಷಯಕ್ಕೆ ಹೇಳುವ ತವಕವು ದೇವನ ಮನದಲ್ಲಿ ನಿರ್ಮಾಣವಾಯಿತು ॥೧೧೨೦॥ ಇಂತಹ ಉತ್ತಮ ಭಕ್ತನ ಕಥೆಯು ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯವಾಗುತ್ತಿತ್ತು. ಆ ಯಾವ ತೀರದ ಪ್ರೇಮದಿಂದ ಪುನಃ ಪುನಃ ಅದನ್ನು ಹೇಳುತ್ತಿದ್ದನು ॥೧೧೨೧॥ ಶ್ಲೋಕದಲ್ಲಿ ಅನೇಕ ವಿಚಾರಗಳು ತೋರುತ್ತಿದ್ದರೂ ಅವೆಲ್ಲವನ್ನೂ ಹಿಂದಕ್ಕೆ ತಳ್ಳಿ ಶ್ರೀಕೃಷ್ಣನು ಅತ್ಯಂತ ಪ್ರೇಮದಿಂದ ತಾನಾಗಿಯೇ ಈ ಗ್ರಂಥಾರ್ಥವನ್ನು ನನ್ನಿಂದ ಬರೆಯಿಸಿದನು ॥೧೧೨೨॥ ಮಹಾರಾಜರೇ, ಇದು ಕೇವಲ ನನ್ನ ಹೃದಯದಿಂದ ಪ್ರಗಟವಾದ ಕಥೆಯಲ್ಲ. ಈ ಅರ್ಥವನ್ನು ಹೇಳಿಸುವವನು ಶ್ರೀಕೃಷ್ಣನೇ ಆಗಿರುವನು. ಇದನ್ನು ಶ್ರೋತೃಗಳು ಸತ್ಯವೆಂದು ತಿಳಿಯಬೇಕು ॥೧೧೨೩॥ ಈಗ ಶ್ರೋತೃಗಳವರು ಪುನಃ ಎಚ್ಚರವಹಿಸಬೇಕು. ಹಿಂದಿನ ಕಥಾನುಸಂಧಾನವು ಹೀಗಿರುವುದು. ಕೃಷ್ಣ ಉದ್ಧವರಿಬ್ಬರೂ ಪರಸ್ಪರರನ್ನು ಆಲಿಂಗಿಸಿದರು. ಅತ್ಯಂತ ಆಶ್ಚರ್ಯದಿಂದ ಉದ್ಧವನು ತನ್ನ ಎಚ್ಚರವನ್ನು ಮರೆತುಬಿಟ್ಟನು ॥೧೧೨೪॥ ಶ್ರೀಕೃಷ್ಣನಿಗೆ ಬಂದಿರುವ ಪ್ರೇಮದ ಉಕ್ಕೇರುವಿಕೆಯನ್ನು ಆತನು ಆವರಿಸಿಕೊಂಡು ಉದ್ಧವನಿಗೆ ಕೈಯಿಂದ ಚಪ್ಪರಿಸಿ ಎಚ್ಚರಿಸಿದನು ॥೧೨೧೨೫॥ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು. ನಿಜವಾಗಿಯೂ ನಿನಗೆ ಭಕ್ತಿಯ ಕಥೆಯು ತುಂಬಾ ಪ್ರಿಯವಾಯಿತು. ಇದನ್ನೇ ನಿನಗೆ ಈ ಮುಂದೆ ಹೇಳುವೆನು. ಏಕಾಗ್ರಚಿತ್ತದಿಂದ ಅದರ ಶ್ರವಣನ್ನು ಮಾಡು ॥೧೧೨೬॥ ಕೆಲವರು ನನಗೆ ಸ್ವರೂಪತೆಯನ್ನು ಅರಿತು ನನ್ನ ಭಜನೆಯನ್ನು ಮಾಡುವರು. ಎಷ್ಟೋ ಜನರು ಭಾವಾರ್ಥದಿಂದ ನನ್ನ ಭಜನೆಯನ್ನು ಮಾಡುವರು. ನಾನು ಆ ಎರಡೂ ಪ್ರಕಾರಗಳ ಭಕ್ತಿಗೆ ಭುಲಾಯಿಸುವೆನು. ಈ ಇಬ್ಬರೂ ನನ್ನ ಪ್ರಿಯ ಭಕ್ತರಾಗಿರುವರು ॥೧೧೨೭॥

ನಾನು ಆತ್ಮಸ್ವರೂಪ ಸಚ್ಚಿದಾನಂದ, ಜಗತ್ತಿನ ಆದಿ, ಆನಂದಕಂದ, ನಿತ್ಯಸಿದ್ಧ, ಪರಮ ಪವಿತ್ರನಾಗಿರುವೆನು. ನನ್ನ ಭಕ್ತರು ಈ ಸ್ವರೂಪದಲ್ಲಿ ನನ್ನನ್ನು ಸ್ಪಷ್ಟವಾಗಿ ತಿಳಿಯುವರು ॥೧೧೨೮॥ ದೇಶಕಾಲ ಮತ್ತು ವರ್ತಮಾನ ಈ ಎಲ್ಲದರಲ್ಲಿಯೂ ಪರಿಪೂರ್ಣವಾಗಿ ತುಂಬಿರುವ ಪರಮಾತ್ಮಾ ಸಚ್ಚಿದಾನಂದ ಘನ, ಭೇದಶೂನ್ಯ ಹೀಗೆ ನಾನೊಬ್ಬನೇ ಇರುವೆನು ॥೧೧೨೯॥ ನನಗೆ ಸತ್ಯ, ಜ್ಞಾನ, ಆನಂದಪರಬ್ರಹ್ಮ ಹೀಗೆ ನಿಶ್ಚಯಪೂರ್ವಕವಾಗಿ ತಿಳಿದು ಯಾರು ನನ್ನನ್ನು ಭಜಿಸುವರೋ, ಆತನೇ ಉತ್ತಮ ಭಾಗವತನೆಂದು ನೀನು ತಿಳಿದುಕೋ ॥೧೧೩೦॥

ಶುದ್ಧ ಝಾಲಿಯಾ ಸ್ವರೂಪಪ್ರಾಪ್ತೀ । ಮ್ಹಣಶೀ ಭಜನ ಕೈಶಾ ರೀತೀ । ದೇವಭಕ್ತ ತೇಚಿ ತೇ ಹೋತೀ । ಮೀ ಹೋಊನ ಭಜತೀ ಮಜಮಾಜೀ ॥೧೧೩೧॥ ವಾಮ ಸವ್ಯ ದೋನೀ ಭಾಗ । ದೋ ನಾವೀ ಏಕಚಿ ಅಂಗ । ತೇವೀ ದೇವಭಕ್ತ ವಿಭಾಗ । ಮದ್ರೂಪೀ ಸಾಂಗ ಭಾಸತೀ ॥೧೧೩೨॥ ಪಾಹೇ ಪಾ ಲೋಖಂಡಾಚಾ ಆರಿಸಾ । ಲೋಖಂಡೇಚಿ ಘಡಿಜೇ ಜೈಸಾ । ಲೋಖಂಡೇಚಿ ಉಜಳೇ ಕೈಸಾ । ಸ್ವಪ್ರಕಾಶಾ ನಿಜತೇಜೇ ॥೧೧೩೩॥ ದರ್ಪಣ ಉಜಳಲಿಯಾ ಪಾಹೀ । ಶಶೀ ಸೂರ್ಯ ಗಗನ ಮಹೀ । ಬಿಂಬಲೀ ಧರೀ ಆಪುಲ್ಯಾ ಠಾಯೀ । ಅಪ್ರಯಾಸೇ ಪಾಹೀ ಸ್ವಲೀಲಾ ॥೧೧೩೪॥ ತೈಸೇ ಮೀ ಹೋಊನಿ ಮಾಝೇ ಭಕ್ತ । ಅನನ್ಯಭಾವೇ ಮಜಚಿ ಭಜತ । ತೈ ಮಾಝೇ ಐಶ್ವರ್ಯ ಸಮಸ್ತ । ಪ್ರತಿಬಿಂಬತ ತಯಾಮಾಜೀ ॥೧೧೩೫॥ ಹೋ ಕಾ ತರಂಗು ಜೈಸಾ ಸಾಗರೀ । ತ್ಯಾಂಸೀ ಜಳಾಚೇ ತಳೀವರೀ । ತೈಸಾ ಮಾಝಾ ಭಕ್ತ ಮಜಮಾಝಾರೀ । ಸಬಾಹ್ಯಾಂಭ್ಯಂತರೀ ಮದ್ರೂಪ ॥೧೧೩೬॥ ಜೈಸಾ ಸುವರ್ಣಾಚಾ ನರಹರೀ । ಸುವರ್ಣಹಿರಣ್ಯಕಶಿಪೂತೇ ವಿದಾರೀ । ಸುವರ್ಣಪ್ರಹ್ಲಾದ ಪೋಟಿಸೀ ಧರೀ । ತೈಶೀ ಪರೀ ಮದ್ಭಜನಾ ॥೧೧೩೭॥ ತೇಥೇ ಸಗುಣ ಆಣಿ ನಿರ್ಗುಣ । ಉಭಯ ರೂಪೇ ಮೀಚಿ ಜಾಣ । ಜೈಸೇ ಸುವರ್ಣ ಆಣಿ ಕಂಕಣ । ತೈಸೇ ಅಭಿನ್ನ ಜಾಣ ಮದ್ರೂಪ ॥೧೧೩೮॥ ತೇಥ ಜೇ ಜೇ ದೃಶ್ಯ ದೇಖೇ ದೃಷ್ಟೀ । ತೇಥ ಮದ್ರೂಪೇ ಪಡೇ ಮಿಠೀ । ದೃಶ್ಯ ದ್ರಷ್ಟಾ ಲೋಪೂನಿ ತ್ರಿಪುಟೀ । ಉಠಾಉಠೀ ಮಜ ಮಿಳೇ ॥೧೧೩೯॥ ಐಸೇ ಜಾಣೋನಿಯಾ ಮಜ ಭಜತ । ತೇ ಜಾಣ ಪಾ ಉತ್ತಮ ಭಕ್ತ । ಐಸೇ ನೇಣೋನಿಯಾ ಮಜ ಭಜತ । ಭೋಳೇ ಭಕ್ತ ತೇ ಮಾಝೇ ॥೧೧೪೦॥ ನಾಹೀ ಶ್ರುತೀಚೇ ಪಠಣ । ನಾಹೀ ವೇದಾಂತಶಾಸ್ತ್ರಶ್ರವಣ । ನಾಹೀ ವಿಕಲ್ಪಲಕ್ಷಣ । ಅನನ್ಯ ಜಾಣ ಭಾವಾರ್ಥೀ ॥೧೧೪೧॥ ಸಗುಣ ನಿರ್ಗುಣ ನೇಣೇ ಕಾಂಹೀ । ಪರೀ ದೇವೋ ಆಹೇ ಮ್ಹಣೇ ಹೃದಯೀ । ಜಡತ್ವ ಅಸೇ ದೇಹಾಚ್ಯಾ ಠಾಯೀ । ತೇ ದೇವೋ ಪಾಹೀ ವಾಗವೀತ ॥೧೧೪೨॥ ಯಾಲಾಗೀ ದೇಹಾಚೇ ಜೇ ಚಳಣ । ತೇ ಹೃದಯಸ್ಥ ಕರವೀ ನಾರಾಯಣ । ದೃಷ್ಟೀಚೇ ಜೇ ದೇಖಣೇಪಣ । ತ್ಯಾಚೇನಿ ಜಾಣ ಹೋತಸೇ ॥೧೧೪೩॥ ಕಾಢೂನಿ ಆಪುಲಾ ಡೋಳಾ । ದೂರೀ ಠೇವಿಲಾ ವೇಗಳಾ । ತೋ ಹೃದಯಸ್ಥೇವೀಣ ಆಂಧಳಾ । ದೇಖಣೇ ಕಳಾ ದೇವಾಚೀ ॥೧೧೪೪॥

ಹೇ ಉದ್ಧವನೇ, ಒಂದು ಸಾರೆ ಶುದ್ಧ ಸ್ವರೂಪದ ಪ್ರಾಪ್ತಿಯಾಯಿತೆಂದರೆ, ಪುನಃ ಭಜನೆಯನ್ನು ಹೇಗೆ ಮಾಡಬೇಕೆಂದು ನೀನು ಹೀಗೆ ಕೇಳಬಹುದು. ಅದಕ್ಕಾಗಿ ಅದರ ಉತ್ತರವು ಹೀಗಿರುವುದು, ದೇವ ಭಕ್ತ ಇಬ್ಬರೂ ಒಂದೇಯಾಗಿ ಅವರು ನನ್ನನ್ನೇ ನನ್ನಲ್ಲಿ ಭಜಿಸುವವರಾಗಿರುವರು ॥೧೧೩೧॥ ಎಡ ಮತ್ತು ಬಲ ಇವು ಎರಡು ಭಾಗಗಳಾಗಿದ್ದರೂ, ಎರಡರ ಅಂಗವು ಒಂದೇಯಾಗಿರುವುದು. ಅದರಂತೆ ದೇವ ಮತ್ತು ಭಕ್ತ ಈ ಎರಡು ಭಾಗಗಳು ನನ್ನ ಸ್ವರೂಪದಲ್ಲಿಯೇ ತೋರುವುವು ॥೧೧೩೨॥ ಕಬ್ಬಿಣದ ಕನ್ನಡಿಯನ್ನು ಮಾಡಬೇಕಾದರೆ, ಅದನ್ನು ಕಬ್ಬಿಣದಿಂದಲೇ ತಯಾರಿಸಬೇಕಾಗುವುದು. ಮತ್ತು ಕಬ್ಬಿಣವು ತನ್ನ ಪ್ರಕಾಶದಿಂದ ಪ್ರಕಾಶಮಯಿಯಾಗುವ ಬೆಳಕನ್ನು ಅದಕ್ಕೆ ಕಬ್ಬಿಣವೇ ಕೊಡಬೇಕಾಗುವುದು ॥೧೧೩೩॥ ಕನ್ನಡಿಯನ್ನು ಸ್ವಚ್ಛ ಮಾಡಲು ಅದು ಚಂದ್ರ,ಸೂರ್ಯ, ಆಕಾಶ ಮತ್ತು ಪೃಥ್ವಿ ಈ ಎಲ್ಲ ಪ್ರತಿಬಿಂಬಗಳನ್ನು ಸಹಜ ಲೀಲೆಯಿಂದ ಧರಿಸುವುದು ॥೧೧೩೪॥ ಅದರಂತೆ ನನ್ನ ಭಕ್ತನೂ ಸಹ ನಾನೇ ಆಗಿ ಅನನ್ಯ ಭಾವದಿಂದ ನನ್ನ ಭಜನೆಯನ್ನು ಮಾಡುವನು. ಆಗ ನನ್ನ ಸರ್ವ ಐಶ್ವರ್ಯವು ಸಹಜವಾಗಿಯೇ ಆತನಲ್ಲಿ ಪ್ರತಿಬಿಂಬವಾಗುವುದು ॥೧೧೩೫॥ ಸಮುದ್ರದ ತೆರೆಗಳ ಮೇಲೆ,ಕೆಳಗೆ ಕೇವಲ ನೀರೇ ಇರುವುದು. ಅದರಂತೆ ನನ್ನ ಭಕ್ತನು ನನ್ನಲ್ಲಿಯೇ ಇರುವುದರಿಂದ ಆತನು ಒಳಹೊರಗೆ ಮದ್ರೂಪನಾಗಿಯೇ ಇರುವನು ॥೧೧೩೬॥ ಬಂಗಾರದ ನೃಸಿಂಹ ಮೂರ್ತಿಯು ಬಂಗಾರದ ಹಿರಣ್ಯಕಶಪೂವಿನನ್ನು ಕೊಲ್ಲುತ್ತದೆ. ಮತ್ತು ಬಂಗಾರದ ಪ್ರಹ್ಲಾದನನ್ನು ತನ್ನ ಹೊಟ್ಟೆಗೆ ಅಪ್ಪಿಕೊಳ್ಳುತ್ತದೆ. ಅದರಂತೆಯೇ ನನ್ನ ಭಜನೆಯ ಸ್ಥಿತಿಯಾಗಿರುವುದು ॥೧೧೩೭॥ ಅಲ್ಲಿ ಸಗುಣ ಮತ್ತು ನಿರ್ಗುಣ ಎರಡೂ ರೂಪಗಳಲ್ಲಿ ನಾನೇ ಇರುವೆನು. ಬಂಗಾರ ಮತ್ತು ಬಂಗಾರದ ಬಳೆ ಇವು ಎರಡೂ ಭಿನ್ನವಾಗಿರುವುದಿಲ್ಲ. ಅದರಂತೆ ಭಕ್ತನು ನನ್ನ ಸ್ವರೂಪದಿಂದ ಭಿನ್ನನಾಗಿರುವುದಿಲ್ಲ. ಆತನು ಮತ್ತು ನಾನು ಅಭಿನ್ನವಾಗಿರುವೆವು ॥೧೧೩೮॥ ಆತನು ತನ್ನ ಕಣ್ಣುಗಳಿಂದ ಯಾವ ಯಾವುದನ್ನು ನೋಡುವನೋ, ಅಲ್ಲಿ ಆತನಿಗೆ ನನ್ನ ಸ್ವರೂಪವೇ ಕಾಣುವುದು. ದೃಶ್ಯ, ದ್ರಷ್ಟಾ ಮತ್ತು ದರ್ಶನ ಈ ತ್ರಿಪುಟಿಯು ಇಲ್ಲದಾಗಿ ಆತನು ತತ್ಕಾಲದಲ್ಲಿ ನನ್ನ ಸ್ವರೂಪದಲ್ಲಿ ಏಕರೂಪನಾಗುವನು ॥೧೧೩೯॥ ಹೀಗೆ ಅರಿತುಕೊಂಡು ಆತನು ನನ್ನ ಭಜನೆಯನ್ನು ಮಾಡುವನು. ಅಂತಹ ಭಕ್ತನು ಉತ್ತಮನಾಗಿರುವನು. ಇದನ್ನು ಲಕ್ಷದಲ್ಲಿಡು. ಈ ಪ್ರಕಾರವಾಗಿ ನನ್ನನ್ನು ಅರಿತುಕೊಳ್ಳದೇ ಯಾರು ನನ್ನ ಭಜನೆಯನ್ನು ಮಾಡುವರೋ, ಅವರು ನನ್ನ ಭೋಳೇ ಭಕ್ತರಾಗಿರುವರು ॥೧೧೪೦॥ ಈ ಯಾವ ಭೋಳೇ ಭಕ್ತರು ವೇದದ ಪಠಣೆಯನ್ನು ಎಂದೂ ಮಾಡುವುದಿಲ್ಲ. ಇವರು ವೇದದ ಶ್ರವಣವನ್ನೂ ಮಾಡಿರುವುದಿಲ್ಲ. ಇವರು ತಮ್ಮ ಮನದಲ್ಲಿ ಯಾವ ತರಹದ ವಿಕಲ್ಪಗಳನ್ನು ತರುವುದಿಲ್ಲ. ಇವರು ಪರಿಪೂರ್ಣವಾಗಿ ಭಾವಿಕರಾಗಿರುವರು ॥೧೧೪೧॥ ಇವರು ಸಗುಣವಾಗಲಿ, ನಿರ್ಗುಣವಾಗಲಿ ಏನೊಂದೂ ಅರಿಯರು. ದೇವನು ಹೃದಯಲ್ಲಿರುವನು ಎಂದು ಅವರು ಹೀಗೆ ಹೇಳುವರು. ದೇಹವು ಜಡವಾಗಿರುವುದು. ಇದನ್ನು ದೇವರೇ ನಡೆಸುವನು ॥೧೧೪೨॥ ದೇಹದ ಯಾವತ್ತೂ ಕರ್ಮಗಳನ್ನು ನಾರಾಯಣನೇ ಮಾಡಿಸುತ್ತಿರುವನು. ಕಣ್ಣುಗಳಿಂದ ನೋಡುವಿಕೆಯು ಅದು ಆತನ ಸತ್ತೆಯಿಂದಲೇ ಆಗುವುದು ॥೧೧೪೩॥ತನ್ನ ಕಣ್ಣುಗಳನ್ನು ಕಿತ್ತು ಅವನ್ನು ದೂರವಿಡಲು ಹೃದಯದಲ್ಲಿನ ನಾರಾಯಣನು ಅಲ್ಲಿರಲಾರದ್ದಕ್ಕೆ ಆ ಮನುಷ್ಯನು ಕುರುಡಾಗುವನು. ಈ ಯಾವ ಕಾಣುವಿಕೆಯ ಶಕ್ತಿಯೂ ಕೂಡ ಪರಮಾತ್ಮನದೇ ಆಗಿರುವುದು ॥೧೧೪೪॥

ರಸನಾ ಕೇವಳ ಚಾಮಡೀ । ತೇ ಕಾಯ ಜಾಣೇ ರಸಗೋಡೀ । ಕಾಪೂನಿ ಟಾಕಿಲ್ಯಾ ಬಾಪುಡೀ । ಗೋಡೀ ಅಗೋಡೀ ತೇ ನೇಣೇ ॥೧೧೪೫॥ ರಸನಾದ್ವಾರೇ ರಸಸ್ವಾದೂ । ಘೇತಾ ಹೃದಯಸ್ಥ ಪರಮಾನಂದೂ । ಬುದ್ಧೀಸೀ ಕರಿತಾ ಉದ್‌ಬೋಧೂ । ಸತ್ಯ ಗೋವಿಂದೂ ಹೃದಯೀಚಾ ॥೧೧೪೬॥ ಮನಾಚೇ ಗಮನಾಗಮನ । ದಿಸೇ ಹೃದಯಸ್ಥಾ ಆಧೀನ । ಯಾಲಾಗೀ ದೂರೀ ಜಾವೋನಿ ಪರತೇ ಮನ । ಹೃದಯಾಸೀ ಜಾಣ ಯೇತಸೇ ॥೧೧೪೭॥ ಇಂದ್ರಿಯೇ ಪ್ರೇರಿತಾ ವಾರಿತಾ । ಹೇ ಸತ್ತಾ ಆಧೀನ ಹೃದಯಸ್ಥಾ । ಯಾಲಾಗೀ ನಾಂವೇ ಹೃಷೀಕೇಶತಾ । ತ್ಯಾಸಚಿ ತತ್ತ್ವತಾ ಮ್ಹಣತಾತೀ ॥೧೧೪೮॥ ಏವಂ ವಿಚಾರಾಚಾ ನಿರ್ವಾಹೋ । ಕರಿತಾ ನಿಜಹೃದಯೀ ಅಸೇ ದೇವೋ । ತೋ ಪಹಾವಯಾ ಬಾಹೇರೀ ಧಾಂವೋ । ತೈ ಮೂರ್ಖ ಪಹಾ ಹೋ ಮೀ ಝಾಲೋ ॥೧೧೪೯॥ ತೀರ್ಥೀ ಕ್ಷೇತ್ರೀ ಭೇಟೇಲ ದೇವೋ । ಹಾ ಆಪುಲೇ ಹೃದಯೀಚಾ ಭಾವೋ । ನಿಜಭಾವೇವೀಣ ಪಹಾ ಹೋ । ತೀರ್ಥೀಹೀ ದೇವೋ ಅಸೇನಾ ॥೧೧೫೦॥ ಏವಂ ದೇವೋ ತೋ ಮಜಮಾಜೀ ಆಹೇ । ತ್ಯಾಚೇನಿ ಟವಟವತೀ ಇಂದ್ರಿಯೇ । ಕ್ರಿಯಾಕರ್ಮ ಜೇ ಜೇ ಹೋಯೇ । ತೇ ತ್ಯಾಚೇನಿ ಪಾಹೇ ತತ್ತ್ವತಾ ॥೧೧೫೧॥ ದೇಹ ತಂವ ಬಾಪುಡೇ । ಕೇವಳ ಅಚೇತನ ಮಡೇ । ತ್ಯಾಚೇನಿ ಕರ್ಮ ನುಪಜೇ ಪುಡೇ । ತೇ ತಂವ ಕುಡೇ ಸರ್ವಥಾ ॥೧೧೫೨॥ ಇಂದ್ರಿಯಾಂಚೇನಿ ಚೇತವಿತಾ । ಕರ್ಮ ಕ್ರಿಯಾ ಕರ್ತವ್ಯತಾ । ದೇಹಾಚೇನಿ ನೋಹೇ ತತ್ತ್ವತಾ । ಮುಖ್ಯತ್ವೇ ಕರ್ತಾ ಹೃದಯಸ್ಥ ॥೧೧೫೩॥ ಯಾಪರೀ ಜೇ ಕಾಂಹೀ ಕರ್ತವ್ಯತಾ । ತೇ ಭೋಳೇಪಣೇ ನೇಘೇ ಮಾಥಾ । ಸರ್ವ ಕರ್ಮಾಚಾ ಆತ್ಮಾ ಕರ್ತಾ । ವಿಶ್ವಾಸೇ ಸರ್ವಥಾ ದೃಢ ಮಾನೀ ॥೧೧೫೪॥ ಮಗ ಅನ್ನಪಾನಾದಿ ಸೇವಿತಾ । ಮಾನೀ ಆತ್ಮಾರಾಮು ಭೋಕ್ತಾ । ಸರ್ವ ಕರ್ಮಕರ್ತವ್ಯತಾ । ಅಹಂ ಕರ್ತಾ ಹೇ ಮ್ಹಣೋ ನೇಣೇ ॥೧೧೫೫॥ ಐಸೇ ಭೋಳಿವೇಚೇನಿ ಸಮಜೇ । ಮಾಝೇ ಭಜನ ನಿಪಜೇ ವೋಜೇ । ತೇ ಮ್ಯಾ ಆವಡೀ ಸೇವಿಜೇ । ಜಾಣ ತೇ ಮಾಝೇ ಖಾಜುಕೇ ॥೧೧೫೬॥ ಸರ್ವಭಾವೇ ಸರ್ವಥಾ । ಬಾಳಕಾಂಸೀ ಜೇವೀ ಮಾತಾ । ತೇವೀ ಮಾಝಿಯಾ ಭೋಳ್ಯಾ ಭಕ್ತಾ । ಮೀ ಸರ್ವಥಾ ಸರ್ವಸ್ವೇ ॥೧೧೫೭॥ ಧಾಂವೋನಿ ಮಿಠೀ ಘಾಲಾ ವಯಾಸೀ । ಹಿತಗುಜ ಆಲೋಚಾಸೀ । ಖಾಣೇ ಜೇವಣೇ ವಿಶ್ರಾಂತೀಸೀ । ಜೇವೀ ಬಾಳಕಾಸೀ ನಿಜಜನನೀ ॥೧೧೫೮॥

ನಾಲಿಗೆಯು ಇದು ಕೇವಲ ಚರ್ಮನಾಗಿರುವುದು. ಇದಕ್ಕೆ ರಸಗಳ ರುಚಿಯು ಹೇಗೆ ತಿಳಿಯಬೇಕು? ಪಾಪ, ಆ ನಾಲಿಗೆಯನ್ನು ಕೊಯ್ದು ಒಗೆಯಲು ಅದಕ್ಕೆ ಸಿಹಿ, ಕಹಿಗಳನ್ನು ಹೇಗೆ ಅರಿಯಲು ಸಾಧ್ಯ? ॥೧೧೪೫॥ ಆದ್ದರಿಂದ ನಾಲಿಗೆಯು ಮುಖಾಂತರವಾಗಿ ರಸಗಳ ರುಚಿಯನ್ನು ಸ್ವೀಕರಿಸುವವನೂ ಕೂಡ ಹೃದಯಸ್ಥ ಪರಮಾತ್ಮನೇ ಆಗಿರುವನು. ಅದರಂತೆ ಬುದ್ಧಿಗೆ ಜ್ಞಾನವನ್ನು ಕೊಡುವವನು ಆತನೇ ಆಗಿರುವನು ॥೧೧೪೬॥ ಮನಸ್ಸಿನ ಬರು ಹೋಗುವಿಕೆಯೂ ಕೂಡ ಆ ಯಾವ ಹೃದಯದಲ್ಲಿನ ಪರಮೇಶ್ವರನ ಆಧೀನದಲ್ಲಿರುವುದು. ಆದ್ದರಿಂದ ಮನವು ದೂರ ಹೋಗಿದ್ದರೂ ಪುನಃ ಓಂದಕ್ಕೆ ಹೊರಳುವುದು ಮತ್ತು ಹೃದಯದಲ್ಲಿ ಬಂದಿರುವುದು ॥೧೧೪೭॥ ಇಂದ್ರಿಯಗಳಿಗೆ ಪ್ರೇರಿಸುವುದು ಅಥವಾ ಅವುಗಳ ದಮನ ಮಾಡುವುದು. ಇದೂ ಕೂಡ ಪರಮೇಶ್ವರನ ಕೈಯಲ್ಲಿರುವುದು. ಆದ್ದರಿಂದ ಆತನಿಗೆ ಹೃಷೀಕೇಶಾ ಅಂದರೆ ಇಂದ್ರಿಯಗಳ ಸ್ವಾಮೀ ಎಂದು ಹೇಳುವರು ॥೧೧೪೮॥ ಹೀಗೆ ವಿಚಾರಿಸಲು ದೇವನು ಹೃದಯದಲ್ಲಿಯೇ ಇರುವನೆಂಬ ಖಾತ್ರಿಯಾಗುವುದು. ಆದರೆ ಆತನನ್ನು ಶೋಧಿಸಲು ಹೊರ ಹೊರಟರೆ ನಾನೆಷ್ಟು ಮೂರ್ಖನು? ॥೧೧೪೯॥ ತೀರ್ಥ ಕ್ಷೇತ್ರಗಳಲ್ಲಿ ದೇವನು ಸಿಗುವನೆಂಬ ವಿಚಾರವಿರುವುದು. ಆದರೆ ಆತ್ಮಶ್ರದ್ಧೆಯಿಲ್ಲದೇ ತೀರ್ಥಕ್ಷೇತ್ರಗಳಲ್ಲಿ ದೇವನು ಎಂದೂ ತೋರಲಾರನು ॥೧೧೫೦॥ ತಾತ್ಪರ್ಯವೇನಂದರೆ, ದೇವರು ನನ್ನಲ್ಲಿಯೇ ಇರುವನು. ಈತನಿಂದಲೇ ಇಂದ್ರಿಯಗಳು ಕಾರ್ಯಗಳನ್ನು ಮಾಡುವುವು. ಕ್ರಿಯಾ ಕರ್ಮಗಳೆಲ್ಲವೂ ಈತನ ಸತ್ತೆಯಿಂದಲೇ ನಡೆಯುವುವು ॥೧೧೫೧॥ ಶರೀರವು ಪಾಪ, ಚೇತನ ರಹಿತ ಕೇವಲ ಪ್ರೇತವಾಗಿರುವುದು. ಆದರಿಂದ ಕರ್ಮಗಳು ಹೇಗಾಗಬೇಕು? ಇದು ಸ್ಪಷ್ಟವಾಗಿದೆ. ಚೈತನ್ಯವಿಲ್ಲದ ದೇಹವು ವ್ಯರ್ಥವಾಗಿರುವುದು ॥೧೧೫೨॥ ಇಂದ್ರಿಯಗಳಿಗೆ ಚಾಲನೆ ಕೊಡುವವನು, ವಿವಿಧ ಪ್ರಕಾರಗಳ ಕ್ರಿಯೆಗಳನ್ನು ಮಾಡುವವನು, ದೇಹವಲ್ಲ. ಅದರ ನಿಜವಾದ ಕರ್ತನು ಹೃದಯಸ್ಥ ಪರಮಾತ್ಮನಾಗಿರುವನು ॥೧೧೫೩॥ ಅದಕ್ಕಾಗಿ ಯಾವುದೇ ಪ್ರಕಾರದ ಕರ್ತವ್ಯಗಳನ್ನು ಅವರು ಭೋಳೇತನದಿಂದ ತಮ್ಮ ಆಧೀನ ಪಡೆಯದೇ, ಸರ್ವ ಕರ್ಮಗಳ ಕರ್ತನು ಪರಮಾತ್ಮನಿರುವನು. ಹೀಗೆ ದೃಢವಾದ ಶ್ರದ್ಧೆಯನ್ನಿಡುವರು ॥೧೧೫೪॥ ಅನ್ನಪಾನಾದಿಗಳನ್ನು ಸೇವಿಸುವಾಗ, ಪರಮಾತ್ಮನೇ ಸರ್ವರ ಭೋಕ್ತಾನಾಗಿರುವನೆಂದು ಅವರು ತಿಳಿದಿರುವರು ''ನಾನು ಸರ್ವ ಕರ್ಮಗಳ ಕರ್ತನು'' ಎಂದು ಹೇಳುವುದು ಅವರಿಗೆ ಗೊತ್ತೇ ಇರುವುದಿಲ್ಲ ॥೧೧೫೫॥ ಅಂತಃಕರಣವನ್ನು ಶುದ್ಧ ಮಾಡಿ ಭೋಳೇ ಭಾವಿಕತನದಿಂದ ನಡೆಯುವ ನನ್ನ ಭಜನೆಯು ಅತಿಶಯ ಪ್ರೇಮದಿಂದ ಕೂಡಿರುವುದು. ಅದರ ಸ್ವೀಕಾರವನ್ನು ನಾನು ಪ್ರೇಮದಿಂದ ಮಾಡುವೆನು, ಅದು ನನ್ನ ಪ್ರೀತಿಯ ಖಾದ್ಯವೆಂದೇ ನೀನು ತಿಳಿದುಕೋ ॥೧೧೫೬॥ ಸಣ್ಣ ಕೂಸಿಗೆ ಅದರ ತಾಯಿಯು ಸರ್ವಸ್ವವಾಗಿರುವಳು. ಅದರಂತೆ ಭೋಳೇ ಭಾವಿಕ ಭಕ್ತರ ಸರ್ವಸ್ವವು ನಾನೇ ಆಗಿರುವೆನು ॥೧೧೫೭॥ ಕೂಸಿಗಾಗಿ ಧಾವಿಸಿ ಬಂದು ಅಪ್ಪಿಕೊಳ್ಳುವುದು, ಹಿತಗುಜ ಹೇಳುವುದು, ತಿನ್ನಲು, ಕುಡಿಯಲು, ವಿಶ್ರಾಂತಿಸಲು ಈ ಸರ್ವ ಕೃತ್ಯಗಳಿಗಾಗಿ ತಾಯಿಯು ಹೇಗೆ ಪ್ರಿಯಳಾಗಿರುವಳೋ ॥೧೧೫೮॥

ತೇವೀ ಮಾಝಿಯಾ ಭೋಳ್ಯಾ ಭಕ್ತಾ । ಮೀಚ ಜಾಣ ಜೀವಲಗ ಮಾತಾ। ಅರ್ಥ ಸ್ವಾರ್ಥ ಪರಮಾರ್ಥತಾ । ಜಾಣ ತತ್ತ್ವತಾ ಮೀ ತ್ಯಾಂಸೀ ॥೧೧೪೯॥ ತೋಂಡೀಚೇ ಪೋಟೀಚೇ ಗಾಂಠೀಚೇ । ಮಾತಾ ಬಾಳಕಾಲಾಗೀ ವೇಂಚೇ । ತೇವೀ ಭಾವಿಕಾಲಾಗೀ ಆಮುಚೇ । ಸರ್ವಸ್ವ ಸಾಚೇ ಮೀ ವೇಂಚೀ ॥೧೧೫೦॥ ಬಾಳಕ ನ ಮಾಗತಾ ಧಾಂವೋನೀ । ಕಳವಳೋನಿ ಮಾತಾ ಲಾವೀ ಸ್ತನೀ । ತೇವೀ ಭೋಳ್ಯಾ ಭಕ್ತಾಲಾಗುನೀ । ಮೀ ಅನುಸಂಧಾನೀ ಲಾವಿತಾ ॥೧೧೫೧॥ ಜೇಷ್ಠ ಕನಿಷ್ಠ ಪುತ್ರಾ್ರತೇ ಪಿತಾ । ಏಕಚಿ ಜಾಣ ಪ್ರತಿಪಾಳಿತಾ । ಜೇಷ್ಠಾತೇ ನಿಗ್ರಹೋ ಕರಿತಾ । ಲಳೇ ಪುರವಿತಾ ಬಾಳಕಾಂಚೇ ॥೧೧೫೨॥ ಜೇಷ್ಠ ವಾಂಕುಡೇ ಬೋಲತಾ । ತೋಂಡಾವರೀ ಹಾಣೇ ಪಿತಾ । ಬಾಳಕ ಬೋಬಡೇ ಬೋಲತಾ । ಸಂತೋಷೇ ಸರ್ವಥಾ ಸರ್ವಸ್ವೇ ॥೧೧೫೩॥ ಸಜ್ಞಾನಾಸೀ ಅಬದ್ಧ ಪಡತಾ । ದೋಷ ವಾಜತೀ ತ್ಯಾಚೇ ಮಾಥಾ । ಭೋಳ್ಯಾ ಭಕ್ತಾಂಚೀ ಅಬದ್ಧ ಕಥಾ । ತೇಣೇ ದೇವೋ ತತ್ತ್ವತಾ ಸಂತೋಷೇ ॥೧೧೫೪॥ ಕರ್ಮಾಕರ್ಮಪ್ರತ್ಯವಾಯತಾ । ಹೇ ಸಜ್ಞಾನಾಸೀಚ ಸರ್ವಥಾ । ಭೋಳ್ಯಾ ಭಕ್ತಾಂಸೀ ಕರ್ಮಬಾಧಕತಾ । ಮೀ ಸರ್ವಥಾ ಯೇಊ ನೇದೀ ॥೧೧೫೫॥ ಭೋಜನೀ ಬೈಸತಾ ಬಾಪಾಸೀ । ದೂರೀ ಬೈಸವೀ ಜೇಷ್ಠ ಪುತ್ರಾಸೀ । ಅಂಕೀ ವಾಊನಿ ಬಾಳಕಾಸೀ । ತೃಪ್ತಿ ನಿಜಗ್ರಾಸೀ ದೇತುಸೇ ॥೧೧೫೬॥ ತೇಥೇ ಜೇ ಜೇ ಗೋಡ ಆಪಣಾಸೀ । ತೇ ತೇ ದೇ ಬಾಳಕಾಸೀ । ನ ಘೇತಾ ಪ್ರಾರ್ಥೂನಿ ತ್ಯಾಸೀ । ತೃಪ್ತೀಚ್ಯಾ ಗ್ರಾಸೀ ಜೇವವೀ ॥೧೧೫೭॥ ತೇವೀ ಸಾಧನೀ ಶಿಣತಾ ಸಜ್ಞಾನಾಸೀ । ಪ್ರಾಪ್ತೀ ಹೋಯ ಅತಿಪ್ರಯಾಸೀ । ಮಾಝಿಯಾ ಭೋಳ್ಯಾ ಭಕ್ತಾಂಸೀ । ಮೀಚ ಅನಾಯಾಸೀ ಉದ್ಧರೀ ॥೧೧೫೮॥ ವಾಟ ಚುಕಲ್ಯಾ ಭುಯಾಳಾಸೀ । ಫೇರಾ ಪಡೇ ಚಾಲೋ ಜಾಣತ್ಯಾಸೀ । ಬಾಳಕ ಬಾಪಾಚೇ ಕಡಿಯೇಸೀ । ಶ್ರಮೂ ತಯಾಸೀ ಯೇವೋ ನ ಶಕೇ ॥೧೧೫೯॥ ತೇವೀ ಸಾಧನೀ ಅಂಗವಿಕಳತಾ । ತೇ ವಾಜೇ ಸಜ್ಞಾನಾಚೇ ಮಾಥಾ । ಭೋಳ್ಯಾ ಭಕ್ತಾತೇ ಮೀ ಉದ್ಧರಿತಾ । ಪ್ರಯಾಸ ಸರ್ವಥಾ ತ್ಯಾ ನಾಹೀ ॥೧೧೬೦॥ ತ್ಯಾಸೀ ವಾಊನಿ ಆಪುಲ್ಯಾ ಖಾಂದೀ । ಮೀ ಪಾವವೀ ಸಾಯುಜ್ಯಸಿದ್ಧೀ । ನವಲ ತ್ಯಾಚೀ ಭೋಳೀ ಬುದ್ಧಿ । ತೇಥಹೀ ಭಜನವಿಧೀ ನ ಸಾಂಡೀ ॥೧೧೬೧॥

ಅದರಂತೆಯೇ ನನ್ನ ಭೋಳೇ ಭಕ್ತರ ತಾಯಿಯು ನಾನೇ ಆಗಿರುವೆನು. ಅವರಿಗೆ ಅರ್ಥ, ಸ್ವಾರ್ಥ, ಪರಮಾರ್ಥ ಈ ಎಲ್ಲವೂ ನಾನೇ ಆಗಿರುವೆನು ॥೧೧೪೯॥ ತಾಯಿಯು ಯಾವ ಪ್ರಕಾರವಾಗಿ ತನ್ನ ಕೂಸಿಗಾಗಿ ಮುಖದಲ್ಲಿನ, ಹೊಟ್ಟೆಯಲ್ಲಿನ, ಗಂಟಿನಲ್ಲಿಯ ಖರ್ಚನ್ನು ಮಾಡುವಳೋ, ಅದರಂತೆ ಭಾವಿಕರಿಗಾಗಿ ನಿಜವಾಗಿಯೂ ನಮ್ಮದೂ ಕೂಡ ಸರ್ವಸ್ವವಾಗಿ ನಾನು ಖರ್ಚು ಮಾಡುವೆನು ॥೧೧೫೦॥ ಚಿಕ್ಕ ಬಾಲಕನು ಒಂದು ವೇಳೆ ಏನೂ ಬೇಡದಿದ್ದರೂ ಕೂಡ, ಆಗ ತಾಯಿಯು ಧಾವಿಸಿ ಬಂದು ಕಳಕಳಿಯಿಂದ ಅದಕ್ಕೆ ಹಾಲನ್ನು ಕುಡಿಸುವಳು. ಅದರಂತೆ ನಾನೂ ಕೂಡ ನನ್ನ ಭಕ್ತರಿಗೆ ನನ್ನ ಅನುಸಂಧಾನಕ್ಕೆ ಹಚ್ಚುವೆನು ॥೧೧೫೧॥ ಚಿಕ್ಕ ದೊಡ್ಡ ಮಕ್ಕಳನ್ನು ಸಂಭಾಳಿಸುವ ಒಬ್ಬ ತಂದೆಯೇ ಇರುವನು. ಆತನು ದೊಡ್ಡ ಮಗನಿಗೆ ಬೆದರಿಕೆ ಇಟ್ಟು ನಡೆಯಿಸಿಕೊಳ್ಳುವನು. ಚಿಕ್ಕ ಮಗನ ಬೇಡಿಕೆ ಪೂರೈಸುವನು ॥೧೧೫೨॥ ದೊಡ್ಡ ಮಗನು ಏನಾದರೂ ಅಪಶಬ್ದಗಳನ್ನು ನುಡಿದರೆ ತಂದೆಯು ಆತನಿಗೆ ಕಪಾಳಕ್ಕೆ ಹೊಡೆಯುವನು. ಚಿಕ್ಕವನು ತೊದಲು ನುಡಿ ನುಡಿದರೂ ತಂದೆಗೆ ಪರಮ ಸಂತೋಷವಾಗುವುದು ॥೧೧೫೩॥ ಸಜ್ಞಾನನಾದ ಮನುಷ್ಯನು ತನ್ನ ಮುಖದಿಂದ ಏನಾದರೂ ಅಬದ್ಧ ನುಡಿಯಲು ಅವನು ಅದರ ದೋಷವನ್ನು ತನ್ನ ತಲೆಯ ಮೇಲೆ ಹೊರಬೇಕಾಗುವುದು. ಭೋಳೇ ಭಾವಿಕರಾದ ಭಕ್ತರ ಕಥೆಯು ಅಸಂಬದ್ಧವಾಗಿದ್ದರೂ ಕೂಡ, ದೇವರಿಗೆ ಅದರಿಂದ ನಿಜವಾಗಿಯೂ ಸಂತೋಷವೇ ಆಗುವುದು ॥೧೧೫೪॥ ಸಜ್ಞಾನ ಜನರಿಗಾಗಿ ಕರ್ಮಾಕರ್ಮಗಳ ಸರ್ವ ದೋಷವಿರುವುದು. ಆದರೆ ಭೋಳೇ ಭಾವಿಕ ಭಕ್ತರತ್ತ ಕರ್ಮಬಾಧೆಯು ಎಂದಿಗೂ ಬಾರದಂತೆ ನಾನು ನೋಡಿಕೊಳ್ಳುವೆನು ॥೧೧೫೫॥ ತಂದೆಯು ಊಟಕ್ಕೆ ಕುಳಿತುಕೊಳ್ಳಲು ಜೇಷ್ಠ ಪುತ್ರನಿಗೆ ದೂರ ಕುಳ್ಳಿರಿಸುವನು. ಆದರೆ ತನ್ನ ಚಿಕ್ಕ ಮಗನಿಗೆ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುವನು. ತನ್ನ ತುತ್ತಿನಲ್ಲಿನ ತುತ್ತನ್ನು ಆತನ ಮುಖದಲ್ಲಿ ಹಾಕುವನು, ತೃಪ್ತಿಪಡಿಸುವನು ॥೧೧೫೬॥ ಆ ಸಮಯದಲ್ಲಿ ತನಗೆ ಯಾವ ಯಾವುದು ರುಚಿ ಅನಿಸುವುದೋ ಅದನ್ನು ತನ್ನ ಚಿಕ್ಕ ಬಾಲಕನಿಗೆ ಕೊಡುವನು. ಅವನು ಅದನ್ನು ಸ್ವೀಕರಿಸದಿದ್ದರೆ ಅನೇಕ ರೀತಿಯಲ್ಲಿ ಆತನನ್ನು ವಿನಂತಿಸಿ ಬಹು ಸಂತೋಷದಿಂದ ಆತನಿಗೆ ಉಣಿಸುವನು ॥೧೧೫೭॥ ಅದರಂತೆ ಸಜ್ಞಾನಿಗಳು ಅನೇಕ ಪ್ರಕಾರದ ಕ್ಲಿಷ್ಟ ಸಾಧನೆಗಳನ್ನು ಮಾಡಿ ಮಾಡಿ, ದಣಿದುಕೊಂಡಾಗ ಅವರಿಗೆ ಬಹು ಪ್ರಯಾಸದಿಂದ ನನ್ನ ಪ್ರಾಪ್ತಿಯಾಗುವುದು. ಆದರೆ ನನ್ನ ಭೋಳೇ ಭಕ್ತರನ್ನು ನಾನು ಸ್ವತಃ ಉದ್ಧಾರವನ್ನು ಮಾಡುವೆನು ॥೧೧೫೮॥ ದಾರಿ ನಡೆಯುವವನಿಗೆ ನಡೆಯಲು ಬರುತ್ತಿದ್ದರೂ ಕೂಡ ಆತನು ಒಂದು ವೇಳೆ ದಾರಿ ತಪ್ಪಲು, ಆತನಿಗೆ ಪುನಃ ಸುತ್ತಬೇಕಾಗುವುದು. ತಂದೆಯ ಟೊಂಕದ ಮೇಲೆ ಕುಳಿತುಕೊಂಡ ಬಾಲಕನಿಗೆ ನಡೆಯುವ ಸ್ವಲ್ಪ ಶ್ರಮವೂ ಬೀಳುವುದಿಲ್ಲ ॥೧೧೫೯॥ ಅದರಂತೆ ಸಜ್ಞಾನೀ ಜನರಿಗೆ ಸಾಧನೆಗಳನ್ನು ಮಾಡುತ್ತಿರಲು, ಸಾಧನೆಗಳಲ್ಲಿನ ಸದೋಷಗಳು ಬಾಧಿಸುವುವು. ಭೋಳೇ ಭಕ್ತರ ಉದ್ಧಾರವನ್ನು ನಾನೇ ಮಾಡುತ್ತಿರುವುದರಿಂದ ಅವರಿಗೆ ಯಾವ ಪ್ರಕಾರದ ತೊಂದರೆಯಾಗುವುದಿಲ್ಲ ॥೧೧೬೦॥ ಭೋಳೇ ಭಕ್ತರಿಗೆ ನಾನು ನನ್ನ ಹೆಗಲ ಮೇಲೆ ಕುಳ್ಳಿರಿಸಿಕೊಂಡು ಸಾಯುಜ್ಯ ಸಿದ್ಧಿಗೆ ಮುಟ್ಟಿಸುವೆನು. ಆತನ ಭೋಳೇ ಭಾವನೆಯು ಅತಿಶಯವಾಗಿ ವಿಲಕ್ಷಣವಾಗಿರುವುದು. ಅವನು ಆ ಸ್ಥಾನವನ್ನು ಮುಟ್ಟಿದರೂ ನನ್ನ ಭಜನೆಯನ್ನು ಬಿಡಲಾರನು ॥೧೧೬೧॥

ಹೃದಯೀ ಕಪಟಾಚಾ ಥಾರಾ । ತೋಚಿ ಭಜನಾಸೀ ಆಡವಾರಾ । ಕರಿತಾ ಯುಕ್ತಿಪ್ರಯುಕ್ತೀ ವಿಚಾರಾ। ವಿಚಾರಾಬಾಹಿರಾ ಮೀ ತ್ಯಾಸೀ ॥೧೧೭೨॥ ನೇಣೇ ಆಚರಾ ವಿಚಾರಾ । ಕೇವಳ ಭಾವಾರ್ಥೀ ಭೋಳಾ ಖರಾ । ನ ಧರತ ನ ಸಾಂವರತ ಏಕಸರಾ । ಮಜಭೀತರಾ ತೋ ಪಾವೇ ॥೧೧೭೩॥ ದೇಖೋನ ಭೋಳಿವೇಚ್ಯಾ ಭಕ್ತಾಸೀ। ಮೀಚಿ ಸಮೋರಾ ಧಾಂವೇ ತ್ಯಾಸೀ । ತ್ಯಾಪಾಶೀ ಮೀ ಅಹರ್ನಿಶೀ । ಭುಲಲೋ ಭಾವಾಸೀ ಸರ್ವಥಾ ॥೧೧೭೪॥ ಕೇವಳ ಜೇ ಭೋಳೇ ಭಕ್ತ । ತೇ ಭಗವಂತಾಸೀ ಆವಡತ । ಸಾಂಗತಾ ಕೃಷ್ಣ ಮಿಟಿಕಿಯಾ ದೇತ । ಲಾಳ ಘೋಟಿತ ಉದ್ಧವೂ ॥೧೧೭೫॥ ಮಜ ಭೋಳ್ಯಾ ಭಕ್ತಾಂಚೀ ಆವಡೀ । ಕಾಯ ಸಾಂಗೋ ತ್ಯಾಂಚೀ ಗೋಡೀ । ತ್ಯಾವೇಗಳೀ ಅರ್ಥಘಡೀ । ಕೋಡೀ ಪರವಡೀ ನಾವಡತೀ ॥೧೧೭೬॥ ಯಾಪರೀಚೇ ಜೇ ಭೋಳೇ ಭಕ್ತ । ತೇ ಮೀ ಮಾನೀ ಉತ್ತಮ ಭಾಗವತ । ತ್ಯಾಂಚ್ಯಾ ಪಾಯ ಮೀ ಲಾಗೇ ಭಗವಂತ । ಉತ್ತಮ ನಿಶ್ಚಿತ ತೇ ಜಾಣ ॥೧೧೭೭॥ ತ್ಯಾಲಾಗೀ ಮೀ ಆರ್ತಭೂತ । ತ್ಯಾಲಾಗೀ ಸದಾ ಸಾವಚಿತ್ತ । ತ್ಯಾಲಾಗೀ ಮೀ ದಶಾದಿಶಾ ಧಾವಂತ । ಭೋಳಾ ಭಕ್ತ ದುರ್ಲಭ ॥೧೧೭೮॥ ಉದ್ಧವಾ ಕಾಯ ಸಾಂಗೋ ಗೋಠೀ । ಭೋಳಾ ಭಕ್ತ ದೇಖೋನಿ ದಿಠೀ । ಮೀಹೀ ಆಪುಲಿಯೇ ಸವಸಾಟೀ । ಉಠಾಉಠೀ ಘೇತುಸೇ ॥೧೧೭೯॥ ಯೇರ್ಥ ವೀ ಮೋಲ ಕರಿತಾ ಜಾಣ । ಮಜಹೂನಿ ಮಾಝೇ ಭಕ್ತ ಗಹನ । ಯಾಲಾಗೀ ಮೀ ತ್ಯಾ ಆಧೀನ । ಭಕ್ತವಚನ ನುಲ್ಲಂಘೀ ॥೧೧೮೦॥ ಭೋಳ್ಯಾ ಭಕ್ತಾಂಚೇ ವಚನ। ಮಾಝೇನಿ ನುಲ್ಲಂಘವೇ ಜಾಣ । ದೇವಕೀ ವಸುದೇವಾಂಚೀ ಆಣ । ಭಾವೋ ಪ್ರಮಾಣ ಭಜನಾಸೀ ॥೧೧೮೧॥ ವೃಥಾ ಘೃತೇವೀಣ ಭೋಜನ । ವೃಥಾ ವಂಧ್ಯೇಚೇ ಮೈಥುನ । ವೃಥಾ ಭಾವೇವೀಣ ಭಜನ । ಸತ್ಯ ಜಾಣ ಉದ್ಧವಾ ॥೧೧೮೨॥ ಭಾವೋ ತೇಥ ಭಾಗ್ಯ ಪಹಾ ಹೋ । ಭಾವೋ ತೇಥ ಮೀ ನಿಃಸಂದೇಹೋ । ಭಾವೋ ತೇಥೇ ಪ್ರಕಟೇ ದೇವೋ । ನಿಜಸ್ವಭಾವೋ ಸ್ವಾನಂದೇ ॥೧೧೮೩॥ ಭಾವೋ ತೇಥ ವಿರಕ್ತೀ । ಭಾವೋ ತೇಥ ಪ್ರಕಟೇ ಶಾಂತೀ। ಭಾವೋ ತೇಥ ಮಾಝೀ ಭಕ್ತೀ । ಉಲ್ಹಾಸತೀ ನಿಜಬೋಧೇ ॥೧೧೮೪॥ ಏವಂ ಭಾವಿಕಾಮಾಜೀ ಮಾಝೀ ಭಕ್ತಿ । ಮಜಸಹಿತ ಸ್ವಾನಂದೇ ನಾಚತೀ । ಯಾಲಾಗೀ ಭೋಳೇ ಜೇ ಭಾವಾರ್ಥೀ । ತೇ ಉತ್ತಮ ಹೋತೀ ಭಾಗವತ ॥೧೧೮೫॥

ಮನಸ್ಸಿನಲ್ಲಿ ಕಪಟ ಭಾವವನ್ನಿಡುವುದೇ ಭಜನೆಯಲ್ಲಿನ ಆತಂಕವಾಗಿರುವುದು. ಯುಕ್ತಿ ಪ್ರಯುಕ್ತಿಗಳಿಂದ ನನ್ನನ್ನು ತಿಳಿಯುವ ವಿಚಾರ ಮಾಡಿದರೆ, ನಾನು ಅವರ ವಿಚಾರಗಳ ಹೊರಗೇನೇ ಇರುವೆನು ॥೧೧೭೨॥ ಕೇವಲ ಭೋಳೇ ಭಾವಿಕ ಭಕ್ತನಿಗೆ ಯಾವ ಆಚಾರ, ವಿಚಾರಗಳು ತಿಳಿಯುವುದಿಲ್ಲ. ಆತನು ಬೇರೆಕಡೆ ಎಲ್ಲಿಯೂ ತಿರುಗದೇ, ಸರಳವಾಗಿ ನನ್ನತ್ತ ಬರುವನು. ಹಾಗೆಯೇ ಮದ್ರೂಪನಾಗುವನು ॥೧೧೭೩॥ ಈ ಪ್ರಕಾರವಾಗಿ ಅಂತಃಕರಣದಿಂದ ಶುದ್ಧನಾಗಿರುವ ನನ್ನ ಭೋಳೇ ಭಕ್ತನನ್ನು ನೋಡಿ ನಾನು ಆತನನ್ನು ಎದುರುಗೊಳ್ಳುವೆನು. ನಾನು ಆತನ ಭಾವಿಕತನಕ್ಕೆ ಪೂರ್ಣವಾಗಿ ಮನಸೋಲುವೆನು, ಆತನಲ್ಲಿಯೇ ಇರುವೆನು ॥೧೧೭೪॥ ಯಾರು ನಿಜವಾಗಿಯೂ ಭೋಳೇ ಭಕ್ತರಿರುವರೋ ಅವರು ಭಗವಂತನಿಗೆ ಪ್ರಿಯರಾಗುವರು. ಇದನ್ನು ಶ್ರೀಕೃಷ್ಣನು ಹೇಳುತ್ತಿರಲು ಉದ್ಧವನ ಮುಖದಲ್ಲಿ ಜೊಲ್ಲು ಸೋರಹತ್ತಿತು. ನಾಲಿಗೆಯಿಂದ ಆ ರುಚಿಯನ್ನು ಸೇವಿಸಹತ್ತಿದನು ॥೧೧೭೫॥ ನನಗೆ ಭೋಳೆ ಭಾವಿಕ ಭಕ್ತರಲ್ಲಿ ಅತಿಶಯವಾಗಿ ಪ್ರೀತಿ ಇರುವುದು. ಇದರ ಸುಖವನ್ನು ನಾನು ನಿನಗೆ ಎಷ್ಟೆಂದು ಹೇಳಲಿ? ಆತನ ಹೊರತಾಗಿ ಅರ್ಧ ಘಳಿಗೆ ಇರಲು, ಬೇಕಾದ ವಸ್ತುಗಳ ರಾಶಿ ರಾಶಿಯಾಗಿ ಕೊಟ್ಟರೂ ನನಗೆ ಬೇಡವಾಗುವುದು ॥೧೧೭೬॥ ಈ ಪ್ರಕಾರವಾಗಿ ಅಂತಃಕರಣದಿಂದ ಶುದ್ಧರಾಗಿರುವ ಭೋಳೆ ಭಾವಿಕ ಭಕ್ತರಿಗೆ ನಾನು ಅವರಿಗೆ ಉತ್ತಮ ಭಾಗವತರೆಂದು ತಿಳಿಯುವೆನು. ನಾನು ಸ್ವತಃ ಭಗವಂತನಾಗಿದ್ದರೂ ಅವರ ಚರಣಗಳನ್ನು ವಂದಿಸುವೆನು. ಕಾರಣ ನಿಜವಾಗಿಯೂ ಅವರು ಉತ್ತಮ ಭಕ್ತರಿರುವರು. ಹೀಗೆ ನೀನು ನಿಶ್ಚಯವಾಗಿ ತಿಳಿ ॥೧೧೭೭॥ ಆ ಯಾವ ಭೋಳೇ ಭಕ್ತರಿಗಾಗಿ ನಾನು ಅತ್ಯಂತ ಉತ್ಕಂಠಿತನಾಗಿರುವೆನು, ಸಾವಧನಾಗಿರುವೆನು. ಅವರಿಗಾಗಿ ನಾನು ಹತ್ತು ದಿಶೆಗಳಿಂದ ಧಾವಿಸುವೆನು. ಏಕೆಂದರೆ ಆ ಭೋಳೇ ಭಕ್ತರು ಅತಿಶಯವಾಗಿ ದುರ್ಲಭರಾಗಿರುವರು ॥೧೧೭೮॥ ಹೇ ಉದ್ಧವನೇ, ನಿನಗೆ ಏನೆಂದು ಹೇಳಬೇಕು? ಭೋಳೇ ಭಕ್ತನು ನನ್ನ ದೃಷ್ಟಿಗೆ ಬೀಳುತ್ತಲೇ ನಾನು ಸ್ವತಃ ನನ್ನ ಮೌಲ್ಯವನ್ನು ಕೊಟ್ಟು ಆತನಿಗೆ ತತ್ಕಾಲದಲ್ಲಿ ನನ್ನ ಸ್ಥಾನವನ್ನು ಕೊಡುವೆನು ॥೧೧೭೯॥ ನಿಜವಾಗಿಯೂ ಬೆಲೆ ಕಟ್ಟುವ ವಿಚಾರವನ್ನು ಮಾಡಲು ನನ್ನ ಭಕ್ತನ ಬೆಲೆಯು ನನಗಿಂತಲೂ ಹೆಚ್ಚಾಗಿರುವುದು. ನಾನು ಆತನ ಆಧೀನನಾಗಿರುವೆನು. ಆತನ ವಚನವನ್ನು ನಾನೂ ಎಂದಿಗೂ ಉಲ್ಲಂಘಿಸುವುದಿಲ್ಲ ॥೧೧೮೦॥ ಭೋಳೆ ಭಾವಿಕರ ವಚನವನ್ನು ನನಗೆ ಉಲ್ಲಂಘಿಸಲು ಸಾಧ್ಯವೇ ಇಲ್ಲ. ವಸುದೇವ, ದೇವಕೀಯರ ಆಣೆ ಮಾಡಿ ಹೇಳುವೆನು, ಏನೆಂದರೆ ಭಕ್ತಿಯೇ ಭಜನಕ್ಕೆ ಮುಖ್ಯವಾಗಿರುವುದು ॥೧೧೮೧॥ ಹೇ ಉದ್ಧವನೇ, ತುಪ್ಪವಿಲ್ಲದ ಭೋಜನವು ವ್ಯರ್ಥವು, ಬಂಜೆ ಸ್ತ್ರೀಯಳ ಮೈಥುನವು ವ್ಯರ್ಥವು. ಅದರಂತೆ ಭಕ್ತಿವಿಲ್ಲದ ಭಜನೆಯು ವ್ಯರ್ಥವಾಗಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೧೧೮೨॥ ಶುದ್ಧ ಭಾವವು ಇದ್ದಲ್ಲಿ ಮಾತ್ರ ಅಲ್ಲಿಯೇ ಭಾಗ್ಯ ಮತ್ತು ಅಲ್ಲಿಯೇ ನಾನು ನಿಃಸಂಶಯವಾಗಿ ಇರುವೆನು. ಎಲ್ಲಿ ಭಾವವೋ ಅಲ್ಲಿಯೇ ದೇವರು ಎಂಬುದು ಸ್ವಭಾವತಃ ಆನಂದದಿಂದ ಪ್ರಕಟವಾಗುವುದು ॥೧೧೮೩॥ ಎಲ್ಲಿ ಭಾವವಿರುವುದೋ, ಅಲ್ಲಿ ವಿರಕ್ತಿವಿರುವುದು. ಎಲ್ಲಿ ಭಾವವೋ ಅಲ್ಲಿ ಶಾಂತಿಯು ಪ್ರಕಟವಾಗುವುದು. ಹಾಗೆಯೇ ಎಲ್ಲಿ ಭಾವವಿರುವುದೋ ಅಲ್ಲಿ ಆತ್ಮಭಾವದಿಂದ ನನ್ನ ಭಕ್ತಿಯು ವಿಕಾಸಹೊಂದುತ್ತಿರುವುದು ॥೧೧೮೪॥ ಈ ಪ್ರಕಾರವಾಗಿ ಭಾವಿಕರಲ್ಲಿ ನನ್ನ ಭಕ್ತಿಯು ಸ್ವಾನಂದದಿಂದ ಕುಣಿಯುತ್ತಿರುವುದು. ಆದ್ದರಿಂದ ಭೋಳೇ, ಭಾವಿಕರೇ ಉತ್ತಮ ಭಾಗವತರಾಗಿರುವರು ॥೧೧೮೫॥

ನೇಣತೇ ಭಕ್ತ ಜೇ ಮಾತೇ ಭಜತೀ । ತೇ ಮಜ ಪಾವಲೇ ಯಾ ರೀತೀ । ಸಾಂಗಿತಲೀ ತೇ ಮ್ಯಾ ವ್ಯುತ್ಪತ್ತೀ । ಆತಾ ಉತ್ತಮ ಭಕ್ತೀ ಅವಧಾರೀ ।।೧೧೮೬।।

ಮಲ್ಲಿಂಗಮದ್ಭಕ್ತಜನದರ್ಶನಸ್ಪರ್ಶನಾರ್ಚನಮ್ । ಪರಿಚರ್ಯಾ ಸ್ತುತಿಃ ಪ್ರಹ್ವಗುಣಕರ್ಮಾನುಕೀರ್ತನಮ್ ।।೩೪।।

ಅರ್ಥ :- ಪ್ರಿಯ ಉದ್ಧವಾ, ನನ್ನ ಮೂರ್ತಿ ಮತ್ತು ನನ್ನ ಭಕ್ತಜನರ ದರ್ಶನ, ಸ್ಪರ್ಶನ, ಪೂಜಾ, ಸೇವೆ, ಶುಶ್ರೂಷಾ, ಸ್ತುತೀ ಮತ್ತು ಪ್ರಣಾಮಗಳನ್ನು ಮಾಡಬೇಕು. ಅದರಂತೆ ನನ್ನ ಗುಣ ಮತ್ತು ಕರ್ಮಗಳ ಕೀರ್ತನೆಯನ್ನು ಮಾಡಬೇಕು.

ನಾನಾ ಅವತಾರ ಅನುಕ್ರಮಾ । ಶೈವೀ ವೈಷ್ಣವೀ ಅತಿ ಉತ್ತಮಾ । ಶಾಸ್ತ್ರೋಕ್ತ ಮಾಝ್ಯಾ ಪ್ರತಿಮಾ । ತೀರ್ಥಕ್ಷೇತ್ರೀ ಮಹಿಮಾ ವಿಶೇಷ ಜ್ಯಾಂಚಾ ।।೧೧೮೭।। ಜ್ಯಾ ಪ್ರತಿಮಾ ದೇವೀ ಪ್ರತಿಷ್ಠಿಲಿಯಾ । ಜ್ಯಾ ನರಕಿನ್ನರೀ ಸಂಸ್ಥಾಪಿಲಿಯಾ । ಜ್ಯಾ ಸ್ವಯೇ ಸ್ವಯಂಭ ಪ್ರಕಟಲಿಯಾ । ಶಾಸ್ತ್ರೀ ಬೋಲಿಲಿಯಾ ಗಂಡಕೀ ।।೧೧೮೮।। ಏಕೀ ಭಕ್ತ ಅನುಗ್ರಹೇ ಆಲ್ಯಾ । ಆಸುರೀ ನಿಶಾಚರೀ ಜ್ಯಾ ಕೇಲ್ಯಾ । ಆಪುಲಾಲ್ಯಾ ಘರೀ ಪೂಜಿಲ್ಯಾ । ಭಕ್ತೀ ಕರವಿಲ್ಯಾ ತ್ರೈವರ್ಣಿಕೀ ।।೧೧೮೯।। ಐಶಾ ಮಾಝ್ಯಾ ಪ್ರತಿಮಾಂಚೀ ಭೇಟೀ । ಪಾಹೋ ಧಾಂವೇ ಉಠಾಉಠೀ । ಪೂಜಾ ಕರಾವಯಾ ಪೋಟೀ । ಆವಡೀ ಮೋಟೀ ಉಲ್ಹಾಸೇ ।।೧೧೯೦।। ಮಾಝೇ ಸ್ವರೂಪ ತೇ ಮಾಝೇ ಭಕ್ತ । ಮೀ ತೇಚಿ ತೇ ಮಾಝೇ ಸಂತ । ತ್ಯಾಂಚೇ ಭೇಟಿಲಾಗೀ ಆರ್ತಭೂತ । ಜೈಸೇ ಕೃಪಣಾಚೇ ಚಿತ್ತ ಧನಾಲಾಗೀ ।।೧೧೯೧।। ಮಾಝ್ಯಾ ಪ್ರತಿಮಾಹೂನಿ ಅಧಿಕ । ಸಂತಭಜನೀ ಅತ್ಯಂತ ಹರಿಖ । ಸಾಧುಸಂಗತೀಚೇ ಅತಿಸುಖ । ಸಾಂಡೂನಿ ದೇಖ ಘರದಾರಾ ।।೧೧೯೨।। ಚಿಂತಾಮಣೀಸೀ ಕೀಜೇ ಜತನ । ತೈಸೀ ಮರ್ಯಾದಾ ರಾಖೇ ಸಜ್ಜನ । ನೀಚ ನವ್ಹೇ ಅಧಿಕ ಭಜನ । ನ ಧಾಯೇ ಮನ ಪೂಜಿತಾ ।।೧೧೯೩।। ಸಿದ್ಧ ಕರೂನಿ ಪೂಜಾಸಂಭಾರ । ಮಾಝೀ ಪೂಜೇಚಾ ಅತ್ಯಾದರ । ಪೂಜಾ ಕರಿತಾ ಏಕಾಗ್ರ । ಜೈ ಸಾಧು ನರ ಘರಾ ಯೇತೀ ।।೧೧೯೪।। ತ್ಯಾ ಸಾಧೂಂಚೀ ಪೂಜಾ ನ ಕರಿತಾ । ಜೋ ಮಾಝೀ ಪೂಜಾ ಕರೀ ಸರ್ವಥಾ । ತೇಣೇ ಮಜ ಹಾಣಿತಲ್ಯಾ ಲಾತಾ । ಕೀ ತೋ ಮಾಝ್ಯಾ ಘಾತಾ ಪ್ರವರ್ತಲಾ ।।೧೧೯೫।। ಬಾಳಕ ಏಕ ಏಕುಲತಾ । ತ್ಯಾಸೀ ಮಾಥಾ ಹಾಣಿತಲ್ಯಾ ಲಾತಾ । ಮಗ ಪಾಟೋಳಾಹೀ ನೇಸವಿತಾ । ಕ್ಷೋಭಲೀ ಮಾತಾ ಸಮಜೇನಾ ।।೧೧೯೬।।

ಹೀಗೆ ಏನೂ ಅರಿಯದ ಭಕ್ತರು ಈ ಪ್ರಕಾರವಾಗಿ ನನ್ನ ಭಜನೆಯನ್ನು ಮಾಡುವರು ಮತ್ತು ನನ್ನಲ್ಲಿ ಬಂದು ಕೂಡುವರು. ಅದರ ಪ್ರಕಾರವನ್ನು ನಿನಗೆ ಹೇಳಿದೆನು. ಈಗ ಉತ್ತಮ ಭಕ್ತಿಯು ಹೇಗೆ ಇರುವುದೆಂಬುದನ್ನು ಕೇಳು ।।೧೧೮೬।।

ಹೇ ಉದ್ಧವನೇ, ನನ್ನ ಅನೇಕ ಪ್ರಕಾರಗಳ ಅವತಾರ ಪ್ರಮಾಣದಂತೆ ಶಾಸ್ತ್ರ ಸಿದ್ಧ ರೀತಿಯಂತೆ ಅತಿಶಯ ಉತ್ತಮ ಪ್ರತಿಮೆಗಳನ್ನು ಸ್ಥಾಪನೆ ಮಾಡಿರುವುವು. ಅವುಗಳ ಮಹಾತ್ಮ್ಯೆಯು ವಿಶೇಷವಾಗಿರುವುದು ।।೧೧೮೭।। ಯಾವ ಮೂರ್ತಿಗಳನ್ನು ದೇವತೆಗಳಿಂದ ಪ್ರತಿಷ್ಠಾಪನೆಯನ್ನು ಮಾಡಿರುವುವು. ಕೆಲವು ಮೂರ್ತಿಗಳನ್ನು ಮನುಷ್ಯರಿಂದ ಅಥವಾ ಕಿನ್ನರರಿಂದ ಸ್ಥಾಪನೆಯಾಗಿರುವುವು. ಮತ್ತು ಕೆಲವು ಮೂರ್ತಿಗಳು ಸ್ವಯಂಭೂ ಪ್ರಕಟವಾಗಿರುವುವು. ಅವುಗಳಿಗೆ ಶಾಸ್ತ್ರದಲ್ಲಿ "ಗಂಡಕಿ" ಎಂದು ಹೇಳುವರು ।।೧೧೮೮।। ಇವುಗಳಲ್ಲಿ ಕೆಲವು ಮೂರ್ತಿಗಳು ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ಬಂದಿರುವುವು. ಕೆಲವು ಮೂರ್ತಿಗಳನ್ನು ರಾಕ್ಷಸರು ಮತ್ತು ಅಸುರರು ಮಾಡಿರುವರು ಮತ್ತು ಕೆಲವು ಮೂರ್ತಿಗಳನ್ನು ಮೂರು ವರ್ಣಗಳ ಜನರು ತಮ್ಮ ತಮ್ಮ ಮನೆಗಳಲ್ಲಿ ಪೂಜೆಗಾಗಿ ಮಾಡಿರುವರು ।।೧೧೮೯।। ಹೀಗೆ ಯಾವ ನನ್ನ ವಿವಿಧ ಪ್ರತಿಮೆಗಳಿದ್ದು, ಆ ಮೂರ್ತಿಗಳ ದರ್ಶನವನ್ನು ಪಡೆಯಲು ಭಕ್ತರು ತ್ವರೆಯಿಂದ ಧಾವಿಸಿ ಬರುವರು. ಮತ್ತು ಅವುಗಳ ಪೂಜೆಯನ್ನು ಮಾಡುವುದಕ್ಕಾಗಿ ಅವರ ಅಂತಃಕರಣದಲ್ಲಿ ಬಹು ಉಲ್ಹಾಸವು ನಿರ್ಮಾಣವಾಗಿರುವುದು ।।೧೧೯೦।। ನನ್ನ ಭಕ್ತರು ನಿಜವಾಗಿಯೂ ನನ್ನ ಸ್ವರೂಪವೇ ಆಗಿರುವರು. ನನ್ನ ಸಂತರು, ಅವರು ನಾನೇ ಆಗಿರುವೆನು. ಯಾವ ಪ್ರಕಾರವಾಗಿ ದ್ರವ್ಯಕ್ಕಾಗಿ ಕೃಪಣನ ಚಿತ್ತವು ಹೇಗೆ ಉತ್ಕಂಠಿತವಾಗಿರುವುದೋ ಅದರಂತೆ ನನ್ನ ಚಿತ್ತವು ಅವರ ಭೇಟಿಗಾಗಿ ಅಗದೀ ಉತ್ಕಂಠಿತವಾಗುವುದು ।।೧೧೯೧।। ಅವರಿಗೆ ನನ್ನ ಮೂರ್ತಿಗಿಂತಲೂ ಸಂತರ ಭಜನೆಯಲ್ಲಿ ಅತ್ಯಂತ ಆನಂದವಾಗುವುದು. ಮನೆಮಾರು ಬಿಟ್ಟು ಅವರ ಸಂಗತಿಯಿಂದ ಸುಖಪ್ರಾಪ್ತಿ ಮಾಡಿಕೊಳ್ಳುವರು ।।೧೧೯೨।। ಯಾವ ಪ್ರಕಾರವಾಗಿ ಚಿಂತಾಮಣಿ ರತ್ನವನ್ನು ಸಂಭಾಳಿಸಿ ಕಾದಿಡಲಾಗುವುದೋ, ಅದರಂತೆ ನನ್ನ ಭಕ್ತರು ಸಂತರ ಮರ್ಯಾದೆಯನ್ನು ಸಂಭಾಳಿಸಲು ತತ್ಪರರಾಗಿರುವರು. ಅವರು ನಿತ್ಯ ನೂತನವಾಗಿ ಭಜನೆಯನ್ನು ಮಾಡುವರು. ಅವರ ಪೂಜೆಯನ್ನು ಮಾಡುತ್ತಿರಲು ಇವರ ಮನಸ್ಸು ಎಂದಿಗೂ ತೃಪ್ತಿಯಾಗುವುದಿಲ್ಲ ।।೧೧೯೩।। ಪೂಜೆಯ ಸಾಹಿತ್ಯಗಳನ್ನು ಏಕತ್ರ ಮಾಡಿ ಅತ್ಯಂತ ಪ್ರೇಮದಿಂದ ಸಾಕ್ಷೇಪದಿಂದ ನನ್ನ ಪೂಜೆಯನ್ನು ಮಾಡುವರು. ಆದರೆ ಏಕಾಂತದಲ್ಲಿ ಈ ರೀತಿಯಲ್ಲಿ ಪೂಜೆಯನ್ನು ಮಾಡುತ್ತಿರಲು ಒಂದು ವೇಳೆ ಯಾರಾದರೂ ಸಾಧು ಸಂತರು ಮನೆಗೆ ಆಗಮಿಸಿದರೆ ।।೧೧೯೪।। ಆಗ ಅವರ ಪೂಜೆಯನ್ನು ಮಾಡದೇ ನನ್ನ ಪೂಜೆಯಲ್ಲಿಯೇ ನಿರತರಾದರೆ ಅದು ಅವರ ಪೂಜೆಯೇ ಅಲ್ಲ. ಆತನು ನನಗೆ ಕಾಲಿನಿಂದ ಒದ್ದಂತಾಗುವುದು. ಇಲ್ಲವೇ ನನ್ನನ್ನು ಕೊಲ್ಲಲು ಪ್ರವರ್ತನಾದಂತಾಗುವುದು ।।೧೧೯೫।। ಒಬ್ಬ ತಾಯಿಗೆ ಒಬ್ಬನೇ ಒಬ್ಬ ಮಗನಿರುವನು. ಆಗ ಯಾರೋ ಒಬ್ಬರು ಆ ಮಗನಿಗೆ ತಲೆಗೆ ಒದ್ದು ನಂತರ ಆ ತಾಯಿಗೆ ಶಾಂತಗೊಳಿಸಲು ಪೀತಾಂಬರವನ್ನು ಕೊಟ್ಟರೂ ಕೂಡ ಆಕೆಯ ಕ್ರೋಧವು ಶಾಂತವಾಗಲಾರದು ।।೧೧೯೬।।

ತೇವೀ ಅವಗಣುನೀ ಮಾಝಿಯಾ ಸಂತಾ । ಮೀಚಿ ಕ್ಷೋಭೇ ಮಜ ಪೂಜಿತಾ । ತೇ ಸೇವಾ ನವ್ಹೇ ಸರ್ವಥಾ। ಅತಿಕ್ಷೋಭಕತಾ ಮಜ ಕೇಲೀ ।।೧೧೯೭।। ಸಂತ ಮಾಝೇ ಲಳೇವಾಡ । ತ್ಯಾಂಚೀ ಪೂಜಾ ಮಜ ಲಾಗೇ ಗೋಡ । ಸಂತಸೇವಕಾಂಚೇ ಮೀ ಪುರವೀ ಕೋಡ । ಮಜ ನಿಚಾಡಾ ಜಾಡ ಸಂತಾಂಚೀ ।।೧೧೯೮।। ಸಾಂಡೂನಿ ಮಾಝೀ ಪೂಜಾಧ್ಯಾನ । ಜೋ ಸಂತಾಸೀ ಘಾಲೀ ಲೋಟಾಂಗಣ । ಕೋಟಿ ಯಜ್ಞಾಂಚೇ ಫಳ ಜಾಣ । ಮದರ್ಪಣ ತೇಣೇ ಕೇಲೇ ।।೧೧೯೯।। ಸಕಳ ತೀರ್ಥೀ ತೋಚಿ ನ್ಹಾಲಾ । ಜಪತಪಾದಿಫಳೇ ತೋಚಿ ಲಾಹಿಲಾ । ಸರ್ವ ಪೂಜಾಂಚೇ ಸಾರ ತೋ ಪಾವಲಾ । ಜೇಣೇ ಸಾಧೂ ವಂದಿಲಾ ಸನ್ಮಾನೇ ।।೧೨೦೦।। ಪ್ರತಿಮಾ ಮಾಝ್ಯಾ ಅಚೇತನ ವ್ಯಕ್ತೀ । ಸಂತ ಸಚೇತನ ಮಾಝ್ಯಾ ಮೂರ್ತೀ । ದೃಢ ಭಾವೇ ಕೇಲ್ಯಾ ತ್ಯಾಂಚೀ ಭಕ್ತೀ । ತೇ ಮಜ ನಿಶ್ಚಿತೀ ಪಾವಲೀ ।।೧೨೦೧।। ಪ್ರತಿಮಾ ನಿಜಕಲ್ಪನಾ ಉತ್ತಮ । ಸಂತ ಪ್ರತ್ಯಕ್ಷ ಪುರುಷೋತ್ತಮ । ಚಾಲತೇ ಬೋಲತೇ ಪರಬ್ರಹ್ಮ । ಅತಿ ಉತ್ತಮ ಸಾಧು ಸೇವಾ ।।೧೨೦೨।। ಮಾಝ್ಯಾ ಪ್ರತಿಮಾ ಆಣಿ ಸಾಧುನರ । ತೇಥೇ ಯಾ ರೀತೀ ಭಜತೀ ತತ್ಪರ । ಹಾ ತಂವ ಸಾಂಗೀತಲಾ ನಿರ್ಧಾರ । ಭಜನಪ್ರಕಾರ ತೋ ಏಕ ।।೧೨೦೩।। ಪ್ರತಿಮಾ ಆಣಿ ಸಾಧು ಸೋಜ್ಜ್ವಳೇ । ಆವಡೀ ನ ಪಾಹತೀ ಜ್ಯಾಂಚೇ ಡೋಳೇ । ದೃಷ್ಟೀ ಅಸೋನಿ ತೇ ಆಂಧಳೇ । ಜಾಣ ಕೇವಳೇ ಮೋರಪಿಸೇ ।।೧೨೦೪।। ಜೇವೀ ಕಾ ಪ್ರಿಯಾ ಪುತ್ರ ಧನ । ದೇಖೋನಿಯಾ ಸುಖಾವತೀ ನಯನ । ತೈಸೇ ಸಂತಪ್ರತಿಮಾಚೇ ದರ್ಶನ । ಆವಡೀ ಜಾಣ ಜೋ ಕರೀ ।।೧೨೦೫।। ಅತಿ ಉಲ್ಹಾಸೇ ಜೇ ದರ್ಶನ । ಯಾ ನಾಂವ ಗಾ ದೇಖಣೇಪಣ । ತೇಣೇ ಸಾರ್ಥಕ ನಯನ ಜಾಣ । ದೃಷ್ಟೀಚೇ ಭಜನ ಯಾ ರೀತೀ ।।೧೨೦೬।। ದೇಖೋನಿ ಸಂತ ಮಾಝೀ ರೂಪಡೀ । ಜೋ ಧಾಂವೋನಿಯಾ ಲವಡಸವಡೀ । ಖೇವ ದೇಊನಿಯಾ ಆವಡೀ । ಮಿಠೀ ನ ಸೋಡೀ ವಿಸ್ಮಯೇ ।।೧೨೦೭।। ಐಸೇ ಸಂತಾಂಚೇ ಆಲಿಂಗನ । ತೇಣೇ ಸರ್ವಾಂಗ ಹೋಯ ಪಾವನ । ಕಾ ಮೂರ್ತಿಸ್ಪರ್ಶೇ ಜಾಣ । ಶರೀರ ಪಾವನ ಹೋತಸೇ ।।೧೨೦೮।। ತೀರ್ಥಯಾತ್ರೇ ನ ಚಾಲತಾ । ಸಂತಾಸಮೀಪ ನ ವಚತಾ । ಹರಿರಂಗಣೇ ನ ನಾಚತಾ । ಚರಣ ಸರ್ವಥಾ ನಿರರ್ಥಕ ।।೧೨೦೯।। ಜೋ ಕಾ ನಾನಾ ವಿಷಯಸ್ವಾರ್ಥಾ। ನ ಲಾಜೇ ನೀಚಾಪುಢೇ ಪಿಲಂಗತಾ । ತೋ ಹರಿರಂಗಣೇ ನಾಚ ಮ್ಹಣತಾ । ಆಲಾ ಸರ್ವಥಾ ಉಠವಣ್ಯಾ ।।೧೨೧೦।।

ಅದರಂತೆ ನನ್ನ ಸಂತರ ಉಪೇಕ್ಷೆಯನ್ನು ಮಾಡಿ ನನ್ನ ಪೂಜೆಯನ್ನು ಮಾಡಿದರೆ ನನ್ನ ಕ್ಷೋಭೆಯಾಗುವುದು. ಆತನು ನನ್ನ ಸೇವೆ ಮಾಡಿದಂತೆ ಸರ್ವಥಾ ಆಗುವುದಿಲ್ಲ. ಆತನು ಆ ಯಾವ ಕೃತಿಯಿಂದ ನನ್ನನ್ನು ಕ್ರೋಧಕ್ಕೆ ತಂದನೆಂದು ತಿಳಿಯಬೇಕು ।।೧೧೯೭।। ಸಂತರು ನನಗೆ ಅತ್ಯಂತ ಪ್ರಿಯರಾಗಿರುವರು. ಅವರ ಪೂಜೆಯು ನನಗೆ ಬಹಳ ಹಿತವಾಗುವುದು. ಸಂತ ಸೇವಕರ ಮನೋರಥಗಳನ್ನು ನಾನು ಪೂರ್ಣ ಮಾಡುವೆನು. ನಾನು ನಿರಿಚ್ಛನಾಗಿದ್ದರೂ ನನಗೆ ಸಂತರ ಇಚ್ಛೆಯು ಇರುವುದು ।।೧೧೯೮।। ನನ್ನ ಪೂಜೆ, ಧ್ಯಾನಗಳನ್ನು ಬಿಟ್ಟು ಯಾರು ಸಂತರಿಗೆ ಲೋಟಾಂಗಣವನ್ನು ಹಾಕುವರೋ, ಅವರು ಕೋಟಿ ಯಜ್ಞಗಳ ಫಲವನ್ನು ನನಗೆ ಅರ್ಪಿಸಿದರು ಎಂದು ನಿಶ್ಚಯವಾಗಿ ತಿಳಿಯಬೇಕು ।।೧೧೯೯।। ಆತನು ಸರ್ವ ತೀರ್ಥಗಳಲ್ಲಿ ಸ್ನಾನ ಮಾಡಿದನೆಂದು ತಿಳಿಯಬೇಕು. ಈತನೇ ಜಪತಪಗಳ ಸರ್ವ ಫಲಗಳನ್ನು ಪ್ರಾಪ್ತ ಮಾಡಿಕೊಂಡವನಾಗಿರುವನು. ಈತನು ಅತ್ಯಂತ ಆದರಭಾವದಿಂದ ಸಾಧುವಿಗೆ ನಮಸ್ಕಾರವನ್ನು ಮಾಡಲು, ಸರ್ವ ಪೂಜೆಗಳ ಸಾರವು ಪ್ರಾಪ್ತವಾಗುವುದು ।।೧೨೦೦।। ಪ್ರತಿಮೆಯು ನನ್ನ ಜಡಮೂರ್ತಿಯಾಗಿರುವುದು. ಸಂತರು ನನ್ನ ಸಾಕ್ಷಾತ್ ಚೇತನ ಸ್ವರೂಪರು ಎಂದು ತಿಳಿಯಬೇಕು, ಅತ್ಯಂತ ದೃಢವಾದ ಭಾವದಿಂದ ಅವರ ಭಕ್ತಿಯನ್ನು ಮಾಡಲು ಆ ಭಕ್ತಿಯು ನಿಶ್ಚಿತವಾಗಿ ನನಗೆ ಪ್ರಾಪ್ತವಾಗುವುದು ।।೧೨೦೧।। ನನ್ನ ಪ್ರತಿಮೆಯನ್ನು ಕಲ್ಪನೆಯಿಂದ ತಯಾರಿಸಿರುವರು. ಸಂತರಾದ ಇವರು ಪ್ರತ್ಯಕ್ಷವಾಗಿ ಪುರಷೋತ್ತಮರೇ ಆಗಿರುವರು. ಇವರು ನಡೆಯುವ, ಮಾತನಾಡುವ ಪರಬ್ರಹ್ಮವೇ ಆಗಿರುವರು. ಆದ್ದರಿಂದ ಸಾಧು ಸೇವೆಯು ಬಹಳ ಉತ್ತಮವಾಗಿರುವುದು ।।೧೨೦೨।। ನನ್ನ ಪ್ರತಿಮೆ ಮತ್ತು ಸಾಧು -ಪುರುಷ ಇವರ ಸೇವೆಯನ್ನು ಮಾಡುತ್ತ ಭಕ್ತರು ನನಗೆ ಯಾವ ಪ್ರಕಾರವಾಗಿ ಭಜಿಸುವರೆಂಬುದನ್ನು ನಾನು ನಿನಗೆ ಹೇಳಿದೆನು. ಭಜನೆಯ ಪ್ರಕಾರವನ್ನು ಕೇಳು ।।೧೨೦೩।। ನನ್ನ ಪ್ರತಿಮೆ ಮತ್ತು ಸಾಧು ಸಂತ ಜನರನ್ನು ಯಾರ ನೇತ್ರಗಳು ಪ್ರೇಮದಿಂದ ನೋಡುವುದಿಲ್ಲವೋ ಅವರ ಯಾವ ಆ ಕಣ್ಣುಗಳು ನವಿಲಿನ ಗರಿಗಳಲ್ಲಿನ ಕಣ್ಣಿನಂತೆ ಕುರಡಾಗಿರುವುವು ।।೧೨೦೪।। ಯಾವ ಪ್ರಕಾರವಾಗಿ ಹೆಂಡತಿ, ಮಕ್ಕಳು, ಸಂಪತ್ತು ಇವುಗಳನ್ನು ಕಂಡು ಕಣ್ಣುಗಳಿಗೆ ಸುಖವಾಗುತ್ತಿರುವುದೋ, ಅದರಂತೆ ಆತನು ಅತ್ಯಂತ ಪ್ರೇಮದಿಂದ ಸಂತ, ಪ್ರತಿಮೆಗಳ ದರ್ಶನವನ್ನು ಪಡೆಯುತ್ತಿರುವನು ।।೧೨೦೫।। ಆತನು ಯಾವ ಅತಿ ಉತ್ಕಟೇಚ್ಛೆಯಿಂದ ದರ್ಶನವನ್ನು ಪಡೆಯುವನೋ ಅದುವೇ ನೋಡುವಿಕೆಯಾಗಿರುವುದು. ಇದರಿಂದಲೇ ನೇತ್ರಗಳ ಸಾರ್ಥಕವಾಗುವುದು. ಈ ರೀತಿಯಿಂದ ನೇತ್ರಗಳಿಂದ ಭಜನೆಯಾಗುತ್ತಿರುವುದು ।।೧೨೦೬।। ಸಂತರಾದ ಇವರು ನನ್ನ ಮೂರ್ತಿಯೇ ಆಗಿರುವರು ಎಂದು ತಿಳಿದು ಅವರನ್ನು ಕಂಡು ಅತ್ಯಂತ ಉತ್ಕಂಠ ಭಾವದಿಂದ ಅವರತ್ತ ಧಾವಿಸಿ ಅವರನ್ನು ಆಲಿಂಗಿಸಬೇಕು. ಆನಂದದಿಂದ ಅಪ್ಪಿಕೊಂಡಿದ್ದನ್ನು ಬಿಡಬಾರದು ।।೧೨೦೭।। ಈ ಪ್ರಕಾರವಾಗಿ ಸಂತರ ಆಲಿಂಗನವನ್ನು ತೆಗೆದುಕೊಳ್ಳಲು ಆ ಯೋಗದಿಂದ ಸರ್ವ ಅಂಗವು ಪಾವನವಾಗುವುದು. ಮೂರ್ತಿಯ ಸ್ಪರ್ಶದಿಂದಲೂ ಅಂಗವು ಪಾವನವಾಗುವುದು ।।೧೨೦೮।। ತೀರ್ಥಕ್ಷೇತ್ರಗಳಿಗಾಗಿ ನಡೆಯದ, ಸಂತರ ಸಮೀಪ ಹೋಗದ ಮತ್ತು ನನ್ನ ಕೀರ್ತನ ರಂಗದಲ್ಲಿ ಕುಣಿಯದ ಕಾಲುಗಳು ಸರ್ವಥಾ ನಿರರ್ಥಕವಾಗಿರುವುವು ।।೧೨೦೯।। ಅನೇಕ ಪ್ರಕಾರಗಳ ವಿಷಯ ಸುಖಕ್ಕಾಗಿ ಹೀನ ಮನುಷ್ಯನಲ್ಲಿ ಯಾದರೂ ಕೆಲಸಕ್ಕೆ ಬಾರದ ಕಾರ್ಯಗಳನ್ನು ಮಾಡುವನು. ಆದರೆ ಹರಿಕೀರ್ತನೆಯಲ್ಲಿ ಕುಣಿಯಬೇಕೆಂದರೆ ಆತನಿಗೆ ನಾಚಿಕೆಯಾಗುವುದು; ಅಲಸ್ಯ ಮಾಡುವನು ।।೧೨೧೦।।

ತೀರ್ಥಯಾತ್ರಾ ಕ್ಷೇತ್ರ ಗಮನತಾ । ಹರಿಕೀರ್ತನಾ ಜಾಗರಣಾ ಜಾತಾ । ಸಂತಸಮಾಗಮೇ ಚಾಲತಾ । ಕಾ ನೃತ್ಯ ಕರಿತಾ ಹರಿರಂಗೀ ।।೧೨೧೧।। ಯಾ ನಾಂವ ಗಾ ಸಾರ್ಥಕಚರಣ । ಇತರ ಸಂಚಾರ ಅಧೋಗಮನ । ಚರಣಾಚೇ ಪಾವನಪಣ । ಯಾ ನಾಂವ ಜಾಣ ಉದ್ಧವಾ ।।೧೨೧೨।। ಸರ್ವಭಾವೇ ಅವಂಚನ । ಕವಡೀ ಧರೂನಿ ಕೋಟೀ ಧನ । ಜೇಣೇ ಕೇಲೇ ಮದರ್ಪಣ । ಮಾಝೇ ಅರ್ಚನ ಯಾ ನಾಂವ ।।೧೨೧೩।। ಧನಧಾನ್ಯ ವಂಚೂನಿ ಗಾಂಠೀ । ಮಾಝೀ ಪೂಜಾ ಆಹಾಚ ದೃಷ್ಟೀ । ತೇ ನವ್ಹೇ ಅರ್ಚನ ಹಾತವಟೀ । ತೋ ಜಾಣ ಕಪಟೀ ಮಜಸೀ ಪೈ ।।೧೨೧೪।। ಲೋಭೇ ಖಾವಯಾ ಆಪಣ । ಠೇವೀ ಪ್ರತಿಮೇಪುಢೇ ಪಕ್ವಾನ್ನ । ಅತೀತ ಆಲಿಯಾ ನ ಘಾಲೀ ಅನ್ನ । ಮದರ್ಚನ ತೇ ನವ್ಹೇ ।।೧೨೧೫।। ಕರ ಪವಿತ್ರ ಕರಿತಾ ಪೂಜಾ । ತೇ ಆವಡತೀ ಅಧೋಕ್ಷಜಾ । ಜೇ ನ ಪೂಜಿತೀ ಗರುಡಧ್ವಜಾ । ತ್ಯಾ ಜಾಣ ಭುಜಾ ಪ್ರೇತಾಚ್ಯಾ ।।೧೨೧೬।। ನ ಕರಿತಾ ಹರಿಪೂಜನೇ । ನ ದೇತಾ ಸತ್ಪಾತ್ರೀ ದಾನೇ । ಜಡಿತ ಮುದ್ರಾ ಬಾಹುಭೂಷಣೇ । ತೇ ಪ್ರೇತಾಸೀ ಲೇಣೇ ಲೇವವಿಲೇ ।।೧೨೧೭।। ವಾಚಾ ಸಾರ್ಥಕ ಹರಿಕೀರ್ತನೇ । ಕಾ ಅನಿವಾರ ನಾಮಸ್ಮರಣೇ । ಜಯಜಯಕಾರಾಚೇನಿ ಗರ್ಜನೇ । ಕೇಲೀ ತ್ರಿಭುವನೇ ಪಾವನ ।।೧೨೧೮।। ರಾಮನಾಮಾಚ್ಯಾ ಗಜರೀ । ಸದಾ ಗರ್ಜೇ ಜ್ಯಾಚೀ ವೈಖರೀ । ತೇಥ ಕಳಿಕಾಳಾಚೀ ನುರೇ ಉರೀ । ದುರಿತೇ ದೂರೀ ಪಳಾಲೀ ।।೧೨೧೯।। ಹರಿನಾಮ ಸಾಂಡೂನಿ ಕರಂಟೇ । ಮಿಥ್ಯಾ ಕರಿತಾತೀ ಚಾವಟೇ । ಜೇವೀ ಹಾಗವಣೇ ಪಿಟಪಿಟೇ । ತೈಶಾ ಗೋಠೀ ಜಲ್ಪತೀ ।।೧೨೨೦।। ಹರಿನಾಮಾಚಾ ಸುಖಸುರವಾಡ । ಜ್ಯಾಚೇ ಮುಖೀ ಲಾಗಲಾ ಗೋಡ । ತ್ಯಾಚೇ ಮಜಪಾಶೀ ಸರತೇ ತೋಂಡ । ಮೀ ಅಖಂಡ ತ್ಯಾಜವಳೀ ।।೧೨೨೧।। ಗದ್ಯಪದ್ಯೇ ಸ್ತವನಮಾಳಾ । ನಾನಾ ಪದಬಂಧಾಚಿ ಕಳಾ । ಛಂದೇ ಕುಸರೀ ವಿಚಿತ್ರ ಲೀಳಾ । ಸ್ತುತಿ ಗೋಪಾಳಾ ಅರ್ಪಾವೀ ।।೧೨೨೨।। ಧೈರ್ಯ ಸ್ಥೈರ್ಯ ಔದಾರ್ಯ । ಘನಶ್ಯಾಮ ಅತಿ ಸೌಂದರ್ಯ । ಶೌರ್ಯ ವೀರ್ಯ ಅತಿಮಾಧುರ್ಯ । ಗುಣಗಾಂಭೀರ್ಯ ಗೋವಿಂದೂ ।।೧೨೨೩।। ತ್ರಿವಿಕ್ರಮ ಉಭಾ ಬಳೀಚ್ಯಾ ದ್ವಾರೀ । ದ್ವಾರ ನ ಸಾಂಡೂನಿ ದ್ವಾರಕರೀ । ತೇಣೇ ದ್ವಾರೇ ದ್ವಾರಕೇಭೀತರೀ । ಯೇಊನಿ ಉದ್ಧರೀ ಕುಶಾತೇ ।।೧೨೨೪।।

ಪುಣ್ಯಕ್ಷೇತ್ರಗಳಿಗಾಗಿ ತೀರ್ಥಯಾತ್ರೆಗಳನ್ನು ಮಾಡುತ್ತಿರುವುದು, ಹರಿಕೀರ್ತನೆಗೆ ಹೋಗಿ ಜಾಗರಣೆಯನ್ನು ಮಾಡುವುದು, ಸಂತರ ದಿಂಡಿಯಲ್ಲಿ ಪಾದಯಾತ್ರೆ ಮಾಡುವುದು ಮತ್ತು ಹರಿಕೀರ್ತನೆಯಲ್ಲಿ ಅತ್ಯಂತ ಪ್ರೇಮದಿಂದ ಕುಣಿಯುವುದು ।।೧೨೧೧।। ಇದಕ್ಕೇನೇ ಚರಣಗಳ ಸಾರ್ಥಕತೆ ಎಂದು ಹೇಳುವರು. ಇತರ ಕಡೆ ಹೋಗುವುದೆಂದರೆ ಅಧಃಪಾತದತ್ತ ಹೋದಂತಾಗುವುದು. ಹೇ ಉದ್ಧವನೇ, ಇದರ ಹೆಸರೇ ಚರಣಗಳ ಪವಿತ್ರತೆಯಾಗಿರುವುದು ।।೧೨೧೨।। ಅಂತಃಕರಣದಲ್ಲಿ ನಿಷ್ಕಪಟ ಭಾವವನ್ನಿಟ್ಟು ಕೋಟ್ಯಾವಧಿ ದ್ರವ್ಯರಾಶಿಯತ್ತ ಲಕ್ಷವನ್ನಿಡದೇ ಮನಸ್ಸನ್ನು ನನ್ನಲ್ಲಿ ಅರ್ಪಣೆ ಮಾಡುವುದಕ್ಕೆ ಅರ್ಚನ ಎಂದು ಹೆಸರಾಗುವುದು ।।೧೨೧೩।। ಯಾವನು ಧನಧಾನ್ಯಗಳ ಸಂಗ್ರಹ ಮಾಡಿ ಅದರತ್ತ ಪೂರ್ಣ ಲಕ್ಷವನ್ನಿಟ್ಟು, ಜನರಿಗೆ ತೋರಿಸುವ ಉದ್ದೇಶಕ್ಕಾಗಿ ಪೂಜೆಯನ್ನು ಮಾಡುವನೋ, ಅದು ನಿಜವಾದ ಪೂಜೆಯಲ್ಲ ಆತನು ನನ್ನಲ್ಲಿ ಕಪಟವನ್ನು ಮಾಡುವವನಾಗಿರುವನು ।।೧೨೧೪।। ತನಗೆ ತಿನ್ನಲು ದೊರೆಯಬೇಕೆಂಬ ಈ ಆಶೆಯಿಂದ ಯಾವನು ದೇವಮೂರ್ತಿಯ ಮುಂದೆ ಪಕ್ವಾನ್ನವನ್ನು ಇಟ್ಟು, ಮನೆಗೆ ಬಂದ ಅತಿಥಿಗೆ ಅನ್ನವೂ ಸಹ ಹಾಕಲಾರನು. ಹೀಗೆ ಮಾಡುವುದು ನಿಜವಾದ ಅರ್ಚನೆಯಲ್ಲ ।।೧೨೧೫।। ಭಗವಂತನ ಪೂಜೆಯನ್ನು ಮಾಡಲು ಕೈಗಳು ಪವಿತ್ರವಾಗುವುವು. ಮತ್ತು ಈ ಕೈಗಳೇ ಭಗವಂತನಿಗೆ ಪ್ರಿಯವಾಗುವುವು. ಯಾರ ಕೈಗಳು ಭಗವಂತನ ಪೂಜೆಯನ್ನು ಮಾಡುವುದಿಲ್ಲವೋ, ಆ ಕೈಗಳು ಪ್ರೇತದ್ದಾಗಿರುವುವು ।।೧೨೧೬।। ಶ್ರೀಹರಿಯ ಪೂಜೆಯನ್ನು ಮಾಡದ, ಸತ್ಪಾತ್ರಗಳಿಗೆ ದಾನಗಳನ್ನು ನೀಡದ ತನ್ನ ಕೈಗಳನ್ನು ರತ್ನ ಜಡಿತ ಅಲಂಕಾರಗಳಿಂದ ಮಂಡಿಸಿ, ಜನರಲ್ಲಿ ಮೆರೆಯುವವನು, ಹೆಣಕ್ಕೆ ಶೃಂಗರಿಸಿದಂತಾಗುವುದು ।।೧೨೧೭।। ಹರಿ ಕೀರ್ತನೆಗಳನ್ನು ಮಾಡುವುದರಿಂದ ವಾಣಿಯ ಸಾರ್ಥಕವಾಗುವುದು. ಅಖಂಡ ನಾಮಸ್ಮರಣೆಯಿಂದ ವಾಚಾ ಪವಿತ್ರವಾಗುವುದು. ಭಗವಂತನ ಜಯಜಯಕಾರಗಳನ್ನು ಮಾಡಲು ಆ ಗರ್ಜನೆಯಿಂದ ತ್ರಿಭುವನವು ಪಾವನವಾಗುವುದು ।।೧೨೧೮।। ಯಾರ ವಾಣಿಯು ಸತತವಾಗಿ ರಾಮನಾಮದ ಘೋಷವನ್ನು ಮಾಡುವುದೋ, ಅಲ್ಲಿ ಕಲಿಕಾಲನಿಗೆ ನಿಂತುಕೊಳ್ಳಲೂ ಸಹ ಸಾಧ್ಯವಿಲ್ಲದಾಗುವುದು. ಸರ್ವ ಪ್ರಕಾರಗಳ ಪಾತಕಗಳು ದೂರ ಓಡಿ ಹೋಗುವುವು ।।೧೨೧೯।। ದುರ್ದೈವೀ ಮನುಷ್ಯರು ಶ್ರೀಹರಿಯ ನಾಮವನ್ನು ಉಚ್ಚರಿಸದೇ ಕೆಲಸಕ್ಕೆ ಬಾರದ ಮಿಥ್ಯಾ ಮಾತನಾಡುವರು. ಎರಡಕ್ಕೆ ಕುಳಿತಾಗ ಕುಂಡಿಯ ಪುರಪುರ ಶಬ್ದದಂತೆ ಇವರ ಬಡಬಡಿಕೆಯಾಗಿದೆ ಎಂದು ತಿಳಿಯಬೇಕು ।।೧೨೨೦।। ಯಾರ ಮುಖಕ್ಕೆ ಹರಿನಾಮದ ಸುಖವು ಹತ್ತಿರುವುದೋ, ಆತನು ಸರ್ವಕಾಲದಲ್ಲಿಯೂ ನನ್ನೆದುರಿನಲ್ಲಿಯೇ ಇರುವನು. ಹಾಗೆಯೇ ನಾನೂ ಕೂಡ ನಿರಂತರವಾಗಿ ಆತನ ಹತ್ತಿರ ಇರುವೆನು ।।೧೨೨೧।। ಅನೇಕ ಪ್ರಕಾರಗಳ ಗದ್ಯಪದ್ಯಾತ್ಮಕ ಸ್ತವನೆಗಳು, ಕೌಶಲ್ಯದಿಂದ ರಚಿಸಿರುವ ಪ್ರೇಮಮಯ ವಚನಗಳು, ಭಿನ್ನ ಭಿನ್ನ ವೃತ್ತಿಗಳಲ್ಲಿ ರಚಿಸಿರುವ ಲೀಲಾತ್ಮಕ ಚರಿತ್ರೆಗಳು ಇವುಗಳನ್ನೆಲ್ಲ ಗೋಪಾಲನ ಚರಣ ಕಮಲಗಳಲ್ಲಿ ಅರ್ಪಿಸಬೇಕು ।।೧೨೨೨।। ಘನಶ್ಯಾಮ ಶ್ರೀಕೃಷ್ಣನು ಅತಿ ಸುಂದರನಾಗಿರುವನು. ಆ ಗೋವಿಂದನಲ್ಲಿ ಧೈರ್ಯ, ಶೌರ್ಯ, ಔದಾರ್ಯ, ಸ್ಥೈರ್ಯ, ವೀರ್ಯ ಹಾಗೂ ಅತಿ ಮಾಧುರ್ಯ ಈ ಗುಣಗಳೆಲ್ಲವೂ ವಿಪುಲವಾಗಿ ಒಂದುಗೂಡಿರುವುವು ।।೧೨೨೩।। ಶ್ರೀಕೃಷ್ಣನು ಬಲಿಯ ದ್ವಾರಪಾಲನಾಗಿ ಆತನ ಬಾಗಿಲದಲ್ಲಿ ನಿಂತಿರುವನು. ಅದೇ ದ್ವಾರದಿಂದ ದ್ವಾರಕೆಗೆ ಬಂದು ಆತನು ಕುಶನ ಉದ್ಧಾರವನ್ನು ಮಾಡಿದನು ।।೧೨೨೪।।

ತೋ ಅದ್ಯಾಪಿ ಶ್ರೀಹರೀ । ಸ್ವಯೇ ಉಭಾ ಸಮುದ್ರತೀರೀ । ಶೋಭಾ ವಿರಾಜಮಾನ ಸಾಜಿರೀ । ಅಸುರಸುರನರೀ ವಂದಿಜೇ ॥೧೨೨೫॥ ಮತ್ಸ್ಯ ಝಾಲಾ ತೋ ಸಾಗರೀ । ವರಾಹ ಝಾಲಾ ನಾಸಿಕದ್ವಾರೀ ।.ಉಪಜಲಾ ಖಾಂಬಾಮಾಝಾರೀ । ಯಶೋದೇಘರೀ ಪೋಸಣಾ ॥೧೨೨೬॥ ಜರಠಪಾಠೀ ಝಾಲಾ ಕಮಠೂ । ಬಳಿಚ್ಛಳನೀ ತೋ ಖುಜಟೂ । ವೇದವಾದೇ ಅತಿವಾಜಟೂ । ಘುರಘುರಾಟೂ ನಿಃಶ್ವಾಸೇ ॥೧೨೨೭॥ ಬಾಈಲ ಚೋರೀ ನೇಲೀ ಪರದೇಶೀ । ತೀಲಾಗೀ ರಡೇ ಪಡೇ ವನವಾಸೀ । ಏಕಹೀ ಗುಣ ನಾಹೀ ತ್ಯಾಪಾಶೀ । ಶೇಖೀ ದಾಸೀ ಕುಬ್ಜೇಸೀ ರಾತಲಾ ॥೧೨೨೮॥ ''ಸ್ತುತಿ - ಗುಣಕರ್ಮಾನುಕೀರ್ತನ'' । ತೇ ಯಾ ನಾಂವ ಗಾ ತೂ ಜಾಣ । ''ಪ್ರಹ್ವ'' ಮ್ಹಣಿಜೇ ತೇ ನಮನ । ತೇಹೀ ವ್ಯಾಖ್ಯಾನ ಅವಧಾರೀ ॥೧೨೨೯॥ ಮಾಝ್ಯಾ ಪ್ರತಿಮಾಂಚೇ ದರ್ಶನ । ಕಾ ದೇಖೋನಿ ಸಂತಜನ । ಜೋ ಭಾವೇ ಘಾಲೀ ಲೋಟಾಂಗಣ । ದೇಹಾಭಿಮಾನ ಸಾಂಡೂನಿ ॥೧೨೩೦॥ ಸಾಧುಜನಾಂಸೀ ವಂದಿತಾ । ಧಣೀ ನ ಮನೀ ಜೋ ಚಿತ್ತಾ । ಪುನಃಪುನ್ಹಾ ಚರಣೀ ಮಾಥಾ । ವಿನೀತತಾ ಅತಿನಮ್ರ ॥೧೨೩೧॥ ಭಾಗವತಾಚೇ ರಜಃಕಣ । ಜೋ ಮಸ್ತಕೀ ವಂದೀನಾ ಆಪಣ । ತೋ ಜೀವೇ ಜೀತಾ ಪ್ರೇತ ಜಾಣ। ಅಪವಿತ್ರಪಣ ತೈಸೇ ತಯಾ ॥೧೨೩೨॥ ಸಾಂಡೂನಿ ಲೌಕಿಕಾಚ್ಯಾ ಲಾಜಾ । ಜೋ ವೈಷ್ಣವಾಂಚ್ಯಾ ಚರಣರಜಾ। ಗಡಬಡಾ ಲೋಳೇ ವೋಜಾ । ಹಾ ಭಕ್ತೀಚಾ ಮಾಝಾ ಉಲ್ಹಾಸ ॥೧೨೩೩॥ ಯಾ ಆವಡೀ ಕರಿತಾ ನಮನ। ಸಹಜೇ ಜಾತೀ ಮಾನಾಭಿಮಾನ । ಹೇ ಮುಖ್ಯ ಭಕ್ತೀಚೇ ಲಕ್ಷಣ । ಜೇ ಮಾನಾಭಿಮಾನ ಸಾಂಡಾವೇ ॥೧೨೩೪॥ ತ್ಯಾಜಾವಯಾ ಮಾನಾಭಿಮಾನ । ಕರಾವೇ ಮತ್ಕೀರ್ತನ ಶ್ರವಣ । ಶ್ರವಣಾದಿ ಭಕ್ತೀಚೇ ಲಕ್ಷಣ । ಏಕ ಸಂಪೂರ್ಣ ಉದ್ಧವಾ ॥೧೨೩೫॥

ಮತ್ಕಥಾಶ್ರವಣೇ ಶ್ರದ್ಧಾ ಮದನುಧ್ಯಾನಮುದ್ಧವ । ಸರ್ವಲಾಭೋಪಹರಣಂ ದಾಸ್ಯೇ ನಾತ್ಮನಿವೇದನಮ್ ।೩೫॥

ಅರ್ಥ :- ಹೇ ಉದ್ಧವನೇ, ಶ್ರದ್ಧೆಯಿಂದ ನನ್ನ ಕಥೆಯನ್ನು ಕೇಳಬೇಕು. ನಿರಂತರವಾಗಿ ನನ್ನ ಧ್ಯಾನವನ್ನು ಮಾಡುತ್ತಿರಬೇಕು. ಏನೇ ಪ್ರಾಪ್ತವಾಗಲಿ ಅದನ್ನು ನನಗೆ ಅರ್ಪಿಸಬೇಕು. ದಾಸ್ಯ ಭಾವನೆಯಿಂದ ನನಗೆ ಆತ್ಮನಿವೇದನೆಯನ್ನು ಮಾಡಬೇಕು.

ದೃಢ ಆಸ್ತಿಕ್ಯೇ ಸಮಾಧಾನ । ಶುದ್ಧ ಶ್ರದ್ಧಾ ತ್ಯಾ ನಾಂವ ಜಾಣ । ಭಾವಾರ್ಥೇ ನ ಡಂಡಳೀ ಮನ। ಕಥಾಶ್ರವಣ ಸಾಧರೇ ॥೧೨೩೬॥

ಅದೇ ಶ್ರೀಹರಿಯು ಈಗಲೂ ಸಮುದ್ರದ ದಡದಲ್ಲಿ ಪ್ರತ್ಯಕ್ಷವಾಗಿ ನಿಂತಿರುವನು. ಆತನ ಶೋಭೆಯು ಅವರ್ಣನೀಯವಾಗಿರುವುದು. ದೇವಲೋಕದವರು ಮತ್ತು ಮನುಷ್ಯ ಲೋಕದವರು ಆತನನ್ನು ವಂದಿಸುವರು ।೧೨೨೫॥ ಆತನೇ ಸಮುದ್ರದಲ್ಲಿ ಮತ್ಸ್ಯರೂಪನಾಗಿದ್ದನು. ನಾಸಿಕದ್ವಾರಾ ಆತನೇ ವರಾಹರೂಪ ತಾಳಿದ್ದನು. ಆತನೇ ನೃಸಿಂಹರೂಪದಿಂದ ಖಂಬದಿಂದ ಪ್ರಕಟನಾಗಿದ್ದನು. ಆತನೇ ಯಶೋದೆಯ ಮನೆಯಲ್ಲಿ ಬೆಳೆದನು ।೧೨೨೬॥ ಆತನು ಕಠಿಣವಾದ ಬೆನ್ನುಳ್ಳ ಆಮೆಯಾದನು. ಬಳಿಯನ್ನು ಕಾಡಲು ಆತನೇ ಕುಳ್ಳ ವಾಮನಮೂರ್ತಿಯಾದನು. ಆತನ ನಿಃಶ್ವಾಸದಿಂದ ಆಗುವ ಘುರಘುರಾಟ ವೇದವಾದದ ಶಬ್ದದಿಂದ ದೊಡ್ಡದಾಗಿ ಧ್ವನಿಯಾಗುತ್ತಿರುವುದು ।೧೨೨೭॥ ಹೆಂಡತಿಯನ್ನು ಕದ್ದು ಪರದೇಶಕ್ಕೆ ಒಯ್ಯಲ್ಪಟ್ಟದ್ದಕ್ಕೆ ಆಕೆಗಾಗಿ ವನವಾಸದಲ್ಲಿ ಅಳುತ್ತಿದ್ದವನು ಆತನೇ, ಆತನಲ್ಲಿ ಒಂದೂ ಸಹ ಗುಣವಿಲ್ಲ. ಕೊನೆಗೆ ದಾಸಿಯಾಗಿರುವ ಕುಬ್ಜೆಯಲ್ಲಿಯೂ ರತಿಸಿದನು ।೧೨೨೮॥ ಹೀಗೆ ವರ್ಣಿಸಲು ಆಗ ಇದರ ಹೆಸರು ''ಸ್ತುತಿ ಗುಣಕರ್ಮಾನು ಕೀರ್ತನ'' ಎಂದಾಗುವುದು ಎಂದು ತಿಳಿದುಕೋ. ಈಗ ''ಪ್ರಹ್ವ'' ಎಂದರೆ ನಮನ, ಅದರ ನಿರೂಪಣೆಯನ್ನು ಹೇಳುವೆನು, ಅದನ್ನು ಕೇಳು ।೧೨೨೯॥ ನನ್ನ ಭಕ್ತನಿಗೆ ದೇಹಾಭಿಮಾನವು ಇರುವುದಿಲ್ಲ. ಆತನು ನನ್ನ ಪ್ರತಿಮೆಯ ದರ್ಶನವಾಗುತ್ತಲೇ ಅಥವಾ ಸಾಧು ಸಂತರು ಕಾಣುತ್ತಲೇ ಅವರಿಗೆ ಭಕ್ತಿಯುಕ್ತನಾಗಿ ಅಂತಃಕರಣದಿಂದ ಲೋಟಾಂಗಣವನ್ನು ಹಾಕುವನು ।೧೨೩೦॥ ಸಾಧು ಸಂತರಿಗೆ ಮನೋಭಾವದಿಂದ ವಂದನೆಯನ್ನು ಮಾಡುತ್ತಿದ್ದರೂ ಆತನ ಮನಸ್ಸಿಗೆ ತೃಪ್ತಿಯಾಗುವುದಿಲ್ಲ. ಅತ್ಯಂತ ನಮ್ರಭಾವದಿಂದ ಮತ್ತು ವಿನಯ ಪೂರ್ವಕವಾಗಿ ಆತನು ಮೇಲಿಂದ ಮೇಲೆ ಅವರ ಚರಣಗಳಲ್ಲಿ ತನ್ನ ಮಸ್ತಕವನ್ನಿಡುವನು. ಇದಕ್ಕೆ ನಮನ ಎಂದು ಹೇಳುವರು ।೧೨೩೧॥ ಭಗವದ್ಭಕ್ತರ ಪಾದಧೂಳನ್ನು ಯಾರು ತನ್ನ ಮಸ್ತಕಕ್ಕೆ ಧರಿಸಲಾರನೋ, ಅವನು ಜೀವಂತನಾಗಿದ್ದರೂ ಪ್ರೇತಸಮಾನನು. ಈ ರೀತಿಯ ಅಪವಿತ್ರತೆಯು ಆತನಿಗೆ ಒದಗುವುದು ।೧೨೩೨॥ ಯಾವನು ಲೌಕಿಕರ ಯಾವ ಲಜ್ಜೆಯನ್ನು ನೋಡದೇ ಅತ್ಯಂತ ಪ್ರೇಮದಿಂದ ವೈಷ್ಣವರ ಚರಣಧೂಳಿನಲ್ಲಿ ಗಡಗಡನೇ ಉರುಳಾಡುವನೋ, ಈ ಯಾವ ವರ್ತನೆಯು ನನ್ನ ಭಕ್ತಿಯ ಬೆಳವಣಿಗೆಯಾಗಿರುವುದು ।೧೨೩೩॥ ಈ ರೀತಿಯಿಂದ ಅಂತಃಕರಣ ಪೂರ್ವಕವಾಗಿ ನಮನವನ್ನು ಮಾಡಲು ದೇಹಾಭಿಮಾನವು ಸಹಜವಾಗಿ ಇಲ್ಲದಾಗುವುದು. ಇದೇ ಭಕ್ತಿಯ ಮುಖ್ಯ ಲಕ್ಷಣವಾಗಿರುವುದು. ಅದಕ್ಕಾಗಿ ಮಾನಾಭಿಮಾನವನ್ನು ಬಿಡಬೇಕು ।೧೨೩೪॥ ಹೀಗೆ ಮಾನಾಭಿಮಾನವನ್ನು ಬಿಡುವದಕ್ಕಾಗಿ ನನ್ನ ಕೀರ್ತನೆ-ಶ್ರವಣವನ್ನು ಮಾಡಬೇಕು. ಅದಕ್ಕಾಗಿ ಶ್ರವಣಾದಿ ಭಕ್ತಿಯ ಲಕ್ಷಣಗಳನ್ನು ಪೂರ್ಣವಾಗಿ ಕೇಳು ।೧೨೩೫॥

ಅತ್ಯಂತ ದೃಢಭಾವದ ಆಸ್ತಿಕಭಾವದಿಂದ ಅಂತಃಕರಣದಲ್ಲಿ ಸಮಾಧಾನದಿಂದ ಇರುವಿಕೆ, ಇದೇ ಶುದ್ಧವಾದ ಶ್ರದ್ಧೆಯಾಗಿರುವುದು. ಆದ್ದರಿಂದ ಕಥೆಯನ್ನು ಶ್ರವಣ ಮಾಡಲು ಅದರಲ್ಲಿನ ಭಾವಾರ್ಥದಿಂದ ಮನದ ಚಂಚಲತೆಯು ನಿಲ್ಲುವುದು ।೧೨೩೬॥

ವಕ್ತಾಂಚ್ಯಾ ವಚನಾಪಾಶೀ । ಜಡೂನಿ ಘಾಲೀ ಕಾನಾಮನಾಸೀ । ಶ್ರವಣಾರ್ಥ ವಾಢವೀ ಬುದ್ಧೀಸೀ । ಪಿಲಾ ಕಥೇಸೀ ಭಾವಾರ್ಥೇ ॥೧೨೩೭॥ ಜೇವೀ ದುಧಾಲಾಗೀ ಮಾಂಜರ । ಸಂಧೀ ಪಹಾವಯಾ ಸಾದರ । ತೇವೀ ಸೇವಾವಯಾ ಕಥಾಸಾರ । ನಿರಂತರ ಉಲ್ಲಾಸು ॥೧೨೩೮॥ ಜಡಿತ ಕುಂಡಲೇಮಂಡಿತ ಕಾನ । ತೇ ಶ್ರವಣಾಸೀ ನೋಹೇ ಮಂಡಣ । ಶ್ರವಣಾಸೀ ಶ್ರವಣ ಭೂಷಣ । ಶ್ರವಣೇ ಶ್ರವಣ ಸಾರ್ಥಕ ॥೧೨೩೯॥ ಜರೀ ಸ್ವಯೇ ಝಾಲಾ ವ್ಯಾಖ್ಯಾತಾ । ಪುರಾಣಪಠಣೇ ಪುರತಾ । ತರೀ ಸಾಧುಮುಖೇ ಹರಿಕಥಾ । ಐಕೇ ಸಾದರತಾ ಅತಿಪ್ರೀತೀ ॥೧೨೪೦॥ ಶ್ರವಣೇ ಶ್ರವಣಾರ್ಥೀ ಸಾವಧಾನ । ತೋಚಿ ಅರ್ಥಕರೀ ಮನನ । ಸಂಪಲ್ಯಾ ಕಥಾವಾಖ್ಯಾನ । ಮನೀ ಮನನ ಸಂಪೇನಾ ॥೧೨೪೧॥ ಐಸೇ ಠಸಾವಲ್ಯಾ ಮನನ । ಸಹಜೇಚಿ ಲಾಗೇ ಮಾಝೇ ಧ್ಯಾನ । ಸಗುಣ ಅಥವಾ ನಿರ್ಗುಣ । ಆವಡೀ ಪ್ರಮಾಣ ಧ್ಯಾನಾಸೀ ॥೧೨೪೨॥ ತೇಥ ಧ್ಯೇಯ ಧ್ಯಾನ ಧ್ಯಾತಾ । ತೀಹಿಂಸೀ ಏಕೀ ಗಾಂಠೀ ನಸತಾ । ತಂವಚಿವರೀ ಧ್ಯಾನಾವಸ್ಥಾ । ಜಾಣ ತತ್ತ್ವತಾ ಉದ್ಧವಾ ॥೧೨೪೩॥ ಜ್ಯಾ ಚ್ಯಾ ಜೇವೀ ಧ್ಯಾನಾಚೀ ಆವಡೀ । ಜ್ಯಾಚ್ಯಾ ಮನಾಸೀ ಮಾಝೀ ಗೋಡೀ । ಉದ್ಧವಾ ಹೇ ತ್ಯೈಚಿ ಜೋಡೇ ಜೋಡೀ । ಜ್ಯೈ ಜನ್ಮ ಕೋಡೀ ನಿಜಭಾಗ್ಯೇ ॥೧೨೪೪॥ ನಿಷ್ಕಾಮ ಕರೋನಿಯಾ ಮನ । ಜನ್ಮ ಜನ್ಮಾಂತರೀ ಸಾಧನ । ಕೇಲೇ ಅಸೇಲ ತ್ಯೈ ಮಾಝೇ ಧ್ಯಾನ । ವಿಶ್ವಾಸೇ ಜಾಣ ದೃಢ ಲಾಗೇ ॥೧೨೪೫॥ ದೃಢ ಲಾಗಲ್ಯಾ ಮಾಝೇ ಧ್ಯಾನ । ಅನನ್ಯಭಾವೇ ಮಾಝೇ ಭಜನ । ಸರ್ವ ಪದಾರ್ಥೇಸೀ ಜಾಣ । ಆತ್ಮ ಸಮರ್ಪಣ ಮಜ ಕರೀ ॥೧೨೪೬॥ ವೈದಿಕ ಲೌಕಿಕ ದೈಹಿಕ । ಯಾ ಕ್ರಿಯಾಂಚೇ ಲಾಭ ದೇಖ । ಜರೀ ಝಾಲ್ಯಾ ಅಲೋಕಿಕ । ಭಕ್ತ ಭಾವಿಕ ತ್ಯೈ ನೇಘೇ ॥೧೨೪೭॥ ವೈದೆಕ ಲಾಭ ದಿವ್ಯ ಸಾಮಗ್ರೀ । ಸ್ವರ್ಗಾದಿ ಸತ್ಯಲೋಕಾವರೀ । ಭಕ್ತ ತೇಹೀ ಹಾತೀ ನ ಧರೀ । ಭಜನ ಸುಖೇ ಕರೀ ಸಂತುಷ್ಟ ॥೧೨೪೮॥ ಲೌಕಿಕ ಲಾಭಾಚಿ ಶ್ರೇಣೀ । ಕಲ್ಪತರು ಕಾಮಧೇನು ಚಿಂತಾಮಣೀ । ಭಕ್ತ ಅರ್ಪೀ ಕೃಷ್ಣಾರ್ಪಣೀ । ಹರಿಭಜನೀ ಸಂತುಷ್ಟ ॥೧೨೪೯॥ ದೈಹಿಕ ಲಾಭಾಚೀ ಥೋರೀ । ಗಜಾಂತಲಕ್ಷ್ಮೀ ಆಲ್ಯಾಘರೀ । ಭಕ್ತ ಕೃಷ್ಣಾರ್ಪಣ ಕರೀ । ಭಜನ ಸುಖೇ ಕರೀ ಸಂತುಷ್ಟ ॥೧೨೫೦॥

ಆತನು ವಕ್ತಾನ ಶಬ್ದಗಳಲ್ಲಿ ತನ್ನ ಕಿವಿ, ಮನವನ್ನು ಇಟ್ಟಿರುವನು. ಕೇಳುತ್ತಿರುವ ಅರ್ಥವು ಆತನ ಬುದ್ಧಿಗೆ ಬೆಳೆಸುವುದು. ಭಾವಿಕತನದಿಂದ ಆತನು ಕಥೆಗಾಗಿ ತನ್ನನ್ನು ಮಾರಿಕೊಳ್ಳುವನು ॥೧೨೩೭॥ ಹಾಲನ್ನು ಕುಡಿಯಬೇಕೆಂಬ ಆಶೆಯಿಂದ ಬೆಕ್ಕು ಆ ಸಂಧಿಯನ್ನು ಸಾಧಿಸಲು ಜಪ್ಪಿಸಿ ಕುಳಿತುಕೊಳ್ಳುವುದು. ಅದರಂತೆ ಕಥೆಯಲ್ಲಿನ ಸಾರಭಾವವನ್ನು ಗ್ರಹಿಸುವುದಕ್ಕಾಗಿ ಆತನು ಯಾವಾಗಲೂ ಉತ್ಸುಕತನಾಗಿರುವನು ॥೧೨೩೮॥ ರತ್ನಜಡಿತ ಕುಂಡಲಗಳಿಂದ ತಮ್ಮ ಕಿವಿಗಳನ್ನು ಶೋಭಾಯಮಾನವಾಗಿ ಬೆಳೆಸುವ ಪ್ರಯತ್ನ ಮಾಡಿದರೂ ಕೂಡ ಅದು ಕಿವಿಗಳ ನಿಜವಾದ ಭೂಷಣವಾಗಲಾರದು. ಕಥಾ ಶ್ರವಣಗಳಿಂದ ಮಾತ್ರ ಕಿವಿಗಳ ನಿಜವಾದ ಸಾರ್ಥಕವಾಗುವುದು ॥೧೨೩೯॥ ತಾನು ಸ್ವತಃ ಉತ್ತಮ ವಕ್ತಾನಾಗಿದ್ದರೂ ಸಹ, ಕಥೆ ಪುರಾಣಗಳನ್ನು ಹೇಳುವುದರಲ್ಲಿ ಅತಿಶಯ ನಿಷ್ಣಾತನಾಗಿದ್ದರೂ ಕೂಡ ಸಾಧು ಮುಖದಿಂದ ಹೇಳುವ ಹರಿಕಥೆಯನ್ನು ಅತ್ಯಂತ ಪ್ರೇಮದಿಂದ ಕೇಳುವನು ॥೧೨೪೦॥ ಯಾವನು ಏಕಾಗ್ರಚಿತ್ತದಿಂದ ಕಿವಿಗೊಟ್ಟು ಪ್ರೇಮದಿಂದ ಕೇಳುವನೋ, ಅವನೇ ಕಥೆಯ ಅರ್ಥದ ಮನನವನ್ನು ಮಾಡಬಲ್ಲನು. ಕಥೆಯ ನಿರೂಪಣೆಯು ಮುಗಿದರೂ ಆತನ ಮನದಲ್ಲಿನ ಮನನವು ಮುಗಿಯುವುದಿಲ್ಲ ॥೧೨೪೧॥ ಈ ಪ್ರಕಾರವಾಗಿ ಅಂತಃಕರಣದಲ್ಲಿ ಮನನವು ನಟ್ಟಿಕೊಂಡರೆ, ಸಹಜವಾಗಿಯೇ ನನ್ನಧ್ಯಾನವು ಹತ್ತುವುದು. ಆಗ ಅದು ಸಗುಣವಾಗಿರಲಿ ಅಥವಾ ನಿರ್ಗುಣವಾಗಿರಲಿ, ಧ್ಯಾನಕ್ಕೆ ಪ್ರೇಮ ಒಂದೇ ಪ್ರಮಾಣವಾಗಿರುವುದು ॥೧೨೪೨॥ ಹೇ ಉದ್ಧವನೇ, ಧ್ಯೇಯ, ಧ್ಯಾನ ಮತ್ತು ಧ್ಯಾತಾ ಈ ತ್ರಿಪುಟಿಯ ಏಕರೂಪತೆಯು ಎಲ್ಲಿಯವರೆಗೆ ಆಗಿರುವುದಿಲ್ಲವೋ ಅಲ್ಲಿಯವರೆಗೆ ಧ್ಯಾನಾವಸ್ಥೆಯು ಇರುವುದು. ಹೀಗೆ ತಿಳಿ ॥೧೨೪೩॥ ಯಾರಿಗೆ ಧ್ಯಾನದ ಉತ್ಕಟೇಚ್ಛೆಯಿರುವುದೋ, ಆತನಿಗೆ ಮಾತ್ರ ನನ್ನ ಸುಖವು ಲಭಿಸುವುದು. ಹೇ ಉದ್ಧವನೇ, ಕೋಟ್ಯಾವಧೀ ಜನ್ಮಗಳ ಭಾಗ್ಯವು ಉದಯವಾದರೆ ಮಾತ್ರ ಈ ಲಾಭವು ಪ್ರಾಪ್ತವಾಗುವುದು ॥೧೨೪೪॥ ನಿಷ್ಕಾಮ ಮನಸ್ಸಿನಿಂದ ಅನೇಕ ಜನ್ಮಗಳಲ್ಲಿ ಸಾಧನೆಯನ್ನು ಮಾಡಿರಲು ಆಗ ಮಾತ್ರ ದೃಢವಾದ ವಿಶ್ವಾಸದೊಂದಿಗೆ ನನ್ನ ಧ್ಯಾನವು ಹತ್ತುವುದು ॥೧೨೪೫॥ ನನ್ನ ಧ್ಯಾನವು ದೃಢವಾಗಲು, ಅನನ್ಯ ಭಾವದಿಂದ ನನ್ನ ಭಜನೆಯು ಸಾಧಿಸುತ್ತಿರಲು ಆಗ ಆತನು ಸರ್ವ ಪದಾರ್ಥಗಳೊಂದಿಗೆ ಆತ್ಮಸಮರ್ಪಣೆಯನ್ನು ನನಗೆ ಮಾಡುವನು ॥೧೨೪೬॥ ವೇದದಲ್ಲಿ ವರ್ಣನೆಯನ್ನು ಮಾಡಿದ ಕ್ರಿಯೆಗಳ, ಲೋಕಾರೂಢಿಯಲ್ಲಿ ಮಾನ್ಯವಾಗಿರುವ ಕ್ರಿಯೆಗಳ, ಮತ್ತು ದೇಹ ಸಂಬಂಧ ಕ್ರಿಯೆಗಳ ದಿವ್ಯ ಉಪಭೋಗಗಳು ಪ್ರಾಪ್ತವಾದರೂ ಆ ಭಕ್ತನು ಅವುಗಳನ್ನು ಸ್ಪರ್ಶ ಕೂಡ ಮಾಡಲಾರನು ॥೧೨೪೭॥ ವೈದಿಕ ಲಾಭದಲ್ಲಿ ಸ್ವರ್ಗದಿಂದ ಹಿಡಿದು ಸತ್ಯಲೋಕದವರೆಗೆ ಇರುವ ದಿವ್ಯ ಭೋಗಗಳು ಪ್ರಾಪ್ತವಾಗುವುವು. ಭಕ್ತರು ಅವುಗಳಿಗೆ ಸ್ಪರ್ಶ ಸಹ ಮಾಡುವುದಿಲ್ಲ. ಆತನು ಆನಂದದಿಂದ ಭಜನೆಯನ್ನು ಮಾಡುತ್ತಿರುವನು. ಆದ್ದರಿಂದ ಆತನು ತೃಪ್ತನಾಗಿರುವನು ॥೧೨೪೮॥ ಲೌಕಿಕದಲ್ಲಿ ಅನೇಕ ಲಾಭಗಳ ಸಮುದಾಯವು ಪ್ರಾಪ್ತವಾಗುತ್ತಿರುವುದು. ಕಲ್ಪತರು, ಕಾಮಧೇನು, ಚಿಂತಾಮಣಿಗಳು ಪ್ರಾಪ್ತವಾಗುವುವು. ಈ ಎಲ್ಲವನ್ನು ಶ್ರೀಕೃಷ್ಣನಿಗೆ ಅರ್ಪಿಸಿ, ಭಕ್ತನು ಆನಂದದಿಂದ ಹರಿಭಜನೆಯನ್ನು ಮಾಡುವನು ಮತ್ತು ಅದರಲ್ಲಿಯೇ ಸಂತುಷ್ಟನಾಗುವನು ॥೧೨೪೯॥ ದೈಹಿಕ ಲಾಭದ ವೈಭವವನ್ನು ಏನೆಂದು ವರ್ಣಿಸಬೇಕು? ಗಜಾಂತಲಕ್ಷ್ಮೀಯು ಮನೆಗೆ ಬಂದರೂ ಭಕ್ತನು ಅದನ್ನು ಕೃಷ್ಣಚರಣದಲ್ಲಿ ಅರ್ಪಿಸುವನು. ಅತ್ಯಂತ ಸಂತೋಷದಿಂದ ಭಜನೆಯನ್ನು ಮಾಡುತ್ತಿರುವನು ॥೧೨೫೦॥

ಆವಿರಿಙ್ಚ್ಯಾದಿ ಲಾಭ ಜಾಣ । ಸರ್ವಹೀ ಮಾನೋನಿಯಾ ಗೌಣ । ಮಾಝ್ಯೇ ಭಕ್ತೀಸೀ ವಿಕಿಲಾ ಪ್ರಾಣ । ಸರ್ವ ಸಮರ್ಪಣ ಮಜ ಕರೀ ॥೧೨೪೧॥ ಜೇಣೇ ಸೇವೇಸೀ ವಿಕಿಲಾ ಪ್ರಾಣ । ತೋ ವೃಥಾ ಜಾವೋ ನೇದೀ ಅರ್ಧಕ್ಷಣ । ಮಾಝೀ ಕಥಾ ಮಾಝೇ ಧ್ಯಾನ । ಮಹೋತ್ಸಾಹೋ ಜಾಣ ಮಾಝಾಚಿ ॥೧೨೪೨॥

ಮಜ್ಜನ್ಮಕರ್ಮಕಥನಂ ಮಮ ಪರ್ವಾನುಮೋದನಮ್ । ಗೀತತಾಂಡವವಾದಿತ್ರಗೋಷ್ಠೀಭಿರ್ಮದ್ ಗೃಹೋತ್ಸವಃ ॥೩೬॥

ಅರ್ಥ :-ನನ್ನ ದಿವ್ಯ ಜನ್ಮ ಮತ್ತು ಕರ್ಮದ ಚರ್ಚೆ ಮಾಡಬೇಕು. ಜನ್ಮಾಷ್ಟಮೀ, ರಾಮನವಮೀ, ಇತ್ಯಾದಿ ಪರ್ವಕಾಲದಲ್ಲಿ ಆನಂದದಿಂದ ಮಹೋತ್ಸವಗಳನ್ನು ನೆರವೇರಿಸಬೇಕು. ಸಂಗೀತ ಕಾರ್ಯಕ್ರಮಗಳನ್ನು ಮಾಡಬೇಕು. ನನ್ನ ಮಂದಿರದಲ್ಲಿ ಉತ್ಸವವನ್ನು ಮಾಡಬೇಕು ಹಾಗೂ ಮಾಡಿಸಿಕೊಳ್ಳಬೇಕು.

ಧ್ಯಾನಾವಸ್ಥೇ ಕರೀ ಧ್ಯಾನ । ನಾತರೀ ಕಥಾನಿರೂಪಣ । ಅನುಸಂಧಾನೀ ಸಾವಧಾನ । ರಿತೇ ಮನ ರಾಹೂ ನೇದೀ ॥೧೨೪೩॥ ಮಾಝೀ ಜನ್ಮಕರ್ಮೇ ನಿರೂಪಿತಾ । ಆವಡೀ ಉಲ್ಲಾಸ ಥೋರ ಚಿತ್ತಾ । ಸ್ವೇದ ರೋಮಾಂಚ ದ್ರವತಾ । ಸಪ್ರೇಮ ಕಥಾ ಉಲ್ಲಾಸೇ ॥೧೨೪೪॥ ಐಕೂನಿ ರಹಸ್ಯ ಹರಿಕಥಾ । ದ್ರವ ನುಪಜೇ ಜ್ಯಾಚಿಯಾ ಚಿತ್ತಾ । ತೋ ಪಾಷಾಣ ಜಾಣ ಸರ್ವಥಾ । ಜಳೀ ಅಸತಾ ಕೋರಡಾ ॥೧೨೪೫॥ ಐಕ ಮಾಝ್ಯೇ ಭಕ್ತೀಚೇ ಚಿನ್ಹ । ಮಾಝ್ಯಾ ಪರ್ವಾಚೇ ಅನುಮೋದನ । ಕರೀ ಕರವೀ ಆಪಣ । ದಿನೋದ್ಧರಣ ಉಪಾವೋ ॥೧೨೪೬॥ ಪರ್ವವಿಶೇಷ ಭಾಗವತಧರ್ಮೀ । ನೃಸಿಂಹಜಯಂತೀ ರಾಮನವಮೀ । ವಾಮನ ಜಯಂತೀ ಜನ್ಮಾಷ್ಟಮೀ । ಉತ್ತಮೋತ್ತಮೀ ಶಿವರಾತ್ರ ॥೧೨೪೭॥ ವೈಷ್ಣವಾಂಸೀ ಶಿವರಾತ್ರೀ ವಿರುದ್ಧ । ಹೇ ಬೋಲಣೇ ಅತಿಅಬದ್ಧ । ಸಕಳ ಪುರಾಣೇ ಅವಿರುದ್ಧ । ವ್ಯಾಸ ವಿಶುದ್ಧ ಬೋಲಿಲಾ ॥೧೨೪೮॥ ಶಿವ ಶ್ಯಾಮ ತಮೋಗುಣೇ । ತೋ ಶುದ್ಧ ಝಾಲಾ ವಿಷ್ಣೂಚ್ಯಾ ಧ್ಯಾನೇ । ವಿಷ್ಣು ಶ್ಯಾಮ ಶಿವಚಿಂತನೇ । ವಿನಟಲೇ ಗುಣೇ ಯೇರಯೇರಾ ॥೧೨೪೯॥ ಶಿವ ಧವಳಧಾಮ ಗೋಕ್ಷೀರೂ । ವಿಷ್ಣು ಘನಶ್ಯಾಮ ಅತಿಸುಂದರೂ । ಬಾಪ ಧ್ಯಾನಾಚಾ ಬಡಿವಾರೂ । ಯೇರೇ ಯೇರೂ ವ್ಯಾಪಿಲಾ ॥೧೨೫೦॥ ಮುದಲಾ ದೋಹೀಸೀ ಐಕ್ಯ ಶುದ್ಧ । ಮಾ ಉಪಾಸಕಾಂಸೀ ಕಾ ವಿರುದ್ಧ । ಶಿವರಾತ್ರೀ ವೈಷ್ಣವಾಂಸೀ ಅವಿರುದ್ಧ । ವ್ರತ ವಿಶುದ್ಧ ಸರ್ವಾಸೀ ॥೧೨೫೧॥ ಜೇ ಪರ್ವಣೀ ಪ್ರಿಯ ಚಕ್ರಪಾಣೀ । ಜೇ ಸಕಳ ಕಲ್ಯಾಣಾಚೀ ಶ್ರೇಣೀ । ಉಭಯ ಪಕ್ಷಾ ತಾರಿಣೀ । ವೈಷ್ಣವಜನನೀ ಏಕಾದಶೀ ॥೧೨೫೨॥

ಬ್ರಹ್ಮದೇವನ ಪದವಿಯವರೆಗೆ ಎಲ್ಲ ಲಾಭಗಳೂ ತುಚ್ಛವಾಗಿವೆ ಎಂದು ತಿಳಿದು ಭಕ್ತನು ನನ್ನ ಭಕ್ತಿಗಾಗಿ ತನ್ನ ಪ್ರಾಣವನ್ನು ಮಾರಿಕೊಳ್ಳುವನು ಹಾಗೂ ಸರ್ವಕರ್ಮಗಳನ್ನು ನನಗೆ ಅರ್ಪಿಸುವನು ॥೧೨೪೧॥ ಹೀಗೆ ನನ್ನ ಸೇವೆಗಾಗಿ ತನ್ನ ಪ್ರಾಣವನ್ನು ಮಾರಿಕೊಂಡವನು. ಅರ್ಧಕ್ಷಣ ಕೂಡ ವ್ಯರ್ಥಮಾಡಲಾರನು. ಆತನು ನನ್ನ ಕಥೆ, ನನ್ನ ಧ್ಯಾನ, ನನ್ನ ಮಹೋತ್ಸವಗಳನ್ನು ಆಚರಿಸುವನು ॥೧೨೪೨॥

ನನ್ನ ಭಕ್ತನು ಧ್ಯಾನದ ಸಮಯದಲ್ಲಿ ಧ್ಯಾನವನ್ನು ಮಾಡುತ್ತಿರಲಿ, ಇಲ್ಲವೇ ಕಥಾ ನಿರೂಪಣೆಯನ್ನು ಮಾಡುತ್ತಿರಲಿ, ಆತನು ನಿರಂತರವಾಗಿ ನನ್ನಲ್ಲಿಯೇ ಲಕ್ಷವನ್ನು ಕೊಟ್ಟಿರುವನು. ಮನಸ್ಸಿಗೆ ಬಿಡುವು ಮಾತ್ರ ಮಾಡಿಕೊಡುವುದಿಲ್ಲ ॥೧೨೪೩॥ ನನ್ನ ಅಲೌಕಿಕ ಜನ್ಮದ ಮತ್ತು ನನ್ನಲೀಲೆಗಳ ವರ್ಣನೆಯನ್ನು ಮಾಡುತ್ತಿರುವಾಗ, ಆತನ ಚಿತ್ತಕ್ಕೆ ಪರಮ ಉಲ್ಲಾಸವಾಗುತ್ತಿರುವುದು. ಆತನ ಶರೀರವು ಬೆವರು ತುಂಬಿ ಹರಿಯುವುದು. ಮತ್ತು ಶರೀರದಲ್ಲಿ ರೋಮಾಂಚನವಾಗುವುದು. ಹೀಗೆ ಪ್ರೇಮದಿಂದ ಕಥೆಯು ಉಲ್ಲಾಸಮಯವಾಗುವುದು ॥೧೨೪೪॥ ಹರಿಯ ಇಂತಹ ಕಥೆಯನ್ನು ಕೇಳಿ ಯಾರ ಮನಸ್ಸು ದ್ರವಿಸುವುದಿಲ್ಲವೊ, ಅವನು ನೀರನಲ್ಲಿರುವ ಕರಗದ ಕಲ್ಲಿನಂತಹವನಾಗಿರುವನು ಎಂದು ತಿಳಿಯಬೇಕು ॥೧೨೪೫॥ ಈಗ ನನ್ನ ಭಕ್ತಿಯ ಲಕ್ಷಣವನ್ನು ಕೇಳು. ಈತನು ದೀನರ ಉದ್ಧಾರಕ್ಕಾಗಿ ನನ್ನ ಮಹೋತ್ಸವಗಳನ್ನು ಸ್ವತಃ ಮಾಡುವನು, ಬೇರೆಯವರಿಂದಲೂ ಮಾಡಿಸುವನು ॥೧೨೪೬॥ ನೃಸಿಂಹ ಜಯಂತೀ, ರಾಮನವಮೀ, ವಾಮನ ಜಯಂತೀ, ಗೋಕುಲಾಷ್ಟಮೀ, ಉತ್ತಮದಲ್ಲಿನ ಉತ್ತಮವಾದ ಶಿವರಾತ್ರೀ, ಇವು ಭಾಗವತದಲ್ಲಿನ ವಿಶೇಷ ಪರ್ವಕಾಲಗಳಾಗಿರುವುವು ॥೧೨೪೭॥ ಶಿವರಾತ್ರಿಯ ವ್ರತವು ವೈಷ್ಣವರ ವಿರುದ್ಧವಾಗಿದೆ ಎಂದು ಹಲವರು ಹೇಳುವರು. ಆದರೆ, ಅದು ತಪ್ಪಾಗಿರುವುದು. ಹಾಗಾದರೆ ಉಪಾಸಕರಿಗೆ ವಿರುದ್ಧ ಏಕಾಗಬೇಕು? ನಿಜವಾಗಿ ನೋಡಿದರೆ ಶಿವರಾತ್ರಿ ವ್ರತವು ವೈಷ್ಣವರಿಗೆ ವಿರುದ್ಧವಾಗಿರುವುದಿಲ್ಲ. ಹೀಗೆ ವ್ಯಾಸರು ಸ್ಪಷ್ಟವಾಗಿ ಹೇಳಿರುವರು ॥೧೨೪೮॥ ಶಂಕರನು ತಮೋಗುಣ ಉಳ್ಳವನಾಗಿ ಮೂಲದಲ್ಲಿ ಕಪ್ಪಾಗಿದ್ದನು. ಆತನು ವಿಷ್ಣುವಿನ ಧ್ಯಾನವನ್ನು ಮಾಡಿರುವುದರಿಂದ ಶುದ್ಧನಾದನು. ವಿಷ್ಣೂ ಈತನು ಶಿವನ ಧ್ಯಾನದಿಂದ ಕಪ್ಪಾದನು. ಈ ಪ್ರಕಾರವಾಗಿ ಈ ಇಬ್ಬರು ಒಬ್ಬರಿಗೊಬ್ಬರ ಗುಣಗಳಿಂದ ಶೋಭಿಸುತ್ತಿರುವರು ॥೧೨೪೯॥ ಶಂಕರನು ಆಕಳಿನ ಹಾಲಿನಂತೆ ಶುಭ್ರವರ್ಣದವನಾಗಿರುವನು. ವಿಷ್ಣೂ ಈತನು ಅತ್ಯಂತ ಸುಂದರ ಘನಶ್ಯಾಮನಾಗಿರುವನು. ಈ ಪ್ರಕಾರವಾಗಿ ಇವರು ಪರಸ್ಪರರ ಧ್ಯಾನದಿಂದ ಮಹತ್ವವನ್ನು ಬೆಳೆಸಿರುವರು ॥೧೨೫೦॥ ಹೀಗೆ ಮೂಲದಲ್ಲಿಯೇ ಇಬ್ಬರಲ್ಲಿ ಅತಿಶಯವಾಗಿ ಐಕ್ಯವಿರುವುದು. ಅಂದಮೇಲೆ ಉಪಾಸಕರಿಗೆ ಏಕೆ ವಿರುದ್ಧವಾಗಬೇಕು? ನಿಜವಾಗಿಯೂ ಶಿವರಾತ್ರಿಯು ವೈಷ್ಣವರಿಗೆ ಯಾವ ವಿರುದ್ಧವೂ ಇರುವುದಿಲ್ಲ. ಈ ವ್ರತವು ಸರ್ವರನ್ನೂ ಪವಿತ್ರವನ್ನಾಗಿ ಮಾಡುವುದಾಗಿದೆ ॥೧೨೫೧॥ ಯಾವ ಪರ್ವಕಾಲವು ಭಗವಂತನಿಗೆ ಪ್ರಿಯವಾಗಿರುವ, ಸರ್ವ ಕಲ್ಯಾಣದ ಭಾಂಡಾರವಾಗಿರುವ, ಉಭಯ ಪಕ್ಷಗಳನ್ನು ರಕ್ಷಿಸುವ, ವೈಷ್ಣವರ ಜನನೀಯೇ ಆಗಿರುವ ಈ ಏಕಾದಶೀ ವ್ರತವಾಗಿದೆ ॥೧೨೫೨॥

ಜೇ ಶುಕ್ಲಕೃಷ್ಣಪಕ್ಷವಿಧೀ । ಭಕ್ತ ವಾಊನಿಯಾ ಖಾಂದೀ । ನೇಊನಿಯಾ ಸಾಯುಜ್ಯಸಿದ್ಧೀ । ಮೋಕ್ಷಪದೀ ಬೈಸವೀ ॥೧೨೬೩॥ ಕರಾವೀ ಶುಕ್ಲ ಏಕಾದಶೀ । ತ್ಯಜಾವೇ ಕೃಷ್ಣಪಕ್ಷಾಸೀ । ಉಪಡಲಿಯಾ ಏಕಾ ಪಕ್ಷಾಸೀ । ಸಾಯುಜ್ಯಾಸೀ ಕೇವೀ ಪಾವೇ ॥೧೨೬೪॥ ದೋ ಪಾಂಖೀ ಉಡ್ಡಾಣ ಪಕ್ಷ್ಯಾಸೀ । ಏಕು ಉಪಡಲಿಯಾ ನುಡವೇ ತ್ಯಾಸೀ । ತೇವೀ ಪಾ ತ್ಯಜಿತಾ ಕೃಷ್ಣಪಕ್ಷಾಸೀ । ಸಾಯುಜ್ಯಾಸೀ ನ ಪವಿಜೇ ॥೧೨೬೫॥ ತೇವೀ ಏಕಾದಶೀ ಪಾಹೀ । ಜೋ ಜೋ ಉತ್ಸವೋ ಜೇ ಜೇ ಸಮಯೀ । ತೋ ತೋ ಉಪತೀಷ್ಠೇ ಮಾಝ್ಯಾ ಠಾಯೀ । ಸಂದೇಹೋ ನಾಹೀ ಸರ್ವಥಾ ॥೧೨೬೬॥ ಜೋ ಏಕಾದಶೀಚಾ ವ್ರತಧಾರೀ । ಮೀ ನಿತ್ಯ ನಾಂದೇ ತ್ಯಾಚಾ ಘರೀ । ಸರ್ವ ಪರ್ವ ಕಾಳಾಂಚ್ಯಾ ಶಿರೀ । ಏಕಾದಶೀ ಖರೀ ಪೈ ಮಾಝೀ ॥೧೨೬೭॥ ಜೋ ಏಕಾದಶೀಚಾ ವ್ರತೀ ಮಾಝಾ । ತೋ ವ್ರತತಪತೀರ್ಥಾಂಚಾ ರಾಜಾ । ಮಜ ಆವಡೇ ತೋ ಗರುಡಧ್ವಜಾ । ಪರಿಗ್ರಹೋ ಮಾಝಾ ತೋ ಏಕು ॥೧೨೬೮॥ ಜೈ ಮಾಝೇ ಭಕ್ತ ಆಲೇ ಘರಾ । ತೈ ಸರ್ವ ಪರ್ವಕಾಳ ಯೇತೀ ದಾರಾ । ವೈಷ್ಣವಾ ತೋ ದಿವಾಳೀ ದಸರಾ । ತೀರ್ಥೇ ಘರಾ ತೈ ಯೇತೀ ॥೧೨೬೯॥ ಚಂದ್ರಸೂರ್ಯಗ್ರಹಣಾಸೀ । ವೋವಾಳೂನಿ ಸಾಂಡೀ ತೇ ದಿವಸೀ । ಕಪಿಲಾಷಷ್ಠೀ ತೇ ಯಾಚೀ ದಾಸೀ। ಮಾ ಅರ್ಧೋದಯಾಸೀ ಕೋಣ ಪುಸೇ ॥೧೨೭೦॥ ಐಸೇ ಮದ್ಭಾಕ್ತಾಂಚೇಆಗಮನ । ತೇಣೇ ಉಲ್ಹಾಸೇ ನ ಸಂಟೇ ಮನ । ಸರ್ವಸ್ವ ವೇಂಚಿತಾ ಧನಧಾನ್ಯ । ಹರಿಖೇ ಜಾಣ ನಾಚತು ॥೧೨೭೧॥ ಐಶೀ ಮಾಝ್ಯಾ ಭಕ್ತಾಂಚೀ ಆವಡೀ । ತ್ಯಾಂಚೇ ಸಂಗತೀಚೀ ಅತಿಗೋಡೀ । ತ್ಯಾ ನಾಂವ ಭಕ್ತೀಚೀ ಕುಳವಾಡೀ । ಪರ್ವಕೋಡೀ ತೇದಿವಸೋ ॥೧೨೭೨॥ ಪರ್ವವಿಶೇಷ ಆದರೇ । ಸಂತ ಆಲೇನಿ ಅವಸರೇ । ಶೃಂಗಾರೀ ಹರಿಮಂದಿರೇ । ಗುಢಿಯಾ ಮಖರೇ ಮಹೋತ್ಸಾಹ ॥೧೨೭೩॥ ಸಂತ ಬೈಸವೂನಿ ಪರವಡೀ । ಕೀರ್ತನ ಮಾಂಡಿತೀ ನಿರವಡೀ । ಹರಿಖೇ ನಾಚತೀ ಆವಡೀ । ಧರಿತೀ ಬಾಗಡೀ ವಿನ್ಯಾಸೇ ॥೧೨೭೪॥ ಟಾಳ ಘೋಳ ಮೃದಂಗ ಕುಸರೀ । ನಾನಾ ಚರಿತ್ರೇ ಗಾತೀ ಗಜರೀ । ಗರ್ಜತೀ ಸ್ವಾನಂದ ಅವಸರೀ । ಜಯಜಯಕಾರೀ ಹರಿನಾಮೇ ॥೧೨೭೫॥

ಈ ವ್ರತವು ತನ್ನ ಶುಕ್ಲ ಮತ್ತು ಕೃಷ್ಣ ಪಕ್ಷಗಳ ಹೆಗಲ ಮೇಲೆ ಹೊತ್ತುಕೊಂಡು ಸಾಯುಜ್ಯ ಸಿದ್ಧಿಯವರೆಗೆ ಒಯ್ದು ಮೋಕ್ಷಪದಕ್ಕೆ ಮುಟ್ಟಿಸುವುದು ॥೧೨೬೩॥ ಶುದ್ಧ ಪಕ್ಷದಲ್ಲಿನ ಏಕಾದಶೀ ವ್ರತವನ್ನು ಮಾಡಿ, ಕೃಷ್ಣಪಕ್ಷದಲ್ಲಿನ ಏಕಾದಶೀಯನ್ನು ಬಿಟ್ಟು ಬಿಟ್ಟರೆ, ಪಕ್ಷಿಯ ಒಂದು ರೆಕ್ಕೆಯನ್ನು ಕಿತ್ತಿದಂತಾಗಿ ಅವರು ಮೋಕ್ಷ ಪದಕ್ಕೆ ಮುಟ್ಟಲಾರರು ॥೧೨೬೪॥ ಪಕ್ಷಿಗಳು ಎರಡು ರೆಕ್ಕೆಗಳಿಂದ ಹಾರುತ್ತಿರುವುವು. ಅವುಗಳ ಒಂದು ರೆಕ್ಕೆಯನ್ನು ಕೀಳಲು, ಆಗ ಹಾರಲು ಬರುವುದೇ ಇಲ್ಲ. ಅದರಂತೆ ಕೃಷ್ಣಪಕ್ಷದಲ್ಲಿನ ಏಕಾದಶೀಯನ್ನು ಬಿಡಲು ಸಾಯುಜ್ಯ ಮುಕ್ತಿಯು ಪ್ರಾಪ್ತವಾಗಲು ಶಕ್ಯವಿಲ್ಲದಾಗುವುದು ॥೧೨೬೫॥ ಈ ಪ್ರಕಾರವಾಗಿ ಏಕಾದಶೀಯ ಮಹಾತ್ಮ್ಯಯಾಗಿರುವುದು. ಆ ಯಾವ ಏಕಾದಶೀಯನ್ನು ಹಿಡಿದುಕೊಂಡು ಮಾಡುವ ಯಾವುದೇ ಮಹೋತ್ಸವವಾಗಲಿ, ಹೀಗೆ ಆಚರಿಸಿದವರು ನನ್ನಲ್ಲಿ ಬಂದು ಕೂಡುವರು. ಇದರಲ್ಲಿ ಯಾವ ಅನುಮಾನವೇ ಇಲ್ಲ ॥೧೨೬೬॥ ಏಕಾದಶೀ ವ್ರತವನ್ನು ಮಾಡುವವರ ಮನೆಯಲ್ಲಿ ನಾನು ಯಾವಾಗಲೂ ಇರುವೆನು. ಈ ಯಾವ ನನ್ನ ಏಕಾದಶೀ ವ್ರತವು ಸರ್ವ ಪರ್ವಕಾಲಗಳಿಗಿಂತಲೂ ಶ್ರೇಷ್ಠವಾಗಿರುವುದು ॥೧೨೬೭॥ ಯಾವ ಏಕಾದಶೀಯ ವ್ರತವನ್ನು ಆಚರಿಸುವ ನನ್ನ ಭಕ್ತನು ಸಕಲ ವ್ರತ,ತಪ, ತೀರ್ಥಗಳ ರಾಜನಾಗಿರುವನು. ಗರುಡಧ್ವಜನಾದ ನನಗೆ ಆತನು ಅತ್ಯಂತ ಪ್ರಿಯನು. ಆತನು ನನ್ನ ಕುಟುಂಬದವನೇ ಆಗಿರುವನು ॥೧೨೬೮॥ ನನ್ನ ಭಕ್ತರು, ಎಂದು ಮನೆಗೆ ಬರುವರೋ, ಅಂದು ಸರ್ವ ಪ್ರಕಾರಗಳ ಪರ್ವಕಾಲಗಳು ಆ ಮನೆಯ ಬಾಗಿಲಿಗೆ ಬಂದು ನಿಲ್ಲುವುವು. ವೈಷ್ಣವರಿಗೆ ಮಾತ್ರ ಅಂದು ದೀಪಾವಳೀ ದಸರಾ ಹಬ್ಬವಾಗುವುದು. ಆ ಸಮಯದಲ್ಲಿ ಸರ್ವ ತೀರ್ಥಗಳು ಆತನ ಮನೆಗೆ ನಡೆದು ಬರುವುವು ॥೧೨೬೯॥ ಈ ದಿನದಂದು ಚಂದ್ರ ಸೂರ್ಯಗ್ರಹಣ ಪರ್ವಕಾಲಗಳನ್ನು ನಿವಾಳಿಸಿ ಒಗೆಯಬೇಕು. ಕಪಿಲಾಷಷ್ಠಿಯು ಆ ದಿನದ ದಾಸಿಯಾಗಿರುವಳು. ಅಂದ ಮೇಲೆ ಅರ್ಧೋದಯ ಪರ್ವಕ್ಕೆ ಯಾರು ಕೇಳಬೇಕು? ॥೧೨೭೦॥ ನನ್ನ ಭಕ್ತನ ಆಗಮನವು ಹೀಗಾಗಿರುವುದು. ಇವರಿಂದಾಗುವ ಉಲ್ಹಾಸವು ಹೃದಯದಲ್ಲಿ ಹಿಡಿಸುವುದಿಲ್ಲ. ಆದ್ದರಿಂದ ಹೇರಳವಾಗಿ ಧನಧಾನ್ಯಗಳು ಖರ್ಚಾದರೂ ಆತನು ಆನಂದದಿಂದ ಕುಣಿಯುತ್ತಿರುವನು ॥೧೨೭೧॥ ಹೀಗೆ ನನ್ನ ಭಕ್ತರ ಅಪೇಕ್ಷೆ ಮತ್ತು ಅವರ ಸಂಗತಿಯ ಅತಿಶಯವಾದ ಪ್ರೀತಿಗೆ ಭಕ್ತಿಯ ಬೆಳೆ ಎಂದು ಕರೆಯುವರು. ಎಂದು ಸಂತರು ಮನೆಗೆ ಆಗಮಿಸುವರೋ, ಅಂದು ಕೋಟ್ಯಾವಧಿ ಪರ್ವಕಾಲಗಳು ಸಹಜವಾಗಿಯೇ ಪ್ರಾಪ್ತವಾಗುವುವು ॥೧೨೭೨॥ ಸಂತರು ಮನೆಗೆ ಆಗಮಿಸುತ್ತಲೇ, ಆಗ ವೈಷ್ಣವರು ಅತ್ಯಂತ ಆದರಭಾವದಿಂದ ಬಹು ದೊಡ್ಡ ಪರ್ವಕಾಲವೆಂದು ತಿಳಿಯುವರು. ಶ್ರೀಹರಿಯ ಮಂದಿರವನ್ನು ಶೃಂಗರಿಸುವನು, ಪತಾಕೆಗಳನ್ನು ಏರಿಸುವನು, ಸುಂದರವಾದ ವೇದಿಕೆ ನಿರ್ಮಿಸುವನು, ಹೀಗೆ ಬಹು ಆದರದಿಂದ ಮಹೋತ್ಸವವನ್ನೇ ಹಮ್ಮಿಕೊಳ್ಳುವನು ॥೧೨೭೩॥ ಸಂತರನ್ನು ಬಹು ಆದರದಿಂದ ಕುಳ್ಳಿರಿಸಿ, ವೈಷ್ಣವರು ಬಹಳ ಚಾತುರ್ಯದಿಂದ ಕೀರ್ತನವನ್ನು ಆರಂಭಿಸುವರು. ಪ್ರೇಮದಿಂದ ಆನಂದಿತರಾಗಿ ಕುಣಿಯುವರು. ಸಂತೋಷವು ಉಕ್ಕೇರಿ ಹಾವಭಾವಗಳನ್ನು ಮಾಡಿ ತೋರಿಸುವರು ॥೧೨೭೪॥ ತಾಳ, ವೀಣಾ, ಮೃದಂಗವನ್ನು ಕುಶಲತೆಯಿಂದ ನುಡಿಸುವರು. ಅನೇಕ ಪ್ರಕಾರದ ಅವತಾರ ಚರಿತ್ರೆಗಳನ್ನು ಹೇಳುವರು. ಭಜನೆಯನ್ನು ಜೋರಾಗಿ ಗರ್ಜನೆಯೊಂದಿಗೆ ಮಾಡುವರು. ಹರಿನಾಮದ ಜಯಘೋಷಗಳನ್ನು ಮಾಡುವರು ॥೧೨೭೫॥

ಯಾತ್ರಾ ಬಲಿವಿಧಾನಂ ಚ ಸರ್ವವಾರ್ಷಿಕಪರ್ವಸು ।
ವೈದಿಕೀ ತಾಂತ್ರಿಕೀ ದೀಕ್ಷಾ ಮದೀಯವ್ರತಧಾರಣಮ್ ।೩೭॥

ಅರ್ಥ :- ವಾರ್ಷಿಕೋತ್ಸವ ದಿನದಲ್ಲಿ ನನ್ನ ಸ್ಥಾನದ ಯಾತ್ರೆ ಮಾಡಬೇಕು. ಅನೇಕ ಪ್ರಕಾರಗಳ ಉಪಹಾರಗಳಿಂದ ನನ್ನ ಪೂಜೆಯನ್ನು ಮಾಡಬೇಕು. ವೈದಿಕ ಅಥವಾ ತಾಂತ್ರಿಕ ಪದ್ಧತಿಗಳಿಂದ ದೀಕ್ಷಾಗ್ರಹಣ ಮಾಡಬೇಕು. ನನ್ನ ವ್ರತಗಳ ಪಾಲನೆಯನ್ನು ಮಾಡಬೇಕು.

ಐಕ ದೀಕ್ಷೇಚೇ ಲಕ್ಷಣ । ವೈದಿಕೀ ತಾಂತ್ರಿಕೀ ದೋನ್ಹೀ ಜಾಣ । ವೈದಿಕೀ ವೇದೋಕ್ತ ಗ್ರಹಣ । ತಾಂತ್ರಿಕೀ ಜಾಣ ಆಗಮೋಕ್ತ ॥೧೨೭೬॥ ವೈಷ್ಣವೀ ದೀಕ್ಷಾ ವ್ರತಗ್ರಹಣ । ಪಾಂಚ ರಾತ್ರಿಕ ಮಂತ್ರಾನುಷ್ಠಾನ । ಹೇ ಆಗಮೋಕ್ತ ಶುದ್ಧ ಲಕ್ಷಣ । ವ್ರತಧಾರಣ ತೇ ಮಾಝೇ ॥೧೨೭೭॥ ವೈಷ್ಣವವ್ರತ ಧರ್ಮಾಸೀ । ಪರ್ವೇ ಕರಾವೀ ವಾರ್ಷಿಕೇಸೀ । ಜೇ ಬೋಲಿಲೀ ಚಾತುರ್ಮಾಸೀ । ಏಕಾದಶ್ಯಾದಿ ಜಯಂತ್ಯಾ ॥೧೨೭೮॥ ಶಯನೀ ಕಟಿನೀ ಪ್ರಭೋಧಿನೀ । ಪವಿತ್ರಾರೋಪಣೀ ನೀರಾಜನೀ । ವಸಂತದಮನಕಾರೋಪಣೀ । ಜನ್ಮ ದಿನೀ ಜಯಂತ್ಯಾ ॥೧೨೭೯॥ ಇತ್ಯಾದಿ ನಾನಾ ಪರ್ವಕಾಳೀ । ಮಹಾಮಹೋತ್ಸಾಹೋ ಪೂಜಾವಳೀ । ನೀರಾಜನೇ ದೀಪಾವಳೀ । ಮೃದಂಗಟಾಳೀ ಗರ್ಜತ ॥೧೨೮೦॥ ಉಂಚಬಳೋನಿ ಅತಿಸುಖೇ । ಯಾತ್ರೇ ನಿಘಾವೇ ಯೇಣೇ ಹರಿಖೇ । ದಿಂಡೀ ಪತಾಕಾ ಗರುಡಟಕೇ । ನಾಮಘೋಷೇ ಗರ್ಜತ ॥೧೨೮೧॥ ಯಾತ್ರೇ ಜಾವೇ ಜ್ಯಾ ದೇವಾಸೀ । ತೋ ದೇವೋ ಆಣೀ ನಿಜಗೃಹಾಸೀ । ಆಪಲೀ ಆವಡೀ ಜೇ ಮೂರ್ತೀಸೀ । ತೇ ಪ್ರತಿಮೇಸೀ ಪ್ರತಿಷ್ಠೀ ॥೧೨೮೨॥

ಮದರ್ಚಾಸ್ಥಾಪನೇ ಶ್ರದ್ಧಾ ಸ್ವತಃ ಸಂಹತ್ಯ ಚೋದ್ಯಮಃ ।
ಉದ್ಯಾನೋಪವನಾಕ್ರೀಡಪುರಮಂದಿರ ಕರ್ಮಣಿ ।೩೮॥

ಅರ್ಥ:- ಶ್ರದ್ಧೆಯಿಂದ ಮಂದಿರದಲ್ಲಿ ನನ್ನ ಮೂರ್ತಿಯ ಸ್ಥಾಪನೆಯನ್ನು ಮಾಡಬೇಕು. ಒಬ್ಬನಿಂದಲೇ ಈ ಕಾರ್ಯವು ಆಗದಿದ್ದರೆ, ಅನೇಕರನ್ನು ಏಕತ್ರ ಮಾಡಿ ಈ ಕಾರ್ಯವನ್ನು ಮಾಡಬೇಕು. ನನಗಾಗಿ ಪುಷ್ಪವಟಿಕೆ, ತೋಟ, ಕ್ರೀಡಾಸ್ಥಾನ ಮತ್ತು ಮಂದಿರ ಇವುಗಳನ್ನು ಸಿದ್ಧಗೊಳಿಸಬೇಕು.

ಮೂರ್ತಿ ನಿಪಜವಾವೀ ವರಿಷ್ಠ । ನೇಟುಗೀ ದೇಟುಗೀ ಚೋಖಟ । ಸಾಧುಮುಖೇ ಅತಿನಿರ್ದುಷ್ಟ । ಘವಘವೀತ ಸಾಜಿರೀ ॥೧೨೮೩॥ ಮೂರ್ತಿ ಕರಾವೀ ಅತಿಸುರೇಖ । ಕೃಶ ನ ಕರಾವೀ ಅಧೋಮುಖ । ಸ್ಥೂಲ ನ ಕರಾವೀ ಊರ್ಧ್ವಮುಖ । ರಡಕೀ ದುರ್ಮುಖ ನ ಕರಾವೀ ॥೧೨೮೪॥ ಅಂಗ ಸ್ಥೂಳ ವದನ ಹೀನ । ಮೂರ್ತಿ ನ ಕರಾವೀ ಅತಿದೀನ । ಖೇಚರೀ ಭೂಚರೀ ಜಿಜೇ ನಯನ । ವಿಕ್ರಾಳ ವದನ ನ ಕರಾವೀ ॥೧೨೮೫॥

ಈಗ ದೀಕ್ಷೆಯ ಲಕ್ಷಣಗಳನ್ನು ಕೇಳು. ಎರಡು ಪ್ರಕಾರದ ದೀಕ್ಷೆಗಳಿರುವುವು. ಒಂದು ವೈದಿಕವು ಇನ್ನೊಂದು ತಾಂತ್ರಿಕವು. ವೇದೋಕ್ತ ಮಂತ್ರಗಳನ್ನು ಗ್ರಹಣ ಮಾಡುವುದು ವೈದಿಕ ದೀಕ್ಷೆಯಾಗಿರುವುದು. ಶಾಸ್ತ್ರ ಪುರಾಣೋಕ್ತ ದೀಕ್ಷೆಯನ್ನು ಗ್ರಹಣ ಮಾಡುವುದು ತಾಂತ್ರಿಕವಾಗಿರುವುದು ।೧೨೭೬॥ ವೈಷ್ಣವ ವ್ರತಗಳ ಗ್ರಹಣ ಮಾಡುವುದು ವೈಷ್ಣವ ದೀಕ್ಷೆಯಾಗಿರುವುದು. ಇದರಲ್ಲಿ ಐದು ರಾತ್ರಿಗಳಲ್ಲಿ ಮಂತ್ರಾನುಷ್ಠಾನವನ್ನು ಮಾಡಬೇಕಾಗುವುದು. ಇದು ನನ್ನ ವೈಷ್ಣವ ವ್ರತವನ್ನು ಧಾರಣೆ ಮಾಡುವುದು ಆಗಮೋಕ್ತ ಶುದ್ಧ ಲಕ್ಷಣವಾಗಿರುವುದು ।೧೨೭೭॥ ವೈಷ್ಣವ ವ್ರತದ ಧರ್ಮವನ್ನು ಪಾಲಿಸುವುದಕ್ಕಾಗಿ ಪ್ರತಿವರ್ಷ ಬರುವ ಪರ್ವಕಾಲಗಳನ್ನು ಶಾಸ್ತ್ರಾನುಸಾರವಾಗಿ ಆಚರಿಸಬೇಕು. ಚಾತುರ್ಮಾಸ್ಯದಲ್ಲಿ ಹೇಳಿರುವ ಏಕಾದಶೀ ಇತ್ಯಾದಿ ವ್ರತಗಳನ್ನು ಮತ್ತು ಜಯಂತಿಗಳನ್ನು ಪಾಲಿಸಬೇಕು ।೧೨೭೮॥ ಶಯನೀ, ಕಟಿನೀ, ಪ್ರಬೋಧಿನೀ, ಪವಿತ್ರಾರೋಪಣೀ, ನೀರಾಜನೀ, ವಸಂತದಮನಕಾರೋಪಣೀ, ಇತ್ಯಾದಿ ಜನ್ಮ ದಿವಸಗಳ ಜಯಂತಿಗಳನ್ನು ।೧೨೭೯॥ ಈ ಯಾವ ವಿವಿಧ ಪ್ರಕಾರಗಳ ಪರ್ವಕಾಲಗಳಲ್ಲಿ ಅನೇಕ ಪ್ರಕಾರಗಳ ಪೂಜೆಗಳನ್ನು ಏರ್ಪಡಿಸಬೇಕು. ನಿರಾಂಜನೆ ಮತ್ತು ದೀಪಮಾಲೆಗಳಿಂದ ಬೆಳಗಬೇಕು. ತಾಳ ಮೃದಂಗದೊಂದಿಗೆ ಹರಿನಾಮದ ಗಜರ ಮಾಡಬೇಕು ।೧೨೮೦॥ ಬಹು ಉತ್ಸಾಹದೊಂದಿಗೆ ದಿಂಡಿ,ಪತಾಕೆ, ಧ್ವಜಗಳನ್ನು ತೆಗೆದುಕೊಂಡು ನಾಮಘೋಷಗಳನ್ನು ಗರ್ಜಿಸುತ್ತ ಯಾತ್ರೆಗೆ ಹೊರಡಬೇಕು ।೧೨೮೧॥ ಯಾವ ದೇವರ ಯಾತ್ರೆಗೆ ಹೋಗಿರುವೆವೋ, ಆ ದೇವರನ್ನೇ ತಮ್ಮ ಮನೆಗೆ ತರಬೇಕು. ಯಾವ ಮೂರ್ತಿಯಲ್ಲಿ ತಮ್ಮ ಶ್ರದ್ಧೆ ಇರುವುದೋ, ಆ ಮೂರ್ತಿಯ ಪ್ರತಿಷ್ಠಾಪನೆಯನ್ನು ಮಾಡಬೇಕು ।೧೨೮೨॥

ಮೂರ್ತಿಯನ್ನು ಅತ್ಯಂತ ಉತ್ತಮ ಪ್ರಕಾರವಾಗಿ ಕೆತ್ತಿಸಬೇಕು. ಅದು ನೀಟಾಗಿ ಸುಂದರವಾಗಿರಬೇಕು. ದಷ್ಟಪುಷ್ಟ ಮತ್ತು ನಯನರಮ್ಯವಾಗಿರಬೇಕು. ಇದು ಅತ್ಯಂತ ನಿರ್ದೋಷವಾಗಿದೆ, ಭವ್ಯ ಮತ್ತು ಪ್ರೇಮ ಬರುವ ಹಾಗಿದೆ ಎಂದು ಸಾಧು ಜನರ ಮುಖದಿಂದ ಉದ್ಗಾರವಾಗಬೇಕು ।೧೨೮೩॥ ಮೂರ್ತಿಯು ಅತಿಶಯ ಸುರೇಖವಾಗಿರಬೇಕು. ಅದು ಬಡಕಲವಾಗಿ ಅಧೋಮುಖವಾಗಿರಬಾರದು. ಮೂರ್ತಿಯು ಸ್ಥೂಲವಾಗಿ ಮೇಲೆ ಮುಖವಾಗಿರಬಾರದು. ಹಾಗೆಯೇ ಅಳುಮುಖ, ಕೆಟ್ಟಮುಖವಿರಬಾರದು ।೧೨೮೪॥ ದಷ್ಟ ಶರೀರ ಹೀನಮುಖ ಅಥವಾ ದೀನಮುಖ ಹೀಗೆ ಮೂರ್ತಿಯು ಇರಬಾರದು. ಖೇಚರೀ, ಭೂಚರೀಗಳಂತೆ ಕಣ್ಣುಗಳಿರಬಾರದು. ಅಕ್ರಾಳ ವಿಕ್ರಾಳ ಮುಖವಿರಬಾರದು ।೧೨೮೫॥

ಅಂಗ ಸಾಜಿರೇ ನಾಕ ಹೀನ । ವರದಳ ಚಾಂಗಚರಣ ಕ್ಷೀಣ । ಮೋದಳೀ ಬುದಗುಲಿ ಠೇಂಗಣೇ ಠಾಣ । ಅತಿದೀರ್ಘ ಜಾಣ ನ ಕರಾವೀ ॥೧೨೮೬॥ ಮೂರ್ತಿ ಸಾಜಿರೀ ಸುನಯನ । ಸಮ ಸಪೋಷ ಸುಪ್ರಸನ್ನ । ಅಂಗೀ ಪ್ರತ್ಯಂಗೀ ನವ್ಹೇ ನ್ಯೂನ । ಸುಚಿನ್ಹ ಸುಲಕ್ಷಣ ಸಾಯುಧ ॥೧೨೮೭॥ ಪಾಹತಾ ನಿವೇ ತನುಮನ । ದೇಖತಾ ಜಾಯ ಭೂಕತಹಾನ । ಘವಘವೀತ ಪ್ರಸನ್ನವದನ । ಕೃಪಾಲಕ್ಷಣ ಸುಕುಮಾರ ॥೧೨೮೮॥ ಜೇ ದೇಖತಾಂಚಿ ಜೀವೀ ಜಡೇ । ಅತಿಶಯೇ ಸರ್ವಾಸೀ ಆವಡೇ । ಪಾಹೋ ಜಾತಾ ನಿಜನಿವಾಡೇ । ಪೂರು ಪಡೇ ಪ್ರೇಮಾಚಾ ॥೧೨೮೯॥ ಈಷತ್ ದಿಸೇ ಹಾಸ್ಯವದನ । ಅತಿಶಯೇಸೀ ಸುಪ್ರಸನ್ನ । ಜಿಚೇನಿ ಘವಘವಾಟೇ ನಿವೇ ಮನ । ಪ್ರತಿಮಾ ಸಂಪೂರ್ಣ ಹೀ ನಾಂವ ॥೧೨೯೦॥ ತೇಥೇ ಮೇಳವೂನಿ ಸಾಧುಶ್ರೇಷ್ಠಾ । ಅಗ್ನ್ಯುತ್ತಾರಣ ಕರಾವೇ ನಿಷ್ಠಾ । ಚಕ್ಷೂನ್ಮೀಲನ । ಪ್ರಾಣಪ್ರತಿಷ್ಠಾ । ಕರಾವೀ ವರಿಷ್ಠಾ ಚೇನಿ ಹಾತೇ ॥೧೨೯೧॥ ದೇವಾಲಯ ಕರಾವೇ ಗಹನ । ವನ ಉದ್ಯಾನ ಉಪವನ । ಖೇಡಕುಲಿಯಾ ವಿಶ್ರಾಮಸ್ಥಾನ । ಆರಾಮ ಜಾಣ ಕರಾವೇ ॥೧೨೯೨॥ ನಾನಾ ಜಾತೀಚೇ ವೃಕ್ಷ ತೇ ವನ । ಫಳಭಕ್ಷೀ ವೃಕ್ಷ ತೇ ಉಪವನ । ಪುಷ್ಪವಾಟಿಕಾ ತೇ ಉದ್ಯಾನ । ಕೃಷ್ಣಾರ್ಪಣ ಪೂಜೇಸೀ ॥೧೨೯೩॥ ಹಾಟ ಹಾಟವಟಿಯಾ ಚೌಪಾಸೀ । ನಗರ ವಸವಾವೇ ದೇವಾಪಾಶೀ । ವೇದಾಧ್ಯಯನ ಶಾಸ್ತ್ರ ಶ್ರವಣೇಸೀ । ಅಹರ್ನಿಶೀ ಕೀರ್ತನೇ ॥೧೨೯೪॥ ಇತುಕೇ ಕರಾವಯಾ ಅಸಮರ್ಥ । ಶ್ರದ್ಧಾ ಆಹೇ ಪರೀ ನಸೇ ವಿತ್ತ । ತರೀ ಸಾಹ್ಯ ಮೇಳವೂನ ಸಮರ್ಥ । ಮದ್ಭಾವಯುಕ್ತ ಕರಾವೇ ॥೧೨೯೫॥ ಕಾ ಮೇಳವೂನಿ ಭಗವದ್ಭಕ್ತ । ತ್ಯಾಂತ ಶ್ರದ್ಧಾಳೂ ಜೇ ವಿತ್ತವಂತ । ಭಾವಪೂರ್ವಕ ದಿಧಲ್ಯಾ ವಿತ್ತ । ತೇಣೇ ಹೇ ಸಮಸ್ತ ಕರಾವೇ ॥೧೨೯೬॥ ದೇಉಳೀ ಕರೂನಿ ಮೂರ್ತಿ ಪ್ರತಿಷ್ಠಾ । ಪರತೋನಿ ನ ವಚೇ ಜೋ ತ್ಯಾ ವಾಟಾ । ತೋ ಆಳಶೀ ಜಾಣ ಪಾ ಕರಂಟಾ । ನವ್ಹೇಚಿ ಚೋಖಟಾ ಭಾವಾಚಾ ॥೧೨೯೭॥ ಜೋ ಕರೂ ಜಾಣೇ ಮೂರ್ತಿಪ್ರತಿಷ್ಠಾ । ಧನ ವೇಂಚೂನ ಭಾವಾರ್ಥೀ ಮೋಟಾ । ನೀಚಸೇವಾ ತೋ ಮಾರಝಾ ವಾಂಟಾ । ಝಾಡಿತಾ ಖರಾಂಟಾ ನ ಸಂಡೀ ॥೧೨೯೮॥

ಶರೀರವೆಲ್ಲವೂ ಉತ್ತಮವಾಗಿದ್ದು ಮೂಗು ಮಂಡಾಗಿರಬಾರದು. ಅಥವಾ ಮೇಲಿನ ಭಾಗವು ಸೊಗಸಾಗಿದ್ದು ಪಾದಗಳು ಮಾತ್ರ ಅತಿಚಿಕ್ಕ, ಅತಿ ಲಕ್ಕ, ಕುರೂಪ, ಗಿಡ್ಡ, ಅಥವಾ ಬಹು ಎತ್ತರ ಹೀಗೆ ಇರಬಾರದು ॥೧೨೮೬॥ ಮೂರ್ತಿಯು ಸುಂದರ ನಯನಗಳ ಆಕರ್ಷಕವಾಗಿರಬೇಕು. ಸರ್ವ ಅವಯವಗಳು ಪುಷ್ಟವಾಗಿರಬೇಕು, ಸುಪ್ರಸನ್ನವಾಗಿರಬೇಕು. ಶರೀರದಲ್ಲಿ, ಯಾವುದೇ ಭಾಗಗಳಲ್ಲಿ ಯಾವುದೇ ಪ್ರಕಾರದ ನ್ಯೂನತೆವಿರಬಾರದು. ಅದು ಉತ್ತಮ ಚಿನ್ಹೆಗಳಿಂದ ಯುಕ್ತವಾಗಿರಬೇಕು. ಸುಲಕ್ಷಣವಾಗಿರಬೇಕು, ಮತ್ತು ಕೈಗಳಲ್ಲಿ ಆಯುಧಗಳಿರಬೇಕು ॥೧೨೮೭॥ ಮೂರ್ತಿಯನ್ನು ನೋಡಿದಾಕ್ಷಣವೇ ತನಮನಗಳು ಸಮಾಧಾನವಾಗಿ ತೃಪ್ತಿಯಾಗಬೇಕು. ಇದರ ದರ್ಶನವನ್ನು ಮಾಡುತ್ತಲೇ ಹಸಿವೆ, ನೀರಡಿಕೆಗಳು ಇಲ್ಲದಾಗಬೇಕು. ಈ ಪ್ರಕಾರವಾಗಿ ಆ ಯಾವ ಮೂರ್ತಿಯ ಮುಖವು ಪ್ರಸನ್ನವಾಗಿರಬೇಕು. ಮೂರ್ತಿಯು ಸುಕುಮಾರವಾಗಿ ಕೃಪಾದೃಷ್ಟಿಯ ಲಕ್ಷಣವಾಗಿರಬೇಕು ॥೧೨೮೮॥ ಮೂರ್ತಿಯನ್ನು ನೋಡುತ್ತಲೇ ಅಂತಃಕರಣದಲ್ಲಿ ನೆಟ್ಟಿಕೊಳ್ಳಬೇಕು. ಎಲ್ಲರಿಗೂ ಪರಿಪೂರ್ಣವಾಗಿ ಪ್ರಿಯವಾಗುವಂತೆ, ಪ್ರೇಮದಿಂದ ನೋಡುತ್ತಲೇ ಅಂತಃಕರಣದಲ್ಲಿ ಪ್ರೇಮದ ಲಹರಿಗಳು ಹುಟ್ಟುವಂತೆ ಇರಬೇಕು ॥೧೨೮೯॥ ಕಿಂಚಿತ್‌ವಾಗಿ ಹಾಸ್ಯವದನವಿರಬೇಕು. ಅತ್ಯಂತ ಪ್ರಸನ್ನವಾದ ಮುದ್ರೆವಿರಬೇಕು. ಮೂರ್ತಿಯ ಸೌಂದರ್ಯ ತೇಜದಿಂದ ಮನವು ಪ್ರಸನ್ನವಾಗುವ ಸರ್ವಾಂಗ ಸುಂದರಮೂರ್ತಿ ಎಂದು ಹೆಸರಾದ ಈ ಮೂರ್ತಿಗೆ ಪ್ರತಿಮೆ ಎಂದು ಕರೆಯುವರು ॥೧೨೯೦॥ ಹೀಗೆ ಪ್ರತಿಮೆಯನ್ನು ಸಿದ್ಧಗೊಳಿಸಿ, ತದನಂತರ ಸಾಧು ಸಂತರನ್ನು ಒಂದುಗೂಡಿಸಬೇಕು. ಅಗ್ನ್ಯುತ್ತಾರಣ ವಿಧಿಯನ್ನು ಶ್ರದ್ಧೆಯಿಂದ ಮಾಡಬೇಕು. ಆಗ ಕೆತ್ತಿದ ದೋಷಗಳು ನಿವಾರಣೆಯಾಗುವುವು. ಮೂರ್ತಿಯ ನೇತ್ರಗಳಿಗೆ ಮಾಡಿದ ಆಚ್ಛಾದನೆಯನ್ನು ತೆಗೆದು ಶ್ರೇಷ್ಠ ಪುರುಷರ ಹಸ್ತದಿಂದ ಅದರ ಪ್ರಾಣ ಪ್ರತಿಷ್ಠೆಯನ್ನು ಮಾಡಬೇಕು ॥೧೨೯೧॥ ದೇವಾಲಯವನ್ನು ಭವ್ಯವಾಗಿ ಕಟ್ಟಿಸಬೇಕು. ಅದರ ಸುತ್ತಮುತ್ತು ವನ, ಉದ್ಯಾನ, ತಪೋವನ ನಿರ್ಮಿಸಬೇಕು. ತೋಟ, ಬಾವಿ, ಕೆರೆ ಕಟ್ಟಿಸಿ, ಸಂಪೂರ್ಣ ಸ್ಥಾನವನ್ನು ವಿಶ್ರಾಂತಿಗೆ ಯೋಗ್ಯವಾಗಿರುವಂತೆ ಕಾಮನೀಯ, ರಮಣೀಯವಾಗಿರಬೇಕು ॥೧೨೯೨॥ ಅನೇಕ ಪ್ರಕಾರಗಳ ವೃಕ್ಷಗಳನ್ನು ಹಚ್ಚಬೇಕು. ಅದಕ್ಕೆ ವನವೆಂದು ಕರೆಯುವರು. ತಿನ್ನಲು ಉಪಯೋಗವಾಗುವ ಫಲ ಕೊಡುವ ವೃಕ್ಷಗಳು ಇದ್ದರೆ ಅದಕ್ಕೆ ಉಪವನವೆನ್ನುವರು. ಕೇವಲ ಪುಷ್ಪಗಳ ಗಿಡಗಳಿರಲು ಅದಕ್ಕೆ ಉದ್ಯಾನವೆನ್ನುವರು. ಈ ಎಲ್ಲವನ್ನೂ ತಯಾರಿಸಿ ಪೂಜೆಗಾಗಿ ಕೃಷ್ಣಾರ್ಪಣೆಯನ್ನು ಮಾಡಬೇಕು ॥೧೨೯೩॥ ನಾಲ್ಕೂ ಕಡೆಗಳಿಂದ ವ್ಯಾಪಾರಿಗಳು ಬಂದು ಅಲ್ಲಿ ಬಜಾರ ತುಂಬಬೇಕು. ಅದಕ್ಕಾಗಿ ದೇಗುಲ ಹತ್ತಿರ ನಗರವಿರಬೇಕು. ಅಲ್ಲಿ ಅಹೋರಾತ್ರಿ ವೇದಾಧ್ಯಯನ, ಶಾಸ್ತ್ರಶ್ರವಣ ಮತ್ತು ಕೀರ್ತನೆ ಭಜನೆಗಳು ನಡೆಯುತ್ತಿರಬೇಕು ॥೧೨೯೪॥ ಇಷ್ಟೆಲ್ಲ ಮಾಡಲು ತನ್ನಲ್ಲಿ ಸಾಮರ್ಥ್ಯವು ಇರದಿದ್ದರೆ, ಅದನ್ನು ಪೂರ್ಣಗೊಳಿಸುವ ಶ್ರದ್ಧೆವಿದ್ದರೆ, ಬೇರೆಯವರಿಂದ ದೇಣಿಗೆ ಸಹಾಯ ಸ್ವೀಕರಿಸಿ, ಭಕ್ತಿಯಿಂದ ಈ ನನ್ನ ಕಾರ್ಯವನ್ನು ಪೂರ್ಣ ಮಾಡಬೇಕು ॥೧೨೯೫॥ ಭಗವದ್ಭಕ್ತರೆಲ್ಲರನ್ನೂ ಒಂದೆಡೆ ಕರೆಯಿಸಬೇಕು. ಅವರಲ್ಲಿಯ ಭಕ್ತಿವಂತ ಶ್ರೀಮಂತರಿಂದ ಅವರು ಭಕ್ತಿಯುಕ್ತ ಅಂತಃಕರಣದಿಂದ ದ್ರವ್ಯ ನೀಡಲು ಅಂತಹ ದ್ರವ್ಯದಿಂದ ಈ ಕಾರ್ಯವನ್ನು ಮಾಡಬೇಕು ॥೧೨೯೬॥ ದೇವಾಲಯದಲ್ಲಿ ಒಮ್ಮೆ ದೇವರ ಪ್ರತಿಷ್ಠೆಯನ್ನು ಮಾಡಿದನೆಂದರೆ ಮುಗಿಯಿತು, ಪುನಃ ದೇವಾಲಯಕ್ಕೆ ಹೋಗದೇ ಇದ್ದರೆ ಅವನು ಅಜ್ಞಾನಿಯಾಗಿರುವನು, ಸೋಮಾರೀ ಎಂದು ತಿಳಿಯಬೇಕು. ಅವನು ನಿಜವಾದ ಭಕ್ತನಲ್ಲ ॥೧೨೯೭॥ ಯಾವನು ನನ್ನ ಮೂರ್ತಿಯ ಸ್ಥಾಪನೆಯನ್ನು ಮಾಡಿ ಹಣವನ್ನು ಖರ್ಚಿಸುತ್ತ ಎಲ್ಲ ವ್ಯವಸ್ಥೆಗಳನ್ನು ಮಾಡುವವನು ನಿಜ ಭಕ್ತ ಭಾವಿಕನಾಗಿರುವನು. ಕಸಗೂಡಿಸುವುದು ನೀಚಸೇವೆ ಎನ್ನದೇ ಸ್ವತಃ ತನ್ನದೆಂಬ ಭಾವನೆಯಿಂದ ಕಸಬರಿಗೆಯನ್ನು ಕೈಯಲ್ಲಿ ಹಿಡಿಯುವನು. ದೇವರ ಸೇವೆ ಎಂದು ಏನೆಲ್ಲವನ್ನೂ ಮಾಡುವನು ॥೧೨೯೮॥

ಸಂಮಾರ್ಜನೋಪಲೇಪಾಭ್ಯಾಂ ಸೇಕಮಂಡಲವರ್ತನೈ: ।
ಗೃಹಶುಶ್ರೂಷಣಂ ಮಹ್ಯಂ ದಾಸವದ್ಯದಮಾಯಯಾ ॥೩೯॥

ಅರ್ಥ:- ಕಸಗೂಡಿಸುವುದು, ಸಾರಿಸುವುದು, ಸಗಣಿ ನೀರು ಅಂಗಳಕ್ಕೆ ಹಾಕುವುದು, ಭಿನ್ನ ಭಿನ್ನ ಪ್ರಕಾರಗಳ ಸುಂದರ ರಂಗವಲಿ ಹಾಕುವುದು ಹೀಗೆ ದಾಸಾನುದಾಸನಾಗಿ ನಿಷ್ಕಪಟ ಭಾವದಿಂದ ನನ್ನ ಮಂದಿರದ ಸೇವೆಯನ್ನು ಮಾಡಬೇಕು.

ಅಸತಾ ಶಿಷ್ಯ ಸೇವಕಜನ । ತೇ ಪ್ರತಿಷ್ಠಾ ಸಾಂಡೂನಿ ಸನ್ಮಾನ । ಸ್ವಯೇ ಕರೀ ಸಡಾಸಂಮಾರ್ಜನ । ದೇವಾಲಯೀ ಜಾಣ ನಿರ್ದಂಭ ॥೧೪೯೯॥ ರಂಗಮಾಳಾ ಘಾಲೀ ಕುಸರೀ । ನಾನಾ ಯಂತ್ರೇ ನಾನಾಕಾರೀ । ನಾನಾ ಪರೀಚೇ ರಂಗ ಭರೀ । ಆವಡಿ ಭಾರೀ ಮದ್ಭಜನೀ ॥೧೫೦೦॥ ಜೈಸೇ ಕಾ ನೀಚ ರಂಕ । ತೈಸೀ ಸೇವಾ ಕರೀ ದೇಖ । ನೀಚಸೇವೇಚೇ ಅತಿಸುಖ । ನಿರ್ಮಾಯಿಕ ಮದ್ಭಜನೀ ॥೧೫೦೧॥

ಅಮಾನಿತ್ವಮದಂಭಿತ್ವಂ ಕೃತಸ್ಯಾಪರಿಕೀರ್ತನಮ್ ।
ಅಪಿ ದೀಪಾವಲೋಕಂ ಮೇ ನೋಪಯುಂಜ್ಯಾನ್ನಿವೇದಿತಮ್ ॥೪೦॥

ಅರ್ಥ:- ಅಭಿಮಾನ ಡಾಂಭಿಕತನವಿರಬಾರದು. ತನ್ನ ಶುಭಕರ್ಮಗಳ ಬಹು ಪ್ರಸಿದ್ಧ ಮಾಡಕೂಡದು. ಪ್ರಿಯ ಉದ್ಧವನೇ, ಬೆಳಗಿದ ದೀಪವನ್ನೇ ಪುನಃ ಬೆಳಗಿಸಬಾರದು, ಇತರ ದೇವರಿಗೆ ಅರ್ಪಿಸಿದ ವಸ್ತುಗಳನ್ನು ನನಗೆ ಅರ್ಪಿಸಕೂಡದು.

ಅಪಾರ ವೇಂಚೂನಿ ನಾನಾ ಅರ್ಥ । ಪ್ರಾಸಾದಪ್ರತಿಷ್ಠಾ ಮ್ಯಾ ಕೇಲೀ ಯೇಥ । ಮೀ ಏಕ ದೇವಾಚಾ ಮೋಠಾ ಭಕ್ತ । ನ ಧರೀ ಪೋಟಾಂತ ಅಭಿಮಾನ ॥೧೫೦೨॥ ಶುದ್ಧ ಭಾವೋ ನಾಹೀ ಚಿತ್ತೀ । ಖಟಾಟೋಪೇ ಅಹಾಚ ಭಕ್ತೀ । ಐಶೀ ಜೇ ದಾಂಭಿಕ ಸ್ಥಿತೀ । ಭಕ್ತ ನಾತಳತೀ ಭಾವಿಕ ॥೧೫೦೩॥ ಭಕ್ತೇ ನ ಧರಾವಾ ಅಭಿಮಾನ । ನಾಪೇಕ್ಷಾವಾ ಮಾನಸನ್ಮಾನ । ನ ಕರಾವೇ ದಾಂಭಿಕ ಭಜನ । ಅಭಿಲಾಷ ಜಾಣ ನ ಧರಾವಾ ॥೧೫೦೪॥ ಅನುಭವ ಜಾಲಾ ತೋ ಆಪಣ । ಕಾ ದೇವಾಲಯೀ ವೇಂಚಿಲೇ ಧನ । ಅಥವಾ ಜೇ ದಿಧಲೇ ದಾನ । ತೇ ವಾಚ್ಯ ಜಾಣ ನ ಕರಾವೇ ॥೧೫೦೫॥ ಯಜಮಾನ ಜೈ ಕೇಲೇ ಬೋಲೇ । ತೈ ಜೇ ಕೇಲೇ ತೇ ನಿರ್ವೀರ್ಯ ಜಾಲೇ । ಪ್ರಾಣೇವೀಣ ಪ್ರೇತ ಉರಲೇ । ತೈಸೇ ಝಾಲೇ ತೇ ಧರ್ಮ ॥೧೫೦೬॥ ಕೃಷೀವಳೂ ಪೇರೂನಿಯಾ ಧಾನ್ಯ । ಸವೇಂಚಿ ಆಚ್ಛಾದೀ ಆಪಣ । ತೈ ಪೀಕ ಲಗಡೂನಿ ಯೇ ಜಾಣ । ತೈಸೇ ಸಫಳ ದಾನ ನ ಬೋಲತಾ ॥೧೫೦೭॥ ದೇವಾಸೀ ಸಮರ್ಪಿಲೇ ಆಪಣ । ಕಾ ಆಣಿಕೀ ಕೇಲೇ ನಿವೇದನ । ತೇ ಘೇಊ ನಯೇ ಆಪಣ । ದೇವಲಕಪಣ ತೋ ದೋಷು ॥೧೫೦೮॥

ಈತನಲ್ಲಿ ಶಿಷ್ಯರು, ಸೇವಕರು ಇದ್ದರೂ ಕೂಡ ಈತನು ತನ್ನ ಈ ದೊಡ್ಡಸ್ಥಿಕೆಯನ್ನು ಮರೆತಿರುವನು. ಪ್ರತಿಷ್ಠೆ, ಮಾನಸನ್ಮಾನಗಳನ್ನು ಬದಿಗೊತ್ತಿ ಈತನು ದೇವಾಲಯದಲ್ಲಿ ಅಂಗಳವನ್ನು ಸಾರಿಸುವನು ॥೧೪೯೯॥ ಕುಶಲತೆಯಿಂದ ಈತನು ನಾನಾ ಪ್ರಕಾರದ ರಂಗವಲಿ ಹಾಕುವನು. ಸುಂದರ, ಆಕರ್ಷಕ ಚಿತ್ರಗಳನ್ನು ತೆಗೆಯುವನು. ಅವುಗಳಲ್ಲಿ ತರಹತರಹದ ಬಣ್ಣಗಳನ್ನು ತುಂಬುವನು. ಈತನಿಗೆ ನನ್ನ ಭಜನೆಯಲ್ಲಿ ಬಹಳ ಆನಂದವಿರುವುದು ॥೧೫೦೦॥ ತಾನೊಬ್ಬ ಬಡ ಸೇವಕನೆನ್ನುವಂತೆ ಈತನು ನನ್ನ ಸೇವೆಯನ್ನು ಮಾಡುವನು. ಇಂತಹ ಕೆಳದರ್ಜೆಯ ಕಾರ್ಯ ಮಾಡಲು ಈತನಿಗೆ ಬಹಳ ಸಂತೋಷವಾಗುತ್ತಿರುವುದು. ಈ ಪ್ರಕಾರವಾಗಿ ಈತನು ತನ್ನ ಅಂತಃಕರಣಪೂರ್ವಕವಾಗಿ ನನ್ನ ಅಕೃತ್ರಿಮ ಭಜನೆಯನ್ನು ಮಾಡುತ್ತಿರುವನು ॥೧೫೦೧॥

ನಾನು ಬಹಳ ಧನವನ್ನು ಖರ್ಚುಮಾಡಿ ಇಲ್ಲಿ ದೇವಾಲಯವನ್ನು ಕಟ್ಟಿಸಿರುವೆನು ಮತ್ತು ದೇವರ ಪ್ರಾಣಪ್ರತಿಷ್ಠೆಯನ್ನು ಮಾಡಿಸಿರುವೆನು. ನಾನೇ ದೇವರ ದೊಡ್ಡ ಭಕ್ತನಾಗಿರುವೆನು, ಎಂಬ ಈ ಅಭಿಮಾನವನ್ನು ಈತನು ತನ್ನ ಮನದಲ್ಲಿ ಹಿಡಿದಿರುವುದಿಲ್ಲ ॥೧೫೦೨॥ ಅಂತಃಕರಣದಲ್ಲಿ ನಿಜವಾದ ಭಕ್ತಿಯು ಇರದಿದ್ದರೂ ಹೊರನೋಟಕ್ಕೆ ಭಕ್ತಿಯ ಢೋಂಗೀತನ ಮಾಡುವುದು, ಭಕ್ತಿಯ ಪ್ರಸರಣ ಮಾಡುವುದು, ಹೀಗೆ ತೋರಿಕೆಯ ವೃತ್ತಿಯನ್ನು ಕಂಡು, ನಿಷ್ಠಾವಂತನಾದ ನಿಜ ಭಾವಿಕ ಭಕ್ತನು ಅವನನ್ನು ಸ್ಪರ್ಶ ಮಾಡುವುದಿಲ್ಲ ॥೧೫೦೩॥ ಭಕ್ತನಾದವನು ಯಾವುದೇ ಅಭಿಮಾನವನ್ನು ಹಿಡಿಯಬಾರದು. ಮಾನ ಸನ್ಮಾನಗಳ ಇಚ್ಛೆಯನ್ನು ಮಾಡಬಾರದು. ಡಾಂಭಿಕ ಭಜನೆಯನ್ನು ಎಂದಿಗೂ ಮಾಡಕೂಡದು. ಯಾವುದೇ ವಿಷಯಗಳ ಅಭಿಲಾಷೆಯನ್ನು ಮನಸ್ಸಿನಲ್ಲಿ ಹಿಡಿಯಬಾರದು ॥೧೫೦೪॥ ತನಗಾದ ಸ್ವತಃದ ಅನುಭವವನ್ನು ಅಥವಾ ದೇವಾಲಯಕ್ಕಾಗಿ ಆದ ಖರ್ಚಿನ ವಿವರಣೆಯನ್ನು ಹಾಗೂ ತಾನು ಕೊಟ್ಟ ದಾನವನ್ನು ಇವುಗಳ ಉಚ್ಚಾರವನ್ನು ಎಂದಿಗೂ ಮಾಡಬಾರದು ॥೧೫೦೫॥ ಯಜಮಾನನಾದವನು ತಾನು ಮಾಡಿದ ಈ ಸತ್ಕಾರ್ಯವನ್ನು ಎಲ್ಲರಲ್ಲಿಯೂ ಹೇಳುತ್ತ ಸಾಗಲು ಆಗ ತಾನು ಮಾಡಿದ ಕಾರ್ಯದ ಫಲವು ನಿಷ್ಫಲವಾಗುವುದು. ಪ್ರಾಣ ಕಳೆದುಕೊಂಡ ಶರೀರವು ಹೆಣವಾಗುವಂತೆ ಅವನ ಧರ್ಮದ ಸ್ಥಿತಿಯಾಗುವುದು ॥೧೫೦೬॥ ಒಕ್ಕಲಿಗನು ಧಾನ್ಯಗಳನ್ನು ಬಿತ್ತಿ ಕೂಡಲೇ ಮಣ್ಣಿನಿಂದ ಮುಚ್ಚುವನು. ಆದ್ದರಿಂದ ಅಲ್ಲಿ ಬೆಳೆಯು ಜೋರಾಗಿ ಬೆಳೆಯುವುದು. ಅದರಂತೆ ಕೊಟ್ಟ ದಾನವನ್ನು ಹೇಳದೇ ಮುಚ್ಚಿಡಲು ಆ ದಾನವು ಸಫಲವಾಗುವುದು ॥೧೫೦೭॥ ತಾನು ದೇವರಿಗೆ ಏನೇ ಸಮರ್ಪಿಸಲಿ ಅಥವಾ ಅನ್ಯರು ದೇವರಿಗೆ ಏನೇ ಕೊಟ್ಟಿರಲಿ ಸ್ವೀಕರಿಸಬಾರದು. ಇದರಿಂದ ಪೂಜಾರಿತನದ ದೋಷವು ಒದಗುವುದು ॥೧೫೦೮॥

ದೇವಾಚಾ ಪ್ರಸಾದ ಘೇತಾ । ಲೋಭೇ ನ ಘ್ಯಾವಾ ಸರ್ವಥಾ । ಆಧೀ ವಾಂಟಾವಾ ಸಮಸ್ತಾ । ಅಲ್ಪ ಮಾತ್ರತಾ ಸ್ವಯೇ ಘ್ಯಾವಾ ॥೧೩೦೯॥ ದೀಪು ಸಮರ್ಪಿಲಾ ಶ್ರೀಹರೀ । ತೇಣೇ ನ ವರ್ತಾವೇ ಗೃಹವ್ಯಾಪಾರೀ । ಹೇ ಬೋಲಿಲೇ ಆಗಮಶಾಸ್ತ್ರೀ । ಸ್ಮೃತಿಕಾರೀ ಸಜ್ಞಾನೀ ॥೧೩೧೦॥ ಹೇ ತಂವ ಅವಘೀ ಸಾಧಾರಣ ಬಾಹ್ಯ ಪೂಜಾ । ಪರೀ ದೃಢವಿಶ್ವಾಸೇ ಭಾವೋ ಮಾಝಾ । ತೇ ಭಕ್ತಿ ಆವಡೇ ಅಧೋಕ್ಷಜಾ । ಭಾವಿಕಾಂಚೀ ಪೂಜಾ ಭಾವಾರ್ಥೇ ॥೧೩೧೧॥ ಐಕ ಪಾ ಭಕ್ತೀಚಾ ಇತ್ಯರ್ಥು । ಜೇಣೇ ಭಜನೇ ಮ್ಹಣಿಜೇ ಭಕ್ತು । ತರೀ ಜೇ ಜೇ ಉತ್ತಮ ಯಾ ಲೋಕಾಂತು । ಆವಡತಾ ಪದಾರ್ಥು ಮಜ ಅರ್ಪೀ ॥೧೩೧೨॥

ಯದ್ಯದಿಷ್ಟತಂ ಲೋಕೇ ಯಚ್ಚಾತಿಪ್ರಿಯಮಾತ್ಮನಃ ।
ತತ್ತನ್ನಿವೇದಯೇನ್ಮಹ್ಯಂ ತದಾನಂತ್ಯಾಯ ಕಲ್ಪತೇ ॥೫೧॥

ಅರ್ಥ:- ಜಗತ್ತಿನಲ್ಲಿರುವ ಯಾವ ವಸ್ತು ತನಗೆ ಎಲ್ಲಕ್ಕಿಂತಲೂ ಪ್ರಿಯವಾಗಿರುವುದೋ, ಅದನ್ನು ನನಗೆ ಸಮರ್ಪಿಸಬೇಕು. ಹೀಗೆ ಮಾಡುವುದರಿಂದ ಆ ವಸ್ತುವು ಅನೇಕ ಫಲಗಳನ್ನು ನೀಡುವುದಾಗಿರುವುದು.

ಹೋ ಕಾ ಚಂದ್ರಾಮೃತ ತತ್ತ್ವತಾ । ಅವಚಟೇ ಆಲೇ ಭಕ್ತಾಚೇ ಹಾತಾ । ತೇ ಅವಘೇಚಿ ಅರ್ಪಿ ಭಗವಂತಾ । ದೇಹಲೋಭತಾ ನ ಸೇವೀ ॥೧೩೧೩॥ ದೇಹಾಸೀ ಯಾವಯಾ ಅಮರತಾ । ತೇಣೇ ಲೋಭೇ ಸೇವಾವೇ ಅಮೃತಾ । ಅಮರ ಅಮೃತಪಾನ ಕರಿತಾ । ಮರತೀ ಸರ್ವಥಾ ಸಕಾಳೇ ॥೧೩೧೪॥ ನಶ್ವರ ದೇಹಾಚಿಯಾ ಮಮತಾ । ಭಕ್ತ ಸೇವೀನಾ ಅಮೃತಾ । ತೇಚಿ ಭಗವಂತಾಸೀ ಅರ್ಪಿತಾ । ಅಕ್ಷಯತಾ ಅನಶ್ವರ ॥೧೩೧೫॥ ಪರಿಸ ಚಿಂತಾಮಣಿ ನ ಪ್ರಾರ್ಥಿತಾ । ದೈವೇ ಆಲಿಯಾ ಭಕ್ತಾಚ್ಯಾ ಹಾತಾ । ತೋ ಲೋಭೇ ನ ಠೇವೀ ಸರ್ವಥಾ । ಅರ್ಪಿ ಭಗವಂತಾ ತತ್ಕಾಳ ॥೧೩೧೬॥ ಲೋಭೇ ಕಲ್ಪತರು ರಾಖಿತಾ । ಕಲ್ಪನಾ ವಾಢೇ ಅಕಲ್ಪಿತಾ । ತೋಚಿ ಭಗವಂತೀ ಅರ್ಪಿತಾ । ನಿರ್ವಿಕಲ್ಪತಾ ಸ್ವಯೇ ಲಾಭೇ ॥೧೩೧೭॥ ಸ್ವಾರ್ಥೇ ಚಿಂತಾಮಣಿ ರಾಖಿತಾ । ಅತ್ಯಂತ ಹೃದಯೀ ವಾಢವೀ ಚಿಂತಾ । ತೋಚಿ ಭಗವಂತೀ ಅರ್ಪಿತಾ । ನಿಶ್ಚಿಂತತಾ ಚಿತ್ತಾಸೀ ॥೧೩೧೮॥ ಕಾಮಧೇನು ರಾಖಿತಾ ಆಪಣ । ಅನಿವಾರ ಕಾಮನಾ ವಾಢವೀ ಜಾಣ । ತೇಚಿ ಕರಿತಾ ಕೃಷ್ಣಾರ್ಪಣ । ನಿರಪೇಕ್ಷತಾ ಪೂರ್ಣ ಅಂಗೀ ಬಾಣೇ ॥೧೩೧೯॥

ದೇವರ ಪ್ರಸಾದವನ್ನು ತಾನೊಬ್ಬನೇ ಸಂಪೂರ್ಣವಾಗಿ ಲೋಭದಿಂದ ಸ್ವೀಕರಿಸಬಾರದು. ಆರಂಭದಲ್ಲಿ ಪ್ರಸಾದವನ್ನು ಎಲ್ಲರಿಗೂ ಹಂಚಿ ತದನಂತರ ತಾನು ಅಲ್ಪ ಪ್ರಸಾದವನ್ನು ಸ್ವೀಕರಿಸಬೇಕು ॥೧೩೦೯॥ ದೇವರಿಗೆ ದೀಪವನ್ನು ಹಚ್ಚಿ ಬೆಳಗಿ ಸಮರ್ಪಣೆ ಮಾಡಿದ ನಂತರ ಆ ದೀಪದಿಂದಲೇ ಮನೆಯ ಕೆಲಸಗಳನ್ನು ಮಾಡಕೂಡದು. ಹೀಗೆ ಸ್ಮೃತಿಕಾರರು ಹಾಗೂ ಪುರಾಣಿಕರು ಹೇಳಿರುವರು. ಆದ್ದರಿಂದ ಅವರ ಆಜ್ಞೆಯನ್ನು ಪಾಲಿಸಬೇಕು ॥೧೩೧೦॥ ಆದರೆ ಈ ಎಲ್ಲವೂ ಬಾಹ್ಯ ಪೂಜೆಯಾಗಿರುವುದು. ಅಂತಃಕರಣದಲ್ಲಿ ನನ್ನ ಮೇಲೆ ದೃಢವಾದ ಶ್ರದ್ಧೆ ಮತ್ತು ಭಕ್ತಿಯು ಬೇಕಾಗುವುದು. ಹೀಗಿರುವ ನಿಸ್ವಾರ್ಥ ಭಕ್ತಿಯು ದೇವರಿಗೆ ಪ್ರಿಯವಾಗುವುದು. ಭಾವಿಕನಾದವನು ಭಕ್ತಿಯಿಂದಲೇ ಪೂಜೆಯನ್ನು ಮಾಡುವನು ॥೧೩೧೧॥ ಈಗ ಭಕ್ತಿಯ ರಹಸ್ಯವನ್ನು ಕೇಳು. ಈ ಜಗತ್ತಿನಲ್ಲಿ ಯಾವ ಯಾವುದು ಉತ್ತಮವಾಗಿ ತನಗೆ ಪ್ರಿಯವಾಗಿರುವುದೋ, ಅವುಗಳೆಲ್ಲವನ್ನೂ ನನಗೆ ಪ್ರೇಮದಿಂದ ಅರ್ಪಿಸಬೇಕು. ಭಕ್ತರು ಇದಕ್ಕೇನೇ ಭಜನೆ ಎಂದು ಹೇಳುವರು ॥೧೩೧೨॥

ಭಕ್ತನ ಕೈಯಲ್ಲಿ ಒಂದುವೇಳೆ ಅಕಸ್ಮಾತ್ತಾಗಿ ಚಂದ್ರಾಮೃತವು ಬಂದಿತೆಂದರೆ, ಆ ಭಕ್ತನು ಸರ್ವ ಚಂದ್ರಾಮೃತವನ್ನು ದೇವರಿಗೆ ಅರ್ಪಣೆಯನ್ನು ಮಾಡುವನು. ದೇಹದ ಮೇಲೆ ಲೋಭವನಿಟ್ಟು ಆತನು ಅದನ್ನು ಸೇವನೆ ಮಾಡಲಾರನು ॥೧೩೧೩॥ ದೇಹವನ್ನು ಅಮರವನ್ನಾಗಿ ಮಾಡುವುದಕ್ಕಾಗಿ ಅಮೃತವನ್ನು ಸೇವಿಸಬೇಕೆಂದರೆ, ಅಮೃತಪಾನವನ್ನು ಮಾಡುವ ದೇವತೆಗಳೂ ಸಹ ತಮ್ಮ ತಮ್ಮ ವೇಳೆ ಬರಲು ಸಾಯುತ್ತಿರುವರು ॥೧೩೧೪॥ ದೇಹದ ಮೇಲಿನ ಈ ಪ್ರೇಮವು ನಶ್ವರವಾಗಿರುವುದೆಂದು ತಿಳಿದು ಭಕ್ತನು ಅಮೃತವನ್ನು ಸೇವಿಸುವುದಿಲ್ಲ. ಈ ಅಮೃತವನ್ನೇ ದೇವರಿಗೆ ಅರ್ಪಿಸಲು ಆತನಿಗೆ ಶಾಶ್ವತವಾದ ಅಮರತ್ವವು ಪ್ರಾಪ್ತವಾಗುವುದು ॥೧೩೧೫॥ ದೈವಯೋಗದಿಂದ ಭಕ್ತನಿಗೆ ಪರಿಸಮಣಿಯಾಗಲಿ, ಅಥವಾ ಚಿಂತಾಮಣಿಯಾಗಲಿ ಪ್ರಾಪ್ತವಾಯಿತೆಂದರೆ ಆತನು ಅವುಗಳ ಲೋಭದಿಂದ ತನ್ನ ಬಳಿ ಇಟ್ಟುಕೊಳ್ಳಲಾರನು. ಆ ವಸ್ತುಗಳನ್ನು ಭಗವಂತನಿಗೆ ಅರ್ಪಿಸಿಬಿಡುವನು ॥೧೩೧೬॥ ಒಂದುವೇಳೆ ಲೋಭಕ್ಕೆ ಬಲಿಯಾಗಿ ಕಲ್ಪವೃಕ್ಷವನ್ನು ಜೋಪಾನವಾಗಿ ಇಟ್ಟುಕೊಳ್ಳಲು, ಅದರಿಂದ ಮನದಲ್ಲಿ ಇಚ್ಛೆಯು ಸತತವಾಗಿ ಬೆಳೆಯುತ್ತ ಸಾಗುವುದು. ಆದರೆ ಅದೇ ಕಲ್ಪವೃಕ್ಷವನ್ನು ಭಗವಂತನಿಗೆ ಅರ್ಪಿಸಲು ಸಹಜವಾಗಿಯೇ ನಿರಿಚ್ಛೆಯು ಪ್ರಾಪ್ತವಾಗುವುದು ॥೧೩೧೭॥ ಸ್ವಾರ್ಥಬುದ್ಧಿಯಿಂದ ಚಿಂತಾಮಣಿಯನ್ನು ಹತ್ತಿರ ಇಟ್ಟುಕೊಂಡು ಜೋಪಾನ ಮಾಡಲು, ಆಗ ಅದು ಅಂತಃಕರಣದಲ್ಲಿ ನಾನಾ ಪ್ರಕಾರಗಳ ಚಿಂತೆಗಳನ್ನು ಹುಟ್ಟಿಸುವುದು. ಅದೇ ಚಿಂತಾಮಣಿಯನ್ನು ಭಗವಂತನಿಗೆ ಅರ್ಪಿಸಿದರೆ, ಆಗ ಅಂತಃಕರಣದಲ್ಲಿ ಶಾಂತತೆಯು ಪ್ರಾಪ್ತವಾಗುವುದು ॥೧೩೧೮॥ ತಾನು ಕಾಮಧೇನುವನ್ನು ಪೋಷಣೆ ಮಾಡುವುದರಿಂದ, ಅದು ಮನಸ್ಸಿನಲ್ಲಿ ಅನಿವಾರ್ಯವಾಗಿ ಕಾಮನೆಗಳನ್ನು ಬೆಳೆಸುವುದು. ಆದರೆ ಅದೇ ಕಾಮಧೇನುವನ್ನು ಭಗವಂತನಿಗೆ ಅರ್ಪಿಸಲು ಹೃದಯದಲ್ಲಿ ಪರಿಪೂರ್ಣವಾಗಿ ನಿರಪೇಕ್ಷತೆಯ ಸ್ಥಿರವಾಗಿ ನೆಲೆಗೊಳ್ಳುವುದು ॥೧೩೧೯॥

ಲೋಭೇ ಸ್ಪರ್ಶಮಣಿ ರಾಖಿತಾ । ತೋ ವಾಢವೀ ಧನ-ಲೋಭತಾ । ತೋಚಿ ಭಗವಂತೀ ಅರ್ಪಿತಾ। ಅರ್ಥಸ್ವಾರ್ಥತಾನಿರ್ಮುಕ್ತ ॥೧೩೨೦॥ ಹೋ ಕಾ ದೇಶಕಾಳಋತುಮೇಳೇ । ಉತ್ತಮ ಪದಾರ್ಥ ಅಥವಾ ಫಳೇ । ನವಧಾನ್ಯಾದಿಕೇ ಸಕಳೇ । ಅರ್ಪೀ ಭಾವಬಳೇ ಮಜಲಾಗೀ ॥೧೩೨೧॥ ಪೋಟಾಂತೂನಿ ಆವಡತಾ । ಪ್ರಾಪ್ತ ಝಾಲಿಯಾ ಪದಾರ್ಥಾ । ಮಜಚಿ ಅರ್ಪಿತೀ ಸರ್ವಥಾ । ಲೋಲಿಂಗತಾ ಸಾಂಡೂನೀ ॥೧೩೨೨॥ ಆಪುಲೇ ಹೃದಯೀಂಚೀ ಆವಡೀ । ಹರಿಚರಣೀ ಪುಡೀ । ಆತಾ ನಾನಾ ಪದಾರ್ಥಾಚೀ ಜೇ ಗೋಡೀ । ತೇ ಮಜಚಿ ರೋಕಡೀ ಅರ್ಪಿತೀ ॥೧೩೨೩॥ ಮಜ ಅನಂತಾಚ್ಯಾ ಹಾತೀ । ಆವಡೀ ಅರ್ಪಿಲೇ ಮದ್ಭಕ್ತೀ । ತ್ಯಾಚೀ ಫಳೇ ಸಾಂಗತಾ ಶ್ರುತೀ । ಮುಕ್ಯಾ ಹೋತೀ ಸರ್ವಥಾ ॥೧೩೨೪॥ ಮೀ ವೇದಾಂಚಾ ವೇದವಕ್ತಾ । ಮಜಹೀ ನ ಬೋಲವೇ ಸರ್ವಥಾ। ತ್ಯಾಚೇ ಫಳ ತೇ ಮೀಚಿ ಆತಾ । ಜಾಣ ತತ್ತ್ವತಾ ಉದ್ಧವಾ ॥೧೩೨೫॥ ಜೀವಾಹಿಹೋನಿ ಪರೌತೀ । ಮಾಝ್ಯಾ ಠಾಯೀ ಅತ್ಯಂತ ಪ್ರೀತೀ । ತಿಯೇ ನಾಂವ ಗಾ ಮಾಝೀ ಭಕ್ತೀ । ಜಾಣ ನಿಶ್ಚಿತೀ ಉದ್ಧವಾ ॥೧೩೨೬॥ ತತ್ಕಾಳ ಮಜ ಪಾವಿಜೇ ಜೇಣೇ । ತೇ ಮಾಝೀ ಪೂಜೇಚೀ ಸ್ಥಾನೇ । ಅತಿಪವಿತ್ರ ಜೇ ಕಲ್ಯಾಣೇ । ತುಜ ಕಾರಣೇ ಸಾಂಗೇನ ॥೧೩೨೭॥

ಸೂರ್ಯೋಽಗ್ನಿರ್ಬ್ರಾಹ್ಮಣೋ ಗಾವೋ ವೈಷ್ಣವಃ ಖಂ ಮರುಜ್ಜಲಮ್ ।
ಭೂರಾತ್ಮಾ ಸರ್ವಭೂತಾನಿ ಭದ್ರಪೂಜಾಪದಾನಿ ಮೇ ॥೪೨॥

ಅರ್ಥ:- ಹೇ ಉದ್ಧವನೇ, ಸೂರ್ಯ, ಅಗ್ನಿ, ಬ್ರಾಹ್ಮಣ, ಆಕಳು, ವೈಷ್ಣವ, ಆಕಾಶ, ವಾಯು, ಜಲ, ಪೃಥ್ವಿ, ಆತ್ಮಾ ಮತ್ತು ಸರ್ವ ಭೂತಗಳು ಇವು ನನ್ನ ಪೂಜೆಯ ಸ್ಥಾನಗಳಾಗಿರುವುವು.

ಏಕಾದಶೀ ಏಕಾದಶಾಧ್ಯಾಯೀ । ಏಕಾದಶ ಪೂಜಾಸ್ಥಾನೇ ಪಾಹೀ । ಏಕಾ ಜನಾರ್ದನು ತೇಹೀ । ಏಕರೂಪ ಸರ್ವಹೀ ವರ್ಣೀಲ ॥೧೩೨೮॥ ಸೂರ್ಯ ಅಗ್ನಿ ಆಣಿ ಬ್ರಾಹ್ಮಣ । ಗಾಯೀ ವೈಷ್ಣವ ಆಣಿ ಗಗನ । ಅನಿಳ ಜಳ ಮಹೀ ಜಾಣ । ಪೂಜ್ಯ ಆಪಣ ಆಪಣಾಸೀ ॥೧೩೨೯॥ ಅಕರಾವೇ ಪೂಜಾ ಸ್ಥಾನ । ಸರ್ವ ಭೂತೇ ಪೂಜ್ಯ ಜಾಣ। ಐಕ ಪೂಜೇಚೇ ವಿಧಾನ । ಯಥಾಯೋಗ್ಯ ಲಕ್ಷಣ ಅವಧಾರೀ ॥೧೩೩೦॥

ಪರೀಸಮಣಿಯನ್ನು ಪ್ರೀತಿಯಿಂದ ತನ್ನಲ್ಲಿಟ್ಟುಕೊಂಡು ಜೋಪಾನ ಮಾಡಲು, ಆಗ ಮನದಲ್ಲಿ ಧನ ಲೋಭವು ಬೆಳೆಯುತ್ತಿರುವುದು. ಆದ್ದರಿಂದ ಅದೇ ಪರೀಸಮಣಿಯನ್ನು ಭಗವಂತನಿಗೆ ಅರ್ಪಿಸಲು, ಮನುಷ್ಯನು ದ್ರವ್ಯದ ಲಾಲಸೆಯಿಂದ ಮುಕ್ತನಾಗುವನು ॥೧೩೨೦॥ ದೇಶ, ಕಾಲ ಋತು ಪ್ರಮಾಣದಂತೆ ನಿರ್ಮಾಣವಾಗುವ ಫಲಗಳು, ಉತ್ತಮ ಪದಾರ್ಥಗಳು, ಹೊಸಧಾನ್ಯಗಳು ಇತ್ಯಾದಿ ಪದಾರ್ಥಗಳನ್ನು ನನ್ನ ಭಕ್ತನು ನನಗೇನೇ ಬಹು ಪ್ರೇಮದಿಂದ ಅರ್ಪಣೆಯನ್ನು ಮಾಡುವನು ॥೧೩೨೧॥ ಮನಸ್ಸಿಗೆ ಅತ್ಯಂತ ಪ್ರಿಯವಾದ ಯಾವುದೇ ಪದಾರ್ಥವಾಗಲಿ, ತನಗೆ ಪ್ರಾಪ್ತವಾಗಲು, ಅದರ ಲೋಭವನ್ನು ಬಿಟ್ಟು ಭಕ್ತನು ಆ ಪದಾರ್ಥವನ್ನು ನನ್ನಲ್ಲಿಯೇ ಅರ್ಪಿಸುವನು ॥೧೩೨೨॥ ತನ್ನ ಮನಸ್ಸಿನಲ್ಲಿಯ ಸರ್ವ ಪ್ರಕಾರದ ಅಪೇಕ್ಷೆಗಳನ್ನು ಆತನು ನಿಜವಾದ ಪ್ರೇಮಭಾವದಿಂದ ನನಗೆ ಅರ್ಪಣೆಯನ್ನು ಮಾಡಿರುವನು. ಆದ್ದರಿಂದ ಭಿನ್ನ ಭಿನ್ನ ಪ್ರಕಾರಗಳ ಅಭಿರುಚಿಗಳನ್ನು ಆತನು ನನಗೆ ಅರ್ಪಿಸಿಬಿಡುವನು ॥೧೩೨೩॥ ನನ್ನ ಭಕ್ತನು ಪ್ರೇಮಭಾವದಿಂದ ಅನಂತನಾದ ನನ್ನ ಕೈಯಲ್ಲಿ ಏನೇನು ಕೊಟ್ಟಿರುವನೋ, ಅವುಗಳ ಫಲಗಳನ್ನು ಹೇಳಲು ವೇದವೂ ಕೂಡ ಮೌನವಾಗುವುದು ॥೧೩೨೪॥ ಹೇ ಉದ್ಧವನೇ, ನಾನಾದರೂ ವೇದಗಳ ಕರ್ತನಾಗಿರುವೆನು. ಹೀಗಿದ್ದರೂ ನನಗೂ ಕೂಡ ಆ ಫಲದ ವರ್ಣನೆಯನ್ನು ಮಾಡಲು ಬರುವುದಿಲ್ಲ. ಈಗ ಅದರ ಫಲವೇನೆಂದರೆ ನನ್ನದೇ ಪ್ರಾಪ್ತಿ ಎಂದು ನೀನು ಹೀಗೆ ತಿಳಿದುಕೋ ॥೧೩೨೫॥ ನಿಜವಾಗಿಯೂ ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ನನ್ನಲ್ಲಿ ಅತ್ಯಂತ ಪ್ರೇಮವಿರುವುದಕ್ಕೆ ಭಕ್ತಿ ಎಂದು ಕರೆಯುವರು. ಇದನ್ನು ನೀನು ನಿಶ್ಚಯ ಪೂರ್ವಕವಾಗಿ ಲಕ್ಷದಲ್ಲಿಡು ॥೧೩೨೬॥ ಯಾವುದರ ಸಹಾಯದಿಂದ ತತ್ಕಾಲದಲ್ಲಿ ನನ್ನ ಪ್ರಾಪ್ತಿಯಾಗುವುದೋ, ಅಂತಹ ನನ್ನ ಪೂಜೆಯ ಅತ್ಯಂತ ಪವಿತ್ರ ಮತ್ತು ಕಲ್ಯಾಣಕಾರಕ ಸ್ಥಾನಗಳನ್ನು ನಾನು ಈಗ ನಿನಗೆ ಹೇಳುವೆನು ॥೧೩೨೭॥

ಭಾಗವತದ ಹನ್ನೊಂದನೆಯ ಸ್ಕಂಧದ ಹನ್ನೊಂದನೆಯ ಅಧ್ಯಾಯದಲ್ಲಿ ಹನ್ನೊಂದು ಪ್ರಕಾರಗಳ ಪೂಜೆಯ ಸ್ಥಾನಗಳನ್ನು ಹೇಳಿರುವುದು. ಆ ಸರ್ವ ಪೂಜೆಯ ಸ್ಥಾನಗಳ ವರ್ಣನೆಯನ್ನು ಏಕನಾಥ ಜನಾರ್ದನರು ಐಕ್ಯ ರೂಪದಿಂದ ಮಾಡುವರು ॥೧೩೨೮॥ ಸೂರ್ಯ, ಅಗ್ನಿ, ಬ್ರಾಹ್ಮಣ, ಗೋವು, ವೈಷ್ಣವ, ಆಕಾಶ, ವಾಯು, ಜಲ ಮತ್ತು ಪೃಥ್ವಿ ಇವು ಒಂಭತ್ತು ಸ್ಥಾನಗಳು ಮತ್ತು ತಾನು ಸ್ವತಃ ಇದು ಹತ್ತನೆಯ ಸ್ಥಾನವು ಇವು ತಮಗೆ ಪೂಜ್ಯವಾಗಿರುವುವು ॥೧೩೨೯॥ ಸರ್ವ ಪಂಚಮಹಾಭೂತಗಳು ಇವು ಹನ್ನೊಂದನೆಯ ಪೂಜ್ಯ ಪೂಜಾಸ್ಥಾನಗಳಾಗಿರುವುವು. ಹೀಗೆ ತಿಳಿ. ಈಗ ಅವುಗಳ ಪೂಜೆಯ ಯಥಾಯೋಗ್ಯ ವಿಧಾನಗಳನ್ನು ಮತ್ತು ಲಕ್ಷಣಗಳನ್ನು ಹೇಳುವೆನು. ಕೇಳು ॥೧೩೩೦॥

ಸೂರ್ಯೇ ತು ವಿದ್ಯಾಯಾ ತ್ರಯ್ಯಾ ಹವಿಷಾಗ್ನೌ ಯಜೇತ ಮಾಮ್ ।
ಆತಿಥ್ಯೇನ ತು ವಿಪ್ರಾಗ್ರ್ಯೇ ಗೋಷ್ವಂಗ ಯವಸಾದಿನಾ ॥೪೩॥

ಅರ್ಥ:- ಸೂರ್ಯನಲ್ಲಿ ವೇದೋಕ್ತ ಮಂತ್ರಗಳಿಂದ ಉಪಸ್ಥಾನಾದಿಗಳ ಯೋಗದಿಂದ ನನ್ನ ಪೂಜೆಯನ್ನು ಮಾಡಬೇಕು. ಅಗ್ನಿಯಲ್ಲಿ ಘೃತಾದಿ ಹವಿಸ್ಸಿನಿಂದ ನನ್ನ ಪೂಜೆಯನ್ನು ಮಾಡಬೇಕು. ಬ್ರಾಹ್ಮಣನನ್ನು ಶ್ರೇಷ್ಠರಲ್ಲಿ ಆತಿಥ್ಯದಿಂದ ನನಗೆ ಪೂಜಿಸಬೇಕು. ಆಕಳುಗಳಲ್ಲಿ ತೃಣಾದಿಗಳ ಯೋಗದಿಂದ ನನ್ನ ಪೂಜೆಯನ್ನು ಮಾಡಬೇಕು.

ಸವಿತಾ ಮಾಝೇ ಅದಿಷ್ಠಾನ । ಮಾಝೇನಿ ತೇಜೇ ವಿರಾಜಮಾನ । ಜೇಣೇ ತೇಜೇ ಜಗಾಚೇ ನಯನ । ದೇಖಣೇ ಜಾಣ ಹೋತಾತೀ ॥೧೩೩೧॥ ದೀಪು ಲಾವಿಲ್ಯಾ ಗೃಹಾಭೀತರೀ । ತೋ ಪ್ರಕಾಶು ದಿಸೇ ಗವಾಕ್ಷದ್ವಾರೀ । ತೈಸೇ ಮಾಝೇ ನಿಜತೇಜ ಅಂತರೀ । ತೇ ಸೂರ್ಯದ್ವಾರೀ ಪ್ರಕಾಶೇ ॥೧೩೩೨॥ ತೋ ಸವಿತಾ ಮಂಡಳ ಮಧ್ಯವರ್ತೀ । ಜಾಣ ನಾರಾಯಣ ಮೀ ನಿಶ್ಚಿತೀ । ತ್ಯಾ ಮಜ ಸೂರ್ಯಾಚೀ ಉಪಾಸ್ತೀ । ಸೌರ ಸೂಕ್ತಿ ತ್ರೈವಿದ್ಯಾ ॥೧೩೩೩॥ ಋಗ್ವೇದಾದಿ ವೇದ ತೀನೀ । ಸಾಂಗ ಸೌರಮಂತ್ರ ಜಾಣೋನೀ । ಸೂರ್ಯಸೂಕ್ತೇ ಸಂಮುಖ ಪಠಣೀ । ಪೂಜಾ ಸಜ್ಞಾನೀ ಕರಾವೀ ॥೧೩೩೪॥ ಹೇ ವೈದಿಕೀ ಉಪಾಸಕತಾ । ವೇದಜ್ಞಾಂಸೀಚಿ ತತ್ತ್ವತಾ । ನೇಣತ್ಯಾ ಯೋಗ್ಯ ನವ್ಹೇ ಸವಿತಾ । ಐಸೇ ಸರ್ವಥಾ ನ ಮ್ಹಣಾವೇ ॥೧೩೩೫॥ ತತ್ಕಾಳ ಪ್ರಸನ್ನ ಹೋಯ ಸವಿತಾ । ಐಸೀ ಸುಗಮ ಉಪಾಸಕತಾ । ತುಜ ಸಾಂಗೇನ ಆತಾ । ಸಾವಧಾನತಾ ಅವಧಾರೀ ॥೧೩೩೬॥ ಸಕಳ ವೇದಾಂಚೀ ಜನನೀ । ಸಕಳ ಮಂತ್ರಾಚಾ ಮುಕುಟಮಣೀ । ತೇ ಗಾಯತ್ರೀ ಉತ್ತಮವರ್ಣೀ । ಸಕಳ ಬ್ರಾಹ್ಮಣೀ ಜಾಣಿಜೇ ॥೧೩೩೭॥ ತಿಚಾ ಅರ್ಥ ವಿಚಾರಿತಾ । ತೀ ಆಧೀನ ಅಸೇ ಸವಿತಾ । ತ್ರಿಪದಾ ತ್ರಿಕಾಳೀ ಅರ್ಘ್ಯ ದೇತಾ । ತ್ರೈವಿದ್ಯಾ ತತ್ತ್ವತಾ ತ್ಯಾ ನಾಂವ ॥ ೧೩೩೮ ॥ ಅರ್ಧಮಾತ್ರಾ ಅರ್ಧಬಿಂಬ ಧ್ಯಾನ । ತ್ರಿಪದಾ ತ್ರಿಕಾಳೀ ಅರ್ಘ್ಯದಾನ । ತೇಣೇ ಸಂತೋಷೇ ಚಿದ್‌ಘನ । ಆಪಣಾಸಮಾನ ಭಕ್ತ ಕರೀ ॥೧೩೩೯॥ ಹೇ ಪ್ರಥಮ ಮಾಝೇ ಅಧಿಷ್ಠಾನ । ಸೂರ್ಯಪೂಜಾ ಯಾಚಿ ನಾಂವ ಜಾಣ । ಆತಾ ಅಗ್ನಿಪೂಜೇಚೇ ಲಕ್ಷಣ । ಸಾಂಗ ಸಂಪೂರ್ಣ ತೇ ಐಕ ॥೧೩೪೦॥ ಸರ್ವಾಂಗ ಮುಖ ಪ್ರಧಾನ । ತೇ ಮಾಝೇ ಮುಖ ಅಗ್ನಿ ಜಾಣ । ಯೇ ಅರ್ಥೀ ವೇದಶಾಸ್ತ್ರಪುರಾಣ । ಸಾಕ್ಷೀ ಸಂಪೂರ್ಣ ಗರ್ಜತೀ ॥೧೩೪೧॥ ಬ್ರಾಹ್ಮಣ ಮಾಝೇ ಆವಡತೇ । ಮಾಝೇ ಮುಖೀ ಹೋಆವಯಾ ಸರತೇ । ಮ್ಯಾ ಲಾವಿಲೇ ಅಗ್ನಿಸೇವೇತೇ । ತೇಹೀ ತೇಥೇ ಚೂಕಲೇ ॥೧೩೪೨॥

ಸೂರ್ಯನು ನನ್ನ ಅಧಿಷ್ಠಾನವಾಗಿರುವನು. ನನ್ನದೇ ಆದ ತೇಜದಿಂದ ಸೂರ್ಯನು ಪ್ರಕಾಶಿಸುತ್ತಿರುವನು. ಆತನ ತೇಜದಿಂದಲೇ ಸರ್ವ ಜಗತ್ತಿನ ಕಣ್ಣುಗಳು ನೋಡಲು ಸಮರ್ಥವಾಗಿರುವುವು ॥೧೩೩೧॥ ಮನೆಯಲ್ಲಿ ಹಚ್ಚಿದ ದೀಪದ ಪ್ರಕಾಶವು ಖಿಡಕಿಯಿಂದ ಹೊರಗೆ ಪ್ರಸರಿಸುವುದು. ಅದರಂತೆ ನನ್ನ ಸ್ವರೂಪದಲ್ಲಿನ ಆತ್ಮತೇಜವು ಸೂರ್ಯನ ರೂಪದಿಂದ ಹೊರಗೆ ಪ್ರಕಾಶಿಸುವುದು ॥೧೩೩೨॥ ಆಕಾಶದಲ್ಲಿರುವ ಆ ಯಾವ ಸೂರ್ಯನು ನಿಜವಾಗಿಯೂ ನಾನು ನಾರಾಯಣನೇ ಆಗಿರುವೆನು ಎಂದು ತಿಳಿ. ಈ ಯಾವ ಸೌರಸೂಕ್ತ ಮತ್ತು ತ್ರೈವಿದ್ಯಾ ಇವು ಸೂರ್ಯನ ಉಪಾಸನೆಯ ಮಂತ್ರವಾಗಿರುವುವು ॥೧೩೩೩॥ ಋಗ್ವೇದಾದೀ ಮೂರೂ ವೇದಗಳಲ್ಲಿನ ಸರ್ವ ಸೌರಮಂತ್ರ ಮತ್ತು ಸೂರ್ಯಸೂಕ್ತಗಳನ್ನು ಅರಿತುಕೊಂಡು ಸೂರ್ಯನ ಎದುರಿನಲ್ಲಿ ಮುಖವನ್ನು ಮಾಡಿ ಪಠಿಸುತ್ತ ಸೂರ್ಯನ ಪೂಜೆಯನ್ನು ಮಾಡಬೇಕು ॥೧೩೩೪॥ ಆದರೆ ಇದು ವೈದಿಕರ ಪೂಜಾವಿಧಿಯಾಗಿರುವುದು. ವೇದದ ಪಠಣೆಯನ್ನು ಮಾಡುವವರಿಗೆ ಮಾತ್ರ ಈ ಪದ್ಧತಿಯು ಯೋಗ್ಯವಾಗಿರುವುದು. ಅಜ್ಞಾನಿಗಳವರಿಗೆ ಸೂರ್ಯನ ಉಪಾಸನೆಯು ಯೋಗ್ಯವಲ್ಲವೆಂದು ಹೀಗೆ ಹೇಳಬೇಡ ॥೧೩೩೫॥ ಯಾವುದರಿಂದ ಸೂರ್ಯನು ತತ್ಕಾಲದಲ್ಲಿ ಪ್ರಸನ್ನನಾಗುವಂತಹ ಒಂದು ಸುಲಭ ಉಪಾಸನೆಯನ್ನು ನಾನು ನಿನಗೆ ಹೇಳುವೆನು. ಅದನ್ನು ನೀನು ಲಕ್ಷಪೂರ್ವಕವಾಗಿ ಕೇಳು ॥೧೩೩೬॥ ಸರ್ವ ವೇದಗಳ ಮಾತೆ, ಸರ್ವ ಮಂತ್ರಗಳ ಮುಕುಟಮಣಿ, ಹೀಗಿರುವ ಯಾವ ಗಾಯತ್ರಿ ಮಂತ್ರವನ್ನು ಬ್ರಾಹ್ಮಣವರ್ಗದವರು ಅರಿಯಬೇಕು ॥೧೩೩೭॥ ಇದರ ಅರ್ಥದ ವಿಚಾರವನ್ನು ಮಾಡಲು, ಸೂರ್ಯನು ಈ ಮಂತ್ರದ ಆಧೀನನಾಗಿರುವನು. ಈ ಯಾವ ಮೂರು ಚರಣಗಳ ಗಾಯತ್ರಿ ಮಂತ್ರದಿಂದ ಮೂರು ವೇಳೆ ಅರ್ಘ್ಯವನ್ನು ಕೊಡುವುದಕ್ಕೆ "ತ್ರೈವಿದ್ಯಾ" ಎಂದು ನಾಮವಿರುವುದು ॥೧೩೩೮॥ ಅರ್ಧ ಉದಯವಾದ ಸೂರ್ಯಬಿಂಬದ ಅರ್ಧಮಾತ್ರಾ ಧ್ಯಾನ ಮಾಡುವದು ಮತ್ತು ತ್ರಿಕಾಲದಲ್ಲಿ ತ್ರಿಪದಾ ಗಾಯತ್ರಿ ಮಂತ್ರದಿಂದ ಅರ್ಘ್ಯಪ್ರದಾನ ಮಾಡುವುದರಿಂದ ಚಿದ್‌ಘನ ಪರಮಾತ್ಮನು ಸಂತುಷ್ಟನಾಗುವನು. ಮತ್ತು ಭಕ್ತನಿಗೆ ತನ್ನಂತೆ ಮಾಡಿಕೊಳ್ಳುವನು ॥೧೩೩೯॥ ಇದು ನನ್ನ ಪ್ರಥಮ ಅಧಿಷ್ಠಾನವಾಗಿರುವುದು. ಇದಕ್ಕೇನೇ ಸೂರ್ಯಪೂಜೆ ಎಂದು ಹೇಳುವರು. ಈಗ ಅಗ್ನಿಪೂಜೆಯ ಯಾವ ಲಕ್ಷಣವನ್ನು ಸವಿಸ್ತಾರವಾಗಿ ಹೇಳುವೆನು. ಸಂಪೂರ್ಣವಾಗಿ ಕೇಳಿ ತಿಳಿ ॥೧೩೪೦॥ ಸರ್ವ ಅಂಗಗಳಲ್ಲಿ ಮುಖವು ಇದು ಶ್ರೇಷ್ಠವಾಗಿರುವುದು. ಮತ್ತು ಅಗ್ನಿಯೇ ನನ್ನ ಮುಖವಾಗಿರುವುದು. ಹೀಗೆ ಸರ್ವ ವೇದ, ಶಾಸ್ತ್ರ, ಪುರಾಣಗಳು ವರ್ಣನೆ ಮಾಡಿರುವುವು ॥೧೩೪೧॥ ಬ್ರಾಹ್ಮಣರು ಇವರು ನನಗೆ ಪ್ರಿಯರು. ಅವರು ನನ್ನ ಮುಖದಿಂದ ಶ್ರೇಷ್ಠರಾಗಬೇಕೆಂದು ತಿಳಿದು ನಾನು ಅವರಿಗೆ ಅಗ್ನಿಯ ಸೇವೆಗೆ ಹಚ್ಚಿರುವೆನು. ಆದರೆ ಅಲ್ಲಿ ಅವರೂ ಕೂಡ ತಪ್ಪಿದರು ॥೧೩೪೨॥

ಘಾಲೂನಿ ಮಜಮುಖೀ ಅವದಾನ । ''ಇಂದ್ರಾಯ ಸ್ವಾಹಾ'' ಮ್ಹಣತೀ ಜಾಣ । ಕರ್ಮಕಾಂಡೇ ಠಕಿಲೇ ಬ್ರಾಹ್ಮಣ । ಶುದ್ಧ ಮದರ್ಪಣ ಚೂಕಲೇ ॥೧೩೪೩॥ ಕೇವಳ ಮಜಮುಖೀ ಅರ್ಪಿತಾ । ಆಡ ಆಲೀ ತ್ಯಾಂಚೀ ಯೋಗ್ಯತಾ। ಇಂದ್ರ ಯಮ ವರುಣ ಸವಿತಾ । ನಾನಾ ವಿಕಲ್ಪತಾ ಅವದಾನೀ ॥೧೩೪೪॥ ದೇವೋ ದೇವೀ ಮೀಚಿ ಆಹೇ। ಹೇಹೀ ಸತ್ಯ ನ ಮಾನಿತೀ ಪಾಹೇ । ಮಜವೇಗಳಾ ವಿನಿಯೋಗ ಹೋಯೇ । ನವಲ ಕಾಯೇ ಸಾಂಗಾವೇ ॥೧೩೪೫॥ ಜೇ ಜೇ ಸೇವಿಜೇ ತಿಹೀ ಲೋಕೀ । ತೇ ತೇ ಅರ್ಪೇ ಮಾಝ್ಯಾ ಮುಖೀ । ಹೇ ನ ಮನಿಜೇ ಯಾಜ್ಞಿಕೀ । ಕರ್ಮಾವಿಖೀ ವಿಕಲ್ಪೂ ॥೧೩೪೬॥ ವಿಕಲ್ಪಬುದ್ಧಿ ಬ್ರಾಹ್ಮಣ । ಅದ್ಯಾಪಿ ಸಂಶಯೀ ಪಡಿಲೇ ಜಾಣ । ಕರೂನಿ ವೇದಶಾಸ್ತ್ರಪಠಣ । ಶುದ್ಧ ಮದರ್ಪಣ ನ ಬೋಲತೀ ॥೧೩೪೭॥ ಮಾಝೇ ಮುಖ ವೈಶ್ವಾನರ । ಯೇಣೇ ಭಾವೇ ವಿನಟಲೇ ನರ । ಸಾಂಡೂನಿ ಭೇದ ದೇವತಾಂತರ । ಮಜಚಿ ಸಾಚಾರ ಅರ್ಪಿತೀ ॥೧೩೪೮॥ ತ್ಯಾಂಚೇ ಸಮಿಧೇನಿ ಮನ ತೃಪ್ತ ಝಾಲೇ । ತೇಥಹೀ ಜರೀ ಹವಿರ್ದ್ರವ್ಯ ಆಲೇ । ತರೀ ಮಾಝೇ ನಿಜಮುಖ ಸುಖಾವಲೇ । ಸರ್ವಸ್ವ ಆಪುಲೇ ತ್ಯಾಂಸೀ ಮೀ ದೇ ॥೧೩೪೯॥ ಮಜ ನೈರಾಶ್ಯತೇಚೀ ಆಸ । ತ್ಯಾಂಚ್ಯಾ ಹಾತಾಚೀ ಮೀ ಪಾಹೇ ವಾಸ। ತ್ಯಾಲಾಗೀ ಸದಾ ಸಾವಕಾಶ । ಅಲ್ಪಹೀ ಗ್ರಾಸ ಜೈ ದೇತೀ ॥೧೩೫೦॥ ತ್ಯಾಂಚೇನಿ ಹಾತೇ ನಿರ್ವಿಕಲ್ಪೇ । ಮದ್‌ಭಾವೇ ಜೇ ಅಗ್ನೀಸ ಅರ್ಪೇ । ತೃಣ ಕಾಷ್ಠ ತಿಳ ತುಪೇ । ತೇ ಮ್ಯಾ ಚಿದ್ರೂಪೇ ಸೇವಿಜೇ ॥೧೩೫೧॥ ಯಾಪರೀ ಅಗ್ನೀಚೀ ಉಪಾಸ್ತೀ । ಜೇ ದುಜೇ ಸ್ಥಾನೀಚೀ ಪೂಜಾಸ್ಥಿತೀ । ಸಾಂಗೀತಲೀ ಮ್ಯಾ ತುಜಪ್ರತೀ । ಬ್ರಾಹ್ಮಣಭಕ್ತೀ ಅವಧಾರೀ ॥೧೩೫೨॥ ಪೂಜೇಮಾಜೇ ಅತಿಶ್ರೇಷ್ಠ ಜಾಣ । ಶೀಘ್ರ ಮತ್ಪ್ರಾಪ್ತೀಚೇ ಕಾರಣ । ಬ್ರಾಹ್ಮಣ ಮಾಝೇ ಪೂಜಾಸ್ಥಾನ । ಅತಿಗಹನ ಉದ್ಧವಾ ॥೧೩೫೩॥ ತ್ಯಾಂಚಿಯಾ ಭಜನಾಚೀ ನವಲಪರೀ । ಆಡ ಪಡಾವೇ ದೇಖೋನಿ ದೂರೀ। ಮಸ್ತಕ ಠೇವಾವಾ ಚರಣಾವರೀ । ಚರಣರಜ ಶಿರೀ ವಂದಾವೇ ॥೧೩೫೪॥ ಆವಹನವಿಸರ್ಜನೇವೀಣ । ಶಾಲಿಗ್ರಾಮೀ ಮಾಝೇ ಅಧಿಷ್ಠಾನ । ಪರೀ ತೇ ಕೇವಳ ಅಚೇತನ । ಬ್ರಾಹ್ಮಣ ಸಚೇತನ ಮದ್ರೂಪೇ ॥೧೩೫೫॥

ಕಾರಣವೇನೆಂದರೆ, ಅವರು ನನ್ನ ಮುಖದಲ್ಲಿ ಅಂದರೆ ಅಗ್ನಿಯಲ್ಲಿ ಆಹುತಿಯನ್ನು ಹಾಕಿ ಮುಖದಿಂದ ''ಇಂದ್ರಾಯ ಸ್ವಾಹಾ'' ಎಂದು ಹೇಳುವರು. ಕರ್ಮಕಾಂಡವು ಅವರನ್ನು ಈ ರೀತಿಯಾಗಿ ಮೋಸಮಾಡಿದೆ. ಆದ್ದರಿಂದ ನನಗೆ ಅರ್ಪಣೆಯನ್ನು ಮಾಡುವ ಶುದ್ಧವಾದ ಮಾರ್ಗವನ್ನು ಇವರು ಮರೆತರು ॥೧೩೪೩॥ ಕೇವಲ ನನ್ನ ಮುಖದಲ್ಲಿಯೇ ಇವರು ಅರ್ಪಣೆಯನ್ನು ಮಾಡುತ್ತಿರಲು ಅವರ ಯೋಗ್ಯತೆಯು ಮಧ್ಯದಲ್ಲಿಯೇ ಅಡ್ಡವಾಯಿತು. ಆದ್ದರಿಂದ ಅವರು ಆಹುತಿಯಲ್ಲಿ ಇಂದ್ರ, ಯಮ, ವರುಣ, ಸೂರ್ಯ ಹೀಗೆ ಅನೇಕ ಪ್ರಕಾರಗಳ ವಿಕಲ್ಪಗಳನ್ನು ಮಾಡಲಾರಂಭಿಸಿದರು ॥೧೩೪೪॥ ವಾಸ್ತವಿಕವಾಗಿ ನೋಡಲು ದೇವ ಮತ್ತು ದೇವೀ ನಾನೇ ಆಗಿರುವೆನು. ಆದರೆ ಇವರು ಇದನ್ನು ನಿಜವೆನ್ನುವುದಿಲ್ಲ. ನನ್ನನ್ನು ಬಿಟ್ಟುಕೊಟ್ಟು ಸರ್ವ ಸಮರ್ಪಣೆಯನ್ನು ಮಾಡುವರು. ಇದೇ ಬಹು ಆಶ್ಚರ್ಯಕರವಾಗಿದೆ ॥೧೩೪೫॥ ತ್ರಿಭುವನದಲ್ಲಿನ ಜನರು ಯಾವ ಯಾವುದನ್ನು ಸೇವಿಸುವರೋ ಅದೆಲ್ಲವೂ ನನ್ನ ಮುಖದಲ್ಲಿ ಬೀಳುತ್ತಿರುವುದು. ಆದರೆ ಯಾಜ್ಞಿಕರಿಗೆ ಇದು ಮಾನ್ಯವಿಲ್ಲ. ಅವರ ಮನದಲ್ಲಿ ಕರ್ಮಗಳ ವಿಷಯದಲ್ಲಿ ವಿಕಲ್ಪವು ತುಂಬಿಕೊಂಡಿರುವುದು ॥೧೩೪೬॥ ಬ್ರಾಹ್ಮಣರು ವಿಕಲ್ಪಬುದ್ಧಿಯವರಾಗಿ ಇಲ್ಲಿಯವರೆಗೂ ಸಂಶಯದಲ್ಲಿಯೇ ತೊಳಲಾಡುತ್ತಿರುವರು. ಇದನ್ನು ಲಕ್ಷದಲ್ಲಿಡು, ವೇದಶಾಸ್ತ್ರಗಳ ಪಠಣೆಯನ್ನು ಮಾಡಿಯೂ ಕೂಡ ನನಗೆ ಹೇಗೆ ಅರ್ಪಣೆಯನ್ನು ಮಾಡಬೇಕೆಂಬುದನ್ನು ಬ್ರಾಹ್ಮಣರು ಹೇಳುವುದಿಲ್ಲ ॥೧೩೪೭॥ ನನ್ನ ಮುಖವೇ ಅಗ್ನಿಯಾಗಿರುವುದು, ಈ ಭಾವನೆಯಿಂದ ಕೂಡಿರುವ ಯಾವ ಪುರುಷನು ಭಿನ್ನ ಭಿನ್ನ ಪ್ರಕಾರಗಳ ದೇವ ದೇವತೆಗಳ ಭೇದವನ್ನು ಬಿಟ್ಟು ನನ್ನಲ್ಲಿಯೇ ಅರ್ಪಿಸುವನು ॥೧೩೪೮॥ ಇವರ ಒಂದು ಸಮಿಧ್ದಾದಿಂದ ನನ್ನ ಮನವು ತೃಪ್ತವಾಗುವುದು. ಹೀಗಿರಲು ಅವರು ಪುನಃ ಹವಿದ್ರವ್ಯಗಳನ್ನು ಅರ್ಪಣೆ ಮಾಡಿದರಂತೂ ನಾನು ಇನ್ನೂ ಅಧಿಕವಾಗಿ ಪ್ರಸನ್ನನಾಗುವೆನು. ನನ್ನ ಸರ್ವಸ್ವವನ್ನು ನಾನು ಇವರಿಗೆ ಅರ್ಪಿಸುವೆನು ॥೧೩೪೯॥ ನನಗೆ ನಿರಿಚ್ಛೆಯ ಅತಿಶಯವಾಗಿ ಪ್ರೀತಿಯಿರುವುದು. ಆದ್ದರಿಂದ ಆ ನಿರಿಚ್ಛೆ ಜನರ ಕೈಗಳತ್ತ ನಾನು ದಾರಿಯನ್ನು ಕಾಯುತ್ತಿರುವೆನು. ಅವರು ತಮ್ಮ ಕೈಗಳಿಂದ ಸಣ್ಣ ತುತ್ತನ್ನು ಕೊಡುವವರೆಗೂ ನಾನು ಕಾಯುತ್ತ ನಿಂತಿರುವೆನು ॥೧೩೫೦॥ ಅವರ ಕೈಗಳಿಂದ ನನಗೆ ಯಾವ ತೃಣ, ಕಾಷ್ಠ, ಎಳ್ಳು, ತುಪ್ಪ ಇತ್ಯಾದಿ ನಿರ್ವಿಕಲ್ಪ ಚಿತ್ತದಿಂದ ಅಗ್ನಿಗೆ ಅರ್ಪಣೆಯಾಗುತ್ತಿರಲು ಅದೆಲ್ಲವನ್ನೂ ನಾನು ಚಿದ್ರೂಪದಿಂದ ಸೇವನೆ ಮಾಡುವೆನು ॥೧೩೫೧॥ ಈ ಪ್ರಕಾರವಾಗಿ ಅಗ್ನಿಯ ಉಪಾಸನೆಯನ್ನು ಮಾಡುವ ಇದು ಎರಡನೇ ಸ್ಥಾನದ ಪೂಜಾವಿಧಿಯಾಗಿರುವುದು. ಇದನ್ನು ನಾನು ನಿನಗೆ ಹೇಳಿದೆನು. ಬ್ರಾಹ್ಮಣರ ಭಕ್ತಿಯನ್ನು ಹೇಗೆ ಮಾಡಬೇಕೆಂಬುದನ್ನು ಈಗ ಹೇಳುವೆನು. ಅದನ್ನು ಕೇಳು ॥೧೩೫೨॥ ಹೇ ಉದ್ಧವನೇ, ಬ್ರಾಹ್ಮಣರು ಈ ಯಾವ ನನ್ನ ಪೂಜಾಸ್ಥಾನದಲ್ಲಿನ ಅತಿಶ್ರೇಷ್ಠ ಸ್ಥಾನವಾಗಿರುವುದು. ಇವರ ಪೂಜೆಯಿಂದ ನನ್ನ ಪ್ರಾಪ್ತಿಯು ಶೀಘ್ರವಾಗಿ ಆಗುವುದು. ಹೀಗೆ ತಿಳಿದುಕೊ ॥೧೩೫೩॥ ಅವರ ಭಜನೆಯ ಆಶ್ಚರ್ಯವೇನೆಂದರೆ, ವಿಘ್ನಗಳಿಗೆ ತುತ್ತಾದವರು ಅವರನ್ನು ಕಾಣುತ್ತಲೇ ವಿಘ್ನಗಳು ದೂರ ಓಡುವುವು. ಆದ್ದರಿಂದ ಅವರಿಗೆ ದೂರದಿಂದಲೇ ಲೋಟಾಂಗಣವನ್ನು ಹಾಕಬೇಕು. ಅವರ ಚರಣಕಮಲದಲ್ಲಿ ಮಸ್ತಕವನ್ನಿಡಬೇಕು. ಅವರ ಪಾದಧೂಳನ್ನು ಶಿರಸಾ ವಂದಿಸಬೇಕು ॥೧೩೫೪॥ ಆವಾಹನೆ ಮತ್ತು ವಿಸರ್ಜನೆ ಇಲ್ಲದೆಯೇ ಶಾಲಿಗ್ರಾಮದಲ್ಲಿ ನನ್ನ ಅಧಿಷ್ಠಾನವಿರುವುದು. ಈ ಶಾಲಿಗ್ರಾಮವು ಕೇವಲ ಅಚೇತನವಾಗಿರುವುದು. ಆದರೆ ಬ್ರಾಹ್ಮಣರ ವಿಷಯಕ್ಕೆ ವಿಚಾರವನ್ನು ಮಾಡಲು ಅವರು ಸಚೇತನರಾಗಿ ಮದ್ರೂಪರಾಗಿರುವರು ॥೧೩೫೫॥

ಮೀ ಅವ್ಯಕ್ತರೂಪ ಜನಾರ್ದನ । ತೋ ಮೀ ವ್ಯಕ್ತ ಬ್ರಾಹ್ಮಣರೂಪೇ ಜಾಣ । ಧರಾತಳೀ ಅಸೇ ಮೀ ನಾರಾಯಣ । ಧರಾಮರ ಬ್ರಾಹ್ಮಣ ಯಾಲಾಗೀ ॥೧೩೫೬॥ ಬ್ರಾಹ್ಮಣಮುಖೇ ವೇದಾಂಸೀ ಮಹಿಮಾ । ಬ್ರಾಹ್ಮಣೇ ಯಜ್ಞದಾನತಪತೀರ್ಥಗರಿಮಾ । ಬ್ರಾಹ್ಮಣೇ ದೇವಾಸೀ ಪರಮ ಪ್ರೇಮಾ । ಬ್ರಹ್ಮತ್ವ ಬ್ರಹ್ಮಾ ಬ್ರಾಹ್ಮಣಮುಖೇ ॥೧೩೫೭॥ ತ್ಯಾ ಬ್ರಾಹ್ಮಣಾಂಸೀ ಅಪಮಾನಿತಾ । ಅಪಮಾನಿಲ್ಯಾ ಯಜ್ಞದೇವತಾ । ವೇದಾದಿ ತಪದಾನತೀರ್ಥಾ । ಪರಬ್ರಹ್ಮ ತತ್ತ್ವತಾ ಅಪಮಾನಿಲೇ ॥೧೩೫೮॥ ಮಜ ತ್ರಿಲೋಕೀ ನಾಹೀ ಸಾಂಠವಣ । ಮಜಹೂನಿ ಅಧಿಕ ಮಾಝೇ ಬ್ರಾಹ್ಮಣ । ತ್ಯಾಮಾಜೀ ಮೀ ವೇದರೂಪ ನಾರಾಯಣ । ಸಗಳಾ ಜಾಣ ಸಾಂಠವಲೋ ॥೧೩೫೯॥ ಬ್ರಾಹ್ಮಣಪದ ಹೃದಯೀ ಧರಿತಾ । ಮಜ ಆಲೀ ಪರಮ ಪವಿತ್ರತಾ । ಲಕ್ಷ್ಮೀ ಪಾಯಾ ಲಾಗೇ ಉಪೇಕ್ಷಿತಾ । ಚರಣತೀರ್ಥ ಮಾಥಾ ಶಿವೂ ಧರೀ ॥೧೩೬೦॥ ಯಾಲಾಗೀ ಬ್ರಾಹ್ಮಣ ಪೂಜ್ಯ ಜಾಣ । ಅಂಗೇ ಮೀ ಕರೀ ಚರಣಕ್ಷಾಲನ । ತ್ಯಾಂಚೇ ಉಚ್ಛಿಷ್ಟ ಮೀ ಕಾಢೀ ಆಪಣ । ಪಾಡೂ ಕೋಣ ಇತರಾಂಚಾ ॥೧೩೬೧॥ ಮುಖ್ಯ ಮಾಝೇ ಅಧಿಷ್ಠಾನ । ಸರ್ವೋಪಚಾರ ಪೂಜಾಸ್ಥಾನ । ದಾನ ಮಾನ ಮಿಷ್ಟಾನ್ನ । ವಿಧಿಪೂಜನ ವಿಪ್ರಾಂಚೇ ॥೧೩೬೨॥ ಏಕಾ ನೇಮೂ ಶಾಲಿಗ್ರಾಮಾಚಾ । ಏಕಾ ಸ್ಥಾವರ ಲಿಂಗಾಚಾ । ಏಕಾ ನೇಮೂ ಗಣೇಶಾಚಾ । ಏಕಾ ಸೂರ್ಯಾಚಾ ದರ್ಶನನೇಮೂ ॥೧೩೬೩॥ ಏಕಾ ನೇಮೂ ತುಳಶೀಚಾ । ಏಕಾ ಬಾಂಧಲ್ಯಾ ಅನಂತಾಚಾ । ನಿತ್ಯ-ನೇಮ ಬ್ರಾಹ್ಮಣಾಚಾ । ಸಭಾಗ್ಯ ತೋ ಭಾಗ್ಯಾಚಾ ದುರ್ಲಭ ॥೧೩೬೪॥ ನಿತ್ಯ ನೇಮಸ್ತ ದ್ವಿಜಪೂಜಾ । ಷೋಡಶೋಪಚಾರ ಕರೀ ಬೋಜಾ । ಮಾಝೇ ಭಕ್ತೀಚಾ ತೋ ರಾಜಾ । ಆತ್ಮಾ ಮಾಝಾ ತೋ ಏಕೂ ॥೧೩೬೫॥ ಜೋ ದೇವತಾಂತರಾ ನುಪಾಸಿತ । ಜೀವೇಭಾವೇ ಬ್ರಾಹ್ಮಣಭಕ್ತ । ತ್ಯಾಚ್ಯಾ ಚುಕವೂನಿಯಾ ಅನರ್ಥ । ನಿಜಸ್ವಾರ್ಥ ಮೀ ಕರ್ತಾ ॥೧೩೬೬॥ ಐಸೇ ಜೇ ಬ್ರಾಹ್ಮಣಭಕ್ತ । ತ್ಯಾಂಚಾಪಾಯೀ ಪೃಥ್ವೀ ಪುನೀತ । ಗಂಗಾ ಚರಣತೀರ್ಥ ವಾಂಛಿತ । ಶಿರೀ ವಂದೀತ ಮೀ ತ್ಯಾಂಸೀ ॥೧೩೬೭॥ ತ್ಯಾಂಚೇ ಸೇವೇಚಾ ಸೇವಕ । ಮೋಲೇವೀಣ ಮೀ ಝಾಲೋ ದೇಖ । ಬ್ರಾಹ್ಮಣ ಸೇವೇಚೇ ಮಜ ಸುಖ । ಅಲೋಕಿಕ ಅನಿವಾರ ॥೧೩೬೮॥

ಜನಾರ್ದನನಾದ ನಾನು ಅವ್ಯಕ್ತರೂಪದಿಂದಿರುವೆನು. ಬ್ರಾಹ್ಮಣರ ರೂಪದಿಂದ ವ್ಯಕ್ತನಾಗಿರುವೆನು. ಬ್ರಾಹ್ಮಣರ ರೂಪದಿಂದ ನಾನು ಪೃಥ್ವಿಯಲ್ಲಿರುವೆನು. ಆದ್ದರಿಂದ ಬ್ರಾಹ್ಮಣರಿಗೆ ''ಭೂದೇವರು'' ಎಂದು ಕರೆಯುವರು ॥೧೩೫೬॥ ಬ್ರಾಹ್ಮಣರ ಮುಖದಿಂದ ವೇದದ ಮಹಿಮೆಯು ಬೆಳೆದಿರುವುದು. ಯಜ್ಞ, ದಾನ ಮತ್ತು ತಪಸ್ಸು ಇತ್ಯಾದಿಗಳಿಗೆ ಬ್ರಾಹ್ಮಣರಿಂದಲೇ ಮಹತ್ವವು ಪ್ರಾಪ್ತವಾಗಿರುವುದು. ಬ್ರಾಹ್ಮಣರಿಂದಲೇ ದೇವರಲ್ಲಿ ಪ್ರೇಮವು ಬೆಳೆಯುತ್ತಿರುವುದು. ಬ್ರಾಹ್ಮಣರ ಮುಖದಿಂದ ಬ್ರಹ್ಮಕ್ಕೆ ಬ್ರಹ್ಮತ್ವವು ಪ್ರಾಪ್ತವಾಗಿರುವುದು. ಬ್ರಾಹ್ಮಣರಿಂದಲೇ ದೇವರಲ್ಲಿ ಪ್ರೇಮವು ಬೆಳೆಯುತ್ತಿರುವುದು. ಬ್ರಾಹ್ಮಣರ ಮುಖದಿಂದ ಬ್ರಹ್ಮಕ್ಕೆ ಬ್ರಹ್ಮತ್ವವು ಪ್ರಾಪ್ತವಾಗಿರುವುದು ॥೧೩೫೭॥ ಈ ಬ್ರಾಹ್ಮಣರನ್ನು ಅಪಮಾನಿಸಲು ಯಜ್ಞದೇವನಿಗೆ ಅಪಮಾನಿಸಿದಂತಾಗುವುದು. ಹಾಗೆಯೇ ವೇದ, ತಪ, ದಾನ, ತೀರ್ಥ, ಇವುಗಳ ಹಾಗೂ ಪ್ರತ್ಯಕ್ಷ ಪರಬ್ರಹ್ಮದ ಅಪಮಾನವನ್ನು ಮಾಡಿದಂತಾಗುವುದು ॥೧೩೫೮॥ ನಾನು ತ್ರೈಲೋಕ್ಯಗಿಂತಲೂ ಅಧಿಕವಾಗಿ ವ್ಯಾಪಕನಾಗಿರುವೆನು. ಆದರೂ ಬ್ರಾಹ್ಮಣರು ನನಗಿಂತಲೂ ಶ್ರೇಷ್ಠರು. ಕಾರಣ, ನಾನು ಅವರಲ್ಲಿ ವೇದರೂಪ ನಾರಾಯಣನಾಗಿ ಸಂಪೂರ್ಣವಾಗಿ ಇದ್ದುಕೊಂಡಿರುವೆನು ॥೧೩೫೯॥ ಬ್ರಾಹ್ಮಣನ ಪಾದವನ್ನು ಹೃದಯದಲ್ಲಿ ಧರಿಸಿರುವುದರಿಂದ ನನಗೆ ಪವಿತ್ರತೆಯ ಪ್ರಾಪ್ತವಾಯಿತು. ಲಕ್ಷ್ಮಿಯ ಉಪೇಕ್ಷೆಯನ್ನು ಮಾಡಿದರೂ ಆಕೆಯು ನನ್ನ ಚರಣಗಳ ಸಮೀಪ ಇರುವಳು. ನನ್ನ ಚರಣ ತೀರ್ಥವನ್ನು ಶಂಕರನು ಮಸ್ತಕಕ್ಕೆ ಧರಿಸಿದನು ॥೧೩೬೦॥ ಅದಕ್ಕಾಗಿ ಬ್ರಾಹ್ಮಣರು ಪೂಜ್ಯರಾಗಿರುವರು. ನಾನು ಸ್ವತಃ ಅವರ ಪಾದಗಳನ್ನು ತೊಳೆಯುವೆನು. ನಾನೇ ಮುಂದಾಗಿ ಅವರ ಎಂಜಲವನ್ನು ತೆಗೆಯುವೆನು. ಅಂದ ಮೇಲೆ ಇತರರ ಪಾಡೇನು? ॥೧೩೬೧॥ ನನ್ನ ಮುಖ್ಯ ಅಧಿಷ್ಠಾನವು, ಸರ್ವ ಉಪಚಾರಗಳ ಪೂಜೆಯನ್ನು ಮಾಡುವ ಸ್ಥಾನವು, ಹಾಗೆಯೇ ದಾನ, ಮಾನ, ಮೃಷ್ಟಾನ್ನ, ಈ ಎಲ್ಲವೂ ಒಬ್ಬ ಬ್ರಾಹ್ಮಣನ ವಿಧಿಯುಕ್ತ ಪೂಜೆಯಲ್ಲಿರುವುದು ॥೧೩೬೨॥ ಕೆಲವರು ಶಾಲಿಗ್ರಾಮದ ಪೂಜೆಯ ನೇಮವನ್ನು ಹಿಡಿಯುವರು. ಕೆಲವರು ಶಿವಲಿಂಗದ ಪೂಜೆಯನ್ನು ಮಾಡುತ್ತಿರುವರು, ಕೆಲವರು ಸತತವಾಗಿ ಗಣಪತಿಯ ಪೂಜೆಯನ್ನು ಮಾಡುತ್ತಿರುವರು. ಇನ್ನು ಕೆಲವರು ನಿತ್ಯ ನೇಮದಿಂದ ಸೂರ್ಯನ ಪೂಜೆಯನ್ನು ಮಾಡುವರು ॥೧೩೬೩॥ ಕೆಲವರಿಗೆ ತುಳಸೀ ಪೂಜೆಯ ನೇಮವಿದ್ದರೆ, ಕೆಲವರಿಗೆ ಕೈಯಲ್ಲಿ ಕಟ್ಟಿದ ಅನಂತನ ಪೂಜೆಯ ನಿತ್ಯ ನೇಮವಿರುವುದು. ಆದರೆ ನಿತ್ಯ ನೇಮದಿಂದ ಬ್ರಾಹ್ಮಣರ ಪೂಜೆಯ ನೇಮವನ್ನು ಹಿಡಿಯುವ ಭಾಗ್ಯವಂತನು ದುರ್ಲಭನಾಗಿರುವನು ॥೧೩೬೪॥ ಯಾರು ನಿತ್ಯ ನಿಯಮದಿಂದ ಬ್ರಾಹ್ಮಣನ ಷೋಡಷೋಪಚಾರಗಳಿಂದ ಬಹು ಪ್ರೇಮದಿಂದ ಪೂಜೆಯನ್ನು ಮಾಡುವನೋ, ಆತನು ಭಕ್ತಿಯ ರಾಜನು, ಆತನೇ ನನ್ನ ಆತ್ಮನಾಗಿರುವನು ಎಂದು ತಿಳಿ ॥೧೩೬೫॥ ಯಾವನು ಅನೇಕ ದೇವರುಗಳ ಪೂಜೆಯನ್ನು ಮಾಡದೇ, ಜೀವಭಾವದಿಂದ ಬ್ರಾಹ್ಮಣನ ಭಕ್ತನಾಗಲು, ಆತನ ಸರ್ವ ಅನರ್ಥಗಳು ಮಾಯವಾಗುವುವು. ಆತನ ಮನೋರಥಗಳನ್ನು ನಾನು ಪೂರ್ಣಗೊಳಿಸುವೆನು ॥೧೩೬೬॥ ಈ ಪ್ರಕಾರವಾಗಿ ಇರುವ ಬ್ರಾಹ್ಮಣ ಭಕ್ತರ ಚರಣ ಸ್ಪರ್ಶದಿಂದ ಪೃಥ್ವಿಯು ಪುನೀತವಾಗುವುದು. ಗಂಗೆಯು ಅವರ ಚರಣಗಳ ಇಚ್ಛೆಯನ್ನು ಮಾಡುವಳು. ನಾನು ಅವರಿಗೆ ಶಿರಸಾ ವಂದಿಸುವೆನು ॥೧೩೬೭॥ ನಾನು ಯಾವ ಮೌಲ್ಯವಿಲ್ಲದೇ ಅವರ ಸೇವೆಯ ಸೇವಕನಾಗಿರುವೆನು. ಬ್ರಾಹ್ಮಣರ ಸೇವೆಯಲ್ಲಿ ನನಗೆ ಅಲೌಕಿಕ ಮತ್ತು ಅನಿವಾರ್ಯ ಸುಖವು ಉಂಟಾಗುವುದು ॥೧೩೬೮॥

ನಿತ್ಯನೇಮ ದ್ವಿಜಪೂಜಾ । ಕರೀ ತೋ ಆವಡೇ ಅಧೋಕ್ಷಜಾ । ತ್ಯಾಲಾಗೀ ಪಸರೂನಿ ಚಾರೀ ಭುಜಾ । ಆಲಿಂಗನೀ ಮಾಝ್ಝಾ ಜೀವ್ಹಾ ನಿವೇ ॥೧೩೬೯॥ ಬ್ರಾಹ್ಮಣಾಂಚ್ಯಾ ಸ್ನಾನಪ್ರವಾಹತಳೀ । ಜೇಣೇ ಭಾವಾರ್ಥೇ ಕೇಲೀ ಆಂಘೋಳೀ । ಕೋಟಿ ಅವಭೃತೇ ಪಾಯಾತಳೀ । ತೇಣೇ ತತ್ಕಾಳೀ ಘಾತಲೀ ॥೧೩೭೦॥ ಬ್ರಾಹ್ಮಣಚರಣತೀರ್ಥ ದೇಖತಾ । ಪಳ ಸುಟೇ ದೋಷದುರಿತಾ । ತೇ ಭಾವಾರ್ಥೇ ತೀರ್ಥ ಘೇತಾ । ದೋಷ ಸರ್ವಥಾ ನಿಮಾಲೇ ॥೧೩೭೧॥ ಜೋ ಕೋಣೀ ನಿತ್ಯ ನೇಮಸ್ತ । ಸೇವೀ ಬ್ರಾಹ್ಮಣಾಚೇ ಚರಣತೀರ್ಥ । ತೋ ಸ್ವಯೇ ಝಾಲಾ ತೀರ್ಥಭೂತ । ತ್ಯಾಚೇನಿ ಪುನೀತ ಜಡಜೀವ ॥೧೩೭೨॥ ತ್ಯಾ ಬ್ರಾಹ್ಮಣಾಚೇ ಠಾಯೀ ಜಾಣ । ಅಭ್ಯಂಗಾದಿ ಸುಮನ ಚಂದನ । ಆಸನ ಭೋಜನ ಧನ ಧಾನ್ಯ । ಶಕ್ತಿ ಪ್ರಮಾಣ ಪೂಜೇಸೀ ॥೧೩೭೩॥ ಬ್ರಾಹ್ಮಣಾಸೀ ಪ್ರಿಯ ಭೋಜನ । ದಾನೀ ಶ್ರೇಷ್ಠ ಅನ್ನದಾನ । ನಿಪಜವೂನಿಯಾ ಮಿಷ್ಟಾನ್ನ । ದ್ಯಾವೇ ಭೋಜನ ಮದ್ಭಾವೇ ॥೧೩೭೪॥ ಏಕ ಹೇಳಸೂನಿ ದೇತೀ ಅನ್ನ । ಏಕ ಉಬಗಲ್ಯಾಸಾರೀ ಜಾಣ । ಏಕ ದೇತೀ ನಿರ್ಭರ್ತ್ಸೂನ । ಏಕ ವಸವಸೋನ ಘಾಲಿತೀ ॥೧೩೭೫॥ ತೈಸೇ ನ ಕರಾವೇ ಆಪಣ । ಬ್ರಾಹ್ಮಣ ಮಾಝೇ ಸ್ವರೂಪ ಜಾಣ । ತ್ಯಾಂಸೀ ದೇಊನಿಯಾ ಸನ್ಮಾನ । ದ್ಯಾವೇ ಭೋಜನ ಯಥಾಶಕ್ತೀ ॥೧೩೭೬॥ ಅಜ್ಞಾನ ಅತಿಥಿ ಆಲ್ಯಾ ಸಮಯೀ । ಖೋಡೀ ಕಾಢೂ ನಯೇ ತ್ಯಾಚ್ಯಾ ಠಾಯೀ । ತೋಹೀ ಮಾಝೇ ಸ್ವರೂಪ ಪಾಹೀ । ಅನ್ನ ತೇ ಸಮಯೀ ಅರ್ಪಾವೇ ॥೧೩೭೭॥ ಅತಿಥಿ ಜಾತಾ ಪರಾಂಗಮುಖ । ತ್ಯಾಸವೇ ಜಾಯ ಪುಣ್ಯ ನಿಃಶೇಖ । ಅನ್ನ ದ್ಯಾವೇ ಸಮಯೀ ಆವಶ್ಯಕ । ನಾತರೀ ಉದಕ ತರೀ ದ್ಯಾವೇ ॥೧೩೭೮॥ ಬ್ರಾಹ್ಮಣ ಬೈಸವೂನಿ ಪಂಕ್ತೀ । ಜೇ ಕೋಣೀ ಪಂಕ್ತಿಭೇದ ಕರಿತೀ । ತೇ ಮೋಲೇ ಪಾಪ ವಿಕತ ಘೇತೀ । ತ್ಯಾಂಸೀ ಅಧೋಗತೀ ನಿಶ್ಚಿತೀ ॥೧೩೭೯॥ ಬ್ರಾಹ್ಮಣ ಸೇವೇಲಾಗೀ ಜಾಣ । ಕಾಯಾ ವಾಚಾ ಮನ ಧನ । ಯಥಾಸಾಮರ್ಥ್ಯೇ ಅವಂಚನ । ಅತಿಥಿಪೂಜನ ತ್ಯಾ ನಾಂವ ॥೧೩೮೦॥ ತ್ರಿಪದಾಜಪೇ ಪವಿತ್ರ ಪೂರ್ಣ । ಯಾಲಾಗೀ ವೇದಾಂಚೇ ನಿವಾಸಸ್ಥಾನ । ಬ್ರಾಹ್ಮಣ ಮಾಝೇ ಸ್ವರೂಪ ಜಾಣ । ಶ್ರೇಷ್ಠ ಅಧಿಷ್ಠಾನ ಪೂಜೇಚೇ ॥೧೩೮೧॥

ನಿತ್ಯ ನೇಮದಿಂದ ಬ್ರಾಹ್ಮಣರ ಪೂಜೆಯನ್ನು ಮಾಡುವವನು ಭಗವಂತನಿಗೆ ಪ್ರಿಯನಾಗುವನು. ಆದ್ದರಿಂದ ನಾಲ್ಕೂ ಕೈಗಳನ್ನು ಎತ್ತರಿಸಿ ಆತನಿಗೆ ಆಲಿಂಗನವನ್ನು ಕೊಟ್ಟಾಗ ನನ್ನ ಜೀವಕ್ಕೆ ಶಾಂತಿಯಾಗುವುದು ॥೧೩೬೯॥ ಬ್ರಾಹ್ಮಣನು ಸ್ನಾನವನ್ನು ಮಾಡಿದ ನೀರಿನಲ್ಲಿ ಯಾರು ಭಕ್ತಿಭಾವಪೂರ್ಣರಾಗಿ ಅಂತಃಕರಣದಿಂದ ಸ್ನಾನವನ್ನು ಮಾಡಿದರೆ, ಆತನು ಆ ಕಾಲಕ್ಕೆ ಕೋಟ್ಯಾವಧೀ ಅವಭೃತ ಸ್ನಾನಗಳನ್ನು ತನ್ನ ಕಾಲಡಿಯಲ್ಲಿ ಹಾಕಿರುವನೆಂದು ಅವಶ್ಯವಾಗಿ ತಿಳಿಯಬೇಕು ॥೧೩೭೦॥ ಬ್ರಾಹ್ಮಣನ ಚರಣ ತೀರ್ಥವನ್ನು ಕಂಡಾಕ್ಷಣವೇ ದೋಷಗಳು, ಪಾಪಗಳು ದೂರ ಓಡುವುವು. ಆ ತೀರ್ಥವನ್ನು ಶ್ರದ್ಧೆಯಿಂದ ಸೇವಿಸಲು ಸಕಲ ದೋಷಗಳ ಪರಿಹಾರವಾಗುವುದು ॥೧೩೭೧॥ ಯಾರಾದರೂ ಬ್ರಾಹ್ಮಣನ ಚರಣ ತೀರ್ಥವನ್ನು ನಿತ್ಯ ನೇಮದಿಂದ ಸೇವಿಸುತ್ತಿರಲು ಆತನು ಸ್ವತಃ ತೀರ್ಥಸ್ವರೂಪನಾಗುವನು. ಆತನಿಂದ ಜಡ ಜೀವಿಗಳ ಉದ್ಧಾರವಾಗುವುದು ॥೧೩೭೨॥ ಆದ್ದರಿಂದ ಬ್ರಾಹ್ಮಣರಿಗೆ ಅಭ್ಯಂಗ ಸ್ನಾನವನ್ನು ಮಾಡಿಸಿ, ಸುಗಂಧ ಪುಷ್ಪಗಳಿಂದ, ಚಂದನದಿಂದ ಅವರ ಪೂಜೆಯನ್ನು ಮಾಡಬೇಕು. ಹಾಗೆಯೇ ಆಸನ, ಭೋಜನವನ್ನು ಮತ್ತು ಧನ ಧಾನ್ಯವನ್ನು ಯಥಾಶಕ್ತಿ ಅರ್ಪಿಸಬೇಕು ॥೧೩೭೩॥ ಬ್ರಾಹ್ಮಣರಿಗೆ ಭೋಜನವು ಸರ್ವಕ್ಕಿಂತಲೂ ಶ್ರೇಷ್ಠವಾಗಿರುವುದು. ಅನ್ನದಾನವು ಇದೊಂದು ಶ್ರೇಷ್ಠ ದಾನವಾಗಿರುವುದು. ಆದ್ದರಿಂದ ಉತ್ತಮವಾದ, ರುಚಿಕರ ಮೃಷ್ಟಾನ್ನವನ್ನು ಸಿದ್ಧಗೊಳಿಸಿ ಬ್ರಾಹ್ಮಣರು ನನ್ನ ಸ್ವರೂಪರಾಗಿರುವೆಂಬ ಭಾವನೆಯಿಂದ ಅವರಿಗೆ ಪ್ರೇಮದಿಂದ ಭೋಜನವನ್ನು ಬಡಿಸಬೇಕು ॥೧೩೭೪॥ ಕೆಲವರು ತಿರಸ್ಕಾರ ಭಾವನೆಯಿಂದ ಅವರಿಗೆ ಅನ್ನವನ್ನು ಕೊಡುವರು. ಕೆಲವರು ಬೇಸರಪಟ್ಟು ಅನ್ನವನ್ನು ನೀಡುವರು. ಇನ್ನೂ ಕೆಲವರು ಪ್ರಾರಂಭದಲ್ಲಿಯೇ ಅವರನ್ನು ನಿಂದಿಸಿ, ನಂತರ ಅನ್ನವನ್ನು ಹಾಕುವರು. ಕೆಲವರು ಮಾತ್ರ ಅವರತ್ತ ಒದರಾಡುತ್ತ ತದನಂತರ ಊಟಕ್ಕೆ ನೀಡುವರು ॥೧೩೭೫॥ ಈ ರೀತಿಯಾಗಿ ನಾವು ಮಾಡಕೂಡದು, ಕಾರಣವೇನೆಂದರೆ ಬ್ರಾಹ್ಮಣರು ನನ್ನ ಸ್ವರೂಪವೇ ಆಗಿರುವರು. ಇದನ್ನು ಲಕ್ಷದಲ್ಲಿಡು. ಅವರ ಯೋಗ್ಯ ಆದರ ಸತ್ಕಾರಗಳನ್ನು ಮಾಡಿ, ತದನಂತರ ಪ್ರೇಮದಿಂದ ಭೋಜನವನ್ನು ಕೊಡಬೇಕು ॥೧೩೭೬॥ ಭೋಜನದ ಸಮಯದಲ್ಲಿ ಒಂದುವೇಳೆ ಅಜ್ಞಾನಿ ಅತಿಥಿಯು ಬಂದರೆ, ಆಗ ಆತನ ದೋಷಗಳನ್ನು ಎಣಿಸಬಾರದು. ಆತನು ನನ್ನ ಸ್ವರೂಪನೆಂಬ ಭಾವನೆಯಿಂದ ಆತನಿಗೆ ಅನ್ನವನ್ನು ಕೊಡಬೇಕು ॥೧೩೭೭॥ ಬಂದ ಅತಿಥಿಯು ಪರಾಂಗಮುಖನಾಗಲು ಆತನೊಂದಿಗೆ ನಮ್ಮ ಸರ್ವ ಪುಣ್ಯವು ಹೋಗಿಬಿಡುವುದು. ಅದಕ್ಕಾಗಿ ಆತನಿಗೆ ಆ ವೇಳೆಯಲ್ಲಿ ಅನ್ನವನ್ನು ಕೊಡಬೇಕು. ಇಲ್ಲವೇ ನೀರನ್ನಾದರೂ ಕುಡಿಯಲು ಕೊಡಬೇಕು ॥೧೩೭೮॥ ಬ್ರಾಹ್ಮಣನಿಗೆ ಭೋಜನಪಂಕ್ತಿಯಲ್ಲಿ ಕುಳ್ಳಿರಿಸಿ ಅನ್ನ ಬಡಿಸುವಾಗ್ಗೆ ಪಂಕ್ತಿಭೇದ ಮಾಡಿದವರು ಪಾಪವನ್ನು ಖರೀದಿಸಿದಂತಾಗುವುದು. ಅವರಿಗೆ ನಿಶ್ಚಿತವಾಗಿ ಅಧೋಗತಿಯಾಗುವುದು ॥೧೩೭೯॥ ಕಾಯಾ, ವಾಚಾ, ಮನ ಮತ್ತು ಧನದಿಂದ ಬ್ರಾಹ್ಮಣರ ಸೇವೆಯನ್ನು ಮಾಡುವುದು ಮತ್ತು ನಿಷ್ಕಪಟ ಭಾವವನ್ನು ಹೃದಯದಲ್ಲಿ ಧರಿಸುವುದು. ಇದರ ಹೆಸರೇ ಅತಿಥಿಪೂಜೆಯಾಗಿರುವುದು ॥೧೩೮೦॥ ಬ್ರಾಹ್ಮಣರು ತ್ರಿಪದಾ ಗಾಯತ್ರಿ ಮಂತ್ರವನ್ನು ಜಪಿಸಿ ತಮ್ಮ ಅಂತಃಕರಣದಿಂದ ಶುದ್ಧರಾಗಿರುವರು. ಆದ್ದರಿಂದ ಇವರಲ್ಲಿಯೇ ವೇದದ ವಸತಿ ಸ್ಥಾನವಿರುವುದು. ಬ್ರಾಹ್ಮಣರು ನನ್ನ ಸ್ವರೂಪರು ಎಂದು ತಿಳಿ. ಅಲ್ಲದೇ ಇವರು ಪೂಜೆಯ ಶ್ರೇಷ್ಠ ಅಧಿಕಾರಿಯಾಗಿರುವರು ॥೧೩೮೧॥

ಬ್ರಾಹ್ಮಣ ಆಜ್ಞೇಲಾಗೀ ಜಾಣ । ಅತಿಸಾದರ ಜ್ಯಾಚೇ ಮನ । ದೇಣೇ ದೇವವಣೇ ದಾನ । ಶ್ರದ್ಧಾ ಸಂಪೂರ್ಣ ಯಾ ನಾಂವ ।।೧೩೮೨।। ಬ್ರಾಹ್ಮಣಸೇವಾ ಧನೇವೀಣ । ಸರ್ವಥಾ ನ ಘಡೇ ಐಸೇ ನ ಮ್ಹಣ । ಸೇವೇಸೀ ಶ್ರದ್ಧಾ ಪ್ರಮಾಣ । ಉಲ್ಹಾಸ ಪೂರ್ಣ ಭಜನಾಚಾ ।।೧೩೮೩।। ಏಕಾಚೇ ಶರೀರ ಸೇವಾ ಜಾಣ । ಏಕಾಚೇ ವಾಚಕ ಪೂಜನ । ಏಕಾಚೇ ಮಾನಸಿಕ ಭಜನ । ದಯಾ ಪೂರ್ಣ ದ್ವಿಜಾಚೀ ।।೧೩೮೪।। ಬ್ರಾಹ್ಮಣ ಭಕ್ತಿಲಾಗೀ ಜಾಣ । ಹರ್ಷ ನಿರ್ಭರ ಅಂತಃಕರಣ । ಶ್ರದ್ಧಾಯುಕ್ತ ಉಲ್ಹಾಸಪೂರ್ಣ । ಆತಿಥ್ಯ ಜಾಣ ಯಾ ನಾಂವ ।।೧೩೮೫।। ಯಾಪರೀ ಬ್ರಾಹ್ಮಣಭಜನ । ತಿಸರೇ ಪೂಜೇಚೇ ಅಧಿಷ್ಠಾನ । ಹೇ ಸಾಂಗಿತಲೇ ಜಾಣ । ಗೋಶುಶ್ರೂಷಣ ತೇ ಐಕ ।।೧೩೮೬।। ಜೇ ಗಾಯೀಚ್ಯಾ ಕೈವಾರಾ । ಘಾಯೇ ಸಹಸ್ರಬಾಹೋ ಕೇಲಾ ಪುರಾ । ತೀನ ಸಪ್ತಕೇ ವಸುಂಧರಾ । ಮುಖ್ಯ ಧುರಾ ಮ್ಯಾ ಮಾರಿಲ್ಯಾ ।।೧೩೮೭।। ರಾಮಾವತಾರೀ ಅತಿಮಹಿಮಾನ । ತೈ ನ ಘಡೇಚಿ ಗೋಶುಶ್ರೂಷಣ । ಯಾಲಾಗೀ ಗೋಕುಳೀ ಜಾಣ । ಗಾಯೀಚೇ ಸೇವನ ಮ್ಯಾ ಕೇಲೇ ।।೧೩೮೮।। ಗಾಯೀಚೇ ಸೇವೇ ಝಾಲೀ ಪುಷ್ಟೀ । ಬಾಳಪಣೇ ಮಾರಿಲೇ ಜೇಠೀ । ಕಂಸ ಚಾಣೂರ ಮಾರಿಲೇ ಹಟೀ । ಬೈಸವಿಲಾ ರಾಜ್ಯಪಟೀ ಉಗ್ರಸೇನ ।।೧೩೮೯।। ಗಾಯೀಚೇ ಸೇವೇಚೀ ಅತಿಗೋಡೀ । ತೇಣೇ ಮಾಝೀ ಕೀರ್ತಿ ಝಾಲೀ ಚೋಖಡೀ । ಫೋಡಿಲೀ ಕಂಸಾಚೀ ಬಾಂದವಡೀ । ತೋಡಿಲೀ ಬೇಡೀ ಪಿತರಾಂಚೀ ।।೧೩೯೦।। ಯಾಲಾಗೀ ಗಾಯೀ ಆಣಿ ಬ್ರಾಹ್ಮಣ । ಮಾಝಾ ಜಾಣ ಜೀವಪ್ರಾಣ । ಮಾಝೇ ಪೂಜೇಚೇ ಅಧಿಷ್ಠಾನ । ಸುಲಭ ಜಾಣ ಇಯೇ ದೋನ್ಹೀ ।।೧೩೯೧।। ಆಪತ್ಕಾಳೀ ಗೋರಕ್ಷಣ । ಕರೀ ತೋ ಪಢಿಯಂತಾ ಮಜ ಜಾಣ । ತ್ಯಾಸವೇ ಮೀ ಆಪಣ । ಗೋರಕ್ಷಣ ಕರಿತಸೇ ।।೧೩೯೨।। ಗಾಯೀಚೇ ಸೇವೇಚೇ ವಿಧಾನ । ಗೋಗ್ರಾಸ ದ್ಯಾವಾ ಜೇ ತೃಣ । ಕರಾವೇ ಅಂಗಕುರವಾಳಣ । ಇತುಕೇನಿ ಪ್ರಸನ್ನ ಮೀ ಹೋಯೇ ।।೧೩೯೩।। ನಿರ್ಲೋಭ ಗಾಯೀಚೀ ಸೇವಾ । ಕರಿತಾ ಮಾಝೀ ಪ್ರಾಪ್ತಿ ಉದ್ಧವಾ । ಐಕ ವೈಷ್ಣವಾಚೀ ಸೇವಾ । ಪೂಜಾ ಸದ್ಭಾವಾ ವಿಭಾಗೂ ।।೧೩೯೪।।

ವೈಷ್ಣವೇ ಬಂಧುಸತ್ಕೃತ್ಯಾ ಹೃದಿ ಖೇ ಧ್ಯಾನನಿಷ್ಠಯಾ । ವಾಯೌ ಮುಖ್ಯಧಿಯಾ ತೋಯೇ ದ್ರವ್ಯೈಸ್ತೋಯಪುರಸ್ಕೃತೈಃ ।।೪೪।।

ಅರ್ಥ:- ವೈಷ್ಣವರಲ್ಲಿ ಬಂಧುವಿನಂತೆ ಸತ್ಕಾರದಿಂದ, ಹೃದಯಲ್ಲಿನ ಆಕಾಶದಲ್ಲಿ ಧ್ಯಾನನಿಷ್ಠೆಯಿಂದ, ವಾಯುವಿನಲ್ಲಿ ಪ್ರಾಣದೃಷ್ಟಿಯಿಂದ, ಜಲದಲ್ಲಿ ಜಲಾದಿ ದ್ರವ್ಯದಿಂದ ತರ್ಪಣಾದಿಗಳಿಂದ ಪೂಜಿಸಬೇಕು.

ಯಾರು ಬ್ರಾಹ್ಮಣನ ಆಜ್ಞೆಯನ್ನು ಪಾಲಿಸುತ್ತಿರುವನೋ, ಅವರಿಗೆ ದಾನವನ್ನು ಕೊಟ್ಟು ಇತರರಿಂದ ಕೊಡಿಸುವನೋ, ಆತನ ಈ ವೃತ್ತಿಗೆ ಪೂರ್ಣವಾದ ಶ್ರದ್ಧೆ ಎಂದು ಕರೆಯುವರು ।।೧೩೮೨।। ಬ್ರಾಹ್ಮಣರ ಸೇವೆಯು ಹಣವಿಲ್ಲದೇ ಆಗಲು ಶಕ್ಯವೇ ಇಲ್ಲ ಎಂದು ನೀನು ಹೀಗೆ ತಿಳಿಯಬೇಡ. ಸೇವೆಗೆ ಶ್ರದ್ಧೆ ಮತ್ತು ಭಜನೆ ಮಾಡುವ ಉಲ್ಹಾಸ ಇವೇ ಪ್ರಮುಖ ಪ್ರಮಾಣಭೂತ ಸಾಧನೆಗಳಾಗಿರುವುವು ।।೧೩೮೩।। ಕೆಲವರು ಶರೀರದಿಂದ ಸೇವೆಯನ್ನು ಮಾಡುವರು. ಕೆಲವರು ವಾಣಿಯಿಂದ ಸೇವೆ ಮಾಡುವರು. ಕೆಲವರು ಮನಸ್ಸಿನಿಂದ ಸೇವೆಯನ್ನು ಮಾಡುವರು. ಹೀಗಿದ್ದರೂ ಬ್ರಾಹ್ಮಣರ ದಯೆಯು ಎಲ್ಲರಲ್ಲಿಯೂ ಸಮವಾಗಿ ಇರುವುದು ।।೧೩೮೪।। ಬ್ರಾಹ್ಮಣರ ಭಕ್ತಿಗಾಗಿ ಅಂತಃಕರಣವು ಆನಂದದಿಂದ ತುಂಬಿಕೊಳ್ಳುವುದು, ಪರಮ ಶ್ರದ್ಧೆಯಿಂದ ಮತ್ತು ಉಲ್ಹಾಸದಿಂದ ಪರಿಪೂರ್ಣವಾಗಿರುವುದಕ್ಕೆ "ಆತಿಥ್ಯ" ವೆಂದು ಕರೆಯುವರು ।।೧೩೮೫।। ಈ ಪ್ರಕಾರವಾಗಿ ಬ್ರಾಹ್ಮಣರ ಭಜನೆಯು ಈ ಯಾವ ಪೂಜೆಯ ಮೂರನೆಯ ಅಧಿಷ್ಠಾನವಾಗಿರುವುದು. ಇದನ್ನು ನಿನಗೆ ಹೇಳಿರುವೆನು. ಈಗ ಆಕಳ ಸೇವೆಯನ್ನು ಹೇಗೆ ಮಾಡಬೇಕೆಂಬುದನ್ನು ಹೇಳುವೆನು, ಕೇಳು ।।೧೩೮೬।। ಆಕಳಿನ ಬೆಂಬಲವನ್ನು ಹಿಡಿದು ನಾನು ಸಹಸ್ರಾರ್ಜುನನನ್ನು ಒಂದೇ ಹೊಡೆತಕ್ಕೆ ಕೊಂದಿರುವೆನು. ಇಪ್ಪತ್ತೊಂದು ಸಾರೆ ಪೃಥ್ವಿಯನ್ನು ನಿಃಕ್ಷತ್ರಿಯವನ್ನಾಗಿ ಮಾಡಿರುವೆನು ।।೧೩೮೭।। ರಾಮಾವತಾರದಲ್ಲಿ ನಾನು ಮಹಾ ಮಹಾ ಕಾರ್ಯಗಳನ್ನು ಮಾಡಿದೆನು, ಆದರೆ ಆ ಸಮಯದಲ್ಲಿ ಆಕಳಿನ ಸೇವೆಯು ಸಾಧಿಸಲಿಲ್ಲ. ಆದ್ದರಿಂದ ನಾನು ಗೋಕುಳದಲ್ಲಿ ಅವತಾರವನ್ನು ಧರಿಸಿ ಗೋ ಸೇವೆಯನ್ನೂ ಮಾಡಿದೆನು ।।೧೩೮೮।। ಗೋ ಸೇವೆಯಿಂದ ನನಗೆ ಪುಷ್ಟತೆಯು ಪ್ರಾಪ್ತವಾಯಿತು. ನಾನು ಸದೃಢನಾದೆನು. ಆದ್ದರಿಂದ ಚಿಕ್ಕವನಿರುವಾಗಲೇ ಮಹಾ ಮಹಾ ಮಲ್ಲರನ್ನು ಕೊಂದು ಬಿಟ್ಟೆನು. ಕಂಸ, ಚಾಣೂರರಂತಹ ಅದಮ್ಯ ಮಲ್ಲರನ್ನೂ ಸಹ ನಾನು ಕೊಂದೆನು. ಉಗ್ರಸೇನನಿಗೆ ರಾಜ್ಯಪಟ್ಟಕ್ಕೆ ಕುಳ್ಳಿರಿಸಿದೆನು ।।೧೩೮೯।। ನನಗೆ ಆಕಳಿನ ಸೇವೆಯಲ್ಲಿ ಅತಿಶಯವಾದ ಪ್ರೇಮವಿರುವುದರಿಂದ ನನ್ನ ಕೀರ್ತಿಯು ಸರ್ವತ್ರವೂ ಪಸರಿಸಿತು. ನಾನು ನನ್ನ ತಂದೆ ತಾಯಿಯವರನ್ನು ಕಂಸನ ಬಂಧನದಿಂದ ಬಿಡಿಸಿ, ಅವರನ್ನು ಬೇಡಿಗಳಿಂದ ಮುಕ್ತಗೊಳಿಸಿದೆನು ।।೧೩೯೦।। ಆದ್ದರಿಂದ ಆಕಳು ಮತ್ತು ಬ್ರಾಹ್ಮಣ ಇವರು ನನ್ನ ಜೀವಪ್ರಾಣವಾಗಿರುವರು. ಈ ಎರಡರಿಂದ ನನ್ನ ಪೂಜೆಯ ಅಧಿಷ್ಠಾನವು ಸುಲಭವಾಗಿರುವುದು ।।೧೩೯೧।। ಯಾವನು ಆಪತ್ಕಾಲದಲ್ಲಿ ಆಕಳವನ್ನು ರಕ್ಷಿಸುವನೋ, ಆತನು ನನಗೆ ಅತ್ಯಂತ ಪ್ರಿಯನು. ಆತನ ಜೊತೆಯಲ್ಲಿ ನಾನೂ ಕೂಡ ಗೋರಕ್ಷಣೆಯನ್ನು ಮಾಡುತ್ತಿರುವೆನು ।।೧೩೯೨।। ಆಕಳಿನ ಸೇವೆಯ ಪ್ರಕಾರವು ಹೀಗಿರುವುದು, ಅದಕ್ಕೆ ಪ್ರತಿನಿತ್ಯ ಗೋಗ್ರಾಸವನ್ನು ಕೊಡಬೇಕು. ಮೇವು ಹಾಕಬೇಕು. ಮತ್ತು ಅದರ ಮೈಮೇಲೆ ಪ್ರೀತಿಯಿಂದ ಕೈಯಾಡಿಸಿ ಸಮಾಧಾನವಾಗುವಂತೆ ತಿಕ್ಕಬೇಕು. ಆಗ ನಾನು ಪ್ರಸನ್ನನಾಗುವೆನು ।।೧೩೯೩।। ಹೇ ಉದ್ಧವನೇ, ಮನದಲ್ಲಿ ಪ್ರೇಮವಿಲ್ಲದೇ ಆಕಳಿನ ಸೇವೆಯನ್ನು ಮಾಡಿದರೆ ನನ್ನ ಪ್ರಾಪ್ತಿಯಾಗುವುದಿಲ್ಲ. ಈಗ ಸದ್ಭಾವನೆಯಿಂದ ವೈಷ್ಣವರ ಪೂಜೆಯನ್ನು ಹೇಗೆ ಮಾಡಬೇಕೆನ್ನುವುದನ್ನು ಕೇಳು ।।೧೩೯೪।।

ವೈಷ್ಣವಸೇವಾ ಅತ್ಯಂತ ಕಠಿಣ । ತೇಥೇ ಜಾತೀ ನಾಹೀ ಗಾ ಪ್ರಮಾಣ । ನ ಮ್ಹಣಾವಾ ಶೂದ್ರ ಬ್ರಾಹ್ಮಣ । ಭಕ್ತಿಪ್ರಾಧಾನ್ಯ ಭಾವಾರ್ಥೇ ॥೧೩೯೫॥ ವಿದುರ ದಾಸೀಪುತ್ರ ಪ್ರಸಿದ್ಧ । ತ್ಯಾಸೀ ಆವಡಲಾ ಗೋವಿಂದು । ಝಾಲಾ ವೈಷ್ಣವಾಮಾಜೀ ಅತಿಶುದ್ಧ । ಕೈಸೇನಿ ನಿಂದ್ಯ ಮ್ಹಣಾವಾ ॥೧೩೯೬॥ ಯೋನಿ ಜನ್ಮಲಾ ಮರ್ಕಟ । ತೋ ವೈಷ್ಣವಾಮಾಜೀ ಅತಿಶ್ರೇಷ್ಠ । ಹನುಮಂತ ಮ್ಹಣಾವಯಾ ಕನಿಷ್ಠ । ಐಸಾ ಪಾಪಿಷ್ಠ ಕೋಣ ಆಹೇ ॥೧೩೯೭॥ ರಾಕ್ಷಸಾಮಾಜೀ ಬಿಭೀಷಣ । ದೈತ್ಯಾಮಾಜೀ ಪ್ರಹ್ಲಾದ ಜಾಣ । ಭಗವಂತಾಸೀ ಅನನ್ಯಶರಣ । ವೈಷ್ಣವಪಣ ತೇಣೇ ತ್ಯಾಂಸೀ ॥೧೩೯೮॥ ಜಾತೀ ಉತ್ತಮ ಭಕ್ತಿಹೀನ । ತೋ ವೈಷ್ಣವ ನವ್ಹೇ ಜಾಣ । ಅಥವಾ ಕರೀ ದಾಂಭಿಕ ಭಜನ । ವೈಷ್ಣವಪಣ ತ್ಯಾ ನಾಹೀ ॥೧೩೯೯॥ ವೈಷ್ಣವೀ ಮಾನೀ ಜಾತೀಪ್ರಮಾಣ । ಶಾಲಿಗ್ರಾಮ ಮಾನೀ ಪಾಷಾಣ । ಗುರೂಸೀ ಮಾನೀ ಮಾಣೂಸಪಣ । ತೋ ಪಾಪಿಷ್ಠ ಜಾಣ ಸರ್ವಥಾ ॥೧೪೦೦॥ ಜಾಣೇವ ಶಾಹಣೇವ ಜ್ಞಾತೇಪಣ । ಸಾಂಡೂನಿ ಜಾತೀಚಾ ಅಭಿಮಾನ । ಜೋ ಮಜ ಹೋಯ ಅನನ್ಯ ಶರಣ । ವೈಷ್ಣವ ಜಾಣ ತೋ ಮಾಝಾ ॥೧೪೦೧॥ ತ್ಯಾ ವೈಷ್ಣವಾಚೇ ಪೂಜನ । ಬಾಹ್ಯ ಉಪಚಾರೇ ನವ್ಹೇ ಜಾಣ । ಬಂಧುಸ್ನೇಹೇ ಕಳವಳೀ ಮನ । ಸಾಚಾರ ಪೂಜನ ತ್ಯಾ ನಾಂವ ॥೧೪೦೨॥ ಐಕ ಸಖ್ಯಾ ಬಂಧೂಚಾ ಸ್ನೇಹೋ । ಬಂಧೂಸೀ ರಣೀ ಲಾಗತಾ ಘಾವೋ । ಘಾಯಾ ಆಡ ಸ್ವಯೇ ರಿಘೋನಿ ಪಹಾ ಹೋ । ಶತ್ರುಸಮುದಾವೋ ವಿಭಾಂಡೀ ॥೧೪೦೩॥ ತೈಸಾ ಪೋಟಾಆಂತುಲಾ ಕಳವಳಾ । ತೋಚಿ ವೈಷ್ಣವಪೂಜೇಚಾ ಸೋಹಳಾ । ಸ್ನೇಹೇವೀಣ ಟಿಳೇ ಮಾಳಾ । ಸುಖಿ ಗೋಪಾಳಾ ತೇಣೇ ನವ್ಹೇ ॥೧೪೦೪॥ ಏಕಾ ಪಿತಯಾಚೇ ಪುತ್ರ ಸಾಧೂ । ಅಕೃತ್ರಿಮ ಹೋತೀ ಬಂಧೂ । ಮಾಜೀ ಸಾಪತ್ನ ವಿರೋಧೂ । ಸ್ನೇಹ ಶುದ್ಧೂ ತೋ ನವ್ಹೇ ॥೧೪೦೫॥ ಭಕ್ತಾ ಅಭಕ್ತಾಂಚೀ ಉತ್ಪತ್ತೀ । ಮಜಪಾಸೂನಿ ಗಾ ನಿಶ್ಚಿತೀ । ಭಾವಾಭಾವ ಸಾಪತ್ನಪ್ರಾಪ್ತೀ । ವಿರುದ್ಧ ಸ್ಥಿತೀ ಪರಸ್ಪರೇ ॥೧೪೦೬॥ ವೈಷ್ಣವ ವಿಷ್ಣೂಚೇ ಉದರೀ ಜಾಣ । ತೇ ಉದರೀ ಉದರಸ್ಥ ವ್ಹಾವೇ ಆಪಣ । ತೈ ಸಹಜೇ ಝಾಲೇ ಸಖೇಪಣ । ಅಕೃತ್ರಿಮ ಜಾಣ ಕಳವಳಾ ॥೧೪೦೭॥

ವೈಷ್ಣವರ ಸೇವೆಯನ್ನು ಮಾಡುವುದು ಅತ್ಯಂತ ಕಠಿಣವಾಗಿರುವುದು. ಅಲ್ಲಿ ಜಾತಿಯ ಪ್ರಮಾಣವು ಇರುವುದೇ ಇಲ್ಲ. ಈತನು ಬ್ರಾಹ್ಮಣನು, ಈತನು ಶೂದ್ರನು ಎಂಬ ಭೇದಭಾವನೆಯನ್ನು ಇಡಕೂಡದು. ಭಕ್ತಿಭಾವವೇ ಮುಖ್ಯವೆಂದು ತಿಳಿಯಬೇಕು ॥೧೩೯೫॥ ವಿದುರನು ದಾಸೀಪುತ್ರನಾಗಿದ್ದನು. ಇದು ಪ್ರಸಿದ್ಧವಾಗಿರುವುದು. ಆದರೆ ಆತನು ಶ್ರೀಕೃಷ್ಣನಿಗೆ ಪ್ರಿಯನಾದ್ದರಿಂದ ಸರ್ವ ವೈಷ್ಣವರಲ್ಲಿ ಅತ್ಯಂತ ಪವಿತ್ರನಾದನು. ಹಾಗಾದರೆ ಆತನು ನಿಂದ್ಯನು ಎಂದು ಹೇಗೆ ಹೇಳಬೇಕು? ॥೧೩೯೬॥ ಕಪಿಕುಲದಲ್ಲಿ ಜನ್ಮಕ್ಕೆ ಬಂದ ಹನುಮಂತನು, ವೈಷ್ಣವರಲ್ಲಿಯೇ ಅತ್ಯಂತ ಶ್ರೇಷ್ಠನಾಗಿರುವನು. ಈತನು ಕನಿಷ್ಠನು ಎಂದು ಹೇಳುವಂತಹ ಪಾಪಿಷ್ಠನು ಯಾರಿರುವರು? ॥೧೩೯೭॥ ರಾಕ್ಷಸ ಕುಲದಲ್ಲಿ ಹುಟ್ಟಿದ ವಿಭೀಷಣನು ಮತ್ತು ದೈತ್ಯಕುಲದಲ್ಲಿ ಜನಿಸಿದ ಪ್ರಹ್ಲಾದನು; ಇವರು ಭಗವಂತನಿಗೆ ಅನನ್ಯ ಭಾವದಿಂದ ಶರಣಾದರು. ಆದ್ದರಿಂದ ಇವರಿಗೆ ವೈಷ್ಣವ ಪದವಿಯು ಪ್ರಾಪ್ತವಾಯಿತು ॥೧೩೯೮॥ ಜಾತಿಯಿಂದ ಶ್ರೇಷ್ಠನಾಗಿ, ಭಕ್ತಿರಹಿತನಾದರೆ, ಆತನು ವೈಷ್ಣವನಾಗುವುದಿಲ್ಲ. ಇದನ್ನು ನೀನು ತಿಳಿದುಕೋ. ಹಾಗೆಯೇ ಯಾವನು ಡಾಂಭಿಕತನದಿಂದ ಭಜನೆಯನ್ನು ಮಾಡುವವನು; ಅವನೂ ಕೂಡ ವೈಷ್ಣವನಾಗಿರುವುದಿಲ್ಲ ॥೧೩೯೯॥ ಯಾವನು ವೈಷ್ಣವರಲ್ಲಿ ಜಾತಿ ಪ್ರಮಾಣವನ್ನು ಮನ್ನಿಸುವನೋ, ಶಾಲಿಗ್ರಾಮಕ್ಕೆ ಕಲ್ಲು ಎಂದು ತಿಳಿಯುವನೋ, ಗುರುವಿಗೆ ಸಾಮನ್ಯ ಮನುಷ್ಯನೆಂದು ಭಾವಿಸುವನೋ, ಅವನು ನಿಜವಾಗಿಯೂ ಪಾತಕಿಯಾಗಿರುವನು ॥೧೪೦೦॥ ಯಾವನು ತನ್ನ ಬುದ್ಧಿವಂತಿಕೆಯನ್ನು, ವಿದ್ಯೆಯನ್ನು, ಜಾಣತನವನ್ನು ಮತ್ತು ಜಾತಿಯ ಅಭಿಮಾನವನ್ನು ತ್ಯಜಿಸಿ ನನಗೆ ಅನನ್ಯ ಭಾವದಿಂದ ಶರಣಾಗುವನೋ, ಆತನೇ ನನ್ನ ವೈಷ್ಣವನಾಗಿರುವನು ॥೧೪೦೧॥ ಆ ಯಾವ ವೈಷ್ಣವರ ಪೂಜೆಯು ಬಾಹ್ಯ ಉಪಚಾರಗಳಿಂದ ಆಗುವುದಿಲ್ಲ. ಬಂಧು-ಸ್ನೇಹದಿಂದ ಮನವು ಕಳಕಳಿಯಿಂದ ಕೂಡಿರಬೇಕಾಗುವುದು. ಇದರ ಹೆಸರೇ ನಿಜವಾದ ಪೂಜೆಯಾಗಿರುವುದು ॥೧೪೦೨॥ ತನ್ನ ನಿಜ ಬಂಧುವಿನ ಪ್ರೇಮವು ಹೇಗಿರುವುದೆಂಬುದನ್ನು ಕೇಳು. ಅಣ್ಣನಿಗೆ ಒಂದು ವೇಳೆ ಯುದ್ಧದಲ್ಲಿ ಗಾಯದ ಪ್ರಸಂಗವು ಒದಗಲು ಆಗ ತಮ್ಮನು ಸ್ವತಃ ಅದಕ್ಕೆ ಅಡ್ಡಬಂದು ಹಾಗೂ ಶತ್ರು ಸಮುದಾಯದೊಂದಿಗೆ ಯುದ್ಧವನ್ನು ಮಾಡಿ ಅವರನ್ನು ನಿಃಪಾತ ಮಾಡುವನು ॥೧೪೦೩॥ ಈ ಪ್ರಕಾರವಾಗಿ ಯಾವನ ಮನಸ್ಸಿನಲ್ಲಿ ಕಳಕಳಿಯು ಇರುವುದೋ, ಆತನೇ ನಿಜವಾದ ವೈಷ್ಣವ ಪೂಜೆಯ ವೈಭವಸ್ವರೂಪನಾಗಿರುವನು. ಪ್ರೇಮವಿಲ್ಲದೇ ಕೇವಲ ಬಾಹ್ಯ ಲಕ್ಷಣಗಳಾದ ಮಾಲೆ, ಮುದ್ರೆಗಳಿಂದ ಭಗವಂತನಿಗೆ ಸಂತೋಷವು ಪ್ರಾಪ್ತವಾಗುವುದಿಲ್ಲ ॥೧೪೦೪॥ ಈ ಯಾವ ಸಾಧೂ ಒಂದೇ ತಂದೆಯ ಮಗನಾಗಿರುವುದರಿಂದ ಅಕೃತ್ರಿಮ ಬಂಧುವೇ ಆಗಿರುವನು. ಅದರಲ್ಲಿ ಮಲತಾಯೀ ಅಣ್ಣತಮ್ಮಂದಿರಂತೆ ಭೇದವಿಡುವುದು ಇದಕ್ಕೆ ನಿಜವಾದ ಸ್ನೇಹವೆನ್ನುವುದಿಲ್ಲ ॥೧೪೦೫॥ ನಿಜವಾಗಿ ನೋಡಲು ಭಕ್ತ ಮತ್ತು ಅಭಕ್ತ ಇವರಿಬ್ಬರ ಉತ್ಪತ್ತಿಯು ನನ್ನಿಂದಲೇ ಆಗುವುದು. ಆದರೆ ನನ್ನಲ್ಲಿ ಭಾವವನ್ನಿಡುವುದು ಮತ್ತು ಭಾವವನ್ನು ಇಡದೇ ಇರುವುದು ಹೀಗೆ ಮಲತಾಯೀ ಧೋರಣೆ ನಿರ್ಮಾಣವಾಯಿತೆಂದರೆ ಪರಸ್ಪರರಲ್ಲಿ ವಿರುದ್ಧ ಸ್ಥಿತಿಯು ಹುಟ್ಟಿಕೊಳ್ಳುವುದು ॥೧೪೦೬॥ ವೈಷ್ಣವರು ವಿಷ್ಣುವಿನ ಉದರದಲ್ಲಿ ಇರುತ್ತಿರುವರು. ಆ ಉದರದಲ್ಲಿ ತಾವೂ ಕೂಡ ಹೋಗಿ ಇರಬೇಕು. ಅಂದರೆ ಸಹಜವಾಗಿಯೇ ಸ್ನೇಹಭಾವವು ನಿರ್ಮಾಣವಾಗುವುದು. ನಿಷ್ಕಪಟವಾದ ಕಳಕಳಿಯು ಪ್ರಕಟವಾಗುವುದು ॥೧೪೦೭॥

ಐಸಾ ಬಂಧುಸ್ನೇಹೇ ಜೋ ಕಳವಳಾ । ತೇಚಿ ಪೂಜಾ ವೈಷ್ಣವಕುಳಾ । ವೈಷ್ಣವಪೂಜಕಾಜವಳಾ । ಭಾವೇ ಭುಲಲಾ ಮೀ ತಿಷ್ಠೇ ।।೧೪೦೮।। ವೈಷ್ಣವಪೂಜೇಚೇ ಲಕ್ಷಣ । ತೇ ಪಾಂಚವೇ ಮಾಝೇ ಪೂಜಾಸ್ಥಾನ । ಐಕ ಆಕಾಶಾಚೇ ಪೂಜನ । ಕೇವಳ ಮಾಝೇ ಧ್ಯಾನ ತೇ ಠಾಯೀ ।।೧೪೦೯।। ಆಕಾಶ ನಿರ್ಲೇಪ ನಿರ್ವಿಕಾರ । ಅತಿಸೂಕ್ಷ್ಮ ನಿರಾಕಾರ । ತೈಸೇ ಮಾಝೇ ಧ್ಯಾನ ನಿರಂತರ । ಹೃದಯೀ ಸಾಚಾರ ಕರಾವೇ ।।೧೪೧೦।। ಧ್ಯಾನೀ ಬೈಸೋನಿ ಸಾವಕಾಶ । ಸಗಳೇ ಸರ್ವ ಮಹಾದಾಕಾಶ । ಜೋ ಆಪುಲೇ ಕರೀ ಹೃದಯಾಕಾಶ । ತೇಣೇ ಮೀ ಪರೇಶ ಪೂಜಿಲಾ ।।೧೪೧೧।। ಅತಿಸೂಕ್ಷ್ಮ ನಿರ್ವಿಕಾರ । ಹೃದಯೀ ಮಾಝೇ ಧ್ಯಾನ ಸಧರ । ತೇಚಿ ಪೂಜಾ ಗಾ ಸಾಚಾರ । ಅಪರಂಪಾರ ಮೀ ಪೂಜಿಲೋ ।।೧೪೧೨।। ಆಕಾಶಾ ಲೇಪ ಲಾವೂ ಜಾತಾ । ಲಾವಿತಾ ನ ಲಾಗೇ ಸರ್ವಥಾ । ತೇವೀ ಸರ್ವ ಕರ್ಮೀ ವರ್ತತಾ । ಆಪುಲೀ ಮುಕ್ತತಾ ಜೋ ದೇಖೇ ।।೧೪೧೩।। ಆಕಾಶ ಸರ್ವ ಪದಾರ್ಥೀ ವ್ಯಾಪ್ತ । ವ್ಯಾಪ್ತ ಅಸೋನಿ ಅತಿಅಲಿಪ್ತ । ತೇವೀ ಸರ್ವ ಕರ್ಮೀ ವರ್ತತ । ಕರ್ಮಾತೀತ ನಭನಿಷ್ಠಾ ।।೧೪೧೪।। ಆಕಾಶ ಮಾಝೇ ಪೂಜಾಸ್ಥಾನ । ತೇಥೀಲ ಪೂಜೇಚೇ ಹೇ ವಿಧಾನ । ಹೇ ಸಹಾವೇ ಪೂಜಾ ಅಧಿಷ್ಠಾನ । ವಾಯೂಚೇ ಅರ್ಚನ ತೇ ಐಕ ।।೧೪೧೫।। ವಾಯೂಚ್ಯಾ ಠಾಯೀ ಭಗವದ್‌ಬುದ್ಧೀ । ಜ್ಯಾಚೀ ಢಳೋ ನೇಣೇ ಕಧೀ । ವಾಯೂಚೇನಿ ಭೂತಾ ಚೇತನಸಿದ್ಧೀ । ಜಗಾತೇ ತ್ರಿಶುದ್ಧೀ ಧರಿತಾ ತೋ ।।೧೪೧೬।। ವಾಯುರೂಪೇ ಮೀಚಿ ಜಾಣ । ಜಾಲೋ ಸರ್ವ ಭೂತಾಂಚಾ ಪ್ರಾಣ । ಪ್ರಾಣಾಚಾ ಮೀ ಮುಖ್ಯ ಪ್ರಾಣ । ಮದ್ರೂಪೇ ಪವನ ಯಾ ಹೇತು ।।೧೪೧೭।। ವಾಯೂ ವ್ಯೋಮೀ ಜನ್ಮ ಪಾವೇ । ಜನ್ಮೋನಿ ವ್ಯೋಮಾವೇಗಳಾ ನವ್ಹೇ । ಸರ್ವ ಕರ್ಮೀ ತೇಥೇಚಿ ಸಂಭವೇ । ಅಂತೀ ಸ್ಥಿರಾವೇ ನಿಜವ್ಯೋಮೀ ।।೧೪೧೮।। ತೇವೀ ಜನ್ಮ ಕರ್ಮನಿದಾನ । ಪಾವೋನಿ ನ ಸಾಂಡೀ ಅಧಿಷ್ಠಾನ । ಪ್ರಾಣಾಚಾ ಜೋ ಹೋಯ ಪ್ರಾಣ । ಹೇಚಿ ಪೂಜನ ವಾಯೂಚೇ ।।೧೪೧೯।। ಪ್ರಾಣಾಚೇ ಗಮನಾಗಮನ । ತೇಥ ಸೋಹಂಹಂಸಾಚೇ ನಿತ್ಯ ಧ್ಯಾನ । ತೇಚಿ ಕರಿತಾ ನಿತ್ಯ ಸಾವಧಾನ । ಹೇಚಿ ಪೂಜನ ವಾಯೂಚೇ ।।೧೪೨೦।। ಮದ್ರೂಪೇ ದೃಢಭಾವನ । ವಾಯೂಚೇ ಜೋ ಕರೀ ಆಪಣ । ತೇ ಪವನಾಚೇ ಪೂಜನ । ಪೂಜಾಸ್ಥಾನ ಸಾತವೇ ।।೧೪೨೧।।

ಅದರಂತೆ ಬಂಧು ಸ್ನೇಹದಿಂದ ಯಾವ ಕಳಕಳಿಯು ಉತ್ಪನ್ನವಾಗುವುದೋ, ಅದುವೇ ವೈಷ್ಣವರ ನಿಜವಾದ ಪೂಜೆಯಾಗಿರುವುದು. ಹೀಗೆ ವೈಷ್ಣವರ ಪೂಜೆಯನ್ನು ಮಾಡುವವರ ಹತ್ತಿರ ಭಕ್ತಿಗೆ ಭುಲಾಯಿಸಿರುವ ನಾನು ನಿಂತುಕೊಂಡಿರುತ್ತೇನೆ ।।೧೪೦೮।। ವೈಷ್ಣವ ಪೂಜೆಯ ಈ ಲಕ್ಷಣವು ನನ್ನ ಐದನೆಯ ಪೂಜೆಯಸ್ಥಾನವಾಗಿರುವುದು. ಈಗ ಆಕಾಶದ ಪೂಜೆಯನ್ನು ಹೇಳುವೆನು, ಕೇಳು. ಅದರಲ್ಲಿ ಕೇವಲ ನನ್ನ ಧ್ಯಾನ ಮಾತ್ರ ಇರುವುದು ।।೧೪೦೯।। ಆಕಾಶವು ನಿರ್ಲೇಪ ಹಾಗೂ ನಿರ್ವಿಕಾರವಾಗಿರುವುದು ಮತ್ತು ಅತಿಸೂಕ್ಷ್ಮ ಹಾಗೂ ನಿರಾಕಾರವಾಗಿರುವುದು. ಅದರಂತೆ ನಿತ್ಯವೂ ಹೃದಯದಲ್ಲಿ ನನ್ನ ಧ್ಯಾನವನ್ನು ಮಾಡಬೇಕು ।।೧೪೧೦।। ಧ್ಯಾನದಲ್ಲಿ ಸಾವಕಾಶವಾಗಿ ಕುಳಿತುಕೊಂಡು ಸರ್ವ ಮಹದಾಕಾಶವನ್ನು ತನ್ನ ಹೃದಯಾಕಾಶವಾಗಿ ಮಾಡಿಬಿಡುವನು. ಇದರಿಂದ ಆತನು ನನ್ನ ಪರಮೇಶ್ವರನ ಪೂಜೆಯನ್ನು ಮಾಡಿದನೆಂದು ತಿಳಿಯಬೇಕು ।।೧೪೧೧।। ಅತ್ಯಂತ ಸೂಕ್ಷ್ಮವಾಗಿರುವ ಮತ್ತು ನಿರ್ವಿಕಾರವಾಗಿರುವ ಈ ನನ್ನ ಧ್ಯಾನವನ್ನು ಹೃದಯದಲ್ಲಿ ಸ್ಥಿರಗೊಳಿಸಿದರೆ, ಅದೇ ನನ್ನ ನಿಜವಾದ ಪೂಜೆಯಾಗುವುದು. ಅಪರಂಪಾರನಾಗಿರುವ ನನ್ನನ್ನು ಈ ರೀತಿಯಾಗಿ ಪೂಜಿಸಿದನೆಂದು ತಿಳಿಯಬೇಕು ।।೧೪೧೨।। ಆಕಾಶಕ್ಕೆ ಏನಾದರೂ ಲೇಪಿಸಲು ಹೋದರೆ ಅದು ಲೇಪವಾಗುವುದೇ ಇಲ್ಲ. ಅದರಂತೆ ಸರ್ವಕರ್ಮಗಳನ್ನು ಮಾಡುತ್ತಿದ್ದರೂ ತಾನು ಮುಕ್ತನಾಗಿರುವೆನು ಎಂದು ಯಾವನು ಅರಿಯುವನೋ ।।೧೪೧೩।। ಮತ್ತು ಆಕಾಶವು ಸರ್ವ ಪದಾರ್ಥಗಳಲ್ಲಿ ವ್ಯಾಪ್ತವಾಗಿರುವುದು, ಆದರೆ ಅದು ವ್ಯಾಪ್ತವಾಗಿದ್ದರೂ ಅತ್ಯಂತ ಅಲಿಪ್ತವಾಗಿರುವುದು. ಅದರಂತೆ ಯಾವನು ಆಕಾಶದಲ್ಲಿ ನಿಷ್ಠೆಯನ್ನಿಟ್ಟು ಸರ್ವ ಕರ್ಮಗಳನ್ನು ಮಾಡುತ್ತಿದ್ದರೂ ಕರ್ಮಾತೀತನೇ ಆಗಿರುವನು ।।೧೪೧೪।। ಇದುವೇ ಆಕಾಶದ ಪೂಜೆಯಾಗಿರುವುದು. ಆಕಾಶವು ನನ್ನ ಪೂಜೆಯ ಸ್ಥಾನವಾಗಿದ್ದು ಅದರ ಪೂಜೆಯ ವಿಧಾನವು ಈ ಪ್ರಕಾರವಾಗಿರುವುದು. ಇದು ಆರನೆಯ ಪೂಜಾಸ್ಥಾನವಾಗಿರುವುದು. ಈಗ ವಾಯುವಿನ ಅರ್ಚನೆಯನ್ನು ಕೇಳು ।।೧೪೧೫।। ಯಾರಲ್ಲಿ ವಾಯುವಿನಲ್ಲಿ ದೃಢವಾದ ಭಗವದ್ಭಕ್ತಿ ವಿರುವುದೋ, ಅದು ಎಂದಿಗೂ ತೊಲಗುವುದಿಲ್ಲ. ಕಾರಣ ವಾಯುವಿನ ಯೋಗದಿಂದಲೇ ಸರ್ವ ಪ್ರಾಣಿಮಾತ್ರರಿಗೆ ಸಜೀವತ್ವವು ಪ್ರಾಪ್ತವಾಗಿರುವುದು. ನಿಜವಾಗಿಯೂ ಜಗತ್ತನ್ನು ಧಾರಣ ಮಾಡುವ ಶಕ್ತಿಯು ವಾಯುವೇ ಆಗಿರುವುದು ।।೧೪೧೬।। ನಾನು ವಾಯು ರೂಪದಿಂದ ಸರ್ವ ಪ್ರಾಣಿಗಳ ಪ್ರಾಣನಾಗಿರುವೆನು. ಇದನ್ನು ಲಕ್ಷದಲ್ಲಿಡು. ಪ್ರಾಣದ ಮುಖ್ಯ ಪ್ರಾಣವು ನಾನಾಗಿರುವೆನು. ಆದ್ದರಿಂದ ವಾಯುವು ನನ್ನ ಸ್ವರೂಪವೇ ಆಗಿರುವುದು ।।೧೪೧೭।। ವಾಯುವು ಆಕಾಶದಲ್ಲಿ ಹುಟ್ಟುವುದು ಮತ್ತು ಆಕಾಶದಿಂದ ಭಿನ್ನವಾಗಿರುವುದಿಲ್ಲ. ಸರ್ವ ಪ್ರಕಾರದ ಕರ್ಮಗಳಲ್ಲಿ ಅದು ಆಕಾಶದಲ್ಲಿಯೇ ಇರುವುದು. ಕೊನೆಗೆ ಆಕಾಶದಲ್ಲಿಯೇ ಸ್ಥಿರಗೊಳ್ಳುವುದು ।।೧೪೧೮।। ಅದರಂತೆ ಜನ್ಮಕರ್ಮದ ನಿರ್ಣಯವನ್ನು ತಿಳಿದರೂ ಕೂಡ ತನ್ನ ಅಧಿಷ್ಠಾನವನ್ನು ಬಿಡದಿರುವುದು ಮತ್ತು ಪ್ರಾಣಕ್ಕೆ ಪ್ರಾಣನಾಗಿರುವುದಕ್ಕೆ ವಾಯುವಿನ ಪೂಜೆ ಎಂದು ಹೇಳುವರು ।।೧೪೧೯।। ಪ್ರಾಣದ ಗಮನಾಗಮನವು ಇದ್ದೇ ಇರುವುದು. ಆಗ ''ಸೋಹಂ'' ಹಂಸದ ಸಾವಧಾನ ಮನದಿಂದ ಸತತವಾಗಿ ಧ್ಯಾನವನ್ನು ಮಾಡಿದರೆ, ಅಂದರೆ ಬ್ರಹ್ಮರೂಪವಾದ ಅದುವೇ ನಾನು, ಹೀಗೆ ನಿರಂತರವಾಗಿ ಜಾಗೃತವಾಗಿರುವುದೇ ವಾಯುವಿನ ಪೂಜೆಯಾಗಿರುವುದು ।।೧೪೨೦।। ಯಾರು ನನ್ನ ಸ್ವರೂಪದಿಂದಲೇ ವಾಯುವಿನ ದೃಢವಾದ ಧ್ಯಾನವನ್ನು ಮಾಡುವನೋ, ಆತನಿಂದ ಆಗುವುದೆಲ್ಲವೂ ವಾಯುವಿನ ಪೂಜೆಯಾಗಿರುವುದು. ಇದು ಏಳನೆಯ ಪೂಜಾಸ್ಥಾನವೆಂದು ತಿಳಿಯಬೇಕು ।।೧೪೨೧।।

ಜೀವನೇ ಜೀವನಾಚೀ ಪೂಜಾ । ಜೀವನೇಚಿ ನಿಪಜೇ ವೋಜಾ । ತೈ ಪೂಜಾ ಪಾವೇ ಅಧೋಕ್ಷಜಾ । ತೋ ಭಕ್ತ ಮಾಝಾ ಪಢಿಯಂತಾ ॥೧೪೨೨॥ ''ಆಪೋ ನಾರಾಯಣ ಸಾಕ್ಷಾತ್'' । ಯಾ ಮಂತ್ರಾಚಾ ಜೋ ಮಂತ್ರಾರ್ಥ । ದೇವೇ ದೇವೋಚಿ ಪೂಜಿಜೇತ । ಜಾಣ ನಿಶ್ಚಿತ ಉದ್ಧವಾ ॥೧೪೨೩॥ ಕ್ಷೀರೇ ಪೂಜಿಲಾ ಕ್ಷೀರಸಾಗರೂ । ತೇವೀ ದ್ರವ್ಯೇ ದ್ರವ್ಯೋಪಚಾರೂ । ಹಾ ಜೀವನಪೂಜಾಪ್ರಕಾರೂ । ಜಾಣ ನಿರ್ಧಾರೂ ಉದ್ಧವಾ ॥೧೪೨೪॥ ಜೀವಾ ಜೀವವೀ ಜೀವನ । ತ್ಯಾ ಜೀವನಾ ಮೀ ನಿಜಜೀವನ । ಜೀವನೇ ಪೂಜಿಜೇ ಜೀವನ । ಜೇವೀ ಸಮುದ್ರಪೂಜನ ತರಂಗೀ ॥೧೪೨೫॥ ''ನದ್ಯಸ್ತೃಪ್ಯಂತು ಸಮುದ್ರಾಸ್ತೃಪ್ಯಂತು'' । ಹೇ ಜಳೇಚಿ ಜಳ ಪೂಜಿಜೇತೂ । ಪೂಜ್ಯಪೂಜಕಾ ಏಕತ್ವ ಯೇಥೂ । ಹೇಚಿ ವೇದೋಕ್ತ ವಿಧಿಪೂಜಾ ॥೧೪೨೬॥ ಜೀವನೇ ಪೂಜಿಜೇ ಜೀವನ । ಹೇ ಆಠವೇ ಪೂಜಾಸ್ಥಾನ । ಐಕ ಪೃಥ್ವೀಚೇ ಪೂಜನ । ಶ್ಲೋಕಾರ್ಧೇ ಸಂಪೂರ್ಣ ಸಾಂಗೇನ ॥೧೪೨೭॥

ಸ್ಥಂಡಿಲೇ ಮಂತ್ರಹೃದಯೈರ್ಭೋಗೈರಾತ್ಮಾನಮಾತ್ಮನಿ । ಕ್ಷೇತ್ರಜ್ಞಂ ಸರ್ವಭೂತೇಷು ಸಮತ್ವೇನ ಯಜೇತ ಮಾಮ್ ॥೪೫॥

ಅರ್ಥ:- ಭೂಮಿಯಲ್ಲಿ ರಹಸ್ಯ ಮಂತ್ರದ ನ್ಯಾಸದಿಂದ, ಶರೀರದಲ್ಲಿ ಆತ್ಮದ ಭೋಗಗಳ ಯೋಗದಿಂದ, ಸರ್ವಭೂತಮಾತ್ರರಲ್ಲಿ ನನ್ನ ಕ್ಷೇತ್ರಜ್ಞನ ಸಮತ್ವದಿಂದ ಪೂಜೆಯನ್ನು ಮಾಡಬೇಕು.

ಜಳಾಮಾಜೀ ಧರಾ ಅಧರ । ವಿರೋನಿ ಹೋ ಪಾಹೇ ತೇ ನೀರ । ತೀಮಾಜೀ ಮೀ ಪ್ರವೇಶಲೋ ಧರಾಧರ । ಅಧರ ತೇ ಸಧರ ತೇಣೇ ಝಾಲೀ ॥೧೪೨೮॥ ಯಾಲಾಗೀ ಪೃಥ್ವಿ ಮಾಝೇ ಪೂಜಾಸ್ಥಾನ । ಐಕ ಪೂಜೇಚೇ ವಿಧಾನ । ಗೋಸದೃಶ ಸ್ಥಂಡಿಲೀ ಜಾಣ । ಆವಾಹನಾ ಪೈ ಮಾಝೇ ॥೧೪೨೯॥ ಗೋಸದೃಶ ಸ್ಥಂಡಿಲೀ ಕಾ ಮ್ಹಣಸೀ । ಪೃಥ್ವೀ ಆಹೇ ಗಾಯೀಚ್ಯಾ ಐಶೀ । ಜೈ ಪೂಜಾ ಕರಾವೀ ಪಡೇ ತಿಸೀ । ತೈ ತದಾಕಾರೇಸೀ ಸ್ಥಂಡಿಲ ॥೧೪೩೦॥ ತೇ ಸ್ಥಂಡಿಲೀ ಪೂಜಾವಯಾ ಧರಾ । ಆವಾಹನ ಕರಾವೇ ಧರಾಧರಾ । ತಲ್ಲಿಂಗ ಹೃದಯಮಂತ್ರಾ । ಮಂತ್ರದ್ವಾರಾ ಪೂಜಾವೀ ॥೧೪೩೧॥ ಹೃದಯ ಕವಚ ಶಿಖಾ ನೇತ್ರ । ಶಕ್ತಿ ಬೀಜ ಮಂತ್ರಾಸ್ತ್ರ । ಸ್ಥಂಡಿಲೀ ರೇಖೋನಿಯಾ ಯಂತ್ರ । ಧರಾಧರ ಮಹಾಪೂಜಾ ॥೧೪೩೨॥ ಯಾಪರೀ ಪೃಥ್ವೀಪೂಜನ । ಸಾಂಗ ಸಾಂಗೀತಲೇ ಜಾಣ । ಆಪುಲೇ ಆಪಣ ಪೂಜಾಸ್ಥಾನ । ದಹಾವೇ ಲಕ್ಷಣ ತೇ ಐಕ ॥೧೪೩೩॥

ಜಲದಿಂದಲೇ ಜಲದ ಪೂಜೆಯನ್ನು ಮಾಡಬೇಕು. ಅಂದರೆ ಜಲದ ಯೋಗದಿಂದ ಭಗವಂತನ ಪ್ರೀತಿಯು ನಿರ್ಮಾಣವಾಗುವುದು. ಮತ್ತು ಈ ಪೂಜೆಯು ಭಗವಂತನಿಗೆ ಮುಟ್ಟುವುದು. ಇಂತಹ ಭಕ್ತನು ನನಗೆ ಅತ್ಯಂತ ಪ್ರಿಯನಾಗಿರುವನು ॥೧೪೨೨॥ ಹೇ ಉದ್ಧವನೇ, ''ಆಪೋ ನಾರಾಯಣಾ: ಸಾಕ್ಷಾತ್'' ಅಂದರೆ ಜಲವು ಸಾಕ್ಷಾತ್ ನಾರಾಯಣನಾಗಿರುವನು. ಹೀಗಿರುವುದರಿಂದ ದೇವರೇ ದೇವರನ್ನು ಪೂಜಿಸುವನೆಂದು ನಿಶ್ಚಿತವಾಗಿ ತಿಳಿದುಕೋ ॥೧೪೨೩॥ ಹೇ ಉದ್ಧವನೇ, ಕ್ಷೀರಸಾಗರದ ಪೂಜೆಯನ್ನು ಹಾಲಿನಿಂದಲೇ ಮಾಡಬೇಕಾಗುವುದು. ಅಥವಾ ದ್ರವ್ಯದಿಂದಲೇ ದ್ರವ್ಯದ ಪೂಜೆಯನ್ನು ಮಾಡಬೇಕಾಗುವುದು. ಅದರಂತೆಯೇ ಈ ಜಲಪೂಜೆಯ ಪ್ರಕಾರವಿರುವುದು. ಇದನ್ನು ನಿಶ್ಚಿತವಾಗಿ ಅರಿತುಕೋ ॥೧೪೨೪॥ ಜಲವೇ ಜೀವಕ್ಕೆ ಜೀವಂತವಾಗಿಡುವುದು. ಆ ಜಲದ ನಾನು ನಿಜಜೀವನನಾಗಿರುವೆನು. ಅಂದಮೇಲೆ ಯಾವ ಪ್ರಕಾರವಾಗಿ ಸಮುದ್ರದ ತೆರೆಗಳಿಂದ ಸಮುದ್ರದ ಪೂಜೆಯು ಹೇಗಾಗುವುದೋ, ಅದರಂತೆಯೇ ಜಲದಿಂದ ಜಲದ ಪೂಜೆಯನ್ನು ಮಾಡಬೇಕು ॥೧೪೨೫॥ ನದಿಗಳು ತೃಪ್ತವಾಗಲಿ, ಸಮುದ್ರವು ತೃಪ್ತವಾಗಲಿ ಎಂಬ ಅರ್ಥದ ಮಂತ್ರದಿಂದ ''ನದ್ಯಸ್ತೃಪ್ಯಂತು, ಸಮುದ್ರಾಸ್ತೃಪ್ಯಂತು'' ಎನ್ನುತ್ತ ಯಾರು ಜಲವನ್ನು ಕೊಡುವರೋ, ಅವರೂ ಸಹ ಜಲದಿಂದ ಜಲದ ಪೂಜೆಯನ್ನು ಮಾಡುವರು. ಇದರಲ್ಲಿ ಪೂಜೆ ಮತ್ತು ಪೂಜಕರ ಐಕ್ಯವಾಗುವುದು. ಇದೇ ವೇದೋಕ್ತ ವಿಧಿಯ ಪೂಜೆಯಾಗಿರುವುದು ॥೧೪೨೬॥ ಈ ಪ್ರಕಾರವಾಗಿ ಜಲದಿಂದ ಜಲ ಪೂಜೆಯು ಎಂಟನೆಯ ಪೂಜಾಸ್ಥಾನವಾಗಿರುವುದು. ಈಗ ಮುಂದಿನ ಅರ್ಧಶ್ಲೋಕದಿಂದ ಪೃಥ್ವಿಯ ಪೂಜೆಯನ್ನು ಹೇಳುವೆನು, ಅದನ್ನು ನೀನು ಕೇಳು ॥೧೪೨೭॥

ನೀರಿನಲ್ಲಿ ಪೃಥ್ವಿಯ ನಿರಾಧಾರವಾಗಿರುವುದು. ಆದ್ದರಿಂದ ಅದು ಕರಗಿ ಜಲರೂಪವಾಗುವುದಿತ್ತು. ಆ ಸಮಯದಲ್ಲಿ ನಾನು ಅದರಲ್ಲಿ ಪ್ರವೇಶವನ್ನು ಮಾಡಿ ಅದಕ್ಕೆ ಆಧಾರವನ್ನು ಕೊಟ್ಟೆನು. ಆಗ ಧರಾಧರ ನಾಮದಿಂದ ನನ್ನ ಪ್ರಸಿದ್ಧಿಯಾಯಿತು ॥೧೪೨೮॥ ಆದ್ದರಿಂದ ಪೃಥ್ವಿಯು ನನ್ನ ಪೂಜಾಸ್ಥಾನವಾಗಿರುವುದು. ಅದರ ಪೂಜೆಯ ವಿಧಾನವನ್ನು ಈಗ ಹೇಳುವೆನು, ಕೇಳು. ಆಕಳಿನಂತೆ ಯಜ್ಞವೇದಿಕೆಯನ್ನು ಮಾಡಿ ನನ್ನ ಆವಾಹನೆಯನ್ನು ಮಾಡಬೇಕು ॥೧೪೨೯॥ ಆಕಳಿನ ಆಕಾರದಂತೆ ಯಜ್ಞವೇದಿಕೆಯನ್ನು ಏಕೆ ಮಾಡಬೇಕೆಂಬ ವಿಚಾರವು ಮನದಲ್ಲಿ ಮೂಡಬಹುದು. ಅದಕ್ಕಾಗಿ ಕೇಳು, ಪೃಥ್ವಿಯು ಆಕಳಿನಂತೆ ಇರುವುದು. ಅಂದಮೇಲೆ ಪೃಥ್ವಿಯ ಪೂಜೆಯನ್ನು ಮಾಡಬೇಕಾದಲ್ಲಿ ಆಕಳಿನ ಆಕಾರದ ಯಜ್ಞವೇದಿಕೆಯನ್ನು ಮಾಡಬೇಕು ॥೧೪೩೦॥ ಈ ವೇದಿಕೆಯ ಮೇಲೆ ಪೃಥ್ವಿಯ ಪೂಜೆ ಮಾಡುವುದಕ್ಕಾಗಿ ಧರಾಧರನ ಆವಾಹನೆ ಮಾಡಬೇಕು ನಂತರ ಅದರ ಲಿಂಗದ, ಹೃದಯ ಮಂತ್ರದ ಮಂತ್ರೋಕ್ತ ಪೂಜೆ ಮಾಡಬೇಕು ॥೧೪೩೧॥ ಆ ವೇದಿಕೆಯಲ್ಲಿ ಹೃದಯ, ಕವಚ, ಶಿಖಾ, ನೇತ್ರ, ಬೀಜ, ಮಂತ್ರ, ಅಸ್ತ್ರ ಇತ್ಯಾದಿ ಲಕ್ಷಣಗಳಿಂದ ಕೂಡಿದ ಯಂತ್ರ ತಯಾರಿಸಿ, ಧರಾಧರನ ಮಹಾಪೂಜೆಯನ್ನು ಪ್ರೇಮಭಾವದಿಂದ ಮಾಡಬೇಕು ॥೧೪೩೨॥ ಈ ಪ್ರಕಾರವಾಗಿ ಸರ್ವ ಪೂಜೆಗಳನ್ನು ಹೇಳಿದೆನು. ಈಗ ತನ್ನ ಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನು ಹೇಳುವೆನು. ಇದು ಹತ್ತನೆಯ ಪೂಜಾಸ್ಥಾನವಾಗಿದೆ. ಅದರ ಲಕ್ಷಣವನ್ನು ಈಗ ಹೇಳುವೆ, ಕೇಳು ॥೧೪೩೩॥

ಆಧೀ ಏಕ ಪುಢೇ ಪೂರ್ಣ । ತ್ಯಾ ನಾಂವ ದಹಾವೇ ಲಕ್ಷಣ । ಆಪಲೇ ಆಪಣ ಪೂಜಾಸ್ಥಾನ । ವಿಚಿತ್ರ ವಿಂದಾನ ಪೂಜೇಚೇ ।।೧೪೩೪।। ಪೂಜ್ಯಾಪುಢೇ ಪೂಜ್ಯಕೋಟೀ । ಕೇಲ್ಯಾ ಗಣಿತಾಸೀ ಪಡೇ ತುಟೀ । ಪಹಿಲ್ಯಾ ಪೂಜ್ಯಾಸೀ ಜೈ ಘಾಂಟಾ ಉಠೀ । ತೈ ಗಣಿತಸೃಷ್ಟೀ ಅಸಂಖ್ಯ ।।೧೪೩೫।। ಪೂರ್ಣಾಸೀ ಘಾಂಟಾ ಕಾಢಿಜೇ । ತ್ಯಾ ನಾಂವ ಏಕ ಮ್ಹಣಿಜೇ । ಏಕಪಣೇಹೀ ಪೂರ್ಣ ಅಸಿಜೇ । ಸಹಜ ನಿಜೇ ಪರಿಪೂರ್ಣ ।।೧೪೩೬।। ಪೂರ್ಣಾಪುಢೇ ಪೂರ್ಣ ಪಡೇ । ತೈ ಗಣಿತ ಕಾಯ ಆತುಡೇ । ಜೈ ನಿಚಾಡಾ ಚಾಡ ವಾಢೇ । ತೈ ನಿಜನಿವಾಡೇ ನಿಜಪೂಜಾ ।।೧೪೩೭।। ಏಕಾಸೀ ಏಕ ಮೇಳವಿಜೇ । ತೈ ದೋನೀಪಣೇ ಹೋಯ ದುಜೇ । ಜೈ ಏಕೇ ಏಕ ಭೋಗಿಜೇ । ತೈ ದೇಖಿಜೇ ನಿಜಪೂಜ್ಯತ್ವ ।।೧೪೩೮।। ಆಪಣಚಿ ಆಪಲಾ ದೇವೋ । ಆಪುಲಾ ಪೂಜಕ ಆಪಣ ಪಹಾ ಹೋ । ಆಪುಲಾ ಆಪಣಚಿ ಭಾವೋ । ನವಲ ನವಲಾವೋ ಪೂಜೇಚಾ ।।೧೪೩೯।। ಹೃದಯೀ ಭಾವೂನಿ ಚೈತನ್ಯಘನ । ಸ್ವಯೇ ತದ್ರೂಪಿ ಹೋಊನಿ ಜಾಣ । ಮಗ ಜೇ ಜೇ ಭೋಗ ಭೋಗೀ ಆಪಣ । ಬ್ರಹ್ಮಾರ್ಪಣ ಸಹಜೇಚಿ ।।೧೪೪೦।। ತೋ ಗ್ರಾಸ ಘಾಲೀ ಸ್ವಮುಖೀ । ತೇಣೇ ಮುಖೇ ಮೀ ಹೋಯ ಸುಖೀ । ತೃಪ್ತೀ ಉಪಜೇ ಪರಮಪುರುಖೀ । ಪೂಜಾ ನೇಟಕೀ ಹೇ ಮಾಝೀ ।।೧೪೪೧।। ತೋ ಜೇ ಜೇ ಕಾಂಹೀ ಭೋಗ ಭೋಗೀ । ತೇ ಅರ್ಪತೀ ಮಜಚಿಲಾಗೀ । ಮೀ ರಂಗಲೋ ತ್ಯಾಚೇ ರಂಗೀ । ಪಾವೇ ಶ್ರೀರಂಗೀ ತೇ ಪೂಜಾ ।।೧೪೪೨।। ಮುಖ್ಯ ಪೂಜೇಮಾಜೀ ಹೇ ಮಾಝೀ ಪೂಜಾ । ತೇಣೇಂಚಿ ಪೂಜಿಲೇ ಮಜ ಅತಿವೋಜಾ । ಪೂಜಾಮಿಸೇ ಗರುಡಧ್ವಜಾ । ವಶ ಅಧೋಕ್ಷಜಾ ತೇಣೇ ಕೇಲೇ ।।೧೪೪೩।। ಹೇ ಆವಡತೀ ಮಾಝೀ ಪೂಜಾ । ಅತ್ಯಂತ ಪ್ರಿಯ ಅಧೋಕ್ಷಜಾ । ಹೇ ಭಕ್ತಿ ಪಢಿಯೇ ಗರುಡಧ್ವಜಾ । ಜಾಣ ತೋ ಮಾಝಾ ಪ್ರಿಯ ಭಕ್ತ ।।೧೪೪೪।। ಹೋ ಕಾ ಸಗುಣ ಅಥವಾ ನಿರ್ಗುಣ । ದೋಹೀ ರೂಪೇ ಮೀಚಿ ಜಾಣ । ತೇಥ ಜೋ ಕರೀ ನಿಜಭೋಗ ಅರ್ಪಣ । ಶುದ್ಧ ಪೂಜನ ತೇ ಮಾಝೇ ।।೧೪೪೫।। ನಿಜಾತ್ಮ ಭೋಗೀ ಅಧೋಕ್ಷಜಾ । ಪೂಜಿಜೇ ತೇ ಹೇ ಜಾಣ ಪೂಜಾ । ಸರ್ವ ಭೂತಾಂತೇ ಪೂಜಿಜೇ ವೋಜಾ । ಸಮಸಾಮ್ಯ ಸಮಜಾ ಸಮಭಾವೇ ।।೧೪೪೬।।

ಪ್ರಥಮದಲ್ಲಿ ಮೊದಲನೆಯ ಸಂಖ್ಯೆಯು ಒಂದು, ಅದರ ಮುಂದೆ ಸೊನ್ನೆ ಬರೆದರೆ ಅದಕ್ಕೆ ಹತ್ತನೆಯ ಲಕ್ಷಣವೆನ್ನುವರು. ಅದೇ ತನ್ನದೇ ತನ್ನ ಪೂಜಾಸ್ಥಾನವಾಗಿರುವುದು. ಆ ಪೂಜೆಯ ಆಶ್ಚರ್ಯಕಾರಕ ಕಾರಣವಿದೆ ।।೧೪೩೪।। ಸೊನ್ನೆಯ ಮುಂದೆ ಇನ್ನು ಕೋಟಿಗಟ್ಟಲೆ ಸೊನ್ನೆಗಳನ್ನು ಬರೆದರೂ ಯಾವ ಲೆಕ್ಕಕ್ಕೂ ಕಾರಣವಾಗದು. ಆದರೆ ಮೊದಲನೆಯ ಸೊನ್ನೆಯ ಬದಲು ಒಂದನ್ನು ಬರೆದರೆ ಮಾತ್ರ ಸಂಖ್ಯೆಯ ಗಣಿತವು ಕಲ್ಪನಾತೀತವಾಗುವುದು. ಈ ಗಣಿತವನ್ನು ಮಾಡಲು ದಣಿಯಬೇಕಾಗುವುದು ।।೧೪೩೫।। ಸೊನ್ನೆಯು ಚಿಗುರಿತೆಂದರೆ ಆಗ ಅದಕ್ಕೆ ಒಂದು ಸಂಖ್ಯೆ ಎನ್ನುವರು. ಒಂದಾಗಿ ಪೂರ್ಣವಾಗಿರಲು ಆತನು ಸಹಜವಾಗಿಯೇ ಪರಿಪೂರ್ಣನಾಗಿರುವನು ।।೧೪೩೬।। ಇದನ್ನು ಬಿಟ್ಟು ಸೊನ್ನೆಯ ಮುಂದೆ ಸೊನ್ನೆ ಬರೆಯಲು ಆಗ ಅದರ ಗಣಿತವನ್ನು ಏನೆಂದು ಮಾಡಲಾದೀತು! ನಿರಿಚ್ಛೆಗೆ ಇಚ್ಛೆಯು ನಿರ್ಮಾಣವಾದಾಗ ಮಾತ್ರ ತಾನು ತನ್ನ ಪೂಜೆಯನ್ನು ಮಾಡಲಾರಂಭಿಸುವನು ।।೧೪೩೭।। ಒಂದರಲ್ಲಿ ಒಂದನ್ನು ಕೂಡಿಸಿದರೆ ಅದು ಎರಡಾಗುವುದು. ಆದರೆ ಒಂದರಲ್ಲಿ ಒಂದನ್ನು ಕಳೆದರೆ ಕೇವಲ ಸೊನ್ನೆ ಮಾತ್ರ ಉಳಿಯುವುದು ।।೧೪೩೮।। ತನ್ನ ದೇವರು ತಾನೇ ಆಗಿರುವನು. ತನ್ನ ಪೂಜಾರಿಯು ತಾನೇ ಆಗಿರುವನು. ತನ್ನ ಭಕ್ತಿಯು ತಾನೇ ಆಗಿರುವನು. ಹೀಗಾದ ನಂತರ ಈ ಪೂಜೆಯ ಸತ್ಕಾರವು ಎಷ್ಟೊಂದು ಆಶ್ಚರ್ಯಕಾರಕವಾಗಿರುವುದು ಎಂಬುದನ್ನು ನೋಡಿರಿ ।।೧೪೩೯।। ಹೃದಯದಲ್ಲಿ ಚೈತನ್ಯರೂಪ ಆತ್ಮಾರಾಮನಿರುವನು ಎಂಬ ಭಾವನೆಯನ್ನು ಇಟ್ಟುಕೊಂಡು ತನ್ನಲ್ಲಿ ತಾನೇ ತದ್ರೂಪನಾಗಬೇಕು. ತದನಂತರ ತಾನು ಸ್ವತಃ ತನ್ನ ಯಾವ ಭೋಗಗಳನ್ನು ಭೋಗಿಸುವನೋ, ಅವುಗಳೆಲ್ಲವೂ ಸಹಜವಾಗಿಯೇ ಬ್ರಹ್ಮಾರ್ಪಣವಾಗುವುವು ।।೧೪೪೦।। ಆತನು ಸ್ವತಃ ತನ್ನ ಮುಖದಲ್ಲಿ ಅನ್ನದ ತುತ್ತನ್ನು ಹಾಕಲು, ಅದರಿಂದ ನಾನು ಸುಖೀಯಾಗುವೆನು ಮತ್ತು ಪರಮಪುರುಷನೂ ಕೂಡ ಸುಖಿಯಾಗುವನು. ಇದು ನನ್ನ ಉತ್ತಮವಾದ ಪೂಜೆಯಾಗಿರುವುದು ।।೧೪೪೧।। ಆತನು ಯಾವುದೇ ಭೋಗಗಳನ್ನು ಭೋಗಿಸಲಿ, ಅವುಗಳೆಲ್ಲವನ್ನೂ ನನಗೇನೇ ಅರ್ಪಿಸುವನು. ನಾನು ಆತನ ಆನಂದದಲ್ಲಿ ಆನಂದಿತನಾಗುವೆನು. ಆದ್ದರಿಂದ ಆ ಪೂಜೆಯು ಭಗವಂತನಿಗೆ ಮುಟ್ಟುವುದು ।।೧೪೪೨।। ನನ್ನ ಎಲ್ಲ ಪೂಜೆಗಳಲ್ಲಿ ಇದು ಪ್ರಮುಖ ಪೂಜೆಯಾಗಿರುವುದು. ಈ ಪೂಜೆಯನ್ನು ಮಾಡುವುದರಿಂದಲೇ ನನಗೆ ಅತ್ಯಂತ ಪ್ರೇಮದಿಂದ ಪೂಜಿಸಿದಂತಾಗುವುದು. ಪೂಜೆಯ ನಿಮಿತ್ತದಿಂದ ಆತನು ಗರುಡಧ್ವಜನಿಗೆ, ಅಧೋಕ್ಷಜನಿಗೆ ವಶ ಮಾಡಿಕೊಂಡನೆಂದು ನಿಶ್ಚಿತವಾಗಿ ತಿಳಿದುಕೊಳ್ಳಬೇಕು ।।೧೪೪೩।। ಇದು ನನ್ನ ಅತ್ಯಂತ ಪ್ರಿಯವಾದ ಪೂಜೆಯಾಗಿರುವುದು. ಇದು ಗರುಡಧ್ವಜನಿಗೆ ಪ್ರಿಯವಾಗಿರುವುದು. ಇಂತಹ ಭಕ್ತಿಯು ಅಧೋಕ್ಷಜನಿಗೆ ಪ್ರಿಯವಾಗುವುದು. ಆತನೇ ನನ್ನ ನಿಜವಾದ ಪ್ರಿಯ ಭಕ್ತನಾಗಿರುವನು ।।೧೪೪೪।। ಸಗುಣವಾಗಿರಲಿ ಅಥವಾ ನಿರ್ಗುಣವಾಗಿರಲಿ, ನಿಜವಾಗಿ ನೋಡಿದರೆ ಈ ಎರಡೂ ಸ್ವರೂಪಗಳು ನನ್ನದೇ ಆಗಿವೆ. ಆತನಲ್ಲಿ ತನ್ನ ಸರ್ವ ಭೋಗಗಳನ್ನು ಅರ್ಪಣೆ ಮಾಡುವುದೇ ನನ್ನ ನಿಜವಾದ ಪೂಜೆಯಾಗಿರುವುದು ।।೧೪೪೫।। ಈ ಯಾವ ಆತ್ಮಭೋಗದಿಂದ ಮಾಡಿದ ಭಗವಂತನ ಪೂಜೆ ಮತ್ತು ಸರ್ವ ಭೂತಗಳು ಎಲ್ಲವೂ ಆತ್ಮಸ್ವರೂಪವಾಗಿರುವುವು ಎಂದು ತಿಳಿದು ಅವರ ಏಕಾತ್ಮ ಭಾವದಿಂದ ಪ್ರೇಮದಿಂದ ಮಾಡಿದ ಪೂಜೆಯು ಈ ಎರಡೂ ಒಂದೇ ತರಹದ್ದಾಗಿರುವುವು ।।೧೪೪೬।।

ಅಕರಾವೇ ಪೂಜೇಚಾ ವಿವೇಕ । ಮಾಗಾ ಪುಢಾ ಏಕ ಏಕ । ಅಕರಾ ಇಂದ್ರಿಯಾ ಪಡೇ ಆಂಖ । ತೋಚಿ ಪೂಜಕ ಸರ್ವ ಭೂತಾ ॥೧೪೪೭॥ ಮಾಗಾ ಪುಢಾ ಏಕಏಕ ಕೀಜೇ । ತ್ಯಾ ನಾಂವ ಏಕಾದಶ ಮ್ಹಣಿಜೇ । ಹಾಚೀ ವಿವೇಕ ಜೇಣೇ ಜಾಣಿಜೇ । ತೇಣೇ ಪೂಜಿಜೇ ಸರ್ವ ಭೂತಾ ॥೧೪೪೮॥ ಆತ್ಮ ಭೋಗಸಮರ್ಪಣೇ ಪಾಹೀ । ವಸ್ತು ಜಾಣಿತಲೀ ಸ್ವದೇಹೀ । ತೇಚಿ ಸರ್ವ ಭೂತಾಂಚ್ಯಾ ಠಾಯೀ । ದೇಹೀವಿದೇಹೀ ಸಮಸಾಮ್ಯೇ ॥೧೪೪೯॥ ಸರ್ವ ಕ್ಷೇತ್ರಾಂತೇ ವಾಗವಿತಾ । ಮೀ ಕ್ಷೇತ್ರಜ್ಞು ಜಾಣ ತತ್ತ್ವತಾ । ದೇಖತಾಂಹೀ ವಿಷಮ ಭೂತಾ । ಜ್ಯಾಸೀ ಮಾಝೀ ಮಮತಾ ಮೋಡೇನಾ ॥೧೪೫೦॥ ಉಂಚ ನೀಚ ವಿಷಮತಾ ಭೂತಾ । ವಸ್ತೂಸೀ ನ ದೇಖೇ ವಿಷಮತಾ । ಸಮಸಾಮ್ಯೇ ಸಮಾನ ಸಮತಾ । ಸರ್ವ ಭೂತಾ ಸಮತ್ವೇ ॥೧೪೫೧॥ ಮಾಝಿಯಾ ಸಾಮ್ಯೇ ಸರ್ವಸಮತಾ । ತೇಚಿ ಪೂಜಾ ಸರ್ವ ಭೂತಾ । ತೋಚಿ ಪೂಜಕ ತತ್ತ್ವತಾ । ಜ್ಯಾಸೀ ವಿಷಮತಾ ಬಾಧೀನಾ ॥೧೪೫೨॥ ಜೋ ಭಾವಾರ್ಥೇ ಮಜಮಾಜೀ ಆಲಾ । ತ್ಯೆ ಸರ್ವ ಭೂತೇ ತೋಚಿ ಝಾಲಾ । ಸಹಜೇ ಸಮತ್ವ ಪಾವಲಾ । ಪೂಜೂ ಲಾಗಲಾ ಆತ್ಮತ್ವೇ ॥೧೪೫೩॥ ಪೂಜೂ ಜಾವೋ ರಂಕ ರಾವೋ । ಪರೀ ಪಾಲಟೇನಾ ಸಮಭಾವೋ । ನ ಖಂಡಿತಾ ಸಮತೇಚಾ ಠಾವೋ । ಯಥಾಯೋಗ್ಯ ಪಹಾ ಹೋ ಪೂಜಿತ ॥೧೪೫೪॥ ಏಕ ಯದುವಂಶಧ್ವಜಾ । ಸರ್ವಭೂತೀ ಮಾಝೀ ಪೂಜಾ । ಮಾಝೇನಿ ಸಮತ್ವೇ ನಿಪಜೇ ವೋಜಾ । ಯಾ ಅಕರಾಹೀ ಪೂಜಾ ಸಮತ್ವೇ ॥೧೪೫೫॥ ಇಯೇ ಅಕರಾಹಿ ಅಧಿಷ್ಠಾನೇ । ಮತ್ಪ್ರಾಪ್ತಿಕರೇ ಅತಿಪಾವನೇ । ಮ್ಯಾ ಸಾಂಗೀತಲೇನಿ ಅನುಸಂಧಾನೇ । ಪೂಜಾ ಕರಣೇ ಯಥಾವಿಧೀ ॥೧೪೫೬॥ ಮ್ಯಾ ಸಾಂಗೀತಲೇ ಜ್ಯಾ ನಿಗುತೀ । ಪೂಜಾ ಕರಾವೀ ತ್ಯಾಚೀ ಸ್ಥಿತೀ । ನ ಕಳೇ ತರೀ ಮಾಝೀ ಮೂರ್ತಿ । ಸರ್ವಾಹೀಪ್ರತಿ ಚಿಂತಾವೀ ॥೧೪೫೭॥

ಧಿಷ್ಣ್ಯೇಷ್ವೇಷ್ವಿತಿ ಮದ್ರೂಪಂ ಶಂಖಚಕ್ರಗದಾಂಬುಜೈಃ ।
ಯುಕ್ತಂ ಚತುರ್ಭುಜಂ ಶಾಂತಂ ಧ್ಯಾಯನ್ನರ್ಚೇತ್ಸಮಾಹಿತಃ ॥೪೬॥

ಅರ್ಥ:- ಈ ಯಾವ ಸರ್ವ ಸ್ಥಾನಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ ಧರಿಸಿರುವ ಚತುರ್ಭುಜ ಶ್ರೀ ಭಗವಾನನು ವಿರಾಜಮಾನನಾಗಿರುವನು. ಹೀಗೆ ಧ್ಯಾನವನ್ನು ಮಾಡುತ್ತ ಏಕಾಗ್ರ ಚಿತ್ತದಿಂದ ನನ್ನ ಪೂಜೆಯನ್ನು ಮಾಡಬೇಕು.

ಹನ್ನೊಂದನೆಯ ಪೂಜೆಯ ವಿಚಾರ ಮಾಡಿದರೆ ಅದರ ಹಿಂದೆ, ಮುಂದೆ ಒಂದೊಂದು ಸಂಖ್ಯೆ ಇರುವುವು. ಹನ್ನೊಂದು ಇಂದ್ರಿಯಗಳ ಸಂಖ್ಯೆಯು ಸಿದ್ಧಗೊಂಡರೆ ಅವನೇ ಸರ್ವ ಪ್ರಾಣಿಮಾತ್ರರ ಪೂಜಾರಿಯಾಗುವನು ॥೧೪೪೭॥ ಒಂದರ ನಂತರ ಒಂದು ಹೀಗೆ ಬರೆಯಲು ಅದಕ್ಕೆ ಹನ್ನೊಂದು ಸಂಖ್ಯೆ ಎಂದು ಹೇಳುವರು. ಈ ವಿವೇಕವು ಯಾರಿಗೆ ತಿಳಿಯುವುದೋ ಆತನೇ ಸರ್ವಭೂತಗಳನ್ನು ಪೂಜಿಸಿದಂತಾಗುವುದು ॥೧೪೪೮॥ ಯಾರು ತನ್ನ ಸರ್ವ ಆತ್ಮ ಭೋಗವನ್ನು ನನಗೆ ಅರ್ಪಿಸುವನೋ, ಆತನೇ ತನ್ನ ದೇಹದಲ್ಲಿನ ಆತ್ಮ ತತ್ತ್ವವನ್ನು ತಿಳಿಯುವನು. ಅದೇ ಪರಬ್ರಹ್ಮವು ಸರ್ವ ಪ್ರಾಣಿಮಾತ್ರರಲ್ಲಿ, ದೇಹದಲ್ಲಿ, ವಿದೇಹದಲ್ಲಿ, ಸಮಾನವಾಗಿ ಇರುವುದು ॥೧೪೪೯॥ ಸರ್ವ ದೇಹಗಳಿಗೆ ಚಾಲನೆ ನೀಡುವವನು ನಿಜವಾಗಿಯೂ ನಾನೇ ಕ್ಷೇತ್ರಜ್ಞನಾಗಿರುವೆನು. ಹೀಗೆ ನೀನು ತಿಳಿ. ಆದ್ದರಿಂದ ಭಿನ್ನ ಭಿನ್ನ ಪ್ರಾಣಿಗಳನ್ನು ನೋಡುತ್ತಿದ್ದರೂ ಆತನ ನನ್ನಲ್ಲಿರುವ ಪ್ರೇಮವು ಮುರಿಯದು ॥೧೪೫೦॥ ಉಚ್ಚ, ನೀಚ, ಇತ್ಯಾದಿ ವಿಷಮತೆಯು ಭೂತಮಾತ್ರಗಳಲ್ಲಿರುವುದು. ಆತ್ಮತತ್ತ್ವದಲ್ಲಿ ವಿಷಮತೆಯು ಇಲ್ಲವೇ ಇಲ್ಲ. ಹೀಗೆ ಯಾವನು ಮನ್ನಿಸುವನೋ, ಆತನಿಗೆ ಮಾತ್ರ ಸರ್ವಭೂತಗಳ ಸಮತ್ವವು ತಿಳಿಯುತ್ತಿರುವುದು ॥೧೪೫೧॥ ಆತನು ನನ್ನಲ್ಲಿ ಸಾಮ್ಯವನ್ನು ಪಡೆದಿರುವುದರಿಂದ ಆತನಿಗೆ ಸರ್ವಪ್ರಾಣಿ ಮಾತ್ರರಲ್ಲಿ ಸಮಾನತೆಯು ತೋರುವುದು. ನಿಜವಾಗಿಯೂ ಅದೇ ಸರ್ವ ಪ್ರಾಣಿಮಾತ್ರರ ಪೂಜೆಯಾಗಿರುವುದು. ಯಾರಿಗೆ ಭಿನ್ನ ಭಿನ್ನ ವಸ್ತುಗಳಲ್ಲಿ ವಿಷಮ ಭಾವವು ಬಾಧಿಸುವುದಿಲ್ಲವೋ, ಆತನೇ ನಿಜವಾಗಿ ಪೂಜೆಯನ್ನು ಮಾಡುವವನಾಗಿರುವನು ॥೧೪೫೨॥ ಯಾವನು ಭಕ್ತಿ ಭಾವದಿಂದ ನನ್ನಲ್ಲಿ ಏಕರೂಪನಾದಾಗಲೇ, ಅಲ್ಲಿ ಆತನೇ ಸ್ವತಃ ಸರ್ವ ಪ್ರಾಣಿಮಾತ್ರನಾಗಿಬಿಡುವನು. ಅರ್ಥಾತ್ ಆತನು ಸರ್ವರಲ್ಲಿ ಏಕರೂಪನಾದನು. ಬಹು ಪ್ರೀತಿಯಿಂದ ಆತ್ಮ ಭಾವನೆಯಿಂದ ಪೂಜೆಯನ್ನು ಮಾಡ ಹತ್ತಿದನು ಎಂದು ತಿಳಿದುಕೊ ॥೧೪೫೩॥ ಆತನು ಧನಿಕನಾಗಿರಲಿ, ಬಡವನಾಗಿರಲಿ, ಈ ಇಬ್ಬರನ್ನೂ ಪೂಜಿಸುತ್ತಿರುವನು. ಆತನ ಮನದಲ್ಲಿನ ಸಮಭಾವವು ಎಂದೆಂದಿಗೂ ಬದಲಾಗುವುದಿಲ್ಲ. ಆತನು ಸಮಭಾವದಿಂದ ಯಥಾಯೋಗ್ಯ ಪೂಜೆಯನ್ನು ಮಾಡುತ್ತಿರುವನು ॥೧೪೫೪॥ ಹೇ ಯದುವಂಶದಲ್ಲಿನ ಶ್ರೇಷ್ಠನಾಗಿರುವ ಉದ್ಧವನೇ, ಕೇಳು. ಸರ್ವಭೂತಗಳ ಪೂಜೆಯನ್ನು ಸಮತ್ವ ಭಾವದಿಂದ ಮಾಡುವುದೇ ನನ್ನ ಪೂಜೆಯಾಗಿರುವುದು. ಈ ಪ್ರಕಾರವಾಗಿ ನನ್ನಲ್ಲಿ ಏಕರೂಪವಾಗುತ್ತಲೇ ಪ್ರೇಮವು ನಿರ್ಮಾಣವಾಗುವುದು. ಈ ಹನ್ನೊಂದು ರೂಪಗಳ ಪೂಜೆಯು ಸಮತ್ವ ರೂಪಗಳದ್ದೇ ಆಗಿರುವುದು ॥೧೪೫೫॥ ಈ ಯಾವ ಹನ್ನೊಂದು ಪೂಜಾಸ್ಥಾನಗಳು ಅತ್ಯಂತ ಪವಿತ್ರವಾಗಿದ್ದು, ನನ್ನ ಪ್ರಾಪ್ತಿಯನ್ನು ಮಾಡಿಕೊಡುವಂತಹದ್ದಾಗಿವೆ. ಇದನ್ನು ನಾನು ನಿನಗೆ ಹೇಳಿದೆನು. ನಾನು ಹೇಳಿದ ಪ್ರಕಾರದಂತೆ ಶಾಸ್ತ್ರ ವಿಧಿಯಂತೆ ಪೂಜೆಯನ್ನು ಮಾಡಬೇಕು ॥೧೪೫೬॥ ನಾನು ಹೇಳಿರುವ ಪ್ರಕಾರದಂತೆ ಪೂಜೆಯನ್ನು ಮಾಡುವ ವಿಷಯದಲ್ಲಿ ಸರಿಯಾಗಿ ತಿಳುವಳಿಕೆಯು ಆಗದಿದ್ದಲ್ಲಿ ಸರ್ವತ್ರವೂ ನನ್ನ ಪ್ರತಿಮೆಯನ್ನೇ ಕಲ್ಪಿಸಿ ಯಾವಾಗಲೂ ಪ್ರೇಮಭಾವದಿಂದ ಅದರದೇ ಚಿಂತನೆಯನ್ನು ಮಾಡಬೇಕು ॥೧೪೫೭॥

ನಿರ್ಗುಣಾಹೂನಿ ಸಗುಣ ನ್ಯೂನ । ಮ್ಹಣೇ ತೋ ಕೇವಳ ಮೂರ್ಖ ಜಾಣ । ಸಗುಣ ನಿರ್ಗುಣ ದೋನೀ ಸಮಾನ । ನ್ಯೂನ ಪೂರ್ಣ ಅಸೇನಾ ॥೧೪೫೮॥ ವಿಘುರಲೇ ತೇ ತೂಪ ಹೋಯೇ । ಥಿಜಲೇ ತ್ಯಾಪರೀಸ ಗೋಡ ಆಹೇ । ನಿರ್ಗುಣಾಪರಿಸ ಸಗುಣೀ ಪಾಹೇ । ಅತಿಲವಲಾಹೇ ಸ್ವಾನಂದೂ ॥೧೪೫೯॥ ನಿರ್ಗುಣಾಚಾ ಬೋಧ ಕಠಿಣ । ಮನಬುದ್ಧಿವಾಚೇ ಅಗಮ್ಯ ಜಾಣ । ಶಾಸ್ತ್ರಾಂಸೀ ನ ಕಳೇ ಉಣಖೂಣ । ವೇದೀ ಮೌನ ಧರಿಯೇಲೇ ॥೧೪೬೦॥ ವಾರಾ ಉಮಾಣಾವಾ ವಾವೇ । ಆಕಾಶ ಆಕಳಾವೇ ಖೇವೇ । ಭಾವನಾ ಭಾಂಬಾವಲೀ ಧಾಂವೇ । ಕಾಯ ಕರಾವೇ ಸ್ಫುರೇನಾ ॥೧೪೬೧॥ ತೈಶೀ ಸಗುಣ ಮೂರ್ತಿ ನವ್ಹೇ ಜಾಣ । ಸುಲಭ ಆಣಿ ಸುಲಕ್ಷಣ । ದೇಖತಾ ಜಾಯ ಭೂಕತಹಾನ । ನಿವತಾಹೇ ಮನ ಸಪ್ರೇಮೇ ॥೧೪೬೨॥ ಜೋ ನಿತ್ಯಸಿದ್ಧ ಸಚ್ಚಿದಾನಂದೂ । ಪ್ರಕೃತಿಪರೂ ಪರಮಾನಂದೂ । ಸಗುಣ ಜಾಲಾ ಜೀ ಗೋವಿಂದೂ । ಸ್ವಾನಂದಕಂದೂ ಸ್ವಲೀಳಾ ॥೧೪೬೩॥ ಸಾಖರೇಚೀ ಗೋಡೀ ವಾಖಾಣಿಲೀ । ತಿಚೀ ನಾಬದೇಚೀ ಭೇಲೀ ಕೇಲೀ । ಗೋಡಿಯೇ ಅಧಿಕ ಶೋಭಾ ಆಲೀ । ತೈಶೀ ಮೂರ್ತಿ ಝಾಲೀ ಸಾಕಾರ ॥೧೪೬೪॥ ಲಾವೂನಿಯಾ ಕಸವಟೀ । ಉತ್ತಮ ಸುವರ್ಣಾಚೀ ಖೋಟೀ । ಬಾಂಧಲ್ಯಾ ನವವಧೂಚ್ಯಾ ಕಂಠೀ । ತೇಣೇ ತೇ ಗೋಮಟೀ ದಿಸೇ ಕಾಯ ॥೧೪೬೫॥ ತ್ಯಾಂಚೇಚ ಕರೂನಿಯಾ ಭೂಷಣೇ । ಅಂಗೀ ಪ್ರತ್ಯಂಗೀ ಲೇವಿತಾ ಲೇಣೇ । ನವವಧೂ ಅತ್ಯಂತ ಶೋಭಲೀ ತೇಣೇ । ನಿಂಬಲೋಣೇ ಉತರಿತೀ ॥೧೪೬೬॥ ತೈಸೇ ಜೇ ನಿರ್ಗುಣ ನಿರ್ವಿಕಾರ । ತ್ಯಾಚೀ ಸಗುಣಮೂರ್ತಿ ಸುಕುಮಾರ । ಚಿನ್ಮಾತ್ರೈಕ ಅತಿಸುಂದರ । ಮನೋಹರ ಸ್ವಲೀಲಾ ॥೧೪೬೭॥ ಘವಘವಿತ ಘನಸಾಂವಳಾ । ಮುಕುಟ ಕುಂಡಲೇ ಮೇಖಳಾ । ಕಂಠೀ ಕೌಸ್ತುಭ ವನಮಾಳಾ । ಸೋನಸಳಾ ಝಳಕತ ॥೧೪೬೮॥ ಆಧೀಂಚ ತೋ ಅತಿಸಾಂವಳಾ । ವರೀ ಟಿಳಕ ರೇಖಿಲಾ ಪಿಂವಳಾ । ಆರಕ್ತಪ್ರಾಂತ ದೋಹೀ ಡೋಳಾ । ಕಮಳದಳಾ ಲಾಜವೀ ॥೧೪೬೯॥ ಚಿನ್ಮಾತ್ರೀಚೇ ದೇಖಣೇಪಣ । ತ್ಯಾ ಡೋಳ್ಯಾ ಆಲೇ ಶರಣ । ಸೈರಾಟ ಹಿಂಡತಾ ಶಿಣಲಾ ಪವನ । ಹರೀಚೇ ಘ್ರಾಣ ಠಾಕಿಲೇ ॥೧೪೭೦॥

ನಿರ್ಗುಣಕ್ಕಿಂತಲೂ ಸಗುಣವು ಗೌಣವೆಂದು ಕೆಲವರು ಹೀಗೆ ಹೇಳುವರು. ಅವರು ಮೂರ್ಖರು ಎಂದು ತಿಳಿಯಬೇಕು. ಸಗುಣ ಮತ್ತು ನಿರ್ಗುಣ ಇವು ಸಮಾನವಾಗಿರುವುವು. ಅವುಗಳಲ್ಲಿ ಒಂದು ಕಡಿಮೆ ಇನ್ನೊಂದು ಹೆಚ್ಚಿಗೆ ಹೀಗೆ ಇರುವುದೇ ಇಲ್ಲ ॥೧೪೫೮॥ ತುಪ್ಪವು ಕರಗಿ ನೀರಾಗಿದ್ದರೂ ಅದು ತುಪ್ಪವೇ ಆಗಿರುವುದು. ಅದೇ ತುಪ್ಪವು ಹೆಪ್ಪುಗಟ್ಟಿ ಗಟ್ಟಿಯಾಗಲು ಅದು ಹೆಚ್ಚಿಗೆ ರುಚಿಯಾಗುವುದು. ಅದರಂತೆ ನಿರ್ಗುಣಕ್ಕಿಂತಲೂ ಸಗುಣವು ಸ್ವರೂಪದಿಂದಲೇ ಮನಸ್ಸಿಗೆ ಬಹು ಬೇಗನೇ ಆನಂದವಾಗುವುದು ॥೧೪೫೯॥ ನಿರ್ಗುಣದ ಬೋಧೆಯಾಗುವುದು ಬಹಳ ಕಠಿಣವಾಗಿರುವುದು. ಕಾರಣ ಮನ, ಬುದ್ಧಿ ಮತ್ತು ವಾಣೀ ಇವು ನಿರ್ಗುಣವನ್ನು ತಿಳಿಯಲಾರವು. ಶಾಸ್ತ್ರಗಳಿಗೂ ಇದರ ಲಕ್ಷಣವು ತಿಳಿಯುವುದಿಲ್ಲ. ವೇದವೂ ಸಹ ನಿರ್ಗುಣ ವಿಷಯಕ್ಕೆ ಮೌನಧರಿಸಿರುವುದು ॥೧೪೬೦॥ ಗಾಳಿಯನ್ನು ಅಳೆಯುವ ಪ್ರಯತ್ನ ಮಾಡಿದಂತೆ, ಎರಡು ಕೈಗಳ ಸುತ್ತಳತೆಯಿಂದ ಆಕಾಶವನ್ನು ಹಿಡಿಯುವಂತೆ, ಈ ಪ್ರಕಾರವಾಗಿ ನಿರ್ಗುಣದ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಚಿತ್ತವು ಭ್ರಮೆಗೊಳ್ಳುವುದು. ನಾಲ್ಕೂ ಕಡೆಗಳಲ್ಲಿಯೂ ಮನ ಬಂದಂತೆ ಧಾವಿಸುವುದು ॥೧೪೬೧॥ ಆದರೆ ಸಗುಣ ಮೂರ್ತಿಯು ಹಾಗಿರುವುದಿಲ್ಲ. ಅದು ಸುಲಭ ಮತ್ತು ಸುಲಕ್ಷಣವಾಗಿರುವುದರಿಂದ ಮೂರ್ತಿಯನ್ನು ನೋಡಿದಾಕ್ಷಣವೇ ಹಸಿವೆ ನೀರಡಿಕೆಗಳು ಇಲ್ಲವಾಗುವುವು. ಹೃದಯದಲ್ಲಿ ಪ್ರೇಮವು ಪ್ರಕಟವಾಗಿ ಮನವು ಶಾಂತವಾಗುವುದು ॥೧೪೬೨॥ ಯಾವುದು ನಿತ್ಯ ಸಿದ್ಧ, ಸಚ್ಚಿದಾನಂದ, ಪ್ರಕೃತಿಯಿಂದ ಭಿನ್ನ ಮತ್ತು ಪರಮಾನಂದ ಸ್ವರೂಪ, ಸ್ವಾನಂದದ ಮೂಲಕಂದನಾಗಿರುವ ಗೋವಿಂದನು ತನ್ನ ಸಹಜ ಲೀಲೆಯಿಂದ ಸಗುಣನಾದನು ॥೧೪೬೩॥ ಸಕ್ಕರೆಯ ಸಿಹಿಯು ಸರ್ವತ್ರವೂ ಪ್ರಸಿದ್ಧವಾಗಿರುವುದು. ಅದನ್ನು ಕಲ್ಲುಸಕ್ಕರೆಯಾಗಿ ಪರಿವರ್ತಿಸಲು ಅದು ಅಧಿಕ ಸಿಹಿ, ರುಚಿಯಾಗುವುದು. ಅದರಂತೆ ಸಗುಣ ಮೂರ್ತಿಯ ಆನಂದವು ಅಧಿಕವಾಗಿರುವುದು ॥೧೪೬೪॥ ತಿಕ್ಕಿನೋಡಿ ಪರೀಕ್ಷಿಸಿದ ಬಂಗಾರದ ಗಟ್ಟಿಯನ್ನು ನವವಧುವಿನ ಕೊರಳಿನಲ್ಲಿ ಕಟ್ಟಿದರೆ ಅದರಿಂದ ಆ ನವವಧುವಿನ ಶೋಭೆಯು ಬರುವುದೇ? ಸಾಧ್ಯವಿಲ್ಲ ॥೧೪೬೫॥ ಆದರೆ ಅದೇ ಬಂಗಾರದ ಗಟ್ಟಿಯಿಂದ ಕಲಾತ್ಮಕವಾಗಿ ಆಭರಣಗಳನ್ನು ತಯಾರಿಸಿ ಅವುಗಳನ್ನು ಮಸ್ತಕ, ಕಂಠ, ಕೈ ಇತ್ಯಾದಿ ಭಿನ್ನ ಭಿನ್ನ ಅವಯವಗಳಿಗೆ ತೊಡಿಸಲು, ಆಗ ಆ ನವವಧುವಿನ ಸೌಂದರ್ಯವು ಅಧಿಕವಾಗಿ ಎದ್ದು ಕಾಣುವುದು. ಆಗ ಜನರು ಆಕೆಯ ಮೇಲಿನಿಂದ ನಿವಾಳಿ ತೆಗೆದು ಒಗೆಯುವರು ॥೧೪೬೬॥ ಅದರಂತೆಯೇ ಯಾವ ನಿರ್ಗುಣ ನಿರಾಕಾರವಾಗಿರುವುದೋ ಅದರಿಂದಲೇ ತಮ್ಮ ತಮ್ಮ ಅಪೇಕ್ಷೆಯ ಪ್ರೇಮದಂತೆ ನಯನರಮ್ಯ, ಸುಕುಮಾರ, ಸುರೇಖ, ಕೇವಲ ಜ್ಞಾನಸ್ವರೂಪ, ಮನೋರಮ ಹೀಗೆ ಸಗುಣ ಮೂರ್ತಿಯು ತನ್ನ ಲೀಲೆಯಿಂದ ನಿರ್ಮಾಣವಾಗುವುದು ॥೧೪೬೭॥ ಯಾವ ದಿವ್ಯವಾಗಿರುವ ಶ್ಯಾಮವರ್ಣ, ಮಸ್ತಕಕ್ಕೆ ಕಿರೀಟ, ಕಿವಿಗಳಲ್ಲಿ ಕುಂಡಲಗಳು, ನಡುವಿಗೆ ನಡುಪಟ್ಟಿ, ಕೊರಳಲ್ಲಿ ಕೌಸ್ತುಭ ಮತ್ತು ವನಮಾಲೆ, ಪೀತ ಪಿತಾಂಬರವು, ಈ ಎಲ್ಲವೂ ಪ್ರಕಾಶಿಸುತ್ತಿರುವುವು ॥೧೪೬೮॥ ಮೊದಲೇ ಸುಂದರ ಮೇಘವರ್ಣ ಮೂರ್ತಿಯು, ಅದರಲ್ಲಿ ಕೇಶರ ಗಂಧದ ತಿಲಕವನ್ನು ಹಣೆಗೆ ಲೇಪಿಸಿದ, ನೇತ್ರಗಳಲ್ಲಿ ಕಮಲ ದಳಗಳು ನಾಚುವಂತೆ ಆರಕ್ತ ತೇಜವಿರುವುದು ॥೧೪೬೯॥ ಚಿನ್ಮಾತ್ರದಲ್ಲಿನ ಸೌಂದರ್ಯವು ಯಾವ ಈ ನೇತ್ರಗಳಿಗೆ ಶರಣಾಗಿರುವಂತೆ ತೋರುವುದು. ನಾಲ್ಕೂ ದಿಕ್ಕುಗಳಿಗೆ ಧಾವಿಸುತ್ತಿರುವ ಆ ಯಾವ ಗಾಳಿಯು ಶ್ರೀ ಹರಿಯ ಘ್ರಾಣದಲ್ಲಿ ಬಂದು ನಿಂತಿತು ॥೧೪೭೦॥

ಜೈಶಾ ಓಂಕಾರಾ ಮಾಜೀ ಶ್ರುತೀ । ತೈಶಾ ಮುಖಾಮಾಜೀ ದಂತಪಂಕ್ತೀ । ಚೌಕೀಚೇ ಚಾರೀ ಝಳಕತೀ। ಸಚ್ಚಿದ್ದೀಪ್ತೀ ಸೋಲೀವ ।।೧೪೭೧।। ಜೇವೀ ಜೀವ ಶಿವ ಭಿನ್ನಪಣೇ । ತೇವೀ ಅಧ ಊರ್ಧ್ವ ಅಧರ ದೋನ್ಹೀ। ಹರಿಅಂಗೀ ಮಿನಲೇ ಮಿಳಣೇ । ಸಮಾನಪಣೇ ಸಮತ್ವೇ ।।೧೪೭೨।। ದೇಖೋನಿಯಾ ಕೃಷ್ಣವದನ । ಚಂದ್ರಮಾ ಕೃಷ್ಣಪಕ್ಷೀ ಕ್ಷೀಣ । ತೋ ತಂವ ಪೂರ್ಣಿಮೇಸೀ ಪೂರ್ಣ । ಹಾ ಸದಾ ಸಂಪೂರ್ಣ ವದನೇಂದೂ ।।೧೪೭೩।। ದಿವಸಾ ಚಂದ್ರಾಚೀ ಕ್ಷೀಣ ಪ್ರಭಾ । ವದನೇಂದೂಚೀ ನವಲಶೋಭಾ । ಲೋಪೋನಿ ಚಂದ್ರಸೂರ್ಯಪ್ರಭಾ। ಸ್ವಯೇ ಸ್ವಯಂಭಾ ಪ್ರಕಾಶ ।।೧೪೭೪।। ತೋ ಆರ್ತಚಕೋರಾ ಅಮೃತಪಾನ । ಮುಮುಕ್ಷು ಚಾತಕಾ ಸ್ವಾನಂದ ಘನ । ಸಗುಣಪಣೇ ನಾರಾಯಣ । ಭೂಷಣಾ ಭೂಷಣ ತೋ ಝಾಲಾ ।।೧೪೭೫।। ಚಹೂ ಖಾಣೀಚ್ಯಾ ಕ್ರಿಯಾ ವಿವಿಧಾ । ತೈಶಾ ಚಹೂ ಭುಜೇಂಚ್ಯಾ ಚಾರೀ ಆಯುಧಾ । ಸಗುಣ ದೇಖೋನಿ ಗೋವಿಂದಾ । ವೇದ ನಿಜಬೋಧಾ ಆಯುಧೇ ಝಾಲೇ ।।೧೪೭೬।। ದೇವೋ ನ ಕಳೇ ಶ್ರುತೀಸೀ । ಲಾಜ ಆಲೀ ಹೋತೀ ವೇದಾಂಸೀ । ಜಗೀ ಮಿರವಾವಯಾ ಪ್ರತಾಪಾಸೀ । ಆಯುಧೇ ಹರೀಪಾಸೀ ತೇ ಝಾಲೇ ।।೧೪೭೭।। ಸಾಮವೇದ ಝಾಲಾ ಶಂಖ। ಯಜುರ್ವೇದ ಚಕ್ರ ದೇಖ । ಅಥರ್ವಣ ಗದಾ ತಿಖ । ಕಮಳ ಸಾಜುಕ ಋಗ್ವೇದೂ ।।೧೪೭೮।। ಸಾಕಾರಪಣೇ ಸಚ್ಚಿದಾನಂದಾ । ಶಂಖ ಚಕ್ರ ಪದ್ಮ ಗದಾ । ಚಹೂ ಕರೀ ಚಹೂ ವೇದಾ । ನಿವವೀ ಸದಾ ನಿಜಾಂಗೇ ।।೧೪೭೯।। ಜಗೀ ಮಿರವಾವಯಾ ಉಪನಿಷದೇ । ಝಾಲೀ ಬಾಹುಭೂಷಣೇ ಅಂಗದೇ । ಕರೀ ಕಂಕಣೇ ಅತಿಮುದ್ದೇ । ಸೋಹಂ ಶಬ್ದೇ ರುಣಝುಣತೀ ।।೧೪೮೦।। ನಖ ಕೇಶ ಅಂಗುಲಿಕಾ । ಕರಾಗ್ರೀ ಜಡಿತ ಮುದ್ರಿಕಾ । ತ್ರಿಕೋಣ ಷಟ್‌ಕೋಣೆಯಾ ದೇಖಾ । ಉಪಾಸಕಾ ವಿಧಿಪೀಠ ।।೧೪೮೧।। ಅಗಮ್ಯ ತೇಜ ಹೃದಯೀಚ್ಯಾ ಪದಕಾ । ಗುಣತ್ರಿವಳೀ ಉದರೀ ದೇಖಾ । ಮಧ್ಯೇ ಕಳಸೂ ನೇಟಕಾ । ಕ್ಷುದ್ರ ಘಂಟಿಕಾ ಮೇಖಳೇ ।।೧೪೮೨।। ಕಾಂತೀವ ಮರಕತಸ್ತಂಭ ಜಾಣ । ತೈಸೇ ಶೋಭತಾತೀ ದೋನ್ಹೀ ಚರಣ । ತೇ ಕೇವಳ ಅಚೇತನ । ಹೇ ಸಚೇತನ ಹರಿಅಂಗೀ ।।೧೪೮೩।।

ಓಂಕಾರದಲ್ಲಿ ಶ್ರುತಿಗಳಿರುವಂತೆ ಶ್ರೀಹರಿಯ ಮುಖದಲ್ಲಿ ದಂತಪಂಕ್ತಿಯು ಶೋಭಾಯಮಾನವಾಗಿ ಕಾಣುತ್ತಿರುವುವು. ಮುಂದಿನ ನಾಲ್ಕು ದಂತಗಳು ತಮ್ಮ ಸ್ವಾಭಾವಿಕ ತೇಜದಿಂದ ಸಚ್ಚಿತ್ಪ್ರಕಾಶದಂತೆ ಝಳಪಿಸುತ್ತಿರುವುವು ।।೧೪೭೧।। ಯಾವ ಪ್ರಕಾರವಾಗಿ ಜೀವ ಮತ್ತು ಶಿವ ಇವರು ಭಿನ್ನತ್ವದಿಂದ ಏಕತ್ರವಿರುವಂತೆ ಕೆಳಗಿನ, ಮೇಲಿನ ತುಟಿಗಳು ಶ್ರೀಹರಿಯ ಅಂಗದಲ್ಲಿ ಸಮಾನಭಾವದಿಂದ ಮತ್ತು ಸಮಾನಗುಣದಿಂದ ಕೂಡಿಕೊಂಡಿರುವುವು ।।೧೪೭೨।। ಶ್ರೀಕೃಷ್ಣನ ಮುಖಮುದ್ರೆಯನ್ನು ನೋಡಿರುವುದರಿಂದಲೇ ಚಂದ್ರನು ಕೃಷ್ಣಪಕ್ಷದಲ್ಲಿ ಕ್ಷೀಣನಾಗುತ್ತಿರುವನು. ಆತನು ಕೇವಲ ಪೌರ್ಣಿಮೆಯ ದಿನದಲ್ಲಿ ಮಾತ್ರ ಪರಿಪೂರ್ಣನಾಗಿರುವನು. ಆದರೆ ಈ ಯಾವ ಕೃಷ್ಣನ ಮುಖಚಂದ್ರವು ಸದಾ ಸರ್ವಕಾಲದಲ್ಲಿಯೂ ಪರಿಪೂರ್ಣ ರೂಪದಲ್ಲಿರುವುದು ।।೧೪೭೩।। ಚಂದ್ರನ ತೇಜವು ಹಗಲಿನಲ್ಲಿ ಸಪ್ಪಗಾಗುವುದು. ಆದರೆ ಕೃಷ್ಣಮುಖದ ಶೋಭೆಯು ಅವರ್ಣನೀಯವಾಗಿರುವುದು. ಚಂದ್ರ ಸೂರ್ಯರ ತೇಜವನ್ನು ಲೋಪಗೊಳಿಸಿ, ಆತನು ಸದಾ ಸರ್ವಕಾಲದಲ್ಲಿಯೂ ಸ್ವಯಂ ಪ್ರಕಾಶಿತನಾಗಿರುವನು ।।೧೪೭೪।। ಆ ಯಾವ ನಾರಾಯಣನು ದರ್ಶನಕ್ಕೆ ಉತ್ಸುಕರಾದ ಭಕ್ತರೂಪ ಚಕೋರಗಳಿಗೆ ಅಮೃತವನ್ನು ಕುಡಿಸುವನು. ಮುಮುಕ್ಷುರೂಪ ಚಾತಕಗಳಿಗೆ ಸ್ವಾನಂದ ಮೇಘದ ಮಳೆಯಿಂದ ತೃಪ್ತಪಡಿಸುವನು. ನಾರಾಯಣನು ಸಗುಣ ರೂಪದಿಂದ ಭೂಷಣಕ್ಕೆ ಭೂಷಣನಾಗಿರುವನು ।।೧೪೭೫।। ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ, ಈ ನಾಲ್ಕು ಖಾಣೆಗಳು ಅನೇಕ ಪ್ರಕಾರಗಳ ಕ್ರಿಯೆಗಳನ್ನು ಮಾಡುವುವು. ಶ್ರೀಕೃಷ್ಣನು ಸಗುಣರೂಪವನ್ನು ಧರಿಸಿರುವುದನ್ನು ನೋಡಿ ನಾಲ್ಕೂ ವೇದಗಳು ಆತ್ಮಜ್ಞಾನಕ್ಕಾಗಿ ಆ ನಾಲ್ಕೂ ಕೈಗಳ ಆಯುಧಗಳಾದವು ।।೧೪೭೬।। ಪರಬ್ರಹ್ಮ ಸ್ವರೂಪವು ತಿಳಿಯಲಾರದ್ದಕ್ಕೆ ವೇದಗಳಿಗೆ ನಾಚಿಕೆಯುಂಟಾಯಿತು. ಆಗ ಆ ಯಾವ ವೇದಗಳು ತಮ್ಮ ಪರಾಕ್ರಮವನ್ನು ಜಗತ್ತಿಗೆ ತೋರಿಸುವುದಕ್ಕಾಗಿ ಶ್ರೀಹರಿಯ ಕೈಗಳಲ್ಲಿ ಆಯುಧಗಳಾದವು ।।೧೪೭೭।। ಸಾಮವೇದವು ಶಂಖವಾಯಿತು, ಯಜುರ್ವೇದವು ಚಕ್ರವಾಯಿತು, ಅಥರ್ವವೇದವು ತೀಕ್ಷ್ಣವಾದ ಗದೆಯಾಯಿತು, ಮತ್ತು ಋಗ್ವೇದವು ಕೋಮಲವಾದ ಪದ್ಮವಾಯಿತು ।।೧೪೭೮।। ಸಚ್ಚಿದಾನಂದನು ದೇಹಧಾರಿಯಾಗಿ ಆತನು ತನ್ನ ನಾಲ್ಕೂ ಕೈಗಳಲ್ಲಿ ನಾಲ್ಕು ವೇದಗಳನ್ನು ಶಂಖ, ಚಕ್ರ, ಗದಾ, ಪದ್ಮ ಈ ರೂಪದಲ್ಲಿ ಧರಿಸಿದನು. ತಾನೇ ಸ್ವತಃ ಅವುಗಳನ್ನು ಶಾಂತಗೊಳಿಸಿದನು ।।೧೪೭೯।। ಆಗ ಉಪನಿಷತ್‌ಗಳು ತಾವು ಜಗತ್ತಿನಲ್ಲಿ ಮೆರೆಯುತ್ತಿರಬೇಕೆಂಬ ಭಾವನೆಯಿಂದ ದೇವರ ಬಾಹು ಭೂಷಣೆ ಮತ್ತು ಬಾಹು ಬಂಧಗಳಾದವು ಮತ್ತು ಕೈಗಳಲ್ಲಿನ ಕಂಕಣಗಳು ಲಖಲಖಿತವಾಗಿ ಹೊಳೆಯುತ್ತ ಸೋಹಂ ಶಬ್ದದಿಂದ ರುಣು ಝುಣು ನಾದ ಮಾಡಿದವು ।।೧೪೮೦।। ಹಾಗೆಯೇ ಆತನ ನಖ, ರೋಮ, ಬೆರಳು ಮತ್ತು ಕೈಬೆರಳುಗಳಲ್ಲಿರುವ ಆ ಯಾವ ತ್ರಿಕೋಣ, ಷಟ್‌ಕೋಣ ಇತ್ಯಾದಿ ಆಕಾರವುಳ್ಳ ರತ್ನಜಡಿತ ಉಂಗುರಗಳು ಇವು ಉಪಾಸಕರ ವಿಧಿಪೀಠಗಳಾದವು ।।೧೪೮೧।। ಹೃದಯದ ಮೇಲೆ ತೂಗಾಡುತ್ತಿರುವ ಕೊರಳಿನಲ್ಲಿನ ಹಾರದ ಪದಕದ ತೇಜವು ಅತಿಶಯ ಅಲೌಕಿಕವಾಗಿರುವುದು. ಹೊಟ್ಟೆಯ ಮೇಲೆ ತ್ರಿಗುಣರೂಪ ಮೂರು ಗೆರೆಗಳು ಮೂಡಿರುವುವು. ನಡುವಿನಲ್ಲಿನ ನಡುಪಟ್ಟಿಯು ಚಿಕ್ಕ ಚಿಕ್ಕ ಗಿಲಗಂಟೆಗಳು ನಡುವೆ ಸುಂದರವಾದ ಕಳಸ ರೂಪವಿರುವುವು ।।೧೪೮೨।। ನಡುವಿನ ಕೆಳಗೆ ಉತ್ತಮವಾದ ಮರದಿಂದ ಕೆತ್ತಿಸಿದ ಸುಂದರ ಖಂಬಗಳಂತೆ ಎರಡೂ ಚರಣಗಳು ಶೋಭಾಯಮಾನವಾಗಿ ಕಾಣುವುವು. ಮರದಿಂದ ತಯಾರಿಸಿದ ಖಂಬಗಳು ನಿರ್ಜೀವವಾಗಿರುವುವು. ಆದರೆ ಈ ಕಾಲುಗಳು ಶ್ರೀಹರಿಯ ಅವಯವಗಳಾಗಿರುವುದರಿಂದ ಸಚೇತನವಾಗಿರುವುವು ।।೧೪೮೩।।

ಧ್ವಜ ವಜ್ರ ಅಂಕುಶ ಊರ್ಧ್ವರೇಖಾ । ದೋನ್ಹೀ ಪಾಯೀ ಪದ್ಮೇ ದೇಖಾ । ಯವಾಂಕಿತ ಸಾಮುದ್ರಿಕಾ । ಅತಿನೇಟಕಾ ಪದಬಂಧೂ ।।೧೪೮೪।। ಆರಕ್ತ ರಂಗ ಚರಣತಳಾ । ವರೀಲ ಘನಸಾಂವಳೀ ಕಳಾ । ನಭೀ ಇಂದ್ರಧನುಷ್ಯಮೇಳಾ । ತೈಸೀ ಲೀಳಾ ಹರಿಚರಣೀ ।।೧೪೮೫।। ಸಗುಣ ದೇಖೋನಿಯಾ ಜಗನ್ನಾಯಕಾ । ದಶದಿಶಾಂಸೀ ಚರಣೀ ಆವಾಂಕಾ । ಪಾವಾವಯಾ ನಿಜಸುಖಾ । ದಶಾಂಗಲಿಕಾ ಹೋಊನಿ ಠೇಲ್ಯಾ ।।೧೪೮೬।। ಚಂದ್ರ ಕೃಷ್ಣಪಕ್ಷೀ ಕ್ಷೀಣ । ತೇಣೇ ಠಕಿಲೇ ಹರಿಚರಣ । ನಖೀ ಚಂದ್ರ ಜಡೋನಿಯಾ ಜಾಣ । ಪರಮ ಪಾವನ ತೋ ಝಾಲಾ ।।೧೪೮೭।। ಹೇ ಜಾಣೋನಿ ತ್ರಿನಯನೇ । ಚಂದ್ರಮಾ ಮಸ್ತಕೀ ಧರಣೇ । ಪಾಯವಣೀ ಮಾಥಾ ವಾಹಣೇ । ಜಗ ಉದ್ಧರಣೇ ತೇಣೇ ಜಳೇ ।।೧೪೮೮।। ಸಗುಣ ದೇವೋ ದೇಖೋನಿ ಪಾಹೀ । ಚಾರೀ ಮುಕ್ತಿ ಲಾಗಲ್ಯಾ ಪಾಯೀ । ಯಾಲಾಗಿ ಸಂತ ಚರಣಾಂಚ್ಯಾ ಠಾಯೀ । ತತ್ಪರ ಪಾಹೀ ಸರ್ವದಾ ।।೧೪೮೯।। ಸಲೋಕತಾ ಸಮೀಪತಾ । ದೋಹೀ ಪಾಯೀ ವಾಂಕೀ ಗರ್ಜತಾ । ಅಂದೂ ಝಾಲೀ ಸ್ವರೂಪತಾ । ಸಾಯುಜ್ಯತಾ ತೋಡರು ।।೧೪೯೦।। ಜ್ಯಾ ತೋಡರಾಚಾ ಧಾಕ ಪಾಹೀ । ಅಹಂಗರ್ವಿತ ಅಸುರ ವಾಹತೀ ದೇಹೀ । ಸರ್ವ ಸುಖ ತೇ ಹರೀಚ್ಯಾ ಠಾಯೀ । ತ್ಯಾಂಚ್ಯಾ ಪಾಯೀ ಸಮಾಧೀ ।।೧೪೯೧।। ಧೈರ್ಯ ವೀರ್ಯ ಉದಾರಕೀರ್ತೀ । ಗುಣಗಾಂಭೀರ್ಯ ಶೌರ್ಯ ಖ್ಯಾತೀ । ಯಾಂಸೀ ಕಾರಣ ಮಾಝೀ ಸಗುಣ ಮೂರ್ತೀ । ಜಾಣ ನಿಶ್ಚಿತೀ ಉದ್ಧವಾ ।।೧೪೯೨।। ಮಾಝೀ ಯೇ ಮೂರ್ತಿಚೇನಿ ದರ್ಶನೇ । ಹೋತ ಡೋಳ್ಯಾ ಪಾರಣೇ । ಜನ್ಮ ಮರಣಾಂಚೇ ಉಠವೀ ಧರಣೇ । ಖತ ಫಾಡಣೇ ವಿಷಯಾಂಚೇ ।।೧೪೯೩।। ಮಾಝೀ ಮೂರ್ತಿ ದೇಖಿಲ್ಯಾಪಾಠೀ । ನ ಲಗೇ ಯೋಗಯಾಗ ಆಟಾಆಟೀ । ನ ಲಗೇ ರಿಘಾವೇ ಗಿರಿಕಪಾಟೀ । ನಾನಾ ಸಂಕಟೀ ನ ಪಡಾವೇ ।।೧೪೯೪।। ನ ಲಗೇ ಆಸನ ಭೋಜನ । ನ ಲಗೇ ಸಮಾಧಿಸಾಧನ । ಮಾಝಿಯೇ ಪ್ರಾಪ್ತೀಸೀ ಕಾರಣ । ಮಾಝೀ ಭಕ್ತೀ ಜಾಣ ಉದ್ಧವಾ ।।೧೪೯೫।। ಏಕಾದಶ ಪೂಜಾ ಅಧಿಷ್ಠಾನ । ತೇಥೇ ಮಾಝೇ ಕರೋನಿ ಆವ್ಹಾನ । ಮ್ಯಾ ಸಾಂಗೀತಲೇ ಮೂರ್ತಿಚೇ ಧ್ಯಾನ । ಸಾವಧಾನ ಕರಾವೇ ।।೧೪೯೬।।

ಎರಡೂ ಪಾದಗಳಲ್ಲಿ ಧ್ವಜ, ವಜ್ರ, ಅಂಕುಶ, ಊರ್ಧ್ವರೇಖ ಮತ್ತು ಪದ್ಮ ಈ ಯಾವ ಸಾಮುದ್ರಿಕ ಚಿನ್ಹೆಗಳಿಂದ ಯುಕ್ತವಾಗಿರುವ ಚರಣದ್ವಯಗಳು ಅತಿಶಯ ಶುಭಕಾರಕಗಳಾಗಿರುವುವು ।।೧೪೮೪।। ಚರಣಗಳ ತಳ ಅಂದರೆ ಅಂಗಾಲುಗಳು ಗುಲಾಬಿ ಬಣ್ಣದಿಂದ ಕೂಡಿ, ಮೇಲ್ಭಾಗ ಘನಶ್ಯಾಮ ವರ್ಣದ, ಆಕಾಶದಲ್ಲಿನ ಇಂದ್ರಧನುಷ್ಯದಂತೆ ಮಿಶ್ರವರ್ಣಗಳಿಂದ ಕೂಡಿದ ಹರಿಚರಣಗಳು ಶೋಭಾಯಮಾನವಾಗಿ ಕಾಣುತ್ತಿದ್ದವು ।।೧೪೮೫।। ಜಗನ್ನಾಯಕನು ಈ ಪ್ರಕಾರವಾಗಿ ಸಗುಣ ರೂಪ ಧರಿಸಿದ್ದನ್ನು ಕಂಡು ದಶದಿಶೆಗಳು ಆತನಲ್ಲಿ ಬರುವ ಧೈರ್ಯವನ್ನು ಮಾಡಿ, ತಮ್ಮ ಆತ್ಮಸುಖವನ್ನು ಸಾಧಿಸುವುದಕ್ಕಾಗಿ ಆ ಯಾವ ದಶದಿಶೆಗಳು ಹರಿಪಾದಗಳ ಹತ್ತು ಬೆರಳುಗಳಾದವು ।।೧೪೮೬।। ಚಂದ್ರನು ಕೃಷ್ಣಪಕ್ಷದಲ್ಲಿ ಕ್ಷೀಣನಾಗುತ್ತಿದ್ದನು. ಆದ್ದರಿಂದ ಆತನು ಶ್ರೀಹರಿಯ ಪಾದಗಳನ್ನು ಹಿಡಿದನು. ಹಾಗೆಯೇ ಆತನ ಕಾಲಬೆರಳುಗಳ ಉಗುರುಗಳಾಗಿ ಉಳಿದನು. ಇದರಿಂದ ಆತನು ಅತ್ಯಂತ ಪವಿತ್ರನಾದನು ।।೧೪೮೭।। ಇದು ಶಂಕರನಿಗೆ ತಿಳಿಯುತ್ತಲೇ ಆತನು ಚಂದ್ರನನ್ನು ತನ್ನ ಮಸ್ತಕದ ಮೇಲೆ ಧರಿಸಿದನು. ಮತ್ತು ಹರಿ ಚರಣದ ತೀರ್ಥ ಅಂದರೆ ಗಂಗೆಯನ್ನು ತನ್ನ ಮಸ್ತಕದ ಮೇಲೆ ಕುಳ್ಳಿರಿಸಿಕೊಂಡು ಆ ಯಾವ ಗಂಗಾ ಜಲದಿಂದ ಸರ್ವ ಜಗತ್ತಿನ ಉದ್ಧಾರವನ್ನು ಮಾಡಿದನು ।।೧೪೮೮।। ದೇವನು ಈ ಪ್ರಕಾರವಾಗಿ ಸಗುಣವಾದದ್ದನ್ನು ಕಂಡು ನಾಲ್ಕೂ ಮುಕ್ತಿಗಳು ಆತನ ಪಾದಗಳ ಹತ್ತಿರ ಬಂದು ನಮ್ರವಾದವು. ಅದಕ್ಕಾಗಿಯೇ ಸಂತರು ದೇವಮೂರ್ತಿಯ ಚರಣಗಳಲ್ಲಿ ಯಾವಾಗಲೂ ತತ್ಪರರಾಗಿರುವರು ।।೧೪೮೯।। ಆ ಯಾವ ನಾಲ್ಕು ಮುಕ್ತಿಗಳ ಪೈಕಿ ಸಲೋಕತಾ ಮತ್ತು ಸಮೀಪತಾ ಈ ಇಬ್ಬರೂ ಚರಣಗಳಲ್ಲಿ ವಂಕಿಗಳಾಗಿ ನಾದವನ್ನು ಮಾಡ ಹತ್ತಿದವು. ಸ್ವರೂಪತೆಯು ಚರಣಗಳಲ್ಲಿ ಸರವಾಗಿ, ಸಾಯಜ್ಯತೆಯು ಆ ಸರದಲ್ಲಿ ಕಿರುಗೆಜ್ಜೆಗಳಾಗಿದ್ದವು ।।೧೪೯೦।। "ನಾನು, ನಾನು" ಎನ್ನುವ ರಾಕ್ಷಸರಿಗೂ ಆ ಚರಣಗಳ ನಾದದ ಭಯ ಉಂಟಾಗುವುದು. ಶ್ರೀಹರಿಯಲ್ಲಿ ಸರ್ವ ಸುಖವು ಸಮಾವೇಶವಾಗಿದೆ. ಆತನ ಚರಣಗಳಲ್ಲಿ ಸಮಾಧಿಯೂ ಇದೆ ।।೧೪೯೧।। ಹೇ ಉದ್ಧವನೇ, ಧೈರ್ಯ, ವೀರ್ಯ, ಉದಾರ ಕೀರ್ತಿ, ಗುಣಗಾಂಭೀರ್ಯ, ಶೌರ್ಯ, ಖ್ಯಾತಿ ಈ ಎಲ್ಲಕ್ಕೂ ಕಾರಣವು ನನ್ನ ಸಗುಣ ಮೂರ್ತಿಯೇ ಆಗಿರುವುದು. ಇದನ್ನು ನೀನು ಸರಿಯಾಗಿ ಲಕ್ಷದಲ್ಲಿಡು ।।೧೪೯೨।। ಈ ಯಾವ ನನ್ನ ಮೂರ್ತಿಯ ದರ್ಶನದಿಂದ ಕಣ್ಣುಗಳ ಹಸಿವೆ ಇಂಗುವುದು. ಜನ್ಮ ಮರಣಗಳ ಕಟ್ಟೆಯು ಒಡೆದು ಹೋಗುವುದು. ಮತ್ತು ವಿಷಯಗಳ ಜಮಾ-ಖರ್ಚು ಖಾತೆಯು ಹರಿದು ಹೋಗುವುದು ।।೧೪೯೩।। ನನ್ನ ಮೂರ್ತಿಯನ್ನು ನೋಡಿದ ನಂತರ ಯೋಗಯಾಗಗಳ ಯಾವ ಖಟಪಟಿಯನ್ನು ಮಾಡಬೇಕಾಗುವುದಿಲ್ಲ. ಗಿರಿ ಕಂದಕಗಳಲ್ಲಿ ಹೋಗಿ ಕುಳಿತುಕೊಳ್ಳಬೇಕಾಗಿಲ್ಲ. ಅಥವಾ ಅನೇಕ ಪ್ರಕಾರಗಳ ಸಂಕಟಗಳಲ್ಲಿ ಬೀಳಬೇಕಾಗಿಲ್ಲ ।।೧೪೯೪।। ಹೇ ಉದ್ಧವನೇ, ನನ್ನ ಪ್ರಾಪ್ತಿಗಾಗಿ ಯಾವ ಆಸನಗಳು ಬೇಡ, ಧ್ಯಾನವು ಬೇಡ, ಮತ್ತು ಸಮಾಧಿಯ ಸಾಧನೆಗಳೂ ಬೇಡ. ನನ್ನ ಪ್ರಾಪ್ತಿಗಾಗಿ ಮುಖ್ಯ ಕಾರಣವು ನನ್ನ ಭಕ್ತಿಯೇ ಆಗಿರುವುದು. ಇದನ್ನು ಪರಿಪೂರ್ಣವಾಗಿ ಲಕ್ಷದಲ್ಲಿಡು ।।೧೪೯೫।। ನನ್ನ ಪೂಜೆಯ ಸ್ಥಾನಗಳು ಹನ್ನೊಂದು ಇರುವುವು. ಅಲ್ಲಿ ನನ್ನ ಆವಾಹನೆಯನ್ನು ಮಾಡಿ, ನಾನು ಹೇಳಿದ ಮೂರ್ತಿಯ ಧ್ಯಾನವನ್ನು ಲಕ್ಷಪೂರ್ವಕವಾಗಿ ಮಾಡಬೇಕು ।।೧೪೯೬।।

ಮಾಝೀ ಅರ್ಚನ ಮಾಝೇ ಧ್ಯಾನ । ಮಾಝೇ ಕರಾವೇ ಕೀರ್ತನ । ಮಾಝ್ಯಾ ನಾಮಾಚೇ ಸ್ಮರಣ । ಮಾಝೇ ಗುಣ ವರ್ಣಾವೇ ॥೧೪೯೭॥ ಅಹರ್ನಿಶೀ ಮಾಝೀ ಕಥಾ । ಅಹರ್ನಿಶೀ ಮಾಝೀ ವಾರ್ತಾ । ಅಹರ್ನಿಶೀ ಮಾಝೀ ಧ್ಯಾತಾ । ಭಕ್ತಿ ತತ್ತ್ವತಾ ತೀ ನಾಂವ ॥೧೪೯೮॥ ದೀಪಕಳಿಕಾ ಹಾತೀ ಚಢೇ । ತ್ಯೆ ಘರಭರೀ ಪ್ರಕಾಶು ಸಾಂಪಡೇ । ಮಾಝೀ ಮೂರ್ತಿ ಜ್ಯೆ ಧ್ಯಾನೀ ಜಡೇ । ತ್ಯೆ ಚೈತನ್ಯ ಆತುಡೇ ಅವಘೇಚಿ ॥೧೪೯೯॥ ಯಾ ಉಪಪತ್ತೀ ಉದ್ಧವಾ ದೇಖ । ಸಗುಣ ನಿರ್ಗುಣ ದೋನ್ಹೀ ಏಕ । ಜಾಣ ಪಾ ನಿಶ್ಚಯೇಂ ನಿಷ್ಟಂಕ । ಸಚ್ಚಿದಾನಂದಸುಖ ಸಮತ್ವೇ ॥೧೫೦೦॥ ಜೋ ಕಸೂ ಸುವರ್ಣಾಚಿಯೇ ಖೋಟೀ । ತೋಚಿ ವಾಲಾ ಏಕಾ ಕಸವಟೀ । ಸಗುಣನಿರ್ಗುಣಪರಿಪಾಟೀ । ನಾಹೀ ತುಟೀ ಚಿತ್ಸುಖಾ ॥೧೫೦೧॥ ತೇವೀ ಸಗುಣ ನಿರ್ಗುಣ ನಿಃಶೇಷ । ಜಾಣ ನಿಶ್ಚಯೇ ದೋನ್ಹೀ ಏಕ । ಸಗಳೇ ಸಾಖರೇಚೇ ಟೇಕ । ನಾ ನವಟಾಂಕ ಸುಮ ಗೋಡೀ ॥೧೫೦೨॥ ಹೇ ಅಂತರಂಗ ಮಾಝೇ ಧ್ಯಾನ । ತೇಥೇ ಮನ ಕರೋನಿ ಸಾವಧಾನ । ಅತಿಹರ್ಷೇ ಮದರ್ಚನ । ಮದ್ಭಕ್ತೀ ಜಾಣ ಕರಾವೇ ॥೧೫೦೩॥ ಉದ್ಧವಾ ಐಸೇ ಮ್ಹಣಸೀ ಮನೀ । ಹೇ ಭಕ್ತೀ ಪಾವಿಜೇ ಕೈಸೇನಿ । ಹೇ ಸಾಧ್ಯ ಹೋಯ ಜೆಂಹೀ ಸಾಧನೀ । ತೇ ತುಜಲಾಗೋನೀ ಸಾಂಗೇನ ॥೧೫೦೪॥

ಇಷ್ಟಾಪೂರ್ತೇನ ಮಾಮೇವಂ ಯೋ ಯಜೇತ ಸಮಾಹಿತಃ । ಲಭತೇ ಮಯಿ ಸದ್ಭಕ್ತಿಂ ಮತ್ಸ್ಮೃತಿಃ ಸಾಧುಸೇವಯಾ ॥೪೭॥

ಅರ್ಥ :- ಈ ಪ್ರಕಾರವಾಗಿ ಯಾವ ಮನುಷ್ಯನು ಏಕಾಗ್ರ ಚಿತ್ತದಿಂದ ಯಜ್ಞಯಾಗಾದಿ ಇಷ್ಟಕರ್ಮಗಳನ್ನು ಮಾಡುವನೋ, ಜನರಿಗಾಗಿ ಬಾವಿ ತೋಡಿಸುವನೋ, ಅವು ನನ್ನದೇ ಪೂಜೆಯಾಗಿರುವುದು. ಆತನಿಗೆ ನನ್ನ ಶ್ರೇಷ್ಠ ಭಕ್ತಿಯು ಪ್ರಾಪ್ತವಾಗುವುದು. ಹಾಗೆಯೇ ಸಂತ ಪುರುಷರ ಸೇವೆಯನ್ನು ಮಾಡುವುದರಿಂದ ನನ್ನ ಸ್ವರೂಪದ ಜ್ಞಾನವು ಪ್ರಾಪ್ತವಾಗುವುದು.

ಕರಿತಾ ನಾನಾ ಯೋಗಯಾಗ । ವಾಪೀ ಕೂಪ ವನ ತಡಾಗ । ಶ್ರೌತಸ್ಮಾರ್ತ ಕರ್ಮೇ ಚಾಂಗ । ಮದರ್ಪಣೇ ಸಾಂಗ ಜೆಂಹೀ ಕೇಲೀ ॥೧೫೦೫॥ ಶ್ರೌತ ಅಗ್ನಿಹೋತ್ರ ಸೋಮಯಾಗ । ಸ್ಮಾರ್ತ ವಾಪೀ ಕೂಪ ತಡಾಗ । ಮಜ ನಾರ್ಪಿತಾ ದೋನ್ಹೀ ವ್ಯಂಗ । ಸತ್ಕರ್ಮ ಸಾಂಗ ಮದರ್ಪಣೇ ॥೧೫೦೬॥ ಕರ್ಮ ಕರಿತಾ ಮದರ್ಪಣ । ಅವಚಟೇ ಫಳ ವಾಂಛೀ ಮನ । ಇತುಕಿಯಾಸಾಠೀ ಭಕ್ತಾಸೀ ವಿಘ್ನ । ಸರ್ವಥಾ ಮೀ ಜಾಣ ಯೇವೋ ನೇದೀ ॥೧೫೦೭॥

ನನ್ನನ್ನು ಮನೋಭಾವದಿಂದ ಪೂಜೆಯನ್ನು ಮಾಡಬೇಕು. ನನ್ನ ಧ್ಯಾನವನ್ನು ಮಾಡಬೇಕು. ನನ್ನ ಕೀರ್ತನೆಯನ್ನು ಮಾಡಬೇಕು. ನನ್ನ ನಾಮದ ಸ್ಮರಣೆಯನ್ನು ಯಾವಾಗಲೂ ಮಾಡುತ್ತಿರಬೇಕು. ಮತ್ತು ನನ್ನ ಗುಣಗಾನವನ್ನು ಮಾಡಬೇಕು ॥೧೪೯೭॥ ಹಗಲು ರಾತ್ರಿ ನನ್ನ ಕಥೆಯನ್ನು ಮಾಡಬೇಕು. ಹಗಲು ರಾತ್ರಿ ನನ್ನ ಚರಿತ್ರೆಗಳಲ್ಲಿನ ಮಾತುಗಳನ್ನು ಹೇಳಬೇಕು. ಈ ಪ್ರಕಾರವಾಗಿ ಹಗಲು ರಾತ್ರಿ ನನ್ನ ವಿಚಾರಗಳನ್ನೇ ಮಾಡುತ್ತಿರಬೇಕು. ನಿಜವಾಗಿಯೂ ಇದಕ್ಕೇನೇ ಭಕ್ತಿ ಎಂದು ಹೇಳುವರು ॥೧೪೯೮॥ ದೀಪದ ಜ್ಯೋತಿಯು ಕೈಯಲ್ಲಿ ಬರಲು ಮನೆತುಂಬ ಪ್ರಕಾಶವು ಬೀಳುತ್ತಿರುವುದು. ಅದರಂತೆ ನನ್ನ ಮೂರ್ತಿಯತ್ತ ಲಕ್ಷ ಹತ್ತಲು ಆಗ ಸರ್ವತ್ರವೂ ಪರಬ್ರಹ್ಮವು ಪ್ರಕಾಶಿತವಾಗುವುದು ॥೧೪೯೯॥ ಹೇ ಉದ್ಧವನೇ, ಈ ವರ್ಣನೆಯಿಂದ ಸಿದ್ಧವಾಗುವುದೇನೆಂದರೆ, ಸಗುಣ ಮತ್ತು ನಿರ್ಗುಣವು ಒಂದೇಯಾಗಿರುವುವು. ಈ ಎರಡೂ ಏಕರೂಪವಾಗಿರುವುದರಿಂದ ಎರಡರಿಂದಲೂ ಸಚ್ಚಿದಾನಂದದ ಸುಖವೂ ಕೂಡ ಸಮಾನ ಪ್ರಮಾಣದಲ್ಲಿ ಪ್ರಾಪ್ತವಾಗುವುದು. ಇದನ್ನು ನಿಶ್ಚಯವಾಗಿ ತಿಳಿ ॥೧೫೦೦॥ ಬಂಗಾರದ ಗಟ್ಟಿಗೆ ಯಾವ ವರೀ ಹತ್ತುವುದೋ ಅದೇ ವರಿಯು ಅದರ ಒಂದು ಗುಂಜಿ ಬಂಗಾರಕ್ಕೂ ಹತ್ತುವುದು. ಅದರಂತೆ ಸಗುಣ ಅಥವಾ ನಿರ್ಗುಣ ಇವುಗಳ ಉಪಾಸನೆಗಳಲ್ಲಿ ಆತ್ಮಸುಖಕ್ಕಾಗಿ ಯಾವ ಕಡಿಮೆಯೂ ಬೀಳುವುದಿಲ್ಲ ॥೧೫೦೧॥ ಆದ್ದರಿಂದ ಸಗುಣ ಮತ್ತು ನಿರ್ಗುಣ ಈ ಎರಡೂ ಒಂದೇ ಎಂದು ತಿಳಿಯಬೇಕು. ಸಕ್ಕರೆಯ ರಾಶಿಯಲ್ಲಿ ಸಿಗುವ ಸಿಹಿಯೇ ಅದರ ಒಂದು ಚಟಾಕು ಸಕ್ಕರೆಯಲ್ಲಿ ಸಿಗುವುದು ॥೧೫೦೨॥ ಇದು ನನ್ನ ಅಂತಃಕರಣದಲ್ಲಿನ ಧ್ಯಾನವಾಗಿರುವುದು. ನನ್ನ ಭಕ್ತರು ಅತ್ಯಂತ ಸಂತೋಷದಿಂದ ನನ್ನ ಪೂಜೆಯನ್ನು ಮಾಡಬೇಕು. ಉಲ್ಹಾಸದೊಂದಗೆ ನನ್ನ ಭಕ್ತಿಯನ್ನು ಮಾಡಬೇಕು ॥೧೫೦೩॥ ಹೇ ಉದ್ಧವನೇ, ಈ ಭಕ್ತಿಯು ಹೇಗೆ ಪ್ರಾಪ್ತವಾಗುವುದು? ಎಂದು ಕದಾಚಿತ್ ನಿನ್ನ ಮನದಲ್ಲಿ ಹೀಗೆ ವಿಚಾರವು ಬರಬಹುದು. ಅದಕ್ಕಾಗಿ ಯಾವ ಸಾಧನೆಗಳಿಂದ ಅದು ಸಾಧ್ಯವಾಗುವುದೆಂಬುದನ್ನು ನಿನಗೆ ಸಮಗ್ರವಾಗಿ ಹೇಳುವೆನು ॥೧೫೦೪॥

ನಾನಾ ಪ್ರಕಾರಗಳ ಯೋಗಯಾಗಗಳನ್ನು ಮಾಡಿ, ಕೆರೆ, ಬಾವಿ, ಉಪವನ, ಸರೋವರ ಕಟ್ಟಿಸಿ ಉತ್ತಮೋತ್ತಮ ಶ್ರೌತಸ್ಮಾರ್ತ ಕರ್ಮಗಳನ್ನು ಮಾಡಿ ನನಗೆ ಅರ್ಪಣೆಯನ್ನು ಮಾಡಿದರೆ ಆ ಕರ್ಮಗಳು ಫಲದ್ರೂಪವಾಗುವುವು ॥೧೫೦೫॥ ಆದರೆ ನನಗೆ ಅರ್ಪಣೆಯನ್ನು ಮಾಡದೇ ಶ್ರೌತ, ಅಗ್ನಿಹೋತ್ರ, ಸೋಮಯಾಗ, ಸ್ಮಾರ್ತ ಇತ್ಯಾದಿ ಸತ್ಕರ್ಮಗಳನ್ನು ಮಾಡಲು ಅಥವಾ ಸಮಾಜ ಕಲ್ಯಾಣಕ್ಕಾಗಿ ಕೆರೆ, ಬಾವಿಗಳನ್ನು ಕಟ್ಟಲು, ಈ ಎರಡೂ ವ್ಯರ್ಥವಾಗಿರುವುವು. ಸತ್ಕರ್ಮಗಳಾಗಿದ್ದರೂ ನನಗೆ ಅರ್ಪಿಸದಿದ್ದರೆ ಅವು ಯಥಾಸಾಂಗವಾಗಲಾರವು ॥೧೫೦೬॥ ಕರ್ಮಗಳನ್ನು ನನಗೆ ಅರ್ಪಿಸುತ್ತಿದ್ದರೂ ಕೂಡ ಅಕಸ್ಮಾತ್ತಾಗಿ ಮನವು ಫಲದ ಇಚ್ಛೆಯನ್ನು ಮಾಡುತ್ತಿರುವುದು. ಆದರೂ ನಾನು ಆತನ ಕರ್ಮಗಳಲ್ಲಿ ಎಂದಿಗೂ ವಿಘ್ನಗಳನ್ನು ಆಗಗೊಡುವುದಿಲ್ಲ. ಇದನ್ನು ಲಕ್ಷದಲ್ಲಿಡು ॥೧೫೦೭॥

ಸಕಾಮ ಕರ್ಮಕರ್ತ್ಯಾಸೀ । ಜೇ ಪ್ರಾಪ್ತಿ ನವ್ಹೇ ಅತಿಪ್ರಯಾಸೀ । ತ್ಯಾ ಉತ್ತಮಲೋಕಗತಿ ಭೋಗಾಸೀ । ಮದ್ಭಕ್ತಾಂಸೀ ಮೀ ದೇತಾ ॥೧೫೦೮॥ ಪೋಟಾಂತೂನಿ ಮಾಝಾ ಭಕ್ತು । ದಿವ್ಯ ಭೋಗಾಂಸೀ ವಿರಕ್ತು । ತೇ ಭೋಗ ಭೋಗಿತಾ ಮಾತೇ ಸ್ಮರತೂ । ಭೋಗಾಸಕ್ತು ತೋ ನವ್ಹೇ ॥೧೫೦೯॥ ಸಾಧು ದೇವಾಲಯಾ ಜಾತಾ । ಪರ್ಜನ್ಯೇ ಪೀಡಿಲಾ ಧಾರಾವರ್ತಾ । ವೇಶ್ಯಾ ಗೃಹಾಸೀ ನೇಣತಾ । ಆಲಾ ಅವಚಿತಾ ವೋಸರಿಯಾ ॥೧೫೧೦॥ ತೋ ಬಸೋನಿ ವೇಶ್ಯೇಸೀ ನಾತಳೇ । ತೇವೀ ಭಕ್ತ ದಿವ್ಯ ಭೋಗಾಸೀ ಕಾಂಟಾಳೇ । ಠಕಲೋ ಮ್ಹಣೇ ಅನುತಾಪಬಳೇ । ಪಿಟೂನಿ ಕಪಾಳೇ ಹರಿ ಸ್ಮರೇ ॥೧೫೧೧॥ ಐಶಿಯಾ ಅನುತಾಪಸ್ಥಿತೀ । ತತ್ಕಾಳ ಭೋಗ ಕ್ಷಯಾ ಜಾತೀ । ತೋ ಜನ್ಮ ಪಾವೇ ಮಹಾಮತೀ । ಮಾಝೀ ಭಕ್ತೀ ಜಿಯೇ ಗೃಹೀ ॥೧೫೧೨॥ ತ್ಯಾಸೀ ಪೂರ್ವಸಂಸ್ಕಾರಸ್ಥಿತೀ । ಸಕಳ ವಿಷಯಾಂಚೀ ವಿರಕ್ತೀ । ಉಪಜತಚಿ ಲಾಗೇ ಭಕ್ತಿಪಂಥೀ । ಭಕ್ತ ಆವಡತೀ ಜೀವೇಪ್ರಾಣೇ ॥೧೫೧೩॥ ತೋ ಮುಕ್ತೀತೇ ಹಾಣೋನಿ ಲಾತೇ । ನಿಜಸರ್ವಸ್ವೇ ಭಜೇ ಮಾತೇ । ಯಾಪರೀ ಮೀ ನಿಜಭಕ್ತಾತೇ । ನೇದೀ ವಿಘ್ನಾತೇ ಆತಳೂ ॥೧೫೧೪॥ ಯಾಪರೀ ಜ್ಯಾಂಸ ವಿಷಯವಿರಕ್ತೀ । ತೇಹೀ ಇಷ್ಟಾಪೂರ್ತ ಜೈ ಕರಿತೀ । ಯೋಗ ಯಾಗ ತ್ಯಾಗ ಜೈ ಸಾಧಿತೀ । ಮಾಝೀ ಭಕ್ತೀ ತೈ ಉಪಜೇ ॥೧೫೧೫॥ ಸಮಾಹಿತ ಕರೋನಿ ಮನ । ಶ್ರೌತಸ್ಮಾರ್ತಕರ್ಮಾನುಷ್ಠಾನ । ಯೋಗ ಯಾಗ ತ್ಯಾಗ ಸಾಧನ । ನಿಷ್ಠೇನೇ ಜಾಣ ಜೈ ಕರಿತೀ ॥೧೫೧೬॥ ತೇಣೇ ಶೋಧಿತ ಹೋಯ ಚಿತ್ತವೃತ್ತೀ । ಝಾಲಿಯಾ ಚಿತ್ತಶುದ್ಧೀಚೀ ಪ್ರಾಪ್ತೀ । ತೈ ಉಪಜೇ ಮಾಝೀ ಸದ್ಭಕ್ತೀ । ಜಾಣ ನಿಶ್ಚಿತೀ ಉದ್ಧವಾ ॥೧೫೧೭॥ ಇತುಕೀ ನ ಕರಿತಾ ಆಟಾಟೀ । ಮಾಝೀ ಸದ್ಭಕ್ತಿಚೀ ಹೋಯ ಭೇಟೀ । ಹೇ ಅತಿಗುಹ್ಯ ಆಹೇ ಮಾಝೇ ಪೋಟೀ । ತೇ ತುಜ ಮೀ ಗೋಠೀ ಸಾಂಗೇನ ॥೧೫೧೮॥ ಸಾಂಡೋನಿ ಸಕಳ ಸಾಧನ । ಜೋ ಕರೀ ಸಾಧುಭಜನ । ತೇವ್ಹಾಂಚಿ ತ್ಯಾಚೇ ಶುದ್ಧ ಮನ । ಸತ್ಯ ಜಾಣ ಉದ್ಧವಾ ॥೧೫೧೯॥ ಮ್ಹಣಸೀ ಸಾಧು ತೋ ಕೈಸಾ ಕೋಣ । ಮಾಗಾ ಸಾಂಗೀತಲೇ ಲಕ್ಷಣ । ಬಹು ಬೋಲಾವಯಾ ನಾಹೀ ಕಾರಣ । ಸಾಧು ತೋ ಜಾಣ ಸದ್ಗುರು ॥೧೫೨೦॥ ತ್ಯಾ ಸದ್ಗುರುಚೇ ಭಜನ । ಜೋ ಭಾವಾರ್ಥೇ ಕರೀ ಆಪಣ । ಸರ್ವ ಶುದ್ಧೀಚೇ ಕಾರಣ । ಸದ್ಗುರು ಜಾಣ ಸರ್ವಾಶೀ ॥೧೫೨೧॥

ಸಕಾಮ ಕರ್ಮಗಳನ್ನು ಮಾಡುವವರಿಗೆ, ಅತ್ಯಂತ ಪ್ರಯಾಸದಿಂದಲೂ ಪ್ರಾಪ್ತವಾಗದಂತಹ ಉತ್ತಮ ಲೋಕಗಳಲ್ಲಿನ ಭೋಗಗಳನ್ನು ನಾನು ನನ್ನ ಭಕ್ತರಿಗೆ ಸಹಜವಾಗಿ ಕೊಡುವೆನು ॥೧೫೦೮॥ ಅಂತಃಕರಣದಿಂದ ಯಾರು ನನ್ನ ಭಕ್ತನಾಗಿರುವನೋ, ದಿವ್ಯ ಭೋಗಗಳ ವಿಷಯಕ್ಕೆ ಯಾವನು ವಿರಕ್ತನಾಗಿರುವನೋ, ಅವನು ಆ ಯಾವ ಭೋಗಗಳನ್ನು ಭೋಗಿಸುತ್ತಿದ್ದರೂ ಅವುಗಳಲ್ಲಿ ಆಸಕ್ತನಾಗುವುದಿಲ್ಲ ॥೧೫೦೯॥ ಯಾರೋ ಒಬ್ಬ ಸಾಧು ಪುರುಷನು ದೇವಾಲಯಕ್ಕೆ ಹೋಗುತ್ತಿರಲು ಅಕಸ್ಮಾತ ಮಳೆಗೆ ಸಿಕ್ಕಿಕೊಂಡರೆ ಆಗ ಆತನು ಸಮೀಪದಲ್ಲಿರುವ ವೇಶ್ಯೆಯ ಮನೆಯಲ್ಲಿ ಮಳೆ ರಕ್ಷಣೆಗಾಗಿ ತಂಗಿದನು ॥೧೫೧೦॥ ಆದರೆ ಆತನು ಅಲ್ಲಿದ್ದರೂ ಆ ವೇಶ್ಯೆಗೆ ಸ್ಪರ್ಶ ಮಾಡುವುದಿಲ್ಲ. ಅದರಂತೆ ಭಕ್ತನು ದಿವ್ಯ ಭೋಗಗಳಲ್ಲಿ ಸಿಲುಕಿಕೊಳ್ಳಲು ಆಗ ಆತನು ಪಶ್ಚಾತ್ತಾಪ ಪಟ್ಟು, ನಾನು ಅನಿವಾರ್ಯವಾಗಿ ಇದರಲ್ಲಿ ಮೋಸ ಹೋದೆನು ಎಂದು ಹೇಳುತ್ತಾ ತನ್ನ ಹಣೆಯನ್ನು ಬಡಿದುಕೊಳ್ಳುತ್ತಾ ಹರಿಸ್ಮರಣೆಯನ್ನು ಮಾಡುತ್ತಿರುವನು ॥೧೫೧೧॥ ಈ ಪ್ರಕಾರವಾಗಿ ಅನುತಾಪವಾಯಿತೆಂದರೆ ಸರ್ವ ಪ್ರಕಾರಗಳ ಭೋಗಗಳು ತತ್ಕಾಲದಲ್ಲಿ ನಷ್ಟವಾಗುವುವು. ಯಾರ ಮನೆಯಲ್ಲಿ ನನ್ನ ಭಕ್ತಿಯು ನಡೆದಿರುತ್ತದೆಯೋ, ಅಂತಹ ಮನೆಯಲ್ಲಿ ಆ ಮಹಾನ ಜ್ಞಾನಿಯು ಜನ್ಮಕ್ಕೆ ಬರುವನು ॥೧೫೧೨॥ ಆತನ ಪೂರ್ವ ಸಂಸ್ಕಾರಾನುಸಾರವಾಗಿ ಸರ್ವ ವಿಷಯಗಳಲ್ಲಿ ಆತನಿಗೆ ಸ್ವಭಾವತವೇ ವಿರಕ್ತಿ ಇರುವುದು. ಆದ್ದರಿಂದ ಆತನು ಜನ್ಮತಃ ನನ್ನ ಭಕ್ತಿ ಮಾರ್ಗಕ್ಕೆ ಹತ್ತುವನು. ಆತನಿಗೆ ನನ್ನ ಯಾವತ್ತೂ ಭಕ್ತರು ಜೀವಪ್ರಾಣದಂತೆ ಪ್ರಿಯರಾಗುವರು ॥೧೫೧೩॥ ಈತನು ಮುಕ್ತಿಯನ್ನು ಒದೆದು ತನ್ನ ಸರ್ವಸ್ವಭಾವದಿಂದ ನನ್ನ ಭಜನೆಯನ್ನು ಮಾಡುತ್ತಿರುವನು . ಈ ಪ್ರಕಾರದ ನನ್ನ ಭಕ್ತನಿಗೆ ನಾನು ವಿಘ್ನಗಳ ಸ್ಪರ್ಶ ಕೂಡ ಮಾಡಿಕೊಡುವುದಿಲ್ಲ ॥೧೫೧೪॥ ಯಾರಿಗೆ ಇಂತಹ ವಿಷಯ ವಿರಕ್ತಿ ಇದ್ದು ಅವರು ಕೆರೆ, ಬಾವಿ ಕಟ್ಟಿಸುವ ಇತ್ಯಾದಿ ಪರೋಪಕಾರದ ಕಾರ್ಯಗಳನ್ನು ಮಾಡುತ್ತಿದ್ದರೆ ಅಥವಾ ಯೋಗ, ಯಾಗ ಇಲ್ಲವೇ ತ್ಯಾಗ ಇವುಗಳ ಸಾಧನೆಯನ್ನು ಮಾಡುತ್ತಿದ್ದರೆ, ಆಗಲೇ ಅವರಿಗೆ ನನ್ನ ಭಕ್ತಿಯು ಉತ್ಪನ್ನವಾಗುವುದು ॥೧೫೧೫॥ ಮನವನ್ನು ಶಾಂತಮಾಡಿ ಶ್ರೌತ, ಸ್ಮಾರ್ತ ಕರ್ಮಾನುಷ್ಠಾನ ಮತ್ತು ಯೋಗಯಾಗ ಇತ್ಯಾದಿ ಸಾಧನೆಗಳು ಹಾಗೂ ತ್ಯಾಗ ಇವುಗಳನ್ನು ಏಕನಿಷ್ಠೆಯಿಂದ ಮಾಡುವರು ॥೧೫೧೬॥ ಈ ಯೋಗದಿಂದ ಕೂಡಲೇ ಅವರ ಚಿತ್ತವು ಶುದ್ಧವಾಗಿ ಪವಿತ್ರವಾಗುವುದು. ಹೇ ಉದ್ಧವನೇ, ಚಿತ್ತ ಶುದ್ಧಿಯಾಯಿತೆಂದರೆ ನಿಜವಾಗಿಯೂ ಅವರಿಗೆ ನನ್ನ ಪ್ರಾಪ್ತಿಯಾಗುವುದೆಂದು ತಿಳಿ ॥೧೫೧೭॥ ಆದರೆ ಇಷ್ಟೊಂದು ಖಟಪಟಗಳನ್ನು ಮಾಡದೇ ನನ್ನ ಸದ್ಭಕ್ತಿಯು ಪ್ರಾಪ್ತವಾಗುವ ಅದೊಂದು ಅತ್ಯಂತ ಗುಪ್ತ ಯುಕ್ತಿಯಾಗಿರುವುದು. ಅದು ನನಗೆ ಗೊತ್ತಿರುವುದು. ಇದನ್ನೂ ಕೂಡ ನಿನಗೆ ಹೇಳುವೆನು ॥೧೫೧೮॥ ಹೇ ಉದ್ಧವನೇ, ಸರ್ವ ಸಾಧನೆಗಳನ್ನು ಬಿಟ್ಟುಕೊಟ್ಟು ಯಾರು ಸಾಧು ಭಜನೆಯನ್ನು ಮಾಡುವರೋ, ಆಗ ಅವರ ಮನವು ನಿಜವಾಗಿಯೂ ಶುದ್ಧವಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ॥೧೫೧೯॥ ಈಗ ನಿನ್ನ ಮನದಲ್ಲಿ ಹೀಗೆ ವಿಚಾರವು ಬರಬಹುದು. ಸಾಧು ಹೇಗಿರುವನು? ಅಂತಹ ಸಾಧು ಯಾರು? ಇವುಗಳ ಲಕ್ಷಣಗಳನ್ನು ಈ ಹಿಂದೆ ಹೇಳಲಾಗಿದೆ. ಪುನಃ ಹೆಚ್ಚಿಗೆ ಹೇಳುವ ಯಾವ ಕಾರಣವಿಲ್ಲ. ಸದ್ಗುರುವೇ ಸಾಧುವಾಗಿರುವನು. ಇದನ್ನು ಲಕ್ಷದಲ್ಲಿಡು ॥೧೫೨೦॥ ಈ ಸದ್ಗುರುವಿನ ಭಜನೆಯನ್ನು ಯಾರು ಪ್ರೇಮಭಾವದಿಂದ ಮಾಡುವನೋ, ಆತನು ಸರ್ವ ಪ್ರಕಾರಗಳಿಂದ ಶುದ್ಧನಾಗುವನು. ಸರ್ವ ಶುದ್ಧಿಯ ಕಾರಣವು ಸದ್ಗುರುವೇ ಆಗಿರುವನು. ಹೀಗೆ ನೀನು ತಿಳಿದುಕೋ ॥೧೫೨೧॥

ಜ್ಯಾಚೇ ಮುಖೀಚೇ ವಚನ । ಬ್ರಹ್ಮಸಾಕ್ಷಾತ್ಕಾರಾ ಪಾವವೀ ಜಾಣ । ತ್ಯಾಚೇ ಸೇವಿತಾ ಶ್ರೀಚರಣ । ಶುದ್ಧಿ ಕೋಣ ಹೋಈನಾ ॥೧೫೨೨॥ ಗುರುನಾಮ ಘೇತಾ ಮುಖೇ । ಕಳಿಕಾಳ ಪಾಹೂ ನ ಶಕೇ । ತ್ಯಾಚೀ ಸೇವಾ ಕರಿತಾ ಹರಿಖೇ । ಪಾಯಾ ಮೋಕ್ಷ ಸುಖೇ ಲಾಗತೀ ॥೧೫೨೩॥ ಜ್ಯಾಸೀ ಸದ್ಗುರುಚೀ ಆವಡೀ ಚಿತ್ತೀ । ಜ್ಯಾಚೇ ಸದ್ಗುರುಭಜನೀ ಅತಿಪ್ರೀತೀ । ತ್ಯಾಸೀ ಭಾಳಲೀ ಮಾಝೀ ಸದ್ಭಕ್ತೀ । ಪಾಠೀ ಲಾಗೇ ನಿಶ್ಚಿತೀ ವರಾವಯಾ ॥೧೫೨೪॥ ಜೋ ಗುರುಭಜನೀ ಭಾವಾರ್ಥೀ । ಜಗಾಮಾಜೀ ತೋಚಿ ಸ್ವಾರ್ಥೀ । ತ್ಯಾಪಾಶೀ ಮಾಝೀ ಸದ್ಭಕ್ತೀ । ಅಸೇ ತಿಷ್ಠತೀ ಆಂಖಿಲೀ ॥೧೫೨೫॥ ಸದ್ಭಕ್ತಿ ಬಾಪುಡೀ ಕಾಯಸೀ । ಅಂಗೇ ಮೀಹೀ ಅಹರ್ನಿಶೀ । ತಿಷ್ಠತಸೇ ಸ್ವಾನಂದೇಸೀ । ಗುರುಪ್ರೇಮಾಸೀ ಭೂಲಲೋ ॥೧೫೨೬॥ ಮಜ ಮಾಝ್ಯಾ ಭಕ್ತಾಂಚೀ ಥೋಡೀ ಗೋಡೀ । ಪರೀ ಗುರುಭಕ್ತಾಂಚೀ ಅತಿ ಆವಡೀ । ಸತ್ಸಂಗೇವೀಣ ರೋಕಡೀ । ಸದ್ಭಕ್ತಿ ಚೋಖಡೀ ನ ಪವಿಜೇ ॥೧೫೨೭॥

ಪ್ರಾಯೇಣ ಭಕ್ತಿಯೋಗೇನ ಸತ್ಸಂಗೇನ ವಿನೋದ್ಧವ ।
ನೋಪಾಯೋ ವಿದ್ಯತೇಸಮ್ಯಕ್ ಪ್ರಾಯಣಂ ಹಿ ಸತಾಮಹಮ್ ॥೪೮॥

ಅರ್ಥ:- ಪ್ರಿಯ ಉದ್ಧವನೇ, ಸತ್ಸಂಗ ಮತ್ತು ಭಕ್ತಿಯೋಗ ಈ ಎರಡೂ ಸಾಧನೆಗಳನ್ನು ಏಕಕಾಲಕ್ಕೆ ಅನುಷ್ಠಾನ ಮಾಡಬೇಕು. ಇದು ನನ್ನ ನಿಶ್ಚಯವಾಗಿದೆ. ಈ ಎರಡೂ ಸಾಧನೆಗಳು ಭವಸಾಗರದಿಂದ ಪಾರಾಗಲು ಉಪಯೋಗಿಯಾಗಿರುವುವು. ಕಾರಣ ಸತ್ಪುರುಷನು ನನ್ನನ್ನು ಯಾವಾಗಲೂ ಆಶ್ರಯ ಬಯಸುವನು ಮತ್ತು ನಾನು ಯಾವಾಗಲೂ ಅವನ ಬಳಿಯಲ್ಲಿ ಇರುವೆನು.

ಮಾಝಿಯೇ ಪ್ರಾಪ್ತೀಲಾಗುನೀ । ಭಕ್ತಿ - ಜ್ಞಾನಮಾರ್ಗ ದೋನ್ಹೀ । ಜ್ಞಾನ ಅತ್ಯಂತ ಕಠಿಣಪಣೀ । ಭಕ್ತಿ ನಿರ್ವಿಘ್ನೀ ಪಾವವೀ ಮಜ ॥೧೫೨೮॥ ಸಂಸಾರ ತರಾವಯಾಲಾಗೀ । ಅನೇಕ ಸಾಧನೇ ಅನೇಗೀ । ಬೋಲಿಲೀ ತೀ ಜಾಣ ವಾಉಗೀ । ಉತ್ತಮ ಪ್ರಯೋಗೀ ಮದ್ಭಕ್ತಿ ॥೧೫೨೯॥ ಉಪಾಯಾಮಾಜೀ ಅತಿಪ್ರಾಂಜಳ । ನಿರ್ವಿಘ್ನ ಆಣಿ ನಿತ್ಯ ನಿರ್ಮಳ । ಮಾಝಾ ಭಕ್ತಿಮಾರ್ಗ ಕೇವಳ । ಜ್ಞಾನ ತೇ ವಿಕಳ ಮಧ್ಯಪಾತೀ ॥೧೫೩೦॥ ಮಳಾ ಶಿಂಪಾವಯಾ ಲಾಗುನೀ । ಮೋಟ ಪಾಟ ಉಪಾಯ ದೋನ್ಹೀ । ಮೋಟಾ ಕಾಢಿಜೇ ವಿಹೀರ ವಣೀ । ಬಹುತ ಕಷ್ಟೋನೀ ಅತಿಅಲ್ಪ ॥೧೫೩೧॥ ಮೋಟ ನಾಡಾ ಬೈಲಜೋಡೀ । ಅಖಂಡ ಝೋಡಿತಾ ಆಸುಡೀ । ಯೇತಾ ಜಾತಾ ವೋಢಾವೋಢೀ । ಭೋಯ ಭಿಜೇ ಥೋಡೀ ಭಾಗ ಏಕ ॥೧೫೩೨॥

ಇವರ ಮುಖದಿಂದ ಬಂದ ಶಬ್ದಗಳು ಬ್ರಹ್ಮಸಾಕ್ಷಾತ್ಕಾರವನ್ನು ಪ್ರಾಪ್ತ ಮಾಡಿ ಕೊಡುವುವು. ಅಂದಮೇಲೆ ಅವರ ಚರಣ ಸೇವೆಯನ್ನು ಮಾಡುವುದರಿಂದ ಯಾರು ಶುದ್ಧರಾಗುವುದಿಲ್ಲ? ॥೧೫೨೨॥ ಸದ್ಗುರುವಿನ ಕೇವಲ ನಾಮವನ್ನು ಮುಖದಿಂದ ನುಡಿಯಲು ಆತನತ್ತ ಕಲಿಕಾಲನು ಮುಖವೆತ್ತಿ ನೋಡಲು ಶಕ್ಯವಿಲ್ಲ. ಮನಃಪೂರ್ವಕವಾಗಿ ಅವರ ಸೇವೆಯನ್ನು ಮಾಡಲು ಸರ್ವ ಪ್ರಕಾರದ ಮೋಕ್ಷ ಸುಖವು ಆನಂದದಿಂದ ಅವರ ಚರಣಗಳತ್ತ ನಡೆಯುತ್ತ ಬರುವುದು ॥೧೫೨೩॥ ಯಾರ ಮನದಲ್ಲಿ ಸದ್ಗುರುಗಳ ವಿಷಯಕ್ಕೆ ಅತ್ಯಂತ ಪ್ರೇಮವಿರುವುದೋ, ಆತನಿಗೆ ಸದ್ಗುರುಗಳ ಭಜನೆಯು ಅತ್ಯಂತ ಪ್ರಿಯವಾಗುವುದು. ಆತನಲ್ಲಿ ನನ್ನ ಸದ್ಭಕ್ತಿಯು ಮೋಹಿತಳಾಗಿ ಆತನನ್ನು ವರಿಸಲು ಆತನ ಬೆನ್ನು ಹತ್ತುವಳು ॥೧೫೨೪॥ ಯಾವನು ಭಕ್ತಿ ಭಾವದಿಂದ ಗುರುಭಜನೆಯನ್ನು ಮಾಡುವನೋ, ಆತನೇ ಜಗತ್ತಿನಲ್ಲಿ ಸ್ವಾರ್ಥವನ್ನು ಸಾಧಿಸಿದನು ಎಂದು ತಿಳಿಯಬೇಕು. ಆತನಲ್ಲಿ ನನ್ನ ಭಕ್ತಿಯು ದಾಸಿಯಾಗಿ ನಿಂತುಕೊಳ್ಳುವಳು ॥೧೫೨೫॥ ಅಹೋ! ಪಾಪ ಆ ಯಾವ ಸದ್ಭಕ್ತಿ ನಿಲ್ಲುವುದೇನು ಮಹಾ? ನಾನೂ ಕೂಡ ಸ್ವತಃ ಆನಂದದಿಂದ ಗುರುಪ್ರೇಮಕ್ಕೆ ಮರುಳಾಗಿ ಹಗಲು ರಾತ್ರಿ ಆ ಭಕ್ತನಲ್ಲಿ ನಿಂತುಕೊಂಡಿರುವೆನು ॥೧೫೨೬॥ ನನಗೆ ನನ್ನ ಭಕ್ತರಿಗಿಂತಲೂ ಗುರುಭಕ್ತರಲ್ಲಿ ಪ್ರೇಮವು ಅಧಿಕವಾಗಿರುವುದು. ಆದರೆ ಸತ್‌ಸಂಗತಿವಿಲ್ಲದೇ ಉತ್ತಮ ಭಕ್ತಿಯು ಎಂದೆಂದಿಗೂ ಪ್ರಾಪ್ತವಾಗಲಾರದು ॥೧೫೨೭॥

ನನ್ನ ಪ್ರಾಪ್ತಿಯಾಗುವುದಕ್ಕಾಗಿ ಜ್ಞಾನಮಾರ್ಗ ಮತ್ತು ಭಕ್ತಿಮಾರ್ಗ ಹೀಗೆ ಎರಡು ಪ್ರಕಾರದ ಮಾರ್ಗವಿರುವುವು. ಇವುಗಳಲ್ಲಿ ಜ್ಞಾನಮಾರ್ಗವು ಅತಿಶಯವಾಗಿ ಕಠಿಣವಾಗಿರುವುದು. ಮತ್ತು ಭಕ್ತಿ ಮಾರ್ಗವು ಸುಲಭವಾಗಿರುವುದು. ಭಕ್ತಿಮಾರ್ಗವು ಭಕ್ತನನ್ನು ನಿರ್ವಿಘ್ನವಾಗಿ ನನ್ನಲ್ಲಿ ತಂದು ಮುಟ್ಟಿಸುವುದು ॥೧೫೨೮॥ ಈ ಸಂಸಾರದಿಂದ ಪಾರಾಗಲು ಅನೇಕರು ಅನೇಕ ಪ್ರಕಾರಗಳ ಸಾಧನೆಗಳನ್ನು ಹೇಳಿರುವರು. ಆದರೆ ಅವು ಎಲ್ಲವೂ ವ್ಯರ್ಥವಾಗಿರುವುವು ಎಂದು ತಿಳಿದುಕೋ. ಅನೇಕ ಮಾರ್ಗಗಳ ಅನುಭವವನ್ನು ಪಡೆದು ಭಕ್ತಿಮಾರ್ಗ ಒಂದೇ ಶ್ರೇಷ್ಠವಾಗಿರುವುದೆಂದು ಹೇಳಿರುವುದಾಗಿದೆ ॥೧೫೨೯॥ ಎಲ್ಲ ಉಪಾಯಗಳಲ್ಲಿ ಅತ್ಯಂತ ಸರಳ, ನಿರ್ವಿಘ್ನತೆ, ನಿತ್ಯ ಮತ್ತು ಪವಿತ್ರ ಹೀಗೆ ನನ್ನ ಕೇವಲ ಭಕ್ತಿಮಾರ್ಗವೇ ಇರುವುದು. ಯಾವ ಜ್ಞಾನಮಾರ್ಗವು ಭಕ್ತನಿಗೆ ಮಧ್ಯದಲ್ಲಿಯೇ ವ್ಯಾಕುಲಗೊಳಿಸಿ ತೊಂದರೆಯನ್ನು ಕೊಡುವುದಾಗಿರುವುದು ॥೧೫೩೦॥ ಹೊಲವನ್ನು ಬೆಳೆಯಲು ಕಾಲುವೆಯ ನೀರನ್ನು ಮತ್ತು ಬಾವಿಯ ನೀರನ್ನು ಉಪಯೋಗಿಸುವರು. ಕಾಲುವೆಯ ನೀರು ಸರಳವಾಗಿ ಹೇರಳವಾಗಿ ದೊರೆತರೆ ಬಾವಿಯ ನೀರು ಕಷ್ಟದಿಂದ ಅಲ್ಪಸ್ವಲ್ಪ ಸಿಗುವುದು ॥೧೫೩೧॥ ಬಾವಿಯ ಏತಕ್ಕೆ ಹಗ್ಗ ಮತ್ತು ಎತ್ತಿನ ಜೋಡು ಪ್ರಾರಂಭದಲ್ಲಿಯೇ ಏಕತ್ರ ಮಾಡಬೇಕಾಗುವುದು. ತದನಂತರ ಎತ್ತುಗಳಿಗೆ ಬಾರಕೋಲಿನಿಂದ ಹೊಡೆಯುತ್ತ ಒಂದಕ್ಕೆ ಮುಂದಕ್ಕೆ ನಡೆಸಬೇಕಾಗುವುದು. ಹೀಗೆ ಅತಿಶಯವಾಗಿ ಪ್ರಯತ್ನ ಮಾಡಿದನಂತರ ಸ್ವಲ್ಪ ನೆಲವು ತೋಯುವುದು ॥೧೫೩೨॥

ತೇಥಹೀ ಮೋಟ ಫುಟೇ ಕಾ ನಾಡಾ ತುಟೇ । ವೋಡವ ಪಡೇ ಬೈಲ ಅವಚಟೇ । ತರೀ ಹಾತಾ ಯೇತಾ ಪೀಕ ಆಟೇ । ವೋಲ ತುಟೇ ತತ್ಕಾಳ ॥೧೫೩೩॥ ತೈಸಾ ನವ್ಹೇ ಸರಿತೇಚಾ ಪಾಟ । ಏಕವೇಳ ಕೇಲ್ಯಾ ವಾಟ । ಅಹರ್ನಿಶೀ ಘಡಘಡಾಟ । ಚಾಲತೀ ಲೋಟ ಜೀವನಾಚೇ ॥೧೫೩೪॥ ಮೋಟೇಚೇ ಪಾಣೀ ತೈಸೇ ಜ್ಞಾನ । ಕರೂನಿ ವೇದಶಾಸ್ತ್ರಪಠಣ । ನಿತ್ಯಾನಿತ್ಯ ವಿವೇಕಾಸೀ ಜಾಣ । ಪಂಡಿತ ವಿಚಕ್ಷಣ ಬೈಸತೀ ॥೧೫೩೫॥ ಏಕ ಕರ್ಮಾಕಡೇ ವೋಢೀ । ಏಕ ಸನ್ಯಾಸಾಕಡೇ ಬೋಡೀ । ಏಕ ಮ್ಹಣತೀ ಹೇ ಗೋಷ್ಟೀ ಕುಡೀ । ದೇಹೋ ವೋಢಾವೋಢೀ ನ ಘಾಲಾವಾ ॥೧೫೩೬॥ ಏಕ ಮ್ಹಣತೀ ಪ್ರಾರಬ್ಧ ಪ್ರಮಾಣ । ಏಕ ಮ್ಹಣತೀ ಸತ್ಯ ಶಬ್ದಜ್ಞಾನ । ಏಕ ಮ್ಹಣತೀ ಧರಾವೇ ಮೌನ । ಅತಿಜಲ್ಪನ ನ ಕರಾವೇ ॥೧೫೩೭॥ ಏಕ ಮ್ಹಣತೀ ಸಾಂಡಾವೀ ವ್ಯುತ್ಪತ್ತೀ । ಜ್ಯಾಚೀ ಚಢೇ ಅಧಿಕ ಯುಕ್ತೀ । ತೋಚಿ ಜ್ಞಾತಾ ನಿಶ್ಚಿತೀ । ಸಾಂಗೋ ಕಿತೀ ಮೂರ್ಖಾಸೀ ॥೧೫೩೮॥ ಏಕ ಮ್ಹಣತೀ ತಪ ಪ್ರಮಾಣ । ಏಕ ಮ್ಹಣತೀ ಪುರಶ್ಚರಣ । ಏಕ ಮ್ಹಣತೀ ವೇದಾಧ್ಯಾಯನ । ದ್ಯಾವೇ ದಾನ ಏಕ ಮ್ಹಣತೀ ॥೧೫೩೯॥ ಏಕ ತೋ ಹೇ ಅವಘೇಚಿ ಮೋಡೀ । ಘಾಲೀ ಯೋಗಾಚಿಯೇ ಕಡಾಡೀ । ಲಾವೀ ಆಸನ ಮುದ್ರೇಚೀ ವೋಢೀ ।ಬೈಸವೀ ರೋಕಡೀ ವಾರಯಾವರೀ ॥೧೫೪೦॥ ಐಸೇ ನಾನಾ ವಾದ ಕರಿತಾ । ಏಕ ನಿಶ್ಚಯೋ ನವ್ಹೇ ಸರ್ವಥಾ । ಜ್ಞಾನಾಭಿಮಾನ ಅತಿಪಂಡಿತಾ । ಜ್ಞಾನ ತತ್ತ್ವತಾ ಕಳೇನಾ ॥೧೫೪೧॥ ಐಸೀ ಜ್ಞಾನಮಾರ್ಗೀಚೀ ಗತೀ । ನಾನಾ ಪರೀಂಚೀ ವಿಘ್ನೇ ಯೇತೀ । ವಿಕಲ್ಪೇ ನಾಸಲ್ಯಾ ವ್ಯುತ್ಪತ್ತೀ । ಮಾಝೀ ನಿಜಪ್ರಾಪ್ತೀ ತೇಥೇ ನಾಹೀ ॥೧೫೪೨॥ ತೈಸೀ ನವ್ಹೇ ಮಾಝೀ ಭಕ್ತೀ । ನಾಮಮಾತ್ರೇ ಮಜ ಪಾವತೀ । ನಾಮೇ ಉದ್ಧರಲೇ ನೇಣೋ ಕಿತೀ । ಹೇಚಿ ಭಾಗವತೀ ಬೋಲಿಲೇ ॥೧೫೪೩॥ ಮಾಝೇ ಕರಿತಾ ಗುಣವರ್ಣನ । ಕಾ ಹರಿಕಥಾ ನಾಮಸಂಕೀರ್ತನ । ತೇಥೇ ರಿಘೋನ ಶಕೇ ವಿಘ್ನ । ಗಡಗರ್ಜನ ಹರಿನಾಮೇ ॥೧೫೪೪॥ ಜೇಥೇ ಹರಿನಾಮಾಚೇ ಪವಾಡೇ । ತೇಥೇ ವಿಘ್ನ ಕೈಚೇ ಬಾಪುಡೇ । ವಿಘ್ನ ಪಳೇ ಮದ್ಭಕ್ತಾಪುಢೇ । ಉಘಡತೀ ಕವಾಡೇ ಮೋಕ್ಷಾಚೇ ॥೧೫೪೫॥

ಇಂತಹ ಪರಸ್ಥಿತಿಯಲ್ಲಿ ನಡುವೆಯೇ ಏತವು ಮುರಿಯಲು ಅಥವಾ ಹಗ್ಗವು ಹರಿಯಲು ಇಲ್ಲವೇ ಏತ ಎಳೆಯುವ ಎತ್ತು ಬೇನೆ ಬೀಳಲು ನೀರು ಉಪಲಬ್ಧವಾಗುವುದೇ ಇಲ್ಲ. ಆದ್ದರಿಂದ ಹೊಲದ ತೇವ ಒಣಗಿ ಹೋಗುವುದು. ಸಂಪೂರ್ಣ ಹೊಲವು ಸುಟ್ಟಂತಾಗಿ ಪೀಕು ಇಲ್ಲದಾಗುವುದು ॥೧೫೩೩॥ ಆದರೆ ನದೀ ಕಾಲುವೆಯು ಹಾಗಿರುವುದಿಲ್ಲ. ಒಂದು ಸಲ ನೀರಿನ ಒಡ್ಡು ತಯಾರಿಸಿದರೆ ಸಾಕು, ನೀರಿನ ಪ್ರವಾಹವು ಹಗಲು ರಾತ್ರಿ ಸತತವಾಗಿ ಹರಿಯುತ್ತಿರುವುದು ॥೧೫೩೪॥ ಜ್ಞಾನಮಾರ್ಗವು ಇದು ಬಾವಿಯ ಏತ ನೀರಿನಂತಾಗಿರುವುದು. ವಿದ್ವಾನ ಪಂಡಿತ ಜನರು ವೇದಶಾಸ್ತ್ರಗಳ ಅಭ್ಯಾಸವನ್ನು ಮಾಡಿ ನಿತ್ಯ ಯಾವುದು, ಅನಿತ್ಯ ಯಾವುದು ಎಂಬ ವಿಚಾರವನ್ನು ಮಾಡುತ್ತಲೇ ಇರುವರು ॥೧೫೩೫॥ ಒಬ್ಬನು ಕರ್ಮದತ್ತ ಜಗ್ಗುತ್ತಿರುವನು. ಇನ್ನೊಬ್ಬನು ಸನ್ಯಾಸತ್ವಕ್ಕೆ ಶ್ರೇಷ್ಠವೆಂದು ತಿಳಿದು ಮುಂಡನ ಮಾಡಿಕೊಳ್ಳಲು ಹೇಳುತ್ತಿರುವನು. ಕೆಲವರು ಈ ಸ್ಥಿತಿಯು ಯೋಗ್ಯವಲ್ಲ, ದೇಹಕ್ಕೆ ಸಂಕಟಗಳನ್ನು ಒಟ್ಟಬಾರದೆನ್ನುವರು ॥೧೫೩೬॥ ಕೆಲವರು ಪ್ರಾರಬ್ಧಕ್ಕೆ ನಿಜವೆನ್ನುವರು. ಕೆಲವರು ಶಬ್ದಜ್ಞಾನವು ಸತ್ಯವೆನ್ನುವರು. ಇನ್ನೂ ಕೆಲವರು ಬಹಳವಾಗಿ ಬಡಬಡಿಸುತ್ತ ಮಾತನಾಡದೇ ಮೌನವನ್ನು ಧರಿಸಬೇಕೆನ್ನುವರು ॥೧೫೩೭॥ ಪುನಃ ಒಬ್ಬನು ವಿದ್ವತ್ತೆಯನ್ನು ಬಿಟ್ಟುಬಿಡಬೇಕು. ಯುಕ್ತಿಯೇ ಶ್ರೇಷ್ಠವು. ಅವನೇ ನಿಜವಾದ ಜ್ಞಾನಿಯು. ಹೀಗೆ ಹೇಳುವ ಮೂರ್ಖರ ವರ್ಣನೆಯನ್ನು ಎಷ್ಟೆಂದು ಮಾಡಬೇಕು? ॥೧೫೩೮॥ ಕೆಲವರು ತಪಸ್ಸಿಗೆ ಶ್ರೇಷ್ಠವೆನ್ನುವರು. ಕೆಲವರು ಗಾಯತ್ರಿಯ ಪುನರಶ್ಚರಣಕ್ಕೆ ಅಧಿಕವಾಗಿ ಮಹತ್ವ ಕೊಡುವರು. ಕೆಲವರು ವೇದದ ಅಧ್ಯಯನ ಮಾಡಬೇಕೆನ್ನುವರು. ಇನ್ನೂ ಕೆಲವರು ದಾನಗಳನ್ನು ಕೊಡಬೇಕೆಂದು ಹೇಳುವರು ॥೧೫೩೯॥ ಯಾರೋ ಒಬ್ಬರು ಇವುಗಳೆಲ್ಲವನ್ನೂ ಬಿಟ್ಟುಬಿಡಿರಿ ಎಂದು ಹೇಳುವನು. ಯೋಗಭ್ಯಾಸವನ್ನು ಮಾಡಿರಿ ಎಂದು ಹೇಳುವನು. ಸಾಧಕನಿಗೆ ಆಸನಮುದ್ರೆಗಳ ಅಪೇಕ್ಷೆ ಹುಟ್ಟಿಸುವನು. ವಾಯು ಭಕ್ಷಣೆಯನ್ನು ಮಾಡಿ ಬದುಕಬೇಕೆಂದು ಹೇಳುವನು ॥೧೫೪೦॥ ಈ ಪ್ರಕಾರವಾಗಿ ಅನೇಕ ರೀತಿಗಳಿಂದ ವಾದಗಳನ್ನು ಮಾಡಿ ಕೊನೆಯಲ್ಲಿ ಈತನು ಯಾವುದು ಒಂದೂ ನಿಶ್ಚಯ ನಿರ್ಣಯಕ್ಕೆ ಬರುವುದೇ ಇಲ್ಲ. ಮಹಾ ಮಹಾ ಪಂಡಿತರಿಗೆ ಜ್ಞಾನದ ಅಭಿಮಾನವಿರುವುದರಿಂದ ಅವರಿಗೆ ನಿಜವಾದ ಜ್ಞಾನವು ತಿಳಿಯುವುದೇ ಇಲ್ಲ ॥೧೫೪೧॥ ಈ ಪ್ರಕಾರದ ಸ್ಥಿತಿಯು ಈ ಯಾವ ಜ್ಞಾನಮಾರ್ಗದ ಜನರದ್ದಾಗಿದೆ. ಆ ಯಾವ ಜ್ಞಾನಮಾರ್ಗದಲ್ಲಿ ಅನೇಕ ಪ್ರಕಾರಗಳ ವಿಘ್ನಗಳು ಬರುವುವು. ವಿಕಲ್ಪಗಳಿಂದ ವಿದ್ವತ್ತೆಯು ನಾಶವಾಗುವುದು. ಆದ್ದರಿಂದ ವಿದ್ವತ್ತೆಯಿಂದ ನನ್ನ ಪ್ರಾಪ್ತಿಯು ಆಗುವುದಿಲ್ಲ ॥೧೫೪೨॥ ಆದರೆ ನನ್ನ ಭಕ್ತಿಯು ಹೀಗಿರುವುದಿಲ್ಲ. ಭಕ್ತಿಸಂಪನ್ನ ಜನರು ನನ್ನ ನಾಮವನ್ನು ಭಜಿಸುವುದರಿಂದ ನನಗೆ ಪ್ರಾಪ್ತರಾಗುವರು. ನನ್ನ ನಾಮದಿಂದ ಅದೆಷ್ಟು ಜನರು ಉದ್ಧಾರರಾದರೆಂಬುದಕ್ಕೆ ಗಣಿತವೇ ಇಲ್ಲ. ಭಾಗವತದಲ್ಲಿ ಅದರ ವರ್ಣನೆಯನ್ನು ಮಾಡಲಾಗಿದೆ ॥೧೫೪೩॥ ನನ್ನ ಗುಣವರ್ಣನೆ ಅಥವಾ ಹರಿನಾಮ ಸಂಕೀರ್ತನವನ್ನು ಮಾಡಲು ಅಲ್ಲಿ ಯಾವ ವಿಘ್ನಗಳು ಪ್ರವೇಶವಾಗಲಾರವು. ಹರಿನಾಮದ ಗರ್ಜನೆಯು ಕಲ್ಲಿನ ಕೋಟೆಯಂತೆ ರಕ್ಷಣೆಯನ್ನು ಮಾಡುತ್ತಿರುವುದು ॥೧೫೪೪॥ ಎಲ್ಲಿ ಹರಿನಾಮದ ಕಥಾ ಕೀರ್ತನೆಗಳು ನಡೆಯುವುವೋ ಅಲ್ಲಿ ಪಾಪ, ಆ ಬಡಪಾಯಿ ವಿಘ್ನಗಳು ಎಲ್ಲಿಂದ ಬರಬೇಕು? ನನ್ನ ಭಕ್ತನ ಎದುರಿನಿಂದಲೇ ಅವು ಓಡಿಹೋಗುವುವು. ಹಾಗೆಯೇ ಮೋಕ್ಷದ ಬಾಗಿಲು ತೆರೆಯಲ್ಪಡುವುದು ॥೧೫೪೫॥

ಮಾಝೇ ಭಕ್ತ ಅತಿನಿರಾಶ । ನ ಧರಿತೀ ಮೋಕ್ಷಾಚೀ ಆಸ । ಯಾಲಾಗೀ ಮೀ ಹೃಷೀಕೇಶ । ತ್ಯಾಂಚ್ಯಾ ಭಾವಾರ್ಥಾಸ ಭೂಲಲೋ ॥೧೫೪೬॥ ಏವಂ ನಿರ್ವಿಘ್ನ ಮಜಮಾಜೀ ಸರತಾ । ಮಾರ್ಗ ನಾಹೀ ಭಕ್ತಿಪರತಾ । ತ್ರಿಸತ್ಯ ಸತ್ಯ ಗಾ ಸರ್ವಥಾ । ಭಕ್ತಿ ತತ್ತ್ವತಾ ಮಜ ಪಢಿಯೇ ॥೧೫೪೭॥ ಐಶೀ ನಿಜಭಕ್ತಿ ಸುಲಭ ಪುಢೀ । ದೇವೋ ಸಾಂಗೇ ಅತಿಆವಡೀ । ಉದ್ಧವಾಸೀ ಹರಿಭಕ್ತೀಚೀ ಗೋಡೀ । ಹರ್ಷಾಚೀ ಗುಢೀ ಉಭಾರಿಲೀ ತೇಣೇ ॥೧೫೪೮॥ ಜೇ ಉದ್ಧವಾಚ್ಯಾ ಜೀವೀ ಹೋತೇ । ತೇಚಿ ನಿರೂಪಿಲೇ ಶ್ರೀಅನಂತೇ । ಹರಿಖೇ ನಾಚೋ ಲಾಗಲಾ ತೇಥೇ । ಜೀವೇ ಶ್ರೀಕೃಷ್ಣಾತೇ ವೋವಾಳೀ ॥೧೫೪೯॥ ಐಶೀ ತುಝೀ ಸುಲಭ ಭಕ್ತೀ । ತರೀ ಅವಘೇಚಿ ಭಕ್ತಿ ಕಾ ನ ಕರಿತೀ । ದೇವೋ ಮ್ಹಣೇ ಭಾಗ್ಯೇವೀಣ ಮಾಝೀ ಭಕ್ತಿ । ನ ಘಡೇ ನಿಶ್ಚಿತೀ ಉದ್ಧವಾ ॥೧೫೫೦॥ ಕೋಟಿ ಜನ್ಮಾಂಚೀ ಪುಣ್ಯಸಂಪತ್ತೀ। ಜರೀ ಗಾಂಠೀ ಅಸೇಲ ಆಇತೀ । ತ್ೈ ಜೋಡೇ ಮಾಝ್ಯಾ ಸಂತಾಂಚೀ ಸಂಗತೀ । ಸತ್ಸಂಗೇ ಭಕ್ತೀ ಉಲ್ಹಾಸೇ ॥೧೫೫೧॥ ಸತ್ಸಂಗೇ ಭಕ್ತೀಚೀ ಪ್ರಾಪ್ತೀ । ಉದ್ಧವಾ ಜಾಣ ತೂ ನಿಶ್ಚಿತೀ । ಸಂತಾಪಾಶೀ ಮಾಝೀ ಭಕ್ತೀ । ವಾಸ ಪಾಹತೀ ಉಭೀ ಅಸೇ ॥೧೫೫೨॥ ಹೋ ಕಾ ತೂ ಸಂತ ಮಾಝೇ ಮ್ಹಣಸೀ । ಯೇರ ಲೋಕ ಸಾಂಡಿಲೇ ಕೋಣಾಪಾಶೀ । ತುಝೀ ಭಕ್ತೀ ಅಹರ್ನಿಶೀ । ಸಂತಾಪಾಶೀ ಕಾ ಅಸೇ ॥೧೫೫೩॥ ಉದ್ಧವಾ ಐಸಾ ವಿಕಲ್ಪ ಭಾವೋ । ಯೇಥೇ ಧರಾವಯಾ ನಾಹೀ ಠಾವೋ । ಸಂತಭಜನೀ ಮಾಝಾ ಸದ್ಭಾವೋ । ಕೇಲಾಕೋಣ ಪಾಹಾವೋ ಭಕ್ತೀಚಾ ॥೧೫೫೪॥ ಸಂತಸೇವಾ ಕರಾವಯಾಸೀ । ಕೋಣ ಕಾರಣ ತೂ ಮಜ ಮ್ಹಣಸೀ । ಅನಾವರಾ ಮಜ ಅನಂತಾಸೀ । ತಿಹೀ ನಿಜಭಾವೇಸೀ ಆಕಳಿಲೇ ॥೧೫೫೫॥ ಮಜ ಆಕಳಿಲೇ ಜ್ಯಾ ಹೇತೂ । ತೇಹೀ ಸಾಂಗೇನ ತುಜ ಮಾತೂ । ಮಜವಾಂಚೂನಿ ಜಗಾಆಂತೂ । ದುಸರಾ ಅರ್ಥೂ ನೇಣತೀ ॥೧೫೫೬॥ ಆಪುಲೇ ಜೇ ಸ್ವಕರ್ಮ। ಮಜ ಅರ್ಪಿಲೇ ಸರ್ವ ಧರ್ಮ । ದೇಹ ಗೇಹ ರೂಪ ನಾಮ । ಆಶ್ರಮಧರ್ಮ ಮದರ್ಪಣ ॥೧೫೫೭॥ ಕಲ್ಪಾಂತೀಚೇನಿ ಕಡಕಡಾಟೇ । ಜೈ ಧಾಕೇ ಧಾಕೇ ವಿರಾಟ ಆಟೇ । ಐಸೀ ವೋಢವಲ್ಯಾ ಆಚಾಟೇ । ಮಜವೇಗಳೇ ನೇಟೇ ನ ಢಳತೀ ॥೧೫೫೮॥ ತುಟೋನಿ ಪಡತಾ ಆಕಾಶ । ಆಣಿಕಾಚೀ ತೇ ನ ಪಾಹತೀ ವಾಸ । ಯಾಲಾಗೀ ಮೀ ಹೃಷೀಕೇಶ । ತ್ಯಾಂಚಾ ದಾಸ ಝಾಲೋ ಅಸೇ ॥೧೫೫೯॥

ನನ್ನ ಭಕ್ತರಾದ ಇವರು ಪೂರ್ಣವಾಗಿ ನಿರಿಚ್ಛರಾಗಿರುವರು. ಅವರ ಮನದಲ್ಲಿ ಮೋಕ್ಷದ ವಿಚಾರವಿರುವುದಿಲ್ಲ. ಆದ್ದರಿಂದ ಭಗವಂತನಾದ ನಾನು ಅವರ ಶುದ್ಧ ಭಾವಕ್ಕೆ ಮಾರು ಹೋಗಿರುವೆನು ॥೧೫೪೬॥ ನಿರ್ವಿಘ್ನದಿಂದ ನನ್ನ ಪ್ರಾಪ್ತಿಗಾಗಿ ಭಕ್ತಿಯ ಹೊರತಾದ ಅನ್ಯ ಸರಳ ಮಾರ್ಗವಿರುವುದಿಲ್ಲ. ಇದು ತ್ರಿವಾರ ಸತ್ಯವೆಂದು ತಿಳಿದುಕೋ. ಎಲ್ಲಕ್ಕಿಂತಲೂ ನನಗೆ ಭಕ್ತಿಯೇ ಅತಿಶಯವಾಗಿ ಪ್ರಿಯವಾಗಿರುವುದು ॥೧೫೪೭॥ ಹೀಗೆ ಸುಲಭವಾಗಿರುವ ಭಕ್ತಿಯನ್ನು ದೇವನು ಅತ್ಯಂತ ಪ್ರೇಮದಿಂದ ಸ್ಪಷ್ಟವಾಗಿ ಹೇಳಿದನು. ಉದ್ಧವನು ಹರಿಭಕ್ತಿಯ ಸಂತೋಷದಲ್ಲಿ ತತ್ಕಾಲಕ್ಕೆ ಆನಂದದ ಧ್ವಜವನ್ನು ನಿಲ್ಲಿಸಿದನು ॥೧೫೪೮॥ ಉದ್ಧವನ ಮನಸ್ಸಿನಲ್ಲಿದ್ದದ್ದನ್ನೇ ಶ್ರೀಕೃಷ್ಣನು ಹೇಳಿದನು. ಆಗ ಆತನು ಅತಿ ಹರ್ಷದಿಂದ ಕುಣಿಯಲಾರಂಭಿಸಿದನು. ಶ್ರೀಕೃಷ್ಣನ ಮೇಲಿನಿಂದ ಆತನು ತನ್ನ ಜೀವವನ್ನೇ ನಿವಾಳಿಸಿ ಒಗೆದನು ॥೧೫೪೯॥ ಆಗ ಉದ್ಧವನು ಹೀಗೆ ಕೇಳಿದನು; ಶ್ರೀಕೃಷ್ಣನೇ, ನಿನ್ನ ಭಕ್ತಿಯು ಇಷ್ಟೊಂದು ಸುಲಭವಾಗಿರಲು ಎಲ್ಲರೂ ಇದನ್ನೇ ಏಕೆ ಮಾಡುವುದಿಲ್ಲ? ಆಗ ದೇವನು ಹೀಗೆ ಉತ್ತರಿಸಿದನು. ಹೇ ಉದ್ಧವನೇ, ಭಾಗ್ಯವಿಲ್ಲದೇ ನನ್ನ ಭಕ್ತಿಯು ಎಂದಿಗೂ ಸಾಧಿಸದು. ಇದನ್ನು ಲಕ್ಷದಲ್ಲಿಡು ॥೧೫೫೦॥ ಕೋಟ್ಯಾವಧಿ ಜನ್ಮಗಳ ಪುಣ್ಯ ಸಂಗ್ರಹವಿದ್ದಾಗಲೇ ಮಾತ್ರ ನನ್ನ ಸಂತರ ಸಂಗತಿಯು ಸಾಧಿಸುವುದು. ಈ ಯಾವ ಸತ್ಸಂಗತಿಯಿಂದ ನನ್ನ ಭಕ್ತಿಯು ಉತ್ಪನ್ನವಾಗುವುದು ॥೧೫೫೧॥ ಹೇ ಉದ್ಧವನೇ, ಸತ್ಸಂಗತಿಯಿಂದಲೇ ಮಾತ್ರ ನನ್ನ ಪ್ರಾಪ್ತಿಯಾಗುವುದು. ಇದನ್ನು ನೀನು ನಿಶ್ಚಯವಾಗಿ ಅರಿತುಕೋ. ನನ್ನ ಭಕ್ತಿಯು ಸಂತರಲ್ಲಿ ದಾರಿ ಕಾಯುತ್ತ ನಿಂತಿರುವುದು ॥೧೫೫೨॥ ಸಂತರಿಗೆ ನೀನು ''ನನ್ನವರು'' ಎಂದು ಹೇಳುತ್ತಿರುವೆ. ಹಾಗಾದರೆ ಇತರ ಜನರನ್ನು ಯಾರ ಮೇಲೆ ಅವಲಂಬಿಸಿರುವೆ? ನಿನ್ನ ಭಕ್ತಿಯು ಸಂತರಲ್ಲಿ ಹಗಲು ರಾತ್ರಿ ಏಕೆ ಇರುವುದು? ॥೧೫೫೩॥ ಹೇ ಉದ್ಧವನೇ, ಹೀಗೆ ನೀನು ವಿಕಲ್ಪವನ್ನು ಮನದಲ್ಲಿ ತರಲು ಸ್ಥಳವೇ ಇಲ್ಲ. ಸಂತರ ಭಜನೆಯಲ್ಲಿ ನನ್ನದು ಅತಿಶಯವಾದ ಶ್ರದ್ಧೆವಿರುವುದು. ಅಂದಮೇಲೆ ಭಕ್ತಿಯ ಮಾತಂತೂ ದೂರವೇ ಉಳಿಯಿತು ॥೧೫೫೪॥ ಸಂತರ ಸೇವೆಯನ್ನಾದರೂ ಏಕೆ ಮಾಡಬೇಕೆಂಬ ಭಾವನೆಯು ನಿನ್ನ ಮನದಲ್ಲಿ ಬರಬಹುದು. ಆದರೆ ಉದ್ಧವನೇ, ಅನಂತನಾದ ನನಗೆ ಯಾರಿಗೂ ಏನೆಂದೂ ಊಹಿಸಲಾಗವುದಿಲ್ಲ. ನಾನು ಮಾತ್ರ ಸಂತರ ಭಕ್ತಿಯಿಂದ ಪೂರ್ಣವಾಗಿ ಬಂಧಿಸಲ್ಪಟ್ಟಿರುವೆನು ॥೧೫೫೫॥ ಆತನು ನನ್ನನ್ನು ಯಾವ ಉದ್ದೇಶಕ್ಕಾಗಿ ಬಂಧಿಸಿರುವೆನೆಂಬುವ ಕಾರಣವನ್ನು ನಾನು ನಿನಗೆ ಈಗ ಹೇಳುವೆನು, ಕೇಳು. ಅವರಿಗೆ ಅಖಿಲ ಸೃಷ್ಟಿಯಲ್ಲಿ ನನ್ನ ಹೊರತಾಗಿ ಯಾವುದೂ ಕಾಣಿಸುವುದಿಲ್ಲ ॥೧೫೫೬॥ ಆತನು ತನ್ನ ಯಾವ ಸ್ವಕರ್ಮಗಳನ್ನು ನನ್ನಲ್ಲಿಯೇ ಅರ್ಪಣೆ ಮಾಡಿರುವನು. ಆತನು ತನ್ನ ಸರ್ವ ಧರ್ಮ, ಮನೆಮಾರು, ರೂಪ, ನಾಮ, ಸರ್ವಪ್ರಕಾರಗಳ ಆಶ್ರಮ ಧರ್ಮ ನನಗೆನೇ ಅರ್ಪಿಸಿರುವನು ॥೧೫೫೭॥ ಯಾವ ಸಮಯದಲ್ಲಿ ಕಲ್ಪಾಂತದ ವೇಳೆಯು ಬರುವುದೋ, ಆಗ ಘನ ಗರ್ಜನೆಯಿಂದ ಭಯಭೀತರಾಗಿ ಪೂರ್ಣ ವಿಶ್ವವೇ ಲಯವಾಗಿ ಹೋಗುವುದು. ಈ ಪ್ರಕಾರದ ಮಹಾಭಯಂಕರವಾದ ಅನಿಷ್ಟವು ಒದಗಿ ಬಂದರೂ ಸಹ ನನ್ನ ಭಕ್ತನು ಧೈರ್ಯದಿಂದ ನನ್ನಿಂದ ದೂರನಾಗುವುದೇ ಇಲ್ಲ ॥೧೫೫೮॥ ಅವರ ಮೇಲಿನಿಂದ ಆಕಾಶವೇ ಕಳಚಿ ಬೀಳಲಿ. ಆದರೂ ಸಹ ಅವರು ಅನ್ಯರಾದ ಯಾರ ಆಶೆಯನ್ನೂ ಮಾಡಲಾರರು. ಆದ್ದರಿಂದಲೇ ಹೃಷೀಕೇಶಿಯಾದ ನಾನು ಅವರ ದಾಸನಾಗಿ ಇರುವೆನು ॥೧೫೫೯॥

ನವಲ ಭಾವಾರ್ಥಾಚಾ ಮಹಿಮಾ । ಮಜ ವಿಶ್ವಾತ್ಮ್ಯಾಚೇ ಝಾಲೇ ತೇ ಆತ್ಮಾ । ಐಸೇ ಲಾಹಾಣೇ ತಯಾ ಆಮ್ಹಾ
। ಮಜ ಪುರುಷೋತ್ತಮಾ ವಶ ಕೇಲೇ ॥೧೫೬೦॥ ಸಂತಾಂಸೀ ಮಜ ಭಿನ್ನಪಣ । ಕಲ್ಪಾಂತೀಹೀ ನಾಹೀ ಜಾಣ ।
ತುಜ ಜಿವ್ಹಾರೀಚೀ ಉಣಖೂಣ । ತುಜ ಸಂಪೂರ್ಣ ಸಾಂಗಿತಲೀ ॥೧೫೬೧॥ ಸಂತ ಮಾಝೇ ಝಾಲೇ ಮಾಝ್ಯಾ
ಭಕ್ತೀ । ಯೇರ ಲೋಕ ಮಜ ನ ಭಜತೀ । ತೇ ಮ್ಯಾ ದಿಧಲೇ ಕಾಳಾಚ್ಯಾ ಹಾತೀ । ಅದೃಷ್ಟಗತೀ ಬಾಂಧೋನೀ
॥೧೫೬೨॥ ಮಾಝಿಯಾ ಸಂತಾಪಾಶೀ । ಯಾವಯಾ ಪ್ರಾಪ್ತೀ ನಾಹೀ ಕಾಳಾಸೀ । ಮೀ ಸದಾ ಸಂರಕ್ಷಿತಾ ತ್ಯಾಂಸೀ
। ತೇ ಕಳಿಕಾಳಾಸೀ ನಾಗವತೀ ॥೧೫೬೩॥ ಯಾಪರೀ ಸಂತಾಚೇ ಸರ್ವ ಕಾಜ । ಕರಿತಾ ಮಜ ನಾಹೀ ಲಾಜ । ಉದ್ಧವಾ
ಮಾಝೇ ಅತ್ಯಂತ ನಿಜಗುಜ । ತೇ ಮೀ ತುಜ ಸಾಂಗೇನ ॥೧೫೬೪॥

ಅಥೈತತ್ಪರಂ ಗುಹ್ಯಂ ಶೃಣ್ವತೋ ಯದುನಂದನ । ಸುಗೋಪ್ಯಮಪಿ ವಕ್ಷ್ಯಾಮಿ ತ್ವಂ ಮೇ ಭೃತ್ಯಃ ಸುಹೃತ್ಸಖಾ ॥೧೯॥

ಅರ್ಥ:- ಪ್ರಿಯ ಉದ್ಧವನೇ, ಈಗ ನಾನು ನಿನಗೆ ಅತ್ಯಂತ ಗೌಪ್ಯವಾದ ಪರಮ ರಹಸ್ಯವಾದ ಮಾತನ್ನು ಹೇಳುವೆನು. ಕಾರಣ ನೀನು ನನ್ನ ಪ್ರಿಯ ಸೇವಕನು, ಹಿತಕಾರಕನು, ಸುಹೃದನು ಮತ್ತು ಪ್ರಿಯಸಖನಾಗಿರುವೆ ಮತ್ತು ಕೇಳಲಿಕ್ಕೆ ಉತ್ಸುಕನಾಗಿರುವೆ.

ಐಕೇ ಯದುವಂಶಕುಳತಿಳಕಾ । ತೂ ಸ್ವಗೋತ್ರ ಭೃತ್ಯ ಸಹೃದ ಸಖಾ । ತುಜ ನ ಸಾಂಗಿಜೇ ಹಾ ಆವಾಂಕಾ
। ಸರ್ವಥಾ ದೇಖಾ ನ ಧರವೇ ॥೧೫೬೫॥ ಮಜ ಗುಪ್ತಾಚೇ ಗುಪ್ತಸಾರ । ಸಾರಾಚೇ ಗುಪ್ತ ಭಾಂಡಾರ । ತೇ
ಭಾಂಡಾರೀಚೇ ನಿಜ ಸಾರ । ತುಜ ಮೀ ಸಾಚಾರ ಸಾಂಗೇನ ॥೧೫೬೬॥ ಐಸೇ ಗುಹ್ಯಾಚೇ ಗುಹ್ಯ ನಿಶ್ಚಿತೀ । ನಾಹೀ
ಸಾಂಗಿತಲೇ ಕೋಣಾಪ್ರತೀ । ತೂ ಸಖಾ ಜಿವಲಗ ಸಾಂಗಾತೀ । ಅನನ್ಯ ಪ್ರೀತೀ ಮಜಲಾಗೀ ॥೧೫೬೭॥ ಕೇವಳ
ಕೋರಡೀ ನವ್ಹೇ ಪ್ರೀತೀ । ತೈಸೀಚ ಮಾಝೀ ಅನನ್ಯಭಕ್ತೀ । ಭಕ್ತೀ ಸಾರಿಖೀ ವಿರಕ್ತೀ । ಅವಂಚಕ ಸ್ಥಿತೀ ತುಜಪಾಶೀ
॥೧೫೬೮॥ ಯಾದವವಂಶೀ ಪಾಹತಾ ದೇಖ । ಮಜಸಮಾನ ತೂಚಿ ಏಕ । ಸಮಾನ ಸಗೋತ್ರ ಆಣಿ ಸೇವಕ । ಹೇ
ಅಲೋಕಿಕ ಉದ್ಧವಾ ॥೧೫೬೯॥ ನವ್ಹೇಸೀ ಕಾರ್ಯಾರ್ಥೀ ಸೇವಕ । ಸರ್ವಭಾವೇ ವಿಶ್ವಾಸುಕ । ಕಿತೀ ವಾಣೂ
ಗುಣ ಏಕಏಕ । ಪರಮ ಹರಿಖ ಮಜ ಝಾಲಾ ॥೧೫೭೦॥ ಯಾಲಾಗೀ ಗುಹ್ಯ ತೇಹೀ ತುಝ್ಯಾ ಠಾಯೀ ।
ವಂಚಾವಯಾ ಮಜ ಧೀರು ನಾಹೀ । ಹೃದಯ ಆಲಿಂಗಿಲೇ ಹೃದಯೀ । ಚಿದಾನಂದೂ ಪಾಹೀ ತುಷ್ಟಲಾ ॥೧೫೭೧॥

ಹೀಗೆ ಪ್ರೇಮಭಾವದ ಮಹಿಮೆಯು ವಿಲಕ್ಷಣವಾಗಿರುವುದು. ನನ್ನ ವಿಶ್ವಾತ್ಮನ ಆತ್ಮವೇ ಇವರಾಗಿರುವರು. ಇದರಲ್ಲಿ ಅವರ ಮತ್ತು ನಮ್ಮ ಐಕ್ಯವಿರುವುದು. ಅವರು ಪುರುಷೋತ್ತಮನಾದ ನನ್ನನ್ನು ವಶ ಮಾಡಿಕೊಂಡಿರುವರು ॥೧೫೬೦॥ ಸಂತರಲ್ಲಿ ಮತ್ತು ನನ್ನಲ್ಲಿ ಕಲ್ಪಾಂತಕ್ಕೂ ದ್ವೈತಭಾವವು ಹುಟ್ಟಲಾರದು. ಈ ಯಾವ ನನ್ನ ಅಂತಃಕರಣದಲ್ಲಿನ ಗುಟ್ಟನ್ನು ನಾನು ಸಂಪೂರ್ಣವಾಗಿ ತಿಳಿಸಿದೆನು ॥೧೫೬೧॥ ನನ್ನ ಭಕ್ತಿಯಿಂದಲೇ ಸಂತರು ನನ್ನವರಾದರು. ಇತರ ಜನರು ನನ್ನ ಭಕ್ತಿಯನ್ನು ಮಾಡುವುದೇ ಇಲ್ಲ. ಆದ್ದರಿಂದ ನಾನು ಅವರಿಗೆ ಪ್ರಾರಬ್ಧದ ಚಕ್ರದಲ್ಲಿ ಸಿಲುಕಿಸಿ ಕಾಲನ ವಶಕ್ಕೆ ಕೊಟ್ಟಿರುವೆನು ॥೧೫೬೨॥ ಈ ಯಾವ ಕಾಲನಿಗೆ ನನ್ನ ಸಂತರ ಸಮೀಪ ಕೂಡ ಬರುವ ಸಾಮರ್ಥ್ಯವಿರುವುದಿಲ್ಲ. ಏಕೆಂದರೆ ನಾನು ಸರ್ವಕಾಲಕ್ಕೂ ಅವರ ರಕ್ಷಣೆಯನ್ನು ಮಾಡುತ್ತಿರುವೆನು. ಆದ್ದರಿಂದ ಸಂತರು ಕಲಿಕಾಲನ ಹೊಡೆತದಲ್ಲಿ ಸಿಲುಕಿಕೊಳ್ಳುವುದಿಲ್ಲ ॥೧೫೬೩॥ ಹೇ ಉದ್ಧವನೇ, ಈ ಪ್ರಕಾರವಾಗಿ ಸಂತರ ಯಾವುದೇ ಕಾರ್ಯಗಳನ್ನು ಮಾಡಲು ನನಗೆ ಯಾವುದೇ ನಾಚಿಕೆಯಾಗಲಾರದು, ಈಗ ನಾನು ಅತ್ಯಂತ ಗುಟ್ಟಾಗಿರುವ ರಹಸ್ಯವನ್ನು ಹೇಳುವೆನು ॥೧೫೬೪॥

ಯದುಕುಲಕ್ಕೆ ಭೂಷಣನಾಗಿರುವ ಹೇ ಉದ್ಧವನೇ, ಈಗ ಕೇಳು. ನೀನು ನನ್ನ ಆಪ್ತನಾಗಿರುವೆ, ಸೇವಕ, ಸುಹೃದ ಮತ್ತು ಸ್ನೇಹಿತನಾಗಿರುವೆ. ಅಂದಮೇಲೆ ನಿನಗೆ ಹೇಳದೇ ಇರುವ ಧೈರ್ಯವು ನನಗೆ ಸಾಲದು ॥೧೫೬೫॥ ಆದ್ದರಿಂದ ನನ್ನ ಗುಹ್ಯದಲ್ಲಿಯೇ ಗುಹ್ಯವಾಗಿರುವ ಸಾರವನ್ನು, ಈ ಸಾರದಲ್ಲಿಯೇ ಗುಪ್ತವಾಗಿರುವ ಭಾಂಡಾರದಲ್ಲಿಯೂ ಕೂಡ ಗುಪ್ತವಾಗಿರುವ ತತ್ವವನ್ನು ಈಗ ನಾನು ನಿಜವಾಗಿಯೂ ನಿನಗೆ ಹೇಳುತ್ತೇನೆ ॥೧೫೬೬॥ ನಿಜವಾಗಿಯೂ ನೋಡಿದರೆ ನಾನು ಇಂತಹ ಗುಹ್ಯದಲ್ಲಿನ ಗುಹ್ಯವನ್ನು ಯಾರಿಗೂ ಹೇಳಿರುವುದಿಲ್ಲ. ಆದರೆ ನೀನು ನನ್ನ ಜೀವದ ಮಿತ್ರನಾಗಿರುವೆ ಹಾಗೂ ನನ್ನಲ್ಲಿಯೇ ಯಾವಾಗಲೂ ಇರುವೆ. ನನ್ನಲ್ಲಿ ನಿನ್ನ ಅತಿಶಯವಾದ ಪ್ರೇಮವಿರುವುದು ॥೧೫೬೭॥ ಇದು ಕೂಡ ಒಣಪ್ರೇಮವಲ್ಲ. ನಿನ್ನಂತೆ ನನ್ನಲ್ಲಿಯೂ ನಿನ್ನ ಮೇಲೆ ಅನನ್ಯ ಭಕ್ತಿಯಿರುವುದು. ಈ ಭಕ್ತಿಯಂತೆ ನಿನ್ನ ಅಂತಃಕರಣದಲ್ಲಿ ವಿರಕ್ತಿಯು ಕೂಡ ಇರುವುದು. ನಿನ್ನ ವೃತ್ತಿಯು ಪರಿಪೂರ್ಣವಾಗಿ ನಿಷ್ಕಪಟವಾಗಿರುವುದು ॥೧೫೬೮॥ ಹೇ ಉದ್ಧವನೇ, ಯಾದವಕುಲದಲ್ಲಿಯೇ ಶೋಧಮಾಡಿ ನೋಡಲು ನನ್ನಂತೆ ನೀನೊಬ್ಬನೇ ಮಾತ್ರ ಇರುವೆ. ನೀನು ನನ್ನ ಗೋತ್ರದವನೇ ಆಗಿರುವೆ, ನನ್ನ ಸೇವಕನೂ ಸಹ ಆಗಿರುವೆ ॥೧೫೬೯॥ ಕೇವಲ ಕೆಲಸ ಮಾಡುವ ಸೇವಕ ನೀನಲ್ಲ. ಆದರೆ ಸರ್ವ ಪ್ರಕಾರವಾಗಿ ವಿಶ್ವಾಸಕ್ಕೆ ಪಾತ್ರನಾದ ಸೇವಕನಾಗಿರುವೆ. ನಿನ್ನ ಒಂದೊಂದೇ ಗುಣಗಳ ವರ್ಣನೆಯನ್ನು ಎಷ್ಟೆಂದು ಮಾಡಬೇಕು? ಇದನ್ನು ಹೇಳುತ್ತಿರಲು ನನಗೆ ಅತಿಶಯವಾಗಿ ಸಂತೋಷವಾಗುವುದು ॥೧೫೭೦॥ ಆದ್ದರಿಂದಲೇ ನನ್ನ ಪರಮ ರಹಸ್ಯವನ್ನು ನಿನ್ನಿಂದ ಮುಚ್ಚಿಡುವ ಧೀರತನವು ನನ್ನಲ್ಲಿರುವುದಿಲ್ಲ. ಹೀಗೆ ಹೇಳುತ್ತ ಶ್ರೀಕೃಷ್ಣನು ಉದ್ಧವನಿಗೆ ಆಲಿಂಗನವನ್ನು ಕೊಟ್ಟನು. ಆಗ ಚಿದಾನಂದನಾಗಿರುವ ಶ್ರೀಕೃಷ್ಣನು ಸಂತುಷ್ಟನಾದನು ॥೧೫೭೧॥

ಮಗ ಮ್ಹಣೇ ಸಾವಧಾನ । ಸಾದರ ಆಇಕ ಮಾಝೇ ವಚನ । ತುಜ ಫಾವಲ್ಯಾ ಮಾಝೇ ಗುಹ್ಯ ಜ್ಞಾನ । ವಂಶ ಉದ್ಧರಣ ತುಝೇನಿ ॥೧೫೭೨॥ ಜೇ ವಂಶೀ ಹೋಯ ಬ್ರಹ್ಮ ಜ್ಞಾನೀ । ತೋ ವಂಶ ಪವಿತ್ರ ತ್ಯಾಚೇನಿ । ಹೇ ಸತ್ಯ ಜಾಣ ಮಾಝೀ ವಾಣೀ । ವಿಕಲ್ಪ ಮನಿ ನ ಧರಾವಾ ॥೧೫೭೩॥ ಮ್ಹಣಸೀ ಸ್ವಯೇ ತೂ ಬ್ರಹ್ಮ ಪೂರ್ಣ । ವಂಶೀ ಅವತರಲಾಸೀ ನಾರಾಯಣ । ತೇಣೇ ವಂಶ ಉದ್ಧರಲಾ ಜಾಣ । ಮಾಝೇ ಜ್ಞಾನ ತೇ ಕಿತೀ ॥೧೫೭೪॥ ತರೀ ನಾಮ ರೂಪ ಜಾತಿ ಗೋತ । ಯಾ ಅವಘ್ಯಾಂಸೀ ಮೀ ಅಲಿಪ್ತ । ಸಕಳ ಕುಳೇಸೀ ಮೀ ಕುಳವಂತ । ಗೋತ ಸಮಸ್ತ ಜಗ ಮಾಝೇ ॥೧೫೭೫॥ ಐಸೇ ಮ್ಹಣೋನಿ ನಿಜಗುಹ್ಯಸಾರ । ತುಜ ಮೀ ಸಾಂಗೇನ ಸಾಚಾರ । ತೇಣೇ ಹೋಈಲ ಜಗಾಚಾ ಉದ್ಧಾರ। ಐಸೇ ಶಾರಂಗಧರ ಬೋಲಿಲೇ॥೧೫೭೬॥ ತೇ ಐಕಾವಯಾ ಗುಹ್ಯ ಜ್ಞಾನ । ಉದ್ಧವೇ ಮನಾಚೇ ಉಘಡಿಲೇ ಕಾನ । ಸಾವಧ ಪಾಹತಾ ಹರೀಚೇ ವದನ । ನಯನೀ ನಯನ ವಿಗುಂತಲೇ ॥೧೫೭೭॥ ಯಾಪರೀ ಉದ್ಧವ ಸಾವಧಾನ। ತ್ಯಾಸೀ ಕೃಷ್ಣ ಸಾಂಗೇಲ ಗುಹ್ಯ ಜ್ಞಾನ । ಪುಢಿಲೇ ಅಧ್ಯಾಯೀ ಅತಿಗಹನ । ರಸಾಳ ನಿರೂಪಣ ಹರೀಚೇ ॥೧೫೭೮॥ ಏಕಾ ವಿನವೀ ಜನಾರ್ದನ । ಸಂತೀ ಮಜ ದ್ಯಾವೇ ಅವಧಾನ । ಶ್ರೋತೀ ವ್ಹಾವೇ ಸಾವಧಾನ । ಮಸ್ತಕೀ ಚರಣ ವಂದಿಲೇ ॥೧೫೭೯॥ ತುಮಚೇನಿ ಪದಪ್ರಸಾದೇ । ಶ್ರೀಭಾಗವತೀಚೇ ಶ್ಲೋಕಪದೇ । ವಾಖಾಣೇನ ಅರ್ಥಾವಬೋಧೇ । ಸಂತ ಸ್ವಾನಂದೇ ತುಷ್ಟಲಿಯಾ ॥೧೫೮೦॥ ಯಾಲಾಗೀ ಏಕಾ ಶರಣ ಜನಾರ್ದನೀ । ತಂವ ಜನಾರ್ದನಚೀ ಏಕಪಣೀ । ಜೇವೀ ಕಾ ಸಾಗರೀಚೇ ಪಾಣೀ । ತರಂಗಪಣೇ ವಿರಾಜೇ ॥೧೫೮೧॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಏಕಾಕಾರಟೀಕಾಯಾಂ
ಶ್ರೀಕೃಷ್ಣೋದ್ಧವಸಂವಾದೇ ಏಕಾದಶಪೂಜಾವಿಧಾನಯೋಗೋ ನಾಮ ಏಕಾದಶೋಽಧ್ಯಾಯಃ ಸಮಾಪ್ತ:

॥ ಶ್ರೀಕೃಷ್ಣಾರ್ಪಣಮಸ್ತು ॥

ತದ ನಂತರ ಶ್ರೀಕೃಷ್ಣನು ಹೇಳಿದನು; ನೀನೀಗ ಸಾವಧಾನವಾಗಿ ಸ್ಪಷ್ಟವಾಗಿ ಲಕ್ಷ ಕೊಟ್ಟು ನನ್ನ ವಿಚಾರಗಳನ್ನು ಆದರಪೂರ್ವಕವಾಗಿ ಕೇಳು. ಈ ನನ್ನ ಗುಹ್ಯ ಜ್ಞಾನವು ನಿನಗೆ ದೊರೆಯಲು ಅದರಿಂದ ಸರ್ವ ವಂಶವೂ ಉದ್ಧಾರವಾಗುವುದು ॥೧೫೭೨॥ ಏಕೆಂದರೆ, ಯಾವ ವಂಶದಲ್ಲಿ ಬ್ರಹ್ಮಜ್ಞಾನಿಯಾಗುವನೋ, ಆತನಿಂದ ಆ ವಂಶವು ಪಾವನವಾಗುವುದು. ಈ ಯಾವ ನನ್ನ ವಿಚಾರವು ಪರಿಪೂರ್ಣವಾಗಿ ಸತ್ಯವಾಗಿರುವುದೆಂದು ತಿಳಿದುಕೋ. ಈ ವಿಷಯದಲ್ಲಿ ಯಾವುದೇ ಪ್ರಕಾರದ ವಿಕಲ್ಪವನ್ನು ಮನದಲ್ಲಿ ತರಬೇಡ ॥೧೫೭೩॥ ನೀನು ಸ್ವತ: ಪೂರ್ಣಬ್ರಹ್ಮ ನಾರಾಯಣನು ಈ ಯಾವ ನಮ್ಮ ವಂಶದಲ್ಲಿ ಅವತರಿಸಿರುವೆ, ಆದ್ದರಿಂದ ಯಾದವ ವಂಶವು ಉದ್ಧಾರವಾಯಿತು. ನಿನ್ನೆದುರಿನಲ್ಲಿ ನನ್ನ ಜ್ಞಾನವಾದರೂ ಎಂತಹದ್ದು? ಎಂದು ನೀನು ಹೀಗೆ ಹೇಳಬಹುದು. ಅದಕ್ಕಾಗಿ ಕೇಳು ॥೧೫೭೪॥ ನಾನು ನಾಮ, ರೂಪ, ಜಾತಿ, ಕುಲ ಈ ಎಲ್ಲವುಗಳಿಂದ ಅಲಿಪ್ತನಾಗಿರುವೆನು. ಎಲ್ಲ ಕುಲಗಳು ನನ್ನವೇ ಆಗಿವೆ. ಸರ್ವ ಜಗತ್ತು ನನ್ನ ಗೋತ್ರವಾಗಿದೆ ॥೧೫೭೫॥ ಈ ಯಾವ ನನ್ನ ಆತ್ಮಜ್ಞಾನದ ಸಾರವನ್ನು ನಾನು ನಿನಗೆ ಹೇಳುವೆನು. ಇದರಿಂದ ಸರ್ವ ಜಗತ್ತಿನ ಉದ್ಧಾರವಾಗುವುದು. ಹೀಗೆಂದು ಶ್ರೀಕೃಷ್ಣನು ಹೇಳಿದನು ॥೧೫೭೬॥ ಈ ಗುಹ್ಯಜ್ಞಾನವನ್ನು ಕೇಳುವುದಕ್ಕಾಗಿ ಉದ್ಧವನು ತನ್ನ ಎಲ್ಲ ಲಕ್ಷವನ್ನು ಅಲ್ಲಿಟ್ಟನು. ಏಕಾಗ್ರತೆಯಿಂದ ಶ್ರೀಕೃಷ್ಣನ ಮುಖವನ್ನು ನೋಡುತ್ತಲೇ, ಆತನ ನೇತ್ರಗಳಲ್ಲಿ ಉದ್ಧವನ ನೇತ್ರಗಳು ಒಂದುಗೂಡಿದವು ॥೧೫೭೭॥ ಈ ಪ್ರಕಾರವಾಗಿ ಲಕ್ಷವನ್ನು ಕೊಟ್ಟಮೇಲೆ ಶ್ರೀಕೃಷ್ಣನು ತನ್ನ ಗುಹ್ಯಜ್ಞಾನವನ್ನು ಹೇಳುವನು. ಈ ಯಾವ ಶ್ರೀಕೃಷ್ಣನ ಅತ್ಯಂತ ಗಹನವಾದ ರಸಾಳ ನಿರೂಪಣೆಯು ಮುಂದಿನ ಅಧ್ಯಾಯದಲ್ಲಿರುವುದು ॥೧೫೭೮॥ ಆದ್ದರಿಂದ ಏಕಾ ಜನಾರ್ದನನು ನಮ್ರತೆಯಿಂದ ವಿನಂತಿಸಿಕೊಳ್ಳುವುದೇನೆಂದರೆ ಸಂತರು ನನ್ನತ್ತ ಲಕ್ಷವನ್ನು ಕೊಡಬೇಕು. ಮತ್ತು ಶ್ರೋತೃಗಳವರು ಸಾವಧರಾಗಬೇಕು. ನಾನು ನಿಮ್ಮೆಲ್ಲರ ಚರಣಗಳಲ್ಲಿ ಮಸ್ತಕವನ್ನು ಇಡುವೆನು ॥೧೫೭೯॥ ನಿಮ್ಮ ಪಾದಪ್ರಸಾದದಿಂದ ಶ್ರೀಭಾಗವತದಲ್ಲಿನ ಶ್ಲೋಕಗಳನ್ನು ಉತ್ತಮ ರೀತಿಯಲ್ಲಿ ಬೋಧವಾಗುವ ಅರ್ಥದಿಂದ ವರ್ಣಿಸುವೆನು. ಅಂದರೇನೇ ಸಂತರು ಸ್ವಾನಂದದಿಂದ ಸಂತುಷ್ಟರಾಗುವರು ॥೧೫೮೦॥ ಅದಕ್ಕಾಗಿ ಏಕನಾಥನು ಜನಾರ್ದನರಿಗೆ ಶರಣಾಗುತ್ತಲೇ ಸಮುದ್ರದ ನೀರು ತೆರೆಗಳಿಂದ ಶೋಭಿಸುವಂತೆ ಜನಾರ್ದನರು ಏಕತ್ವದಿಂದ ಶೋಭಿಸಿದರು ॥೧೫೮೧॥

ಇತಿ ಶ್ರೀಮದ್ಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಏಕನಾಥ ಮಹಾರಾಜರ ಭಾಷ್ಯೆಯ
ಶ್ರೀಕೃಷ್ಣ ಉದ್ಧವ ಸಂವಾದದ ಏಕಾದಶ ಪೂಜಾ ವಿಧಾನಯೋಗ ನಾಮದ ಹನ್ನೊಂದನೆಯ ಅಧ್ಯಾಯವು ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಹನ್ನೆರಡನೆಯ ಅಧ್ಯಾಯ

ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸದ್ಗುರು ವಸಂತೂ । ಐಕ್ಯಕಾಳೀ ತುಝಾ ಋತೂ । ತಯಾ ಋತುಕಾಳೀಚಾ ಮಾರುತೂ । ಜ್ಞಾನವನಾಂತೂ ಜೈ ರಿಘೇ ॥೧॥ ತೈ ಅವಿದ್ಯೇಚೀ ಜುನೀ ಪಾನೇ । ಗಳೂನಿ ಜಾತೀ ತತ್ಕ್ಷಣೇ । ನವಪಲ್ಲವೀ ವಿರಾಜಮಾನೇ । ವಿರಕ್ತಪಣೇ ಆರಕ್ತ ॥೨॥ ಅತ್ಯಂತ ವೈರಾಗ್ಯಾಚೀ ಹಾಂವ । ಖಾಂಕರ ಝಾಲೇ ವೃಕ್ಷ ಸರ್ವ । ತ್ಯಾಂಸೀ ನಿಘಾಲೇ ನವಪಲ್ಲವ । ಅತಿಲವಲವ ಕೋವಳಿಕ ॥೩॥ ಜಾಹಲ್ಯಾ ವಸಂತಾಚೇ ರಿಗವಣೇ । ವೃಕ್ಷ ಆಡವೇ ಫುಟಲೇ ತೇಣೇ । ಸೋಹಂಭಾವಾಚೀ ಸುಮನೇ । ತೇಣೇ ಗುಣೇ ವಿಕಾಸಲೀ ॥೪॥ ಕೃಷ್ಣಸಾರೂಪ್ಯೇ ಕೃಷ್ಣಭ್ರಮರ । ತೇಥೇ ಝೋಂಪಾವಲೇ ಅತಿಸತ್ವರ । ಆಮೋದ ಸೇವಿತೀ ಅರುವಾರ । ಕೈಸೇನಿ ಕೇಸರ ಕುಚಂಬೇ ॥೫॥ ಸದ್ಭಾವಾಚ್ಯಾ ಆಮೋದಧಾರಾ । ಸೇವಿತಾ ಸುಖ ಝಾಲೇ ಭ್ರಮರಾ । ಹೃದಯಕಮಳೀ ಕೇಲಾ ಥಾರಾ । ಮಧ್ಯಮದ್ವಾರಾ ಚಾಲಿಲೇ ॥೬॥ ಭೇದೋನಿಯಾ ಸಾಹೀ ಕಮಳೇ । ದ್ವಿದಳಾದಿ ಷೋಡಶದಳೇ । ರ್ಝೋಪಾವಲೇ ಮಳಯನಿಳೇ । ಸಹಸ್ರದಳೀ ಮಿಸಳಲೇ ॥೭॥ ತೇಥ ಸೇವೂನಿ ಪರಾಗ ಧವಳ । ಉನ್ಮತ್ತ ಮಾತಲೇ ಅಳಿಕುಳ । ಕರಿತೀ ಆನಂದಾಚಾ ಗೋಂಧಳ । ಸುಖಕಲ್ಲೋಳ ಸ್ವಾನಂದೇ ॥೮॥ ಲಾಗಲಾ ಅನುಹತಾಚಾ ಧ್ವನೀ । ರುಣಝುಣಿತೀ ದಶಲಕ್ಷಣೀ । ತ್ಯಾಹೀ ನಾದಾತೇ ಪ್ರಾಶುನೀ । ನಿಃಶಬ್ದಪಣೇ ನಿವಾಂತ ॥೯॥ ತೇಥೇ ಮೋಕ್ಷ ಸುಖಾಚೇ ಘಡ । ಡೋಲತಾ ದಿಸೇ ಅತಿಗೋಡ । ತೇಣೇ ಜೀವಾಚೇ ಪುರತ ಕೋಡ । ಕರಿತೀ ಧುಮಾಡ ಸೋಹಂಶಬ್ದೇ ॥೧೦॥ ಮುಮುಕ್ಷು ಮಯೂರ ಅತಿಪ್ರೀತೀ । ಪಿಚ್ಛೇ ಪಸರೂನಿ ನಾಚತೀ । ಯೋಊನ ವಸಂತವನಾಪ್ರತೀ । ಟಾಹೋ ಫೋಡಿತೀ ಗುರುನಾಮೇ ॥೧೧॥

ಓಂಕಾರರೂಪ ಸದ್ಗುರುಗಳಿಗೆ ನಮಸ್ಕಾರವನ್ನು ಮಾಡುವೆನು. ಹೇ ಸದ್ಗುರುರಾಯನೇ, ನೀನು ವಸಂತ ಋತುವಾಗಿರುವೆ. ಐಕ್ಯದ ಕಾಲವು ಬಂದಾಗಲೇ ನಿನ್ನ ವಸಂತ ಋತು ಪ್ರಾಪ್ತವಾಗುವುದು. ಆ ಋತುಕಾಲದಲ್ಲಿ ಬೀಸುವ ಗಾಳಿಯು ಜ್ಞಾನರೂಪ ಅರಣ್ಯದಲ್ಲಿ ಸೇರಿಕೊಳ್ಳುವುದು ॥೧॥ ಆಗ ಅವಿದ್ಯೆ ಎಂಬ ಹಳೆಯದಾದ ಎಲೆಗಳು ಕೂಡಲೇ ಉದುರಿ ಹೋಗುವುವು. ವಿರಕ್ತಿಯಿಂದ ಕೂಡಿದ ಆರಕ್ತ ವರ್ಣದ ಹೊಸ ಎಲೆಗಳು ಸರ್ವತ್ರವೂ ಶೋಭಿಸುತ್ತಿರುವುವು ॥೨॥ ವೈರಾಗ್ಯದ ತೇಜವು ಅತ್ಯಂತ ಪ್ರಖರವಾಗಿರುವುದು. ಇದರಿಂದ ಅಜ್ಞಾನರೂಪ ವೃಕ್ಷಗಳು ಸುಟ್ಟಂತಾಗುವುವು. ಸದ್ಗುರುರೂಪ ವಸಂತ ಋತುವಿನ ಆಗಮನದಿಂದ ಹೊಸದಾದ ಕೋಮಲ ಎಲೆಗಳು ಹುಟ್ಟುವುವು ॥೩॥ ವಸಂತ ಋತು ಪ್ರಾಪ್ತವಾಯಿತೆಂದರೆ ವೃಕ್ಷಗಳಿಗೆ ಅಡ್ಡ ಟೊಂಗೆಗಳು ಚಿಗುರುವುವು. ಆ ಯಾವ ಋತುವಿನಿಂದ ಸೋಹಂಭಾವದ ಹೂವುಗಳು ಆ ವೃಕ್ಷಗಳಲ್ಲಿ ಅರಳುವುವು ॥೪॥ ಕೃಷ್ಣನ ರೂಪದಲ್ಲಿ ಐಕ್ಯವಾದ್ದರಿಂದ ಕಪ್ಪಾಗಿರುವ ಭ್ರಮರಗಳು ಝೇಂಕರಿಸುತ್ತ ಲಗುಬಗೆಯಿಂದ ಅಲ್ಲಿಗೆ ಆಗಮಿಸಿದವು ಮತ್ತು ಅತ್ಯಂತ ಮೃದುಭಾವನೆಯಿಂದ ಮಕರಂದವನ್ನು ಸೇವನೆ ಮಾಡ ಹತ್ತಿದವು. ಅಂದಮೇಲೆ ಆ ಪರಾಗಕ್ಕೆ ಹೇಗೆ ಧಕ್ಕೆಯಾಗಬೇಕು? ॥೫॥ ಸದ್ಭಾವನೆಯ ಧಾರೆಯನ್ನು ಪ್ರಾಶನ ಮಾಡುತ್ತ ಮಾಡುತ್ತ ಆ ಭ್ರಮರಗಳಿಗೆ ಅತ್ಯಂತ ಆನಂದವಾಯಿತು. ಆಗ ಆ ಭ್ರಮರಗಳು ಹೃದಯ ಕಮಲಗಳಲ್ಲಿ ಸೇರಿಕೊಂಡವು ಮತ್ತು ಅಲ್ಲಿಯೇ ಸ್ಥಿರವಾದವು. ಮುಂದೆ ಸುಷುಮ್ನೆಯ ಮಾರ್ಗದಿಂದ ಅವು ಮುಂದೆ ಮುಂದಕ್ಕೆ ಹೋಗ ಹತ್ತಿದವು ॥೬॥ ಮೂಲಾಧಾರ, ಅಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧ ಮತ್ತು ಆಜ್ಞಾಚಕ್ರದ ಭೇದ ಮಾಡಿ ಹಾಗೆಯೇ ದ್ವಿದಳದಿಂದ ಷೋಡಶ ದಳಗಳನ್ನು ಭೇದಿಸಿ ಇನ್ನೂ ಮುಂದಕ್ಕೆ ಸಾಗಿದವು. ಮಲಯವಾಯುವಿನ ತೀವ್ರತೆಯಿಂದ ಮುಂದಕ್ಕೆ ಸರಿಯುತ್ತ ಸಹಸ್ರದಳಕ್ಕೆ ಬಂದು ಮುಟ್ಟಿದವು ॥೭॥ ಸಹಸ್ರದಳದಲ್ಲಿನ ಶುಭ್ರ ಪರಾಗದ ಆಸ್ವಾದನೆಯನ್ನು ಮಾಡಿ ಆ ಭ್ರಮರಗಳ ತಂಡವು ಉನ್ಮತ್ತಗೊಂಡಿತು. ಅವು ಆನಂದದಿಂದ ಗೊಂದಲ ಎಬ್ಬಿಸಿದವು ಮತ್ತು ಸ್ವಾನಂದ ಸುಖಕಲ್ಲೋಳವನ್ನು ಸೇವಿಸ ಹತ್ತಿದವು ॥೮॥ ಇಷ್ಟರಲ್ಲಿಯೇ ಅವುಗಳಿಗೆ ಅನಾಹತ ನಾದದ ಶಬ್ದವು ಕಿವಿಗಳಿಗೆ ಕೇಳಲಾರಂಭಿಸಿತು. ಅವು ದಶಲಕ್ಷಣಗಳಿಂದ ರುಣುಝುಣು ಮಾಡಹತ್ತಿದವು. ಆ ನಾದವನ್ನೂ ಸಹ ಗ್ರಹಣ ಮಾಡಿ ಅವು ನಿಃಶಬ್ದವಾಗಿಬಿಟ್ಟವು ॥೯॥ ಅಲ್ಲಿ ಮೋಕ್ಷಸುಖದ ಸುಂದರವಾದ ಗೊಂಚಲವು ತೂಗಾಡುತ್ತಿತ್ತು. ಅದು ನೋಡಲು ಬಹು ಸುಂದರವಾಗಿ ಕಾಣುತ್ತಿತ್ತು. ಆದರಿಂದ ಜೀವದ ಸರ್ವ ಮನೋರಥಗಳು ಪೂರ್ಣವಾದವು. ಅವು ''ಸೋಹಂ'' ಶಬ್ದಗಳಿಂದ ಘನ ಗರ್ಜನೆ ಮಾಡಲಾರಂಭಿಸಿದವು ॥೧೦॥ ಅಷ್ಟರಲ್ಲಿಯೇ ಮುಮುಕ್ಷುರೂಪ ಮಯೂರ ಪಕ್ಷಿಗಳು ಅತ್ಯಂತ ಪ್ರೇಮದಿಂದ, ಪ್ರಸನ್ನತೆಯಿಂದ ತಮ್ಮ ಪುಚ್ಛಗಳನ್ನು ಪಸರಿಸಿ ಕುಣಿಯಲಾರಂಭಿಸಿದವು ಮತ್ತು ವಸಂತ ವನಕ್ಕೆ ಬಂದು ಅವು ಗುರುನಾಮದ ಚೀತ್ಕಾರ ಮಾಡಿದವು ॥೧೧॥

ನೇಮಸ್ತಾ ಕೋಕಿಳಾ ಹೋತೇ ಮೌನ । ವಸಂತಋತುರಾಜ ದೇಖೋನ । ತಿಹೀ ಕರೋನಿ ವಿಸರ್ಜನ । ಮಧುರಸ್ತವನೇ ಗರ್ಜತೀ ॥೧೨॥ ಭಕ್ತಿಸರೋವರೀ ನಿರ್ಮಳ ಪಾಣೀ । ವಿಕಾಸಲ್ಯಾ ನವವಿಧ ಕಮಳಿಣೀ । ಭಕ್ತ ಸುಸ್ನಾತ ತಿಯೇ ಸ್ನಾನೀ । ನಿಮಜ್ಜನೀ ನಿಶ್ಚಳ ॥೧೩॥ ತೇ ಸರೋವರೀಚೇ ಸೇವಿತಾ ಪಾಣೀ । ಜೀವಶಿವ ಚಕ್ರವಾಕೇ ದೋನೀ । ಸದ್ಗುರುಚಿದ್ಭಾನು ವಸಂತವನೀ । ದೇಖೋನಿ ಮಿಳಣೀ ಮಿಳಾಲೀ ॥೧೪॥ ವಸಂತೇ ಉಲ್ಲಾಸ ತರುವರಾ । ಉಲೋನಿ ಲಾಗಲ್ಯಾ ಸ್ವಾನಂದಧಾರಾ । ಪಾರಂಬ್ಯಾ ಭೇದೂನಿಯಾ ಧರಾ । ಧರಾಧರಾ ವಿಗುಂತಲ್ಯಾ ॥೧೫॥ ಬೋಧಮಲಯಾನಿಳ ಝುಳಕತ । ತೇಣೇ ವನಶ್ರೀ ಮಘಮಘಿತ । ಮೋಕ್ಷಮಾರ್ಗೀಚೇ ಪಾಂಥಿಕ ತೇಥ । ನಿಜೀ ನಿಜತ ನಿಜರೂಪೇ ॥೧೬॥ ಐಸಾ ಸದ್ಗುರು ವಸಂತರಾವೋ । ನಿಜಭಕ್ತವನಾ ದೇ ಉತ್ಸಾವೋ । ತೋ ಭಾಗವತಭಜನ ಅಧ್ಯಾವೋ । ಉದ್ಧವಾಸೀ ದೇವೋ ಸಾಂಗತ ॥೧೭॥ ಬಾರಾವೇ ಅಧ್ಯಾಯೀ ನಿರೂಪಣ । ಸತ್ಸಂಗಾಚಾ ಮಹಿಮಾ ಗಹನ । ಕರ್ಮಾಚಾ ಕರ್ತಾ ತೇಥ ಕೋಣ । ತ್ಯಾಗಿತೇ ಲಕ್ಷಣ ಕರ್ಮಾಚೇ ॥೧೮॥ ಸಂಪತಾ ಅಕರಾವಾ ಅಧ್ಯಾವೋ । ಗುಹ್ಯ ಸಾಂಗೇನ ಮ್ಹಣೇ ದೇವೋ । ತೇ ಪರಿಸಾವಯಾ ಉದ್ಧವೋ । ನ್ಯಾಹಾಳೀ ಪಹಾ ಹೋ ಹರಿವದನ ॥೧೯॥ ಕಾಯ ಸಾಂಗೇಲ ಗುಹ್ಯ ಗೋಷ್ಟೀ । ಕೋಣ ಅಕ್ಷರೇ ನಿಘತೀ ಓಠೀ । ತ್ಯಾ ವಚನಾರ್ಥಾ ಫಾಲಾವಯಾ ಮಿಠೀ । ಉಲ್ಲಾಸ ಪೋಟೀ ಉದ್ಧವಾ ॥೨೦॥ ಜೈಸೇ ಮೇಘಮುಖೀಚೇ ಉದಕ । ವರಚ್ಯಾವರೀ ಝೇಲೀ ಚಾತಕ । ತೈಸೇ ಕೃಷ್ಣವಚನಾಲಾಗೀ ದೇಖ । ಪಸರಿಲೇ ಮುಖ ಉದ್ಧವೇ ॥೨೧॥ ಸ್ನಾನ ಸಂಧ್ಯಾ ಭೋಜನ । ಆವಡೇ ಯಾ ಏಕೇ ಕಾಳೇ ಜಾಣ । ತೈಸೇ ಜ್ಞೇಯ ಜ್ಞಾತಾ ಜ್ಞಾನ । ಘ್ಯಾವಯಾ ಸಾವಧಾನ ಉದ್ಧವ ॥೨೨॥ ಐಸಾ ಉದ್ಧವಾಚಾ ಆದರೂ । ದೇಖೋನಿ ಹರಿ ಝಾಲಾ ಸಾದರೂ । ಭಕ್ತಕೃಪಾಳೂ ಅತಿಉದಾರೂ । ನಿಜಗುಹ್ಯಸಾರೂ ಸಾಂಗತ ॥೨೩॥

ಶ್ರೀ ಭಗವಾನುವಾಚ:-

ನ ರೋಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಏವ ಚ । ನ ಸ್ವಾಧ್ಯಾಯಸ್ತಪಸ್ತ್ಯಾಗೋನೇಷ್ಟಾಪೂರ್ತಂ ನ ದಕ್ಷಿಣಾ ॥೧॥
ವ್ರತಾನಿ ಯಜ್ಞಶ್ಛಂದಾಂಸಿ ತೀರ್ಥಾನಿ ನಿಯಮಾ ಯಮಾಃ । ಯಥಾವರುಂಧೇ ಸತ್ಸಂಗಃ ಸರ್ವಸಂಗಾಪಹೋ ಹಿ ಮಾಮ್ ॥೨॥

ಶ್ರೀ ಭಗವಂತನು ನುಡಿದನು:- ಪ್ರಿಯ ಉದ್ಧವನೇ, ಜಗತ್ತಿನಲ್ಲಿರುವ ಸರ್ವ ಆಸಕ್ತಿಗಳು ಸತ್ಸಂಗದಿಂದ ನಾಶವಾಗುವುವು. ಆದರಂತೆ ನನ್ನನ್ನು ಸತ್ಸಂಗವು ವಶಮಾಡಿಕೊಳ್ಳುವುದು. ಆದರೆ ಯೋಗ, ಸಾಂಖ್ಯ, ಧರ್ಮಪಾಲನೆ ಮತ್ತು ಸ್ವಾಧ್ಯಾಯಗಳಿಂದ ಹೀಗಾಗುವುದಿಲ್ಲ. ತಪಸ್ಸುಗಳು, ತ್ಯಾಗ, ದಕ್ಷಿಣ ಇವುಗಳಿಂದಲೂ ನಾನು ಆದರಂತೆ ಪ್ರಸನ್ನನಾಗುವುದಿಲ್ಲ. ವ್ರತ, ಯಜ್ಞ, ವೇದ, ತೀರ್ಥ, ಯಮ, ನಿಯಮ ಇವುಗಳು ಸತ್ಸಂಗದಂತೆ ನನ್ನನ್ನು ಪ್ರಾಪ್ತಮಾಡಿಕೊಳ್ಳಲಾರವು.

ಯಮನಿಯಮರೂಪ ಕೋಗಿಲೆಗಳು ಮೌನ ಧರಿಸಿ ಕುಳಿತಿದ್ದವು. ಅವು ವಸಂತ ಋತುವನ್ನು ಕಂಡು ಮೌನವನ್ನು ವಿಸರ್ಜಿಸಿದವು ಮತ್ತು ಆನಂದದಿಂದ ಮಧುರವಾಗಿ ಗುರುಸ್ತವನವನ್ನು ಹಾಡಹತ್ತಿದವು ॥೧೨॥ ಭಕ್ತಿರೂಪ ಸರೋವರದಲ್ಲಿ ನಿರ್ಮಲವಾದ ಜಲವಿತ್ತು. ಆದರಲ್ಲಿ ನವವಿಧ ಭಕ್ತಿಯ ಕಮಲಗಳು ಅರಳಿಕೊಂಡಿದ್ದವು. ಅಲ್ಲಿ ಭಕ್ತರು ಉತ್ತಮ ರೀತಿಯಲ್ಲಿ ಸ್ನಾನವನ್ನು ಮಾಡಿ ಅದರಲ್ಲಿ ಮೇಲಿಂದ ಮೇಲೆ ಮುಳುಗುತ್ತಿದ್ದರು ॥೧೩॥ ಅಲ್ಲಿ ಜೀವ ಮತ್ತು ಶಿವ ಎಂಬ ಚಕ್ರವಾಕ ಪಕ್ಷಿಗಳ ಜೋಡಿಯು ಮಾಯಾರೂಪ ರಾತ್ರಿಯ ಕತ್ತಲೆಯಲ್ಲಿ ಒಂದಕ್ಕೊಂದು ಅಗಲಿಕೊಂಡಿದ್ದವು. ಅವು ಆ ಯಾವ ಸರೋವರದ ಜಲ ಪ್ರಾಶನ ಮಾಡಿದವು. ವಸಂತರೂಪ ವನದಲ್ಲಿ ಸದ್ಗುರುರೂಪ ಜ್ಞಾನಸೂರ್ಯನ ಉದಯವಾಯಿತು. ಅವಿದ್ಯಾರೂಪ ರಾತ್ರಿಯು ಇಲ್ಲದಾಗಿ ಜೀವ ಶಿವರ ಐಕ್ಯವು ಸಾಧಿಸಿತು ॥೧೪॥ ವಸಂತ ಋತು ಕಾರಣವಾಗಿ ಆಲದ ಮಹಾ ವೃಕ್ಷಗಳಿಗೆ ಉಲ್ಲಾಸಯುಕ್ತ ಎಲೆಗಳು ಹುಟ್ಟಿಕೊಂಡವು. ಅವುಗಳಿಂದ ಸ್ವಾನಂದದ ಧಾರೆಯು ಹರಿಯತೊಡಗಿತು. ಅವುಗಳ ಟೊಂಗೆಗಳ ಬೇರಿನ ಟೊಂಗೆಗಳು ಪೃಥ್ವಿಯನ್ನು ಭೇದಿಸಿ ಶೇಷಶಾಯೀ ನಾರಾಯಣನವರೆಗೂ ಹೋಗಿ ಮುಟ್ಟಿಕೊಂಡವು. ಮತ್ತು ಆತನಲ್ಲಿ ಏಕರೂಪವಾದವು ॥೧೫॥ ಬೋಧರೂಪ ಮಲಯಾಪರ್ವತದ ವಾಯುವು ಬೀಸಲಾರಂಭಿಸಿತು. ಇದರಿಂದ ವನಶ್ರೀಯು ಸುಗಂಧಿತವಾಯಿತು. ಅಲ್ಲಿ ಮೋಕ್ಷಮಾರ್ಗದ ಪ್ರವಾಸಿಗರು ಸ್ವರೂಪದಲ್ಲಿ ಸುಖವಾಗಿ ವಿಶ್ರಾಂತಿಯನ್ನು ಪಡೆದರು ॥೧೬॥ ಹೀಗೆ ಈ ಯಾವ ಸದ್ಗುರುರೂಪ ವಸಂತರಾಜನು ಭಕ್ತರೂಪ ವನಕ್ಕೆ ಆನಂದವನ್ನು ಕೊಡುತ್ತಿರುವನು. ಭಗವಂತನ ಭಜನೆಯ ಈ ಅಧ್ಯಾಯವನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ॥೧೭॥ ಈ ಹನ್ನೆರಡನೆಯ ಅಧ್ಯಾಯದಲ್ಲಿ ಸತ್ಸಂಗದ ಅಗಾಧ ಮಹಿಮೆಯನ್ನು ಹೇಳಿರುವುದು. ಇದರಲ್ಲಿ ಕರ್ಮದ ಕರ್ತನು ಯಾರು ಮತ್ತು ಕರ್ಮತ್ಯಾಗದ ಸ್ವರೂಪವೇನು? ಇವುಗಳ ನಿರೂಪಣೆಯನ್ನು ಮಾಡಲಾಗಿದೆ ॥೧೮॥ ಹನ್ನೊಂದನೆಯ ಅಧ್ಯಾಯದ ಕೊನೆಯಲ್ಲಿ ಶ್ರೀಕೃಷ್ಣನು "ಗುಹ್ಯದ ಮಾತು ಹೇಳುವೆ" ಎಂದು ಹೇಳಿದ್ದನು. ಆದ್ದರಿಂದ ಅದನ್ನು ಕೇಳುವುದಕ್ಕಾಗಿ ಉದ್ಧವನು ಶ್ರೀಕೃಷ್ಣನ ಮುಖದತ್ತ ನೋಡುತ್ತ ಕುಳಿತನು ॥೧೯॥ ಶ್ರೀಕೃಷ್ಣನು ಈಗ ಯಾವುದನ್ನು ಕುರಿತು ಗುಹ್ಯ ಗೋಷ್ಟಿಯನ್ನು ಹೇಳಬಹುದು? ಆತನ ಮುಖದಿಂದ ಯಾವ ಶಬ್ದಗಳು ಪ್ರಕಟವಾಗಬಹುದು? ಇವುಗಳನ್ನು ಶ್ರವಣ ಮಾಡುವುದಕ್ಕಾಗಿ ಉದ್ಧವನ ಮನದಲ್ಲಿ ಮಹಾ ಉತ್ಸಾಹವು ಹುಟ್ಟಿಕೊಂಡಿತು ॥೨೦॥ ಯಾವ ಪ್ರಕಾರವಾಗಿ ಚಾತಕ ಪಕ್ಷಿಯು ಮೇಘ ಮುಖದ ಜಲವನ್ನು ಪಡೆಯಲು ಮೇಲಿಂದ ಮೇಲೆ ತನ್ನ ಮುಖವನ್ನು ಪಸರಿಸುವುದೋ, ಅದರಂತೆ ಶ್ರೀಕೃಷ್ಣನ ಮುಖದಲ್ಲಿನ ವಚನಗಳಿಗಾಗಿ ಉದ್ಧವನು ತನ್ನ ಮುಖವನ್ನು ತೆರೆದನು ॥೨೧॥ ಸ್ನಾನ, ಸಂಧ್ಯಾ ಮತ್ತು ಭೋಜನ ಇವು ಒಬ್ಬನಿಗೆ ಏಕಕಾಲಕ್ಕೆ ಪ್ರಿಯವಾಗುವಂತೆ, ಜ್ಞಾತಾ, ಜ್ಞಾನ ಮತ್ತು ಜ್ಞೇಯ ಇವುಗಳನ್ನು ಒಂದೇ ಕಾಲಕ್ಕೆ ಗ್ರಹಣ ಮಾಡುವುದಕ್ಕಾಗಿ ಉದ್ಧವನು ಸಾವಧಾನನಾದನು ॥೨೨॥ ಈ ಪ್ರಕಾರದ ಉದ್ಧವನ ಉತ್ಕಂಠವನ್ನು ಕಂಡು ಭಕ್ತರಿಗಾಗಿ ದಯಾಳೂ ಮತ್ತು ಉದಾರನಾಗಿರುವ ಶ್ರೀಹರಿಯು ತನ್ನ ಗುಹ್ಯ ರಹಸ್ಯದ ಸಾರವನ್ನು ಹೇಳಲಾರಂಭಿಸಿದನು ॥೨೩॥

ಮಜ ವಶ ಕರಾವಯಾಲಾಗೀ । ಸಾಮರ್ಥ್ಯ ನಾಹೀ ಅಷ್ಟಾಂಗಯೋಗೀ । ನಿತ್ಯಾನಿತ್ಯ ವಿವೇಕ ಜಗೀ । ಆಂಗೋವಾಂಗೀ ಮಜ ನ ಪವೇ ।೨೪॥ ಪ್ರಕೃತಿಪುರುಷವಿವಂಚನಾ । ಅಖಂಡ ಆಲೋಡಿತಾ ಮನಾ । ಪಾವಾವಯಾ ಮಾಝಿಯಾ ಸ್ಥಾನಾ । ಸಾಮರ್ಥ್ಯ ಜಾಣಾ ತ್ಯಾ ನಾಹೀ ।೨೫॥ ಧರ್ಮ ಅಹಿಂಸಾದಿಸಹಿತ । ಸತ್ಯ ತ್ಯಾಂಚೇನಿ ಮೀ ನವ್ಹೇ ಪ್ರಾಪ್ತ । ಮುಖ್ಯ ವೇದಾಧ್ಯಯನೇಹೀ ಮೀ ಅಪ್ರಾಪ್ತ । ಸಾಂಗ ಸಮಸ್ತ ಜರೀ ಪಢಿಲೇ ।೨೬॥ ತೇಥ ತಪೇ ಕಾಯಸೀ ಬಾಪುಡೀ । ಪಂಚಾಗ್ನಿ ಅಸಾರ ಪರವಡೀ । ಕೃಚ್ಛ್ರಚಾಂದ್ರಾಯಣೇ ಝಾಲೀ ವೇಡೀ । ತ್ಯಾಂಚೇ ಜೋಡೀ ಮೀ ನ ಜೋಡೇ ।೨೭॥ ದೇಹಗೇಹ ಸಾಂಡೂನಿ ಉದಾಸ । ವಿರಜಾಹೋಮೀ ಹವೀ ಸರ್ವಸ್ವ । ಸಾಧನೀ ಅತಿಶ್ರೇಷ್ಠ ಸನ್ಯಾಸ । ತ್ಯಾಸೀ ಮೀ ಪರೇಶ ನಾತುಡೇ ।೨೮॥ ಕರಿತಾ ಶ್ರೌತಸ್ಮಾರ್ತಕರ್ಮಾಸೀ । ಕರ್ಮಠೇ ಝಾಲೀ ಪಾನಪಿಸೀ । ತರೀ ಮೀ ನಾಕಳೇ ತ್ಯಾಂಸೀ । ಕ್ಲೇಶ ಹೋಮೇಸೀ ಕಷ್ಟತಾ ।೨೯॥ ಗೋದಾನ ಭೂದಾನ ತಿಲದಾನ । ದಾನ ದೇತಾ ಧನಧಾನ್ಯ । ತ್ಯಾಂಸೀ ಮೀ ನಾಟೋಪೇ ಜಾಣ । ದಾನಾಭಿಮಾನ ನ ವಚತಾ ।೩೦॥ ಸಂಕಟಚತುರ್ಥೀ ಋಷಿಪಂಚಮೀ । ವಿಷ್ಣುಪಂಚಕ ಬುಧಾಷ್ಟಮೀ । ಅನೇಕ ವ್ರತೇ ಕರಿತಾ ನೇಮೀ । ತೇ ಮೀ ಕರ್ಮೀ ನಾತುಡೇ ।೩೧॥ ಅಶ್ವಮೇಧ ರಾಜಸೂಯಯಾಗ । ಸರ್ವಸ್ವ ವೇಂಚೂನಿ ಕರಿತಾ ಸಾಂಗ । ಮಾಝೀ ಪ್ರಾಪ್ತೀಸೀ ನವ್ಹತೀಚಿ ಚಾಂಗ । ತೇಣೇ ಮೀ ಶ್ರೀರಂಗ ನಾಟೋಪೇ ।೩೨॥ ಹೋ ಕಾ ವಾಪೀ ಕೂಪ ಆರಾಮ । ವೃಕ್ಷಾರೋಪಣ ವನವಿಶ್ರಾಮ । ಆಚರತಾ ಸ್ಮಾರ್ತಕರ್ಮ । ಮೀ ಆತ್ಮಾರಾಮ ನ ಭೇಟೇ ।೩೩॥ ನಾನಾ ಛಂದ ರಹಸ್ಯಮಂತ್ರ । ವಿಧಿವಿಧಾನ ಅತಿವಿಚಿತ್ರ । ಸಾಮರ್ಥ್ಯೇ ಅತಿವಿಶೇಷ ಪವಿತ್ರ । ನವ್ಹತೀ ಸ್ವತಂತ್ರ ಮತ್ಪ್ರಾಪ್ತೀ ।೩೪॥ ಪುಷ್ಕರಾದಿ ನಾನಾ ತೀರ್ಥೇ । ಪಾಪನಿರ್ದಳಣೀ ಅತಿಸಮರ್ಥೇ । ಶೀಘ್ರ ಪಾವಾವಯಾ ಮಾತೇ । ಸಾಮರ್ಥ್ಯ ತ್ಯಾಂತೇ ಅಸೇನಾ ।೩೫॥ ಯಮನಿಯಮ ಅಹರ್ನಿಶೀ । ಜೇ ಸದಾ ಶಿಣತೀ ಸಾಧನೇಸೀ । ತೇ ಯಾವಯಾ ಮಾಝ್ಯಾ ದ್ವಾರಾಸೀ । ಸಾಮರ್ಥ್ಯ ತಾಂಸೀ ಅಸೇನಾ ।೩೬॥ ಉದ್ಧವಾ ಯಮನಿಯಮ ನಿರ್ಧಾರ । ಏಕುಣಿಸಾವೇ ಅಧ್ಯಾಯೀ ಸವಿಸ್ತರ । ತುಜ ಮೀ ಸಾಂಗೇನ ಸಾಚಾರ । ಸಂಕ್ಷೇಪಾಕಾರ ಬಾರಾವಾ ।೩೭॥

ನನ್ನನ್ನು ವಶಮಾಡಿಕೊಳ್ಳುವ ಸಾಮರ್ಥ್ಯವು ಅಷ್ಟಾಂಗ ಯೋಗಗಳಲ್ಲಿ ಇರುವುದಿಲ್ಲ. ಜಗತ್ತಿನಲ್ಲಿ ನಿತ್ಯಾನಿತ್ಯ ವಿವೇಕವೂ ಕೂಡ ನನ್ನ ಪ್ರಾಪ್ತಿಯನ್ನು ಮಾಡಿಕೊಡಲು ಶಕ್ಯವಿಲ್ಲ ।೨೪॥ ಪ್ರಕೃತಿ ಪುರುಷರ ವಿಚಾರವನ್ನು ಮನಸ್ಸಿನಲ್ಲಿ ನಿರಂತರವಾಗಿ ಮಾಡುತ್ತಿದ್ದರೂ ಸಹ ಆ ಮನುಷ್ಯನು ನನ್ನಲ್ಲಿಗೆ ಬಂದು ಮುಟ್ಟಲು ಸಮರ್ಥನಾಗುವುದಿಲ್ಲ ।೨೫॥ ಹಾಗೆಯೇ ಅಹಿಂಸಾಸಹಿತವಾಗಿ ಸರ್ವ ಧರ್ಮಗಳಿಂದ ನನ್ನ ಪ್ರಾಪ್ತಿಯು ಆಗುವುದಿಲ್ಲ. ವೇದಾಧ್ಯಯನವು ಶ್ರೇಷ್ಠವಾಗಿರುವುದು. ಆದರೆ ಆ ವೇದಾಂತದ ಪಠಣೆಯಿಂದ ನನ್ನ ಪ್ರಾಪ್ತಿಯಾಗಲಾರದು ।೨೬॥ ಹೀಗಿರುವಾಗ ಇದರ ಮುಂದೆ ತಪಗಳ ಆಟವಾದರೂ ಏನು ನಡೆದೀತು? ಪಂಚಾಗ್ನಿ ಸಾಧನೆ, ಕೃಚ್ಛ್ರಚಂದ್ರಾಯಣ, ಈ ವ್ರತಗಳಿಂದ ನನ್ನ ಪ್ರಾಪ್ತಿಯಾಗುವುದಿಲ್ಲ ।೨೭॥ ಮನೆಮಾರಿನ ಮತ್ತು ತನ್ನ ದೇಹದ ಮೇಲಿನ ಆಸಕ್ತಿಯನ್ನು ತೊರೆದು, ವಿರಕ್ತನಾಗಿ ಅದರಲ್ಲಿ ತನ್ನ ಸರ್ವಸ್ವದ ಹವನವನ್ನು ಮಾಡುವವನು. ಅಥವಾ ಸರ್ವ ಸಾಧನೆಗಳಲ್ಲಿ ಅತಿಶ್ರೇಷ್ಠವಾದ ಸನ್ಯಾಸವನ್ನು ಸ್ವೀಕರಿಸಿದರೂ ನನ್ನ ಪ್ರಾಪ್ತಿಯಾಗುವುದಿಲ್ಲ ।೨೮॥ ಕರ್ಮಠ ಜನರು ಶ್ರೌತ ಸ್ಮಾರ್ತ ಕರ್ಮಗಳನ್ನು ಮಾಡಿ ಭ್ರಮಿಷ್ಠರಾಗುವರು. ಅವರಿಗೆ ಯಜ್ಞಯಾಗಗಳ ಕಷ್ಟಗಳು ಒದಗುವುವು. ಆದರೆ ನನ್ನ ಪ್ರಾಪ್ತಿಯಾಗುವುದಿಲ್ಲ ।೨೯॥ ಕೆಲವರು ಗೋದಾನವನ್ನು ಮಾಡುವರು, ಕೆಲವರು ಭೂದಾನವನ್ನು ಮಾಡುವರು ಅಥವಾ ಎಳ್ಳಿನ ದಾನ, ಧನಧಾನ್ಯಗಳ ದಾನವನ್ನು ಮಾಡುವರು. ಆದರೆ ದಾನದ ಅಭಿಮಾನವು ನಷ್ಟವಾಗುವವರೆಗೆ ನನ್ನ ಪ್ರಾಪ್ತಿಯಾಗುವುದಿಲ್ಲ ।೩೦॥ ಹಾಗೆಯೇ ಸಂಕಷ್ಟೀ ಚತುರ್ಥೀ, ಋಷಿಪಂಚಮಿ, ವಿಷ್ಣುಪಂಚಕ, ಬುದ್ಧಾಷ್ಟಮಿ ಇತ್ಯಾದಿ ವ್ರತಗಳನ್ನು ನಿತ್ಯ ನಿಯಮದಿಂದ ಪಾಲಿಸಿದರೂ ಕೂಡ ಆ ವ್ರತಗಳಿಂದ ನನ್ನ ಪ್ರಾಪ್ತಿಯಾಗುವುದಿಲ್ಲ ।೩೧॥ ಸರ್ವ ಸಂಪತ್ತನ್ನು ಖರ್ಚು ಮಾಡಿ ಅಶ್ವಮೇಧ ಮತ್ತು ರಾಜಸೂಯ ಯಜ್ಞಗಳನ್ನು ಯಥಾಸಾಂಗವಾಗಿ ಮಾಡಿದರೂ ಕೂಡ ಅವುಗಳಿಂದ ನನ್ನ ಪ್ರಾಪ್ತಿಯಾಗುವುದಿಲ್ಲ ।೩೨॥ ಜನರ ಹಿತಕ್ಕಾಗಿ ಕೆರೆ, ಬಾವಿ ಅಥವಾ ತೋಟ ತಯಾರಿಸುವುದು, ಹಾಗೆಯೇ ಮಾರ್ಗದ ಉದ್ದಕ್ಕೂ ಭಿನ್ನ ಭಿನ್ನವಾದ ಮರಗಳನ್ನು ಹಚ್ಚುವುದು, ಜನರ ವಿಶ್ರಾಂತಿಗಾಗಿ ವಿಶ್ರಾಂತಿ ಗೃಹಗಳನ್ನು ಕಟ್ಟಿಸುವುದು ಅಥವಾ ಅನೇಕ ತರಹದ ಸ್ಮಾರ್ತ ಕರ್ಮಗಳನ್ನು ಮಾಡುವುದು, ಹೀಗೆಲ್ಲ ಮಾಡಿದರೂ ಕೂಡ ಆತ್ಮಾರಾಮನಾದ ನಾನು ಭೇಟಿಯಾಗಲು ಶಕ್ಯವಿಲ್ಲ ।೩೩॥ ವಿವಿಧ ಪ್ರಕಾರಗಳ ಛಂದ, ರಹಸ್ಯ ಮಂತ್ರ, ವಿಚಿತ್ರ ವಿಧಿ ವಿಧಾನಗಳ ಸಾಮರ್ಥ್ಯವು ವಿಲಕ್ಷಣವಾಗಿದ್ದರೂ ಹಾಗೂ ಅತ್ಯಂತ ಪವಿತ್ರವಾಗಿದ್ದರೂ ಕೂಡ ಅವುಗಳಿಂದ ನನ್ನ ಪ್ರಾಪ್ತಿಯಾಗುವುದಿಲ್ಲ ।೩೪॥ ಪುಷ್ಕರಾದಿ ಅನೇಕ ಪ್ರಕಾರದ ತೀರ್ಥಗಳಿರುವುವು. ಪಾಪಗಳನ್ನು ನಾಶ ಮಾಡಲು ಅವು ಸಮರ್ಥವಾಗಿರುವುವು. ಆದರೂ ಕೂಡ ನನ್ನಲ್ಲಿಯವರೆಗೆ ತತ್ಕಾಲದಲ್ಲಿ ಮುಟ್ಟಿಸುವ ಸಾಮರ್ಥ್ಯವು ಅವುಗಳಲ್ಲಿರುವುದಿಲ್ಲ ।೩೫॥ ಯಾರು ಯಮ ನಿಯಮ ಸಾಧನೆಗಳಿಗಾಗಿ ಹಗಲು ರಾತ್ರಿ ಕಷ್ಟಪಡುವರು, ಆದರೆ ಆ ಸಾಧಕರು ನನ್ನಲ್ಲಿ ಬಂದು ಮುಟ್ಟುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ ।೩೬॥ ಹೇ ಉದ್ಧವನೇ, ಯಮ ನಿಯಮಗಳ ನಿರ್ಣಯವನ್ನು ನಾನು ನಿನಗೆ ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಸವಿಸ್ತಾರವಾಗಿ ಹೇಳುವೆನು. ಅವುಗಳ ಹನ್ನೆರಡು ಪ್ರಕಾರಗಳನ್ನು ಆಗ ಕಥನ ಮಾಡಿ ತಿಳಿಸುವೆನು. ಈ ಹನ್ನೆರಡನೆಯ ಅಧ್ಯಾಯವು ಸಂಕ್ಷಿಪ್ತ ಸ್ವರೂಪದ್ದಾಗಿರುವುದು ।೩೭॥

ತೇ ಯಮ ನಿಯಮ ಬಾರಾ ಬಾರಾ । ಆಣಿ ಸಕಳ ಸಾಧನಸಂಭಾರಾ । ಯಾವಯಾ ಮಾಝಿಯಾ ನಗರಾ । ಮಾರ್ಗು ಪುಢಾರಾ ಚಾಲೇನಾ ॥೩೮॥ ತೇ ಗೇಲಿಯಾ ಸಂತಾಂಚ್ಯಾ ದಾರಾ । ಧರೂನಿ ಸಾಧೂಂಚ್ಯಾ ಆಧಾರಾ । ಅವಘೀ ಆಲೀ ಮಾಝ್ಯಾ ಘರಾ । ಏವಂ ಪರಂಪರಾ ಮತ್ಪ್ರಾಪ್ತೀ ॥೩೯॥ ತೈಶೀ ನವ್ಹೇ ಸತ್ಸಂಗತೀ । ಸಂಗೇ ಸಕಳ ಸಂಗಾತೇ ಛೇದಿತೀ । ಠಾಕತೋಕ ಮಾಝೀ ಪ್ರಾಪ್ತೀ । ಪಂಗಿಸ್ತ ನವ್ಹತೀ ಆಣಿಕಾಂಚೇ ॥೪೦॥ ಕಿಡೀ ಭಿಂಗುರಟೀಚ್ಯಾ ಸಂಗತೀ । ಪಾಲಟಲೀ ಸ್ವದೇಹಸ್ಥಿತೀ । ತೇವೀ ಧರಿಲಿಯಾ ಸಂತಾಂಚಿ ಸಂಗತೀ । ಭಕ್ತ ಪಾಲಟತೀ ಮದ್ರೂಪೇ ॥೪೧॥ ಕೇವಳ ಪಾಹೇ ಪಾ ಜಡಮೂಢೇ । ಚಂದನಾಸಭೋವಂತೀ ಝಾಡೇ । ತೀ ಸುಗಂಧ ಹೋಊನಿ ಲಾಂಕಡೇ । ಮೋಲ ಗಾಢೇ ಪಾವಲೀ ॥೪೨॥ ತೀ ಅಚೇತನ ಕಾಷ್ಠೇ ಸರ್ವಥಾ । ಚಢಲೀ ದೇವಬ್ರಾಹ್ಮಣಾಂಚೇ ಮಾಥಾ । ತ್ಯಾಂಚಾ ಪಾಂಗ ಪಡೇ ಶ್ರೀಮಂತಾ । ರಾಜೇ ತತ್ತ್ವತಾ ವಂದಿತೀ ॥೪೩॥ ತೈಶೀ ಧರಿಲ್ಯಾ ಸತ್ಸಂಗತೀ । ಭಕ್ತ ಮಾಝೀ ಪದವೀ ಪಾವತೀ । ಶೇಖೀ ಮಜಹೀ ಪೂಜ್ಯ ಹೋತೀ । ಸಾಂಗೋ ಕಿತೀ ಮಹಿಮಾನ ॥೪೪॥ ಸಂತಸಂಗತೀವೇಗಳೇ ಜಾಣ । ತತ್ಕಾಳ ಪಾವಾವಯಾ ಮಾಝೇ ಸ್ಥಾನ । ಆಣಿಕ ನಾಹೀಂಚ ಸಾಧನ । ಸತ್ಯ ಜಾಣ ಉದ್ಧವಾ ॥೪೫॥ ಮಾಗಾ ಬೋಲಿಲೀ ಜೀ ಸಾಧನೇ । ತೀ ಅವಘೀಹೀ ಮಲಿನ ಅಭಿಮಾನೇ । ಐಕ ತಯಾಂಚೀ ಲಕ್ಷಣೇ । ತುಜಕಾರಣೇ ಸಾಂಗೇನ ॥೪೬॥ ಅಷ್ಟಾಂಗಯೋಗೀ ದುರ್ಜಯೋ ಪವನ । ಸರ್ವಥಾ ಸಾಧೇನಾ ಜಾಣ । ಸಾಧಲಾ ತರೀ ನಾಗವಣ । ಅನಿವಾರ ಜಾಣ ಸಿದ್ಧೀಂಚೀ ॥೪೭॥ ನಿತ್ಯಾನಿತ್ಯವಿವೇಕಜ್ಞಾನ । ತೇಥ ಬಾಧೀ ಪಾಂಡಿತ್ಯ ಅಭಿಮಾನ । ಪ್ರಬಳ ವಾಂಛೀ ಧನಮಾನ । ಜ್ಞಾನಚಿ ವಿಘ್ನ ಜ್ಞಾನ್ಯಾಸೀ ॥೪೮॥ ಅಹಿಂಸಾಧರ್ಮ ಕರಿತಾ ಜನೀ । ಧರ್ಮಿಷ್ಠಪಣೇ ಗಾಳಿತೀ ಪಾಣೀ । ಗಾಳಿತಾ ನಿಮಾಲ್ಯಾ ಜೀವಶ್ರೇಣೀ । ಅಧರ್ಮಪಣೇ ತೋ ಧರ್ಮ ॥೪೯॥ ಕರಿತಾ ವೇದಾಧ್ಯಯನ । ಮುಖ್ಯ ವೇದೇ ಧರಿಲೇ ಮೌನ । ಪಠಣಮಾತ್ರೇ ಮೀ ನಾತುಡೇ ಜಾಣ । ಯಾಜನದಾನ ವಾಂಛಿತೀ ॥೫೦॥ ತಪ ಕರೂ ಜಾತಾ ದೇಹೀ । ಕ್ರೋಧ ತಾಪಸಾಂಚ್ಯಾ ಠಾಯೀ । ಪರತಾ ಜಾವೋ ನೇದೀ ಕಂಹೀ । ವಾಢಲಾ ಪಾಹೀ ನೀಚ ನವಾ ॥೫೧॥ ಸರ್ವಸ್ವತ್ಯಾಗೇ ಸನ್ಯಾಸಗ್ರಹಣ । ತೇಥಹೀ ನ ಜಳೇ ದೇಹಾಭಿಮಾನ । ವ್ಯರ್ಥ ವಿರಜಾಹೋಮ ಗೇಲಾ ಜಾಣ । ಮಾನಾಭಿಮಾನ ಬಾಧಿತೀ ॥೫೨॥

ಈ ಯಾವ ಹನ್ನೆರಡು ಯಮ ಅಥವಾ ಹನ್ನೆರಡು ನಿಯಮ ಇವು ತಮ್ಮ ಸರ್ವ ಸಾಧನಸಾಮಗ್ರಿ ಸಹ ನನ್ನ ವೈಕುಂಠ ನಗರಕ್ಕೆ ಬರುವ ಮಾರ್ಗವನ್ನೇ ಅರಿಯುವುದಿಲ್ಲ ॥೩೮॥ ಆದ್ದರಿಂದ ಈ ಎಲ್ಲವೂ ಎಂದಿಗೆ ಬಾಗಿಲಿಗೆ ಬರುವುವೋ ಮತ್ತು ಸಾಧುಗಳ ಆಶ್ರಯವನ್ನು ಎಂದಿಗೆ ಪಡೆದು ನನ್ನ ಮನೆಗೆ ಬರುವರೋ ಆಗ ಪರಂಪರೆಯಿಂದ ನನ್ನ ಪ್ರಾಪ್ತಿಯು ಆಗುತ್ತಿರುವುದು ॥೩೯॥ ಆದರೆ ನನ್ನ ಸತ್ಸಂಗತಿಯು ಅದರಂತೆ ಇರುವುದಿಲ್ಲ. ಅದು ತನ್ನ ಸಂಗದಿಂದ ಇತರ ಸಂಗದ ನಾಶಮಾಡುವುದು. ಅವರಿಗೆ ನನ್ನ ಸಾಕ್ಷಾತ್ ಪ್ರಾಪ್ತಿಯಾಗುವುದು. ಸತ್ಸಂಗವನ್ನು ಹಿಡಿಯುವ ಭಕ್ತರು ನನ್ನ ಪ್ರಾಪ್ತಿಗಾಗಿ ಅನ್ಯ ಯಾರ ಮೇಲೆಯೂ ಅವಲಂಬಿಸಿರುವುದಿಲ್ಲ ॥೪೦॥ ಹಸಿರು ಹುಳುವು ಕೀಟದ ಸಂಗತಿಯಲ್ಲಿ ಹೋಗಲು, ಅದರ ದೇಹದ ಸ್ಥಿತಿಯೇ ಬದಲಾಗುವುದು. ಅದರಂತೆ ಸಂತರ ಸಂಗತಿಯನ್ನು ಹಿಡಿಯಲು ಭಕ್ತನು ನನ್ನ ಸ್ವರೂಪದಲ್ಲಿ ಏಕರೂಪನಾಗುವನು ॥೪೧॥ ಚಂದನ ಗಿಡದ ಸುತ್ತಮುತ್ತ ಯಾವ ಗಂಧ ರಹಿತ ಹಾಗೂ ನಿರುಪಯೋಗಿ ಗಿಡಗಳು ಇರುವುವು. ಅವುಗಳ ಕಟ್ಟಿಗೆಗಳು ಚಂದನದ ಸಂಗತಿಯಿಂದ ಸುಗಂಧವಾಗಿ ಮೌಲ್ಯವು ಬೆಳೆಯುವುದು ॥೪೨॥ ಈ ಯಾವ ಅಚೇತನ ಕಟ್ಟಿಗೆಗಳು ದೇವರ ಮತ್ತು ಬ್ರಾಹ್ಮಣರ ಮಸ್ತಕದ ಮೇಲೆ ಚಂದನ ರೂಪದಿಂದ ಏರುವುವು. ಶ್ರೀಮಂತರಿಗೆ ಅವುಗಳ ಅವಶ್ಯಕತೆ ಬೀಳುವುದು. ಮತ್ತು ರಾಜರು ಸಹ ಅವುಗಳನ್ನು ವಂದಿಸುವರು ॥೪೩॥ ಅದರಂತೆಯೇ ಸತ್ಸಂಗತಿಯನ್ನು ಹಿಡಿದರೆ ಭಕ್ತರು ನನ್ನ ಪದವಿಗೆ ಬಂದು ಮುಟ್ಟುವರು ಮತ್ತು ಕೊನೆಯಲ್ಲಿ ಅವರು ನನಗೂ ಕೂಡ ಪೂಜ್ಯರಾಗುವರು. ಅವರ ಮಹಿಮೆಯನ್ನು ಎಷ್ಟೆಂದು ವರ್ಣಿಸಬೇಕು? ॥೪೪॥ ಹೇ ಉದ್ಧವನೇ, ನನ್ನ ಪ್ರಾಪ್ತಿಯು ತತ್ಕಾಲದಲ್ಲಿ ಆಗಬೇಕಾದರೆ ಸತ್ಸಂಗತಿ ಹೊರತಾದ ಬೇರೆ ಯಾವ ಸಾಧನೆಯೂ ಇರುವುದಿಲ್ಲ. ಇದನ್ನು ನೀನು ನಿಶ್ಚಯವಾಗಿ ಲಕ್ಷದಲ್ಲಿಡು ॥೪೫॥ ಈ ಹಿಂದೆ ಹೇಳಿರುವ ಸಾಧನೆಗಳೆಲ್ಲವೂ ಅಭಿಮಾನಗಳಿಂದ ಮಲಿನವಾಗಿರುವುವು. ಅವುಗಳ ಲಕ್ಷಣಗಳನ್ನು ನಿನಗೆ ಹೇಳುವೆನು, ಕೇಳು ॥೪೬॥ ಅಷ್ಟಾಂಗ ಯೋಗದಲ್ಲಿ ವಾಯುನಿರೋಧವನ್ನು ಸಾಧಿಸುವುದು ಬಹು ಕಠಿಣವಾಗಿರುವುದು. ಅದನ್ನು ಒಂದು ವೇಳೆ ಸಾಧಿಸಿದರೆ ಅನಿವಾರ್ಯವಾಗಿ ಸಿದ್ಧಿಗಳು ಪ್ರಾಪ್ತವಾಗಿ ಅವರು ನನ್ನ ಪ್ರಾಪ್ತಿಯಿಂದ ದೂರ ಸರಿಯುವರು ॥೪೭॥ ನಿತ್ಯಾನಿತ್ಯ ವಿವೇಕದ ಜ್ಞಾನದಲ್ಲಿ ಪಾಂಡಿತ್ಯದ ಅಭಿಮಾನವು ಬಾಧಿಸುವುದು. ಇಷ್ಟೇ ಅಲ್ಲ, ಸನ್ಮಾನ, ದ್ರವ್ಯಗಳ ಪ್ರಬಲ ಇಚ್ಛೆಯುಂಟಾಗುವುದು. ಇಲ್ಲಿ ಜ್ಞಾನವೇ ಜ್ಞಾನೀ ಪಂಡಿತನಿಗೆ ವಿಘ್ನವಾಗುವುದು ॥೪೮॥ ಅಹಿಂಸಾ ಧರ್ಮದ ಪಾಲನೆಯನ್ನು ಮಾಡುವ ಜನರು ಧರ್ಮಬುದ್ಧಿಯಿಂದ ನೀರನ್ನು ಬಟ್ಟೆಯಿಂದ ಸೋಸುವರು. ಆದರೆ ಅವರು ಹೀಗೆ ಸೋಸುತ್ತಿರುವಾಗ ಸಾವಿರಾರು ಕ್ರಿಮಿ ಜೀವಿಗಳು ತಮ್ಮ ಪ್ರಾಣವನ್ನು ಕಳೆದುಕೊಳ್ಳುವುವು. ಆದ್ದರಿಂದ ಈ ಧರ್ಮವು ಹಿಂಸಾಮಯವಾಗುವುದು ॥೪೯॥ ವೇದಾಧ್ಯಯನ ಮಾಡಿದರೆ, ಮುಖ್ಯವಾಗಿ ವೇದವೇ ಮೌನವನ್ನು ಧರಿಸಿರುವರು. ಆದ್ದರಿಂದ ಕೇವಲ ವೇದ ಪಠಣೆಯಿಂದ ನನ್ನ ಪ್ರಾಪ್ತಿಯಾಗುವುದಿಲ್ಲ. ವೇದಾಧ್ಯಯನ ಮಾಡುವವರು ಯಾಜನ ಮತ್ತು ದಾನದ ಇಚ್ಛೆಯನ್ನು ಮಾಡುತ್ತಿರುವರು ॥೫೦॥ ದೇಹದಿಂದ ತಪಸ್ಸನ್ನು ಮಾಡಹತ್ತಿದರೆ, ಅಂಗದಲ್ಲಿ ಕ್ರೋಧವು ಬೆಳೆಯುತ್ತಿರುವುದು. ಆ ಕ್ರೋಧವು ಸತತವಾಗಿ ಬೆಳೆಯುತ್ತ ಸಾಗುವುದೇ ವಿನಹ ಕಡಿಮೆಯಾಗುವುದೇ ಇಲ್ಲ ॥೫೧॥ ಸರ್ವಸ್ವವನ್ನು ತ್ಯಾಗ ಮಾಡಿ ಸನ್ಯಾಸವನ್ನು ಸ್ವೀಕರಿಸಿದರೂ ಸಹ ಅಲ್ಲಿಯೂ ಕೂಡ ದೇಹದ ಅಭಿಮಾನವು ನಷ್ಟವಾಗುವುದಿಲ್ಲ. ''ವಿರಜಾ'' ಹೋಮವನ್ನು ಮಾಡಿದರೂ ಸಹ ಅದೂ ಕೂಡ ವ್ಯರ್ಥವಾಗುವುದು. ಕಾರಣ, ಜ್ಞಾನದ ಅಭಿಮಾನವು ಬಾಧಿಸುತ್ತಿರುವುದು ॥೫೨॥

ಶ್ರೌತ ಸ್ಮಾರ್ತ ಕರ್ಮ ಸಾಂಗ । ಇಷ್ಟಾಪೂರ್ತ ಜೇ ಕಾ ಯಾಗ । ತೇಥ ಆಡವಾ ಠಾಕೇ ಸ್ವರ್ಗಭೋಗ । ಕರ್ಮ ಕ್ಷಯರೋಗ ಸಾಧಕಾ ।।೫೩।। ನಾನಾ ದಾನೇ ದೇತಾ ಸಕಳ । ವಾಸನಾ ವಾಂಛೀ ದಾನಫಳ । ಕಾ ದಾತೇಪಣೇ ಗರ್ವ ಪ್ರಬಳ । ಲಾಗಲಾ ಅಢಳ ಢಳೇನಾ ।।೫೪।। ಅನಂತವ್ರತೇ ವ್ರತೀ ಝಾಲಾ । ಚೌದಾ ಗಾಂಠೀ ದೇವೋ ಬಾಂಧಲಾ । ಶೇಖೀ ಅನಂತಾತೇ ವಿಸರಲಾ । ದೇವೋ ಹರವಿಲಾ ಹಾತೀಂಚಾ ।।೫೫।। ನಾನಾ ಯಜ್ಞ ಕರಿತಾ ವಿಧೀ । ಮಂತ್ರ ತಂತ್ರ ಪಾತ್ರಶುದ್ಧೀ । ಸಹಸಾ ಪಾವೋ ನ ಶಕೇ ಸಿದ್ಧೀ । ಪಾವಲ್ಯಾ ಬಾಧೀ ಫಳಭೋಗೂ ।।೫೬।। ನಾನಾ ಛಂದೇ ರಹಸ್ಯಮಂತ್ರ । ವಿಕಳ ಹೋ ನಯೇ ಉಚ್ಚಾರ । ಮಂತ್ರೀ ಮಂತ್ರ ರಚಿಲೇ ಸಾಚಾರ । ಚಳಲೇ ಅಪಾರ ಮಂತ್ರವಾದೀ ।।೫೭।। ಭಗವೀ ಕರೂನಿ ತಾಂಬಡೀ । ತೀರ್ಥಾಭಿಮಾನೇ ಜಾಲೇ ಕಾಪಡೀ । ಭಿಕೇ ಲಾಗಲೀ ಬಾಪುಡೀ । ನಾಹೀ ಅರ್ಧಘಡೀ ವಿಶ್ರಾಂತೀ ।।೫೮।। ಯಮನಿಯಮ ಬಾರಾ ಬಾರಾ । ಕರಿತಾ ಅಖಂಡ ವೋರಬಾರಾ । ಚೋವಿಸಾಮಾಜೀ ಯಾಂಚಾ ಉಭಾರಾ । ನೇಣತೀ ಸೋಯರಾ ಪಂಚವಿಸಾವಾ ।।೫೯।। ಏವಂ ಸಾಂಗೀತಲ್ಯಾ ಸಾಧನಾಸೀ । ಆಪಮತೀ ಕರಿತಾ ತ್ಯಾಂಸೀ । ಬಾಧಕತಾ ಆಹೇ ಸರ್ವಾಸೀ । ಮ್ಯಾ ತುಜಪಾಸೀ ಸಾಂಗೀತಲೀ ।।೬೦।। ಕರಿತಾ ಸಾಧನೇ ಆಪಮತೀಸೀ । ತೇಣೇ ವಿಘ್ನೇ ಉಪಜತೀ ಐಶೀ । ತೀಚ ಸಾಧನೇ ಸಾಧುಉಪದೇಶೀ । ಸರ್ವ ಹೀ ಸಿದ್ಧೀಸೀ ಪಾವತೀ ।।೬೧।। ಸಾಧು ನ ಸಾಂಗತಾ ನಿರ್ಧಾರೀ । ನಾನಾ ಸಾಧನೇ ಹಾ ಕಾಯ ಕರೀ । ಕೋಣ ವಿಧಾನ ಕೈಶೀ ಪರೀ । ನಿಜನಿರ್ಧಾರೀ ಕಳೇನಾ ।।೬೨।। ನ ಕರಿತಾ ಸಾಧನವ್ಯುತ್ಪತ್ತೀ । ಕೇವಳ ಜಾಣ ಸತ್ಸಂಗತೀ । ಮಜ ಪಾವಲೇ ನೇಣೋ ಕಿತೀ । ತೇ ಮೀ ತುಜಪ್ರತೀ ಸಾಂಗೇನ ।।೬೩।।

ಸತ್ಸಂಗೇನ ಹಿ ದೈತೇಯಾ ಯಾತುಧಾನಾ ಮೃಗಾಃ ಖಗಾಃ । ಗಂಧರ್ವಾಪ್ಸರಸೋ ನಾಗಾಃ ಸಿದ್ಧಾಶ್ಚಾರಣಗುಹ್ಯಕಾಃ ।।೩।।
ವಿದ್ಯಾಧರಾ ಮನುಷ್ಯೇಷು ವೈಶ್ಯಾಃ ಶೂದ್ರಾಃ ಸ್ತ್ರಿಯೋಽಂತ್ಯಜಾಃ । ರಜಸ್ತಮಃ ಪ್ರಕೃತಯಸ್ತಸ್ಮಿಂಸ್ತಸ್ಮಿನ್ಯುಗೇಽನಘ ।।೪।।

ಅರ್ಥ:- ಹೇ ಉದ್ಧವನೇ, ಇದು ಒಂದು ಯುಗದ ಮಾತಲ್ಲ. ಸರ್ವ ಯುಗಗಳ ಒಂದೇ ಮಾತಾಗಿರುವುದು. ಸತ್ಸಂಗದಿಂದಲೇ ದೈತ್ಯ, ರಾಕ್ಷಸ, ಪಶುಪಕ್ಷಿ, ಗಂಧರ್ವ, ಅಪ್ಸರಾ, ನಾಗ, ಸಿದ್ಧ, ಚಾರಣ, ಗುಹ್ಯ ಮತ್ತು ವಿದ್ಯಾಧರ ಇವರಿಗೆ ನನ್ನ ಪ್ರಾಪ್ತಿಯಾಗಿರುವುದು. ಮನುಷ್ಯರಲ್ಲಿ ವೈಶ್ಯ, ಶೂದ್ರ, ಮತ್ತು ಸ್ತ್ರೀ ಹಾಗೂ ಅಂತ್ಯಜ ಇತ್ಯಾದಿ ರಜೋಗುಣಿ, ತಮೋಗುಣಿ ಹೀಗೆ ಅನೇಕರಿಗೆ ನನ್ನ ಪರಮಪದವು ಪ್ರಾಪ್ತವಾಗಿರುವುದು.

ಶ್ರೌತ, ಸ್ಮಾರ್ತ ಕರ್ಮಗಳನ್ನು ಯಥಾಸಾಂಗವಾಗಿ ಮಾಡಲು ಅಥವಾ ಇಷ್ಟಾಪೂರ್ತ ಯಜ್ಞಯಾಗಗಳನ್ನು ಮಾಡಲು ಸ್ವರ್ಗದಲ್ಲಿನ ನಾನಾ ಪ್ರಕಾರಗಳ ಭೋಗ ಲಾಲಸೆಯು ನಿರ್ಮಾಣವಾಗುವುದು. ಹೀಗೆ ಸಾಧಕರಿಗೆ ಕರ್ಮಗಳ ಕ್ಷಯರೋಗವು ಹತ್ತಿಕೊಳ್ಳುವುದು ।೫೩।। ನಾನಾ ಪ್ರಕಾರಗಳ ದಾನಗಳನ್ನು ಮಾಡಲು ಆ ದಾನದ ಫಲದ ಅಪೇಕ್ಷೆಯು ನಿರ್ಮಾಣವಾಗುವುದು. ಹಾಗೆಯೇ ನಾನು ದಾನೀ ಎಂಬ ಗರ್ವವು ಹುಟ್ಟಿಕೊಳ್ಳುವುದು. ಏನು ಮಾಡಿದರೂ ಆ ಗರ್ವವು ಪ್ರಬಲವಾಗಿಯೇ ಇರುವುದು ।೫೪।। ಒಬ್ಬ ಸಾಧಕನು ಅನಂತ ವ್ರತಗಳನ್ನು ಮಾಡುತ್ತ ವ್ರತೀಯಾಗುವನು. ಅವನು ಹದಿನಾಲ್ಕು ಗಂಟುಗಳಿಂದ ದೇವರಿಗೆ ಕಟ್ಟುವನು. ಆದರೂ ಕೂಡ ಅವನು ಕೊನೆಯಲ್ಲಿ ಅನಂತನನ್ನು ಮರೆತು ಕೈಯಲ್ಲಿದ್ದ ದೇವರನ್ನು ಕಳೆದುಕೊಳ್ಳುವನು ।೫೫।। ಭಿನ್ನ ಭಿನ್ನ ಪ್ರಕಾರಗಳ ಯಜ್ಞಗಳನ್ನು ಮಾಡಿದರೆ ಆ ಯಾವ ಪ್ರತಿಯೊಂದೂ ಯಜ್ಞದಲ್ಲಿನ ವಿಧೀ, ಮಂತ್ರತಂತ್ರ, ಪಾತ್ರಶುದ್ಧಿ ಇತ್ಯಾದಿ ಕಾರ್ಯಗಳ ಕಾರಣದಿಂದ ಅವು ಬಹುತೇಕವಾಗಿ ಸಿದ್ಧಿಯಾಗುವುದಿಲ್ಲ. ಒಂದುವೇಳೆ ಯದಾಕದಾಚಿತ್ ಸಿದ್ಧಿಗೊಳ್ಳಲು ಆಗ ಅವುಗಳಿಂದಾಗುವ ಫಲಭೋಗದ ಪೀಡೆಯು ನಿರ್ಮಾಣವಾಗುವುದು ।೫೬।। ನಾನಾ ಪ್ರಕಾರದ ಛಂದಗಳಲ್ಲಿ ರಹಸ್ಯ ಮಂತ್ರಗಳನ್ನು ರಚಿಸಿರುವುದು. ಆ ಯಾವ ಗುಪ್ತ ಮಂತ್ರಗಳನ್ನು ಉಚ್ಚರಿಸುತ್ತಿರುವಾಗ ಏನಾದರೂ ತಪ್ಪಿದರೆ ಅವು ಏನೂ ಉಪಯೋಗವಾಗುವುದಿಲ್ಲ. ಮಂತ್ರಗಳನ್ನು ತಪ್ಪಾಗಿ ಉಚ್ಚರಿಸಿ ಅನೇಕ ಮಂತ್ರವಾದಿಗಳು ಹುಚ್ಚರಾಗಿರುವರು ।೫೭।। ವಸ್ತ್ರಗಳನ್ನು ಕೇಸರೀ, ಕ್ಯಾವಿ ಬಣ್ಣಗೊಳಿಸಿ ತೀರ್ಥಾಭಿಮಾನದಿಂದ ತೀರ್ಥಾಟನೆ ಮಾಡುವ ಪ್ರವಾಸಿಗರಾಗುವರು. ಪಾಪ, ಅವರು ಭಿಕ್ಷೆ ಬೇಡಲು ಅನುವಾಗುವರು. ಅವರಿಗೆ ಒಂದು ಕ್ಷಣವಾದರೂ ವಿಶ್ರಾಂತಿಯು ದೊರೆಯುವುದಿಲ್ಲ ।೫೮।। ಹನ್ನೆರಡು ಯಮ ಮತ್ತು ಹನ್ನೆರಡು ನಿಯಮ ಇವುಗಳಿಗಾಗಿ ಎಡೆಬಿಡದೇ ಶ್ರಮಪಟ್ಟು ಪ್ರಕೃತ್ಯಾದಿ ಇಪ್ಪತ್ನಾಲ್ಕು ತತ್ವಗಳಲ್ಲಿಯೇ ಅವರ ಪ್ರಾಧಾನ್ಯವಿರುವುದು. ಆದರೆ ಇಪ್ಪತ್ತೈದನೆಯ ತತ್ವವಾದ ಸರ್ವರ ಆಪ್ತನಾಗಿರುವ ಪರಮಾತ್ಮನು ಅವರಿಗೆ ತಿಳಿಯುವುದಿಲ್ಲ ।೫೯।। ಈ ಪ್ರಕಾರವಾಗಿ ಮೇಲೆ ಹೇಳಿದ ಸಾಧನೆಗಳನ್ನು ತನ್ನದೇ ಆದ ಮತದಿಂದ ಮಾಡುತ್ತಿರಲು, ಅವು ಬಾಧಕವಾಗುವುವು ಎಂದು ನಿನಗೆ ಹೇಳಿರುವೆನು ।೬೦।। ಈ ಯಾವ ಸಾಧನೆಗಳನ್ನು ಆಪಮತಿಯಿಂದ ಆಚರಿಸಿದರೆ ಅವುಗಳಲ್ಲಿ ವಿಘ್ನಗಳು ಉಂಟಾಗುವುವು. ಆದರೆ ಈ ಸಾಧನೆಗಳನ್ನೇ ಗುರು ಉಪದೇಶದಂತೆ ಯಥಾಯೋಗ್ಯ ಪದ್ಧತಿಯಿಂದ ಅಭಿಮಾನವನ್ನು ತ್ಯಜಿಸಿ ಆರಂಭಿಸಿದರೆ ಅವುಗಳೆಲ್ಲವೂ ಸಿದ್ಧಿಯಾಗುವುವು ।೬೧।। ಸಾಧು ನಿಶ್ಚಯವಾಗಿ ಯಾವುದನ್ನೂ ತಿಳಿಸದಿದ್ದರೆ ಸಾಧಕನು ನಾನಾ ಪ್ರಕಾರದ ಸಾಧನೆಗಳನ್ನು ಹೇಗೆ ಮಾಡಲು ಸಾಧ್ಯ? ಪ್ರತ್ಯೇಕ ಸಾಧನೆಯ ವಿಧಾನಗಳು ಯಾವುವು? ಅವುಗಳ ಪ್ರಕಾರ ಯಾವುವು? ಇವು ತನ್ನ ವಿಚಾರದಿಂದ ತನಗೆ ಎಂದೂ ತಿಳಿಯಲಾರವು ।।೬೨।। ಆದರೆ ಯಾವ ಸಾಧನೆಗಳನ್ನು ಮಾಡದೇ ಕೇವಲ ಸತ್ಸಂಗತಿಯಿಂದಲೇ ಅನೇಕ ಸಾಧಕರು ನನ್ನನ್ನು ಪಡೆದುಕೊಂಡಿರುವರು. ಅದರ ಗಣತಿಯನ್ನು ಮಾಡಲು ಬರುವುದಿಲ್ಲ. ಅದನ್ನೇ ಈಗ ನಿನಗೆ ಹೇಳುವೆ ।೬೩।।

ಪಾಹತಾ ಕೇವಳ ಜಡಮೂಢ । ರಜತಮಯೋನೀ ಜನ್ಮಲೇ ಗೂಢ । ಸತ್ಸಂಗತೀ ಲಾಗೋನಿ ದೃಢ। ಮಾತೇ ಸುದೃಢ ಪಾವಲೇ ॥೧೪॥ ದೈತ್ಯ ದಾನವ ನಿಶಾಚರ । ಖಗ ಮೃಗ ಗಂಧರ್ವ ಅಪ್ಸರ । ಸಿದ್ಧ ಚಾರಣ ವಿದ್ಯಾಧರ । ನಾಗ ವಿಖಾರ ಗುಹ್ಯಕ ॥೧೫॥ ಖಗ ಮೃಗ ಸರ್ಪ ಪಾವಲೇ ಮಾತೇ । ಮಾನವ ತಂವ ಸಹಜೇ ಸರತೇ । ವೈಶ್ಯ ಶುದ್ರ ಸ್ತ್ರೀಯಾದಿ ಸಮಸ್ತೇ । ಪಾವಲೀ ಮಾತೇ ಸತ್ಸಂಗೇ ॥೧೬॥ ಜೇ ಸಕಳವರ್ಣಧರ್ಮಾವೇಗಳೇ । ಜ್ಯಾಂಚ್ಯಾ ನಾಮಾಸ ಕೋಣೀ ನಾತಳೇ । ಛಾಯಾ ದೇಖೂನಿ ಜಗ ಪಳೇ । ಅತ್ಯಂತ ಮೈಳೇ ಅಂತ್ಯಜ ॥೧೭॥ ತಿಹೀ ಧರೋನಿ ಸತ್ಸಂಗತೀ । ಆಲೇ ಮಾಝಿಯಾ ಪದಾಪ್ರತೀ । ದೇವ ದ್ವಿಜ ತಯಾಂತೇ ವಂದಿತೀ । ಅಭಿನವ ಕೀರ್ತಿ ಸಂತಾಂಚೀ ॥೧೮॥ ಧರಿಲಿಯಾ ಸತ್ಸಂಗತೀ । ನಿಂದ್ಯ ತೇಹೀ ವಂದ್ಯ ಹೋತೀ । ಉದ್ಧವಾ ತೂ ನಿಷ್ಪಾಪ ನಿಶ್ಚಿತೀ । ತರೀ ಸತ್ಸಂಗತೀ ಕರಾವೀ ॥೧೯॥ ಸೋನೇ ಸಾಡೇಪಂಧರೇ ಚೋಖಡೇ । ತ್ಯಾಸೀ ರತ್ನಾಚೀ ಸಂಗತೀ ಜೋಡೇ । ತೈ ಅಧಿಕಾಧಿಕ ಮೋಲ ಚಢೇ । ಮುಕುಟೀ ಚಢೇ ಮಹೇಶಾ ॥೨೦॥ ತೈಸೀ ಪುಣ್ಯ ಪುರುಷಾ ಸತ್ಸಂಗತೀ । ಜಾಹಲ್ಯಾ ಅನಂತ ಸುಖ ಪವಾತೀ । ಸುರವರ ತ್ಯಾಂತೇ ವಂದಿತೀ । ಶಿವಾದಿ ಯೇತೀ ಭೇಟೀಸೀ ॥೨೧॥ ಯಮಧರ್ಮ ಪಾಯಾ ಲಾಗತೀ । ತೀರ್ಥೇ ಪಾಯವಣೀ ಮಾಗತೀ । ಭಾವೇ ಧರಿಲ್ಯಾ ಸತ್ಸಂಗತೀ । ಏವಢೀ ಪ್ರಾಪ್ತೀ ಪುರುಷಾಸೀ ॥೨೨॥ ದೈತ್ಯ ರಾಕ್ಷಸ ಸ್ತ್ರೀ ಶೂದ್ರ ಪಾಹೀ । ಅಂತ್ಯಜ ತರಲೇ ಮ್ಹಣಸೀ ಕಾಯೀ । ತ್ಯಾ ತ್ಯಾ ಯುಗಾಚ್ಯಾ ತೇ ತೇ ಠಾಯೀ । ಬಹುಸಾಲ ಪಾಹೀ ಉದ್ಧರಿಲೇ ॥೨೩॥

ಬಹವೋ ಮತ್ಪದಂ ಪ್ರಾಪ್ತಾಸ್ತ್ವಾಷ್ಟ್ರಕಾಯಾಧವಾದ್ಯಃ । ವೃಷಪರ್ವಾ ಬಲಿರ್ಬಾಣೋ ಮಯಶ್ಚಾಥ ಬಿಭೀಷಣಃ ॥೫॥
ಸುಗ್ರೀವೋ ಹನುಮಾನೃಕ್ಷೋ ಗಜೋ ಗೃಧೋ ವಣಿಕ್ಪಥಃ । ವ್ಯಾಧಃ ಕುಬ್ಜಾ ವ್ರಜೇ ಗೋಪ್ಯೋ ಯಜ್ಞಪತ್ನ್ಯಸ್ತಥಾಽಪರೇ ॥೬॥

ಅರ್ಥ:- ವೃತ್ರಾಸುರ, ಪ್ರಹ್ಲಾದ, ವೃಷಪರ್ವಾ, ಬಲೀ, ಬಾಣಾಸುರ, ಮಯಾಸುರ, ವಿಭೀಷಣ, ಸುಗ್ರೀವ, ಹನುಮಾನ, ಜಾಂಬುವಾನ್, ಗಜೇಂದ್ರ, ಜಟಾಯೂ, ತುಳಾಧಾರ, ವೈಶ್ಯ, ಧರ್ಮವ್ಯಾಧ, ಕುಬ್ಜಾ, ವ್ರಜ-ಗೋಪೀ, ಯಜ್ಞಪತ್ನೀ ಮತ್ತು ಅನೇಕ ಜನರು ಸತ್ಸಂಗದಿಂದ ನನ್ನನ್ನು ಪ್ರಾಪ್ತ ಮಾಡಿಕೊಂಡರು.

ವೃತ್ರಾಸುರ ಗಾಇಜೇ ವೇದೀ । ಜೋ ಇಂದ್ರಾಸೀ ಮಿಸಳಲಾ ಯುದ್ಧೀ । ಯುದ್ಧೀಹೀ ಅವಿರುದ್ಧ ಬುದ್ಧೀ । ಮಾಝೀ ನಿಜಪದೀ ಪಾವಲಾ ॥೨೪॥ ಐಕತಾ ನಾರದಾಚ್ಯಾ ಗೋಠೀ । ಗರ್ಭೀಚ ಮಜಸೀ ಘಾತಲೀ ಮಿಠೀ । ಜೋ ಜನ್ಮಲಾ ಕಯಧೂಚ್ಯಾ ಪೋಟೀ । ಭಕ್ತ ಜಗಜೇಠೀ ಪ್ರಹ್ಲಾದು ॥೨೫॥

ಯಾವ ಜಡ-ಮೂಢ, ರಾಜಸ ಮತ್ತು ತಾಮಸ ಯೋನಿಗಳಲ್ಲಿ ಜನ್ಮ ಪಡೆದವರೂ ಸಹ ದೃಢವಾದ ಸತ್ಸಂಗತಿಯಿಂದ ನನ್ನನ್ನು ಪ್ರಾಪ್ತ ಮಾಡಿಕೊಂಡರು ॥೧೪॥ ದೈತ್ಯ, ದಾನವ, ನಿಶಾಚರ, ಪಕ್ಷೀ, ಪಶೂ, ಗಂಧರ್ವ, ಅಪ್ಸರಾ, ಸಿದ್ಧ, ಚಾರಣ, ವಿದ್ಯಾಧರ, ನಾಗ, ವಿಷಾರೀ ಸರ್ಪ, ಗುಹ್ಯಕ ಇವರೆಲ್ಲರೂ ಸತ್ಸಂಗತಿಯಿಂದ ನನ್ನ ಪದವಿಗೆ ಮುಟ್ಟಿಕೊಂಡರು ॥೧೫॥ ಸಾಮಾನ್ಯವಾದ ಪಶುಪಕ್ಷಿಗಳು ನನ್ನನ್ನು ಪ್ರಾಪ್ತಿ ಮಾಡಿಕೊಂಡಿರಲು ಮನುಷ್ಯ ಯೋನಿಯು ಸ್ವಭಾವತಃ ಶ್ರೇಷ್ಠವಾಗಿರುವುದು. ಇದರಲ್ಲಿ ವೈಶ್ಯ, ಶೂದ್ರ, ಸ್ತ್ರೀಯರು ಇವರೆಲ್ಲರೂ ಕೇವಲ ಸತ್ಸಂಗದಿಂದ ನನ್ನನ್ನು ಪಡೆದುಕೊಂಡರು ॥೧೬॥ ಹೆಚ್ಚಿಗೆ ಏನು ಹೇಳಬೇಕು! ಸರ್ವ ಆಶ್ರಮಗಳಿಂದಲೂ, ಸರ್ವ ಧರ್ಮಗಳಿಂದಲೂ ಭಿನ್ನವಾಗಿರುವ, ಯಾರೊಬ್ಬರೂ ಅವರನ್ನು ಸ್ಪರ್ಶ ಕೂಡ ಮಾಡದ, ಕಂಡರೆ ದೂರ ಓಡಿಹೋಗುವ ಸಮಾಜವೆಂದರೆ ಅಂತ್ಯಜರು ॥೧೭॥ ಇಂತಹವರೂ ಸಹ ಸತ್ಸಂಗದಿಂದ ನನ್ನ ಪದವಿಗೆ ಬಂದು ಕೂಡಿಕೊಂಡರು. ಇಷ್ಟೇ ಅಲ್ಲ ಅವರಿಗೆ ದೇವ, ಬ್ರಾಹ್ಮಣರು ವಂದಿಸುವರು. ಹೀಗೆ ಸಂತರ ಕೀರ್ತಿಯು ಬಹು ಅಪೂರ್ವವಾಗಿರುವುದು ॥೧೮॥ ಹೇ ಉದ್ಧವನೇ, ಸತ್ಸಂಗತಿಯನ್ನು ಹಿಡಿಯಲು ನಿಂದ್ಯ ಜನರೂ ಕೂಡ ವಂದ್ಯರಾಗುವರು. ನೀನು ಮಾತ್ರ ನಿಜವಾಗಿಯೂ ನಿಷ್ಪಾಪನಾಗಿರುವೆ. ಆದ್ದರಿಂದ ನೀನು ಸತ್ಸಂಗತಿಯನ್ನು ಮಾಡು ॥೧೯॥ ಮೊದಲೇ ಹದಿನೈದುವರೆ ದರದ ಉತ್ತಮ ಬಂಗಾರಕ್ಕೆ ರತ್ನವನ್ನು ಕೆತ್ತಿ ಕೂಡಿಸಲು ಆಗ ಅದರ ಮೌಲ್ಯವು ಬೆಳೆದು, ರಾಜನ ಕಿರೀಟದ ಮೇಲೆ ಏರುವುದು ॥೨೦॥ ಅದರಂತೆ ಪುಣ್ಯವಂತ ಪುರುಷರಿಗೆ ಸತ್ಸಂಗತಿಯು ಸಾಧಿಸಿದರೆ ಅವರಿಗೆ ಅನಂತ ಪ್ರಕಾರದ ಸುಖದ ಪ್ರಾಪ್ತಿಯಾಗುವುದು. ಸುರವರರು ಇವರಿಗೆ ವಂದಿಸುವರು ಮತ್ತು ಶಿವಾದಿಕರು ಇವರ ಭೇಟಿಗಾಗಿ ಬರುವರು ॥೨೧॥ ಯಮಧರ್ಮನು ಸಹ ಇವರ ಕಾಲುಗಳನ್ನು ಹಿಡಿಯುವನು. ಪುಣ್ಯ ತೀರ್ಥಗಳು ಇವರ ಚರಣತೀರ್ಥವನ್ನು ಬಯಸುವುವು. ಭಕ್ತಿಭಾವದಿಂದ ಸತ್ಸಂಗತಿಯನ್ನು ಹಿಡಿಯಲು ಆ ಪುರುಷರಿಗೆ ಇಷ್ಟೊಂದು ಲಾಭವಾಗುವುದು ॥೨೨॥ ದೈತ್ಯ, ರಾಕ್ಷಸ, ಸ್ತ್ರೀ, ಶೂದ್ರ ಅಥವಾ ಅಂತ್ಯಜರು ಇಷ್ಟೇ ಜನರು ಉದ್ಧಾರವಾದರು ಎನ್ನುವಂತಿಲ್ಲ. ಆದರೆ ಆ ಯಾವ ಯುಗಗಳಂತೆ ಇನ್ನೂ ಎಷ್ಟೋ ಭಕ್ತರ ಉದ್ಧಾರವಾಗಿರುವುದು ॥೨೩॥

ವೃತ್ರಾಸುರನು ಇಂದ್ರನೊಂದಿಗೆ ಯುದ್ಧವನ್ನು ಮಾಡುತ್ತಿದ್ದನು. ವೇದದಲ್ಲಿ ಇದರ ವರ್ಣನೆಯು ಬಂದಿರುವುದು. ಯುದ್ಧದಲ್ಲಿಯೂ ಕೂಡ ಈತನ ಬುದ್ಧಿಯು ಸಮವಾಗಿತ್ತು. ಆದ್ದರಿಂದಲೇ ಆತನು ನನ್ನ ಪದವಿಗೆ ಬಂದು ಮುಟ್ಟಿದನು ॥೨೪॥ ನಾರದರ ಉಪದೇಶವನ್ನು ಕೇಳಿ ಗರ್ಭದಲ್ಲಿಯೇ ಯಾರು ನನ್ನನ್ನು ಅಪ್ಪಿಕೊಂಡನೋ, ಆ ಯಾವ ಭಕ್ತಶಿರೋಮಣಿ ಪ್ರಹ್ಲಾದನು ಕಯಾದುಕಶ್ಯಪೂರ ಹೊಟ್ಟೆಯಲ್ಲಿ ಜನಿಸಿದನು ॥೨೫॥

ವೃಷಪರ್ವಾ ದೈತ್ಯ ಉದ್ಭಟೂ । ಮಾಝೇ ಪದೀ ಝಾಲಾ ಪ್ರವಿಷ್ಟೂ । ಬಳೀಚ್ಯಾ ದ್ವಾರೀ ಮೀ ಖುಜಟೂ । ಝಾಲೋ ಬಟೂ ಭಿಕೇಸೀ ॥೭೬॥ ಛಳೇ ಕರಿತಾ ಬಳಿಬಂಧನ । ಛಳಿತಾ ಮೀ ಛಳಿಲೋ ಜಾಣ । ಅಂಗಾ ಆಲೇ ದ್ವಾರಪಾಳಪಣ । ಬಳೀ ಆಧೀನ ಮೀ ಝಾಲೋ ॥೭೭॥ ತ್ಯಾ ಬಳೀಚಾ ಪುತ್ರ ಬಾಣಾಸುರ । ಶಿವವರೇ ಮಾತಲಾ ಥೋರ । ಮಾಝೇ ಪುತ್ರಾಚಾ ಚೋರಿಲಾ ಪುತ್ರ । ದೋಹೀಂಚಾ ಹೇರ ನಾರದೂ ॥೭೮॥ ತೋ ಮ್ಯಾ ಸಾಧೂನಿ ಧರಿಲಾ ಚೋರೂ । ಬಾಣೇ ಕೇಲಾ ಅತಿಜರ್ಜರೂ । ಛೇದಿಲಾ ಸಹಸ್ರ ಭುಜಾಂಚಾ ಭಾರೂ । ಶಿವ ಜೀವೇ ಮಾರೂ ನೇದೀಚ ॥೭೯॥ ತೋ ಮ್ಹಣೇ ಹಾ ಭಕ್ತಪುತ್ರ ಝಣೇ ಮಾರೀ । ಮಜಹೀ ಬಳೀಚೀ ಭೀಡ ಭಾರೀ । ಅಖಂಡ ಮೀ ಅಸೇ ತ್ಯಾಚ್ಯಾ ದ್ವಾರೀ । ಯಾಲಾಗೀ ಉದ್ಧರೀ ಬಾಣಾತೇ ॥೮೦॥ ಮಗ ಸಂತೋಷಾವಯಾ ಶಿವಾತೇ । ಬಾಣ ಆಪುಲೇ ನಿಜಹಸ್ತೇ । ಐಕ್ಯೇ ಶಿವಪದೀ ಸ್ಥಾಪಿಲೇ ತ್ಯಾತೇ । ಕಲ್ಯಾಣಾತೇ ಪಾವಲಾ ॥೮೧॥ ಖಾಂಡವವನ ಅಗ್ನೀಸೀ । ಅರ್ಜುನೇ ದೀಧಲೇ ಖಾವಯಾಸೀ । ತೇಥೇ ಜಳತಾ ಮಯಾಸುರಾಸೀ । ಮ್ಯಾಂಚಿ ತಯಾಸೀ ಉದ್ಧರಿಲೇ ॥೮೨॥ ರಾಕ್ಷಸಕುಳೀ ಜನ್ಮಲಾ ಜಾಣ । ಶತ್ರೂಚಾ ಬಂಧು ವಿಭೀಷಣ । ಮಾಝ್ಯಾ ಠಾಯೀ ಅನನ್ಯಶರಣ । ಜೀವಪ್ರಾಣ ತೋ ಮಾಝಾ ॥೮೩॥ ಸುಗ್ರೀವ ಹನುಮಂತ ಜಾಂಬವಂತೂ । ಯಾಂಚಾ ಪವಾಡಾ ವಿಖ್ಯಾತೂ । ಜಟಾಯೂ ಉದ್ಧರಿಲಾ ವನಾಂತೂ । ಜೋ ರಾವಣೇ ಖಸ್ತೂ ಕೇಲಾ ಹೋತಾ ॥೮೪॥ ಗಜ ಸರೋವರೀ ಗ್ರಹಗ್ರಸ್ತ । ಸ್ತ್ರಿಯಾಪುತ್ರೀ ಸಾಂಡಿಲಾ ಜೀತ । ತೋ ಅಂತಕಾಳೀ ಮಾತೇ ಸ್ಮರತ । ಆರ್ತಭೂತ ಅತಿಸ್ತವನೇ ॥೮೫॥ ಸಾಂಡೂನಿ ಸಮಸ್ತಾಂಚೀ ಆಸ । ಪಾಹೋನಿ ವೈಕುಂಠಾಚಿ ವಾಸ । ರಾಜೀವ ಉಚಲೋನಿ ರಾಜಸ । ಪಾವ ಪರೇಶ ಮ್ಹಣೇ ವೇಗೀ ॥೮೬॥ ತ್ಯಾ ಗಜೇಂದ್ರಾಚೇ ತಾಂತಡೀ । ವೈಕುಂಠೀಹೂನಿ ಲವಡಸವಡೀ । ಮ್ಯಾ ಗರುಡಾಪುಢೇ ಘಾಲೋನಿ ಉಡೀ । ಬಂಧನ ತೋಡೀ ಗಜಾಚೇ ॥೮೭॥ ತ್ಯಾಸೀ ಪಶುಯೋನೀ ಜನ್ಮ ಹೋತೇ । ಪರೀ ತೋ ಅಂತೀ ಸ್ಮರಲಾ ಮಾತೇ । ಪಾವಲಾ ಮಾಝ್ಯಾ ನಿಜಧಾಮಾತೇ । ಗಾಇಜೇ ತ್ಯಾತೇ ಪುರಾಣೀ ॥೮೮॥ ವೈಶ್ಯ ತುಳಾಧಾರ ವಾಣೀ । ಸತ್ಯ ವಾಚಾ ಸತ್ಯ ಜೋಖಣೀ । ಸತ್ಯೇ ಪಾವಲಾ ಮಜಲಾಗುನೀ । ಸತ್ಯ ತೋಲಣೀ ತ್ಯಾಚೇ ನಾಂವ ॥೮೯॥

ವೃಷಪರ್ವನು ಮಹಾದೈತ್ಯನು. ಅವನೂ ಕೂಡ ನನ್ನ ಪದಕ್ಕೆ ಪ್ರಾಪ್ತನಾದನು. ನಾನು ಬಲಿಯ ದ್ವಾರಕ್ಕೆ ವಾಮನ ವಟೂನಾಗಿ ಭಿಕ್ಷೆಯನ್ನು ಬೇಡಲು ಹೋದೆನು ॥೭೬॥ ಅಲ್ಲಿ ನಾನು ಕಪಟದಿಂದ ಬಲಿಯನ್ನು ಬಂಧಿಸಿದೆನು. ಆದರೆ ಆತನೂ ನನ್ನನ್ನು ಸಿಕ್ಕಿ ಹಾಕಿಕೊಂಡನು. ಕೊನೆಗೆ ನಾನು ಆತನ ದ್ವಾರಪಾಲಕನಾಗಿ ಆತನ ಆಧೀನನಾದೆನು ॥೭೭॥ ಆ ಬಲಿಯ ಪುತ್ರನು ಬಾಣಾಸುರನು. ಈ ಬಾಣಾಸುರನು ಶ್ರೀಶಂಕರನ ವರದಾನದಿಂದ ಬಹಳ ಉನ್ಮತ್ತನಾಗಿದ್ದನು. ಆತನು ನನ್ನ ಮೊಮ್ಮಗನನ್ನು ಅಂದರೆ ಪ್ರದ್ಯುಮ್ನನ ಮಗನಾದ ಅನಿರುದ್ಧನಿಗೆ ಕದ್ದು ಒಯ್ದನು. ಆಗ ನಾರದರು ಎರಡೂ ಕಡೆಯಲ್ಲಿ ಸಮಾಚಾರ ಪ್ರಸಾರಕರಾಗಿದ್ದರು ॥೭೮॥ ಆ ಕಳ್ಳ ಬಾಣಾಸುರನಿಗೆ ನಾನು ಯುಕ್ತಿಯಿಂದ ಹಿಡಿದು ಬಾಣಗಳಿಂದ ಜರ್ಜಿತಗೊಳಿಸಿದೆ. ಆತನ ಸಾವಿರ ಬಾಹುಗಳನ್ನು ಕತ್ತರಿಸಿ ಒಗೆದೆ. ನಾನು ಆತನನ್ನು ಕೊಲ್ಲಬೇಕೆಂದಿದ್ದೆ. ಆದರೆ ಶಂಕರನು ಹಾಗೆ ಮಾಡಿಸಿಕೊಡಲಿಲ್ಲ ॥೭೯॥ ಶಂಕರನು ಹೀಗೆ ಹೇಳಿದನು, ಈತನು ನಿನ್ನ ಭಕ್ತನ ಪುತ್ರನು, ಕೊಲ್ಲಬೇಡ. ನನಗೂ ಸಹ ಬಲಿಯ ಮೇಲೆ ಬಹು ಪ್ರೀತಿ ಇದ್ದು, ನಾನು ಆತನ ದ್ವಾರದಲ್ಲಿ ಅಖಂಡವಾಗಿ ನಿಂತುಕೊಂಡಿರುವೆನು. ಆದ್ದರಿಂದ ಬಾಣಾಸುರನಿಗೆ ನಾನು ಉದ್ಧರಿಸಿದೆನು ॥೮೦॥ ಆಗ ನಾನು ಶಂಕರನಿಗೆ ಸಂತೋಷಪಡಿಸುವುದಕ್ಕಾಗಿ ನನ್ನ ನಿಜಹಸ್ತದಿಂದ ಬಾಣಾಸುರನಿಗೆ ಸ್ವಸ್ವರೂಪಕ್ಕೆ ಮುಟ್ಟಿಸಿದೆನು ಹಾಗೂ ಶಿವಪದವನ್ನು ಸ್ಥಾಪಿಸಿಕೊಟ್ಟೆನು. ಆದ್ದರಿಂದ ಆತನು ಸುಖೀಯಾದನು ॥೮೧॥ ಅರ್ಜುನನು ಅಗ್ನಿದೇವನಿಗೆ ಖಾಂಡವವನವನ್ನು ಭಕ್ಷಣೆ ಮಾಡಲು ಕೊಟ್ಟಿದ್ದನು. ಅಲ್ಲಿ ಮಾಯಾಸುರನು ಸುಡುತ್ತಿದ್ದನು. ಆಗ ನಾನೇ ಆತನ ಉದ್ಧಾರವನ್ನು ಮಾಡಿದೆನು ॥೮೨॥ ರಾಮಾವತಾರದಲ್ಲಿ ನನ್ನ ಶತ್ರುವಿನ ತಮ್ಮನಾದ ವಿಭೀಷಣನು ರಾಕ್ಷಸ ಕುಲದಲ್ಲಿ ಜನ್ಮ ಪಡೆದಿದ್ದರೂ ಕೂಡ ಆತನು ನನಗೆ ಅನನ್ಯಭಾವದಿಂದ ಶರಣಾದನು. ಆದ್ದರಿಂದ ಆತನು ನನಗೆ ಜೀವಪ್ರಾಣ ಪ್ರಿಯನಾದನು ॥೮೩॥ ಸುಗ್ರೀವ, ಹನುಮಂತ ಮತ್ತು ಜಾಂಬುವಂತ ಇವರ ಮಹಾ ಪರಾಕ್ರಮವು ಪ್ರಸಿದ್ಧವಾಗಿರುವುದು. ರಾವಣನು ಜಟಾಯು ಪಕ್ಷಿಯನ್ನು ಗಾಯಗೊಳಿಸಿ ಒಗೆದಿದ್ದನು. ಆದರ ಉದ್ಧಾರವನ್ನೂ ನಾನು ಮಾಡಿದೆ ॥೮೪॥ ಸರೋವರದಲ್ಲಿ ಗಜೇಂದ್ರನಿಗೆ ನಕ್ರನು ಜಿಗಿದು ಹಿಡಿದುಕೊಂಡಿದ್ದನು. ಈತನ ಹೆಂಡತಿ ಮಕ್ಕಳು ಈತನಿಗೆ ಹಾಗೆಯೇ ಬಿಟ್ಟು ಹೋಗಿದ್ದರು. ಆಗ ಅಂತ್ಯಸಮಯಕ್ಕೆ ದೀನನಾಗಿ ಆತನು ನನ್ನ ಸ್ತವನೆಯನ್ನು ಮಾಡಲಾರಂಭಿಸಿದ ॥೮೫॥ ಸರ್ವರ ಆಶೆಯನ್ನು ಬಿಟ್ಟುಕೊಟ್ಟು ವೈಕುಂಠದ ದಾರಿ ಕಾಯುತ್ತ ತನ್ನ ಸೊಂಡಿಲಿನಿಂದ ಒಂದು ಕಮಲ ಪುಷ್ಪವನ್ನು ಎತ್ತಿಕೊಂಡು ಹೇ ಪರಮೇಶ್ವರನೇ, ಬೇಗನೇ ಧಾವಿಸಿ ಬಾ ಎಂದು ಕೂಗಿಕೊಂಡನು ॥೮೬॥ ಆ ಯಾವ ಗಜೇಂದ್ರನ ಉತ್ಕಂಠವನ್ನು ಕಂಡು ನಾನು ವೈಕುಂಠದಿಂದ ತ್ವರಿತವಾಗಿ ಗರುಡನ ಮುಂದೆ ಹಾರಿ ಬಂದು ಆ ಯಾವ ಗಜೇಂದ್ರನ ಬಂಧನವನ್ನು ಮುರಿದುಬಿಟ್ಟೆನು ॥೮೭॥ ಗಜೇಂದ್ರನ ಜನ್ಮವು ಪಶು ಯೋನಿಯಲ್ಲಿ ಆಗಿತ್ತು. ಆದರೆ ಆತನು ಅಂತ್ಯಕಾಲದಲ್ಲಿ ಆರ್ತಭಾವದಿಂದ ನನ್ನ ಸ್ಮರಣೆಯನ್ನು ಮಾಡಿದಕ್ಕಾಗಿ ಆತನು ನನ್ನ ನಿಜಧಾಮಕ್ಕೆ ಬಂದು ಸೇರಿದನು. ಅದಕ್ಕಾಗಿ ಪುರಾಣದಲ್ಲಿಯೂ ಇದರ ವರ್ಣನೆವಿರುವುದು ॥೮೮॥ ಸತ್ಯವನ್ನು ನುಡಿಯುವವ ಮತ್ತು ತನ್ನ ಕಿರಾಣಿ ಅಂಗಡಿಯಲ್ಲಿ ಗ್ರಾಹಕರಿಗೆ ಸತ್ಯವಾದ ಅಳತೆಯಿಂದ ತೂಕಮಾಡಿ ಕೊಡುವವ ಒಬ್ಬ ತುಳಾಧಾರ ಎಂಬ ವ್ಯಾಪಾರೀ ಇದ್ದನು. ಸತ್ಯ ಆಚರಣೆಯಿಂದ ಆತನಿಗೆ ನನ್ನ ಪ್ರಾಪ್ತಿಯಾಯಿತು. ಆದ್ದರಿಂದ ಆತನ ಹೆಸರು ''ಸತ್ಯಮಾಪಕ'' ಎಂದು ಸರ್ವತ್ರವೂ ಪ್ರಸಿದ್ಧಿಯಾಯಿತು ॥೮೯॥

ಅಂತ್ಯಜಾಮಾಜೀ ಧರ್ಮವ್ಯಾಧ । ಮಾಝೇ ಪಾವಲಾ ನಿಜಪದ । ಜರಾವ್ಯಾಧ ಗಾ ಪ್ರಸಿದ್ಧ । ಕರೋನಿ ಅಪರಾಧ ಉದ್ಧರಿಲಾ ॥೯೦॥ ಚರಣೀ ವಿಂಧೋನಿಯಾ ಬಾಣ । ಧಾಯೇ ಘೇತಲಾ ಕೃಷ್ಣಾಚಾ ಪ್ರಾಣ । ತೋ ಪರೀಕ್ಷಿತಿ ಜರಾವ್ಯಾಧ ಜಾಣ । ಕೃಷ್ಣೇ ಆಪಣ ತಾರಿಲಾ ॥೯೧॥ ಕೌಲಿಕಾಮಾಜೀ ಗುಹಕ ದೇಖ । ಆಲಾ ಶ್ರೀರಾಮಾಸಂಮುಖ । ಕರ್ಮ ನಿರಸಲೇ ನಿಃಶೇಖ । ನಿಜಧಾಮ ದೇಖ ಪಾವಲಾ ॥೯೨॥ ಕುಬ್ಜಾ ತೀ ಠಾಯೀ ವಾಂಕುಡೀ । ನೀಟ ನಿಜಭಾವೇ ಚೋಖಡೀ । ತಿಚ್ಯಾ ಚಂದನಾಚೀ ಶುದ್ಧ ಗೋಡೀ । ಅತಿ ಆವಡೀ ಮಜಲಾಗೀ ॥೯೩॥ ತಿಣೇ ಚರ್ಚೂನಿಯಾ ಚಂದನ । ಮನ ಕೇಲೇ ಮದರ್ಪಣ । ಮೀ ಝಾಲೋ ತಿಜಆಧೀನ । ನಿಜಧಾಮ ತೇ ಜಾಣ ಪಾವಲೀ ॥೯೪॥ ಗೋಕುಳೀಂಚಿಯಾ ಗೋಪಿಕಾ । ಸಂಸಾರಾಸೀ ಹೋಊನಿ ವಿಮುಖಾ । ತನಮನಪ್ರಾಣೇ ಮಜಲಾಗೀ ದೇಖಾ । ಭಾಳೋನಿ ನಿಜಸುಖಾ ಪಾವಲ್ಯಾ ॥೯೫॥ ಮಾಝೀ ಗೋಪಿಕಾಂಸೀ ಪರಮ ಆವಡೀ । ಕೀ ಮಜಚಿ ಗೋಪಿಕಾಂಚೀ ಗೋಡೀ । ಪಾಹತಾ ಯಾಂಚೇ ಸಮಾನ ಪಾಡೀ । ಜಾಹಲೀ ಬಾಪುಡೀ ಸಾಧನೇ ॥೯೬॥ ಸಾಂಡೂನಿ ಸಂಸಾರಾಚೀ ಚಾಡ । ನ ಧರೂನಿ ಪತಿಪುತ್ರಾಂಚೀ ಭೀಡ । ಯಜ್ಞಪತ್ನ್ಯಾಂಸೀ ಮಾಝೇ ಕೋಡ । ಭವಾರ್ಥೇ ದೃಢ ಭಾವಿಕಾ ॥೯೭॥ ತಿಂಹೀ ಮಜ ಅರ್ಪೋನಿಯಾ ಅನ್ನ । ಮಾಝೇ ನಿಜಧಾಮ ಪಾವಲ್ಯಾ ಜಾಣ । ಮಜ ನ ಪಾವತೀಚ ತೇ ಬ್ರಾಹ್ಮಣ । ಜಯಾಂಸೀ ಕರ್ಮಾಭಿಮಾನ ಕರ್ಮಾಚಾ ॥೯೮॥ ಏಕ ಬ್ರಾಹ್ಮಣ ಅತಿಶಾಸ್ತ್ರಬಳೇ । ಪತ್ನೀಸೀ ಯೇವೂ ನೇದೀ ಮಜಜವಳೇ । ತುಮ್ಹೀ ವೇದಶಾಸ್ತ್ರಾಂಸೀ ವೇಗಳೇ । ಗೋರಕ್ಷ ಗೋಂವಳೇ ಕೇವೀ ಪೂಜಾ ॥೯೯॥ ಯೇರೀ ಸಮಸ್ತಾ ಜಾತಾ ದೇಖೋನ । ತಿಚೇ ಮಜಲಾಗೀ ತಳಮಳೀ ಮನ । ಅತಿಕರ್ಮಠ ತೋ ಬ್ರಾಹ್ಮಣ ಕಠಿಣ । ಅವರೋಧೂನ ರಾಖಿಲೀ ॥೧೦೦॥ ಪಿತ್ಯಾನೇ ಲಾವಿಲೀಸೀ ಮಾಝ್ಯಾ ಹಾತೀ । ತೇವ್ಹಾಂಚ ಮೀ ತುಝ್ಯಾ ದೇಹಾಚಾ ಪತೀ । ಮಜ ಸಾಂಡೂನಿ ಕೇಉತೀ । ಗೋವಳಾಪ್ರತೀ ಜಾತೇಸೀ ॥೧೦೧॥ ಯೇರೀ ಮ್ಹಣೇ ತೂ ಯಾ ದೇಹಾಚಾ ಪತೀ । ತೋ ದೇಹ ಠೇವೂನಿಯಾ ತಯಾಪ್ರತೀ । ಜೀವಿತ್ವೇ ಮೀನಲಿಯಾ ಮಜಪ್ರತೀ । ಸಾಯುಜ್ಯ ಮುಕ್ತಿ ಪಾವಲೀ ॥೧೦೨॥ ಜ್ಯಾ ಮಾಝಿಯಾ ಪ್ರಾಪ್ತೀಸೀ । ಸಾಧಕ ಶಿಣತೀ ನಾನಾ ಸಾಯಾಸೀ । ತೀ ಸಾಧನೇ ನ ಕರಿತಾ ತಯಾಂಸೀ । ಅನಾಯಾಸೀ ಮಜ ಪಾವಲ್ಯಾ ॥೧೦೩॥

ಅಂತ್ಯಜ ಕುಲದಲ್ಲಿನ ಧರ್ಮವ್ಯಾಧನೂ ಕೂಡ ನನ್ನ ನಿಜಪದಕ್ಕೆ ಬಂದು ಮುಟ್ಟಿದನು. ಜರಾವ್ಯಾಧನೂ ಕೂಡ ಪ್ರಸಿದ್ಧನಾಗಿರುವನು. ಈತನು ಅಪರಾಧವನ್ನು ಎಸಗಿದನು. ಆದರೂ ನಾನು ಆತನನ್ನು ಉದ್ಧರಿಸಿದೆನು ॥೯೦॥ ಹೇ ಪರೀಕ್ಷಿತಿಯೇ, ಜರಾವ್ಯಾಧನು ಶ್ರೀಕೃಷ್ಣನ ಚರಣಕ್ಕೆ ಬಾಣವನ್ನು ಬಿಟ್ಟು ಆತನ ಪ್ರಾಣವನ್ನು ತೆಗೆದುಕೊಂಡನು. ಹೀಗೆ ಮಾಡಿದ ಜರಾವ್ಯಾಧನನ್ನೂ ಶ್ರೀಕೃಷ್ಣನು ಉದ್ಧರಿಸಿದನು ॥೯೧॥ ಅಂಬಿಕ ಕುಲದ ಗುಹಕನು ಶ್ರೀರಾಮಚಂದ್ರನ ಸಮೀಪ ಬರುತ್ತಲೇ ಆತನ ಸರ್ವ ಕರ್ಮಗಳ ನಿರಸನೆಯಾಯಿತು. ಹಾಗೂ ಆತನು ನಿಜಧಾಮಕ್ಕೆ ಹೋದನು ॥೯೨॥ ದಾಸೀ ಕುಬ್ಜಾ ಈಕೆಯು ತನ್ನ ಶರೀರದಿಂದ ಮೂರು ಕಡೆಗಳಲ್ಲಿ ಡೊಂಕಾಗಿದ್ದಳು. ಆದರೆ ಆಕೆಯು ಮನಸ್ಸಿನಿಂದ ಮಾತ್ರ ಸರಳ ಹಾಗೂ ಶುದ್ಧಳಾಗಿದ್ದಳು. ಈಕೆಯ ಚಂದನದ ಮೇಲೆ ನನಗೆ ಬಹು ಪ್ರೀತಿಯು ಇತ್ತು ॥೯೩॥ ಆಕೆಯು ನನ್ನನ್ನು ಚಂದನದಿಂದ ವಿಲೇಪನ ಮಾಡಿದಳು ಮತ್ತು ತನ್ನ ಮನಸ್ಸನ್ನು ನನ್ನ ಚರಣದಲ್ಲಿ ಅರ್ಪಿಸಿದಳು. ಆದ್ದರಿಂದ ನಾನು ಆಕೆಯ ಆಧೀನನಾದೆನು. ಆಕೆಯೂ ಕೂಡ ನಿಜಧಾಮವನ್ನು ಪಡೆದುಕೊಂಡಳು ॥೯೪॥ ಗೋಕುಲದಲ್ಲಿನ ಗೋಪಿಕೆಯರು ಸಂಸಾರದಿಂದ ವಿಮುಖರಾದರು. ಅವರು ನನಗೆ ತಮ್ಮ ತನು, ಮನ, ಧನವನ್ನು ಅರ್ಪಿಸಿದರು. ಆದ್ದರಿಂದ ಅವರಿಗೆ ಆತ್ಮಸುಖವು ಪ್ರಾಪ್ತವಾಯಿತು ॥೯೫॥ ಈ ಗೋಪಿಕೆಯರಿಗೆ ನನ್ನ ಮೇಲೆ ಬಹು ಪ್ರೀತಿಯಿತ್ತು ಮತ್ತು ನನಗೂ ಸಹ ಗೋಪಿಕೆಯರ ಭಕ್ತಿಯನ್ನು ಕಂಡು ಪರಮ ಪ್ರೀತಿಯಾಗಿತ್ತು. ಇದನ್ನು ಕಂಡು ಇತರ ಸಾಧನೆಗಳು ದೀನವಾದವು ॥೯೬॥ ಸಂಸಾರದ ಚಿಂತೆಯನ್ನು ಬಿಟ್ಟುಕೊಟ್ಟು ಪತಿಪುತ್ರರ ಭಿಡೆಯನ್ನು ಬದಿಗೊತ್ತಿ ಯಾಜ್ಞಿಕರ ಸ್ತ್ರೀಯರು ಅತ್ಯಂತ ಪ್ರೇಮದಿಂದ ನನ್ನ ಮೇಲೆ ದೃಢವಾದ ಭಾವವನ್ನಿಟ್ಟರು ॥೯೭॥ ಅವರು ನನಗೆ ಅನ್ನವನ್ನು ಸಮರ್ಪಣೆ ಮಾಡಿದರು. ಆದ್ದರಿಂದ ಅವರು ನನ್ನ ನಿಜಧಾಮವನ್ನು ಪಡೆದರು. ಆದರೆ ಕರ್ಮದ ಅಭಿಮಾನವಿದ್ದ ಆ ಯಾವ ಬ್ರಾಹ್ಮಣರು ಮಾತ್ರ ನನ್ನನ್ನು ಪ್ರಾಪ್ತ ಮಾಡಿಕೊಳ್ಳಲಿಲ್ಲ ॥೯೮॥ ಅದರಲ್ಲಿ ಒಬ್ಬ ಬ್ರಾಹ್ಮಣನು ತನ್ನ ಪತ್ನಿಯನ್ನು ನನ್ನತ್ತ ಬರಗೊಡಲಿಲ್ಲ. ನೀವು ವೇದಶಾಸ್ತ್ರಗಳಿಂದ ಭ್ರಷ್ಟರಾಗಿರುವಿರಿ. ದನಕಾಯುವವನಿಗೆ ಪೂಜೆಯನ್ನು ಹೇಗೆ ಮಾಡುವಿರಿ? ಎಂದು ಜನರಿಗೆ ಹೇಳುತ್ತಿದ್ದನು ॥೯೯॥ ಇತರ ಎಲ್ಲ ಸ್ತ್ರೀಯರು ನನ್ನತ್ತ ಬರುತ್ತಿರುವುದನ್ನು ಕಂಡು ಅವನ ಹೆಂಡತಿಯು ತಳಮಳಿಸುತ್ತಿದ್ದಳು. ಆದರೆ ಆಕೆಯ ಪತಿಯು ಅತಿಶಯವಾಗಿ ಕರ್ಮಠ ಹಾಗೂ ಕಠೋರನಾಗಿದ್ದನು. ಆತನು ತನ್ನ ಪತ್ನಿಯನ್ನು ಮನೆಯಲ್ಲಿ ತಡೆಹಿಡಿದನು ॥೧೦೦॥ ಅವನು ಹೀಗೆಂದನು; ನಿನ್ನ ತಂದೆಯು ನಿನ್ನನ್ನು ನನ್ನ ಕೈಯಲ್ಲಿ ಕೊಟ್ಟಿರುವನು. ಆದ್ದರಿಂದ ನಾನು ನಿನ್ನ ದೇಹದ ಸ್ವಾಮಿಯಾಗಿರುವೆನು. ನನ್ನನ್ನು ಬಿಟ್ಟು ಆ ಯಾವ ಗೌಳಿಗನಲ್ಲಿ ಹೋಗಲು ಶಕ್ಯವಿಲ್ಲ ॥೧೦೧॥ ಆಗ ಅವನ ಪತ್ನಿಯು ಹೀಗೆ ನುಡಿದಳು;ನೀನು ಈ ದೇಹದ ಪತಿಯಾಗಿರುವೆ. ಆದ್ದರಿಂದ ಈ ದೇಹವನ್ನು ನಿನ್ನಲ್ಲಿಯೇ ಇಡುವೆ. ಹೀಗೆಂದು ಆಕೆಯು ತನ್ನ ದೇಹವನ್ನು ಅಲ್ಲಿಯೇ ಬಿಟ್ಟು, ತನ್ನ ಪ್ರಾಣದಿಂದ ಬಂದು ನನ್ನನ್ನು ಕೂಡಿಕೊಂಡಳು. ಆದ್ದರಿಂದ ಆಕೆಗೆ ಸಾಯುಜ್ಯ ಮುಕ್ತಿಯು ಪ್ರಾಪ್ತವಾಯಿತು ॥೧೦೨॥ ಅನೇಕರು ಯಾವ ನನ್ನ ಪ್ರಾಪ್ತಿಗಾಗಿ ಅನೇಕ ಪ್ರಕಾರಗಳ ಕಠೋರ ಸಾಧನೆಗಳನ್ನು ಮಾಡುತ್ತ ದಣಿದುಕೊಳ್ಳುವರು. ಈ ಯಾವ ಸಾಧನೆಗಳನ್ನು ಮಾಡದೇ ಶುದ್ಧವಾದ ಭಕ್ತಿಭಾವದಿಂದ ಆ ಯಾವ ಸ್ತ್ರೀಯರು ನನ್ನ ಪ್ರಾಪ್ತಿಯನ್ನು ಮಾಡಿಕೊಂಡರು ॥೧೦೩॥

ತೇ ನಾಧೀತಶ್ರುತಿಗಣಾ ನೋಪಾಸಿತಮಹತ್ತಮಾಃ ।
ಅವ್ರತಾತಪ್ತತಪಸಃ ಮತ್‌ಸಂಗಾನ್ಮಾಮುಪಾಗತಾಃ ॥೭॥

ಅರ್ಥ:- ಆ ಯಾವ ಜನರು ವೇದದ ಅಭ್ಯಾಸವನ್ನು ಮಾಡಲಿಲ್ಲ ಮತ್ತು ವಿಧಿಪೂರ್ವಕವಾಗಿ ಮಹಾಪುರುಷರ ಉಪಾಸನೆಯನ್ನು ಮಾಡಲಿಲ್ಲ. ಇಷ್ಟೇ ಅಲ್ಲ; ಕೃಚ್ಛ್ರಚಾಂದ್ರಾಯಣ ಇತ್ಯಾದಿ ವ್ರತಗಳನ್ನು ಮತ್ತು ತಪಸಾಧನೆಗಳನ್ನು ಮಾಡಲಿಲ್ಲ. ಕೇವಲ ಸತ್ಸಂಗದಿಂದ ಅವರಿಗೆ ನನ್ನ ಪ್ರಾಪ್ತಿಯಾಯಿತು.

ತಿಹೀ ನಾಹೀ ಕೇಲೇ ವೇದಪಠಣ । ನಾಹೀ ಗುರು ಕೇಲೇ ಕೇವಳ ಶಾಸ್ತ್ರಜ್ಞ । ವ್ರತತಪಾದಿ ನಾನಾ ಸಾಧನ ।ನಾಹೀ ಜಾಣ ತಿಹೀ ಕೇಲೇ ॥೧೦೪॥ ಕೇವಳ ಗಾ ಸತ್ಸಂಗತೀ । ಮಜ ಪಾವಲ್ಯಾ ನೇಣೋ ಕಿತೀ । ಏಕಭಾವೇ ಜೇ ಭಾವಾರ್ಥೀ । ತ್ಯಾಂಸೀ ಶ್ರೀಪತಿ ಸುಲಭೂ ॥೧೦೫॥

ಕೇವಲೇನ ಹಿ ಭಾವೇನ ಗೋಪ್ಯೋ ಗಾವೋ ನಗಾ ಮೃಗಾಃ ।
ಯೇಽನ್ಯೇ ಮೂಢಧಿಯೋ ನಾಗಾಃ ಸಿದ್ಧಾ ಮಾಮೀಯುರಂಜಸಾ ॥೮॥

ಅರ್ಥ:- ಗೋಪಿಯರು, ಆಕಳು, ಯಮಲಾರ್ಜುನ ಇತ್ಯಾದಿ ವೃಕ್ಷ, ಬ್ರಜಭೂಮಿಯಲ್ಲಿನ ಚಿಗರೆ ಇತ್ಯಾದಿ ಪಶುಗಳು, ಕಾಲಿಯಾ ಇತ್ಯಾದಿ ನಾಗ ಈ ಎಲ್ಲವೂ ಸಾಧನ, ಸಾಧ್ಯ ವಿಷಯಗಳಲ್ಲಿ ಅಜ್ಞಾನಿಗಳಾಗಿದ್ದವು. ಇಂತಹವರು ಕೇವಲ ಪ್ರೇಮದಿಂದ ಅನಾಯಾಸವಾಗಿ ನನ್ನ ಪ್ರಾಪ್ತಿಯನ್ನು ಮಾಡಿಕೊಂಡರು.

ಕೇವಳ ಸ್ವರೂಪ ಜೇ ಸಂತ । ತ್ಯಾ ಮಾಝೀ ಸಂಗತೀ ಝಾಲೀ ಪ್ರಾಪ್ತ । ಕಾಯ ಕರಿಸೀ ತಪ ವ್ರತ । ಭಾವಾರ್ಥೇ ಪ್ರಾಪ್ತ ಮಜ ಜಾಹಲಿಯಾ ॥೧೦೬॥ ಹೋಆವಯಾ ಮಾಝೇ ಪದ ಪ್ರಾಪ್ತ । ತ್ಯಾಂಸೀ ಭಾಂಡವಲ ಗಾ ಭಾವಾರ್ಥ । ಭಾವಬಳೇ ಗಾ ಸಮಸ್ತ । ಪದ ನಿಶ್ಚಿತ ಪಾವಲ್ಯಾ ॥೧೦೭॥ ಐಕೋನಿ ಮಾಝೇ ವೇಣುಗೀತ । ಗೋಪಿಕಾ ಸಾಂಡೂನಿ ಸಮಸ್ತ । ನಿಜದೇಹಾತೇ ನ ಸಾಂಭಾಳಿತ । ಮಜ ಗಿವಸೀತ ಪಾತಲ್ಯಾ ॥೧೦೮॥ ಸಾಂಡೂನಿ ಪತಿಪಿತ್ಯಾಂಚೀ ಚಾಡ । ನ ಧರೋನಿ ವೇದಶಾಸ್ತ್ರಾಂಚೀ ಭೀಡ । ಮಾಝೇ ಠಾಯೀ ನಿಜಭಾವ ದೃಢ । ಪ್ರೇಮ ಅತಿಗೋಡ ಗೋಪಿಕಾ ॥೧೦೯॥ ಪುತ್ರಸ್ನೇಹ ತೋಡೂನಿ ಘಾಯೇ । ವಿಧೀತೇ ರಗಡೂನಿ ಪಾಯೇ । ಮಾಝೇ ಆವಡೀಚೇನಿ ಲವಲಾಹೇ । ಗೋಪಿಕಾ ಮಜ ಪಾಹೇ ಪಾವಲ್ಯಾ ॥೧೧೦॥ ತ್ಯಾಚಪರೀ ಜಾಣ ಗಾಯೀ । ವೇಣುಧ್ವನಿ ವೇಧಲ್ಯಾ ಪಾಹೀ । ವ್ಯಾಘ್ರಭಯ ವಿಸರಲ್ಯಾ ದೇಹೀ । ಮಾಝ್ಯಾ ಠಾಯೀ ವಿನಟಲ್ಯಾ ॥೧೧೧॥ ಮಾಝ್ಯಾ ವೇಣುಧ್ವನೀ ವೇಧಲೇ ಮನ । ವತ್ಸೀ ವಿಸರಲೀ ಸ್ತನಪಾನ । ಮುಖೀಂಚಾ ಕವಳ ಮುಖೀ ಜಾಣ । ಮಾಝೇ ಧ್ಯಾನ ಲಾಗಲೇ ॥೧೧೨॥ ಮಾಝ್ಯಾ ವೇಣುಶ್ರವಣಾಸ್ತವ ಜಿಂಹೀ । ನಿಜವೈರ ಸಾಂಡೂನಿ ದೇಹೀ । ಯೇರಯೇರಾಂವರೀ ಮಾನಾ ಪಾಹೀ । ವ್ಯಾಘ್ರಹರಿಣೇ ತೀಹೀ ವಿನಟಲೀ ॥೧೧೩॥

ಇವರು ವೇದಗಳ ಪಠಣೆಯನ್ನು ಮಾಡಲಿಲ್ಲ ಅಥವಾ ಶಾಸ್ತ್ರವೇತ್ತರಾದ ಗುರುಗಳನ್ನು ಮಾಡಿಕೊಳ್ಳಲಿಲ್ಲ. ಹಾಗೆಯೇ ಅನೇಕ ಸಾಧನೆಗಳ ಮಾರ್ಗದಿಂದ ನಡೆಯಲಿಲ್ಲ ॥೧೦೪॥ ಕೇವಲ ಸತ್ಸಂಗದಿಂದ ಅದೆಷ್ಟು ಸ್ತ್ರೀಯರು ನನ್ನ ಪದವಿಯನ್ನು ಪ್ರಾಪ್ತಮಾಡಿಕೊಂಡರೋ ಅದರ ಗಣಿತವೇ ಇಲ್ಲ. ಯಾರು ಏಕನಿಷ್ಠೆಯಿಂದ ನನ್ನ ಭಕ್ತಿಯನ್ನು ಮಾಡುವರೋ, ಅವರಿಗೆ ಶ್ರೀಪತಿಯಾದ ನಾನು ಸುಲಭನಾಗುವೆನು ॥೧೦೫॥

ಕೇವಲ ಆತ್ಮಸ್ವರೂಪರಾಗಿರುವ ಸಂತರಿಗೆ ನನ್ನ ಸಂಗತಿಯು ಪ್ರಾಪ್ತವಾಯಿತು. ಭಾವಾರ್ಥದಿಂದ ನನ್ನ ಪ್ರಾಪ್ತಿಯಾದ ನಂತರ ವ್ರತ, ತಪಗಳನ್ನು ಏಕೆ ಮಾಡಬೇಕಾಗಿದೆ? ॥೧೦೬॥ ನನ್ನ ಪ್ರಾಪ್ತಿಯ ಮಾರ್ಗವು ಕೇವಲ ಶುದ್ಧ ಭಕ್ತಿಯಾಗಿರುವುದು. ಯಾವತ್ತೂ ಸ್ತ್ರೀಯರು ಶುದ್ಧಭಾವನೆಯಿಂದಲೇ ನನ್ನ ಪದಕ್ಕೆ ಬಂದು ಮುಟ್ಟಿದರು ॥೧೦೭॥ ನನ್ನ ಮುರಲಿಯ ಮಧುರ ಧ್ವನಿಯನ್ನು ಕೇಳುತ್ತಲೇ ಗೋಪಿಕೆಯರು ತಮ್ಮ ಸರ್ವ ಕಾರ್ಯಗಳನ್ನು ಬಿಟ್ಟುಕೊಟ್ಟು ದೇಹಭಾವವನ್ನು ಮರೆತು ನನ್ನನ್ನು ಶೋಧಿಸುತ್ತ ಬಂದರು ॥೧೦೮॥ ಪತಿ ಮತ್ತು ಪಿತನ ಪ್ರೇಮಾಭಿಮಾನವನ್ನು ಬಿಟ್ಟು, ಹಾಗೂ ವೇದದ ಅಥವಾ ಶಾಸ್ತ್ರಗಳ ಭಿಡೆಯನ್ನು ಹಿಡಿಯದೇ ಅವರು ನನ್ನಲ್ಲಿ ದೃಢವಾದ ನಿಷ್ಠೆಯನ್ನಿಟ್ಟರು. ಗೋಪಿಕೆಯವರಿಗೆ ನನ್ನ ಪ್ರೇಮವು ಅತ್ಯಂತ ಪ್ರಿಯವಾಗುತ್ತಿತ್ತು ॥೧೦೯॥ ಪುತ್ರಸ್ನೇಹದ ಪಾಶವನ್ನು ಮುರಿದು, ವಿಧಿಯನ್ನು ಬದಿಗಿಟ್ಟು ನನ್ನ ಭಕ್ತಿಯಿಂದ ಅವರು ನನಗೆ ಪ್ರಿಯರಾದರು ॥೧೧೦॥ ಅದರಂತೆಯೇ ಗೋವುಗಳು ನನ್ನ ಕೊಳಲಿನ ಮಂಜುಳ ಸ್ವರಕ್ಕೆ ಭುಲಾಯಿಸಿದವು. ಹುಲಿಗಳ ಭಯವನ್ನು ಬಿಟ್ಟು ಅವು ನನ್ನ ಹತ್ತಿರ ಬಂದು ನಿಂತುಕೊಂಡವು ॥೧೧೧॥ ನನ್ನ ಕೊಳಲಿನ ಮಧುರ ಧ್ವನಿಯಿಂದ ಕರುಗಳು ತಲ್ಲೀನಗೊಂಡು, ಅವು ಸ್ತನಪಾನ ಮಾಡುವುದನ್ನು ಮರೆತುಬಿಟ್ಟವು. ಅವುಗಳ ಮುಖಗಳಲ್ಲಿನ ತಿನ್ನುವ ತುತ್ತು ಅಲ್ಲಿಯೇ ಉಳಿದುಕೊಂಡಿತು. ಅವುಗಳಿಗೆ ನನ್ನ ಧ್ಯಾನವು ಹತ್ತಿಕೊಂಡಿತು ॥೧೧೨॥ ನನ್ನ ಕೊಳಲಿನಿಂದ ಹುಟ್ಟುವ ಪ್ರೇಮಸ್ವರವನ್ನು ಕೇಳುತ್ತಲೇ ಹುಲಿ, ಚಿಗರೆಗಳು ತಮ್ಮ ವೈರಭಾವವನ್ನು ಮರೆತುಬಿಟ್ಟವು. ಹುಲಿ ಮತ್ತು ಚಿಗರೆ ಇವು ಒಂದರಮೇಲೊಂದು ಶರೀರದ ಮೇಲೆ ತಮ್ಮ ತಲೆಗಳನ್ನಿಟ್ಟು ಆ ಯಾವ ಕೊಳಲಿನ ಸ್ವರವನ್ನು ಕೇಳುತ್ತ ಕುಳಿತುಕೊಂಡವು ॥೧೧೩॥

ಮ್ಯಾ ಉಪಡಿಲೇ ಯಮಲಾರ್ಜುನ । ತೇ ತರಲೇ ಹೇ ನವಲ ಕೋಣ । ವೃಂದಾವನೀಚೇ ವೃಕ್ಷ ತೃಣ । ಮಾಝ್ಯಾ ಸಾನಿಧ್ಯೇ ಜಾಣ ಉದ್ಧರಲೇ ॥೧೧೪॥ ಮಯೂರ ತರಲೇ ಮೋರಪಿಸೀ । ಗುಲ್ಮ ಲತಾತೃಣಪಾಷಾಣಾಂಸೀ । ಜಡ ಮೂಢ ವೃಂದಾವನವಾಸೀ । ಮತ್ಸಾನಿಧ್ಯೇ ತ್ಯಾಂಸೀ ಉದ್ಧಾರೂ ॥೧೧೫॥ ಮಾಝೀ ಸಂಗತೀ ಅನನ್ಯ ಪ್ರೀತೀ । ತೇಚಿ ತ್ಯಾಂಸ ಶುದ್ಧ ಭಕ್ತೀ । ತೇಣೇ ಕೃತಕೃತ್ಯ ಹೋಊನಿ ನಿಶ್ಚಿತೀ । ಮಾಝೀ ನಿಜಪ್ರಾಪ್ತೀ ಪಾವಲೇ ॥೧೧೬॥ ಮಾಝೇನಿ ಚರಣಘಾತೇ ಸಾಚಾರ । ಕಾಲಿಯಾ ತರಲಾ ದುರಾಚಾರ । ನಾಗನಾಗಿಣೀ ಸಪರಿವಾರ । ಮಾಝೇನಿ ವಿಚಾರ ಉದ್ಧರಲೇ ॥೧೧೭॥ ಆಪುಲೀ ಜೇ ನಿಜಪದಪ್ರಾಪ್ತೀ । ತೇ ಸತ್ಸಂಗೇವೀಣ ನಿಶ್ಚಿತೀ । ದುರ್ಲಭ ಹೇ ಉದ್ಧವಾಪ್ರತೀ । ಸ್ವಯೇ ಶ್ರೀಪತೀ ಸಾಂಗತ ॥೧೧೮॥

ಯಂ ನ ಯೋಗೇನ ಸಾಂಖ್ಯೇನ ದಾನವ್ರತತಪೋಽಧ್ವರೈಃ ।
ವ್ಯಾಖ್ಯಾಸ್ವಾಧ್ಯಾಯಸಂನ್ಯಾಸೈಃ ಪ್ರಾಪ್ನುಯಾದ್ಯತ್ನವಾನಪಿ ॥೯॥

ಅರ್ಥ:- ಅರೇ, ಮಹಾಮಹಾ ಪ್ರಯತ್ನಶೀಲ ಸಾಧಕರಿಗೆ ಯೋಗ, ಸಾಂಖ್ಯ, ದಾನ, ವ್ರತ, ತಪಸ್ಸು, ಯಜ್ಞಶ್ರುತೀಯ ವ್ಯಾಖ್ಯಾನ, ಸ್ವಾಧ್ಯಾಯ ಮತ್ತು ಸನ್ಯಾಸ ಇವುಗಳಿಂದ ನನ್ನನ್ನು ಪ್ರಾಪ್ತಮಾಡಿಕೊಳ್ಳಲು ಶಕ್ಯವಿಲ್ಲ. ಆದರೆ, ಸತ್ಸಂಗದಿಂದ ಮಾತ್ರ ನನ್ನ ಪ್ರಾಪ್ತಿಯಾಗಲು ಶಕ್ಯವಿದೆ.

ಯೋಗ ಯಾಗ ವ್ರತ ದಾನ । ವೇದಾಧ್ಯಯನ ವ್ಯಾಖ್ಯಾನ । ತಪ ತೀರ್ಥ ಜ್ಞಾನ ಧ್ಯಾನ । ಸನ್ಯಾಸಗ್ರಹಣ ಸಾದರೇ ॥೧೧೯॥ ಇತ್ಯಾದಿ ನಾನಾ ಸಾಧನೇ । ನಿಷ್ಠಾ ಕರಿತಾ ನಿರ್ಬಂಧನೇ । ಮಾಝೀ ಪ್ರಾಪ್ತಿ ದುರಾಸತೇನೇ । ಜೀವೇಪ್ರಾಣೇ ನ ಪಾವಿಜೇ ॥೧೨೦॥ ಯಾಪರೀ ಶಿಣತಾ ಸಾಧನೇಸೀ । ಮಾಝೀ ಪ್ರಾಪ್ತಿ ನವ್ಹೇ ಅತಿಪ್ರಯಾಸೀ । ತೇ ಗೋಪೀ ಪಾವಲ್ಯಾ ಅಪ್ರಯಾಸೀ । ಸತ್ಸಂಗಾಸೀ ಲಾಹೋನಿ ॥೧೨೧॥ ತ್ಯಾ ಗೋಪಿಕಾಂಸೀ ಮಾಝೀ ಪ್ರೀತೀ । ಮೀಚಿ ತ್ಯಾಂಚೀ ಸತ್ಸಂಗತೀ । ಸತ್ಸಂಗೇ ನಿಜಪದಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೧೨೨॥ ಗೋಪಿಕಾಂಚೀ ಸಪ್ರೇಮ ಸ್ಥಿತೀ । ತೇ ತುಜ ಗೋಕುಳೀ ಝಾಲೀ ಪ್ರತೀತೀ । ತುಜಹೀ ನ ತರ್ಕವೇಚ ತ್ಯಾಂಚೀ ಪ್ರೀತೀ । ತೇ ಮೀ ತುಜಪ್ರತೀ ಸಾಂಗೇನ ॥೧೨೩॥ ಗೋಪಿಕಾಂಚೇ ಅತ್ಯಂತ ಪ್ರೇಮ । ಸ್ವಮುಖೇ ಸಾಂಗೇ ಪುರುಷೋತ್ತಮ । ಉದ್ಧವಾಚೇ ಭಾಗ್ಯ ಉತ್ತಮ । ಆವಡೀಚೇ ವರ್ಮ ದೇವೋ ಸಾಂಗೇ ॥೧೨೪॥

ರಾಮೇಣ ಸಾರ್ಧಂ ಮಥುರಾಂ ಪ್ರಣೀತೇ ಶ್ವಾಫಲ್ಕಿನಾ ಮಯ್ಯನುರಕ್ತಚಿತ್ತಾಃ ।
ವಿಗಾಢಭಾವೇನ ನ ಮೇ ವಿಯೋಗತೀವ್ರಾಧಯೋಽನ್ಯಂ ದದೃಶುಃ ಸುಖಾಯ ॥೧೦॥

ಅರ್ಥ:- ಹೇ ಉದ್ಧವನೇ, ಯಾವ ವೇಳೆಯಲ್ಲಿ ಅಕ್ರೂರನು ಅಣ್ಣ ಬಲರಾಮನೊಂದಿಗೆ ನನ್ನನ್ನು ವೃಂದಾವನ ಕ್ಷೇತ್ರದಿಂದ ಮಥುರಾ ನಗರಕ್ಕೆ ಒಯ್ಯಲ್ಪಟ್ಟಾಗ ಗೋಪಿಕೆಯರ ಹೃದಯದಲ್ಲಿನ ಅಲೌಕಿಕ ಪ್ರೇಮವು ನನ್ನ ಆನಂದದಲ್ಲಿ ನಿಮಗ್ನವಾಗಿತ್ತು. ನನ್ನ ವಿಯೋಗದಿಂದ ಅವರು ವ್ಯಾಕುಲರಾಗಿದ್ದರು. ನನ್ನ ಹೊರತಾಗಿ ಯಾವ ವಸ್ತುವೂ ಅವರಿಗೆ ಸುಖಕರವಾಗುತ್ತಿದ್ದಿಲ್ಲ.

ವೃಂದಾವನದಲ್ಲಿನ ಹುಲ್ಲು ಮೊದಲು ಮಾಡಿ ಸರ್ವವೃಕ್ಷಗಳು ನನ್ನ ಸಾನಿಧ್ಯದಿಂದ ಉದ್ಧಾರವಾದವು. ಅಂದಮೇಲೆ ನಾನು ಕಿತ್ತಿ ಒಗೆದ ಯಮಲಾರ್ಜುನ ವೃಕ್ಷಗಳು ಉದ್ಧಾರವಾದದ್ದು ಯಾವ ಆಶ್ಚರ್ಯ? ॥೧೧೪॥ ನಾನು ನವಿಲಗರಿಯನ್ನು ಧರಿಸಿರುವುದರಿಂದ ನವಿಲುಗಳು ಉದ್ಧಾರವಾದವು. ವೃಂದಾವನದಲ್ಲಿರುವ ಗಿಡಬಳ್ಳಿಗಳು, ಹುಲ್ಲು, ಕಲ್ಲು ಇತ್ಯಾದಿ ಜಡ, ಮೂಢ ಇವೆಲ್ಲವೂ ನನ್ನ ಸಾನಿಧ್ಯದಿಂದ ಉದ್ಧಾರ ಆದವು ॥೧೧೫॥ ನನ್ನ ಸಾನಿಧ್ಯದ ಅತ್ಯಂತಿಕ ಇಚ್ಛೆವಿರುವುದೇ ನನ್ನ ಭಕ್ತಿಯಾಗಿರುವುದು. ಈ ಯಾವ ಶುದ್ಧ ಭಕ್ತಿಯಿಂದ ಕೃತಕೃತ್ಯರಾಗಿ ಅವು ನನ್ನ ಸ್ವರೂಪಕ್ಕೆ ಬಂದು ಮುಟ್ಟಿದವು ॥೧೧೬॥ ಅತ್ಯಂತ ದುರಾಚಾರಿಯಾದ ಕಾಲಿಯಾ ಸರ್ಪವು ನನ್ನ ಪಾದ ಪ್ರಹರಗಳಿಂದ ನಿಜವಾಗಿಯೂ ಉದ್ಧಾರವಾಯಿತು. ಇದರ ಇತರ ನಾಗ ನಾಗಿಣಿ ಇತ್ಯಾದಿ ಎಲ್ಲವೂ ಸಪರಿವಾರದೊಂದಿಗೆ ಉದ್ಧಾರವಾದವು ॥೧೧೭॥ ಸತ್ಸಂಗತಿ ಇಲ್ಲದೇ ತಮ್ಮ ಆತ್ಮಪದದ ಪ್ರಾಪ್ತಿಯು ಅತ್ಯಂತ ದುರ್ಲಭವಾಗಿರುವುದು. ಇದನ್ನು ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ತಿಳಿಸಿ ಹೇಳಿದನು ॥೧೧೮॥

ಯೋಗ, ಯಾಗ, ವ್ರತ, ದಾನ, ವೇದಾಧ್ಯಯನ, ತಪತೀರ್ಥ, ಜ್ಞಾನ, ಆದರಭಾವದಿಂದ ಸನ್ಯಾಸ ಗ್ರಹಣ ಮಾಡುವುದು ॥೧೧೯॥ ಇತ್ಯಾದಿ ಅನೇಕ ಸಾಧನೆಗಳು ಇದ್ದು, ಅವುಗಳನ್ನು ಬಹು ನಿಷ್ಠೆಯಿಂದ ಮತ್ತು ನಿಶ್ಚಯಪೂರ್ವಕವಾಗಿ ಆಚರಿಸಿದರೂ ಕೂಡ ನನ್ನ ಪ್ರಾಪ್ತಿಯಾಗುವುದಿಲ್ಲ ॥೧೨೦॥ ಈ ಪ್ರಕಾರದ ಅನೇಕ ಸಾಧನೆಗಳನ್ನು ಆಚರಿಸಿ ದಣಿದುಕೊಂಡರೂ ಸಹ ಬೇಕಾದಷ್ಟು ಪ್ರಯತ್ನಗಳನ್ನು ಮಾಡಿದರೂ ಸಹ ನನ್ನ ಪ್ರಾಪ್ತಿಯಾಗುವುದಿಲ್ಲ. ಗೋಪಿಕೆಯರು ಮಾತ್ರ ಸತ್ಸಂಗತಿಯಿಂದ ನನ್ನ ಪ್ರಾಪ್ತಿಯನ್ನು ಸಹಜವಾಗಿ ಮಾಡಿಕೊಂಡರು ॥೧೨೧॥ ಆ ಯಾವ ಗೋಪಿಕೆಯವರ ಮನದಲ್ಲಿ ನನ್ನ ವಿಷಯಕ್ಕೆ ಅತ್ಯಂತ ಪ್ರೇಮವಿತ್ತು ಮತ್ತು ನನ್ನ ಸಂಗತಿಯೇ ಅವರ ಸತ್ಸಂಗತಿಯಾಗಿತ್ತು. ಹೇ ಉದ್ಧವನೇ, ಸತ್ಸಂಗತಿಯಿಂದಲೇ ನಿಜವಾಗಿ ನನ್ನ ಪ್ರಾಪ್ತಿಯಾಗುವುದು ॥೧೨೨॥ ಗೋಪಿಕೆಯರ ಪ್ರೇಮಭಾವವು ಹೇಗಿರುವುದೆಂಬುದನ್ನು ಗೋಕುಲದಲ್ಲಿ ನಿನ್ನ ಅನುಭವಕ್ಕೆ ಬಂದಿರುವುದು. ಆದರೆ ಅವರ ಪ್ರೇಮದ ತರ್ಕ ಮಾಡಲು ನಿನಗೆ ಬರಲಾರದು. ಅದನ್ನು ನಿನಗೆ ಹೇಳುವೆನು ॥೧೨೩॥ ಶ್ರೀಕೃಷ್ಣನು ತನ್ನ ಸ್ವಮುಖದಿಂದ ಗೋಪಿಕೆಯರ ಪ್ರೇಮದ ವರ್ಣನೆಯನ್ನು ಮಾಡಲಾರಂಭಿಸಿದನು. ಉದ್ಧವನ ಭಾಗ್ಯವು ಮಹತ್ತರವಾದ್ದರಿಂದ ದೇವನು ತನ್ನ ಪ್ರೀತಿಯ ರಹಸ್ಯವನ್ನು ಹೇಳಹತ್ತಿದನು ॥೧೨೪॥

ಬಳಿಭದ್ರಾಸಮವೇತ ತತ್ತ್ವತಾ । ಅಕ್ರೂರೇ ಮಜ ಮಥುರೇ ನೇತಾ । ತ್ಯೆ ಗೋಪಿಕಾಂಸಿ ಜೇ ಝಾಲೀ ವ್ಯಥಾ । ತೇ ಸಾಂಗತಾ ಮಜ ನ ಯೇ ॥೧೨೫॥ ತೇ ತಯಾಂಚೀ ಅವಸ್ಥಾ ಸಾಂಗತಾ । ಮಜ ಅದ್ಯಾಪಿ ಧೀರ ನ ಧರವೇ ಚಿತ್ತಾ । ಐಸೇ ದೇವೋ ಸಾಂಗತಸಾಂಗತಾ । ಕಂಠೀ ಬಾಷ್ಪತಾ ದಾಟಲೀ ॥೧೨೬॥ ಸಾಂಗತಾ ಭಕ್ತಾಂಚೇ ನಿಜಪ್ರೇಮ । ಪ್ರೇಮೇ ದ್ರವಲಾ ಪರುಷೋತ್ತಮ । ಜೋ ಭಕ್ತಕಾಮಕಲ್ಪದ್ರುಮ । ಕೃಪಾ ನಿರುಪಮ ಭಕ್ತಾಂಚೀ ॥೧೨೭॥ ಮಜ ಮಥುರೇ ಜಾತಾ ದೇಖೋನೀ । ಆಂಸುವಾಂಚಾ ಪೂರ ನಯನೀ । ಹೃದಯ ಫುಟೇ ಮಜಲಾಗುನೀ । ಪ್ರೇಮೇ ಲೋಳಣೀ ಘಾಲಿತೀ ॥೧೨೮॥ ಪೋಟಾಂತೀಲ ಪರಮ ಪ್ರೀತೀ । ಸಾರಿತಾ ಮಾಗೇ ನ ಸರತೀ । ಧರಿಲೇ ಚರಣ ನ ಸೋಡಿತೀ । ಯೇತೀ ಕಾಕುಳತೀ ಮಜಲಾಗೀ ॥೧೨೯॥ ನವಲ ಭಾವಾರ್ಥ ತ್ಯಾಂಚ್ಯಾ ಪೋಟೀ । ಮಾಝ್ಯಾ ರೂಪೀ ಘಾತಲೀ ಮಿಠೀ । ಸೋಡವಿತಾ ನ ಸುಟೇ ಗಾಂಠೀ । ಶ್ವಾಸ ಪೋಟೀ ಪರತೇನಾ ॥೧೩೦॥ ಲಾಜ ವಿಸರಲ್ಯಾ ಸರ್ವಥಾ । ಸಾಸರಾ ಪತಿಪಿತ್ಯಾ ದೇಖತಾ । ಮಾಝೇ ಚರಣೀ ಠೇವೂನಿ ಮಾಥಾ । ರಡತೀ ದೀರ್ಘತಾ ಆಕ್ರಂದೇ ॥೧೩೧॥ ಮಜವೀಣ ಅವಘೇ ದೇಖತೀ ವೋಸ । ಮಾಝೀಚ ಪುನಃಪುನ್ಹಾ ಪಾಹತೀ ವಾಸ । ಥೋರ ಘಾಲೋನಿ ನಿಃಶ್ವಾಸ । ಉಕಸಾಬುಕಸೀ ಸ್ಫುಂದತ ॥೧೩೨॥ ಆಮುಚಾ ಜಿವಲಗ ಸಾಂಗಾತೀ । ಘೇಊನಿ ಜಾತೋ ಹಾ ದುಷ್ಟಮೂರ್ತೀ । ಅಕ್ರೂರಾ ಸಂಮುಖ ಕ್ರೂರ ಮ್ಹಣತೀ । ಯೇತೀ ಕಾಕುಳತೀ ಮಜಲಾಗೀ ॥೧೩೩॥ ಉಭ್ಯಾ ಠಾಕೋನಿ ಸಂಮುಖ । ಮಾಝೇ ಪಾಹತೀ ಶ್ರೀಮುಖ । ಆಠವೇ ವಿಯೋಗಾಚೇ ದುಃಖ । ತೇಣೇ ಅಧೋಮುಖ ವಿಲಪತೀ ॥೧೩೪॥ ಐಶಿಯಾ ಮಜಲಾಗೀ ಆಸಕ್ತ । ಮಾಝ್ಯಾ ಠಾಯೀ ಅನನ್ಯಚಿತ್ತ । ವಿಸರಲ್ಯಾ ದೇಹಸುಖೇ ಸಮಸ್ತ । ಅತಿಅನುರಕ್ತ ಮಜಲಾಗೀ ॥೧೩೫॥ ಮಾಝೇನಿ ವಿಯೋಗೇ ತತ್ತ್ವತಾ । ತ್ಯಾಂಸೀ ಮಾಝೀ ತೀವ್ರ ವ್ಯಥಾ । ತೇ ವ್ಯಥೇಚೀ ಅವಸ್ಥಾ । ಬೋಲಿಲೀ ಸಾಂಗತಾ ಮಜ ನ ಯೇ ॥೧೩೬॥ ಮಜ ವೇಗಳೇ ಜೇ ಜೇ ಸುಖ । ತೇ ಗೋಪಿಕಾಂಸೀ ಕೇವಳ ದುಃಖ । ಕೈಶೀ ಆವಡೀ ಅಲೌಕಿಕ । ಮಜ ಹೃದಯೀ ದೇಖ ನ ವಿಸಂಬತೀ ॥೧೩೭॥ ಮಜ ಗೋಕುಳೀ ಅಸತಾ । ಮಾಝೇ ಠಾಯೀ ಆಸಕ್ತಚಿತ್ತಾ । ತೇ ಆಸಕ್ತೀಚೀ ಸಮೂಳ ಕಥಾ । ಐಕ ಆತಾ ಸಾಂಗೇನ ॥೧೩೮॥

ಅಕ್ರೂರನು ಅಣ್ಣ ಬಲರಾಮನೊಂದಿಗೆ ಮಥುರಾ ನಗರಕ್ಕೆ ಒಯ್ಯಲು ಬಂದಾಗ ಆ ಸಮಯಕ್ಕೆ ಗೋಪಿಕೆಯರಿಗೆ ಆದ ದುಃಖದ ವರ್ಣನೆಯನ್ನು ಮಾಡಲಾಗುವುದಿಲ್ಲ ॥೧೨೫॥ ಅವರ ಆ ಸಮಯದ ವಿರಹ ಅವಸ್ಥೆಯನ್ನು ಹೇಳಹತ್ತಲು ಇಂದೂ ಸಹ ನನ್ನ ಚಿತ್ತಕ್ಕೆ ಧೀರವು ಸಾಲದು. ಹೀಗೆ ದೇವನು ವಿರಹದ ವರ್ಣನೆ ಮಾಡುತ್ತಿರಲು ಆಗ ಆತನ ಕಂಠವು ಬಿಗಿದು ನೇತ್ರಗಳು ನೀರಿನಿಂದ ತುಂಬಿಕೊಂಡವು ॥೧೨೬॥ ಭಕ್ತರ ಅಂತಃಕರಣದಲ್ಲಿನ ಪ್ರೇಮದ ವರ್ಣನೆ ಮಾಡುತ್ತಿರಲು ಪುರುಷೋತ್ತಮನಿಗೆ ಹೀಗೆ ಪ್ರೇಮದ ಪೂರವು ಬರುತ್ತಿರುವುದು. ಈತನು ಭಕ್ತರ ಇಚ್ಛೆಯನ್ನು ಪೂರ್ಣ ಮಾಡುವ ಕಲ್ಪವೃಕ್ಷನು ಮತ್ತು ಭಕ್ತರಲ್ಲಿ ನಿರುಪಮ ಕೃಪಾವಂತನು ॥೧೨೭॥ ನಾನು ಮಥುರೆಗೆ ಹೋಗುವುದನ್ನು ಕಂಡಾಕ್ಷಣವೇ ಗೋಪಿಕೆಯರ ನೇತ್ರಗಳಿಂದ ನೀರು ಹರಿಯತೊಡಗಿತು. ನನಗಾಗಿ ಅವರ ಹೃದಯವು ಧಡಾಧಡ್ ಹೊಡೆಯುವಂತಾಯಿತು. ಪ್ರೇಮದಿಂದ ಅವರು ಭೂಮಿಯ ಮೇಲೆ ಉರುಳಾಡ ಹತ್ತಿದರು ॥೧೨೮॥ ಅವರನ್ನು ದೂರ ಸರಿಸಲು ಪ್ರಯತ್ನ ಮಾಡಲಾಯಿತು. ಆದರೆ ಅಂತಃಕರಣದ ಪ್ರೇಮದಿಂದ ಅವರು ದೂರ ಸರಿಯಲಿಲ್ಲ. ನನ್ನ ಚರಣಗಳನ್ನು ಅವರು ಬಿಗಿದು ಹಿಡಿದರು, ಬಹಳ ಕುಕ್ಕುಲತೆಪಟ್ಟರು ॥೧೨೯॥ ಅವರ ಹೃದಯದಲ್ಲಿನ ಭಕ್ತಿಯು ಅಪೂರ್ವವಾಗಿತ್ತು. ಅವರು ನನ್ನ ಸ್ವರೂಪಕ್ಕೆ ಅಪ್ಪಿಕೊಂಡರು. ಈ ಪ್ರೇಮದ ಗಂಟು ಏನು ಮಾಡಿದರೂ ಬಿಡದಾಯಿತು. ಶ್ವಾಸವು ಅವರ ದೇಹದಲ್ಲಿ ತಿರುಗಿ ಹೋಗದಾಯಿತು ॥೧೩೦॥ ನನಗಾಗಿ ಅವರು ತಮ್ಮ ಸರ್ವ ಲಜ್ಜೆಯನ್ನು ಬಿಟ್ಟುಕೊಟ್ಟರು. ಪತಿ, ಪಿತ ಮತ್ತು ಮಾವ ಇವರ ಮುಂದೆಯೇ ನನ್ನ ಚರಣಗಳಲ್ಲಿ ಮಸ್ತಕವನ್ನಿಟ್ಟು ಅವರು ಜೋರಾಗಿ ಆಕ್ರೋಶವನ್ನು ಮಾಡಹತ್ತಿದರು ॥೧೩೧॥ ನನ್ನ ಹೊರತಾಗಿ ಅವರಿಗೆ ಏನೆಲ್ಲವೂ ಬರಿದೇ ತೋರಹತ್ತಿತು. ಪುನಃ ಪುನಃ ನನ್ನ ದಾರಿಯನ್ನೇ ಕಾಯಹತ್ತಿದರು. ಅವರು ಬಹಳವಾಗಿ ಬಿಕ್ಕಿ ಬಿಕ್ಕಿ ಅಳಹತ್ತಿದರು ॥೧೩೨॥ ಈ ಯಾವ ಭಯಂಕರ ದುಷ್ಟನು ನಮ್ಮ ಪ್ರೀತಿಯ ಸಂಗಾತಿಯನ್ನು ಒಯ್ಯುತ್ತಿರುವನು. ಹೀಗೆ ಇವರು ಅಕ್ರೂರನ ಸಮ್ಮುಖದಲ್ಲಿಯೇ ಹೀಯಾಳಿಸಿದರು. ಅಕ್ರೂರನಿಗೆ ಕ್ರೂರನು ಎಂದು ಹೇಳುತ್ತ ನನ್ನತ್ತ ಅತ್ಯಂತ ಕಕ್ಕುಲತೆಯಿಂದ ಬಂದರು ॥೧೩೩॥ ನನ್ನ ಎದುರಿನಲ್ಲಿ ನಿಂತು ನನ್ನ ಮುಖವನ್ನು ನೋಡಿದರು. ಆಗ ಅವರಿಗೆ ನನ್ನ ವಿಯೋಗದ ದುಃಖವು ಸ್ಮರಣೆಗೆ ಬಂದಿತು. ಆಗ ಅವರು ಕೆಳಗೆ ಮುಖಮಾಡಿ ಬಹುವಾಗಿ ವಿಲಾಪಿಸಿದರು ॥೧೩೪॥ ಈ ಪ್ರಕಾರವಾಗಿ ಅವರು ನನ್ನಲ್ಲಿ ಆಸಕ್ತರಾಗಿದ್ದರು. ಅವರು ತಮ್ಮ ಚಿತ್ತವನ್ನು ಅನನ್ಯಭಾವದಿಂದ ನನ್ನ ಚರಣಗಳಿಗೆ ಅರ್ಪಿಸಿದ್ದರು. ತಮ್ಮ ದೇಹಸುಖವೆಲ್ಲವನ್ನೂ ಮರೆತಿದ್ದರು. ಹೀಗೆ ಆ ಗೋಪಿಕೆಯರು ನನ್ನ ಮೇಲೆ ಇಷ್ಟೊಂದು ಅನುರಕ್ತರಾಗಿದ್ದರು ॥೧೩೫॥ ನನ್ನ ವಿಯೋಗದಿಂದ ಅವರ ಹೃದಯದಲ್ಲಿ ತೀವ್ರ ವೇದನೆಯುಂಟಾಯಿತು. ಆ ದುಃಖದ ವರ್ಣನೆಯನ್ನು ನನಗೆ ಶಬ್ದಗಳಿಂದ ಮಾಡಲು ಬರುವುದಿಲ್ಲ ॥೧೩೬॥ ನನ್ನ ಹೊರತಾಗಿ ಆಗುವ ಸರ್ವ ಸುಖಗಳು ಗೋಪಿಕೆಯರಿಗೆ ಕೇವಲ ದುಃಖವಾಗುತ್ತಿದ್ದವು. ಇದೆಂತಹ ಅಲೌಕಿಕ ಪ್ರೇಮವು ಹೇಗಿರುವುದು ನೋಡು! ಅವರ ಅಂತಃಕರಣದಲ್ಲಿ ಸತತವಾಗಿ ನನ್ನ ಸ್ಮರಣೆಯು ಇರುತ್ತಿತ್ತು. ಅವರಿಗೆ ಎಂದಿಗೂ ನನ್ನ ವಿಸ್ಮರಣೆಯಾಗಲಿಲ್ಲ ॥೧೩೭॥ ನಾನು ಗೋಕುಲದಲ್ಲಿರುತ್ತಿರಲು ಆಗ ಅವರ ಮನವು ನನ್ನಲ್ಲಿ ಅತ್ಯಂತ ಆಸಕ್ತವಾಗಿತ್ತು. ಆ ಆಸಕ್ತಿಯ ಕಥೆಯನ್ನು ಈಗ ವಿಸ್ತಾರವಾಗಿ ಹೇಳುವೆನು, ಅದನ್ನು ಕೇಳು ॥೧೩೮॥

ತಾಸ್ತಾ: ಕ್ಷಪಾ: ಪ್ರೇಷ್ಠತಮೇನ ನೀತಾ ಮಯ್ಯೈವ ವೃಂದಾವನ ಗೋಚರೇಣ ।
ಕ್ಷಣಾರ್ಧವತ್ತಾ: ಪುನರಂಗ ತಾಸಾಂ ಹೀನಾ ಮಯಾ ಕಲ್ಪಸಮಾ ಬಭೂವು: ॥೧೧॥

ಅರ್ಥ:- ನಾನು ಅವರಿಗೆ ಏಕಮಾತ್ರ ಪ್ರಿಯತಮನೆಂಬುದು ನಿನಗೆ ತಿಳಿದಿದೆ. ನಾನು ವೃಂದಾವನದಲ್ಲಿದ್ದಾಗ ಅವರು ಅನೇಕ ರಾತ್ರಿಗಳನ್ನು ನನ್ನೊಂದಿಗೆ ರಾಸಲೀಲೆಯಲ್ಲಿ ಕಳೆದಿದ್ದರು. ಆ ರಾತ್ರಿ ಅವರಿಗೆ ಅರ್ಧಕ್ಷಣದಂತಾಗುತ್ತಿತ್ತು. ಆದರೆ ಪ್ರಿಯ ಉದ್ಧವನೇ, ನನ್ನ ಹೊರತಾಗಿ ಅವರಿಗೆ ಒಂದೊಂದು ಕಲ್ಪದಂತೆ ಭಾಸವಾಗಹತ್ತಿತು.

ನವಲ ಗೋಪಿಕಾಂಚಾ ಹರಿಖ । ಮಜ ವೃಂದಾವನಾ ಜಾತಾ ದೇಖ । ಮಾರ್ಝೇ ಪಾಹೋನಿ ಶ್ರೀಮುಖ
। ಪ್ರಾತಃಕಾಳೀ ಸುಖ ಭೋಗಿತೀ ॥೧೩೯॥ ಗಾಯೀ ಪಾಜೋನಿಯಾ ಪಾಣೀ । ಗೋಠಣೀ ಬೈಸವೀ ಮಧ್ಯಾನ್ಹೀ ।
ತೇಥೇ ಉದಕಮಿಷೇ ಗೌಳಣೀ । ಪಾಹಾವಯಾಲಾಗೂನೀ ಮಜ ಯೇತೀ ॥೧೪೦॥ ತೇಥೇ ನಾನಾ ಕೌತುಕೇ
ನಾನಾ ಲೀಲಾ । ನಾನಾ ಪರೀಂಚ್ಯಾ ಖೇಳತಾ ಖೇಳಾ । ತೋ ತೋ ದೇಖೋನಿ ಸೋಹಳಾ । ಸುಖೇ ವೇಲ್ಹಾಳಾ
ಸುಖಾವತೀ ॥೧೪೧॥ ಮಜ ಸಾಯಂಕಾಳೀ ಯೇತಾ ದೇಖೋನೀ । ಆರತ್ಯಾ ನಿಂಬಲೋಣ ಘೇಊನೀ ।
ಸಾಮೋರ್‍ಯಾ ಯೇತೀ ಧಾಂವೋನೀ । ಲಾಗತೀ ಚರಣೀ ಸ್ವಾನಂದೇ ॥೧೪೨॥ ಐಶೀ ತ್ರಿಕಾಳ ದರ್ಶನೇ ಘೇತಾ ।
ಧಣೀ ನ ಪುರೇ ತ್ಯಾಂಚೇ ಚಿತ್ತಾ । ತ್ಯಾ ಹೀವರೀ ವರ್ತಲೀ ಕಥಾ । ಏಕಾಂತತಾ ಅತಿಗುಹ್ಯ ॥೧೪೩॥ ತ್ಯಾ ಗುಹ್ಯಾಚೇ
ನಿಜಗುಜ । ಉದ್ಧವಾ ಮೀ ಸಾಂಗೇನ ತುಜ । ಮಹಾಸುಖಾಚೇ ಸುಖಭೋಜ । ಮೀ ಅಧೋಕ್ಷಜ ನಾಚಿನ್ನಲೋ
॥೧೪೪॥ ತೇ ಸುಖ ಗೋಪಿಕಾ ಜಾಣತೀ । ಕೀ ಮಾರ್ಝೇ ಮೀ ಜಾಣೇ ಶ್ರೀಪತೀ । ಜೇ ರಾಸಕ್ರೀಡೇಚ್ಯಾ ರಾತೀ ।
ಝಾಲೀ ಸುಖಪ್ರಾಪ್ತೀ ಸಕಳೀಕಾಂಸೀ ॥೧೪೫॥ ತ್ಯಾ ಸುಖಾಚೀ ಗೋಡೀ । ರಮಾ ಕಾಯ ಜಾಣೇ ಬಾಪುಡೀ ।
ಬ್ರಹ್ಮಾದಿಕೇ ಕೇವಳ ವೇಡೀ । ತ್ಯಾ ಸುಖಾಚೀ ಗೋಡೀ ನೇಣತೀ ॥೧೪೬॥ ಪಾವಾವಯಾ ತ್ಯಾ ಸುಖಾಸೀ । ಸದಾಶಿವ
ಝಾಲಾ ಯೋಗಾಭ್ಯಾಸೀ । ತರೀ ಪ್ರಾಪ್ತಿ ನವ್ಹೇ ತಯಾಸೀ । ಭುಲಲಾ ಮೋಹಿನೀಸೀ ದೇಖತಾ ॥೧೪೭॥ ಉಮಾ
ಹೋಊನಿ ಭಿಲ್ಲಟೀ । ತಿಣೇ ಭುಲವಿಲಾ ಧೂರ್ಜಟೀ । ತ್ಯಾ ಸುಖಾಚೀ ಸುಖಗೋಷ್ಟೀ । ನೇಣತೀ ಹಟೀ
ತಾಪಸೀ ॥೧೪೮॥ ಜವಳೀ ಅಸೋನಿ ನಿಶ್ಚಿತೀ । ಸಂಕರ್ಷಣ ಮಹಾಮೂರ್ತೀ । ತ್ಯಾಸೀ ತ್ಯಾ ಸುಖಾಚೀ ಪ್ರಾಪ್ತೀ ।
ನವ್ಹೇ ನಿಶ್ಚಿತೀ ಉದ್ಧವಾ ॥೧೪೯॥ ರಾಸಕ್ರೀಡಾ ಗೋಪಿಕಾಪ್ರತೀ । ಕೋಣೇ ಮ್ಹಣೇಲ ಕಾಮಾಸಕ್ತೀ । ತೇಥ
ಕಾಮಾಚೀ ಕೈಚೀ ಪ್ರಾಪ್ತೀ । ಐಕ ನಿಶ್ಚಿತೀ ಉದ್ಧವಾ ॥೧೫೦॥ ಶಿವಾತೇ ಜಿಣೋನಿ ಪುಡಾ । ಕಾಮ ಮ್ಹಣೇ ಮೀ
ಸಬಳ ಗಾಢಾ । ಮಾರಿಝೇ ಭೇದಾವಯಾ ರಾಸಕ್ರೀಡಾ । ವಾಊನಿ ಮೇಢಾ ಚಾಲಿಲಾ ॥೧೫೧॥

ಗೋಪಿಕೆಯರ ಆನಂದವು ಮಹಾ ವಿಲಕ್ಷಣವಾಗಿತ್ತು. ಪ್ರಾತಃಕಾಲದಲ್ಲಿ ನಾನು ವೃಂದಾವನಕ್ಕೆ ಹೋಗುತ್ತಿರಲು, ನನ್ನ ಮುಖಕಮಲವನ್ನು ಕಂಡು ಅವರಿಗೆ ಪರಮ ಸಂತೋಷವಾಗುತ್ತಿತ್ತು ॥೧೩೯॥ ಮಧ್ಯಾಹ್ನ ಕಾಲದಲ್ಲಿ ಗೋವುಗಳಿಗೆ ನೀರನ್ನು ಕುಡಿಸಿ ಆ ದನಗಳ ಮನೆಯಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಆಗ ನೀರಿನ ನಿಮಿತ್ತ ಮಾಡಿಕೊಂಡು ಆ ಗೌಳಣಿಯರು ನನ್ನನ್ನು ನೋಡಲು ಬರುತ್ತಿದ್ದರು ॥೧೪೦॥ ಅಲ್ಲಿ ನಾನಾ ಪ್ರಕಾರಗಳ ವಿನೋದಗಳನ್ನು, ಅನೇಕ ಪ್ರಕಾರದ ಲೀಲೆಗಳನ್ನು ಮತ್ತು ನಾನಾ ವಿಧವಾದ ಆಟಗಳನ್ನು ಆಡುವುದನ್ನು ನೋಡಿ ಪ್ರೇಮಳ ಗೌಳಣಿಯವರಿಗೆ ಆನಂದವು ಉಕ್ಕೇರುತ್ತಿತ್ತು ॥೧೪೧॥ ಸಾಯಂಕಾಲದಲ್ಲಿ ತಿರುಗಿ ಬರುತ್ತಿರುವುದನ್ನು ಕಂಡು ಆರತಿ, ನಿವಾಳಿಗಳೊಂದಿಗೆ ಧಾವಿಸಿ ಬಂದು ಬಹು ಆನಂದದಿಂದ ನನ್ನ ಚರಣಗಳಲ್ಲಿ ಮಸ್ತಕವನ್ನಿಡುತ್ತಿದ್ದರು ॥೧೪೨॥ ಈ ಪ್ರಕಾರವಾಗಿ ಮುಂಜಾನೆ, ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ನನ್ನ ದರ್ಶನವನ್ನು ಪಡೆಯುತ್ತಿದ್ದರೂ ಕೂಡ ಅವರಿಗೆ ತೃಪ್ತಿಯು ಆಗುತ್ತಲೇ ಇಲ್ಲ. ಇದಕ್ಕಿಂತಲೂ ಆಚೆಕಡೆಯಲ್ಲಿನ ಒಂದು ಅತ್ಯಂತ ಗುಹ್ಯವಾದ ಮತ್ತು ಏಕಾಂತದಲ್ಲಿ ನಡೆದ ಘಟನೆಯಾಗಿರುವುದು ॥೧೪೩॥ ಹೇ ಉದ್ಧವಾ, ಆ ಯಾವ ಗುಟ್ಟಿನಲ್ಲಿನ ರಹಸ್ಯವನ್ನು ನಾನು ನಿನಗೆ ಹೇಳುತ್ತೇನೆ. ನಾನು ಪರಮಾತ್ಮನಾಗಿದ್ದರೂ ಸಹ ಆ ಸುಖದಲ್ಲಿ ಕುಣಿಯುತ್ತಿದ್ದೆನು ॥೧೪೪॥ ರಾಸಕ್ರೀಡೆಯ ರಾತ್ರಿಯಲ್ಲಿ ನಮಗೆಲ್ಲರಿಗೂ ಆದ ಸುಖಪ್ರಾಪ್ತಿಯ ಆನಂದವನ್ನು ಗೋಪಿಕೆಯರು ಬಲ್ಲರು ಮತ್ತು ನಾನು ಬಲ್ಲೆನು ॥೧೪೫॥ ಆ ಸುಖದ ಆನಂದವು ಪಾಪ ಲಕ್ಷ್ಮೀಗೂ ಕೂಡ ಹೇಗೆ ತಿಳಿದೀತು? ಬ್ರಹ್ಮದೇವನು ಮಾತ್ರ ಕೇವಲ ಹುಚ್ಚನಾಗಿಬಿಟ್ಟನು. ಈ ಯಾವ ಸುಖದ ಆನಂದವು ಆತನಿಗೂ ತಿಳಿಯದಾಯಿತು ॥೧೪೬॥ ಈ ಯಾವ ಸುಖವನ್ನು ತಿಳಿಯುವುದಕ್ಕಾಗಿ ಶಂಕರನು ಯೋಗಾಭ್ಯಾಸವನ್ನು ಮಾಡಿದನು. ಆದರೂ ಸಹ ಆತನಿಗೆ ಈ ಸುಖವು ಪ್ರಾಪ್ತವಾಗಲಿಲ್ಲ. ಈತನು ಮೋಹಿನಿಗೆ ಭುಲಾಯಿಸಿದನು ॥೧೪೭॥ ಪಾರ್ವತಿಯು ಭಿಲ್ಲಣಿಯಾಗಿ ಆಕೆಯು ಶಂಕರನಿಗೆ ಭುಲಾಯಿಸಿದಳು. ಈ ಯಾವ ಸುಖದ ಆನಂದಮಯ ಮಾತನ್ನು ಹಟಯೋಗಿಗಳು ಮತ್ತು ತಪಸ್ವಿಗಳು ತಿಳಿಯಲಾರರು ॥೧೪೮॥ ಹೇ ಉದ್ಧವಾ, ನನ್ನ ಅಣ್ಣನಾದ ಬಲರಾಮನು ನನ್ನ ಸಮೀಪದಲ್ಲಿದ್ದರೂ ಕೂಡ ಈ ಯಾವ ಸುಖವು ಆತನಿಗೆ ಪ್ರಾಪ್ತವಾಗಲಿಲ್ಲ. ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ॥೧೪೯॥ ಗೋಪಿಕೆಯರೊಂದಿಗೆ ಆದ ಈ ಯಾವ ರಾಸಕ್ರೀಡೆಯನ್ನು ಕಂಡು ಯಾರಾದರೂ ಇದು ಕೇವಲ ಕಾಮಾಸಕ್ತಿಯಿಂದ ಕೂಡಿದೆ ಎಂದು ಹೇಳಬಹುದು. ಆದರೆ ಅಲ್ಲಿ ಕಾಮಾಸಕ್ತಿಯು ಎಲ್ಲಿಂದ ಬರಬೇಕು? ಉದ್ಧವಾ, ಇದಕ್ಕಾಗಿ ಸರಿಯಾಗಿ ಕೇಳಿ ತಿಳಿದುಕೋ ॥೧೫೦॥ ಕಾಮನು ಶಂಕರನನ್ನು ಜಯಿಸಿದನು. ಆದ್ದರಿಂದ ಆತನು ನಾನು ಮಹಾ ಪರಾಕ್ರಮಿ ಎಂದು ಹೇಳಹತ್ತಿದನು. ನನ್ನ ರಾಸಕ್ರೀಡೆಯನ್ನು ಭಂಗಗೊಳಿಸಲು ಅವನು ಧನುಷ್ಯ ಬಾಣವನ್ನು ತೆಗೆದುಕೊಂಡು ಹೊರಟನು ॥೧೫೧॥

ಜೇಥ ಮಾಝ್ಯಾ ಸ್ವರೂಪಾಚೇ ವೋಡಣ । ತೇಥ ನ ಚಲೇ ಕಾಮಾಚೇ ಕಾಮಪಣ । ಮೋಡಲೇ ಮದನಾಚೇ ಬಾಣ । ದೃಢ ವೋಡಣ ಸ್ಮರಣಾಚೇ ।।೧೫೨।। ಕಾಮ ಕಾಮಿಕಾ ಚಪಳದೃಷ್ಟೀ । ನಿಜಕ್ಷೋಭಾಚೀ ತೀಕ್ಷ್ಣ ಬಾಣಾಟೀ । ಸಂಧೀ ಸಾಧೂನಿ ವಿಂಧೇ ಹಟೀ । ತೇ ನವ್ಹೇಚಿ ಪೈಠೀ ಹರಿರಂಗೀ ।।೧೫೩।। ಜೇಥ ಮೀ ಕ್ರೀಡೇ ಆತ್ಮಾರಾಮೂ । ತೇಥ ಕೇವೀ ರಿಘೇ ಬಾಪುಡಾ ಕಾಮೂ । ಮಾಝೇ ಕಾಮೇ ಗೋಪಿಕಾ ನಿಷ್ಕಾಮೂ । ಕಾಮಸಂಭ್ರಮೂ ತ್ಯಾ ನಾಹೀ ।।೧೫೪।। ಜೋ ಕೋಣೇ ಸ್ಮರೇ ಮಾಝೇ ನಾಮೂ । ತಿಕಡೇ ಪಾಹೂ ನ ಶಕೇ ಕಾಮೂ । ಜೇಥ ಮೀ ರಮೇ ಪುರುಷೋತ್ತಮೂ । ತೇಥ ಕಾಮಕರ್ಮೂ ರಿಘೇನಾ ।।೧೫೫।। ಕಾಮೂ ಮ್ಹಣೇ ಕಟಕಟಾ । ಅಭಾಗ್ಯ ಭಾಗ್ಯೇ ಝಾಲೋ ಮೋಟಾ । ರಾಸಕ್ರೀಡೇಚಿಯಾ ಶೇವಟೀಲ ಗೋಟಾ । ಆಜ ಮೀ ಕರಂಟಾ ನ ಪವೇಂಚಿ ।।೧೫೬।। ದೇಖೋನಿ ರಾಸಕ್ರೀಡಾ ಗೋಮಟೀ । ಕಾಮ ಘಟಘಟಾ ಲಾಳ ಘೋಟೀ । ಲಾಜ ಸಾಂಡೂನಿ ಜನ್ಮಲಾ ಪೋಟೀ । ತ್ಯಾ ಸುಖಾಚೇ ಭೇಟೀಲಾಗೋನಿ ।।೧೫೭।। ತೋ ಕಾಯ ಮ್ಯಾ ಆಪುಲೇ ಅಂಕೀ । ಕೇಲಾ ನಿಜಭಾವೇ ನಿಜಸುಖೀ । ತೇ ಮಾಝೇ ನಿಜಸುಖ ಗೋಪಿಕೀ । ರಾಸಮಿಷೇ ಕೀ ಭೋಗಿಲೇ ।।೧೫೮।। ತೇ ರಾಸಕ್ರೀಡೇಚಿ ರಾತೀ । ಮ್ಯಾ ಬ್ರಹ್ಮಷಣ್ಮಾಸ ಕೇಲಿ ಹೋತೀ । ಗೋಪಿಕಾ ಅರ್ಧಕ್ಷಣ ಮಾನಿತೀ । ವೇಗಿ ಕಾ ಗಭಸ್ತೀ ಉಗವಲಾ ।।೧೫೯।। ಜೇಥ ಮಾಝ್ಯಾ ಕ್ರೀಡಾಸುಖಕಲ್ಲೋಳ । ತೇಥ ಕೋಣ ಸ್ಮರೇ ಕಾಳವೇಳ । ಗೋಪಿಕಾಂಚೇ ಭಾಗ್ಯ ಪ್ರಬಳ । ಮಾಝೇ ಸುಖ ಕೇವಳ ಪಾವಲ್ಯಾ ।।೧೬೦।। ಐಶಾ ಮಾಝಿಯಾ ಸಂಗತೀ । ಭೋಗಿಲ್ಯಾ ರಾತೀ ನೇಣೋ ಕಿತೀ । ತರೀ ತ್ಯಾಂಸೀ ನವ್ಹೇ ತೃಪ್ತೀ । ಚಢತೀ ಪ್ರೀತೀ ಮಜಲಾಗೀ ।।೧೬೧।। ಗೋಪಿಕಾ ಕರೂನಿ ಮಾಝೀ ಭಕ್ತೀ । ಮೀ ಪ್ರಸನ್ನ ಕೇಲೋ ಶ್ರೀಪತೀ । ರಾಸ ಮಾಗೀತಲೋ ಏಕಾಂತೀ । ಮಾಝೀ ಸುಖಪ್ರಾಪ್ತೀ ಪಾವಾವಯಾ ।।೧೬೨।। ತ್ಯಾ ಜಾಣ ವೇದಗರ್ಭೀಚ್ಯಾ ಶ್ರುತೀ । ಶ್ರುತಿರೂಪೇ ನವ್ಹೇ ಮತ್ಪ್ರಾಪ್ತೀ । ತೈ ಪರತಲ್ಯಾ ಮ್ಹಣೌನಿ "ನೇತಿ ನೇತಿ" । ಮಾಝೀ ಸುಖಸಂಗತೀ ನ ಪವೇಚಿ ।।೧೬೩।। ವಿಷಯಬುದ್ಧಿ ತೇ ಮುಖ್ಯ ಅಜ್ಞಾನ । ತೇ ಅಸತಾ ಮೀ ನ ಭೇಟೇ ಜಾಣ । ಅಸತಾ ವೇದೋಕ್ತ ಜಾಣಪಣ । ತೇಣೇಹೀ ಸಂಪೂರ್ಣ ನ ಭೇಟೇ ಮೀ ।।೧೬೪।।

ಆದರೆ ನನ್ನ ಸ್ವರೂಪದ ಢಾಲ ಮುಂದೆ ಕಾಮನ ಸಾಮರ್ಥ್ಯವು ಏನೂ ನಡೆಯಲಿಲ್ಲ. ಮದನನ ಸರ್ವ ಬಾಣಗಳು ಮುರಿದು ಬಿದ್ದವು. ಹೀಗೆ ನನ್ನ ನಾಮಸ್ಮರಣೆಯ ಢಾಲವು ಬಹಳ ಗಟ್ಟಿಯಾಗಿರುವುದು ।।೧೫೨।। ಮದನನ ದೃಷ್ಟಿಯು ಮಹಾ ಚಪಲವಾಗಿರುವುದು. ಅದು ಕಾಮುಕರಿಗೆ ಕ್ಷುಬ್ಧಗೊಳಿಸುವುದು. ಮತ್ತು ಆತನ ತೀಕ್ಷ್ಣವಾದ ಬಾಣಗಳು ಸಂಧಿಯನ್ನು ಸಾಧಿಸಿ ಅವರಿಗೆ ಜರ್ಜರಗೊಳಿಸುವುವು. ಆದರೆ ಈ ಯಾವ ಕಾಮನ ಬಾಣಗಳು ಶ್ರೀಹರಿಯ ರಂಗಿನಲ್ಲಿ ಬರಲು ಶಕ್ಯವಿಲ್ಲ ।।೧೫೩।। ಯಾವ ಸ್ಥಳದಲ್ಲಿ ಆತ್ಮಾರಾಮನಾದ ನಾನು ಪ್ರತ್ಯಕ್ಷವಾಗಿ ಕ್ರೀಡೆಯನ್ನು ಮಾಡುತ್ತಿರಲು, ಅಲ್ಲಿ ಪಾಪ, ಕಾಮನಾದರೂ ಹೇಗೆ ಪ್ರವೇಶ ಮಾಡಬಲ್ಲನು? ನನ್ನ ಪ್ರಾಪ್ತಿಯ ಇಚ್ಛೆಯಿಂದ ಗೋಪಿಕೆಯರು ನಿಷ್ಕಾಮರಾಗಿದ್ದರು. ಅವರಿಗೆ ಕಾಮದ ಇಚ್ಛೆಯು ಉಳಿಯಲೇ ಇಲ್ಲ ।।೧೫೪।। ಯಾರು ನನ್ನನ್ನು ಅಂತಃಕರಣದಿಂದ ಸ್ಮರಿಸುವನೋ, ಅವನತ್ತ ಕಾಮನು ಹಣಿಕಿ ನೋಡಲಾರನು. ಪುರುಷೋತ್ತಮನಾದ ನಾನು ಎಲ್ಲಿ ರಮಮಾಣನಾಗಿರುವೆನೋ ಅಲ್ಲಿ ಕಾಮ ಕರ್ಮವು ನಡೆಯದು ।।೧೫೫।। ಕಾಮನು ನುಡಿದನು, ಅಯ್ಯೋ, ನಾನು ಭಾಗ್ಯವಂತನೆಂದು ನಿಜವಾಗಿ ತಿಳಿದಿದ್ದೆನು, ಆದರೆ ನಾನು ದುರ್ಭಾಗ್ಯನು. ನನಗೆ ಈ ರಾಸಕ್ರೀಡೆಯಲ್ಲಿನ ಕೊನೆಯ ಒಂದು ಕಣವೂ ಸಹ ದೊರೆಯಲಿಲ್ಲ ।।೧೫೬।। ನನ್ನ ಅಲೌಕಿಕವಾದ ರಾಸಕ್ರೀಡೆಯನ್ನು ಕಂಡು ಕಾಮನ ಬಾಯಿಯಲ್ಲಿ ಜೊಲ್ಲು ಸೋರಹತ್ತಿತು. ಕೊನೆಗೆ ಆತನು ಸರ್ವ ಲಜ್ಜೆಯನ್ನು ತೊರೆದು ನನ್ನ ಹೊಟ್ಟೆಯಲ್ಲಿ ಜನ್ಮಕ್ಕೆ ಬಂದನು ।।೧೫೭।। ಗೋಪಿಕೆಯರು ನನ್ನ ಯಾವ ಆತ್ಮಸುಖವನ್ನು ರಾಸಕ್ರೀಡೆಯ ನಿಮಿತ್ತದಿಂದ ಭೋಗಿಸಿದರು. ಅದೇ ಸುಖವನ್ನು ಮದನನಿಗೆ ನಾನು ನನ್ನ ತೊಡೆಯ ಮೇಲೆ ಕುಳ್ಳಿರಿಸಿ ಕೊಟ್ಟೆನು ।।೧೫೮।। ಗೋಪಿಕೆಯರು ನನ್ನ ಆತ್ಮಸುಖವನ್ನು ರಾಸಕ್ರೀಡೆಯ ಮಾಧ್ಯಮದಿಂದ ಭೋಗಿಸಿದರು. ಆ ರಾಸಕ್ರೀಡೆಯ ರಾತ್ರಿಯನ್ನು ನಾನು ಬ್ರಹ್ಮದೇವನ ಆರು ತಿಂಗಳದಷ್ಟು ವಿಸ್ತರಿಸಿದ್ದೆನು. ಆದರೆ ಗೋಪಿಕೆಯರಿಗೆ ಅದು ಅರ್ಧಕ್ಷಣದಷ್ಟಾಯಿತು. ಇಂದು ಸೂರ್ಯನು ಇಷ್ಟು ಬೇಗ ಏತಕ್ಕೆ ಬಂದನು ಎಂದು ಅವರು ಹೇಳಿದರು ।।೧೫೯।। ಎಲ್ಲಿ ನನ್ನದೇ ಆದ ಕ್ರೀಡಾಸುಖದ ತೆರೆಗಳ ಮೇಲೆ ತೆರೆಗಳು ಬರುತ್ತಿರಲು, ಅಲ್ಲಿ ಕಾಲವೇಳೆಯ ಸ್ಮರಣೆ ಯಾರಿಗೆ ಇದ್ದೀತು? ಗೋಪಿಕೆಯರ ಭಾಗ್ಯವು ಬಹು ದೊಡ್ಡದು. ಆದ್ದರಿಂದಲೇ ಅವರು ನನ್ನ ಆತ್ಮಸುಖವನ್ನು ಪ್ರಾಪ್ತ ಮಾಡಿಕೊಂಡರು ।।೧೬೦।। ಈ ರೀತಿಯಾಗಿ ನನ್ನ ಸಂಗತಿಯಲ್ಲಿ ಇವರು ಅದೆಷ್ಟು ರಾತ್ರಿಗಳನ್ನು ಕಳೆದರೋ, ಲೆಕ್ಕವೇ ಇಲ್ಲ. ಆದರೂ ಕೂಡ ಅವರಿಗೆ ತೃಪ್ತಿಯು ಆಗಲಿಲ್ಲ. ನನ್ನ ಪ್ರೇಮವು ಅವರಲ್ಲಿ ಬೆಳೆಯುತ್ತಲೇ ಸಾಗುತ್ತಿತ್ತು ।।೧೬೧।। ಗೋಪಿಕೆಯರು ನನ್ನನ್ನು ಪ್ರೇಮಮಾಡಿ ಕೃಷ್ಣನಾದ ನನಗೆ ಪ್ರಸನ್ನಗೊಳಿಸಿದರು ಮತ್ತು ಆತ್ಮಸುಖದ ಪ್ರಾಪ್ತಿಗಾಗಿ ಅವರು ಏಕಾಂತದಲ್ಲಿ ರಾಸನ್ನು ಅನುಭವಿಸಲು ವಿನಂತಿಸಿದರು ।।೧೬೨।। ಈ ಗೋಪಿಕೆಯರೆಂದರೆ ವೇದದಲ್ಲಿನ ಶ್ರುತಿಗಳು ಎಂದಾಗಿ ತಿಳಿದುಕೋ. ಶ್ರುತಿಯ ರೂಪದಿಂದಲೂ ಸಹ ಅವುಗಳಿಗೆ ನನ್ನ ಪ್ರಾಪ್ತಿಯಾಗಲಿಲ್ಲದ್ದಕ್ಕಾಗಿ "ನೇತಿ ನೇತಿ" ಹೀಗೆನ್ನುತ್ತ ಹಿಂದಕ್ಕೆ ತಿರುಗಿದವು. ನನ್ನ ಸುಖದ ಸಂಗತಿಯು ಅವರಿಗೆ ಅಲ್ಲಿ ದೊರೆಯಲಿಲ್ಲ ।।೧೬೩।। ವಿಷಯಬುದ್ಧಿಯು ಮುಖ್ಯವಾದ ಅಜ್ಞಾನವಾಗಿದೆ. ಹೀಗಿದ್ದರೆ ನಾನು ಎಂದಿಗೂ ಸಿಗಲಾರೆನು. ಇದನ್ನು ಲಕ್ಷದಲ್ಲಿಡು. ಹಾಗೆಯೇ ವೇದಾಧ್ಯಯನದ ವಿದ್ವತ್ತೆಯು ಇದ್ದರೂ ಕೂಡ ನನ್ನ ಪೂರ್ಣ ಪ್ರಾಪ್ತಿಯಾಗದು ।।೧೬೪।।

ಜಾಣೇವನೇಣೇವ ಗೇಲಿಯಾ ನಿಃಶೇಷ । ಮಾಝೇ ಪಾವಿಜೇ ನಿಜಾತ್ಮ ಸುಖ । ಶ್ರುತಿ ಜಾಣೋನಿ ಹೇ ನಿಷ್ಟಂಕ । ಗೋಕುಳಿ ತ್ಯಾ ದೇಖ ಸುಖಾರ್ಥ ಆಲ್ಯಾ ॥೧೬೫॥ ತ್ಯಾಚಿ ಜಾಣ ಸಮಸ್ತ ಶ್ರುತೀ । ಗೋಪಿಕಾರೂಪೇ ಗೋಕುಳಾ ಯೇತೀ । ರಾಸಕ್ರೀಡಾಮಿಸೇ ಏಕಾಂತೀ । ಮಾಝೀ ಸುಖಪ್ರಾಪ್ತೀ ಪಾವಲ್ಯಾ ॥೧೬೬॥ ಹಾಹೀ ಅಸೋ ಅಭಿಪ್ರಾವೋ । ಉದ್ಧವಾ ಜ್ಯಾಸೀ ಜೈಸಾ ಭಾವೋ । ತ್ಯಾಲಾಗೀ ಮೀ ತೈಸಾ ದೇವೋ । ಯದರ್ಥಿ ಸಂದೇಹೋ ಅಸೇನಾ ॥೧೬೭॥ ಉದ್ಧವಾ ಮೀ ಭಕ್ತಾಂಸೀ ದೇಖ । ಕೋಣೇ ಕಾಳೀ ನವ್ಹೇ ವಿಮುಖ । ಜೋ ತೈಸಾ ಭಾವೀ ಭಾವಿಕ । ತೈಸಾ ಮೀ ದೇಖ ತಯಾಸೀ ॥೧೬೮॥ ಮೀ ಜನಾಸೀ ಸದಾ ಸನ್ಮುಖ । ಜನಚಿ ಮಜಸೀ ಹೋತೀ ವಿನ್ಮುಖ । ಯಾಸೀ ಕಾಂಹೀ ನ ಚಲೇ ದೇಖ । ದಾಟೂನಿ ದುಃಖ ಭೋಗತೀ ॥೧೬೯॥ ಮೀ ಸಕಾಮ ಸಕಾಮಾಚ್ಯಾ ಠಾಯೀ । ನಿಷ್ಕಾಮಾಸೀ ನಿಷ್ಕಾಮ ಪಾಹೀ । ನಾಸ್ತಿಕಾ ಮೀ ಲೋಕೀ ತಿಹೀ । ಅಸತೂಚಿ ನಾಹೀ ನಾಸ್ತಿಕ್ಯೇ ॥೧೭೦॥ ಅಸೋ ಹೇ ಕಿತೀ ಉಪಪತ್ತೀ । ಐಕ ಗೋಪಿಕಾಂಸೀ ಮಾಝೀ ಪ್ರೀತೀ । ಮಾಝೇ ಸುಖಸಂಗೇ ಭೋಗಿಲ್ಯಾ ರಾತೀ । ತ್ಯಾ ಮಾನಿತೀ ನಿಮೇಷಾರ್ಧ ॥೧೭೧॥ ಮಾಝ್ಯಾ ವಿಯೋಗೇ ತ್ಯಾ ತ್ಯಾ ರಾತೀ । ಜ್ಯಾ ಆಲಿಯಾ ಯಥಾಸ್ಥಿತೀ । ತ್ಯಾ ಗೋಪಿಕಾ ಕಲ್ಪಪ್ರಾಯ ಮಾನಿತೀ । ಸನ್ನಿಧಿ ಸ್ವಪತೀ ಅಸತಾಂಹೀ ॥೧೭೨॥ ತ್ಯಾಂಚ್ಯಾ ದುಃಖಾಚೀ ಅವಸ್ಥಾ । ಬೋಲೇ ನ ಬೋಲವೇ ಸರ್ವಥಾ । ಮಾಝೇನಿ ವಿಯೋಗೇ ಮಾತೇ ಸ್ಮರತಾ । ಸಮಾಧಿ ಅವಸ್ಥಾ ಪಾವಲ್ಯಾ ॥೧೭೩॥

ತಾ ನಾವಿದನ್ಮಯ್ಯನುಷಂಗಬದ್ಧಧಿಯಃ ಸ್ವಮಾತ್ಮಾನಮದಸ್ತಥೇದಮ್ ।
ಯಥಾ ಸಮಾಧೌ ಮುನಯೋಽಬ್ಧಿತೋಯೇ ನದ್ಯಃ ಪ್ರವಿಷ್ಟಾ ಇವ ನಾಮರೂಪೇ ॥೧೨॥

ಅರ್ಥ:- ಮಹಾ ಮಹಾ ಋಷಿಗಳು ಸಮಾಧಿಯಲ್ಲಿ ಏಕರೂಪರಾಗುವಂತೆ ಅಥವಾ ಗಂಗಾ ಇತ್ಯಾದಿ ನದಿಗಳು ಸಮುದ್ರದಲ್ಲಿ ಕೂಡಿಕೊಂಡು ತಮ್ಮ ನಾಮರೂಪವನ್ನು ಮರೆತುಬಿಡುವಂತೆ ಗೋಪಿಕೆಯರು ಪರಮ ಪ್ರೇಮದಿಂದ ನನ್ನಲ್ಲಿ ಏಕರೂಪರಾಗಿದ್ದರು. ಅವರಿಗೆ ಲೋಕಪರಲೋಕ, ಶರೀರ, ಪುತ್ರ, ಪತಿ ಇವರ ಸ್ಮರಣೆಯೂ ಉಳಿಯಲಿಲ್ಲ.

ಮಜಗೋಕುಳೀ ಅಸತಾ । ಮಾಝೇ ಠಾಯೀ ಆಸಕ್ತ ಚಿತ್ತಾ । ಹೇ ಅವಘೀ ಸಮೂಳ ಕಥಾ । ತುಜ ಮ್ಯಾ ತತ್ತ್ವತಾ ಸಾಂಗೀತಲೀ ॥೧೭೪॥ ಐಶಿಯಾಂಸೀ ಮ್ಯಾ ಅತಿನಿವಾಡತಾ । ಕೃತಘ್ನಾಚೇ ಪರೀ ಸಾಂಡೂನಿ ಜಾತಾ । ಮಾಝ್ಯಾ ವಿಯೋಗಕಾಳೀಂಚೀ ವ್ಯಥಾ । ಪಾಷಾಣ ಪಾಹತಾ ಉತತಟತೀ ॥೧೭೫॥ ಯಾಪರೀ ಮಜವೇಗಳ್ಯಾ ಅಸತಾ । ಮಾಗೇ ಮಾಝೀ ಕಥಾ ವಾರ್ತಾ । ಸದಾ ಮಾಝೇ ಸ್ಮರಣ ಕರತಾ । ಮದಾಕಾರತಾ ಪಾವಲ್ಯಾ ॥೧೭೬॥

ಜ್ಞಾನ, ಅಜ್ಞಾನಗಳು ಸಂಪೂರ್ಣ ಇಲ್ಲದಾಗಲು ನನ್ನ ಆತ್ಮಸುಖವು ಪ್ರಾಪ್ತವಾಗುವುದು. ಶ್ರುತಿಗಳು ಇದನ್ನು ನಿಶ್ಚಿತವಾಗಿ ತಿಳಿದು ಆ ಸುಖಕ್ಕಾಗಿ ಗೋಕುಲದಲ್ಲಿ ಹುಟ್ಟಿದವು ॥೧೬೫॥ ಈ ಸರ್ವ ಶ್ರುತಿಗಳು ಗೋಪಿಕೆಯರ ರೂಪದಿಂದ ಗೋಕುಲಕ್ಕೆ ಬಂದವು. ಹೀಗೆ ತಿಳಿ. ರಾಸಕ್ರೀಡೆಯ ಮಾಧ್ಯಮದಿಂದ ಏಕಾಂತದಲ್ಲಿ ನನ್ನ ಸುಖಪ್ರಾಪ್ತಿಯ ಉಪಭೋಗವನ್ನು ಪಡೆದರು ॥೧೬೬॥ ಹೇ ಉದ್ಧವನೇ, ಈಗ ಈ ಮಾತು ಇರಲಿ. ಯಾರ ಭಾವನೆಯು ಹೇಗಿರುವುದೋ, ನಾನು ಅವರಿಗೆ ಅದರಂತೆಯೇ ಒದಗುವೆನು. ಇದರಲ್ಲಿ ಯಾವುದೇ ಅನುಮಾನವಿಲ್ಲ ॥೧೬೭॥ ಹೇ ಉದ್ಧವನೇ, ನಾನು ಭಕ್ತರಿಗೆ ಎಂದಿಗೂ ವಿಮುಖನಾಗುವುದಿಲ್ಲ. ಯಾವ ಭಕ್ತನಲ್ಲಿ ಯಾವ ಶ್ರದ್ಧೆ ಇರುವ ರೀತಿಯಲ್ಲಿಯೇ ನಾನು ಪ್ರಾಪ್ತನಾಗುವೆನು ॥೧೬೮॥ ನಾನು ಎಲ್ಲ ಜನರಲ್ಲಿ ಯಾವಾಗಲೂ ಸಮ್ಮುಖನಾಗಿರುವೆನು. ಆದರೆ ಜನರೇ ನನ್ನ ವಿಮುಖರಾಗುವರು. ಆದ್ದರಿಂದ ಅವರು ಸ್ವತಃ ದುಃಖಗಳನ್ನು ಭೋಗಿಸುವರು. ಇದಕ್ಕೇನೂ ಮಾಡಲಾಗುವುದಿಲ್ಲ ॥೧೬೯॥ ನಾನು ಸಕಾಮನಲ್ಲಿ ಸಕಾಮನಾಗುವೆನು ಮತ್ತು ನಿಷ್ಕಾಮನಲ್ಲಿ ನಿಷ್ಕಾಮನಾಗಿರುವೆನು. ನಾನು ತ್ರಿಭುವನದಲ್ಲಿದ್ದರೂ ನಾಸ್ತಿಕನಿಗೆ ಆತನ ನಾಸ್ತಿಕಭಾವದಿಂದ ಎಲ್ಲಿಯೂ ಕಾಣಿಸುವುದಿಲ್ಲ ॥೧೭೦॥ ಇರಲಿ, ಈ ಪ್ರತಿಪಾದನೆಯನ್ನು ನಿನಗೆ ಎಷ್ಟೆಂದು ಹೇಳಲಿ? ಗೋಪಿಕೆಯರಲ್ಲಿ ನನ್ನ ಪ್ರೀತಿಯಿರುವುದರಿಂದ ನನ್ನ ಸುಖದ ಸಂಗತಿಯಲ್ಲಿ ಅವರು ಅನೇಕ ರಾತ್ರಿ ಭೋಗಿಸಿದರು. ಆದರೆ ಅವರಿಗೆ ಅದು ಅರ್ಧಕ್ಷಣಕ್ಕಿಂತಲೂ ಅಲ್ಪವಾಗಿ ತೋರಿತು ॥೧೭೧॥ ನನ್ನ ವಿಯೋಗದ ರಾತ್ರಿಯಲ್ಲಿ ಅವರ ಪತಿಯು ಸಮೀಪದಲ್ಲಿದ್ದರೂ ಕೂಡ ಅವರಿಗೆ ಕಲ್ಪಪ್ರಮಾಣ ದೀರ್ಘವಾಗಿ ತೋರುತ್ತಿತ್ತು ॥೧೭೨॥ ಅವರ ದುಃಖದ ಅವಸ್ಥೆಯನ್ನು ಯಾವ ಶಬ್ದಗಳಿಂದಲೂ ವರ್ಣನೆಯನ್ನು ಮಾಡಲು ಸಾಧ್ಯವಿಲ್ಲ. ನನ್ನ ವಿಯೋಗ ಕಾರಣವಾಗಿ ನನ್ನ ಚಿಂತನೆಯನ್ನು ಮಾಡುತ್ತಿರಲು ಆ ಗೋಪಿಕೆಯರು ಸಮಾಧಿ ಅವಸ್ಥೆಯನ್ನು ಪಡೆದುಕೊಂಡರು ॥೧೭೩॥

ನಾನು ಗೋಕುಲದಲ್ಲಿದ್ದಾಗ ಗೋಪಿಕೆಯರ ಅಂತಃಕರಣವು ನನ್ನಲ್ಲಿ ಹೇಗೆ ಆಸಕ್ತವಾಗಿತ್ತೆಂಬುವ ಸರ್ವ ವೃತ್ತಾಂತವನ್ನು ನಾನು ನಿನಗೆ ಹೇಳಿದೆನು ॥೧೭೪॥ ಹೀಗಿರುವ ಆ ಯಾವ ಗೋಪಿಕೆಯರಿಗೆ ನಾನು ನಿಷ್ಠುರನಾಗಿ ಕೃತಘ್ನತೆ ಸಮಾನವಾಗಿ ಬಿಟ್ಟು ಹೋಗುತ್ತಿರಲು, ನನ್ನ ವಿಯೋಗದಿಂದ ಅವರಿಗಾದ ವ್ಯಥೆಯನ್ನು ಕಂಡು ಕಲ್ಲು ಸಹ ಕರಗಿ ನೀರಾಯಿತು ॥೧೭೫॥ ಈ ರೀತಿಯಲ್ಲಿ ಆ ಗೋಪಿಕೆಯರು ನನ್ನಿಂದ ದೂರಾದರೂ ಕೂಡ ಅವರು ನಿರಂತರವಾಗಿ ನನ್ನ ಮಾತುಗಳನ್ನೇ ಆಡುತ್ತ ನನ್ನ ಸ್ಮರಣೆಯನ್ನೇ ಮಾಡುತ್ತಿದ್ದರು. ಹಾಗೂ ನನ್ನಲ್ಲಿ ಏಕರೂಪರಾದರು ॥೧೭೬॥

ಕರಿತಾ ದಳಣ ಕಾಂಡಣ । ಮಾಝೇ ದೀರ್ಘಸ್ವರೇ ಗಾತೀ ಗುಣ । ಕೀ ಆದರಿಲ್ಯಾ ದಧಿಮಂಥನ । ಮಾಝೇ ಚರಿತ್ರಗಾಯನ ತ್ಯಾ ಕರಿತೀ ।।೧೭೭।। ಕರಿತಾ ಸಡಾಸಂಮಾರ್ಜನ । ಗೋಪಿಕಾಂಸೀ ಮಾಝೇ ಧ್ಯಾನ । ಮಾಝೇನಿ ಸ್ಮರಣೇ ಜಾಣ । ಪರಿಯೇ ದೇಣೇ ಬಾಲಕಾ ।।೧೭೮।। ಗಾಯೀಚೇ ದೋಹನ ಕರಿತಾ । ಮಾಝೇ ಸ್ಮರಣೇ ಆಸಕ್ತತಾ । ಏವಂ ಸರ್ವ ಕರ್ಮೀ ವರ್ತತಾ । ಮಾಝ್ಯಾ ವಿಸರಾಚೀ ವಾರ್ತಾ ವಿಸರಲ್ಯಾ ।।೧೭೯।। ಕರಿತಾ ಗಮನಾಗಮನ । ಅಖಂಡ ಮಾಝ್ಯಾ ಠಾಯೀ ಮನ । ಆಸನ ಭೋಜನ ಪ್ರಾಶನ । ಕರಿತಾ ಮತ್ ಧ್ಯಾನ ತಯಾಂಸೀ ।।೧೮೦।। ಏವಂ ಮಜ ಗೇಲಿಯಾಪಾಠೀ । ಐಶೀ ಮಾಝೀ ಆವಡೀ ಮೋಠೀ । ಅಖಂಡ ಮಾಝ್ಯಾ ಠಾಯೀ ದೃಷ್ಟೀ । ಮಾಝ್ಯಾಚಿ ಗೋಷ್ಟೀ ಸರ್ವದಾ ।।೧೮೧।। ಐಸೀ ಅನನ್ಯ ಠಾಯೀಂಚ್ಯಾ ಠಾಯೀ । ಗೋಪಿಕಾಂಸೀ ಮಾಝೀ ಪ್ರೀತಿ ಪಾಹೀ । ತ್ಯಾ ವರ್ತತಾಂಹೀ ದೇಹಗೇಹೀ । ಮಾಝ್ಯಾ ಠಾಯೀ ವಿನಟಲ್ಯಾ ।।೧೮೨।। ಯಾಪರೀ ಬುದ್ಧಿ ಮದಾಕಾರ । ಮ್ಹಣೋನಿ ವಿಸರಲ್ಯಾ ಘರದಾರ । ವಿಸರಲ್ಯಾ ಪುತ್ರ ಭ್ರತಾರ । ನಿಜವ್ಯಾಪಾರ ವಿಸರಲ್ಯಾ ।।೧೮೩।। ವಿಸರಲ್ಯಾ ವಿಷಯಸುಖ । ವಿಸರಲ್ಯಾ ದ್ವಂದ್ವದುಃಖ । ವಿಸರಲ್ಯಾ ತಹಾನಭೂಕ । ಮಾಝೇನಿ ಏಕ ನಿಧಿಧ್ಯಾಸೇ ।।೧೮೪।। ಜೇಣೇ ದೇಹೇ ಪತಿಪುತ್ರಾಂತೇ । ಆಪ್ತ ಮಾನಿಲೇ ಹೋತೇ ಚಿತ್ತೇ । ತೇ ಚಿತ್ತ ರಾತಲೇ ಮಾತೇ । ತ್ಯಾ ದೇಹಾತೇ ವಿಸರೋನೀ ।।೧೮೫।। ವಿಸರಲ್ಯಾ ಇಹಲೋಕ ಪರಲೋಕ । ವಿಸರಲ್ಯಾ ಕಾರ್ಯಕಾರಣ ನಿಃಶೇಖ । ವಿಸರಲ್ಯಾ ನಾಮರೂಪ ದೇಖ । ಮಾಝೇ ಧ್ಯಾನಸುಖ ಭೋಗಿತಾ ।।೧೮೬।। ನಿರಸೋನಿ ತತ್ತ್ವಾಂಚೇ ವಿಕಾರ । ಸಮಾಧಿ ಪಾವೇ ಮುನೀಶ್ವರ । ತೋ ವಿಸರೇ ಜೇವೀ ಸಂಸಾರ । ತೇವೀ ಮದಾಕಾರ ಗೋಪಿಕಾ ।।೧೮೭।। ಜೇವೀ ಕಾ ನಾನಾ ಸರಿತಾ । ಆಲಿಯಾ ಸಿಂಧೂತೇ ಠಾಕಿತಾ । ತೇಥೇ ಪಾವೋನಿ ಸಮರಸತಾ । ನಾಮರೂಪತಾ ವಿಸರಲ್ಯಾ ।।೧೮೮।। ತೇವೀ ಗೋಪಿಕಾ ಅನನ್ಯಪ್ರೀತೀ । ಮಾಝೀ ಲಾಹೋನಿಯಾ ಪ್ರಾಪ್ತೀ । ನಾಮರೂಪಾಚೀ ವ್ಯುತ್ಪತ್ತೀ । ವಿಸರಲ್ಯಾ ಸ್ಫೂರ್ತಿ ಸ್ಫುರೇನಾ ।।೧೮೯।। ಸಚ್ಚಿದಾನಂದಸ್ವರೂಪಪ್ರಭಾವೋ । ನೇಣತಾ ಮಾಝಾ ನಿಜಸ್ವಭಾವೋ । ಗೋಪಿಕಾಂಚಾ ಅನನ್ಯಭಾವೋ । ಪರಬ್ರಹ್ಮ ಪಹಾ ಹೋ ಪಾವಲ್ಯಾ ।।೧೯೦।।

ಬೀಸುವಾಗ, ಕುಟ್ಟುವಾಗ, ಅವರು ಭಾವಪೂರ್ಣವಾಗಿ ಉಚ್ಚಸ್ವರದಲ್ಲಿ ನನ್ನ ಗುಣಗಳ ಗಾನವನ್ನು ಮಾಡುತ್ತಿದ್ದರು. ಮೊಸರನ್ನು ಕಡೆಯುವಾಗ ನನ್ನ ಚರಿತ್ರಮಯ ಹಾಡುಗಳನ್ನು ಅಂತಃಕರಣಪೂರ್ವಕವಾಗಿ ಪ್ರೇಮದಿಂದ ಹಾಡುತ್ತಿದ್ದರು ।।೧೭೭।। ಅಂಗಳ ಕಸಗೂಡಿಸಿ ಸಾರಿಸುವಾಗಲೂ ಸಹ ನನ್ನ ಮಾತುಗಳನ್ನೇ ಸ್ಮರಿಸುತ್ತಿದ್ದರು. ಕೂಸುಗಳಿಗೆ ತೊಟ್ಟಿಲುಗಳಲ್ಲಿ ತೂಗುತ್ತಿರಲು, ಆಗಲೂ ಕೂಡ ನನ್ನ ಸ್ಮರಣೆಯನ್ನು ಮಾಡುತ್ತಿದ್ದರು ।।೧೭೮।। ಆಕಳ ಹಾಲನ್ನು ಹಿಂಡುತ್ತಿರಲು, ಆಗ ಅವರ ಚಿತ್ತವು ನನ್ನ ಚಿಂತನೆಯಲ್ಲಿ ಆಸಕ್ತವಾಗುತ್ತಿತ್ತು. ಈ ಪ್ರಕಾರವಾಗಿ ಯಾವತ್ತೂ ಕೆಲಸಗಳನ್ನು ಮಾಡುವ ಸಮಯದಲ್ಲಿ ಅವರು ನನ್ನ ವಿಸ್ಮರಣೆಯ ಮಾತನ್ನೇ ಮರೆತುಬಿಟ್ಟರು ।।೧೭೯।। ಹೋಗುವಾಗ, ಬರುವಾಗ, ಹೀಗೆ ಯಾವಾಗಲೂ ಅವರ ಮನವು ನನ್ನಲ್ಲಿ ಏಕರೂಪವಾಗಿತ್ತು. ಕುಳಿತುಕೊಳ್ಳುವಾಗ, ಭುಂಜಿಸುವಾಗ, ನೀರನ್ನು ಕುಡಿಯುವಾಗ ಇತ್ಯಾದಿ ಯಾವತ್ತೂ ಪ್ರಸಂಗಗಳಲ್ಲಿ ಅವರು ನನ್ನದೇ ಧ್ಯಾನವನ್ನು ಮಾಡುತ್ತಿದ್ದರು ।।೧೮೦।। ಸಾರಾಂಶವೇನಂದರೆ, ನಾನು ಹೋದನಂತರವೂ ಗೋಪಿಕೆಯರಿಗೆ ಅತಿಶಯವಾಗಿ ನನ್ನ ಪ್ರೀತಿಯು ಉಳಿದುಕೊಂಡಿತು. ಅವರ ಸರ್ವ ಲಕ್ಷವು ನನ್ನತ್ತವೇ ಇತ್ತು. ಮತ್ತು ಸದಾ ಸರ್ವಕಾಲದಲ್ಲಿ ನನ್ನ ವಿಷಯದಲ್ಲಿಯೇ ಮಾತನಾಡುತ್ತಿದ್ದರು ।।೧೮೧।। ಹೀಗೆ ಗೋಪಿಕೆಯರ ಅನನ್ಯ ಪ್ರೀತಿಯು ನನ್ನ ಮೇಲಿತ್ತು. ಅವರು ಸಂಸಾರವನ್ನು ಮಾಡುತ್ತಿದ್ದರೂ ಕೂಡ ನನ್ನಲ್ಲಿಯೇ ತನ್ಮಯರಾಗುತ್ತಿದ್ದರು ।।೧೮೨।। ಈ ಪ್ರಕಾರವಾಗಿ ಅವರು ನನ್ನಲ್ಲಿ ಏಕರೂಪರಾದರು. ಆದ್ದರಿಂದ ಅವರು ಮನೆಮಾರನ್ನು ಮರೆತುಬಿಟ್ಟರು. ಪತಿ, ಪುತ್ರರನ್ನು ಮರೆತರು. ತಮ್ಮ ಸರ್ವ ಕಾರ್ಯಧಂದೆಗಳನ್ನೆಲ್ಲ ಮರೆತರು ।।೧೮೩।। ಗೋಪಿಕೆಯರಿಗೆ ನನ್ನ ನಿಧಿಧ್ಯಾಸವು ಹತ್ತಿಕೊಂಡಿತ್ತು. ಆದ್ದರಿಂದ ಅವರು ವಿಷಯ ಸುಖಗಳನ್ನು ಮರೆತರು. ಹಾಗೆಯೇ ಶೀತ - ಉಷ್ಣ ಇತ್ಯಾದಿ ದ್ವಂದ್ವದುಃಖಗಳನ್ನು ಮರೆತುಬಿಟ್ಟರು. ಅವರು ಹಸಿವೆ, ನೀರಡಿಕೆಗಳನ್ನು ಮರೆತರು ।।೧೮೪।। ಯಾವ ದೇಹದಿಂದ ಪತಿ, ಪುತ್ರರಿಗೆ ಆಪ್ತರೆನ್ನುತ್ತಿದ್ದರೋ, ಅದೇ ತಮ್ಮ ದೇಹವನ್ನು ಮರೆತುಬಿಟ್ಟಿದ್ದರು. ಅವರ ಮನಸ್ಸು ನನ್ನಲ್ಲಿ ರಮಮಾಣವಾಗಿತ್ತು ।।೧೮೫।। ಗೋಪಿಕೆಯರು ಇಹಲೋಕವನ್ನೂ ಮತ್ತು ಪರಲೋಕವನ್ನೂ ಮರೆತರು. ಕಾರ್ಯಕಾರಣ ಭಾವವನ್ನು ಸಂಪೂರ್ಣವಾಗಿ ಮರೆತುಬಿಟ್ಟರು. ಇವರು ಯಾವಾಗಲೂ ನನ್ನ ಧ್ಯಾನವನ್ನೇ ಮಾಡುತ್ತಿರುವುದರಿಂದ ಆನಂದದ ಉಪಭೋಗವನ್ನು ಪಡೆಯುತ್ತಿದ್ದರು. ಹಾಗೆಯೇ ಇವರು ತಮ್ಮ ನಾಮ ಮತ್ತು ರೂಪವನ್ನು ಸಹ ಮರೆತುಬಿಟ್ಟರು ।।೧೮೬।। ಇಪ್ಪತ್ತನಾಲ್ಕು ತತ್ತ್ವಗಳ ಸರ್ವ ವಿಕಾರಗಳನ್ನು ನಿರಸನೆ ಮಾಡಿ ಮುನಿಶ್ರೇಷ್ಠರು ಸಮಾಧಿಯನ್ನು ಹಚ್ಚುವರು. ಅವರು ಆ ಯಾವ ಸಮಾಧಿಯಲ್ಲಿ ಸರ್ವ ಸಂಸಾರವನ್ನು ಮರೆತುಬಿಡುವರು. ಅದರಂತೆಯೇ ಗೋಪಿಕೆಯರೂ ಕೂಡ ಸರ್ವ ಸಂಸಾರವನ್ನು ಮರೆತಿದ್ದರು. ಮತ್ತು ನನ್ನಲ್ಲಿ ಅವರು ಏಕರೂಪರಾಗಿದ್ದರು ।।೧೮೭।। ಯಾವ ಪ್ರಕಾರವಾಗಿ ಅನೇಕ ನದಿಗಳು ಸಮುದ್ರದಲ್ಲಿ ಏಕರೂಪವಾಗಲು ಆಗ ಅವು ತಮ್ಮ ನಾಮ ಮತ್ತು ರೂಪಗಳನ್ನು ಮರೆತು ಬಿಡುವುವು ।।೧೮೮।। ಅದರಂತೆಯೇ ಗೋಪಿಕೆಯರು ಅನನ್ಯ ಪ್ರೇಮದಿಂದ ಸಹಜವಾಗಿಯೇ ನನ್ನ ಪ್ರಾಪ್ತಿಯನ್ನು ಮಾಡಿಕೊಂಡರು. ಆ ಯಾವ ತಮ್ಮ ನಾಮ, ರೂಪಗಳ ಲಕ್ಷವನ್ನು ಮರೆತರು. ಅವರ ಅಹಂ ಸ್ಫೂರ್ತಿಯೂ ಸಹ ಇಲ್ಲದಾಯಿತು ।।೧೮೯।। ಸಚ್ಚಿದಾನಂದ ಸ್ವರೂಪದ ಪ್ರಭಾವನ್ನು ಹೇಗೆ ವರ್ಣನೆಯನ್ನು ಮಾಡಬೇಕು? ನಿಜವಾಗಿಯೂ ಅವರಿಗೆ ನನ್ನ ಸ್ವಭಾವವು ಗೊತ್ತಿಲ್ಲದಿದ್ದರೂ ಆ ಯಾವ ಗೋಪಿಕೆಯರ ಅನನ್ಯ ಭಾವವು ನನ್ನಲ್ಲಿ ಇತ್ತು. ಆದ್ದರಿಂದ ಅವರು ಪರಬ್ರಹ್ಮ ಸ್ವರೂಪದಲ್ಲಿ ಏಕರೂಪರಾದರು ।।೧೯೦।।

ಮತ್ಕಾಮಾ ರಮಣಂ ಜಾರಮಸ್ವರೂಪವಿದೋಽಬಲಾಃ ಬ್ರಹ್ಮ ಮಾಂ ಪರಮಂ ಪ್ರಾಪುಃ ಸಂಗಾಚ್ಛತಸಹಸ್ರಶಃ ॥೧೩॥

ಅರ್ಥ:- ಹೇ ಉದ್ಧವಾ, ಆ ಯಾವ ಗೋಪಿಕೆಯವರಲ್ಲಿ ಅನೇಕರು ನನ್ನ ನಿಜಸ್ವರೂಪವನ್ನು ತಿಳಿದಿಲ್ಲ. ಅವರು ನನಗೆ ಪರಮಾತ್ಮನೆಂದು ತಿಳಿಯದೇ ಕೇವಲ ಪ್ರಿಯತಮನೆಂದುಕೊಂಡಿದ್ದರು. ಮತ್ತು ಜಾರ ಭಾವನೆಯಿಂದ ನನ್ನನ್ನು ಕೂಡುವ ಆಕಾಂಕ್ಷೆಯನ್ನು ಮಾಡುತ್ತಿದ್ದರು. ಈ ಯಾವ ಸಾಧನೆಯಿಂದ ಸಾವಿರಾರು ಅಬಲೆಯರು ಕೇವಲ ಸತ್ಸಂಗದ ಪ್ರಭಾವದಿಂದ ಪರಮಾತ್ಮಾ ಪರಬ್ರಹ್ಮನಾದ ನನ್ನನ್ನು ಪ್ರಾಪ್ತ ಮಾಡಿಕೊಂಡರು.

ತ್ಯಾ ಕೇವಳ ಅಬಲಾ ನಿಶ್ಚಿತೀ । ಮತ್ಸಂಗಾಚೀ ಅತಿಪ್ರೀತೀ । ತೇಹೀ ಸಂಗತೀ ಕಾಮಾಸಕ್ತೀ । ಶಾಸ್ತ್ರ - ಪ್ರವತ್ತೀವಿರುದ್ಧ ॥೧೯೧॥ ಮೀ ಭ್ರತಾರು ನವ್ಹೇ ಶಾಸ್ತ್ರವಿಧೀ । ರೂಪೇ ಮದನಮೋಹನ ತ್ರಿಶುದ್ಧೀ । ಮಜ ರತಲ್ಯಾ ಜ್ಯಾ ಅವಿಧೀ । ಜಾರಬುದ್ಧೀ ವ್ಯಭಿಚಾರೇ ॥೧೯೨॥ ಚೌ ಪ್ರಕಾರೀಂಚ್ಯಾ ಕಾಮಿನೀ । ಹಸ್ತಿನೀ ಇತ್ಯಾದಿ ಪದ್ಮಿನೀ । ಚೌಘೀಸೀ ಚೌ ಮುಕ್ತಿಸ್ಥಾನೀ । ಕಾಮಮೋಹನೀ ಮೀ ರಮವೀ ॥೧೯೩॥ ಇತರ ಪುರುಷಾಂಚೇ ಸಂಗತೀ । ಕ್ಷಣಭಂಗುರ ಸುಖ ಭೋಗಿತೀ । ಅವಿನಾಶ ನಿಜಸುಖಪ್ರಾಪ್ತೀ । ಕಾಮಾಸಕ್ತೀ ಮಾಝೇನಿ ॥೧೯೪॥ ಸ್ವಪತಿಸಂಗೇ ಕ್ಷಣಿಕ ಆನಂದೂ । ಮಾಝ್ಯಾ ಸುಖಾಚಾ ನಿಜಬೋಧೂ । ನಿತ್ಯ ಭೋಗಿತೀ ಪರಮಾನಂದೂ । ಸ್ವಾನಂದಕಂದೂ ಸರ್ವದಾ ॥೧೯೫॥ ಯಾಲಾಗೀ ಗಾ ಅಬಳಾ ಚಪಳಾ । ಸಾಂಡೂನಿ ಸ್ವಪತೀಚಾ ಸೋಹಳಾ । ಮಜಚಿ ರಾತಲ್ಯಾ ಸಕಳಾ । ಮಾಝೀ ಕಾಮಕಳಾ ಅಭಿನವ ॥೧೯೬॥ ನವರಸಾಂಚಾ ರಸಿಕ । ನವರಂಗಡಾ ಮೀಚ ಏಕ । ಯಾಲಾಗೀ ಮಾಝ್ಯಾ ಕಾಮೀ ಕಾಮುಕ । ಭಾವೋ ನಿಷ್ಟಂಕ ಗೋಪಿಕಾಂಚಾ ॥೧೯೭॥ ಜೀವಾ - ಆಂತುಲಿಯೇ ಖಿಣೇ । ಮೀಚಿ ಏಕ ನಿವ್ರೋ ಜಾಣೇ । ಐಸೇ ಜಾಣೋನಿ ಮಜಕಾರಣೇ । ಜೀವೇಪ್ರಾಣೇ ವಿನಟಲ್ಯಾ ॥೧೯೮॥ ಅಂಗೀ ಪ್ರತ್ಯಂಗೀ ಮೀಚಿ ಭೋಕ್ತಾ । ಸಬಾಹ್ಯ ಸರ್ವಾಂಗೇ ಮೀಚಿ ನಿವವಿತಾ । ಐಸೇ ಜಾಣೋನಿ ತತ್ತ್ವತಾ । ಕಾಮಾಸಕ್ತತಾ ಮಜಲಾಗೀ ॥೧೯೯॥ ಹಾವಭಾವಕಟಾಕ್ಷ ಗುಣ । ಮೀಚಿ ಜಾಣೇ ಉಣಖೂಣ । ಕೋಣ ವೇಳ ಕೋಣ ಲಕ್ಷಣ । ಕೋಣ ಸ್ಥಾನ ಮಿಳಣೇಚೇ ॥೨೦೦॥ ಜೇ ನಿಜೋನಿಯಾ ನಿಜಶೇಝಾರೀ । ಜೇ ಕಾಳೀ ಮಾಝೀ ಇಚ್ಛಾ ಕರೀ । ತೇಚಿ ಕಾಹೀ ತೇಚಿ ಅವಸರೀ । ಸುಖಶೇಜಾರೀ ಮೀ ನಿವವೀ ॥೨೦೧॥ ಮಜ ಕುಡಕುಡೇ ನಾಹೀ ಯೇಣೇ । ನಾಹೀ ಕವಾಡ ಟಣತ್ಕಾರಣೇ । ನಿತ್ಯ ನಿಜಶೇಜೇ ನಿವವಣೇ । ಜೇ ಜೀವೇಪ್ರಾಣೇ ಅನುಸರಲೀ ॥೨೦೨॥

ಈ ಯಾವ ಗೋಪಿಕೆಯರು ಕೇವಲ ಅಬಲೆಯರಾಗಿದ್ದರು. ನನ್ನ ಸಂಗತಿಯ ಅತ್ಯಂತ ಪ್ರೇಮವು ಅವರಿಗೆ ಇತ್ತು. ಮತ್ತು ಯಾವ ಈ ಸಂಗತಿಯು ಕಾಮಾಸಕ್ತಿಯಿಂದ ಕೂಡಿತ್ತು. ಇದು ಶಾಸ್ತ್ರವೃತ್ತಿಯ ವಿರುದ್ಧವಾಗಿತ್ತು ॥೧೯೧॥ ನಾನಾದರೂ ಶಾಸ್ತ್ರ ಪ್ರಮಾಣದಂತೆ ಅವರ ಪತಿಯಾಗಿದ್ದಿಲ್ಲ. ಮದನನೂ ಕೂಡ ನಾಚುವಂತಹ ನನ್ನ ಸುಂದರ ಸ್ವರೂಪವಿತ್ತು. ಈ ಯಾವ ಸ್ತ್ರೀಯರು ಶಾಸ್ತ್ರ ವಿರುದ್ಧವಾದ ಜಾರ ಬುದ್ಧಿಯಿಂದ ಹಾಗೂ ವ್ಯಭಿಚಾರದ ಉದ್ದೇಶದಿಂದ ನನ್ನಲ್ಲಿ ರಮಮಾಣರಾದರು ॥೧೯೨॥ ಅವರು ನಾಲ್ಕು ಪ್ರಕಾರದ ಸ್ತ್ರೀಯರಿದ್ದರು. ಹಸ್ತಿನೀ, ಶಂಖಿಣೀ, ಚಿತ್ರಿಣೀ ಮತ್ತು ಪದ್ಮಿನೀ. ಈ ಯಾವ ನಾಲ್ವರನ್ನೂ ನಾಲ್ಕೂ ಮುಕ್ತಿಯ ಸ್ಥಾನದಲ್ಲಿ ಕಾಮದ ಮೋಹದಲ್ಲಿ ನಾನು ರಮಿಸುತ್ತಿದ್ದೆನು ॥೧೯೩॥ ಇತರ ಯಾವುದೇ ಪುರುಷರ ಸಂಗದಿಂದ ಸ್ತ್ರೀಯರು ಕ್ಷಣಭಂಗುರವಾದ ಸುಖವನ್ನು ಭೋಗಿಸುವರು. ಆದರೆ ನನ್ನ ಕಾಮಾಸಕ್ತಿಯಿಂದ ಎಂದಿಗೂ ನಾಶವಾಗದಂತಹ ನಿಜಸುಖದ ಪ್ರಾಪ್ತಿಯಾಗುವುದು ॥೧೯೪॥ ತಮ್ಮ ಪತಿಯ ಸಂಗದಿಂದ ಇವರಿಗೆ ಕ್ಷಣಹೊತ್ತು ಮಾತ್ರ ಆನಂದವಾಗುವುದು. ಆದರೆ ನನ್ನ ಆತ್ಮಸುಖದ ಆನಂದವು ನಿತ್ಯ ಪರಮಾನಂದವನ್ನು ಕೊಡುವುದು. ಮತ್ತು ಸದಾ ಸರ್ವಕಾಲದಲ್ಲಿ ಸ್ವಾನಂದವನ್ನು ಕೊಡುವುದು ॥೧೯೫॥ ಆದ್ದರಿಂದ ಈ ಯಾವ ಚಂಚಲ ಸ್ತ್ರೀಯರು ತಮ್ಮ ಪತಿಯ ಸುಖಭೋಗವನ್ನು ತೊರೆದು ಸರ್ವಭಾವದಿಂದ ನನ್ನಲ್ಲಿ ರಮಮಾಣರಾದರು. ಹೀಗೆ ನನ್ನ ಕಾಮಕಲೆಯು ಅಪೂರ್ವವಾಗಿರುವುದು ॥೧೯೬॥ ನವರಸಗಳ ರಸಿಕನು ನಾನು. ನಿತ್ಯವೂ ಹೊಸ ಹೊಸ ಬಣ್ಣಗಳನ್ನು ಉತ್ಪನ್ನ ಮಾಡುವವನು ನಾನೇ ಒಬ್ಬನಾಗಿರುವೆನು. ಆದ್ದರಿಂದ ಗೋಪಿಕೆಯರು ನನ್ನ ಕಾಮದಲ್ಲಿ ಲುಬ್ಧರಾಗಿದ್ದರು. ಆ ಗೋಪಿಕೆಯರ ಭಕ್ತಿಯೂ ಕೂಡ ಅದರಂತೆಯೇ ಅಖಂಡವಾಗಿತ್ತು ॥೧೯೭॥ ಜೀವದ ಒಳಗಿನ ತಾಪವನ್ನು ನಾನೊಬ್ಬನೇ ಮಾತ್ರ ಶಾಂತಮಾಡಬಲ್ಲೆನು. ಇದನ್ನು ಅರಿತ ಆ ಯಾವ ಸರ್ವ ಗೋಪಿಕೆಯರು ಜೀವ ಭಾವದಿಂದ ಆತುರರಾಗಿದ್ದರು ॥೧೯೮॥ ಸರ್ವ ಅಂಗಗಳ ಮತ್ತು ಪ್ರತ್ಯಂಗಗಳ ಭೋಕ್ತಾ ಹಾಗೂ ಸರ್ವಾಂಗದಿಂದ ಸಬಾಹ್ಯವಾಗಿ ಶಾಂತ ಮಾಡುವವನು ನಾನೇ ಆಗಿರುವೆನು. ಹೀಗಿರುವ ಈ ತತ್ವವನ್ನು ಅವರು ತಿಳಿದುಕೊಂಡಿದ್ದರು. ಆದ್ದರಿಂದ ಅವರು ನನಗಾಗಿ ಕಾಮಾಸಕ್ತರಾಗಿದ್ದರು ॥೧೯೯॥ ಹಾವಭಾವ, ನೇತ್ರಕಟಾಕ್ಷ ಇತ್ಯಾದಿ ಗುಣಗಳನ್ನು ಮತ್ತು ಅವುಗಳಲ್ಲಿನ ಚಿನ್ಹೆಗಳನ್ನು ನಾನೇ ಬಲ್ಲೆನು. ಯಾವ ಸಮಯದಲ್ಲಿ ಯಾವ ಲಕ್ಷಣಗಳನ್ನು ತಿಳಿಯಬೇಕು ಮತ್ತು ಕೂಡುವ ಸ್ಥಾನಗಳನ್ನು ನಾನೊಬ್ಬನೇ ತಿಳಿದಿರುವೆನು ॥೨೦೦॥ ತನ್ನ ಶಯನ ಗೃಹದಲ್ಲಿ ಮಲಗಿಕೊಂಡು ಯಾವ ಗೌಳಣಿಯು ಯಾವ ಸಮಯದಲ್ಲಿ ನನ್ನ ಇಚ್ಛೆಯನ್ನು ಮಾಡುತ್ತಿದ್ದಳೋ ಅದೇ ಸಮಯಕ್ಕೆ ನಾನು ಆಕೆಯ ಮಗ್ಗಲಿಗೆ ಹೋಗಿ ಆಕೆಯನ್ನು ಶಾಂತಗೊಳಿಸುತ್ತಿದ್ದೆನು ॥೨೦೧॥ ನನಗೆ ಕದ್ದುಮುಚ್ಚಿ ಹೋಗುವುದು ಎಂದೂ ಆಗುತ್ತಿದ್ದಿಲ್ಲ. ನನಗೆ ಕದಬಡಿಯುವ ಅವಶ್ಯಕತೆಯೂ ಇರುತ್ತಿದ್ದಿಲ್ಲ. ಯಾರು ನನ್ನನ್ನು ಜೀವಭಾವದಿಂದ ಅನುಸರಿಸುತ್ತಿದ್ದರೋ, ಆಕೆಯ ನಿಜಶಯ್ಯದಲ್ಲಿ ನಾನು ಆಕಗೆ ನಿತ್ಯ ಶಾಂತ ಮಾಡುತ್ತಿದ್ದೆನು ॥೨೦೨॥

ಐಸಾ ಸ್ವರ್ವಕಾಮದಾಯಕ । ಪುರುಷಾಮಾಜೀ ಮೀಚಿ ಏಕ । ಹಾ ಗೋಪಿಕೀ ಜಾಣೋನಿ ವಿವೇಕ । ಭಾವ ನಿಷ್ಟಂಕ ಧರಿಯೇಲಾ ॥೨೦೩॥ ಜ್ಯಾಸೀ ಭಾಳಲೇ ನಿಷ್ಕಾಮ ತಾಪಸೀ । ಜ್ಯಾಸೀ ಭಾಳಲೇ ಯೋಗೀ ಸನ್ಯಾಸೀ । ಗೋಪಿ ಭಾಳಲ್ಯಾ ತ್ಯಾಸೀ । ದೇಹಗೇಹಾಂಸೀ ವಿಸರೋನಿ ॥೨೦೪॥ ಅಂಧಾರೀ ಗೂಳ ಖಾತಾ । ಕಡೂ ನ ಲಗೇ ತೋ ಸರ್ವಥಾ । ತೇವೀ ನೇಣೋನಿ ಮಾಝೀ ಸಚ್ಚಿದಾನಂದತಾ । ಮಾತೇ ಸೇವಿತಾ ಮೀ ಜಾಹಲ್ಯಾ ॥೨೦೫॥ ಪರೀಸ ಮಾನೋನಿ ಪಾಷಾಣ । ಫೋಡೂ ಜಾತಾ ಲೋಹಾಚಾ ಘಣ । ಲಾಗತಾಂಚಿ ಹೋಯ ಸುವರ್ಣ । ತೈಸಾ ಜಾಣ ಗೋಪಿಕಾ ॥೨೦೬॥ ವಿಷ ಮ್ಹಣೋನಿ ಅಮೃತ ಘೇತಾ । ಮರಣ ಜಾಊನಿ ಯೇ ಅಮರತಾ । ತೇವೀ ಜಾರಬುದ್ಧೀ ಮಾತೇ ಭಜತಾ । ಮಾಜೇ ಸಾಯುಜ್ಯತಾ ಪಾವಲ್ಯಾ ॥೨೦೭॥ ಮ್ಯಾ ಗೋಪಿಕಾಂಸೀ ಕಾಮೂ ಕೇಲಾ । ಕೀ ತ್ಯಾಂಚಾ ಸರ್ವ ಕಾಮೂ ಹರಿಲಾ । ವಿಚಾರಿತಾ ಅರ್ಥ ಏಥಿಲಾ । ಮೋಕ್ಷ ಫಾವಲಾ ಮತ್ಕಾಮೇ ॥೨೦೮॥ ಜ್ಯಾಂಸೀ ಝಾಲೀ ಮಾಝೀ ಸಂಗತೀ । ತ್ಯಾ ಏಕದೋನ ಸಾಂಗೋ ಕಿತೀ । ಶತ ಸಹಸ್ರ ಅಮಿತೀ । ನಿಜಪದಾಪ್ರತೀ ಪಾವಲ್ಯಾ ॥೨೦೯॥ ವೈರಾಗರಾಚ್ಯಾ ಮಣೀಪ್ರತೀ । ಖಡೇ ಲಾಗಲೇ ಹಿರೇ ಹೋತೀ । ತೈಸಾ ಗೋಪಿಕಾ ಮಾಝ್ಯಾ ಸಂಗತೀ । ನೇಣೋ ಕಿತೀ ಉದ್ಧರಲ್ಯಾ ॥೨೧೦॥ ಮೀ ಪರಬ್ರಹ್ಮ ಮೂರ್ತಿ ಚೋಖಡೀ । ಮಾಝಿಯಾ ವ್ಯಭಿಚಾರಪರವಡೀ । ಧುತಲ್ಯಾ ಅವಿದ್ಯಾಪಾಪಕೋಡೀ । ಮುಕ್ತಿ ರೋಕಡೀ ಪಾವಲ್ಯಾ ॥೨೧೧॥ ಮೀ ಅಥವಾ ಮಾಝೇ ಸಂತ । ಸಂಗತೀ ಹೋಈಲ ಜ್ಯಾಂಸೀ ಪ್ರಾಪ್ತ । ತೇ ಮಜ ಪಾವಲೇ ನಿಶ್ಚಿತ । ಸಂದೇಹ ಯೇಥ ನ ಧರಾವಾ ॥೨೧೨॥ ಮಾಝೇ ಸ್ವರೂಪಾವರೀ ಲೋಕ । ವಿಕಲ್ಪೇ ಠೇವಿತೀ ನಾನಾ ದೋಖ । ಸಂತ ಮಾಝೇ ನಿರ್ದೋಖ । ತತ್ಸಂಗೇ ಸುಖ ನಿರ್ದುಷ್ಟ ॥೨೧೩॥ ಉದ್ಧವಾ ತ್ವಾಂಹೀ ಯೇಚಿ ಅರ್ಥೀ । ಬಹುತ ನ ಕರಾವೀ ವ್ಯುತ್ಪತ್ತೀ । ಧರೋನಿಯಾ ಸತ್ಸಂಗತೀ । ಸಂಸಾರಗುಂತೀ ಉಗವಾವೀ ॥೨೧೪॥

ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಮ್ ಪ್ರತಿಚೋದನಾಮ್ ।
ಪ್ರವತ್ತಂ ಚ ನಿವೃತ್ತಂ ಚ ಶ್ರೋತವ್ಯಂ ಶ್ರುತಮೇವ ಚ ॥೧೪॥

ಅರ್ಥ:- ಹೇ ಉದ್ಧವನೇ, ನನ್ನ ಭಜನೆಯ ಮಹಿಮೆಯು ಹೀಗೆ ಅಲೌಕಿಕವಾಗಿರುವುದು. ನೀನು ಶ್ರುತೀ ಮತ್ತು ಸ್ಮೃತೀ ಅಥವಾ ವಿಧೀ, ನಿಷೇಧ, ಸಕಾಮ ಪ್ರವೃತ್ತಿಕರ್ಮ ಮತ್ತು ನಿಷ್ಕಾಮ ನಿವೃತ್ತಿಕರ್ಮ, ಶ್ರವಣೀಯ ಮತ್ತು ಶ್ರುತ ಈ ಎಲ್ಲವನ್ನೂ ತ್ಯಜಿಸಬೇಕು.

ಸರ್ವ ಇಚ್ಛೆಯನ್ನು ಪೂರ್ಣ ಮಾಡುವ ಪುರುಷರಲ್ಲಿ ಪುರುಷೋತ್ತಮನು ನಾನೇ ಆಗಿರುವೆನು. ಈ ವಿಚಾರವನ್ನು ತಿಳಿದುಕೊಂಡು ಗೋಪಿಕೆಯರು ನನ್ನಲ್ಲಿ ಶುದ್ಧವಾದ ಭಕ್ತಿಯನ್ನು ಮಾಡುತ್ತಿದ್ದರು ॥೨೦೩॥ ಯಾರಲ್ಲಿ ನಿಷ್ಕಾಮ ತಪಸ್ವಿಗಳು ಭುಲಾಯಿಸಿರುವರೋ, ಯಾರಲ್ಲಿ ಯೋಗಿಗಳು ಮತ್ತು ಸನ್ಯಾಸಿಗಳವರು ಮೋಹಿತರಾಗಿರುವರೋ, ಆತನಲ್ಲಿಯೇ ಗೋಪಿಕೆಯರು ದೇಹ, ಗೇಹ, ಮನೆ, ಮಾರು ಎಲ್ಲವನ್ನೂ ಮರೆತು ಮೋಹಿತರಾಗಿದ್ದರು ॥೨೦೪॥ ಬೆಲ್ಲವನ್ನು ಕತ್ತಲಲ್ಲಿ ತಿಂದರೂ ಕೂಡ ಅದು ಕಹಿಯಾಗುವುದಿಲ್ಲ. ಅದರಂತೆ ನನ್ನ ಸಚ್ಚಿದಾನಂದ ಸ್ವರೂಪವನ್ನು ತಿಳಿಯದೇ ಅವರು ನನ್ನ ಸೇವೆಯನ್ನು ಮಾಡಿ ನನ್ನಲ್ಲಿ ಏಕರೂಪರಾದರು ॥೨೦೫॥ ಪರಿಸಮಣಿಯನ್ನು ಕಲ್ಲೆಂದು ತಿಳಿದು, ಅದನ್ನು ಕಬ್ಬಿಣದ ಗನ್ನಿನಿಂದ ಒಡೆಯಹತ್ತಲು ಆಗ ಆ ಕಬ್ಬಿಣದ ದೊಡ್ಡ ಸುತ್ತಿಗೆಯು ಬಂಗಾರರೂಪವಾಗುವುದು. ಅದರಂತೆ ಗೋಪಿಕೆಯರ ಅವಸ್ಥೆಯಾಗಿರುವುದು. ಇದನ್ನು ಲಕ್ಷದಲ್ಲಿಡು ॥೨೦೬॥ ಇದು ವಿಷವೆಂದು ತಿಳಿದು ಅಮೃತವನ್ನು ಸೇವಿಸಲು, ಆಗ ಮರಣವು ದೂರಾಗಿ ಅಮರತ್ವವು ಪ್ರಾಪ್ತವಾಗುವುದು. ಇದೇ ಪ್ರಕಾರವಾಗಿ ಅವರು ಜಾರಬುದ್ಧಿಯಿಂದ ನನ್ನ ಭಕ್ತಿಯನ್ನು ಮಾಡಿದರೂ ಕೂಡ ನನ್ನ ಸಾಯುಜ್ಯ ಮುಕ್ತಿಗೆ ಪ್ರಾಪ್ತರಾದರು ॥೨೦೭॥ ನಾನು ಗೋಪಿಕೆಯರಲ್ಲಿ ಕಾಮ ವಿಲಾಸವನ್ನು ಮಾಡಿದೆನೋ, ಇಲ್ಲವೇ ಅವರ ಸರ್ವ ಕಾಮಗಳನ್ನು ನಷ್ಟ ಮಾಡಿದೆನೋ, ಇದರಲ್ಲಿನ ರಹಸ್ಯವನ್ನು ವಿಚಾರ ಮಾಡಿ ನೋಡಲು, ಅವರಿಗೆ ನನ್ನ ವಿಷಯದ ಕಾಮನೆಯಿಂದ ಮೋಕ್ಷವು ಪ್ರಾಪ್ತವಾಗಯಿತೆಂದು ತಿಳಿಯುವುದು ॥೨೦೮॥ ಹೀಗೆ ನನ್ನ ಸಂಗತಿ ಪಡೆದ ಸ್ತ್ರೀಯರು ಒಬ್ಬರೋ, ಇಬ್ಬರೋ ಎಷ್ಟೆಂದು ಹೇಳಲಿ? ನೂರಾರು, ಸಾವಿರಾರು ಹೀಗೆ ಅಸಂಖ್ಯಾತ ಗೋಪಿಕೆಯರು ಆತ್ಮಪದಕ್ಕೆ ಪ್ರಾಪ್ತರಾದರು ॥೨೦೯॥ ವೈರಾಗರ ರತ್ನಕ್ಕೆ ಕಲ್ಲಿನ ಹರಳು ಸ್ಪರ್ಶ ಮಾಡಲು ಅದು ವಜ್ರವಾಗುವುದು. ಅದರಂತೆ ನನ್ನ ಸಂಗತಿಯಿಂದ ಅದೆಷ್ಟು ಗೋಪಿಕೆಯರು ಉದ್ಧಾರರಾದರೆಂಬುದಕ್ಕೆ ಗಣಿತವೇ ಇಲ್ಲ ॥೨೧೦॥ ನಾನು ಸುಂದರನಾದ ಪರಬ್ರಹ್ಮ ಮೂರ್ತಿಯಾಗಿರುವೆನು. ನನ್ನಲ್ಲಿ ವ್ಯಭಿಚಾರ ಮಾಡುವ ಬುದ್ಧಿಯಿಂದ ಬಂದ ಅವರ ಅವಿದ್ಯೆ ಮತ್ತು ಅನೇಕ ಪಾಪಗಳ ರಾಶಿಯು ತೊಳೆದು ಹೋಯಿತು. ಹೀಗೆ ಈ ಯಾವ ಗೋಪಿಕೆಯರಿಗೆ ಮುಕ್ತಿಯ ಲಾಭವಾಯಿತು ॥೨೧೧॥ ನನ್ನ ಅಥವಾ ನನ್ನ ಸಂತರ ಸಂಗತಿಯು ಯಾರಿಗೆ ಪ್ರಾಪ್ತವಾಗುವುದೋ, ಅವರು ನಿಶ್ಚಯಪೂರ್ವಕವಾಗಿ ನನ್ನಲ್ಲಿ ಬಂದು ಕೂಡುವರು. ಇದರಲ್ಲಿ ಯಾವ ಸಂಶಯವೂ ಇಲ್ಲ ॥೨೧೨॥ ಅನೇಕ ಜನರು ವಿಕಲ್ಪ ಬುದ್ಧಿಯಿಂದ ನನ್ನ ಸ್ವರೂಪದಲ್ಲಿ ಅನೇಕ ಪ್ರಕಾರದ ದೋಷಗಳನ್ನು ಎಣಿಸುವರು. ಆದರೆ ನನ್ನ ಸಂತರು ನಿರ್ದೋಷಿಗಳಾಗಿರುವರು. ಅವರ ಸಂಗತಿಯಿಂದ ನಿರ್ದೋಷವಾದ ಸುಖವು ಪ್ರಾಪ್ತವಾಗುವುದು ॥೨೧೩॥ ಹೇ ಉದ್ಧವನೇ, ನೀನೂ ಕೂಡ ಈ ವಿಷಯದಲ್ಲಿ ವಿಶೇಷವಾಗಿ ಚರ್ಚೆಯನ್ನು ಮಾಡದೇ ಸಂತಸಂಗತಿಯ ಆಧಾರದಿಂದ ಸಂಸಾರದ ತೊಡಕು, ಸಮಸ್ಯೆಗಳನ್ನು ಬಿಡಿಸಿಕೊಳ್ಳಬೇಕು ॥೨೧೪॥

ಮಾಝೇಂ ಸ್ವರೂಪ ಶುದ್ಧ ನಿರ್ಗುಣ । ವೇದ ತಿತುಕಾ ಗಾ ತ್ರಿಗುಣ । ತ್ಯಾ ವೇದಾಚೇಂ ಜೇಂ ಪ್ರೇರಣ । ತೇಂ ಗೌಣ ಜಾಣ ಮತ್ಪ್ರಾಪ್ತೀ ।।೨೧೫।। ತ್ಯಾ ವೇದಾರ್ಥೇಂ ಶ್ರುತಿಸ್ಮೃತೀ । ನಾನಾ ಕರ್ಮೇಂ ಕರವಿತೀ । ತ್ಯಾ ಕರ್ಮಾಚೀ ಕರ್ಮಗತೀ । ನ ಕಳೇ ನಿಶ್ಚಿತೀ ಕೋಣ್ಹಾಸೀ ।।೨೧೬।। ಕರ್ಮ ಸ್ವರೂಪೇಂ ಪರಮ ಗೂಢ । ವಿಧಿನಿಷೇಧೇಂ ಅತಿಅವಘಡ । ಸಜ್ಞಾನಾಸೀ ನವ್ಹೇ ನಿವಾಡ । ಶಾಸ್ತ್ರೇಂ ದೃಢ ವಿಚಾರಿತಾ ।।೨೧೭।। ಕೇವಳ ಕರ್ಮಚಿ ಕರ್ಮಾ ಆಂತ । ಏಕ ಪ್ರವೃತ್ತ ಏಕ ನಿವೃತ್ತ । ಸಕಾಮ ನಿಷ್ಕಾಮ ಅದ್ಭುತ । ಅಂಗೀ ಆದಳತ ಸಾಧಕಾ ।।೨೧೮।। ಕರ್ಮ ತಿತುಕೇಂ ಅವಿದ್ಯಕ । ವೇದ ತೋ ತ್ರಿಗುಣಾತ್ಮಕ । ತತ್ಸಂಬಂಧೀ ಶ್ರವಣ ದೇಖ । ಸಾಧನರೂಪ ವೇದಾಂತ ।।೨೧೯।। ತಮೋಗುಣೇಂ ಕರ್ಮಕಾಂಡ । ರಜೋಗುಣೇಂ ಉಪಾಸನಾಕಾಂಡ । ಸತ್ತ್ವಗುಣೇಂ ಜ್ಞಾನಕಾಂಡ । ವೇದ ತ್ರಿಕಾಂಡ ತ್ರಿಗುಣಾತ್ಮಕ ।।೨೨೦।। ವೇದಶಾಸ್ತ್ರ ವಿಧಾನವಿಧೀ । ಯಾಂಚೇಂ ಮೂಳ ಅವಿದ್ಯಾ ಆಧೀಂ । ಜೇ ಅವಿದ್ಯೇಸ್ತವ ದೇಹಬುದ್ಧೀ । ವಿಧಿನಿಷೇಧೀಂ ಗೋವಿತ ।।೨೨೧।। ಯಾಲಾಗೀಂ ಉದ್ಧವಾ ತೂ ಆಧೀಂ । ಸಾಂಡೀಂ ಅವಿದ್ಯಾ ಪಾ ತ್ರಿಶುದ್ಧೀ । ಅವಿದ್ಯಾ ಸಾಂಡಿಲ್ಯಾ ಸಂಬಂಧೀ । ಸಹಜೇಂ ವೇದವಿಧೀ ಸಾಂಡಿಲಾ ।।೨೨೨।। ಆಧೀಂ ಅವಿದ್ಯಾ ತೇ ಕೋಣ । ಹೇಂಚ ಆಮ್ಹಾ ನ ಕಳೇ ಜಾಣ । ಮಗ ತಿಚೇಂ ನಿರಾಕಾರಣ । ಕೇವೀಂ ಆಪಣ ಕರಾವೇಂ ।।೨೨೩।। ನಿಜಕಲ್ಪನೇಚಾ ಜೋ ಬೋಧ । ತೇಚಿ ಅವಿದ್ಯಾ ಸ್ವತಃ ಸಿದ್ಧ । ತೇಣೇಂಚಿ ಭಾದೇ ವಿಧಿನಿಷೇಧ । ತೇ ತ್ಯಾಗಿಲ್ಯಾ ಶುದ್ಧ ಬ್ರಹ್ಮಚಿ ತೋ ।।೨೨೪।। ಧೂರ ಪಡಿಲಿಯಾ ರಣೇಂ । ಸಹಜ ಕಟಕ ಜಾಯ ಪಳೋನೀ । ತೇವೀಂ ಅವಿದ್ಯಾ ಸಾಂಡಿತಾ ಸಾಂಡಣೇಂ । ವಿಧಿವಿಧಾನ ದೋನೀ ಸಹಜೇಚಿ ।।೨೨೫।। ಆಂಖು ಭೇದಿಲಿಯಾ ಪಡಿಪಾಡೇಂ । ರಥ ನ ಚಾಲೇ ಅಸತಾಂಹೀ ಘೋಡೇ । ತೇವೀಂ ಅವಿದ್ಯಾ ಭೇದಿಲಿಯಾ ನಿವಾಡೇಂ । ವಿಧಿನಿಷೇಧ ಪುಢೇಂ ನ ಚಲತೀ ।।೨೨೬।। ಮೂಳ ಭೇದಿಲಿಯಾ ಏಕೇ ಘಾಯೀಂ । ಶಾಖಾ ಪಲ್ಲವ ಭೇದಿಲೇ ಪಾಹೀಂ । ತೇವೀಂ ಅವಿದ್ಯಾ ಭೇದಿಲಿಯಾ ಲವಲಾಹೀಂ । ವಿಧಿನಿಷೇಧ ರಾಹೀಂ ಸಹಜಚಿ ।।೨೨೭।। ಏಕೇಂ ವೇದೀಂಚಾ ತಾತ್ಪರ್ಯಾರ್ಥ । ಮುಖ್ಯ ಭಜಾವಾ ಮೀ ಭಗವಂತ । ತೋಚಿ ಶಾಸ್ತ್ರಿ ವಿಶದಾರ್ಥ । ಕರೀಂ ವೇದಾಂತಶ್ರವಣಾರ್ಥೇಂ ।।೨೨೮।।

ಹೇ ಉದ್ಧವಾ, ನನ್ನ ಸ್ವರೂಪವು ಶುದ್ಧ ಮತ್ತು ನಿರ್ಗುಣವಾಗಿರುವುದು. ನಾನು ಮೂರೂ ಗುಣಗಳ ಆಚೆ ಇರುವೆನು. ಆದರೆ ವೇದವು ಸತ್ವ, ರಜ, ತಮ ಈ ಮೂರು ಗುಣಗಳಿಂದ ಯುಕ್ತವಾಗಿದೆ. ಆ ಯಾವ ವೇದದ ವಿಧಾನವು ನನ್ನ ಪ್ರಾಪ್ತಿಯ ಗೌಣ ಸಾಧನೆಯಾಗಿರುವುದು. ಹೀಗೆ ನೀನು ತಿಳಿದುಕೋ ।।೨೧೫।। ಆ ವೇದಕ್ಕೆ ಅನುಸರಿಸಿ ಶ್ರುತೀ, ಸ್ಮೃತೀ ಇವು ಅನೇಕ ಪ್ರಕಾರಗಳ ಕರ್ಮಗಳನ್ನು ಜನರಿಂದ ಮಾಡಿಸಿಕೊಳ್ಳುವುವು. ಆದರೆ ಈ ಯಾವ ಕರ್ಮಗಳ ಕರ್ಮಗತಿಯು ಯಾರಿಗೂ ತಿಳಿಯುವುದಿಲ್ಲ ।।೨೧೬।। ಕರ್ಮದ ಸ್ವರೂಪವು ಅತಿಶಯವಾಗಿ ಗಹನವಾಗಿರುವುದು. ವಿಧಿ ಮತ್ತು ನಿಷೇಧಗಳಿಂದ ಅದು ಬಹಳ ಬಿಕ್ಕಟ್ಟಾಗಿರುವುದು ಮಹಾ ಜ್ಞಾನಿ ಮನುಷ್ಯರಿಗೂ ಕೂಡ ಈ ಶಾಸ್ತ್ರದ ಆಧಾರದಿಂದ ಕರ್ಮದ ನಿರ್ಣಯವನ್ನು ಮಾಡಲು ಬರುವುದಿಲ್ಲ ।।೨೧೭।। ಕರ್ಮಗಳಲ್ಲಿ ಒಂದು ನಿವೃತ್ತಿಪರವಾಗಿರುವುದು ಮತ್ತು ಒಂದು ಪ್ರವೃತ್ತಿಪರ ಕರ್ಮವಾಗಿರುವುದು. ಒಂದು ನಿಷ್ಕಾಮವಾಗಿರುವುದು. ಇನ್ನೊಂದು ಸಕಾಮವಾಗಿರುವುದು. ಹೀಗೆ ಕರ್ಮಗಳ ಸ್ವರೂಪವು ಅದ್ಭುತವಾಗಿರುವುದು. ಇದು ಸಾಧಕರ ಅಂಗಕ್ಕೆ ಬಂದು ಅಪ್ಪಳಿಸುವುದು ।।೨೧೮।। ಎಷ್ಟೊಂದು ಕರ್ಮಗಳಿರುವುವೋ, ಅವೆಲ್ಲವೂ ಅವಿದ್ಯೆಯಿಂದಲೇ ಆಗಿರುವುವು. ವೇದವು ಮಾತ್ರ ತ್ರಿಗುಣಾತ್ಮಕವಾಗಿರುವುದು. ಅದರಲ್ಲಿ ಸಾಧನೆರೂಪ ವೇದಾಂತವು ಶ್ರವಣವನ್ನು ಮಾಡಲು ಯೋಗ್ಯವಾಗಿರುವುದು ।।೨೧೯।। ತಮೋಗುಣದಿಂದ ಕರ್ಮಕಾಂಡವು ಉತ್ಪನ್ನವಾಗಿರುವುದು. ರಜೋಗುಣದಿಂದ ಉಪಾಸನೆಕಾಂಡವು ನಿರ್ಮಾಣವಾಗಿರುವುದು. ಮತ್ತು ಸತ್ವಗುಣದಿಂದ ಜ್ಞಾನಕಾಂಡವು ಉತ್ಪನ್ನವಾಗಿರುವುದು. ಹೀಗೆ ಈ ವೇದವು ತ್ರಿಗುಣಾತ್ಮಕವಾಗಿ ಮೂರು ಕಾಂಡಗಳಿಂದ ಯುಕ್ತವಾಗಿರುವುದು ।।೨೨೦।। ವೇದಶಾಸ್ತ್ರ ಮತ್ತು ವಿಧಿ ಇವುಗಳ ಮೂಲವು ಅವಿದ್ಯೆಯಿಂದಲೇ ಕೂಡಿದೆ. ಈ ಯಾವ ಅವಿದ್ಯೆಯಿಂದ ದೇಹಬುದ್ಧಿಯು ನಿರ್ಮಾಣವಾಗುತ್ತಿರುವುದು. ಮತ್ತು ಇದು ವಿಧಿ ನಿಷೇಧಗಳಲ್ಲಿ ಸಿಲುಕಿಸಿಬಿಡುವುದು ।।೨೨೧।। ಅದಕ್ಕಾಗಿ ಹೇ ಉದ್ಧವಾ, ನೀನು ನಿಜವಾಗಿಯೂ ಆರಂಭದಲ್ಲಿಯೇ ಈ ಅವಿದ್ಯೆಯನ್ನು ಬಿಟ್ಟುಬಿಡು. ಅವಿದ್ಯೆಯ ಸಂಬಂಧವನ್ನು ಬಿಡಲು ಸಹಜವಾಗಿಯೇ ವೇದವಿಧಿಗಳು ಬಿಡಲ್ಪಡುವುವು ।।೨೨೨।। ಆದರೆ ನಮಗೆ ಅವಿದ್ಯೆ ಎಂದರೆ ಏನೆಂಬುವುದೇ ತಿಳಿಯುವುದಿಲ್ಲ. ಅಂದಮೇಲೆ ಅದರ ನಿರಾಕರಣೆಯನ್ನಾದರೂ ಹೇಗೆ ಮಾಡಲಾದೀತು? ಇಂತಹ ವಿಚಾರವು ನಿನ್ನ ಮನದಲ್ಲಿ ಬಂದಿರಬಹುದು, ಅದಕ್ಕಾಗಿಯೇ ಕೇಳು ।।೨೨೩।। ತನ್ನ ಕಲ್ಪನೆಯಿಂದ ಆಗುವ ಬೋಧವೇ ಅವಿದ್ಯೆಯಾಗಿರುವುದು. ಈ ಯಾವ ಅವಿದ್ಯೆಯಿಂದ ವಿಧಿನಿಷೇಧಗಳು ಬಾಧಿಸುವವು. ಈ ಅವಿದ್ಯೆಯನ್ನು ತ್ಯಜಿಸಿದೆ ಎಂದರೆ ನೀನು ಶುದ್ಧ ಬ್ರಹ್ಮರೂಪನಾಗುವೆ ।।೨೨೪।। ರಣರಂಗದಲ್ಲಿ ಸೇನಾಪತಿಯು ಪತನಗೊಳ್ಳಲು ಆತನ ಸೈನ್ಯವು ಯಾವ ಪ್ರಕಾರವಾಗಿ ಸ್ವಭಾವತವೇ ಓಡಲಾರಂಭಿಸುವುದೋ, ಅದರಂತೆಯೇ ಮುಖ್ಯವಾದ ಅವಿದ್ಯೆಯು ಲೋಪವಾಗಲು ವಿಧಿ ನಿಷೇಧಗಳು ಸಹಜವಾಗಿಯೇ ಲಯಗೊಳ್ಳುವುವು ।।೨೨೫।। ರಥದ ಆಧಾರವನ್ನು ಸಂಪೂರ್ಣವಾಗಿ ಕೊಯ್ದು ಒಗೆಯಲು ಕುದುರೆಗಳನ್ನು ಕಟ್ಟಿದ್ದರೂ ಕೂಡ ರಥವು ನಡೆಯಲಾರದು. ಅದರಂತೆ ನನ್ನ ಸ್ವರೂಪದ ನಿರ್ಣಯವನ್ನು ಮಾಡಿ ಅವಿದ್ಯೆಯನ್ನು ನಾಶಮಾಡಲು ವಿಧಿನಿಷೇಧಗಳು ಮುಂದಕ್ಕೆ ಹೆಜ್ಜೆಯನ್ನೇ ಇಡಲಾರವು ।।೨೨೬।। ಒಂದೇ ಹೊಡೆತಕ್ಕೆ ವೃಕ್ಷದ ಬೊಡ್ಡೆಯನ್ನು ಮುರಿದು ಒಗೆಯಲು ಅದರ ಟೊಂಗೆಗಳನ್ನು ಎಲೆಗಳನ್ನು ಪುನಃ ಬೇರೆಯಾಗಿ ಮುರಿಯಬೇಕಾಗುವುದಿಲ್ಲ. ಅದರಂತೆ ಅವಿದ್ಯೆಯನ್ನು ಮುರಿದು ಒಗೆಯಲು ವಿಧಿನಿಷೇಧಗಳು ಇವು ತಾವು ಇದ್ದಲ್ಲಿಯೇ ನಷ್ಟವಾಗಿ ಹೋಗುವುವು ।।೨೨೭।। ವೇದಾಂತದಲ್ಲಿಯ ತಾತ್ಪರ್ಯವು ಹೇಗಿರುವುದೆಂದರೆ, ಮುಖ್ಯವಾಗಿ ಭಗವಂತನಾದ ನನಗೆ ಭಜಿಸಬೇಕು. ಶಾಸ್ತ್ರಗಳಲ್ಲಿ ವೇದಾಂತ ಶ್ರವಣಾರ್ಥದಿಂದ ಇದನ್ನೇ ಸ್ಪಷ್ಟಾರ್ಥವಾಗಿ ಹೇಳಿರುವುದು ।।೨೨೮।।

ಶ್ರವಣ ಕೇಲಿಯಾಚೇ ಫಳ ಜಾಣ । ಕರಾವೇ ಅವಿದ್ಯಾ ನಿರಸನ । ಅವಿದ್ಯಾ ನಿರಸಿಲಿಯಾ ಶ್ರವಣ । ಪುಢಾರೇ ಜಾಣ ಲಾಗೇನಾ ॥೩೨೯॥ ಜೇವೀ ಠಾಕಿಲಿಯಾ ಸ್ವಸ್ಥಾನ । ಪುಢಾರೇ ನ ಲಗೇ ಗಮನಾಗಮನ । ತೇವಿ ಝಾಲಿಯಾ ಅವಿದ್ಯಾ ನಿರಸನ । ಶ್ರವಣ ಮನನ ಲಾಗೇನಾ ॥೩೩೦॥ ಮ್ಹಣಸೀ ಅವಿದ್ಯಾ ಕೇವೀ ಸಾಂಡೇ । ಹೇಚಿ ಅವಘಡ ಘೋರ ಮಾಂಡೇ । ಹೇ ಅವಘೇ ಉಗವೇ ಸಾಂಕಡೇ । ತೇ ಮೀ ತುಜ ಪುಢೇ ಸಾಂಗೇನ ॥೩೩೧॥ ವೇದಶಾಸ್ತ್ರಕರ್ಮವಿಧಾನ । ಹೇ ಅವಿದ್ಯಾಯುಕ್ತ ಸಾಧನ । ತೇ ಅವಿದ್ಯಾ ಜಾವಯಾ ಜಾಣ । ಮಜಲಾಗೀ ಶರಣ ರಿಘಾವೇ ॥೩೩೨॥

ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ ।
ಯಾಹಿ ಸರ್ವಾತ್ಮ ಭಾವೇನ ಮಯಾ ಸ್ಯಾ ಹ್ಯಕುತೋಭಯಃ ॥೧೫॥

ಅರ್ಥ:- ಸರ್ವ ದೇಹ ಧಾರಣೆ ಮಾಡುವವರ ಆತ್ಮವು ನಾನೊಬ್ಬನೇ ಆಗಿರುವೆನು. ನನಗೆ ಸರ್ವಭಾವದಿಂದ ಶರಣಾಗು ಮತ್ತು ನನ್ನ ಯೋಗದಿಂದಲೇ ನಿರ್ಭಯನಾಗು.

ಸಾಂಡೂನಿ ಸ್ತ್ರೀ ಪುತ್ರ ವಿಷಯಧ್ಯಾನ । ಸಾಂಡೂನಿ ಯೋಗ ಯಾಗ ಯೋಗ್ಯತಾ ಶಾಹಣಪಣ । ಸಾಂಡೂನಿ ಕರ್ಮಠತಾ ಕರ್ಮಾಭಿಮಾನ । ಮಜಲಾಗೀ ಶರಣ ರಿಘಾವೇ ॥೩೩೩॥ ಸಾಂಡೂನಿಯಾ ವೇದಾಧ್ಯಯನ । ಸಾಂಡೂನಿಯಾ ಶಾಸ್ತ್ರಶ್ರವಣ । ಸಾಂಡೂನಿ ಪ್ರವೃತ್ತಿ ನಿವೃತ್ತಿ ಜಾಣ । ಮಜಲಾಗೀ ಶರಣ ರಿಘಾವೇ ॥೩೩೪॥ ಸಾಂಡೂನಿ ಧನಮಾನಚೇಷ್ಟಾ । ಸಾಂಡೂನಿ ಸಜ್ಞಾನ ಪ್ರತಿಷ್ಠಾ । ಸಾಂಡೂನಿಯಾ ನಾನಾ ನಿಷ್ಠಾ । ಶರಣ ವರಿಷ್ಠಾ ಮಜ ಯಾವೇ ॥೩೩೫॥ ಸಾಂಡೂನಿಯಾ ವೈದಿಕ ಲೌಕಿಕ । ಸಾಂಡೂನಿ ಆಗಮ ತಾಂತ್ರಿಕ । ಮಜ ಶರಣ ರಿಘಾಲಿಯಾ ದೇಖ । ಮಾಝೇ ನಿಜಸುಖ ಪಾವಸೀ ॥೩೩೬॥ ಸಾಂಡೂನಿ ಕುಳಾಚೇ ಉಂಚಪಣ । ಸಾಂಡೂನಿ ಜಾತೀಚಾ ಅಭಿಮಾನ । ಸಾಂಡೂನಿ ಆಶ್ರಮಾಚೇ ಶ್ರೇಷ್ಠಪಣ । ಮಜಲಾಗಿ ಶರಣ ರಿಘಾವೇ ॥೩೩೭॥ ಸಾಂಡೂನಿಯಾ ಜ್ಞಾನ ಧ್ಯಾನ । ಸಾಂಡೂನಿಯಾ ವಿಧಿವಿಧಾನ । ಸಾಂಡೂನಿಯಾ ದೇಹಾಭಿಮಾನ । ಮಜಲಾಗೀ ಶರಣ ರಿಘಾವೇ ॥೩೩೮॥ ಮಾಝೇ ನಾಂವ ಅಂತರ್ಯಾಮೀ । ಹೃದಯೀಚೇ ಜಾಣತಾ ಮುಖ್ಯತ್ವೇ ಮೀ । ತೋ ಮೀ ಚಾಳವೇನಾ ಶಬ್ದಧರ್ಮೀ । ಶ್ರದ್ಧಾ ಪರಬ್ರಹ್ಮೀ ನಿರ್ಮಮತ್ವೇ ॥೩೩೯॥ ಸರ್ವ ತ್ಯಾಗಾಚೇ ತ್ಯಾಗಿತೇಪಣ । ಉದ್ಧವಾ ತುಜ ಮೀ ಸಾಂಗೇನ ಖೂಣ । ಸರ್ವ ಸಾಂಡಾವಾ ಅಭಿಮಾನ । ಹೇ ಮುಖ್ಯ ಲಕ್ಷಣ ತ್ಯಾಗಾಚೇ ॥೩೪೦॥

ಅವಿದ್ಯೆಯ ನಿರಸನೆಯನ್ನು ಮಾಡುವುದೇ ವೇದಾಂತ ಶ್ರವಣದ ಫಲವಾಗಿರುವುದು. ಒಮ್ಮೆ ಅವಿದ್ಯೆಯ ನಿರಸನೆಯು ಆಯಿತೆಂದರೆ ಸಾಕು, ಮುಂದೆ ಪುನಃ ಶ್ರವಣವನ್ನು ಮಾಡಬೇಕಾಗುವುದಿಲ್ಲ ॥೩೨೯॥ ಯಾವ ಪ್ರಕಾರವಾಗಿ ಒಮ್ಮೆ ನಾವು ನಮ್ಮ ಮೂಲ ಸ್ಥಾನಕ್ಕೆ ಬಂದು ಮುಟ್ಟಲು, ಪುನಃ ಹೋಗಿ ಬರುವ ಕಾರ್ಯದ ಅವಶ್ಯಕತೆಯು ಇರುವುದಿಲ್ಲ. ಅದರಂತೆ ಅವಿದ್ಯೆಯು ಹೋಯಿತೆಂದರೆ ಶ್ರವಣ ಮನನದ ಅವಶ್ಯಕತೆಯು ಇರುವುದಿಲ್ಲ ॥೩೩೦॥ ಈಗ ನೀನು ಹೀಗೆ ಹೇಳಬಹುದು, ಏನೆಂದರೆ ಈ ಯಾವ ಅವಿದ್ಯೆಯು ಏನು ಮಾಡಿದರೆ ನಷ್ಟವಾದೀತು? ಇದು ಬಹಳ ಕಠಿಣ ಕಾರ್ಯವಾಗಿರುವುದು. ಅದಕ್ಕಾಗಿಯೇ ಈ ಸಂಕಟವೂ ಕೂಡ ದೂರವಾಗಲು ಶಕ್ಯವಿದೆ ಎಂಬುವುದನ್ನು ಈಗ ನಾನು ನಿನಗೆ ಹೇಳುತ್ತೇನೆ ॥೩೩೧॥ ವೇದ, ಶಾಸ್ತ್ರ ಅಥವಾ ಕರ್ಮಗಳ ವಿಧಾನಗಳ ಸಾಧನೆಗಳು ಅವಿದ್ಯಾತ್ಮಕವಾಗಿರುವುವು. ಈ ಅವಿದ್ಯೆಯು ಪರಿಪೂರ್ಣವಾಗಿ ಇಲ್ಲದಾಗಿ ಹೋಗಬೇಕೆಂದರೆ ನನಗೆ ಶರಣಾಗಬೇಕು. ಇದನ್ನು ಲಕ್ಷದಲ್ಲಿಡು ॥೩೩೨॥

ಸ್ತ್ರೀ ಪುತ್ರ ಇತ್ಯಾದಿ ಸರ್ವ ವಿಷಯಗಳ ಧ್ಯಾನವನ್ನು ಬಿಟ್ಟುಕೊಟ್ಟು ಯೋಗ, ಯೋಗ್ಯತೆ, ಜಾಣತನ, ಕರ್ಮಠತನ ಮತ್ತು ಕರ್ಮದ ಅಭಿಮಾನ ಇವುಗಳನ್ನು ದೂರ ಮಾಡಿ ನನಗೊಬ್ಬನಿಗೇ ಶರಣು ಬರಬೇಕು ॥೩೩೩॥ ವೇದಾಧ್ಯಯನವನ್ನು ಬಿಟ್ಟು, ಶಾಸ್ತ್ರ ಶ್ರವಣವನ್ನು ಬಿಟ್ಟು, ಪ್ರವೃತ್ತಿ-ನಿವೃತ್ತಿ ಈ ಎಲ್ಲವನ್ನೂ ಬಿಟ್ಟುಕೊಟ್ಟು ನನಗೆ ಶರಣು ಬರಬೇಕು ॥೩೩೪॥ ಧನ ಮತ್ತು ಮಾನಸನ್ಮಾನಗಳ ಹವ್ಯಾಸವನ್ನು ಬಿಟ್ಟು, ವಿದ್ವತ್ತೆ ಮತ್ತು ಪ್ರತಿಷ್ಠೆ ಇವುಗಳನ್ನು ದೂರಿಟ್ಟು, ಅನೇಕ ಪ್ರಕಾರದ ನಿಷ್ಠೆಗಳನ್ನು ಬದಿಗೊತ್ತಿ ಸರ್ವಶ್ರೇಷ್ಠ ಪರಮಾತ್ಮನಾದ ನನಗೆ ಶರಣು ಬರಬೇಕು ॥೩೩೫॥ ವೈದಿಕ, ಲೌಕಿಕ, ತಾಂತ್ರಿಕ ಕರ್ಮಗಳನ್ನು ತ್ಯಜಿಸಿ, ಪುರಾಣೋಕ್ತ ಮತ್ತು ಪಂಚರಾತ್ರಾಗಮದ ಮಂತ್ರ - ತಂತ್ರ ಇತ್ಯಾದಿ ಸರ್ವವನ್ನೂ ಬಿಟ್ಟುಕೊಟ್ಟು ನನಗೆ ಶರಣು ಬಂದರೆ ಮಾತ್ರ, ನನ್ನ ಆತ್ಮಸುಖವು ನಿನಗೆ ಪ್ರಾಪ್ತವಾಗುವುದು ॥೩೩೬॥ ಕುಲದ ದೊಡ್ಡಸ್ಥಿಕೆಯನ್ನು ಬಿಟ್ಟುಬಿಡು, ಜಾತಿಯ ಅಭಿಮಾನವನ್ನು ಹಿಡಿಯಬೇಡ. ಆಶ್ರಮದ ಗರಿಮೆಯನ್ನು ತ್ಯಜಿಸಿ ನನಗೆ ಶರಣಾಗಬೇಕು ॥೩೩೭॥ ಜ್ಞಾನ, ಧ್ಯಾನವನ್ನು ಬಿಟ್ಟುಕೊಟ್ಟು ವಿಧಿನಿಷೇಧಗಳ ತ್ಯಾಗ ಮಾಡಿ, ದೇಹದ ಅಭಿಮಾನವನ್ನು ತ್ಯಜಿಸಿ, ನನಗೊಬ್ಬನಿಗೇ ಶರಣು ಬರಬೇಕು ॥೩೩೮॥ ನನ್ನ ನಾಮವು ''ಅಂತರ್ಯಾಮಿ'' ಎಂದಿದೆ. ಕಾರಣ ನಾನು ಪ್ರಾಮುಖ್ಯದಿಂದ ಹೃದಯದಲ್ಲಿನ ಭಾವವನ್ನು ತಿಳಿಯುವವನಾಗಿದ್ದೇನೆ. ನಾನು ನನ್ನ ಸ್ವರೂಪದಿಂದ ಎಂದಿಗೂ ಚ್ಯುತನಾಗುವುದಿಲ್ಲ. ಸರ್ವ ಪ್ರಕಾರದ ಮಮತ್ವವನ್ನು ಬಿಟ್ಟು ಪರಬ್ರಹ್ಮನಲ್ಲಿ ದೃಢವಾದ ಶ್ರದ್ಧೆಯನ್ನು ಇಡಬೇಕು ॥೩೩೯॥ ಹೇ ಉದ್ಧವಾ, ಈಗ ಸರ್ವ ತ್ಯಾಗಗಳಲ್ಲಿ ನಿಜತ್ಯಾಗವು ಹೇಗಿರುವುದೆಂಬುದನ್ನು, ಅದರ ಲಕ್ಷಣವನ್ನು ನಾನು ನಿನಗೆ ಹೇಳುವೆನು. ಸರ್ವ ಪ್ರಕಾರದ ಅಭಿಮಾನವನ್ನು ತ್ಯಜಿಸುವುದೇ ತ್ಯಾಗದ ಮುಖ್ಯ ಲಕ್ಷಣವಾಗಿರುವುದು ॥೩೪೦॥

ಸರ್ವಹೀ ಸಾಂಡೋನಿ ಅಭಿಮಾನ । ಮಜ ರಿಘಾಲಿಯಾ ಶರಣ । ತುಜ ಕೈಚೇ ಜನ್ಮ ಮರಣ । ಮಾಝೇ ಪ್ರತಾಪೇ ಜಾಣ ತರಶೀಲ ॥೬೪೧॥ ಶರಣ ರಿಘಾವಯಾಸಾಠೀ । ಕಾಯ ರಿಘಾವೇ ಗಿರಿಕಪಾಟೀ । ಕಿಂವಾ ಸೇವಾವೀ ದರಕುಟೀ । ಅಥವಾ ದಿಕ್ಪಟೀ ಭಂವಾವೇ ॥೬೪೨॥ ತುಜ ವಸ್ತೀಸೀ ನಾಹೀ ಗಾವೋ । ನಿತ್ಯ ನೇಮಸ್ತ ಕೋಣ ಠಾವೋ । ಶರಣ ರಿಘಾವಯಾ ಕೋಠೇ ಧಾಂವೋ । ಐಸಾ ಭಾವೋ ಕಲ್ಪಿಸೀ ॥೬೪೩॥ ಮ್ಹಣಸೀ ಶರಣ ರಿಘಾವೇ ಕವಣೇ ಠಾಯೀ । ತರೀ ಮೀ ಅಸೇ ತುಝ್ಯಾ ಹೃದಯೀ । ತ್ಯಾ ಹೃದಯಸ್ಥಾ ನಾಸೀ ಲವಲಾಹೀ । ಶರಣ ಪಾಹೀ ರಿಘಾವೇ ॥೬೪೪॥ ಸರ್ವಭಾವೇ ಸರ್ವಸ್ವೇಸೀ । ಮಜ ಹೃದಯಸ್ಥಾ ಶರಣ ಯೇಸೀ । ತೈ ಮಾಝೀ ಸರ್ವಗತತಾ ಪಾವಸೀ । ಸರ್ವಭೂತನಿವಾಸೀ ಹೃದಯಸ್ಥೂ ॥೬೪೫॥ ತಿಳಭರೀ ರಾಖೋನಿ ಅಭಿಮಾನ । ಜರಿ ಮಜ ರಿಘಶೀ ಶರಣ । ತರೀ ಮಾಝೀ ಪ್ರಾಪ್ತೀ ನವ್ಹೇ ಜಾಣ । ಅಭಿಮಾನ ವಿಘ್ನ ಪ್ರಾಪ್ತೀಸೀ ॥೬೪೬॥ ಶ್ವಾನೇ ಸ್ಪರ್ಶಿಲೇ ಪಕ್ವಾನ । ತೇ ಜೇವೀ ನಾತಳತೀ ಬ್ರಾಹ್ಮಣ । ತೇವೀ ಜೇವೀ ಅಸತಾ ಅಭಿಮಾನ । ಸಾಧಕಾಸೀ ಮೀ ಜಾಣ ನಾತಳೇ ॥೬೪೭॥ ರಜಸ್ವಲೇಚೀ ಐಕೋನಿ ವಾಣೀ । ದೂರ ಪಳಿಜೇ ಪುರಶ್ಚರಣೀ । ತೇವೀ ಅಹಂಕಾರಾಚ್ಯಾ ಸಾಧನೀ । ಥಿತಾ ಜವಳುನೀ ಮೀ ಜಾಯೇ ॥೬೪೮॥ ರಜಕವಿಟಾಳಾಚೇ ಜೀವನ । ಜೇವೀ ನಾತಳತೀ ಸಜ್ಜನ । ತೇವೀ ಹೃದಯೀ ಅಸತಾ ಅಭಿಮಾನ । ಉದ್ಧವಾ ಮೀ ಜಾಣ ನ ಭೇಟೇ ॥೬೪೯॥ ಡೋಳಾ ಹರಳೂ ನ ವಿರೇ । ಘಾಯೀ ಕೋತ ನ ಜಿರೇ । ಟಾಂಕೀ ಮುಕ್ತಾಫಳೀ ನ ಶಿರೇ । ಖಿರೀಮಾಜೀ ನ ಸರೇ ಸರಾಂಟಾ ॥೬೫೦॥ ತೇವೀ ಮಜಮಾಜೀ ಅಭಿಮಾನ। ಉದ್ಧವಾ ನ ರಿಘೇ ಗಾ ಜಾಣ। ಹೇ ತ್ಯಾಗತಾತ್ಪರ್ಯಾಚೀ ಖೂಣ । ತುಜ ಮ್ಯಾ ಸಂಪೂರ್ಣ ಸಾಂಗೀತಲೀ ॥೬೫೧॥ ಪತ್ನೀ ವಿಚರತಾ ಪರಪುರುಷೀ । ದೇಖೋನಿ ನಿಜಪತೀ ತ್ಯಾಗೀ ತಿಸೀ । ತೇವೀ ಅಭಿಮಾನರತ ಭಕ್ತಾಂಸೀ । ಮೀ ಹೃಷೀಕೇಶೀ ನಾತಳೇ ॥೬೫೨॥ ಯಾಲಾಗೀ ಸಾಂಡೂನಿ ಅಭಿಮಾನ । ಮಜ ಹೃದಯಸ್ಥಾ ರಿಘಾಲಿಯಾ ಶರಣ। ತುಜ ಮೀ ಉದ್ಧರೀನ ಜಾಣ । ದೇವಕೀಚೀ ಆಣ ಉದ್ಧವಾ ॥೬೫೩॥ ಮ್ಹಣಸೀ ತುಜ ದೋಘೀ ಮಾತಾ । ಕೋಣತೀಚೀ ಆಣ ಮಾನೂ ಆತಾ । ಮಜ ತುಝೀಚ ಆಣ ತತ್ತ್ವತಾ । ತುಜ ನಿರ್ಭಯತಾ ಮಾಝೇನಿ ॥೬೫೪॥

ಸರ್ವ ಪ್ರಕಾರದ ಅಭಿಮಾನವನ್ನು ಬಿಟ್ಟುಕೊಟ್ಟು ನನಗೆ ಶರಣು ಬಂದರೆ, ಆಗ ನಿನಗೆ ಜನ್ಮ - ಮರಣವು ಎಲ್ಲಿಯದು? ನೀನು ನನ್ನ ಪ್ರಭಾವದಿಂದ ಸಹಜವಾಗಿಯೇ ಉದ್ಧಾರನಾಗುವೆ ॥೬೪೧॥ ಶರಣು ಬರುವುದಕ್ಕಾಗಿ ನಿನಗೆ ಪರ್ವತದ ಗುಹೆಯಲ್ಲಿ ಹೋಗಿ ಕುಳಿತುಕೊಳ್ಳಬೇಕಾಗಿಲ್ಲ. ಗುಡ್ಡಗಳ ನಡುವಿನ ಪ್ರದೇಶ ಕಂದರದಲ್ಲಿ ಕುಟೀರ ಕಟ್ಟಿಕೊಂಡು ಇರಬೇಕಾಗಿಲ್ಲ. ಅಥವಾ ದಶದಿಶೆಗಳಲ್ಲಿ ಸುತ್ತುತ್ತ ನಡೆಯಬೇಕಾಗಿಲ್ಲ ॥೬೪೨॥ ನಿನಗೆ ಇರಲು ನಿಶ್ಚಿತವಾದ ಸ್ಥಳವಿಲ್ಲ, ಠರಾಯಿಸಿದ ಊರು ಇಲ್ಲ. ಅಂದಮೇಲೆ ಎಲ್ಲಿ ಹೋಗಬೇಕು? ಹೀಗೆ ನೀನು ನಿನ್ನ ಮನದಲ್ಲಿ ಕಲ್ಪನೆಯನ್ನು ತರಬಹುದು ॥೬೪೩॥ ಪುನಃ ನೀನು ಹೀಗೆಯೂ ಹೇಳಬಹುದು. ನಿನಗೆ ಯಾವ ಸ್ಥಳದಲ್ಲಿ ಶರಣು ಬರಬೇಕು? ಅದಕ್ಕಾಗಿ ಕೇಳು, ನಾನು ನಿನ್ನ ಹೃದಯದಲ್ಲಿಯೇ ಇರುವೆನು. ಹೃದಯದಲ್ಲಿರುವ ನನಗೆ ತ್ವರಿತವಾಗಿ ಶರಣು ಹೋಗಬೇಕು ॥೬೪೪॥ ಸರ್ವಭಾವದಿಂದ ಮತ್ತು ಸರ್ವಸ್ವದಿಂದ ಹೃದಯಸ್ಥನಾದ ನನಗೆ ಶರಣು ಬರುವುದೊಂದೇ ತಡ, ಕೂಡಲೇ ಸರ್ವ ಪ್ರಾಣಿಮಾತ್ರರಲ್ಲಿ ಮತ್ತು ಸರ್ವರ ಹೃದಯಲ್ಲಿರುವ ನನ್ನಂತೆ, ಈ ಯಾವ ನನ್ನ ವ್ಯಾಪಕತ್ವವು ನಿನಗೂ ಕೂಡ ಸಹಜವಾಗಿಯೇ ಪ್ರಾಪ್ತವಾಗುವುದು ॥೬೪೫॥ ಆದರೆ ಮನದಲ್ಲಿ ತಿಲಮಾತ್ರ ಅಭಿಮಾನವನ್ನು ಧರಿಸಿ ನೀನು ನನಗೆ ಶರಣು ಬಂದರೆ ನನ್ನ ಪ್ರಾಪ್ತಿಯು ಆಗಲು ಸಾಧ್ಯವಿಲ್ಲ. ಕಾರಣವೇನಂದರೆ ನನ್ನ ಪ್ರಾಪ್ತಿಗಾಗಿ ಈ ಯಾವ ಅಭಿಮಾನವು ಬಹು ದೊಡ್ಡ ವಿಘ್ನವಾಗಿರುವುದು ॥೬೪೬॥ ನಾಯಿ ಮುಟ್ಟಿದ ಪಕ್ವಾನ್ನವನ್ನು ಬ್ರಾಹ್ಮಣರು ಸ್ಪರ್ಶ ಸಹ ಮಾಡಲಾರರು. ಅದರಂತೆ ಮನದಲ್ಲಿ ಅಭಿಮಾನವಿದ್ದರೆ ನಾನು ಆ ಸಾಧಕನಿಗೆ ಸ್ಪರ್ಶವನ್ನು ಮಾಡಲಾರೆನು ॥೬೪೭॥ ರಜಸ್ವಲೆಯಾದ ಸ್ತ್ರೀಯಳ ಮಾತಿನ ಧ್ವನಿಯನ್ನು ಕೇಳುತ್ತಲೇ ಪುರಶ್ಚರಣ ಮಾಡುವವನು ದೂರ ಓಡಿಹೋಗುವನು. ಅದರಂತೆ ಅಹಂಕಾರದ ಸಾಧನೆಯು ಸಮೀಪವಿರಲು, ಸಮೀಪದಲ್ಲಿರುವ ನಾನು ದೂರಾಗುವೆನು ॥೬೪೮॥ ಹೇ ಉದ್ಧವನೇ, ಅಗಸನು ತೊಳೆದ ಬಟ್ಟೆಯ ಹೊಲಸು ನೀರನ್ನು ಸಜ್ಜನನು ಸ್ಪರ್ಶ ಮಾಡುವುದಿಲ್ಲ. ಅದರಂತೆ ಹೃದಯದಲ್ಲಿ ಅಹಂಕಾರವನ್ನು ಇಟ್ಟುಕೊಂಡವನಿಗೆ ನಾನು ಎಂದಿಗೂ ಭೇಟಿಯಾಗುವುದಿಲ್ಲ ॥೬೪೯॥ ಕಣ್ಣಿನಲ್ಲಿ ಬಿದ್ದ ಹರಳು ಅಲ್ಲಿಯೇ ಕರಗುವುದಿಲ್ಲ. ಘಾಯದಲ್ಲಿ ನಟ್ಟಿರುವ ಶಸ್ತ್ರವು ಅದರಲ್ಲಿಯೇ ಜೀರ್ಣಿಸುವುದಿಲ್ಲ. ಮುತ್ತುಗಳಲ್ಲಿ ಟಂಕು ಹಾಕಲು ಬರುವುದಿಲ್ಲ. ಖೀರಿನಲ್ಲಿ ಓತಿಕಾಟವು ನಡೆಯುವುದಿಲ್ಲ ॥೬೫೦॥ ಅದರಂತೆಯೇ ಹೇ ಉದ್ಧವಾ, ನನ್ನಲ್ಲಿ ಅಭಿಮಾನಕ್ಕೆ ಪ್ರವೇಶವಿರುವುದಿಲ್ಲ ಇದನ್ನು ಲಕ್ಷದಲ್ಲಿಡಬೇಕು. ಈ ಯಾವ ತ್ಯಾಗದಲ್ಲಿನ ತಾತ್ಪರ್ಯದ ಚಿನ್ಹೆಯನ್ನು ನಾನು ನಿನಗೆ ಸ್ಪಷ್ಟವಾಗಿ ಹೇಳಿರುವೆನು ॥೬೫೧॥ ತನ್ನ ಪತ್ನಿಯು ಪರಪುರುಷನ ಸಹವಾಸದಲ್ಲಿರುವುದನ್ನು ಕಾಣಲು ಆಗ ಆಕೆಯ ಪತಿಯು ಆಕೆಯನ್ನು ತ್ಯಜಿಸಿಬಿಡುವನು. ಅದರಂತೆ ಅಭಿಮಾನದಲ್ಲಿ ಸಿಲುಕಿಕೊಂಡಿರುವ ಭಕ್ತರನ್ನು ನಾನು ಸ್ವೀಕರಿಸುವುದಿಲ್ಲ ॥೬೫೨॥ ಅದಕ್ಕಾಗಿಯೇ ಅಭಿಮಾನವನ್ನು ಬಿಟ್ಟು ಹೃದಯಸ್ಥನಾದ ನನಗೆ ನೀನು ಶರಣು ಬಂದರೆ ಮಾತ್ರ, ಹೇ ಉದ್ಧವಾ, ದೇವಕಿಯ ಮೇಲೆ ಆಣೆ ಮಾಡಿ ಹೇಳುವೆ, ನಾನು ನಿನಗೆ ನಿಶ್ಚಯಪೂರ್ವಕವಾಗಿ ಉದ್ಧರಿಸುವೆನು ॥೬೫೩॥ ನಿನಗೆ ಇಬ್ಬರು ಮಾತೆಯವರು. ಹಾಗಾದರೆ ಯಾರ ಆಣೆಯು ನಿಜವೆಂದು ತಿಳಿಯಬೇಕು? ಎಂದು ನೀನು ಹೀಗೆ ಕದಾಚಿತ್ ಹೇಳಬಹುದು. ಅದಕ್ಕಾಗಿ ನಿನ್ನ ಮೇಲೆಯೇ ಆಣೆ ಮಾಡಿ ಹೇಳುವೆನು, ನಾನು ನಿನಗೆ ಪರಿಪೂರ್ಣವಾಗಿ ನಿರ್ಭಯನನ್ನಾಗಿ ಮಾಡುವೆನು ॥೬೫೪॥

ತೂ ಬೋಲೀ ನಾತುಡಸೀ ಕಾಂಹೀ । ತುಜ ಸರ್ವಥಾ ಕ್ರಿಯಾ ನಾಹೀ । ತುಝೀ ಆಣಭಾಕ ಮಾನಾವೀ ಕಾಯೀ । ಐಸೇ ಜರೀ ಕಾಂಹೀ ಕಲ್ಪಿಸೀ ।।೭೫೫।। ಪಾತೇಜೂನಿ ತುಝಿಯಾ ಬೋಲಾಸೀ । ಥಿತೇ ಸಾಂಡಾವೇ ಸ್ವಧರ್ಮಾಸೀ । ಲಟಕೇ ಜಾಹಲಿಯಾ ಆಣೇಸೀ । ಕೋಣೇ ಸಮರ್ಥಾಸೀ ಭಾಂಡಾವೇ ।।೭೫೬।। ಉದ್ಧವಾ ಐಸೇ ನ ಮ್ಹಣ । ಮ್ಯಾಜೇ ವಾಹಿಲೀ ತುಝಿ ಆಣ । ತೇಪರಮಾತ್ಮ್ಯಾವರೀ ಪ್ರಮಾಣ । ಸತ್ಯ ಜಾಣ ಸರ್ವಥಾ ।।೭೫೭।। ಉದ್ಧವಾ ತೂ ಆತ್ಮಾ ಪರಿಪೂರ್ಣ । ಮಜ ತುಜ ನಾಹೀ ಮೀತೂಪಣ । ತ್ಯಾ ತುಝೀ ಮ್ಯಾ ವಾಹಿಲೀ ಆಣ । ಪರಮ ಪ್ರಮಾಣ ಪರಮಾತ್ಮತಾ ।।೭೫೮।। ಅಸತಾ ಪ್ರತ್ಯಕ್ಷ ಪ್ರಮಾಣ । ಕಾ ಲಾಗೇ ಭಾಕ ಆಣ । ಸರ್ವಭಾವೇ ಮಜ ಆಲಿಯಾ ಶರಣ । ಆತಾಂಚಿ ಜಾಣ ತರಶೀಲ ।।೭೫೯।।ಮಜ ಶರಣ ರಿಘಾಲ್ಯಾ ವಾಡೇಕೋಡೇ । ಕಳಿಕಾಳ ತುಝಿಯಾ ಪಾಯಾ ಪಡೇ । ಕಾಯಸೇ ಭವಭಯ ಬಾಪುಡೇ । ಕೋಣ ತುಜಕಡೇ ಪಾಹೇಲ ।।೭೬೦।। ಶರಣ ರಿಘತಾಂಚಿ ತತ್ಕಾಳ । ತೂ ಲಾಹಾಸೀ ಮಾಝೇ ಬಳ । ತೇವ್ಹಾ ಭವಭಯ ಪಳೇ ಸಕಳ । ತುಜ ಕಳಿಕಾಳ ಕಾಂಪತೀ ।।೭೬೧।। ತೃಣೇ ಪೇಟಲಿಯಾ ಅಗ್ನಿ ಸ್ಫುಲ್ಲಿಂಗ । ತೋ ಜಾಳೀ ನಾನಾ ವನಾಂಚೇ ದಾಂಗ । ತೈಸೇ ಶರಣ ಆಲಿಯಾ ಅವ್ಯಂಗ । ಸಂಸಾರದಾಂಗ ತೂ ಜಾಳಿಸೀ ।।೭೬೨।। ಶರಣ ಯಾವೇ ಹೃದಯಸ್ಥಾಸೀ । ತೋ ಹೃದಯಸ್ಥ ನ ಕಳೇ ಆಮ್ಹಾಸೀ । ಉದ್ಧವಾ ತೂ ಐಸೇ ಮ್ಹಣಸೀ । ತರೀ ಐಕ ತ್ಯಾ ಸ್ವರೂಪಾಸೀ ಸಾಂಗೇನ ।।೭೬೩।। ಸಾಂಡೂನಿ ರೂಪನಾಮ ಅಭಿಮಾನ । ಸ್ಫುರೇ ಜೇ ಕಾ ಉದ್ಧವಪಣ । ತೇ ಮಜ ಹೃದಯಸ್ಥಾಚೇ ರೂಪ ಜಾಣ । ತ್ಯಾಸೀ ತುವಾ ಶರಣ ರಿಘಾವೇ ।।೭೬೪।। ನಾಮ-ರೂಪ-ಗುಣವಾರ್ತಾ । ಹೇ ಮಾಯಾ ಜಾಣ ತತ್ತ್ವತಾ । ತೇ ಸಾಂಡೂನಿ ಜೇ ಸ್ಫುರೇ ಸತ್ತಾ । ತೇ ಮಜ ಹೃದಯಸ್ಥಾಚೇ ರೂಪ ।।೭೬೫।। ಐಸೇನಿ ಹೃದಯಸ್ಥ ಜೋಡಲ್ಯಾ ಪಹಾ ಹೋ । ತೇವ್ಹಾ ಸರ್ವ ಭೂತೀ ಪಾಹತಾ ದೇವೋ । ತೇಥ ವೇಗಳಾ ಉರಾವಯಾ ಉದ್ಧವೋ । ರಿತಾ ಠಾವೋ ನ ದಿಸೇಚಿ ।।೭೬೬।। ತೇವ್ಹಾ ಸರ್ವ ಭೂತೀ ಮೀ ಏಕೂ । ನಿಶ್ಚಯೇ ಜಾಣ ನಿಷ್ಟಂಕೂ । ದೇಖತಾಹೀ ಅನೇಕ ಲೋಕೂ । ತ್ಯಾಂಸೀ ಮೀ ಏಕೂ ಏಕಲಾ ।।೭೬೭।।

ಆದರೆ ನೀನು ಶಬ್ದಗಳಲ್ಲಿ ಎಂದೂ ಸಿಲುಕಿಕೊಳ್ಳುವುದಿಲ್ಲ ಮತ್ತು ಕ್ರಿಯೆ ಎಂಬುವುದನ್ನು ನೀನು ಏನನ್ನೂ ಮಾಡುವುದಿಲ್ಲ. ಅಂದಮೇಲೆ ನಿನ್ನ ಆಣೆ - ಶಪಥ ನಿಜವೆಂದು ಹೇಗೆ ಮನ್ನಿಸಬೇಕು ? ಹೀಗೆ ಒಂದು ವೇಳೆ ನಿನ್ನ ಮನದಲ್ಲಿ ವಿಕಲ್ಪವು ಹುಟ್ಟಬಹುದು ।।೭೫೫।। ಅಥವಾ ನಿನ್ನ ಶಬ್ದಗಳಲ್ಲಿ ವಿಶ್ವಾಸವನ್ನಿಟ್ಟು ನಮ್ಮ ಸ್ವಧರ್ಮವನ್ನು ಬಿಟ್ಟುಕೊಡಬೇಕು. ಆಗ ನಿನ್ನ ಶಪಥವು ಸುಳ್ಳಾಗಲು ನಿನ್ನಂತಹ ಸಮರ್ಥನಲ್ಲಿ ಯಾರು ಜಗಳವಾಡುತ್ತ ಕುಳಿತುಕೊಳ್ಳಬೇಕು? ಹೀಗೂ ನೀನು ಹೇಳಬಹುದು.ಅದಕ್ಕಾಗಿ ಈಗ ಕೇಳು ।।೭೫೬।। ಹೇ ಉದ್ಧವನೇ, ನೀನು ಹೀಗೆ ತಿಳಿಯಬೇಡ. ನಾನು ನಿನ್ನ ಮೇಲೆ ಆಣೆ ಮಾಡಿರುವುದು ಅದು ಪರಮಾತ್ಮನದೇ ಆಣೆಯಾಗಿರುವುದು. ಇದು ಪರಿಪೂರ್ಣವಾಗಿ ಸತ್ಯವಾಗಿರುವುದು, ಹೀಗೆ ತಿಳಿದುಕೋ ।।೭೫೭।। ಹೇ ಉದ್ಧವನೇ, ನೀನು ಪರಿಪೂರ್ಣನಾಗಿ ನನ್ನ ಆತ್ಮವೇ ಆಗಿರುವೆ. ನನ್ನಲ್ಲಿ ಮತ್ತು ನಿನ್ನಲ್ಲಿ ನಾನು ನೀನೆಂಬುವ ಯಾವ ಭೇದವೂ ಇರುವುದಿಲ್ಲ. ಅದಕ್ಕಾಗಿಯೇ ನಾನು ನಿನ್ನ ಮೇಲೆ ಆಣೆ ಮಾಡಿರುವೆನು. ಇದಕ್ಕೆ ಪರಮಾತ್ಮ ತತ್ವವೇ ದೊಡ್ಡ ಸಾಕ್ಷಿದಾರನಾಗಿರುವುದು ।।೭೫೮।। ನಾನು ಹೇಳಿರುವ ಸಿದ್ಧಾಂತಗಳಿಗೆ ಪ್ರತ್ಯಕ್ಷವಾಗಿ ವಸ್ತುಸ್ಥಿತಿಗಳ ಪ್ರಮಾಣವೇ ಇರಲು ಶಪಥವಾದರೂ ಏಕೆ ಮಾಡಬೇಕಾಗಿದೆ? ಸರ್ವಭಾವದಿಂದ ನೀನು ನನಗೆ ಶರಣು ಬಂದರೆ ಸಾಕು, ಈಗಲೇ ತ್ವರಿತವಾಗಿ ಉದ್ಧಾರನಾಗುವೆ ।।೭೫೯।। ಅರೇ, ನೀನು ಪ್ರೇಮದಿಂದ ನನಗೆ ಶರಣು ಬಂದೆ ಎಂದರೆ ಕಲಿಕಾಲನು ನಿನ್ನ ಕಾಲಿಗೆ ಬೀಳುವನು. ಅಂದಮೇಲೆ ಪಾಪ, ಸಂಸಾರದ ಭಯವಾದರೂ ಹೇಗೆ ಉಳಿದೀತು? ನಿನ್ನತ್ತ ನೋಡುವ ಧೈರ್ಯವೂ ಯಾರಿಂದಲೂ ಆಗುವುದಿಲ್ಲ ।।೭೬೦।। ನೀನು ನನಗೆ ಶರಣು ಬರುವುದೊಂದೇ ತಡ, ಕೂಡಲೇ ನಿನಗೆ ನನ್ನ ಸಾಮರ್ಥ್ಯವು ಪ್ರಾಪ್ತವಾಗುವುದು ಮತ್ತು ಸಂಸಾರದಲ್ಲಿನ ಸರ್ವ ಪ್ರಕಾರದ ಭಯವು ಇಲ್ಲದಾಗುವುದು. ಹಾಗೂ ಕಲಿಕಾಲನು ನಿನ್ನ ಮುಂದೆ ನಡಗಲಾರಂಭಿಸುವನು ।।೭೬೧।। ಹುಲ್ಲಿನಲ್ಲಿ ಚಿಕ್ಕದಾದ ಅಗ್ನಿ ಕಿಡಿಯು ಬಿದ್ದು ಅದು ಪ್ರಜ್ವಲಿಸಲು ಅರಣ್ಯದಲ್ಲಿನ ಅನೇಕ ಗಿಡಗಂಟೆಗಳನ್ನು ಸುಟ್ಟು ಹಾಕುವುದು. ಅದರಂತೆ ನೀನು ಶುದ್ಧವಾದ ಅಂತಃಕರಣದಿಂದ ನನಗೆ ಶರಣು ಬಂದಿದ್ದಾದರೆ ಸಂಸಾರದಲ್ಲಿನ ದುಃಖದ ಅರಣ್ಯವನ್ನು ನೀನು ಸಹಜವಾಗಿಯೇ ಸುಟ್ಟು ಹಾಕುವೆ ।।೭೬೨।। ಹೃದಯಸ್ಥ ಪರಮಾತ್ಮನಿಗೆ ಶರಣಾಗಬೇಕೆಂಬುವುದು ನಿಜವಾದರೆ, ಆ ಹೃದಯಸ್ಥ ಪರಮಾತ್ಮನು ನಮಗೆ ತಿಳಿಯುವುದಿಲ್ಲ. ಹೀಗೆ ನೀನು ಹೇಳಿದರೆ, ಹೇ ಉದ್ಧವನೇ, ಅದರ ಸ್ವರೂಪವನ್ನೂ ಸಹ ಈಗ ನಿನಗೆ ಹೇಳುವೆನು, ಅದನ್ನು ಕೇಳು ।।೭೬೩।। ನಾಮ, ರೂಪ ಮತ್ತು ಅಭಿಮಾನವನ್ನು ತ್ಯಜಿಸಿದ ನಂತರ ಯಾವ ಉದ್ಧವನೆಂಬುವುದು ಸ್ಫುರಣವಾಗುವುದೋ, ಅದೇ ಹೃದಯಸ್ಥನ ರೂಪವಾಗಿರುವುದೆಂದು ತಿಳಿ. ಹೀಗಿರುವ ಆತನನ್ನೇ ನೀನು ಶರಣು ಹೋಗು ।।೭೬೪।। ನಾಮ, ರೂಪ ಅಥವಾ ಗುಣ ಇವುಗಳ ಯಾವ ಸಂಬಂಧವು ನಿಜವಾಗಿಯೂ ಇದೇ ಮಾಯೆಯಾಗಿರುವುದು. ಇದನ್ನು ಬಿಟ್ಟುಕೊಟ್ಟಾಗ ಆಗುವ ಸ್ಫುರಣರೂಪವು ಅದೇ ನನ್ನ ಹೃದಯಸ್ಥದ ಸ್ವರೂಪವೆಂದು ತಿಳಿದುಕೋ ।।೭೬೫।। ಈ ರೀತಿಯಲ್ಲಿ ಹೃದಯಸ್ಥನ ಪ್ರಾಪ್ತಿಯಾದಾಗ ಆ ಸಮಯಕ್ಕೆ ಸರ್ವ ಪ್ರಾಣಿಮಾತ್ರರಲ್ಲಿ ನೋಡುತ್ತಿರಲು ಆಗ ದೇವರೇ ಕಾಣಿಸುವನು. ಅಲ್ಲಿ ಉದ್ಧವನಾಗಿ ಬೇರೆ ಇರಲು ಖಾಲೀ ಸ್ಥಳವೇ ಉಳಿಯುವುದಿಲ್ಲ ।।೭೬೬।। ಆ ಸಮಯದಲ್ಲಿ ಸರ್ವ ಪ್ರಾಣಿ ಮಾತ್ರರಲ್ಲಿ ನಾನೊಬ್ಬನೇ ಸರ್ವತ್ರವೂ ತುಂಬಿರುವುದಾಗಿ ತೋರುತ್ತಿರುವುದು. ಇದನ್ನು ನೀನು ನಿಶ್ಚಯಪೂರ್ವಕವಾಗಿ ಲಕ್ಷದಲ್ಲಿಡು. ನೇತ್ರಗಳಿಂದ ಅನೇಕ ಲೋಕಗಳನ್ನು ನೋಡುತ್ತಿದ್ದರೂ ಕೂಡ ಆ ಎಲ್ಲದರಲ್ಲಿಯೂ ನಾನೊಬ್ಬನೇ ಕಾಣುತ್ತಿರುವೆನು ।।೭೬೭।।

ಐಸಾ ತೂ ಮಿಳೋನಿ ಹೃದಯಸ್ಥಾಸೀ । ಮೀ ಹೋಊನಿ ಮಜ ಪಾವಸೀ । ಮಾಝೀ ಪ್ರಾಪ್ತೀ ಉದ್ಧವಾ ಐಸೀ । ನಿರ್ಭಯೇಸೀ ನಿಶ್ಚಳ ।।೨೧೮।। ಐಶೀ ಸಾಂಗೋನಿ ಗುಹ್ಯಗೋಷ್ಟೀ । ದೇವೋ ಉದ್ಧವಾಚೀ ಪಾಠೀ ಥಾಪಟೀ। ಯೇರೇ ಚರಣೀ ಘಾತಲೀ ಮಿಠೀ। ಉಠವಿತಾ ನುಠೀ ಸರ್ವಥಾ ।।೨೧೯।। ತುವಾ ಜೇ ಸಾಂಗಿತಲೇ ನಿಜಗುಜ। ತೇ ಮಜ ಮಾನಲೇ ಗಾ ಸಹಜ । ಬೋಲಾ ಏಕಾಚಾ ಸಂಶಯ ಮಜ । ತೋ ಮೀ ತುಜ ಪುಸೇನ ।।೨೨೦।।

ಉದ್ಧವ ಉವಾಚ:-

ಸಂಶಯ: ಶೃಣ್ವತೋ ವಾಚಂ ತವ ಯೋಗೇಶ್ವರೇಶ್ವರ ।
ನ ನಿವರ್ತತ ಆತ್ಮಸ್ಥೋ ಯೇನ ಭ್ರಾಮ್ಯತಿ ಮೇ ಮನ: ।।೧೬।।

ಅರ್ಥ:- ಉದ್ಧವನು ನುಡಿದನು; ಸನಕಾದಿ ಯೋಗೇಶ್ವರರ ಈಶ್ವರನೇ, ನಾನು ನಿನ್ನ ಉಪದೇಶವನ್ನು ಕೇಳುತ್ತಿದ್ದೇನೆ. ಆದರೆ ನನ್ನ ಮನದಲ್ಲಿನ ಸಂಶಯವು ನಾಶವಾಗಿಲ್ಲ. ನನಗೆ ಸ್ವಧರ್ಮದ ಪಾಲನೆಯನ್ನು ಮಾಡಬೇಕೋ ಅಥವಾ ಎಲ್ಲವನ್ನೂ ಬಿಟ್ಟು ನಿನಗೆ ಶರಣು ಬರಬೇಕೋ, ಈ ಎರಡು ಸ್ಥಿತಿಗಳು ನನ್ನ ಮನದಲ್ಲಿ ಮೂಡಿರುವುವು. ಕೃಪೆ ಮಾಡಿ ನೀವೇ ನನಗೆ ತಿಳಿಸಿ ಹೇಳಿರಿ.

ವೇದಶಾಸ್ತ್ರಾಂಚೇ ಮಥಿತ ಸಾರ । ಯೋಗದುರ್ಗಿಚೇ ಭಾಂಡಾರ । ಪಿಕಲ್ಯಾ ಸುಖಾಚಾ ಸುಖಸಾಗರ। ಮಜ ಸಾಚಾರ ಉಪದೇಶಿಲಾ ।।೨೨೧।। ತೂ ಯೋಗಿಯಾಂಚಾ ಯೋಗೇಶ್ವರ । ಸಕಳ ಜಗಾಚಾ ಈಶ್ವರ । ತುಝೀ ಸತ್ಯ ಗಾ ಉತ್ತರ । ಸಂಶಯಕರ ಮಜ ವಾಟೇ ।।೨೨೨।। ತುವಾಂಚ ಸಾಂಗಿತಲೇ ಸಾಕ್ಷೇಪ ಜಾಣ । ಕರಾವೇ ಗಾ ಸ್ವಧರ್ಮಾರಚರಣ । ತೇ ಸತ್ಯ ಮಾನೂನಿ ವಚನ । ಸರ್ವಸ್ವೇ ಜಾಣ ವಿಶ್ವಾಸಲೋ ।।೨೨೩।। ಕರಾವೇ ಜೇ ಸ್ವಧರ್ಮಾಚರಣ । ತೇಚ ಮ್ಹಣಶೀ ಮಾಝೇ ಭಜನ । ಶೇಖೀ ತೇಹೀ ಆತಾ ಸಾಂಡೂನ । ರಿಘಾವೇ ಶರಣ ಮ್ಹಣತೋಸೀ ।।೨೨೪।। ತರೀ ಆತ್ಮಾ ಕರ್ತಾ ಕೀ ಅಕರ್ತಾ । ಹೇಚಿ ನ ಕಳೇ ತತ್ತ್ವತಾ । ಕರ್ಮ ಕರಾವೇ ಕೀ ಸರ್ವಥಾ । ಆಮ್ಹೀ ಆತಾ ಸಾಂಡಾವೇ ।।೨೨೫।। ತುಝೀವಿಷಮ ಉಪದೇಶವ್ಯುತ್ಪತ್ತೀ । ಸಾಂಗತಾ ಆಮ್ಹಾ ಅಬಳಾಂಪ್ರತೀ । ಥೋರ ಸಂದೇಹ ವಾಢತ ಚಿತ್ತೀ । ಕಾಯ ಶ್ರೀಪತೀ ಕರಾವೇ ।।೨೨೬।। ಜರೀ ಆತ್ಮಾ ಝಾಲಾ ಅಕರ್ತಾ । ತರೀ ಕರ್ಮಾಚಾ ಕೋಣ ಕರ್ತಾ । ಜ್ಯೈ ಆತ್ಮ್ಯಾಸೀ ಅಲೀ ಅಕರ್ತವ್ಯತಾ । ತ್ಯೈ ತ್ಯಾಗ ಸರ್ವಥಾ ಘಡೇನಾ ।।೨೨೭।। ಐಕೋನಿ ಉದ್ಧವಾಚಾ ಪ್ರಶ್ನ । ಸಾಂವಳಾ ರಾಜೀವಲೋಚನ । ಕಾಯ ಬೋಲಿಲಾ ಹಾಂಸೋನ। ಸಾವಧಾನ ಪರಿಸಾವೇ ।।೨೨೮।।

ಈ ಪ್ರಕಾರವಾಗಿ ನೀನು ಹೃದಯಸ್ಥ ಪರಮಾತ್ಮನನ್ನು ಪ್ರಾಪ್ತ ಮಾಡಿಕೊಂಡೆ ಎಂದರೆ ಆಗ ನೀನು ಮದ್ರೂಪನಾಗಿ ನನ್ನನ್ನೇ ಬಂದು ಕೂಡುವೆ. ಹೇ ಉದ್ಧವನೇ, ನನ್ನ ಪ್ರಾಪ್ತಿಯು ಹೀಗೆ ನಿರ್ಭಯ ಮತ್ತು ನಿಶ್ಚಲವಾಗಿರುವುದು ।।೨೧೮।। ಹೀಗೆ ಯಾವ ಗೂಢವಾದ ರಹಸ್ಯವನ್ನು ಹೇಳುತ್ತ ದೇವನು ಉದ್ಧವನ ಬೆನ್ನನ್ನು ಚಪ್ಪರಿಸಿದನು. ಆಗ ಉದ್ಧವನು ದೇವನ ಚರಣಗಳನ್ನು ಜಿಗದಪ್ಪಿಕೊಂಡನು. ಆತನನ್ನು ಎಬ್ಬಿಸಿದರೂ ಏಳದಾದನು ।।೨೧೯।। ಆಗ ಆತನು ಹೀಗೆ ಹೇಳಿದನು, ನೀನು ನಿನ್ನ ಯಾವ ಗುಪ್ತವಾದ ಮಾತನ್ನು ಹೇಳಿರುವೆ, ಅದು ನನಗೆ ಸಹಜವಾಗಿಯೇ ಮಾನ್ಯವಾಯಿತು. ಈಗ ಒಂದು ಮಾತಿನಲ್ಲಿ ನನಗೆ ಸಂಶಯುವಾಗುತ್ತಿದೆ. ಅದಕ್ಕಾಗಿ ಅದನ್ನು ನಾನು ನಿನಗೆ ಕೇಳುವೆನು ।।೨೨೦।।

ಹೇ ಶ್ರೀಕೃಷ್ಣನೇ, ವೇದಗಳ ಮತ್ತು ಶಾಸ್ತ್ರಗಳ ಮಂಥನ ಮಾಡಿದ ಸಾರ, ಅಥವಾ ಯೋಗರೂಪ ಕೋಟೆಯಲ್ಲಿನ ಭಾಂಡಾರ ಅಥವಾ ರಸಾಳ ಸುಖದ ಸಾಗರದಂತಿರುವ ಉತ್ತಮ ಉಪದೇಶವನ್ನು ನೀನು ನನಗೆ ಹೇಳಿರುವೆ ।।೨೨೧।। ನೀನು ಯೋಗಿಗಳವರಲ್ಲಿ ಯೋಗೇಶ್ವರನಾಗಿರುವೆ. ನೀನು ಸರ್ವ ಜಗತ್ತಿನ ಈಶ್ವರನಾಗಿರುವೆ. ನಿನ್ನ ಭಾಷಣವು ಸತ್ಯವಾಗಿಯೇ ಇರುವುದು. ಆದರೆ ನಿನ್ನ ವಚನಗಳು ಸಂಶಯಾಸ್ಪದವಾಗಿವೆ ।।೨೨೨।। ನೀನು ಪ್ರಾರಂಭದಲ್ಲಿ ಸ್ವಧರ್ಮದ ಆಚರಣೆಯನ್ನು ಮಾಡಬೇಕೆಂದು ಹೇಳಿರುವೆ. ಈ ಯಾವ ನಿನ್ನ ಭಾಷಣವು ನಿಜವೆಂದು ತಿಳಿದು ನಾನು ಅದರಲ್ಲಿ ಪೂರ್ಣ ವಿಶ್ವಾಸವನ್ನಿಟ್ಟಿರುವೆನು ।।೨೨೩।। ಯಾವ ಸ್ವಧರ್ಮದ ಆಚರಣೆಯನ್ನು ಮಾಡುವುದೇ ನನ್ನ ಭಜನೆಯಾಗಿರುವುದೆಂದು ಹೀಗೆ ಹೇಳಿರುವೆ. ಈಗ ಕೊನೆಯಲ್ಲಿ ಅದನ್ನೂ ಬಿಟ್ಟುಕೊಟ್ಟು ನನಗೆ ಶರಣು ಬರಬೇಕೆಂದು ಹೇಳುತ್ತಿರುವೆ ।।೨೨೪।। ಅಂದ ಮೇಲೆ ಆತ್ಮವು ಇದು ಕರ್ತನೋ ಅಥವಾ ಅಕರ್ತನೋ ಇದೇ ನಮಗೆ ತಿಳಿಯದಾಗಿದೆ. ಅದಕ್ಕಾಗಿ ಈಗ ನಾವು ಕರ್ಮಗಳನ್ನು ಮಾಡಬೇಕೋ ? ಅಥವಾ ಸರ್ವಥಾ ಬಿಡಬೇಕೋ ? ।।೨೨೫।। ಹೇ ಶ್ರೀಕೃಷ್ಣನೇ, ನಿನ್ನ ಉಪದೇಶವು ಹೀಗೆ ವಿಲಕ್ಷಣವಾಗಿದೆ. ಇದನ್ನು ಕೇಳಿ ನನ್ನ ಮನದಲ್ಲಿ ಮಹಾ ಸಂಶಯವು ನಿರ್ಮಾಣವಾಗಿದೆ. ಹೇ ಶ್ರೀಪತಿಯೇ, ಈಗ ನಾನು ಯಾವುದನ್ನು ಮಾಡಲಿ ? ।।೨೨೬।। ಆತ್ಮವು ಅಕರ್ತವಾದರೆ ಕರ್ಮದ ಮಾತಾದರೂ ಎಲ್ಲಿಯದು? ಮತ್ತು ಆತ್ಮನಲ್ಲಿ ಅಕರ್ತತೆಯು ಬರುವುದಾದರೆ ತ್ಯಾಗ ಮಾಡುವಿಕೆಯು ಸಂಭವಿಸುವುದೇ ಇಲ್ಲ ।।೨೨೭।। ಈ ಯಾವ ಉದ್ಧವನ ಪ್ರಶ್ನೆಯನ್ನು ಕೇಳಿ ಮೇಘಶ್ಯಾಮನಾದ ಕಮಲನಯನ ಶ್ರೀಕೃಷ್ಣನು ನಗುತ್ತ ಏನು ಹೇಳಿದನೆಂಬುವುದನ್ನು ಸರಿಯಾಗಿ ಶ್ರವಣವನ್ನು ಮಾಡಬೇಕು ।।೨೨೮।।

ಶ್ರೀಭಗವಾನುವಾಚ :-

ಸ ಏಷ ಜೀವೋ ವಿವರಪ್ರಸೂತಿಃ ಪ್ರಾಣೇನ ಘೋಷೇಣ ಗುಹಾಂ ಪ್ರವಿಷ್ಟಃ ।
ಮನೋಮಯಂ ಸೂಕ್ಷ್ಮಮುಪೇತ್ಯ ರೂಪಂ ಮಾತ್ರಾ ಸ್ವರೋ ವರ್ಣ ಇತಿ ಸ್ಥವಿಷ್ಠಃ ॥೧೭॥

ಅರ್ಥ:- ಶ್ರೀ ಭಗವಾನನು ಹೇಳಿದನು; ಪ್ರಿಯ ಉದ್ಧವಾ, ಯಾವ ಪರಮೇಶ್ವರನ ಪರೋಕ್ಷ ರೂಪದಿಂದ ವರ್ಣಿಸಲ್ಪಡುವುದೋ, ಆತನು ಸಾಕ್ಷಾತ್ ಅಪರೋಕ್ಷನು ಪ್ರತ್ಯಕ್ಷವಾಗಿರುವನು. ಕಾರಣ ಆತನು ಸಂಪೂರ್ಣ ವಸ್ತುಮಾತ್ರಗಳ ಸತ್ತೆ, ಸ್ಫೂರ್ತಿ ಮತ್ತು ಜೀವದಾನ ಮಾಡುವವನಾಗಿರುವನು. ಆತನು ಪ್ರಾರಂಭದಲ್ಲಿ ಅನಾಹತ ನಾದ ಸ್ವರೂಪ ಪರಾ ವಾಣೀ ಹೆಸರಿನ ಪ್ರಾಣದ ಜೊತೆಯಲ್ಲಿ ಮೂಲಾಧಾರ ಚಕ್ರದಲ್ಲಿ ಪ್ರವೇಶ ಮಾಡುವನು. ತದನಂತರ ಮಣಿಪೂರ ಚಕ್ರದಲ್ಲಿ ಬಂದು ಪಶ್ಯಂತೀ ವಾಣಿಯ ಸೂಕ್ಷ್ಮ ರೂಪವನ್ನು ಧರಿಸುವನು. ಆಮೇಲೆ ಕಂಠದಲ್ಲಿ ಸ್ಥಿತ ವಿಶುದ್ಧ ನಾಮದ ಚಕ್ರದಲ್ಲಿ ಬರುವನು ಮತ್ತು ಮಧ್ಯಮ ವಾಣಿಯಿಂದ ಪ್ರಕಟನಾಗುವನು. ಪುನಃ ಕ್ರಮಶಃ ಮುಖದಲ್ಲಿ ಬಂದು ಹ್ರಸ್ವ - ದೀರ್ಘ ಮಾತ್ರಾ, ಉದಾತ್ತ ಇತ್ಯಾದಿ ಸ್ವರ ಹಾಗೆಯೇ ಕಕಾರಾದಿ ವರ್ಣರೂಪ ಸ್ಥೂಲ ವೈಖರೀ ವಾಣಿಯ ರೂಪವನ್ನು ಗ್ರಹಣ ಮಾಡುವನು.

ಐಕ ಬಾಪಾ ಉದ್ಧವಾ । ಮೀ ಮಾಯೇಚ್ಯಾ ನಿಜಸ್ವಭಾವಾ । ಅನುಸರೋನಿ ಜೀವ ಭಾವಾ । ಕರ್ತೃತ್ವ ಜೀವಾ ಜೀವತ್ವೇ ॥೨೭೯॥ ಜಳೀ ಪ್ರತಿಬಿಂಬಲಾ ಸವಿತಾ । ತೋ ಜಳಕಂಪೇ ದಿಸೇ ಕಾಂಪತಾ । ತೇವೀ ಅಕರ್ತಾಚಿ ಮೀ ದಿಸೇ ಕರ್ತಾ । ಜೀವ ಅಹಂತಾಸ್ವಭಾವೇ ॥೨೮೦॥ ರಾಜಾ ಝೂಲಿಯಾ ನಿದ್ರೇ ಆಧೀನ । ತೋ ಸ್ವಪ್ನೀ ರಂಕ ಹೋಯ ಆಪಣ । ತೇವೀ ಪ್ರಕೃತೀ ಸ್ತವ ಮಜ ಜಾಣ । ಜೀವಪಣ ಆಭಾಸೇ ॥೨೮೧॥ ಸ್ವಯೇ ರಾಜಾ ಆಹೇ ಆಪಣ । ತೋ ಸ್ವಪ್ನೀ ರಂಕತ್ವೇ ಕರೀ ಕೋರಾನ್ನ । ತೇಥೇ ಜೋ ದೇ ಪಸಾಭರ ಕಣ । ತ್ಯಾಸೀ ವಾನೀ ಆಪಣ ರಾಜಾ ರೇ ತೂ ॥೨೮೨॥ ಆಪಣಚಿ ರಾಜಾ ಆಹೇ । ಹೇ ತ್ಯಾಚೇ ತ್ಯಾಸ ಠಾಉಕೇ ನವ್ಹೇ । ತೈಸೇಚ ಜೀವಾಸಹಿ ಹೋಯೇ । ಪೂರ್ಣತ್ವ ಸ್ವಯೇ ಸ್ಮರೇನಾ ॥೨೮೩॥ ಜೇವೀ ಸ್ವಪ್ನಾಚಿಯಾ ಅವಸ್ಥಾ । ರಾಜಾ ರಂಕಕ್ರಿಯಾ ಕರೀ ಸಮಸ್ತಾ । ತೇವೀ ಅವಿದ್ಯೇಸ್ತವ ತತ್ತ್ವತಾ । ಕರ್ಮಕರ್ತಾ ಮೀ ಝೂಲೋ ॥೨೮೪॥ ತೇಥೇ ವೇದೋಕ್ತ ವಿಧಿವಿಧಾನ । ಜೀವಾ ಅಂಗೀ ಆದಳೇ ಜಾಣ । ಜಂವ ನವ್ಹೇ ಬ್ರಹ್ಮಜ್ಞಾನ । ತಂವ ಸ್ವಧರ್ಮಾಚರಣ ಕರಾವೇ ॥೨೮೫॥ ರಾಜಾ ರಾಜಪದೀ ಜಾಗಾ ನವ್ಹೇ । ತಂವ ರಂಕಕ್ರಿಯಾ ತ್ಯಾಸೀ ಸಂಭವೇ । ತೇವೀ ಜಂವ ಬ್ರಹ್ಮಜ್ಞಾನ ನವ್ಹೇ । ತಂವ ಸರ್ವ ಕರಾವೇ ಸ್ವಧರ್ಮ ॥೨೮೬॥ ರಾಜಾ ರಾಜಪದೀ ಜಾಗಾ ಝೂಲಾ । ತೋ ಭೀಕ ಮ್ಹಣತಾಂಚಿ ಲಾಜಲಾ । ತೇವೀ ಬ್ರಹ್ಮಜ್ಞಾನ ಜೋ ಪಾವಲಾ । ತೋ ''ಮೀ ಕರ್ತಾ'' ಯಾ ಬೋಲಾ ನ ಬೋಲೇ ಕದಾ ॥೨೮೭॥ ಜೈಸೇ ರಾಯಾಸ ಮಿಥ್ಯಾ ರಂಕಪಣ । ತೇವೀ ಪರಮಾತ್ಮ್ಯಾಸೀ ಜೀವತ್ವ ಜಾಣ । ತ್ಯಾ ಜೀವಾಸ ಶರೀರೀ ಸಂಸರಣ । ತೇ ಉಪಲಕ್ಷಣ ಅವಧಾರೀ ॥೨೮೮॥

ಅಪ್ಪಾ ಉದ್ಧವಾ, ಕೇಳು, ನಾನು ಮಾಯೆಯ ಸ್ವಭಾವಕ್ಕೆ ಅನುಸರಿಸಿ ಜೀವದಶೆಗೆ ಬಂದಿರುವೆನು. ಆದ್ದರಿಂದ ಜೀವಕ್ಕೆ ಜೀವಧರ್ಮದಿಂದ ಕರ್ತೃತ್ವವು ಒದಗುವುದು ॥೨೭೯॥ ನೀರಿನಲ್ಲಿ ಬಿದ್ದಿರುವ ಸೂರ್ಯನ ಪ್ರತಿಬಿಂಬವು ನೀರು ಅಲುಗಾಡುತ್ತಲೇ ಸೂರ್ಯನು ಅಲುಗಾಡಿದಂತೆ ಹೇಗೆ ಕಾಣುವುದೋ, ಅದರಂತೆ ನಾನು ಅಕರ್ತನಾಗಿದ್ದರೂ ಕೂಡ ಜೀವದ ಅಹಂತೆಯ ಧರ್ಮದಿಂದ ನಾನು ಕರ್ತನಾಗಿರುವಂತೆ ತೋರುವೆನು ॥೨೮೦॥ ರಾಜನು ನಿದ್ರೆಯ ಆಧೀನನಾಗಲು ಆತನು ಸ್ವಪ್ನದಲ್ಲಿ ತಾನು ಭಿಕ್ಷುಕನಾಗಿರುವಂತೆ ಕಾಣುವನು. ಅದರಂತೆ ಪ್ರಕೃತಿ ಕಾರಣವಾಗಿ ನನಗೆ ಜೀವತ್ವವು ಇರುವಂತೆ ಭಾಸವಾಗುತ್ತಿರುವುದು ॥೨೮೧॥ ತಾನು ಸ್ವತಃ ರಾಜನಾಗಿದ್ದು ಸ್ವಪ್ನದಲ್ಲಿ ರಂಕನಾಗಿ ಒಣಭಿಕ್ಷೆಯನ್ನು ಬೇಡುವನು. ಮತ್ತು ಆತನಿಗೆ ಯಾರಾದರು ಒಂದು ಹಿಡಿ ಕಾಳು ಭಿಕ್ಷೆ ನೀಡಲು ಆ ಮನುಷ್ಯನಿಗೆ ಈತನು ''ನೀನು ರಾಜನು'' ಎಂದು ಸ್ತುತಿ ಮಾಡುವನು ॥೨೮೨॥ ಆದರೆ ತಾನು ಸ್ವತಃ ರಾಜನಾಗಿರುವುದನ್ನು ತನಗೆ ತಾನೇ ತಿಳಿಯಲಾರದಂತಾಗಿರುವನು. ಕಾರಣ ಅದು ಸ್ಮರಿಸುವುದಿಲ್ಲ. ಅದರಂತೆ ಜೀವದ ಸ್ಥಿತಿಯಾಗುವುದು. ಸ್ವತಃದ ಪೂರ್ಣತ್ವವು ಅದಕ್ಕೆ ತಿಳಿಯಲಾರದಂತಾಗಿರುವುದು ॥೨೮೩॥ ಸ್ವಪ್ನದ ಅವಸ್ಥೆಯಲ್ಲಿ ರಾಜನು ಯಾವ ಪ್ರಕಾರವಾಗಿ ಈ ಯಾವ ಭಿಕಾರಿಯಂತೆ ಸರ್ವ ಕೃತಿಗಳನ್ನು ಮಾಡುತ್ತಿರುವನು. ಅದರಂತೆ ಅವಿದ್ಯೆಯಿಂದ ನಾನು ಕರ್ಮಕರ್ತನಾಗಿರುವೆನು ॥೨೮೪॥ ಇಂತಹ ಅವಸ್ಥೆಯಲ್ಲಿ ವೇದೋಕ್ತ ವಿಧಿ ವಿಧಾನಗಳನ್ನು ಜೀವದ ಮೇಲೆ ಬೀಳುತ್ತಿರುವುದು. ಅಂದರೆ ಜೀವಕ್ಕೆ ಅದನ್ನು ಮಾಡಲೇಬೇಕಾಗುತ್ತದೆ. ಆದ್ದರಿಂದ ಎಲ್ಲಿಯವರೆಗೆ ಬ್ರಹ್ಮಜ್ಞಾನವಾಗುವುದಿಲ್ಲವೋ, ಅಲ್ಲಿಯವರೆಗೆ ಸ್ವಧರ್ಮದ ಆಚರಣೆಯನ್ನು ಮಾಡಬೇಕು ॥೨೮೫॥ ರಾಜನು ಎಚ್ಚರಾಗಿ ಎಲ್ಲಿಯವರೆಗೆ ರಾಜ ವೈಭವದಲ್ಲಿ ಬರುವುದಿಲ್ಲವೋ, ಅಲ್ಲಿಯವರೆಗೆ ಭಿಕ್ಷುಕನಂತೆ ಸರ್ವ ಕರ್ಮಗಳು ಆತನ ಕೈಗಳಿಂದ ನಡೆಯುವುವು. ಅದರಂತೆ ಎಲ್ಲಿಯವರೆಗೆ ಬ್ರಹ್ಮಜ್ಞಾನದ ಸಾಮ್ರಾಜ್ಯದ ಮೇಲೆ ಆರೂಢನಾಗುವುದಿಲ್ಲವೋ, ಅಲ್ಲಿಯವರೆಗೆ ಸ್ವಧರ್ಮದ ಆಚರಣೆಯನ್ನು ಮಾಡಬೇಕು ॥೨೮೬॥ ಕಾರಣವೇನೆಂದರೆ ರಾಜನು ಜಾಗೃತನಾಗಿ ರಾಜ್ಯ ಸಿಂಹಾಸನದ ಮೇಲೆ ಆರೂಢನಾಗುತ್ತಲೇ ಭಿಕ್ಷೆ ಎಂಬ ಶಬ್ದವನ್ನು ನುಡಿಯಲು ಸಹ ನಾಚುವನು. ಅದರಂತೆ ಬ್ರಹ್ಮಜ್ಞಾನವು ಪ್ರಾಪ್ತವಾಗುತ್ತಲೇ ಆ ಮನುಷ್ಯನು ''ನಾನು ಕರ್ತನು'' ಎಂಬ ಶಬ್ದವನ್ನು ಎಂದಿಗೂ ನುಡಿಯಲಾರನು ॥೨೮೭॥ ರಾಜನ ಭಿಕ್ಷೆ ಬೇಡುವುದು ಹೇಗೆ ಮಿಥ್ಯೆಯೋ, ಹಾಗೆಯೇ ಪರಮಾತ್ಮನ ಜೀವತ್ವವೂ ಮಿಥ್ಯೆಯಾಗಿರುವುದು. ಜೀವವು ಶರೀರದಲ್ಲಿ ಹೇಗೆ ಸಂಚರಿಸುವುದು ? ಅದು ಉಪಾಧಿಯಿಂದ ಉತ್ಪನ್ನವಾಗಿರುವ ಗೌಣ ಲಕ್ಷಣಗಳನ್ನು ಈಗ ಹೇಳುವೆನು, ಅದಕ್ಕಾಗಿ ಕೇಳು ॥೨೮೮॥

ಜೈಸಾ ಜೀವ ಜಡಾತೇ ಜೀವವಿತಾ । ಯಾಲಾಗೀ ಜೀವೂ ಐಶೀ ವಾರ್ತಾ । ಸಹಜೇ ತರೀ ಸ್ವಭಾವತಾ । ಚೈತನ್ಯರೂಪತಾ ಜೀವಾಚೀ ।।೨೮೯।। ಘಟಾಮಾಜೀ ದೀಪೂ ಘಾತಲಾ । ತ್ಯೆ ಘಟಭರೀ ಪ್ರಕಾಶೂ ಝಾಲಾ । ತೋಚಿ ಘರಾಮಾಜೀ ಠೇವಿಲಾ । ಘರಭರೀ ಝಾಲಾ ಪ್ರಕಾಶ ।।೨೯೦।। ತೇವೀ ಶರೀರಾಮಾಜೀ ತರೀ ಜೀವೂ । ಸಹಜೇ ತರೀ ಹಾ ಸದಾಶಿವೂ । ಯೇಥ ಬೋಲಣೇ ನ ಲಗೇ ಬಹೂ । ಜೀವಶಿವ ಅನುಭವೂ ತೋ ಐಸಾ ।।೨೯೧।। ಆರಿಶಾಚಾ ಸೂರ್ಯ ದಿಸೇ ಹಾತೀ । ತೇವೀ ಶರೀರೀ ಜೀವಾಚೀ ಪ್ರಸೂತೀ । ಪ್ರಕರ್ಷೇಸೀ ರಾಹತೀ ಸ್ಥಿತೀ । ಯಾಲಾಗೀ ''ಪ್ರಸೂತೀ'' ಬೋಲಿಜೇ ।।೨೯೨।। ಆರಸಾ ಅತ್ಯಂತ ಲಹಾನ । ತೇಥೇ ಸೂರ್ಯಬಿಂಬೇ ಸಂಪೂರ್ಣ । ತೇವೀ ವಿದೇಹಾ ದೇಹಧಾರಣ । ''ವಿವರಪ್ರವೇಶನ'' ತ್ಯಾ ನಾಂವ ।।೨೯೩।। ಥಿಲ್ಲರೀ ಚಂದ್ರಾಸೀ ಅಭಿವ್ಯಕ್ತೀ । ತೋ ಗಗನೀಚಾ ದಿಸೇ ಅಧೋಗತೀ । ತೇವೀ ಶರೀರೀ ಜೀವಾಚೀ ಪ್ರಸೂತೀ । ಅವ್ಯಕ್ತ ವ್ಯಕ್ತೀ ಪ್ರವೇಶೇ ।।೨೯೪।। ಜಳೀ ಸವಿತಾ ಪ್ರತಿಬಿಂಬಲಾ । ಪರೀ ತೋ ಜಳೇ ನಾಹೀ ಓಲಾ ಝಾಲಾ । ತೇವೀ ಕರ್ಮೇ ಕರೋನಿ ಸಂಚಲಾ । ಅಲಿಪ್ತ ಠೇಲಾ ನಿಜ ಆತ್ಮಾ ।।೨೯೫।। ಜಳೀ ಪ್ರತಿಬಿಂಬ ಆಂದೋಲಾಯಮಾನ । ತೇವೀ ಜೀವಾಸೀ ಜನ್ಮ ಮರಣ । ಥಿಲ್ಲರೀ ಚಂದ್ರ ಅಡಕಲಾ ಸಂಪೂರ್ಣ । ತೇವೀ ಕರ್ಮಬಂಧನ ಜೀವಾಸೀ ।।೨೯೬।। ಥಿಲ್ಲರ ಜಳ ಆಟಲೇ । ತೇಥೇ ಕಾಯ ಚಂದ್ರಬಿಂಬ ನಿಮಾಲೇ । ತೇ ಚಂದ್ರಬಿಂಬ ಹೋವೋನಿ ಠೇಲೇ । ಜಾಹಲೇ ನಿಮಾಲೇ ದೋನೀ ಮಿಥ್ಯಾ ।।೨೯೭।। ಥಿಲ್ಲರೀಚಾ ಚಂದ್ರ ಕಾಢೂ ಜಾತಾ । ಹೋ ಮಿಥ್ಯಾತ್ವೇ ನ ಯೇ ಹಾತಾ । ತೇವೀ ದೇಹೀ ಮಿತ್ಯಾ ಜೀವತಾ । ತೇ ಸತ್ಯ ಮಾನಿತಾ ಅತಿದುಃಖೀ ।।೨೯೮।। ಆರಸಾ ಥೋರ ಅಥವಾ ಲಹಾನ । ತೇಥೇ ಸೂರ್ಯಬಿಂಬೇ ಸಂಪೂರ್ಣ । ತೇವೀ ಮೀ ಅಂತರ್ಯಾಮೀ ಜಾಣ । ಸರ್ವಾಭೂತೀ ಸಮಾನ ಸಮಗ್ರ ಅಸೇ ।।೨೯೯।। ಸೂರ್ಯ ಥಿಲ್ಲರಾ ಆಂತೌತಾ । ಅಡಕಲಾ ದಿಸೇ ಸಮಸ್ತಾ । ತೇವೀ ಜೀವಾಸೀ ಕರ್ಮಬದ್ಧತಾ । ಮೂರ್ಖ ತತ್ತ್ವತಾ ಮಾನಿತೀ ।।೩೦೦।। ಗಗನೀಚಾ ಸೂರ್ಯೋ ನ ದೇಖತೀ । ಥಿಲ್ಲರೀ ಅಡಕಲಾ ಮಾನಿತೀ । ತೇವೀ ನಿರ್ಗುಣೀ ಜಯಾ ನಾಹೀ ಪ್ರತೀತೀ । ತೇ ಬದ್ಧ ಮ್ಹಣತೀ । ಜೀವಾತೇ ।।೩೦೧।।

ಜೀವವು ಜಡಕ್ಕೆ ಸಜೀವವನ್ನಾಗಿ ಮಾಡುವುದು. ಆದ್ದರಿಂದ ಅದಕ್ಕೆ ''ಜೀವ'' ಎಂದು ಕರೆಯುವರು. ಅಂದಮೇಲೆ ಸಹಜವಾಗಿಯೇ ಜೀವಕ್ಕೆ ಸ್ವಭಾವಧರ್ಮ ಪ್ರಕಾರವಾಗಿ ಚೈತನ್ಯ ರೂಪವು ಪ್ರಾಪ್ತವಾಗುವುದು ।।೨೮೯।। ದೀಪವನ್ನು ಘಟದಲ್ಲಿಡಲು ಆಗ ಅದು ಘಟದಷ್ಟೇ ಪ್ರಕಾಶಿಸುವುದು. ಅದೇ ದೀಪವನ್ನು ಮನೆಯಲ್ಲಿಡಲು ಮನೆತುಂಬ ಪ್ರಕಾಶಿಸುವುದು ।।೨೯೦।। ಅದರಂತೆ ಶರೀರದಲ್ಲಿರುವವರೆಗೂ ಅದು ಜೀವವಾಗಿರುವುದು. ಸಾಮಾನ್ಯವಾಗಿ ವಿಚಾರ ಮಾಡಿ ನೋಡಲು ಅದು ಸದಾಶಿವವೇ ಆಗಿರುವುದು. ಅಂದರೆ ಸರ್ವವ್ಯಾಪೀ ಪರಮಾತ್ಮವಾಗಿರುವುದು. ಈ ಸಂಬಂಧವಾಗಿ ಹೆಚ್ಚಿಗೆ ಹೇಳುವ ಅವಶ್ಯಕತೆವಿರುವುದಿಲ್ಲ. ಕಾರಣ ಜೀವದ ಮತ್ತು ಶಿವನ ಅನುಭವವು ಹೀಗೆ ಇರುವುದು ।।೨೯೧।। ಕನ್ನಡಿಯಲ್ಲಿ ಬಿದ್ದ ಸೂರ್ಯನ ಪ್ರತಿಬಿಂಬವು ತನ್ನ ಕೈಯಲ್ಲಿಯೇ ಬಂದಂತೆ ಭಾಸವಾಗುವುದು. ಅದರಂತೆ ಶರೀರದಲ್ಲಿ ಜೀವದಜನ್ಮವಾಗಿರುವುದು. ಅದರ ಚೈತನ್ಯರೂಪವು ಯಾವ ಶರೀರದಲ್ಲಿ ಇರುವಿಕೆಯಾಗಿರುವುದೋ ಅದಕ್ಕೇನೇ ''ಪ್ರಸೂತೀ'' ಎಂದು ಹೇಳುವರು ।।೨೯೨।। ಕನ್ನಡಿಯು ಬಹಳ ಚಿಕ್ಕದಾಗಿರುವುದು. ಆದರೆ ಅದರಲ್ಲಿ ಸೂರ್ಯನ ಸಂಪೂರ್ಣ ಬಿಂಬವು ಬೀಳುವುದು. ಅದರಂತೆ ದೇಹರಹಿತ ಆತ್ಮವು ದೇಹಧಾರಣೆಯನ್ನು ಮಾಡುವುದು. ಆದ್ದರಿಂದ ಅದಕ್ಕೆ ವಿವರ ಪ್ರವೇಶ ಅಂದರೆ ವಿವರದಲ್ಲಿ ಪ್ರವೇಶ ಮಾಡುವಿಕೆ ಎಂದು ಹೇಳುವರು ।।೨೯೩।। ಯಾವುದೋ ಒಂದು ಚಿಕ್ಕಮಡುವಿನಲ್ಲಿ ಚಂದ್ರನ ಪ್ರತಿಬಿಂಬವು ಬಿದ್ದಿತೆಂದರೆ ಆ ಯಾವ ಆಕಾಶದಲ್ಲಿನ ಚಂದ್ರನು ಕೆಳಗೆ ಬಂದಂತೆ ತೋರುವನು. ಅದರಂತೆ ಶರೀರದಲ್ಲಿ ಜೀವದ ಪ್ರಸೂತಿಯಾಗುತ್ತಿರುವುದು. ಅಂದರೇನೇ ಅವ್ಯಕ್ತನಾದವನು ವ್ಯಕ್ತದಲ್ಲಿ ಪ್ರವೇಶ ಮಾಡುವಿಕೆಯಾಗಿರುವುದು ।।೨೯೪।। ನೀರಿನಲ್ಲಿ ಸೂರ್ಯನ ಪ್ರತಿಬಿಂಬವು ಬೀಳಲು ಅದು ನೀರಿನಿಂದ ತೋಯುವುದಿಲ್ಲ. ಅದರಂತೆ ದೇಹದಲ್ಲಿ ಕರ್ಮಗಳನ್ನು ಮಾಡುತ್ತಿದ್ದರೂ ಕೂಡ ಆತ್ಮವು ಅಲಿಪ್ತವಾಗಿಯೇ ಇರುವುದು ।।೨೯೫।। ನೀರಿನಲ್ಲಿ ಬಿದ್ದ ಪ್ರತಿಬಿಂಬವು ನೀರಿನ ಅಲುಗಾಡುವಿಕೆಯಿಂದ ತಾನೂ ಅಲುಗಾಡುವುದು. ಅದರಂತೆ ಜೀವಕ್ಕೆ ಜನ್ಮ ಮರಣಗಳು ಒದಗುತ್ತಿರುವುದು. ಮಡುವಿನಲ್ಲಿ ಚಂದ್ರನು ಸಿಕ್ಕಿಹಾಕಿಕೊಂಡಂತೆಯೇ ಜೀವದ ಕರ್ಮ ಬಂಧನವಾಗಿರುವುದು ।।೨೯೬।। ಮಡುವಿನಲ್ಲಿದ್ದ ನೀರು ಕರಗಿ ಇಲ್ಲದಾಗಲು ಅದರ ಜೊತೆಯಲ್ಲಿ ಪ್ರತಿಬಿಂಬವೂ ಕೂಡ ಇಲ್ಲದಾಗುವುದು. ಆದರೆ ಅದರಿಂದ ಆಕಾಶದಲ್ಲಿನ ಚಂದ್ರನು ಕರಗುವುದಿಲ್ಲ, ಲೋಪವಾಗುವುದಿಲ್ಲ. ಅದು ತಾನು ಇದ್ದಂತೆಯೇ ಇರುವುದು. ಮಡುವಿನಲ್ಲಿ ಪ್ರತಿಬಿಂಬವು ತೋರುವುದು, ಅಡಗುವುದು, ಈ ಎರಡೂ ಭಾವಗಳು ಮಿಥ್ಯೆಯಾಗಿರುವುವು ।।೨೯೭।। ಮಡುವಿನಲ್ಲಿ ಪ್ರತಿಬಿಂಬಿಸಿರುವ ಚಂದ್ರನನ್ನು ನಾವು ಹೊರಗೆ ತೆಗೆಯಲು ಪ್ರಯತ್ನಿಸಿದರೆ ಅದು ಮಿಥ್ಯೆಯಾಗಿರುವುದರಿಂದ ಕೈಗೆ ಹತ್ತುವುದಿಲ್ಲ ಅದರಂತೆ ದೇಹದಲ್ಲಿರುವ ಜೀವವೂ ಕೂಡ ಮಿಥ್ಯೆಯಾಗಿರುವುದು. ಇದಕ್ಕೆ ಸತ್ಯವೆಂದು ತಿಳಿದರೆ ಅತಿಶಯವಾಗಿ ದುಃಖವಾಗುವುದು ।।೨೯೮।। ಕನ್ನಡಿಯು ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ ಅದರಲ್ಲಿ ಸೂರ್ಯನ ಪ್ರತಿಬಿಂಬವು ಸಂಪೂರ್ಣವಾಗಿ ಬೀಳುವುದು. ಅದರಂತೆ ಅಂತಃಕರಣದಲ್ಲಿರುವ ನಾನು ಸರ್ವಪ್ರಾಣಿಮಾತ್ರರಲ್ಲಿ ಸಮಾನ ಮತ್ತು ಸಂಪೂರ್ಣವಾಗಿ ತುಂಬಿರುವೆನು ।।೨೯೯।। ಸೂರ್ಯನು ಸರ್ವರಿಗೂ ಮಡುವಿನಲ್ಲಿ ಸಿಲುಕಿಕೊಂಡಂತೆ ತೋರುವನು. ಅದರಂತೆ ಜೀವವು ಕರ್ಮಗಳಿಂದ ಬದ್ಧವಾಗಿರುವುದೆಂದು ಅಜ್ಞಾನಿ ಜನರು ತಿಳಿದುಕೊಂಡಿರುವರು ।।೩೦೦।। ಆಕಾಶದಲ್ಲಿನ ಸೂರ್ಯನನ್ನು ನೋಡದೇ ಆತನು ಮಡುವಿನಲ್ಲಿ ಸಿಲುಕಿಕೊಂಡಿದ್ದನ್ನೇ ಮನ್ನಿಸುವರು. ಅದರಂತೆ ಯಾರು ನಿರ್ಗುಣವಾದ ಅನುಭವವನ್ನು ಪಡೆದಿರುವುದಿಲ್ಲವೋ, ಆ ಜನರು ಜೀವಕ್ಕೆ ಬದ್ಧನೆಂದು ತಿಳಿದುಕೊಂಡಿರುವರು ।।೩೦೧।।

ಅಗ್ನಿಜ್ವಾಳಾ ಜಾಳೀ ಆಕಳಿತಾ । ಜಾಳೇ ಜಳೇ ಆಕಳೂ ಜಾತಾ । ತೇವೀ ಆತ್ಮಯಾ ಕರ್ಮೀ ಬಾಂಧತಾ । ಕರ್ಮೀ ಕರ್ಮತಾ ನಿಷ್ಕರ್ಮ ॥೩೦೨॥ ನಾದ ಉತ್ಪತ್ತೀಸೀ ಠಾವೋ । ಮುಖ್ಯ ವಾವೋ ಕಾ ದುಸರಾ ಘಾವೋ । ಯಾ ದೋಹೀವೇಗಳಾ ನಿತ್ಯ ನಿರ್ವಾಹೋ । ತೋ ನಾದೂ ಪಹಾ ಹೋ ಅನುಹತ ॥೩೦೩॥ ಅನುಹತಾಚಾ ಸೋಲೀವ ಶಬ್ದೂ । ಪರಾಪರತೀರೀ ಪರಾಖ್ಯ ನಾದೂ । ಜ್ಯಾಚಾ ಯೋಗಿಯಾ ಸದಾ ಛಂದೂ- । ಬೋಲಿಲಾ ಅನುವಾದೂ ನವ್ಹೇ ತ್ಯಾಚಾ॥೩೦೪॥ ಜ್ಯಾ ನಾದಾಚೀ ಸುಖಗೋಡೀ । ಸದಾಶಿವೂಚ ಜಾಣೇ ಫುಡೀ । ಕಾ ಸನಕಾದಿಕೀ ಚೋಖಡೀ । ಚಾಖಿಲೀ ಗಾಢೀ ತೇ ಚವೀ ॥೩೦೫॥ ವಾಯೂಚೇ ಶೋಧಿತಾ ಸತ್ತ್ವ । ತ್ಯಾಸೀ ಏಕವಟಲೇ ತೇ ಶಬ್ದತತ್ತ್ವ । ಉಭಯಚೇತನೇ ಜೀವಿತ್ವ । ಮನೋಮಯತ್ವ ಧರೂ ಪಾಹೇ ॥೩೦೬॥ ಚೇತನೇಚೇ ಚೇತನತ್ವ । ತೇ ವಾಯೂಚೇ ಶೋಧಿತ ಸತ್ತ್ವ । ತೇಚಿ ಶಬ್ದಾಚೇ ನಿಜತತ್ತ್ವ । ತೇಣೇ ಜೀವಿತ್ವ ಮನೋರೂಪ ಹೋಯ ॥೩೦೭॥ ಜೀವಾಚಾ ಶರೀರಸಂಯೋಗ । ಸ್ವಯೇ ಸಾಂಗೇ ತೋ ಶ್ರೀರಂಗ । ಆಧಾರಾದಿಚಕ್ರಪ್ರಯೋಗ । ಕ್ರಮೇಂಚಿ ಸಾಂಗ ಸಾಂಗತ ॥೩೦೮॥ ಅಹಮಿತಿ ಪ್ರಥಮಾಧ್ಯಾಸೇ । ಜೀವಾಸೀ ಜೀವತ್ವ ಆಭಾಸೇ। ತೋ ಜೇ ಜೇ ತತ್ತ್ವೀ ಪ್ರವೇಶೇ । ತೇ ಮೀ ಐಸೇ ಮ್ಹಣತಚಿ ॥೩೦೯॥ ತೇಥ ಮೀ ದೇಹೋ ಮ್ಹಣತಾ । ತತ್ಕಾಳ ಜಾಯ ಪೂರ್ಣತಾ । ತೇಂವ್ಹಾ ಏಕದೇಶೀ ಪರಿಚ್ಛಿನ್ನತಾ । ದೇಹಾತ್ಮತಾ ಲಾಗಲೀ ॥೩೧೦॥ ನಿರ್ವಿಶೇಷನಾದ ಅತಿಸೂಕ್ಷ್ಮ ಪ್ರಾಣ । ತ್ಯಾಸಹಿತ ಆಧಾರೀ ಪ್ರವೇಶೋನ । ಅತಿಸೂಕ್ಷ್ಮ ಪ್ರಥಮ ಸ್ಫುರಣ । ಪಾವೋನಿ ಜಾಣ ಪರಾ ಝಾಲೀ ॥೩೧೧॥ ಆಧಾರ ಚಕ್ರೀ ಸೂಕ್ಷ್ಮ ಪ್ರಾಣ । ಪರಾ ವಾಚಾ ತೇಥೀಚೀ ಜಾಣ । ಮನಾಚೇ ಕೋವಳೇ ಸ್ಫುರಣ । ಅತಿಸಪೂರಪಣ ಸೂಕ್ಷ್ಮತ್ವೇ ॥೩೧೨॥ ಸ್ವಾಧಿಷ್ಠಾನಚಕ್ರಾಚ್ಯಾ ಠಾಯೀ । ಮನಾಚೇ ವಾಢತೇ ಬಾಳಸೇ ಪಾಹೀ । ಪಶ್ಯಂತೀ ವಾಚಾ ತಯೇ ಠಾಯೀ । ಬೋಲೂ ದೇಖೇ ಪರೀ ಕಾಂಹೀ ಬೋಲೇನಾ॥೩೧೩॥ ತಿಯೇ ಚಕ್ರೀ ಏಕವಟಲಾ ಪ್ರಾಣ। ಪುಢಾರಾ ನ ಚಲೇಚಿ ಗಾ ಜಾಣ। ಪ್ರಾಣಾಪಾನಾ ಝಾಲೇ ಭಾಂಡಣ। ದೋಘೇಜಣ। ರುಸಲೇ॥೩೧೪॥ ಘರಕಲಹೋ ಲಾಗಲಾ ಭಾರೀ। ಮಗ ನಿಘಾಲೇ ವೇಗಳೇಚಾರೀ । ಪಾಂಚಹೀ ರಾಹಿಲೇ ಪಾಂಚಾಪರೀ । ಐಕ ನಿರ್ಧಾರೀ ವಿಚಾರೂ ॥೩೧೫॥

ಅಗ್ನಿಯ ಜ್ವಾಲೆಯನ್ನು ಬಲೆಯಲ್ಲಿ ಹಿಡಿಯಲು ಹೋದರೆ ಆಗ ಆ ಬಲೆಯೇ ಸುಟ್ಟುಹೋಗುವುದು. ಅದರಂತೆ ಆತ್ಮಕ್ಕೆ ಕರ್ಮದಿಂದ ಕರ್ಮದಲ್ಲಿ ಬದ್ಧವಾಗಿಡುವ ಪ್ರಯತ್ನ ಮಾಡಿದರೆ ಕರ್ಮದ ಕರ್ಮತ್ವವೇ ಇಲ್ಲದಾಗಿಬಿಡುವುದು ॥೩೦೨॥ ನಾದವು ಉತ್ಪನ್ನವಾಗಲು ಪ್ರಾಮುಖ್ಯವಾಗಿ ಎರಡು ಕಾರಣಗಳಿರುವುವು. ಮೊದಲನೆಯದಾಗಿ ಅವಕಾಶವು ಮತ್ತು ಎರಡನೆಯದಾಗಿ ಆಘಾತವಾಗಿರುವುದು. ಆದರೆ ಈ ಎರಡೂ ಕಾರಣಗಳಿಂದ ಭಿನ್ನವಾಗಿರುವ ಮತ್ತು ನಿತ್ಯ ಸಿದ್ಧವಾದ ಯಾವ ನಾದವು ವಿಶ್ವದಲ್ಲಿ ಪ್ರಸರಿಸಿರುವುದು ಅದಕ್ಕೆ ''ಅನುಹತ'' ನಾದವೆಂದು ಕರೆಯುವರು ॥೩೦೩॥ ಪರಾ ಎಂಬ ವಾಣಿಯ ಆಚೆಕಡೆ ಇರುವ ಪರಾ ಎಂಬ ನಾಮದ ನಾದವು, ಅದೇ ಅನುಹತದ ಶುದ್ಧ ಶಬ್ದವಾಗಿದೆ. ಯೋಗಿಗಳಿಗೆ ಈ ನಾದದ ಅಭಿರುಚಿಯು ಹತ್ತಿರುವುದು. ಶಬ್ದಗಳಿಂದ ಇದರ ವರ್ಣನೆಯನ್ನು ಮಾಡಲು ಬರುವುದಿಲ್ಲ ॥೩೦೪॥ ಈ ಯಾವ ನಾದದ ಆನಂದವನ್ನು ಸದಾಶಿವನು ಮಾತ್ರ ತಿಳಿದಿರುವನು. ಹಾಗೆಯೇ ಸನಕಾದಿಕರೂ ಕೂಡ ಈ ನಾದದ ಪೂರ್ಣ ರುಚಿಯನ್ನು ಅರಿತಿರುವರು ॥೩೦೫॥ ವಾಯುವಿನ ಶುದ್ಧ ಸತ್ವ ಎಂದರೆ ಚಾಂಚಲ್ಯವಾಗಿರುವುದು. ಅದರಲ್ಲಿ ಶುದ್ಧವಾದ ಶಬ್ದ ತತ್ವವು ಕೂಡಿಕೊಂಡಿತು. ಈ ಎರಡರ ಚೈತನ್ಯದಿಂದ ಅದಕ್ಕೆ ಸಜೀವತ್ವವು ಪ್ರಾಪ್ತವಾಯಿತು ಮತ್ತು ಅದರ ಮಿಶ್ರಣದಿಂದ ಮನವು ಉತ್ಪನ್ನವಾಯಿತು ॥೩೦೬॥ ಚೇತನದ ಚೈತನ್ಯವು ಅದಾಗಿರುವುದು. ಅದುವೇ ವಾಯುವಿನ ಶುದ್ಧ ಸತ್ವವಾಗಿರುವುದು. ಹಾಗೆಯೇ ಅದು ಶಬ್ದದ ಮೂಲತತ್ವವಾಗಿರುವುದು. ಮತ್ತು ಅದರದೇ ಯೋಗದಿಂದ ಜೀವವು ಮನೋರೂಪವಾಗುತ್ತಿರುವುದು ॥೩೦೭॥ ಜೀವದ ಸಂಯೋಗವು ಶರೀರದಲ್ಲಿ ಹೇಗಾಗುವುದೆಂಬುವುದನ್ನು ಸ್ವತಃ ಶ್ರೀರಂಗನೇ ಹೇಳಲಾರಂಭಿಸಿದನು. ಆ ಯಾವ ಆಧಾರಾದಿ ಚಕ್ರಗಳಿಂದ ಸಿದ್ಧವಾಗುವ ಎಲ್ಲವನ್ನೂ ಸಂಸ್ಕಾರಪ್ರಮಾಣದಂತೆ ಹೇಳಹತ್ತಿದನು ॥೩೦೮॥ ಅಹಂ ಎಂದರೆ ನಾನು. ಈ ಮೊದಲನೆಯ ಅಧ್ಯಾಸದಿಂದ ಜೀವಕ್ಕೆ ಜೀವತ್ವದ ಭಾಸವಾಗುತ್ತಿರವುದು. ಮತ್ತು ಯಾವ ಯಾವ ತತ್ವಗಳಲ್ಲಿ ಪ್ರವೇಶವಾಗುವುದೋ ಅದಕ್ಕೆ ನಾನು ಎಂದು ಹೇಳುವುದು ॥೩೦೯॥ ಅದು ದೇಹಕ್ಕೆ ನಾನೇ ಎಂದು ಹೇಳುವುದೊಂದೇ ತಡ, ಅದರ ಪೂರ್ಣತ್ವವು ತತ್ಕಾಲದಲ್ಲಿ ಇಲ್ಲದಾಗುವುದು. ಮತ್ತು ಏಕದೇಶೀಯ ಮರ್ಯಾದಿತವಾಗಿ ದೇಹಾತ್ಮಬುದ್ಧಿಯು ಅದರ ಬೆನ್ನು ಹತ್ತುವುದು ॥೩೧೦॥ ನಿರ್ವಿಶೇಷವಾಗಿರುವ ಯಾವ ನಾದವು ಅತಿಸೂಕ್ಷ್ಮ ಪ್ರಾಣವಾಗಿರುವುದು. ಅದರೊಂದಿಗೆ ಆಧಾರ ಚಕ್ರದಲ್ಲಿ ಪ್ರವೇಶ ಮಾಡಿದಾಗ ಮೊದಲನೆಯ ಸ್ಫುರಣವೇ ಪರಾವಾಣೀಯಾಯಿತು ॥೩೧೧॥ ಆಧಾರ ಚಕ್ರದಲ್ಲಿ ಸೂಕ್ಷ್ಮ ಪ್ರಾಣವಿರುವುದು. ಮತ್ತು ಪರಾ ನಾಮದ ವಾಣಿಯು ಅಲ್ಲಿರುವುದು ಅದುವೇ ಮನದ ಕೋಮಲ ಸ್ಫುರಣವಾಗಿರುವುದು. ಈ ಸ್ವರೂಪವು ಮಾತ್ರ ಅತಿಶಯವಾಗಿ ಸೂಕ್ಷ್ಮವಾಗಿರುವುದು ॥೩೧೨॥ ಸ್ವಾಧಿಷ್ಠಾನ ಚಕ್ರದಲ್ಲಿ ಆ ಸೂಕ್ಷ್ಮ ಮನದ ಗಾತ್ರವು ಅಧಿಕವಾಗಿ ಬೆಳೆಯಲಾರಂಭಿಸುವುದು. ಅಲ್ಲಿ ಪಶ್ಯಂತಿ ವಾಣಿಯು ಮಾತನಾಡುವ ಪ್ರಯತ್ನವನ್ನು ಮಾಡುತ್ತಿರುವುದು. ಆದರೆ ಅದು ಮಾತನಾಡಲು ಸಾಧ್ಯವೇ ಇಲ್ಲ ॥೩೧೩॥ ಆ ಚಕ್ರದಲ್ಲಿ ಪ್ರಾಣವಾಯೂ ಸಹ ಕೂಡಿಕೊಂಡಿರುವುದು. ಆದ್ದರಿಂದ ಅದು ಅದರ ಮುಂದೆ ನಡೆದು ಹೋಗಲು ಸಾಧ್ಯವಿಲ್ಲ. ಆಗ ಪ್ರಾಣದ ಮತ್ತು ಅಪಾನದ ಕಲಹವಾಗಿ ಅವರೀರ್ವರೂ ಮುನಿಸಿಕೊಳ್ಳುವರು ॥೩೧೪॥ ಅಲ್ಲಿ ಭಾರೀ ಗೃಹಕಲಹವೇ ನಿರ್ಮಾಣವಾಗುವುದು ಮತ್ತು ಆಗ ಅವು ಬೇರೆ ಬೇರೆಯಾಗುವುವು. ಆದ್ದರಿಂದ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಹೀಗೆ ಐದೂ ಪ್ರಾಣಗಳು ಐದು ಸ್ಥಳಗಳಲ್ಲಿ ಇರಹತ್ತಿದವು. ಅದರ ನಿಶ್ಚಯಕಾರಕ ವಿಚಾರವನ್ನೂ ಸಹ ಹೇಳುವೆ, ಈಗ ಕೇಳು ॥೩೧೫॥

ಮಾಗೇ ರುಸೋನಿ ಗೇಲಾ ಜಾಣ । ತ್ಯಾ ನಾಂವ ಮ್ಹಣತೀ ಅಪಾನ । ರಾಗೇ ಪುಢಾರಾ ಆಲಾ ಜಾಣ । ತ್ಯಾ ನಾಂವ ಪ್ರಾಣ ಮ್ಹಣತಾತೀ ॥೩೧೬॥ ದೋಹೀಮಾಜೀ ಸಮತ್ವೇಜಾಣ । ನಾಭೀ ರಾಹಿಲಾ ತೋ ಸಮಾನ । ಕಂಠೀ ರಾಹಿಲಾ ತೋ ಉದಾನ । ವ್ಯಾನಾಸೀ ರಹಾವಯಾ ಸ್ಥಾನ ಅಸೇನಾ ॥೩೧೭॥ ಅದ್ಯಾಪಿ ಶರೀರೀ ಜಾಣ । ವ್ಯಾನಾಸೀ ನಾಹೀ ಏಕ ಸ್ಥಾನ । ತೋ ಸರ್ವಾಂಗೀ ಸರ್ವದಾ ಜಾಣ । ಪರಿಭ್ರಮಣ ಕರೀತಸೇ ॥೩೧೮॥ ಯಾಹೂನ ಧಾಕಟೇ ಪಾಂಚ ಪ್ರಾಣ । ತೇಹೀ ವೇಗಳೇ ರಾಹಿಲೇ ಜಾಣ । ತಿಹೀ ವೇಗಳಾಲೇ ಆಪಣ । ವಸ್ತೀಸೀ ಸ್ಥಾನ ಯೋಜಿಲೇ ॥೩೧೯॥ ನಾಗ ಕೂರ್ಮ ಕೃಕಲ ದೇವದತ್ತೂ । ಪಾಂಚವಾ ಧನಂಜಯ ಜಾಣ ತೇಥೂ । ಯಾಂಚಿ ವಸ್ತೀ ಜೇ ಶರೀರಾಂತೂ । ಏಕ ನಿಶ್ಚಿತೂ ಸಾಂಗೇನ ॥೩೨೦॥ ಶಿಂಕ ಜಾಂಭಈ ಆಣೀ ಢೇಂಕರ । ನಾಗ ಕೂರ್ಮ ಕೃಕಲಾಚೇ ಘರ । ಉಚಕೀ ದೇವದತ್ತಾಚೇ ಬಿಢಾರ । ಧನಂಜಯಾಸೀ ಥಾರ ಮಿಳೇಚಿನಾ ॥೩೨೧॥ ಜೀವದೇಹಾಂಚೇ ಆಪ್ತವಾದಾಪಾಸೀ । ಧನಂಜಯೋ ರಾಹಿಲಾ ವಸ್ತೀಸೀ । ಜೀವೇ ಸಾಂಡಿಲ್ಯಾ ಶರೀರಾಸೀ । ಮೂಹೂರ್ತಾರ್ಧ ದೇಹಾಸೀ ತೋ ವಾಂಚವೀ ॥೩೨೨॥ ಸ್ವಾಧಿಷ್ಠಾನಾ ಹೋನಿ ಜಾಣ । ಅನುಕ್ರಮೇ ದಶಧಾಹೋತೀ ಪ್ರಾಣ। ತ್ಯಾಂಚೇ ಸ್ಥಾನ ಮಾನ ಉಪಲಕ್ಷಣ । ತುಜ ಮ್ಯಾ ಜಾಣ ಸಾಂಗಿತಲೇ ॥೩೨೩॥ ಮಾಗೇ ಮ್ಯಾ ಸಾಂಗಿತಲೀ ಗೋಷ್ಟೀ । ಪ್ರಾಣಾಪಾನ ರುಸಲ್ಯಾಪಾಠೀ । ದೋಘಾ ಅದ್ಯಾಪೀ ನಾಹೀ ಭೇಟೀ । ಮಹಾಹಟೀ ಥಾಂದಸ ॥೩೨೪॥ ತ್ಯಾ ದೋಘಾಂಸೀ ಕರೀ ಭುಜಾವಣ । ತೋ ಮಾರ್ಝಾ ಪಢಿಯಂತಾ ತೂ ಜಾಣ । ತ್ಯಾ ಸರ್ವಸ್ವ ದೇ ಮೀ ಆಪಣ। ಯೋಗಸಾಧನ ಯಾ ನಾಂವ ॥೩೨೫॥ ಉದ್ಧವಾ ಪ್ರಾಣ ಲಕ್ಷಣೇ ಸಾಂಗತಾ । ಅವಚಟೇ ಪ್ರಾಣಾಪಾನ ಸಮತಾ । ಪ್ರಸಂಗೀ ಆಲೀ ಕಥಾ । ತ್ವಾಂಹೀ ಸ್ವಭಾವತಾ ಏಕಾವೀ ॥೩೨೬॥ ಸ್ವಾಧಿಷ್ಠಾನಾಹೂನಿ ಮಣಿಪುರಾ ಯೇತಾ । ಜೀವಾಮನಾಸೀ ಏಕಾತ್ಮತಾ । ಸೂಕ್ಷ್ಮಪ್ರಾಣ ತೇಥ ವಸತಾ । ಪರೇಚ್ಯಾ ಐಕ್ಯತಾ ಪಶ್ಯಂತೀ ॥೩೨೭॥ ತೇಥ ಮನಾಚೇ ಖೇಳುಗೇಪಣ । ಕುಮಾರ ಅವಸ್ಥಾ ಬಾಣಲೀ ಜಾಣ । ತಂವ ಡೋಲತ ಪುಢೇ ಚಾಲೇ ಪ್ರಾಣ । ಅನಾಹತಸ್ಥಾನ ಠಾಕಿಲೇ ॥೩೨೮॥ ಧರೋನಿ ಪಶ್ಯಂತೀಚೇ ಅನುಸಂಧಾನ । ಮಧ್ಯಮಾ ವಾಚಾ ಉಪಜೇ ಜಾಣ । ಮೌನಾಚೀ ಮಿಠೀ ನ ಸೋಡೂನ । ಕರೀ ಗುಣಗುಣ ಆಪಣಾಂತ ॥೩೨೯॥

ಮುನಿಸಿಕೊಂಡು ಹೋದ ವಾಯುವಿಗೆ ಅಪಾನವೆನ್ನುವರು ಮತ್ತು ಕ್ರೋಧದಿಂದ ಮುಂದೆ ಬಂದ ವಾಯುವಿಗೆ ಪ್ರಾಣವೆನ್ನುವರು ॥೩೧೬॥ ಈ ಇಬ್ಬರಲ್ಲಿ ಸಮಸಮಾನ ತತ್ವದಿಂದ ನಾಭಿಯಲ್ಲಿರುವ ವಾಯುವಿಗೆ ''ಸಮಾನ'' ವೆಂದು ಹೇಳುವರು. ಕಂಠದಲ್ಲಿ ಇರುವ ವಾಯುವಿಗೆ ಉದಾನವೆನ್ನುವರು. ಆದರೆ ವ್ಯಾನಕ್ಕೆ ಇರಲು ನಿಶ್ಚಿತವಾದ ಸ್ಥಳವೇ ಇಲ್ಲದಾಯಿತು ॥೩೧೭॥ ಶರೀರದಲ್ಲಿ ಈಗಲೂ ವ್ಯಾನಕ್ಕೆ ಒಂದು ನಿಯಮಿತ ಸ್ಥಾನವಿಲ್ಲ. ಆದ್ದರಿಂದ ಅದು ಯಾವಾಗಲೂ ಸರ್ವ ಅಂಗದಲ್ಲಿ ಸಂಚಾರ ಮಾಡುತ್ತಿರುವುದು ॥೩೧೮॥ ಇವುಗಳಿಗಿಂತಲೂ ಇನ್ನೂ ಸೂಕ್ಷ್ಮವಾಗಿರುವ ಐದು ಪ್ರಾಣಗಳಿರುವುವು. ಅವು ಭಿನ್ನ ಭಿನ್ನ ಸ್ಥಾನಗಳಲ್ಲಿರುವವು. ಅವು ತಾವಿರಲು ತಾವೇ ಬೇರೆ ಬೇರೆ ಸ್ಥಳಗಳನ್ನು ಆರಾಯಿಸಿಕೊಂಡಿರುವುವು ॥೩೧೯॥ ನಾಗ, ಕೂರ್ಮ, ಕೃಕಲ, ದೇವದತ್ತ ಮತ್ತು ಧನಂಜಯ ಹೀಗೆ ಇಲ್ಲಿ ಸೂಕ್ಷ್ಮವಾದ ಪಂಚಪ್ರಾಣಗಳಿರುವುವು. ಶರೀರದಲ್ಲಿರುವ ಇವುಗಳ ವಸತಿಗಳನ್ನು ಯಾವ ಯಾವ ಸ್ಥಾನಗಳಲ್ಲಿವೆ ಎಂಬುವುದನ್ನು ನಿಶ್ಚಯಪೂರ್ವಕವಾಗಿ ಹೇಳುವೆನು, ಅದಕ್ಕಾಗಿ ಕೇಳು ॥೩೨೦॥ ಶೀನುವುದು ಇದು ನಾಗದ ಸ್ಥಾನವು. ಆಕಳಿಸುವುದು ಇದು ಕೂರ್ಮದ ಸ್ಥಾನವು. ತೇಗುವುದು ಇದು ಕೃಕಲದ ಸ್ಥಾನವು. ಬಿಕ್ಕಳಿಸುವುದು ಇದು ದೇವದತ್ತದ ಬೀಡಾಗಿರುವುದು. ಧನಂಜಯಕ್ಕೆ ಎಲ್ಲಿಯೂ ಸ್ಥಳವು ದೊರೆಯದಾಯಿತು ॥೩೨೧॥ ಆದ್ದರಿಂದ ಜೀವ ಮತ್ತು ದೇಹ ಇವುಗಳ ಸಂಗಮವಾಗುವ ಸ್ಥಳದಲ್ಲಿ ಚಿತ್ತಗ್ರಂಥೀಯಲ್ಲಿ ಧನಂಜಯವು ವಸತಿಯಾಗಿರುವುದು. ಆದ್ದರಿಂದ ಜೀವವು ಶರೀರವನ್ನು ಬಿಟ್ಟಾಗಲೂ ಕೂಡ ಅದು ಸ್ವಲ್ಪ ಸಮಯದವರೆಗೆ ಯಾವ ಈ ಶರೀರವನ್ನು ಬದುಕಿಸುವುದು ॥೩೨೨॥ ಸ್ವಾಧಿಷ್ಠಾನ ನಾಮದ ಚಕ್ರದಿಂದ ಅನುಕ್ರಮವಾಗಿ ಪ್ರಾಣದ ಹತ್ತು ವಿಭಾಗಗಳಾಗುವುವು. ಅವುಗಳ ಸ್ಥಾನ, ಮಾನ ಮತ್ತು ಉಪಲಕ್ಷಣಗಳು ಈ ಎಲ್ಲವನ್ನೂ ನಾನು ನಿನಗೆ ಹೇಳಿದೆನು ॥೩೨೩॥ ಈ ಹಿಂದೆ ನಾನು ನಿನಗೆ ಪ್ರಾಣ ಮತ್ತು ಅಪಾನ ಈ ಇಬ್ಬರೂ ಮುನಿಸಿಕೊಂಡಿದ್ದಾರೆಂದು ತಿಳಿಸಿ ಹೇಳಿದ್ದೆನು. ತದನಂತರ ಆ ಈರ್ವರ ಭೇಟಿಯು ಇಲ್ಲಿಯವರೆಗೂ ಆಗಿರುವುದಿಲ್ಲ. ಕಾರಣ ಅವು ಮಹಾ ಹಠವಾದಿ ಮತ್ತು ಛಾಂದಿಷ್ಟವಾಗಿವೆ ॥೩೨೪॥ ಈ ಈರ್ವರನ್ನು ಸಮಾಧಾನಪಡಿಸುವವರೇ ನನ್ನ ಪ್ರಿಯರಾಗಿರುವರೆಂದು ನೀನು ತಿಳಿದುಕೋ. ನಾನು ಅವರಿಗೆ ಸ್ವತಃ ಸರ್ವಸ್ವವನ್ನು ಅರ್ಪಿಸುವೆನು. ಇದರ ನಾಮವೇ ಯೋಗಸಾಧನೆಯಾಗಿರುವುದು ॥೩೨೫॥ ಹೇ ಉದ್ಧವನೇ, ಪ್ರಾಣಗಳ ಲಕ್ಷಣಗಳನ್ನು ಹೇಳುತ್ತಿರಲು ಏಕಾಏಕೀಯಾಗಿ ಪ್ರಾಣ ಮತ್ತು ಅಪಾನ ಇವುಗಳಸಾಮ್ಯ ಸ್ಥಿತಿ ಹೇಳುವ ಗತಿಯು ಪ್ರಸಂಗಾನುಸಾರವಾಗಿ ಬಂದಿತು. ಆದ್ದರಿಂದ ಅದನ್ನೂ ಕೂಡ ನೀನು ಸಹಜವಾಗಿ ಕೇಳಿ ತಿಳಿದುಕೋ ॥೩೨೬॥ ಸ್ವಾಧಿಷ್ಠಾನ ಚಕ್ರದಿಂದ ಮಣಿಪೂರ ಚಕ್ರಕ್ಕೆ ಬರುವರು. ಅಲ್ಲಿ ಜೀವ ಮತ್ತು ಮನ ಇವುಗಳ ಐಕ್ಯವಾಗುವುದು. ಅಲ್ಲಿ ಸೂಕ್ಷ್ಮ ಪ್ರಾಣವು ಉಳಿಯಿತೆಂದರೆ ಪರಾ ಮತ್ತು ಪಶ್ಯಂತಿ ಇವುಗಳ ಏಕಾತ್ಮತೆಯಾಗಿಬಿಡುವುದು ॥೩೨೭॥ ಆಗ ಮನಸ್ಸಿಗೆ ಆಟಾಡುವಿಕೆಯು ಉತ್ಪನ್ನವಾಗಿ ಬಾಲ್ಯದಶೆಯು ಪ್ರಾಪ್ತವಾಗುವುದು. ಹೀಗೆ ತಿಳಿ. ತದನಂತರ ಪ್ರಾಣವು ತೂಗಾಡುತ್ತ ತೂಗಾಡುತ್ತ ಮುಂದೆ ನಡೆಯಲಾರಂಭಿಸುವುದು. ಮುಂದೆ ಅನಹತ ಸ್ಥಾನಕ್ಕೆ ಬಂದು ಮುಟ್ಟಿಕೊಳ್ಳುವುದು ॥೩೨೮॥ ಆಗ ಪಶ್ಯಂತೀ ವಾಣಿಯ ಅನುರೋಧದಿಂದ ಮಧ್ಯಮಾ ಹೆಸರಿನ ವಾಣಿಯು ಉತ್ಪನ್ನವಾಗುವುದು. ಅದು ಮೌನವನ್ನು ಅಪ್ಪಿಕೊಂಡದ್ದನ್ನು ಬಿಡುವುದಿಲ್ಲ. ತಾನು ತನ್ನಲ್ಲಿಯೇ ಗುಣಗುಣವನ್ನು ಮಾಡುತ್ತಿರುವುದು ॥೩೨೯॥

ತೇಥ ಮನಾಚೀ ಪೌಗಂಡ ಅವಸ್ಥಾ । ಮಾಗೇ ಪುಢೇ ಸಾಂಭಾಳಿತಾ । ವಾಂಛೀ ನಾನಾ ಭೋಗ ಅವಸ್ಥಾ । ಲಾಜಾ ಸರ್ವಥಾ ಬೋಲೇನಾ ॥೩೩೦॥ ಮಗ ವೇಗೇ ಠಾಕಿಲೇ ವಿಶುದ್ಧಿಸ್ಥಾನ । ತೇಥ ಉಸಳತ ಉದಾನ ಝಾಲಾ ಪ್ರಾಣ । ತಂವ ಮನಾಸೀ ತಾರುಣ್ಯಪಣ । ಪುರತೇ ಜಾಣ ಬಾಣಲೇ ॥೩೩೧॥ ತಯಾ ವಿಶುದ್ಧ ಚಕ್ರಾಪ್ರತೀ । ಪರಾ ಮಿಳೋನಿ ಆಂತೌತೀ । ಪಶ್ಯಂತೀ ಮಧ್ಯಮಾ ಏಕ ಹೋತೀ । ವಾಚಾ ಘುಮಘುಮತೀ ಝಣತ್ಕಾರೇ ॥೩೩೨॥ ತ್ಯಾ ಝಣತ್ಕಾರಾಪರಿಪಾಠೀ । ವಕ್ತ್ರೀ ವಾಚಾ ತತ್ಕಾಳ ಉಠೀ । ತಾರುಣ್ಯೇ ಉನ್ಮತ್ತ ಝಾಲೀ ಮೋಠೀ । ತ್ಯಾ ಸ್ವರವರ್ಣ ಚಾವಟೀ ಮಾಂಡಿಲೀ ॥೩೩೩॥ ಆಜ್ಞಾ ಚಕ್ರ ಭ್ರೂಸ್ಥಾನ । ತೇ ಯಾಹೂನಿ ವೇಗಳೇ ಜಾಣ । ತೇಥೇ ವಾಚೇಸೀ ನಾಹೀ ಗಮನ । ಹಂಸಲಕ್ಷಣ ಯೋಗ್ಯಾಂಚೇ ॥೩೩೪॥ ಹೀ ಸಾಹೀ ಚಕ್ರೇ ಅನುಕ್ರಮೇ ಜಾಣ । ಚಾರ ಮಾತೃಕಾ ಅಠ್ಠಾವೀಸ ವರ್ಣ । ಸೋಳಾಹೀ ಸ್ವರ ಸಂಪೂರ್ಣ । ಹಂಸಲಕ್ಷಣ ಯೋಗಿಯಾಂಚೇ ॥೩೩೫॥ ಕೋಣ ಚಕ್ರೀ ಕೋಣ ವರ್ಣ । ಮಾತೃಕಾಂಚೇ ಕೋಣತೇ ಸ್ಥಾನ । ಕೋಠೇ ಉಠತೀ ಸ್ವರ ಸಂಪೂರ್ಣ । ತೇಹೀ ಲಕ್ಷಣ ಅವಧಾರೀ ॥೩೩೬॥ ಆಧಾರಚಕ್ರೀ ಚತುರ್ದಳ ಉಭಾರಾ । ತೇಥ ನಾಸಿಲ್ಯಾ ಚಾರೀ ಮಾತ್ರಾ । ವ ಶ ಷ ಸ ಯಾ ಅಕ್ಷರಾ । ಬೋಲಿಜೇ ಮಾತ್ರಾ ಶಾಸ್ತ್ರಾಜ್ಞೀ ॥೩೩೭॥ ಸ್ವಾಧಿಷ್ಠಾನ ಷಡ್ದಳ ಜೇಥ । ಸಾಹೀ ವರ್ಣಸ್ಥಾಪಿಲೇ ತೇಥ । ಬಕಾರಾದೀ ಲಕಾರಾಂತ । ಜಾಣ ನಿಶ್ಚಿತ ತೇ ಸ್ಥಾನೀ ॥೩೩೮॥ ಮಣಿಪೂರ ದಶದಳ ನಿಶ್ಚಿತ ದಹಾ ವರ್ಣ ಸ್ಥಾಪಿಲೇ ತೇಥ । ಡಕಾರಾದಿ ಫಕಾರಾಂತ । ವರ್ಣ ನಾಂದತ ತೇ ಚಕ್ರೀ ॥೩೩೯॥ ಅನಾಹತಚಕ್ರ ದ್ವಾದಶದಳಯುಕ್ತ । ಬಾರಾ ವರ್ಣ ನ್ಯಾಸಿಲೇ ತೇಥ । ಕಕಾರಾದಿ ಠಕಾರಾಂತ । ವರ್ಣೇ ವಿರಾಜತ ತೇ ಚಕ್ರೀ ॥೩೪೦॥ ವಿಶುದ್ಧಿಚಕ್ರೀಚ್ಯಾ ಸೋಳಾ ದಳಾ । ಅ ಇ ಉ ಋ ಲು ಹೇ ವರ್ಣ ಸೋಳಾ । ಕಂಠಸ್ಥಾನೀ ಮಿನಲಾ ಮೇಳಾ । ಯಾಂಚಾ ವೇದೀ ಅಗಳಾ ಪ್ರತಾಪ ॥೩೪೧॥ ಆಜ್ಞಾ ಚಕ್ರ ಅತಿ ಅವಘಡ । ನುಘಡೇ ಕಾಕೀ ಮುಖಾಚೇ ಕವಾಡ । ನ ಚಲೇ ಪ್ರಾಣಾಂಚೇ ಚಡಫಡ । ಮಾರ್ಗ ಅತಿಗೂಢ ಲಕ್ಷೇನಾ ॥೩೪೨॥ ತೇ ಆಜ್ಞಾ ಚಕ್ರ ಗಾ ದ್ವಿದಳ । ಕೇವಳ ಹಂಸಾಚೇ ರಾಉಳ । ತೇಥ ಪಾವಾವಯಾ ಯೋಗಬಳ । ಅತಿಪ್ರಬಳ ಪಾಹಿಜೇ ॥೩೪೩॥

ಅಲ್ಲಿ ಮನಸ್ಸಿಗೆ ಪೌಗಂಡಾವಸ್ಥೆಯು ಅಂದರೆ ಹದಿನಾರು ವರ್ಷದೊಳಗಿನ ಅವಸ್ಥೆ ವಿರುವುದು. ಅದಕ್ಕೆ ಹಿಂದು ಮುಂದು ಸಂಭಾಳಿಸುತ್ತಿರಲು ಅದು ಅನೇಕ ಪ್ರಕಾರದ ವಿಷಯ ಭೋಗಗಳ ಇಚ್ಛೆಯನ್ನು ಮಾಡುತ್ತಿರುವುದು. ಆದರೆ ನಾಚಿಕೆಯಿಂದ ಏನೂ ಹೇಳುವುದಿಲ್ಲ ॥೩೩೦॥ ತದನಂತರ ಪ್ರಾಣವು ಬಹು ವೇಗದಿಂದ ವಿಶುದ್ಧೀ ಸ್ಥಾನಕ್ಕೆ ಪ್ರಾಪ್ತವಾಗುವುದು. ಮತ್ತು ಅಲ್ಲಿ ಉಚ್ಛೃಂಖಲ ಎಂಬ ಉದಾನದ ಸ್ವರೂಪವನ್ನು ಆ ಪ್ರಾಣವು ಧರಿಸುವುದು. ಆಗ ಮನಸ್ಸಿಗೂ ಕೂಡ ಪರಿಪೂರ್ಣವಾಗಿ ತಾರುಣ್ಯವು ಪ್ರಾಪ್ತವಾಗುವುದು ॥೩೩೧॥ ಆ ಯಾವ ವಿಶುದ್ಧ ಚಕ್ರದಲ್ಲಿ ಒಳಗಿನಿಂದ ಪರಾವಾಣಿಯು ಬಂದು ಕೂಡುವುದು. ಮತ್ತು ಪಶ್ಯಂತಿ ಹಾಗೂ ಮಧ್ಯಮಾ ಇವೂ ಕೂಡ ಏಕತ್ರವಾಗುವುವು. ಈ ಪ್ರಕಾರವಾಗಿ ಆ ಯಾವ ಸರ್ವ ವಾಣಿಗಳು ಅಲ್ಲಿ ಮಿಗಿಲಾದ ಡೌಲಿನಿಂದ ಧ್ವನಿಮಾಡಹತ್ತುವುವು ॥೩೩೨॥ ಅವರ ಯಾವ ಈ ಝಣತ್ಕಾರದ ಹಿಂದೆಯೇ ಬಹುಬೇಗನೇ ಮುಖದಿಂದ ವಾಣಿಯು ಉತ್ಪನ್ನವಾಗಹತ್ತುವುದು. ಅದು ತಾರುಣ್ಯದ ಭರದಿಂದ ಬಹಳ ಉನ್ಮತ್ತವಾಗಿರುವುದು. ಅದು ಸ್ವರಗಳನ್ನು ಮತ್ತು ವರ್ಣಗಳನ್ನು ಸಿಕ್ಕ ಸಿಕ್ಕಹಾಗೆ ಬಡಬಡಿಸಲಾರಂಭಿಸುವುದು ॥೩೩೩॥ ಆಜ್ಞಾ ಚಕ್ರವು ಹುಬ್ಬುಗಳ ನಡುವೆ ಇದ್ದು ಅದು ಇವುಗಳಿಗಿಂತ ಭಿನ್ನವಾಗಿರುವುದು. ಅಲ್ಲಿ ವಾಣಿಗೆ ಹೋಗಲಿಕ್ಕೆ ಬರುವುದಿಲ್ಲ. ಯೋಗಿ ಜನರ ಅದು ಹಂಸಲಕ್ಷಣವಾಗಿರುವುದು ॥೩೩೪॥ ಹೀಗೆ ಕ್ರಮವಾಗಿ ಆರು ಚಕ್ರಗಳಿರುವುವು. ನಾಲ್ಕು ಮಾತೃಕೆಗಳು, ಇಪ್ಪತ್ತೆಂಟು ವರ್ಣಗಳು, ಹದಿನಾರು ಸ್ವರಗಳು, ಇದುವೇ ಆ ಯೋಗಿಯ ಹಂಸಲಕ್ಷಣವಾಗಿರುವುದು ॥೩೩೫॥ ಈಗ ಯಾವ ಚಕ್ರದಲ್ಲಿ ಯಾವ ವರ್ಣಗಳಿರುವುವು? ಮಾತೃಕೆಗಳ ಸ್ಥಾನಗಳು ಯಾವುವು? ಸರ್ವ ಸ್ವರಗಳು ಎಲ್ಲಿ ಉತ್ಪನ್ನವಾಗುವುವು? ಇವುಗಳನ್ನು ಕೇಳು ॥೩೩೬॥ ಆಜ್ಞಾ ಚಕ್ರದಲ್ಲಿ ನಾಲ್ಕು ದಳಗಳ ಕಮಲವಿರುವುದು. ಅದರಲ್ಲಿ ನಾಲ್ಕು ಮಾತ್ರೆಗಳ ನ್ಯಾಸವನ್ನು ಮಾಡಲಾಗಿರುವುದು. ವ, ಶ, ಷ ಮತ್ತು ಸ ಈ ನಾಲ್ಕೂ ಅಕ್ಷರಗಳಿಗೆ ಶಾಸ್ತ್ರಜ್ಞನು ಮಾತ್ರ ಈ ಹೆಸರಿನಿಂದ ಸಂಬೋಧಿಸುವನು ॥೩೩೭॥ ಸ್ವಾಧಿಷ್ಠಾನ ಚಕ್ರಕ್ಕೆ ಆರು ದಳಗಳಿರುವುವು. ಬ, ದಿಂದ ಹಿಡಿದು ಲ ಕಾರದವರೆಗೆ ಅಲ್ಲಿ ಆರು ವರ್ಣಗಳನ್ನು ಸ್ಥಾಪಿಸಿರುವುವು. ಬ, ಭ, ಮ, ಯ, ರ ಮತ್ತು ರ ಈ ಆರು ವರ್ಣಗಳು ಈ ಸ್ಥಾನದಲ್ಲಿ ಇರುವುವು. ಹೀಗೆ ನಿಶ್ಚಯಪೂರ್ವಕವಾಗಿ ತಿಳಿದುಕೊ ॥೩೩೮॥ ಮಣಿಪೂರ ಚಕ್ರಕ್ಕೆ ಹತ್ತು ದಳಗಳಿರುವುವು. ಅಲ್ಲಿ ಹತ್ತು ವರ್ಣಗಳನ್ನು ಸ್ಥಾಪಿಸಲಾಗಿರುವುದು. ಡ, ದಿಂದ ಫ, ವರೆಗೆ ಅಂದರೆ ಡ, ಢ, ಣ, ತ, ಥ, ದ, ಧ, ನ, ಪ, ಫ. ಈ ಯಾವ ಹತ್ತು ವರ್ಣಗಳು ಈ ಚಕ್ರದಲ್ಲಿ ವರ್ತಿಸುತ್ತಿರುವುವು ॥೩೩೯॥ ಅನಾಹತ ಚಕ್ರವು ಇದು ಹನ್ನೆರಡು ದಳಗಳದ್ದಾಗಿರುವುದು. ಅಲ್ಲಿ ಕ, ದಿಂದ ಠ, ವರೆಗೆ ಅಂದರೆ ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ. ಹೀಗೆ ಹನ್ನೆರಡು ವರ್ಣಗಳನ್ನು ಸ್ಥಾಪಿಸಿರುವುವು. ಅವು ಆ ಚಕ್ರದಲ್ಲಿ ಶೋಭಿಸುತ್ತಿರುವುವು ॥೩೪೦॥ ವಿಶುದ್ಧ ಚಕ್ರವು ಇದು ಹದಿನಾರು ದಳಗಳಿಂದ ಕೂಡಿದೆ. ಅದರಲ್ಲಿ ಅ, ಇ, ಉ, ಋ, ಲು ಇತ್ಯಾದಿ ಒಟ್ಟಿಗೆ ಹದಿನಾರು ಸ್ವರಗಳಿರುವುವು. ಕಂಠದಲ್ಲಿ ಈ ಸ್ವರಗಳ ಸಮುದಾಯವಿರುವುದು. ವೇದಗಳಲ್ಲಿ ಇವುಗಳ ಅಗಾಧ ಸಾಮರ್ಥ್ಯವನ್ನು ವರ್ಣಿಸಿರುವುದು ॥೩೪೧॥ ಆಜ್ಞಾ ಚಕ್ರವು ಮಾತ್ರ ಅತಿಶಯವಾಗಿ ದುರ್ಗಮವಾಗಿದೆ. ಅಲ್ಲಿ ಕಾಕಿಮುಖವಿರುವ ಈ ದ್ವಾರವು ತೆರೆಯುವುದೇ ಇಲ್ಲ. ಅಲ್ಲಿ ಪ್ರಾಣಗಳ ಪ್ರಯತ್ನವು ನಡೆಯುವುದಿಲ್ಲ. ಅಲ್ಲಿಯ ಮಾರ್ಗವು ಅತಿಶಯವಾಗಿ ಗೂಢವಾಗಿರುವುದರಿಂದ ಅದು ಅವುಗಳಿಗೆ ಸಿಗಲು ಅಸಾಧ್ಯವಾಗಿರುವುದು ॥೩೪೨॥ ಆ ಆಜ್ಞಾ ಚಕ್ರವು ಎರಡು ದಳಗಳಿಂದ ಕೂಡಿರುವುದು. ಶುದ್ಧ ಹಂಸದ ಇದು ಮಂದಿರವಾಗಿರುವುದು. ಅಲ್ಲಿಗೆ ಮುಟ್ಟಬೇಕಾದರೆ ಅತ್ಯಂತ ಮಹಾನ್ ಯೋಗ ಸಾಮರ್ಥ್ಯವಿರಬೇಕಾಗುವುದು ॥೩೪೩॥

ಹೇ ಸ್ಥಾನ ಪಾವಾವಯಾ ಸಾಠೀ । ಯೋಗಿ ಝಾಲೇ ಮಹಾಹಟೀ । ಅಭ್ಯಾಸ ಕರಿತಾ ಅತಿಸಂಕಟೀ । ತೇಹೀ ಶೇವಟೀ ನ ಪಾವತೀ ।।೩೪೪।। ಹೇ ಪಾವಾವಯಾ ಮಾಝೇ ಸ್ಥಾನ । ಅತಿಗುಹ್ಯ ಆಹೇ ಅನುಷ್ಠಾನ। ಸೋಹಂಹಂಸಾಚೇ ಸಾಧನ । ಸಾವಧಾನ ಜೋ ಸಾಧೀ ।।೩೪೫।। ಪ್ರಾಣಾಚೇನಿ ಗಮನಾಗಮನೇ। ಸೋಹಂಹಂಸಾಚೇನಿ ಸ್ಮರಣೇ । ಸಾವಧಾನೇ ಜೋ ಸಾಧೂ ಜಾಣೇ । ತೇಣೇ ಪಾವಣೇ ಹೇ ಸ್ಥಾನ ।।೩೪೬।। ತ್ಯಾಸೀಚಿ ಪವನಜಯೋ ಘಡೇ । ತೋಚಿ ಆಜ್ಞಾಚಕ್ರಾಮಾಜೇ ಚಢೇ । ತೇಥೂನಿಹೀ ಮಾರ್ಗ ಕಾಢೀ ಪುಢೇ। ಅತಿನಿವಾಡೇ ಅಚುಕ ।।೩೪೭।। ತೇಥ ನಾನಾಭೋಗಸಮೃದ್ಧಿ ಫಳೇ । ಆಣಿತೀ ಋದ್ಧಿಸಿದ್ಧಿಂಚೇ ಪಾಳೇ । ತೇ ಡಾವಲೂನಿಯಾ ಸಕಳೇ । ನಿಘೇ ನಿರ್ಮಳೇ ನಿಜಪಂಥೇ ।।೩೪೮।। ಜೋ ಕಾ ರಿದ್ಧಿಸಿದ್ಧೀಸೀ ಭುಲಲಾ । ಮೀ ಸಿದ್ಧ ಯೇ ಶ್ಲಾಘೇ ಆಲಾ । ತೋ ಆಜ್ಞಾಚಕ್ರಾವರೋನಿ ಚೇವಲಾ । ಕೇಲ್ಯಾ ಮುಕಲಾ ಕಷ್ಟಾಸೀ ।।೩೪೯।। ಜ್ಯಾಸೀ ವೈರಾಗ್ಯ ಅಸೇ ಸಪುರತೇ । ತೋ ಕದಾ ಭುಲೇನಾ ಸಿದ್ಧಿತೇ । ಲಾತಾ ಹಾಣೋನಿ ಭೋಗಮಾನ್ಯತೇತೇ । ನಿಘೇ ನಿಜಪಂಥೇ ಮಜಲಾಗೀ ।।೩೫೦।। ತ್ರೈ ಔಟಪೀಠ ಗೋಲ್ಹಾಟ। ಸಾಂಡೂನಿ ಭ್ರಮರಗುಂಫಾ ಕಚಾಟ। ಶೋಋೂನಿ ಸಹಸ್ರದಳಾಚೇ ಪಾಟ। ಮಜಮಾಜೇ ಸುಭಟ ಮಿಸಳಲೇ ।।೩೫೧।। ಸಾಂಗತಾ ಆಜ್ಞಾಚಕ್ರಾಚೇ ಸಂಸ್ಥಾ । ಪುಢೇ ಗೋಡೀ ಲಾಗಲೀ ಯೋಗಪಂಥಾ । ಮಾಗೀಲ ವಿಸರಲೋ ಜೇ ಕಥಾ । ಕ್ಷಮಾ ಶ್ರೋತಾ ಕರಾವೀ।।೩೫೨।। ಮ್ಹಣಾಲ ವಾಹವಟೀ ಪಡಲಾ ಮಾಸಾ। ತೋ ಪರತೇನಾ ಜೇವೀ ಸಹಸಾ। ಗ್ರಂಥನಿರೂಪಣೇ ತೂ ತೈಸಾ। ಜಲ್ಪೂ ವಾಯಸಾ ಕಾ ಕರಿಸೀ ।।೩೫೩।। ಜೇವೀ ಚುಕಲಿಯಾ ಬಾಳಕಾತೇ । ಮಾತಾ ಶಿಕವಣ ದೇ ತ್ಯಾತೇ । ತೇವೀ ತುಮಚೇ ವಚನ ಮಾತೇ । ನಿಜಹಿತಾತೇ ದ್ಯೋತಕ ।।೩೫೪।। ಕರಿತಾ ಚಕ್ರಾಂಚೇ ನಿರೂಪಣ । ಯೋಗಾರೂಢ ಝಾಲೇ ಮನ । ವಿಸರೋನಿ ಮಾಗೀಲ ನಿರೂಪಣ । ಗೇಲೇ ನಿಘೂನ ಶೇವಟಾ ।।೩೫೫।। ಹೇ ಐಕೋನಿ ಹಾಂಸಿಲೇ ಶ್ರೋತೇ । ತೂ ಕರ್ತಾ ನವ್ಹಸೀ ಯೇಥೇ । ಹೇ ಕಳೋನಿ ಗೇಲೇ ಆಮುತೇ । ನಕೋ ಪರಿಹಾರಾತೇ ಉಪಪಾದೂ ।।೩೫೬।।

ಈ ಸ್ಥಾನಕ್ಕೆ ಬಂದು ಮುಟ್ಟುವುದಕ್ಕಾಗಿ ಯೋಗಿ ಜನರು ನಾನಾ ಪ್ರಕಾರಗಳ ಹಟಯೋಗ ಸಾಧನೆಯನ್ನು ಮಾಡುವರು. ಆದರೆ ಅವರು ಎಷ್ಟೇ ಸಂಕಟಗಳನ್ನು ಸೋಸಿ ಯೋಗದ ಅಭ್ಯಾಸವನ್ನು ಮಾಡಿದರೂ ಕೂಡ ಕೊನೆಗೂ ಅವರು ಅಲ್ಲಿಗೆ ಬಂದು ಮುಟ್ಟಲಾರರು ।೩೪೪॥ ಹೀಗಿರುವ ಆ ಯಾವ ನನ್ನ ಸ್ಥಾನವನ್ನು ಮುಟ್ಟಿಕೊಳ್ಳುವುದಕ್ಕಾಗಿ ಅತ್ಯಂತ ಗೂಢವಾದ ಒಂದು ಅನುಷ್ಠಾನವಿರುವುದು. ಯಾರು ಲಕ್ಷಪೂರ್ವಕವಾಗಿ ಸೋಹಂ ಹಂಸದ ಸಾಧನೆಯನ್ನು ಸಾಧಿಸುವರೋ ಆತನೇ ಈ ಸ್ಥಳವನ್ನು ಮುಟ್ಟಲು ಸಾಧ್ಯನಾಗಿರುವನು ।೩೪೫॥ ಪ್ರಾಣಾಯಾಮದ ನಿರೋಧ ಹಾಗೂ ತ್ಯಾಗವನ್ನು ಮಾಡಿ ಸೋಹಂ ಹಂಸದ ಸ್ಮರಣೆಯನ್ನು ಮಾಡುತ್ತ ಯಾರು ಈ ಅನುಷ್ಠಾನವನ್ನು ಅತ್ಯಂತ ಲಕ್ಷಪೂರ್ವಕವಾಗಿ ಸಾಧಿಸುವನೋ, ಆತನೇ ಈ ಸ್ಥಾನವನ್ನು ಪ್ರಾಪ್ತಮಾಡಿಕೊಳ್ಳಬಲ್ಲನು ।೩೪೬॥ ಆತನಿಗೆ ಮಾತ್ರ ವಾಯುವಿನ ನಿರೋಧವಾಗುವುದು ಮತ್ತು ಆತನೇ ಆಜ್ಞಾಚಕ್ರದಲ್ಲಿ ಪ್ರವೇಶ ಮಾಡುವನು. ಇಷ್ಟೇ ಅಲ್ಲ, ಆತನು ಅಲ್ಲಿಂದಲೂ ಕೂಡ ಮುಂದೆ ಅತಿನಿರ್ಣಾಯಕ ಮಾರ್ಗವನ್ನು ಶೋಧಿಸುತ್ತಿರುವನು ।೩೪೭॥ ಅಲ್ಲಿ ಋದ್ಧಿ-ಸಿದ್ಧಿಗಳ ಸಮುದಾಯವು ಅನೇಕ ಸುಖಪ್ರಾಪ್ತಿಯ ಫಲಗಳನ್ನು ಆತನಿಗೆ ಪ್ರಾಪ್ತಮಾಡಿಕೊಡುವುವು. ಆದರೆ ಆತನು ಅವೆಲ್ಲವನ್ನೂ ಬದಿಗೊತ್ತುವನು. ತನ್ನದೇ ಆದ ಪವಿತ್ರಮಾರ್ಗದಿಂದ ಮುಂದೆ ನಡೆಯಲಾರಂಭಿಸುವನು ।೩೪೮॥ ಋದ್ಧಿ-ಸಿದ್ಧಿಗಳಿಗೆ ಯಾವನು ಭುಲಾಯಿಸುವನೋ ಅಥವಾ ನಾನೇ ಸಿದ್ಧನೆಂಬ ಅಭಿಮಾನವು ಯಾವನಿಗೆ ನಿರ್ಮಾಣವಾಗುವುದೋ, ಅವನು ಆ ಆಜ್ಞಾಚಕ್ರದಿಂದ ಚ್ಯುತನಾದನೆಂದು ತಿಳಿಯಬೇಕು. ಹಾಗೂ ಆತನು ಮಾಡಿದ ಸರ್ವ ಶ್ರಮದ ಫಲವನ್ನು ಕಳೆದುಕೊಳ್ಳುವನು ।೩೪೯॥ ಯಾರ ಅಂಗದಲ್ಲಿ ಪರಿಪೂರ್ಣವಾದ ವೈರಾಗ್ಯವಿರುವುದೋ, ಆತನು ಸಿದ್ಧಿಗಳಿಗೆ ಎಂದಿಗೂ ಮರುಳಾಗುವುದಿಲ್ಲ. ಸುಖೋಪಭೋಗ ಹಾಗೂ ಮಾನಮಾನ್ಯತೆಗಳನ್ನು ಒದ್ದೋಡಿಸಿ ನನ್ನ ಪ್ರಾಪ್ತಿಗಾಗಿ ತನ್ನ ಮಾರ್ಗದಿಂದ ಸತತವಾಗಿ ನಡೆಯುತ್ತಿರುವನು ।।೩೫೦॥ ತದನಂತರ ಔಟಪೀಠ ಹಾಗೂ ಗೋಲ್ಹಾಟ ದಾಟಿಕೊಂಡು ಭ್ರಮರಗವಿಯ ಜಾಲದಿಂದ ಪಾರಾಗಿ ಸಹಸ್ರಕಮಲದ ಪ್ರವಾಹದ ಶೋಷಣೆ ಮಾಡಿ ಧೈರ್ಯಶೀಲ ಯೋಗಿ ಪುರುಷನು ನನ್ನಲ್ಲಿ ಏಕರೂಪನಾಗುವನು ।೩೫೧॥ ಆಜ್ಞಾಚಕ್ರದ ವರ್ಣನೆಯನ್ನು ಮಾಡುತ್ತಿರಲು ಮುಂದೆ ಯೋಗಮಾರ್ಗದ ವರ್ಣನೆಯನ್ನು ಮಾಡುವ ಪ್ರೇಮವು ಹುಟ್ಟಿಕೊಂಡಿತು. ಆದ್ದರಿಂದ ಹಿಂದಿನ ಕಥೆಯನ್ನು ಹೇಳುವುದು ನಾನು ಮರೆತುಬಿಟ್ಟೆನು. ಅದಕ್ಕಾಗಿ ಶ್ರೋತೃಗಳವರೇ, ನನ್ನನ್ನು ಕ್ಷಮಿಸಿರಿ ।೩೫೨॥ ನೀವು ಹೀಗೆ ಹೇಳಬಹುದು. ಮೀನವು ಪ್ರವಾಹದ ಜೊತೆಯಲ್ಲಿ ಸಾಗುತ್ತಿರಲು ಅದು ಸಹಸಾ ಹಿಂದಕ್ಕೆ ತಿರುಗುವುದಿಲ್ಲ. ಅದರಂತೆ ಗ್ರಂಥದ ನಿರೂಪಣೆಯನ್ನು ಮಾಡುತ್ತಿರಲು ನೀನೂ ಕೂಡ ಮುಂದೆಯೇ ನಡೆಯುತ್ತಿರುವಿ. ವ್ಯರ್ಥವಾಗಿ ಶಬ್ದಗಳನ್ನು ಏಕೆ ಬೆಳೆಸುವೆ? ।೩೫೩॥ ತಪ್ಪಿದ ಬಾಲಕನಿಗೆ ತಾಯಿಯು ಯಾವ ಪ್ರಕಾರವಾಗಿ ಕಲಿಸಿ ತಿಳಿಸಿ ಹೇಳುವಳೋ, ಅದರಂತೆ ಈ ನಿಮ್ಮ ಭಾಷಣವು ನನ್ನ ನಿಜಹಿತಕಾರಕವೇ ಆಗಿರುವುದು ।೩೫೪॥ ಚಕ್ರಗಳ ವರ್ಣನೆಯನ್ನು ಮಾಡುವಾಗ ನನ್ನ ಮನವು ಯೋಗಾರೂಢವಾಯಿತು. ಆದ್ದರಿಂದ ನಾನು ಹಿಂದಿನ ಕಥೆಯ ಅನುಸಂಧಾನವನ್ನು ಮರೆತುಬಿಟ್ಟೆನು ।೩೫೫॥ ಇದನ್ನು ಕೇಳಿ ಶ್ರೋತೃಗಳು ನಕ್ಕರು, ಅವರು ಹೀಗೆಂದರು. ನೀನೇನು ಗ್ರಂಥದ ಕರ್ತನಲ್ಲ. ಇದು ನಮಗೆ ತಿಳಿದಿರುವುದು. ಅಂದಮೇಲೆ ಈಗ ಅದರ ನಿರಾಕರಣೆಯನ್ನು ಮಾಡುವುದಕ್ಕಾಗಿ ವಿಶೇಷವಾಗಿ ಯಾವ ಪ್ರತಿಪಾದನೆಯನ್ನು ಮಾಡುವ ಆವಶ್ಯಕತೆ ಇರುವುದಿಲ್ಲ ।೩೫೬॥

ಆಲೋಡಿತಾ ಗ್ರಂಥಕೋಡೀ । ನ ಕಳೇ ಯೋಜಜ್ಞಾನಾಚೀ ಗೋಡೀ । ತೋ ತುವಾ ವಿಶದ ಕೇಲೀ ಪುಡೀ । ನಿಜಪರವಡೀವಿಭಾಗೇ ॥೩೫೭॥ ತುರ್ಝೇನಿ ಮುಖೇ ಕೃಷ್ಣನಾಥೇ । ಶ್ರೀಭಾಗವತ ಜೇ ಕಠಿಣ ಹೋತೇ । ತೇ ಅರ್ಥವಿಲೇ ಯಥಾರ್ಥೇ । ಸತ್ಯ ಆಮುತೇ ಮಾನಲೇ ॥೩೫೮॥ ಹಾ ಬಾರಾವಾ ಅಧ್ಯಾವೋ । ಅತಿಗೂಢ ಬೋಲಿಲಾ ದೇವಾಧಿದೇವೋ । ತೇಥೀಚಾಹೀ ತ್ವಾಂ ಅಭಿಪ್ರಾವೋ । ವಿಶದ ಪಹಾ ಹೋ ವಿವರಿಲಾ ॥೩೫೯॥ ಐಸಾ ಸಂತೀ ಕರೋನಿ ಆದರೂ । ನಿರ್ಭಯ ದಿಧಲಾ ನಾಭಿಕಾರೂ । ಏಕಾ ಜನಾರ್ದನೀ ಹರ್ಷನಿರ್ಭರೂ । ಕೇಲಾ ನಮಸ್ಕಾರೂ ಸಂತಾಂಸೀ ॥೩೬೦॥ ''ವೈಖರೀ ಮಾತ್ರಾ ಸ್ವರ ವರ್ಣ'' । ಯಾ ಪದಾಂಚೇ ಝಾಲೇ ವ್ಯಾಖ್ಯಾನ । ತೇಚಿ ದೃಷ್ಟಾಂತೇ ಶ್ರೀಕೃಷ್ಣ । ಉದ್ಧವಾಸೀ ಜಾಣ ಸಾಂಗತೂ ॥೩೬೧॥ ಸೂಕ್ಷ್ಮ ಜೀವಶಿವಾಂಚೇ ಮೂಳ । ತೋಚಿ ವಾಗ್ದ್ವಾರಾ ಝಾಲಾ ಸ್ಥೂಲ । ಯೇಚಿ ಅರ್ಥೀ ಅತಿವಿವಳ । ಕರೂನಿ ಪ್ರಾಂಜಳ ಸಾಂಗತ ॥೩೬೨॥

ಯಥಾನಲಃ ಖೇಽನಿಲಬಂಧುರುಷ್ಮಾ ಬಲೇನ ದಾರುಣ್ಯಧಿಮಥ್ಯಮಾನಃ ।
ಅಣುಃಪ್ರಜಾತೋ ಹವಿಷಾ ಸಮೇಧತೇ ತಥೈವ ಮೇ ವ್ಯಕ್ತಿರಿಯಂ ಹಿ ವಾಣೀ ॥೧೮॥

ಅರ್ಥ:- ಅಗ್ನಿಯು ಆಕಾಶದಲ್ಲಿ ಉಷ್ಣತೆಯ ಅಥವಾ ವಿದ್ಯುತ್ ರೂಪದಿಂದ ಅವ್ಯಕ್ತವಾಗಿ ಸ್ಥಿತವಾಗಿರುವುದು. ಅದಕ್ಕಾಗಿ ಬಲಪೂರ್ವಕವಾಗಿ ಕಾಷ್ಠಗಳ ಮಂಥನ ಮಾಡಿದಾಗ ವಾಯುವಿನ ಸಹಾಯದಿಂದ ಅದು ಆರಂಭದಲ್ಲಿ ಅತ್ಯಂತ ಸೂಕ್ಷ್ಮವಾದ ಕಿಡಿಯ ರೂಪದಿಂದ ಪ್ರಕಟವಾಗಿ ಪುನಃ ಆಹುತಿ ಕೊಟ್ಟ ನಂತರ ಪ್ರಚಂಡವಾದ ರೂಪವನ್ನು ಧರಿಸುವುದು. ಆದರಂತೆ ನಾನು ಶಬ್ದ ಬ್ರಹ್ಮ ಸ್ವರೂಪದಿಂದ ಕ್ರಮವಾಗಿ ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ವಾಣಿಗಳ ರೂಪದಿಂದ ಪ್ರಕಟನಾಗುವೆನು.

ಅವ್ಯಕ್ತರೂಪೇ ಊಷ್ಮಾ ಗಗನೀ । ವ್ಯಾಪಕಪಣೇ ಅಸೇ ವನ್ಹೀ । ತೋ ಅರಣೀ ಮಾಜೀ ಮಥಿತಾ ಮಂಥನೀ । ಅತಿಸೂಕ್ಷ್ಮಪಣೇ ಪ್ರಕಟಲಾ ॥೩೬೩॥ ಅನಳಾ ಅನಿಳ ನಿಜಸಖಾ । ಕೋಮಳ ತೂಳೇ ಫುಂಕಿತಾ ದೇಖಾ । ದಿಸೇ ಲಖಲಖೀತ ನೇಟಕಾ । ಜ್ವಾಳಾ ಸಾಜುಕಾ ಕೋವಳಿಯಾ ॥೩೬೪॥ ತೇಥ ಪಾವಲಾ ದಶಾ ಮಧ್ಯಮ । ಮಗ ಹವನದ್ರವ್ಯೇಕರಿತಾ ಹೋಮ । ತೇಣೇ ಥೋರಾವಲಾ ನಿರುಪಮ । ವಾಢಲಾ ವ್ಯೋಮಚುಂಬಿತ ॥೩೬೫॥ ತೈಸಾ ಸೂಕ್ಷ್ಮನಾದ ಶಿವಸಂಯೋಗೇ । ಪ್ರಾಣಸಂಗಮೇ ಲಾಗವೇಗೇ । ಷಟ್‌ಚಕ್ರಾದಿ ಪ್ರಯೋಗೇ । ವೈಖರಿಯೋಗೇ ಅಭಿವ್ಯಕ್ತೀ ॥೩೬೬॥ ಮರಾ ಹೇ ಐಕತಾ ಗೋಠೀ । ತೇ ವಾಚಾ ಸರ್ವಾಂತೇ ವಾಟೇ ಖೋಟೀ । ತೇಚಿ ಅಕ್ಷರೇ ಕೇಲ್ಯಾ ಉಫರಾಟೀ । ರಾಮನಾಮೇ ಗೋಮಟೀ ನಿವವೀ ವಾಚಾ ॥೩೬೭॥ ಕರಿತಾ ಸುಷ್ಟು ದುಷ್ಟು ಉಚ್ಚಾರ । ವರ್ಣ ನವ್ಹತೀ ಕ್ಷರ ಅಕ್ಷರ । ಯಾಲಾಗಿ ನಾಂವ ತೇ ಅಕ್ಷರ । ಯಾಪರೀ ಪವಿತ್ರ ತೇ ವಾಣೀ ॥೩೬೮॥

ಕೋಟ್ಯಾವಧೀ ಗ್ರಂಥಗಳ ಅಭ್ಯಾಸವನ್ನು ಮಾಡಿದರೂ ಸಹ ಯೋಗಜ್ಞಾನದ ರುಚಿಯು ತಿಳಿಯುವುದಿಲ್ಲ. ಅದನ್ನು ನೀನು ನಿನ್ನ ಚಾತುರ್ಯದಿಂದ ಸ್ಪಷ್ಟಮಾಡಿ ತೋರಿಸಿಕೊಟ್ಟಿರುವೆ ॥೩೫೭॥ ಯಾವ ಶ್ರೀಮದ್ಭಾಗವತವನ್ನು ತಿಳಿದುಕೊಳ್ಳಲು ಬಹು ಕಠಿಣವಾಗಿತ್ತು. ಆ ಭಾಗವತವನ್ನು ಶ್ರೀಕೃಷ್ಣನು ನಿನ್ನ ಮುಖದಿಂದಲೇ ಯಥಾರ್ಥ ರೀತಿಯಲ್ಲಿ ಅರ್ಥ ಮಾಡಿ ಹೇಳಿರುವನು. ಇದು ನಿಜವಾಗಿಯೂ ನಮಗೆ ಅರ್ಥವಾಯಿತು ॥೩೫೮॥ ಈ ಯಾವ ಹನ್ನೆರಡನೆಯ ಅಧ್ಯಾಯವು ಅತಿಶಯವಾಗಿ ಗಹನವಾಗಿರುವುದೆಂದು ದೇವಾಧಿದೇವ ಶ್ರೀಕೃಷ್ಣನು ಹೇಳಿದ್ದನು. ಆದರೆ ನೀನು ಅದನ್ನು ಸ್ಪಷ್ಟಮಾಡಿ ಹೇಳಿರುವೆ ॥೩೫೯॥ ಈ ಪ್ರಕಾರವಾಗಿ ಸಂತಮಂಡಳಿಯವರು ಆದರದಿಂದ ಅಭಯವನ್ನು ಕೊಟ್ಟರು. ಆಗ ಏಕನಾಥ ಜನಾರ್ದನನು ಸಂತರಿಗೆ ಮನೋಭಾವದಿಂದ ನಮಸ್ಕಾರವನ್ನು ಮಾಡಿದನು ॥೩೬೦॥ ವೈಖರೀ, ಮಾತ್ರಾ, ಸ್ವರ ಮತ್ತು ವರ್ಣ ಈ ಪದಗಳ ವ್ಯಾಖ್ಯಾನವು ಮುಗಿಯಿತು. ಇದನ್ನೇ ಶ್ರೀಕೃಷ್ಣನು ದೃಷ್ಟಾಂತಗಳನ್ನು ಕೊಟ್ಟು ಉದ್ಧವನಿಗೆ ಹೇಳುತ್ತಿರುವನು ॥೩೬೧॥ ಜೀವದ ಮತ್ತು ಶಿವನ ಯಾವ ಮೂಲದಲ್ಲಿ ಸೂಕ್ಷ್ಮವಾಗಿರುವುದನ್ನು ಆ ಆದಿಪುರುಷನ ವಾಣಿಯ ದ್ವಾರದಿಂದ ಸ್ಥೂಲ ಆಕಾರಕ್ಕೆ ಬರುತ್ತಿರುವುದು. ಭಗವಾನನು ಈಗ ಇದೇ ಅರ್ಥವನ್ನು ಅತಿಶಯವಾಗಿ ಸುಲಭಗೊಳಿಸಿ ಸ್ಪಷ್ಟವಾಗಿ ಹೇಳುವನು ॥೩೬೨॥

ಆಕಾಶದಲ್ಲಿ ಉಷ್ಣತೆಯು ಅವ್ಯಕ್ತರೂಪದಲ್ಲಿರುವುದು. ಕಾರಣ ಅಗ್ನಿಯು ಸರ್ವತ್ರವೂ ವ್ಯಾಪಕತ್ವದಿಂದಿರುವುದು. ಅರಣಿ ಇಂದ ಮಂಥನ ಮಾಡಲು ಅದು ಸೂಕ್ಷ್ಮವಾದ ಕಿಡಿಯ ರೂಪದಿಂದ ಪ್ರಕಟವಾಗುವುದು ॥೩೬೩॥ ವಾಯುವು ಅಗ್ನಿಯ ಮಿತ್ರನಾಗಿರುವುದು. ಆದ್ದರಿಂದ ಆ ಕಿಡಿಯ ಹತ್ತಿರ ಸ್ವಲ್ಪ ಅರಳೆಯನ್ನು ಹಿಡಿದು ಊದಲು ಆ ಚಿಕ್ಕ ಜ್ವಾಲೆಯು ಲಖಲಖಿತವಾಗಿ ಹೊತ್ತಿಕೊಳ್ಳುವುದು ॥೩೬೪॥ ಅಲ್ಲಿ ಅಗ್ನಿಯು ಮಧ್ಯಮದೆಶೆಗೆ ಪ್ರಾಪ್ತವಾಗುವುದು. ಅದರಲ್ಲಿ ತುಪ್ಪ ಇತ್ಯಾದಿ ಹವನ ದ್ರವ್ಯಗಳ ಹೋಮವನ್ನು ಮಾಡಲು ಆ ಅಗ್ನಿಯು ಅತ್ಯಂತ ಪ್ರದೀಪ್ತವಾಗುವುದು ಮತ್ತು ಅದರ ಜ್ವಾಲೆಯು ಬಹುವಾಗಿ ಬೆಳೆದು ಆಕಾಶ ಚುಂಬಿತವಾಗುವುದು ॥೩೬೫॥ ಅದರಂತೆ ಸೂಕ್ಷ್ಮವಾದ ನಾದವು ಶಿವನ ಸಂಯೋಗದಿಂದ ಮತ್ತು ಪ್ರಾಣದ ಸಮಾಗಮದಿಂದ ತ್ವರೆಯಾಗಿ ಷಟ್‌ಚಕ್ರಾದಿಗಳ ಸಂಬಂಧದಿಂದ ವೈಖರಿಯ ರೂಪದಿಂದ ವ್ಯಕ್ತವಾಗುವುದು ॥೩೬೬॥ ''ಮರಾ'' (ಸತ್ತು ಹೋಗಿರಿ) ಎನ್ನುವ ಈ ಶಬ್ದವು ಸರ್ವಸ್ವ ಅಮಂಗಲಕಾರಕವಾಗಿರುವುದು. ಆದರೆ ಅದೇ ಅಕ್ಷರಗಳನ್ನು ವಿರುದ್ಧವಾಗಿ ತಿರುಗಿ ಹೇಳಲು ''ರಾಮ'' ಎಂಬ ನಾಮದಿಂದ ಪವಿತ್ರವಾದ ವಾಣಿಯು ಸಮಾಧಾನ ನೀಡುವುದು ॥೩೬೭॥ ಒಳ್ಳೆಯದಾಗಲಿ, ಅಥವಾ ಕೆಟ್ಟದ್ದಾಗಿರಲಿ ಹೇಗೆ ಉಚ್ಚಾರ ಮಾಡಿದರೂ ವರ್ಣವು ಏನೂ ಇಲ್ಲದಂತೆ ಆಗುವುದಿಲ್ಲ. ಇವು ಸ್ಥಿರವಾಗಿಯೇ ಇರುವುವು. ಆದ್ದರಿಂದ ವರ್ಣಗಳಿಗೆ ''ಅಕ್ಷರ'' (ಅವಿನಾಶೀ) ಎಂದು ಹೇಳುವರು. ಆದ್ದರಿಂದ ಈ ವಾಣಿಯು ಪವಿತ್ರವಾಗಿರುವುದು ॥೩೬೮॥

ಜೈಶೀ ವಾಚೇಚೀ ಅಭಿವ್ಯಕ್ತೀ । ತೈಶೀಚ ಇತರ ಇಂದ್ರಿಯಪ್ರವೃತ್ತೀ । ಸಂಕ್ಷೇಪೇ ತೇಹೀ ಸ್ಥಿತೀ । ಉದ್ಧವಾಪ್ರತೀ ಸಾಂಗತೂ ।।೩೬೯।।

ಏವಂ ಗದಿಃ ಕರ್ಮಗತಿರ್ವಿಸರ್ಗೋ ಘ್ರಾಣೋ ರಸೋದೃಕ್ ಸ್ಪರ್ಶಃ ಶ್ರುತಿಶ್ಚ ।
ಸಂಕಲ್ಪವಿಜ್ಞಾನಮಥಾಭಿಮಾನಃ ಸೂತ್ರಂ ರಜಃ ಸತ್ವತಮೋವಿಕಾರಃ ।೧೯।।

ಅರ್ಥ:- ಈ ಪ್ರಕಾರವಾಗಿ ಮಾತನಾಡುವಿಕೆ, ಕೈಗಳಿಂದ ಕೆಲಸ ಮಾಡುವಿಕೆ, ಕಾಲುಗಳಿಂದ ನಡೆಯುವಿಕೆ, ಮಲಮೂತ್ರ ತ್ಯಜಿಸುವಿಕೆ, ಮೂಸು ನೋಡುವಿಕೆ, ರುಚಿ ನೋಡುವಿಕೆ, ಕಾಣುವಿಕೆ, ಸ್ಪರ್ಶ ಮಾಡುವಿಕೆ, ಕೇಳುವಿಕೆ, ಮನಸ್ಸಿನಿಂದ ಸಂಕಲ್ಪವಿಕಲ್ಪ ಮಾಡುವಿಕೆ, ಬುದ್ಧಿಯಿಂದ ತಿಳಿಯುವಿಕೆ, ಅಹಂಕಾರದಿಂದ ಅಭಿಮಾನಪಡುವಿಕೆ, ಸೂತ್ರವು ಪ್ರಧಾನದ ವೃತ್ತಿಯು, ಸತ್ವಗುಣ, ರಜೋಗುಣ ಮತ್ತು ತಮೋಗುಣ ಇವುಗಳ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಹೀಗೆ ತ್ರಿವಿಧ ಪ್ರಪಂಚರೂಪಿ ವಿಕಾರಗಳು ನನ್ನ ಸರ್ವ ಅಭಿವ್ಯಕ್ತಿಯಾಗಿರುವುದು. ಸರ್ವ ಕರ್ತಾ, ಕಾರಣ ಮತ್ತು ಕರ್ಮ ಇವೂ ಕೂಡ ನನ್ನ ಅಭಿವ್ಯಕ್ತಿಯಾಗಿರುವುದು.

ಜೈಶೀ ವಾಚೇಚೀ ವ್ಯುತ್ಪತ್ತೀ । ತೈಶೀಚ ಕರ್ಮೇಂದ್ರಿಯಾಂಚೀ ಪ್ರವೃತ್ತೀ । ಚರಣಾಂಚ್ಯಾ ಠಾಯೀ ಗತೀ । ಗ್ರಹಣಶಕ್ತೀ ಹಸ್ತಾಂಚೀ ।।೩೭೦।। ವಿಸರ್ಗ ಜಾಣ ಪಾಯೂಚಾ । ಸುಖೋದ್ರೇಕ ಲಿಂಗಾಚಾ । ಕರ್ಮೇಂದ್ರಿಯೀ ಪಾಂಚವೀ ವಾಚಾ । ವಿಸ್ತಾರೂ ತಿಚಾ ಸಾಂಗೀತಲಾ ।।೩೭೧।। ತೈಶೀಚ ಜಾಣ ಜ್ಞಾನಕರಣೇ । ದೃಷ್ಟೀ ಉಠೀ ದೇಖಣೇಪಣೇ । ರಸನಾ ರಸಾತೇ ಚಾಖೋ ಜಾಣೇ । ಶ್ರವಣಾ ಶ್ರವಣೇ ಅಧಿಕಾರೂ ।।೩೭೨।। ಶೀತ ಉಷ್ಣ ಮೃದು ಕಠಿಣ । ಹೇ ತ್ವಗಿಂದ್ರಿಯಾಚೇ ಲಕ್ಷಣ । ಸುಗಂಧ ದುರ್ಗಂಧ ಜಾಣತೇಪಣ । ಘ್ರಾಣ ವಿಚಕ್ಷಣ ತೇ ಕರ್ಮೀ ।।೩೭೩।। ಸಂಕಲ್ಪ ವಿಕಲ್ಪ ಮನಾಚೇ । ನಿಶ್ಚಯೋ ಕರ್ಮ ಬುದ್ಧೀಚೇ । ಚಿಂತನ ಜಾಣ ಚಿತ್ತಾಚೇ । ಅಹಂಕಾರಾಚೇ ಮೀಪಣ ।।೩೭೪।। ಸೂತ್ರ ತಂವ ಪ್ರಧಾನಾಚೇ । ವಿಕಾರ ರಜತಮಸತ್ತ್ವಾಂಚೇ । ಸಂಕ್ಷೇಪೇ ವಿವರಣ ತಿಹೀಂಚೇ । ಐಕ ಸಾಚೇ ಸಾಂಗೇನ ।।೩೭೫।। ಆಧಿದೈವ ಆದಿಭೌತ । ಜಾಸೀ ಅಧ್ಯಾತ್ಮ ಮ್ಹಣತ । ವಾಢಲಾ ಜೋ ಪ್ರಪಂಚೂ ಯೇಥ । ಈಶ್ವರಾಚೇ ಅಭಿವ್ಯಕ್ತ ಸ್ವರೂಪ ಜಾಣ ।।೩೭೬।। ಜಗಾಚೇ ಮೂಳ ಕಾರಣ । ಅಂಗೇ ಈಶ್ವರಚಿ ಆಪಣ । ತ್ಯಾ ಕಾರಣಾಹೂನಿ ಕಾರ್ಯ ಭಿನ್ನ । ನವ್ಹೇ ಜಾಣ ಸರ್ವಥಾ ।।೩೭೭।। ಹೋ ಕಾ ಘೃತಾಚೀ ಏಕೇ ಕಾಳೀ । ಥಿಜೋನಿ ಝಾಲಿಯಾ ಪುತಳೀ । ತೇ ಘೃತಾಹೋನಿ ವೇಗಳೀ । ನಾಹೀ ದೇಖಿಲೀ ಪ್ರತ್ಯಕ್ಷ ।।೩೭೮।। ಕಾಷ್ಠಾಚಾ ಘೋಡಾ ಕೇಲಾ । ಅಂಗೇ ಠಾಣೇ ಅತಿ ಮಿರವಿಲಾ । ತೋ ಕಾಷ್ಠಪಣಾ ನಾಹೀ ಮುಕಲಾ । ಸರ್ವಾಂಗೇ ಶೋಭಲಾ ಕಾಷ್ಠತ್ವೇ ।।೩೭೯।।

ಯಾವ ಪ್ರಕಾರವಾಗಿ ವಾಣಿಯು ವರ್ಣೋಚ್ಚಾರದಿಂದ ಸ್ಪಷ್ಟವಾಗಿ ಪ್ರಕಟವಾಗುವುದೋ ಅದರಂತೆಯೇ ಇತರ ಇಂದ್ರಿಯಗಳ ಕೂಡ ಇದೇ ಪ್ರವೃತ್ತಿಯಾಗಿರುವುದು. ಈ ಯಾವ ಇಂದ್ರಿಯಗಳ ಸ್ಥಿತಿಗತಿಗಳನ್ನೂ ಕೂಡ ಭಗವಾನ ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ।೩೬೯।।

ವಾಣಿಯು ಪ್ರಗಟವಾಗುವ ಯಾವ ಪ್ರಕಾರವಿರುವುದೋ ಅದರಂತೆಯೇ ಕರ್ಮಗಳು ಈ ಯಾವ ಇಂದ್ರಿಯಗಳ ಪ್ರವೃತ್ತಿಯನ್ನು ಪ್ರಕಟ ಮಾಡುವ ಪ್ರಕಾರವಾಗಿರುವುದು. ಚರಣಗಳಲ್ಲಿ ಗತಿಯು ಮತ್ತು ಕೈಗಳಲ್ಲಿ ಗ್ರಹಣಶಕ್ತಿಯು (ವಸ್ತುಗಳನ್ನು ಹಿಡಿಯುವ ಸಾಮರ್ಥ್ಯವು) ಪ್ರಕಟವಾಗುತ್ತಿರುವುದು ಕಾಣುವುದು ।೩೭೦।। ವಿಸರ್ಗವು ಇದು ಗುದದ್ವಾರದ ಗುಣವು. ಮತ್ತು ಅತ್ಯಂತಿಕ ಸುಖದ ಉಪಭೋಗವು ಲಿಂಗದ ಗುಣವು. ಹೀಗೆ ಪ್ರಕಟವಾಗುವುವು. ಕರ್ಮೇಂದ್ರಿಯಗಳಲ್ಲಿರುವ ಐದನೆಯ ವಾಣಿಯ ವರ್ಣನೆಯನ್ನು ವಿಸ್ತಾರಪೂರ್ವಕವಾಗಿ ಈ ಹಿಂದೆ ಹೇಳಲಾಗಿರುವುದು ।।೩೭೧।। ಅದರಂತೆಯೇ ಜ್ಞಾನೇಂದ್ರಿಯಗಳಾಗಿರುವುವು. ದೃಷ್ಟಿಯು ನೋಡುವಿಕೆಯಿಂದ ವ್ಯಕ್ತವಾಗುವುದು. ನಾಲಿಗೆಯು ರಸವನ್ನು ಹೇಗೆ ನೆಕ್ಕಬೇಕೆಂಬುದನ್ನು ಅರಿತಿರುವುದು. ಮತ್ತು ಕಿವಿಗೆ ಕೇಳುವಿಕೆಯ ಗುಣದಿಂದ ಅದಕ್ಕೆ ಅಧಿಕಾರವು ದೊರೆತಿರುವುದು ।೩೭೨।। ಶೀತ, ಉಷ್ಣ, ಮೃದು, ಕಠಿಣ, ಈ ಪ್ರಕಾರದ ಜ್ಞಾನವು ತ್ವಚೆಯ ಇಂದ್ರಿಯದಿಂದ ವ್ಯಕ್ತವಾಗುವುದು. ಸುಗಂಧ ಅಥವಾ ದುರ್ಗಂಧ ಇವುಗಳ ಜ್ಞಾನವಾಗುವುದಕ್ಕೆ ಮೂಗು ಇದು ಅತ್ಯಂತ ಚತುರವಾಗಿರುವುದು ।೩೭೩।। ಸಂಕಲ್ಪ ವಿಕಲ್ಪಗಳು ಮನಸ್ಸಿನ ಕರ್ಮವು. ನಿಶ್ಚಯ ಮಾಡುವಿಕೆಯು ಇದು ಬುದ್ಧಿಯ ಕರ್ಮವಾಗಿರುವುದು. ಚಿಂತನೆಯು ಇದು ಚಿತ್ತದ ಕರ್ಮವಾಗಿರುವುದು. ಮತ್ತು ನಾನು ಎಂದು ಹೇಳುವುದು ಇದು ಅಹಂಕಾರದ ಕರ್ಮವಾಗಿರುವುದು ।೩೭೪।। ರಜ, ತಮ ಮತ್ತು ಸತ್ವ ಈ ವಿಕಾರಗಳು ಮೂಲತಃ ಮಾಯೆಯಿಂದಾಗುವುವು. ಈ ಮೂರು ಗುಣಗಳ ವಿವರಣೆಯನ್ನು ನಾನೀಗ ಸಂಕ್ಷಿಪ್ತವಾಗಿ ಹೇಳುವೆನು ಅದನ್ನು ಕೇಳು ।೩೭೫।। ಆಧಿ ದೈವಿಕ, ಆಧಿ ಭೌತಿಕ ಮತ್ತು ಆಧ್ಯಾತ್ಮಿಕ ಇವು ಈ ಎಲ್ಲ ಪ್ರಕಾರಗಳ ಪ್ರಪಂಚವು ಬೆಳೆದಿರುವುದು. ಇದುವೇ ಈಶ್ವರನ ಅಭಿವ್ಯಕ್ತ ಸ್ವರೂಪವಾಗಿರುವುದು. ಇದನ್ನು ನೀನು ಲಕ್ಷದಲ್ಲಿಡು ।೩೭೬।। ಈಶ್ವರನು ತಾನು ಸ್ವತಃ ಈ ಜಗತ್ತಿಗೆ ಮೂಲ ಕಾರಣನಾಗಿರುವನು. ಈ ಕಾರಣದಿಂದ ಅಂದರೆ ಈಶ್ವರನಿಂದ ಕಾರ್ಯವು ಅಂದರೆ ಈ ಜಗತ್ತು ಸರ್ವಥಾ ಭಿನ್ನವಾಗಿರುವುದಿಲ್ಲ ।೩೭೭।। ಒಂದು ವೇಳೆ ತುಪ್ಪವು ಹೆಪ್ಪುಗಟ್ಟಿ ಅದರ ಒಂದು ಗೊಂಬೆಯನ್ನು ತಯಾರಿಸಲು ಆಗ ಅದು ತುಪ್ಪದಿಂದ ಬೇರೆಯಾಗಿದೆ ಎಂದು ಪ್ರತ್ಯಕ್ಷವಾಗಿ ಎಂದಿಗೂ ದೃಷ್ಟಿಗೆ ಗೋಚರಿಸಲು ಸಾಧ್ಯವಿಲ್ಲ ।೩೭೮।। ಅಥವಾ ಕಟ್ಟಿಗೆಯಿಂದ ಸುಂದರವಾದ ಒಂದು ಕುದುರೆಯನ್ನು ಸಿದ್ಧಗೊಳಿಸಲು ಆಗ ಅದರ ಅಂಗಗಳು, ನೀಟಾಗಿ ನಿಂತಿರುವ ಅದರ ಸೊಬಗು ಇತ್ಯಾದಿಯಾಗಿ ಅದು ಸುಂದರವಾಗಿ ಕಂಡರೂ ಕೂಡ ಅದು ಕಟ್ಟಿಗೆಯಿಂದ ಎಂದಿಗೂ ಭಿನ್ನವಾಗಿರುವುದಿಲ್ಲ. ಅದು ಸರ್ವಾಂಗದಿಂದ ಕಟ್ಟಿಗೆಯಿಂದಲೇ ಶೋಭಿಸುತ್ತಿರುವುದು ।೩೭೯।।

ತ್ಯಾಚೇ ಪಾಹತಾ ವೇಗಳಾಲೇ ಅವಯವ । ಖೂರ ಖಾಂದ ಕಾಷ್ಠ ಚಿ ಸರ್ವ । ತೇವೀ ಮಹಾಭೂತೇ ಗುಣಪ್ರಭವ ।ಸ್ವರೂಪ ಸಾವೇವ ಶಿವಾಚೇ ।೩೮೦॥ ಸುವರ್ಣಾಚೇ ಝಾಲೇ ಲೇಣೇ । ತೇ ಜೇವೀ ಮಿರವೇ ಸೋನೇಪಣೇ । ತೇವೀ ಮಹಾಭೂತೇ ವಿಷಯಕರಣೇ । ಅಭಿನ್ನ ಪಣೇ ಶಿವರೂಪ ।೩೮೧॥ ಫಡಾ ಪುಚ್ಛ ವಾಂಕುಡಾ ಬಾಗ । ಯೇಣೇ ಆಕಾರೇ ಮ್ಹಣತೀ ನಾಗ । ತೋ ನಾಗ ನವ್ಹೇ ಸೋನೇಚಿ ಚಾಂಗ । ತೇವೀ ಹೇ ಜಗ ಮದ್ರೂಪ ।೩೮೨॥ ಪ್ರಪಂಚ ಈಶ್ವರಾಸೀ ಅಭಿನ್ನ । ಯೇಚಿ ಅರ್ಥೀ ನಾರಾಯಣ । ಉದ್ಧವಾಸೀ ಸಾಂಗೇ ಆಪಣ । ಅಭಿನ್ನ ಪಣ ಜೀವಶಿವಾ ।೩೮೩॥

ಅಯಂ ಹಿ ಜೀವಸ್ತ್ರಿವೃದಬ್ಜಯೋನಿರವ್ಯಕ್ತ ಏಕೋ ವಯಸಾ ಸ ಆದ್ಯಃ ।
ವಿಶ್ಲಿಷ್ಟಶಕ್ತಿರ್ಬಹುಧೇವ ಭಾತಿ ಬೀಜಾನಿ ಯೋನಿಂ ಪ್ರತಿಪದ್ಯ ಯದ್ವತ್ ।೨೦॥

ಅರ್ಥ:- ಈ ಯಾವ ಸರ್ವ ಜೀವಿಗಳಿಗೆ ಜೀವಂತವಿಡುವ ಪರಮೇಶ್ವರನು ಈ ತ್ರಿಗುಣಮಯ ಬ್ರಹ್ಮಾಂಡದ ಕಾರಣನಾಗಿರುವನು. ಈ ಯಾವ ಆದಿಪುರುಷನು ಪ್ರಾರಂಭದಲ್ಲಿ ಒಬ್ಬನೇ ಇದ್ದು ಅವ್ಯಕ್ತನಾಗಿದ್ದನು. ಉತ್ತಮ ಹೊಲದಲ್ಲಿ ಬಿತ್ತಿದ ಬೀಜವು ಟೊಂಗೆ, ಎಲೆ, ಹೂವು ಹೀಗೆ ಅನೇಕ ಪ್ರಕಾರಗಳ ರೂಪವನ್ನು ಧರಿಸುವುದು. ಅದರಂತೆ ಕಾಲಗತಿಯಿಂದ ಮಾಯೆಯ ಆಶ್ರಯವನ್ನು ಪಡೆದು ಶಕ್ತೀ-ವಿಭಜನೆಯ ಮುಖಾಂತರ ಪರಮೇಶ್ವರನೂ ಕೂಡ ಅನೇಕ ರೂಪಗಳಲ್ಲಿ ಪ್ರತೀತನಾಗುತ್ತಿರುವನು.

ಜೀವಾಚಾ ಜೀವೂ ಆಪಣ । ಯಾಲಾಗೀ ಬೋಲಿಜೇ ಶಿವಪಣ । ಜೀವಶಿವರೂಪೇ ಹಾ ಭಿನ್ನ । ಜೀವತ್ವ ಜಾಣ ಯಾ ಹೇತೂ ।೩೮೪॥ ಸಾಗರು ಆಪುಲ್ಯಾ ಅಂಗಾವರೀ । ವರ್ತುಳ ಆವರ್ತ ಕರೀ ಧರೀ । ತೇವೀ ಲೋಕಪದ್ಮಾತೇ ಶ್ರೀಹರೀ । ಕರೀ ಧರೀ ನಿಜನಾಭೀ ।೩೮೫॥ ''ತ್ರಿವೃದಬ್ಜ'' ಮ್ಹಣಿಜೇ ಯಾಪರೀ । ತ್ಯಾ ನಾಭಿಕಮಳಾಮಾಝಾರೀ । ಸ್ವಲೀಲಾ ತ್ರೈಲೋಕ್ಯಾತೇ ಧರೀ । ಪದ್ಮನಾಭ ಶ್ರೀಹರೀ ಯಾ ಹೇತೂ ।೩೮೬॥ ಸುವರ್ಣಾಚ್ಯಾ ಸಿಂಹಾಸನೀ । ಸುವರ್ಣಮೂರ್ತೀ ಬೈಸವೂನೀ । ಪೂಜಿಜೇ ಸುವರ್ಣಸುಮನೀ । ಏಕಪಣೇ ತೀನ್ಹೀ ಭಾಸತೀ ।೩೮೭॥ ತೇವೀ ನಾಭಿಪದ್‌ಮೀ ತ್ರೈಲೋಕ್ಯ ಧರಿತಾ । ತಿಹೀತೇ ಭಾಸವೀ ಅಭಿನ್ನತಾ । ಯಾಲಾಗೀ ಪದ್‌ಮನಾಭ ತತ್ತ್ವತಾ । ಆಲೇ ವಾಕ್ಪಥಾ ಶ್ರುತೀಚಿಯಾ ।೩೮೮॥ ದ್ಯತಿ ಮಾರ್ದವೇ ಪಿಂವಳೀ । ಏಕಲೀ ಭಾಸೇ ಚಾಂಪೇಕಳೀ । ತೇಚಿ ವಿಕಾಸೇ ಜೇವೀ ನಾನಾ ದಳೀ । ತೇವೀ ಮೀ ವನಮನಾಳೀ ಲೋಕತ್ವೇ ।೩೮೯॥

ಅದರ ಅವಯವಗಳನ್ನು ಬೇರೆ ಬೇರೆಯಾಗಿ ಕಾಣಲು, ಅದರ ಕಾಲಿನ ಕೊಳಗ, ಬೆನ್ನು ಇವು ಎಲ್ಲವೂ ಕಟ್ಟಿಗೆಯೇ ಆಗಿರುವುವು. ಅದರಂತೆ ಮೂರು ಗುಣಗಳಿಂದ ಆಗಿರುವ ಪಂಚಾ ಮಹಾಭೂತಗಳು ಇವು ಶಿವನ ಮೂರ್ತಿಮಂತ ಸ್ವರೂಪವಾಗಿರುವುವು ।೩೮೦॥ ಸುವರ್ಣದ ಅಲಂಕಾರಗಳು ಸಿದ್ಧವಾದರೂ ಸಹ ಅವು ಸುವರ್ಣದಿಂದಲೇ ಶೋಭಿಸುತ್ತಿರುವುವು. ಅದರಂತೆ ಪಂಚಮಹಾಭೂತಗಳು, ವಿಷಯಗಳು ಮತ್ತು ಇಂದ್ರಿಯಗಳು ಈ ಎಲ್ಲವೂ ಶಿವಸ್ವರೂಪವೇ ಆಗಿರುವುವು. ಹೀಗೆ ನೀನು ತಿಳಿದುಕೋ ।೩೮೧॥ ಬಂಗಾರದಿಂದ ಸರ್ಪವನ್ನು ಸಿದ್ಧಗೊಳಿಸಲು ಅದರ ಹೆಡೆ, ಬಾಲ ಮತ್ತು ವಕ್ರತೆ ಹೀಗಿರುವ ಎಲ್ಲ ಆಕಾರಗಳಿಂದ ಅದಕ್ಕೆ ನಾಗರಹಾವು ಎಂದು ಕರೆಯಲ್ಪಡುವುದು. ಆದರೆ ಅದು ನಿಜವಾಗಿಯೂ ನಾಗರಹಾವೇ ಆಗಿದ್ದರೂ ಕೂಡ ಅದೆಲ್ಲವೂ ಬಂಗಾರವೇ ಆಗಿರುವುದು. ಅದರಂತೆ ಈ ಜಗತ್ತು ನನ್ನ ರೂಪವೇ ಆಗಿರುವುದು ।೩೮೨॥ ಈ ಪ್ರಪಂಚವು ಈಶ್ವರನಿಂದ ಭಿನ್ನವಾಗಿರುವುದಿಲ್ಲ. ಇದೇ ಅರ್ಥದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಜೀವ ಮತ್ತು ಶಿವ ಇವರ ಅಭಿನ್ನತ್ವವನ್ನು ಹೇಳುತ್ತಿರುವನು ।೩೮೩॥

ಶಿವನು ತಾನು ಸ್ವತಃ ಜೀವದ ಜೀವನಾಗಿರುವನು. ಆದ್ದರಿಂದ ಆತನ ಶಿವತ್ವವು ಸ್ವತಂತ್ರವಾಗಿರುವುದು ಎಂದು ಹೇಳುವರು. ಜೀವ ಮತ್ತು ಶಿವ ಈ ರೂಪದಿಂದ ಭಿನ್ನವಾಗಿ ಭಾಸವಾಗುವುದು. ಆದ್ದರಿಂದ ಜೀವತ್ವವು ಭಿನ್ನವಾಗಿ ತೋರುವುದು ।೩೮೪॥ ಸಮುದ್ರವು ತನ್ನ ಪೃಷ್ಠಭಾಗದಲ್ಲಿ ತಿರಗುಣಿ, ತೆರೆಗಳು ಇತ್ಯಾದಿಯಾಗಿ ಉತ್ಪನ್ನಗೊಳಿಸುವುದು. ಅದರಂತೆ ಶ್ರೀಹರಿಯು ಬ್ರಹ್ಮಾಂಡ ಕಮಲವನ್ನು ಉತ್ಪನ್ನಗೊಳಿಸಿ ಆತನು ತನ್ನ ನಾಭಿಯಲ್ಲಿ ಧಾರಣೆಯನ್ನು ಮಾಡಿರುವನು ।೩೮೫॥ ಆದ್ದರಿಂದ ಆತನಿಗೆ ''ತ್ರಿವೃದಬ್ಜ'' ಅಂದರೆ ಮೂರು ಲೋಕಗಳನ್ನು ಧಾರಣೆ ಮಾಡುವವನು ಎಂದು ಹೇಳುವರು. ಆ ನಾಭಿಕಮಲದಲ್ಲಿ ತನ್ನ ಅಲೌಕಿಕ ಲೀಲೆಯಿಂದ ಆತನು ತ್ರೈಲೋಕ್ಯವನ್ನು ಧರಿಸಿರುವನು. ಆದ್ದರಿಂದ ಆತನಿಗೆ ಪದ್ಮನಾಭನೆಂದು ಹೇಳುವರು ।೩೮೬॥ ಸುವರ್ಣದ ಸಿಂಹಾಸನದಲ್ಲಿ ಸುವರ್ಣದ ಮೂರ್ತಿಯನ್ನು ಕುಳ್ಳಿರಿಸಿ ಸುವರ್ಣದ ಹೂವುಗಳಿಂದ ಅದಕ್ಕೆ ಪೂಜೆಯನ್ನು ಮಾಡಲು ಆಗ ಅವು ಮೂರೂ ಸಹ ಸುವರ್ಣರೂಪದಿಂದ ಒಂದೇಯಾಗಿ ಭಾಸವಾಗುವುವು ।೩೮೭॥ ಅದರಂತೆ ನಾಭಿಕಮಲದಲ್ಲಿ ತ್ರೈಲೋಕ್ಯವನ್ನು ಧರಿಸಿರಲು, ಆ ಮೂರೂ ಲೋಕಗಳಲ್ಲಿ ಐಕ್ಯತೆಯನ್ನೇ ಭಾಸವಾಗುತ್ತಿರುವುದು. ಆದ್ದರಿಂದಲೇ ಶ್ರುತಿಯ ಮುಖದಿಂದ ಪದ್ಮನಾಭ ಎಂಬ ಶಬ್ದವು ಹೊರಟಿರುವುದು ।೩೮೮॥ ಸುಗಂಧ ಹಾಗೂ ಕೋಮಲತೆಯಿಂದ ಕೂಡಿರುವ ಹಳದಿ ಸಂಪಿಗೆ ಹೂವಿನ ಮೊಗ್ಗೆಯು ವಾಸ್ತವಿಕವಾಗಿ ಒಂದೇಯಾಗಿರುವುದು. ಆದರೆ ಅದರ ವಿಕಾಸವಾಯಿತೆಂದರೆ ಅನೇಕ ದಳಗಳು ಪ್ರಫುಲ್ಲಿತವಾಗಿ ಬೇರೆ ಬೇರೆಯಾಗಿ ಕಾಣುವುವು. ಅದರಂತೆ ತಾತ್ವಿಕವಾಗಿ ಒಂದೇಯಾಗಿರುವ ಪರಮಾತ್ಮನಾದ ನಾನು ಈ ಯಾವ ಅನೇಕ ಲೋಕಗಳ ರೂಪದಿಂದ ವಿಕಾಸಗೊಂಡಿರುವೆನು ।೩೮೯॥

ಹೇ ನಸತಾ ಕಾರ್ಯಕಾರಣ । ಯಾಪೂರ್ವೀ ಮೀ ಅವ್ಯಕ್ತ ಜಾಣ । ಜೋ ಮೀ ಪ್ರಾಣಾಂಚಾಹೀ ಪ್ರಮಾಣ। ಭೇದೇ ಜೇಥ ಆಣ ವಾಹಿಲೀ ॥೯೯೦॥ ಹೇತು ಮಾತು ದೃಷ್ಟಾಂತ । ರಿಘೋ ನ ಶಕೇ ಜ್ಯಾಚ್ಯಾ ಗಾಂವಾಂತ। ಅಪಾರ ಅನಾದಿ ಅನಂತ । ಆದ್ಯ ಅವ್ಯಕ್ತ ಮೀ ಐಸಾ ॥೯೯೧॥ ಏವಂ ಕೇವಳ ಜೇ ಅಭೇದ । ತೇಥೇ ಕೈಚೇ ತ್ರಿವಿಧ ಭೇದ । ಜೇಥ ಲಾಜೋನಿ ಪರತಲೇ ವೇದ । ಸ್ವರೂಪ ಶುದ್ಧ ತೇ ಮಾಝೇ ॥೯೯೨॥ ತೋ ನ ಮೇಳವಿತಾ ಸಾಹ್ಯಮೇಳು । ಸ್ವಲೀಲಾಕ್ಷೋಭೇ ಕ್ಷೋಭಕ ಕಾಳೂ । ಸ್ವಶಕ್ತೀನೇ ಝಾಲೋ ಸಬಳೂ । ಶಕ್ತಿ ಬಂಬಾಳೂ ಚೇತವಿಲಾ ॥೯೯೩॥ ತೇ ನಿಜಶಕ್ತೀಚೇ ವಿಭಾಗ । ಮ್ಯಾಂಚಿ ವಿಭಾಗಿಲೇ ಚಾಂಗ । ತ್ಯಾ ವಿಭಾಗಾಂಚೇ ಭಾಗ । ಐಕ ಸಾಂಗ ಸಾಂಗೇನ॥೯೯೪॥ ಗುಣಶಕ್ತೀ ದೇವತಾಶಕ್ತೀ। ಮನಃಶಕ್ತೀ ಇಂದ್ರಿಯಶಕ್ತೀ। ಮಹಾಭೂತಾಂಚೀ ಭೂತಶಕ್ತೀ । ಏಥ ಕ್ರಿಯಾಶಕ್ತೀ ಮುಖ್ಯತ್ವೇ ॥೯೯೫॥ ಜೀವಾಪಾಸಾವ ಅದೃಷ್ಟಶಕ್ತೀ । ಝಾಲೀ ಅನಿವಾರ ತ್ರಿಜಗತೀ । ಹರಿಹರಾ ನಾವರೇ ನಿಶ್ಚಿತೀ । ಅದೃಷ್ಟಶಕ್ತೀ ಅನಿವಾರ ॥೯೯೬॥ ಜೇ ಅದೃಷ್ಟಶಕ್ತೀನೇ ಜೀವಾತೇ । ಬಾಂಧೋನಿ ಕೇಲೇ ಆಪೈತೇ । ತಿಸೀ ಆವರಾವಯಾ ಮಾತೇ । ಸಾಮರ್ಥ್ಯ ಯೇಥೇ ಆಥೀನಾ ॥೯೯೭॥ ಜೇವೀ ಕಾ ರಾಜಾಜ್ಞಾ ಜಾಣ । ರಾಜಾ ಪ್ರತಿಪಾಳೀ ಆಪಣ । ತೇವೀ ಅದೃಷ್ಟಶಕ್ತೀ ಉಲ್ಲಂಘನ । ಮೀ ಸರ್ವಥಾ ಜಾಣ ಕರೀನಾ ॥೯೯೮॥ ಜೀಭ ಕಾಪೂನಿ ದೇವಾಸೀ ವಾಹತೀ । ತೈಸೇ ನಾಸಿಕ ನ ಛೇದಿತೀ । ತೇವೀ ಮೀ ಛೇದೀ ಕರ್ಮಸ್ಥಿತೀ । ಪರೀ ಅದೃಷ್ಟಗತೀ ಛೇದೀನಾ ॥೯೯೯॥ ಅಥವಾ ವಿಶೇಷೇಸೀ ನಿಶ್ಚಿತೀ । ಮೀ ಮಾಯಾ ಆಲಿಂಗಿಲೀ ನಿಜಶಕ್ತೀ । ತೋ ಮೀ ಏಕೂಚಿ ತ್ರಿಜಗತೀ । ಬಹುಧಾವ್ಯಕ್ತೀ ಆಭಾಸೇ ॥೧೦೦೦॥ ಮಾಝಿಯಾ ಸಾಕ್ಷಾತ್ಕಾರಾ ಆಲಾ । ಜೋ ಜೀವನ್ಮುಕ್ತತ್ವ ಪಾವಲಾ । ತೋಹೀ ಅದೃಷ್ಟೇ ಬಾಂಧಲಾ । ವರ್ತೇ ಉಗಲಾ ದೇಹಗೇಹೀ ॥೧೦೦೧॥ ಜನಕೂ ರಾಜಪದೀ ನಾಂದೇ । ಶುಕ ನಾಗವಾ ಪ್ರಾರಬ್ಧೇ । ಕಳೀ ಲಾವಿಜೇ ನಾರದೇ । ಅದೃಷ್ಟ ಛಂದೇ ವಿನೋದೀ ॥೧೦೦೨॥ ವಸಿಷ್ಠ ಪುರೋಹಿತತ್ವ ಕರೀ । ಭೀಷ್ಮ ಪಹುಡೇ ಶರಪಂಜರೀ । ಯಾಜ್ಞವಲ್ಕ್ಯಾ ದೋನೀ ನಾರೀ । ಅದೃಷ್ಟಾಕಾರೀ ವರ್ತತ ॥೧೦೦೩॥

ಈ ಕಾರ್ಯಕಾರಣವು ಇಲ್ಲದ ಪೂರ್ವದಲ್ಲಿ ನಾನು ಅವ್ಯಕ್ತನಾಗಿಯೇ ಇದ್ದೆನು ಎಂದು ತಿಳಿದುಕೋ. ನಾನು ಪ್ರಮಾಣಗಳ ಪ್ರಮಾಣನಾಗಿರುವೆನು. ನನ್ನ ಸ್ವರೂಪದಲ್ಲಿ ಆಣೆಗೂ ಭೇದವು ಸಿಗಲಾರದು ॥೯೯೦॥ ಕಾರಣ, ಶಬ್ದಗಳು ದೃಷ್ಟಾಂತಗಳು ಇವುಗಳಲ್ಲಿ ಯಾರೊಬ್ಬರೂ ಆತನ ಊರಿನಲ್ಲಿ ತಿರುಗಾಡಲಾರರು. ಹೀಗೆ ನಾನು ಅಪಾರ, ಅನಾದಿ, ಅನಂತ, ಆದ್ಯ, ಅವ್ಯಕ್ತನಾಗಿರುವೆನು ॥೯೯೧॥ ಹೀಗೆ ಕೇವಲ ಯಾವ ಅಭೇದ ಸ್ವರೂಪವಾಗಿರುವುದೋ ಅದರಲ್ಲಿ ಮೂರು ಪ್ರಕಾರಗಳ ಭೇದವು ಹೇಗಿರಲು ಸಾಧ್ಯ ? ಯಾವ ಸ್ವರೂಪದ ವಿಚಾರವನ್ನು ಮಾಡುತ್ತಿರಲು ವೇದವೂ ಕೂಡ ಲಜ್ಜಿತಗೊಂಡು ಹಿಂದಕ್ಕೆ ತಿರುಗಿರುವುದು. ಇದೇ ನನ್ನ ಶುದ್ಧ ಸ್ವರೂಪವಾಗಿರುವುದು ॥೯೯೨॥ ನಾನು ಯಾವ ಸಹಾಯಕರ್ತರ ಸಾಧನೆಗಳ ಸಮುದಾಯವನ್ನು ಏಕತ್ರ ಮಾಡದೇ ಸ್ವತಃ ನನ್ನದೇ ಆದ ಲೀಲಾಕ್ಷೋಭೆಯಿಂದಲೇ ಕ್ಷುಬ್ಧನಾದ ಕಾಲನಾಗುವೆನು. ನಾನು ನನ್ನದೇ ಸಾಮರ್ಥ್ಯದಿಂದ ಪ್ರಬಲನಾಗಿರುವೆನು. ಮತ್ತು ನನ್ನದೇ ಆದ ಶಕ್ತಿಯು ಭಯಂಕರ ವಿಸ್ತಾರವಾಗಿ ಎಲ್ಲ ಕಡೆಯಲ್ಲಿಯೂ ಪ್ರಸರಿಸಿರುವುದು ॥೯೯೩॥ ಈ ಯಾವ ನನ್ನ ಶಕ್ತಿಯನ್ನು ನಾನೇ ವ್ಯವಸ್ಥಿತವಾಗಿ ವಿಭಾಗಗಳನ್ನು ಮಾಡಿರುವೆನು. ಆ ಯಾವ ವಿಭಾಗಗಳ ಸವಿಸ್ತಾರವಾದ ಭೇದಗಳನ್ನು ನಿನಗೆ ನಾನು ಹೇಳುವೆನು ಅದನ್ನು ಕೇಳು ॥೯೯೪॥ ಗುಣಗಳ ಶಕ್ತಿ, ದೇವತೆಗಳ ಶಕ್ತಿ, ಮನದ ಶಕ್ತಿ, ಇಂದ್ರಿಯಗಳ ಶಕ್ತಿ, ಮಹಾಭೂತಗಳ ಭೂತಶಕ್ತಿ, ಈ ಎಲ್ಲದರಲ್ಲಿ ಕ್ರಿಯಾಶಕ್ತಿಯು ಇದೇ ಮುಖ್ಯವಾಗಿರುವುದು ॥೯೯೫॥ ಜೀವದಿಂದ ಆಗಿರುವ ಪ್ರಾರಬ್ಧದ ಶಕ್ತಿಯು ಎಷ್ಟೆಂದು ಬೆಳೆದಿದೆ ಎಂದರೆ ಇದು ಹರಿಹರರಿಗೂ ಸಹ ತಡೆಯಲು ಆಗುವಂತಿಲ್ಲ. ಹೀಗೆ ಈ ಯಾವ ಅದೃಷ್ಟ ಶಕ್ತಿಯು ಅನಿವಾರ್ಯವಾಗಿರುವುದು ॥೯೯೬॥ ಈ ಯಾವ ಪ್ರಾರಬ್ಧ ಶಕ್ತಿಯು ಜೀವಕ್ಕೆ ಬಂಧಿಸಿ ತನ್ನ ಸ್ವಾಧೀನವನ್ನಾಗಿ ಮಾಡಿಕೊಂಡಿರುವುದು. ಇದನ್ನು ತಡೆಯಲು ಸ್ವತಃ ನಾನೂ ಕೂಡ ಸಮರ್ಥನಾಗಿರುವುದಿಲ್ಲ ॥೯೯೭॥ ಯಾವ ಪ್ರಕಾರವಾಗಿ ರಾಜಾಜ್ಞೆಯಾಗಿರುವುದೋ ಅದರಂತೆ ಆ ರಾಜನೂ ಕೂಡ ಸ್ವತಃ ಪಾಲಿಸುವನು. ಅದರಂತೆ ನಾನು ಅದೃಷ್ಟಶಕ್ತಿಯನ್ನು ಸರ್ವಥಾ ಉಲ್ಲಂಘಿಸಲಾರೆನು. ಇದನ್ನು ನೀನು ಲಕ್ಷದಲ್ಲಿಡು ॥೯೯೮॥ ನಾಲಿಗೆಯನ್ನು ಕತ್ತರಿಸಿ ಅದನ್ನು ದೇವರಿಗೆ ಅರ್ಪಿಸುವರು. ಆದರೆ ಮೂಗನ್ನು ಕೊಯ್ದು ದೇವರಿಗೆ ಯಾರೂ ಅರ್ಪಿಸಲಾರರು. ಅದರಂತೆ ನಾನು ಕರ್ಮಸ್ಥಿತಿಯನ್ನು ಇಲ್ಲದಂತೆ ಮಾಡಬಲ್ಲೆನು. ಆದರೆ ನನಗೆ ಪ್ರಾರಬ್ಧ ಗತಿಯನ್ನು ಮುರಿಯುವುದಾಗುವುದಿಲ್ಲ ॥೯೯೯॥ ನನ್ನ ಶಕ್ತಿಯು ಮಾಯೆಯಾಗಿರುವುದು. ಅದಕ್ಕೇನೇ ನಾನು ವಿಶೇಷವಾಗಿ ಅಂಟಿಕೊಂಡಿರುವುದರಿಂದ ನಾನು ಒಬ್ಬನೇ ಇದ್ದರೂ ಕೂಡ ಮೂರೂ ಲೋಕಗಳಲ್ಲಿ ಅನೇಕ ರೂಪಗಳಿಂದ ತೋರುವೆನು ॥೧೦೦೦॥ ಯಾರಿಗೆ ನನ್ನ ಸಾಕ್ಷಾತ್ಕಾರವಾಗುವುದೋ ಆತನು ತತ್ಕಾಲದಲ್ಲಿ ಜೀವನ್ಮುಕ್ತನಾಗುವನು. ಆದರೆ ಆತನೂ ಕೂಡ ಪ್ರಾರಬ್ಧದಿಂದ ಬಂಧಿಸಲ್ಪಟ್ಟವನಾಗಿ ದೇಹರೂಪ ಮನೆಯಲ್ಲಿ ಸುಮ್ಮನೇ ಮೂಕಸ್ಮಿತನಾಗಿ ಇರುವನು ॥೧೦೦೧॥ ಜೀವನ್ಮುಕ್ತನಾಗಿರುವ ಜನಕ ಮಹಾರಾಜನು ಪ್ರಾರಬ್ಧಕಾರಣವಾಗಿಯೇ ರಾಜ್ಯ ಪದವಿಯನ್ನು ಭೋಗಿಸಿದನು. ಶುಕಾಚಾರ್ಯರೂ ಸಹ ಪ್ರಾರಬ್ಧಕಾರಣವಾಗಿಯೇ ನಗ್ನಸ್ಥಿತಿಯಲ್ಲಿ ಇರುತ್ತಿದ್ದರು.ಮತ್ತು ನಾರದರೂ ಕೂಡ ಪ್ರಾರಬ್ಧಕಾರಣವಾಗಿಯೇ ವಿನೋದಿಯಾಗಿದ್ದರು ಹಾಗೂ ಒಬ್ಬರಿಂದೊಬ್ಬರಿಗೆ ಜಗಳ ಹಚ್ಚುವವರಾಗಿದ್ದರು ॥೧೦೦೨॥ ಈ ಯಾವ ಪ್ರಾರಬ್ಧಾನುಸಾರವಾಗಿಯೇ ಮಹರ್ಷಿ ವಸಿಷ್ಠರು ಪುರೋಹಿತ ಕಾರ್ಯಗಳನ್ನು ಮಾಡಿದರು. ಭೀಷ್ಮಾಚಾರ್ಯರು ಶರಪಂಜರದಲ್ಲಿ ಮಲಗಿದರು. ಯಾಜ್ಞವಲ್ಕ್ಯರಿಗೆ ಇಬ್ಬರು ಪತ್ನಿಯರಾಗಿ ಪ್ರಾರಬ್ಧದ ವಶದಲ್ಲಿ ಸಿಕ್ಕಿಕೊಂಡು ಆತನು ಅದರಂತೆ ವರ್ತಿಸುತ್ತಿದ್ದನು ॥೧೦೦೩॥

ಯಾಪರೀ ಗಾ ಅದೃಷ್ಟಶಕ್ತೀ । ಅನಿವಾರ ವಾಢಲೀ ತ್ರಿಜಗತೀ । ತ್ಯಾ ಜೀವ ಬಾಂಧಲೇ ಅದೃಷ್ಟಗತೀ । ಜೇವೀ ಗಾರೋಡಿಯಾಹಾತೀ ವಾನರ ॥೯೦೪॥ ತ್ಯಾ ಜೇವಾದೃಷ್ಟೇ ಬಹುದಾ ವ್ಯಕ್ತೀ । ಮೀ ಏಕ ಭಾಸೇ ತ್ರಿಜಗತೀ । "ವಿಶ್ವತಶ್ಚಕ್ಷು" ಯಾ ಶ್ರುತೀ । ಬಹುಧಾಮೂರ್ತಿ ಮೀ ಏಕ ॥೯೦೫॥ ಮೃತ್ತಿಕೇಚೀ ಗೋಕುಳೇ ಕೇಲೀ । ನಾನಾ ನಾಮಾಕಾರೇ ಪೂಜಿಲೀ । ಪರೀ ತೇ ಮೃತ್ತಿಕಾಚಿ ಸಂಚಲೀ । ತೇವೀ ಸೃಷ್ಟಿ ಝಾಲೀ ಮದ್ರೂಪೇ ॥೯೦೬॥ ಜೇವೀ ಏಕಲಾ ಏಕು ಆಪಣ । ನಿದ್ರೇಸೀ ದೇತಾ ಆಲಿಂಗನ । ಸ್ವಪ್ನೀ ದೇಖೇ ಬಹುವಿಧ ಆಪಣ । ತೇವೀ ಮೀ ಜಾಣ ವಿಶ್ವಾತ್ಮಾ ॥೯೦೭॥ ಜೇವೀ ಸೂಕ್ಷ್ಮ ವಟಬೀಜ ಕೇವಳ । ತ್ಯಾಸೀ ಮೀನಲ್ಯಾ ಭೂಮಿಜಳ । ವಾಢೋನಿಯಾ ಅತಿಪ್ರಬಳ । ವೃಕ್ಷ ವಿಶಾಳ ಆಭಾಸೇ ॥೯೦೮॥ ತೇಥ ನಾಮ ರೂಪ ಪುಷ್ಪ ಫಳ । ತೇ ಬೀಜಚಿ ಆಭಾಸೇ ಸಮೂಳ । ತೇವೀ ಜಗದಾಕಾರೇ ಸಕಳ । ಭಾಸೇ ಕೇವಳ ಚಿದಾತ್ಮಾ ॥೯೦೯॥ ಜೇ ಕಾ ಮೂಳ ಬೀಜಾಚೀ ಗೋಡೀ । ತೋಚಿ ಸ್ವಾದ ವಾಢಲಾ ವಾಡೀ । ಕಾಂಡೋಕಾಂಡೀ ಸ್ವಾದುಪರವಡೀ । ಅವಿಕಾರ ಗೋಡೀ ಉಂಸಾಚೀ ॥೯೧೦॥ ತೇವೀ ಮೂಳೀ ಚಿದಾತ್ಮ ಚಿ ಕಾರಣ । ತೇಥೂನಿ ಜೇ ಜೇ ತತ್ತ್ವ ಝಾಲೇ ಜಾಣ । ತೇ ತೇ ನಿಖಳ ಚೈತನ್ಯಘನ । ಜಗ ಸಂಪೂರ್ಣ ಚಿದ್ರೂಪ ॥೯೧೧॥ ಊಂಸ ಸರ್ವಾಂಗೇ ಬೀಜ ಸಕಳ । ಬೀಜರೂಪೇ ಊಂಸ ಸಫಳ । ತೇವೀ ಜಗಾಚೇ ಚಿನ್ಮಾತ್ರ ಮೂಳ । ಜಾಣ ಸಕಳ ತೇ ಚಿದ್ರೂಪ ॥೯೧೨॥ ಬೀಜ ಊಂಸ ದೋನೀ ಏಕರೂಪ । ತೈಸಾ ಪ್ರಪಂಚ ಜಾಣ ಚಿತ್ಸ್ವರೂಪ । ಯೇಚಿ ಅರ್ಥೀ ಅತಿಸಾಕ್ಷೇಪ । ಕೃಪಾಪೂರ್ವಕ ಸಾಂಗತ ॥೯೧೩॥

ಯಸ್ಮಿನ್ನಿದಂ ಪ್ರೋತಮಶೇಷಮೋತಂ ಪಟೋ ಯಥಾ ತಂತುವಿತಾನಸಂಸ್ಥ: ॥

ಅರ್ಥ:- ನೇಯ್ದ ವಸ್ತ್ರವು ಯಾವ ಪ್ರಕಾರವಾಗಿ ಉದ್ದ ಮತ್ತು ಅಡ್ಡ ಎಳೆಗಳ ವಿಸ್ತರಣೆಯನ್ನು ಅವಲಂಬಿಸಿದೆಯೋ, ಆದರಂತೆ ಇಡೀ ಬ್ರಹ್ಮಾಂಡವು ಪರಮೇಶ್ವರನಲ್ಲಿ ವೋತಪ್ರೋತವಾಗಿ ತುಂಬಿರುವುದು. ಎಳೆಗಳಿಲ್ಲದೇ ವಸ್ತ್ರದ ಅಸ್ತಿತ್ವವು ಇರಲಾರದು. ಆದರೆ ಎಳೆಯು ವಸ್ತ್ರವಿಲ್ಲದೇ ಇರಬಲ್ಲದು.

ಯಾಲಾಗೀ ಸಂಸಾರ ಜೋ ಸಮಸ್ತ । ಮಾಝ್ಯಾ ಠಾಯೀ ಅಸೇ ಓತಪ್ರೋತ । ಮಜವೇಗಳೇ ಕಾಂಹೀ ಯೇಥ । ನಾಹೀ ನಿಶ್ಚಿತ ಅಣುಮಾತ್ರ ॥೯೧೪॥ ಯೇಚಿ ಅರ್ಥೀಚಾ ದೃಷ್ಟಾಂತೂ । ದೇವೋ ಉದ್ಧವಾಸೀ ಸಾಂಗತೂ । ಜೇವೀ ಕಾಪುಸಾಚೇ ಸೂಕ್ಷ್ಮ ತಂತೂ । ಕಾಂತೋನಿ ನಿಶ್ಚಿತ್ ಪಟು ಕೇಲಾ ॥೯೧೫॥

ಈ ಪ್ರಕಾರವಾಗಿ ಈ ಯಾವ ಪ್ರಾರಬ್ಧಶಕ್ತಿಯು ಮೂರು ಲೋಕಗಳಲ್ಲಿ ಬೆಳೆದು ನಿಂತಿತು. ಗಾರುಡಿಗನ ಕೈಯಲ್ಲಿರುವ ಮಂಗವು ಆತನು ಹೇಳಿದಂತೆ ಹೇಗೆ ಕುಣಿಯುವುದೋ ಅದರಂತೆಯೇ ಈ ಯಾವ ಜೀವವು ಪ್ರಾರಬ್ಧಶಕ್ತಿಯಿಂದ ಬದ್ಧವಾಗಿರುವುದು ॥೯೦೪॥ ಈ ತ್ರಿಗುಣದಲ್ಲಿ ನಾನೊಬ್ಬನೇ ಇದ್ದುಕೊಂಡು ಜೀವದ ಪ್ರಾರಬ್ಧಾನುಸಾರವಾಗಿ ಅನೇಕನಾಗಿ ತೋರುವೆನು. "ವಿಶ್ವತಶ್ಚಕ್ಷು" ಹೀಗೆ ಶ್ರುತಿಯಲ್ಲಿ ಹೇಳಿರುವುದು. ಹೀಗಿರುವುದರಿಂದ ಈ ಯಾವ ಸರ್ವ ಭಿನ್ನ ಭಿನ್ನ ವ್ಯಕ್ತಿಗಳು ನಾನೇ ಒಬ್ಬನಾಗಿರುವುದು ಸ್ಪಷ್ಟವಾಗುವುದು ॥೯೦೫॥ ಮಣ್ಣಿನಿಂದ ಅನೇಕ ಗೋಕುಲಗಳನ್ನು ಕಟ್ಟಿ ಅವುಗಳಿಗೆ ಬೇರೆ ಬೇರೆ ಹೆಸರುಗಳನ್ನಿಟ್ಟು ಅವುಗಳಿಗೆ ಪೂಜೆಯನ್ನು ಮಾಡಲು ಅವುಗಳಲ್ಲಿ ಎಲ್ಲೆಲ್ಲಿಯೂ ಮಣ್ಣೇ ತುಂಬಿರುವುದು. ಅದರಂತೆ ಈ ಯಾವ ಸರ್ವ ಸೃಷ್ಟಿಯು ನನ್ನದೇ ರೂಪದಿಂದ ವ್ಯಕ್ತವಾಗಿರುವುದು ॥೯೦೬॥ ಒಬ್ಬ ಮನುಷ್ಯನು ನಿದ್ರೆಯ ಅಧೀನನಾಗಲು ಆತನ ಸ್ವಪ್ನದಲ್ಲಿ ಸ್ವತ: ತಾನೇ ಅನೇಕ ರೂಪನಾಗಿರುವುದನ್ನು ಹೇಗೆ ಕಾಣುವನೋ ಅದರಂತೆಯೇ ವಿಶ್ವಾತ್ಮನಾಗಿರುವ ನಾನು ಒಂದೇ ಇದ್ದರೂ ಕೂಡ ಅನೇಕ ರೂಪಗಳಿಂದ ತೋರುವೆನು ॥೯೦೭॥ ಆಲದ ಮರದ ಬೀಜವು ಕೇವಲ ಅತಿ ಚಿಕ್ಕದಾಗಿರುವುದು. ಆದರೆ ಅದಕ್ಕೆ ನೆಲ ಮತ್ತು ಜಲ ಸಿಗಲು ಅದರ ಅಂಕುರವು ಬೆಳೆದು ಅತ್ಯಂತ ಬಲಾಢ್ಯ ಮತ್ತು ವಿಸ್ತಾರಮಯ ವೃಕ್ಷವಾಗಿ ತೋರುವುದು ॥೯೦೮॥ ಆದರೆ ಅದರ ನಾಮ, ರೂಪ, ಫಲ, ಪುಷ್ಪ ಈ ಎಲ್ಲವೂ ಒಂದೇಯಾದ ಬೀಜರೂಪವಾಗಿರುವುದು. ಅದರಂತೆ ಈ ಯಾವ ಚಿದಾತ್ಮನು ಜಗತ್ತಿನ ಆಕಾರದಿಂದ ಭಾಸವಾಗುತ್ತಿರುವನು ॥೯೦೯॥ ಬೀಜದ ಆರಂಭದಲ್ಲಿ ಯಾವ ರುಚಿ ಇರುವುದೋ ಅದೇ ರುಚಿಯು ಬೆಳೆಯುತ್ತ ಬೆಳೆಯುತ್ತ ಸಾಗಿ ದೊಡ್ಡ ಆಕಾರಕ್ಕೆ ಪ್ರಾಪ್ತವಾಗುವುದು. ಆರಂಭದ ಸಿಹಿಯು ಕಬ್ಬಿನಲ್ಲಿ ಬೆಳೆಯುವುದು. ಅದು ಪ್ರತಿಯೊಂದು ಕಾಂಡಗಳಲ್ಲಿ ಅಧಿಕಾಧಿಕವಾಗಿಯೇ ಬೆಳೆಯುತ್ತ ಸಾಗುತ್ತಿರುವುದು. ಇದು ಅದರ ಸ್ವಾಭಾವಿಕವಾಗಿರುವುದು ॥೯೧೦॥ ಅದರಂತೆ ಈ ಸರ್ವರ ಮೂಲಕಾರಣವು ಚಿದಾತ್ಮನೇ ಆಗಿರುವನು. ಆತನಿಂದ ಯಾವ ಯಾವ ತತ್ವಗಳು ಉತ್ಪನ್ನವಾಗಿರುವುವೋ ಅವೆಲ್ಲವೂ ಶುದ್ಧ ಚೈತನ್ಯಘನವಾಗಿರುವುವು. ಇದರಿಂದ ಈ ಜಗವೆಲ್ಲವೂ ಚಿದ್ರೂಪದಿಂದ ಪರಿಪೂರ್ಣವಾಗಿ ತುಂಬಿರುವುದು ॥೯೧೧॥ ಕಬ್ಬಿನ ಸರ್ವಾಂಗದಲ್ಲಿಯೂ ಬೀಜವು ತುಂಬಿಕೊಂಡಿರುವುದು ಆದ್ದರಿಂದ ಪರಿಪೂರ್ಣ ಕಬ್ಬು ಬೀಜರೂಪದಿಂದಿರುವುದು. ಅದರಂತೆ ಈ ಜಗತ್ತಿನ ಮೂಲವು ಚಿನ್ಮಾತ್ರವಾಗಿದ್ದ ಜಗತ್ತು ಸರ್ವವೂ ಚಿದ್ರೂಪವಾಗಿರುವುದು ॥೯೧೨॥ ಬೀಜ ಮತ್ತು ಕಬ್ಬು ಯಾವ ಪ್ರಕಾರವಾಗಿ ಏಕರೂಪವಾಗಿ ಇರುವಂತೆಯೇ ಈ ಪ್ರಪಂಚವೂ ಕೂಡ ಚಿತ್‌ಸ್ವರೂಪವಾಗಿರುವುದು. ಈ ವಿಷಯಕ್ಕಾಗಿ ಭಗವಂತನು ಕೃಪಾಪೂರ್ವಕವಾಗಿ ಮನವರಿಕೆಯಾಗುವಂತೆ ಪುನ: ಹೇಳುತ್ತಿರುವನು ॥೯೧೩॥

ಸಂಸಾರವೆಂಬುವುದು ಸರ್ವವೂ ಅದು ನನ್ನಲ್ಲಿ ಓತಪ್ರೋತವಾಗಿ ತುಂಬಿರುವುದು. ನನ್ನ ಹೊರತಾಗಿ ಭಿನ್ನವೆಂಬುವುದು ಈ ಜಗತ್ತಿನಲ್ಲಿ ಯಾವುದೂ ಅಣುಸಹಿತವಾಗಿಯೂ ಇರುವುದಿಲ್ಲ ॥೯೧೪॥ ಈ ವಿಷಯಕ್ಕೆ ಭಗವಾನನು ಉದ್ಧವನಿಗೆ ದೃಷ್ಟಾಂತವನ್ನು ಹೇಳುವನು. ಯಾವ ಪ್ರಕಾರವಾಗಿ ಅರಳೆಯಿಂದ ಸೂಕ್ಷ್ಮ ಎಳೆಗಳನ್ನು ತಯಾರಿಸಿ ಅದರಿಂದ ಒಂದು ವಸ್ತ್ರವನ್ನು ಸಿದ್ಧಗೊಳಿಸುವರು ॥೯೧೫॥

ಆಡವೇತಿಡವೇ ವಿಣಲೇ ತಂತೂ । ತ್ಯಾಂಸೀ ವಸ್ತ್ರ ನಾಮ ಹೇ ಮೃಷಾ ಮಾತೂ । ತೇವಿ ಸಂಸಾರಶಬ್ದ ಹಾ ವ್ಯರ್ಥೂ । ಸ್ಫುರೇ ಭಗವಂತೂ ಮೀ ತದ್ರೂಪ ॥೪೧೬॥ ಪಾಹತಾ ಸೂತಚಿ ದಿಸೇ ಉಘಡೇ । ತ್ಯಾಂಚೇ ನಾಮ ಮ್ಹಣತೀ ಲುಗಡೇ । ಪ್ರತ್ಯಕ್ಷ ಚೈತನ್ಯ ಸ್ಫುರತಾ ಪುಢೇ । ತ್ಯಾಸೀ ಸಂಸಾರು ವೇಡೇ ಮ್ಹಣತಾತೀ ॥೪೧೭॥ ಸುತಾವೇಗಳೇ ವಸ್ತ್ರ ನ ದಿಸೇ । ಮಜವೇಗಳಾ ಪ್ರಪಂಚು ನಸೇ । ಉದ್ಧವಾ ಅಪ್ರಾಪ್ತಾಚೇ ಭಾಗ್ಯ ಕೈಸೇ । ಮೀಚಿ ನಸೇ ಮ್ಹಣತಾತೀ ॥೪೧೮॥ ಯಾಪರೀ ಮೀ ಸರ್ವಗತ । ವಿಶ್ವಾತ್ಮಾ ವಿಶ್ವಭರಿತ । ವೃಕ್ಷ ದೃಷ್ಟಾಂತೇ ಪ್ರಸ್ತುತ । ತುಜ ಮ್ಯಾ ಯೇಥ ಸಾಂಗೀತಲೇ ॥೪೧೯॥ ಮಜ ದೇಖಣಾ ಜ್ಯಾಚಾ ನಿರ್ಧಾರೂ । ತ್ಯಾಸೀ ಮೀ ಕೇವಳ ಸರ್ವೇಶ್ವರೂ । ಮಜ ಅಪ್ರಾಪ್ತ ಜೋ ನರೂ । ತ್ಯಾಸೀ ಸಂಸಾರೂ ಆಭಾಸೇ ॥೪೨೦॥ ಜೋ ಸರ್ವಾತ್ಮಾ ಸರ್ವೇಶ್ವರೂ । ಭ್ರಾಂತಾಸೀ ಭಾಸೇ ಭವತರೂವರೂ । ತ್ಯಾ ಭವತರೂಚಾ ವಿಸ್ತಾರೂ । ಸ್ವಯೇ ಶ್ರೀಧರೂ ಸಾಂಗತ ॥೪೨೧॥

ಯ ಏಷ ಸಂಸಾರತರುಃ ಪುರಾಣಃ ಕರ್ಮಾತ್ಮಕಃ ಪುಷ್ಪಫಲೇ ಪ್ರಸೂತೇ ॥೨೧॥

ಅರ್ಥ:- ಅದರಂತೆ ಜಗತ್ತು ಇರದಿದ್ದರೂ ಪರಮಾತ್ಮನು ಇದ್ದೇ ಇರುವನು. ಈ ಜಗತ್ತು ಪರಮಾತ್ಮ ಸ್ವರೂಪವೇ ಆಗಿರುವುದು. ಪರಮಾತ್ಮನಿಲ್ಲದ ಈ ಜಗತ್ತಿನ ಯಾವ ಅಸ್ತಿತ್ವವು ಇರುವುದಿಲ್ಲ. ಈ ಸಂಸಾರ ವೃಕ್ಷವು ಅನಾದಿ ಮತ್ತು ಪ್ರವಾಹರೂಪದಿಂದ ನಿತ್ಯವಾಗಿರುವುದೇ ಇದರ ಸ್ವರೂಪವಾಗಿರುವುದು. ಕರ್ಮದ ಪರಂಪರೆಯು ಮತ್ತು ವೃಕ್ಷದ ಫಲಪುಷ್ಪಗಳು ಮೋಕ್ಷ, ಭೋಗಗಳಾಗಿವೆ.

ಭ್ರಾಂತೀಸ್ತವ ಭವತರುವರೂ । ಕರ್ಮಾಕರ್ಮಜಳೇ ವಾಢಲಾ ಥೋರೂ । ಜೀರ್ಣ ಜುನಾಟ ಅಪರಂಪಾರೂ । ಓತಂಬರೂ ಫಳಪುಷ್ಪೀ ॥೪೨೨॥ ತ್ಯಾಚೇ ಕೋಣ ಬೀಜ ಕೋಣ ಮೂಳ । ಕೋಣ ರಸೂ ಕೋಣ ಫಳ । ಜೇಣೇ ಭ್ರಮಲೇ ಜೀವ ಸಕಳ । ತೇ ಮೀ ಸಮೂಳ ಸಾಂಗೇನ ॥೪೨೩॥

ದ್ವೇ ಅಸ್ಯ ಬೀಜೇ ಶತಮೂಲಸ್ತ್ರಿನಾಲಃ ಪಂಚಸ್ಕಂಧಃ ಪಂಚರಸಪ್ರಸೂತಿಃ ।
ದಶೈಕಶಾಖೋ ದ್ವಿಸುಪರ್ಣನೀಡಸ್ತ್ರಿವಲ್ಕಲೋ ದ್ವಿಫಲೋಽರ್ಕಂ ಪ್ರವಿಷ್ಟಃ ॥೨೨॥

ಅರ್ಥ:- ಈ ಸಂಸಾರ ವೃಕ್ಷದಲ್ಲಿ ಎರಡು ಬೀಜಗಳಿರುವುವು. ಒಂದು ಪಾಪ, ಮತ್ತೊಂದು ಪುಣ್ಯ. ಅಸಂಖ್ಯ ಪ್ರಕಾರಗಳ ವಾಸನೆಗಳು ಬೇರುಗಳಾಗಿರುವುವು. ಸತ್ವ, ರಜ, ತಮ ಈ ಮೂರು ಇದರ ಕಾಂಡಗಳಾಗಿರುವುವು. ಪಂಚ ಮಹಾಭೂತಗಳು ಇವು ದೊಡ್ಡ ದೊಡ್ಡ ಶಾಖೆಗಳಾಗಿರುವುವು. ಶಬ್ದಾದಿ ಐದು ವಿಷಯಗಳು ಇವುಗಳಿಂದ ಉತ್ಪನ್ನವಾಗುವುವು. ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಮತ್ತು ಮನಸ್ಸು ಹೀಗೆ ಹನ್ನೊಂದು ಇಂದ್ರಿಯಗಳು ಇದರ ಉಪಶಾಖೆಗಳಾಗಿರುವುವು. ಜೀವ ಮತ್ತು ಈಶ್ವರ ಈ ಎರಡು ಪಕ್ಷಿಗಳು ಇದರಲ್ಲಿ ಗೂಡು ಕಟ್ಟಿರುವುವು. ವಾತ, ಪಿತ್ತ, ಕಫ ಇವು ಇದರ ತ್ವಚೆಗಳಾಗಿರುವುವು. ಸುಖ ಮತ್ತು ದುಃಖ ಇದರ ಎರಡು ಫಲಗಳಾಗಿರುವುವು.

ಆಗ ಆ ವಸ್ತ್ರದಲ್ಲಿ ಅಡ್ಡ ಉದ್ದವಾಗಿ ನೇಯ್ದ ಅರಳೆಯ ಎಳೆಗಳೇ ಇರುವುವು. ಸುಮ್ಮನೇ ಅದಕ್ಕೆ ವಸ್ತ್ರವೆಂದು ಹೆಸರಿಟ್ಟದ್ದು ವ್ಯರ್ಥವೇ ಸರಿ. ಅದರಂತೆ ಸಂಸಾರವೆಂಬ ನಾಮವೂ ಕೂಡ ವ್ಯರ್ಥವೇ ಆಗಿರುವುದು. ಭಗವಂತನಾದ ನಾನು ವಾಸ್ತವಿಕವಾಗಿ ಸಂಸಾರರೂಪದಿಂದ ಸ್ಫುರಣನಾಗುತ್ತಿರುವೆನು ॥೪೧೬॥ ಎಳೆಗಳಿಂದ ನೇಯ್ದದ್ದು ಪ್ರತ್ಯಕ್ಷವಾಗಿ ಕಾಣುತ್ತಿದ್ದರೂ ಕೂಡ ಜನರು ಅದಕ್ಕೆ ಸೀರೆ ಎಂದು ಕರೆಯುವರು. ಅದರಂತೆ ಚೈತನ್ಯವು ಪ್ರತ್ಯಕ್ಷವಾಗಿ ಸ್ಫುರಣಗೊಳ್ಳುತ್ತಿರುವುದು ಕಾಣುತ್ತಿದ್ದರೂ ಕೂಡ ಮೂರ್ಖ ಜನರು ಅದಕ್ಕೆ ಸಂಸಾರವೆಂದು ಕರೆಯುತ್ತಿರುವರು ॥೪೧೭॥ ನೂಲುಗಳಿಲ್ಲದ ವಸ್ತ್ರವಿಲ್ಲ, ಅದರಂತೆ ನಾನಿಲ್ಲದ ಸಂಸಾರವಿಲ್ಲ. ಹೀಗಿದ್ದರೂ ಹೇ ಉದ್ಧವನೇ, ಯಾರಿಗೆ ನನ್ನ ಪ್ರಾಪ್ತಿಯಾಗಿಲ್ಲವೋ, ಆ ಜನರ ಭಾಗ್ಯ ಹೇಗಿರಬಹುದು ನೀನೇ ನೋಡು ? ''ನಾನೇ ಇಲ್ಲ''ವೆಂದು ಅವರ ಹೇಳಿಕೆಯಾಗಿರುವುದು ! ॥೪೧೮॥ ಈ ಪ್ರಕಾರವಾಗಿ ನಾನು ಸರ್ವವ್ಯಾಪಿ, ವಿಶ್ವಾತ್ಮಾ ಮತ್ತು ವಿಶ್ವದಲ್ಲಿ ತುಂಬಿಕೊಂಡಿರುವ ವಿಷಯಕ್ಕೆ ವೃಕ್ಷದ ದೃಷ್ಟಾಂತದಿಂದ ನಿನಗೆ ಇಲ್ಲಿ ಸ್ಪಷ್ಟವಾಗಿ ಹೇಳಿರುವೆನು ॥೪೧೯॥ ನನ್ನನ್ನು ಕಾಣುವ ನನ್ನ ಯಾವ ಭಕ್ತನಿಗೆ ನಾನು ಸರ್ವೇಶ್ವರನಾಗಿರುವೆನು. ನನ್ನನ್ನು ತಿಳಿಯಲಾರದ ನರನಿಗೆ ಕೇವಲ ಸಂಸಾರವೇ ಕಾಣಿಸುತ್ತಿರುವುದು ॥೪೨೦॥ ನಾನು ಸರ್ವಾತ್ಮನೂ ಮತ್ತು ಸರ್ವೇಶ್ವರನೂ ಆಗಿರುವೆನು. ಆದರೆ ಆ ಯಾವ ಭ್ರಾಂತ ಜನರಿಗೆ ಸಂಸಾರವೃಕ್ಷವಾಗಿ ಭಾಸವಾಗುವುದು. ಈ ಯಾವ ಸಂಸಾರ ವೃಕ್ಷದ ವಿಸ್ತಾರವನ್ನು ಸ್ವತಃ ಶ್ರೀಕೃಷ್ಣನೇ ಹೇಳುತ್ತಿರುವನು ॥೪೨೧॥

ಭ್ರಾಂತಿಯಿಂದ ಈ ಸಂಸಾರವೃಕ್ಷವು ಉತ್ಪನ್ನವಾಗಿ ಕರ್ಮ ಮತ್ತು ಅಕರ್ಮರೂಪ ಜಲದಿಂದ ಬಹು ದೊಡ್ಡದಾಗಿ ಬೆಳೆದಿರುವುದು. ಇದು ಅನಂತ ಕಾಲದಿಂದ ಜೀರ್ಣ ಮತ್ತು ಹಳೆಯದಾಗಿರುವುದು. ಫಲಪುಷ್ಪಗಳಿಂದ ತುಂಬಿಕೊಂಡಿರುವುದು ॥೪೨೨॥ ಅದರ ಬೀಜ ಯಾವುದು? ಬೇರು ಯಾವುದು? ರಸ ಯಾವುದು? ಫಲ ಯಾವುದು? ಈ ಪ್ರಶ್ನೆಗಳಿಂದ ಅನೇಕ ಜೀವಿಗಳು ಭ್ರಮೆಯಲ್ಲಿ ಬದ್ಧರುವುವು. ಇದನ್ನು ನಾನು ನಿನಗೆ ಸವಿಸ್ತಾರವಾಗಿ ತಿಳಿಸಿ ಹೇಳುವೆನು ॥೪೨೩॥

ಭ್ರಮ ಭೂಮೀಮಾಜಿವಡೇ । ಪಾಪಪುಣ್ಯ ಜೋಡಪಾಡೇ । ಬೀಜ ಪಡತಾಂಚಿ ವೃಕ್ಷ ವಿರೂಢೇ । ಅಗ್ನೀ ವಾಢೇ ಕಲ್ಪನಾ ॥೪೨೪॥ ಪಾನ ಫೂಲ ನ ದಿಸೇ ಫಳ । ವೇಲಾಅಂಗೀ ದೋ ರವಾ ಸಕಳ । ತೇಣೇಂಚಿ ವೇಲಾ ವಾಢ ಪ್ರಬಳ । ತೇವೀ ಸಂಸಾರ ಸಬಳ ಕಲ್ಪನಾಗ್ರೇ ॥೪೨೫॥ ಕರ್ಮಾಕರ್ಮಪ್ರವಾಹಜಳೇ । ಭರಿಲೇ ಅವಿದ್ಯೇಚೇ ಆಳೇ । ಅನಂತ ವಾಸನಾ ತೇಚಿ ಮೂಳೇ । ವೃಕ್ಷ ತೇಣೇ ಬಳೇ ಢಳೇನಾ ॥೪೨೬॥ ಸೂಕ್ಷ್ಮ ವಾಸನಾ ಕಲ್ಪಕೋಡೀ । ಅಧೋಗತೀ ರುತಲ್ಯಾ ಬುಡೀ । ಸಂಕಲ್ಪವಿಕಲ್ಪೇ ಚಹೂಕಡೀ । ಪಸರಲ್ಯಾ ಬುಡೀ ಬುಚಬುಚಿತ ॥೪೨೭॥ ಸಂಚಿತಕ್ರಿಯಮಾಣ ವಾಫೇ ಭಾರೀ । ಸುಬದ್ಧ ಭರಲೇ ಜಳೇಕರೀ । ಭರಿಲೇಚ ಮಾಗುತೇ ಭರೀ । ಪ್ರವಾಹೋ ತ್ಯಾವರೀ ಪಡಲಾಸೇ ॥೪೨೮॥ ತೇಣೇ ವೃಕ್ಷ ಸಬಳ ಭಾರೀ । ನಿತ್ಯ ನೂತನ ವಾಢೀ ಧರೀ । ಸಗುಣ ಗುಣಾಚೇ ವಾಢೀವರೀ । ತ್ರಿಗುಣ ಅಹಂಕಾರೀ ತ್ರಿನಾಳ ॥೪೨೯॥ ತ್ರಿಗುಣಗುಣಾಂಚೀ ಪರವಡೀ । ಯೇರಾಂಚೀ ಯೇರಾಮಾಜೀ ಮುರಡೀ । ಯೇರಯೇರಾವರೀ ಬುಡೀ । ಮಿಸಳೇ ವಾಢೀ ವಾಢತೀ ॥೪೩೦॥ ಪಂಚಭೂತಾಂಚ್ಯಾ ಖಾಂದ್ಯಾ ಥೋರೀ । ಪ್ರಪಂಚ ವಾಡಲ್ಯಾ ಬಾಹೇರೀ । ಪಸರಲ್ಯಾ ಯೇರಯೇರಾವರೀ । ಮೀನಲ್ಯಾ ಪರಸ್ಪರೀ ವಾಢತೀ ॥೪೩೧॥ ಸಮೂಳ ಗರ್ಭ ಸಾಧೂನಿ ರುಖಾ । ಮನೋಮಯ ವಾಢಲಿಯಾ ಶಾಖಾ । ಅಗ್ನೀ ದಶೇಂದ್ರಿಯಫಾಂಟೇ ದೇಖಾ । ತಿಚ್ಯಾ ಝುಳಕಾ ಡೋಲತೀ ॥೪೩೨॥ ತ್ಯಾ ತ್ಯಾ ಶಾಖಾಮಾಜೀ ದೇಖಾ । ದೈವತೇ ಆಲೀ ವಸ್ತೀಸುಖಾ । ಕರೂನೀ ಕರ್ಮಾಚಾ ಆವಾಂಕಾ । ಆಪುಲಾಲೀ ಶಾಖಾ ತೇ ಧರಿತೀ ॥೪೩೩॥ ದಶಧಾ ವಾಯೂಚೀ ಝುಡಾಡ । ತೇಣೇ ತೇ ಡೋಲತ ದಿಸೇ ಝಾಡ । ತ್ಯಾಮಾಜೀ ದೋ ಪಕ್ಷ್ಯಾಂಚೇ ನೀಡ । ಅತಿಗೂಢ ಅತರ್ಕ್ಯ ॥೪೩೪॥ ಜೇಥೂನಿ ಉಪಜೇ ನಿಜಜ್ಞಾನ । ತೇಚಿ ನೀಡ ಹೃದಯಭುವನ । ಜೀವೂ ಪರಮಾತ್ಮಾ ದೋಘೇಜಣ । ಅತರ್ಕ್ಯ ಪೂರ್ಣ ವಸತಾತೀ ॥೪೩೫॥ ಜೀವೂ ಜೋ ದೇಹಾಭಿಮಾನೀ । ಪರಮಾತ್ಮಾ ಜೋ ನಿರಭಿಮಾನೀ । ಇಂಹೀ ದೋಘೀಜಣೇ ಮಿಳೋನೀ । ಹೃದಯಭುವನೀ ನೀಡ ಕೇಲೇ ॥೪೩೬॥ ಜೀವ ಸಂಕಲ್ಪವಿಕಲ್ಪಪ್ರಾಪ್ತೀ । ಪರಮಾತ್ಮಾ ನಿರ್ವಿಕಲ್ಪಸ್ಥಿತೀ । ದೋಹೀಚಿ ಹೃದಯಾಮಾಜೀ ವಸ್ತೀ । ನೀಡ ನಿಶ್ಚಿತೀ ಯಾ ಹೇತೂ ॥೪೩೭॥

ಭ್ರಮರೂಪ ಭೂಮಿಯಲ್ಲಿ ಪಾಪ-ಪುಣ್ಯಗಳ ಹಳೆಯ ಜೋಡು ಬೀಜವು ಬೀಳುತ್ತಲೇ ಈ ಯಾವ ವೃಕ್ಷವು ಹುಟ್ಟುವುದು. ಇದರ ಶಿಖರದಲ್ಲಿ ಕಲ್ಪನೆಯು ಬೆಳೆಯುತ್ತಿರುವುದು ॥೪೨೪॥ ಈ ವೃಕ್ಷದ ಎಲೆಗಳು, ಪುಷ್ಪಗಳು, ಫಲಗಳು ಹೀಗೆ ಯಾವುವೂ ಕಾಣುವುದಿಲ್ಲ. ಒಳಭಾಗದಲ್ಲಿ ದಾರದಂತಹ ತಂತುಗಳೇ ಎಲ್ಲೆಲ್ಲಿಯೂ ತುಂಬಿಕೊಂಡಿರುವುವು. ಈ ಯಾವ ತಂತುಗಳಿಂದ ಬಳ್ಳಿಗಳು ಬಹುವಾಗಿ ಬೆಳೆಯುತ್ತಿರುವುವು. ಅದರಂತೆ ಕಲ್ಪನೆಗಳ ಶಿಖರದಿಂದ ಯಾವ ಈ ಸಂಸಾರವು ಬಲಿಷ್ಠವಾಗಿರುವುದು ॥೪೨೫॥ ಕರ್ಮ ಅಕರ್ಮ ರೂಪ ಜಲದ ಪ್ರವಾಹದಿಂದ ಅವಿದ್ಯಾರೂಪ ವೃಕ್ಷದ ಸುತ್ತುಗಟ್ಟೆ ತುಂಬಿಕೊಳ್ಳುವುದು. ಯಾವ ಅನಂತ ವಾಸನೆಗಳೆಂಬುವ ಬೇರುಗಳೇ ಆಳವಾಗಿ ಹೋಗಿ ಅವುಗಳ ಬಿಗಿಯಾದ ಆಧಾರದಿಂದ ಈ ವೃಕ್ಷವು ಸ್ವಲ್ಪವೂ ಕೂಡ ಅಲುಗಾಡದಂತಾಯಿತು ॥೪೨೬॥ ಸೂಕ್ಷ್ಮವಾಗಿರುವ ಈ ಯಾವ ವಾಸನೆರೂಪ ಕೋಟ್ಯಾವಧಿ ಬೇರುಗಳು ಕೆಳಗೆ ಹೋಗಿ ಹೂತುಕೊಂಡಿರುವುವು. ಮತ್ತು ಸಂಕಲ್ಪ-ವಿಕಲ್ಪ ರೂಪದಿಂದ ನಾಲ್ಕೂ ಕಡೆಗಳಲ್ಲಿ ಪಸರಿಸಿ, ಬುಡದಲ್ಲಿ ಅದರ ಜಾಲಗಳು ಸಿದ್ಧವಾಗಿರುವುವು ॥೪೨೭॥ ಸಂಚಿತ ಕ್ರಿಯಾಮಾಣವೆಂದು ವೃಕ್ಷಸುತ್ತಲಿನ ಮಡಿಗಳು ನೀರಿನಿಂದ ತುಂಬಿ ತುಳುಕುತ್ತಿರುವುವು. ಅದರಲ್ಲಿ ಬೇರೆ ಪ್ರವಾಹಗಳು ಕೂಡಿಕೊಂಡು ಆ ಮಡಿಗಳು ಸತತವಾಗಿ ತುಂಬಿಕೊಂಡಿರುವುವು ॥೪೨೮॥ ಆದ್ದರಿಂದ ಈ ವೃಕ್ಷವು ಭಾರೀ ದಟ್ಟವಾಗಿ ಬೆಳೆದು ಹಬ್ಬಿಕೊಳ್ಳುವುದು. ಸಗುಣ ಗುಣದ ಬೆಳೆಯಲ್ಲಿ ತ್ರಿಗುಣಾತ್ಮಕ ಅಹಂಕಾರದ ತ್ರಿದಳವು ಹುಟ್ಟಿಕೊಳ್ಳುವುದು ॥೪೨೯॥ ತ್ರಿಗುಣಗಳ ಗುಣಗಳ ಜಾಲವೇ ತಯಾರಾಗಿ ಅವು ಒಂದರಲ್ಲಿ ಒಂದು ಸಿಕ್ಕಿಕೊಂಡು ಭರಭರನೇ ಬೆಳೆಯುತ್ತಲೇ ಏಕತ್ರ ಬೆಳೆಯುವಿಕೆಯಿಂದ ದೊಡ್ಡದಾಗುವುವು ॥೪೩೦॥ ಪಂಚಮಹಾಭೂತಗಳ ದೊಡ್ಡ ದೊಡ್ಡ ಟೊಂಗೆಗಳು ಪ್ರಪಂಚ ವೃಕ್ಷದ ಹೊರಗೂ ಪಸರಿಸುವುವು ಮತ್ತು ಒಂದರಲ್ಲಿ ಒಂದು ಕೂಡಿಕೊಂಡು ಬೆಳೆಯಲಾರಂಭಿಸುವುವು ॥೪೩೧॥ ಈ ವೃಕ್ಷದ ಮೇಲೆ ಬೇರುಸಮೇತವಾಗಿ ಮನೋಮಯ ಶಾಖೆಗಳು ಬೆಳೆದಿರುವುವು ಮತ್ತು ಅವುಗಳ ಶಿಖರದ ಮೇಲೆ ಹತ್ತು ಇಂದ್ರಿಯಗಳ ಶಾಖೆಗಳು ಹುಟ್ಟಿಕೊಂಡಿರುವುವು. ಇವು ವಾಯುವಿನ ಮಂದವಾದ ಬೀಸುವಿಕೆಯಲ್ಲಿ ತೂಗಾಡುತ್ತಿರುವುವು ॥೪೩೨॥ ಈ ಯಾವ ಪ್ರತ್ಯೇಕ ಶಾಖೆಗಳಲ್ಲಿ ದೇವತೆಗಳೂ ಕೂಡ ಸುಖವಾಗಿರಲು ಬಂದಿರುವರು. ಇವರು ಕರ್ಮಗಳ ಆಧಾರಗಳಿಂದ ತಮ್ಮ ತಮ್ಮ ಶಾಖೆಗಳಲ್ಲಿ ಇರುವರು ॥೪೩೩॥ ಹತ್ತು ಪ್ರಕಾರದ ವಾಯುಗಳ ಬೀಸುವಿಕೆಯಿಂದ ಈ ವೃಕ್ಷವು ಅಲುಗಾಡುವುದು ತೋರುವುದು. ಈ ವೃಕ್ಷದಲ್ಲಿ ಎರಡು ಪಕ್ಷಿಗಳ ಗೂಢವಾದ ಮತ್ತು ಅತರ್ಕ್ಯ ಮನೆಗಳಿರುವುವು ॥೪೩೪॥ ಎಲ್ಲಿಂದ ಆತ್ಮಜ್ಞಾನವು ಉತ್ಪನ್ನವಾಗುವುದೋ ಅದೇ ಆ ಗೂಡು ಅಂದರೆ ಹೃದಯಮಂದಿರವಾಗಿರುವುದು. ಅಲ್ಲಿ ಜೀವ ಮತ್ತು ಪರಮಾತ್ಮಾ ಈ ಈರ್ವರೂ ಅತರ್ಕ್ಯ ರೀತಿಯಲ್ಲಿರುವರು ॥೪೩೫॥ ದೇಹಾಭಿಮಾನೀ ಜೀವನಾಗಿರುವನು. ನಿರಾಭಿಮಾನೀ ಪರಮಾತ್ಮನಾಗಿರುವನು. ಈ ಈರ್ವರೂ ಕೂಡಿ ಹೃದಯಮಂದಿರದಲ್ಲಿ ಗೂಡನ್ನು ಕಟ್ಟಿರುವರು ॥೪೩೬॥ ಜೀವವು ಸಂಕಲ್ಪ-ವಿಕಲ್ಪಗಳನ್ನು ನಿರ್ಮಾಣಗೊಳಿಸುತ್ತಿರುವುದು. ಪರಮಾತ್ಮನು ನಿರ್ವಿಕಲ್ಪನಾಗಿರುವನು. ಈ ಈರ್ವರ ವಾಸ್ತವ್ಯವು ಹೃದಯ ಮಂದಿರದಲ್ಲಿರುವುದು. ಆದ್ದರಿಂದ ಅದಕ್ಕೆ ಪಕ್ಷಿಗಳ ಗೂಡು ಎಂದು ಕರೆಯುವರು ॥೪೩೭॥

ಪಾಹೇ ಪಾ ವಾತ ಪಿತ್ತ ಶ್ಲೇಷ್ಮಾ । ಯಾ ಆಂತರತ್ವಚಾ ಭವದ್ರುಮಾ। ವಲ್ಕಲೇ ಮ್ಹಣಾವಯಾಚಾ ಮಹಿಮಾ। ಭಕ್ತೋತ್ತಮಾ ಯಾ ಹೇತೂ ॥೪೩೮॥ ಗಗನಾಹೂನಿ ವಾಢಲಾ ವರುತಾ । ಶೂನ್ಯಾಸಹಿತ ಲಾಂಬಲಾ ಆರುತಾ। ಸೈಂಘ ಪಸರಲಾ ಸಭೋವತಾ ದಿಶಾಂಚ್ಯಾ ಪ್ರಾಂತಾ ಸಾಂಡೂನೀ ॥೪೩೯॥ ಏವಂ ವಿಸ್ತಾರಲೇನಿ ವಿಸ್ತಾರಾ। ವೃಕ್ಷ ಉನ್ಮಳೋನಿ ಮದಭರಾ । ಪಂಚರಸಾಂಚ್ಯಾ ವಿಷಯಧಾರಾ । ಅತಿಮಧುರಾ ವರ್ಷತು ॥೪೪೦॥ ಶ್ರುತಿ - ಸ್ಮೃತಿ ಹೀಂಚ ಪಾನೇ । ತ್ಯಾಮಾಜೀ ಉಗವಲೀ ಸ್ವರ್ಗಸುಮನೇ । ದೀಕ್ಷಿತಭ್ರಮರ ಜ್ಯಾ ಕಾರಣೇ । ಅತಿಸತ್ರಾಣೇ ಉಡತಾತೀ ॥೪೪೧॥ ತ್ಯಾ ವೃಕ್ಷಾಚೀ ಜಾವಳೀ ಫಳೇ । ಸುಖದುಃಖ ದೋನೀ ಏಕೇ ಮೇಳೇ । ತೇಂಡಾ ಧರೋನಿ ಸಮೂಳೇ । ದೋನೀಚಿ ಫಳೇ ಪೈ ತ್ಯಾಸೀ ॥೪೪೨॥ ಜಿತುಕೀ ಸೂರ್ಯಮಂಡಳೇ ಭಾಸತೀ । ತಿತುಕೀ ಜಾಣ ಯಾಚೀ ಸ್ಥಿತೀ । ಸುಖದುಃಖಫಳೇ ತಿತುಕ್ಯಾಂಪ್ರತೀ । ಕರ್ಮಪ್ರಾಪ್ತೀ ದೇತುಸೇ ॥೪೪೩॥ ಸೂರ್ಯಮಂಡಳಾ ಆರುತೇ। ಸಾಂಗೀತಲೇ ಭವವೃಕ್ಷಾತೇ । ಚಂದ್ರಮಂಡಳಾದಿ ಸಮಸ್ತೇ । ಭವಭಯ ತೇಥೇ ನಾಹೀ ನ ಮ್ಹಣ॥೪೪೪॥ ಮೀ ಸೂರ್ಯಮಂಡಳಮಧ್ಯವರ್ತೀ । ತ್ಯಾ ಮಜವೇಗಳೀ ಜೇ ಸ್ಫುರೇ ಸ್ಫೂರ್ತಿ । ತೇಥವರೀ ಭವಭಯಾಚೀ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೪೪೫॥ ಸೂರ್ಯಾಚೇ ಜೇ ಸೂರ್ಯಮಂಡಳ । ತೇಹೀ ಸಂಸಾರಾಮಾಜೀ ಕೇವಳ। ಜೋ ನ ಖಾಯ ಯಾ ವೃಕ್ಷಾಚೇ ಫಳ । ತೋಚಿ ರವಿ ಮಂಡಳ ಭೇದಕ ॥೪೪೬॥ ವೃಕ್ಷಾಚೀ ದೋನೀ ಫಳೇ ಯೇಥೇ । ದೋ ಹೋ ಫಳಾಂಚೇ ದೋಘೇ ಭೋಕ್ತೇ । ದೋಘೇ ಸಂಸಾರಾ ಆಂತೌತೇ । ಐಕ ತೂತೇ ಸಾಂಗೇನ ॥೪೪೭॥

ಅದಂತಿ ಚೈಕಂ ಫಲಮಸ್ಯ ಗೃಧ್ರಾ ಗ್ರಾಮೇಚರಾ ಏಕಮರಣ್ಯವಾಸಾಃ ।
ಹಂಸಾ ಯ ಏಕಂ ಬಹುರೂಪಮಿಜ್ಯೈರ್ಮಾಯಾಮಯಂ ವೇದ ಸ ವೇದ ವೇದಮ್ ॥೨೩॥

ಅರ್ಥ:- ಗ್ರಾಮದಲ್ಲಿ ಇರುವ ಸಕಾಮ ಜನರು ಇದರ ಒಂದು ಫಲವನ್ನು ತಿನ್ನುವರು. ಅಂದರೆ ದುಃಖವನ್ನು ಭೋಗಿಸುವರು. ಅರಣ್ಯದಲ್ಲಿನ ಸನ್ಯಾಸಿಯು ಇದರ ಇನ್ನೊಂದು ಸುಖದ ಫಲವನ್ನು ಭೋಗಿಸುವನು. ಹೇ ಉದ್ಧವನೇ, ವಾಸ್ತವಿಕವಾಗಿ ನಾನು ಒಬ್ಬನೇ ಇರುವೆನು. ಇವು ಎಲ್ಲವೂ ನನ್ನ ಅನೇಕ ಪ್ರಕಾರದ ರೂಪಗಳಾಗಿವೆ. ಇವು ಕೇವಲ ಮಾಯಾಮಯವಾಗಿರುವುವು. ಈ ಯಾವ ವಿಷಯವನ್ನು ಸದ್ಗುರುಗಳವರಿಂದ ತಿಳಿದುಕೊಂಡವನು ಸರ್ವ ವೇದಗಳ ರಹಸ್ಯವನ್ನು ತಿಳಿಯುವನು.

ದುಃಖಫಳಾಚೇ ಭೋಕ್ತೇ । ಅತ್ಯಂತ ವಿಷಯಾಸಕ್ತ ಚಿತ್ತೇ । ಗೀಧ ಗೃಹಸ್ಥ ಕಾ ಜೇ ಯೇಥೇ । ಅವಿಧಿ ವಿಷಯಾಂತೇ ಸೇವಿತೀ ॥೪೪೮॥

ವಾತ, ಪಿತ್ತ, ಕಫ ಇವು ಈ ಸಂಸಾರ ವೃಕ್ಷದ ಒಳಗಿನ ಚರ್ಮಗಳಾಗಿರುವುವು. ಹೇ ಭಕ್ತಶ್ರೇಷ್ಠ ಉದ್ಧವನೇ, ಇದಕ್ಕೆ ಗೌರವದಿಂದ ಒಳದೊಗಟೆ ಎಂದು ಹೇಳುವುದು ಇದೇ ಉದ್ದೇಶವಾಗಿದೆ ॥೪೩೮॥ ಈ ವೃಕ್ಷವು ಆಕಾಶಕ್ಕಿಂತಲೂ ಎತ್ತರವಾಗಿ ಬೆಳೆದಿರುವುದು. ಹಾಗಯೇ ಶೂನ್ಯದ ಕೆಳಭಾಗದಲ್ಲಿಯೂ ಕೂಡ ಬಹು ಉದ್ದವಾಗಿ ಹರಡಿರುವುದು. ದಿಕ್ಕುಗಳ ಮರ್ಯಾದೆಯನ್ನು ಉಲ್ಲಂಘಿಸಿ ಇದರ ವಿಸ್ತಾರವು ಸುತ್ತುಮುತ್ತು ಬೆಳೆದಿರುವುದು ॥೪೩೯॥ ಈ ಪ್ರಕಾರವಾಗಿ ವಿಸ್ತಾರಪೂರ್ವಕ ಹಬ್ಬಿಕೊಂಡಿರುವ ಈ ಯಾವ ಮಹಾ ವೃಕ್ಷವು ತಾನು ಮದದಿಂದ ತುಂಬಿತುಳುಕುತ್ತ ಪಂಚ ರಸಾತ್ಮಕ ವಿಷಯಗಳ ಅತ್ಯಂತ ಮಧುರವಾದ ಧಾರೆಗಳ ಮಳೆಗರೆಯುತ್ತಿರುವುದು ॥೪೪೦॥ ಶ್ರುತೀ ಮತ್ತು ಸ್ಮೃತೀಗಳು ಈ ವೃಕ್ಷದ ಎಲೆಗಳಾಗಿರುವುವು. ಅವುಗಳಲ್ಲಿ ಸ್ವರ್ಗರೂಪ ಹೂವುಗಳು ಹುಟ್ಟಿಕೊಂಡಿರುವುವು. ಈ ಹೂವುಗಳ ಮೇಲೆ ಯಾಜ್ಞಿಕರೂಪ ಭ್ರಮರಗಳು ಬಹು ವೇಗದಿಂದ ಜಿಗಿಯುವುವು ॥೪೪೧॥ ಈ ವೃಕ್ಷದಲ್ಲಿ ಸುಖ ಮತ್ತು ದುಃಖ ಈ ಎರಡರಿಂದ ಕೂಡಿದ ಫಲಗಳಿದ್ದು ಇವು ಯಾವಾಗಲೂ ಕೂಡಿಕೊಂಡೇ ಇರುವುವು. ಹಾಗೆಯೇ ವೃಕ್ಷದ ಬೇರಿನಿಂದ ಹಿಡಿದು ಶಿಖರದವರೆಗೆ ಯಾವಾಗಲೂ ಜೋತು ಬಿದ್ದಿರುವುವು ॥೪೪೨॥ ಎಷ್ಟು ಸೂರ್ಯ ಮಂಡಲಗಳು ಕಾಣುವುವೋ, ಅಷ್ಟೊಂದು ಸೂರ್ಯನ ವಿಸ್ತಾರವಿರುವುದು ಮತ್ತು ಅದರಲ್ಲಿಯ ಕರ್ಮಪ್ರಾಪ್ತಿಯು ಸುಖದುಃಖರೂಪ ಫಲಗಳನ್ನು ಕೊಡುತ್ತಿರುವುವು ॥೪೪೩॥ ಸೂರ್ಯಮಂಡಲಗಳವರೆಗೆ ಈ ಯಾವ ಸಂಸಾರ ವೃಕ್ಷವು ಇರುವುದೆಂದು ಕೇಳಿಕೊಂಡು ಚಂದ್ರಮಂಡಳಾದಿ ಇರುವ ಇತರ ಸರ್ವ ಭಾಗಗಳಲ್ಲಿ ಸಂಸಾರ ಭಯವಿಲ್ಲವೆಂದು ಹೀಗೆ ತಿಳಿಯಬೇಡ ॥೪೪೪॥ ಉದ್ಧವಾ, ನಾನು ಸೂರ್ಯ ಮಂಡಲದ ಮಧ್ಯಭಾಗದಲ್ಲಿಯೂ ಇರುವೆನು. ಅವು ನನ್ನ ಹೊರತಾಗಿ ಯಾವುದೇ ವಸ್ತುಗಳು ಸ್ಫೂರ್ತಿಯನ್ನು ಸ್ಫುರಣಗೊಳ್ಳುತ್ತಿರುವವೋ ಅಲ್ಲಿಯವರೆಗೆ ಸಂಸಾರಭಯವು ನಿಜವಾಗಿಯೂ ಇದ್ದೇ ಇರುವುದೆಂದು ನಿಶ್ಚಿತವಾಗಿ ತಿಳಿದುಕೋ ॥೪೪೫॥ ಸೂರ್ಯನ ಮಂಡಲವೂ ಕೂಡ ಕೇವಲ ಸಂಸಾರ ಮಧ್ಯದಲ್ಲಿಯೇ ಇದೆ ಎಂದು ತಿಳಿದು ಈ ವೃಕ್ಷದ ಫಲವನ್ನು ಯಾರು ತಿನ್ನಲಾರನೋ, ಆ ಮನುಷ್ಯನು ಮಾತ್ರ ರವಿಮಂಡಲವನ್ನು ಬೇಧಿಸುವವನಾಗಿರುವನು ॥೪೪೬॥ ಈ ವೃಕ್ಷದಲ್ಲಿ ಎರಡೇ ಫಲಗಳಿರುವುವು. ಆ ಫಲಗಳ ಭೋಕ್ತರೂ ಕೂಡ ಇಬ್ಬರೇ ಇರುವರು. ಈ ಇಬ್ಬರೂ ಸಂಸಾರದಲ್ಲಿರುವರು. ಈಗದನ್ನು ನಿನಗೆ ಹೇಳುವೆ, ಕೇಳು ॥೪೪೭॥

ಯಾರು ವಿಷಯಗಳ ಅತ್ಯಂತ ಆಸಕ್ತರಾಗಿರುವರೋ, ಅವರು ದುಃಖದ ಫಲಗಳನ್ನು ಭೋಗಿಸುವರು. ಪಶುರೂಪಿ ಗೃಹಸ್ಥರಾಗಿ ಅವಿಧಿಯಾಗಿ ವಿಷಯಗಳ ಸೇವನೆಯನ್ನು ಮಾಡುತ್ತಿರುವರು ॥೪೪೮॥

ಗ್ರಾಮ್ಯ ವಿಷಯೀ ಅತಿತತ್ಪರ । ಯಾಲಾಗೀ ಬೋಲಿಜೇ ಗ್ರಾಮಚರ । ಗ್ರಾಮಗೀಧ ಜೈಸೇ ಘಾರ । ತೈಸೇ ಸಾದರ ವಿಷಯಾಂಸೀ ॥೪೪೯॥ ಜೇವೀ ಕಾ ಘಾರ ಗಗನಾ ಚಢೇ । ತೇಥೂನಿ ಆವಿಸಾ ಉಡೀ ಪಡೇ । ತೇವೀ ನರದೇಹ ಪಾವೋನಿ ಚೋಖಡೇ । ವಿಷಯೀ ಝಡಪಡೇ ಝೋಂಬತೀ ॥೪೫೦॥ ಏವಂ ವಿಷಯಾಸಕ್ತ ಜೇ ಚಿತ್ತೇ । ಜೇ ಅಧೋಗತೀತೇ ಪಾವತೇ । ತೇ ದುಃಖಫಳಾಚೇ ಭೋಕ್ತೇ । ಜಾಣ ಯೇಥೇ ನಿಶ್ಚಿತ ॥೪೫೧॥ ಸಾಂಡೋನಿಯಾ ಗಾರ್ಹಸ್ಥ್ಯ । ವನವಾಸೀ ವಾನಪ್ರಸ್ಥ । ತ್ಯಾಂಸಚಿ ಸುಖಫಲ ಪ್ರಾಪ್ತ । ಜಾಣ ನಿಶ್ಚಿತ ಉದ್ಧವಾ ॥೪೫೨॥ ತ್ಯಾ ಸುಖಫಳಾಚೇ ವಿಭಾಗ । ಬ್ರಹ್ಮ ಸದನಾಂತ ಇತರ ಸ್ವರ್ಗ । ಕರ್ಮೆ ಕರೂನಿಯಾ ಸಾಂಗ । ಜೇಥೀಂಚಾ ಮಾರ್ಗ ಚಾಲಿಜೇ ॥೪೫೩॥ ಬ್ರಹ್ಮ ಚರ್ಯೆ ವೇದಾಧ್ಯಯನ । ಗಾರ್ಹಸ್ಥ್ಯೇ ಪೂಜಿತೇ ಅಗ್ನಿ ಬ್ರಾಹ್ಮಣ । ವಾನಪ್ರಸ್ಥಾಶ್ರಮೀ ಜಾಣ । ವನ್ಯಫಳಭೋಜನ ವನವಾಸೀ ॥೪೫೪॥ ಯೇಣೇ ಕರ್ಮೆಚಿ ಕ್ರಮಮುಕ್ತಿಸ್ಥಾನ । ಜಂಹೀ ಠಾಕಿಲೇ ಬ್ರಹ್ಮ ಸದನ । ಸುಖಫಳಾಚೇ ಭೋಕ್ತೇ ತೇ ಜಾಣ । ಬ್ರಹ್ಮ ಭುವನನಿವಾಸೀ ॥೪೫೫॥ ಇತರ ಸ್ವರ್ಗೀ ಸುಖಪ್ರಾಪ್ತೀ ।ಜೇಥೇ ಆಹೇ ಪುನರಾವೃತ್ತೀ । ಬ್ರಹ್ಮ ಸದನೀ ಪಾವಲ್ಯಾ ವಸ್ತೀ । ತ್ಯಾಂಸೀ ಕ್ರಮೇ ಮುಕ್ತೀ ಹೋ ಈಲ ॥೪೫೬॥ ಮೂಳೀಂಚೇ ಪದ ''ಅರಣ್ಯವಾಸೀ'' । ತೇಣೇ ದ್ಯೋತಿಲೇ ವಾನಪ್ರಸ್ಥಾಸೀ । ತೇಥ ನಾಹೀ ಘೇತಲಾ ಸನ್ಯಾಸೀ । ತ್ಯಾಸೀ ವನವಾಸೀ ಮ್ಹಣೋ ನ ಯೇ ॥೪೫೭॥ ಸನ್ಯಾಶಾಂಸೀ ನಿವಾಸಸ್ಥಾನ । ವೇದೀ ಬೋಲಿಲೇ ನಾಹೀ ಜಾಣ ।ತಿಹೀ ಸ್ವದೇಹಾಚೇ ಕೇಲೇ ದಹನ । ನೇಮಿಲೇ ಸ್ಥಾನ ತ್ಯಾ ನಾಹೀ ॥೪೫೮॥ ಜೇ ಅವಿದ್ಯಾದಿಕರ್ಮಪ್ರವೃತ್ತೀ। ವಿರಜಾಹೋಮೀ ಸ್ವಯೇ ಜಾಳಿತೀ। ತೇ ಭವವೃಕ್ಷಾ ಚೀ ಫಳೇ ಖಾತೀ। ಹೇ ಹೀ ಯುಕ್ತೀ ಘಡೇನಾ ॥೪೫೯॥ ಜಾಗೃತೀಚ್ಯಾ ಪಾಹುಣ್ಯಾಸೀ । ಜೇವೂ ಧಾಡಾವೇ ಸ್ವಪ್ನಗೃಹಾಸೀ । ತೇವೀ ನ್ಯಸ್ತಸಂಕಲ್ಪ ಸನ್ಯಾಸೀ । ಸಂಸಾರಸುಖಾಸೀ ಕೇವೀ ಭೋಕ್ತೇ ॥೪೬೦॥ ಸ್ವಕರ್ಮ ಜಾಳೋನಿ ವಿರಜಾಹೋಮೀ । ಜಂಹೀ ಸಾಧ್ಯ ಕೇಲೇ ಬ್ರಹ್ಮಾಹಮಸ್ಮಿ । ತ್ಯಾಂಸೀ ನಿವಾಸಸ್ಥಾನ ಕೋಣ ನೇಮೀ । ವನೀ ಗ್ರಾಮೀ ೇಮಸ್ತ ॥೪೬೧॥ ಬಿಢಾರ ದ್ಯಾವಯಾ ಆಕಾಶಾಸೀ । ಕೋಣ ಘರ ನೇಮಾವೇ ತ್ಯಾಸೀ । ತೇವೀ ನ್ಯಸ್ತಸಂಕಲ್ಪ ಸನ್ಯಾಸೀ । ತ್ಯಾಂಚ್ಯಾ ನಿವಾಸಾಸೀ ಕೋಣ ನೇಮೀ ॥೪೬೨॥

ಇವರು ಗ್ರಾಮ್ಯ ವಿಷಯಗಳಲ್ಲಿ ಅತ್ಯಂತ ತತ್ಪರರಾಗಿರುವರು. ಆದ್ದರಿಂದ ಇವರಿಗೆ ಗ್ರಾಮಚರರೆಂದು ಹೇಳುವರು. ಹದ್ದುಗಳಂತೆ ಇವರು ವಿಷಯಗಳ ಮೇಲೆ ಜಿಗಿದು ಬೀಳುವರು ॥೪೪೯॥ ಹದ್ದು ಆಕಾಶದಲ್ಲಿ ಬಹು ಎತ್ತರವಾಗಿ ಹಾರುತ್ತಿರುವುದು. ಅದರ ಲಕ್ಷವು ಆಮಿಷದ ಮೇಲೆ ಹೋಗುವುದೊಂದೇ ತಡ, ಕೂಡಲೇ ಅಲ್ಲಿಂದಲೇ ಅದಕ್ಕಾಗಿ ಜಿಗಿದಿಳಿಯುವುದು. ಅದರಂತೆ ಅಮೌಲ್ಯವಾದ ನರದೇಹವು ಲಭಿಸಿದ್ದರೂ ಕೂಡ ವಿಷಯಗಳಿಗೆ ಪಪ್ಪಿಸಿ ಅಪ್ಪಿಕೊಳ್ಳುತ್ತಿರುವರು ॥೪೫೦॥ ಒಟ್ಟಿನಲ್ಲಿ ಯಾರ ಚಿತ್ತವು ವಿಷಯಗಳಲ್ಲಿ ಆಸಕ್ತವಾಗಿರುವುದೋ ಅವರು ಅಧೋಗತಿಯನ್ನು ಹೊಂದುವರು. ಇವರೇ ದುಃಖಫಲಗಳ ಭೋಕ್ತರೆಂದು ನಿಶ್ಚಯವಾಗಿ ತಿಳಿ ॥೪೫೧॥ ಹೇ ಉದ್ಧವನೇ, ಗೃಹಸ್ಥಾಶ್ರಮವನ್ನು ತ್ಯಜಿಸಿ ವನದಲ್ಲಿದ್ದುಕೊಂಡು ವಾನಪ್ರಸ್ಥ ಆಶ್ರಮವನ್ನು ಸ್ವೀಕರಿಸಿರುವವನಿಗೆ ಸುಖಫಲದ ಪ್ರಾಪ್ತಿಯಾಗುವುದು. ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ॥೪೫೨॥ ಆ ಯಾವ ಸುಖ ಫಲದ ವಿಭಾಗದಲ್ಲಿ ಯಥಾಶಾಸ್ತ್ರವಾಗಿ ಸಂಪೂರ್ಣ ಕರ್ಮಗಳನ್ನು ಮಾಡುವುದರಿಂದ ಅವರ ಮಾರ್ಗವು ನಡೆಯುತ್ತಿರುವುದು. ಹೀಗೆ ಬ್ರಹ್ಮಸ್ಥಾನದ ಕೊನೆಯವರೆಗೆ ಇತರ ಸರ್ವ ಸ್ವರ್ಗಗಳಿರುವುವು ॥೪೫೩॥ ಬ್ರಹ್ಮಚರ್ಯಾವಸ್ಥೆಯಲ್ಲಿ ವೇದಗಳ ಅಧ್ಯಯನವನ್ನು ಮಾಡಿ ಜ್ಞಾನಪ್ರಾಪ್ತಿ ಮಾಡಿಕೊಳ್ಳಬೇಕು. ಗೃಹಸ್ಥಾಶ್ರಮದಲ್ಲಿ ಅಗ್ನಿಯ ಮತ್ತು ಬ್ರಾಹ್ಮಣರ ಪೂಜೆಯನ್ನು ಮಾಡಬೇಕು. ಮತ್ತು ವಾನಪ್ರಸ್ಥ ಆಶ್ರಮದಲ್ಲಿ ವನದಲ್ಲಿದ್ದುಕೊಂಡು ವನದಲ್ಲಿನ ಫಲಗಳನ್ನು ಭುಂಜಿಸಬೇಕು ॥೪೫೪॥ ಹೀಗೆ ಕ್ರಮವಾಗಿ ಆಚರಿಸಲು, ಈ ಕ್ರಮವು ಮುಕ್ತಿಗೆ ಪ್ರಾಪ್ತವಾಗಿ ಬ್ರಹ್ಮಸದನಕ್ಕೆ ಹೋಗಿ ಮುಟ್ಟುವರು. ಇವರೇ ಬ್ರಹ್ಮಭುವನದಲ್ಲಿರುವ ಸುಖಫಲದ ಭೋಕ್ತರಾಗಿರುವರು ॥೪೫೫॥ ಸ್ವರ್ಗದಲ್ಲಿ ಇತರ ಸುಖಪ್ರಾಪ್ತಿಗಳು ಇದ್ದು, ಇವುಗಳಿಗೆ ಪುನರಾವೃತ್ತಿ ಇರುವುದು. ಬ್ರಹ್ಮಸ್ಥಾನದಲ್ಲಿ ಒಂದು ಸಲ ವಸತಿ ಮಾಡಿದರೆ, ಅವರಿಗೆ ಕ್ರಮದಿಂದಲೇ ಮುಕ್ತಿಯು ಪ್ರಾಪ್ತವಾಗುವುದು ॥೪೫೬॥ ಮೂಲದಲ್ಲಿ ''ಅರಣ್ಯವಾಸೀ'' ಎಂದು ಶಬ್ದವಿರುವುದು. ಈ ಶಬ್ದದಿಂದಲೇ ''ವಾನಪ್ರಸ್ಥ'' ಎಂಬುವ ಬೋಧವೇ ಸ್ಪಷ್ಟಗೊಳಿಸಿರುವುದು. ಇಲ್ಲಿ ಸನ್ಯಾಸಿ ಎಂಬ ಅರ್ಥವನ್ನು ಸ್ವೀಕರಿಸಿರುವುದಿಲ್ಲ. ಕಾರಣ ಸನ್ಯಾಸಿಗೆ ವನವಾಸೀ ಎಂದು ಹೀಗೆ ಹೇಳಿರುವುದಿಲ್ಲ ॥೪೫೭॥ ಸನ್ಯಾಸಿಗೆ ಇರಲು ಸ್ಥಳ ಯಾವುದೆಂದು ವೇದದಲ್ಲಿ ಏನೂ ಹೇಳಿರುವುದಿಲ್ಲ. ಸನ್ಯಾಸವನ್ನು ಸ್ವೀಕರಿಸುವಾಗ ಆತನು ಸ್ವದೇಹದ ಹವನವನ್ನು ಮಾಡಿರುವನು. ಆದ್ದರಿಂದ ಆತನಿಗೆ ವಾಸಿಸಲು ನಿಶ್ಚಿತ ಸ್ಥಳವು ಇರುವುದಿಲ್ಲ ॥೪೫೮॥ ಆತನು ಅಜ್ಞಾನಜನ್ಯ ಕರ್ಮಪ್ರವೃತ್ತಿಗೇನೇ ವಿರಜಾ ಹೋಮದಲ್ಲಿ ಸುಟ್ಟುಹಾಕುತ್ತಿರುವನು. ಆದ್ದರಿಂದ ಆತನು ಸಂಸಾರ ವೃಕ್ಷದ ಫಲಗಳನ್ನು ತಿನ್ನುವ ಸಂಭವವಿರುವುದಿಲ್ಲ ॥೪೫೯॥ ಜಾಗೃತಿಯಲ್ಲಿನ ಬೀಗನನ್ನು ಸ್ವಪ್ನದ ಮನೆಯಲ್ಲಿ ಊಟಕ್ಕೆ ಕಳಿಸುವಂತೆ, ಯಾರ ಮನೋವಾಸನೆಯು ಸಂಪೂರ್ಣವಾಗಿ ಲಯಗೊಂಡಿರುವುದು. ಇಂತಹ ಸನ್ಯಾಸಿಯು ಸಂಸಾರಸುಖದ ಭೋಕ್ತನಾಗಲು ಹೇಗೆ ಶಕ್ಯವಿರುವುದು? ॥೪೬೦॥ ಯಾವ ಈ ಸನ್ಯಾಸಿಯು ವಿರಜಾ ಹೋಮದಲ್ಲಿ ತನ್ನ ಸರ್ವ ಕರ್ಮಗಳೆಲ್ಲವನ್ನೂ ಸುಟ್ಟು ಹಾಕಿರುವನು. ಮತ್ತು ಆತನು ನಾನೇ ಬ್ರಹ್ಮನು ಎಂಬ ಜ್ಞಾನವನ್ನು ಪ್ರಾಪ್ತಿಮಾಡಿಕೊಂಡಿರುವನು. ಆತನಿಗೆ ಅರಣ್ಯದಲ್ಲಾಗಲೀ, ಊರಲ್ಲಾಗಲೀ ನಿಯಮಿತವಾಗಿ ನಿವಾಸಸ್ಥಾನವನ್ನು ಯಾರೂ ನಿರ್ಮಿಸಿ ಕೊಡಲು ಸಾಧ್ಯವಿಲ್ಲ ॥೪೬೧॥ ಆಕಾಶಕ್ಕೆ ವಸತಿಗಾಗಿ ಯಾವ ಮನೆಯನ್ನು ಕಟ್ಟಿಕೊಡಬೇಕು? ಅದರಂತೆ ಸರ್ವಸಂಗ ಪರಿತ್ಯಾಗವನ್ನು ಮಾಡಿರುವ ಸನ್ಯಾಸಿಗೆ ಇರಲು ವಸತಿಸ್ಥಾನವನ್ನು ಯಾರು ನೇಮಿಸಬೇಕು? ॥೪೬೨॥

ಜೇ ನ್ಯಸ್ತ ಸಂಕಲ್ಪ ಸನ್ಯಾಸೀ । ತ್ಯಾಂಸೀ ಕೋಣ ಮ್ಹಣೇ ಅರಣ್ಯವಾಸೀ । ಮಾಯಿಕ ಭವವೃಕ್ಷೀಂಚ್ಯಾ ಫಳಾಸೀ। ಭೋಕ್ತೇ ತ್ಯಾಂಸೀ ಮ್ಹಣೋ ನಯೇ ॥೪೬೩॥ ಮೂಳೀಂಚೇ ಪದ ''ಅರಣ್ಯವಾಸೀ'' । ತೇ ಭಾಗಾ ಆಲೇ ವಾನಪ್ರಸ್ಥಾಸೀ । ವಾನಪ್ರಸ್ಥ ಸದಾ ವನವಾಸೀ । ದುಸರ್‍ಯಾ ಫಳಾಸೀ ತೋ ಭೋಕ್ತಾ ॥೪೬೪॥ ಏಕ ಸನ್ಯಾಸಾಂಚೀ ಸುಖಪ್ರಾಪ್ತೀ । ದೋನೀ ಫಳೇ ಮಿಥ್ಯಾ ಜಾಣತೀ । ಮೀಚಿ ಏಕ ತ್ರಿಜಗತೀ । ಹೇ ಪ್ರತೀತೀ ನಿಶ್ಚಿತೀ ತ್ಯಾ ಝಾಲೀ ॥೪೬೫॥ ಜೋ ಹಾ ಬಹುರೂಪೇ ವಿಸ್ತಾರೂ । ತೋ ಮೀ ಚಿದಾತ್ಮಾ ಸಾಚಾರೂ । ಜಾಣೋನಿ ಗುರುಮುಖೇ ನಿರ್ಧಾರೂ । ಮಾಝೇ ಸುಖ ಸಾಚಾರೂ ಪಾವಲೇ ॥೪೬೬॥ ತೇ ಮದ್ರೂಪೇ ಮಜ ಪಾವಲೇ । ಮಾಝೇನಿ ಸುಖೇ ಸುಖರೂಪ ಝಾಲೇ । ಸುಖದುಃಖಫಳಾಂತೇ ಮುಕಲೇ । ಯೇವೋ ಚುಕಲೇ ಸಂಸಾರಾ ॥೪೬೭॥ ಸಂಸಾರ ಮಾಯಾಮಯ ಮಿಥ್ಯಾಭಾಸ । ಜಾಣೇ ತೋಚಿ ವೇದಜ್ಞ ವಿದ್ವಾಂಸ । ತ್ಯಾಸೀಚ ಬೋಲಿಜೇ ಪರಮಹಂಸ । ವಿಶ್ವನಿವಾಸನಿವಾಸೀ ॥೪೬೮॥ ಐಶೀ ಹೋಆವಯಾ ಪದಪ್ರಾಪ್ತೀ । ಸುದೃಢ ಕರಾವೀ ಗುರುಭಕ್ತೀ । ತೇಣೇ ಹೋಯ ಸಂಸಾರನಿವೃತ್ತಿ । ತೇಚಿ ಶ್ರೀಪತೀ ಸಾಂಗತ ॥೪೬೯॥ ಪಹಿಲೀ ಸಾಂಗಿತಲೀ ಸತ್ಸಂಗತೀ । ತೇಣೇ ಜಾಹಲೀ ಮತ್ಪದಪ್ರಾಪ್ತೀ । ತೇಚಿ ಅಧ್ಯಾಯಾಚಾ ಅಂತೀ । ಕರಾವೀ ಗುರುಭಕ್ತೀ ಸಾಂಗತೂ ॥೪೭೦॥

ಏವಂ ಗುರೂಪಾಸನಯೈಕಭಕ್ತ್ಯಾ ವಿದ್ಯಾಕುಠಾರೇಣ ಶಿತೇನ ಧೀರಃ ।
ವಿವೃಶ್ಚ್ಯ ಜೀವಾಶಯಮಪ್ರಮತ್ತಃ ಸಂಪದ್ಯ ಚಾತ್ಮಾನಮಥ ತ್ಯಜಾಽಸ್ತ್ರಮ್ ॥೨೪॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವ ಸಂವಾದೇ ದ್ವಾದಶೋಽಧ್ಯಾಯಃ ॥

ಅರ್ಥ:- ಹೇ ಉದ್ಧವಾ, ಈ ಪ್ರಕಾರವಾಗಿ ನೀನು ಗುರುದೇವನ ಉಪಾಸನಾರೂಪ ಅನನ್ಯ ಭಕ್ತಿಯನ್ನು ಮಾಡು. ಮತ್ತು ತೀಕ್ಷ್ಣ ಮಾಡಿರುವ ಜ್ಞಾನರೂಪ ಶಸ್ತ್ರದಿಂದ ತ್ರಿಗುಣಾತ್ಮಕ ಲಿಂಗ ಶರೀರರೂಪ ಜೀವ ಉಪಾಧಿಯನ್ನು ಛೇದಿಸಿ, ಪರಮಾತ್ಮನನ್ನು ಪ್ರಾಪ್ತಿ ಮಾಡಿಕೋ. ತದನಂತರ ಸಾಧನೆಗಳ ತ್ಯಾಗವನ್ನು ಮಾಡಿ ನಿನ್ನ ಅಖಂಡವಾದ ಸುಖರೂಪದಲ್ಲಿ ಸ್ಥಿರನಾಗು.

ನ ಕರಿತಾ ಸದ್ಗುರುಭಜನ । ನವ್ಹೇ ಭವವೃಕ್ಷಾಚೇ ಛೇದನ । ಜರೀ ಕೋಟಿಕೋಟೀ ಸಾಧನ । ಆನೇಆನ ಕೇಲಿಯಾ ॥೪೭೧॥ ಭವವೃಕ್ಷಾತೇ ಛೇದಿತೀ । ಕೇವಳ ಜಾಣ ಗುರುಭಕ್ತೀ । ಅರಿನಿರ್ದಳಣೇ ನಿಶ್ಚಿತೀ । ಜೇವೀ ನಿಜಶಕ್ತೀ ಶೂರಾಂಚೀ ॥೪೭೨॥ ದೂರೀ ಕರಾವಯಾ ದುರಿತ । ಜೇವೀ ಗಂಗಾಜಳ ಸಮರ್ಥ । ತೇವೀ ಭವಭಯಾ ಭಸ್ಮ ಕರೀತ । ಜಾಣ ನಿಶ್ಚಿತ ಗುರುಭಕ್ತೀ ॥೪೭೩॥

ಯಾರು ಸಂಕಲ್ಪಗಳನ್ನು ತ್ಯಾಗ ಮಾಡಿರುವರೋ, ಇಂತಹ ಸನ್ಯಾಸಿಗೆ ಅರಣ್ಯವಾಸಿ ಎಂದು ಹೇಗೆ ಹೇಳಬೇಕು? ಆದ್ದರಿಂದ ಮಾಯೆಯಿಂದ ಕಲ್ಪಿತಗೊಂಡಿರುವ ಈ ಯಾವ ಸಂಸಾರವೃಕ್ಷದ ಫಲಗಳ ಭೋಕ್ತರೆಂದು ಇವರಿಗೆ ಹೇಳಕೂಡದು ॥೪೬೩॥ ಮೂಲ ಶ್ಲೋಕದಲ್ಲಿನ ಪದವು ಅರಣ್ಯವಾಸಿ ಎಂದಿದೆ. ಅದು ವಾನಪ್ರಸ್ಥದ ಭಾಗಕ್ಕೆ ಮಾತ್ರ ಬಂದಿದೆ. ಕಾರಣ ವಾನಪ್ರಸ್ಥಾಶ್ರಮಿಯು ಯಾವಾಗಲೂ ವನದಲ್ಲಿಯೇ ಇರುವನು. ಆದ್ದರಿಂದ ಎರಡನೆಯದಾದ ಸುಖರೂಪ ಫಲದ ಭೋಕ್ತನು ಆತನೇ ಆಗಿರುವನು ॥೪೬೪॥ ಈಗ ಸನ್ಯಾಸಿಯ ಸುಖಪ್ರಾಪ್ತಿ ವಿಷಯಕ್ಕೆ ಹೇಳುವೆನು, ಅದನ್ನು ಕೇಳು. ಆತನು ಸುಖ ದುಃಖರೂಪಗಳಾದ ಎರಡೂ ಫಲಗಳು ಮಿಥ್ಯೆಯಾಗಿವೆ ಎಂದು ತಿಳಿದಿರುವನು. ತ್ರಿಭುವನದಲ್ಲಿ ಪರಮಾತ್ಮನಾದ ನಾನೊಬ್ಬನೇ ಇರುವೆನು ಎಂಬ ಅನುಭವವು ಆತನಿಗೆ ನಿಶ್ಚಯವಾಗಿ ಪ್ರಾಪ್ತವಾಗಿರುವುದು ॥೪೬೫॥ ಈ ಯಾವ ಸರ್ವವೂ ಅನೇಕ ರೂಪದಿಂದ ಹರಡಿರುವ ವಿಸ್ತಾರವು ಕಾಣುವುದೋ ಅದೆಲ್ಲವೂ ನಾನು ಚಿದಾತ್ಮನಾಗಿರುವೆನು. ಈ ನಿಶ್ಚಯವನ್ನು ಗುರುಮುಖದಿಂದ ತಿಳಿದುಕೊಂಡಿರುವುದರಿಂದ ಆತನು ನನ್ನ ಸುಖಕ್ಕೆ ಪ್ರಾಪ್ತನಾಗುವನು ॥೪೬೬॥ ಆತನು ನನ್ನಲ್ಲಿ ಏಕರೂಪನಾಗಿ ನನ್ನನ್ನು ಪ್ರಾಪ್ತಮಾಡಿಕೊಳ್ಳುವನು. ನನ್ನ ಸುಖದಿಂದ ಸುಖರೂಪನಾಗುವನು. ಆದ್ದರಿಂದಲೇ ಈತನು ಸುಖದುಃಖರೂಪ ಫಲಗಳನ್ನು ಪಡೆಯಲಾರನು. ಮತ್ತು ಸಂಸಾರಕ್ಕೆ ಬರುವುದರಿಂದಲೂ ಬಿಡುಗಡೆಯಾಗಿರುವನು ॥೪೬೭॥ ಈ ಸಂಸಾರವು ಮಾಯಾಮಯವಾಗಿರುವುದರಿಂದ ನಿಜವಾಗಿಯೂ ಮಿಥ್ಯೆಯಾಗಿರುವುದು, ಭಾಸರೂಪವಾಗಿರುವುದು. ಹೀಗೆ ತಿಳಿದುಕೊಂಡವನೇ ವೇದವೇತ್ತಾ ಮತ್ತು ವಿದ್ವಾನನಾಗಿರುವನು. ಆತನಿಗೆ ಮಾತ್ರ ಪರಮಹಂಸನೆಂದು ಕರೆಯುವರು. ಈತನು ಈ ವಿಶ್ವವನ್ನು ತನ್ನ ಮನೆ ಎಂದು ತಿಳಿದು ಅಖಂಡವಾದ ಆನಂದದಲ್ಲಿರುವನು ॥೪೬೮॥ ಇಂತಹ ಅಲೌಕಿಕ ಪದವಿಯ ಪ್ರಾಪ್ತಿಯಾಗುವುದಕ್ಕಾಗಿ ಗುರುಭಕ್ತಿಯನ್ನು ಅನನ್ಯ ಭಾವದಿಂದ ಮಾಡಬೇಕು. ಇದರಿಂದ ಮಾತ್ರ ಸಂಸಾರದ ನಿವೃತ್ತಿಯಾಗಲು ಸಾಧ್ಯವಿದೆ. ಅದನ್ನೇ ಈಗ ಶ್ರೀಕೃಷ್ಣನು ಹೇಳುತ್ತಿರುವನು ॥೪೬೯॥ ಪ್ರಾರಂಭದಲ್ಲಿ ಸತ್ಸಂಗತಿಯನ್ನು ಹೇಳಿದೆನು. ಇದರಿಂದ ನನ್ನ ಪದವಿಯ ಪ್ರಾಪ್ತಿಯಾಗುವುದು. ಇದೇ ಅಧ್ಯಾಯದ ಕೊನೆಯಲ್ಲಿ ಗುರುಭಕ್ತಿಯನ್ನು ಮಾಡಬೇಕೆಂದು ಹೇಳಲ್ಪಡುವುದು ॥೪೭೦॥

ಸದ್ಗುರುವಿನ ಭಜನೆಯನ್ನು ಮಾಡದೇ ಭಿನ್ನ ಭಿನ್ನ ಪ್ರಕಾರಗಳ ಕೋಟ್ಯಾವಧೀ ಸಾಧನೆಗಳನ್ನು ಮಾಡಿದರೂ ಕೂಡ ಸಂಸಾರವೃಕ್ಷವನ್ನು ಛೇದಿಸುವುದಾಗುವುದಿಲ್ಲ ॥೪೭೧॥ ಶೂರರ ಶೌರ್ಯವು ಶತ್ರುಗಳನ್ನು ನಿಶ್ಚಯಪೂರ್ವಕವಾಗಿ ನಾಶಮಾಡುತ್ತದೆ. ಅದರಂತೆ ಕೇವಲ ಗುರುಭಕ್ತಿಯಿಂದ ಸಂಸಾರ ವೃಕ್ಷವನ್ನು ಛೇದಿಸಲು ಬರುವುದು ॥೪೭೨॥ ಪಾಪದ ಕ್ಷಾಲನೆ ಮಾಡಲು ಗಂಗೋದಕವು ಸಮರ್ಥವಿರುವಂತೆ ಗುರುಭಕ್ತಿಯು ಸಂಸಾರ ಭಯವನ್ನು ನಷ್ಟ ಮಾಡುವ ಸಮರ್ಥವಿರುವುದೆಂದು ನಿಶ್ಚಯವಾಗಿ ಲಕ್ಷದಲ್ಲಿಡು ॥೪೭೩॥

ಕರಿತಾ ಸತ್ಯವ್ರತಗ್ರಹಣ । ಪಾಪ ಸ್ವಯೇ ಜಾಯ ಪಳೋನ । ತೇವೀ ಕರಿತಾ ಗುರುಭಜನ । ಭವನಿರ್ದಳಣ ಸ್ವಯೇ ಹೋಯ ॥೫೭೪॥ ಹನುಮಂತ ದೇಖತಾ ದಿಠೀ । ಭೂತೇ ಪಳತೀ ಬಾರಾ ವಾಟೀ । ತೇವೀ ಗುರಭಜನಪರಿಪಾಟೀ ।ಪಳೇ ಉತಾಉಠೀ ಭವಭಯ ॥೫೭೫॥ ಮರತಾ ಘಡೇ ಅಮೃತಪಾನ । ತೈ ಮರಣಾಸಚಿ ಆಲೇ ಮರಣ । ತೇವೀ ಕರಿತಾ ಗುರುಭಜನ । ಜನ್ಮ ಮರಣ ನಿಮಾಲೇ ॥೫೭೬॥ ಅಂತೀ ಅವಚಟೇ ಹರಿ ಮ್ಹಣತಾ । ಪಾಂಪರಾ ಹಾಣೇ ಯಮದೂತಾ । ತೇವೀ ಸದ್ಗುರೂತೇ ಭಜತಾ । ಹಾಣೇ ಲಾತಾ ಭವಭಯಾ ॥೫೭೭॥ ಕರಾವಯಾ ಭವನಿರ್ದಳಣ ।ಮುಖ್ಯ ಕರಾವೇ ಗುರುಭಜನ । ಹೇಚಿ ಶ್ರೇಷ್ಠ ಗಾ ಸಾಧನ । ಸಭಾಗ್ಯ ಜಾಣ ಗುರುಭಕ್ತ ॥೫೭೮॥ ಕೋಣ ಸದ್ಗುರು ಕೈಶೀ ಭಕ್ತೀ । ಐಸೇ ಕಾಂಹೀ ಕಲ್ಪಿಸೀ ಚಿತ್ತೀ । ತೇಹೀ ಮೀ ಯಥಾನಿಗುತೀ । ಮಾಗಾ ತುಜಪ್ರತಿ ಸಾಂಗೀತಲೀ ॥೫೭೯॥ ಜೋ ಶಬ್ದ ಪರನಿಷ್ಣಾತ । ಶಿಷ್ಯ ಬೋಧಿನಿ ಸಮರ್ಥ । ತೋಚಿ ಸದ್ಗುರು ಯೇಥ । ಜಾಣ ನಿಶ್ಚಿತ ಉದ್ಧವಾ ॥೫೮೦॥ ಜೋ ಸ್ವರೂಪೀ ಕರೀ ಸಮಾಧಾನ । ತೋಚಿ ಸದ್ಗುರು ಸತ್ಯ ಜಾಣ । ತ್ಯಾವೇಗಳೇ ಸದ್ಗುರುಪಣ । ಹೋಆವಯಾ ಕಾರಣ ಅಸೇನಾ ॥೫೮೧॥ ತ್ಯಾ ಸದ್ಗುರುಭಜನಾಚೀ ಪರೀ । ತುಜ ಮೀ ಸಾಂಗೇನ ನಿರ್ಧಾರೀ । ಸರ್ವ ಕರ್ಮಧರ್ಮಾಚಿಯಾ ಶಿರೀ । ಜೋ ಕಾ ಕರೀ ಗುರುಭಜನ ॥೫೮೨॥ ಗುರು ಮ್ಹಣೋ ಪಿತ್ಯಾಸಮಾನ । ತಂವ ತೋ ಏಕಜನ್ಮೀಚಾ ಜಾಣ । ಹಾ ಮಾಯಬಾಪೂ ಸನಾತನ । ಜನಕ ಪೂರ್ಣ ಜಗಾಚಾ ॥೫೮೩॥ ಗುರು ಮಾತೇಸಮಾನ ಪಾಹೋ । ತಂವ ಗರ್ಭಜನ್ಮೀ ತಿಚಾ ಸ್ನೇಹೋ । ಗರ್ಭವಾಸ ನಿವಾರೀ ಗುರುರಾವೋ । ಅಧಿಕ ಸ್ನೇಹೋ ಪುತ್ರಾಪರಿಸ ॥೫೮೪॥ ಉದರಾಬಾಹೇರ ಪಡಲ್ಯಾಪಾಠೀ । ಪುತ್ರಸ್ನೇಹೀ ಮಾತಾ ಉಠೀ । ತೇ ಬಾಹೇರೀಲ ಘಾಲೂನಿ ಪೋಟೀ । ಸ್ನೇಹೇ ಗೋಮಟೀ ಗುರುಮಾತಾ ॥೫೮೫॥ ಗುರು ಮಾನೂ ಸ್ವಾಮೀಸಮಾನ । ಸ್ವಾಮೀ ನಿವಾರೂ ನ ಶಕೇ ಮರಣ । ಸದ್ಗುರು ಚುಕವೀ ಜನ್ಮ ಮರಣ । ಸ್ವಾಮೀ ಸಂಪೂರ್ಣ ಗುರುರಾವೋ ॥೫೮೬॥ ಗುರು ಮಾನು ಕುಲದೇವತಾ । ತಂವ ತಿಸೀ ಕುಲಧರ್ಮೀ ಪೂಜ್ಯತಾ । ಹಾ ಕುಲದೇವತೇಚಿ ದೇವತಾ । ನಿತ್ಯ ಪೂಜ್ಯತಾ ನಿಜಕರ್ಮೀ ॥೫೮೭॥

ಸತ್ಯದ ವರ್ತನೆಯಿಂದ ಪಾಪಗಳು ತಾವಾಗಿಯೇ ಓಡಿ ಹೋಗುವಂತೆ ಗುರುಭಜನೆಯಿಂದ ಸಂಸಾರದ ನಾಶವಾಗುವುದು ॥೫೭೪॥ ಹನುಮಂತನ ದರ್ಶನದಿಂದ ಭೂತಗಳು ದಿಕ್ಕೆಟ್ಟು ಓಡುವಂತೆ ಗುರುಭಜನೆಯಿಂದ ಸಂಸಾರದ ಭಯವು ತತ್ಕಾಲದಲ್ಲಿ ಓಡಿ ಹೋಗುವುದು ॥೫೭೫॥ ಮರಣ ಸಮಯಕ್ಕೆ ಅಮೃತದ ಪ್ರಾಶನವಾದರೆ ಮರಣಕ್ಕೆ ಮರಣ ಬರುವುದು . ಅದರಂತೆ ಗುರುಭಜನೆಯಿಂದ ಜನ್ಮ ಮರಣವೇ ಇಲ್ಲದಾಗುವುದು ॥೫೭೬॥ ಅಂತ್ಯಕಾಲದಲ್ಲಿ ಅಕಸ್ಮಾತ್ತಾಗಿ ಮುಖದಿಂದ ಹರಿನಾಮವು ಬಂದರೆ, ಯಮದೂತನಿಗೆ ಒದಿಕೆ ಬೀಳುವುವು. ಅದರಂತೆ ಸದ್ಗುರುವಿನ ಭಜನೆಯು ಸಾಧಿಸಿದರೆ, ಭವಭಯಕ್ಕೆ ಒದಿಕೆ ಬೀಳುವುವು ॥೫೭೭॥ ಅದಕ್ಕಾಗಿ ಸಂಸಾರದ ಕ್ಷಯ ಮಾಡಲು ಪ್ರಾಮುಖ್ಯವಾಗಿ ಗುರುಭಜನೆಯನ್ನು ಮಾಡಬೇಕು. ಈ ಸಾಧನೆಯೇ ಶ್ರೇಷ್ಠವಾಗಿರುವುದು. ಗುರುಭಕ್ತನು ಮಹಾ ಭಾಗ್ಯಶಾಲಿಯಾಗಿರುವನೆಂದು ತಿಳಿ ॥೫೭೮॥ ಸದ್ಗುರು ಯಾರು? ಆತನ ಭಕ್ತಿಯನ್ನು ಹೇಗೆ ಮಾಡಬೇಕು? ಇವುಗಳ ವಿಚಾರವನ್ನು ಮನದಲ್ಲಿ ನೀನು ತರಬಹುದು. ಆದರೆ ಈ ಪೂರ್ವದಲ್ಲಿ ನಿನಗೆ ಇದನ್ನು ಯಥಾರ್ಥ ರೀತಿಯಲ್ಲಿ ಹೇಳಿರುವೆನು ॥೫೭೯॥ ಉದ್ಧವಾ, ಯಾರು ವೇದ ಮತ್ತು ಬ್ರಹ್ಮಜ್ಞಾನದಲ್ಲಿ ನಿಷ್ಣಾತನಾಗಿದ್ದು ಶಿಷ್ಯನಿಗೆ ಸಮರ್ಥರೀತಿಯಲ್ಲಿ ಜ್ಞಾನವನ್ನು ಕೊಡುವವನೇ ಸದ್ಗುರುವಾಗಿರುವನು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೫೮೦॥ ಯಾರು ತನ್ನ ಸ್ವರೂಪದಲ್ಲಿಯೇ ಸಮಾಧಾನವನ್ನು ಪಡೆಯುವನೋ, ಆತನೇ ಸದ್ಗುರುವಾಗಿರುವನು. ಹೀಗಿರದಿದ್ದರೆ ಸದ್ಗುರುತನವು ಬರಲು ಅನ್ಯ ಕಾರಣವೇ ಇಲ್ಲ ॥೫೮೧॥ ಈ ಯಾವ ಸದ್ಗುರುವಿನ ಭಜನೆಯ ಪ್ರಕಾರವನ್ನು ನಿನಗೆ ನಿಶ್ಚಯವಾಗಿ ಹೇಳುವೆನು. ಯಾವತ್ತೂ ಪ್ರಕಾರಗಳ ಕರ್ಮಧರ್ಮಗಳಲ್ಲಿ ಸದ್ಗುರುಗಳ ಭಜನೆಯೇ ಶ್ರೇಷ್ಠವಾಗಿರುವುದು ॥೫೮೨॥ ಸದ್ಗುರುವಿಗೆ ಪಿತಾಸಮಾನನು ಎಂದು ಮಾನ್ಯ ಮಾಡಬೇಕೆಂದರೆ, ಪಿತನು ಒಂದೇ ಜನ್ಮಕ್ಕೆ ಸಂಬಂಧಿಕನಾಗಿರುವನು. ಗುರು ಸನಾತನಾಗಿ ಇರುವ ತಂದೆ ತಾಯಿಯಾಗಿರುವನು. ಈತನು ಸರ್ವಸೃಷ್ಟಿಯ ಜನಕನಾಗಿರುವನು ॥೫೮೩॥ ಗುರುಗಳು ಮಾತೃಸಮಾನರು ಎಂದು ಹೇಳಬೇಕೆಂದರೆ, ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ಮಾತ್ರಕ್ಕಾಗಿಯೇ ಆಕೆಯ ಪ್ರೇಮವಿರುವುದು. ಆದರೆ ಸದ್ಗುರುಗಳು ಈ ಯಾವ ಗರ್ಭವಾಸದ ನಿವಾರಣೆಯನ್ನು ಮಾಡುವರು ಮತ್ತು ಪುತ್ರನಿಗಿಂತಲೂ ಅಧಿಕವಾಗಿಯೇ ನಿಃಸ್ವಾರ್ಥ ಪ್ರೇಮವನ್ನು ಮಾಡುವರು ॥೫೮೪॥ ಮಗು ಗರ್ಭದಿಂದ ಹೊರಗೆ ಬಂದ ಮೇಲೆ ಮಾತೆಯ ಹೃದಯದಲ್ಲಿ ಆತನ ಸಂಬಂಧವಾಗಿ ಪ್ರೇಮದ ಝರಿಯು ಹುಟ್ಟುವುದು ಆದರೆ ಗುರುಮಾತೆಯು ಹೊರಗಿನ ಸರ್ವ ಪ್ರಕಾರದ ದೋಷಗಳನ್ನು ತನ್ನ ಹೊಟ್ಟೆಯಲ್ಲಿ ಹಾಕಿಕೊಂಡು ತಾಯಿಗಿಂತಲೂ ಅಧಿಕವಾಗಿ ನಿಃಸ್ವಾರ್ಥ ಪ್ರೇಮವನ್ನು ಮಾಡುವಳು ॥೫೮೫॥ ಗುರುವಿಗೆ ಧಣಿ ಎಂದು ತಿಳಿಯಬೇಕೆಂದರೆ ಆ ಧಣಿಗೆ ನಮ್ಮ ಜನ್ಮಮರಣವನ್ನು ತಪ್ಪಿಸಲು ಬರುವುದಿಲ್ಲ. ಆದರೆ ಸದ್ಗುರುಗಳು ಜನ್ಮಮರಣಗಳನ್ನು ತಪ್ಪಿಸುವರು. ಆದ್ದರಿಂದ ಗುರುರಾಜನೇ ನಿಜವಾದ ಧಣಿಯಾಗಿರುವನು ॥೫೮೬॥ ಗುರುವಿಗೆ ಕುಲದೇವತೆ ಎಂದು ಮನ್ನಿಸಿದರೆ, ಆಕೆಗೆ ಕೇವಲ ಕುಲಧರ್ಮದಲ್ಲಿ ಮಾತ್ರ ಪೂಜ್ಯತ್ವವು ಇರುವುದು. ಆದರೆ ಸದ್ಗುರುಗಳು ಕುಲದೇವತೆಯ ಕುಲದೇವತೆಯಾಗಿರುವರು. ಆದ್ದರಿಂದಲೇ ನಮ್ಮ ಪ್ರತಿಯೊಂದು ಕಾರ್ಯಗಳಲ್ಲಿ ಗುರುಗಳು ಪೂಜ್ಯರಾಗಿರುವರು ॥೫೮೭॥

ಗುರು ಮಾನು ಕಲ್ಪತರೂಸಮಾನ । ತಂವ ಕಲ್ಪತರು ದೇ ಕಲ್ಪಿಲೇ ದಾನ । ಸದ್ಗುರು ದೇ ನಿರ್ವಿಕಲ್ಪತಾ ಪೂರ್ಣ। ಅಗಾಧ ದಾನ ನಿರ್ಲೋಭೇ ॥೮೮॥ ಚಿಂತಾಮಣೀ ದೇ ಚಿಂತಿಲ್ಯಾ ಅರ್ಥಾ । ಸದ್ಗುರು ಕರೀ ಚಿಂತೇಚ್ಯಾ ಘಾತಾ । ಚಿತ್ತಾ ಮಾರೂನಿ ದೇ ಚೈತನ್ಯತಾ । ಅಕ್ಷಯತಾ ನಿಜದಾನ ॥೮೯॥ ಕಾಮಧೇನೂಚೇ ದುಭತೇ । ತೇ ಕಾಮನೇಚಪುರತೇ । ಸದ್ಗುರು ದುಭೇ ಸ್ವಾನಂದಾರ್ಥೇ । ಕಾಮನೇತೇ ನಿರ್ದಳೀ ॥೯೦॥ ಗುರುಸಮಾನ ಮ್ಹಣೋ ಸಾಗರೂ । ತೋ ಗಂಭೀರ ಪರೀ ಸದಾ ಕ್ಷಾರೂ । ಹಾ ಸ್ವಾನಂದೇ ನಿತ್ಯ ನಿರ್ಭರೂ । ಅತಿಮಧುರೂ ನಿಜಬೋಧೇ ॥೯೧॥ ಗುರು ಪರಬ್ರಹ್ಮ ಸಮಾನ । ಹೇಹೀ ಬೋಲಣೇ ಕಿಂಚಿತ ನ್ಯೂನ । ಗುರುವಾಕ್ಯೇ ಬ್ರಹ್ಮ ಸಪ್ರಮಾಣ। ಯೇರವೀ ಬ್ರಹ್ಮ ಪಣ ಶಬ್ದ ಮಾತ್ರ ॥೯೨॥ ಶಬ್ದೀ ಲೋಪೂನಿ ಶಬ್ದಾರ್ಥಾ । ಗುರು ಪ್ರಬೋಧೀ ಸಂವಿದರ್ಥಾ । ತ್ಯಾಹೂನಿ ಪೂಜ್ಯ ಪರತಾ । ನಾಹೀ ಸರ್ವಥಾ ತ್ರಿಲೋಕೀ ॥೯೩॥ ಗುರು ಮಾತಾ ಗುರು ಪಿತಾ । ಗುರು ಸ್ವಾಮೀ ಕುಳದೇವತಾ । ಗುರುವಾಂಚೋನಿ ಸರ್ವಥಾ । ಆಣಿಕ ದೇವತಾ ಸ್ಮರೇನಾ ॥೯೪॥ ಥೋರ ಮಾಂಡಲಿಯಾ ಸಾಂಕಡೇ । ಜೈ ಗಗನ ಗಡಗಡೂನಿ ಪಡೇ । ತೈ ನ ಪಾಹೇ ಆಣಿಕಾಕಡೇ । ನಾಮ ಪಡೇ ಗುರೂಚೇ ॥೯೫॥ ಕಾಯಾ ವಾಚಾ ಮನೇ ಪ್ರಾಣೇ । ಜೋ ಗುರುವಾಂಚೋನಿ ಆನ ನೇಣೇ । ತೈಸಾಚಿ ಭಜೇ ಅನನ್ಯಪಣೇ । ಗುರು ಭಕ್ತಿ ಮ್ಹಣಣೇ ತ್ಯಾ ನಾಂವ ॥೯೬॥ ಪಕ್ಷಿಣೀಚೇ ಅಪಕ್ಷ ಪಿಲೇ । ತೀ ತಿಸೀಚ ಸ್ಮರತೀ ಸರ್ವಕಾಳೇ । ತೇವೀ ಜಾಗೃತಿ - ಸ್ವಪ್ನ - ಸುಷುಪ್ತಿಮೇಳೇ । ಜೋ ಗುರುವೇಗಳೇ ಸ್ಮರೇನಾ ॥೯೭॥ ಮಾಗಾ ಸಾಂಗೀತಲೇ ಭಗವದ್ಭಜನ । ಆತಾ ಸಾಂಗಸೀ ಗುರುಸೇವನ । ನಾಹೀ ಏಕವಿಧ ನಿರೂಪಣ । ಐಸಾ ವಿಕಲ್ಪ ಜಾಣ ನ ಧರಾವಾ ॥೯೮॥ ಸದ್ಗುರು ತೋಚಿ ಮಾಝೀ ಮೂರ್ತೀ । ನಿಶ್ಚಯೇಸೀ ಜಾಣ ನಿಶ್ಚಿತೀ । ವಿಕಲ್ಪ ನ ಧರಾವಾ ಯೇ ಅರ್ಥೀ । ಅನನ್ಯಭಕ್ತಿ ಯಾ ನಾಂವ ॥೯೯॥ ಏಕಾಗ್ರತಾ ಜೇ ಗುರುಭಜನ । ತೇಚಿ ಮಾಝೇ ಪರಮಪೂಜನ । ಗುರೂಸೀ ಮಜ ವೇಗಳೇಪಣ । ಕಲ್ಪಾಂತೀ ಜಾಣ ಅಸೇನಾ ॥೧೦೦॥

ಗುರುಗಳಿಗೆ ಕಲ್ಪವೃಕ್ಷ ಸಮಾನರು ಎಂದು ಮಾನ್ಯ ಮಾಡಲು ಕಲ್ಪವೃಕ್ಷವು ಕಲ್ಪನೆಗಳನ್ನು ಮಾಡಿದ್ದನ್ನು ಮಾತ್ರ ಕೊಡುವುದು. ಆದರೆ ಸದ್ಗುರುಗಳು ನಿರ್ವಿಕಲ್ಪತೆಯನ್ನೇ ಕೊಟ್ಟು ಬಿಡುವರು. ಅದಕ್ಕಾಗಿ ಇವರ ದಾನವು ಅಗಾಧವಾಗಿರುವುದು ಮತ್ತು ನಿರ್ಲೋಭವಾಗಿರುವುದು ॥೮೮॥ ಚಿಂತಾಮಣಿಯು ಚಿಂತಿಸಿದ ವಸ್ತು ಮಾತ್ರ ನೀಡುವುದು. ಆದರೆ ಸದ್ಗುರುಗಳು ನಮ್ಮ ಸರ್ವ ಪ್ರಕಾರಗಳ ಚಿಂತೆಗಳನ್ನೇ ನಾಶ ಮಾಡುವರು ಮತ್ತು ಚಿತ್ತಕ್ಕೆ ಚೈತನ್ಯಮಯವನ್ನಾಗಿ ಮಾಡಿ ಶಾಶ್ವತವಾಗಿರುವ ದಾನವನ್ನು ಕೊಡುವರು ॥೮೯॥ ಕಾಮಧೇನುವಿನ ಕೊಡುಗೆಯು ಅದು ನಮ್ಮ ಇಚ್ಛೆಗಷ್ಟೇ ಮರ್ಯಾದಿತವಾಗಿರುವುದು. ಆದರೆ ಸದ್ಗುರುಗಳು ಸ್ವಾನಂದರೂಪ ಅಮೃತವನ್ನು ಕೊಟ್ಟು ಸರ್ವ ಪ್ರಕಾರದ ಕಾಮನೆಗಳನ್ನೇ ಇಲ್ಲದಾಗಿ ಮಾಡುವರು ॥೯೦॥ ಸದ್ಗುರುಗಳಿಗೆ ಸಮುದ್ರದಂತೆ ಎಂದು ತಿಳಿಯಲು, ಸಮುದ್ರವು ಗಂಭೀರವಾಗಿರುವುದು ನಿಜ, ಆದರೆ ಯಾವಾಗಲೂ ಉಪ್ಪಾಗಿರುವುದು. ಆದರೆ ಸದ್ಗುರುಗಳು ಯಾವಾಗಲೂ ಸ್ವಾನಂದದಿಂದ ತುಂಬಿರುವರು. ಆತ್ಮ ಬೋಧೆಯಿಂದ ಅತ್ಯಂತ ಅಮೃತಪ್ರಾಯ ಮಧುರವಾಗಿರುವರು ॥೯೧॥ ಗುರುಗಳು ಬ್ರಹ್ಮ ಸಮಾನ ಹೇಳಬೇಕೆಂದರೆ ಈ ಉಪಮೆಯೂ ಕೂಡ ಸ್ವಲ್ಪ ನ್ಯೂನವೇ ಆಗುವುದು. ಗುರುಗಳ ಉಪದೇಶದಿಂದ ಬ್ರಹ್ಮಕ್ಕೆ ಸತ್ಯತ್ವವು ಬರುವುದು. ಇಲ್ಲದಿದ್ದರೆ ಬ್ರಹ್ಮವು ಕೇವಲ ಶಾಬ್ದಿಕವಾಗಿಯೇ ಉಳಿಯುವುದು ॥೯೨॥ ಸದ್ಗುರುಗಳು ಶಬ್ದಾರ್ಥಕ್ಕೆ ಶಬ್ದಗಳಲ್ಲಿಯೇ ಲೋಪಗೊಳಿಸುವರು ಮತ್ತು ಜ್ಞಾನರೂಪ ವಸ್ತುವಿನ ಬೋಧೆಯನ್ನು ಮಾಡುವರು. ಅದಕ್ಕಾಗಿ ಸದ್ಗುರುಗಳಿಗಿಂತ ಅಧಿಕವಾಗಿ ಶ್ರೇಷ್ಠರು ಈ ತ್ರೈಲೋಕ್ಯದಲ್ಲಿ ಯಾರೂ ಇರುವುದಿಲ್ಲ. ॥೯೩॥ ಆದ್ದರಿಂದ ಸದ್ಗುರುವೇ ನಿಜವಾದ ತಾಯಿಯು, ಸದ್ಗುರುವೇ ನಿಜವಾದ ತಂದೆಯು, ಸದ್ಗುರುವೇ ನಿಜವಾದ ಸ್ವಾಮಿಯು ಮತ್ತು ಸದ್ಗುರುವೇ ಕುಲದೇವತೆಯು. ಸದ್ಗುರು ಹೊರತಾಗಿ ಅನ್ಯ ದೇವತೆಗಳ ಸ್ಮರಣೆಯಾಗುವುದೇ ಇಲ್ಲ ॥೯೪॥ ಅತ್ಯಂತ ಮಹಾ ಸಂಕಟಗಳು ಒದಗಲಿ, ಆಕಾಶವು ಹರಿದು ಮೇಲೆ ಬೀಳಲಿ, ಆದರೂ ಬೇರೆ ಯಾರತ್ತವೂ ನೋಡದೇ ಸದ್ಗುರುಗಳ ನಾಮಸ್ಮರಣೆಯನ್ನು ಮಾಡಬೇಕು ॥೯೫॥ ಕಾಯಾ,ವಾಚಾ, ಮನ ಮತ್ತು ಪ್ರಾಣಗಳಿಂದ ಯಾರು ಸದ್ಗುರುಗಳ ಹೊರತಾಗಿ ಅನ್ಯ ಯಾವುದು ಒಂದೂ ತಿಳಿಯಲಾರನೋ ಮತ್ತು ಅನನ್ಯ ಭಾವದಿಂದ ಆತನನ್ನೇ ಭಜಿಸುತ್ತಿರುವನೋ ಆತನೇ ನಿಜವಾದ ಭಕ್ತನಾಗಿರುವನು. ಆತನದೇ ಗುರುಭಕ್ತಿಯು ನಿಜವಾಗಿರುವುದು ॥೯೬॥ ಪಕ್ಷಿಯ ಮರಿಗಳು ತಮ್ಮ ರೆಕ್ಕೆ ಬಲಿಯುವವರೆಗೆ ತಮ್ಮ ತಾಯಿಯನ್ನೇ ಸರ್ವಕಾಲದಲ್ಲಿ ಸ್ಮರಿಸುತ್ತಿರುವುವು. ಅದರಂತೆ ಭಕ್ತನು ಜಾಗೃತಿ, ಸ್ವಪ್ನ, ಸುಷುಪ್ತಿಯಲ್ಲಿ ಸದ್ಗುರುವಿನ ಹೊರತಾಗಿ ಬೇರೆ ಯಾವುದರ ಸ್ಮರಣೆಯನ್ನೇ ಮಾಡುವುದಿಲ್ಲ ॥೯೭॥ ಉದ್ಧವಾ, ನಿನ್ನ ಮನದಲ್ಲಿ ಕದಾಚಿತ್ ಹೀಗೆ ಮೂಡಬಹುದು. ಏನೆಂದರೆ, ಈ ಹಿಂದೆ ಭಗವದ್‌ಭಜನೆಯನ್ನು ಹೇಳಿರುವೆ, ಆದರೆ ಈಗ ಗುರುಭಕ್ತಿಯನ್ನು ಹೇಳುತ್ತಿರುವೆ, ಅಂದಮೇಲೆ ನಿನ್ನ ನಿರೂಪಣೆಯಲ್ಲಿ ಒಂದೇ ತರಹ ನಿಶ್ಚಯ ಕಾಣುವುದಿಲ್ಲ. ಆದರೆ ನೀನು ಈ ರೀತಿ ವಿಕಲ್ಪವನ್ನು ನಿನ್ನ ಮನದಲ್ಲಿ ತರಬೇಡ ॥೯೮॥ ಸದ್ಗುರುಗಳು ನಿಜವಾಗಿಯೂ ಅವರೇ ನನ್ನ ಮೂರ್ತಿಯಾಗಿರುವರು. ಹೀಗೆ ನೀನು ನಿಶ್ಚಯಪೂರ್ವಕವಾಗಿ ತಿಳಿದುಕೋ. ಈ ವಿಷಯಕ್ಕೆ ಸಂಶಯವನ್ನು ಹಿಡಿಯಬೇಡ. ಇದಕ್ಕೇನೆ ಅನನ್ಯ ಭಕ್ತಿ ಎಂದು ಹೇಳುವರು ॥೯೯॥ ಏಕಾಗ್ರತೆಯಿಂದ ಗುರುಗಳ ಭಜನೆಯನ್ನು ಮಾಡುವುದೇ ನನ್ನ ಪೂಜೆಯಾಗಿರುವುದು. ಗುರು ಮತ್ತು ನಾನು ಇದರ ಮಧ್ಯೆ ಕಲ್ಪಾಂತಕ್ಕೂ ಭಿನ್ನತ್ವವು ಇರುವುದಿಲ್ಲ ॥೧೦೦॥

ಗುರು ಭಗವಂತ ದೋನ್ಹೀ ಏಕ । ಯೇಣೇ ಭಾವೇ ನಿಜನಿಷ್ಟಂಕ । ಭಜೇ ತೋಚಿ ಗುರುಸೇವಕ । ಯೇರು ತೋ ದೇಖ ಅನುಮಾನೀ ।೮೦೧॥ ಮಾಝಿಯಾ ಐಕ್ಯತಾ ಅತಿಪ್ರೀತಿ । ಜೇಣೇ ಆದರಿಲೀ ಗುರುಭಕ್ತೀ । ತೋಚಿ ಧನ್ಯಧನ್ಯ ತ್ರಿಜಗತೀ । ಭಜತೀ ಸ್ಥಿತೀ ತೇ ಐಕ ।೮೦೨॥ ಕರಾವಯಾ ಗುರುಸೇವೇ । ಮನಾಪುಢೇ ದೇಹ ಧಾಂವೇ । ಏಕಲಾ ಕರೀನ ಸರ್ವ ಸೇವೇ । ಯೇವಢೇ ಹಾಂವೇ ಉದ್ಯತೂ ।೮೦೩॥ ಸೇವೇಚ್ಯಾ ದಾಟಣೇ ಜಾಣ । ಅಧಿಕಚಿ ಹೋಯ ಠಾಣಮಾಣ । ಅಂಗ ಅಂಗಲೂನಿ ಅಂಗವಣ । ಸೇವೇಮಾಜೀ ಜಾಣ ವಿಸಾಂವಾ ತ್ಯಾಸೀ ।೮೦೪॥ ಸೇವೇಚಿಯಾ ಆವಡೀ । ಆರಾಯೇನಾ ಅರ್ಧಘಡೀ । ಆವಡೀಚೇ ಚಢೋವಢೀ । ಚಢತೀ ಗೋಡೀ ಗುರುಭಜನೀ ।೮೦೫॥ ನಿತ್ಯ ಕರಿತಾ ಗುರುಸೇವಾ । ಪ್ರೇಮಪಡಿಭರೂ ನೀಚ ನವಾ । ಸದ್ಭಾವಾಚಿಯಾ ಹಾಂವಾ । ಗುರುಚರಣೀ ಜೀವಾ ವಿಕಿಲೇ ।೮೦೬॥ ಆಳಸು ಯೇವೋಚಿ ವಿಸರಲಾ। ಆರಾಣುಕೇಚಾ ಠಾವೋ ಗೇಲಾ । ಗುರುಸೇವಾಸಂಭ್ರಮೇ ಭುಲಲಾ । ಠೇವೋ ವಿಸರಲಾ ವಿಷಯಾಂತೇ ।೮೦೭॥ ತಹಾನ ವಿಸರಲೀ ಜೇವನ। ಕ್ಷುಧಾ ವಿಸರಲೀ ಮಿಷ್ಟಾನ್ನ ।ಕರಿತಾ ಗುರುಚರಣಸಂವಾಹನ । ನಿದ್ರಾ ಜಾಣ ವಿಸರಲಾ ।೮೦೮॥ ಜಾಂಭಯಿೀ ಯಾವಯಾಪುರತೀ । ಸವಡೀ ಉರೇನಾ ರಿತೀ । ತೇಥೇ ನಿದ್ರೇಲಾಗೀ ಕೇಉತೀ । ರಾಹಾವಯಾ ವಸ್ತೀ ಮಿಳೇಲ ।೮೦೯॥ ಮುಖೀ ಸದ್ಗುರೂಚೇ ನಾಮ । ಹೃದಯೀ ಸದ್ಗುರೂಚೇ ಪ್ರೇಮ । ದೇಹೀ ಸದ್ಗುರೂಚೇ ಕರ್ಮ । ಅವಿಶ್ರಮ ಅಹರ್ನಿಶೀ ।೮೧೦॥ ಗುರುಸೇವೇಸೀ ಗುಂತಲೇ ಮನ । ವಿಸರಲಾ ಸ್ತ್ರೀ ಪುತ್ರ ಧನ । ವಿಸರಲಾ ಮನಾಚೀ ಆಠವಣ । ಮೀ ಕೋಣ ಹೇ ಸ್ಫುರೇನಾ ।೮೧೧॥ ನವಲ ಭಜನಾಚಾ ಉತ್ಸಾವೋ । ಭಜತಾ ನಾಠವೇ ನಿಜದೇಹೋ । ಥೋರ ಸೇವೇಚಾ ನವಲಾವೋ । ನಿಜಾತ್ಮ ಭಾವೋ ಗುರುಚರಣೀ ।೮೧೨॥ ಐಸಾಹೀ ಪ್ರಾರಬ್ಧಮೇಳಾ । ಅವಚಟೇ ಝಾಲಿಯಾ ವೇಗಳಾ । ನ ತುಟೇ ಪ್ರೇಮಾಚಾ ಜಿವ್ಹಾಳಾ । ಭಜನೀ ಆಗಳಾ ಸದ್‌ಭಾವೋ ।೮೧೩॥ ಗುರೂಚಾ ವಸತಾ ಜೋ ಗ್ರಾಮ । ತೇಥೇಚಿ ವಸೇ ಮನೋಧರ್ಮ । ಗುರುಧ್ಯಾನ ತೇ ಸ್ವಧರ್ಮಕರ್ಮ । ಸೇವಾ ಸಂಭ್ರಮ ಸಾಂಡೀನಾ ।೮೧೪॥

ಗುರು ಮತ್ತು ಭಗವಂತನು ಈ ಈರ್ವರನ್ನು ಒಂದೇ ಎಂದು ತಿಳಿದು ಯಾರು ಅನನ್ಯ ಭಾವದಿಂದ ಯಾವಾಗಲೂ ಭಜಿಸುತ್ತಿರುವರೋ, ಅವರೇ ನಿಜವಾದ ಗುರುಭಕ್ತರಾಗಿರುವರು. ಇತರರೆಲ್ಲರೂ ಅನಿಶ್ಚಿತ ಬುದ್ಧಿಯವರಾಗಿರುವರೆಂದು ತಿಳಿ ।೮೦೧॥ ನನ್ನಲ್ಲಿ ಐಕ್ಯತೆಯನ್ನು ಪ್ರಾಪ್ತಮಾಡಿಕೊಳ್ಳುವುದಕ್ಕಾಗಿ ಯಾರು ಅತ್ಯಂತ ಪ್ರೇಮದಿಂದ ಗುರುಭಕ್ತಿಯನ್ನು ಸ್ವೀಕರಿಸಿರುವರೋ, ಅವರು ತ್ರಿಭುವನದಲ್ಲಿ ನಿಜವಾಗಿ ಧನ್ಯಧನ್ಯರಾಗಿರುವರು. ಈಗ ಭಜನೆಯ ಸ್ವರೂಪವನ್ನು ಹೇಳುವೆ, ಕೇಳು ।೮೦೨॥ ಗುರುವಿನ ಸೇವೆಯನ್ನು ಮಾಡುವುದಕ್ಕಾಗಿ ಆತನ ದೇಹವು ತನ್ನ ಮನಸ್ಸಿನಕ್ಕಿಂತಲೂ ಮುಂದುಮುಂದಾಗಿ ಧಾವಿಸುತ್ತಿರುವುದು. ಹಾಗೆಯೇ ಎಲ್ಲ ಸೇವೆಗಳೂ ನನ್ನ ಕೈಗಳಿಂದಲೇ ಆಗಬೇಕೆಂಬ ಉತ್ಕಟ ಇಚ್ಛೆಯು ಆತನ ಮನದಲ್ಲಿ ನಿರ್ಮಾಣವಾಗಿರುವುದು ।೮೦೩॥ ಆತನು ಹೇಗೆ ಹೇಗೆ ಹೆಚ್ಚಿಗೆ ಸೇವೆಯನ್ನು ಮಾಡುತ್ತಿರುವನೋ, ಅಷ್ಟೇ ಆತನ ಉತ್ಸಾಹವು ಹೆಚ್ಚಾಗಿಯೇ ಬೆಳೆಯುತ್ತಿರುವುದು. ಈತನು ತನ್ನ ಸರ್ವ ಶರೀರ ಸಂಪತ್ತನ್ನು ಗುರುಗಳ ಸೇವೆಯನ್ನು ಮಾಡಲು ಅರ್ಪಿಸಿರುವನು ।೮೦೪॥ ಅಂತಃಕರಣದಲ್ಲಿ ಸೇವೆಯ ಪ್ರೇಮವು ನಿರ್ಮಾಣವಾಗಿರುವುದರಿಂದ ಆತನು ಕ್ಷಣವೂ ಕೂಡ ವಿಶ್ರಾಂತಿಯನ್ನು ಪಡೆಯಲಾರನು. ಪ್ರೇಮದ ಈ ಬೆಳವಣಿಗೆಯಿಂದ ಆತನ ಗುರುಭಜನೆಯ ಆನಂದವು ಬೆಳೆಯುತ್ತಲೇ ಸಾಗುತ್ತಿರುವುದು ।೮೦೫॥ ನಿತ್ಯವೂ ಗುರುಸೇವೆಯನ್ನು ಮಾಡುತ್ತಿರಲು ಆತನ ಮನದಲ್ಲಿ ನಿತ್ಯನೂತನವಾಗಿ ಪ್ರೇಮದ ಅಲೆಗಳು ಭರದಿಂದ ಪ್ರಕಟಗೊಳ್ಳುತ್ತಿರುವುವು. ಸದ್‌ಭಕ್ತಿಯಿಂದ ಆತನು ಸದ್ಗುರುಗಳ ಚರಣಗಳಲ್ಲಿ ತನ್ನ ಜೀವವನ್ನೇ ಅರ್ಪಿಸಿರುವನು ।೮೦೬॥ ಆಲಸ್ಯವು ಆತನಲ್ಲಿ ಬರಲು ಸಾಧ್ಯವೇ ಇಲ್ಲ. ವಿಶ್ರಾಂತಿಗೆ ಸ್ಥಾನವೇ ದೊರೆಯಲು ಶಕ್ಯವಿಲ್ಲ. ಗುರುಸೇವೆಯ ಸಂಭ್ರಮದಲ್ಲಿ ರಮಮಾಣನಾಗಿರುವುದರಿಂದ ಇತರ ಯಾವುದೇವಿಷಯಗಳ ಸೇವನೆಯನ್ನು ಆತನು ಮರೆತುಬಿಡುವನು ।೮೦೭॥ ನೀರಡಿಕೆಯು ನೀರು ಕುಡಿಯುವುದನ್ನು ಮರೆಯುವುದು. ಹಸಿವೆಯು ಮೃಷ್ಟಾನ್ನ ಭುಂಜಿಸುವುದನ್ನು ಮರೆಯುವುದು ಮತ್ತು ಗುರುಚರಣಗಳ ಸೇವೆಯನ್ನು ಮಾಡುತ್ತಿರಲು ಆತನು ನಿದ್ರೆಯನ್ನೂ ಕೂಡ ಮರೆತುಬಿಡುವನು ।೮೦೮॥ ಈತನಿಗೆ ಆಕಳಿಕೆ ಕೊಡಲೂ ಸಹ ಬಿಡುವು ದೊರೆಯದಿರಲು ನಿದ್ರೆ ಮಾಡಲು ಅವಕಾಶವಾದರೂ ಹೇಗೆ ಲಭಿಸಬೇಕು? ।೮೦೯॥ ಈತನ ಮುಖದಲ್ಲಿ ಯಾವಾಗಲೂ ಸದ್ಗುರುಗಳ ನಾಮವಿರುವುದು. ಹೃದಯದಲ್ಲಿ ಸದ್ಗುರುವಿನ ಪ್ರೇಮವು ತುಂಬಿಕೊಂಡಿರುವುದು. ದೇಹದಿಂದ ಅಹೋರಾತ್ರಿ ಸದ್ಗುರುಗಳ ಕರ್ಮಗಳಲ್ಲಿ ಅವಿಶ್ರಾಂತಿಯಾಗಿರುವನು ।೮೧೦॥ ಈತನ ಮನಸ್ಸು ಸದೈವ ಗುರುಸೇವೆಯಲ್ಲಿಯೇ ರಮಿಸಿರುವುದರಿಂದ ತನ್ನ ಸ್ತ್ರೀ, ಪುತ್ರ, ಧನಗಳ ಸರ್ವ ವಿಷಯಗಳನ್ನು ಈತನು ಮರೆತಿರುವನು. ಈತನಿಗೆ ತನ್ನ ಮನವೂ ಕೂಡ ಮರೆತು, ನಾನು ಯಾರು? ಎಂಬುವುದನ್ನೂ ಕೂಡ ತಿಳಿಯದಾಗುವನು ।೮೧೧॥ ಈತನ ಭಜನೆಯ ಉತ್ಸಾಹವು ಆಶ್ಚರ್ಯಕಾರಕವಾಗಿರುವುದು. ಭಜನೆಯನ್ನು ಮಾಡುತ್ತಿರಲು ಈತನಿಗೆ ತನ್ನ ದೇಹದ ಸ್ಮರಣೆಯೂ ಕೂಡ ಇರುವುದಿಲ್ಲ. ಹೀಗೆ ಅಲೌಕಿಕ ಗುರುಸೇವೆಯ ಮಹಿಮೆಯು ಅಗಾಧವಾಗಿರುವುದು. ಕಾರಣ ಭಕ್ತನ ಸರ್ವಭಾವವು ಗುರುಚರಣಗಳಲ್ಲಿ ನಟ್ಟಿರುವುದು ।೮೧೨॥ ಇಂತಹ ಅವಸ್ಥೆಯಲ್ಲಿ ದೈವಯೋಗದಿಂದ ಒಮ್ಮಿಂದೊಮ್ಮೆಲೆ ಗುರುವಿನಿಂದ ದೂರಾದರೆ, ಈತನ ಮನದಲ್ಲಿನ ಪ್ರೇಮದ ಓಘವು ಕಡಿಮೆಯಾಗುವುದಿಲ್ಲ. ಅದು ಅಧಿಕವಾಗಿಯೇ ಬೆಳೆಯುವುದು ಮತ್ತು ಭಜನೆಯಲ್ಲಿ ಭಕ್ತಿಯು ಬಹುವಾಗಿ ಬೆಳೆಯುವುದು ।೮೧೩॥ ಗುರುಗಳು ಇರುವ ಗ್ರಾಮದಲ್ಲಿಯೇ ಈತನ ಸರ್ವ ಮನೋಧರ್ಮವು ಗುಂತಾಯಿಸಿರುವುದು. ಗುರುಗಳ ಧ್ಯಾನವೇ ಈತನ ಸ್ವಧರ್ಮ ಕರ್ಮವಾಗಿರುವುದು. ಸೇವೆಯ ಭಾವನೆಯು ಹೃದಯದಲ್ಲಿ ಸತತವಾಗಿ ಅರಳುತ್ತಿರುವುದು ।೮೧೪॥

ಗುರುಮೂರ್ತೀಚೀ ಸವೇ ತ್ಯಾಸೀ । ತೇ ಮೂರ್ತಿ ಬೈಸವೀ ಹೃದಯಾವಕಾಶೀ । ಮಗ ನಾನಾಭಜನವಿಲಾಸೀ । ಆವಡೀ ಕೈಶೀ ಭಜನಾಚೀ ॥೫೧೫॥ ಚಿನ್ಮಾತ್ರ ಪೂರ್ಣಿಮಾ ಗುರೂ ಪೂರ್ಣಚಂದ್ರ । ತಳೀ ಆಪಣ ಹೋಯ ಆರ್ತ ಚಕೋರ । ಮಗ ಸ್ವಾನಂದಬೋಧಾಚೇ ಚಂದ್ರಕರ । ನಿರಂತರ ಸ್ವಯೇ ಸೇವೀ ॥೫೧೬॥ ಸದ್‌ಗುರು ಸೂರ್ಯ ಕರೀ ಚಿದ್‌ಗಗನೀ । ಆಪಣ ಹೋಯ ಸೂರ್ಯಕಾಂತಮಣೀ । ತ್ಯಾಚೇನಿ ತೇಜೇ ಪ್ರಜ್ವಳೋನೀ । ಸ್ವಭಾವೇ ಮಾಯಾವನೀ ಹೋಳೀ ಕರೀ ॥೫೧೭॥ ಸದ್‌ಗುರುಕೃಪಾಮೃತಾಚ್ಯಾ ಡೋಹೀ । ಸ್ವಯೇ ತರಂಗೂ ಹೋಯ ತಯೇ ಠಾಯೀ । ಸಬಾಹ್ಯ ತದ್ರೂಪೇ ಪಾಹೀ । ಭಾವನಾ ಹೃದಯೀ ಭಾವಿತು ॥೫೧೮॥ ಆಪುಲಾ ನಿಜಸ್ವಾಮೀ ಜೋ ಸದ್‌ಗುರೂ । ಭಾವೀ ನಿರ್ವಿಕಲ್ಪ ಕಲ್ಪತರೂ । ತ್ಯಾಚೇ ಛಾಯೇ ಬೈಸೋನಿ ಸಾಚಾರೂ । ಮಾಗೇ ವರೂ ಗುರುಭಕ್ತೀ ॥೫೧೯॥ ಸದ್ಗುರು ಕಾಮಧೇನು ಕರೀ ಜಾಣಾ । ವತ್ಸರೂಪೇ ಭಾವೀ ಆಪಣಾ । ಆವಡೀ ಚಾಟವೀ ಬೋಧರಸನಾ । ಸ್ವಾನಂದಪಾನ್ಹಾ ಸೇವಿತೂ ॥೫೨೦॥ ತುಝ್ಯಾ ಸಕಳ ವೃತ್ತೀಂಚೀ ಸೇವಾ । ಮ್ಯಾಂಚಿ ಕರಾವೀ ಗಾ ಗುರುದೇವಾ । ಐಸೇ ಪ್ರಾರ್ಥೂನಿ ಸದ್ಭಾವಾ । ಹಾ ವರೂ ಮಜ ದ್ಯಾವಾ ಕೃಪಾನಿಧೀ ॥೫೨೧॥ ತೇಥ ಸಂತೋಷೋನಿ ಗುರುನಾಥೇ । ವರೂ ದೀಧಲಾ ವರದಹಸ್ತೇ । ಹರ್ಷೇ ವೋಸಂಡತ ಚಿತ್ತೇ । ಧನ್ಯ ಮೀ ವರಾತೇ ಲಾಧಲೋ ॥೫೨೨॥ ಐಸೀ ಲಾಹೋನಿ ವರದಸ್ಥಿತೀ । ತೇಚಿ ಸೇವಾ ಆದರೀ ಪ್ರೀತೀ । ಅತಿಧನ್ಯ ಭಾವಾರ್ಥ ಗುರುಭಕ್ತೀ । ನಾನಾ ಉಪಪತ್ತೀ ಗುರುಭಜನಾ ॥೫೨೩॥ ಸದ್ಗುರೂಚೀ ದಹಾಹೀ ಕರಣೇ । ಮನಬುದ್ಧ್ಯಾದಿ ಅಂತಃಕರಣೇ । ಕ್ರಿಯಾಮಾತ್ರ ಮೀಚಿ ಹೋಣೇ । ಐಸೇ ಜೀವೇಪ್ರಾಣೇ ಭಾವಿತು ॥೫೨೪॥ ಸದ್ಗುರು ಜೇ ಜೇ ಭೋಗ ಭೋಗಿತೀ । ತೇ ಮೀಚಿ ಹೋಈನ ನಿಶ್ಚಿತೀ । ಏವಂ ಮೀಚಿ ಏಕ ಗುರುಭಕ್ತೀ । ದುಜೀ ಸ್ಥಿತೀ ಹೋ ನೇದೀ ॥೫೨೫॥ ಸದ್ಗುರು ಜೇತೇ ಉಭೇ ಠಾಕತಿ । ತ್ಯೆ ಪಾಯಾಂತಳೀ ಮೀಚಿ ಕ್ಷಿತೀ । ಸದ್ಗುರು ಜೇಥೇ ಜೇಥೇ ಚಾಲತೀ । ತೇ ಮಾರ್ಗೀಚೀ ಮಾತೀ ಮೀ ಹೋಈನ ॥೫೨೬॥ ಚರಣಕ್ಷಾಲನಾಸೀ ಸಮಸ್ತ । ಮೀಚಿ ಉದಕ ಮೀಚಿ ತಸ್ತ । ಮೀಚಿ ಚರಣ ಪ್ರಕ್ಷಾಲಿತ । ಚರಣತೀರ್ಥ ಮೀ ಸೇವೀ ॥೫೨೭॥ ಸದ್ಗುರುಚರಣೇಚೇ ರಜಃಕಣ । ಮೀಚಿ ಹೋಈನ ಆಪಣ । ಸದ್ಗುರು ಕರಿತೀ ಆರೋಹಣ । ತೇ ಸಿಂಹಾಸನ ಹೋಈನ ಮೀ ॥೫೨೮॥

ಗುರುಗಳ ಮೂರ್ತಿಯು ಈತನಲ್ಲಿ ರೂಢಿಸಿಕೊಂಡಿದ್ದಕ್ಕೆ ಹೃದಯ ಮಂದಿರದಲ್ಲಿ ಸದ್ಗುರುಗಳ ಮೂರ್ತಿಯನ್ನು ಸ್ಥಾಪಿಸಿಕೊಂಡಿರುವನು. ಅನಂತರ ಅನೇಕ ಪ್ರಕಾರದ ಭಜನ ರಂಗದಲ್ಲಿ ಈತನ ಭಜನೆಯ ಪ್ರೇಮವನ್ನು ಹೇಗೆ ವರ್ಣಿಸಬೇಕು ? ॥೫೧೫॥ ಚಿತ್ಸ್ವರೂಪವೇ ಈತನ ಪೌರ್ಣಿಮೆಯು ಮತ್ತು ಸದ್ಗುರುಗಳು ಅದರಲ್ಲಿಯ ಪೂರ್ಣ ಚಂದ್ರನು. ಆದಕ್ಕಾಗಿ ಸ್ವತಃ ಉತ್ಸುಕ ಚಕೋರ ತಾನಾಗುವನು ಮತ್ತು ಸ್ವಾನಂದ ಬೋಧರೂಪ ಚಂದ್ರಕಿರಣಗಳನ್ನು ನಿರಂತರವಾಗಿ ಸೇವಿಸುತ್ತಿರುವನು ॥೫೧೬॥ ಈತನು ಸದ್ಗುರುಗಳವರನ್ನು ಚಿದಾಕಾಶದಲ್ಲಿ ಸೂರ್ಯನನ್ನಾಗಿ ಕಲ್ಪಿಸುವನು ಮತ್ತು ಸ್ವತಃ ಸೂರ್ಯಕಾಂತ ಮಣಿಯಾಗಿ ಆತನ ದಿವ್ಯಮಯ ತೇಜದಿಂದ ಪ್ರಜ್ವಲಿತನಾಗಿ ಮಾಯಾರೂಪವಾದ ಮನವನ್ನು ಸುಟ್ಟುಬಿಡುವನು ॥೫೧೭॥ ಇದಲ್ಲದೇ ಸದ್ಗುರುಗಳ ಕೃಪಾಮೃತದ ಮಡುವಿನಲ್ಲಿನ ತೆರೆಯಾಗುವನು. ಒಳಹೊರಗೆ ಸರ್ವವೂ ಗುರುಗಳ ಸ್ವರೂಪವೇ ತುಂಬಿರುವುದೆಂದು ತಿಳಿಯುವನು. ಹೃದಯದಲ್ಲಿ ಈ ಅವಸ್ಥೆಯನ್ನೇ ಇಟ್ಟಿರುವನು ॥೫೧೮॥ ತನ್ನ ನಿಜವಾದ ಸ್ವಾಮಿಯಾದ ಸದ್ಗುರುಗಳು ನಿರ್ವಿಕಲ್ಪ ಕಲ್ಪತರುವೆಂದು ತಿಳಿದಿರುವನು. ಮತ್ತು ಅದರ ಶೀತಲ ನೆರಳಿನಡಿಯಲ್ಲಿ ಕುಳಿತು ಗುರುಭಕ್ತಿಯ ವರವನ್ನು ಬೇಡುವನು ॥೫೧೯॥ ಸದ್ಗುರುಗಳಿಗೆ ಕಾಮಧೇನುವನ್ನಾಗಿ ಮಾಡಿ ತಾನು ಅದರ ಕರು ಆಗುವನು. ಹೀಗೆ ಕಲ್ಪಿಸಿ ಆಕೆಯಿಂದ ಜ್ಞಾನರೂಪ ನಾಲಿಗೆಯಿಂದ ಸ್ವತಃಕ್ಕೆ ನೆಕ್ಕಿಸಿಕೊಳ್ಳುವನು. ಸ್ವಾನಂದದ ಹಾಲನ್ನು ಕುಡಿಯುವನು ॥೫೨೦॥ ''ಹೇ ಸದ್ಗುರುರಾಯನೇ, ನಿನ್ನ ವೃತ್ತಿಯ ಸೇವೆಯನ್ನು ನಾನೇ ಮಾಡಬೇಕು'' ಇಷ್ಟೊಂದು ವರವನ್ನು ನನಗೆ ನೀಡೆಂದು ಪ್ರಾರ್ಥಿಸುವನು ॥೫೨೧॥ ಆಗ ಗುರುರಾಯನು ಪ್ರಸನ್ನನಾಗಿ ಮಸ್ತಕದ ಮೇಲೆ ವರದ ಹಸ್ತವನ್ನಿಟ್ಟು, ಕೇಳಿದ ವರ ಕೊಡಲು ಆನಂದದ ಲಹರಿಯು ಹೃದಯದಲ್ಲಿ ನಿರ್ಮಾಣವಾಗಿ ''ನನಗೆ ವರವು ದೊರೆಯಿತು ನನ್ನ ಜೀವನವು ಧನ್ಯವಾಯಿತು'' ಎಂದು ಹೇಳಹತ್ತುವನು ॥೫೨೨॥ ಹೀಗೆ ಪ್ರೇಮದ ವರವನ್ನು ಪ್ರಾಪ್ತ ಮಾಡಿಕೊಂಡು ಆತನು ಪೂರ್ವಕ್ಕಿಂತಲೂ ಅಧಿಕವಾಗಿ ಸೇವೆಯನ್ನು ಮಾಡಹತ್ತುವನು. ಗುರುಭಕ್ತಿಯ ಭಾವಾರ್ಥವು ಅತ್ಯಂತ ಧನ್ಯನಾಗಿರುವುದು. ಗುರುಭಜನೆಯ ಅನೇಕ ಪ್ರಕಾರಗಳಿರುವುವು ॥೫೨೩॥ ಸದ್ಗುರುಗಳ ಮನವು, ಬುದ್ಧಿ, ಅಂತಃಕರಣ ಇತ್ಯಾದಿ ದಶ ಇಂದ್ರಿಯಗಳ ಸರ್ವ ಕಾರ್ಯಗಳು ನಾನೇ ಆಗಬೇಕು. ಹೀಗೆ ಆತನು ಮನೋಭಾವದಿಂದ ಇಚ್ಛೆಯನ್ನು ಮಾಡುತ್ತಿರುವನು ॥೫೨೪॥ ಸದ್ಗುರುಗಳು ಯಾವ ಯಾವ ಭೋಗಗಳನ್ನು ಭೋಗಿಸುವರೋ, ಅದೆಲ್ಲವೂ ನಿಜವಾಗಿ ನಾನೇ ಆಗುವೆನು. ಈ ಪ್ರಕಾರವಾಗಿ ನಾನೊಬ್ಬನೇ, ಗುರುಭಕ್ತಿ ಸ್ವರೂಪನಾಗಿರುವೆನು. ಅನ್ಯ ಯಾವ ಸ್ಥಿತಿಯಲ್ಲಿಯೂ ಇರಲಾರೆನು ॥೫೨೫॥ ಸದ್ಗುರುಗಳು ಎಲ್ಲೆಲ್ಲಿ ನಿಲ್ಲುವರೋ, ಅಲ್ಲಿ ಅವರ ಚರಣದ ನೆಲ ನಾನೇ ಆಗುವೆನು. ಸದ್ಗುರುಗಳು ಎಲ್ಲಿ ನಡೆಯುತ್ತ ಸಾಗುವರೋ, ಆ ಮಾರ್ಗದ ಮಣ್ಣೂ ಕೂಡ ನಾನೇ ಆಗುವೆನು ॥೫೨೬॥ ಅವರ ಪಾದಗಳನ್ನು ತೊಳೆಯಲು ನೀರು ನಾನೇ ಆಗುವೆನು ಮತ್ತು ತಾಟು ಕೂಡ ನಾನೇ ಆಗುವೆನು. ಪಾದಗಳನ್ನು ತೊಳೆಯುವವನು ನಾನೇ ಮತ್ತು ಪಾದಗಳ ತೀರ್ಥ ಸೇವಿಸುವವನು ನಾನೇ ಆಗುವೆನು ॥೫೨೭॥ ಸದ್ಗುರುಗಳ ಚರಣಕಮಲಗಳ ಧೂಳು ಸಹ ನಾನೇ ಆಗುವೆನು. ಸದ್ಗುರುಗಳು ಯಾವುದರ ಮೇಲೆ ಕುಳಿತುಕೊಳ್ಳುವರೋ, ಆ ಸಿಂಹಾಸನವೂ ಸಹ ನಾನೇ ಆಗುವೆನು ॥೫೨೮॥

ಸದ್ಗುರೂಂಚೇ ಸಿಂಹಾಸನ । ತೇ ಮೀಚಿ ಹೋಈನ ಆಪಣ । ತ್ಯಾವರೀ ಬೈಸತೇ ಆಸನ । ತೇಹೀ ಜಾಣ ಹೋಈನ ಮೀ ।೬೨೯॥ ಸದ್ಗುರೂಸೀ ಸ್ನೇಹ ಲಾಗೇ । ತೇ ಮೀ ಹೋಈನ ಸರ್ವಾಂಗೇ । ಗುರೂಸೀ ವೋಠಂಗಾವಯಾ ಪುಢೇಮಾಗೇ । ಮೃದುಳೀ ಸರ್ವಾಂಗೇ ಮೀ ಹೋ ಈನ ।೬೩೦॥ ಮನೀಂಚಾ ಐಸಾ ಆವಾಂಕಾ । ಸದ್ಗುರುಚ್ಯಾ ಸಿದ್ಧ ಪಾದುಕಾ । ತ್ಯಾ ಮೀ ಹೋಈನ ದೇಖಾ । ನೇದಿ ಆಣಿಕಾ ಆತಳೋ ।೬೩೧॥ ಮೀ ಹೋಈನ ಗುರೂಚ್ಯಾ ಶ್ವಾಸೋಚ್ಛ್ವಾಸಾ । ವೇಗೀ ಬಾಹೇರ ನಿಘೇನ ನಾಸಾ । ಗುರು ಘೇತೀಲ ಜ್ಯಾ ಸುವಾಸಾ । ತ್ಯಾ ತ್ಯಾ ವಿಲಾಸಾ ಮೀ ಹೋಈನ ।೬೩೨॥ ಗುರು ಅವಲೋಕಿತೀ ಕೃಪಾದೃಷ್ಟೀ । ತ್ಯಾ ದೃಶ್ಯಾಚೀ ಮೀ ಹೋ ಈನ ಸೃಷ್ಟೀ । ಗುರೂಸೀ ದೇಖತೀ ದೇಖಣೇ ಪುಷ್ಟೀ । ತೇ ಮೀ ಉಠಾಉಠೀ ಹೋಈನ ।೬೩೩॥ ಗುರೂಸೀ ಆವಡತೇ ನಿರೂಪಣ । ತೇ ಮೀ ಶ್ರವಣೇ ಹೋಈನ ಶ್ರವಣ । ಅಥವಾ ರುಚೇಲ ಜೇ ಕೀರ್ತನ । ತೇ ಗಾತಾ ಗಾಯನ ಮೀ ಹೋಈನ ।೬೩೪॥ ಸದ್ಗುರುಮುಖೀಂಚೀ ಜೇ ಕಥಾ । ತೇ ಮೀ ಆದರೆ ಹೋಈನ ತತ್ತ್ವತಾ । ಅಕ್ಷರೀ ಅಕ್ಷರಾರ್ಥಾ । ಮೀಚಿ ಸರ್ವಥಾ ಹೋಈನ ।೬೩೫॥ ಸದ್ಗುರು ಜೇಥ ಕರಿತೀ ಸ್ನಾನ । ತೇ ಮೀ ಅಂಗಸ್ಪರ್ಶನಾಚೇ ಜೀವನ । ಗುರೂ ಕರಿತೀ ಆಚಮನ । ತೇಹೀ ಜಾಣ ಹೋ ಈನ ಮೀ ।೬೩೬॥ ಗುರುಪರಿಧಾನ ಕರಿತೀ ವಾಸ । ತೇ ಮೀ ಹೋಈನ ಸುವಾಸ । ಗುರುಚರಣ ಪುಸಾವಯಾಸ । ತೇಹೀ ಧೂತವಾಸ ಮೀ ಹೋಈನ ।೬೩೭॥ ಗುರೂಸೀ ಕರಿತೀ ವಿಲೇಪನ । ತೇ ಮೀ ಹೋ ಈನ ಶುದ್ಧ ಚಂದನ । ಚರಣೀ ಅರ್ಪಿತೇ ಸುಮನ । ಮೀಚಿ ಜಾಣ ಹೋಈನ ।೬೩೮॥ ಸದ್ಗುರು ಕರಿತೀ ಭೋಜನ । ತೇಥ ಮೀಚಿ ತಾಟ ಮೀಚಿ ಅನ್ನ । ರಸಸ್ವಾದ ಪಕ್ವಾನ್ನ । ಪಂಕ್ತಿಕಾರು ಜಾಣ ಮೀ ಹೋಈನ ।೬೩೯॥ ಮಥೋನಿಯಾ ದಹೀ ಮಥಿತ । ಸಾರಾಂಶ ತೇ ನವನೀತ । ವೈರಾಗ್ಯ ಅಗ್ನಿಸಂತಪ್ತ । ಭೋಜನೀ ಮುಖ್ಯ ಘೃತ ಮೀ ಹೋಈನ ।೬೪೦॥ ಪರಿಪಾಕೀ ಸ್ವಾದಿಷ್ಟಪಣ । ಸರ್ವಾ ಚವೀಚೇ ಕಾರಣ । ಮೀ ಹೋಈನ ವರೀ ಲವಣ । ನ್ಯೂನ ತೇ ಪೂರ್ಣ ಗುರೂ ಕರಿತೀ ।೬೪೧॥ ಗುರೂ ಕರಿತೀ ಪ್ರಾಶನ । ತೇ ಮೀ ಹೋಈನ ಜೀವನ । ಸದ್ಗುರೂಚೇ ಧಾಲೇಪಣ । ತೇ ಉದ್ಗಾರ ಜಾಣ ಮೀ ಹೋಈನ ।೬೪೨॥ ಗುರೂಸೀ ಜೇ ಜೇ ಗೋಡ ಲಾಗೇ । ತೇ ತೇ ಪದಾರ್ಥ ಮೀ ಹೋಈನ ಅಂಗೇ । ಸದ್ಗುರೂಸೀ ಜ್ಯಾಚೀ ರುಚಿ ಲಾಗೇ । ತೇ ಮೀ ಸರ್ವಾಂಗೇ ಹೋಈನ ।೬೪೩॥

ಸದ್ಗುರುಗಳ ಸಿಂಹಾಸನವನ್ನು ಸ್ವತಃ ನಾನೇ ಆಗುವೆನು. ಅದರ ಮೇಲೆ ಕುಳಿತುಕೊಳ್ಳುವ ಆಸನವೂ ಕೂಡ ನಾನೇ ಆಗುವೆನು. ಇದನ್ನು ನೀನು ಲಕ್ಷ್ಯದಲ್ಲಿಡು ।೬೨೯॥ ಸದ್ಗುರುಗಳಿಗೆ ಅಂಗಕ್ಕೆ ಹಚ್ಚುವ ತೈಲವೂ ಕೂಡ ಸರ್ವಾಂಗದಿಂದ ನಾನೇ ಆಗುವೆನು. ಅವರಿಗೆ ಆಧಾರವಾಗಿ ಹಿಂದು ಮುಂದು ಲೋಡು ತಕ್ಕೆ ನಾನೇ ಆಗುವೆನು. ಮೃದುವಾದ ಗಾದಿ ಇತ್ಯಾದಿ ಎಲ್ಲವೂ ನಾನೇ ಆಗುವೆನು ।೬೩೦॥ ನನ್ನ ಮನದಲ್ಲಿ ಸದ್ಗುರಗಳ ಸಿದ್ಧಗೊಂಡ ಪಾದುಕೆಗಳೂ ಕೂಡ ನಾನೇ ಆಗಬೇಕೆಂಬ ಉತ್ಕಟ ಇಚ್ಛೆಯಿರುವುದು. ಅವುಗಳಿಗೆ ಅನ್ಯರಾರೂ ಸ್ಪರ್ಶ ಮಾಡಬಾರದು ।೬೩೧॥ ಸದ್ಗುರಗಳ ಶ್ವಾಸೋಚ್ಛ್ವಾಸವೂ ಕೂಡ ನಾನೇ ಆಗುವೆನು ಮತ್ತು ಮೂಗಿನಿಂದ ವೇಗವಾಗಿ ಹೊರಗೆ ಬರುವೆನು. ಗುರುಗಳು ಸೇವಿಸುವ ಸುಗಂಧವೂ ಕೂಡ ನಾನೇ ಆಗುವೆನು ।೬೩೨॥ ಗುರುಗಳು ಕೃಪಾದೃಷ್ಟಿಯಿಂದ ಎಲ್ಲಿ ನೋಡುವರೋ, ಆ ಎಲ್ಲ ದೃಶ್ಯ ಪದಾರ್ಥಗಳು ನಾನೇ ಆಗುವೆನು. ಅಥವಾ ಗುರುಗಳ ದೃಷ್ಟಿಯು ಯಾವ ಯಾವುದನ್ನು ಕಾಣುವುದೋ, ಅದೆಲ್ಲವೂ ನಾನು ಕೂಡಲೇ ಆಗುವೆನು ।೬೩೩॥ ಗುರುಗಳಿಗೆ ಯಾವ ವ್ಯಾಖ್ಯಾನವು ರುಚಿಸುವುದೋ, ಅದನ್ನು ಶ್ರವಣ ಮಾಡುವುದಕ್ಕಾಗಿ ನಾನು ಅವರ ಶ್ರವಣಗಳಾಗುವೆನು ಅಥವಾ ಗುರುಗಳಿಗೆ ಯಾವ ಕೀರ್ತನೆಯು ಪ್ರಿಯವಾಗುವುದೋ, ಅದನ್ನು ಹಾಡಲು ನಾನೇ ಗಾಯಕನಾಗುವೆನು ।೬೩೪॥ ಸದ್ಗುರಗಳ ಮುಖದಲ್ಲಿನ ಕಥೆಯನ್ನು ನಿಜವಾಗಿಯೂ ನಾನೇ ಆದರಪೂರ್ವಕವಾಗಿ ಆಗುವೆನು. ಮತ್ತು ಆ ಅಕ್ಷರಗಳಲ್ಲಿನ ಅಕ್ಷರ ಹಾಗೂ ಅಕ್ಷರಗಳಲ್ಲಿನ ಅರ್ಥವೂ ಕೂಡ ಸರ್ವಸ್ವದಿಂದ ನಾನೇ ಆಗುವೆನು ।೬೩೫॥ ಸದ್ಗುರುಗಳು ಎಲ್ಲಿ ಸ್ನಾನವನ್ನು ಮಾಡುವರೋ, ಅಲ್ಲಿ ಅವರ ಅಂಗದ ಮೇಲೆ ಬೀಳುವ ಜಲವೂ ಕೂಡ ನಾನೇ ಆಗುವೆನು. ಗುರುಗಳು ಆಚಮನ ಮಾಡುವ ಜಲವೂ ಸಹ ನಾನೇ ಆಗುವೆನು ।೬೩೬॥ ಸದ್ಗುರುಗಳು ಯಾವ ವಸ್ತ್ರವನ್ನು ಪರಿಧಾನ ಮಾಡುವರೋ ಆ ಉತ್ತಮ ವಸ್ತ್ರ ನಾನಾಗುವೆನು. ಗುರುಗಳ ಪಾದ ಒರೆಸುವ ಸ್ವಚ್ಛ ವಸ್ತ್ರವೂ ನಾನೇ ಆಗುವೆನು ।೬೩೭॥ ಗುರುಗಳ ಅಂಗಕ್ಕೆ ಸುಗಂಧ ದ್ರವ್ಯ ಹಚ್ಚುವ ಪವಿತ್ರವಾದ ಚಂದನ ನಾನೇ ಆಗುವೆನು. ಗುರಗಳ ಚರಣಗಳಿಗೆ ಅರ್ಪಿಸುವ ಸುಕೋಮಲ ಪುಷ್ಪಗಳೂ ಕೂಡ ನಾನೇ ಆಗುವೆನು ।೬೩೮॥ ಸದ್ಗುರುಗಳು ಯಾವ ತಾಟಿನಲ್ಲಿ ಭೋಜನವನ್ನು ಮಾಡುವರೋ ಆ ತಾಟು ನಾನಾಗುವೆನು. ತಾಟಿನಲ್ಲಿನ ಸರ್ವ ಅನ್ನವೂ ಕೂಡ ನಾನೇ ಆಗುವೆನು. ಅದರಲ್ಲಿನ ರಸಗಳ ರುಚಿ ಪಕ್ವಾನ್ನ, ಪಂಕ್ತಿಗೆ ಕುಳಿತುಕೊಳ್ಳುವವ ಹೀಗೆ ಎಲ್ಲವೂ ನಾನೇ ಆಗುವೆನು ।೬೩೯॥ ಮೊಸರನ್ನು ಕಡೆದು ತಗೆದ ಬೆಣ್ಣೆಯನ್ನು ವೈರಾಗ್ಯರೂಪ ಅಗ್ನಿಯ ಮೇಲೆ ಕಾಯಿಸಿ ಭೋಜನದಲ್ಲಿನ ಮುಖ್ಯವಾಗಿ ಬಂಗೊಳಿಸುವ ತುಪ್ಪವೂ ಕೂಡ ನಾನೇ ಆಗುವೆನು ।೬೪೦॥ ಸರ್ವ ಅಡುಗೆಯನ್ನು ಸ್ವಾದಿಷ್ಟಗೊಳಿಸುವ, ಸರ್ವರಿಗೂ ರುಚಿಯನ್ನು ಕೊಡುವ ಉಪ್ಪು ಸಹ ನಾನೇ ಆಗುವೆನು. ಇದಲ್ಲದೇ ಇನ್ನೇನಾದರೂ ಕೊರತೆ ಕಂಡಲ್ಲಿ ಗುರುಗಳು ಅದನ್ನು ಪೂರ್ಣಗೊಳಿಸುವರು ।೬೪೧॥ ಸದ್ಗುರುಗಳು ಪ್ರಾಶನಮಾಡುವ ನೀರು ನಾನೇ ಆಗುವೆನು. ಹಾಗೆಯೇ ತೃಪ್ತಿಯ ಡೇಗು ಕೂಡ ನಾನೇ ಆಗುವೆನು ।೬೪೨॥ ಗುರುಗಳಿಗೆ ಯಾವ ಯಾವ ಪದಾರ್ಥಗಳು ರುಚಿಯಾಗಿ ತೋರುವುವೋ, ಆ ಎಲ್ಲ ಪದಾರ್ಥಗಳು ನಾನು ಸ್ವತಃ ಆಗುವೆನು. ಸದ್ಗುರುಗಳಿಗೆ ಯಾವುದರಲ್ಲಿ ಅಪೇಕ್ಷೆಯಿರುವುದೋ, ಅದು ನಾನು ಸರ್ವಾಂಗದಿಂದ ಆಗುವೆನು ।೬೪೩॥

ಸದ್‌ಗುರೂ ಆಂಚವತೀ ಜೇಥ । ಮೀ ಉಷ್ಣೋದಕ ಮೀ ತಸ್ತ । ಶಿಂತೋಡೇ ಲಾಗತೀ ಜೇಥ ಜೇಥ । ತೇಹೀ ಸಮಸ್ತ ಹೋಈನ ಮೀ ॥೫೪೪॥ ಗುರೂಸೀ ಅರ್ಪಿತೀ ಜೇ ಫಳ । ತೇ ಮೀ ಹೋಈನ ತತ್ಕಾಳ । ಗುರುಅರ್ಪಣೇ ಸಫಳ । ಫಳಾಚೇ ಫಳ ಮೀ ಹೋಈನ ॥೫೪೫॥ ಸದ್ಗುರೂಚೇ ಘ್ಯಾವಯಾ ಉಚ್ಛಿಷ್ಟ । ಮಜಚಿ ಮೋಠಾ ಲವಲವಾಟ । ಮಾಂಜರ ಹೋಊನಿಯಾ ತಾಟ । ಚರಚರಾಟ ಚಾಟೀನ ಮೀ ॥೫೪೬॥ ಗುರು ಕರಿತೀ ಕರೋದ್ವರ್ತನ । ತೋ ಮೀ ಹೋಈನ ಸುಗಂಧಚಂದನ । ಮುಖವಾಸಾ ಸುವಾಸಪಣ । ಮೀಚಿ ಜಾಣ ಹೋಈನ ॥೫೪೭॥ ಫಳಾಶಾ ಫೋಡೋನಿ ಫೋಡೀ । ವಾಸನಾಶಿರಾ ಕಾಢೂನಿಯಾ ವಿಡೀ । ರಿಘೋನಿಯಾ ಸದ್ಗುರೂಚ್ಯಾ ತೋಂಡೀ । ತಾಂಬೂಲಗೋಡೀ ಮೀ ಹೋಈನ ॥೫೪೮॥ ಜಾಳೂನಿಯಾ ಅಹಂಕರಿಣಪಣಾ । ಮೀ ಹೋಈನ ಸೋಹಂ ಶುದ್ಧ ಚುನಾ । ಶಾಂತಿಪರಿಪಕ್ವ ಲಾಗೋನಿ ಪಾನಾ । ಸದ್ಗುರುವದನಾ ಪಾವೇನ ॥೫೪೯॥ ಸರ್ವ ಸಾರಾಂಚೇ ಶುದ್ಧ ಸಾರ । ತೋ ಹೋಈನ ಖದಿರಸಾರ । ಸದ್ಗುರುಮುಖೀ ರಂಗಾಕಾರ । ಮೀಚಿ ಸಾಚಾರ ಶೋಭೇನ ॥೫೫೦॥ ಸದ್ಗುರುಮುಖೀಚೇ ಪವಿತ್ರ ಪೀಕ । ವರಚ್ಯಾವರೀ ಮೀ ಘೇಈನ ದೇಖ । ಪಿಕದಾಣೀಚೇ ಮುಖಾಚೇ ಮುಖ । ಆವಶ್ಯಕ ಮೀಚ ಹೋಈನ ॥೫೫೧॥ ಗುರೂಚಾ ಉಗಾಳೂ ಮೀ ಹೋಈನ । ಪೀಕ ಪಿಕದಾಣೀ ಧರೋನಿ ಜಾಣ । ಚವರೀ ಜೇ ಮಕ್ಷಿಕಾನಿವಾರಣ । ತೀ ಮೀ ಹೋಈನ ನಿಜಾಂಗೇ ॥೫೫೨॥ ಗುರೂಚಾ ಉಗಾಳೂ ಘ್ಯಾವಯಾ ದೇಖ । ಮೀ ಹೋಈನ ಆಗಳಾ ಸೇವಕ । ನಾತರೀ ಲಡಿವಾಳ ಬಾಳಕ । ಗುರುಅಂಕೀ ದೇಖ ಮೀ ಹೋಈನ ॥೫೫೩॥ ಮಾಝಿಯಾ ಗುಣಾಂಚೀ ಸುಮನಮಾಳಾ । ಆವಡೀ ಘಾಲೀನ ಗುರೂಚ್ಯಾ ಗಳಾ । ಗುರೂ ಝೇಲಿತೀ ಲೀಲಾಕಮಳಾ । ತ್ಯಾ ಕರಕಮಳಾ ಮೀ ಹೋಈನ ॥೫೫೪॥ ಗುರೂಸೀ ನೀರಾಂಜನ ಕರಿತೀ । ತೇ ಮೀ ನಿಜತೇಜೇ ಉಜಳೀನ ಜ್ಯೋತೀ । ಗುರೂ ಜೇಣೇ ಪ್ರಕಾಶೇ ಚಾಲತೀ । ತೇ ದೀಪಿಕಾದೀಪ್ತಿ ಮೀ ಹೋಈನ ॥೫೫೫॥ ಜೀವಭಾವಾಚೇ ನಿಂಬಲೋಣ । ಗುರೂಸೀ ಮೀ ಕರೀನ ಆಪಣ । ಇಡಾಪೀಡಾ ಮೀ ಘೇ ಈನ ಜಾಣ । ತೇ ಲೋಣಲಕ್ಷಣ ಮಜ ಲಾಗೋ ॥೫೫೬॥ ಮೀ ಛತ್ರ ಮೀ ಛತ್ರಾಕಾರೂ । ಮೀ ಚವರ ಮೀಚಿ ಚವರಧರೂ । ಮೀಚಿ ವಿಂಜಣಾ ಮೀಚಿ ವಿಂಜಣವಾರೂ । ಗುರುಚಾ ಪರಿವಾರೂ ಮೀ ಹೋಈನ ॥೫೫೭॥

ಸದ್ಗುರುಗಳು ಎಲ್ಲಿ ಕೈಕಾಲುಮುಖ ತೊಳೆದುಕೊಳ್ಳುವರೋ ಅಲ್ಲಿ ಉಷ್ಣೋದಕ ನಾನಾಗುವೆನು. ಹಾಗೂ ಪಾತ್ರೆ ಕೂಡ ನಾನೇ ಆಗುವೆನು.ತೊಳೆದುಕೊಳ್ಳುವ ನೀರಿನಿಂದ ಹತ್ತಿಕೊಳ್ಳುವ ಹನಿಗಳೂ ಕೂಡ ಎಲ್ಲವೂ ನಿಶ್ಚಿತವಾಗಿ ನಾನೇ ಆಗುವೆನು ॥೫೪೪॥ ಗುರುಗಳಿಗೆ ಅರ್ಪಿಸುವ ಫಲಗಳನ್ನು ಬಹುಬೇಗನೇ ನಾನೇ ಆಗುವೆನು. ಗುರುಗಳಿಗೆ ಅರ್ಪಣೆಯನ್ನು ಮಾಡುವುದರಿಂದ ಸಫಲವಾದ ಆ ಯಾವ ಫಲದ ಫಲವೂ ಕೂಡ ನಾನೇ ಆಗುವೆನು ॥೫೪೫॥ ಗುರುಗಳ ಉಚ್ಛಿಷ್ಟದ ಪ್ರೀತಿಯು ನನಗೆ ಅತಿಶಯವಾಗಿ ಹತ್ತಿರುವುದು. ಅದಕ್ಕಾಗಿ ನಾನು ಬೆಕ್ಕು ಆಗಿ ಅವರ ಎಂಜಲು ತಾಟನ್ನು ನೆಕ್ಕುತ್ತ ಕುಳಿತುಕೊಳ್ಳುವೆನು ॥೫೪೬॥ ಗುರುಗಳು ಚೂರ್ಣದಿಂದ ಹಸ್ತಶುದ್ಧಿ ಮಾಡುತ್ತಿರಲು ಆಗ ನಾನು ಸುಗಂಧ ಚಂದನನಾಗುವೆನು ಮತ್ತು ಮುಖಕ್ಕೆ ಸುವಾಸನೆಯನ್ನು ತರುವುದಕ್ಕಾಗಿ ಸುವಾಸನೆಯೂ ಕೂಡ ನಾನೇ ಆಗುವೆನು ॥೫೪೭॥ ಫಲಾಸೆಯ ದೇಟನ್ನು ಮುರಿದು ವಾಸನೆಯ ಎಲೆಯ ನಾಡಿಯನ್ನು ತಗೆದು ತಾಂಬೂಲರೂಪದಿಂದ ಗುರುಗಳ ಮುಖದಲ್ಲಿ ಹೋಗಿ ತಾಂಬೂಲಿನ ರುಚಿಯು ಕೂಡ ನಾನೇ ಆಗುವೆನು ॥೫೪೮॥ ನಾನು ಎಂಬುವ ಅಹಂಕಾರವನ್ನು ಸುಟ್ಟುಹಾಕಿ ಸೋऽಹಂ ರೂಪ ಶುದ್ಧವಾದ ಸುಣ್ಣವನ್ನೂ ಕೂಡ ನಾನೇ ಆಗುವೆನು ಹಾಗೂ ಶಾಂತಿರೂಪ ಪಕ್ವವಾದ ಎಲೆಗೆ ಹಚ್ಚಿ ನಾನು ಸದ್ಗುರುಗಳ ಮುಖದಲ್ಲಿ ಹೋಗುವೆನು ॥೫೪೯॥ ಸರ್ವಸಾರಗಳಲ್ಲಿನ ಶುದ್ಧವಾದ ತತ್ವಾಗಿರುವ ಉತ್ತಮ ಕಾಚು ನಾನಾಗುವೆನು. ಮತ್ತು ಸದ್ಗುರುಗಳ ಮುಖದಲ್ಲಿ ಕೆಂಪುಬಣ್ಣದ ರೂಪದಿಂದ ಶೋಭಿಸುತ್ತಿರುವೆನು ॥೫೫೦॥ ಸದ್ಗುರುಗಳವರ ಮುಖದಲ್ಲಿನ ಪವಿತ್ರ ಉಗುಳನ್ನು ನಾನು ಮೇಲಿಂದ ಮೇಲೆ ಸ್ವೀಕರಿಸುವೆನು. ಮತ್ತು ಪಿಕದಾಣೆಯ ಮುಖದಲ್ಲಿನ ಮುಖವು ನಾನು ಅವಶ್ಯವಾಗಿ ಆಗುವೆನು ॥೫೫೧॥ ಗುರುಗಳು ಕಡಿದಿರುವ ತಾಂಬೂಲವನ್ನು ಮತ್ತು ಉಗುಳಿದ ಉಗುಳು ಹಾಗೂ ಪಿಕದಾಣೆ ಕೂಡ ನಾನೇ ಆಗುವೆನು. ನೊಣಗಳನ್ನು ಹೊರಹಾಕುವ ಚವರಿ ಕೂಡ ನಾನೇ ಆಗುವೆನು ॥೫೫೨॥ ಗುರುಗಳ ಮುಖದಲ್ಲಿನ ತಾಂಬೂಲರಸವನ್ನು ಪಡೆಯುವುದಕ್ಕಾಗಿ ನಾನು ಬಹಳ ಆಸ್ಥೆಯಿಂದ ಅವರ ಸೇವಕನಾಗುವೆನು. ಅಥವಾ ಗುರುಗಳ ತೊಡೆಯ ಮೇಲೆ ನಾನು ಪ್ರೀತಿಯ ಬಾಲಕನಾಗಿ ಕುಳಿತುಕೊಳ್ಳುವೆನು ॥೫೫೩॥ ನನ್ನ ಗುಣಗಳ ರೂಪ ಹೂವಿನ ಮಾಲೆಯನ್ನು ನಾನು ಬಹಳ ಪ್ರೇಮದಿಂದ ಗುರುಗಳ ಕೊರಳಲ್ಲಿ ಹಾಕುವೆನು. ಮತ್ತು ಗುರುಗಳು ಕೈಯಿಂದ ಸಹಜ ಲೀಲೆಯಾಗಿ ಕಮಲವನ್ನು ಹಿಡಿಯಲು ಅವರ ಕರಕಮಲವೂ ಕೂಡ ನಾನೇ ಆಗುವೆನು ॥೫೫೪॥ ಗುರುಗಳಿಗೆ ನಿರಾಂಜನಗಳಿಂದ ಬೆಳಗುತ್ತಿರಲು ಆಗ ಆ ನಿರಾಂಜನಗಳಲ್ಲಿನ ಜ್ಯೋತಿಯನ್ನು ನಾನು ನನ್ನ ತೇಜದಿಂದ ಪ್ರಕಾಶಗೊಳಿಸುವೆನು. ಮತ್ತು ಗುರುಗಳು ಯಾವ ಪ್ರಕಾಶದಿಂದ ನಡೆಯುವರೋ, ಆ ದೀಪದ ತೇಜಮಯ ಪ್ರಭೆ ಕೂಡ ನಾನೇ ಆಗುವೆನು ॥೫೫೫॥ ನನ್ನ ಜೀವಭಾವದ ನಿವಾಳಿಯನ್ನು ತಯಾರಿಸಿ ಅದನ್ನು ನಾನು ಗುರುಗಳ ಮೇಲಿನಿಂದ ಇಳಿಸಿ ಒಗೆಯುವೆನು ಮತ್ತು ಇಡಾ-ಪೀಡಾವನ್ನು ನಾನು ಹೊರುವೆನು. ಆ ಯಾವ ನಿವಾಳಿಯ ಬಾಧೆಯು ನನಗಾಗಲಿ ॥೫೫೬॥ ನಾನು ಛತ್ರಿಯಾಗುವೆ, ಮತ್ತು ಛತ್ರಿ ಹಿಡಿಯುವವನೂ ಕೂಡ ನಾನೇ ಆಗುವೆ. ನಾನು ಚವರಿಯಾಗುವೆ ಮತ್ತು ಚವರಿ ಹಿಡಿಯುವವನೂ ನಾನಾಗುವೆನು. ಬೀಸಣಿಕೆ ನಾನಾಗುವೆ, ಮತ್ತು ಬೀಸಣಿಕೆಯಿಂದ ಗಾಳಿ ಬೀಸುವವನೂ ನಾನೇ ಆಗುವೆ. ಹೀಗೆ ಗುರುಗಳ ಸರ್ವ ಪರಿವಾರವೇ ನಾನಾಗುವೆನು ॥೫೫೭॥

ಗುರು ಕರಿತೀ ಆರೋಹಣ । ತೋ ಮೀ ಹೋ ಈನ ಶ್ಯಾಮಕರ್ಣ । ಗುರೂಚಾ ಭರಭಾರ ಸಾಹಾವಯಾ ಜಾಣ ।ವಾಜೀವಾಹನ ಹೋಈನ ಮೀ ।೫೫೮॥ ಗುರೂಪುಢೇ ಮೀ ವಾಟಸುಭಟೂ । ಗುಣವರ್ಣನೀ ಮೀ ಗರ್ಜತಾ ಭಾಟೂ । ಗುರುಗೃಹೀ ಶಾಂತಿಪಾಠೂ । ಪಢತಾ ಭಟೂ ಮೀ ಹೋಈನ ।೫೫೯॥ ಮೀಚಿ ಬಾರೀ ಮೀ ಕರ್ಢೇರೀ ।ಮೀ ಹಡಪೀ ಮೀ ಫುಲಾರೀ । ಮೀ ಝಾಡಣಾ ಮೀ ಖಿಲ್ಲಾರೀ । ಮೀ ದ್ವಾರಪಾಳ ದ್ವಾರೀ ಹೋಈನ ।೫೬೦॥ ಗುರು ಜೇಥೇ ದೇತೀ ಅವಧಾನ । ತೇ ತೇ ಕಳಾ ಮೀ ಹೋಈನ ಜಾಣ । ಗುರೂವೇಗಳಾ ಅರ್ಧಕ್ಷಣ । ಗೇಲಾ ಪ್ರಾಣ ತರೀ ನ ವಚೇ ।೫೬೧॥ ಗುರು ಸಾಂಗತೀ ಜೇ ಕಥಾ । ತೇಥ ಮೀ ಹೋ ಈನ ಸಾದರ ಶ್ರೋತಾ । ಗುರುಕೃಪಾ ಮೀ ಹೋಈನ ವಕ್ತಾ । ನಿಜಾತ್ಮತಾ ಬೋಲಕಾ ।೫೬೨॥ ಗುರು ಗಂಭೀರ ದಾನ ದೇತ । ದೀನ ಮಾಗತೇ ಮೀ ಹೋಈನ ತೇಥ । ಗುರೂಚೇ ನಿಜಗುಜ ಸಮಸ್ತ । ಕರಿತಾ ಏಕಾಂತ ಮೀ ಹೋಈನ ।೫೬೩॥ ಗುರು ಬೈಸತೀ ಸಾವಕಾಶ । ತೈ ಮೀ ಹೋಈನ ಅವಕಾಶ । ಗುರು ಹೃದಯೀಚೇ ಚಿದಾಕಾಶ । ನಿರವಕಾಶ ಮೀ ಹೋಈನ ।೫೬೪॥ ಗುರು ಬೈಸತೀ ಆಪಣ । ತೇ ಮೀ ಹೋಈನ ಸುಖಾಸನ । ತೇ ಮೀಚಿ ವಾಹೇನ ಆಪಣ । ಭೋಈ ಹೋಈನ ಚಾಲಣಾ ।೫೬೫॥ ಸ್ವಾಮೀ ಸೂನಿಯಾ ದಿಠೀ । ಚಪಳ ಪಾ ಉಲಾಂಟ್ಯಾ ನೇಟೀ । ಚಾಲೇನ ಮೀ ಉಠಾಉಠೀ । ಧುರೇಸೀ ಗೋಠೀ ಸಾಂಗತ ।೫೬೬॥ ಆಂತುಲೇ ದೃಷ್ಟೀ ಪುಢೀಲೇ ಚಾಲೀ । ಗೋವೀಚೇ ಪಾಊಲ ಉಗವೋನಿ ಘಾಲೀ । ಉಂಚ ನೀಚ ಭೂಮೀಚೀ ಖೋಲೀ । ಚುಕವೂನಿ ಚಾಲೀ ಚಾಲೇನ ।೫೬೭॥ ಸಂಕಲ್ಪ ವಿಕಲ್ಪಾಂಚೇ ಝೋಂಕ । ಜಾತೇ ವಾಮ ಸವ್ಯ ಅನೇಕ । ತೇ ಆವರೂನಿಯಾ ದೇಖ । ಪಾಹತ ಶ್ರೀಮುಖ ಚಾಲೇನ ಮೀ ।೫೬೮॥ ನ ಚುಕತಾ ನಿಜಮಾರ್ಗ । ನ ಹಾಲತಾ ಧುರೇಚೇ ಆಂಗ । ನ ಕರಿತಾ ಆಣಿಕಾಂಚಾ ಪಾಂಗ । ಭೋಈ ಚಾಂಗ ಮೀ ಹೋಈನ ॥೫೬೯॥ ಸುಖಾಸನಾಚೇನಿ ಪಡಿಪಾಡೇ । ಚಾಲತಾ ಸುಖ ಅಧಿಕ ವಾಢೇ । ಮಾಗೀಸ ಸೂಡ ಕಾಢೂನಿ ಪುಢೇ । ಸುಖಿಸುರವಾಡೇ ಚಾಲೇನ ।೫೭೦॥ ಚಢಣೇ ಪಡಣೇ ಅಡಖಳಣೇ । ದಡಕಣೇ ಫಡಕಣೇ ಅಡಕಣೇ । ಸಾಂಭಾಳೂನಿಯಾ ನಿಷ್ಠೇನೇ । ಟಣಕಪಣೇ ಚಾಲೇನ ।೫೭೧॥

ಗುರುಗಳು ಆರೋಹಣ ಮಾಡುವ ಸುಲಕ್ಷಣವಾದ ಕುದುರೆ ನಾನಾಗುವೆನು. ಗುರುಗಳ ಸರ್ವ ಭಾರವನ್ನು ಹೊರುವುದಕ್ಕಾಗಿ ನಾನು ಕುದುರೆಯ ರೂಪದಿಂದ ವಾಹನನಾಗುವೆನು ।೫೫೮॥ ಗುರುಗಳ ಮುಂದೆ ಅವರ ಮಾರ್ಗದರ್ಶಕನು, ಅವರ ಗುಣಗಳ ವರ್ಣನೆಯನ್ನು ಮಾಡುವ ಭಾಟನು ಮತ್ತು ಗುರುಗಳ ಗೃಹದಲ್ಲಿ ಶಾಂತಿಪಾಠ ಹೇಳುವ ಭಟ್ಟನೂ ಕೂಡ ನಾನೇ ಆಗುವೆನು ।೫೫೯॥ ಗುರುಗಳ ಮೇಲೆ ಛತ್ರ ಹಿಡಿಯುವವನು ನಾನೇ ಆಗುವೆನು. ಗುರುಗಳ ಮೇಲೆ ಚವರೀ ಬೀಸುವವನು ನಾನಾಗುವೆನು, ತಾಂಬೂಲವನ್ನು ಕೊಡುವವ, ಹೂವುಗಳನ್ನು ಕೊಡುವವ ಹಾಗೂ ಕಸಗೂಡಿಸುವವನೂ ಕೂಡ ನಾನೇ ಆಗುವೆನು. ಪಶುಗಳನ್ನು ಕಾಯುವವ ನಾನೇ ಮತ್ತು ಬಾಗಿಲಲ್ಲಿ ಕಾಯುವ ದ್ವಾರಪಾಲಕನೂ ಕೂಡ ನಾನೇ ಆಗುವೆನು ।೫೬೦॥ ಗುರುಗಳು ಲಕ್ಷ ಕೊಟ್ಟಲ್ಲಿ ಅವಧಾನ ನಾನಾಗುವೆನು. ಪ್ರಾಣ ಹೋದರೂ ಸರಿಯೇ, ಗುರುಗಳನ್ನು ಬಿಟ್ಟು ಬೇರೆ ಕಡೆ ಅರ್ಧಕ್ಷಣವೂ ಕೂಡ ಹೋಗಲಾರೆನು ।೫೬೧॥ ಗುರುಗಳು ಹೇಳುವ ಕಥೆಯನ್ನು ಅತ್ಯಂತ ಆದರದಿಂದ ಕೇಳುವ ಶ್ರೋತೃ ಆಗುವೆನು. ಗುರುಗಳ ಕೃಪೆಯನ್ನು ಪ್ರಾಪ್ತ ಮಾಡಿಕೊಂಡು ಅಧ್ಯಾತ್ಮ ಜ್ಞಾನವನ್ನು ಹೇಳುವ ವಕ್ತಾ ನಾನಾಗುವೆನು ।೫೬೨॥ ಗುರುಗಳು ಉದಾರಭಾವದಿಂದ ದಾನವನ್ನು ಕೊಡುವಲ್ಲಿ ಬಡ ಯಾಚಕನು ನಾನಾಗುವೆನು. ಗುರುಗಳು ತಮ್ಮ ಸ್ವತಃದ ಹಿತಗುಜವನ್ನು ಹೇಳುತ್ತಿರಲು ನಾನು ಏಕಾಂತಸ್ವರೂಪನಾಗುವೆನು ।೫೬೩॥ ಗುರುಗಳು ಎಲ್ಲಿ ನಿಧಾನವಾಗಿ ಕುಳಿತುಕೊಳ್ಳುವರೋ ಅಲ್ಲಿ ನಾನು ಅವಕಾಶನಾಗುವೆನು . ಗುರುಗಳ ಹೃದಯದಲ್ಲಿನ ಅವಕಾಶರಹಿತ ಚಿದಾಕಾಶವು ನಾನೇ ಆಗುವೆನು ।೫೬೪॥ ಗುರುಗಳು ಕುಳಿತುಕೊಳ್ಳುವ ಸುಖಾಸನವೂ ನಾನೇ ಆಗುವೆನು. ಮತ್ತು ನಡೆಯುವ ಪಲ್ಲಕ್ಕಿ ಹೊರುವವನಾಗಿ ಅದನ್ನು ಹೊತ್ತುಕೊಂಡು ಒಯ್ಯುವೆನು ।೫೬೫॥ ಸ್ವಾಮೀ ಅತ್ತ ಲಕ್ಷ ಕೊಟ್ಟು ಭರಭರಾಟೆಯಿಂದ ಹೆಜ್ಜೆಗಳನ್ನಿಡುತ್ತ ಹೆಗಲಮೇಲೆ ಪಲ್ಲಕ್ಕಿಯ ದಿಂಡು ಇದ್ದರೂ ಕೂಡ ಅವರೊಂದಿಗೆ ಹಿತಮಾತುಗಳನ್ನಾಡುತ್ತಿರುವೆನು ।೫೬೬॥ ವಾಹನದ ಮೇಲೆ ಗುರುಗಳು ಕುಳಿತಿರುವುದನ್ನು ಅರಿತು, ಲಕ್ಷ ಕೊಟ್ಟು ಕಾಲುಗಳಲ್ಲಿ ತೊಡರು ಬಾರದಂತೆ ನಾನು ವ್ಯವಸ್ಥಿತವಾಗಿ ಕಾಲುಗಳನ್ನು ಎತ್ತಿ ಇಡುವೆನು. ದಾರಿಯುದ್ದಕ್ಕೂ ಭೂಮಿಯ ಏರಿಳಿತ ತೆಗ್ಗು ದಿನ್ನೆಗಳನ್ನು ತಪ್ಪಿಸುತ್ತ ವ್ಯವಸ್ಥಿತವಾಗಿ ನಡೆಯುವೆನು ।೫೬೭॥ ಸಂಕಲ್ಪ-ವಿಕಲ್ಪಗಳ ಎಡ ಬಲ ಭಾಗಗಳಲ್ಲಿ ಅನೇಕ ವೇಳೆ ಹೊಯ್ದಾಡುವಿಕೆಯನ್ನು ನಾನು ಸಾಂಭಾಳಿಸಿಕೊಳ್ಳುವೆನು. ಶ್ರೀಗುರುಗಳ ಮುಖದತ್ತ ನೋಡುತ್ತ ನಾನು ನಡೆಯುತ್ತಿರುವೆನು ।೫೬೮॥ ನಮ್ಮ ಮಾರ್ಗವು ಸ್ವಲ್ಪವೂ ಕೂಡ ತಪ್ಪಲಾರದಂತೆ, ಹೆಗಲ ಮೇಲಿನ ಪಲ್ಲಕ್ಕಿಯ ದಂಡಿಗೆಯು ತಿಲಮಾತ್ರವೂ ಅಲುಗಾಡದಂತೆ, ಅನ್ಯ ಯಾರ ಭಿಡೆಯನ್ನೂ ಹಿಡಿಯದೇ ನಾನು ಉತ್ತಮ ಪ್ರಕಾರದ ಪಲ್ಲಕ್ಕಿ ಹೊರುವವನಾಗುವೆನು ।೫೬೯॥ ಆ ಯಾವ ಸುಖಕಾರಕ ವಾಹನದ ಆಶ್ರಯದಿಂದ ನಡೆಯುತ್ತಿರಲು ಸುಖದ ವೃದ್ಧಿಯಾಗುತ್ತಿರುವುದು. ಹಿಂದಿನ ಮಾರ್ಗವನ್ನು ನೋಡಿಕೊಂಡು ನಾನು ಮುಂದಿನ ಮಾರ್ಗವನ್ನು ಆನಂದದಿಂದ ಆಕ್ರಮಣ ಮಾಡುವೆನು ।೫೭೦॥ ಏರು ಹತ್ತುವಿಕೆ, ಬೀಳುವಿಕೆ, ಮುಗ್ಗರಿಸುವಿಕೆ, ಭಯಪಡುವಿಕೆ, ಓಡುವಿಕೆ, ಸಿಕ್ಕಿಕೊಳ್ಳುವಿಕೆ, ಇತ್ಯಾದಿ ಸರ್ವವನ್ನೂ ಸಾಂಭಾಳಿಸಿಕೊಂಡು ನೀಟಾಗಿ ಲಕ್ಷ ಕೊಟ್ಟು ಬಹಳ ಉತ್ಸಾಹದಿಂದ ನಡೆಯುವೆನು ।೫೭೧॥

ಉರೀ ಶಿರೀ ಖಾಂದೀ ಕೋಪರೀ । ಮಾಗೀಲ ಸೂಡ ಪುಢೇ ಧರೀ । ದೃಷ್ಟೀ ಠೇಊನಿ ಪಾಯಾಂವರೀ । ನಿರ್ವಿಕಾರೀ ಚಾಲೇನ ॥೫೭೨॥ ಆಟೀ ಮುರಡೀ ಉಲಟ ಲೋಟ । ಧಾಪಕಾಂಪ ಪಡೇ ಭೇಟ । ಆಧಾರ ಧರೂನಿ ಸುಭಟ । ಚಢತೀ ವಾಟ ಚಾಲೇನ ॥೫೭೩॥ ಉಲ್ಲಂಘೂನಿ ಕಾಮಾಚಾ ಪಾಟ । ಆಂವರೂನಿ ಕ್ರೋಧಾಚಾ ಲೋಟ । ಚುಕವೂನಿ ಖೋಲವ್ಯಾಚೀ ವಾಟ । ಧುರೇಸಕಟ ಮೀ ಚಾಲೇನ ॥೫೭೪॥ ಮಮತೇಚೀ ಓಲ ಪ್ರಬಳ । ತೇಥಾಯೀ ರುತೀ ಗುಂತೀ ಸಬಳ । ತೇಥ ನ ಮಾಖತಾ ಪಾಉಲ । ಲಂಘೂನಿ ತತ್ಕಾಳ ಜಾಈನ ॥೫೭೫॥ ಮೋಹನದೀಚೀ ಥೋರ ಕರಾಡೀ । ಮಾಜೀ ಸಬಳ ಜಳೇ ಪ್ರಬಳ ವೋಢೀ । ಶಿಂತೋಡಾ ನ ಲಾಗತಾ ಧೂರ ಮೀ ಕಾಢೀ । ಪರಾಪರ ಥಡೀ ತತ್ಕಾಳ ॥೫೭೬॥ ದೃಷ್ಟೀ ಠೇವೂನಿ ಸ್ವಾಮೀಕಡೇ । ಸವೇಗ ಚಾಲತಾ ಮಾಗೇಪುಢೇ । ಭೋಈ ಹೋಈನ ದೋಹೀಕಡೇ । ಸೂಡ ಸುಢೇ ಕಾಢೀನ ॥೫೭೭॥ ಏವಂ ಮೀಚಿ ಮೀ ಮಾಗೇ ಪುಢೇ । ಸುಖಾಸನಾಚೇನಿ ಸುರವಾಡೇ । ಸ್ವಾಮೀಚೀ ನಿಜನಿದ್ರಾ ನ ಮೋಡೇ । ತೇಣೇ ಪಡಿಪಾಡೇ ವಾಹೇನ ॥೫೭೮॥ ಉಚ್ಛಿಷ್ಟ ಅನ್ನಾಚಾ ಪೋಸಣಾ । ಆಠಾ ಪ್ರಹರಾಂಚಾ ಜಾಗಣಾ । ಸದಾ ಗುರುಗುರು ಕರೀತ ಜಾಣಾ । ಗುರುದ್ವಾರೀ ಸುಣಾ ಮೀ ಹೋಈನ ॥೫೭೯॥ ವಿಜಾತೀ ದೇಖೋನಿ ನಯನಾ । ಸೋಹಂ ಭಾವೇ ಭುಂಕೇನ ಜಾಣಾ । ಭಜನಥಾರೋಳಾ ಬೈಸಣಾ । ಗುರುದಾರೀ ಸುಣಾ ಮೀ ಹೋಈನ ॥೫೮೦॥ ಐಸಐಶಿಯಾ ಭಾವನಾ । ಗುರುಸೇವೇಲಾಗೀ ಜಾಣಾ । ಅತಿಶಯೇ ಆವಡೀ ಮನಾ । ನಾನಾ ವಿವಂಚನಾ ವಿವಂಚೀ ॥೫೮೧॥ ಜರೀ ದೈವವಶೇ ದೂರ ಗೇಲಾ । ಪರೀ ತೋ ಭಾವಬಳೇ ಜವಳೀ ಆಲಾ । ಗುರುಸೇವೇ ಜೋ ಜೀವೇ ವಿಕಲಾ । ತೋ ಶಾಸ್ತ್ರ ಪಾವಲಾ ಸದ್ವಿದ್ಯಾ ॥೫೮೨॥ ಅಸೋ ಜವಳೀ ಅಥವಾ ದೂರೀ । ಪರೀ ಗುರುಭಕ್ತೀಚೀ ಆವಡೀ ಭಾರೀ । ಜೀವಿತ್ವ ಠೇವಿಲೇ ಸೇವೇವರೀ । ಗುರೂಚ್ಯಾ ದ್ವಾರೀ ಭಜನಾಸೀ ॥೫೮೩॥ ಐಸಾ ಗುರುಭಕ್ತೀಸೀ ಸಾದರ । ಚಢತ್ಯಾ ಆವಡೀ ಏಕಾಗ್ರ । ತೇಚಿ ಸದ್ವಿದ್ಯಾ ಲಕ್ಷಣ ಶಸ್ತ್ರ । ಗುರುಕೃಪಾಕುಠಾರ ಪೈ ಪಾವೇ ॥೫೮೪॥ ಲಾವೋನಿ ವೈರಾಗ್ಯಾಚೇ ಸಾಹಾಣೇ । ಪ್ರತ್ಯಾವೃತ್ತಿ ಬೋಧಕಪಣೇ । ಶಸ್ತ್ರ ಕೇಲೇ ಜೀ ಸಣಾಣೇ । ತೀಕ್ಷ್ಣಪಣೇ ಅತಿಸಜ್ಜ ॥೫೮೫॥

ಒಂದೆ ಏರು ಇಳಿತ ಹತ್ತಲು ಗುರೂಜಿಯವರಿಗೆ ಪಾಲಖಿಯಲ್ಲಿ ಕುಳಿತುಕೊಳ್ಳಲು ತ್ರಾಸಾಗಬಾರದೆಂದು ನಾನು ಪಲ್ಲಕ್ಕಿಯ ದಂಡಿಗೆಯನ್ನು ಎದೆಯ ಮೇಲೆ ತಲೆಯ ಮೇಲೆ, ಹೆಗಲ ಮೇಲೆ, ಸಂದಿಯ ಮೇಲೆ, ಈ ಪ್ರಕಾರದಿಂದ ದಂಡಿಗೆಯನ್ನು ಹಿಡಿದು ಕಾಲುಗಳ ಮೇಲೆ ದೃಷ್ಟಿಯನ್ನಿಟ್ಟು ಶಾಂತಮನದಿಂದ ನಡೆಯುವೆನು ॥೫೭೨॥ ಮುಂದೆ ದಿನ್ನು ಬರಲು, ತಿರುವು ಬರಲು, ಏರಿಳಿತ ಇತ್ಯಾದಿ ಬರಲು, ಆಗ ದಮ್ಮು ಹತ್ತಲಿ, ದೇಹ ನಡುಗಲಿ, ಜೀವಕ್ಕೆ ಎಷ್ಟೇ ತೊಂದರೆಯಾಗಲಿ, ಆದರೂ ಕೂಡ ಧೈರ್ಯಯುಳ್ಳ ಮನುಷ್ಯನಂತೆ ಏರಿನಲ್ಲಿ ದಾರಿ ನಡೆಯುತ್ತಿರುವೆನು ॥೫೭೩॥ ಕಾಮದ ಜಗ್ಗಾಟ ದಾಟುತ್ತ ಕ್ರೋಧದ ಆವೇಶವನ್ನು ಆವರಿಸುತ್ತ ತೆಗ್ಗಾದ ರಸ್ತೆಯನ್ನು ತಪ್ಪಿಸುತ್ತ ಪಲ್ಲಕ್ಕಿಯ ಮುಂದಿನ ದಂಡಿಗೆಯನ್ನು ಹೆಗಲ ಮೇಲೆ ಹೊತ್ತುಕೊಂಡು ನಡೆಯುತ್ತಿರುವೆನು ॥೫೭೪॥ ಮಮತೆಯ ರಜ್ಜು, ಅದೂ ಕೂಡ ಬಹಳ ದೊಡ್ಡದಾಗಿರುವುದು. ಚತುರ ಜನರೂ ಕೂಡ ಅದರಲ್ಲಿ ಸಿಕ್ಕಿಕೊಳ್ಳುವರು. ಆದರೆ ನಾನು ಮಾತ್ರ ಅದರಲ್ಲಿ ಒಂದು ಹೆಜ್ಜೆಯನ್ನೂ ಸಹ ಇಡದೇ ತೀವ್ರವಾಗಿ ಅಲ್ಲಿಂದ ದಾಟಿ ಹೋಗುವೆನು ॥೫೭೫॥ ಮೋಹರೂಪ ನದಿಯ ಜಬರು ಅತಿಶಯ ಭಯಂಕರವಾಗಿರುವುದು. ಅದರ ನೀರಿನ ಪ್ರವಾಹವು ಜೋರಾಗಿರುವುದರಿಂದ ಅದರ ಸೆಳೆತವೂ ಕೂಡ ಭಾರಿಯಾಗಿರುವುದು. ಆದರೆ ನಾನು ಗುರುಗಳಿಗೆ ಒಂದು ಹನಿ ನೀರು ಬಡೆಯದಂತೆ ಪಲ್ಲಕ್ಕಿಯನ್ನು ಆಚೆ ದಂಡೆಗೆ ಒಯ್ಯುವೆನು ॥೫೭೬॥ ಸ್ವಾಮಿಯತ್ತ ಲಕ್ಷವಿಟ್ಟು ಅತ್ಯಂತ ವೇಗದಿಂದ ನಾನು ಹಿಂದು ಮುಂದು ಎರಡೂ ಕಡೆಗಳಲ್ಲಿ ಭೋಈಯಾಗಿ ಹಾಗೂ ಯಾವ ವಿಘ್ನಗಳಿಲ್ಲದೇ ದಾರಿ ನಡೆಯುವೆನು ॥೫೭೭॥ ಈ ಪ್ರಕಾರವಾಗಿ ಹಿಂದು ಮುಂದು ನಾನೇ ಆಗಿ, ಸ್ವಾಮಿಯ ನಿದ್ರೆಯನ್ನು ಅಲ್ಪವೂ ಕೂಡ ಭಂಗಗೊಳಿಸಲಾರೆನು. ಹೀಗೆ ಸುಖಾಸನದಲ್ಲಿ ಅವರನ್ನು ಹೊತ್ತುಕೊಂಡು ಹೋಗುವೆನು ॥೫೭೮॥ ಎಂಜಲ ಅನ್ನದಿಂದ ರಕ್ಷಣೆಯಾಗಿರುವ, ಎಂಟೂ ಪ್ರಹರಗಳಲ್ಲಿ ಎಚ್ಚರವಾಗಿರುವ, ಗುರುಗಳ ಬಾಗಿಲಲ್ಲಿ ನಿಂತು ಯಾವಾಗಲೂ ಗುರುಗುರು ಮಾಡುತ್ತಿರುವ ಹೀಗೆ ಗುರುಗಳ ಬಾಗಿಲಿನ ನಾಯೀ ನಾನಾಗುವೆನು ॥೫೭೯॥ ಪರಕೀಯ ಮನುಷ್ಯನು ಕಣ್ಣಿಗೆ ಬೀಳಲು ಸೋಹಂ ಭಾವದಿಂದ ನಾನು ಬೊಗಳುವೆನು ಮತ್ತು ಭಜನರೂಪ ತೆಗ್ಗಿನಲ್ಲಿ ಸಿಸ್ತಾಗಿ ಕುಳಿತುಕೊಂಡು ಗುರುಗಳ ಬಾಗಿಲವನ್ನು ಕಾಯುವವನಾಗುವೆನು ॥೫೮೦॥ ಸದ್ಗುರುಗಳ ಸೇವೆಗಾಗಿ ಮನವು ಅತ್ಯಂತ ಅಪೇಕ್ಷೆ ಪಡುತ್ತಿರಲು ಶಿಷ್ಯನು ಮನದಲ್ಲಿ ನಾನಾ ಪ್ರಕಾರಗಳ ವಿಚಾರಗಳನ್ನು ಮಾಡುವನು, ಈ ಪ್ರಕಾರವಾಗಿ ಅನೇಕ ಕಲ್ಪನೆಗಳನ್ನು ಮಾಡುತ್ತಿರುವನು ॥೫೮೧॥ ದೈವಯೋಗದಿಂದ ಆತನು ದೂರ ಹೋದರೂ ಕೂಡ ಭಕ್ತಿಬಲದಿಂದ ಸಮೀಪವಾಗಿಯೇ ಇರುವನು. ಯಾರು ಗುರುಸೇವೆಗಾಗಿ ತನ್ನ ಜೀವವನ್ನು ಅರ್ಪಿಸಿರುವನೋ, ಆತನಿಗೆ ಸದ್‌ವಿದ್ಯಾ ಶಾಸ್ತ್ರವು ಸಹಜವಾಗಿಯೇ ದೊರೆಯುವುದು ॥೫೮೨॥ ಆತನು ಸದ್ಗುರುವಿನ ಹತ್ತಿರವಿರಲಿ ಅಥವಾ ಅತಿಶಯವಾಗಿ ದೂರವಿರಲಿ ಆತನಿಗೆ ಗುರುಭಕ್ತಿಯ ಅತ್ಯಂತ ಪ್ರೇಮವಿರುವುದರಿಂದ ಆತನು ತನ್ನ ಜೀವನವನ್ನು ಗುರುಸೇವೆಗಾಗಿ ಗುರುಗಳ ಬಾಗಿಲಲ್ಲಿ ಭಜನೆ ಮಾಡಲು ಹಚ್ಚಿರುವನು ॥೫೮೩॥ ಹೀಗೆ ಆತನು ಗುರುಭಕ್ತಿಯಲ್ಲಿ ಯಾವಾಗಲೂ ಸಾದರನಾಗಿರುವುದರಿಂದ ಹಾಗೂ ಬೆಳೆಯುತ್ತಿರುವ ಪ್ರೇಮದೊಂದಿಗೆ ಏಕಾಗ್ರತೆಯನ್ನು ಸಾಧಿಸಿದ್ದರಿಂದ ಆಗುವ ಗುರುಕೃಪೆಯಿಂದ ಸದ್ವಿದ್ಯಾ ಲಕ್ಷಣ ಶಸ್ತ್ರವು ಆತನ ಕೈಸೇರುವುದು ॥೫೮೪॥ ಈ ಶಸ್ತ್ರವನ್ನು ವೈರಾಗ್ಯದ ಸಾಣೆಯಲ್ಲಿ ಹಚ್ಚಿ ಸ್ವಸ್ವರೂಪ ವೃತ್ತಿಯಿಂದ ಸ್ವಚ್ಛಗೊಳಿಸಿ ಲಖಲಖೀತಗೊಳಿಸಲು ಅದಕ್ಕೆ ತೀಕ್ಷ್ಣವಾದ ಧಾರೆ ಪ್ರಾಪ್ತವಾಗುವುದು ॥೫೮೫॥

ಶಸ್ತ್ರ ಸಜಿಲೇ ನಿಜ ದೃಷ್ಟೀ । ದೃಢ ಧರಿಲೇ ಐಕ್ಯಾಚೇ ಮುಷ್ಟೀ । ಶಸ್ತ್ರ ಆಣಿ ಶಸ್ತ್ರಧರಾ ಏಕೀ ಗಾಂಠೀ । ಕರೂನಿ ಉಠೀ ಭವಚ್ಛೇದಾ ॥೫೮೬॥ ದೃಢ ಸಾಧೋನಿಯಾ ಆವೋ । ನಿಜಬಳೇ ಘಾಲಿತಾ ಘಾವೋ । ಝಾಲಾ ಭವವೃಕ್ಷಾ ಚಾ ಅಭಾವೋ । ಘಾಯೇವೀಣ ಪಹಾ ಹೋ ಛೇದಿಲಾ ॥೫೮೭॥ ಜೀವಾಶಯಾಚೀ ವಾಸನಾ । ತೇ ಛೇದಾವೀ ನಿಜಕಲ್ಪನಾ । ತೋಚಿ ಭವವೃಕ್ಷಾ ಚಾ ಛೇದೂ ಜಾಣಾ । ಸಾವಧಾನಾ ಧೃತಿಬಳೇ ॥೫೮೮॥ ಝಾಲಿಯಾ ಚೈತನ್ಯಪದಪ್ರಾಪ್ತೀ । ಸಕಳ ಸಾಧನೇ ಸಹಜೇ ಜಾತೀ । ಭೋಜನೀ ಝಾಲಿಯಾ ಪೂರ್ಣ ತೃಪ್ತೀ । ಠಾಯಿಂಚ ರಾಹತೀ ಪಕ್ವಾನ್ನೇ ॥೫೮೯॥ ಪರಮತೃಪ್ತೀ ಉಥಳಲ್ಯಾ ಪೋಟೀ । ಅಮೃತಹೀ ನ ಲಾವೀ ಓಠೀ । ತೇವೀ ಬ್ರಹ್ಮಪದ ಪಾವಲ್ಯಾಪಾಠೀ । ಸಾಧನ ಆಟಾಟೀ ಸಾಂಡಾವ್ಯಾ ॥೫೯೦॥ ಹಾಚಿ ಭಾವೋ ಧರೋನಿ ಚಿತ್ತೀ । ಮಾಗಾ ಸಾಂಗೀತಲೇ ತುಜಪ್ರತೀ । ಸಾಂಡೀ ಸಾಧನವ್ಯುತ್ಪತ್ತೀ । ಪ್ರವತ್ತಿ ನಿವೃತ್ತೀಸಮವೇತ ॥೫೯೧॥ ಪಾವಲಿಯಾ ಪರಬ್ರಹ್ಮ । ಮಿಥ್ಯಾ ವೇದೋಕ್ತ ಸಕಳ ಕರ್ಮ । ಮಿಥ್ಯಾ ಆಶ್ರಮಾದೀ ವರ್ಣಧರ್ಮ । ಹೇ ತ್ಯಾಗಿತೇ ವರ್ಮ ಕರ್ಮಾಚೇ ॥೫೯೨॥ ಸ್ವಪ್ನೀ ಚಾಲತಾ ಲವಡಸವಡೀ । ಜೋ ಅಡಖಳೂನಿ ಪಡಲಾ ಆಡೀ । ತೋ ಜಾಗಾ ಹೋಊನಿ ಆಪಣಾತೇ ಕಾಢೀ । ತೈಶೀ ವೃಥಾ ವೋಢೀ ಸಾಧನೀ ॥೫೯೩॥ ಪೀಕ ಆಲಿಯಾ ಘುಮರೀ । ತೇ ಶೇತೀ ಕೋಣ ನಾಂಗರ ಧರೀ । ಗಜಾಂತಲಕ್ಷ್ಮೀ ಆಲಿಯಾ ಘರೀ । ಭೀಕ ದಾರೋದಾರೀ ಕೋಣ ಮಾಗೇ ॥೫೯೪॥ ಹಾತೀ ಲಾಗಲಿಯಾ ನಿಧಾನ । ನಯನೀ ಕೋಣ ಘಾಲೀ ಅಂಜನ । ಸಾಧಲಿಯಾ ನಿಜಾತ್ಮಜ್ಞಾನ । ವೃಥಾ ಸಾಧನ ಕೋಣ ಸೋಶೀ ॥೫೯೫॥ ಅಂಗೀಕಾರೋನಿ ಜ್ಞಾನಶಕ್ತೀ । ಕೇಲೀ ಸಂಸಾರನಿವೃತ್ತೀ । ತೇಹೇ ತ್ಯಾಗಾವೀ ನಿಜವೃತ್ತೀ । ಜಾಣ ನಿಶ್ಚಿತೀ ಉದ್ಧವಾ ॥೫೯೬॥ ಅಗ್ನಿಸ್ತವ ನಿಪಜೇ ಅನ್ನ । ತೇ ವಾಫ ನ ಜಿರತಾ ಪರಮಾನ್ನ । ಪೋಳೀ ಅವಶೇಷ ತಾಪಲೇಪಣ । ರಾಂಧಿತೇಹೀ ಜಾಣ ಚವೀ ನೇಣೇ ॥೫೯೭॥ ಆಂಬಯಾ ಪಾಡು ಲಾಗಲಾ ಜಾಣ । ತರೀ ಅಂಗೀ ಅಸೇ ಆಮ್ಲಪಣ । ಸೇಜೇಸಿ ಮುರಾಲಿಯಾ ಮುಘಮುಘೋನ । ನ ಚಾಖತಾ ಪ್ರಾಣ ಚವೀ ಸಾಂಗೇ ॥೫೯೮॥ ಸೇಜೇ ಮುರಾವಯಾಚೀ ಗೋಠೀ । ತೇಥ ನ ವ್ಹಾವೀ ದ್ವೈತಾಚೀ ದಿಠೀ । ಯೇರಯೇರಾ ಜಾಹಲಿಯಾ ಭೇಟೀ । ದೋನೀ ಶೇವಟೀ ಠಿಕಾಳತೀ ॥೫೯೯॥

ತನ್ನ ನಿಜದೃಷ್ಟಿಯಿಂದ ಶಸ್ತ್ರವನ್ನು ತಯಾರಿಸಿ ಅದನ್ನು ಐಕ್ಯವೆಂಬ ಮುಷ್ಠಿಯಲ್ಲಿ ಬಿಗಿಯಾಗಿ ಹಿಡಿಯಲು ಶಸ್ತ್ರ ಮತ್ತು ಶಸ್ತ್ರವನ್ನು ಹಿಡಿದವನು ತಾದಾತ್ಮ್ಯವಾಗುವುದು. ಆಗ ಆತನು ಸಂಸಾರದ ಮೇಲೆ ಹೊಡೆತ ಹಾಕಲು ಸಿದ್ಧನಾಗುವನು ॥೫೮೬॥ ವ್ಯವಸ್ಥಿತವಾಗಿ ಗುರಿಯನ್ನು ಸಾಧಿಸಿ ಬಹಳ ಜೋರಿನಿಂದ ಹೊಡೆತ ಹಾಕಲು ಸಿದ್ಧನಾಗುತ್ತಲೇ, ಸಂಸಾರ ವೃಕ್ಷದ ನಾಶವಾಗಿಬಿಡುವುದು ಮತ್ತು ಪ್ರತ್ಯಕ್ಷವಾಗಿ ಹೊಡೆತವನ್ನು ಹಾಕದೇ ಅದು ಮುರಿದು ಬೀಳುವುದು ॥೫೮೭॥ ಲಿಂಗದೇಹದ ವಾಸನೆಯಾಗಿರುವ ಯಾವ ತನ್ನ ಕಲ್ಪನೆಗಳನ್ನು ಕತ್ತರಿಸಿ ಒಗೆಯಬೇಕು. ಹಾಗೂ ಧೈರ್ಯದಿಂದ ಯಾವಾಗಲೂ ಸಾವಧನಾಗಿರಬೇಕು. ಇದುವೇ ಸಂಸಾರರೂಪ ವೃಕ್ಷದ ಛೇದನೆ ಮಾಡುವ ಮಾರ್ಗವಾಗಿರುವುದು ॥೫೮೮॥ ಆತ್ಮಸಾಕ್ಷಾತ್ಕಾರವಾದ ಮೇಲೆ ಸರ್ವ ಸಾಧನೆಗಳು ತಮ್ಮಷ್ಟಕ್ಕೆ ತಾವೇ ಇಲ್ಲದಾಗುವುವು. ಭೋಜನದಿಂದ ಪರಿಪೂರ್ಣವಾಗಿ ತೃಪ್ತಿಯಾಗಲು, ಉಳಿದ ಪಕ್ವಾನ್ನಗಳು ತಮ್ಮ ಸ್ಥಳದಲ್ಲಿಯೇ ಇರುವುವು ॥೫೮೯॥ ಒಂದು ಸಾರೆ ಹೊಟ್ಟೆ ತುಂಬ ತೃಪ್ತಿಯಾಯಿತೆಂದರೆ, ಅಮೃತವನ್ನೂ ಕೂಡ ಯಾರೂ ತುಟಿಗೆ ಹಚ್ಚುವುದಿಲ್ಲ. ಅದರಂತೆ ಆತ್ಮಸಾಕ್ಷಾತ್ಕಾರವಾಯಿತೆಂದರೆ ಸಾಧನೆಗಳ ಕಾರ್ಯಗಳು ಸಹಜವಾಗಿ ಮುರಿದುಬೀಳುವುವು ॥೫೯೦॥ ಈ ಭಾವಾರ್ಥವನ್ನೇ ಮನದಲ್ಲಿ ಹಿಡಿದು ನಾನು ನಿನಗೆ ಈ ಪೂರ್ವದಲ್ಲಿ ಪ್ರವೃತ್ತಿ ಮತ್ತು ನಿವೃತ್ತಿ ಸಹ ಸರ್ವ ಸಾಧನೆಗಳನ್ನು ಬಿಟ್ಟುಬಿಡಲು ಹೇಳಿದ್ದೆನು ॥೫೯೧॥ ಒಮ್ಮೆ ಪರಬ್ರಹ್ಮದ ಪ್ರಾಪ್ತಿಯಾಯಿತೆಂದರೆ ಎಲ್ಲ ವೇದೋಕ್ತ ಕರ್ಮಗಳು ಹಾಗೂ ಆಶ್ರಮಾದಿ ವರ್ಣಗಳ ಧರ್ಮಗಳು ವ್ಯರ್ಥವಾಗಿಬಿಡುವುವು. ಇದುವೇ ಕರ್ಮಯೋಗದ ರಹಸ್ಯವಾಗಿರುವುದು ॥೫೯೨॥ ಸ್ವಪ್ನದಲ್ಲಿ ಯಾರೋ ಒಬ್ಬಾತನು ಗಡಿಬಿಡಿಯಿಂದ ನಡೆಯುತ್ತಿರಲು ಕಾಲುಗಳು ತೊಡರಾಗಿ ಆತನು ಬಾವಿಯಲ್ಲಿ ಬಿದ್ದಾಗ, ಎಚ್ಚರಾದ ಮೇಲೆ ತನ್ನನ್ನು ಮೇಲಕ್ಕೆತ್ತಿರಿ ಎಂದು ಹೇಳುವಂತೆ ಸಾಧನೆಗಳ ಜಗ್ಗಾಟವು ವ್ಯರ್ಥವಾಗುವುದು ॥೫೯೩॥ ಹೊಲದಲ್ಲಿ ಎಲ್ಲ ಬೆಳೆಯು ಬೆಳೆದು ನಿಲ್ಲಲು ಆಗ ಅದರಲ್ಲಿ ಯಾರು ನೇಗಿಲವನ್ನು ಹೊಡೆಯುವರು? ಗಜಾಂತ ಲಕ್ಷ್ಮಿಯು ಮನೆಯಲ್ಲಿ ಆಗಮಿಸಲು ಆಗ ಮನೆಮನೆಗೆ ಭಿಕ್ಷೆ ಬೇಡುತ್ತ ಯಾರು ತಿರುಗುವರು? ॥೫೯೪॥ ಅಮೌಲ್ಯ ನಿಧಿಯು ಕೈಗೆ ಸೇರಲು ಆಗ ಕಣ್ಣುಗಳಿಗೆ ಅಂಜನವನ್ನು ಯಾರು ಹಚ್ಚುವರು? ಅದರಂತೆ ಆತ್ಮಜ್ಞಾನವು ಪ್ರಾಪ್ತವಾಯಿತೆಂದರೆ ಯಾವತ್ತೂ ಸಾಧನೆಗಳನ್ನು ಯಾರು ಮಾಡುತ್ತ ಕುಳಿತುಕೊಳ್ಳುವರು? ॥೫೯೫॥ ಹೇ ಉದ್ಧವನೇ, ಜ್ಞಾನಶಕ್ತಿಯನ್ನು ಪ್ರಾಪ್ತಮಾಡಿಕೊಂಡು ಒಂದು ಸಲ ಸಂಸಾರದ ನಿವೃತ್ತಿಯಾಗಲು ಆಗ ಆ ಜ್ಞಾನಶಕ್ತಿಯನ್ನೂ ಕೂಡ ನಿಶ್ಚಯಪೂರ್ವಕವಾಗಿ ತ್ಯಜಿಸಬೇಕು ॥೫೯೬॥ ಅಗ್ನಿಯ ಸಹಾಯದಿಂದ ಅನ್ನವು ತಯಾರಾಗುವುದು. ಆದರೆ ಅದರ ಉಗಿಯು ಜೀರ್ಣವಾಗದೇ ಅದು ಪರಮಾನ್ನವಾಗಲಾರದು. ಚಪಾತಿಯು ಪೂರ್ಣವಾಗಿ ಬೇಯಿಸದೇ ಅದು ರುಚಿಯಾಗಲಾರದು ॥೫೯೭॥ ಮಾವು ಪಕ್ವದಶೆಗೆ ಬಂದರೂ ಕೂಡ ಅದರಲ್ಲಿ ಹುಳಿ ಅಂಶವು ಇರುವುದು. ಆದರೆ ಅದೇ ಮಾವನ್ನು ಹುಲ್ಲಿನಲ್ಲಿ ರಾಶಿ ಮಾಡಿ ಪಕ್ವಗೊಳಿಸಲು ಅದನ್ನು ಸೇವಿಸುವ ಮೊದಲೇ ಅದರ ರುಚಿಯು ಘಮಾಸುತ್ತಿರುವುದು ॥೫೯೮॥ ಮಾವುಗಳು ಒಟ್ಟಿಲನಲ್ಲಿ ಪಕ್ವಗೊಳ್ಳಬೇಕಾದರೂ ಅದಕ್ಕೆ ಒಂದು ಪ್ರಕಾರದ ಕೌಶಲ್ಯವು ಇರಬೇಕಾಗುವುದು. ಇವು ಒಂದಕ್ಕೊಂದು ಅಂಟಿಕೊಳ್ಳಬಾರದು. ಕಾರಣ ಇದರಿಂದ ಅವು ಎರಡೂ ಕೆಡುವುವು ॥೫೯೯॥

ಠಿಕಾಳಲೀ ಸೇಜೇ ಘಾಲಿತೀ । ತತ್ಸಂಗೇ ಆಣಿಕೇ ನಾಸತೀ । ನಿಶ್ಚಳ ರಾಹಿಲ್ಯಾ ಏಕಾಂತೀ । ಪರಿಪಾಕಪೂರ್ತೀ ಘ್ರಾಣ ಸಾಂಗೇ ॥೬೦೦॥ ಶತ್ರು ಜಿಣೋನಿಯಾ ಕಡಾಡೀ । ರಣಾಂಗಣೀ ಉಭವಿತಾ ಗುಢೀ । ಶಸ್ತ್ರೇಸೀ ಕವಚ ಜಂವ ನ ಫೇಡೀ । ತಂವ ವಿಶ್ರಾಂತಿ ಗಾಢೀ ನ ಪವಿಜೇ ॥೬೦೧॥ ಗರೋದರೇಸೀ ಪ್ರಸೂತಿ ಹೋಯೇ । ಪುತ್ರಜನ್ಮೇ ಸುಖಾವಲೀ ಠಾಯೇ । ತೇಹೀ ಬಾರಾವಳೀ ಜೈಪಾಹೇ । ತೈ ಭೋಗೂ ಲಾಹೇ ಪುತ್ರಸುಖ ॥೬೦೨॥ ಪುರುಷ ನಿಮೋನಿಯಾ ಜಾಯೇ । ತ್ಯಾ ದೇಹಾಚೇ ದಹನ ಹೋಯೇ । ತರೀ ಅವಶೇಷ ಸುತಕ ರಾಹೇ । ತೇ ಗೇಲಿಯಾ ಹೋಯೇ ನಿಜಶುದ್ಧೀ ॥೬೦೩॥ ತೇವೀ ಜಾವೋನಿಯಾ ಅಜ್ಞಾನ । ಉರಲಾ ಜೋ ಜ್ಞಾನಾಭಿಮಾನ । ತೋಹೀ ತ್ಯಾಗಿಲಿಯಾ ಜಾಣ । ಚಿತ್ಸಮಾಧಾನ ಸ್ವಾನಂದೇ ॥೬೦೪॥ ಖೈರಾಚಾ ಶೂಳ ತತ್ತ್ವತಾ ಮಾರೀ । ಮಾ ಚಂದನಾಚಾ ಕಾಯ ಆನ ಕರೀ । ತೇವೀ ಅಭಿಮಾನ ದೋಹೀಪರೀ । ಬಾಧಕತಾ ಧರೀ ಜ್ಞಾನಾಜ್ಞಾನೇ ॥೬೦೫॥ ಲೋಖಂಡಾಚಿ ಬೇಡೀ ತೋಡೀ । ಮಾ ಆವಡೀ ಸೋನಿಯಾಚೀ ಜಡೀ । ಚಾಲತಾ ತೇಹೀ ತೈಶೀಚ ಆಡೀ । ಭಾಧಾ ರೋಕಡೀ ಜೈಸೀ ತೈಶೀ ॥೬೦೬॥ "ಬ್ರಹ್ಮಾಹ್ಮಸ್ಮಿ" ಹಾ ಅಭಿಮಾನ । ಶುದ್ಧ ಬ್ರಹ್ಮ ನವ್ಹೇ ಜಾಣ । ಅಹಂಪಣೇ ತೇಹೀ ಕಠೀಣ । ತೇಹೀ ಲಕ್ಷಣ ಅವಧಾರೀ ॥೬೦೭॥ ಜಳಾಪಾಸೋನಿ ಲವಣ ಹೋಯೇ । ತೇ ಜಳೀಚೇ ಜಳೀ ವಿರೋನಿ ಜಾಯೇ । ಮೋತೀ ಝಾಲೇ ತೇ ಕಠಿಣ ಪಾಹೇ । ಊದಕೀ ನ ಜಾಯೇ ವಿರೋನೀ ॥೬೦೮॥ ಮುಕ್ತಪಣೇ ಮೋಲಾ ಚಢಲೇ । ತೇ ವನಿತಾ ಅಧರೀ ಫಾಂಸಾ ಪಡಿಲೇ । ಮುಕ್ತಚೀ ಪರೀ ನಾಸಾ ಆಲೇ । ಕಠಿಣ ಕೇಲೇ ಅಭಿಮಾನೇ ॥೬೦೯॥ ತೇವೀ ಅಜ್ಞಾನ ಅಭಿಮಾನ ಆಹೇ । ತೋ ಸರ್ವಥಾ ತತ್ಕಾಳ ಜಾಯೇ । ಜ್ಞಾನಾಭಿಮಾನ ಕಠಿಣ ಪಾಹೇ । ಗೋವಿತಾಹೇ ಮುಕ್ತತ್ವೇ ॥೬೧೦॥ ಅಪಕ್ವ ಘಟೂ ತತ್ಕಾಳ ಗಳೇ । ತೋ ಪೃಥ್ವೀಚಾ ಪೃಥ್ವೀಸ ಮಿಳೇ । ಭಾಜಿಲೇ ಖಾಪರ ಅತಿ ಕಾಳೇ । ಪೃಥ್ವೀಸ ನ ಮಿಳೇ ಕಠಿಣತ್ವೇ ॥೬೧೧॥ ಪ್ರಪಂಚ ಅಜ್ಞಾನೇ ಝಾಲಾ ಲಾಠಾ । ಜ್ಞಾನಅಜ್ಞಾನಾಂಚಾ ಸತ್ವವಾಂಟಾ । ಫೇಡೂನಿ ಕಾಂಟೇನ ಕಾಂಟಾ । ದೋನೀ ಆವ್ಹಾಂಟಾ ಸಾಂಡಾವೇ ॥೬೧೨॥

ಕೊಳೆತ ಮಾವುಗಳನ್ನು ಪುಟ್ಟಿಯಲ್ಲಿ ಹಾಕಲು ಇವುಗಳ ಸಂಸರ್ಗದಿಂದ ಇತರ ಮಾವುಗಳೂ ಕೂಡ ಕೆಡುವುವು. ಅದಕ್ಕಾಗಿ ಅವುಗಳನ್ನು ನಿಚ್ಚಳವಾಗಿ ಬೇರೆ ಬೇರೆಯಾಗಿ ಇಡಲು ಅವುಗಳ ಪಕ್ವತನದ ಚಿನ್ಹೆಯಾದ ಅವುಗಳ ಸುವಾಸನೆಯನ್ನು ನಮ್ಮ ಮೂಗು ಸಹಜವಾಗಿಯೇ ತಿಳಿಯುವುದು ॥೬೦೦॥ ಬಹಳ ಸಾಹಸದಿಂದ ಶತ್ರುಗಳ ಮೇಲೆ ವಿಜಯವನ್ನು ಗಳಿಸಿ ರಣರಂಗದ ಮೇಲೆ ವಿಜಯಧ್ವಜವನ್ನು ಏರಿಸಿದರೂ ಕೂಡ ತಮ್ಮ ಮೈಮೇಲಿನ ಶಸ್ತ್ರ ಕವಚಗಳನ್ನು ತಗೆಯದ ಹೊರತು ನಿಜವಾದ ವಿಶ್ರಾಂತಿಯು ದೊರೆಯದು ॥೬೦೧॥ ಗರ್ಭಿಣೀ ಸ್ತ್ರೀಯು ಪ್ರಸೂತಳಾಗಿ ಪುತ್ರಜನ್ಮದಿಂದ ಆನಂದಿತಳಾಗಿದ್ದರೂ ಕೂಡ ಅದರ ತೊಟ್ಟಿಲು ಸಮಾರಂಭವನ್ನು ಕಾಣುವವರೆಗೂ ಆಕೆಗೆ ನಿಜವಾದ ಪುತ್ರಸುಖವು ದೊರೆಯಲಾರದು ॥೬೦೨॥ ಒಬ್ಬ ಮನುಷ್ಯನು ಸತ್ತು ಹೋಗಲು ಆಗ ಆ ದೇಹದ ದಹನವಾಗುವುದು. ಆದರೂ ಕೂಡ ಆ ದೇಹದ ಸೂತಕವು ಉಳಿಯುವುದು. ಸೂತಕವು ಮುಗಿದಾಗಲೇ ನಮ್ಮ ಶುದ್ಧಿಯಾಗುವುದು ॥೬೦೩॥ ಅದರಂತೆ ಅಜ್ಞಾನವು ನಷ್ಟವಾಗಿ ಯಾವ ಜ್ಞಾನದ ಅಭಿಮಾನವು ಉಳಿದುಕೊಳ್ಳುವುದು. ಅದರ ತ್ಯಾಗದ ಅವಶ್ಯಕತೆ ಇರುವುದು. ಆಗ ಮಾತ್ರ ಆತ್ಮಸುಖದ ಸ್ವಾನಂದವು ಲಭಿಸುವುದು ॥೬೦೪॥ ಜಾಲಿಗಿಡದ ಕಾಷ್ಠದಿಂದ ಶೂಲವನ್ನು ತಯಾರಿಸಿದರೆ ಮಾತ್ರ ಅದು ಜೀವವನ್ನು ತೆಗೆದುಕೊಳ್ಳುವುದು ಮತ್ತು ಚಂದನ ಕಾಷ್ಠದಿಂದ ತಯಾರಿಸಿದರೂ ಕೂಡ ಅದು ಜೀವವನ್ನು ತೆಗೆದುಕೊಳ್ಳದೇ ಏಕೆ ಇರುವುದು? ಅದರಂತೆ ಜ್ಞಾನ ಮತ್ತು ಅಜ್ಞಾನ ಈ ಎರಡರ ಅಭಿಮಾನವು ಒಂದೇ ತರಹದ ಬಾಧಕವಾಗಿರುವುದು ॥೬೦೫॥ ಕಬ್ಬಿಣದ ಬೇಡಿಯನ್ನು ಮುರಿದು ಹಾಕಿ ತದನಂತರ ಬಹಳ ಹುಮ್ಮಸ್ಸಿನಿಂದ ಬಂಗಾರದ ಬೇಡಿಯನ್ನು ಹಾಕಿದರೂ ಕೂಡ ಮೊದಲಿನಂತೆಯೇ ಅಡಚಣೆಯಾಗುವುದು. ಈ ಎರಡರ ಕ್ಲೇಶವು ಸಮಾನವಾಗಿರುವುದು ॥೬೦೬॥ "ನಾನೇ ಬ್ರಹ್ಮನು" ಎಂಬ ಈ ಅಭಿಮಾನವು ಯಾವ ಶುದ್ಧವಾದ ಬ್ರಹ್ಮವಲ್ಲ. ಇದನ್ನು ಲಕ್ಷದಲ್ಲಿಡು. ಅಹಂಕಾರದಿಂದ ಅದೂ ಕೂಡ ಕಠಿಣವಾಗಿಯೇ ಇರುವುದು. ಅದರ ಲಕ್ಷಣಗಳನ್ನು ಈಗ ಕೇಳು ॥೬೦೭॥ ಲವಣವು ನೀರಿನಿಂದಲೇ ಹುಟ್ಟಿಕೊಳ್ಳುವುದು. ಅದನ್ನು ನೀರಿನಲ್ಲಿ ಹಾಕಲು ಕರಗಿಹೋಗುವುದು. ಆದರೆ ಮುತ್ತು ಮಾತ್ರ ನೀರಿನಲ್ಲಿ ಹುಟ್ಟಿಕೊಂಡಿದ್ದರೂ ಕೂಡ ಅದರ ಕಠಿಣತನವು ನೀರಿನಲ್ಲಿ ಕರಗುವುದಿಲ್ಲ ॥೬೦೮॥ ಅದು ಮುತ್ತಾಗಿರುವುದರಿಂದ ಬೆಲೆಬಾಳುವ ವಸ್ತುವಾಗಿದ್ದರೂ ಕೂಡ ಸ್ತ್ರೀಯಳ ತುಟಿ ಸಮೀಪ ಬಂಗಾರದ ಎಳೆಯಲ್ಲಿ ನತ್ತಾಗಿ ಸಿಕ್ಕಿಹಾಕಿಕೊಂಡು ಜೋತಾಡುತ್ತಿರುವುದು. ಅದು ಮುಕ್ತವಾಗಿದ್ದರೂ ಮೂಗಿನತ್ತ ಬರಬೇಕಾಯಿತು. ಅಭಿಮಾನವೆಂಬುವುದು ಇಷ್ಟೊಂದು ಕಠಿಣತನದ ಪ್ರಸಂಗವನ್ನು ತಂದೊಡ್ಡಿತು ॥೬೦೯॥ ಅದರಂತೆ ಅಜ್ಞಾನದಿಂದ ನಿರ್ಮಾಣಗೊಂಡ ಅಭಿಮಾನವು ಬಹುಬೇಗ ಇಲ್ಲದಾಗುವುದು. ಆದರೆ ಜ್ಞಾನದ ಅಭಿಮಾನವು ಮಾತ್ರ ಬಹಳ ಕಠಿಣವಾಗಿರುವುದು. ಅದು ಮುಕ್ತತನದಿಂದ ಇದ್ದರೂ ಕೂಡ ಸಿಕ್ಕಿಹಾಕಿಕೊಳ್ಳುವುದು ॥೬೧೦॥ ಮಣ್ಣಿನ ಕೊಡವು ಹಸಿಯಾಗಿದ್ದರೆ ಅದು ತತ್ಕಾಲದಲ್ಲಿ ಸೋರುವುದು ಹಾಗೂ ಆ ಕೊಡವು ಒಡೆಯುತ್ತಲೇ ಕೂಡಲೇ ಮಣ್ಣಿನಲ್ಲಿ ಕೂಡಿಬಿಡುವುದು. ಆದರೆ ಸರಿಯಾಗಿ ಸುಟ್ಟ ಮಣ್ಣಿನ ಪಾತ್ರೆಯು ಕಪ್ಪು ಬಣ್ಣವಾಗಿ ಅದು ಒಡೆದರೂ ತನ್ನ ಕಠಿಣತ್ವದಿಂದ ಮಣ್ಣಿನಲ್ಲಿ ಕೂಡಿಕೊಳ್ಳುವುದಿಲ್ಲ ॥೬೧೧॥ ಅದರಂತೆ ಪ್ರಪಂಚವು ಕೇವಲ ಅಜ್ಞಾನದಿಂದ ಬೆಳೆದಿರುವುದು. ಅದಕ್ಕಾಗಿ ಜ್ಞಾನ ಮತ್ತು ಅಜ್ಞಾನ ಇವುಗಳ ಅಭಿಮಾನವನ್ನು ಬಿಟ್ಟು ಮುಳ್ಳಿನಿಂದ ಮುಳ್ಳು ತೆಗೆಯುವಂತೆ ಈ ಎರಡನ್ನೂ ದಾರಿಬಿಟ್ಟು ದೂರ ಒಗೆಯಬೇಕು ॥೬೧೨॥

ಜರೀ ಸಾಂಡಿಲೇ ವಾಟೇವರೀ । ತರೀ ಅವಚಟೇ ಆಪಣಾಸೀಚಿ ಬಾಧು ಕರೀ । ಯಾಲಾಗೀ ಸಾಂಡಾವೇ ದೂರೀ । ನಿಜನಿರ್ಧಾರೀ ಹಾ ತ್ಯಾಗೂ ॥೬೧೩॥ ಜೇಥವರ ಅಹಂಪಣ । ತಿತುಕೇಹೀ ಬಾಧಕ ಜಾಣ । ಶುದ್ಧಾಶುದ್ಧ ಅಭಿಮಾನ । ನಿಃಶೇಷ ಸಜ್ಞಾನ ಸಾಂಡಿತೀ ॥೬೧೪॥ ಉದ್ಧವಾ ತುಜ ಕರಿತಾ ಮಾಝೀ ಭಕ್ತೀ । ಝಾಲೀ ಮಾಝ್ಯಾ ನಿಜಪದಾಚೀ ಪ್ರಾಪ್ತೀ । ಆತಾ ನಾನಾ ಸಾಧನ ಉಪಪತ್ತೀ । ಶಾಸ್ತ್ರವ್ಯುತ್ಪತ್ತೀ ಕಾ ಕರಿಸೀ ॥೬೧೫॥ ಸದ್ಭಾವೇ ಕರಿತಾ ಮಾಝೇ ಭಜನ । ತೂ ಝಾಲಾಸೀ ಬ್ರಹ್ಮ ಸಂಪನ್ನ । ಆತಾ ಸದ್ವಿದ್ಯಾದಿ ಸರ್ವ ಸಾಧನ । ಶಾಸ್ತ್ರಶ್ರವಣೇಸೀ ಸಾಂಡೀ ಪಾ ॥೬೧೬॥ ''ತಸ್ಮಾದುದ್ಧವ ಉತ್ಸೃಜ್ಯ'' । ಯೇ ಶ್ಲೋಕೀಚೇ ಹೇ ತ್ಯಾಗಬೀಜ । ವಿಶದ ಸಾಂಗೀತಲೇ ಮ್ಯಾ ತುಜ । ನಿಜಗುಜ ಹೃದಯಸ್ಥ ॥೬೧೭॥ ಸಕಳಾ ಸಾಧನಾ ಶ್ರೇಷ್ಠ ಸಾಧನ । ಶಿಷ್ಯಾಸೀ ಸದ್‌ಗುರೂಚೇ ಭಜನ । ತೇಣೇ ಪಾವಿಜೇ ಬ್ರಹ್ಮಸಮಾಧಾನ । ಸತ್ಯ ಜಾಣ ಉದ್ಧವಾ ॥೬೧೮॥ ಜೋ ಭಾವೇ ಭಜೇ ಗುರುಚರಣೀ । ತೋ ನಾಂದೇ ಸಚ್ಚಿದಾನಂದಭುವನೀ । ಹೇ ಸತ್ಯ ಸತ್ಯ ಮಾಝೀ ವಾಣೀ । ವಿಕಲ್ಪ ಕೋಣೀ ನ ಧರಾವಾ ॥೬೧೯॥ ಐಸೇ ಬೋಲೋನಿ ಶ್ರೀಹರೀ । ಆವಡೀ ಚಾರೀ ಬಾಹ್ಯಾ ಪಸರೀ । ಉದ್ಧವಾತೇ ಪ್ರೀತಿಕರೀ । ಹೃದಯೀ ಧರೀ ಸ್ವಾನಂದೇ ॥೬೨೦॥ ದೇವೇ ಸದ್ಭಕ್ತಾ ಕ್ಷೇಮ ದೀಧಲೇ । ನಿಜಹೃದಯೀ ಹೃದಯ ಏಕ ಝಾಲೇ । ಸಾಂಗಣೇ ಪುಸಣೇ ಸಹಜ ಠೇಲೇ । ಬೋಲಣೇ ಬೋಲೇ ಪ್ರಾಶಿಲೇ ॥೬೨೧॥ ಚಹು ವಾಚಾ ಪಡಲೇ ಮೌನ । ಜೀವೂ ವಿಸರಲಾ ಜೀವಪಣ। ಏಕಾ ತುಷ್ಟಲಾ ಜನಾರ್ದನ । ಸ್ವಾನಂದಘನ ಸದ್ಭಕ್ತಾ ॥೬೨೨॥ ತೇಚಿ ಸದ್ಭಕ್ತೀಚಾ ಭಾವಾರ್ಥ । ವಿಶದ ಬೋಲಿಲಾ ಬಾರಾವ್ಯಾಂತ । ನಿಜಭಾವೇ ಶ್ರೀಕೃಷ್ಣನಾಥ। ನಿತ್ಯ ಪ್ರಾಪ್ತ ಭಾವಿಕಾ ॥೬೨೩॥ ನಿಜಾತ್ಮಪ್ರಾಪ್ತೀಚೇ ಕಾರಣ । ಕೇವಳ ಭಾವಾರ್ಥಚಿ ಜಾಣ । ಭಾವಾರ್ಥಾವೇಗಳೇ ಸಾಧನ । ವೃಥಾ ಜಾಣ ಪರಿಶ್ರಮೂ ॥೬೨೪॥ ಜಪ ತಪ ಯಜ್ಞ ದಾನೇ । ಭಾವಾರ್ಥಾಲಾಗೀ ಕರಣೇ । ತೋ ಭಾವಾರ್ಥ ಲಾಹಿಜೇ ಜೇಣೇ । ಧನ್ಯ ಜಿಣೇ ತಯಾಚೇ ॥೬೨೫॥ ಧನ್ಯ ನರದೇಹಾಚೀ ಪ್ರಾಪ್ತೀ । ಧನ್ಯ ಸಾಧೂಚೀ ಸಂಗತೀ । ಧನ್ಯ ಧನ್ಯ ತೇ ಭಾವಾರ್ಥೀ । ಜೇ ಭಗವದ್ಭಕ್ತೀ ರಂಗಲೇ ॥೬೨೬॥

ಕಾರಣ ಜ್ಞಾನ ಮತ್ತು ಅಜ್ಞಾನ ಈ ಎರಡನ್ನು ದಾರಿಯಲ್ಲಿ ಒಗೆದರೆ ಒಂದು ವೇಳೆ ಅವು ನಮಗೇನೇ ಬಾಧಕವಾಗುವುವು. ಆದ್ದರಿಂದ ಅವುಗಳನ್ನು ಬಹುದೂರ ಒಗೆದುಬಿಡಬೇಕು. ಇದುವೇ ನಿಜವಾದ ತ್ಯಾಗವಾಗಿರುವುದು ॥೬೧೩॥ ಎಲ್ಲಿಯವರೆಗೆ ಅಹಂಕಾರವಿರುವುದೋ, ಅಲ್ಲಿಯವರೆಗೆ ಬದ್ಧತೆವಿರುವುದು. ''ನಾನು ದೇಹಿ'' ಎಂಬ ಅಶುದ್ಧ ಅಭಿಮಾನವು ಮತ್ತು ''ನಾನು ಬ್ರಹ್ಮನು'' ಎಂಬ ಶುದ್ಧ ಅಭಿಮಾನವು ಈ ಎರಡೂ ಅಭಿಮಾನಗಳು ಬಾಧಕವಾಗಿರುವುವು. ಆತ್ಮ ಜ್ಞಾನಿಗಳು ಈ ಎರಡೂ ಅಭಿಮಾನಗಳನ್ನು ತ್ಯಜಿಸುವರು ॥೬೧೪॥ ಹೇ ಉದ್ಧವನೇ, ನಿನಗೆ ನನ್ನ ಪದವಿಯು ಪ್ರಾಪ್ತವಾಗಿರುವುದು. ಅದಕ್ಕಾಗಿ ನೀನು ಅನೇಕ ಸಾಧನೆಗಳ ಸಾಯಾಸವನ್ನು ಮತ್ತು ಶಾಸ್ತ್ರಗಳ ವಾದವಿವಾದಗಳನ್ನು ಏತಕ್ಕಾಗಿ ಮಾಡುವೆ? ॥೬೧೫॥ ಸದ್‌ಭಕ್ತಿಯಿಂದ ನನ್ನ ಭಜನೆಯನ್ನು ಮಾಡಿ ನೀನು ಪರಬ್ರಹ್ಮಸ್ವರೂಪನಾಗಿರುವೆ. ಆದ್ದರಿಂದ ಈಗ ಸದ್‌ವಿದ್ಯಾದಿ ಸರ್ವ ಸಾಧನೆಗಳನ್ನು ಶಾಸ್ತ್ರಶ್ರವಣ ಸಮೇತವಾಗಿ ಬಿಟ್ಟುಕೊಡು ॥೬೧೬॥ ತಸ್ಮಾದುದ್ಧವ ಈ ಶ್ಲೋಕದಲ್ಲಿನ ತ್ಯಾಗದ ಬೀಜವಾಗಿರುವ ನನ್ನ ಅಂತಃಕರಣದಲ್ಲಿನ ಗುಹ್ಯ ತತ್ವವನ್ನು ನಾನು ನಿನಗೆ ಸ್ಪಷ್ಟಮಾಡಿ ತಿಳಿಸಿದೆನು ॥೬೧೭॥ ಶಿಷ್ಯನಿಗೆ ಗುರುಗಳ ಭಜನೆಯೇ ಸರ್ವ ಸಾಧನೆಗಳಲ್ಲಿನ ಶ್ರೇಷ್ಠ ಸಾಧನೆಯಾಗಿರುವುದು. ಉದ್ಧವನೇ, ಇದರಿಂದಲೇ ನಿಜವಾಗಿಯೂ ಬ್ರಹ್ಮ ಸಮಾಧಾನವಾಗುವುದು. ಇದು ಸತ್ಯವಾದ ಮಾತಾಗಿದೆ. ಇದನ್ನು ನೀನು ತಿಳಿದುಕೋ ॥೬೧೮॥ ಯಾರು ಭಕ್ತಿಭಾವದಿಂದ ಶ್ರೀಗುರು ಚರಣಗಳ ಭಜನೆಯನ್ನು ಮಾಡುವನೋ, ಆತನು ಸಚ್ಚಿದಾನಂದ ಭವನದಲ್ಲಿರುವನು. ಈ ನನ್ನ ವಚನವು ಸತ್ಯ ಸತ್ಯವೆಂದು ತಿಳಿ. ಇದಕ್ಕಾಗಿ ಯಾರೂ ಸಂಶಯವನ್ನು ಹಿಡಿಯಬಾರದು ॥೬೧೯॥ ಶ್ರೀಹರಿಯು ಹೀಗೆ ಹೇಳುತ್ತ ತನ್ನ ನಾಲ್ಕೂ ಬಾಹುಗಳನ್ನು ಪಸರಿಸಿ, ತನ್ನ ಪ್ರೇಮಗಳ ಕೈಗಳಿಂದ ಅತ್ಯಂತ ಆನಂದದಿಂದ ಉದ್ಧವನಿಗೆ ಹೃದಯಕ್ಕೆ ಅಪ್ಪಿಕೊಂಡನು ॥೬೨೦॥ ದೇವನು ಸದ್ಭಕ್ತನಿಗೆ ಆಲಿಂಗನವನ್ನು ಕೊಡುವುದರಿಂದ ಈರ್ವರ ಹೃದಯಗಳು ಏಕರೂಪವಾದವು. ಆಗ ಹೇಳುವಿಕೆ, ಕೇಳುವಿಕೆ ಈ ಎರಡೂ ಸ್ಥಗಿತಗೊಂಡವು. ಮತ್ತು ಶಬ್ದಗಳಲ್ಲಿ ಶಬ್ದಗಳು ಲೀನವಾದವು ॥೬೨೧॥ ನಾಲ್ಕೂ ವಾಣಿಗಳು ಮೌನವನ್ನು ಧರಿಸಿದವು ಮತ್ತು ಜೀವವು ತನ್ನ ಜೀವತ್ವವನ್ನು ಮರೆಯಿತು. ಭಕ್ತರಿಗೆ ಸ್ವಾನಂದಘನವಾಗಿರುವ ಏಕನಾಥರೂಪ ಜನಾರ್ದನನೂ ಕೂಡ ಸಂತುಷ್ಟನಾದನು ॥೬೨೨॥ ಈ ಯಾವ ಸದ್‌ಭಕ್ತಿಯ ಭಾವಾರ್ಥವನ್ನು ಈ ಹನ್ನೆರಡನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಿದೆ. ಅದೇನೆಂದರೆ, ಭಕ್ತರಿಗೆ ಅವರ ಭಕ್ತಿಯಿಂದಲೇ ಶ್ರೀಕೃಷ್ಣನು ಯಾವಾಗಲೂ ಪ್ರಾಪ್ತನಾಗುವನು ॥೬೨೩॥ ಆತ್ಮಪ್ರಾಪ್ತಿಯಾಗಲು ಕಾರಣವು ಮುಖ್ಯವಾಗಿ ಕೇವಲ ಭಾವಾರ್ಥವೇ ಆಗಿರುವುದು. ಭಾವಾರ್ಥವಿಲ್ಲದೇ ಇತರ ಸಾಧನೆಗಳು ಇವು ಕೇವಲ ವ್ಯರ್ಥವಾಗಿರುವುವು. ಹೀಗೆ ನೀನು ತಿಳಿ ॥೬೨೪॥ ಜಪ, ತಪ, ಯಜ್ಞ ಅಥವಾ ದಾನ ಈ ಎಲ್ಲವೂ ಭಾವಾರ್ಥಕ್ಕಾಗಿಯೇ ಮಾಡಬೇಕಾಗಿರುವುದು. ಈ ಭಾವಾರ್ಥವನ್ನು ಸಾಧಿಸಿದವನ ಜನ್ಮವು ಧನ್ಯ ಧನ್ಯವಾಗುವುದು ॥೬೨೫॥ ನರದೇಹದ ಪ್ರಾಪ್ತಿಯು ನಿಜವಾಗಿಯೂ ಧನ್ಯವಾಗಿರುವುದು. ಸಾಧುಗಳ ಸಂಗತಿಯೂ ಕೂಡ ಧನ್ಯವಾಗಿರುವುದು. ಮತ್ತು ಯಾರು ಭಗವದ್ಭಕ್ತಿಯಲ್ಲಿ ತನ್ಮಯರಾಗಿರುವರೋ ಆ ಭಾವಾರ್ಥಿಯು ಅತ್ಯಂತ ಧನ್ಯ ದನ್ಯನಾಗಿರುವನು ॥೬೨೬॥

ಜೇ ರಂಗಲೇ ಭಗವತ್ಪಥಾ । ತ್ಯಾಂಚೇ ಚಿತ್ತ ವಿಸರಲೇ ವಿಷಯಾವಸ್ಥಾ । ತೇ ಹಂಸಗೀತಾಚೀ ಕಥಾ । ಉದ್ಧವ ಕೃಷ್ಣನಾಥಾ ಪುಸೇಲ ॥೬೨೭॥ ತೇ ಅತಿರಸಾಳ ನಿರೂಪಣ । ಕೇವಳ ಶುದ್ಧ ಬ್ರಹ್ಮಜ್ಞಾನ । ಶ್ರೋತಾ ವ್ಹಾವೇ ಸಾವಧಾನ । ಏಕಾ ಜನಾರ್ದನ ವಿನವಿತೂ ॥೬೨೮॥

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂದೇ ಶ್ರೀಕೃಷ್ಣೋದ್ಧವಸಂವಾದೇ
ಏಕಾಕಾರಟೀಕಾಯಾಂ ದ್ವಾದಶೋಽಧ್ಯಾಯಃ ॥೧೨॥

ಮೂಳ ಶ್ಲೋಕ ॥೨೪॥ ಓವ್ಯಾ ॥೬೨೮॥

॥ ಶ್ರೀಕೃಷ್ಣಾರ್ಪಣಮಸ್ತು ॥

ಭಗವಂತನ ಮಾರ್ಗದಲ್ಲಿ ಯಾರು ರಮಮಾಣನಾಗುವನೋ, ಆತನ ಚಿತ್ತವು ವಿಷಯ ಸುಖವನ್ನು ಮರೆತುಬಿಡುವುದು. ಈ ಯಾವ ಹಂಸಗೀತೆಯ ಕಥೆಯನ್ನು ಈಗ ಉದ್ಧವನು ಶ್ರೀಕೃಷ್ಣನಿಗೆ ವಿಚಾರಿಸುವನು ॥೬೨೭॥ ಈ ನಿರೂಪಣವು ಅತ್ಯಂತ ರಸಭರಿತವಾಗಿದ್ದು, ಕೇವಲ ಶುದ್ಧಬ್ರಹ್ಮಜ್ಞಾನವೇ ಆಗಿರುವುದು. ಅದಕ್ಕಾಗಿ ಶ್ರೋತೃಗಳವರು ಆದರತ್ತ ಏಕಾಗ್ರತೆಯಿಂದ ಲಕ್ಷವನ್ನು ಕೊಡಬೇಕಾಗಿ ಏಕಾ ಜನಾರ್ದನರ ವಿನಂತಿಯಾಗಿರುವುದು ॥೬೨೮॥

ಇತಿ ಶ್ರೀ ಭಾಗವತ ಮಹಾಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ
ಶ್ರೀಏಕನಾಥಮಹಾರಾಜರ ಭಾಷ್ಯಯ ಹನ್ನೆರಡನೆಯ ಅಧ್ಯಾಯವು ಮುಗಿದುದು॥

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಹದಿಮೂರನೆಯ ಅಧ್ಯಾಯ

॥ಶ್ರೀ ಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಜೀ ಅನಾದಿ ಹಂಸಾ । ಹಂಸರೂಪಾ ಜೀ ಜಗದೀಶಾ । ತೂ ಸದ್‌ಗುರು ಪರಮಹಂಸಾ । ಪರಮಪರೇಶಾ ಪರಿಪೂರ್ಣಾ ॥೧॥ ಉಭಯಪಕ್ಷೇವೀಣ ದೇಖ । ತುರ್ಝೇ ಶೋಭತೀ ದೋನೀ ಪಾಂಖ । ಶುದ್ಧ ಸತ್ತ್ವಾಹೋನಿ ಚೋಖ । ಸ್ವರೂಪ ಸುರೇಖ ಸೋಜ್ವಳ ॥೨॥ ಹಂಸ ಬೋಲಿಜೇ ಶುಭ್ರ ವರ್ಣಾ । ತುರ್ಝೀ ಹಂಸತಾ ವಿಲಕ್ಷಣ । ಸಾಂಡೋನಿಯಾ ಸಕಳ ವರ್ಣಾ । ಹಂಸಪಣ ತುಜ ಶೋಭೇ ॥೩॥ ವಿಕಾಸಲ್ಯಾ ಸುವರ್ಣಾಪಂಕಜೇ । ಇತರ ಹಂಸೀ ತೇಥೇ ಕ್ರೀಡಿಜೇ । ಪ್ರೇಮೇ ಉತ್ಫುಲ್ಲಿತ ಕಮಳ ಜೇ । ತುವಾ ಕ್ರೀಡಿಜೇ ತೇ ಠಾಯೀ ॥೪॥ ಮಾನಸಸರೋವರೀ ವಸ್ತೀ ಹಂಸಾಸೀ । ತೂ ಮಾನಸಾತೀತ ರಹಿವಾಸೀ । ಹಂಸಾ ಉತ್ಪತನ ಆಕಾಶೀ । ತುರ್ಝೇ ಚಿದಾಕಾಶೀ ಉಡ್ಡಾಣ ॥೫॥ ವಿವೇಕಚಂಚೂಯಾ ಮುದ್ರಾ । ಸ್ವಭಾವೇ ನಿವಡಿಸೀ ಕ್ಷೀರನೀರಾ । ಮಗ ಸಾಂಡೋನಿಯಾ ಅಸಾರಾ । ಶುದ್ಧ ಸಾರಾ ಸೇವಿಸೀ ॥೬॥ ಐಸಿಯಾ ಹಂಸಾ ಜೀ ಸುಕುಮಾರಾ । ಮುಕ್ತಮೋತಿಯಾಂಚಾ ತುಜ ಚಾರಾ । ಜೇ ಕಾ ವೈರಾಗ್ಯಶುಕ್ತಿದ್ವಾರಾ । ಚಿತ್ಸಾಗರಾಮಾಜೀ ಝಾಲೀ ॥೭॥ ಸರ್ವಥಾ ನಾತಳೋನಿ ಕ್ಷಿತೀ । ನಿರಾಲಂಬ ಮಾರ್ಗಪ್ರಾಪ್ತೀ । ಚಾಲಣೇ ಚಾಲಸೀ ಹಂಸಗತೀ । ಹೇ ಗಮನಶಕ್ತೀ ಅಭಿನವ ॥೮॥ ಅಭಿನ್ನ ಸ್ವಭಾವತಾ ನಿಜಅಂಶೀ । ಚಿನ್ಮಾತ್ರವಾಗೀಶ್ವರೀ ತೂ ವಾಹಸೀ । ಹಂಸವಾಹಿನೀ ಆಖ್ಯಾ ಐಶೀ । ತುರ್ಝೇನಿ ಅಂಶೇಸೀ ತೀಸ ಝಾಲೀ ॥೯॥ ತುರ್ಝೇನಿ ಚಾಲವಿಲ್ಯಾ ಸರಸ್ವತೀ ಚಾಲೇ । ತುವಾ ಬೋಲವಿಲ್ಯಾ ವೇದೂ ಬೋಲೇ । ತುವಾ ಚೇತವಿಲ್ಯಾ ಪ್ರಾಣ ಹಾಲೇ । ತುರ್ಝೇನಿ ವಾಚಾಳೇ ವಾಗ್ದೇವೀ ವದೇ ॥೧೦॥ ಝಾಲೀ ವಾಗೀಶ್ವರೀ ವಾಗ್ದೇವತಾ । ತಿಯೇಸೀ ತುರ್ಝೇನಿ ವಾಚಾಳತಾ । ಜೇವೀ ಕಾ ವೇಣು ವಾಜೇ ಮಧುರತಾ । ಪರೀ ವಾಜವಿತಾ ತೋ ಭಿನ್ನ ॥೧೧॥

ಹೇ ಓಂಕಾರರೂಪ ಅನಾದಿ ಹಂಸನೇ, ಹಂಸರೂಪ ಜಗದೀಶನೇ, ಪರಿಪೂರ್ಣ ಪರಮ ಪರೇಶನೇ, ಪರಮಹಂಸ ಸದ್ಗುರುರಾಯನೇ, ನಿನಗೆ ಭಕ್ತಿಭಾವದಿಂದ ಸಾಷ್ಟಾಂಗ ನಮಸ್ಕಾರವನ್ನು ಮಾಡುವೆನು ॥೧॥ ದ್ವೈತಭಾವದ ಎರಡು ಪಕ್ಷಗಳು ಇಲ್ಲದಿದ್ದರೂ ನಿನ್ನ ಎರಡು ಪಕ್ಷಗಳು ಶೋಭಿಸುತ್ತಿರುವುವು. ನಿನ್ನ ಸ್ವರೂಪವು ಶುದ್ಧ ಸತ್ವಕ್ಕಿಂತಲೂ ಉತ್ತಮವಾಗಿರುವುದು. ಸುರೇಖ, ಸೋಜ್ವಳವಾಗಿರುವುದು ॥೨॥ ಹಂಸವು ಬಿಳಿ ಶುಭ್ರ ವರ್ಣದ್ದಾಗಿದೆ ಎಂದು ಹೇಳುವರು. ಆದರೆ ನಿನ್ನ ಹಂಸತ್ವವು ವಿಲಕ್ಷಣವಾಗಿರುವುದು. ಸರ್ವ ಪ್ರಕಾರದ ವರ್ಣಗಳನ್ನು ಬಿಟ್ಟಿರುವ ನಿನ್ನ ಹಂಸತನವು ಶೋಭಿಸುತ್ತಿರುವುದು ॥೩॥ ಸುವರ್ಣ ಕಮಲಗಳು ವಿಕಾಸಗೊಳ್ಳುತ್ತಲೇ ಅಲ್ಲಿ ಹಂಸಗಳು ಕ್ರೀಡಿಸಲಾರಂಭಿಸುವುವು. ಆದರೆ ಪ್ರೇಮದಿಂದ ಹೃದಯ ಕಮಲವು ಪ್ರಫುಲ್ಲಿತಗೊಳ್ಳಲು ಅಲ್ಲಿ ನೀನು ಕ್ರೀಡೆಯಾಡುವೆ ॥೪॥ ಹಂಸವು ಮಾನಸ ಸರೋವರದಲ್ಲಿ ಇರುವುದು. ಆದರೆ ನೀನು ಮಾನಸವಿರಹಿತನಾಗಿ ಇರುವವನಾಗಿರುವೆ. ಹಂಸವು ಆಕಾಶದಲ್ಲಿ ಉಡ್ಡಾಣಮಾಡುವುದು. ನಿನ್ನ ಉಡ್ಡಾಣವು ಚಿದಾಕಾಶದಲ್ಲಿರುವುದು ॥೫॥ ವಿವೇಕರೂಪ ಚುಂಚುವಿನಿಂದ ನಿತ್ಯ ಮತ್ತು ಅನಿತ್ಯ ಕ್ಷೀರನೀರನ್ನು ಬೇರೆ ಬೇರೆಯಾಗಿ ಮಾಡುವೆ ಮತ್ತು ಅಸಾರವನ್ನು ಒಗೆದು ಶುದ್ಧವಾದ ಸಾರವನ್ನು ಸೇವಿಸುವೆ ॥೬॥ ಹೀಗೆ ಸುಕುಮಾರ ಹಂಸಕ್ಕೆ ಚಿತ್‌ಸಮುದ್ರದಲ್ಲಿ ವೈರಾಗ್ಯರೂಪ ಚಿಪ್ಪಿನಲ್ಲಿ ಸಿದ್ಧವಾಗಿರುವ ಮುಕ್ತರೂಪ ಮುತ್ತುಗಳ ಆಹಾರವಾಗಿರುವುದು ॥೭॥ ಪೃಥ್ವಿಗೆ ಸ್ವಲ್ಪವೂ ಸ್ಪರ್ಶವನ್ನು ಮಾಡದೇ ಕೇವಲ ನಿರಾಧಾರವಾದ ಮಾರ್ಗದಿಂದ ನೀನು ಹಂಸಗತಿಯಿಂದ ವಿಹರಿಸುವೆ. ಈ ನಿನ್ನ ವಿಹರಿಸುವ ಸ್ಥಿತಿಯು ಅತಿಶಯವಾಗಿ ಅದ್ಭುತವಾಗಿರುವುದು ॥೮॥ ಸ್ವಭಾವತಃವಾಗಿಯೇ ನಿನಗಿಂತಲೂ ಭಿನ್ನವಾಗಿರುವ ಚಿನ್ಮಯ ವಾಗ್ದೇವತೆಗೆ ನೀನು ನಡೆಸಿಕೊಳ್ಳುವೆ. ನಿನ್ನ ಅಂಶದಿಂದ ಆಕೆಗೆ ಹಂಸವಾಹಿನೀ ಎಂಬ ನಾಮವು ಪ್ರಾಪ್ತವಾಗಿರುವುದು ॥೯॥ ನೀನು ನಡೆಸಿದಾಗ ಮಾತ್ರ ಸರಸ್ವತಿಯು ನಡೆಯುವಳು. ನೀನು ನುಡಿಸಿದರೆ ಮಾತ್ರ ವೇದವು ನುಡಿಯುವುದು. ನಿನ್ನ ಚೇತನದಿಂದಲೇ ಪ್ರಾಣದ ಚಟುವಟಿಕೆಯಾಗಿರುವುದು. ನೀನು ಮಾತನಾಡಿಸಿದರೆ ಮಾತ್ರ ವಾಗ್ದೇವಿ ಮಾತನಾಡುವಳು ॥೧೦॥ ಸರಸ್ವತಿಯು ವಾಣಿಯ ದೇವತೆಯಾಗಿರುವಳು. ಆದರೆ ಆಕೆಗೆ ಮಾತನಾಡುವ ಸಾಮರ್ಥ್ಯವು ನಿನ್ನಿಂದಲೇ ಪ್ರಾಪ್ತವಾಯಿತು. ಕೊಳಲಿನಿಂದ ಸ್ವರವೈಭವವು ಪ್ರಕಟವಾಗುವುದು ನಿಜ. ಆದರೆ ಆ ಕೊಳಲನ್ನು ಬಾರಿಸುವಾತನು ಬೇರೆಯೇ ಇರುವನು ॥೧೧॥

ಏವಂ ವಾಚ್ಯ ವಚನ ವಕ್ತಾ । ತೂಂಚಿ ವಾಗೀಶ್ವರೀ ತೂಂಚಿ ವದತಾ । ಆಪುಲ್ಯಾ ಹಂಸರೂಪಾಚೀ ಕಥಾ । ಸ್ವಭಾವತಾ ಬೋಲವಿಸೀ ॥೧೨॥ ಬೋಲಾವಯಾ ಮಹಾಕವೀಚ್ಯಾ ಠಾಯೀ । ತುವಾ ವಾಗೀಶ್ವರೀ ದ್ಯೋತಿಲೀ ಪಾಹೀ । ತೇ ಹಂಸರೂಪಾಚೀ ನವಾಈ । ಅಭಿನವ ಕಾಂಹೀ ಬೋಲವೀ ॥೧೩॥ ತೋ ತೂ ಸರ್ವಭೂತೀ ಸಮಾನ । ಹಂಸಸ್ವರೂಪೀ ಶ್ರೀಜನಾರ್ದನ । ತ್ಯಾಚೇ ವಂದಿತಾ ನಿಜಚರಣ । ಜನ್ಮ ಮರಣ ಪಳಾಲೇ ॥೧೪॥ ಆಪಭಯೇ ಪಳತಾ ತ್ಯಾಸೀ । ಲಪಣೇ ಮಿಳಾಲೀ ಭ್ರಮಾಪಾಶೀ । ಜನ್ಮಾ ಮಾಗೇ ಮರಣಾಸೀ । ಠಾವೂ ವಸತೀಸೀ ದೀಧಲಾ ॥೧೫॥ ಯಾಲಾಗೀ ಭ್ರಮಾಮಾಜೀ ಜೋ ಪಡಲಾ । ತೋ ಜನ್ಮ ಮರಣಾಂಸೀ ಆತುಡಲಾ । ಮಗ ನ ಸುಟೇ ಕಾಂಹೀ ಕೇಲ್ಯಾ । ಯಂತ್ರೀ ಪಡಲಾ ಭ್ರಮಚಕ್ರೀ ॥೧೬॥ ತೇಥ ರಾಹಾಟಮಾಳೇಚ್ಯಾ ಪರೀ । ಜನ್ಮ ಮರಣಾಂಚೇ ಪಡೇ ಯಂತ್ರೀ । ಏಕಾಚೀ ಸೋಸೀ ಭರೋವರೀ । ತಂವ ದುಸರೇ ಶಿರೀ ಆದಳೇ ॥೧೭॥ ತೇ ನಿಸ್ತರಾವಯಾ ಜನ್ಮ ಮರಣ । ತುಜ ಸೋಹಂಹಂಸಾಚೇ ಸ್ಮರಣ । ಜೈ ಕಾ ಕರೀ ಸಾವಧಾನ । ಭ್ರಮಮೋಚನ ತೈ ಹೋಯ ॥೧೮॥ ತೋ ತೂ ಪರಮಾತ್ಮಾ ಪರಮಹಂಸೂ । ಪರಬ್ರಹ್ಮೈಕ ಪೂರ್ಣ ಪರೇಶೂ । ಬ್ರಹ್ಮ ಪುತ್ರಾಂಸೀ ಉಪದೇಶೂ । ಕರಾವಯಾ ಹಂಸೂ ಝಾಲಾಸೀ ॥೧೯॥ ತೇ ಹಂಸಮುಖೀಚೇ ನಿರೂಪಣ । ಬೋಲಾವಯಾ ಬೋಲಕಾ ಶ್ರೀಶುಕ ಜಾಣ । ತ್ಯಾ ವಚನಾರ್ಥಾತೇ ಲೇವೂನ । ಪರಮ ಪಾವನ ಪರೀಕ್ಷಿತೀ ॥೨೦॥ ತ್ಯಾ ಹಂಸಾಚೇ ಹಂಸಗೀತ । ಕೃಷ್ಣ ಉದ್ಧವಾಸೀ ಸಾಂಗತ । ಶ್ರೋತಾ ವ್ಹಾವೇ ದತ್ತಚಿತ್ತ । ಅಚುಂಬಿತ ನಿಜಬೋಧೂ ॥೨೧॥ ತೋ ಹಾ ತೇರಾವಾ ಅಧ್ಯಾವೋ । ಅತ್ಯಾದರೇ ಸಾಂಗೇ ದೇವೋ । ತೇ ಐಕತಾ ಉದ್ಧವೋ । ವಿಷಯವಿಲಯೋ ದೇಖೇಲ ॥೨೨॥ ತೇರಾವೇ ಅಧ್ಯಾಯೀ ನಿರೂಪಣ । ಸತ್ತ್ವವೃದ್ಧೀಚೇ ಕಾರಣ । ವಿದ್ಯಾ ಉದ್ಭವಕ್ರಮೂ ಜಾಣ । ಅತಿಸುಲಕ್ಷಣ ಸೋಪಾರಾ ॥೨೩॥ ಹಂಸ ಇತಿಹಾಸಾಚಾ ಯೋಗೂ । ಸ್ವಯೇ ಸಾಂಗೇಲ ಶ್ರೀರಂಗೂ । ತೇಣೇ ಚಿತ್ತಾಸೀ ವಿಷಯವಿಯೋಗೂ । ಸುಗಮ ಸಾಂಗೂ ಸಾಂಗೇಲ ॥೨೪॥ ದ್ವಾದಶಾಧ್ಯಾಯಾಚೇ ಅಂತೀ । ಕರೂನಿ ಸದ್‌ಗುರೂಚೀ ಭಕ್ತೀ । ಪಾವೋನಿ ವಿದ್ಯಾಕುಠಾರಪ್ರಾಪ್ತೀ । ಛೇದಾವಾ ನಿಶ್ಚಿತೀ ಜೀವಾಶಯೋ ॥೨೫॥ ಛೇದಿಲ್ಯಾ ಜೀವಾಚೇ ಜೀವಪಣ । ಸಕಳ ಸಾಂಡಾವೇ ಸಾಧನ । ಹೇ ಉದ್ಧವೇ ಐಕೂನಿ ಜಾಣ । ಪ್ರತಿವಚನ ನೇದೀಚ ॥೨೬॥

ಅದರಂತೆ ನಿಜವಾಗಿಯೂ ವಾಚಾ, ವಚನ ಮತ್ತು ವಕ್ತಾ ನೀನೇ ಆಗಿರುವೆ. ಸರಸ್ವತಿಯೂ ಕೂಡ ನೀನೇ ಆಗಿರುವೆ ಮತ್ತು ಹೇಳುವವನು ನೀನೇ ಇರುವೆ. ಆದ್ದರಿಂದ ನಿನ್ನ ಹಂಸರೂಪದ ಕಥೆಯನ್ನೂ ಕೂಡ ನೀನೇ ಆಕೆಯಿಂದ ಹೇಳಿಸುವೆ ॥೧೨॥ ಮಹಾ ಕವಿಯವರಲ್ಲಿ ಹೇಳುವುದಕ್ಕಾಗಿ ನೀನು ಸರಸ್ವತಿಯನ್ನು ಪ್ರಕಟಗೊಳಿಸಿದೆ. ಆಕೆಯು ಹಂಸರೂಪದ ವಿಲಕ್ಷಣತೆಯನ್ನು ಹೊಸದಾಗಿರುವ ಉನ್ಮೇಷಕ್ಕೆ ಪ್ರಕಟಿಸುವಳು ॥೧೩॥ ಆ ಯಾವ ಹಂಸರೂಪ ಜನಾರ್ದನನಾದ ನೀನು ಸರ್ವ ಭೂತಗಳಲ್ಲಿ ಸಮಾನನಾಗಿರುವೆ. ನಿನ್ನ ಚರಣ ಕಮಲಗಳಲ್ಲಿ ಮನೋಭಾವದಿಂದ ವಂದಿಸಲು ಜನ್ಮ ಮರಣಗಳು ಓಡಿ ಹೋದವು ॥೧೪॥ ಇವು ತಮ್ಮಷ್ಟಕ್ಕೆ ತಾವೇ ಭಯಪಟ್ಟು ಓಡಿಹೋಗುತ್ತಿರಲು ಇವುಗಳಿಗೆ ಭ್ರಮದ ಹತ್ತಿರ ಅಡಗಿಕೊಳ್ಳಲು ಸ್ಥಳಾವಕಾಶವು ದೊರೆಯಿತು ಮತ್ತು ಭ್ರಮವು ಜನ್ಮದ ನಂತರ ಮರಣಕ್ಕೆ ಇರಲು ಠಿಕಾಣಿಯನ್ನು ನೇಮಿಸಿಕೊಟ್ಟಿತು ॥೧೫॥ ಆದ್ದರಿಂದ ಯಾವನು ಭ್ರಮೆಯಲ್ಲಿ ಬೀಳುವನೋ ಅವನು ಜನ್ಮ ಮರಣಗಳಲ್ಲಿ ಸಿಕ್ಕಿಕೊಳ್ಳುವನು. ಒಮ್ಮೆ ಈ ಭ್ರಮದ ಚಕ್ರದಲ್ಲಿ ಬಿದ್ದನೆಂದರೆ ಏನು ಮಾಡಿದರೂ ಬಿಡಿಸಿಕೊಳ್ಳುವುದಾಗುವುದಿಲ್ಲ ॥೧೬॥ ಅಲ್ಲಿ ಅವನು ತಿರುಗಣೆಯಾತದ ಮಾಲೆಯಂತೆ ಜನ್ಮ ಮರಣದ ಚಕ್ರದಲ್ಲಿ ಸಿಕ್ಕಿಕೊಳ್ಳುವನು. ಒಂದರ ಹೊಡೆತವನ್ನು ಸೋಸುತ್ತಿದ್ದಂತೆಯೇ ಅದೇ ಇನ್ನೊಂದು ಹೊಡೆತವು ತಲೆಯ ಮೇಲೆ ಬೀಳುವುದು ॥೧೭॥ ಈ ಜನ್ಮ ಮರಣದ ತಿರುಗಾಟವನ್ನು ತಪ್ಪಿಸಬೇಕೆಂದರೆ ಸೋऽಹಂ ಹಂಸದ ಸ್ಮರಣೆಯನ್ನು ಮಾಡಬೇಕಾಗುವುದು. ಯಾರು ಲಕ್ಷಕೊಟ್ಟು ಏಕಾಗ್ರಚಿತ್ತದಿಂದ ಸ್ಮರಣೆಯನ್ನು ಮಾಡುವನೋ, ಆಗಲೇ ಆತನ ಭ್ರಮವು ನಷ್ಟವಾಗುವುದು ॥೧೮॥ ಅದೇ ನೀನು ಪರಮಾತ್ಮಾ ಪರಮಹಂಸನಾಗಿರುವೆ. ಪರಬ್ರಹ್ಮರೂಪ ಪೂರ್ಣ ಪರಮೇಶ್ವರನೇ ಆಗಿರುವೆ. ಬ್ರಹ್ಮದೇವನ ಪುತ್ರನಿಗೆ ಉಪದೇಶವನ್ನು ಮಾಡುವುದಕ್ಕಾಗಿ ನೀನು ಹಂಸನಾದೆ ॥೧೯॥ ಆ ಹಂಸ ಮುಖದ ನಿರೂಪಣೆಯನ್ನು ಹೇಳುವುದಕ್ಕಾಗಿ ಶ್ರೀಶುಕಾಚಾರ್ಯರು ವಕ್ತಾರಾದರು. ಮತ್ತು ಅವರ ವಚನಗಳ ಅರ್ಥವನ್ನು ತಿಳಿದುಕೊಂಡು ಪರೀಕ್ಷಿತೀ ರಾಜನು ಪಾವನನಾದನು ॥೨೦॥ ಈ ಹಂಸದ ಹಂಸಗೀತವನ್ನು ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ಹೇಳುತ್ತಿರುವನು. ಆದ್ದರಿಂದ ಶ್ರೋತೃಗಳವರು ಈ ಕಡೆ ಪೂರ್ಣಲಕ್ಷವನ್ನು ಕೊಟ್ಟರೆ ಸಹಜವಾಗಿಯೇ ಆತ್ಮಬೋಧದ ಪ್ರಾಪ್ತಿಯಾಗಬಲ್ಲದು ॥೨೧॥ ಈ ಯಾವ ಹದಿಮೂರನೆಯ ಅಧ್ಯಾಯವನ್ನು ಶ್ರೀಕೃಷ್ಣನು ಅತ್ಯಂತ ಆದರದಿಂದ ಹೇಳುತ್ತಿರುವನು. ಇದನ್ನು ಕೇಳುತ್ತಲೇ ಉದ್ಧವನ ವಿಷಯ ವಾಸನೆಯು ಇಲ್ಲದಾಗುವುದು ॥೨೨॥ ಈ ಯಾವ ಹದಿಮೂರನೆಯ ಅಧ್ಯಾಯದಲ್ಲಿ ಸತ್ವಬುದ್ಧಿಯ ಕಾರಣವನ್ನು ಮತ್ತು ಅವಿದ್ಯೆಯ ನಿರಸನವಾಗಿ ವಿದ್ಯೆಯು ಪ್ರಕಟವಾಗುವ ಕ್ರಮವನ್ನು ಅತಿಶಯ ಸುಂದರವಾಗಿ ಹಾಗೂ ಸುಲಭ ರೀತಿಯಲ್ಲಿ ವರ್ಣನೆಯನ್ನು ಮಾಡಿ ಹೇಳಿರುವನು ॥೨೩॥ ಶ್ರೀಕೃಷ್ಣನು ಸ್ವತಃ ತಾನೇ ಹಂಸದ ಇತಿಹಾಸದ ಭೋಗವನ್ನು ಮತ್ತು ಚಿತ್ತಕ್ಕೆ ವಿಷಯಗಳ ವಿಯೋಗವಾಗುವ ಮಾರ್ಗವನ್ನು ಅತ್ಯಂತ ಸುಲಭರೀತಿಯಲ್ಲಿ ಹೇಳುವನು ॥೨೪॥ ಹನ್ನೆರಡನೆಯ ಅಧ್ಯಾಯದ ಕೊನೆಯಲ್ಲಿ ಸದ್ಗುರುಗಳ ಭಕ್ತಿಯನ್ನು ಮಾಡಬೇಕು. ಮತ್ತು ವಿದ್ಯಾರೂಪ ಶಸ್ತ್ರವನ್ನು ಪ್ರಾಪ್ತಮಾಡಿಕೊಂಡು ಜೀವದಲ್ಲಿನ ವಾಸನೆಯನ್ನೇ ಛೇದಿಸಿ ಒಗೆಯಬೇಕೆಂದು ಹೀಗೆ ಉಪದೇಶಿಸಿದನು ॥೨೫॥ ಜೀವದ ಜೀವತ್ವವು ಮುಗಿಯಿತೆಂದರೆ ಸರ್ವ ಸಾಧನೆಗಳನ್ನು ಬಿಟ್ಟುಬಿಡಬೇಕು. ಈ ಭಗವಂತನ ವಚನವನ್ನು ಉದ್ಧವನು ಕೇವಲ ಕೇಳಿಕೊಂಡನು. ಇದಕ್ಕಾಗಿ ಈತನು ಏನನ್ನೂ ಹೇಳಲಿಲ್ಲ ॥೨೬॥

ಉದ್ಧವಾಚೇ ಜೇವೀಚಾ ಭಾವೋ । ಪಖೋಲ ಹೃದಯೀಚಾ ಅಭಿಪ್ರಾವೋ । ಸಕಳ ಆಕಳೋನಿಯಾ ಸದ್ಭಾವೋ ।ಸ್ವಯೇ ಶ್ರೀಕೃಷ್ಣ ದೇವೋ ಬೋಲತ ।೨೭॥ ಮ್ಹಣಸೀ ಲಾಗೋನಿ ಸೂತ್ರ ತ್ರಿಗುಣ । ಜೀವಾಸೀ ಆಲೇ ಜೀವಪಣ ।ತೇ ಅಂಗೀ ಅಸತಾ ತಿನೀ ಗುಣ । ಸದ್ವಿದ್ಯಾ ಜಾಣ ಉಪಜೇನಾ ।೨೮॥ ತೋಂಡೀಚಾ ಖಿಳೂ ನವ್ಹತಾ ದೂರೀ । ನಾರಳೇಜಳ ನ ಚಢೇ ಕರೀ । ತೇವೀ ಗುಣ ನ ವಚತಾ ನಿರ್ಧಾರೀ । ವಿದ್ಯಾ ಕೈಶಾಪರೀ ಉಪಜೇಲ ।೨೯॥ ಐಸಾ ಆಶಂಕೇಚಾ ಭಾವೋ । ಜಾಣೋನಿಯಾ ಶ್ರೀವಾಸುದೇವೋ । ತಿಹೀ ಶ್ಲೋಕೀ ತೋ ಪಹಾ ಹೋ । ಗೂಢಾಭಿಪ್ರಾವೋ ನಿರಸಿತೂ ।೩೦॥

ಶ್ರೀಭಗವಾನುವಾಚ :-

ಸತ್ತ್ವಂ ರಜಸ್ತಮ ಇತಿ ಗುಣಾ ಬುದ್ಧೇರ್ನ ಚಾತ್ಮನಃ । ಸತ್ತ್ವೇನಾನ್ಯತಮೌ ಹನ್ಯಾತ್ಸತ್ತ್ವಂ ಸತ್ತ್ವೇನ ಚೈವ ಹಿ ।೧॥

ಅರ್ಥ :- ಶ್ರೀ ಭಗವಂತನು ನುಡಿದನು :- ಪ್ರಿಯ ಉದ್ಧವನೇ, ಸತ್ತ್ವ, ರಜ ಮತ್ತು ತಮ ಈ ಮೂರು ಗುಣಗಳು ಬುದ್ಧಿಯ ಅಂದರೆ ಪ್ರಕೃತಿಯದ್ದಾಗಿರುವುವು. ಆತ್ಮನದಲ್ಲ. ಸತ್ತ್ವ ಗುಣದ ಆಧಾರದಿಂದ ರಜ ಮತ್ತು ತಮ ಗುಣಗಳನ್ನು ಗೆಲ್ಲಬೇಕಾಗುವುದು. ತದನಂತರ ಸತ್ತ್ವಗುಣದ ಶಾಂತ ವೃತ್ತಿಯಿಂದ ಅದರ ದಯೆ ಇತ್ಯಾದಿ ವೃತ್ತಿಗಳನ್ನು ಶಾಂತಗೊಳಿಸಬೇಕು.

ಸತ್ತ್ವರಜತಮಾದಿ ಗುಣ । ನಿಶ್ಚಯೇಸೀ ಮಾಯೇಚೇ ಜಾಣ । ಹೇ ದ್ವಾದಶಾಧ್ಯಾಯೀ ನಿರೂಪಣ । ತುಜ ಮ್ಯಾ ಸಂಪೂರ್ಣ ಸಾಂಗೀತಲೇ ।೩೧॥ ಸಚ್ಚಿದಾನಂದೂ ಜೋ ಯೇಥ । ಆತ್ಮ್ಯಾಸೀ ಅಭಿನ್ನ ನಿತ್ಯ । ತೈಸೇ ಗುಣ ನವ್ಹತೀ ಸಮಸ್ತ । ತೇ ಪ್ರಾಕೃತ ಪ್ರಕೃತಿಕಾರ್ಯೇ ।೩೨॥ ಜೇ ಸದ ತೇಚೀ ಚಿದ । ಜೇ ಚಿದ ತೋಚಿ ಆನಂದ ।ಸ್ವರೂಪೀ ನಾಹೀ ತ್ರಿವಿಧ ಭೇದ । ತೇ ಏಕವದ ಸಚ್ಚಿದಾನಂದ ।೩೩॥ ಜೇವೀ ಶ್ವೇತತಾ ಮೃದು ಮಧುರ । ತ್ರಿವಿಧ ಭೇದೇ ಏಕ ಸಾಖರ । ತೇವೀ ಸಚ್ಚಿದಾನಂದ ಅವಿಕಾರ । ವಸ್ತು ಸಾಕಾರ ಏಕವದ ।೩೪॥ ಪ್ರಕೃತಿ ಗುಣಾಂತೇ ಉಪಜವಿತೀ । ಗುಣಾಂಸ್ತವ ಸಬಳ ಪ್ರಕೃತೀ । ಗುಣಾಂಸೀ ಆತ್ಮ್ಯಾಸೀ ಸಂಗತೀ । ನ ಘಡೇ ಕಲ್ಪಾಂತೀ ಉದ್ಧವಾ ।೩೫॥ ಯೇಥ ವಿದ್ಯಾ ಉತ್ಪತ್ತಿಲಕ್ಷಣ । ಸ್ವಯೇ ಸಾಂಗೇ ನಾರಾಯಣ । ಕರೂನಿ ಗುಣೇ ಗುಣಾಂಚೇ ಮರ್ದನ । ಸದ್ವಿದ್ಯಾ ಜಾಣ ಸಾಧಾವೀ ।೩೬॥ ಸತ್ತ್ವ ವಾಢವೂನ ಸುರವಾಡೇ । ಜೈ ರಜ ತಮ ನಿಃಶೇಷ ಝಡೇ । ತೈ ಸದ್ವಿದ್ಯಾ ಹಾತಾ ಚಢೇ । ಸತ್ತ್ವಾಚೇ ವಾಢೀ ಮೋಡೇ ನಿಜಸತ್ತ್ವೇಕರೂನೀ ।೩೭॥ ಸರ್ಪು ಲಾಗಲಾ ಹೋಯ ಜ್ಯಾಸೀ । ವಿಷಖಾದಲ್ಯಾ ಉತಾರ ತ್ಯಾಸೀ । ತೇ ವಿಷ ಖಾತಾ ಯೇರೇ ದಿಶೀ । ಆತ್ಮಘಾತಾಸೀ ವಾಢವೀ ।೩೮॥

ಆಗ ಉದ್ಧವನ ಮನದಲ್ಲಿನ, ಹೃದಯದಲ್ಲಿನ ಭಾವವನ್ನು ಆತನ ಗೂಢವಾದ ವಿಚಾರಗಳನ್ನು ಹೀಗೆ ಎಲ್ಲವನ್ನೂ ಅರಿತು ಶ್ರೀಕೃಷ್ಣನು ತಾನಾಗಿಯೇ ಹೇಳಹತ್ತಿದನು ।೨೭॥ ತ್ರಿಗುಣಗಳ ಸೂತ್ರವನ್ನು ಹತ್ತಿಕೊಂಡು ಜೀವಕ್ಕೆ ಜೀವತ್ವವು ಪ್ರಾಪ್ತವಾಗುವುದು. ಈ ಮೂರು ಗುಣಗಳು ಇರುವವರೆಗೂ ಸದ್‌ವಿದ್ಯೆಯು ಉತ್ಪನ್ನವಾಗಲಾರದೆಂದು ನೀನು ಹೀಗೆ ಹೇಳಬಹುದು ।೨೮॥ ತೆಂಗಿನಕಾಯಿಯ ಮೇಲ್ಭಾಗ ತೆಗೆಯದಿದ್ದರೆ ತೆಂಗಿನ ನೀರು ಕೈಗೆ ಹತ್ತಲಾರದು. ಅದರಂತೆ ಗುಣಗಳೇ ನಿಜವಾಗಿ ಹೋಗದಿದ್ದರೆ ವಿದ್ಯೆಯು ಹೇಗೆ ಉತ್ಪನ್ನವಾದೀತು ?।೨೯॥ ಈ ಯಾವ ಉದ್ಧವನ ಮನದಲ್ಲಿನ ಶಂಕೆಯನ್ನು ತಿಳಿದುಕೊಂಡು ಶ್ರೀಕೃಷ್ಣನು ಮುಂದಿನ ಮೂರು ಶ್ಲೋಕಗಳಿಂದ ಆ ಗಹನವಾದ ಶಂಕೆಯ ನಿರಸನೆಯನ್ನು ಮಾಡಿರುವನು ।೩೦॥

ಸತ್ತ್ವ, ರಜ ಮತ್ತು ತಮ ಈ ಮೂರು ಗುಣಗಳು ನಿಜವಾಗಿಯೂ ಮಾಯೆಯದ್ದಾಗಿರುವುವು. ಇದನ್ನು ಲಕ್ಷದಲ್ಲಿಡು. ಹನ್ನೆರಡನೆಯ ಅಧ್ಯಾಯದಲ್ಲಿ ಇದರ ಸರ್ವ ನಿರೂಪಣೆಯನ್ನು ನಾನು ಮಾಡಿರುವೆನು ।೩೧॥ ಸತ್, ಚಿತ್, ಆನಂದ ಇವು ಆತ್ಮದೊಂದಿಗೆ ಹೇಗೆ ಏಕರೂಪವಾಗಿರುವುವೋ ಅದರಂತೆ ಸತ್ತ್ವ, ರಜ, ತಮ ಈ ಗುಣಗಳು ಏಕರೂಪವಾಗಿರುವುದಿಲ್ಲ. ಇದು ಪ್ರಕೃತಿಯ ಕಾರ್ಯವಿರುವುದರಿಂದ ಪ್ರಾಕೃತವಾಗಿರುವುವು. ।೩೨॥ ಯಾವುದು ಸತ್ ಅದುವೇ ಚಿತ್ ಮತ್ತು ಯಾವುದು ಚಿತ್‌ವೋ ಅದುವೇ ಆನಂದವು. ಆತ್ಮಸ್ವರೂಪದಲ್ಲಿ ಇವುಗಳ ಮೂರು ಪ್ರಕಾರದ ಭೇದವಿರುವುದಿಲ್ಲ. ಇವು ಏಕರೂಪದಿಂದ ಸಚ್ಚಿದಾನಂದವಾಗಿರುವುವು ।೩೩॥ ಯಾವ ಪ್ರಕಾರವಾಗಿ ಬಿಳಿ, ಮೃದು ಮತ್ತು ಸಿಹಿ ಈ ಮೂರೂ ಪ್ರಕಾರದಿಂದಿದ್ದರೂ ಕೂಡ ಸಕ್ಕರೆಯು ಮಾತ್ರ ಹೇಗೆ ಒಂದೇಯಾಗಿರುವುದೋ, ಅದರಂತೆ ಆ ಸಚ್ಚಿದಾನಂದವು ಏಕರೂಪವಾಗಿದ್ದು ಆಕಾರದಿಂದ ಏಕರೂಪವಾಗಿಯೇ ಇರುವುದು ।೩೪॥ ಮಾಯೆಯು ಸತ್ತ್ವ,ರಜ, ತಮ ಈ ಮೂರು ಗುಣಗಳಿಗೆ ಉತ್ಪನ್ನ ಮಾಡುತ್ತಿರುವುದು. ಮತ್ತು ಈ ಗುಣಗಳಿಂದ ಮಾಯೆಯು ಪ್ರಬಲವಾಗುವುದು. ಅದಕ್ಕಾಗಿ ಉದ್ಧವಾ, ಗುಣಗಳ ಮತ್ತು ಆತ್ಮದ ಸಂಗತಿಯು ಎಂದಿಗೂ ಕಲ್ಪಾಂತಕ್ಕೂ ಸಾಧಿಸಲು ಶಕ್ಯವಿಲ್ಲ ।೩೫॥ ಈಗ ವಿದ್ಯೆಯ ಉತ್ಪತ್ತಿಯ ಲಕ್ಷಣವನ್ನು ಶ್ರೀಕೃಷ್ಣನು ಸ್ವತಃ ಹೇಳುವನು. ಗುಣಗಳಿಂದಲೇ ಗುಣಗಳ ನಾಶವನ್ನು ಮಾಡಬೇಕು ಮತ್ತು ಸರ್ವ ವಿದ್ಯೆಯನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಇದನ್ನು ಲಕ್ಷದಲ್ಲಿಡಬೇಕು ।೩೬॥ ಬಹು ಪ್ರೇಮದಿಂದ ಸತ್ತ್ವವನ್ನು ಬೆಳೆಯಿಸಿ ರಜ ಮತ್ತು ತಮಗಳನ್ನು ತ್ವರೆಯಾಗಿ ಇಲ್ಲದಾಗಿ ಮಾಡಬೇಕು. ಅಂದರೆ ಸದ್‌ವಿದ್ಯೆಯು ಕೈ ಸೇರುವುದು. ಮತ್ತು ಸ್ವರೂಪ ಬೋಧದಿಂದ ಸತ್ತ್ವಗುಣದ ಬೆಳವಣಿಗೆಯೂ ಕೂಡ ಬೆಳೆಯುವುದು ।೩೭॥ ಸರ್ಪದಂಶವಾಗಲು ಆಗ ವಿಷವನ್ನು ಕೊಟ್ಟರೆ ವಿಷದ ಉತಾರವಾಗುವುದು. ಆದರೆ ಇತರ ವೇಳೆಯಲ್ಲಿ ಆ ವಿಷವನ್ನು ತಿಂದರೆ ಆ ವಿಷವು ಪ್ರಾಣವನ್ನೇ ತೆಗೆದುಕೊಳ್ಳುವುದು ।೩೮॥

ತೈಸೇ ರಜತಮಲೋಪೇ ಸತ್ತ್ವ ವಾಢೇ । ವಾಢಲೇ ಸತ್ತ್ವ ಬಾಧಕತ್ವೇ ಕುಡೇ । ತೇಹೀ ಬಾಧಾ ಮೀ ತುಜ ಪುಢೇ । ಅತಿನಿವಾಡೇ ಸಾಂಗೇನ ॥೪೯॥ ಮೀ ಅಲಿಪ್ತ ಕರ್ಮಕಾರ್ಯಾ । ಮೀ ಜ್ಞಾತಾ ಮೀ ಮಹಾಸುಖಿಯಾ । ಐಸಾ ವಾಢವೂನಿ ಅಭಿಪ್ರಾಯಾ । ಗುಣೇ ಗುಣಕಾರ್ಯಾ ಗೋವಿಜೇ ಸತ್ತ್ವೇ ॥೫೦॥ ಐಸಾ ವಾಢಲಾ ಜೋ ಸತ್ತ್ವಗುಣ । ತ್ಯಾಸೀ ಉಪಶಮಾತ್ಮಕ ನಿಜಸತ್ತ್ವೇ ಗುಣ । ಸಮೂಳ ಕರಾವೇ ನಿರ್ದಳಣ । ತೈ ಸಮಾಧಾನ ಪಾವಿಜೇ ॥೫೧॥ ಉದ್ಧವಾ ತೂ ಐಸೇ ಮ್ಹಣಸೀ । ಸಮಾನತಾ ತಿಹೀ ಗುಣಾಂಸೀ । ಕೇವೀ ವಾಢೀ ಹೋಈಲ ಸತ್ತ್ವಾಸೀ । ಗುಣ ಗುಣಾಂಸೀ ರಾಖಣ ॥೫೨॥ ವಾಢಲ್ಯಾ ತಮೋಗುಣ । ನಾವಡೇ ತೇವ್ಹಾ ಜ್ಞಾನಧ್ಯಾನ । ನಾವಡೇ ತ್ಯಾಗ ಭೋಗ ಚಂದನ । ನಿದ್ರಾ ದಾರುಣ ಕಾ ಕಲಹೋ ॥೫೩॥ ವಾಢಲ್ಯಾ ರಜೋಗುಣ । ಐಕತಾ ಜ್ಞಾನನಿರೂಪಣ । ತ್ಯಾಚೇ ಭೋಗಾಸಕ್ತ ಮನ । ಸದಾ ಧ್ಯಾನ ವಿಷಯಾಂಚೇ ॥೫೪॥ ಧನಲೋಭ ಸುದಲ್ಯಾ ದಿಠೀ । ಪಾಂಪರಾ ಘೇತಲ್ಯಾ ಕ್ರೋಧ ನುಠೀ । ಹೇ ರಜೋಗುಣಾಚೀ ಕೋಟೀ । ಲೋಭಿಷ್ಟ ಪೋಟೀ ಸ್ತ್ರೀಪುತ್ರಾ ॥೫೫॥ ವಾಢಲಿಯಾ ಸತ್ತ್ವಗುಣ । ಸ್ತ್ರೀಯಾದಿಭೋಗೀ ಉದಾಸೀನ । ಸದಾ ಕರೀ ಭಗವಚ್ಚಿಂತನ । ಕಾ ಕರೀ ಕೀರ್ತನ ಹರೀಭಕ್ತೀ ॥೫೬॥ ಕ್ರೋಧಲೋಭಮೋಹಲಕ್ಷಣ । ಸತ್ತ್ವಕಾಳೀ ನುಠೇ ಜಾಣ । ಪರೀ ಏಕಲಾ ಕೇವೀ ವಾಢೇ ಸತ್ತ್ವಗುಣ । ಗುಣಾಂಸೀ ರಾಖಣ ಗುಣ ಹೋತೀ ॥೫೭॥ ಮಾಗೇ ತಮ ಪುಢೇ ರಜಪೂರ್ಣ । ಮಧ್ಯೇ ಅಡಕಲಾ ಸತ್ತ್ವಗುಣ । ತೋ ಕೈಸೇನಿ ವಾಢೇಲ ಜಾಣ । ಅಡಕಲೇಪಣ ಸುಬದ್ಧ ॥೫೮॥ ಐಸೀ ಆಶಂಕಾ ಧರೂನಿ ಜಾಣ । ಮ್ಹಣಸೀ ವಾಢೇನಾ ಸತ್ತ್ವಗುಣ । ತೇ ಸತ್ತ್ವವೃದ್ಧೀಚೇ ಲಕ್ಷಣ । ಐಕ ಸಂಪೂರ್ಣ ಸಾಂಗೇನ ॥೫೯॥

ಸತ್ತ್ವಾದ್‌ಧರ್ಮೋ ಭವೇದ್‌ವೃದ್ಧಾತ್‌ಪುಂಸೋ ಮದ್ಭಕ್ತಿಲಕ್ಷಣಃ ।
ಸಾತ್ತ್ವಿಕೋಪಾಸಯಾ ಸತ್ತ್ವಂ ತತೋ ಧರ್ಮಃ ಪ್ರವರ್ತತೇ ॥೨॥

ಅರ್ಥ :- ಸತ್ವಗುಣದ ವೃದ್ಧಿಯಾದಾಗ ಜೀವಕ್ಕೆ ನನ್ನ ಭಕ್ತಿರೂಪ ಸ್ವಧರ್ಮದ ಪ್ರಾಪ್ತಿಯಾಗುವುದು. ನಿರಂತರವಾಗಿ ಸಾತ್ವಿಕ ಉಪಾಸನೆಯನ್ನು ಮಾಡುವುದರಿಂದ ಸತ್ತ್ವಗುಣದ ವೃದ್ಧಿಯಾಗುವುದು. ಅದರಿಂದಲೇ ಸಾತ್ವಿಕ ಧರ್ಮವು ಪ್ರವೃತ್ತವಾಗುವುದು.

ಯೇ ಶ್ಲೋಕೀಚೇ ನಿರೂಪಣ । ಪಹಿಲೇ ಉತ್ತರಾರ್ಧವ್ಯಾಖ್ಯಾನ । ತೇಥೇ ಸತ್ತ್ವವೃದ್ಧೀಚೇ ಕಾರಣ । ಸಾತ್ತ್ವಿಕ ಸೇವನ ಕರಾವೇ ॥೬೦॥

ಅದರಂತೆ ಸತ್ವಗುಣದ ಬೆಳವಣಿಗೆಯಿಂದ ರಜ,ತಮ ಗುಣಗಳ ಲೋಪವಾಗುವುದು. ಬೆಳೆದಿರುವ ಸತ್ವಗುಣವು ಹಾಗೆಯೇ ಉಳಿದುಕೊಂಡರೆ ಅದು ಬಾಧಕವಾಗುವುದು. ಅದರ ಬಾಧೆಯು ಹೇಗಾಗುವುದೆಂಬುದನ್ನು ನಾನು ನಿನಗೆ ಹೇಳುವೆನು ॥೪೯॥ ಸರ್ವ ಕರ್ಮಗಳಿಂದ ಸರ್ವ ಪ್ರಕಾರದ ಕಾರ್ಯಗಳಿಂದ ನಾನು ಪೂರ್ಣವಾಗಿ ಅಲಿಪ್ತನಾಗಿರುವೆನು, ನಾನು ಜ್ಞಾನಿಯು, ಮತ್ತು ಅತ್ಯಂತ ಸುಖಿಯಾಗಿರುವೆನು. ಹೀಗೆ ಕಲ್ಪನೆಯು ಬೆಳೆದು ಸತ್ವದಿಂದಲೇ ಗುಣಗಳ ಕಾರ್ಯದಲ್ಲಿ ಸಿಕ್ಕಿಹಾಕಿಕೊಳ್ಳುವುದು ॥೫೦॥ ಹೀಗೆ ಬೆಳೆದಿರುವ ಸತ್ವಗುಣದ ಉಪಶಮಾತ್ಮಕ ಸ್ವರೂಪವನ್ನು ಬೋಧೆಯಿಂದ ಸಮೂಲವಾಗಿ ನಾಶಮಾಡಬೇಕು. ಆಗ ಮಾತ್ರ ಪೂರ್ಣ ಸಮಾಧಾನವು ದೊರೆಯುವುದು ॥೫೧॥ ಹೇ ಉದ್ಧವಾ, ನಿನ್ನ ಮನದಲ್ಲಿ ಹೀಗೆ ವಿಚಾರ ಮೂಡಬಹುದು, ಏನೆಂದರೆ, ಮೂರು ಗುಣಗಳು ಸಮಾನವಾಗಿದ್ದರೆ ಸತ್ವಗುಣದ ಬೆಳವಣಿಗೆ ಹೇಗೆ ಆದೀತು? ಅದರ ಉತ್ತರವು ಹೀಗಿದೆ. ಗುಣವೇ ಗುಣಗಳ ರಕ್ಷಣೆಯನ್ನು ಮಾಡುತ್ತಿರುವುದು ॥೫೨॥ ತಮೋಗುಣದ ವೃದ್ಧಿಯಾದರೆ ಆತನಿಗೆ ಜ್ಞಾನ, ಧ್ಯಾನ ಯಾವುದೂ ಪ್ರಿಯವಾಗುವುದಿಲ್ಲ. ತ್ಯಾಗದ ನಿರ್ಮಾಣವಾಗುವುದಿಲ್ಲ. ಚಂದನಾದಿ ಸುಖವಿಲಾಸವು ಬೇಕಾಗುವುದಿಲ್ಲ. ನಿದ್ರೆ ಅಥವಾ ಮಹಾಕಲಹ ಈತನಿಗೆ ಪ್ರಿಯವೆನಿಸುವವು ॥೫೩॥ ರಜೋಗುಣವು ಬೆಳೆದಿರಲು ಆತನಿಗೆ ಜ್ಞಾನದ ನಿರೂಪಣೆಯನ್ನು ಕೇಳುತ್ತಿದ್ದಂತೆ ಆತನ ಮನವು ಭೋಗ ವಿಷಯದಲ್ಲಿ ಆಸಕ್ತವಾಗುವುದು. ಆತನ ಮನದಲ್ಲಿ ಯಾವಾಗಲೂ ವಿಷಯಗಳ ಚಿಂತೆ ಇರುವುದು ॥೫೪॥ ಧನಲೋಭವು ದೃಷ್ಟಿಯಲ್ಲಿ ತುಂಬಿರಲು ಆಗ ಯಾರಾದರೂ ಕಾಲಮುರಿ ತಗೆದರೂ ಆತನಿಗೆ ಕೋಪವು ಬರುವುದಿಲ್ಲ. ಇದು ರಜೋಗುಣದ ಜಾತಿಯಾಗಿರುವುದು. ಆ ರಜೋಗುಣಿ ಮನುಷ್ಯನು ಸ್ತ್ರೀ-ಪುತ್ರ ವಿಷಯದಲ್ಲಿ ಅತಿಶಯ ಲೋಭಿಯಾಗಿರುವನು ॥೫೫॥ ಸತ್ವಗುಣವು ಬೆಳದಿರಲು ಆತನು ಸ್ತ್ರೀಯಾದಿ ಭೋಗ ವಿಷಯಕ್ಕೆ ಉದಾಸೀನನಾಗಿರುವನು. ಆತನು ನಿರಂತರವಾಗಿ ಭಗವತ್‌ಚಿಂತನೆಯನ್ನು ಮಾಡುತ್ತಿರುವನು. ಅಥವಾ ಹರಿಭಕ್ತಿಯನ್ನು ಮಾಡುತ್ತಿರುವನು ॥೫೬॥ ಕ್ರೋಧ, ಲೋಭ ಅಥವಾ ಮೋಹ ಇವುಗಳ ಲಕ್ಷಣಗಳು ಸತ್ವಗುಣದ ಆಚರಣೆಯನ್ನು ಮಾಡುತ್ತಿರಲು ಉತ್ಪನ್ನವಾಗಲಾರವು. ಆದರೆ ಸತ್ವಗುಣವು ಒಂಟಿಯಾಗಿ ಬೆಳೆಯುವುದಾದರೂ ಹೇಗೆ? ಗುಣವೇ ಗುಣಗಳ ರಕ್ಷಣೆಯನ್ನು ಮಾಡುವುದು ॥೫೭॥ ಸತ್ವಗುಣದ ಹಿಂದೆ ತಮಗುಣವಿರುವುದು ಮತ್ತು ಮುಂದೆ ರಜೋಗುಣವು ತುಂಬಿರುವುದು. ಈ ಎರಡು ಗುಣಗಳಲ್ಲಿ ಸತ್ವಗುಣವು ಸಿಕ್ಕಿಕೊಂಡಿರುವುದು. ಆದ್ದರಿಂದ ಅದರ ವೃದ್ಧಿಯು ಹೇಗಾಗಬೇಕು ? ॥೫೮॥ ಹೀಗೆ ಶಂಕೆಯನ್ನು ಮನದಲ್ಲಿ ತಂದು ಸತ್ವಗುಣವು ಬೆಳೆಯಲಾರದೆಂದು ನೀನು ಹೀಗೆ ಹೇಳಬಹುದು. ಆದರೆ ಸತ್ವಗುಣದ ವೃದ್ಧಿಯು ಹೇಗಾಗುತ್ತದೆ ಎಂಬ ಲಕ್ಷಣವನ್ನು ಹೇಳುವೆ, ಕೇಳು ॥೫೯॥

ಈ ಶ್ಲೋಕದ ಪ್ರಾರಂಭದ ನಿರೂಪಣೆಯಲ್ಲಿ ಉತ್ತರಾರ್ಧದ ವ್ಯಾಖ್ಯಾನವನ್ನು ಹೇಳುವೆನು. ಸಾತ್ವಿಕ ಪದಾರ್ಥಗಳ ಸೇವನೆಯು ಸತ್ವಬುದ್ಧಿಯ ಕಾರಣವಾಗಿರುವುದು ॥೬೦॥

ಸಾತ್ವಿಕ ಪದಾರ್ಥ ಸೇವಿತಾ । ಸತ್ತ್ವಬುದ್ಧಿ ಹೋಯ ಸರ್ವಥಾ । ಸತ್ತ್ವ ವಿಜಯೀ ವರ್ತತಾ । ಪವಿತ್ರತಾ ಜೀವಾಚೀ ॥೮೧॥ ಸತ್ತ್ವ ಉತ್ಕರ್ಷಾಚೇ ಲಕ್ಷಣ । ಧರ್ಮನಿಷ್ಠಾ ಸ್ವಧರ್ಮಾಚರಣ । ತೈಸೇ ತೇಥೀಲ ವಾಸನಾಬಂಧನ । ಇಹಾಮುತ್ರ ಜಾಣ ವಾಂಛೀನಾ ॥೮೨॥ ಝಾಲಿಯಾ ಶುದ್ಧ ಅಂತಃಕರಣ । ತೇಂವ್ಹಾ ನಿಃಸೀಮ ವಾಢೇ ಸತ್ತ್ವಗುಣ । ಪುರುಷಾಸೀ ಮದ್ಭಕ್ತಿಲಕ್ಷಣ । ಧರ್ಮ ಜಾಣ ಉಪತಿಷ್ಠೇ ॥೮೩॥ ಸತ್ತ್ವೇ ವಾಢಲ್ಯಾ ಧರ್ಮಪ್ರವೃತ್ತೀ । ತೈ ಗುರುಭಜನೀ ಅತಿಪ್ರೀತೀ । ಕಾ ಸತ್ತ್ವವಿಗ್ರಹೀ ಮಾಝೀ ಮೂರ್ತೀ । ತೇ ಠಾಯೀ ಭಕ್ತೀ ಉಲ್ಹಾಸೇ ॥೮೪॥ ಕಾಯಿಕ ವಾಚಿಕ ಮಾನಸಿಕ । ಮದರ್ಪಣ ಕರೀ ಸ್ವಾಭಾವಿಕ । ಮಜವೇಗಳಾ ಆಣಿಕ । ಭಾವಾರ್ಥ ದೇಖ ಸ್ಫುರೇನಾ ॥೮೫॥ ಗುರು ಭಗವಂತ ಅಭಿನ್ನ । ಹೇ ತೇ ಕಾಳೀ ಪ್ರಕಟೇ ಚಿನ್ಹ । ತೇ ಅತಿಸತ್ತ್ವಾಚೇ ವೋಳಖಣ । ಹೇ ಧರ್ಮ ಪೂರ್ಣಸಾತ್ತ್ವಿಕ ॥೮೬॥

ಧರ್ಮೋ ರಜಸ್ತಮೋ ಹನ್ಯಾತ್ ಸತ್ತ್ವವೃದ್ಧಿರನುತ್ತಮಃ । ಆಶು ನಶ್ಯತಿ ತನ್ಮೂಲೋ ಹ್ಯಧರ್ಮ ಉಭಯೇ ಹತೇ ॥೩॥

ಅರ್ಥ:- ಸತ್ವಗುಣದಿಂದ ಬಲಯುತವಾದ ಧಾರ್ಮಿಕ ತತ್ವಗಳು ರಜೋಗುಣ ಮತ್ತು ತಮೋಗುಣಗಳ ಪ್ರಭಾವವನ್ನು ಇಲ್ಲವಾಗಿಸುತ್ತವೆ. ರಜೋಗುಣ ಮತ್ತು ತಮೋಗುಣಗಳನ್ನು ನಿಗ್ರಹಿಸಿದರೆ ಅವುಗಳ ಮೂಲ ಕಾರಣವಾದ ಅಧರ್ಮವು ಕೂಡಲೇ ನಾಶವಾಗುತ್ತದೆ.

ಐಸಾ ವಾಢಲಿಯಾ ಸಾತ್ತ್ವಿಕ ಧರ್ಮ । ತೈ ಸತ್ತ್ವವೃದ್ಧಿ ಸರ್ವೋತ್ತಮ । ಜೇ ಸತ್ತ್ವೀ ಪ್ರಕಟೇ ಪುರುಷೋತ್ತಮ । ವಿಶ್ರಾಮಧಾಮ ಮುಮುಕ್ಷಾ ॥೮೭॥ ಏವಂ ಸತ್ತ್ವವೃತ್ತೀ ವಾಢಲಾ ಧರ್ಮ । ತೋ ತತ್ಕಾಳ ನಾಶೀ ಅಧರ್ಮ । ಅಧರ್ಮಾಚೇ ಮೂಳ ರಜತಮ । ತ್ಯಾಂಚೇ ರೂಪನಾಮ ಉರೋ ನೇದೀ ॥೮೮॥ ಸಾತ್ತ್ವಿಕಸೇವನೇ ಸತ್ತ್ವವೃದ್ಧೀ । ತೇಣೇ ಸದ್ವಿದ್ಯೇಚೀ ಉಪಲಬ್ಧೀ । ಹೇ ಉಪಾಯಾಚೀ ವಿಧಾನವಿಧೀ । ಕೃಷ್ಣ ಕೃಪಾನಿಧೀ ಬೋಲಿಲಾ ॥೮೯॥ ಕರಾವೇ ಸಾತ್ತ್ವಿಕಸೇವನ । ತೇ ಸಾತ್ವಿಕ ಪದಾರ್ಥ ಕೋಣ ಕೋಣ । ಐಕ ತ್ಯಾಂಚೇಹೀ ನಿರೂಪಣ । ದಶಲಕ್ಷಣ ಸಾಂಗೇನ ॥೯೦॥

ಆಗಮೋಽಪಃ ಪ್ರಜಾ ದೇಶಃ ಕಾಲಃ ಕರ್ಮ ಚ ಜನ್ಮ ಚ । ಧ್ಯಾನಂ ಮಂತ್ರೋಽಥ ಸಂಸ್ಕಾರೋ ದಶೈತೇ ಗುಣಹೇತವಃ ॥೪॥

ಅರ್ಥ:- ಶಾಸ್ತ್ರ, ಜಲ, ಪುತ್ರ, ದೇಶ, ಕಾಲ, ಕರ್ಮ, ಜನ್ಮ, ಧ್ಯಾನ , ಮಂತ್ರ ಮತ್ತು ಸಂಸ್ಕಾರ ಈ ಹತ್ತು ವಸ್ತುಗಳು ಸಾತ್ವಿಕವಾಗಿದ್ದರೆ ಮಾತ್ರ ಸತ್ವಗುಣವು ಬೆಳೆಯುವುದು ರಾಜಸವಾಗಿದ್ದರೆ ರಜೋಗುಣವು ಬೆಳೆಯುವುದು. ತಾಮಸವಿದ್ದರೆ, ತಮೋಗುಣವು ಬೆಳೆಯುವುದು.

ಗುಣವೃದ್ಧೀಚೇ ಕಾರಣ । ಆಗಮ ಮ್ಹಣಿಜೇ ಶಾಸ್ತ್ರ ಜಾಣ । ಆಪ ಮ್ಹಣಿಜೇ ತೇ ಜೀವನ । ಆವಡತೇ ಸ್ಥಾನ ತೋ ದೇಶೂ ॥೯೧॥

ಸಾತ್ವಿಕ ಆಹಾರವನ್ನು ಸೇವನೆ ಮಾಡಲು ಸತ್ವಗುಣದ ವೃದ್ಧಿಯಾಗುವುದು. ಮತ್ತು ಸತ್ವಗುಣವು ಬೆಳೆಯಲು ಜೀವಕ್ಕೆ ಪವಿತ್ರತೆಯು ಪ್ರಾಪ್ತವಾಗುವುದು ॥೮೧॥ ಧರ್ಮನಿಷ್ಠೆಯು ಮತ್ತು ಧರ್ಮದ ಆಚರಣೆಯು ಇವು ಸತ್ವಗುಣದ ಉತ್ಕರ್ಷದ ಲಕ್ಷಣವಾಗಿರುವುದು. ಹೀಗಾಗಿ ಆತನು ಈ ಲೋಕದ ಮತ್ತು ಪರಲೋಕದ ವಿಷಯಗಳನ್ನು ಇಚ್ಛಿಸುವುದಿಲ್ಲ ॥೮೨॥ ಅಂತಃಕರಣವು ಶುದ್ಧ ಪವಿತ್ರವಾಗಲು ಅಮರ್ಯಾದ ಸತ್ವಗುಣವು ಬೆಳೆಯುವುದು. ಮತ್ತು ಆ ಪುರುಷನಲ್ಲಿ ನನ್ನ ಭಕ್ತಿಯ ಲಕ್ಷಣವಾದ ಯಾವ ಧರ್ಮವು ಉತ್ಪನ್ನವಾಗುವುದು ॥೮೩॥ ಸತ್ವಗುಣದಿಂದ ಧರ್ಮದ ಪ್ರವೃತ್ತಿಯು ಬೆಳೆಯಲು ಗುರುಭಜನೆಯಲ್ಲಿ ಅತ್ಯಂತ ಪ್ರೇಮವು ತುಂಬುವುದು. ಮತ್ತು ನನ್ನ ಸತ್ವಾಕಾರ ಮೂರ್ತಿಯಲ್ಲಿ ಭಕ್ತಿಯು ವಿಕಾಸಗೊಳ್ಳುವುದು ॥೮೪॥ ಕಾಯಿಕ, ವಾಚಿಕ, ಮಾನಸಿಕ ಹೀಗೆ ಎಲ್ಲ ಕರ್ಮಗಳನ್ನು ಆತನು ನನಗರ್ಪಿಸುವನು. ನನ್ನ ಹೊರತಾಗಿ ಅನ್ಯರ ಭಕ್ತಿಯು ಆತನಲ್ಲಿ ಹುಟ್ಟಲಾರದು ॥೮೫॥ ಗುರು ಮತ್ತು ಭಗವಂತ ಇವರು ಭಿನ್ನರಾಗಿರುವುದಿಲ್ಲವೆಂಬ ಅನುಭವವು ಆತನಿಗೆ ಬರುವುದು. ಇದು ವಿಕಾಸಗೊಂಡಿರುವ ಭಕ್ತಿಯ ಚಿನ್ಹೆಯಾಗಿರುವುದು. ಇದುವೇ ಪೂರ್ಣವಾದ ಸಾತ್ವಿಕ ಧರ್ಮವಾಗಿರುವುದು ॥೮೬॥

ಈ ಪ್ರಕಾರವಾಗಿ ಸಾತ್ವಿಕ ಧರ್ಮವನ್ನು ಬೆಳೆಯಿಸಲು ಅತಿ ಉತ್ತಮವಾದ ಸತ್ವದ ವೃದ್ಧಿಯಾಗುವುದು. ಮತ್ತು ಆ ಸತ್ವದಲ್ಲಿ ಮುಮುಕ್ಷುಗಳ ವಿಶ್ರಾಂತಿಯ ಸ್ಥಾನನಾದ ಪುರುಷೋತ್ತಮನು ಪ್ರಕಟನಾಗುವನು ॥೮೭॥ ಈ ರೀತಿಯಾಗಿ ಸತ್ವವೃತ್ತಿಯಲ್ಲಿ ಧರ್ಮವು ಬೆಳೆಯಲು ಸಹಜವಾಗಿಯೇ ಅಧರ್ಮದ ನಾಶವಾಗುವುದು. ಅಧರ್ಮದ ಮೂಲವಾಗಿರುವ ರಜ ಮತ್ತು ತಮ ಗುಣಗಳ ನಾಮರೂಪ ಸಹ ಉಳಿಯಲಾರದು ॥೮೮॥ ಸಾತ್ವಿಕ ಪದಾರ್ಥಗಳ ಸೇವನೆಯಿಂದ ಸತ್ವಗುಣಗಳ ವೃದ್ಧಿಯಾಗುತ್ತಿರುವುದು. ಅದರಿಂದ ಸದ್ವಿದ್ಯೆಯು ಪ್ರಾಪ್ತವಾಗುವುದು. ಕೃಪಾನಿಧಿಯಾದ ಶ್ರೀಕೃಷ್ಣನು ಈ ಸದ್ವಿದ್ಯೆಯ ಪ್ರಾಪ್ತಿಯ ಉಪಾಯಗಳ ಸಾಧನೆಗಳನ್ನು ಹೇಳಿರುವನು ॥೮೯॥ ಸಾತ್ವಿಕ ಪದಾರ್ಥಗಳು ಯಾವುವು ? ಅದರ ಹತ್ತು ಲಕ್ಷಣಗಳ ನಿರೂಪಣೆಯನ್ನು ಹೇಳುವೆನು, ಕೇಳು ॥೯೦॥

ಸತ್ವ,ರಜ ಮತ್ತು ತಮ ಈ ಮೂರು ಗುಣಗಳ ವೃದ್ಧಿಯ ಕಾರಣವು ಆಗಮವಾಗಿರುವುದು. ಆಗಮವೆಂದರೆ ಶಾಸ್ತ್ರವಾಗಿರುವುದು. ಇದನ್ನು ಲಕ್ಷದಲ್ಲಿಡು. ಆಪವೆಂದರೆ ನೀರು ಮತ್ತು ತನ್ನ ಪ್ರಿಯ ಸ್ಥಾನವೆಂದರೆ ದೇಶ ॥೯೧॥

ಐಕ ಪ್ರಜಾಂಚೇ ವಿಂದಾನ । ಪ್ರಜಾ ಮ್ಹಣಿಜೇ ತ್ರಿವಿಧ ಜನ । ಜೈಸೀ ಜ್ಯಾಚೀ ಸಂಗತೀ ಜಾಣ । ತೈಸೇ ಲಕ್ಷಣ ತೋ ಪಾವೇ ॥೧೨॥ ಕಾಳ ಮ್ಹಣಿಜೇ ದಿವಸಭಾಗ । ಕರ್ಮ ಮ್ಹಣಿಜೇ ಜೇ ಜೇ ಕರೀ ಅಂಗ । ಜನ್ಮ ಮ್ಹಣಿಜೇ ದೀಕ್ಷಾ ಸಾಂಗ । ಮಂತ್ರಾಚೇ ಲಿಂಗ ಯಥಾರುಚಿ ॥೧೩॥ ಕರ್ತ್ಯಾಚಾ ಜೇಥ ಅತ್ಯಾದರೂ । ತ್ಯಾ ನಾಂವ ಬೋಲಿಜೇ ಸಂಸ್ಕಾರೂ । ಹಾ ದಶಲಕ್ಷಣಪ್ರಕಾರೂ । ಗುಣವೃದ್ಧಿ ವಿಚಾರೂ ತೋ ಐಕ ॥೧೪॥ ಯೇಥ ಸತ್ತ್ವವೃದ್ಧೀಸೀ ಪ್ರಸ್ತುತ । ಸಾಧಕಾಂಸೀ ಶಾಸ್ತ್ರ ನಿವೃತ್ತ । ಉಪನಿಷದ್ಭಾಗೇಸೀ ವೇದಾಂತ । ತ್ಯಾಚಾ ಮಥಿತಾರ್ಥ ಸೇವಾವಾ ॥೧೫॥ ಆಪ ಮ್ಹಣಿಜೇ ಜಳಪವಿತ್ರತಾ । ಗೌತಮೀಭಾಗೀರಥ್ಯಾದಿ ಪುಣ್ಯಸರಿತಾ । ಜ್ಯಾಂಚಾ ಅವಚಟೇ ಶಿಂತೋಡಾ ಲಾಗತಾ । ಪಾಪ ಸರ್ವಥಾ ಉರೇನಾ ॥೧೬॥ ಕಾ ಮಾಝ್ಯಾ ಪ್ರತಿಮಾಂಚೇ ಚರಣಾಮೃತ । ಜ್ಯಾಲಾಗೀ ಬ್ರಹ್ಮಾದಿಕ ಆರ್ತಭೂತ । ಕಿಂವಾ ಶಾಲಿಗ್ರಾಮಶಿಳೇಚೇ ತೀರ್ಥ । ಸಕಳ ದುರಿತ ನಿವಾರೀ ॥೧೭॥ ಜೇಣೇ ಸಕಳ ತೀರ್ಥೇ ಹೋತೀ ಪಾವನ । ತೇ ಬ್ರಾಹ್ಮಣಾಚೇ ಚರಣತೀರ್ಥ ಜಾಣ । ಸ್ವಯೇ ವಂದೀ ಶ್ರೀನಾರಾಯಣ । ನಿಜಹೃದಯೀ ಚರಣ ವಾಹತಸೇ ॥೧೮॥ ಭಲತೈಸೇ ಹೋ ಕಾ ಪಾಣೀ । ಜೇ ಲಾಗಲೇ ಸದ್ಗುರುಚರಣೀ । ತೇ ಸಕಳ ತೀರ್ಥಾ ಶಿರೋಮಣೀ । ಸೇವಿತಾ ತತ್ಕ್ಷಣೀ ಉದ್ಧರೀ ॥೧೯॥ ಸತ್ತ್ವವೃದ್ಧೀಚೇ ಕಾರಣ ಆಪ। ತೇ ಇಯೇ ತೀರ್ಥೀ ಜಾಣ ಪುಣ್ಯರೂಪ । ಸೇವಿತಾ ಸತ್ತ್ವವೃದ್ಧೀಚೇ ಸ್ವರೂಪ । ಆಪೋ ಆಪ ಪ್ರಕಾಶೇ ॥೨೦॥ ಪ್ರಜಾ ಮ್ಹಣಿಜೇ ಮಹಾಜನ । ಸೇವಾವೇ ಸಾಧು ಸಜ್ಜನ । ಜ್ಯಾಂಚೇ ಸಂಗತೀಸ್ತವ ಜಾಣ । ಉದ್ಧರಣ ಜಡಜೀವಾ ॥೨೧॥ ಸತ್ತ್ವವೃದ್ಧೀಸೀ ಕಾರಣ । ಮುಖ್ಯತ್ವೆ ಸತ್ಸಂಗತೀಚಿ ಜಾಣ । ತ್ಯಾ ಸತ್ಸಾಂಗಾಚೇ ಮಹಿಮಾನ । ಕೇಲೇ ನಿರೂಪಣ ದ್ವಾದಶೀ ॥೨೨॥ ದೇಶೂ ಪುಣ್ಯಭೂಮಿಕಾ ಸಿದ್ಧಿಸ್ಥಳ । ವಿಜನವಾಸೂ ಏಕಾಂತಶೀಳ । ಜೇಥ ಬೈಸತಾಂಚಿ ತತ್ಕಾಳ । ಸತ್ತ್ವಾಸೀ ಬಳ ಚಢೋವಢೀ ॥೨೩॥ ಏಕಾಂತೀ ಸ್ಥಿರಾವಲ್ಯಾ ಆಸನ । ಸಹಜೇ ವಾಢೇ ಸತ್ತ್ವಗುಣ । ಮನೀ ಹವ್ಯಾಸೂ ಚಢತಾ ಜಾಣ । ವಸ್ತು ಚಿದ್‌ಘನ ಸಾಧಾವಯಾ ॥೨೪॥ ಸಾಧಕಾಂಸೀ ಕಾಳ ಯಥೋಚಿತ । ಅವಶ್ಯ ಬ್ರಾಹ್ಮಮುಹೂರ್ತ । ಕಾ ಜೇ ಕಾಳೀ ಉದ್ವೇಗರಹಿತ । ಹರ್ಷಯುಕ್ತ ಮನ ಹೋಯ ॥೨೫॥

ಈಗ ಪ್ರಜೆಯ ಲಕ್ಷಣವನ್ನು ಕೇಳು. ಪ್ರಜೆಯೆಂದರೆ ಮೂರು ಪ್ರಕಾರದ ಜನರು. ಯಾರಿಗೆ ಯಾರ ಸಂಗತಿ ಇರುವುದೋ, ಅವರಿಗೆ ಅವರ ಲಕ್ಷಣವು ಪ್ರಾಪ್ತವಾಗುವುದು ॥೧೨॥ ಕಾಲವೆಂದರೆ ದಿನಗಳ ವಿಭಾಗವು. ಶರೀರವು ಮಾಡುವ ಯಾವತ್ತೂ ಕ್ರಿಯೆಗಳು ಕರ್ಮವಾಗಿರುವುದು. ಜನ್ಮವೆಂದರೆ ಉತ್ತಮ ಪ್ರಕಾರದ ದೀಕ್ಷೆ. ಮಂತ್ರಗಳ ಲಕ್ಷಣವನ್ನು ತಮ್ಮ ಅಪೇಕ್ಷೆಯಂತೆ ತಿಳಿಯಬೇಕು ॥೧೩॥ ಯಾವ ಕಾರ್ಯಗಳಲ್ಲಿ ಅತಿಶಯವಾದ ಆದರವಿರುವುದೋ, ಅದಕ್ಕೆ ಸಂಸ್ಕಾರವೆಂದು ಹೇಳಬೇಕು. ಹೀಗೆ ಇವು ಹತ್ತು ಪ್ರಕಾರಗಳ ಲಕ್ಷಣಗಳಾಗಿರುವುವು. ಈಗ ಗುಣಗಳ ಬೆಳವಣಿಗೆಯ ವಿಚಾರವನ್ನು ಹೇಳುವೆನು, ಕೇಳು ॥೧೪॥ ಸತ್ವ ಗುಣದ ವೃದ್ಧಿಗಾಗಿ ಸಾಧಕನಿಗೆ ನಿವೃತ್ತಿಪರ ವೇದಾಂತ ಶಾಸ್ತ್ರವು ವಿಹಿತವಾಗಿರುವುದು. ಆದ್ದರಿಂದ ಆತನು ಉಪನಿಷದ್‌ಗಳ ಸಮೇತ ವೇದಾಂತದ ಮಥಿತಾರ್ಥವನ್ನು ಗ್ರಹಣ ಮಾಡಬೇಕು ॥೧೫॥ ಆಪವೆಂದರೆ ಜಲದ ಪವಿತ್ರತೆಯು. ಗೋದಾವರೀ, ಭಾಗೀರಥೀ ಇತ್ಯಾದಿ ಪವಿತ್ರ ನದಿಗಳು. ಅಕಸ್ಮಾತ್ತಾಗಿ ಇವುಗಳ ಒಂದು ಹನಿಯು ಬಡಿದರೆ ಸಾಕು, ಪಾಪಗಳು ಸರ್ವಥಾ ಉಳಿಯಲಾರವು ॥೧೬॥ ಯಾವುದಕ್ಕಾಗಿ ಬ್ರಹ್ಮಾದಿಕ ದೇವತೆಗಳೂ ಕೂಡ ಅಪೇಕ್ಷೆಪಡುವಂತಹ ನನ್ನ ಪ್ರತಿಮೆಯ ಚರಣಾಮೃತವನ್ನು ಸೇವಿಸುವುದು. ಅಥವಾ ಶಾಲಿಗ್ರಾಮದ ತೀರ್ಥವೂ ಕೂಡ ಸರ್ವ ಪಾಪಗಳ ನಾಶಮಾಡುವುದು ॥೧೭॥ ಯಾವುದರಿಂದ ಸರ್ವ ತೀರ್ಥಗಳು ಪಾವನವಾಗುವುವೋ, ಅಂತಹ ಬ್ರಾಹ್ಮಣರ ಚರಣತೀರ್ಥವನ್ನು ಸ್ವತಃ ನಾರಾಯಣನು ವಂದ್ಯವೆಂದು ಮಾನ್ಯ ಮಾಡುವನು. ಮತ್ತು ಅವರ ಚರಣವನ್ನು ಹೃದಯದಲ್ಲಿ ಧರಿಸಿರುವನು ॥೧೮॥ ಎಂತಹದ್ದೇ ಜಲವಾಗಲಿ ಅದು ಸದ್ಗುರುಗಳ ಚರಣಗಳಿಗೆ ಮುಟ್ಟಿದರೆ ಸಾಕು, ಅದು ಸರ್ವ ತೀರ್ಥಗಳಿಗಿಂತಲೂ ಶ್ರೇಷ್ಠವಾಗುವುದು. ಮತ್ತು ಇದರ ಸೇವನೆಯಿಂದ ತತ್ಕಾಲದಲ್ಲಿ ಉದ್ಧಾರವಾಗುವುದು ॥೧೯॥ ಸತ್ವವೃದ್ಧಿಯ ಕಾರಣವು ಉದಕವಾಗಿರುವುದು. ಇದು ಈ ಯಾವ ತೀರ್ಥಗಳಿಂದ ಪಾವನವಾಗುವುದು. ಇದರ ಸೇವನೆಯಿಂದ ಸತ್ವವೃದ್ಧಿಯ ಸ್ವರೂಪವು ಸಹಜವಾಗಿಯೇ ಪ್ರಕಟವಾಗುವುದು ॥೨೦॥ ಪ್ರಜಾವೆಂದರೆ ಮಹಾಜನರಾಗಿರುವರು. ಇವರಲ್ಲಿ ಸಾಧು ಮತ್ತು ವೈರಾಗ್ಯಶೀಲ ಪುರುಷರ ಸೇವೆಯನ್ನು ಮಾಡಬೇಕು. ಕಾರಣ ಇವರ ಸಂಗತಿಯಿಂದ ಜಡಜೀವಿಗಳ ಉದ್ಧಾರವಾಗುವುದು ॥೨೧॥ ಸದ್ಬುದ್ಧಿಯ ಕಾರಣವು ಮುಖ್ಯವಾಗಿ ಸತ್ಸಂಗತಿಯೇ ಆಗಿರುವುದು. ಈ ಯಾವ ಸತ್ಸಂಗತಿಯ ಮಹಿಮೆಯನ್ನು ಹನ್ನೆರಡನೆಯ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಿದೆ ॥೨೨॥ ಈಗ ದೇಶವೆಂದರೆ ನೈಮಿಷಾರಣ್ಯಾದಿ ಪುಣ್ಯಭೂಮಿ ಅಥವಾ ಸಿದ್ಧಿ ಪ್ರಾಪ್ತವಾಗುವ ಸ್ಥಳ. ಇದು ದೇಶವಾಗಿರುವುದು. ಈ ದೇಶದಲ್ಲಿನ ಏಕಾಂತ ಮತ್ತು ನಿರ್ಜನ ಪ್ರದೇಶದಲ್ಲಿ ಕುಳಿತಾಕ್ಷಣವೇ ಕೂಡಲೇ ಸತ್ತ್ವಗುಣವು ಪ್ರಾಪ್ತವಾಗುವುದು ॥೨೩॥ ಏಕಾಂತದಲ್ಲಿ ಆಸನವನ್ನು ಹಾಕುವ ಅಭ್ಯಾಸವು ಪೂರ್ಣಗೊಳ್ಳಲು ಮತ್ತು ಚಿತ್‌ಘನವಾಗಿರುವ ಪರಮಾತ್ಮನ ಪ್ರಾಪ್ತಿ ಮಾಡಿಕೊಳ್ಳಬೇಕೆಂಬ ಬಯಕೆಯು ಬೆಳೆಯುತ್ತಲೇ ಸಹಜವಾಗಿಯೇ ಸತ್ವಗುಣವು ಬೆಳೆಯುತ್ತ ಸಾಗುವುದು ॥೨೪॥ ಇದರಂತೆ ಸಾಧಕರ ಯೋಗ್ಯ ಕಾಲವೆಂದರೆ ಬ್ರಹ್ಮ ಮುಹೂರ್ತವು ಅಂದರೆ ರಾತ್ರಿಯ ಕೊನೆಯ ಘಳಿಗೆಯಾಗಿರುವುದು. ಪ್ರಾತಃಕಾಲವೇ ಸಾಧಕರ ಯೋಗ್ಯ ಕಾಲವಾಗಿರುವುದು. ಕಾರಣ ಆ ವೇಳೆಯಲ್ಲಿ ಮನವು ಉದ್ವೇಗರಹಿತ ಪ್ರಸನ್ನವಾಗಿರುವುದು. ಈ ಕಾಲವೇ ಯೋಗ್ಯವಾಗಿರುವುದು ॥೨೫॥

ಪ್ರೇಮಯುಕ್ತ ಅಂತಃಕರಣೇ । ಜೋ ಕಾಳ ಜಾಯ ಕಥಾಶ್ರವಣೇ । ಕಾ ಜಯಂತ್ಯಾದಿ ಮಹಾಪೂಜಾ ಕರಣೇ । ಜಾಗರಣೇ ಹರಿದಿನೀ ॥೭೬॥ ಥೋರ ಕಾಳಾಚೇ ಸಾರ್ಥಕತಾ । ಹರಿಕೀರ್ತನೀ ಗಾತಾ ನಾಚತಾ । ತ್ಯಾ ಕಾಳಾಚಾ ಮಹಿಮಾ ತತ್ತ್ವತಾ । ಮಾರ್ಝೇನ ಸರ್ವಥಾ ನ ಬೋಲವೇ ॥೭೭॥ ನಿರಭಿಮಾನ ಕೀರ್ತನ ಕರಣೇ । ನಿರ್ಲೋಭ ಗಾಣೇ ನಾಚಣೇ । ತೋ ಕಾಳೂ ವಂದಿಜೇ ಮ್ಯಾ ಶ್ರೀಕೃಷ್ಣೇ । ಮಹಿಮಾ ಕೋಣೇ ಬೋಲಾವಾ ॥೭೮॥ ಕರ್ಮ ಮ್ಹಣಿಜೇ ತೇ ನಿವೃತ್ತ । ಜೇ ಆಶಾಪಾಶಫಳರಹಿತ । ಕಾ ಕ್ರಿಯಾ ಜೇ ಉಪಕಾರಾರ್ಥ । ಸಾತ್ತ್ವಿಕ ನಿಶ್ಚಿತ ತೇ ಕರ್ಮ ॥೭೯॥ ಗುರುಪಾಸೋನಿ ದೀಕ್ಷಾ ಗ್ರಹಣ । ತೇ ಪುರುಷಾಸೀ ನವೇ ಜನ್ಮ ಜಾಣ । ಗುರು ಮಾಯಬಾಪ ಸಂಪೂರ್ಣ ।ತೇ ಐಕ ಲಕ್ಷಣ ಉದ್ಧವಾ ॥೮೦॥ ಉಪಜಲಿಯಾ ಬಾಳಕಾಸೀ ತತ್ತ್ವತಾ । ಪಂಚವಿಧ ಜಾಣ ಪಿತಾ । ಜನಿತಾ ಆಣ ಉಪನೇತಾ । ತಿಜಾ ಪ್ರತಿಪಾಳಿತಾ ಅನ್ನದಾನೇ ॥೮೧॥ ಜೋ ಭಯಾಪಾಸೂನಿ ಸೋಡವಿತಾ । ಜೋ ಬಂಧವಿಮೋಚನ ಕರವಿತಾ । ಜೋ ದೇಹಾಚೇ ಮರಣ ಚುಕವಿತಾ । ತೋಹೀ ಪಿತಾ ಶಾಸ್ತ್ರಾರ್ಥೇ ॥೮೨॥ ಯಾವೇಗಳಾ ಪಾಂಚವಾ ಪಿತಾ । ಜೋ ಝಾಡಣೇ ಕರೀ ಪಂಚಭೂತಾ । ಮೃತ್ಯೂಪಾಸೂನ ಸೋಡವಿತಾ । ಜೋ ಗರ್ಭವ್ಯಥಾ ನಿವಾರೀ ॥೮೩॥ ಜ್ಯಾಚೇ ದೇಖಿಲಿಯಾ ಚರಣ । ಬಾಧೂ ನ ಶಕೇ ಭವಬಂಧನ । ತೋ ಸದ್ಗುರು ಪಿತಾ ಜಾಣ । ಭಾಗ್ಯೇವೀಣ ನ ಪಾವಿಜೇ ॥೮೪॥ ಉಪಜಲ್ಯಾ ಬಾಳಕಾಸೀ ಸರ್ವಥಾ । ವೇಗಳಾಲೀ ಮಾತಾ ಪಿತಾ ।ಏಕ ವೀರ್ಯಾತೇ ನಿಕ್ಷೇಪಿತಾ । ಧಾರಣಪೋಷಣತಾ ಜನನೀಚೀ ॥೮೫ ತೈಸಾ ಸದ್ಗುರು ನವ್ಹೇ ಪಿತಾ । ನಿಜವೀರ್ಯ ನ ವೇಚಿತಾ । ಯೋನಿದ್ವಾರೇ ನುಪಜವಿತಾ । ಜನನೀ ಜನಿತಾ ಸ್ವಯೇ ಝಾಲಾ ॥೮೬॥ ಉದರಾಬಾಹೇರೀ ಘಾತಲ್ಯಾ ಪಾಠೀ । ಮಾತಾ ಪುತ್ರಸ್ನೇಹೇ ಕಳವಳಾ ಉಠೀ । ಬಾಹೇರಿಲೇ ಸೂನಿ ಆಪುಲೇ ಪೋಟೀ । ನಿಜಸ್ನೇಹೇ ಗೋಮಟೀ ಗುರುಮಾತಾ ॥೮೭॥ ಯಾಲಾಗೀ ಶಿಷ್ಯಾಸೀ ತತ್ತ್ವತಾ । ಸದ್ಗುರುಚಿ ಮಾತಾ ಪಿತಾ । ನಿಜಸ್ನೇಹೇ ವಾಢವಿತಾ । ತದಾತ್ಮತಾ ಅಭೇದೇ ॥೮೮॥ ಮಾಗೀಲ ಪಿತೇ ಜೇ ಚೌಘೇಜಣ । ತೇ ಯಾಚೇ ಸಾವತ್ರ ಬಾಪ ಜಾಣ। ಮಾತಾ ಪಿತಾ ಭಿನ್ನ ಭಿನ್ನ । ಸಖೇಪಣ ತ್ಯಾ ಕೈಚೇ ॥೮೯॥

ಪ್ರೇಮಪೂರ್ಣ ಅಂತಃಕರಣದಿಂದ ಕೀರ್ತನೆಯನ್ನು ಶ್ರವಣ ಮಾಡುವುದರಲ್ಲಿ ಕಳೆಯುವ ಕಾಲವು ಹಾಗೂ ಜಯಂತಿಗಳು ಆದಿಯಾಗಿ ಮಹಾಪೂಜೆ ಮಾಡುವ, ಏಕಾದಶಿಯಲ್ಲಿ ಜಾಗರಣೆ ಮಾಡುವ ಕಾಲವು ॥೭೬॥ ಈ ಕಾಲವೇ ನಿಜವಾದ ಸಾರ್ಥಕತೆಯಾಗಿರುವುದು. ಹರಿಕೀರ್ತನದಲ್ಲಿ ಹಾಡುತ್ತ, ಕುಣಿಯುತ್ತ ಕಳೆಯುವ ಕಾಲವು, ಈ ಕಾಲದ ಮಹಿಮೆಯನ್ನು ನನಗೆ ವರ್ಣಿಸಲು ಸಾಧ್ಯವಿಲ್ಲ ॥೭೭॥ ಅಭಿಮಾನರಹಿತನಾಗಿ ಕೀರ್ತನೆಯನ್ನು ಮಾಡುವುದು, ಲೋಭರಹಿತನಾಗಿ ಹಾಡುವುದು ಮತ್ತು ನರ್ತಿಸುವುದು ಹೀಗೆ ಇದರಲ್ಲಿ ಉಪಯೋಗವಾಗುವ ಕಾಲಕ್ಕೆ ಶ್ರೀಕೃಷ್ಣನಾದ ನಾನು ವಂದಿಸುವೆನು! ಇದರ ಮಹಿಮೆಯನ್ನು ಏನೆಂದು ವರ್ಣಿಸಬೇಕು? ॥೭೮॥ ಯಾವುದು ಆಶಾಪಾಶರಹಿತ ನಿಷ್ಕಾಮ ಅಥವಾ ಪರೋಪಕಾರಕ್ಕಾಗಿ ಮಾಡುವ ಸಾತ್ವಿಕ ಕರ್ಮವು, ಇದುವೇ ಇಲ್ಲಿ ಹೇಳಿದ ಕರ್ಮವಾಗಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ ॥೭೯॥ ಗುರುಗಳಿಂದ ದೀಕ್ಷೆಯನ್ನು ಪಡೆಯುವಿಕೆಯು ಇದು ಪುರುಷನ ಒಂದು ಹೊಸ ಜನ್ಮವಾಗಿರುವುದು. ಇದನ್ನು ಲಕ್ಷದಲ್ಲಿಡು. ಹೇ ಉದ್ಧವಾ, ಗುರುಗಳು ಪರಿಪೂರ್ಣವಾಗಿ ತಾಯಿತಂದೆಯಾಗಿರುವರು. ಇವರ ಲಕ್ಷಣವನ್ನು ಕೇಳು ॥೮೦॥ ಹುಟ್ಟಿದ ಬಾಲಕನಿಗೂ ಕೂಡ ಐದು ಪ್ರಕಾರಗಳ ಪಿತೃಗಳಿರುವರು. ಒಬ್ಬನು ಜನ್ಮವನ್ನು ಕೊಡುವವನು, ಎರಡನೆಯವನು ಉಪನಯನವನ್ನು ಮಾಡುವವನು, ಮೂರನೆಯವನು ಅನ್ನವನ್ನು ಕೊಟ್ಟು ಪ್ರತಿಪಾಲನೆಯನ್ನು ಮಾಡುವವನು ॥೮೧॥ ಸರ್ವ ಪ್ರಕಾರದ ಭಯದಿಂದ ಬಿಡಿಸುವವನು, ಬಂಧನೆಯಿಂದ ಮುಕ್ತ ಮಾಡುವವನು ಮತ್ತು ದೇಹದ ಮರಣವನ್ನು ತಪ್ಪಿಸುವವನು, ಇವರೆಲ್ಲರೂ ಶಾಸ್ತ್ರದಂತೆ ತಂದೆಯೇ ಆಗಿರುವರು ॥೮೨॥ ಇವರಲ್ಲದೇ ಮತ್ತೊಬ್ಬನಾದ ಐದನೆಯ ಪಿತನಿರುವನು. ಆತನು ಪಂಚ ಮಹಾಭೂತಗಳ ನಿರಸನೆಯನ್ನು ಮಾಡಿ ಮೃತ್ಯುವಿನಿಂದ ಬಿಡಿಸುವನು ಮತ್ತು ಗರ್ಭವಾಸವನ್ನು ತಪ್ಪಿಸುವನು ॥೮೩॥ ಆತನ ಚರಣಗಳು ದೃಷ್ಟಿಗೆ ಬೀಳುತ್ತಲೇ ಸಂಸಾರದ ಬಂಧನೆಯು ಬಾಧಿಸುವುದಿಲ್ಲ. ಆ ಯಾವ ಸದ್ಗುರು ಅಂದರೆ ಪಿತನೇ ಆಗಿರುವನು. ಈತನು ಭಾಗ್ಯವಿಲ್ಲದೇ ದೊರಕಲಾರನು ॥೮೪॥ ಹುಟ್ಟಿರುವ ಬಾಲಕನ ತಾಯೀ, ತಂದೆಯವರು ಭಿನ್ನ ವ್ಯಕ್ತಿಯಾಗಿರುವರು. ಪಿತನು ತನ್ನ ವೀರ್ಯವನ್ನು ಕೊಟ್ಟವನಾಗಿರುವನು. ಆದರೆ ತಾಯಿಯು ಆ ವೀರ್ಯದ ಧಾರಣೆಯನ್ನು ಮಾಡಿ ಗರ್ಭದ ಪೋಷಣೆಯನ್ನು ಮಾಡಿರುವಳು ॥೮೫॥ ಆದರೆ ಸದ್ಗುರು ಆದ ಈತನು ಇಂತಹ ಪಿತನಲ್ಲ. ಈತನ ಕಾರ್ಯವು ತಾಯಿತಂದೆಯವರಂತೆ ಇರುವುದಿಲ್ಲ. ಆದರೆ ಈತನು ಆತ್ಮಪ್ರೇಮದಿಂದ ಸ್ವತಃ ತಾನೇ ಮಾತಾಪಿತನಾಗಿರುವನು ॥೮೬॥ ಹೊಟ್ಟೆಯಿಂದ ಹೊರಗೆ ಬಂದ ಮೇಲೆ ತಾಯಿಗೆ ಪುತ್ರಪ್ರೇಮದ ಕಳಕಳಿಯು ಉತ್ಪನ್ನವಾಗುತ್ತಿರುವುದು. ಆದರೆ ಗುರುಮಾತೆಯು ಹೊರಗಿನ ಸರ್ವ ದೋಷಗಳನ್ನು ತನ್ನ ಹೊಟ್ಟೆಯಲ್ಲಿ ಹಾಕಿಕೊಂಡು ನಿಜವಾದ ಪ್ರೇಮವನ್ನು ಬೆಳೆಯಿಸುವಳು ॥೮೭॥ ಇದಲ್ಲದೇ ಸದ್ಗುರುಗಳೇ ವಾಸ್ತವಿಕವಾಗಿ ಮಾತಾಶ್ರೀ - ಪಿತಾಶ್ರೀ ಆಗಿರುವರು. ಗುರುಗಳು ಆತ್ಮಪ್ರೇಮದಿಂದ ಶಿಷ್ಯನಿಗೆ ಬೆಳೆಯಿಸುವರು ಮತ್ತು ಅಭೇದ ಭಾವನೆಯ ಯೋಗದಿಂದ ಗುರುಶಿಷ್ಯರ ತಾದಾತ್ಮ್ಯವಾಗುತ್ತಿರುವುದು ॥೮೮॥ ಈ ಮೊದಲು ಹೇಳಿರುವ ನಾಲ್ಕು ಪ್ರಕಾರದ ತಂದೆಯವರು ಇವರು ಸವತಿಭಾವದ ತಂದೆಯವರೆಂದು ತಿಳಿ. ತಾಯೀ ಮತ್ತು ತಂದೆ ಈ ಈರ್ವರೂ ಭಿನ್ನ ಭಿನ್ನ ಇರುವುದರಿಂದ ಅವರಲ್ಲಿ ಸಖ್ಯತ್ವವು ಹೇಗೆ ಇದ್ದೀತು? ॥೮೯॥

ಯಾಲಾಗೀ ಸದ್ಗುರು ಜೋ ಸಕೃಪೂ । ತೋ ಸಚ್ಛಿಷ್ಯಾಸೀ ಸಖಾ ಬಾಪೂ । ಪಿತ್ಯಾ ಪುತ್ರಾಮಾಜೇ ಅಲ್ಪೂ । ಕಾಂಹೀ ವಿಕಲ್ಪೂ ಉಪಜೇನಾ ॥೯೦॥ ತ್ಯಾ ಸದ್ಗುರೂಪಾಸೂನ ಜಾಣ । ಶೈವೀವೈಷ್ಣವೀದೀಕ್ಷಾಗ್ರಹಣ । ಅಥವಾ ಉಪದೇಸೀ ನಿರ್ಗುಣ । ಚೈತನ್ಯಘನ ನಿಜಬೋಧೇ ॥೯೧॥ ಐಕ ದೀಕ್ಷಾ ನಾಮಾಚೀ ಯುಕ್ತೀ । ದೇ ಚಾರೀ ಪುರುಷಾರ್ಥ ಚಾರೀ ಮುಕ್ತೀ । ನಿಃಶೇಷ ಅವಿದ್ಯೇಚೀ ನಾಶೀ ಸ್ಥಿತೀ । ದೀಕ್ಷಾ ವ್ಯುತ್ಪತ್ತೀ ತ್ಯಾ ನಾಂವ ॥೯೨॥ ಏವಂ ದೀಕ್ಷಾ ಜನ್ಮಾಚೀ ಜೇ ಕಥಾ । ಉದ್ಧವಾ ಸಾಂಗೀತಲೀ ಮ್ಯಾ ತತ್ತ್ವತಾ । ಧ್ಯಾನನಿಷ್ಠ ಜೇ ಸಾತ್ತ್ವಿಕತಾ । ಐಕ ಆತಾ ಸಾಂಗೇನ ॥೯೩॥ ಸತ್ತ್ವೋಪಾಧಿ ಶರೀರ ಸಾಚೇ । ಚೈತನ್ಯಘನ ಸ್ವರೂಪ ಜ್ಯಾಚೇ । ತೋ ಶ್ರೀವಿಷ್ಣು ಧ್ಯೇಯ ಸಾತ್ತ್ವಿಕಾಂಚೇ । ಧ್ಯಾನ ತ್ಯಾಚೇ ಕರಾವೇ ॥೯೪॥ ಅಥವಾ ಧವಳಧಾಮ ಗೋಕ್ಷಿರ । ಕರ್ಪೂರಗೌರ ಪಂಚವಕ್ತ್ರ । ಧ್ಯಾನೀ ಆಣಾವಾ ಶಂಕರ । ಸಂಸಾರಪಾರ ತರಾವಯಾ ॥೯೫॥ ಯಾ ಮೂರ್ತೀಚೇ ಧ್ಯಾನ ಕರಿತಾ । ಹಾರಪೇ ಧ್ಯೇಯ ಧ್ಯಾನ ಧ್ಯಾತಾ । ಠಸಾವೇ ಚೈತನ್ಯಘನತಾ । ಸಾತ್ತ್ವಿಕತಾ ಹೇ ಧ್ಯಾನ ॥೯೬॥ ಜೈಸೀ ದೀಕ್ಷಾ ತೈಸೇ ಧ್ಯಾನ । ಹೇ ಆಗಮಶಾಸ್ತ್ರೀಚೇ ಪ್ರಮಾಣ । ತ್ಯಾ ಧ್ಯಾನಾಚೇ ಪರ್ಯವಸನ । ಚೈತನ್ಯಘನ ಪಾವಾವೇ ॥೯೭॥ ಕೇವಳ ಜೇ ಚೈತನ್ಯಘನ । ತೇ ಸದ್ಗುರುಸ್ವರೂಪ ಜಾಣ । ತ್ಯಾಚೇ ಕರಾವೇ ನಿತ್ಯ ಧ್ಯಾನ । ಅನುಸಂಧಾನ ನಿಜನಿಷ್ಠಾ ॥೯೮॥ ಪಂಚಭೂತದೇಹಾಚೀ ಮೂಸ । ತೇಥ ವೋತಿಲಾ ಬ್ರಹ್ಮರಸ । ಗುರುಸ್ವರೂಪ ತೇ ಸವಿಲಾಸ । ಧ್ಯಾನ ರಾತ್ರಂದಿವಸ ಕರಾವೇ ತ್ಯಾಚೇ ॥೯೯॥ ಸಾತ್ವಿಕಾಂಚೇ ಜೇ ಕಾ ಧ್ಯಾನ । ತೇ ಹೇ ತೂ ಉದ್ಧವಾ ಜಾಣ । ಆತಾ ಮಂತ್ರಾಚೇ ಮಂತ್ರಗ್ರಹಣ । ತೇಹೀ ನಿರೂಪಣ ಅವಧಾರೀ ॥೧೦೦॥ ಸಕಳ ಮಂತ್ರಾಚೀ ಜನನೀ । ಜೇ ದ್ವಿಜನ್ಮಾ ಕರೀ ತತ್ಕ್ಷಣೀ । ಗಾಯತ್ರೀಚ್ಯಾ ಮಂತ್ರಗ್ರಹಣೀ । ಬ್ರಾಹ್ಮಣಪಣೀ ಅಧಿಕಾರೂ ॥೧೦೧॥ ಜೇ ಸಕಳ ಮಂತ್ರಾಚಾ ರಾಜಾ । ಜೇ ವಾಂಟ್ಯಾ ಆಲೀ ಅಸೇ ದ್ವಿಜಾ । ಜಿಚೇನಿ ಧಾಕೇ ದ್ವಿಜಪೂಜಾ । ಮಜ ಅಧೋಕ್ಷಜಾ ಕರಣೇ ಪಡೇ ॥೧೦೨॥ ತೇ ಗ್ರಾಯತ್ರೀ ಸ್ವಭಾವತಾ । ಆಲೀ ಅಸೇ ಬ್ರಾಹ್ಮಣಾಂಚ್ಯಾ ಹಾತಾ । ತಿಚೇ ಉಪೇಕ್ಷಾ ಕರಿತಾ । ಲೌಲ್ಯೇ ದರಿದ್ರತಾ ಪಾವಲೇ ॥೧೦೩॥ ಗಾಯತ್ರಿನಿಷ್ಠ ಜೋ ಬ್ರಾಹ್ಮಣ । ತ್ಯಾಚೇ ಮಸ್ತಕೀ ಮೀ ವಂದೀ ಚರಣ । ಮಂತ್ರೀ ಗಾಯತ್ರೀ ಶ್ರೇಷ್ಠ ಜಾಣ । ವೇದ ಪ್ರಮಾಣ ಯೇ ಅರ್ಥೀ ॥೧೦೪॥

ಅದಕ್ಕಾಗಿಯೇ ಕೃಪಾಮೂರ್ತಿಯಾದ ಸದ್ಗುರುಗಳೇ ಶಿಷ್ಯನಿಗೆ ನಿಜವಾದ ಪಿತನಾಗಿರುವರು. ಆದ್ದರಿಂದ ಈ ಪಿತಾ-ಪುತ್ರರಲ್ಲಿ ಎಂದಿಗೂ ವಿಕಲ್ಪವು ನಿರ್ಮಾಣವಾಗುವುದಿಲ್ಲ ॥೯೦॥ ಸದ್ಗುರುಗಳಿಂದ ಆ ಯಾವ ಶಿಷ್ಯನು ಶೈವೀ ಅಥವಾ ವೈಷ್ಣವ ದೀಕ್ಷೆಯನ್ನು ಪಡೆಯುವನು ಅಥವಾ ಆತ್ಮಜ್ಞಾನದ ಚೈತನ್ಯಘನವಾಗಿರುವ ನಿರ್ಗುಣದ ಉಪದೇಶವನ್ನು ಪಡೆಯುವನು ॥೯೧॥ ಈಗ ದೀಕ್ಷೆಯ ಲಕ್ಷಣವನ್ನು ಕೇಳು. ಯಾವುದು ನಾಲ್ಕು ಪುರುಷಾರ್ಥಗಳನ್ನು ಮತ್ತು ನಾಲ್ಕೂ ಮುಕ್ತಿಗಳನ್ನು ಕೊಟ್ಟು ಹಾಗೂ ಅವಿದ್ಯೆಯನ್ನು ಪೂರ್ಣವಾಗಿ ಇಲ್ಲದಂತೆ ಮಾಡುವುದೋ, ಅದರ ನಾಮವು ದೀಕ್ಷೆ ಎಂದು ಇರುವುದು ॥೯೨॥ ಹೇ ಉದ್ಧವಾ, ಈ ರೀತಿಯಾಗಿ ದೀಕ್ಷಾರೂಪ ಜನ್ಮದ ಯಾವ ಕಥೆಯನ್ನು ನಾನು ನಿನಗೆ ಹೇಳಿದೆನು. ಧ್ಯಾನನಿಷ್ಠವಾದ ಸಾತ್ವಿಕತೆಯನ್ನು ಕುರಿತು ಹೇಳುವೆ ॥೯೩॥ ಯಾರ ಶರೀರವು ಸತ್ತ್ವೋಪಾಧಿಯಾಗಿ ಮತ್ತು ಚೈತನ್ಯಘನವು ಯಾರ ಸ್ವರೂಪವೋ ಆ ಶ್ರೀವಿಷ್ಣು ಸಾತ್ವಿಕದ ಧ್ಯೇಯನಾಗಿರುವನು. ಆತನ ಧ್ಯಾನವನ್ನು ಮಾಡಬೇಕು ॥೯೪॥ ಆಕಳಿನ ಹಾಲಿನಂತೆ ಶುಭ್ರನಾಗಿರುವ ಅಥವಾ ಕರ್ಪುರದಂತೆ ಗೌರವರ್ಣನಾಗಿರುವ ಆ ಪಂಚಮುಖೀ ಶ್ರೀ ಶಂಕರನ ಧ್ಯಾನವನ್ನು ಮಾಡಿ ಸಂಸಾರದ ಸರ್ವ ಪ್ರಕಾರಗಳ ದುಃಖಗಳಿಂದ ಪಾರಾಗಬೇಕು ॥೯೫॥ ಈ ಮೂರ್ತಿಯ ಧ್ಯಾನವನ್ನು ಮಾಡುತ್ತಿದ್ದರೆ, ಧ್ಯೇಯ, ಧ್ಯಾನ ಮತ್ತು ಧ್ಯಾತಾ ಇವು ಇಲ್ಲದಾಗುವುವು. ಮತ್ತು ಅಂತಃಕರಣದಲ್ಲಿ ಚೈತನ್ಯಘನವು ಅಂಕಿತವಾಗುವುದು. ಇದುವೇ ಸಾತ್ವಿಕತೆಯ ಧ್ಯಾನವಾಗಿರುವುದು ॥೯೬॥ ದೀಕ್ಷೆಯು ಹೇಗಿರುವುದೋ ಅದರಂತೆಯೇ ಧ್ಯಾನವಿರುವುದೆಂದು ಆಗಮಶಾಸ್ತ್ರದಲ್ಲಿನ ಸಿದ್ಧಾಂತವಾಗಿರುವುದು. ಆ ಧ್ಯಾನದ ಪರ್ಯಾವಸಾನವು ಕೊನೆಯಲ್ಲಿ ಚೈತನ್ಯಘನ ಪರಮಾತ್ಮನಲ್ಲಿಯೇ ಆಗುವುದು ॥೯೭॥ ಕೇವಲ ಜ್ಞಾನದ ಭಂಡಾರವೇ ಸದ್ಗುರುಗಳ ಸ್ವರೂಪವಾಗಿರುವುದು. ಏಕನಿಷ್ಠೆಯಿಂದ ಮತ್ತು ಅನುಸಂಧಾನದಿಂದ ಅವರ ಧ್ಯಾನವನ್ನು ಮಾಡಬೇಕು ॥೯೮॥ ಪಂಚಭೂತಾತ್ಮಕ ದೇಹದ ಅಚ್ಚುಪಡಿಯನ್ನು ತಯಾರಿಸಬೇಕು, ಅದರಲ್ಲಿ ಬ್ರಹ್ಮರೂಪ ರಸವನ್ನು ಸುರಿಯಬೇಕು. ಅದರಿಂದ ಸದ್ಗುರುರೂಪವು ಸಿದ್ಧವಾಗುವುದು. ಆದ್ದರಿಂದ ಆತನ ಧ್ಯಾನವನ್ನು ಹಗಲು ರಾತ್ರಿ ಮಾಡಬೇಕು ॥೯೯॥ ಉದ್ಧವಾ, ಇದು ಸಾತ್ವಿಕರ ಧ್ಯಾನವಾಗಿರುವುದು. ಹೀಗೆ ತಿಳಿ. ಈಗ ಮಂತ್ರಗಳ ಗ್ರಹಣವು ಹೇಗೆ ಇರುವುದೆಂಬುವ ಅದರ ನಿರೂಪಣೆಯನ್ನು ಕೇಳು ॥೧೦೦॥ ಗಾಯತ್ರಿ, ಇದು ಸರ್ವ ಮಂತ್ರಗಳ ಜನಿತೆಯಾಗಿರುವುದು. ಇದು ಪುರುಷನಿಗೆ ಎರಡನೆಯ ಜನ್ಮ ನೀಡುವುದು. ಈ ಗಾಯತ್ರೀ ಮಂತ್ರದ ಪಠಣೆಯಿಂದ ಬ್ರಾಹ್ಮಣತ್ವದ ಅಧಿಕಾರವು ಪ್ರಾಪ್ತವಾಗುವುದು ॥೧೦೧॥ ಸರ್ವ ಮಂತ್ರಗಳ ರಾಜನಾಗಿರುವ ಈ ಗಾಯತ್ರೀ ಮಂತ್ರವು ದ್ವಿಜರ ಪಾಲಿಗೆ ಬಂದಿರುವುದು. ಶ್ರೀಕೃಷ್ಣನಾದ ನಾನು ಇದರ ವರ್ಚಸ್ಸು ಕಂಡು ದ್ವಿಜರ ಪೂಜೆಯನ್ನು ಮಾಡುವೆನು ॥೧೦೨॥ ಈ ಗಾಯತ್ರಿಯು ಸ್ವಾಭಾವಿಕವಾಗಿಯೇ ಬ್ರಾಹ್ಮಣರ ಕೈಸೇರಿರುವುದು. ಯಾರು ಇದರ ಉಪೇಕ್ಷೆಯನ್ನು ಮಾಡುವರೋ ಅವರು ಲೋಭಿಷ್ಠರಾಗಿ ದರಿದ್ರರಾಗುವರು ॥೧೦೩॥ ಗಾಯತ್ರಿಯಲ್ಲಿ ನಿಷ್ಠೆಯಿಂದ ಇರುವ ಬ್ರಾಹ್ಮಣರ ಚರಣಗಳಿಗೆ ನಾನು ಶಿರಸಾ ವಂದಿಸುವೆನು. ಸರ್ವ ಮಂತ್ರಗಳಲ್ಲಿ ಗಾಯತ್ರಿಯು ಶ್ರೇಷ್ಠವಾಗಿರುವುದು. ಈ ವಿಷಯಕ್ಕೆ ವೇದವು ಪ್ರಮಾಣವಾಗಿರುವುದು ॥೧೦೪॥

ಗಾಯತ್ರೀ ರಿಘಾಲ್ಯಾವೀಣ ಕಾಂಹೀ । ಇತರ ಮಂತ್ರಾ ರಿಘಮೂ ನಾಹೀ । ಮುಖ್ಯತ್ವೇ ಗಾಯತ್ರೀಚ್ಯಾ ಠಾಯೀ ।ತೇ ಲಾಗತೀ ಪಾಹೀ ಸಕಳ ಮಂತ್ರ ॥೧೦೫॥ ನಸ್ಥತಾ ಗಾಯತ್ರೀ ಸಂಬಂಧ । ಮುಖೀ ರಿಘೋ ನ ಶಕೇ ವೇದ । ಇತರ ಮಂತ್ರಾ ಕೇವೀ ಸಂವಾದ । ವೇದಾ ವಂದ್ಯ ಗಾಯತ್ರೀ ॥೧೦೬॥ ಗಾಯತ್ರೀಚೇ ಗುಹ್ಯ ಪರಮ । ಚಿನ್ಮಾತ್ರೈಕ ಪರಬ್ರಹ್ಮ । ತೋ ಮಂತ್ರ ಬ್ರಾಹ್ಮಣಾಸೀಚ ಸುಗಮ । ಪರೀ ತೇಹೀ ವರ್ಮ ಚುಕಲೇ ॥೧೦೭॥ ಏವಂ ಗಾಯತ್ರೀಮಂತ್ರ ಬ್ರಹ್ಮ ಪೂರ್ಣ । ಸಕಳ ಸಿದ್ಧೀಚೇ ಕಾರಣ । ಶೈವವೈಷ್ಣವಮಂತ್ರಗ್ರಹಣ । ತೇಣೇ ತ್ವರಿತ ಜಾಣ ಸತ್ವಶುದ್ಧೀ ॥೧೦೮॥ ಸತ್ತ್ವಶುದ್ಧೀಚೇ ಪರಿಪಾಟೀ । ಶೈವವೈಷ್ಣವಮಂತ್ರಕೋಟೀ । ತೇಣೇ ಸತ್ವಶುದ್ಧೀ ಉಠಾಉಠೀ । ಹೋಯ ನಿಜಾತ್ಮ ದೃಷ್ಟೀ ಸಾಧಕಾ ॥೧೦೯॥ ಮಂತ್ರಗ್ರಹಣವಿಚಾರ । ಉದ್ಧವಾ ಜಾಣ ಹಾ ಸಾಚಾರ । ಆತಾ ಬೋಲಿಲಾ ಜೋ ಸಂಸ್ಕಾರ । ತೋಹೀ ಪ್ರಕಾರ ಪರಿಯೇಸೀ ॥೧೧೦॥ ಮನಾಚೇ ಸಂಕಲ್ಪವಿಕಲ್ಪ । ತೋಡಾವಯಾ ಅತಿಸಾಕ್ಷೇಪ । ಯೇಚೀ ಅರ್ಥೀಚಾ ಖಟಾಟೋಪ । ಮಹಾಸಾಟೋಪ ಜೋ ಮಾಂಡೀ ॥೧೧೧॥ ಸಂಕಲ್ಪು ಉಠೂಂಚಿ ನ ಲಾಹೇ । ಜೇಥೇ ಉಠೀ ತೇಥೇ ಠೇಂಚಿತ ಜಾಯೇ । ವಿವೇಕಾಚೇನಿ ಬಳೇ ಪಾಹೇ । ಮೋಕಳು ಹೋಯೇ ಮನಾಚಾ ॥೧೧೨॥ ಪರಮಾತ್ಮ ನಿಷ್ಠಾ ಪರವಡೀ । ಅಖಂಡ ಮನಾಚೀ ಮೋಡೀ ಪಾಡೀ । ಉಸಂತ ಘೇವೋ ನೇದೀ ಅರ್ಧಘಡೀ । ಸ್ಮರಣನಿರವಡೀ ಮನ ರಾಖೇ ॥೧೧೩॥ ವೈರಾಗ್ಯಬಳೇ ದಮೀ ಮನ । ತೇಣೇ ಘೇಣೇ ಕರೀ ಹರಿಚಿಂತನ । ದಾಸೀ ನುಲ್ಲಂಘೀ ಸ್ವಾಮೀಚೇ ವಚನ । ತೈಸೇ ಸ್ಮರಣಾಧೀನ ಮನ ಕರೀ ॥೧೧೪॥ ಇಂದ್ರಿಯೇ ಪಾಹತೀ ನಾನಾ ಪದಾರ್ಥಾ । ಮನ ನ ಪಾಹೇ ಆಣಿಕಾ ಅರ್ಥಾ । ಜಾಗೃತೀ ಸ್ವಪ್ನೀ ಸ್ವಭಾವತಾ । ಅಖಂಡತಾ ಹರಿ ಸ್ಮರೇ ॥೧೧೫॥ ಐಶಾ ಸಂಸ್ಕಾರೇ ಸಂಸ್ಕರಿಲೇ ಮನ । ನಿಮಿಷೋನ್ಮೇಷೀ ಹರಿಚಿಂತನ ।ಶ್ವಾಸೋಚ್ಛ್ವಾಸಾಂಚೇ ಗಮನಾಗಮನ । ಸೋಹಂಧ್ಯಾನ ತ್ಯಾ ಠಾಯೀ ॥೧೧೬॥ ಸ್ವಭಾವಿಕ ಸ್ಮರಣಾದರು । ಯಾ ನಾಂವ ಆತ್ಮ ಸಂಸ್ಕಾರು । ಹಾ ಸತ್ತ್ವವೃದ್ಧೀಚಾ ಪ್ರಕಾರು । ಶಾರ್ಙ್ಗಧರು ಬೋಲಿಲಾ ॥೧೧೭॥ ಆತ್ಮಶುದ್ಧೀಚೇ ಮಹಾಕಾರಣ । ಬೋಲಿಲೋ ತೇ ಹೇ ದಶಲಕ್ಷಣ । ಸಾಧಕೀ ಸೇವಾವಯಾ ಜಾಣ । ವಿಶದ ನಿರೂಪಣ ಮ್ಯಾ ಕೇಲೇ ॥೧೧೮॥

ಗಾಯತ್ರಿಯ ಉಪದೇಶವಾಗದ ಹೊರತು ಇತರ ಮಂತ್ರಗಳ ಪ್ರಾಪ್ತಿಯಾಗಲು ಶಕ್ಯವಿಲ್ಲ. ಆದ್ದರಿಂದ ಗಾಯತ್ರಿಗೆ ಅತಿಶಯ ಮಹತ್ವವು ಉಂಟಾಗಿದೆ. ಗಾಯತ್ರಿಯಲ್ಲಿ ಸರ್ವ ಮಂತ್ರಗಳು ಇದರ ಅನುರೋಧದಿಂದ ಇರುವುವು ॥೧೦೫॥ ಗಾಯತ್ರೀ ಮಂತ್ರದ ಸಂಬಂಧವಿಲ್ಲದಿದ್ದರೆ ಬ್ರಾಹ್ಮಣರ ಮುಖದಲ್ಲಿ ವೇದವು ಪ್ರವೇಶಿಸಲು ಸಾಧ್ಯವೇ ಇಲ್ಲ. ಅಂದಮೇಲೆ ಇತರ ಮಂತ್ರಗಳ ಮಾತನ್ನು ಏನೆಂದು ಹೇಳಬೇಕು? ತಾತ್ಪರ್ಯವೇನೆಂದರೆ ವೇದಗಳಿಗೆ ಗಾಯತ್ರಿಯು ವಂದ್ಯವಾಗಿರುವುದು ॥೧೦೬॥ ಗಾಯತ್ರೀ ಮಂತ್ರದ ಗೂಢವಾದ ರಹಸ್ಯವೇನೆಂದರೆ ಅದು ಚಿನ್ಮಾತ್ರೈಕ ಪರಬ್ರಹ್ಮವಾಗಿರುವುದು. ಈ ಮಂತ್ರವು ಬ್ರಾಹ್ಮಣರಿಗೆ ಸುಲಭವಾಗಿರುವುದು. ಆದರೂ ಸಹ ಅವರು ಅದರಲ್ಲಿನ ಮರ್ಮವನ್ನು ತಪ್ಪಿರುವರು ॥೧೦೭॥ ಈ ಪ್ರಕಾರವಾಗಿ ಗಾಯತ್ರೀ ಮಂತ್ರವು ಇದು ಪೂರ್ಣ ಬ್ರಹ್ಮಸ್ವರೂಪವಾಗಿರುವುದು ಹಾಗೂ ಸರ್ವಪ್ರಕಾರದ ಸಿದ್ಧಿಗಳಿಗೆ ಉತ್ಪನ್ನ ಮಾಡುವುದಾಗಿರುವುದು. ಶೈವರು ಅಥವಾ ವೈಷ್ಣವರು ಈ ಮಂತ್ರದ ಗ್ರಹಣ ಮಾಡಿಕೊಳ್ಳಲು ಶೀಘ್ರವಾಗಿ ಸತ್ವಶುದ್ಧಿಯಾಗುವುದು ॥೧೦೮॥ ಸತ್ವಶುದ್ಧಿಯಾಗಲು ಅದರಿಂದ ಕೋಟ್ಯಾವಧಿ ಶೈವ, ವೈಷ್ಣವ ಮಂತ್ರಗಳು ಪ್ರಾಪ್ತವಾಗುವುವು. ಹಾಗೆಯೇ ಸಾಧಕನ ಸತ್ವಶುದ್ಧಿಯಾಗಿ ಆತನಿಗೆ ಆತ್ಮದೃಷ್ಟಿಯು ಪ್ರಾಪ್ತವಾಗುವುದು ॥೧೦೯॥ ಹೇ ಉದ್ಧವನೇ, ಈ ಮಂತ್ರದ ಗ್ರಹಣ ಮಾಡುವುದೇ ನಿಜವಾದ ವಿಚಾರವಾಗಿದೆ. ಇದನ್ನು ನೀನು ಲಕ್ಷದಲ್ಲಿಡು. ಈಗ ಯಾವುದಕ್ಕೆ ಸಂಸ್ಕಾರವೆನ್ನುವರೋ ಅದರ ಪ್ರಕಾರವನ್ನೂ ಹೇಳುವೆನು, ಕೇಳು ॥೧೧೦॥ ಮನದ ಸಂಕಲ್ಪ - ವಿಕಲ್ಪಗಳನ್ನು ಮುರಿಯುವುದಕ್ಕಾಗಿ ಉತ್ಕಟ ಇಚ್ಛೆಯಿಂದ ಯಾರು ಅದರ ವಿಷಯಕ್ಕೆ ನಿಜವಾಗಿ ಪ್ರಯತ್ನ ಮಾಡುವನೋ ॥೧೧೧॥ ಆತನ ಮನದಲ್ಲಿ ಸಂಕಲ್ಪಗಳು ಹುಟ್ಟಬಾರವು. ಒಂದು ವೇಳೆ ಹುಟ್ಟಿದರೆ ಸಾಧಕನು ಅವನ್ನು ಅಲ್ಲಿಯೇ ತಡೆಯುವನು. ಈತನು ಯಾವಾಗಲೂ ವಿಚಾರದಿಂದ ಇರುವನು, ವಿಚಾರದೃಷ್ಟಿಯಿಂದ ಕಾಣುವನು. ಆದ್ದರಿಂದ ಆತನ ಮನವು ಶುದ್ಧ, ಪವಿತ್ರವಾಗಿರುವುದು ॥೧೧೨॥ ಪರಮಾರ್ಥದ ನಿಷ್ಠೆಯಿಂದ ಈತನು ಮನಸ್ಸನ್ನು ಅಂಕಿತಗೊಳಿಸುವನು. ಅರ್ಧಕ್ಷಣವೂ ಕೂಡ ಈತನು ಪರಮೇಶ್ವರನನ್ನು ಮರೆಯಲಾರನು. ಮನಸ್ಸಿಗೆ ಪ್ರಭು ಭಕ್ತಿಯಲ್ಲಿ ತಲ್ಲೀನಗೊಳಿಸುವನು ॥೧೧೩॥ ಈತನು ವೈರಾಗ್ಯದ ಬಲದಿಂದ ಮನದ ದಮನವನ್ನು ಮಾಡುವನು. ಕ್ರಮವಾಗಿ ಯಾವಾಗಲೂ ಹರಿಚಿಂತನೆಯನ್ನು ಮಾಡುವನು. ದಾಸಿಯು ಸ್ವಾಮಿಯ ಆಜ್ಞೆಯನ್ನು ಮೀರದಂತೆ ಈತನು ಮನವನ್ನು ಹರಿನಾಮ ಸ್ಮರಣೆಯಿಂದ ಅಧೀನಪಡಿಸುವನು ॥೧೧೪॥ ಇಂದ್ರಿಯಗಳು ಅನೇಕ ಪ್ರಕಾರದ ಪದಾರ್ಥಗಳನ್ನು ನೋಡುತ್ತಿರುವುವು. ಆದರೆ ಮನವು ಯಾವುದೇ ಪದಾರ್ಥಗಳನ್ನು ನೋಡದೇ ಜಾಗ್ರತದಲ್ಲಿ, ಸ್ವಪ್ನದಲ್ಲಿ ಅಖಂಡವಾಗಿ ಹರಿಸ್ಮರಣೆಯನ್ನು ಮಾಡುತ್ತಿರುವುದು ॥೧೧೫॥ ಹೀಗೆ ಸಂಸ್ಕಾರದಿಂದ ಮನವು ಸುಸಂಸ್ಕೃತವಾದರೆ ಅದು ಕ್ಷಣಕ್ಷಣಕ್ಕೂ ಹರಿಚಿಂತನೆಯನ್ನು ಮಾಡುತ್ತಿರುತ್ತದೆ. ಶ್ವಾಸೋಚ್ಛ್ವಾಸವು ನಡೆದಿರಲು ಆ ಕರ್ಮದಲ್ಲಿ ಈತನಿಗೆ ಸೋಽಹಂ ಧ್ಯಾನವು ಹತ್ತುವುದು ॥೧೧೬॥ ಹೀಗೆ ಸಹಜವಾಗಿಯೇ ಭಗವಂತನ ನಾಮದ ಆದರವಿರಲು, ಅದಕ್ಕೆ ಮಾತ್ರ ಆತ್ಮಸಂಸ್ಕಾರವೆಂದು ಹೇಳುವರು. ಈ ಸತ್ವಬುದ್ಧಿಯ ಪ್ರಕಾರವನ್ನು ಶ್ರೀಕೃಷ್ಣನು ಹೇಳಿದನು ॥೧೧೭॥ ಆತ್ಮಶುದ್ಧಿಯ ಈ ಯಾವ ಪ್ರಮುಖ ಕಾರಣವಿದೆಯೋ ನಿನಗೆ ಹತ್ತು ಲಕ್ಷಣಗಳಿಂದ ಹೇಳಲ್ಪಟ್ಟಿದೆ. ಸಾಧಕರು ಅದರಂತೆ ವರ್ತಿಸಬೇಕು. ನಿನಗೆ ಇದನ್ನು ನಾನು ಸ್ಪಷ್ಟವಾಗಿ ಹೇಳಿರುವೆನು ॥೧೧೮॥

ಜೇಣೇ ಖವಳಲಾ ವಾಢೇ ತಮೋಗುಣ । ತೇ ತಮೋವೃದ್ಧೀಚೇ ದಶಲಕ್ಷಣ । ಕೇವಳ ತ್ಯಾಗಾವಯಾ ಜಾಣ। ತೇಹೀ ನಿರೂಪಣ ಸಾಂಗೇನ ॥೧೧೯॥ ತೇಥೀಚಾ ಆಗಮ ಆಭಿಚಾರಿಕ । ವೇದವಿರುದ್ಧ ಮಾರ್ಗ ದೇಖ । ವಾರುಣೀ ಮಾಧ್ವೀ ಮದ್ಯೋದಕ । ಅವಶ್ಯಕ ಸೇವಿತೀ ॥೧೨೦॥ ಜೇ ಉಭಯಭ್ರಷ್ಟ ಪಾಖಂಡೀ । ವೇಷಧಾರೀ ವೃಥಾ ಮುಂಡೀ । ತ್ಯಾಂಚೇ ಸಂಗತೀಚೀ ಅತಿಗೋಡೀ । ಜೇಥ ಅಪರವಡೀ ವಿಧಿವೇದಾ ॥೧೨೧॥ ದ್ವೇಷ ಚೋಹಟಾ ಕಾ ಪರದ್ವಾರ । ತೇಥೇಚಿ ಬೈಸಕಾ ನಿರಂತರ । ಕಾಳ ತೋ ತ್ಯಾಸೀ ಮಧ್ಯರಾತ್ರ । ತೈ ವ್ಯಾಪಾರ ಕರ್ಮಾಚಾ ॥೧೨೨॥ ಕ್ರಿಯಾರಂಭು ಜಾರಣಮಾರಣ । ಮೋಹನ ಸ್ತಂಭನ ಉಚ್ಚಾಟಣ । ಕಾ ಕರಾವೇ ವಶೀಕರಣ । ಹೇ ಕರ್ಮಜಾಣ ತಾಮಸ ॥೧೨೩॥ ಜನ್ಮ ಮ್ಹಣಿಜೇ ದೀಕ್ಷಾಗ್ರಹಣ । ಪ್ರೇತಭೂತಪಿಶಾಚ ವಿದ್ಯಾ ಜಾಣ । ಕರಿತಾ ಪ್ರೇತಭೂತ ಆರಾಧನ । ಪ್ರೇತಜನ್ಮ ಜಾಣ ತಾಮಸಾ ॥೧೨೪॥ ಜೇಥ ತಮೋಗುಣ ಪ್ರಧಾನ । ತೋ ಕ್ರೋಧಯುಕ್ತ ಪುರುಷ ಜಾಣ । ಸದಾ ಶತ್ರೂಚೇ ಕರೀ ಧ್ಯಾನ । ಕರಾವಯಾ ಹನನ ಉದ್ಯತೂ ॥೧೨೫॥ ತಾಮಸೀ ಮಂತ್ರ ಮುಕೀ ಮೈಳೀ । ಅಥವಾ ಉಚ್ಛಿಷ್ಟಚಾಂಡಾಳೀ । ಕಾ ಪ್ರೇತದೇವತಾ ಕಂಕಾಳೀ । ಮಂತ್ರಶೈಲೀ ಹೇ ತೇಥೇ ॥೧೨೬॥ ಸಂಸ್ಕಾರ ದಗಡ ಮಾತೀ । ಮಾಝೇ ಘರ ಹೇ ಮಾಝೀ ಕ್ಷಿತೀ । ಸ್ವಪ್ನೀ ನಿಜೇಲಾ ಘಾಲೀ ಭಿಂತೀ । ಏವಢೀ ಆಸಕ್ತೀ ಗೃಹಾಚೀ ॥೧೨೭॥ ಘರ ಕರಾವಯಾ ಅಶಕ್ತ । ತರೀ ತ್ಯಾ ಖಿಂಡೋರಾ ಆಂತ । ಸದಾ ದಗಡಮಾತೀ ರಾಖಿತ । ನಾಂದತೇ ತೇಥ ಯೇವೋ ನೇದೀ ॥೧೨೮॥ ದೇಹಾಲಾಗೀ ಗೇಹ ಕರಣೇ ಘಡೇ । ತೇ ದೇಹ ಕಷ್ಟವೀ ಅತಿದುರ್ವಾಡೇ । ತಾಮಸಸಂಸ್ಕಾರೇ ರೋಕಡೇ । ಕೇವಳ ವೇಡೇ ಗೃಹಾಸಕ್ತೀ ॥೧೨೯॥ ಗೃಹಾಸಕ್ತೀಚಾ ವ್ಯಾಪಾರೂ । ಜೋ ಮರಣಾಂತ ನ ಸೋಡೀ ನರೂ । ತೋ ಜಾಣ ತಾಮಸ ಸಂಸ್ಕಾರೂ । ತ್ಯಾಚಾ ಸಂಸಾರೂ ತೋ ಮಾತೀ ॥೧೩೦॥ ಜೇಣೇ ಥೋರಾವೇ ತಮೋಗುಣ । ತೇ ಹೇ ಜಾಣ ದಶಲಕ್ಷಣ । ಐಕ ರಾಜಸಾಚೇ ಚಿನ್ಹ । ತ್ಯಾಚೇ ಭಿನ್ನ ಸ್ವರೂಪ ॥೧೩೧॥ ಕರಾವೇ ಸತ್ತ್ವಾಚ್ಯಾ ಅಂಗೀಕಾರಾ । ತ್ಯಾಗಾವಾ ತಮೋಗುಣ ದುಸರಾ । ಪುಢೇ ಚಾವಿರಾ ಮಾಗೇ ಲಾತಿರಾ । ಐಕ ತಿಸರಾ ರಜೋಗುಣ ॥೧೩೨॥

ಈಗ ಯಾವುದರಿಂದ ತಮೋಗುಣವು ಉಗ್ರವಾಗಿ ಬೆಳೆಯುವುದೋ ಆ ತಮೋಗುಣದ ಹತ್ತು ಲಕ್ಷಣಗಳನ್ನು ಹೇಳುವೆನು. ಈ ಲಕ್ಷಣಗಳನ್ನು ಕೇಳಿ ಅವುಗಳನ್ನು ತ್ಯಜಿಸಬೇಕೆಂಬ ಉದ್ದೇಶದಿಂದ ಈ ನಿರೂಪಣೆಯನ್ನು ಮಾಡುತ್ತಿರುವೆನು ॥೧೧೯॥ ತಮೋಗುಣದ ಜಾರಣ-ಮಾರಣಾದಿ ಪಾಖಂಡ ಶಾಸ್ತ್ರವಾಗಿರುವುದು. ಇದರ ಮಾರ್ಗವು ವೇದವಿರುದ್ಧವಾಗಿರುವುದು. ನಿಶೆಬರುವ ಪದಾರ್ಥ ಹೆಂಡ, ಸರಾಯೀ ಇತ್ಯಾದಿ ಅವಶ್ಯವಾಗಿ ಸೇವನೆ ಮಾಡುವರು ॥೧೨೦॥ ಯಾರು ಇಹಲೋಕ ಮತ್ತು ಪರಲೋಕದಿಂದ ಭ್ರಷ್ಟರಾದವರು ಇವರು ಪಾಖಂಡಿಯಾಗಿರುವರು. ಮತ್ತು ಇವರು ನಾನಾ ಪ್ರಕಾರಗಳ ಸೋಗುಗಳನ್ನು ಹಾಕುತ್ತಿರುವರು. ಇವರು ತಲೆಯ ಮೇಲಿನ ಕೂದಲುಗಳನ್ನು ಬೋಳಿಸಿರುವರು. ವೇದರಹಿತವಾದ ಯಾರ ಆಚರಣೆಗಳು ಇರುವುವೋ, ಅವರ ಸಂಗತಿಯು ಇವರಿಗೆ ಬಹುಪ್ರೀತಿಯಾಗಿರುವುದು ॥೧೨೧॥ ದ್ವೇಷ, ಜೂಜು, ಪರಸ್ತ್ರೀ ಹೀಗೆ ಅಶುದ್ಧವಾದ ಸ್ಥಳಗಳಲ್ಲಿ ಇವರು ಯಾವಾಗಲೂ ಇರುವರು. ಇವರ ಈ ಕರ್ಮಗಳ ವ್ಯವಹಾರವು ಮಧ್ಯರಾತ್ರಿಯಲ್ಲಿ ನಡೆಯುತ್ತಿರುವುವು ॥೧೨೨॥ ಈ ಕರ್ಮಗಳ ಆರಂಭವು ಜಾರಣ,ಮಾರಣ. ಮೋಹನ, ಸ್ತಂಭನ, ಉಚ್ಚಾಟನ ಹಾಗೂ ವಶೀಕರಣ ಈ ಎಲ್ಲ ಕರ್ಮಗಳು ತಾಮಸವೆಂದು ತಿಳಿಯಬೇಕು ॥೧೨೩॥ ಜನ್ಮವೆಂದರೆ, ದೀಕ್ಷಾಗ್ರಹಣವಾಗಿರುವುದು. ಪ್ರೇತ,ಭೂತ, ಪಿಶಾಚ ಈ ವಿಧಿಗಳಿಂದ ಪ್ರೇತಭೂತಗಳ ಆರಾಧನೆಯನ್ನು ಮಾಡುತ್ತಿರಲು ತಾಮಸ ಜನರಿಗೆ ಪ್ರೇತಜನ್ಮವು ಪ್ರಾಪ್ತವಾಗುವುದು ॥೧೨೪॥ ಯಾರ ಅಂಗದಲ್ಲಿ ಪ್ರಾಮುಖ್ಯವಾಗಿ ತಮೋಗುಣವು ಇರುವುದೋ, ಆ ಪುರುಷರು ಅತಿಶಯವಾಗಿ ಕ್ರೋಧಿಯಾಗಿರುವನು. ಈತನು ನಿರಂತರವಾಗಿ ಶತ್ರುಗಳ ಧ್ಯಾನವನ್ನು ಮಾಡುತ್ತಿರುವನು. ಹಾಗೂ ಆತನ ಪ್ರಾಣಹರಣ ಮಾಡಲು ಸಿದ್ಧನಾಗಿರುವನು ॥೧೨೫॥ ಆತನ ಮಂತ್ರಗಳು ತಾಮಸಿಯಾಗಿರುವುವು. ಆತನ ದೇವತೆಗಳನ್ನು ನೋಡಿದರೆ ಅವು ಮೂಕ, ಅಸ್ವಚ್ಛ, ಎಂಜಲ, ಚಾಂಡಾಳೀ ಅಥವಾ ಪ್ರೇತದ ದೇವತೆ ಕಂಕಾಳೀ ಎಂದು ಹೀಗೆ ಇರುವರು. ಈ ದೇವತೆಗಳಿಗೆ ಪ್ರಸನ್ನಮಾಡಿಕೊಳ್ಳುವ ಮಂತ್ರಗಳೂ ಕೂಡ ಇರುವುವು ॥೧೨೬॥ ಕಲ್ಲು ಮಣ್ಣುಗಳೇ ಇದು ನನ್ನ ಮನೆ, ಇದು ನನ್ನ ಹೊಲವು ಹೀಗೆ ಆತನಲ್ಲಿ ಸಂಸ್ಕಾರವಾಗಿರುವುದು. ಈತನು ಮಲಗಿಕೊಂಡಿದ್ದರೂ ಕೂಡ ಸ್ವಪ್ನದಲ್ಲಿ ಮನೆಯ ಗೋಡೆಯನ್ನು ಕಟ್ಟುತ್ತಿರುವನು. ಇಷ್ಟೊಂದು ಆತನ ಮನೆಯ ಮೇಲೆ ಆಸಕ್ತಿಯಾಗಿರುವುದು ॥೧೨೭॥ ಮನೆಯನ್ನು ಕಟ್ಟುವ ಸಾಮರ್ಥ್ಯವು ತನ್ನಲ್ಲಿ ಇಲ್ಲದಿರಲು ಆತನು ಊರಹೊರಗೆ ಮಣ್ಣುಕಲ್ಲುಗಳ ರಾಶಿಯ ಮೇಲೆ ಕುಳಿತುಕೊಂಡು ಅದನ್ನು ರಕ್ಷಿಸುತ್ತ ಅಲ್ಲಿ ಯಾರಿಗೂ ಬರಗೊಡಲಾರನು ॥೧೨೮॥ ಯಾವ ದೇಹಕ್ಕಾಗಿ ಮನೆಯನ್ನು ಮಾಡಬೇಕಾಗಿದೆಯೋ ಆ ದೇಹಕ್ಕೇನೇ ಅತಿಶಯವಾಗಿ ಕಷ್ಟವನ್ನು ಕೊಡುವನು. ತಾಮಸ ಸಂಸ್ಕಾರದಿಂದ ಮನೆಯ ಮೇಲಿನ ಆಸಕ್ತಿಯಿಂದ ಆತನು ಹುಚ್ಚನಾಗಿರುವನು ॥೧೨೯॥ ಮನೆಯ ಅತ್ಯಂತಿಕ ಆಸಕ್ತಿಯಿಂದ ಆಗುತ್ತಿರುವ ವ್ಯವಹಾರವನ್ನು ತಾನು ಸಾಯುವವರೆಗೂ ಬಿಡದಿರುವುದೇ ಇದು ತಾಮಸ ಸಂಸ್ಕಾರವಾಗಿರುವುದು. ಆತನ ಸರ್ವ ಸಂಸಾರವು ಮಣ್ಣೀಮಣ್ಣಾಗಿರುವುದು ॥೧೩೦॥ ಯಾವುದರಿಂದ ತಮೋಗುಣದ ವೃದ್ಧಿಯಾಗುವುದೋ, ಅದರ ಹತ್ತು ಲಕ್ಷಣಗಳಿರುವುವು. ಈಗ ರಾಜಸ ಗುಣಗಳ ಸ್ವರೂಪವನ್ನು ಹೇಳುವೆನು, ಕೇಳು , ಇದರ ಸ್ವರೂಪವು ತಾಮಸಕ್ಕಿಂತ ಭಿನ್ನವಾಗಿರುವುದು ॥೧೩೧॥ ಸತ್ವಗುಣದ ಸ್ವೀಕಾರ ಮಾಡಬೇಕು ಮತ್ತು ತಮೋಗುಣದ ತ್ಯಾಗ ಮಾಡಬೇಕು. ಈಗ ಮುಂದೆ ಕಡಿಯುವ ಹಿಂದೆ ಒದೆಯುವ ಹೀಗಿರುವ ಮೂರನೆಯ ರಜೋಗುಣವನ್ನು ಕುರಿತು ಕೇಳು ॥೧೩೨॥

ಹೋ ಕಾ ಶಾಹಾಣೀ ಸಿಂದಳೀ ನಾರೀ । ತೇ ಪುರುಷಾಚೇ ಮನ ಬರೇ ಧರೀ । ಮಗ ಠಕೋನಿ ಜಾಯ ವ್ಯಭಿಚಾರೀ ।ತೈಸೀ ಪರೀ ರಜೋಗುಣಾ ॥೧೩೩॥ ಜೈಸೇ ಕಾ ಕುಚರ ಘೋಡೇ । ಬರೇ ದಿಸೇ ಪರೀ ಆಡವೀ ಅಡೇ । ಕಾಂಹೀ ಕೇಲ್ಯಾ ನ ಚಲೇ ಪುಢೇ । ಮಾಗಿಲೀಕಡೇ ಸರೋ ಲಾಗೇ ॥೧೩೪॥ ತೈಸೀ ರಜೋಗುಣಾಚೀ ಸ್ಥಿತೀ । ತ್ಯಾಗೂ ನ ಸಂಭವೇ ಕಲ್ಪಾಂತೀ । ಧರ್ಮ ಕರಿತೋ ಕೇವಳ ಸ್ಫೀತೀ । ಮನೀ ಆಸಕ್ತೀ ಕಾಮಾಚೀ ॥೧೩೫॥ ಸರ್ವಸ್ವ ಘ್ಯಾವಯಾ ಸಂವಚೋರೂ । ಸವೇ ಧಾಂವೇ ಹೋಊನಿ ನಫರೂ । ತೈಸಾ ರಜೋಗುಣಾಚಾ ವಿಚಾರೂ । ಕಾಮನಾಸಂಸಾರೂ ವಾಢವೀ ॥೧೩೬॥ ಧರ್ಮ ಕರೀ ಕಾಮಾಸಕ್ತೀ । ಕೇಲೇ ಭೋಗವೀ ನಿಶ್ಚಿತೀ । ಪಾಡೀ ಜನ್ಮ ಮರಣ ಆವರ್ತೀ । ಕದಾ ಕಲ್ಪಾಂತೀ ಸುಟೇನಾ ॥೧೩೭॥ ಸಾತ್ತ್ವಿಕ ತರಲೇ ಮಾಝೇನಿ ಭಜನೇ । ತಾಮಸ ತರಲೇ ಮದ್ವಿರೋಧಧ್ಯಾನೇ ।ರಾಜಸಾಚೇ ಜನ್ಮ ಮರಣಧರಣೇ । ರಜೋಗುಣೇ ಉಠೀನಾ ॥೧೩೮॥ ಜೇಣೇ ಪ್ರಬಳ ವಾಢ ರಜೋಗುಣಾ । ತ್ಯಾ ಸಾಂಗೇನ ಮೀ ದಶಲಕ್ಷಣಾ । ಕೇವಳ ತ್ಯಾಗಾವಯಾ ಕಾಮ್ಯಕಲ್ಪನಾ । ಯಾ ನಿರೂಪಣಾ ಅವಧಾರೀ ॥೧೩೯॥ ರಾಜಸಾಚೇ ಪ್ರವೃತ್ತೀ ಶಾಸ್ತ್ರ । ಜೇ ಕೇವಳ ಕಾಮನಾಪರ । ಜೇಣೇ ಹೋಯ ಇಹಾಮುತ್ರ । ತೇಥೇ ಅತ್ಯಾದರ ರಾಜಸಾ ॥೧೪೦॥ ಆಪ ಮ್ಹಣಿಜೇ ತೇ ತಂವ ಜಳ । ವೇಳಾ ವಾಳಾ ಸುಪರಿಮಳ । ಕರ್ಪೂರಯುಕ್ತ ಅತಿಶೀತಳ । ಪ್ರಿಯ ಪ್ರಬಳ ತೇ ರಾಜಸಾ ॥೧೪೧॥ ಪ್ರಜಾಸಂಗತಿ ತ್ಯಾಚೀ ಐಕ । ರಾಜವರ್ಗೀ ಸಭಾನಾಯಕ । ವ್ಯವಹಾರೀ ಚತುರ ಅತಿರಂಜಕ । ಪ್ರವೃತ್ತಿಲೋಕ ಪ್ರಿಯ ತ್ಯಾಸೀ ॥೧೪೨॥ ರಾಜದ್ವಾರೀ ಕಾ ಸಭೇಮಾಝಾರೀ । ಬೈಸಾವೇ ಪಾರೀ ಅಥವಾ ವೇವ್ಹಾರೀ । ಕಾ ಮಂಡಪತೋರಣಾಭೀತರೀ । ಸನ್ಮಾನೇ ಕರೀ ಉಪವಿಷ್ಟ ॥೧೪೩॥ ವೇಳು ನ ಗಮೇ ಜೈ ಘರೀಚ್ಯಾ ಘರೀ । ತೈ ಕ್ರಮೀ ಚೌಹಾಟಾ ನಗರೀ । ಕಾ ಬೈಸೇ ಬುದ್ಧಿಬಳಾಂವರೀ । ಅತ್ಯಾದರೀ ಸಾದರ ॥೧೪೪॥ ಐಕ ರಜೋಗುಣಾಚೀ ವೇಳ । ಸೂರ್ಯೋದಯಾ ಉಪರೀ ಜೋ ಕಾಳ । ಕಾ ರಾಜಸ ಜೇ ಸಾಂಜವೇಳ ।ತೇ ತೇ ಕಾಳ ಪ್ರಿಯ ತ್ಯಾಸೀ ॥೧೪೫॥ ರಾಜಸಾಂಚೇ ಸಕಾಮ ಕರ್ಮ । ಧನಧಾನ್ಯಾರ್ಥ ಕರಿತೀ ಧರ್ಮ । ವಾಸನಾ ತೇ ಪಶುಪುತ್ರಕಾಮ । ಸ್ವಪ್ನೀ ನಿಷ್ಕಾಮ ನೇಣತೀ ॥೧೪೬॥

ಇಲ್ಲಿ ನೋಡು(ಜಾಣೆಯಾಗಿದ್ದರೂ ಹಾದರ ಮನಸ್ಸಿನ ಸ್ತ್ರೀಯಳು ತನ್ನ ಗಂಡನ ಮನವನ್ನು ಪ್ರಸನ್ನಗೊಳಿಸುವಳು. ತದನಂತರ ಆತನನ್ನು ಮೋಸಗೊಳಿಸಿ ವ್ಯಭಿಚಾರಕ್ಕಾಗಿ ಹೊರಗೆ ಹೋಗುವಳು. ಅದರಂತೆ ಈ ರಜೋಗುಣವು ಇರುವುದು) ॥೧೩೩॥ ಕೆಟ್ಟ ಚಾಳಿಯ ಕುದುರೆಯು ನೋಡಲು ಮಾತ್ರ ಸುಂದರವಾಗಿರುವುದು. ಆದರೆ ರಸ್ತೆಯಲ್ಲಿಯೇ ನಿಂತು ಬಿಡುವುದು, ಅಡ್ಡ ರಸ್ತೆಗೆ ಹೋಗುವುದು, ಹಿಂದಕ್ಕೆ ಸರಿಯುತ್ತ ಏನು ಮಾಡಿದರೂ ಮುಂದೆ ಹೋಗದು ॥೧೩೪॥ ಅದರಂತೆಯೇ ರಜೋಗುಣದ ಸ್ಥಿತಿಯಾಗಿರುವುದು. ರಜೋಗುಣಿಯಿಂದ ಕಲ್ಪಾಂತಕ್ಕೂ ಎಂದಿಗೂ ತ್ಯಾಗವು ಸಾಧಿಸಲಾರದು. ಆತನ ಎಲ್ಲ ಧರ್ಮಗಳು ದಂಭದ ಮೇಲೆ ಅವಲಂಬಿಸಿರುವುದು. ಆತನ ಮನದಲ್ಲಿ ಕಾಮದ ಆಸಕ್ತಿಯು ತುಂಬಿಕೊಂಡಿರುವುದು ॥೧೩೫॥ ನಮ್ಮ ಜೊತೆಯಲ್ಲಿ ನಡೆಯುತ್ತಿರುವ ಕಳ್ಳನು ಸರ್ವಸ್ವವನ್ನು ಕದಿಯುವುದಕ್ಕಾಗಿಯೇ ನಮ್ಮ ಸೇವಕನಾಗುವನು. ಹಾಗೂ ನಮ್ಮನ್ನು ಬಿಡದೇ ಧಾವಿಸುತ್ತಿರುವನು. ಅದರಂತೆ ರಜೋಗುಣದ ಪ್ರಕಾರವಾಗಿರುವುದು. ರಜೋಗುಣವು ಇದು ಕಾಮನಾರೂಪ ಸಂಸಾರವನ್ನು ಬೆಳೆಯಿಸುತ್ತಿರುವುದು ॥೧೩೬॥ ಆದ್ದರಿಂದ ಮನುಷ್ಯನು ಕಾಮದ ಆಸಕ್ತಿಯಿಂದ ಧರ್ಮವನ್ನು ಮಾಡುತ್ತಿರುವನು. ಆ ಕರ್ಮದ ಫಲವನ್ನು ಆತನಿಗೆ ನಿಶ್ಚಿತವಾಗಿ ಭೋಗಿಸಬೇಕಾಗುವುದು. ಈತನು ಜನ್ಮ ಮರಣ ರೂಪವಾದ ತಿರುಗಣಿಯಲ್ಲಿ ಸಿಕ್ಕಿಕೊಳ್ಳುವನು. ಈ ಚಕ್ರದಿಂದ ಈತನಿಗೆ ಕಲ್ಪಾಂತಕ್ಕೂ ಹೊರಗೆ ಬರುವುದಾಗುವುದಿಲ್ಲ ॥೧೩೭॥ ಸಾತ್ವಿಕರು ನನ್ನ ಪ್ರೇಮಮಯ ಭಜನೆಯಿಂದ ಉದ್ಧಾರವಾಗುವರು. ತಾಮಸಿಕರೂ ಕೂಡ ನನ್ನ ವಿರೋಧ ಭಕ್ತಿಯಿಂದ ಉದ್ಧಾರರಾಗುವರು. ಆದರೆ ರಜೋಗುಣಿ ರಾಜಸರ ಜನ್ಮ ಮರಣಗಳ ಚಕ್ರವು ಎಂದಿಗೂ ನಿಲ್ಲಲಾರದು ॥೧೩೮॥ ಯಾವುದರಿಂದ ರಜೋಗುಣವು ಅತಿಶಯವಾಗಿ ಬೆಳೆಯುವುದೋ, ಅದರ ಹತ್ತು ಲಕ್ಷಣಗಳನ್ನು ಈಗ ನಿನಗೆ ಹೇಳುವೆನು. ಕಾಮ್ಯ ಕಲ್ಪನೆಯ ತ್ಯಾಗ ಮಾಡುವುದಕ್ಕಾಗಿ ನೀನು ಇದನ್ನು ಕೇಳು ॥೧೩೯॥ ರಾಜಸರ ಪ್ರಕೃತಿಶಾಸ್ತ್ರವು ಕೇವಲ ಕಾಮನೆಗಳಿಂದ ತುಂಬಿ ತುಳುಕುತ್ತಿರುವುದು. ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖದ ಲಾಭವಾಗುವ ವಿಷಯದಲ್ಲಿ ರಾಜಸ ಮನದವರ ಅತ್ಯಂತ ಆದರವಿರುವುದು ॥೧೪೦॥ ಆಪವೆಂದರೆ ಕೇವಲು ನೀರು. ಆದರೆ ಆ ನೀರಿಗೆ ಏಲಕ್ಕಿ, ಬಾಳದ ಬೇರು ಇತ್ಯಾದಿ ಸುಗಂಧ ಪದಾರ್ಥಗಳನ್ನು ಹಾಕಿ ಕರ್ಪೂರಯುಕ್ತ ಅತಿಶಯವಾಗಿ ತಣ್ಣಗೆ ಮಾಡಿದಾಗ ರಾಜಸರಿಗೆ ಆ ನೀರು ಬಹು ಪ್ರಿಯವಾಗುವುದು ॥೧೪೧॥ ಆತನು ಯಾರ ಸಂಗತಿ ಮಾಡುವನೆಂಬುದು ಈಗ ಕೇಳು. ರಾಜರಂತಿರುವ ಜನರು, ಸಭಾಪತಿ, ವ್ಯವಹಾರದಲ್ಲಿ ಚತುರರು, ಲೋಕರಂಜನೆ ಪ್ರವೃತ್ತಿಯವರ ಸಹವಾಸವು ಆತನಿಗೆ ಬಹು ಪ್ರಿಯವು ॥೧೪೨॥ ದರಬಾರದಲ್ಲಿ ಅಥವಾ ಸಭೆಯಲ್ಲಿ, ಜನದಟ್ಟಣೆ ಹಾಗೆಯೇ ದೊಡ್ಡ ವ್ಯಾಪಾರವು ನಡೆಯುತ್ತಿರುವಲ್ಲಿ ಹಾಗೂ ಮಂಟಪ, ತಳಿರುತೋರಣಗಳಿಂದ ಶೃಂಗರಿಸಿರುವ ಸ್ಥಳಗಳಲ್ಲಿ ಈತನು ಬಹಳ ಸನ್ಮಾನದಿಂದ ಹೋಗಿ ಕುಳಿತುಕೊಳ್ಳುವನು ॥೧೪೩॥ ಮನೆಯಲ್ಲಿ ವೇಳೆಯು ಸರಿಯದಿದ್ದರೆ ಆತನು ಊರಿನ ಚಾವಡಿಯಲ್ಲಿ ಹೋಗಿ ಕುಳಿತುಕೊಳ್ಳುವನು. ಪ್ರೇಮದಿಂದ ಪಗಡೆಯ ಆಟವನ್ನು ಆರಂಭಿಸುವನು ॥೧೪೪॥ ಈಗ ರಜೋಗುಣಿಯ ವೇಳೆಯನ್ನು ಕೇಳು. ಸೂರ್ಯೋದಯವು ಮುಗಿದಿರುವ ಸಾಯಂಕಾಲದ ವೇಳೆಯು ಇದು ರಾಜಸವೆಂದು ತಿಳಿಯಬೇಕು. ಈ ವೇಳೆಯು ಈತನಿಗೆ ಬಲು ಪ್ರೀತಿಯು ॥೧೪೫॥ ರಾಜಸ ಜನರ ಕರ್ಮಗಳು ಸಕಾಮವಾಗಿರುವುವು. ಇವು ಧನಧಾನ್ಯ ಸಂಗ್ರಹಕ್ಕಾಗಿ ಇರುವುವು. ಪಶು, ಪುತ್ರ, ಇತ್ಯಾದಿಗಳಲ್ಲಿ ರಾಜಸರ ಆಸಕ್ತಿಯು ಇರುವುದು. ನಿಷ್ಕಾಮ ಭಾವವು ಇವರಿಗೆ ಸ್ವಪ್ನದಲ್ಲಿಯೂ ಗೊತ್ತಿರುವುದಿಲ್ಲ ॥೧೪೬॥

ರಾಜಸಾಂಸೀ ಕಾಮು ಗಹನ । ಕಾಮಾಸಕ್ತೀ ದೀಕ್ಷಾ ಗ್ರಹಣ । ತೇಚಿ ತ್ಯಾಂಚೇ ಜನ್ಮ ಜಾಣ । ಸದಾ ಧ್ಯಾನ ಸ್ತ್ರೀಯೇಚೇ ॥೧೪೭॥ ಮಂತ್ರ ಘ್ಯಾವಾ ಅಭಿಲಾಖೇ । ಜೇಣೇ ಸನ್ಮಾನ ಹೋಯ ಲೌಕಿಕೇ ಜ್ಯಾಚಾ ಸುಗರಾವಾ ಥೋರ ದೇಖೇ । ತೋ ಮಂತ್ರ ಆವಶ್ಯಕೇ ಆದರೀ ॥೧೪೮॥ ಸಂಸ್ಕಾರ ಅತಿರಾಜಸ । ಶರೀರಭೋಗಾಂಚೇ ವಿಲಾಸ । ನಾನಾ ಪರಿಮಳ ಬಹುವಸ । ಉತ್ತಮ ವಾಸ ಸುಧೂತ ॥೧೪೯॥ ಸಂಸ್ಕಾರಾಚೀ ಅಂತರನಿಷ್ಠಾ । ಲೌಕಿಕೀ ವ್ಹಾವೀ ದೇಹಪ್ರತಿಷ್ಠಾ । ಮಾಝೀ ಆಜ್ಞಾ ವಂದ್ಯ ವರಿಷ್ಠಾ । ಸಭೇಚೇ ಚೌಹಾಟಾ ಮೀ ಪೂಜ್ಯ ॥೧೫೦॥ ರಜೋಗುಣ ದಶಲಕ್ಷಣ । ಉದ್ಧವಾ ತ್ಯಾಚೇ ಹೀ ವ್ಯೋಳಖಣ । ರಾಜಸಾಸೀ ಜನ್ಮ ಮರಣ । ಸರ್ವಥಾ ಜಾಣ ಸೋಡೀನಾ ॥೧೫೧॥ ಸಾತ್ತ್ವಿಕ ತ್ಯಾಗ ಕರೀ ವಿವೇಕನಿಷ್ಠೇ । ತಾಮಸ ತ್ಯಾಗ ಕರೀ ಕಡಕಡಾಟೇ । ರಾಜಸಾಸೀ ತ್ಯಾಗ ನ ಘಡೇ ಸ್ಪಷ್ಟೇ । ದ್ರವ್ಯದಾರಾಲೋಭಿಷ್ಟೇ ಲೋಭಾಳೂ ॥೧೫೨॥ ತಿಹೀ ಗುಣಾಂಚೇ ಲಕ್ಷಣ । ಮ್ಯಾ ಸಾಂಗೀತಲೇ ಭಿನ್ನ ಭಿನ್ನ । ತಿಹೀಂಚೇ ಸರ್ವಸಾಧಾರಣ । ಸಾಂಗೇನ ಚಿನ್ಹ ತೇ ಐಕ ॥೧೫೩॥

ತತ್ತತ್ಸಾತ್ತ್ವಿಕಮೇವೈಷಾಂ ಯದ್ಯದ್ವೃದ್ಧಾಃ ಪ್ರಚಕ್ಷತೇ । ನಿಂದಂತಿ ತಾಮಸಂ ತತ್ತದ್ರಾಜಸಂ ತದುಪೇಕ್ಷಿತಮ್ ॥೮॥

ಅರ್ಥ :- ಇವುಗಳನ್ನರಿತ ಶಾಸ್ತ್ರಜ್ಞ ಮಹಾತ್ಮನು ಯಾರನ್ನು ಹೊಗಳುವರೋ, ಅವರು ಸಾತ್ತ್ವಿಕರು. ಯಾರನ್ನು ಟೀಕಿಸಿ ನಿಂದಿಸುವರೋ, ಅವರು ತಾಮಸಿಗಳು ಮತ್ತು ಯಾರನ್ನು ಉಪೇಕ್ಷಿಸುವರೋ, ಅವರು ರಾಜಸಿಯರು.

ವಿವೇಕವೃದ್ಧ ವೃದ್ಧಾಚಾರೇ । ಜ್ಯಾತೇ ಸ್ತವಿತೀ ಅತ್ಯಾದರೇ । ತೇ ತೇ ಸಾತ್ತ್ವಿಕ ಜಾಣ ಖರೇ । ನಿಜನಿರ್ಧಾರೇ ನಿಶ್ಚಿತ ॥೧೫೪॥ ವಿವೇಕಿಯಾಚೇ ಅನುವಾದಾ । ಜ್ಯಾ ಪದಾರ್ಥಾಚೀ ಕರಿತೀ ನಿಂದಾ । ತೇ ತೇ ಜಾಣ ತಾಮಸಬಾಧಾ । ಮಾಝ್ಯಾ ನಿಜಬೋಧಾ ಮಾನಲೇ ॥೧೫೫॥ ಜ್ಯಾತೇ ಸ್ತವಿತ ನಾ ನಿಂದಿತ । ಜೀವೇ ಭಾವೇ ಉಪೇಕ್ಷಿತ । ತೇ ರಾಜಸ ಜಾಣ ನಿಶ್ಚಿತ । ಬಾಧಾ ಅದ್ಭುತ ತಯಾಚೀ ॥೧೫೬॥ ಜೈಸೇ ಕಾ ವಿಖೇ ರಾಂಧಿಲೇ ಅನ್ನ । ವರಿವರೀ ಗೋಡ ಅಂತರೀ ಮರಣ । ತೈಸಾ ಜಾಣ ರಾಜಸ ಗುಣ । ಅತರ್ಕ್ಯ ಬಂಧನ ತಯಾಚೇ ॥೧೫೭॥ ರಾಜಸಾಸೀ ಜ್ಞಾನ-ಬೋಧೂ । ಕರಿತಾ ಥೋಂಟಾವಲಾ ವೇದೂ । ತ್ಯಾಚೇ ಉಪದೇಶೀ ಬ್ರಹ್ಮಾ ಮಂದೂ । ಮಾಝೇನೇಹೀ ಬೋಧೂ ನ ಕರವೇ ॥೧೫೮॥

ರಾಜಸ ಜನರಿಗೆ ಇಚ್ಛೆಗಳು ಬಹಳ ಪ್ರಬಲವಾಗಿರುವುವು. ಮನದಲ್ಲಿ ಕಾಮನೆಯ ಆಸಕ್ತಿಯನ್ನು ಇಟ್ಟುಕೊಂಡು ಮಂತ್ರದ ಉಪದೇಶ ಅಥವಾ ದೀಕ್ಷೆಯನ್ನು ಪಡೆಯುವರು. ಅದೇ ಅವರ ಜನ್ಮವೆಂದು ತಿಳಿ. ಅವರ ಮನದಲ್ಲಿ ನಿರಂತರವಾಗಿ ಸ್ತ್ರೀ ಧ್ಯಾನವು ಹತ್ತಿರುವುದು ॥೧೪೭॥ ಮನದಲ್ಲಿ ಏನಾದರೂ ಒಂದು ಇಚ್ಛೆಯನ್ನು ಇಟ್ಟುಕೊಂಡೇ ಅವರು ಮಂತ್ರದ ಗ್ರಹಣ ಮಾಡುವರು. ಲೌಕಿಕದಲ್ಲಿ ತನ್ನ ಸನ್ಮಾನವಾಗುವ, ತನಗೆ ದೊಡ್ಡ ಪ್ರತಿಷ್ಠೆ ದೊರಕುವ, ಜನರು ತನಗೆ ವಶವಾಗುವ, ಅಂತಹ ಮಂತ್ರವನ್ನು ಅವರು ಆದರದಿಂದ ಗ್ರಹಣ ಮಾಡುವರು ॥೧೪೮॥ ಅವರ ಸರ್ವ ಸಂಸ್ಕಾರಗಳು ಅತಿಯಾದ ರಾಜಸವಾಗಿರವುವು. ಅವುಗಳಲ್ಲಿ ಸರ್ವವೂ ಶರೀರಭೋಗದ ವಿಲಾಸಗಳಿರುವುವು. ಅನೇಕ ಸುಗಂಧಗಳು ಅವರಿಗೆ ಪ್ರಿಯವಾಗಿರುವುವು. ಒಗೆದು ಸ್ವಚ್ಛಗೊಳಿಸಿರುವ ವಸ್ತ್ರಗಳು ಇವರಿಗೆ ಯಾವಾಗಲೂ ಪ್ರಿಯವಾಗಿರುವುವು ॥೧೪೯॥ ತಮ್ಮ ಲೌಕಿಕವು ಬೆಳೆಯಬೇಕು, ಜನರು ತಮ್ಮನ್ನು ಗಾದಿಯ ಮೇಲೆ ಕೂಡ್ರಿಸಬೇಕು. ಹೀಗೆ ಅವರ ಮನದ ಹಂಬಲವಾಗಿರುವುದು. ತಮ್ಮ ಆಜ್ಞೆಯನ್ನು ಜನರು ಶಿರಸಾ ವಂದಿಸಬೇಕು ಮತ್ತು ಸಭೆಯಲ್ಲಿ ಜನರು ತಮಗೆ ಸನ್ಮಾನಿಸಬೇಕು ॥೧೫೦॥ ಉದ್ಧವಾ, ರಜೋಗುಣದ ಹತ್ತು ಲಕ್ಷಣಗಳಿರುವುವು. ಇವು ಈ ಪ್ರಕಾರದ ಅದರ ಸ್ವರೂಪವಾಗಿರುವುವು. ಆದ್ದರಿಂದ ರಾಜಸ ಜನರಿಗೆ ಜನ್ಮ ಮರಣಗಳು ತಪ್ಪುವುದಿಲ್ಲ ॥೧೫೧॥ ಸಾತ್ತ್ವಿಕ ಮನುಷ್ಯನು ವಿವೇಕದಲ್ಲಿ ನಿಷ್ಠೆಯನ್ನು ಅತಿಶಯವಾಗಿ ಇಡುವನು. ಹಾಗೂ ಆ ನಿಷ್ಠೆಯ ಆಧಾರದಿಂದ ತ್ಯಾಗವನ್ನು ಮಾಡುವನು. ತಾಮಸನು ಜೋರಾಗಿ ಒದರುತ್ತ ಕೋಪದಿಂದ ತ್ಯಾಗವನ್ನು ಮಾಡುವನು. ಆದರೆ ರಾಜಸನ ಮನದಲ್ಲಿ ದ್ರವ್ಯ ಹಾಗೂ ಸ್ತ್ರೀ ಇವುಗಳ ಲೋಭವಿರುವುದರಿಂದ ಈತನಿಗೆ ನಿಜವಾದ ತ್ಯಾಗವು ಎಂದಿಗೂ ಆಗಲಾರದು ॥೧೫೨॥ ಈ ಮೂರು ಗುಣಗಳ ಭಿನ್ನ ಭಿನ್ನ ಲಕ್ಷಣಗಳನ್ನು ನಾನು ನಿನಗೆ ಹೇಳಿದೆನು. ಈಗ ಆ ಮೂರರ ಸ್ವರೂಪವನ್ನು ನಾನು ನಿನಗೆ ಹೇಳುವೆನು. ಏಕಾಗ್ರದಿಂದ ಕೇಳು ॥೧೫೩॥

ವಿವೇಕವೃದ್ಧರಾದ, ಆಚಾರಶ್ರೇಷ್ಠರಾದ ಜನರು ಯಾರನ್ನು ಆದರಭಾವದಿಂದ ಸ್ತುತಿಸುವರೋ, ಅವರೇ ನಿಜವಾದ ಸಾತ್ತ್ವಿಕರೆಂದು ನೀನು ನಿಶ್ಚಯವಾಗಿ ತಿಳಿ ॥೧೫೪॥ ವಿವೇಕಿ ಜನರ ವಾರ್ತೆಯಲ್ಲಿ ನಿಂದೆಯನ್ನು ಮಾಡಿದ್ದೆಲ್ಲವೂ ತಾಮಸ ಬಾಧೆಯಾಗಿರುವುದು. ಹೀಗೆ ತಿಳಿ ಮತ್ತು ಅದು ನನಗೂ ಮಾನ್ಯವಾಗಿರುವುದು ॥೧೫೫॥ ಯಾರನ್ನು ಯಾರೂ ಸ್ತುತಿಸುವುದಿಲ್ಲ ಮತ್ತು ನಿಂದಿಸುವುದಿಲ್ಲ, ಆದರೆ ಉಪೇಕ್ಷೆಯನ್ನು ಮಾತ್ರ ಮನಸಾ ಮಾಡುವರು. ಇವರು ನಿಜವಾಗಿಯೂ ರಾಜಸರು. ಇವರ ಬಾಧೆಯು ವಿಲಕ್ಷಣವಾಗಿರುವುದು. ಇದನ್ನು ಲಕ್ಷದಲ್ಲಿಡು ॥೧೫೬॥ ವಿಷ ಮಿಶ್ರಿತ ಅನ್ನವು ಮೇಲ್ನೋಟಕ್ಕೆ ಉತ್ತಮವಾಗಿರುವುದು. ಆದರೆ ಅದರ ಹೊಟ್ಟೆಯಲ್ಲಿ ಕೇವಲ ಮರಣವು ತುಂಬಿರುವುದು. ಅದರಂತೆ ರಾಜಸ ಗುಣವಾಗಿರುವುದು ॥೧೫೭॥ ರಾಜಸ ಜನರಿಗೆ ಜ್ಞಾನದ ಉಪದೇಶ ಮಾಡಲು ಹೋಗಿ ವೇದವು ಕುಂಠಿತವಾಯಿತು. ಅವರನ್ನು ಉಪದೇಶ ಮಾಡಲು ಬ್ರಹ್ಮದೇವನು ದಣಿದುಕೊಂಡನು. ಸ್ವತಃ ನನಗೂ ಕೂಡ ಅವರಿಗೆ ಉಪದೇಶ ಮಾಡುವುದಾಗುವುದಿಲ್ಲ ॥೧೫೮॥

ಯಾಚಿಲಾಗೀ ರಜೋಗುಣ । ವಿವೇಕೀ ಸಾಂಡಿಲಾ ಉಪೇಕ್ಷೂನ । ಉಪೇಕ್ಷೇಚೇ ಹೇಚ ಕಾರಣ । ತುಜ ಮ್ಯಾ ಜಾಣ ಸಾಂಗೀತಲೇ ॥೧೫೯॥ ಯಾಲಾಗೀ ಸಾತ್ತ್ವಿಕ ಸೇವನ । ಸಾಧಕೀ ಅವಶ್ಯ ಕರಾವೇ ಜಾಣ । ಸಾತ್ತ್ವಿಕಸೇವನಾಚಾ ಗುಣ । ತುಜ ಮೀ ಸಂಪೂರ್ಣ ಸಾಂಗೇನ ॥೧೬೦॥

ಸಾತ್ತ್ವಿಕಾನ್ಯೇವ ಸೇವೇತ ಪುಮಾನ್ ಸತ್ತ್ವವಿವೃದ್ಧಯೇ ।
ತತೋ ಧರ್ಮಸ್ತತೋ ಜ್ಞಾನಂ ಯಾವತ್ ಸ್ಮೃತಿರಪೋಹನಮ್ ॥೬॥

ಅರ್ಥ :- ಎಲ್ಲಿಯವರೆಗೆ ಆತ್ಮ ಸಾಕ್ಷಾತ್ಕಾರವು ಆಗುವುದಿಲ್ಲವೋ, ಹಾಗೂ ಸ್ಥೂಲ, ಸೂಕ್ಷ್ಮ ಶರೀರ ಮತ್ತು ಅವುಗಳ ಕಾರಣ ಮೂರು ಗುಣ ಇವುಗಳ ನಿವೃತ್ತಿ ಯಾಗುವುದಿಲ್ಲವೋ, ಅಲ್ಲಿಯವರೆಗೆ ಮಾನವನು ಸತ್ವಗುಣದ ವೃದ್ಧಿಯನ್ನು ಮಾಡುತ್ತಿರಬೇಕು. ಸಾತ್ವಿಕ ಶಾಸ್ತ್ರಗಳ ಅಭ್ಯಾಸ ಮಾಡಬೇಕು. ಅದರಿಂದ ಧರ್ಮದ ವೃದ್ಧಿಯಾಗುವುದು. ಕಾರಣ ಧರ್ಮದ ವೃದ್ಧಿಯಾಗುವುದರಿಂದ ಅಂತಃಕರಣವು ಶುದ್ಧವಾಗುವುದು. ಮತ್ತು ಆತ್ಮ ತತ್ವದ ಜ್ಞಾನವಾಗುವುದು.

ಸಾತ್ತ್ವಿಕ ದ್ರವ್ಯ ಸೇವಿತಾ । ಸತ್ತ್ವವೃದ್ಧೀ ಹೋಯ ತತ್ತ್ವತಾ । ಸತ್ತ್ವವೃದ್ಧೀ ಪುರುಷೀ ಹೋತಾ । ಧರ್ಮ ಸ್ವಭಾವತಾ ಪ್ರವರ್ತೇ ॥೧೬೧॥ ಧರ್ಮಪ್ರವೃತ್ತೀ ಮಾಝೇ ಭಜನ । ಮಾಝ್ಯಾ ಭಕ್ತಿ ಉಲ್ಹಾಸೇ ಜಾಣ । ಭಕ್ತಾಂಸೀ ಮೀ ಹೋಯೇ ಪ್ರಸನ್ನ । ತೈ ಸ್ವಭಾವೇ ಜ್ಞಾನ ಪ್ರಕಾಶೇ ॥೧೬೨॥ ತತ್ತ್ವಮಸ್ಯಾದಿ ವಾಕ್ಯವ್ಯುತ್ಪತ್ತೀ । ತೇ ಗುರುದ್ವಾರಾ ಜ್ಞಾನಾಚೀ ಪ್ರಾಪ್ತೀ । ತರೀ ಸತ್ತ್ವಶುದ್ಧಿತ್ವೇ ಧರ್ಮಭಕ್ತೀ । ಕೋಣೇ ಅರ್ಥೀ ಸೇವಾವೀ ॥೧೬೩॥ ಐಸಾ ವಿಕಲ್ಪ ಜರೀ ತೂ ಧರಿಸೀ । ಉದ್ಧವಾ ಐಕ ತ್ಯಾಹೀ ವಿಚಾರಾಸೀ । ಯಥಾರ್ಥ ಸಾಂಗೇನ ತುಜಪಾಶೀ । ಸತ್ತ್ವಶುದ್ಧೀಸೀ ಉಪಯೋಗೂ ॥೧೬೪॥ ಕೇವಳ ಸತ್ತ್ವಶುದ್ಧೀವೀಣ । ಜಾಹಲ್ಯಾ ಗುರುವಾಕ್ಯಾಚೇ ಶ್ರವಣ । ತೇ ಪಾ ಹಾಟಗಾಣ್ಯಾ ಐಸೇ ಜಾಣ । ಅನೋಳಖಪಣ ಸ್ವಸ್ವರೂಪಾ ॥೧೬೫॥ ಆಂಧಳೇ ಉಪಜಲೇ ಜೇ ಕುಶೀ । ಸ್ತನಪಾನ ಕರೀ ಅಹರ್ನಿಶೀ । ಪರೀ ತೇ ನ ದೇಖೇ ಮಾಉಲಿಸೀ । ದಶಾ ತೈಶೀ ಉಪದೇಶಾ ॥೧೬೬॥ ಇಂದ್ರಿಯೇ ಸಚೇತನ ಮೇಳೀ । ಭಗವಂತ ಸರ್ವಾಂತೇ ಪ್ರತಿಪಾಳೀ । ತ್ಯಾತೇ ನ ದೇಖತೀ ವಿಷಯಾಂಧಳೀ । ಅತಿ ಅಂಧ ಝಾಲೀ ಚಿತ್ತಶುದ್ಧೀವಿಣ ॥೧೬೭॥ ಅಜಾಗಳಾ ಲೋಂಬತೇ ಜಾಣ । ಮಿಥ್ಯಾ ಭಾಷಣ ಮ್ಹಣತೀ ತೇ ಸ್ತನ । ತ್ಯಾಪರೀ ಸತ್ತ್ವಶುದ್ಧೀವಿಣ । ವೃಥಾ ಜಾಣ ಉಪದೇಶ ॥೧೬೮॥ ವಾಹತೇ ಉದಕೀ ಲಿಹಿಲೇ ಲೇಖ । ತಳೀ ಅಕ್ಷರ ನುಮಟೇ ಏಕ । ತೇವೀ ಸತ್ತ್ವಶುದ್ಧೀವಿಣ ದೇಖ । ನಿಜಜ್ಞಾನ ಸುಟಂಕ ಪ್ರಕಟೇನಾ ॥೧೬೯॥ ಝಾಲ್ಯಾ ಆಪಾದತಾ ಸತ್ತ್ವಶುದ್ಧೀ । ಜಂವ ಪ್ರಕಟೇನಾ ಧರ್ಮಬುದ್ಧೀ । ತಂವ ನಿಜಜ್ಞಾನಾಚೀ ನವ್ಹೇ ಸಿದ್ಧೀ । ಜೇವೀ ಗ್ರಹಣಾಮಧೀ ಚಂದ್ರಮಾ ॥೧೭೦॥

ಈ ಕಾರಣದಿಂದ ವಿವೇಕಿಯುರು ರಜೋಗುಣದ ಉಪೇಕ್ಷೆ ಮಾಡಿ ಅದನ್ನು ದೂರ ಮಾಡಿದರು. ಉಪೇಕ್ಷೆಯ ಈ ಕಾರಣವನ್ನು ನಾನು ನಿನಗೆ ಹೇಳಿದೆನು ॥೧೫೯॥ ಈ ಪ್ರಕಾರವಾಗಿ ಸಾಧಕರು ಸಾತ್ವಿಕ ಸೇವನೆಯನ್ನು ಮಾಡಬೇಕು. ಸಾತ್ವಿಕ ಸೇವನೆಯಲ್ಲಿನ ಗುಣವನ್ನು ನಾನು ನಿನಗೆ ಈಗ ಸವಿಸ್ತಾರವಾಗಿ ಹೇಳುವೆನು ॥೧೬೦॥

ಸಾತ್ವಿಕ ಪದಾರ್ಥಗಳ ಸೇವನೆಯಿಂದ ಸಾತ್ವಿಕ ಗುಣಗಳ ವೃದ್ಧಿಯಾಗುವುದು. ಪುರುಷನಲ್ಲಿ ಸಾತ್ವಿಕ ಗುಣಗಳು ಪ್ರಕಟವಾಗುತ್ತಲೇ ಸಹಜವಾಗಿ ಧರ್ಮದತ್ತ ಪ್ರವೃತ್ತಿಯಾಗುವುದು ॥೧೬೧॥ ಧರ್ಮಪ್ರವೃತ್ತಿಯೇ ನನ್ನ ಭಜನೆಯಾಗಿರುವುದು. ಉಲ್ಹಾಸದಿಂದ ನನ್ನ ಭಕ್ತಿಯನ್ನು ಮಾಡಲು ನಾನು ಪ್ರಸನ್ನನಾಗುವೆನು. ಆಗ ಸಹಜವಾಗಿಯೇ ಜ್ಞಾನವು ಪ್ರಕಟವಾಗುವುದು ॥೧೬೨॥ ತತ್ತ್ವಮಸ್ಯಾದಿ ವಚನಗಳ ಅರ್ಥವನ್ನು ಗುರುಮುಖದಿಂದ ತಿಳಿಯಲು ಜ್ಞಾನಪ್ರಾಪ್ತಿಯಾಗುವುದು. ಹಾಗಾದರೆ ಸತ್ವಶುದ್ಧಿಗಾಗಿ ಧರ್ಮ ಭಕ್ತಿಯನ್ನು ಏಕೆ ಮಾಡಬೇಕು? ॥೧೬೩॥ ಹೇ ಉದ್ಧವಾ, ಇಂತಹ ವಿಕಲ್ಪವು ನಿನ್ನ ಮನದಲ್ಲಿ ಬರಬಹುದು. ಅದಕ್ಕಾಗಿ ಆ ವಿಷಯದಲ್ಲಿಯೂ ಸಹ ಸತ್ವವೃದ್ಧಿಯ ಉಪಯೋಗವನ್ನು ನಾನು ನಿನಗೆ ಹೇಳುವೆನು ॥೧೬೪॥ ಸತ್ವಶುದ್ಧಿಯಾಗದೇ ಕೇವಲ ಗುರುವಾಕ್ಯಗಳ ಶ್ರವಣವು ಸಾಧಿಸಿದರೂ ಕೂಡ ಅದು ಕೇವಲ ಬಜಾರದಲ್ಲಿನ ಹಾಡುಗಳಾಗಿರುವುವು. ಇದರಿಂದ ಎಂದಿಗೂ ಆತ್ಮಸ್ವರೂಪದ ಪ್ರಾಪ್ತಿಯಾಗಲಾರದು ॥೧೬೫॥ ಕುರುಡ ಕೂಸು ತನ್ನ ತಾಯಿಯ ಎದೆಗೆ ಅಪ್ಪಿಕೊಂಡು ಹಗಲು ರಾತ್ರಿ ಸ್ತನಪಾನವನ್ನು ಮಾಡುತ್ತಿರುವುದು. ಆದರೆ ಅದಕ್ಕೆ ತನ್ನ ತಾಯಿಯನ್ನು ನೋಡಲಿಕ್ಕಾಗುವುದಿಲ್ಲ. ಅದರಂತೆಯೇ ಆ ಉಪದೇಶದ ಸ್ಥಿತಿಯಾಗಿರುವುದು ॥೧೬೬॥ ಭಗವಂತನು ಸರ್ವ ಇಂದ್ರಿಯಗಳಲ್ಲಿ ಸಜೀವತೆಯನ್ನಿಟ್ಟು ಸರ್ವರ ರಕ್ಷಣೆಯನ್ನು ಮಾಡುತ್ತಿರುವನು. ಆದರೆ ವಿಷಯಾಂಧರಾದ ಮನುಷ್ಯರು ಆತನನ್ನು ನೋಡುವುದಿಲ್ಲ. ಅವರ ಚಿತ್ತಶುದ್ಧಿಯು ಇಲ್ಲದ್ದಕ್ಕೆ ಅವರಿಗೆ ನಿಜವಾದದ್ದು ಯಾವುದೂ ತೋರುವುದಿಲ್ಲ ॥೧೬೭॥ ಆಡಿನ ಕೊರಳಲ್ಲಿ ಜೋತಾಡುವ ಗ್ರಂಥಿಗಳಿಗೆ ಮೊಲೆಗಳೆಂಬ ಹೆಸರು ಸುಳ್ಳಾಗಿರುವುದು. ಅದರಂತೆ ಚಿತ್ತಶುದ್ಧಿ ಇಲ್ಲದೇ ಸರ್ವ ಉಪದೇಶವು ಕೇವಲ ವ್ಯರ್ಥವಾಗಿರುವುದೆಂದು ತಿಳಿ ॥೧೬೮॥ ಹರಿಯುವ ನೀರಿನ ಮೇಲೆ ಎಷ್ಟೇ ಅಕ್ಷರಗಳನ್ನು ಬರೆದರೂ ಕೂಡ ಆ ನೀರಿನ ಮೇಲೆ ಒಂದಕ್ಷರವೂ ಸಹ ಮೂಡಲಾರದು. ಅದರಂತೆ ಸತ್ವಶುದ್ಧಿಯಾಗದೇ ಆತ್ಮಜ್ಞಾನವು ಸ್ಪಷ್ಟವಾಗಿ ಪ್ರಕಟವಾಗಲಾರದು ॥೧೬೯॥ ಗ್ರಹಣವು ಹಿಡಿಯಲು ಚಂದ್ರನಿದ್ದರೂ ಕಾಣಿಸಲಾರನು. ಅದರಂತೆ ಚಿತ್ತಶುದ್ಧಿಯಾಗಿ ಎಲ್ಲಿಯವರೆಗೆ ಧರ್ಮಬುದ್ಧಿಯು ಪ್ರಕಟವಾಗಲಾರದೋ, ಅಲ್ಲಿಯವರೆಗೆ ಆತ್ಮಜ್ಞಾನವು ಪ್ರಕಟವಾಗಲಾರದು ॥೧೭೦॥

ಐಕತಾ ಹರಿಕಥಾಶ್ರವಣ । ಬಾಷ್ಪ ರೋಮಾಂಚ ಸ್ವೇದ ರುದನ । ರುಕಾ ವೇಂಚಿತಾ ಜಾಯ ಪ್ರಾಣ । ತೇಥೇಹೀ ಬ್ರಹ್ಮಜ್ಞಾನ ಪ್ರಕಟೇನಾ ॥೧೭೧॥ ಹೃದಯೀಚಾ ಲೋಭ ಜಂವ ನ ತುಟೇ । ತಂವ ನಿಶ್ಚಯಜ್ಞಾನ ಕೈಚೇ ಭೇಟೇ ।ಸತ್ತ್ವಶುದ್ಧಿಧರ್ಮೂ ಜೈ ಪ್ರಕಟೇ । ತೈ ನಿಜಜ್ಞಾನನೇಟೇ ಸುಪಂಥೀ ಲಾಗೇ ॥೧೭೨॥ ತೇ ಚಾಲತಾ ಧರ್ಮಪಂಥೀ । ಜೈ ಮಾಝೀ ಭಕ್ತಿ ಹೋಯ ಸಾಂಗಾತೀ । ತೈ ಚೋರಾಂಚೀ ನ ಪಡೇ ಗುಂತೀ । ಶೀಘ್ರಗತಿ ಮಜ ಪಾವೇ ॥೧೭೩॥ ತೇ ಭಕ್ತೀಚಾ ಸಾಂಡಿತಾ ಸಾಂಗಾತೂ । ಪುಢೀಲ ಅನೋಳಖ ಮಹಾಪಂಥೂ । ತೇಥ ಕಾಮಕ್ರೋಧ ಕರಿತೀ ಘಾತೂ । ವಿಕಲ್ಪ - ಆವರ್ತೂ ಬುಡವಿತೀ ॥೧೭೪॥ ಭಾಗ್ಯೇವೀಣ ಮಾಝೀ ಭಕ್ತೀ । ಪ್ರಾಣ್ಯಾಸೀ ನವ್ಹೇ ಗಾ ಸಾಂಗಾತೀ । ಜಿಚೇ ಸಂಗೇ ಚಾಲತಾ ಪಂಥೀ । ಅಲ್ಪಹೀ ಗುಂತೀ ಪಡೇನಾ ॥೧೭೫॥ ಮಾಝೇ ಭಕ್ತೀಸವೇ ಮಹಾಶೂರ । ನಾಂವಾಣಿಗೆ ನವವಿಧ ವೀರ । ಸನ್ನದಬದ್ಧ ಸದಾ ಸಮೋರ । ಮಹಾಝುಂಜಾರ ನಿಜಬೋಧೇ ॥೧೭೬॥ ಯಾಲಾಗೀ ಮಾಝೇ ಭಕ್ತೀವಿಣ । ಸಹಸ್ರಧಾ ಕೇಲ್ಯಾ ಶ್ರವಣ ಮನನ । ಮಾಝೀ ಪ್ರಾಪ್ತಿ ನವ್ಹೇ ಜಾಣ । ಭಜನೇ ಪೂರ್ಣ ಮತ್ಪ್ರಾಪ್ತೀ ॥೧೭೭॥ ಸರ್ವ ಭೂತೀ ಭಗವದ್ಭಾವೋ । ಯಾ ನಾಂವ ಮುಖ್ಯಭಕ್ತೀ ಪಹಾ ಹೋ । ತೇ ಸಾಂಗಾತೀ ಝಾಲಿಯಾ ಸ್ವಯಮೇವೋ । ಕಾಮಕ್ರೋಧಮೋಹೋ ನ ಶಕತೀ ಬಾಧೂ ॥೧೭೮॥ ಸಾಕ್ಷೇಪೇ ನೇಊನಿ ಘಾಗರೀ । ಪಾಲಥೀ ಘಾತಲ್ಯಾ ಗಂಗಾಸಾಗರೀ । ಜಳಬಿಂದು ರಿಘೇನಾ ಭೀತರೀ । ತೈಶೀ ಪರೀ ಮಹಾವಾಕ್ಯಾ ॥೧೭೯॥ ಯಾಲಾಗೀ ಅತ್ಯಾದರೇಸೀ ಜಾಣ । ಧರ್ಮಯುಕ್ತ ಮಾಝೇ ಭಜನ । ಕರಿತಾ ಮೀ ಹೋಯ ಪ್ರಸನ್ನ । ಮತ್ಪ್ರಸಾದೇ ಜ್ಞಾನ ಪ್ರಕಾಶೇ ॥೧೮೦॥ ಲೋಭ ಠೇಊನಿ ಅರ್ಥಸ್ವಾರ್ಥೀ । ಕೋರಡೀ ಕರಿತಾ ಮಾಝೀ ಭಕ್ತೀ । ಮೀ ಪ್ರಸನ್ನ ನವ್ಹೇ ಶ್ರೀಪತೀ । ಜಾಣ ನಿಶ್ಚಿತೀ ಉದ್ಧವಾ ॥೧೮೧॥ ಜೋ ಧನೇ ಮನೇ ಕಾಯಾ ವಚನೇ । ವೇಂಚೂನಿ ಭಜೇ ಮಜಕಾರಣೇ । ತ್ಯಾಸೀಚ ಮ್ಯಾ ಪ್ರಸನ್ನ ಹೋಣೇ । ಜೇವೀ ಚಂದ್ರಕಿರಣೇ ಚಕೋರಾ ॥೧೮೨॥ ವ್ಯಾಲೀ ಧೇನು ವತ್ಸಾ ವೋರಸೇ । ತೇವೀ ಮೀ ತುಷ್ಟೇ ಅತಿಸಂತೋಷೇ । ತೇವೀ ಮಾಝೇನಿ ಪ್ರಸಾದವಶೇ । ಮಾಝೇ ಜ್ಞಾನ ಪ್ರಕಾಶೇ ಮದ್ಭಕ್ತಾ ॥೧೮೩॥

ಹರಿಕೀರ್ತನೆಯನ್ನು ಕೇಳುತ್ತಿರಲು ಮೈಮೇಲೆ ರೋಮಾಂಚನವಾಗುವುದು, ನೇತ್ರಗಳಿಂದ ಕಣ್ಣೀರು ಸುರಿಯುವುದು, ಕಂಠವು ಬಿಗಿಯುವುದು. ಅಳುವುದು ಹೊರಬೀಳುವುದು. ಹೀಗಿದ್ದರೂ ಹಣವನ್ನು ಖರ್ಚು ಮಾಡುವ ಪ್ರಸಂಗವು ಒದಗಲು ಪ್ರಾಣವೇ ಹೋದಂತಾಗುವುದು. ಹೀಗಿದ್ದರೆ ಬ್ರಹ್ಮಜ್ಞಾನವು ಪ್ರಕಟವಾಗುವುದಿಲ್ಲ ॥೧೭೧॥ ಅಂತಃಕರಣದಲ್ಲಿ ಲೋಭವು ನಷ್ಟವಾಗದೇ ಜ್ಞಾನದ ಪ್ರಾಪ್ತಿಯು ನಿಶ್ಚಯವಾಗಿ ಆಗಲಾರದು. ಚಿತ್ತಶುದ್ಧಿಯಾಗಿ ಧರ್ಮವು ಪ್ರಕಟಗೊಂಡಾಗ ಮಾತ್ರ ಆಗ ಆತ್ಮಜ್ಞಾನದ ಸನ್ಮಾರ್ಗವು ಸಿಗುವುದು ॥೧೭೨॥ ಆತನು ಧರ್ಮಮಾರ್ಗದಲ್ಲಿ ನಡೆಯುತ್ತಿರಲು ನನ್ನ ಭಕ್ತಿಯು ಆತನ ಸಂಗತಿಯಲ್ಲಿರುವುದು. ಕಳ್ಳರು ಆತನಿಗೆ ದಾರಿಯಲ್ಲಿ ಅಡ್ಡಿ ಮಾಡಲಾರರು. ಆದ್ದರಿಂದ ಆತನು ಶೀಘ್ರಗತಿಯಲ್ಲಿ ನನ್ನನ್ನು ಕೂಡುವನು ॥೧೭೩॥ ಒಂದು ವೇಳೆ ಆ ಭಕ್ತಿಯ ಸಂಗತಿಯನ್ನು ಬಿಟ್ಟು ಬಿಟ್ಟರೆ, ಮುಂದಿನ ಮಾರ್ಗವು ತೊಂದರೆಯೊಳಗಾಗುವುದು. ದಾರಿಯಲ್ಲಿ ಕಾಮ ಕ್ರೋಧರು ಘಾತ ಮಾಡಿ ವಿಕಲ್ಪರೂಪ ಚಕ್ರದಲ್ಲಿ ಮುಳುಗಿಸುವರು ॥೧೭೪॥ ಮಹಾಭಾಗ್ಯವಿಲ್ಲದೇ ನನ್ನ ಭಕ್ತಿಯು ಎಂದಿಗೂ ಪ್ರಾಪ್ತವಾಗುವುದಿಲ್ಲ. ಭಕ್ತಿಯ ಸಂಗತಿಯಿಂದ ನಡೆಯುತ್ತಿದ್ದರೆ ಮಾತ್ರ ಸ್ವಲ್ಪವೂ ಕೂಡ ಅಡಚಣೆಗಳು ಒದಗುವುದಿಲ್ಲ ॥೧೭೫॥ ನನ್ನ ಭಕ್ತಿಯ ಜೊತೆಯಲ್ಲಿ ಚಿಕ್ಕ ದೊಡ್ಡ ಹಾಗೂ ನಾಮಾಂಕಿತರಾದ ಒಂಬತ್ತು ಪ್ರಕಾರಗಳ ವೀರರಿರುವರು. ಇವರು ಯುದ್ಧಕ್ಕೆ ಸಜ್ಜಾಗಿರುವರು. ಯಾವಾಗಲೂ ಶತ್ರುಗಳ ಎದುರಿನಲ್ಲಿ ನಿಂತಿರುವರು. ಆತ್ಮಜ್ಞಾನದ ಯೋಗದಿಂದ ಇವರು ಮಹಾಯೋದ್ಧರಾಗಿರುವರು ॥೧೭೬॥ ಆದ್ದರಿಂದ ನನ್ನ ಭಕ್ತಿಯನ್ನು ಬಿಟ್ಟು ಸಾವಿರಾರು ಸಾರೆ ಶ್ರವಣ ಮನನವನ್ನು ಮಾಡಿದರೂ ಕೂಡ ನನ್ನ ಪ್ರಾಪ್ತಿಯಾಗಲಾರದು. ಕೇವಲ ಭಜನಮಾತ್ರದಿಂದಲೇ ನನ್ನ ಪೂರ್ಣಪ್ರಾಪ್ತಿಯಾಗುವುದು ॥೧೭೭॥ ಸರ್ವಭೂತಮಾತ್ರರಲ್ಲಿ ಭಗತ್ಭಾವವನ್ನಿಡುವುದೇ ಮುಖ್ಯವಾದ ಭಕ್ತಿಯೆಂದು ಹೇಳುವರು. ಈ ಭಕ್ತಿಯು ಸ್ವತಃ ನಮ್ಮ ಜೊತೆಯಲ್ಲಿರಲು ಕಾಮ, ಕ್ರೋಧ, ಮೋಹ ಇವು ನಮ್ಮನ್ನು ಬಾಧಿಸಲು ಶಕ್ಯವೇ ಇಲ್ಲ ॥೧೭೮॥ ಕೊಡವನ್ನು ತೆಗೆದುಕೊಂಡು ಗಂಗೆಯಲ್ಲಿ ಅಥವಾ ಸಮುದ್ರದಲ್ಲಿ ಡಬ್ಬು ಹಾಕಲು ಅದರಲ್ಲಿ ಒಂದು ಹನಿ ನೀರು ಕೂಡ ಸೇರಲಾರದು. ಅದರಂತೆ ಮಹಾವಾಕ್ಯಗಳ ರೀತಿಯಾಗಿರುವುದು ॥೧೭೯॥ ಆದ್ದರಿಂದ ಅತ್ಯಂತ ಪ್ರೇಮದಿಂದ, ಆದರದಿಂದ ಮತ್ತು ಧರ್ಮಶೀಲ ಬುದ್ಧಿಯಿಂದ ಅಂತಃಕರಣಪೂರ್ವಕವಾಗಿ ನನ್ನ ಭಜನೆಯನ್ನು ಮಾಡುವುದೊಂದೇ ತಡ, ನಾನು ಪ್ರಸನ್ನನಾಗುವೆನು. ಹಾಗೂ ನನ್ನ ಪ್ರಸಾದದಿಂದ ಜ್ಞಾನವು ಪ್ರಕಾಶಿತವಾಗುವುದು ॥೧೮೦॥ ಹಣದ ಮೇಲೆ ಅಥವಾ ಸ್ವಾರ್ಥದ ಮೇಲೆ ದೃಷ್ಟಿಯನ್ನಿಟ್ಟು ನನ್ನ ಒಣ ಭಕ್ತಿಯನ್ನು ಮಾಡಿದರೆ, ನಾನು ಪ್ರಸನ್ನನಾಗಲಾರೆನು. ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ॥೧೮೧॥ ಹೇ ಉದ್ಧವನೇ, ಯಾರು ಧನ, ಮನ, ಕಾಯಾ ಮತ್ತು ವಾಚಾ ಕೇವಲ ನನಗಾಗಿಯೇ ಮಾತ್ರ ಸವೆಸುತ್ತಿರುವರೋ, ಅವರ ಮೇಲೆ ಯಾವ ಪ್ರಕಾರವಾಗಿ ಚಂದ್ರಕಿರಣಗಳು ಚಕೋರದ ಮೇಲೆ ಪ್ರಸನ್ನವಾಗುವುವೋ ಅದರಂತೆಯೇ ನಾನು ಪ್ರಸನ್ನನಾಗುವೆನು ॥೧೮೨॥ ತಾನು ಹಡೆದ ಕರುವಿಗೆ ಆಕಳವು ಪ್ರೇಮದಿಂದ ಹಾಲನ್ನು ಕೊಡವುದು. ಅದರಂತೆ ನಾನು ಸಂತುಷ್ಟನಾಗಿ ಪ್ರಸನ್ನನಾಗುವೆನು ಮತ್ತು ನನ್ನ ಪ್ರಸಾದದಿಂದ ಭಕ್ತರಿಗೆ ನನ್ನ ಜ್ಞಾನವು ಪ್ರಾಪ್ತವಾಗುವುದು ॥೧೮೩॥

ಸಗುಣ ಸುಂದರ ಆಣಿ ಪತಿವ್ರತಾ । ಅತಿಶಯೇ ಪಢಿಯಂತೀ ಹೋಯ ಕಾಂತಾ । ತಿಸೀ ಸರ್ವಸ್ವ ದೇ ನ ಮಾಗತಾ ಭರ್ತಾ । ತೇವೀ ಮೀ ಮದ್ಭಕ್ತಾ ಪ್ರಸನ್ನ ॥೧೮೪॥ ಮಾಝೇನಿ ಪ್ರಸಾದೇ ಪ್ರಕಾಶೇ ಜ್ಞಾನ । ಶ್ರುತಿಸ್ಮೃತೀ ನಾಂವ ಮ್ಹಣತೀ ಜಾಣ । ಸವಿಲಾಸ ಅವಿದ್ಯಾ ನಿರಸನ । "ಅಪೋಹನ" ಯಾ ನಾಂವ ॥೧೮೫॥ ಗುಣಾಸ್ತವ ದೇಹ ಜಾಣ । ದೇಹಾಸ್ತವ ಉಪಜೇ ಜ್ಞಾನ । ತೇಣೇ ಜ್ಞಾನೇ ಗುಣ ನಿರ್ದಳಣ । ದೇಹನಿರಸನ ನ ಘಡೇ ಮ್ಹಣಸೀ ॥೧೮೬॥ ಹೇ ಗೋಷ್ಟೀ ತೂ ಮ್ಹಣಸೀ ಕುಡೀ । ಕೀ ಪಕ್ಷೀ ಆಪುಲೇ ಪಾಂಖ ಮೋಡೀ । ನಾರಳ ನಾರಳೀತೇ ತೋಡೀ । ಸ್ವಮಾಂಸಾಚೀ ಗೋಡೀ ವ್ಯಾಘ್ರ ಚಾಖೇ ॥೧೮೭॥ ಹೇ ನ ಘಡತೇ ಜೈ ಘಡೋ ಬೈಸೇ । ತೈ ದೇಹೀಚೇನಿ ಜ್ಞಾನೇ ಗುಣದೇಹ ನಾಸೇ । ಹಾ ವಿಕಲ್ಪೂ ಧರಿಸೀ ಮಾನಸೇ । ಐಕ ಅನಾಯಾಸೇ ತೋ ನಿರಾಸೂ ॥೧೮೮॥

ವೇಣುಸಂಘರ್ಷಜೋ ವಹ್ನಿರ್ದಗ್ಧ್ವಾ ಶಾಮ್ಯತಿ ತದ್ವನಮ್ । ಏವಂ ಗುಣವ್ಯತ್ಯಯಜೋ ದೇಹಃ ಶಾಮ್ಯತಿ ತತ್ಕ್ರಿಯಃ ॥೭॥

ಅರ್ಥ :- ಬಿದಿರುಗಳು ಪರಸ್ಪರ ಸಂಘರ್ಷದಿಂದ ಅಂದರೆ ಒಂದಕ್ಕೊಂದು ತಿಕ್ಕಿದಾಗ ಉತ್ಪನ್ನವಾಗುವ ಅಗ್ನಿಯು ತನ್ನ ಜ್ವಾಲೆಯಿಂದ ಸರ್ವ ವನವನ್ನು ಸುಟ್ಟು ಹಾಕುವುದು ಮತ್ತು ಶಾಂತವಾಗುವುದು. ಆದರಂತೆ ಗುಣಗಳ ವಿಕಾರದಿಂದ ಉತ್ಪನ್ನವಾಗಿರುವ ಈ ದೇಹವು ವಿಚಾರದ್ವಾರಾ ಮಂಥನ ಮಾಡುವುದರಿಂದ ಜ್ಞಾನಾಗ್ನಿಯು ಪ್ರಜ್ವಲಿಸುವುದು. ಮತ್ತು ಅದು ಸಮಸ್ತ ಶರೀರಕ್ಕೆ ಮತ್ತು ಗುಣಗಳಿಗೆ ಭಸ್ಮ ಮಾಡಿ ಸ್ವತಃ ಶಾಂತವಾಗುವುದು.

ದೈವೇ ವಾಯೂಚ್ಯಾ ಕಲ್ಲೋಳೀ । ಪರಸ್ಪರೇ ವೇಳೂಜಾಳೀ । ಸ್ವಜಾತಿಕಾಂಚಣೇ ಇಂಗಳೀ । ಪೇಟಲೀ ತೇ ಹೋಳೀ ವನಾಚೀ ಕರೀ ॥೧೮೯॥ ಅಗ್ನಿ ಉಪಜಲಾ ಜೇ ಕಾಂಡೀ । ತೇಹೀ ಕಾಂಡೇ ಜಾಳೂನಿ ಸಾಂಡೀ । ವನೀ ನುರವೂನಿಯಾ ಕಾಡೀ । ಸ್ವಯೇ ರಾಖೋಡೀ ಹೋಊನಿ ವಿಝೇ ॥೧೯೦॥ ತೇವೀ ವೈರಾಗ್ಯಾಭ್ಯಾಸವಾಯೂನೀ । ಹೋತಾ ತ್ರಿಗುಣಾಂಚೀ ಕಾಂಚಣೀ । ತೇಥೇ ಪ್ರಕಟಲಾ ಜ್ಞಾನಾಗ್ನೀ । ಅವಿದ್ಯಾವನೀ ದಾಹಕೂ ॥೧೯೧॥ ತೋ ಹರಿಗುರುಕೃಪಾ ಖವಳಲಾ । ವೃತ್ತಿರೂಪೇ ಪ್ರಜ್ವಳಲಾ । ದೇಹದ್ವಯೇಸೀ ಲಾಗಲಾ । ಪ್ರವರ್ತಲಾ ಗುಣಾಂತೇ ಜಾಳೂ ॥೧೯೨॥ ಜಳಾಲ್ಯಾ ಆಶಾತೃಷ್ಣೇಚ್ಯಾ ಪಾಳೀ । ಜಳಾಲೀ ಕಾಮಲೋಭಾಂಚೀ ಕೋಲ್ಹೀ । ಕ್ರೋಧವ್ಯಾಘ್ರಾಚೀ ಹೋಳೀ ಝಾಲೀ । ಆಗೀ ಲಾಗಲೀ ಮದಗಜಾ ॥೧೯೩॥ ಜಾಳಿಲೀ ಸ್ನೇಹಾಚೀ ಆರಾಂಟೀ । ಜಾಳಿಲೀ ಅಸತ್ಯಾಚೀ ಬೋರಾಂಟೀ । ಜಾಳಿಲಾ ಮೋಹ ಅಜಗರು ಉಠಾಉಠೀ । ಜಾಳಿಲಾ ಶೇವಟೀ ಕಾಳವಿಟ ಕಾಳೂ ॥೧೯೪॥

ಗುಣವತೀ, ರೂಪವತೀ, ಪತಿವ್ರತಾ ಹಾಗೂ ಅತಿಶಯ ಪ್ರೀತಿಯ ಪತ್ನಿಗೆ ಪತಿಯು ಆಕೆಯು ಕೇಳದೇ ಏನೆಲ್ಲವನ್ನೂ ಕೊಡುವನು. ಅದರಂತೆ ನಾನು ನನ್ನ ಭಕ್ತರಲ್ಲಿ ಪ್ರಸನ್ನನಾಗುವೆನು ॥೧೮೪॥ ನನ್ನ ಪ್ರಸಾದದಿಂದ ಯಾವ ಸಮಯಕ್ಕೆ ಜ್ಞಾನವು ಪ್ರಕಟವಾಗುವುದೋ, ಆಗ ಆತನಿಗೆ ಶ್ರುತೀ, ಸ್ಮೃತಿ ಒಂದು ಹೆಸರನ್ನು ಕೊಡುವವು. ಆ ಹೆಸರು "ಅಪೋಹನ" ಎಂದಾಗಿರುವುದು. ಈತನಿಗೆ ಸಹಜ ಲೀಲೆಯಿಂದ ಅವಿದ್ಯೆಯು ನಾಶವಾಗುವುದು. ಇದನ್ನು ನೀನು ಲಕ್ಷದಲ್ಲಿಡು ॥೧೮೫॥ ಗುಣಗಳಿಂದ ದೇಹವು ಉತ್ಪನ್ನವಾಗುವುದು. ಮತ್ತು ದೇಹದಿಂದ ಜ್ಞಾನವು ಉತ್ಪನ್ನವಾಗುವುದು. ಆದರೆ ಅದೇ ಜ್ಞಾನದಿಂದ ಗುಣಗಳ ನಾಶವಾಗುವುದಾದರೆ ಆಗ ದೇಹದ ಯಾವ ನಿರಸನೆಯಾಗಲಾರದು ॥೧೮೬॥ ಹೀಗೆ ನೀನು ಹೇಳಬಹುದು. ಆದರೆ ಈ ಮಾತು ಸುಳ್ಳಾಗಿರುವುದು. ಪಕ್ಷಿಗಳು ತಾವೇ ತಮ್ಮ ರೆಕ್ಕೆಗಳನ್ನು ಕಿತ್ತು ಒಗೆಯುವಂತೆ, ತೆಂಗಿನಕಾಯಿಯು ತನ್ನ ತೆಂಗಿನಗೊಂಚಲವನ್ನೇ ಕಿತ್ತು ಎಸೆಯುವಂತೆ, ಅಥವಾ ಹುಲಿಯು ತನ್ನ ಸ್ವತಃದ ಶರೀರದ ಮಾಂಸದ ರುಚಿಯನ್ನು ನೆಕ್ಕುವಂತೆ ॥೧೮೭॥ ಇವು ಎಂದೆಂದಿಗೂ ಸಾಧಿಸಲಾರದ ವಿಪರೀತವಾದ ಮಾತುಗಳು ಯಾವ ಪ್ರಕಾರವಾಗಿ ಸಾಧಿಸಲು ಶಕ್ಯವಿಲ್ಲವೋ, ಅದರಂತೆಯೇ ದೇಹದಲ್ಲಿನ ಜ್ಞಾನದಿಂದ ಗುಣಗಳ ಮತ್ತು ದೇಹದ ನಾಶವಾಗಲಾರದು ಎಂದು ಹೀಗೆ ನಿನ್ನ ಮನದಲ್ಲಿ ವಿಕಲ್ಪವು ಬರಬಹುದು. ಅದಕ್ಕಾಗಿ ಅದರ ನಿರಾಕರಣೆಯನ್ನೂ ಕೂಡ ನೀನು ಸಹಜವಾಗಿ ಕೇಳಿಕೋ ॥೧೮೮॥

ದೈವಯೋಗದಿಂದ ವಾಯುವಿನ ಬಿರುಗಾಳಿಯಲ್ಲಿ ಬಿದಿರಿನ ಗುಂಪಿನಲ್ಲಿನ ಆ ಬಿದಿರುಗಳು ಪರಸ್ಪರವಾಗಿ ತಿಕ್ಕಲ್ಪಡುವುವು. ಈ ರೀತಿಯಲ್ಲಿ ಸ್ವಜಾತಿಯ ಘರ್ಷಣೆಯಿಂದ ಬೆಂಕಿ ಕಿಡಿಯು ಹುಟ್ಟುವುದು. ಅದು ಬೆಳೆದು ಜ್ವಾಲೆಯಾಗಿ ಸರ್ವವನವನ್ನು ಸುಟ್ಟು ಹಾಕುವುದು ॥೧೮೯॥ ಬಿದಿರಿನ ಕಾಂಡಗಳಲ್ಲಿ ಉತ್ಪನ್ನವಾಗುವ ಆ ಯಾವ ಅಗ್ನಿಯು ಆ ಕಾಂಡಗಳನ್ನೇ ಸುಟ್ಟು ಹಾಕುವುದು. ಆ ಅರಣ್ಯದಲ್ಲಿ ಒಂದು ಹುಲ್ಲಿನ ಕಡ್ಡಿಯನ್ನೂ ಕೂಡ ಉಳಿಸುವುದಿಲ್ಲ. ಕೊನೆಗೆ ತಾನು ಸ್ವತಃ ಬೂದಿಯಾಗಿ ಆರಿಹೋಗುವುದು ॥೧೯೦॥ ಅದರಂತೆ ವೈರಾಗ್ಯ, ಅಭ್ಯಾಸರೂಪ ವಾಯುವಿನಿಂದ ತ್ರಿಗುಣಗಳ ಘರ್ಷಣೆಯಾಗುವುದು. ಅಲ್ಲಿ ಜ್ಞಾನರೂಪ ಅಗ್ನಿಯು ಪ್ರಕಟವಾಗುವುದು. ಅದು ಅವಿದ್ಯಾರೂಪ ಸರ್ವ ವನವನ್ನು ಸುಟ್ಟು ಹಾಕುವುದು ॥೧೯೧॥ ಈ ಅಗ್ನಿಯು ಹರಿಗುರುಕೃಪೆಯ ರೂಪದಿಂದ ಉಗ್ರವಾಗವುದು. ವೃತ್ತಿರೂಪದಿಂದ ಪ್ರಜ್ವಲಿತವಾಗುವುದು. ಈ ಯಾವ ಸ್ಥೂಲ, ಸೂಕ್ಷ್ಮ ದೇಹ ಸಮೇತ ಗುಣಗಳನ್ನು ಸುಡಲು ಪ್ರವೃತ್ತವಾಗುವುದು ॥೧೯೨॥ ಆಗ ಆಶೆಯ ಮತ್ತು ತೃಷ್ಣೆಯ ಗುಂಪು ಗುಂಪುಗಳೆಲ್ಲವೂ ಸುಟ್ಟು ಹೋಗುವುವು. ಕಾಮ ಲೋಭರೂಪ ನರಿಗಳು ಭಸ್ಮವಾಗುವುವು. ಕ್ರೋಧರೂಪ ಹುಲಿಯ ಹೋಳಿಯಾಗುವುದು. ಹಾಗೂ ಮದರೂಪ ಆನೆಗೆ ಬೆಂಕಿ ಹತ್ತುವುದು ॥೧೯೩॥ ಸ್ನೇಹದ ಮುಳ್ಳಿನ ಕೊಂಪೆಗಳು ಸುಟ್ಟು ಹೋಗುವುವು. ಅಸತ್ಯರೂಪ ಬಾರೀಗಿಡದ ಮುಳ್ಳುಗಳು, ಮೋಹ ರೂಪ ಹೆಬ್ಬಾವು ಈ ಎಲ್ಲವನ್ನೂ ತತ್ಕಾಲದಲ್ಲಿ ಸುಟ್ಟು ಹಾಕಿ, ಕೊನೆಗೆ ಕಾಳರೂಪ ಕಾಳವಿಟವನ್ನು ಸುಟ್ಟು ಹಾಕಿತು ॥೧೯೪॥

ಉಠಿಲಾ ಅಹಂಕಾರಾಚಾ ಸೋರೂ । ಧರಿತಾ ನ ಧರೇ ಅನಿವಾರೂ । ತೋಹೀ ಜಾಳಿಲಾ ದುರ್ಧರೂ । ವಣವಾ ಚೌಫೇರೂ ಕೋಂಡಲಾ ॥೧೯೫॥ ಪಳೂನಿ ಜಾವಯಾ ಪುರತಾ । ಅಣುಭರೀ ಠಾವೋ ನುರೇಚಿ ರಿತಾ । ಏವಂ ಜಳಾಲಾ ತೋ ಪಳತಪಳತಾ । ಅಹಂಸೋರು ಸರ್ವಥಾ ನಿಮಾಲಾ ॥೧೯೬॥ ನವಲ ಅಗ್ನೀಚೇ ವಿಂದಾಣ । ಆಪಣೆಯಾ ಜಾಳೀ ಆಪಣ । ದಾಹಶಕ್ತೀತೇ ಜಾಳೂನ । ಸ್ವಸ್ವರೂಪೀ ಜಾಣ ಉಪರಮೇ ॥೧೯೭॥ ಐಸೇ ಐಕೋನಿ ನಿರೂಪಣ । ಉದ್ಧವಾಸೀ ವಿಸ್ಮಯೋ ಗಹನ । ಜನಾಸ ಕೇವಢೀ ನಾಗವಣ । ಆಪಣೆಯಾ ಆಪಣ ವೋಢವಲೀ ॥೧೯೮॥ ನಶ್ವರದೇಹಾಚಿಯೇ ಸಾಠೀ । ಪಾವಿಜೇ ಪರಬ್ರಹ್ಮಾಚೀ ಪುಷ್ಟೀ । ತೇ ಸಾಂಡೂನಿಯಾ ಕರಂಟೀ । ವಿಷಯನಿಷ್ಠೀ ಮರಮರೋ ಮರತೀ ॥೧೯೯॥ ಸಾತ್ತ್ವಿಕಸೇವನೇ ಸತ್ತ್ವವೃದ್ಧೀ । ತೇಣೇ ಅಲಭ್ಯ ಲಾಭೇ ಸಿದ್ಧೀ । ತೇ ಸಾಂಡೋನಿಯಾ ದುರ್ಬುದ್ಧೀ । ವಿಷಯವಿಧೀ ರಾತಲೇ ॥೨೦೦॥ ಕೇವಢಾ ನಾಡೂ ಮಾಂಡಲಾ ಲೋಕಾ । ಐಶೀ ಜೀವೀಚೀ ಆಶಂಕಾ । ಯಾಲಾಗೀ ಯದುನಾಯಕಾ । ಆದರೇ ದೇಖಾ ಪುಸತ ॥೨೦೧॥

ಉದ್ಧವ ಉವಾಚ :-

ವಿದಂತಿ ಮರ್ತ್ಯಾಃ ಪ್ರಾಯೇಣ ವಿಷಯಾನ್ಪದಮಾಪದಾಮ್ ।
ತಥಾಽಪಿ ಭುಂಜತೇ ಕೃಷ್ಣ ತತ್ಕಥಂ ಶ್ವಖರಾಜವತ್ ॥೮॥

ಅರ್ಥ :- ಉದ್ಧವನು ನುಡಿದನು, ಹೇ ಶ್ರೀಕೃಷ್ಣನೇ, ಸರ್ವ ಜನರಿಗೂ ವಿಷಯಗಳು ಸಂಕಟಗಳ ಸ್ಥಾನವೆಂದು ತಿಳಿದಿದ್ದರೂ ಕೂಡ ಅವರು ನಾಯಿ, ಕತ್ತೆ, ಕುರಿಗಳಂತೆ ದುಃಖಗಳನ್ನು ಸಹಿಸಿಕೊಂಡು ವಿಷಯಗಳ ಉಪಭೋಗ ಪಡೆಯುವರು. ಇದರ ಕಾರಣವೇನು?

ಉದ್ಧವ ಮ್ಹಣೇ ಶ್ರೀಮುಕುಂದಾ । ಐಕ ಸರ್ವಜ್ಞಾ ಗೋವಿಂದಾ । ವಿಷಯಾಂಚೀ ಪದೋಪದೀ ಆಪದಾ । ಸರ್ವೀ ಸರ್ವದಾ ಕಳಲೀಸೇ ॥೨೦೨॥ ಜೋ ಝಾಲಾ ವಿಷಯಾಧೀನ । ತೋ ಸರ್ವೀ ಸರ್ವತ್ರ ಸದಾ ದೀನ । ಐಸೇ ಜಾಣತಜಾಣತಾ ಜನ । ಆಸಕ್ತಿ ಗಹನ ವಿಷಯಾಂಚೀ ॥೨೦೩॥ ಜೈಸೇ ಕಾ ಶ್ವಾನ ಆಣಿ ಖರ ಅಜ । ತೈಸೇ ವಿಷಯಾಂಸೀ ಲೋಕ ನಿರ್ಲಜ್ಜ । ಸಾಂಡೂನಿ ಸ್ವಹಿತಾಚೇ ಕಾಜ । ಕಾ ವಿಷಯಾಂಚೇ ಭೋಜನಾಚತೀ ॥೨೦೪॥ ಶುನೀ ವಸವಸೋನಿ ಪಾಠೀ ಲಾಗೇ । ಶ್ವಾನ ಸವೇಂಚ ಲಾಗೇ ಮಾಗೇ । ಪುಚ್ಛ ಹಾಲವೂನಿ ಹುಂಗೇ । ಲಾಜ ನೇಘೇ ಜನಾಚೀ ॥೨೦೫॥

ಅಹಂಕಾರ ರೂಪ ಕಾಡಹಂದಿಯು ಒಮ್ಮೆ ಎಚ್ಚರಾಯಿತೆಂದರೆ ಯಾರಿಗೂ ಅದನ್ನು ಹಿಡಿಯುವುದಾಗುವುದಿಲ್ಲ. ಅದರ ಬೆನ್ನು ಹತ್ತಿದರೂ ಅದು ಯಾರಿಗೂ ಸಿಗುವುದಿಲ್ಲ. ಇಷ್ಟೊಂದು ಇದು ಅಸಾಧ್ಯವಾಗಿರುವುದು. ಹೀಗಿರುವ ಈ ಯಾವ ದುರ್ಧರ ಅಹಂಕಾರ ರೂಪ ಕಾಡಹಂದಿಯನ್ನು ಅದು ಸುಟ್ಟುಹಾಕುವುದು. ಹೀಗೆ ಈ ಜ್ವಾಲೆಯು ನಾಲ್ಕೂ ಕಡೆಗಳಲ್ಲಿಯೂ ಹಬ್ಬಿಕೊಂಡಿರುವುದು ॥೧೯೫॥ ಓಡಿ ಹೋಗಬೇಕೆಂದರೆ ಒಂದು ಕಣವೂ ಕೂಡ ಸ್ಥಳವಿರುವುದಿಲ್ಲ. ಹೀಗಾಗಿ ಅಹಂಕಾರರೂಪ ಕಾಡಹಂದಿಯು ಓಡು ಓಡುತ್ತಲೇ ಸುಡುತ್ತ ಸುಡುತ್ತ ಕೊನೆಗೆ ಭಸ್ಮವಾಗುವುದು ॥೧೯೬॥ ಈ ಅಗ್ನಿಯ ಕಾರ್ಯವು ಅತಿಶಯವಾಗಿ ವಿಲಕ್ಷಣವಾಗಿರುವುದು. ತನಗೆ ತಾನೇ ಸುಟ್ಟು ಹಾಕುವುದು. ಇಷ್ಟೇ ಅಲ್ಲ, ಅದು ತನ್ನಲ್ಲಿರುವ ದಾಹಕಶಕ್ತಿಯನ್ನೂ ಕೂಡ ಸುಟ್ಟು ಹಾಕಿ ಕೊನೆಗೆ ತನ್ನ ಸ್ವರೂಪದಲ್ಲಿ ಹೋಗಿ ಸ್ಥಿರವಾಗುವುದು ॥೧೯೭॥ ಹೀಗಿರುವ ಈ ನಿರೂಪಣೆಯನ್ನು ಕೇಳಿ ಉದ್ಧವನಿಗೆ ಬಹಳ ಆಶ್ಚರ್ಯವಾಯಿತು. ಆತನು ಹೀಗೆ ಹೇಳಹತ್ತಿದನು, ಈ ಜನರಿಗೆ ಎಂತಹ ಸಂಕಟ ಪ್ರಸಂಗವು ತನ್ನಷ್ಟಕ್ಕೆ ತಾನೇ ಒದಗಿ ಬಂದಿರುವುದು? ॥೧೯೮॥ ಈ ಯಾವ ನಶ್ವರ ದೇಹದ ಯೋಗದಿಂದ ಪರಬ್ರಹ್ಮದ ಆನಂದವು ಪ್ರಾಪ್ತವಾಗುವುದು. ಹೀಗಿದ್ದರೂ ಇದನ್ನು ಬಿಟ್ಟು ಮಂದಬುದ್ಧಿಯ ಜನರು ವಿಷಯಗಳಲ್ಲಿ ಲುಬ್ಧರಾಗಿ ಮೇಲಿಂದ ಮೇಲೆ ಸಾಯುತ್ತಲೇ ಇರುವರು ॥೧೯೯॥ ಸಾತ್ವಿಕ ಸೇವನೆಯಿಂದ ಸತ್ವವೃದ್ಧಿಯಾಗುವುದು. ಮತ್ತು ಆ ಯೋಗದಿಂದ ದುರ್ಲಭವಾದ ಸಿದ್ಧಿಗಳು ಪ್ರಾಪ್ತವಾಗುವುವು. ಇದನ್ನು ತ್ಯಾಗ ಮಾಡಿ ಮೂರ್ಖ ಜನರು ವಿಷಯ ವಿಧಿಗಳಲ್ಲಿಯೇ ರಮಮಾಣರಾಗುವರು ॥೨೦೦॥ ಈ ಜನರಿಗೆ ಎಂತಹ ಅನರ್ಥವು ಒದಗಿ ಬಂದಿರುವುದು? ಹೀಗೆ ಉದ್ಧವನ ಮನದಲ್ಲಿ ಶಂಕೆಯು ನಿರ್ಮಾಣವಾಯಿತು. ಆದ್ದರಿಂದ ಆತನು ಬಹು ಜಿಜ್ಞಾಸೆಯಿಂದ ಶ್ರೀಕೃಷ್ಣನಿಗೆ ಕೇಳಹತ್ತಿದನು ॥೨೦೧॥

ಉದ್ಧವನು ಹೇಳಿದನು ; ಹೇ ಮುಕುಂದನೇ, ಸರ್ವಜ್ಞ ಗೋವಿಂದನೇ, ವಿಷಯಗಳ ಸಂಕಟಗಳು ಮೇಲಿಂದ ಮೇಲೆ ಹೇಗೆ ಬರುತ್ತಿವೆ ಎಂಬುದು ಎಲ್ಲರಿಗೂ ತಿಳಿದು ಬಂದಿರುವುದು ॥೨೦೨॥ ಯಾರು ವಿಷಯಗಳ ಆಧೀನನಾಗುವನೋ, ಅವನು ಯಾವಾಗಲೂ ದೀನನಾಗಿರುವನು. ಹೀಗಿರುವ ಈ ಅವಸ್ಥೆಯನ್ನು ತಿಳಿಯುತ್ತಿದ್ದರೂ ಕೂಡ ಜನರಿಗೆ ವಿಷಯಗಳ ಅತ್ಯಂತ ಆಸಕ್ತಿ ವಿರುವುದು ॥೨೦೩॥ ಯಾವ ಪ್ರಕಾರವಾಗಿ ನಾಯೀ,ಕತ್ತೆ ಮತ್ತು ಹೋತು ಇರುವುವೋ, ಅದರಂತೆಯೇ ವಿಷಯೋಪಭೋಗದಲ್ಲಿ ಜನರು ನಿರ್ಲಜ್ಜರಾಗಿರುವರು. ತಮ್ಮ ಹಿತದ ಕರ್ಮಗಳನ್ನು ಬಿಟ್ಟುಕೊಟ್ಟು ವಿಷಯದ ಪ್ರೇಮದಲ್ಲಿ ಜನರು ಏಕೆ ಕುಣಿಯುತ್ತಿರುವರು? ॥೨೦೪॥ ಹೆಣ್ಣು ನಾಯಿಯು ಒದರುತ್ತ ಗುರ್‌ಗುರ್ ಮಾಡುತ್ತಿರಲು ಗಂಡು ನಾಯಿಯು ಅದರ ಹಿಂದ ಹಿಂದೆ ಹೋಗುತ್ತ ತನ್ನ ಬಾಲವನ್ನು ಅಲುಗಾಡಿಸುತ್ತ ಮೂಸು ನೋಡುತ್ತಿರುತ್ತದೆ. ಇತರ ಜನರ ಯಾವ ನಾಚಿಕೆಯನ್ನೂ ಅದು ಹಿಡಿಯುವುದಿಲ್ಲ ॥೨೦೫॥

ಕಾಣಾ ಕುಂಟಾ ವ್ಯಾಧಿವ್ಯಾಪ್ತ । ಚಿಂತಾ ಕಾಂಠಫರಾ ಗಳಾ ವಾಹತ । ತೋಹೀ ಶುನೀಮಾಗೇ ಧಾಂವತ । ಕಾಮಾಸಕ್ತ ಅವಿಚಾರ ॥೨೦೬॥ ಶುನೀ ಸಕ್ರೋಧೇ ವಸವಸೀ । ತೇ ಗೋಡ ಲಾಗೇ ಶ್ವಾನಾಸೀ । ಜೀವಿತ ಬಾಂಧಲೇ ತಿಚ್ಯಾ ಪುಂಸೀ । ತೀಮಾಗಮಾಗೇಸೀ ಹಿಂಡತೂ ॥೨೦೭॥ ಅಂಗೀ ಅಂಗಾ ಹೋತಾ ಭೇಟೀ । ಸಕ್ರೋಧ ಶುನೀ ಲಾಗೇ ಪಾಠೀ । ತರೀ ನ ಸೋಡೀ ಪುಸಾಂಟೀ । ಕುಂಕಾಂತ ಉರೀ ಕಾಮಾಸೀ ॥೨೦೮॥ ಐಶಾ ಸಂಕಟೀ ಜೈ ಭೋಗ ಚಢೇ । ತೈ ಭೋಗಾಸವೇಂಚಿ ಅಡಕೋನಿ ಪಡೇ । ಹಡ ಹಡ ಕರಿತೀ ಚಹೂಕಡೇ । ಜಗಾಪುಢೇ ಫಜಿತೀ ॥೨೦೯॥ ನಿಂದೇಚೇ ಸೈಂಘ ವಾಜತೀ ಧೋಂಡೇ । ಮೂರ್ಖ ತೇಹೀ ಥುಂಕಿತೀ ತೋಂಡೇ । ಐಸೇಚಿ ಪುರುಷಾಸಹೀ ಘಡೇ । ತರೀಹೀ ಆವಡೇ ಅತಿಕಾಮೂ ॥೨೧೦॥ ಶ್ವಾನಾಚೇ ಹೇಡ ತತ್ಕಾಳ ಸುಟೇ । ಮನುಷ್ಯಾಚೇ ಆಕಲ್ಪ ನ ಸುಟೇ । ಸ್ತ್ರೀಲೋಭಾಳೂ ಅತಿಲೋಭಿಷ್ಠೇ । ತೀಲಾಗೀ ಸಂಕಟೇ ನಾನಾ ಸೋಶೀ ॥೨೧೧॥ ನಾತರೀ ಗಾಢವಾಚ್ಯಾ ಪರೀ । ದೂರೀ ದೇಖೋನಿಯಾ ಖರೀ । ಭುಂಕತ ಧಾಂವೇ ತೀವರೀ । ಲಾಜ ನ ಧರೀ ಸರ್ವಥಾ ॥೨೧೨॥ ಖರೀ ಪಳೇ ಪುಢೇಪುಢೇ । ಖರೂ ಧಾಂವೇ ವಾಡೇಕೋಡೇ । ಲಾತಾ ಹಾಣೋನಿ ಫೋಡೀ ಜಾಭಾಡೇ । ತರೀ ಪುಢೇ ಪುಢೇ ಘಾಸೋ ಲಾಗೇ ॥೨೧೩॥ ಲಾತಾ ಹಾಣೇ ಉರಾವರೀ । ತರೀ ತಿಚೀ ಪ್ರೀತಿ ಧರೀ । ಐಸಿಯಾ ಸ್ತ್ರೀಯಾಂಚೇ ಘರಾಚಾರೀ । ಖರಾಚ್ಯಾಪರೀ ನಾಂದತೀ ॥೨೧೪॥ ನಾತರೀ ಬೋಕಡಾಚೀ ಗತಿ ಜೈಶೀ । ತೈಶೀ ದಶಾ ದಿಸೇ ಪುರುಷಾಸೀ । ಮಾರೂ ಆಣಿಲ್ಯಾ ಪಶುಹತ್ಯಾರ್ಯಾಪಾಶೀ । ತರೀ ಶೇಳ್ಯಾಂಸೀ ಸೇವಿತ ॥೨೧೫॥ ಸ್ವಯಾತೀ ಮಾರಿತಾ ದೇಖೇ । ಅನುತಾಪ ನೇಘೇ ತೇಣೇ ದುಃಖೇ । ಮೃತ್ಯುಸಮೀಪಹೀ ಅಭಿಲಾಖೇ । ಕಾಮಸುಖೇ ವಾಂಛಿತೀ ॥೨೧೬॥ ಪೂರ್ಣ ಮೃತ್ಯೂಚೀ ಯಾಪರೀ । ತೇ ವಾರ್ಧಕ್ಯ ವಾಜಲೇ ಉರೀ । ತರೀ ಧಾಂವೇ ವಿಷಯಾವರೀ । ಆಠವೂ ನ ಧರೀ ಮರಣಾಚಾ ॥೨೧೭॥ ಮೇಷ ಮಾರೂ ಆಣಿಲಾ ಘಾತಕೇ । ನಿಜಸಖ್ಯಾಂತೇ ಮಾರಿತಾ ದೇಖೇ । ತೇ ನ ಮಾನೂನಿಯಾ ಯಥಾಸುಖೇ । ಅಜೇಸೀ ಹರಿಖೇ ರಮೋ ಧಾಂವೇ ॥೨೧೮॥

ಸರಿಯಾಗಿ ಕಾಣದ, ಸರಿಯಾಗಿ ನಡೆಯಲು ಬಾರದ ಕುಂಟಾದ, ರೋಗಗ್ರಸ್ಥ, ಕೊರಳಲ್ಲಿ ಹೊಡೆದ ಮಡಿಕೆಯು ಕಂಠದಲ್ಲಿ ಸಿಕ್ಕೊಂಡ, ಹೀಗೆ ಅನೇಕ ಗಂಡು ನಾಯಿಗಳು ಹೆಣ್ಣು ನಾಯಿಯ ಹಿಂದೆ ಧಾವಿಸುತ್ತಿರುವುವು. ಹೀಗೆ ಅವು ಕಾಮಾಸಕ್ತ ಅವಿಚಾರಿಯಾಗಿರುವುವು ॥೨೦೬॥ ಹೆಣ್ಣು ನಾಯಿಯು ಸಿಟ್ಟಿಗೇಳುತ್ತ ಗುರ್‌ಗುಡತ್ತ ಒದರಿದರೂ ಸಹ ಇದರ ಒದರಾಟವು ಗಂಡು ನಾಯಿಗೆ ಸಂತೋಷವಾಗುತ್ತಿರುವುದು. ಅದರ ಬಾಲದಡಿಯಲ್ಲಿ ತನ್ನ ಜೀವವನ್ನು ಕಟ್ಟಿ ಅದರ ಹಿಂದೆ ಹಿಂದೆ ಓಡುತ್ತಿರುವುದು ॥೨೦೭॥ ಹೆಣ್ಣು ನಾಯಿಯ ಅಂಗಕ್ಕೆ ಗಂಡು ನಾಯಿಯ ಅಂಗವು ಹತ್ತಲು ಆಗ ಆ ಹೆಣ್ಣುನಾಯಿಯು ಕ್ರೋಧದಿಂದ ಒದರುವುದು. ಹಾಗೂ ಅದಕ್ಕೆ ಬೆನ್ನುಹತ್ತಿ ಓಡಿಸುವುದು. ಆದರೂ ಆ ಗಂಡು, ಹೆಣ್ಣಿನ ಬಾಲವನ್ನು ಬಿಡುವುದಿಲ್ಲ. ಕುಂಯ್-ಕುಂಯ್ ಮಾಡುತ್ತ ಅದರ ಕಾಮಾಸಕ್ತಿಯು ಬೆಳೆಯುತ್ತಲೇ ಸಾಗುವುದು ॥೨೦೮॥ ಇಷ್ಟೊಂದು ಸಂಕಟದಲ್ಲಿ ಹೇಗೋ ಭೋಗವು ಸಿಕ್ಕಿತೆಂದರೆ ಸಾಕು, ಆ ಭೋಗದ ಜೊತೆಯಲ್ಲಿಯೇ ಸಿಕ್ಕಿ ಬೀಳುವುದು. ಆಗ ನಾಲ್ಕೂ ಕಡೆಯಿಂದ ಜನರು ಹಚಾ ಹಚಾ ಎನ್ನಲಾರಂಭಿಸುವರು. ಹೀಗೆ ಜನರೆದುರು ಅತಿ ಫಜೀತಿಯಾಗುವುದು ॥೨೦೯॥ ಹುಡುಗರು ಅವುಗಳಿಗೆ ನಿಂದಾರೂಪ ಕಲ್ಲುಗಳನ್ನು ಒಗೆಯುವರು. ಮೂರ್ಖ ಜನರೂ ಕೂಡ ಮುಖಕ್ಕೆ ಉಗುಳುವರು. ಇದೇ ರೀತಿಯಲ್ಲಿ ಪುರುಷನ ಸ್ಥಿತಿಯಾಗುತ್ತಿರುವುದು. ಆದರೂ ಸಹ ಅವನಿಗೆ ಕಾಮದ ಅತಿಶಯ ಪ್ರೀತಿವಿರುವುದು ॥೨೧೦॥ ಆ ನಾಯಿಗಳ ತೊಡಕು ಬೇಗನೇ ಬಿಡುವುದು, ಆದರೆ ಮನುಷ್ಯನ ಈ ತೊಡಕು ಕಲ್ಪಾಂತಕ್ಕೂ ಬಿಡುವುದಿಲ್ಲ. ಸ್ತ್ರೀಯಳ ಲೋಭದಿಂದ ಅತಿಶಯವಾಗಿ ಲಂಪಟನಾಗಿರುವುದರಿಂದ ಅವನು ಆಕೆಗಾಗಿ ನಾನಾ ಸಂಕಟಗಳನ್ನು ಸೋಸುತ್ತಿರುವನು ॥೨೧೧॥ ಈಗ ಕತ್ತೆಯ ಸ್ಥಿತಿ ನೋಡು! ಹೆಣ್ಣು ಕತ್ತೆಯನ್ನು ದೂರದಿಂದ ನೋಡುತ್ತಲೇ ಗಂಡು ಕತ್ತೆಯು ಒದರುತ್ತ ಅದರತ್ತ ಧಾವಿಸುತ್ತಿರುವುದು. ಸ್ವಲ್ಪವೂ ಕೂಡ ನಾಚಿಕೆ ಹಿಡಿಯುವುದಿಲ್ಲ ॥೨೧೨॥ ಹೆಣ್ಣು ಕತ್ತೆಯು ಮುಂದೆ ಮುಂದೆ ಓಡುತ್ತಿರುವುದು. ಗಂಡು ಕತ್ತೆಯು ಬಲು ಆಶೆಯಿಂದ ಅದರತ್ತ ಧಾವಿಸುತ್ತಿರುವುದು. ಹೆಣ್ಣು ಕತ್ತೆಯು ಇದಕ್ಕೆ ಹಿಂದಿನಿಂದ ಒದ್ದು ಅದರ ಗದ್ದವನ್ನು ಒಡೆಯುವುದು. ಆದರೂ ಇದು ಅದರ ಹಿಂದೆ ಮುಂದೆ ಹೊಕ್ಕುತ್ತಿರುವುದು ॥೨೧೩॥ ಅದು ಇದಕ್ಕೆ ಎದೆಗೆ ಒದ್ದರೂ ಕೂಡ ಆ ಗಂಡು ಕತ್ತೆಯು ಅದಕ್ಕೆ ಪ್ರೀತಿಸುತ್ತಲೇ ಇರುವುದು. ಇದೇ ರೀತಿಯಲ್ಲಿ ಸ್ತ್ರೀಯರ ಪತಿಯಂದಿರು ಕತ್ತೆಯಂತೆ ವರ್ತಿಸುತ್ತಿರುವರು ॥೨೧೪॥ ಇದಲ್ಲದೇ ಹೋತಿನ ಸ್ಥಿತಿಗತಿಯೂ ಕೂಡ ಹಾಗೆಯೇ ಇರುವುದು. ಇದೇ ಸ್ಥಿತಿಗತಿಯು ಪುರುಷನದ್ದಾಗಿರುವುದು. ಹೋತನ್ನು ಕೊಲ್ಲುವುದಕ್ಕಾಗಿ ಕಟಗರ ಹತ್ತಿರ ಒಯ್ಯುತ್ತಿದ್ದರೂ ಕೂಡ ಅದು ಆಡಿನ ಹಿಂದೆ ಬೆನ್ನುಹತ್ತುತ್ತಿರುವುದು ॥೨೧೫॥ ತನ್ನ ಸ್ವಜಾತಿಯವರ ಮರಣವನ್ನು ತಾನು ಕಣ್ಣಾರೆ ಕಂಡರೂ ಕೂಡ ಅದಕ್ಕೆ ದುಃಖದಿಂದ ಅನುತಾಪವಾಗುವುದಿಲ್ಲ. ಮೃತ್ಯು ತನ್ನ ಮುಂದೆ ನಿಂತುಕೊಂಡಿದ್ದರೂ ಸಹ ಅದು ಅತ್ಯಂತ ಪ್ರೇಮದಿಂದ ಕಾಮಸುಖದ ಇಚ್ಛೆ ಮಾಡುವುದು ॥೨೧೬॥ ಮರಣದ ಕೊನೆಯ ಪಾವುಟಣಗೆ ಎಂದರೆ ವಾರ್ಧಕ್ಯವಾಗಿರುವುದು. ಅದು ಬಂದು ತನ್ನ ಎದೆಯ ಮೇಲೆ ಬಡೆದರೂ ಅವನು ವಿಷಯಗಳತ್ತ ಧಾವಿಸುತ್ತಿರುವನು. ಈತನಿಗೆ ತನ್ನ ಮರಣದ ಸ್ಮರಣೆಯೇ ಇರುವುದಿಲ್ಲ ॥೨೧೭॥ ಕಟಗನು ಕುರಿಗಳನ್ನು ಕೊಯ್ಯಲು ತಂದಿರುವನು. ಕುರಿಯು ತನ್ನ ಸಂಗಡಿಗನನ್ನು ಕೊಲ್ಲುವುದು ಪ್ರತ್ಯಕ್ಷವಾಗಿ ನೋಡುತ್ತಿರುವುದು. ಆದರೂ ಅದಕ್ಕೆ ಯಾವ ಪರಿಣಾಮವೂ ಆಗುವುದಿಲ್ಲ. ಅದು ಹೆಣ್ಣು ಕುರಿಯೊಂದಿಗೆ ರಮಿಸಲು ಪ್ರೇಮದಿಂದ ಧಾವಿಸುವುದು ॥೨೧೮॥

ಮೇಷ ಶ್ವಾನ ಆಣಿ ಖರ । ಹೇ ಋತುಕಾಳೀಂಚಿ ವಿಷಯತತ್ಪರ । ತ್ಯಾಹೂನಿ ವಿಶೇಷೇಸೀ ನರ । ಕಾಮೀ ದುರ್ಧರ ಸರ್ವದಾ ॥೨೧೯॥ ಗರ್ಭ ಸಂಭವಲ್ಯಾಪಾಠೀ । ಶ್ವಾನಹೀ ಸ್ತ್ರೀಭೋಗಾಸೀ ನುಠೀ । ಪುರುಷಾಚೀ ಅಭಿನವ ಗೋಠೀ । ಗರೋದರ ಗೋಮಟೀ ಭೋಗಿತೀ ॥೨೨೦॥ ಗಾಢವ ಗಾಢವೀಸೀ ಬುಂಥಡ । ನ ಕರೀ ಅಲಂಕಾರ ಮೋಥಡ । ಮನುಷ್ಯಾಸೀ ಸ್ತ್ರೀಯೇಚೇ ಕೋಡ । ತಿಚೇ ವಾಲಭ ವಾಡ ವಾಢವೀ ॥೨೨೧॥ ದಾಂಡಾ ಗೋಂಡಾ ಮೂದ ವೇಣೀ । ಟಿಳಕುವರೀ ರತ್ನಖೇವಣೀ । ನಾಕೀಚೇ ಹಾಲೋ ದೇ ಸುಪಾಣೀ । ಹೇ ಮನುಷ್ಯಪಣೀ ವಾಲಭ ॥೨೨೨॥ ಜರೀ ಪ್ರಸೂತಿಕಾಳ ನಿಕಟ । ಗಾಡ್ಯಾ ಏವಢೇ ವಾಢಲೇ ಪೋಟ । ತರೀ ಕಾಮಚಾರೀ ವಿವೇಕನಷ್ಟ । ರಮತಾತೀ ದುಷ್ಟ ಸ್ತ್ರೀಯಾಂಸೀ ॥೨೨೩॥ ಅಸ್ಥಿ ಮಾಂಸ ವಿಷ್ಟಾ ಮೂತ । ತೇಣೇ ಕಾಮಿನೀ ಪೂರ್ಣ ಭರಿತ । ತೇ ಕುಚ್ಚಳೀ ಜನ ಕಾಮಾಸಕ್ತ । ಜಾಣೋನಿ ಹೋತ ಕಾ ದೇವಾ ॥೨೨೪॥ ಯಾ ಪ್ರಶ್ನಾಚೇ ಪ್ರತ್ಯುತ್ತರ । ತೀ ಶ್ಲೋಕೀ ಸಾಂಗೇ ಶಾರ್ಙ್ಗಧರ । ಕಾಮಾಸಕ್ತೀಚಾ ವಿಚಾರ । ಐಕ ಸಾದರ ಉದ್ಧವಾ ॥೨೨೫॥

ಶ್ರೀ ಭಗವಾನುವಾಚ :-

ಅಹಮಿತ್ಯನ್ಯಥಾಬುದ್ಧಿಃ ಪ್ರಮತ್ತಸ್ಯ ಯಥಾ ಹೃದಿ ।
ಉತ್ಸರ್ಪತಿ ರಜೋ ಘೋರಂ ತತೋ ವೈಕಾರಿಕಂ ಮನಃ ॥೯॥

ಅರ್ಥ :- ಶ್ರೀಕೃಷ್ಣನು ಹೇಳಿದನು ; ಹೇ ಉದ್ಧವಾ, ಜೀವವು ಅಜ್ಞಾನ ವಶದಿಂದ ತನ್ನ ಸ್ವರೂಪವನ್ನು ಮರೆತು ಸೂಕ್ಷ್ಮ ಸ್ಥೂಲ ಶರೀರದಲ್ಲಿ ಅಹಂ ಬುದ್ಧಿಯನ್ನು ನಿರ್ಮಿಸುವುದು. ಆಗ ಅದರ ಸತ್ವಪ್ರಧಾನ ಮನವು ಘೋರವಾದ ರಜೋಗುಣದತ್ತ ಬಾಗಿಕೊಳ್ಳುವುದು ಹಾಗೂ ಅದರಿಂದ ವ್ಯಾಪ್ತವಾಗುವುದು.

ಮೋಹಪ್ರಮತ್ತ ವಿವೇಕಶೂನ್ಯ । ತ್ಯಾ ಪುರುಷಾಂಚ್ಯಾ ಠಾಯೀ ಜಾಣ । ದೇಹಾತ್ಮವಾದೇ ಅಭಿಮಾನ । ರಜೋಗುಣೇ ಖವಳಲಾ ॥೨೨೬॥ ಜೈಸಾ ಮದಿರಾಪಾನೇ ಉನ್ಮತ್ತೂ । ವಿಸರೂನಿ ಆಪುಲಾ ನಿಜಸ್ವಾರ್ಥೂ । ಮಗ ಅನ್ಯೋನ್ಯ ಅನರ್ಥೂ । ಆತ್ಮಘಾತೂ ಕರೂ ಧಾಂವೇ ॥೨೨೭॥ ತೇವೀ ಶುದ್ಧಬುದ್ಧ ನಿತ್ಯಮುಕ್ತು । ಹಾ ವಿಸರೋನಿ ನಿಜಸ್ವಾರ್ಥು । ರಜೋಗುಣೇ ಲೋಲಂಗತು । ಕಾಮಾಸಕ್ತು ನರೂ ಕೀಜೇ ॥೨೨೮॥ ರಜೀ ರಂಗಲ್ಯಾ ಅಭಿಮಾನ । ದುಃಖರೂಪ ತೋ ದಾರುಣ । ದುರ್ಧರ ವಾಢೇ ರಜೋಗುಣ । ವಿಚಾರೀ ಮನ ತೇಣೇ ಹೋಯ ॥೨೨೯॥

ನಾಯಿ, ಕತ್ತೆ, ಹೋತು ಇವು ಕೇವಲ ಋತುಕಾಲದಲ್ಲಿ ಮಾತ್ರ ವಿಷಯಾಸಕ್ತವಾಗುವುವು. ಆದರೆ ಮನುಷ್ಯನಾದ ಇವನು ಅವುಗಳಿಗಿಂತಲೂ ಅಧಿಕವಾಗಿ ಲಂಪಟನಾಗಿರುವನು, ಇವನು ಸದಾ ಸರ್ವಕಾಲದಲ್ಲಿ ಕಾಮಾಸಕ್ತನಾಗಿರುವನು ॥೨೧೯॥ ಗರ್ಭವು ಧಾರಣವಾದ ಮೇಲೆ ನಾಯಿಯೂ ಕೂಡ ಆ ಹೆಣ್ಣಿಗೆ ಸ್ಪರ್ಶ ಮಾಡುವುದಿಲ್ಲ. ಆದರೆ ಮನುಷ್ಯನ ಮಾತೇ ಬಹು ವಿಚಿತ್ರವಾಗಿರುವುದು. ಇವನು ಗರ್ಭಿಣಿ ಸ್ತ್ರೀಯಳ ಸಹ ಉಪಭೋಗ ಪಡೆಯುವನು ॥೨೨೦॥ ಗಂಡು ಕತ್ತೆಯು ಹೆಣ್ಣು ಕತ್ತೆಯನ್ನು ಕೂಡುವುದು. ಆದರೆ ಅದಕ್ಕೆ ಅಲಂಕಾರಗಳಿಂದ ಶೃಂಗರಿಸುವುದಿಲ್ಲ. ಆದರೆ, ಮನುಷ್ಯನಿಗೆ ಸ್ತ್ರೀ ಪ್ರೇಮವು ಎಷ್ಟಿದೆ ಎಂದರೆ ಅವನು ಆಕೆಯನ್ನು ಅನೇಕ ಪ್ರಕಾರಗಳಿಂದ ಪ್ರೀತಿಸುವನು ॥೨೨೧॥ ಆಕೆಯ ಜಡೆಗೆ ಗೊಂಡೆವು, ಮುದ್ರೆ, ರತ್ನಜಡಿತ ಚೂಡಾಭರಣ , ಬಿಲ್ವಾರ, ಪರಿಶುದ್ಧ ಮುತ್ತಿನ ನತ್ತು ಹೀಗೆ ಅಲಂಕಾರಗಳಿಂದ ಆಕೆಯನ್ನು ಶೃಂಗರಿಸುವನು. ಇದು ಮನುಷ್ಯ ಜನ್ಮದ ಪ್ರೀತಿಯಾಗಿರುವುದು ॥೨೨೨॥ ಸ್ತ್ರೀಯಳ ಪ್ರಸೂತಿ ಕಾಲವು ಸಮೀಪಿಸಲು ಆಕೆಯ ಹೊಟ್ಟೆಯು ಡೇರೆಯಪ್ಟಾದರೂ ಕೂಡ ಈ ಅವಿಚಾರೀ ಕಾಮಾಂಧ ಮನುಷ್ಯನು ಆಕೆಯಲ್ಲಿ ರಮಮಾಣನಾಗುವನು ॥೨೨೩॥ ವಿಚಾರಿಸಿ ನೋಡಲು ಸ್ತ್ರೀಯಳ ಶರೀರವು ಎಲುಬು, ಮಾಂಸ, ರಕ್ತ, ಮಲ ಮೂತ್ರಗಳಿಂದ ಪರಿಪೂರ್ಣವಾಗಿ ತುಂಬಿರುವುದು. ಇಷ್ಟೊಂದು ಹೊಲಸಾದವಳನ್ನು ತಿಳಿದೂ, ತಿಳಿದೂ ಜನರು ಏಕೆ ಕಾಮಾಸಕ್ತರಾಗುವರು? ॥೨೨೪॥ ಈ ಪ್ರಶ್ನೆಯ ಉತ್ತರವನ್ನು ಶ್ರೀಕೃಷ್ಣನು ಮುಂದಿನ ಮೂರು ಶ್ಲೋಕಗಳಲ್ಲಿ ಹೇಳುವನು, ಹೇ ಉದ್ಧವನೇ, ಈಗ ಆ ಯಾವ ಕಾಮಾಸಕ್ತಿಯ ವಿಷಯಗಳ ವಿಚಾರವನ್ನು ಹೇಳುವೆನು, ಲಕ್ಷಕೊಟ್ಟು ಕೇಳು ॥೨೨೫॥

ಕೆಲವು ಜನರು ಮೋಹಮದಗಳಿಂದ ಮತ್ತರಾಗಿರುವರು. ಅವರು ವಿವೇಕಶೂನ್ಯರಾಗಿರುವರು. ಅವರಲ್ಲಿ ದೇಹಾತ್ಮವಾದದಿಂದ ರಜೋಗುಣವು ಉತ್ಪನ್ನವಾಗುವುದು. ಅದರಿಂದ ಅಭಿಮಾನವು ಉಗ್ರವಾಗುವುದು ॥೨೨೬॥ ಒಬ್ಬ ಮನುಷ್ಯನು ಮದ್ಯಪಾನವನ್ನು ಮಾಡಿ ಉನ್ಮತ್ತನಾಗಲು ಆಗ ಆತನು ತನ್ನ ಹಿತವನ್ನು ಮರೆತುಬಿಡುವನು. ಇಂತಹ ಸಮಯದಲ್ಲಿ ಅವನು ಭಿನ್ನ ಭಿನ್ನ ಅನರ್ಥಗಳನ್ನು ಹುಟ್ಟಿಸುವನು. ತನ್ನ ಆತ್ಮಘಾತವನ್ನು ಮಾಡಿಕೊಳ್ಳಲು ಪ್ರವೃತ್ತನಾಗುವನು ॥೨೨೭॥ ತಾನು ಶುದ್ಧ, ಬುದ್ಧ, ಮುಕ್ತನಾಗುವುದರಲ್ಲಿ ತನ್ನ ಹಿತವಿದೆ ಎಂಬುದನ್ನು ಮರೆತು ರಜೋಗುಣದಿಂದ ಕಾಮಾಸಕ್ತನಾಗುವನು ॥೨೨೮॥ ಒಮ್ಮೆ ಈ ಯಾವ ಅಭಿಮಾನವು ರಜೋಗುಣದಲ್ಲಿ ಕೂಡಿತೆಂದರೆ ಆಗ ದುಃಖರೂಪ ರಜೋಗುಣವು ಬಹಳಷ್ಟು ಬೆಳೆಯುವುದು ಮತ್ತು ಅದರಿಂದ ಮನದಲ್ಲಿ ವಿಕಾರಗಳ ತೆರೆಗಳು ನಿರ್ಮಾಣವಾಗುವುವು ॥೨೨೯॥

ರಜೋಯುಕ್ತಸ್ಯ ಮನಸಃ ಸಂಕಲ್ಪಃ ಸವಿಕಲ್ಪಕಃ । ತತಃ ಕಾಮೋ ಗುಣಧ್ಯಾನಾದ್‌ದುಃಸಹಃ ಸ್ಯಾದ್ಧಿ ದುರ್ಮತೇಃ ।।೧೦।।

ಅರ್ಥ :- ಮನದಲ್ಲಿ ರಜೋಗುಣವು ವೃದ್ಧಿಯಾಯಿತೆಂದರೆ ಸಂಕಲ್ಪವಿಕಲ್ಪಗಳು ಬೆಳೆಯುತ್ತ ಸಾಗುವುವು. ಅವು ವಿಷಯಗಳ ಚಿಂತನೆಯನ್ನು ಮಾಡಲಾರಂಭಿಸುವುವು ಮತ್ತು ತಮ್ಮ ದುರ್ಬುದ್ಧಿಯಿಂದ ಕಾಮದ ಚಕ್ರದಲ್ಲಿ ಸಿಕ್ಕಲ್ಪಡುವುವು. ಹೀಗಾದ ಮೇಲೆ ಅದರಿಂದ ಬಿಡಿಸಿಕೊಳ್ಳುವುದು ಬಹಳ ಕಷ್ಟದ ಮಾತಾಗಿರುವುದು.

ಜೈ ರಜೋಯುಕ್ತ ಝಾಲೇ ಮನ । ತೈ ಸಂಕಲ್ಪವಿಕಲ್ಪ ಗಹನ । ಏಕಾಂತೀ ಘಾತಲ್ಯಾ ಆಸನ । ಧ್ಯಾನೀ ಚಿಂತನ ಸ್ತ್ರೀಯೇಚೇ ।।೨೩೦।। ರಜೋಗುಣೇ ಕಾಮಾಸಕ್ತೀ । ಹೋಯ ದುಷ್ಟ ವಾಸನಾ ದುರ್ಮತೀ । ಕಾಮಾವಾಂಚೂನಿ ಚಿತ್ತೀ । ಆಣಿಕ ಸ್ಫೂರ್ತಿ ಸ್ಫುರೇನಾ ।।೨೩೧।। ಜನೀ ವನೀ ಆಣೀ ವಿಜನೀ । ಜಾಗೃತೀ ಸುಷುಪ್ತೀ ಸ್ವಪ್ನೀ । ಧ್ಯಾನೀ ಮನೀ ಚಿಂತನೀ । ಸ್ತ್ರೀವಾಂಚೂನೀ ಸ್ಮರೇನಾ ।।೨೩೨।। ಕಾಮಿನೀಕಾಮಾಚಾ ಅಧ್ಯಾಸ । ಹಾವಭಾವ ಅತಿವಿಲಾಸ । ಗುಣಲಾವಣ್ಯ ಸುರತರಸ । ಆಸಕ್ತ ಮಾಸನ ತೇ ಠಾಯೀ ।।೨೩೩।। ರತಿಸುಖಾಚಾ ಆರಾಮು । ಕಾಮಿನೀಕ್ರೀಡೇಚಾ ಸಂಭ್ರಮು । ತೇಣೇ ದುರ್ಧರ ಝಾಲಾ ಜೋ ಕಾಮು । ತಯಾಸೀ ನಿಯಮು ಚಾಲೇನಾ ।।೨೩೪।। ಧನಧಾನ್ಯಪುತ್ರಸುಖ । ವಾಂಛೀ ಇಹಲೋಕ ಪರಲೋಕ । ಹಾ ರಜೋಗುಣಾಚಾ ದೇಖ । ಅಲೋಕಿಕ ಅತಿಕಾಮೂ ।।೨೩೫।।

ಕರೋತಿ ಕಾಮವಶಗಃ ಕರ್ಮಾಣ್ಯವಿಜಿತೇಂದ್ರಿಯಃ । ದುಃಖೋದರ್ಕಾಣಿ ಸಂಪಶ್ಯನ್ ರಜೋವೇಗವಿಮೋಹಿತಃ ।।೧೧।।

ಅರ್ಥ :- ಆ ಯಾವ ಅಜ್ಞಾನಿಯು ಕಾಮವಶನಾಗಿ ಅನೇಕ ಪ್ರಕಾರಗಳ ಕರ್ಮಗಳನ್ನು ಮಾಡುವನು. ಈತನು ಇಂದ್ರಿಯಗಳ ಸ್ವಾಧೀನನಾಗುವನು. ಈ ಕರ್ಮಗಳ ಫಲವು ದುಃಖದಾಯಕವೆಂದು ತಿಳಿದೂ ಕೂಡ ಅದೇ ರಜೋಗುಣದ ಕರ್ಮಗಳನ್ನು ಮಾಡುವನು ಮತ್ತು ಅವುಗಳಲ್ಲಿಯೇ ರಮಮಾಣನಾಗುವನು.

ಜೇಥ ರಜಾಚಾ ವೇಗ ಉದಿತ । ತೇಥ ಕಾಮಗ್ರಹೋ ಖವಳೇ ಅದ್ಭುತ । ಜೋ ಪುರುಷ ಝಾಲಾ ಕಾಮಗ್ರಸ್ತ । ತೋ ಸದಾ ಅಂಕಿತ ಕಾಮಾಚಾ ।।೨೩೬।। ಜ್ಯಾಸಿ ವಿವೇಕ ನಾಹೀ ಮಾನಸೀ । ತೋ ಜಾಣ ಪಾ ಕಾಮಾಚೀ ಆಂದಣೀ ದಾಸೀ । ಕಾಮ ನಾಚವೀ ಜೈಸೇ ತ್ಯಾಸಿ । ತೇಣೇ ವಿಕಾರೇಸೀ ನಾಚತ ।।೨೩೭।। ಕಾಮಾಂಕಿತ ಝಾಲಿಯಾ ಪುಢೇ । ಸಕಾಮ ಕರ್ಮ ಕರಣೇ ಪಡೇ । ಜ್ಯಾಚೇ ಉತ್ತರೋತ್ತರ ದುಃಖ ವಾಢೇ । ಅತಿದುರ್ವಾಡೇ ಗರ್ವಿತು ।।೨೩೮।। ರಜೋಗುಣೇ ಅತಿಮೋಹಿತ । ಯಾಲಾಗೀ ಅಜಿತೇಂದ್ರಿಯ ಅಯುಕ್ತ । ಜನ್ಮಮರಣಾಂಚಾ ಅಂಕಿತ । ಕರ್ಮೇ ಕರೀತ ತದ್ರೂಪೇ ।।೨೩೯।। ರಜೋಗುಣಾಚಾ ಅತಿಬಾಧ । ತೇಣೇ ಜನ ಕೇಲೇ ವಿಷಯಾಂಧ । ರಜರಾಗೀ ಮಹಾಮಂದ । ಜಾಣ ಪ್ರಸಿದ್ಧ ಉದ್ಧವಾ ।।೨೪೦।।

ರಜೋಗುಣದಿಂದ ತುಂಬಿರುವ ಮನದಲ್ಲಿ ಭಯಂಕರವಾಗಿ ಸಂಕಲ್ಪ-ವಿಕಲ್ಪಗಳು ನಿರ್ಮಾಣವಾಗುವುವು. ಏಕಾಂತದಲ್ಲಿ ಆಸನವನ್ನು ಹಾಕಿ ಧ್ಯಾನ ಮಾಡುತ್ತಿದ್ದರೂ ಕೂಡ ಮನದಲ್ಲಿ ಸ್ತ್ರೀಚಿಂತನೆ ಮೂಡುವುದು ।।೨೩೦।। ರಜೋಗುಣದಿಂದ ಕಾಮಾಸಕ್ತಿಯು ಬೆಳೆಯುವುದು. ದುಷ್ಟ ವಾಸನೆಗಳು ಹಾಗೂ ದುರ್ಬುದ್ಧಿಯು ಹುಟ್ಟುವುದು. ಆದ್ದರಿಂದ ಆತನ ಮನಕ್ಕೆ ಕಾಮದ ವಿಷಯದ ಹೊರತಾಗಿ ಬೇರೆ ಯಾವುದೂ ಸೂಚಿಸುವುದಿಲ್ಲ ।।೨೩೧।। ಈತನಿಗೆ ಜನರಲ್ಲಿ, ವನದಲ್ಲಿ, ಏಕಾಂತದಲ್ಲಿ, ಜಾಗೃತಿಯಲ್ಲಿ, ಸ್ವಪ್ನದಲ್ಲಿ, ಸುಷುಪ್ತಿಯಲ್ಲಿ, ಧ್ಯಾನದಲ್ಲಿ, ಮನದಲ್ಲಿ ಅಥವಾ ಚಿಂತನೆಯಲ್ಲಿ ಸ್ತ್ರೀ ಹೊರತಾದ ಅನ್ಯ ಯಾವುದೂ ಸ್ಮರಿಸುವುದಿಲ್ಲ, ಪ್ರಿಯವಾಗುವುದಿಲ್ಲ ।।೨೩೨।। ಈತನಿಗೆ ಸ್ತ್ರೀಸಂಗದ ಧ್ಯಾಸವು ಹತ್ತಿಕೊಂಡಿರುವುದು. ಆಕೆಯ ಹಾವಭಾವ, ಆಕೆಯ ನಯನರಮ್ಯ ವಿಲಾಸ, ಆಕೆಯ ಸುರೇಖ ಲಾವಣ್ಯ ಸೌಂದರ್ಯಗಳಲ್ಲಿ ಈತನ ಮನವು ಆಸಕ್ತವಾಗುವುದು ।।೨೩೩।। ರತಿಸುಖದಲ್ಲಿ ಮತ್ತು ಸ್ತ್ರೀಕ್ರೀಡೆಯಲ್ಲಿ ಕಾಮವು ಒಮ್ಮೆ ಬೆಳೆಯಿತೆಂದರೆ ಸಾಕು, ಆಗ ಈತನಿಗೆ ಯಾವ ನಿಯಮವೂ ಇರಲು ಶಕ್ಯವಿಲ್ಲದಾಗುವುದು ।।೨೩೪।। ಧನಧಾನ್ಯ, ಪುತ್ರಸುಖವಿರಬೇಕು, ಇಹಲೊಕದ, ಪರಲೋಕದ ತುಂಬಿದ ಸುಖವು ಲಭಿಸಬೇಕು, ಹೀಗೆ ರಜೋಗುಣದ ಆಶ್ಚರ್ಯಕಾರಕ ಕಾಮನೆಗಳಾಗಿರುವುವು ।।೨೩೫।।

ಎಲ್ಲಿ ರಜೋಗುಣದ ವೇಗವು ಅತಿಶಯವಾಗಿ ಬೆಳೆಯುವುದೋ, ಅಲ್ಲಿ ಕಾಮರೂಪ ಗ್ರಹವು ಬಹು ಉಗ್ರವಾಗುವುದು. ಕಾಮಾಸಕ್ತನಾದ ಪುರುಷನು ಯಾವಾಗಲೂ ಕಾಮದ ಅಂಕಿತನಾಗಿರುವನು ।।೨೩೬।। ಮನದಲ್ಲಿ ಸ್ವಲ್ಪವೂ ವಿವೇಕವು ನಿರ್ಮಾಣವಾಗದ ಮನುಷ್ಯನು ತನ್ನ ಶರೀರವನ್ನು ಒತ್ತಿ ಇಟ್ಟ ದಾಸೀಯಂತಾಗುವನು. ಈತನು ಕಾಮವು ಕುಣಿಸಿದಂತೆ ವಿಕಾರದಿಂದ ಕುಣಿಯುತ್ತಿರುವನು ।।೨೩೭।। ಈತನು ಕಾಮದ ಆಧೀನನಾಗಲು ಈತನಿಗೆ ಸಕಾಮ ಕರ್ಮಗಳನ್ನು ಮಾಡುವ ಪ್ರಸಂಗವು ಒದಗುವುದು. ದಿನದಿನಕ್ಕೂ ಈತನ ದುಃಖವು ಬೆಳೆಯುತ್ತಲೇ ಸಾಗುವುದು. ಹಾಗೆಯೇ ಈತನು ಅತಿಶಯವಾಗಿ ಗರ್ವಿಷ್ಠನಾಗುವನು ।।೨೩೮।। ರಜೋಗುಣದಿಂದ ಈತನು ಮೋಹಿತನಾಗುವನು, ಆದ್ದರಿಂದ ಈತನಿಗೆ ಇಂದ್ರಿಯಗಳ ಆಧೀನವು ದೊರೆಯಲು ಶಕ್ಯವಿಲ್ಲದಾಗುವುದು. ಇವನು ಜನ್ಮಮರಣಗಳ ಅಂಕಿತನಾಗಿರುವನು ಮತ್ತು ಅದರಂತೆ ಸರ್ವ ಕರ್ಮಗಳನ್ನು ಮಾಡುತ್ತಿರುವನು ।।೨೩೯।। ಈ ಪ್ರಕಾರವಾಗಿ ಈ ರಜೋಗುಣವು ಅತಿಶಯವಾಗಿ ಬಾಧೆಯನ್ನು ಕೊಡುತ್ತಿರುವುದು. ರಜೋಗುಣವು ಜನರಿಗೆ ವಿಷಯಾಂಧರಾಗಿ ಮಾಡಿರುವುದು. ರಜೋಗುಣದ ಜನರು ಮಂದಬುದ್ಧಿಯವರಾಗಿರುವರು. ಹೀಗೆ ಇದರ ಪ್ರಸಿದ್ಧಿಯಾಗಿರುವುದು. ಹೇ ಉದ್ಧವಾ, ಇದನ್ನು ನೀನು ಲಕ್ಷದಲ್ಲಿಡು ।।೨೪೦।।

ರಜೇ ಬಾಂಧಲ್ಯಾಪಾಠೀ ಜಾಣ । ಹೋಯ ಮಹಾಮೋಹಾಚೇ ಸಂಚರಣ । ತೇವ್ಹಾ ಭ್ರಮಾಚೇ ವಾಉಧಾಣ। ಸೈರಾ ತಮೋಗುಣ ಉಲ್ಹಾಸೇ ।।೨೪೧।। ಐಶೀ ಪ್ರಾಣಿಯಾಂಚೀ ಮತೀ । ಉದ್ಧವಾ ಜಾಣ ನಿಶ್ಚಿತೀ । ಯಾಲಾಗೀ ಕಾಮ ತೇ ಸೇವಿತೀ । ನವ್ಹೇ ವಿರಕ್ತೀ ವಿಷಯಾಂಚೀ ।।೨೪೨।। ತುಜ ಐಸೇ ವಾಟೇಲ ಚಿತ್ತೀ । ಬುಡಾಲೀ ತರಣೋಪಾಯಸ್ಥಿತೀ । ಖುಂಟಲೀ ಪ್ರಾಣ್ಯಾಂಚಿ ಪರಮಗತೀ । ವಿಷಯಾಸಕ್ತೀ ಅನಿವಾರ ।।೨೪೩।। ಜೀವಾ ಅವಿದ್ಯಾ ವಿಷಯಸಂಬಂಧೂ । ಯಾಚಾ ಬಾಧೂ ಅತಿಸುಬದ್ಧೂ । ಅವಿದ್ಯಾಯೋಗ ಅನಾದಿಸಿದ್ಧೂ । ತೇಣೇ ದೃಢ ಭೇದೂ ಜೀವಾಸೀ ।।೨೪೪।। ಅಂತಃಕರಣಹೀ ಅನಾದೀ । ಪ್ರವಾಹರೂಪೇ ತ್ಯಾಚೀ ಸಿದ್ಧೀ । ತೇಣೇ ದೃಢ ಝಾಲೀ ವಿಷಯಬುದ್ಧೀ । ತ್ಯಾಗ ತ್ರಿಶುದ್ಧೀ ಘಡೇನಾ ।।೨೪೫।। ಸತ್ತ್ವೀ ಉತ್ಪನ್ನ ಅಂತಃಕರಣ । ಪರೀ ತೇ ಪ್ರಕೃತಿಕಾರ್ಯ ಜಾಣ । ತೇಥೇ ಭೋಗಾಧ್ಯಾಸೇ ರಜೋಗುಣ। ಖವಳಲಾ ಕೋಣ ಆವರೀ ।।೨೪೬।। ವಿಷಯೀ ಬಾಂಧಿಲೇ ವಿವೇಕೀ । ತೋ ವಿಷಯತ್ಯಾಗ ನವ್ಹೇ ಯೇ ಲೋಕೀ । ಉದ್ಧವಾ ತುಝೀ ಆಶಂಕಾ ಹೇಚ ಕೀ । ಐಕ ತೇವಿಖೀ ಉಪಾವೋ ।।೨೪೭।। ವಿವೇಕಿಯಾಂಚ್ಯಾ ಠಾಯೀ । ವಿಷಯಬುದ್ಧಿ ನುಪಜೇ ಪಾಹೀ । ವಿಕ್ಷೇಪೂ ಝಾಲ್ಯಾ ಕಂಹೀಬಹೀ । ಅಭ್ಯಾಸೂ ತಿಹೀ ಕರಾವಾ ।।೨೪೮।।

ರಜಸ್ತಮೋಭ್ಯಾಂ ಯದಪಿ ವಿದ್ವಾನ್ವಿಕ್ಷಿಪ್ತಧೀಃ ಪುನಃ । ಅತಂದ್ರಿತೋ ಮನೋ ಯುಂಜನ್ ದೋಷದೃಷ್ಟಿರ್ನ ಸಜ್ಜತೇ ।।೧೨।।

ಅರ್ಥ :- ರಜೋಗುಣ ಮತ್ತು ತಮೋಗುಣಗಳಿಂದ ಒಬ್ಬ ಪ್ರಜ್ಞಾವಂತ ವ್ಯಕ್ತಿಯ ಬುದ್ಧಿಗೆ ಮಂಕು ಕವಿದರೂ ಅವನು ಎಚ್ಚರಿಕೆಯಿಂದ ಮತ್ತೇ ತನ್ನ ಮನಸ್ಸನ್ನು ಹತೋಟಿಗೆ ತಂದುಕೊಳ್ಳಬೇಕು. ಪ್ರಕೃತಿ ಗುಣಗಳ ದುಷ್ಟಭಾವವನ್ನು ಸ್ಪಷ್ಟವಾಗಿ ಕಂಡು ಅವನು ಅದಕ್ಕೆ ವಶನಾಗುವುದಿಲ್ಲ.

ಹೋ ಕಾ ರಜತಮಾಂಚೇನಿ ಗುಣೇ । ಜರೀ ಬುದ್ಧಿ ವಿಕ್ಷಿಪ್ತ ಕೇಲೀ ತೇಣೇ । ತರೀ ಆಳಸ ಸಾಂಡೂನಿ ಸಜ್ಞಾನೇ । ಆವರಣೇ ಮನಾತೇ ।।೨೪೯।। ಅಸ್ಥಿಮಾಂಸಾಚಾ ಘಡಿಲಾ । ವಿಷ್ಠಾಮೂತ್ರಾಂಚಾ ಕೋಥಳಾ । ಸ್ತ್ರೀ ವಿಚಾರಿತಾ ಕಾಂಟಾಳಾ । ನರಕಜಿವ್ಹಾಳಾ ತೋ ಭೋಗೂ ।।೨೫೦।। ಭೋಗೀ ದಾವೂನಿ ದೋಷದೃಷ್ಟೀ । ಮನಾಸೀ ವಿಷಯಾಂಚೀ ತುಟೀ । ಕರಾವೀ ಗಾ ಉಠಾಉಠೀ । ನೇಮೂನಿ ನಿಹಟೀ ಮನಾತೇ ।।೨೫೧।। ಐಸೇನಿಹೀ ಮನ ಅತಿದುರ್ಧರ । ನಿಯಮಾಸೀ ನಾವರೇ ಅನಾವರ । ಸಾಧಕಾಂಸೀ ಅತಿದುಸ್ತರ । ಅಶಕ್ತ ನರ ಯೇ ಅರ್ಥೀ ।।೨೫೨।।

ಒಮ್ಮೆ ರಜೋಗುಣದಿಂದ ಬದ್ಧನಾದ ಮೇಲೆ ಅಲ್ಲಿ ಮಹಾಮೋಹದ ಪ್ರವೇಶವಾಗುವುದು, ಭ್ರಮೆಯ ಬಿರುಗಾಳಿಯು ಎಲ್ಲ ಕಡೆಯಲ್ಲಿ ಹರಡುವುದು ಹಾಗೂ ತಮೋಗುಣವೂ ಕೂಡ ಸರ್ವತ್ರ ಹಬ್ಬುವುದು ।।೨೪೧।। ಹೇ ಉದ್ಧವನೇ, ಮನುಷ್ಯರ ಬುದ್ಧಿಯು ನಿಜವಾಗಿ ಹೀಗೆ ಇರುವುದು. ಇದನ್ನು ನೀನು ಲಕ್ಷದಲ್ಲಿಡು, ಇವರು ಯಾವಾಗಲೂ ಕಾಮದ ಸೇವನೆ ಮಾಡುವರು. ಇವರಿಗೆ ವಿಷಯ ವೈರಾಗ್ಯವು ಬರುವುದಿಲ್ಲ ।।೨೪೨।। ನಿನ್ನ ಮನದಲ್ಲಿ ಹೀಗೆ ವಿಚಾರವು ನಿರ್ಮಾಣವಾಗಬಹುದು, ಈಗ ತರಣೋಪಾಯವು ಮುಗಿಯಿತು, ಮಾನವರ ಪರಮಗತಿಯು ನಿಂತುಹೋಯಿತು. ವಿಷಯಾಸಕ್ತಿಯು ಬಹುವಾಗಿ ಬೆಳೆಯಿತು ।।೨೪೩।। ಜೀವಕ್ಕೆ ಅವಿದ್ಯೆಯ ಹಾಗೂ ವಿಷಯಗಳ ಸಂಬಂಧವಾಗುವುದು. ಇದರಿಂದಾಗುವ ಬಾಧೆಯು ಅತಿಶಯವಾಗಿ ಪ್ರಬಲ ಸ್ವರೂಪದ್ದಾಗಿರುವುದು. ಅವಿದ್ಯೆಯ ಸಂಬಂಧವು ಅನಾದಿಕಾಲದಿಂದಲೂ ಇರುವುದು. ಆದ್ದರಿಂದ ಭಿನ್ನ ಭಿನ್ನ ಪ್ರಕಾರಗಳ ಅತ್ಯಂತ ದೃಢವಾದ ಕಲ್ಪನೆಗಳು ನಿರ್ಮಾಣವಾಗುವುವು ।।೨೪೪।। ಅಂತಃಕರಣವೂ ಕೂಡ ಅನಾದಿಯಾಗಿರುವುದು. ಅದರ ಪರಿಪೂರ್ಣತೆಯೂ ಕೂಡ ಓಘಾನುರೂಪದಿಂದ ಆಗುತ್ತಿರುವುದು. ಆದ್ದರಿಂದ ವಿಷಯ ಬುದ್ಧಿಯೂ ಕೂಡ ದೃಢವಾಗುವುದು ಮತ್ತು ಅದರ ತ್ಯಾಗವು ಸಾಧಿಸುವುದಿಲ್ಲ ।।೨೪೫।। ಸತ್ವಗುಣದಿಂದ ಅಂತಃಕರಣವು ಉತ್ಪನ್ನವಾಗುವುದು ನಿಜ, ಆದರೆ ಇದು ಮಾಯೆಯ ಕಾರ್ಯವಾಗಿದೆ. ಇದಕ್ಕೆ ಸುಖಭೋಗದ ಇಚ್ಛೆಯಿಂದ ರಜೋಗುಣವು ಉಗ್ರಗೊಂಡರೆ ಅದನ್ನು ಯಾರು ತಡೆ ಹಿಡಿಯುವರು? ।।೨೪೬।। ವಿವೇಕ ಉಳ್ಳ ಪುರುಷರೂ ಕೂಡ ವಿಷಯಗಳಿಂದ ಬದ್ಧರಾಗುವರು. ಆದ್ದರಿಂದ ವಿಷಯ ತ್ಯಾಗವು ಸಾಧಿಸುವುದಿಲ್ಲ. ಹೇ ಉದ್ಧವನೇ, ಹೀಗೆ ನಿನ್ನ ಶಂಕೆಯು ಇದ್ದರೆ, ಅದಕ್ಕಾಗಿಯೂ ಉಪಾಯವನ್ನು ಕೇಳು ।।೨೪೭।। ವಾಸ್ತವಿಕವಾಗಿ ವಿಚಾರಿಸಲು ವಿವೇಕಿ ಜನರ ಮನದಲ್ಲಿ ವಿಷಯ ವಾಸನೆಯು ಉತ್ಪನ್ನವಾಗುವುದಿಲ್ಲ. ಹೀಗಿದ್ದರೂ ಸಹ ಹೇಗಾದರೂ ವಿಕ್ಷೇಪವಾದರೆ, ಅವರು ವಿವೇಕವನ್ನು ಬೆಳೆಸುವ ಅಭ್ಯಾಸವನ್ನು ಮಾಡಬೇಕು ।।೨೪೮।।

ರಜೋಗುಣ, ತಮೋಗುಣಗಳಿಂದ ಬುದ್ಧಿಯು ಚಂಚಲವಾದರೆ ವಿಚಾರೀ ಜನರು ಆಲಸ್ಯವನ್ನು ಮಾಡದೇ ಮನವನ್ನು ಅಧೀನಗೊಳಿಸಬೇಕು ।।೨೪೯।। ಸ್ತ್ರೀ ದೇಹದ ವಿಚಾರ ಮಾಡಲು, ಸ್ತ್ರೀಯು ಎಲುಬು ಮಾಂಸಗಳಿಂದ ತಯಾರಿಸಿದ ಮಲಮೂತ್ರಗಳ ಚೀಲವಾಗಿರುವಳು. ಹೀಗೆ ವಿಚಾರವನ್ನು ಮಾಡಲು ಮನಸ್ಸಿಗೆ ಹೇಸಿಗೆಯಾಗುವುದು. ಈಕೆಯ ಭೋಗವು ಕೇವಲ ನರಕದ ಸಾಧನೆಯಾಗಿರುವುದು ।।೨೫೦।। ಆಕೆಯ ಭೋಗದಲ್ಲಿ ಹೀಗೆ ದೋಷ ದೃಷ್ಟಿಯನ್ನಿಟ್ಟು ಸಾವಧಾನದಿಂದ ಮನದ ನಿಯಮನವನ್ನು ಮಾಡಿ ಅದಕ್ಕೆ ವಿಷಯಗಳಿಂದ ದೂರವಿಡಬೇಕು. ಅದನ್ನು ನಿಯಮದಿಂದ ಆವರಿಸಿ ಹಿಡಿಯಬೇಕು ।।೨೫೧।। ಮನವು ಅತ್ಯಂತ ಚಂಚಲವಾಗಿರುವುದು. ಇಷ್ಟೊಂದು ನಿಯಮದಿಂದಲೂ ಅದಕ್ಕೆ ಆವರಿಸುವುದು ಆಗುವುದಿಲ್ಲ. ಸಾಧಕನಿಗೂ ಇದನ್ನು ಅಧೀನಪಡಿಸುವದು ಅತಿದುಸ್ತರವಾಗಿರುವುದು. ಅದನ್ನು ಅಧೀನಪಡಿಸಲು ನರರು ಅಸಮರ್ಥರಾಗಿರುವರು ।।೨೫೨।।

ತರೀ ಐಕ ಬಾಪಾ ಸಾವಧಾನ । ಮನೋನಿಗ್ರಹಾಚೇ ಲಕ್ಷಣ । ತೇಹೀ ಸಾಂಗೇನ ಸಾಧನ । ಜೇಣೇ ಪ್ರಕಾರೇ ಮನ ಆಕಳೇ ।।೭೫೩।।

ಅಪ್ರಮತ್ತೋಽನುಯುಂಜೀತ ಮನೋ ಮಯ್ಯರ್ಪಯನ್ ಶನೈಃ । ಅನಿರ್ವಿಣ್ಣೋ ಯಥಾಕಾಲಂ ಜಿತಶ್ವಾಸೋ ಜಿತಾಸನಃ ।।೧೩।।

ಅರ್ಥ :- ಸಾಧಕನು ಆಸನ ಮತ್ತು ಪ್ರಾಣಾಯಾಮಗಳಲ್ಲಿ ವಿಜಯವನ್ನು ಸಾಧಿಸಿ ತನ್ನ ಶಕ್ತಿ ಮತ್ತು ಸಮಯಾನುಸಾರವಾಗಿ ಅತ್ಯಂತ ಸಾವಧಾನ ರೀತಿಯಲ್ಲಿ ಮೆಲ್ಲಮೆಲ್ಲನೆ ತನ್ನ ಮನವನ್ನು ನನ್ನ ಸ್ವರೂಪಕ್ಕೆ ಹಚ್ಚಬೇಕು. ಹೀಗೆ ಆಚರಿಸುತ್ತಿದ್ದಾಗ ಫಲವು ಪ್ರಾಪ್ತವಾಗದಿರಲು ಆಗ ಸ್ವಲ್ಪವೂ ನಿರಾಶನಾಗದೇ ಪುನಃ ಅತ್ಯಂತ ಉತ್ಸಾಹದಿಂದ ಸಾಧನೆಯನ್ನು ಮಾಡಬೇಕು.

ಆಳಸನಿದ್ರೇಸೀ ದವಡೂನಿ ದೂರೀ । ಜೋ ಸಾವಧಾನ ನಿಜವೃತ್ತೀ ಧರೀ । ಮಾಝೀ ಚಿದ್ರೂಪ ನಿರ್ಧಾರೀ ।ಶನೈಃಶನೈಃ ಕರೀ ಅಭ್ಯಾಸೂ ।।೭೫೪।। ಅಭ್ಯಾಸೀ ಪ್ರಥಮ ಭೂಮಿಕಾ । ಶಿಕಾವೀ ಆಸನಗಢೀಕಾ । ಮೂಳಬಂಧ ಅತಿನೇಟಕಾ । ಆಸನಜಯೋ ದೇಖಾ ಶಿಕಾವಾ ।।೭೫೫।। ಆಸನಜಯೋ ಆಲ್ಯಾ ಹಾತಾ । ಸಹಜೇ ಚಢೇ ಯೋಗಪಂಥಾ । ತೇಥೇ ಪ್ರಾಣಾಪಾನಸಮತಾ । ಅಭ್ಯಾಸಿತಾ ಹೋ ಲಾಗೇ ।।೭೫೬।। ವಿಷಯ ತೇ ಮನಾ ಆಧೀನ ।ಮನ ಪವನಾಸೀ ವಶ್ಯ ಜಾಣ । ಅಭ್ಯಾಸೇ ವಶ ಕೇಲಾ ಪವನ । ಸಹಜೇ ಮನ ಸ್ಥಿರಾವೇ ।।೭೫೭।। ಯಾಪರೀ ಜೋ ಹಳೂಹಳೂ । ಅಭ್ಯಾಸೇ ಸಾರ್ಥಕ ಕರೀ ಕಾಳೂ । ಅವಿರಕ್ತ ಪರೀ ಪ್ರಬಳೂ । ಹೋಯ ಭುಕಾಳೂ ಪರಮಾರ್ಥೀ ।।೭೫೮।। ಹರಿಚಿಂತನೀ ಏಕಾಗ್ರ ಮನ । ತ್ಯೆ ಏಕ ಹೋತೀ ಪ್ರಾಣಾಪಾನ । ಹಾಚಿ ಪವನಜಯೋ ಪೂರ್ಣ। ಯೋಗಸಾಧನ ಸಹಜೇಚಿ ।।೭೫೯।। ತಂವ ಪ್ರಾಣಾಪಾನ ಸಮಜೋಡೀ । ಷಟ್‌ಚಕ್ರಾಂಚೇ ಪದರ ಫೋಡೀ । ತ್ಯೆ ವಿಷಯಾಂತೇ ಚಿತ್ತ ಸಾಂಡೀ । ವಿಷಯೋ ವೋಸಂಡೀ ಚಿತ್ತಾತೇ ।।೭೬೦।। ಯಾಪರೀ ಯಾ ಅಭ್ಯಾಸ ವಾಟೇ । ಸಕಾಮ ಕಾಮಾಚಾ ತಟಕಾ ತುಟೇ । ಸನಕಾದಿಕ ಯೇಣೇ ಪರಿಪಾಠೇ । ಮ್ಯಾ ಆತ್ಮನಿಷ್ಠೇ ಲಾವಿಲೇ ।।೭೬೧।।

ಏತಾವಾನ್ ಯೋಗ ಆದಿಷ್ಟೋ ಮಚ್ಛಿಷ್ಯೈಃ ಸನಕಾದಿಭಿಃ । ಸರ್ವತೋ ಮನ ಆಕೃಷ್ಯ ಮಯ್ಯದ್ಧಾವೇಶ್ಯತೇ ಯಥಾ ।।೧೪।।

ಅರ್ಥ :- ನನ್ನ ಭಕ್ತರಾದ ಸನಕಾದಿಗಳಿಂದ ಉಪದೇಶಗೊಂಡ ನಿಜಯೋಗ ಪದ್ಧತಿಯು ಈ ರೀತಿ ಇದೆ. ಉಳಿದ ಎಲ್ಲ ವಿಷಯಗಳಿಂದಲೂ ಮನಸ್ಸನ್ನು ಹಿಂದಕ್ಕೆ ತೆಗೆದುಕೊಂಡ ಮೇಲೆ ಅದನ್ನು ನೇರವಾಗಿ ಮತ್ತು ಯೋಗ್ಯವಾಗಿ ನನ್ನಲ್ಲಿ ನಿಮಜ್ಜನಗೊಳಿಸಬೇಕು.

ಯೇಣೇಂಚಿ ಉಪದೇಶೇ ದೇಖ । ಮಾಝೇ ಶಿಷ್ಯ ಸನಕಾದಿಕ । ಅಭ್ಯಾಸಬಳೇ ಅಲೋಲಿಕ । ನಿಜಾತ್ಮಸುಖ ಪಾವಲೇ ।।೭೬೨।।

ಆದಕ್ಕಾಗಿ ಹೇ ಅಪ್ಪಾಜಿಯೇ, ಸರಿಯಾಗಿ ಲಕ್ಷಕೊಟ್ಟು ಕೇಳು. ಈಗ ಮನೋನಿಗ್ರಹದ ಲಕ್ಷಣಗಳನ್ನು ತಿಳಿದುಕೋ. ಯಾವುದರ ಸಹಾಯದಿಂದ ಮನವನ್ನು ಸ್ವಾಧೀನಪಡಿಕೊಳ್ಳಲು ಬರುವುದೋ, ಆ ಸಾಧನೆಯನ್ನು ಹೇಳುವೆನು, ಅದನ್ನು ಕೇಳು ।।೭೫೩।।

ಯಾವನು ಆಲಸ್ಯ ಮತ್ತು ನಿದ್ರೆಯನ್ನು ದೂರವಿಡುವನೋ ಮತ್ತು ಅತ್ಯಂತ ಸಾವಧಾನ ಚಿತ್ತದಿಂದ ಬ್ರಹ್ಮ ಭಾವನೆಯನ್ನು ಧರಿಸುವನೋ, ಆತನೇ ನಿಜವಾಗಿಯೂ ನನ್ನ ಚಿತ್‌ಸ್ವರೂಪದ ಅಭ್ಯಾಸಕ್ಕೆ ಮೆಲ್ಲಮೆಲ್ಲನೇ ಹತ್ತಿಕೊಳ್ಳುವನು ।।೭೫೪।। ಪ್ರಾರಂಭದಲ್ಲಿ ಆಸನವನ್ನು ಸ್ಥಿರಗೊಳಿಸಲು ಕಲಿಯಬೇಕು. ಮೂಲಬಂಧದ ಮೇಲೆ ಆಸನವನ್ನು ನೀಟಾಗಿ ಹಾಕಬೇಕು. ಮತ್ತು ಆಸನಜಯವನ್ನು ಮಾಡುವುದನ್ನು ಕಲಿಯಬೇಕು. ಇದು ಅಭ್ಯಾಸದ ಮೊದಲನೆಯ ಮೆಟ್ಟಲಾಗಿರುವುದು ।।೭೫೫।। ಒಮ್ಮೆ ಆಸನಜಯವು ಸಾಧ್ಯವಾಯಿತೆಂದರೆ ಆತನು ಸಹಜವಾಗಿಯೇ ಯೋಗ ಮಾರ್ಗಕ್ಕೆ ಹತ್ತುವನು. ಆ ಸಮಯದಲ್ಲಿ ಅಧಿಕವಾಗಿ ಅಭ್ಯಾಸವನ್ನು ಮಾಡಲು ಪ್ರಾಣ, ಅಪಾನ ಇವುಗಳ ಸಮಾನ ಸ್ಥಿತಿಯಾಗ ಹತ್ತುವುದು ।।೭೫೬।। ವಿಷಯಗಳು ಮನಸ್ಸಿನ ಆಧೀನವಾಗಿರುವುವು. ಮನವು ವಾಯುವಿನ ಆಧೀನವಾಗಿರುವುದು. ಆದ್ದರಿಂದ ಪ್ರಾಣಾಯಾಮದಿಂದ ವಾಯುವನ್ನು ವಶಗೊಳಿಸಲು ಆಗ ಮನವು ಸಹಜವಾಗಿ ಸ್ಥಿರವಾಗುವುದು ।।೭೫೭।। ಈ ಪ್ರಕಾರವಾಗಿ ಈತನು ಮೆಲ್ಲಮೆಲ್ಲನೇ ಅಭ್ಯಾಸವನ್ನು ಮಾಡಿ ವೇಳೆಯ ಸಾರ್ಥಕ ಮಾಡುವನು. ಈತನು ಸಂಸಾರಿಕನಾಗಿದ್ದರೂ ಕೂಡ ಪರಮಾರ್ಥಕ್ಕಾಗಿ ಆತುರನಾಗಿರುವನು ।।೭೫೮।। ಹರಿಚಿಂತನೆಯಲ್ಲಿ ಮನವು ರಮಿಸಲು ಪ್ರಾಣ ಮತ್ತು ಅಪಾನ ಈ ಎರಡೂ ವಾಯುಗಳು ಏಕರೂಪವಾಗುವುವು. ಇದು ವಾಯುವಿನ ಪೂರ್ಣ ಜಯವಾಗಿರುವುದು. ಇದರ ಸಹಾಯದಿಂದ ಯೋಗ ಸಾಧನೆಯು ಸಹಜವಾಗಿಯೇ ಬೆಳೆಯುವುದು ।।೭೫೯।। ಪ್ರಾಣಾಯಾಮದ ಸಮಸಮಾನ ಜೋಡಿಯು ಷಟ್‌ಚಕ್ರಗಳ ಆವರಣವನ್ನು ಭೇದಿಸುತ್ತದೆ. ಆಗ ಚಿತ್ತವು ವಿಷಯಗಳನ್ನು ಬಿಟ್ಟು ಬಿಡುವುದು ಮತ್ತು ವಿಷಯಗಳೂ ಕೂಡ ಚಿತ್ತವನ್ನು ಬಿಟ್ಟು ಬಿಡುವುವು ।।೭೬೦।। ಈ ಪ್ರಕಾರವಾಗಿ ಈ ಅಭ್ಯಾಸದ ಯೋಗದಿಂದ ಸಕಾಮ ಪುರುಷನ ಕಾಮ ಸಂಬಂಧವು ಮುರಿದು ಬೀಳುವುದು. ಇದೇ ಮಾರ್ಗದಿಂದ ನಾನು ಸನಕಾದಿಕರಿಗೆ ಆತ್ಮಜ್ಞಾನದತ್ತ ತಿರುಗಿಸಿರುವೆನು ।।೭೬೧।।

ಇದೇ ಉಪದೇಶದಿಂದ ನನ್ನ ಶಿಷ್ಯರಾದ ಸನಕಾದಿಕರು ತಮ್ಮ ಅಲೌಕಿಕ ಅಭ್ಯಾಸದ ಸಾಮರ್ಥ್ಯದಿಂದ ಆತ್ಮಸುಖಕ್ಕೆ ಪ್ರಾಪ್ತರಾದರು ।।೭೬೨।।

ತೋ ಉಪದೇಶ ಕೋಣ ಮ್ಹಣಸೀ । ಜೋ ವಿಯೋಗ ಚಿತ್ತ ವಿಷಯಾಂಸೀ । ಹೇ ಮ್ಯಾ ಸಾಂಗೋನಿಯಾ ತ್ಯಾಂಸೀ । ಆತ್ಮಾಭ್ಯಾಸೀ ಲಾವಿಲೇ ।।೨೬೩।। ಮನ ಜೇಥೇ ಜೇಥೇ ಜಾಯೇ । ತೇಥೇ ತೇಥೇ ವಸ್ತೂಚಿ ಆಹೇ । ಯೇಣೇ ಅಭ್ಯಾಸೇ ಲವಲಾಹೇ । ಸನಕಾದಿಕ ಪಾಹೇ ಸಿದ್ಧ ಝಾಲೇ ।।೨೬೪।। ಚಿತ್ತಾಸೀ ವಿಷಯಾಂಚಾ ವಿಯೋಗೂ । ಹಾ ಸನಕಾದಿಕೀ ಸಾಧಿಲಾ ಯೋಗೂ । ತ್ಯಾಂಸೀ ಉಪದೇಶಾವಯಾ ಸಾಂಗೂ । ಮೀ ಸ್ವಯೇ ಶ್ರೀರಂಗೂ ಉಪದೇಷ್ಟಾ ।।೨೬೫।। ತೇ ಐಕೋನಿ ಉದ್ಧವ ಪಾಹೀ । ವಿಚಾರೀ ಆಪುಲಿಯಾ ಠಾಯೀ । ಮೀ ಶ್ರೀಕೃಷ್ಣಾವೇಗಳಾ ಕಂಹೀ ನಾಹೀ । ಸನಕಾದಿಕ ಕಂಹೀ ಉಪದೇಶಿಲೇ ।।೨೬೬।। ಸನಕಾದಿಕ ಬ್ರಹ್ಮ ಶೀಳ । ಪೂರ್ವೀ ಜಾಹಲೇ ಬಹುಕಾಳ । ಕೃಷ್ಣ ಯೇ ಕಾಳೀಚೇ ದೇವಕೀಬಾಳ । ಗುರುತ್ವ ಕೇವಳ ಘಡೇ ಕೈಸೇ ।।೨೬೭।।

ಉದ್ಧವ ಉವಾಚ:-

ಯದಾ ತ್ವಂ ಸನಕಾದಿಭ್ಯೋ ಯೇನ ರೂಪೇಣ ಕೇಶವ ।
ಯೋಗ ಮಾದಿಷ್ಟವಾನೇತದ್‌ರೂಪಮಿಚ್ಛಾಮಿ ವೇದಿತುಮ್ ।।೧೫।।

ಅರ್ಥ :- ಉದ್ಧವನು ನುಡಿದನು, ಹೇ ಶ್ರೀಕೃಷ್ಣನೇ, ಸನಕಾದಿಕರಿಗೆ ಉಪದೇಶ ಮಾಡುವ ಕಾಲಕ್ಕೆ ನೀನು ಯಾವ ರೂಪವನ್ನು ತೆಗೆದುಕೊಂಡಿದ್ದೆಯೋ ಆ ರೂಪವನ್ನು ನಾನು ನೋಡಲು ಬಯಸಿರುವೆನು.

ಉದ್ಧವ ಮ್ಹಣೇ ಗಾ ಕೇಶವಾ । ಸನಕಾದಿಕಾಂಸೀ ಕೇಂವ್ಹಾ । ಉಪದೇಶ ಕೇಲಾ ಗಾ ತುವಾ । ಜವಳೀ ತೇಂವ್ಹಾ ಮೀ ಕಾ ನವ್ಹತೋ ।।೨೬೮।। ಯೇಣೇಂಚಿ ರೂಪೇ ಹೃಷೀಕೇಶೀ । ಯೋಗ ಸಾಂಗೀತಲಾ ತಯಾಂಸೀ । ಕಿಂವಾ ರೂಪಾಂತರೇ ಮ್ಹಣಸೀ । ತೇ ಜಾಣಾವಯಾಸೀ ಮಜ ಇಚ್ಛಾ ।।೨೬೯।। ಕೋಣ ಕಾಳ ಸಮಯೋ ಕೋಣ । ಕೋಣ ಯೋಗ ಕೈಸಾ ಪ್ರಶ್ನ । ತೇ ಕೃಪಾ ಕರೋನಿ ಆಪಣ । ಮಜ ಸಂಪೂರ್ಣ ಸಾಂಗಾವೇ ।।೨೭೦।। ಐಕೋನಿ ಉದ್ಧವಾಚಾ ಪ್ರಶ್ನ । ಕೃಪಾ ಕಳವಳಲಾ ನಾರಾಯಣ । ಹಂಸ ಇತಿಹಾಸನಿರೂಪಣ । ಆಪುಲೇ ಆಪಣ ಸಾಂಗತ ।।೨೭೧।।

ಶ್ರೀ ಭಗವಾನುವಾಚ :-

ಪುತ್ರಾ ಹಿರಣ್ಯಗರ್ಭಸ್ಯ ಮಾನಸಾಃ ಸನಕಾದಯಃ ।
ಪಪ್ರಚ್ಛುಃ ಪಿತರಂ ಸೂಕ್ಷ್ಮಾಂ ಯೋಗಸ್ಯೈಕಾಂತಿಕೀಂ ಗತಿಮ್ ।।೧೬।।

ಅರ್ಥ:- ಭಗವಾನ ಶ್ರೀಕೃಷ್ಣನು ಹೇಳಿದನು, ಸನಕಾದಿಕರು ಬ್ರಹ್ಮದೇವನ ಮಾನಸಪುತ್ರರಾಗಿರುವರು. ಆವರು ತಮ್ಮ ಪಿತನಿಗೆ ಯೋಗದ ದುರ್ಜೇಯ, ಪರಾಕಾಷ್ಠವನ್ನು ಕೇಳಿದರು.

ಅಂತಹ ಆದಾವ ಉಪದೇಶವೆಂದು ನೀನು ಕೇಳಬಹುದು, ಆದಕ್ಕಾಗಿ ಕೇಳು. ಚಿತ್ತ ಮತ್ತು ವಿಷಯಗಳ ಇವುಗಳ ಭೇಟಿಯಾಗದಂತೆ ಮಾಡುವುದು. ಇದೇ ಉಪದೇಶವನ್ನು ಮಾಡಿ ಆತ್ಮಜ್ಞಾನದ ಅಭ್ಯಾಸಕ್ಕೆ ಹತ್ತಿಸಿದೆನು ।।೨೬೩।। ಮನವು ಎಲ್ಲಿ ಎಲ್ಲಿಗೆ ಹೋಗುವುದೋ ಅಲ್ಲಲ್ಲಿ ಪರಬ್ರಹ್ಮವೇ ತುಂಬಿರುವುದು ಎಂಬ ಭಾವನೆಯನ್ನು ಧರಿಸುವ ರೂಢಿಯಾದ್ದರಿಂದ ಸನಕಾದಿಕರು ಬ್ರಹ್ಮಸ್ವರೂಪರಾದರು ।।೨೬೪।। ಚಿತ್ತಕ್ಕೆ ವಿಷಯಗಳ ವಿಯೋಗಗೊಳಿಸುವ ಈ ಯೋಗವನ್ನೇ ಸನಕಾದಿಕರು ಸಾಧಿಸಿದರು. ಶ್ರೀಕೃಷ್ಣನಾದ ನಾನು ಸ್ವತಃ ಅವರಿಗೆ ಉಪದೇಶವನ್ನು ಮಾಡಿರುತ್ತೇನೆ ।।೨೬೫।। ಉದ್ಧವನು ಈ ಶ್ರವಣವನ್ನು ಮಾಡುತ್ತಲೇ ಮನದಲ್ಲಿ ವಿಚಾರ ಮಾಡಿದನೇಂದರೆ, ನಾನು ಕೃಷ್ಣನಿಗೆ ಬಿಟ್ಟು ಎಂದೂ ಇರುವುದಿಲ್ಲ. ಹೀಗಿರುವಾಗ ಶ್ರೀಕೃಷ್ಣನು ಸನಕಾದಿಕರಿಗೆ ಉಪದೇಶವನ್ನು ಎಂದು ಯಾವಾಗ್ಗ ಮಾಡಿದನು? ।।೨೬೬।। ಸನಕಾದಿಕರು ಇವರಾದರೂ ಬಹಳ ಪ್ರಾಚೀನ ಕಾಲದಲ್ಲಿಯೇ ಬ್ರಹ್ಮಸ್ವರೂಪರಾಗಿರುವರು ಮತ್ತು ಈ ಕೃಷ್ಣನು ನೋಡಿದರೆ ಈ ಕಾಲದ ದೇವಕಿಯ ಪುತ್ರನಾಗಿರುವನು. ಹೀಗಿರಲು ಈತನಿಗೆ ಗುರುತ್ವವು ಹೇಗೆ ಸಂಭವಿಸುವುದು? ।।೨೬೭।।

ಉದ್ಧವನು ನುಡಿದನು, ಹೇ ಕೇಶವನೇ, ನೀನು ಸನಾದಿಕರಿಗೆ ಉಪದೇಶವನ್ನು ಎಂದು ಯಾವಾಗ್ಗ ಮಾಡಿದೆ? ಆ ಸಮಯದಲ್ಲಿ ನಾನು ನಿನ್ನ ಬಳಿಯಲ್ಲಿರಲಿಲ್ಲವೇ? ।।೨೬೮।। ಹೇ ಹೃಷೀಕೇಶನೇ, ನೀನು ಇದೇ ರೂಪದಲ್ಲಿ ಅವರಿಗೆ ಉಪದೇಶವನ್ನು ಮಾಡಿದೆಯೋ ಅಥವಾ ಅನ್ಯ ಯಾವ ದೇವಾಸುರರ ರೂಪವನ್ನು ಧರಿಸಿದ್ದೆಯೋ ಎಂಬುದನ್ನು ತಿಳಿಯಲು ನನಗೆ ಇಚ್ಛೆಯಾಗಿರುವುದು ।।೨೬೯।। ಅದು ಯಾವ ಕಾಲವಾಗಿತ್ತು? ಸಮಯವು ಯಾವುದಾಗಿತ್ತು? ಇದಕ್ಕಾಗಿ ಅವರು ಹೇಗೆ ಪ್ರಶ್ನೆಯನ್ನು ಕೇಳಿದರು? ಇದೆಲ್ಲವನ್ನೂ ನೀವು ನನಗೆ ಸಂಪೂರ್ಣವಾಗಿ ತಿಳಿಸಿರಿ ।।೨೭೦।। ಉದ್ಧವನ ಈ ಪ್ರಶ್ನೆಯನ್ನು ಕೇಳಿ, ಶ್ರೀಕೃಷ್ಣನ ಹೃದಯದಲ್ಲಿ ದಯೆಯು ನಿರ್ಮಾಣವಾಯಿತು. ಆಗ ತನ್ನ ಹಂಸದ ಕಥೆಯನ್ನು ತಾನೇ ಹೇಳಹತ್ತಿದನು ।।೨೭೧।।

ಬ್ರಹ್ಮಯಾಚೇ ಮಾನಸಪುತ್ರ । ಮಹಾಪ್ರಸಿದ್ಧ ಸನತ್ಕುಮಾರ । ತಿಹೀ ಸತ್ಯಲೋಕೀ ಪ್ರಶ್ನ ಘೋರ । ಅತಿದುಸ್ತರ ಪೂಶಿಲಾ ॥೨೭೨॥ ಅತಿಸೂಕ್ಷ್ಮ ಯೋಗಗತೀ । ದುರ್ಜ್ಞೇಯ ಸ್ವಸ್ವರೂಪಸ್ಥಿತೀ । ಪರಮ ಕಠಿಣ ಪ್ರಶ್ನೋಕ್ತೀ । ಪಿತ್ಯಾಪ್ರತೀ ಪೂಶಿಲೀ ॥೨೭೩॥

ಸನಕಾದಯ ಉವಾಚ:-

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಭೋ ।
ಕಥಮನ್ಯೋನ್ಯಸಂತ್ಯಾಗೋ ಮುಮುಕ್ಷೋರತಿತಿತೀರ್ಷೋಃ ॥೧೭॥

ಅರ್ಥ :- ಸನಕಾದಿಕರು ಕೇಳಿದರು; ಹೇ ಪ್ರಭುವೇ, ಸಹಜವಾಗಿಯೇ ಜನರ ಮನಸ್ಸನ್ನು ಇಂದ್ರಿಯ ವಿಷಯಗಳು ಸೆಳೆಯುತ್ತವೆ. ಅದೇ ರೀತಿ ಇಂದ್ರಿಯ ವಿಷಯಗಳು ಬಯಕೆಯ ರೂಪದಲ್ಲಿ ಮನಸ್ಸನ್ನು ಪ್ರವೇಶಿಸುತ್ತವೆ. ಆದ್ದರಿಂದ ಇಂದ್ರಿಯ ತೃಪ್ತಿಯ ಕಾರ್ಯಗಳನ್ನು ಮೀರಿ ಹೇಗೆ ತಾನೇ ಒಬ್ಬ ವ್ಯಕ್ತಿಯು ಇಂದ್ರಿಯ ವಿಷಯಗಳು ಮತ್ತು ಮನಸ್ಸಿನ ನಡುವಣ ಪರಸ್ಪರ ಸಂಬಂಧವನ್ನು ಕಡಿದು ಹಾಕಲು ಸಾಧ್ಯ? ದಯಮಾಡಿ ಇದನ್ನು ನಮಗೆ ವಿವರಿಸಿರಿ.

ಸನಕಾದಿಕ ಪುಸತ । ವಿಷಯಾಂಚ್ಯಾ ಠಾಯೀ ಚಿತ್ತ । ಸ್ವಭಾವೇ ಅಸೇ ವಿಷಯಾಸಕ್ತ । ತೇ ವಿಷಯೀ ಸತತ ಆವೇಶಲೇ ॥೨೭೪॥ ತೈಸೇಚಿ ವಿಷಯ ಪಾಹೀ । ಪ್ರವೇಶಲೇ ಚಿತ್ತಾಚ್ಯಾ ಠಾಯೀ । ವಾಸನಾರೂಪೇ ಜಡಲೇ ತೇಹೀ । ನಿಘೋ ಕಂಹೀ ನೇಣತೀ ॥೨೭೫॥ ಫಳಕಾಳ ದೋನೀ ನಾಹೀ । ತರೀ ತೈಚೇ ಆಂಬೇ ಗೋಡ ಪಾಹೀ । ಐಸೇ ವಿಷಯ ಚಿತ್ತಾಚೇ ಠಾಯೀ । ರಿಘಾಲೇ ಕಂಹೀ ನ ನಿಘತೀ ॥೨೭೬॥ ಪರ್ಣಿಲೀ ಕಾಂತಾ ಮಾಹೇರಾ ಜಾಯೇ । ಚಿತ್ತೀ ರಿಘಾಲೀ ದೂರೀ ನ ರಾಹೇ । ಯಾಪರೀ ವಿಷಯೋ ಪಾಹೇ । ಜಡಲಾ ಠಾಯೇ ಚಿತ್ತಾಸೀ ॥೨೭೭॥ ಚಿತ್ತ ವಿಷಯೋ ಅನ್ಯೋನ್ಯತ್ಯಾಗೂ । ಮುಮುಕ್ಷು ಕೇವೀ ಘಡೇ ಚಾಂಗೂ । ಯೇ ಉಪಾಯೀ ಉಪಾಯಯೋಗೂ । ಸ್ವಾಮೀನೇ ಸಾಂಗೂ ಸಾಂಗಾವಾ ॥೨೭೮॥

ಶ್ರೀಭಗವಾನುವಾಚ :-

ಏವಂ ಪೃಷ್ಟೋ ಮಹಾದೇವಃ ಸ್ವಯಂಭೂರ್ಭೂತಭಾವನಃ ।
ಧ್ಯಾಯಮಾನಃ ಪ್ರಶ್ನಬೀಜಂ ನಾಭ್ಯಪದ್ಯತ ಕರ್ಮಧೀಃ ॥೧೮॥

ಅರ್ಥ :- ಭಗವಾನ ಶ್ರೀಕೃಷ್ಣನು ಹೇಳಿದನು, ಪ್ರಿಯ ಉದ್ಧವಾ, ಬ್ರಹ್ಮದೇವನು ಸರ್ವ ದೇವದೇವತೆಗಳ ಶಿರೋಮಣೀ ಸ್ವಯಂಭೂ ಮತ್ತು ಪ್ರಾಣಿಗಳ ಜನ್ಮದಾತನಾಗಿರುವನು. ಆದರೆ ಸನಕಾದಿಕರ ಈ ಪ್ರಶ್ನೆಯ ಉತ್ತರವನ್ನು ಧ್ಯಾನ ಮಾಡಿದರೂ ಸಹ ತಿಳಿಯಲಾರದಾದನು. ಕಾರಣ ಆತನ ಬುದ್ಧಿಯು ಕಾರ್ಯಕಾರಣವಾಗಿ ವಿಕ್ಷಿಪ್ತವಾಗಿತ್ತು.

ಜ್ಯಾಸೀ ಅಗ್ರಪೂಜೇಚಾ ಸನ್ಮಾನ । ಶ್ರೇಷ್ಠ ದೇವಾಮಾಜೀ ಮಹಿಮಾನ । ಮಹಾದೇವ ಮ್ಹಣಾವಯಾ ಕಾರಣ । ಬ್ರಹ್ಮಯಾಸೀ ಜಾಣ ಯಾ ಹೇತೂ ॥೨೭೯॥

ಬ್ರಹ್ಮದೇವನ ಏಳು ಮಾನಸ ಪುತ್ರರಲ್ಲಿ ಸನತ್‌ಕುಮಾರರು ಪ್ರಸಿದ್ಧರಾಗಿರುವರು. ಇವರು ಸತ್ಯಲೋಕದಲ್ಲಿ ಅತ್ಯಂತ ಗಹನವಾದ ಪ್ರಶ್ನೆಯನ್ನು ಕೇಳಿದರು ॥೨೭೨॥ ಯೋಗದ ಸಿದ್ಧಿಯು ಅತ್ಯಂತ ಸೂಕ್ಷ್ಮವಾಗಿರುವುದು ಮತ್ತು ಆತ್ಮಸ್ವರೂಪದ ಸ್ಥಿತಿಯನ್ನು ತಿಳಿಯುವುದು ಅತಿಶಯವಾಗಿ ಕಠಿಣವಾಗಿರುವುದು. ಅಂದಮೇಲೆ ಇದು ಹೇಗೆ ತಿಳಿಯಬೇಕು? ಇಂತಹ ಬಿಕ್ಕಟ್ಟಾದ ಪ್ರಶ್ನೆಯನ್ನು ಇವರು ತಮ್ಮ ತಂದೆಗೆ ಕೇಳಿದರು ॥೨೭೩॥

ಸನಾದಿಕರು ಹೀಗೆ ಕೇಳಿದರು; ಚಿತ್ತವು ಇದು ತನ್ನ ಸ್ವಭಾವಧರ್ಮದಂತೆ ವಿಷಯಗಳಲ್ಲಿ ಆಸಕ್ತವಾಗುವುದು. ಆದ್ದರಿಂದ ಅದು ಯಾವಾಗಲೂ ವಿಷಯಗಳಲ್ಲಿಯೇ ತಲ್ಲೀನಗೊಂಡಿರುವುದು ॥೨೭೪॥ ಅದರಂತೆ ವಿಷಯಗಳು ಒಮ್ಮೆ ಚಿತ್ತದಲ್ಲಿ ಪ್ರವೇಶ ಮಾಡಿದವೆಂದರೆ, ವಾಸನಾರೂಪದಿಂದ ಅವು ಅಂಟಿಕೊಳ್ಳುವುವು ಮತ್ತು ಅಲ್ಲಿಂದ ತಿರುಗಿ ಬರುವುದನ್ನು ಅವು ತಿಳಿದಿರುವುದಿಲ್ಲ ॥೨೭೫॥ ಫಲ ಮತ್ತು ಕಾಲ ಈ ಎರಡೂ ಇಲ್ಲದಿದ್ದರೂ ಆ ಸಮಯದ ಮಾವುಗಳು ಸಿಹಿಯಾಗಿಯೇ ಇರುವುವು. ಅದರಂತೆಯೇ ವಿಷಯಗಳು ಒಮ್ಮೆ ಚಿತ್ತದಲ್ಲಿ ಪ್ರವೇಶಿಸಿದರೆ ಸಾಕು, ಅಲ್ಲಿಂದ ಅವು ಎಂದಿಗೂ ಕದಲುವುದಿಲ್ಲ ॥೨೭೬॥ ಲಗ್ನವಾದ ಸ್ತ್ರೀಯಳು ತನ್ನ ತವರು ಮನೆಗೆ ಹೋದರೂ ಕೂಡ ಆಕೆಯು ಮನಸಾ ದೂರ ಹೋಗಲಾರಳು. ಅದರಂತೆ ವಿಷಯಗಳು ಚಿತ್ತಕ್ಕೆ ಅಂಟಿಕೊಂಡಿರುವುವು ॥೨೭೭॥ ಅದಕ್ಕಾಗಿ ಚಿತ್ತ ಮತ್ತು ವಿಷಯಗಳು ಇವುಗಳ ಪರಸ್ಪರವಾಗಿ ಪೂರ್ಣ ಬಿಡುಗಡೆಯು ಮುಮುಕ್ಷುಗಳವರಿಗೆ ಹೇಗೆ ಸಾಧಿಸುವುದು? ಈ ವಿಷಯಕ್ಕಾಗಿ ಸ್ವಾಮೀಯವರು ಒಮ್ಮೆ ಉಪಾಯ ಯೋಗವನ್ನು ಹೇಳಬೇಕು ॥೨೭೮॥

ಬ್ರಹ್ಮದೇವನಿಗೆ ಅಗ್ರಪೂಜೆಯ ಮಾನವಿರುವುದು. ಈತನ ಮಹಿಮೆಯು ಶ್ರೇಷ್ಠವಾಗಿರುವುದು. ಈ ದೇವನಿಗೆ ಮಹಾದೇವ ಎನ್ನುವುದಕ್ಕೆ ಆತನ ಈ ಮಹಿಮೆಯು ಕಾರಣವಾಗಿರುವುದು ॥೨೭೯॥

ಜೋ ಆಂಗೇ ಸ್ರಜೀ ಚರಾಚರ । ಜೋ ವೇದಾಂಚೇ ನಿಜಮಂದಿರ । ತ್ಯಾ ಬ್ರಹ್ಮಯಾಪ್ರತಿ ಅತಿಗಂಭೀರ । ಪ್ರಶ್ನ ಮಹಾಘೋರ ಪುತ್ರೀ ಕೇಲಾ ।।೨೮೦।। ತ್ಯಾ ಪ್ರಶ್ನಾಚೀ ಪ್ರಶ್ನೋತ್ತರವಿಧೀ। ಬ್ರಹ್ಮಯಾಸೀ ನ ಕಳೇ ತ್ರಿಶುದ್ಧೀ। ಕರ್ಮಜಡ ಝಾಲೀ ಬುದ್ಧೀ । ಬೋಧಕಸಿದ್ಧೀ ಸ್ಫುರೇನಾ ।।೨೮೧।। ಪ್ರಶ್ನ ಅತ್ಯಂತ ಸಖೋಲ ಪಡಿಲಾ । ತೇಣೇ ಬ್ರಹ್ಮಾ ವೇಡಾವಲಾ ಠೇಲಾ । ಕಾಂಹೀ ನ ಬೋಲವೇ ಜೇ ಬೋಲಾ । ತೋ ಚಿಂತೂ ಲಾಗಲಾ ಮಜ ತೇವ್ಹಾ ।।೨೮೨।। ಸನಕಾದಿಕಾಂಚೀ ಪ್ರಶ್ನಾವಸ್ಥಾ । ಸತ್ಯಲೋಕೀ ಸಮಸ್ತಾ ದೇಖತಾ । ನ ಕಳೇ ನ ಮ್ಹಣವೇ ಸರ್ವಥಾ। ಸಾಂಗೋ ಜಾತಾ ನವ್ಹೇ ಬೋಧ ।।೨೮೩।। ಐಸೇ ಬ್ರಹ್ಮಯಾಸೀ ದುರ್ಘಟ । ಕಾಂಹೀ ನ ಬೋಲವೇ ಸ್ಪಷ್ಟ। ಪರಮ ದೇಖೋನಿ ಸಂಕಟ । ಮೀ ಜ್ಞಾನವರಿಷ್ಠ ಚಿಂತಿಲೋ ।।೨೮೪।।

ಸ ಮಾಮಚಿಂತಯದ್‌ದೇವಃ ಪ್ರಶ್ನಪಾರಂ ತಿತೀರ್ಷಯಾ । ತಸ್ಯಾಹಂ ಹಂಸರೂಪೇಣ ಸಕಾಶಮಗಮಂ ತದಾ ।।೧೯।।

ಅರ್ಥ :- ಬ್ರಹ್ಮನು ಈ ಪ್ರಶ್ನೆಯ ಉತ್ತರವನ್ನು ಕೊಡುವುದಕ್ಕಾಗಿ ನನ್ನ ಚಿಂತನೆಯನ್ನು ಭಕ್ತಿಭಾವದಿಂದ ಮಾಡಿದನು. ಆಗ ನಾನು ಹಂಸದ ರೂಪವನ್ನು ಧರಿಸಿ ಆತನೆದುರು ಪ್ರಕಟನಾದೆನು.

ನಿರಸಾವಯಾ ಪುತ್ರಾಚೇ ಅಜ್ಞಾನ । ಆಣಿ ತರಾವಯಾ ತ್ಯಾಂಚಾ ಪ್ರಶ್ನ । ಬ್ರಹ್ಮಾ ಕರೀ ಮಾಝೇ ಚಿಂತನ । ತೇವ್ಹಾ ಮಾಝೇ ಹೀ ಮನ ಕಳವಳಲೇ ।।೨೮೫।। ಬ್ರಹ್ಮಾ ಮಾಝೇ ಪೋಟೀಚೇ ಬಾಳ । ತ್ಯಾಸೀ ಕರ್ಮಜಾಡ್ಯೇ ಆಲೇ ಪಡಳ । ತೇ ನಿರಸಾವಯಾ ತತ್ಕಾಳ । ಹಂಸ ಕೇವಳ ಮೀ ಜಾಹಲೋ ।।೨೮೬।। ಪ್ರಶ್ನ ಕೇಲಾ ಅಪರಂಪಾರ । ಜೋ ಪರಮಹಂಸಾಚೇ ಪರಮ ಸಾರ । ತ್ಯಾಚಾ ಪಾವಾವಯಾ ಪರಪಾರ । ಹಂಸರೂಪಧರ ಮೀ ಜಾಹಲೋ ।।೨೮೭।। ನಾತಳೇ ವರ್ಣವ್ಯಕ್ತಿವಿಲಾಸ । ತೋ ಮೀ ಶ್ವೇತವರ್ಣ ಸ್ವಪ್ರಕಾಶ । ಸ್ವಯೇ ಝಾಲೋ ರಾಜಹಂಸ। ಬ್ರಹ್ಮಪುತ್ರಾಂಸ ಉಪದೇಶಾವಯಾ ।।೨೮೮।। ಸೃಷ್ಟಿ ಸ್ರಜಾವಯಾಚೇ ವಿಧೀ । ವಿಧಾತಾ ಲಾಗಲಾ ತ್ರಿಶುದ್ಧೀ। ತೇಣೇ ಕರ್ಮಜಡ ಝಾಲೀ ಬುದ್ಧೀ । ನಿಜಜ್ಞಾನಸಿದ್ಧೀ ವಿಸರಲಾ ।।೨೮೯।। ಜೋ ಮ್ಹಣೇ ಮೀ ಕರ್ಮಾಧಿಕಾರೀ । ತೇವ್ಹಾಚಿ ತೋ ದೇಹಧಾರೀ । ತೋ ಪರಮಾರ್ಥಾಚೇ ನಗರೀ । ನ ಸರೇ ನಿರ್ಧಾರೀ ಬಾಹ್ಯ ಮುದ್ರಾ ।।೨೯೦।। ''ನ ಕರ್ಮಣಾ ನ ಪ್ರಜಯಾ'' ಐಸೀ ವೇದೋಕ್ತಿ । ಕರ್ಮ ನಿಷೇಧೇ ತ್ಯಾಗವಿ ಶ್ರುತೀ । ತೇಣೇ ಕರ್ಮೇ ಬ್ರಹ್ಮಪ್ರಾಪ್ತೀ । ಜೇ ಮ್ಹಣತೀ ತೇ ಅಜ್ಞಾನ ಜ್ಞಾತೇ ।।೨೯೧।।

ಯಾರು ಸ್ವತಃ ಈ ಚರಾಚರ ವಿಶ್ವವನ್ನು ಸೃಷ್ಟಿಸಿರುವರೋ, ಯಾರು ವೇದಗಳ ಕೇವಲ ತವರು ಮನೆಯಾಗಿರುವರೋ, ಅಂತಹ ಬ್ರಹ್ಮದೇವನಿಗೆ ಆತನ ವಿದ್ವಾನ ಪುತ್ರರು ಗಹನವಾದ ಪ್ರಶ್ನೆಯನ್ನು ಕೇಳಿದರು ।।೨೮೦।। ಆದರೆ ಬ್ರಹ್ಮದೇವನಿಗೆ ಈ ಪ್ರಶ್ನೆಯ ಯಥಾಯೋಗ್ಯ ಉತ್ತರವನ್ನು ಕೊಡುವುದಾಗಲಿಲ್ಲ. ಕಾರಣ ಆತನ ಬುದ್ಧಿಯು ಕರ್ಮಗಳಿಂದ ಜಡವಾಗಿತ್ತು. ಆತನಿಗೆ ಜ್ಞಾನದ ಉಪದೇಶವು ಸ್ಫುರಣವಾಗದಂತಾಯಿತು ।।೨೮೧।। ಪ್ರಶ್ನೆಯು ಮಾತ್ರ ಅತ್ಯಂತ ಗಹನವಾಗಿತ್ತು. ಇದರಿಂದ ಬ್ರಹ್ಮದೇವನು ಹುಚ್ಚನಾಗಿಬಿಟ್ಟನು. ಆತನಿಗೆ ಏನೂ ತೋಚದಾಯಿತು. ಆಗ ಆತನು ನನ್ನ ಚಿಂತನೆಯನ್ನು ಮಾಡಿದನು ।।೨೮೨।। ಸತ್ಯಲೋಕದಲ್ಲಿ ಸರ್ವರ ಸಮಕ್ಷಮದಲ್ಲಿ ಸನಕಾದಿಕರು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುವುದಾಗಲಿಲ್ಲ. ಒಂದು ವೇಳೆ ಏನಾದರೂ ಉತ್ತರಿಸಬೇಕೆಂದರೆ ಅದರಿಂದ ಬೋಧೆಯಾಗುವಂತಿದ್ದಿಲ್ಲ ।।೨೮೩।। ಹೀಗೆ ಬ್ರಹ್ಮದೇವನ ಬಿಕ್ಕಟ್ಟಾದ ಅವಸ್ಥೆಯಾಯಿತು. ಆತನಿಗೆ ಸ್ಪಷ್ಟವಾಗಿ ಏನೂ ಹೇಳಲು ಬರದಾಯಿತು. ಇಂತಹ ಮಹಾ ಸಂಕಟವನ್ನು ಕಂಡು ಜ್ಞಾನವರಿಷ್ಠನಾದ ನನ್ನನ್ನು ಚಿಂತಿಸಿದನು ।।೨೮೪।।

ಪುತ್ರರ ಅಜ್ಞಾನವು ನಷ್ಟವಾಗಬೇಕು ಮತ್ತು ಅವರ ಪ್ರಶ್ನೆಗೆ ಉತ್ತರವು ದೊರೆಯಬೇಕು, ಇದಕ್ಕಾಗಿ ಬ್ರಹ್ಮದೇವನು ನನ್ನ ಸ್ಮರಣೆಯನ್ನು ಮಾಡಲಾರಂಭಿಸಿದನು. ಆಗ ನನ್ನ ಮನವೂ ಕೂಡ ತಳಮಳಿಸಿತು ।।೨೮೫।। ಬ್ರಹ್ಮದೇವನು ನನ್ನ ಹೊಟ್ಟೆಯ ಮಗನು. ಕರ್ಮಜಾಡ್ಯದಿಂದ ಆತನ ಕಣ್ಣುಗಳಿಗೆ ಅಜ್ಞಾನದ ಪರದೆ ಬಂದಿತ್ತು. ಆದ್ದರಿಂದ ಆತನಿಗೆ ಉತ್ತರವು ಹೊಳೆಯಲಿಲ್ಲ. ಆ ಯಾವ ಅಜ್ಞಾನ ಪರದೆಯನ್ನು ದೂರು ಮಾಡುವುದಕ್ಕಾಗಿ ನಾನು ತತ್ಕಾಲದಲ್ಲಿ ಹಂಸನಾದೆನು ।।೨೮೬।। ಆತನು ಅತಿಗಹನವಾದ ಪ್ರಶ್ನೆಯನ್ನು ಮಾಡಿದ್ದನು. ಪರಮಹಂಸದ ಪರಮತತ್ವವಾಗಿರುವ ಈ ಪ್ರಶ್ನೆಯನ್ನು ದಾಟೀ ಪಾರಾಗುವುದಕ್ಕಾಗಿ ನಾನು ಹಂಸದ ರೂಪವನ್ನು ಧರಿಸಿದೆನು ।।೨೮೭।। ಯಾವುದರ ಆಕಾರವು ಮತ್ತು ವರ್ಣವು ಯಾವುದೂ ತಿಳಿಯದಂತಹ ನಾನು ಶುಭ್ರವರ್ಣ ಸ್ವಯಂಪ್ರಕಾಶವಾದ ರಾಜಹಂಸವನ್ನು ನಾನು ಸ್ವತಃ ಬ್ರಹ್ಮದೇವನಿಗೆ ಉಪದೇಶವನ್ನು ಮಾಡಲು ಆದೆನು ।।೨೮೮।। ನಿಜವಾಗಿಯೂ ಬ್ರಹ್ಮದೇವನು ಈ ಯಾವ ಸೃಷ್ಟಿಯನ್ನು ನಿರ್ಮಾಣಗೊಳಿಸುವ ಕಾರ್ಯದಲ್ಲಿ ಗುಂತಾಯಿಸಿದ್ದನು. ಆದ್ದರಿಂದ ಈ ಯಾವ ಕರ್ಮದಿಂದ ಆತನ ಬುದ್ಧಿಯು ಜಡವಾಗಿತ್ತು ಮತ್ತು ಆತನು ತನ್ನ ಜ್ಞಾನವನ್ನು ಮರೆತುಬಿಟ್ಟಿದ್ದನು ।।೨೮೯।। ನಾನು ಕರ್ಮದ ಅಧಿಕಾರಿಯಾಗಿರುವೆನು ಎಂದು ಹೀಗೆ ಯಾರು ಹೇಳುವರೋ, ಆತನು ದೇಹಧಾರಿಯಾಗುವನು. ಆತನು ಪರಮಾರ್ಥದ ನಗರದಲ್ಲಿ ಕೇವಲ ಬಾಹ್ಯ ಸ್ವರೂಪದಿಂದ ಪ್ರವೇಶ ಮಾಡಲಾರನು ।।೨೯೦।। ''ನ ಕರ್ಮಣಾನ ಪ್ರಜಯಾ'' ಅಂದರೆ ಬ್ರಹ್ಮಪ್ರಾಪ್ತಿಯು ಇದು ಕರ್ಮದಿಂದ ಎಂದಿಗೂ ಆಗುವುದಿಲ್ಲ. ಮತ್ತು ಪುತ್ರರಿಂದಲೂ ಆಗುವುದಿಲ್ಲ. ಹೀಗೆ ವೇದೋಕ್ತಿ ಇರುವುದು. ಶ್ರುತಿಯು ಕರ್ಮದ ನಿಷೇಧವನ್ನು ಮಾಡಿ ಕರ್ಮದ ತ್ಯಾಗ ಮಾಡಿಸುವುದು. ಆ ಯಾವ ಕರ್ಮದ ಯೋಗದಿಂದ ಬ್ರಹ್ಮಪ್ರಾಪ್ತಿಯಾಗುವುದೆಂದು ಹೇಳುವ ಪಂಡಿತರು ನಿಜವಾಗಿಯೂ ಅಜ್ಞಾನಿಗಳಾಗಿರುವರು ।।೨೯೧।।

ಮ್ಯಾ ಉಪದೇಶಿಲೇ ಬ್ರಹ್ಮ ಯಾಸೀ । ತೇಹೀ ಕರ್ಮಜಾಡ್ಯ ಆಲೇ ತ್ಯಾಸೀ । ಕೇವಳ ಕರ್ಮಠೇ ಕರ್ಮಠಾಸೀ । ಮುಕ್ತಿ ತಯಾಸೀ ಕೈಸೇನೀ ।।೯೨।। ಬ್ರಹ್ಮಾ ಅದೃಷ್ಟದ್ರಷ್ಟಾ ಲೋಕೀ ತಿಹೀ । ತೋ ಕರ್ಮಜಾಡ್ಯೇ ಝಾಲಾ ವಿಷಯೀ । ಇತರಾಂಚಾ ತೋ ಪಾಡ ಕಾಯೀ । ಠಕಲೇ ಯೇ ಠಾಯೀ ಸಜ್ಞಾನ ।।೯೩।। ಸಾಂಗತಾ ಪುತ್ರಾಂಚಾ ಪ್ರಶ್ನ । ಉಜಳೇಲ ಬ್ರಹ್ಮಾಚೇ ನಿಜಜ್ಞಾನ । ಐಸೇ ಸಾಧೋನಿಯಾ ವಿಂದಾನ । ಸತ್ಯಲೋಕೀ ಜಾಣ ಉತರಲೋ ।।೯೪।। ಪ್ರಶ್ನಕರ್ತೇ ಸನಕಾದಿಕ । ವಕ್ತಾ ಸತ್ಯಲೋಕನಾಯಕ । ದೋಹೀಸೀಹೀ ಪಡಲೀ ಅಟಕ । ತೇ ಕಾಳೀ ದೇಖ ಮೀ ಆಲೋ ।।೯೫।। ನಾಸೋ ನೇದಿತಾ ಸಾಚಾರ । ಹಂಸ ನಿವಡೀ ಕ್ಷೀರನೀರ । ತೈಸೇ ನಿವಡಾವಯಾ ಸಾರಾಸಾರ । ಜ್ಞಾನಚತುರ ಮೀ ರಾಜಹಂಸ ।।೯೬।। ಪೂರ್ವಪುಣ್ಯಸಂಚಯೇವೀಣ । ವಿಮಾನೇವೀಣ ಸ್ವಯೇ ಗಮನ । ಸತ್ಯಲೋಕೀ ಆಗಮನ । ಕೋಣಾಚೇಹೀ ಜಾಣ ಕದಾ ನವ್ಹೇ ।।೯೭।। ಮೀ ಪಾಪಪುಣ್ಯಾತೀತ ಪಾಹೀ । ಯಾಲಾಗೀ ಮಜ ಪಾಪ ಪುಣ್ಯ ನಾಹೀ । ಪಾಖೀ ಕಾ ಚಾಲೋನಿ ಪಾಯೀ । ತೋ ಮೀ ಸರ್ವಾ ಠಾಯೀ ಸರ್ವಗತ ।।೯೮।। ತ್ಯಾ ಸತ್ಯಲೋಕಾ ಮೀ ಅವಚಿತಾ । ಹಂಸಸ್ವರೂಪೇ ಝಾಲೋ ಯೇತಾ । ತ್ಯಾ ಮಜ ದೇಖೋನಿಯಾ ಸಮಸ್ತಾ । ಪರಮಾಶ್ಚರ್ಯತಾ ವಾಟಲೀ ।।೯೯।।

ದೃಷ್ಟ್ವಾ ಮಾಂ ತ ಉಪವ್ರಜ್ಯ ಕೃತ್ವಾ ಪಾದಾಭಿವಂದನಮ್ ।
ಬ್ರಹ್ಮಾಣಮಗ್ರತಂ ಕೃತ್ವಾ ಪ್ರಪಚ್ಛುಃ ಕೋ ಭವಾನಿತಿ ।।೭೦।।

ಅರ್ಥ :- ನನ್ನನ್ನು ನೋಡಿ ಸನಕಾದಿಕರು ಬ್ರಹ್ಮದೇವನಿಗೆ ಮುಂದ ಮಾಡಿ ಬಂದರು ಮತ್ತು ನನ್ನ ಚರಣಗಳಿಗೆ ವಂದಿಸಿ, ನೀವು ಯಾರು ಎಂದು ಸರಳವಾಗಿ ಕೇಳಿದರು.

ಪರಬ್ರಹ್ಮೈಕ ಪರಮ ಮೂರ್ತೀ । ಮಜ ಯೇತಾ ದೇಖೋನಿ ಹಂಸಸ್ಥಿತೀ । ಉಭೇ ಠಾಕೋನಿ ಸಾಮೋರೇ ಯೇತೀ । ಚರಣ ವಂದಿತೀ ಸಾಷ್ಟಾಂಗ ।।೧೦೦।। ಬ್ರಹ್ಮಸದನೀ ವೇದ ಮೂರ್ತಿಮಂತ । ಪುಣ್ಯಹೀ ಮೂರ್ತಿಮಂತ ತೇಥ । ಸತ್ಯಲೋಕೀ ಮೂರ್ತಿಮಂತ ಸತ್ಯ । ತಪಾದಿ ಸಮಸ್ತ ಮೂರ್ತಿಮಂತೇ ।।೧೦೧।। ತ್ಯಾ ಸಮಸ್ತಾ ದೇಖತಾ ಜಾಣ । ಬ್ರಹ್ಮ ಯಾನೇ ಪುಸಾವೇ ತೂ ಕೋಣ । ಪುಸಲ್ಯಾ ಯೇಈಲ ನೇಣತೇಪಣ । ಯಾಲಾಗೀ ಮೌನ ಧರೋನಿ ಠೇಲಾ ।।೧೦೨।। ಬ್ರಹ್ಮಾ ಪುಢೇ ಕರೂನಿ ಜಾಣ । ಸನಕಾದಿಕೀ ಆಪಣ । ಮಜ ಕೇಲಾ ಗಾ ತಿಂಹೀ ಪ್ರಶ್ನ । ತುಮ್ಹೀ ಕೋಣ ಕೋಠೀಲ ।।೧೦೩।।

ನಾನು ಬ್ರಹ್ಮದೇವನಿಗೆ ಉಪದೇಶವನ್ನು ಮಾಡಿದ್ದೆನು. ಆದರೆ ಆತನಿಗೂ ಕೂಡ ಕರ್ಮಠತನದಿಂದ ಆಗುವ ಬುದ್ಧಿಮಾಂದ್ಯವು ಬಂದಿರಲು, ಈಗ ಕೇವಲ ಕರ್ಮಗಳನ್ನು ಮಾಡುವ ಕರ್ಮಠರಿಗೆ ಮುಕ್ತಿಯು ಹೇಗೆ ದೊರಕೀತು? ।।೯೨।। ಬ್ರಹ್ಮನು ತ್ರಿಭುವನದಲ್ಲಿನ ಸರ್ವರ ಅದೃಷ್ಟವನ್ನು ಬಲ್ಲವನಾಗಿರುವನು. ಹೀಗಿದ್ದರೂ ಕೂಡ ಆತನು ಕರ್ಮಜಾಡ್ಯದಿಂದ ವಿಷಯೀಯಾದನು. ಅಂದ ಮೇಲೆ ಇತರರ ಯಾವ ಪಾಡು? ಇದರಲ್ಲಿ ಮಹಾ ಮಹಾ ಜ್ಞಾನಿಗಳೂ ಕೂಡ ಮೋಸಹೋಗಿರುವರು ।।೯೩।। ಪುತ್ರರ ಪ್ರಶ್ನೆಗೆ ಉತ್ತರವನ್ನು ಕೊಡುವ ನಿಮಿತ್ತದಿಂದ ಬ್ರಹ್ಮದೇವನ ಜ್ಞಾನಕ್ಕೂ ಕೂಡ ಪ್ರಕಾಶ ಲಭಿಸೀತೆಂಬ ಈ ಸಂಧಿಯನ್ನು ಸಾಧಿಸಿ ನಾನು ಸತ್ಯ ಲೋಕಕ್ಕೆ ಹೋಗಿ ಮುಟ್ಟಿಕೊಂಡೆನು ।।೯೪।। ಪ್ರಶ್ನೆಯನ್ನು ಕೇಳುವವರು ಸನಕಾದಿಕರು. ಮತ್ತು ಉತ್ತರವನ್ನು ಕೊಡುವವನು ಬ್ರಹ್ಮದೇವನು. ಈ ಈರ್ವರೂ ಕುಂಠಿತರಾಗಿ ಸಂಕಟದಲ್ಲಿ ಬಿದ್ದ ಸಮಯದಲ್ಲಿ ನಾನಲ್ಲಿ ಪ್ರಕಟನಾದೆನು ।।೯೫।। ಹಂಸವು ಯಾವ ಪ್ರಕಾರವಾಗಿ ಹಾಲನ್ನು ಕೆಡಿಸದೇ ಹಾಲಿನಲ್ಲಿಯ ನೀರನ್ನು ಬೇರ್ಪಡಿಸುತ್ತದೆಯೋ, ಅದರಂತೆ ಸಾರ ಯಾವುದು ಮತ್ತು ಅಸಾರ ಯಾವುದು ಇದನ್ನು ತಿಳಿಸಿ ಹೇಳುವ ಜ್ಞಾನದಲ್ಲಿ ಚತುರನಾಗಿರುವ ನಾನು ರಾಜಹಂಸನಾಗಿರುವೆನು. ಚಿತ್ತ ಮತ್ತು ವಿಷಯಗಳು ಇವು ಪರಸ್ಪರರಲ್ಲಿ ಒಂದುಗೂಡಿರುವುದರಿಂದ ಅವುಗಳನ್ನು ಬೇರ್ಪಡಿಸುವುದಕ್ಕಾಗಿ ನಾನು ಹಂಸರೂಪವನ್ನು ಧರಿಸಿದೆನು ।।೯೬।। ಪೂರ್ವಜನ್ಮದ ಪುಣ್ಯದ ಸಂಗ್ರಹವಿರದೇ ಅಥವಾ ದಿವ್ಯ ವಿಮಾನವಿಲ್ಲದೇ ಸತ್ಯಲೋಕದಲ್ಲಿ ಯಾರಿಗೂ ಪ್ರವೇಶ ಮಾಡಲಾಗುವುದಿಲ್ಲ ।।೯೭।। ಆದರೆ ನಾನು ಪಾಪಪುಣ್ಯಗಳನ್ನು ದಾಟಿದವನಾಗಿರುವೆನು. ಹೀಗಿರುವ ನಾನು ರೆಕ್ಕೆಗಳಿಂದ ಅಥವಾ ಕಾಲ್ನಡಿಗೆಯಿಂದ ನಡೆಯುತ್ತ ಎಲ್ಲಿ ಬೇಕಾದಲ್ಲಿ ಬೇಕಾದಾಗ್ಗೆ ಹೋಗಬಲ್ಲೆನು ।।೯೮।। ಆ ಯಾವ ಸತ್ಯಲೋಕದಲ್ಲಿ ನಾನು ಆಕಸ್ಮಿಕವಾಗಿ ಬಂದೆನು. ನನ್ನನ್ನು ನೋಡುತ್ತಲೇ ಅಲ್ಲಿಯ ಎಲ್ಲ ಜನರು ಪರಮಾಶ್ಚರ್ಯಪಟ್ಟರು ।।೯೯।।

ಕೇವಲ ಪರಬ್ರಹ್ಮಸ್ವರೂಪವಾಗಿರುವ ನನ್ನ ಶ್ರೇಷ್ಠಮೂರ್ತಿಯು, ಹೀಗಿರುವ ನಾನು ಹಂಸರೂಪದಿಂದ ಬರುತ್ತಿರುವುದನ್ನು ಕಂಡು ಸರ್ವದೇವತೆಯವರು ಎದ್ದು ಎದುರಿಗೆ ಬಂದು ಸ್ವಾಗತಿಸಿ, ನನ್ನ ಚರಣಗಳಿಗೆ ವಂದಿಸಿದರು ।।೧೦೦।। ಬ್ರಹ್ಮಲೋಕದಲ್ಲಿ ವೇದವು ಮತ್ತು ಪುಣ್ಯ ಇವು ಮೂರ್ತಿಮಂತವಾಗಿ ಇರುವುವು. ಈ ಯಾವ ಸತ್ಯಲೋಕದಲ್ಲಿ ಸತ್ಯ, ತಪ ಇತ್ಯಾದಿ ಮೂರ್ತಿಮಂತವಾಗಿ ಇರುವುವು ।।೧೦೧।। ಅಲ್ಲಿ ನೆರೆದಿರುವ ಸರ್ವರ ಎದುರಿನಲ್ಲಿ ನೀನು ಯಾರು ಇರುವೆ ಎಂದು ಹೀಗೆ ಒಂದು ವೇಳೆ ಬ್ರಹ್ಮದೇವನು ನನಗೆ ಪ್ರಶ್ನೆಯನ್ನು ಇಟ್ಟಿದ್ದರೆ ಆತನಿಗೆ ಅಜ್ಞಾನತನವು ಬರುತ್ತಿತ್ತು. ಆದ್ದರಿಂದ ಆತನು ಮೌನವನ್ನು ಧರಿಸಿದನು ।।೧೦೨।। ಆಗ ಬ್ರಹ್ಮದೇವನಿಗೆ ಮುಂದುಮಾಡಿ ಸನಕಾದಿಕರು ಹೀಗೆ ಪ್ರಶ್ನೆಯನ್ನು ಮಾಡಿದರು, ನೀವು ಯಾರಾಗಿರುವಿರಿ? ಎಲ್ಲಿಂದ ಬಂದಿರುವಿರಿ? ।।೧೦೩।।

ಇತ್ಯಹಂ ಮುನಿಭಿಃ ಪೃಷ್ಟಸ್ತತ್ತ್ವಜಿಜ್ಞಾಸುಭಿಸ್ತದಾ । ಯದವೋಚಮಹಂ ತೇಭ್ಯಸ್ತದುದ್ಧವ ನಿಬೋಧ ಮೇ ।೨೧॥

ಅರ್ಥ :- ಪ್ರಿಯ ಉದ್ಧವಾ, ಸನಕಾದಿಕರು ಪರಮಾರ್ಥ ತತ್ತ್ವದ ಜಿಜ್ಞಾಸುಗಳಾಗಿದ್ದರು. ಆದ್ದರಿಂದ ಅವರು ಕೇಳಿದ ನಂತರ ನಾನೇನು ಹೇಳಿದೆನೋ ಅದನ್ನು ನೀನು ಈಗ ಕೇಳು.

ಬ್ರಹ್ಮಯಾಸೀ ಪುಸಿಲಾ ಜೋ ಪ್ರಶ್ನ । ತ್ಯಾಚಾ ತತ್ತ್ವಾರ್ಥ ಜಾಣಾವಯಾ ಜಾಣ । ಮಜ ಪುಶಿಲೇ ತಿಂಹೀ ತೂ ಕೋಣ । ಅತಿವಿಚಕ್ಷಣ ಜಿಜ್ಞಾಸೂ ।೩೦೪॥ ತ್ಯಾಸೀ ಸ್ಥೂಳ ಲಿಂಗ ಕಾರಣ । ಯಾವೇಗಳೀ ವಸ್ತು ಚಿದ್ಘನ । ಸಾಂಗಾವಯಾ ಪ್ರಶ್ನಖಂಡಣ । ತೀ ಶ್ಲೋಕೀ ಜಾಣ ಮ್ಯಾ ಕೇಲೇ ।೩೦೫॥ ಕರೋನಿಯಾ ಪ್ರಶ್ನಖಂಡಣ । ನಿತ್ಯಾನಿತ್ಯ ವಿವೇಕಜ್ಞಾನ । ತ್ಯಾಂಸೀ ಮ್ಯಾ ಸಾಂಗೀತಲೇ ಜಾಣ । ತೇಚಿ ನಿರೂಪಣ ತೂ ಐಕ ।೩೦೬॥ ಸನಕಾದಿಕಾಸಮಾನ । ಉದ್ಧವಾ ತುಜ ಮೀ ಮಾನೀ ಜಾಣ । ಯಾಲಾಗೀ ತ್ಯಾಂಚೇ ಜ್ಞಾನಕಥನ । ಐಕ ಸಾಂಗೇನ ಮ್ಹಣತಸೇ ।೩೦೭॥ ತೇ ಅತಿಶ್ರೇಷ್ಠ ಜುನಾಟ ಜ್ಞಾನ । ಉದ್ಧವಾ ಪರಿಸೇ ಸಾವಧಾನ । ಐಸೇ ಐಕೋನಿಯಾ ವಚನ । ಯೇರೇ ಮನಾಚೇ ಕಾನಪಸರಲೇ ।೩೦೮॥ ದೇಹದ್ವಯ ಸಾಂಡೋನಿ ಮಾಗೇ । ಉದ್ಧವ ಶ್ರವಣ ಝಾಲಾ ಸರ್ವಾಂಗೇ । ಯಾಲಾಗೀ ಸ್ವಯೇ ಶ್ರೀರಂಗೇ । ಗುಹ್ಯ ಜ್ಞಾನ ಸ್ವಾಂಗೇ ಸಾಂಗೀತಲೇ ।೩೦೯॥ ದೇವಾಲಯೀ ಲಾಗೇ ರತ್ನಖಾಣೀ । ತ್ಯಾಮಾಜೀ ಸಾಂಪಡಲಾ ಸ್ಪರ್ಶಮಣೀ । ಅಮೃತ ಸ್ರವೇ ತ್ಯಾಪಾಸೋನೀ । ತೈಸಾ ಸಭಾಗ್ಯಪಣೇ ಉದ್ಧವೂ ।೩೧೦॥ ಸಾಂಗತಾ ಶ್ರೀಮಹಾಭಾಗವತಾ । ಶ್ರೀಕೃಷ್ಣಾಸಾರಿಖಾ ವಕ್ತಾ । ತ್ಯಾಹೀಮಾಜೀ ಹಂಸಗೀತಕಥಾ । ಆದರೇ ಸಾಂಗತಾ ಹರಿ ಝಾಲಾ ।೩೧೧॥ ಸನಕಾದಿಕಾಂಚೇ ಜೇ ಪ್ರಾಪ್ತೀ । ತೇ ದಾಟೂನಿ ಉದ್ಧವಾಚೇ ಹಾತೀ । ಸ್ವಯೇ ದೇತಸೇ ಶ್ರೀಪತೀ । ತ್ಯಾಚೇ ಭಾಗ್ಯ ಕಿತೀ ವರ್ಣಾವೇ ।೩೧೨॥ ಬ್ರಹ್ಮರೂಪ ಸ್ವಯೇ ವಕ್ತಾ । ತೋಹೀ ಉಪದೇಶೀ ಬ್ರಹ್ಮಕಥಾ । ಗುರು ಬ್ರಹ್ಮಚಿ ಸ್ವಭಾವತಾ । ಹೇ ಸಭಾಗ್ಯತಾ ಉದ್ಧವೀ ।೩೧೩॥ ಯಾಲಾಗೀ ನಿಜಭಾಗ್ಯೇ ಭಾಗ್ಯವಂತೂ । ಜಗೀ ಉದ್ಧವಚಿ ಅತಿವಿಖ್ಯಾತೂ । ಜ್ಯಾಲಾಗೀ ಸ್ವಯೇ ಜಗನ್ನಾಥೂ । ಜ್ಞಾನ ಸಮರ್ಥೂ ತುಷ್ಟಲಾ ।೩೧೪॥

ಹಂಸ ಉವಾಚ :-

ವಸ್ತುನೋ ಯದ್ಯನಾನಾತ್ವ ಆತ್ಮನಃ ಪ್ರಶ್ನ ಈದೃಶಃ । ಕಥಂ ಘಟೇತ ವೋ ವಿಪ್ರಾ ವಕ್ತುರ್ವಾ ಮೇ ಕ ಆಶ್ರಯಃ ।೨೨॥

ಅರ್ಥ :- ಹಂಸವು ನುಡಿಯಿತು ; ಪ್ರಿಯ ವಿಪ್ರರೇ, ಪರಮಾರ್ಥ ರೂಪ ವಸ್ತು ನಾನಾ ತತ್ತ್ವಗಳಿಂದ ಸರ್ವಥಾ ರಹಿತವಾಗಿರುವುದು. ಅಂದಮೇಲೆ ಆತ್ಮದ ಸಂಬಂಧದಿಂದ ನಿಮ್ಮ ಇಂತಹ ಪ್ರಶ್ನೆಯು ಹೇಗೆ ಯುಕ್ತಿಸಂಗತಿಯಾದೀತು? ಅಥವಾ ನಾನು ಉತ್ತರ ಕೊಡಲು ಹೇಳಹತ್ತಿದರೆ ಯಾವ ಯಾವ ಜಾತೀ ಮತ್ತು ಗುಣ ಕ್ರಿಯೆಗಳ ಆಶ್ರಯವನ್ನು ಪಡೆದು ಉತ್ತರಿಸಲಿ ?

ಇವರು ಬ್ರಹ್ಮದೇವನಿಗೆ ಯಾವ ಪ್ರಶ್ನೆಯನ್ನು ಮಾಡಿದ್ದರೋ, ಅದರ ತಾತ್ಪರ್ಯವನ್ನು ತಿಳಿದುಕೊಳ್ಳುವುದಕ್ಕಾಗಿ ಆ ಯಾವ ಚತುರ ಜಿಜ್ಞಾಸುಗಳವರು ನೀವು ಯಾರು ಎಂಬ ಪ್ರಶ್ನೆಯನ್ನು ಮಾಡಿದರು ।೩೦೪॥ ಕೂಡಲೇ ನಾನು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಿಂದ ಚಿತ್‌ಘನ ಪರಮಾತ್ಮನು ಭಿನ್ನನಾಗಿರುವನೆಂಬುದನ್ನು ಹೇಳುವುದಕ್ಕಾಗಿಯೇ, ಮುಂದಿನ ಮೂರು ಶ್ಲೋಕಗಳಿಂದ ಅವರ ಪ್ರಶ್ನೆಯ ಖಂಡನೆಯನ್ನು ಮಾಡಿದೆನು ।೩೦೫॥ ಅವರ ಪ್ರಶ್ನೆಯ ಖಂಡನೆಯನ್ನು ಮಾಡಿ ನಿತ್ಯಾನಿತ್ಯ ವಿವೇಕದ ಜ್ಞಾನವನ್ನು ನಾನು ಅವರಿಗೆ ಹೇಳಿದೆನು. ಅದೇ ನಿರೂಪಣೆಯನ್ನು ನೀನು ಕೇಳು ।೩೦೬॥ ಹೇ ಉದ್ಧವಾ, ನಾನು ನಿನಗೆ ಸನಕಾದಿಕರಂತೆಯೇ ತಿಳಿದಿರುವೆನು. ಇದನ್ನು ನೀನು ಲಕ್ಷದಲ್ಲಿಡು. ಅವರಿಗೆ ಯಾವ ಜ್ಞಾನವನ್ನು ಹೇಳಿರುವೆನೋ, ಅದನ್ನು ನಿನಗೂ ಕೂಡ ಹೇಳುವೆನು. ಅದಕ್ಕಾಗಿ ನೀನು ನೀಟಾಗಿ ಕೇಳು ।೩೦೭॥ ಹೇ ಉದ್ಧವನೇ, ಆ ಜ್ಞಾನವು ಅತ್ಯಂತ ಪುರಾತನವಾಗಿರುವುದು, ಶ್ರೇಷ್ಠವಾಗಿರುವುದು. ಆದ್ದರಿಂದ ನೀನು ಏಕಾಗ್ರಚಿತ್ತದಿಂದ ಕೇಳು. ಶ್ರೀಕೃಷ್ಣನ ಈ ಶಬ್ದವನ್ನು ಕೇಳುತ್ತಲೇ ಉದ್ಧವನು ತನ್ನ ಮನದ ಕಿವಿಗಳನ್ನು ಪೂರ್ಣ ತೆರೆದನು ।೩೦೮॥ ಸ್ಥೂಲದೇಹ ಮತ್ತು ಸೂಕ್ಷ್ಮದೇಹ ಈ ಎರಡರ ಭಾನವನ್ನು ಮರೆತು ಸರ್ವಾಂಗದಿಂದ ಶ್ರವಣೇಂದ್ರಿಯನಾದನು. ಆಗ ಶ್ರೀಕೃಷ್ಣನು ಸ್ವತಃ ಸ್ವಮುಖದಿಂದ ಗುಹ್ಯ ಜ್ಞಾನವನ್ನು ಹೇಳಿದನು ।೩೦೯॥ ದೇವಾಲಯದಲ್ಲಿ ರತ್ನದ ಖಣಿಯು ಸಿಕ್ಕರೆ, ಮತ್ತು ಅದರಲ್ಲಿ ಪರೀಸಮಣಿಯು ದೊರೆತರೆ, ಆ ಪರೀಸಮಣಿಯಿಂದ ಅಮೃತವು ಸ್ರವಿಸಿದರೆ ಹೇಗೋ, ಅದರಂತೆ ಉದ್ಧವನಿಗೆ ಮಹಾ ಭಾಗ್ಯವು ಪ್ರಾಪ್ತವಾಗಿತ್ತು ।೩೧೦॥ ಶ್ರೀಮದ್ಭಾಗವತವನ್ನು ಹೇಳುವಾತನು ಶ್ರೀಕೃಷ್ಣನಂತಹ ಮಹಾನ ವಕ್ತಾ ಮತ್ತು ಅದರಲ್ಲಿ ಹಂಸಗೀತ ಕಥೆಯನ್ನು ಶ್ರೀಹರಿಯು ಬಹಳ ಪ್ರೇಮದಿಂದ ಹೇಳಹತ್ತಿದನು ।೩೧೧॥ ಸನಕಾದಿಕರಿಗೆ ಯಾವುದು ಪ್ರಾಪ್ತಿಯಾಯಿತೋ, ಅದೇ ಪ್ರಾಪ್ತಿಯನ್ನು ಶ್ರೀಕೃಷ್ಣನು ಸ್ವತಃ ಉದ್ಧವನ ಕೈಯಲ್ಲಿ ಕೊಡುತ್ತಿರಲು, ಆಗ ಉದ್ಧವನ ಭಾಗ್ಯವನ್ನು ಹೇಗೆ ವರ್ಣಿಸಬೇಕು? ।೩೧೨॥ ವಕ್ತಾನು ಸ್ವತಃ ಬ್ರಹ್ಮಸ್ವರೂಪನು, ಆತನೇ ಬ್ರಹ್ಮಕಥೆಯ ಉಪದೇಶವನ್ನು ಮಾಡುವಾತನಾಗಿರುವನು. ಅಂದ ಮೇಲೆ ಸಹಜವಾಗಿಯೇ ಪರಬ್ರಹ್ಮ ಗುರುವಾದನು. ಇಷ್ಟೊಂದು ಉದ್ಧವನ ಭಾಗ್ಯವಾಗಿರುವುದು ! ।೩೧೩॥ ಆತ್ಮ ಭಾಗ್ಯದಿಂದ ಭಾಗ್ಯವಂತನು ಮತ್ತು ಜಗತ್ತಿನಲ್ಲಿ ಅತ್ಯಂತ ಪ್ರಸಿದ್ಧನು. ಹೀಗೆ ಒಬ್ಬ ಉದ್ಧವನೇ ಆಗಿರುವನು. ಈತನಿಗಾಗಿ ಸ್ವತಃ ಜ್ಞಾನಸಮರ್ಥನಾಗಿರುವ ಜಗನ್ನಾಥನು ಪ್ರಸನ್ನನಾದನು ।೩೧೪॥

ಪರಮಾತ್ಮಾ ಅವಘಾ ಏಕ । ತೇಥ "ಮೀ ತೂ" ಹೇ ನ ರಿಘೇ ದೇಖ । "ತೂ ಕೋಣ" ಹೇ ಜೇ ವಾಚಿಕ । ವೃಥಾ ಶಾಬ್ದಿಕ ವಾಚಾಳೇ ।೩೧೫॥ ತುಮ್ಹಿ ಕೇಲಾ ಜೋ ಪ್ರಶ್ನ । ತ್ಯಾಸಿ ದ್ಯಾವಯಾ ಪ್ರತಿವಚನ । ವಕ್ತ್ಯಾಸೀ ಆಶ್ರಯೋ ನಾಹೀ ಜಾಣ । ಮೀತೂಪಣ ದಿಸೇನಾ ।೩೧೬॥ ತುಮ್ಹಿ ಪುಸಿಲೇ ನೇಣೋನ । ಮ್ಯಾ ಕಾಯ ಸಾಂಗಾವೇ ಜಾಣೋನ । ಮೂಳೀ ನಾಹೀ ಮೀ ತೂಪಣ । ಪುಶಿಲಾ ಪ್ರಶ್ನ ತೋ ಮಿಥ್ಯಾ ।೩೧೭॥ ನಾಮ ರೂಪವರ್ಣವ್ಯಕ್ತೀ । ನಾಹೀ ಸ್ವಜಾತಿವಿಜಾತೀ । ವಿಪ್ರಹೋ ತುಮಚೀ ವಚನೋಕ್ತೀ । ನ ಘಡೇ ನಿಶ್ಚಿತೀ ಸತ್ಯತ್ವೇ ।೩೧೮॥ ಚಾರೀ ಪುರುಷಾರ್ಥ ಪೂರ್ಣ ಕರಿತೀ । ಹೇ ವಿಪ್ರನಾಮಾಚೀ ಪರಮಖ್ಯಾತೀ । ತ್ಯಾ ತುಮ್ಹಾ ಸಜ್ಞಾನಾಚೀ ಪ್ರಶ್ನೋಕ್ತೀ । ನ ಘಡೇ ನಿಶ್ಚಿತೀ ವಿಪ್ರ, ಹೋ ।೩೧೯॥ ಅಸಾವೇ ಜರೀ ಬಹುಪಣ । ತರೀ ಪುಸಣೇ ಘಡೇ ತೂ ಕೋಣ । ಆತ್ಮಾಚೇ ಠಾಯೀ ಐಸಾ ಪ್ರಶ್ನ । ನ ಘಡೇ ಜಾಣ ಸರ್ವಥಾ ।೩೨೦॥ ಪ್ರಶ್ನ ನ ಘಡೇ ಆತ್ಮ್ಯಾಚ್ಯಾ ಠಾಯೀ । ಜರೀ ಮ್ಹಣಾಲ ದೇಹವಿಷಯೀ । ತೇಹೀ ನ ಘಡೇ ಗಾ ಪಾಹೀ । ತೋ ದೇಹಾಚೇ ಠಾಯೀ ಯೋಜೇನಾ ।೩೨೧॥

ಪಂಚಾತ್ಮಕೇಷು ಭೂತೇಷು ಸಮಾನೇಷು ಚ ವಸ್ತುತಃ । ಕೋ ಭವಾನಿತಿ ವಃ ಪ್ರಶ್ನೋ ವಾಚಾರಂಭೋ ಹ್ಯನರ್ಥಕಃ ।೬೩॥

ಅರ್ಥ :- ದೇವತಾ, ಮನುಷ್ಯ, ಪಶುಪಕ್ಷೀ ಇತ್ಯಾದಿ ಸರ್ವ ಶರೀರಗಳು ಪಂಚಮಹಾಭೂತ್ಮಕವಾಗಿರುವುದರಿಂದ ಅವು ಅಭಿನ್ನವಾಗಿರುವುವು. ಪರಮಾರ್ಥರೂಪದಿಂದಲೂ ಸಹ ಅವು ಅಭಿನ್ನವಾಗಿರುವುವು. ಇಂತಹ ಪರಿಸ್ಥಿತಿಯಲ್ಲಿ ನೀವು ಯಾರು ಎನ್ನುವುದು ನಿಮ್ಮ ಕೇವಲ ವಾಣಿಯ ವ್ಯವಹಾರವಾಗಿರುವುದು. ಇದು ವಿಚಾರಪೂರ್ವಕವಿಲ್ಲದ್ದಕ್ಕೆ ನಿರರ್ಥಕವಾಗಿರುವುದು.

ಆದೀ ಬ್ರಹ್ಮಾ ಅಂತೀಮಶಕ । ದೇಹ ತಿತುಕಾ ಪಾಂಚಭೌತಿಕ । ತೇಥ ತೂ ಕೋಣ ಮ್ಹಣಾವಯಾ ದೇಖ । ವೇಗಳೀಕ ದಿಸೇನಾ ।೩೨೨॥ ಕಟಕ ಕುಂಡಲೇ ಮುಕುಟ ಮಾಳಾ । ಕರಮುದ್ರಿಕಾ ಕಟಿಮೇಖಳಾ । ಅಲಂಕಾರ ಪಾಹಾತಾ ಡೋಳಾ । ಸುವರ್ಣವೇಗಳಾ ಅಂತು ನಾಹೀ ।೩೨೩॥ ಕಾ ಘಡಾ ಗಾಡಗೇ ವೇಳಣೇ । ಪರಳ ರಾಂಜಣ ಮಾಥಣೇ । ಹೇ ಮೃತ್ತಿಕೇವಾಂಚೂನೀ । ಆನ ಕಾಂಹೀ ಅಸೇನಾ ।೩೨೪॥ ತೇವೀ ಸರ್ವ ದೇಹೀ ದೇಹತ್ವೇ ಜಾಣ । ಪಾಂಚಭೌತಿಕ ಸಮಸಮಾನ । ತೇಥ ಮ್ಹಣಾವಯಾ ತೂ ಕೋಣ । ವೇಗಳೇಪಣ ಅಸೇನಾ ।೩೨೫॥ ವಸ್ತು ವಸ್ತುತ್ವೇ ಸಮಸಮಾನ । ಭೂತೇ ಭೂತತ್ವೇ ಸಮಾನ ಜಾಣ । ತೇಥ ಪ್ರಶ್ನೋಕ್ತಿ ವಾಚಾರಂಭಣ । "ತೂ ಕೋಣ" ಹೇ ಅನರ್ಥೂ ।೩೨೬॥

ಪರಮಾತ್ಮನು ಸರ್ವತ್ರವೂ ಒಬ್ಬನೇ ಇರುವನು. ಅದರಲ್ಲಿ ನಾನು ಮತ್ತು ನೀನು ಇವುಗಳ ಪ್ರವೇಶವಾಗುವುದಿಲ್ಲ. ಆದ್ದರಿಂದ ನೀನು ಯಾರು ಎಂಬ ಈ ಭಾಷಣವು ವ್ಯರ್ಥವಾದ ಶಬ್ದಗಳ ಬಡಬಡಿಕೆಯಾಗಿರುವುದು ।೩೧೫॥ ನೀವು ಯಾವ ಪ್ರಶ್ನೆಯನ್ನು ಮಾಡಿರುವಿರೋ, ಅದರ ಉತ್ತರವನ್ನು ಕೊಡಲು ವಕ್ತಾನಿಗೆ ಯಾವ ಆಧಾರವೇ ಇರುವುದಿಲ್ಲ. ಕಾರಣ ಆತನಿಗೆ ನಾನು-ನೀನು ಎಂಬುವುದು ಏನೂ ಕಾಣುವುದೇ ಇಲ್ಲ ।೩೧೬॥ ನೀವು ಏನೂ ತಿಳಿಯದೇ ವಿಚಾರಿಸಿದಿರಿ. ಆದರೆ ಇದನ್ನು ನಾನು ತಿಳಿಯುತ್ತಿದ್ದರೂ ಅದರ ಉತ್ತರವನ್ನು ನಿಮಗೆ ಏನೆಂದು ಕೊಡಲಿ? ನಾನು-ನೀನು ಎಂಬುದು ಇಲ್ಲವೇ ಇಲ್ಲ. ನೀವು ಕೇಳಿದ ಪ್ರಶ್ನೆಯೇ ಮಿಥ್ಯೆಯಾಗಿರುವುದು ।೩೧೭॥ ನಿಜವಾಗಿಯೂ ನಾಮ, ರೂಪ, ವರ್ಣ, ವ್ಯಕ್ತಿ ಇವು ಯಾವುವೂ ಇರುವುದಿಲ್ಲ. ನಮ್ಮ ಜಾತೀ, ಬೇರೆ ಜಾತೀ ಹೀಗೆ ಏನೂ ಇರುವುದಿಲ್ಲ. ಆದ ಕಾರಣ ಹೇ ವಿಪ್ರರೇ, ನಿಮ್ಮ ಪ್ರಶ್ನೆಯು ನಿಜವಾಗಲು ಶಕ್ಯವಿಲ್ಲ ।೩೧೮॥ ನಾಲ್ಕೂ ಪುರುಷಾರ್ಥಗಳನ್ನು ಪೂರ್ಣ ಮಾಡುವವರು ವಿಪ್ರರು ಎಂಬ ನಾಮದ ದೊಡ್ಡ ಖ್ಯಾತಿವಿರುವುದು. ಆದರೆ ಹೇ ವಿಪ್ರರೇ, ಹೀಗಿರುವ ನಿಮಗೆ ನಿಜವಾಗಿಯೂ ಜ್ಞಾನದ ಪ್ರಶ್ನೆಯೇ ಉಪಸ್ಥಿತವಾಗಲಾರದು ।೩೧೯॥ ಅನೇಕತ್ವವು ಇದ್ದರೆ ಮಾತ್ರ ಅಲ್ಲಿ "ನೀನು ಯಾರು" ಎಂದು ಕೇಳಲು ಸಂಭವಿಸುವುದು. ಆತ್ಮದ ವಿಷಯದಲ್ಲಿ ಇಂತಹ ಪ್ರಶ್ನೆಯನ್ನು ಮಾಡಲು ಬರುವುದೇ ಇಲ್ಲ ।೩೨೦॥ ಆತ್ಮ ವಿಷಯದಲ್ಲಿ ಒಂದು ವೇಳೆ ಪ್ರಶ್ನೆಯು ಸಂಭವಿಸದಿದ್ದರೆ ಅದು ದೇಹ ವಿಷಯಕ್ಕಾದರೂ ಸಂಭವಿಸಬಹುದಲ್ಲ? ಹೀಗೆ ನೀವು ಹೇಳಬಹುದು. ಆದರೆ ಅದೂ ಕೂಡ ಯೋಗ್ಯವಲ್ಲ. ಕಾರಣ, ದೇಹಕ್ಕೆ ಈ ಪ್ರಶ್ನೆಯು ಸಮಂಜಸವಾಗುವುದಿಲ್ಲ ।೩೨೧॥

ಬ್ರಹ್ಮದೇವನಿಂದ ಹಿಡಿದು ಅತಿಸೂಕ್ಷ್ಮ ಜಂತುವರೆಗೆ ಎಷ್ಟೆಷ್ಟು ಶರೀರಗಳಿರುವುವೋ ಅವೆಲ್ಲವೂ ಪಂಚಮಹಾಭೂತಗಳಿಂದ ತಯಾರಿಸಲ್ಪಟ್ಟದ್ದಾಗಿರುವುವು. ಅದರಲ್ಲಿ ನೀನು ಯಾರು ಎಂದು ಹೀಗೆ ಕೇಳಲು ಅನ್ಯ ಸ್ಥಳಾವಕಾಶವೇ ಇಲ್ಲ ।೩೨೨॥ ಕೈಗಳಲ್ಲಿನ ಕಂಕಣ, ಬಳೆ, ಕಿವಿಗಳಲ್ಲಿನ ಕುಂಡಲಗಳು, ಮಸ್ತಕ ಮೇಲಿನ ಕಿರೀಟ, ಕೊರಳೊಳಗಿನ ಸರ, ಬೆರಳಿನಲ್ಲಿನ ಉಂಗುರಗಳು ಮತ್ತು ನಡುವಿನಲ್ಲಿಯ ಪಟ್ಟ ಇತ್ಯಾದಿ ಸರ್ವ ಅಲಂಕಾರಗಳನ್ನು ವಿಚಾರಿಸಿ ನೋಡಲು, ಅವುಗಳಲ್ಲಿ ಸುವರ್ಣದ ಹೊರತಾಗಿ ಬೇರೆ ಯಾವ ಅಂಶವೂ ಕಾಣುವುದಿಲ್ಲ ।೩೨೩॥ ಅಥವಾ ಕೊಡ, ಮಡಿಕೆ, ಡೇರೆ, ಹರವೀ, ಕುಡಕಿಬಟ್ಟಲು, ದೊಡ್ಡ ಪಾತ್ರೆ ಇವುಗಳನ್ನು ವಿಚಾರಿಸಿ ನೋಡಲು, ಅವುಗಳಲ್ಲಿ ಮಣ್ಣಿನ ಹೊರತಾಗಿ ಬೇರೆ ಯಾವುದೂ ಇರುವುದಿಲ್ಲ ।೩೨೪॥ ಅದರಂತೆ ಎಲ್ಲ ದೇಹಗಳಲ್ಲಿ ಪಂಚಭೂತಗಳು ದೇಹತ್ವದಿಂದ ಸಮಸಮಾನ ರೂಪದಿಂದ ಇರುವುವು. ಅದರಲ್ಲಿ ನೀನು ಯಾರು ಎಂದು ಹೀಗೆ ಕೇಳುವವರು ಭಿನ್ನರಾಗಿ ಇರುವುದೇ ಇಲ್ಲ ।೩೨೫॥ ಬ್ರಹ್ಮವು ಇದು ಬ್ರಹ್ಮತ್ವದಿಂದಸಮಸಮಾನವಾಗಿರುವುದು. ಮತ್ತು ಭೂತಗಳು ಭೂತತ್ವದಿಂದ ಸಮಸಮಾನವಾಗಿರುವುವು. ಅಂದಮೇಲೆ ಅಲ್ಲಿ ನೀನು ಯಾರು ಎಂದು ಹೀಗೆ ಕೇಳುವುದು ಅನರ್ಥವಾಗಿದೆ ಎಂದು ತಿಳಿಯಬೇಕು ।೩೨೬॥

ಹೋ ಕಾ ಆಪಣಿಯಾ ಆಪಣ । ಜೋ ಕೋಣೇ ಪುಸೇಲ ತೂ ಕೋಣ । ತೋ ಅತಿಭ್ರಮೇ ಭುಲಲಾ ಜಾಣ । ನಿಜಾತ್ಮಜ್ಞಾನ ವಿಸರಲಾ ॥೩೨೭॥ ವಿಚಾರಿತಾ ಪ್ರಶ್ನಾಚಾ ಅರ್ಥೂ । ಏವಢಾ ದಿಸತಸೇ ಅನರ್ಥೂ । ಕಾಂಹೀ ಭಾಸೇನಾ ಪರಮಾರ್ಥೂ । ತೂ ಕೋಣ ಹಾ ವ್ಯರ್ಥೂ ಪ್ರಶ್ನ ತುಮಚಾ ॥೩೨೮॥ ದೇಹಾಸೀ ತೂ ಕೋಣ ಐಸೇ । ಆತ್ಮಾ ಜೈ ಸ್ವಯೇ ಪುಸೇ । ತೈ ಆತ್ಮತ್ವಾ ಲಾಗಲೇ ಪಿಸೇ । ಅತಿಭ್ರಂತೇ ಭುಲಲಾ ॥೩೨೯॥ ದೋರಾ ಅಂಗೀ ಸರ್ಪ ನಸೇ । ತ್ಯಾವರೀ ತೋ ಭ್ರಮೇ ಭಾಸೇ । ತ್ಯಾ ಸರ್ಪಾತೇ ದೋರೂ ಪುಸೇ । ತೂ ಕೋಣ ಐಸೇ ತೇ ಮಿಥ್ಯಾ ॥೩೩೦॥ ಯಾ ರೀತೀ ತ್ಯಾಂಚೇ ಪ್ರಶ್ನಖಂಡನ । ಉದ್ಧವಾ ತೈ ಮ್ಯಾ ಕೇಲೇ ಜಾಣ । ತೇಣೇ ಭೇದಾಚೇ ನಿರಸನ । ವಚನೋಕ್ತೀ ಜಾಣ ದಾವಿಲೇ ॥೩೩೧॥ ಪ್ರಶ್ನಖಂಡಣಾಚೇ ಅರ್ಥೀ । ಕೈಚೀ ಕರಣೇ ಕೈಚೀ ಭೂತೇ । ಭೇದ ನಾಹೀ ಜೀವಶಿವಾತೇ । ಹೇಹೀ ತ್ಯಾಂತೇ ಸೂಚಿಲೇ ॥೩೩೨॥ ಯಾಹೀವರೀ ಜೇ ಕಥಾ ಗಹನ । ಪರಮ ಕಾರಣೇಸೀ ಅಭಿನ್ನ । ತ್ಯಾಂಸೀ ಮ್ಯಾ ಸಾಂಗೀತಲೇ ನಿಜಜ್ಞಾನ । ಐಕ ಸಾವಧಾನ ಉದ್ಧವಾ ॥೩೩೩॥

ಮನಸಾ ವಚಸಾ ದೃಷ್ಟ್ಯಾ ಗೃಹ್ಯತೇಽನ್ಯೈರಪೀಂದ್ರಿಯೈಃ । ಅಹಮೇವ ನ ಮತ್ತೋಽನ್ಯದಿತಿ ಬುಧ್ಯಧ್ವಮಂಜಸಾ ॥೮೪॥

ಅರ್ಥ :- ಮನದಿಂದ, ವಾಣಿಯಿಂದ, ದೃಷ್ಟಿಯಿಂದ ಅನ್ಯ ಇಂದ್ರಿಯಗಳಿಂದ ಗ್ರಹಣ ಮಾಡುವ ಎಲ್ಲವೂ ನಾನೇ ಆಗಿರುವೆನು. ನನ್ನ ಹೊರತಾದ ಭಿನ್ನವಾದದ್ದು ಯಾವುದೊಂದೂ ಇರುವುದಿಲ್ಲ. ಈ ಸಿದ್ಧಾಂತವನ್ನು ನೀವು ತತ್ವಗಳ ವಿಚಾರದ್ವಾರಾ ತಿಳಿಯಬೇಕು.

ಮಜವೇಗಳಾ ತಿಳಾ ಇತುಕಾ । ರಿತಾ ಠಾವೋ ನಾಹೀ ದೇಖಾ । ತೇಥ ವ್ಯಾಪ್ತ ಆಣಿ ವ್ಯಾಪಕಾ । ಅಭಿನ್ನತ್ವ ದೇಖಾ ಸಹಜಚಿ ॥೩೩೪॥ ಮನಾಚ್ಯಾ ಸಂಕಲ್ಪಾ ಆಲೇ ಜೇ ಜಾಣ । ತ್ಯಾಸೀ ಶಾಬ್ದಿಕ ಮ್ಹಣತೀ ಭಿನ್ನ । ಮಾಝ್ಯಾ ಸ್ವರೂಪಾಚಾ ವಿವರ್ತ ತೇ ಮನ । ಹೇ ಅಭಿನ್ನ ಖೂಣ ಕಳೇನಾ ॥೩೩೫॥ ಮನ ಲಕ್ಷಿತಾ ಸಾವಧಾನ । ಸರ್ವಥಾ ಲಕ್ಷೇನಾ ತೇ ಜಾಣ । ಪರಬ್ರಹ್ಮೀ ಅಲಕ್ಷ್ಯ ಪೂರ್ಣ । ದೋನೀ ಸಮಾನ ಚಿದ್ರೂಪೇ ॥೩೩೬॥ ಶಿಂಪೀಚ್ಯಾ ಅಂಗೀ ರೂಪೇ ಆಭಾಸೇ । ತೇಚಿ ತೇಥೇ ಸಾಚೇ ನಸೇ । ಮಾಝ್ಯಾ ಸ್ವರೂಪೀ ಮನ ತೈಸೇ । ಮಿಥ್ಯಾ ಭಾಸೇ ಕಲ್ಪನಾಮಾತ್ರ ॥೩೩೭॥ ವಿಚಾರಿತಾ ಶಬ್ದಮಹಿಮಾನ । ಶಬ್ದ ಸ್ವರೂಪೇ ಜ್ಞಾನಘನ । ಜ್ಞಾನಾರ್ಥೇವೀಣ ವಚನ । ಅಲ್ಪಹೀ ಜಾಣ ಅಸೇನಾ ॥೩೩೮॥ ವಕ್ತಾ ವಾಚ್ಯ ವಚನ । ತೀನೀ ಮೀಚಿ ಆಹೇ ಜಾಣ । ಬೋಲು ಬೋಲಕಾ ಮಜವೀಣ । ದುಸರಾ ಜಗೀ ಕೋಣ ಅಸೇ ॥೩೩೯॥

ಯಾರಾದರೂ ಒಬ್ಬರು ಸ್ವತಃ ಸ್ವತಃಕ್ಕೆ ನೀನು ಯಾರು ಇರುವೆ ಎಂದು ಹೀಗೆ ಪ್ರಶ್ನೆಯನ್ನು ಕೇಳಿದರೆ ಆತನು ಆತ್ಮಜ್ಞಾನವನ್ನು ಮರೆತುಬಿಟ್ಟಿರುವನೆಂದು ತಿಳಿಯಬೇಕು. ಈತನು ಅತಿಶಯವಾಗಿ ಭ್ರಮದಿಂದ ಭುಲಾಯಿಸಿರುವನು ॥೩೨೭॥ ನಿಮ್ಮ ಪ್ರಶ್ನೆಯ ಅರ್ಥದ ವಿಚಾರವನ್ನು ಮಾಡಿದರೆ, ಈ ಪ್ರಕಾರದ ಅನರ್ಥವಾಗುವುದು. ಅದರಲ್ಲಿ ಯಾವ ಪರಮಾರ್ಥವೂ ತೋರಲಾರದ್ದಕ್ಕೆ ''ನೀನು ಯಾರು'' ಎಂಬ ಈ ನಿಮ್ಮ ಪ್ರಶ್ನೆಯು ವ್ಯರ್ಥವಾಗಿರುವುದು ॥೩೨೮॥ ಆತ್ಮವು ಸ್ವತಃ ತನ್ನ ದೇಹಕ್ಕೆ ನೀನು ಯಾರು ಇರುವೆ ಎಂದು ಹೀಗೆ ಪ್ರಶ್ನೆಯನ್ನು ಕೇಳುತ್ತಿದ್ದರೆ ಆಗ ಆತ್ಮದ ಅಜ್ಞಾನವು ತಿಳಿದುಬರುವುದು. ಆತನು ಅತಿಶಯವಾಗಿ ಭ್ರಮದಿಂದ ಭ್ರಾಂತಿಯಲ್ಲಿ ಬದ್ಧಿರುವನು ಎಂದು ಹೀಗೆ ಹೇಳಬೇಕಾಗುವುದು ॥೩೨೯॥ ಹಗ್ಗದ ಅಂಗದಲ್ಲಿ ಸರ್ಪತ್ವವು ಇರುವುದೇ ಇಲ್ಲ. ಹೀಗಿದ್ದರೂ ಆ ಹಗ್ಗವು ಭ್ರಮದಿಂದ ಸರ್ಪಸಮಾನ ಭಾಸವಾಗುವುದು. ಆ ಸರ್ಪಕ್ಕೆ ಹಗ್ಗವೇ ''ನೀನು ಯಾರು'' ಎಂದು ಹೀಗೆ ಕೇಳುವುದು ಮಿಥ್ಯೆಯಾಗುವುದು ॥೩೩೦॥ ಹೇ ಉದ್ಧವನೇ, ಈ ಪ್ರಕಾರವಾಗಿ ನಾನು ಅವರ ಪ್ರಶ್ನೆಯ ಖಂಡನೆಯನ್ನು ಮಾಡಿದೆನು. ಈ ಮುಖಾಂತರ ದ್ವೈತದ ನಿರಸನೆಯನ್ನು ಮಾಡಿ ತೋರಿಸಿದೆನು ॥೩೩೧॥ ಪ್ರಶ್ನೆಯನ್ನು ಖಂಡನೆ ಮಾಡುವ ನಿಮಿತ್ತದಿಂದ ಇಂದ್ರಿಯಗಳು ಎಲ್ಲಿಯವು, ಭೂತಗಳು ಎಲ್ಲಿಯವು ಮತ್ತು ಜೀವಶಿವರಲ್ಲಿ ಭೇದವು ಇಲ್ಲವೇ ಇಲ್ಲ ಎಂಬುದನ್ನು ನಾನು ಅವರಿಗೆ ಸೂಚಿಸಿದೆನು ॥೩೩೨॥ ಇದಕ್ಕಿಂತಲೂ ಮಹಾಕಾರಣದಿಂದ ಅಭಿನ್ನವಾಗಿರುವ ಗಹನವಾದ ಕಥೆ ಅಂದರೆ ಆತ್ಮಜ್ಞಾನವಾಗಿರುವುದು. ಆ ಆತ್ಮಜ್ಞಾನವನ್ನೂ ಕೂಡ ನಾನು ಅವರಿಗೆ ಹೇಳಿದೆನು. ಉದ್ಧವಾ, ನೀನು ಬಹಳ ಲಕ್ಷಕೊಟ್ಟು ಕೇಳು ॥೩೩೩॥

ನನ್ನ ಹೊರತಾಗಿ ತಿಲಮಾತ್ರವೂ ಕೂಡ ಖಾಲೀ ಸ್ಥಳವು ಸಿಗಲಾರದು. ಹೀಗಿರಲು ವ್ಯಾಪ್ತ ಮತ್ತು ವ್ಯಾಪಕ ಈ ಎರಡಕ್ಕೂ ಸಹಜವಾಗಿಯೇ ಅಭಿನತ್ವವು ಇರುವುದು. ಎರಡರ ಐಕ್ಯವಾಗುವುದು ॥೩೩೪॥ ಯಾವುದು ಮನದ ಸಂಕಲ್ಪಕ್ಕೆ ವಿಷಯವಾಗುವುದೋ, ಅದಕ್ಕೆ ಶಬ್ದ ಮಾತ್ರ ಭಿನ್ನವಾಗುವುದು. ಕಾರಣ, ಮನವು ನನ್ನ ಸ್ವರೂಪದ ಅನ್ಯಥಾ ಪರಿಣಾಮವಾಗಿರುವುದು. ಆದರೆ ಈ ಅಭಿನ್ನತ್ವದ ಏಕತ್ವದ ಗುರುತು ಅವರಿಗೆ ತಿಳಿಯುವುದಿಲ್ಲ ॥೩೩೫॥ ಅತ್ಯಂತ ಏಕಾಗ್ರ ಚಿತ್ತದಿಂದ ಮನವು ಏನಿರುವುದೆಂದು ತಿಳಿಯಲು ಹೋದರೆ, ಏನು ಮಾಡಿದರೂ ಅದು ಕಾಣುವುದಿಲ್ಲ. ಪರಬ್ರಹ್ಮವೂ ಕೂಡ ಅದರಂತೆಯೇ ಪೂರ್ಣವಾಗಿ ಅದೃಶ್ಯವಾಗಿರುವುದು. ಆದ್ದರಿಂದ ಈ ಎರಡೂ ಚೈತನ್ಯರೂಪದಿಂದ ಸರಿಸಮಾನವಾಗಿರುವುವು ॥೩೩೬॥ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯ ಭಾಸವಾಗುವುದು. ಆದರೆ ಆ ಬೆಳ್ಳಿಯು ನಿಜವಾಗಿರುವುದಿಲ್ಲ. ಅದರಂತೆ ನನ್ನ ಸ್ವರೂಪದಲ್ಲಿ ಮನವು ಕೇವಲ ಕಲ್ಪನಾಮಯವಾಗಿ ಮಿಥ್ಯಾ ಭಾಸವಾಗುವುದು ॥೩೩೭॥ ಈಗ ಶಬ್ದದ ದೊಡ್ಡಸ್ತಿಕೆಯ ವಿಚಾರವನ್ನು ಮಾಡಹತ್ತಲು, ಆ ಯಾವ ಶಬ್ದವು ಸ್ವರೂಪದಿಂದ ಜ್ಞಾನಮಯವೇ ಆಗಿರುವುದು. ಜ್ಞಾನದ ಅರ್ಥವಿಲ್ಲದೇ ವಚನವು ಲೇಶಮಾತ್ರವೂ ಇರಲು ಶಕ್ಯವಿಲ್ಲ ॥೩೩೮॥ ವಕ್ತಾ, ವಾಚ್ಯ ಮತ್ತು ವಚನ ಈ ಮೂರೂ ಸಹ ನಾನೇ ಇರುವೆನು. ಇದನ್ನು ನೀನು ದೃಢವಾಗಿ ಲಕ್ಷದಲ್ಲಿಡು. ಶಬ್ದವನ್ನು ನುಡಿಯುವವನು ನನ್ನ ಹೊರತಾಗಿ ಜಗತ್ತಿನಲ್ಲಿ ಅನ್ಯರಾರೂ ಇರುವುದಿಲ್ಲ ॥೩೩೯॥

ಮೀ ವೇದೂ ಜಾಣ ಪಾ ವೇದಾಂಚಾ । ಪ್ರಣವರೂಪ ಮೀಚಿ ಸಾಚಾ । ಮುಖ್ಯ ವಾಚೇಚೀ ಮೀಚಿ ವಾಚಾ । ವೇಗಳಾ ಶಬ್ದಾ ಚಾ ಠಾವೋ ನಾಹೀ ।।೩೪೦।। ದೃಷ್ಟೀಚೇ ಜೇ ದೇಖಣೇಪಣ । ದೇಖಣೇ ತೇಚಿ ಮುಖ್ಯ ಜ್ಞಾನ । ತೇಚಿ ಜಾಣ ಬ್ರಹ್ಮ ಪೂರ್ಣ । ಚೈತನ್ಯಘನ ನಿಜದೃಷ್ಟೀ ।।೩೪೧।। ಮೀಚಿ ಡೋಳಾ ಮೀಚಿ ದೇಖತಾ । ದೃಶ್ಯ ದ್ರಷ್ಟಾ ಮೀಚಿ ತತ್ತ್ವತಾ । ಮಜವೇಗಳೀ ದೇಖಣೇ ಅವಸ್ಥಾ । ನಾಹೀ ಸರ್ವಥಾ ತಿಹೀ ಲೋಕೀ ।।೩೪೨।। ಮೀಚಿ ಡೋಳಿಯಾಂಚಾ ನಿಜಡೋಳಾ । ಮೀ ಸರ್ವಾಂಗದೇಖಣಾ ಸೋಜ್ವಳಾ । ಮಜವೇಗಳೀ ದೇಖಣೇ ಕಳಾ । ನಾಹೀ ಜಿವ್ಹಾಳಾ ಆಣಿಕಾಂಚಾ ।।೩೪೩।। ಮೀಚಿ ಶಬ್ದಾಂತೇ ಶಬ್ದವಿತಾ । ಮೀಚಿ ಶ್ರವಣಾಮಾಜೀ ಶ್ರೋತಾ । ಐಶಿಯಾ ಏಕಾತ್ಮತಾ ಪಾಹತಾ । ಶಬ್ದ ನಿಃಶಬ್ದತಾ ಪರಬ್ರಹ್ಮ ।।೩೪೪।। ಕಾನ ವಚನ ಮೀಚಿ ಶ್ರೋತಾ । ಮೀಚಿ ಜಾಣತಾ ಶಬ್ದಾರ್ಥಾ । ಐಕಣಾಹೀ ಮಜಪರತಾ । ನಾಹೀ ತತ್ತ್ವತಾ ಶ್ರವಣಾಚಾ ।।೩೪೫।। ಮೀಚಿ ಘ್ರಾಣ ಮೀಚಿ ವಾಸ । ಮೀಚಿ ಜಾಣತಾ ಸುವಾಸ । ಮಜವೇಗಳಾ ರಹಿವಾಸ । ಪರಿಮಳಾಸ ಅಸೇನಾ ।।೩೪೬।। ರಸನಾ ರಸಜ್ಞತ್ವೇ ಚೋಖಡೀ । ಪರೀ ತೇ ಕೇವಳ ಚಾಮಡೀ । ಕಾಪೂನ ಸೋಡಿಲ್ಯಾ ಬಾಪುಡೀ । ಗೋಡೀ ಅಗೋಡೀ ತೇ ನೇಣೇ ।।೩೪೭।। ಮೀಚಿ ರಸೂ ಮೀಚಿ ರಸನಾ । ಸ್ವಾದು ಸೇವಿತಾ ಮೀಚಿ ಜಾಣಾ । ಮಜವೇಗಳಾ ಚವೀಚಾಖಣಾ । ರಸಜ್ಞಪಣಾ ಆನ ನಾಹೀ ।।೩೪೮।। ಇತರ ಇಂದ್ರಿಯಪ್ರವೃತ್ತೀ । ತ್ಯಾಹೀ ಮದ್ರೂಪ ಜಾಣ ನಿಶ್ಚಿತೀ । ಮೀ ಸರ್ವಾತ್ಮಾ ಆತ್ಮಮೂರ್ತೀ । ಕ್ರಿಯಾಶಕ್ತೀ ತೇಹೀ ಮೀಚಿ ।।೩೪೯।। ಪಾಂಚಭೌತಿಕ ದೇಹಾಚಾ ಗೋಳಾ । ಭ್ರಾಂತ ಮ್ಹಣತೀ ಮಜವೇಗಳಾ । ಚುಕೋನಿ ವ್ಯಾಪಕಾ ಸಕಳಾ । ತೋ ಕೋಠೇ ನಿರಾಳಾ ರಾಹೋ ಲಾಹೇ ।।೩೫೦।। ಜೈಸೇ ಜಳೀಚೇ ಜಳತರಂಗ । ಜಳರೂಪೇ ಜಳೀ ಕ್ರೀಡತೀ ಚಾಂಗ । ತೈಸೇ ಮಾಝ್ಯಾ ಸ್ವರೂಪೀ ಸಾಂಗ । ದೇಹ ಅನೇಗ ಮದ್ರೂಪೇ ।।೩೫೧।। ಹೋ ಕಾ ಘೃತಾಚೀ ಪುತಳೀ । ಥಿಜೋನಿ ಜಾಲೀ ಏಕೇ ಕಾಳೀ । ಪರೀ ತೇ ನವ್ಹೇ ಘೃತಪಣಾವೇಗಳೀ । ತೇವೀ ಭೂತೇ ಝಾಲೀ ಮಜಮಾಜೀ ।।೩೫೨।। ಜಳೀ ಜಳಾಚೇ ಜಳಗಾರ । ಜಳಾಮಾಜೀ ಭಾಸಲೀ ಸಾಕಾರ । ತೈಸೇ ಮಜಮಾಜೀ ಚರಾಚರ । ಅಭಿನ್ನ ಸಾಚಾರ ಮದ್ರೂಪೀ ।।೩೫೩।।

ನಾನು ವೇದಗಳ ವೇದನಾಗಿರುವೆನು, ಹೀಗೆಂದು ನೀನು ತಿಳಿ. ನಾನು ಓಂಕಾರಸ್ವರೂಪನಾಗಿರುವೆನು. ವಾಚೆಯ ವಾಚಾ ನಾನೇ ಆಗಿರುವೆನು. ನನ್ನನ್ನು ಬಿಟ್ಟರೆ ಶಬ್ದಕ್ಕೆ ಅನ್ಯಸ್ಥಳವೇ ಇಲ್ಲ ।।೩೪೦।। ಕಣ್ಣುಗಳಿಗೆ ಇರುವ ನೋಡುವ ಶಕ್ತಿಯು, ಇದೇ ಮುಖ್ಯ ಜ್ಞಾನವು ಹಾಗೂ ಪೂರ್ಣ ಬ್ರಹ್ಮವಾಗಿರುವುದು. ಆತ್ಮದೃಷ್ಟಿಯು ಚೈತನ್ಯಘನವಾಗಿರುವುದು ।।೩೪೧।। ಕಣ್ಣುಗಳು ನಾನೇ ಮತ್ತು ನೋಡುವವನು ನಾನೇ, ದೃಶ್ಯವು ನಾನೇ ಮತ್ತು ನಿಜವಾಗಿಯೂ ದ್ರಷ್ಟಾನೂ ನಾನೇ. ನನ್ನನ್ನು ಬಿಟ್ಟು ಸಂಪೂರ್ಣ ತ್ರಿಭುವನದಲ್ಲಿ ನೋಡುವ ಬೇರೆ ಯಾವ ಶಕ್ತಿಯೂ ಇಲ್ಲವೇ ಇಲ್ಲ ।।೩೪೨।। ಕಣ್ಣುಗಳ ನಿಜಕಣ್ಣು ನಾನೇ ಇರುವೆನು. ನಾನೇ ಸರ್ವಾಂಗದಿಂದ ಪ್ರಕಾಶಮಾನ ನೋಡುವವನಾಗಿರುವೆನು. ನನಗಿಂತಲೂ ಭಿನ್ನವಾದ ನೋಡುವ ಕಲೆಯು ಇರುವುದಿಲ್ಲ ಮತ್ತು ಈ ಕಲೆಗೆ ಇತರ ಯಾರ ಪ್ರೀತಿಯು ಇರುವುದಿಲ್ಲ ।।೩೪೩।। ಶಬ್ದಗಳಿಗೆ ನುಡಿಸುವವನು ನಾನೇ ಆಗಿರುವೆನು. ಕಿವಿಗಳಲ್ಲಿ ಕೇಳುವವನು ನಾನೇ ಆಗಿರುವೆನು. ಹೀಗೆ ಏಕಾತ್ಮತೆಯನ್ನು ಕಂಡರೆ ಶಬ್ದ ಮತ್ತು ನಿಃಶಬ್ದ ಈ ಎರಡೂ ಪರಬ್ರಹ್ಮವಾಗಿರುವುವು ।।೩೪೪।। ಕಿವಿಗಳು, ಶಬ್ದ, ಕೇಳುವವನು ಹಾಗೂ ಶಬ್ದಾರ್ಥವನ್ನು ತಿಳಿಯುವವನು ನಾನೇ ಆಗಿರುವೆನು. ನನ್ನನ್ನು ಬಿಟ್ಟರೆ ಅನ್ಯರಾರೂ ಕೇಳುವವರು ಇರುವುದಿಲ್ಲ ।।೩೪೫।। ಮೂಗು ಮತ್ತು ವಾಸನೆ ಈ ಎರಡೂ ನಾನೇ ಇರುವೆನು. ಸುಗಂಧವನ್ನು ತಿಳಿಯುವವನು ನಾನೇ ಇರುವೆನು. ನನ್ನನ್ನು ಬಿಟ್ಟರೆ ಸುವಾಸನೆಗೆ ಅನ್ಯ ಎಲ್ಲಿಯೂ ಆಶ್ರಯವೇ ಇಲ್ಲ ।।೩೪೬।। ನಾಲಿಗೆಯು ಮಾತ್ರ ಇದು ರಸವನ್ನು ತಿಳಿಯುವುದೆಂದು ಹೀಗೆ ಪ್ರಸಿದ್ಧವಾಗಿರುವುದು. ಆದರೆ ಅದು ಕೇವಲ ಚರ್ಮವೇ ಆಗಿರುವುದು. ಈ ನಾಲಿಗೆಯನ್ನು ಕತ್ತರಿಸಿ ಒಗೆದರೆ ಆಗ ಅದು ರುಚಿ, ಅರುಚಿ ಏನೂ ತಿಳಿಯಲಾರದು ।।೩೪೭।। ರಸವೂ ನಾನೇ, ನಾಲಿಗೆಯೂ ನಾನೇ ಮತ್ತು ರಸಸೇವನೆಯನ್ನು ಮಾಡುವವನೂ ನಾನೇ ಇರುವೆನು. ನನ್ನ ಹೊರತಾಗಿ ರುಚಿಯನ್ನು ತಿಳಿಯುವವ ಅನ್ಯ ರಸಜ್ಞನು ಇಲ್ಲವೇ ಇಲ್ಲ ।।೩೪೮।। ಇಂದ್ರಿಯಗಳ ಇತರ ಸರ್ವ ಪ್ರವೃತ್ತಿಗಳು ನನ್ನ ರೂಪವೇ ಆಗಿರುವುವು. ಎಲ್ಲರ ಒಳಗಡೆಯಲ್ಲಿ ಆತ್ಮರೂಪದಿಂದ ಇರುವವನು ನಾನೇ ಮತ್ತು ಕ್ರಿಯಾಶಕ್ತಿಯೂ ಸಹ ನಾನೇ ಆಗಿರುವೆನು ।।೩೪೯।। ಪಂಚಮಹಾಭೂತಗಳಿಂದ ತಯಾರಿಸಲ್ಪಟ್ಟ ದೇಹದ ಈ ಜಡವಾದ ಉಂಡೆಯು ನನಗಿಂತ ಭಿನ್ನವಾಗಿದೆ ಎಂದು ಭ್ರಾಂತರಾದ ಜನರು ಹೇಳುವರು. ಆದರೆ ನನ್ನ ಸರ್ವ ವ್ಯಾಪಕತ್ವವನ್ನು ಬಿಟ್ಟು ದೇಹವು ಭಿನ್ನವಾಗಿ ಹೇಗೆ ಇರಲು ಸಾಧ್ಯ? ।।೩೫೦।। ನೀರಿನ ಮೇಲಿನ ತರಂಗಗಳು ಯಾವ ರೀತಿಯಲ್ಲಿ ಅನೇಕ ಪ್ರಕಾರದ ಆಕಾರಗಳಲ್ಲಿ ನೀರಿನ ಮೇಲೆ ಕ್ರೀಡೆಯನ್ನು ಮಾಡುತ್ತಿರುವುವೋ, ಅದೇ ರೀತಿಯಲ್ಲಿ ಅನೇಕ ಪ್ರಕಾರದ ಶರೀರಗಳು ನನ್ನದೇ ಆದ ಸ್ವರೂಪದಲ್ಲಿ ಮದ್ರೂಪದಿಂದ ಲೀಲೆಗಳನ್ನು ಮಾಡುತ್ತಿರುವುವು ।।೩೫೧।। ಒಂದು ವೇಳೆ ತುಪ್ಪವು ಹೆಪ್ಪುಗಟ್ಟಿ ಒಂದು ಗೊಂಬೆಯಾದರೆ ಆಗ ಅದು ಕೆಲವು ಸಮಯಕ್ಕಾಗಿ ತುಪ್ಪದಿಂದ ಭಿನ್ನವಾಗಿ ಕಾಣಸಬಹುದು. ಆದರೆ ಅದು ತುಪ್ಪದಿಂದ ಭಿನ್ನವಾಗಿರುವುದೇ ಇಲ್ಲ. ಅದರಂತೆ ಸರ್ವಭೂತಗಳು ನನ್ನಿಂದಲೇ ಆಗಿರುವುವು ।।೩೫೨।। ನೀರಿನಲ್ಲಿ ನೀರಿನಿಂದಲೇ ತಯಾರಾದ ಹಿಮವು ನೀರಿನಲ್ಲಿ ಸಾಕಾರವಾಗಿದೆ ಎನ್ನುವಂತೆ ಭಾಸವಾಗುವುದು. ಅದರಂತೆ ನನ್ನಲ್ಲಿಯೇ ಈ ಚರಾಚರವು ಉತ್ಪನ್ನವಾಗಿ ನಿಜವಾಗಿಯೂ ನನ್ನ ಸ್ವರೂಪದಲ್ಲಿಯೇ ಅಭಿನ್ನವಾಗಿರುವುದು ।।೩೫೩।।

ಜೈಸಾ ಏಕಲಾ ಏಕ ತಂತೂ । ಸುತೇಂಚಿ ವಿಣಿಲಾ ಸುತಾಅಂತೂ । ತ್ಯಾ ವೇಗಳಾಲೇ ಮ್ಹಣತೀ ತಾಂತೂ । ತೈಸೇ ಮಜ ಆಂತೂ ಜಗ ಭಾಸೇ ।೧೫೪॥ ತಂತೂ ಪಾಹತಾ ವಸ್ತ್ರನ ದಿಸೇ । ಆತ್ಮಾ ಲಕ್ಷಿತಾ ಜಗಚಿ ನಸೇ । ಯೇಣೇ ಅದ್ವೈತತತ್ತ್ವಸೌರಸೇ । ಆಹೇ ಅನಾಯಾಸೇ ಪರಬ್ರಹ್ಮ ।೧೫೫॥ ಐಸಾ ಅದ್ವೈತಬೋಧೇ ಮೀ ಏಕೂ । ಸರ್ವಾತ್ಮಾ ಸರ್ವಾತ್ಮಕೂ । ಹಾ ನಿಶ್ಚಯೇಸೀ ವಿವೇಕೂ । ಬುದ್ಧಿ ಬೋಧೇ ನಿಷ್ಟಂಕೂ ಜಾಣಾವಾ ।೧೫೬॥ ಮೀಚಿ ಏಕ ಸರ್ವಾ ಠಾಯೀ । ಹೇಚಿ ದೃಢ ಧರಿಲ್ಯಾ ಪಾಹೀ । ಮಗ ಸಾಧನಾಚೇ ಕಾರ್ಯ ನಾಹೀ । ಠಾಯೀಂಚ ಪಾಹೀ ನಿತ್ಯಮುಕ್ತ ।೧೫೭॥ ಸರ್ವಾತ್ಮಾ ಚೈತನ್ಯಘನ । ಅತಿಸುಲಭ ಹೇ ನಿಜಜ್ಞಾನ । ಉದ್ಧವಾ ಮ್ಯಾ ಹೇ ಸಾಂಗೋನ ಜಾಣ । ಭೇದಖಂಡಣ ಕೇಲೇ ತ್ಯಾಂಚೇ ।೧೫೮॥ ಸನಕಾದಿಕಾಂಚಾ ಪೂರ್ವೀಲ ಪ್ರಶ್ನ । ಜೋ ಬ್ರಹ್ಮಾದಿಕಾ ಅಟಕ ಜಾಣ । ತ್ಯಾಚೇಹೀ ಮ್ಯಾ ಪ್ರತಿವಚನ । ವಿವಂಚೂನಿ ಜ್ಞಾನ ಸಾಂಗೀತಲೇ ।೧೫೯॥

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಜಾಃ । ಜೀವಸ್ಯ ದೇಹ ಉಭಯಂ ಗುಣಾಶ್ಚೇತೋ ಮದಾತ್ಮನಃ ।೨೫॥

ಅರ್ಥ :- ಈ ಚಿತ್ತವು ಚಿಂತನೆಯನ್ನು ಮಾಡುತ್ತ ವಿಷಯಾಕಾರವಾಗುವುದು ಮತ್ತು ವಿಷಯಗಳು ಚಿತ್ತದಲ್ಲಿ ಪ್ರವೇಶವಾಗುವವು. ಈ ಮಾತು ನಿಜವಿದೆ. ಆದಾಗ್ಯೂ ವಿಷಯ ಮತ್ತು ಚಿತ್ತ ಇವು ಎರಡೂ ನನ್ನ ಸ್ವರೂಪಭೂತ ಜೀವದ ದೇಹಗಳಾಗಿರುವುವು. ಉಪಾಧಿಯಾಗಿರುವುವು. ಚಿತ್ತ ಮತ್ತು ವಿಷಯಗಳು ಆತ್ಮನಲ್ಲಿ ಯಾವ ಸಂಬಂಧವಿರುವುದಿಲ್ಲ.

ತುಮ್ಹೀ ಬ್ರಹ್ಮಯಾಸೀ ಪುಸಿಲೇ ಪಾಹೀ । ವಿಷಯ ರಿಘಾಲೇ ಚಿತ್ತಾಚ್ಯಾ ಠಾಯೀ । ಚಿತ್ತ ಜೇ ರಿಘಾಲೇ ವಿಷಯೀ । ತೇ ವೇಗಳೇ ಕಾಂಹೀ ನಿವಡೇನಾ ।೧೬೦॥ ವಿಷಯತ್ಯಾಗೇವಿಣ । ಕದಾ ನವ್ಹೇ ಬ್ರಹ್ಮಜ್ಞಾನ । ತ್ಯಾಹೀ ತ್ಯಾಗಾಚೇ ತ್ಯಾಗಿತೀ ಖೂಣ । ಐಕ ಸಂಪೂರ್ಣ ಸಾಂಗೇನ ।೧೬೧॥ ಚಿತ್ತ ವಿಷಯ ದೋನೀ ಪಾಹೇ । ತೇ ಜೀವಾಚೇ ನಿಜಸ್ವರೂಪ ನವ್ಹೇ । ಹೇ ಉಪಾಧಿವಶೇ ದೋನೀ ದೇಹೇ । ಲಾಗಲೀ ಪಾಹೇ ಪ್ರವಾಹರೂಪೇ ।೧೬೨॥ ಕರ್ತೃತ್ವಭೋಕ್ತಾತ್ವರೂಪೇ ಜಾಣ । ವಿಷಯೀ ಜಾಹಲೇ ಅಂತಃಕರಣ । ತೇಣೇ ಉಭಯ ದೇಹಾಂಚೇ ಕಾರಣ । ಅಹಂಕಾರೂ ಜಾಣ ಖವಳಲಾ ।೧೬೩॥ ತೇಣೇ ಭುಲವಿಲೇ ಚಿತ್ತ ವಿಷಯಾಂಸೀ । ವಿಸರಲಾ ನಿಜಾತ್ಮಸ್ವರೂಪಾಸೀ । ತೇಣೇ ತದಾತ್ಮತಾ ಜೀವಾಮನಾಸೀ । ಅತಿಶಯೇಸೀ ದೃಢ ಝಾಲೀ ।೧೬೪॥ ಚಿತ್ತ ಜೀವಾಚೇ ಸ್ವರೂಪ ಹೋತೇ । ತರೀ ವಿಷಯೀ ಲೋಲುಪ ನವ್ಹತೇ । ಹಾ ಉಭಯ ಉಪಾಧೀ ಜೀವಾತೇ । ಅಭಿಮಾನೇ ಯೇಥೇ ವಾಢವಿಲಾ ।೧೬೫॥

ಅರಳೆಯ ಒಂದೇ ದಾರವಿರುವುದು. ಅದನ್ನು ದಾರದ ರೂಪದಿಂದ ದಾರದಲ್ಲಿಯೇ ನೇಯಲ್ಪಟ್ಟಿರುವುದು. ಆದರೆ ಅದಕ್ಕೆ ಬೇರೆ ಬೇರೆ ದಾರವೆನ್ನುವರು. ಅದರಂತೆ ಈ ಸಂಪೂರ್ಣ ಜಗತ್ತು ನನ್ನಲ್ಲಿ ಭಾಸವಾಗುವುದು ।೧೫೪॥ ದಾರವನ್ನೇ ನೋಡುತ್ತಿದ್ದರೆ ವಸ್ತ್ರವು ಕಾಣಿಸುವುದಿಲ್ಲ. ಅದರಂತೆ ಆತ್ಮವು ಪ್ರತೀತವಾದರೆ ಜಗತ್ತು ಕಾಣಿಸುವುದೇ ಇಲ್ಲ. ಹೀಗೆ ಐಕ್ಯ ದೃಷ್ಟಿಯಿಂದ ನೋಡಲು ಅನಾಯಾಸವಾಗಿ ಸರ್ವವೂ ಪರಬ್ರಹ್ಮವೇ ಆಗಿರುವುದೆಂದು ತಿಳಿಯುವುದು ।೧೫೫॥ ಹೀಗೆ ಐಕ್ಯಭಾವದಿಂದ ನಾನೊಬ್ಬನೇ ಸರ್ವಾತ್ಮಾ ಮತ್ತು ಸರ್ವರೂಪನಾಗಿರುವೆನು. ಇದು ನಿಶ್ಚಯವಾದ ವಿವೇಕವಾಗಿರುವುದು. ತಮ್ಮ ಬುದ್ಧಿಯಿಂದ ಇದನ್ನು ದೃಢ ನಿಶ್ಚಯವಾಗಿ ಮನಗಾಣಬೇಕು ।೧೫೬॥ ಎಲ್ಲ ಸ್ಥಳಗಳಲ್ಲಿಯೂ ನಾನೇ ಇರುವೆನು, ಹೀಗೆ ಒಂದು ಸಲ ದೃಢವಾದ ವೃತ್ತಿಯಾಗಲು ಆಗ ಬೇರೆ ಯಾವುದೂ ಸಾಧ್ಯ ಮಾಡಿಕೊಳ್ಳುವ ಕಾರಣವೇ ಉಳಿಯುವುದಿಲ್ಲ. ಆತನು ತಾನು ಇದ್ದ ಸ್ಥಳದಲ್ಲಿಯೇ ನಿತ್ಯಮುಕ್ತನಾಗುವನು ।೧೫೭॥ ಸರ್ವತ್ರವೂ ತುಂಬಿಕೊಂಡಿರುವ ಆತ್ಮತತ್ತ್ವವು ಚೈತನ್ಯರೂಪವಾಗಿದೆ ಎಂದು ತಿಳಿಯಬೇಕು. ಈ ಆತ್ಮಜ್ಞಾನವು ಅತ್ಯಂತ ಸುಲಭವಾಗಿರುವುದು. ಹೇ ಉದ್ಧವನೇ, ಇದನ್ನು ಹೇಳಿ ನಾನು ಅವರ ಭೇದವನ್ನು ಖಂಡನೆ ಮಾಡಿದೆನು ।೧೫೮॥ ಸನಕಾದಿಕರ ಮೊದಲನೆಯ ಪ್ರಶ್ನೆಯಿಂದ ಬ್ರಹ್ಮದೇವನ ಮತಿಯು ಕುಂಠಿತವಾಯಿತು. ಆ ಪ್ರಶ್ನೆಯ ಉತ್ತರವನ್ನು ಜ್ಞಾನದ ಸ್ಪಷ್ಟೀಕರಣವನ್ನು ಮಾಡಿ ನಾನು ಅವರಿಗೆ ಹೇಳಿದೆನು ।೧೫೯॥

ನೀವು ಬ್ರಹ್ಮದೇವನಿಗೆ ಹೀಗೆ ಕೇಳಿರುವಿರಿ, ಒಮ್ಮೆ ವಿಷಯವು ಚಿತ್ತದಲ್ಲಿ ಸೇರಿದರೆ ಅಥವಾ ಚಿತ್ತವು ವಿಷಯಗಳಲ್ಲಿ ಗುಂತಾಯಿಸಿದರೆ ಅವುಗಳನ್ನು ಪರಸ್ಪರವಾಗಿ ದೂರ ಮಾಡಲು ಬರುವುದಿಲ್ಲ ।೧೬೦॥ ವಿಷಯಗಳ ತ್ಯಾಗ ಮಾಡದೇ ಬ್ರಹ್ಮಜ್ಞಾನವು ಎಂದಿಗೂ ಪ್ರಾಪ್ತವಾಗುವುದಿಲ್ಲ. ಹಾಗಾದರೆ ಆ ತ್ಯಾಗವನ್ನು ಹೇಗೆ ಮಾಡಬೇಕು? ಅದರ ನಿಜವಾದ ಲಕ್ಷಣವನ್ನು ಪೂರ್ಣವಾಗಿ ಹೇಳುವೆನು, ಅದನ್ನು ಕೇಳು ।೧೬೧॥ ಚಿತ್ತ ಮತ್ತು ವಿಷಯ ಈ ಎರಡೂ ಜೀವದ ಆತ್ಮಸ್ವರೂಪವಲ್ಲ. ಮಾಯೆಯ ಉಪಾಧಿಯಿಂದ ಸೂಕ್ಷ್ಮ ಮತ್ತು ಸ್ಥೂಲ ಈ ಎರಡೂ ಶರೀರಗಳಲ್ಲಿ ಚಿತ್ತ ಮತ್ತು ವಿಷಯಗಳು ಪ್ರವಾಹರೂಪದಿಂದ ಹತ್ತಿರುವುವು ।೧೬೨॥ ಕರ್ತೃತ್ವರೂಪದಿಂದ ಮತ್ತು ಭೋಕ್ತೃತ್ವರೂಪದಿಂದ ಅಂತಃಕರಣವು ವಿಷಯೀಯಾಗಿದೆ. ಆದ್ದರಿಂದ ಎರಡೂ ದೇಹಗಳ ಕಾರಣವಾದ ಯಾವ ಅಹಂಕಾರವು ಉಕ್ಕೇರುವುದು ।೧೬೩॥ ಈ ಅಹಂಕಾರವು ಚಿತ್ತಕ್ಕೆ ವಿಷಯಗಳಲ್ಲಿ ಭುಲಾಯಿಸಿರುವುದು. ಹೀಗಾಗಿ ಜೀವವು ಆತ್ಮಸ್ವರೂಪವನ್ನು ಮರೆಯುವುದು. ಮತ್ತು ಜೀವ ಮತ್ತು ಮನ ಇವುಗಳ ತಾದಾತ್ಮ್ಯವು ಅತಿಶಯವಾಗಿ ದೃಢವಾಗುವುದು ।೧೬೪॥ ಚಿತ್ತವು ಒಂದು ವೇಳೆ ಜೀವದ ಸ್ವರೂಪವಾಗಿದ್ದರೆ, ಅದು ವಿಷಯಗಳಿಗೆ ಎಂದಿಗೂ ಭುಲಾಯಿಸುತ್ತಿದ್ದಿಲ್ಲ. ಜೀವಕ್ಕೆ ಈ ಎರಡೂ ಉಪಾಧಿಗಳು ಅಭಿಮಾನದಿಂದ ಬೆಳೆದಿರುವುವು ।೧೬೫॥

ಜೇವೀ ಕಾ ವಿಸರೋನಿ ಆಪಣಾಸೀ । ಸ್ವಪ್ನೀಂಚಿಯಾ ಸ್ವಪ್ನದೇಹಾಸೀ । ಅತಿಪ್ರೀತಿ ವಾಢೇ ಪುರುಷಾಸೀ । ತೈಸೀ ದಶಾ ಜೇವಾಸೀ ಯೇಥ ಝಾಲೀ ॥೩೬೬॥ ನಿತ್ಯ ಶುದ್ಧ ಮುಕ್ತ ಜಾಣ । ಜೇವಾಚೇ ಸ್ವರೂಪ ಚೈತನ್ಯಘನ । ತ್ಯಾಸೀ ಅಭಿಮಾನೇ ಹೇ ಜಾಣ । ಮಿಥ್ಯಾ ಬಂಧನ ಲಾವಿಲೇ ॥೩೬೭॥ ಯಾಲಾಗೀ ಸಾಂಡಾವಾ ಅಭಿಮಾನ । ತೈ ತುಟೇ ಸಕಳ ಬಂಧನ । ಅಭಿಮಾನ ನಿರಸಾವಯಾ ಜಾಣ । ಮಾಝೇ ಭಜನ ಕರಾವೇ ॥೩೬೮॥ ಪರೀ ವೈರಾಗ್ಯೇವೀಣ ಮಾಝೀ ಭಕ್ತೀ । ಪೋಂಚಟ ಜಾಣ ಪಾ ನಿಶ್ಚಿತೀ । ಜೈ ವೈರಾಗ್ಯಯುಕ್ತ ಉಪಜೇ ಭಕ್ತಿ । ತೈ ಮದ್ರೂಪಪ್ರಾಪ್ತೀ ಜೇವಾಸೀ ॥೩೬೯॥ ಹೃದಯೀ ವಿಷಯಾಂಚಾ ಅಭಾವೋ । ಆಣಿ ಸರ್ವಾಭೂತೀ ಭಗವದ್ಭಾವೋ । ಹೇ ವೈರಾಗ್ಯಯುಕ್ತ ಭಕ್ತಿ ಪಹಾ ಹೋ । ತೈ ಜೇವಾಸೀ ನಿರ್ವಾಹೋ ಮದ್ರೂಪೀ ॥೩೭೦॥ ಜೇವ ಮದ್ರೂಪಚಿ ತತ್ತ್ವತಾ । ತ್ಯಾಸೀ ದೇಹಾಭಿಮಾನ ಜೇವಿತಾ । ಸದಾ ಭೂತೀ ಮದ್ಭಾವೋ ಪಾಹತಾ । ಸಿದ್ಧ ಮದ್ರೂಪತಾ ಉದ್ಬೋಧೇ ॥೩೭೧॥ ಜೇವಾಸೀ ಜಾಹಲ್ಯಾ ಮದ್ರೂಪತಾ । ಸಹಜೇ ತ್ಯಾಗೂ ವಿಷಯಚಿತ್ತಾ । ದೇಖೇ ಉಭಯಾಂಸೀ ಮಿಥ್ಯಾತ್ವತಾ । ನ ತ್ಯಾಗಿತಾ ಹಾ ತ್ಯಾಗೂ ॥೩೭೨॥ ಚಿತ್ತ ವಿಷಯಾಂಚಾ ತ್ಯಾಗೂ । ಪುತ್ರ ಹೋ ತುಮ್ಹೀ ಪುಶಿಲಾ ಚಾಂಗೂ । ತೋ ಮ್ಯಾ ಸಾಂಗಿತಲಾ ಅವ್ಯಂಗೂ । ಹಾ ಜ್ಞಾನಮಾರ್ಗೂ ಅತಿಶುದ್ಧ ॥೩೭೩॥ ಮ್ಹಣಾಲ ಮಿಥ್ಯಾ ಉಭಯಾಂಚೇ ಭಾನ । ತರೀ ಏವಡೇ ಜೇವಾಸೀ ಬಂಧನ । ಲಾಗಾವಯಾ ಕಾಂಹೀ ಕಾರಣ । ಐಸೇ ಕಾಂಹೀ ಮನ ಕಲ್ಪೀಲ ಜರೀ ॥೩೭೪॥ ಗಗನಸುಮನಾಂಚೀ ಮಾಳಾ । ಕಧೀ ಕೋಣೇ ಲೇಇಲೀ ಗಳಾ । ತಾರೂ ಬುಡೇ ಮೃಗಜಳಾ । ಹೇ ಕೋಣೇ ತರೀ ಡೋಳಾ ದೇಖಿಲೇ ಕಾಯ ॥೩೭೫॥ ಸತ್ಯಾಸೀ ಬಾಧಕ । ಕದಾ ಬಾಧೂ ನ ಶಕೇ ಲಟಿಕ । ಐಸೇ ಕಲ್ಪಾಲ ತುಮ್ಹೀ ಕಲ್ಪಕ । ತೋಹೀ ಪರಿಪಾಕ ಅವಧಾರಾ ॥೩೭೬॥ ತರೀ ಪರಿಸಾ ಸಾವಧಾನ । ತೇ ಮೀ ಸಾಂಗೇನ ನಿರೂಪಣ । ಜೇಣೇ ಜೇವಾಸೀ ಬಂಧನ । ಲಟಿಕೇಚಿ ಜಾಣ ದೃಢ ಝಾಲೇ ॥೩೭೭॥

ಗುಣೇಷು ಚಾವಿಶಚ್ಚಿತ್ತಮಭೀಕ್ಷ್ಣಂ ಗುಣಸೇವಯಾ ।
ಗುಣಾಶ್ಚ ಚಿತ್ತಪ್ರಭವಾ ಮದ್ರೂಪ ಉಭಯಂ ತ್ಯಜೇತ್ ॥೨೬॥

ಅರ್ಥ :- ಪ್ರತಿನಿತ್ಯವೂ ವಿಷಯಗಳ ಸೇವನೆಯಿಂದ ಆ ಯಾವ ಚಿತ್ತವು ವಿಷಯಗಳಲ್ಲಿ ಆಸಕ್ತವಾಗುವುದು. ಮತ್ತು ವಿಷಯಗಳೂ ಕೂಡ ಚಿತ್ತದಲ್ಲಿ ಪ್ರವಿಷ್ಟವಾಗುವುವು. ತನ್ನ ವಾಸ್ತವಿಕ ಒಳಗಿನ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡು ಈ ಎರಡನ್ನೂ ತ್ಯಾಗ ಮಾಡಬೇಕು.

ಮನುಷ್ಯನು ಸ್ವಪ್ನದಲ್ಲಿ ತನ್ನ ದೇಹವನ್ನು ಮರೆತು ಸ್ವಪ್ನದಲ್ಲಿನ ದೇಹಕ್ಕೆ ಹೆಚ್ಚು ಪ್ರೀತಿಸುವನು. ಅದರಂತೆ ಇಲ್ಲಿ ಜೀವದ ದಶೆಯು ಇದೇ ಸ್ಥಿತಿಯಾಗಿರುವುದು ॥೩೬೬॥ ನಿತ್ಯ, ಶುದ್ಧ, ಮುಕ್ತ ಮತ್ತು ಜ್ಞಾನರೂಪ ಹೀಗೆ ಜೀವದ ಸ್ವರೂಪವಾಗಿರುವುದು. ಆದರೆ ಅದಕ್ಕೆ ಅಭಿಮಾನವು ಮಿಥ್ಯೆಯಾದ ಬಂಧನದಲ್ಲಿ ಸಿಲುಕಿಸಿರುವುದು ॥೩೬೭॥ ಆದ್ದರಿಂದ ಪ್ರಾರಂಭದಲ್ಲಿ ಅಭಿಮಾನವನ್ನು ಬಿಟ್ಟು ಬಿಡಬೇಕು. ಅಂದರೆ ಮಾತ್ರ ಸರ್ವ ಪ್ರಕಾರದ ಬಂಧನೆಗಳು ಚಟಾಚಟ್ ಮುರಿದು ಬೀಳುವುವು ಮತ್ತು ಅಭಿಮಾನವನ್ನು ಬಿಟ್ಟು ಬಿಡುವುದಕ್ಕಾಗಿ ನನ್ನ ಭಜನೆಯನ್ನು ಮಾಡಬೇಕಾಗುವುದು ॥೩೬೮॥ ಆದರೆ ವೈರಾಗ್ಯವಿಲ್ಲದೇ ನನ್ನ ಭಕ್ತಿಯನ್ನು ಮಾಡುವುದು ಅದು ಪೊಳ್ಳಾಗಿರುವುದು. ಆದ್ದರಿಂದ ವೈರಾಗ್ಯಯುಕ್ತ ಭಕ್ತಿಯನ್ನು ಮಾಡಿದಾಗ ಮಾತ್ರ, ಆಗ ಜೀವಕ್ಕೆ ನನ್ನ ಸ್ವರೂಪದ ಪ್ರಾಪ್ತಿಯಾಗುವುದು ॥೩೬೯॥ ಹೃದಯದಲ್ಲಿ ವಿಷಯಗಳ ಚಿಂತನೆಯು ಸ್ವಲ್ಪವೂ ಕೂಡ ಇರದಿರುವುದು ಮತ್ತು ಸರ್ವ ಪ್ರಾಣಿ ಮಾತ್ರರಲ್ಲಿ, ಸರ್ವತ್ರವೂ ಭಗವಂತನಿರುವನೆಂಬ ಭಾವನೆಯನ್ನು ಧರಿಸುವುದು, ಇದೇ ವೈರಾಗ್ಯಯುಕ್ತ ಭಕ್ತಿಯಾಗಿರುವುದು. ಇದು ಎಂದಿಗೆ ಪ್ರಾಪ್ತವಾಗುವುದೋ , ಅಂದಿಗೆ ನನ್ನ ಸ್ವರೂಪದಲ್ಲಿ ಜೀವದ ಪ್ರವೇಶವಾಗುವುದು ॥೩೭೦॥ ವಾಸ್ತವಿಕವಾಗಿ ನೋಡಲು ಯಾವ ಈ ಜೀವವು ನನ್ನದೇ ಸ್ವರೂಪವಾಗಿರುವುದು. ಆದರೆ ಅದಕ್ಕೆ ದೇಹದ ಅಭಿಮಾನವು ಪೋಶಿಸುತ್ತಿರುವುದು. ಅದಕ್ಕಾಗಿ ಸದಾ ಸರ್ವಕಾಲದಲ್ಲಿ ಸರ್ವ ಪ್ರಾಣಿಮಾತ್ರರಲ್ಲಿ ನನ್ನ ಭಾವನೆಯನ್ನೇ ಇಡಬೇಕು. ಆಗ ನಿನ್ನಷ್ಟಕ್ಕೆ ನೀನೇ ನನ್ನಲ್ಲಿ ಏಕರೂಪನಾಗುವೆ ॥೩೭೧॥ ಜೀವಕ್ಕೆ ನನ್ನ ಸ್ವರೂಪವು ಪ್ರಾಪ್ತವಾಯಿತೆಂದರೆ ಚಿತ್ತ ಮತ್ತು ವಿಷಯ ಈ ಎರಡರ ತ್ಯಾಗವು ಸಹಜವಾಗಿಯೇ ಸಾಧಿಸುವುದು. ಏಕೆಂದರೆ ಈ ಎರಡೂ ಕೂಡ ಮಿಥ್ಯವೇ ಆಗಿರುವುವು. ತ್ಯಾಗವನ್ನು ಮಾಡದೇ ಈ ತ್ಯಾಗವು ಸಾಧಿಸುವುದು ॥೩೭೨॥ ಹೇ ಪುತ್ರರೇ, ನೀವು ಚಿತ್ತದ ಮತ್ತು ವಿಷಯಗಳ ತ್ಯಾಗಕ್ಕಾಗಿ ಕೇಳಿರುವುದು ಬಹಳ ಒಳ್ಳೆಯದು ಮಾಡಿರುವಿರಿ. ಆ ತ್ಯಾಗವನ್ನು ನಾನು ಯಥಾಸಾಂಗವಾಗಿ ನಿಮಗೆ ಹೇಳಿರುವೆನು. ಈ ಜ್ಞಾನಮಾರ್ಗವು ಅತ್ಯಂತ ಶುದ್ಧವಾಗಿರುವುದು ॥೩೭೩॥ ಉಭಯರ ಭಾನವೂ ಒಂದು ವೇಳೆ ಮಿಥ್ಯಾಯಾಗಿರಲು ಜೀವಕ್ಕೆ ಇಂತಹ ಬಂಧನವು ಆಗುವ ಕಾರಣವೇನು ? ಹೀಗೆ ಕದಾಚಿತ್ ನಿಮಗೆ ಅನಿಸೀತು ॥೩೭೪॥ ಆಕಾಶ ಪುಷ್ಪದ ಮಾಲೆಯನ್ನು ಯಾರಾದರೂ ಎಂದಾದರೂ ಕೊರಳಲ್ಲಿ ಹಾಕಿರುವರೇ? ಅಥವಾ ಹಡಗವು ಎಂದಾದರೂ ಮೃಗಜಲದಲ್ಲಿ ಮುಳುಗಿರುವುದೇ? ॥೩೭೫॥ ಅದರಂತೆ ಸತ್ಯಕ್ಕೆ ಮಿಥ್ಯೆಯು ಎಂದಿಗೂ ಬಾಧಿಸಲು ಶಕ್ಯವಿಲ್ಲ. ಹೀಗೆ ಕಲ್ಪನೆಯು ನಿಮ್ಮ ಮನದಲ್ಲಿ ಬರಬಹುದು. ಅದಕ್ಕಾಗಿ ಅದರ ಸಮಾಧಾನವನ್ನು ಕೇಳಿರಿ ॥೩೭೬॥ ಅದಕ್ಕಾಗಿ ಈಗ ನೀವು ಏಕಾಗ್ರ ಚಿತ್ತದಿಂದ ಕೇಳಿರಿ. ಜೀವಕ್ಕೆ ಮಿಥ್ಯೆಯಾಗಿರುವ ಬಂಧನವು ಹೇಗೆ ದೃಢವಾಯಿತು? ಅದನ್ನು ನಾನು ಈಗ ನಿಮಗೆ ಹೇಳುವೆನು ॥೩೭೭॥

ಅನಾದಿ ಸಂಸಾರ ಮಾಳೇಚ್ಯಾ ಠಾಯೀ । ನಿತ್ಯ ವಿಷಯ ಭೋಗಿಲೇ ಪಾಹೀ । ತೇ ಠಸಾವಲೇ ಚಿತ್ತಾಚ್ಯಾ ಠಾಯೀ । ವಾರಂವಾರ ದೇಹೀ ಸೇವಿತಾ ।೩೭೮॥ ಚಿತ್ತಾಸೀ ವಿಷಯಾಂಚೀ ಅತಿಪ್ರೀತೀ । ತೇಣೇ ವಾಢಲೀ ವಿಷಯಾಸಕ್ತೀ । ತೇ ಪ್ರವೇಶಲೇ ವಿಷಯಾಂಪ್ರತೀ । ನ ನಿಘೇ ಮಾಗುತೀ ಸರ್ವಥಾ ।೩೭೯॥ ಬುದ್ಧೀಸೀ ವಿಷಯಾಂಚೇ ಧ್ಯಾನ । ಚಿತ್ತೀ ವಿಷಯಾಂಚೇ ಚಿಂತನ । ವಿಷಯಾಲಾಗೀ ತಳಮಳೀ ಮನ । ವಿಷಯಾಭಿಮಾನ ತೇಣೇ ಝುಲಾ ।೩೮೦॥ ವಿಷಯೀ ಖವಳಲ್ಯಾ ಅಭಿಮಾನ । ದೇಹದ್ವಯಾಚೇ ದೃಢಬಂಧನ । ಜೀವಾಸಿ ಲಾಗಲೇ ಅತಿಕಠಿಣ । ಪರಮ ದಾರುಣ ದುಸ್ತರ ।೩೮೧॥ ಮಗ ತ್ಯಾ ದೇಹಾಚೇ ವಿಕಾರ । ತೇ ಆಪುಲೇ ಮಾನೀ ಸಾಚಾರ । ಅಂಧ ಪಂಗೂ ಮೀ ಕುಷ್ಠೀ ನರ । ಸ್ವರೂಪೇ ಸುಂದರ ಮೀ ಜ್ಞಾತಾ ।೩೮೨॥ ಮೀ ದೇಹ ಹೇ ಮಾನೋನಿ ಚಿತ್ತೀ । ನಿಜರೂಪ ವಿಸರಲಾ ಭಾವಾರ್ಥೇ । ಹೇ ಮಿಥ್ಯಾಬಂಧನ ಜೀವಾತೇ । ಸತ್ಯತ್ವೇ ತ್ಯಾತೇ ಅಭಿಮಾನೂ ।೩೮೩॥ ಮಿಥ್ಯಾ ಬುದ್ಧಿಬಳಾಚಾ ಖೇಳ । ಹಾರೀ ಜೈತಿ ಹೀ ನಿಷ್ಫಳ । ತರೀ ಖೇಳತ್ಯಾ ಅಭಿಮಾನ ಪ್ರಬಳ । ತೈಸೇ ದೇಹಬಳ ಜೀವಾಸೀ ।೩೮೪॥ ತ್ಯಾ ಖೇಳಾಚೇ ಘೋಡೇ ಹಸ್ತೀ । ಪಹಿಲೇ ಕಾಯ ಜೇತ ಹೋತೀ । ಮಾ ಮಾರಿಲೇ ಮ್ಹಣೋನಿ ಭಾಂಡತೀ । ತೇವೀ ಜನ್ಮಪಂಕ್ತೀ ಜೀವಾಸೀ ।೩೮೫॥ ಹೇ ನಿರಸಾವಯಾ ಜೀವಬಂಧನ । ನಿಃಶೇಷ ಸಾಂಡಾವಾ ದೇಹಾಭಿಮಾನ । ಅಭಿಮಾನ ಸಾಂಡಿತಾಂಚಿ ಜಾಣ । ಮದ್ರೂಪಣ ಸಹಜೇಂಚೀ ।೩೮೬॥ ಜೀವೇ ಸಾಧಿಲ್ಯಾ ಮದ್ರೂಪತಾ । ಸಹಜೇಂಚಿ ತ್ಯಾಗ ವಿಷಯಚಿತ್ತಾ । ಮಾಝೀ ಸ್ವರೂಪೀ ಅಹಂತಾ । ನಾಹೀ ವಾರ್ತಾ ವಿಷಯಾಂಚೀ ।೩೮೭॥ ಜೇವ್ಹಾ ಬುದ್ಧಿಬಳಾಂಚಾ ಖೇಳ ಮೋಡೇ । ತೇವ್ಹಾ ರಾಜಾಪ್ರಧಾನಾದಿ ಲಾಂಕುಡೇ । ತೇವೀ ಅಹಂಕಾರೂ ನಿಮಾಲ್ಯಾ ಪುಢೇ । ಪ್ರಪಂಚ ಉಡೇ ಮಿಥ್ಯಾತ್ವೇ ।೩೮೮॥ ಜೇವೀ ಸ್ವಪ್ನೀಚಾ ಸ್ವಪ್ನಾಭಿಮಾನ । ದಾರಾ ಪುತ್ರ ಸ್ವಜನ ಧನ । ಸ್ವದೇಹೇಸೀ ಮಿಥ್ಯಾ ಜಾಣ । ಜಾಗೇಪಣ ಝಾಲಿಯಾ ।೩೮೯॥ ತೇವೀ ಪಾವಲಿಯಾ ಮಾಝೀ ಸ್ವರೂಪತಾ । ಕೈಚಾ ದೇಹ ಕೈಚೀ ಅಹಂತಾ । ವಿಷಯಚಿತ್ತಾಂಚೀ ವಾರ್ತಾ । ನಾಹೀ ಅವಸ್ಥಾ ಗುಣತ್ರಯಾ ।೩೯೦॥

ಅನಾದಿಕಾಲದಿಂದ ಸಂಸಾರದ ಮಾಲಿಕೆಯಲ್ಲಿ ನಿತ್ಯವೂ ವಿಷಯಗಳನ್ನು ಸೇವಿಸುತ್ತಿರುವುದರಿಂದ ಮತ್ತು ದೇಹವು ಅದರ ಉಪಭೋಗವನ್ನು ಪಡೆಯುತ್ತಿರುವುದರಿಂದ ಅದು ಚಿತ್ತದಲ್ಲಿ ಸಿಕ್ಕಿಕೊಂಡಿರುವುದು ।೩೭೮॥ ಚಿತ್ತಕ್ಕೆ ವಿಷಗಳಿಗಾಗಿ ಅತ್ಯಂತ ಪ್ರೇಮವಿರುವುದು. ಆದ್ದರಿಂದ ವಿಷಯಗಳ ಆಸಕ್ತಿಯು ಬೆಳೆಯುತ್ತಲೇ ಸಾಗುವುದು. ಇದು ಒಮ್ಮೆ ವಿಷಯಗಳಲ್ಲಿ ಹೊಕ್ಕಿಕೊಂಡರೆ ಸಾಕು ಅಲ್ಲಿಂದ ಮರಳಿ ಹೊರಳುವುದೇ ಇಲ್ಲ ।೩೭೯॥ ಬುದ್ಧಿಗೆ ವಿಷಯಗಳ ಧ್ಯಾನವು ಹತ್ತುವುದು, ಚಿತ್ತದಲ್ಲಿ ವಿಷಯಗಳ ಚಿಂತನೆಯು ನಡೆಯುವುದು. ಆದ್ದರಿಂದ ಮನವು ವಿಷಯಗಳಿಗಾಗಿ ತಳಮಳಿಸುತ್ತಿರುವುದು. ಅದಕ್ಕಾಗಿ ವಿಷಯಗಳಲ್ಲಿ ಅತಿಶಯವಾಗಿ ಅಭಿಮಾನವು ನಿರ್ಮಾಣವಾಗುವುದು ।೩೮೦॥ ವಿಷಯಗಳಲ್ಲಿ ಅಭಿಮಾನವು ಜೋರಾಗಿ ಬೆಳೆಯಲು ಆಗ ಎರಡೂ ದೇಹಗಳಿಗೆ ದೃಢವಾದ ಬಂಧನವು ಪ್ರಾಪ್ತವಾಗುವುದು. ಇದು ಜೀವಕ್ಕೆ ಅತ್ಯಂತ ಕಠಿಣ, ಮಹಾಭಯಂಕರ ಹಾಗೂ ದುಸ್ತರವಾಗುವುದು ।೩೮೧॥ ಆಗ ದೇಹಕ್ಕೆ ಇರುವ ವಿಕಾರಗಳೆಲ್ಲವೂ ನನ್ನದೇ ಆಗಿರುವುವು ಎಂದು ತಿಳಿಯುತ್ತಿರುವನು. ನಾನು ಕುರುಡನು, ನಾನು ಕುಂಟನು, ನಾನು ಕುಷ್ಠರೋಗಿಯು, ನಾನು ಬಹು ಸುಂದರನು, ನಾನು ತಿಳಿದ ಜ್ಞಾನಿಯಾಗಿರುವೆನು ಹೀಗೆ ತಿಳಿಯುತ್ತಿರುವನು ।೩೮೨॥ ದೇಹವೆಂದರೆ ನಾನೇ ಹೀಗೆ ಚಿತ್ತದಲ್ಲಿ ಈತನು ತಿಳಿದಿರುವನು. ಹಾಗೂ ತನ್ನ ಮೂಲವಾದ ಆತ್ಮಸ್ವರೂಪವನ್ನು ಮರೆತುಬಿಡುವನು. ದೇಹಕ್ಕಿರುವ ಸುಳ್ಳಾದ ಬಂಧನಕ್ಕೆ, ಇದೇ ನಿಜವೆಂದು ಹೀಗೆ ಈತನಿಗೆ ಅಭಿಮಾನವಾಗುತ್ತಿರುವುದು ।೩೮೩॥ ಪಗಡೆಯ ಆಟಗಳು ಮೊದಲೇ ಸುಳ್ಳಾಗಿರುವುವು. ಅಂದ ಮೇಲೆ ಅದರಲ್ಲಿ ಜಯ ಮತ್ತು ಪರಾಜಯ ಇವು ನಿಷ್ಫಲವಾಗಿರುವುವು. ಹೀಗಿದ್ದರೂ ಈ ಆಟವನ್ನು ಆಡುವವನಿಗೆ ಅದರ ಅತಿಶಯವಾದ ಅಭಿಮಾನವಿರುವುದು. ಅದರಂತೆ ಜೀವಕ್ಕೆ ದೇಹದ ಬಲವಾಗಿರುವುದು ।೩೮೪॥ ಪಗಡೆಯ ಆಟದಲ್ಲಿ ಆನೆ,ಕುದುರೆಗಳು ನಿಜವಾಗಿರುವುದಿಲ್ಲ. ಆದರೆ ಅದಕ್ಕೆ ಕೊಂದಿರುವೆ ಎಂದು ಆಟ ಆಡುವವರು ಜಗಳ ಮಾಡುತ್ತಿರುವರು. ಅದರಂತೆ ಜೀವಕ್ಕೆ ಜನ್ಮ ಮರಣದ ಸುತ್ತುವಿಕೆ ಇರುವುದು ।೩೮೫॥ ಜೀವಕ್ಕೆ ಬಂಧನವನ್ನು ಬಿಡುಸುವುದಕ್ಕಾಗಿ ದೇಹದ ಅಭಿಮಾನವನ್ನು ಸಂಪೂರ್ಣವಾಗಿ ತ್ಯಾಗ ಮಾಡಬೇಕು. ಒಂದೇ ಸಾರೆ ಅಭಿಮಾನವನ್ನು ತ್ಯಜಿಸುತ್ತಲೇ ಸಹಜವಾಗಿಯೇ ಮದ್ರೂಪವು ಪ್ರಾಪ್ತವಾಗುವುದು ।೩೮೬॥ ಜೀವವು ಮದ್ರೂಪತೆಯನ್ನು ಪ್ರಾಪ್ತ ಮಾಡುತ್ತಲೇ ಚಿತ್ತ ಮತ್ತು ವಿಷಯ ಇವುಗಳ ತ್ಯಾಗವು ಸಹಜವಾಗಿಯೇ ಸಾಧಿಸುವುದು. ಏಕೆಂದರೆ ನನ್ನ ಸ್ವರೂಪದಲ್ಲಿ ಅಹಂಕಾರ ಮತ್ತು ವಿಷಯುಗಳ ಸ್ವಲ್ಪವೂ ಕೂಡ ಅವುಗಳ ವಾರ್ತೆ ಇರುವುದಿಲ್ಲ ।೩೮೭॥ ಪಗಡೆಯ ಆಟವು ಮುಗಿಯುತ್ತಲೇ ಆಗ ಆ ಆಟದಲ್ಲಿನ ರಾಜಾ, ಪ್ರಧಾನ ಇತ್ಯಾದಿ ಎಲ್ಲವೂ ಕೇವಲ ಕಟ್ಟಿಗೆಯಾಗಿಯೇ ಇರುವುವು. ಅದರಂತೆ ಅಹಂಕಾರವು ಇಲ್ಲದಂತಾಗಲು ಕೂಡಲೇ ಪ್ರಪಂಚವು ಮಿಥ್ಯೆತ್ವದಿಂದ ಇಲ್ಲದಾಗುವುದು ।೩೮೮॥ ಸ್ವಪ್ನದಲ್ಲಿನ ಸ್ತ್ರೀ,ಪುತ್ರ, ಆಪ್ತ, ದ್ರವ್ಯ ಇವುಗಳಲ್ಲಾಗಿರುವ ಅಭಿಮಾನವು ಜಾಗೃತಾವಸ್ಥೆಯು ಪ್ರಾಪ್ತವಾಗುತ್ತಲೇ ಆಗ ತನ್ನ ಸ್ವಪ್ನದೇಹ ಸಮೇತವಾಗಿ ಎಲ್ಲ ಸ್ವಪ್ನವೂ ಸುಳ್ಳಾಗಿಬಿಡುವುದು ।೩೮೯॥ ಅದರಂತೆ ನನ್ನ ಸ್ವರೂಪವು ಪ್ರಾಪ್ತವಾಗುತ್ತಲೇ ಎಲ್ಲಿಯ ದೇಹ ? ಮತ್ತು ಯಾವುದರ ಅಹಂಕಾರ ? ಚಿತ್ತ ಮತ್ತು ವಿಷಯಗಳ ವಾರ್ತೆಯೇ ಇರುವುದಿಲ್ಲ. ಮೂರು ಗುಣಗಳಿಗೂ ಕೂಡ ಅಸ್ತಿತ್ವವಿಲ್ಲ ।೩೯೦॥

ತಿಹೀ ಅವಸ್ಥೀ ಅವಸ್ಥಾಭೂತ । ಜಾಗೃತಿಸ್ವಪ್ನಸುಷುಪ್ತಿಮಂತ । ತೋ ಹೋಊನಿ ಜೀವ ನಿರವಸ್ಥ । ಪರಮಾತ್ಮ್ಯಾಂತ ಮಿಳೇ ಕೈಸಾ ॥೯೯೧॥ ಐಸಾ ಕಾಂಹೀ ಕಲ್ಪಾಲ ಭಾವೋ । ತ್ಯಾ ಜೀವಾಸೀ ಅವಸ್ಥಾಂಚಾ ಅಭಾವೋ । ತ್ರಿಗುಣ ಗುಣಾಂಚಾ ಸ್ವಭಾವೋ । ಯಾ ವೃತ್ತಿ ಪಹಾ ಹೋ ಬುದ್ಧೀಚ್ಯಾ ॥೯೯೨॥

ಜಾಗ್ರತ್‌ಸ್ವಪ್ನಃ ಸುಷುಪ್ತಂ ಚ ಗುಣತೋ ಬುದ್ಧಿವೃತ್ತಯಃ ।
ತಾಸಾಂ ವಿಲಕ್ಷಣೋ ಜೀವಃ ಸಾಕ್ಷಿತ್ವೇನ ವಿನಿಶ್ಚಿತಃ ॥೨೭॥

ಅರ್ಥ :- ಜಾಗೃತೀ, ಸ್ವಪ್ನ ಮತ್ತು ಸುಷುಪ್ತೀ ಇವು ಬುದ್ಧಿಯ ವೃತ್ತಿಯಾಗಿರುವುವು. ಆದರೆ ಅವು ಸ್ವಾಭಾವಿಕವಾಗಿರುವುದಿಲ್ಲ. ಸತ್ವದಿಂದ ಜಾಗೃತೀ, ರಜದಿಂದ ಸ್ವಪ್ನ ಮತ್ತು ತಮದಿಂದ ಸುಷುಪ್ತಿಯಾಗಿರುವುದು. ಸಚ್ಚಿದಾನಂದದ ಸ್ವಭಾವವಿಲ್ಲ. ಈ ವೃತ್ತಿಯ ಸಾಕ್ಷಿಯಾಗಿರುವುದರಿಂದ ಜೀವವು ಅದಕ್ಕಿಂತಲೂ ವಿಲಕ್ಷಣವಾಗಿರುವುದು. ಈ ಸಿದ್ಧಾಂತವು ಶ್ರುತೀ, ಯುಕ್ತೀ ಮತ್ತು ಅನುಭೂತಿಯಿಂದ ಯುಕ್ತವಾಗಿರುವುದು.

ತಿನ್ಹೀ ಗುಣಾಂಚ್ಯಾ ತಿನ್ಹೀ ವೃತ್ತೀ । ಸತ್ವಗುಣಾಚೀ ಜಾಗೃತೀ । ರಜೋಗುಣೇ ಸ್ವಪ್ನಪ್ರಾಪ್ತೀ । ಕೇವಳ ಸುಷುಪ್ತೀ ತಮಾಚೀ ॥೯೯೩॥ ಯಾ ತಿನೀ ಅವಸ್ಥಾ ಪಾಹೀ । ದೃಢ ಜಡಲ್ಯಾ ಬುದ್ಧೀಚ್ಯಾ ಠಾಯೀ । ಜೀವಾಸೀ ಯಾಂಚಾ ಸಂಬಂಧ ನಾಹೀ । ತೋ ವೇಗಳಾ ಪಾಹೀ ಸಾಕ್ಷಿತ್ವೇ ॥೯೯೪॥ ಜೈ ಜೀವಾ ಅಂಗೀ ಅವಸ್ಥಾ ಜಡೇ । ತೈ ತೋ ಅವಸ್ಥೀಮಾಜೀ ಬುಡೇ । ತಿಹೀಂಚೇ ಸಾಕ್ಷಿತ್ವ ತ್ಯಾಸೀ ನ ಘಡೇ । ಐಕ ನಿವಾಡೇ ಅವಸ್ಥಾ ॥೯೯೫॥ ಜಾಗೃತೀಮಾಜೀ ನಾಹೀ ಸ್ವಪ್ನ । ಸ್ವಪ್ನ ಜಾಗೃತೀಸೀ ನೇಣೇ ಜಾಣ । ಸುಷುಪ್ತೀ ನೇಣೇ ಜಾಗೃತಿಸ್ವಪ್ನ । ಸುಷುಪ್ತೀಚೇ ಭಾನ ತ್ಯಾ ನೇಣತೀ ॥೯೯೬॥ ಜೀವೂ ಅವಸ್ಥಾಂಚಾ ಅಭಿಮಾನೀ । ಹೇಹೀ ನ ಘಡೇ ಜೀವಾಲಾಗುನೀ । ವಿಶ್ವ ತೈಜಸ ಪ್ರಾಜ್ಞ ತಿನ್ಹೀ । ಅವಸ್ಥಾಭಿಮಾನೀ ಹೇ ತಿಹೀಂಚೇ ॥೯೯೭॥ ಜೋ ಜೇ ಅವಸ್ಥೀಚಾ ಅಭಿಮಾನೀ । ತೋ ತೇ ಅವಸ್ಥೇಸವೇ ಜಾಯ ನಿಮೋನೀ । ಜೀವ ವೇಗಳಾ ಸಾಕ್ಷಿಪಣೇ । ಅವಸ್ಥಾಭಿಮಾನೀ ತೋ ನವ್ಹೇ ॥೯೯೮॥ ದೇಹಾತೀತ ಗುಣಾತೀತ । ತಿಹೀ ಅವಸ್ಥಾ ಅತೀತ । ದ್ರಷ್ಟಾ ಸಾಕ್ಷೀ ನಿಶ್ಚಿತ । ಜಾಣತಾ ಯೇಥ ತೋ ಜೀವೂ ॥೯೯೯॥ ಅವಸ್ಥಾಭಿಮಾನ ನಾಹೀ ಜೀವಿತಾ । ತರೀ ಕವಣ ಭೋಗೀ ತಿನೀ ಅವಸ್ಥಾ । ಮೀ ನಿಜಲೋ ಮೀಚ ಜಾಗತಾ । ಮ್ಯಾ ಸ್ವಪ್ನಾವಸ್ಥಾ ದೇಖಿಲೀ ॥೧೦೦೦॥ ಐಸಾ ಪ್ರತ್ಯಕ್ಷ ಅನುಭವೂ । ಸ್ವಯೇ ಬೋಲತಾಹೇ ಜೀವೂ । ಹಾ ಮ್ಹಣಾಲ ಜೀವಾಚಾ ಸ್ವಭಾವೂ । ಐಕ ಅಭಿಪ್ರಾವೂ ಸಾಂಗೇನ ॥೧೦೦೧॥

ಜಾಗೃತೀ, ಸ್ವಪ್ನ ಮತ್ತು ಸುಷುಪ್ತೀ ಈ ಮೂರೂ ಅವಸ್ಥೆಗಳಲ್ಲಿ, ಅವಸ್ಥಾರೂಪನಾಗಿರುವವನು ಜೀವನಾಗಿರುವನು. ಆ ಜೀವವು ಅವಸ್ಥಾಹೀನವಾಗಿ ಪರಮಾತ್ಮನಲ್ಲಿ ಹೇಗೆ ಕೂಡಿಕೊಳ್ಳಲು ಸಾಧ್ಯ? ॥೯೯೧॥ ಹೀಗೆ ಏನಾದರೂ ಕಲ್ಪನೆಯು ಮನದಲ್ಲಿ ನಿರ್ಮಾಣವಾಗಬಹುದು. ಆದರೆ ಆ ಜೀವಕ್ಕೆ ಯಾವ ಅವಸ್ಥೆಯು ಇರುವುದೇ ಇಲ್ಲ. ಅವು ಯಾವ ಮೂರು ಪ್ರಕಾರದ ಗುಣಗಳ ಸ್ವಭಾವಧರ್ಮವಾಗಿದ್ದು, ಅವುಗಳಿಂದ ಉತ್ಪನ್ನವಾಗುವ ಯಾವ ಮೂರು ವೃತ್ತಿಗಳು ಬುದ್ಧಿಗೆ ಸಂಬಂಧವು ॥೯೯೨॥

ಮೂರು ಗುಣಗಳ ಮೂರು ವೃತ್ತಿ ಇರುವುವು. ಸತ್ವಗುಣದ ಜಾಗೃತಿಯು, ರಜೋಗುಣದ ಸ್ವಪ್ನವು ಮತ್ತು ತಮೋಗುಣದ ಕೇವಲ ಸುಷುಪ್ತಿಯಾಗಿರುವುದು ॥೯೯೩॥ ಈ ಮೂರೂ ಅವಸ್ಥೆಗಳು ಬುದ್ಧಿಕಾರಣವಾಗಿ ದೃಢಸ್ವರೂಪದಲ್ಲಿ ಇರುವುವು. ಇವುಗಳಿಗೆ ಜೀವದೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಜೀವವು ಕೇವಲ ಸಾಕ್ಷಿತ್ವ ರೂಪದಿಂದ ಭಿನ್ನವಾಗಿಯೇ ಇರುವುದು ॥೯೯೪॥ ಒಂದು ವೇಳೆ ಜೀವದ ಅಂಗಕ್ಕೆ ಅವಸ್ಥೆಗಳು ಹಿಡಿದುಕೊಂಡಿದ್ದರೆ, ಅದು ಆ ಯಾವ ಅವಸ್ಥೆಗಳಲ್ಲಿಯೇ ಮುಳುಗುತ್ತಿತ್ತು. ಮೂರು ಅವಸ್ಥೆಗಳ ಸಾಕ್ಷಿತ್ವವೂ ಕೂಡ ಅದಕ್ಕೆ ಸಾಧಿಸುತ್ತಿದ್ದಿಲ್ಲ. ಅದಕ್ಕಾಗಿ ಆ ಅವಸ್ಥೆಗಳ ಸ್ಥಿತಿಯನ್ನು ಕೇಳು ॥೯೯೫॥ ಜಾಗೃತಿಯಲ್ಲಿ ಸ್ವಪ್ನವಿರುವುದಿಲ್ಲ, ಅಂದರೆ ಈ ಸ್ವಪ್ನವು ಜಾಗೃತಿಯನ್ನು ತಿಳಿಯಲಾರದು. ಇದನ್ನು ಲಕ್ಷದಲ್ಲಿಡು. ಸುಷುಪ್ತಿಯು ಜಾಗೃತಿ ಮತ್ತು ಸ್ವಪ್ನ ಈ ಎರಡನ್ನೂ ತಿಳಿಯಲಾರದು. ಹಾಗೆಯೇ ಈ ಇಬ್ಬರು ಸುಷುಪ್ತಿಯ ಭಾನವನ್ನು ತಿಳಿಯಲಾರರು ॥೯೯೬॥ ಜೀವವು ಈ ಮೂರು ಅವಸ್ಥೆಗಳ ಅಭಿಮಾನಿ ಎಂಬುವುದೂ ಕೂಡ ಸಾಧಿಸುವುದಿಲ್ಲ. ಕಾರಣವೇನೆಂದರೆ, ವಿಶ್ವ, ತೇಜಸ ಮತ್ತು ಪ್ರಾಜ್ಞ ಈ ಕ್ರಮದಿಂದ ಮೂರು ಅವಸ್ಥೆಗಳ ಅಭಿಮಾನಿಗಳಿರುವುವು ॥೯೯೭॥ ಯಾವ ಅವಸ್ಥೆಯಲ್ಲಿ ಯಾವ ಅಭಿಮಾನಿ ಇರುವುದೋ ಅದು ಆ ಅವಸ್ಥೆಯಲ್ಲಿ ಏಕರೂಪವಾಗುವುದು. ಜೀವವು ಇದು ಸಾಕ್ಷಿತ್ವದಿಂದ ಕೇವಲ ಬೇರೆಯಾಗಿಯೇ ಇರುವುದು. ಆದ್ದರಿಂದ ಅದು ಅವಸ್ಥೆಗಳ ಅಭಿಮಾನಿಯಲ್ಲ ॥೯೯೮॥ ಇಲ್ಲಿ ಜೀವ ಎಂದರೆ ಅದು ದೇಹದಿಂದ ಭಿನ್ನವಾಗಿರುವುದು, ಗುಣಗಳಿಂದ ಭಿನ್ನವಾಗಿರುವುದು, ಮೂರು ಅವಸ್ಥೆಗಳಿಂದ ಭಿನ್ನವಾಗಿರುವುದು, ಕೇವಲ ದ್ರಷ್ಟಾ, ಸಾಕ್ಷೀ ಮತ್ತು ಅದುವೇ ನಿಜವಾಗಿ ತಿಳಿಯುವವನಾಗಿರುವುದು ॥೯೯೯॥ ಜೀವಕ್ಕೆ ಈ ಅವಸ್ಥೆಗಳ ಅಭಿಮಾನವು ಇಲ್ಲವೆಂದು ಹೇಳಿದರೆ ಈ ಮೂರೂ ಅವಸ್ಥೆಗಳ ಭೋಕ್ತನು ಯಾರು? ನಾನು ಮಲಗಿಕೊಂಡೆ, ನಾನು ಎಚ್ಚರಾದೆ, ನಾನು ಸ್ವಪ್ನವನ್ನು ಕಂಡೆ, ॥೧೦೦೦॥ ಹೀಗೆ ಜೀವವು ಸ್ವತಃ ಹೇಳುತ್ತಿರುವುದು ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವುದು. ಹಾಗಾದರೆ ಇದು ಜೀವದ ಸ್ವಭಾವವಾಗಿದೆ ಎಂದು ಹೀಗೆ ಹೇಳಿದರೆ ಆ ವಿಷಯದ ನಿರ್ಣಯವನ್ನು ಹೇಳುವೆನು, ಕೇಳು ॥೧೦೦೧॥

ಯರ್ಹಿ ಸಂಸೃತಿಬಂಧೋಽಯಮಾತ್ಮನೋ ಗುಣವೃತ್ತಿದಃ । ಮಯಿ ತುರ್ಯೇ ಸ್ಥಿತೋ ಜಹ್ಯಾತ್ತ್ಯಾಗಸ್ತದ್ ಗುಣಚೇತಸಾಮ್ ॥೨೮॥

ಅರ್ಥ:- ಬುದ್ಧಿ ವೃತ್ತಿಯಿಂದ ಆಗುವ ಈ ಬಂಧನವಾಗಿದೆ. ಇದು ಆತ್ಮಕ್ಕೆ ಗುಣವೃತ್ತಿಯನ್ನು ಕೊಡುವುದು. ಆದ್ದರಿಂದ ನೀವು ತತ್ವದಲ್ಲಿ ಸ್ಥಿತರಾಗಿ ಈ ಬುದ್ಧಿಯ ಬಂಧನದ ತ್ಯಾಗವನ್ನು ಮಾಡಿರಿ. ಹೀಗೆ ಮಾಡುವುದರಿಂದ ಗುಣ ಮತ್ತು ಚಿತ್ತ ಇವುಗಳ ಪರಸ್ಪರ ತ್ಯಾಗವಾಗುವುದು.

ಜೋ ಡೋಲ್ಹಾರಾ ಬೈಸೇ ಯಥಾಸುಖೇ । ತೋ ನ ಹಾಲತಾ ಹಾಲೇ ತೇಣೇ ಹರಿಖೇ । ಉಂಚ ನೀಚ ಖಾಯ ರ್ಝೋಂಕೇ । ನಿಜಕೌತುಕೇ ಹಿಂದೋಳೇ ॥೪೦೨॥ ಹಿಂದೋಳತಾಂಹೀ ಪ್ರಬಳ । ಡೋಲ್ಹಾರಾಚಿ ಅತಿಚಂಚಳ । ಬೈಸಲಾ ತೋ ನಿಜನಿಶ್ಚಳ । ಮಾನೀ ಕೇವಳ ಮೀ ಹಾಲತೋ ॥೪೦೩॥ ಜೀವಾಸೀ ಝಾಲೀ ತೈಶೀ ವಾನೀ । ಅಹಂಮಮತೇಚ್ಯಾ ಅಭಿಮಾನೀ । ತಿನೀ ಅವಸ್ಥಾ ಸ್ವಯೇ ಮಾನೀ । ಜೇವೀ ಕಾ ಸ್ವಪ್ನೀ ಗೃಹದಾರಾ ॥೪೦೪॥ ಹೋ ಕಾ ಲೋಖಂಡಕಾಮ ಘಡತಾ । ಲೋಹಾಚೇ ಘಾಯ ಅಗ್ನೀಚೇ ಮಾಥಾ । ಪ್ರತ್ಯಕ್ಷ ದಿಸತೀ ವಾಜತಾ । ಲೋಹತದಾತ್ಮತಾಸಂಯೋಗೇ ॥೪೦೫॥ ತೇಣೇ ಅಗ್ನಿಸಂಗೇ ವಾಡೇಕೋಡೇ । ಲೋಹಕಾಮಚಿ ಘಡೇ ಮೋಡೇ । ಪರೀ ಅಗ್ನೀಸೀ ಘಡಮೋಡ ನ ಘಡೇ । ತೇಣೇ ಪಡಿಪಾಡೇ ಜೀವೂ ಯೇಥೇ ॥೪೦೬॥ ಜೇವೀ ಅಗ್ನಿವೀಣ ಲೋಹ ನ ಘಡೇ । ತೇವೀ ಆತ್ಮಸಂಯೋಗೇವೀಣ ಪುಢೇ । ಬುದ್ಧಿ ಕೇವಳ ಜಡ ವೇಡೇ । ಕರ್ಮಕ್ರಿಯಾ ನಾತುಡೇ ಸರ್ವಥಾ ॥೪೦೭॥ ಲೋಹ ಘಡವೂನಿ ಅಗ್ನಿ ನ ಘಡತಾ । ಕರ್ಮ ಕರವೂನಿ ಜೀವ ಅಕರ್ತಾ । ತರೀ ವೃತ್ತಿಸಂಘೇ ತದಾತ್ಮತಾ । ವೃತ್ತೀಸಂಗೇ ತದಾತ್ಮತಾ । ಅಹಂಕರ್ತಾ ಹೇ ಮಾನೀ ॥೪೦೮॥ ಜೀವ ಆಪುಲೇ ಪ್ರಕಾಶತಾ । ಝಾಲಾ ವೃತ್ತೀತೇ ಪ್ರಕಾಶ ಕರಿತಾ । ವೃತ್ತಿ ಜೀವಾಸೀ ನಾನಾವಸ್ಥಾ । ನಿಜಸ್ವಭಾವತಾ ದೇತಸೇ ॥೪೦೯॥ ಸೂರ್ಯೇ ಪ್ರಕಾಶಿಲೇ ಜಳ । ಜಳೇ ಕೇಲೇ ಪ್ರತಿಮಂಡಳ । ಖಳಾಳ ಚಂಚಳ ನಿಶ್ಚಳ । ಕಾಂಪೇ ಚಳಚಳ ಜಳಕಂಪೇ ॥೪೧೦॥ ಸೂರ್ಯಾಚೀ ಗಗನೀ ನಿತ್ಯ ವಸ್ತೀ । ತೋ ಜಳೇ ಆಣಿಲಾ ಅಧೋಗತೀ । ತೇವೀ ವೃತ್ತೀಚಿಯಾ ನಿಜಖ್ಯಾತೀ । ಮುಕ್ತಾಂತೇ ದಾವಿತೀ ಬದ್ಧ ಕರೂನೀ ॥೪೧೧॥ ಆತ್ಮ್ಯಾನೇ ಪ್ರಕಾಶಿಲೀ ವೃತ್ತೀ । ವೃತ್ತೀನೇ ಆತ್ಮ್ಯಾಸೀ ಜೀವಪ್ರಾಪ್ತೀ । ಜೀವಾ ಜೀವತ್ವೇ ದೇಹಾಸಕ್ತೀ । ಸುಖದುಃಖಪ್ರಾಪ್ತೀ ತೇಣೇ ಭೋಗೀ ॥೪೧೨॥

ತೂಗುಮಂಚದ ಮೇಲೆ ಕುಳಿತುಕೊಂಡವನು ತಾನು ಅಲುಗಾಡದಿದ್ದರೂ ಆ ತೂಗುಮಂಚದ ಅಲುಗಾಟದಿಂದ ಅಲ್ಲಾಡುತ್ತಿರುವನು. ಅವನು ಸುಖವಾಗಿ ಮೇಲೆ ಕೆಳಗೆ ತೂಗಾಡುತ್ತಿರುವನು. ತನ್ನ ಅಭಿರುಚಿಗಾಗಿ ಆತನು ಇದನ್ನು ಮಾಡುತ್ತಿರುವನು ॥೪೦೨॥ ಆತನು ಜೋರಾಗಿ ತೂಗಾಡುತ್ತಿದ್ದರೂ ಕೂಡ ಆ ವೇಳೆಯಲ್ಲಿ ಕೇವಲ ತೂಗುಮಂಚವಷ್ಟೇ ತೂಗುತ್ತಿರುವುದು. ತೂಗಾಡುತ್ತಿರುವವನು ತನ್ನ ಸ್ಥಾನದಲ್ಲಿ ಸ್ಥಿರವಾಗಿಯೇ ಕುಳಿತಿರುವನು. ಹೀಗಿದ್ದರೂ ಕೂಡ ನಾನು ತೂಗಾಡುತ್ತಿರುವೆ ಎಂದು ಸುಮ್ಮನೇ ತಿಳಿಯುವನು ॥೪೦೩॥ ಇದರಂತೆ ಜೀವದ ಸ್ಥಿತಿಯೂ ಕೂಡ ಹೀಗೆಯೇ ಆಗಿರುವುದು. ಯಾವ ಪ್ರಕಾರವಾಗಿ ಸ್ವಪ್ನದಲ್ಲಿ ಮನೆಮಾರು, ಸ್ತ್ರೀಪುತ್ರಾದಿಗಳು ನಿಜವೆಂದು ಭಾಸವಾಗುವುವೋ, ಅದರಂತೆ ಅಹಂ ಮಮತೆಯ ಅಭಿಮಾನದ ಆಧಾರದಿಂದ ಜೀವವು ಮೂರೂ ಅವಸ್ಥೆಗಳನ್ನು ತನ್ನದೇ ಎಂದು ತಿಳಿಯುತ್ತಿರುವುದು ॥೪೦೪॥ ಕಬ್ಬಿಣದ ಕೆಲಸವನ್ನು ಮಾಡುತ್ತಿರಲು ಕಬ್ಬಿಣಕ್ಕೆ ಅಗ್ನಿಯ ತಾದಾತ್ಮ್ಯವಾಗಿರುವುದರಿಂದ ಆಗ ಕಬ್ಬಿಣಕ್ಕೆ ಹೊಡೆತವನ್ನು ಹೊಡೆಯುವಾಗ್ಗೆ ಪ್ರತ್ಯಕ್ಷವಾಗಿ ಅಗ್ನಿಯ ತಲೆಯ ಮೇಲೆ ಹೊಡೆದಂತೆ ಕಾಣುವುದು ॥೪೦೫॥ ಆ ಯಾವ ಅಗ್ನಿಯ ಸಂಯೋಗದಿಂದ ಕಬ್ಬಿಣದ ಕಾರ್ಯವು ನಡೆಯುತ್ತಿರುವುದು. ಅದು ಉದ್ದ ಅಗಲವಾಗುತ್ತಿರುವುದು. ಆದರೆ ಅಗ್ನಿಯು ಹೀಗೆ ಹಿಡಿಯುವುದು, ಮುರಿಯುವುದು ಹಿಗ್ಗು ಮುಗ್ಗು ಆಗುವುದಿಲ್ಲ. ಅದರಂತೆ ಜೀವವೂ ಕೂಡ ಈ ಮೂರೂ ಅವಸ್ಥೆಗಳಿಂದ ಅಲಿಪ್ತವಾಗಿರುವುದು ॥೪೦೬॥ ಯಾವ ಪ್ರಕಾರವಾಗಿ ಅಗ್ನಿಯನ್ನು ಬಿಟ್ಟು ಕಬ್ಬಿಣವು ಸಿದ್ಧಗೊಳ್ಳುವುದಿಲ್ಲವೋ, ಅದರಂತೆ ಆತ್ಮದ ಸಂಯೋಗವನ್ನು ಬಿಟ್ಟುಬಿಟ್ಟರೆ ಬುದ್ಧಿಯು ಕೇವಲ ಜಡಮೂಢವಾಗಿರುವುದು. ಆತ್ಮವನ್ನು ಬಿಟ್ಟುಕೊಟ್ಟು ಇದಕ್ಕೆ ಯಾವ ಕರ್ಮಕ್ರಿಯೆಗಳನ್ನೂ ಮಾಡಲು ಸಾಧ್ಯವಿಲ್ಲ ॥೪೦೭॥ ಕಬ್ಬಿಣಕ್ಕೆ ಹಿಗ್ಗುಮುಗ್ಗು ಮಾಡಿ ಅಗ್ನಿಯು ತಾನು ಹಾಗೆ ಯಾವ ರೀತಿ ಆಗುವುದಿಲ್ಲವೋ, ಅದರಂತೆ ಜೀವಾತ್ಮನು ತಾನು ಕರ್ಮವನ್ನು ಮಾಡಿಯೂ ತಾನು ಅಕರ್ತನಾಗಿರುವನು. ಹೀಗಿದ್ದರೂ ಕೂಡ ಆತನು ತಾದಾತ್ಮ್ಯನಾಗಿದ್ದರಿಂದ ''ನಾನು ಕರ್ತನು'' ಎಂದು ಹೀಗೆ ಹೇಳುವನು ॥೪೦೮॥ ಜೀವವು ತನ್ನ ಪ್ರಕಾಶದಿಂದ ವೃತ್ತಿಗೆ ಪ್ರಕಾಶಿತವನ್ನಾಗಿ ಮಾಡಿರುವುದು ಮತ್ತು ತನ್ನಸ್ವಭಾವಾನುಸಾರವಾಗಿ ಈ ಕೃತಿಗಳ ಜೀವಕ್ಕೆ ಅನೇಕ ಪ್ರಕಾರದ ಅವಸ್ಥೆಗಳನ್ನು ಕೊಡುತ್ತಿರುವುದು ॥೪೦೯॥ ಸೂರ್ಯನು ತಾನು ನೀರಿನಲ್ಲಿ ಪ್ರಕಾಶವನ್ನು ಚೆಲ್ಲುವನು. ಆಗ ಆ ನೀರು ಸೂರ್ಯನ ಪ್ರತಿಬಿಂಬವನ್ನು ಧರಿಸುವುದು. ಈ ನೀರು ಅಲುಗಾಡುತ್ತಲೇ ಸೂರ್ಯನು ಚಂಚಲನಾಗುವನು. ನೀರು ಸ್ಥಿರವಾಗುತ್ತಲೇ ತಾನೂ ಕೂಡ ನಿಶ್ಚಲನಾಗುವನು. ನೀರು ಜೋರಾಗಿ ಅಲುಗಾಡಲು ಆಗ ಸೂರ್ಯನ ಬಿಂಬವು ಗಡಗಡನೇ ನಡುಗುತ್ತಿರುವಂತೆ ಭಾಸವಾಗುತ್ತಿರುವುದು ॥೪೧೦॥ ಸೂರ್ಯನಾದ ಈತನು ನಿತ್ಯವೂ ಆಕಾಶದಲ್ಲಿ ಇರುವಾತನಾಗಿರುವನು. ಆದರೆ ನೀರು ಆತನಿಗೆ ಅಧೋಗತಿ ಅಂದರೆ ಕೆಳಗೆ ಇಳಿಸುವುದು. ಅದರಂತೆ ವೃತ್ತಿಯು ಇದು ತನ್ನ ಖ್ಯಾತಿಯಂತೆ ಮುಕ್ತನಿಗೂ ಕೂಡ ಬದ್ಧನನ್ನಾಗಿ ಮಾಡಿ ತೋರಿಸುವುದು ॥೪೧೧॥ ಅದರಂತೆ ಆತ್ಮದಿಂದ ಅಂತಃಕರಣಗಳಲ್ಲಿ ಪ್ರಕಾಶವು ಬೀಳುತ್ತಲೇ ಅವುಗಳಲ್ಲಿ ಆತ್ಮನ ಪ್ರತಿಬಿಂಬವು ಬೀಳುವುದು. ಅದರಿಂದ ಆತ್ಮಕ್ಕೆ ಜೀವತ್ವವು ಪ್ರಾಪ್ತವಾಗುವುದು. ಜೀವತ್ವದಿಂದ ಜೀವಕ್ಕೆ ದೇಹದ ಆಸಕ್ತಿಯು ಹುಟ್ಟುವುದು. ಆದ್ದರಿಂದ ಜೀವವು ಸುಖದುಃಖವನ್ನು ಭೋಗಿಸುತ್ತಿರುವುದು ॥೪೧೨॥

ಏವಂ ವೃತ್ತೀಚಿಯಾ ಸಂಗತೀ । ವಾಢಲೀ ವಿಷಯಾಂಚೀ ಆಸಕ್ತೀ । ತೇಣೇ ಸಂಸಾರಬಂಧಪ್ರಾಪ್ತೀ । ಝಾಲೀ ನಿಶ್ಚಿತೀ ಜೀವಾಸೀ ॥೪೧೩॥ ಹೋ ಕಾ ಗುಣಚಿತ್ತ ವಿಷಯಾಸಕ್ತೀ । ಜರೀ ಝಾಲೀ ಜೀವಾಸೀ ಬಂಧಪ್ರಾಪ್ತೀ । ತರೀ ಆವರಾವೀ ವಿಷಯವೃತ್ತೀ । ವೈರಾಗ್ಯಯುಕ್ತೀ ಗುರುಕೃಪಾ ॥೪೧೪॥ ಐಕ ಗುರುಕೃಪೇಚೀ ಮಾತೂ । ತಿಹೀ ಅವಸ್ಥಾ ಮಾಜೀ ಸತತೂ । ಜೋ ಮೀ ತುರೀಯ ಗುಣಾತೀತೂ । ತೇ ಅಭ್ಯಾಸೀ ಲಾವಿತೂ ನಿಜಬೋಧೇ ॥೪೧೫॥ ನವಲ ಅಭ್ಯಾಸಾಚೀ ಗೋಠೀ । ವಿಷಯವೃತ್ತೀಚ್ಯಾ ಪಾಠೀಪೋಟೀ । ಮಜ ತುರೀಯಾತೇ ದಾವೀ ದಿಠೀ । ಬೋಧಪರಿಪಾಟೀ ನಿಜಬೋಧೇ ॥೪೧೬॥ ಮೀ ತುರೀಯ ತಂವ ಸಂತತು । ಸರ್ವೀ ಅಸೇ ಸರ್ವಗತು । ಶಿಷ್ಯವೃತ್ತೀಸೀ ಮಜ ಆಂತು । ಗುರೂ ನಿಜಸ್ವಾರ್ಥು ದಾಖವೀ ॥೪೧೭॥ ಸುತಾವೇಗಳೇ ಲುಗಡೇ । ಕರೂ ಜಾತಾ ಗಾ ಉಘಡೇ । ತೇಥ ಕ್ರಿಯಾಚಿ ಲಾಜೋನಿ ಬುಡೇ । ಮಾಗೇ ಪುಢೇ ಸೂತಚಿ ॥೪೧೮॥ ತೇವೀ ಸಾಧಕಾಸೀ ಜಾಣ । ವಿಷಯಾಂಚೇ ವಿಷಯಭಾನ । ಮಾಝೇ ಸ್ವರೂಪೀ ನವ್ಹೇಚಿ ಭಿನ್ನ । ಚೈತನ್ಯಘನ ಮೀಚಿ ಮೀ ॥೪೧೯॥ ತೇಥ ನಾಮರೂಪವರ್ಣಭೇದ । ನಾಹೀ ಕರ್ಮ ಕರ್ತಾ ವಿಧಿವಾದ । ಬುಡಾಲೇ ಪ್ರಣವೇಸೀ ವೇದ । ಕೇವಳ ಶುದ್ಧ ಮೀ ಏಕ ॥೪೨೦॥ ತೇಥೇ ಭ್ರಮೇಸಹಿತ ಪಳಾಲೀ ಭ್ರಾಂತೀ । ಕ್ರಿಯೇಸಹಿತ ಗಳಾಲೀ ಪ್ರವೃತ್ತೀ । ಲಾಜಾ ವಿರಾಲೀ ನಿವೃತ್ತೀ । ಸ್ವಸ್ವರೂಪೀ ವೃತ್ತೀ ವಿನಟಲೀ ॥೪೨೧॥ ಸೂರ್ಯೋದಯೋ ಜಾಹಲ್ಯಾಪಾಠೀ । ಸಮೂಳ ಅಂಧಾರಾತೇ ಘೋಟೀ । ಖದ್ಯೋತಾಚೀ ನಳೀ ನಿವಟೀ । ನಕ್ಷತ್ರಕೋಟೀ ತತ್ಕಾಳ ಗಿಳೀ ॥೪೨೨॥ ತೇವೀ ಮಾಝೀ ಸ್ವರೂಪಪ್ರಾಪ್ತೀ । ಮಾಯೇಚೀ ಮಾವಳೇ ಸ್ಫೂರ್ತೀ । ಲಾಜಾ ವಿಸರೇ ಪ್ರವತ್ತಿ ನಿವೃತ್ತೀ । ನಿತ್ಯತೃಪ್ತೀ ಸ್ವಾನಂದೇ ॥೪೨೩॥ ಐಶೀ ಮಾಝ್ಯಾ ಸ್ವರೂಪಾಚೀ ಗೋಢೀ । ಜೈ ಸಾಧಕಾ ಲಾಗೇ ಧಡಪುಡೀ । ತೈ ಚಿತ್ತ ವಿಷಯಾತೇ ಸಾಂಡೀ । ವಿಷಯೋ ವೋಸಂಡೀ ಚಿತ್ತಾತೇ ॥೪೨೪॥ ಜೇ ದೇಠೀ ವಾಢಲೀ ಫಳೇ । ತೀಂಚಿ ಪರಿಪಾಕಾಚೇ ವೇಳೇ । ಹೋತೀ ದೇಠಾವೇಗಳೇ । ದೇಠೂ ತೋ ಫಳೇ ಧರೀನಾ ॥೪೨೫॥ ಕಾ ಮಂಥೂನಿ ಕಾಢಿಲೇ ನವನೀತ । ತೇ ಪರತೋನಿ ಘಾತಲ್ಯಾ ತಾಕಾಆಂತ । ತೇ ತಾಕೇಸೀ ಹೋಯ ಅಲಿಪ್ತ । ತೈಸೇ ಚಿತ್ತ ವಿಷಯಾಂಸೀ ॥೪೨೬॥

ಅದರಂತೆ ವೃತ್ತಿಯ ಸಂಗತಿಯಿಂದ ವಿಷಯಗಳ ಆಸಕ್ತಿಯು ಬೆಳೆಯಿತು ಮತ್ತು ಜೀವಕ್ಕೆ ಸಂಸಾರಬಂಧನವು ಒದಗಿ ಬಂದಿತು ॥೪೧೩॥ ಈ ಪ್ರಕಾರವಾಗಿ ಗುಣಚಿತ್ತಗಳ ವಿಷಯಾಸಕ್ತಿಯಿಂದ ಜೀವಕ್ಕೆ ಬಂಧನವು ಪ್ರಾಪ್ತವಾಗಿದ್ದರೂ ಕೂಡ ವೈರಾಗ್ಯಭಾವದಿಂದ ಮತ್ತು ಗುರುಗಳ ಕೃಪೆಯಿಂದ ವಿಷಯ ವೃತ್ತಿಯನ್ನು ಹತ್ತಿಕ್ಕುತ್ತಿರಬೇಕು ॥೪೧೪॥ ಈಗ ಗುರುಕೃಪೆಯ ಮಾತನ್ನು ಕೇಳು. ಗುರುಕೃಪೆಯ ಪ್ರಭಾವವು ದೊಡ್ಡದಾಗಿರುವುದು. ಅವರು ಮೂರೂ ಅವಸ್ಥೆಗಳಲ್ಲಿ ಗುಣಾತೀತನಾಗಿರುವ ನಾನು ''ತುರ್ಯ'' ಸಾಕ್ಷಿಯಾಗಿರುವೆನೆಂಬ ಆ ನನ್ನ ಆತ್ಮಜ್ಞಾನದ ಅಭ್ಯಾಸವನ್ನು ಮಾಡಲು ಹಚ್ಚುವರು ॥೪೧೫॥ ಅಭ್ಯಾಸದ ಸಾಮರ್ಥ್ಯವು ಬಹು ವಿಲಕ್ಷಣವಾಗಿದೆ. ಅದು ವಿಷಯಗಳ ಹಿಂದೆ ಮುಂದೆ ಇರುವ ನನ್ನ ತುರ್ಯಾ ಆತ್ಮನ ಜ್ಞಾನವನ್ನು ಮಾಡಿಕೊಡುವುದು ॥೪೧೬॥ ನಾನಾದರೂ ಯಾವಾಗಲೂ ಜ್ಞಾನಸ್ವರೂಪನಾಗಿರುವೆನು. ನಾನು ಸರ್ವರಲ್ಲಿ ಸರ್ವಸ್ವದಿಂದ ವ್ಯಾಪಿಸಿರುವೆನು. ಆದ್ದರಿಂದ ಗುರುವು ಯಾವ ಶಿಷ್ಯನ ವೃತ್ತಿಯಲ್ಲಿರುವ ನಿಜಸ್ವಾರ್ಥವನ್ನು ತೋರಿಸಿಕೊಡುವನು ॥೪೧೭॥ ಅರೇ! ಸೀರೆಯನ್ನು ನೂಲಿನಿಂದ ಪರಿಪೂರ್ಣವಾಗಿ ಬೇರೆ ಮಾಡಬೇಕೆಂದು ಪ್ರಯತ್ನ ಮಾಡಿದರೆ ಅಲ್ಲಿ ಆ ಕೃತಿಯೇ ನಾಚಿಕೊಂಡು ನಷ್ಟವಾಗುವುದು. ಏಕೆಂದರೆ ಸೀರೆಯು ಅಡ್ಡ, ಉದ್ದ ಎಲ್ಲವೂ ನೂಲೇ ಆಗಿರುವುದು ॥೪೧೮॥ ಅದರಂತೆ ಸಾಧಕನಿಗೆ ಯಾವ ವಿಷಯಗಳ ಭಾನವಿರುವುದೋ, ಅದು ನನ್ನ ಸ್ವರೂಪದಿಂದ ಭಿನ್ನವಿರುವುದಿಲ್ಲ. ನಾನೇ ಚೈತನ್ಯಘನನಾಗಿರುವೆನು ॥೪೧೯॥ ಅದರಲ್ಲಿ ನಾಮ, ರೂಪ, ವರ್ಣ ಇವುಗಳ ಯಾವ ಭೇದವೂ ಇರುವುದಿಲ್ಲ. ಹಾಗೆಯೇ ಕರ್ಮ, ಕರ್ತಾ ಅಥವಾ ವೇದ, ವಾದ ಇವು ಯಾವುವೂ ಇರುವುದಿಲ್ಲ. ಓಂಕಾರದಲ್ಲಿ ಸರ್ವ ವೇದಗಳು ಮುಳುಗಿದವು. ಕೇವಲ ಶುದ್ಧನಾಗಿರುವ ನಾನೊಬ್ಬನೇ ಮಾತ್ರ ಉಳಿದುಕೊಂಡಿರುವೆನು ॥೪೨೦॥ ಅಲ್ಲಿ ಭ್ರಮೆಸಮೇತವಾಗಿ ಸರ್ವ ಭ್ರಾಂತಿಗಳು ಓಡಿ ಹೋದವು. ಪ್ರವತ್ತಿ ಅಂದರೆ ಕರ್ಮ ಮಾರ್ಗವು ಇದು ಕ್ರಿಯೆಸಹಿತವಾಗಿ ಓಡಿ ಹೋಯಿತು. ನಿವೃತ್ತಿ ಮಾತ್ರ ನಾಚಿಕೆಯಿಂದ ಇದ್ದಲ್ಲಿಯೇ ಕರಗಿಹೋಯಿತು. ಮತ್ತು ವೃತ್ತಿಯು ಸ್ವಸ್ವರೂಪದಲ್ಲಿ ಏಕರೂಪವಾಗಿ ಉಳಿಯಿತು ॥೪೨೧॥ ಸೂರ್ಯನ ಉದಯವಾಗುತ್ತಲೇ ಆತನ ಪ್ರಕಾಶವು ಸರ್ವ ಅಂಧಃಕಾರಕ್ಕೆ ನುಂಗಿಬಿಡುವುದು. ಮಿಂಚು ಹುಳಕ್ಕೆ ಮಾತ್ರ ಕುತ್ತಿಗೆ ಹಿಚುಕಿ ಕೊಂದುಬಿಡುವುದು. ಕೋಟ್ಯಾವಧಿ ನಕ್ಷತ್ರಗಳ ಸಮುದಾಯವನ್ನು ಕೂಡಲೇ ನಷ್ಟಗೊಳಿಸುವುದು ॥೪೨೨॥ ಅದರಂತೆ ನನ್ನ ಸ್ವರೂಪದ ಪ್ರಾಪ್ತಿಯಾಗಲು ಮಾಯೆಯ ಸ್ಫೂರ್ತಿಯು ತಕ್ಷಣ ಮುಳುಗಿ ಹೋಗುವುದು. ಪ್ರವತ್ತಿ ಮತ್ತು ನಿವೃತ್ತಿಗಳು ನಾಚಿಕೊಂಡು ಇಲ್ಲದಾಗುವುವು ಮತ್ತು ಆತ್ಮಾನಂದದಿಂದ ನಿತ್ಯ ತೃಪ್ತಿಯಾಗುವುದು ॥೪೨೩॥ ಹೀಗಿರುವ ನನ್ನ ಸ್ವರೂಪದ ಆನಂದವು ಸಾಧಕನಿಗೆ ಪ್ರಾಪ್ತವಾಗಲು, ಆಗ ಸಾಧಕನು ಅದರಲ್ಲಿ ರಮಮಾಣನಾಗುವನು. ಆಗ ಚಿತ್ತವು ವಿಷಯಗಳಿಗೆ ಬಿಟ್ಟು ಬಿಡುವುದು ಮತ್ತು ವಿಷಯಗಳೂ ಕೂಡ ಚಿತ್ತಕ್ಕೆ ಬಿಟ್ಟು ಬಿಡುವುವು ॥೪೨೪॥ ಯಾವ ಫಲಗಳು ತುಂಬಿಗೆ ಅಂಟಿಕೊಂಡು ಬೆಳೆಯುವುವೋ, ಅದೇ ಫಲಗಳು ಪರಿಪಕ್ವಗಳಾದವೆಂದರೆ ತಾವಾಗಿಯೇ ಅವು ದೇಟನಿಂದ ಉದುರಿಬೀಳುವುವು. ದೇಟವೂ ಕೂಡ ಆ ಫಲಗಳನ್ನು ಹಿಡಿದುಕೊಳ್ಳುವುದಿಲ್ಲ ॥೪೨೫॥ ಅಥವಾ ಮೊಸರನ್ನು ಕಡೆದು ಒಮ್ಮೆ ಅದರ ಬೆಣ್ಣೆಯನ್ನು ತೆಗೆಯಲು ಅದು ಮಜ್ಜಿಗೆಯಿಂದ ಬೇರೆಯಾಗುವುದು. ಪುನಃ ಮಜ್ಜಿಗೆಯಲ್ಲಿ ಹಾಕಿದರೂ ಕೂಡ ಅದು ಅದರಲ್ಲಿ ಕೂಡಿಕೊಳ್ಳುವುದಿಲ್ಲ. ಅದರಂತೆ ಚಿತ್ತವು ವಿಷಯಗಳನ್ನು ಬಿಟ್ಟುಕೊಟ್ಟು ಅದರಿಂದ ಅಲಿಪ್ತವಾಗಿಬಿಡುವುದು ॥೪೨೬॥

ಪಾವಲ್ಯಾ ಮಾಝೀ ಸ್ವರೂಪತಾ । ದೈವ ಬಳೇ ವಿಷಯೋದೇತಾ । ಚಿತ್ತಾಸೀ ನುಪಜೇ ವಿಷಯಾವಸ್ಥಾ । ಸ್ವಭಾವತಾ ಅಲಿಪ್ತ ॥೪೨೭॥ ಏವಂ ಸಾಧಿಲ್ಯಾ ಮಾಝ್ಹಾ ಯೋಗೂ । ಚಿತ್ತ ವಿಷಯಾಂಚಾ ವಿಯೋಗು । ಸಹಜೇಂಚಿ ಹೋಯ ಚಾಂಗೂ । ಹಾ ಸುಗಮ ಸಾಂಗೂ ಉಪಾವೋ ॥೪೨೮॥ ಯೇಥೇ ಝಣೇ ಆಶಂಕಾ ಧರಾಲ ದೇಖ । ಸ್ವರೂಪ ಶುದ್ಧ ಅವಘೇ ಏಕ । ತೇಥೇ ಕೈಚೇ ಬಾಧ್ಯಬಾಧಕ । ಕಾಯ ಸಾಧಕ ಸಾಧಿತೀ ॥೪೨೯॥ ಐಶಾಹೀ ಸಂಧೀಮಾಜೀ ಜಾಣ । ಅಹಂತಾ ಬಂಧಾಚೇ ಕಾರಣ । ತ್ಯಾಚೇ ಸಾಂಗೇನ ಮೀ ಲಕ್ಷಣ । ಸಾವಧಾನ ಪರಿಯೇಸೀ ॥೪೩೦॥

ಅಹಂಕಾರಕೃತಂ ಬಂಧಮಾತ್ಮನೋಽರ್ಥವಿಪರ್ಯಯಮ್ ।
ವಿದ್ವಾನ್ನಿರ್ವಿದ್ಯ ಸಂಸಾರಚಿಂತಾಂ ತುರ್ಯೇ ಸ್ಥಿತಸ್ತ್ಯಜೇತ್ ॥೨೯॥

ಅರ್ಥ :- ಅಹಂಕಾರವು ಮಾಡಿದ ಬಂಧನವು ಆತ್ಮದ ಆನಂದಕ್ಕೆ ಆಚ್ಛಾದನೆ ಮಾಡುವುದು. ಇದನ್ನೆಲ್ಲವನ್ನು ತಿಳಿದು ಮತ್ತು ಇದೆಲ್ಲವೂ ಕೇವಲ ದುಃಖವಾಗಿದೆ ಎಂದು ನಿಶ್ಚಯ ಮಾಡಿ ಭಗವಂತನಲ್ಲಿ ನೆಲಗೊಂಡು ಸಂಸಾರದಲ್ಲಿನ ಸರ್ವ ಪ್ರಕಾರದ ಚಿಂತೆಯನ್ನು ಬಿಟ್ಟು ಬಿಡಬೇಕು.

ಜೇಥ ಮುಹೂರ್ತ ಮಾತ್ರ ವಸತೀ ಘಡೇ । ತ್ಯಾ ಠಾಯಾಚಾ ಅಭಿಮಾನ ಚಢೇ । ಐಸೇ ಅಭಿಮಾನಾಚೇ ಸಾಂಕಡೇ । ಪಾಹೇ ಪಾ ರೋಕಡೇ ಕೌತುಕ ತ್ಯಾಂಚೇ ॥೪೩೧॥ ಬುದ್ಧಿ ಅಹಂಕಾರ ಅಳುಮಾಳ । ಉಠತಾ ಶುದ್ಧಾಸೀ ಕರೀ ಶಬಳ । ತೇಣೇ ದೇಹಯೋಗೇ ಧರಿಲ್ಯಾ ಬಳ । ಕರೀ ತತ್ಕಾಳ ವಿಪರೀತ ॥೪೩೨॥ ಅಹಂಕಾರ ಖವಳಲ್ಯಾ ಜಾಣ । ಕರೀ ಆನಂದಾಚೇ ಆಚ್ಛಾದನ । ಬುಡೇ ಪರಮಾತ್ಮ ಸ್ಫೂರ್ತಿಚೇ ಸ್ಫುರಣ । ದೇಹಾಚೇ ಮೀಪಣ ವಾಢವೀ ॥೪೩೩॥ ಜೇವೀ ಕೂರ್ಮೀಚ್ಯಾ ಪಿಲಿಯಾ । ಚಕ್ಷುರಮೃತೇ ತೃಪ್ತೀ ತಯಾ । ತೇಚಿ ಮಾತೇಸೀ ಚುಕಲಿಯಾ । ಮಗ ಭುಕೇಲಿಯಾ ಕರ್ದಮೂ ಸೇವೀ ॥೪೩೪॥ ತೇವೀ ಖುಂಟಲಿಯಾ ಆನಂದ ಅಭಿವ್ಯಕ್ತೀ । ಜೀವಾಸೀ ವಾಢೇ ವಿಷಯಾಸಕ್ತೀ । ಕಾಮಿನೀಕಾಮಾ ಪಂಗಿಸ್ತ ಹೋತೀ । ಚಿಂತಾ ಚಿತ್ತೀ ವಿಷಯಾಂಚೀ ॥೪೩೫॥ ವಿಸರಲಾ ಆಪುಲೇ ಪೂರ್ಣಪಣ । ಧನಾಲಾಗೀ ಅತಿಹೀನ ದೀನ । ಮೀ ದೇಹವಂತ ಪರಿಚ್ಛಿನ್ನ । ಐಸಾ ದೇಹಾಭಿಮಾನ ದೃಢ ಹೋಯ ॥೪೩೬॥ ತೇಣೇ ಕರ್ಮಾಕರ್ಮಾಚೇ ಆಘಾತ । ನಾನಾ ನರಕಯಾತನಾ ಹೋತ । ಜನ್ಮ ಮರಣಾದಿ ಆವರ್ತ । ತೇಣೇ ದುಃಖೀ ಹೋತ ಅತಿದುಃಖೇ ॥೪೩೭॥

ಒಮ್ಮೆ ನನ್ನ ಸ್ವರೂಪದ ಪ್ರಾಪ್ತಿಯಾಯಿತೆಂದರೆ, ಆಗ ದೈವಯೋಗದಿಂದ ಎಷ್ಟೇ ವಿಷಯಗಳು ಮುಂದೆ ಬಂದರೂ ಚಿತ್ತಕ್ಕೆ ಅವುಗಳ ಆಸಕ್ತಿಯು ಬೆಳೆಯುವುದಿಲ್ಲ. ಏಕೆಂದರೆ ಆ ಚಿತ್ತವು ಸ್ವಭಾವತಃವೇ ವಿಷಯಗಳಿಂದ ಅಲಿಪ್ತವಾಗಿರುವುದು ॥೪೨೭॥ ಈ ಪ್ರಕಾರವಾಗಿ ನನ್ನ ಯೋಗವು ಸಾಧಿಸಲು ಆಗ ಚಿತ್ತ ಮತ್ತು ವಿಷಯಗಳ ವಿಯೋಗವು ಸಹಜವಾಗಿಯೇ ಸಾಧಿಸುವುದು. ಇದು ಅತಿಶಯವಾಗಿ ಸುಲಭವು ಮತ್ತು ಪರಿಪೂರ್ಣವಾದ ಉಪಾಯವಾಗಿರುವುದು ॥೪೨೮॥ ಇನ್ನು ನಿನ್ನ ಮನದಲ್ಲಿ ಹೀಗೆ ಅನುಮಾನವು ಕದಾಚಿತ್ ಮೂಡಬಹುದು. ಏನೆಂದರೆ ಆತ್ಮಸ್ವರೂಪವು ಶುದ್ಧ ಮತ್ತು ಸರ್ವತ್ರವೂ ಒಂದೇ ಒಂದಾಗಿರುವುದು. ಅಲ್ಲಿ ಬಾಧ್ಯ-ಬಾಧಕತೆಯು ಹೇಗೆ ನಿರ್ಮಾಣವಾಗುವುವು? ಮತ್ತು ಆ ಸ್ಥಿತಿಯಲ್ಲಿ ಸಾಧಕನು ಅಲ್ಲಿ ಸಾಧಿಸುವುದಾದರೂ ಏನು ? ॥೪೨೯॥ ಆದರೆ ಇಂತಹ ಸಂಧಿಯಲ್ಲಿಯೂ ಕೂಡ ಅಹಂಕಾರವೇ ಬಂಧನಕ್ಕೆ ಕಾರಣೀಭೂತವಾಗಿರುವುದು. ಅದರ ಲಕ್ಷಣವನ್ನು ನಾನೀಗ ನಿನಗೆ ಹೇಳುವೆನು, ಅದನ್ನು ನೀಟಾಗಿ ಲಕ್ಷಕೊಟ್ಟು ಕೇಳು ॥೪೩೦॥

ನಾವು ಎಲ್ಲಿಯಾದರೂ ಒಂದು ಮುಹೂರ್ತ ಮಾತ್ರ ವಸತಿ ಮಾಡಿದರೂ ಕೂಡ ಆ ಸ್ಥಳದ ಅಭಿಮಾನವು ನಿರ್ಮಾಣವಾಗುವುದು. ಹೀಗೆ ಅಭಿಮಾನದ ತೊಡಕಾಗಿರುವುದು. ಅದರ ಕೌತುಕವನ್ನು ಪ್ರತ್ಯಕ್ಷವಾಗಿ ನೋಡಿಕೊಳ್ಳಿರಿ ॥೪೩೧॥ ಸ್ವಲ್ಪ ಅಭಿಮಾನವು ಹುಟ್ಟಿದರೆ ಸಾಕು, ಪವಿತ್ರ ಮನುಷ್ಯನ ಬುದ್ಧಿಯು ಮಲಿನವಾಗಿಬಿಡುವುದು. ಈ ಅಹಂಕಾರ ದೇಹದ ಸಂಗತಿಯಿಂದ ಬೆಳೆಯುತ್ತಿರಲು ಕೂಡಲೇ ಏನಾದರೂ ವಿಪರೀತ ಪರಿಣಾಮವನ್ನು ಮಾಡುವುದು ॥೪೩೨॥ ಅಹಂಕಾರವು ಉಗ್ರವಾಯಿತೆಂದರೆ ಅದು ಆನಂದದ ಮೇಲೆ ಆವರಣ ಹಾಕುವುದು. ಆದ್ದರಿಂದ ಪರಮಾತ್ಮಾ ಸ್ಫೂರ್ತಿಯ ಸ್ಫುರಣವು ಇಲ್ಲದಾಗುವುದು ಮತ್ತು ಈ ಅಭಿಮಾನವು ದೇಹದ ''ನಾನು'' ಎಂಬುವುದನ್ನು ಮಾತ್ರ ಬೆಳೆಸುತ್ತ ಸಾಗುವುದು ॥೪೩೩॥ ಆವಿಯ ಮರಿಗಳಿಗೆ ಅವುಗಳ ತಾಯಿಯು ಕೇವಲ ಪ್ರೇಮದೃಷ್ಟಿಯಿಂದ ಪೋಷಿಸುತ್ತಿರುವುದು. ಆದರೆ ಅದೇ ತಾಯಿಯ ದೃಷ್ಟಿಯು ಅಡ್ಡಾಗಿ ತಪ್ಪಲು ಹಸಿವೆಯಿಂದ ಅವುಗಳಿಗೆ ಕೆಸರು ತಿನ್ನಬೇಕಾಗುವುದು ॥೪೩೪॥ ಅದರಂತೆ ಆನಂದದ ಅನುಭವವನ್ನು ಪಡೆಯುವುದು ನಿಂತುಕೊಂಡರೆ, ಆಗ ಜೀವದಲ್ಲಿ ವಿಷಯ ಸೇವನೆಯ ಪ್ರೇಮವು ಬೆಳೆಯುತ್ತ ಸಾಗುವುದು. ಪುರುಷನ ಸ್ತ್ರೀಯಳ ಆಧೀನನಾಗುವನು. ಸ್ತ್ರೀಯಳು ಪುರುಷನ ಆಧೀನಳಾಗುವಳು ಮತ್ತು ಮನದಲ್ಲಿ ವಿಷಯಗಳ ಚಿಂತನೆಯು ಯಾವಾಗಲೂ ಇರಲಾರಂಭಿಸುವುದು ॥೪೩೫॥ ತಾನು ಸತ್ ಚಿತ್ ಆನಂದದಿಂದ ಪರಿಪೂರ್ಣನಾಗಿರುವೆನು ಎಂಬುದನ್ನು ಆತನು ಮರೆತುಬಿಡುವನು. ಆತನು ದ್ರವ್ಯಕ್ಕಾಗಿ ಅತಿದೀನನಾಗುವನು. ನಾನು ಅಂದರೆ ದೇಹವೇ ಎಂಬ ಈವಿಚಾರದಿಂದ ಆತನ ದೇಹಾಭಿಮಾನವು ಬೆಳೆಯುತ್ತಲೇ ನಡೆಯುವುದು ॥೪೩೬॥ ಹೀಗಾಗುವುದರಿಂದ ಅವನ ಮೇಲೆ ಕರ್ಮ ಅಕರ್ಮಗಳ ಅನೇಕ ಆಘಾತಗಳಾಗುವುವು. ಆತನಿಗೆ ಅನೇಕ ಪ್ರಕಾರದ ಕ್ಲೇಶಗಳಿಂದ ದುಃಖವು ಒದಗುವುದು ॥೪೩೭॥

ಭೋಗಿತಾ ದುಃಖಯಾತನಾ । ತ್ರಾಸು ಉಪಜೇ ಜ್ಯಾಚ್ಯಾ ಮನಾ । ನ ಸಾಹವೇ ಭವ ವೇದನಾ । ತೇಣೇ ದೇಹಾಭಿಮಾನಾ ಸಾಂಡಾವೇ ।।೪೩೮।। ಅಭಿಮಾನ ಸಾಂಡಿತಾ ನ ಸಂಡೇ । ಹೇಚಿ ದುರ್ಘಟ ಥೋರ ಮಾಂಡೇ । ಯಾಲಾಗೀ ಸಾಧನಾಚೇ ಸಾಂಕಡೇ । ಸೋಸಣೇ ಪಡೇ ಸಾಧಕಾ ।।೪೩೯।। ಜೇ ಜೇ ಕರಾವೇ ಸಾಧನ । ಸಾಧನೀ ರಿಘೇ ಸಾಧನಾಭಿಮಾನ । ಧಾಂವಣೇ ನಾಗವೀ ಸಂಪೂರ್ಣ । ಸಾಧನೀ ವಿಘ್ನ ಹೋಯ ತೈಸೇ ।।೪೪೦।। ಐಕ ಸಾಧಕಾಂಚೇ ಸಾಧನ । ವೇದೋಕ್ತ ಸ್ವಧರ್ಮಾಚರಣ । ಸಾಧಾವೇ ವೈರಾಗ್ಯ ಪೂರ್ಣ । ಮಾಝೇ ಭಜನ ಅತಿಪ್ರೀತೀ ।।೪೪೧।। ತತ್ಕಾಳ ಜಾವಯಾ ದೇಹಾಭಿಮಾನ । ಅಖಂಡ ಮಾಝೇ ನಾಮಸ್ಮರಣ । ಗೀತ ನೃತ್ಯ ಹರಿಕೀರ್ತನ । ಸರ್ವಾಭೂತೀ ಸಮಾನ ಮದ್ಭಾವೋ ।।೪೪೨।। ಮದ್ಭಾವೇ ಭೂತೇ ಸಮಸ್ತ । ಸರ್ವದಾ ಪಾಹತಾ ಸತತ । ಮೀ ತುರೀಯ ಸರ್ವಗತ । ತೇ ಠಾಯೀ ಚಿತ್ತ ಪ್ರವೇಶೇ ।।೪೪೩।। ತಿಹೀ ಅವಸ್ಥಾ ಮಾಜೀ ಮೀ ಸತತ । ತಿಹೀ ಅವಸ್ಥಾ ತೇ ಮೀ ಪ್ರಕಾಶಿತ । ತಿಹೀ ಅವಸ್ಥಾ ಹೂನಿ ಅತೀತ । ತೋ ಜಾಣ ನಿಶ್ಚಿತ ಮೀ ತುರೀಯೂ ।।೪೪೪।। ತಿಹೀ ಗುಣಾಹೂನಿ ಪರತಾ । ಚೌಥೇಪಣೇ ವಿಣ ಚೋಥಾ । ತೋ ಮೀ ತುರೀಯ ಜಾಣ ತತ್ತ್ವತಾ । ತೇ ಠಾಯೀ ಚಿತ್ತಾ ಜೋ ಠೇವೀ ।।೪೪೫।। ತೇಥೇ ಠೇವಿತಾ ಚಿತ್ತಾ । ಜೀವೂ ಪಾವೇ ಮದ್ರೂಪತಾ । ನಿಮಾಲೀ ಸಂಸಾರಿಕ ಚಿಂತಾ । ವಿಷಯಾವಸ್ಥಾ ಬುಡಾಲೀ ।।೪೪೬।। ತೇಂವ್ಹಾ ಚಿತ್ತ ಚಿಂತಾ ಚಿಂತನ । ವಿಷಯವಾಸನಾ ಅಭಿಮಾನ । ಯಾ ಅವಘೀಯಾಂಚೇ ಹೋಯ ಶೂನ್ಯ । ಮೀ ಸ್ವಾನಂದಘನ ಸ್ವಯೇ ಪ್ರಕಟೇ ।।೪೪೭।। ನ ತುಟತಾ ಭೇದಾಚೇ ಭೇದಭಾನ । ಜೋ ಮ್ಹಣವೀ ಮೀ ಸಜ್ಞಾನ । ವೃಥಾ ಧರೀ ಜ್ಞಾನಾಭಿಮಾನ । ತೋಹೀ ಅಜ್ಞಾನ ತೇ ಐಕಾ ।।೪೪೮।।

ಯಾವನ್ನಾನಾರ್ಥಧೀಃ ಪುಂಸೋ ನ ನಿವರ್ತೇತ ಯುಕ್ತಿಭಿಃ । ಜಾಗರ್ತ್ಯಪಿ ಸ್ವಪನ್ನಜ್ಞಃ ಸ್ವಪ್ನೇ ಜಾಗರಣಂ ಯಥಾ ।।೩೦।।

ಅರ್ಥ:- ಪುರುಷನ ದ್ವೈತ ಬುದ್ಧಿಯು ಮುಂದೆ ತಿಳಿಸಿದ ಯುಕ್ತಿಯಿಂದ ಎಲ್ಲಿಯವರೆಗೆ ನಿವೃತ್ತವಾಗುವುದಿಲ್ಲವೋ, ಅಲ್ಲಿಯವರೆಗೆ ಕರ್ಮಾದಿಕಗಳಲ್ಲಿ ಒಂದು ವೇಳೆ ಆತನು ದಕ್ಷನಾಗಿದ್ದರೂ ಕೂಡ ಆತನು ಮಲಗಿದವನಾಗಿ ಸ್ವಪ್ನವನ್ನೇ ಕಾಣುತ್ತಿರುವನು

ನಾನಾ ವರ್ಣ ನಾನಾ ವ್ಯಕ್ತೀ । ನಾನಾ ಗೋತ್ರೇ ನಾನಾ ಜಾತೀ । ಅಧಮೋತ್ತಮವಿಧಾನಸ್ಥಿತೀ । ಭೇದ ಚಿತ್ತೀ ದೃಢ ಭಾಸೇ ।।೪೪೯।।

ಈ ಯಾವ ದುಃಖದ ಮಹಾ ಯಾತನೆಗಳನ್ನು ಭೋಗಿಸುತ್ತಿರಲು ಆತನ ಮನಸ್ಸಿಗೆ ಉದ್ವೇಗವು ಉತ್ಪನ್ನವಾಗುವುದು. ಅದಕ್ಕಾಗಿ ಯಾರಿಗೆ ಸಂಸಾರದ ದುಃಖವನ್ನು ಸಹಿಸುವುದಾಗುವುದಿಲ್ಲವೋ, ಅವರು ದೇಹದ ಅಭಿಮಾನವನ್ನು ಬಿಟ್ಟುಬಿಡಬೇಕು ।।೪೩೮।। ಆದರೆ ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಕೂಡ ದೇಹದ ಅಭಿಮಾನವು ಬಿಡುವುದೇ ಇಲ್ಲ. ಇದೇ ಒಂದು ಮಹಾ ಸಂಕಟದ ಪ್ರಸಂಗವಾಗಿರುವುದು. ಅದಕ್ಕಾಗಿ ಸಾಧಕರಿಗೆ ಸಾಧನೆಗಳ ಸಂಕಟಗಳನ್ನು ಸೋಸಬೇಕಾದ ಪ್ರಸಂಗವು ಒದಗುವುದು ।।೪೩೯।। ಯಾವ ಯಾವ ಸಾಧನೆಗಳನ್ನು ಮಾಡುತ್ತಿರಲಿ, ಆ ಯಾವ ಸಾಧನೆಯ ಅಭಿಮಾನವು ಉತ್ಪನ್ನವಾಗುವುದು. ಸಾಧ್ಯ ಮಾಡಿಕೊಳ್ಳಲು ಎಷ್ಟೇ ಓಡಾಡಿ ಪ್ರಯತ್ನಿಸಿದರೂ ಅದರ ಉಪಯೋಗವಾಗುವುದಿಲ್ಲ. ಈ ರೀತಿಯಾಗಿ ಸಾಧನೆಯ ಅಹಂಕಾರವು ಇದೇ ವಿಘ್ನರೂಪವಾಗುವುದು ।।೪೪೦।। ಈಗ ಸಾಧಕರ ಸಾಧನೆಯ ವಿಷಯಕ್ಕೆ ಕೇಳು. ವೇದೋಕ್ತ ಸ್ವಧರ್ಮಾಚರಣೆಯನ್ನು ಮಾಡಬೇಕು. ಪೂರ್ಣವಾಗಿ ವೈರಾಗ್ಯವನ್ನು ಪಡೆಯಬೇಕು. ಮತ್ತು ಅತ್ಯಂತ ಪ್ರೇಮದಿಂದ ನನ್ನ ಭಜನೆಯನ್ನು ಮಾಡಬೇಕು ।।೪೪೧।। ದೇಹದ ಅಭಿಮಾನವು ಬಹುಬೇಗನೇ ಹೋಗುವುದಕ್ಕಾಗಿ ನನ್ನ ಅಖಂಡ ನಾಮಸ್ಮರಣೆಯನ್ನು ಮಾಡಬೇಕು. ಗಾಯನ, ನರ್ತನ ಮತ್ತು ಹರಿಕೀರ್ತನೆಯನ್ನು ಮಾಡಬೇಕು, ಸರ್ವಪ್ರಾಣಿಮಾತ್ರರಲ್ಲಿ ಸಮಾನ, ಮತ್ಸ್ವರೂಪ ಭಾವನೆಯನ್ನು ಇಡಬೇಕು ।।೪೪೨।। ಸರ್ವಭೂತಗಳು ನನ್ನ ಸ್ವರೂಪವಾಗಿವೆ ಎಂಬ ಈ ಭಾವನೆಯಿಂದ ಸದಾ ಸರ್ವದಾ ನೋಡುತ್ತಿರಲು, ಜ್ಞಾನಸ್ವರೂಪನಾದ ಮತ್ತು ಸರ್ವವ್ಯಾಪಿಯಾದ ನನ್ನಲ್ಲಿ ಸಾಧಕನ ಚಿತ್ತವು ಪ್ರವೇಶ ಮಾಡುವುದು ।।೪೪೩।। ನಾನು ನಿತ್ಯವೂ ಮೂರೂ ಅವಸ್ಥೆಗಳಲ್ಲಿರುವೆನು. ಮೂರೂ ಅವಸ್ಥೆಗಳಿಗೆ ಪ್ರಕಾಶಿತವನ್ನಾಗಿ ಮಾಡುವೆನು ಮತ್ತು ಮೂರೂ ಅವಸ್ಥೆಗಳಿಂದ ಭಿನ್ನನಾಗಿರುವ ನಾನು ಜ್ಞಾನಸ್ವರೂಪನಾಗಿರುವೆನು ।।೪೪೪।। ನಾನು ಮೂರು ಗುಣಗಳಿಂದ ಭಿನ್ನನು. ಆದರೆ ನನಗೆ ನಾಲ್ಕನೆಯ ಅವಸ್ಥೆಯು ಇಲ್ಲದಿದ್ದರೂ ಮೂರು ಅವಸ್ಥೆಗಳ ಅಪೇಕ್ಷೆಯಿಂದ ನಾಲ್ಕನೆಯದಾದ ನಾನು ನಿಜವಾಗಿಯೂ ಜ್ಞಾನರೂಪನಾಗಿರುವೆನು ।।೪೪೫।। ಅಲ್ಲಿ ಚಿತ್ತವನ್ನು ಇಟ್ಟರೆ ಜೀವವು ನನ್ನ ಸ್ವರೂಪವಾಗುವುದು. ಸಂಸಾರ ವಿಷಯದಲ್ಲಿನ ಸರ್ವ ಚಿಂತೆಗಳು ಇಲ್ಲದಾಗುವುವು. ವಿಷಯಗಳು, ಅವಸ್ಥೆಗಳು ಈ ಎಲ್ಲವೂ ಮುಗಿದುಹೋಗುವುವು ।।೪೪೬।। ಆ ವೇಳೆಯಲ್ಲಿ ಚಿತ್ತ, ಚಿಂತೆ ಮತ್ತು ಚಿಂತನೆ, ವಿಷಯ ವಾಸನೆ ಮತ್ತು ಅಭಿಮಾನ ಈ ಸರ್ವವೂ ನಾಶವಾಗಿ ಸ್ವಾನಂದಘನನಾದ ನಾನು ಪ್ರತ್ಯಕ್ಷ ರೂಪದಲ್ಲಿ ಪ್ರಕಟನಾಗುವೆನು ।।೪೪೭।। ಹೃದಯದಲ್ಲಿನ ದ್ವೈತದ ಭಾವನೆಯನ್ನು ಬಿಡದೇ ಯಾವನು ಸ್ವತಃಕ್ಕೆ ಜ್ಞಾನೀ ಎಂದು ತಿಳಿಯುವನೋ ಹಾಗೂ ಜ್ಞಾನದ ವ್ಯರ್ಥ ಅಭಿಮಾನವನ್ನು ಹಿಡಿಯುವನೋ, ಅವನು ಅಜ್ಞಾನಿಯಾಗಿರುವನು. ಆತನ ವರ್ಣನೆಯನ್ನು ಈಗ ಕೇಳು ।।೪೪೮।।

ಅನೇಕ ವರ್ಣ, ಅನೇಕ ಜಾತಿ, ಅನೇಕ ವ್ಯಕ್ತಿ, ಅಧಮ ಉತ್ತಮ ಹೀಗೆ ವಿಧಿಯ ಪ್ರಕಾರಗಳು ಈ ಎಲ್ಲ ಭೇದಗಳು ಚಿತ್ತದಲ್ಲಿ ದೃಢವಾಗಿ ಭಾಸವಾಗುವುವು ।।೪೪೯।।

ಮೀ ಕಾಳಾ ಗೋರಾ ಸಾವಳಾ । ಮೀ ಸಜ್ಞಾನತ್ವೇ ಆಗಳಾ । ಮಾಝೀ ಉತ್ತಮ ಪವಿತ್ರ ಲೀಳಾ । ಮೀ ಕುಳೇ ಆಗಳಾ ಸತ್ಕುಲೀನ ॥೪೫೦॥ ಐಶೀ ಝಾಲ್ಯಾ ಭೇದಪ್ರಾಪ್ತೀ । ಪಾಹತಾ ಅಭೇದಪರಾ ಶ್ರುತೀ । ಸಾಧಕಾ ಶಾಸ್ತ್ರಾರ್ಥಯುಕ್ತೀ । ಭೇದ ನಿವೃತ್ತಿ ಜ್ಯಾನವ್ಹೇಚಿ ॥೪೫೧॥ ತ್ಯಾಚಾ ವ್ಯರ್ಥ ಜ್ಞಾನಾಭಿಮಾನ । ತ್ಯಾಚೇ ವ್ಯರ್ಥ ಕರ್ಮಾಚರಣ । ತೋ ಜಾಗಾಚಿ ನಿಜೇಲಾ ಜಾಣ । ಜಾಗೇಪಣ ತ್ಯಾ ನಾಹೀ ॥೪೫೨॥ ದೃಢ ಜೋ ಕಾ ದೇಹಾಭಿಮಾನ । ತೇಚಿ ಕನಕಬೀಜಸೇವನ । ಕರೂನಿ ಥೋರ ಭ್ರಮಲಾ ಜಾಣ । ಅವಿದ್ಯಾ ದೀರ್ಘ ಸ್ವಪ್ನ ಭೇದು ದೇಖೇ ॥೪೫೩॥ ವೋಸಣತಾ ಬೋಲೀ ನ ಲಭೇ ಅರ್ಥೂ । ತೇವೀ ಪಠಣಮಾತ್ರೇ ಪರಮಾರ್ಥೂ । ಶ್ರುತಿಶಾಸ್ತ್ರಾಂಚಾ ನಿಜಶಾಸ್ತ್ರಾರ್ಥೂ । ನವ್ಹೇಚಿ ಪ್ರಾಪ್ತ ತಯಾಂಸೀ ॥೪೫೪॥ ವೇದಾಧ್ಯಯನ ನಿತ್ಯ ಕರಿತೀ । ಅರಣ ಬ್ರಾಹ್ಮಣ ಸೂತ್ರ, ನಿರುಕ್ತೀ । ನವ್ಹೇಚಿ ಕಾಮಕ್ರೋಧ ನಿವೃತ್ತೀ । ಪಠಣೇ ಪರಮಪ್ರಾಪ್ತೀ ಕದಾ ನ ಘಡೇ ॥೪೫೫॥ ದೇಹಾಭಿಮಾನೇ ಭೇದದೃಷ್ಟೀ । ಪಢತಾ ಶ್ರುತಿ ಶಾಸ್ತ್ರಾಂಚ್ಯಾ ಕೋಟೀ । ಪರಮಾರ್ಥೇಸೀ ನವ್ಹೇ ಭೇಟೀ । ಭೇದದೃಷ್ಟೀ ನ ವಚತಾ ॥೪೫೬॥ ಜೋ ಕಾ ಸ್ವಪ್ನೀಚೇ ಸ್ವಪ್ನೀ ಜಾಗಾ ಜಾಹಲಾ । ಸ್ವಪ್ನೀ ವೇದಶಾಸ್ತ್ರ ಪಢಿನ್ನಲಾ । ಜಾಗಾ ಮ್ಹಣತಾ ಅಸೇ ನಿಜೇಲಾ । ತೈಸಾ ವ್ಯವಹಾರೂ ಝಾಲಾ ಶಾಸ್ತ್ರಜ್ಞಾಂಸೀ ॥೪೫೭॥ ದೇಹಾಭಿಮಾನೇಸೀ ಭೇದಭಾನ । ನಿಃಶೇಷ ಜಂವ ನ ವಚೇ ಜಾಣ । ತಂವವರೀ ನವ್ಹೇ ನಿಜಜ್ಞಾನ । ಅತ್ಯಂತ ಬಂಧನ ತೋ ಭೇದ ॥೪೫೮॥ ಸನಕಾದಿಕಾಂಚೇ ಆಶಂಕಾ । ಘೇಊನಿ ದೇವ ಬೋಲೇ ದೇಖಾ । ವೇದವಿಭಾಗ ನೇಟಕಾ । ಸಕಳ ಲೋಕಾ ಕಳೇ ತೈಸಾ ॥೪೫೯॥ ಸ್ವಯೇ ಪ್ರಕಾಶೋನಿ ಸಕಳ ಭೇದೂ । ಗರ್ಜತ ಉಠೀ ತುಝಾ ವೇದೂ । ಭೇದ ವೇದೇಂಚಿ ಪ್ರತಿಪಾದ್ಯೂ । ವೇದಾನುವಾದೂ ನವ್ಹೇ ಮಿಥ್ಯಾ ॥೪೬೦॥ ವೇದವಚನ ತೇ ತಾತ್ತ್ವಿಕ । ಮಾನಾವೇ ಪೈ ಆವಶ್ಯಕ । ಹೇ ತುಝೀಚ ಶಿಕವಣ ದೇಖ । ತೋ ವೇದೂ ಲಟಿಕ ಮ್ಹಣಾವಾ ಕೈಸಾ ॥೪೬೧॥ ವೇದಾಜ್ಞೇಚಾ ಪರಮ ನೇಮ । ವೇದೇ ಪ್ರತಿಪಾದ್ಯ ಕ್ರಿಯಾಕರ್ಮ । ವೇದಬಳೇ ವರ್ಣಾಶ್ರಮ । ನಿಜ ಸ್ವಧರ್ಮ ಚಾಲವಿತೀ ॥೪೬೨॥

ನಾನು ಕಪ್ಪಾಗಿರುವೆ, ನಾನು ಬೆಳ್ಳಗಿರುವೆ, ನಾನು ಸಾದಾಕಪ್ಪಾಗಿರುವೆ, ಉತ್ತಮ ಜ್ಞಾನಿಗಳವರಲ್ಲಿ ನಾನು ಶ್ರೇಷ್ಠನು, ಉತ್ತಮವಾದ ಪಾವನವಾದ ಕೃತಿಗಳು ನನ್ನದಾಗಿರುವುವು, ನನ್ನ ಚರಿತ್ರವು ಪಾವನವು,ನನ್ನ ಕುಲವು ಅತಿಶಯ ಶ್ರೇಷ್ಠವಾಗಿರುವುದು. ಹಾಗೂ ನಾನು ಉತ್ತಮವಾದ ಕುಲವಂತನಾಗಿರುವೆನು ॥೪೫೦॥ ಹೀಗೆ ಭೇದಾಭೇದವು ಮನದಲ್ಲಿ ಹುಟ್ಟಿಕೊಂಡಾಗ ಅದ್ವೈತವನ್ನು ಸಾರುವ ಶ್ರುತಿಯನ್ನು ಓದಿ ಅಥವಾ ಶಾಸ್ತ್ರಗಳ ಯುಕ್ತಿಯನ್ನು ಕೇಳಿಯೂ ಕೂಡ ಆ ಯಾವ ಸಾಧಕನ ಮನದಲ್ಲಿನ ಭೇದಭಾವವು ಹೋಗುವುದಿಲ್ಲ ॥೪೫೧॥ ಆತನ ಜ್ಞಾನದ ಅಭಿಮಾನವು ವ್ಯರ್ಥವು, ಆತನ ಕರ್ಮಾಚರಣೆಗಳು ವ್ಯರ್ಥವು. ಆತನು ಎಚ್ಚರಾಗಿದ್ದರೂ ಕೂಡ ಮಲಗಿರುವೆನೆಂದು ತಿಳಿಯಬೇಕು. ಆತನಿಗೆ ಜಾಗೃತಿಯು ಎಂದೂ ಇರುವುದಿಲ್ಲ ॥೪೫೨॥ ದೇಹದ ಅಭಿಮಾನವು ಅದೊಂದು ಧತ್ತೂರಿ ಬೀಜವಾಗಿರುವುದು. ಇದನ್ನು ಸೇವನೆ ಮಾಡಿ ಮನುಷ್ಯನು ಅತ್ಯಂತ ಭ್ರಮದಲ್ಲಿ ಬಿದ್ದನೆಂದರೆ ಅವನು ಅವಿದ್ಯಾರೂಪ ಒಳ್ಳೆಯ, ಕೆಟ್ಟ ದೀರ್ಘ ಸ್ವಪ್ನಗಳನ್ನು ನೋಡುತ್ತ ಕುಳಿತುಕೊಳ್ಳುವನು ॥೪೫೩॥ ಮನುಷ್ಯನು ನಿದ್ರೆಯಲ್ಲಿ ಏನಾದರೂ ಬಡಬಡಿಸಲು ಹತ್ತಿದರೆ ಆತನ ಭಾಷಣದಿಂದ ಯಾವ ಅರ್ಥವೂ ಹುಟ್ಟಲಾರದು. ಅದರಂತೆ ಕೇವಲ ಶಬ್ದಗಳ ಪಠಣೆಯನ್ನು ಮಾಡಿದರೆ ಪರಮಾರ್ಥವು ಪ್ರಾಪ್ತವಾಗಲಾರದು. ಇಷ್ಟೇ ಅಲ್ಲ, ಯಾವ ಶ್ರುತಿ ಶಾಸ್ತ್ರಗಳ ನಿಜವಾದ ಮತಿತಾರ್ಥವೂ ಕೂಡ ತಿಳಿಯಲಾರದು ॥೪೫೪॥ ಪ್ರತಿನಿತ್ಯವೂ ವೇದಾಧ್ಯಯವನ್ನು ಮಾಡುವರು, ಅರಣ, ಬ್ರಾಹ್ಮಣ, ಸೂತ್ರ, ನಿರುಕ್ತ ಇವುಗಳನ್ನು ನುಡಿಯುವರು, ಆದರೆ ಕಾಮ, ಕ್ರೋಧಗಳು ಹೋಗದಿದ್ದರೆ ಆ ಯಾವ ಪಠಣೆಯಿಂದ ಪರಮಾರ್ಥದ ಪ್ರಾಪ್ತಿಯು ಎಂದೆಂದಿಗೂ ಆಗಲು ಶಕ್ಯವಿಲ್ಲ ॥೪೫೫॥ ದೇಹದ ಅಭಿಮಾನದಿಂದ ಭೇದದೃಷ್ಟಿಯು ಪ್ರಾಪ್ತವಾಗಲ್ಪಡುವುದು. ಈ ಯಾವ ದ್ವೈತ ಭಾವನೆಯು ಎಲ್ಲಿಯವರೆಗೆ ಹೋಗುವುದಿಲ್ಲವೋ ಅಲ್ಲಿಯವರೆಗೆ ಕೋಟಿಗಟ್ಟಲೇ ಶಾಸ್ತ್ರಗಳನ್ನು ಶ್ರುತಿಗಳನ್ನು ಓದಿದರೂ ಪರಮೇಶ್ವರನ ಪ್ರಾಪ್ತಿಯು ಆಗಲು ಶಕ್ಯವಿಲ್ಲ ॥೪೫೬॥ ಒಬ್ಬ ಮನುಷ್ಯನು ಸ್ವಪ್ನದಲ್ಲಿಯೇ ಸ್ವಪ್ನದಿಂದ ಎಚ್ಚರಾದನು ಮತ್ತು ವೇದಶಾಸ್ತ್ರಗಳ ಅತಿ ಅಭ್ಯಾಸವನ್ನು ಮಾಡಿದನು. ಆದರೆ ಆತನಿಗೆ ಎಚ್ಚರಾದನು ಎಂದು ಹೀಗೆ ಹೇಳಲು ಬರುವುದಿಲ್ಲ. ಏಕೆಂದರೆ ಅವನು ನಿಜವಾಗಿಯೂ ಮಲಗಿರುವನು. ಅದರಂತೆ ಶಾಸ್ತ್ರಗಳ ಅಭ್ಯಾಸ ಮಾಡಿದ ವಿದ್ವಾನರ ಸ್ಥಿತಿಯಾಗಿರುವುದು ॥೪೫೭॥ ದೇಹದ ಅಭಿಮಾನ ಸಹ ಸರ್ವ ಭೇದಭಾವನೆಯು ಪರಿಪೂರ್ಣವಾಗಿ ಎಲ್ಲಿಯವರೆಗೆ ಇಲ್ಲದಾಗುವುದಿಲ್ಲವೋ, ಅಲ್ಲಿಯವರೆಗೆ ಆತ್ಮಜ್ಞಾನವು ಪ್ರಾಪ್ತವಾಗಲು ಶಕ್ಯವೇ ಇಲ್ಲ. ಏಕೆಂದರೆ ಹೃದಯದಲ್ಲಿ ಭೇದಭಾವನೆ ಇರುವುದೇ ಎಲ್ಲಕ್ಕಿಂತಲೂ ಹೆಚ್ಚಿನ ಬಂಧನವಾಗಿರುವುದು ॥೪೫೮॥ ಈಗ ಸ್ವತಃ ದೇವರೇ ಸನಕಾದಿಕರ ಪ್ರಶ್ನೆಯನ್ನು ತಿಳಿದುಕೊಂಡು ಸರ್ವ ಜನರಿಗೆ ಸರಿಯಾಗಿ ತಿಳಿಯುವ ರೀತಿಯಲ್ಲಿ ವೇದಗಳ ವಿಭಾಗವನ್ನು ಸರಿಯಾದ ರೀತಿಯಲ್ಲಿ ಹೇಳಹತ್ತಿದನು ॥೪೫೯॥ ಸರ್ವ ಭೇದಗಳನ್ನು ಸ್ವತಃ ಪ್ರಕಟಮಾಡಿ ನಿನ್ನ ವೇದಗಳು ಗರ್ಜನೆಯನ್ನು ಮಾಡುತ್ತ ಹೊರಟಿರುವುವು. ಈ ಯಾವ ಭೇದಗಳನ್ನು ಆರಂಭದಲ್ಲಿಯೇ ವೇದಗಳೇ ಹೇಳಿರುವುವು. ವೇದಗಳ ಹೇಳಿಕೆಯು ಸುಳ್ಳಾಗಿರಲು ಸಾಧ್ಯವಿಲ್ಲ ॥೪೬೦॥ ವೇದ ವಚನಗಳನ್ನು ಅವಶ್ಯವಾಗಿ ಸತ್ಯವೆಂದು ತಿಳಿಯಬೇಕು. ಅವುಗಳನ್ನು ಅವಶ್ಯವಾಗಿ ಮಾನ್ಯ ಮಾಡಬೇಕೆಂದು ನಿನ್ನ ಹೇಳಿಕೆಯಾಗಿರುವುದು. ಅಂದಮೇಲೆ ಆ ವೇದಗಳಿಗೆ ಸುಳ್ಳು ಎಂದು ಹೇಗೆ ಹೇಳಬೇಕು? ॥೪೬೧॥ ವೇದದೊಳಗಿನ ಆಜ್ಞೆಗಳು ಇವು ಅತ್ಯಂತ ಶ್ರೇಷ್ಠವಾಗಿರುವುವು. ವೇದಗಳೇ ಕ್ರಿಯಾ ಮತ್ತು ಕರ್ಮ ಇವುಗಳ ಪ್ರತಿಪಾದನೆಯನ್ನು ಮಾಡಿರುವುವು. ಸರ್ವ ವರ್ಣಾಶ್ರಮಗಳು ತಮ್ಮ ತಮ್ಮ ಸ್ವಧರ್ಮಗಳನ್ನು ವೇದಗಳ ಆಧಾರದಿಂದಲೇ ಆಚರಿಸುತ್ತಿರುವುವು ॥೪೬೨॥

ವೇದ ವ್ಹಣೇ ಜೋ ಲಟಿಕ । ತೋ ವೇದಬಾಹ್ಯ ಆವಶ್ಯಕ । ಹೇ ತೂಚಿ ಬೋಲಿಲಾಸೀ ದೇಖ । ತೋ ವೇದ ಲಟಿಕ ಕೇವೀ ಮಾನೂ ॥೪೬೩॥ ಐಶೀ ಮಾನಾಲ ಆಶಾಂಕಾ । ತೇಹೀವಿಷಯೀ ಮೀಚಿ ದೇಖಾ । ವೇದವಾದಾಚ್ಯಾ ವಿವೇಕಾ । ವಿಭಾಗ ನೇಟಕಾ ಸಾಂಗೇನ ॥೪೬೪॥ ಅವಿದ್ಯಾಭೇದ ಸಬಳ ಜ್ಯಾಸೀ । ವೇದ ನಿಯಾಮಕ ಮ್ಯಾ ಕೇಲಾ ತ್ಯಾಸೀ । ಮದ್ರೂಪೀ ಅಭೇದತಾ ಜ್ಯಾ ಭಕ್ತಾಸೀ । ಮಿಣಧಾ ತ್ಯಾಪಾಶೀ ವೇದವಾದು ॥೪೬೫॥ ವೇದ ತಿತುಕಾಹೀ ತ್ರಿಗುಣ । ಅಭೇದ ಭಜನೇ ಭಕ್ತ ನಿರ್ಗುಣ । ತ್ಯಾಸೀ ವೇದಾಚೇ ನಿಯಾಮಕಪಣ । ನ ಚಲೇ ಜಾಣ ಮಮಾಜ್ಞಾ ॥೪೬೬॥ ರಾಯಾಚಾ ಜಿವಲಗ ಸೇವಕೂ । ತ್ಯಾಸೀ ದ್ವಾರಪಾಳ ನವ್ಹೇ ನಿಯಾಮಕೂ । ಕಾ ದಾಸೀಸ ಲಾಗಲ್ಯಾ ರಾಜಾಂಕೂ । ತೀಸ ಮಾನೀ ಲೋಕೂ ಪ್ರಧಾನಾದೀ ॥೪೬೭॥ ನಿಜಕನ್ಯೇಸೀ ಶಿಕವೀ ಮಾತಾ । ಲಾಜ ಧರಾವೀ ಲೋಕದೇಖತಾ । ಏಕಾಂತೀ ಮೀನಲ್ಯಾ ಕಾಂತಾ । ಲಾಜ ಸರ್ವಥಾ ಸೋಡಾವೀ ॥೪೬೮॥ ಸಬಳ ಭೇದಾಂಚೇ ಭೇದಭಾನ । ತಂವ ದುರ್ಲಂಘ್ಯ ವೇದವಚನ । ಅಭೇದ ಭಕ್ತ ಮಾರ್ಝೇ ಜಾಣ । ವೇದವಿಧಾನ ತ್ಯಾ ನ ಬಾಧೀ ॥೪೬೯॥ ಆಶಾ ತೇಚಿ ಅವಿದ್ಯಾಬಾಧೂ । ಭೇದಿಲ್ಯಾ ಬಾಧೀನಾ ವೇದವಾದೂ । ಜೇವೀ ಸೂರ್ಯೋದಯಾಪುಢೇ ಚಾಂದೂ । ಹೋಯ ಮಂದೂ ನಿಜತೇಜೇ ॥೪೭೦॥

ಅಸತ್ತ್ವಾದಾತ್ಮನೋಽನ್ಯೇಷಾಂ ಭಾವಾನಾಂ ತತ್ಕೃತಾ ಭಿದಾ ।
ಗತಯೋ ಹೇತವಶ್ಚಾಸ್ಯ ಮೃಷಾ ಸ್ವಪ್ನದೃಶೋ ಯಥಾ ॥೩೧॥

ಅರ್ಥ :- ಆತ್ಮದ ಮತ್ತು ಅನ್ಯ ದೇಹ ನಾಮರೂಪಾತ್ಮಕ ಪ್ರಪಂಚ ಇವರ ಪರಸ್ಪರ ಸಂಬಂಧವಿರುವುದಿಲ್ಲ. ಪ್ರಪಂಚದ ಯಾವ ಅಸ್ತಿತ್ವವಿರುವುದಿಲ್ಲ. ಆದ್ದರಿಂದ ವರ್ಣ, ಆಶ್ರಮ ಇತ್ಯಾದಿ ಭೇದ, ಸ್ವರ್ಗ ಇತ್ಯಾದಿ ಫಲ ಇವುಗಳ ಕಾರಣೀಭೂತ ಕರ್ಮಗಳೆಲ್ಲವೂ ಆತ್ಮಕ್ಕೆ ಮಿಥ್ಯೆಯಾಗಿರುವುವು. ಸ್ವಪ್ನದಲ್ಲಿನ ಪುರುಷನು ಯಾವ ಸರ್ವರ ಸರ್ವ ಪದಾರ್ಥಗಳನ್ನು ನೋಡುವಂತೆ ಆಗಿರುವುವು.

ಗುರುಕೃಪಾ ಜೋ ಸಜ್ಞಾನ । ತ್ಯಾಸೀ ದೇಹಾಚೇ ಅಬಾಧಿತ ಭಾನ । ಮಿಥ್ಯಾ ಪ್ರಪಂಚಾಚೇ ದರ್ಶನ । ಕರ್ಮೀ ಕರ್ತೇಪಣ ತ್ಯಾ ನಾಹೀ ॥೪೭೧॥ ಅವಿದ್ಯಾ ದ್ಯೋತಿಲೇ ವರ್ಣಾಶ್ರಮ । ತೇಥೀಚೇ ಆವಿದ್ಯಕ ಕ್ರಿಯಾಕರ್ಮ । ತೇಥೀಲ ಜೋ ವೇದೋಕ್ತ ಧರ್ಮ । ತೋ ಅವಿದ್ಯಾಭ್ರಮ ಅಜ್ಞಾನಾ ॥೪೭೨॥ ಸಜ್ಞಾನ ಭಕ್ತಾಂಚ್ಯಾ ಠಾಯೀ । ತೇ ಅವಿದ್ಯಾ ನಿಃಶೇಷ ನಾಹೀ । ಮಾ ವೇದವಿಧಾನ ತೇಥೇ ಪಾಹೀ । ರಿಘಾವಯಾ ಕಾಯೀ ಕಾರಣ ॥೪೭೩॥

ಯಾವನು ವೇದಗಳಿಗೆ ಸುಳ್ಳು ಎಂದು ಹೇಳುವನೋ ಅವನು ಸರ್ವಥಾ ವೇದಬಾಹ್ಯನು ಎಂದು ಹೀಗೆ ನೀನೇ ಹೇಳಿರುವೆ. ಅಂದ ಮೇಲೆ ನಾವಾದರೂ ವೇದಗಳಿಗೆ ಸುಳ್ಳು ಎಂದು ಹೇಗೆ ತಿಳಿಯಬೇಕು? ॥೪೬೩॥ ಹೀಗೆ ಒಂದುವೇಳೆ ನೀವು ಅನುಮಾನವನ್ನು ಮಾಡಿದರೆ, ನಾನು ನಿಮಗೆ ವೇದವಚನಗಳಲ್ಲಿನ ಭಿನ್ನ ಭಿನ್ನ ಭಾಗಗಳ ವಿಚಾರಗಳನ್ನು ಸ್ಪಷ್ಟವಾಗಿ ಹೇಳುವೆನು ॥೪೬೪॥ ಯಾರಲ್ಲಿ ಅವಿದ್ಯಾತ್ಮ ಭೇದವು ತುಂಬ ಬೆಳೆದಿರುವುದೋ, ನಾನು ಅವರಿಗೆ ಈ ವೇದದ ನಿಯಮಗಳನ್ನು ಹೇಳಿರುವೆನು. ಆದರೆ ಯಾವ ಭಕ್ತರಿಗೆ ನನ್ನ ಸ್ವರೂಪದಲ್ಲಿ ಪೂರ್ಣವಾದ ಐಕ್ಯವು ಲಭ್ಯವಾಗಿರುವುದೋ, ಅವರಿಗೆ ವೇದವು ದಿಕ್ಕಿಲ್ಲದ ನಿರಾಶ್ರಿತವಾಗುವುದು ॥೪೬೫॥ ಸರ್ವ ವೇದಗಳು ತ್ರಿಗುಣಾತ್ಮಕವಾಗಿರುವುವು. ಭಕ್ತನು ಅಭೇದ ಭಜನೆಯಿಂದ ನಿರ್ಗುಣನಾಗಿರುವನು. ಆದ್ದರಿಂದ ಆತನಿಗೆ ನನ್ನ ಆಜ್ಞಾ ಪ್ರಮಾಣವಾಗಿ ವೇದದ ಯಾವ ನಿರ್ಬಂಧವೂ ಅನ್ವಯಿಸುವುದಿಲ್ಲ ॥೪೬೬॥ ಸೇವಕನು ಒಂದು ವೇಳೆ ರಾಜನಿಗೆ ಅತ್ಯಂತ ಪ್ರಿಯಕರನಾದರೆ ಆಗ ದ್ವಾರಪಾಲಕನು ಆತನಿಗೆ ಪ್ರತಿಬಂಧ ಮಾಡಲಾರನು. ಅಥವಾ ಒಬ್ಬ ದಾಸಿಯು ರಾಜನ ಪಟ್ಟರಾಣಿಯಾದರೆ ಪ್ರಧಾನಿ ಮೊದಲು ಮಾಡಿ ಸರ್ವ ಜನರೂ ಆಕೆಗೆ ಮಾನವನ್ನು ಕೊಡುವರು ॥೪೬೭॥ ತಾಯಿಯಾದವಳು ತನ್ನ ಮಗಳಿಗೆ ಹೀಗೆ ಕಲಿಸುವಳು; ಸಾರ್ವಜನಿಕರಲ್ಲಿರುವಾಗ ಪತಿಗೆ ನಾಚಬೇಕು. ಅದೇ ಪತಿಯು ಏಕಾಂತದಲ್ಲಿದ್ದಾಗ ಸರ್ವಥಾ ನಾಚಿಕೆಯನ್ನು ಬಿಟ್ಟುಬಿಡಬೇಕು ॥೪೬೮॥ ಆದ್ದರಿಂದ ತಮ್ಮಲ್ಲಿ ಎಲ್ಲಿಯವರೆಗೆ ದ್ವೈತ ಭಾವನೆಯು ಇರುವುದೋ ಅಲ್ಲಿಯವರೆಗೆ ವೇದದ ವಚನಗಳಂತೆ ಆಚರಿಸಬೇಕು. ಆದರೆ ನನ್ನ ಭಕ್ತರು ವಿಶ್ವಾತ್ಮಕ ಪ್ರೇಮದಿಂದ ದ್ವೈತರಹಿತರಾಗಿರುವುದರಿಂದ ಅವರಿಗೆ ವೇದ ವಿಧಾನವು ಬಾಧಿಸಲಾರದು ॥೪೬೯॥ ಯಾವ ಪ್ರಕಾರವಾಗಿ ಸೂರ್ಯೋದಯವಾದ ನಂತರ ಚಂದ್ರನು ಹೇಗೆ ನಿಸ್ತೇಜನಾಗಿ ಕಾಣುತ್ತಿರುವನೋ, ಅದರಂತೆ ಯಾವ ಆಶೆ ಎಂಬುದು ಅವಿದ್ಯಾ ರೂಪದಲ್ಲಿ ಬಾಧಿಸುತ್ತಿರುವುದು. ಅದನ್ನು ಭೇದಿಸಲು ವೇದವಾದವು ತನ್ನ ನಿಜ ತೇಜದಿಂದ ಮಂದವಾಗಿಬಿಡುವುದು ॥೪೭೦॥

ಯಾರ ಮೇಲೆ ಗುರುಕೃಪೆಯಾಗುವುದೋ, ಆತನು ಜ್ಞಾನಸಂಪನ್ನನಾಗುವನು. ಆತನಿಗೆ ದೇಹದ ಭಾನವು ಬಾಧಕವಾಗುವುದಿಲ್ಲ. ಪ್ರಪಂಚವು ಮಿಥ್ಯೆಯಾಗಿದೆ ಎಂದು ಆತನು ತಿಳಿದಿರುವನು. ಆತನು ಕರ್ಮಗಳನ್ನು ಮಾಡಿದರೂ ಕರ್ತೃತ್ವವು ಆತನಲ್ಲಿ ಬರುವುದಿಲ್ಲ ॥೪೭೧॥ ವರ್ಣ ಆಶ್ರಮಗಳು ಇವು ಅಜ್ಞಾನದಿಂದ ಆಗಿರುವುವು. ಇವುಗಳಲ್ಲಿನ ಕ್ರಿಯಾ ಕರ್ಮಗಳೂ ಕೂಡ ಅಜ್ಞಾನದಿಂದಲೇ ಆಗಿರುವುವು. ಆದ್ದರಿಂದ ಅದರಲ್ಲಿ ಹೇಳಿರುವ ಯಾವ ವೇದೋಕ್ತ ಧರ್ಮವು, ಆ ಯಾವ ಯಜ್ಞ ಜನರ ಅವಿದ್ಯಾ ಭ್ರಮವಾಗಿರುವುದು ॥೪೭೨॥ ಆದರೆ, ಜ್ಞಾನೀ ಭಕ್ತರಲ್ಲಿ ಅವಿದ್ಯೆಯು ಸ್ವಲ್ಪವೂ ಕೂಡ ಇರುವುದಿಲ್ಲ. ಹೀಗಿರಲು ಅವರಲ್ಲಿ ವೇದಗಳ ವಿಧಾನಗಳು ಪ್ರವೇಶಿಸಲು ಯಾವ ಕಾರಣವಿರುವುದು ? ॥೪೭೩॥

ಆಂಬಾ ಸಫಳಿತ ಜಂವ ಅಸೇ । ತಂವ ನೇಟೇಪಾಟೇ ರಾಖಣ ಬೈಸೇ । ಫಳ ಹಾತಾ ಆಲ್ಯಾ ಆಪೈಸೇ । ರಾಖಣ ವಾಯಸೇ ರಾಹೇನಾ ॥೪೭೪॥ ತೇವೀ ಅವಿದ್ಯೇಚೇ ಜಂವ ಬಂಧನ । ತಂವ ವೇದಾಚೇ ವೇದ ವಿಧಾನ । ಅವಿದ್ಯಾ ನಾಶಿಲಿಯಾ ಜಾಣ । ವಿಧಿನೇ ತೇ ಸ್ಥಾನ ಸೋಡಿಲೇ ॥೪೭೫॥ ಅವಿದ್ಯಾ ಜಾಊನಿ ವರ್ತತಾ ದೇಹೀ । ದೇಹಾಚಾ ದೇಹತ್ವೇ ಹೇತು ನಾಹೀ । ಹೇ ಮ್ಹಣಾಲ ನ ಘಡೇಚ ಕಾಂಹೀ । ಐಕ ತೇಹೀ ಸಾಂಗೇನ ॥೪೭೬॥ ಸ್ವಪ್ನೀಚೇ ದೇಹಾದಿ ಪ್ರಪಂಚಭಾನ । ಸ್ವಪ್ನಾಮಾಜೀ ಸತ್ಯ ಜಾಣ । ಜಾಗೇ ಹೋತಾ ತೇ ಅಕಾರಣ । ಸಂಸ್ಕಾರೇ ಸ್ವಪ್ನ ದಿಸತಾಂಹೀ ॥೪೭೭॥ ಸ್ವಪ್ನೀ ರಾಜ್ಯಪದ ಪಾವಲಾ । ಕಾ ವ್ಯಾಘ್ರಮುಖೀ ಸಾಂಪಡಲಾ । ಅಥವಾ ಧನಾದಿಲಾಭ ಝಾಲಾ । ರತ್ನೇ ಪಾವಲಾ ಅನರ್ಘ್ಯೇ ॥೪೭೮॥ ತೇಥೀಚೇ ಸುಖ ದುಃಖ ಹರಿಖ । ಜಾಗತ್ಯಾಸೀ ನಾಹೀ ದೇಖ । ತೇವೀ ಸಜ್ಞಾನಾಸೀ ಆವಿದ್ಯಕ । ನೋಹೇ ಬಾಧಕ ನಿಜಬೋಧೇ ॥೪೭೯॥ ದೇಹೀ ಅಸೋನಿ ವಿದೇಹಸ್ಥಿತೀ । ಐಶಾ ಬೋಧಸಾಧಿಕಾ ಜ್ಯಾ ಯುಕ್ತೀ । ಸ್ವಯೇ ಸಾಂಗೇನ ಮ್ಹಣೇ ಶ್ರೀಪತೀ । ಭೇದಾಚೀ ಉತ್ಪತ್ತೀ ಛೇದಾವಯಾ ॥೪೮೦॥

ಯೋ ಜಾಗರೇ ಬಹಿರನುಕ್ಷಣಧರ್ಮಿಣೋಽರ್ಥಾನ್ ಭುಂಕ್ತೇ ಸಮಸ್ತಕರಣೈರ್ಹೃದಿ ತತ್ಸದೃಕ್ಷಾನ್ ।
ಸ್ವಪ್ನೇ ಸುಷುಪ್ತ ಉಪಸಂಹರತೇ ಸ ಏಕಃ ಸ್ಮೃತ್ಯನ್ವಯಾತ್ತ್ರಿಗುಣವೃತ್ತಿದೃಗಿಂದ್ರಿಯೇಶಃ ॥೩.೨॥

ಅರ್ಥ :- ಜಾಗ್ರತಾವಸ್ಥೆಯಲ್ಲಿ ಸರ್ವ ಇಂದ್ರಿಯಗಳ ಮುಖಾಂತರವಾಗಿ ಹೊರಗೆ ಕಾಣಿಸುವ ಸಂಪೂರ್ಣ ಪದಾರ್ಥಗಳ ಅನುಭವವನ್ನು ಪಡೆಯುವನು ಮತ್ತು ಹೃದಯದ ಜಾಗೃತಿಯಲ್ಲಿ ಕಂಡಿರುವ ಪದಾರ್ಥಗಳ ಸಮಾನ ವಾಸನಾಮಯ ವಿಷಯಗಳ ಅನುಭವವನ್ನು ಸ್ವಪ್ನದಲ್ಲಿ ಪಡೆಯುವನು ಮತ್ತು ಸುಷುಪ್ತಿ ಅವಸ್ಥೆಯಲ್ಲಿ ಆ ಸರ್ವ ವಿಷಯಗಳನ್ನು ಏಕತ್ರಗೊಳಿಸಿ ಅದರ ಲಯವಾದ ಅನುಭವವನ್ನು ಪಡೆಯುವನು. ಈತನು ಒಬ್ಬನೇ ಆಗಿರುವನು. ಜಾಗ್ರತಾವಸ್ಥೆಯಲ್ಲಿ ಇಂದ್ರಿಯಗಳು ಸ್ವಪ್ನಾವಸ್ಥೆಯಲ್ಲಿ ಮನವು ಮತ್ತು ಸುಷುಪ್ತಿಯ ಸಂಸ್ಕಾರಹೊಂದಿದ ಬುದ್ಧಿಯ ಆತನು ಸ್ವಾಮಿಯಾಗಿರುವನು. ಆತನು ತ್ರಿಗುಣಮಯ ಮೂರು ಅವಸ್ಥೆಗಳ ಸಾಕ್ಷಿಯಾಗಿರುವನು. ಯಾವನು ಸ್ವಪ್ನವನ್ನು ಕಂಡನೋ ಆತನು ಎಚ್ಚರಾದನು ಮತ್ತು ಆತನೇ ಮಲಗಿರುವನು ಈ ಸ್ಮೃತಿಯ ಆಧಾರದಿಂದ ಒಂದೇ ಆತ್ಮವು ಮೂರೂ ಅವಸ್ಥೆಗಳಲ್ಲಿರುವುದು ಇದು ಸಿದ್ಧವಾಗುವುದು.

ತಿಹೀ ಅವಸ್ಥಾಂಚ್ಯಾ ಠಾಯೀ । ಆತ್ಮಾ ಏಕಚಿ ಅಸೇ ದೇಹೀ । ತೋಚಿ ದೇಹಾಚ್ಯಾ ಠಾಯೀ ವಿದೇಹೀ । ಸಾಕ್ಷೀ ಪಾಹೀ ಸರ್ವಾಂಚಾ ॥೪೮೧॥ ಮೀ ಬಾಳ ತೋಚಿ ಝಾಲೋ ತರಣಾ । ಆತಾ ಆಲೋ ಮ್ಹಾತಾರಪಣಾ । ಐಶಾ ವಯಸಾಂಚೇ ಸಾಕ್ಷೀಪಣಾ । ಆಪಣ ಆಪಣಾ ದೇಖತೂ ॥೪೮೨॥ ಜಾಗೃತೀಸೀ ನಾನಾ ಭೋಗ । ಸವಿಸ್ತರ ಭೋಗೀ ಅನೇಕ । ತೇಚಿ ಸ್ವಪ್ನಾಮಾಜೀ ಸಾಂಗ । ನಿಜಹೃದಯೀ ಚಾಂಗ ವಿಸ್ತಾರೀ ॥೪೮೩॥

ಮಾವಿನ ಮರದಲ್ಲಿ ಎಲ್ಲಿಯವರೆಗೆ ಫಲಗಳಿರುವುವೋ, ಅಲ್ಲಿಯವರೆಗೆ ಅದರ ರಕ್ಷಣೆಯನ್ನು ಮಾಡಬೇಕಾಗುವುದು. ತದನಂತರ ಒಮ್ಮೆ ಎಲ್ಲ ಫಲಗಳು ಕೈಗೆ ಹತ್ತಲು ಆಗ ಕ್ಷಣಹೊತ್ತು ಕೂಡ ಆ ಮರವನ್ನು ಕಾಯಬೇಕಾಗುವುದಿಲ್ಲ ॥೪೭೪॥ ಅದರಂತೆಯೇ ಅಜ್ಞಾನ ಬಂಧನೆಯು ಎಲ್ಲಿಯವರೆಗೆ ಇರುವುದೋ, ಅಲ್ಲಿಯವರೆಗೆ ವೇದವಿಧಾನಗಳ ಪಾಲನೆಯನ್ನು ಮಾಡಬೇಕಾಗುವುದು. ಒಮ್ಮೆ ಅಜ್ಞಾನವೇ ಇಲ್ಲದಾಗಲು, ಆಗ ವೇದವಿಧಾನಗಳ ಅವಶ್ಯಕತೆಯು ಉಳಿಯುವುದಿಲ್ಲ ॥೪೭೫॥ ಅಜ್ಞಾನವು ಮುಗಿದು ಹೋದ ನಂತರ ಒಂದು ವೇಳೆ ಭಕ್ತನು ದೇಹದಲ್ಲಿ ಉಳಿದರೂ ಕೂಡ ಆತನು ದೇಹತ್ವದಿಂದ ದೇಹದ ಸ್ವಾಮಿಯಾಗುವುದಿಲ್ಲ. ಈಗ ಈ ಮಾತು ಬಹಳ ಕಠಿಣವಾಗಿದೆ ಎಂದು ನೀನು ಹೇಳಬಹುದು, ಅದಕ್ಕಾಗಿ ಅದರ ಕಾರಣವನ್ನೂ ಹೇಳುವೆನು, ಕೇಳು ॥೪೭೬॥ ಸ್ವಪ್ನದಲ್ಲಿನ ದೇಹಾದಿ ಸಂಸಾರದ ಭಾಸವು ಸ್ವಪ್ನದಲ್ಲಿಯೇ ಮಾತ್ರ ನಿಜವೆಂದು ತೋರುವುದು. ಸಂಸ್ಕಾರದಿಂದ ಸ್ವಪ್ನ ಪ್ರಪಂಚವು ಕಾಣುತ್ತಿದ್ದರೂ ಎಚ್ಚರಾದ ತಕ್ಷಣವೇ ಅದೆಲ್ಲವೂ ಸುಳ್ಳಾಗಿಬಿಡುವುದು ॥೪೭೭॥ ಸ್ವಪ್ನದಲ್ಲಿ ಒಂದುವೇಳೆ ರಾಜ್ಯ ಪದವು ಪ್ರಾಪ್ತವಾಯಿತು ಅಥವಾ ಹುಲಿಯ ಮುಖದಲ್ಲಿ ನಮ್ಮ ಕುತ್ತಿಗೆಯು ಸಿಕ್ಕಿಕೊಂಡಿತು, ಇಲ್ಲವೇ ಹೇರಳವಾಗಿ ಧನ ದೊರೆಯಿತು ಇಷ್ಟೇ ಅಲ್ಲ ಅಮೌಲ್ಯವಾಗಿರುವ ರತ್ನಗಳು ಸಿಕ್ಕವು ॥೪೭೮॥ ಇಲ್ಲಿ ಸ್ವಪ್ನದಲ್ಲಿನ ಯಾವತ್ತೂ ಸುಖ-ದುಃಖಗಳು, ಹರುಷವು ಎಚ್ಚರಾದ ಮೇಲೆ ಯಾವುದೂ ಇರುವುದಿಲ್ಲ. ಅದರಂತೆ ಆತ್ಮಜ್ಞಾನಿಯಾಗಿರುವವನಿಗೆ ಅಜ್ಞಾನದ ಕಾರ್ಯಗಳು ಬಾಧಿಸಲಾರವು ॥೪೭೯॥ ದೇಹದಲ್ಲಿದ್ದರೂ ಕೂಡ ವಿದೇಹೀ ಅವಸ್ಥೆಯು ಪ್ರಾಪ್ತವಾಗುವುದು. ಹೀಗೆ ಜ್ಞಾನದಾಯಕ ಉಪಾಯವಾಗಿರುವುದು. ಸರ್ವ ಪ್ರಕಾರದ ಭೇದಗಳ ನಾಶವನ್ನು ಮಾಡುವುದಕ್ಕಾಗಿ ಅದನ್ನು ನಾನು ಸ್ವತಃ ನಿಮಗೆ ಈಗ ಹೇಳುವೆನು ॥೪೮೦॥

ಮೂರೂ ಅವಸ್ಥೆಗಳಲ್ಲಿ ಆತ್ಮವು ದೇಹದಲ್ಲಿ ಒಂದೇ ಇರುವುದು. ಆತ್ಮವು ದೇಹದಲ್ಲಿದ್ದು ವಿದೇಹೀ ಸ್ಥಿತಿಯಲ್ಲಿ ಸರ್ವರ ಸಾಕ್ಷಿಯಾಗಿರುವುದು ॥೪೮೧॥ ನಾನು ಚಿಕ್ಕ ಬಾಲಕನಾಗಿದ್ದೆನು, ಈಗ ತರುಣನಾಗಿರುವೆನು ಮತ್ತು ನನಗೆ ಮುದುಕತನ ಬಂದಿತು. ಹೀಗೆ ಅವಸ್ಥೆಗಳ ಸಾಕ್ಷಿತ್ವದಿಂದ ತಾನು ತನ್ನನ್ನೇ ಸ್ವತಃ ಹೀಗೆ ಕಾಣುವನು ॥೪೮೨॥ ಜಾಗೃತಿಯಲ್ಲಿರುತ್ತಿರಲು ಅನೇಕ ಪ್ರಕಾರಗಳ ಸುಖೋಪಭೋಗಗಳನ್ನು ಭಿನ್ನ ಭಿನ್ನ ರೀತಿಯಿಂದ ಅವನು ಭೋಗಿಸುತ್ತಿರುವನು. ಸ್ವಪ್ನದಲ್ಲಿ ಅದೇ ಭೋಗವು ಆತನ ಹೃದಯದಲ್ಲಿ ವಿಸ್ತಾರವಾಗುವುದು ॥೪೮೩॥

ಜಾಗೃತಿಭೋಗಾಚಾ ಸಂಸ್ಕಾರೂ । ತೋಚಿ ಸ್ವಪ್ನಾಮಾಜೀ ವಿಸ್ತಾರೂ । ಮನೋಮಯ ವಿಶ್ವಾಕಾರೂ । ನಿಜಹೃದಯೀ ವೇವ್ಹಾರೂ ವಾಢವೀ ।।೪೮೪।। ಗಜ ತುರಂಗ ಖರ ನರ । ಗಿರಿ ದುರ್ಗ ಪುರ ನಗರ । ವಿಶಾಳ ಸರಿತಾ ಸಮುದ್ರ । ವಾಸನೇಚೇ ವೈಚಿತ್ರ್ಯ ಸ್ವಪ್ನೀ ದೇಖೇ ।।೪೮೫।। ನಾಹೀ ಜಾಗೃತೀ ನಾಹೀ ಸ್ವಪ್ನ । ಅಂತಃಕರಣಹೀ ಕರೋನಿ ಲೀನ । ಸುಷುಪ್ತಿ ಕಾಳೀ ತೋಚಿ ಜಾಣ । ಅಹಂಕಾರೇವೀಣ ಉರಲಾಸೇ ।।೪೮೬।। ವಿಶ್ವಾಭಿಮಾನೀ ಇಂದ್ರಿಯವೃತ್ತೀ । ತೇಣೇ ತೋ ದೇಖತಸೇ ಜಾಗೃತೀ । ತೈಜಸ ಅಭಿಮಾನೀ ಅವಿದ್ಯಾವೃತ್ತೀ । ಸ್ವಪ್ನಸ್ಥಿತೀ ತೋ ದೇಖೇ ।।೪೮೭।। ಪ್ರಾಜ್ಞ ಅಭಿಮಾನೀ ಮೂಢವೃತ್ತೀ । ತೋ ದೇಖತಸೇ ಸುಷುಪ್ತೀ । ಏಕ ಆತ್ಮಾ ತಿಹೀಪ್ರತೀ । ನ ಘಡೇ ನಿಶ್ಚಿತೀ ಮ್ಹಣಾಲ ।।೪೮೮।। ತಿಹೀ ಅವಸ್ಥಾಂಚೇ ಅಭಿಮಾನೀ । ಮ್ಹಣಾಲ ದೇಖಣೇ ಭಿನ್ನ ತಿನೀ । ತರೀ ಏಕ ಆತ್ಮಾ ದೃಷ್ಟೇಪಣೀ । ಉರಲಾ ನಿದಾನೀ ತೇ ಐಕಾ ।।೪೮೯।। ಪಹಿಲಾ ಜೋ ಕಾ ಮೀ ಜಾಗತಾ । ತೇಣೆ ಮ್ಯಾ ದೇಖಿಲೀ ಸ್ವಪ್ನಾವಸ್ಥಾ । ತೋಚಿ ಮೀ ಸುಖೇ ನಿಜೇಲಾ ಹೋತಾ । ಯಾ ತಿನೀ ಅವಸ್ಥಾ ಸ್ವಯೇ ಮೀ ಜಾಣೇ ।।೪೯೦।। ಜೇಣೇ ಜೇ ದೇಖಿಲೀ ನಾಹೀ । ತೋ ತೇ ಅವಸ್ಥಾ ಸಾಂಗೇಲ ಕಾಯೀ । ಯಾಲಾಗೀ ತಿಹೀ ಅವಸ್ಥಾಂಚೇ ಠಾಯೀ । ಆತ್ಮಾ ಪಾಹೀ ಅನುಸ್ಯೂತ ।।೪೯೧।। ಜಾಗೃತೀ ಇಂದ್ರಿಯಾ ದೇಖಣೇಪಣ । ಸ್ವಪ್ನೀ ದೇಖಣೇ ತೇಂ ತಂವ ಮನ । ಸುಷುಪ್ತಿ ಗಾಢ ಮೂಢ ಅಜ್ಞಾನ । ಕೈಚೇ ದೇಖಣೇಪಣ ಆತ್ಮ್ಯಾಸೀ ।।೪೯೨।। ಯೇಹೀ ಆಶಂಕೇಚೇ ವಚನ । ಐಕಾ ದ್ವಿಜ ಹೋ ಸಾವಧಾನ । ಮನ ಇಂದ್ರಿಯೇ ಜಡೇ ಜಾಣ । ದೇಖಣೇಪಣ ತ್ಯಾ ಕೈಚೇ ।।೪೯೩।। ಜೋ ಮಾನಸಾಚಾ ಚಾಳಕೂ । ಜೋ ಇಂದ್ರಿಯಾಂಚಾ ಪ್ರಕಾಶಕೂ । ಜೋ ಸುಷುಪ್ತೀಚಾ ದ್ಯೋತಕೂ । ಸಾಕ್ಷಿತ್ವೇ ಏಕೂ ತೋ ಆತ್ಮಾ ।।೪೯೪।। ಮ್ಹಣಾಲ ಸುಷುಪ್ತೀ ಆತ್ಮಾ ನಾಹೀ । ಬೋಲಣೇ ನ ಘಡೇ ಕಾಂಹೀ । ಮೀ ಸುಖೇ ನಿಜೇಲೋ ಹೋತೋ ಪಾಹೀ । ಹೇ ಕೋಣಾಚೇ ಠಾಯೀ ಜಾಣವೇ ।।೪೯೫।। ಪ್ರಕೃತಿಕಾರ್ಯಾಹೂನಿ ಪರತಾ । ದೇಹಾದಿ ಅವಸ್ಥಾಂತೇ ಪ್ರಕಾಶಿತಾ । ಗುಣ ಇಂದ್ರಿಯಾಂಚಾ ನಿಯಂತಾ । ಜಾಣ ತತ್ತ್ವತಾ ತೋ ಆತ್ಮಾ ।।೪೯೬।।

ಜಾಗೃತಾವಸ್ಥೆಯಲ್ಲಿ ಅನೇಕ ಪ್ರಕಾರಗಳ ಉಪಭೋಗದ ಸಂಸ್ಕಾರವು ಸಾಧಿಸಿರುವುದು. ಅವುಗಳ ವಿಸ್ತಾರವು ಸ್ವಪ್ನದಲ್ಲಿ ಆಗುವುದು. ಸ್ವಪ್ನದಲ್ಲಿ ಮನೋಮಯವು ಕಾಲ್ಪನಿಕ ವಿಶ್ವವನ್ನು ಉತ್ಪನ್ನಗೊಳಿಸಿ ತನ್ನ ಹೃದಯದಲ್ಲಿ ಅದರ ವಿಸ್ತಾರವನ್ನು ಮಾಡುವುದು ।।೪೮೪।। ಆನೆ, ಕುದುರೆ, ಕತ್ತೆ, ಪುರುಷ, ಕೋಟೆಗಳು, ಗ್ರಾಮಗಳು, ನಗರಗಳು, ಪ್ರಚಂಡ ನದಿಗಳು, ಸಮುದ್ರ ಇತ್ಯಾದಿ ವಿವಿಧ ವಸ್ತುಗಳನ್ನು ತನ್ನ ಕಲ್ಪನೆಗಳಂತೆ ಸ್ವಪ್ನವನ್ನು ಕಾಣುವನು ।।೪೮೫।। ಅದೇ ಜೀವವು ಸುಷುಪ್ತಿಯಲ್ಲಿ ಜಾಗೃತೀ ಮತ್ತು ಸ್ವಪ್ನ ಇವುಗಳಿಂದ ರಹಿತವಾಗುವುದು. ಅಂತಃಕರಣಕ್ಕೆ ದೀನಗೊಳಿಸುವುದು. ಅಥವಾ ಅಹಂಕಾರವಿಲ್ಲದೇ ಇರುವುದು ।।೪೮೬।। ಜಾಗೃತಾವಸ್ಥೆಯಲ್ಲಿ ವಿಶ್ವಾಭಿಮಾನಿ ಇರುವನು, ಆತನು ತನ್ನ ದೇಹಕ್ಕೆ ನಾನೇ ಇರುವೆ ಮತ್ತು ಈ ಎಲ್ಲ ವಿಷಯಗಳು ನನ್ನದಾಗಿವೆ, ಹೀಗೆ ವೃತ್ತಿಯನ್ನು ಹಿಡಿಯುವುದು ಮತ್ತು ಈ ಯಾವ ವೃತ್ತಿಯಿಂದ ಅವನು ಯಾವಾಗಲೂ ನೋಡುತ್ತಿರುವನು. ತೇಜಸ ಅಭಿಮಾನಿಯು ಅದು ಅಜ್ಞಾನ ವೃತ್ತಿಯದ್ದಾಗಿರುವುದರಿಂದ ಸ್ವಪ್ನಾವಸ್ಥೆಯನ್ನು ಕಾಣುತ್ತಿರುವನು ।।೪೮೭।। ಪ್ರಾಜ್ಞವೆಂದರೆ ಗಾಢವಾದ ನಿದ್ರೆಯ ಅಭಿಮಾನಿಯಾಗಿರುವನು. ಸುಷುಪ್ತಿಯ ಅನುಭವವನ್ನು ಪಡೆಯುತ್ತಿರುವನು. ಒಂದೇ ಆಗಿರುವ ಆತ್ಮವು ಜಾಗೃತೀ ಸ್ವಪ್ನ, ಸುಷುಪ್ತೀ ಈ ಮೂರೂ ಅವಸ್ಥೆಗಳ ಸಾಕ್ಷಿ ಹೇಗಾಗುವುದು? ಎಂದು ನಿಮಗೆ ಹೀಗೆ ಅನಿಸಿಕೆಯಾಗಬಹುದು ।।೪೮೮।। ಮೂರೂ ಅವಸ್ಥೆಗಳಲ್ಲಿ ಒಂದು ವೇಳೆ ಸಾಕ್ಷೀಗಳು ಭಿನ್ನ ಭಿನ್ನವಾಗಿರಲು ಆಗ ಒಂದೇ ಆತ್ಮವು ಸಾಕ್ಷಿತ್ವದಿಂದ ಹೇಗೆ ಉಳಿಯುವುದು? ಅದಕ್ಕಾಗಿ ಅದರ ಉತ್ತರವನ್ನೂ ಕೂಡ ಈಗ ಕೇಳಿರಿ ।।೪೮೯।। ಪ್ರಾರಂಭದಲ್ಲಿ ಜಾಗೃತನಾಗಿದ್ದವನೇ ಮಲಗುವನು ಹಾಗೂ ಸ್ವಪ್ನವನ್ನು ಕಾಣುವನು. ನಂತರ ನಾನು ಗಾಢವಾದ ನಿದ್ರೆಯಲ್ಲಿ ಮಲಗಿಕೊಂಡಿದ್ದೆನು ಎಂದು ಹೀಗೆ ಹೇಳುವನು ।।೪೯೦।। ಯಾವನು ಯಾವ ಅವಸ್ಥೆಯನ್ನು ನೋಡನ್? ಇಲ್ಲದಿರುವಾಗ್ಗ ಅವನು ಆ ಅವಸ್ಥೆಯನ್ನು ಹೇಳಲು ಸಾಧ್ಯವಿರುವುದೇ? ಆದ್ದರಿಂದ ಮೂರೂ ಅವಸ್ಥೆಗಳಲ್ಲಿ ಆತ್ಮವು ಒಂದೇ ರೀತಿಯಾಗಿ ತುಂಬಿರುವುದು ।।೪೯೧।। ಎಚ್ಚರದಿಂದಿರುವಾಗ್ಗ ಇಂದ್ರಿಯಗಳಿಗೆ ನೋಡುವ ಸಾಮರ್ಥ್ಯವಿರುವುದು. ಸ್ವಪ್ನದಲ್ಲಿ ಮನವು ನೋಡುತ್ತಿರುವುದು. ಮತ್ತು ಸುಷುಪ್ತಿಯಲ್ಲಿ ಪೂರ್ಣ ಅಜ್ಞಾನ, ಮೂಢತ್ವವಿರುವುದು. ಹೀಗಿರಲು ಆತ್ಮಕ್ಕೆ ನೋಡುವತನ ಹೇಗೆ? ।।೪೯೨।। ಹೇ ಬ್ರಾಹ್ಮಣರೇ, ಈ ನಿಮ್ಮ ಶಂಕೆಯ ಉತ್ತರವನ್ನು ಈಗ ಹೇಳುವೆನು, ನೀವು ಏಕಾಗ್ರಚಿತ್ತದಿಂದ ಕೇಳಿರಿ. ನಿಜವಾಗಿಯೂ ಮನ, ಇಂದ್ರಿಯಗಳು ಜಡವಾಗಿರುವುವು. ಅವುಗಳಿಗೆ ನೋಡುವ ಸಾಮರ್ಥ್ಯವು ಎಲ್ಲಿಂದ ಬರಬೇಕು? ।।೪೯೩।। ಮನಸ್ಸಿಗೆ ಚಾಲನೆಯನ್ನು ನೀಡುವುದು, ಇಂದ್ರಿಯಗಳಿಗೆ ಪ್ರಕಾಶಗೊಳಿಸುವುದು, ಸುಷುಪ್ತಿಯನ್ನು ಕಾಣುವದು ಸಾಕ್ಷಿತ್ವದಿಂದ ಒಂದೇ ಆತ್ಮವಿರುವುದು ।।೪೯೪।। ಸುಷುಪ್ತಿಯಲ್ಲಿ ಆತ್ಮವು ಇಲ್ಲವೇ ಇಲ್ಲವೆಂದು ಹೀಗೆ ಹೇಳದರೆ ಅದು ಯೋಗ್ಯವಾಗುವುದಿಲ್ಲ. ಕಾರಣ ನಾನು ಸುಖವಾಗಿ ಮಲಗಿದ್ದೆನು ಎಂಬ ಈ ಅನುಭವವನ್ನು ಸಾಕ್ಷಿತ್ವವಿಲ್ಲದೇ ಹೇಗೆ ಹೇಳಲು ಬರುವುದು? ।।೪೯೫।। ಯಾವುದು ಪ್ರಕೃತೀ, ಕರ್ಮಗಳಿಂದ ಭಿನ್ನವಾಗಿರುವ, ದೇಹಾದಿ ಅವಸ್ಥೆಗಳಿಗೆ ಪ್ರಕಾಶಿತ ಮಾಡುವ, ಹಾಗೆಯೇ ಗುಣ ಮತ್ತು ಇಂದ್ರಿಯಗಳ ನಿಯಮನ ಮಾಡುವ, ಇದುವೇ ನಿಜವಾಗಿ ಆತ್ಮವೆಂದು ಹೀಗೆ ತಿಳಿಯಬೇಕು ।।೪೯೬।।

ಇಂದ್ರಿಯೇ ಆತ್ಮಾ ನವ್ಹತೀ ಹಾ ನೇಮ । ತ್ಯಾಂಚೇ ಸದಾ ಏಕದೇಶೀ ಕರ್ಮ । ಆತ್ಮಾ ಸರ್ವಕರ್ತಾ ಸರ್ವೋತ್ತಮ । ಕರೋನಿ ನಿಷ್ಕರ್ಮ ಸರ್ವದಾ ।೬೯೭॥ ಮನ ಆತ್ಮಾ ನವ್ಹೇ ತೇ ಐಕ ವರ್ಮ । ಸಂಕಲ್ಪ ವಿಕಲ್ಪ ತ್ಯಾಚೇ ಕರ್ಮ । ಆತ್ಮಾ ನಿರ್ವಿಕಲ್ಪ ನಿರೂಪಮ । ವಿಶ್ರಾಮಧಾಮ ಜಗಾಚೇ ।೬೯೮॥ ಜೋ ಸುಷುಪ್ತಿ ಸುಖಭೋಗಸಾಕ್ಷೀ । ಜೋ ದೇಖಣೇಪಣೇ ತಿಹೀ ಲೋಕೀ । ತೋ ಮೀ ಆತ್ಮಾ ಗಾ ಏಕಾಕೀ । ಜಾಣ ನಿಷ್ಟಂಕೀ ನಿಶ್ಚಿತ ।೬೯೯॥ ಏವಂ ಯುಕ್ತೀಚಿಯಾ ವಿಭಾಗಲೀಲಾ । ಪರಮಾತ್ಮಾ ಜೋ ಏಕೂ ಸಾಧಿಲಾ । ತೋ ಸಾಧಕಾಂಸೀ ಉಪಯೋಗಾ ಆಲಾ । ಯೋಗ ಸಿದ್ಧೀ ನೇಲಾ ತೇಣೇ ಬಳೇ ।೭೦೦॥

ಏವಂ ವಿಮೃಶ್ಯ ಗುಣತೋ ಮನಸಸ್ತ್ರ್ಯವಸ್ಥಾ ಮನ್ಮಾಯಯಾ ಮಯಿ ಕೃತಾ ಇತಿ ನಿಶ್ಚಿತಾರ್ಥಾಃ ।
ಸಂಛಿದ್ಯ ಹಾರ್ದಮನುಮಾನಸದುಕ್ತಿತೀಕ್ಷ್ಣಜ್ಞಾನಾಸಿನಾ ಭಜತ ಮಾಽಖಿಲಸಂಶಯಾಧಿಮ್ ।೩೩॥

ಅರ್ಥ :- ಮನದ ಈ ಮೂರು ಅವಸ್ಥೆಗಳು ಗುಣಗಳಿಂದಾಗುವವು. ಇವು ನನ್ನ ಅವಿದ್ಯೆಯಿಂದಲೇ ನನ್ನಲ್ಲಿ ಆರೋಪಿತವಾಗಿರುವುವು. ನಿಜವಾಗಿ ತತ್ವತಃ ಅವು ಇರುವುದಿಲ್ಲ. ಹೀಗೆ ಯಾರು ಆತ್ಮರೂಪ ನಿಶ್ಚಯವನ್ನು ಮಾಡಿರುವುದನ್ನು ನೀವು ಅದರಲ್ಲಿ ಸಂಶಯವನ್ನು ಸ್ಥಾಪಿಸಿರುವಿರಿ. ಆ ಅಹಂಕಾರಕ್ಕೆ ಅನುಮಾನಕ್ಕೆ ಸಂತರ ಉಪದೇಶ ಮತ್ತು ಶ್ರುತಿ ಈ ಜ್ಞಾನ ಖಡ್ಗಗಳಿಂದ ಸಂಪೂರ್ಣವಾಗಿ ಮುರಿದು ಹಾಕಬೇಕು, ಅಹಂಕಾರವನ್ನು ಛೇದಿಸಬೇಕು. ಮತ್ತು ಹೃದಯದಲ್ಲಿರುವ ನನ್ನನ್ನು ಅತ್ಯಂತ ಪ್ರೇಮದಿಂದ ಭಜಿಸಬೇಕು.

ಮ್ಯಾ ಸಾಂಗೀತಲ್ಯಾ ಜ್ಯಾ ಯುಕ್ತೀ । ಜ್ಯಾ ಕಾ ಶ್ರುತಿಶಾಸ್ತ್ರಸಂಮತೀ । ತ್ಯಾ ವಿಚಾರೋನಿ ಪರಮಾರ್ಥಗತೀ । ಸಂಸಾರಗುಂತೀ ಉಗವಾವೀ ।೭೦೧॥ ಸಂಸಾರಗುಂತೀಸೀ ಕಾರಣ ಗುಣ । ಗುಣಾವಸ್ಥೀ ವ್ಯಾಪಿಲೇ ಮನ । ತ್ಯಾಸೀ ಮಾಝೀ ಮಾಯಾ ಮೂಳ ಜಾಣ । ಜಿಯಾ ಕೇಲೇ ಆವರಣ ಮಾಝೇಚಿ ।೭೦೨॥ ಮಾಝೀ ಮಾಯಾ ಮಾಝೇನಿ ಸಬಳ । ತ್ಯಾ ಮಜಚಿ ಆವರಿಲೇ ತತ್ಕಾಳ । ಜೈಸೇ ಡೋಳ್ಯಾಂಚೇ ಡೋಳಾ ಜಳ । ಗೋಠೂನಿ ಪಡಳ । ಹೋಊನಿ ಠಾಕೇ ।೭೦೩॥ ಕಾ ಪೂರ್ಣಚಂದ್ರ ಅತಿನಿರ್ಮಳ । ತೇಥ ಪೃಥ್ವೀ ಬಿಂಬಲೀ ಸಕಳ । ತೇಣೇ ಸಲಾಂಛನ ಚಂದ್ರಮಂಡಳ । ಲೋಕ ಸಕಳ ದೇಖತೀ ।೭೦೪॥ ಪೃಥ್ವೀಚಂದ್ರಾಸೀ ಅಂತರ । ವಿಚಾರಿತಾ ದೂರಾಂತರ । ಮಿಥ್ಯಾ ಬಾಧಿಲಾ ರಜನೀಕರ । ತೇ ಲೋಕ ಸಾಚಾರ ಮಾನಿತೀ ।೭೦೫॥ ಯಾಪರೀ ಮಾಯಾ ಮಾಝ್ಯಾ ಠಾಯೀ । ಆತಳಲೀ ನಾಹೀ ಕಂಹೀ । ಮಿಥ್ಯಾಭಾಸೇ ಲೋಕ ಪಾಹೀ । ತಿಚ್ಯಾ ಠಾಯೀ ಭೂಲಲೇ ।೭೦೬॥

ಇಂದ್ರಿಯಗಳು ಆತ್ಮವಲ್ಲವೆಂಬುದು ನಿಚ್ಚಳವಾಗಿರುವುದು. ಏಕೆಂದರೆ ಇಂದ್ರಿಯಗಳ ಕರ್ಮಗಳು ಯಾವಾಗಲೂ ಏಕದೇಶಿಯಾಗಿರುವುವು. ಆತ್ಮವಾದರೂ ಸರ್ವಕರ್ತನಾಗಿದ್ದು ಸರ್ವೋತ್ತಮವಾಗಿರುವುದು. ಹಾಗೆಯೇ ಆತ್ಮವು ಸದಾಸರ್ವದಾ ಕರ್ಮಗಳನ್ನು ಮಾಡಿ ನಿಷ್ಕರ್ಮವಾಗಿರುವುದು ।೬೯೭॥ ಮನವೂ ಕೂಡ ಆತ್ಮವಲ್ಲ. ಅದರಲ್ಲಿನ ಮರ್ಮವನ್ನು ಕೇಳು. ಸಂಕಲ್ಪ, ವಿಕಲ್ಪಗಳು ಇವು ಮನಸ್ಸಿನದ್ದಾಗಿರುವುದು. ಆತ್ಮವು ಮಾತ್ರ ನಿರ್ವಿಕಲ್ಪವಾಗಿರುವುದು. ಹಾಗೆಯೇ ಅದು ನಿರೂಪಮವಾಗಿದ್ದು ಜಗತ್ತಿನ ವಿಶ್ರಾಂತಿ ಸ್ಥಾನವಾಗಿರುವುದು ।೬೯೮॥ ಯಾವುದು ಸುಷುಪ್ತಿಯಲ್ಲಿನ ಸುಖಭೋಗದ ಸಾಕ್ಷಿಯಾದ, ತ್ರೈಲೋಕ್ಯದಲ್ಲಿನ ಸರ್ವವನ್ನೂ ನೋಡುವ ಆ ಯಾವ ಒಂದು ಅದ್ವಿತೀಯ ಆತ್ಮವು ನಾನಿರುವೆನು ಹೀಗೆ ನೀನು ನಿಶ್ಚಯವಾಗಿ ತಿಳಿಯಬೇಕು ।೬೯೯॥ ಈ ಪ್ರಕಾರದ ಯುಕ್ತಿಯ ವಿಭಾಗಗಳಿಂದ ಸಿದ್ಧಮಾಡಿದ ಯಾವ ಒಬ್ಬ ಪರಮಾತ್ಮನು, ಆತನೇ ಸಾಧಕರ ಉಪಯೋಗಿಯಾಗುವನು. ಮತ್ತು ಆತನ ಸಾಮರ್ಥ್ಯದಿಂದಲೇ ಯೋಗಸಿದ್ಧಿಯು ಪ್ರಾಪ್ತವಾಗುವುದು ।೭೦೦॥

ಶ್ರುತೀ ಮತ್ತು ಸ್ಮೃತಿಗಳಿಗೆ ಸಮ್ಮತವಾಗಿರುವ ಇಂತಹ ಯುಕ್ತಿಯನ್ನು ನಾನು ನಿನಗೆ ಹೇಳಿರುವೆನು. ಪರಮಾರ್ಥ ದೃಷ್ಟಿಯಿಂದ ಇದರ ಸರಿಯಾದ ವಿಚಾರವನ್ನು ಮಾಡಬೇಕು. ಮತ್ತು ಸಂಸಾರದ ತೊಡಕುಗಳನ್ನು ಬಿಡಿಸಿಕೊಳ್ಳಬೇಕು ।೭೦೧॥ ಸಂಸಾರ ಬಂಧನದ ಕಾರಣವು ಗುಣಗಳೇ ಆಗಿರುವುವು. ಗುಣಗಳ ಅವಸ್ಥೆಗಳಿಂದ ಮನವು ವ್ಯಾಪಿಸಿರುವುದು. ಯಾವುದು ನನ್ನನ್ನೇ ಆಚ್ಛಾದನೆಯನ್ನು ಮಾಡಿರುವ ಯಾವ ಈ ಮಾಯೆಯು ಇದೇ ಮೂಲಕಾರಣವಾಗಿರುವುದು ।೭೦೨॥ ಯಾವ ಪ್ರಕಾರವಾಗಿ ಕಣ್ಣಿನೊಳಗಿನ ನೀರು ಹೆಪ್ಪುಗಟ್ಟಿ ಅದರಿಂದಲೇ ಕಣ್ಣಿನಲ್ಲಿ ಪೊರೆಯು ತಯಾರಾಗುವುದು ಮತ್ತು ಅದು ಕಣ್ಣುಗಳಿಗೆ ಹೇಗೆ ಮುಚ್ಚಿಬಿಡುವುದೋ, ಅದರಂತೆ ನನ್ನ ಮಾಯೆಯು ನನ್ನಿಂದಲೇ ಬಲಿಷ್ಠವಾಗಿರುವುದು. ಆ ಯಾವ ಮಾಯೆಯು ನನ್ನನ್ನು ತತ್ಕಾಲದಲ್ಲಿ ಮುಚ್ಚಿಬಿಟ್ಟಿರುವುದು ।೭೦೩॥ ಪೌರ್ಣಿಮೆಯ ಚಂದ್ರನು ಸ್ವಭಾವತಃ ಪೂರ್ಣವಾಗಿ ಸ್ವಚ್ಛನಾಗಿರುವನು. ಆದರೆ ಅದರ ಮೇಲೆ ಪೃಥ್ವಿಯ ಪ್ರತಿಬಿಂಬವು ಬೀಳುತ್ತಲೇ ಸರ್ವ ಜನರು ಚಂದ್ರನಿಗೆ ಲಾಂಛಿತನೆಂದು ಹೇಳುವರು ।೭೦೪॥ ವಿಚಾರ ಮಾಡಿ ನೋಡಲು ಚಂದ್ರ ಮತ್ತು ಪೃಥ್ವಿ ಇವುಗಳ ಅಂತರವು ಎಷ್ಟೋ ದೂರವಾಗಿರುವುದು. ಆದರೆ ಚಂದ್ರನ ಮೇಲೆ ಮಿಥ್ಯೆಯೇ ಆಗುವ ಭಾಸವು, ಇದು ನಿಜವಾಗಿದೆ ಎಂದೇ ಜನರು ತಿಳಿಯುತ್ತಿರುವರು ।೭೦೫॥ ಅದರಂತೆ ವಾಸ್ತವಿಕವಾಗಿ ಮಾಯೆಯು ನನ್ನಲ್ಲಿಲ್ಲ. ಅದು ನನಗೆ ಸ್ಪರ್ಶ ಕೂಡ ಮಾಡಿರುವುದಿಲ್ಲ. ಹೀಗಿದ್ದರೂ ಸಹ ಜನರು ಮಿಥ್ಯಾ ಆಭಾಸದಿಂದ ಅದರಲ್ಲಿ ಭುಲಾಯಿಸಿಬಿಡುವರು ।೭೦೬॥

ತೇಣೇ ನಾಥಿಲೀ ಗುಣಾವಸ್ಥಾ । ಅಹಂಕರ್ತೃತ್ವೇ ಘೇತಲೀ ಮಾಥಾ । ತೇಣೇ ವಿಷಯಭೋಗಅವಸ್ಥಾ । ವಾಸನಾಯುಕ್ತಾ ವಾಢವಿಲ್ಯಾ ॥೫೦೭॥ ಏವಂ ಉಭಯ ದೇಹಬಂಧನ । ಮಿಥ್ಯಾ ಜೀವತ್ವೇ ಲಾಗಲೇ ಜಾಣ । ತ್ಯಾಚೇ ಕರಾವಯಾ ಛೇದನ । ಮಾಝ್ಯಾ ಯುಕ್ತೀ ಜಾಣ ವಿವರಾವ್ಯಾ ॥೫೦೮॥ ಕರಿತಾ ಯುಕ್ತೀಚೇ ಅನುಮಾನ । ತೇಣೇ ಅನುಮಾನಿಕ ಹೋಯ ಜ್ಞಾನ । ನ ತುಟೇ ಅವಿದ್ಯಾಬಂಧನ । ಯಾಲಾಗೀ ಸಾಧುಸಜ್ಜನ ಸೇವಾವೇ ॥೫೦೯॥ ಸಾಧೂಮಾಜೀ ಸಾಧುತ್ವ ಪೂರ್ಣ । ಸೇವಾವೇ ಸದ್ಗುರುಚರಣ । ತೇಣೇ ನಿರಸೇ ಭವಬಂಧನ । ಸಾಧುಸಜ್ಜನ ಸದ್‌ಗುರೂ ॥೫೧೦॥ ತ್ಯಾ ಸಾಧೂಂಚಿಯಾ ಸದುಕ್ತೀ । ಶ್ರುತ್ಯರ್ಥೇ ಉಪದೇಶ ಕರಿತೀ । ತೇಣೇ ಹೋಯ ಜ್ಞಾನಖಡ್ಗಪ್ರಾಪ್ತೀ । ಜೇ ಬುದ್ಧೀಚ್ಯಾ ಹಾತೀ ಹಾತವಶೀ ॥೫೧೧॥ ತೇಹೀ ವೈರಾಗ್ಯನೈರಾಶ್ಯಸಾಹಾಣೇ । ಲಾವೂನಿ ಸತೇಜ ಶಸ್ತ್ರ ಕರಣೇ । ಧೃತೀಚ್ಯಾ ಧಾರಣಾ ದೃಢ ಧರಣೇ । ಸಾವಧಪಣೇ ನಿಃಶಂಕ ॥೫೧೨॥ ಶಸ್ತ್ರಾಸೀ ಆಣಿ ಆಪಣಾ । ಏಕಪಣಾಚೀ ಧಾರಣಾ । ದೃಢ ಸಾಧೂನಿ ಸಾಧನಾ । ದೇಹಾಭಿಮಾನಾ ಛೇದಾವೇ ॥೫೧೩॥ ಜೋ ಸಕಳ ಸಂಶಯಾಚಾ ಕಂದೂ । ಜೇಣೇ ದೇಹದುಃಖಾಚಾ ಉದ್ಬೋಧೂ । ಜ್ಯಾಚೇನಿ ಸದಾ ವಿಷಯ ಸಂಧೂ । ಜೋ ಕಾಮಕ್ರೋಧ ಪೋಷಕೂ ॥೫೧೪॥ ಜೋ ವಾಢವೀ ತಿನೀ ಗುಣ । ಜೋ ಶುದ್ಧಾಸೀ ಆಣೀ ಜೀವಪಣ । ಜ್ಯಾಚೇನಿ ಜೀವ ಜನ್ಮಮರಣ । ದುರ್ನಿವಾರ ಜಾಣ ಲಾಗಲೇ ॥೫೧೫॥ ಜೋ ಸಕಳ ಅನರ್ಥಾಚಾ ದಾತಾ । ಜ್ಯಾಚೀ ಲಡಿವಾಳ ಕನ್ಯಾ ಮಮತಾ । ತಿಯೇಸೀ ವಾಢವೀ ಮಾಯಾ ಮಾತಾ । ತಿಚ್ಯಾ ಸತ್ತಾ ಹಾ ದಾಟುಗಾ ॥೫೧೬॥ ತೇಥೇ ಶಾಸ್ತ್ರಾಚೇನಿ ಲಖಲಖಾಟೇ । ರಾಹೋನಿಯಾ ನೇಟೇಪಾಟೇ । ಸಮರಾಂಗಣೇ ಸುಭಟೇ । ಘಾವೋ ಯೇಣೇ ನೇಟೇ ಹಾಣಾವಾ ॥೫೧೭॥ ಏಕೇಚಿ ಘಾಯೇ ಜಾಣ । ಮಾಯಾ ಮಮತಾ ಅಭಿಮಾನ । ತ್ರಿಪುಟೀಚೇ ಹೋಯ ಛೇದನ । ಯೇಣೇ ಬಳೇ ಜಾಣ ಛೇದಾವಾ ॥೫೧೮॥ ಭೋಗ್ಯ ಭೋಗೂ ಭೋಕ್ತಾ । ಕರ್ಮ ಕಾರ್ಯ ಕರ್ತಾ । ಧ್ಯೇಯ ಧ್ಯಾನ ಧ್ಯಾತಾ । ತ್ರಿಪುಟೀ ತತ್ತ್ವತಾ ಛೇದಾವೀ ॥೫೧೯॥

ಇವರು ಅಹಂಕಾರರೂಪ ಗುಣ ಅವಸ್ಥೆಗಳನ್ನು ಸುಳ್ಳೇ ತಮ್ಮ ಮಸ್ತಕದ ಮೇಲೆ ಹಚ್ಚಿಕೊಂಡಿರುವರು. ಆದ್ದರಿಂದ ವಾಸನಾಯುಕ್ತವಾದ ವಿಷಯ ಭೋಗಗಳ ಅವಸ್ಥೆಯು ಸತತವಾಗಿ ವೃದ್ಧಿಯಾಗುತ್ತ ಸಾಗುವುದು ॥೫೦೭॥ ವಾಸ್ತವಿಕವಾಗಿ ಸ್ಥೂಲ, ಸೂಕ್ಷ್ಮ ದೇಹಬಂಧನವು ಜೀವಕ್ಕೆ ಮಿಥ್ಯೆಯಾಗಿಯೇ ಹತ್ತಿಕೊಂಡಿರುವುದು. ಅದಕ್ಕಾಗಿ ಅವುಗಳ ಛೇದನೆಯನ್ನು ಮಾಡುವುದಕ್ಕಾಗಿ ನನ್ನ ಯುಕ್ತಿಗಳನ್ನು ಕುರಿತು ಅವುಗಳ ವಿಚಾರವನ್ನು ಶಾಂತರೀತಿಯಲ್ಲಿ ಮಾಡಬೇಕು ॥೫೦೮॥ ಯುಕ್ತಿಗಳ ಅನುಮಾನವನ್ನು ಮಾಡಿದರೆ, ಆಗ ಅನುಮಾನಿಕ ಜ್ಞಾನವು ಪ್ರಾಪ್ತವಾಗುವುದು. ಇದರಿಂದ ಅವಿದ್ಯೆಯ ಬಂಧನವು ಮುರಿಯಲು ಶಕ್ಯವಿಲ್ಲ. ಆದ್ದರಿಂದ ಸಾಧುಸಂತರ ಸಂಗತಿಯನ್ನು ಮಾಡಬೇಕು ॥೫೦೯॥ ಸಾಧುಗಳವರಲ್ಲಿ ಯಾರಲ್ಲಿ ಸಾಧುತ್ವವು ಪರಿಪೂರ್ಣವಾಗಿ ಇರುವುದೋ, ಅಂತಹ ಸದ್ಗುರುಗಳ ಚರಣಾಶ್ರಯವನ್ನು ಮಾಡಬೇಕು. ಇದರಿಂದ ಸಂಸಾರ ಬಂಧನವು ಸಹಜವಾಗಿಯೇ ನಿರಸನೆಯಾಗುವುದು. ಏಕೆಂದರೆ ಸದ್ಗುರುಗಳೇ ನಿಜವಾದ ಸಾಧು ಸಜ್ಜನರಾಗಿರುವರು ॥೫೧೦॥ ಈ ಯಾವ ಸದ್ಗುರುಗಳ ಹಿತವಚನಗಳು ಶ್ರುತಿಯ ಅರ್ಥದ ಉಪದೇಶವಾಗಿರುವುದು. ಇದರಿಂದ ಜ್ಞಾನರೂಪ ಖಡ್ಗದ ಪ್ರಾಪ್ತಿಯಾಗುವುದು. ಇದನ್ನು ಬುದ್ಧಿಯ ಕೈಯಲ್ಲಿ ಕೊಡಲು ಸಾಧ್ಯವಾಗುವುದು ॥೫೧೧॥ ಈ ಯಾವ ಶಸ್ತ್ರವನ್ನು ವೈರಾಗ್ಯ ನೈರಾಶ್ಯವೆಂಬ ಸಾಣೇಕಲ್ಲಿನ ಮೇಲೆ ತಿಕ್ಕಿ ಅದನ್ನು ಲಖಲಖೀತವನ್ನಾಗಿ ಮಾಡಬೇಕು. ಅದಕ್ಕೆ ಧೈರ್ಯವೆಂಬ ಬಲವಾದ ಹಿಡಿಕೆಯನ್ನು ಅಂತಃಕರಣದಲ್ಲಿ ಏಕಾಗ್ರತೆಯೊಂದಿಗೆ ಬಿಗಿಯಾಗಿ ಹಿಡಿಯಬೇಕು ॥೫೧೨॥ ಆ ಶಸ್ತ್ರದ ಮತ್ತು ತನ್ನನ್ನು ಏಕರೂಪವಾಗುವಂತೆ ಸಾಧಿಸಬೇಕು. ಸರಿಯಾಗಿ ಗುರಿಯನ್ನು ಸಾಧಿಸಿ ದೇಹದ ಅಭಿಮಾನವನ್ನು ಪರಿಪೂರ್ಣವಾಗಿ ಕತ್ತರಿಸಿ ಒಗೆಯಬೇಕು ॥೫೧೩॥ ಯಾವ ಸರ್ವ ಪ್ರಕಾರಗಳ ಸಂಶಯದ ಬೇರಿನ ಗಡ್ಡೆಯು, ದೇಹದ ದುಃಖವನ್ನು ಬೆಳೆಸುತ್ತ ಇರುವುದು. ಯಾವುದು ಸದಾವಕಾಲದಲ್ಲಿ ವಿಷಯಗಳ ಅಭಿರುಚಿಯನ್ನು ಹಚ್ಚುವುದೋ, ಯಾವುದು ಕಾಮ ಕ್ರೋಧಗಳ ಪೋಷಣೆಯನ್ನು ಮಾಡುವುದೋ ॥೫೧೪॥ ಯಾವುದು ಸತ್ವ, ರಜ, ತಮ ಈ ಮೂರು ಗುಣಗಳ ವಿಕಾಸವನ್ನು ಮಾಡುವುದೋ, ಯಾವುದು ನಿರುಪಾಧಿಕವಾಗಿರುವ ಆತ್ಮಕ್ಕೆ ಜೀವತ್ವವನ್ನು ತರುವುದೋ, ಯಾವುದರಿಂದ ಜೀವದ ಬೆನ್ನಿಗೆ ಭಯಂಕರವಾಗಿರುವ ಜನ್ಮ-ಮರಣವು ಹತ್ತಿರುವುದೋ ॥೫೧೫॥ ಯಾವುದು ಸರ್ವ ಪ್ರಕಾರದ ಅನರ್ಥಗಳ ದಾತಾ ಆಗಿರುವುದೋ, ಮಮತೆಯು ಯಾವುದರ ಪ್ರೀತಿಯ ಮಗಳಾಗಿರುವಳೋ, ಹೀಗಿರುವ ಈ ಯಾವ ದೇಹಾಭಿಮಾನವಾಗಿರುವುದು. ಮಾಯೆಯೇ ತಾಯಿಯಾಗಿ ಮಮತೆಯನ್ನು ಬೆಳೆಯಿಸುತ್ತಿರುವುದು. ಇದರ ಸಾಮರ್ಥ್ಯದ ಮೇಲೆಯೇ ಈ ಅಭಿಮಾನವು ಇಷ್ಟೊಂದು ಬಲಿಷ್ಠವಾಗಿರುವುದು ॥೫೧೬॥ ಆದಕಾರಣದಿಂದ ಶೂರನಾದ ವೀರನು ಈ ಯಾವ ಲಖಲಖೀತವಾಗಿರುವ ಶಸ್ತ್ರವನ್ನು ಕೈಯಲ್ಲಿ ಧರಿಸಿ ದೊಡ್ಡ ಧೈರ್ಯದಿಂದ ಅಭಿಮಾನದ ಮೇಲೆ ಪ್ರಹಾರವನ್ನು ಮಾಡಬೇಕು ॥೫೧೭॥ ಒಂದೇ ಹೊಡೆತಕ್ಕೆ ಮಾಯಾ, ಮಮತಾ ಮತ್ತು ಅಭಿಮಾನ ಈ ಮೂರರ ಛೇದನೆಯಾಗುವ ರೀತಿಯಲ್ಲಿ ಬಲವಾದ ಶಕ್ತಿಯಿಂದ ಅವುಗಳ ಮೇಲೆ ಹೊಡೆತವನ್ನು ಹಾಕಬೇಕು ॥೫೧೮॥ ಭೋಗ್ಯ, ಭೋಗ. ಭೋಕ್ತಾ, ಕರ್ಮ, ಕಾರ್ಯ ಮತ್ತು ಕರ್ತಾ, ಧ್ಯೇಯ, ಧ್ಯಾನ ಮತ್ತು ಧ್ಯಾತಾ ಈ ಸರ್ವ ಪ್ರಕಾರದ ತ್ರಿಪುಟಿಗಳನ್ನು ಛೇದಿಸಬೇಕು ॥೫೧೯॥

ಅಹಂ ಕೋಹಂ ಸೋಹಂ ಸ್ವಭಾವೋ । ಹಾಹೀ ಭೇದೂನಿ ಅಹಂಭಾವೋ । ಸಾಧಕಾ ನಿಜಪದೀ ಠಾವೋ । ಬ್ರಹ್ಮ ಸ್ವಯಮೇ ಹೋಊನಿ ಠೇಲೇ ।।೫೨೦।। ಮ್ಹಣಾಲ ಸಾಂಗತಾ ಜೋ ಪ್ರಕಾರೂ । ತೋ ಶಬ್ದಜ್ಞಾನವೆವ್ಹಾರೂ । ಬೋಲಾಚಾ ಕಡಕಡಾಟ ಥೋರೂ । ಕೈಸೇನಿ ಅಹಂಕಾರೂ ಮಾರವೇ ।।೫೨೧।। ಶಬ್ದಮಾತ್ರೇ ಅಭಿಮಾನ । ಜರೀ ಪಾವತಾ ನಿರ್ದಳಣ । ತರೀ ಕಾ ಪಾ ವಿದ್ವಜ್ಜನ । ಅಭಿಮಾನ ಮಗ್ನ ಹೋತಾತೀ ।।೫೨೨।। ಅಭಿಮಾನ ಸಂಮುಖ ದಿಸತಾ । ತರೀ ಧಾಂವೋನಿ ಕರೂ ಯೇ ಘಾತಾ । ತೋ ಅತರ್ಕ್ಯ ಜೇ ಸರ್ವಥಾ । ಶಬ್ದೇ ಅಹಂತಾ ಮರೇನಾ ।।೫೨೩।। ಘಡೇ ಅಪರೋಕ್ಷಸಾಕ್ಷಾತ್ಕಾರೂ । ತೋ ಶಬ್ದಮಾತ್ರೇ ನವ್ಹೇ ಪ್ರಕಾರೂ । ಐಸಾ ಆಶಂಕೇಚಾ ವಿಚಾರೂ । ಐಕ ನಿರ್ಧಾರೂ ಸಾಂಗೇನ ।।೫೨೪।। ಜೋ ಅನನ್ಯಭಾವೇ ಮಾಝೇ ಭಜನ । ಸರ್ವದಾ ಕರೀ ಸಾವಧಾನ । ಕಾ ಸದ್ಗುರೂಚೇ ಶ್ರೀಚರಣ । ಮದ್ಭಾವೇ ಜಾಣ ಜೋ ಸೇವೀ ।।೫೨೫।। ಮಜ ಆಣಿ ಸದ್ಗುರುಮೂರ್ತೀ । ಭೇದ ನಾಹೀ ಗಾ ಕಲ್ಪಾಂತೀ । ಯೇಣೇ ಅಭೇದಭಾವೇ ಜೇ ಭಜತೀ । ತೇ ಜ್ಞಾನ ಪಾವತೀ ಸಹಜಚಿ ।।೫೨೬।। ತ್ಯಾಂಸೀ ಸ್ವಭಾವೇ ಭಜನಸ್ಥಿತೀ । ಜ್ಞಾನಖಡ್ಗಾಚೀ ಹೋಯ ಪ್ರಾಪ್ತೀ । ಸಹಜೇಚಿ ಸಾಂಪಡೇ ಹಾತೀ ; ಜ್ಯಾ ಶಸ್ತ್ರದೀಪ್ತೀ ಕಾಳೂ ಕಾಂಪೇ ।।೫೨೭।। ಜ್ಯಾ ಶಸ್ತ್ರಾಚ್ಯಾ ಧಾಕಾಭೇಣ । ಮಾಯಾ ಮಮತಾ ಅಭಿಮಾನ । ಸಾಂಡೂನಿಯಾ ಜೀವಪಣ । ಸಮೂಳ ಜಾಣ ಪಳಾಲೀ ।।೫೨೮।। ಹಾಣಾವಯಾ ಪುರತಾ ಘಾವೋ । ಅಹಂಮಮತೇಸೀ ನಾಹೀ ಠಾವೋ । ಅವಿದ್ಯೇಚಾಹೀ ಅಭಾವೋ । ಆಪಭಯೇ ಪಹಾ ಹೋ ಆಪಣಚಿ ।।೫೨೯।। ಸದ್ಭಾವೇ ಜೇ ಮಾಝೇ ಭಜನ । ಕರಿತಾ ಏವಢೇ ಹೋಯ ಜ್ಞಾನ । ಯೇಥ ಆಶಂಕಾ ಕರೀಲ ಮನ । ಕೋಣೇ ಭಜನ ಕರಾವೇ ।।೫೩೦।। ತುಝೇ ಸ್ವರೂಪ ಅತರ್ಕ್ಯ ಜಾಣ । ಅತಿಸೂಕ್ಷ್ಮ ಆಣಿ ನಿರ್ಗುಣ । ತುಜ ಭಜಾವಯಾ ಕವಣ ಸ್ಥಾನ । ಆಮ್ಹಾಸೀ ಜಾಣ ಕಳೇನಾ ।।೫೩೧।। ಐಸೇ ಕಲ್ಪೀಲ ಜರೀ ಮನ । ತರೀ ಐಕ ಸಾವಧಾನ । ಅತಿಸುಗಮ ಭಜನಸ್ಥಾನ । ಮೀ ಸಾಂಗೇನ ತೇ ಐಕ ।।೫೩೨।। ನುಲ್ಲಂಘಿತಾ ಪರ್ವತಕೋಟೀ । ನ ರಿಘತಾ ಗಿರಿಕಪಾಟೀ । ದೂರೀ ನ ಕರಿತಾ ಆಟಾಟೀ । ಜೇ ಸ್ಥಾನೀ ಭೇಟೀ ಸದಾ ಮಾಝೀ ।।೫೩೩।। ಭಜನಸ್ಥಾನ ನಿರೂಪಮ । ಜೇಥ ಮೀ ವಸೇ ಪುರುಷೋತ್ತಮ । ಪ್ರಾಪ್ತೀಲಾಗೀ ಅತಿಸುಗಮ । ವಿಶ್ರಾಮಧಾಮ ಭಕ್ತಾಂಚೇ ।।೫೩೪।।

''ಅಹಂ'', ''ಕೋಹಂ'', ''ಸೋಹಂ'' ಹೀಗಿರುವ ಆತ್ಮೀಯತೆಯ ಅಹಂಕಾರವನ್ನು ಭೇದಿಸಿ ಒಗೆಯಬೇಕು. ಇದರಿಂದ ಸಾಧಕರಿಗೆ ನನ್ನ ಚರಣಗಳ ಹತ್ತಿರ ಸ್ಥಾನವು ಪ್ರಾಪ್ತವಾಗುವುದು. ಅವರು ಸ್ವತಃ ಬ್ರಹ್ಮರೂಪರಾಗುವರು ।೫೨೦।। ಈಗ ನಿಮ್ಮ ಮನದಲ್ಲಿ ಹೀಗೆ ವಿಚಾರವು ಬರಬಹುದು. ನೀವು ಯಾವ ಪ್ರಕಾರವಾಗಿ ಹೇಳುತ್ತಿರುವಿರೋ ಅದು ಕೇವಲ ಶಬ್ದಜ್ಞಾನದ ವ್ಯವಹಾರವಾಗಿರುವುದು. ಇದು ಕೇವಲ ಮಾತನಾಡುವ ಕಡಕಡಾಟವಾಗಿರುವುದು. ಅಹಂಕಾರಕ್ಕೆ ಹೇಗೆ ಹೊಡೆಯಲು ಬರುವುದು ? ।೫೨೧।। ಒಂದು ವೇಳೆ ಶಬ್ದಗಳಿಂದಲೇ ಅಭಿಮಾನವು ನಷ್ಟವಾಗುತ್ತಿದ್ದರೆ ಮಹಾ ಮಹಾ ವಿದ್ವಾನರು ಈ ಅಭಿಮಾನದಲ್ಲಿ ಏಕೆ ಮುಳುಗಿ ಹೋಗುತ್ತಿದ್ದರು? ।೫೨೨।। ಒಂದು ವೇಳೆ ಅಭಿಮಾನವು ನಮ್ಮ ಕಣ್ಣೆದುರಿನಲ್ಲಿ ನಿಜವಾಗಿ ಕಾಣುತ್ತಿದ್ದರೆ ಅದರ ಮೈಮೇಲೆ ಧಾವಿಸಿ ಹೋಗಿ ಅದರ ನಾಶವನ್ನು ಮಾಡಲು ಬರುತ್ತಿತ್ತು. ಆದರೆ ಅದು ಸರ್ವಥಾ ಅತರ್ಕ್ಯವಾಗಿರುವುದರಿಂದ ಕೇವಲ ಶಬ್ದದಿಂದ ಆ ಯಾವ ಅಹಂಕಾರದ ನಾಶವನ್ನು ಮಾಡಲು ಬರುವುದಿಲ್ಲ ।೫೨೩।। ಆತ್ಮದ ಸಾಕ್ಷಾತ್ಕಾರವನ್ನು ಸಾಧಿಸುವುದು ಇದು ಯಾವ ಶಬ್ದಗಳ ಆಟವಲ್ಲ. ಹೀಗೆ ನಿಮ್ಮ ಪ್ರಶ್ನೆಯ ಉತ್ತರವನ್ನು ಹೇಳುವೆನು. ಅದನ್ನು ಸರಿಯಾಗಿ ಲಕ್ಷಕೊಟ್ಟು ಕೇಳಿರಿ ।೫೨೪।। ಯಾರು ನಿತ್ಯವೂ ಏಕಾಗ್ರ ಚಿತ್ತವಿಟ್ಟು, ಅನನ್ಯಭಾವದಿಂದ ನನ್ನ ಭಜನೆಯನ್ನು ಮಾಡುವರೋ, ಯಾರು ನನ್ನ ಮೇಲಿನ ಭಾವನೆಯಿಂದಲೇ ಸದ್ಗುರುಗಳ ಪವಿತ್ರ ಚರಣಗಳ ಸೇವೆಯನ್ನು ಮಾಡುವರೋ ।೫೨೫।। ನನ್ನಲ್ಲಿ ಮತ್ತು ಸದ್ಗುರುಗಳಲ್ಲಿ ಸ್ವರೂಪದಿಂದ ಯಾರು ಕಲ್ಪಾಂತಕ್ಕೂ ಭೇದವಾಗಿ ನೋಡದೇ ನನ್ನ ಭಜನೆಯನ್ನು ಮಾಡುವರೋ, ಅವರಿಗೆ ಸಹಜವಾಗಿಯೇ ಜ್ಞಾನದ ಪ್ರಾಪ್ತಿಯಾಗುವುದು ।೫೨೬।। ಇವರಿಗೆ ಸ್ವಭಾವತವಾಗಿಯೇ ಭಜನಸ್ಥಿತಿಯಲ್ಲಿನ ಜ್ಞಾನರೂಪ ಖಡ್ಗವು ಪ್ರಾಪ್ತವಾಗುವುದು. ಈ ಶಸ್ತ್ರವು ಸಹಜವಾಗಿಯೇ ಕೈಯಲ್ಲಿ ಬರುತ್ತಲೇ ಅದರ ತೀಕ್ಷ್ಣವಾದ ಪರೆಯನ್ನು ಕಂಡು ಕಾಲನೂ ಕೂಡ ಥರಥರನೇ ನಡುಗಲಾರಂಭಿಸುವನು ।೫೨೭।। ಈ ಯಾವ ಶಸ್ತ್ರದ ಭಯದಿಂದ ಮಾಯಾ, ಮಮತಾ ಮತ್ತು ಅಭಿಮಾನ ಈ ಎಲ್ಲವೂ ತಮ್ಮ ಜೀವವನ್ನು ಹಿಡಿದುಕೊಂಡು ದೂರ ಓಡಿ ಹೋಗುವುವು ।೫೨೮।। ಅಹಂ ಮಮತೆಗಳಿಗೆ ಪೂರ್ಣವಾಗಿ ಹೊಡೆಯಲು ಅವಕಾಶವೇ ಸಿಗುವುದಿಲ್ಲ. ಕೇವಲ ಭಯಮಾತ್ರದಿಂದ ಅವಿದ್ಯೆಯ ನಾಶವು ತನ್ನಷ್ಟಕ್ಕೆ ತಾನೇ ಆಗುವುದು ।೫೨೯।। ಯಾರು ಸದ್‌ಭಾವನೆಯಿಂದ ನನ್ನ ಭಜನೆಯನ್ನು ಮಾಡುವರೋ, ಅವರಿಗೆ ಇಷ್ಟೊಂದು ಜ್ಞಾನದ ಪ್ರಾಪ್ತಿಯಾಗುವುದು, ಈಗ ನಿಮ್ಮ ಮನದಲ್ಲಿ ಹೀಗೆ ಶಂಕೆಯು ಹುಟ್ಟಬಹುದು, ''ನಿನ್ನ ಭಜನೆಯನ್ನು ಎಲ್ಲಿ ಮಾಡಬೇಕು?'' ।೫೩೦।। ಏಕೆಂದರೆ, ನಿನ್ನ ಭಜನೆಯನ್ನು ಮಾಡುವ ಸ್ಥಾನವಾದರೂ ಯಾವುದು ? ಇದು ಯಾವುದೂ ನಮಗೆ ತಿಳಿಯುತ್ತಿಲ್ಲ ।೫೩೧।। ಹೀಗೆ ನಿಮ್ಮ ಮನದಲ್ಲಿ ಕಲ್ಪನೆಯು ಬಂದಿರಬಹುದು. ಅದಕ್ಕಾಗಿ ಲಕ್ಷಕೊಟ್ಟು ಕೇಳಿರಿ. ಭಜನೆಯ ಅತಿಸುಲಭ ಸ್ಥಾನವನ್ನು ನಿಮಗೆ ಹೇಳುವೆನು ।೫೩೨।। ಕೋಟ್ಯಾವಧಿ ಪರ್ವತಗಳನ್ನು ಹತ್ತಿಳಿಯದೇ, ಗಿರಿಗುಡ್ಡಗಳ ಗುಹೆಗಳಲ್ಲಿ ಹೋಗದೇ, ಯಾವ ಕಸರತ್ತುಗಳನ್ನು ಮಾಡದೇ, ಆ ಯಾವ ನನ್ನ ಸ್ಥಾನದ ಭೇಟಿಯು ಯಾವಾಗಲೂ ಆಗುವುದು ।೫೩೩।। ನಿರುಪಮವಾದ ಭಜನೆಯ ಸ್ಥಾನದಲ್ಲಿ ಪುರುಷೋತ್ತಮನಾದ ನಾನು ಇರುವೆನು. ನನ್ನ ಪ್ರಾಪ್ತಿಯಾಗಲು ಅತ್ಯಂತ ಸುಲಭವಾದ ವಿಶ್ರಾಂತಿ ಸ್ಥಾನವಾಗಿರುವುದು ।೫೩೪।।

ಸರ್ವ ಸುಖಾಂಚಾ ಆರಾಮ । ನಿಜಹೃದಯೀ ಆತ್ಮಾರಾಮ । ಸರ್ವದಾ ಅಸೇ ಸಮ । ಭಜಾವೇ ಸಪ್ರೇಮ ತೇ ಠಾಯೀ ॥೫೩೫॥ ಆದಿ ಬ್ರಹ್ಮಾ ಅಂತೀ ಮಶಕ । ಸರ್ವಾಂಚೇ ಹೃದಯೀ ಮೀಚ ಏಕ । ಐಸೇ ಪಾಹೇ ತೋ ಸಭಾಗ್ಯ ದೇಖ । ಹೇ ಭಜನ ಚೋಖ ಮತ್ಪ್ರಾಪ್ತೀ ॥೫೩೬॥ ಜ್ಯಾ ಮಜ ಹೃದಯಸ್ಥಾಚೇ ದೀಪ್ತೀ । ಮನ ಬುದ್ಧ್ಯಾದಿಕೇ ವರ್ತತೀ । ಜ್ಯಾ ಮಾಝಿಯೇ ಸ್ಫುರಣಸ್ಫೂರ್ತೀ । ಜ್ಞಾನವೃತ್ತೀ ಪಾಯಾ ಲಾಗೇ ॥೫೩೭॥ ತ್ಯಾ ಮಜ ಹೃದಯಸ್ಥಾಚ್ಯಾ ಠಾಯೀ । ಭಜನಶೀಳ ಕೋಣೀಚ ನಾಹೀ । ಶಿಣತಾ ಬಾಹ್ಯ ಉಪಾಯೀ । ಜನ ಅಪಾಯೀ ಪಡತಾತೀ ॥೫೩೮॥ ಐಶಾತ ಸದ್ದೈವ ಕೋಣೀ ಏಕ । ನಿಜಭಾಗ್ಯೇ ಅತ್ಯಂತ ಚೋಖ । ಮಜ ಹೃದಯಸ್ಥಾಚಾ ವಿವೇಕ । ಕರೂನಿ ನಿಷ್ಟಂಕ ಮದ್ಭಜನೀ ॥೫೩೯॥ ಕರಿತಾ ಹೃದಯಸ್ಥಾಚೇ ಭಜನ । ಮಾಝೇ ಪಾವೇ ತೋ ನಿಜಜ್ಞಾನ । ವೈರಾಗ್ಯಯುಕ್ತ ಸಂಪೂರ್ಣ । ಜೇ ಜ್ಞಾನೀ ಪತನ ರಿಘೇನಾ ॥೫೪೦॥ ಜ್ಯಾ ಜ್ಞಾನಾಭೇಣೇ ಜಾಣ । ಧಾಕೇಚಿ ಪಳೇ ಅಭಿಮಾನ । ತೇ ಮೀ ಆಪುಲೇ ತ್ಯಾಂಸೀ ದೇ ಜ್ಞಾನ । ಜೇ ಹೃದಯಸ್ಥಾಚೇ ಭಜನ ಕರಿತೀ ಸದಾ ॥೫೪೧॥ ಜ್ಯಾ ಜ್ಞಾನಾಚಿಯೇ ಜ್ಞಾನಸಿದ್ಧೀ । ಅಖಿಲ ಜಾತೀ ಆಧಿವ್ಯಾಧೀ । ಸಂಶಯ ಪಳತೀ ತ್ರಿಶುದ್ಧೀ । ಭಕ್ತ ನಿಜಪದೀ ಪಾವತೀ ॥೫೪೨॥ ಸಬಳ ಬಳೇ ಸುಭಟೇ । ಶಸ್ತ್ರಾಚೇನೀ ಲಖಲಖಾಟೇ । ಸಂಶಯೋ ಭೇದಾವಾ ಕಡಕಡಾಟೇ । ಹೇ ಮ್ಯಾ ನೇಟೇಪಾಟೇ ಸಾಂಗೀತಲೇ ॥೫೪೩॥ ಯಾವರಿ ಐಸೇ ಗಮೇಲ ಚಿತ್ತೀ । ಸಂಸಾರಾಚೀ ಸತ್ಯಪ್ರಾಪ್ತೀ । ತ್ಯಾಸೀ ಶಸ್ತ್ರ ಘೇಊನಿ ಹಾತೀ । ಕೋಣ ಯುಕ್ತೀ ಭೇದಾವಾ ॥೫೪೪॥ ತರೀ ಸಂಸಾರ ತಿತುಕೀ ಭ್ರಾಂತೀ । ಹೇಚಿ ಸಾಂಗಾವಯಾ ದೃಷ್ಟಾಂತೀ । ಪುಢೀಲ ಶ್ಲೋಕಾಚೀ ಶ್ಲೋಕೋಕ್ತೀ । ಸ್ವಯೇ ಶ್ರೀಪತೀ ಸಾಂಗತೂ ॥೫೪೫॥

ಈಕ್ಷೇತ ವಿಭ್ರಮಮಿದಂ ಮನಸೋ ವಿಲಾಸಂ ದೃಷ್ಟಂ ವಿನಷ್ಟಮತಿಲೋಲಮಲಾತಚಕ್ರಮ್ ।
ವಿಜ್ಞಾನಮೇಕಮುರುಧೇವ ವಿಭಾತಿ ಮಾಯಾ ಸ್ವಪ್ನಸ್ತ್ರಿಧಾ ಗುಣವಿಸರ್ಗಕೃತೋ ವಿಕಲ್ಪಃ ॥೩೪॥

ಅರ್ಥ:- ಈ ಜಗತ್ತು ಮನಸ್ಸಿನ ವಿಲಾಸವಾಗಿದೆ ಎಂದು ತೋರುವುದು. ಆದರೆ ನಷ್ಟವಾಗುವಂತಹದ್ದಾಗಿರುವುದು. ಸ್ವಪ್ನದಂತೆ ಅತ್ಯಂತ ಚಂಚಲ ಮತ್ತು ಭ್ರಮ ಮಾತ್ರವಾಗಿರುವುದು. ಜ್ಞಾತಾ ಮತ್ತು ಜ್ಞೇಯ ಇವುಗಳ ಭೇದರಹಿತ ಒಂದು ಜ್ಞಾನಸ್ವರೂಪ ಆತ್ಮವು ಅನೇಕ ಪದ್ಧತಿಗಳಿಂದ ಪ್ರತೀತವಾಗುವುದು. ಈ ಸ್ಥೂಲ ಶರೀರವು ಇಂದ್ರಿಯ ಮತ್ತು ಅಂತಃಕರಣ ಮೂರು ಪ್ರಕಾರದ ವಿಕಲ್ಪ ಗುಣ ಪರಿಣಾಮದ ರಚನೆಯಾಗಿರುವುದು ಮತ್ತು ಸ್ವಪ್ನದಂತೆ ಅಜ್ಞಾನದ ಆಟವಾಗಿರುವುದು. ಮಾಯೆಯಂತೆ ಕಲ್ಪಿತವಾಗಿರುವುದು.

ದೇಹಾದಿ ಅಹಂಕಾರಪರ್ಯಂತ । ಪಿಂಡ ಬ್ರಹ್ಮಾಂಡ ಜೇ ಭಾಸತ । ತೇ ಮನೋಮಾತ್ರ ವಿಲಸತ । ಮಿಥ್ಯಾಭೂತ ಸಂಸಾರೂ ॥೫೪೬॥

ಸರ್ವ ಸುಖದ ವಿಶ್ರಾಂತಿ ಸ್ಥಾನವಾಗಿರುವ ಯಾವ ಪರಮಾತ್ಮನು ತನ್ನ ಹೃದಯ ಮಂದಿರದಲ್ಲಿ ಸಮಭಾವನೆಯಿಂದ ಇರುವನು, ಅಲ್ಲಿ ಅತ್ಯಂತ ಪ್ರೇಮದಿಂದ ನನ್ನ ಭಜನೆಯನ್ನು ಮಾಡಬೇಕು ॥೫೩೫॥ ಬ್ರಹ್ಮದೇವನಿಂದ ಹಿಡಿದು ಅತಿಚಿಕ್ಕದಾದ ನೊಣದವರೆಗೆ ಸರ್ವರ ಹೃದಯದಲ್ಲಿ ನಾನೇ ಒಬ್ಬನು ಇರುವೆನು. ಹೀಗೆ ಯಾರು ತಿಳಿದಿರುವರೋ, ಅವರೇ ನಿಜವಾಗಿ ಮಹಾಭಾಗ್ಯಶಾಲಿಗಳಾಗಿರುವರು. ನನ್ನ ಪ್ರಾಪ್ತಿಗೆ ಇದೇ ಭಜನೆಯು ಶ್ರೇಷ್ಠವಾಗಿರುವುದು ॥೫೩೬॥ ಆ ಯಾವ ನನ್ನ ಹೃದಯಸ್ಥನ ದಿವ್ಯ ತೇಜದಿಂದ ಮನ, ಬುದ್ಧಿ ಇತ್ಯಾದಿ ಎಲ್ಲವೂ ನಡೆಯುವುವು. ಯಾವ ನನ್ನ ಸ್ಫುರಣದ ಸ್ಫೂರ್ತಿಯಿಂದ ಜ್ಞಾನದ ವೃತ್ತಿಯು ಪಾದಗಳಿಗೆ ಲೋಟಾಂಗಣವನ್ನು ಹಾಕುತ್ತ ಬರುವುದು ॥೫೩೭॥ ಹೀಗೆ ಹೃದಯ ಮಂದಿರದಲ್ಲಿರುವ ಪರಮಾತ್ಮನ ಭಜನೆಯನ್ನು ಮಾಡುವವರು ಯಾರೂ ಇರುವುದಿಲ್ಲ. ಎಲ್ಲ ಜನರು ಬಾಹ್ಯ ಉಪಚಾರಗಳ ವ್ಯರ್ಥವಾದ ಶ್ರಮವನ್ನು ಮಾಡುವರು ಮತ್ತು ಅನೇಕ ಸಂಕಟಗಳಲ್ಲಿ ಬೀಳುವರು ॥೫೩೮॥ ಇಂತಹ ಜನರಲ್ಲಿಯೂ ಕೂಡ ಒಬ್ಬ ಭಾಗ್ಯವಾನನು ತನ್ನ ದೊಡ್ಡದಾದ ದೈವಯೋಗದಿಂದ ನನ್ನ ಹೃದಯಸ್ಥ ಆತ್ಮಜ್ಞಾನ ವಿಚಾರವನ್ನು ಮಾಡಿ ನನ್ನ ಭಜನೆಯಲ್ಲಿ ತಲ್ಲೀನನಾಗುವನು ॥೫೩೯॥ ಹೃದಯಸ್ಥನ ಭಜನೆಯನ್ನು ಮಾಡುವುದರಿಂದ ಆತ್ಮಜ್ಞಾನವು ಪ್ರಾಪ್ತವಾಗುವುದು. ಅದು ವೈರಾಗ್ಯಭರಿತ ಜ್ಞಾನವಾಗಿರುವುದು, ಆದ್ದರಿಂದ ಆ ಜ್ಞಾನಿಯು ಪತನವಾಗಲಾರನು ॥೫೪೦॥ ಈ ಯಾವ ಜ್ಞಾನಕ್ಕೆ ಭಯಪಟ್ಟು ದೇಹಾಭಿಮಾನವು ದೂರ ಓಡಿ ಹೋಗುವುದು. ಈ ಯಾವ ನನ್ನ ಜ್ಞಾನವನ್ನು ಹೃದಯಮಂದಿರದಲ್ಲಿ ನಿತ್ಯವೂ ಭಜನೆಯನ್ನು ಮಾಡುವವರಿಗೆ ನಾನು ಕೊಡುವೆನು ॥೫೪೧॥ ಈ ಜ್ಞಾನವು ಪ್ರಾಪ್ತಿಯಾಗುತ್ತಲೇ ಸರ್ವ ಆಧಿವ್ಯಾಧಿಯು ಓಡಿ ಹೋಗುವುದು. ಸರ್ವ ಪ್ರಕಾರಗಳ ಸಂಶಯಗಳು ಇಲ್ಲದಾಗುವುವು. ಮತ್ತು ಭಕ್ತನಿಗೆ ಪರಮ ಪದವು ಪ್ರಾಪ್ತವಾಗುವುದು ॥೫೪೨॥ ಅದಕ್ಕಾಗಿ ಬಲಿಷ್ಠರಾದ ವೀರರು ಲವಲಖೀತವಾಗಿರುವ ಜ್ಞಾನರೂಪ ಶಸ್ತ್ರವನ್ನು ಝಳಪಿಸಿ ಸಂಶಯಗಳನ್ನು ಚೂರು ಚೂರು ಮಾಡಿ ಇಲ್ಲದಂತೆ ಮಾಡಬೇಕು, ಹೀಗೆ ನಾನು ಬಹಳ ಆಗ್ರಹದಿಂದ ಹೇಳಿದೆನು ॥೫೪೩॥ ಈಗ ಪುನಃ ಮನದಲ್ಲಿ ಹೀಗೆ ಮೂಡಬಹುದು. ಏನೆಂದರೆ, ಸಂಸಾರವು ಅನುಭವಕ್ಕೆ ನಿಜವಾಗಿ ಬರುತ್ತಿರಲು ಕೈಯಲ್ಲಿ ಶಸ್ತ್ರವನ್ನು ಹಿಡಿದು ಅದನ್ನು ಯಾವ ಯುಕ್ತಿಯಿಂದ ಭೇದಿಸಬೇಕು? ॥೫೪೪॥ ಇದರ ಉತ್ತರವನ್ನು ಕೊಡುವುದಕ್ಕಾಗಿ, ಯಾವ ಈ ಸಂಸಾರವು ಕೇವಲ ಭ್ರಾಂತಿಮಯವಾಗಿದೆ ಎಂದು ತಿಳಿಸಲು ಮುಂದಿನ ಶ್ಲೋಕದಲ್ಲಿ ದೃಷ್ಟಾಂತಗಳನ್ನು ಕೊಟ್ಟು ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ॥೫೪೫॥

ದೇಹಾದಿಕದಿಂದ ಹಿಡಿದು ಅಹಂಕಾರದವರೆಗೆ ಯಾವ ಬ್ರಹ್ಮಾಂಡ, ಪಿಂಡಾಂಡಗಳು ಭಾಸವಾಗುತ್ತಿರುವುವೋ ಅವೆಲ್ಲವೂ ಮನಸ್ಸಿನ ಆಟವಾಗಿರುವುದು. ಆದ್ದರಿಂದ ಈ ಸಂಸಾರವು ಮಿಥ್ಯೆಯಾಗಿರುವುದು ॥೫೪೬॥

ಜೈಸೇ ಸ್ವಪ್ನೀ ನಿದ್ರೇಮಾಜೀ ಮನ । ಸ್ವಯೇ ದೇಖೇ ತ್ರಿಭುವನ । ತೈಸೇಚಿ ಹೇ ದೀರ್ಘಸ್ವಪ್ನ । ಅವಿದ್ಯಾ ಜಾಣ ವಿಕಾಶೀ ।೫೪೭॥ ಆನ ಅಸೂನಿ ಆನ ದೇಖತೀ । ತ್ಯಾ ನಾಂವ ಆಭಾಸ ಮ್ಹಣತೀ । ಶುಕ್ತಿಕೇಮಾಜೀ ರಜತಭ್ರಾಂತೀ । ದೋರಾತೇ ಮ್ಹಣತೀ ಮಹಾಸರ್ಪೂ ।೫೪೮॥ ಸೂರ್ಯಾಚೇ ಕಿರಣ ನಿಖಳ । ತೇ ಠಾಯೀ ದೇಖತೀ ಮೃಗಜಳ । ತೈಶೀ ಶುದ್ಧ ವಸ್ತೂ ಜೇ ಕೇವಳ । ತೋ ಸಂಸಾರ ಬರಳ ಮ್ಹಣತಾತೀ ।೫೪೯॥ ತಯಾ ಆರೋಪಾಸೀ ಅಧಿಷ್ಠಾನ । ಮೀಚೀ ಸಾಚಾರ ಅಸೇ ಆಪಣ । ಜೇವೀ ಕಾ ಕೋಲಿತಾಚೇ ಕಂಕಣ । ಅಗ್ನಿತೇಜೇ ಜಾಣ ಆಭಾಸೇ ।೫೫೦॥ ಅಲಾತಚಕ್ರೀಚಾ ನಿರ್ಧಾರ । ಅಗ್ನಿ ಸತ್ಯ ಮಿಥ್ಯಾ ಚಕ್ರ । ತೇವೀ ನಿರ್ಧಾರಿತಾ ಸಂಸಾರ । ಬ್ರಹ್ಮ ಸಾಚಾರ ಸಂಸಾರ ಮಿಥ್ಯಾ ।೫೫೧॥ ತೇಥ ಆಧಿದೈವ ಆಧಿಭೌತಿಕ । ಆಧ್ಯಾತ್ಮಾದಿ ಸಕಳಿಕ । ಅಲಾತಚಕ್ರಾಚ್ಯಾ ಐಸೇ ದೇಖ । ತ್ರಿಗುಣಮಾಯಿಕ ಪರಿಣಾಮ ।೫೫೨॥ ಕೋಲಿತಾಚೇನಿ ಭ್ರಮಭಾಸೇ । ಭ್ರಮಣಬಳೇ ತೇ ಚಕ್ರ ದಿಸೇ । ಕ್ಷಣಾ ದಿಸೇ ಕ್ಷಣಾ ನಾಸೇ । ತೈಸಾ ಅಸೇ ಹಾ ಸಂಸಾರೂ ।೫೫೩॥ ಜಂವ ಭ್ರಮಣಾಚೇ ದೃಢಪಣ । ತಂವ ಕೋಲಿತಾಚೇ ಕಾಂಕಣ । ಭ್ರಮ ಗೇಲಿಯಾ ಜಾಣ । ಕಾಂಕಣಪಣ ಅಸೇನಾ ।೫೫೪॥ ತೇವೀ ಜಂವ ಜಂವ ಭ್ರಮ ಅಸೇ । ತಂವ ತಂವ ದೃಢ ಸಂಸಾರ ಭಾಸೇ । ಭ್ರಮ ಗೇಲಿಯಾ ಅನಾಯಾಸೇ । ಸಂಸಾರ ನಸೇ ಪಾಹತಾಂಹೀ ।೫೫೫॥ ಮೀ ದೇಹೋ ಮಾಝೇ ಕಲತ್ರ ಪುತ್ರ । ಹೇ ಭ್ರಮಾಚೇ ಮುಖ್ಯ ಸೂತ್ರ । ತೇ ನ ಭೇದಿತಾ ಪಾಮರ । ಮುಕ್ತಾಹಂಕಾರ ಮಿರವಿತೀ ।೫೫೬॥ ಏವಂ ಮಾಯಾಮಯ ಸಂಸಾರೂ । ಐಸಾ ಜಾಣೋನಿ ನಿರ್ಧಾರೂ । ತೇಥೀಲ ಸಾಂಡೂನಿ ಆತ್ಯಾದರೂ । ಉಪರಮಪ್ರಕಾರೂ ಸಾಂಗತ ।೫೫೭॥

ದೃಷ್ಟಿಂ ತತಃ ಪ್ರತಿನಿವರ್ತ್ಯ ನಿವೃತ್ತತೃಷ್ಣಸ್ತೂಷ್ಣೀಂ ಭವೇನ್ನಿಜಸುಖಾನುಭವೋ ನಿರೀಹಃ ।
ಸಂದೃಶ್ಯತೇ ಕ್ವ ಚ ಯದೀದಮವಸ್ತುಬುದ್ಧ್ಯಾ ತ್ಯಕ್ತಂ ಭ್ರಾಮಯಾ ನ ಭವೇತ್ ಸ್ಮೃತಿರಾನಿಪಾತಾತ್ ।೩೫॥

ಅರ್ಥ :- ದೃಶ್ಯದಿಂದ ದೃಷ್ಟಿಯನ್ನು ತಿರುಗಿಸಿ ಸ್ವತಃ ನಿಜ ಸುಖಾತ್ಮಕರಾಗಬೇಕು. ತೃಷ್ಣಾರಹಿತ ಇಂದ್ರಿಯಗಳು, ವ್ಯಾಪಾರ ರಹಿತ ಮತ್ತು ನಿರಿಚ್ಛವಾಗಬೇಕು. ಆಹಾರ ಇತ್ಯಾದಿ ಇತರ ಅವಶ್ಯ ವ್ಯಾಪಾರದಲ್ಲಿ ಈ ಶರೀರವು ದ್ವೈತ ಪ್ರವೃತ್ತವಾಗುತ್ತಿದ್ದಂತೆ ತೋರುತ್ತಿದ್ದರೂ ಮಿಥ್ಯಾ ಬುದ್ಧಿಯಿಂದ ಬಿಟ್ಟಿರುವ ಶರೀರಾದಿ ದ್ವೈತಭಾವವು ಇದು ಪುನಃ ಮೋಹಕ್ಕೆ ಕಾರಣವಾಗುವುದೇ ಇಲ್ಲ. ಇನ್ನು ಈಗಿನ ಶರೀರವು ಬಿದ್ದು ಹೋಗುವ ಪರ್ಯಂತ ಕೇವಲ ಸಂಸ್ಕಾರದಿಂದ ಅದರ ಆಗುಹೋಗು ಆಗುತ್ತಿರುವುವು.

ಯಾವ ಪ್ರಕಾರವಾಗಿ ನಿದ್ರೆಯಲ್ಲಿ ಮನವು ತ್ರಿಭುವನವನ್ನು ಕಾಣುತ್ತಿರುವುದೋ, ಅದರಂತೆಯೇ ಅವಿದ್ಯೆಯು ಈ ಸಂಸಾರರೂಪ ದೊಡ್ಡದಾದ ಸ್ವಪ್ನವನ್ನು ಉತ್ಪನ್ನ ಮಾಡುವುದು ।೫೪೭॥ ಇರುವುದು ಒಂದು, ಕಾಣುವುದು ಮತ್ತೊಂದು, ಹೀಗಾದರೆ ಅದಕ್ಕೆ ಆಭಾಸವೆಂದು ಹೇಳುವರು. ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯ ಭಾಸವಾಗುವುದು. ಹಗ್ಗವು ಮಹಾಸರ್ಪದಂತೆ ಭಾಸಮಾನವಾಗುವುದು ।೫೪೮॥ ಅಥವಾ ಕೇವಲ ಸೂರ್ಯನ ಕಿರಣಗಳಿರಲು ಆ ಸ್ಥಳದಲ್ಲಿ ಮೃಗಜಲವು ಭಾಸಮಾನವಾಗುವುದು, ಅದರಂತೆ ಯಾವ ಕೇವಲ ಶುದ್ಧ ವಸ್ತುವೆಂದರೆ ಪರಬ್ರಹ್ಮವು. ಅದಕ್ಕೆ ಭ್ರಮೆಯಿಂದ ಜನರು ಸಂಸಾರವೆಂದು ಕರೆಯುವರು ।೫೪೯॥ ಆದರೆ ಈ ಯಾವ ಆರೋಪಕ್ಕೆ ನಿಜವಾಗಿಯೂ ನಾನೇ ಕಾರಣನಾಗಿರುವೆನು. ಉರಿಗೋಲು ದುಂಡಾಗಿ ತಿರುಗಿಸಲು ಆಗ ಅಗ್ನಿಯು ಕಂಕಣವಾದಂತೆ ತೋರುವುದು. ಇದು ಯಾವ ಈ ಅಗ್ನಿಯ ತೇಜದಿಂದ ಹೀಗೆ ಭಾಸವಾಗುವುದು ।೫೫೦॥ ಈ ಯಾವ ಅಗ್ನಿ ಚಕ್ರ ವಿಷಯವಾಗಿ ಶಾಂತಚಿತ್ತದಿಂದ ವಿಚಾರವನ್ನು ಮಾಡಲು ಆಗ ಅದರಲ್ಲಿ ಅಗ್ನಿಯು ಸತ್ಯವಾಗಿ ಇರುವುದು. ಆದರೆ ಅಗ್ನಿಯ ಕಂಕಣವು ಇದು ಮಿಥ್ಯೆಯಾಗಿರುವುದು. ಅದರಂತೆ ಈ ಸಂಸಾರದ ವಿಚಾರವನ್ನು ಮಾಡಲು ಆಗ ಬ್ರಹ್ಮ ಮಾತ್ರ ಸತ್ಯವಾಗಿರುವುದು ಮತ್ತು ಸಂಸಾರವು ಮಿಥ್ಯೆಯಾಗಿರುವುದು ಎಂದು ಹೀಗೆ ನಿಶ್ಚಯವಾಗುವುದು ।೫೫೧॥ ಈ ಯಾವ ಸಂಸಾರದಲ್ಲಿನ ಆಧಿದೈವಿಕ, ಆಧಿಭೌತಿಕ ಮತ್ತು ಆಧ್ಯಾತ್ಮಿಕ ಇತ್ಯಾದಿ ಸರ್ವವೂ ಉರಿಗೋಲಿನಂತೆ ಇರುವುವು. ಇವು ಮೂರು ಗುಣಗಳಿಂದ ಆಗಿರುವ ಮಾಯೆಯ ಪರಿಣಾಮವಾಗಿರುವುದು ।೫೫೨॥ ಉರಿಗೋಲು ದುಂಡಗೆ ತಿರುಗಿಸಲು ಅದು ಚಕ್ರದಂತೆ ಕಾಣುವುದು. ಕ್ಷಣದಲ್ಲಿ ತೋರುವುದು ಪುನಃ ಕ್ಷಣದಲ್ಲಿಯೇ ಅಡಗುವುದು. ಅದರಂತೆ ಈ ಸಂಸಾರವಿರುವುದು ।೫೫೩॥ ಎಲ್ಲಿಯವರೆಗೆ ಉರಿಗೋಲಿನ ಪರಿಭ್ರಮಣವು ವೇಗದಿಂದ ನಡೆಯುತ್ತಿರುವುದೋ, ಅಲ್ಲಿಯವರೆಗೆ ಆ ಉರಿಗೋಲು ಚಕ್ರದಂತೆ ತೋರುವುದು. ಈ ಪರಿಭ್ರಮಣವನ್ನು ನಿಲ್ಲಿಸಲು ಕೂಡಲೇ ಚಕ್ರದ ಸ್ವರೂಪವು ಅಡುಗುವುದು ।೫೫೪॥ ಅದರಂತೆ ಎಲ್ಲಿಯವರಗೆ ನಮ್ಮಲ್ಲಿ ಭ್ರಮೆಯು ಇರುವುದೋ, ಅಲ್ಲಿಯವರೆಗೆ ಈ ಸಂಸಾರವು ನಿಜವೆಂದು ಭಾಸವಾಗುವುದು. ಸರ್ವ ಪ್ರಕಾರದ ಭ್ರಮವು ನಿರಸನೆಯಾಗಲು ಆಗ ಸಂಸಾರವನ್ನು ಎಷ್ಟು ಪ್ರಯತ್ನಿಸಿ ನೋಡಿದರೂ ಕೂಡ ಅದು ಕಾಣುವುದೇ ಇಲ್ಲ ।೫೫೫॥ ಈ ದೇಹವೆಂದರೆ ''ನಾನು'', ಸ್ತ್ರೀ, ಪುತ್ರ ಇತ್ಯಾದಿ ''ನನ್ನದು'', ಎಂಬುದೇ ಇದೇ ಭ್ರಮದ ಮುಖ್ಯ ಸೂತ್ರವಾಗಿರುವುದು. ಇದನ್ನು ಭೇದಿಸದೇ ಅಜ್ಞಾನಿ ಜನರು ಮುಕ್ತನಾಗಿರುವೆನೆಂಬ ಅಹಂಕಾರವನ್ನು ಮೆರೆಯುಸುತ್ತ ಇರುವರು ।೫೫೬॥ ಈ ಪ್ರಕಾರವಾಗಿ ಈ ಸಂಸಾರವು ಮಾಯಾಮಯವಾಗಿರುವುದೆಂದು ಹೀಗೆ ನಿಶ್ಚಯ ಮಾಡಿ ಅದರ ಮೇಲಿನ ಆಸಕ್ತಿಯನ್ನು ಬಿಟ್ಟುಬಿಡಬೇಕು. ಈಗ ಶಾಂತಿಯಿಂದ ಜೀವನವನ್ನು ಹೇಗೆ ಸಾಗಿಸಬೇಕೆಂಬುವ ಪ್ರಕಾರವನ್ನು ಹೇಳುವೆನು ।೫೫೭॥

ಪೂರ್ವಿಲ್ಯಾ ಭಜನಪರಿಪಾಟೀ । ಸಹಜೇ ನಿರ್ಮಳ ಝಾಲೀ ದೃಷ್ಟೀ । ಮಿಥ್ಯಾ ಸಾಂಸಾರಿಕ ತ್ರಿಪುಟೀ । ಹಾ ನಿರ್ಧಾರ ಪೋಟೀ ದೃಢ ಝಾಲಾ ॥೫೫೮॥ ತೇಥೇ ಸಾಂಸಾರಿಕ ತ್ರಿಪುಟೀ । ಸಾಂಡೂನಿ ಉಪರಮವಿತಾ ದೃಷ್ಟೀ । ಮಜ ಹೃದಯಸ್ಥಾಸೀ ಹೋಯ ಭೇಟೀ । ಜೇವೀ ಸುವರ್ಣದೃಷ್ಟೀ ಅಳಂಕಾರೂ ॥೫೫೯॥ ತೇಥ ದೃಶ್ಯ ದೃಷ್ಟಾ ದರ್ಶನ । ಮೋಡೂನಿ ತ್ರಿಪುಟೀಚೇ ಭಾನ । ತೇಚಿ ಧಾರಣಾ ತೇಚಿ ಧ್ಯಾನ । ತೇಥ ಸಮಾಧಾನ ಧರಾವೇ ॥೫೬೦॥ ತೇಚಿ ಅಂಗೇ ವ್ಹಾವಯಾ ಆಪಣಾ । ಸಾಂಡಾವೀ ಸಕಳ ತೃಷ್ಣಾ । ವಾಚೇಸೀ ಧರಾವೇ ಮಹಾಮೌನಾ । ದೇಹಚೇಷ್ಟಾ ಜಾಣಾ ಆವರಾವ್ಯಾ ॥೫೬೧॥ ಸಾಂಡಾವೀ ವೇದಶಾಸ್ತ್ರವ್ಯುತ್ಪತ್ತಿ ವಾಡ । ಸಾಂಡಾವೀ ವಾಗ್ವಾದ ಬಡಬಡ । ಭಗವದ್ಭಾವೋ ಧರಾವಾ ದೃಢ । ಜೇಣೇ ಆಶೇಚೇ ಬೂಡ ಸಮೂಳ ಛೇದೇ ॥೫೬೨॥ ಕಾಯಾ ವಾಚಾ ಆಣಿ ಮನ । ದೃಢ ಆವರಾವೇ ಆಪಣ । ತುಟೋ ನೇದಾವೇ ಅನುಸಂಧಾನ । ಸದಾ ಸಾವಧಾನ ನಿಜರೂಪೀ ॥೫೬೩॥ ತೇ ಸ್ವರೂಪಸುಖೀ ಲೋಧಲ್ಯಾ ಜಾಣ । ದೇಹಾಚೇ ಸ್ಫುರೇನಾ ದೇಹಪಣ । ಅಹಂಕಾರೇಸೀ ಮಾವಳೇ ಮನ । ಸ್ವಾನಂದ ಪೂರ್ಣ ವೋಸಂಡೇ ॥೫೬೪॥ ತೇಥ ಸಂಮುಖ ನಾ ಪಾಠಿಮೋರೇ । ಏಕಪಣ ನಾ ದುಸರೇ । ದೇವೋ ಭಕ್ತ ಹೇಹೀ ನುರೇ । ಸುಖೇ ಸುಖಭರೇ ಸುಖರೂಪ ॥೫೬೫॥ ಮೀ ಏಕ ಸುಖರೂಪ ಆಹೇ । ವೇಗಳೇಪಣೇ ಠಾವೇ ನೋಹೇ । ಯೇಣೇ ಆತ್ಮಾನುಭವೇ ರಾಹೇ । ಏವಢೀ ಪ್ರಾಪ್ತೀ ಹೋಯೇ ಮದ್ಭಕ್ತಾ ॥೫೬೬॥ ಮ್ಹಣಾಲ ಕಾಷ್ಠಾಚ್ಯಾ ಪರೀ ತ್ಯಾಸೀ । ಪಡಲಾ ಅಸೇಲ ಅಹರ್ನಿಶೀ । ಹೇಹೀ ನ ಘಡೇ ಗಾ ತಯಾಸೀ । ಸಾಂಡೂನಿ ಹೇತೂಸೀ ದೇಹೀ ವರ್ತೇ ॥೫೬೭॥ ತೋಹೀ ಪ್ರಾರಬ್ಧಾಚೇನಿ ಬಳೇ । ಆಹಾರನಿದ್ರಾದಿ ಖೇಳೇಮೇಳೇ । ದೇಹೀಚೀ ಕರ್ಮೇ ಕರಿತಾ ಸಕಳೇ । ಸರ್ವಥಾ ನಾತಳೇ ದೇಹಬುದ್ಧೀ ॥೫೬೮॥ ದಂಡ ಕಾಢೋನಿ ನೇಲಿಯಾ ಕುಂಭಾರೇ । ಪಹಿಲೇ ಭವಂಡೀ ಚಕ್ರ ಫಿರೇ । ತೇವೀ ಪ್ರಾರಬ್ಧಾಚೇನಿ ಸಂಸ್ಕಾರೇ । ಕರ್ಮಾನುಸರೇ ದೇಹ ವರ್ತೇ ॥೫೬೯॥ ಕುಲಾಲಚಕ್ರೀ ಬೈಸಲೀ ಮಾಶೀ । ನ ಹಾಲತಾ ಭೋವೇ ಚಕ್ರಾಸರಸೀ । ಕೋಟೀ ಫೇರೇ ಮ್ಹಣತೀ ತಿಸೀ । ತೇವೀ ಮುಕ್ತಾಸೀ ದೇಹಕರ್ಮೇ ॥೫೭೦॥

ಪೂರ್ವದಲ್ಲಿನ ಭಜನೆಯ ಅಭ್ಯಾಸದಿಂದ ದೃಷ್ಟಿಯು ಸಹಜವಾಗಿಯೇ ಪವಿತ್ರ, ಶುದ್ಧವಾಗುವುದು ಮತ್ತು ಸಂಸಾರಾತ್ಮಕ ಈ ಯಾವ ತ್ರಿಪುಟಿಗಳು ಮಿಥ್ಯೆಯಾಗಿವೆ ಎಂಬುದು ಅಂತಃಕರಣದಲ್ಲಿ ದೃಢವಾದ ನಿಶ್ಚಯವಾಗುವುದು ॥೫೫೮॥ ಈ ಪ್ರಕಾರವಾಗಿ ಸಂಸಾರಾತ್ಮಕ ತ್ರಿಪುಟಿಗಳನ್ನು ಬಿಟ್ಟುಕೊಟ್ಟು ದೃಷ್ಟಿಯನ್ನು ಶಾಂತಗೊಳಿಸಲು, ಆಗ ಅನೇಕ ಪ್ರಕಾರದ ಭಿನ್ನ ಭಿನ್ನ ಆಭರಣಗಳಲ್ಲಿ ಬಂಗಾರವು ಒಂದೇ ಕಾಣುವಂತೆ ನನ್ನ ಹೃದಯಸ್ಥನ ಭೇಟಿಯಾಗುವುದು ॥೫೫೯॥ ಆಗ ದೃಶ್ಯ, ದ್ರಷ್ಟಾ ಮತ್ತು ದರ್ಶನ ಈ ತ್ರಿಪುಟಿಯ ಭಾನವು ಇಲ್ಲದಾಗಿ ಮಾಡಿ ಧ್ಯಾನವು ಅದೇ, ಧಾರಣಾವು ಅದೇ, ಎಂದು ತಿಳಿದುಕೊಂಡು ಅಲ್ಲಿ ಚಿತ್ತವನ್ನು ಸ್ಥಿರಗೊಳಿಸಬೇಕು ಮತ್ತು ಅದರಲ್ಲಿ ಸಮಾಧಾನವನ್ನು ಪಡೆಯಬೇಕು ॥೫೬೦॥ ಇದನ್ನೇ ತಾವು ಸ್ವತಃಕ್ಕೆ ಸಾಧ್ಯವಾಗುವುದಕ್ಕಾಗಿ ಸರ್ವ ತೃಷ್ಣಾವನ್ನು ಬಿಟ್ಟುಬಿಡಬೇಕು. ವಾಣಿಯಿಂದ ಮಹಾಮೌನವನ್ನು ಧರಿಸಬೇಕು. ದೇಹದ ವ್ಯಾಪಾರಗಳನ್ನು ಹತೋಟಿಯಲ್ಲಿ ತರಬೇಕು ॥೫೬೧॥ ವೇದ ಶಾಸ್ತ್ರಗಳ ಮತ್ತು ವ್ಯುತ್ಪತ್ತಿಗಳ ಹವ್ಯಾಸವನ್ನು ಬಿಡಬೇಕು. ಸರ್ವ ಪ್ರಕಾರದ ವಾದ ವಿವಾದಗಳನ್ನು ವರ್ಜಿಸಬೇಕು. ಭಗವಂತನಲ್ಲಿ ದೃಢವಾದ ವಿಶ್ವಾಸವನ್ನಿಟ್ಟು ಆಶೆಯ ಸಂಪೂರ್ಣ ಬೇರನ್ನು ಕತ್ತರಿಸಿ ಒಗೆಯಬೇಕು ॥೫೬೨॥ ಕಾಯಾ, ವಾಚಾ ಮತ್ತು ಮನ ಇವುಗಳನ್ನು ಸ್ವಾಧೀನಗೊಳಿಸಬೇಕು. ಆತ್ಮಸ್ವರೂಪದ ಅನುಸಂಧಾನವನ್ನು ಮುರಿಯದಂತೆ ನೋಡಿಕೊಳ್ಳಬೇಕು. ಆತ್ಮಸ್ವರೂಪದಲ್ಲಿ ಸರ್ವದಾ ಸಮಾಧಾನಿಯಾಗಿರಬೇಕು ॥೫೬೩॥ ಆ ಯಾವ ಸ್ವರೂಪದ ಆನಂದದಲ್ಲಿ ದೇಹದ ದೇಹತ್ವವು ಮರೆತುಬಿಡುವುದು. ಅಹಂಕಾರ ಸಮೇತವಾಗಿ ಮನವು ಲೀನವಾಗಿ ಸ್ವಾನಂದವು ಪರಿಪೂರ್ಣವಾಗಿ ತುಂಬಿ ಬರುವುದು ॥೫೬೪॥ ಅಲ್ಲಿ ಮುಂದೆಯೂ ಇಲ್ಲ ಮತ್ತು ಹಿಂದೆಯೂ ಇಲ್ಲ. ಐಕ್ಯವೂ ಇಲ್ಲ ಮತ್ತು ಭಿನ್ನವೂ ಇಲ್ಲ. ಅಲ್ಲಿ ದೇವ ಮತ್ತು ಭಕ್ತರೆಂಬ ಈ ಭೇದಭಾವವೂ ಕೂಡ ಇರುವುದಿಲ್ಲ. ಹೀಗೆ ಆತನು ಆನಂದರೂಪನಾಗಿರುವನು ॥೫೬೫॥ ನಾನು ಆನಂದರೂಪನಾಗಿರುವೆನು. ನನಗೆ ಇನ್ನೊಂದು ಬೇರೆ ಯಾವುದೂ ಗೊತ್ತಿಲ್ಲ. ಹೀಗೆ ಆತ್ಮಾನುಭವದಲ್ಲಿ ಆತನು ತಲ್ಲೀನನಾಗಿರುವನು. ನನ್ನ ಭಕ್ತರಿಗೆ ಇಷ್ಟೊಂದು ಅಲೌಕಿಕ ಪ್ರಾಪ್ತಿಯಾಗುವುದು ॥೫೬೬॥ ಈಗ ನೀವು ಹೀಗೆ ಹೇಳಬಹುದು, ಏನೆಂದರೆ, ಆತನು ಹಗಲು ರಾತ್ರಿ ಕಟ್ಟಿಗೆಯಂತೆ ಮಲಗಿರುತ್ತಿರಬಹುದು. ಆದರೆ ಹೀಗೆ ಆಗುವುದಿಲ್ಲ. ಆತನು ಆಸಕ್ತಿಯನ್ನು ಬಿಟ್ಟುಕೊಟ್ಟು ದೇಹದಲ್ಲಿ ಆನಂದವಾಗಿ ಇರುವನು ॥೫೬೭॥ ಆತನು ತನ್ನ ಪ್ರಾರಬ್ಧಾನುಸಾರವಾಗಿ ಆಹಾರ, ನಿದ್ರಾ ಇತ್ಯಾದಿ ದೇಹದ ಸರ್ವ ಕರ್ಮಗಳನ್ನು ಸ್ವಾಭಾವಿಕವಾಗಿ ಮಾಡುತ್ತಿರುವನು. ಆದರೆ ದೇಹಬುದ್ಧಿಗೆ ಸ್ಪರ್ಶ ಕೂಡ ಮಾಡಲಾರನು ॥೫೬೮॥ ಕುಂಬಾರನು ಮಡಕೆಯನ್ನು ತಯಾರಿಸುತ್ತಿರುವನು. ಆಗ ಆತನು ಚಕ್ರದ ಮೇಲಿನ ಗೂಟವನ್ನು ತೆಗೆದುಕೊಂಡು ಹೋದರೂ ಗತಿಯ ವೇಗವು ಮುಗಿಯುವವರೆಗೆ ಆ ಚಕ್ರವು ತಿರುಗುತ್ತಿರುವುದು. ಅದರಂತೆ ಪ್ರಾರಬ್ಧ ಕರ್ಮಾನುಸಾರವಾಗಿ ದೇಹವು ವರ್ತಿಸುತ್ತಿರುವುದು ॥೫೬೯॥ ಕುಂಬಾರನ ಚಕ್ರದ ಮೇಲೆ ಒಂದು ನೊಣವು ಕುಳಿತಿರಲು ಅದು ತನ್ನ ಸ್ಥಳವನ್ನು ಕದಲದೇ ಚಕ್ರದೊಂದಿಗೆ ತಿರುಗುತ್ತಿರುವುದು. ಆದ್ದರಿಂದ ಅದಕ್ಕೆ ಕೋಟಿಸಾರೆ ತಿರುಗಿತು ಎಂದು ಹೇಳುವರು. ಆದರೆ ನಿಜವಾಗಿ ನೋಡಲು ಆ ನೊಣವು ಒಮ್ಮೆಯೂ ತಿರುಗಿರುವುದಿಲ್ಲ. ಅದರಂತೆ ಮುಕ್ತನ ದೇಹಕರ್ಮಗಳಾಗುತ್ತಿರುವುವು ॥೫೭೦॥

ಯಾಪರೀ ದೇಹಕರ್ಮೀ ವರ್ತತಾ । ಜ್ಞಾತಾ ನ ಮ್ಹಣೇ ಅಹಂಕರ್ತಾ । ಜೇವೀ ವಾರ್ಯಾಚಿಯಾ ಸ್ವಭಾವತಾ । ದಿಸೇ ಚಪಳತಾ ಗಲಿತಪತ್ರೀ ।।೫೭೧।। ಜೇವೀ ಕಾ ಪುರುಷಾಸವೇ ಛಾಯಾ ಅಸೇ । ಪರೀ ತೇ ಛಾಯೇಸೀ ಪುರುಷ ನ ಬೈಸೇ । ತೇವೀ ಜ್ಞಾತ್ಯಾಸವೇಹೀ ದೇಹ ದಿಸೇ । ಪರೀ ತೋ ದೇಹದೋಷೇ ಮೈಳೇನಾ ।।೫೭೨।। ನಿಜಛಾಯೇಸೀ ಬೈಸೋ ಜಾತಾ । ಛಾಯಾಚಿ ಪಳೇ ತತ್ತ್ವತಾ । ತೇವೀ ಮದ್ಭಕ್ತೀ ಮಾಯಾ ಪಾಹತಾ । ಮಾಯಾ ಸ್ವಭಾವತಾ ಮಿಥ್ಯಾತ್ವೇ ಪಳೇ ।।೫೭೩।। ಹೋ ಕಾ ಮುಕ್ತಾಫಳಾಂಚೀ ಮಾಳಾ । ಭ್ರಮೇ ಸರ್ಪರೂಪ ಭಾಸೇ ಡೋಳಾ । ತೇಚಿ ಭ್ರಮಾಂತೀ ಘಾಲಿತಾ ಗಳಾ । ನುಪಜೇ ಕಂಟಾಳಾ ಸರ್ಪಭಯಾಚಾ ।।೫೭೪।। ತೇವೀ ಅಧಮೋತ್ತಮ ಯೋನೀ । ಕಾ ವಂದ್ಯನಿಂದ್ಯ ಜೇ ಜನೀ । ತೇ ಮೀ ಮ್ಹಣತಾ ಜ್ಞಾನೀ । ಶಂಕಾ ನ ಮಾನೀ ದೇಹಮಿಥ್ಯಾತ್ವೇ ।।೫೭೫।। ಯಾಪರೀ ತೇ ಅತಿಸಜ್ಞಾನ । ಜಾಣೋನಿ ದೇಹಾಚೇ ಮಿಥ್ಯಾಭಾನ । ದೇಹಕರ್ಮೀ ವರ್ತತಾ ಜಾಣ । ದೇಹಾಚೇ ದೇಹಪಣ ಸ್ಫುರೇನಾ ।।೫೭೬।। ತೋ ದೇಹೋ ಸರ್ವಾಂಗೀ ತೋಡಿತಾ । ಕಾ ವೃಕವ್ಯಾಘ್ರಾದಿಕೀ ಫಾಡಿತಾ । ಕಾ ಅಗ್ನಿಮಾಜೀ ಧಡಾಡಿತಾ । ತ್ಯಾಸೀ ದೇಹ ಅಹಂತಾ ಸ್ಫುರೇನಾ ।।೫೭೭।। ಆಪುಲೀ ಛಾಯಾ ದೇಖಿಲೀ ಶೂಳೀ । ತೇಲಾಗೀ ಪುರುಷ ನ ತಳಮಳೀ । ತೇವೀ ದೇಹಾಚಿ ಹೋತ ಹೋಳೀ । ಜ್ಞಾತಾ ನ ಡಂಡಳೀ ನಿಜಬೋಧೇ ।।೫೭೮।। ಮ್ಹಣಾಲ ದೇಹಸಂಗೇ ವರ್ತತಾ । ಕೇವೀ ಬಾಧೀನಾ ದೇಹ ಅಹಂತಾ । ಸಾಂಡೂನಿ ಅಂಗೀಚೀ ಕ್ಷಾರತಾ । ಲವಣ ವರ್ತತಾ ಉರೇ ಕೈಸೇ ।।೫೭೯।। ಹಿಂಗ ಸಾಂಡೂನಿ ಆಪುಲೀ ಘಾಣೀ । ಕೇವೀ ರಾಹೇಲ ಸುಗಂಧಪಣೀ । ನಿಃಶೇಷ ಸಾಂಡೋನಿ ಅಂಗೀಚೇ ಪಾಣೀ । ಕೇಳೀ ಕೇಳೀಪಣೇ ಉರೇ ಕೈಚೀ ।।೫೮೦।। ನ ಝುಂಝೇ ಮ್ಹಣೋನಿ ರಣೀ ರಿಘತಾ । ಜೇವಿ ಕಾ ಘಾಯ ವಾಜತೀ ಮಾಥಾ । ತೇವೀ ದೇಹಸಂಗೇ ವರ್ತತಾ । ದೇಹಅಹಂತಾ ಸೋಡೀನಾ ।।೫೮೧।। ಯೇವಿಷಯೀ ಐಕಾ ಸಾವಧಾನ । ಜ್ಞಾತ್ಯಾಸೀ ದೇಹಾಚೇ ಬಾಧೀನಾ ಭಾನ । ತೇಥೇ ಸ್ಫುರೇ ಜೋ ಅಭಿಮಾನ । ತೋ ಭರ್ಜಿತ ಜಾಣ ಬೀಜ ಜೈಸೇ ।।೫೮೨।। ಭರ್ಜಿತ ಬೀಜೇ ಜಾಣ। ಹೋ ಶಕೇ ಕ್ಷುದಾಹರಣ। ಪರೀ ಕರಿತಾ ಬೀಜಾರೋಪಣ । ಅಂಕುರ ಜಾಣ ತ್ಯಾ ನಾಹೀ ।।೫೮೩।।

ಉದುರಿ ಬಿದ್ದ ಒಣ ಎಲೆಗಳು ಗಾಳಿಯ ಗತಿಯಂತೆ ಹಾರುತ್ತಿರುವುವು. ಅದರಂತೆ ಜ್ಞಾನಿಯು ದೇಹದ ಕರ್ಮಗಳನ್ನು ಮಾಡುತ್ತಿರುವನು. ಆದರೆ ಈ ಯಾವ ಕರ್ಮಗಳನ್ನು ಮಾಡುತ್ತಿರಲು, ನಾನು ಕರ್ತನು ಎಂಬ ಭಾವನೆಯು ಆತನ ಮನದಲ್ಲಿ ಇರುವುದೇ ಇಲ್ಲ. ಪೂರ್ವ ಸಂಸ್ಕಾರದಂತೆ ಆತನ ಕರ್ಮಗಳು ನಡೆಯುತ್ತಿರುವುವು ।।೫೭೧।। ಮನುಷ್ಯನ ನೆರಳು ಆತನ ಜೊತೆಯಲ್ಲಿಯೇ ಇರುವುದು. ಆದರೆ ಸ್ವತಃ ತನ್ನ ನೆರಳಿನಲ್ಲಿ ಯಾರಿಗೂ ಕುಳಿತುಕೊಳ್ಳುವುದಾಗುವುದಿಲ್ಲ. ಅದರಂತೆ ಆತ್ಮವೇತ್ತಾ ಜೊತೆಯಲ್ಲಿ ಆತನ ಶರೀರವು ಕಾಣಿಸುತ್ತಿರುವುದು. ಆದರೆ ಆತನು ಶರೀರ ದೋಷದಿಂದ ಮಲಿನನಾಗುವುದಿಲ್ಲ ।।೫೭೨।। ತನ್ನ ಸ್ವತಃದ ನೆರಳಿನಲ್ಲಿ ಕುಳಿತುಕೊಳ್ಳಬೇಕೆಂದು ಪ್ರಯತ್ನವನ್ನು ಮಾಡಲು, ಆ ನೆರಳು ತನ್ನ ಮುಂದೆಯೇ ಓಡುವುದು. ಹಾಗೆ ನನ್ನ ಭಕ್ತರಲ್ಲಿ ಮಾಯೆಯನ್ನು ಕಾಣುವ ಪ್ರಯತ್ನ ಮಾಡಿದರೆ ದೇಹವು ಸ್ವಭಾವತವೇ ಮಿಥ್ಯತ್ವದಿಂದ ಓಡಿ ಹೋಗುವುದು ।।೫೭೩।। ಅಥವಾ ಮುತ್ತಿನ ಸರ ಒಂದು ಭ್ರಮದಿಂದ ಸರ್ಪದಂತೆ ತೋರುವುದು. ಆದರೆ ಆ ಭ್ರಮವು ದೂರಾಗಲು ಆಗ ಆ ಸರವನ್ನು ಕೊರಳಲ್ಲಿ ಹಾಕಿದರೂ ಸರ್ಪಭಯದ ಯಾವ ತೊಂದರೆಯೂ ಆಗುವುದಿಲ್ಲ ।।೫೭೪।। ಅದರಂತೆ ಅಧಮ ಜನರಲ್ಲಿರಲಿ, ಉತ್ತಮ ಜನರಲ್ಲಿರಲಿ, ಜನರಿಂದ ನಿಂದ್ಯವಾಗಲಿ ಅಥವಾ ವಂದ್ಯವಾಗಲಿ, ಆ ಎಲ್ಲ ಜನರ ದೇಹವೇ ನಾನು ಎಂದು ತಿಳಿದುಕೊಂಡಿರಲು ಹಾಗೂ ದೇಹವು ಮಿಥ್ಯೆ ಎಂದು ತಿಳಿದಿರುವುದರಿಂದ ಯಾವ ಅನುಮಾನ ಸ್ಥಿತಿಯು ಉಂಟಾಗುವುದಿಲ್ಲ ।।೫೭೫।। ಅದರಂತೆ ಆತನು ಅತ್ಯಂತ ಜ್ಞಾನ ಸಂಪನ್ನನಾಗಿರುವುದರಿಂದ ದೇಹದ ಭಾನವು ಮಿಥ್ಯೆ ಎಂದು ತಿಳಿದಿರುವನು. ದೇಹದಿಂದ ಕರ್ಮಗಳನ್ನು ಮಾಡುತ್ತಿದ್ದರೂ ಆತನಿಗೆ ದೇಹದ ದೇಹತ್ವವು ಭಾಸವಾಗುವುದೇ ಇಲ್ಲ ।।೫೭೬।। ಆ ದೇಹಕ್ಕೆ ಎಷ್ಟೇ ತುಂಡು ಮಾಡಲಿ ಅಥವಾ ಹುಲಿ, ತೋಳಗಳು ಆತನಿಗೆ ಹರಿದು ಹಾಕಲಿ ಇಲ್ಲವೇ ಪ್ರಜ್ವಲಿತ ಅಗ್ನಿಯಲ್ಲಿ ದೇಹವು ಬೆಂದುತ್ತಿದ್ದರೂ ಆತನ ದೇಹಭಾನವು ಜಾಗೃತವಾಗುವುದಿಲ್ಲ ।।೫೭೭।। ತನ್ನ ನೆರಳು ಶೂಲದ ಮೇಲಿದೆ ಎಂದು ಯಾರಿಗೂ ತಳಮಳವು ಉಂಟಾಗುವುದಿಲ್ಲ. ಅದರಂತೆ ದೇಹದ ಹೋಳಿ ಆಗುತ್ತಿರುವುದನ್ನು ಕಂಡರೂ, ಜ್ಞಾನಿಯು ಆತ್ಮತತ್ವದಲ್ಲಿ ಏಕರೂಪನಾಗಿರುವುದರಿಂದ ಯಾವುದಕ್ಕೂ ಭಯಪಡುವುದಿಲ್ಲ ।।೫೭೮।। ಹೀಗೆ ಹೇಳಿದ ನಂತರ ನೀವು ಹೀಗೆ ವಿಚಾರವನ್ನು ಮಾಡಬಹುದು. ದೇಹದಲ್ಲಿದ್ದುಕೊಂಡಿರಲು ದೇಹಾಭಿಮಾನವು ಹೇಗೆ ಬಾಧಿಸುವುದಿಲ್ಲ? ಲವಣವು ತನ್ನ ಅಂಗದ ಉಪ್ಪುತನ ಬಿಟ್ಟು ಎಂದಾದರೂ ಇರಲು ಸಾಧ್ಯವೇ ।।೫೭೯।। ಅಥವಾ ಹಿಂಗವು ತನ್ನ ಉಗ್ರ ವಾಸನೆಯನ್ನು ಬಿಟ್ಟು ಸುವಾಸಿಕವಾಗಿ ಇರಲು ಸಾಧ್ಯವೇ? ಅಥವಾ ತನ್ನ ಅಂಗದಲ್ಲಿನ ನೀರನ್ನು ಸಂಪೂರ್ಣವಾಗಿ ಒಗೆದು ಬಾಳೆಯು ತಾನು ಬಾಳೆಯಾಗಿ ಇರಲು ಸಾಧ್ಯವೇ? ।।೫೮೦।। ನಾನು ಯುದ್ಧವನ್ನು ಮಾಡಲಾರೆನು ಎಂದು ಹೇಳುತ್ತ ರಣರಂಗಕ್ಕೆ ಹೋಗಲು ಅಲ್ಲಿ ತನ್ನ ತಲೆಗೆ ಪೆಟ್ಟು ಬಿದ್ದೇ ಬೀಳುವುದು. ಅದರಂತೆ ದೇಹದಲ್ಲಿದ್ದುಕೊಂಡು ದೇಹಾಭಿಮಾನದ ಬಿಡುಗಡೆಯು ಹೇಗೆ ಸಾಧ್ಯ? ।।೫೮೧।। ಹಾಗಾದರೆ ನಿಮ್ಮ ಶಂಕೆಯ ಉತ್ತರವನ್ನು ಲಕ್ಷಕೊಟ್ಟು ಕೇಳಿರಿ. ಜ್ಞಾನಿಗೆ ದೇಹದ ಭಾನವು ಎಂದಿಗೂ ಬಾಧಿಸುವುದಿಲ್ಲ. ಆತನ ದೇಹಾಭಿಮಾನವು ಸುಟ್ಟ ಬೀಜದಂತೆ ನಿರ್ಬೀಜವಾಗಿರುವುದು ।।೫೮೨।। ಸುಟ್ಟ ಬೀಜಗಳಿಂದ ಹಸಿವೆಯು ಹಿಂಗುವುದು. ಆದರೆ ಆ ಬೀಜಗಳನ್ನು ಭೂಮಿಯಲ್ಲಿ ಬಿತ್ತಲು ಅದಕ್ಕೆ ಅಂಕುರವು ಮಾತ್ರ ಹುಟ್ಟಲು ಸಾಧ್ಯವಿಲ್ಲ. ಇದನ್ನು ಸರಿಯಾಗಿ ಲಕ್ಷದಲ್ಲಿಡಿರಿ ।।೫೮೩।।

ಚಿತ್ರಾಮಾಜೀ ವ್ಯಾಘ್ರದಿಸೇ । ಪರೀ ಬಾಧಕತ್ವ ತ್ಯಾಸೀ ನಸೇ । ತೇವೀ ಭರ್ಜಿತ ಅಭಿಮಾನಶೇಷೇ । ಬಾಧಾ ನಸೇ ಜ್ಞಾತ್ಯಾಸೀ ॥೩೮೪॥ ಚಿತ್ರೀಚ್ಯಾ ವಾಘಾಸೀ ಜಾಣ । ನಿಃಶೇಷ ನಾಹೀ ವ್ಯಾಘ್ರಪಣ । ತೇವೀ ಮುಕ್ತಾಂಚ್ಯಾ ದೇಹಾಸೀ ಜಾಣ । ದೇಹಪಣ ಅಸೇನಾ ॥೩೮೫॥ ದೃಢ ಠಸಾವಲ್ಯಾ ಚೈತನ್ಯಘನ । ಸ್ವರೂಪಿ ವೃತ್ತಿ ಹೋಯ ನಿಮಗ್ನ । ತೇವ್ಹಾ ದಿಸೇ ತೇಹೀ ಭರ್ಜಿತ ಭಾನ । ತೇಹೀ ಸ್ಫುರಣ ನಿಮಾಲೇ ॥೩೮೬॥ ಐಶೀ ಮಾವಳಲ್ಯಾ ಸ್ಮೃತೀ । ಜ್ಞಾತ್ಯಾಚೀ ವರ್ತತೀ ಸ್ಥಿತೀ । ಸ್ವಯೇ ಸಾಂಗತೂ ಶ್ರೀಪತೀ । ಯಥಾನಿಗುತೀ ನಿಜಬೋಧೇ ॥೩೮೭॥ ಸರ್ವ ಕರ್ಮಿ ವರ್ತತಾ ಜಾಣ । ದೇಹಾಚೇ ಸ್ಫುರೇನಾ ದೇಹಪಣ । ತೇ ಮುಖ್ಯ ಸಮಾಧಿಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೩೮೮॥

ದೇಹಂ ಚ ನಶ್ವರಮವಸ್ಥಿತಮುತ್ಥಿತಂ ವಾ ಸಿದ್ಧೋ ನಪಶ್ಯತಿ ಯತೋಽಧ್ಯಗಮತ್ ಸ್ವರೂಪಮ್ ।
ದೈವಾದಪೇತಮಥ ದೈವವಶಾದುಪೇತಂ ವಸೋ ಯಥಾ ಪರಿಕೃತಂ ಮದಿರಾಮದಾಂಧಃ ॥೩೬॥

ಅರ್ಥ:- ಆತ್ಮ ಸಾಕ್ಷಾತ್ಕಾರದಲ್ಲಿ ಪರಿಪೂರ್ಣನಾಗಿ ಶಾಶ್ವತ ಸ್ವರೂಪವನ್ನು ಸಾಧಿಸಿದವನು ಅನಿತ್ಯವಾದ ಶರೀರವು ಕುಳಿತಿದೆಯೋ, ಅಥವಾ ನಿಂತಿದೆಯೋ ಎಂಬುದನ್ನು ಗಮನಿಸುವುದಿಲ್ಲ. ದೈವೇಚ್ಛೆಯಿಂದ ಶರೀರವು ನಾಶವಾದಾಗಲಾಗಲಿ ಅಥವಾ ದೈವಕೃಪೆಯಿಂದ ಹೊಸ ಶರೀರವನ್ನು ಪಡೆದಾಗಲಾಗಲಿ, ತನ್ನ ಮೈಮೇಲಿನ ಬಟ್ಟೆಯನ್ನು ಗಮನಿಸದಿರುವ ಕುಡುಕನ ಹಾಗೆ, ಈತನು ಯಾವದನ್ನೂ ಗಮನಿಸುವುದಿಲ್ಲ.

ಜಯಾ ದೇಹಾಚೇನಿ ಮದ್ಭಜನೇ । ಮಾಝೇ ಶುದ್ಧ ಸ್ವರೂಪ ಪಾವಣೇ । ತ್ಯಾ ದೇಹಾಸೀ ವಿಸರಿಜೇ ತೇಣೇ । ಮೀ ಮಾಝೇಪಣೇ ದೇಖೇನಾ ॥೩೮೯॥ ಜೇವೀ ಕಾ ಭಾಡಿಯಾಚೇ ಘೋಡೇ । ಜೇಣೇ ಆಣಿಲೇ ನಿಜಧಾಮಾ ರೋಕಡೇ । ತೇ ಆಹೇ ಕೀ ಗೇಲೇ ಕೋಣೀಕಡೇ । ಹೇ ಸ್ಮರೇನಾ ಪುಢೇ ತೋ ಜೈಸಾ ॥೩೯೦॥ ಹೋ ಕಾ ಭೇಟಾವಯಾ ಭ್ರತಾರಾಸೀ । ಸವೇ ಮಜುರ ಆಣೀ ವಿಶ್ವಾಸೀ । ತೇ ಪತೀಸೀ ಪಹುಡಲ್ಯಾ ರಾಣಿವಸೀ । ತ್ಯಾ ಮಜುರಾಸೀ ವಿಸರಲೀ ॥೩೯೧॥ ಕಾ ಜೋ ದೈವಯೋಗೇ ಪಾಲಖೀ ಚಢೇ । ತೋ ಪೂರ್ವಿಲ ತುಟಕೇ ಮೋಚಡೇ । ಆಹೇತ ಕೀ ಗೇಲೇ ಕೋಣೀಕಡೇ । ಹೇ ಸ್ಮರೇನಾ ಪುಢೇ ತೇಣೇ ಹರಿಖೇ ॥೩೯೨॥ ಹೋ ಕಾ ಬಹುಕಾಳೇ ಪತ್ನೀ ಜೈಸೀ । ಭರ್ತಾರೂ ಮೀನಲ್ಯಾ ನಿಜಸೇಜೇಸೀ । ತೇ ನಿಃಶೇಷ ವಿಸರೇ ಲಾಜೇಸೀ । ದೇಹಾಚಿ ತೈಸೀ ದಶಾ ಜಾಹಲೀ ॥೩೯೩॥ ತ್ಯಾ ದಾಂಪತ್ಯಾಚೇ ಸುಖಭೇಟೀ । ಪಾರಕೇ ದೇಖತಾ ಲಾಜ ಉಠೀ । ತೇವೀ ದೇಹಾಚೇ ಭಾನ ದ್ವೈತದೃಷ್ಟೀ । ಮದ್ಯೆಕ್ಯಪುಷ್ಟೀ ದೇಹ ಕೈಚೇ ॥೩೯೪॥ ಏವಂ ಪಾವೋನಿ ಮಾಝ್ಯಾ ಸ್ವರೂಪಾಸೀ । ಸ್ವಾನಂದಪೂರ್ಣ ಸಾಧಕಾಸೀ । ಸುಖೇ ಸುಖರೂಪತಾ ಜಾಹಲೀ ತ್ಯಾಸೀ । ನಿಜದೇಹಾಸೀ ವಿಸರೋನೀ ॥೩೯೫॥

ಚಿತ್ರದಲ್ಲಿನ ಹುಲಿಯ ಅಂಗದಲ್ಲಿ ಪೀಡೆಯನ್ನು ಕೊಡುವ ಸಾಮರ್ಥ್ಯವು ಇರುವುದಿಲ್ಲ. ಅದರಂತೆ ನಿರ್ಬೀಜವಾಗಿರುವ ಅಭಿಮಾನದ ತೊಂದರೆಯು ಜ್ಞಾನೀ ಪುರುಷನಿಗೆ ಆಗುವುದಿಲ್ಲ ॥೩೮೪॥ ಚಿತ್ರದಲ್ಲಿನ ಹುಲಿಯ ಅಂಗದಲ್ಲಿ ಯಾವ ರೀತಿಯಲ್ಲಿ ಹುಲಿತನವು ಇರುವುದಿಲ್ಲವೋ ಅದರಂತೆ ಮುಕ್ತನ ದೇಹಕ್ಕೆ ದೇಹತ್ವವು ಎಂದಿಗೂ ಇರಲು ಶಕ್ಯವಿಲ್ಲ. ಇದನ್ನು ನೀಟಾಗಿ ತಿಳಿದುಕೊಳ್ಳಿರಿ ॥೩೮೫॥ ಚೈತನ್ಯಘನನಾದ ಆತ್ಮಾರಾಮನು ಹೃದಯದಲ್ಲಿ ಪರಿಪೂರ್ಣವಾಗಿ ನಟ್ಟಿಕೊಳ್ಳಲು ಆಗ ಆತನ ಸ್ವರೂಪದಲ್ಲಿ ವೃತ್ತಿಯು ಏಕರೂಪವಾಗುವುದು. ನಂತರ ಆಭಾಸಾತ್ಮ ಪ್ರತೀತವಾಗುವ ಶರೀರದ ಮತ್ತು ಜಗತ್ತಿನ ಭಾನವು ಇರುವುದಿಲ್ಲ ॥೩೮೬॥ ಈ ಪ್ರಕಾರವಾಗಿ ದೇಹದ ಸ್ಮೃತಿಯು ಇಲ್ಲದಾಗಲು ಜ್ಞಾನಿಯು ಹೇಗೆ ವರ್ತಿಸುವನೆಂಬುದನ್ನು ಸ್ವತಃ ಶ್ರೀಕೃಷ್ಣನು ಈಗ ಆತ್ಮಬೋಧೆಯಿಂದ ಉತ್ತಮ ಪ್ರಕಾರವಾಗಿ ಹೇಳುತ್ತಿರುವನು ॥೩೮೭॥ ಸರ್ವ ಪ್ರಕಾರಗಳ ಕರ್ಮಗಳನ್ನು ಮಾಡುತ್ತಿದ್ದರೂ ದೇಹದ ದೇಹತ್ವವು ಸ್ಫುರಣವಾಗುವುದಿಲ್ಲ. ಇದೇ ಸಮಾಧಿಯ ಮುಖ್ಯ ಲಕ್ಷಣವಾಗಿರುವುದು. ಹೀಗೆ ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ॥೩೮೮॥

ಯಾರು ಅತ್ಯಂತ ಪ್ರೇಮದಿಂದ, ದೇಹದಿಂದ ನನ್ನ ಭಜನೆಯನ್ನು ಮಾಡಿ ನನ್ನ ಶುದ್ಧ ಸ್ವರೂಪಕ್ಕೆ ಮುಟ್ಟಿದವನು, ತನ್ನ ದೇಹವನ್ನೇ ಮರೆಯುವನು ಮತ್ತು ನಾನು, ನನ್ನದು ಎಂಬ ಭಾವವು ಇರುವುದಿಲ್ಲ ॥೩೮೯॥ ಒಬ್ಬನು ಭಾಡಿಗೆಯ ಕುದುರೆಯನ್ನು ಪಡೆದು, ಅದರ ಮೇಲೆ ಕುಳಿತುಕೊಂಡು ಆತನು ತನ್ನ ಮನೆಯನ್ನು ಮುಟ್ಟಿಕೊಂಡಾಗ ಆ ಕುದುರೆಯು ಎಲ್ಲಿಗೆ ಹೋಯಿತೆಂಬ ವಿಚಾರವನ್ನು ಮಾಡುವುದಿಲ್ಲ ॥೩೯೦॥ ಪತಿಗೃಹಕ್ಕೆ ಹೋಗುವ ಸ್ತ್ರೀಯು, ಜೊತೆಗೆ ಒಬ್ಬ ಸೇವಕನನ್ನು ಒಯ್ಯುವಳು. ಪತಿಯ ಭೇಟಿಯಾಗಿ ಆಕೆಯು ಅಂತಃಪುರಕ್ಕೆ ಹೋಗುವಳು. ಆಗ ಆಕೆಯು ಆ ಸೇವಕನನ್ನು ಮರೆತುಬಿಡುವಳು ॥೩೯೧॥ ಒಬ್ಬ ಮನುಷ್ಯನು ದೈವಯೋಗದಿಂದ ಪಾಲಖಿಯಲ್ಲಿ ಕುಳಿತುಕೊಂಡಿರಲು, ಆಗ ಆ ಆನಂದದಲ್ಲಿ ಆತನಿಗೆ ತನ್ನ ಹಿಂದಿನ ಹಳೆಯ ಚಪ್ಪಲಿಗಳು ಇದೆಯೋ ಅಥವಾ ಎಲ್ಲಿಯಾದರೂ ಹೋಗಿರುವುವೋ ಎಂಬ ನೆನಪು ಸಹ ಬರುವುದಿಲ್ಲ ॥೩೯೨॥ ಅಥವಾ ಹೆಂಡತಿಗೆ ಗಂಡನ ಸಹವಾಸವು ಬಹುಕಾಲದವರೆಗೆ ಸಾಧಿಸಲು ಆಗ ಆಕೆಯು ಮೊದಲಿನಂತೆ ನಾಚಿಕೆಯನ್ನು ಬಿಟ್ಟು ಆತನಲ್ಲಿ ವರ್ತಿಸುವಳು. ಅದರಂತೆ ಜ್ಞಾನಿಯ ದೇಹಸ್ಥಿತಿಯಾಗುವುದು ॥೩೯೩॥ ಆ ದಾಂಪತ್ಯದ ಏಕಾಂತದಲ್ಲಿ ಯಾರೋ ಬೇರೆಯವರು ಕಾಣುತ್ತಲೇ ಅವರಿಗೆ ನಾಚಿಕೆಯುಂಟಾಗುವುದು. ಅದರಂತೆ ನಿಮ್ಮ ದ್ವೈತ ದೃಷ್ಟಿಯಾಗಲು ಆಗ ದೇಹದ ಭಾನವಾಗುವುದು. ಆದರೆ ನನ್ನಲ್ಲಿ ಏಕರೂಪ ತಾಳಲು ದೇಹಭಾನವು ಹೇಗೆ ಇದ್ದೀತು? ॥೩೯೪॥ ಈ ಪ್ರಕಾರವಾಗಿ ನನ್ನ ಸ್ವರೂಪವನ್ನು ಪ್ರಾಪ್ತಮಾಡಿಕೊಂಡು ಸಾಧಕನು ದೇಹಾಭಿಮಾನವನ್ನು ಮರೆಯುವನು ಮತ್ತು ಪೂರ್ಣ ಸ್ವಾನಂದದ ಅನುಭವವನ್ನು ಪಡೆಯುವನು ॥೩೯೫॥

ಮಗ ಉಠಲೇ ಕೀ ಬಸಲೇ । ಚಾಲತೇ ಕೀ ರಾಹಿಲೇ । ಜಾಗತೇ ಕೀ ನಿಜಲೇ । ಹೇ ಸ್ಮರಣ ಠೇಲೇ ದೇಹಾಚೇ ॥೬೯೬॥ ಹೇ ಧಾಲೇ ಕೀ ಭುಕೇಲೇ । ಹಿಂವತೀ ಕೀ ತಾಪಲೇ । ಪ್ಯಾಲೇ ಕೀ ತಾನ್ಹಲೇ । ರಾಹಿಲೇ ಉಗಲೇ ಸ್ಮರೇನಾ ತೋ ॥೬೯೭॥ ಹೇ ಯೇಥೇ ಕೀ ತೇಥೇ । ಮುಕೇ ಕೀ ಬೋಲತೇ । ಹೋತೇ ಕೀ ನವ್ಹತೇ । ಸ್ಮರಣಸಹಿತೇ ಸ್ಮರೇನಾ ತೋ ॥೬೯೮॥ ಹೇ ಓವಳೇ ಕೀ ಸೋವಳೇ । ಚೋಖಟ ಕೀ ಮೈಳೇ । ಡೋಳಸ ಕೀ ಆಂಧಳೇ । ಅಂಗೀ ಪಾಂಗುಳಲೇ ಸ್ಮರೇನಾ ತೋ ॥೬೯೯॥ ಹೇ ಆಲೇ ಕೀ ಗೇಲೇ । ಹೋತೇ ಕೀ ಕೇಲೇ । ಜಾಹಲೇ ಕೀ ಮೇಲೇ । ತಟಸ್ಥ ರಾಹಿಲೇ ಸ್ಮರೇನಾ ತೋ ॥೭೦೦॥ ಹೇ ಬಾಳ ಕೀ ಪ್ರೌಢ । ಮೋಠೇ ಕೀ ರೋಡ । ಹಳೂ ಕೀ ಜಡ । ಕಾಂಹೀ ಸದೃಢ ಸ್ಮರೇನಾ ತೋ ॥೭೦೧॥ ಹೇ ಖಾಟೇ ಕೀ ಭುಯಿೀ । ಠಾಯಿೀ ಕೀ ಕುಠಾಯಿೀ । ಆಹೇ ಕೀ ನಾಹೀ । ಹೇಹೀ ಪಾಹೀ ಸ್ಮರೇನಾ ತೋ ॥೭೦೨॥ ಹೇ ಮಂತ್ರೀ ಕೀ ತಂತ್ರೀ । ತೀರ್ಥೀ ಕೀ ಕ್ಷೇತ್ರೀ । ವಿಷ್ಠೀ ಕೀ ಮೂತ್ರೀ । ಆಹೇ ಪವಿತ್ರೀ ಸ್ಮರೇನಾ ತೋ ॥೭೦೩॥ ಜನೀ ಕೀ ವನೀ । ಅಥವಾ ನಿರಂಜನೀ । ಜಪೀ ಕೀ ಧ್ಯಾನೀ । ಹೇಹೀ ಮನೀ ಸ್ಮರೇನಾ ತೋ ॥೭೦೪॥ ಹೇ ಸುಜನೀ ಕೀ ದುರ್ಜನೀ । ಬಂದೀ ಕೀ ವಿಮಾನೀ । ಮಂದಿರೀ ಕೀ ಮಸಣೀ । ಪಾಹತೀ ಕೋಣೀ ಸ್ಮರೇನಾ ತೋ ॥೭೦೫॥ ಹೇ ಗಜೀ ಕೀ ತುರಂಗೀ । ಕೀ ಅಂಗನಾಸಂಭೋಗೀ । ಖರೀ ಕೀ ಉರಗೀ । ಅಂಗೀಚ್ಯಾ ಅಂಗೀ ಸ್ಮರೇನಾ ತೋ ॥೭೦೬॥ ಹೇ ಕಾಶೀ ಕೀ ಕೈಕಟೀ । ನರಕೀ ಕೀ ವೈಕುಂಠೀ । ಘರೀ ಕೀ ಕಪಾಟೀ । ರಾಹಿಲೇ ನೇಹಟೀ । ಸ್ಮರೇನಾ ತೋ ॥೭೦೭॥ ಹೇ ಪೂಜಿಲೇ ಕೀ ಗಾಂಜಿಲೇ । ಧರಿಲೇ ಕೀ ಮಾರಿಲೇ । ದೇಹಾಚೇ ಯೇಕಹೀ ಕೇಲೇ । ಅಥವಾ ಕಾಯ ಝಾಲೇ ಸ್ಮರೇನಾ ತೋ ॥೭೦೮॥ ಮೀ ಶೇಷಶಯನಾವರೀ । ಕೀ ಮಾತಂಗಾಚ್ಯಾ ಘರೀ । ಕೀ ಬೈಸಲೋ ಶೂಳಾವರೀ । ಹೇಹೀ ನ ಸ್ಮರೀ ಸಹಸಾ ತೋ ॥೭೦೯॥ ಐಶೀ ಜ್ಞಾತ್ಯಾಚೀ ನಿರಭಿಮಾನತಾ । ಮಾಝೇನಿ ನ ಸಾಂಗವೇ ತತ್ತ್ವತಾ । ಜೇ ಪಾವಲೇ ಮಾಝೀ ಸಾಯುಜ್ಯತಾ । ತ್ಯಾಂಚೀ ಕಥಾ ನ ಬೋಲವೇ ॥೭೧೦॥

ತದನಂತರ ತನ್ನ ಶರೀರವು ನಿಂತಿದೆಯೋ ಅಥವಾ ಕುಳಿತಿರುವುದೋ, ನಡೆಯುತ್ತಿದೆಯೋ ಅಥವಾ ಸ್ಥಿರವಾಗಿದೆಯೋ, ಜಾಗೃತವಾಗಿದೆಯೋ ಅಥವಾ ಮಲಗಿರುವುದೋ ಎಂಬ ಈ ಶರೀರದ ಸ್ಮರಣೆಯೇ ಇಲ್ಲದಾಗುವುದು ॥೬೯೬॥ ಇದು ತೃಪ್ತವಾಗಿದೆಯೋ ಅಥವಾ ಹಸಿದಿದೆ? ತಣ್ಣಗಾಗಿದೆಯೋ ಅಥವಾ ಬಿಸಿಯಾಗಿದೆ? ನೀರನ್ನು ಕುಡಿದಿರುವುದೋ ಅಥವಾ ನೀರಡಿಸಿದೆ? ಅಥವಾ ಸುಮ್ಮನೇ ಸ್ವಸ್ಥವಾಗಿದೆ ಎಂಬ ಸ್ಮರಣೆಯು ಇರುವುದಿಲ್ಲ ॥೬೯೭॥ ಇದು ಇಲ್ಲಿದೆಯೋ ಅಥವಾ ಅಲ್ಲಿದೆ? ಮೂಕವಾಗಿದೆಯೋ ಅಥವಾ ಮಾತನಾಡುವುದೋ, ಇದು ಇತ್ತೋ ಅಥವಾ ಇಲ್ಲವೋ? ಎಂಬ ಈ ನೆನಪೂ ಕೂಡ ಸ್ಮರಿಸುವುದಿಲ್ಲ ॥೬೯೮॥ ಇದು ಮೈಲಿಗೆಯೋ ಅಥವಾ ಮಡಿಯಾಗಿದೆ? ಇದು ಸ್ವಚ್ಛವಾಗಿದೆಯೋ ಅಥವಾ ಮಲಿನವಾಗಿದೆ? ಇದಕ್ಕೆ ಕಾಣುವುದೋ ಅಥವಾ ಕುರುಡವೋ, ಶರೀರದಿಂದ ಕುಂಟಾಗಿದೆಯೋ ಎಂಬ ಸ್ಮರಣೆಯು ಇರುವುದಿಲ್ಲ ॥೬೯೯॥ ಇದು ಬಂದಿತೋ ಅಥವಾ ಹೋಯಿತೋ, ಮೂಲದಲ್ಲಿ ಇತ್ತೋ, ಅಥವಾ ಇದ್ದಿಲ್ಲವೋ, ಇದು ಹುಟ್ಟಿತೋ ಅಥವಾ ಸತ್ತಿರುವುದೋ, ಇಲ್ಲವೇ ತಟಸ್ಥವಾಗಿದೆ? ಎಂಬ ಸ್ಮರಣೆಯು ಇರುವುದಿಲ್ಲ ॥೭೦೦॥ ಇವನು ಬಾಲಕನೋ ಅಥವಾ ಪ್ರೌಢನೋ? ಲಠ್ಠನೋ ಅಥವಾ ಕೃಶನೋ? ಭಾರರಹಿತನೋ ಅಥವಾ ಭಾರ ಉಳ್ಳವನೋ ಇದರ ಯಾವ ಸ್ಮರಣೆಯೂ ಇರುವುದಿಲ್ಲ ॥೭೦೧॥ ಇದು ಪಲಂಗದ ಮೇಲಿದೆಯೋ ಅಥವಾ ಭೂಮಿಯ ಮೇಲೆ? ಉತ್ತಮ ಸ್ಥಳದಲ್ಲಿದೆಯೋ ಅಥವಾ ಕೆಟ್ಟ ಸ್ಥಳದಲ್ಲಿದೆ? ಇದು ಇದೆಯೋ, ಇಲ್ಲವೋ? ಎಂಬುದು ಕೂಡ ಈತನಿಗೆ ಸ್ಮರಣೆಯು ಇರುವುದಿಲ್ಲ ॥೭೦೨॥ ಇದು ಮಂತ್ರದಲ್ಲಿದಿಯೋ ಅಥವಾ ತಂತ್ರದಲ್ಲಿದೆ? ತೀರ್ಥದಲ್ಲಿದೆಯೋ ಅಥವಾ ಕ್ಷೇತ್ರದಲ್ಲಿದೆ? ಇದು ಮಲದಲ್ಲಿದಿಯೋ ಅಥವಾ ಮೂತ್ರದಲ್ಲಿದೆ? ಇವುಗಳ ಯಾವ ಸ್ಮರಣೆಯೂ ಇರುವುದಿಲ್ಲ ॥೭೦೩॥ ಇದು ಜನರಲ್ಲಿದೆಯೋ ಅಥವಾ ವನದಲ್ಲಿದೆ? ಅಥವಾ ನಿರಂಜನಿಯೋ? ಜಪಿಯೋ? ಧ್ಯಾನಿಯೋ? ಇದು ಕೂಡ ಮನದಲ್ಲಿ ನೆನಪಾಗುವುದಿಲ್ಲ ॥೭೦೪॥ ಇದು ಸಜ್ಜನರಲ್ಲಿದೆಯೋ ಅಥವಾ ದುರ್ಜನರಲ್ಲಿದೆ? ಕಾರಾಗೃಹದಲ್ಲಿದೆಯೋ? ಅಥವಾ ವಿಮಾನದಲ್ಲಿದೆ? ಮಂದಿರದಲ್ಲಿದೆಯೋ ಅಥವಾ ಸ್ಮಶಾನದಲ್ಲಿದೆ? ಇದು ಯಾವುದೂ ಸ್ಮರಿಸುವುದಿಲ್ಲ ॥೭೦೫॥ ಇದು ಆನೆಯ ಮೇಲೆ ಇದೆಯೋ ಅಥವಾ ಕುದುರೆಯ ಮೇಲೆ ಇದೆ? ಸ್ತ್ರೀ ವಿಲಾಸದಲ್ಲಿದೆಯೋ ಅಥವಾ ಗಾರ್ದಭವಿಲಾಸದಲ್ಲಿದೆ? ಅಂಗದಲ್ಲಿ ಅಂಗವಿದೆ ಎಂಬ ಸ್ಮರಣೆಯೂ ಇರುವುದಿಲ್ಲ ॥೭೦೬॥ ಇದು ಕಾಶಿಯಲ್ಲಿದೆಯೋ ಅಥವಾ ಕೈಕಾಟ ದೇಶದಲ್ಲಿದೆ? ಇದು ವೈಕುಂಠದಲ್ಲಿದೆಯೋ ಅಥವಾ ನರಕದಲ್ಲಿದೆ? ಮನೆಯಲ್ಲಿದೆಯೋ ಅಥವಾ ಗಿರಿಕಂದರಗಳಲ್ಲಿದೆ? ಅಥವಾ ಏಕಾಂತದಲ್ಲಿ ಧ್ಯಾನಸ್ಥನಾಗಿರುವುದು ಇದು ಯಾವುದೂ ಆತನಿಗೆ ಸ್ಮರಿಸುವುದಿಲ್ಲ ॥೭೦೭॥ ಜನರು ಈತನಿಗೆ ಪೂಜಿಸಿದರೋ ಅಥವಾ ಬೈದರೋ? ಇಲ್ಲವೇ ಹಿಡಿದರೋ ಅಥವಾ ಹೊಡೆದರು? ಹೀಗೆ ಆತನ ದೇಹಕ್ಕೆ ಏನಾದರೂ ಕೂಡ ಆತನಿಗೆ ಅದರ ಸ್ಮರಣೆಯು ಇರುವುದಿಲ್ಲ ॥೭೦೮॥ ನಾನು ಶೇಷನ ಮೇಲೆ ಮಲಗಿರುವೆನೋ? ಅಥವಾ ಮಾದಿಗನ ಮನೆಯಲ್ಲಿ ಇರುವೆ? ನನಗೇನಾದರೂ ಶೂಲಕ್ಕೆ ಏರಿಸಿರುವರೆ? ಈ ಯಾವ ಒಂದೂ ಸಹ ಆತನಿಗೆ ಸ್ಮರಣೆಗೆ ಬರುವುದಿಲ್ಲ ॥೭೦೯॥ ಈ ಪ್ರಕಾರವಾಗಿ ಜ್ಞಾನಿ ಭಕ್ತರ ದೇಹದ ಮೇಲೆ ಆಸಕ್ತಿಯು ಇರುವುದಿಲ್ಲ. ಅವರ ಸಂಪೂರ್ಣ ವರ್ಣನೆಯನ್ನು ನನಗೆ ಮಾಡಲು ಬರುವುದಿಲ್ಲ. ಯಾರು ನನ್ನ ಸಾಯುಜ್ಯ ಅಂದರೆ ನನ್ನ ಸ್ವರೂಪಕ್ಕೆ ಪ್ರಾಪ್ತರಾಗಿರುವರೋ ಅವರ ಕಥೆಯನ್ನು ಹೇಳಲು ಶಕ್ಯವಿಲ್ಲ ॥೭೧೦॥

ಜೇಥ ವೇದಾ ಮೌನ ಪಡೇ । ಸ್ವರವರ್ಣೇಸೀ ವಾಚಾ ಬುಡೇ । ತ್ಯಾ ಸಂತಾಂಚೇ ಪವಾಡೇ । ಮಾಝೇನಿಹೀ ನಿವಾಡೇ ನ ಸಾಂಗವತೀ॥೬೧೧॥ ಐಕೋನಿ ಸಜ್ಞಾನಾಚೀ ಸ್ಥಿತೀ । ತುಮ್ಹಾಸೀ ಗಮೇಲ ಐಸೇ ಚಿತ್ತೀ । ಕೇವಳ ಜಡ ಮೂಢ ಝಾಲೀ ಪ್ರಾಪ್ತೀ । ಏಕಹೀ ಸ್ಫೂರ್ತೀ ಸ್ಫುರೇನಾ ॥೬೧೨॥ ಜೇವೀ ಕಾ ಕೇವಳ ಪಾಷಾಣ । ತೈಸೇ ಝಾಲೇ ಅಂತಃಕರಣ । ಏಕಹೀ ಸ್ಫುರೇನಾ ಸ್ಫುರಣ । ಜ್ಞಾ ತೇಪಣ ಘಡೇ ಕೈಸೇ ॥೬೧೩॥ ಐಶೀ ಧರಿಲ್ಯಾ ಆಶಂಕಾ । ತೇ ವಿಷಯೀ ಸಾವಧ ಐಕಾ । ಜ್ಞಾನ ಅಜ್ಞಾನೀಭೂಮಿಕಾ । ಅತರ್ಕ್ಯ ಲೋಕಾ ನಿಶ್ಚಿತ ॥೬೧೪॥ ಕೇವಳ ಜೇ ಶುದ್ಧ ಜ್ಞಾನ । ಆಣಿ ಜಡಮೂಢ ಅಜ್ಞಾನ । ದೋಹೀಂಚೀ ದಶಾ ಸಮಾನ । ತೇಥೀಲಹೀ ಖೂಣ ಮೀ ಜಾಣೇ ॥೬೧೫॥ ನಿಬಿಡ ದಾಟಲಾ ಅಂಧಕಾರೂ । ತ್ಯಾಮಾಜೀ ಕಾಜಳಾಚಾ ಡೋಂಗರೂ । ತೇಥ ಆಂಧಳಾ ಆಲಾ ವಿಭಾಗ ಕರೂ । ತೈಸಾ ವ್ಯವಹಾರೂ ಅಜ್ಞಾನಾ ॥೬೧೬॥ ಶೋಧಾವಯಾ ಅಧ್ಯಾತ್ಮಗ್ರಂಥ ಭಲೇ । ಅಂಧಮೂಕಾಹಾತೀ ದೀಧಲೇ । ತೇ ಐಕೇ ದೇಖೇ ನಾ ಬೋಲೇ । ತೈಸೇ ಜಡತ್ವೇ ಝಾಲೇ ಅಜ್ಞಾನ ॥೬೧೭॥ ಐಶೀ ಅಜ್ಞಾನಾಚೀ ಗತೀ । ಐಕಾ ಸಜ್ಞಾನಾಚೀ ಸ್ಥಿತೀ । ಅಪರೋಕ್ಷ ಸಾಕ್ಷಾತ್ಕಾರ ಪ್ರತೀತೀ । ದೇಹೀ ವರ್ತತೀ ವಿದೇಹತ್ವೇ ॥೬೧೮॥ ಜೇವೀ ಕಾ ರತ್ನೇ ಆಣಿ ಗಾರಾ । ದೋಹೀಂಚಾ ಸಾರಿಖಾ ಉಭಾರಾ । ಮೋಲ ವೇಂಚೂನಿ ನೇತೀ ಹಿರಾ । ಫುಕಟ ಗಾರಾ ನ ಘೇತೀ ॥೬೧೯॥ ಜೈಸೇ ಕಣ ಆಣಿ ಫಲಕಟ । ದೋಹೋಂಸೀ ವಾಢೀ ಏಕವಾಟ । ತೈಸೇ ಜ್ಞಾನಾಜ್ಞಾನ ನಿಕಟ । ದಿಸೇ ಸಮಸಕಟ ಸಾರಿಖೇ ॥೬೨೦॥ ಜೇವೀ ಕಾ ಖರೇ ಕುಡೇ ನಾಣೇ । ಪಾಹತಾ ದಿಸೇ ಸಾರಿಖೇಪಣೇ । ಖರೇ ಪಾರಖೋನಿ ಘೇತೀ ದೇಖಣೇ । ಮೂರ್ಖೀ ನಾಡಣೇ ತೇ ಠಾಯೀ ॥೬೨೧॥ ತೇವೀ ಜ್ಞಾನಾಜ್ಞಾನಾಚೀ ಪೇಠ । ಭೇಸಳಲೀ ದಿಸೇ ಏಕವಟ । ತೇಥ ಅಣುಭರೀ ಚುಕಲ್ಯಾ ವಾಟ । ಪಾಖಂಡ ಉದ್ಭಟ ಅಂಗೀ ವಾಜೇ ॥೬೨೨॥ ಯಾಲಾಗೀ ಮದ್ಭಕ್ತೀಪಾಶೀ ಆಲೇ । ಜೇ ಮಾಝ್ಯಾ ವಿಶ್ವಾಸಾ ಟೇಕಲೇ । ತ್ಯಾಂಸೀ ಮ್ಯಾ ನಿಜರೂಪ ಆಪುಲೇ । ಖರೇ ದೀಧಲೇ ಅತಿಶುದ್ಧ ॥೬೨೩॥

ಇಲ್ಲಿ ವೇದವೂ ಕೂಡ ಮೌನವಾಗುವುದು. ಸ್ವರ ವರ್ಣದೊಂದಿಗೆ ವಾಣಿಯು ಕುಂಠಿತವಾಗುವುದು. ಇಂತಹ ಸಂತರ ಮಹಿಮೆಯನ್ನು ನನ್ನಿಂದ ನಿರ್ಣಯ ಮಾಡಿ ಹೇಳಲು ಆಗುವುದಿಲ್ಲ ॥೬೧೧॥ ಈ ಪ್ರಕಾರದ ಜ್ಞಾನೀ ಜನರ ಸ್ಥಿತಿಯನ್ನು ಕೇಳಿ ನಿಮ್ಮ ಮನದಲ್ಲಿ ಹೀಗೆ ಮೂಡಬಹುದು; ನನ್ನ ಪ್ರಾಪ್ತಿಯಾಗುತ್ತಲೇ ಅವರು ಕೇವಲ ಜಡ,ಮೂಢರಾಗುವರು. ಇವರ ಹೃದಯದಲ್ಲಿ ಯಾವ ರೀತಿಯ ಸ್ಫೂರ್ತಿಯು ಸ್ಫುರಣವಾಗುವುದಿಲ್ಲ ॥೬೧೨॥ ಅವರ ಅಂತಃಕರಣವು ಕಲ್ಲಿನಂತೆ ಕೇವಲ ಜಡವಾಗಿ ಬಿಡುವುದು. ಅದರಲ್ಲಿ ಯಾವ ಸ್ಫೂರ್ತಿಯೂ ಹುಟ್ಟಲಾರದು. ಅಂದ ಮೇಲೆ ಜ್ಞಾನತ್ವವು ಹೇಗೆ ಹುಟ್ಟಬೇಕು? ॥೬೧೩॥ ಇಂತಹ ಶಂಕೆಯು ನಿಮ್ಮ ಮನದಲ್ಲಿ ಬಂದಿರಬಹುದು, ಅದರ ಉತ್ತರವನ್ನೂ ಹೇಳುವೆನು. ಅದನ್ನು ಲಕ್ಷಕೊಟ್ಟು ಕೇಳಿರಿ. ಜ್ಞಾನ ಮತ್ತು ಅಜ್ಞಾನ ಈ ಎರಡೂ ಅವಸ್ಥೆಗಳು ಸರ್ವ ಜನರಿಗೆ ನಿಶ್ಚಿತವಾಗಿ ಅತರ್ಕ್ಯವಾಗಿರುವುವು ॥೬೧೪॥ ಕೇವಲ ಶುದ್ಧವಾದ ಜ್ಞಾನವು ಮತ್ತು ಜಡ,ಮೂಢ ಅಜ್ಞಾನವು ಈ ಎರಡೂ ಅವಸ್ಥೆಗಳು ನೋಡಲು ಸಮಾನವಾಗಿ ಕಂಡರೂ ಅದರಲ್ಲಿನ ಚಿನ್ಹೆಯನ್ನು ನಾನು ತಿಳಿಯುವೆನು ॥೬೧೫॥ ಅತಿಶಯವಾಗಿ ದಟ್ಟವಾಗಿ ಹರಡಿರುವ ಕತ್ತಲಿನಲ್ಲಿ ಕಪ್ಪು ಕಾಡಿಗೆಯಂತಹ ಪರ್ವತವಿರಬೇಕು. ಅದರ ವಿಭಾಗವನ್ನು ಮಾಡಲು ಕುರುಡ ಮನುಷ್ಯನು ಹೋದರೆ ಹೇಗೋ, ಅದರಂತೆ ಈ ಅಜ್ಞಾನ ಜನರ ಸರ್ವ ವ್ಯಾಪಾರಗಳು ಆಗುತ್ತಿರುವುವು ॥೬೧೬॥ ಆಧ್ಯಾತ್ಮಿಕ ಶಾಸ್ತ್ರಗಳ ದೊಡ್ಡ ದೊಡ್ಡ ಗ್ರಂಥಗಳನ್ನು ಕುರುಡ ಮತ್ತು ಮೂಕ ಮನುಷ್ಯನಿಗೆ ಅವುಗಳನ್ನು ಶುದ್ಧಗೊಳಿಸಲು ತಂದುಕೊಟ್ಟರೆ, ಆತನಿಗೆ ಕೇಳಿಸುವುದಿಲ್ಲ, ಮಾತನಾಡಲು ಬರುವುದಿಲ್ಲ ಮತ್ತು ನೋಡಲೂ ಸಹ ಬರುವುದಿಲ್ಲ. ಅದರಂತೆ ಜಡತ್ವದಿಂದ ಅಜ್ಞಾನೀ ಜನರ ಸ್ಥಿತಿಯಾಗಿರುವುದು ॥೬೧೭॥ ಹೀಗಿರುವ ಅಜ್ಞಾನಿ ಜನರ ಅವಸ್ಥೆಯನ್ನು ವರ್ಣಿಸಿರುವೆನು, ಈಗ ಜ್ಞಾನೀ ಜನರ ಸ್ಥಿತಿಯನ್ನು ಹೇಳುವೆನು ಅದನ್ನು ಕೇಳಿರಿ. ಇವರಿಗೆ ಆತ್ಮಜ್ಞಾನದ ಸಾಕ್ಷಾತ್ಕಾರವು ಪ್ರಾಪ್ತವಾಗಿರುವುದರಿಂದ ಅವರು ದೇಹದಲ್ಲಿದ್ದರೂ ಕೂಡ ವಿರಾಗೀಯಾಗಿರುವರು, ವಿದೇಹತ್ವದಿಂದ ಕರ್ಮಗಳನ್ನು ಮಾಡುತ್ತಿರುವರು ॥೬೧೮॥ ವಜ್ರ ಮತ್ತು ಬೆಂಚು ಹರಳು ಇವು ನೋಡಲು ಒಂದೇಯಾಗಿರುವುವು. ಆದರೆ ವಜ್ರವನ್ನು ಹೇರಳವಾಗಿ ಧನವನ್ನು ಕೊಟ್ಟು ಖರೀದಿಸುವರು. ಆದರೆ ಆ ಬೆಂಚುಹರಳನ್ನು ಮಾತ್ರ ಯಾರೂ ಪುಕ್ಕಟೆಯಾಗಿಯೂ ತೆಗೆದುಕೊಳ್ಳುವುದಿಲ್ಲ ॥೬೧೯॥ ಯಾವ ಪ್ರಕಾರವಾಗಿ ಧಾನ್ಯಗಳು ಮತ್ತು ಅವುಗಳ ಸಿಪ್ಪೆ ಇವು ಕೂಡಿಯೇ ಬೆಳೆಯುವುವೋ, ಅದರಂತೆ ಜ್ಞಾನ ಮತ್ತು ಅಜ್ಞಾನವು ಇವು ಎರಡೂ ಅಗದೀ ಸಮೀಪವಾಗಿಯೇ ಇರುವುದರಿಂದ ಈ ಎರಡೂ ಒಂದೇಯಾಗಿ ಕಾಣುವುವು ॥೬೨೦॥ ಯಾವ ಪ್ರಕಾರವಾಗಿ ನಿಜ ಮತ್ತು ಖೊಟ್ಟಿ ನಾಣ್ಯಗಳು ನೋಡಲು ಸಮಾನವಾಗಿ ಕಾಣುವುವು. ತಿಳಿದ ಜನರು ಅವುಗಳಲ್ಲಿ ನಿಜವಾದ ನಾಣ್ಯಗಳನ್ನು ಪರೀಕ್ಷಿಸಿ ಪಡೆಯುವರು. ಆದರೆ ಅಜ್ಞಾನೀ ಜನರು ತಿಳಿಯದೇ ಖೊಟ್ಟಿ ನಾಣ್ಯವನ್ನು ಸ್ವೀಕರಿಸಿ ಮೋಸಕ್ಕೆ ಹೋಗುವರು ॥೬೨೧॥ ಇದೇ ರೀತಿಯಾಗಿ ಜ್ಞಾನದ ಮತ್ತು ಅಜ್ಞಾನದ ಬಜಾರವು ಏಕತ್ರವಾಗಿರುವುದು. ಅವುಗಳಲ್ಲಿ ಸ್ವಲ್ಪಾದರೂ ರಸ್ತೆಯು ತಪ್ಪಿದರೆ ಸಾಕು, ಮೈಮೇಲೆ ಭಯಂಕರವಾದ ಪಾಖಂಡವು ಬೀಳುವುದು ॥೬೨೨॥ ಆದಕಾರಣ ಯಾರು ನನ್ನ ಭಕ್ತಿಯಲ್ಲಿ ಕೂಡಿಕೊಳ್ಳುವವರು ನನ್ನ ಮೇಲಿನ ದೃಢವಾದ ಶ್ರದ್ಧೆಯಿಂದ ಅಲ್ಲಿ ಸ್ಥಿರರಾಗುವರು. ಅವರಿಗೆ ನಾನು ನನ್ನ ಅತಿನಿರ್ಮಳವಾದ ಆತ್ಮಸ್ವರೂಪವನ್ನು ಪ್ರಾಪ್ತಮಾಡಿಕೊಡುವೆನು ॥೬೨೩॥

ಮಾಝ್ಯಾ ನಾಮವಿಶ್ವಾಸಾಸಾಠೀ । ಪ್ರಹ್ಲಾದ ದ್ವಂದೇ ಪಾಯೇ ಪಿಟೀ । ನ ಘೇತಾ ಮುಕ್ತೀ ಲಾಗೇ ಪಾಠೀ। ವಿಶ್ವಾಸೇ ಭೇಟೀ ಮಾಝ್ಯಾ ರೂಪೀ ॥೬೨೪॥ ಪಾವೋನಿ ಮಾಝ್ಯಾ ನಿಜಸ್ವರೂಪಾಸೀ । ತೇಚಿ ತೇ ಝಾಲೇ ಮದ್ಭಾವೇಸೀ । ಜೇವೀ ಲವಣ ಮೀನಲ್ಯಾ ಜಳಾಸೀ । ಲವಣಪಣಾಸೀ ಮೂಕಲೇ ॥೬೨೫॥ ತೇಥ ಮೀ ಏಕ ಲವಣ । ಹೇಹೀ ವಿರಾಲೀ ಆಠವಣ । ಸ್ವಯೇ ಸಮುದ್ರ ಝಾಲೇ ಜಾಣ । ತೇವೀ ಸಜ್ಞಾನ ಮದ್ರೂಪೇ ॥೬೨೬॥ ಐಸೇ ಪಾವೋನಿ ಮಾಝ್ಯಾ ಸ್ವರೂಪಾಸೀ । ವಿಸರಲೇ ದೇಹಅಭಿಮಾನಾಸೀ । ಝಾಲೇ ಚೈತನ್ಯಘನ ಸರ್ವಾಂಶೀ। ಆನಂದಸಮರಸೀ ನಿಮಗ್ನ ॥೬೨೭॥ ಜೇವೀ ದೋರೀ ಸರ್ಪೂ ಉಪಜಲಾ । ನಾಂದೋನಿ ಸ್ವಯೇ ನಿಮಾಲಾ। ತೋ ದೋರೇ ನಾಹೀ ದೇಖಿಲಾ । ತೈಸಾ ಝಾಲಾ ದೇಹಭಾವೋ ಮುಕ್ತಾ ॥೬೨೮॥ ತೇಂವ್ಹಾ ಮೀ ತೂ ಹೇ ಆಠವಣ । ಆಠವಿತೇ ಆಹೇ ಕೋಣ । ವಿಸರೋನಿ ಗೇಲೇ ಅಂತಃಕರಣ । ಆಪಣ್ಯಾ ಆಪಣ ವಿಸರಲಾ ॥೬೨೯॥ ತೇಥ ಕೈಚಾ ಸ್ವರ್ಗ ಕೈಚಾ ನರಕ । ಕೈಚೇ ಚೋಖ ಕೈಚೇ ವೋಖ । ಕೈಚೇ ಚತುರ್ದಶ ಲೋಕ । ಬ್ರಹ್ಮ ಏಕ ಏಕಲೇ ॥೬೩೦॥ ಕೈಚೇ ಪವಿತ್ರ ಕೈಚೇ ಅಪವಿತ್ರ । ಕೈಚೇ ತೀರ್ಥ ಕೈಚೇ ಕ್ಷೇತ್ರ । ಕೈಚಾ ವೇದೂ ಕೈಚೇ ಶಾಸ್ತ್ರ । ಬ್ರಹ್ಮ ಸ್ವತಂತ್ರ ಅದ್ವಯ ॥೬೩೧॥ ತೇಥ ಕೈಚಾ ಉತ್ಪತ್ತಿ ವಿನಾಶೂ । ಕೈಚಾ ವೈಕುಂಠ ಕೈಲಾಸೂ । ಕೈಚಾ ಬ್ರಹ್ಮಾ ವಿಷ್ಣು ಮಹೇಶೂ । ಏಕ ಅವಿನಾಶೂ ಉರಲಾಸೇ ॥೬೩೨॥ ತೇಥ ಕೈಚಾ ಬೋಧೂ ಕೈಚೇ ಬುದ್ಧೀ । ದೇವಪಣ ಬುಡಾಲೇ ತ್ರಿಶುದ್ಧೀ । ಲಾಜಾ ನಿಮಾಲೀ ಮೋಕ್ಷಸಿದ್ಧೀ । ಕೈಚಾ ಕ್ಷೀರಾಬ್ಧಿಶೇಷಶಾಯೀ ॥೬೩೩॥ ತೇಥ ಮಾಝೀಹೀ ಭಗವಂತತಾ । ಹಾರಪೋನಿ ಜಾಯ ತತ್ತ್ವತಾ । ಪ್ರಣವಾಚಾ ಬುಡಾಲಾ ಮಾಥಾ । ಐಶೀ ಸಾಯುಜ್ಯತಾ ಪಾವಲೇ ॥೬೩೪॥ ಯಾಲಾಗೀ ದೇಹಾಚೇ ಕೇಲೇ ಠೇಲೇ । ಅಥವಾ ಆಲೇ ಕಾ ಗೇಲೇ । ಹೇ ಸ್ಫುರೇನಾ ಜೇ ಬೋಲಿಲೇ। ತೇ ವಿಶದ ಕೇಲೇ ಯಾ ರೀತೀ ॥೬೩೫॥ ಅವಿದ್ಯಾ ಕಾರಣ ದೇಹ ಕಾರ್ಯ । ತೇ ಅವಿದ್ಯಾ ನಾಸೋನಿ ಜಾಯೇ। ಕಾರಣ ನಾಸಲ್ಯಾ ಕಾರ್ಯ ರಾಹೇ । ಹೇ ನ ಘಡೇ ಪಾಹೇ ಮ್ಹಣಾಲ ॥೬೩೬॥ ವೃಕ್ಷ ಸಮೂಳೀ ಉಪಡಿಲಾ ಜಾಯೇ । ಸಾರ್ದ್ರತಾ ತತ್ಕಾಳ ನ ಜಾಯೇ । ಪತ್ರ ಪುಷ್ಪಿ ಫಳ ಸಾರ್ದ್ರ ರಾಹೇ । ಶುಷ್ಕ ಹೋಯೇ ಅತಿಕಾಳೇ ॥೬೩೭॥

ಪ್ರಹ್ಲಾದನು ಸತತವಾಗಿ ನನ್ನ ನಾಮಸ್ಮರಣೆಯನ್ನು ಮಾಡಿದನು. ತನ್ನ ಹೃದಯದಲ್ಲಿನ ದ್ವಂದ್ವವನ್ನು ನಾಶಗೊಳಿಸಿದನು. ಆದ್ದರಿಂದ ಆತನ ಇಚ್ಛೆಯು ಇಲ್ಲದಿದ್ದರೂ ಮುಕ್ತಿಯು ಆತನ ಬೆನ್ನು ಹತ್ತಿತು. ದೃಢವಾದ ಶ್ರದ್ಧೆಯಿಂದ ಆತನಿಗೆ ನನ್ನ ಸ್ವರೂಪದ ಪ್ರಾಪ್ತಿಯಾಯಿತು ॥೬೨೪॥ ಯಾವ ಪ್ರಕಾರವಾಗಿ ಲವಣವು ನೀರಿನಲ್ಲಿ ಏಕರೂಪವಾಯಿತೆಂದರೆ ಆಗ ಲವಣದ ಸ್ವರೂಪವು ಹೇಗೆ ಇಲ್ಲದಾಗುವುದೋ, ಅದರಂತೆ ನನ್ನ ಸ್ವರೂಪಕ್ಕೆ ಪ್ರಾಪ್ತರಾಗಿ ಭಕ್ತರು ನನ್ನಲ್ಲಿ ಏಕರೂಪರಾಗುವರು ॥೬೨೫॥ ನೀರಿನಲ್ಲಿ ಕರಗಿರುವ ಲವಣಕ್ಕೆ ನಾನು ಲವಣನಾಗಿರುವೆ ಎಂಬ ಈ ಸ್ಮರಣೆಯೂ ಕೂಡ ಉಳಿಯುವುದಿಲ್ಲ. ಅದು ಸ್ವತಃ ಸಮುದ್ರರೂಪವಾಗುವುದು. ಅದರಂತೆ ಜ್ಞಾನೀ ಭಕ್ತನು ನನ್ನ ಸ್ವರೂಪದಲ್ಲಿ ಏಕರೂಪನಾಗುವನು ॥೬೨೬॥ ಈ ಪ್ರಕಾರವಾಗಿನನ್ನ ಸ್ವರೂಪಕ್ಕೆ ಪ್ರಾಪ್ತರಾಗಿ ಭಕ್ತರು ಈ ಯಾವ ಸರ್ವ ಪ್ರಕಾರದ ದೇಹಾಭಿಮಾನವನ್ನು ಮರೆತುಬಿಡುವರು ಮತ್ತು ಸರ್ವ ಪ್ರಕಾರದಿಂದ ಚೈತನ್ಯರೂಪರಾಗಿ ಸಚ್ಚಿದಾನಂದ ತತ್ವದಲ್ಲಿ ತಲ್ಲೀನರಾಗಿಬಿಡುವರು ॥೬೨೭॥ ಯಾವ ಪ್ರಕಾರವಾಗಿ ಹಗ್ಗದಲ್ಲಿ ಭಾಸವಾದ ಸರ್ಪವು ಉತ್ಪನ್ನವಾಗುವುದು ಮತ್ತು ತಾನೇ ಇಲ್ಲದಂತಾಗುವುದು. ಹಗ್ಗವು ಆ ಸರ್ಪವನ್ನು ಕಂಡಿರುವುದಿಲ್ಲ. ಅದರಂತೆ ಮುಕ್ತರಿಗೆ ದೇಹಭಾವವು ಭಾಸವಾಗುವುದೇ ಇಲ್ಲ ॥೬೨೮॥ ಆಗ ಅಲ್ಲಿ ನಾನು ಮತ್ತು ನೀನು ಎಂಬ ಈ ಸ್ಮರಣೆಯಾದರೂ ಯಾರಿಗೆ ಆಗಬೇಕು? ಅಂತಃಕರಣವನ್ನು ಮರೆತನು ಮತ್ತು ಆತನು ತನ್ನನ್ನು ತಾನೇ ಮರೆತುಬಿಟ್ಟಿರುವನು ॥೬೨೯॥ ಆಗ ಆತನಿಗೆ ಎಂತಹ ಸ್ವರ್ಗ ಮತ್ತು ನರಕವು ಎಂತಹದ್ದು? ಒಳ್ಳೆಯದು ಯಾವುದು ಮತ್ತು ಯಾವುದು ಕೆಟ್ಟದ್ದು? ಹದಿನಾಲ್ಕು ಭುವನಗಳು ಇವು ಎಲ್ಲಿಯವು? ಸರ್ವತ್ರವೂ ಕೇವಲ ಒಂದೇ ಬ್ರಹ್ಮವು ಇರುವುದು ॥೬೩೦॥ ಪವಿತ್ರ ಯಾವುದು ಮತ್ತು ಯಾವುದು ಅಪವಿತ್ರ? ತೀರ್ಥ ಯಾವುದು ಮತ್ತು ಯಾವುದು ಕ್ಷೇತ್ರ? ವೇದ ಯಾವುದು ಮತ್ತು ಯಾವುದು ಶಾಸ್ತ್ರ? ಬ್ರಹ್ಮವು ಸ್ವತಂತ್ರ ಹಾಗೂ ಅದ್ಭುತವಾಗಿರುವುದು ॥೬೩೧॥ ಅಲ್ಲಿ ಉತ್ಪತ್ತಿ ಎಲ್ಲಿಯದು ಮತ್ತು ವಿನಾಶವು ಯಾರದು? ಬ್ರಹ್ಮ, ವಿಷ್ಣು ಮತ್ತು ಮಹೇಶರು ಇವರಾರು? ಒಂದು ಅವಿನಾಶ ಬ್ರಹ್ಮವು ಮಾತ್ರ ಉಳಿದುಕೊಳ್ಳುವುದು ॥೬೩೨॥ ಅಲ್ಲಿ ಯಾರ ಬೋಧವು ಎಂತಹ ಬುದ್ಧಿಯು? ಅಲ್ಲಿ ದೇವತ್ವವೂ ಕೂಡ ನಿಜವಾಗಿಯೂ ಇಲ್ಲದಾಗುವುದು. ಮೋಕ್ಷಸಿದ್ಧಿಗಳು ಇವು ನಾಚಿಕೆಪಟ್ಟು ಇಲ್ಲದಾಗುವುವು. ಅಲ್ಲಿ ಕ್ಷೀರಸಾಗರದಲ್ಲಿನ ಶೇಷಶಾಯಿಯು ಎಲ್ಲಿಯಾತನು? ॥೬೩೩॥ ಅಲ್ಲಿ ನನ್ನ ಭಗವಂತತನವೂ ಕೂಡ ಇಲ್ಲದಾಗುವುದು. ಓಂಕಾರದ ಮಸ್ತಕವು ಅಲ್ಲಿ ಮುಳುಗಿ ಹೋಗುವುದು. ಇಂತಹ ಸಾಯುಜ್ಯ ಮುಕ್ತಿಗೆ ಅವರು ಪ್ರಾಪ್ತರಾಗುವರು ॥೬೩೪॥ ಆದ್ದರಿಂದ ದೇಹವು ಇದೆಯೋ, ಇಲ್ಲವೋ ಎಂಬ ಭಾನವು ಇರುವುದಿಲ್ಲ. ಹೀಗಿರುವುದನ್ನು ನಾನು ವಿಸ್ತರಿಸಿ ಹೇಳಿದೆನು ॥೬೩೫॥ ಅವಿದ್ಯೆಯು ಕಾರಣವಾಗಿದೆ ಮತ್ತು ದೇಹವು ಅದರ ಕಾರ್ಯವಾಗಿದೆ. ಈ ಅವಿದ್ಯೆಯು ಇಲ್ಲದಾಗಿ ಹೋಗಲು ಆಗ ಅದರ ಕಾರ್ಯವಾದರೂ ಹೇಗೆ ಉಳಿಯಬೇಕು? ಹೀಗೆ ನೀವು ಹೇಳಬಹುದು ॥೬೩೬॥ ವೃಕ್ಷವನ್ನು ಬೇರೆ ಸಮೇತವಾಗಿ ಕಿತ್ತಿ ಒಗೆಯಲು ಆಗ ಅದರ ಹಸಿಯು ಕೂಡಲೇ ಇಲ್ಲದಾಗುವುದಿಲ್ಲ. ಅದರ ಎಲೆಗಳು ಹೂವುಗಳು, ಫಲಗಳು ಕೆಲವು ಕಾಲ ಹಾಗೆಯೇ ಹಸಿಯಾಗಿಯೇ ಇರುವುವು. ಇವು ಒಣಗಿ ಹೋಗಲು ಬಹಳ ವೇಳೆ ಬೇಕಾಗುವುದು ॥೬೩೭॥

ತೇವೀ ಅವಿದ್ಯಾ ನಾಸೋನಿ ಜಾಯೇ । ಭೋಗಾನುರೂಪ ದೈವ ಜೇ ರಾಹೇ । ತೇಣೇ ಜ್ಞಾತಾ ವರ್ತತಾಹೇ । ನಿಜದೇಹೀ ಪಾಹೇ ವಿದೇಹತ್ವೇ ॥೯೩೮॥ ಮ್ಹಣಾಲ ವಾಢವಿತಾ ವಾಡೇಕೋಡೇ । ಪ್ರತಿಪಾಳಿತಾ ಸುರವಾಡೇ । ರಾಖಿತರಾಖಿತಾ ದೇಹ ಪಡೇ । ಪ್ರತ್ಯಕ್ಷ ರೋಕಡೇ ದಿಸತಾಹೇ ॥೯೩೯॥ ಜ್ಯಾಚೇ ದೇಹ ತ್ಯಾಸೀ ದೃಢ ನವ್ಹೇ । ತರೀ ತೇ ತತ್ಕಾಳಚಿ ಪಡಾವೇ । ವಾಂಚಲೇ ಅಸೇ ಕೋಣೇ ಭಾವೇ । ಐಸೇ ಕಾಂಹೀ ಜೀವೇ ಕಲ್ಪಾಲ ॥೯೪೦॥ ಜ್ಯಾಚೇ ದೇಹ ತೋ ನ ಪುಸೇ ತ್ಯಾತೇ । ತರೀ ತೇ ದೇಹ ಕೇವೀ ಕರ್ಮಿ ವರ್ತೇ । ಐಶೀ ಆಶಂಕಾ ತುಮ್ಹಾತೇ । ಐಕಾ ಸಾವಚಿತ್ತೇ ಸಾಂಗೇನ ॥೯೪೧॥ ದೇಹಾಚೇ ಉತ್ಪತ್ತಿಸ್ಥಿತಿನಿದಾನ । ಪುರುಷಾಸೀ ವಶ್ಯ ನವ್ಹೇ ಜಾಣ । ತ್ಯಾಸೀ ಅದೃಷ್ಟಚಿ ಪ್ರಮಾಣ । ದೈವಯೋಗೇ ಚಳಣ ದೇಹಾಚೇ ॥೯೪೨॥ ಉಠಣೇ ಕಾ ಬೈಸಣೇ । ತೇ ದೇಹಾಸೀ ದೈವಗುಣೇ । ಅದೃಷ್ಟಗತೀ ದೇಣೇ ಘೇಣೇ । ಖಾಣೇ ಜೇವಣೇ ಅದೃಷ್ಟೇ ॥೯೪೩॥ ಸ್ವದೇಶೀ ಕಾ ಪರದೇಶೀ । ಅದೃಷ್ಟ ನೇತಸೇ ದೇಹಾಸೀ । ಸ್ವರ್ಗ ನರಕಭೋಗಾಸೀ। ಅದೃಷ್ಟ ದೇಹಾಸೀ ಉಪಜವೀ ॥೯೪೪॥ ಯಶಲಾಭ ಹಾನಿ ಮೃತ್ಯು । ದೇಹಾಸೀ ಅದೃಷ್ಟೇ ಅಸೇ ಹೋತೂ । ಜ್ಞಾತಾ ದೇಹಾಸೀ ಅಲಿಪ್ತೂ । ಜೈಸಾ ಘಟಾಂತು ಚಂದ್ರಮಾ ॥೯೪೫॥ ಜೈಶೀ ಛಾಯಾ ಪುರುಷಾಸರಸೀ । ತೈಶೀ ಕಾಯಾ ಸಜ್ಞಾನಾಸೀ । ತೇ ರಾಹಿಲೀ ಅದೃಷ್ಟಾಪಾಶೀ । ನಿಜಕರ್ಮಾಸೀ ಭೋಗಾವಯಾ ॥೯೪೬॥ ಜನ್ಮೋನಿ ಛಾಯಾ ಸರಸೀ ವಾಢೇ । ಮಾಝೀ ಐಸಿ ಅಹಂತಾ ನ ಚಢೇ । ತೈಸೇಚ ದೇಹ ಜ್ಞಾತ್ಯಾಕಡೇ । ಮ್ಹಿ ಮ್ಹಣೋನಿ ಪುಢೇ ಯೇವೋ ನ ಶಕೇ ॥೯೪೭॥ ಸದಾ ಛಾಯಾ ಸರಸೀ ಅಸೇ । ಪರೀ ಕೋಠೇ ಅಸೇ ಕೋಠೇ ನಸೇ । ಹೇ ಜ್ಯಾಚೀ ತೋ ನ ಪುಸೇ । ದೇಹಾಚೇ ತೈಸೇ ವರ್ತನ ಝಾಲೇ ॥೯೪೮॥ ಛಾಯಾ ವಿಷ್ಠೇವರೀ ಪಡೇ । ಕಾ ಪಾಲಖೀಮಾಜೀ ಚಢೇ । ಪುರುಷಾಸೀ ಸುಖದುಃಖ ನ ಜೋಡೇ । ಜ್ಞಾತ್ಯಾಸೀ ತೇಣೇ ಪಾಡೇ ದೇಹಭೋಗ ॥೯೪೯॥ ಯೇಥವರೀ ನಿಜದೇಹಾಸೀ । ಕೈಸೇನ ವಿಸರ ಪಡಿಲಾ ತ್ಯಾಸೀ । ಐಕ ತ್ಯಾಹೀ ಅಭಿಪ್ರಾಯಾಸೀ । ದೃಷ್ಟಾಂತೇಸೀ ಸಾಂಗೇನ ॥೯೫೦॥

ಅದರಂತೆ ಈ ಅವಿದ್ಯೆಯು ನಿವೃತ್ತಿಯಾದರೂ ಕೂಡ ಭೋಗಗಳನ್ನು ಕೊಡುವ ಪ್ರಾರಬ್ಧ ಕರ್ಮವು ಉಳಿದುಕೊಂಡಿರುವುದು. ಆದ್ದರಿಂದ ಜ್ಞಾನಿಯು ಈ ಕಾರಣವಾಗಿ ತನ್ನ ದೇಹದಲ್ಲಿನ ದೇಹಾಭಿಮಾನವನ್ನು ಬಿಟ್ಟು ವರ್ತಿಸುತ್ತಿರುವನು ॥೯೩೮॥ ಈಗ ನೀವು ಹೀಗೆ ಹೇಳಬಹುದು, ಜನರು ತಮ್ಮ ದೇಹಗಳನ್ನು ಅತಿಶಯ ಪ್ರೇಮದಿಂದ ಬೆಳೆಸುತ್ತಿರುವರು. ಅತ್ಯಂತ ಕೌತುಕದಿಂದ ಅದರ ಪಾಲನೆ ಪೋಷಣೆಯನ್ನು ಮಾಡುತ್ತಿರುವರು, ಸತತವಾಗಿ ಅದರ ಸಂರಕ್ಷಣೆಯನ್ನು ಮಾಡುತ್ತಿರುವರು. ಹೀಗಿದ್ದರೂ ಆ ದೇಹವು ಬಿದ್ದು ಹೋಗುವದು ಪ್ರತ್ಯಕ್ಷವಾಗಿ ಕಾಣವುದು ॥೯೩೯॥ ಈಗ ಜ್ಞಾನಿಯ ದೇಹವು ಆತನ ಸ್ವಾಧೀನದಲ್ಲಿಯೇ ಇಲ್ಲದಿರಲು ತತ್ಕಾಲದಲ್ಲಿಯೇ ಬಿದ್ದು ಹೋಗಬೇಕಾಗಿತ್ತು. ಆದರೆ ಅವರು ಬದುಕಿರುವರಲ್ಲ? ಎಂದು ನಿಮಗೆ ಸಂಶಯವು ಮೂಡಬಹುದು ॥೯೪೦॥ ಸ್ವತಃ ತನ್ನ ದೇಹಕ್ಕೆ ಆತನೇ ಕೇಳುವುದಿಲ್ಲ. ಅಂದಮೇಲೆ ಕರ್ಮಗಳನ್ನಾದರೂ ಏಕೆ ಮಾಡಬೇಕು? ಹೀಗೆ ನಿಮ್ಮ ಮನದಲ್ಲಿ ಶಂಕೆ ಇದ್ದರೆ ಅದರ ಉತ್ತರವನ್ನೂ ಕೂಡ ಈಗ ಹೇಳುವೆನು ಲಕ್ಷ ಕೊಟ್ಟು ಶ್ರವಣವನ್ನು ಮಾಡಿರಿ ॥೯೪೧॥ ದೇಹದ ಉತ್ಪತ್ತೀ, ಸ್ಥಿತೀ ಮತ್ತು ಲಯ ಇವು ಯಾವ ಪುರುಷನ ಸ್ವಾಧೀನವಾಗಿರುವುದಿಲ್ಲ. ಅದಕ್ಕೆ ಅದೃಷ್ಟವೇ ಪ್ರಮಾಣವಾಗಿರುವುದು. ಪೂರ್ವ ಕರ್ಮದಲ್ಲಿನ ಪ್ರಾರಬ್ಧದಂತೆ ದೇಹದ ವ್ಯಾಪಾರವು ಆಗುತ್ತಿರುವುದು ॥೯೪೨॥ ದೈವಗುಣದಿಂದಲೇ ದೇಹದ ಏಳುವಿಕೆ, ಕುಳಿತುಕೊಳ್ಳುವಿಕೆ, ಉಣ್ಣುವುದು, ಕುಡಿಯುವುದು ಈ ಎಲ್ಲವೂ ಆಗುತ್ತಿರುವುವು. ದೇಹದ ಯಾವತ್ತೂ ಕೊಡುವಿಕೆ, ತೆಗೆದುಕೊಳ್ಳುವಿಕೆ ಇವೂ ಕೂಡ ಪ್ರಾರಬ್ಧ ಕರ್ಮಾನುಸಾರವಾಗಿ ನಡೆಯುತ್ತಿರುವುವು ॥೯೪೩॥ ಪ್ರಾರಬ್ಧವೇ ದೇಹಕ್ಕೆ ಸ್ವದೇಶಕ್ಕೆ ಇಲ್ಲವೇ ಪರದೇಶಕ್ಕೆ ಒಯ್ಯುತ್ತಿರುವುದು. ಸ್ವರ್ಗದ ಅಥವಾ ನರಕದ ಭೋಗಗಳನ್ನು ಪ್ರಾರಬ್ಧವೇ ಭೋಗಿಸಲು ಹಚ್ಚುವುದು ॥೯೪೪॥ ಈ ದೇಹಕ್ಕೆ ಯಶ, ಲಾಭ, ಹಾನೀ, ಮೃತ್ಯು ಈ ಎಲ್ಲವೂ ಪ್ರಾರಬ್ಧಾನುಸಾರವಾಗಿಯೇ ಪ್ರಾಪ್ತವಾಗುತ್ತಿರುವುವು. ಘಟದಲ್ಲಿನ ಚಂದ್ರಬಿಂಬವು ಅದರ ನೀರಿನಲ್ಲಿ ಲಿಪ್ತವಾಗುವುದಿಲ್ಲ. ಹಾಗೆಯೇ ಜ್ಞಾನೀ ಭಕ್ತನು ಈ ಸರ್ವ ಪ್ರಕಾರದಿಂದಲೂ ಅಲಿಪ್ತನಾಗಿರುವನು ॥೯೪೫॥ ಮನುಷ್ಯನ ಜೊತೆಯಲ್ಲಿಯೇ ನೆರಳು ಇರುವಂತೆ ಜ್ಞಾನೀ ಮನುಷ್ಯನ ಜೊತೆಯಲ್ಲಿ ದೇಹವಿರುವುದು. ಅದು ಪ್ರಾರಬ್ಧಕರ್ಮಾನುಸಾರವಾಗಿ ತಮ್ಮ ಕರ್ಮಫಲಗಳನ್ನು ಭೋಗಿಸಲು ಉಳಿದುಕೊಂಡಿರುವುದು ॥೯೪೬॥ ಯಾವ ಈ ನೆರಳು ತನ್ನಿಂದಲೇ ಉತ್ಪನ್ನವಾಗಿರುವುದು ಮತ್ತು ತನ್ನ ಸನ್ನಿಧಿಯಲ್ಲಿಯೇ ಬೆಳೆಯುತ್ತಿರುವುದು. ಹೀಗಿದ್ದರೂ ಕೂಡ ಈ ನೆರಳು ನನ್ನದು ಎಂಬ ಅಭಿಮಾನವು ಯಾರಿಗೂ ಹುಟ್ಟುವುದಿಲ್ಲ. ಅದರಂತೆ ಜ್ಞಾನೀಯವರಲ್ಲಿ ದೇಹವು ಇರುವುದು. ಆದರೆ ಅವರು ಅದು ''ನಾನು'' ಎಂದು ಅಭಿಮಾನದಿಂದ ಹೇಳಲು ಮುಂದಾಗುವುದಿಲ್ಲ ॥೯೪೭॥ ಈ ನೆರಳು ಯಾವಾಗಲೂ ಬಳಿಯಲ್ಲಿಯೇ ಇರುವುದು. ಆದರೂ ಅದು ಎಲ್ಲಿದೆ? ಎಲ್ಲಿ ಹೋಗಿದ್ದೆ? ಎಂದು ತಮ್ಮ ನೆರಳನ್ನು ವಿಚಾರಿಸುವುದಿಲ್ಲ. ಇದರಂತೆಯೇ ಜ್ಞಾನಸಂಪನ್ನರ ದೇಹಸಂಬಂಧದ ವರ್ತನೆಯಾಗಿರುವುದು ॥೯೪೮॥ ಈ ನೆರಳು ಹೊಲಸಿನ ಮೇಲೆ ಬಿದ್ದಿರಲಿ ಅಥವಾ ಪಾಲಖಿಯ ಮೇಲೆ ಕುಳಿತಿರಲಿ, ಇದರಿಂದ ಯಾರಿಗೂ ಸುಖದುಃಖಗಳಾಗುವುದಿಲ್ಲ. ಅದರಂತೆ ಜ್ಞಾನಿಯವರಿಗೆ ದೇಹಭೋಗದ ಸುಖದುಃಖವಿರುವುದಿಲ್ಲ ॥೯೪೯॥ ಹೀಗೆ ಆತನಿಗೆ ದೇಹದ ಮರುವು ಹೇಗೆ ಉಂಟಾಗುವುದೆಂಬುದಕ್ಕೆ ದೃಷ್ಟಾಂತವನ್ನು ಕೊಟ್ಟು ಹೇಳುವೆನು, ಏಕಾಗ್ರದಿಂದ ಕೇಳಿರಿ ॥೯೫೦॥

ಜೋ ಮೋಲೇ ಮದಿರಾ ಪಿವೋನಿ ಠಾಯೇ । ತೋ ತೇಣೇ ಮದೇ ನಾಚೇ ಗಾಯೇ । ದೇಹವಂತ ದೇಹ ವಿಸರೋನಿ ಜಾಯೇ । ವಸ್ತ್ರ ನಾಹೀ ಆಹೇ ಸ್ಮರೇನಾ ।।೬೫೧।। ಹಾ ತಂವ ಬ್ರಹ್ಮರಸ ಪ್ಯಾಲಾ । ಪರಮಾನಂದೇ ತೃಪ್ತ ಝಾಲಾ । ದೇಹೋ ಝಾಲಾ ಕೀ ಮೇಲಾ । ಆಠವೂ ಠೇಲಾ ತೇಣೇ ಮದೇ ।।೬೫೨।। ಏವಂ ದೇಹಾಚೇ ಭರಣ ಪೋಷಣ । ಜನ್ಮ ಅಥವಾ ಮರಣ । ತೇ ದೈವಯೋಗೇ ಜಾಣ । ತೇಚಿ ನಿರೂಪಣ ಹಂಸ ಬೋಲೇ ।।೬೫೩।।

ದೇಹೋಽಪಿ ದೈವವಶಗಃ ಖಲು ಕರ್ಮ ಯಾವತ್ಸ್ವಾರಂಭಕಂ ಪ್ರತಿ ಸಮೀಕ್ಷತ ಏವ ಸಾಸುಃ ।
ತಂ ಸಪ್ರಪಂಚಮಧಿರೂಢಸಮಾಧಿಯೋಗಃ ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವಸ್ತುಃ ।೩೭॥

ಅರ್ಥ :- ಪ್ರಾಣ ಮತ್ತು ಇಂದ್ರಿಯಗಳ ಜೊತೆಯಲ್ಲಿ ಈ ಶರೀರವು ಪ್ರಾರಬ್ಧದ ಆಧೀನವಾಗಿರುವುದು. ಆದ್ದರಿಂದ ತಮ್ಮ ಕರ್ಮ ಎಲ್ಲಿಯವರೆಗೆ ಇರುವುದೋ, ಅಲ್ಲಿಯವರೆಗೆ ಅದರ ದಾರಿಯನ್ನು ಕಾಯುತ್ತಿರುವರು. ಆದರೆ ಆತ್ಮಜ್ಞಾನವು ಪ್ರಾಪ್ತವಾಗುತ್ತಲೇ ಆ ಯೋಗದಲ್ಲಿ ಜ್ಞಾನೀ ಪುರುಷನು ಸ್ತ್ರೀ, ಪುತ್ರ, ಧನ ಇತ್ಯಾದಿ ಪ್ರಪಂಚಸಮೇತವಾಗಿ ಆ ಯಾವ ಶರೀರದ ಸ್ವೀಕಾರವನ್ನು ಮಾಡುವುದಿಲ್ಲ. ತನ್ನ ಭಾನವೇ ಇರುವುದಿಲ್ಲ. ಎಚ್ಚರಾದ ಮನುಷ್ಯನು ಸ್ವಪ್ನಕ್ಕೆ ನಿಜವೆಂದು ತಿಳಿಯಲಾರದಂತೆ ಜ್ಞಾನಿಯು ದೇಹಕ್ಕೆ ನಿಜವೆಂದು ತಿಳಿಯಲಾರನು.

ಜಿತುಕೇ ದೇಹಾಚೇ ವರ್ತನ । ತಿತುಕೇ ಅದೃಷ್ಟಾಸ್ತವ ಜಾಣ । ಅಜ್ಞಾನಾಸೀ ದೇಹಾಭಿಮಾನ । ತ್ಯಾತೇ ಸಜ್ಞಾನ ನ ಧರಿತೀ ।।೬೫೪।। ಜೈಸೇ ಅದೃಷ್ಟ ಪೂರ್ವಸ್ಥಿತ । ತೈಸಾ ದೇಹ ಉಪಜೇ ಯೇಥ । ಸಾವೇವ ಪ್ರಾಣೇಸಹಿತ । ಐಸೇ ವರ್ತತ ಜಂವ ದೈವೇ ।।೬೫೫।। ಮ್ಹಣಾಲ ದೈವಯೋಗೇ ದೇಹೀ ಅಸತಾ । ಅವಶ್ಯ ವಾಢೇಲ ದೇಹಅಹಂತಾ । ಜೇವೀ ಏಕತ್ರ ಗಮನೇ ಮಾರ್ಗಸ್ಥಾ । ಯೇರಯೇರಾಂಚ್ಯಾ ವ್ಯಥಾ ಬೋಗಿತೀ ।।೬೫೬।। ಲವಣಾಚ್ಯಾ ಮಿಳಣೀ ಪಾಣೀ । ಹೋಊನಿ ಠಾಕೇ ಖಾಖಣೀ । ತೇವೀ ಜ್ಞಾತಾಹೀ ದೇಹಾಚೇ ಮಿಳಣೀ । ದೇಹಾಭಿಮಾನೀ ಹೋಈಲ ।।೬೫೭।। ಜೇವೀ ಲೋಹಸಂಗಾಚಿಯೇ ಪ್ರಾಪ್ತೀ । ದುರ್ಧರ ಅಗ್ನಿ ಘಣ ವರೀ ಘೇತೀ । ತೇವೀ ದೇಹಾಚಿಯಾ ಸಂಗತೀ । ಜ್ಞಾತೇ ಭೋಗಿತೀ ಸುಖದುಃಖೇ ।।೬೫೮।। ಐಸಾ ಕಲ್ಪಾಲ ಅಭಿಪ್ರಾವೋ । ತೋ ಸಜ್ಞಾನಾಸೀ ನ ಘಡೇ ಭಾವೋ । ತಿಹೀ ನಿವಟೂನಿಯಾ ಅಹಂಭಾವೋ । ಚಿದಾನಂದೇ ಪಹಾ ಹೋ ಸಮಾಧಿಸ್ಥ ।।೬೫೯।। ''ಅಧಿರೂಢಸಮಾಧಿಯೋಗ'' । ಹೇ ಮೂಳೀಚೇ ಪದ ಅಭಂಗ । ಯೇಣೇ ಸಮಾಧಿ ಅತಿನಿರ್ವ್ಯಂಗ । ಸಾಧಿಲೀ ಚಾಂಗ ನಿಜಬೋಧೇ ।।೬೬೦।। ತರೀ ಸಮಾಧೀ ತೇ ಕೈಶೀ ಅಸೇ । ತಟಸ್ಥ ಕಾಷ್ಠಾ ಚೇಪರೀ ದಿಸೇ । ಕಾ ಸಮಾಧಿಸ್ತ ಕೇವಳ ಪಿಸೇ । ಅಥವಾ ಅಸೇ ಸಜ್ಞಾನ ।।೬೬೧।।

ಹಣಕೊಟ್ಟು ಸೆರೆ ಕುಡಿದವನು ಅಮಲೇರಿ ಕುಣಿಯುವನು, ಹಾಡುವನು ಅವನು ದೇಹದಲ್ಲಿದ್ದರೂ ದೇಹವನ್ನು ಮರೆಯುವನು. ಮೈಮೇಲಿನ ವಸ್ತ್ರಗಳ ಪರಿವೆ ಅವನಿಗಿರುವುದಿಲ್ಲ ।।೬೫೧।। ಇಲ್ಲಿ ಜ್ಞಾನೀ ಭಕ್ತನು ಅಲೌಕಿಕವಾದ ದಿವ್ಯ ಬ್ರಹ್ಮರಸವನ್ನು ಕುಡಿದು ಪರಮಾನಂದದಲ್ಲಿ ತೃಪ್ತನಾಗಿರುವನು. ಆದ್ದರಿಂದ ಆತನಿಗೆ ದೇಹವು ಇದೆಯೋ ಇಲ್ಲವೋ ಎಂಬುದು ಯಾವುದೂ ಸ್ಮರಿಸುವುದಿಲ್ಲ ।।೬೫೨।। ತಾತ್ಪರ್ಯವೇನೆಂದರೆ ದೇಹದ ಪಾಲನೆ, ಪೋಷಣೆ ಮತ್ತು ಜನ್ಮ, ಮರಣ ಈ ಎಲ್ಲವೂ ದೈವಯೋಗದಿಂದಾಗುತ್ತಿರುವುದು. ಹಂಸವು ಇದೇ ಪ್ರತಿಪಾದನೆಯನ್ನು ಮಾಡಿರುವುದು ।।೬೫೩।।

ದೇಹದ ಯಾವತ್ತೂ ವರ್ತನೆಗಳು ಪ್ರಾರಬ್ಧಾನುಸಾರವಾಗಿಯೇ ಆಗುತ್ತಿರುವುವು. ಇದನ್ನು ಮಾತ್ರ ಲಕ್ಷದಲ್ಲಿಡಬೇಕು. ಅಜ್ಞಾನೀ ಜನರಲ್ಲಿ ದೇಹದ ಅಭಿಮಾನವು ಅತಿಶಯವಾಗಿರುವುದು. ಜ್ಞಾನೀ ಮನುಷ್ಯರಲ್ಲಿ ದೇಹದ ಅಭಿಮಾನವು ಇರುವುದಿಲ್ಲ ।।೬೫೪।। ಪೂರ್ವಜನ್ಮದ ಕರ್ಮಾನುಸಾರವಾಗಿ ದೇಹವು ಜನ್ಮವನ್ನು ಧರಿಸುತ್ತಿರುವುದು ಮತ್ತು ಇಂದ್ರಿಯಗಳ ಜೊತೆಯಲ್ಲಿ ತನ್ನ ಪ್ರಾರಬ್ಧದಂತೆ ಆಚರಣೆಯನ್ನು ಮಾಡುತ್ತಿರುವುದು ।।೬೫೫।। ನೀವು ಹೀಗೆ ಹೇಳಬಹುದು, ಪ್ರಾರಬ್ಧಯೋಗದಂತೆ ದೇಹದಲ್ಲಿರುವುದರಿಂದ ಆ ದೇಹದ ಅಭಿಮಾನವು ಅವಶ್ಯವಾಗಿ ಬೆಳೆಯುತ್ತಲೇ ಇರುವುದು. ಪ್ರವಾಸಿಗರು ಒಬ್ಬರಿಗೊಬ್ಬರು ಕೂಡಿ ನಡೆಯುತ್ತಿರಲು ಆಗ ಬಂದ ಸಂಕಟಗಳನ್ನು ಪರಸ್ಪರರು ಭೋಗಿಸುತ್ತಿರುವರು ।।೬೫೬।। ಲವಣದ ಮಿಶ್ರಣದಿಂದ ನೀರೂ ಕೂಡ ಉಪ್ಪಾಗಿಬಿಡುವುದು. ಅದರಂತೆ ಜ್ಞಾನಸಂಪನ್ನನೂ ಕೂಡ ದೈವದ ಸಂಗತಿಯಿಂದ ದೇಹದ ಅಭಿಮಾನಿಯಾಗಲು ಶಕ್ಯವಿದೆ ।।೬೫೭।। ಯಾವ ಪ್ರಕಾರವಾಗಿ ಕಬ್ಬಿಣದ ಸಂಗತಿಯಿಂದ ಅಗ್ನಿಗೂ ಕೂಡ ಗನ್ನಿನ ಹೊಡೆತದ ದೊಡ್ಡ ದೊಡ್ಡ ದುಃಖಗಳನ್ನು ಹೇಗೆ ಸೋಸಬೇಕಾಗುವುದೋ, ಅದರಂತೆ ದೇಹದ ಸಂಗತಿಯಿಂದ ಜ್ಞಾನಿಯು ಸುಖದುಃಖಗಳನ್ನು ಭೋಗಿಸುವನು ।।೬೫೮।। ಹೀಗಿರುವ ವಿಚಾರವು ನಿಮ್ಮ ಮನದಲ್ಲಿ ನಿರ್ಮಾಣವಾಗಬಹುದು. ಆದರೆ ಈ ನಿಯಮವು ಜ್ಞಾನೀ ಭಕ್ತನಿಗೆ ಅನುಸರಿಸುವುದಿಲ್ಲ. ಏಕೆಂದರೆ ಆತನು ತನ್ನ ಸರ್ವ ಅಹಂಕಾರವನ್ನು ಬಿಟ್ಟಿರುವನು ಮತ್ತು ಆತನು ಚಿದಾನಂದದಲ್ಲಿ ಸಮಾಧಿಸ್ಥನಾಗಿರುವನು ।।೬೫೯।। ''ಅಧಿರೂಢಸಮಾಧಿಯೋಗ'' ಹೀಗೆ ಮೂಲದಲ್ಲಿಯೇ ಸ್ಪಷ್ಟವಾದ ಮತವಿರುವುದು. ಇದರಿಂದ ಪೂರ್ಣ ನಿರ್ದೋಷವಾಗಿರುವ ಸಮಾಧಿಯನ್ನು ಆತನು ಆತ್ಮಜ್ಞಾನದಿಂದ ಸಾಧಿಸಿರುವನು ಎಂದು ಹೀಗೆ ಸಿದ್ಧವಾಗುವುದು ।।೬೬೦।। ಆದರೆ ಆ ಸಮಾಧಿಯು ಇರುವುದಾದರೂ ಹೇಗೆ? ಆ ಸಮಾಧಿಯಲ್ಲಿರುವ ಮನುಷ್ಯನು ಕಟ್ಟಿಗೆಯಂತೆ ತಟಸ್ಥನಾಗಿ ಕಾಣುವನೋ, ಅಥವಾ ಅಜ್ಞಾನೀಯಂತೆ ಕಾಣುವನೋ, ಅಥವಾ ಜ್ಞಾನಸಂಪನ್ನನಾಗಿರುವನೋ? ।।೬೬೧।।

ತೇ ಸಮಾಧೀಚೀ ಲಕ್ಷಣೇ । ಐಕ ಸಾಂಗೇನ ಸಂಪೂರ್ಣೇ । ದೇಹೀ ಅಸೋನಿ ದೇಹಬಂಧನೇ । ನಾಹೀ ಅಡಕಣೇ ಸಜ್ಞಾನಾ ॥೬೬೨॥ ಕೇವಳ ತಾಟಸ್ಥ್ಯ ನಾಂವ ಸಮಾಧೀ । ಮ್ಹಣತಾ ಜ್ಞಾತ್ಯಾಚೀ ಠಕಲೀ ಬುದ್ಧೀ । ತೇ ಸಮಾಧಿ ನವ್ಹೇ ತ್ರಿಶುದ್ಧೀ । ಮೂರ್ಚ್ಛಿತ ತೇ ಸಂಧೀ ಅಸೇ ವೃತ್ತೀ ॥೬೬೩॥ ನಿರಾಭಿಮಾನ ನಿರವಧೀ । ತ್ಯಾ ನಾಂವ ಅಖಂಡಸಮಾಧೀ । ಪರೀ ಕಾಷ್ಠಾತೇ ತ್ರಿಶುದ್ಧೀ । ನವ್ಹೇ ಸಮಾಧೀ ಸರ್ವಥಾ ॥೬೬೪॥ ತಾಟಸ್ಥ್ಯಚಿ ಸಮಾಧಿ ಸಾಚೀ । ತೇ ಮಾನಿತೀ ತ್ಯಾಂಸೀ ಸ್ವರೂಪಾಚೀ । ಜ್ಞಾನ ನಾಹೀ ನಿಶ್ಚಯಾಚೀ । ಅನುಮಾನಾಚೀ ಬೋಲಣೇ ॥೬೬೫॥ ಪ್ರಚಂಡ ಆಘಾತಾಚ್ಯಾ ಭುಲೀ । ತತ್ಕಾಳ ತಟಸ್ಥತಾ ಬಾಣಲೀ । ತರೀ ಕಾಯ ತೇಣೇ ಝಾಲೀ । ಸತ್ಯಚಿ ಭಲೀ ಸಮಾಧಿ ತ್ಯಾಸೀ ॥೬೬೬॥ ಓವಾಳಣೀಚಿಯಾ ಆಸ್ಥಾ । ಬಹುರೂಪೀ ಸೋಂಗ ಸಂಪಾದಿತಾ । ವಾಯು ಸ್ತಂಭವಿಲಾ ಅವಚಿತಾ । ತೇಣೇ ತಟಸ್ಥತಾ ಬಹುಕಾಳ ॥೬೬೭॥ ಪರೀ ವಾಸನಾ ಜಂವ ಉರಲೀ ಆಹೇ । ತಂವ ಸಮಾಧಿ ಕೈಸೇನಿ ಹೋ ಲಾಹೇ । ಸಾವಧ ಹೋತಾಂಚಿ ಮ್ಹಣೇ ಕಾಯೇ । ಯೇ ದಾತ್ಯಾಚೇ ರಾಯೇ ಉಚಿತ ದ್ಯಾವೇ ॥೬೬೮॥ ಸರ್ವ ಸಂಕಲ್ಪಾಂಚೀ ಅವಧೀ । ತ್ಯಾ ನಾಂವ ನಿರ್ವಿಕಲ್ಪ ಸಮಾಧೀ । ಸಕಳ ಶಾಸ್ತ್ರ ಹೇಚಿ ಪ್ರತಿಪಾದೀ । ಸಮಾಧಿ ತ್ರಿಶುದ್ಧೀ ತ್ಯಾ ನಾಂವ ॥೬೬೯॥ ಸಾಪು ಆಲಾ ಶೇಳೀಪ್ರತೀ । ತಟಸ್ಥ ಹೋಯ ಸಕಳವೃತ್ತೀ । ತೈಶೀ ಝಾಲಿಯಾ ತಾಟಸ್ಥ್ಯಸ್ಥಿತೀ । ನವ್ಹೇ ನಿಶ್ಚಿತೀ ತೇ ಸಮಾಧೀ ॥೬೭೦॥ ಅಕಸ್ಮಾತ ಅವಚಿತಾ । ದಿವ್ಯ ಸ್ವರೂಪ ದೇಖತಾ । ಆಶ್ಚರ್ಯೇ ಝಾಲೀ ತಟಸ್ಥತಾ । ತೇಥ ಜಾಣಾವೀ ತತ್ತ್ವತಾ ವೃತ್ತಿ ಆಹೇ ॥೬೭೧॥ ಸ್ವಸ್ವರೂಪ ದೇಖತಾ ಪ್ರಥಮದೃಷ್ಟೀ । ನ ಸಂವರತು ವಿಸ್ಮಯೋ ಉಠೀ । ತೋಹೀ ಜಿರವೂನಿಯಾ ಪೋಟೀ । ದಶಾ ಜೇ ಉಠೀ ತೇ ಸಮಾಧೀ ॥೬೭೨॥ ನಿಃಶೇಷ ಕಲ್ಪನಾ ಜೇಥ ವಿರೇ । ತೇಥ ವಿಸ್ಮಯೋ ಕೋಠೆ ಸ್ಫುರೇ । ಸೂಕ್ಷ್ಮ ಕಲ್ಪನಾ ಥಾವರೇ । ತೇಣೇ ವೋಸರೇ ವಿಸ್ಮಯೋ ॥೬೭೩॥ ಜೇಥ ಸಾಚಾರ ಬ್ರಹ್ಮಪ್ರಾಪ್ತೀ ಹೋಯೇ । ತೇಥೇ ದೇಹಚಿ ಸ್ಫುರೋ ನ ಲಾಹೇ । ತೇಂವ್ಹಾ ತಟಸ್ಥ ಕೀ ಚಾಲತಾಹೇ । ಹೇ ದೇಖಿಣೇ ಹೋಯೇ ಪುಢಿಲಾಂಚೇ ॥೬೭೪॥

ಅದಕ್ಕಾಗಿ ಆ ಯಾವ ಸಮಾಧಿಯ ಸವಿಸ್ತಾರವಾದ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು. ಜ್ಞಾನಸಂಪನ್ನ ಮನುಷ್ಯನು ದೇಹದಲ್ಲಿದ್ದರೂ ಕೂಡ ದೇಹಬಂಧನದಲ್ಲಿ ಸಿಲುಕಿಕೊಳ್ಳುವುದಿಲ್ಲ ॥೬೬೨॥ ಕೇವಲ ತಟಸ್ಥತನದಿಂದ ಇರುವಿಕೆಯ ಹೆಸರು ಸಮಾಧಿ ಎಂದು ಯಾರಾದರೂ ಹೇಳಿದರೆ ಅವರ ಬುದ್ಧಿಯಲ್ಲಿ ಭ್ರಮೆಯಾಗಿದೆ ಎಂದು ತಿಳಿಯಬೇಕು. ಏಕೆಂದರೆ ಅದು ನಿಜವಾದ ಸಮಾಧಿಯಾಗಿರುವುದಿಲ್ಲ. ಆ ಸ್ಥಿತಿಯಲ್ಲಿ ವೃತ್ತಿಯೂ ಮೂರ್ಚ್ಛಿತವಾಗಿರುವುದು ॥೬೬೩॥ ಯಾವಾಗಲೂ ಅಭಿಮಾನರಹಿತನಾಗಿರುವುದೇ, ಇದರ ನಾಮವು ಅಖಂಡ ಸಮಾಧಿಯು. ಆದರೆ ಕೇವಲ ಕಾಷ್ಠದಂತೆ ಬಿದ್ದುಕೊಂಡಿರುವುದು ಇದು ನಿಜವಾದ ಸಮಾಧಿಯಾಗುವುದಿಲ್ಲ ॥೬೬೪॥ ತಟಸ್ಥತನವೇ ಸಮಾಧಿ ಎಂದು ತಿಳಿದವರಿಗೆ ನಿಜವಾದ ಸ್ವರೂಪದ ಜ್ಞಾನವು ಇರುವುದಿಲ್ಲ. ಮತ್ತು ನಿಶ್ಚಯವಾದ ಜ್ಞಾನವೂ ಇರುವುದಿಲ್ಲ. ಅವರ ಈ ಹೇಳಿಕೆಯು ಕೇವಲ ಅನುಮಾನದಿಂದ ಕೂಡಿರುವುದು ॥೬೬೫॥ ಒಬ್ಬ ಮನುಷ್ಯನಿಗೆ ಪ್ರಚಂಡವಾದ ಆಘಾತ ಒದಗಲು ಆಗ ಆತನು ಪ್ರಜ್ಞಾಹೀನನಾಗುವನು. ಅವನ ಶರೀರಕ್ಕೆ ಕೂಡಲೇ ಕಟ್ಟಿಗೆಯಂತೆ ಅವಸ್ಥೆಯು ಪ್ರಾಪ್ತವಾಗುವುದು. ಹಾಗಾದಲ್ಲಿ ಆತನಿಗೆ ಸಮಾಧಿ ಹತ್ತಿದೆ ಎಂದು ತಿಳಿಯಬೇಕೇ? ॥೬೬೬॥ ಹಣ ಗಳಿಸುವ ಆಶೆಯಿಂದ ಸೋಗುಗಾರನು ಒಂದು ಸೋಗಿನಲ್ಲಿ ಬಹಳ ವೇಳೆಯವರೆಗೆ ವಾಯುನಿರೋಧವನ್ನು ಮಾಡಿ ಅವನು ತಟಸ್ಥನಾಗುವನು. ಆದರೆ, ಅದು ಅವನ ಸಮಾಧಿಯಾಗಲಾರದು ॥೬೬೭॥ ಎಲ್ಲಿಯವರೆಗೆ ವಾಸನೆಯು ಮನದಲ್ಲಿ ಉಳಿದಿರುವುದೋ, ಅಲ್ಲಿಯವರೆಗೆ ಸಮಾಧಿಯು ಹೇಗೆ ಪ್ರಾಪ್ತವಾಗಬೇಕು? ಸೋಗುಗಾರನು ತನ್ನ ಸೋಗನ್ನು ಮುಗಿಸಿ ಎಚ್ಚರಾದ ಮೇಲೆ ಆತನು ತಕ್ಷಣ ಮಾಲಕನಿಗೆ ನೀವು ಉದಾರ ಜನರಲ್ಲಿ ಶ್ರೇಷ್ಠರಾದ ದಾನೀಗಳಾಗಿರುವಿರಿ. ಆದ್ದರಿಂದ ನನಗೆ ಯೋಗ್ಯ ಬಹುಮಾನ ಕೊಡಿರಿ ಎಂದು ಕೇಳುವನು ॥೬೬೮॥ ಸರ್ವ ಸಂಕಲ್ಪಗಳು ಎಲ್ಲಿ ಮುಗಿಯುವುವೋ ಅಲ್ಲಿ ನಿಜವಾದ ನಿರ್ವಿಕಲ್ಪ ಸಮಾಧಿ ಇರುವುದು. ಸರ್ವ ಶಾಸ್ತ್ರಗಳು ಇದನ್ನೇ ಪುನಃ ಪುನಃ ಹೇಳಿರುವುವು. ನಿಜವಾಗಿಯೂ ಇದರ ಹೆಸರೇ ಸಮಾಧಿ ಎಂದಾಗಿರುವುದು ॥೬೬೯॥ ಆಡಿನ ಹತ್ತಿರ ಒಂದು ಹಾವು ಬಂದಾಗ ಅದು ಭಯಪಟ್ಟು ಅದರ ಚಿತ್ತವೃತ್ತಿಯು ಅಲ್ಲಿಯೇ ತಟಸ್ಥವಾಗುವುದು. ಹೀಗಾಗಿರುವ ತಟಸ್ಥ ವೃತ್ತಿಯು ಸಮಾಧಿ ಎಂದೂ ಆಗಲಾರದು ॥೬೭೦॥ ಅಕಸ್ಮಾತ್ತಾಗಿ ಅನಪೇಕ್ಷಿತವಾದ ಯಾವುದೋ ಒಂದು ಭವ್ಯ, ದಿವ್ಯವಾದ ಸ್ವರೂಪವು ದೃಷ್ಟಿಗೆ ಬೀಳುತ್ತಲೇ ಆಶ್ಚರ್ಯಚಕಿತನಾಗಿ ಥಕ್ಕಾಗಿಬಿಡುವುದು. ಆಗ ಮನುಷ್ಯನ ಭಾನವು ಇಲ್ಲದಾಗುವುದು. ಶರೀರವು ತಟಸ್ಥವಾಗುವುದು. ಆದರೆ ಇದು ಒಂದು ವೃತ್ತಿಯಾಗಿದೆ ಹೊರತು ಸಮಾಧಿ ಅಲ್ಲ ॥೬೭೧॥ ಪ್ರಾರಂಭದಲ್ಲಿ ಆತ್ಮಸ್ವರೂಪವು ದೃಷ್ಟಿಗೆ ಬೀಳುತ್ತಲೇ ಸಹಿಸಲಾಗದಂತಹ ವಿಸ್ಮಯವನ್ನು ಸಹಿಸಿಕೊಳ್ಳಬೇಕು ಮತ್ತು ನಿಶ್ಚಲಸ್ಥಿತನಾಗಬೇಕು. ಇದುವೇ ನಿಜವಾದ ಸಮಾಧಿ ಅವಸ್ಥೆ ಎಂದು ತಿಳಿಯಬೇಕು ॥೬೭೨॥ ಎಲ್ಲಿ ಸರ್ವಪ್ರಕಾರದ ಕಲ್ಪನೆಗಳು ಮರೆತು ಹೋಗುವುವೋ, ಅಲ್ಲಿ ವಿಸ್ಮಯವಾದರೂ ಎಲ್ಲಿಂದಾಗಬೇಕು? ಅಲ್ಲಿ ಅತಿ ಸೂಕ್ಷ್ಮವಾದ ಕಲ್ಪನೆಯೂ ಕೂಡ ನಷ್ಟವಾಗುವುದು. ಆದ್ದರಿಂದ ಆಶ್ಚರ್ಯವೂ ಸಹ ಇಲ್ಲದಾಗುವುದು ॥೬೭೩॥ ನಿಜವಾಗಿಯೂ ಬ್ರಹ್ಮಪ್ರಾಪ್ತಿಯಾದ ಮೇಲೆ ಆತನಲ್ಲಿ ದೇಹದ ಯಾವ ಸ್ಫುರಣೆಯು ಉಳಿಯುವುದಿಲ್ಲ. ಆತನು ನಡೆಯುತ್ತಿರುವನೋ? ಅಥವಾ ನಿಂತುಕೊಂಡಿರುವನೋ? ಎಂಬುದನ್ನು ಬೇರೆ ಜನರು ನೋಡುತ್ತಿರುವರು ॥೬೭೪॥

ಏವಂ ದೇಹಚಿ ಜೇಥ ಮಿಥ್ಯಾಪಣೇ । ತ್ಯಾಚೀ ಕವಣ ಲಕ್ಷೀ ಲಕ್ಷಣೇ । ಹೋ ಕಾ ಮೃಗಜಳೀಚೇನಿ ನಾಹಾಣೇ। ಜೇವೀ ಕಾ ನಿವಣೇ ಸಜ್ಞಾನೀ ॥೬೭೫॥ ಮಿಥ್ಯಾದೇಹಾಸೀ ತಟಸ್ಥತಾ । ಝಾಲ್ಯಾ ಮಾನಾವೀ ಸಮಾಧ್ಯವಸ್ಥಾ। ಐಶೀ ಲಕ್ಷಣೇ ಸತ್ಯ ಮಾನಿತಾ । ಠಕಲೇ ತತ್ತ್ವತಾ ಪರೀಕ್ಷಕ ॥೬೭೬॥ ಹೋ ಕಾ ಸ್ವಪ್ನೀಚೇ ಸಜ್ಞಾನಾಸೀ। ತಾಟಸ್ಥ್ಯಮುದ್ರಾ ಲಾಗಲ್ಯಾ ತ್ಯಾಸೀ । ಜರೀ ಮಾನ್ಯ ಝಾಲ್ಯಾ ಸ್ವಪ್ನೀಚ್ಯಾಸೀ । ತರೀ ಜಾಗೃತೀಸೀ ನಾಹೀ ಆಲಾ ॥೬೭೭॥ ಹೋ ಕಾ ಸ್ವಪ್ನೀಂಚ್ಯಾ ಲೋಕಾಪ್ರತೀ । ಥೋರ ಝಾಲೀ ಸಮಾಧೀಚೀ ಖ್ಯಾತೀ । ತರೀ ನಾಹೀ ಆಲಾ ತೋ ಜಾಗೃತೀ । ಜಾಣಾವಾ ನಿಶ್ಚಿತೀ ನಿದ್ರಿತೂ॥೬೭೮॥ ತೇವೀ ತಾಟಸ್ಥ್ಯ ನಾಂವ ಸಮಾಧೀ । ತೇ ಅವಿದ್ಯಾ ಸ್ವಪ್ನಮೂರ್ಚ್ಛಾಸಿದ್ಧೀ । ಪರೀ ಸ್ವಸ್ವರೂಪಪ್ರಬೋಧೀ । ಜಾಗಾ ತ್ರಿಶುದ್ಧೀ ನಾಹೀ ಝಾಲಾ ॥೬೭೯॥ ತೋ ಜಾಗಾ ಹೋಊನಿ ಸ್ವಪ್ನ ಪಾಹೇ । ತೇ ಮಿಥ್ಯಾತ್ವೇ ದೇಖತಾಹೇ । ತ್ಯಾಂತು ಆಪುಲಾ ದೇಹೋ ಸತ್ಯ ಕಾಯೇ। ಮಾ ತಾಟಸ್ಥ್ಯ ರಾಹೇ ತೇ ಠಾಯೀ ॥೬೮೦॥ ಜೋ ಜಾಗಾ ಹೋಊನಿ ತತ್ತ್ವತಾ । ಸ್ವಪ್ನದೇಹಾಸೀ ತಟಸ್ಥತಾ। ಸಾಕ್ಷೇಪಪೂರ್ವಕ ಲಾವೂ ಜಾತಾ । ಲಾಜೇ ಪರೀ ಅಧಿಕತಾ ದಶಾ ನ ಮನೀ ॥೬೮೧॥ ಜೋ ಜಾಗಾ ಹೋಊನಿ ಸ್ವಪ್ನ ಸಾಂಗೇ । ತೇ ಮಿಥ್ಯಾಪಣೇಂಚಿ ಅವಘೇ । ಪರೀ ಸತ್ಯತ್ವಾಚೇನಿ ಪಾಂಗೇ । ಕದಾ ನಿಜಾಂಗೇ ನಾತಳೇ ॥೬೮೨॥ ತೈಶೀ ಸಾಚಾರ ವಸ್ತುಪ್ರಾಪ್ತೀ । ತೋ ನಾತಳೇ ದೇಹಸ್ಥಿತೀ । ತರೀ ದೇಹ ವರ್ತೇ ಕೋಣೇ ರೀತೀ । ತೋ ಪ್ರಾರಬ್ಧಗತೀಚೇನಿ ಶೇಷೇ ॥೬೮೩॥ ಸ್ಥಂಡಿಲೀ ಅಗ್ನಿ ವಿಝೋನಿ ಜಾಯೇ । ತರೀ ಭೂಮಿಯೇ ಉಷ್ಣತಾ ರಾಹೇ । ಕರ್ಪೂರ ಸರಲ್ಯಾಹೀ ಪಾಹೇ । ಸುವಾಸು ಆಹೇ ತೇ ದೇಶೀ ॥೬೮೪॥ ಪಾಳಣಾ ಹಾಲವಿತಾ ವೋಸರೇ । ತರೀ ತೋ ಹಾಲೇ ಪೂರ್ವಸಂಸ್ಕಾರೇ । ತೇವೀ ಅವಿದ್ಯಾನಾಶೇ ಪ್ರಾರಬ್ಧ ಉರೇ । ತೇಣೇ ದೇಹೋ ವಾವರೇ ಮುಕ್ತಾಂಚಾ ॥೬೮೫॥ ಲಕ್ಷ ಭೇದೋನಿಯಾ ತೀರೇ । ಬಳೇ ಚಾಲಿಜೇ ಪುಢಾರೇ । ತೇವೀ ಅವಿದ್ಯಾನಾಶೇ ಪ್ರಾರಬ್ಧ ಉರೇ। ತೇಣೇ ದೇಹೋ ವಾವರೇ ಮುಕ್ತಾಂಚಾ ॥೬೮೬॥ ಶರೀರಾಚೇನಿ ಛಾಯಾ ಚಳೇ । ಪರೀ ಶರೀರ ಛಾಯೇವೇಗಳೇ । ತೇವೀ ದೇಹ ಮಿಥ್ಯಾ ಮುಕ್ತಾಜವಳೇ । ಚಳೇ ವಳೇ ಪ್ರಾರಬ್ಧೇ ॥೬೮೭॥

ಈ ಪ್ರಕಾರವಾಗಿ ಎಲ್ಲಿ ದೇಹವೇ ಮಿಥ್ಯೆ ಎಂದು ತಿಳಿದುಕೊಂಡಿರಲು ಅಲ್ಲಿ ಅದರ ಲಕ್ಷಣಗಳನ್ನು ಯಾರು ನೋಡಬೇಕು ? ಜ್ಞಾನದಿಂದ ಮೃಗಜಲದಲ್ಲಿ ಸ್ನಾನವನ್ನು ಮಾಡಿ ಶಾಂತರಾಗುವಿಕೆಯಾಗಿದೆ ॥೬೭೫॥ ಮಿಥ್ಯೆಯಾಗಿರುವ ಈ ದೇಹಕ್ಕೆ ತಟಸ್ಥತನವು ಪ್ರಾಪ್ತವಾಯಿತೆಂದರೆ ಇದೇ ಸಮಾಧಿಯಾಗಿದೆ ಎಂದು ಇಂತಹ ಸಮಾಧಿಗೆ ನಿಜವೆಂದು ತಿಳಿದು ಮಹಾ ಮಹಾ ಜ್ಞಾನೀಗಳೂ ಕೂಡ ಮೋಸ ಹೋಗಿರುವರು ॥೬೭೬॥ ಸ್ವಪ್ನದಲ್ಲಿ ಜ್ಞಾನೀಯಾದ ಮನುಷ್ಯನಿಗೆ ತಟಸ್ಥ ಸ್ಥಿತಿಯು ಪ್ರಾಪ್ತವಾಯಿತು ಮತ್ತು ಆ ಯಾವ ಸ್ವಪ್ನದಲ್ಲಿನ ಮನುಷ್ಯನಿಗೆ ಇದು ನಿಜವೆಂದು ತಿಳಿಯಿತು. ಆಗ ಆತನು ಎಚ್ಚರಾದಮೇಲೆ ಈ ಅವಸ್ಥೆಗೆ ಬರಲಾರನು ॥೬೭೭॥ ಸ್ವಪ್ನದಲ್ಲಿನ ಜನರಿಗೆ ಸಮಾಧಿಯ ಅನುಭವವು ಬೇಕಾದಷ್ಟು ಬಂದಿರಲಿ, ಆದರೆ ಎಚ್ಚರಾದ ಮೇಲೆ ಅವರಿಗೆ ಅದರ ಒಂದಾಂಶವೂ ಕೂಡ ಅನುಭವಕ್ಕೆ ಬರುವುದಿಲ್ಲ. ಅಂದಮೇಲೆ ಈ ಸ್ವಪ್ನದ ಅನುಭವವು ಕೇವಲ ನಿದ್ರೆಯೇ ಆಗಿರುವುದು ॥೬೭೮॥ ಆದ್ದರಿಂದ ತಟಸ್ಥತನಕ್ಕೆ ಸಮಾಧಿ ಎಂದು ಹೆಸರು ಕೊಡುವುದು ಇದು ಅವಿದ್ಯೆಯಾಗಿರುವುದು. ಇದರಿಂದಲೇ ಸ್ವಪ್ನ ಮತ್ತು ಮೂರ್ಛೆ ಇವುಗಳ ಸಿದ್ಧಿಯಾಗುವುದು. ಅವನು ಆತ್ಮಸ್ವರೂಪದಲ್ಲಿ ಜಾಗೃತನಾಗಿರುವುದೇ ಇಲ್ಲವೆಂದು ತಿಳಿಯಬೇಕು ॥೬೭೯॥ ಆತನು ಎಚ್ಚರಾಗುವನು ಮತ್ತು ಸ್ವಪ್ನದತ್ತ ವಿಚಾರಿಸುವನು. ಆಗ ಆತನು ಆದ ಸ್ವಪ್ನವು ಸುಳ್ಳು ಎಂದು ತಿಳಿಯುವನು. ಆಗ ಆತನು ಸ್ವಪ್ನದಲ್ಲಿ ದೇಹವು ಸತ್ಯವಾಗಿತ್ತು ಎಂದು ಹೇಗೆ ತಿಳಿಯುವನು ? ಆತನು ಸ್ವಪ್ನದ ದೇಹವಿಷಯಕ್ಕೆ ತಟಸ್ಥನಾಗುವನು ॥೬೮೦॥ ಯಾವನು ನಿಜವಾಗಿ ಜಾಗೃತನಾಗಿ ಸ್ವಪ್ನದೇಹದಲ್ಲಿನ ತಟಸ್ಥತೆಯನ್ನು ತನ್ನದೇ ಎಂದು ತಿಳಿಯುವನು. ಇದು ಆತನ ಮನಸ್ಸಿಗೆ ನಾಚಿಕೆಯುಂಟುಮಾಡುವುದು. ಇದಕ್ಕಿಂತಲೂ ಅದರಲ್ಲಿ ಅಧಿಕವಾದ ಮಹತ್ವವು ಆತನಿಗೆ ಏನೂ ಅನಿಸುವುದಿಲ್ಲ ॥೬೮೧॥ ಯಾರು ಜಾಗೃತರಾಗುವರೋ ಆತನು ಆದ ಸ್ವಪ್ನವನ್ನು ಹೇಳುವನು. ಅದೆಲ್ಲವೂ ಸುಳ್ಳಾಗಿರುವುವು. ಅದರಲ್ಲಿ ಯಾವ ನಿಜಾಂಶವೂ ಇರಲಾರದಕ್ಕೆ ಆತನು ಆ ಸ್ವಪ್ನಕ್ಕೆ ಎಂದಿಗೂ ಸ್ಪರ್ಶವನ್ನು ಮಾಡಲಾರನು ॥೬೮೨॥ ಆತ್ಮಸ್ಥಿತಿಯು ಪ್ರಾಪ್ತವಾಗಲು ಆತನು ನಿಜವಾಗಿಯೂ ದೇಹಸ್ಥಿತಿಗೆ ಸ್ಪರ್ಶ ಕೂಡ ಮಾಡಲಾರನು. ಹಾಗಾದರೆ ಆತನ ದೇಹವು ನಡೆಯುವುದಾದರೂ ಹೇಗೆ ಎಂದು ನೀವು ಕೇಳಬಹುದು. ಅದರ ಉತ್ತರವು "ಉಳಿದಿರುವ ಪ್ರಾರಬ್ಧಗತಿಯಿಂದ" ಎಂದು ಇರುವುದು ॥೬೮೩॥ ಯಜ್ಞವೇದಿಕೆಯಲ್ಲಿನ ಅಗ್ನಿಯು ಆರಿದರೂ ಕೂಡ ಆ ನೆಲದಲ್ಲಿ ಬಿಸಿಯು ಇನ್ನೂ ಉಳಿದಿರುವುದು. ಅದರಂತೆ ಕರ್ಪೂರವು ಸುಟ್ಟು ಹೋಗಿದ್ದರೂ ಕೂಡ ಆ ಸ್ಥಳದಲ್ಲಿ ಅದರ ಸುವಾಸನೆಯು ಉಳಿದಿರುವುದು ॥೬೮೪॥ ತೊಟ್ಟಿಲಕ್ಕೆ ತೂಗುವುದನ್ನು ತಡೆದರೂ ಕೂಡ ಅದು ಪೂರ್ವದ ಗತಿಯು ಮುಗಿಯುವವರೆಗೂ ತೂಗುತ್ತಿರುವುದು. ಅದರಂತೆ ಅವಿದ್ಯೆಯು ನಾಶವಾದರೂ ಕೂಡ ಪ್ರಾರಬ್ಧವು ಉಳಿದುಕೊಂಡಿರುವುದು. ಹೀಗೆ ಶೇಷ ಉಳಿದಿರುವ ಪ್ರಾರಬ್ಧದಿಂದ ಮುಕ್ತನ ದೇಹವು ನಡೆಯುತ್ತಿರುವುದು ॥೬೮೫॥ ಧನುಷ್ಯದಿಂದ ಬಾಣವನ್ನು ಲಕ್ಷಿಸಿ ಬಿಟ್ಟ ನಂತರ ಅದು ತನ್ನ ಲಕ್ಷವನ್ನು ಭೇದಿಸಿ ಮುಂದಕ್ಕೆ ಹೊರಟು ಹೋಗುವದು. ಅದರಂತೆ ಅವಿದ್ಯೆಯ ನಾಶವಾಗಿ ಉಳಿದಿರುವ ಪ್ರಾರಬ್ಧದಂತೆ ದೇಹವು ನಡೆಯುತ್ತಿರುವುದು ॥೬೮೬॥ ಶರೀರವು ಅಲುಗಾಡುತ್ತಲೇ ಅದರ ನೆರಳು ಅಲುಗಾಡುವುದು. ಆದರೆ ಶರೀರವು ಆ ನೆರಳಿನಿಂದ ಭಿನ್ನವಾಗಿರುವುದು. ಅದರಂತೆ ಮುಕ್ತನಲ್ಲಿ ಈ ದೇಹವು ಮಿಥ್ಯೆಯಾಗಿರುವುದು. ಪೂರ್ವದ ಪ್ರಾರಬ್ಧದ ಯೋಗದಿಂದ ಆತನು ಸರ್ವ ಕರ್ಮಗಳನ್ನು ಮಾಡುತ್ತಿರುವನು ॥೬೮೭॥

ಹೇತುವೀಣ ಅನಾಯಾಸೇ । ಪುರುಷಾಸವೇ ಛಾಯಾ ಅಸೇ । ತೇವೀ ಸಜ್ಞಾನಾಸರಿಸೇ । ದೇಹ ದಿಸೇ ಮಿಥ್ಯಾತ್ವೇ ॥೯೮೮॥ ಜೈಸೇ ಗಲಿತ ಪತ್ರ ವಾರೇನಿ ಚಳೇ । ತೈಸೇ ದೇಹ ವರ್ತೇ ಪ್ರಾಚೀನ ಮೇಳೇ । ಪರೀ ದೇಹಕರ್ಮಾಚೇನಿ ವಿಟಾಳೇ । ಜ್ಞಾತಾ ನ ಮೈಳೇ ನಿಜಬೋಧೇ ॥೯೮೯॥ ತ್ಯಾ ಪ್ರಾರಬ್ಧಾಚ್ಯಾ ಪೋಟೀ । ಸಾಂಗೋ ಸಕಳ ಜಗೇಸೀ ಗೋಠೀ । ಕಾ ಧರೋನಿ ಮೌನಾಚೀ ಮಿಠೀ । ಗಿರಿಕಪಾಟೀ ಪಡೋ ಸುಖೇ ॥೯೯೦॥ ತೋ ಆಚರೋ ಸಕಳ ಕರ್ಮೇ । ಅಥವಾ ಪಿಸಾ ಹೋ ಕಾ ನಿಜಭ್ರಮೇ । ತೇಣೇ ತೇಣೇ ಅನುಕ್ರಮೇ । ಜಾಣ ಪರಿಣಾಮೇ ಪ್ರಾರಬ್ಧೇ ॥೯೯೧॥ ತೋ ಚಢೋ ಪಾಲಖೀ ಗಜಸ್ಕಂಧೀ । ಕಾ ಪಡೋ ವಿಷ್ಠಾಮೂತ್ರಸಂಧೀ । ತೇ ತೇ ಪ್ರಾರಬ್ಧಾಚೀ ಸಿದ್ಧೀ । ಜಾಣ ತ್ರಿಶುದ್ಧೀ ಜ್ಞಾತ್ಯಾಸೀ ॥೯೯೨॥ ಜೇಥ ಭಾಧ್ಯಬಾಧಕತಾ ಫಿಟಲೀ । ಸಕಳ ಅಹಂ ಅವಿದ್ಯಾ ತುಟಲೀ । ಸಹಜ ಸಮಾಧೀ ತ್ಯಾ ನಾಂವ ಝಾಲೀ । ಹೇ ಸಂಖ್ಯಾ ಕೇಲೀ ಸಿದ್ಧಾಂತೀ ॥೯೯೩॥ ಐಶೀ ಜೇ ಸ್ಥೈರ ಸಮಾಧಿ ಅವಸ್ಥಾ । ತೋಚಿ ಭೋಗ ಭೋಗೋನಿ ಅಭೋಕ್ತಾ । ಕರ್ಮೇ ಕರೋನಿ ಅಕರ್ತಾ । ಜಾಣ ತತ್ತ್ವತಾ ತೋ ಏಕ ॥೯೯೪॥ ತೋ ಕ್ರಿಯಾಕಾರಣಸಂಯೋಗೇ। ಡುಲತ ದೇಖಿಜೇ ವಿಷಯಭೋಗೇ । ಪರೀ ಸಮಾಧಿಮುದ್ರಾ ನ ಭಂಗೇ । ಭೋಗಸಂಗೇ ಅಲಿಪ್ತ ॥೯೯೫॥ ತ್ಯಾಸೀ ಸ್ತ್ರೀ ಮ್ಹಣೇ ಮಾಝಾ ಭರ್ತಾ । ಪುತ್ರ ಮ್ಹಣೇ ಮಾಝಾ ಪಿತಾ । ಶಿಷ್ಯ ಮ್ಹಣೇ ಸ್ವಾಮೀ ತತ್ತ್ವತಾ । ತ್ಯಾ ಹೂನಿ ಪರತಾ ತ್ಯಾಮಾಜೀ ವರ್ತೇ ॥೯೯೬॥ ಹೋ ಕಾ ಕಾಷ್ಠಾಸ್ತವ ಉತ್ಪತ್ತೀ । ಕಾಷ್ಠಾವರೀ ಜ್ಯಾಚೀ ಸ್ಥಿತೀ । ತೋ ಆಕಳಿತಾ ಕಾಷ್ಠೀ ಬಹುತೀ । ನಾವರೇ ನಿಶ್ಚಿತೀ ಅಗ್ನಿ ಜೈಸಾ ॥೯೯೭॥ ಫುಂಕಿತಾ ಲಖಲಖಿಲಾ । ಜೋ ಫುಂಕಾಸ್ತವ ಪ್ರಕಟಲಾ । ತೋ ಫುಂಕ ನ ಸಾಹತಾ ಠೇಲಾ । ನಿರ್ವಾತೀಚಾ ಸಂಚಲಾ ದೀಪ ಜೈಸಾ ॥೯೯೮॥ ತೇವೀ ಕರ್ಮಾಸ್ತವ ಉತ್ಪತ್ತೀ । ಕರ್ಮೇಚಿ ಝಾಲೀ ಪರಬ್ರಹ್ಮಪ್ರಾಪ್ತೀ । ತ್ಯಾ ಕರ್ಮಾಮಾಜೀ ವರ್ತತೀ । ನಿಷ್ಕರ್ಮಸ್ಥಿತೀ ಮಹಾಯೋಗೀ ॥೯೯೯॥ ತೋ ವ್ಯವಹಾರೀ ದಿಸೋ ಜನೀ । ಕೀ ಪಿಸೇಪಣೇ ನಾಚೋ ವನೀ । ಅಥವಾ ತಟಸ್ಥ ರಾಹೋ ವಿಜನೀ । ದಶಾ ಅಧಿಕ ಉಣೇ ಬೋಲೂ ನಯೇ ॥೧೦೦೦॥ ಜೇ ಸಿಂಹಾಸನೀ ರಾಜತ್ವ ಜೋಡೇ । ತೇ ವನಾಂತ ಖೇಳತಾ ನ ಮೋಡೇ । ಕೀ ಧಾಂವತಾ ವ್ಯಾಹಾಳೀಪುಢೇ । ರಾಜಪದ ಚೋಖಡೇ ಢಳೂ ನೇಣೇ ॥೧೦೦೧॥

ಮನುಷ್ಯನ ಹತ್ತಿರ ಇರುವ ಈ ಯಾವ ನೆರಳು ಯಾವ ಕಾರಣವಿಲ್ಲದೇ ಸಹಜವಾಗಿ ಇರುವುದು. ಅದರಂತೆ ಜ್ಞಾನಿ ಪುರುಷನ ಜೊತೆಯಲ್ಲಿರುಃ ದೇಹವು ಮಿಥ್ಯೆಯಾಗಿರುವುದು ॥೯೮೮॥ ಯಾವ ಪ್ರಕಾರವಾಗಿ ಉದುರಿ ಬಿದ್ದ ಒಣ ಎಲೆಗಳು ಗಾಳಿಬೀಸುವಿಕೆಯಿಂದ ಹಾರಾಡುತ್ತಿರುವುವೋ, ಅದರಂತೆ ದೇಹವೂ ಕೂಡ ಪೂರ್ವಕರ್ಮಾನುಸಾರವಾಗಿ ವರ್ತಿಸುತ್ತಿರುವುದು. ಹೀಗೆ ಜ್ಞಾನಿಯು ಈಶ್ವರ ಸತ್ತೆಯ ಜ್ಞಾನದಿಂದ ದೇಹಕರ್ಮದ ದೋಷದಿಂದ ಯತ್ಕಿಂಚಿತವೂ ಮಲಿನವಾಗಲಾರನು ॥೯೮೯॥ ಪ್ರಾರಬ್ಧ ಕರ್ಮದ ಆಧೀನದಲ್ಲಿದ್ದು ಆತನು ಯಾವತ್ತೂ ಜಗತ್ತಿಗೆ ವಚನಗಳನ್ನು ನುಡಿಯುತ್ತಿರಲಿ ಅಥವಾ ಪರ್ವತದ ಗುಹೆಯಲ್ಲಿ ಮೌನವನ್ನು ಧರಿಸಿ ಸುಖವಾಗಿ ಕುಳಿತಿರಲಿ ॥೯೯೦॥ ಆತನು ಸರ್ವ ಕರ್ಮಗಳನ್ನು ಮಾಡುತ್ತಿರಲಿ ಅಥವಾ ನಿಜಭ್ರಮೆಯಿಂದ ಹುಚ್ಚನಂತೆ ವರ್ತಿಸಲಿ. ಈ ಎಲ್ಲ ಪರಿಣಾಮಗಳು ಮಾತ್ರ ಪ್ರಾರಬ್ಧದಿಂದಲೇ ಎಂದು ತಿಳಿಯಬೇಕು ॥೯೯೧॥ ಆತನು ಪಾಲಖಿಯಲ್ಲಿ ಕುಳಿತಿರಲಿ ಅಥವಾ ಆನೆಯ ಅಂಬಾರಿಯಲ್ಲಿ ಕುಳಿತರಲಿ, ಇಲ್ಲವೇ ಮಲಮೂತ್ರದಲ್ಲಿ ಉರುಳಾಡುತ್ತಿರಲಿ, ಇದೆಲ್ಲವೂ ಪ್ರಾರಬ್ಧದ ಯೋಗವೆಂದು ಜ್ಞಾನಿಯು ತಿಳಿದಿರುವನು ॥೯೯೨॥ ಅಲ್ಲಿ ಬಾಧ್ಯ, ಬಾಧಕತೆ ಸರ್ವವೂ ಮುಗಿದು ಹೋಗಿರುವುದು. ''ಅಹಂ'' ಎಂಬ ಸರ್ವಪ್ರಕಾರದ ಅವಿದ್ಯೆಯು ಇಲ್ಲದಾಯಿತು. ಹೀಗಿರುವುದಕ್ಕೆ ಸಹಜ ಸಮಾಧಿ ಎಂದು ಹೇಳುವರು. ಇದುವೇ ಸರ್ವ ಸಿದ್ಧಾಂತಗಳ ತಾತ್ಪರ್ಯವಾಗಿದೆ ॥೯೯೩॥ ಇಂತಹ ಸಹಜ ಸಮಾಧಿ ಅವಸ್ಥೆಯು ಯಾರಿಗೆ ಪ್ರಾಪ್ತವಾಗುವುದೋ, ಆತನು ಭೋಗಗಳನ್ನು ಭೋಗಿಸಿದರೂ ಕೂಡ ಅಭೋಕ್ತನಾಗಿರುವನು.ಸರ್ವಕರ್ಮಗಳನ್ನು ಮಾಡಿದರೂ ಕೂಡ ಅಕರ್ತನಾಗಿರುವನು. ಇದನ್ನು ಲಕ್ಷದಲ್ಲಿಡಬೇಕು ॥೯೯೪॥ ಆತನು ಕ್ರಿಯಾ ಮತ್ತು ಕಾರಣ ಇವುಗಳ ಸಂಯೋಗದಿಂದ ವಿಷಯಭೋಗಗಳಲ್ಲಿ ತಲ್ಲೀನನಾದಂತೆ ತೋರುತ್ತಿರುವನು. ಆದರೆ ಆತನ ಸಮಾಧಿಯುಭಂಗವಾಗುವುದಿಲ್ಲ. ಭೋಗ ಭೋಗಿಸಿಯೂ ಆತನು ಅಲಿಪ್ತನಾಗಿರುವನು ॥೯೯೫॥ ಆತನಿಗೆ ಆತನ ಪತ್ನಿಯು ನನ್ನ ಪತಿ ಎನ್ನುವಳು, ಪುತ್ರನು ನನ್ನ ಪಿತ ಎನ್ನುವನು, ಶಿಷ್ಯನು ನನ್ನ ಗುರು ಎನ್ನುವನು. ಆದರೆ ಆತನು ಮಾತ್ರ ಎಲ್ಲ ಪ್ರಕಾರದ ಆಧೀನಗಳಿಂದ ಅಲಿಪ್ತನಾಗಿರುವನು ಹಾಗೂ ಅವರಲ್ಲಿ ವರ್ತಿಸುತ್ತಿರುವನು ॥೯೯೬॥ ಅಗ್ನಿಯ ಉತ್ಪತ್ತಿಯು ಕಾಷ್ಠದಿಂದಾಗುವುದು. ಕಾಷ್ಠದಿಂದಲೇ ಅದರ ಸ್ಥಿತಿಯೂ ಸಹ ಆಗುವುದು. ಆದರೆ ಅನೇಕ ಪ್ರಕಾರದ ಭಿನ್ನ ಭಿನ್ನ ಕಾಷ್ಠಗಳು ಅಗ್ನಿಯನ್ನು ಬಂಧಿಸಿಡಲು ಪ್ರಯತ್ನಿಸಿದರೆ ಅದು ಸಾಧ್ಯವಾಗುವುದಿಲ್ಲ ॥೯೯೭॥ ಅಗ್ನಿಯ ಮೇಲೆ ಊದಲು ಆಗ ಅಗ್ನಿಯು ಪ್ರಜ್ವಲಿತವಾಗುವುದು. ಅದು ವಾಯುವಿನ ಸಹಾಯದಿಂದ ಪ್ರಕಟವಾಗುವುದು. ಆದರೆ ಗಾಳಿವಿಲ್ಲದ ಸ್ಥಳದಲ್ಲಿ ಇಟ್ಟಿರುವ ದೀಪಕ್ಕೆ ಊದಿದರೆ ಅದಕ್ಕೆ ಸಹನೆಯಾಗುವುದಿಲ್ಲ ॥೯೯೮॥ ಅದರಂತೆ ಕರ್ಮದಿಂದಲೇ ಉತ್ಪತ್ತಿ, ಕರ್ಮದಿಂದಲೇ ಪರಬ್ರಹ್ಮಪ್ರಾಪ್ತಿ. ಆದರೆ ಮಹಾಯೋಗಿಯು ಕರ್ಮದಿಂದಲೇ ನಿಷ್ಕರ್ಮನಾಗಿರುವನು ॥೯೯೯॥ ಆತನು ಜನರಲ್ಲಿ ಜನರಂತೆ ಸಂಸಾರಿಯಂತೆ ಕಾಣುತ್ತಿರಲಿ, ಅಥವಾ ಅರಣ್ಯದಲ್ಲಿ ಹುಚ್ಚನಂತೆ ಕುಣಿಯುತ್ತಿರಲಿ, ಇಲ್ಲವೇ ಏಕಾಂತದಲ್ಲಿ ಸ್ವಸ್ಥನಾಗಿ ಕುಳಿತಿದ್ದು ಕಾಣುತ್ತಿರಲಿ, ಆತನ ವೃತ್ತಿಯಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ ॥೧೦೦೦॥ ಸಿಂಹಾಸನದ ಮೇಲೆ ಕುಳಿತುಕೊಂಡು ರಾಜನಾಗಿರುವವನು ವನಕ್ಕೆ ಹೋಗಿ ಅಲ್ಲಿ ಆಟಗಳನ್ನು ಆಡುತ್ತಿರಲು ರಾಜ್ಯವು ಇಲ್ಲದಾಗುವುದಿಲ್ಲ. ಅಥವಾ ಬೇಟೆಗಾಗಿ ಅರಣ್ಯದಲ್ಲಿ ಓಡಾಡುತ್ತಿದ್ದರೂ ಆತನು ತನ್ನ ರಾಜಪದವಿಯಿಂದ ದೂರಾಗುವುದಿಲ್ಲ ॥೧೦೦೧॥

ರಾವೋ ರಾನೀ ವಸಿನ್ನಲಾ । ತ್ಯಾ ರಾನಾಸೀ ರಾಜಭೋಗ ಆಲಾ । ರಾವೋ ರಾಜತ್ವಾ ಮುಕಲಾ । ಮೂರ್ಖಹೀ ಯಾ ಬೋಲಾ ನ ಬೋಲತೀ ॥೭೦೨॥ ತೇವೀ ಪಾವೋನಿ ಸ್ವರೂಪಪ್ರಾಪ್ತೀ । ಯೋಗೀ ಪ್ರಾರಬ್ಧಾಚ್ಯಾ ಸ್ಥಿತೀ । ನಾನಾ ಕರ್ಮೇ ಕರಿತಾ ದಿಸತೀ । ಪರೀ ನಿಜಾತ್ಮಸ್ಥಿತೀ ಭಂಗೇನಾ ॥೭೦೩॥ ಯಾಲಾಗೀ ಸಮಾಧಿ ಆಣಿ ವ್ಯುತ್ಥಾನ । ಯಾ ದೋಹೀ ಅವಸ್ಥಾಂಚೇ ಲಕ್ಷಣ । ಅಪಕ್ವಾಸೀಚಿ ಘಡೇ ಜಾಣ । ಪರಿಪೂರ್ಣಾಸೀ ಲಕ್ಷಣ ತೇ ಕೈಚೇ ॥೭೦೪॥ ಸ್ವರೂಪಾವೇಗಳೇ ಕಾಂಹೀ ಏಕ । ಪೂರ್ಣಾಸೀ ಉರಲೇ ನಾಹೀ ದೇಖ । ಸಮಾಧಿವ್ಯುತ್ಥಾನಾಚೇ ಮುಖ । ತ್ಯಾ ಸಂಮುಖ ಯೇವೋ ಲಾಜೇ ॥೭೦೫॥ ಅರ್ಜುನಾ ದೇವೋನಿ ಸಮಾಧೀ । ಸವೇಚಿ ಘಾತಲಾ ಮಹಾಯುದ್ಧೀ । ಪರೀ ಕೃಷ್ಣ ಕೃಪಾನಿಧೀ । ತಟಸ್ಥ ತ್ರಿಶುದ್ಧೀ ನ ಕರೀಚ ॥೭೦೬॥ ಯಾಲಾಗೀ ಸಮಾಧಿವ್ಯುತ್ಥಾನ ವಿಧೀ । ತಾಟಸ್ಥ್ಯೇ ಸಹಿತ ನಿರವಧೀ । ಗಿಳೂನಿ ಝಾಲೀ ಸ್ವೈರ ಸಮಾಧೀ । ಪೂರ್ಣ ನಿಜಪದೀ ವಿಲಸತಾ ॥೭೦೭॥ ಏವಂ ಪ್ರಾರಬ್ಧ ಜಂವ ಅಸೇ । ತಂವ ಮುಕ್ತಾಚೇ ದೇಹ ವರ್ತೇ ಐಸೇ । ಪರೀ ಅಹಂಮಮತೇಚೇ ಪಿಸೇ । ಪೂರ್ವಿಲ್ಯಾ ಐಸೇ ಬಾಧೀನಾ ॥೭೦೮॥ ಜೇವೀ ಸ್ವಪ್ನದೇಹಾಚ್ಯಾ ನಾನಾ ಅವಸ್ಥಾ । ಜಾಗೃತೀ ಆಲಿಯಾ ತತ್ತ್ವತಾ । ಪುರುಷ ನೇಘೇ ಆಪುಲೇ ಮಾಥಾ । ತೇವೀ ಸಮಾಧಿಸ್ಥಾ ದೇಹಕರ್ಮೇ ॥೭೦೯॥ ಹೇಚಿ ಪರಮಾರ್ಥತಾ ಬ್ರಹ್ಮಸ್ಥಿತೀ। ನಾನಾ ಪರೀಂಚ್ಯಾ ಉಪಪತ್ತೀ । ಮ್ಯಾ ಸಾಂಗೀತಲ್ಯಾ ತುಮ್ಹಾ ಪ್ರತೀ । ಜ್ಞಾನಸಂಪತ್ತೀ ನಿಜಗುಹ್ಯ ॥೭೧೦॥ ತೂ ಕೋಣ ಹೇ ಪುಸಿಲೇ ಹೋತೇ । ಸಾಂಗಾವಯಾ ತೇ ಸನಕಾದಿಕಾಂತೇ । ಸಾಂಗತಸೇ ನಿಜರೂಪಾತೇ । ವಿಶ್ವಾಸ ತ್ಯಾತೇ ದೃಢ ವ್ಹಾವಯಾ ॥೭೧೧॥

ಮಯ್ಯೈತದುಕ್ತಂ ವೋ ವಿಪ್ರಾ ಗುಹ್ಯಂ ಯತ್ಸಾಂಖ್ಯಯೋಗಯೋಃ ।
ಜಾನೀತ ಮಾಗತಂ ಯಜ್ಞಂ ಯುಷ್ಮದ್ಧರ್ಮವಿವಕ್ಷಯಾ ।೩೮॥

ಅರ್ಥ :- ಹೇ ಸನಕಾದಿಕ ಋಷಿಮುನಿಗಳೇ, ಈಗ ನಾನು ಹೇಳಿರುವುದು ಸಾಂಖ್ಯ ಮತ್ತು ಯೋಗ ಈ ಎರಡರ ಗೌಪ್ಯಮಯ ರಹಸ್ಯವಾಗಿರುವುದು. ನಾನು ಸ್ವತಃ ಭಗವಂತನಾಗಿರುವೆನು. ನಿಮಗೆ ತತ್ವಜ್ಞಾನದ ಉಪದೇಶವನ್ನು ಮಾಡುವುದಕ್ಕಾಗಿ ನಾನು ಇಲ್ಲಿಗೆ ಬಂದಿರುವೆನು. ಇದನ್ನು ತಿಳಿದುಕೊಳ್ಳಿರಿ.

ಅತಿಗುಹ್ಯ ಜ್ಞಾನ ಪರಾತ್ಪರ । ಜೇ ಉಪನಿಷದಾಂಚೇ ಭಾಂಡಾರ । ಮ್ಯಾ ಸಾಂಗಿತಲೇ ಸಾಚಾರ । ಯೋಗಸಾರ ಯೋಗ್ಯಾಂಚೇ ॥೭೧೨॥

ರಾಜನು ವನಕ್ಕೆ ಹೋಗಿ ವಸತಿ ಹೂಡಲು ಆಗ ಆ ವನದಲ್ಲಿ ರಾಜಭೋಗಗಳು ಬಂದು ತಲುಪುವುವು. ರಾಜನು ವನಕ್ಕೆ ಹೋಗಿರುವನು ಎಂದು ರಾಜನ ಅಧಿಕಾರವು ಹೋಯಿತು ಎಂದು ಮೂರ್ಖನೂ ಕೂಡ ಹೇಳಲಾರನು ।೭೦೨॥ ಅದರಂತೆ ಯೋಗಿಯು ಒಮ್ಮೆ ಆತ್ಮಸ್ವರೂಪ ಸ್ಥಿತಿಗೆ ಪ್ರಾಪ್ತನಾದನೆಂದರೆ ಆಗ ಆತನು ನಾನಾ ಪ್ರಕಾರದ ಕರ್ಮಗಳನ್ನು ಮಾಡುತ್ತಿರುವುದು ಕಂಡರೂ ಸಹ ಆತನು ತನ್ನ ಸ್ವರೂಪ ಸ್ಥಿತಿಯಿಂದ ಕದಲಲಾರನು ।೭೦೩॥ ಅದಕ್ಕಾಗಿ ಸಮಾಧಿಯನ್ನು ಹಚ್ಚುವುದು ಮತ್ತು ಸಮಾಧಿಯನ್ನು ಇಳಿಸುವುದು, ಇದು ಅರ್ಧಮರ್ಧ ಸಾಧಕನದ್ದಾಗಿರುವುದು. ಪೂರ್ಣತ್ವಕ್ಕೆ ಮುಟ್ಟಿಕೊಂಡಾತನಿಗೆ ಈ ಲಕ್ಷಣಗಳು ಇರುವುದಿಲ್ಲ ।೭೦೪॥ ಏಕೆಂದರೆ ಪೂರ್ಣತ್ವಕ್ಕೆ ಮುಟ್ಟಿಕೊಂಡಿರುವ ಜ್ಞಾನೀ ಭಕ್ತನಿಗೆ ಸರ್ವತ್ರವೂ ಈಶ್ವರನು ಕಾಣುತ್ತಿರುವನು. ಆದ್ದರಿಂದ ಸಮಾಧಿಯನ್ನು ಹಚ್ಚುವಿಕೆ ಮತ್ತು ವಿಸರ್ಜಿಸುವಿಕೆ ಈ ವಿಧಿಯು ಈತನಿಗೆ ತನ್ನ ಮುಖ ತೋರಿಸಲು ನಾಚಿಕೆಯಾಗುವುದು ।೭೦೫॥ ಅರ್ಜುನನಿಗೆ ಸಮಾಧಿಯನ್ನು ಕೊಟ್ಟು ಮಹಾಯುದ್ಧಕ್ಕೆ ಪ್ರವೃತ್ತ ಮಾಡಿದನು. ಆದರೆ ದಯಾಘನ ಶ್ರೀಕೃಷ್ಣನು ಆತನನ್ನು ತಟಸ್ಥನನ್ನಾಗಿ ಮಾಡಲಿಲ್ಲ ।೭೦೬॥ ಈ ಪ್ರಕಾರವಾಗಿ ಈಶ್ವರನನ್ನು ಪೂರ್ಣ ಸ್ವರೂಪದಲ್ಲಿ ಸರ್ವತ್ರವೂ ಕಾಣುತ್ತಿರಲು ಸಮಾಧೀ ಮತ್ತು ವ್ಯುತ್ಥಾನಕ್ಕೆ ತಟಸ್ಥತನ ಸಹ ನುಂಗಿಬಿಟ್ಟು ಸಹಜ ಸಮಾಧಿಗೆ ಪ್ರಾಪ್ತನಾಗುವನು ।೭೦೭॥ ಈ ಪ್ರಕಾರವಾಗಿ ಎಲ್ಲಿಯವರೆಗೆ ಪ್ರಾರಬ್ಧವು ಉಳಿದಿರುವುದೋ, ಅಲ್ಲಿಯವರೆಗೆ ಮುಕ್ತನ ದೇಹವು ತದನುರೂಪವಾಗಿ ವರ್ತಿಸುತ್ತಿರುವುದು. ಆದರೆ ಅಹಂ ಮಮತೆಯ ಹುಚ್ಚು ಆತನಿಗೆ ಪರಿಪೂರ್ಣವಾಗಿ ಎಂದಿಗೂ ಹತ್ತುವುದಿಲ್ಲ ।೭೦೮॥ ಯಾವ ಪ್ರಕಾರವಾಗಿ ಸ್ವಪ್ನದಲ್ಲಿನ ನಾನಾ ಪ್ರಕಾರದ ಅವಸ್ಥೆಗಳು ಜಾಗೃತನಾದ ಮೇಲೆ ಅವು ದೇಹಕ್ಕೆ ಹೇಗೆ ಪ್ರಾಪ್ತವಾಗುವುದಿಲ್ಲವೋ, ಅದರಂತೆ ಈಶ್ವರನು ಸರ್ವತ್ರವೂ ಸಮಪ್ರಮಾಣದಲ್ಲಿದ್ದಾನೆ ಎಂಬ ಭಾವನೆಯಿಂದ ಜಾಗೃತನಾದ ಮೇಲೆ ಆತನು ದೇಹದ ಕರ್ಮಗಳನ್ನು ತನ್ನ ತಲೆಯ ಮೇಲೆ ಹೊರುವುದಿಲ್ಲ ।೭೦೯॥ ಈ ಸರ್ವಶ್ರೇಷ್ಠವಾದ ಇಂತಹ ಬ್ರಹ್ಮಜ್ಞಾನದ ಸ್ವರೂಪ ಸ್ಥಿತಿಯನ್ನು ನಾನು ನಿಮಗೆ ಭಿನ್ನ ಭಿನ್ನ ಪ್ರಕಾರಗಳಿಂದ ಹೇಳಿದೆನು. ಇದು ನನ್ನ ನಿಜಗುಹ್ಯವಾದ ಜ್ಞಾನಸಂಪತ್ತಾಗಿರುವುದು ।೭೧೦॥ ''ನೀನು ಯಾರು'' ಎಂದು ಸನಕಾದಿಕರು ಕೇಳಿದ್ದರು. ಅದರ ಉತ್ತರವನ್ನು ಕೊಡುವುದಕ್ಕಾಗಿ ಹಾಗೂ ಅವರ ವಿಶ್ವಾಸವನ್ನು ದೃಢಗೊಳಿಸುವುದಕ್ಕಾಗಿ ಭಗವಾನ ಶ್ರೀಕೃಷ್ಣನು ತನ್ನ ನಿಜರೂಪವನ್ನು ಈಗ ಹೇಳುವನು ।೭೧೧॥

ಅತ್ಯಂತ ಗುಹ್ಯವಾದ, ಶ್ರೇಷ್ಠವಾಗಿರುವ, ಉಪನಿಷದಗಳ ಭಾಂಡಾರವಾದ ಮತ್ತು ಯೋಗಿಗಳ ಯೋಗ ಮಾರ್ಗದಲ್ಲಿನ ರಹಸ್ಯವಾಗಿರುವ, ಯಾವ ನಿಜವಾದ ಜ್ಞಾನವನ್ನು ನಾನು ನಿಮಗೆ ಹೇಳಿರುವೆನು ।೭೧೨॥

ಜ್ಯಾ ಜ್ಞಾನಾಲಾಗೀ ಸಾಧನಕೋಟೀ । ಮುಮುಕ್ಷು ಕರಿತೀ ಹಟತಟೀ । ಯೋಗೀ ರಿಘೋನಿ ಗಿರಿಕಪಾಟೀ । ಮಹಾಮುದ್ರಾ ನೇಹಟೀ ಸಾಧಿತೀ ॥೭೧೩॥ ವೇದಶಾಸ್ತ್ರಾಂಚಿಯಾ ಯುಕ್ತೀ । ಥೋಂಟಾವಲ್ಯಾ ಜಯೇ ಅರ್ಥೀ ।ತೇ ನಿಜಜ್ಞಾನ ಮ್ಯಾ ತುಮ್ಹಾ ಪ್ರತೀ । ಯಥಾನಿಗುತೀ ಸಾಂಗೀತಲೇ ॥೭೧೪॥ ಏವಢಿಯಾ ಜ್ಞಾನಾಚಾ ಜ್ಞಾನವಕ್ತಾ । ಮೀ ಕೋಣ ಹೇ ನ ಕಳೇಲ ಸರ್ವಥಾ । ತರೀ ಯಜ್ಞಾಚಾ ಯಜ್ಞಭೋಕ್ತಾ । ಜಾಣ ತತ್ತ್ವತಾ ಮೀ ವಿಷ್ಣೂ ॥೭೧೫॥ ಮಜ ಯಾವಯಾ ಹೇಚಿ ಕಾರಣ । ತುಮ್ಹೀ ಬ್ರಹ್ಮಯಾಪ್ರತಿ ಕೇಲಾ ಪ್ರಶ್ನ । ತೇ ಉಪದೇಶಾವಯಾ ಬ್ರಹ್ಮಜ್ಞಾನ । ಸ್ವಯೇ ಆಪಣ ಯೇಥೇ ಆಲೋ ॥೭೧೬॥ ಜ್ಯಾ ಉಪದೇಶಾಚ್ಯಾ ಪೋಟೀ । ವರ್ಣಾಶ್ರಮಪರಿಪಾಟೀ । ನ ಸಾಂಡಿತಾ ಹೋಯ ಮಾಝೀ ಭೇಟೀ । ತೇಹೀ ಗೋಷ್ಟೀ ಧ್ವನಿಲೀಸೇ ॥೭೧೭॥ ಸಾಂಡಾವೇ ಬ್ರಾಹ್ಮಣಪಣ । ಮಗ ಮಾಂಡಾವೇ ಸನ್ಯಾಸಗ್ರಹಣ । ಹೇ ದೋನೀ ಧರ್ಮ ದೇಹೀಚೇ ಜಾಣ । ಉಪದೇಶೀ ದೇಹಪಣ ಮುಖ್ಯತ್ವೇ ಮಿಥ್ಯಾ ॥೭೧೮॥ ಉಪದೇಶೂ ಕರೂನಿ ಪ್ರಮಾಣ । ಸನಕಾದಿಕೀ ಬ್ರಾಹ್ಮಣಪಣ । ಅದ್ಯಾಪಿ ಸಾಂಡಿಲೇ ನಾಹೀ ಜಾಣ । ಮಾಝೇ ಗುಹ್ಯಜ್ಞಾನ ಪಾವಲೇ ॥೭೧೯॥ ತೇಣೇಚಿ ಉಪದೇಶೇ ನಿಶ್ಚಿತ । ನಾರದ ಬ್ರಾಹ್ಮಣಪಣೇ ವರ್ತತ । ಬ್ರಹ್ಮಾನಂದೇ ಡುಲ್ಲತ । ಗಾತ ನಾಚತ ನಿಜಬೋಧೇ ॥೭೨೦॥ ಐಸೇ ಜೇ ಚೈತನ್ಯಘನ । ಆಪುಲೇ ಸ್ವರೂಪ ಆಪಣ। ಸ್ವಯೇ ಕರಿತಾಹೇ ಸ್ತವನ । ನಿಜಮಹಿಮಾನ ದ್ಯೋತಾವಯಾ ॥೭೨೧॥

ಅಹಂ ಯೋಗಸ್ಯ ಸಾಂಖ್ಯಸ್ಯ ಸತ್ಯಸ್ಯರ್ತಸ್ಯ ತೇಜಸಃ । ಪರಾಯಣಂ ದ್ವಿಜಶ್ರೇಷ್ಠಾಃ ಶ್ರಿಯಃ ಕೀರ್ತೇರ್ದಮಸ್ಯ ಚ ।೩೯॥

ಅರ್ಥ :- ಹೇ ಬ್ರಾಹ್ಮಣೋತ್ತಮರೇ, ನಾನು ಯೋಗ, ಸಾಂಖ್ಯ, ಸತ್ಯ, ಮಧುರ ಭಾಷಣ, ತೇಜಶ್ರೀ, ಕೀರ್ತಿ, ಇಂದ್ರಿಯ ನಿಗ್ರಹ ಈ ಎಲ್ಲಕ್ಕೂ ಪರಮಗತಿ ಪರಮ ಅಧಿಷ್ಠಾನನಾಗಿರುವೆನು.

ಸಾಂಖ್ಯ ಜೇ ಪರಮ ಜ್ಞಾನ । ಯೋಗ ಅಷ್ಟಾಂಗಾದಿಸಾಧನ । ಸತ್ಯಾಚೇ ಸತ್ಯಪಣ। ಸತ್ಯಸ್ವರೂಪ ಜಾಣ ಮೀ ಏಕ ॥೭೨೨॥ ಪಹಾ ಪಾ ಜ್ಯಾ ಸತ್ಯಾಚ್ಯಾ ಠಾಯೀ । ಸಂತ ಸದ್ಧರ್ಮೇ ರಾಹಿಲೇ ಪಾಹೀ । ಸುನೃತ ಜೇ ವಾಚಾ ತೇಹೀ । ಮಜವೇಗಳೀ ಕಾಂಹೀ ಹೋ ನೇಣೇ ॥೭೨೩॥ ತೇಜಾಚೀ ಜೇ ಪ್ರಗಲ್ಭತಾ । ತೇ ಮಾಝೇನಿ ತೇಜೇ ಸತೇಜತಾ । ಶ್ರೀಯೇಚೀ ಜೇ ಐಶ್ವರ್ಯತಾ । ಜಾಣ ತತ್ತ್ವತಾ ಮಾಝೇನಿ ॥೭೨೪॥ ಕೀರ್ತಿ ಮಾಝೇನಿ ಕೀರ್ತನೇ । ಸದಾ ವಂದಿಜೇ ಸಾಧುಜನೇ । ಮಜವೇಗಳೇ ಕೀರ್ತೀಚೇ ಜಿಣೇ । ಕೋಣೇ ಪೋಸಣೇ ನ ಘೇತೀ ॥೭೨೫॥

ಯಾವ ಜ್ಞಾನಕ್ಕಾಗಿ ಮುಮುಕ್ಷು ಜನರು ಅತಿಶಯವಾದ ಘೋರ ತಪಶ್ಚರ್ಯ್ಯಗಳನ್ನು ಮಾಡುವರು. ಕೋಟ್ಯಾವಧೀ ಪ್ರಕಾರಗಳ ಸಾಧನೆಗಳನ್ನು ಮಾಡುವರು. ದೃಢಯೋಗಿಗಳು ಗಿರಿಕಂದರಗಳಲ್ಲಿ ಕುಳಿತು ಆಸನ ಮುದ್ರೆಗಳನ್ನು ಪ್ರಾಪ್ತಮಾಡಿಕೊಳ್ಳುವರು ॥೭೧೩॥ ಯಾವ ಜ್ಞಾನದ ಎದುರಿಗೆ ಯೋಗಶಾಸ್ತ್ರದ ಯುಕ್ತಿಯೂ ಕೂಡ ಬಹಳಷ್ಟು ಉಪಯೋಗವಾಗುವುದಿಲ್ಲವೋ, ಆ ಆತ್ಮಜ್ಞಾನವನ್ನು ನಾನು ನಿಮಗೆ ಯೋಗ್ಯ ರೀತಿಯಲ್ಲಿ ಹೇಳಿರುವೆನು ॥೭೧೪॥ ಇಂತಹ ಜ್ಞಾನವನ್ನು ಹೇಳುವವ ಜ್ಞಾನವಕ್ತಾ ನಾನು ಯಾರು ಇರುವೆ ಎಂಬುದು ನಿಮಗೆ ಇನ್ನೂ ತಿಳಿಯದಿದ್ದರೆ ನಾನು ಸರ್ವ ಯಜ್ಞಗಳ ಯಜ್ಞಭೋಕ್ತಾನಾಗಿರುವ ಶ್ರೀ ವಿಷ್ಣುವೇ ನಾನಾಗಿರುವೆನು. ಇದನ್ನು ಲಕ್ಷದಲ್ಲಿಡಿರಿ ॥೭೧೫॥ ನೀವು ಬ್ರಹ್ಮದೇವನಿಗೆ ಯಾವ ಪ್ರಶ್ನೆಯನ್ನು ಮಾಡಿದ್ದಿರೋ, ಆ ಬ್ರಹ್ಮಜ್ಞಾನದ ಉಪದೇಶವನ್ನು ಮಾಡುವುದಕ್ಕಾಗಿಯೇ ನಾನು ಸ್ವತಃ ಇಲ್ಲಿ ಪ್ರಕಟನಾಗಿರುವೆನು. ನನ್ನ ಇಲ್ಲಿಗೆ ಬರುವ ಕಾರಣವು ಇದೇ ಆಗಿರುವುದು ॥೭೧೬॥ ಈ ಉಪದೇಶದಲ್ಲಿ ವರ್ಣಾಶ್ರಮ ಧರ್ಮಗಳನ್ನು ತ್ಯಜಿಸದೇ ನನ್ನ ಭೇಟಿಯು ಸಹಜವಾಗಿ ಆಗುವುದೆಂಬುದನ್ನು ಒತ್ತಿ ಹೇಳಿರುವೆನು ॥೭೧೭॥ ಬ್ರಾಹ್ಮಣತ್ವವನ್ನು ಬಿಟ್ಟು ಸನ್ಯಾಸವನ್ನು ಗ್ರಹಣ ಮಾಡುವಿಕೆ ಈ ಎರಡೂ ಕೂಡ ದೇಹದ ಧರ್ಮಗಳಾಗಿರುವುವು. ಆದರೆ ನಾನು ಹೇಳಿರುವ ಉಪದೇಶದಲ್ಲಿ ಈ ಯಾವ ದೇಹವೇ ಮಿಥ್ಯೆಯಾಗಿರುವುದು ॥೭೧೮॥ ಅದಕ್ಕಾಗಿ ನನ್ನ ಉಪದೇಶಕ್ಕೆ ಪ್ರಮಾಣವನ್ನಾಗಿ ಮಾಡಿಕೊಂಡು ಸನಕಾದಿಕರು ತಮ್ಮ ಬ್ರಾಹ್ಮಣತ್ವವನ್ನು ಈಗಲೂ ತ್ಯಜಿಸಿರುವುದಿಲ್ಲ. ಇದರಿಂದ ಇವರು ನನ್ನ ಗುಹ್ಯ ಜ್ಞಾನವನ್ನು ಪ್ರಾಪ್ತಮಾಡಿಕೊಂಡಿರುವರೆಂದು ತೋರುವುದು ॥೭೧೯॥ ಇದೇ ಉಪದೇಶದಿಂದ ನಾರದರೂ ಕೂಡ ತನ್ನ ಬ್ರಾಹ್ಮಣತ್ವವನ್ನು ಹಿಡಿದುಕೊಂಡೇ ಆತ್ಮಜ್ಞಾನದಿಂದ ಬ್ರಹ್ಮಾನಂದದಲ್ಲಿ ಕುಣಿಯುತ್ತ ಪ್ರೇಮದಿಂದ ಹಾಡುತ್ತಿರುವರು, ಆನಂದದಿಂದ ತೂಗಾಡುತ್ತಿರುವರು ॥೭೨೦॥ ಹೀಗಿರುವ ಯಾವ ತನ್ನ ಚೈತನ್ಯಘನ ಸ್ವರೂಪದ ಪ್ರಕಾಶಿತಗೊಳಿಸಲು ಭಗವಾನ ಶ್ರೀಕೃಷ್ಣನು ಸ್ವತಃ ಆತನ ಸ್ತವನೆಯನ್ನು ಮಾಡುತ್ತಿರುವನು ॥೭೨೧॥

ಸಾಂಖ್ಯವೆಂದರೆ ಶ್ರೇಷ್ಠ ಜ್ಞಾನವು, ಅಷ್ಟಾಂಗಾದಿ ಸಾಧನೆಗಳಿಂದ ಪ್ರಾಪ್ತವಾಗುವ ಯೋಗವು, ಅಥವಾ ಸತ್ಯದ ಯಾವ ಸತ್ಯತ್ವವು, ಇವು ನನ್ನ ನಿಜವಾದ ಸ್ವರೂಪವಾಗಿರುವುವು ಎಂದು ತಿಳಿಯಬೇಕು ॥೭೨೨॥ ಯಾವ ಸತ್ಯದ ಆಧಾರದಿಂದ ಸಂತರು ಸದ್ಧರ್ಮದಿಂದ ನಡೆಯುವರು ಹಾಗೂ ನಿರಿಚ್ಛವಾದ ಅವರ ಯಾವ ವಾಣಿಯು ಅದು ಕೂಡ ನನ್ನ ಹೊರತಾಗಿ ಭಿನ್ನವಾಗಿರಲು ಶಕ್ಯವಿಲ್ಲ ॥೭೨೩॥ ತೇಜದಲ್ಲಿ ಇರುವ ಯಾವ ಪ್ರಭಾವವು, ಅದಕ್ಕೆ ನನ್ನಿಂದಲೇ ಸತೇಜತೆಯು ಪ್ರಾಪ್ತವಾಗುತ್ತಿರುವುದು. ಲಕ್ಷ್ಮಿಗೆ ಪ್ರಾಪ್ತವಾಗಿರುವ ಯಾವ ಐಶ್ವರ್ಯವೂ ಕೂಡ ನನ್ನಿಂದಲೇ ಎಂದು ಲಕ್ಷದಲ್ಲಿಡು ॥೭೨೪॥ ಸಾಧುಜನರೂ ಸಹ ಕೀರ್ತಿಗೆ ಮಾನವನ್ನು ಕೊಡುವರು. ಈ ಕೀರ್ತಿಯು ಅವರಿಗೆ ನನ್ನ ಕೀರ್ತನೆಯಿಂದ ಪ್ರಾಪ್ತವಾಗುವುದು. ನನ್ನನ್ನು ಬಿಟ್ಟು ಆ ಕೀರ್ತಿಯನ್ನು ಯಾರೂ ಸ್ವೀಕರಿಸುವುದಿಲ್ಲ ॥೭೨೫॥

ಮಾಝೋನಿ ತೇಜೇ ನಿಗ್ರಹತಾ । ನಿಗ್ರಹೋ ಕರೀ ಸಮಸ್ತಾ । ಅದಮ್ಯಾ ದಮೂ ದಮಿತಾ । ಜಾಣ ತತ್ತ್ವತಾ ಮಾಝೋನಿ ॥೭೨೬॥ ಯೇಥ ಧ್ಯೇಯ ಆಣಿ ಧ್ಯಾನ । ಕಾ ಸಾಧ್ಯ ಆಣಿ ಸಾಧನ । ಯಾ ಅವಘಿಯಾ ಮೀ ಅಧಿಷ್ಠಾನ। ಮಜವೇಗಳೇ ಭಾನ ಯಾ ಕೈಚೇ ॥೭೨೭॥ ತುಮ್ಹೀ ಬ್ರಾಹ್ಮಣ ಅತಿಶ್ರೇಷ್ಠ । ಮಜಹೀ ಪೂಜ್ಯಪಣೇ ವರಿಷ್ಠ । ಯಾಲಾಗೀ ನಿಜಜ್ಞಾನ ಚೋಖಟ । ತುಮ್ಹಾಸೀ ಮ್ಯಾ ಪ್ರಕಟ ಸಾಂಗೀತಲೇ ॥೭೨೮॥

ಮಾಂ ಭಜಂತಿ ಗುಣಾಃ ಸರ್ವೇ ನಿರ್ಗುಣಂ ನಿರಪೇಕ್ಷಕಮ್ ।
ಸುಹೃದಂ ಪ್ರಿಯಮಾತ್ಮಾನಂ ಸಾಮ್ಯಾಸಂಗದಯೋಽಗುಣಾಃ ॥೪೦॥

ಅರ್ಥ :- ನಾನು ಸರ್ವ ಗುಣರಹಿತನಾಗಿರುವೆನು ಮತ್ತು ಯಾವ ಅಪೇಕ್ಷೆಯನ್ನೂ ಮಾಡುವುದಿಲ್ಲ. ಸಾಮ್ಯ, ಅಸಂಗ ಇತ್ಯಾದಿ ನಿತ್ಯ ಗುಣ ಮತ್ತು ಇತರ ಸಾಮಾನ್ಯಗುಣ, ನಿರ್ಗುಣ, ನಿರಪೇಕ್ಷ ಸಹೃದ ಹಾಗೂ ಪ್ರಿಯ ಆತ್ಮಾ ಹೀಗಿರುವ ನನ್ನನ್ನು ಭಜಿಸುವರು.

ಮೀ ವಸ್ತುತಾ ನಿರಪೇಕ್ಷ ನಿರ್ಗುಣ । ತ್ಯಾ ಮಾಝ್ಯಾ ಠಾಯೀ ಭಜೋನಿ ಗುಣ। ಸಹೃದ ಆತ್ಮಾ ಪ್ರಿಯ ಜಾಣ । ಐಸೇ ಲಕ್ಷಣ ಮಜ ಕರಿತೀ ॥ ೭೨೯॥ ಸಮತಾ ಆಣಿ ಅಸಂಗತಾ । ಯಾಹೀ ಗುಣಾಂಚ್ಯಾ ಅವಸ್ಥಾ । ಆಣೋನಿ ಠೇವಿತೀ ಮಾಝ್ಯಾ ಮಾಥಾ । ಗುಣಸ್ವಭಾವತಾ ಲಕ್ಷಣೇ ॥೭೩೦॥ ಹೋ ಕಾ ಸಬಳ ಬಳೇ ಅಂಧಕಾರ । ಕೈ ಯುದ್ಧಾ ಆಲಾ ಸೂರ್ಯಾ ಸಮೋರ । ತರೀ ತಮಾರೀ ಹಾ ಬಡಿವಾರ । ಸೂರ್ಯಾ ಆಂಧಾರ ಜೇವೀ ದೇತ ॥೭೩೧॥ ಕೋಣೇ ಧರೋನಿಯಾ ಆಕಾಶ । ಘಟೀ ಘಾತಲೇ ಸಾವಕಾಶ। ತರೀ ಘಟಯೋಗೇ ಘಟಾಕಾಶ । ಮಿಥ್ಯಾ ಗಗನಾಸ ನಾಂವ ಆಲೇ ॥೭೩೨॥ ನಾಹೀ ಘಟಾಸೀ ಆತಳಲಾ । ಗಗನೀಚಾ ಗಗನೀಚ ಸಂಚಲಾ । ತೋ ಘಟೇ ಘಟಚಂದ್ರಮಾ ಕೇಲಾ । ಮೂರ್ಖಾಸೀ ಮಾನಲಾ ಸತ್ಯತ್ವೇ ॥೭೩೩॥ ತೇವೀ ಮೀ ಕೇವಳ ನಿರ್ಗುಣ । ತ್ಯಾ ಮಾಝ್ಯಾ ಠಾಯೀ ಭಜೋನಿ ಗುಣ । ಸಹೃದ ಆತ್ಮಾ ಇತ್ಯಾದಿ ಜಾಣ । ಅಸಂಗಾದಿ ಲಕ್ಷಣ ಮಜ ದೇತೀ ॥೭೩೪॥ ಗುಣಾಸೀ ಮೀ ನಾತಳೇ ಜರೀ। ತರೀ ಮಜ ಮ್ಹಣತೀ ಲೀಲಾಧಾರೀ । ಏವಂ ಗುಣಚಿ ಗುಣಾಮಾಝ್ಯಾರೀ। ಮಿಥ್ಯಾ ಮಜವರೀ ಆಳ ಹಾ ॥೭೩೫॥ ತೇಥ ಮೀ ಘೇತಾ ನಾ ದೇತಾ । ಕರ್ತಾ ನಾ ಕರವಿತಾ । ಹೇ ಮಾಝೀ ನಿಜಸ್ವಭಾವತಾ । ಯೇರ ತೇ ಅವಸ್ಥಾ ಗುಣಾಂಚೀ ॥೭೩೬॥ ಏವಂ ಪೂರ್ವಾಪಾರ ಅತಿವಿಚಿತ್ರ । ಸಾಂಗೋನಿ ಜ್ಞಾನವಿಜ್ಞಾನನಿರ್ಧಾರ । ತ್ಯಾ ಇತಿಹಾಸಾಚಾ ಉಪಸಂಹಾರರ ಸ್ವಯೇ ಸಾರಂಗಧರ ಕರೀತಸೇ ॥೭೩೭॥

ನಿಗ್ರಹತೆಯು ಇದು ನನ್ನದೇ ತೇಜದಿಂದ ಸರ್ವರಿಗೂ ನಿಗ್ರಹ ಮಾಡಲು ಹಚ್ಚುವುದು. ಆಧೀನದಲ್ಲಿರಲು ಶಕ್ಯವಿಲ್ಲದ ದಮನವು ಇದು ನನ್ನಿಂದ ಮಾತ್ರ ಸಾಧ್ಯವಾಗುವುದು ॥೭೨೬॥ ಅದಕ್ಕಾಗಿ ಧ್ಯೇಯ ಮತ್ತು ಧ್ಯಾನ, ಸಾಧ್ಯ ಮತ್ತು ಸಾಧನೆ, ಈ ಎಲ್ಲಕ್ಕೂ ಆಶ್ರಯವು ನಾನೇ ಆಗಿರುವೆನು. ನನ್ನಿಂದ ಅವರಿಗೆ ಕಾರ್ಯದ ಪ್ರೇರಣೆಯು ದೊರೆಯುವುದು ॥೭೨೭॥ ನೀವು ಅತಿಶ್ರೇಷ್ಠರಾದ ಬ್ರಾಹ್ಮಣರಾಗಿರುವಿರಿ. ಪೂಜ್ಯತ್ವದಿಂದ ವರಿಷ್ಠರಾಗಿರುವಿರಿ. ಆದ್ದರಿಂದ ಈ ಯಾವ ಶುದ್ಧ ಆತ್ಮಜ್ಞಾನವನ್ನು ನಾನು ನಿಮಗೆ ಬಹಿರಂಗವಾಗಿ ಸ್ಪಷ್ಟಮಾಡಿ ಹೇಳಿದೆನು ॥೭೨೮॥

ನಿಜವಾಗಿ ವಿಚಾರಿಸಿ ನೋಡಲು ನಾನು ಮಾತ್ರ ನಿರಿಚ್ಛ ಮತ್ತು ನಿರ್ಗುಣನಾಗಿರುವೆನು. ಆದರೆ ನನ್ನಲ್ಲಿ ಗುಣಗಳ ಕಲ್ಪನೆಯಿಂದ ಭಕ್ತಿಯನ್ನುಮಾಡಿ ಸುಹೃದ, ಆತ್ಮಾ, ಪ್ರಿಯ ಇತ್ಯಾದಿ ಲಕ್ಷಣಗಳನ್ನು ನನಗೆ ಹಚ್ಚುವರು ಇದನ್ನು ಲಕ್ಷದಲ್ಲಿಡು ॥೭೨೯॥ ಸಮತಾ ಮತ್ತು ಅಸಂಗತಾ ಇವು ಗುಣಗಳ ಅವಸ್ಥೆಯಾಗಿರುವುವು. ಇವುಗಳನ್ನೂ ಸಹ ಗುಣ-ಸ್ವಭಾವ ಲಕ್ಷಣಗಳಿಂದ ನನ್ನಲ್ಲಿ ತಂದಿಡುವರು ॥೭೩೦॥ ಕತ್ತಲೆಯು ತನ್ನ ಸರ್ವ ಸೈನ್ಯವನ್ನು ತೆಗೆದುಕೊಂಡು ಪ್ರಚಂಡವಾದ ಸಾಮರ್ಥ್ಯದಿಂದ ಸೂರ್ಯನ ಎದುರಿಗೆ ಎಂದಾದರೂ ಯುದ್ಧಕ್ಕೆ ನಿಂತಿರುವುದೇ? ಹೀಗಿದ್ದರೂ ಕೂಡ ಸೂರ್ಯನಿಗೆ ಕತ್ತಲೆನಾಶಕನು ಎಂದು ಹೀಗೆ ಮಾನದ ಹೆಸರನ್ನು ಕೊಡುವರು ॥೭೩೧॥ ಅಥವಾ ಆಕಾಶವನ್ನು ಹಿಡಿದು ಯಾರಾದರೂ ಮೆಲ್ಲನೇ ಮಡಿಕೆಯಲ್ಲಿ ತುಂಬಿರುವರೇ? ಆದರೂ ಕೂಡ ಘಟದ ಕಾರಣವಾಗಿ ಆಕಾಶಕ್ಕೆ ಘಟಾಕಾಶವೆಂಬ ಸುಳ್ಳಾಗಿರುವ ಹೆಸರು ಪ್ರಾಪ್ತವಾಗಿರುವುದು ॥೭೩೨॥ ಚಂದ್ರನು ಘಟದಲ್ಲಿ ಎಂದಿಗೂ ಸಿಕ್ಕಿಕೊಂಡು ಇರುವುದಿಲ್ಲ. ಆತನು ಯಾವಾಗಲೂ ಆಕಾಶದಲ್ಲಿಯೇ ಇರುವನು. ಆದರೆ ಘಟವು ಆತನ ಪ್ರತಿಬಿಂಬವನ್ನು ಧರಿಸಿ ಆತನಿಗೆ ಘಟಚಂದ್ರನನ್ನಾಗಿ ಮಾಡಿತು, ಅಜ್ಞಾನಿ ಜನರಿಗೆ ಇದೇ ನಿಜವೆನಿಸುವುದು ॥೭೩೩॥ ಅದರಂತೆ ನಾನು ಕೇವಲ ನಿರ್ಗುಣನಾಗಿರುವೆನು. ಹೀಗಿದ್ದರೂ ಸಹ ನನ್ನಲ್ಲಿ ಗುಣಗಳ ಕಲ್ಪನೆಯಿಂದ ಭಜನೆಯನ್ನು ಮಾಡುತ್ತ ಸುಹೃದ, ಆತ್ಮಾ, ಅಸಂಗ ಇತ್ಯಾದಿ ಲಕ್ಷಣಗಳನ್ನು ನನಗೆ ಹಚ್ಚುವರು ॥೭೩೪॥ ನಾನು ಎಂದಿಗೂ ಗುಣಗಳನ್ನು ಸ್ಪರ್ಶ ಕೂಡ ಮಾಡುವುದಿಲ್ಲ. ಹೀಗಿದ್ದರೂ ನನಗೆ ಲೀಲಾಧಾರೀ ಎಂದು ಹೇಳುವರು. ಈ ಪ್ರಕಾರವಾಗಿ ಗುಣಗಳೇ ಗುಣಗಳಲ್ಲಿ ಇರುತ್ತಿರುವುವು. ಸುಮ್ಮನೇ ನನ್ನ ಮೇಲೆ ಮಿಥ್ಯಾ ಆರೋಪವನ್ನು ಮಾಡುವರು ॥೭೩೫॥ ನಾನು ತೆಗೆದುಕೊಳ್ಳುವವನೂ ಅಲ್ಲ ಮತ್ತು ಕೊಡುವವನೂ ಅಲ್ಲ. ನಾನು ಮಾಡುವವನೂ ಅಲ್ಲ ಮತ್ತು ಮಾಡಿಸುವವನೂ ಅಲ್ಲ. ಇದು ನನ್ನ ಸ್ವಭಾವಧರ್ಮವಾಗಿದೆ. ಇತರ ಇರುವ ಯಾವ ಅವಸ್ಥೆಗಳು ಎಲ್ಲವೂ ಗುಣಗಳದ್ದಾಗಿರುವುವು ॥೭೩೬॥ ಈ ಪ್ರಕಾರವಾಗಿ ಜ್ಞಾನದ ಮತ್ತು ವಿಜ್ಞಾನದ ಯಾವ ಪೂರ್ವಾಪರವಾಗಿ ನಡೆದುಬಂದಿರುವ ಅತಿಶಯ ವಿಲಕ್ಷಣವಾದ ಸ್ವರೂಪವನ್ನು ಹೇಳಿ ಶ್ರೀಕೃಷ್ಣನು ಈಗ ಸ್ವತಃ ಈ ಇತಿಹಾಸದ ಉಪಸಂಹಾರವನ್ನು ಮಾಡುವನು ॥೭೩೭॥.

ಇತಿ ಮೇ ಛಿನ್ನಸಂದೇಹಾ ಮುನಯಃ ಸನಕಾದಯಃ । ಸಭಾಜಯಿತ್ವಾ ಪರಯಾ ಭಕ್ತ್ಯಾಽಗೃಣತ ಸಂಸ್ತವೈಃ ॥೫೧॥

ಅರ್ಥ :- ಪ್ರಿಯ ಉದ್ಧವನೇ, ಈ ಪ್ರಕಾರವಾಗಿ ನಾನು ಸನಕಾದಿಕಮುನಿಗಳ ಸಂಶಯಗಳನ್ನು ಪರಿಹಾರಗೊಳಿಸಿದೆನು. ಅವರು ಪರಮ ಭಕ್ತಿಯಿಂದ ನನ್ನ ಪೂಜೆಯನ್ನುಮಾಡಿದರು ಮತ್ತು ಸ್ತುತಿಯಿಂದ ನನ್ನ ಮಹಿಮೆಗಳನ್ನು ಹಾಡಿಹೊಗಳಿದರು.

ಆತ್ಮಜ್ಞಾನೀ ಪರಮ ದಕ್ಷ । ಮುಮುಕ್ಷೂ ಮಾಜೇ ಅತಿನೇಟಕ । ಸಂದೇಹಾಪನ್ನ ಸನಕಾದಿಕ । ಮ್ಯಾ ಯಾಪರೀ ದೇಖ ನಿಃಸಂದೇಹ ಕೇಲೇ ॥೭೩೮॥ ಸದಾ ಸಾವಧಾನೇ ನಿರ್ಮಳ । ಮಾಝ್ಯಾ ಭಜನೀ ಅತಿಪ್ರೇಮಳ । ಸದಾ ಮದ್ರೂಪೇ ಮನನಶೀಳ । ಅವ್ಯಾಕುಳ ಶ್ರವಣಾರ್ಥೀ ॥೭೩೯॥ ಉದ್ಧವಾ ತಿಹೀ ಐಕತಾ ಮಾಝೀ ಗೋಷ್ಟೀ। ಮಾಝ್ಯಾ ಸ್ವರೂಪೀ ಘಾತಲೀಮಿಠೀ । ಮದ್ರೂಪ ಝಾಲೇ ಉಠಾಉಠೀ । ಬಾಪ ಜಗಜೇಠೀ ಬ್ರಹ್ಮಪುತ್ರ ॥೭೪೦॥ ತಿಹೀ ದೃಶ್ಯ ದ್ರಷ್ಟಾ ದರ್ಶನ । ತ್ರಿಪುಟೀಚೇ ಕೇಲೇ ಶೂನ್ಯ । ಪರಬಹ್ಮಚಿ ಝಾಲೇ ಪೂರ್ಣ । ಮಾಝೇನಿ ಜಾಣ ಉಪದೇಶೇ ॥೭೪೧॥ ಪರಮ ಪಾವಲೇ ಸಮಾಧಾನ। ಗದ್ಯಪದ್ಯಾದಿ ಸುಲಕ್ಷಣ । ಮಾಝೇ ಕರೋನಿಯಾ ಸ್ತವನ । ಪೂಜಾವಿಧಾನ ಮಾಂಡಿಲೇ ॥೭೪೨॥

ತೈರಹಂ ಪೂಜಿತಃ ಸಮ್ಯಕ್ ಸುಸ್ತುತಃ ಪರಮರ್ಷಿಭಿಃ । ಪ್ರತ್ಯೇಯಾಯ ಸ್ವಕಂ ಧಾಮ ಪಶ್ಯತಃ ಪರಮೇಷ್ಠಿನಃ ॥೫೨॥

ಅರ್ಥ :- ಪ್ರಿಯ ಉದ್ಧವನೇ, ಸನಕಾದಿಕ ಮುನಿಗಳು ಈ ಪ್ರಕಾರವಾಗಿ ಉತ್ತಮ ರೀತಿಯಲ್ಲಿ ನನ್ನ ಪೂಜೆಯನ್ನು ಮಾಡಿದರು ಮತ್ತು ಸ್ತುತಿಯನ್ನು ಮಾಡಿದರು. ತದನಂತರ ನಾನು ಬ್ರಹ್ಮದೇವನ ಎದುರಿನಲ್ಲಿಯೇ ಅದೃಶ್ಯನಾಗಿ ನನ್ನ ಧಾಮಕ್ಕೆ ತಿರುಗಿ ಬಂದೆನು.

ಜರೀ ಪೂಜ್ಯಪೂಜಕತಾ ಗೇಲೀ । ತರೀ ತಿಹೀ ಗುರೂಚೀ ಪೂಜಾ ಕೇಲೀ । ಸಾಂಡೂನಿ ದ್ವೈತಾಚಿ ಭುಲೀ । ಪೂಜಾ ಮಾಂಡಿಲೀ ಅತಿಪ್ರೀತೀ ॥೭೪೩॥ ಶಿಷ್ಯ ಝಾಲಿಯಾಹೀ ಬ್ರಹ್ಮಸಂಪನ್ನ । ತ್ಯಾಹೀವರೀ ತ್ಯಾಸೀ ಗುರೂ ಪೂಜ್ಯ ಜಾಣ । ಸದ್ಗುರೂ ತೋಚಿ ಬ್ರಹ್ಮ ಪೂರ್ಣ । ಹೇ ಪಾವಲೀ ಖೂಣ ಸನಕಾದಿಕಾ ॥೭೪೪॥ ಜ್ಯಾಚ್ಯಾ ಬೋಲಾಸರಿಸೇಚಿ ಪಾಹೇ । ಅವಘೇ ಬ್ರಹ್ಮಚಿ ಹೋಊನಿ ಠಾಯೇ । ತ್ಯಾ ಸದ್‌ಗುರೂಚೇ ಪೂಜ್ಯ ಪಾಯೇ । ಸಾಂಗೂ ಕಾಯೇ ಬೋಲವರೀ ॥೭೪೫॥ ಜ್ಯಾಸೀ ಪರಬ್ರಹ್ಮ ಆಲೇ ಹಾತಾ । ತೋಚಿ ಜಾಣೇ ಸದ್‌ಗುರೂಚೀ ಪೂಜ್ಯತಾ । ಇತರಾಂಸೀ ಹೇ ನ ಕಳೇ ಕಥಾ । ಅನುಮಾನತಾ ಬೋಲವರೀ ॥೭೪೬॥ ತೇ ಸನಕಾದಿಕ ಸಮಸ್ತ । ಮಾಝೀ ಪೂಜಾ ಕರೋನಿ ಯಥೋಕ್ತ । ವಾರಂವಾರ ಸ್ತವನ ಕರೀತ । ಚರಣಾ ಲಾಗತ ಪುನಃಪುನಃ ॥೭೪೭॥ ಮಾಝ್ಯಾ ಭಜನೀ ಏಕಮುಖ । ಮಾಝಿಯಾ ನಿಜಭಾವೇ ಅತಿಭಾವಿಕ । ಮಜ ಅವಾಪ್ತಕಾಮಾಸೀ ಸುಖ । ತ್ಯಾಂಚೇ ಪೂಜನೀ ದೇಖ ಉಥಳಲೇ ॥೭೪೮॥

ಆತ್ಮಜ್ಞಾನೀ, ಅತಿಶಯ ದಕ್ಷರಾದ, ಮುಮುಕ್ಷುಗಳವರಲ್ಲಿ ಪರಮ ಶ್ರೇಷ್ಠರಾದ ಸನಕಾದಿಕರು ಸಂದೇಹಯುಕ್ತರಾಗಿದ್ದರು. ಅವರ ಮನದಲ್ಲಿನ ಸಂಶಯವನ್ನು ನಾನು ಈ ಪ್ರಕಾರವಾಗಿ ದೂರ ಮಾಡಿದೆನು ॥೭೩೮॥ ಇವರು ಯಾವಾಗಲೂ ದಕ್ಷರಾಗಿದ್ದರು, ಪವಿತ್ರರಾಗಿದ್ದರು,ಅತ್ಯಂತ ಪ್ರೇಮದಿಂದ ನನ್ನ ಭಜನೆಯನ್ನು ಮಾಡುವವರಾಗಿದ್ದರು, ನಿರಂತರವಾಗಿ ನನ್ನ ಸ್ವರೂಪದ ಚಿಂತನೆಯನ್ನು ಮಾಡುವವರಾಗಿದ್ದರು ಮತ್ತು ಶ್ರವಣಕ್ಕಾಗಿ ಅತಿಶಯವಾಗಿ ಉತ್ಸುಕರಾಗಿದ್ದರು ॥೭೩೯॥ ಹೇ ಉದ್ಧವನೇ, ಸನಕಾದಿಕರು ನನ್ನ ಉಪದೇಶವನ್ನು ಕೇಳುತ್ತಲೇ ತತ್ಕಾಲದಲ್ಲಿ ನನ್ನ ಸ್ವರೂಪಕ್ಕೆ ತೆಕ್ಕೆ ಬಿದ್ದರು ಮತ್ತು ಬಹುಬೇಗನೇ ನನ್ನಲ್ಲಿ ಏಕರೂಪರಾದರು. ಹೀಗೆ ಯಾವ ಬ್ರಹ್ಮಪುತ್ರರು ಜಗತ್ತಿನಲ್ಲಿ ಧನ್ಯಧನ್ಯರಾದರು ॥೭೪೦॥ ನನ್ನ ಉಪದೇಶದ ಯೋಗದಿಂದ ದೃಶ್ಯ, ದ್ರಷ್ಟಾ ಮತ್ತು ದರ್ಶನ ಈ ತ್ರಿಪುಟಿಯನ್ನು ಶೂನ್ಯವನ್ನಾಗಿ ಮಾಡಿಬಿಟ್ಟರು ಮತ್ತು ಪರಬ್ರಹ್ಮನಲ್ಲಿ ಪರಿಪೂರ್ಣವಾಗಿ ಏಕರೂಪರಾದರು ॥೭೪೧॥ ಅವರಿಗೆ ಪರಮ ಸಮಾಧಾನವು ಲಭಿಸಿತು. ಅವರು ಉತ್ತಮ ಗದ್ಯ-ಪದ್ಯಗಳಿಂದ ನನ್ನ ಸ್ತವನೆಯನ್ನು ಮಾಡುತ್ತ ನನ್ನ ಪೂಜೆಯನ್ನು ಮಾಡಲು ಆರಂಭಿಸಿದರು ॥೭೪೨॥

ಅವರ ಪೂಜ್ಯ-ಪೂಜಕ ಭಾವವು ಹೋಗಿದ್ದರೂ ಕೂಡ ಅವರು ಗುರುಗಳ ಪೂಜೆಯನ್ನು ಮಾಡಿದರು. ದ್ವೈತದ ಭ್ರಮೆಯನ್ನು ಒಗೆದು ಅವರು ಅತ್ಯಂತ ಪ್ರೇಮದಿಂದ ಪೂಜೆಯನ್ನು ಹಮ್ಮಿಕೊಂಡರು ॥೭೪೩॥ ಶಿಷ್ಯನು ಬ್ರಹ್ಮಸ್ವರೂಪನಾಗಿದ್ದರೂ ಕೂಡ ಆತನಿಗೆ ಗುರುಗಳು ಪೂಜ್ಯರಾಗಿರುವರು. ಸದ್ಗುರು ಪೂರ್ಣ ಪರಬ್ರಹ್ಮನಾಗಿರುವನು. ಈ ಮಹಿಮೆಯು ಸನಕಾದಿಕರಿಗೆ ತಿಳಿದಿತ್ತು ॥೭೪೪॥ ಯಾರ ಉಪದೇಶದಿಂದ ಇವರೆಲ್ಲರೂ ಬ್ರಹ್ಮಸ್ವರೂಪರಾದರೋ ಆ ಯಾವ ಸದ್ಗುರುಗಳ ಪವಿತ್ರ ಚರಣ ಕಮಲಗಳನ್ನು ನಾನು ಯಾವ ಶಬ್ದದಿಂದ ವರ್ಣಿಸಲಿ? ॥೭೪೫॥ ಯಾರಿಗೆ ಪರಬ್ರಹ್ಮವು ಹಸ್ತಗತವಾಗಿರುವುದೋ, ಅವರಿಗೆ ಸದ್ಗುರುಗಳ ಪೂಜ್ಯತೆಯು ತಿಳಿಯುತ್ತಿರುವುದು. ಇತರರಿಗೆ ಈ ಮಾತು ತಿಳಿಯುವುದಿಲ್ಲ. ಅವರ ಹೇಳುವಿಕೆಯಲ್ಲಿ ಅನುಮಾನವಿರುವುದು ॥೭೪೬॥ ಸನಕಾದಿಕ ಸಮಸ್ತರು ನನ್ನ ಯಥಾಸಾಂಗವಾಗಿ ಪೂಜೆಯನ್ನು ಮಾಡಿ ಮೇಲಿಂದ ಮೇಲೆ ನನ್ನನ್ನು ಮುಕ್ತಕಂಠದಿಂದ ಸ್ತುತಿಸುತ್ತ ಪುನಃಪುನಃ ನನ್ನ ಚರಣಗಳಿಗೆ ವಂದಿಸಿದರು ॥೭೪೭॥ ನನ್ನ ಭಜನೆಯಲ್ಲಿ ಅವರು ತಲ್ಲೀನರಾದರು, ಭಕ್ತಿಭಾವದಿಂದ ಅವರು ಏಕರೂಪರಾದರು. ಆಗ ಪೂರ್ಣಕಾಮನಾದ ನನಗೆ ಅವರ ಪೂಜನೆಯಿಂದ ಪರಮಸಂತೋಷವಾಯಿತು ॥೭೪೮॥

ಮಗ ಕರೂನಿ ಪ್ರದಕ್ಷಿಣಾ । ತೇ ಲಾಗಲೇ ಮಾಝಿಯಾ ಚರಣಾ । ಪರಮ ಸುಖ ಝಾಲೇ ಬ್ರಾಹ್ಮಣಾ । ವಚನಾರ್ಥೇ ಜಾಣಾ ಮಾಝೇನೀ ॥೭೪೯॥ ಪಹಾತ ಅಸತಾ ಪ್ರಜಾಪತೀ । ಸನಕಾದಿಕ ಉಭೇ ಅಸತೀ । ತ್ಯಾದೇಖತಾ ನಿಜಧಾಮಾಪ್ರತೀ । ಶೀಘ್ರಗತೀ ಮೀ ಆಲೋ॥೭೫೦॥ ಮಾಝೇ ಶಿಷ್ಯ ಸನಕಾದಿಕ । ಉದ್ಧವಾ ಯಾ ರೀತೀ ಝಾಲೇ ದೇಖ । ತೋ ಇತಿಹಾಸ ಅಲೋಕಿಕ । ತುಜ ಮ್ಯಾ ಸಮ್ಯಕ್ ಸಾಂಗೀತಲಾ ॥೭೫೧॥ ತೇ ಯೋಗಿಯಾಮಾಜೀ ಅತಿ ಉದ್ಭಟ । ಭಕ್ತಾಮಾಜೀ ಅತಿಶ್ರೇಷ್ಠ । ಜ್ಞಾನಿಯಾಮಾಜೀ ಅತಿವರಿಷ್ಠ । ಶಿಷ್ಯ ಚೋಖಟ ಸನಕಾದಿಕ ॥೭೫೨॥ ಹಂಸಗೀತನಿರೂಪಣ । ಪುರಾತನ ಜೇ ಬ್ರಹ್ಮಜ್ಞಾನ । ತೇ ಉದ್ಧವಾಸೀ ಶ್ರೀಕೃಷ್ಣ । ಪ್ರಸನ್ನ ಹೋಊನ ದೀಧಲೇ ॥೭೫೩॥ ಭಾಗವತ ಪಂಥೇ ಚಾಲತಾ । ಹೇ ಪುರಾತನ ಬ್ರಹ್ಮಕಥಾ ।ಏಕಾ ಏಕಾದಶೂ ಪಾಹತಾ । ಸ್ವಭಾವೇ ಹಾತಾ ಪೈ ಆಲೀ ॥೭೫೪॥ಜೇ ಹಂಸಮುಖೀಚೀ ಚಿದ್ರತ್ನೇ । ಜೇ ಸನಕಾದಿಕಾ ಝಾಲೀ ಭೂಷಣೇ । ಉದ್ಧವಾ ಅಲಂಕಾರಿಲಾ ಶ್ರೀಕೃಷ್ಣೇ । ತೇ ಶೇಷ ಜನಾರ್ದನೇ ಮಜ ದೀಧಲೇ ॥೭೫೫॥ ಸನಕಾದಿಕ -ಉದ್ಧವಾಚೇ ಶೇಷ । ಹಾತಾ ಆಲೇ ಹಾ ಬೋಲ ವೋಸ । ತೇ ಗೋಷ್ಟೀಸೀ ಜಾಹಲೇ ಬಹು ದಿವಸ । ಮ್ಹಣಾಲ ವಾಯಸ ಹಾ ಜಲ್ಪೋ ॥೭೫೬॥ ಕೃತಯುಗೀ ಶಂಖಾಸುರಾಸೀ । ದೇವೇ ಮಾರ್ದಿಲೇ ಹೋತೇ ತ್ಯಾಸೀ । ತೇ ಶಾಯೀ ಅದ್ಯಾಪಿ ಸಭಾಗ್ಯಾಸೀ । ಅವ್ಹಾ ಶಂಖಾಸೀ ಪಾವತೀ ॥೭೫೭॥ ರಾಮೇ ಪೂರ್ವೀ ಅಯೋಧ್ಯೇಸೀ । ಕೇಲೇ ಹೋತೇ ಮಹಾಯಾಗಾಸೀ । ತೇಥೇ ಹವಿಃಶೇಷ ಲೋಕಾಸೀ । ಅದ್ಯಾಪ ಹಾತಾಸೀ ಯೇತಸೇ ॥೭೫೮॥ ತೈಸೇಚಿ ಯೇಥೇ ಭಾಗವತೀ । ಜನಾರ್ದನಕೃಪಾಪದ್ಧತೀ । ಸನಕಾದಿಕಾಂಚೀ ಶೇಷಪ್ರಾಪ್ತೀ । ಏಕಾದಶಾರ್ಥೀ ಆಮ್ಹಾ ಝಾಲೀ ॥೭೫೯॥ ಮಾಗೇಪುಢೇ ಅವಘೇ ಏಕ । ಹಾ ಏಕಾದಶಾಚಾ ವಿವೇಕ । ತೇಣೇ ಸನಕಾದಿಕ - ಉದ್ಧವಶೇಖ । ಆಮ್ಹಾ ಹೀ ದೇಖ ಪ್ರಾಪ್ತ ಝಾಲೇ ॥೭೬೦॥ ಕರೂ ನೇದಿತಾ ಗಯಾವರ್ಜನೀ । ನ ರಿಘವೇ ಸಮರ್ಥಜನೀ । ತೇ ಪದೀ ಮಾಶೀಲಾಗುನೀ । ನಿವಾರಣ ಕೋಣೇ ಕರೀನಾ ॥೭೬೧॥ ತೇವೀ ನಾನಾ ಶಸ್ತ್ರಾರ್ಥಯುಕ್ತೀಸೀ । ಶಿಣತಾ ಸಮರ್ಥ ಸಾಧಕಾಂಸೀ । ಪ್ರಾಪ್ತೀ ನವ್ಹೇ ಜ್ಞಾನಶೇಷಾಸೀ । ತೇ ಝಾಲೀ ಆಮ್ಹಾಸೀ ಏಕಾದಶೇ ॥೭೬೨॥

ನನ್ನ ಉಪದೇಶದಿಂದ ಆ ಯಾವ ಬ್ರಾಹ್ಮಣರಿಗೆ ಅತ್ಯಂತ ಸುಖವಾಯಿತು. ಅವರು ನನಗೆ ಪ್ರದಕ್ಷಿಣೆಯನ್ನು ಹಾಕಿ ನನ್ನ ಚರಣಗಳಲ್ಲಿ ಲೋಟಾಂಗಣವನ್ನು ಹಾಕಿದರು ॥೭೪೯॥ ಆ ಸಮುದಯದಲ್ಲಿ ಬ್ರಹ್ಮದೇವನು ಮೊದಲು ಮಾಡಿ ಸರ್ವರೂ ನೋಡುತ್ತಿದ್ದಂತೆಯೇ ಮತ್ತು ಸನಕಾದಿಕರು ನಿಂತುಕೊಂಡಿದ್ದಂತೆಯೇ, ಅವರೆಲ್ಲರ ಸಮಕ್ಷಮದಲ್ಲಿ ನಾನು ತೀವ್ರವಾಗಿ ನಿಜಧಾಮಕ್ಕೆ ಹೊರಟು ಬಂದೆನು ॥೭೫೦॥ ಹೇ ಉದ್ಧವಾ, ಈ ಪ್ರಕಾರವಾಗಿ ಸನಕಾದಿಕರು ಹೇಗೆ ನನ್ನ ಶಿಷ್ಯರಾದರೆಂಬುವ ಈ ಅಲೌಕಿಕ ಇತಿಹಾಸವನ್ನು ವಿಸ್ತಾರ ಸ್ವರೂಪದಲ್ಲಿ ನಾನು ನಿನಗೆ ಹೇಳಿದೆನು ॥೭೫೧॥ ಸನಕಾದಿಕರು ಯೋಗಿಗಳವರಲ್ಲಿ ಅತಿಶ್ರೇಷ್ಠರಾಗಿರುವರು, ಭಕ್ತರಲ್ಲಿ ಅತಿಶಯವಾಗಿ ವರಿಷ್ಠರಾಗಿರುವರು, ಜ್ಞಾನಿಗಳವರಲ್ಲಿ ಅಗ್ರಗಣ್ಯರು ಮತ್ತು ಶುದ್ಧನಿರ್ಮಲ, ಪವಿತ್ರ ಅಂತಃಕರಣದವರಾಗಿರುವರು ॥೭೫೨॥ ಶ್ರೀಕೃಷ್ಣನು ಉದ್ಧವನಿಗೆ ''ಹಂಸಗೀತಾನಿರೂಪಣ''ದ ಯಾವ ಪ್ರಾಚೀನ ಬ್ರಹ್ಮಜ್ಞಾನವನ್ನು ಅತ್ಯಂತ ಪ್ರಸನ್ನಯುಕ್ತ ಅಂತಃಕರಣದಿಂದ ಕೊಟ್ಟನು ॥೭೫೩॥ ಭಾಗವತ ಧರ್ಮದಂತೆ ನಡೆಯುತ್ತಿರಲು ಮತ್ತು ಈ ಯಾವ ಹನ್ನೊಂದನೆಯ ಸ್ಕಂಧವನ್ನು ನೋಡುತ್ತಿರಲು ಈ ಪುರಾತನವಾದ ಬ್ರಹ್ಮಕಥೆಯು ಏಕನಾಥನ ಕೈಗೆ ಸಹಜವಾಗಿ ಬಂದಿತು ॥೭೫೪॥ ಹಂಸದ ಮುಖದಿಂದ ಪ್ರಕಟಗೊಂಡಿರುವ ಈ ಯಾವ ಜ್ಞಾನರತ್ನಗಳು ಸನಕಾದಿಕರಿಗೆ ಅಲಂಕಾರದೊಂದಿಗೆ ಭೂಷಣಪ್ರಾಯವಾದವು. ಆ ಯಾವ ಅಮೌಲ್ಯ ರತ್ನಗಳಿಂದ ಶ್ರೀಕೃಷ್ಣನು ಉದ್ಧವನಿಗೆ ಶೃಂಗರಿಸಿದನು ಮತ್ತು ಅವುಗಳಲ್ಲಿನ ಶೇಷ ರತ್ನಗಳನ್ನು ಶ್ರೀಗುರು ಜನಾರ್ದನ ಸ್ವಾಮಿಗಳವರು ನನಗೆ ಕೊಟ್ಟರು ॥೭೫೫॥ ಆದರೆ ಸನಕಾದಿಕರು ಮತ್ತು ಉದ್ಧವ ಇವರಿಂದ ಉಳಿದುಕೊಂಡಿರುವ ರತ್ನಗಳು ನನಗೆ ಸಿಕ್ಕವು ಎಂದು ಹೇಳುವುದು ಯೋಗ್ಯವಾಗುವುದಿಲ್ಲ. ಕಾರಣವೇನೆಂದರೆ ಸನಕಾದಿಕರು ಮತ್ತು ಉದ್ಧವ ಇವರ ಈ ಮಾತಿಗೆ ಎಷ್ಟೋ ದಿವಸಗಳು ಗತಿಸಿ ಹೋಗಿರುವುವು. ಆದ್ದರಿಂದ ಹೀಗೆ ಹೇಳುವಿಕೆಯು ವ್ಯರ್ಥವಾಗಿರುವುದು. ಹೀಗೆ ಕದಾಚಿತ್ ಅಂದರೆ ಅದಕ್ಕಾಗಿ ಕೇಳಿರಿ ॥೭೫೬॥ ಏನೆಂದರೆ ದೇವನು ಕೃತಯುಗದಲ್ಲಿ ಶಂಖಾಸುರನಿಗೆ ಸಂಹಾರ ಮಾಡಿದ್ದನು. ಆದರೆ ಆ ಸ್ಥಳದಲ್ಲಿ ಇಂದಿಗೂ ಭಾಗ್ಯವಂತರಿಗೆ ಬಲಮುರಿ ಶಂಖಗಳು ಸಿಗುತ್ತವೆ ॥೭೫೭॥ ಶ್ರೀರಾಮಚಂದ್ರನು ತ್ರೇತಾಯುಗದಲ್ಲಿ ಅಯೋಧ್ಯೆಯಲ್ಲಿ ಅಶ್ವಮೇಧ ಯಜ್ಞವನ್ನು ಮಾಡಿದ್ದನು. ಆದರೆ ಆ ಸ್ಥಳದಲ್ಲಿ ಇಂದಿಗೂ ಉಳಿದಿರುವ ಯಜ್ಞದ್ರವ್ಯಗಳು ಜನರ ಕೈಗೆ ದೊರಕುವುವು ॥೭೫೮॥ ಅದರಂತೆಯೇ ಭಾಗವತದಲ್ಲಿಯೂ ಕೂಡ ಶ್ರೀಜನಾರ್ದನ ಸದ್ಗುರುಗಳ ಕೃಪಾಪ್ರಸಾದದಿಂದ ಸನಕಾದಿಕರ ಜ್ಞಾನ ರತ್ನಗಳಲ್ಲಿನ ಉಳಿದುಕೊಂಡಿರುವ ಜ್ಞಾನರತ್ನಗಳ ಪ್ರಾಪ್ತಿಯು ಏಕಾದಶಸ್ಕಂಧದ ಅರ್ಥದಲ್ಲಿ ನನಗೆ ಪ್ರಾಪ್ತವಾದವು ॥೭೫೯॥ ಹಿಂದೆ, ಮುಂದೆ ಸರ್ವತ್ರವೂ ಸಮಪ್ರಮಾಣದಲ್ಲಿ ಪರಬ್ರಹ್ಮವು ತುಂಬಿರುವುದು. ಇದರ ಮುಖ್ಯ ವಿಚಾರವನ್ನೇ ಈ ಯಾವ ಹನ್ನೊಂದನೆಯ ಸ್ಕಂಧದಲ್ಲಿ ಮಾಡಲಾಗಿದೆ. ಆದ್ದರಿಂದ ಸನಕಾದಿಕರ ಮತ್ತು ಉದ್ಧವನ ಜ್ಞಾನರತ್ನಗಳಲ್ಲಿನ ಅವಶೇಷವು ನಮಗೂ ಕೂಡ ಪ್ರಾಪ್ತವಾದವು ॥೭೬೦॥ ಗಯಾವರ್ಜನೆಯ ಸಮಯದಲ್ಲಿ ವಿಷ್ಣುಪಾದಗಳ ಹತ್ತಿರ ಹೋಗಲು ಪರವಾನಿಗೆಯು ಹೊರತಾಗಿ ಅಲ್ಲಿ ದೊಡ್ಡ ಶ್ರೀಮಂತರಿಗೂ ಕೂಡ ಹೋಗುವುದಾಗುವುದಿಲ್ಲ. ಆದರೆ ಅದೇ ಪಾದಗಳ ಮೇಲೆ ಒಂದು ನೊಣವು ಸಿಸ್ತಾಗಿ ಕುಳಿತಿರಲು ಅದರ ನಿವಾರಣೆಯನ್ನು ಯಾರೂ ಮಾಡುವುದಿಲ್ಲ ॥೭೬೧॥ ಅದರಂತೆ ಅನೇಕ ಶಾಸ್ತ್ರಗಳಿಂದ, ಯುಕ್ತಿಯಿಂದ ಎಷ್ಟೇ ಪರಿಶ್ರಮಪಟ್ಟರೂ ಸಮರ್ಥ ಸಾಧಕರಿಗೆ ಯಾವ ಜ್ಞಾನದ ಪ್ರಾಪ್ತಿಯಾಗುವುದಿಲ್ಲವೋ, ಆ ಜ್ಞಾನವು ಹನ್ನೊಂದನೆಯ ಸ್ಕಂಧದಲ್ಲಿ ನಮಗೆ ಅನಾಯಾಸವಾಗಿ ಪ್ರಾಪ್ತವಾಯಿತು ॥೭೬೨॥

ಹಂಸಕೃಷ್ಣ ಜನಾರ್ದನ । ಸ್ವರೂಪ ಏಕ ನಾಮೇ ಭಿನ್ನ । ತೇಣೇ ಘಾಲೂನ ಬೋಧಾಂಜನ । ಜುನಾ ಠೇವಾ ಜಾಣ ದಾಖವಿಲಾ ॥೭೬೩॥ ತೇಥ ಮೀ ಏಕಾ ಏಕೂ ದೇಖತಾ । ಆಣಿ ತೋ ಏಕೂ ಮಾತೇ ದಾಖವಿತಾ । ಹೇಹೀ ನುರೇಚಿ ಬೋಧ್ಯಬೋಧಕತಾ । ಪಾಹತಾ ಪಾಹವಿತಾ ತೋಚಿ ತೋ ॥೭೬೪॥ ಆರಸಾ ಆಲಿಯಾ ಮುಖ ದಿಸೇ । ತೋ ಗೇಲಿಯಾ ತೇ ನ ದಿಸೇ । ಪರೀ ಯೇಣೇ ಜಾಣೇ ಮುಖಾಸೀ ನಸೇ । ತೇ ಸಹಜೇಚಿ ಅಸೇ ಸಂಚಲೇ ॥೭೬೫॥ ಆರಿಶಾಚೇ ಮುಖ ಆರಿಸೇ ನೇಲೇ । ಪರೀ ಪಾಹತಯಾ ನಾಹೀ ಐಸೇ ಝಾಲೇ । ಜೇ ಕಟಕಟಾ ಮಾಝೇ ಮುಖ ಗೇಲೇ । ತೇ ಅಸೇ ಸಂಚಲೇ ತೋ ಜಾಣೇ ॥೭೬೬॥ ತೇವೀ ಅಜ್ಞಾನೇ ನ್ಯಾವೇ । ಕಾ ಜ್ಞಾನ ಝಾಲಿಯಾ ಯಾವೇ । ತೈಸೇ ವಸ್ತೂಸೀ ನ ಸಂಭವೇ । ತೇ ಅಸೇ ಸ್ವಭಾವೇ ಸಂಚಲೇ ॥೭೬೭॥ ತೈಸೇ ದೇಖತೇ ಆಣಿ ದಾಖವಿತೇ । ದೋನೀ ಜಾಊನಿಯಾ ತೇಥೇ । ಮಾಝೇ ಮೀಪಣ ಜೇ ಜುನೇ ಹೋತೇ । ತೇ ದಾವಿಲೇ ಮಾತೇ ಜನಾರ್ದನೇ ॥೭೬೮॥ ಜೇವೀ ಸೂರ್ಯಾಚೇನಿ ಪ್ರಕಾಶೇ । ಸೂರ್ಯೇಚಿ ಕೀ ಸುರ್ಯೋ ದಿಸೇ। ತೇವೀ ಮಾಝೇನಿ ನಿಜಪ್ರಕಾಶೇ । ಮಜ ಮೀಚಿ ಅಸೇ ದೇಖತ ॥೭೬೯॥ ಐಶಿಯಾಹೀ ಠಾಯೀ ಜಾಣ । ಕೈಚೇ ನವೇ ಜುನೇ ಜ್ಞಾನ । ಬಹು ಕಾಳ ಠೇವಿಲೇ ಸುವರ್ಣ । ತ್ಯಾಸೀ ಮ್ಹಣೇ ಕೋಣ ಕುಹಜಕು ॥೭೭೦॥ ಕಾಲಚಾಚಿ ಆಜಿ ಉಗವಲಾ । ತೋ ಸೂರ್ಯ ಕಾಯ ಮ್ಹಣಾವಾ ಶಿಳಾ । ಕೀ ಆಜೇಚಾ ಅಗ್ನಿ ಸೋವಳಾ । ಕಾಲಚಾ ಕಾಯ ವ್ಹೋವಳಾ ಮ್ಹಣೋ ಯೇ ॥೭೭೧॥ ತೇವೀ ಸನಕಾದಿಕಾಂಚೇ ಜೇ ಜ್ಞಾನ । ತೇಚಿ ಮರಾಠೀಭಾಷೇಮಾಜೇ ಜಾಣ । ತೇಥೇ ಠೇವೂ ಜಾತಾ ದೂಷಣ । ದೋಷೀ ಆಪಣ ಹೋಇಜೇ ॥೭೭೨॥ ಕಾ ಸುವರ್ಣಾಚೇ ಕೇಲೇ ಸುಣೇ । ಪರೀ ತೇ ಮೋಲೇ ನವ್ಹೇಚಿ ಉಣೇ । ತೇವೀ ಸನಕಾದಿಕಾಂಚೇ ಜ್ಞಾನೇ । ದೇಶಭಾಷಾ ಹೀನೇ ನವ್ಹತೀಚ ॥೭೭೩॥ ಜೇವೀ ಕಾ ಗುಳಾಚೇ ಕಾರಲೇ ಕೇಲೇ । ಪರೀ ತೇ ಕಡೂಪಣಾ ನಾಹೀ ಆಲೇ । ತೇವೀ ಹಂಸಗೀತ ಮರಾಠೇ ಝಾಲೇ । ನಾಹೀ ಪಾಲಟಲೇ ಚಿನ್ಮಾತ್ರ ॥೭೭೪॥ ಜೇ ಮೋಲ ಮುಕುಟೀಚ್ಯಾ ಹೇಮಾಸೀ । ತೇಚಿ ಮೋಲ ಸುವರ್ಣಶ್ವಾನಾಸೀ । ಜೋ ಕಾ ಗ್ರಾಹಿಕ ಸುವರ್ಣಾಸೀ । ತೋ ಘೇ ದೋಘಾಂಸೀ ಸಮತ್ವೇ ॥೭೭೫॥

ಹಂಸ, ಕೃಷ್ಣ ಮತ್ತು ಜನಾರ್ದನ ಇವರ ಸ್ವರೂಪವು ಒಂದೇ ಇರುವುದು. ಹೆಸರು ಮಾತ್ರ ಭಿನ್ನ ಭಿನ್ನವಾಗಿರುವುವು. ಇವರೇ ಬೋಧರೂಪ ಅಂಜನವನ್ನು ಕಣ್ಣಿಗೆ ಹಾಕಿ ಯಾವ ಈ ಹಳೆಯ ನಿಧಿಯನ್ನು ನನಗೆ ಪ್ರತ್ಯಕ್ಷವಾಗಿ ತೋರಿಸಿದರು. ಇದನ್ನು ಲಕ್ಷದಲ್ಲಿಡಬೇಕು ॥೭೬೩॥ ಅಲ್ಲಿ ನಾನು ಏಕಾ ಅಂದರೆ ಏಕನಾಥನು ಒಬ್ಬನೇ ನೋಡುವವನಾಗಿದ್ದೆನು ಮತ್ತು ನನಗೆ ತೋರಿಸುವವನು ಆತನೊಬ್ಬನೇ ಇದ್ದನು. ಈ ಬೋಧೆ ಮತ್ತು ಬೋಧಕತ್ವವು ಉಳಿಯಲಿಲ್ಲ. ಕಾರಣವೇನೆಂದರೆ ನೋಡುವವ ಮತ್ತು ತೋರಿಸುವವ ಆತನೇ ಇರುವನು ॥೭೬೪॥ ಕನ್ನಡಿಯು ತನ್ನ ಮುಂದೆ ಬರಲು ಆಗ ಅದರಲ್ಲಿ ತನ್ನ ಮುಖವು ಕಾಣುವುದು. ಕನ್ನಡಿಯು ಮಗ್ಗಲಾಗಲು ಆಗ ಮುಖವು ಕಾಣದಂತಾಗುವುದು. ಆದರೆ ಮುಖಕ್ಕೆ ಬರುವುದು ಹೋಗುವುದು ಈ ಎರಡೂ ಸಂಭವಿಸುವುದಿಲ್ಲ. ಅದು ಸ್ವಭಾವತಃ ತಾನು ಇದ್ದಲ್ಲೇ ಇರುವುದು ॥೭೬೫॥ ಕನ್ನಡಿಯಲ್ಲಿನ ಪ್ರತಿಬಿಂಬವನ್ನು ಕನ್ನಡಿಯು ಒಯ್ಯುತ್ತಿರುವುದು ನೋಡುವವನಿಗೆ ಅದು ಕಾಣಿಸುವುದಿಲ್ಲವಷ್ಟೇ. ಆದರೆ ಇಷ್ಟರಿಂದಲೇ ಆತನು ಅರೆರೆರೇ, ನನ್ನ ಮುಖ ಹೋಯಿತೆಂದು ನೋಡುವವನು ಎಂದಿಗೂ ಹೀಗೆ ಹೇಳಲಾರನು. ಕಾರಣ ಆ ಮುಖವು ಇದ್ದಲ್ಲಿಯೇ ಇರುವುದು ಈತನಿಗೆ ತಿಳಿದಿರುವುದು ॥೭೬೬॥ ಅದಂತೆ ಅಜ್ಞಾನದಿಂದ ಇಲ್ಲದಂತೆ ಆಗುವುದು ಮತ್ತು ಜ್ಞಾನವಾದ ನಂತರ ಮರಳಿ ಬರುವುದು. ಹೀಗೆ ಪರಬ್ರಹ್ಮನಲ್ಲಿ ಆಗದು. ಪರಬ್ರಹ್ಮವು ಸ್ವಭಾವತವೇ ಇದ್ದಂತೆಯೇ ಇರುವುದು ॥೭೬೭॥ ಅದರಂತೆ ನೋಡುವವನು ಮತ್ತು ತೋರಿಸುವವನು ಹೀಗೆ ಈರ್ವರೂ ಇಲ್ಲದಾಗಿ ಅಲ್ಲಿ ನನ್ನ ಮೂಲದ ನಾನು ಎಂಬುವುದು ಇತ್ತು. ಅದನ್ನೇ ಶ್ರೀಜನಾರ್ದನ ಸ್ವಾಮಿಯವರು ನನಗೆ ಸ್ಪಷ್ಟ ಸ್ವರೂಪದಲ್ಲಿ ತೋರಿಸಿದರು ॥೭೬೮॥ ಯಾವ ಪ್ರಕಾರವಾಗಿ ಸೂರ್ಯನ ಪ್ರಕಾಶದಿಂದಲೇ ಸೂರ್ಯನು ಕಾಣುವನೋ, ಅದರಂತೆ ನನ್ನ ಆತ್ಮಪ್ರಕಾಶದಿಂದ ನಾನೇ ನನ್ನನ್ನು ನೋಡಲು ಸಮರ್ಥನಾದೆನು ॥೭೬೯॥ ಇಂತಹ ಸ್ಥಿತಿಯಲ್ಲಿ ಜ್ಞಾನವು ಹಳೆಯದು ಮತ್ತು ಹೊಸದು ಎಂದು ಹೇಗಾಗುವುದು? ಬಹು ಕಾಲದ ಸುವರ್ಣವು ಅದು ಕೆಟ್ಟು ಹೋಗಿದೆ ಎಂದು ಯಾರಾದರೂ ಹೀಗೆ ಹೇಳುವರೇ?॥೭೭೦॥ ನಿನ್ನಿನ ಸೂರ್ಯನೇ ಇಂದು ಉದಯನಾದನೆಂದು ಆತನಿಗೆ ತಂಗಳನಾದನು ಎಂದು ಹೇಳಬೇಕೆ? ಅಥವಾ ಇಂದಿನ ಅಗ್ನಿಯು ಮಡಿಯಾಗಿದೆ ಆದರೆ ನಿನ್ನಿನ ಅಗ್ನಿಯು ಏನಾದರೂ ಮಲಿನವಾಗಿತ್ತೆಂದು ಹೀಗೆ ಹೇಳಲು ಬರುವುದೇ? ॥೭೭೧॥ ಅದರಂತೆ ಸನಕಾದಿಕರ ಯಾವ ಜ್ಞಾನವನ್ನು ಮರಾಠಿ ಭಾಷೆಯಲ್ಲಿ ಹೇಳಲಾಯಿತೆಂದು ಯಾರಾದರೂ ಅದಕ್ಕೆ ದೋಷವನ್ನು ಎಣಿಸಿದರೆ ಅವರೇ ದೋಷಿಗಳಾಗುವರು ॥೭೭೨॥ ಅಥವಾ ಬಂಗಾರದ ನಾಯಿಯನ್ನು ತಯಾರಿಸಿದರೆ ಅದರ ಬೆಲೆಯು ಎಷ್ಟೂ ಕಡಿಮೆಯಾಗಲು ಶಕ್ಯವಿಲ್ಲ. ಅದರಂತೆ ಸನಕಾದಿಕರಿಗೆ ಯಾವ ಜ್ಞಾನವನ್ನು ಹೇಳಲಾಯಿತೋ, ಅದನ್ನು ದೇಶಭಾಷೆಯಾದ ಮರಾಠಿಯಲ್ಲಿ ಹೇಳಲಾಯಿತೆಂದು ಅದರ ಮಹತ್ವವು ಏನೂ ಕಡಿಮೆಯಾಗಲಾರದು ॥೭೭೩॥ ಯಾವ ಪ್ರಕಾರವಾಗಿ ಬೆಲ್ಲದ ಹಾಗಲಕಾಯಿ ತಯಾರಿಸಲು ಆಗ ಅದು ಹೇಗೆ ಕಹಿಯಾಗುವುದಿಲ್ಲವೋ, ಅದರಂತೆ ಹಂಸಗೀತವನ್ನು ಮರಾಠಿಯಲ್ಲಿ ಹೇಳಲಾಯಿತೆಂದು ಅದರ ಜ್ಞಾನವು ಬದಲಾಗುವುದಿಲ್ಲ ॥೭೭೪॥ ಕಿರೀಟದಲ್ಲಿನ ಬಂಗಾರಕ್ಕೆ ಯಾವ ಬೆಲೆಯು ಇರುವುದೋ, ಅದೇ ಬೆಲೆಯು ನಾಯಿಯನ್ನಾಗಿ ತಯಾರಿಸಿದ ಬಂಗಾರಕ್ಕೂ ಕೂಡ ಇರುವುದು. ಬಂಗಾರವನ್ನು ಕೊಳ್ಳುವವನು ಈ ಎರಡರ ಬಂಗಾರಕ್ಕೆ ಸಮಾನವಾದ ಬೆಲೆಯಲ್ಲಿ ಖರೀದಿಸುವನು ॥೭೭೫॥

ತೈಸೇ ಆತ್ಮಾನುಭವೀ ಜೇ ಯೇಥೇ । ತೇ ಮಾನಿತೀಲ ಯಾ ಗ್ರಂಥಾತೇ । ಯೇರ ತೇ ಹೇಳಸಿತೀಲ ಯಾತೇ । ನಿಜಭಾವಾರ್ಥೇ ನ ಘೇತೀ ॥೭೭೬॥ ಜೇ ವಂದಿತೀ ಕಾ ನಿಂದಿತೀ । ತೇ ದೋಘೇ ಆಮ್ಹಾ ಬ್ರಹ್ಮಮೂರ್ತೀ । ಹೇ ನಿಜಾತ್ಮಭಾವಾಚೀ ಪ್ರತೀತೀ । ಕೇಲೀ ನಿಶ್ಚಿತೀ ಜನಾರ್ದನೇ ॥೭೭೭॥ ಏಕಾ ಜನಾರ್ದನಾ ಶರಣ । ರಿಘತಾ ವಿರಾಲೇ ಏಕಪಣ । ಜೇವೀ ಕಾ ಸಮರಸೋನಿ ಲವಣ । ಸ್ವಯೇ ಜಾಣ ಸಮುದ್ರ ಝಾಲೇ ॥೭೭೮॥ ತೇಥೇ ಏಕಾ ಆಣಿ ಜನಾರ್ದನ । ಏಕ ಝಾಲೇ ಹೇ ಮಣೇ ಕೋಣ । ಜೇವೀ ಡೋಳ್ಯಾಂಚೇ ದೇಖಣೇ ಪಣ । ಡೋಳಾಚಿ ಆಪಣ ಸ್ವಯೇ ಜಾಣೇ ॥೭೭೯॥ ಡೋಳ್ಯಾಸೀ ಆರಿಸಾ ಪ್ರಕಾಶಿಜೇ । ತೇಥೆ ಡೋಳೇನಿ ಡೋಳಾ ಪಾಹಿಜೇ । ತೇವೀ ಹೇ ಜ್ಞಾನ ಜಾಣಿಜೇ । ದೇಖಣೇ ದೇಖಿಜೇ ದೇಖಣೇನೀ ॥೭೮೦॥ ಸಾಂಡೋನಿಯಾ ಏಕಪಣ । ಏಕಾ ಜನಾರ್ದನಾ ಶರಣ । ಹೇಚಿ ಹಂಸಗೀತನಿರೂಪಣ । ಝಾಲೇ ಪರಿಪೂರ್ಣ ಪೂರ್ಣತ್ವೇ ॥೭೮೧॥

ಇತಿ ಶ್ರೀಭಾಗವತೇ ಮಹಾ ಪುರಾಣೇ ಏಕಾದಶಸ್ಕಂಧೇ ಏಕಾಕಾರಟೀಕಾಯಾಂ ಶ್ರೀಕೃಷ್ಣೋದ್ಧವ ಸಂವಾದೇ ಹಂಸಗೀತನಿರೂಪಣಂ ನಾಮ ತ್ರಯೋದಶೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಅದರಂತೆ ನಿಜವಾದ ಆತ್ಮಾನುಭವಿಯವರಿಗೆ ಈ ಗ್ರಂಥವು ಮಾನ್ಯವಾಗುವುದು ಮತ್ತು ಇತರ ಆತ್ಮಾನುಭವವಿಲ್ಲದವರಿಗೆ ಈ ಗ್ರಂಥವು ಮಾನ್ಯವಾಗಲಾರದು. ಇವರು ಅಂತಃಕರಣ ನಿಷ್ಠೆಯಿಂದ, ಭಕ್ತಿಭಾವದಿಂದ ಈ ಗ್ರಂಥದ ಸ್ವೀಕಾರವನ್ನು ಮಾಡುವುದಿಲ್ಲ ॥೭೭೬॥ ಈ ಗ್ರಂಥಕ್ಕೆ ವಂದಿಸುವವರೂ ಮತ್ತು ನಿಂದಿಸುವವರೂ ಈ ಈರ್ವರೂ ನಮಗೆ ಬ್ರಹ್ಮಸ್ವರೂಪರಾಗಿರುವರು. ಇದೇ ನಿಜವಾದ ಆತ್ಮಸ್ವರೂಪದ ಅನುಭವವನ್ನು ಶ್ರೀಜನಾರ್ದನಸ್ವಾಮಿಗಳವರು ನಮಗೆ ತೋರಿಸಿಕೊಟ್ಟಿರುವರು ॥೭೭೭॥ ಯಾವ ಪ್ರಕಾರವಾಗಿ ಲವಣವು ಸಮುದ್ರದಲ್ಲಿ ಕರಗಿ ಏಕರೂಪವಾಗುವುದೋ, ಅದರಂತೆ ಏಕನಾಥನಾದ ನಾನು ಶ್ರೀ ಜನಾರ್ದನ ಸ್ವಾಮಿಯವರಲ್ಲಿ ಶರಣಾಗುತ್ತಲೇ ಏಕತ್ವವೂ ಕೂಡ ಪರಿಪೂರ್ಣವಾಗಿ ಇಲ್ಲದಾಯಿತು ॥೭೭೮॥ ಅಲ್ಲಿ ಏಕನಾಥ ಮತ್ತು ಜನಾರ್ದನರು ಏಕರೂಪರಾದರು ಎಂದು ಹೀಗೆ ಹೇಳುವವರಾದರೂ ಯಾರಿರುವರು? ಕಣ್ಣುಗಳನ್ನು ನೋಡುವ ಶಕ್ತಿಯು ಕಣ್ಣುಗಳಿಗೆ ಮಾತ್ರ ತಿಳಿಯವುದು ॥೭೭೯॥ ಕಣ್ಣುಗಳಿಂದ ಕನ್ನಡಿಯನ್ನು ನೋಡಲು ಕಣ್ಣುಗಳಿಂದಲೇ ಕಣ್ಣುಗಳು ಕಾಣುವುವು. ಅದರಂತೆಯೇ ಈ ಜ್ಞಾನವು ಇರುವುದು. ಹೀಗೆ ತಿಳಿ. ಜ್ಞಾನಾತ್ಮವನ್ನು ಜ್ಞಾನದಿಂದಲೇ ಕಾಣಬೇಕಾಗುವುದು ॥೭೮೦॥ ಏಕನಾಥನು ತನ್ನ ಏಕತ್ವವನ್ನು ಬಿಟ್ಟು ಕೊಟ್ಟು ಶ್ರೀಜನಾರ್ದನ ಸ್ವಾಮಿಯವರಿಗೆ ಶರಣು ಹೋಗಿದ್ದರಿಂದ ಈ ಹಂಸಗೀತ ನಿರೂಪಣವು ಪೂರ್ಣತ್ವದಿಂದ ಪರಿಪೂರ್ಣವಾಯಿತು ॥೭೮೧॥

ಇತಿ ಶ್ರೀಭಾಗವತ ಮಹಾಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ ಹಂಸಗೀತ ನಿರೂಪಣೆಯ ಏಕನಾಥ ಮಹಾರಾಜರ ಭಾಷ್ಯೆಯ ಹದಿಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಕೃಷ್ಣಾರ್ಪಣಮಸ್ತು ॥

ಸಾರ್ಥ ಶ್ರೀಏಕನಾಥೀ ಭಾಗವತ

ಹದಿನಾಲ್ಕನೆಯ ಅಧ್ಯಾಯ

॥ಶ್ರೀ ಗಣೇಶಾಯ ನಮಃ ॥ ಶ್ರೀಕೃಷ್ಣಾಯ ನಮಃ ॥ ಓಂ ನಮೋ ಸ್ವಾಮೀ ಸದ್ಗುರೂ । ತೂ ನಿಜಾಂಗೇ ಕ್ಷೀರಸಾಗರೂ । ತುಝಾ ಉಗವಲ್ಯಾ ಪ್ರಬೋಧಚಂದ್ರೂ । ಆಹ್ಲಾದಕರೂ ಜೀವಾಸೀ ॥೧॥ ಜ್ಯಾ ಚಂದ್ರಾಚೇ ಚಂದ್ರಕರೀ । ನಿಬಿಡ ಅಜ್ಞಾನ ಅಂಧಾರೀ । ತ್ರಿವಿಧ ತಾಪ ದೂರ ಕರೀ । ಹೃದಯಚಿದಂಬರೀ ಉಗವೋನೀ ॥೨॥ ಜ್ಯಾ ಚಂದ್ರಾಚೇ ಚಂದ್ರಕಿರಣ । ಆರ್ತಚಕೋರಾಲಾಗೀ ಜಾಣ । ಸ್ವಾನಂದಚಂದ್ರಾಮೃತೇ ಸ್ರವೋನ । ಸ್ವಭಾವೇ ಪೂರ್ಣ ಕರಿತಾತೀ ॥೩॥ ಅವಿದ್ಯಾಅಂಧಾರೀ ಅಂಧಬಂಧೇ । ಸಂಕೋಚಲೀ ಜೀವದೇಹಕುಮುದೇ । ತೀ ಜ್ಯಾಚೇನಿ ಕಿರಣಪ್ರಬೋಧೇ । ಅತಿಸ್ವಾನಂದೇ ವಿಕಾಸಲೀ ॥೪॥ ಜೋ ಚಂದ್ರ ದೇಖತಾಂಚಿ ದಿಠೀ । ಸುಖ ಹೋಯ ಜೀವಾಚ್ಯಾ ಪೋಟೀ । ಅಹಂಸೋಮಕಾಂತಖೋಟೀ । ಉತಾಉಠೀ ವಿರವಿತೂ ॥೫॥ ಪೂರ್ಣಿಮಾ ಪೂರ್ಣತ್ವೇ ಪೂರ್ಣ ವಾಢೇ । ದೇಖೋನಿ ಕ್ಷೀರಾಬ್ಧೀ ಭರತೇ ಚಢೇ । ಗುರು ಆಜ್ಞಾ ಮರ್ಯಾದಾ ನ ಮೋಡೇ । ಸ್ವಾನಂದ ಚಢೇ ಅದ್ವಯೇ ॥೬॥ ಸದ್ಗುರೂ ಕ್ಷೀರಾಬ್ಧೀ ಅತಿಗಹನ । ಸಾದರೇ ಕರಿತಾ ನಿರೀಕ್ಷಣ । ವೇದಾಂತಲಹರೀಮಾಜೀ ಜಾಣ । ಶಬ್ದ ಚಿದ್ರತ್ನೇ ಭಾಸತೀ ॥೭॥ ತೇಥ ವಿಶ್ವಾಸಾಚಾ ಗಿರಿವರ । ವೈರಾಗ್ಯವಾಸುಕೀ ರವಿದೋರ । ನಿಜಧೈರ್ಯಾಚೇ ಸುರಾಸುರ । ಮಂಥನತತ್ಪರ ಸಮಸಾಮ್ಯೇ ॥೮॥ ಮಂಥನೀ ಪ್ರಥಮ ಖಳಖಳಾಟೀ । ಲಯವಿಕ್ಷೇಪ ಹಾಳಾಹಳ ಉಠೀ। ತೇ ವಿವೇಕನೀಳಕಂಠೇ ಕಂಠೀ । ನಿಜಾತ್ಮದೃಷ್ಟೀ ಗಿಳಿಲೇ ॥೯॥ ಮಗ ಅಭ್ಯಾಸ ಪ್ರತ್ಯಗಾವೃತ್ತೀ । ಕ್ರಿಯೇಸೀ ಝಾಲೀ ವಿಶ್ರಾಂತೀ । ಪ್ರಕಟಲೀ ರಮಾ ನಿಜಶಾಂತೀ । ಜೇಸ ಶ್ರೀಪತೀ ವಶ್ಯ ಝಾಲಾ ॥೧೦॥ ತೇಥ ಬ್ರಹ್ಮರಸ ಆಣಿ ಭ್ರಮರಸ । ಇಂಹೀ ಯುಕ್ತ ಅಮೃತಕಲಶ । ಮಂಥನೀ ನಿಘಾಲಾ ಸಾವಕಾಶ । ಜ್ಯಾಚಾ ಅಭಿಲಾಷ ಸುರಾಸುರಾ ॥೧೧॥

ಹೇ ಓಂಕಾರಸ್ವರೂಪ ಸದ್ಗುರು ಸ್ವಾಮಿಯೇ, ನಿಮಗೆ ನನ್ನ ನಮಸ್ಕಾರಗಳು. ನೀನು ಸ್ವತಃ ಕ್ಷೀರಸಾಗರನಾಗಿರುವೆ. ನಿನ್ನ ಜ್ಞಾನರೂಪ ಚಂದ್ರನ ಉದಯವಾಗಲು ಅದು ಪ್ರತಿಯೊಂದು ಜೀವಕ್ಕೂ ಆಹ್ಲಾದದಾಯಕವಾಗುವುದು ॥೧॥ ಯಾವ ಚಂದ್ರನ ಬೆಳದಿಂಗಳು ಹೃದಯರೂಪ ಆಕಾಶದಲ್ಲಿ ದಿವ್ಯವಾದ ಪ್ರಕಾಶವನ್ನು ಕೊಟ್ಟು ಅಜ್ಞಾನರೂಪ ಘೋರ ಅಂಧಕಾರದಲ್ಲಿನ ತ್ರಿವಿಧ ತಾಪಗಳನ್ನು ದೂರು ಮಾಡುವುದು ॥೨॥ ಆ ಯಾವ ಚಂದ್ರನ ಕಿರಣಗಳು ಸ್ವಾನಂದರೂಪ ಅಮೃತದ ಮಳೆಗರೆದು ಚಕೋರರೂಪ ಆರ್ತ ಜೀವಿಗಳಿಗೆ ಪರಿಪೂರ್ಣ ತೃಪ್ತಿಯನ್ನು ಕೊಡುವುವು ॥೩॥ ಅವಿದ್ಯಾರೂಪ ಕತ್ತಲಿನಲ್ಲಿ ಜೀವದ ದೇಹರೂಪ ಕಮಲಗಳು ಬಾಡಿರುವುವು. ಅವು ಈ ಯಾವ ಕಿರಣರೂಪ ಜ್ಞಾನದಿಂದ ಅತ್ಯಂತ ಆನಂದದಿಂದ ಪ್ರಫುಲ್ಲಿತವಾಗುವುವು ॥೪॥ ಯಾವ ಚಂದ್ರನನ್ನು ನೋಡುತ್ತಲೇ ಅಂತಃಕರಣದಲ್ಲಿ ಆನಂದವು ನಿರ್ಮಾಣವಾಗುವುದು ಮತ್ತು ಅಹಂಕಾರರೂಪ ಚಂದ್ರಕಾಂತ ಮಣಿಗಳನ್ನು ತತ್ಕಾಲದಲ್ಲಿ ಇದ್ದಲ್ಲಿಯೇ ಕರಗಿಸಿಬಿಡುವುದು ॥೫॥ ಪೌರ್ಣಿಮೆಯ ದಿನದಂದು ಚಂದ್ರನ ಪೂರ್ಣ ವೃದ್ಧಿಯಾಗುವುದು. ಇದನ್ನು ಕಂಡು ಸಮುದ್ರಕ್ಕೆ ಭರತೀ ಬರುವುದು. ಅದರಂತೆ ತನ್ನ ಶಿಷ್ಯನು ಜ್ಞಾನದಿಂದ ಪೂರ್ಣತ್ವಕ್ಕೆ ಮುಟ್ಟಿರುವುದನ್ನು ಕಂಡು ಸದ್ಗುರುಗಳಿಗೆ ಆನಂದವು ಉಕ್ಕೇರುವುದು. ಗುರುಗೌರವದ ಮರ್ಯಾದೆಯನ್ನು ಉಲ್ಲಂಘಿಸಲು ಬರುವುದಿಲ್ಲ. ಅದ್ವಯಾನುಭವದಿಂದ ಅಂತಃಕರಣದಲ್ಲಿ ಆತ್ಮಾನಂದವು ಬೆಳೆಯುತ್ತ ಸಾಗುವುದು ॥೬॥ ಸದ್ಗುರುರೂಪ ಸಾಗರವು ಅತ್ಯಂತ ಆಳವಾಗಿರುವುದು. ಅತ್ಯಂತ ಆದರದಿಂದ ಅದರತ್ತ ನೋಡುತ್ತಿರಲು ಅದರ ಮೇಲೆ ತೇಲಾಡುತ್ತಿರುವ ವೇದಾಂತರೂಪ ತೆರೆಗಳಲ್ಲಿ ಶಬ್ದರೂಪ ಅನೇಕ ಜ್ಞಾನರತ್ನಗಳು ತೋರುವುವು ॥೭॥ ವಿಶ್ವಾಸರೂಪ ಮಂದರಾಚಲ ಶಿಖರವನ್ನು ಕಡಗೋಲನ್ನಾಗಿ ಮಾಡಿ ವೈರಾಗ್ಯರೂಪ ವಾಸುಕಿ ಸರ್ಪದ ಹಗ್ಗದಿಂದ ಧೈರ್ಯರೂಪ ದೇವ-ದಾನವರು ಕ್ಷೀರಸಾಗರದ ಮಂಥನವನ್ನು ಮಾಡಲು ತತ್ಪರರಾದರು ॥೮॥ ಆ ಮಂಥನದ ಪ್ರಾರಂಭದಲ್ಲಿಯೇ ಖಳಖಳವೆನ್ನುತ್ತ ಲಯ, ವಿಕ್ಷೇಪ ಇತ್ಯಾದಿ ಕಾಳಕೂಟ ವಿಷವು ಉತ್ಪನ್ನವಾಯಿತು. ಅದನ್ನು ವಿವೇಕರೂಪ ನೀಲಕಂಠನು ಆತ್ಮದೃಷ್ಟಿಯಿಂದ ನುಂಗಿಬಿಟ್ಟನು ॥೯॥ ಪುನಃ ಮಂಥನವು ಆರಂಭವಾಯಿತು. ಕೊನೆಗೆ ಈ ಕ್ರಿಯೆಯು ವಿರಾಮಗೊಂಡಿತು. ಅದರಲ್ಲಿ ಶಾಂತಿರೂಪ ಲಕ್ಷ್ಮಿಯು ಪ್ರಕಟಳಾದಳು. ಆಕೆಗೆ ಶ್ರೀಪತಿಯು ವಶನಾದನು ॥೧೦॥ ಆ ಯಾವ ಮಂಥನದಿಂದ ಮೆಲ್ಲಮೆಲ್ಲನೇ ಬ್ರಹ್ಮರಸ ಮತ್ತು ಭ್ರಮರಸ ಈ ಎರಡೂ ತುಂಬಿರುವ ಕಲಶಗಳು ಪ್ರಕಟವಾದವು. ದೇವದಾನವರಿಗೆ ಇದರ ಮೇಲೆ ಬಹು ಪ್ರೀತಿವಿರುವುದು ॥೧೧॥

ತೇ ವಿಭಾಗಾವಯಾಲಾಗುನೀ । ಮಾಧವಚಿ ಝಾಲಾ ಮೋಹಿನೀ । ಅಹಂರಾಹೂಚೇ ಶಿರ ಛೇದೂನೀ । ಅಮೃತಪಾನೀ ನಿವವಿಲೇ ।೧೨॥ ತೇ ವೃತ್ತಿರೂಪ ಮೋಹಿನೀ । ಪಾಲಟಲೀ ತತ್‌ಕ್ಷಣೀ । ಠೇಲೀ ನಾರಾಯಣ ಹೋಊನೀ । ಪಹಿಲೇಪಣೇ ಉರೇನಾ ।೧೩॥ ತೇ ಕ್ಷೀರಸಾಗರೀ ನಾರಾಯಣ । ಸಮಾಧಿ ಶೇಷಶಯನೀ ಆಪಣ । ಸುಖೇ ಸುಖಾವಲಾ ಜಾಣ । ಅದ್ಯಾಪಿ ಶಯನ ಕೇಲೇ ಅಸೇ ।೧೪॥ ಐಸಾ ಸದ್ಗುರೂ ಚಿತ್ಸಾಗರೂ । ಜ್ಯಾಚಾ ವೇದಾಂಸೀ ನ ಕಳೇ ಪಾರೂ । ನಾರಾಯಣಾದಿ ನಾನಾವತಾರೂ । ಜ್ಯಾಚೇನ ಸಾಚಾರೂ ಉಪಜತೀ ।೧೫॥ ಜ್ಯಾಚೀ ಚಿದ್ರತ್ನೇ ಗೋಮಟೀ । ಹರಿಹರಾಂಚೇ ಕಂಠೀ ಮುಕುಟೀ । ಬಾಣಲೀ ಶೋಭತೀ ವೇದಪಾಠೀ । ಕವಿವರಿಷ್ಠೀ ವಾನಿಲೀ ।೧೬॥ ಐಶಿಯಾ ಜೇ ಅತಿಗಂಭೀರಾ । ಜನಾರ್ದನಾ ಸುಖಸಾಗರಾ । ಅನಂತರೂಪಾ ಅಪಾರಾ । ತುಝ್ಯಾ ಪರಪಾರಾ ಕೋಣ ಜಾಣೇ ।೧೭॥ ವಿವೇಕೇ ನ ದೇಖವೇ ದಿಠೀ । ವೇದಾ ನ ಬೋಲಾವೇ ಗೋಠೀ । ತೇಥ ಹೇ ಮಾಝೀ ಮರಾಠೀ । ಕೋಣೇ ಪರಿಪಾಟೀ ಸರೇಲ ।೧೮॥ ಹೋ ಕಾ ರಾಜಚಕ್ರವರ್ತೀಚೇ ಮಾಥಾ । ಕೋಣಾಸೀ ನ ಬೈಸವೇ ಸರ್ವಥಾ । ತೇಥ ಮಾಶೀ ಜಾಊನಿ ಬೈಸತಾ । ದುರ್ಗಮತಾ ತಂವ ನಾಹೀ ।೧೯॥ ಕಾ ರಾಜಪತ್ನೀಚೇ ಸ್ತನ । ದೇಖಾವಯಾ ಶಕೆ ಕೋಣ । ಪರೀ ನಿಜಪುತ್ರ, ತೇಥೇ ಜಾಣ । ಬಳೇ ಸ್ತನಪಾನ ಕರೀತಸೇ ।೨೦॥ ತೇವೀ ಮಾಝೀ ಹೇ ಮರಾಠೀ । ಜನಾರ್ದನಕೃಪಾಪರಿಪಾಟೀ । ನಿಃಶಬ್ದಾಚಾ ಸಾಂಗೇ ಗೋಠೀ । ಚಿನ್ಮಾತ್ರೀ ಮಿಠೀ ಘಾಲೂನೀ ।೨೧॥ ಅಸೋ ಆಕಾಶ ಘಟಾ ಸಬಾಹ್ಯ ಆಂತೂ । ತೇವೀ ಶಬ್ದಾಮಾಜೀ ನಿಃಶಬ್ದವಸ್ತೂ । ರಿತಾ ಬೋಲ ರಿಘಾವಯಾ ಪ್ರಾಂತೂ । ಉರಲಾ ಪ್ರಸ್ತುತೂ ದಿಸೇನಾ ।೨೨॥ ಬಾಲಕ ಬೋಲೋ ನೇಣೇ ತತ್ತ್ವತಾ । ತ್ಯಾಸೀ ಬೋಲಿಕೇ ಬೋಲವೀ ಪಿತಾ । ತೈಸೀಚ ಹೇಹೀ ಜಾಣಾವೀ ಕಥಾ । ವಾಚೇಚಾ ವಕ್ತಾ ಜನಾರ್ದನ ।೨೩॥ ತ್ಯಾ ಜನಾರ್ದನಾಚೇ ಕೃಪಾದೃಷ್ಟೀ । ಭಾಗವತ ಸಾಂಗೋ ಮರಾಠಿಯೇ ಗೋಷ್ಟೀ । ಜೇ ಕಾ ಆಲೋಡಿತಾ ಗ್ರಂಥಕೋಟೀ । ಅರ್ಥೀ ದೃಷ್ಟೀ ಪಡೇನಾ ।೨೪॥ ತೇಚಿ ಶ್ರೀಮಹಾಭಾಗವತ । ಜನಾರ್ದನ ಕೃಪೇ ಯೇಥ । ದೇಶಭಾಷಾ ಹಂಸಗೀತ । ಜ್ಞಾನ ಸುನಿಶ್ಚಿತ ಸಾಂಗೀತಲೇ ।೨೫॥ ಸದ್ಭಾವೇ ಕರಿತಾ ಮಾಝೀ ಭಕ್ತೀ । ತೇಣೇ ಜ್ಞಾನಖಡ್ಗಾಚೀ ಹೋಯ ಪ್ರಾಪ್ತೀ । ಭೇದೋನಿ ಸಂಸಾರ ಆಸಕ್ತೀ । ಸಾಯುಜ್ಯ ಮುಕ್ತೀ ಮದ್ಭಕ್ತಾ ।೨೬॥

ಇದನ್ನೇ ಹಂಚಿಕೊಡುವುದಕ್ಕಾಗಿ ಭಗವಂತನು ಸ್ವತಃ ತಾನೇ ಮೋಹಿನಿಯ ರೂಪವನ್ನು ಧರಿಸಿದನು. ಹಾಗೆಯೇ ''ಅಹಂ'' ಎಂಬ ರಾಹುವಿನ ಶಿರಚ್ಛೇದನವನ್ನು ಮಾಡಿ ದೇವತೆಗಳಿಗೆ ಅಮೃತಪ್ರಾಶನದಿಂದ ತೃಪ್ತಗೊಳಿಸಿದನು ।೧೨॥ ಈ ವೃತ್ತಿರೂಪ ಮೋಹಿನಿಯು ತಕ್ಷಣ ತನ್ನ ಸ್ವರೂಪವನ್ನು ಬದಲಾಯಿಸಿ ನಾರಾಯಣಸ್ವರೂಪಳಾದಳು. ಮೊದಲಿನ ದೇಹಬುದ್ಧಿಯು ಆಕೆಗೆ ಉಳಿಯಲಿಲ್ಲ ।೧೩॥ ಆ ಯಾವ ಕ್ಷೀರಸಾಗರದಲ್ಲಿನ ನಾರಾಯಣನು ತಾನು ಸ್ವತಃ ಸಮಾಧಿರೂಪ ಶೇಷಶಯನದಲ್ಲಿ ಸುಖದಿಂದ ಅತ್ಯಂತ ಸಂತುಷ್ಟನಾಗಿ ಅದ್ಯಾಪಿ ಮಲಗಿರುವನು ।೧೪॥ ಈ ಪ್ರಕಾರವಾಗಿ ಶ್ರೀಸದ್ಗುರುಗಳು ಜ್ಞಾನರೂಪ ಸಮುದ್ರರಾಗಿರುವರು. ಇವರ ಅಂತವು ವೇದಕ್ಕೂ ನಿಲುಕುವುದಿಲ್ಲ. ನಾರಾಯಣಾದಿ ಅವತಾರಗಳು ಇವರ ಯೋಗದಿಂದ ಆಗುವುವು ।೧೫॥ ಇವರ ಸುಂದರವಾದ ಜ್ಞಾನರೂಪ ರತ್ನಗಳು ಶಂಕರ ಮತ್ತು ವಿಷ್ಣು ಇವರ ಕೊರಳಲ್ಲಿ, ಮುಕುಟದಲ್ಲಿ ಶೋಭಿಸುತ್ತಿರುವುವು. ಇದರ ವರ್ಣನೆಯನ್ನು ವೇದ ಮತ್ತು ಶ್ರೇಷ್ಠ ಕವಿಗಳು ಮಾಡಿರುವರು ।೧೬॥ ಹೇ ಜನಾರ್ದನನೇ, ಹೀಗೆ ನೀನು ಅತಿಗಂಭೀರನೂ, ಸುಖಸಾಗರನೂ ಆಗಿರುವೆ. ನಿನ್ನ ರೂಪವು ಅನಂತ ಮತ್ತು ಅಪಾರವಾಗಿದೆ. ನಿನ್ನ ಆಚೆಗಿರುವ ವಸ್ತುವನ್ನು ಯಾರು ನೋಡಿ, ತಿಳಿಯುವರು? ।೧೭॥ ವಿಚಾರಕ್ಕೆ ಮರ್ಯಾದೆ ಇರುವುದರಿಂದ ವಿಚಾರ ದೃಷ್ಟಿಯಿಂದ ಅದು ಗೋಚರಿಸುವುದಿಲ್ಲ. ವೇದವೂ ಕೂಡ ಸ್ವರೂಪದ ವರ್ಣನೆ ಮಾಡಲಾರದು. ಅಲ್ಲಿ ನನ್ನ ಮರಾಠಿ ಭಾಷೆಯು ಹೇಗೆ ಪೂರ್ಣವಾದೀತು? ।೧೮॥ ಹೀಗಿದ್ದರೂ ಕೂಡ ಸಾರ್ವಭೌಮ ರಾಜನ ಮಸ್ತಕದ ಮೇಲೆ ಯಾರೂ ಕುಳಿತುಕೊಳ್ಳಲು ಸಾಧ್ಯವೇ ಇಲ್ಲ. ಆದರೆ ಅಲ್ಲಿ ಒಂದು ನೊಣವು ಹೋಗಿ ಕುಳಿತುಕೊಳ್ಳುವುದು. ಈ ಕಾರ್ಯವು ನೊಣಕ್ಕೆ ದುರ್ಗಮವಲ್ಲ ।೧೯॥ ಅಥವಾ ರಾಜನ ಪಟ್ಟದ ರಾಣಿಯ ಸ್ತನಗಳನ್ನು ನೋಡುವ ಸಾಮರ್ಥ್ಯವು ಯಾರಿಗಿರುವುದು? ಆದರೆ ರಾಜಪುತ್ರನು ಮಾತ್ರ ಸ್ತನಪಾನವನ್ನು ಮಾಡುತ್ತಿರುವನು ।೨೦॥ ಅದರಂತೆ ನನ್ನ ಈ ಮರಾಠಿ ಭಾಷೆಯು ಸದ್ಗುರು ಶ್ರೀ ಜನಾರ್ದನಸ್ವಾಮಿಯ ಕೃಪೆಯಿಂದ ಆತ್ಮಜ್ಞಾನಕ್ಕೆ ಅಪ್ಪಿಕೊಂಡು ಅನಿರ್ವಾಚ್ಯ ಜ್ಞಾನದ ಮಾತುಗಳನ್ನು ಆಡುತ್ತಿರುವುದು ।೨೧॥ ಆಕಾಶವು ಘಟದ ಒಳಹೊರಗೆ ವ್ಯಾಪಿಸಿಕೊಂಡಿರುವಂತೆ ಶಬ್ದಾತೀತವಾದ ಪರಬ್ರಹ್ಮವು ಶಬ್ದಗಳಿಂದ ವ್ಯಾಪಿಸಿಕೊಂಡಿರುವುದು. ಆದ್ದರಿಂದ ಪ್ರಸ್ತುತ ಪ್ರಸಂಗದಲ್ಲಿ ನಿಷ್ಫಲ ಮಾತುಗಳನ್ನಾಡಲು ಸ್ಥಳವೇ ಉಳಿದಿರುವುದಿಲ್ಲ ।೨೨॥ ನಿಜವಾಗಿ ನೋಡಿದರೆ ಅತಿ ಚಿಕ್ಕ ಬಾಲಕನಿಗೆ ಮಾತನಾಡಲಿಕ್ಕೆ ಬರುತ್ತಿರುವುದಿಲ್ಲ. ಆದರೆ ಆತನ ತಂದೆಯು ಆತನಿಂದ ಶಬ್ದಗಳನ್ನು ಪ್ರಕಟಗೊಳಿಸುವನು. ಅದರಂತೆ ಈ ಕಥೆಯಾಗಿರುವುದು. ನನ್ನ ವಾಣಿಗೆ ನುಡಿಸುವವನು ಜನಾರ್ದನನೇ ಆಗಿರುವನು ।೨೩॥ ಆ ಜನಾರ್ದನಸ್ವಾಮಿಯ ಕೃಪಾಪ್ರಸಾದದಿಂದ ನಾನು ಭಾಗವತವನ್ನು ಮರಾಠೀ ಭಾಷೆಯಲ್ಲಿ ಹೇಳುತ್ತಿರುವೆನು. ಕೋಟ್ಯಾವಧೀ ಗ್ರಂಥಗಳ ಅಭ್ಯಾಸವನ್ನು ಮಾಡಿದರೂ ಕೂಡ ಭಾಗವತದಲ್ಲಿನ ಜ್ಞಾನವು ದೃಷ್ಟಿಗೆ ಬೀಳುವುದಿಲ್ಲ ।೨೪॥ ಇದೇ ಶ್ರೀಮದ್‌ಭಾಗವತದಲ್ಲಿನ ಹಸಂಗೀತ ಜ್ಞಾನವನ್ನು ಜನಾರ್ದನ ಸ್ವಾಮಿಯ ಕೃಪೆಯಿಂದ ನಾನು ಮರಾಠೀ ಭಾಷೆಯಲ್ಲಿ ಹೇಳಿದೆನು ।೨೫॥ ಶುದ್ಧವಾದ ಅಂತಃಕರಣದಿಂದ ನನ್ನ ಭಕ್ತಿಯನ್ನು ಮಾಡಲು, ಅದರಿಂದ ಜ್ಞಾನಖಡ್ಗದ ಪ್ರಾಪ್ತಿಯಾಗುವುದು. ಇದರಿಂದ ಸಂಸಾರದ ಆಸಕ್ತಿಯನ್ನು ಛೇದಗೊಳಿಸಿ ನನ್ನ ಭಕ್ತರಿಗೆ ಸಾಯುಜ್ಯ ಮುಕ್ತಿಯ ಪ್ರಾಪ್ತಿಯಾಗುವುದು ।೨೬॥

ಮಾಝೇನಿ ಭಜನೇ ಮೋಕ್ಷ ಪಾವೇ । ಐಸೇ ಬೋಲಿಲೇ ಜೇ ದೇವೇ । ತೇ ಆ ಇಕೋನಿಯಾ ಉದ್ಧವೇ । ವಿಚಾರೂ ಆದರಿಲಾ ॥೨೭॥ ದೇವೋ ಸಾಂಗೇ ಭಜನೇಚಿ ಮುಕ್ತೀ । ಆಣಿ ಜ್ಞಾತ್ಯಾಂಚಿ ವ್ಯುತ್ಪತ್ತೀ । ಆಣಿಕೇ ಸಾಧನೇ ಮೋಕ್ಷಾ ಪ್ರತೀ । ಸಾಂಗತಾತೀ ಆನ ಆನೇ ॥೨೮॥ ಏವಂ ಯಾ ದೋಹೀ ಪಕ್ಷೀ ಜಾಣ । ಮೋಕ್ಷೀ ಶ್ರೇಷ್ಠ ಸಾಧನ ಕೋಣ । ತೇಚಿ ಆತಂಕೇಚಾ ಪ್ರಶ್ನ । ಉದ್ಧವೇ ಆಪಣ ಮಾಂಡಿಲಾ ॥೨೯॥

ಉದ್ಧವ ಉವಾಚ :-

ವದಂತಿ ಕೃಷ್ಣ ಶ್ರೇಯಾಂಸಿ ಬಹೂನಿ ಬ್ರಹ್ಮವಾದಿನಃ । ತೇಷಾಂ ವಿಕಲ್ಪಪ್ರಧಾನ್ಯ ಮುತಾಹೋ ಏಕಮುಖ್ಯತಾ ॥೧॥

ಅರ್ಥ :- ಉದ್ಧವನು ಕೇಳಿದನು, ಹೇ ಶ್ರೀಕೃಷ್ಣನೇ, ಬ್ರಹ್ಮವೇತ್ತೆಯರು ಆತ್ಮಕಲ್ಯಾಣಕ್ಕಾಗಿ ಅನೇಕ ಪ್ರಕಾರದ ಸಾಧನೆಗಳನ್ನು ಹೇಳುವರು. ಆ ಯಾವ ಸರ್ವ ಸಾಧನೆಗಳು ತಮ್ಮ ತಮ್ಮ ದೃಷ್ಟಿಯಿಂದ ಶ್ರೇಷ್ಠವಾಗಿರುವುವೋ, ಅಥವಾ ಅವುಗಳಲ್ಲಿ ಯಾವುದಾದರೂ ಒಂದು ಶ್ರೇಷ್ಠವಾಗಿದೆ?

ಉದ್ಧವ ಮ್ಹಣೇ ಗಾ ಶ್ರೀಪತಿ । ಮೋಕ್ಷಮಾರ್ಗೀ ಸಾಧನೇ ಕಿತೀ । ವೇದವಾದಿಯಾಂಚೀ ವ್ಯುತ್ಪತ್ತೀ । ಬಹುತ ಸಾಂಗತೀ ಸಾಧನೆ ॥೩೦॥ ತೀ ಅವಘೀಚ ಸಮಾನ । ಕೀ ಏಕ ಗೌಣ ಏಕ ಪ್ರಧಾನ । ದೇವೇ ಸಾಂಗೀತಲೇ ಆಪಣ । ಭಕ್ತೀಚಿ ಕಾರಣ ಮುಕ್ತೀಸೀ ॥೩೧॥

ಭವತೋದಾಹೃತಃ ಸ್ವಾಮಿನ್ ಭಕ್ತಿಯೋಗೋಽನಪೇಕ್ಷಿತಃ । ನಿರಸ್ಯ ಸರ್ವತಃ ಸಂಗಂ ಯೇನ ತ್ವಯ್ಯಾವಿಶೇನ್ಮನಃ ॥೨॥

ಅರ್ಥ :- ಹೇ ಪ್ರಭುವೇ, ನೀನು ನಿಷ್ಕಾಮ ಭಕ್ತಿ ಯೋಗವನ್ನು ಹೇಳಿರುವೆ. ಇದರಿಂದ ಮನವು ಸರ್ವ ವಿಷಯಗಳಲ್ಲಿನ ಆಸಕ್ತಿಯನ್ನು ತೊರೆದು ನಿನ್ನಲ್ಲಿ ಪ್ರವೇಶಿಸುವುದು.

ಆಣಿಕಾ ಸಾಧನಾ ನಾಪೇಕ್ಷಿತೀ । ಸರ್ವ ಸಂಗಾಂತೇ ನಿರಸಿತೀ । ಮೋಕ್ಷಮಾರ್ಗೀ ಮುಖ್ಯ ಭಕ್ತೀ । ಜಿಣೇ ಸ್ವರೂಪಪ್ರಾಪ್ತೀ ತತ್ಕಾಳ ॥೩೨॥ ಮಾಝ್ಯಾ ಸ್ವರೂಪೀ ಠೇವೂನಿ ಮನ । ಫಳಾಶೇವೀಣ ಮಾಝೇ ಭಜನ । ಹೇಚಿ ಮೋಕ್ಷಾಚೇ ಮುಖ್ಯ ಸಾಧನ । ದೇವೇ ಆಪಣ ಬೋಲಿಲೇ ॥೩೩॥ ಸ್ವಾಮೀ ಬೋಲಿಲೇ ಮುಖ್ಯ ಭಕ್ತೀ । ಇತರ ಜೇ ಸಾಧನೇ ಸಾಂಗತೀ । ತ್ಯಾಂಸೀ ಪ್ರಾಪ್ತೀಚೀ ಅಸ್ತಿನಾಸ್ತೀ । ದೇವೇ ಮಜಪ್ರತೀ ಸಾಂಗಾವೀ ॥೩೪॥ ಯಾಚಿಪ್ರಶ್ನಾಚಿ ಪ್ರಶ್ನಸ್ಥಿತೀ । ವಿವಂಚೀತಸೇ ಶ್ರೀಪತೀ । ತ್ರಿಗುಣ ಜ್ಞಾತ್ಯಾಚೀ ಪ್ರಕೃತೀ । ಸಾಧನೇ ಮಾನಿತೀ ಯಥಾರುಚಿ ॥೩೫॥ ಜ್ಯಾಚೀ ಆಸಕ್ತೀ ಜಿಯೇ ಗುಣೀ । ತೋ ತೇಚಿ ಸಾಧನ ಸತ್ಯ ಮಾನೀ । ಯಾಪರಿ ಜ್ಞಾನಾಭಿಮಾನೀ । ನಾನಾ ಸಾಧನೀ ಜಲ್ಪತೀ ॥೩೬॥

"ನನ್ನ ಭಜನೆಯಿಂದ ಮೋಕ್ಷವು ಪ್ರಾಪ್ತವಾಗುವುದು" ಹೀಗೆಂದು ಶ್ರೀಕೃಷ್ಣನು ಹೇಳಿದ್ದನ್ನು ಉದ್ಧವನು ಕೇಳಿ ಮನದಲ್ಲಿ ಹೀಗೆ ವಿಚಾರವನ್ನು ಮಾಡಿದನು, ಅದೇನಂದರೆ ॥೨೭॥ ದೇವನು ನೋಡಿದರೆ ಭಜನೆಯಿಂದ ಮುಕ್ತಿಯು ದೊರೆಯುವುದೆಂದು ಹೇಳುವನು, ಆದರೆ ವಿದ್ವಾನರ ಮತಗಳು ಮಾತ್ರ ಬೇರೆಯಾಗಿವೆ. ಇವರು ನೋಡಿದರೆ ಅನೇಕ ಪ್ರಕಾರಗಳ ಸಾಧನೆಗಳನ್ನು ಹೇಳಿರುವರು ॥೨೮॥ ಅಂದಮೇಲೆ ಈ ಎರಡು ಪ್ರಕಾರಗಳಲ್ಲಿ ಮೋಕ್ಷಪ್ರಾಪ್ತಿಯ ಶ್ರೇಷ್ಠಸಾಧನೆಯು ಯಾವುದು? ಈ ರೀತಿಯಲ್ಲಿ ಉದ್ಧವನು ಪ್ರಶ್ನೆಯನ್ನು ಮಾಡಲು ಪ್ರಾರಂಭಿಸಿದನು ॥೨೯॥

ಉದ್ಧವನು ಹೇಳಿದನು; ಹೇ ಶ್ರೀಕೃಷ್ಣಾ, ಮೋಕ್ಷ ಮಾರ್ಗದ ಸಾಧನೆಗಳಾದರೂ ಎಷ್ಟು ಇರುವುವು? ವೇದವೇತ್ತೆಯವರ ಮತದಂತೆ ಭಿನ್ನ ಭಿನ್ನ ಪ್ರಕಾರದ ಅನೇಕ ಸಾಧನೆಗಳು ಪ್ರತೀತವಾಗುವುವು ॥೩೦॥ ಈ ಎಲ್ಲ ಸಾಧನೆಗಳು ಸಮಾನ ಯೋಗ್ಯತೆಯಲ್ಲಿ ಇರುವುದೇ? ಅಥವಾ ಒಂದು ಗೌಣ, ಇನ್ನೊಂದು ಶ್ರೇಷ್ಠ ಹೀಗೆ ಇರುವುವೇ? ದೇವನಾದ ನೀನು ಸ್ವತಃ ಮುಕ್ತಿಗಾಗಿ ಭಕ್ತಿಯೇ ಶ್ರೇಷ್ಠವೆಂದು ಹೇಳಿರುವೆ ॥೩೧॥

ಭಕ್ತರು ಇತರ ಸಾಧನೆಗಳ ಅಪೇಕ್ಷೆಯನ್ನು ಮಾಡುವುದಿಲ್ಲ. ಸರ್ವಸಂಗದ ತ್ಯಾಗ ಮಾಡುವರು. ಇದರಿಂದ ಆತ್ಮಸ್ವರೂಪದ ಪ್ರಾಪ್ತಿಯು ತತ್ಕಾಲದಲ್ಲಿ ಆಗುವುದು. ಹೀಗೆ ಭಕ್ತಿಯೇ ಮೋಕ್ಷ ಮಾರ್ಗದಲ್ಲಿ ಮುಖ್ಯವಾಗಿರುವುದು ॥೩೨॥ ನನ್ನ ಸ್ವರೂಪದಲ್ಲಿ ಮನವಿಟ್ಟು ಫಲದ ಆಶೆಯನ್ನು ಬಿಟ್ಟು ನನ್ನ ಭಜನೆಯನ್ನು ಮಾಡುವುದೇ ಮೋಕ್ಷದ ಮುಖ್ಯ ಸಾಧನೆಯಾಗಿರುವುದು. ಹೀಗೆ ದೇವನೇ ಸ್ವತಃ ಹೇಳಿರುವನು ॥೩೩॥ ದೇವನು "ಭಕ್ತಿಯೇ ಮುಖ್ಯ"ವೆಂದು ಹೇಳಿರುವನು. ಹಾಗಾದರೆ ಹೇಳುವ ಇತರ ಸಾಧನೆಗಳಿಂದ ಆತ್ಮಸ್ವರೂಪದ ಪ್ರಾಪ್ತಿಯು ಆಗುವುದೋ ಅಥವಾ ಇಲ್ಲವೋ ಎಂಬುದು ದೇವನೇ ನನಗೆ ಹೇಳಬೇಕು ॥೩೪॥ ಹೀಗಿರುವ ಪ್ರಶ್ನೆಯುನ್ನು ತಿಳಿದುಕೊಂಡು ಶ್ರೀಕೃಷ್ಣನು ಹೇಳಹತ್ತಿದನು; ಹೇ ಉದ್ಧವಾ, ವಿದ್ವಾನರ ಸ್ವಭಾವವು ತ್ರಿಗುಣಾತ್ಮಕವಾಗಿರುವುದರಿಂದ ಅವರು ತಮ್ಮ ತಮ್ಮ ಅಪೇಕ್ಷೆಯಂತೆ ಸಾಧನೆಗಳನ್ನು ಹೇಳುವರು ॥೩೫॥ ಯಾವ ಗುಣದ ಪ್ರೀತಿಯು ಯಾರಿಗೆ ಇರುವುದೋ, ಅದೇ ಸಾಧನೆಯನ್ನು ಅವರು ನಿಜವೆಂದು ಭಾವಿಸುವರು. ಜ್ಞಾನದ ಅಭಿಮಾನವನ್ನು ಹಿಡಿದುಕೊಂಡವರು ಈ ರೀತಿಯಾಗಿ ಅನೇಕ ಸಾಧನೆಗಳನ್ನು ಹೇಳುವರು ॥೩೬॥

ಪರಂಪರಾ ಬಹುಕಾಳೇ । ಜ್ಞಾತ್ಯಾಚೇ ಜ್ಞಾನ ಝಾಲೇ ಮೈಳೇ । ತೇ ಸತ್ಯ ಮಾನಿತೀ ತುಚ್ಛ ಫಳೇ । ಐಕ ಪ್ರಾಂಜಳೇ ಉದ್ಧವಾ ।೩೭॥ ಚೌದಾವ್ಯಾ ಮಾಜೇ ನಿರೂಪಣ ಸ್ಥಿತೀ । ಇತುಕೇ ಸಾಂಗೇಲ ಶ್ರೀಪತೀ । ಸಾಧನಾಮಾಜೇ ಮುಖ್ಯ ಭಕ್ತೀ । ಧ್ಯಾನಯೋಗಸ್ಥಿತೀ ಸಮಾಧಿಯುಕ್ತ ।೩೮॥ ಇತರ ಸಾಧನಾಂಚೇ ನಿರಾಕರಣ । ತುಚ್ಛಫಲತ್ವೇ ತೇಹೀ ಜಾಣ । ಸಾತ ಶ್ಲೋಕೀ ಶ್ರೀಕೃಷ್ಣ । ಸ್ವಮುಖೇ ಆಪಣ ಸಾಂಗತೂ ।೩೯॥

ಶ್ರೀಭಗವಾನುವಾಚ :-

ಕಾಲೇನ ನಷ್ಟಾ ಪ್ರಲಯೇ ವಾಣೀಯಂ ವೇದಸಂಜ್ಞಿತಾ ।
ಮಯಾಽಽದೌ ಬ್ರಹ್ಮಣೇ ಪ್ರೋಕ್ತಾ ಧರ್ಮೋ ಯಸ್ಯಾಂ ಮದಾತ್ಮಕಃ ।೩॥

ಅರ್ಥ :- ಭಗವಾನ ಶ್ರೀಕೃಷ್ಣನು ಹೇಳಿದನು; ಪ್ರಿಯ ಉದ್ಧವಾ, ಈ ವೇದವಾಣಿಯು ಪ್ರಳಯದ ವೇಳೆಯಲ್ಲಿ ಲುಪ್ತವಾಗಿತ್ತು. ಪುನಃ ಸೃಷ್ಟಿ ರಚನೆಯು ಪ್ರಾರಂಭವಾಗಲು ಆಗ ನಾನು ನನ್ನ ಸಂಕಲ್ಪದಿಂದ ಬ್ರಹ್ಮನಿಗೆ ಉಪದೇಶವನ್ನು ಮಾಡಿದೆನು. ಆದರಲ್ಲಿ ನನ್ನ ಭಾಗವತ ಧರ್ಮದ ವರ್ಣನೆ ಇರುವುದು.

ಮಾಝೀ ದೇವವಾಣೀ ಪ್ರಾಂಜಳೀ । ಜ್ಞಾನಪ್ರಕಾಶೇ ಅತಿಸೋಜ್ವಳೀ । ತೇ ನಾಶಿಲೀ ಪ್ರಳಯಕಾಳೀ । ಸತ್ಯಲೋಕಹೋಳೀ ಜೇವ್ಹಾ ಝಾಲೀ ।೪೦॥ ಬ್ರಹ್ಮಯಾಚಾ ಪ್ರಳಯೋ ಹೋತಾ । ವೇದವಾಣೀಚಾ ವಕ್ತಾ । ಕೋಣೀ ನುರೇಚಿ ತತ್ತ್ವತಾ । ಯಾಲಾಗೀ ಸರ್ವಥಾ ಬುಡಾಲೀ ।೪೧॥ ತೇಚಿ ವೇದವಾಣೀ ಕಲ್ಪಾದೀಸೀ । ಮ್ಯಾಚಿ ಪ್ರಕಾಶಿಲೀ ಬ್ರಹ್ಮಯಾಸೀ । ಜೆಚ್ಯಾ ಠಾಯೀ ಮದ್ಭಕ್ತೀಸೀ । ಯಥಾರ್ಥೇಸೀ ಬೋಲಿಲೋ ।೪೨॥ ಜೇ ವಾಚೇಚೇ ಅನುಸಂಧಾನ । ಮಾಝೇ ಸ್ವರೂಪೀ ಸಮಾಧಾನ । ಐಸೇ ಮಾಝೇ ನಿಜಜ್ಞಾನ । ಬ್ರಹ್ಮಯಾಸೀ ಮ್ಯಾ ಜಾಣ ಸಾಂಗೀತಲೇ ।೪೩॥

ತೇನ ಪ್ರೋಕ್ತಾ ಸ್ವಪುತ್ರಾಯ ಮನವೇ ಪೂರ್ವಜಾಯ ಸಾ ।
ತತೋ ಭೃಗ್ವಾದಯೋಽಗೃಹ್ಣನ್ ಸಪ್ತ ಬ್ರಹ್ಮಮಹರ್ಷಯಃ ।೪॥

ಅರ್ಥ :- ಬ್ರಹ್ಮನು ತನ್ನ ಜೇಷ್ಠ ಪುತ್ರ ಸ್ವಾಯಂಭುವ ಮನುವಿಗೆ ಉಪದೇಶವನ್ನು ಮಾಡಿದನು. ಈತನಿಂದ ಭೃಗು, ಅಂಗಿರಾ, ಮರೀಚೀ, ಪುಲಹ, ಅತ್ರಿ, ಪುಲಸ್ತ್ಯ ಮತ್ತು ಋತು ಈ ಏಳು ಬ್ರಹ್ಮ ಮಹರ್ಷಿಗಳವರು ಗ್ರಹಣ ಮಾಡಿದರು.

ತೋ ಸಕಳ ವೇದ ವಿವಂಚೂನೂ । ಬ್ರಹ್ಮೇನಿ ಉಪದೇಶಿಲಾ ಮನೂ । ಸಪ್ತ ಬ್ರಹ್ಮರ್ಷೀ ತ್ಯಾಪಾಸೂನೂ । ವೇದ ಸಂಪೂರ್ಣ ಪಾವಲೇ ।೪೪॥ ಬ್ರಹ್ಮೇನಿ ದಕ್ಷಾದಿ ಪ್ರಜಾಪತೀ । ಉಪದೇಶಿಲೆ ತ್ಯಾಚಿ ಸ್ಥಿತೀ । ಯಾಪಾಸೂನ ನೇಣೋ ಕಿತೀ । ಜ್ಞಾನಸಂಪತ್ತೀ ಪಾವಲೇ ।೪೫॥ ಸಪ್ತ ಋಷೀಂಚೀ ಜೇ ಮಾತೂ । ಭೃಗು ಮರೀಚಿ ಅತ್ರಿ ವಿಖ್ಯಾತೂ । ಅಂಗಿರಾ ಪುಲಸ್ತ್ಯ ಪುಲಹ ಋತೂ । ಜಾಣ ನಿಶ್ಚಿತೂ ಋಷಿಭಾಗೂ ।೪೬॥

ಹೇ ಉದ್ಧವಾ, ಈ ಪರಂಪರೆಯು ದೀರ್ಘ ಕಾಲದಿಂದ ಇರುತ್ತಿರುವುದರಿಂದ ವಿದ್ವಾನರ ಜ್ಞಾನವು ಮಲಿನವಾಗಿರುವುದು. ಆದ್ದರಿಂದ ಅವರು ತುಚ್ಛ ಫಲಗಳಿಗೆ ಸತ್ಯವೆನ್ನುವರು. ಇದನ್ನು ನೀನು ಈಗ ಸ್ಪಷ್ಟವಾಗಿ ಕೇಳು ।೩೭॥ ಈ ಹದಿನಾಲ್ಕನೆಯ ಅಧ್ಯಾಯದಲ್ಲಿ ಸಮಾಧಿಯುಕ್ತ ಧ್ಯಾನಯೋಗ ಸ್ಥಿತಿಯ ಸಾಧನೆಗಳಲ್ಲಿ ಭಕ್ತಿಯೇ ಮುಖ್ಯವಾಗಿರುವುದು. ಇದರ ನಿರೂಪಣೆಯನ್ನು ಶ್ರೀಕೃಷ್ಣನು ಹೇಳುವನು ।೩೮॥ ಇತರ ಸಾಧನೆಗಳು ಫಲದ ಇಚ್ಛೆಯನ್ನು ಮಾಡುವಂತಹದ್ದಾಗಿರುವುವು. ಆದ್ದರಿಂದ ಅವು ತುಚ್ಛವಾಗಿರುವುವು. ಇದನ್ನು ಈಗ ಶ್ರೀಕೃಷ್ಣನು ತನ್ನ ಮುಖದಿಂದ ಮುಂದಿನ ಏಳು ಶ್ಲೋಕಗಳಲ್ಲಿ ಹೇಳುವನು ।೩೯॥

ಪ್ರಳಯ ಕಾಲದಲ್ಲಿ ಸತ್ಯಲೋಕವೂ ನಾಶವಾಗುವುದು. ಆಗ ಜ್ಞಾನ ಪ್ರಕಾಶದಿಂದ ಅತ್ಯಂತ ಶುದ್ಧವಾಗಿರುವ ನನ್ನ ವೇದವಾಣಿಯೂ ಕೂಡ ಇಲ್ಲದಾಯಿತು ।೪೦॥ ಬ್ರಹ್ಮದೇವನ ಪ್ರಳಯವಾದ ನಂತರ ವೇದವಾಣಿಯನ್ನು ಹೇಳಲು ಯಾರೊಬ್ಬರೂ ಉಳಿಯಲಿಲ್ಲ. ಆದ್ದರಿಂದ ಅದು ಪರಿಪೂರ್ಣವಾಗಿ ಲೋಪವಾಯಿತು ।೪೧॥ ಸೃಷ್ಟಿಯ ಆರಂಭದಲ್ಲಿ ಅದೇ ವೇದವಾಣಿಯನ್ನು ಬ್ರಹ್ಮದೇವನಿಗೆ ಉಪದೇಶವನ್ನು ಮಾಡಿದೆನು. ಅದರಲ್ಲಿ ನಾನು ನನ್ನ ಭಕ್ತಿಯ ಯಥಾರ್ಥ ಆಚರಣೆಗಳನ್ನು ಹೇಳಿರುವೆನು ।೪೨॥ ಈ ಯಾವ ವಾಣಿಯ ಅನುಸಂಧಾನದಲ್ಲಿದ್ದುಕೊಂಡು, ನನ್ನ ಸ್ವರೂಪದಲ್ಲಿ ಸಮಾಧಾನವನ್ನು ಪಡೆಯುವಂತಹ ನನ್ನ ಆತ್ಮಜ್ಞಾನವನ್ನು ನಾನು ಬ್ರಹ್ಮದೇವನಿಗೆ ಹೇಳಿದೆನು ।೪೩॥

ಈ ಯಾವ ಸರ್ವ ವೇದಗಳ ವಿಚಾರವನ್ನು ಮಾಡಿ ಬ್ರಹ್ಮದೇವನು ಪ್ರಾರಂಭದಲ್ಲಿ ಮನೂಗೆ ಉಪದೇಶವನ್ನು ಮಾಡಿದನು. ಮನೂವಿನಿಂದ ಆತನ ಮಾನಸ ಪುತ್ರರಾದ ಏಳು ಮಹರ್ಷಿಗಳವರಿಗೆ ಸಂಪೂರ್ಣವಾಗಿ ವೇದಗಳ ಪ್ರಾಪ್ತಿಯಾಯಿತು ।೪೪॥ ಬ್ರಹ್ಮದೇವನು ದಕ್ಷಾದಿ ಪ್ರಜಾಪತಿಯವರಿಗೆ ಇದೇ ಪದ್ಧತಿಯಿಂದ ಉಪದೇಶವನ್ನು ಮಾಡಿದನು. ಇವರಿಂದ ಅದೆಷ್ಟೋ ಜನರಿಗೆ ಜ್ಞಾನಸಂಪತ್ತು ಪ್ರಾಪ್ತವಾಯಿತು. ಇವರನ್ನು ಸಂಖ್ಯೆಯಲ್ಲಿ ಹೇಳಲು ಬರುವುದಿಲ್ಲ ।೪೫॥ ಭೃಗು, ಮರೀಚಿ, ಅತ್ರಿ, ಅಂಗಿರಾ, ಪುಲಸ್ತ್ಯ, ಪುಲಹ ಮತ್ತು ಋತು. ಹೀಗೆ ಇವರು ಏಳು ಪ್ರಸಿದ್ಧ ಋಷಿಗಳಾಗಿರುವರು ।೪೬॥

तेभ्यः --

ತೇಭ್ಯಃ ಪಿತೃಭ್ಯಸ್ತತ್ಪುತ್ರಾ ದೇವದಾನವಗುಹ್ಯಕಾಃ । ಮನುಷ್ಯಾಃ ಸಿದ್ಧಗಂಧರ್ವಾಃ ಸವಿದ್ಯಾಧರಚಾರಣಾಃ ॥೫॥

ಕಿಂದೇವಾಃ ಕಿನ್ನರಾ ನಾಗಾ ರಕ್ಷಃ ಕಿಂಪುರುಷಾದಯಃ । ಬಹ್ವ್ಯಸ್ತೇಷಾಂ ಪ್ರಕೃತಯೋ ರಜಃಸತ್ತ್ವತಮೋಭುವಃ ॥೬॥

ಅರ್ಥ :- ಈ ಯಾವ ಪೂರ್ವ ಪಿತೃಗಳಿಂದ ಅವರ ಪುತ್ರರಾದ ದೇವ, ದಾನವರು, ಮಾನವರು, ಗುಹ್ಯಕರು, ಸಿದ್ಧರು, ಗಂಧರ್ವರು, ವಿದ್ಯಾಧರರು, ಚಾರಣರು, ಕಿಂದೇವರು, ಕಿನ್ನರರು, ನಾಗರು, ಕಿಂಪುರುಷರು ಇತ್ಯಾದಿಕರು ಇದನ್ನು ಗ್ರಹಣ ಮಾಡಿದರು. ರಜೋಗುಣ, ಸತ್ವಗುಣ ಮತ್ತು ತಮೋಗುಣ ಇವು ಅವರ ಜನ್ಮಸ್ಥಾನವಾಗಿರುವುವು. ಹೀಗೆ ಅನೇಕ ಪ್ರಕಾರಗಳ ವಾಸನೆಗಳಿರುವುವು.

ತಿಹೀ ಋಷೀಶ್ವರೀ ಪುತ್ರ, ಪೌತ್ರ । ಉಪದೇಶಿಲೇ ನರ ಕಿನ್ನರ । ದೇವ ದಾನವ ಅಪಾರ । ಸಿದ್ಧ ವಿದ್ಯಾಧರ ಚಾರಣ ॥೪೭॥ ಗುಹ್ಯಕ ಗಂಧರ್ವ ರಾಕ್ಷಸ । ಕಿಂದೇವ ಆಣಿ ಕಿಂಪುರುಷ । ನಾಗಸರ್ಪಾದಿ ತಾಮಸ । ಪರಂಪರಾ ಉಪದೇಶ ಪಾವಲೇ ॥೪೮॥ ಮುಖಾಕೃತೀ ದಿಸತೀ ನರ । ಶರೀರೇ ಕೇವಳ ವನಚರ । ಐಸೇ ಜೇ ಕಾ ರೀಸ ಘೋರ । ತ್ಯಾಸೀ ಕಿನ್ನರ ಬೋಲಿಜೇ ॥೪೯॥ ಮುಖಾಭಾಸೇ ದಿಸತೀ ಪುರುಷ । ಶರೀರ ಪಾಹತಾ ಶ್ವಾಪದವೇಷ । ಐಸೇ ಜೇ ವಾನರ ರಾಮದಾಸ । ತ್ಯಾಂಸೀ ಕಿಂಪುರುಷ ಬೋಲಿಜೇ ॥೫೦॥ ಸ್ವೇದದುರ್ಗಂಧಿ-ಕಲ್ಮಷರಹಿತ । ಶರೀರೇ ಅತಿಭವ್ಯ ಭಾಸತ ।ಮನುಷ್ಯದೇವಾ ಐಸೇ ದಿಸತ । ತೇ ಬೋಲಿಜೇತ ಕಿಂದೇವ ॥೫೧॥ ಯಾಪರೀ ಚ್ಯಾ ಬಹುಧಾ ವ್ಯಕ್ತೀ । ರಜತಮಾದಿ ಸತ್ವಪ್ರಕೃತೀ । ಉಪದೇಶಪರಂಪರಾ ಪ್ರಾಪ್ತೀ । ಜ್ಞಾನ ಬೋಲತೀ ಯಥಾರುಚಿ ॥೫೨॥

ಯಾಭಿರ್ಭೂತಾನಿ ಭಿದ್ಯಂತೇ ಭೂತಾನಾಂ ಪತಯಸ್ತಥಾ । ಯಥಾಪ್ರಕೃತಿ ಸರ್ವೇಷಾಂ ಚಿತ್ರಾ ವಾಚಃ ಸ್ರವಂತಿ ಹಿ ॥೭॥

ಅರ್ಥ :- ಯಾವ ಪ್ರಕೃತಿಯಿಂದ ದೇವ ಅಸುರ ಇತ್ಯಾದಿ ಭೂತಗಳ ಭೇದವಾಗುವುದೋ, ಅದರಂತೆ ಭೂತಗಳ ಮತಿಯೂ ಕೂಡ ಭಿನ್ನ ಭಿನ್ನವಾಗಿರುವುವು. ಸರ್ವರೂ ತಮ್ಮ ತಮ್ಮ ಪ್ರಕೃತಿಯ ಅನುಸಾರವಾಗಿ ಆ ವೇದವಾಣಿಯ ಭಿನ್ನ ಭಿನ್ನ ಅರ್ಥವನ್ನು ಗ್ರಹಣ ಮಾಡುವರು. ಈ ವಾಣಿಯೂ ಕೂಡ ಹೇಗೆ ಅಲೌಕಿಕವಾಗಿದೆ ಎಂದರೆ ಅದರಿಂದ ಸ್ವಾಭಾವಿಕವಾಗಿ ವಿಭಿನ್ನ ಅರ್ಥಗಳು ಹೊರಡುವುವು.

ಜೈಶೀ ಪ್ರಕೃತೀ ತೈಶೀ ಭಾವನಾ । ಜೈಸಾ ಗುಣ ತಶೀ ವಾಸನಾ । ಜೇ ವಾಸನೇಸ್ತವ ಜಾಣಾ । ಭೂತೀ ವಿಷಮಪಣಾ ಆಣಿ ಭೇದು ॥೫೩॥ ದೇವಮನುಷ್ಯತಿರ್ಯಗತಾ । ಹೇ ವಾಸನೇಚಿ ವಿಷಮತಾ । ಯೇವಢಾ ಭೇದ ಕರೀ ಭೂತಾ । ಅನೇಕತಾ ಯಥಾರುಚಿ ॥೫೪॥ ಜ್ಯಾಂಚೀ ಜೈಶೀ ಪ್ರಕೃತೀ । ತೇ ತೈಸಾ ವೇದಾರ್ಥೂ ಮಾನಿತೀ । ತೇಚಿ ಶಿಷ್ಯಾಂಸೀ ಸಾಂಗತೀ । ಪರಂಪರಾಸ್ಥಿತೀ ಉಪದೇಶೂ ॥೫೫॥ ವಿಚಿತ್ರ ವೇದಾರ್ಥ ಮಾನಣೇ । ವಿಚಿತ್ರ ಸಂಗತೀ ಸಾಧನೇ । ವಿಚಿತ್ರ ಉಪದೇಶ ಕರಣೇ । ಪ್ರಕೃತಿಗುಣೇ ಮತವಾದ ॥೫೬॥

ಏವಂ ಪ್ರಕೃತಿವೈಚಿತ್ರ್ಯಾದ್‌ಭಿದ್ಯಂತೇ ಮತಯೋ ನೃಣಾಮ್ ।
ಪಾರಂಪರ್ಯೇಣ ಕೇಷಾಂಚಿತ್‌ಪಾಷಂಡಮತಯೋಽಪರೇ ॥೮॥

ಅರ್ಥ :- ಈ ಪ್ರಕಾರವಾಗಿ ಸ್ವಭಾವಭೇದ ತಥಾ ಪರಂಪರಾಗತ ಉಪದೇಶದ ಭೇದದಿಂದ ಮನುಷ್ಯನ ಬುದ್ಧಿಯಲ್ಲಿ ಭಿನ್ನತೆಯು ಬರುವುದು ಮತ್ತು ಕೆಲವು ಜನರು ವಿಚಾರವನ್ನು ಮಾಡದೇ ವೇದವಿರುದ್ಧವಾದ ಪಾಖಂಡ ಮತದ ಅವಲಂಬನೆಯನ್ನು ಮಾಡುವರು.

ಈ ಯಾವ ಮಹಾಋಷಿಗಳವರು ತಮ್ಮ ಪುತ್ರ, ಪೌತ್ರ, ನರ, ಕಿನ್ನರ, ದೇವ, ದಾನವ, ಸಿದ್ಧ, ವಿದ್ಯಾಧರ, ಚಾರಣ ॥೪೭॥ ಗುಹ್ಯಕ, ಗಂಧರ್ವ, ರಾಕ್ಷಸ, ಕಿಂದೇವ ಮತ್ತು ವಾನರಾದಿ ಕಿಂಪುರುಷ, ನಾಗಸರ್ಪಾದಿ ತಾಮಸ, ಈ ಎಲ್ಲರಿಗೂ ಪರಂಪರೆಯಿಂದ ಉಪದೇಶವನ್ನು ಮಾಡಿದರು ॥೪೮॥ ಯಾರ ಮುಖವು ಮನುಷ್ಯನಿಗೆ ಹೋಲುತ್ತಿದ್ದು ಮತ್ತು ಶರೀರವು ವನಚರದಂತೆ ಇರಲು, ಇಂತಹ ಕರಡಿಗಳಿಗೆ ಕಿನ್ನರರು ಎಂದು ಹೇಳುವರು ॥೪೯॥ ಯಾರ ಮುಖವನ್ನು ನೋಡಿದರೆ ಮನುಷ್ಯನ ಭಾಸವಾಗುವುದು ಮತ್ತು ಶರೀರವು ಶ್ವಾಪದ ಸಮಾನವಾಗಿ ಕಾಣುವುದು. ಇವರು ಪ್ರಭು ಶ್ರೀರಾಮಚಂದ್ರನ ದಾಸರಾದ ವಾನರರಿಗೆ ಕಿಂಪುರುಷರು ಎಂದು ಹೇಳುವರು ॥೫೦॥ ಬೆವರು, ದುರ್ಗಂಧ ಮಲರಹಿತ ಹೀಗೆ ಯಾರ ಶರೀರವು ಭವ್ಯ ದಿವ್ಯವಾಗಿರುವುದೋ, ಯಾರು ನೋಡಲು ಮನುಷ್ಯ, ದೇವತೆಯಂತೆ ಕಾಣುವರೋ ಅವರಿಗೆ ಕಿಂದೇವ ಎಂದು ಕರೆಯುವರು ॥೫೧॥ ಈ ಪ್ರಕಾರವಾಗಿ ರಜ, ತಮ, ಸತ್ವ ಪ್ರಕೃತಿಯ ಅನೇಕ ವ್ಯಕ್ತಿಗಳು ಪರಂಪರೆಯಿಂದ ಉಪದೇಶವು ಪ್ರಾಪ್ತವಾಗಿರುವುದರಿಂದ ತಮ್ಮ ತಮ್ಮ ಅಭಿರುಚಿಯಂತೆ ಅವರು ಜ್ಞಾನವನ್ನು ಹೇಳುತ್ತಿರುವರು ॥೫೨॥

ಪ್ರಕೃತಿಯು ಹೇಗೆ ಇರುವುದೋ, ಹಾಗೆಯೇ ಸ್ವಭಾವವಿರುವುದು. ಗುಣವಿದ್ದಂತೆ ವಾಸನೆ ಇರುವುದು. ಈ ಯಾವ ವಾಸನೆಯಿಂದಲೇ ಪ್ರಾಣಿಗಳಲ್ಲಿ ವಿಷಮತೆ ಹಾಗೂ ಭೇದವು ನಿರ್ಮಾಣವಾದದ್ದು ಕಂಡುಬರುವುದು ॥೫೩॥ ದೇವ, ಮನುಷ್ಯ ಮತ್ತು ಪಶು ಈ ಯೋನಿಗಳು ವಾಸನೆಯಂತೆಯೇ ಪ್ರಾಪ್ತವಾಗುವುವು. ಈ ವಾಸನೆಯೇ ತನ್ನ ರುಚಿತಕ್ಕಂತೆ ಪ್ರಾಣಿ ಮಾತ್ರರಲ್ಲಿ ಅನೇಕ ಪ್ರಕಾರಗಳ ಭೇದವನ್ನು ನಿರ್ಮಾಣಗೊಳಿಸುತ್ತಿರುವುದು ॥೫೪॥ ಯಾರ ಪ್ರಕೃತಿಯು ಹೇಗೆ ಇರುವದೋ ಅವರು ಅದರಂತೆಯೇ ಅರ್ಥವನ್ನು ಗ್ರಹಣ ಮಾಡುವರು ಮತ್ತು ತಮ್ಮ ಶಿಷ್ಯರಿಗೆ ಪರಂಪರೆಯಿಂದ ಇದೇ ಉಪದೇಶವನ್ನು ಕಲಿಸುತ್ತಿರುವರು ॥೫೫॥ ವೇದದ ಅರ್ಥವನ್ನು ವಿಚಿತ್ರವಾಗಿ ಮಾಡುವರು, ವಿಚಿತ್ರವಾದ ಸಾಧನೆಗಳನ್ನು ಮಾಡುವರು, ವಿಚಿತ್ರವಾಗಿ ಸಂಗತಿಯನ್ನು ಹಿಡಿಯುವರು, ವಿಚಿತ್ರವಾಗಿ ಉಪದೇಶಗಳನ್ನು ಮಾಡುವರು. ಇದೆಲ್ಲವೂ ಪ್ರಕೃತಿಯ ಗುಣಗಳ ಮತ್ತು ಸ್ವತಃದ ಸ್ವಭಾವಾನುಸಾರವಾಗಿ ಗ್ರಹಣ ಮಾಡಿರುವ ಮನಸ್ಸಿನ ಅಭಿಮಾನವಾಗಿರುವುದು ॥೫೬॥

ಯಾಪರೀ ಗಾ ನಿಜಪ್ರಕೃತೀ । ವಾಢಲೀ ಜಾಣ ನಾನಾ ಮತೀ । ತೋ ಮತವಾದ ಠಸಾವಲಾ ಚಿತ್ತೀ । ಯಥಾನಿಗುತೀ ಸತ್ಯತ್ವೇ ॥೫೭॥ ಮಿಥ್ಯಾ ಸ್ವಪ್ನ ಜೇವೀ ನಿದ್ರಿತಾ । ಸತ್ಯ ಮಾನಲೇಸೇ ಸರ್ವಥಾ । ತೇವೀ ನಾನಾಮತವಾದಕಥಾ । ಸತ್ಯ ತತ್ತ್ವತಾ ಮಾನಿತೀ ॥೫೮॥ ಹೇ ವೇದ ಪಢಿಯಂತ್ಯಾಚೀ ಕಥಾ । ಜ್ಯಾಂಸೀ ವೇದಿ ನಾಹೀ ಅಧಿಕಾರತಾ । ತ್ಯಾಂಸೀ ಉಪದೇಶಪರಂಪರತಾ । ನಾನಾಮತತಾ ಸತ್ಯ ಮಾನೇ ॥೫೯॥ ಏಕಾಚೀ ವೇದಬಾಹ್ಯ ವ್ಯುತ್ಪತ್ತೀ । ತೇ ಆಪುಲಾಲಿಯೇ ಸ್ವಮತೀ । ಪಾಷಂಡಾತೇ ಪ್ರತಿಷ್ಠಿತೀ । ತೇಚ ಉಪದೇಶಿತೀ ಶಿಷ್ಯಾಂತೇ ॥೬೦॥

ಮನ್ಮಾಯಾಮೋಹಿತಧಿಯಃ ಪುರುಷಾಃ ಪುರುಷರ್ಷಭ । ಶ್ರೇಯೋ ವದಂತ್ಯನೇಕಾಂತಂ ಯಥಾಕರ್ಮ ಯಥಾರುಚಿ ॥೯॥

ಅರ್ಥ :- ಪ್ರಿಯ ಉದ್ಧವಾ, ಸರ್ವರ ಬುದ್ಧಿಯು ನನ್ನ ಮಾಯೆಯಿಂದ ಮೋಹಿತವಾಗಿರುವುದು. ಆದ್ದರಿಂದ ತಮ್ಮ ಕರ್ಮಸಂಸ್ಕಾರದ ತಮ್ಮ ರುಚಿ ತಕ್ಕಂತೆ ಆತ್ಮಕಲ್ಯಾಣದ ಸಾಧನೆಗಳು ಒಂದಾಗಿರದೇ ಅನೇಕ ಹೇಳುವರು.

ನಾನಾ ವಾಸನಾಗುಣಾನುವೃತ್ತೀ । ನಾನಾ ಪರೀಂಚ್ಯಾ ಪುರುಷಪ್ರಕೃತೀ । ಯಾಂಸೀ ಮಾಝೀ ಮಾಯಾ ಮೂಳಕರ್ತೀ । ಜಾಣ ನಿಶ್ಚಿತೀ ಉದ್ಧವಾ ॥೬೧॥ ಮಾಝೀಯಾ ಮಾಯೇ ಮೋಹಿಲೇ ವರಿಷ್ಠ । ಜನ ಕೇಲೇ ವಿವೇಕನಷ್ಟ । ಭುಲವೂನಿಯಾ ಮೋಕ್ಷಾಚೀ ವಾಟ । ವಿಷಯನಿಷ್ಠ ವಿವೇಕೂ ॥೬೨॥ ಐಕ ಉದ್ಧವಾ ಪುರುಷಶ್ರೇಷ್ಠಾ । ಯಾಪರೀ ಭ್ರಂಶಲೀ ಜನಾಂಚೀ ನಿಷ್ಠಾ । ಚುಕೋನಿ ಮೋಕ್ಷಾಚಾ ದಾರವಂಟಾ । ಸಾಧನಕಚಾಟಾ ಜಲ್ಪತೀ ॥೬೩॥ ತ್ಯಾ ನಾನಾ ಸಾಧನಾಂಚ್ಯಾ ಯುಕ್ತೀ । ಜ್ಯಾ ಮತವಾದೇ ಪ್ರತಿಪಾದಿತೀ । ತ್ಯಾಹೀ ದೀಡ ಶ್ಲೋಕೀ ಶ್ರೀಪತೀ । ಉದ್ಧವಾ ಪ್ರತೀ ಸಾಂಗತ ॥೬೪॥

ಧರ್ಮಮೇಕೇ ಯಶಶ್ಚಾನ್ಯೇ ಕಾಮಂ ಸತ್ಯಂ ದಮಂ ಶಮಮ್ । ಅನ್ಯೇ ವದಂತ ಸ್ವಾರ್ಥ
ವಾ ಐಶ್ವರ್ಯ ತ್ಯಾಗಭೋಜನಮ್ । ಕೇಚಿದ್ಯಜ್ಞತಪೋದಾನಂ ವ್ರತಾನಿ ನಿಯಮಾನ್ಯಮಾನ್ ॥೧೦॥

ಅರ್ಥ :- ಪೂರ್ವ ಮೀಮಾಂಸಕ ಧರ್ಮಕ್ಕೆ ಸಾಹಿತಿಯು ಯಶಕ್ಕೆ, ಕಾಮಶಾಸ್ತ್ರೀ ಕಾಮಕ್ಕೆ, ಯೋಗವೇತ್ತ್ಯಾ ಸತ್ಯ ಮತ್ತು ಶಮದಮ ಇತ್ಯಾದಿಗಳಿಗೆ, ದಂಡನೀತಿಕಾರ ಐಶ್ವರ್ಯಕ್ಕೆ, ತ್ಯಾಗಿಯು ತ್ಯಾಗಕ್ಕೆ, ಭೋಗಿಯು ಭೋಗಕ್ಕೆ, ಮನುಷ್ಯ ಜೀವನದ ಪರಮಲಾಭವೆಂದು ಹೇಳುತ್ತಿರುವರು.

ಮೀಮಾಂಸಕಾಚೇ ಮತ ಯೇಥ । ಕಾಮ್ಯ ನಿಷಿದ್ಧ ರಹಿತ । ಕರ್ಮಚಿ ಸಾಧನ ಮಾನಿತ । ಮೋಕ್ಷ ಯೇಣೇ ಪ್ರಾಪ್ತ ಮ್ಹಣತಾತೀ ॥೬೫॥ ಕಾವ್ಯ ನಾಟಕ ಅಳಂಕಾರ ಕರಿತೀ । ತೇ ಕವಿತ್ವಚಿ ಸಾಧನ ಮಾನಿತೀ । ಕವಿತಾ ಪ್ರಬಂಧವ್ಯುತ್ಪತ್ತೀ । ಮೋಕ್ಷ ಮಾನಿತೀ ತೇಣೇ ಯಶೇ ॥೬೬॥ ಕವೀಶ್ವರಾಂಚೇ ಮತ ಐಸೇ । ಆಪುಲೇ ಕವಿತ್ವಾಚೇನಿ ಯಶೇ । ಮೋಕ್ಷ ಲಾಹೋ ಅನಾಯಾಸೇ । ಹೇ ಕವಿತಾಪಿಸೇ ಕವೀಶ್ವರಾ ॥೬೭॥

ಈ ರೀತಿಯಲ್ಲಿ ಪ್ರಕೃತಿಯು ಅನೇಕ ಪ್ರಕಾರದಿಂದ ಬೆಳೆಯುತ್ತಿರುವುದು. ಇದನ್ನು ಲಕ್ಷದಲ್ಲಿಡು. ಏಕದೇಶಿಯ ಮತದ ವಾದವು ನಿಜವೆಂದು ಪೂರ್ಣವಾಗಿ ತಿಳಿಯಲು ಅದೇ ಚಿತ್ತದಲ್ಲಿ ದೃಢವಾಗುವುದು ॥೫೭॥ ನಿಜವಾಗಿ ನೋಡಿದರೆ ಸ್ವಪ್ನವು ಸುಳ್ಳಾಗಿರುವುದು. ಆದರೆ ಮಲಗಿಕೊಂಡವನಿಗೆ ಎಲ್ಲವೂ ಸತ್ಯವಾಗಿ ತೋರುವುದು. ಅದರಂತೆ ಭಿನ್ನ ಭಿನ್ನ ಮತಗಳನ್ನು ಸಂಪೂರ್ಣವಾಗಿ ನಿಜವೆಂದು ತಿಳಿಯುವರು ॥೫೮॥ ಇದು ವೇದವೇತ್ತೆಯರ ಈ ಕಥೆಯಾಗಿರುವುದು. ಇನ್ನು ವೇದವನ್ನು ತಿಳಿಯದೇ ಇದ್ದವರು ಈ ಉಪದೇಶ, ಪರಂಪರೆ, ನಾನಾ ಮತಗಳು ಸತ್ಯವಾಗಿ ಮನ್ನಿಸುವರು ॥೫೯॥ ವೇದ ವಿರುದ್ಧವಾಗಿ ಒಬ್ಬನ ಮತವಿರುವುದು. ಆತನು ತನ್ನ ಮತದಂತೆ ಪಾಖಂಡ ಮತವನ್ನು ಸ್ಥಾಪಿಸಿ, ಅದನ್ನೇ ಶಿಷ್ಯರ ಮನದಲ್ಲಿ ದೃಢಗೊಳಿಸುವನು ॥೬೦॥

ಹೇ ಉದ್ಧವಾ, ಭಿನ್ನ ಭಿನ್ನ ವಾಸನೆಗಳು ಗುಣಗಳ ತಕ್ಕಂತೆ ಹುಟ್ಟಿರುವುವು. ಆದರಂತೆ ಭಿನ್ನ ಭಿನ್ನ ಸ್ವಭಾವದ ಮನುಷ್ಯರಾಗುವರು. ನನ್ನ ಮಾಯೆಯು ಸರ್ವಕ್ಕೂ ಮೂಲವಾಗಿದೆ. ಇದನ್ನು ನಿಶ್ಚಯವಾಗಿ ತಿಳಿ ॥೬೧॥ ಶ್ರೇಷ್ಠರಿಗೂ ನನ್ನ ಮಾಯೆಯು ಮೋಹಗೊಳಿಸಿರುವುದು ಮತ್ತು ವಿಚಾರ ಶೂನ್ಯರಾಗಿ ಮಾಡಿರುವುದು. ಇವರಿಗೆ ಮೋಕ್ಷ ಮಾರ್ಗದ ವಿಸ್ಮರಣವಾಗಿ ವಿಷಯಗಳ ವಿಚಾರ ಮಾಡಹತ್ತಿದರು ॥೬೨॥ ಹೇ ಪುರುಷಶ್ರೇಷ್ಠ ಉದ್ಧವನೇ, ಕೇಳು. ಇದರಿಂದ ಜನರ ನಿಷ್ಠೆಯು ಭ್ರಂಶವಾಯಿತು. ಪ್ರಮುಖವಾದ ಮೋಕ್ಷದ ದ್ವಾರವನ್ನು ಬಿಟ್ಟು ಸಾಧನೆಗಳ ಖಟಪಟೀಯ ವಟವಟ ಮಾಡುತ್ತಿರುವರು ॥೬೩॥ ಅನೇಕ ಮತವಾದಿಗಳು ವಿವಿಧ ಸಾಧನೆಗಳನ್ನು ಹೇಳಿರುವ ಯುಕ್ತಿಯನ್ನು ಈಗ ಶ್ರೀಪತಿಯು ಉದ್ಧವನಿಗೆ ಮುಂದಿನ ಒಂದುವರೆ ಶ್ಲೋಕದಲ್ಲಿ ಹೇಳುವನು ॥೬೪॥

ಇಲ್ಲಿ ಮೀಮಾಂಸಕರು ಹೀಗೆ ಹೇಳುವರು. ಏನೆಂದರೆ, ಕಾಮ್ಯಕರ್ಮ ಮತ್ತು ನಿಷಿದ್ಧ ಕರ್ಮಗಳನ್ನು ಬಿಟ್ಟು ಇತರ ಎಲ್ಲ ಕರ್ಮಗಳು ಮೋಕ್ಷಕ್ಕೆ ಮುಖ್ಯ ಸಾಧನೆಯಾಗಿರುವುದು ॥೬೫॥ ಕಾವ್ಯ, ನಾಟಕ, ಅಲಂಕಾರ ಇವುಗಳ ಜ್ಞಾನವಿದ್ದವರು ಕವಿತ್ವವೇ ಮುಖ್ಯ ಸಾಧನೆವೆನ್ನುವರು. ಉತ್ತಮ ಕವಿತ್ವ ಮೂಡುವ ಪದ್ಯ ನಿರ್ಮಿಸುವುದು ಇದರಿಂದ ಯಶಪಡುವಿಕೆಯಲ್ಲಿಯೇ ನಿಜವಾದ ಮೋಕ್ಷವಿದೆ ಎಂದು ಹೇಳುವರು ॥೬೬॥ ನಮ್ಮ ಕವಿತ್ವದ ಅಂಶದಿಂದ ನಾವು ಸಹಜವಾಗಿಯೇ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವೆವು. ಹೀಗೆ ಪ್ರತಿಭಾಶಾಲೀ ಶ್ರೇಷ್ಠ ಕವಿಗಳು ಹೇಳುವರು. ಹೀಗೆ ಕವೀಶ್ವರರಿಗೆ ಕವಿತೆಯ ಹುಚ್ಚು ಹಿಡಿದಿರುವುದು ॥೬೭॥

ವಾತ್ಸ್ಯಾಯನಕೋಕಶಾಸ್ತ್ರಮತ । ತ್ಯಾಂಚಾ ಅಭಿಪ್ರಾಯೋ ವಿಪರೀತ । ಕಾಮಸುಖೇ ಮೋಕ್ಷ ಮಾನಿತ । ಕಾಮ ಸತತ ಸೇವಾವಾ ॥೧೮॥ ಸಾಂಖ್ಯಯೋಗಾಂಚೀ ವದಂತೀ । ಸತ್ಯ-ಶಮ-ದಮಾದಿ ಸಂಪತ್ತೀ । ಹೇಚಿ ಸಾಧನ ಮೋಕ್ಷಾಪ್ರತೀ । ನೇಮ ನಿಶ್ಚಿತೀ ತಿಹೀ ಕೇಲಾ ॥೧೯॥ ನೀತಿಶಾಸ್ತ್ರಕಾರಾಂಚೇ ಮತ । ಸಾರ್ವಭೌಮ ರಾಜ್ಯ ಪ್ರಾಪ್ತ । ತ್ಯಾತೇಚಿ ಮೋಕ್ಷ ಮಾನಿತ । ಸಾಮದಾನಾದಿ ತೇಥ ಸಾಧನ ॥೨೦॥ ಏಕಾಂಚಾ ಮತವಿಭಾಗ । ಶಿಖಾಸೂತ್ರ ಮಾತ್ರತ್ಯಾಗ । ತ್ಯಾಂಚೇ ನಾಂವ ಮೋಕ್ಷಮಾರ್ಗ । ಪರಮ ಶ್ಲಾಘ್ಯ ಮಾನತೀ ॥೨೧॥ ದೇಹಾತ್ಮವಾದ್ಯಾಂಚಾ ಯೋಗ । ಸ್ವೇಚ್ಛಾ ಭೋಗಾವೇ ಯಥೇಷ್ಟ ಭೋಗ । ಕೈಚಾ ನರಕ ಕೈಚಾ ಸ್ವರ್ಗ । ಮೇಲ್ಯಾ ಮಗ ಕೋಣ ಜನ್ಮೇ ॥೨೨॥ ಅಶ್ವಮೇಧ ರಾಜಸೂಯಯಾಗ । ಹಾಚಿ ಏಕಾಂಚಾ ಮೋಕ್ಷಮಾರ್ಗ । ಏಕಾ ಮೂರ್ತಿ ಉಪಾಸನಾ ಸಾಂಗ । ಪೂಜಾವಿಭಾಗ ತೇ ಸಾಧನ ॥೨೩॥ ಏಕಾಚೇ ಮತ ಸಾಕ್ಷೇಪ । ಕಡಕಡಾಟೇಸೀ ಖಟಾಟೋಪ । ಶರೀರಶೋಷಣಾದಿ ಜೇ ಜಪ । ತೋ ಮಾರ್ಗ ಸಮೀಪ ಮೋಕ್ಷಾಚಾ ॥೨೪॥ ಏಕ ಮ್ಹಣತೀ ಶ್ರೇಷ್ಠ ಸಾಧನ । ಮೋಕ್ಷಮಾರ್ಗೀ ಕೇವಳ ದಾನ । ದೀಕ್ಷಿತ ಮ್ಹಣತೀ ವ್ರತಗ್ರಹಣ । ಹೇಚಿ ಸಾಧನ ಮೋಕ್ಷಾಚೇ ॥೨೫॥ ಏಕಾಂಚ್ಯಾ ಮತಾಚಾ ಅನುಕ್ರಮ । ಅವಶ್ಯ ಕರಾವೇ ವ್ರತ ನಿಯಮ । ಏವಂ ಮತಾನುಸಾರೇ ಉಪಕ್ರಮ । ನಾನಾ ಸಾಧನಸಂಭ್ರಮ ಬೋಲತೀ ॥೨೬॥ ಯಾ ಸಾಧನಾಂಚೀ ಪಾಹತಾ ಸ್ಥಿತೀ । ಆದ್ಯಂತವಂತ ನಿಶ್ಚಿತೀ । ತೇಚಿ ಪೈ ಉದ್ಧವಾ ಪ್ರತೀ । ಕೃಷ್ಣ ಕೃಪಾಮೂರ್ತೀ ಸಾಂಗತ ॥೨೭॥

ಆದ್ಯಂತವಂತ ಏವೈಷಾಂ ಲೋಕಾಃ ಕಾಮವಿನಿರ್ಮಿತಾಃ । ದುಃಖೋದರ್ಕಾಸ್ತಮೋನಿಷ್ಠಾಃ ಕ್ಷುದ್ರಾನಂದಾಃ ಶುಚಾರ್ಪಿತಾಃ ॥೧೧॥

ಅರ್ಥ :- ಈ ಎಲ್ಲ ಸಾಧನೆಗಳಿಂದ ಪ್ರಾಪ್ತವಾಗುವ ಫಲಗಳು ಉತ್ಪತ್ತಿ, ವಿನಾಶಶೀಲವಾಗಿರುವುವು. ಇವುಗಳಿಂದ ದುಃಖವು ಪ್ರಾಪ್ತವಾಗುವುದು. ಇವುಗಳ ಅಂತಿಮ ಗತಿಯೂ ಕೂಡ ಘೋರ ಅಜ್ಞಾನಕಾರಕವಾಗಿರುವುದು. ಇವುಗಳಿಂದ ಸಿಗುವ ಸುಖವು ತುಚ್ಛವಾಗಿರುವುದು. ಈ ಜನರು ಭೋಗದ ಸಮಯದಲ್ಲೂ ಕೂಡ ದುಃಖಿಯಾಗಿರುವರು. ಆದ್ದರಿಂದ ಇಂತಹ ವಿಭಿನ್ನ ಸಾಧನೆಗಳಲ್ಲಿ ಸಿಲುಕಿಕೊಳ್ಳಬಾರದು.

ಸಾಂಡೂನಿ ಫಳಾಶಾ ದೇಹಾಭಿಮಾನ । ಮಜ ನಾರ್ಪಿತೀ ಜೇ ಸಾಧನ । ತ್ಯಾಂಚೇ ಫಳ ದುಃಖರೂಪ ಜಾಣ । ಜನ್ಮ ಮರಣದಾಯಕ ॥೨೮॥ ತಿಹೀ ಸಾಧನೀ ಸಾಧಿಲೇ ಲೋಕ । ತೇ ಅಂತವಂತ ನಶ್ವರ ದೇಖ । ತೇ ಲೋಕೀಚೇ ಜೇ ಸುಖ । ಸಾಖರೇಸೀ ವಿಖರಾಂಧಿಲೇ ॥೨೯॥

ವಾತ್ಸ್ಯಾಯನ ಕೋಕಶಾಸ್ತ್ರದ ಮತವು ಮಾತ್ರ ಅತಿಶಯವಾಗಿ ವಿಚಿತ್ರವಾಗಿರುವುದು. ಅವರು ಕಾಮಸುಖದಿಂದ ಮೋಕ್ಷವು ದೊರೆಯುವುದೆಂದು ಹೇಳುವರು. ಆದ್ದರಿಂದ ಅವರು ನಿತ್ಯವೂ ಕಾಮಸೇವನೆಯನ್ನು ಮಾಡಬೇಕೆಂದು ಹೇಳುವರು ॥೧೮॥ ಸಾಂಖ್ಯಯೋಗಿಗಳು ಹೀಗೆ ಹೇಳುವರು ; ಸತ್ಯ ,ಶಮ, ದಮ ಇವುಗಳೇ ನಿಜವಾದ ಸಂಪತ್ತಾಗಿರುವುವು. ಇದೇ ಮೋಕ್ಷದ ಸಾಧನೆಯಾಗಿದೆ. ಹೀಗೆಂದು ಅವರು ನಿಶ್ಚಯವನ್ನು ಮಾಡಿರುವರು ॥೧೯॥ ನೀತಿಶಾಸ್ತ್ರಕಾರರ ಮತವು ಸಾರ್ವಭೌಮ ರಾಜ್ಯವನ್ನು ಪ್ರಾಪ್ತಮಾಡಿಕೊಳ್ಳುವುದೇ ಮೋಕ್ಷವಾಗಿರುವುದು. ಇವರು ಸಾಮ-ದಾನ ಇತ್ಯಾದಿ ಇವು ಮೋಕ್ಷದ ಸಾಧನೆ ಎಂದು ತಿಳಿಯುವರು ॥೨೦॥ ಇನ್ನು ಕೆಲವು ಜನರು ಹೀಗೆ ಹೇಳುವರು ; ಜುಟ್ಟು ,ಜನಿವಾರ ಇವುಗಳನ್ನು ತ್ಯಜಿಸಿದರೆ, ಇದರಿಂದಲೇ ಮೋಕ್ಷವು ದೊರೆಯುವುದು. ಈ ಮಾರ್ಗವೇ ಎಲ್ಲಕ್ಕೂ ಮಿಗಿಲಾಗಿರುವುದು ॥೨೧॥ ದೇಹವೇ ಆತ್ಮವು ಎಂದು ಹೀಗೆ ತಿಳಿದಿರುವ ನಾಸ್ತಿಕ ಜನರು ಹೀಗೆ ಹೇಳುವರು. ಏನೆಂದರೆ, ತಾವು ತಮ್ಮ ಇಚ್ಛೆಯಂತೆ ವರ್ತಿಸಬೇಕು. ಇಷ್ಟವಾದ ಭೋಗಗಳನ್ನು ಭೋಗಿಸಬೇಕು. ಸ್ವರ್ಗ ಮತ್ತು ನರಕ ಇವು ಯಾವುವೂ ಇಲ್ಲ. ಸತ್ತ ಶರೀರವು ಸುಟ್ಟು ಬೂದಿಯಾಗಲು ಪುನಃ ಹುಟ್ಟುವುದು ಎಲ್ಲಿಂದ? ॥೨೨॥ ಯಾಜ್ಞಿಕ ಜನರ ಅಶ್ವಮೇಧಯಾಗ ಮತ್ತು ರಾಜಸೂಯಯಾಗ ಇವುಗಳೇ ಮೋಕ್ಷದ ಮಾರ್ಗವಾಗಿರುವುದು. ಕೆಲವರು ಮೂರ್ತಿಯ ಯಥಾಸಾಂಗ ಪೂಜೆ ಮತ್ತು ಉಪಾಸನೆಯೇ ಸಾಧನೆವೆನ್ನುವರು ॥೨೩॥ ಇನ್ನು ಕೆಲವರು ಹೀಗೆಯೂ ಹೇಳುವರು , ಶರೀರಕ್ಕೆ ಕ್ಲೇಶಕೊಟ್ಟು ಉಪವಾಸ ಮಾಡಬೇಕು ; ಶರೀರವನ್ನು ದಂಡಿಸಿ ಹಠಯೋಗದಂತಹ ತಪವನ್ನು ಮಾಡಬೇಕು. ಇವೇ ಮೋಕ್ಷ ಪ್ರಾಪ್ತಿಯ ಅತ್ಯಂತ ಸಮೀಪದ ಮಾರ್ಗವಾಗಿರುವುದು ॥೨೪॥ ಇದಲ್ಲದೇ ಕೆಲವರು ದಾನವನ್ನು ಕೊಡುವುದೇ ಮೋಕ್ಷದ ಶ್ರೇಷ್ಠ ಸಾಧನೆಯಾಗಿರುವುದು ಎಂದು ಹೇಳುವರು. ದೀಕ್ಷಿತರು ವ್ರತಸ್ಥನಾಗಿರುವುದೇ ಮೋಕ್ಷದ ಶ್ರೇಷ್ಠ ಸಾಧನೆ ಎಂದು ಹೇಳುವರು ॥೨೫॥ ವ್ರತ-ಕೈವಲ್ಯ ನೇಮಧರ್ಮ ಇವೇ ಮೋಕ್ಷದ ಮಾರ್ಗವೆಂದು ಇನ್ನೂ ಕೆಲವರ ಮತವಾಗಿರುವುದು. ಹೀಗೆ ತಮ್ಮ ತಮ್ಮ ಮತಗಳಂತೆ ಅನೇಕ ಸಾಧನೆಗಳ ಮಹಿಮೆಯನ್ನು ಹೇಳುವರು ॥೨೬॥ ಆದರೆ ಈ ಎಲ್ಲ ಸಾಧನೆಗಳ ವಿಚಾರವನ್ನು ಮಾಡಲು ಅವು ಅನಿತ್ಯವಾಗಿರುವುವು ಎಂದು ಕೃಪಾಮೂರ್ತಿ ಶ್ರೀಕೃಷ್ಣನು ಉದ್ಧವನಿಗೆ ಹೇಳುವನು ॥೨೭॥

ಫಲದ ಅಪೇಕ್ಷೆಯನ್ನು ಮತ್ತು ದೇಹದ ಅಭಿಮಾನವನ್ನು ಬಿಟ್ಟು ತಮ್ಮ ಸಾಧನೆಗಳನ್ನು ನನಗೆ ಅರ್ಪಣೆ ಮಾಡದಿದ್ದರೆ, ಅವರ ಸಾಧನೆಗಳ ಫಲವು ದುಃಖರೂಪವಾಗಿರುವುದು. ಇದು ಪುನಃ ಪುನಃ ಜನ್ಮ ಮರಣ ಚಕ್ರದಲ್ಲಿ ತಿರುಗಿಸುವುದು ॥೨೮॥ ಯಾವ ಸಾಧನೆಗಳಿಂದ ಸ್ವರ್ಗಾದಿ ಭೋಗಗಳನ್ನು ಪ್ರಾಪ್ತಮಾಡಿಕೊಂಡವರು ಅಶಾಶ್ವತ ಮತ್ತು ನಾಶಿವಂತರಾಗಿರುವರು. ವಿಷವನ್ನು ಕೂಡಿಸಿ ಕುದಿಸಿರುವ ಸಕ್ಕರೆಯ ಪದಾರ್ಥಗಳಂತೆ ಆ ಲೋಕದ ಸುಖವು ದುಃಖಕಾರಕವಾಗಿರುವುದು ॥೨೯॥

ತ್ಯಾಚೇ ಜಿವ್ಹಾಗ್ರೀ ಗೋಢಪಣ । ಪರಿಪಾಕೀ ಅಚೂಕ ಮರಣ । ತೈಸಾ ತೋ ಕ್ಷುದ್ರಾನಂದ ಜಾಣ । ಶೋಕಾಸೀ ಕಾರಣ ಸಮೂಳ ।।೮೦।। ನಿಜಕರ್ಮೇ ಮಲಿನ ಲೋಕ । ತ್ಯಾಂಚ್ಯಾ ಠಾಯೀ ಕೈಚೇ ಸುಖ । ಉತ್ತರೋತ್ತರ ವಾಢತೇ ದುಃಖ । ಅಂಧತಮದಾಯಕ ಪರಿಪಾಕೂ ।।೮೧।। ಭೋಗಾಸಕ್ತ ಜೇ ಝಾಲೇ ಮನ । ತ್ಯಾಸೀ ಅಖಂಡ ವಿಷಯಾಂಚೇ ಧ್ಯಾನ । ವಿಷಯಧ್ಯಾಸೇ ತಮೋಗುಣ । ಅಧಃಪತನದಾಯಕ ।।೮೨।। ಇಹೀಂಚ ಸಾಧನೀ ಮಾಝೀ ಭಕ್ತೀ । ಜೋ ಕೋಣೀ ಕರೀಲ ಪರಮಪ್ರೀತೀ । ತೇ ಭಕ್ತೀಚೀ ಮುಖ್ಯತ್ವೇ ಸ್ಥಿತೀ । ಸ್ವಯೇ ಶ್ರೀಪತೀ ಸಾಂಗತ ।।೮೩।।

ಮಯ್ಯರ್ಪಿತಾತ್ಮನಃ ಸಭ್ಯ ನಿರಪೇಕ್ಷಸ್ಯ ಸರ್ವತಃ । ಮಯಾತ್ಮನಾ ಸುಖಂ ಯತ್ತತ್ಕುತಃ ಸ್ಯಾದ್ವಿಷಯಾತ್ಮನಾಮ್ ।।೧೨।।

ಅರ್ಥ :- ಪ್ರಿಯ ಉದ್ಧವಾ, ಯಾರು ಸರ್ವಪ್ರಕಾರದಿಂದ ನಿರಪೇಕ್ಷರಾಗುವರೋ ಮತ್ತು ಕರ್ಮ ಹಾಗೂ ಫಲ ಇವುಗಳ ಆಸಕ್ತಿ ಬಿಡುವರೋ ಹಾಗೆಯೇ ಅಂತಃಕರಣದಿಂದ ಸಂಪೂರ್ಣ ಜೀವನವನ್ನು ನನಗೆ ಸಮರ್ಪಿತ ಮಾಡುವರೋ ಅವರ ಅಂತಃಕರಣದಲ್ಲಿ ನಾನು ಪ್ರಕಟನಾಗುವೆನು. ಆಗ ಅವರಿಗೆ ಆಗುವ ಆನಂದವು ಯಾವ ವಿಷಯಗಳಿಂದಲೂ ಸಿಗುವುದಿಲ್ಲ.

ಭಕ್ತೀ ನಿಜಸುಖಾಚೀ ಮಾತೂ । ಸಾಂಗಾವಯಾ ಉದ್ಧವಾಸೀ ಸಂಬೋಧಿತೂ । ಭಕ್ತೀಸುಖಾಲಾಗೀ ಭಾಗ್ಯವಂತೂ । ತೂಚಿ ನಿಶ್ಚಿತೂ ಉದ್ಧವಾ ।।೮೪।। ಭಕ್ತಿ ಸುಖಾಚೇ ಭಾಗ್ಯ ಯಾಸೀ । ಮ್ಹಣೋನಿ ಸಭ್ಯ ಮ್ಹಣಣೇ ತ್ಯಾಸೀ । ಐಸೇ ಪುರಸ್ಕಾರೋನಿ ಉದ್ಧವಾಸೀ । ಭಕ್ತೀ ಸುಖಾಸೀ ದೇವೋ ಸಾಂಗೇ ।।೮೫।। ಪಾವಾವಯಾ ಮಾಝೀ ಸ್ವರೂಪಪ್ರಾಪ್ತೀ । ಇಹಲೋಕೀಚೀ ಭೋಗಾಸಕ್ತೀ । ನಿಃಶೇಷ ನಾತಳೇ ಚಿತ್ತವೃತ್ತೀ । ಜೇವೀ ನಿಜಪತೀ ರಜಸ್ವಲಾ ।।೮೬।। ಸಾಧೂನಿ ಮಾಝಿಯಾ ಅನುಸಂಧಾನಾ । ಪರಲೋಕ ನಾತಳೇ ವಾಸನಾ । ಧಿಕ್ಕಾರೀ ಪೈ ಬ್ರಹ್ಮಸದನಾ । ಇತರ ಗಣನಾ ಕೋಣ ಪುಸೇ ।।೮೭।। ಐಶಿಯಾ ಗಾ ನಿರಪೇಕ್ಷತಾ । ಮಾಝೇನಿ ಭಜನೇ ಸಪ್ರೇಮತಾ । ತೇಥ ಮೀ ಜಾಣ ಸ್ವಭಾವತಾ । ಪ್ರಕಟೇ ತತ್ತ್ವತಾ ನಿಜರೂಪೇ ।।೮೮।। ಮೀ ಪ್ರಕಟಲೋ ಹೇ ಐಸೇ । ಬೋಲಣೇ ತೇ ಆಹಾಚ ದಿಸೇ। ಸದಾ ಮೀ ಹೃದಯೀಚಿ ವಸೇ । ಪ್ರಕಟಲೋ ದಿಸೇ ನಿರ್ವಿಕಲ್ಪೇ ।।೮೯।। ಆಭಾಳ ಗೇಲಿಯಾ ಸವಿತಾ । ಸಹಜೇಚಿ ದಿಸೇ ಆಂತೌತಾ । ತೇವೀ ಗೇಲಿಯಾ ವಿಷಯಾವಸ್ಥಾ । ಮೀ ಸ್ವಭಾವತಾ ಪ್ರಕಟಚಿ ।।೯೦।। ಏವಂ ಭಕ್ತಾಚಿಯಾ ಭಾವಾರ್ಥಾ । ಭಾವಬಳೇ ಮಜ ಪ್ರಕಟತಾ । ತೇವ್ಹಾ ಭಕ್ತಾಚಿಯಾ ಚಿತ್ತಾ । ವಿಷಯವಾರ್ತಾ ಸ್ಫುರೇನಾ ।।೯೧।। ಸಾಂಡೂನಿ ವಿಷಯಾವಸ್ಥಾ । ಮದ್ರೂಪೀ ಲಾಗಲ್ಯಾ ಚಿತ್ತಾ । ಭಕ್ತಾಸೀ ಹೋಯ ಮದ್ರೂಪತಾ । ಸ್ವಭಾವತಾ ನಿಜಬೋಧೇ ।।೯೨।।

ಈ ಪದಾರ್ಥಗಳು ತುದಿ ನಾಲಿಗೆಗೆ ಮಾತ್ರ ಸಿಹಿಯಾಗಿ ತೋರುವುವು. ಆದರೆ ಅದರಿಂದ ಮಾತ್ರ ತಪ್ಪದೇ ಮರಣವು ಪ್ರಾಪ್ತವಾಗುವುದು. ಅದರಂತೆ ಸ್ವರ್ಗದಲ್ಲಿನ ಕ್ಷುದ್ರಸುಖವು ಶೋಕಕ್ಕೆ ಕಾರಣೀಭೂತವಾಗಿರುವುದು ।।೮೦।। ತಮ್ಮ ಕಾರ್ಯಗಳಿಂದ ದೋಷಿಗಳಾಗಿರುವ ಜನರಿಗೆ ಸುಖವು ಎಲ್ಲಿಂದ ಲಭಿಸಬೇಕು? ಅದರಲ್ಲಿ ಸತತವಾಗಿ ಬೆಳೆಯುವ ದುಃಖವು ತುಂಬಿರುವುದು. ಅದು ಅಂಧತಮವೆಂಬ ನರಕವನ್ನು ಪ್ರಾಪ್ತಮಾಡಿಕೊಡುವುದು ।।೮೧।। ಯಾವ ನಮನವು ಯಾವಾಗಲೂ ವಿಷಯ ಭೋಗದಲ್ಲಿ ಆಸಕ್ತವಾಗಿರುವುದೋ, ಆತನಿಗೆ ಹಗಲು ರಾತ್ರಿ ವಿಷಯಗಳ ಧ್ಯಾಸವು ಹತ್ತಿರುವುದು. ಈ ಧ್ಯಾಸದಿಂದ ನರಕಕ್ಕೆ ಒಯ್ಯುವ ತಮೋಗುಣವು ಬೆಳೆಯುವುದು ।।೮೨।। ಯಾವ ಸಾಧನೆಯಿಂದ ಯಾರಾದರು ಅಂತಃಕರಣದಲ್ಲಿ ಶುದ್ಧ ಪ್ರೇಮದಿಂದ ನನ್ನ ಭಕ್ತಿಯನ್ನು ಮಾಡುವರೋ, ಆ ಭಕ್ತಿಯ ಸ್ವರೂಪವನ್ನು ಶ್ರೀಕೃಷ್ಣನು ಸ್ವತಃ ಹೇಳುವನು ।।೮೩।।

ಭಕ್ತಿಯಿಂದ ಆತ್ಮಾನಂದದ ಪ್ರಾಪ್ತಿಯಾಗುವುದು. ಇದರ ವರ್ಣನೆಯನ್ನು ಮಾಡುವುದಕ್ಕಾಗಿ ದೇವನು ಉದ್ಧವನಿಗೆ ಉದ್ದೇಶಿಸಿ ಹೇಳಿದನು ; ಹೇ ಉದ್ಧವಾ, ಭಕ್ತಿಸುಖಕ್ಕೆ ಪ್ರಾಪ್ತನಾಗುವ ಭಾಗ್ಯವಾನ ನಿಜವಾಗಿಯೂ ನೀನೇ ಆಗಿರುವೆ ।।೮೪।। ಈತನಲ್ಲಿ ಭಕ್ತಿಸುಖದ ಭಾಗ್ಯವಿರುವುದು. ಆದ್ದರಿಂದ ಈತನಿಗೆ ಸಭ್ಯನು ಎಂದು ಹೇಳುವುದು ಯೋಗ್ಯವಾಗಿರುವುದು. ಹೀಗೆ ಆದರದಿಂದ ದೇವನು ಉದ್ಧವನಿಗೆ ಭಕ್ತಿಸುಖವನ್ನು ಹೇಳಹತ್ತಿದನು ।।೮೫।। ಮುಟ್ಟಾಗಿರುವ ತನ್ನ ಹೆಂಡತಿಗೆ ಗಂಡನು ಸ್ಪರ್ಶ ಮಾಡುವುದಿಲ್ಲ. ಅದರಂತೆ ನನ್ನ ಭಕ್ತನು ನನ್ನ ಸ್ವರೂಪದ ಪ್ರಾಪ್ತಿಗಾಗಿ ಇಹಲೋಕದ ಭೋಗ ಆಸಕ್ತಿಯನ್ನು ಸ್ಪರ್ಶಕೂಡ ಮಾಡಲಾರನು ।।೮೬।। ಸತತವಾಗಿ ನನ್ನ ಚಿಂತನೆಯನ್ನು ಮಾಡಿ ಭಕ್ತನು ಪರಲೋಕ ಪ್ರಾಪ್ತಿಯ ಇಚ್ಛೆಯನ್ನು ಮಾಡುವುದೇ ಇಲ್ಲ. ಈತನು ಬ್ರಹ್ಮಲೋಕಕ್ಕೂ ತುಚ್ಛವೆನ್ನುವನು. ಅಂದ ಮೇಲೆ ಇತರ ಲೋಕದ ಯಾವ ಕಥೆ? ।।೮೭।। ಹೀಗೆ ನಿರಪೇಕ್ಷ ಭಾವದಿಂದ ನನ್ನ ಭಜನೆಯನ್ನು ಮಾಡುವವನ ಅಂತಃಕರಣದಲ್ಲಿ ಪ್ರೇಮವು ನಿರ್ಮಾಣವಾಗುವುದು. ಆತನಲ್ಲಿ ನಾನು ಸಹಜವಾಗಿ ಆತ್ಮರೂಪದಿಂದ ಪ್ರಕಟನಾಗುವೆನು ।।೮೮।। ಇಲ್ಲಿ ನಾನು ಪ್ರಕಟನಾದೆನು ಎಂದು ಹೇಳುವಿಕೆಯು ವ್ಯರ್ಥವಾಗಿರುವುದು. ಕಾರಣ ನಾನು ಯಾವಾಗಲೂ ಹೃದಯದಲ್ಲಿಯೇ ಇರುತ್ತಿರುವೆನು. ಚಿತ್ತವು ನಿರ್ವಿಕಲ್ಪವಾಗುತ್ತಲೇ ನಾನು ಕಾಣಲಾರಂಭಿಸುವೆನು. ಆದಕ್ಕಾಗಿ ನಾನು ಪ್ರಕಟನಾದೆನೆಂದು ಅನಿಸುವುದು ।।೮೯।। ಆಕಾಶದಲ್ಲಿ ಮೋಡಗಳು ಸರಿದಾಕ್ಷಣವೇ ಸೂರ್ಯನು ಸಹಜವಾಗಿ ಕಾಣುವಂತೆ ವಿಷಯಗಳ ಆಸಕ್ತಿ ಹೋದಕೂಡಲೇ ನಾನು ಪ್ರತ್ಯಕ್ಷ ರೂಪದಲ್ಲಿ ತೋರುವೆನು ।।೯೦।। ಈ ಪ್ರಕಾರವಾಗಿ ಭಕ್ತನ ಶುದ್ಧಭಾವನೆಯಿಂದ ನಾನು ಪ್ರಕಟನಾಗಲು ಭಕ್ತನ ಚಿತ್ತಕ್ಕೆ ವಿಷಯಗಳ ವಾರ್ತೆಯೇ ಸ್ಫುರಣವಾಗುವುದಿಲ್ಲ ।।೯೧।। ವಿಷಯವಾಸನೆಯನ್ನು ಬಿಟ್ಟು ಚಿತ್ತವನ್ನು ನನ್ನ ಸ್ವರೂಪದತ್ತ ಹಚ್ಚಲು ಆ ಭಕ್ತನು ಆತ್ಮಜ್ಞಾನದಿಂದ ಮದ್ರೂಪನಾಗುವನು ।।೯೨।।

ಲೋಹ ಏಕಾಂಗೇ ಸ್ಪರ್ಶಮಣೀ । ಲಾಗತಾ ಸರ್ವಾಂಗ ಹೋಯ ಸುವರ್ಣೀ । ತೇವೀ ಮದ್ಭಕ್ತ ಮಾಝ್ಯಾ ಧ್ಯಾನೀ । ಚಿದ್ರೂಪಪಣೇ ಸರ್ವಾಂಗ ।೯೩॥ ತೇ ಕಾಳೀ ಸಹಜಸುಖ । ಭಕ್ತಾಂಸೀ ಜೇ ಹೋಯ ದೇಖ । ತ್ಯಾಸೀ ತುಕಾವಯಾ ತುಕ । ಕೈಚೇ ಆಣಿಕ ಕಾಂಟಾಳೇ ।೯೪॥ ಜ್ಯಾ ನಿಜಸುಖಾಕಾರಣೇ । ಸದಾಶಿವೂ ಸೇವೀ ಸ್ಮಶಾನೇ । ಬ್ರಹ್ಮಾ ತೇ ಸುಖ ಕಾಯ ಜಾಣೇ । ತ್ಯಾಕಾರಣೇ ಮ್ಯಾ ಉಪದೇಶಿಲೇ ।೯೫॥ ಭಕ್ತೀ ಭೋಗಿತಾ ಮಾಝೇ ಸುಖ । ವಿಸರಲೇ ದೇಹಾದಿ ಜನ್ಮ ದುಃಖ । ವಿಸರಲೇ ತೇ ತಹಾನಭೂಕ । ನಿಜಾತ್ಮ ಸುಖ ಕೋಂದಲೇ ।೯೬॥ ಐಶಿಯಾ ನಿಜಸುಖಾಚೀ ಗೋಡೀ । ವಿಷಯೀ ಕಾಯ ಜಾಣತೀ ಬಾಪುಡೀ । ವೇಚಿತಾ ಲಕ್ಷಾ ಲಕ್ಷ ಕೋಡೀ । ತ್ಯಾ ಸುಖಾಚಾ ಕವಡೀ ಲಾಭೇನಾ ।೯೭॥ ಧನ ಧಾನ್ಯ ಪುತ್ರ ಸ್ವಜನ । ಸರ್ವಸ್ವ ವೇಂಚಿತಾಹೀ ಜಾಣ । ತ್ಯಾ ಸುಖಾಚಾ ರಜಃಕಣ । ವಿಷಯೀ ಜನ ನ ಲಭತೀ ।೯೮॥ ಹೋ ಕಾ ಸತ್ಯಲೋಕನಿವಾಸೀ । ತೇಹೀ ನ ಪಾವತೀ ತ್ಯಾ ಸುಖಾಸೀ । ಇತರಾಂಚಿ ಕಥಾ ಕಾಯಸೀ । ಮುಖ್ಯ ಪ್ರಜಾಪತೀಸೀ ಹೇ ಸುಖ ಕೈಚೇ ।೯೯॥ ಮಜ ನಿಜಾತ್ಮ್ಯಾಚೇ ಸುಖಪ್ರಾಪ್ತೀ । ಸಕಳ ಇಂದ್ರಿಯೇ ಸುಖರೂಪ ಹೋತೀ । ತ್ಯಾ ಸುಖಾಚೀ ಸುಖಸ್ಥಿತೀ । ಲೋಕಾಂತರಪ್ರಾಪ್ತೀ ಕೋಟ್ಯಾಂಶೇನೇ ನ ತುಕೇ ।೧೦೦॥ ನಿಷ್ಕಾಮ ನಿರ್ಲೋಭ ನಿರ್ದಂಭ ಭಜನ । ನಿರ್ಮತ್ಸರ ನಿರಭಿಮಾನ। ಐಶಿಯಾ ಮದ್ಭಕ್ತಾಂಸೀ ಜಾಣ । ಮಾಝೇ ಸುಖ ಸಂಪೂರ್ಣ ಮೀ ದೇತೋ ।೧೦೧॥ ಜೇ ಕಾ ದೇಶತಃ ಕಾಲತಾ । ಅನವಚ್ಛಿನ್ನ ಗಾ ವಸ್ತುತಾ । ಐಶಿಯಾ ನಿಜಸುಖಾಚೇ ಮಾಥಾ । ಮಾಝಿಯಾ ನಿಜಭಕ್ತಾ ರಹಿವಾಸೂ ।೧೦೨॥

ಅಕಿಂಚನಸ್ಯ ದಾಂತಸ್ಯ ಶಾಂತಸ್ಯ ಸಮಚೇತಸಃ । ಮಯಾ ಸಂತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ ।೧೩॥

ಅರ್ಥ :- ಯಾರು ಈ ಜಗತ್ತಿನಲ್ಲಿ ಏನನ್ನೂ ಅಪೇಕ್ಷಿಸುವುದಿಲ್ಲವೋ, ಯಾರು ಇಂದ್ರಿಯ ನಿಗ್ರಹದಿಂದ ಶಾಂತಿ ಪಡೆದಿರುವರೋ, ಯಾರು ಎಲ್ಲ ಸ್ಥಿತಿಗಳಲ್ಲಿಯೂ ಸಮಚಿತ್ತರಾಗಿರುವರೋ ಹಾಗೂ ನನ್ನಲ್ಲಿರುತ್ತ ಯಾರ ಮನಸ್ಸು ಸಂಪೂರ್ಣವಾಗಿ ತೃಪ್ತಿ ಹೊಂದಿದೆಯೋ, ಅಂತಹವರು ಎಲ್ಲೇ ಇರಲಿ, ಅಲ್ಲೆಲ್ಲ ಸುಖ ಸಂತೋಷಗಳನ್ನು ಪಡೆಯುತ್ತಾರೆ.

ಐಕ ಅಕಿಂಚನಾಚೇ ಗೋಠೀ । ನಾಹೀ ಮಠ ಮಠಿಕಾ ಪರ್ಣಕುಟೀ । ಪಾಂಚಾಪಾಲವೀ ಮೋಕಳ್ಯಾ ಗಾಂಠೀ । ತ್ಯಾಂಸೀ ಯೇ ಭೇಟೀ ನಿಜಸುಖ ಮಾಝೇ ।೧೦೩॥ ಜೋ ದಮನಶೀಳ ಜಗಜೇಠೀ । ಅಕರಾಂಚೇಹೀ ನಳೀ ನಿಮಟೀ । ತೋ ನಿಜಸುಖಾಚೇ ಸಾಮ್ರಾಜ್ಯಪಟೀ । ಬೈಸೇ ಉಠಾಉಠೀ ತತ್ಕಾಳ ।೧೦೪॥

ಕಬ್ಬಿಣದ ಒಂದೇ ಭಾಗಕ್ಕೆ ಸ್ಪರ್ಶಮಣಿಯ ಸ್ಪರ್ಶವಾಗಲು ಆಗ ಎಲ್ಲ ಭಾಗವೂ ಸುವರ್ಣವಾಗುವುದು. ಅದರಂತೆ ನನ್ನ ಭಕ್ತನು ಕೇವಲ ನನ್ನ ಚಿಂತನೆಯಿಂದ ಸಹಜವಾಗಿಯೇ ಪರಿಪೂರ್ಣ ಮದ್ರೂಪನಾಗುವನು ।೯೩॥ ಆ ಸಮಯಕ್ಕೆ ಭಕ್ತನಿಗಾಗುವ ಸಹಜವಾದ ದಿವ್ಯ ಆನಂದದ ತುಲನೆಯನ್ನು ಮಾಡಲು ಬೇರೆ ಯಾವ ವಸ್ತುವೇ ಇರುವುದಿಲ್ಲ ।೯೪॥ ಈ ಆನಂದಕ್ಕಾಗಿ ಶಂಕರನಿಗೆ ಸ್ಮಶಾನದಲ್ಲಿರಬೇಕಾಯಿತು. ಬ್ರಹ್ಮನಿಗೂ ಈ ಆನಂದದ ಪರಿಚಯವಿಲ್ಲದ್ದಕ್ಕೆ ನಾನು ಆತನಿಗೆ ಉಪದೇಶವನ್ನು ಮಾಡಿದೆನು ।೯೫॥ ಭಕ್ತರು ಈ ನನ್ನ ಆನಂದದ ಅನುಭವವನ್ನು ಪಡೆದು ಅವರು ದೇಹಾದಿ ಜನ್ಮ ಮರಣಗಳನ್ನು ಮರೆತುಬಿಡುವರು. ತಮ್ಮ ಹಸಿವೆ ನೀರಡಿಕೆಯನ್ನು ಮರೆಯುವರು. ಆತ್ಮಾನಂದದಿಂದ ಅವರು ಓತಪ್ರೋತವಾಗಿ ಆನಂದದಿಂದ ತುಂಬಿರುವರು ।೯೬॥ ಇಂತಹ ದಿವ್ಯವಾದ ಆತ್ಮಾನಂದದ ರುಚಿಯು ವಿಷಯಗಳಲ್ಲಿ ಆಸಕ್ತರಾಗಿರುವ ಜನರಿಗೆ ಹೇಗೆ ಸಿಗಬೇಕು? ಅವರು ಅಗಣಿತ ಸಂಪತ್ತನ್ನು ಖರ್ಚು ಮಾಡಿದರೂ ಕೂಡ ಅವರಿಗೆ ಆ ದಿವ್ಯ ಆನಂದದ ಪ್ರಾಪ್ತಿಯಾಗಲು ಶಕ್ಯವಿಲ್ಲ ।೯೭॥ ಧನ, ಧಾನ್ಯ, ಪುತ್ರ, ಆಪ್ತೇಷ್ಟ ಇತ್ಯಾದಿ ಸರ್ವವನ್ನು ಖರ್ಚಿಗೆ ಹಾಕಿದರೂ ಸಹ ಆ ಯಾವ ದಿವ್ಯ ಆನಂದದ ಒಂದು ಕಣವೂ ಕೂಡ ವಿಷಯೀ ಜನರಿಗೆ ಪ್ರಾಪ್ತವಾಗಲಾರದು ।೯೮॥ ಬೇಕಾದರೆ ಸತ್ಯಲೋಕಕ್ಕೆ ಹೋಗಿ ವಸತಿ ಮಾಡಲಿ, ಅವರಿಗೂ ಕೂಡ ಈ ಆನಂದವು ಪ್ರಾಪ್ತವಾಗುವುದಿಲ್ಲ. ಅಂದಮೇಲೆ ಇತರರ ಯಾವ ಕಥೆ? ಮುಖ್ಯವಾಗಿ ಬ್ರಹ್ಮದೇವನಿಗೂ ಕೂಡ ಈ ಆನಂದವು ಹೇಗೆ ಪ್ರಾಪ್ತವಾಗಬೇಕು? ।೯೯॥ ನನ್ನ ನಿಜಾತ್ಮದ ಆನಂದವು ಪ್ರಾಪ್ತವಾಗಲು ಆಗ ಸರ್ವ ಇಂದ್ರಿಯಗಳು ಆನಂದರೂಪವಾಗುವುವು. ಆ ಆನಂದ ಸ್ಥಿತಿಯ ಕೋಟಿಯಲ್ಲಿನ ಒಂದು ಅಂಶವೂ ಕೂಡ ಸ್ವರ್ಗಾದಿ ಲೋಕಾಂತರ ಪ್ರಾಪ್ತಿಯ ಸರಿಸಮಾನವಾಗಲು ಶಕ್ಯವಿಲ್ಲ ।೧೦೦॥ ನಿಷ್ಕಾಮ, ನಿರ್ಲೋಭ, ನಿರ್ದಂಭ ಭಜನೆಯನ್ನು ಮಾಡುವವ ನಿರ್ಮತ್ಸರ, ನಿರಾಭಿಮಾನವಾಗಿರುವ ಇಂತಹ ಭಕ್ತರಿಗೆ ನಾನು ನನ್ನ ಪರಿಪೂರ್ಣ ಬ್ರಹ್ಮಾನಂದವನ್ನು ಕೊಡುವೆನು ।೧೦೧॥ ನಾನು ನನ್ನ ಭಕ್ತರಿಗೆ ದೇಶ ಮತ್ತು ಕಾಲ ಇವುಗಳಿಗೆ ಮರ್ಯಾದಿತವಾಗಿರದ ನನ್ನ ಅಲೌಕಿಕವಾದ ಆತ್ಮಾನಂದದ ಶಿಖರದಲ್ಲಿ ಒಯ್ದು ಕುಳ್ಳಿರಿಸುವೆನು ।೧೦೨॥

ಈಗ ಅಕಿಂಚನ ಭಕ್ತನ ವರ್ಣನೆಯನ್ನು ಕೇಳು. ಯಾರಿಗೆ ಮಠವೂ ಇಲ್ಲ ಮಠಿಯೂ ಇಲ್ಲ, ಪರ್ಣ ಕುಟೀರವೂ ಇಲ್ಲ. ಐದೂ ಸೆರಗಿನ ಗಂಟುಗಳು ಬಿಚ್ಚಿಹೋಗಿರುವುವು. ಆದರೆ ಅವರಿಗೆ ಮಾತ್ರ ನನ್ನ ಆತ್ಮಸೌಖ್ಯವು ಭೇಟಿಗಾಗಿ ಬರುವುದು ।೧೦೩॥ ಯಾರು ಶ್ರೇಷ್ಠ ದಮನಶೀಲರಾಗಿ ಐದು ಜ್ಞಾನೇಂದ್ರಿಯಗಳು ಮತ್ತು ಐದು ಕರ್ಮೇಂದ್ರಿಯಗಳು ಮತ್ತು ಮನವು ಹೀಗೆ ಕೂಡಿರುವ ಹನ್ನೊಂದು ಇಂದ್ರಿಯಗಳ ಕುತ್ತಿಗೆಯನ್ನು ಹಿಚುಕಿ ಅವುಗಳನ್ನು ತನ್ನ ಅಂಕಿತಗಳನ್ನಾಗಿ ಮಾಡುವನೋ, ಆತನೇ ಆತ್ಮಾನಂದದ ಸಾಮ್ರಾಜ್ಯದ ಮೇಲೆ ವಿರಾಜಮಾನನಾಗುವನು ।೧೦೪॥

ದೇಖತಾ ನಾನಾಭೂತ ವಿಷಮತಾ । ಜ್ಯಾಸೀ ಸಾಚಾರ ದಿಸೇ ಸಮತಾ । ತೋ ಮಾಝಿಯಾ ನಿಜಸುಖಾಚೇ ಮಾಥಾ । ಕ್ರೀಡೇ ಸರ್ವಾರ್ಥತಾ ಸಮಸ್ಸಾಮ್ಯೇ ॥೧೦೫॥ ಸರ್ಪತ್ವಚಾ ಜೇವೀ ಪಾಂಪರೀ । ಮಾಥಾ ಹಾಲವಿಲ್ಯಾ ಫಡಾ ನ ಕರೀ । ತೇವೀ ಧನದಾರಾಗೃಹ ಪುತ್ರೀ । ಛಳಿತಾ ಜ್ಯಾ ಭೀತರೀ ಕ್ರೋಧ ನುಮಸೇ ॥೧೦೬॥ ಕಾಮಕ್ರೋಧ ಮಾವಳಲೇ ದೇಹೀ । ಸಾಚಾರ ಶಾಂತಿ ಜ್ಯಾಚ್ಯಾ ಠಾಯೀ । ಮಾಝೀ ನಿಜಸುಖ ತ್ಯಾಚ್ಯಾ ಪಾಯೀ । ಲೋಳತ ಪಾಹೀ ಸರ್ವದಾ ॥೧೦೭॥ ತೋ ಜರೀ ತೇ ಸುಖ ನೇಘೇ । ತರೀ ತೇ ಸುಖ ತಯಾಪುಢೇಮಾಗೇ । ಜಡೋನಿ ಠೇಲೇ ಜೇ ಸರ್ವಾಂಗೇ । ಸಾಂಡಿತಾ ವೇಗೇ ಸಾಂಡೇನಾ ॥೧೦೮॥ ತೋ ಜೇಉತೀ ವಾಸ ಪಾಹೇ । ತೇ ದಿಗ್ಮಂಡಳ ಸುಖಾಚೇ ಹೋಯೇ । ತೋ ಜೇಥ ಕಾ ಉಭಾ ರಾಹೇ । ತೇಥ ಸುಖಾವಲೇ ರಾಹೇ ಮಹಾಸುಖ ॥೧೦೯॥ ತ್ಯಾಚೇ ಪಾಊಲ ಜೇಥೇ ಪಡೇ । ತೇಥೇ ನಿಜಸುಖಾಚೀ ಖಾಣೀ ಉಘಡೇ । ತೋ ಪ್ರಸಂಗೇ ಪಾಹೇ ಜಯಾಕಡೇ । ತೇಥೇ ಸ್ವಾನಂದೇ ವಾಢೇ ಪರಮಾನಂದೂ ॥೧೧೦॥ ತೋ ಜ್ಯಾಸೀ ಭೇಟೇ ಅದೃಷ್ಟೇ । ತ್ಯಾಸ ಸುಖಾಚೀ ಪಹಾಂಟ ಫುಟೇ । ತ್ಯಾಚಾ ಪಾವೋ ಲಾಗಲಿಯಾ ಅವಚಟೇ । ಸುಖಾಚೇ ಗೋಮಟೇ ನಿಜಸುಖ ಲಾಭೇ ॥೧೧೧॥ ಜ್ಯಾಚೇ ಶ್ವಾಸೋಚ್ಛ್ವಾಸಾಂಚಾ ಪರಿಚಾರ । ಕೀ ನಿಮಿಷೋನ್ನಿಷಾಂಚೇ ವ್ಯಾಪಾರ । ಮಾಝೇನಿ ನಿಜಸುಖೇ ಸಾಚಾರ । ತೇಥೇಚಿ ಘರಬಾಂಧಲೇ ॥೧೧೨॥ ತೋ ಸಕಳ ಸುಖಾಂಚಾ ಮಂಡಪೂ । ಕೀ ನಿಜಸುಖಾಚಾ ಕಂದರ್ಪೂ । ತೋ ಸರ್ವಾಂಗೇ ಸುಖಸ್ವರೂಪೂ । ಸಬಾಹ್ಯ ಸುಖರೂಪೂ ಸಮಸುಖತ್ವೇ ॥೧೧೩॥ ತ್ಯಾಚೇ ಸುಖಾಚೀ ಪರಿಪೂರ್ಣತಾ । ಪುಢಿಲೇ ಶ್ಲೋಕೇ ತತ್ತ್ವತಾ । ಸ್ವಯೇ ದೇವೋಚಿ ಝಾಲಾ ಸಾಂಗತಾ । ಸುಖಸಂಪನ್ನತಾ ಭಕ್ತಾಚೀ ॥೧೧೪॥

ನ ಪಾರಮೇಷ್ಠ್ಯಂ ನ ಮಹೇಂದ್ರಧಿಷ್ಣ್ಯಂ ನ ಸಾರ್ವಭೌಮಂ ನ ರಸಾಧಿಪತ್ಯಂ ।
ನ ಯೋಗಸಿದ್ಧೀರಪುನರ್ಭವಂ ವಾ ಮಯ್ಯರ್ಪಿತಾತ್ಮೇಚ್ಛತೀ ಮದ್ವಿನಾಽನ್ಯತ್ ॥೧೪॥

ಅರ್ಥ:- ನನ್ನಲ್ಲಿ ತಮ್ಮ ಚಿತ್ತವನ್ನು ಅರ್ಪಿಸಿದವರು ಬ್ರಹ್ಮ ಅಥವಾ ಇಂದ್ರಪದವಿಯನ್ನಾಗಲೀ ಮತ್ತು ಅವರ ಧಾಮವನ್ನಾಗಲೀ ಬಯಸುವುದಿಲ್ಲ. ಅಥವಾ ಭೂಲೋಕದ ಸಾರ್ವಭೌಮತ್ವವನ್ನಾಗಲೀ, ಅಧೋಲೋಕಗಳ ಅಧಿಪತ್ಯವನ್ನಾಗಲೀ, ಅಷ್ಟಸಿದ್ಧಿಗಳನ್ನಾಗಲೀ ಅಥವಾ ಜನನ-ಮರಣಗಳಿಂದ ಮುಕ್ತಿಯನ್ನಾಗಲೀ ಬಯಸುವುದಿಲ್ಲ. ಅಂತಹ ವ್ಯಕ್ತಿಯು ನನ್ನನ್ನು ಮಾತ್ರ ಬಯಸುತ್ತಾನೆ.

ಮಾಝೇ ಠಾಯೀ ಅರ್ಪಿತಚಿತ್ತ । ಐಸೇ ಮಾಝೇ ನಿಜಭಕ್ತ । ಮಾಝೇನಿ ಸುಖೇ ಸುಖೀ ಸತತ । ತೇ ಅನಾಸಕ್ತ ಸರ್ವಾರ್ಥೀ ॥೧೧೫॥ ಮಾಝ್ಯಾ ಠಾಯೀ ನಿತ್ಯಭಕೀ । ಆಣೀ ಲೋಕಲೋಕಾಂತರ ಆಸಕ್ತೀ । ತೇ ಭಕ್ತೀ ನವ್ಹೇ ಕಾಮಾಸಕ್ತೀ । ಜಾಣ ನಿಶ್ಚಿತೀ ಉದ್ಧವಾ ॥೧೧೬॥

ಅನೇಕ ಪ್ರಾಣಿಮಾತ್ರರಲ್ಲಿ ವಿಷಮತೆಯು ತೋರುತ್ತಿದ್ದರೂ ಕೂಡ ಆ ಯಾವ ಸರ್ವರಲ್ಲಿಯೂ ಸಮಭಾವನೆಯಿಂದ ಯಾರು ಕಾಣುವರೋ, ಅವರು ನನ್ನ ಆತ್ಮಾನಂದದ ಶಿಖರದ ಮೇಲೆ ಏರುವರು. ಸಮಸಾಮ್ಯದಿಂದಲೇ ಕ್ರೀಡಿಸುವರು ॥೧೦೫॥ ಸರ್ಪದಿಂದ ಬೇರೆಯಾಗಿರುವ ಆ ಯಾವ ಸರ್ಪದ ಪೊರೆಯನ್ನು ಯಾರಾದರೂ ಒದ್ದು ಅದರ ತಲೆಯನ್ನು ಅಲುಗಾಡಿಸಿದರೂ ಕೂಡ ಅದು ತನ್ನ ಹೆಡೆಯನ್ನು ಎತ್ತಲಾರದು. ಅದರಂತೆ ಸ್ತ್ರೀ, ಪುತ್ರ, ಧನ, ಮನೆ ಇತ್ಯಾದಿಗಳಿಂದ ಎಷ್ಟೇ ಪೀಡೆಗಳು ಒದಗಿ ಬಂದರೂ ಕೂಡ ಅವರಿಗೆ ಸ್ವಲ್ಪವೂ ಕ್ರೋಧವು ಹುಟ್ಟಲಾರದು ॥೧೦೬॥ ಯಾರ ಕಾಮ ಕ್ರೋಧಗಳು ದೇಹದಲ್ಲಿಯೇ ಕರಗಿ ಹೋಗಿರುವುವೋ, ಆತನಿಗೆ ಮಾತ್ರ ಸಹಜವಾಗಿಯೇ ಅಪಾರ ಶಾಂತಿಯು ಪ್ರಾಪ್ತವಾಗುವುದು. ನನ್ನ ಆತ್ಮಸುಖವು ಯಾವಾಗಲೂ ಆತನ ಚರಣಗಳಲ್ಲಿ ಉರುಳಾಡುತ್ತಿರುವುದು ॥೧೦೭॥ ಆತನು ಈ ಯಾವ ಸುಖವನ್ನು ಸ್ವೀಕರಿಸದಿದ್ದರೂ ಸಹ ಆತನ ಹಿಂದೆ ಮುಂದೆ ಆತನನ್ನು ಅಂಟಿಕೊಳ್ಳುವುದು. ಅದನ್ನು ದೂರ ಮಾಡಿದರೂ ಅದು ದೂರಾಗುವುದಿಲ್ಲ ॥೧೦೮॥ ಆತನು ಯಾವ ಯಾವ ದಿಕ್ಕನ್ನು ನೋಡುವನೋ, ಆ ದಿಕ್ಕು ಸುಖದಿಂದ ಸರ್ವಾಂಗವು ತುಂಬಿಕೊಳ್ಳುವುದು. ಆತನು ಎಲ್ಲಿ ನಿಲ್ಲುವನೋ ಅಲ್ಲಿ ಮಹಾಸುಖವು ಮೂರ್ತಿಮಂತವಾಗಿ ಪ್ರಕಟವಾಗುವುದು ॥೧೦೯॥ ಆತನು ಎಲ್ಲಿ ತನ್ನ ಪಾದಗಳನ್ನು ಹಾಕುವನೋ, ಅಲ್ಲಿ ಆತ್ಮಸುಖದ ಖಣಿಯೇ ಉದ್ಭವಿಸುವುದು. ಆತನು ಸಹಜವಾಗಿ ಯಾರತ್ತ ನೋಡುವನೋ, ಅಲ್ಲಿ ಪರಮಾನಂದವು ಸ್ವಾನಂದದಿಂದ ಬೆಳೆಯುತ್ತಿರುವುದು ॥೧೧೦॥ ಆತನು ದೈವಯೋಗದಿಂದ ಯಾರಿಗೆ ಭೇಟಿಯಾಗುವನೋ, ಆತನಿಗೆ ಸುಖದ ದಿನಗಳು ಉದಯಿಸುವುವು. ಅಕಸ್ಮಾತಾಗಿ ಆತನ ಚರಣಗಳ ಸ್ಪರ್ಶವಾದರೆ ಸಾಕು, ಆತ್ಮಸುಖದ ಅಲಭ್ಯ ಲಾಭವಾಗುವುದು ॥೧೧೧॥ ಆತನ ಉಸಿರಾಟದಲ್ಲಿ, ಕೊಡುವ ತೆಗೆದುಕೊಳ್ಳುವಲ್ಲಿ, ನೇತ್ರಗಳು ಬಡೆಯುವಿಕೆಯಲ್ಲಿ ನನ್ನ ಆತ್ಮಸುಖದ ಮನೆಯು ಕಟ್ಟಿರುವುದು ॥೧೧೨॥ ಆತನು ಸರ್ವಸುಖದ ಮಂಟಪ ಅಥವಾ ಆತ್ಮಸುಖದ ಖಣಿಯೇ ಆಗಿ ಸರ್ವಾಂಗದಿಂದ ಸುಖರೂಪನಾಗಿರುವನು. ಒಳಹೊರಗೆ ಆತ್ಮಾನಂದದಿಂದ ತುಂಬಿಕೊಂಡಿರುವನು ॥೧೧೩॥ ಆತನ ಸುಖದ ಪರಿಪೂರ್ಣತೆಯು ಅಂದರೆ ಭಕ್ತನ ಸುಸಂಪನ್ನತೆಯನ್ನು ಮುಂದಿನ ಶ್ಲೋಕದಲ್ಲಿ ದೇವನು ಹೇಳುವನು ॥೧೧೪॥

ನನ್ನಲ್ಲಿ ಚಿತ್ತವನ್ನು ಅರ್ಪಿಸಿರುವ ಭಕ್ತರು ನನ್ನ ಸುಖದಿಂದ ಸುಖಿಗಳಾಗಿರುವರು. ಇವರು ಸರ್ವ ವಿಷಯಗಳಲ್ಲಿಯೂ ಅನಾಸಕ್ತರಾಗಿರುವರು ॥೧೧೫॥ ಮೇಲ್ನೋಟಕ್ಕೆ ನನ್ನಲ್ಲಿ ಭಕ್ತಿ ಇಡುವುದು, ಅಂತಃಕರಣದಲ್ಲಿ ಇಹಲೋಕದ, ಪರಲೋಕದ ಅಪೇಕ್ಷೆ ಪಡುವುದು, ಹೀಗೆ ಮಾಡುವುದು ಭಕ್ತಿಯಾಗದೇ ಅದು ಕಾಮಾಸಕ್ತಿಯಾಗುವುದು ॥೧೧೬॥

ಸಕಳ ದ್ವಿಪಾಸಮವೇತ । ಸಾರ್ವಭೌಮ ವಲಯಾಂಕಿತ । ಯೇಊನಿಯಾ ಹೋತಾ ಪ್ರಾಪ್ತ । ಮಾಝೇ ನಿಜಭಕ್ತ ಥುಂಕಿತೀ ।।೧೧೭।। ವಿಷ್ಠೇಮಾಜೀಲ ಸಗಳೇ ಚಣೇ । ತೇ ಸೂಕರಾಸೀ ಗೋಡಪಣೇ । ತ್ಯಾಂತೇ ಕಾಂಟಾಳತೀ ಶಹಾಣೇ । ತೇವೀ ಮದ್ಭಕ್ತೀ ಸಾಂಡಣೇ ಸಾರ್ವಭೌಮ ।।೧೧೮।। ರಸತಳಾದಿ ಸಮಸ್ತ । ಪಾತಾಳೀ ಭೋಗ ಅಮೃತಯುಕ್ತ । ತೇ ಪ್ರಾಪ್ತ ಹೋತಾ ಮಾಝೇ ಭಕ್ತ । ಲಾತಾ ಹಾಣತ ಅನಿಚ್ಛಾ ।।೧೧೯।। ಖಾತ್ಯಾ ಸಾಂಡೂನಿ ಅಮೃತಫಳಾ । ಶಾಹಾಣಾ ನ ಘೇ ಪೇಂಡೀಚಾ ಗೋಳಾ । ತೇವೀ ಸಾಂಡೂನಿ ಸುಖಸೋಹಳಾ । ಭಕ್ತ ರಸಾತಳಾ ನ ವಚತೀ ।।೧೨೦।। ಸುರ ನರ ಪನ್ನಗ ವಂದಿತೀ । ಯೇಣೇ ಮಹತ್ತ್ವೇ ಆಲಿಯಾ ಅಮರಾವತೀ । ಜೇವೀ ಕಾಕಸ್ತೂರಿ ಪುಢೇ ಮಾತೀ । ತೇವೀ ಉಪೇಕ್ಷಿತೀ ಮದ್ಭಕ್ತ ।।೧೨೧।। ಜೇ ಇಂದ್ರಾದಿಕಾ ವಂದ್ಯ ಸ್ಥಾನ । ಉತ್ತಮೋತ್ತಮ ಬ್ರಹ್ಮಸದನ । ತೇ ತುಚ್ಛ ಕರಿತೀ ಭಕ್ತಜನ । ತೇ ಸುಖಸಂಪನ್ನ ಮದ್ಭಾವೇ ।।೧೨೨।। ತಾಕ ದೂಧ ಪಾಹತಾ ದಿಠೀ । ಸಾರಿಖೇಪಣೇ ಹೋತಸೇ ಭೇಟೀ । ಸಜ್ಞಾನ ದೂಧ ಲಾವಿಲೀ ಓಠೀ । ತ್ಯಾಗಿತೀ ವಾಟೀ ತಾಕಾಚೀ।।೧೨೩।। ತೇವೀ ಸತ್ಯಲೋಕ ಆಣಿ ಭಕ್ತಸುಖ । ಸಮಾನ ಮಾನಿತೀ ಕೇವಳ ಮೂರ್ಖ । ಮದ್ಭಾವೇ ಮಾಝೇ ಭಕ್ತ ಜೇ ಚೋಖ । ತೇ ಸತ್ಯಲೋಕ ಧಿಕ್ಕಾರಿತೀ ।।೧೨೪।। ಇಂದ್ರಪದ ಬ್ರಹ್ಮಸದನ। ಪಾತಾಳಭೋಗ ಅಮೃತಪಾನ । ಏಕೇ ಕಾಳೇ ದ್ಯಾವಯಾ ಜಾಣ । ಸರ್ವಸಿದ್ಧಿ ಆಪಣ ಆಲಿಯಾ ।।೧೨೫।। ಜ್ಯಾ ಸಾಧಾವಯಾ ಮಹಾಸಿದ್ಧೀ । ಯೋಗೀ ಶಿಣತಾತೀ ನಾನಾ ವಿಧೀ । ತ್ಯಾ ಪ್ರಕಟಲ್ಯಾ ತ್ರಿಶುದ್ಧೀ । ಭಕ್ತ ಸದ್ಬುದ್ಧೀ ನಾತಳತೀ ।।೧೨೬।। ತ್ಯಾ ಅಣಿಮಾದಿ ಸಿದ್ಧಿಂಚ್ಯಾ ಮಾಥಾ । ಮದ್ಭಕ್ತೀ ಹಾಣೋನಿ ಲಾತಾ । ಲಾಗಲೇ ಮಾಝ್ಯಾ ಭಕ್ತಿಪಂಥಾ । ಜಾಣ ತತ್ತ್ವತಾ ಉದ್ಧವಾ ।।೧೨೭।। ಯಾ ಸಿದ್ಧೀಂಚೀ ಕಾಯಸೀ ಕಥಾ । ಸಲೋಕತಾ ಸಮೀಪತಾ । ಮಾಝೀ ದೇತಾ ಸ್ವರೂಪತಾ । ಭಕ್ತ ಸರ್ವಥಾ ನ ಘೇತೀ ।।೧೨೮।। ಜೇಥ ನ ರಿಘೇಚಿ ಕಾಳಸತ್ತಾ । ನಾಹೀ ಜನ್ಮ ಮರಣವಾರ್ತಾ । ಐಶೀ ದೇತಾ ಮಾಝೀ ಸಾಯುಜ್ಯತಾ । ಭಕ್ತ ಸರ್ವಥಾ ನ ಘೇತೀ ।।೧೨೯।। ಆಧೀ ಅಸಾವೇ ವೇಗಳೇಪಣೇ । ಮಗ ಸಾಯುಜ್ಯೇ ಏಕ ಹೋಣೇ । ಹೇ ಮೂಳಚೇ ಅಬದ್ಧ ಬೋಲಣೇ । ಸಾಯುಜ್ಯ ನ ಘೇಣೇ ಮದ್ಭಕ್ತೀ ।।೧೩೦।।

ಸಪ್ತ ದ್ವೀಪಸಮೇತ ಸಮುದ್ರವಲಯಾಂಕಿತ ಪೃಥ್ವಿಯ ಸಾರ್ವಭೌಮ ರಾಜ್ಯವು ಭಕ್ತನಿಗೆ ಪ್ರಾಪ್ತವಾದರೂ ಆದನ್ನು ತುಚ್ಛಗೊಳಿಸುವನು ।।೧೧೭।। ಮಲದಲ್ಲಿನ ಬೇಳೆಕಾಳುಗಳು ಹಂದಿಗೆ ರುಚಿಯಾಗುವುವು. ಆದರೆ ತಿಳಿದ ಜನರಿಗೆ ಇವು ಹೇಸಿಗೆಯಾಗುವುವು. ಅದರಂತೆ ನನ್ನ ಭಕ್ತನು ಸಾರ್ವಭೌಮ ಪದವನ್ನು ತ್ಯಾಗ ಮಾಡಿರುವನು ।।೧೧೮।। ರಸತಳಾದಿ ಸರ್ವ ಪಾತಾಳಲೋಕಗಳಲ್ಲಿನ ಅಮೃತಯುಕ್ತ ಉಪಭೋಗಗಳು ಪ್ರಾಪ್ತವಾದರೂ ಕೂಡ ನನ್ನ ಭಕ್ತರು ನಿರಿಚ್ಛರಾಗಿರುವರು. ಅವರು ಈ ಭೋಗಗಳನ್ನು ಒದ್ದೋಡಿಸುವರು ।।೧೧೯।। ಮುಖದಲ್ಲಿ ಮೆಲ್ಲುತ್ತಿರುವ ಅಮೃತ ಫಲವನ್ನು ಉಗುಳಿ ಜಾಣಮನುಷ್ಯನು ದನ ತಿನ್ನುವ ಹಿಂಡಿಯನ್ನು ತಿನ್ನುವುದಿಲ್ಲ. ಅದರಂತೆ ನನ್ನ ಭಕ್ತರು ನನ್ನ ಸೌಖ್ಯಲಾಭವನ್ನು ಬಿಟ್ಟು ಪಾತಾಳಗಳಲ್ಲಿನ ರಾಜ್ಯಕ್ಕೆ ಭುಲಾಯಿಸುವುದಿಲ್ಲ ।।೧೨೦।। ದೇವ, ಮನುಷ್ಯ ಮತ್ತು ನಾಗ ಇತ್ಯಾದಿ ಸರ್ವರಿಂದ ವಂದಿಸಲ್ಪಡುವ ಇಂದ್ರನ ನಗರ ಅಮರಾವತಿಯು ಪ್ರಾಪ್ತವಾದರೂ ಸಹ ಕಸ್ತೂರಿ ಕಂಡವನು ಮಣ್ಣನ್ನು ತ್ಯಜಿಸುವಂತೆ ನನ್ನ ಭಕ್ತರು ಅದನ್ನು ತ್ಯಜಿಸುವರು ।।೧೨೧।। ಅಥವಾ ಇಂದ್ರಾದಿಕರಿಗೂ ವಂದ್ಯವಾಗಿರುವ ಉತ್ತಮೋತ್ತಮ ಬ್ರಹ್ಮಲೋಕವನ್ನೂ ಕೂಡ ನನ್ನ ಭಕ್ತಿಯಿಂದ ಸುಖಸಂಪನ್ನರಾಗಿರುವ ನನ್ನ ಭಕ್ತರು ಅದನ್ನು ತುಚ್ಛವೆನ್ನುವರು ।।೧೨೨।। ಮಜ್ಜಿಗೆ, ಹಾಲು ಇವು ಕಣ್ಣಿಗೆ ಒಂದೇಯಾಗಿ ಕಾಣುವುವು. ಜಾಣರಾದವರು ಹಾಲಿನ ಬಟ್ಟಲನ್ನು ಬಾಯಿಗೆ ಹಚ್ಚುವರು, ಮಜ್ಜಿಗೆಯನ್ನು ಹಾಗೆಯೇ ಬಿಟ್ಟು ಬಿಡುವರು ।।೧೨೩।। ಅದರಂತೆ ಮೂರ್ಖರಾದವರು ಸತ್ಯಲೋಕದ ಸುಖ ಮತ್ತು ನನ್ನ ಭಕ್ತಿಯ ಸುಖ ಇವು ಒಂದೇ ಎಂದು ಹೇಳುವರು. ಆದರೆ ನನ್ನ ಭಕ್ತರು ಮಾತ್ರ ಅದನ್ನು ಧಿಕ್ಕರಿಸುವರು ।।೧೨೪।। ಒಂದು ವೇಳೆ ಇಂದ್ರಪದ, ಬ್ರಹ್ಮಲೋಕ, ಪಾತಾಳಗಳ ಲೋಕ, ಅಮೃತಪಾನ ಈ ಎಲ್ಲವನ್ನೂ ಒಮ್ಮೆಲೇ ಕೊಡುವುದಕ್ಕಾಗಿ ಸರ್ವಸಿದ್ಧಿಗಳು ತಾವಾಗಿಯೇ ಪ್ರಾಪ್ತವಾಗಲು ।।೧೨೫।। ಅಥವಾ ಯಾವ ಮಹಾಸಿದ್ಧಿಗಳ ಪ್ರಾಪ್ತಿಗಾಗಿ ಯೋಗಿಗಳವರು ನಾನಾ ಪ್ರಕಾರಗಳ ವಿಧಿಗಳಿಂದ ಶ್ರಮಿಸುತ್ತಿರುವರೋ, ಅಂತಹ ಸಿದ್ಧಿಗಳು ಮುಂದೆ ಬಂದು ನಿಂತುಕೊಂಡರೂ ಕೂಡ ನನ್ನ ಭಕ್ತರು ಅವುಗಳಿಗೆ ಸ್ಪರ್ಶ ಕೂಡ ಮಾಡುವುದಿಲ್ಲ ।।೧೨೬।। ಹೇ ಉದ್ಧವಾ, ನನ್ನ ಭಕ್ತರು ನಿಜವಾಗಿಯೂ ಅಣಿಮಾದಿ ಮಹಾಸಿದ್ಧಿಗಳ ಮಸ್ತಕಕ್ಕೆ ಕಾಲಿನಿಂದ ಒದ್ದು ಅವಹೇಳನೆ ಮಾಡಿ ನನ್ನ ಭಕ್ತಿಮಾರ್ಗಕ್ಕೆ ಹತ್ತಿರುವರು ।।೧೨೭।। ಈ ಯಾವ ಸಿದ್ಧಿಗಳ ಯಾವ ಕಥೆ? ಸಲೋಕತಾ, ಸಮೀಪತಾ ಮತ್ತು ಸ್ವರೂಪತಾ ಇವುಗಳಿಗೂ ಕೂಡ ನನ್ನ ಭಕ್ತರು ಸ್ಪರ್ಶ ಮಾಡುವುದಿಲ್ಲ ।।೧೨೮।। ಎಲ್ಲಿ ಕಾಲನ ಸಾಮರ್ಥ್ಯವು ನಡೆಯುವುದಿಲ್ಲವೋ, ಯಾವುದರಲ್ಲಿ ಜನ್ಮಮರಣದ ವಾರ್ತೆಯು ಇರುವುದಿಲ್ಲವೋ, ಅಂತಹ ನನ್ನ ಸಾಯುಜ್ಯ ಮುಕ್ತಿಯನ್ನು ನನ್ನ ಭಕ್ತರಿಗೆ ಕೊಡಬೇಕೆಂದರೆ ಅವರು ಅದನ್ನು ಸರ್ವಥಾ ಸ್ವೀಕರಿಸುವುದಿಲ್ಲ ।।೧೨೯।। ಮೊದಲು ಭಿನ್ನನಾಗಿರಬೇಕು, ತದನಂತರ ಸಾಯುಜ್ಯ ಮುಕ್ತಿಯಿಂದ ಒಂದಾಗಬೇಕು. ಹೀಗೆ ಹೇಳುವುದೇ ಮೂಲತಃ ವಿಸಂಗತವಾಗುವುದು. ಆದ್ದರಿಂದ ನನ್ನ ಭಕ್ತರಾದವರು ನನ್ನ ಸಾಯುಜ್ಯ ಮುಕ್ತಿಯನ್ನೂ ಕೂಡ ಸ್ವೀಕಾರ ಮಾಡುವುದಿಲ್ಲ ।।೧೩೦।।

ಭಕ್ತಿಸುಖೇ ಸುಖಾವಲೀ ಸ್ಥಿತೀ । ಯಾಲಾಗೀ ಆವಡೇ ಮಾಝೀ ಭಕ್ತೀ । ಪಾಯಾ ಲಾಗತೀ ಚಾರಿ ಮುಕ್ತೀ । ಭಕ್ತ ನ ಘೇತೀ ಮಜವೀಣ ॥೧೩೧॥ ಏಕ ಮಜ ವಾಂಚೂನಿ ಕಾಂಹೀ । ಭಕ್ತಾಂಸೀ ಆಣಿಕ ಪ್ರಿಯ ನಾಹೀ । ಮಾಝೇನಿ ಭಜನಸುಖೇ ಪಾಹೀ । ಲೋಕೀ ತಿಹೀ ನ ಸಮಾತೀ ॥೧೩೨॥ ಆದಿಕರೂನಿ ಚಾರೀ ಮುಕ್ತೀ । ಮಜವೇಗಳೀ ಜೇ ಸುಖಪ್ರಾಪ್ತೀ । ಭಕ್ತ ಸರ್ವಥಾ ನ ಘೇತೀ । ಮಾಝ್ಯಾ ಅಭೇದಭಕ್ತೀ ಲೋಧಲೇ ॥೧೩೩॥ ಮಜವೇಗಳೇ ಜೇ ಜೇ ಸುಖ । ತುಚ್ಛ ಕರೂನಿ ಸಾಂಡಿತೀ ದೇಖ । ಮಾಝ್ಯಾ ಭಜನಾಚಾ ಪರಮ ಹರಿಖ । ಅಲೋಲಿಕ ಮದ್ಭಕ್ತಾ ॥೧೩೪॥ ಮ್ಹಣಾಲ ಭಕ್ತ ಕೇವಳ ವೇಡೀ। ತುಝ್ಯಾ ಭಜನೀ ಧರಿತೀ ಗೋಡೀ । ಪರೀ ತುಜ ತಯಾಂಚೀ ಆವಡೀ । ನಸೇಲ ಗಾಢೀ ಅತಿಪ್ರೀತೀ ॥೧೩೫॥ ಜೇವೀ ಗೋಚಿಡಾ ಆವಡೇ ಮ್ಹಶೀ । ಪರೀ ಗೋಚೀಡ ನಾವಡೇ ತಿಸೀ । ತೇವೀ ಭಕ್ತಾಂಚೀ ಪ್ರೀತೀ ತುಜಸರಿಸೀ । ತುಜ ತ್ಯಾಂಚೀ ಪ್ರೀತಿ ನಸೇಲ ॥೧೩೬॥ ಭಜ್ಯ ಭಜನ ಭಜತಾ । ಹೇ ತ್ರಿಪುಟೀ ಆವಿದ್ಯಕತಾ । ಅವಿದ್ಯಾಯುಕ್ತ ಭಜನಪಂಥಾ । ನಸೇಲ ಸರ್ವಥಾ ತುಜ ಪ್ರೀತೀ ॥೧೩೭॥ ಜೇವೀ ಕಾಸ್ವಪ್ನೀಚೇ ಆವಂತಣೇ । ಜಾಗತ್ಯಾಸೀ ನಾಹೀ ಜೇವೂ ಜಾಣೇ । ತೇವೀ ಅವಿದ್ಯಾಯುಕ್ತ ಮಿಥ್ಯಾ ಭಜನೇ । ತ್ವಾ ಪ್ರೀತೀ ಕರಣೇ ಹೇ ಘಡೇನಾ ॥೧೩೮॥ ಐಸಾ ಆಶಂಕೇಚಾ ಅಭಿಪ್ರಾವೋ । ತೇಚಿ ಅರ್ಥೀ ಸಾಂಗತಾಹೇ ದೇವೋ । ಭಜನೀ ಭಕ್ತಾಂಚಾ ಶುದ್ಧ ಭಾವೋ । ತೇಥ ಮಜಹೀ ಪಹಾವೋ ಅತಿಪ್ರೀತೀ ॥೧೩೯॥ ಜೋ ಜೈಸಾ ಮಜಕಾರಣೇ । ಮೀ ತೈಸಾಚೀ ತ್ಯಾಕಾರಣೇ । ಭಕ್ತ ಅನನ್ಯ ಮಜಕಾರಣೇ । ಮೀಹೀ ತ್ಯಾಕಾರಣೇ ಅನನ್ಯ ॥೧೪೦॥

ನ ತಥಾ ಮೇ ಪ್ರಿಯತಮ ಆತ್ಮಯೋನಿರ್ನ ಶಂಕರಃ । ನ ಚ ಸಂಕರ್ಷಣೋ ನ ಶ್ರೀರ್ನೈವಾತ್ಮಾ ಚ ಯಥಾ ಭವಾನ್ ॥೧೫॥

ಅರ್ಥ :- ನನ್ನ ಪ್ರೀತಿಯ ಉದ್ಧವನೇ, ಬ್ರಹ್ಮ, ಶಿವ, ಸಂಕರ್ಷಣ ಮತ್ತು ಲಕ್ಷ್ಮೀ ಇವರ್‍ಯಾರೂ ನನಗೆ ನಿನ್ನಷ್ಟು ಪ್ರಿಯರಲ್ಲ. ಇಷ್ಟೇಕೆ ನನ್ನ ಆತ್ಮವೂ ನನಗೆ ನಿನ್ನಷ್ಟು ಪ್ರಿಯವಲ್ಲ.

ಮಾಝ್ಯಾ ಭಕ್ತಾಂಚೀ ಮಜ ಪ್ರೀತೀ । ತೇ ಮೀಚಿ ಜಾಣೇ ಶ್ರೀಪತೀ । ತೇ ಉಪಮೇಲಾಗೀ ತ್ರಿಜಗತೀ । ನಾಹೀ ನಿಶ್ಚಿತೀ ಕಾಂಟಾಳೇ ॥೧೪೧॥ ಜೋ ಅನನ್ಯ ಝಾಲಾ ಮಾಝೀ ಭಕ್ತೀ । ತೆವ್ಹಾಂಚಿ ತ್ಯಾಚೀ ಅವಿದ್ಯಾನಿವೃತ್ತೀ । ಐಶಿಯಾ ಭಕ್ತಾಚೀ ಜೇ ಮಜ ಪ್ರೀತೀ । ತೇ ಸಾಂಗೂ ಮೀ ಕಿತೀ ಉದ್ಧವಾ ॥೧೪೨॥

ಭಕ್ತಿಯಿಂದಲೇ ಅವರ ವೃತ್ತಿಯು ಆನಂದಮಯವಾಗಿರುವುದು. ಆದ್ದರಿಂದ ಭಕ್ತಿಯೇ ಅವರಿಗೆ ಪ್ರಿಯವಾಗಿರುವುದು ಮತ್ತು ಭಕ್ತಿಯಲ್ಲಿಯೇ ಅವರು ರಮಮಾಣರಾಗುವರು. ನಾಲ್ಕೂ ಮುಕ್ತಿಗಳು ಬಂದು ಕಾಲಿಗೆ ಬಿದ್ದರೂ ಸಹ ಆ ನನ್ನ ಭಕ್ತರು ನನ್ನ ಹೊರತಾಗಿ ಏನನ್ನೂ ಸ್ವೀಕರಿಸುವುದಿಲ್ಲ ॥೧೩೧॥ ನನ್ನ ಭಕ್ತರಿಗೆ ನನ್ನ ಹೊರತಾದ ಅನ್ಯ ಯಾವುದೂ ಪ್ರಿಯವಾಗುವುದಿಲ್ಲ. ನನ್ನ ಭಜನೆಯ ಸುಖದಿಂದಲೇ ಅವರು ಮೂರು ಲೋಕಗಳಲ್ಲಿ ಹಿಡಿಸದಂತಾಗುವರು. ಇಷ್ಟೊಂದು ಮಹಿಮಾಶಾಲಿಯಾಗುವರು ॥೧೩೨॥ ನಾಲ್ಕು ಮುಕ್ತಿಗಳು ಇತ್ಯಾದಿಗಳಿಂದ ನನ್ನ ಹೊರತಾದ ಸಿಗುವ ಸುಖವನ್ನು ನನ್ನ ಭಕ್ತರು ಎಂದಿಗೂ ಸ್ವೀಕರಿಸುವುದಿಲ್ಲ. ಏಕೆಂದರೆ ನನ್ನ ಅಭೇದ ಭಕ್ತಿಯಿಂದ ಅವರ ಹೃದಯವು ಪರಿಪೂರ್ಣವಾಗಿ ತುಂಬಿ ತುಳುಕುತ್ತಿರುವುದು ॥೧೩೩॥ ನನ್ನ ಹೊರತಾದ ಯಾವ ಯಾವ ಸುಖಗಳಿರುವುವೋ, ಅವುಗಳಿಗೆ ತುಚ್ಛವೆನ್ನುವರು ಹಾಗೂ ಅವುಗಳ ತ್ಯಾಗವನ್ನು ಮಾಡುವರು. ನನ್ನ ಭಕ್ತರಿಗೆ ಮಾತ್ರ ನನ್ನ ಭಜನೆಯಿಂದ ಅಲೌಕಿಕ ಆನಂದವು ಪ್ರಾಪ್ತವಾಗುತ್ತಿರುವುದು ॥೧೩೪॥ ಈಗ ನಿನಗೆ ಕದಾಚಿತ್ ಹೀಗೆ ಅನಿಸಬಹುದು; ಭಕ್ತನು ಭಕ್ತಿಯಿಂದ ಹುಚ್ಚರಾಗಿರುವುದರಿಂದ ನಿನ್ನ ಭಜನೆಯಲ್ಲಿ ಅವರಿಗೆ ಪ್ರೀತಿ ಇರುವುದು. ಆದರೆ ನಿನಗೆ ಭಕ್ತರಲ್ಲಿ ಅತಿಶಯ ಪ್ರೇಮವಿರುವುದಿಲ್ಲ ॥೧೩೫॥ ಕೆಚ್ಚಲಿನ ಉಣ್ಣೆಗಳಿಗೆ ಎಮ್ಮೆಯ ಪ್ರೇಮವಿರುವುದು. ಆದರೆ ಎಮ್ಮೆಗೆ ಉಣ್ಣೆಗಳಿಗಾಗಿ ಪ್ರೇಮವಿರುವುದಿಲ್ಲ. ಅದರಂತೆ ಭಕ್ತರ ಪ್ರೇಮವು ನಿನ್ನಲ್ಲಿರಬಹುದು. ಆದರೆ ನಿನ್ನ ಪ್ರೇಮವು ಭಕ್ತರಲ್ಲಿರಲಿಕ್ಕಿಲ್ಲ ॥೧೩೬॥ ಕಾರಣವೇನೆಂದರೆ ಭಕ್ತನು ಮಾಡುವ ಭಜ್ಯ, ಭಜನ ಮತ್ತು ಭಜಿಸುವವ ಈ ತ್ರಿಪುಟಿಯು ಅವಿದ್ಯೆಯಿಂದ ಉತ್ಪನ್ನವಾಗಿರುವುವು. ಹಾಗಾದರೆ ಇಂತಹ ಅವಿದ್ಯಾಯುಕ್ತ ಭಜನೆಯ ಮಾರ್ಗದಲ್ಲಿ ನಿನ್ನ ಪ್ರೇಮವು ಮೂಲತಃ ಇರಲಿಕ್ಕಿಲ್ಲ ॥೧೩೭॥ ಯಾರಿಗಾದರೂ ಸ್ವಪ್ನದಲ್ಲಿ ಭೋಜನದ ಆಮಂತ್ರಣ ಬರಲು ಅವರು ಎಚ್ಚರಾದ ಮೇಲೆ ಭೋಜನಕ್ಕೆ ಹೋಗಲಾರರು. ಆದರಂತೆ ಅವಿದ್ಯಾಯುಕ್ತ ಮಿಥ್ಯೆಯಾಗಿರುವ ಭಜನಕ್ಕೆ ನೀನು ಪ್ರೇಮವನ್ನು ಮಾಡುವಿ ಎಂಬುದು ಸಂಭವಿಸಲಾರದು ॥೧೩೮॥ ಈ ಯಾವ ಶಂಕೆಯ ಉತ್ತರವನ್ನು ದೇವನು ಈಗ ಹೇಳುವನು. ನನ್ನ ಭಜನೆಯಲ್ಲಿ ಶುದ್ಧಭಾವವಿರುವ ಭಕ್ತರ ಮೇಲೆ ನನ್ನ ಅತಿಶಯವಾದ ಪ್ರೇಮವಿರುವುದು ॥೧೩೯॥ ಯಾರು ನನ್ನಲ್ಲಿ ಹೇಗೆ ವರ್ತಿಸುವರೋ, ಹಾಗೆಯೇ ನಾನು ಅವರಲ್ಲಿ ವರ್ತಿಸುವೆನು. ಭಕ್ತನು ನನ್ನಲ್ಲಿ ಅನನ್ಯ ಭಕ್ತಿಯನ್ನಿಟ್ಟರೆ ನಾನೂ ಕೂಡ ಆತನಲ್ಲಿ ಅನನ್ಯ ಪ್ರೇಮವನ್ನು ಮಾಡುವೆನು ॥೧೪೦॥

ನನ್ನ ಭಕ್ತನ ಮೇಲೆ ನನ್ನ ಪ್ರೇಮವು ಎಷ್ಟಿದೆ ಎನ್ನುವುದು ಶ್ರೀಪತಿಯಾದ ನಾನು ಮಾತ್ರ ತಿಳಿಯುವೆನು. ಅದಕ್ಕೆ ದೃಷ್ಟಾಂತವನ್ನು ಕೊಡಬೇಕೆಂದರೆ ತ್ರಿಭುವನದಲ್ಲಿ ಬೇರೆ ಯಾವುದೂ ದೊರೆಯುವುದಿಲ್ಲ ॥೧೪೧॥ ಅನನ್ಯ ಭಾವದಿಂದ ನನ್ನ ಭಕ್ತಿಯಲ್ಲಿ ತಲ್ಲೀನರಾದವರ ಅಜ್ಞಾನವು ತತ್ಕಾಲದಲ್ಲಿ ಇಲ್ಲದಾಗುವುದು. ಇಂತಹ ಭಕ್ತರಲ್ಲಿರುವ ನನ್ನ ಪ್ರೀತಿಯ ವರ್ಣನೆಯನ್ನು ಎಷ್ಟೆಂದು ಮಾಡಬೇಕು? ॥೧೪೨॥

ಬ್ರಹ್ಮಾ ಮಾಝೇ ಪೋಟೀಚೇ ಬಾಳ । ತ್ಯಾಚೇ ಲಳೇ ಮೀ ಪುರವೀ ಸಕಳ । ಪರೀ ಭಕ್ತಾಂಚ್ಯಾ ಐಸಾ ಪ್ರಬಳ । ಪ್ರೀತಿಕಲ್ಲೋಳ ತೇಥ ನಾಹೀ ।।೧೪೩।। ಮ್ಯಾ ಬ್ರಹ್ಮಾ ಲಾವಿಲಾ ಕರ್ಮಪಂಥಾ । ಭಕ್ತಾಂಸೀ ದಿಧಲೀ ನಿಷ್ಕರ್ಮತಾ । ಯಾಲಾಗೀ ನ ವಚೇ ಮೀ ಬ್ರಹ್ಮಾ ಪ್ರಾರ್ಥಿತಾ । ಹೋಯ ಭಾತ ಖಾತಾ ಗೋವಳ್ಯಾಂಚಾ ।।೧೪೪।। ಉಣೇ ಆಣೂನಿ ಬ್ರಹ್ಮ್ಯಾಸೀ । ಮೀ ತೋ ಝಾಲೋ ವತ್ಸೇ ವತ್ಸಪಾಂಸೀ । ಏವಂ ನಿಜಭಕ್ತಾಂಚ್ಯಾ ಐಸೀ । ಪ್ರೀತೀ ಬ್ರಹ್ಮ್ಯಾಸೀ ಮಜ ನಾಹೀ ।।೧೪೫।। ಅಸೋ ಬ್ರಹ್ಮ್ಯಾಚೀ ಐಶೀ ಕಥಾ । ಸಂಕರ್ಷಣ ಮಾಝಾ ಜ್ಯೇಷ್ಠ ಭ್ರಾತಾ । ಪರೀ ಭಕ್ತಾಂಚ್ಯಾ ಐಶೀ ಸರ್ವಥಾ । ನಸೇ ಪ್ರೀತಿ ತತ್ತ್ವತಾ ತಯಾಸೀ ।।೧೪೬।। ಕೌರವಾಂಚ್ಯಾ ಪಕ್ಷಪಾತಾಸೀ । ಉಣೇ ಆಣೋನಿ ಬಳಿಭದ್ರಾಸೀ । ಮ್ಯಾ ವಾಂಚವಿಲೇ ನಿಜಭಕ್ತಾಂಸೀ । ಪಾಂಡವಾಂಸೀ ನಿಜಾಂಗೇ ।।೧೪೭।। ತುಜ ದೇಖತಾ ಭೀಷ್ಮಾಚ್ಯಾ ಪಣೇ । ಮ್ಯಾ ಹಾರೀ ಘೇಊನಿ ರಣಾಂಗಣೇ । ವಾಂಚವಿಲಾ ಕೋದಂಡಪಾಣೀ । ಭಕ್ತಚೂಡಾಮಣೀ ಅರ್ಜುನ ।।೧೪೮।। ರಮಾ ಮಾಝ್ಯಾ ಪಟ್ಟಾಚೀ ರಾಣೀ । ತೇ ಮ್ಯಾ ಸೇವೇಸೀ ಲಾವಿಲೀ ಚರಣೀ । ಖಾಂದೀ ವಾಹಿಲ್ಯಾ ಗೌಳಣೀ । ಭಕ್ತಶಿರೋಮಣೀ ಗೋಪಿಕಾ ।।೧೪೯।। ಜೇ ಲಕ್ಷ್ಮೀ ನಿಃಶೇಷ ಉಪೇಕ್ಷಿತೀ । ತೇ ಮಜ ಪೂಜ್ಯ ಪರಮ ಪ್ರೀತೀ । ಜೇ ಮಜ ಲಕ್ಷ್ಮೀ ಮಾಗತೀ । ತ್ಯಾಂಸೀ ಶ್ರೀ ನಾ ಶ್ರೀಪತೀ ಐಸೇ ಹೋಯ ।।೧೫೦।। ಲಕ್ಷ್ಮೀ ಉಪೇಕ್ಷೂನಿ ನಿಶ್ಚಿತೀ । ಮಜ ನಿಜಭಕ್ತ ಆವಡತೀ । ಮಜ ಫಡಿಯಂತಾ ಉಮಾಪತೀ । ತ್ಯಾಹೂನ ಅತಿಪ್ರೀತೀ ಭಕ್ತಾಂಚೀ ।।೧೫೧।। ಜ್ಯಾ ಮಹಾದೇವಾಚೇನಿ ಗುಣೇ । ಮ್ಯಾಂಹೀ ಶ್ಯಾಮವರ್ಣ ಧರಣೇ । ಜ್ಯಾ ಮಹಾದೇವಾಚೇನಿ ವಚನೇ । ಮ್ಯಾ ಮೋಹಿನೀ ಹೋಣೇ ದುಸರೇನೀ ।।೧೫೨।। ತೇ ಮೋಹಿನೀಚ್ಯಾ ದರ್ಶನೀ । ಮ್ಯಾ ಶಿವ ಭುಲವಿಲಾ ತತ್ಕ್ಷಣೀ । ರುಕ್ಮಾಂಗದ ಮೋಹಿನೀಪಾಸೂನೀ । ಅರ್ಧಕ್ಷಣೇ ತಾರಿಲಾ ।।೧೫೩।। ಯಾಪರೀ ಮಾಝ್ಯಾ ಭಕ್ತಾಹುನೀ । ಮಜ ಪ್ರಿಯ ನವ್ಹೇ ಶೂಲಪಾಣೀ । ಮಜ ಪಢಿಯಂತಾ ತ್ರಿಭುವನೀ । ಭಕ್ತಾ ವಾಂಚುನೀ ಆನ ನಾಹೀ ।।೧೫೪।। ಆಗಮನಿಗಮೀ ಪ್ರತಿಪಾದ್ಯ । ಮಾಝೀ ಚತುರ್ಭುಜಮೂರ್ತಿ ಶುದ್ಧ । ತೇ ನಿಜಹೃದಯೀ ಮೀ ಪರಮಾನಂದ । ಭಕ್ತ ನಿಜಪದ ವಾಹತಸೇ ।।೧೫೫।। ಮಜ ನಿಜದೇಹಾಚೀ ನಾಹೀ ಗೋಡೀ । ಗೋವಳ ಝಾಲೋ ಅತಿ ಆವಡೀ । ಗಾಯೀ ರಾಖೇ ಅರಡೀದರಡೀ । ಕೀ ಥಾಪಟೀ ಘೋಡೀ ಭಕ್ತಾಂಚೀ ।।೧೫೬।।

ಬ್ರಹ್ಮದೇವನಾದರೂ ನನ್ನ ಹೊಟ್ಟೆಯ ಬಾಲಕನು ಆತನ ಸರ್ವ ಸಲಿಗೆಯ ಅಪೇಕ್ಷೆಯನ್ನು ನಾನು ಪೂರೈಸುವೆನು. ಹೀಗಿದ್ದರೂ ಭಕ್ತರಿಗಾಗಿ ಪ್ರಕಟವಾಗುವ ಪ್ರೇಮದ ತೆರೆಗಳು ಆತನಿಗಾಗಿ ಹುಟ್ಟುವುದಿಲ್ಲ ।।೧೪೩।। ನಾನು ಬ್ರಹ್ಮನಿಗೆ ಕರ್ಮಮಾರ್ಗಕ್ಕೆ ಹಚ್ಚಿದೆನು. ನನ್ನ ಭಕ್ತರಿಗೆ ನೈಷ್ಕರ್ಮವನ್ನು ಕೊಟ್ಟಿರುವೆನು. ಬ್ರಹ್ಮನು ನನಗೆ ಬೇಡಿಕೊಂಡರೂ ಆತನಲ್ಲಿ ಹೋಗದೇ ಪ್ರೇಮಕ್ಕಾಗಿ ಗೌಳಿಗರ ಮನೆಯಲ್ಲಿ ಅನ್ನ ತಿನ್ನುತ್ತ ಕುಳಿತೆನು ।।೧೪೪।। ಬ್ರಹ್ಮನಿಗೆ ಸಣ್ಣತನ ತಂದು ನಾನು ಆಕಳ, ಕರು ,ಗೋಪಾಲಕರ ರೂಪ ಧರಿಸಿದೆನು. ತಾತ್ಪರ್ಯವೇನೆಂದರೆ, ಭಕ್ತರಲ್ಲಿರುವ ನನ್ನ ಪ್ರೇಮವು ಬ್ರಹ್ಮನಲ್ಲಿಯೂ ಇಲ್ಲ ।।೧೪೫।। ಬ್ರಹ್ಮನ ಈ ಕಥೆ ಇರಲಿ, ಬಲರಾಮನು ನನ್ನ ಹಿರಿಯ ಅಣ್ಣನು. ಆತನಲ್ಲಿಯೂ ನನ್ನ ಪ್ರೇಮವು ಭಕ್ತರ ಸಮಾನ ಇರುವುದಿಲ್ಲ ।।೧೪೬।। ಕೌರವರ ಪಕ್ಷಪಾತಿಯಾಗಿರುವ ಬಲರಾಮನಿಗೆ ಕೀಳು ಸ್ಥಿತಿ ತಂದು ನನ್ನ ಭಕ್ತರಾದ ಪಾಂಡವರನ್ನು ನಾನು ಸ್ವತಃ ಸಂರಕ್ಷಣೆಯನ್ನು ಮಾಡಿದೆನು ।।೧೪೭।। ಭೀಷ್ಮಾಚಾರ್ಯರು ಪ್ರತಿಜ್ಞೆಯನ್ನು ಮಾಡಿದಾಗ ನಾನು ರಣಾಂಗಣದಲ್ಲಿ ನನ್ನ ಪ್ರತಿಜ್ಞೆಯನ್ನು ಮುರಿದು ನೀನು ನೋಡುತ್ತಿದ್ದಂತೆಯೇ ಭಕ್ತ ಶಿರೋಮಣೀಧನುರ್ಧಾರೀ ಅರ್ಜುನನನ್ನು ಬದುಕಿಸಿದೆನು ।।೧೪೮।। ಲಕ್ಷ್ಮೀ ನನ್ನ ಪಟ್ಟದ ರಾಣಿಯಾಗಿರುವಳು. ಆದರೆ ನಾನು ಆಕೆಗೆ ನನ್ನ ಪಾದಸೇವೆಯನ್ನು ಮಾಡಲು ಹಚ್ಚಿರುವೆನು. ಭಕ್ತಿಯಿಂದ ಅಂತಃಕರಣರವು ಪರಿಪೂರ್ಣವಾಗಿ ತುಂಬಿರುವ ಗೋಪಿಕಾ, ಗೌಳಣಿಯವರನ್ನು ನಾನು ನನ್ನ ಹೆಗಲ ಮೇಲೆ ಹೊತ್ತುಕೊಂಡೆನು ।।೧೪೯।। ಯಾವ ಭಕ್ತರು ಸಂಪತ್ತಿಕ್ಕಿಂತಲೂ ಪ್ರೇಮವು ಶ್ರೇಷ್ಠವೆಂದು ಅರಿತು ಆ ಯಾವ ಸಂಪತ್ತನ್ನು ಉಪೇಕ್ಷೆ ಮಾಡವರೋ, ಅವರು ನನಗೆ ಅತ್ಯಂತ ಪೂಜ್ಯರಾಗಿರುವರು. ಅವರಲ್ಲಿ ನನ್ನ ಪರಮ ಪ್ರೀತಿವಿರುವುದು. ಆದರೆ ಯಾರು ನನ್ನಲ್ಲಿ ಐಶ್ವರ್ಯದ ಯಾಚನೆಯನ್ನು ಮಾಡುವರೋ ಅವರಿಗೆ ಲಕ್ಷ್ಮಿಯು ಇಲ್ಲ ಲಕ್ಷ್ಮಿಪತಿಯೂ ಇಲ್ಲ. ಹೀಗೆ ಅವರ ಅವಸ್ಥೆಯಾಗುವುದು ।।೧೫೦।। ಆದ್ದರಿಂದ ಯಾರು ಲಕ್ಷ್ಮಿಯ ಉಪೇಕ್ಷೆಯನ್ನು ಮಾಡುವರೋ, ಆ ಭಕ್ತರು ನನಗೆ ಅತಿಶಯವಾಗಿ ಪ್ರಿಯರು. ಶಂಕರನು ನನಗೆ ಪ್ರಿಯನು. ಆದರೆ ಆತನಿಗಿಂತಲೂ ನನಗೆ ಭಕ್ತರಲ್ಲಿ ಪ್ರೀತಿಯು ಅಧಿಕವಾಗಿರುವುದು ।।೧೫೧।। ಯಾವ ಮಹಾದೇವನ ಸಂಗತಿಯಿಂದ ನಾನು ಶ್ಯಾಮವರ್ಣವನ್ನು ಧರಿಸಿರುವೆನು, ಆ ಮಹಾದೇವನಮಾತಿನಂತೆ ನಾನು ಮತ್ತೊಮ್ಮೆ ಮೋಹಿನಿಯ ರೂಪವನ್ನು ಧರಿಸಿದೆನು ।।೧೫೨।। ಮಹಾದೇವನಿಗೆ ಆ ರೂಪದಿಂದ ತಕ್ಷಣ ಭುಲಾಯಿಸಿದೆನು, ರುಕ್ಮಾಂಗದನಿಗೆ ಆ ಮೋಹಿನಿಯಿಂದ ತತ್ಕಾಲದಲ್ಲಿ ಬಿಡಿಸಿದೆನು ।।೧೫೩।। ಈ ಪ್ರಕಾರವಾಗಿ ನನ್ನ ಭಕ್ತರಿಗಿಂತಲೂ ಶಂಕರನು ನನಗೆ ಪ್ರಿಯನಾಗಿರುವುದಿಲ್ಲ. ನನಗೆ ನನ್ನ ಭಕ್ತರಿಗಿಂತ ಅಧಿಕ ಪ್ರಿಯರು ಈ ಮೂರು ಲೋಕಗಳಲ್ಲಿಯೂ ಇಲ್ಲ ।।೧೫೪।। ವೇದಶಾಸ್ತ್ರಗಳಲ್ಲಿ ನನ್ನ ಚತುರ್ಭುಜ ಮೂರ್ತಿಯ ವರ್ಣನೆಯನ್ನು ಮಾಡಿರುವುದು. ಹೀಗಿರುವ ನಾನು ನನ್ನ ಭಕ್ತನ ಚರಣಚಿನ್ಹೆಯನ್ನು ಅತ್ಯಂತ ಆನಂದದಿಂದ ನನ್ನ ಹೃದಯದ ಮೇಲೆ ಧರಿಸಿರುವೆನು ।।೧೫೫।। ನನಗೆ ನನ್ನ ನಿಜದೇಹದಲ್ಲಿಯೂ ಪ್ರೀತಿ ಇಲ್ಲ. ಆದ್ದರಿಂದ ನಾನು ಬಹು ಆನಂದದಿಂದ ಗೌಳಿಗನಾದೆನು ಮತ್ತು ಗುಡ್ಡಗಾಡಿನಲ್ಲಿ ದನಗಳನ್ನು ಕಾಯ್ದೆನು. ಇಷ್ಟೇ ಅಲ್ಲ ಭಕ್ತನ ಕುದುರೆಗಳನ್ನೂ ಕೂಡ ತೊಳೆದೆನು ।।೧೫೬।।

ಮೀ ಅವಾಪ್ತ ಸಕಳಕಾಮ । ಪರೀ ಪ್ರೇಮಳಾಲಾಗೀ ಸದಾ ಸಕಾಮ । ದೇಖತಾ ಪ್ರೇಮಳಾಂಚಾ ಭಾವ ಪರಮ। ಮೀ ಆತ್ಮಾರಾಮ ಉಡೀ ಘಾಲೀ ॥೧೫೭॥ ಪ್ರೇಮಳ ದೇಖತಾಂಚಿ ದಿಠೀ । ಮೀ ಘೇ ಆಪುಲಿಯೇ ಸಂವಸಾಟೀ । ನವ್ಹತಾ ವರೀವ ದೇ ಸುಖಕೋಟೀ । ನ ಯೇ ತರೀ ಉತಾ ಉಠೀ ಸೇವಕ ಹೋಯ ॥೧೫೮॥ ಸಾಂಡೂನಿ ಮಹತ್ತ್ವಪರವಡೀ । ಮೀ ನಿಜಭಕ್ತಾಂಚೀ ಉಚ್ಚಿಷ್ಟೇ ಕಾಢೀ । ಭಕ್ತಕಾಜಾಚೇ ಸಾಂಕಡೀ । ಕರೀ ಕುರವಂಡೀ ದೇಹಾಚೀ ॥೧೫೯॥ ಅಪೇಕ್ಷೂನಿ ನಿಜದೇಹಾಸೀ । ಉದ್ಧವಾ ತುಜಸಾರಿಖಿಯಾ ಭಕ್ತಾಂಸೀ । ಮಜ ಆವಡತೀ ತೇ ಅಹರ್ನಿಶೀ । ಜೀವೇ ಸರ್ವಸ್ವೇಸೀ ಪಢಿಯಂತೇ ॥೧೬೦॥ ಆವಡೀ ಕರಿತಾ ಮಾಝೇ ಭಜನ । ಮಜ ಪೂಜ್ಯ ಝಾಲೇ ಭಕ್ತಜನ । ತ್ಯಾ ಭಕ್ತಾಂಚೇ ನಿಜಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೧೬೧॥

ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶನಂ ।
ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಂಘ್ರಿರೇಣುಭಿಃ ॥೧೬॥

ಅರ್ಥ:- ನನ್ನ ಭಕ್ತರು ಸರ್ವ ಅಪೇಕ್ಷೆಯಿಂದ ಮುಕ್ತರು. ಇತರ ಯಾವ ಚಿಂತನೆಯನ್ನು ಮಾಡದೇ ನನ್ನಲೀಲೆಯ ಆಲೋಚನೆಗಳಲ್ಲಿ ಮೈಮರೆತಿರುವರು. ಇವರು ಶಾಂತಚಿತ್ತರು. ಇವರಿಗೆ ಯಾರೂ ವೈರಿಗಳಲ್ಲ. ಇವರು ಎಲ್ಲವನ್ನೂ ಸಮಾನವಾಗಿ ಕಾಣುವರು. ಇಂತಹ ಮಹಾತ್ಮನ ಹಿಂದೆ ನಾನು ಹೋಗುತ್ತ ಆತನನ್ನು ಅನುಸರಿಸುತ್ತೇನೆ.

ಅನನ್ಯ ಕರಿತಾ ಮಾಝೇ ಭಜನ । ಮಾಝ್ಯಾ ಸ್ವರೂಪೀ ಝಗಡಲೇ ಮನ । ಸಕಳ ವಾಸನಾ ಗೇಲ್ಯಾ ವಿರೋನ । ವೃತ್ತಿಶೂನ್ಯ ಅವಸ್ಥಾ ॥೧೬೨॥ ಆಟಾಟೀವೀಣ ನ ಪ್ರಾರ್ಥಿತಾ । ಅಯಾಚಿತ ಅರ್ಥ ಪ್ರಾಪ್ತ ಹೋತಾ । ತೋಹೀ ಹಾತೀ ಘೇವ್ಞೋ ಜಾತಾ । ನಿರಪೇಕ್ಷತಾ ಬುಡಾಲೀ ॥೧೬೩॥ ಅರ್ಥ ದೇಖೋನಿ ಜೋ ಲವಿನ್ನಲಾ। ತೋ ಜಾಣ ಲೋಭೇ ವ್ಞೋಣವಾ ಕೇಲಾ । ತೋಹೀ ಉಪೇಕ್ಷೂನಿ ಜೋ ನಿಘಾಲಾ । ತೋ ಮ್ಯಾ ವಂದಿಲಾ ಸರ್ವಸ್ವೇ ॥೧೬೪॥ ಮಾರ್ಗಿ ಅರ್ಥ ಪಡತಾ । ಕೋಣೀ ನಾಹೀ ಮಾಝಾ ಮ್ಹಣತಾ । ತೋಹೀ ಸ್ವಯೇ ಹಾತೀ ಘೇತಾ । ನಿರಪೇಕ್ಷತಾ ಬುಡಾಲೀ ॥೧೬೫॥ ವೃತ್ತಿಶೂನ್ಯ ಜೇ ಅವಸ್ಥಾ । ತೀ ನಾಂವ ಜಾಣ ನಿರಪೇಕ್ಷತಾ । ತೇ ಕಾಳೀಚೀ ಜೇ ಮನನತಾ । ಐಕ ತತ್ತ್ವತಾ ಸಾಂಗೇನ ॥೧೬೬॥ ವೇದಶಾಸ್ತ್ರಾರ್ಥೇ ಪರಮ ಪ್ರಮಾಣ । ತೇ ಮಾಝೇ ಸತ್ಯ ಸ್ವರೂಪ ಜಾಣ । ತೇ ಸ್ವರೂಪೀ ನಿಜನಿರ್ಧಾರಣ । ತ್ಯಾ ನಾಂವ ಮನನ ಬೋಲಿಜೇ ॥೧೬೭॥ ಕರಿತಾ ಸ್ವರೂಪವಿವೇಚನ । ಸ್ವರೂಪರೂಪ ಝಾಲೇ ಮನ । ತೇಥೇ ಧಾರಣೇವೀಣ ಮನನ । ನ ಕರಿತಾ ಸ್ಮರಣ ಹೋತಸೇ ॥೧೬೮॥

ನಾನು ನಿಜವಾಗಿ ನೋಡಿದರೆ ಪೂರ್ಣಕಾಮನು. ಆದರೆ ಪ್ರಿಯ ಭಕ್ತರಿಗಾಗಿ ಸದಾ ಸಕಾಮನಾದೆನು. ಪ್ರೀತಿಯ ಭಕ್ತರ ನಿಃಸ್ವಾರ್ಥ ಪ್ರೇಮವನ್ನು ಕಂಡು ಆತ್ಮಾರಾಮನಾದ ನಾನು ಅವರತ್ತ ಜಿಗಿಯುವೆನು ॥೧೫೭॥ ಪ್ರೇಮಳ ಭಕ್ತನು ನನಗೆ ಕಂಡರೆ ಆತನನ್ನು ನನ್ನ ಸಂಗತಿಯಲ್ಲಿ ತೆಗೆದುಕೊಳ್ಳುವೆನು. ಆತನಲ್ಲಿ ಪ್ರೇಮದಿಂದ ಗುಟ್ಟಾದ ಮಾತುಗಳನ್ನಾಡುವೆನು. ಒಂದುವೇಳೆ ಆತನು ನನ್ನ ಸಂಗತಿಯಲ್ಲಿ ಬಾರದಿರಲು ಆಗ ನಾನು ಆತನ ಸೇವಕನಾಗುವೆನು ॥೧೫೮॥ ನಾನು ನನ್ನ ಸರ್ವಪ್ರಕಾರದ ದೊಡ್ಡಸ್ತಿಕೆಯನ್ನು ಬಿಟ್ಟುಕೊಟ್ಟು ಭಕ್ತರ ಎಂಜಲ ತೆಗೆಯುವೆನು. ಭಕ್ತರ ಸಂಕಟ ಪ್ರಸಂಗದಲ್ಲಿ ನನ್ನ ದೇಹವನ್ನು ನಿವಾಳಿಸಿ ಒಗೆಯುವೆನು ॥೧೫೯॥ ಹೇ ಉದ್ಧವಾ, ನಿನ್ನಂತಹ ಭಕ್ತರು ನನಗೆ ಯಾವಾಗಲೂ ಪ್ರಿಯರಾಗಿರುವರು. ಅವರಿಗಾಗಿ ನಾನು ನನ್ನ ದೇಹದ ಉಪೇಕ್ಷೆ ಮಾಡುವೆನು. ಏಕೆಂದರೆ ಅವರು ನನಗೆ ನನ್ನ ಪ್ರಾಣಕ್ಕಿಂತಲೂ ಪ್ರಿಯರಾಗಿರುವರು ॥೧೬೦॥ ಪ್ರೇಮದಿಂದ ನನ್ನ ಭಜನೆಯನ್ನು ಮಾಡಿರುವುದರಿಂದ ನನ್ನ ಭಕ್ತರು ನನಗೆ ಪೂಜ್ಯರಾದರು. ಆ ಯಾವ ಭಕ್ತರ ಲಕ್ಷಣಗಳನ್ನು ಈಗ ಶ್ರೀಕೃಷ್ಣನು ಹೇಳುವನು ॥೧೬೧॥

ಅನನ್ಯ ಭಾವದಿಂದ ನನ್ನ ಭಜನೆಯನ್ನು ಮಾಡಲು ಆಗ ಮನವು ನನ್ನ ಸ್ವರೂಪದಲ್ಲಿ ಮುಳುಗುವುದು. ಸರ್ವ ವಾಸನೆಗಳು ನಷ್ಟವಾಗಿ ವೃತ್ತಿಯು ಶೂನ್ಯವಾಗುವುದು ॥೧೬೨॥ ಯಾವ ಖಟಾಟೋಪವನ್ನು ಮಾಡದೇ, ಬೇಕೆಂದು ಪ್ರಾರ್ಥಿಸದೇ, ಅನಾಯಾಸವಾಗಿ ಬಂದ ಐಶ್ವರ್ಯವನ್ನು ಸ್ವೀಕರಿಸಿದರೆ ಸಾಕು, ನಿರಪೇಕ್ಷತೆಯು ನಷ್ಟವಾಗುವುದು ॥೧೬೩॥ ಬಿದ್ದ ಹಣ ಕಂಡು ಬಗ್ಗಿದರೆ ಅವನಿಗೆ ಲೋಭವು ಬಗ್ಗಿಸಿತು ಎಂದು ಹೇಳಬೇಕಾಗುವುದು. ಹಣದ ಉಪೇಕ್ಷೆಯನ್ನು ಮಾಡಿ ಅಲ್ಲಿಂದ ಮುಂದೆ ಸಾಗಲು ಆತನೇ ನನಗೆ ಪರಿಪೂರ್ಣ ವಂದ್ಯನಾಗುವನು ॥೧೬೪॥ ಹಾದಿಯಲ್ಲಿ ಬಿದ್ದಿರುವ ಹಣಕ್ಕೆ ಅದರ ಯಜಮಾನನು ಇಲ್ಲದಿದ್ದರೂ ಆ ಹಣಕ್ಕೆ ಸ್ಪರ್ಶವನ್ನು ಮಾಡಕೂಡದು. ಒಂದುವೇಳೆ ಆ ಹಣವನ್ನು ಸ್ವೀಕರಿಸಿದರೆ ನಿರಪೇಕ್ಷತೆಯು ಮುಳುಗಿಹೋಗುವುದು ॥೧೬೫॥ ಇಚ್ಛಾಶೂನ್ಯ ಅವಸ್ಥೆಯೇ ನಿರಪೇಕ್ಷತೆಯಾಗಿರುವುದು. ಆ ಸಮಯದ ಮನನ ವಿಷಯಕ್ಕೆ ನಾನೀಗ ಹೇಳುವೆನು ॥೧೬೬॥ ವೇದಶಾಸ್ತ್ರಗಳು ನನ್ನ ಸ್ವರೂಪಕ್ಕೆ ಪ್ರಮಾಣವೆಂದಿರುವುವು. ಇದೇ ನನ್ನ ಅತ್ಯಂತ ಶುದ್ಧವಾದ ಸ್ವರೂಪವಾಗಿರುವುದು. ಆ ಸ್ವರೂಪದಲ್ಲಿ ಸತತವಾಗಿ ಸ್ಮರಣೆಯನ್ನಿಡುವುದೇ ಮನನವೆಂದು ಕರೆಯಲಾಗುವುದು ॥೧೬೭॥ ಆ ಸ್ವರೂಪದ ವಿಚಾರವನ್ನು ಸತತವಾಗಿ ಮಾಡುತ್ತ ಮಾಡುತ್ತ ಮನವೇ ಸ್ವರೂಪಕಾರವಾಗಿ ಬಿಡುವುದು. ಆಗ ಸ್ಮರಣೆ ಇಲ್ಲದೇ ಸ್ಮರಣರೂಪ ಮನನವಾಗುವುದು ॥೧೬೮॥

ಯಾ ನಾಂವ ಮನನಾವಸ್ಥಾ । ಸತ್ಯ ಜಾಣ ಪಾ ಸರ್ವಥಾ । ಯಾಹೀವರೀ ಶಾಂತೀಚೀ ಜೇ ಕಥಾ । ಐಕ ತತ್ತ್ವತಾ ಸಾಂಗೇನ ।।೧೧೯।। ಕಾಮ ಕ್ರೋಧ ಸಲೋಭತಾ । ಸಮೂಳ ಮೂಳೇಸೀ ನ ವಚತಾ । ದೇಹೀ ಆಲೀ ಜೇ ನಿಶ್ಚಳತಾ । ತೇ ನ ಸರೇ ಸರ್ವಥಾ ಯೇಥ ಶಾಂತೀ ।।೧೨೦।। ಮತ್ಸ್ಯ ಧರೂನಿಯಾ ಮನೀ। ಬಕ ನಿಶ್ಚಳ ರಾಹಿಲಾ ಧ್ಯಾನೀ । ತೇ ಶಾಂತಿ ಕೋಣ ಮಾನೀ । ಅಂತಃಕರಣೀ ಸಕಾಮ ।।೧೨೧।। ದೇಹೀ ಸ್ಫುರೇನಾ ದೇಹಅಹಂತಾ । ವಿರಾಲೀ ಕಾಮಕ್ರೋಧಸಲೋಭತಾ । ಹೇ ಶಾಂತಿ ಬಾಣೇ ಭಾಗ್ಯವಂತಾ । ಮುಖ್ಯ ಶಾಂತತಾ ಯಾ ನಾಂವ ।।೧೨೨।। ಉದ್ಧವಾ ಜಾಣ ಪಾ ನಿಶ್ಚಿತೀ । ಮಜಹೀ ಮಾನಲೀ ಹೇಚಿ ಶಾಂತೀ । ಯಾಹೀವರೀ ಜೇ ಸಮತೇಚಿ ಸ್ಥಿತೀ । ಐಕ ತುಜಪ್ರತೀ ಸಾಂಗೇನ ।।೧೨೩।। ವಿಚಿತ್ರ ಭೂತೇ ವಿಚಿತ್ರ ನಾಮ । ವಿಚಿತ್ರಾಕಾರೇ ಜಗ ವಿಷಮ । ತೇಥೇ ದೇಖೇ ಸರ್ವೀ ಸರ್ವಸಮ । ಪರಬ್ರಹ್ಮ ಸಮತ್ವೇ ।।೧೨೪।। ಘಾವಾಪೋಡೀ ನ ಶಿಣತಾ । ತಡಾಕೋಡೀ ನ ಕರಿತಾ । ಮಾಝೇನಿ ಭಜನೇ ಮದ್ಭಕ್ತಾ । ಸರ್ವಸಮತಾ ಮದ್ಭಾವೇ ।।೧೨೫।। ಮದ್ಭಾವೇ ಸಮತಾ ಆಲ್ಯಾ ಹಾತಾ । ಖುಂಟಲೀ ಭೂತಭೇದಾಚೀ ವಾರ್ತಾ । ಭೇದಶೂನ್ಯ ಸ್ವಭಾವತಾ । ನಿರ್ವೈರತಾ ಸಹಜೇಚಿ ।।೧೨೬।। ಜಂವವರೀ ದ್ವೈತಾಚೇ ಭಾನ । ತಂವವರೀ ವಿರೋಧಾಚೇ ಕಾರಣ । ಅವಘಾ ಏಕಚಿ ಆಪಣ । ತೇಥ ವೈರೀ ಕೋಣ ಕೋಣಾಚಾ ।।೧೨೭।। ಗಗನ ಗಗನಾಸೀ ಕೈ ಭಾಂಡೇ । ಕೀ ಚಂದ್ರಾ ಚಂದ್ರೇಸೀ ಝುಂಝು ಮಾಂಡೇ । ಕೀ ವಾಯುಚೇನಿ ವಾಯು ಕೋಂಡೇ । ಕೀ ಜಿವ್ಹೇಚೀ ದುಖಂಡೇ ಜಿವ್ಹಾ ಕರೀ ।।೧೨೮।। ಜೇ ಭೇದಾಚೇ ನಿರಾಕಾರಣ । ತೇಚಿ ನಿರ್ವೈರತೇಚೇ ಲಕ್ಷಣ । ಉದ್ಧವಾ ಸತ್ಯ ಜಾಣ । ನಿರ್ವೈರಪಣ ಯಾ ನಾಂವ ।।೧೨೯।। ನಿರಪೇಕ್ಷತಾ ಆಣಿ ಮಾಝೇ ಮನನ । ಶಾಂತಿ ಆಣಿ ಸಮದರ್ಶನ । ಪಾಂಚವೇ ತೇ ನಿರ್ವೈರ ಜಾಣ । ಪಂಚಲಕ್ಷಣ ಹೇ ಮುಖ್ಯತ್ವೇ ।।೧೩೦।। ಅಸೋ ಪಂಚಲಕ್ಷಣಕಥಾ । ಏಕ ನಿರಪೇಕ್ಷತಾ ಆಲ್ಯಾ ಹಾತಾ । ಪಾಯಾ ಲಾಗೇ ಸಾಯುಜ್ಯತಾ । ಪೂರ್ಣಬ್ರಹ್ಮತಾ ಠಸಾವೇ ।।೧೩೧।। ನಿರಪೇಕ್ಷಾಚೇ ನಿಶ್ಚಳ ಮನ । ನಿರಪೇಕ್ಷ ತೋ ನಿರ್ವೈರ ಜಾಣ । ನಿರಪೇಕ್ಷ ತೋ ಶಾಂತ ಸಂಪೂರ್ಣ । ನಿರಪೇಕ್ಷಾಚೀ ಜಾಣ ಸೇವಾ ಮೀ ಕರೀ ।।೧೩೨।।

ನಿಜವಾಗಿಯೂ ಇದಕ್ಕೆ ಮಾತ್ರ ಮನನಶೀಲ ಸ್ಥಿತಿ ಎಂದು ನಾಮವಿರುವುದು. ಇದು ಪರಿಪೂರ್ಣವಾಗಿ ಸತ್ಯವಾಗಿದೆ ಎಂದು ತಿಳಿಯಬೇಕು. ಈಗ ಶಾಂತಿಯ ಸ್ವರೂಪವನ್ನು ಹೇಳುವೆನು, ಅದನ್ನು ಕೇಳು।।೧೧೯।। ಕಾಮ,ಕ್ರೋಧ ಮತ್ತು ಲೋಭ ಇವುಗಳನ್ನು ಪರಿಪೂರ್ಣವಾಗಿ ಬಿಟ್ಟುಕೊಡದೇ ದೇಹಕ್ಕೆ ನಿಶ್ಚಲತೆಯು ಒದಗಲು ಅದು ಶಾಂತಿ ಎಂದಿಗೂ ಆಗಲಾರದು ।।೧೨೦।। ಬಕಪಕ್ಷಿಯು ಮನದಲ್ಲಿ ಮೀನಿನ ಧ್ಯಾನವನ್ನು ಒಡಿದು ಅಗದಿ ನಿಶ್ಚಲವಾಗಿ ನಿಲ್ಲುವುದು. ಆದರೆ ಅದಕ್ಕೆ ಶಾಂತಿ ಎಂದು ಯಾರನ್ನಬೇಕು? ಏಕೆಂದರೆ ಅದರ ಅಂತಃಕರಣದಲ್ಲಿ ಲೋಭವು ತುಂಬಿಕೊಂಡಿರುವುದು ।।೧೨೧।। ದೇಹಕ್ಕೆ ದೇಹದ ಭಾನವು ಇಲ್ಲದಿರುವಿಕೆ, ಕಾಮ,ಕ್ರೋಧ ಲೋಭ ಇವು ಸಂಪೂರ್ಣವಾಗಿ ಕರಗಿ ಹೋಗುವಿಕೆ, ಇಂತಹ ಶಾಂತಿಯು ಭಾಗ್ಯವಂತನಿಗೆ ಪ್ರಾಪ್ತವಾಗುವುದು. ಇದರ ಹೆಸರೇ ಮುಖ್ಯವಾದ ಶಾಂತಿಯಾಗಿರುವುದು ।।೧೨೨।। ಹೇ ಉದ್ಧವಾ, ನನಗೂ ಕೂಡ ಇದೇ ಶಾಂತಿಯು ಮಾನ್ಯವಾಗಿರುವುದು. ಇದನ್ನು ನೀನು ನಿಶ್ಚಯವಾಗಿ ತಿಳಿ. ಈಗ ಸಮತೆಯ ಸ್ವರೂಪವನ್ನು ಹೇಳುವೆನು, ಅದನ್ನು ಕೇಳು ।।೧೨೩।। ಈ ಜಗತ್ತಿನಲ್ಲಿ ವಿಚಿತ್ರ ಪ್ರಕಾರಗಳ ಪ್ರಾಣಿಗಳು ತುಂಬಿರುವುವು. ಅವುಗಳ ನಾಮಗಳು ವಿಚಿತ್ರ ಸ್ವರೂಪವಾಗಿರುವುವು. ಚಿತ್ರವಿಚಿತ್ರ ಆಕಾರಗಳಿಂದ ಈ ಜಗತ್ತು ವಿಷಮವಾಗಿರುವುದು. ಈ ಎಲ್ಲವುಗಳಲ್ಲಿಯೂ ಪರಬ್ರಹ್ಮವು ಸಮಾನವಾಗಿ ತುಂಬಿರುವುದನ್ನು ಯಾರು ಕಾಣುವರೋ ।।೧೨೪।। ಭೂತ ಮಾತ್ರರಲ್ಲಿ ವೈರತ್ವವು ಹುಟ್ಟುವಿಕೆಯನ್ನು ಮನದಲ್ಲಿಯೇ ತರುವುದಿಲ್ಲವೋ ಮತ್ತು ಯಾರಲ್ಲಿಯೂ ನಿಷ್ಠುರವಾಗಿ ನುಡಿಯಲಾರನೋ, ಅಂತಹ ನನ್ನ ಭಕ್ತನಿಗೆ ನನ್ನ ಭಜನೆಯಿಂದ ಸರ್ವತ್ರವೂ ಸಮತೆಯು ತೋರುವುದು ।।೧೨೫।। ನನ್ನ ಭಕ್ತಿಯಿಂದ ಸಮಾನತೆಯು ಪ್ರಾಪ್ತವಾಗುವುದೊಂದೇ ತಡ, ಪ್ರಾಣಿಮಾತ್ರರಲ್ಲಿನ ದ್ವೈತ ಭೇದಬುದ್ಧಿಯು ನಿಲ್ಲುವುದೇ ಇಲ್ಲ. ಆತನು ಸಹಜವಾಗಿಯೇ ಭೇದಭಾವ ರಹಿತನಾಗುವನು. ಹಾಗೆಯೇ ಆತನ ಮನದಲ್ಲಿ ಯಾರಲ್ಲಿಯೂ ವೈರಭಾವವು ಇರುವುದಿಲ್ಲ ।।೧೨೬।। ಎಲ್ಲಿಯವರೆಗೆ ದ್ವೈತದ ಭಾವವಿರುವುದೋ, ಅಲ್ಲಿಯವರೆಗೆ ಮನದಲ್ಲಿ ವಿರೋಧ ಭಾವವಿರುವುದು. ಸರ್ವತ್ರವೂ ನಾನೇ ಇರುವೆನು ಎಂಬ ಈ ಜ್ಞಾನವು ಮೂಡಲು ಆಗ ಅಲ್ಲಿ ಯಾರು ಯಾರ ವೈರಿಯಾಗಬೇಕು? ।।೧೨೭।। ಆಕಾಶವು ಆಕಾಶದೊಂದಿಗೆ ಎಂದಾದರೂ ಜಗಳಾಡುವುದೇ? ಅಥವಾ ಚಂದ್ರನೇ ಚಂದ್ರನೊಂದಿಗೆ ಎಂದಾದರೂ ಯುದ್ಧವನ್ನು ಮಾಡಿರುವನೇ? ಇಲ್ಲವೇ ವಾಯು ವಾಯುವನ್ನು ಕಟ್ಟಿ ಹಾಕಿರುವುದೇ? ಅಥವಾ ನಾಲಿಗೆಯೇ ನಾಲಿಗೆಯನ್ನು ತುಂಡುಗೊಳಿಸುವುದೇ? ।।೧೨೮।। ಮನದಲ್ಲಿನ ಸರ್ವ ಪ್ರಕಾರದ ಭೇದಗಳು ಇಲ್ಲದಂತಾಗುವುದೇ ನಿರ್ವೈರತನದ ಲಕ್ಷಣವಾಗಿರುವುದು. ಉದ್ಧವಾ,ನಿಜವಾಗಿಯೂ ಇದರ ನಾಮವೇ ನಿರ್ವೈರತ್ವವೆಂದಾಗುವುದು. ಇದನ್ನು ಲಕ್ಷದಲ್ಲಿಡು ।।೧೨೯।। ನಿರಪೇಕ್ಷೆ ಮತ್ತು ನನ್ನ ಮನನ, ಶಾಂತಿ ಮತ್ತು ಸಮದೃಷ್ಟಿ, ಐದನೆಯ ನಿರ್ವೈರತ್ವ ಹೀಗೆ ಈ ಐದು ಲಕ್ಷಣಗಳು ಮುಖ್ಯವಾಗಿರುವವು ।।೧೩೦।। ಈ ಐದು ಲಕ್ಷಣಗಳ ಕಥೆ ಇರಲಿ, ಆದರೆ ಕೇವಲ ಒಂದೇ ನಿರಪೇಕ್ಷೆಯು ಕೈಗೆ ಒದಗಲು ಆಗ ಸಾಯುಜ್ಯ ಮುಕ್ತಿಯು ಪಾದದಡಿಯಲ್ಲಿ ಬರುವುದು. ಹಾಗೂ ಪೂರ್ಣ ಬ್ರಹ್ಮಸ್ವರೂಪವು ಹೃದಯದಲ್ಲಿ ತುಂಬಿಕೊಳ್ಳುವುದು ।।೧೩೧।। ನಿರಪೇಕ್ಷ ಮನುಷ್ಯನ ಮನವು ಸ್ಥಿರವಾಗಿರುವುದು. ನಿರಪೇಕ್ಷನಾದವನಿಗೆ ಆತನ ಅಂತಃಕರಣದಲ್ಲಿ ಯಾವುದೇ ವೈರಭಾವವಿರುವುದಿಲ್ಲ. ನಿರಪೇಕ್ಷನಾದವನಿಗೆ ಪೂರ್ಣ ಶಾಂತಿ ಇರುವುದು. ಅದಕ್ಕಾಗಿ ನಾನೂ ಕೂಡ ನಿರಪೇಕ್ಷ ಭಕ್ತನ ಸೇವೆಯನ್ನು ಮಾಡುವೆನು ।।೧೩೨।।

ಕಡೇಕಪಾಟೀ ನ ರಿಘತಾ ಜಾಣ । ನ ಸೋಶಿತಾ ಅತಿಸಾಧನ । ಹೇ ಹಾತಾ ಅಲ್ಯಾ ಪಂಚಲಕ್ಷಣ । ವಿಶ್ವ ಉದ್ಧರಣ ತ್ಯಾಚೇನೀ ॥೧೮೩॥ ಐಶಿಯಾ ಭಕ್ತಾಂಚೇ ದರ್ಶನ । ಝಾಲ್ಯಾ ತರತೀ ಹೇ ನವಲ ಕೋಣ । ತ್ಯಾಂಚೇ ಕರಿತಾ ನಾಮಸ್ಮರಣ । ಉದ್ಧರಣ ಜಡಜೀವಾ ॥೧೮೪॥ ಹೇ ಪಂಚಲಕ್ಷಣ ಆಲ್ಯಾ ಹಾತಾ । ಮಜಹೋನಿ ಅಧಿಕ ಪವಿತ್ರತಾ । ಜೋಡಲೀ ಮಾಝ್ಯಾ ನಿಜಭಕ್ತಾ । ಮೀಹೀ ವಂದೀ ಮಾಥಾ ಚರಣರೇಣು ॥೧೮೫॥ ಸಮುದ್ರೋದಕ ಮೇಘೀ ಚಢೇ । ತ್ಯಾಸೀ ಮಧುರತಾ ಅಧಿಕ ವಾಢೇ । ಜಗ ನಿವವೀ ವಾಡೇಕೋಡೇ । ಫೇಡೀ ಸಾಂಕಡೇ ದುಕಾಳಾಚೇ ॥೧೮೬॥ ತೇಚಿ ಉದಕ ಸಮುದ್ರೀ ಅಸತಾ । ಉಪಯೋಗಾ ನ ಯೇ ಗಾ ಸರ್ವಥಾ । ತೇವೀ ಮಾಝೇನಿ ಭಜನೇ ಮದ್ಭಕ್ತಾ । ಝಾಲೀ ಪವಿತ್ರತಾ ಮಜಹುನೀ ॥೧೮೭॥ ಕೇಳೀ ಚಾಖಿತಾ ಚವೀ ನಾತುಡೇ । ತಿಚೇಂಚ ಕೇಳೇ ಅತಿಗೋಡೇ । ತೇವೀ ಮಜಹೂನಿ ಮಾಝ್ಯಾ ಭಕ್ತಾಕಡೇ । ಪವಿತ್ರತಾ ವಾಢೇ ಅನಿವಾರ ॥೧೮೮॥ ಮಾಝ್ಯಾ ಠಾಯೀ ಜೇ ಪವಿತ್ರಪಣ । ತೇ ಭಕ್ತಾಂಚೇನಿ ಮಜ ಜಾಣ । ಯಾಲಾಗೀ ಭಕ್ತಾ ಮಾಗೇ ಮೀ ಆಪಣ । ಧಾಂವೇ ಚರಣರೇಣೂ ವಂದಾವಯಾ ॥೧೮೯॥ ಭಕ್ತಚರಣರೇಣು ವಂದಿತಾ । ಮಜ ಕೆವಢೀ ಆಲೀ ಪವಿತ್ರತಾ । ಮಾಝೀ ಪಾಯವಣೀ ವಾಹೇ ಮಾಥಾ । ಜಾಣ ತತ್ತ್ವತಾ ಸದಾಶಿವೂ ॥೧೯೦॥ ಏವಂ ಮಾಝ್ಯಾ ಭಕ್ತಾಂಚೇ ಜೇ ಸುಖ । ಸುಖಪಣೇ ಅಲೋಲಿಕ । ತೇ ಸುಖ ನೇಣತೀ ಆಣಿಕ । ತೇ ಬೋಲಾವಯಾ ಮುಖ ಸರೇನಾ ॥೧೯೧॥

ನಿಷ್ಕಿಂಚನಾ ಮಯ್ಯನುರಕ್ತಚೇತಸಃ ಶಾಂತಾ ಮಹಾಂತೋಽಖಿಲಜೀವವತ್ಸಲಾ ।
ಕಾಮೈರನಾಲಬ್ಧಧಿಯೋ ಜುಷಂತಿ ತೇ ಯನ್ನೈರಪೇಕ್ಷ್ಯಂ ನ ವಿದುಃ ಸುಖಂ ಮಮ ॥೧೭॥

ಅರ್ಥ :- ಇಂದ್ರಿಯ ತೃಪ್ತಿಯ ಆಸೆ- ಆಕಾಂಕ್ಷೆ ಇಲ್ಲದವರು, ಸದಾಕಾಲ ನನ್ನಲ್ಲಿ ಅನುರಕ್ತರಾಗಿರುವರು, ಮಿಥ್ಯಾ ಅಹಂಕಾರ ಇಲ್ಲದವರು, ಎಲ್ಲ ಜೀವಿಗಳಲ್ಲೂ ಕರುಣೆ- ಅನುಕಂಪ ಉಳ್ಳವರು ಹಾಗೂ ಯಾರ ಪ್ರಜ್ಞೆಯು ಇಂದ್ರಿಯ ತೃಪ್ತಿಯ ಅವಕಾಶಗಳಿಂದ ಬಾಧಿತವಾಗುವುದಿಲ್ಲವೋ, ಅಂತಹವರು ನನ್ನ ಪರಮಾನಂದದ ಅನುಭವ ಪಡೆಯುವರು. ಇವರನ್ನು ಯಾರೂ ತಿಳಿಯಲಾರರು. ಕಾರಣ ಈ ಪರಮಾನಂದವು ಕೇವಲ ನಿರಪೇಕ್ಷ ಭಾವನೆಯಿಂದ ಮಾತ್ರ ಪ್ರಾಪ್ತವಾಗುವುದು.

ಮೀ ವಾಂಛೂನಿ ಜ್ಯಾಂಚೇ ಗಾಂಠೀ । ನಾಹೀ ಫುಟಕೀ ಕಾಂಚವಟೀ । ಮಜವಾಂಚೋನಿ ಸಗಳೇ ಸೃಷ್ಟೀ । ಆಣಿಕಾಂತೇ ದೃಷ್ಟೀ ನ ದೇಖತೀ ॥೧೯೨॥ ಐಸೇ ಕರಿತಾ ಮಾಝೇ ಭಜನ । ಜಾತಿ ಕುಳ ದೇಹಾಭಿಮಾನ । ಸಹಜೇ ಜಾಯ ನಿರಸೋನ । ಅಕಿಂಚನ ಯಾ ನಾಂವ ॥೧೯೩॥ ಯಾಹೀವರೀ ಪ್ರೇಮಯುಕ್ತ । ಮಾಝ್ಯಾ ಸ್ವರೂಪೀ ರಂಗಲೇ ಚಿತ್ತ । ಅತಏವ ನಿಜಶಾಂತೀ ತೇಥ । ಅಸೇ ನಾಂದತ ನಿಜರೂಪೇ ॥೧೯೪॥

ಗುಡ್ಡಗಾಡು ಗವಿಯಲ್ಲಿರದೇ, ಯಾವ ಯೋಗ ಸಾಧನೆಯನ್ನು ಮಾಡದೇ, ಈ ಐದು ಲಕ್ಷಣಗಳು ಮಾತ್ರ ಕೈಗೆ ಸಿಗಲು, ಆತನಿಂದ ಸಹಜವಾಗಿ ಜಡಜೀವಿಗಳ ಉದ್ಧಾರವಾಗುವುದು ॥೧೮೩॥ ಇಂತಹ ಭಕ್ತರ ದರ್ಶನದಿಂದ ಜನರು ಸಹಜವಾಗಿಯೇ ಉದ್ಧಾರರಾಗುವರು. ಇದು ಯಾವ ಆಶ್ಚರ್ಯ? ಇವರ ನಾಮಸ್ಮರಣೆಯನ್ನು ಮಾಡಿದರೂ ಜಡಜೀವಿಗಳ ಉದ್ಧಾರವಾಗುವುದು ॥೧೮೪॥ ಈ ಯಾವ ಐದು ಲಕ್ಷಣಗಳು ಕೈಗೆ ಸಿಗಲು ಈ ನನ್ನ ಭಕ್ತರಿಗೆ ನನಗಿಂತಲೂ ಹೆಚ್ಚಿನ ಪವಿತ್ರತೆಯು ಪ್ರಾಪ್ತವಾಗುವುದು. ನಾನೂ ಸಹ ಅವರ ಪಾದಧೂಳಿಯನ್ನು ಶಿರಸಾ ವಂದಿಸುವೆನು ॥೧೮೫॥ ಸಮುದ್ರದ ನೀರು ಭಾಷ್ಪರೂಪದಿಂದ ಮೋಡಗಳಲ್ಲಿ ಏರಿ ಕೂಡಲು ಅದಕ್ಕೆ ಹೆಚ್ಚಿನ ರುಚಿಯು ಹುಟ್ಟುವುದು. ಅದು ಮಳೆಯ ರೂಪದಿಂದ ಸರ್ವ ಜಗತ್ತಿಗೆ ಶಾಂತಗೊಳಿಸುವುದು ಹಾಗೂ ದುಷ್ಕಾಲವನ್ನು ನಷ್ಟ ಮಾಡುವುದು ॥೧೮೬॥ ಅದೇ ನೀರು ಸಮುದ್ರದಲ್ಲಿರಲು ಅದು ಯಾರ ಉಪಯೋಗಕ್ಕೂ ಬರುವುದಿಲ್ಲ. ಅದರಂತೆಯೇ ನನ್ನ ಭಕ್ತರಿಗೆ ಕೇವಲ ನನ್ನ ಭಜನೆಯಿಂದ ಅಧಿಕವಾದ ಪವಿತ್ರತೆಯು ಪ್ರಾಪ್ತವಾಗುವುದು ॥೧೮೭॥ ಬಾಳೆಯ ಗಿಡವನ್ನು ತಿನ್ನಲು ರುಚಿಯಾಗುವುದಿಲ್ಲ. ಆದರೆ ಆ ಗಿಡದಲ್ಲಿನ ಬಾಳೆಯ ಫಲವು ಅತ್ಯಂತ ಮಧುರವಾಗಿರುವುದು. ಅದರಂತೆಯೇ ನನಗಿಂತಲೂ ನನ್ನ ಭಕ್ತರ ಹೃದಯಲ್ಲಿ ಅಧಿಕವಾಗಿ ಪವಿತ್ರತೆಯು ಬೆಳೆದಿರುವುದು ॥೧೮೮॥ ನನ್ನಲ್ಲಿರುವ ಯಾವ ಪವಿತ್ರತೆಯು ಇದು ಭಕ್ತರಿಂದಲೇ ನನಗೆ ಪ್ರಾಪ್ತವಾಗಿರುವುದು. ಆದ್ದರಿಂದ ನಾನು ಭಕ್ತರ ಚರಣರಜಕ್ಕೆ ವಂದಿಸುವುದಕ್ಕಾಗಿ ಅವರ ಹಿಂದೆ ಧಾವಿಸುತ್ತಿರುವೆನು ॥೧೮೯॥ ಈ ಯಾವ ಭಕ್ತರ ಪಾದಧೂಳಿಯ ವಂದನೆಯಿಂದ ನನಗೆ ಎಷ್ಟೊಂದು ಪವಿತ್ರತೆಯು ಬಂದಿದೆ ಎಂದರೆ, ನನ್ನ ಚರಣ ತೀರ್ಥವಾದ ಭಾಗೀರಥಿಯನ್ನು ಶಂಕರನು ತನ್ನ ಮಸ್ತಕದ ಮೇಲೆ ಧರಿಸಿದನು ॥೧೯೦॥ ಈ ಪ್ರಕಾರವಾಗಿ ನನ್ನ ಭಕ್ತರ ಸುಖವು ಅಲೌಕಿಕವಾಗಿರುವುದು. ಇದು ಭಕ್ತರಿಗಲ್ಲದೇ ಯಾರಿಗೂ ತಿಳಿಯುವುದಿಲ್ಲ. ಇದರ ವರ್ಣನೆಯನ್ನು ಮಾಡಲು ವಾಣಿಗೆ ಸಾಮರ್ಥ್ಯವಿರುವುದಿಲ್ಲ ॥೧೯೧॥

ಆ ಭಕ್ತನಲ್ಲಿ ನನ್ನ ಹೊರತಾಗಿ ಒಂದು ಒಡಕ ಕಾಜಿನ ತುಕಡಿಯೂ ಕೂಡ ಇರುವುದಿಲ್ಲ. ಈ ಯಾವ ಸರ್ವ ಸೃಷ್ಟಿಯಲ್ಲಿ ನನ್ನ ಹೊರತಾಗಿ ಬೇರೆ ಯಾರನ್ನೂ ಕಣ್ಣಿನಿಂದ ನೋಡುವುದಿಲ್ಲ ॥೧೯೨॥ ಈ ಪ್ರಕಾರವಾಗಿ ವ್ಯಾಪಕ ಸ್ವರೂಪದಲ್ಲಿ ನನ್ನ ಭಜನೆಯನ್ನು ಮಾಡಲು, ಆಗ ಕುಲ, ಜಾತಿ ಮತ್ತು ದೇಹ ಇವುಗಳ ಅಭಿಮಾನವು ಸಹಜವಾಗಿ ನಿರಸನೆಯಾಗುವುದು. ಇದಕ್ಕೆ ಮಾತ್ರ ''ಅಕಿಂಚನ'' ಎಂದು ಹೇಳುವರು ॥೧೯೩॥ ಹೀಗಾದ ನಂತರ ನನ್ನ ಸ್ವರೂಪದಲ್ಲಿ ಚಿತ್ತವು ಪ್ರೇಮದಿಂದ ತನ್ಮಯವಾಗಲು, ಅಲ್ಲಿ ನಿಜಶಾಂತಿಯು ನಿಜರೂಪದಿಂದ ವರ್ತಿಸುವುದು ॥೧೯೪॥

ಐಶಿಯಾ ಗಾ ನಿಜಶಾಂತೀ । ಪರಿಪಾಕಾತೇ ಪಾವಲೀ ಭಕ್ತೀ । ತೇ ಮೀವಾಂಚೂನಿ ಸರ್ವಭೂತೀ । ದುಜೇ ಸ್ಥಿತೀ ಜಾಣೇನಾ ॥೧೯೫॥ ಜೋ ಜೋ ಜೀವೂ ಜೇಥೇ ದೇಖೇ । ತೋ ತೋ ಮದ್ರೂಪೇ ವೋಳಖೇ । ತೇ ವೋಳಖೀಚೇನಿ ಹರಿಖೇ । ಪ್ರೀತಿ ಯಥಾಸುಖೇ ಅನನ್ಯ ಕರೀ ॥೧೯೬॥ ಐಶಿಯಾ ಮದ್ರೂಪಸ್ಥಿತೀ । ಜೀವಮಾತ್ರೀ ಅನನ್ಯ ಪ್ರೀತೀ । ಏವಂ ಮದ್ಭಾವೇ ಮಾಝಿ ೯ ಭಕ್ತೀ । ಮಹಂತಸ್ಥಿತೀ ಯಾ ನಾಂವ ॥೧೯೭॥ ಐಸೇಮದ್ಭಾವನಾಯುಕ್ತ । ಸರ್ವೀ ಸರ್ವತ್ರ ಮಾಝಾ ಭಕ್ತ । ತೇಥ ಕಾಮಾದಿದೋಷ ಸಮಸ್ತ । ಅಸ್ತಮಾನಾ ಜಾತ ತೇ ಕಾಳೀ ॥೧೯೮॥ ಸವಿತಾ ಯೇತಾ ಪ್ರಾಚೀ ಜವಳೀ । ಮಾವಳೇ ನಕ್ಷತ್ರ ಮಂಡಳೀ । ತೇವೀ ಭಕ್ತೀಚ್ಯಾ ಪ್ರಬೋಧಕಾಳೀ । ಝಾಲೀ ಹೋಳೀ ಕಾಮಾದಿಕಾ ॥೧೯೯॥ ಝಾಲಿಯಾ ಕಾಮಾಚೀ ನಿವೃತ್ತೀ । ಸಹಜೇಚಿ ನಿರ್ವಿಷಯಸ್ಥಿತೀ । ತೇಥೇ ಮಾಝ್ಯಾ ಸುಖಾಚೀ ಸುಖಪ್ರಾಪ್ತೀ । ಸುಖೇ ಸುಖ ಭೋಗಿತೀ ಸುಖರೂಪ ॥೨೦೦॥ ದೇಶೇ ಕಾಳೇ ವೇದಾನುವಾದಾ । ಜ್ಯಾ ಸುಖಾಚೀ ನ ಕರವೇ ಮರ್ಯಾದಾ । ತ್ಯಾ ಸುಖಾಚೀ ಸುಖಸಂಪದಾ । ಮದ್ಭಕ್ತ ಸದಾ ಭೋಗಿತೀ ॥೨೦೧॥ ಜ್ಯಾ ಸುಖಾಚೇ ಸುಖಪ್ರಾಪ್ತೀ । ವಿರೋನಿ ಜಾಯ ಚಿತ್ತವೃತ್ತೀ । ಸುಖೇ ಸುಖರೂಪ ಸರ್ವಾಂಗೇ ಹೋತೀ । ಏವಢೀ ಸುಖಪ್ರಾಪ್ತೀ ಮದ್ಭಕ್ತಾ ॥೨೦೨॥ ಇತರ ಮೀ ಸಾಂಗೋ ಕಾಯೀ । ಮೋಕ್ಷಸುಖಾಚ್ಯಾ ಹೀ ಠಾಯೀ । ಯಾ ಸುಖಾಚೀ ಗೋಡೀ ನಾಹೀ । ಧನ್ಯ ಪಾಹೀ ಹರಿಭಕ್ತ ॥೨೦೩॥ ಐಶಿಯಾ ಸುಖಾಕಾರಣೇ । ಸಾಧಕ ಶಿಣತೀ ಜೀವೇ ಪ್ರಾಣೇ । ತಪಾದಿ ಶರೀರಶೋಷಣೇ । ವ್ರತ ಧರಣೇ ವಿಷಯಾಂಚೇ ॥೨೦೪॥ ಏಕ ಕರಿತೀ ಯೋಗಯಾಗ । ಏಕ ಕರಿತೀ ಶಾಸ್ತ್ರಸಂಗ । ಏಕ ಕರಿತೀ ಸರ್ವಸ್ವತ್ಯಾಗ । ಏಕೀ ಸಾಂಡಿಲಾ ಸಂಗ ಗೃಹದಾರಾ ॥೨೦೫॥ ಏಕ ಫಳಾಹಾರೀ ನಿರಾಹಾರೀ । ಏಕ ತೇ ನಗ್ನ ಬ್ರಹ್ಮಚಾರೀ । ಏಕ ಕಡೇಕಪಾಟೀ ಶಿಖರೀ । ಗಿರಿಕಂದರೀ ರಿಘಾಲೇ ॥೨೦೬॥ ಏಕ ತೇ ಜಟಾಳ ಗಾಂಠ್ಯಾಳ । ಏಕ ನಖಧಾರೀ ಢಿಸಾಳ । ಏಕ ಮಹಾಹಟೀ ವಿಶಾಳ । ಏಕ ಪಿಸಾಳ ಮತ್ತಮುದ್ರಾ ॥೨೦೭॥ ಏಕ ತಾಂಬಡೇ ಬೋಡಕೇ । ಏಕ ತೇ ಕೇವಳ ಸುಡಕೇ । ಏಕ ತೀರ್ಥಾಟಣೇ ರೋಡಕೇ । ಏಕ ತೇ ಮುಕೇ ಮೌನನಿಷ್ಠ ॥೨೦೮॥ ಏಕ ರಾಖ್ಯೇ ಏಕ ಶಂಖ್ಯೇ । ಏಕ ತೇ ಅತ್ಯಂತ ಬೋಲಕೇ । ಏಕ ಪಾಣೀಪಿಶೀ ಝಾಲೀ ಉದಕೇ । ಕುಶವೃತ್ತೀಕೇ ವಿಗುಂತಲೀ ॥೨೦೯॥

ಇಂತಹ ನಿಜಶಾಂತಿಯು ದೊರೆಯಲು ಭಕ್ತಿಯು ಅತ್ಯಂತ ವ್ಯಾಪಕವಾಗುವುದು ಮತ್ತು ಸರ್ವ ಭೂತಮಾತ್ರದಲ್ಲಿ ಆತನು ನನ್ನ ಹೊರತಾಗಿ ಅನ್ಯ ಯಾವುದನ್ನೂ ಕಾಣಲಾರನು ॥೧೯೫॥ ಆತನು ಯಾರನ್ನಾದರೂ ನೋಡಲಿ, ಅವರೆಲ್ಲರೂ ಮದ್ರೂಪರೆಂದು ತಿಳಿಯುವನು. ಆ ಆನಂದದಲ್ಲಿ ಆತನು ಅವರನ್ನು ಪ್ರೇಮದಿಂದ ಪ್ರೀತಿಸುವನು ॥೧೯೬॥ ಈ ಪ್ರಕಾರವಾಗಿ ದೃಷ್ಟಿಯು ಮದ್ರೂಪವಾಗಿ ಪ್ರಾಣಿಮಾತ್ರರಲ್ಲಿ ಮದ್ರೂಪ ಭಾವನೆಯಿಂದ ಅನನ್ಯ ಪ್ರೇಮವನ್ನು ಮಾಡಿ, ನನ್ನ ಭಜನೆಯನ್ನು ಮಾಡುವುದಕ್ಕೆ ಮಾತ್ರ ಮಹಂತ ಸ್ಥಿತಿ ಎಂದು ಕರೆಯುವರು ॥೧೯೭॥ ಹೀಗೆ ಸರ್ವರಲ್ಲಿ ಸರ್ವತ್ರ ನನ್ನ ಭಾವನೆಯನ್ನು ಇಡುವವನಾದ ನನ್ನ ಭಕ್ತನಿಗೆ ಆತನ ಮನದಲ್ಲಿನ ಸರ್ವ ಪ್ರಕಾರದ ದೋಷಗಳು ಇಲ್ಲದಾಗುವುವು ॥೧೯೮॥ ಸೂರ್ಯನು ಪೂರ್ವದಿಕ್ಕಿಗೆ ಬರುತ್ತಲೇ ಸರ್ವ ನಕ್ಷತ್ರಗಳು ಮಾಯವಾಗುವುವು. ಅದರಂತೆಯೇ ಭಕ್ತಿಯ ಉದಯವಾಗುತ್ತಲೇ ಕಾಮಾದಿಗಳ ನಾಶವಾಗುವುದು ॥೧೯೯॥ ಕಾಮದ ನಿವೃತ್ತಿಯಾಗುವುದೊಂದೇ ತಡ, ವೃತ್ತಿಯು ಸಹಜವಾಗಿಯೇ ನಿರ್ವಿಷಯವಾಗುವುದು. ಆಗ ನನ್ನ ಆನಂದದ ಪ್ರಾಪ್ತಿಯಾಗಿ ಆತನು ಯಾವಾಗಲೂ ಆನಂದದಲ್ಲಿಯೇ ಮಗ್ನನಾಗಿ ಇರುವನು ॥೨೦೦॥ ದೇಶ, ಕಾಲ ಅಥವಾ ವೇದ ಪ್ರತಿಪಾದನೆ ಇವರಿಗೂ ಕೂಡ ಆ ಯಾವ ದಿವ್ಯ ಆನಂದದ ಅಳತೆ ಮಾಡಲು ಬರುವುದಿಲ್ಲ. ಇಂತಹ ಆನಂದದ ಅನುಭವವನ್ನು ನನ್ನ ಭಕ್ತರು ಸದಾ ಭೋಗಿಸುವರು ॥೨೦೧॥ ಈ ಆನಂದದ ಲಾಭವಾಗುತ್ತಲೇ ಚಿತ್ತವೃತ್ತಿಯು ಇದ್ದಲ್ಲಿಯೇ ಕರಗಿ ಹೋಗುವುದು. ಸರ್ವಾಂಗವು ಆನಂದಮಯವಾಗುವುದು. ಇಂತಹ ಆನಂದವು ನನ್ನ ಭಕ್ತರಿಗೆ ಪ್ರಾಪ್ತವಾಗುವುದು ॥೨೦೨॥ ಹೆಚ್ಚಿಗೆ ಏನು ಹೇಳಬೇಕು ? ಮೋಕ್ಷಸುಖದಲ್ಲಿಯೂ ಕೂಡ ಇಂತಹ ಆನಂದವು ಪ್ರಾಪ್ತವಾಗುವುದಿಲ್ಲ. ಆದ್ದರಿಂದ ನಿಜವಾಗಿಯೂ ನನ್ನ ಭಕ್ತರು ಧನ್ಯ ಧನ್ಯರು ॥೨೦೩॥ ಇಂತಹ ದಿವ್ಯವಾದ ಆನಂದಕ್ಕಾಗಿ ಸಾಧಕರು ಅಪಾರ ಶ್ರಮಪಡುವರು. ಅನೇಕ ಪ್ರಕಾರದ ಕ್ಲೇಶಗಳನ್ನು ಸಹಿಸುವರು. ತಪದಿಂದ ವಿಷಯಗಳ ನಿಯಮನ ಮಾಡುವರು ॥೨೦೪॥ ಕೆಲವರು ಯೋಗ ಯಾಗಗಳನ್ನು ಮಾಡುವರು, ಕೆಲವರು ಶಾಸ್ತ್ರಾಭ್ಯಾಸವನ್ನು ಮಾಡುವರು. ಕೆಲವರು ಸರ್ವಸಂಗ ಪರಿತ್ಯಾಗವನ್ನು ಮಾಡುವರು, ಕೆಲವರು ಮನೆಮಾರು ಪುತ್ರಪತ್ನಿಯವರ ಸಂಗ ತ್ಯಜಿಸುವರು ॥೨೦೫॥ ಕೆಲವರು ಫಲಹಾರ ಮಾಡುವರು, ಕೆಲವರು ನಿರಾಹಾರ ಮಾಡುವರು, ಕೆಲವರು ನಗ್ನಸ್ಥಿತಿಯಲ್ಲಿರುವರು, ಕೆಲವರು ಬ್ರಹ್ಮಚರ್ಯದ ವ್ರತವನ್ನು ಪಾಲಿಸುವರು, ಕೆಲವರು ಪರ್ವತದ ಗುಹೆಯಲ್ಲಿರುವರು, ಕೆಲವರು ಗಿರಿಕಂದರಗಳಲ್ಲಿರುವರು, ಕೆಲವರು ಪರ್ವತದ ಶಿಖರ ಮೇಲೆ ಹೋಗಿ ಕುಳಿತುಕೊಳ್ಳುವರು ॥೨೦೬॥ ಕೆಲವರು ಉದ್ದುದ್ದ ಜಡೆಗಳನ್ನು ಬೆಳೆಯಿಸುವರು, ಜಡೆಗಳನ್ನು ಸುತ್ತಿ ಗಂಟು ಹಾಕಿ ತಲೆಯ ಮೇಲೆ ಹೊರುವರು, ಕೆಲವರು ತಮ್ಮ ಉಗುರುಗಳನ್ನು ಉದ್ದುದ್ದ ಬೆಳೆಯಿಸುವರು, ಕೆಲವರು ಹಠಯೋಗ ಸಾಧಿಸುವರು, ಕೆಲವರು ಪಿಶಾಚಿಗಳಂತೆ ಮನಬಂದಂತೆ ವರ್ತಿಸುತ್ತಿರುವರು ॥೨೦೭॥ ಕೆಲವರು ಕ್ಯಾವೀ ಬಟ್ಟೆ ತೊಡುವರು ಮತ್ತು ತಲೆಯನ್ನು ಬೋಳಿಸಿಕೊಳ್ಳುವರು. ಕೆಲವರು ಹರಕು ಚಿಂದಿಗಳನ್ನು ಧರಿಸುವರು, ಕೆಲವರು ತೀರ್ಥಯಾತ್ರೆಗಳನ್ನು ಮಾಡುತ್ತ ಶರೀರವನ್ನು ಸೊರಗಿಸುವರು. ಕೆಲವರು ಮೌನವನ್ನು ಧರಿಸುವರು ॥೨೦೮॥ ಕೆಲವರು ಶರೀರಕ್ಕೆ ಬೂದಿಯನ್ನು ಬಡೆದುಕೊಳ್ಳುವರು. ಕೆಲವರು ಶಂಖವನ್ನು ಊದುತ್ತಿರುವರು, ಕೆಲವರು ಯಾವಾಗಲೂ ಗಡಬಡಿಸುತ್ತಿರುವರು. ಕೆಲವರಿಗೆ ತ್ರಿಕಾಲ ಸ್ನಾನದ ಹುಚ್ಚು ಹಿಡಿದಿರುವುದು. ಕೆಲವರು ದರ್ಭೆಯಲ್ಲಿ, ಮಣ್ಣಿನಲ್ಲಿ ಮುಳುಗಿರುವರು ॥೨೦೯॥

ಐಸಾ ನಾನಾ ಪರೀಂಚ್ಯಾ ವ್ಯುತ್ಪತ್ತೀ । ಸಾಧಕ ಶಿಣತೀ ನೇಣೋ ಕಿತೀ । ಮಾಝ್ಯಾ ಭಜನಸುಖಾಚೀ ಪ್ರಾಪ್ತೀ । ನವ್ಹೇ ನಿಶ್ಚಿತೀ ಕೋಣಾಸೀ ॥೨೧೦॥ ಜೇ ಮಾಝ್ಯಾ ಭಕ್ತಾಂಚೇ ನಿಜಸುಖ । ತೇ ಕೋಣಾಸೀ ನ ಪವೇಚಿ ದೇಖ । ಸ್ವಪ್ನೀಹೀ ತ್ಯಾ ಸುಖಾಚೇ ಮುಖ । ಅನೋಳಖ ಪೈ ಝಾಲೇ ॥೨೧೧॥ ಚಂದ್ರಕಿರಣೀಚೇ ಅಮೃತ । ಜೇವೀ ವಾಯಸಾ ಅಪ್ರಾಪ್ತ । ತೇವೀ ಮಾಝೇ ನಿಜಸುಖ ನಿಶ್ಚಿತ । ನವ್ಹೇಚಿ ಪ್ರಾಪ್ತ ಅಭಕ್ತಾ ॥೨೧೨॥ ಥಾನೀ ಲಾಗಲ್ಯಾ ಗೋಚಿಡಾ । ಅಶುದ್ಧಚಿ ಆವಡೇ ಮೂಢಾ । ಜವಳಿಲ್ಯಾ ಕ್ಷೀರಾ ವರಪಡಾ । ನವ್ಹೇಚಿ ರೋಕಡಾ ಅಭಾಗೀ ॥೨೧೩॥ ತೇವೀ ಸಾಂಡೋನಿ ಮಾಝೀ ಭಕ್ತೀ । ನಾನಾ ಸಾಧನೀ ವ್ಯರ್ಥ ಶಿಣತೀ । ತ್ಯಾಂಸೀ ಮಾಝ್ಯಾ ನಿಜಸುಖಾಚೀ ಸುಖಪ್ರಾಪ್ತೀ । ನವ್ಹೇ ನಿಶ್ಚಿತೀ ಉದ್ಧವಾ ॥೨೧೪॥ ಜಂಹೀ ಮಾಝ್ಯಾ ಭಜನ ಪರವಡೀ । ಕೇಲೀ ಭಕ್ತೀಚೀ ಕುಳವಾಡೀ । ತೇ ಮಾಝ್ಯಾ ನಿಜಸುಖಾಚೀ ಗೋಡೀ । ಪಾವಲೇ ರೋಕಡೀ ಆತ್ಯಂತಿಕ ॥೨೧೫॥ ಜ್ಯಾ ನಿಜಸುಖಾಚ್ಯಾ ಠಾಯೀ । ಶಿಳೇಪಣಾಚೀ ಭಾಷಾಚಿನಾಹೀ । ವಿಟೋ ನೇಣೇ ಕಲ್ಪಾಂತಿಹೀ । ಇಂದ್ರಿಯಾಂಚಾ ಕಾಂಹೀ ನ ಪಡೇ ಪಾಂಗೂ ॥೨೧೬॥ ಜೇ ಜೇ ವಿಷಯಾಂಚೇ ಸುಖ । ತೇ ತೇ ಇಂದ್ರಿಯಾಪಾಂಗಿಸ್ತ ದೇಖ । ಅಪಾಂಗಿಸ್ತ ಭಕ್ತಿಸುಖ ಚೋಖ । ಸಭಾಗ್ಯ ಲೋಕ ಪಾವತೀ ॥೨೧೭॥ ಜೇ ಸುಖ ಭೋಗಿತಾ ಪಾಹೀ । ದೇಹೀ ತೋಚಿ ಹೋಯ ವಿದೇಹೀ । ತೇ ಸುಖ ಮಾಝ್ಯಾ ಭಕ್ತಾಂಚ್ಯಾ ಠಾಯೀ । ಪ್ರಕಟಲೇ ಕಂಹೀ ಲೋಪೇನಾ ॥೨೧೮॥ ಹೇ ಉತ್ತಮೋತ್ತಮ ಭಕ್ತ ಪಾಹೀ । ಸುಖ ಪಾವಲೇ ನವಲ ಕಾಯೀ । ಪರಿ ಕೇವಳ ಜೇ ವಿಷಯೀ । ಭಜನೇ ತ್ಯಾಂಹೀ ಸುಖಪ್ರಾಪ್ತೀ ॥೨೧೯॥ ಭಾಗ್ಯವಶೇ ಸತ್ಸಂಗತೀ । ಆಸ್ತಿಕ್ಯಭಾವೇ ಅನನ್ಯಸ್ಥಿತೀ । ಅಲ್ಪಹೀ ಮಾಝೀ ಘಡಲ್ಯಾ ಭಕ್ತೀ । ವಿಷಯನಿವೃತ್ತೀ ತೇಣೇ ಹೋಯ ॥೨೨೦॥

ಬಾಧ್ಯಮಾನೋಽಪಿ ಮದ್ಭಕ್ತೋ ವಿಷಯೈರಜಿತೇಂದ್ರಿಯಃ । ಪ್ರಾಯಃ ಪ್ರಗಲ್ಭಯಾ ಭಕ್ತ್ಯಾ ವಿಷಯೈರ್ನಾಭಿಭೂಯತೇ ॥೧೮॥

ಅರ್ಥ :- ಇಂದ್ರಿಯಗಳನ್ನು ಜಯಿಸದ ನನ್ನ ಭಕ್ತನು ವಿಷಯಗಳಿಂದ ಆಕರ್ಷಿತನಾಗುತ್ತಿದ್ದರೂ ಕೂಡ ಪ್ರಗಲ್ಭ ಭಕ್ತಿಯಿಂದ ಬಹುತೇಕವಾಗಿ ವಿಷಯಗಳಿಂದ ಪರಾಜಯನಾಗಲಾರನು.

ಮಾಝ್ಯಾ ಠಾಯೀ ಅನನ್ಯ ಪ್ರೀತೀ । ಪ್ರೇಮಯುಕ್ತ ಭಜನಸ್ಥಿತೀ । ಐಶಿಯಾ ಭಕ್ತಾ ವಿಷಯ ಬಾಧಿತೀ । ಹೇ ವ್ಯಾಖ್ಯಾನಸ್ಥಿತೀ ಕೇವೀ ಘಡೇ ॥೨೨೧॥ ಆವಡೀ ಕರಿತಾ ಮಾಝೀ ಭಕ್ತೀ । ವಿಷಯವಾಸನಾ ಜಳೂನ ಜಾತೀ । ತೇಥ ಉಪಜೇ ವಿಷಯಾಸಕ್ತೀ । ಹೇ ಕೋಣೇ ಯುಕ್ತೀ ಮಾನಾವೀ ॥೨೨೨॥

ಹೀಗೆ ಅನೇಕ ಪ್ರಕಾರಗಳ ಸಾಧನೆಗಳಿಂದ ಸಾಧಕರು ಶ್ರಮಪಡುತ್ತಿರುವರು. ಇದರ ಗಣನೆಯನ್ನು ಮಾಡಲಾಗುವುದಿಲ್ಲ. ಆದರೆ ನನ್ನ ಭಜನೆಯ ಸುಖದ ಪ್ರಾಪ್ತಿ ಮಾತ್ರ ಇವರ್‍ಯಾರಿಗೂ ಆಗುವುದಿಲ್ಲ ॥೨೧೦॥ ನನ್ನ ಭಕ್ತರಿಗೆ ದೊರಕುವ ಆನಂದವು ಯಾರಿಗೂ ದೊರಕುವುದಿಲ್ಲ. ಇವರಿಗೆ ಸ್ವಪ್ನದಲ್ಲಿಯೂ ಆ ಆನಂದದ ಪ್ರಾಪ್ತಿಯಾಗುವುದಿಲ್ಲ. ಇಷ್ಟೊಂದು ಈ ಆನಂದವನ್ನು ತಿಳಿಯಲಾರದಾಗಿರುವರು ॥೨೧೧॥ ಚಂದ್ರನ ಕಿರಣದಿಂದ ಪ್ರಕಟವಾಗುವ ಅಮೃತವು ಕಾಗೆಗೆ ದುರ್ಲಭವಾಗಿರುವಂತೆ ನನ್ನ ಪ್ರಾಪ್ತಿಯ ಅಲೌಕಿಕ ಆನಂದವು ಅಭಕ್ತರಿಗೆ ಲಭಿಸಲಾರದು ॥೨೧೨॥ ಆಕಳ ಕೆಚ್ಚಲದಲ್ಲಿನ ಉಣ್ಣೆಯು ಅದರ ರಕ್ತವನ್ನು ಕುಡಿಯುವದು, ಆದರೆ ಮೂರ್ಖ ದುರ್ದೈವಿಯಾದ ಆ ಯಾವ ಉಣ್ಣೆಯು ಸಮೀಪದಲ್ಲಿರುವ ಪವಿತ್ರ ಹಾಲಿನ ಸೇವನೆಯನ್ನು ಮಾಡುವುದೇ ಇಲ್ಲ ॥೨೧೩॥ ಅದರಂತೆ ಹೇ ಉದ್ಧವಾ, ಇವರೆಲ್ಲರೂ ನನ್ನ ಭಕ್ತಿಯನ್ನು ಬಿಟ್ಟು ಅನೇಕ ಪ್ರಕಾರದ ಸಾಧನೆಗಳನ್ನು ಮಾಡುತ್ತ ವ್ಯರ್ಥವಾಗಿ ಕಷ್ಟಪಡುವರು. ಇವರಿಗೆ ಎಂದಿಗೂ ಆತ್ಮಸುಖದ ಪ್ರಾಪ್ತಿಯಾಗುವುದಿಲ್ಲ ॥೨೧೪॥ ಯಾರು ನನ್ನ ಭಜನೆಯ ಪ್ರೇಮದಿಂದ ಭಕ್ತಿಯನ್ನು ಬೆಳೆಸುವರೋ, ಅವರಿಗೆ ಮಾತ್ರ ನಿಜವಾಗಿಯೂ ಆತ್ಮಾನಂದದ ಸುಖವು ಪ್ರಾಪ್ತವಾಗುವುದು ॥೨೧೫॥ ಆ ನನ್ನ ಆತ್ಮಾನಂದದಲ್ಲಿ ತಂಗಳ ಎಂಬ ಹೆಸರೇ ಇರುವುದಿಲ್ಲ. ಕಲ್ಪಾಂತಕ್ಕೂ ಇದರ ಬೇಸರವು ಎಂದಿಗೂ ಬರುವುದಿಲ್ಲ. ಇಂದ್ರಿಯಗಳಿಗೆ ಸಂಕಟವು ಬೀಳುವುದಿಲ್ಲ ॥೨೧೬॥ ಇಂದ್ರಿಯಗಳ ಸುಖವು ಇಂದ್ರಿಯಗಳ ಪ್ರಾಧೀನದಲ್ಲಿರುವುದು. ಭಕ್ತಿ ಸುಖವು ಇಂದ್ರಿಯಗಳನ್ನು ಅವಲಂಬಿಸಿರುವುದಿಲ್ಲ. ಭಾಗ್ಯವಂತ ಜನರಿಗೆ ಮಾತ್ರ ಭಕ್ತಿ ಸುಖವು ಪ್ರಾಪ್ತವಾಗುವುದು ॥೨೧೭॥ ಈ ಯಾವ ಸುಖದ ಉಪಭೋಗವನ್ನು ಪಡೆಯುವ ಕಾಲಕ್ಕೆ ದೇಹಿಯಾಗಿರುವವನೇ ವಿದೇಹಿಯಾಗುವನು. ಈ ಸುಖವು ನನ್ನ ಭಕ್ತನ ಹೃದಯದಲ್ಲಿ ಒಮ್ಮೆ ಪ್ರಕಟವಾಯಿತೆಂದರೆ ಅದು ಎಂದೆಂದಿಗೂ ನಾಶವಾಗದು ॥೨೧೮॥ ಹೀಗೆ ನನ್ನ ಉತ್ತಮ ಭಕ್ತರಿಗೆ ಈ ಸುಖವು ಪ್ರಾಪ್ತವಾಗುವುದು ಯಾವ ಆಶ್ಚರ್ಯವಿದೆ? ಆದರೆ ಕೇವಲ ವಿಷಯೀಗಳಾಗಿರುವವರಿಗೂ ಕೂಡ ನನ್ನ ಭಜನೆಯಿಂದ ಸುಖದ ಪ್ರಾಪ್ತಿಯಾಗುವುದು ॥೨೧೯॥ ಸುದೈವದಿಂದ ಸತ್ಸಂಗತಿಯು ಪ್ರಾಪ್ತವಾಯಿತೆಂದರೆ ಮನದಲ್ಲಿ ಆಸ್ತಿಕಭಾವವು ನಿರ್ಮಾಣವಾಗುವುದು. ಈ ಯೋಗದಿಂದ ನನ್ನ ಭಕ್ತಿಯು ಸ್ವಲ್ಪವಾದರೂ ಸಾಧಿಸಿದರೆ ಸಾಕು, ವಿಷಯಗಳ ನಿವೃತ್ತಿಯಾಗುವುದು ॥೨೨೦॥

ನನ್ನಲ್ಲಿ ಅನನ್ಯ ಪ್ರೀತಿಯನ್ನಿಟ್ಟು ಪ್ರೇಮಭಾವದಿಂದ ಭಜನೆಯನ್ನು ಮಾಡುವ, ಇಂತಹ ಗುಣಗಳಿಂದ ಯುಕ್ತನಾಗಿರುವ ನನ್ನ ಭಕ್ತನಿಗೆ ವಿಷಯಗಳ ಬಾಧೆಯಾಗುವುದೆಂಬ ಇಂತಹ ವಿಲಕ್ಷಣವಾದ ಮಾತು ಹೇಗೆ ಸಾಧಿಸಬೇಕು? ॥೨೨೧॥ ಪ್ರೇಮದಿಂದ ನನ್ನ ಭಕ್ತಿಯನ್ನು ಮಾಡಿದರೆ ವಿಷಯ ವಾಸನೆಯು ಇಲ್ಲದಾಗುವುದು. ಅಂದಮೇಲೆ ವಿಷಯಗಳ ಪ್ರೀತಿಯುಂಟಾಗುವ ಈ ಮಾತನ್ನು ಯಾರು ಮನ್ನಿಸಬೇಕು ॥೨೨೨॥

ಆರಿಸಾ ಉಟಿತಾ ಉಜಳೇ । ತೇವೀ ಭಕ್ತೀನೇ ವಿಷಯೋ ಕ್ಷಾಳೇ । ತೇಥ ವಿಷಯಾಸಕ್ತೀ ಖವಳೇ । ಹೇ ನಿರೂಪಣ ಕೋವಳೇ ಸಾಧಾರಣ ।೭೨೩॥ ಕೇವಳ ಜೋ ವಿಷಯಾಸಕ್ತ । ಸಂಸಾರೀ ಪ್ರಪಂಚಯುಕ್ತ । ತೋಹೀ ಪ್ರಸಂಗೇ ಝಾಲಿಯಾ ಭಕ್ತ । ಹೋಯ ವಿರಕ್ತ ತೇ ಐಕ ।೭೨೪॥ ಜೇವೀ ಭಕ್ತಿ ಲಾಗಲೀ ಗೋಡ । ನಾಹೀ ಮಾವಳಲೀ ವಿಷಯಚಾಡ । ಐಸೇ ಉಭಯ ಅವಘಡ । ಅತಿಸಾಂಕಡ ಜಯಾಸೀ ।೭೨೫॥ ತೇಣೇ ಮುಖ್ಯತ್ವೇ ಘ್ಯಾವೀ ಭಕ್ತೀ । ಗೌಣ ಧರಾವೀ ವಿಷಯಾಸಕ್ತೀ । ತಿಚೇಹೀ ಹೋಯ ವಿರಕ್ತೀ । ಐಕ ತೇ ಯುಕ್ತೀ ಸಾಂಗೇನ ।೭೨೬॥ ಲವಣಾಸೀ ಮಿಳತಾ ಜಳ । ವಿರವೂನಿ ಸಾಂಡೀ ತತ್ಕಾಳ । ತೇವೀ ಭಕ್ತಿ ವಾಢವಿಲ್ಯಾ ಪ್ರಬಳ । ವಿಷಯ ಮಂಡಳ ವಿಭಾಂಡೀ ।೭೨೭॥ ಯಾಪರೀ ಭಜನಪರಿಪಾಟೀ । ವಿಷಯಾಂಸೀ ಪಡೇ ತುಟೀ । ನಿಜಸುಖಾಚೀ ಲಾಭೇ ಭೇಟೀ । ಪಡೇ ಮಿಠೀ ಸ್ವಾನಂದೇ ।೭೨೮॥ ಮಜ ಪಾಹಿಜೇ ವಿಷಯನಿವೃತ್ತೀ । ಯಾ ಹೇತೂ ಕೇಲಿ ನಾಹೀ ಭಕ್ತೀ । ಮ್ಹಣಾಲ ವಿಷಯಾಂಚೀ ವಿರಕ್ತೀ । ಕೋಣೇ ಯುಕ್ತೀ ಘಡೇ ತ್ಯಾ ।೭೨೯॥ ಯೇಚಿವಿಷಯೀ ಉತ್ತರ । ಸಾಂಗತಾಹೇ ಶಾರಂಗಧರ । ದೀಪಾಚಾ ಪೇಟಲ್ಯಾ ವೈಶ್ವಾನರ । ತೋ ಜಾಳೀಲ ಘರ ನಗರ ತೈಸೇ ಹೇ ।೭೩೦॥

ಯಥಾಗ್ನಿಃ ಸುಸಮೃದ್ಧಾರ್ಚಿಃ ಕರೋತ್ಯೇಧಾಂಸಿ ಭಸ್ಮಸಾತ್ । ತಥಾ ಮದ್ವಿಷಯಾ ಭಕ್ತಿರುದ್ಧವೈನಾಂಸಿ ಕೃತ್ಸ್ನಶಃ ।೧೯॥

ಅರ್ಥ :- ಅಡುಗೆಗಾಗಿ ಹೊತ್ತಿಸಿದ ಅಗ್ನಿಯು ಎಲ್ಲ ಕಾಷ್ಠಗಳನ್ನು ಸುಟ್ಟು ಭಸ್ಮ ಮಾಡುವುದು. ಅದರಂತೆ ವಿಷಯಾಸಕ್ತಿ ಇತ್ಯಾದಿ ನಿಮಿತ್ತಕ್ಕಾಗಿ ಮಾಡಿದ ಭಕ್ತಿಯೂ ಕೂಡ ನನಗಾಗಿಯೇ ಇದ್ದರೆ ಅದು ಸರ್ವ ಪ್ರಕಾರದ ಪಾಪಗಳನ್ನು ಸುಟ್ಟು ಭಸ್ಮ ಮಾಡುವುದು.

ದೀಪ ಲಾವವಯಾಲಾಗುನೀ । ಸೋಜ್ವಳ ಕೇಲಾ ಜೋ ವನ್ಹೀ । ತೋ ಅವಚಟೇ ಪಡಲಾ ವನೀ । ತಿಡಿಕೀ ಉಡೋನಿ ತೃಣಾಂಕುರೀ ।೭೩೧॥ ತೋ ಅನಿಚ್ಛತಚಿ ಏಕಸರೇ । ಕೋಪಟೇ ಆಣಿ ಧವಳಾರೇ । ನಗರೇಪುರೇ ಮಂದಿರೇ । ಗಿರಿಕಂದರೇ ಭಸ್ಮ ಕರೀ ।೭೩೨॥ ತೈಶೀ ಅಲ್ಪಹೀ ಮಾಝೀ ಭಕ್ತೀ । ಶ್ರದ್ಧಾಯುಕ್ತ ಪ್ರವೇಶಲ್ಯಾ ಚಿತ್ತೀ । ಸಂಚಿತ ಕ್ರಿಯಮಾಣ ಪಾಪಪಂಕ್ತೀ । ಹೋಯ ಜಾಳಿತೀ ನಿಃಶೇಷ ।೭೩೩॥ ಪೂರ್ವಪಾಪಾಚೇ ಸಮೂಳ ಮೂಳ । ಚಿತ್ತೀ ಜಡಲೇ ಹೋತೇ ಪ್ರಬಳ । ತೇ ಚಿತ್ತ ಅತಿಚಂಚಳ । ವಿಷಯೀ ವ್ಯಾಕುಳ ಸರ್ವದಾ ।೭೩೪॥ ತ್ಯಾಸೀ ಮಾಝಿಯಾ ಭಕ್ತಿಲೇಶೇ । ಪೂರ್ವಪಾಪಾಚಾ ಸಮೂಹ ನಾಸೇ । ಜೇವೀ ಕಾ ಕರ್ಪೂರ ದೀಪಸ್ಪರ್ಶೇ । ನಿಃಶೇಷ ನಾಸೇ ತತ್ಕಾಳ ।೭೩೫॥

ಕನ್ನಡಿಯನ್ನು ತಿಕ್ಕಿ ಒರೆಸಲು ಹೊಲಸು ತೊಳೆದು ಸ್ವಚ್ಛವಾಗುವುದು. ಅದರಂತೆ ಭಕ್ತಿಯಿಂದ ವಿಷಯಗಳು ತೊಳೆದು ಸ್ವಚ್ಛವಾಗುವುವು. ಅಂದಮೇಲೆ ಇಲ್ಲಿ ವಿಷಯಗಳ ಆಸಕ್ತಿಯು ನಿರ್ಮಾಣವಾಗುವುದೆಂದು ಹೇಳುವುದು ಅಯೋಗ್ಯವಾಗುವುದು ।೭೨೩॥ ಕೇವಲ ವಿಷಯಾಸಕ್ತನಾದವನು, ಪೂರ್ಣ ಸಂಸಾರೀಯಾದವನು, ಪ್ರಪಂಚದಲ್ಲಿ ತಲ್ಲೀನನಾದವನು ಒಂದುವೇಳೆ ಪ್ರಸಂಗಾನುಸಾರವಾಗಿ ನನ್ನ ಭಕ್ತನಾದರೆ ಆತನ ಮನದಲ್ಲಿ ವಿರಕ್ತಿಯು ಹುಟ್ಟುವುದು. ಅದನ್ನು ಈಗ ಹೇಳುವೆನು, ಕೇಳು ।೭೨೪॥ ಈತನ ಜೀವಕ್ಕೆ ಭಕ್ತಿಯ ಸುಖವು ಬೇಕೆನ್ನಿಸುವುದು. ಆದರೆ ಅಂತಃಕರಣದಲ್ಲಿನ ಇಚ್ಛೆಗಳು ಪೂರ್ಣವಾಗಿ ನಷ್ಟವಾಗಿರುವುದಿಲ್ಲ. ಹೀಗೆ ಆತನು ಎರಡೂ ಕಡೆಯಿಂದ ಸಂಕಟದಲ್ಲಿ ಸಿಕ್ಕಿಕೊಂಡಿರುವನು ।೭೨೫॥ ಇಂತಹವನು ಪ್ರಾಮುಖ್ಯವಾಗಿ ನನ್ನ ಭಕ್ತಿಯ ಆಶ್ರಯವನ್ನು ಮಾಡಬೇಕು. ವಿಷಯಾಸಕ್ತಿಯನ್ನು ಗೌಣವೆಂದು ತಿಳಿಯಬೇಕು. ಆ ವಿಷಯಾಸಕ್ತಿಯೂ ಕೂಡ ವಿರಕ್ತಿಯಾಗಬಲ್ಲ. ಆ ಯುಕ್ತಿಯನ್ನು ಈಗ ನಿನಗೆ ಹೇಳುವೆನು, ಅದನ್ನು ಕೇಳು ।೭೨೬॥ ಉಪ್ಪು ನೀರಲ್ಲಿ ಬೀಳುತ್ತಲೇ ತತ್ಕಾಲದಲ್ಲಿ ಅದು ಕರಗಿ ಹೋಗುವುದು. ಅದರಂತೆ ಭಕ್ತಿಯ ಸಾಮರ್ಥ್ಯವು ಬೆಳೆಯಿತೆಂದರೆ ವಿಷಯಗಳ ಬಲೆಯು ಸಹಜವಾಗಿಯೇ ಮುರಿದುಬೀಳುವುದು ।೭೨೭॥ ಈ ಪ್ರಕಾರವಾಗಿ ಭಜನೆಯ ಅಭ್ಯಾಸದಿಂದ ವಿಷಯಗಳ ಬಿಡುಗಡೆಯಾಗುವುದು. ಆತ್ಮಸುಖದ ಲಾಭವಾಗುವುದು ಮತ್ತು ಸ್ವಾನಂದವು ತಕ್ಕೆ ಬೀಳುವುದು ।೭೨೮॥ ನನಗೆ ವಿಷಯಗಳ ನಿವೃತ್ತಿಯಾಗಬೇಕೆಂದು ನಾನು ಭಕ್ತಿಯನ್ನು ಮಾಡಿರುವುದಿಲ್ಲ. ಹಾಗಾದರೆ ವಿಷಯಗಳ ವಿರಕ್ತಿಯು ಬರಬೇಕೆಂದರೆ ಯಾವ ಯುಕ್ತಿಯನ್ನು ಯೋಜಿಸಬೇಕು? ।೭೨೯॥ ಇದರ ಉತ್ತರವನ್ನು ಶ್ರೀಕೃಷ್ಣನು ಹೇಳುತ್ತಿರುವನು. ದೀಪದಿಂದ ಅಗ್ನಿಯು ಭಡಕಾಯಿಸಿದರೆ ಆಗ ಅದು ಮನೆ ಮತ್ತು ನಗರವನ್ನೂ ಕೂಡ ಸುಟ್ಟು ಹಾಕಬಲ್ಲದು. ಅದರಂತೆ ಈ ಭಕ್ತಿಯಾಗಿರುವುದು ।೭೩೦॥

ದೀಪವನ್ನು ಹಚ್ಚುವುದಕ್ಕಾಗಿ ಅಗ್ನಿಯನ್ನು ಹೊತ್ತಿಸಲು, ಆಗ ಅದರ ಒಂದು ಸಣ್ಣ ಕಿಡಿಯು ಆಕಸ್ಮಾತ್ತಾಗಿ ಹಾರಿಬಂದು ಒಣಹುಲ್ಲಿನ ಮೇಲೆ ಬೀಳಲು ।೭೩೧॥ ಆ ಅಗ್ನಿಯನ್ನು ಹೊತ್ತಿಸಬೇಕೆಂಬ ಇಚ್ಛೆಯು ಇರದಿದ್ದರೂ ಕೂಡ ಅದು ಗುಡಿಸಲುಗಳನ್ನು, ಮನೆಗಳನ್ನು, ಊರನ್ನು, ಗುಡಿಗುಂಡಾರಗಳನ್ನು, ಗಿರಿಕಂದರಗಳನ್ನು ಹೀಗೆ ಎಲ್ಲವನ್ನೂ ಭಸ್ಮ ಮಾಡುವುದು ।೭೩೨॥ ಅದರಂತೆಯೇ ನನ್ನ ಅಲ್ಪವಾದ ಭಕ್ತಿಯೂ ಕೂಡ ಶ್ರದ್ಧೆಯಿಂದ ಅಂತಃಕರಣದಲ್ಲಿ ಪ್ರವೇಶಿಸಿದರೆ ಆಗ ಸಂಚಿತ ಮತ್ತು ಕ್ರಿಯಾಮಾಣ, ಪಾಪಗಳ ರಾಶಿ ಇವುಗಳನ್ನು ಪೂರ್ಣವಾಗಿ ಸುಟ್ಟು ಹಾಕಿ ಭಸ್ಮ ಮಾಡುವುದು ।೭೩೩॥ ಪೂರ್ವ ಜನ್ಮದ ಪಾಪಗಳಿಂದ ಚಿತ್ತದಲ್ಲಿ ಮಲಿನತ್ವವು ಭಾರಿ ಬೆಳೆದಿರುವುದು. ಆದ್ದರಿಂದ ಚಿತ್ತವು ಅತಿಚಂಚಲವಾಗಿರುವುದು ಹಾಗೂ ಅದು ವಿಷಯಗಳಿಗಾಗಿ ಸದಾವಕಾಲದಲ್ಲಿ ವ್ಯಾಕುಲಗೊಳ್ಳುತ್ತಿರುವುದು ।೭೩೪॥ ಕರ್ಪೂರವು ದೀಪದ ಸ್ಪರ್ಶವಾಗುತ್ತಲೇ ಕೂಡಲೇ ಇಲ್ಲದಾಗುವುದು. ಅದರಂತೆ ಕೇವಲ ಕಣದಷ್ಟು ಭಕ್ತಿಯೂ ಸಹ ಪೂರ್ವ ಜನ್ಮದ ಸಮೂಲ ಪಾಪಗಳನ್ನು ನಾಶಗೊಳಿಸುವುದು ।೭೩೫॥

ಐಸೇ ನಿರ್ಮಳ ಝಾಲಿಯಾ ಚಿತ್ತ । ಬ್ರಹ್ಮ ಪ್ರಕಾಶೇ ಸದೋದಿತ । ಮಗ ತೇ ನವ್ಹೇ ವಿಷಯಾಸಕ್ತ । ಹೋಯ ವಿರಕ್ತ ಅನಿಚ್ಛತಾ ।।೮೩೬।। ಭಕ್ತಿಲೇಶಾಚಿ ಏವಢೀ ಗರಿಮಾ । ತೋ ಸಂಪೂರ್ಣ ಭಕ್ತೀಚಾ ಮಹಿಮಾ । ಕೋಣ ಜಾಣೇ ಭಕ್ತೋತ್ತಮಾ । ಆಗಮನಿಗಮಾ ಅತರ್ಕ್ಯ ।।೮೩೭।। ಅಲಕ್ಷ್ಯ ಲಕ್ಷೇನಾ ಮಾಝೀ ಭಕ್ತೀ। ಅತರ್ಕ್ಯ ತರ್ಕೇನಾ ಶಾಸ್ತ್ರಯುಕ್ತೀ । ಅಗಾಧ ನಾಕಳೇ ನಿಶ್ಚಿತೀ । ಸಾಧನವ್ಯುತ್ಪತ್ತೀ ಶಿಣತಾಂಹೀ ।।೮೩೮।। ಪೂರ್ಣ ಮಾಝೀ ಭಕ್ತೀಚಾ ಪಾರ । ಮಜಹೀ ನ ಕಳೇ ಸಾಚಾರ । ಯಾಲಾಗೀ ಮೀ ಭಕ್ತಾಂಚಾ ಆಜ್ಞಾಧಾರ । ನುಲ್ಲಂಘೀ ಉತ್ತರ ಸರ್ವಥಾ ।।೮೩೯।। ಅಗಾಧ ಭಕ್ತಾಂಚೀ ಥೋರೀ। ಯಾಲಾಗೀ ಮೀಹೀ ಸೇವಾ ಕರೀ । ಭಕ್ತಪದ ಧರಿಲೇ ಉರೀ । ವಂದೀ ಶಿರೀ ಅಂಘ್ರಿರೇಣು ।।೮೪೦।। ಭಕ್ತ ಮ್ಹಣವಿತಾ ವಾಟೇ ಗೋಡ । ಭಜನಮುದ್ರಾ ಅತಿಅವಘಡ । ಭಕ್ತೀಚೇ ಅಂತರ ಅತಿಗೂಢ । ನ ಕಳೇ ಉಘಡಶ್ರುತಿಶಾಸ್ತ್ರಾ ।।೮೪೧।। ಜ್ಞಾನ ಸಾಂಗತಾ ಅತಿಸುಗಮ । ಭಕ್ತಿರಹಸ್ಯ ಗುಹ್ಯ ಪರಮ । ಅಕೃತ್ರಿಮ ಉಪಜೇ ಪ್ರೇಮ । ಐಸೇ ಹೇ ವರ್ಮ ಲಾವಿಲ್ಯಾ ನ ಲಗೇ ।।೮೪೨।। ಕೃಪಣ ಜರೀ ದೂರೀ ಜಾಯೇ । ತೋ ಘರೀಚೇ ಠೇವಣೇ ಜೀವೀ ವಾಹೇ । ತೈಸೇ ಮಾಝೇ ಪ್ರೇಮ ಪಾಹೇ । ಜೋ ಹೃದಯೀ ವಾಹೇ ಸರ್ವದಾ ।।೮೪೩।। ಕಾ ವಂಧ್ಯಾ ಗರ್ಭ ಸಂಭವಲ್ಯಾಪಾಠೀ । ಉಲ್ಹಾಸೇ ವಾಢವೀ ಗೋರಟೀ । ತೈಶೀ ಮಾಝ್ಯಾ ಪ್ರೇಮಾಚೀ ಪೋಟೀ । ಆವಡೀಮೋರೀ ಜೈ ಹೋಯ ।।೮೪೪।। ಜೈಸೇ ವಂಧ್ಯಾಗರ್ಭಾಚೇ ಡೋಹಳೇ । ತೈಸೇ ಮಾಝ್ಯಾ ಪ್ರೇಮಾಚೇ ಸೋಹಳೇ । ಪೋಟಾಂತಲೇನಿ ಕಳವಳೇ । ಉಲ್ಹಾಸ ಬಳೇ ಚಢೋವಢೀ ।।೮೪೫।। ಸದೈವ ಜಾಂವಯೀ ಆಲ್ಯಾ ಘರಾ । ಜೇವೀ ಸರ್ವಸ್ವ ವೇಂಚೀ ಸುಂದರಾ । ತೇವೀ ಮಾಝಾ ಕಳವಳಾ ಪುರಾ । ಜ್ಯಾಚ್ಯಾ ಜಿವ್ಹಾರಾ ವೋಸಂಡೇ ।।೮೪೬।। ಬೀಜ ಅಧಿಕಾಧಿಕ ಪೇರಿತಾ । ಉಲ್ಹಾಸ ಕೃಷೀವಳಾಚೇ ಚಿತ್ತಾ । ತೇವೀ ಸರ್ವಸ್ವ ಮಜ ಅರ್ಪಿತಾ । ತೈಶೀ ಉಲ್ಹಾಸತಾ ಜೈ ಹೋಯೇ ।।೮೪೭।। ಸಗುಣ ಸುರೂಪ ಸಮರ್ಥ ಭರ್ತಾ । ನಿಘೋನ ಗೇಲಿಯಾ ತತ್ತ್ವತಾ । ತ್ಯಾಲಾಗೀ ತಳಮಳೀ ಜೈಶೀ ಕಾಂತಾ । ತೈಶೀ ಕಳವಳತಾ ಜೈ ಉರೀ ।।೮೪೮।।

ಈ ಪ್ರಕಾರವಾಗಿ ಒಂದು ಸಾರೆ ಚಿತ್ತವು ಶುದ್ಧವಾಗಿ ನಿರ್ಮಲವಾಯಿತೆಂದರೆ ಅದರಲ್ಲಿ ಯಾವಾಗಲೂ ಬ್ರಹ್ಮವು ಪ್ರಕಾಶಿಸುವುದು. ತದನಂತರ ಅದು ವಿಷಯಾಸಕ್ತವಾಗುವುದಿಲ್ಲ. ವಿರಕ್ತನಾಗಬೇಕೆಂಬ ಇಚ್ಛೆಯು ಇರದಿದ್ದರೂ ಕೂಡ ಅದು ತನ್ನಷ್ಟಕ್ಕೆ ತಾನೇ ವಿರಕ್ತಿಯಾಗುವುದು ।।೮೩೬।। ಭಕ್ತಿಯ ಲೇಶ ಮಾತ್ರವು ಇಷ್ಟೊಂದು ಮಹಾಮಹಿಮೆಯಾಗಿರಲು, ಪೂರ್ಣ ಭಕ್ತಿಯ ಮಹಿಮೆಯು ಯಾರಿಗೆ ತಿಳಿಯಬೇಕು? ಹೇ ಉದ್ಧವಾ, ಈ ಭಕ್ತಿಯ ಮಹಿಮೆಯು ವೇದಶಾಸ್ತ್ರಗಳಿಗೂ ಅತರ್ಕ್ಯವಾಗಿರುವುದು ।।೮೩೭।। ನನ್ನ ಭಕ್ತಿಯು ಅಲಕ್ಷ್ಯ, ಅತರ್ಕ್ಯವಾಗಿರುವುದರಿಂದ ಶಾಸ್ತ್ರಗಳಿಗೂ ಕೂಡ ಇದರ ವಿಷಯಕ್ಕೆ ಏನೂ ಹೇಳಲು ಬರುವುದಿಲ್ಲ. ಅದು ಅಗಾಧವಾಗಿರುವುದರಿಂದ ಎಷ್ಟೇ ಸಾಧನೆಗಳನ್ನು ಮಾಡಿ ದಣಿದುಕೊಂಡರೂ ಅದನ್ನು ತಿಳಿಯಲು ಶಕ್ಯವಾಗುವುದಿಲ್ಲ ।।೮೩೮।। ನನ್ನ ಭಕ್ತಿಯ ಅಂತವು ನನಗೂ ಸಹ ಪರಿಪೂರ್ಣವಾಗಿ ಹತ್ತಿರುವುದಿಲ್ಲ. ಆದ್ದರಿಂದ ನಾನು ಭಕ್ತರ ಆಜ್ಞಾಧಾರಕನಾಗುವೆನು. ಅವರ ಮಾತನ್ನು ನಾನು ಸ್ವಲ್ಪವೂ ಉಲ್ಲಂಘಿಸುವುದಿಲ್ಲ ।।೮೩೯।। ಭಕ್ತರ ಮಹಿಮೆಯು ಹೀಗೆ ಅಪಾರ, ಅಗಾಧವಾಗಿರುವುದು. ಆದ್ದರಿಂದ ನಾನು ಅವರ ಸೇವೆಯನ್ನು ಮಾಡುವೆನು. ನನ್ನ ಭಕ್ತನ ಚರಣ ಚಿನ್ಹೆಯನ್ನು ನಾನು ನನ್ನ ಹೃದಯದ ಮೇಲೆ ಧರಿಸಿರುವೆನು. ಭಕ್ತರ ಚರಣರಜವನ್ನು ನಾನು ಶಿರಸಾ ವಂದಿಸುವೆನು ।।೮೪೦।। ಭಕ್ತನೆಂದು ಹೇಳಿಸಿಕೊಳ್ಳುವುದು ಬಹು ಪ್ರಿಯವೆನಿಸುವುದು. ಆದರೆ ಭಜನೆಯ ಸ್ವರೂಪವು ಬಹಳ ಕಠಿಣವಾಗಿರುವುದು. ಭಕ್ತಿಯ ರಹಸ್ಯವು ಅತ್ಯಂತ ಗೂಢವಾಗಿರುವುದು. ಶ್ರುತಿ, ಸ್ಮೃತಿಗಳಿಗೂ ತಿಳಿಯಲು ಅಶಕ್ಯವಾಗಿರುವುದು ।।೮೪೧।। ಜ್ಞಾನವು ಹೇಳಲಿಕ್ಕೆ ಮಾತ್ರ ಬಹಳ ಸುಲಭವಾಗಿರುವುದು. ಭಕ್ತಿಯ ರಹಸ್ಯವು ಅತ್ಯಂತ ಗಹನವಾಗಿರುವುದು. ಭಕ್ತಿಯಿಂದ ಅಕೃತ್ರಿಮ ಪ್ರೇಮವು ನಿರ್ಮಾಣವಾಗುವುದು. ಈ ಭಕ್ತಿಯ ಮರ್ಮವು ಏನು ಮಾಡಿದರೂ ತಿಳಿಯುವುದೇ ಇಲ್ಲ ।।೮೪೨।। ಕೃಪಣ ಮನುಷ್ಯನು ಎಷ್ಟೇ ದೂರ ಪ್ರವಾಸಕ್ಕೆ ಹೋದರೂ ಸಹ ಆತನ ಮನವು ಮನೆಯಲ್ಲಿರುವ ದ್ರವ್ಯದಲ್ಲಿ ಸಿಲುಕಿಕೊಂಡಿರುವುದು. ಅದರಂತೆ ನನ್ನ ಭಕ್ತರು ಸದಾ ಸರ್ವಕಾಲದಲ್ಲಿ ನನ್ನ ಪ್ರೇಮವನ್ನೇ ಮನದಲ್ಲಿ ಇಟ್ಟುಕೊಂಡಿರುವರು ।।೮೪೩।। ಬಹಳ ವರ್ಷಗಳವರೆಗೆ ಗರ್ಭಧರಿಸದ ಸ್ತ್ರೀಯಳಿಗೆ ಗರ್ಭಧಾರಣೆಯಾಗಲು, ಆಗ ಆ ಸ್ತ್ರೀಯಳು ಅತಿಶಯವಾಗಿ ಆನಂದಿತಳಾಗುವಳು ಮತ್ತು ಅತ್ಯಂತ ಪ್ರೇಮದಿಂದ ತನ್ನ ಗರ್ಭವನ್ನು ಬೆಳೆಯಿಸುತ್ತಿರುವಳು. ಇದರಂತೆಯೇ ನನ್ನ ಭಜನೆಯ ಪ್ರೇಮವು ಭಕ್ತನಿಗೆ ಬಹಳಷ್ಟಿರುವುದು ।।೮೪೪।। ಬಂಜೆಯಾಗಿದ್ದ ಸ್ತ್ರೀಯಳಿಗೆ ಬಯಕೆ ಹತ್ತಲು ಆಗ ಆ ಬಯಕೆಗಳನ್ನು ಅತ್ಯಂತ ಹುರುಪಿನಿಂದ ಪೂರೈಸಲ್ಪಡುವುದು. ಅದರಂತೆ ನನ್ನ ಪ್ರೇಮದ ಉತ್ಸಾಹವನ್ನು ಅತಃಕರಣದಿಂದ ಅತ್ಯಂತ ಉಲ್ಹಾಸದಿಂದ ಹೆಚ್ಚು ಹೆಚ್ಚಾಗಿ ಯಾರು ಪೂರೈಸುವರೋ ।।೮೪೫।। ಅಥವಾ ಐಶ್ವರ್ಯ ಸಂಪನ್ನನಾದ ಅಳಿಯನು ಮನೆಗೆ ಬರಲು ಆಗ ಅತ್ತೆಯು ತನ್ನ ಸರ್ವಸ್ವವನ್ನು ಅಳಿಯನಿಗಾಗಿ ಹೇಗೆ ಖರ್ಚಿಸುವಳೋ, ಅದರಂತೆ ಆ ಯಾವ ನನ್ನ ಭಕ್ತರ ಅಂತಃಕರಣದಲ್ಲಿ ನನ್ನ ವಿಷಯಕ್ಕೆ ಕಳವಳವು ತುಂಬಿ ತುಳುಕುತ್ತಿರುವುದು ।।೮೪೬।। ಒಕ್ಕಲಿಗನು ತನ್ನ ಹೊಲದಲ್ಲಿ ಬೀಜಗಳನ್ನು ಹೆಚ್ಚು ಹೆಚ್ಚಾಗಿ ಬಿತ್ತಿದಂತೆ ಆತನ ಉಲ್ಹಾಸವು ಅಧಿಕವಾಗಿಯೇ ಬೆಳೆಯುತ್ತಿರುವುದು. ಅದರಂತೆ ನನ್ನ ಭಕ್ತರಿಗೆ ನನಗೆ ಸರ್ವಸ್ವವನ್ನು ಅರ್ಪಿಸುವ ಪ್ರಸಂಗದಲ್ಲಿ ಅಧಿಕಾಧಿಕವಾಗಿಯೇ ಉತ್ಸಾಹವು ಉಂಟಾಗುವುದು ।।೮೪೭।। ಗುಣವಾನ, ರೂಪವಾನ ಮತ್ತು ಧನವಾನ ಹೀಗಿರುವ ಪತಿಯು ಒಂದುವೇಳೆ ದೂರದೇಶಕ್ಕೆ ಹೋಗಲು ಆಗ ಆತನ ವಿರಹದಿಂದ ಪತ್ನಿಯು ಹೇಗೆ ತಳಮಳಿಸುತ್ತಿರುವಳೋ, ಅದರಂತೆ ನನ್ನ ಭಕ್ತರ ಅಂತಃಕರಣದಲ್ಲಿ ನನ್ನ ಪ್ರೇಮದ ತಳಮಳವಿರುವುದು ।।೮೪೮।।

ತ್ಯಾ ನಾಂವ ಗಾ ಮಾಝೀ ಭಕ್ತೀ । ಉದ್ಧವಾ ಜಾಣ ನಿಶ್ಚಿತೀ । ಜೇ ಭಕ್ತೀಸೀ ಭುಲೋನಿ ಶ್ರೀಪತೀ । ಭಕ್ತಾಹಾತೀ ಆತುಡಲೋ ॥೨೪೯॥ ಚಢತ್ಯಾ ಆವಡೀಮಾಝೀ ಪ್ರೀತೀ । ತೇಚಿ ಜಾಣ ಪಾ ಮಾಝೀ ಭಕ್ತೀ । ಐಸಾ ಭಕ್ತೀಚಾ ಮಹಿಮಾ ಶ್ರೀಪತೀ । ಸ್ವಯೇ ಉದ್ಧವಾಪ್ರತೀ ಸಾಂಗತ ॥೨೫೦॥ ಆವಡೀ ಧರೋನಿ ಪೋಟೇಸೀ । ದೇವೋ ಸಾಂಗೇ ಉದ್ಧವಾಸೀ । ಮಾಝೀ ಭಕ್ತೀ ತೇ ಜಾಣ ಐಸೀ । ಅಖಂಡ ಜೇಪಾಶೀ ಮೀ ಅಸೇ ॥೨೫೧॥ ಸಂಸಾರತರಣೋಪಾಯೀ । ಹೇಚಿ ಏಕ ಮುಖ್ಯ ಪಾಹೀ । ಮೋಕ್ಷ ಲಾಗೇ ಇಚ್ಯಾ ಪಾಯೀ । ಇತರ ಸಾಧನೇ ಕಾಯೀ ಬಾಪುಡೀ ॥೨೫೨॥ ಮೀ ತಂವ ಅಜಿತ ಲೋಕೀ ತಿಹೀ । ತ್ಯಾ ಮಜ ಭಕ್ತಿಪ್ರತಾಪೇ ಪಾಹೀ । ಜಿಂತೋನಿಯಾ ಠಾಯೀಚ್ಯಾಠಾಯೀ । ಭಾವಬಳೇ ಪಾಹೀ ಸ್ವವಶ ಕೇಲೋ ॥೨೫೩॥ ಯಾಲಾಗೀ ಸರ್ವ ವಿಜಯಾಂಚೇ ಮಾಥಾ । ಮಾಝೀ ಭಕ್ತೀಚಿ ಗಾ ಸರ್ವಥಾ । ಐಕ ಪಾ ತೇಹೀ ಕಥಾ । ತುಜ ಮೀ ತತ್ತ್ವತಾ ಸಾಂಗೇನ ॥೨೫೪॥

ನ ಸಾಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಉದ್ಧವ । ನ ಸ್ವಾಧ್ಯಾಯಸ್ತಪಸ್ತ್ಯಾಗೋ ಯಥಾ ಭಕ್ತಿರ್ಮಮೋರ್ಜಿತಾ ॥೨೦॥

ಅರ್ಥ :- ಪ್ರಿಯ ಉದ್ಧವಾ, ನನ್ನ ಭಕ್ತರು ನನಗೆ ಸಲ್ಲಿಸುವ ಪರಿಶುದ್ಧ ಸೇವೆಯು ನನ್ನನ್ನು ಅವರ ಅಧೀನನ್ನಾಗಿ ಮಾಡುವುದು. ಹಠಯೋಗ, ಸಾಂಖ್ಯ ಸಿದ್ಧಾಂತ, ಪುಣ್ಯಕಾರ್ಯ, ವೇದಾಧ್ಯಯನ, ವ್ರತ ಅಥವಾ ಸನ್ಯಾಸದಿಂದ ನನ್ನನ್ನು ನಿಯಂತ್ರಿಸದಾಗುವುದಿಲ್ಲ.

ಸಾಂಖ್ಯ ಜೇ ಕಾ ನಿತ್ಯಾನಿತ್ಯ । ಕರ್ಮ ಜೇ ಕಾ ನಿತ್ಯನೈಮಿತ್ಯ । ಅಷ್ಟಾಂಗಯೋಗ ಸಮಸ್ತ । ನವ್ಹತೀ ಸಮರ್ಥ ಮತ್ಪ್ರಾಪ್ತೀ ॥೨೫೫॥ ಸ್ವಾಧ್ಯಾಯ ಜೇ ವೇದಾಧ್ಯಯನ । ತಪ ಜೇ ವಾತಾಂಬುಪರ್ಣಾಶನ । ತ್ಯಾಗ ಜೋ ಸನ್ಯಾಸಗ್ರಹಣ । ಮಾಝೇ ಭಕ್ತೀವಿಣ ಬಾಪುಡೀ ॥೨೫೬॥ ಜೈಶೀ ನಾಕೇವೀಣ ಬರವ । ಕಾ ಶಿರೇವೀಣ ಅವಯವ । ಭರ್ತಾರೇವೀಣ ಅಹೇವ । ಜಾಣ ಪಾ ತೋ ಸರ್ವ ವಿಟಂಬೂ ॥೨೫೭॥ ಜೈಸೇ ಮಾಝೇ ಭಕ್ತೀವಿಣ । ಸಕಳ ಸಾಧನೇ ಬಾಪುಡೀ ಜಾಣ । ಮಜ ಪಾವಾವಯಾ ಸಮರ್ಥಪಣ । ನಾಹೀ ಆಂಗವಣ ಸಮಸ್ತಾ ॥೨೫೮॥ ತೈಶೀ ನವ್ಹೇ ಮಾಝೀ ಭಕ್ತೀ । ಚಢತೀ ವಾಢವೂನ ಮಾಝೀ ಪ್ರೀತೀ । ತತ್ಕಾಳ ಕರೀ ಮಾಝೀ ಪ್ರಾಪ್ತೀ । ನವ್ಹೇ ಪಂಗಿಸ್ತೀ ಆಣಿಕಾಚೀ ॥೨೪೯॥ ಜೇವ್ಹಾ ಉಪಜಲೀ ಮಾಝೀ ಭಕ್ತೀ । ತೇವ್ಹಾಂಚ ಝಾಲೀ ಮಾಝೀ ಪ್ರಾಪ್ತೀ । ಹೇ ಪುನಃಪುನ್ಹಾ ಉದ್ಧವಾಪ್ರತೀ । ಹರಿಖೇ ಶ್ರೀಪತೀ ಸಾಂಗತ ॥೨೬೦॥ ರತ್ನಾಸವೇ ಜೈಶೀ ದೀಪ್ತೀ । ಅರುಣಾಸವೇ ಜೇವೀ ಗಭಸ್ತೀ । ತೇವೀ ಭಕ್ತೀಪಾಶೀ ಮೀ ಶ್ರೀಪತೀ । ಅಸೇ ನಿಶ್ಚಿತೀ ಉದ್ಧವಾ ॥೨೬೧॥

ಹೇ ಉದ್ಧವಾ, ಇದರ ನಾಮವೇ ನಿಜವಾದ ಭಕ್ತಿಯಾಗಿರುವುದು. ಇದನ್ನು ನೀನು ನಿಶ್ಚಿತವಾಗಿ ತಿಳಿ. ಈ ಯಾವ ಭಕ್ತಿಗೆ ನಾನು ಭುಲಾಯಿಸಿ ಲಕ್ಷ್ಮಿಕಾಂತನಾದ ನಾನು ಭಕ್ತರ ಕೈಸೇರಿರುವೆನು ॥೨೪೯॥ ನಿರಪೇಕ್ಷ ಪ್ರೇಮದಿಂದ ನನ್ನ ಅಧಿಕಾಧಿಕವಾಗಿ ಪ್ರೇಮವು ನಿರ್ಮಾಣವಾಗುವುದೇ ನನ್ನ ನಿಜವಾದ ಭಕ್ತಿಯಾಗಿರುವುದು. ಈ ಪ್ರಕಾರವಾಗಿ ಭಕ್ತಿಯ ಮಹಿಮೆಯನ್ನು ಸ್ವತಃ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು ॥೨೫೦॥ ಯಾರಲ್ಲಿ ನಾನು ಅಖಂಡವಾಗಿ ಇರುವೆನೋ, ಅದೂ ಕೂಡ ಭಕ್ತಿಯೇ ಆಗಿರುವುದು. ಹೀಗೆಂದು ಶ್ರೀಕೃಷ್ಣನು ಉದ್ಧವನನ್ನು ಹೃದಯಕ್ಕೆ ಅಪ್ಪಿಕೊಂಡು ಹೇಳಿದನು ॥೨೫೧॥ ಸಂಸಾರ ಸಾಗರದಿಂದ ಪಾರಾಗಲು ಭಕ್ತಿಯೇ ಮುಖ್ಯ ಉಪಾಯವಾಗಿರುವುದು. ಮೋಕ್ಷವೂ ಕೂಡ ಈ ಭಕ್ತಿಯ ಕಾಲು ಬೀಳುವುದು. ಅಂದಮೇಲೆ ಇತರ ಸಾಧನೆಗಳ ಯಾವ ಕಥೆ? ॥೨೫೨॥ ನಾನು ಮೂರು ಲೋಕಗಳಿಗೂ ಅಂಜಿಕ್ಯನಾಗಿರುವೆನು. ಹೀಗಿರುವ ನನ್ನನ್ನು ಭಕ್ತರ ಪ್ರಭಾವವು ಗೆದ್ದುಕೊಂಡಿತು. ಭಕ್ತರು ತಮ್ಮ ಭಕ್ತಿಯ ಬಲದಿಂದ ನನ್ನನ್ನು ವಶ ಮಾಡಿಕೊಂಡರು ॥೨೫೩॥ ಆದ್ದರಿಂದ ಸಂಸಾರದಲ್ಲಿ ಗಳಿಸಿರುವ ಸರ್ವ ಪ್ರಕಾರದ ವಿಜಯಗಳಲ್ಲಿ ಭಕ್ತಿಯೇ ಸರ್ವಶ್ರೇಷ್ಠವಾಗಿರುವುದು. ಈ ಕಥೆಯನ್ನು ಈಗ ನಿನಗೆ ಹೇಳುವೆನು, ಅದನ್ನು ಕೇಳು ॥೨೫೪॥

ಸಾಂಖ್ಯಶಾಸ್ತ್ರದ ನಿತ್ಯಾನಿತ್ಯ-ವಿವೇಕ, ಮೀಮಾಂಸಕರ ನಿತ್ಯ ನೈಮಿತ್ತಿಕ ಕರ್ಮ, ಯೋಗಿಗಳ ಅಷ್ಟಾಂಗ ಯೋಗ, ಇವುಗಳೂ ಕೂಡ ನನ್ನ ಪ್ರಾಪ್ತಿಯನ್ನು ಮಾಡಿಕೊಡುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ ॥೨೫೫॥ ಸ್ವಾಧ್ಯಾಯವೆಂದರೆ ವೇದಗಳ ಅಧ್ಯಯನ ಅಥವಾ ವಾಯು, ಜಲ, ತರಗೆಲೆ ಭಕ್ಷಣಮಾಡಿ ಮಾಡುವ ತಪವು, ಅಥವಾ ಸನ್ಯಾಸವನ್ನು ಸ್ವೀಕರಿಸುವುದು ಇತ್ಯಾದಿ ಯಾವ ತ್ಯಾಗವು, ಈ ಎಲ್ಲ ಸಾಧನೆಗಳು ನನ್ನ ಭಕ್ತಿಗಿಂತಲೂ ದೀನವಾಗಿರುವುವು ॥೨೫೬॥ ಮೂಗಿಲ್ಲದ ಸೌಂದರ್ಯದಂತೆ, ಮಸ್ತಕವಿಲ್ಲದ ಸರ್ವ ಅವಯವಗಳಂತೆ, ಅಥವಾ ಪತಿ ಇಲ್ಲದ ಸ್ತ್ರೀಯಳ ಸೌಭಾಗ್ಯದಂತೆ, ಈ ಎಲ್ಲವೂ ಒಂದು ಪ್ರಕಾರದ ಅವಹೇಳನವಾಗಿರುವುದು, ಹೀಗೆ ತಿಳಿ ॥೨೫೭॥ ಇದೇ ರೀತಿಯಾಗಿ ನನ್ನ ಭಕ್ತಿಯ ಹೊರತಾಗಿ ಈ ಸರ್ವ ಸಾಧನೆಗಳು ಬಡಕಲವಾಗಿರುವುವು. ನನ್ನನ್ನು ಪ್ರಾಪ್ತಿ ಮಾಡಿಕೊಳ್ಳುವ ಸಾಮರ್ಥ್ಯವು ಅವುಗಳ ಅಂಗದಲ್ಲಿ ಇರುವುದಿಲ್ಲ ॥೨೫೮॥ ಆದರೆ ನನ್ನ ಭಕ್ತಿಯು ಮಾತ್ರ ಹಾಗಿರುವುದಿಲ್ಲ. ಅದು ನನ್ನ ಪ್ರೇಮವನ್ನು ಅಧಿಕಾಧಿಕವಾಗಿ ಬೆಳೆಸುತ್ತ ತತ್ಕಾಲದಲ್ಲಿ ನನ್ನ ಪ್ರಾಪ್ತಿಯನ್ನು ಮಾಡಿಕೊಡುವುದು. ಇದು ಇತರ ಯಾವುದರ ಮೇಲೆಯೂ ಅವಲಂಬಿಸಿಕೊಂಡಿರುವುದಿಲ್ಲ ॥೨೪೯॥ ನನ್ನ ಭಕ್ತಿಯು ಹುಟ್ಟಿಕೊಳ್ಳುವುದೊಂದೇ ತಡ, ಕೂಡಲೇ ನನ್ನ ಪ್ರಾಪ್ತಿಯನ್ನು ಮಾಡಿಕೊಡುವುದು. ಹೀಗೆ ಶ್ರೀಕೃಷ್ಣನು ಉದ್ಧವನಿಗೆ ಪುನಃ ಪುನಃ ಹೇಳಿದನು ॥೨೬೦॥ ಹೇ ಉದ್ಧವಾ, ರತ್ನದೊಂದಿಗೆ ಯಾವ ಪ್ರಕಾರವಾಗಿ ಅದರ ತೇಜವು ಇರುವುದೋ, ಅರುಣೋದಯದೊಂದಿಗೆ ಯಾವ ಪ್ರಕಾರವಾಗಿ ಸೂರ್ಯನಿರುವನೋ, ಅದರಂತೆಯೇ ನನ್ನ ಭಕ್ತಿಯ ಸಂಗಡ ಲಕ್ಷ್ಮೀಪತಿಯು ಇರುತ್ತಿರುವನು ॥೨೬೧॥

ತೇ ಭಕ್ತಿ ಲಾಗೇ ಜ್ಯಾಚಾ ಚಿತ್ತೀ । ತೈ ಮೀ ಸಾಂಪಡಲೋ ತ್ಯಾಚಾ ಹಾತೀ । ಆಣಿಕಾ ಸಾಧನಾಂಚೇ ಪ್ರಾಪ್ತೀ । ವಿನಾಭಕ್ತೀ ಮೀ ನಾತುಡೇ ॥೧೬೨॥

ಭಕ್ತ್ಯಾಹಮೇಕಯಾ ಗ್ರಾಹ್ಯಃ ಶ್ರದ್ಧಯಾತ್ಮಾ ಪ್ರಿಯಃ ಸತಾಮ್ । ಭಕ್ತಿಃ ಪುನಾತಿ ಮನ್ನಿಷ್ಠಾ ಶ್ವಪಾಕಾನಪಿ ಸಂಭವಾತ್ ॥೨೧॥

ಅರ್ಥ:- ನಾನು ಸಂತರ ಪ್ರಿಯತಮ ಆತ್ಮನಾಗಿರುವೆನು. ನಾನು ಅನನ್ಯ ಶ್ರದ್ಧೆ ಮತ್ತು ಅನನ್ಯ ಭಕ್ತಿಯಿಂದ ಪ್ರಾಪ್ತನಾಗುವೆನು. ನನಗೆ ಪ್ರಾಪ್ತಿ ಮಾಡಿಕೊಳ್ಳುವುದಕ್ಕೆ ಇದೊಂದೇ ಉಪಾಯವಾಗಿರುವುದು. ನನ್ನ ಅನನ್ಯ ಭಕ್ತಿಯು ಜಾತಿದೋಷಗಳಿಂದ ಮುಕ್ತ ಮಾಡುವುದು.

ಇತರ ಸಾಧನೇ ವ್ಯುತ್ಪತ್ತೀ । ದೂರೀ ಸಾಂಡೂನಿ ಪರತೀ । ಶ್ರದ್ಧಾಯುಕ್ತ ಮಾಝೀ ಭಕ್ತೀ । ಧರಿಲ್ಯಾ ಹಾತೀ ಮೀ ಲಾಭೇ ॥೧೬೩॥ ನಿರ್ವಿಕಲ್ಪ ನಿಃಸಂದೇಹೋ । ಸರ್ವ ಭೂತೀ ಭಗವದ್ಭಾವೋ । ಹಾ ಭಕ್ತೀಚಾ ನಿಜನಿರ್ವಾಹೋ । ಭಜನ ಭಾವೋ ಯಾ ನಾಂವ ॥೧೬೪॥ ಹೋಊನಿ ಸರ್ವಾರ್ಥೀ ಉದಾಸೂ । ಮಾಝ್ಯಾ ಭಜನಾಚಾ ಉಲ್ಹಾಸೂ । ನ ಧರೀ ಮೋಕ್ಷಾಚಾ ಅಭಿಲಾಷೂ । ಏವಢಾ ವಿಶ್ವಾಸೂ ಮದ್ಭಜನೀ ॥೧೬೫॥ ತೇಥೇ ತರೇ ಕೀ ನ ತರೇ । ಹಾ ವಿಕಲ್ಪು ಕೋಠೇ ಉರೇ । ಮಾಝೇನಿ ಭಜನೇ ನಿರ್ಧಾರೇ । ಕೇಲೇ ಪಾಠಿಮೋರೇ ವಿಧಿವಾದ ॥೧೬೬॥ ಏವಢಾ ವಿಶ್ವಾಸೀ ಜ್ಯಾಚಾ ಭಾವೋ । ನ ಧರೀ ಭಕ್ತೀವೇಗಳಾ ಉಪಾವೋ । ಆಮ್ಹಾ ತ್ಯಾಚೇನಿ ಜೀವೇ ಜೀವೋ । ತೋ ಆತ್ಮಾ ಪಹಾ ಹೋ ಪೈ ಮಾಝಾ ॥೧೬೭॥ ಜೋ ಮೀ ಜ್ಞಾನಿಯಾಂಚಾ ಆತ್ಮಾ । ಭಕ್ತಾಚಾ ಪ್ರಿಯ ಪರಮಾತ್ಮಾ । ಶಾಸ್ತ್ರೀ ಪ್ರತಿಪಾದಿತೀ ಪುರುಷೋತ್ತಮಾ । ತೋ ಮೀ ಸಾಉಮಾ ತ್ಯಾ ಧಾಂವೇ ॥೧೬೮॥ ಮಜ ಆವಡೇ ಅನನ್ಯ ಭಕ್ತೀ । ಮೀ ತ್ಯಾಂಚಾ ಅಂಕಿತ ನಿಶ್ಚಿತೀ । ತ್ಯಾಂಚೇನಿ ಮಾಝೀ ತ್ರೈಲೋಕೀ ಖ್ಯಾತೀ । ಮಜ ಮಹಂತೀ ತ್ಯಾಂಚೇನಿ ॥೧೬೯॥ ತ್ಯಾಂಚೇನಿ ಮಜ ಖಾಣೇ ಜೇವಣೇ । ತ್ಯಾಂಚೇನಿ ಮಜ ಲೇಣೇ ನೇಸಣೇ । ತ್ಯಾಂಚೇನಿ ಜೀವೇ ಪ್ರಾಣೇ । ಮ್ಯಾ ವರ್ತಣೇ ಸರ್ವತ್ರ ॥೧೭೦॥ ಮಾಝೀ ಗಾಂಠೀ ಕಾಂಹೀ ನಾಹೀ । ಭಕ್ತೀ ಸರ್ವಸ್ವೇ ವೇಚೂನಿ ಪಾಹೀ ।ನಾನಾ ಉಪಚಾರಉಪಾಯೀ । ಮಹತ್ತ್ವ ತಿಹೀ ಮಜ ದಿಧಲೇ ॥೧೭೧॥ ಮಜ ಅಚಕ್ಷೂಸೀ ದಿಧಲೇ ಡೋಳೇ । ಅಶ್ರೋತ್ರಾ ಶ್ರವಣ ದಿಧಲೇ । ಮಜ ಅಮುಖಾ ತಿಂಹೀಮುಖ ಕೇಲೇ । ತ್ಯಾಂಚೇನಿ ಬೋಲೇ ಮೀ ಬೋಲಕಾ ॥೧೭೨॥

ಈ ಭಕ್ತಿಯು ಯಾರ ಹೃದಯದಲ್ಲಿ ಕೂಡಿಕೊಂಡಿರುವುದೋ, ಅವರ ಕೈಗಳಲ್ಲಿ ನಾನು ಸಿಕ್ಕಿಬೀಳುವೆನು. ಭಕ್ತಿಯನ್ನು ಬಿಟ್ಟುಕೊಟ್ಟು ಆಚರಿಸಿದ ಯಾವುದೇ ಸಾಧನೆಗಳಿಂದ ನನ್ನ ಪ್ರಾಪ್ತಿಯು ಆಗಲು ಶಕ್ಯವಿಲ್ಲ ॥೧೬೨॥

ಶಾಸ್ತ್ರಗಳ ವ್ಯುತ್ಪತ್ತಿ ಮೊದಲುಮಾಡಿ ಸರ್ವ ಸಾಧನೆಗಳನ್ನು ದೂರ ಒಗೆದು ದೃಢವಾದ ಶ್ರದ್ಧೆಯಿಂದ ನನ್ನ ಭಕ್ತಿಯನ್ನು ಮಾಡಿದರೆ ನನ್ನ ಪ್ರಾಪ್ತಿಯಾಗುವುದು ॥೧೬೩॥ ಮನದಲ್ಲಿ ಯಾವುದೇ ಪ್ರಕಾರದ ವಿಕಲ್ಪಗಳನ್ನು ತಾರದೇ ಹಾಗೂ ಯಾವುದೊಂದೂ ಸಂಶಯವನ್ನು ಹಿಡಿಯದೇ ಸರ್ವ ಪ್ರಾಣಿಮಾತ್ರರಲ್ಲಿ ಭಗವತ್‌ಸ್ವರೂಪದ ಭಾವನೆಯನ್ನು ಧರಿಸುವುದೇ ನನ್ನ ಭಕ್ತಿಯ ಮುಖ್ಯ ಲಕ್ಷಣವಾಗಿರುವುದು. ಇದಕ್ಕೆ ಮಾತ್ರ ಭಜನೆಯ ಭಾವನೆ ಎಂದು ಹೀಗೆ ಹೇಳುವರು ॥೧೬೪॥ ಇತರ ಸರ್ವ ವಿಷಯಗಳಲ್ಲಿ ಉದಾಸರಾಗಿ, ಮೋಕ್ಷವನ್ನೂ ಕೂಡ ಮನದಲ್ಲಿ ಬಯಸದೇ ನನ್ನ ಭಜನೆಯಲ್ಲಿ ಆನಂದವಾಗುತ್ತಿರಬೇಕು. ಇಷ್ಟೊಂದು ನನ್ನ ಭಜನೆಯಲ್ಲಿ ದೃಢವಾದ ಶ್ರದ್ಧೆಯು ಇರಬೇಕು ॥೧೬೫॥ ಹೀಗಾದಮೇಲೆ ನಾನು ಉದ್ಧಾರನಾಗುವೆನೋ, ಅಥವಾ ಇಲ್ಲವೋ ಎಂಬ ವಿಕಲ್ಪವು ಉಳಿಯುವುದಿಲ್ಲ. ನನ್ನ ಪ್ರೇಮಮಯ ಭಜನೆಯಿಂದ ವಿಧಿನಿಷೇಧಗಳ ಸರ್ವ ಪ್ರಕಾರದ ವಾದಗಳನ್ನು ಇಲ್ಲದಾಗಿ ಮಾಡಿರುವರು ॥೧೬೬॥ ಇಷ್ಟೊಂದು ಪರಮ ಶ್ರದ್ಧೆಯಿಂದ ಯಾರು ನನ್ನ ಭಕ್ತಿಯನ್ನು ಮಾಡುವರೋ, ಅವರು ಈ ಭಕ್ತಿಯ ಹೊರತಾದ ಬೇರೆ ಯಾವ ಉಪಾಯವನ್ನೂ ತಿಳಿದಿರುವುದಿಲ್ಲ. ಇವರ ಜೀವನದಿಂದ ನಾನು ಜೀವಂತನಾಗಿರುವೆನು. ಅವರು ನನ್ನ ಆತ್ಮವೇ ಆಗಿರುವರು ॥೧೬೭॥ ಜ್ಞಾನೀ ಜನರ ಆತ್ಮನಾಗಿರುವ ನಾನು ಭಕ್ತರ ಪ್ರಿಯ ಪರಮಾತ್ಮನಾಗಿರುವೆನು. ಶಾಸ್ತ್ರಗಳು ನನಗೆ ಪುರುಷೋತ್ತಮನೆಂದು ವರ್ಣಿಸಿರುವುವು. ಹೀಗಿರುವ ನಾನು ಭಕ್ತರಿಗಾಗಿ ಧಾವಿಸಿ ಅವರ ಎದುರಿಗೆ ಹೋಗುವೆನು ॥೧೬೮॥ ನನಗೆ ಅನನ್ಯ ಭಕ್ತಿಯು ಅತ್ಯಂತ ಪ್ರಿಯವಾಗುವುದು. ಆದ್ದರಿಂದಲೇ ನಾನು ಭಕ್ತರ ಆಧೀನನಾಗಿರುವೆನು. ಇವರಿಂದಲೇ ನನ್ನ ಕೀರ್ತಿಯು ತ್ರಿಭುವನದಲ್ಲಿರುವುದು. ಇವರಿಂದಲೇ ನನಗೆ ಮಹತ್ವವು ಬಂದಿರುವುದು ॥೧೬೯॥ ಇವರಿಂದ ನನಗೆ ತಿನ್ನಲು ಉಣ್ಣಲು ಸಿಗುವುದು. ಇವರಿಂದಲೇ ನನಗೆ ಭಿನ್ನ ಭಿನ್ನ ಪ್ರಕಾರಗಳ ಅಲಂಕಾರಗಳನ್ನು ಧರಿಸಲು ದೊರೆಯುವುದು. ಉತ್ತಮ ವಸ್ತ್ರಗಳನ್ನು ತೊಡಲು ಸಿಗುವುದು. ಇವರ ಪ್ರಾಣದ ಬಲದಿಂದ ನಾನು ಸರ್ವತ್ರವೂ ಸಂಚಾರ ಮಾಡುವೆನು ॥೧೭೦॥ ನನ್ನ ಹತ್ತಿರ ಏನೂ ಇರುವುದಿಲ್ಲ. ಆದರೆ ನನ್ನ ಭಕ್ತರು ತಮ್ಮ ಸರ್ವಸ್ವವನ್ನು ಖರ್ಚು ಮಾಡಿ ನಾನಾ ಪ್ರಕಾರದ ಉಪಕಾರವನ್ನು ನಿರ್ಮಾಣಗೊಳಿಸಿ ನನಗೆ ಮಹತ್ವವನ್ನು ಪ್ರಾಪ್ತಮಾಡಿಕೊಟ್ಟಿರುವರು ॥೧೭೧॥ ನನಗೆ ಕಣ್ಣುಗಳಿರಲಿಲ್ಲ. ಭಕ್ತರು ನನಗೆ ಕಣ್ಣುಗಳನ್ನು ಕೊಟ್ಟರು. ನನಗೆ ಕಿವಿಗಳಿರಲಿಲ್ಲ. ಭಕ್ತರೇ ನನಗೆ ಕಿವಿಗಳನ್ನು ಕೊಟ್ಟರು. ನಾನು ಮುಖರಹಿತನಾಗಿದ್ದೆನು. ಆದರೆ ಭಕ್ತರು ನನಗೆ ಮುಖವನ್ನು ಕೊಟ್ಟರು ಮತ್ತು ಅವರ ವಾಣಿಯಿಂದಲೇ ನಾನು ಮಾತನಾಡುತ್ತಿರುವೆನು ॥೧೭೨॥

ಮಜ ತ್ಯಾಂಚೇನಿ ಗಮನಾಗಮನ । ತ್ಯಾಂಚೇನಿ ಅವಯವ ಅಳಂಕರಣ । ತಾಂಚೇನಿ ಮಜ ನೇಮಸ್ತ ಸ್ಥಾನ । ಮಜ ಸಮರ್ಥಪಣ ತ್ಯಾಂಚೇನಿ ।೨೭೩॥ ಮಜ ನಾಮರೂಪ ತಿಹೀ ಕರಣೇ । ಮಜ ಪವಿತ್ರತಾ ತ್ಯಾಂಚೇನಿ ಗುಣೇ । ಮಜ ವೈಕುಂಠೀಚೇ ಠಾಣೇ । ಭಕ್ತೀ ಅಚಳಪಣೇ ದೀಧಲೇ ।೨೭೪॥ ಯೇಥವರೀ ನಿಜಭಕ್ತಾಂಸೀ । ಮೀ ವಶ್ಯ ಝಾಲೋ ಭಕ್ತಿಪಾಶೀ । ಯಾಲಾಗೀ ಅಹರ್ನಿಶೀ । ಮೀ ಭಕ್ತಾಪಾಶೀ ತಿಷ್ಠತೂ ।೨೭೫॥ ಮೀ ಅಜನ್ಮಾ ತ್ಯಾಂಚೇನಿ ಜನ್ಮ ಧರೀ । ಮೀ ಅಕರ್ಮಾ ತ್ಯಾಂಚೇನಿ ಕರ್ಮ ಕರೀ । ತ್ಯಾಂಚೇನಿ ಬೋಲೇ ಉದ್ಧರೀ । ನಾಮಮಾತ್ರೇ ಮಹಾಪಾಪಿಯಾ ।೨೭೬॥ ನಾರದವಚನಾಸಾಠೀ । ವಾಲ್ಮೀಕಿ ಪರಮ ಪಾಪೀ ಸೃಷ್ಟೀ । ಮ್ಯಾ ವಂದ್ಯ ಕೇಲಾ ವೈಕುಂಠೀ । ನಾಮಪರಿಪಾಟೀ ಪವಿತ್ರತ್ವೇ ।೨೭೭॥ ಯೇಥವರೀ ಭಕ್ತೀಚೀ ಸತ್ತಾ । ಮಜವರೀ ಚಾಲೇ ತತ್ತ್ವತಾ । ಭಕ್ತೀವೇಗಳಾ ಸರ್ವಥಾ । ಮೀ ನ ಯೇ ಹಾತಾ ಕೋಣಾಚೇ।೨೭೮॥ ಭಕ್ತಾಂಚ್ಯಾ ಉಪಕಾರತಾ । ಮೀ ಥೋರ ದಾಟಲೋ ತತ್ತ್ವತಾ । ನವ್ಹೇಚಿ ಪ್ರತ್ಯುಪಕಾರತಾ । ಆಧೀನ ಸರ್ವಥಾ ಯಾಲಾಗೀ ।೨೭೯॥ ತ್ಯಾಲಾಗೀ ವ್ಹಾವಯಾ ಉತರಾಯೀ । ಮಾಝೀ ಗಾಂಠೀ ಕಾಂಹೀಂಚ ನಾಹೀ । ಲಟಕುಫಟಕು ದೀಧಲೇ ಕಾಂಹೀ । ತೇ ಹಳೂಚಿ ಪಾಹೀ ಸಾಂಗೇನ ।೨೮೦॥ ಭಕ್ತ ಮಾಝೇನಿ ಸನಾಥ । ಮಾಝೇನಿ ಝಾಲೇ ತೇ ಕೃತಕೃತ್ಯ । ಮಾಝೇನಿ ಆನಂದೇ ತೇ ಸದಾ ತೃಪ್ತ । ವೋಸಂಡತ ನಿಜಬೋಧೇ ।೨೮೧॥ ಮಾಝೇನಿ ಬಳೇ ಜಗಜೇಠೀ । ಘಾಯೇವೀಣ ಭೇದಿಲೇ ಸೃಷ್ಟೀ । ಮಾಝೇನಿ ಬಳೇ ತ್ಯಾಂಚೇ ದೃಷ್ಟೀ । ಸಂಮುಖ ನುಠೀ ಕಳಿಕಾಳ ।೨೮೨॥ ಮಾಝೇನಿ ನ ಮಾತೀ ಲೋಕೀ ತಿಹೀ । ಮಾಝೇನಿ ತೇ ದೇಹೀ ವಿದೇಹೀ । ಮಾಝೇನಿ ಬಳೇ ಪಾಹೀ । ಪ್ರಳಯಕಾಳ ತಿಹೀ ಪ್ರಾಶಿಲಾ ।೨೮೩॥ ಮಾಝೇನಿ ಬಳೇ ಜಾಣ । ವಿಭಾಂಡಿಲೇ ಜನ್ಮ ಮರಣ । ಮಾಝೇ ಕರೋನಿಯಾ ಭಜನ । ಬ್ರಹ್ಮ ಸನಾತನ ತೇ ಝಾಲೇ ।೨೮೪॥ ಹೇಹೀ ನಾಹೀ ಮ್ಯಾ ದೀಧಲೇ । ಭಜನಬಳೇ ತಿಹೀ ನೇಲೇ । ತ್ಯಾಂಸೀ ಮಾಝೇ ಕಾಂಹೀ ನ ಚಲೇ । ಸರ್ವಸ್ವ ಲುಟಿಲೇ ನಿಜಭಕ್ತೀ ।೨೮೫॥ ಭಕ್ತೀ ಭಜನಭಾವಬಳೇ । ಅಜಿತಾ ಮಾತೇ ತಿಹೀ ಜಿಂಕಿಲೇ । ಜಿಂಕೋನಿ ಆಪಣ್ಯಾ ವಶ್ಯ ಕೇಲೇ । ಮಾಝೇ ನಿಜಪದ ನೇಲೇ ನಿಜಭಕ್ತೀ ।೨೮೬॥

ಭಕ್ತರಿಂದಲೇನನಗೆ ಬರುವುದು, ಹೋಗುವುದು ನಡೆದಿದೆ. ಇವರಿಂದಲೇ ನನಗೆ ಅವಯವಗಳು ಪ್ರಾಪ್ತವಾಗಿರುವುದು ಮತ್ತು ಇವರಿಂದಲೇ ನಾನು ಅಲಂಕಾರಗಳನ್ನು ಧರಿಸುವೆನು. ಇವರಿಂದ ನನಗೆ ನಿಯಮಿತ ಸ್ಥಾನವು ಪ್ರಾಪ್ತವಾಗಿರುವುದು. ಇವರಿಂದಲೇ ನನಗೆ ಸಾಮರ್ಥ್ಯವು ಪ್ರಾಪ್ತವಾಗಿರುವುದು ।೨೭೩॥ ನನ್ನ ನಾಮ, ರೂಪವನ್ನು ಇವರೇ ಸಿದ್ಧಗೊಳಿಸಿರುವರು. ಇವರ ಗುಣಗಳಿಂದಲೇ ನನಗೆ ಪವಿತ್ರತೆಯು ಪ್ರಾಪ್ತವಾಗಿರುವುದು. ಭಕ್ತರೇ ನನಗೆ ವೈಕುಂಠದ ಅಢಳಪದವಿಯನ್ನು ಕೊಟ್ಟಿರುವರು ।೨೭೪॥ ಈ ಪ್ರಕಾರವಾಗಿ ಭಕ್ತರಿಗೆ ನಾನು ಅವರ ಭಕ್ತಿಯಿಂದಲೇ ಅವರಿಗೆ ವಶನಾಗಿರುವೆನು. ಆದ್ದರಿಂದ ನಾನು ಹಗಲು ರಾತ್ರಿ ಭಕ್ತರಲ್ಲಿ ನಿಂತುಕೊಂಡಿರುವೆನು ।೨೭೫॥ ನಾನು ಜನ್ಮರಹಿತನಾಗಿದ್ದರೂ ಕೂಡ ಭಕ್ತರಿಗಾಗಿಯೇ ಜನ್ಮಗಳನ್ನು ಧರಿಸುತ್ತಿರುವೆನು. ನಾನು ಕರ್ಮರಹಿತನಾಗಿದ್ದರೂ ಕೂಡ ಭಕ್ತರಿಗಾಗಿ ಕರ್ಮರತನಾಗುತ್ತಿರುವೆನು. ಇವರ ಶಬ್ದಕ್ಕಾಗಿಯೇ ಕೇವಲ ನಾಮಸ್ಮರಣೆಯಿಂದ ಮಹಾಪಾತಕಿ ಜನರ ಉದ್ಧಾರವನ್ನು ಮಾಡುವೆನು ।೨೭೬॥ ವಾಲ್ಮೀಕಿಯು ಮಹಾ ಪಾತಕಿಯಾಗಿದ್ದನು. ಆದರೆ ನಾರದರ ಮಾತಿನಂತೆ ನಾನು ಆತನಿಗೆ ನಾಮಜಪದ ಪವಿತ್ರತೆಯಿಂದ ವೈಕುಂಠದಲ್ಲಿ ವಂದ್ಯನಾಗಿ ಮಾಡಿದೆನು ।೨೭೭॥ ಭಕ್ತರ ಸತ್ತೆಯು ನನ್ನಮೇಲೆ ಈ ರೀತಿಯಾಗಿ ನಡೆಯುತ್ತಿರುವುದು. ಭಕ್ತಿ ಇಲ್ಲದೇ ನಾನು ಯಾರ ಕೈಗೂ ಸಿಗಲಾರೆನು ।೨೭೮॥ ಭಕ್ತರ ಉಪಕಾರದಿಂದ ನಾನು ನಿಜವಾಗಿಯೂ ಬಹಳಷ್ಟು ಬಾಗಿರುವೆನು. ಅವರ ಉಪಕಾರವನ್ನು ತೀರಿಸಲು ನನಗೆ ಬಾರದಂತಾಗಿದೆ. ಆದ್ದರಿಂದಲೇ ನಾನು ಅವರ ಅಧೀನನಾಗಿರುವೆನು ।೨೭೯॥ ಭಕ್ತರ ಉಪಕಾರವನ್ನು ತೀರಿಸಲು ನನ್ನ ಹತ್ತಿರ ಏನೂ ಇರುವುದಿಲ್ಲ. ಹೀಗಿದ್ದರೂ ಅವರಿಗೆ ಹರಕು ಮುರಕು ಅಲ್ಪವಾಗಿ ಏನೋ ಕೊಟ್ಟಿರುವೆನು. ಅದನ್ನೂ ಕೂಡ ನಿನಗೆ ಹೇಳುವೆನು ।೨೮೦॥ ಭಕ್ತರು ನನ್ನಿಂದಲೇ ಸನಾಥರಾಗಿರುವರು. ನನ್ನಿಂದಲೇ ಕೃತಕೃತ್ಯರಾಗಿರುವರು. ನನ್ನ ಆನಂದದಿಂದ ಅವರು ತೃಪ್ತರಾಗಿರುವರು. ಯಾವಾಗಲೂ ಆತ್ಮಾನಂದದಲ್ಲಿ ತಲ್ಲೀನರಾಗಿರುವರು ।೨೮೧॥ ನನ್ನ ಬಲದಿಂದ ಅವರು ಜಗತ್ತಿನಲ್ಲಿ ಶ್ರೇಷ್ಠರಾಗಿರುವರು. ಅವರು ಯಾವ ಶಸ್ತ್ರಗಳಿಲ್ಲದೇ ಪ್ರಪಂಚವನ್ನು ಭೇದಿಸಿರುವರು. ನನ್ನ ಕೃಪೆಯಿಂದ ಅವರೆದುರಿನಲ್ಲಿ ಕಲಿಕಾಲನೂ ಕೂಡ ನಿಂತುಕೊಳ್ಳಲು ಶಕ್ಯವಿಲ್ಲ ।೨೮೨॥ನನ್ನಿಂದಲೇ ಅವರು ಮೂರುಲೋಕಗಳಲ್ಲಿ ಯಾರಿಗೂ ಭಯಪಡುವುದಿಲ್ಲ. ನನ್ನಿಂದಲೇ ಅವರು ದೇಹದಲ್ಲಿದ್ದರೂ ವಿದೇಹಿಯಾಗಿರುವರು. ನನ್ನ ಬಲದ ಸಾಮರ್ಥ್ಯದಿಂದ ಅವರು ಪ್ರಳಯ ಕಾಲವನ್ನೂ ಸಹ ನುಂಗಿ ನೀರು ಕುಡಿಯುವರು ।೨೮೩॥ ನನ್ನ ಬಲದಿಂದ ಅವರು ಜನ್ಮ-ಮರಣದ ಚಕ್ರವನ್ನು ಮುರಿದುಹಾಕಿರುವರು. ನನ್ನ ಭಜನೆಯನ್ನು ಪ್ರೇಮದಿಂದ ಮಾಡಿ ಅವರು ಸನಾತನ ಬ್ರಹ್ಮಸ್ವರೂಪರಾಗಿರುವರು ।೨೮೪॥ ಇವುಗಳನ್ನು ನಾನೇನು ಕೊಟ್ಟಿರುವುದಿಲ್ಲ. ಹೀಗಿದ್ದರೂ ಅವರು ತಮ್ಮ ಭಜನೆಯ ಬಲದಿಂದ ಈ ಎಲ್ಲವನ್ನೂ ನನ್ನಿಂದ ಒಯ್ದರು. ಅವರೆದುರಿನಲ್ಲಿ ನನ್ನದು ಯಾವುದೂ ನಡೆಯುವುದಿಲ್ಲ. ತಮ್ಮ ಭಕ್ತಿಯ ಸಾಮರ್ಥ್ಯದಿಂದ ಅವರು ನನ್ನ ಸರ್ವಸ್ವವನ್ನೂ ಲೂಟ ಮಾಡಿರುವರು ।೨೮೫॥ ಆ ಯಾವ ಭಕ್ತರು ತಮ್ಮ ಪ್ರೇಮಯುಕ್ತ ಭಜನೆಯಿಂದ ನಾನು ಅಂಜಿಕ್ಯನಾಗಿದ್ದರೂ ಸಹ ನನ್ನನ್ನು ಗೆದ್ದುಕೊಂಡಿರುವರು. ನನ್ನನ್ನು ವಶಮಾಡಿಕೊಂಡಿರುವರು. ನನ್ನಲ್ಲಿರುವ ಆತ್ಮಪದವನ್ನೂ ಅವರು ಪಡೆದುಕೊಂಡರು ।೨೮೬॥

ಏವಂ ಮಾಝ್ಯಾ ನಿಜಪದಾಚೀ ಸತ್ತಾ । ಜರೀ ಆಲೀ ಭಕ್ತಾಂಚ್ಯಾ ಹಾತಾ । ತರೀ ಸ್ವಾಮಿತ್ವ ಠೇವೂನಿ ಮಾಝೀ ಮಾಥಾ । ಮಾಝೀ ಭಕ್ತಿಪಂಥಾ ವಿನಟಲೇ ।।೨೮೭।। ತೇ ಮಾಝೀ ಭಕ್ತೀಚೀ ಪವಿತ್ರತಾ । ಆಶ್ಚರ್ಯ ವಾಟೇಲ ತುಜ ಐಕತಾ । ಸಂದೇಹೋ ನಾಹೀ ಮಜ ಸಾಂಗತಾ । ಐಕ ತತ್ತ್ವತಾ ತೋ ಮಹಿಮಾ ।।೨೮೮।। ಸಾಂಡೋನಿ ದಾಂಭಿಕ ಲೌಕಿಕ । ಮಾಝ್ಯಾ ಭಜನೀ ಭಾವಾರ್ಥೇ ಚೋಖ । ತೋ ಜ್ಞಾತೀ ಜರೀ ಝಾಲಾ ಶ್ವಪಾಕ । ತರೀ ಆವಶ್ಯಕ ಮಜ ಪೂಜ್ಯ ।।೨೮೯।। ಕೇವಳ ಜೇ ಅಪವಿತ್ರೇ । ರಿಸೇ ಆಣಿ ವಾನರೇ । ಮ್ಯಾ ಪೂಜಿಲೀ ಗೌಳ್ಯಾಂಚೀ ಪೋರೇ । ತಾಕಪಿರೇ ರಾನಟೇ ।।೨೯೦।। ಜೋ ಜಾತೀನೇ ನೀಚತ್ವಾ ನೇಲಾ । ಪರೀ ಭಕ್ತಿಭಾವೇ ಉಂಚಾವಲಾ । ತೋ ಮದ್ರೂಪತಾ ಪಾವಲಾ । ಪೂಜ್ಯ ಝಾಲಾ ತಿಹೀ ಲೋಕೀ ।।೨೯೧।। ''ವಿಪ್ರಾತ್ ದ್ವಿಷಡ್‌ಗುಣಯುತಾ'' । ಯೇ ಶ್ಲೋಕೀಚೀ ಹೇಚಿ ಕಥಾ । ಜಳೋ ತ್ಯಾ ದ್ವಿಜಾಚೀ ಪವಿತ್ರತಾ । ಜೋ ಮಾಝ್ಯಾ ಭಜನಪಂಥಾ ವಿಸ್ಮುಖ ।।೨೯೨।। ತ್ಯಾಹೂನಿ ಶ್ವಪಚ ಗಾ ವರಿಷ್ಠ । ಜೋ ಮಾಝ್ಯಾ ಭಜನೀ ಭಜನನಿಷ್ಠ । ತ್ಯಾತೇ ವಂದಿತೀ ಪುರಾಣಶ್ರೇಷ್ಠ । ಕವಿವರಿಷ್ಠ ಮಹಾಕವೀ ।।೨೯೩।। ವಿದುರ ದಾಸೀಪುತ್ರ ತತ್ತ್ವತಾ । ಭಾವೇ ಪಢಿಯಾ ಭಗವಂತಾ । ಭಾವೋ ಪ್ರಮಾಣ ಪರಮಾರ್ಥಾ । ಜಾತ್ಯಾಭಿಮಾನತಾ ಸರೇನಾ ।।೨೯೪।। ಮಜ ಪಾವಾವಯಾ ಸಾಚೋಕಾರೇ । ಭಾವೋ ಸರೇ ಜಾತೀ ಸರೇ । ಯಾಲಾಗೀ ಅವಘ್ಯಾಂಚೇ ಧುರೇ । ಮ್ಯಾ ವನಚರೇ ಉದ್ಧರಲೀ ।।೨೯೫।। ಪಕ್ಷ್ಯಾಮಾಜೀ ಕೇವಳ ನಿಂದ್ಯ । ಜಟಾಯು ಉದ್ಧರಿಲಾ ಮ್ಯಾ ಗೀಧ । ಅಂತ್ಯಜ ಉದ್ಧರಿಲಾ ಧರ್ಮವ್ಯಾಧ । ಭಾವಶುದ್ಧ ಮದರ್ಥೀ ।।೨೯೬।। ಭಲತಾ ಹೋ ಭಲತೇ ಜಾತೀ । ಜ್ಯಾಸೀ ಮಾಝೀ ಭಾವಾರ್ಥೇ ಭಕ್ತೀ । ತೋಚಿ ಜಾಣ ಪಾ ಪವಿತ್ರಮೂರ್ತೀ । ಮಾಝೀ ಪ್ರಾಪ್ತೀ ಮದ್ಭಜನೇ ।।೨೯೭।। ಸಾಂಡೋನಿಯಾ ಮಾಝೀ ಭಕ್ತೀ । ನಾನಾ ಸಾಧನೇ ವ್ಯುತ್ಪತ್ತೀ । ಕರಿತಾ ನವ್ಹೇ ಮಾಝೀ ಪ್ರಾಪ್ತೀ । ತೇಚಿ ಶ್ರೀಪತೀ ಸಾಂಗತ ।।೨೯೮।।

ಧರ್ಮಃ ಸತ್ಯದಯೋಪೇತೋ ವಿದ್ಯಾ ವಾ ತಪಸಾನ್ವಿತಾ ।
ಮದ್ಭಕ್ತ್ಯಾಪೇತಮಾತ್ಮಾನಂ ನ ಸಮ್ಯಕ್ ಪ್ರಪುನಾತಿ ಹಿ ।।೨೨।।

ಅರ್ಥ :- ಯಾರು ನನ್ನ ಭಕ್ತಿಯನ್ನು ಮಾಡುವುದಿಲ್ಲವೋ, ಆ ಪುರುಷನಿಗೆ ಸತ್ಯ ಮತ್ತು ದಯೆಯಿಂದ ಕೂಡಿರುವ ಧರ್ಮ ಅಥವಾ ತಪಯುಕ್ತವಾದ ವಿದ್ಯೆಯೂ ಕೂಡ ಉತ್ತಮ ರೀತಿಯಲ್ಲಿ ಪಾವನಗೊಳಿಸಲು ಶಕ್ಯವಿಲ್ಲ.

ಈ ಪ್ರಕಾರವಾಗಿ ನನ್ನ ಆತ್ಮಪದವಿಯ ಹಕ್ಕು ಭಕ್ತರ ಕೈಯಲ್ಲಿ ಬಂದಿರುವುದು. ಹೀಗಾಗಿದ್ದರೂ ಸಹ ಅವರು ನನ್ನಲ್ಲಿ ಸ್ವಾಮಿತ್ವದ ಅಧಿಕಾರವನ್ನು ಇಟ್ಟಿರುವರು. ತಾವು ಮಾತ್ರ ನನ್ನ ಭಜನೆಯಲ್ಲಿ ರಮಮಾಣರಾಗಿರುವರು ।।೨೮೭।। ಆ ಯಾವ ನನ್ನ ಭಕ್ತರ ಪವಿತ್ರತೆಯನ್ನು ಕೇಳುತ್ತ ನಿನಗೆ ಆಶ್ಚರ್ಯವಾಗಬಹುದು. ಆದರೆ ಇದನ್ನು ಹೇಳಲು ನನಗೆ ಯಾವ ಪ್ರಕಾರವಾಗಿಯೂ ಸಂಶಯವಾಗುವುದಿಲ್ಲ. ಆ ಭಕ್ತಿಯ ಮಹಿಮೆಯನ್ನು ಹೇಳುವೆನು. ಅದನ್ನು ಈಗ ಕೇಳು ।।೨೮೮।। ಈ ಯಾವ ಪ್ರಪಂಚದಲ್ಲಿ ದಾಂಭಿಕತೆ, ಲೌಕಿಕತೆ ಇವುಗಳನ್ನು ತ್ಯಜಿಸಿ ಶುದ್ಧ ಭಾವನೆಯಿಂದ ನನ್ನ ಭಜನೆಯನ್ನು ಮಾಡಲು, ಅವರು ಜಾತಿಯಿಂದ ಚಾಂಡಾಲರಾಗಿರಲಿ, ಆದರೂ ಸಹ ಅವರು ನನಗೆ ಅತ್ಯಂತ ಪೂಜ್ಯರು ।।೨೮೯।। ಕೇವಲ ಅರಣ್ಯದಲ್ಲಿರುವ ಕರಡಿ, ಕಪಿಗಳು ಮತ್ತು ಮಜ್ಜಿಗೆ ಕುಡಿದು ಅರಣ್ಯದಲ್ಲಿ ಸಿಕ್ಕ ಸಿಕ್ಕಲ್ಲಿ ನಡೆದಾಡುವ ಗೌಳಿಗರ ಹುಡುಗರೂ ಕೂಡ ನನಗೆ ಪೂಜ್ಯರಾದರು ।।೨೯೦।। ಜಾತಿಯಿಂದ ಹೀನರಾಗಿದ್ದರೂ ಸಹ ನನ್ನ ಭಕ್ತಿಯಿಂದ ಶ್ರೇಷ್ಠರಾಗುವರು. ಮತ್ತು ನನ್ನಲ್ಲಿ ಏಕರೂಪರಾಗಿ ಮೂರುಲೋಕಗಳಲ್ಲಿ ಪೂಜ್ಯರಾಗುವರು ।।೨೯೧।। ''ವಿಪ್ರಾದ್‌ದ್ವಿಷಡ್‌ಗುಣಯುತಾ'' ಎಂಬ ಈ ಶ್ಲೋಕದಲ್ಲಿ ಈ ಬೋಧೆಯನ್ನೇ ಹೇಳಿರುವುದು. ಏಳನೆಯ ಸ್ಕಂಧದಲ್ಲಿನ ಒಂಬತ್ತನೆಯ ಅಧ್ಯಾಯದಲ್ಲಿ ಈ ಶ್ಲೋಕವಿರುವುದು. ನನ್ನ ಭಜನೆಯಿಂದ ವಿಮುಖರಾಗುವ ಆ ಯಾವ ಬ್ರಾಹ್ಮಣರ ಮುಖ ಕೂಡ ನೋಡಬಾರದು ।।೨೯೨।। ಇವರಿಗಿಂತಲೂ ನನ್ನ ಭಜನೆಯಲ್ಲಿ ಅತ್ಯಂತ ಪ್ರೇಮದಿಂದ ರಮಮಾಣನಾಗುವ ಚಾಂಡಾಲನೇ ಶ್ರೇಷ್ಠನು. ಆತನಿಗೆ ಮಹಾ ಮಹಾ ಪ್ರಾಚೀನ ಕವಿಶ್ರೇಷ್ಠರು ಮತ್ತು ಮಹಾಜ್ಞಾನೀ ಜನರೂ ಸಹ ವಂದನೆಯನ್ನು ಮಾಡುವರು ।।೨೯೩।। ವಿದುರನು ದಾಸೀ ಪುತ್ರನಾಗಿದ್ದನು. ಆದರೆ ಆತನು ಭಕ್ತಿಯಿಂದಲೇ ಭಗವಂತನಿಗೆ ಪ್ರಿಯನಾದನು. ಪರಮಾರ್ಥದಲ್ಲಿ ಭಕ್ತಿಯೇ ಪ್ರಮಾಣವಾಗಿರುವುದು. ಜಾತಿಯ ಅಭಿಮಾನವು ಇಲ್ಲಿ ನಡೆಯುವುದಿಲ್ಲ ।।೨೯೪।। ನನ್ನ ಪ್ರಾಪ್ತಿಗಾಗಿ ಭಕ್ತಿಯು ಮುಖ್ಯವಾಗಿರುವುದು. ಜಾತಿ ಮುಖ್ಯವಲ್ಲ. ಆದ್ದರಿಂದ ನಾನು ಎಲ್ಲಕ್ಕೂ ಮೊದಲು ವನಚರರ (ವಾನರ, ಕರಡಿ ಇತ್ಯಾದಿಯರ) ಉದ್ಧಾರವನ್ನು ಮಾಡಿದೆನು ।।೨೯೫।। ಪಕ್ಷಿಗಳಲ್ಲಿ ಅತ್ಯಂತ ನಿಂದ್ಯವಾಗಿರುವ ರಣಹದ್ದು ಜಟಾಯುವಿನ ಉದ್ಧಾರವನ್ನು ನಾನು ಮಾಡಿದೆನು. ನನ್ನಲ್ಲಿರುವ ಶುದ್ಧ ಭಾವನೆಯನ್ನು ಕಂಡು ಅಂತ್ಯಜನಾಗಿರುವ ಧರ್ಮವ್ಯಾಧನ ಉದ್ಧಾರವನ್ನು ನಾನು ಮಾಡಿದೆನು ।।೨೯೬।। ಯಾವುದೇ ಪ್ರಾಣಿಯಾಗಿರಲಿ, ಯಾವುದೇ ಜಾತಿಯಾಗಿರಲಿ, ಯಾರು ಅಂತಃಕರಣದಿಂದ, ಪ್ರೇಮದಿಂದ ಸತತವಾಗಿ ನನ್ನ ಭಜನೆಯನ್ನು ಮಾಡುವರೋ, ಮತ್ತು ಯಾರು ಸತತವಾಗಿ ನನ್ನ ಭಕ್ತಿಯಲ್ಲಿ ತಲ್ಲೀನರಾಗುವರೋ, ಅವರೇ ಪವಿತ್ರರು ಎಂದು ತಿಳಿಯಬೇಕು. ನನ್ನ ಭಜನೆಯಿಂದ ನನ್ನ ಪ್ರಾಪ್ತಿಯಾಗುವುದು ।।೨೯೭।। ನನ್ನ ಭಕ್ತಿಯನ್ನು ಬಿಟ್ಟುಕೊಟ್ಟು ಅನೇಕ ಸಾಧನೆಗಳಿಂದ ಅಥವಾ ವಾದವಿವಾದಗಳಿಂದ ನನ್ನ ಪ್ರಾಪ್ತಿಯಾಗುವುದಿಲ್ಲ. ಇದನ್ನೇ ಶ್ರೀಕೃಷ್ಣನು ಹೇಳುತ್ತಿರುವನು ।।೨೯೮।।

ಮಾಝೀ ಭಕ್ತೀವೀಣ ಕರ್ಮಧರ್ಮ । ಜಾಣ ಪಾ ತೋ ಕೇವಳ ಭ್ರಮ । ಚುಕಲೇ ಮತ್ಪ್ರಾಪ್ತೀಚೇ ವರ್ಮ । ತೋ ಧರ್ಮ ಅಧರ್ಮ ಪರಿಣಮೇ ।।೯೯।। ಮಾಝೀ ಭಕ್ತೀವೀಣ ಸತ್ಯವಾದೂ । ತೋ ಜಾಣ ಪಾ ಜೈಸಾ ಗರ್ಭಾಂಧೂ । ಪ್ರತಿಪದೀ ಘಡೇ ಪ್ರಮಾದೂ । ಅಧಃಪತನಬಾಧೂ ದೇಖೇನಾ ।।೧೦೦।। ಭಕ್ತೀವೀಣ ದಯೇಚೀ ಥೋರೀ । ಜೇವೀ ಪುರುಷೇವೀಣ ಸುಂದರೀ । ತೇ ವಿಧವಾ ಸರ್ವ ಧರ್ಮಾಬಾಹೇರೀ । ತೈಸೀ ಪರೀ ದಯೇಚೀ ।।೧೦೧।। ಮಾಝೀ ಭಕ್ತೀವೀಣ ಜೇ ವಿದ್ಯಾ । ತೇ ಕೇವಳ ಜಾಣ ಪಾ ಅವಿದ್ಯಾ । ಜೇವೀ ವಾಯಸ ನೇಣತೀ ಚಾಂದಾ । ತೇವೀ ಮಾಝ್ಯಾ ನಿಜಬೋಧಾ ನೋಳಖತೀ ।।೧೦೨।। ಚಂದನಭಾರ ವಾಹೇ ಖರ । ಪರೀ ತೋ ನೇಣೇ ಸುವಾಸಾಚೇ ಸಾರ । ಮಾಝೇನಿ ಭಕ್ತೀವೀಣ ವಿದ್ಯಾಶಾಸ್ತ್ರ । ಕೇವಳ ಭಾರವಾಹಕ ।।೧೦೩।। ಮಾಝೀ ಭಕ್ತೀವೀಣ ಜೇ ತಪ । ಶರೀರಶೋಷಣಾದಿ ಅಮೂಪ । ತೇ ಪೂರ್ವಾದೃಷ್ಟೇ ಭೋಗೀ ಪಾಪ । ನವ್ಹೇ ಸದ್ರೂಪ ತಪಃಕ್ರಿಯಾ ।।೧೦೪।। ಮಾಝೀ ಭಕ್ತೀವೀಣ ಜೇ ಸಾಧನ । ತೇ ಕೋಶಕೀಟಾಚ್ಯಾ ಐಸೇ ಜಾಣ । ಆಪಣ್ಯಾ ಆಪಣ ಬಂಧನ । ಭಕ್ತಿಹೀನ ಕ್ರಿಯಾ ತೇ ।।೧೦೫।। ಏವಂ ಮಾಝೀ ಭಕ್ತೀವೀಣ । ಜೇ ಕೇಲೇ ತೇ ಅಪ್ರಮಾಣ । ತೇ ಭಕ್ತೀಚೇ ಶುದ್ಧ ಲಕ್ಷಣ । ಸ್ವಯೇ ಶ್ರೀಕೃಷ್ಣ ಸಾಂಗತ ।।೧೦೬।।

ಕಥಂ ವಿನಾ ರೋಮಹರ್ಷ ದ್ರವತಾ ಚೇತಸಾ ವಿನಾ । ವಿನಾಽಽನಂದಾ ಶ್ರುಕಲಯಾ ಶುದ್ಧ್ಯೇದ್ಭಕ್ತ್ಯಾ ವಿನಾಽಽಶಯಃ ।।೨೪।।

ಅರ್ಥ :- ಎಲ್ಲಿಯವರೆಗೆ ಶರೀರದ ಮೇಲೆ ರೋಮಾಂಚನವಾಗುವುದಿಲ್ಲ, ಚಿತ್ತವು ದ್ರವಿಸುವುದಿಲ್ಲ, ನೇತ್ರಗಳಿಂದ ಆನಂದಾಶ್ರುಗಳು ಬರುವುದಿಲ್ಲ ಅಲ್ಲಿಯವರೆಗೆ ಭಕ್ತಿಯು ಹೇಗೆ ಸಿದ್ಧವಾಗಬೇಕು? ಮತ್ತು ಭಕ್ತಿವಿಲ್ಲದೇ ಚಿತ್ತವು ಹೇಗೆ ಶುದ್ಧವಾಗಬೇಕು?

ಆವಡೀ ಹರಿಕಥಾ ಐಕತಾ । ನಾನಾ ಚರಿತ್ರೇ ಶ್ರವಣ ಕರಿತಾ । ಮಾಝೀ ಆತ್ಮಚರ್ಚಾ ಹೃದಯೀ ಧರಿತಾ । ಪಾಲಟೂ ಚಿತ್ತಾ ತೇಣೇ ಹೋಯೇ ।।೧೦೭।। ತೇಣೇಂಚಿ ಉಪಜೇ ಮಾಝೀ ಭಕ್ತೀ । ಮಝ್ಯಾ ಭಜನಾಚ್ಯಾ ಅತಿಪ್ರೀತೀ । ಆವಡೀ ಮಾಝೀ ನಾಮೇ ಗಾತೀ । ರಂಗೀ ನಾಚತೀ ಸದ್ಭಾವೇ ।।೧೦೮।। ಪೋಟಾಂತೂನಿಯಾ ಉಲ್ಹಾಸತಾ । ರಂಗೀ ಗಾತಾ ಪೈ ನಾಚತಾ । ಅಂತರೀ ದ್ರವೋ ಝಾಲಾ ಚಿತ್ತಾ । ತೇ ಅವಸ್ಥಾ ಬಾಹ್ಯ ದಿಸೇ ।।೧೦೯।। ಅಂತರೀ ಸುಖಾಚೀ ಝಾಲೀ ಜೋಡೀ। ಬಾಹ್ಯ ರೋಮಾಂಚೀ ಉಭಿಲೀ ಗುಢೀ । ತ್ಯಾ ಸ್ವಾನುಭವ ಸುಖಾಚೀ ಗೋಡೀ । ನಯನೀ ರೋಕಡೀ ಪ್ರವಾಹೇ ।।೧೧೦।।

ನನ್ನ ಭಕ್ತಿಯ ಹೊರತಾದ ಕರ್ಮ, ಧರ್ಮಗಳು ವ್ಯರ್ಥವಾಗಿರುವುವು, ಕೇವಲ ಭ್ರಮೆಯಾಗಿರುವುವು. ನನ್ನ ಭಕ್ತಿಯ ಮರ್ಮವನ್ನು ತಪ್ಪಿದರೆ, ಧರ್ಮದ ಪರಿಣಾಮವು ಅಧರ್ಮವಾಗುವುದು ।।೯೯।। ನನ್ನಲ್ಲಿ ಭಕ್ತಿವಿಲ್ಲದ ಸತ್ಯ ಭಾಷಣವೂ ಕೂಡ ಹುಟ್ಟುಕುರುಡದಂತಾಗುವುದು. ಏಕೆಂದರೆ ಅದರಲ್ಲಿ ಮೇಲಿಂದ ಮೇಲೆ ದೋಷಗಳು ಉಂಟಾಗುವುವು ಮತ್ತು ತನ್ನ ಅಧಃಪತನವಾಗುವುದನ್ನು ಅವರು ತಿಳಿಯುವುದಿಲ್ಲ ।।೧೦೦।। ಭಕ್ತಿವಿಲ್ಲದ ದಯೆಯ ದೊಡ್ಡಸ್ತಿಕೆಯು ಇದು ಸಹ ಪತಿ ಇಲ್ಲದ ಸುಂದರ ಸ್ತ್ರೀಯಂತೆ ಆಗುವುದು. ಧಾರ್ಮಿಕ, ಮಂಗಲ ಕಾರ್ಯಗಳಲ್ಲಿ ವಿಧವಾ ಸ್ತ್ರೀಯಳು ಹೇಗೆ ವರ್ಜಿಸಲ್ಪಡುವಳೋ. ಅದರಂತೆ ಭಕ್ತಿವಿಲ್ಲದ ದಯೆಯಾಗಿರುವುದು ।।೧೦೧।। ನನ್ನ ಭಕ್ತಿವಿಲ್ಲದ ಯಾವ ವಿದ್ಯೆಯು ಅದು ಕೇವಲ ಅವಿದ್ಯೆಯಾಗಿರುವುದು. ಯಾವ ಪ್ರಕಾರ ಕಾಗೆಯು ಚಂದ್ರನನ್ನು ತಿಳಿಯುವುದಿಲ್ಲವೋ, ಅದರಂತೆ ಭಕ್ತಿವಿಲ್ಲದ ಭಕ್ತನು ನನ್ನ ಸ್ವರೂಪವನ್ನು ತಿಳಿಯಲಾರನು ।।೧೦೨।। ಕತ್ತೆಯು ತನ್ನ ಬೆನ್ನಿನ ಮೇಲೆ ಚಂದನದ ಭಾರವನ್ನು ಹೊರುವುದು, ಆದರೆ ಅದಕ್ಕೆ ಚಂದನದ ಸುವಾಸನೆಯ ಕಲ್ಪನೆಯು ಇರುವುದಿಲ್ಲ. ಅದರಂತೆಯೇ ನನ್ನ ಭಕ್ತಿವಿಲ್ಲದೇ ಅನೇಕ ಪ್ರಕಾರಗಳ ವಿದ್ಯೆ ಹಾಗೂ ಶಾಸ್ತ್ರಗಳನ್ನು ಬಲ್ಲವರು ಕೇವಲ ಭಾರವಾಹೀಯಾಗಿರುವರು ।।೧೦೩।। ನನ್ನ ಭಕ್ತಿಯನ್ನು ಬಿಟ್ಟುಕೊಟ್ಟು ಶರೀರಕ್ಕೆ ಕಷ್ಟಕೊಡುವ ತಪವನ್ನು ಆಚರಿಸುವವರು ನಿಜವಾಗಿಯೂ ಪೂರ್ವಜನ್ಮದ ಪಾಪಗಳನ್ನು ಭೋಗಿಸುತ್ತಿರುವರು. ಅದು ಮದ್ರೂಪವಾಗುವ ತಪಶ್ಚರ್ಯಗಳಾಗಿರುವುದಿಲ್ಲ ।।೧೦೪।। ನನ್ನ ಭಕ್ತಿಯ ಹೊರತಾದ ಇರುವ ಎಲ್ಲ ಸಾಧನೆಗಳು ತನ್ನ ಸುತ್ತುಮುತ್ತು ಕೋಶವನ್ನು ಕಟ್ಟಿಕೊಳ್ಳುವ ಕೋಶಕೀಟದಂತೆ ಆಗುವುದೆಂದು ತಿಳಿಯಬೇಕು. ಆ ಯಾವ ಭಕ್ತಿಹೀನ ಕ್ರಿಯೆಗಳು ತನ್ನಿಂದಲೇ ತನಗೆ ಬಂಧನಕ್ಕೆ ಗುರಿಮಾಡುವುವು ।।೧೦೫।। ಈ ಪ್ರಕಾರವಾಗಿ ನನ್ನ ಶುದ್ಧವಾದ ಭಕ್ತಿಯ ಹೊರತಾಗಿ ಮಾಡುವ ಆಯಾ ಕ್ರಿಯೆಗಳು ಅವೆಲ್ಲವೂ ಅಪ್ರಾಮಾಣವಾಗಿರುವುವು. ಈಗ ಇದೇ ಭಕ್ತಿಯ ಶುದ್ಧ ಸ್ವರೂಪವನ್ನು ಸ್ವತಃ ಶ್ರೀಕೃಷ್ಣನು ಹೇಳುವನು ।।೧೦೬।।

ಅತ್ಯಂತ ಪ್ರೇಮದಿಂದ ಹರಿಕಥೆಯನ್ನು ಕೇಳುವುದರಿಂದ, ಪ್ರೇಮದಿಂದ ನನ್ನ ನಾನಾ ಅವತಾರ ಚರಿತ್ರೆಗಳನ್ನು ಶ್ರವಣ ಮಾಡುವುದರಿಂದ, ನನ್ನ ಆತ್ಮಚರ್ಚೆಯ ವಿರಾಟ ಸ್ವರೂಪವನ್ನು ಮನದಲ್ಲಿ ಚಿಂತಿಸುವುದರಿಂದ ಚಿತ್ತಶುದ್ಧಿಯಾಗುವುದು ।।೧೦೭।। ಇದರಿಂದ ಹೃದಯದಲ್ಲಿ ನನ್ನ ಭಕ್ತಿಯು ಪ್ರಕಟವಾಗುವುದು. ಭಕ್ತರು ನನ್ನ ಅನೇಕ ನಾಮಗಳನ್ನು ಪ್ರೇಮದಿಂದ ಭಜನೆ ಹಾಡುವರು. ಪ್ರೇಮದಲ್ಲಿ ತಲ್ಲೀನರಾಗಿ ನರ್ತಿಸುವರು ।।೧೦೮।। ಅಂತಃಕರಣದಿಂದ ಉಲ್ಹಾಸವು ತುಂಬಿತುಳುಕುತ್ತಿರುವುದು. ಇದರಿಂದ ಅವರು ಹಾಡುವಾಗ್ಗೆ, ಕುಣಿಯುವಾಗ್ಗೆ ಮೈಮರೆತಿರುವರು. ಆದ್ದರಿಂದ ಅವರ ಹೃದಯವು ಪ್ರೇಮದಿಂದ ದ್ರವಿಸುತ್ತಿರುವುದು. ಬಾಹ್ಯ ಚಿನ್ಹೆಗಳಿಂದ ಇದು ಸ್ಪಷ್ಟವಾಗಿ ತೋರುವುದು ।।೧೦೯।। ಅಂತಃಕರಣದಲ್ಲಿ ಸುಖದ ತೆರೆಗಳು ಪ್ರಕಟವಾಗುತ್ತಲೇ ಶರೀರದ ಮೇಲೆ ರೋಮಾಂಚಗಳು ಎದ್ದು ನಿಲ್ಲುವುವು. ಈ ಆತ್ಮಸುಖದ ಆನಂದವು ನೇತ್ರಗಳಿಂದ ಪ್ರೇಮಾಶ್ರೂ ಪ್ರಕಟವಾಗುವುದು ।।೧೧೦।।

ಮಾಝೀ ಭಕ್ತೀಚಿಯಾ ಆವಡೀ । ಅಹಂ ಸೋಹಂ ದೋನೀ ಕುಡೀ। ತುಟಲೀ ಅಭಿಮಾನಾಚೀ ಬೇಡೀ । ವಿಷಯಗೋಡೀ ನಿಮಾಲೀ ।।೩೧೧।। ತೇ ಕಾಳೀಚೇ ಹೇಚಿ ಚಿನ್ಹ । ಪುಲಕಾಂಕಿತ ದೇಹೋ ಜಾಣ । ನಯನೀ ಆನಂದಜೀವನ । ಹೃದಯೀ ಪರಿಪೂರ್ಣ ಸ್ವಾನಂದೂ ।।೩೧೨।। ಪುಂಜಾಳಲೇ ದೋನೀ ನಯನ । ಸದಾ ಸರ್ವದಾ ಸುಪ್ರಸನ್ನ । ಸ್ಫುರೇನಾ ದೇಹಾಚೇ ಭಾನ । ಭಗವಂತೀ ಮನ ರಂಗಲೇ ।।೩೧೩।। ಐಸೀ ನುಪಜತಾ ಮಾಝೀ ಭಕ್ತೀ । ಕೈಚೀ ಹೋಯ ವಿಷಯವಿರಕ್ತೀ । ವಿರಕ್ತೀವೀಣ ಮಾಝೀ ಪ್ರಾಪ್ತೀ । ನವ್ಹೇ ನಿಶ್ಚಿತೀ ಉದ್ಧವಾ ।।೩೧೪।। ಮಾಝೀ ಶುದ್ಧ ಭಕ್ತೀ ತತ್ವತಾ । ಸಾಚಾರ ಆಲೀ ಜಯಾಚೇಹಾತಾ । ಐಕ ತ್ಯಾಚ್ಯಾ ಚಿನ್ಹಾಂಚೀ ಕಥಾ । ಆಣಿ ಪವಿತ್ರತಾ ತಯಾಚೀ ।।೩೧೫।। ಮಾಝೀ ಭಕ್ತೀ ಐಸೀ ಜೋ ಲಾಗಲಾ । ತೋ ತತ್ಕಾಳ ಪವಿತ್ರ ಝಾಲಾ । ತ್ಯಾಣೇ ತ್ರಿಲೋಕ ಪುನೀತ ಕೇಲಾ । ಹೇ ಗರ್ಜೋನಿ ಬೋಲಿಲಾ ಶ್ರೀಕೃಷ್ಣ ।।೩೧೬।।

ವಾಗ್ಗದ್ಗದಾ ದ್ರವತೇ ಯಸ್ಯ ಚಿತ್ತಂ ರುದತ್ಯಭೀಕ್ಷ್ಣಂ ಹಸತಿ ಕ್ವಚಿಚ್ಚ ।
ವಿಲಜ್ಜ ಉದ್ಗಾಯತಿ ನೃತ್ಯಯೇ ಚಸು ಮದ್ಭಕ್ತಿಯುಕ್ತೋ ಭುವನಂ ಪುನಾತಿ ।।೨೪।।

ಅರ್ಥ :- ಯಾರ ವಾಣಿಯು ಪ್ರೇಮದಿಂದ ಸದ್ಗದಿತವಾಗುವುದೋ, ಚಿತ್ತವು ದ್ರವಿಸುವುದೋ, ಕೆಲವೊಮ್ಮೆ ಪ್ರೇಮದಿಂದ ಅಳುವುದು, ಕೆಲವೊಮ್ಮೆ ಗಟ್ಟಿಯಾಗಿ ನಗುವುದು ಹೀಗೆ ಆಗುವುದೋ, ಸಮಾಜದ ನಾಚಿಕೆಯನ್ನು ಬಿಟ್ಟು ಜೋರಾಗಿ ಕುಣಿಯುತ್ತಿರುವನೋ, ಇಂತಹ ಭಕ್ತನು ಕೇವಲ ತಾನು ಪಾವನನಾಗದೇ ಸರ್ವ ತ್ರಿಭುವನವನ್ನು ಪಾವನಗೊಳಿಸುವನು.

ಅಂಗೀ ರೋಮಾಂಚ ರವರವಿತ । ಸ್ವೇದಬಿಂದೂ ಡಳಮಳಿತ । ಚಿತ್ತ ಚೈತನ್ಯೇ ದ್ರವತ । ತೇಣೇ ಸದ್ಗದಿತ ಪೈ ವಾಚಾ ।।೩೧೭।। ಹರ್ಷ ವೋಸಂಡತಾ ಪೋಟೀ । ಅರ್ಧೋನ್ಮೀಲಿತ ಹೋಯ ದೃಷ್ಟೀ । ಜೀವಶಿವಾ ಪಡಲೀ ಮಿಠೀ । ಧ್ಯಾನತ್ರಿಪುಟೀ ಮಾವಳಲೀ ।।೩೧೮।। ನಯನೀ ಅಶ್ರೂಂಚಾ ಪೂರ ಲೋಟೀ । ಉಭಂಡೂ ನ ಸಂಟೇಚಿ ಪೋಟೀ । ಹೋತ ಜೀವಭಾವಾಚೀ ತುಟೀ । ಪಡೇ ಸೃಷ್ಟೀ ಮೂರ್ಚ್ಛಿತ ।।೩೧೯।। ಆಕ್ರಂದೇ ಘೋರ ಆಕ್ರೋಶೇ । ವಾರಂವಾರ ರಡತಾ ದಿಸೇ । ರಡಣ್ಯಾಮಾಜೀ ಗದಗದಾ ಹಾಂಸೇ । ಜೇವಿ ಲಾಗಲೇ ಪಿಸೇ ಬ್ರಹ್ಮಗ್ರಹೋ ।।೩೨೦।। ರಡಣೇ ಹಾಂಸಣೇ ನ ಸಾಂಡೀ। ತ್ಯಾಹೀಮಾಜೀ ನವಲ ಆವಡೀ । ಅರ್ಥಾವಬೋಧೇ ಗಾಣೇ ಮಾಂಡೀ । ನಿಜಾತ್ಮ ಗೋಡೀಚೇನಿ ಯೋಗೇ ।।೩೨೧।। ವಿಸರೋನಿ ಮಾಝೀ ತುಝೀ । ಸಾಂಡೋನಿಯಾ ಲೋಕಲಾಜೀ । ಹರಿಖೇ ಪ್ರೇಮಾಚೇನಿ ಭೋಜೇ । ತೇಣೇ ನಾಚಿಜೇ ನಿಃಶಂಕ ।।೩೨೨।।

ನನ್ನ ಭಕ್ತಿಯ ಪ್ರೇಮದಿಂದ ಅಹಂ ಮತ್ತು ಸೋಹಂ ಸರಪಣಿಯು ಮತ್ತು ಅಭಿಮಾನದ ಬೇಡಿಯು ಮುರಿದು ಹೋಗುವುದು ಹಾಗೂ ವಿಷಯಗಳ ಅಭಿರುಚಿಯು ಇಲ್ಲದಾಗುವುದು ।।೩೧೧।। ಆ ಸಮಯದ ಚಿನ್ಹೆ ಹೇಗಾಗುವುದೆಂದರೆ, ಶರೀರವು ರೋಮಾಂಚಿತವಾಗುವುದು. ಕಣ್ಣುಗಳಿಂದ ಆನಂದಾಶ್ರುಗಳು ಸುರಿಯುತ್ತಿರುವುದು. ಹೃದಯವು ಸ್ವಾನಂದದಿಂದ ತೂಗಾಡುತ್ತಿರುವುದು ।।೩೧೨।। ಆ ಸಮಯದಲ್ಲಿ ನೇತ್ರಗಳು ದೊಡ್ಡವಾಗುವುವು ಮತ್ತು ಅವುಗಳಲ್ಲಿನ ತೇಜವು ಝಳಪಿಸುವುದು. ಇವರು ಯಾವಾಗಲೂ ಸುಪ್ರಸನ್ನರಾಗಿರುವರು. ದೇಹದ ಭಾನವು ಸ್ಫುರಣವಾಗುವುದಿಲ್ಲ. ಮನವು ಭಗವಂತನಲ್ಲಿ ತನ್ಮಯವಾಗಿರುವುದು ।।೩೧೩।। ಇಂತಹ ನನ್ನ ಭಕ್ತಿಯು ನಿರ್ಮಾಣವಾಗದೇ ವಿಷಯಗಳ ವಿರಕ್ತಿಯು ಎಲ್ಲಿಂದ ಬರಬೇಕು? ಹೇ ಉದ್ಧವಾ, ವಿರಕ್ತಿಯಿಲ್ಲದೇ ನನ್ನ ಪ್ರಾಪ್ತಿಯಾಗಲಿಕ್ಕೆ ಶಕ್ಯವಿಲ್ಲ. ಇದನ್ನು ನೀನು ನಿಶ್ಚಯವಾಗಿ ತಿಳಿದುಕೋ ।।೩೧೪।। ಈಗ ನನ್ನ ಶುದ್ಧವಾದ ಭಕ್ತಿಯು ಯಾರಿಗೆ ಪ್ರಾಪ್ತಿಯಾಗಿರುವುದೋ, ಅವರ ಪವಿತ್ರತೆಯನ್ನು ಹಾಗೂ ಇತರ ಲಕ್ಷಣಗಳನ್ನು ಹೇಳುವೆನು, ಅದನ್ನು ಕೇಳು ।।೩೧೫।। ಯಾರು ನನ್ನ ಭಕ್ತಿಯನ್ನು ಮಾಡುವರೋ, ಅವರು ತತ್ಕಾಲದಲ್ಲಿ ಪವಿತ್ರರಾಗುವರೆಂದು ತಿಳಿಯಬೇಕು. ಅವರು ತ್ರಿಭುವನಕ್ಕೂ ಪವಿತ್ರ ಮಾಡುವರು. ಹೀಗೆ ಶ್ರೀಕೃಷ್ಣನು ಗರ್ಜಿಸಿ ಹೇಳಿದನು ।।೩೧೬।।

ನನ್ನಲ್ಲಿ ಪ್ರೇಮವನ್ನು ಮಾಡುವ ಅನನ್ಯ ಭಕ್ತನ ಮೈಮೇಲೆ ರೋಮಾಂಚಗಳು ಎದ್ದು ನಿಲ್ಲುವುವು. ಮೈಮೇಲೆ ಸ್ವೇದಬಿಂದುಗಳು ಹೊಳೆಯುತ್ತಿರುವುವು. ಚಿತ್ತಕ್ಕೆ ಚೈತನ್ಯವು ದ್ರವಿಸುವುದು. ಇದರಿಂದ ವಾಣಿಯೂ ಸಹ ಗದ್ಗದಿತವಾಗುವುದು ।।೩೧೭।। ಅಂತಃಕರಣವು ನಿಃಸ್ವಾರ್ಥ ಪ್ರೇಮದಿಂದ ಪರಿಪೂರ್ಣವಾಗಿ ತುಂಬಲು ಆಗ ದೃಷ್ಟಿಯು ಅರ್ಧೋನ್ಮೀಲಿತವಾಗುವುದು, ಜೀವ ಶಿವರ ಮಿಲನವಾಗುವುದು. ಧ್ಯೇಯ, ಧ್ಯಾತಾ, ಧ್ಯಾನ ಈ ತ್ರಿಪುಟಿಯು ನಷ್ಟವಾಗುವುದು ।।೩೧೮।। ನೇತ್ರಗಳಿಂದ ಪ್ರೇಮದ ಝರಿಯು ಹರಿಯುತ್ತಿರುವುದು. ಅಂತರಂಗದಲ್ಲಿನ ಉದ್ರೇಕವು ಹಿಡಿಸದಂತಾಗುವುದು. ದೇಹಭಾನವು ಇಲ್ಲದಾಗುವುದು. ಈತನಿಗೆ ಮೂರ್ಛೆ ಬಂದು ಭೂಮಿಗೆ ಬೀಳುವನು ।।೩೧೯।। ಈತನು ಜೋರಾಗಿ ಆಕ್ರೋಶ ಮಾಡುತ್ತ ಅಳುವನು, ಅಳು ಅಳುತ್ತಲೇ ಗಹಿಗಹಿಸಿ ನಗುವನು. ಬ್ರಹ್ಮಗ್ರಹ ಬಡಿದುಕೊಂಡ ಯಾವ ಹುಚ್ಚನಂತೆ ಈತನು ವರ್ತಿಸುವನು ।।೩೨೦।। ಈ ಯಾವ ಭಕ್ತರ ಅಳುವುದು, ನಗುವುದು ಇದ್ದೇ ಇರುವುದು. ಅವರಿಗೆ ಆಶ್ಚರ್ಯಕಾರಕ ಪ್ರೇಮವು ಉದಯಿಸುವುದು. ಆತ್ಮಸ್ವರೂಪದ ಸುಖವು ಸಿಕ್ಕಿರುವುದರಿಂದ, ಅದೇ ದೃಷ್ಟಿಯಲ್ಲಿ ಅವರು ಅತ್ಯಂತ ಪ್ರೇಮದಿಂದ ಗಟ್ಟಿಯಾಗಿ ಹಾಡುವರು ।।೩೨೧।। ನಾನು, ನೀನೆಂಬ ಭೇದಭಾವವು ಮರೆತು ಹೋಗಿರುವುದರಿಂದ ಅವರು ಲೋಕಲಜ್ಜೆಯನ್ನು ತೊರೆದಿರುವರು. ಅತ್ಯಂತ ಹರ್ಷದಿಂದ ಮತ್ತು ಪ್ರೇಮದ ಭರದಲ್ಲಿ ಅವರು ಅನುಮಾನಪಡದೇ ನರ್ತಿಸುತ್ತಿರುವರು ।।೩೨೨।।

ಗಾಣೇ ನಾಚಣೇ ಹಾಂಸಣೇ । ತೋ ರಡೇ ಕಾಸಯಾಕಾರಣೇ । ಐಕ ತಿಹೀ ಲಕ್ಷಣೇ । ತುಜಕಾರಣೇ ಸಾಂಗೇನ ।।೩೨೩।। ಮಾಉಲೀವೇಗಳೇ ಬಾಳಕ ಪಡೇ । ಜನನೀ ಪಾಹತಾ ಕೋಠೇ ನಾತುಡೇ। ಭೇಟತಾ ಓರಡೂನಿ ರಡೇ । ಮಿಠೀ ಪಡೇ ಸಪ್ರೇಮ ।।೩೨೪।। ಜೀವ ಪರಮಾತ್ಮಾ ದೋನೀ । ಚುಕಾಮುಕೀ ಝಾಲೀ ಭ್ರಮಪಟ್ಟನೀ । ತ್ಯಾಂಸೀ ಏಕಾಕೀ ಹೋತಾ ಮಿಳಣೀ । ರಡೇ ದೀರ್ಘಸ್ವರೇ ಸ್ಫುಂದತ ।।೩೨೫।। ಬಹುಕಾಳೇ ಝಾಲೀ ಭೇಟೀ । ಐಕ್ಯಭಾವೇ ಪಡಲೀ ಮಿಠೀ । ತೇಣೇ ಉಭಂಡೂ ನ ಸಂಟೇ ಪೋಟೀ । ರುದನ ಉಠೀ ಸಪ್ರೇಮ ।।೩೨೬।। ದೇವೋ ಲಾಘವೀ ನಾನಾ ಪರೀ । ಮಾಯಾವೀ ನಾತುಡೇ ನಿರ್ಧಾರೀ । ತೋ ಸಾಂಪಡಲಾ ಘರೀಚ್ಯಾ ಘರೀ । ತೇಣೇ ವಿಸ್ಮಯ ಕರೀ ಟವಕಾರೇ ।।೩೨೭।। ದೇವ ಸದಾ ಜವಳೀಚ ಅಸೇ । ತ್ಯಾಲಾಗೀ ಜನ ಕೈಸೇ ಪಿಸೇ । ಪಾಹೋ ಜಾತೀ ದೇಶೋದೇಶೇ । ತೇ ದೇಖೋನಿ ಹಾಂಸೇ ಗದಗದಾ ।।೩೨೮।। ದೇವ ಸರ್ವಾಸೀ ಅಜಿತೂ । ತೋ ಮ್ಯಾ ಜಿಂಕಿಲಾ ಭಗವಂತೂ । ಧರೋನಿ ರಾಖಿಲಾ ಹೃದಯಾಂತೂ । ಯಾಲಾಗೀ ನಾಚತೂ ಉಲ್ಹಾಸೇ ।।೩೨೯।। ನಿವಟೂನಿ ದುಜಯಾಚೀ ಮಾತೂ । ಅಂಗೇ ಜೀತಿಲಾ ಭಗವಂತೂ । ಜಗೀ ಝಾಲಾ ಯಶವಂತೂ । ಯಾಲಾಗೀ ಗಾತನಾಚತೂ ಉಲ್ಹಾಸೇ ।।೩೩೦।। ಪಾಹತಾ ದುಸರೇ ನ ದಿಸೇ ಮಜ । ಯಾಲಾಗೀ ಧರೂ ವಿಸರಲಾ ಲಾಜ । ಜಗೀ ಝಾಲಾ ತೋ ನಿರ್ಲಜ್ಜ । ನಿರ್ಲಜ್ಜತೇಚೀ ವ್ಹೋಜ ಹೇ ತ್ಯಾಚೀ ।।೩೩೧।। ಯಾಪರೀ ಭಕ್ತಿಯುಕ್ತ । ಹೋಊನಿಯಾ ಮಾಝೇ ಭಕ್ತ । ನಿಜಾನಂದೇ ಗಾತನಾಚತ । ತೇಣೇ ಕೇಲೇ ಪುನೀತ ಲೋಕತ್ರಯ ।।೩೩೨।। ಜಯಾಚೇ ದೇಖತಾ ಚರಣ। ಜಡಜೀವಾ ಉದ್ಧರಣ । ಜ್ಯಾಚೇ ಲಾಗತಾ ಚರಣರೇಣ । ಪಶು ಪಾಷಾಣ ಉದ್ಧರತೀ ।।೩೩೩।। ಕೀರ್ತನಾಚೇನಿ ಮಹಾಘೋಕೇ । ನಾಶಿಲೀ ಜಗಾಚೀ ಸರ್ವ ದುಃಖೇ । ಅವಘೇ ವಿಶ್ವಚಿ ಹರಿಖೇ । ಭರಿಲೇ ಮಹಾಸುಖೇ ಉಚಂಬಳತ ।।೩೩೪।। ದರ್ಶನೇ ಸ್ಪರ್ಶನೇ ವಚನೇ । ಏಕ ತಾರಿಲೇ ಕೀರ್ತನೇ । ಏಕ ತಾರಿಲೇ ನಾಮಸ್ಮರಣೇ । ಯಾಪರೀ ಜಗ ಉದ್ಧರಣೇ ಉದ್ಧವಾ ।।೩೩೫।। ಅವಿದ್ಯಾಯುಕ್ತ ಜೀವ ಮಲಿನ । ತ್ಯಾಸೀ ಶುದ್ಧ ವ್ಹಾವಯಾ ಜಾಣ । ಮಾಝೀ ಭಕ್ತೀಚಿ ಪ್ರಮಾಣ। ಹೇಚಿ ಶ್ರೀಕೃಷ್ಣ ಸ್ವಯೇ ಸಾಂಗೇ ।।೩೩೬।।

ಈ ಪ್ರಕಾರವಾಗಿ ಇವರು ಹಾಡುಗಳನ್ನು ಹಾಡುವರು, ನಗುವರು,ಕುಣಿಯುವರು. ಆದರೆ ಅಳುವುದು ಏತಕ್ಕಾಗಿ? ಇದರ ಲಕ್ಷಣವನ್ನು ಹೇಳುವೆನು, ಕೇಳು ।।೩೨೩।। ಚಿಕ್ಕ ಬಾಲಕನು ಒಂದು ವೇಳೆ ತಾಯಿಯಿಂದ ತಪ್ಪಿಸಿಕೊಂಡು ದೂರಾಗಲು, ಆಗ ಆ ಬಾಲಕನು ತನ್ನ ತಾಯಿಯನ್ನು ಹುಡುಕುತ್ತಿರುವನು. ಆದರೆ ಆ ತಾಯಿಯು ಎಲ್ಲಿಯೂ ಕಾಣಿಸುವುದಿಲ್ಲ. ಅಕಸ್ಮಾತ್ತಾಗಿ ಆ ತಾಯಿಯ ಭೇಟಿಯಾಗಲು ಆಗ ಅವನು ಆಕ್ರೋಶದಿಂದ ಗಟ್ಟಿಯಾಗಿ ಅಳುತ್ತ ತಾಯಿಯನ್ನು ಬಿಗಿದಪ್ಪಿಕೊಳ್ಳುವನು ।।೩೨೪।। ಅದರಂತೆ ಜೀವ ಮತ್ತು ಶಿವ ಇವರ ಅಗಲುವಿಕೆಯು ಭ್ರಾಂತಿ ರೂಪ ನಗರದಲ್ಲಿ ಆಗಿರುವುದು. ಶಿವನು ಅಕಸ್ಮಾತ್ತಾಗಿ ಭೇಟಿಯಾಗುತ್ತಲೇ ಜೀವನು ಬಿಕ್ಕಿ ಬಿಕ್ಕಿ ಜೋರಾಗಿ ಅಳುವನು ।।೩೨೫।। ದೀರ್ಘ ಕಾಲದಿಂದ ಭೇಟಿಯಾಗಿದ್ದಕ್ಕೆ ಇವರು ಪರಸ್ಪರರು ಐಕ್ಯಭಾವದಿಂದ ಅಪ್ಪಿಕೊಳ್ಳುವರು. ಅವರ ಉದ್ರೇಕವು ಅಂತರಂಗದಲ್ಲಿ ಹಿಡಿಸಲಾರದಂತಾಗುವುದು. ಆದ್ದರಿಂದ ಅವರಿಗೆ ಪ್ರೇಮಭಾವದಿಂದ ಅಳುವು ಉಕ್ಕೇರುವುದು ।।೩೨೬।। ದೇವನು ನಾನಾ ಪ್ರಕಾರದ ಮೋಹಕ, ಮಾಯಾವಿಯಾಗಿರುವನು. ಏನು ಮಾಡಿದರೂ ಯಾರ ಕೈಗೂ ಸಿಗದವನು. ಇಂತಹ ದೇವನು ನನಗೆ ನನ್ನ ಹೃದಯ ಮಂದಿರದಲ್ಲಿ ಸಿಕ್ಕಿಕೊಂಡನು ಎಂದು ತಿಳಿದು ಭಕ್ತನು ಆಶ್ಚರ್ಯಚಕಿತನಾಗುವನು ।।೩೨೭।। ದೇವನು ಸರ್ವಥಾ ಸಮೀಪನಾಗಿರುವನು. ಹೀಗಿದ್ದರೂ ಆತನನ್ನು ಪಡೆಯಲು ಜನರು ಹೇಗೆ ಹುಚ್ಚರಾಗುತ್ತಿರುವರಲ್ಲಾ! ಇವರು ದೇವನನ್ನು ಶೋಧಿಸಲು ದೇಶೋದೇಶಗಳಲ್ಲಿ ತಿರುಗುತ್ತಿರುವರು. ಇದನ್ನು ಕಂಡು ಭಕ್ತನು ಗಹಿಗಹಿಸಿ ನಗುವನು ।।೩೨೮।। ದೇವನು ಸರ್ವರಿಗೂ ಅಂಜಿಕ್ಯನು. ಹೀಗಿದ್ದರೂ ಸಹ ನಾನು ಆತನನ್ನು ಜಯಿಸಿ ಪ್ರೇಮದಿಂದ ಹೃದಯದಲ್ಲಿ ಬಂಧಿಸಿ ಇಟ್ಟಿರುವೆನು. ಹೀಗೆಂದು ತಿಳಿಯುತ್ತ ನನ್ನ ಭಕ್ತನು ಆನಂದದಿಂದ ಹಾಡುವನು, ಕುಣಿಯುವನು ।।೩೨೯।। ದ್ವೈತಭಾವವನ್ನು ಇಲ್ಲದಾಗಿ ಮಾಡಿ ನಾನು ಸ್ವತಃ ಭಗವಂತನಿಗೆ ಜಯಿಸಿ ಜಗತ್ತಿನಲ್ಲಿ ಯಶಸ್ವಿಯಾದೆನು. ಹೀಗೆ ಹೇಳುತ್ತ ಭಕ್ತನು ಮಹದಾನಂದದಿಂದ ಕುಣಿಕುಣಿಯುತ್ತ ಹಾಡುತ್ತಿರುವನು ।।೩೩೦।। ಶೋಧಿಸಿ ನೋಡಲು ಜಗತ್ತಿನಲ್ಲಿ ಆತನಿಗೆ ನನ್ನ ಹೊರತಾಗಿ ಅನ್ಯ ಯಾವುದೂ ತೋರುವುದಿಲ್ಲ. ಇಂತಹ ಸ್ಥಿತಿಯು ಪ್ರಾಪ್ತವಾಗುವುದು. ಆದ್ದರಿಂದ ಭಕ್ತನು ನಾಚಿಕೆಯನ್ನು ಮರೆಯುವನು. ಜಗತ್ತಿನಲ್ಲಿ ನಿರ್ಲಜ್ಜನಾಗಿರುವನು. ಈ ನಿರ್ಲಜ್ಜತೆಯೇ ಆತನ ಶುದ್ಧತೆಯಾಗಿರುವುದು ।।೩೩೧।। ಈ ಪ್ರಕಾರವಾಗಿ ನನ್ನ ಭಕ್ತರು ಭಕ್ತಿಯುಕ್ತರಾಗಿ ಆತ್ಮಾನಂದದಲ್ಲಿ ಹಾಡುತ್ತಿರುವರು, ಕುಣಿಯುತ್ತಿರುವರು. ಇವರ ಯಾವ ಈ ದಿವ್ಯವಾದ ಆನಂದದಿಂದ ಮೂರು ಲೋಕಗಳೆಲ್ಲವೂ ಪಾವನವಾಗುವುವು ।।೩೩೨।। ಇವರ ಚರಣಗಳ ದರ್ಶನದಿಂದ ಜಡಜೀವಿಗಳ ಉದ್ಧಾರವಾಗುವುದು. ಅವರ ಚರಣಗಳ ಚರಣ ಧೂಳಿಯು ಹತ್ತಲು ಪಶುಗಳು, ಪಾಷಾಣಗಳು ಉದ್ಧಾರವಾಗುವುವು ।।೩೩೩।। ಇವರ ಕೀರ್ತನದ ಮಹಾಘೋಷಗಳಿಂದ ಜಗತ್ತಿನ ಸರ್ವ ದುಃಖಗಳು ಇಲ್ಲದಾಗುವುವು. ಸರ್ವ ಬ್ರಹ್ಮಾಂಡವು ಆನಂದದ ತೆರೆಗಳಿಂದ ಉಕ್ಕೇರುತ್ತಿರುವುದು ।।೩೩೪।। ಕೆಲವರು ಇವರ ದರ್ಶನದಿಂದ, ಕೆಲವರು ಇವರ ಸ್ಪರ್ಶದಿಂದ, ಕೆಲವರು ಇವರ ಉಪದೇಶದಿಂದ, ಕೆಲವರು ಇವರ ಕೀರ್ತನೆ, ನಾಮಸ್ಮರಣೆಯಿಂದ ಉದ್ಧಾರರಾದರು. ಹೇ ಉದ್ಧವಾ, ಈ ಪ್ರಕಾರವಾಗಿ ಇವರು ಜಗತ್ತಿನ ಉದ್ಧಾರವನ್ನು ಮಾಡಿದರು ।।೩೩೫।। ಜೀವವು ಅವಿದ್ಯಾಯುಕ್ತವಾಗಿರುವದರಿಂದ ಮಲಿನವಾಗಿರುವುದು. ಇದನ್ನು ಶುದ್ಧಗೊಳಿಸಲು ನನ್ನ ಭಕ್ತಿಯು ಮುಖ್ಯ ಸಾಧನೆಯಾಗಿದೆ, ಇದನ್ನು ಲಕ್ಷದಲ್ಲಿಡು. ಇದನ್ನೇ ಈಗ ಸ್ವತಃ ಶ್ರೀಕೃಷ್ಣನು ಹೇಳುತ್ತಿರುವನು ।।೩೩೬।।

ಡಾಂಕಮಿಳಣೇ ಸುವರ್ಣ । ಹೀನಕಸೇ ಝಾಲೇ ಮಲಿನ । ಉದಕೇ ಧುತಾಂಹೀ ಜಾಣ । ನಿರ್ಮಳಪಣ ನ ಯೇ ತ್ಯಾ ॥೩೩೭॥

ಯಥಾಽಗ್ನಿನಾ ಹೇಮಮಲಂ ಜಹಾತಿ ಧ್ಮಾತಂ ಪುನಃ ಸ್ವ ಭಜತೇ ಚ ರೂಪಮ್ ।
ಆತ್ಮಾ ಚ ಕರ್ಮಾನುಶಯಂ ವಿಧೂಯ ಮದ್ಭಕ್ತಿಯೋಗೇನ ಭಜತ್ಯಥೋ ಮಾಮ್ ॥೨೫॥

ಅರ್ಥ :- ಅಗ್ನಿಯಲ್ಲಿ ಸುವರ್ಣವನ್ನು ಕಾಯಿಸಲು ಆಗ ಅದು ತನ್ನಲ್ಲಿರುವ ಮಲಿನವನ್ನು ತ್ಯಜಿಸುವುದು. ಮೂಲದ ಶುದ್ಧ ಹೊಳಪನ್ನು ಪಡೆಯುವುದು. ಅದರಂತೆ ಜೀವವು ನನ್ನ ಭಕ್ತಿಯ ಯೋಗದಿಂದ ಕರ್ಮವಾಸನೆಯ ತ್ಯಾಗ ಮಾಡಿ ನನ್ನ ಪ್ರಾಪ್ತಿಯನ್ನು ಮಾಡಿಕೊಳ್ಳುವುದು.

ತ್ಯಾಚ ಸುವರ್ಣಾಚೇ ತಗಟ । ಅಗ್ನಿಮುಖೇ ದೇತಾ ಪುಟ । ಮಳತ್ಯಾಗೇ ಹೋಯ ಚೋಖಟ । ದಿಸೇ ಪ್ರಕಟ ಪೂರ್ವರೂಪೇ ॥೩೩೮॥ ತೇವೀ ಅವಿದ್ಯಾಕಾಮಕರ್ಮೀ ಮಲಿನ । ತ್ಯಾಚೇ ಚಿತ್ತಶುದ್ಧೀ ಲಾಗೀ ಜಾಣ । ಮಾಝೀ ಭಕ್ತೀಚಿ ಪರಮ ಪ್ರಮಾಣ । ಮಳಕ್ಷಾಲನ ಜೀವಾಚೇ ॥೩೩೯॥ ಜಂವ ಜಂವ ಭಕ್ತೀಚೇ ಪುಟ ಚಢೇ । ತಂವ ತಂವ ಅವಿದ್ಯಾಬಂಧ ವಿಘಡೇ । ಮಾಯೇಚೇ ಮೂಳಚಿ ಖುಡೇ । ಜೀವೂ ಚಢೇ ನಿಜಪದಾ ॥೩೪೦॥ ತುಟೋನಿಯಾ ಅವಿದ್ಯಾ ಬಂಧೂ । ಚಿನ್ಮಾತ್ರೈಕ ಅತಿವಿಶುದ್ಧೂ । ಜೀವ ಪಾವೇ ಅಗಾಧ ಬೋಧೂ । ಪರಮಾನಂದೂ ನಿಜಬೋಧೇ ॥೩೪೧॥ ಜೀವಾಸೀ ಅವಿದ್ಯೇಚೀ ಪ್ರಾಪ್ತೀ । ತೇ ಜ್ಞಾನಾಸ್ತವ ಹೋಯ ನಿವೃತ್ತೀ । ತೇಥ ಕಾ ಪಾ ಲಾಗಲೀ ಭಕ್ತೀ । ಐಶೀ ಆಶಂಕಾ ಚಿತ್ತೀ ಜರೀ ಧರಿಸೀ ॥೩೪೨॥ ತರೀ ಮಾಝೇ ಭಕ್ತೀವೀಣ ಜ್ಞಾನ । ಸರ್ವಥಾ ನುಪಜೇ ಜಾಣ । ತೇಚಿ ಅರ್ಥೀಚೇ ನಿರೂಪಣ । ಸ್ವಯೇ ಶ್ರೀಕೃಷ್ಣ ಸಾಂಗತ ॥೩೪೩॥

ಯಥಾಯಥಾತ್ಮಾ ಪರಿಮೃಜ್ಯತೇಽಸೌ ಮತ್ಪುಣ್ಯಗಾಥಾಶ್ರವಣಾಭಿಧಾನೈಃ ।
ತಥಾ ತಥಾ ಪಶ್ಯತಿ ವಸ್ತು ಸೂಕ್ಷ್ಮಂ ಚಕ್ಷುರ್ಯಥೈವಾಂಜನಸಂಪ್ರಯುಕ್ತಮ್ ॥೨೬॥

ಅರ್ಥ :- ಹೇ ಉದ್ಧವಾ, ನನ್ನ ಪರಮ ಪಾವನ ಲೀಲಾಕಥೆಗಳ ಶ್ರವಣದಿಂದ ಚಿತ್ತದಲ್ಲಿನ ಮಲಿನತ್ವವು ಯಾವ ಪ್ರಕಾರವಾಗಿ ತೊಳೆಯುತ್ತ ಸಾಗುವುದೋ, ಅದರಂತೆಯೇ ಸೂಕ್ಷ್ಮತ್ವದ ಅನುಭವವು ಬರುತ್ತಿರುವುದು. ಅಂಜನವನ್ನು ಹಾಕುತ್ತಲೇ ಕಣ್ಣುಗಳಲ್ಲಿನ ದೋಷವು ಇಲ್ಲದಾಗುವುದು. ಸೂಕ್ಷ್ಮ ಪದಾರ್ಥಗಳನ್ನು ಕಾಣುವ ಶಕ್ತಿಯು ಅವುಗಳಿಗೆ ಬರುವುದು.

ಮಾಝೀ ಪ್ರತಿಪಾದ್ಯ ಸ್ವರೂಪತಾ । ನಾನಾ ಚರಿತ್ರೇ ಪವಿತ್ರ ಕಥಾ । ತೇಥೇ ಶ್ರವಣಮನನೇ ಚಿತ್ತಾ । ಪ್ರಕ್ಷಾಳಿತಾ ಕೀರ್ತನೇ ॥೩೪೪॥ ಜಂವ ಜಂವ ಕರೀ ಮಾಝೀ ಭಕ್ತೀ । ತಂವ ತಂವ ಅವಿದ್ಯಾನಿವೃತ್ತೀ । ತೇಣೇ ಮಾಝೇ ಸ್ವರೂಪಾಚೀ ಪ್ರಾಪ್ತೀ । ಜೇ ಶ್ರುತಿವೇದಾಂತೀ ಅತರ್ಕ್ಯ ॥೩೪೫॥

ಶುದ್ಧ ಬಂಗಾರವು ಕಲಬೆರಕೆಯಾಗಲು ಅದರ ಒರೆಯು ಕೀಳಾಗುವುದು, ಮಲಿನವಾಗುವುದು. ನೀರಿನಿಂದ ಅದಕ್ಕೆ ಶುದ್ಧಗೊಳಿಸಲು ಎಷ್ಟೇ ಪ್ರಯತ್ನಿಸಿದರೂ ಅದು ಶುದ್ಧವಾಗಲು ಶಕ್ಯವಿಲ್ಲ ॥೩೩೭॥

ಅದೇ ಮಲಿನ ಬಂಗಾರವನ್ನು ಅಗ್ನಿಯಲ್ಲಿ ಪುಟ ಮಾಡಲು, ಆಗ ಅದರಲ್ಲಿನ ಕಲಬೆರಕೆ ಎಲ್ಲವೂ ಸುಟ್ಟು ಹೋಗಿ ಶುದ್ಧವಾಗುವುದು ಮತ್ತು ಮೊದಲಿನಂತೆ ಹೊಳೆಯುತ್ತಿರುವುದು ॥೩೩೮॥ ಅದರಂತೆ ಅವಿದ್ಯೆಯಿಂದ ಮತ್ತು ಸಕಾಮ ಕರ್ಮಗಳಿಂದ ಮಲಿನಗೊಂಡಿರುವ ಚಿತ್ತವು ಶುದ್ಧವಾಗಬೇಕಾದರೆ ನನ್ನ ಭಕ್ತಿಯೇ ಮುಖ್ಯ ಸಾಧನವಾಗಿರುವುದು. ಭಕ್ತಿಯಿಂದ ಜೀವದ ಮಲಿನತ್ವವು ಇಲ್ಲದಾಗುವುದು ॥೩೩೯॥ ಅಂತಃಕರಣದಲ್ಲಿ ಭಕ್ತಿಯು ಯಾವ ಪ್ರಕಾರವಾಗಿ ಬೆಳೆಯುತ್ತ ಸಾಗುವುದೋ, ಅದೇ ಪ್ರಕಾರವಾಗಿ ಅವಿದ್ಯೆಯ ಬಂಧನವು ಕಡಿತವಾಗುತ್ತ ಸಾಗುವುದು. ಮಾಯೆಯ ಬೇರುಗಳೇ ಅಗೆಯಲ್ಪಡುವುವು. ಇದರಿಂದ ಜೀವವು ಆತ್ಮಪದಕ್ಕೆ ಸಾಗಿ ಮುಟ್ಟಿಕೊಳ್ಳುವುದು ॥೩೪೦॥ ಅವಿದ್ಯೆಯ ಬಂಧನವು ಮುರಿದುಬೀಳಲು, ಆಗ ಜ್ಞಾನರೂಪವಾದ ನಿರ್ಮಲ ಬೋಧವು ಪ್ರಾಪ್ತವಾಗುವುದು. ಆ ಯಾವ ಆತ್ಮಜ್ಞಾನದಿಂದ ಅಂತಃಕರಣವು ಪರಮಾನಂದದಿಂದ ತುಂಬಿ ಹೋಗುವುದು ॥೩೪೧॥ ಜೀವಕ್ಕೆ ಅವಿದ್ಯೆಯು ಪ್ರಾಪ್ತಿಯಾಗಿರುವುದು ನಿಜವಾದರೆ, ಜ್ಞಾನದಿಂದ ಅದನ್ನು ಕಳೆಯಬಹುದಲ್ಲಾ? ಅದಕ್ಕಾಗಿ ಭಕ್ತಿಯ ಅವಶ್ಯಕತೆಯಾದರೂ ಏತಕ್ಕಾಗಿ? ಹೀಗೆ ನಿನ್ನ ಮನದಲ್ಲಿ ಅನುಮಾನವು ಉಂಟಾಗಬಹುದು. ಅದಕ್ಕಾಗಿ ಈಗ ಕೇಳು ॥೩೪೨॥ ನನ್ನ ಭಕ್ತಿಯಿಲ್ಲದೇ ಜ್ಞಾನವು ಎಂದಿಗೂ ಹುಟ್ಟಲಾರದು. ಈ ವಿಷಯದ ನಿರೂಪಣೆಯನ್ನು ಈಗ ಸ್ವತಃ ಶ್ರೀಕೃಷ್ಣನೇ ಮಾಡುವನು ॥೩೪೩॥

ವೇದಶಾಸ್ತ್ರಗಳಲ್ಲಿ ವರ್ಣನೆ ಮಾಡಿರುವ ನನ್ನ ಸ್ವರೂಪ, ನನ್ನ ನಾನಾ ಪ್ರಕಾರಗಳ ಚರಿತ್ರೆಗಳು ಮತ್ತು ಪಾವನಗೊಳಿಸುವಂತಹ ನನ್ನ ಕಥೆಗಳ ಶ್ರವಣ, ಮನನ ಮತ್ತು ಕೀರ್ತನೆ ಮಾಡುವುದರಿಂದ ಚಿತ್ತಶುದ್ಧಿಯಾಗುವುದು ॥೩೪೪॥ ನನ್ನ ಭಕ್ತಿಯನ್ನು ಮಾಡುತ್ತ ಸಾಗಿದಂತೆ ಅವಿದ್ಯೆಯು ನಾಶವಾಗುತ್ತ ಸಾಗುವುದು. ಮತ್ತು ಶ್ರುತಿಗಳಿಗೂ ಮತ್ತು ವೇದಗಳಿಗೂ ಅಗಮ್ಯವಾಗಿರುವ ನನ್ನ ಸ್ವರೂಪದ ಪ್ರಾಪ್ತಿಯಾಗುವುದು ॥೩೪೫॥

ಜೇ ಕಾ ಅತಿಸೂಕ್ಷ್ಮ ನಿರ್ಗುಣ। ಅಲಕ್ಷ್ಯ ಲಕ್ಷೀನಾ ಗಹನ। ತೇಣೇ ಸ್ವರೂಪೇ ಹೋಯ ಸಂಪನ್ನ। ಜೀವ ಸಮಾಧಾನ ಮದ್ಭಜನೇ ।೧೪೬॥ ನಯನೀ ಸೂದಲ್ಯಾ ಅಂಜನ। ದೇಖೇ ಪೃಥ್ವೀಗರ್ಭೀಚೇ ನಿಧಾನ। ತೇವೀ ಮದ್ಭಜನೇ ಲಾಹೋನಿ ಜ್ಞಾನ। ಚೈತನ್ಯಘನ ಜೀವ ಹೋಯ ।೧೪೭॥ ಉದ್ಧವಾ ಐಕ ಪಾ ನಿಶ್ಚಿತೀ। ಬಹುತ ನ ಲಗೇ ವ್ಯುತ್ಪತ್ತೀ। ಜೈಸಾ ಭಾವೋ ಜ್ಯಾಚೇ ಚಿತ್ತೀ। ತೈಶೀ ಪ್ರಾಪ್ತೀ ತೋ ಪಾವೇ ।೧೪೮॥

ವಿಷಯಾನ್ ಧ್ಯಾಯತಶ್ಚಿತ್ತಂ ವಿಷಯೇಷು ವಿಷಜ್ಜತೇ। ಮಾಮನುಸ್ಮರತಶ್ಚಿತ್ತಂ ಮಯ್ಯೇವ ಪ್ರವಿಲೀಯತೇ ।೨೭॥

ಅರ್ಥ :- ವಿಷಯಗಳ ಚಿಂತನೆಯನ್ನು ಮಾಡುವ ಪುರುಷನ ಚಿತ್ತವು ವಿಷಯಗಳಲ್ಲಿ ಆಸಕ್ತವಾಗುವುದು. ಹಾಗೆಯೇ ನನ್ನ ಚಿಂತನೆಯನ್ನು ಮಾಡುವ ಪುರುಷನ ಚಿತ್ತವು ನನ್ನಲ್ಲಿ ವಿಲೀನವಾಗುವುದು.

ಜೋ ಕರೀ ವಿಷಯಾಂಚೇ ಧ್ಯಾನ। ತೋ ಹೋಯ ವಿಷಯೀ ನಿಮಗ್ನ। ಜೋ ಕರೀ ಸದಾ ಮಾಝೇ ಚಿಂತನ। ತೋ ಚೈತನ್ಯಘನ ಮೀಚಿ ಹೋಯ ।೧೪೯॥ ಸ್ತ್ರೀ ಗೇಲೀ ಅಸತಾ ಮಾಹೇರೀ। ಧ್ಯಾತಾಂಚಿ ಪ್ರಕಟೇ ಜಿವ್ಹಾರೀ। ಹಾವಭಾವಕಟಾಕ್ಷೇವರೀ। ಸಕಾಮ ಕರೀ ಪುರುಷಾತೇ ।೧೫೦॥ ನಸತೇ ಸ್ತ್ರೀಯೇಚೇ ಧ್ಯಾನ ಕರಿತಾ। ಪ್ರಕಟ ದಿಸೇ ಯಥಾರ್ಥತಾ। ಮೀ ಸ್ವತಃಸಿದ್ಧ ಹೃದಯೀ ಅಸತಾ। ಸಹಜೇ ಮದ್ರೂಪತಾ ಚಿಂತಿತಾ ಮಜ ।೧೫೧॥ ಆವಡೀ ಮಾಝೇ ಜೇ ಚಿಂತನ। ಚಿತ್ತ ಚಿಂತಾ ಚಿಂತಿತೇಪಣ। ವಿರೋನಿ ಹೋಯ ಚೈತನ್ಯಘನ। ಮದ್ರೂಪಪಣ ಯಾ ನಾಂವ ।೧೫೨॥ ಮಾಝೇ ಪ್ರಾಪ್ತೀಲಾಗೀ ಜಾಣ। ಹೇಚಿ ಗಾ ಮುಖ್ಯ ಲಕ್ಷಣ। ಮಾಝೇ ಧ್ಯಾನ ಮಾಝೇ ಭಜನ। ಮದ್ರೂಪಪಣ ತೇಣೇ ಹೋಯ ।೧೫೩॥ ಮಜವೇಗಳೇ ಜೇ ಜೇ ಧ್ಯಾನ। ತೇಚಿ ಜೀವಾಸೀ ದೃಢಬಂಧನ। ಯಾಲಾಗೀ ಸಾಂಡೂನಿ ವಿಷಯಾಂಚೇ ಧ್ಯಾನ। ಮಾಝೇ ಚಿಂತನ ಕರಾವೇ ।೧೫೪॥

ತಸ್ಮಾದಸದಭಿಧ್ಯಾನಂ ಯಥಾ ಸ್ವಪ್ನಮನೋರಥಮಮ್। ಹಿತ್ವಾಮಯಿ ಸಮಾಧತ್ಸ್ವ ಮನೋ ಮದ್ಭಾವಭಾವಿತಮ್ ।೨೮॥

ಅರ್ಥ :- ಆದ್ದರಿಂದ ನೀನು ಅನ್ಯ ಸಾಧನೆಗಳ ಆದರ ಫಲಗಳ ಚಿಂತನೆ ಮಾಡುವುದನ್ನು ಬಿಟ್ಟು ಬಿಡು. ನನ್ನ ಹೊರತಾಗಿ ಯಾವುದೂ ಇರುವುದಿಲ್ಲ. ಕಣ್ಣಿಗೆ ಕಾಣುವುದೆಲ್ಲವೂ ಸ್ವಪ್ನ ಅಥವಾ ಮನೋರಾಜ್ಯವಾಗಿರುವುವು. ಆದ್ದರಿಂದ ನನ್ನ ಚಿಂತನೆಯಿಂದ ನಿನ್ನ ಚಿತ್ತವನ್ನು ಶುದ್ಧಗೊಳಿಸು. ಅದನ್ನು ಏಕಾಗ್ರತೆಯಿಂದ ಈಗ ನನ್ನಲ್ಲಿ ಅರ್ಪಿಸು.

ಸಾಚಾಚ್ಯಾಪರೀ ದಿಸತ। ಪರಿಣಾಮೀ ನಾಶವಂತ। ತ್ಯಾಸೀಚ ಬೋಲಿಜೇ ಅಸತ। ಜೇ ಮಿಥ್ಯಾಭೂತ ಆಭಾಸೂ ।೧೫೫॥

ಯಾವುದು ಅತ್ಯಂತ ಸೂಕ್ಷ್ಮವಾಗಿದ್ದು ನಿರ್ಗುಣವಾಗಿರುವುದೋ, ಯಾವುದು ಅಲಕ್ಷ್ಯವಾಗಿರುವುದರಿಂದ ದೃಷ್ಟಿಗೆ ತೋರುವುದಿಲ್ಲವೋ, ಅಂತಹ ಗಹನವಾಗಿರುವ ನನ್ನ ಸ್ವರೂಪವು ಜೀವಕ್ಕೆ ಪ್ರಾಪ್ತವಾಗುವುದು. ನನ್ನ ಭಜನೆಯಿಂದ ಜೀವಕ್ಕೆ ಸಮಾಧಾನವಾಗುವುದು ।೧೪೬॥ ಕಣ್ಣಿಗೆ ಅಂಜನವನ್ನು ಹಚ್ಚಲು ಭೂಮಿಯ ಗರ್ಭದಲ್ಲಿನ ನಿಧಿಯು ಕಾಣುವಂತೆ ನನ್ನ ಭಜನೆಯಿಂದ ಜೀವಕ್ಕೆ ಜ್ಞಾನವು ಪ್ರಾಪ್ತವಾಗಿ ಸತ್, ಚಿತ್, ಆನಂದವು ಪ್ರಕಟವಾಗುವುದು ।೧೪೭॥ ಹೇ ಉದ್ಧವಾ, ನನ್ನ ಪ್ರಾಪ್ತಿಗಾಗಿ ಸಾಧನೆಗಳ ಬಹಳ ಅವಶ್ಯಕತೆ ಇರುವುದಿಲ್ಲ. ಹೃದಯದಲ್ಲಿ ಭಾವವಿದ್ದಂತೆ ಫಲವು ದೊರಕುವುದು. ಇದನ್ನು ಮಾತ್ರ ನೀನು ಲಕ್ಷದಲ್ಲಿಡು ।೧೪೮॥

ಯಾರು ವಿಷಯಗಳ ಧ್ಯಾನವನ್ನು ಮಾಡುವರೋ, ಅವರು ವಿಷಯಗಳಲ್ಲಿ ನಿಮಗ್ನರಾಗುವರು. ಯಾರು ಸತತವಾಗಿ ನನ್ನ ಚಿಂತನೆಯನ್ನು ಮಾಡುವರೋ, ಅವರು ನನ್ನ ಚೈತನ್ಯಘನಕ್ಕೆ ಬಂದು ಕೂಡುವರು ।೧೪೯॥ ಹೆಂಡತಿಯು ತನ್ನ ತವರು ಮನೆಗೆ ಹೋಗಲು, ಆಗ ಆಕೆಯ ಧ್ಯಾನವನ್ನು ಮಾಡುತ್ತಲೇ ಆಕೆಯು ಮನಸ್ಸಿನ ಪರದೆಯ ಮೇಲೆ ಮೂರ್ತಿಮಂತಳಾಗಿ ಬಂದು ನಿಲ್ಲುವಳು. ಆಕೆಯು ಕಾಲ್ಪನಿಕ ಹಾವಭಾವ ನೇತ್ರಕಟಾಕ್ಷಗಳಿಂದ ತಾನು ಸಕಾಮನಾಗಿಬಿಡುವನು ।೧೫೦॥ ಕಾಲ್ಪನಿಕ ಸ್ತ್ರೀಯಳ ಧ್ಯಾನದಿಂದ ಅಂತಃಕರಣದಲ್ಲಿ ಮೂರ್ತಿಮಂತರೂಪವು ಪ್ರಗಟವಾಗುತ್ತಿರಲು ಹೃದಯಲ್ಲಿ ಸ್ವಯಂಸಿದ್ಧ ಸಾಕ್ಷಾತ್ ಇರುವ ನನ್ನ ಚಿತನೆಯನ್ನು ಮಾಡಲು ಸಹಜವಾಗಿಯೇ ಮದ್ರೂಪತೆಯು ಪ್ರಾಪ್ತವಾಗುವುದು. ಇದರಲ್ಲಿ ಯಾವ ಆಶ್ಚರ್ಯವಿದೆ? ।೧೫೧॥ ಪ್ರೇಮದಿಂದ ನನ್ನ ಚಿಂತನೆಯನ್ನು ಮಾಡಲು, ಚಿತ್ತ ಚಿಂತನ ಮತ್ತು ಚಿಂತನೀಯ ವಸ್ತು, ಈ ತ್ರಿಪುಟಿಯು ಇಲ್ಲದಾಗುವುದು. ಆತನು ಚೈತನ್ಯಘನನಾಗುವನು. ಇದಕ್ಕೇನೇ ಮದ್ರೂಪತೆ ಎಂದು ಹೇಳುವರು ।೧೫೨॥ ನನ್ನ ಪ್ರಾಪ್ತಿಯ ಮುಖ್ಯ ಸಾಧನೆಯು ಇದೇ ಆಗಿರುವುದು. ನನ್ನ ಭಜನೆ ಮತ್ತು ಧ್ಯಾನವನ್ನು ಮಾಡಲು, ಈ ಯೋಗದಿಂದ ಮತ್ಸ್ವರೂಪತೆಯು ಪ್ರಾಪ್ತವಾಗುವುದು ।೧೫೩॥ ನನ್ನ ಹೊರತಾದ ಇತರ ಯಾವುದೇ ಧ್ಯಾನವನ್ನು ಮಾಡಲು, ಅವುಗಳೆಲ್ಲವೂ ಜೀವಕ್ಕೆ ದೃಢವಾದ ಬಂಧನಕಾರಕವಾಗುವುದು. ಆದ್ದರಿಂದ ವಿಷಯಗಳ ಧ್ಯಾನವನ್ನು ಬಿಟ್ಟು ಯಾವಾಗಲೂ ನನ್ನ ಚಿಂತನೆಯನ್ನೇ ಮಾಡಬೇಕು ।೧೫೪॥

ಯಾವುದು ನೋಡಲು ಸತ್ಯವಾಗಿ ತೋರಿ ತದನಂತರ ಕೊನೆಯಲ್ಲಿ ನಾಶವಾಗುವುದೋ, ಅದಕ್ಕೆ ''ಅಸತ್'' ಎಂದು ಕರೆಯುವರು. ಅವು ಮಿಥ್ಯೆಯಾಗಿದ್ದು ಭಾಸಮಾತ್ರವಾಗಿರುವವು ।೧೫೫॥

ತೇವೀ ಇಹಾಮುತ್ರ ಕಾಮನೀಯೇ । ಜೇ ಅವಿಚಾರಿತ ರಮಣೆಯೇ । ತ್ಯಾಲಾಗೀ ಪ್ರಾಣೀ ಪಾಹೇ । ನಾನಾ ಉಪಾಯೇ ಶಿಣತಾತೀ ।೩೫೬॥ ಕಷ್ಟೀ ಸೇವೂನಿ ಸಾಧನ । ಸಾಧಿಲೇ ಸ್ವರ್ಗಭೋಗಸ್ಥಾನ । ತೇಹೀ ನಶ್ವರ ಗಾ ಜಾಣ । ಜೇವೀ ಕಾ ಸ್ವಪ್ನ ಮನೋರಥ ।೩೫೭॥ ಯಾಲಾಗೀ ವಿಷಯಾಚೇ ಧ್ಯಾನ । ಸಾಂಡೂನಿ ಕರಾವೇ ಮಾಝೇ ಭಜನ । ಮಾಝಿಯಾ ಭಾವನಾ ಮನ । ಸಾವಧಾನ ರಾಖಾವೇ ।೩೫೮॥ ಸಾವಧಾನ ಕರಿತಾ ಭಜನ । ಏಕಾಗ್ರ ಧರಿತಾ ಮಾಝೇ ಧ್ಯಾನ । ತೇಥ ಅತ್ಯಂತ ಜೇ ಬಾಧಕಪಣ । ತೇ ತ್ಯಾಗ ಲಕ್ಷಣ ಹರಿಬೋಲೇ ।೩೫೯॥

ಸ್ತ್ರೀಣಾಂ ಸ್ತ್ರೀಸಂಗಿನಾಂ ಸಂಗ ತ್ಯಕ್ತ್ವಾ ದೂರತ ಆತ್ಮವಾನ್ ।
ಕ್ಷೇಮೇ ವಿವಿಕ್ತ ಆಸೀನಶ್ಚಿಂತಯೇ ನ್ಮಾಮತಂದ್ರಿತಃ ।೨೯॥

ಅರ್ಥ :-ಸ್ತ್ರೀಯರ ಮತ್ತು ಸ್ತ್ರೀಸಂಗದಲ್ಲಿರುವ ಜನರ ಸಂಗತಿಯನ್ನು ಬಿಟ್ಟುಕೊಟ್ಟು ಧೈರ್ಯವಾಗಿ, ನಿರ್ಭಯದಿಂದ ನಿರ್ಜನ ಸ್ಥಳದಲ್ಲಿ ಕುಳಿತುಕೊಂಡು ಆಲಸ್ಯವನ್ನು ಮಾಡದೇ ನನ್ನ ಚಿಂತನೆಯನ್ನು ಮಾಡಬೇಕು.

ಜೋ ಮಜಲಾಗೀ ಆರ್ತಭೂತ । ತೇಣೇ ಸಾಂಡಾವೀ ಸ್ತ್ರೀಸಂಗಾಚೀ ಮಾತ । ಮೀ ಚಿಂತಾವಾ ಭಗವಂತ । ತೇಣೇ ಏಕಾಂತ ಸೇವಾವಾ ।೩೬೦॥ ಸ್ತ್ರಿಯೇಚ್ಯಾಹೀ ಪರೀಸ ವೋಖಟೀ । ಸಂಗತಿ ಸ್ತ್ರೈಣಾಂಚೀ ಅತಿಖೋಟೀ । ತ್ಯಾಂಸೀ ನ ವ್ಹಾವೀ ಭೇಟೀಗೋಠೀ । ನ ಪಹಾವೇ ದಿಠೀ ದುರೋನೀ ।೩೬೧॥ ಸಾಧಕೇ ಕಾಯಾವಾಚಾಚಿತ್ತೀ । ಸಾಂಡೂನಿ ದೋಹೀಂಚೀ ಸಂಗತೀ । ಪರತೋನಿ ಸ್ಫುರೇನಾ ಸ್ಫೂರ್ತಿ । ಐಶೀ ದೃಢ ಸ್ಥಿತೀ ಕರಾವೀ ।೩೬೨॥ ಕೇವಳ ಏಕಾಂತ ಜೇ ವಿಜನ । ಪ್ರಶಸ್ತ ಆಣಿ ಪವಿತ್ರಸ್ಥಾನ । ತೇಥೇ ಘಾಲೋನಿಯಾ ಆಸನ । ಮಾಝೇ ಚಿಂತನ ಕರಾವೇ ।೩೬೩॥ ಕರೋನಿ ಆಳಸಾಚೀ ಬೋಳವಣ। ಧರೂನಿ ನಿಜವೃತ್ತೀ ಸಾವಧಾನ । ತ್ಯಾವರೀ ಕರಾವೇ ಮಾಝೇ ಧ್ಯಾನ । ಏಕಾಗ್ರ ಮನ ರಾಖೂನೀ ।೩೬೪॥ ಮಾಝೇ ವಿಧ್ವಂಸೋನಿ ಧ್ಯಾನ । ಮಾಝೇ ಪ್ರಾಪ್ತೀ ಆಡ ವಿಘ್ನ । ಸಾಧಕಾಂಸೀ ಅತಿಬಂಧನ । ಸ್ತ್ರೀ ಆಣಿ ಸ್ತ್ರೈಣಸಂಗತೀ ।೩೬೫॥

ನ ತಥಾಽಸ್ಯ ಭವೇತ್ಕ್ಲೇಶೋ ಬಂಧಶ್ಚಾನ್ಯಪ್ರಸಂಗತಃ ।
ಯೋಷಿತ್ಸಂಗದ್ಯಥಾ ಪುಂಸೋ ಯಥಾ ತತ್ಸಂಗೀ ಸಂಗತಃ ।೩೦॥

ಅರ್ಥ :-ಪ್ರಿಯ ಉದ್ಧವಾ, ಸ್ತ್ರೀಯರ ಸಂಗ ಮತ್ತು ಸ್ತ್ರೀಲಂಪಟರ ಸಂಗ ಇವುಗಳಿಂದ ಪುರುಷನಿಗೆ ಅತಿಶಯ ಕ್ಲೇಶವನ್ನು ಭೋಗಿಸಬೇಕಾಗುವುದು. ಹಾಗೂ ಆತನು ಬಂಧನದಲ್ಲಿ ಬೀಳುವನು. ಈ ಪ್ರಕಾರದ ಕ್ಲೇಶ, ಬಂಧನಗಳು ಇತರ ಯಾವ ಪ್ರಕಾರದ ಸಂಗದಿಂದಲೂ ಆಗುವುದಿಲ್ಲ.

ಅದರಂತೆ ಯಾರು ಇಹಪರಲೋಕದಲ್ಲಿ ಸೌಂದರ್ಯದೊಂದಿಗೆ ಮನದಲ್ಲಿ ಲೋಭದಿಂದ ಸಿಲುಕಿಕೊಳ್ಳುವರೋ ಮತ್ತು ಅವಿಚಾರದಿಂದ ಮನಸ್ಸಿನಲ್ಲಿ ಮೋಹದ ಬಲೆಯಲ್ಲಿ ಸಿಕ್ಕಿಕೊಳ್ಳುವರೋ, ಅವರು ಅನೇಕ ಉಪಾಯಗಳಿಂದ ಹೇಗೆ ಕಷ್ಟಗಳನ್ನು ಸೋಸುವರೆಂಬುದನ್ನು ನೋಡಿರಿ ।೩೫೬॥ ಇಷ್ಟೊಂದು ಕಷ್ಟಗಳನ್ನು ಸೋಸುತ್ತ ಸಾರ್ವಭೌಮ ಪದವಿಯನ್ನು ಪಡೆದುಕೊಂಡರೂ ಸಹ ಅವೆಲ್ಲವೂ ಸ್ವಪ್ನದಲ್ಲಿನ ಮನೋರಥಗಳಂತೆ ನಶ್ವರವೇ ಆಗಿರುವುವು ।೩೫೭॥ ಆದ್ದರಿಂದ ವಿಷಯಗಳ ಧ್ಯಾನವನ್ನು ಬಿಟ್ಟು ನನ್ನ ಭಜನೆಯನ್ನು ಮಾಡಬೇಕು ಮತ್ತು ನನ್ನಲ್ಲಿಯೇ ಯಾವಾಗಲೂ ಭಾವವನ್ನು ಇಡುವ ವಿಷಯದಲ್ಲಿ ಮನಸ್ಸಿನ ಜಾಗೃತೆಯನ್ನು ಕಾಯಬೇಕು ।೩೫೮॥ ಸಾವಧಾನ ಚಿತ್ತದಿಂದ ನನ್ನ ಭಜನೆಯನ್ನು ಮಾಡುತ್ತಿರಲು ಮತ್ತು ಏಕಾಗ್ರ ಚಿತ್ತದಿಂದ ನನ್ನ ಧ್ಯಾನವನ್ನು ಮಾಡುತ್ತಿರಲು, ಅವುಗಳಲ್ಲಿ ಬಾಧೆಗಳು ಹೇಗೆ ಹುಟ್ಟುವುವು ಎಂಬುದಕ್ಕೆ ಈಗ ಸ್ವತಃ ಶ್ರೀಕೃಷ್ಣನು ಹೇಳುವನು ।೩೫೯॥

ಯಾರು ನನ್ನ ಪ್ರಾಪ್ತಿಗಾಗಿ ಅತ್ಯಂತ ಆತುರರಾಗಿರುವರೋ, ಅವರು ಪ್ರಥಮದಲ್ಲಿ ಸ್ತ್ರೀಸಂಗತಿಯ ಮಾತೇ ಎತ್ತಕೂಡದು. ಇವರು ಏಕಾಂತದಲ್ಲಿ ಕುಳಿತುಕೊಂಡು ಭಗವಂತನ ಚಿಂತನೆಯನ್ನು ಮಾಡಬೇಕು ।೩೬೦॥ ಸ್ತ್ರೀ ಸಂಗತಿಯಲ್ಲಿರುವವರು ಸ್ತ್ರೀಯರಿಗಿಂತಲೂ ಅತಿ ಕೆಟ್ಟವರಾಗಿರುವರು. ಇವರ ಸಂಗತಿಯನ್ನು ಎಂದಿಗೂ ಮಾಡಕೂಡದು. ಇವರ ಭೇಟಿಯನ್ನು ಮಾಡಕೂಡದು, ಇವರಲ್ಲಿ ಏನನ್ನೂ ಮಾತನಾಡಕೂಡದು. ಹೆಚ್ಚಿಗೇನು ಹೇಳಬೇಕು, ಇವರನ್ನು ದೂರದಿಂದಲೂ ನೋಡಕೂಡದು ।೩೬೧॥ ಸಾಧಕನಾಗಿರುವವನು ಕಾಯಾ, ವಾಚಾ, ಮನದಿಂದ ಸ್ತ್ರೀ ಮತ್ತು ಸ್ತ್ರೀಲಂಪಟನಾಗಿರುವ ಈ ಈರ್ವರ ಸಂಗತಿಯನ್ನು ಬಿಟ್ಟು ಬಿಡಬೇಕು. ಹಾಗೆಯೇ ಅವರತ್ತ ಪುನಃ ಮನಸ್ಸು ಹರಿಯದಂತೆ ದೃಢವಾದ ನಿಶ್ಚಯ ಮಾಡಬೇಕು ।೩೬೨॥ ತದನಂತರ ಯಾರೂ ಇರದ ಪರಿಪೂರ್ಣವಾಗಿ ಪ್ರಶಸ್ತವಾಗಿರುವ ಮತ್ತು ಪವಿತ್ರವಾಗಿರುವ ಸ್ಥಳದಲ್ಲಿ ಏಕಾಂತನಾಗಿ ನನ್ನ ಚಿಂತನೆಯನ್ನು ಮಾಡಬೇಕು ।೩೬೩॥ ಸಂಪುರ್ಣ ಆಲಸ್ಯವನ್ನು ಬಿಟ್ಟುಕೊಟ್ಟು ತಮ್ಮ ವೃತ್ತಿಯನ್ನು ಜಾಗೃತವನ್ನಾಗಿಡಬೇಕು. ಮತ್ತು ಏಕಾಗ್ರ ಮನಸ್ಸಿನಿಂದ ನನ್ನ ಧ್ಯಾನವನ್ನು ಮಾಡಬೇಕು ।೩೬೪॥ ಆದರೆ ನನ್ನ ಭಕ್ತರಿಗೆ ಸ್ತ್ರೀ ಮತ್ತು ಸ್ತ್ರೀ ಲಂಪಟ ಪುರುಷರು ಈ ಎರಡು ಮಾತ್ರ ಬಹಳ ಬಂಧನಕಾರಕವಾಗಿರುವುವು. ಇವುಗಳೇ ನನ್ನ ಧ್ಯಾನವನ್ನು ನಷ್ಟಗೊಳಿಸುವುವು. ಮತ್ತು ವಿಘ್ನರೂಪದಿಂದ ನನ್ನ ಪ್ರಾಪ್ತಿಗಾಗಿ ಅಡ್ಡಾಗಿ ನಿಲ್ಲುವುವು. ।೩೬೫॥

ಅವಿದ್ಯೇಚಾ ಅನಂತಕೋಟೀ । ಜಾಣ ಪಾ ಸ್ತ್ರೀಸಂಗಾಚೇ ಪೋಟೀ । ಅಧರ್ಮಾಚಾ ಭಡಕಾ ಉಠೀ । ಯೋಷಿತಾ ದೃಷ್ಟೀ ದೇಖತಾ ।೩೬೬॥ ಜೇ ಮಹಾಮೋಹಾಚೇ ಮೇಳವಣ । ಜೇ ಖವಳಲ್ಯಾ ಕಾಮಾಚೇ ಇಂಧನ । ಜೇ ಜೀವಾಚೇ ಪರಮ ಮೋಹನ । ಅಧಃಪತನ ತೇ ಯೋಷಿತಾ ।೩೬೭॥ ಜೇ ಮದನಾಚೇ ತಿಖಟ ಬಾಣ । ಜೇ ಮಾಯೇಚೇ ಚಕ್ರ ಜಾಣ । ಜೇ ಅಂಧತಮಾಚೇ ಪೂರ್ಣ । ಭರಿತೇ ತೇ ಜಾಣ ಯೋಷಿತಾ ।೩೬೮॥ ಹೋ ಕಾ ಜೇಚಿಯೇ ಸಂಗತೀ । ಆಂಧಳೀ ಹೋಯ ಜ್ಞಾನಶಕ್ತೀ । ತೇ ವಾಢವೀ ನಾನಾ ಆಸಕ್ತೀ। ಜಿಚೇನಿ ವಿಸ್ಮೃತೀ ನಿಜಸ್ವಾರ್ಥಾ ।೩೬೯॥ ಜಿಚೇನಿ ಸಂಸಾರ ಬಹುವಸ । ಜಿಚೇನಿ ಅಸೋಸ ಗರ್ಭವಾಸ । ಜಿಚೇನಿ ವಿಷಯವಿಲಾಸ । ಜೇ ವಜ್ರಪಾತ ಜೀವಾಚಾ ।೩೭೦॥ ಜೇ ಅಖಂಡ ಸೋಶೀ ದುಃಖಶೋಕ । ತೇ ಸದಾ ಸೋಶೀ ನರಕವೋಕ । ತೇ ಮಾತಾ ಅನಾಪ್ತ ಕರೂನಿ ದೇಖ । ಸ್ತ್ರೀ ಆವಶ್ಯಕ ಆಪ್ತ ಹೋಯ ।೩೭೧॥ ಜೇ ಮಾತೃಸ್ನೇಹಾತೇ ತೋಡವೀ । ಜೇ ಬಂಧುಸ್ನೇಹಾತೇ ವಿಘಡವೀ । ಜೇ ಸದಾ ಗೋವೀ ಹಾವಭಾವೀ । ಅಧರ್ಮಅಟವೀ ಜೇ ಪಾಡೀ ।೩೭೨॥ ಜಿಚೇ ಕಟಾಕ್ಷ ಅತಿತಿಖ । ಜಿವ್ಹಾರೀ ರುತಲೇ ದೇಖ । ಜೇ ಜೀವಾಚೇ ವ್ಯಾಮೋಹಕ । ಜಿಚೇ ಚಢಲೇ ವಿಖ ಉತರೇನಾ ।೩೭೩॥ ಏವಢೀ ಬಾಧಾ ಜಾಣ ಸ್ತ್ರೀಸಂಗತೀ । ಜೋ ವಾಂಛೂ ಪಾಹೇ ಮಾಝೀ ಪ್ರಾಪ್ತೀ । ತೇಣೇ ಸಾಂಡಾವೀ ಸ್ತ್ರೀಯೇಚೇ ಆಸಕ್ತೀ । ಹೃದಯೀ ಪ್ರೀತೀ ನ ರಾಖಾವೀ ।೩೭೪॥ ಸ್ತ್ರೀ ಆಠವತಾಂಚಿ ಚಿತ್ತಾ । ಉಚ್ಛೇದೀ ಜ್ಞಾನಧ್ಯಾನಅವಸ್ಥಾ । ಏವಢೀ ಸ್ತ್ರೀಸಂಗಬಾಧಕತಾ । ತ್ಯಾಹೂನಿ ಅಧಿಕತಾ ಸ್ತ್ರೈಣಸಂಗೇ ।೩೭೫॥ ಸ್ತ್ರೀಸಂಗಾಚ್ಯಾ ಮೋಹಮದಾ । ಸುಟಕಾ ಆಹೇ ಯದಾಕದಾ । ಪರೀ ಸ್ತ್ರೈಣಸಂಗತೀಚೇ ಬಾಧಾ । ತೇ ಆಪದಾ ಅನಿವಾರ ।೩೭೬॥ ಚೂಡಾಲಾ ಸ್ತ್ರೀಯೇಚೇ ಸಂಗತೀ । ತರಲಾ ಶಿಖಿಧ್ವಜ ಭೂಪತೀ । ನಾತರೀ ಮದಾಲಸೇಚೇ ಸಂಗತೀ । ತರಲಾ ನೃಪತೀ ಕುವಲಯಾಶ್ವ ।೩೭೭॥ ಹೋ ಕಾ ಲೀಲೇನೇ ಕರೋನಿ ಭಕ್ತೀ । ಪ್ರಸನ್ನಕೇಲೀ ಸರಸ್ವತೀ । ತಿಚಾ ಉದ್ಧರಿಲಾ ನಿಜಪತೀ । ಹೇ ಬೋಲಿಲೇ ಗ್ರಂಥೀ ವಸಿಷ್ಠೇ ।೩೭೮॥ ಯಾಪರೀ ಸ್ತ್ರೀಸಂಗತೀ । ಉದ್ಧರಿಲೇ ಐಕಿಜೇತೀ । ಪರೀ ಸ್ತ್ರೈಣಾಚೇ ಸಂಗತೀ। ಉದ್ಧಾರಾ ಗತೀ ಅಸೇನಾ ।೩೭೯॥

ಅವಿದ್ಯೆಯ ಅನಂತ ಕೋಟಿಗಳು ಸ್ತ್ರೀಸಂಗತಿಯಲ್ಲಿ ತುಂಬಿಕೊಂಡಿರುವುವು. ಸ್ತ್ರೀಯಳನ್ನು ಕೇವಲ ಕಣ್ಣುಗಳಿಂದ ನೋಡಿದರೂ ಕೂಡ ಅಧರ್ಮದ ಜ್ವಾಲೆಯು ಉರಿದೇಳುವುದು ।೩೬೬॥ ಸ್ತ್ರೀಯು ಮಹಾಮೋಹದ ರಾಶಿಯಾಗಿರುವಳು, ಸ್ತ್ರೀಯು ಪ್ರಜ್ವಲಿಸುವ ಕಾಮಾಗ್ನಿಯ ಕಾಷ್ಠವಾಗಿರುವಳು, ಸ್ತ್ರೀಯು ಜೀವಕ್ಕೆ ಅತ್ಯಂತ ಮೋಹಕಾರಕಳಾಗಿರುವಳು, ಪುರುಷನ ಅಧಃಪಾತಕ್ಕೆ ಕಾರಣಳು ಸ್ತ್ರೀಯೇ ಆಗಿರುವಳು ।೩೬೭॥ ಸ್ತ್ರೀಯು ಮದನನ ತೀಕ್ಷ್ಣವಾದ ಬಾಣವಾಗಿರುವಳು, ಸ್ತ್ರೀಯು ಮಾಯೆಯ ಚಕ್ರವಾಗಿರುವಳು, ಅಂಧತಮ ನರಕದ ಪೂರ್ಣ ತುಂಬಿದ ಕುಂಡವಾಗಿರುವಳು. ಇದನ್ನು ಲಕ್ಷದಲ್ಲಿಡು ।೩೬೮॥ ಈಕೆಯ ಸಂಗತಿಯಿಂದ ಜ್ಞಾನಶಕ್ತಿಯೂ ಕೂಡ ಕುರುಡಾಗಿಬಿಡುವುದು. ಇದು ಅನೇಕ ಪ್ರಕಾರಗಳ ಆಸಕ್ತಿಗಳನ್ನು ಬೆಳೆಯಿಸುತ್ತಿರುವುದು. ಈಕೆಯಿಂದಲೇ ನಮ್ಮ ನಿಜವಾದ ಸ್ವಾರ್ಥವು ಮರೆತುಹೋಗುವುದು ।೩೬೯॥ ಈಕೆಯಿಂದಲೇ ಸಂಸಾರದ ಬಳ್ಳಿಯು ಬೆಳೆಯುತ್ತ ಸಾಗುವುದು. ಈಕೆಯಿಂದಲೇ ಅಸಂಖ್ಯ ಪ್ರಕಾರದ ಗರ್ಭವಾಸಗಳನ್ನು ಸೋಸಬೇಕಾಗುವುದು. ಈಕೆಯಿಂದಲೇ ವಿಷಯವಿಲಾಸದ ಹವ್ಯಾಸವು ಬೆಳೆಯುತ್ತಿರುವುದು. ಈಕೆಯಿಂದಲೇ ಜೀವಕ್ಕೆ ವಜ್ರಪ್ರಾಯ ಪಾಶವು ಬೀಳುವುದು ।೩೭೦॥ ಯಾರು ನಿರಂತರವಾಗಿ ದುಃಖಶೋಕಗಳನ್ನು ಸಹಿಸಿಕೊಂಡಿರುವ, ಸತತವಾಗಿ ಮಲಮೂತ್ರಗಳ ದುರ್ಗಂಧ ಸಹಿಸಿರುವ, ಅಂತಹ ತನ್ನ ಪ್ರತ್ಯಕ್ಷ ತಾಯಿಯನ್ನು ಶತ್ರುವಿನಂತೆ ನಡೆಸುತ್ತ ತನ್ನ ಹೆಂಡತಿಯಳನ್ನು ಆಪ್ತಳನ್ನಾಗಿ ಮಾಡುವುದು ।೩೭೧॥ ಇದು ಮಾತೃಪ್ರೇಮವನ್ನು ಮುರಿಯುವುದು, ಇದು ಬಂಧುಪ್ರೇಮದಲ್ಲಿ ದ್ವೇಷವನ್ನು ಹುಟ್ಟಿಸುವುದು. ಆಕೆಯ ಹಾವಭಾವದಲ್ಲಿ ನಿರಂತರವಾ ಸಿಲುಕಿಸುವುದು. ಇದು ಅಧರ್ಮರೂಪ ಅರಣ್ಯದಲ್ಲಿ ನೂಕಿಬಿಡುವುದು ।೩೭೨॥ ಈಕೆಯ ನೇತ್ರಕಟಾಕ್ಷವು ಅತ್ಯಂತ ತೀಕ್ಷ್ಣವಾಗಿರುವುದು, ಪುರುಷನ ಅಂತಃಕರಣದಲ್ಲಿ ಸಿಕ್ಕಿಕೊಂಡು ಜೀವಕ್ಕೆ ವ್ಯಾಮೋಹಗೊಳಿಸುವುದು, ಈಕೆಯಿಂದ ಏರಿಕೊಂಡ ವಿಷವು ಇಳಿಯುವುದೇ ಇಲ್ಲ ।೩೭೩॥ ಇಷ್ಟೊಂದು ಬಾಧೆಯು ಸ್ತ್ರೀಸಂಗತಿಯಿಂದಾಗುವುದು. ಆದ್ದರಿಂದ ಯಾರು ನನ್ನ ಪ್ರಾಪ್ತಿಯ ಇಚ್ಛೆಯನ್ನು ಮಾಡುವರೋ, ಅವರು ಸ್ತ್ರೀಯಲ್ಲಿನ ಆಸಕ್ತಿಯನ್ನು ದೂರ ಚೆಲ್ಲಬೇಕು. ಹೃದಯದಲ್ಲಿ ಆಕೆಯ ಪ್ರೇಮವನ್ನು ಸ್ವಲ್ಪವೂ ಇಡಕೂಡದು ।೩೭೪॥ ಮನದಲ್ಲಿ ಸ್ತ್ರೀಯಳ ಸ್ಮರಣೆಯಾಗುತ್ತಲೇ ಜ್ಞಾನಧ್ಯಾನದ ಸ್ಥಿತಿಯು ವಿಧ್ವಂಸವಾಗುವುದು. ಇಷ್ಟೊಂದು ಸ್ತ್ರೀಸಂಗತಿಯ ಬಾಧೆವಿರುವುದು. ಆದರೆ ಸ್ತ್ರೀ ಲಂಪಟ ಪುರುಷನ ಸಂಗತಿಯು ಮಾತ್ರ ಇದಕ್ಕಿಂತಲೂ ಅಧಿಕವಾಗಿಯೇ ಬಾಧೆ ಇರುವುದು ।೩೭೫॥ ಸ್ತ್ರಿಸಂಗತಿಯ ಮೋಹದಿಂದ ಎಂದಾದರೂ ಬಿಡುಗಡೆಯಾಗಬಲ್ಲದು, ಆದರೆ ಸ್ತ್ರೀಲಂಪಟನ ಬಾಧೆಯು ಮಾತ್ರ ಅನಿವಾರ್ಯವಾಗಿರುವುದು ।೩೭೬॥ ಚೂಡಾಲಾ ಎಂಬ ಸ್ತ್ರೀಯಳ ಸಂಗತಿಯಿಂದ ಶಿಖಿಧ್ವಜ ರಾಜನ ಉದ್ಧಾರವಾಯಿತು. ಹಾಗೆಯೇ ಮದಾಲಸಾ ಸ್ತ್ರೀಯಳ ಸಂಗತಿಯಿಂದ ಕುವಲಯಾಶ್ವ ರಾಜನು ಉದ್ಧಾರನಾದನು ।೩೭೭॥ ಲೀಲಾ ಎಂಬ ಸ್ತ್ರೀಯಳು ಭಕ್ತಿಯನ್ನಾಚರಿಸಿ ಸರಸ್ವತಿಯನ್ನು ಪ್ರಸನ್ನಗೊಳಿಸಿದಳು ಮತ್ತು ಆಕೆಯಿಂದ ತನ್ನ ಪತಿಯ ಉದ್ಧಾರವನ್ನು ಮಾಡಿದಳು. ಇದನ್ನು ವಸಿಷ್ಠಋಷಿಗಳು ತಮ್ಮ ಗ್ರಂಥದಲ್ಲಿ ಹೇಳಿರುವರು ।೩೭೮॥ ಈ ಪ್ರಕಾರವಾಗಿ ಸ್ತ್ರೀಯರ ಸಂಗತಿಯಿಂದ ಪುರುಷರ ಉದ್ಧಾರವಾಗಿರುವುದನ್ನು ಕೇಳುತ್ತೇವೆ. ಆದರೆ ಸ್ತ್ರೀಲಂಪಟ ಪುರುಷನ ಸಂಗತಿಯಿಂದ ಸರ್ವಥಾ ತರಣೋಪಾಯವು ಇರುವುದಿಲ್ಲ ।೩೭೯॥

ಜೋ ಕಾ ಸ್ತ್ರೀಯೇಚಾ ಅಂಕಿಲಾ । ಜೋ ಸ್ತ್ರೀಯೇಸೀ ಜೀವೇ ವಿಕಿಲಾ । ಜೋ ಸ್ತ್ರೀಯೇಚಾ ಪೋಸಣಾ ಝಾಲಾ । ತಿಚೇ ಬೋಲಾಮಾಜೀ ವರ್ತೇ ।।೩೮೦।। ಜೈಶೀ ಕುಲದೇವತಾ ಖೇಚರೀ । ತೈಸೇ ಸ್ತ್ರೀಯೇಸೀ ಪೂಜ್ಯ ಕರೀ । ಮಗ ತೀಚಿ ಸೇವೇವರೀ । ನಾನಾ ಉಪಚಾರೀ ನಾಚತ ।।೩೮೧।। ಪಾಳಿಲ್ಯಾ ಶ್ವಾನಾಚೇ ಪರಿಪಾಟೀ । ಲಾವಿಲ್ಯಾ ಲಾಗೇ ಸುಹೃದಾಪಾಠೀ । ತ್ಯಾ ಹಡಕಿಲಿಯಾ ಶೇವಟೀ । ಕಾಮಥಾಳೋರಾ ಪುಸಾಟೀ ಘಾಲೂನಿ ಪಡೇ ।।೩೮೨।। ಧಡಗೋಡ ಉತ್ತಮ ಪದಾರ್ಥಾ । ಆಪಣ ಭೋಗಿನಾ ಸರ್ವಥಾ । ತೇ ದೇಊನ ಸ್ತ್ರಿಯೇಚ್ಯಾ ಹಾತಾ । ಆಪುಲೀ ಸತ್ತಾ ನಿವರ್ತವೀ ।।೩೮೩।। ಇಸೀ ಜೈ ವಿರುದ್ಧ ವಾಟೇಲ । ತೈ ಹೇ ಬ್ರಹ್ಮಾಂಡ ಪಾಲಥೇಲ । ಇಚಾ ಉಲ್ಲಂಘಿತಾ ಬೋಲ । ಕ್ಷೀರಾಬ್ಧಿ ಸುಕೇಲ ಸುಖಾಚಾ ।।೩೮೪।। ನಾಹೀ ದೇವೋ ಕುಳದೇವಾ ಪೂಜಣೇ । ಮಾಯಬಾಪಾಂತೇ ವಂಚಣೇ । ಶೇಖೀ ಗುರೂತೇಹೀ ಠಕಣೇ । ಪರೀ ಸರ್ವಸ್ವ ದೇಣೇ ಸ್ತ್ರೀಯೇಸೀ ।।೩೮೫।। ಏವಂ ಮಾಕಡ ಜೈಸೇ ಗಾರುಡ್ಯಾಚೇ । ತೈಸಾ ಸ್ತ್ರಿಯೇಚೇನಿ ಛಂದೇ ನಾಚೇ । ಐಸಿಯಾ ಸ್ತ್ರೈಣಾಚೇ ಸಂಗತೀಚೇ । ತೇಥೇ ಸುಖ ಕೈಚೇ ಸಾಧಕಾ ।।೩೮೬।। ಜ್ಯಾಚ್ಯಾ ಐಕತಾ ಸ್ತ್ರಿಯೇಚ್ಯಾ ಗೋಠೀ । ಸಜ್ಞಾನಾಸಹೀ ಕಾಮು ಉಠೀ । ಜೋ ಲಾವೀ ಯೋಷಿತಾಪಾಠೀ । ಉಠಾಉಠೀ ಸಕಾಮತ್ವೇ ।।೩೮೭।। ಐಸಿಯಾ ಸ್ತ್ರೈಣಾಚೇ ಸಂಗತೀ । ಕೈಚೀ ಸಾಧಕಾ ಸುಖಪ್ರಾಪ್ತೀ । ತೋ ಘಾಲೀಲ ಅಧೋಗತೀ । ಅಂಧತಮಾಪ್ರತೀ ನೇಈಲ ।।೩೮೮।। ಯಾಲಾಗೀ ಸ್ತ್ರೈಣಾಚೀ ಕಥಾ । ಕಾನೀ ನಾಯಕಾವೀ ವಾರ್ತಾ । ತ್ಯಾಚಾ ವಾರಾಹೀ ಲಾಗತಾ । ತೇಥೂನಿ ಸರ್ವಥಾ ಪಳಾವೇ ।।೩೮೯।। ತ್ಯಾಚೀ ನ ಘ್ಯಾವೀ ಭೇಟೀ । ತ್ಯಾಸೀ ನ ಕರಾವೀ ಗೋಠೀ । ತೋ ನ ಪಹಾವಾ ದಿಠೀ । ನ ಲಾಗಾವೇ ಪಾಠೀ ಸ್ತ್ರೈಣಾಚಿಯೇ ।।೩೯೦।। ಸ್ತ್ರೈಣ ಪುಢೇ ವಾಟೇ ಜಾಯೇ । ತ್ಯಾಚ್ಯಾ ಮಾರ್ಗೀ ಮಾಗೂ ಉರಲಾ ರಾಹೇ । ತೇಹೀ ಆಪಣ ಚುಕವಾವೀ ಭೋಯೇ । ಯೇಥವರೀ ಪಾಹೇ ತ್ಯಾಗಾವಾ ।।೩೯೧।। ಸ್ತ್ರೀ ಆಣಿ ಸ್ತ್ರೈಣಾಚೇ ಸಂಗತೀ । ಜೈಸೀ ಹೋಯ ದುಃಖಪ್ರಾಪ್ತೀ । ತೈಸೇ ದುಃಖ ತ್ರಿಜಗತೀ । ಮಾಜೇ ನಿಶ್ಚಿತೀ ಅಸೇನಾ ।।೩೯೨।।

ಯಾವ ಪುರುಷನು ತನ್ನ ಹೆಂಡತಿಯ ಆಧೀನನಾಗಿರುವನೋ, ತನ್ನ ಜೀವವನ್ನೇ ಆಕೆಗಾಗಿ ಮಾರಿಕೊಂಡಿರುವನೋ, ಆಕೆಯು ಹೇಳಿದಂತೆ ಕೇಳುವ ಗುಲಾಮನಾಗಿರುವನೋ, ಆಕೆಯ ವಚನದಂತೆ ವರ್ತಿಸುತ್ತಿರುವನೋ ।।೩೮೦।। ಆಕಾಶದಲ್ಲಿ ಸಂಚಾರ ಮಾಡುವ ಕುಲದೇವತೆಗೆ ಪೂಜ್ಯಯಂತೆ ತನ್ನ ಹೆಂಡತಿಗೆ ಪೂಜ್ಯಳನ್ನಾಗಿ ವರ್ತಿಸುವನೋ, ಆಕೆಯ ಉಪಚಾರಕ್ಕಾಗಿ ಸದಾ ನರ್ತಿಸುತ್ತಿರುವನೋ ।।೩೮೧।। ಸಾಕಿದ ನಾಯಿಯಂತೆ ಯಾವನು ಸ್ತ್ರೀಯಳ ಆಜ್ಞೆಯಲ್ಲಿರುವನೋ, ಆಕೆಯು ''ಛೂ'' ಎಂದು ಅನ್ನುವುದೇ ತಡ, ಕೂಡಲೇ ಯಾವನು ತನ್ನ ನಿರಪೇಕ್ಷವಾಗಿ ಉಪಕಾರ ಮಾಡುವ ಸುಹೃದಯಿಗಳವರ ಬೆನ್ನು ಹತ್ತುವನೋ ಮತ್ತು ಆಕೆಯು ''ಹಚಾ'' ಎನ್ನಲು ನಾಯಿಯು ತನ್ನ ಬಾಲವನ್ನು ಹಿಂದಿನಿಂದ ಮಡಚಿಕೊಂಡು ನೆಲಕ್ಕೆ ಹೇಗೆ ಬಿದ್ದುಕೊಳ್ಳುವುದೋ, ಆದರಂತೆ ಇವನು ಆಕೆಯ ಆಶ್ರಯದಲ್ಲಿ ಜೊಲ್ಲು ಸೋರಿಸುತ್ತ ಬಿದ್ದುಕೊಂಡಿರುವನು ।।೩೮೨।। ಸುಂದರ, ಉತ್ತಮ ಮತ್ತು ಮಧುರವಾದ ಯಾವುದೇ ಪದಾರ್ಥವು ಆತನಿಗೆ ಸಿಗಲು, ಆಗ ಅವನು ತಾನು ಸ್ವತಃ ಅದನ್ನು ಉಪಭೋಗಿಸದೇ, ತನ್ನ ಹೆಂಡತಿಯ ಸ್ವಾಧೀನ ಮಾಡುವನು. ಆ ಪದಾರ್ಥದ ತನ್ನ ಹಕ್ಕನ್ನು ತಾನೇ ಕಳೆದುಕೊಳ್ಳುವನು ।।೩೮೩ ।।ತಾನು ಮಾಡುವ ಕೃತಿಗಳು ಒಂದು ವೇಳೆ ಈಕೆಯ ಮನಸ್ಸಿಗೆ ಬಾರದೇ ಹೋದರೆ ಬ್ರಹ್ಮಾಂಡವೇ ಕಳಚಿ ಬಿದ್ದೀತೆಂದು ಭಾವಿಸುವನು. ಆಕೆಯ ಶಬ್ದವನ್ನು ವ್ಯರ್ಥಗೊಳಿಸಿದರೆ ಸುಖದ ಕ್ಷೀರಸಾಗರವು ಒಣಗೀತೆಂದು ಭಾವಿಸುವನು ।।೩೮೪।। ದೇವ ದೇವತೆಯರ, ಕುಲದೇವತೆಯ ಪೂಜೆಯನ್ನು ಮಾಡದೇ, ತಂದೆ ತಾಯಿಯವರನ್ನು ಮೋಸಗೊಳಿಸುತ್ತ, ಕೊನೆಗೆ ಗುರುಗಳವರಿಗೂ ಠಕ್ಕತನ ಮಾಡುತ್ತ, ತನ್ನ ಸರ್ವಸ್ವವನ್ನೂ ತನ್ನ ಸ್ತ್ರೀಯಳ ಚರಣಗಳಿಗೆ ಅರ್ಪಿಸುವನು ।।೩೮೫।। ಒಟ್ಟಿನಲ್ಲಿ ಗಾರುಡಿಗನ ಮಂಗವು ಯಾವ ಪ್ರಕಾರವಾಗಿ ಹೇಳಿದಂತೆ ಕುಣಿಯುವುದೋ, ಆದರಂತೆ ಇವನು ತನ್ನ ಹೆಂಡತಿಯು ಹೇಳಿದಂತೆ ಕುಣಿಯುತ್ತಿರುವನು. ಇಂತಹ ಸ್ತ್ರೀಲಂಪಟ ಪುರುಷನ ಸಂಗತಿಯು ಹತ್ತಿತೆಂದರೆ ಸಾಧಕನಿಗೆ ಯಾವುದೇ ಪ್ರಕಾರದ ಸುಖವು ಲಭಿಸಲಾರದು ।।೩೮೬।। ಇವನ ಮುಖದಿಂದ ಸ್ತ್ರೀಯರ ಮನಮೋಹಕ ವಿಷಯಗಳ ವರ್ಣನೆಯನ್ನು ಕೇಳುತ್ತಲೇ ಜ್ಞಾನೀ ಪುರುಷನೂ ಕೂಡ ಸಕಾಮನಾಗಿಬಿಡುವನು. ಹಾಗೆಯೇ ಕಾಮದ ಆಸಕ್ತಿಯು ನಿರ್ಮಾಣವಾಗಿ ಅವನು ಸ್ತ್ರೀಯಳ ಬೆನ್ನು ಹತ್ತುವನು ।।೩೮೭।। ಇಂತಹ ಸ್ತ್ರೀಲಂಪಟರ ಸಂಗತಿಯಿಂದ ಸಾಧಕರಿಗೆ ಯಾವ ಪ್ರಕಾರದ ಸುಖವೂ ಪ್ರಾಪ್ತಿಯಾಗುವುದಿಲ್ಲ. ಈ ಯಾವ ಸ್ತ್ರೀಲಂಪಟನು ಇವನಿಗೆ ಅಧೋಗತಿಗೆ ಒಯ್ದು ನರಕದಲ್ಲಿ ನೂಕಿಬಿಡುವುದು ।।೩೮೮।। ಅದಕ್ಕಾಗಿಯೇ ಸ್ತ್ರೀಲಂಪಟ ಪುರುಷನ ಕಥೆಯನ್ನು ಎಂದಿಗೂ ಕಿವಿಯಿಂದ ಕೇಳಕೂಡದು. ಅವನ ಗಾಳಿಯೂ ಕೂಡ ಹತ್ತದಂತೆ ಅಲ್ಲಿಂದ ಓಡಿ ಹೋಗಬೇಕು ।।೩೮೯।। ಅವನಿಗೆ ಎಂದೂ ಭೇಟಿಯಾಗಬಾರದು. ಅವನಲ್ಲಿ ಯಾವುದೂ ಮಾತನಾಡಬಾರದು. ಅವನನ್ನು ಕಣ್ಣಿನಿಂದ ಎಂದಿಗೂ ನೋಡಬಾರದು. ಸ್ತ್ರೀಲಂಪಟ ಪುರುಷನ ಬೆನ್ನು ಹತ್ತಕೂಡದು ।।೩೯೦।। ಸ್ತ್ರೀಲಂಪಟ ಪುರುಷನು ಯಾವ ರಸ್ತೆಯಲ್ಲಿ ಮುಂದೆ ಹೋಗುತ್ತಿರುವನೋ, ಅವನ ಹಿಂದೆ ಹೋಗಲು ಒಂದು ವೇಳೆ ರಸ್ತೆಯು ಇದ್ದರೂ ಸಹ ಆ ರಸ್ತೆಯನ್ನು ತ್ಯಜಿಸಿ ಬೇರೆ ಕಡೆ ಹೋಗಬೇಕು. ಇಲ್ಲಿಯವರೆಗೆ ಅವನನ್ನು ತ್ಯಜಿಸಬೇಕಾಗುವುದು ।।೩೯೧।। ಸ್ತ್ರೀ ಮತ್ತು ಸ್ತ್ರೀಲಂಪಟ ಇವರ ಸಂಗತಿಯಿಂದ ಎಷ್ಟೊಂದು ದುಃಖಗಳು ಪ್ರಾಪ್ತವಾಗುವುವೋ, ಅಷ್ಟೊಂದು ದುಃಖಗಳು ಸಂಪೂರ್ಣ ತ್ರಿಭುವನದಲ್ಲಿ ಸಿಗುವುದಿಲ್ಲ ।।೩೯೨।।

ಅತ್ಯಂತ ಸ್ತ್ರೀಕಾಮೀ ವಶತಾ । ತೀ ನಾಂವ ಮುಖ್ಯ ಸ್ತ್ರೈಣತಾ । ಕೇವಳ ಸ್ತ್ರಿಯೇಚೀ ಆಧೀನತಾ । ತೋ ಬಾಧೂ ಪರಮಾರ್ಥಾ ಅತಿನಿಂದ್ಯತ್ವೇ ।೯೩॥ ಆಪುಲೇ ಹೃದಯೀಚೀ ಕಾಮಾಸಕ್ತೀ । ತೇಚಿ ಸ್ತ್ರೀಸಂಗಾಚೀ ದೃಢ ಪ್ರಾಪ್ತೀ । ತೇಥ ಉಪಜಲಿಯಾ ವಿರಕ್ತೀ । ಮಗ ಸ್ತ್ರಿಯೇಚಿ ಪ್ರಾಪ್ತೀ ಕೋಣ ಪುಸೇ ।೯೪॥ ಐಸೇ ಹೃದಯೀಚೇ ಕಣವೇ । ಉದ್ಧವಾಸೀ ಸಾಂಗೀತಲೇ ದೇವೇ । ಹೇ ಐಕೋನಿಯಾ ಉದ್ಧವೇ । ವಿಚಾರು ಜೀವೇ ಆದರಿಲಾ ।೯೫॥ ಅನಿವಾರ ಉಪಜೇ ವಿರಕ್ತೀ । ಜೇಣೇ ಬಾಧೀನಾ ವಿಷಯಾಸಕ್ತೀ । ಐಸೀ ಜೇ ಧ್ಯಾನಸ್ಥಿತೀ । ತೇಚಿ ದೇವಾಪ್ರತಿ ಪುಸತ ।೯೬॥ ಜೇ ಲಾಗಲಿಯಾ ಧ್ಯಾನ । ನ ದಿಸೇ ಸ್ತ್ರೀಪುರುಷ ಭಾನ । ಜೇಣೇ ಉಪಜೇ ಚಿತ್ಸಮಾಧಾನ । ತೈಸೇ ವಿಧಾನ ಪುಸತ ।೯೭॥

ಉದ್ಧವ ಉವಾಚ :-

ಯಥಾ ತ್ವಾಮರವಿಂದಾಕ್ಷ ಯಾದೃಶಂ ವಾ ಯದಾತ್ಮಕಮ್ ।
ಧ್ಯಾಯೇನ್ಮುಮುಕ್ಷುರೇತನ್ಮೇ ಧ್ಯಾನಂ ತ್ವಂ ವಕ್ತುಮರ್ಹಸಿ ।೩೧॥

ಅರ್ಥ :- ಉದ್ಧವನು ಹೇಳಿದನು ; ಹೇ ಕಮಲನಯನನೇ, ಶ್ಯಾಮಸುಂದರನೇ, ಮುಮುಕ್ಷು ಪುರುಷನು ನಿನ್ನನ್ನು ಯಾವ ರೂಪದಿಂದ, ಯಾವ ಪ್ರಕಾರವಾಗಿ ಮತ್ತು ಯಾವ ಭಾವನೆಯಿಂದ ಧ್ಯಾನಿಸುವನು? ಇದನ್ನು ಕೃಪೆಮಾಡಿ ಹೇಳು.

ಉದ್ಧವ ಮ್ಹಣೇ ಕಮಲನಯನಾ । ಮುಮುಕ್ಷು ಕರಿತೀ ತುಝಿಯಾ ಧ್ಯಾನಾ । ತ್ಯಾ ಧ್ಯಾನಾಚೇ ಧ್ಯಾನಲಕ್ಷಣಾ । ಜಗಜ್ಜೀವನಾ ಮಜ ಸಾಂಗೇ ।೯೮॥ ತೇ ಸುಗಣ ಕೀ ನಿರ್ಗುಣ । ಕೋಣ ರೂಪ ಕೈಸಾ ವರ್ಣ । ತೇ ಅವಘೇಹೀ ಸಂಪೂರ್ಣ । ಕೃಪಾಕರೂನ ಮಜ ಸಾಂಗಾ ।೯೯॥ ಜೇಥ ರಿಘತಾ ನುಬಗೇ ಮನ । ಜ್ಯಾಚೇ ಅತ್ಯಂತ ಗೋಡಪಣ। ಜೇ ತುಜಹೀ ಆವಡತೇ ಜಾಣ । ತೇ ಮಜ ಧ್ಯಾನ ಸಾಂಗಾವೇ ।೧೦೦॥ ಐಕೋನಿ ಉದ್ಧವಾಚಾ ಪ್ರಶ್ನ । ಸಾಂಗಾವಯಾ ಉತ್ತಮ ಧ್ಯಾನ । ಪೂರ್ವಪೀಠಿಕಾ ಆಸನ । ಪ್ರಾಣಾಯಾಮಲಕ್ಷಣ ಸಾಂಗತ ।೧೦೧॥

ಶ್ರೀಭಗವಾನುವಾಚ :-

ಸಮ ಆಸನ ಆಸೀನಃ ಸುಮಕಾಯೋ ಯಥಾಸುಖಮ್ ।
ಹಸ್ತಾವುತ್ಸಂಗ ಆಧಾಯ ಸ್ವನಾಸಾಗ್ರಕೃತೇಕ್ಷಣಃ ।೩೨॥

ಅರ್ಥ :- ಭಗವಾನ ಶ್ರೀಕೃಷ್ಣನು ಹೇಳಿದನು. ಅತಿ ಎತ್ತರವಿಲ್ಲದ ಅತಿ ಕೆಳಗಿಲ್ಲದ ಆಸನದ ಮೇಲೆ ಶರೀರವನ್ನು ಸರಳವಾಗಿಟ್ಟು ಸುಖವಾಗಿ ಕುಳಿತುಕೊಳ್ಳಬೇಕು. ಬೆನ್ನು, ಕುತ್ತಿಗೆ, ಮಸ್ತಕ ಸಮಾನವಾಗಿಟ್ಟು ಸುಖವಾಗುವಂತೆ ಕುಳಿತುಕೊಂಡು ಎರಡೂ ಕೈಗಳನ್ನು ತೊಡೆಯ ಮೇಲೆ ಇಡಬೇಕು. ಚಿತ್ತ ಸ್ಥಿರತೆಗಾಗಿ ದೃಷ್ಟಿಯನ್ನು ನಾಸಿಕಾಗ್ರದಲ್ಲಿ ಕೇಂದ್ರೀಕೃತವಾಗಬೇಕು.

ಸ್ತ್ರೀಯಳ ಸರ್ವ ಇಚ್ಛೆಗಳನ್ನು ಪೂರೈಸಲು ಅತ್ಯಂತ ದಕ್ಷ ಉಳ್ಳವನಾಗಿ, ಆಕೆಗೆ ವಶನಾಗುವವನಿಗೆ ಸ್ತ್ರೀಲಂಪಟನೆಂದು ಕರೆಯುವರು.ಕೇವಲ ಸ್ತ್ರೀ ಆಧೀನನಾಗುವಿಕೆಯು ಇದು ಅತ್ಯಂತ ನಿಂದ್ಯವಾಗಿದ್ದು ಪರಮಾರ್ಥಕ್ಕೆ ಬಾಧಕವಾಗಿರುವುದು ।೯೩॥ ತನ್ನ ಹೃದಯದಲ್ಲಿರುವ ಕಾಮಾಸಕ್ತಿಯೇ ಸ್ತ್ರೀಸಂಗತಿಯ ಪ್ರಾಪ್ತಿಗೆ ಮುಖ್ಯ ಕಾರಣೀಭೂತವಾಗಿರುವುದು. ಆದರೆ ಒಂದು ವೇಳೆ ಮನದಲ್ಲಿ ವಿರಕ್ತಿಯು ನಿರ್ಮಾಣವಾಯಿತೆಂದರೆ ಸ್ತ್ರೀಪ್ರಾಪ್ತಿಯ ವಿಷಯಕ್ಕೆ ಯಾರು ಕೇಳಬೇಕು? ।೯೪॥ ಹೀಗೆ ಅಂತಃಕರಣದ ಕಳಕಳಿಯಿಂದ ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು. ಇದನ್ನು ಕೇಳಿದ ಉದ್ಧವನು ಅತ್ಯಂತ ಆದರಭಾವದಿಂದ ಮನದಲ್ಲಿ ವಿಚಾರವನ್ನು ಮಾಡಿದನು ।೯೫॥ ಶ್ರೀಕೃಷ್ಣನಿಗೆ ಹೀಗೆ ಕೇಳಿದನು ; ತೀವ್ರವಾದ ವಿರಕ್ತಿಯಿಂದ ವಿಷಯಾಸಕ್ತಿಯ ಬಾಧೆಯಾಗಲು ಶಕ್ಯವಿಲ್ಲ. ಹಾಗಾದರೆ ಆ ಧ್ಯಾನದ ಅವಸ್ಥೆ ಯಾವುದು? ।೯೬॥ ಯಾವ ಧ್ಯಾನವನ್ನು ಮಾಡಲು ಸ್ತ್ರೀ ಪುರುಷ ಎಂಬ ಭಾನವೇ ತೋರದಂತಾಗುವುದು. ಮತ್ತು ಹೃದಯದಲ್ಲಿ ಜ್ಞಾನಯುಕ್ತ ಸಮಾಧಾನವು ಪ್ರಗಟವಾಗುವುದು. ಅಂತಹ ಧ್ಯಾನದ ಪ್ರಕಾರವನ್ನು ಉದ್ಧವನು ವಿಚಾರಿಸುತ್ತಿರುವನು ।೯೭॥

ಉದ್ಧವನು ಹೀಗೆ ಹೇಳಿದನು; ಹೇ ಕಮಲನಯನನೇ, ಜಗಜ್ಜೀವನ ಶ್ರೀಕೃಷ್ಣನೇ, ಮುಮುಕ್ಷುಗಳು ನಿನ್ನ ಧ್ಯಾನವನ್ನು ಮಾಡುವರು. ಆ ಧ್ಯಾನದ ಲಕ್ಷಣವನ್ನು ನೀನು ನನಗೆ ಹೇಳಬೇಕು ।೯೮॥ ಆ ಯಾವ ಧ್ಯಾನವು ಸಗುಣವಿರುವುದೋ ಅಥವಾ ನಿರ್ಗುಣವೋ? ಅದರ ಸ್ವರೂಪವು ಹೇಗೆ ಇರುವುದು? ಈ ಎಲ್ಲವನ್ನೂ ಯಥಾಸಾಂಗವಾಗಿ ಕೃಪೆ ಮಾಡಿ ನನಗೆ ಹೇಳಬೇಕು ।೯೯॥ ಯಾವ ಧ್ಯಾನಕ್ಕೆ ಮನವು ಎಂದಿಗೂ ಬೇಸರಪಡುವುದಿಲ್ಲ. ಯಾವುದರ ಆನಂದವು ನಿನಗೂ ಪ್ರಿಯವಾಗುವುದು. ಅಂತಹ ಆ ಯಾವ ಧ್ಯಾನವನ್ನು ನೀನು ನನಗೆ ಹೇಳಬೇಕು ।೧೦೦॥ ಉದ್ಧವನ ಪ್ರಶ್ನೆಯನ್ನು ಕೇಳಿ, ಶ್ರೀಕೃಷ್ಣನು ಜ್ಞಾನದ ಪ್ರಕಾರವನ್ನು ಉತ್ತಮವಾಗಿ ಹೇಳುವುದಕ್ಕಾಗಿ, ಪೂರ್ವಪೀಠಿಕಾದಲ್ಲಿ ಆಸನ, ಪ್ರಾಣಾಯಾಮ ಇತ್ಯಾದಿಗಳ ಲಕ್ಷಣಗಳನ್ನು ಹೇಳುತ್ತಿರುವನು ।೧೦೧॥

ಐಕ ಆಸನಾಚೇ ಲಕ್ಷಣ । ಪಾಷಾಣೇ ವ್ಯಾಧಿ ಸಂಭವೇ ಜಾಣ । ಕೇವಳ ಧರಣೀಚೇ ಆಸನ । ತೇ ಅತಿ ಕಠಿಣ ದುಃಖರೂಪ ॥೪೦೨॥ ದಾರುಕಾಸನೇ ನಿರ್ದಯ ಮನ । ಕೋರಡ್ಯಾ ಕಾಷ್ಠಾ ಐಸೇ ಹೋಯ ಜಾಣ । ತೃಣಾಸನೀ ವಿಕಲ್ಪ ಗಹನ । ಜೈಸೇ ಕಾ ತೃಣ ವಿಚಿತ್ರಾಂಕುರೇ ॥೪೦೩॥ ವೃಕ್ಷ ಪಲ್ಲವಾಂವರೀ ಆಸನ । ತೇಣೇ ಚಿತ್ತ ಸದಾ ದೋಲಾಯಮಾನ । ಜಾರಣ ಮಾರಣ ಸ್ತಂಭನ । ತೇಥ ಕಾಳೇ ಆಸನ ಸಾಧಕಾ ॥೪೦೪॥ ಜ್ಞಾನೋಪಲಬ್ಧಿ ಮೃಗಾಜಿನೀ । ಮೋಕ್ಷಸಿದ್ಧೀ ವ್ಯಾಘ್ರಜಿನೀ । ಮೋಕ್ಷಾದಿ ಸರ್ವ ಸಿದ್ಧೀಂಚೀ ಶ್ರೇಣೀ । ಶ್ವೇತಕಂಬಲಾಸನೀ ಸಾಧಕಾ ॥೪೦೫॥ ಭೂಮಿಕಾ ಶುದ್ಧ ಆಣಿ ಸಮಾನ । ಪಾಹೋನಿ ನಿರುಪದ್ರವ ಸ್ಥಾನ । ತೇಥ ರಚಾವೇ ಆಸನ । ಸುಲಕ್ಷಣ ಅನುಕ್ರಮೇ ॥೪೦೬॥ ಕುಶ ವಸ್ತ್ರ ಕಂಬಲಾಜಿನ । ಇಂಹೀ ಯುಕ್ತ ಘಾಲಾವೇ ಆಸನ । ಉಂಚ ನೀಚ ನ ವ್ಹಾವೇ ಜಾಣ । ಸಮಸಮಾನ ಸಮಭಾಗೇ ॥೪೦೭॥ ಉಂಚ ಝಾಲಿಯಾ ಆಸನ ಡೋಲೇ । ನೀಚೇ ಭೂಮಿದೋಷ ಆದಳೇ । ಯಾಲಾಗೀ ಸಮತ್ವೇ ಪ್ರಾಂಜಳೇ । ರಚಾವೇ ಕೋವಳೇ ಮೃದು ಆಸನ ॥೪೦೮॥ ತೇಥ ಶುದ್ಧ ಮುದ್ರಾ ವಜ್ರಾಸನ । ಕಾ ಅಂಬುಜಾಸನಹೀ ಜಾಣ । ಅಥವಾ ಘಾಲಾವೇ ಸಹಜಾಸನ । ಜೇ ಆಸನೀ ಮನ ಸುಖಾವೇ ॥೪೦೯॥ ತೇಣೇ ಮೇರುದಂಡ ಅವಕ್ರ ಶುದ್ಧ । ಸಮಕಾಯಾ ರಾಖೋನಿ ಪ್ರಸಿದ್ಧ । ಮೂಳಾಧಾರಾದಿ ತೀನೀ ಬಂಧ । ಅತಿಸುಬದ್ಧ ಪೈ ದ್ಯಾವೇ ॥೪೧೦॥ ಐಸೇ ಆಸನ ಲಾಗತಾ । ಆಸನಾವರೀ ಸ್ವಭಾವತಾ । ಕುರಾಂಬುಜಾಚೀ ವಿಕಾಸತಾ । ಉತ್ಸಂಗತಾ ಶೋಭತೀ ॥೪೧೧॥ ನಾಕಾಚೇ ಅಗ್ರ ಸಾಂಡೂನಿ ದೂರೀ । ದೃಷ್ಟಿ ಠೇವಾವೀ ನಾಸಿಕಾಗ್ರೀ । ತೇ ಠಾಯೀ ಬೈಸೇ ಅಗ್ನಿಚಕ್ರೀ । ಯೋಗಗಂಭೀರೀ ಯೋಗ್ಯತಾ ॥೪೧೨॥ ತೇ ಅಭ್ಯಾಸೀ ನಿಜನಿಷ್ಠಳೇ । ಯೋಗಾಭ್ಯಾಸೇ ಯೋಗಬಳೇ । ಅರ್ಧೋನ್ಮೀಲಿತ ಹೋತೀ ಡೋಳೇ । ಧಾರಣಾಮೇಳೇ ತೇ ಕಾಳೀ ॥೪೧೩॥ ಭೇದಾಪಾಸಾವ ಉಠಾಉಠೀ । ಉಪರಮತಾ ಅಭೇದೀ ದೃಷ್ಟೀ । ತಿಚೀ ನಾಸಾಗ್ರೀ ದಿಸೇ ಮಿಠೀ । ಇತರ ದೃಷ್ಟೀ ನ ಲಕ್ಷಿತಾ ॥೪೧೪॥ ಆಸನಜಯೋ ತ್ರಿಬಂಧಪ್ರಾಪ್ತೀ । ದೃಷ್ಟೀಚೀ ಉಪರಮಸ್ಥಿತೀ । ಹೇ ಅಕಸ್ಮಾತ್ ಕೋಣೇ ರೀತೀ । ಸಾಧಕಾಹಾತೀ ಆತುಡೇಲ ॥೪೧೫॥

ಈಗ ಆಸನಗಳ ಲಕ್ಷಣಗಳನ್ನು ಕೇಳು. ಕಲ್ಲಿನ ಆಸನದ ಮೇಲೆ ಕುಳಿತುಕೊಂಡರೆ ಅನೇಕ ಪ್ರಕಾರದ ರೋಗಗಳು ನಿರ್ಮಾಣವಾಗುವ ಸಾಧ್ಯತೆ ಇದೆ. ಕೇವಲ ಭೂಮಿಯ ಮೇಲೆ ಕುಳಿತುಕೊಳ್ಳಬೇಕೆಂದರೆ ಅದು ಕಠಿಣವಾಗಿರುವುದರಿಂದ ದುಃಖರೂಪವಾಗಿದೆ ॥೪೦೨॥ ಮರದ ಆಸನ ಮಾಡಲು, ಮನವು ಒಣಗಿದ ಕಟ್ಟಿಗೆಯಂತೆ ನಿರ್ದಯವಾಗುವುದು. ಹುಲ್ಲಿನ ಆಸನವನ್ನು ಮಾಡಿದರೆ, ಹುಲ್ಲಿಗೆ ಚಿತ್ರವಿಚಿತ್ರ ಅಂಕುರಗಳು ಹುಟ್ಟುವಂತೆ ಮನಸ್ಸಿಗೂ ನಾನಾ ಪ್ರಕಾರಗಳ ವಿಕಲ್ಪಗಳು ಉತ್ಪನ್ನವಾಗುವುವು ॥೪೦೩॥ ವೃಕ್ಷದ ಎಲೆಗಳಿಂದ ಆಸನವನ್ನು ಮಾಡಲು, ಮನವು ಯಾವಾಗಲೂ ಡೋಲಾಯಮಾನವಾಗುವುದು. ಜಾರಣ, ಮಾರಣ ಮತ್ತು ಸ್ತಂಭನ ಇವುಗಳಿಗಾಗಿ ಸಾಧಕರು ಕಪ್ಪುಬಣ್ಣದ ಆಸನವನ್ನು ಹಾಕಬೇಕು ॥೪೦೪॥ ಕೃಷ್ಣಾಜಿನ ಅಂದರೆ ಚಿಗರೆಯ ಚರ್ಮದ ಮೇಲೆ ಕುಳಿತುಕೊಳ್ಳಲು ಜ್ಞಾನಪ್ರಾಪ್ತಿಯಾಗುವುದು. ವ್ಯಾಘ್ರಚರ್ಮದ ಮೇಲೆ ಕುಳಿತುಕೊಳ್ಳಲು ಮೋಕ್ಷಸಿದ್ಧಿಯಾಗುವುದು. ಬಿಳಿ ಬಣ್ಣದ ಕಂಬಳಿಯ ಆಸನವನ್ನು ಮಾಡಿದರೆ ಸಾಧಕನಿಗೆ ಮೋಕ್ಷಾದಿ ಅನೇಕ ಪ್ರಕಾರದ ಸಿದ್ಧಿಯ ಸಮುದಾಯಗಳು ಪ್ರಾಪ್ತವಾಗುವುವು ॥೪೦೫॥ ಪವಿತ್ರವಾಗಿರುವ, ಸಮಾನವಾಗಿರುವ ಮತ್ತು ಯಾವ ಉಪದ್ರವವಿಲ್ಲದ, ಅಂತಹ ಸ್ಥಳದಲ್ಲಿ ಮುಂದೆ ಹೇಳಿದ ಕ್ರಮದಿಂದ ಉತ್ತಮ ಲಕ್ಷಣಯುಕ್ತವಾದ ಆಸನವನ್ನು ಹಾಕಬೇಕು ॥೪೦೬॥ ಕೆಳಗಡೆ ದರ್ಭೆ, ಮಧ್ಯದಲ್ಲಿ ವಸ್ತ್ರ, ಅದರ ಮೇಲೆ ಕಂಬಳಿ ಅಥವಾ ಚರ್ಮಗಳಿಂದ ತಯಾರಿಸಿದ ಆಸನವನ್ನು ಹಾಕಬೇಕು. ಅದು ಎತ್ತರ ಅಥವಾ ತೆಗ್ಗಿನಲ್ಲಿ ಇರಕೂಡದು. ನಾಲ್ಕೂ ಬದಿಯಲ್ಲಿಯೂ ಸಮಾನವಾಗಿರಬೇಕು ॥೪೦೭॥ ಆಸನವು ಎತ್ತರವಾಯಿತೆಂದರೆ ಡೋಲಾಯಿಸುವದು, ಆಸನವು ಕೆಳಗಡೆಯಾದರೆ ಭೂಮಿದೋಷವು ನಿರ್ಮಾಣವಾಗುವುದು. ಆದ್ದರಿಂದ ಆಸನವು ಸಪಾಟವಾಗಿ, ಸಮಾನವಾಗಿರಬೇಕಾಗುವುದು. ಆಸನವು ಸೂಕ್ಷ್ಮ ಹಾಗೂ ಮೃದುವಾಗಿರಬೇಕು ॥೪೦೮॥ ಇಂತಹ ಆಸನದಲ್ಲಿ ಕುಳಿತುಕೊಂಡು ಶುದ್ಧವಾದ ಮುದ್ರೆಯನ್ನು ಹಚ್ಚಿ ವಜ್ರಾಸನ ಅಥವಾ ಕಮಲಾಸನವನ್ನು ಹಾಕಿ ಕುಳಿತುಕೊಳ್ಳಬೇಕು. ಇಲ್ಲವೇ ಯಾವ ಆಸನದಿಂದ ಮನವು ಪ್ರಸನ್ನ ಸುಖದಾಯಕವಾಗುವುದೋ, ಅಂತಹ ಆ ಸಹಜಾಸನವನ್ನು ಹಾಕಬೇಕು ॥೪೦೯॥ ತದನಂತರ ಬೆನ್ನು ನೀಟಾಗಿ ಮಾಡಿ ಶರೀರ, ಕುತ್ತಿಗೆ ಮತ್ತು ಮಸ್ತಕ ಇವು ಒಂದೇ ರೇಖೆಯಲ್ಲಿ ಬರುವಂತೆ ಸ್ಥಿರಗೊಳಿಸಬೇಕು. ಮತ್ತು ಮೂಲಾಧಾರಾದಿ ಸುಪ್ರಸಿದ್ಧವಾದ ಮೂರು ಬಂಧಗಳನ್ನು ಉತ್ತಮ ರೀತಿಯಲ್ಲಿ ಸಾಧಿಸಬೇಕು ॥೪೧೦॥ ಈ ಪ್ರಕಾರವಾಗಿ ಆಸನವನ್ನು ಹಾಕಿದ ನಂತರ ಆ ಆಸನದಮೇಲೆ ತಮ್ಮ ಕರಕಮಲಗಳ ಎರಡೂ ಭಾಗಗಳನ್ನು ತಮ್ಮ ತೊಡೆಯ ಮೇಲೆ ಸಹಜವಾಗಿ ಮೇಲ್ಮುಖವಾಗಿ ಇಡಬೇಕು. ಆಗ ಅವು ಸುಶೋಭಿತವಾಗಿ ಕಾಣುವುವು ॥೪೧೧॥ ತದನಂತರ ಮೂಗಿನ ಅಗ್ರವನ್ನು ಬಿಡದೇ ಅದರತ್ತ ದೃಷ್ಟಿಯನ್ನಿಡಬೇಕು. ಅಂದರೆ ನಾಸಿಕಾಗ್ರ ದೃಷ್ಟಿಯನ್ನಿಡಬೇಕು. ಅಲ್ಲಿ ಅಗ್ನಿ ಚಕ್ರವಿದ್ದು ಅದು ಯೋಗಿಗಳ ಶ್ರೇಷ್ಠಸಾಧನೆಯಾಗಿರುವುದು ॥೪೧೨॥ ಈ ಪ್ರಕಾರವಾಗಿ ಶಾಂತತೆಯಿಂದ, ಸಂಯಮದಿಂದ ಅಭ್ಯಾಸವನ್ನು ಪ್ರಾರಂಭಿಸಿದರೆ ಯೋಗ ಸಾಮರ್ಥ್ಯದಿಂದ ನೇತ್ರಗಳು ತಮ್ಮಷ್ಟಕ್ಕೆ ತಾವೇ ಅರ್ಧೋನ್ಮೀಲಿತವಾಗುವುವು ॥೪೧೩॥ ಭೇದಗಳಲ್ಲಿ ಹರಡಿರುವ ದೃಷ್ಟಿಯು ಅಭೇದದಲ್ಲಿ ಮಿಲನವಾಗಿ ಸ್ಥಿರವಾಗುವುದು. ಇತರ ಪದಾರ್ಥಗಳನ್ನು ಕಾಣದೇ ಆ ಯಾವ ನಾಸಾಗ್ರಿಗೆ ಹೋಗಿ ಸ್ಥಿರಗೊಳ್ಳುವುದು ॥೪೧೪॥ ಆದರೆ ಆಸನದ ಮೇಳ, ಮೂರೂ ಬಂಧಗಳ ಪ್ರಾಪ್ತಿ ಮತ್ತು ದೃಷ್ಟೀ ಸ್ಥೈರ್ಯ ಇವು ಸಾಧಕನ ಕೈಯಲ್ಲಿ ಯಾವ ರೀತಿಯಲ್ಲಿ ಪ್ರಾಪ್ತವಾಗುವುದು? ॥೪೧೫॥

ಐಸೇ ಆಶಂಕಾ ಧರಿಸೀ ಚಿತ್ತೀ । ತ್ಯಾಹೀ ಅಭ್ಯಾಸಾಚೀ ಸ್ಥಿತೀ । ಉದ್ಧವಾ ಮೀ ತುಜಪ್ರತೀ । ಯಥಾನಿಗುತೀ ಸಾಂಗೇನ ।೮೧೬॥

ಪ್ರಾಣಸ್ಯ ಶೋಧಯೇನ್ಮಾರ್ಗ ಪೂರಕುಂಭಕರೇಚಕೈಃ । ವಿಪಯರ್ಯಣಾಪಿ ಶನೈರಭ್ಯಸನ್ನಿರ್ಜಿತೇಂದ್ರಿಯಃ ।೩೩॥

ಅರ್ಥ :- ತದನಂತರ ಪೂರಕ, ಕುಂಭಕ, ರೇಚಕ ಮತ್ತು ರೇಚಕ, ಕುಂಭಕ, ಪೂರಕ ಈ ಕ್ರಮದಿಂದ ಪ್ರಾಣಾಯಾಮದ್ವಾರಾ ಪ್ರಾಣದ ಮಾರ್ಗವನ್ನು ಶೋಧಿಸಬೇಕು. ಪ್ರಾಣಾಯಾಮದ ಅಭ್ಯಾಸವನ್ನು ಮೆಲ್ಲಮೆಲ್ಲನೇ ಬೆಳೆಸಬೇಕು ಮತ್ತು ಅದರೊಂದಿಗೆ ಇಂದ್ರಿಯಗಳನ್ನು ಜಯಿಸುವ ಅಭ್ಯಾಸವನ್ನು ಮಾಡಬೇಕು.

ಅಭ್ಯಾಸಾಚೇ ಲಕ್ಷಣ । ಪ್ರಥಮ ಪ್ರಾಣಮಾರ್ಗಶೋಧನ । ಪೂರಕ ಕುಂಭಕ ರೇಚಕ ಜಾಣ । ಪ್ರಾಣಾಪಾನಶೋಧಕ ।೮೧೭॥ ಜಿವ್ಹಾ ಉಪಸ್ಥ ಉಪಮರ್ದವೇ । ಐಸಾ ಇಂದ್ರಿಯನೇಮ ಜೈ ಸಂಭವೇ । ತ್ಯಾಸೀಚ ಹಾ ಪ್ರಾಣಜಯೋ ಫಾವೇ । ಯೇರಾ ನವ್ಹೇ ಶ್ರಮತಾಂಹೀ ।೮೧೮॥ ಪ್ರಾಣಶೋಧನ ತೇ ತೂ ಐಕ । ಪೂರಕ ಕುಂಭಕ ರೇಚಕ । ಸವೇಂಚಿ ರೇಚಕ ಪೂರಕ ಕುಂಭಕ । ಹಾ ಉಭಯ ದೇಖ ಅಭ್ಯಾಸೂ ।೮೧೯॥ ಇಡೇನೇ ಕರಾವಾ ಪ್ರಾಣ ಪೂರ್ಣ । ತೋ ಕುಂಭಿನೀನೇ ರಾಖಾವಾ ಜಾಣ । ಮಗ ತಿನೇಚಿ ಕರಾವಾ ರೇಚನ । ಹೇ ಏಕ ಲಕ್ಷಣ ಅಭ್ಯಾಸೀ ।೮೨೦॥ ಕಾ ಪಿಂಗಲೇನೇ ಕರಾವಾ ಪೂರ್ಣ । ತೋ ತಿನೇಚಿ ಕರಾವಾ ರೇಚನ । ಹೇ ಏಕ ಅಪರಲಕ್ಷಣ । ವಿಚಕ್ಷಣ ಬೋಲತೀ ।೮೨೧॥ ಸರ್ವಸಂಮತ ಯೋಗಲಕ್ಷಣ । ಇಡೇನೇ ಪ್ರಾಣ ಕರಾವಾ ಪೂರ್ಣ । ತೋ ಕುಂಭಕೇ ರಾಖಾವಾ ಸ್ತಂಭೂನ । ಕರಾವೇ ರೇಚನ ಪಿಂಗಲಯಾ ।೮೨೨॥ ಹೋ ಕಾ ಪಿಂಗಲೇನೇ ಪುರಾವಾ ಪ್ರಾಣ । ತೋಹೀ ಕುಂಭಕೇ ರಾಖಾವಾ ಕುಂಭೂನ । ಮಗ ಇಡೇನೇ ಸಾಂಡಾವಾ ರೇಚೂನ । ಹೇ ವಿಪರೀತ ಲಕ್ಷಣ ಅಭ್ಯಾಸೀ ।೮೨೩॥ ತೇಥ ನ ಕರಾವೀ ಘಾಡಾಘೋಡೀ । ನ ಮಾಂಡಾವೀ ತಾಡಾತೋಡೀ । ಸಾಂಡೋನಿಯಾ ಲವಡಸವಡೀ । ಅಭ್ಯಾಸಪರವಡೀ ಶನೈಃಶನೈಃ ।೮೨೪॥ ಯೇಥ ಮಾಂಡಲಿಯಾ ತಾಂತಡೀ । ಜೈ ಪ್ರಾಣ ಪಡೇಲ ಅನಾಡೀ । ಮಗ ಹೇ ಥಡೀ ನಾ ತೇ ಥಡೀ । ಐಶೀ ಪರವಡೀ ಸಾಧಕಾ ।೮೨೫॥ ಜೇವೀ ಮುಂಗೀ ವಳಂಘೇ ಪರ್ವತಾ । ತೇ ಚಢೇ ಪರೀ ಪಡೇನಾ ಸರ್ವಥಾ । ತೇಥ ಜಾತ್ಯಶ್ವ ಚಾಲೋ ಜಾತಾ । ನ ಚಢೇ ತತ್ತ್ವತಾ ಅತಿಕಷ್ಟೀ ।೮೨೬॥

ಹೇ ಉದ್ಧವಾ, ಇಂತಹ ಪ್ರಶ್ನೆಯು ನಿನ್ನ ಮನದಲ್ಲಿ ಬಂದಿರಬಹುದು. ಅದಕ್ಕಾಗಿ ಆ ಅಭ್ಯಾಸದ ಪ್ರಕಾರವನ್ನು ಯಥಾರ್ಥರೀತಿಯಲ್ಲಿ ಹೇಳುವೆನು ।೮೧೬॥

ಪ್ರಾಣದ ಮಾರ್ಗವನ್ನು ಶುದ್ಧ ಮಾಡುವುದೇ ಅಭ್ಯಾಸದ ಪ್ರಥಮ ಲಕ್ಷಣವಾಗಿರುವುದು. ಪೂರಕವೆಂದರೆ ಮೂಗಿನಿಂದ ವಾಯುವನ್ನು ಒಳಗೆ ತೆಗೆದುಕೊಳ್ಳುವಿಕೆ, ಕುಂಭಕವೆಂದರೆ ಶ್ವಾಸವನ್ನು ನಿಶ್ಚಿತ ಕಾಲದವರೆಗೆ ಒಳಗೆ ಹಿಡಿದುಕೊಳ್ಳುವಿಕೆ, ರೇಚಕವೆಂದರೆ ಶ್ವಾಸವನ್ನು ಮೂಗಿನಿಂದ ಸಾವಕಾಶವಾಗಿ ಹೊರಗೆ ಬಿಡುವಿಕೆ. ಈ ಪ್ರಾಣಾಯಾಮವು ಪ್ರಾಣಾಪಾನದ ಮಾರ್ಗವನ್ನು ಶುದ್ಧಮಾಡುವುದಾಗಿದೆ ।೮೧೭॥ ನಾಲಿಗೆ ಮತ್ತು ಶಿಶ್ನ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಇಂದ್ರಿಯ ನಿಗ್ರಹ ಸಾಧಿಸಿದರೆ ಮಾತ್ರ ಪ್ರಾಣಾಯಾಮವು ಸಾಧ್ಯವಾಗುವುದು. ಇತರರು ಎಷ್ಟೇ ಪ್ರಯತ್ನಿಸಲಿ, ಅದು ವ್ಯರ್ಥವಾಗುವುದು ।೮೧೮॥ ಈಗ ಪ್ರಾಣಾಯಾಮವನ್ನು ಹೇಗೆ ಮಾಡಬೇಕೆಂಬುದನ್ನು ಕೇಳು. ಪೂರಕ, ಕುಂಭಕ, ರೇಚಕಗಳನ್ನು ಮಾಡಿ ಕೂಡಲೇ ರೇಚಕ, ಪೂರಕ ಮತ್ತು ಕುಂಭಕಗಳನ್ನು ಮಾಡುತ್ತ ಈ ಎರಡೂ ಪ್ರಕಾರಗಳ ಅಭ್ಯಾಸ ಮಾಡುವುದು ಅವಶ್ಯಕವಾಗಿದೆ ।೮೧೯॥ ಇಡಾ ಎಂದರೆ ಚಂದ್ರ ಎಂಬ ನಾಡಿಯು ಮೂಗಿನ ಎಡಭಾಗವು ಮತ್ತು ಪಿಂಗಳಾ ಎಂದರೆ ಸೂರ್ಯನಾಮದ ಮೂಗಿನ ಬಲಭಾಗವಾಗಿದೆ. ಇಡಾದಿಂದ ವಾಯುವನ್ನು ಒಳಗಡೆ ತೆಗೆದುಕೊಳ್ಳಬೇಕು. ಮತ್ತು ಹಾಗೆಯೇ ಅಲ್ಲಿ ನಿಲ್ಲಿಸಿ ನಂತರ ಹೊರಗೆ ಬಿಡಬೇಕು. ಇದು ಒಂದು ಪ್ರಕಾರದ ಅಭ್ಯಾಸವಾಯಿತು ।೮೨೦॥ ಇದಲ್ಲದೇ ಮೂಗಿನ ಬಲಹೊರಳಿಯಿಂದ ವಾಯುವನ್ನು ಒಳಗೆ ತೆಗೆದುಕೊಂಡು, ಮೂಗಿನ ಬಲಹೊರಳಿಯಿಂದಲೇ ಹೊರಗೆ ಬಿಡುವಿಕೆ ಇದೊಂದು ಎರಡನೆಯ ಪ್ರಕಾರದ ಅಭ್ಯಾಸವಾಗಿರುವುದು. ಈ ಲಕ್ಷಣವನ್ನು ಜ್ಞಾನಿ ಜನರು ಪ್ರತಿಪಾದನೆಯನ್ನು ಮಾಡುವರು ।೮೨೧॥ ಆದರೆ ಎಡ ಮೂಗಿನ ಹೊರಳಿಯಿಂದ ಶ್ವಾಸವನ್ನು ತೆಗೆದುಕೊಳ್ಳುವಿಕೆ, ಅದನ್ನು ಕುಂಭಕದಿಂದ ಒಳಗಡೆ ಹಿಡುವಿಕೆ, ನಂತರ ಬಲ ಮೂಗಿನ ಹೊರಳಿಯಿಂದ ಹೊರಗೆ ಬಿಡುವಿಕೆ ಇದು ಸರ್ವಸಾಮಾನ್ಯ ಯೋಗದ ಲಕ್ಷಣವಾಗಿದೆ ।೮೨೨॥ ಇದಲ್ಲದೇ ಬಲಭಾಗದಿಂದ ಶ್ವಾಸವನ್ನು ಒಳಗಡೆ ತೆಗೆದುಕೊಳ್ಳುವಿಕೆ, ಅದನ್ನು ಅಲ್ಲಿಯೇ ಹಿಡಿದಿಟ್ಟು ನಂತರ ಎಡಭಾಗದಿಂದ ಹೊರಗೆ ಬಿಡುವಿಕೆ. ಈ ಅಭ್ಯಾಸವು ಮೊದಲಿನಕ್ಕಿಂತ ಉಲಟ ಪ್ರಕಾರವಾಗಿರುವುದು ।೮೨೩॥ ಆದ್ದರಿಂದ ಹಿಡಿದ ಪ್ರಕಾರವನ್ನು ಬದಲಿಸದೇ, ಕ್ರಮದಲ್ಲಿ ವ್ಯತ್ಯಾಸಗೊಳಿಸದೇ, ಯಾವುದೇ ಗಡಿಬಿಡಿ ಮಾಡದೇ ಶಾಂತಚಿತ್ತದಿಂದ ಅಭ್ಯಾಸವನ್ನು ಮೆಲ್ಲಮೆಲ್ಲನೇ ಬೆಳೆಸಬೇಕು ।೮೨೪॥ ಈ ಪ್ರಾಣಾಯಾಮದಲ್ಲಿ ಆತುರತೆ, ಗಡಿಬಿಡಿ ಮಾಡಿದರೆ ಪ್ರಾಣವು ಸಂಕಟದಲ್ಲಿ ಬೀಳುವದು. ನಂತರ ಸಾಧಕನಿಗೆ ಆ ಮಾರ್ಗವು ಇಲ್ಲ ಈ ಮಾರ್ಗವೂ ಇಲ್ಲ. ಹೀಗೆ ಸಾಧಕನ ಅವಸ್ಥೆಯಾಗುವುದು ।೮೨೫॥ ಇರುವೆಯು ಪರ್ವತವನ್ನು ಏರುತ್ತಿರಲು ಅದು ಮೆಲ್ಲಮೆಲ್ಲನೇ ಮೇಲಕ್ಕೆ ಹೋಗಿ ಮುಟ್ಟಿಕೊಳ್ಳುವುದು. ಕೆಳಗೆ ಬೀಳುವುದಿಲ್ಲ. ಆದರೆ ಜಾತಿವಂತ ಕುದುರೆಯು ಪರ್ವತವನ್ನು ಏರುತ್ತಿದ್ದರೆ ಅದಕ್ಕೆ ಏರಲು ಆಗುವುದಿಲ್ಲ. ಆದರೆ ವ್ಯರ್ಥವಾಗಿ ಕಷ್ಟವನ್ನು ಸೋಸಬೇಕಾಗುವುದು ।೮೨೬॥

ತೈಸೇ ಯೇ ಯೋಗಾಭ್ಯಾಸೀ ಜಾಣ । ನ ಚಲೇ ಜಾಣೀವ ಶಹಾಣಪಣ । ಜಾಣಿವಾ ಯೇಥ ಹೋಯ ಪತನ । ಸರ್ವಥಾ ಗಮನ ಘಡೇನಾ ॥೪೨೭॥ ತೇ ಮುಂಗೀಚ್ಯಾ ಪರೀ ಯೋಗಪಂಥಾ । ಜೋ ಶನೈಃಶನೈಃ ಅಭ್ಯಾಸತಾ । ಪ್ರಣವಾಚಾ ಚಢೇ ಮಾಥಾ । ಜಾಣ ತತ್ತ್ವತಾ ಉದ್ಧವಾ ॥೪೨೮॥ ದೃಢ ಅಭ್ಯಾಸ ಆಲ್ಯಾ ಹಾತಾ । ಜೈಶೀ ಸಾಧಕಾಂಚೀ ಮನೋಗತತಾ । ಜೈಸಾ ಪವನ ಚಾಲೇ ತತ್ತ್ವತಾ । ಜೇವೀ ರಣಾ ಆಂತೌತಾ ಮಹಾಶೂರ ॥೪೨೯॥ ಅಭ್ಯಾಸಾಚ್ಯಾ ಗಡಾಡೀ । ಪ್ರಾಣ ಖಿವಳಲ್ಯಾ ಕಡಾಡೀ । ತೋ ಪ್ರಾಣಾಪಾನಾಚೇ ಭೇದ ಮೋಡೀ । ಪದರ ಫೋಡೀ ಚಕ್ರಾಚೇ ॥೪೩೦॥ ಯೇಥ ದ್ವಿವಿಧ ಮಾಝೇ ಭಜನ । ಏಕತೇ ಯೋಗಯುಕ್ತ ನಿರ್ಗುಣ । ಏಕ ತೇ ಪ್ರಣವಾಭ್ಯಾಸೇ ಭಕ್ತ ಸಗುಣ । ತೇಹೀ ಲಕ್ಷಣ ಅವಧಾರೀ ॥೪೩೧॥ ಐಕ ಪ್ರಾಣಾಯಾಮಾಚೇ ಭೇದ । ಸಗರ್ಭ ಅಗರ್ಭ ದ್ವಿವಿಧ । ಸಗರ್ಭ ಆಗಮೋಕ್ತೀ ಶುದ್ಧ । ಸಗುಣ ಸಂಬಂಧ ಧ್ಯಾನಾದಿ ॥೪೩೨॥

ಹೃದ್ಯವಿಚ್ಛಿನ್ನ ಮೋಂಕಾರಾಂ ಘಂಟಾನಾದಂ ಬಿಸೋರ್ಣವತ್ ।
ಪ್ರಾಣೇನೋದೀರ್ಯ ತತ್ರಾಥ ಪುನಃ ಸಂವೇಶಯೇತ್‌ಸ್ವರಮ್ ॥೩೪॥

ಅರ್ಥ :- ಮೂಲಾಧಾರದಿಂದ ಆರಂಭಿಸಿ ಮೂರ್ಧೆಯ ಒಳಗಿನವರೆಗೆ ಕಮಲದಲ್ಲಿನ ತಂತೂವಿನಂತೆ ಅವಿಚ್ಛಿನ್ನವಾಗಿರುವ ಓಂಕಾರವನ್ನು ಮನದಲ್ಲಿ ಪ್ರಾಣದ ಯೋಗದಿಂದ ವ್ಯಕ್ತಗೊಳಿಸಿ ತದನಂತರ ಪುನಃ ಓಂಕಾರದಲ್ಲಿ ಘಂಟಾನಾದದಂತಹ ಉದಾತ್ತ ಸ್ವರವನ್ನು ಸ್ಥಿರಗೊಳಿಸಬೇಕು.

ವಾಚೇಸೀ ನವ್ಹತಾ ಗೋಚರೂ । ದೀರ್ಘ ಪ್ರಣವಾಚಾ ಉಚ್ಚಾರೂ । ಹೃದಯೀ ಅನವಚ್ಛಿನ್ನ ಓಂಕಾರೂ । ಅಖಂಡಾಕಾರೂ ಉಲ್ಹಾಸೇ ॥೪೩೩॥ ಘಂಟಾನಾದಸದೃಶ ಸ್ಥಿತೂ । ಜೈಸಾ ಕಮಳಮೃಣಾಲಸೂಕ್ಷ್ಮ ತಂತೂ । ತೈಸಾ ಮೂಳಾಧಾರಭ್ಯ ಬ್ರಹ್ಮರಂಧ್ರಾಂತೂ । ಪ್ರಾಣಾಯಾಮಯುಕ್ತೂ ಪ್ರಣವೂ ಭಾಸೇ ॥೪೩೪॥ ತೇಥ ದೀರ್ಘಸ್ವರೇ ಉಚ್ಚಾರೂ । ತೇಣೇ ಪ್ರಣವೂ ಭಾಸೇ ಅತಿಸಪುರೂ । ತೋ ಪ್ರಾಣಾಯಾಮೇ ಕರಾವಾ ಸ್ಥಿರೂ । ಅಖಂಡಾಕಾರೂ ಸ್ವರಯುಕ್ತ ॥೪೩೫॥

ಏವಂ ಪ್ರಣವಸಂಯುಕ್ತಂ ಪ್ರಾಣಮೇವ ಸಮಭ್ಯಸೇತ್ । ದಶಕೃತ್ವಸ್ತ್ರಿಪವಣಂ ಮಾಸಾದರ್ವಾಗ್ಜಿತಾನಿಲಃ ॥೩೫॥

ಅರ್ಥ :- ಓಂಕಾರದಲ್ಲಿ ನೆಲೆಸಿದ ನಂತರ ಎಚ್ಚರಿಕೆಯಿಂದ ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಹತ್ತು ಬಾರಿ ಪ್ರಾಣಾಯಾಮವನ್ನು ಆಚರಿಸಬೇಕು. ಹೀಗೆ ಒಂದು ತಿಂಗಳ ಅಭ್ಯಾಸನಂತರ ಸಾಧಕನು ಪ್ರಾಣವಾಯುವನ್ನು ಗೆಲ್ಲುವನು.

ಸ್ವರವರ್ಣಮಾತ್ರಾತೀತ ಪರ । ಪ್ರಣವ ಜೋ ಕಾ ಅಗೋಚರ । ತೋ ಅಭ್ಯಾಸಬಳೇ ನರ । ವೃತ್ತೀಗೋಚರ ಸ್ವಯೇ ಕರಿತೀ ॥೪೩೬॥

ಅದರಂತೆ ಯೋಗಾಭ್ಯಾಸದಲ್ಲಿ ಜ್ಞಾನ ಅಥವಾ ಜಾಣತನ ಇವು ಯಾವುವೂ ನಡೆಯುವುದಿಲ್ಲ. ಜ್ಞಾನದ ಗರ್ವ ಹಿಡಿದವನಿಗೆ ಅಧಃಪತನವಾಗುವುದು. ಆತನಿಗೆ ಈ ಮಾರ್ಗದಲ್ಲಿ ಮುಂದೆ ಸಾಗುವುದು ಎಂದಿಗೂ ಸಾಧ್ಯವಾಗುವುದಿಲ್ಲ ॥೪೨೭॥ ಹೇ ಉದ್ಧವಾ, ಇರುವೆಯಂತೆ ಯಾವನು ಮೆಲ್ಲಮೆಲ್ಲನೇ ಯೋಗಮಾರ್ಗದಿಂದ ನಡೆಯುವ ಪ್ರಯತ್ನ ಮಾಡುವನೋ, ಆತನೇ ಓಂಕಾರದ ಶಿಖರದ ಮೇಲೆ ಏರಿ ಕುಳಿತುಕೊಳ್ಳುವನು ॥೪೨೮॥ ಒಂದು ಸಾರೆ ಪ್ರಾಣಾಯಾಮದ ಅಭ್ಯಾಸವು ದೃಢವಾಗಲು, ವೀರ ಪುರುಷನು ರಣಾಂಗಣದಲ್ಲಿ ಸೈನ್ಯಕ್ಕೆ ತನ್ನ ಆಜ್ಞೆಯಲ್ಲಿಡುವಂತೆ ಸಾಧಕನ ಇಚ್ಛೆಯಂತೆ ಪ್ರಾಣವಾಯುವು ನಡೆಯುವುದು ॥೪೨೯॥ ಅಭ್ಯಾಸವನ್ನು ತೀವ್ರಗೊಳಿಸಲು ಪ್ರಾಣವು ಅತಿಶಯ ಕ್ಷುಬ್ಧವಾಗುವುದು. ಅದು ಪ್ರಾಣಾಪಾನದ ಭೇದ ಮುರಿದು ಚಕ್ರದ ಪರದೆಯನ್ನು ದೂರ ಸರಿಸುವುದು ॥೪೩೦॥ ನನ್ನ ಭಜನೆಯು ಎರಡು ಪ್ರಕಾರವಾಗಿರುವುದು. ಮೊದಲನೆಯದಾಗಿ ಯೋಗಯುಕ್ತ ಮನಸ್ಸಿನಿಂದ ನಿರ್ಗುಣ ಭಜನೆಯಾಗಿದೆ. ಎರಡನೆಯದಾಗಿ ಓಂಕಾರದ ಅಭ್ಯಾಸದಿಂದ ಸಗುಣ ಮೂರ್ತಿಯ ಭಜನೆಯಾಗಿದೆ. ಅವುಗಳ ಲಕ್ಷಣಗಳನ್ನು ಈಗ ಕೇಳು ॥೪೩೧॥ ಈಗ ಪ್ರಾಣಾಯಾಮದ ಭೇದವನ್ನು ಸ್ಮರಿಸಿಕೊ. ಇದರಲ್ಲಿ ಸಗರ್ಭ ಪ್ರಾಣಾಯಾಮ ಮತ್ತು ಅಗರ್ಭ ಪ್ರಾಣಾಯಾಮ ಹೀಗೆ ಎರಡು ಪ್ರಕಾರಗಳಾಗಿರುವುವು. ಸಗರ್ಭ ಪ್ರಾಣಾಯಾಮವು ಶಾಸ್ತ್ರೋಕ್ತ ಮತ್ತು ಶುದ್ಧವಾಗಿರುವುದು. ಮತ್ತು ಅಗರ್ಭ ಪ್ರಾಣಾಯಾಮವು ಸಗುಣ ಮೂರ್ತಿಯ ಉಪಾಸನೆ ಮತ್ತು ಧ್ಯಾನಾದಿಕಗಳಿಂದ ಕೂಡಿರುವುದು ॥೪೩೨॥

ಓಂಕಾರದ ದೀರ್ಘ ಉಚ್ಚಾರವು ವಾಣಿಗೆ ಮಾಡಲು ಬಾರದಿದ್ದರೆ ಅದೇ ಓಂಕಾರವನ್ನು ಹೃದಯದಲ್ಲಿ ಸತತವಾಗಿ ಒಂದೇ ಸವನೆ ಸ್ಫುರಣವಾಗುತ್ತಿರುವುದು ॥೪೩೩॥ ಅದು ಘಂಟಾನಾದದಂತೆ ಸ್ಥಿರವಾಗಿರುವುದು. ಕಮಲದ ದೇಟದಲ್ಲಿನ ಸೂಕ್ಷ್ಮ ತಂತುವಿನಂತೆ ಅದು ಪ್ರಣವ ಮೂಲಾಧಾರದಿಂದ ಬ್ರಹ್ಮರಂಧ್ರದವರೆಗೆ ಪ್ರಾಣಾಯಾಮದಿಂದ ಯುಕ್ತವಾಗಿರುವುದು ॥೪೩೪॥ ಅಲ್ಲಿ ದೀರ್ಘಸ್ವರದಿಂದ ನಾದವಾಗುತ್ತಿರುವುದು. ಆದ್ದರಿಂದ ಅತ್ಯಂತ ಸೂಕ್ಷ್ಮ ರೀತಿಯಿಂದ ಪ್ರಣವದ ಭಾಸವಾಗುತ್ತಿರುವುದು. ಅದೇ ಪ್ರಾಣಾಯಾಮದಿಂದ ಅಖಂಡ ಮತ್ತು ನಾದಯುಕ್ತವನ್ನಾಗಿ ಮಾಡಬೇಕು ॥೪೩೫॥

ಕೆಲವು ಸಾಧಕರು ಈ ಪ್ರಕಾರದಿಂದ ಸ್ವರ, ವರ್ಣ, ಮಾತ್ರಾ ಇವುಗಳಿಂದ ಭಿನ್ನವಾದ, ಅದೃಶ್ಯ ಮತ್ತು ಶ್ರೇಷ್ಠವಾಗಿರುವ ಪ್ರಣವವನ್ನು ಅಭ್ಯಾಸದ ಸಾಮರ್ಥ್ಯದಿಂದ ಇಂದ್ರಿಯಗಳಿಗೆ ತಿಳಿಯುವಂತೆ, ಹೀಗೆ ಮಾಡಿಕೊಳ್ಳುವರು ॥೪೩೬॥

ನವಲ ಉಚ್ಚಾರಾಚಾ ಚಮತ್ಕಾರ । ಉರ್ಧ್ವಮುಖ ಅಖಂಡಾಕಾರ । ಅಭ್ಯಾಸೇ ಪ್ರಣವೂ ಕರಿತೀ ಸ್ಥಿರ । ಝುಣತ್ಕಾರ ಸ್ವರಯುಕ್ತ ॥೪೩೭॥ ಐಸಾ ಪ್ರಾಣಾಯಾಮಯುಕ್ತ ಪ್ರಣವಾಭ್ಯಾಸ । ತ್ರಿಕಾಳ ಕರಿತಾ ಸಾಂಡೂನಿ ಆಳಸ । ಕಾಳೀ ಆವರ್ತನೇ ದಶದಶ । ಸಾವಕಾಶ ಕರಿತಾ ಪೈ ॥೪೩೮॥ ತರೀ ಏಕ ಮಾಸ ನ ಲಾಗತಾ । ಹಾ ಪ್ರಾಣಜಯೋ ಆತುಡೇ ಹಾತಾ । ಜೇವೀ ಕಾ ಸತೀ ಪತಿವ್ರತಾ । ನುಲ್ಲಂಘೀ ಸರ್ವಥಾ ಪತಿವಚನ ॥೪೩೯॥ ಯೇ ಅಭ್ಯಾಸೀ ಅತಿತತ್ಪರ । ಝಾಲಿಯಾ ಗಾ ನಿರಂತರ । ಯೋಗಾಭ್ಯಾಸಾಚೇ ಸಾರ । ಸಹಜೇಚಿ ನರ ಪಾವತೀ ॥೪೪೦॥ ಐಸಾ ಪ್ರಾಣಜಯೋ ಆಲಿಯಾ ಹಾತಾ । ದೋ ಪ್ರಕಾರೀ ಭಜನಾವಸ್ಥಾ । ಏಕೀ ಸಗುಣ ಆಗಮೋಕ್ತಾ । ದುಜೀ ಯೋಗಾಭ್ಯಾಸತಾ ನಿರ್ಗುಣತ್ವೇ ॥೪೪೧॥ ಪರೀ ದೋಹೀಚೇ ಸಮಾಧಾನ । ನಿರ್ಗುಣೀಚ ಪಾವೇ ಜಾಣ । ತ್ಯಾ ದೋಹೀಚೇ ಉಪಲಕ್ಷಣ । ಸಂಕ್ಷೇಪೇ ಶ್ರೀಕೃಷ್ಣ ಸಾಂಗತ ॥೪೪೨॥ ಅಗಾ ಓಂ ಹೇ ಸ್ಮರೋ ಸರೇ । ಸ್ಮರತಾ ಸ್ವರೇಸೀ ಪ್ರಾಣೂ ಪ್ರಣವೀ ಭರೇ । ಮಗ ಪ್ರಣವೂಚಿ ತೇವ್ಹಾ ಸ್ಫುರೇ । ಅಖಂಡಾಕಾರೇ ಉಲ್ಹಾಸತೂ ॥೪೪೩॥ ಜೇಥೂನಿ ಅಕ್ಷರೇ ಉಪಜತೀ । ಶಬ್ದ ವದೋನಿ ಜೇಥ ಸಾಮಾವತೀ । ಮಗ ಜೇ ಉರೇ ಜಾಣ ತೀ ಸ್ಫೂರ್ತೀ । ಪ್ರಣವೂ ನಿಶ್ಚಿತೀ ತ್ಯಾ ನಾಂವ ॥೪೪೪॥ ತ್ಯಾ ಪ್ರಣವಾಚೇನಿ ಆಧಾರೇ । ಜಿಣೋನಿಯಾ ಸಾಹಿ ಚಕ್ರೇ । ತೋ ಪ್ರಣವೂ ಸೂನಿ ಧುರೇ । ನಿಜನಿರ್ಧಾರೇ ಚಾಲಿಜೇ ॥೪೪೫॥ ತೇಥ ಉಲ್ಹಾಟ ಶಕ್ತೀಚಾ ಲೋಟ । ವೈರಾಗ್ಯಾ ಚಾ ನೇಟಪಾಟ । ಜಿಣೋನಿ ಕಾಕೀಮುಖಾಚೀ ವಾಟ । ಸವೇಗೇ ತ್ರಿಕೂಟ ಘೇತಲೇ ॥೪೪೬॥ ತೇವ್ಹಾ ಅನುಹತಾಚ್ಯಾ ಘಾಯೀ । ನಿಶಾಣ ಲಾಗಲೇ ಪಾಹೀ । ತಂವ ಪುಢೀಲ ಜೇ ಯೋಗಭುಯೀ । ತೇ ಆಪೈತೀ ಪಾಹೀ ಹೋ ಸರಲೀ ॥೪೪೭॥ ತೇಥೇ ಹರಿಖೇ ಅತಿ ಉದ್ಧಟ । ಔಟಪೀಠ ಆಣಿ ಗೋಲ್ಹಾಟ । ತೇಹೀ ಜಿಣೋನಿಯಾ ವಾಟ । ಘಡಘಡಾಟ ಚಾಲಿಲಾ ॥೪೪೮॥ ಮಾಗೀಲ ಠೇಲೀ ಆಠವಣ । ಝಾಲೀ ವಿಕಲ್ಪಾಚೀ ಬೋಳವಣ । ಸತ್ರಾವೀ ವೋಳಲೀ ಜಾಣ । ಸ್ವಾನಂದಜೀವನ ಜೀವಾಚೇ ॥೪೪೯॥ ತೇ ಸಹಸ್ರದಳಾಚೇ ಪಾಟ । ವರೂನಿ ಉತರಲೇ ಘಡಘಡಾಟ । ಸ್ವಾನಂದಜೀವನಾನಿಕಟ । ನೀಟ ವಾಟ ಪೈ ಆಲೇ ॥೪೫೦॥

ಆ ಉಚ್ಚಾರದ ಚಮತ್ಕಾರವು ಬಹು ಆಶ್ಚರ್ಯಕಾರಕವಾಗಿರುವುದು. ಅದು ಊರ್ಧ್ವಮುಖವಿದ್ದು ಅಖಂಡವಾಗಿ ಅಸ್ತಿತ್ವದಲ್ಲಿರುವುದು. ಅದುವೇ ಝುಣತ್ಕಾರಮಯ ಮತ್ತು ನಾದಮಯ ಪ್ರಣವವು ಅಭ್ಯಾಸದ ಸಹಾಯದಿಂದ ಸ್ಥಿರವಾಗುವಂತೆ ಮಾಡುವುದು ॥೪೩೭॥ ಈ ಪ್ರಕಾರವಾಗಿ ಆಲಸ್ಯವನ್ನು ದೂರಮಾಡಿ ಪ್ರಾಣಾಯಾಮ ಸಹ ಪ್ರಣವದ ತ್ರಿಕಾಲದಲ್ಲಿ ಅಭ್ಯಾಸವನ್ನು ಮಾಡುವರು. ಪ್ರತಿಸಲ ಸಾವಕಾಶವಾಗಿ ಹತ್ತು-ಹತ್ತುಸಾರೆ ಆವೃತ್ತಿಯನ್ನು ಮಾಡಲಾಗುವುದು ॥೪೩೮॥ ಯಾವ ಪ್ರಕಾರವಾಗಿ ಒಬ್ಬ ಸಾಧ್ವಿ ಪತಿವ್ರತೆಯು ತನ್ನ ಪತಿಯ ವಚನವನ್ನು ಸ್ವಲ್ಪವೂ ಕೂಡ ಉಲ್ಲಂಘಿಸುವುದಿಲ್ಲವೋ ಅದರಂತೆ ಒಂದು ತಿಂಗಳ ಮುಗಿಯುವ ಮುಂಚೆಯೇ ಈ ಪ್ರಾಣಜಯವನ್ನು ಸಾಧ್ಯ ಮಾಡಲು ಬರುವುದು ॥೪೩೯॥ ಈ ಅಭ್ಯಾಸದಲ್ಲಿ ಯಾವ ಪುರುಷನು ಸತತವಾಗಿ ಅತ್ಯಂತ ತತ್ಪರನಾಗಿರುವನೋ, ಆತನಿಗೆ ಯೋಗದ ಅಭ್ಯಾಸದ ಸಾರವು ಸಹಜವಾಗಿಯೇ ಪ್ರಾಪ್ತವಾಗುವುದು ॥೪೪೦॥ ಹೀಗೆ ಪ್ರಾಣಜಯವು ಪ್ರಾಪ್ತವಾಗುತ್ತಲೇ ಭಜನೆಯೂ ಕೂಡ ಎರಡು ಪ್ರಕಾರವಾಗುವುದು. ಒಂದು ಶಾಸ್ತ್ರದ ವಿಧಿ ಪ್ರಮಾಣದಂತೆ ಸಗುಣ ಉಪಾಸನೆಯು ಮತ್ತು ಎರಡನೆಯದಾಗಿ ಯೋಗಾಭ್ಯಾಸಯುಕ್ತ ನಿರ್ಗುಣೋಪಾಸನವು ॥೪೪೧॥ ಆದರೆ ಎರಡರಲ್ಲಿಯ ಸಮಾಧಾನವು ನಿರ್ಗುಣದಲ್ಲಿಯೇ ದೊರಕುವುದು. ಇದನ್ನು ಲಕ್ಷದಲ್ಲಿಡು. ಈ ಎರಡರ ಉಪಲಕ್ಷಣವನ್ನು ಶ್ರೀಕೃಷ್ಣನು ಸಂಕ್ಷಿಪ್ತವಾಗಿ ಹೇಳುವನು ॥೪೪೨॥ ಹೇ ಉದ್ಧವಾ, ಸಾಧಕನು ''ಓಂ'' ಎಂಬ ಪ್ರಣವದ ಸ್ಮರಣೆಯನ್ನು ಮಾಡಲು ಪ್ರಾರಂಭಿಸಿದರೆ ಆಗ ಆ ಸ್ವರದ ಜೊತೆಯಲ್ಲಿಯೇ ಪ್ರಾಣವೇ ಪ್ರಣವದಲ್ಲಿ ಪ್ರವೇಶಿಸುವುದು. ಒಂದು ಪ್ರಣವದ ಸ್ಫುರಣವಾಗಿ ಅದು ಅಖಂಡವಾಗಿ ವಿಕಾಸವಾಗುತ್ತಿರುವುದು ॥೪೪೩॥ ಯಾವುದರಿಂದ ಅಕ್ಷರಗಳು ನಿರ್ಮಾಣವಾಗುವುವೋ, ಮತ್ತು ಶಬ್ದಗಳನ್ನು ಉಚ್ಚರಿಸಿದನಂತರ ಯಾವುದರಲ್ಲಿ ಸಮಾವಿಷ್ಟವಾಗುವುದೋ, ಹಾಗೆಯೇ ಯಾವ ಸ್ಫೂರ್ತಿಯು ಉಳಿದುಕೊಳ್ಳುವುದೋ, ಅದಕ್ಕೇನೇ ನಿಜವಾಗಿ ಪ್ರಣವ ಎಂದು ಹೇಳುವರು ॥೪೪೪॥ ಯಾವ ಪ್ರಣವದ ಆಧಾರದಿಂದ ಆರೂ ಚಕ್ರಗಳನ್ನು ಜಯಿಸಿದರೆ, ಅದೇ ಪ್ರಣವವನ್ನು ಮುಂದು ಮಾಡಿ ಸಾಧಕನು ದಾರಿಯನ್ನು ನಡೆಯುವನು ॥೪೪೫॥ ಆಗ ಕುಂಡಲಿನೀ ಶಕ್ತಿಯ ಸಾಮರ್ಥ್ಯ ಮತ್ತು ಸರಿಯಾದ ವೈರಾಗ್ಯದ ಸಹಾಯದಿಂದ ಸುಷುಮ್ನಾ ನಾಡಿಯ ದ್ವಾರದ ರಸ್ತೆಯು ತೀವ್ರಗತಿಯಿಂದ ದಾಟಿ ಭಕ್ತನು ತ್ರಿಕುಟಸ್ಥಾನವನ್ನು ಜಯಿಸುವನು ॥೪೪೬॥ ಆ ಸಮಯದಲ್ಲಿ ಹನುಹತ ನಾದದ ಗರ್ಜನೆಯಲ್ಲಿ ಭಕ್ತನು ಪತಾಕೆಯನ್ನು ಕಟ್ಟಲು ಮುಂದಿನ ಯೋಗಮಾರ್ಗವು ತನ್ನಷ್ಟಕ್ಕೆ ತಾನೇ ಕೈ ಸೇರುವುದು ॥೪೪೭॥ ಅಲ್ಲಿ ಅತಿಶಯವಾಗಿ ಆನಂದದಿಂದ ಹಾಗೂ ಉತ್ಸಾಹದಿಂದ ಔಟಪೀಠ ಮತ್ತು ಗೋಲ್ಹಾಟ ಈ ಎರಡು ಚಕ್ರಗಳ ಮಾರ್ಗವನ್ನೂ ಕೂಡ ಆಕ್ರಮಣ ಮಾಡಿ ಆತನು ತೀವ್ರಗತಿಯಿಂದ ಮುಂದೆ ಹೋಗಲಾರಂಭಿಸುವನು ॥೪೪೮॥ ಆ ಸಮಯದಲ್ಲಿ ಆತನಿಗೆ ಹಿಂದಿನ ಸ್ಮರಣೆ ಯಾವುದೂ ಇರುವುದಿಲ್ಲ. ವಿಕಲ್ಪದ ನಾಶವಾಗಿ ಬಿಡುವುದು ಮತ್ತು ಜೀವದ ಸ್ವಾನಂದ ಜೀವನವು ಸತ್ರಾವೀಕಲಾ, ಇದರ ಭೇಟಿಯಾಗುವುದು ॥೪೪೯॥ ಅಲ್ಲಿ ಬ್ರಹ್ಮರಂಧ್ರದಿಂದ ಸಹಸ್ರದಳ ಕಮಲಕ್ಕೆ ಬಿಟ್ಟಿರುವ ದ್ರವವು ಖಳಖಳಾ ಎಂದು ಹರಿಯುತ್ತಿರುವುದು. ಅದು ಸರಳವಾದ ಸ್ವಾನಂದ ಜೀವನಕ್ಕೆ ಬಂದು ಕೂಡುವುದು ॥೪೫೦॥

ತೇ ಸೇವಿತಾ ಸಂತೋಷೇ ಪಾಣೀ । ನಿವಲೀ ಸಂತಪ್ತ ಅವನೀ । ಇಂದ್ರಿಯಾಂಚೀ ಪುರಲೀ ಧಣೀ । ಗುಣಾಂಚೀ ತ್ರಿವೇಣೀ ಬುಡಾಲೀ ॥೪೫೧॥ ತಂವ ಭ್ರಮರಗುಂಫೇ ಆಂತ । ಜೀವಶಿವಾಂಚಾ ಏಕಾಂತ । ತೇಣೇ ಜೀವಪಣಾಚಾ ಪ್ರಾಂತ । ವೃತ್ತೀಸೀ ಘಾತ ಹೋ ಸರಸಾ ॥೪೫೨॥ ತೇಥ ಶಿವಶಕ್ತಿಸಂಯೋಗ । ನಿಜಐಕ್ಯೇ ಝಾಲಾ ಚಾಂಗ । ಪರಮಾನಂದೇ ಕೋಂದಲೇ ಅಂಗ । ಸುಖಾಚಾ ಸುಖಭೋಗ ಸುಖರೂಪ ಝಾಲಾ ॥೪೫೩॥ ತೇವ್ಹಾ ಹೇತು ಮಾತು ದೃಷ್ಟಾಂತೂ । ಖುಂಟಲೀ ವೇದವಾದಾಚೀ ಮಾತೂ । ಝಾಲಾ ಮೀತೂಪಣಾಚಾ ಪ್ರಾಂತೂ । ಏಕಲಾ ಏಕಾಂತೂ ಏಕಪಣೇ ॥೪೫೪॥ ತೇ ಏಕಲೇಪಣಾಚೇ ಏಕ । ಮ್ಹಣಾವಯಾ ಮ್ಹಣತೇ ನಾಹೀ ದೇಖ । ಐಸೇ ಯೋಗಬಳೇ ಜೇ ನೇಟಕ । ಮಾಝೇ ನಿಜಸುಖ ಪಾವಲೇ ॥೪೫೫॥ ಹೇ ಯೋಗಮಾರ್ಗೀಚೇ ವಾಟ । ಅತಿಅವಘಡ ಪರಮ ಕಷ್ಟ । ಘೋರ ವಿಘ್ನಾಚಾ ಕಡಕಡಾಟ । ಪ್ರಾಪ್ತಿ ಅವಚಟ ಏಕಾದ್ಯಾ ॥೪೫೬॥ ತೈಸಾ ನವ್ಹೇ ಮಾಝಾ ಭಕ್ತಿಪಂಥೂ । ತೇಥ ನಾಹೀ ವಿಘ್ನಾಚೀ ಮಾತೂ । ಭಕ್ತಾಂಸೀಹೀ ಹಾಚಿ ಠಾವೋ ಪ್ರಾಪ್ತೂ । ಐಕ ತೇಹೀ ಮಾತೂ ಮೀ ಸಾಂಗೇನ ॥೪೫೭॥ ಮೂಳೀ ಯೋಗ ಹಾ ನಾಹೀ ಸ್ಪಷ್ಟ । ಮ್ಹಣಾಲ ಕೈಚೇ ಕಾಢಿಲೇ ಕಚಾಟ । ಪದಬಂಧಾಚೀ ಚುಕಲೀ ವಾಟ । ವೃಥಾ ವಟವಟ ನ ಮ್ಹಣಾವೀ ॥೪೫೮॥ ಯೇಚ ಶ್ಲೋಕೀ ದೇವೋ ಬೋಲಿಲಾ । ಮಾಸಾದರ್ವಾಕ್ ಪ್ರಾಣಜಯೋ ಜಾಹಲಾ । ಯಾಂತೂ ಧ್ವನಿತೇ ಯೋಗ ಬೋಲಿಲಾ । ತೋ ಮ್ಯಾ ಕೇಲಾ ಪ್ರಕಟಾರ್ಥ ॥೪೫೯॥ ಜೇಥ ಪ್ರಾಣಾಪಾನಜಯೋ ಝಾಲಾ । ತೇಥ ಮಹಾಯೋಗೂ ಹಾ ಭಾಗಾ ಆಲಾ । ಹಾ ಯೋಗೂ ಶಾಸ್ತ್ರಾರ್ಥ ಬೋಲಿಲಾ । ವಿಶದ ಕೇಲಾ ಆಕುಲಾಗಮೀ ॥೪೬೦॥ ಪ್ರಾಣಾಪಾನಜಯೋ ಝಾಲಾ ಪಹಾ ಹೋ । ಜೈಸಾ ಸಾಧಕಾಚಾ ಭಾವೋ । ಸಗುಣನಿರ್ಗುಣ ಉಪಾವೋ । ಪ್ರಾಪ್ತೀ ಠಾವೋ ಸಹಜೇಚಿ ॥೪೬೧॥ ಪ್ರಾಣಾಪಾನಜಯಪ್ರಾಪ್ತೀ । ಸಗುಣ ಉಪಾಸನಾಸ್ಥಿತೀ । ತದ್ದ್ವಾರಾ ನಿರ್ಗುಣಪ್ರಾಪ್ತೀ । ಉದ್ಧವಾಪ್ರತೀ ಹರಿ ಬೋಲೇ ॥೪೬೨॥ ಕಶಾಸಾರಿಖೇ ತುಝೇ ಧ್ಯಾನ । ಐಸಾ ಉದ್ಧವೇ ಕೇಲಾ ಪ್ರಶ್ನ । ಯಾಲಾಗೀ ಸಾಂಗೋನಿಯಾ ಸಗುಣ । ಸವೇಚಿ ನಿರ್ಗುಣ ಸಂಸ್ಥಾಪೀ ॥೪೬೩॥

ಅವರು ಅಲ್ಲಿನ ಜೀವನವನ್ನು ಬಹಳ ಆನಂದದಿಂದ ಸೇವನೆಯನ್ನು ಮಾಡಲು ಸಂತಪ್ತವಾಗಿರುವ ಸರ್ವ ಭೂಮಿಯು ಶಾಂತವಾಗಿಬಿಡುವುದು. ಇಂದ್ರಿಯಗಳ ತೃಷ್ಣೆಯು ಪೂರ್ಣವಾಗುವುದು. ಮತ್ತು ಗುಣಗಳ ತ್ರಿವೇಣಿಯು ಮುಳುಗಿಹೋಗುವುದು ॥೪೫೧॥ ಆಗ ಬ್ರಹ್ಮಗುಹೆಯ ಒಳಭಾಗದಲ್ಲಿ ಜೀವ ಮತ್ತು ಶಿವ ಇವರ ಏಕಾಂತದಲ್ಲಿ ಭೇಟಿಯಾಗುವುದು. ಇದರಿಂದ ಜೀವತ್ವದ ಪ್ರದೇಶ ಮತ್ತು ವೃತ್ತಿ ಈ ಎರಡೂ ನಷ್ಟವಾಗುವುದು ॥೪೫೨॥ ಅಲ್ಲಿ ಆತ್ಮಸ್ವರೂಪದಲ್ಲಿ ಶಿವಶಕ್ತಿ ಐಕ್ಯವಾದ್ದರಿಂದ ಭಕ್ತನ ಶರೀರವು ಪರಮ ಆನಂದದಿಂದ ತುಂಬಿಕೊಳ್ಳುವುದು. ಸುಖದ ಸುಖೋಪಯೋಗವು ಸುಖದಿಂದ ಏಕರೂಪವಾಗುವುದು ॥೪೫೩॥ ಆ ಸಮಯದಲ್ಲಿ ಯಾವುದೇ ಕಾರಣವಾಗಲಿ, ಮಾತಾಗಲಿ, ದೃಷ್ಟಾಂತವಾಗಲಿ ಅಥವಾ ವೇದವಾದವಾಗಲಿ ಈ ಎಲ್ಲವೂ ಇಲ್ಲದಾಗಿ ನಾನು ನೀನೆಂಬುದೂ ಕೂಡ ಕೊನೆಗೊಳ್ಳುವುದು ॥೪೫೪॥ ಈತನು ಒಬ್ಬನೇ ಇರುವನು ಎಂದು ಹೇಳಿಕೊಳ್ಳಲು ಅಲ್ಲಿ ಬೇರೊಬ್ಬನು ಯಾರೂ ಇರುವುದಿಲ್ಲ. ಇದನ್ನು ಲಕ್ಷದಲ್ಲಿಡು. ಈ ಪ್ರಕಾರವಾಗಿ ಯೋಗ ಸಾಮರ್ಥ್ಯದಿಂದ ಯಾರು ಶಕ್ತಿವಾನರಾಗಿರುವರೋ, ಅವರಿಗೆ ಮಾತ್ರ ನನ್ನ ಆತ್ಮಸುಖವು ಲಭಿಸುವುದು ॥೪೫೫॥ ಆದರೆ ಈ ಯೋಗಮಾರ್ಗದ ರಸ್ತೆಯು ಅತಿಶಯವಾಗಿ ಅವಘಡ ಮತ್ತು ಕಷ್ಟಕಾರಕವಾಗಿರುವುದು. ಈ ದಾರಿಯಲ್ಲಿ ಮಹಾ ಮಹಾ ವಿಘ್ನಗಳ ಭಯಂಕರವಾದ ತೊಂದರೆಗಳಿರುವುವು. ಆದ್ದರಿಂದ ಈ ಯೋಗದ ಪ್ರಾಪ್ತಿಯು ಕ್ವಚಿತವಾಗಿ ಯಾರಿಗೋ ಒಬ್ಬರಿಗೆ ಆಗುತ್ತಿರುವುದು ॥೪೫೬॥ ನನ್ನ ಭಕ್ತಿ ಮಾರ್ಗವು ಮಾತ್ರ ಅಂತಹ ತ್ರಾಸದಾಯಕವಲ್ಲ. ಇದರಲ್ಲಿ ವಿಘ್ನಗಳು ನಿರ್ಮಾಣವಾಗುವುದಿಲ್ಲ. ಭಕ್ತರಿಗೂ ಕೂಡ ಭಕ್ತಿಮಾರ್ಗದಿಂದ ಅದೇ ಸ್ಥಾನವು ಪ್ರಾಪ್ತವಾಗುವುದು. ಈ ವಿಷಯಕ್ಕಾಗಿ ಹೇಳುವೆನು, ಅದನ್ನು ಕೇಳು ॥೪೫೭॥ ಮೂಲತಃ ಇಲ್ಲಿ ಯೋಗದ ಬಗ್ಗೆ ಯಾವುದೂ ಹೇಳಿರುವುದಿಲ್ಲ. ಹೀಗಿರಲು ನೀವು ಮೂಲ ಪದದ ಅರ್ಥವನ್ನು ಮಧ್ಯದಲ್ಲಿಯೇ ಬಿಟ್ಟುಕೊಟ್ಟು ಯಾವುದೋ ವಿಚಾರವನ್ನು ಎಲ್ಲಿಂದ ತಂದಿರುವಿರಿ ? ಹೀಗೆ ನೀನು ಹೇಳಬಹುದು. ಆದರೆ ಈ ವಿಚಾರವು ವ್ಯರ್ಥವೆಂದು ಮಾತ್ರ ಹೇಳಬೇಡ ॥೪೫೮॥ ಏಕೆಂದರೆ ಇದೇ ಶ್ಲೋಕದಲ್ಲಿ ''ಮಾಸಾದರ್ವಾಕ್'' ಈ ಪದದಿಂದ ಒಂದು ತಿಂಗಳಕ್ಕಿಂತ ಮುಂಚೆಯೇ ಪ್ರಾಣಜಯವಾಗುವುದೆಂದು ಹೇಳಿರುವುದು. ಇದರಲ್ಲಿ ಅವರು ಯೋಗಾಭ್ಯಾಸವನ್ನು ಧ್ವನಿತಗೊಳಿಸಿರುವರು. ಅದನ್ನೇ ನಾನು ಸ್ಪಷ್ಟಮಾಡಿ ಹೇಳಿರುವೆನು ॥೪೫೯॥ ಪ್ರಾಣಾಪಾನದ ಮೇಲೆ ಜಯವನ್ನು ಸಾಧಿಸಿದರೆ ಮಾತ್ರ ಅಲ್ಲಿ ಮಹಾಯೋಗವು ಸಾಧ್ಯವಾಗುವುದು. ಈ ಯೋಗವನ್ನು ಶಾಸ್ತ್ರದಲ್ಲಿ ಹೇಳಿರುವುದು ''ಆಕುಲಾಗಮ'' ಎಂಬ ತಾಂತ್ರಿಕ ಗ್ರಂಥದಲ್ಲಿ ಇದರ ಸ್ಪಷ್ಟೀಕರಣವನ್ನು ಮಾಡಲಾಗಿರುವುದು. ಆದ್ದರಿಂದ ನಾನು ಇದನ್ನು ಸ್ಪಷ್ಟೀಕರಣ ಮಾಡಿರುವೆನು ॥೪೬೦॥ ಪ್ರಾಣಾಪಾನದ ನಿಗ್ರಹವಾಯಿತೆಂದರೆ, ಸಾಧಕನಿಗೆ ಇದ್ದ ಭಾವನೆಯಂತೆ ಸಗುಣ ಅಥವಾ ನಿರ್ಗುಣ ಉಪಾಸನೆಯ ಯೋಗದಿಂದ ಆ ಯಾ ಪದವಿಗಳು ಸಹಜವಾಗಿ ಪ್ರಾಪ್ತಿಯಾಗುವುದು ॥೪೬೧॥ ಪ್ರಾಣಾಪಾನದಲ್ಲಿ ವಿಜಯವನ್ನು ಸಾಧಿಸಿದ ನಂತರ ಮತ್ತು ಸಗುಣೋಪಾಸನವು ಸಾಧ್ಯವಾಯಿತೆಂದರೆ ಆಗ ನಿರ್ಗುಣದ ಪ್ರಾಪ್ತಿಯು ಹೇಗಾಗುವುದೆಂಬುದನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಿರುವನು ॥೪೬೨॥ ನಿನ್ನ ಧ್ಯಾನವು ಯಾವುದರಂತೆ ಇರುವುದು ? ಉದ್ಧವನು ಹೀಗೆ ಪ್ರಶ್ನೆಯನ್ನು ಕೇಳಿದನು. ಅದಕ್ಕಾಗಿ ಸಗುಣ ಧ್ಯಾನದ ನಿರೂಪಣೆಯನ್ನು ಮಾಡಿ ಕೂಡಲೇ ನಿರ್ಗುಣ ಸ್ವರೂಪದ ಸಿದ್ಧತೆಯನ್ನು ಮಾಡಿ ತೋರಿಸಿದನು ॥೪೬೩॥

ಮತ್ಸ್ಯ ಸಾಧಾವಯಾ ಬಡಿಶ ಜಾಣ । ಚಿತ್ತ ಸಾಧಾವಯಾ ಮೂರ್ತೀ ಸಗುಣ । ತೇಚಿ ಮೂರ್ತಿಚೇ ಸಗುಣ ಧ್ಯಾನ । ಸ್ವಯೇ ಶ್ರೀಕೃಷ್ಣ ಸಾಂಗತ ।೫೬೪॥

ಹೃತ್ಪುಂಡರೀಕಮಂತಸ್ಥಮೂರ್ಧ್ವನಾಲಮಧೋಮುಖಂ । ಧ್ಯಾತ್ವೋರ್ಧ್ವಮುಖಮುನ್ನಿದ್ರಮಷ್ಟಪತ್ರಂ ಸಕರ್ಣಿಕಂ ।೩೬॥

ಅರ್ಥ :- ಹೃದಯದಲ್ಲಿ ಒಂದು ಕಮಲವು ಇರುವುದು. ಅದರ ನಳಿಕೆಯು ಮೇಲೆ ಇದ್ದು ಮುಖವು ಕೆಳಗೆ ಇರುವುದು. ಶರೀರದಲ್ಲಿನ ಹೃದಯ ಕಮಲದ ಮುಖವು ಮೇಲಕ್ಕೆ ಇದ್ದು, ಅರಳಿಕೊಂಡಿರುವುದು ಈ ಕಮಲ ಪುಷ್ಪಕ್ಕೆ ಎಂಟು ದಳಗಳಿರುವುವು. ಹೀಗೆ ಧ್ಯಾನ ಚಿಂತನೆಯನ್ನು ಮಾಡಬೇಕು.

ಜೈಸೇ ಕೇಳೀಚೇ ಕಮಳ । ತೈಸೇ ಹೃದಯೀ ಅಷ್ಟದಳ । ಅಧೋಮುಖ ಊರ್ಧ್ವನಾಳ । ಅತಿಕೋಮಳ ಲಸಲಸಿತ ।೫೬೫॥ ಧರೋನಿ ಪ್ರಾಣಾಯಾಮಾಚೇ ಬಳ । ಊರ್ಧ್ವಮುಖ ಹೃದಯಕಮಳ । ವಿಕಸಿತ ಕರಾವೇ ಅಷ್ಟದಳ । ಧ್ಯಾನೇ ಪ್ರಬಳ ಧ್ಯಾತಾ ಪೈ ।೫೬೬॥ ತೇಥ ಊರ್ಧ್ವಮುಖ ಅಧೋನಾಳ । ಧ್ಯಾನಾ ಆಲಿಯಾ ಹೃದಯಕಾಳ । ಅತಿ ಉನ್ನಿದ್ರ ಅಷ್ಟದಳ । ಧ್ಯಾನೀ ಅಚಂಚಳ ಸ್ಥಿರಾವಲ್ಯಾ ।೫೬೭॥

ಕರ್ಣಿಕಾಯಾಂ ನ್ಯಸೇತ್ಸೂರ್ಯಸೋಮಾಗ್ನೀನುತ್ತರೋತ್ತರಮ್ ।
ವಹ್ನಿಮಧ್ಯೇ ಸ್ಮರೇದ್ ರೂಪಂ ಮಮೈತದ್ಧ್ಯಾನಮಂಗಲಮ್ ।೩೭॥

ಅರ್ಥ :- ಅದರ ಕರ್ಣಿಕೆಯಲ್ಲಿ ಸೂರ್ಯ, ಚಂದ್ರ ಮತ್ತು ಅಗ್ನಿ ಇವರ ಒಂದರಮೇಲೊಂದು ಸ್ಥಾಪನೆ ಮಾಡಬೇಕು. ಅವುಗಳಲ್ಲಿ ಅಗ್ನಿಯಲ್ಲಿ ಧ್ಯಾನದ ಶುಭ ವಿಷಯವಾದ ನನ್ನ ಸ್ವರೂಪದ ಚಿಂತನೆಯನ್ನು ಮಾಡಬೇಕು.

ಕರ್ಣಿಕೇಮಾಜೀ ಚಂದ್ರಮಂಡಳ । ಧ್ಯಾವೇ ಸೋಳಾ ಕಳೀ ಅವಿಕಳ । ತ್ಯಾಹೀಮಾಜೀ ಸೂರ್ಯಮಂಡಳ । ಅತಿಸೋಜ್ಜ್ವಳ ಬಾರಾ ಕಳೀ ।೫೬೮॥ ತ್ಯಾಹೀಮಾಜೀ ವನ್ಹಿಮಂಡಳ । ದಾಹೀ ಕಳೀ ಅತಿಜಾಜ್ವಲ್ಯ । ತೇ ಅಗ್ನಿಮಂಡಳೀ ಸುಮಂಗಲ । ಧ್ಯಾವೀ ಸೋಜ್ಜ್ವಳ ಮೂರ್ತಿ ಮಾಝೀ ।೫೬೯॥

ಸಮಂ ಪ್ರಶಾಂತಂ ಸುಮುಖಂ ದೀರ್ಘಚಾರುಚತುರ್ಭುಜಮ್ । ಸುಚಾರು ಸುಂದರಗ್ರೀವಂ ಸುಕಪೋಲಂ ಶುಚಿಸ್ಮಿತಮ್ ।೩೮॥
ಸಮಾನಕರ್ಣವಿನ್ಯಸ್ತಸ್ಫುರನ್ಮಕರಕುಂಡಲಮ್ । ಹೇಮಾಂಬರಂ ಘನಶ್ಯಾಮಂ ಶ್ರೀವತ್ಸಶ್ರೀನಿಕೇತನಮ್ ।೩೯॥

ಅರ್ಥ:- ಅತ್ಯಂತ ಶಾಂತವಾದ, ಅತ್ಯಂತ ಸುಂದರ ಮುಖಉಳ್ಳ, ನಾಲ್ಕು ಮನೋಹರವಾದ ಭುಜಗಳುಳ್ಳ, ಹಾಸ್ಯ ಮಧುರಭಾವವಿರುವ, ಒಂದೇ ರೀತಿಯ ಎರಡೂ ಕಿವಿಗಳಲ್ಲಿ ಹೊಳೆಯುತ್ತಿರುವ ಮಕರಾಕಾರದ ಕುಂಡಲಗಳಿರುವ, ಪರಿಧಾನ ವಸ್ತ್ರವು ಸುವರ್ಣವರ್ಣದಂತೆ ಹಳದಿಯಾಗಿರುವ, ಅಂಗಕಾಂತಿಯು ಆಕಾಶದಂತೆ ನೀಲವರ್ಣವಾಗಿರುವ, ಹೃದಯದ ಬಲಭಾಗದಲ್ಲಿ ಶ್ರೀವತ್ಸದ ಎಡಭಾಗದಲ್ಲಿ ಶ್ರೀಯ ಸ್ಥಾನವಾಗಿರುವ,

ತೇಚಿ ಮಾಝೀ ಮೂರ್ತೀಚೇ ಧ್ಯಾನ । ಉದ್ಧವಾ ಐಕ ಸಾವಧಾನ । ಆಪುಲೇ ಮೂರ್ತೀಚೇ ಆಪಣ । ಧ್ಯಾನ ಶ್ರೀಕೃಷ್ಣ ಸಾಂಗತ ।೫೭೦॥

ಮೀನನ್ನು ಹಿಡಿಯುವುದಕ್ಕಾಗಿ ಬಲೆಗೆ ಆಮಿಷವನ್ನು ಹಚ್ಚುವರು. ಅದರಂತೆ ಚಿತ್ತವನ್ನು ಸ್ಥಿರವನ್ನಾಗಿ ಮಾಡುವುದಕ್ಕಾಗಿ ಸಗುಣ ಮೂರ್ತಿಯ ಧ್ಯಾನವು ಅವಶ್ಯಕವಾಗಿರುವುದು. ಇದೇ ಸಗುಣ ಮೂರ್ತಿಯ ಧ್ಯಾನವನ್ನು ಶ್ರೀಕೃಷ್ಣನು ಸ್ವತಃ ಹೇಳುತ್ತಿರುವನು ।೫೬೪॥

ಯಾವ ಪ್ರಕಾರವಾಗಿ ಬಾಳೆಯ ಹೂವು ಇರುವುದೋ, ಅದೇ ಪ್ರಕಾರವಾಗಿ ಹೃದಯದಲ್ಲಿ ಎಂಟು ದಳಗಳ ಕಮಲವಿರುವುದು. ಅದರ ಮುಖವು ಕೆಳಗೆ, ತುಂಬು ಮೇಲೆ ಹೀಗೆ ಇದ್ದು ಅದು ಅತ್ಯಂತ ಕೋಮಲವಾಗಿ ಹೊಳೆಯುತ್ತಿರುವುದು ।೫೬೫॥ ಅದಕ್ಕಾಗಿ ಪ್ರಾಣಾಯಾಮದ ಸಾಮರ್ಥ್ಯದಿಂದ ಹೃದಯ ಕಮಲವನ್ನು ಊರ್ಧ್ವಮುಖವನ್ನಾಗಿ ಮಾಡಿ ಪೂರ್ಣವಾದ ಏಕಾಗ್ರತೆಯಿಂದ ಧ್ಯಾನವನ್ನು ಮಾಡುತ್ತ ಆ ಯಾವ ಅಷ್ಟದಳಗಳನ್ನು ವಿಕಾಸಗೊಳಿಸಬೇಕು ।೫೬೬॥ ಈ ಪ್ರಕಾರವಾಗಿ ತುಂಬು ಕೆಳಗೆ ಮತ್ತು ಮುಖ ಮೇಲಕ್ಕೆ ಇರುವ ಸರೋವರದಲ್ಲಿನ ಕಮಲದಂತೆ ಪೂರ್ಣ ವಿಕಾಸಗೊಂಡಿರುವ ಎಂಟು ದಳಗಳ ಕಮಲದ ಧ್ಯಾನವನ್ನು ಮಾಡಿ ಅದು ಕದಲದಂತೆ ಸ್ಥಿರವನ್ನಾಗಿ ಮಾಡಬೇಕು ।೫೬೭॥

ಆ ಯಾವ ಕಮಲದ ಗರ್ಭದಲ್ಲಿ ಹದಿನಾರು ಕಲೆಗಳಿಂದ ಯುಕ್ತವಾಗಿರುವ ನಿರ್ಮಲವಾದ ಚಂದ್ರಮಂಡಲದ ಕಲ್ಪನೆಯನ್ನು ಮಾಡಬೇಕು. ಮತ್ತು ಅದರ ಧ್ಯಾನವನ್ನು ಮಾಡಬೇಕು. ಅದರ ಒಳಗಡೆ ಹನ್ನೆರಡು ಕಲೆಗಳಿಂದ ಯುಕ್ತವಾಗಿರುವ ದೇದಿಪ್ಯಮಾನವಾದ ಸೂರ್ಯಮಂಡಲವಿರುವದೆಂದು ಕಲ್ಪನೆಯನ್ನು ಮಾಡಬೇಕು ।೫೬೮॥ ಅದರ ಒಳಗಡೆ ಹತ್ತು ಕಲೆಗಳಿಂದ ಯುಕ್ತವಾಗಿರುವ ಪ್ರಜ್ವಲಿತ ಅಗ್ನಿಮಂಡಲದ ಕಲ್ಪನೆಯನ್ನು ಮಾಡಿ ಅದರಲ್ಲಿ ಮಂಗಲಮಯವಾದ ನನ್ನ ದಿವ್ಯ ಮೂರ್ತಿಯನ್ನು ಕಾಣಬೇಕು, ಹಾಗೆಯೇ ಅದನ್ನು ಧ್ಯಾನಿಸುತ್ತಿರಬೇಕು ।೫೬೯॥

ಹೇ ಉದ್ಧವಾ, ಆ ಯಾವ ನನ್ನ ಮೂರ್ತಿಯ ಧ್ಯಾನವು ಹೇಗೆ ಇರಬೇಕೆಂಬುದನ್ನು ಏಕಾಗ್ರ ಚಿತ್ತದಿಂದ ಸರಿಯಾಗಿ ಕೇಳು. ಹೀಗೆ ಹೇಳುತ್ತ ಶ್ರೀಕೃಷ್ಣನು ತನ್ನ ಮೂರ್ತಿಯ ಧ್ಯಾನವನ್ನು ತಾನೇ ಹೇಳಲಾರಂಭಿಸಿದನು ।೫೭೦॥

ಅತಿದೀರ್ಘ ನಾ ಠೇಂಗಣೇಪಣ । ಸಮ ಅವಯವ ಸಮಾನ ಠಾಣ । ಸಮ ಸಪೋಷ ಅತಿಸಂಪೂರ್ಣ । ಮೂರ್ತಿ ಸುಲಕ್ಷಣ ಚಿಂತಾವೀ ॥೪೭೧॥ ಮೂರ್ತಿ ಚಿಂತಾವೀ ಸಂಮುಖ । ಪ್ರಸನ್ನ ವದನ ಅತಿಸುರೇಖ । ಜಿಚೇ ದೇಖತಾಂಚಿ ಮುಖ । ಹೃದಯೀ ಹರಿಖ ಕೋಂದಾಟೇ ॥೪೭೨॥ ಜೈಶೀ ವಿಶಾಳ ಕಮಳದಳೇ । ತೈಸೇ ಆಕರ್ಣಾಂತ ದೋನೀ ಡೋಳೇ । ಭವಯಾ ರೇಖಿಲ್ಯಾ ಕಾಜಳೇ । ತೈಶೀ ರೇಖಾ ಉಜಳೇ ಧನುಷ್ಯಾಕೃತೀ ॥೪೭೩॥ ಕಪಾಳ ಮಿರವತ ಸಾಂವಳೇ । ತ್ಯಾಹೀವರೀ ಚಂದನ ಪಿವಳೇ । ಮಾಜೀ ಕಸ್ತೂರೀಚೀ ದೋನೀ ಅಂಗುಳೇ । ಕುಂಕುಮಮೇಳೀ ಲಕ್ಷತಾ ॥೪೭೪॥ ದೀರ್ಘ ನಾಸಿಕ ಆಣಿ ಕಪಾಳೇ । ಲಖಲಖಿತ ಗಂಡಸ್ಥಳೇ । ಮುಖ ಸುಕುಮಾರ ಕೋವಳೇ । ಅಧರ ಪ್ರವಾಳೇ ಆರಕ್ತ ॥೪೭೫॥ ಶ್ಯಾಮಚಂದ್ರಾಚೀ ಸಪೋಷ ಕೋರ । ತೈಶೀ ಚುಬುಕಾ ಅತಿಸುಂದರ । ಮುಖ ನಿಮಾಸುರೇ ಮನೋಹರ । ಭಕ್ತಚಕೋರಚಂದ್ರಮಾ ॥೪೭೬॥ ಜೈಸಾ ಹಿರಿಯಾಚ್ಯಾ ಜ್ಯೋತೀ । ಕೀ ದಾಳಿಂಬಬೀಜಾಂಚೀ ದೀಪ್ತೀ । ತೈಶೀ ಮುಖಾಮಾಜೀ ದಂತಪಂಕ್ತೀ । ದಶನ ಝುಳಕತೀ ಬೋಲತಾ ॥೪೭೭॥ ಸಮಾನಕರ್ಣ ದೋನೀ ಸಧರ । ಸ್ಫುರತ ಕುಂಡಲೇ ಮಕರಾಕಾರ । ಈಷತ್ ಹಾಸ್ಯ ಮನೋಹರ । ಗ್ರೀವಾ ಸುಂದರ ಕಂಬು ಜೈಶೀ ॥೪೭೮॥ ಕಂಠೀಚೀ ತ್ರಿವಳೀ ಉಭವಣೀ । ಮಾಜೀ ಮಿರವೇ ಕೌಸ್ತುಭಮಣೀ । ತೇ ಪ್ರಕಾಶಲೀ ದೀಪ್ತೀ ಕವಣ ಗುಣೀ । ತೇಜೇದಿನಮಣೀ ಲೋಪಲಾ ॥೪೭೯॥ ಭುಜಂಗಾಕಾರ ಸ್ವಭಾವೋ । ಚತುರ್ಭುಜ ಆಜಾನುಬಾಹೋ । ವಿಶಾಳ ವಕ್ಷಃ ಸ್ಥಳನಿರ್ವಾಹೋ । ಶ್ರೀವತ್ಸ ಪಹಾ ಹೋ ಚಿನ್ಹಿತ ॥೪೮೦॥ ಶ್ರೀವತ್ಸ ಶ್ರೀನಿಕೇತನ । ಹೃದಯೀ ದೋಹೀ ಭಾಗೀ ಜಾಣ । ತ್ರಿವಳೀಯುಕ್ತ ಉದರ ಗಹನ । ದಾಮೋದರಚಿನ್ಹ ತ್ಯಾ ಆಲೇ ॥೪೮೧॥ ಬಿಜೂ ತಳಪೇ ತೈಸಾ ಪಿಂವಳಾ । ಲಖಲಖಿತ ದಿಸೇ ಡೋಳಾ । ತೇವೀ ಕಸಿಲಾ ಸೋನಸಳಾ । ತೇಣೇ ಘನಸಾಂವಳಾ ಶೋಭತ ॥೪೮೨॥ ಜೈಸೇ ಚಾಂದಿಣೇ ಗಗನಾಮಾಝಾರೀ । ಶುಭ್ರತಾ ಬೈಸೇ ಶ್ಯಾಮತೇವರೀ । ತೇವೀ ಶ್ಯಾಮಾಂಗೀ ಚಂದನಾಚೀ ಭುರೀ । ತೇಣೇಂ ಶ್ರೀಹರೀ ಶೋಭತ ॥೪೮೩॥

ಬಹು ಎತ್ತರವಾಗಿರದ ಮತ್ತು ಗಿಡ್ಡಾಗಿರದ, ಸರ್ವ ಅವಯವಗಳು ಪ್ರಮಾಣ ಬದ್ಧ, ಸರಳ ರೇಖೆಯಲ್ಲಿ, ಸಮಾನ ಸ್ಥಾನದಲ್ಲಿ, ಅಂಗಕ್ಕೆ ಸೌಂದರ್ಯ ಕೊಡುವ, ಹೀಗೆ ಉತ್ತಮ ಲಕ್ಷಣಗಳಿಂದ ಯುಕ್ತವಾಗಿರುವ ನನ್ನ ಮೂರ್ತಿಯ ಧ್ಯಾನವನ್ನು ಮಾಡಬೇಕು ॥೪೭೧॥ ಆ ಯಾವ ಮೂರ್ತಿಯು ನಮ್ಮೆದುರಿನಲ್ಲಿ ಮುಖ ಮಾಡಿ ನಿಂತುಕೊಂಡಿದೆ ಎಂದು ಮನದಲ್ಲಿ ಭಾವಿಸಬೇಕು. ಆ ಮೂರ್ತಿಯ ಮುಖ ಕಮಲವು ಪ್ರಸನ್ನವಾಗಿರಬೇಕು. ಅತ್ಯಂತ ರಮಣೀಯವಾಗಿರಬೇಕು. ಆ ಮೂರ್ತಿಯ ಮುಖವನ್ನು ನೋಡುತ್ತಲೇ ಹೃದಯವು ಆನಂದದಿಂದ ತುಂಬಿತುಳುಕಬೇಕು ॥೪೭೨॥ ಕಮಲ ಪುಷ್ಪದ ದೊಡ್ಡ ದೊಡ್ಡ ದಳಗಳಂತೆ ಕಿವಿಗಳವರೆಗೂ ಮುಟ್ಟಿಕೊಂಡ ವಿಶಾಲವಾದ ನೇತ್ರಗಳಿರಬೇಕು. ಕಾಡಿಗೆಯಿಂದ ತಿದ್ದಿ ತೀಡಿದಂತೆ ಬಹುಕಪ್ಪಾದ ಹುಬ್ಬುಗಳು ಧನುಷ್ಯಾಕೃತಿಯಾಗಿರಬೇಕು ॥೪೭೩॥ ಶ್ಯಾಮವರ್ಣದ ಹಣೆಗೆ ಕೇಶರೀ ಗಂಧವು ಲೇಪಿಸಿರಬೇಕು. ಅದರ ಮಧ್ಯದಲ್ಲಿ ಕಸ್ತೂರಿಯ ಎರಡು ತಿಲಕಗಳು ಮತ್ತು ಕುಂಕುಮಯುಕ್ತ ಅಕ್ಷತೆ ಇರಬೇಕು ॥೪೭೪॥ ಸರಳವಾದ ಉದ್ದಾಗಿರುವ ಮೂಗು ಹಾಗೂ ಭವ್ಯವಾದ ಹಣೆ, ತೇಜಸ್ವಿ ಗಲ್ಲಗಳು, ಸೂಕ್ಷ್ಮ ಸುಕುಮಾರ ಮುಖಕಮಲದಲ್ಲಿ ಕೆಂಪು ರತ್ನದಂತೆ ಆರಕ್ತ ತುಟಿಗಳಿರಬೇಕು ॥೪೭೫॥ ದ್ವಿತೀಯದ ಚಂದ್ರನ ಸುಲಕ್ಷಣ ರೇಖೆಯಂತೆ ಅತ್ಯಂತ ಸುಂದರವಾದ ಗದ್ದವು ಇರಬೇಕು. ಭಕ್ತಚಕೋರ ಚಂದ್ರಮನಂತೆ ಮುಖವು ಸುಕುಮಾರ ಮತ್ತು ಮನೋಹರವಾಗಿರಬೇಕು ॥೪೭೬॥ ವಜ್ರಗಳ ಪ್ರಭೆಯಂತೆ ಅಥವಾ ದಾಳಿಂಬ ಫಲದ ದೇದಿಪ್ಯ ಬೀಜಗಳಂತೆ ಮುಖದಲ್ಲಿ ಸತೇಜವಾದ ದಂತಪಂಕ್ತಿಯಾಗಿದ್ದು ಮಾತನಾಡುತ್ತಿರಲು ದಂತಗಳು ಝಳಪಿಸುತ್ತಿರಬೇಕು ॥೪೭೭॥ ಎರಡೂ ಭಾಗಕ್ಕೆ ಎರಡು ಸಮಾನವಾದ ಕಿವಿಗಳಿದ್ದು ಮತ್ಸ್ಯಾಕೃತಿ ಕುಂಡಲಗಳು ಅಲುಗಾಡುತ್ತಿರುವುವು. ಗಲ್ಲಗಳಲ್ಲಿ ಮನೋಹರವಾದ ಹಾಸ್ಯವು ಪ್ರಕಟವಾಗುತ್ತಿರಬೇಕು. ಕಂಠದ ಆಕೃತಿಯು ಶಂಖದಂತಿರಬೇಕು ॥೪೭೮॥ ಕುತ್ತಿಗೆಯಲ್ಲಿ ಮೂರು ಗೆರೆಗಳು ಸ್ಪಷ್ಟವಾಗಿದ್ದು ಅವುಗಳಲ್ಲಿ ಕೌಸ್ತುಭಮಣಿಯು ಶೋಭಿಸುತ್ತಿರಬೇಕು. ಅದರ ಪ್ರಕಾಶದ ತೇಜವನ್ನು ಯಾರು ವರ್ಣನೆ ಮಾಡಬೇಕು ? ಸೂರ್ಯನ ತೇಜವೂ ಕೂಡ ಆ ಪ್ರಕಾಶದ ಎದುರಿನಲ್ಲಿ ಸಪ್ಪಾಗುವುದು ॥೪೭೯॥ ಭುಜಂಗದಂತೆ ತೋರುವ ಅಜಾನುಬಾಹೂ ನಾಲ್ಕು ಕೈಗಳ ನಾಲ್ಕು ಭುಜಗಳು, ವಿಶಾಲವಾದ ವಕ್ಷಃಸ್ಥಲ, ಅವುಗಳ ಮೇಲೆ ಶ್ರೀವತ್ಸಗಳ ಚಿನ್ಹೆಗಳು ॥೪೮೦॥ ಹೃದಯದ ಮೇಲೆ ಎರಡೂ ಭಾಗಗಳಲ್ಲಿ ಶ್ರೀವತ್ಸ ಮತ್ತು ಶ್ರೀನಿಕೇತನಗಳು, ಉದರವು ವಿಶಾಲವಾಗಿ ಅದರ ಮೇಲೆ ಮೂರು ಗೆರೆಗಳು, ಯಶೋದೆಯು ಹಗ್ಗದಿಂದ ಕಟ್ಟಿದ್ದರಿಂದ, ಅದರ ಚಿನ್ಹೆಯು ಅಲ್ಲಿ ಮೂಡಿರುವುದರಿಂದ ಆತನಿಗೆ ದಾಮೋದರ ಎಂಬ ನಾಮವು ಪ್ರಾಪ್ತವಾಗಿರುವುದು ॥೪೮೧॥ ಆಕಾಶದಲ್ಲಿನ ತೇಜಸ್ವಿ ಮಿಂಚಿನಂತೆ ಹೊಳೆಯುತ್ತಿರುವ, ಕಣ್ಣುಗಳಿಗೆ ಕುಕ್ಕುತ್ತಿರುವ ಭರ್ಜರೀ ಪೀತಾಂಬರವು, ಇದರಿಂದ ಶೋಭಿಸುವ ಘನಶ್ಯಾಮ, ನಯನರಮ್ಯ ಮೂರ್ತಿಯಾಗಿರುವುದು ॥೪೮೨॥ ಆಕಾಶದಲ್ಲಿ ಬೆಳದಿಂಗಳು ಯಾವರೀತಿಯಾಗಿ ತನ್ನದೇ ಶುಭ್ರತ್ವದಿಂದ ನೀಲವರ್ಣದಲ್ಲಿ ಶೋಭಿಸುವಂತೆ, ಚಂದನದ ಸುಗಂಧ ದ್ರವ್ಯವು ಶ್ರೀಹರಿಯ ಮೇಘವರ್ಣದ ದೇಹಕಾಂತಿಯಲ್ಲಿ ಶೋಭಿಸುತ್ತಿರುವುದು ॥೪೮೩॥

ಶಂಖಚಕ್ರಗದಾಪದ್ಮ ವನಮಾಲಾವಿಭೂಷಿತಮ್ । ನೂಪುರೈರ್ವಿಲಸತ್ಪಾದಂ ಕೌಸ್ತುಭಪ್ರಭಯಾ ಯುತಮ್ ॥೪೦॥
ದ್ಯುಮತ್ಕಿರೀಟಕಟಕಕಟಿಸೂತ್ರಾಂಗದಾಯುತಮ್ । ಸರ್ವಾಂಗಸುಂದರಂ ಹೃದ್ಯಂ ಪ್ರಸಾದಸುಮುಖೇಕ್ಷಣಮ್ ॥೪೧॥

ಅರ್ಥ :- ಭಗವಂತನ ಧ್ಯೇಯರೂಪ ಶಂಖ, ಚಕ್ರ, ಗದಾ, ಪದ್ಮ ಮತ್ತು ವನಮಾಲಾ ಇವುಗಳಿಂದ ಭೂಷಿತವಾಗಿರುವ, ಚರಣಗಳಲ್ಲಿ ಪೈಜಣಗಳು ಶೋಭಿಸುತ್ತಿರುವ, ಕೊರಳಲ್ಲಿ ಕೌಸ್ತುಭಮಣಿಯು ಝಗಝಗಿಸುತ್ತಿರುವ, ಅತಿಶಯ ತೇಜಃಪುಂಜ ಕಿರೀಟವು ನಡುವಿನಲ್ಲಿ ಕಟಿಸೂತ್ರವು ಮತ್ತು ಬಾಹುಭೂಷಣೆಗಳು, ಇವುಗಳಿಂದ ಯುಕ್ತವಾಗಿರುವ ಸರ್ವಾಂಗದಿಂದ ಸುಂದರವಾದ, ಹೃದಯಕ್ಕೆ ತುಂಬಿರುವ ಮುಖವು ಮತ್ತು ಪ್ರಸಾದದಿಂದ ಅತಿಶಯ ರಮಣೀಯ ನೇತ್ರಗಳುಳ್ಳ, ಕೃಪಾಪ್ರಸಾದದಿಂದ ಮಳೆಗರೆಯುತ್ತಿರುವ, ಯಾವ ನನ್ನ ಸುಕುಮಾರ ರೂಪದ ಧ್ಯಾನವನ್ನು ಹೇ ಉದ್ಧವಾ, ಪ್ರತ್ಯೇಕ ಅಂಗದೊಂದಿಗೆ ಐಕ್ಯ ಸಾಧಿಸುತ್ತ ಮಾಡಬೇಕು.

ಕೌಸ್ತುಭಾಸೀ ಸಂಲಗ್ನ ಗಳಾ । ಆಪಾದ ರುಳೇ ವನಮಾಳಾ । ಕಟೀ ಬಾಣಲೀ ರತ್ನಮೇಖಳಾ । ಕಿಂಕಿಣೀ ಜಾಳಮಾಳಾಸಂಯುಕ್ತ ॥೪೮೪॥ ಕರಕಂಕಣ ಬಾಹುಅಂಗದೇ । ಶಂಖಚಕ್ರಪದ್ಮ ಗದಾದಿ ಆಯುಧೇ । ಜಡಿತ ಮುದ್ರಿಕಾ ನಾನಾ ಛಂದೇ । ಕರಾಗ್ರೀ ವಿನೋದೇ ಬಾಣಲ್ಯಾ ॥೪೮೫॥ ನಾಭಿ ಸಖೋಲ ನಿರ್ಮಳ । ಜೇಥ ಬ್ರಹ್ಮಾ ಝಾಲಾ ಪೋಟೀಚೇ ಬಾಳ । ಜೇ ಲೋಕಪದ್ಮಾಚೇ ಸಮೂಳ ಮೂಳ । ತೇ ನಾಭಿಕಮಳ ಹರೀಚೇ ॥೪೮೬॥ ಜೈಸೇ ಸಚೇತನ ಮರ್ಗಜಸ್ತಂಭ । ತೈಸೇ ಘೋಟೀವ ಸಾಜಿರೇ ಸ್ವಯಂಭ । ಉಭಯ ಚರಣಾಂಚೀ ಅಭಿನವಶೋಭ । ಹರೀ ಅಂಗೀ ಸ್ವಯಂಮ ಶೋಭತೀ ॥೪೮೭॥ ಧ್ವಜ ವಜ್ರ ಅಂಕುಶ ರೇಖಾ । ಯವಾಂಕಿತ ಊರ್ಧ್ವರೇಖಾ । ಪದ್ಮ ಚಕ್ರಾದಿ ಸಾಮುದ್ರಿಕಾ । ಚರಣ ನೇಟಕಾ ಹರೀಚಾ ॥೪೮೮॥ ತ್ರಿಕೋಣ ಕಾಂತೀವ ಇಂದ್ರನೀಳೀ । ತೈಶೀ ಸಾಜಿರೀ ಘೋಟೀವ ಸಾಂವಳೀ । ಪಾಉಲೇ ಸುಕುಮಾರ ಕೋವಳೀ । ಆರಕ್ತ ತಳೀ ಪದಪ್ರಭಾ ॥೪೮೯॥ ಪಾಉಲಾವರೀ ಸಾಂವಳೀ ಪ್ರಭಾ । ತಳವಾತಳೀ ಆರಕ್ತ ಶೋಭಾ । ಜೇವೀ ಸಂಧ್ಯಾರಾಗ ಮೀನಲಾ ನಭಾ । ತೈಶೀ ಶೋಭಾ ಹರಿಚರಣೀ ॥೪೯೦॥ ನಭಮಂಡಳೀ ಚಂದ್ರರೇಖಾ । ತೈಶೀ ಪಾದಾಗ್ರೀ ಮಾಂಡಣೀ ನಖಾ । ಪೋಟರ್ಯಾ ಸುಕುಮಾರ ನೇಟಕಾ । ಜಂಘಾ ಸುರೇಖಾ ಜಾನುದ್ವಯ ॥೪೯೧॥ ಅತಿಶಯೇ ಮಾಜು ಸಾನಾ । ಹೋತಾ ಅಭಿಮಾನ ಪಂಚಾನನಾ । ಮಧ್ಯ ದೇಖೋನಿ ಜಗಜ್ಜೀವನಾ । ಲಾಜೋನಿ ರಾನಾ ತೇ ಗೇಲೇ ॥೪೯೨॥ ಅದ್ಯಾಪಿ ತೇ ಝಾಲೇ ಅರಣ್ಯವಾಸೀ । ಲಾಜಾ ಮುಖ ನ ದಾವಿತೀ ಕೋಣಾಸೀ । ಪಹಾವಯಾ ಹರಿಮಧ್ಯಾಸೀ । ಲೇಪ ಮೇಖಲೇಸೀ ತೇ ಝಾಲೇ ॥೪೯೩॥ ಚರಣೀ ನೂಪುರಾಂಚಾ ಗಜರ । ವಾಂಕೀಅಂದುವಾಂಚಾ ಝಣತ್ಕಾರ । ಮಸ್ತಕೀ ಕುಟಿಲಾಲಕಭಾರ । ಸುಮನೀ ಕಬರ ಶೋಭತೀ ॥೪೯೪॥ ನಾನಾರತ್ನೀ ಅತಿಗಹನ । ಮಸ್ತಕೀ ಮುಕುಟ ದೇದಿಪ್ಯಮಾನ । ಸರ್ವಾಂಗೀ ಸುಲಕ್ಷಣ । ಮೂರ್ತಿ ಸಂಪೂರ್ಣ ಹರೀಚೀ ॥೪೯೫॥

ಕೊರಳಲ್ಲಿ ಕೌಸ್ತುಭಮಣೀ, ಪಾದದವರೆಗೂ ಜೋಲಾಡುತ್ತಿರುವ ವನಮಾಲೆ ಹಾಕಿರುವುದು, ನಡುವಿಗೆ ರತ್ನಖಚಿತ ಪಟ್ಟಿಯು ಮತ್ತು ಅದಕ್ಕೆ ಹಚ್ಚಿರುವ ಗಿಲಗಿಂಚಿಗಳ ಗುಂಪು ರುಣಝುಣ ಶಬ್ದವನ್ನು ಮಾಡುತ್ತಿರುವುದು ॥೪೮೪॥ ಕರಗಳಿಗೆ ಕಂಕಣಗಳು, ದಂಡಗಳಿಗೆ ಬಾಜೂ ಬಂದುಗಳು, ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ ಈ ಆಯುಧಗಳು ಬೆರಳುಗಳಲ್ಲಿ ಅತ್ಯಂತ ಶೋಭಾಯಮಾನಗಳಾದ ಭಿನ್ನ ಭಿನ್ನ ಆಕೃತಿಗಳ ರತ್ನಜಡಿತ ಉಂಗುರಗಳು ॥೪೮೫॥ ಆಳವಾದ, ನಿರ್ಮಲವಾದ ನಾಭಿಕಮಲದಿಂದ ಬ್ರಹ್ಮದೇವನು ಹುಟ್ಟಿಕೊಂಡು ಹರಿಯ ಹೊಟ್ಟೆಯ ಮಗನಾದನು. ತ್ರಿಭುವರೂಪ ಕಮಲದ ಮೂಲವೇ ಶ್ರೀಹರಿಯ ನಾಭಿಕಮಲವಾಗಿರುವುದು ॥೪೮೬॥ ಯಾವ ಪ್ರಕಾರವಾಗಿ ಮರಕತರತ್ನಗಳ ಸಜೀವ ಖಂಬ ಇರುವಂತೆಯೇ ಸೌಂದರ್ಯವನ್ನು ಅರೆದು ಸಿದ್ದಗೊಂಡ ಸ್ವಯಂಭೂವಾಗಿರುವ ಎರಡು ಚರಣಗಳ ಶೋಭೆಯಾಗಿರುವುದು ॥೪೮೭॥ ಆ ಯಾವ ಸುಕೋಮಲ ಪಾದಗಳಲ್ಲಿ ಧ್ವಜ, ವಜ್ರ, ಅಂಕುಶ, ಯವಾಂಕಿತವಿರುವ ಊರ್ಧ್ವರೇಖೆ, ಚಕ್ರ, ಪದ್ಮ ಇತ್ಯಾದಿ ಸಾಮುದ್ರಿಕ ಚಿನ್ಹೆಗಳು ಇರುವುದರಿಂದ ಅವು ಅತಿಶಯವಾಗಿ ಶೋಭಿಸುತ್ತಿರುವುವು ॥೪೮೮॥ ಇಂದ್ರನೀಲ ಮಣಿಯನ್ನು ಕೊರೆದು ಅದರ ತ್ರಿಕೋಣವನ್ನು ಮಾಡಿರುವಂತೆ ಮನೋಹರ, ಶುದ್ಧವಾದ, ಶ್ಯಾಮವರ್ಣ, ನಾಜೂಕ ಹಾಗೂ ಕೋಮಲ ಚರಣ ಕಮಲಗಳು ಅದರ ಕೆಳಗಡೆಯಲ್ಲಿ ಆರಕ್ತ ಶೋಭೆಯು ॥೪೮೯॥ ಪಾದಗಳಲ್ಲಿ ಮೇಘವರ್ಣ ಕಾಂತಿಯು, ತಳಗಳಲ್ಲಿ ಆರಕ್ತ ಕಾಂತಿಯು ಆಕಾಶದಲ್ಲಿನ ಸಂಧ್ಯಾರಾಗದಂತೆ ಚರಣಗಳ ವಿಲಕ್ಷಣ ಶೋಭೆಯು ತೋರುವುದು ॥೪೯೦॥ ಆಕಾಶದಲ್ಲಿ ಮೋಡಗಳ ಸಮೂಹದಲ್ಲಿ ಚಂದ್ರರೇಖೆಯಂತೆ ಚರಣಗಳ ಅಗ್ರಭಾಗಗಳಲ್ಲಿ ನಖಗಳ ರಚನೆಯಾಗಿರುವುದು. ಸುಕುಮಾರವಾದ ಹೊಟ್ಟೆಯಭಾಗ,. ಸುಂದರವಾದ ಎರಡು ತೊಡೆಗಳು, ರಮಣೀಯವಾದ ಮೊಣಕಾಲುಗಳು ॥೪೯೧॥ ಸಿಂಹಕ್ಕೆ ತನ್ನ ಚಿಕ್ಕ ನಡುವಿನ ಅತಿಶಯ ಅಭಿಮಾನವಾಗಿತ್ತು. ಆದರೆ ಶ್ರೀಹರಿಯ ನಡುವನ್ನು ಕಂಡು ಅದು ಅರಣ್ಯಕ್ಕೆ ಓಡಿ ಹೋಯಿತು ॥೪೯೨॥ ಅದು ಈಗಲೂ ಅರಣ್ಯದಲ್ಲಿದ್ದು ನಾಚಿಕೆಯಿಂದ ಯಾರಿಗೂ ಮುಖವನ್ನು ತೋರಿಸುವುದಿಲ್ಲ. ಶ್ರೀಹರಿಯ ನಡುವನ್ನು ನೋಡಲು ಬಯಸಿ ಸಿಂಹವು ನಡುಪಟ್ಟಿಯಲ್ಲಿ ಚಿತ್ರವಾಗಿರುವುದು ॥೪೯೩॥ ಕಾಲುಗಳಲ್ಲಿನ ಕಡಗ, ತೋಡೆ, ಪೈಂಜಣ ಇವುಗಳ ಮಧುರ ಝೇಂಕಾರವು, ಮಸ್ತಕದ ಮೇಲೆ ಉಂಗುರ ಕೂದಲುಗಳು, ಅವುಗಳಲ್ಲಿ ಪುಷ್ಪಗಳು ಸುಂದರವಾಗಿ ಶೋಭಿಸುವುವು ॥೪೯೪॥ ಅದರ ಮೇಲೆ ಅನೇಕ ರತ್ನಗಳಿಂದ ಜಡಿತವಾಗಿರುವ ತೇಜಃಪುಂಜ ಕಿರೀಟವು ತನ್ನ ಸರ್ವಾಂಗದಿಂದ ಪರಿಪೂರ್ಣವಾಗಿರುವುದು. ಹೀಗೆ ಅತಿ ಉತ್ತಮ ಲಕ್ಷಣಗಳಿಂದ ಯುಕ್ತವಾಗಿರುವ ಶ್ರೀಹರಿಯ ಮೂರ್ತಿಯು ಇರಬೇಕು ॥೪೯೫॥

ಜೇ ಮೂರ್ತೀಚೀ ಧರಿಲ್ಯಾ ಸೋಯೇ । ತಹಾನ ಭೂಕ ವಿಸರೋನಿ ಜಾಯೇ । ಧ್ಯಾನೀ ಆತುಡಲ್ಯಾ ಪಾಹೇ । ಸುಖಾಚಾ ಹೋಯೇ ಸುದಿನ ॥೯೬॥ ಸರ್ವಾಂಗಸುಂದರ ಶ್ಯಾಮವರ್ಣ । ಜ್ಯೇಷ್ಠ ವರಿಷ್ಠ ಗಂಭೀರ ಗಹನ । ಸುಮುಖ ಆಣಿ ಸುಪ್ರಸನ್ನ । ಮೂರ್ತೀಚೇ ಧ್ಯಾನ ಕರಾವೇ॥೯೭॥

ಸುಕುಮಾರಮಭಿಧ್ಯಾಯೇತ್ ಸರ್ವಾಂಗೇಷು ಮನೋ ದಧತ್ । ಇಂದ್ರಿಯಾಣೇಂದ್ರಿಯಾರ್ಥೇಭ್ಯೋ ಮನಸಾಽಕೃಷ್ಯ ತನ್ಮನಃ ।
ಬುದ್ಧ್ಯಾ ಸಾರಥಿನಾ ಧೀರಃ ಪ್ರಣಯೇನ್ಮಯಿ ಸರ್ವತಃ ॥೨॥

ತತ್ಸರ್ವವ್ಯಾಪಕಂ ಚಿತ್ತಾಮಾಕೃಷ್ಯೈಕತ್ರಧಾರಯೇತ್ । ನಾನ್ಯಾನಿ ಚಿಂತಯೇದ್ ಭೂಯಃ ಸುಸ್ಮಿತಂ ಭಾವಯೇನ್ಮುಖಮ್ ॥೩॥

ಅರ್ಥ :- ಬುದ್ಧಿವಂತನಾದವನು ಮನಸ್ಸಿನ ಮುಖಾಂತರ ಇಂದ್ರಿಯಗಳಿಗೆ ಅವುಗಳ ವಿಷಯಗಳಿಂದ ಜಗ್ಗುತ್ತ ನನ್ನಲ್ಲಿ ಏಕಾಗ್ರಗೊಳಿಸಬೇಕು. ನನ್ನ ಯಾವುದೇ ಅಂಗದ ಧ್ಯಾನವನ್ನು ಮಾಡಿದರೂ ಆಗ ಸರ್ವ ಶರೀರದ ಧ್ಯಾನವಾಗುವುದು. ಆಗ ತಮ್ಮ ಚಿತ್ತವನ್ನು ಜಗ್ಗುತ್ತ ಒಂದು ಸ್ಥಾನದಲ್ಲಿ ಸ್ಥಿರಗೊಳಿಸಬೇಕು. ಅನ್ಯ ಅಂಗದ ಚಿಂತನೆಯನ್ನು ಮಾಡದೇ ಕೇವಲ ಮಂದ ಮಂದ ಹಾಸ್ಯಯುಕ್ತ ನನ್ನ ಮುಖಕಮಲದ ಚಿಂತನೆಯನ್ನು ಮಾಡಬೇಕು.

ಝಣೇ ದೃಷ್ಟೀಚಾ ರುಪೇಲ ನ್ಯಾಹಾರೂ । ಲಾಗತಾ ಖುಪೇಲ ಚಂದ್ರಕರೂ । ತೈಶೀ ಮೂರ್ತಿ ಧ್ಯಾವೀ ಸುಕುಮಾರೂ । ಅತಿಅರುವಾರೂ ಧ್ಯಾನನಿಷ್ಠಾ ॥೯೮॥ ಇಂದ್ರಿಯಾರ್ಥೀ ಅತಿಲೋಲುಪ । ತೈ ವೈರಾಗ್ಯೇ ಆವರೋನಿ ಚಿತ್ತ । ಮಾಝೇ ಧ್ಯಾನೀ ಸುನಿಶ್ಚಿತ । ಬುದ್ಧಿಮಂತ ಲಾವಿತೀ ॥೯೯॥ ವಿಷಯೀ ಆವರೋನಿ ಮನ । ಅಖಂಡ ಕರಿತಾ ಮಾಝೇ ಧ್ಯಾನ । ಮದ್ರೂಪಚಿ ಹೋಯ ಜಾಣ । ಐಸೇ ಚಿಂತನ ಕರಾವೇ ॥೧೦೦॥ ಚಿಂತನೀ ಬಿಚಕತಾ ಮನ । ಸವಿವೇಕ ಬುದ್ಧಿ ಬಳೇ ಜಾಣ । ನಿಃಶಂಕ ಕರಿತಾ ಮಾಝೇ ಸ್ಮರಣ । ಧಾರಣೇವೀಣ ಧ್ಯಾನ ಠಸಾವೇ ॥೧೦೧॥ ಧಾರಣಾ ಜರೀ ತುಟೋನಿ ಜಾಯೇ । ಧ್ಯಾನಠಸಾ ನ ತುಟತ ರಾಹೇ । ಮನ ಮೂರ್ತೀಚ್ಯಾ ಠಾಯೀ ಪಾಹೇ । ಜಡಲೇ ಠಾಯೇ ಸರ್ವಾಂಗೀ ॥೧೦೨॥ ಅಂಗಪ್ರತ್ಯಂಗೀ ಧ್ಯಾನಯುಕ್ತ । ಜಡೋನಿ ಠೇಲೇ ಜೇ ಚಿತ್ತ । ತೇ ಆವರೂನಿ ಸಮಸ್ತ । ಚಿಂತಾವೇ ನಿಶ್ಚಿತ ಹಾಸ್ಯವದನ ॥೧೦೩॥ ಸರ್ವಹೀ ಸಾಂಡೋನಿಯಾ ಜಾಣ । ಸಾಂಗೋಪಾಂಗ ಮೂರ್ತಿಧ್ಯಾನ । ಚಿಂತಾವೇ ಗಾ ಹಾಸ್ಯವದನ । ಸ್ವಾನಂದಘನ ಹರೀಚೇ ॥೧೦೪॥ ಅಂಗ ಪ್ರತ್ಯಂಗ ಮೂರ್ತಿಧ್ಯಾನ । ಪುಢತೀ ನ ಕರಾವೇಚಿ ಗಾ ಜಾಣ । ಧ್ಯಾತಾ ಮಾಝೇ ಹಾಸ್ಯವದನ । ತಲ್ಲೀನ ಮನ ಕರಾವೇ ॥೧೦೫॥ ಉದ್ಧವೇ ಕೇಲಾ ಹೋತಾ ಪ್ರಶ್ನ । ಕಶಾಸಾರಿಖೇ ತುಝೇ ಧ್ಯಾನ । ತೇ ಸಾಂಗೋನಿಯಾ ಜಾಣ । ಯದಾತ್ಮಲಕ್ಷಣ ಹರಿ ಬೋಲೇ ॥೧೦೬॥ ಧ್ಯಾನಾ ಆಲೇ ಜೇ ಹಾಸ್ಯವದನ । ತ್ಯಾಂತೂನಹೀ ಸಾಂಡೋನಿ ವದನ । ಕೇವಳ ಹಾಸ್ಯಾಚೇ ಕರಾವೇ ಧ್ಯಾನ । ಹಾಸ್ಯಾಮಾಜೀ ಮನ ಘಾಲೂನೀ ॥೧೦೭॥

ಆ ಯಾವ ಮೂರ್ತಿಯನ್ನು ಏಕಾಗ್ರ ಚಿತ್ತದಿಂದ ನೋಡುತ್ತಿದ್ದಂತೆ ಹಸಿವೆ, ನೀರಡಿಕೆಗಳು ಇಲ್ಲದಾಗಬೇಕು. ಆ ಮೂರ್ತಿಯ ಧ್ಯಾನವು ಸಾಧ್ಯವಾಗುತ್ತಲೇ ಸುಖದ ಸುದಿನವು ಉದಯವಾಗುವುದು ॥೯೬॥ ಹೀಗೆ ಯಾವ ಸರ್ವಾಂಗ ಸುಂದರ, ಶ್ಯಾಮವರ್ಣ, ಅತಿಗಂಭೀರ, ಶ್ರೇಷ್ಠ ಉದಾರ ಮತ್ತು ಸುಪ್ರಸನ್ನ ಮುಖವುಳ್ಳ ಮೂರ್ತಿಯ ಧ್ಯಾನವನ್ನು ಅತ್ಯಂತ ಪ್ರೇಮದಿಂದ ಮಾಡಬೇಕು ॥೯೭॥

ಕದಾಚಿತ್ ಕಣ್ಣುಗಳ ಕಟಾಕ್ಷವೂ ಕೂಡ ನಟ್ಟಿಕೊಳ್ಳದಂತೆ, ಸೌಮ್ಯವಾದ ಶೀತಲ ಚಂದ್ರಕಿರಣಗಳೂ ಸಹ ಒತ್ತಿಕೊಳ್ಳದಂತೆ ಇಷ್ಟೊಂದು ಸೂಕ್ಷ್ಮತ್ವದಿಂದ ಧ್ಯಾನವನ್ನು ಮಾಡಬೇಕು. ಧ್ಯಾನದಲ್ಲಿ ಪ್ರೇಮವು ನಟ್ಟಿಕೊಳ್ಳಲು ಮೂರ್ತಿಯು ಕೋಮಲವಾಗಿ ಇದ್ದಷ್ಟೂ ಒಳ್ಳೆಯದು ॥೯೮॥ ಮನಸ್ಸು ಈ ಯಾವ ಇಂದ್ರಿಯ ಜನ್ಯ ವಿಷಯಗಳಲ್ಲಿ ಅತ್ಯಂತ ಆಸಕ್ತವಾಗಿರುವುದು. ಬುದ್ಧಿವಂತ ಪುರುಷರು ಆ ಮನವನ್ನು ವೈರಾಗ್ಯದಿಂದ ಆವರಿಸಿಕೊಂಡು ನನ್ನ ಧ್ಯಾನಕ್ಕೆ ಮಾತ್ರ ಹಚ್ಚುವರು ॥೯೯॥ ಈ ಪ್ರಕಾರವಾಗಿ ವಿಷಯಗಳನ್ನು ಅಂಕಿತವನ್ನಾಗಿ ಮಾಡಿಕೊಂಡು ನನ್ನ ಧ್ಯಾನವನ್ನು ಮಾಡಬೇಕು. ಈ ಚಿಂತನೆಯನ್ನು ಮದ್ರೂಪವಾಗುವಂತೆ ಮಾಡಬೇಕು ॥೧೦೦॥ ಚಿಂತನೆಯ ಸಮಯದಲ್ಲಿ ಮನವು ಚಂಚಲವಾಗುತ್ತಿದ್ದರೆ, ಆಗ ವಿವೇಕಯುಕ್ತ ಬುದ್ಧಿಯಿಂದ ಯಾವ ಅನುಮಾನವನ್ನು ಮಾಡದೇ ನನ್ನ ಸ್ಮರಣೆಯನ್ನು ಮಾಡುತ್ತಿರಬೇಕು. ಆಗ ಧಾರಣೆ ಇಲ್ಲದೇ ನನ್ನ ಧ್ಯಾನವು ನಟ್ಟಿಕೊಳ್ಳುವುದು ॥೧೦೧॥ ಧಾರಣೆಯು ಮುಗಿದುಕೊಂಡರೂ ಸಹ ಧ್ಯಾನದಿಂದ ಉದ್ಭವವಾಗಿರುವ ಸ್ಥಿತಿಯು ಇಲ್ಲದಾಗುವುದು ಶಕ್ಯವಿಲ್ಲ. ಮನವು ಮೂರ್ತಿಯ ಸರ್ವಾಂಗದಲ್ಲಿ ಕೂಡಿಕೊಂಡುಬಿಡುವುದು ॥೧೦೨॥ ಯಾವ ಚಿತ್ತವು ಧ್ಯಾನದ ನಿಮಿತ್ತದಿಂದ ಮೂರ್ತಿಯ ಪ್ರತಿಯೊಂದು ಅಂಗಗಳಲ್ಲಿ ನಟ್ಟಿಕೊಂಡಿರುವುದು. ಅದನ್ನು ಆವರಿಸಿಕೊಂಡು ಏಕಾಗ್ರತೆಯಿಂದ ಮೂರ್ತಿಯ ಕೇವಲ ಹಾಸ್ಯವದನದ ಮೇಲೆ ಸ್ಥಿರಗೊಳಿಸಬೇಕು ॥೧೦೩॥ ಮೂರ್ತಿಯ ಸಾಂಗೋಪಾಂಗವಾಗಿ ಸರ್ವ ಧ್ಯಾನವನ್ನು ಬಿಟ್ಟುಕೊಟ್ಟು ಶ್ರೀಹರಿಯ ಸಸ್ವಾನಂದಘನ ಹಾಸ್ಯವದನದ ಚಿಂತನೆಯನ್ನು ಮಾಡಬೇಕು ॥೧೦೪॥ ಮೂರ್ತಿಯ ಅಂಗ ಅಥವಾ ಉಪಾಂಗದ ಧ್ಯಾನವನ್ನು ಬಿಟ್ಟು ಕೇವಲ ಹಾಸ್ಯವದನದ ಧ್ಯಾನವನ್ನು ಮಾಡಬೇಕು. ಮನಸ್ಸನ್ನು ಅಲ್ಲಿಯೇ ನಿಮಗ್ನಗೊಳಿಸಬೇಕು ॥೧೦೫॥ ಈ ಹಿಂದೆ ಉದ್ಧವನು "ನಿನ್ನ ಧ್ಯಾನವು ಯಾವುದರಂತೆ ಇರಬೇಕು?" ಎಂದು ಪ್ರಶ್ನೆಯನ್ನು ಮಾಡಿದ್ದನು. ಇದರ ಉತ್ತರವನ್ನು ಹೇಳುತ್ತ ಶ್ರೀಕೃಷ್ಣನು ಆತ್ಮಸ್ವರೂಪದ ಲಕ್ಷಣವನ್ನು ಹೇಳುತ್ತಿರುವನು ॥೧೦೬॥ ಧ್ಯಾನದಲ್ಲಿ ಮೂಡಿರುವ ಹಾಸ್ಯವದನದಲ್ಲಿನ ಮುಖವನ್ನು ಬಿಟ್ಟುಕೊಟ್ಟು ಕೇವಲ ಹಾಸ್ಯದ ಮೇಲೆಯೇ ಮನವನ್ನು ಸ್ಥಿರಗೊಳಿಸಬೇಕು. ಕೇವಲ ಹಾಸ್ಯವನ್ನೇ ಧ್ಯಾನ ಮಾಡುತ್ತಿರಬೇಕು ॥೧೦೭॥

ತ್ಯಾಹೀ ಹಾಸ್ಯಾಚೇ ಸಾಂಡೂನಿ ಧ್ಯಾನ । ಹಾಸ್ಯಾಮಾಜೀ ತೋ ಆನಂದಘನ । ತೇಥ ಪ್ರವೇಶವಾವೇ ಮನ । ಅತಿ ಸಾವಧಾನ ನಿಜನಿಷ್ಠಾ ।।೩೦೮।। ತೇ ಆನಂದೀ ಆನಂದಯುಕ್ತ । ಜಾಹಲಿಯಾ ಆಪುಲೇ ಚಿತ್ತ । ಆನಂದಾಚೀ ಉಪಲಬ್ಧಿ ತೇಥ । ಹೋಯ ಸುನಿಶ್ಚಿತ ಸಾಧಕಾ ।।೩೦೯।।

ತತ್ರ ಲಬ್ಧಪದಂ ಚಿತ್ತಮಾಕೃಷ್ಯ ವ್ಯೋಮ್ನಿ ಧಾರಯೇತ್ । ತಚ್ಚ ತ್ಯಕ್ತ್ವಾ ಮದಾರೋಹೋ ನ ಕಿಂಚಿದಪಿ ಚಿಂತಯೇತ್ ।।೪೪।।

ಅರ್ಥ :- ಚಿತ್ತವು ಮುಖಾರವಿಂದದಲ್ಲಿ ಸ್ಥಿರಗೊಂಡಾಗ, ಆ ಚಿತ್ತವನ್ನು ಅಲ್ಲಿಂದ ತೆಗೆದು ಆಕಾಶದಲ್ಲಿ ಸ್ಥಿರಗೊಳಿಸಬೇಕು. ತದನಂತರ ಆಕಾಶದ ಚಿಂತನೆಯನ್ನು ಬಿಟ್ಟು ನನ್ನ ಶುದ್ಧವಾದ ಬ್ರಹ್ಮನಲ್ಲಿ ಆರೂಢನಾಗಬೇಕು. ನನ್ನ ಹೊರತಾಗಿ ಯಾವುದೊಂದೂ ಚಿಂತಿಸಬಾರದು.

ಜಾಹಲಿಯಾ ಆನಂದಪದ ಪ್ರಾಪ್ತ । ಚಿದಾಕಾಶಚಿ ದಿಸೇ ಸಮಸ್ತ । ಚಿದಾಕಾಶೀ ಚಿತ್ತ । ಅತಿಸಾವಚಿತ್ತ ಠೇವಾವೇ ।।೩೧೦।। ತೇವ್ಹಾ ಚಿದಾಕಾಶ ಚಿತ್ತ ಚಿಂತನ । ಹೇಹೀ ಸಾಂಡೂನಿ ತ್ರಿವಿಧ ಭೇದಧ್ಯಾನ । ಜೋ ಮೀ ಪರಮಾನಂದ ಪರಿಪೂರ್ಣ । ಭೇದಶೂನ್ಯ ಚಿದಾತ್ಮಾ ।।೩೧೧।। ತೇಥೇ ವೃತ್ತಿ ಕರೂನಿ ನಿಮಗ್ನ । ಸಾಂಡಾವೇ ಚಿದಾಕಾಶಾಚೇಹೀ ಜ್ಞಾನ । ತೇವ್ಹಾ ಜ್ಞೇಯ ಜ್ಞಾತಾ ಜ್ಞಾನ । ಹೇಹೀ ಸ್ಫುರಣ ಸ್ಫುರೇನಾ ।।೩೧೨।।

ಏವಂ ಸಮಾಹಿತಮತಿರ್ಮಾಮೇವಾತ್ಮಾನಮಾತ್ಮನಿ । ವಿಚಷ್ಟೇ ಮಯಿ ಸರ್ವಾತ್ಮನ್ ಜ್ಯೋತಿರ್ಜ್ಯೋತಿಷಿ ಸಂಯುತಮ್ ।।೪೫।।

ಅರ್ಥ :- ಎಂದು ಚಿತ್ತವು ಈ ಪ್ರಕಾರವಾಗಿ ನನ್ನಲ್ಲಿ ಕೂಡಿಕೊಳ್ಳುವುದೋ, ಆಗ ಒಂದು ಜ್ಯೋತಿಯು ಇನ್ನೊಂದು ಜ್ಯೋತಿಯಲ್ಲಿ ಕೂಡಿಕೊಂಡು ಒಂದಾಗುವಂತೆ ತನ್ನಲ್ಲಿ ನಾನು, ನನ್ನಲ್ಲಿ ತಾನು ಕೂಡಿ ಒಂದಾದ ಅನುಭವವು ಬರುವುದು.

ಯಾಪರೀ ಸಾಧಕಾಂಚೀ ನಿಜವೃತ್ತೀ । ಮಾಝ್ಯಾ ಸ್ವರೂಪೀ ಮೀನಲ್ಯಾ ಸ್ವರೂಪಸ್ಥಿತೀ । ತೇವ್ಹಾ ಮೀಪಣಾಚೀ ಸ್ಫುರೇ ಜೇ ಸ್ಫೂರ್ತೀ । ತೇಹೀ ಅದ್ವೈತೀ ವಿರಾಲೀ ।।೩೧೩।। ತೇಥೇ ಮೀತೂಪಣಾಚಾ ಭಾಸ । ಯಾಪರೀ ನಿಮಾಲಾ ನಿಃಶೇಷ । ಮಾಝೇ ಪರಮಾನಂದ ನಿಜಸುಖ । ಅದ್ವೈತೇ ದೇಖ ಕೋಂದಲೇ ।।೩೧೪।। ಜೇವೀ ಜ್ಯೋತೀಸೀ ಮೀನಲ್ಯಾ ಜ್ಯೋತೀ । ದೋಹೀಚೀ ಹೋಯ ಏಕಚಿ ದೀಪ್ತೀ । ತೇವೀ ಜೀವ ಚೈತನ್ಯಾಚೀ ಸ್ಫೂರ್ತೀ । ಅದ್ವೈತಸುಖಪ್ರಾಪ್ತೀ ಸಮರಸೇ ।।೩೧೫।। ಕೋಟಿ ಸ್ನೇಹ ಸೂತ್ರೇ ಮಾಂಡಿತೀ । ತೇಣೇ ಕೋಟಿ ದೀಪ ನಾಮಾಭಿವ್ಯಕ್ತೀ । ತೇ ಕೋಟಿ ದೀಪೀ ಏಕ ದೀಪ್ತೀ । ತೇವೀ ಜೀವ ಅದ್ವೈತೀ ಚಿನ್ಮಾತ್ರ ।।೩೧೬।। ದೇಹೇಂದ್ರಿಯ ಉಪಾಧಿವಶೇ । ಜೀವಾಸೀ ಭಿನ್ನತ್ವ ಆಭಾಸೇ । ಅದ್ವೈತಬೋಧ ಸಮರಸೇ । ಜೀವೂ ಪ್ರವೇಶೇ ಸ್ವರೂಪೀ ।।೩೧೭।।

ತದನಂತರ ಆ ಹಾಸ್ಯದ ಧ್ಯಾನವನ್ನೂ ಕೂಡ ಬಿಟ್ಟು ಹಾಸ್ಯದಲ್ಲಿ ಯಾವ ಆನಂದಘನ ಪರಮಾತ್ಮನು ತುಂಬಿಕೊಂಡಿರುವನೋ, ಅಲ್ಲಿಯೇ ತನ್ನ ಮನವನ್ನು ಸ್ಥಿರವನ್ನಾಗಿ ಮಾಡಬೇಕು. ಹಾಗೆಯೇ ಅಲ್ಲಿ ಅತ್ಯಂತ ಸಾವಧಾನದಿಂದ ಆತ್ಮನಿಷ್ಠೆಯನ್ನು ಇಡಬೇಕು ।।೩೦೮।। ಆ ಯಾವ ಸಚ್ಚಿದಾನಂದದಿಂದ ತನ್ನ ಮನವು ಆನಂದಯುಕ್ತವಾಯಿತೆಂದರೆ ಸಾಧಕನಿಗೆ ನಿಶ್ಚಯವಾಗಿಯೇ ಆ ಆತ್ಮಾನಂದದ ಪ್ರಾಪ್ತಿಯಾಗುವುದು ।।೩೦೯।।

ಆ ಯಾವ ದಿವ್ಯಾನಂದದ ಪ್ರಾಪ್ತಿಯಾಗಲು ಎಲ್ಲೆಲ್ಲಿಯೂ ಎಲ್ಲವೂ ಚಿದಾಕಾಶವಾಗಿಯೇ ತೋರ ಹತ್ತುವುದು. ಆ ಚಿದಾಕಾಶದಲ್ಲಿ ಅತ್ಯಂತ ಸಾವಧಾನದಿಂದ ತನ್ನ ಚಿತ್ತವನ್ನಿಡಬೇಕು ।।೩೧೦।। ತದನಂತರ ಧ್ಯಾನದಲ್ಲಿನ ಚಿದಾಕಾಶ, ಚಿತ್ತ ಮತ್ತು ಚಿಂತನೆ ಈ ತ್ರಿಪುಟಿಯ ಭೇದವನ್ನು ತ್ಯಜಿಸಬೇಕು. ಮತ್ತು ನಾನು ಆ ಯಾವ ಪರಿಪೂರ್ಣ ಪರಮಾನಂದ ಭೇದಶೂನ್ಯ ಚಿದಾತ್ಮಾ ಇರುವ ।।೩೧೧।। ಆ ಯಾವ ನನ್ನಲ್ಲಿ ತನ್ನ ವೃತ್ತಿಯನ್ನು ನಿಮಗ್ನಗೊಳಿಸಬೇಕು. ಮತ್ತು ಚಿದಾತ್ಮಾಕಾಶದ ಜ್ಞಾನವನ್ನೂ ಕೂಡ ಬಿಟ್ಟು ಬಿಡಬೇಕು. ಅಂದರೆ ಜ್ಞೇಯ, ಜ್ಞಾತಾ ಮತ್ತು ಜ್ಞಾನ ಇವುಗಳಲ್ಲಿ ಯಾವುದು ಒಂದೂ ಉಳಿಯುವುದಿಲ್ಲ ।।೩೧೨।।

ಈ ಪ್ರಕಾರವಾಗಿ ಸಾಧಕನ ಆತ್ಮವೃತ್ತಿಯು ನನ್ನ ಸ್ವರೂಪದಲ್ಲಿ ಏಕರೂಪವಾಗಿ ಅದು ಮದ್ರೂಪವಾಗುತ್ತಲೇ ನಾನು ಎಂಬ ಸ್ಫೂರ್ತಿಯೂ ಕೂಡ ಅದ್ವೈತದಲ್ಲಿ ಸಹಜವಾಗಿಯೇ ಕರಗಿಹೋಗುವುದು ।।೩೧೩।। ಈ ರೀತಿಯಾಗಿ ಆ ಸಮಯದಲ್ಲಿ ನಾನು ನೀನು ಎಂಬುವ ಭಾಸವು ಪರಿಪೂರ್ಣವಾಗಿ ಅಡಗಿ ಹೋಗಲು ಆಗ ಪರಮಾನಂದ ಮತ್ತು ಆತ್ಮತತ್ವವು ಅದ್ವೈತದಿಂದ ತುಂಬಿಹೋಗುವುದು ।।೩೧೪।। ದೀಪದ ಒಂದು ಜ್ಯೋತಿಯು ಇನ್ನೊಂದು ಜ್ಯೋತಿಯನ್ನುಕೂಡಿಕೊಳ್ಳಲು ಆಗ ಎರಡರ ತೇಜವು ಯಾವ ಪ್ರಕಾರವಾಗಿ ಏಕರೂಪವಾಗುವುದೋ, ಅದೇ ಪ್ರಕಾರವಾಗಿ ಜೀವ ಮತ್ತು ಶಿವ ಇವರ ಸ್ಫೂರ್ತಿಯು ಅದ್ವೈತ ಸುಖದ ಲಾಭದಿಂದ ಏಕರೂಪವಾಗಿಬಿಡುವುದು ।।೩೧೫।। ಕೋಟ್ಯಾವಧೀ ಪ್ರಣತಿಗಳಲ್ಲಿ ಎಣ್ಣೆ ಬತ್ತಿಗಳನ್ನು ಹಾಕಿ ಅವುಗಳಿಗೆ ದೀಪಗಳನ್ನು ಹಚ್ಚಲು ಭಿನ್ನ ಭಿನ್ನವಾಗಿ ಕೋಟಿ ದೀಪಗಳನ್ನು ಹಚ್ಚಿದೆವು ಎಂದು ಹೇಳುವರು. ಆದರೆ ಆ ಯಾವ ಕೋಟಿ ದೀಪಗಳಲ್ಲಿ ಇರುವ ತೇಜವು ಮಾತ್ರ ಒಂದೇ ಇರುವುದು. ಅದರಂತೆ ಜೀವವು ಅದ್ವೈತದಿಂದ ಚಿತ್‌ಸ್ವರೂಪವಾಗುವುದು ।।೩೧೬।। ದೇಹ ಮತ್ತು ಇಂದ್ರಿಯಗಳ ಉಪಾಧಿಗಳಿಂದ ಜೀವವು ಭಿನ್ನವಾಗಿ ಭಾಸವಾಗುತ್ತಿರುವುದು. ಆದರೆ ಅದೇ ಜೀವವು ಅದ್ವೈತದ ಬೋಧೆಯಾಗಲು ಕೇವಲ ಬ್ರಹ್ಮಸ್ವರೂಪವಾಗಿರುವುದು ಪ್ರಚೀತಿಗೆ ಬರುವುದು ।।೩೧೭।।

ತೇಂವ್ಹಾ ಏಕ ಪರಮ ಸುಖ । ಹೇಹೀಮ್ಹಣತೇ ನಾಹೀ ದೇಖ । ಏಕಾಕೀ ಏಕಲೇ ಏಕ । ಸುಖೇಸೀ ನಿಜಸುಖ ಕೋಂದಲೇ ।೫೧೮॥ ಜೇವೀ ಸಾಖರೇ ಸಾಖರ ಚಾಖಿತ । ಕೀ ಉದಕೀ ಉದಕ ಸ್ನಾನ ಕರಿತ ।ಹೋ ಕಾ ಘೃತ ರಿಘಾಲೇ ಘೃತಾ ಆಂತ । ಸುನಿಶ್ಚಿತ ಸುವಾಸಾ ।೫೧೯॥ ಯಾಪರೀ ಮಾಝೀ ಧ್ಯಾನಸ್ಥಿತೀ । ಸಾಧಕಾ ಜಾಹಲೀ ಪರಮಪ್ರಾಪ್ತೀ । ತೇಚಿ ಉಪಸಂಹಾರೇ ಶ್ರೀಪತೀ । ಉದ್ಧವಾಪ್ರತೀ ಸಾಂಗತ ।೫೨೦॥

ಧ್ಯಾನೇನೇತ್ಥಂ ಸುತೀವ್ರೇಣ ಯುಞ್ಜತೋ ಯೋಗಿನೋ ಮನಃ । ಸಂಯಾಸ್ಯತ್ಯಾಶು ನಿರ್ವಾಣಂ ದ್ರವ್ಯಜ್ಞಾನಕ್ರಿಯಾಭ್ರಮಃ ।೯೬॥

ಅರ್ಥ :- ಯಾವ ಯೋಗಿಯು ಈ ಪ್ರಕಾರವಾಗಿ ತೀವ್ರವಾದ ಧ್ಯಾನಯೋಗದಿಂದ ಚಿತ್ತವನ್ನು ನನ್ನಲ್ಲಿ ಏಕರೂಪ ಮಾಡುವನೋ, ಆಗ ಆತನ ಚಿತ್ತವು ಅನೇಕತಾ ಸಂಬಂಧದ ಧ್ಯಾನವು ಮತ್ತು ಅದರ ಪ್ರಾಪ್ತಿಗಾಗಿ ಆಗುವ ಕರ್ಮದ ಭ್ರಮವು ಕೂಡಲೇ ನಿವೃತ್ತಿಯಾಗುವುದು.

ಯಾಪರೀ ತೀವ್ರ ಧ್ಯಾನಸ್ಥಿತೀ । ಸಮಾಧಿಪರ್ಯಂತ ಮಾಝೀ ಪ್ರಾಪ್ತೀ । ಸಾಧಕಾಸೀ ಹೋಯ ಶೀಘ್ರಗತೀ । ಯಥಾನಿಗುತಿ ಧ್ಯಾನ ಕರಿತಾ ।೫೨೧॥ ಹೇ ಮಾಝೇ ಧ್ಯಾನ ಉತ್ತಮೋತ್ತಮ । ಸರ್ವದಾ ಠಸಾವಲೇ ಜೈ ನಿಃಸೀಮ । ತೈ ಅಧಿಭೂತ ಅಧಿದೈವ ಅಧ್ಯಾತ್ಮ । ಹಾ ತ್ರಿವಿಧ ಭ್ರಮ ಉರೋ ನೇದೀ ।೫೨೨॥ ವಿಷಯೀ ವಿಷಯೋ ವಿಷಯಸಂಭ್ರಮ। ಜ್ಞೇಯ ಜ್ಞಾತಾ ಜ್ಞಾನೋಪಕ್ರಮ । ಕರ್ಮ ಕರ್ತಾ ಕ್ರಿಯಾಭ್ರಮ । ಯಾಂಚೇ ರೂಪನಾಮ ಉರೋ ನೇದೀ ।೫೨೩॥ ತೇಥ ಧ್ಯೇಯ ಧ್ಯಾತಾ ಧ್ಯಾನ । ದೃಶ್ಯ ದ್ರಷ್ಟಾ ಆಣಿ ದರ್ಶನ । ಮನ ಮಂತಾ ಆಣಿ ಮನನ । ಯಾಂಚೇ ಸಮೂಳ ಭಾನ ಉಚ್ಛೇದೀ ।೫೨೪॥ ದೇವೋ ದೇವೀ ದೇವತಾ । ಭಜ್ಯ ಭಜನ ಭಜತಾ । ಲಕ್ಷ್ಯ ಲಕ್ಷಣ ಲಕ್ಷಿತಾ । ಹೇಹೀ ಕಥಾ ನುರೇಚಿ ।೫೨೫॥ ತೇಥ ಯೋಗ್ಯತೇಶೀ ಮಹಾಯೋಗೂ । ಸಮಾಧಿಸುಖಾಚಾ ಸುಖಭೋಗೂ । ಜೀವಶಿವಾಂಚಾ ನಿಜಸಂಯೋಗೂ । ಹಾಹೀ ಉಪಯೋಗೂ ಉಡಾಲಾ ।೫೨೬॥ ತೇಥೇ ಬೋಧ ಕೈಚಾ ಕೈಚೇ ಬೋಧಕತಾ । ಕೈಚೇ ಬದ್ಧತಾ ಆಣಿ ಮುಕ್ತತಾ । ಬ್ರಹ್ಮನಾಮ ಹೇಹೀ ವಾರ್ತಾ । ಜಾಣ ಸರ್ವಥಾ ಬುಡಾಲೀ ।೫೨೭॥ ಸತ್ ಚಿತ್ ಆಣಿ ಆನಂದ । ಯಾ ನಾಂವಾಚಾ ಜೋ ಪ್ರವಾದ । ತೋ ಮಜ ಮಾಯಾವೀ ಸಂಬಂಧ । ಐಕ ತೋಹೀ ವಿಷದ ವಿಭಾಗ ।೫೨೮॥ ಅಸಂತಾಚೇ ವ್ಯಾವೃತ್ತೀ । ''ಸಂತ'' ಮಾತೇ ಮ್ಹಣತೀ ಶ್ರುತೀ । ಕರಿತಾ ಜಡಾಚೇ ಸಮಾಪ್ತೀ । ''ಚಿನ್ಮಾತ್ರ'' ಮ್ಹಣತೀ ಮಜಲಾಗೀ ।೫೨೯॥

ಆಗ ಕೇವಲ ಪರಮಾನಂದವು ಮಾತ್ರ ಉಳಿದುಕೊಳ್ಳುವುದು. ಆದರೆ ಅಲ್ಲಿ ಹೀಗೆ ಹೇಳಲು ಬೇರೆ ಯಾರೂ ಇರುವುದಿಲ್ಲ. ಒಂದೇ ಒಂದಾದ ಆ ಒಂದೇ ಆತ್ಮಸುಖವು ಸುಖಮಯವಾಗಿ ತುಂಬಿ ತುಳುಕುವುದು ।೫೧೮॥ ಯಾವ ಪ್ರಕಾರವಾಗಿ ಸಕ್ಕರೆಯು ಸಕ್ಕರೆಯನ್ನು ತಿಂದು ನೋಡಲು ಅಥವಾ ಜಲವು ಜಲದಲ್ಲಿ ಸ್ನಾನ ಮಾಡಲು ಇಲ್ಲವೇ ವಾಸನೆಯನ್ನು ಸ್ವೀಕರಿಸಲು ತುಪ್ಪವೇ ತುಪ್ಪದಲ್ಲಿ ಸೇರಲು ಆಗ ಹೇಗಾಗುವುದೋ ।೫೧೯॥ ಅದರಂತೆಯೇ ನನ್ನ ಧ್ಯಾನದ ಸ್ಥಿತಿಯು ಸಾಧಕನಿಗೆ ಪರಮಪ್ರಾಪ್ತಿಯಾಗುವುದು. ಇದನ್ನೇ ಕೊನೆಯದಾಗಿ ಶ್ರೀಕೃಷ್ಣನು ಉದ್ಧವನಿಗೆ ತಿಳಿಸಿ ಹೇಳುತ್ತಿರುವನು ।೫೨೦॥

ಈ ಪ್ರಕಾರವಾಗಿ ತೀವ್ರಧ್ಯಾನದಿಂದ ಸಮಾಧಿವರೆಗೆ ಬಂದನಂತರ ಕೂಡಲೇ ಸಹಜವಾಗಿ ನನ್ನ ಪ್ರಾಪ್ತಿಯಾಗುವುದು ।೫೨೧॥ ಈ ನನ್ನ ಧ್ಯಾನವು ಅತಿಶಯವಾಗಿ ಉತ್ತಮವಾಗಿರುವುದು. ಈ ಧ್ಯಾನವು ಸದೋದಿತವಾಗಿ ನಿಸ್ಸೀಮ ಭಾವನೆಯಿಂದ ಮನದಲ್ಲಿ ನಟ್ಟಿಕೊಂಡರೆ, ಆಗ ಅಧಿಭೂತ, ಅಧಿದೈವ ಮತ್ತು ಅಧ್ಯಾತ್ಮ ಈ ಮೂರು ಪ್ರಕಾರಗಳ ಭ್ರಮವು ಉಳಿಯಲಾರದು ।೫೨೨॥ ವಿಷಯ ಸೇವನೆ ಮಾಡುವವ, ವಿಷಯ ಮತ್ತು ವಿಷಯದ ಸಂಭ್ರಮ, ಜ್ಞೇಯ, ಜ್ಞಾತಾ ಮತ್ತು ಜ್ಞಾನೋಪಕ್ರಮ, ಕರ್ಮ, ಕರ್ತಾ ಮತ್ತು ಕ್ರಿಯೆಯ ಭ್ರಮೆ; ಇವುಗಳ ಹೇಳಹೆಸರಿಲ್ಲದಂತಾಗುವುದು ।೫೨೩॥ ಅದರಂತೆ ಧ್ಯೇಯ, ಧ್ಯಾತಾ ಮತ್ತು ಧ್ಯಾನ, ದೃಶ್ಯ, ದೃಷ್ಟಾ ಮತ್ತು ದರ್ಶನ; ಮನ, ಮನಕರ್ತಾ ಮತ್ತು ಮನನ ; ಇವುಗಳ ಸಮೂಲ ಭಾನವು ಬೇರು ಸಮೇತವಾಗಿ ಕತ್ತರಿಸಲ್ಪಡುವುವು ।೫೨೪॥ ದೇವ, ದೇವೀ ಮತ್ತು ದೇವತಾ; ಭಜ್ಯ, ಭಜನ ಮತ್ತು ಭಜನೆಯನ್ನು ಮಾಡುವವ, ಲಕ್ಷ್ಯ, ಲಕ್ಷಣ ಮತ್ತು ಲಕ್ಷವನ್ನು ಕೊಡುವವ; ಇವುಗಳ ವಾರ್ತೆಯೂ ಕೂಡ ಉಳಿಯಲಾರದು ।೫೨೫॥ ಆದ್ದರಿಂದ ಯೋಗ್ಯತೆ ಸಹ ವರ್ತಮಾನ ಮಹಾಯೋಗ ಅಥವಾ ಸಮಾಧಿ ಸುಖದ ಉಪಭೋಗ ಇಲ್ಲವೇ ಜೀವ-ಶಿವರ ಆತ್ಮೈಕ್ಯ ಈ ಯಾವ ಮಾತುಗಳೂ ಕೂಡ ಉಳಿಯಲು ಶಕ್ಯವಿಲ್ಲ ।೫೨೬॥ ಇಲ್ಲಿ ಬೋಧೆ ಎಂಬುವುದು ಎಲ್ಲಿಯದು? ಹಾಗೂ ಬೋಧಕತೆಯಾದರೂ ಯಾವುದು? ಬದ್ಧತಾ, ಮುಕ್ತತಾ ಇವು ಎಲ್ಲಿಯವು? ಬ್ರಹ್ಮ ಎಂಬ ನಾಮದ ವಾರ್ತೆಯೂ ಸಹ ಸರ್ವಥಾ ಇಲ್ಲದಾಗುವುದು ।೫೨೭॥ ಸತ್, ಚಿತ್ ಮತ್ತು ಆನಂದ ಈ ನಾಮದ ಯಾವ ಉಚ್ಚಾರವು ಮತ್ತು ಅದರ ಸಂಬಂಧವನ್ನೂ ಕೂಡ ನನಗೆ ಮಾಯೆಯು ಹಚ್ಚಿರುವುದು. ಅದರ ಪ್ರಕಾರವನ್ನೂ ಹೇಳುವೆನು, ಕೇಳು ।೫೨೮॥ ಅಸತ್ ಎಂದರೆ ಅದು ಮಿಥ್ಯೆಯಾದ ಮಾಯೆಯು. ಇದರ ಅಪೇಕ್ಷೆಯಿಂದ ನನಗೆ ಶ್ರುತಿಗಳು ಸತ್ವ ಅಂದರೆ ಜಡದ ಮಿಥ್ಯೆತ್ವವನ್ನು ತೋರಿಸಿಕೊಡುವುದಕ್ಕಾಗಿ ನನಗೆ ಚಿನ್ಮಾತ್ರವೆನ್ನುವುವು ।೫೨೯॥

ತೋಡಿತಾ ದುಃಖಾಚಾ ಸಂಬಂಧೂ । ಮಾತೇ ಮ್ಹಣತೀ ''ಪರಮಾನಂದೂ'' । ಏವಂ ಸಚ್ಚಿದಾನಂದಪ್ರವಾದೂ । ಹಾ ವಿಪರೀತ ಬೋಧೂ ವಿದ್ಯೇಚಾ ।೫೩೦॥ ಜೇಥ ಅಸಂತಚಿ ನಾಹೀ । ತೇಥ ಸಂತ ಮ್ಹಣಣೇ ಘಡೇ ಕಾಯೀ । ಸಮೂಳ ಅಜ್ಞಾನಾಚಿ ಜೇವ್ಹಾ ನಾಹೀ । ತೇವ್ಹಾ ಚಿನ್ಮಾತ್ರ ಹೇಹೀ ಮ್ಹಣೇ ಕೋಣ ।೫೩೧॥ ಜೇವ್ಹಾ ದುಃಖಾಚಾ ಲೇಶೂ ನಾಹೀ । ತೇವ್ಹಾ ಸುಖ ಮ್ಹಣಾವೇ ಕೋಣೇ ಠಾಯೀ । ಯಾಲಾಗೀ ನಾಮರೂಪ ಮಜ ಪಾಹೀ । ತೇವಿತಾ ಠಾಯೀ ತುಕೇನಾ ।೫೩೨॥ ಸಮೂಳ ಉಡೇ ತ್ರಿಪುಟೀಚೇ ಭಾನ । ಯಾ ನಾಂವ ಗಾ ತೀವ್ರ ಧ್ಯಾನ । ಮಾಝೇ ಕರೂನಿಯಾ ಭಜನ । ನಿಜಸಮಾಧಾನ ಪಾವಲೇ ।೫೩೩॥ ಏವಂ ಮಾಝೇನಿ ಧ್ಯಾನ ಪ್ರಕಾರೇ । ಸಂಸಾರ ಉಡೇ ಚಮತ್ಕಾರೇ । ಮಾಝೇ ಕೇವಳ ಸ್ವರೂಪಚಿ ಉರೇ । ನಿಜನಿರ್ಧಾರೇ ಉದ್ಧವಾ ।೫೩೪॥ ತೇ ಸ್ವರೂಪೀ ಸುಖ ನಾ ದುಃಖ । ನಾಹೀ ಸಂತಾಸಂತಾಚೇ ಲೇಖ । ಜ್ಞಾನಾಜ್ಞಾನಾಚೀ ಅಟಕ । ತೇ ಠಾಯೀ ದೇಖ ಅಸೇನಾ ।೫೩೫॥ ತೇಥ ನಾಮ ರೂಪ ಗುಣ । ನಾಹೀ ಮೀತೂಪಣಾಚೀ ಖೂಣ । ವಿದ್ಯಾ ಅವಿದ್ಯಾ ಮಾನ । ಆನಂದಘನ ನಿಜರೂಪ ।೫೩೬॥ ಭಕ್ತಿ ಸುಖಾಚೇ ಹೇಲಾವೇ । ನಾನಾ ಉಪಾಯಗೌರವೇ । ಉದ್ಧವಾಲಾಗೀ ದೇವೇ । ನಿಜಾನುಭವೇ ದೀಧಲೇ ।೫೩೭॥ ಠಸಾವಲ್ಯಾ ಮಾಝೀ ಭಕ್ತೀ । ಸಕಳ ಸಿದ್ಧೀಂಚೀ ಹೋಯ ಪ್ರಾಪ್ತೀ । ಸಂದೇಹ ನಾಹೀ ಯೇ ಅರ್ಥೀ । ಜಾಣ ನಿಶ್ಚಿತೀ ಉದ್ಧವಾ ।೫೩೮॥ ಭಜನಪಂಥೇ ನಿರಂತರ । ದೋಹೋನಿ ಭಕ್ತಿಸುಖಕ್ಷೀರ । ತ್ಯಾಚೇಹೀ ಮಂಥೋನಿಯಾ ಸಾರ । ಉದ್ಧವಾಸೀ ಶ್ರೀವರ ದೇತಾ ಝಾಲಾ ।೫೩೯॥ ತೋ ಹಾ ಚೌದಾವಾ ಅಧ್ಯಾವೋ । ಸ್ವಮುಖೇ ಬೋಲಿಲಾ ದೇವೋ । ಭಕ್ತೀಸೀ ಮೀ ವಶ್ಯ ಪಹಾ ಹೋ । ಯೇರ ಉಪಾವೋ ತೋ ಗೌಣ ।೫೪೦॥ ಸಕಳ ಯೋಗಾಂಚೇ ಯೋಗಗವ್ಹರ । ವೇದಾಂತ ನಿಜಭಾಂಡಾರ । ಸಕಳ ಸಿದ್ಧೀಂಚೇ ಪರಮ ಸಾರ । ಭಕ್ತಿ ಸಾಚಾರ ಹರೀಚೀ ।೫೪೧॥ ನಿಜಭಾಗ್ಯಾಚೀ ಪರಮ ಜೋಡೀ । ಮಹಾಸುಖಾಚೀ ಆವಡೀ ಗಾಢೀ । ಸಕಳ ಗೋಡಿಯಾಂಚೀ ಗೋಡೀ । ಭಕ್ತಿ ರೋಕಡೀ ಹರೀಚೀ ।೫೪೨॥ ಭಾವೇ ಕರಿತಾ ಭಗವದ್ಭಜನ । ಶ್ವಪಚ ಜಾಹಲೇ ಪಾವನ । ಜೇಣೇ ಭಕ್ತೀಶೀ ವಿಕಲೇ ಮನ । ತ್ಯಾ ಆಧೀನ ಸದಾ ದೇವೋ ।೫೪೩॥ ಉಪೇಕ್ಷೂನಿಯಾ ನಿಜಮುಕ್ತೀ । ಏಕಾ ಜನಾರ್ದನೀ ಪಢಿಯೇ ಭಕ್ತೀ । ತ್ಯಾಚೇನಿ ಪ್ರಸಾದೇ ಭಗವತ್ಪ್ರಾಪ್ತೀ । ಜಾಹಲೀ ಅಹೋರಾತೀ ಖೇಳಣೇ ।೫೪೪॥

ದುಃಖದ ಸಂಬಂಧವು ಮುರಿದು ಹೋಗುವುದೆಂದು ನನಗೆ ಪರಮಾನಂದನು ಎಂದು ಹೇಳುವರು. ಈ ಪ್ರಕಾರವಾಗಿ ನನಗೆ ಸಚ್ಚಿದಾನಂದ ನಾಮವು ದೊರೆಯಿತು. ಇದು ವಿದ್ಯೆಯ ವಿಪರೀತ ಬೋಧೆ ಎಂದು ಪರಿಗಣಿಸಬೇಕು ।೫೩೦॥ ಅಸತ್ ಎಲ್ಲಿ ಇಲ್ಲವೋ, ಅಲ್ಲಿ ಸತ್ ಎಂದು ಯಾರಿಗೆ ಹೇಳಬೇಕಾಗಿದೆ ? ಮೂಲತಃ ಅಜ್ಞಾನವೇ ಇಲ್ಲದಿರಲು, ಅಲ್ಲಿ ''ಜ್ಞಾನಮಯ'' ಎಂದು ಹೀಗೆ ಯಾರು ಹೇಳುವರು? ।೫೩೧॥ ದುಃಖದ ಲೇಶವೇ ಇಲ್ಲದಂತಾಗಿರಲು ಸುಖವೆಂದು ಯಾವುದಕ್ಕೆ ಹೇಳಬೇಕು? ಈ ಪ್ರಕಾರವಾಗಿ ನನಗೆ ನಾಮರೂಪವನ್ನು ಹಚ್ಚಲು ಹೋದರೆ, ಅವು ನನಗೆ ಹತ್ತಲಾರವು ।೫೩೨॥ ತ್ರಿಪುಟಿಗಳ ಭಾನವು ಸಮೂಲವಾಗಿ ಇಲ್ಲದಾಗುವಿಕೆಗೆ ''ತೀವ್ರಧ್ಯಾನ'' ಎಂದು ಹೇಳುವರು. ಅದೇ ನನ್ನ ಭಜನೆಯನ್ನು ಮಾಡಿ ಸಾಧಕನು ಆತ್ಮಾನಂದಕ್ಕೆ ಪ್ರಾಪ್ತನಾಗುವನು ।೫೩೩॥ ಇಂತಹ ಪ್ರಕಾರದ ಧ್ಯಾನದಿಂದ ಬಹು ಚಮತ್ಕಾರವಾಗಿ ಸಂಸಾರವು ಹಾರಿ ಹೋಗುವುದು. ಹೇ ಉದ್ಧವಾ, ಆತ್ಮಸ್ವರೂಪದ ನಿಶ್ಚಯದಿಂದ ಕೇವಲ ನನ್ನ ಶುದ್ಧ ಸ್ವರೂಪವೇ ಉಳಿದುಕೊಳ್ಳುವುದು ।೫೩೪॥ ಆ ಸ್ವರೂಪದಲ್ಲಿ ಸುಖದುಃಖಗಳು ಇರುವುದಿಲ್ಲ. ಸತ್ ಮತ್ತು ಅಸತ್‌ಗಳು ಲೆಕ್ಕಕ್ಕೆ ಇಲ್ಲ. ಜ್ಞಾನ, ಅಜ್ಞಾನ ಕಲ್ಪನೆಗಳ ಅಡೆತಡೆಗಳು ಇಲ್ಲವೇ ಇಲ್ಲ ।೫೩೫॥ ಅದರಲ್ಲಿ ನಾಮ, ರೂಪ, ಗುಣ ನಾನುನೀನೆಂಬ ಮಾತು, ವಿದ್ಯಾ, ಅವಿದ್ಯೆಯ ಭಾನವು, ಇವುಗಳಲ್ಲಿ ಯಾವುದು ಒಂದೂ ಕೂಡ ಇರುವುದಿಲ್ಲ. ಆನಂದಘನವಾದ ಆತ್ಮಸ್ವರೂಪವೇ ಸಂಪೂರ್ಣವಾಗಿ ತುಂಬಿಕೊಂಡಿರುವುದು ।೫೩೬॥ ಈ ಪ್ರಕಾರವಾಗಿ ಶ್ರೀಕೃಷ್ಣನು ಉದ್ಧವನಿಗೆ ಯುಕ್ತಿ-ಪ್ರಯುಕ್ತಿಗಳಿಂದ ಆತ್ಮಾನುಭಾವದಿಂದ ಭಕ್ತಿಸುಖದ ಮೆರಗನ್ನು ಕೊಟ್ಟನು ।೫೩೭॥ ಹೇ ಉದ್ಧವಾ, ನನ್ನ ಭಕ್ತಿಯು ಈ ಪ್ರಕಾರವಾಗಿ ಅಂತಃಕರಣದಲ್ಲಿ ನಟ್ಟಿಕೊಳ್ಳಲು, ಸರ್ವ ಪ್ರಕಾರದ ಸಿದ್ಧಿಗಳು ಪ್ರಾಪ್ತವಾಗುವುವು. ಇದರಲ್ಲಿ ಯಾವ ಅನುಮಾನವೂ ಇಲ್ಲ. ಇದನ್ನು ನೀನು ನಿಶ್ಚಯವಾಗಿ ಲಕ್ಷದಲ್ಲಿಡು ।೫೩೮॥ ಭಕ್ತಿ ಸುಖರೂಪ ಹಾಲನ್ನು ಭಜನಮಾರ್ಗದಿಂದ ಓಂಡಿಕೊಂಡು ಅದನ್ನು ಸತತವಾಗಿ ಕಡೆದು ಅದರಲ್ಲಿನ ಸಾರರೂಪವಾದ ಬೆಣ್ಣೆಯನ್ನು ಶ್ರೀಕೃಷ್ಣನು ಉದ್ಧವನ ಕೈಗೆ ಕೊಟ್ಟನು ।೫೩೯॥ ಇದೇ ಆ ಹದಿನಾಲ್ಕನೆಯ ಅಧ್ಯಾಯವಾಗಿದೆ. ಇದರಲ್ಲಿ ಶ್ರೀಕೃಷ್ಣನು ನಾನು ಕೇವಲ ಭಕ್ತಿಗೆ ಮಾತ್ರ ವಶವಾಗುವೆನೆಂದು ತನ್ನ ಸ್ವಮುಖದಿಂದ ಹೇಳಿರುವನು. ಇತರ ಸರ್ವ ಉಪಾಯಗಳು ಗೌಣವಾಗಿರುವುವು ।೫೪೦॥ ಹರಿಯ ಭಕ್ತಿಯೇ ನಿಜವಾಗಿಯೂ ಎಲ್ಲ ಯೋಗಗಳ ಸಾರವಾಗಿರುವುದು. ವೇದಾಂತದ ಭಾಂಡಾರವು, ಸರ್ವಸಿದ್ಧಿಗಳ ರಹಸ್ಯವು ನಿಜವಾಗಿ ಹರಿಯ ಭಕ್ತಿಯೇ ಆಗಿರುವುದು ।೫೪೧॥ ಹರಿಯ ಏಕನಿಷ್ಠ ಭಕ್ತಿಯೊಂದೇ ಆತ್ಮಸುಖದ ಪರಮಪ್ರಾಪ್ತಿಯನ್ನು ಮಾಡಿಕೊಡುವುದು. ಮಹಾಸುಖದ ನಿಜವಾದ ಅಪೇಕ್ಷೆ ಇದ್ದರೆ, ಸರ್ವ ಆನಂದದಲ್ಲಿನ ಆನಂದವು ಶ್ರೀಹರಿಯ ಏಕನಿಷ್ಠದ ಭಕ್ತಿಯಾಗಿರುವುದು ।೫೪೨॥ ಭಕ್ತಿಪೂರ್ವಕವಾಗಿ ಭಗವದ್‌ಭಜನೆಯನ್ನು ಮಾಡುವುದರಿಂದ ಅನೇಕ ಚಾಂಡಾಲರೂ ಕೂಡ ಪಾವನರಾದರು. ಯಾರು ತಮ್ಮ ಮನಸ್ಸನ್ನು ಭಕ್ತಿಗಾಗಿ ಮಾರಿಕೊಳ್ಳುವರೋ, ಅವರ ಆಧೀನನಾಗಿ ದೇವನು ಸರ್ವಕಾಲಕ್ಕೂ ಇರುವನು ।೫೪೩॥ ಮುಕ್ತಿಯ ಉಪೇಕ್ಷೆಯನ್ನು ಮಾಡಿ ಏಕನಾಥನು ಜನಾರ್ದನರ ಭಕ್ತಿಯನ್ನು ಅತ್ಯಂತ ಪ್ರೇಮದಿಂದ ಮಾಡಿದನು. ಆಗ ಅವರ ಕೃಪಾ ಪ್ರಸಾದದಿಂದ ಭಗವತ್ಪ್ರಾಪ್ತಿಯು ಆಟದ ಗೊಂಬೆಯಂತೆ ಹಗಲು ರಾತ್ರಿ ವಶವಾಗಿ ಉಳಿಯಿತು ।೫೪೪॥

ತೋ ಜರೀ ಭಗವತ್ಪ್ರಾಪ್ತೀ ನೇಘೇ । ತರೀ ತೇ ದಾಟೂನಿ ಘರ ರಿಘೇ । ಐಸೇ ಗುರುಭಕ್ತೀಚೇನಿ ಯೋಗೇ । ದೇವೋ ಸರ್ವಾಂಗೇ ಭೂಲಲಾ ।೫೪೫।। ಭಗವತ್ಪ್ರಾಪ್ತೀ ಪಾಹಿಜೇ ಜ್ಯಾಸೀ । ತೇಣೇ ನ ವಿಸಂಬಾವೇ ಮದ್ಭಕ್ತೀಸೀ । ಅಖಂಡ ಸ್ಮರೇ ಜೋ ಹರಿನಾಮಾಸೀ । ದೇವೋ ತ್ಯಾಪಾಶೀ ತಿಷ್ಠತ ।೫೪೬।। ಸಕಳ ಭಜನಾಚೇ ಶಿರೀ । ರಾಮನಾಮ ದೋ ಅಕ್ಷರೀ । ಸದಾ ಗರ್ಜೇ ಜ್ಯಾಚೇ ವೈಖರೀ । ಧನ್ಯ ಚರಾಚರೀ ತೋ ಏಕ ।೫೪೭।। ಏಕಾ ಜನಾರ್ದನಾ ಶರಣ । ಇತುಕೇ ಕರಿತಾ ನಾಮಸ್ಮರಣ। ಪಾರಿಮೋರೇ ಹೋಯ ಜನ್ಮ ಮರಣ । ಮಹಾಸಿದ್ಧೀ ಆಂಗಣ ವೋಳಂಗತೀ ।೫೪೮।।

ಇತಿ ಶ್ರೀಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಏಕಾಕಾರಟೀಕಾಯಾಂ ಶ್ರೀಕೃಷ್ಣೋದ್ಧವಸಂವಾದೇ ಭಕ್ತಿರಹಸ್ಯಾವಧಾರಣಯೋಗೋ ನಾಮ ಚತುರ್ದಶೋಽಧ್ಯಾಯಃ ।೧೪।।

।। ಶ್ರೀಕೃಷ್ಣಾರ್ಪಣಮಸ್ತು ।।

ಈತನು ಭಗವತ್‌ಪ್ರಾಪ್ತಿಯನ್ನು ಒಲ್ಲೆನೆಂದರೂ ಕೂಡ ತಾನಾಗಿಯೇ ಆತನ ಮನೆಬಾಗಿಲಿಗೆ ಬರುವುದು. ಹೀಗೆ ಗುರುಭಕ್ತಿಯ ಯೋಗದಿಂದ ದೇವನು ಸರ್ವತೋಪರಿಯಾಗಿ ಭುಲಾಯಿಸಿರುವನು ।೫೪೫।। ಯಾರಿಗೆ ಭಗವತ್‌ಪ್ರಾಪ್ತಿಯಾಗಬೇಕೆಂಬ ಅಪೇಕ್ಷೆ ಇದೆಯೋ, ಆತನು ಭಕ್ತಿಯ ಉಪೇಕ್ಷೆಯನ್ನು ಎಂದಿಗೂ ಮಾಡಬಾರದು. ಯಾರು ಶ್ರೀಹರಿಯ ನಿಃಸ್ವಾರ್ಥ ಪ್ರೇಮದಿಂದ ಅಖಂಡ ನಾಮಃಸ್ಮರಣೆಯನ್ನು ಮಾಡುವನೋ, ಆತನಲ್ಲಿ ದೇವನು ನಿರಂತರವಾಗಿ ನಿಂತುಕೊಂಡಿರುವನು ।೫೪೬।। ಯಾರ ವಾಣಿಯು ಸರ್ವ ಭಜನೆಯಲ್ಲಿನ ಶ್ರೇಷ್ಠವಾಗಿರುವ ''ರಾಮ'' ಎಂಬ ಈ ಎರಡಕ್ಷರಗಳನ್ನು ತಪ್ಪದೇ ಉಚ್ಚರಿಸುತ್ತಿರುವುದೋ, ಆತನೇ ಈ ಸರ್ವ ಚರಾಚರ ಸೃಷ್ಟಿಯಲ್ಲಿ ಧನ್ಯ ಧನ್ಯನು ।೫೪೭।। ಏಕನಾಥನು ಜನಾರ್ದನರಿಗೆ ಶರಣಾಗಿ ಹೀಗೆ ನಾಮಸ್ಮರಣೆಯನ್ನು ಮಾಡುತ್ತಿರುವುದರಿಂದ ಆತನ ಜನ್ಮಮರಣಗಳು ಓಡಿ ಹೋದವು. ಹಾಗೂ ಮಹಾಸಿದ್ಧಿಗಳು ಆತನ ಅಂಗಳದಲ್ಲಿ ಕೈಜೋಡಿಸಿ ನಿಂತುಕೊಂಡವು ।೫೪೮।।

ಇತಿ ಶ್ರೀಭಾಗವತ ಮಹಾಪುರಾಣದ ಹನ್ನೊಂದನೆಯ ಸ್ಕಂಧದ ಏಕನಾಥ ಮಹಾರಾಜರ ಭಾಷ್ಯಯ ಶ್ರೀಕೃಷ್ಣೋದ್ಧವ ಸಂವಾದದ ಭಕ್ತಿರಹಸ್ಯಾವಧಾರಣ ಯೋಗ ನಾಮದ ಹದಿನಾಲ್ಕನೆಯ ಅಧ್ಯಾಯ ಸಂಪೂರ್ಣ.

।।ಶ್ರೀಕೃಷ್ಣಾರ್ಪಣಮಸ್ತು ।।

ಸಾರ್ಥ ಶ್ರೀಏಕನಾಥೀ ಭಾಗವತ

ಹದಿನೈದನೆಯ ಅಧ್ಯಾಯ

॥ಶ್ರೀಗಣೇಶಾಯ ನಮಃ ॥ ಶ್ರೀಕೃಷ್ಣಾಯನಮಃ ॥ ಓಂ ನಮೋ ಶ್ರೀಜನಾರ್ದನ । ಸಕಳ ಸಿದ್ಧೀಚೇ ಸಿದ್ಧಸ್ಥಾನ । ಸಕಳ ಋದ್ಧೀಚೇ ಪರಮ ನಿಧಾನ । ತುಝೇ ಶ್ರೀಚರಣ ಸರ್ವಾರ್ಥೀ ॥೧॥ ನಿಧಾನ ಸಾಧಾವಯಾ ಅಂಜನ । ನಯನೀ ಕಾಳಿಮಾ ಘಾಲಿತೀ ಜನ । ತೇಣೇ ಕಾಳವಂಡಲೇ ನಯನ । ಥಿತೇ ನಿಧಾನ ದಿಸೇನಾ ॥೨॥ ತೈಸೇ ನವ್ಹತೀ ತುಝೇ ಚರಣ । ಕರಿತಾ ಚರಣರಜವಂದನ । ನಿಃಶೇಷ ಕಾಳಿಮಾ ನಿರಸೇ ಜಾಣ । ಪೂರ್ಣ ನಿಧಾನ ದಾವಿಸೀ ॥೩॥ ಅಂಜನೇ ಸಾಧಿತಾ ನಿಧಾನ । ತೇಥ ಭಳಾವಯಾ ಪಾವೇ ವಿಘ್ನ । ಬಳೀ ದೇಊನಿ ಸಾಧಿಲ್ಯಾ ಜಾಣ । ನಶ್ವರಪಣ ತಯಾಸೀ ॥೪॥ ತೈಸೇ ನವ್ಹತೀ ತುಝೇ ಚರಣ । ಅವಲೀಳಾ ಕರಿತಾ ಸ್ಮರಣ । ನಿತ್ಯ ಸಿದ್ಧ ಅವ್ಯಯ ಜಾಣ । ನಿಜನಿಧಾನ ಠಸಾವೇ ॥೫॥ ಹೇ ಸಾಧೂನಿಯಾ ನಿಧಾನ । ಝಾಲೇ ಸನಕಾದಿಕ ಸಂಪನ್ನ । ನಾರದಾಚೇ ಉದಾರಪಣ । ಯೇಣೇಚಿ ಜಾಣ ವಾಖಾಣೇ ॥೬॥ ವಜ್ರಕವಚ ಪ್ರಹ್ಲಾದಾಸೀ । ಹೇಚಿ ಭಾಂಡವಲ ಗಾಂಠೀ ತ್ಯಾಸೀ । ಶುಕಾದಿ ವಾಮದೇವಾಂಸೀ । ಮಹಿಮಾ ಯೇಣೇಸೀ ಪಾವಲೇ ತೇ ॥೭॥ ವ್ಯಾಸವಾಲ್ಮೀಕಿ ಮಹಾವೇವ್ಹಾರೇ । ಯೇಣೇಚಿ ಭಾಂಡವಲೇ ಝಾಲೇ ಖರೇ । ತ್ಯಾಂಚೇನಿ ಭಾಂಡವಲೇ ಲಹಾನ ಥೋರೇ । ಛೇದೂನಿ ದರಿದ್ರೇ ನಾಂದತೀ ॥೮॥ ತ್ಯಾ ಸದ್ಗುರೂಚೇ ಶ್ರೀಚರಣ । ಪರಮ ನಿಧೀಚೇ ನಿಧಾನ । ಏಕಾ ಜನಾರ್ದನಾ ಶರಣ । ಹೇ ಆಮ್ಹಾ ಪರಿಪೂರ್ಣ ಭಾಂಡವಲ ॥೯॥ ಯೇಣೇಚಿ ಭಾಂಡವಲೇ ಪ್ರಸ್ತುತ । ಪ್ರಾಪ್ತ ಝಾಲೇ ಶ್ರೀಭಾಗವತ । ತೇಥ ಉದ್ಧವಾಸೀ ಶ್ರೀಅನಂತ । ಜ್ಞಾನಮತಿತಾರ್ಥ ಸಾಂಗತ ॥೧೦॥ ತೇ ದೋಘಾಂಚೇ ಏಕಾಂತ ಮಾತೂ । ಪ್ರಕಟ ಜಾಹಲೀ ಜಗಾ ಆಂತೂ । ಹಾ ಪರೀಕ್ಷಿತೀಚಾ ವಿಖ್ಯಾತೂ । ಉಪಕಾರ ಲೋಕಾಂತೂ ಥೋರ ಝಾಲಾ ॥೧೧॥

ಓಂಕಾರರೂಪ ಶ್ರೀ ಜನಾರ್ದನರಿಗೆ ನಮಸ್ಕಾರವು. ನಿನ್ನ ಪರಮ ಪವಿತ್ರ ಚರಣ ಕಮಲಗಳು ಸರ್ವ ಸಿದ್ಧಿಗಳ ಸಿದ್ಧಸ್ಥಾನವಾಗಿರುವುವು. ಸರ್ವ ನಿಧಿಗಳಲ್ಲಿನ ಶ್ರೇಷ್ಠನಿಧಿಯಾಗಿರುವುವು. ಸರ್ವಾಂಗದಿಂದ ಜೀವನವನ್ನು ವಿಕಾಸಗೊಳಿಸುವುವು ॥೧॥ ಭೂಮಿಯಲ್ಲಿ ಹುಗಿದಿಟ್ಟಿರುವ ಧನವು ಕಾಣುವುದಕ್ಕಾಗಿ ಕಣ್ಣುಗಳಿಗೆ ಅಂಜನವನ್ನು ಹಾಕುವರು. ಆದರೆ ಅದರಿಂದ ಕಣ್ಣುಗಳೇ ಕಡುಕಪ್ಪಾಗಿ ಹೋಗುವುವು. ಆದರಿಂದ ಇದ್ದ ಪದಾರ್ಥಗಳೂ ಕೂಡ ಕಾಣಿಸದಾಗುವುವು ॥೨॥ ನಿನ್ನ ಚರಣಗಳು ಅಂತಹದ್ದಲ್ಲ. ನಿನ್ನ ಚರಣಗಳ ಧೂಳನ್ನು ವಂದಿಸಲು ಸಂಪೂರ್ಣ ಪಾತಕಗಳು ಇಲ್ಲದಾಗುವುವು. ಮತ್ತು ನೀನು ಪರಬ್ರಹ್ಮ ಸ್ವರೂಪದ ದರ್ಶನವನ್ನು ಸಾಧಿಸಿಕೊಡುವೆ ॥೩॥ ಕಣ್ಣುಗಳಲ್ಲಿ ಅಂಜನವನ್ನು ಹಾಕಿ ಹುಗಿದಿರುವ ಧನವನ್ನು ತೆಗೆಯಲು ಹೋದರೆ, ಅಲ್ಲಿ ಪಿಶಾಚ ಸಂಬಂಧಗಳ ಅನೇಕ ಪ್ರಕಾರದ ವಿಘ್ನಗಳ ಪೀಡೆಗಳು ಒದಗುವುವು. ಅವುಗಳಿಗೆ ಬಲಿಕೊಟ್ಟು ನಿಧಿಯನ್ನು ಸ್ವಾಧೀನವನ್ನಾಗಿ ಮಾಡಿಕೊಳ್ಳುವರು. ಇಷ್ಟಾದರೂ ಆ ನಿಧಿಯು ಅಶಾಶ್ವತವೇ ಆಗಿರುವುದು ॥೪॥ ಆದರೆ ನಿನ್ನ ಚರಣಗಳು ಅಂತಹದ್ದಲ್ಲ. ನಿನ್ನ ಚರಣಗಳನ್ನು ಸಹಜವಾಗಿ ಸ್ಮರಿಸಲು ನಿತ್ಯ, ಸಿದ್ಧ ಮತ್ತು ಅವಿನಾಶವಾದ ಸ್ವರೂಪದ ನಿಧಿಯು ಪ್ರಾಪ್ತವಾಗುವುದು ॥೫॥ ಈ ನಿಧಿಯನ್ನೇ ಪ್ರಾಪ್ತಮಾಡಿಕೊಂಡು ಸನಕಾದಿಕರು ಭಾವಸಂಪನ್ನರಾದರು. ಇದರಿಂದಲೇ ನಾರದರ ಔದಾರ್ಯವನ್ನು ಸ್ತುತಿಸುವರು ॥೬॥ ಪ್ರಹ್ಲಾದನಿಗೆ ಸಂರಕ್ಷಣೆಯನ್ನು ಮಾಡುವಂತಹ ವಜ್ರ ಕವಚವು ಲಭಿಸಿತು. ಇದಕ್ಕೂ ಇದೇ ಕಾರಣವಾಗಿರುವುದು. ಆತನಲ್ಲಿ ಇದೇ ಬಂಡವಾಳವಿತ್ತು. ಶುಕ-ವಾಮದೇವಾದಿಕರ ಮಹಿಮೆಯು ಈ ಯೋಗದಿಂದಲೇ ಬೆಳೆಯಿತು ॥೭॥ ಇದೇ ಬಂಡವಾಳದಲ್ಲಿ ವ್ಯಾಸ - ವಾಲ್ಮೀಕರು ಇಷ್ಟೊಂದು ದೊಡ್ಡದಾದ ಹರಿನಾಮದ ವ್ಯಾಪಾರವನ್ನು ಮಾಡಿದರು. ಅವರ ಈ ಯಾವ ಬಂಡವಾಳದ ಆಧಾರದಿಂದ ಚಿಕ್ಕವರು, ದೊಡ್ಡವರು ತಮ್ಮ ಆತ್ಮಜ್ಞಾನ ವಿಷಯದ ದಾರಿದ್ರ್ಯವನ್ನು ದೂರ ಮಾಡಿಕೊಂಡು ಆತ್ಮಜ್ಞಾನದಿಂದ ಬಹು ದೊಡ್ಡ ಶ್ರೀಮಂತರಾದರು ॥೮॥ ಹೀಗಿರುವ ಈ ಯಾವ ಸದ್ಗುರುಗಳ ಚರಣಗಳು ಸರ್ವ ನಿಧಿಗಳಲ್ಲಿ ಪರಮ ನಿಧಿಯಾಗಿರುವುದು. ಏಕನಾಥನು ಜನಾರ್ದನರಿಗೆ ಶರಣು ಹೋಗಿರುವನು. ಸದ್ಗುರುಗಳಿಗೆ ಶರಣಾಗುವುದೇ ನಮ್ಮ ಬಂಡವಾಳವಾಗಿದೆ ॥೯॥ ಇದೇ ಬಂಡವಾಳದಿಂದ ಪ್ರಸ್ತುತ ಶ್ರೀಭಾಗವತವು ನಮಗೆ ಲಭಿಸಿರುವುದು. ಅದರಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಜ್ಞಾನದ ರಹಸ್ಯವನ್ನು ಹೇಳುತ್ತಿರುವನು ॥೧೦॥ ಈ ಈರ್ವರ ಈ ವಿಚಾರವು ಏಕಾಂತದಲ್ಲಿ ನಡೆದಿತ್ತು. ಆದರೆ ಈಗ ಅದೇ ವಿಚಾರವು ಜಗತ್ತಿನಲ್ಲಿ ಪ್ರಸಿದ್ಧವಾಯಿತು. ಇದಕ್ಕಾಗಿ ಪರೀಕ್ಷಿತರಾಜನ ಜಗತ್ತಿನ ಮೇಲೆ ಬಹು ದೊಡ್ಡ ಉಪಕಾರವಾಗಿರುವುದು ॥೧೧॥

ಜ್ಯಾಚೇ ಶ್ರದ್ಧೇಚ್ಯಾ ಆವಡೀ । ಶುಕ ಪಾವಲಾ ಲವಡಸವಡೀ । ತೇಣೇ ಗುಹ್ಯ ಜ್ಞಾನಾಚೀ ಗೋಡೀ । ಪ್ರಕಟ ಉಘಡೀ ದಾಖವಿಲೀ ॥೧೨॥ ತ್ಯಾ ಶುಕಾಚೇ ನವಲ ಮಹಿಮಾನ। ಕಾನೀ ನ ಸಾಂಗತಾ ಗುಹ್ಯ ಜ್ಞಾನ । ಶ್ರವಣೇ ತೋಡೋನಿ ಭವಬಂಧನ । ಪರೀಕ್ಷಿತೀ ಜಾಣ ಉದ್ಧರಿಲಾ ॥೧೩॥ ಏಥವರೀ ಶ್ರವಣಾಚೀ ಗೋಡೀ । ಪ್ರಸಿದ್ಧ ದಾವಿಲೀ ಉಘಡೀ । ತರೀ ಅಭಾಗ್ಯ ದಾಂತಖಿಳೀ ಪಾಡೀ । ಕಾನಾಚೀ ನುಘಡೀ ನಿಮಟಲೀ ಮಿಠೀ ॥೧೪॥ ಶ್ರವಣೀ ಘಾಲಿತಾ ವಾಡೇಕೋಡೇ । ಕಥಾಸಾರಾಮೃತ ಬಾಹೇರೀ ಸಾಂಡೇ । ಶ್ರವಣಾ ಆಂತೌತಾ ಥೇಂಬಹೀ ನ ಪಡೇ । ಯಾಲಾಗೀ ರಡೇ ವಿಷಯಾಂಸೀ ॥೧೫॥ ಅಸೋ ಹೇ ಶ್ರೋತ್ಯಾಂಚೀ ಕಥಾ । ಕಥಾ ಸಾಂಗೇ ಜೋ ವಕ್ತಾ । ತೋಹೀ ತೈಸಾಚಿ ರಿತಾ । ಘೋಟು ಆಂತೌತಾ ಪಾವೋ ನೇದೀ ॥೧೬॥ ಜೈಸಾ ಗುಳ ಉಂಸಾಚಾ ಘಾಣಾ । ರಸು ಬಾಹೇರೀ ಜಾಯೇ ಮಾಂದಣಾ । ಫಿಕೇಪಣೇ ಕರಕರೀ ಗಹನಾ । ತೇ ಗತೀ ವದನಾ ವಕ್ತಯಾಚೇ ॥೧೭॥ ಜೇ ಕಥಾಮೃತಾಚೇ ಗೋಡಪಣ । ಜೇ ಸದ್ಗುರೂವೀಣ ಚಾಖವೀ ಕೋಣ । ಯಾಲಾಗೀ ಜನಾರ್ದನಾ ಶರಣ । ಜೇಣೇ ಗೋಡಪಣ ಚಾಖವಿಲೇ ॥೧೮॥ ಪರೀ ಚಾಖವಿಲೀ ಉಣಖೂಣ । ತೇಹೀ ಅಭಿನವ ಆಹೇ ಜಾಣ । ಸ್ವಾದ ಸ್ವಾದಿತಾ ಆಪಣ । ಹೋಊನಿ ಗೋಡಪಣ ಚಾಖವೀ ॥೧೯॥ ಬಾಳಕಾಹಾತೀ ದಿಧಲ್ಯಾ ಫಳಾ । ಖಾವೇ ಹೇ ನ ಕಳೇ ತ್ಯಾ ಅಬಳಾ । ತ್ಯಾಚೇ ಮುಖೀ ಘಾಲೂನಿ ಗಳಾಳಾ । ಗೋಡೀಚಾ ಜಿವ್ಹಾಳಾ ಜನಕ ದಾವೀ ॥೨೦॥ ಗೋಡೀ ಲಾಗಲ್ಯಾ ಬಾಳಕಾಸೀ । ತೇಚಿ ಫಳ ಖಾಯ ಅಹರ್ನಿಶೀ । ತೇವೀ ಜನಾರ್ದನೇ ಆಮ್ಹಾಂಸೀ । ಗೋಡೀ ಶ್ರೀಭಾಗವತಾಸೀ ಲಾವಿಲೀ ॥೨೧॥ ಐಸೀ ಲಾವಿಲೀ ಗೋಡೀ ಚಡೋವಡೀ । ತೇಣೇ ಝಾಲೀ ನವಲಪರವಡೀ । ಮಜ ಸಾಂಡಿತಾಹೀ ತೇ ಗೋಡೀ । ಗೋಡೀ ನ ಸೋಡೀ ಮಜಲಾಗೀ ॥೨೨॥ ತೇ ಗೋಡೀನೇ ಗಿಳಿಲೇ ಮಾತೇ । ಮೀಪಣ ಗೇಲೇ ಗೋಡೀ ಆಂತೌತೇ । ತೇ ಗೋಡೀಚೇ ಉಥಳಲೇ ಭರಿತೇ । ಸಬಾಹ್ಯ ರಿತೇ ಉರೋ ನೇದೀ ॥೨೩॥ ಹೇ ಶುಕಮುಖೀಚೇ ಶ್ರೇಷ್ಠ ಫಳ । ಗೋಡಪಣೇ ಅತಿರಸಾಳ । ತ್ವಚಾ ಆಂಠೋಳೀವೀಣ ಕೇವಳ । ಗೋಡೀಚ ಸಕಳ ಫಳರೂಪೇ ॥೨೪॥ ತೇ ಭಾಗವತೀಚೇ ಗೋಡೀ । ಶ್ರೀಕೃಷ್ಣೇ ನಿಜ ಆವಡೀ। ಉದ್ಧವಾಸೀ ಕಡೋವಿಕಡೀ । ಭಕ್ತಿ ಚೋಖಡೀ ಚಾಖವಿಲೀ ॥೨೫॥

ರಾಜನ ಶ್ರೇಷ್ಠ ಶ್ರದ್ಧೆಯನ್ನು ಕಂಡು ಆತನಲ್ಲಿ ಶುಕಾಚಾರ್ಯರು ಪ್ರೇಮಪಟ್ಟು ಅವಸರ ಮಾಡುತ್ತಾ ಈ ಯಾವ ಗುಹ್ಯ ಜ್ಞಾನವನ್ನು ಪ್ರಕಟ ಮಾಡಿ ತೋರಿಸಿದರು ॥೧೨॥ ಈ ಯಾವ ಶುಕಾಚಾರ್ಯರ ಮಹಿಮೆಯು ಅಗಾಧವಾಗಿದೆ. ಇದನ್ನು ಹೇಗೆ ವರ್ಣಿಸಬೇಕು? ಇವರು ಈ ಗುಹ್ಯ ಜ್ಞಾನವನ್ನು ಕಿವಿಯಲ್ಲಿ ಬೋಧಿಸದೇ ಕೇವಲ ಶ್ರವಣ ಮಾತ್ರದಿಂದ ಪರೀಕ್ಷಿತಿ ರಾಜನ ಸಂಸಾರ ಬಂಧನವನ್ನು ಮುರಿದುಹಾಕಿದರು. ಹಾಗೂ ಆತನ ಉದ್ಧಾರವನ್ನು ಮಾಡಿದರು ॥೧೩॥ ಶ್ರವಣದ ರುಚಿಯನ್ನು ಇಷ್ಟೊಂದು ಬಿಚ್ಚಿ ತೋರಿಸಿದರು. ಇಷ್ಟಾದರೂ ಕೂಡ ಅಭಾಗ್ಯ ಜನರ ಹಲ್ಲುಗಳು ಉದುರಿದರೂ ಸರಿಯೇ, ಆದರೆ ಇದರತ್ತ ಅವರ ಕಿವಿಗಳು ತಮ್ಮ ಮುಖ ತೆರೆಯಲಾರವು ॥೧೪॥ ಅತಿಶಯವಾದ ಪ್ರೇಮದಿಂದ ಒಂದು ವೇಳೆ ಇವರ ಕಿವಿಗಳಲ್ಲಿ ಕಥಾಮೃತವನ್ನು ಸುರಿದರೂ ಸರಿಯೇ, ಆದರೆ ಆ ಅಮೃತದ ಒಂದು ಹನಿಯೂ ಕೂಡ ಒಳಗೆ ಹೋಗದೇ ಎಲ್ಲವೂ ಹೊರಗೆ ಚೆಲ್ಲುವುದು. ಅದಕ್ಕಾಗಿ ಅವರು ವಿಷಯಗಳಿಗಾಗಿ ಅಳುತ್ತ ಕುಳಿತುಕೊಳ್ಳುವರು ॥೧೫॥ ಇದಾದರೂ ಶ್ರೋತೃಗಳವರ ಕಥೆಯಾಯಿತು. ಆದರೆ ಕಥೆ ಹೇಳುವ ವಕ್ತಾ, ಅವನೂ ಕೂಡ ಇದೇ ರೀತಿ ಬರಿದಾಗಿಯೇ ಇರುವನು. ತನ್ನ ಅಂತಃಕರಣದಲ್ಲಿ ಇವನು ಒಂದು ಗುಟುಕು ಕೂಡ ಹೋಗಕೊಡಲಾರನು ॥೧೬॥ ಕಬ್ಬಿನ ಗಾಣವು ಕಬ್ಬಿನ ರಸವನ್ನು ತೆಗೆಯುತ್ತಿರುವುದು. ಆದರೆ ಈ ಎಲ್ಲ ರಸವು ಹೊರಗಿನ ಪಾತ್ರೆಯಲ್ಲಿ ಬೀಳುತ್ತಿರುವುದು. ಇದು ಸುಮ್ಮನೇ ಕರಕರ ಎಂದು ಕಿರುಚುತ್ತಾ ಇರುವುದು. ಇದೇ ಅವಸ್ಥೆಯು ವಕ್ತಾನ ಮುಖದ ಸ್ಥಿತಿಯಾಗಿರುವುದು ॥೧೭॥ ಕಥಾಮೃತದ ರುಚಿಯನ್ನು ಸದ್ಗುರುಗಳ ಹೊರತಾಗಿ ಬೇರೆ ಯಾರು ಅದನ್ನು ನೆಕ್ಕಿಸಲು ಸಾಧ್ಯವಿದೆ? ಅದಕ್ಕಾಗಿ ಯಾರು ಈ ರುಚಿಯನ್ನು ನನಗೆ ನೆಕ್ಕಿಸಿದರೋ, ಆ ಜನಾರ್ದನರಿಗೆ ಶರಣು ಬಂದೆನು ॥೧೮॥ ಈತನು ನೆಕ್ಕಿಸಿರುವ ರುಚಿಯು ಅತಿಶಯ ವಿಲಕ್ಷಣವಾಗಿರುವುದು. ತಾನೇ ರಸ ಮತ್ತು ರಸನೆಕ್ಕಿಸುವವನೂ ತಾನೇ ಆಗಿ ರಸದ ರುಚಿಯನ್ನು ನೆಕ್ಕಿಸಿದನು ॥೧೯॥ ಸಣ್ಣ ಬಾಲಕನ ಕೈಯಲ್ಲಿ ಒಂದು ಫಲವನ್ನು ಕೊಡಲು, ಆಗ ಆ ಬಾಲಕನಿಗೆ ಆ ಫಲವನ್ನು ಹೇಗೆ ತಿನ್ನಬೇಕೆಂಬುದು ತಿಳಿಯುವುದಿಲ್ಲ. ಅದಕ್ಕಾಗಿ ಅವನ ತಂದೆಯು ಆ ಫಲವನ್ನು ತಾನು ತಿಂದು ಅದರ ರಸವನ್ನು ಬಾಲಕನ ಮುಖದಲ್ಲಿ ಹಾಕುವನು. ಮತ್ತು ಅದರ ರುಚಿಯನ್ನು ತೋರಿಸಿಕೊಡುವನು ॥೨೦॥ ಈ ರುಚಿಯು ಆ ಬಾಲಕನಿಗೆ ಒಮ್ಮೆ ಹತ್ತಲು ಅವನು ಅದೇ ಫಲವನ್ನು ಹಗಲು ರಾತ್ರಿ ಚೀಪುತ್ತ ಕುಳಿತುಕೊಳ್ಳುವನು. ಅದರಂತೆ ನಮಗೂ ಸಹ ಶ್ರೀಜನಾರ್ದನ ಸ್ವಾಮಿಯವರು ಶ್ರೀಭಾಗವತದ ರುಚಿಯನ್ನು ಹಚ್ಚಿರುವರು ॥೨೧॥ ಈ ರುಚಿಯು ನಮಗೆ ಎಷ್ಟೊಂದು ಬೆಳೆದು ನಿಂತಿದೆ ಎಂದರೆ ನಾನು ಒಂದುವೇಳೆ ಆ ರುಚಿಯನ್ನು ಬಿಟ್ಟುಕೊಟ್ಟರೂ ರುಚಿಯು ನನಗೆ ಬಿಡಲಾರದಂತೆ ತಾನು ಅಂಟಿಕೊಂಡಿದೆ. ಇದು ಆಶ್ಚರ್ಯವಲ್ಲವೇ? ॥೨೨॥ ಆ ರುಚಿಯು ನನ್ನನ್ನು ನುಂಗಿಬಿಟ್ಟಿದೆ. ಆದ್ದರಿಂದ ಅದರಲ್ಲಿ ''ನಾನು'' ಎಂಬುವುದು ಇಲ್ಲದಾಗಿ ಹೋಗಿದೆ. ಆ ರುಚಿಗೆ ಎಷ್ಟೊಂದು ಪೂರವು ಬಂದಿದೆ ಎಂದರೆ ಅದು ನನ್ನ ಒಳಹೊರಗೆ ತುಂಬಿ ಎಲ್ಲಿಯೂ ಬರಿದಾದ ಸ್ಥಳವನ್ನು ಇಟ್ಟಿರುವುದಿಲ್ಲ ॥೨೩॥ ಇದು ಶ್ರೀಶುಕಾಚಾರ್ಯರ ಮುಖದಲ್ಲಿನ ಭಾಗವತರೂಪ ಉತ್ಕೃಷ್ಟ ಫಲವಾಗಿದೆ. ಇದು ಸಿಹಿಯಾಗಿ ರಸಾಳವಾಗಿದೆ. ಇದು ಸಿಪ್ಪೆ ಬೀಜ ರಹಿತವಾದ ಸಂಪೂರ್ಣವಾಗಿ ಸಿಹಿಯಾಗಿದೆ ॥೨೪॥ ಹೀಗೆ ಈ ಭಾಗವತದ ರುಚಿಯನ್ನು ಶ್ರೀಕೃಷ್ಣನು ತನ್ನ ತುಂಬಿದ ಪ್ರೀತಿಯಿಂದ ಅತಿ ಉತ್ತಮ ಪ್ರಕಾರವಾಗಿ ಉದ್ಧವನಿಗೆ ಕೊಟ್ಟು ನೆಕ್ಕಿಸಿದನು ॥೨೫॥

ಕರಿತಾ ಮಾರ್ಝೀ ಭಜನ । ಧರಿತಾ ಮಾರ್ಝೀ ಮೂರ್ತೀಚೇ ಧ್ಯಾನ । ಸಮಾಧಿಪರ್ಯಂತ ಸಾಧನ । ಉದ್ಧವಾಸೀ ಸಂಪೂರ್ಣ ಸಾಂಗಿತಲೇ ।೨೬॥ ತೇ ಕೃಷ್ಣಾಮುಖೀಚೀ ಮಾತೂ । ಐಕೋನಿ ಚೌದಾವ್ಯಾ ಅಧ್ಯಾಯಾಂತೂ । ಉದ್ಧವ ಹರಿಖಿಲಾ ಅದ್ಭುತೂ । ಮಾಝ್ಝಾ ನಿಜಸ್ವಾರ್ಥೂ ಫಾವಲಾ ।೨೭॥ ಮಜ ಕೃಷ್ಣಮೂರ್ತೀಚೇ ಧ್ಯಾನ । ಸಹಜೇ ಸದಾ ಅಸೇ ಜಾಣ । ತೇಣೇಂಚ ಹೋಯ ಸಮಾಧಿ ಸಮಾಧಾನ । ತರೀ ಕಾ ಪ್ರಶ್ನ ಕರೂ ಆತಾ ।೨೮॥ ಐಕೋನಿ ಚೌದಾವಾ ಅಧ್ಯಾಯೋ । ಝಾಲಾ ಉದ್ಧವಾಸೀ ಹಾ ದೃಢ ಭಾವೋ । ಹೇ ದೇಖೋನಿ ಸ್ವಯೇ ದೇವೋ । ಪುಢೀಲ ಅಭಿಪ್ರಾವೋ ಸೂಚಿತೂ ।೨೯॥ ದೃಢ ವಿಶ್ವಾಸೇಸೀ ಜಾಣ । ಕರಿತಾ ಮಾರ್ಝೀ ಭಜನ ಧ್ಯಾನ । ಪುಢಾ ಉಪಜೇ ಸಿದ್ಧೀಚೇ ವಿಘ್ನ । ತೇ ಅರ್ಥೀ ಶ್ರೀಕೃಷ್ಣ ಉಪದೇಶೀ ।೩೦॥ ಪಂಧರಾವೇ ಅಧ್ಯಾಯೀ ನಿರೂಪಣ । ಭಕ್ತೀ ಮಾರ್ಝೀ ಕರಿತಾ ಭಜನ । ಅವಶ್ಯ ಸಿದ್ಧಿ ಉಪಜತೀ ಜಾಣ । ತ್ಯಾ ತ್ಯಾಗವೀ ವಿಘ್ನ ಮ್ಹಣೋನಿ ।೩೧॥

ಶ್ರೀಭಗವಾನುವಾಚ :-

ಜಿತೇಂದ್ರಿಯಸ್ಯ ಯುಕ್ತಸ್ಯ ಜಿತಶ್ವಾಸಸ್ಯ ಯೋಗಿನಃ । ಮಯಿ ಧಾರಯತಶ್ಚೇತ ಉಪತಿಷ್ಠಂತಿ ಸಿದ್ಧಯಃ ।೧॥

ಅರ್ಥ :- ಭಗವಾನ ಶ್ರೀಕೃಷ್ಣನು ಹೇಳಿದನು ; ಪ್ರಿಯ ಉದ್ಧವಾ, ಸಾಧಕನು ಇಂದ್ರಿಯ, ಪ್ರಾಣ ಮತ್ತು ಮನವನ್ನು ತನ್ನ ಅಂಕಿತವನ್ನಾಗಿ ಮಾಡಿ ಚಿತ್ತವನ್ನು ನನ್ನಲ್ಲಿ ಸ್ಥಿರಮಾಡಿ ನನ್ನದೇ ಧಾರಣ ಮಾಡಲು, ಆಗ ಅನೇಕ ಪ್ರಕಾರದ ಸಿದ್ಧಿಗಳು ಪ್ರಕಟವಾಗುವುವು.

ಪ್ರಾಣಾಪಾನಜಯೋ ಜಯಾಪಾಸೀ । ಇಂದ್ರಿಯಜಯೋ ಅಸೇ ಜ್ಯಾಸೀ । ಯಾವರೀ ಉಲ್ಹಾಸ ಮದ್ಭಕ್ತೀಸೀ । ಚಿತ್ತ ಅಹರ್ನಿಶೀ ಮದ್ಯುಕ್ತ ।೩೨॥ ಉದ್ಧವಾ ಗಾ ತ್ಯಾಚ್ಯಾ ಠಾಯೀ । ಅನಿವಾರ ಸಿದ್ಧೀ ಉಪಜತೀ ಪಾಹೀ । ಯೇ ಅರ್ಥೀ ಸಂದೇಹ ನಾಹೀ । ಜೇ ಜೇ ಸಮಯೀ ಜೇ ಇಚ್ಛೀ ।೩೩॥ ಐಸೇ ಉದ್ಧವೇ ಐಕತಾ । ಚಮತ್ಕಾರೂ ಝಾಲಾ ಚಿತ್ತಾ । ಸಮೂಳ ಸಿದ್ಧೀಂಚೀ ಕಥಾ । ಶ್ರೀಕೃಷ್ಣನಾಥಾ ಪುಸೋ ಪಾ ।೩೪॥

ಉದ್ಧವ ಉವಾಚ :-

ಕಯಾ ಧಾರಣಯಾ ಕಾ ಸ್ವಿತ್ಕಥಂ ವ್ಪಾಸಿದ್ಧಿರಚ್ಯುತ । ಕತಿ ವಾ ಸಿದ್ಧಯೋ ಬ್ರೂಹಿಯೋಗಿನಾಂ ಸಿದ್ಧಿದೋ ಭವಾನ್ ।೨॥

ಅರ್ಥ :- ಉದ್ಧವನು ಹೇಳಿದನು ; ಹೇ ಅಚ್ಯುತನೇ, ಯಾವ ಧಾರಣೆಯಿಂದ ಯಾವ ಪ್ರಕಾರದ ಸಿದ್ಧಿಗಳು ಪ್ರಾಪ್ತವಾಗುವುವು? ಮತ್ತು ಅವುಗಳ ಸಂಖ್ಯೆಗಳೆಷ್ಟು? ನೀವೆ ಯೋಗಿಗಳಿಗೆ ಸಿದ್ಧಿಗಳನ್ನು ಕೊಡುತ್ತಿರುವಿರಿ. ಆದಕ್ಕಾಗಿ ಅವುಗಳ ವರ್ಣನೆಯನ್ನು ಮಾಡಿರಿ.

ಕೋಣ್ಯಾ ಧಾರಣಾ ಕೋಣ ಸಿದ್ಧೀ । ತೇ ಸಾಂಗಾವೀ ವಿಧಾನವಿಧೀ । ಸಂಖ್ಯಾ ಕಿತೀ ಸಕಳ ಸಿದ್ಧೀ । ತೇಹೀ ಕೃಪಾನಿಧೀ ಸಾಂಗಿಜೇ ।೩೫॥ ಯಾ ಸಕಳ ಸಿದ್ಧೀಂಚೀ ಕಥಾ । ತೂ ಏಕ ಜಾಣತಾ ತತ್ತ್ವತಾ । ತೇ ಮಜ ಸಾಂಗೀಜೇ ಜೇ ಅಚ್ಯುತಾ । ತೂ ಸಿದ್ಧಿದಾತಾ ಯೋಗಿಯಾ ।೩೬॥

ತನ್ನ ಭಜನೆಯನ್ನು ಮತ್ತು ತನ್ನ ಮೂರ್ತಿಯ ಧ್ಯಾನವನ್ನು ಮಾಡುತ್ತಿರಲು ಸಮಾಧಿಯವರೆಗೆ ಇರುವ ಸರ್ವ ಸಾಧನೆಗಳನ್ನು ಶ್ರೀಕೃಷ್ಣನು ಉದ್ಧವನಿಗೆ ಹೇಳಿದನು ।೨೬॥ ಈ ಯಾವ ಶ್ರೀಕೃಷ್ಣನ ಮುಖದ ಅಮೃತಮಯ ಶಬ್ದಗಳನ್ನು ಹದಿನಾಲ್ಕನೆಯ ಅಧ್ಯಾಯದಲ್ಲಿ ಶ್ರಣವನ್ನು ಮಾಡಿ ಉದ್ಧವನಿಗೆ ಅಲೌಕಿಕ ಆನಂದವು ಪ್ರಾಪ್ತವಾಯಿತು. ಮತ್ತು ನನ್ನ ಕಲ್ಯಾಣವು ನನ್ನ ಕೈಯಲ್ಲಿಯೇ ಇರುವುದು ಎಂದು ಆತನಿಗೆ ತಿಳಿಯಿತು ।೨೭॥ ಉದ್ಧವನು ಈಗ ಹೀಗೆ ವಿಚಾರವನ್ನು ಮಾಡಿದನು ; ನನಗೆ ಮಾತ್ರ ಶ್ರೀಕೃಷ್ಣನ ಧ್ಯಾನವು ಸಹಜವಾಗಿಯೇ ಸಾಧಿಸುತ್ತಿದೆ. ಇದರಿಂದಲೇ ಸಮಾಧಿಯವರೆಗೆ ಸುಖಸಮಾಧಾನವು ದೊರೆಯುವಂತೆ ಇದ್ದರೆ ಪುನಃ ಈಗ ಬೇರೆ ಪ್ರಶ್ನೆಯಾದರೂ ಏಕೆ ಮಾಡಬೇಕು? ।೨೮॥ ಹದಿನಾಲ್ಕನೆಯ ಅಧ್ಯಾಯದ ಶ್ರವಣನ್ನು ಮಾಡಿ ಉದ್ಧವನ ಮನಸ್ಸಿನಲ್ಲಿ ಹೀಗೆ ದೃಢವಾದ ನಿಶ್ಚಯವಾಯಿತು. ಇದನ್ನರಿತ ದೇವನು ಸ್ವತಃ ತಾನೇ ಮುಂದಿನ ಭಾವಾರ್ಥವನ್ನು ಸೂಚಿಸಿದನು ।೨೯॥ ದೃಢವಾದ ವಿಶ್ವಾಸವನ್ನಿಟ್ಟು ಭಜನೆ ಮತ್ತು ಧ್ಯಾನವನ್ನು ಮಾಡುವುದರಿಂದ ಮುಂದೆ ಸಿದ್ಧಿಗಳ ವಿಘ್ನವು ಉತ್ಪನ್ನವಾಗುವುದು. ಈ ವಿಷಯಕ್ಕೆ ಶ್ರೀಕೃಷ್ಣನು ಉಪದೇಶವನ್ನು ಮಾಡುತ್ತಿರುವನು ।೩೦॥ ಪ್ರೇಮದಿಂದ ನನ್ನ ಭಜನೆಯನ್ನು ಮಾಡಲು ಅನೇಕ ಪ್ರಕಾರಗಳ ಸಿದ್ಧಿಗಳು ಪ್ರಾಪ್ತವಾಗುವುವು. ಆದರೆ ಅವು ವಿಘ್ನಗಳಾಗಿವೆ ಎಂದು ತಿಳಿದು ಭಕ್ತರು ಅವುಗಳನ್ನು ತ್ಯಜಿಸಬೇಕು. ಹದಿನೈದನೆಯ ಅಧ್ಯಾಯದಲ್ಲಿ ಇದಕ್ಕಾಗಿಯೇ ನಿರೂಪಣೆಯನ್ನು ಶ್ರೀಕೃಷ್ಣನು ಮಾಡುತ್ತಿರುವನು ।೩೧॥

ಯಾರು ಪ್ರಾಣಜಯವನ್ನು ಸಾಧಿಸಿರುವರೋ, ಅವರು ಇಂದ್ರಿಯಗಳ ನಿಗ್ರಹವನ್ನು ಮಾಡಬಲ್ಲರು. ಇದಲ್ಲದೇ ಹಗಲು ರಾತ್ರಿ ಚಿತ್ತವನ್ನು ನನ್ನಲ್ಲಿಯೇ ಇಟ್ಟು ಭಕ್ತಿವಿಷಯಕ್ಕೆ ಉಲ್ಲಸಿತರಾಗುವರು ।೩೨॥ ಹೇ ಉದ್ಧವಾ, ಇಂತಹವರಲ್ಲಿ ಅನಿವಾರ್ಯವಾಗಿ ಸಿದ್ಧಿಗಳು ಪ್ರಾಪ್ತವಾಗುವುವು. ಅವರು ಯಾವ ಯಾವ ಇಚ್ಛೆಗಳನ್ನು ಮಾಡುವರೋ, ಅವು ಎಲ್ಲವೂ ಪೂರ್ಣವಾಗುವುವು. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ ।೩೩॥ ಉದ್ಧವನಿಗೆ ಇದನ್ನು ಕೇಳಿ ಮನಸ್ಸಿಗೆ ಬಹು ಚಮತ್ಕಾರವಾಯಿತು. ಅದಕ್ಕಾಗಿ ಆತನು ಎಲ್ಲ ಸಿದ್ಧಿಗಳ ಕಥೆಯನ್ನು ಶ್ರೀಕೃಷ್ಣನಿಗೆ ಕೇಳಬೇಕೆಂದನು ।೩೪॥

ಯಾವ ಧಾರಣೆಯನ್ನು ಹಿಡಿಯಲು ಯಾವ ಸಿದ್ಧಿಯು ಪ್ರಾಪ್ತವಾಗುವುದು? ಅದರ ವಿಧಾನವನ್ನು ಹೇಳಿರಿ. ಹೇ ಕೃಪಾನಿಧಿಯೇ, ಸರ್ವ ಸಿದ್ಧಿಗಳ ಸಂಖ್ಯೆ ಎಷ್ಟಿವೆ? ಇದನ್ನು ಹೇಳಿರಿ ।೩೫॥ ಏಕೆಂದರೆ ಹೇ ಅಚ್ಯುತನೇ, ಈ ಯಾವ ಸರ್ವ ಸಿದ್ಧಿಗಳ ಕಥೆಯನ್ನು ತಿಳಿಯುವವ ನಿಜವಾಗಿಯೂ ನೀನೊಬ್ಬನೇ ಇರುವೆ. ಯೋಗಿಗಳಿಗೆ ನೀನೇ ಸಿದ್ಧಿಗಳನ್ನು ಕೊಡುವೆ. ಅದಕ್ಕಾಗಿ ಆ ಸಿದ್ಧಿಗಳ ಬಗ್ಗೆ ನನಗೀಗ ಹೇಳು ।೩೬॥

ಶ್ರೀ ಭಗವಾನುವಾಚ :-

ಸಿದ್ಧಯೋಽಷ್ಟಾದಶ ಪ್ರೋಕ್ತಾ ಧಾರಣಾ ಯೋಗಪಾರಗೈಃ । ತಾಸಾಮಷ್ಟೌ ಮತ್ಪ್ರಧಾನಾ ದಶೈವ ಗುಣಹೇತವಃ ।೩॥

ಅರ್ಥ :- ಭಗವಾನ ಶ್ರೀಕೃಷ್ಣನು ಹೇಳಿದನು; ಯೋಗದಲ್ಲಿ ನಿಷ್ಣಾತನಾಗಿರುವ ವ್ಯಕ್ತಿಯು ಹದಿನೆಂಟು ಸಿದ್ಧಿಗಳು ಮತ್ತು ಹದಿನೆಂಟು ಧಾರಣೆಗಳು ಎಂದು ಹೇಳಿರುವನು. ಅವುಗಳಲ್ಲಿ ಎಂಟು ಸಿದ್ಧಿಗಳು ಪ್ರಧಾನವಾಗಿರುವುವು. ಅವು ನನ್ನ ಆಶ್ರಯದಲ್ಲಿರುವುವು. ಮತ್ತು ಸತ್ವಗುಣದ ಉತ್ಕರ್ಷದಿಂದ ಪ್ರಾಪ್ತವಾಗುವ ಹತ್ತು ಸಿದ್ಧಿಗಳಿರುವುವು.

ಸಿದ್ಧಿ ಅಷ್ಟಾದಶ ಜಾಣ । ತ್ಯಾಂಚೀ ಧಾರಣಾ ಭಿನ್ನ ಭಿನ್ನ । ಐಸೇ ಬೋಲಿಲೇ ಯೋಗಜ್ಞ । ಯೋಗಸಂಪನ್ನ ಮಹಾಸಿದ್ಧ ।೩೭॥ ಯಾ ನಾಂವ ಗಾ ಸಿದ್ಧಿ ಸಮಸ್ತಾ । ಯಾಂತ ಅಷ್ಟ ಮಹಾಸಿದ್ಧಿ ವಿಖ್ಯಾತಾ । ತ್ಯಾ ಮಾಝೇ ಸ್ವರೂಪೀ ಸ್ವರೂಪಸ್ಥಿತಾ । ಆಣಿಕಾಸೀ ತತ್ತ್ವತಾ ತ್ಯಾ ನಾಹೀ ।೩೮॥ ಮನಸಾ ವಾಚಾ ಕರ್ಮಣಾ ಜಾಣ । ವಿಸರೋನಿ ದೇಹಾಚೇ ದೇಹಪಣ । ಮಾಝೇನಿ ಸ್ವರೂಪೇ ಅತಿಸಂಪನ್ನ । ಚೈತನ್ಯಘನ ಜೋ ಝಾಲಾ ।೩೯॥ ತ್ಯಾಪಾಶೀ ಯಾ ಸಿದ್ಧಿ ಜಾಣ । ಉಭ್ಯಾ ಅಸತೀ ಹಾತ ಜೋಡೂನ । ಪರೀ ತೋ ನ ಪಾಹೇ ಥುಂಕೋನ । ನಿಚಾಡ ಜಾಣ ಯಾಪರೀ ॥೪೦॥ ಇತರ ದಹಾ ಸಿದ್ಧೀಂಚೀ ಕಥಾ । ಜ್ಯಾ ಸತ್ವಗುಣೇ ಗುಣಭೂತಾ । ಸಾಧಕ ಶುದ್ಧಸತ್ವಾತ್ಮಾ ಹೋತಾ । ತ್ಯಾಪಾಶೀ ಸರ್ವಥಾ ಪ್ರಕಟತೀ ॥೪೧॥ ಅಷ್ಟ ಮಹಾಸಿದ್ಧೀಂಚೀ ಕಥಾ । ತುಜ ಮೀ ಸಾಂಗೇನ ತತ್ತ್ವತಾ। ಜ್ಯಾ ಮಾಝೇ ಸ್ವರೂಪೀ ಸ್ವಭಾವತಾ । ಅಸತಿ ವರ್ತತಾ ಅಹರ್ನಿಶೀ ।೪೨॥

ಅಣಿಮಾ ಮಹಿಮಾ ಮೂರ್ತೇರ್ಲಘಿಮಾ ಪ್ರಾಪ್ತಿರಿಂದ್ರಿಯೈಃ । ಪ್ರಾಕಾಮ್ಯಂ ಶ್ರುತದೃಷ್ಟೇಷು ಶಕ್ತಿಪ್ರೇರಣಮೀಶಿತಾ ।೪॥
ಗುಣೇಷ್ವಸಂಗೋ ವಶಿತಾ ಯತ್ಕಾಮಸ್ತದವಸ್ಯತಿ । ಏತಾ ಮೇ ಸಿದ್ಧಯಃ ಸೌಮ್ಯ ಅಷ್ಟಾವೌತ್ಪತ್ತಿಕಾ ಮತಾಃ ।೫॥

ಅರ್ಥ :- ಅಣಿಮಾ, ಮಹಿಮಾ ಮತ್ತು ಲಘಿಮಾ ಈ ದೇಹದ ಮೂರುಸಿದ್ಧಿಗಳಿರುವವು. ಪ್ರಾಪ್ತಿ ನಾಮದ ನಾಲ್ಕನೆಯ ಸಿದ್ಧಿಯು ಸರ್ವ ಪ್ರಾಣಿಗಳ ಇಂದ್ರಿಯಗಳಲ್ಲಿ ಆಯಾ ಇಂದ್ರಿಯಗಳ ಅಧಿಷ್ಠಾನಗಳಲ್ಲಿ ದೇವರೂಪದಿಂದ ಸಂಬಧವಾಗುವುದು. ಶ್ರುತ ಎಂದರೆ ಪಾರಲೌಕಿಕ ಮತ್ತು ದೃಷ್ಟ ಎಂದರೆ ದರ್ಶನಕ್ಕೆ ಯೋಗ್ಯ. ಆದರೆ ಭೂಪ್ರದೇಶದಲ್ಲಿ ಗುಪ್ತವಾಗಿರುವ ಸರ್ವ ಪದಾರ್ಥಗಳ ಭೋಗದರ್ಶನ ಸಾಮರ್ಥ್ಯ ಇದು ''ಪ್ರಕಾಶ್ಯ'' ಎಂಬ ಐದನೆಯ ಸಿದ್ಧಿಯು. ಮಾಯಾ ಮತ್ತು ತದಂಶಭೂತ ಇತರ ಶಕ್ತಿಗಳಿಗೆ ಪ್ರೇರಿಸುವುದು ಇದು ''ಇತಿಶಾ'' ನಾಮದ ಆರನೆಯ ಸಿದ್ಧಿಯಾಗಿರುವುದು. ವಿಷಯ ಉಪಭೋಗಗಲ್ಲಿ ಆಸಕ್ತನಾಗದಿರುವಿಕೆ ಇದು ''ವಶಿತಾ'' ನಾಮದ ಏಳನೆಯ ಸಿದ್ಧಿಯು. ಯಾವ ಯಾವ ಸುಖದ ಇಚ್ಛೆಯನ್ನು ಮಾಡಲು ಅದರ ಸೀಮೆವರೆಗೂ ಮುಟ್ಟುವಿಕೆ ಇದು ''ಕಾಮಾವಸಾಯಿತಾ'' ನಾಮದ ಎಂಟನೆಯ ಸಿದ್ಧಿಯಾಗಿದೆ. ಈ ಎಂಟೂ ಸಿದ್ಧಿಗಳು ನನ್ನಲ್ಲಿರುವುವು. ನಾನು ಕೊಟ್ಟವರಲ್ಲಿ ಅಂಶತಃ ಪ್ರಾಪ್ತವಾಗುವುದು.

ಅಣಿಮಾ ಮಹಿಮಾ ಲಘಿಮಾ ಸ್ಥಿತೀ । ಯಾ ತಿನ್ಹೀ ದೇಹಸಿದ್ಧೀಚೇ ಪ್ರಾಪ್ತೀ । ಪ್ರಾಪ್ತಿರಿಂದ್ರಿಯೈಃ ಜೇ ವದಂತೀ । ತೇ ಜಾಣ ಚೌಥೀ ಮಹಾಸಿದ್ಧೀ ।೪೩॥ ಪ್ರಕಾಶ್ಯ ಶ್ರುತದೃಷ್ಟತಾ । ತೇ ಪಾಂಚವೀ ಸಿದ್ಧಿ ಗಾ ಸರ್ವಥಾ । ಶಕ್ತಿ ಪ್ರೇರಣಾ ಈಶಿತಾ । ಹೇ ಜಾಣ ತತ್ತ್ವತಾ ಸಹಾವೀ ಸಿದ್ಧಿ ।೪೪॥ ಮಾಝೇ ಧರ್ಮ ಜೇಥ ವಶ ಹೋತೀ । ತೇ ವಶಿತಾ ಬೋಲಿಜೇ ಸಿದ್ಧಾಂತೀ । ತೇ ಸಾತವೀ ಸಿದ್ಧಿ ವದಂತೀ । ಜಾಣ ನಿಶ್ಚಿತೀ ಉದ್ಧವಾ ॥೪೫॥

ಶ್ರೀಕೃಷ್ಣನು ಹೇಳಿದನು; ಒಟ್ಟಿನಲ್ಲಿ ಹದಿನೆಂಟು ಸಿದ್ಧಿಗಳು ಇರುವುವು. ಅವುಗಳಲ್ಲಿ ಧಾರಣೆಗಳೂ ಕೂಡ ಭಿನ್ನ ಭಿನ್ನವಾಗಿರುವುವು. ಹೀಗೆಂದು ಯೋಗಬಲ್ಲವರು, ಮಹಾ ಸಿದ್ಧರಾದ ಯೋಗ ಸಂಪನ್ನರು ಹೇಳುವರು ।೩೭॥ ಇವುಳಿಗೆಲ್ಲ ಸಿದ್ಧಿಗಳೆಂದು ಕರೆಯುವರು. ಇವುಗಳಲ್ಲಿ ಎಂಟು ಸಿದ್ಧಿಗಳು ಅತ್ಯಂತ ಶ್ರೇಷ್ಠವಾಗಿದ್ದು ಇವು ಪ್ರಸಿದ್ಧವಾಗಿರುವುವು. ನನ್ನ ಸ್ವರೂಪದಲ್ಲಿ ಯಾರು ಸ್ಥಿರವಾಗಿರುವರೋ ಅವರಿಗೆ ಇವು ಪ್ರಾಪ್ತವಾಗುವುವು. ಇತರರಿಗೆ ಇವು ಎಂದಿಗೂ ಪ್ರಾಪ್ತವಾಗಲಾರವು ।೩೮॥ ಯಾರು ಮನಸ್ಸಿನಿಂದ, ವಾಣಿಯಿಂದ ಮತ್ತು ಕರ್ಮದಿಂದ ದೇಹದ ದೇಹತ್ವವನ್ನು ಮರೆತು, ನನ್ನ ಸ್ವರೂಪದಲ್ಲಿ ರಮಮಾಣನಾಗಿ ಜ್ಞಾನರೂಪನಾಗುವನೋ ।೩೯॥ ಆತನಲ್ಲಿ ಈ ಯಾವ ಸಿದ್ಧಿಗಳು ಕೈಜೋಡಿಸಿಕೊಂಡು ನಿಂತುಕೊಳ್ಳುವುವು. ಆದರೆ ಭಕ್ತರು ಅವರತ್ತ ಕಣ್ಣೆತ್ತಿ ನೋಡುವುದಿಲ್ಲ. ಇಷ್ಟೊಂದು ಇವರು ನಿಃಸ್ಪೃಹರಾಗಿರುವರು ॥೪೦॥ ಉಳಿದ ಹತ್ತು ಸಿದ್ಧಿಗಳು ಸತ್ವಗುಣಯುಕ್ತರಾದ ಮತ್ತು ಶುದ್ಧ ಸತ್ವಗುಣಸಂಪನ್ನರಾದ ಸಾಧಕರಲ್ಲಿ ಪೂರ್ಣವಾಗಿ ಪ್ರಕಟವಾಗುವುವು ॥೪೧॥ ಈ ಯಾವ ಎಂಟು ಮಹಾಸಿದ್ಧಿಗಳು ಸಹಜವಾಗಿ ನನ್ನ ಸ್ವರೂಪದಲ್ಲಿ ಹಗಲು ರಾತ್ರಿ ವರ್ತಿಸುತ್ತಿರುವುವು. ಇವುಗಳ ಕಥೆಯನ್ನು ಈಗ ನಾನು ನಿನಗೆ ಹೇಳುವೆನು ।೪೨॥

ಅಣಿಮಾ, ಮಹಿಮಾ ಮತ್ತು ಲಘಿಮಾ ಇವು ಮೂರು ದೇಹದ ಸಿದ್ಧಿಯಾಗಿರುವುವು. ಪ್ರಾಪ್ತೀ ನಾಮದ ನಾಲ್ಕನೆಯ ಮಹಾಸಿದ್ಧಿಯು ಇಂದ್ರಿಯಗಳದ್ದಾಗಿರುವುದು ।೪೩॥ ಪರಲೋಕದ ಅದೃಶ್ಯ ವಿಷಯಗಳ ಜ್ಞಾನವನ್ನು ಪ್ರಾಪ್ತಮಾಡಿಕೊಡುವ ''ಪ್ರಾಕಾಶ್ಯ''ನಾಮದ ಮಹಾಸಿದ್ಧಿಯು ಐದನೆಯದ್ದಾಗಿದೆ. ಶಕ್ತಿಗೆ ಪ್ರೇರಣೆ ಮಾಡುವ ''ಈಶಿತಾ'' ಎಂಬುವುದು ಆರನೆಯ ಮಹಾಸಿದ್ಧಿಯಾಗಿದೆ ।೪೪॥ ಯಾವುದರಿಂದ ನನ್ನ ಧರ್ಮವು ಪ್ರಾಪ್ತವಾಗುವುದೋ, ಅದಕ್ಕೆ ಸಿದ್ಧಾಂತಿ ಜನರು ''ವಶಿತಾ'' ಎಂದು ಹೆಸರು ಕೊಟ್ಟಿರುವರು. ಹೇ ಉದ್ಧವಾ, ಇದು ಏಳನೆಯ ಸಿದ್ಧಿಯಾಗಿರುವುದು. ಇದನ್ನು ನಿಶ್ಚಯವಾಗಿ ತಿಳಿದುಕೋ ।೪೫॥

ತ್ರಿಲೋಕೀ ಭೋಗ ಜೋ ನಿರುಪಮು । ತೋ ನ ಕರಿತಾ ಪರಿಶ್ರಮು । ಇಚ್ಛಾಮಾತ್ರೇ ಉತ್ತಮೋತ್ತಮು । ಭೋಗ ಸುಗಮ ಹೋ ಲಾಗೇ ।।೪೬।। ("ಯತ್ಕಾಮಸ್ತದವಸ್ಯತಿ") ಇಚ್ಛಿಲ್ಯಾ ಕಾಮಸುಖಾಚೀ ಪ್ರಾಪ್ತೀ । ತ್ರಿಭುವನೀಂಚೀ ಭೋಗಸಂಪತ್ತೀ । ಏಕೇಚ ಕಾಳೇ ಅವಚಿತೀ । ತೇ ಜಾಣ ಪಾ ಖ್ಯಾತೀ ಆಠವೀ ಸಿದ್ಧೀ ।।೪೭।। ಯಾ ಅಷ್ಟಮಹಾಸಿದ್ಧೀಂಚೀ ರಾಶೀ । ಸ್ವಭಾವೇ ಅಸೇ ಮಜಪಾಶೀ । ಸಾಧಕ ಶಿಣತಾ ಪ್ರಯಾಸೀ । ಏಕಾದೀ ಕೋಣಾಸೀ ಉಪತಿಷ್ಠೇ ।।೪೮।। ಹೇ ಮಹಾಸಿದ್ಧೀಂಚೀ ವ್ಯುತ್ಪತ್ತೀ । ಇತರ ದಹಾ ಜ್ಯಾ ಬೋಲಿಜೇತೀ । ತ್ಯಾಹೀ ಸಾಂಗೇನ ತುಜಪ್ರತೀ । ಯಥಾನಿಗುತೀ ಉದ್ಧವಾ ।।೪೯।।

ಅನೂರ್ಮಿಮತ್ತ್ವಂ ದೇಹೇಽಸ್ಮಿನ್ ದೂರಶ್ರವಣ ದರ್ಶನಂ । ಮನೋಜವಃ ಕಾಮರೂಪಂ ಪರಕಾಯಪ್ರವೇಶನಮ್ ।।೬।।
ಸ್ವಚ್ಛಂದಮೃತ್ಯುರ್ದೇವಾನಾಂ ಸಹಕ್ರೀಡಾನುದರ್ಶನಂ । ಯಥಾಸಂಕಲ್ಪಸಂಸಿದ್ಧಿರಾಜ್ಞಾಽಪ್ರತಿಹತಾ ಗತಿಃ ।।೭।।

ಅರ್ಥ :- ಇವುಗಳ ವ್ಯತಿರಿಕ್ತವಾಗಿ ಇನ್ನೂ ಕೆಲವು ಸಿದ್ಧಿಗಳಿರುವುವು. ಶರೀರದಲ್ಲಿ ಹಸಿವೆ, ನೀರಡಿಕೆ ಆಗದಿರುವಿಕೆ, ಅತಿದೂರದ ಶಬ್ದಗಳ ಶ್ರವಣ ಮಾಡುವಿಕೆ ಹಾಗೂ ವಸ್ತುಗಳ ದರ್ಶನವಾಗುವಿಕೆ, ಮನೋವೇಗದಿಂದ ದೇಹವನ್ನು ಚಲಿಸುವಿಕೆ, ಇಷ್ಟಸ್ವರೂಪದ ಪ್ರಾಪ್ತಿಯಾಗುವಿಕೆ, ಪರಕಾಯ ಪ್ರವೇಶ, ತನ್ನ ಇಚ್ಛೆಯಂತೆ ಶರೀರವನ್ನು ಬಿಡುವಿಕೆ, ದೇವ-ಅಪ್ಸರೆಯರ ಕ್ರೀಡೆಗಳನ್ನು ನೋಡುವಿಕೆ, ಸಂಕಲ್ಪದಂತೆ ವಸ್ತುಗಳ ಪ್ರಾಪ್ತಿಯಾಗುವಿಕೆ ಮತ್ತು ಆಶೆಯ ಗತಿಯು ಎಲ್ಲಿಯೂ ಕುಂಠಿತವಾಗದಂತೆ ಹೀಗೆ ಈ ಯಾವ ಹತ್ತು ಸಿದ್ಧಿಗಳು ಸತ್ವಗುಣದ ವಿಶೇಷ ವಿಕಾಸಗಳಿಂದ ಪ್ರಾಪ್ತವಾಗುವುವು.

ದೇಹೀ ಬಾಧಿತೀ ನಾ ಊರ್ಮಿ ಸಾಹೀ । ತೇ ಅನೂರ್ಮಿಸಿದ್ಧಿ ಪಹಿಲೀ ಪಾಹೀ । ದೂರಲೀ ವಾಚಾ ಐಕೇ ಠಾಯೀ । ದೂರಶ್ರವಣನವಾಈ ದುಸರೀ ಸಿದ್ಧೀ ।।೫೦।। ತ್ರಿಲೋಕೀಂಚಾ ಸೋಹಳಾ । ಬೈಸಲೇ ಠಾಯೀ ದೇಖೇ ಡೋಳಾ । ಹೇ ತಿಸರೀ ಸಿದ್ಧೀಚೀ ಲೀಲಾ । ದೂರದರ್ಶನಕಳಾ ತೀ ನಾಂವ ।।೫೧।। ಮನೋಜವಸಿದ್ಧಿ ಐಶೀ ಆಹೇ । ಕಲ್ಪಿಲ್ಯಾ ಠಾಯಾಸೀ ಪಾಹೇ । ಮನೋವೇಗೇ ಶರೀರ ಜಾಯೇ । ಚೌಥೀ ಹೋಯೇ ಹೇ ಸಿದ್ಧೀ ।।೫೨।। ಕಾಮರೂಪ ಸಿದ್ಧೀಚೀ ಪರೀ । ಜೈಶಿಯಾ ರೂಪಾಚೀ ಕಾಮನಾ ಕರೀ । ತೈಸೇ ರೂಪ ತತ್ಕಾಳ ಧರೀ । ಹೇ ಪಾಂಚವೀ ಖರೀ ಕಾಮನಾಸಿದ್ಧೀ ।।೫೩।। ಆಪುಲೇ ಶರೀರ ಠೇವೂನಿ ದೂರೀ । ಪರಶರೀರೀ ಪ್ರವೇಶ ಕರೀ । ಹೇ ಪರಕಾಯಪ್ರವೇಶ ಪರೀ । ಸಹಾವೀ ಸಾಜಿರೀ ಅತಿಸಿದ್ಧೀ ।।೫೪।। ಕಾಳಾಸೀ ವಶ್ಯ ನಾಹೀ ಹೋಣೇ । ಆಪುಲಿಯೇ ಇಚ್ಛೇನೇ ಮರಣೇ । ಹೇ ಸಾತವೀ ಸಿದ್ಧಿ ಜಾಣಣೇ । ಸ್ವಚ್ಛಂದಮರಣೇ ತೀ ನಾಂವ ।।೫೫।। ಸ್ವರ್ಗೀ ದೇವಾಂಚೇ ಜೇ ಕ್ರೀಡನ । ತ್ಯಾಂಚೇ ಹಾ ದೇಖೇ ದರ್ಶನ । ಸ್ವಯೇ ಕ್ರೀಡಾವಯಾ ಅಂಗವಣ । ತೇ ಸಿದ್ಧಿ ಜಾಣ ಆಠವೀ ।।೫೬।।

ಹೇ ಉದ್ಧವಾ, ತ್ರಿಭುವನದಲ್ಲಿರುವ ಉತ್ತಮ ಭೋಗಗಳು ಯಾವ ಪರಿಶ್ರಮವಿಲ್ಲದೇ ಕೇವಲ ತೀವ್ರ ಇಚ್ಛೆಯಿಂದ ಮಾತ್ರ ಪ್ರಾಪ್ತವಾಗುವುವು ।।೪೬।। ಈ ಪ್ರಕಾರವಾಗಿ ಇಚ್ಛಿಸಿದ ಸುಖದ ಪ್ರಾಪ್ತಿಯನ್ನು ಮಾಡಿಕೊಡುವ ಮತ್ತು ತ್ರಿಭುವನದಲ್ಲಿರುವ ಭೋಗಸಂಪತ್ತನ್ನು ಒಂದೇ ಕಾಲಕ್ಕೆ ಕೊಡುವ "ಖ್ಯಾತೀ" ಹೆಸರಿನ ಎಂಟನೆಯ ಮಹಾಸಿದ್ಧಿಯಾಗಿರುವುದು ।।೪೭।। ಈ ಯಾವ ಎಂಟು ಮಹಾಸಿದ್ಧಿಗಳ ರಾಶಿಯು ಸ್ವಭಾವತವಾಗಿಯೇ ನನ್ನ ಹತ್ತಿರ ಇರುವುವು. ಸಾಧಕರು ಅತಿಶಯವಾಗಿ ಪ್ರಯತ್ನ ಮಾಡಿದರೆ ಮಾತ್ರ ಅವರಲ್ಲಿ ಯಾರಿಗೋ ಒಬ್ಬರಿಗೆ ಪ್ರಾಪ್ತಿಯಾಗುವುದು ।।೪೮।। ಈ ಮಹಾಸಿದ್ಧಿಗಳ ಉತ್ಪತ್ತೀ ಮತ್ತು ಇತರ ಗೌಣಸಿದ್ಧಿಗಳ ಪ್ರಕಾರವನ್ನು ನಾನು ನಿನಗೆ ಕ್ರಮವಾಗಿ ಯೋಗ್ಯ ಪ್ರಕಾರದಿಂದ ಹೇಳುವೆನು. ಹೇ ಉದ್ಧವನೇ, ಅವುಗಳನ್ನು ನೀನು ಕೇಳು ।।೪೯।।

ಕ್ಷುಧೇ, ತೃಷೇ, ಶೋಕ, ಮೋಹ, ಜರಾ ಮತ್ತು ಮರಣ ಈ ಆರು ಪ್ರಕಾರಗಳ ಊರ್ಮಿಯು ದೇಹಕ್ಕೆ ಸ್ವಲ್ಪವೂ ಕೂಡ ಪೀಡೆಯನ್ನು ಕೊಡುವುದಿಲ್ಲ.ಇದು ಮೊದಲನೆಯ "ಅನೂರ್ಮಿಸಿದ್ಧೀ" ಯಾಗಿರುವುದು. ಕುಳಿತಲ್ಲಿಯೇ ದೂರದ ಭಾಷಣ ಕೇಳುವಿಕೆ ಇದು "ದೂರಶ್ರವಣ" ನಾಮದ ಎರಡನೆಯ ಅದ್ಭುತ ಸಿದ್ಧಿಯಾಗಿರುವುದು ।।೫೦।। ಮೂರೂ ಲೋಕದ ಅನೇಕ ಘಟನೆಗಳನ್ನು ಮನುಷ್ಯನು ಕುಳಿತಲ್ಲಿಯೇ ತನ್ನ ಕಣ್ಣುಗಳಿಂದ ನೋಡಬಲ್ಲನು. ಇದಕ್ಕೆ "ದೂರದರ್ಶನಕಳಾ" ಹೆಸರಿನ ಮೂರನೆಯ ಸಿದ್ಧಿಯಾಗಿರುವುದು ।।೫೧।। ಕಲ್ಪಿಸಿದ ಸ್ಥಳಕ್ಕೆ ಮನೋವೇಗದಿಂದ ಶರೀರವು ಹೋಗುವಿಕೆಯು ಇದು ನಾಲ್ಕನೆಯ ಸಿದ್ಧಿಯಾಗಿದ್ದು "ಮನೋಜಯ"ವೆಂದು ಇದರ ನಾಮವಾಗಿರುವುದು ।।೫೨।। ಕಾಮರೂಪ ಸಿದ್ಧಿಯ ಪ್ರಕಾರವು ಹೇಗಿದೆ ಎಂದರೆ, ಯಾವ ರೂಪದ ಇಚ್ಛೆಯು ಮನದಲ್ಲಿ ಮೂಡುವುದೋ, ಆ ರೂಪವನ್ನು ಕೂಡಲೇ ಧರಿಸಲು ಬರುವುದು. ಇದು ಐದನೆಯ "ಕಾಮನಾಸಿದ್ಧೀ" ಯಾಗಿರುವುದು ।।೫೩।। ತನ್ನ ಶರೀರವನ್ನು ದೂರವಿಟ್ಟು ಮನುಷ್ಯನು ಬೇರೆಯವರ ಶರೀರದಲ್ಲಿ ಪ್ರವೇಶ ಮಾಡಬಲ್ಲನು. ಇದು "ಪರಕಾಯಾಪ್ರವೇಶ" ಎಂಬ ಸಿದ್ಧಿಯಾಗಿರುವುದು. ಇದು ಉತ್ತಮವಾದ ಆರನೆಯ ಸಿದ್ಧಿಯಾಗಿರುವುದು ।।೫೪।। ಕಾಲನಿಗೆ ವಶನಾಗದೇ ತನ್ನ ಇಚ್ಛೆಯಂತೆ ದೇಹ ಬಿಡುವುದು ಇದು ಏಳನೆಯ ಸಿದ್ಧಿಯಾಗಿರುವುದು. ಇದಕ್ಕೆ "ಸ್ವಚ್ಛಂದಮರಣ" ಎಂದು ಹೇಳುವರು ।।೫೫।। ಸ್ವರ್ಗದಲ್ಲಿನ ದೇವತೆಗಳ ಕ್ರೀಡೆಗಳ ದರ್ಶನ ಪಡೆಯುವಿಕೆ ಮತ್ತು ಅಂತಹ ಕ್ರೀಡೆಗಳನ್ನು ತಾನು ಮಾಡುವ ಸಾಮರ್ಥ್ಯವು ತನ್ನ ಅಂಗದಲ್ಲಿರುವಿಕೆಯು ಇದು ಎಂಟನೆಯ ಸಿದ್ಧಿಯಾಗಿರುವುದು ।।೫೬।।

ಜೈಸಾ ಸಂಕಲ್ಪ ತೈಸೀ ಸಿದ್ಧಿ । ತೇ ನವವೀ ಜಾಣ ಪಾ ತ್ರಿಶುದ್ಧೀ । ರಾಜಾಹೀ ಆಜ್ಞಾ ಶಿರೀ ವಂದೀ । ಜ್ಯಾಚೀ ಗಮನಸಿದ್ಧೀ ಸರ್ವತ್ರ ।೫೭॥ ಜ್ಯಾಚೀ ಅಜ್ಞಾ ಆಣಿ ಗಮನ । ಕೋಠೇಹೀ ಅವರೋಧೇನಾ ಜಾಣ । ಹೇ ದಹಾವೇ ಸಿದ್ಧೀಚೇ ಲಕ್ಷಣ । ಜ್ಞಾನವಿಚಕ್ಷಣ ಜಾಣತೀ ।೫೮॥ ಯಾ ಗುಣಹೇತುಸಿದ್ಧೀಂಚೀ ವಿಧೀ । ಮ್ಯಾ ಸಾಂಗೀತಲೀ ಹೇ ತ್ರಿಶುದ್ಧೀ । ಯಾಂಹೀಹೋನಿ ಕ್ಷುದ್ರಸಿದ್ಧೀ । ತ್ಯಾಹೀ ನಿಜಬುದ್ಧೀ ಅವಧಾರೀ ।೫೯॥

ತ್ರಿಕಾಲಜ್ಞತ್ವಮದ್ವಂದ್ವಂ ಪರಚಿತ್ತಾದ್ಯಭಿಜ್ಞತಾ । ಅಗ್ನ್ಯರ್ಕಾಂಬುವಿಷಾದೀನಾಂ ಪ್ರತಿಷ್ಟಂಭೋಽಪರಾಜಯಃ ॥೮॥

ಅರ್ಥ :- ಭೂತ, ಭವಿಷ್ಯ, ವರ್ತಮಾನ ಈ ಮೂರೂ ಕಾಲಗಳ ಜ್ಞಾನವು ಪ್ರಾಪ್ತವಾಗುವಿಕೆ, ಶೀತ- ಉಷ್ಣ, ರಾಗ-ದ್ವೇಷ, ಸುಖ-ದುಃಖ ಇತ್ಯಾದಿ ದ್ವಂದ್ವಗಳ ಪರಾಭವ ಆಗದಿರುವಿಕೆ, ಇತರರ ಮನೋಗತವನ್ನು ಅರಿವಿಕೆ, ಅಗ್ನೀ, ಸೂರ್ಯ, ಜಲ, ವಿಷ ಇತ್ಯಾದಿ ಪದಾರ್ಥಗಳ ಸ್ತಂಭನ, ಪರಾಭವ ಆಗದಿರುವಿಕೆ ಈ ಐದು ಸಿದ್ಧಿಗಳು ಭೋಗೀ ಜನರಿಗೆ ಪ್ರಾಪ್ತವಾಗುವುವು.

ಕ್ಷುದ್ರಸಿದ್ಧಿ ಪಂಚಲಕ್ಷಣ । ಭೂತ ಭವಿಷ್ಯ ವರ್ತಮಾನ। ಯಾ ತ್ರಿಕಾಳಾಂಚೇ ಜೇ ಜ್ಞಾನ । ತೇ ಪಹಿಲೇ ಜಾಣ ಯೇ ಠಾಯೀ ॥೬೦॥ ಸುಖ ದುಃಖ ಶೀತ ಉಷ್ಣ । ಮೃದು ಆಣಿ ಅತಿಕಠಿಣ । ಯಾ ದ್ವಂದ್ವಾಸೀ ವಶ ನವ್ಹೇ ಜಾಣ । ತೇ ದುಸರೇ ಲಕ್ಷಣ ಸಿದ್ಧೀಚೇ ।೬೧॥ ಪರಾಚೇ ಸ್ವಪ್ನ ಸ್ವಯೇ ಸಾಂಗಣೇ । ಪುಢಿಲಾಚೇ ಚಿತ್ತೀಚೇ ಜಾಣಣೇ । ಹೇ ತಿಸರೀ ಸಿದ್ಧಿ ಮ್ಹಣಣೇ । ಐಕ ಲಕ್ಷಣೇ ಚೌಥೀಚೇ ।೬೨॥ ಅಗ್ನಿ ವಾಯು ಆಣಿ ಉದಕ । ಶಸ್ತ್ರ ವಿಷ ಆಣಿ ಅರ್ಕ । ಯಾಂಚೇ ಪ್ರತಿಸ್ತಂಭನ ದೇಖ । ತೇ ಸಿದ್ಧಿ ನಿಷ್ಟಂಕ ಪೈ ಚೌಥೀ ।೬೩॥ ಕೋಣಾಸೀ ಜಿಂಕಿಲಾ ನ ವಚೇ ಪಾಹೇ । ಜೇಥೀಚಾ ತೇಥ ವಿಜಯೀ ಹೋಯೇ । ಏಕಲಾ ಸರ್ವತ್ರ ವಿಜಯೋ ಲಾಹೇ । ಹೇ ಪಾಚವೀ ಆಹೇ ವಿಜಯಸಿದ್ಧೀ ।೬೪॥

ಏತಾಶ್ಚೋದ್ದೇಶತಃ ಪ್ರೋಕ್ತಾ ಯೋಗಧಾರಣಸಿದ್ಧಯಃ । ಯಯಾ ಧಾರಣಯಾ ಯಾ ಸ್ಯಾದ್ಯಥಾ ವಾ ಸ್ಯಾನ್ನಿಬೋಧ ಮೇ ।೯॥

ಅರ್ಥ:- ಪ್ರಿಯ ಉದ್ಧವಾ, ಯೋಗ ಧಾರಣೆಯಿಂದ ಪ್ರಾಪ್ತವಾಗುವ ಸಿದ್ಧಿಗಳ ಕೇವಲ ನಾಮಮಾತ್ರ ಹೇಳಿರುವೆನು. ಕ್ರಮವಾಗಿ ಇವುಗಳ ನಾಮಗಳ ಉಲ್ಲೇಖವನ್ನು ಮಾಡಿರುವೆನು. ಈಗ ಯಾವ ಧಾರಣೆಯಿಂದ ಯಾವ ಸಿದ್ಧಿಯು ಪ್ರಾಪ್ತವಾಗುವುದೆಂಬುದನ್ನು ಹೇಳುವೆನು, ಕೇಳು.

ಉದ್ದೇಶಮಾತ್ರೇ ಸಿದ್ಧೀಂಚೀ ಗತೀ । ಮ್ಯಾ ಸಾಂಗೀತಲೀ ತುಜಪ್ರತೀ । ಆತಾ ಕೋಣ ಧಾರಣಾ ಕೋಣ ಸ್ಥಿತೀ । ಸಿದ್ಧೀಚೇ ಪ್ರಾಪ್ತೀ ಹೋಯ ತೇ ಐಕ ।೬೫॥ ಅಷ್ಟ ಮಹಾಸಿದ್ಧೀಂಚೀ ಧಾರಣಾ । ಗುಣಹೇತು ದಹಾ ಸಿದ್ಧೀ ಜಾಣಾ । ಕ್ಷುದ್ರಸಿದ್ಧಿ ಪಂಚಲಕ್ಷಣಾ । ತ್ಯಾಂಚೇ ಸಾಧಿತ್ಯಾ ಸಾಧನಾ ಹರಿ ಬೋಲೇ ।೬೬॥

ಭೂತಸೂಕ್ಷ್ಮಾತ್ಮನಿ ಮಯಿ ತನ್ಮಾತ್ರಂ ಧಾರಯೇನ್ಮನಃ । ಅಣಿಮಾನಮವಾಪ್ನೋತಿ ತನ್ಮಾತ್ರೋಪಾಸಕೋ ಮಮ ॥೧೦॥

ಅರ್ಥ :- ಪ್ರಿಯ ಉದ್ಧವಾ, ಪಂಚಮಹಾಭೂತಗಳ ಸೂಕ್ಷ್ಮ ಮಾತ್ರಾ ನನ್ನದೇ ಶರೀರವಾಗಿರುವುದು. ಯಾವ ಸಾಧಕನು ಕೇವಲ ನನ್ನ ಶರೀರದ ಉಪಾಸನೆಯನ್ನು ಮಾಡುವನೋ ಮತ್ತು ತನ್ನ ಮನವನ್ನು ತದಾಕಾರವನ್ನಾಗಿ ಮಾಡಿ ಅದರಲ್ಲಿ ಸೇರಿಸುವನೋ ಅರ್ಥಾತ್ ನನ್ನ ತನ್ಮಾತ್ರ ಶರೀರದ ಹೊರತಾಗಿ ಅನ್ಯ ಯಾವ ವಸ್ತುಗಳ ಚಿಂತನೆಯನ್ನು ಮಾಡಲಾರನೋ, ಆತನಿಗೆ ''ಅಣಿಮಾ'' ನಾಮದ ಸಿದ್ಧಿಯು ಪ್ರಾಪ್ತವಾಗುವುದು. ಕಲ್ಲಿನಲ್ಲಿಯೂ ಪ್ರವೇಶ ಮಾಡುವ ಶಕ್ತಿ, ಅಣುತಾ ಪ್ರಾಪ್ತವಾಗುವುದು.

ಮನಸ್ಸಿನಲ್ಲಿ ಸಂಕಲ್ಪ ಮಾಡಿದ್ದನ್ನು ಪ್ರಾಪ್ತವಾಗುವಿಕೆಯು ಇದು ಒಂಬತ್ತನೆಯ ಸಿದ್ಧಿಯಾಗಿರುವುದು. ಈತನ ಆಜ್ಞೆಯನ್ನು ರಾಜನೂ ಕೂಡ ಶಿರಸಾ ವಂದಿಸುವನು. ಈತನಿಗೆ ಸರ್ವತ್ರವೂ ಸಂಚರಿಸಲಿಕ್ಕೆ ಬರುವುದು ।೫೭॥ ಈತನ ಆಜ್ಞೆಗೆ ಮತ್ತು ಗತಿಗೆ ಎಲ್ಲಿಯೂ ಪ್ರತಿಬಂಧವಾಗದಿರುವಿಕೆಗೆ, ಇದು ಹತ್ತನೆಯ ಸಿದ್ಧಿಯ ಲಕ್ಷಣವೆಂದು ಜ್ಞಾನೀ ವಿದ್ವಾನ್ ಜನರು ಹೇಳುವರು ।೫೮॥ ಹೇ ಉದ್ಧವಾ, ಈ ಗುಣಹೇತು ಸಿದ್ಧಿಯ ವಿಧಿಯನ್ನು ನಾನು ನಿನಗೆ ಹೇಳಿದೆನು. ಈಗ ಇದಕ್ಕಿಂತಲೂ ಭಿನ್ನ ಪ್ರಕಾರದ ಐದು ಕ್ಷುದ್ರ ಸಿದ್ಧಿಗಳಿರುವುವು. ಅವುಗಳನ್ನೂ ಸಹ ಲಕ್ಷಪೂರ್ವಕವಾಗಿ ಕೇಳು ।೫೯॥

ಕ್ಷುದ್ರ ಸಿದ್ಧಿಗಳು ಐದು ಪ್ರಕಾರಗಳಾಗಿವೆ. ಭೂತ, ಭವಿಷ್ಯ, ವರ್ತಮಾನ ಕಾಲಗಳ ಜ್ಞಾನವಾಗುವಿಕೆ ಇದು ಮೊದಲನೆಯ ಸಿದ್ಧಿಯ ಲಕ್ಷಣವಾಗಿದೆ ।೬೦॥ ಸುಖ-ದುಃಖ, ಶೀತ- ಉಷ್ಣ, ಮೃದು-ಕಠಿಣ, ಈ ದ್ವಂದ್ವಗಳಿಗೆ ವಶನಾಗದಿರುವಿಕೆ ಇದು ಎರಡನೆಯ ಸಿದ್ಧಿಯ ಲಕ್ಷಣವಾಗಿರುವುದು ।೬೧॥ ಬೇರೆಯವರ ಸ್ವಪ್ನವನ್ನು ಹೇಳಲಿಕ್ಕೆ ಬರುವಿಕೆ, ಇತರರ ಮನಸ್ಸಿನ ಮಾತು ತಿಳಿಯುವಿಕೆ, ಇದು ಮೂರನೆಯ ಸಿದ್ಧಿಯಾಗಿದೆ. ಈಗ ನಾಲ್ಕನೆಯ ಸಿದ್ಧಿಯ ಲಕ್ಷಣ ಕೇಳು ।೬೨॥ ಅಗ್ನೀ, ವಾಯೂ, ಜಲ, ಶಸ್ತ್ರ, ವಿಷ ಮತ್ತು ಸೂರ್ಯ ಇವರ ಪ್ರಭಾವವು ನಡೆಯದಂತಾಗುವಿಕೆಯು ನಾಲ್ಕನೆಯ ಸಿದ್ಧಿಯಾಗಿದೆ ।೬೩॥ ತನಗೆ ಯಾರಿಂದಲೂ ಜಯಿಸಲು ಅಸಾಧ್ಯವಾಗುವಿಕೆ, ತಾನು ಎಲ್ಲ ಸ್ಥಳಗಳಲ್ಲಿಯೂ ಒಂದೇ ಸಲ ವಿಜಯ ಸಾಧಿಸುವಿಕೆಯು ಐದನೆಯ ''ವಿಜಯಸಿದ್ಧಿ''ಯಾಗಿರುವುದು ।೬೪॥

ಈ ಪ್ರಕಾರವಾಗಿ ಸಿದ್ಧಿಗಳ ಸ್ವರೂಪವನ್ನು ನಾನು ನಿನಗೆ ಹೇಳಿರುವೆನು. ಈಗ ಯಾವ ಧಾರಣೆಯಿಂದ ಯಾವ ಸಿದ್ಧಿಯು ಪ್ರಾಪ್ತವಾಗುವುದನ್ನು ಕೇಳು ।೬೫॥ ಧಾರಣಾರೂಪ ಅಷ್ಟ ಮಹಾಸಿದ್ಧಿಗಳು, ಹತ್ತು ಗೌಣಸಿದ್ಧಿಗಳು ಮತ್ತು ಐದು ಕ್ಷುದ್ರಸಿದ್ಧಿಗಳ ಲಕ್ಷಣಗಳನ್ನು, ಸಾಧ್ಯವಾಗುವ ಸಾಧನೆಗಳ ವರ್ಣನೆಯನ್ನು ಶ್ರೀಕೃಷ್ಣನು ಮಾಡುವನು ।೬೬॥

ಅಷ್ಟ ಮಹಾಸಿದ್ಧಿ ಸ್ವಾಭಾವಿಕಾ । ಮಾಝ್ಯಾ ಠಾಯೀ ಅಸತೀ ದೇಖಾ । ಯಾ ಅಸಾಧ್ಯ ಸಾಧಾವಯಾ ಆವಾಂಕಾ । ಕರಿತಾ ಸಾಧಕಾ ಸಾಧನ ಸಾಂಗೇ ॥೧೭॥ ಮೀ ಅಣುರೇಣೂಚಾಹೀ ಅಣುರೇಣ । ಜೀವಾಚಾಹೀ ಹೃದಯಸ್ಥ ಜಾಣ । ತೇಥ ಅಣುತನ್ಮಾತ್ರ ಕೂರನಿ ಮನ । ಮಾಝ್ಯಾ ಠಾಯೀ ಜಾಣ ಜೋ ರಾಖೇ ॥೧೮॥ ಅಣುತನ್ಮಾತ್ರ ಧ್ಯಾನ ಸದಾ ರಾಹೇ । ತ್ಯಾಚಾ ಅಣುಮಾತ್ರಚಿ ದೇಹ ಹೋಯೇ । ಕೀಟಕೀಭೃಂಗೀಚ್ಯಾ ಐಸೇಪಾಹೇ । ಅಣಿಮೇಚೀ ಲಾಹೇ ತೋ ಸಿದ್ಧೀ ॥೧೯॥ ತೋ ಅಚ್ಛಿದ್ರೀ ನಿಘೋನಿ ಜಾಯೇ । ಜಗಾಚ್ಯಾ ಡೋಳ್ಯಾಮಾಜೀ ಸಮಾಯೇ । ಕೋಠೇಹೀ ಖಿಪೇನಾ ಪಾಹೇ । ಹೇ ಅಣಿಮೇಚೀ ಲಾಹೇ ಮಹಾಸಿದ್ಧೀ ॥೨೦॥

ಮಹಾತ್ಮ್ಯಾತ್ಮನ್ಮಯಿ ಪರೇ ಯಥಾಸಂಸ್ಥಂ ಮನೋ ದಧತ್ ।
ಮಹಿಮಾನಮವಾಪ್ನೋತಿ ಭೂತಾನಾಂ ಚ ಪೃಥಕ್‌ಪೃಥಕ್ ॥೧೧॥

ಅರ್ಥ :- ಮಹತ್ತತ್ತ್ವದ ರೂಪದಲ್ಲಿ ನಾನೇ ಪ್ರಕಾಶಿತನಾಗುತ್ತಿರುವೆನು. ಆ ರೂಪದಲ್ಲಿ ಸಮಸ್ತ ವ್ಯವಹಾರಿಕ ಜ್ಞಾನದ ಕೇಂದ್ರವಿರುವುದು. ಯಾರು ಈ ರೂಪದಲ್ಲಿ ತನ್ನ ಮನವನ್ನು ತನ್ಮಯಗೊಳಿಸುವನೋ, ಆತನಿಗೆ ಮಹಿಮಾ ನಾಮದ ಸಿದ್ಧಿಯು ಪ್ರಾಪ್ತವಾಗುವುದು. ಈ ಪ್ರಕಾರವಾಗಿ ಆಕಾಶ ಆದಿ ಪಂಚ ಮಹಾಭೂತಗಳಲ್ಲಿರುವ ನನ್ನ ಶರೀರದಲ್ಲಿ ಬೇರೆ ಬೇರೆಯಾಗಿ ಮನವನ್ನು ತೊಡಗಿಸಿ ಅದರ ಮಹತ್ವವು ಪ್ರಾಪ್ತವಾಗುವುದಕ್ಕೆ, ಅದಕ್ಕೂ ಕೂಡ ಮಹಿಮಾ ಸಿದ್ಧಿಯ ಅಂತರ್ಗತವಾಗಿರುವುದು.

ಮಾಝೇ ಸ್ವರೂಪ ಅನಂತ ಅಪಾರ । ಮಹತ್ತತ್ತ್ವಾ ಹೋನಿ ಅತಿಥೋರ । ಆಣಿ ಮಹತ್ತತ್ತ್ವಚಾಹೀ ಸಾಚಾರ । ನಿಯಂತಾ ಈಶ್ವರ ಜೋ ಕಾ ಮೀ ॥೨೧॥ ಹೇ ಸಿದ್ಧಿ ಸಾಧಾವಯಾ ಜೋ ನರ । ಮಾಝೀ ಧಾರಣಾ ಧರೀ ಅಪರಂಪಾರ । ತೇವಢೇಂಚ ಹೋಯ ತ್ಯಾಚೇ ಶರೀರ । ಹೇ ಸಿದ್ಧಿ ಮಹಾಥೋರ ಮಹಿಮಾನ ॥೨೨॥ ಸೂಕ್ಷ್ಮ ಕಾಪುಸಾಚೇ ತಂತೂ ಪಾಹೇ । ತೋ ಕಲ್ಪನೇಐಸಾ ಪಟೂ ಹೋಯೇ । ಮಾಝೀ ಮಹತೀ ಧಾರಣಾ ವಾಹೇ । ತೋ ಮಾಝೀ ಸಿದ್ಧಿ ಲಾಹೇ ಮಹಿಮತ್ವೇ ॥೨೩॥ ತುಕಿತಾ ತ್ಯಾಚ್ಯಾ ಸಮಾನ ಭಾರಾ । ನ ಪುರೇ ಸಪರ್ವತ ಸಗಳೀ ಧರಾ । ಏವಢ್ಯಾ ಮಹತ್ತತ್ತ್ವಾಂಚಾ ಉಭಾರಾ । ಸಿದ್ಧಿದ್ವಾರಾ ತೋ ಪಾವೇ ॥೨೪॥

ಪರಮಾಣುಮಯೇ ಚಿತ್ತಂ ಭೂತಾನಾಂ ಮಯಿ ರಂಜಯನ್ ।
ಕಾಲಸೂಕ್ಷ್ಮಾರ್ಥತಾಂ ಯೋಗೀ ಲಘಿಮಾನಮವಾಪ್ನುಯಾತ್ ॥೧೨॥

ಅರ್ಥ:- ಯಾವ ಯೋಗಿಯು ವಾಯೂ ಆದಿ ನಾಲ್ಕು ಭೂತಗಳ ಪರಮಾಣುಗಳಿಗೆ ನನ್ನ ಸ್ವರೂಪವೆಂದು ತಿಳಿದು ಚಿತ್ತವನ್ನು ತದಾಕಾರ ಮಾಡುವನೋ, ಆತನಿಗೆ ಲಘಿಮಾ ಸಿದ್ಧಿಯು ಪ್ರಾಪ್ತವಾಗುವುದು. ಆತನಿಗೆ ಪರಮಾಣುರೂಪ ಕಾಲನ ಸಮಾನ ಸೂಕ್ಷ್ಮ ವಸ್ತುವಾಗುವ ಸಾಮರ್ಥ್ಯವು ಪ್ರಾಪ್ತವಾಗುವುದು.

ವಾಯ್ವಾದಿ ಪ್ರಾಣಪ್ರಮಾಣ । ಜೇಣೇ ಕಾಳಸೂತ್ರಾಚೇ ಗಣನ । ತೋ ಪರಮಾಣುರೂಪ ಭಗವಂತ ಜಾಣ। ತ್ಯಾಚೇಚೀ ದೃಢ ಧ್ಯಾನ ಸದಾ ಜೋ ಕರೀ ॥೨೫॥

ಅಷ್ಟಮಹಾಸಿದ್ಧಿಗಳು ಸ್ವಾಭಾವಿಕವಾಗಿ ನನ್ನಲ್ಲಿರುವುವು. ಇವು ಸಾಧ್ಯ ಮಾಡಿಕೊಳ್ಳಲು ಅಸಾಧ್ಯವಾಗಿರುವುವು. ಆದರೂ ಸಾಧಿಸಬೇಕೆನ್ನುವವರಿಗೆ ಸಾಧನೆಯನ್ನು ಹೇಳುವೆನು ॥೧೭॥ ನಾನು ಅಣುರೇಣುಕ್ಕಿಂತಲೂ ಸೂಕ್ಷ್ಮ ಜೀವಿಯ ಹೃದಯಸ್ಥನು. ಈ ನನ್ನಲ್ಲಿ ಯೋಗಿಯು ತನ್ನ ಮನವನ್ನು ಸೂಕ್ಷ್ಮ ಮಾಡಿ ನನ್ನಲ್ಲಿ ಸ್ಥಿರಗೊಳಿಸಿದರೆ ॥೧೮॥ ಮತ್ತು ಅಣುರೇಣುಮಾತ್ರ ನನ್ನದೇ ಸ್ವರೂಪದ ಸತತವಾಗಿ ಧ್ಯಾನವನ್ನು ಮಾಡಿದರೆ ಆತನ ದೇಹವೂ ಕೂಡ ಅಣುಪ್ರಮಾಣವಾಗುವುದು. ಮತ್ತು ಕೀಟಕಭೃಂಗನ್ಯಾಯದಂತೆ ಆತನಿಗೆ ''ಅಣಿಮಾ'' ಸಿದ್ಧಿಯು ಪ್ರಾಪ್ತವಾಗುವುದು ॥೧೯॥ ಆತನು ಘನ ಪದಾರ್ಥಗಳಲ್ಲಿಯೂ ಹೋಗಬಲ್ಲನು, ಜನರ ಕಣ್ಣುಗಳಲ್ಲಿಯೂ ಪ್ರವೇಶ ಮಾಡಬಲ್ಲನು, ಆದರೆ ಎಲ್ಲಿಯೂ ಸಿಕ್ಕಿಕೊಳ್ಳಲಾರನು. ಹೀಗಾದಲ್ಲಿ ಆತನಿಗೆ ಅಣಿಮಾ ಸಿದ್ಧಿಯು ಪ್ರಾಪ್ತವಾಗಿದೆ ಎಂದು ತಿಳಿಯಬೇಕು ॥೨೦॥

ನನ್ನ ಸ್ವರೂಪವು ಅನಂತ, ಅಪಾರವಾಗಿದೆ. ಮಹತತ್ವಗಿಂತಲೂ ಅತ್ಯಂತ ದೊಡ್ಡದಾಗಿದೆ. ವಸ್ತುತಃ ಮಹತತ್ವದ ನಿಜವಾದ ನಿಯಂತನಾದ ಈಶ್ವರನು ನಾನೇ ಇರುವೆನು ॥೨೧॥ ಈ ಸಿದ್ಧಿಯನ್ನು ಪ್ರಾಪ್ತಮಾಡುವುದಕ್ಕಾಗಿ ಯಾವ ಪುರುಷನು ನನ್ನ ಸ್ವರೂಪವು ಅಪರಂಪಾರ ವಿಶಾಲವಾಗಿದೆ ಎಂದು ಧಾರಣೆ ಮಾಡಿ ಧ್ಯಾನಿಸುತ್ತಿರಲು, ಆಗ ಆತನ ಶರೀರವು ಅಷ್ಟೇ ದೊಡ್ಡದಾಗಿ ಬಿಡುವುದು. ಆದ್ದರಿಂದ ಈ ಸಿದ್ಧಿಯ ಮಹಿಮೆಯು ದೊಡ್ಡದಾಗಿದ್ದು ''ಮಹಿಮಾ'' ಸಿದ್ಧಿ ಎಂದು ಕರೆಯುವರು ॥೨೨॥ ಅರಳೆಯ ಎಳೆಗಳು ಸೂಕ್ಷ್ಮವಾಗಿರುವುವು. ಆದರೆ ಅವುಗಳಿಂದ ನಮಗೆ ಬೇಕಾದಷ್ಟು ದೊಡ್ಡ ವಸ್ತ್ರವಾಗುವುದು. ಅದರಂತೆ ನನ್ನ ಧ್ಯಾನವನ್ನೂ ಕೂಡ ದೊಡ್ಡದಾಗಿ ಧಾರಣೆಯನ್ನು ಮಾಡಿದವರಿಗೆ ನನ್ನ ದೊಡ್ಡ ಸಿದ್ಧಿಯು ಪ್ರಾಪ್ತವಾಗುವುದು. ಅವರು ನನ್ನ ಮಹತತ್ವಕ್ಕೆ ಪ್ರಾಪ್ತರಾಗುವರು ॥೨೩॥ ಈತನಾಗಿರುವ ಭಾರವನ್ನು ತೂಗಲು ಬೇರೆ ವಸ್ತು ಹುಡುಕಿದರೆ ಪರ್ವತ ಸಹ ಪೃಥ್ವಿಯೂ ಕೂಡ ಈತನ ಸಮಾನವಾಗಲಾರದು. ಸಿದ್ಧಿಯ ಸಹಾಯದಿಂದ ಈತನು ಇಷ್ಟೊಂದು ಮಹತ್‌ರೂಪಕ್ಕೆ ಮುಟ್ಟುವನು ॥೨೪॥

ವಾಯೂ ಆದಿಮಾಡಿ ಪ್ರಾಣದಂತಹ ಸೂಕ್ಷ್ಮ ತತ್ವಗಳಿರುವುವು. ಅವುಗಳ ಯೋಗದಿಂದ ಕಾಲಸೂತ್ರದ ಅಳತೆ ಮಾಡಲು ಬರುವುದು. ಪರಮಾಣುರೂಪ ಭಗವಂತನನ್ನು ಏಕನಿಷ್ಠೆಯಿಂದ, ಏಕಾಗ್ರತೆಯಿಂದ ಸತತವಾಗಿ ಧ್ಯಾನವನ್ನು ಮಾಡಲು ॥೨೫॥

ಪರಮಾಣುಧಾರಣೇಚಾ ಮಹಿಮಾ । ತ್ಯಾಚಾ ದೇಹಾಸೀ ಯೇ ಅತಿಲಘಿಮಾ । ತೋ ಮಶಕೀ ಚಡೋನಿ ಪಾಹೇ ಮಾ । ಉಡೇ ವ್ಯೋಮಾಮಾಜೀ ಸುಖೇ ॥೭೬॥ ಅಣಿಮಾದಿ ತೀನೀ ಧಾರಣಾ । ಯಾ ದೇಹಿಂಚ್ಯಾ ಸಿದ್ಧಿ ಜಾಣಾ । ಲಹಾನ ಥೋರ ಹಳೂಪಣಾ । ದೇಹಲಕ್ಷಣಾ ಉಪಜವೀ ॥೭೭॥ ಉರಲ್ಯಾ ಜ್ಯಾ ಪಂಚಮಹಾಸಿದ್ಧೀ । ತ್ಯಾಂಚಾ ಧಾರಣೇಚಾ ವಿಧೀ । ತೋಹೀ ಸಾಂಗೇನ ತ್ರಿಶುದ್ಧೀ । ಐಕ ಸುಬುದ್ಧೀ ಉದ್ಧವಾ ॥೭೮॥

ಧಾರಯನ್ಮಯ್ಯಹಂತತ್ತ್ವೇ ಮನೋ ವೈಕಾರಿಕೇಽಖಿಲಮ್ ।
ಸರ್ವೇಂದ್ರಿಯಾಣಾಮಾತ್ಮತ್ವಂ ಪ್ರಾಪ್ತಿಂ ಪ್ರಾಪ್ನೋತಿ ಮನ್ಮನಾಃ ॥೧೩॥

ಅರ್ಥ :- ಯಾವ ಸಾತ್ವಿಕ ಅಹಂಕಾರಕ್ಕೆ ನನ್ನ ಸ್ವರೂಪವೆಂದು ತಿಳಿದು. ಆ ರೂಪದಲ್ಲಿ ಚಿತ್ತದ ಧಾರಣೆಯನ್ನು ಮಾಡಿ ಹಾಗೂ ಸರ್ವ ಇಂದ್ರಿಯಗಳ ಅಧಿಷ್ಠಾತಾನಾಗಿ ನನ್ನ ಚಿಂತನೆಯನ್ನು ಮಾಡುವ ಭಕ್ತನಿಗೆ ಈ ಪ್ರಕಾರವಾಗಿ ''ಪ್ರಾಪ್ತಿ'' ನಾಮದ ಸಿದ್ಧಿಯು ಪ್ರಾಪ್ತವಾಗುವುದು.

ಮೂಳೀಂಚಾ ಶುದ್ಧ ಅಹಂಕಾರೂ । ಜ್ಯಾಪಾಸೂನಿ ಇಂದ್ರಿಯವಿಕಾರೂ । ಇಂದ್ರಿಯ ಅಧಿಷ್ಠಾತ್ರೀ ಸುರವರೂ । ಚೇತವಿತಾ ಈಶ್ವರೂ ಜೋ ಕಾ ಮೀ ॥೭೯॥ ತ್ಯಾ ಮಾಝ್ಯಾ ಠಾಯೀ ಧಾರಣಾ ಧರಿತಾ । ಇಂದ್ರಿಯ ಅಧಿಷ್ಠಾತ್ರೀ ದೇವತಾ । ತ್ಯಾಂಸೀ ಪಾವೋನಿ ಏಕಾತ್ಮತಾ । ಇಂದ್ರಿಯಪ್ರಕಾಶತಾ ಸ್ವಯೇ ಲಾಹೇ ॥೮೦॥ ಜೇ ಕಾ ಇಂದ್ರಿಯವ್ಯಾಪಾರ ಜಗಾಚೇ । ಪ್ರಕಾಶೂನಿ ಹಾ ದೇಖೇ ಸಾಚೇ । ಏವಢಿಯೇ ಇಂದ್ರಿಯಪ್ರಾಪ್ತೀಚೇ । ಸಾಧೀ ಸಿದ್ಧೀಚೇ ವೈಭವ ॥೮೧॥ ತೇಂವ್ಹಾ ಜ್ಯಾಚಾ ಜೋ ಜೇಥ ಪಾಹೇ । ಇಂದ್ರಿಯಾಂಚಾ ವ್ಯಾಪಾರೂ ಹೋಯೇ । ತೋ ಯೇಣೇಂಚಿ ಕೇಲಾ ಆಹೇ । ಐಶೀ ಪ್ರತೀತಿ ಹೋಯೇ ಇಂದ್ರಿಯಪ್ರಾಪ್ತೀ ॥೮೨॥

ಮಹತ್ಯಾತ್ಮನಿ ಯಃ ಸೂತ್ರೇ ಧಾರಯೇನ್ಮಯಿ ಮಾನಸಮ್ । ಪ್ರಾಕಾಶ್ಯಂ ಪಾರಮೇಷ್ಠ್ಯಂ ಮೇ ವಿಂದತೇಽವ್ಯಕ್ತಜನ್ಮನಃ ॥೧೪॥

ಅರ್ಥ :- ಯಾವ ಪುರುಷನು ನನ್ನ ಮಹತ್‌ಸ್ವಾಭಿಮಾನೀ ಸೂತ್ರಾತ್ಮದಲ್ಲಿ ತನ್ನ ಚಿತ್ತವನ್ನು ಸ್ಥಿರಮಾಡುವನೋ, ಆತನಿಗೆ ನನ್ನ ಅವ್ಯಕ್ತಜನ್ಮಾ ಅಂದರೆ ಸೂತ್ರಾತ್ಮದ ''ಪ್ರಾಕಾಮ್ಯ'' ನಾಮದ ಸಿದ್ಧಿಯು ಪ್ರಾಪ್ತವಾಗುವುದು. ಇದರಿಂದ ಆತನಿಗೆ ಸರ್ವ ಭೋಗಗಳು ಪ್ರಾಪ್ತವಾಗಬಲ್ಲವು.

ಜೇ ಮಹತ್ತತ್ತ್ವ ಗಾ ಜಾಣ । ತೇ ಮಾಯೇಚೇ ಪ್ರಥಮ ಸ್ಫುರಣ । ಜ್ಯಾಸೀ ಕ್ರಿಯಾ ಸೂತ್ರಪ್ರಧಾನ । ನಾಮಾಭಿಧಾನ ಬೋಲತೀ ॥೮೩॥ ತೇಥ ಅಜನ್ಮಾ ಮೀ ಆಪಣ । ಜಾಹಲೋ ಸೂತ್ರಾಚಾ ಸೂತ್ರಾತ್ಮಾ ಜಾಣ । ತ್ಯಾ ಮಾಝ್ಯಾ ಸ್ವರೂಪಾಚೇ ಧ್ಯಾನ । ಸಾವಧಾನ ಜೋ ಕರೀ ॥೮೪॥ ಜ್ಯಾ ಸೂತ್ರಾಚೇನಿ ಪ್ರಕಾಶಪ್ರವಾಹೇ । ಬ್ರಹ್ಮಾಂಡ ಹಿರಣ್ಯಗರ್ಭ ಪ್ರಕಾಶಲಾ ರಾಹೇ । ತೇ ಪ್ರಕಾಶತಾ ತ್ಯಾಸೀ ವಶ್ಯ ಹೋಯೇ । ಯೇಣೇ ಸೂತ್ರಾತ್ಮಾ ಪಾಹೇ ನಿದಿಧ್ಯಾಸನೇ ॥೮೫॥

ಆ ಯಾವ ಪರಮಾಣುಸ್ವರೂಪ ಧ್ಯಾನದ ಮಹಿಮೆಯು ಅಲೌಕಿಕವಾಗಿರುವುದು. ಇದರಿಂದ ದೇಹಕ್ಕೆ ಅತ್ಯಂತ ಹಗುರುತನ ಪ್ರಾಪ್ತವಾಗುವುದು. ಆತನು ಸೊಣದ ಮೇಲೆ ಕುಳಿತುಕೊಂಡು ಆಕಾಶದಲ್ಲಿ ಸಹಜವಾಗಿ ಸಂಚಾರ ಮಾಡಬಲ್ಲನು ॥೭೬॥ ಅಣಿಮಾದಿಕ ಈ ಧಾರಣೆಗಳು ಆ ಯಾವ ದೇಹದ ಸಿದ್ಧಿಗಳಾಗಿರುವುವು. ಇವು ದೇಹದಲ್ಲಿ ಸೂಕ್ಷ್ಮತ್ವ, ಜಡತ್ವ, ಮತ್ತು ಹಗುರತ್ವ ಇತ್ಯಾದಿ ಲಕ್ಷಣಗಳು ಉತ್ಪನ್ನವಾಗುವುವು ॥೭೭॥ ಹೇ ಬುದ್ಧಿವಂತನಾದ ಉದ್ಧವಾ, ಈಗ ಉಳಿದ ಐದು ಸಿದ್ಧಿಗಳ ಧಾರಣೆಯ ವಿಧಿಯನ್ನೂ ಸಹ ಹೇಳುವೆನು, ಕೇಳು ॥೭೮॥

ಮೂಲದ ಶುದ್ಧ ಆಹಂಕಾರದಿಂದ ಇಂದ್ರಿಯಗಳ ವಿಕಾರಗಳು ಹುಟ್ಟುವುವು. ಇಂದ್ರಿಯಗಳ ಆಧಾರ, ಅವುಗಳಿಗೆ ಚೇತನವನ್ನು ಕೊಡುವವ ದೇವಾಧಿದೇವ ಈಶ್ವರನು ನಾನಾಗಿರುವೆನು ॥೭೯॥ ಹೀಗಿರುವ ನನ್ನಲ್ಲಿ ಧ್ಯಾನವನ್ನು ಮಾಡಲು ಇಂದ್ರಿಯಗಳ ಅಧಿಷ್ಠಾನ ದೇವತೆಗಳಲ್ಲಿ ಏಕಾತ್ಮತೆ ಪಡೆದು ಸ್ವತಃಕ್ಕೆ ಇಂದ್ರಿಯ ಪ್ರಕಾಶತ್ವವು ಲಭಿಸುವುದು ॥೮೦॥ ಇದರಿಂದ ಜಗತ್ತಿನಲ್ಲಿಯ ಇಂದ್ರಿಯಗಳ ಆ ಯಾ ವ್ಯಾಪಾರಗಳು ನಡೆಯುತ್ತಿರುವುದನ್ನೆಲ್ಲ ಸ್ವತಃ ಪ್ರಕಟವಾಗಿ ತಾನು ಕಾಣುತ್ತಿರುವನು. ಇಂದ್ರಿಯ ಪ್ರಾಪ್ತಿಯ ಸಿದ್ಧಿಯಾಗಲು ಆತನಿಗೆ ಇಷ್ಟೊಂದು ವೈಭವವು ಪ್ರಾಪ್ತವಾಗುವುದು ॥೮೧॥ ಆದ್ದರಿಂದ ಎಲ್ಲಿ ಎಲ್ಲಿ ಆತನು ಇಂದ್ರಿಯಗಳ ವ್ಯಾಪಾರವಾಗುತ್ತಿರುವುದನ್ನು ಕಾಣುವನೋ, ಅವೆಲ್ಲವೂ ಆತನೇ ಮಾಡಿರುವಂತೆ ಅನುಭವಕ್ಕೆ ಬರುವುದು. ಇದು '' ಇಂದ್ರಿಯಪ್ರಾಪ್ತಿ'' ನಾಮದ ಸಿದ್ಧಿಯಾಗಿರುವುದು॥೮೨॥

ಯಾವ ಮಹತ್‌ತತ್ವವು ಇದುವೇ ಮಾಯೆಯ ಮೊದಲನೆಯ ಸ್ಫುರಣವಾಗಿರುವುದು. ಹೀಗೆಂದು ತಿಳಿ. ಇದಕ್ಕೆನೇ ''ಸೂತ್ರಪ್ರಧಾನ'' ಎಂದು ನಾಮವನ್ನು ಕೊಟ್ಟಿರುವುದು ॥೮೩॥ ಅಲ್ಲಿ ಸ್ವತಃ ನಾನು ಜನ್ಮರಹಿತನಾಗಿದ್ದರೂ ಕೂಡ ಸೂತ್ರದ ಸೂತ್ರಾತ್ಮಾನಾಗಿರುವೆನು. ಆ ಯಾವ ನನ್ನ ಸ್ವರೂಪದ ಧ್ಯಾನವನ್ನು ಅತ್ಯಂತ ಲಕ್ಷಪೂರ್ವಕ ಚಿತ್ತದಿಂದ ಯಾವನು ಮಾಡುವನೋ ॥೮೪॥ ಆತನಿಗೆ ಯಾವ ಸೂತ್ರದ ಪ್ರಕಾಶದ ಪ್ರವಾಹದಿಂದ ಬ್ರಹ್ಮಾಂಡ ಮತ್ತು ಹಿರಣ್ಯಗರ್ಭ ಇವೂ ಸಹ ಪ್ರಕಾಶಮಯವಾಗುವುವು. ಈ ಪ್ರಕಾಶಕತ್ವವೇ ವಶವಾಗುವುದು. ಈ ಪ್ರಕಾರದ ನಿದಿಧ್ಯಾಸದಿಂದ ಆತನು ಸೂತ್ರಾತ್ಮನನ್ನು ನೋಡುತ್ತಿರುವನು ॥೮೫॥

ತ್ಯಾ ನಿದಿಧ್ಯಾಸನಾಪೋಟೀ । ಕರೂ ಶಕೇ ಬ್ರಹ್ಮಾಂಡಕೋಟೀ । ಏವಢೀ ಪ್ರಕಾಶಸಿದ್ಧಿ ಗೋಮಟೀ। ಹೇ ಮಜವೀಣ ನುಠೀ ಸಾಧಕಾ ।।೮೬।।

ವಿಷ್ಣೌ ತ್ರ್ಯಧೀಶ್ವರೇ ಚಿತ್ತಂ ಧಾರಯೇತ್ಕಾಲವಿಗ್ರಹೇ । ಸ ಈಶಿತ್ವಮವಾಪ್ನೋತಿ ಕ್ಷೇತ್ರ ಕ್ಷೇತ್ರಜ್ಞಚೋದನಾಮ್ ।।೧೫।।

ಅರ್ಥ :- ಯಾವ ತ್ರಿಗುಣಮಯೀ ಮಾಯೆಯ ಸ್ವಾಮಿಯಾದ ನನ್ನ ಕಾಲಸ್ವರೂಪ ವಿಶ್ವರೂಪದ ಧಾರಣೆಯನ್ನು ಮಾಡುವ, ಆತನಿಗೆ ಶರೀರ ಮತ್ತು ಜೀವಕ್ಕೆ ತನ್ನ ಇಚ್ಛೆಯಂತೆ ಪ್ರೇರಿತ ಮಾಡುವ ಸಾಮರ್ಥ್ಯವು ಪ್ರಾಪ್ತವಾಗುವುದು. ಈ ಸಿದ್ಧಿಯ ಹೆಸರು ''ಈಶಿತ್ವ'' ಎಂದಾಗಿರುವುದು.

ಮಾಯಾದಿತ್ರಿಗುಣನಿಯಂತಾ । ಜೋ ಕಳಿಕಾಳಾತೇ ಆಕಳಿತಾ । ಉತ್ಪತ್ತಿಸ್ಥಿತಿಪ್ರಳಯಕರ್ತಾ । ಜಾಣ ತತ್ತ್ವತಾ ಅಂತರ್ಯಾಮೀ ।।೮೭।। ತ್ಯಾ ಮಜ ವಿಷ್ಣೂಚೇ ಧ್ಯಾನ । ನಿರಂತರ ಜೋ ಕರೀ ಜಾಣ । ತ್ಯಾಸೀ ಅದೃಷ್ಟದೃಷ್ಟೇಪಣ । ಶಕ್ತಿಪ್ರೇರಣ ಈಶಿತ್ವೇ ಯೇ ।।೮೮।। ಮಿಥ್ಯಾ ಬುದ್ಧಿಬಳಾಚ್ಯಾ ಖೇಳಾಪ್ರತೀ । ಸ್ವಾರೀಚೀ ಜಾಣೇ ಗತಿ ನಿಗುತೀ । ತೇವೀ ಮಿಥ್ಯಾ ಸಂಸಾರಪ್ರತೀತೀ । ಭೂತಾಂಚೀ ಆಗತೀ ನಿರ್ಗತೀ ಸ್ವಯೇ ಜಾಣೇ ।।೮೯।। ತೋ ಜೀವಾದಿ ಶರೀರಪ್ರೇರಣ । ಸ್ವಯೇ ಕರೂ ಶಕೇ ಆಪಣ । ಕರಿತಾ ಅಂತರ್ಯಾಮ್ಯಾಚೇ ಧ್ಯಾನ । ಏವಢೀ ಸಿದ್ಧಿ ಜಾಣ ಉಪತಿಷ್ಠೇ ।।೯೦।। ತೋ ಆಪುಲೇನಿ ಪ್ರತಾಪಸ್ವಭಾವೀ । ಮಶಕಾಹಾತೀ ಮೇರೂ ವಿಭಾಂಡವೀ । ನೀಚಹಸ್ತೇ ಸೃಷ್ಟಿ ವಿಧ್ವಂಸೂನಿ ಮಾಂಡವೀ । ಕಾ ಇಂದ್ರಾತೇ ಮಾರವೀ ಉಂದಿರಾಹಾತೀ ।।೯೧।। ಯಾಪರೀ ಏಕಾತೇ ಮಾರವೀ । ಜೀವೇ ಗೇಲಿಯಾ ಜೀವವೀ । ಅಚೇತನಾತೇ ಪಾಲೇಜವೀ । ಯೇ ಸಿದ್ಧೀಚೇ ಪದವೀ ಈಶಿತ್ವ ।।೯೨।।

ನಾರಾಯಣೇ ತುರೀಯಾಖ್ಯೇ ಭಗವಚ್ಛಬ್ದಶಬ್ದಿತೇ । ಮನೋ ಮಯ್ಯಾದಧದ್ಯೋಗೀ ಮದ್ಧರ್ಮಾ ವಶಿತಾಮಿಯಾತ್ ।।೧೬।।

ಅರ್ಥ:- ಯಾವ ಯೋಗಿಯು ತುರ್ಯಾ ಹಾಗೂ ಭಗವಾನ ಎಂದು ಹೇಳುವ ನನ್ನ ನಾರಾಯಣ ಸ್ವರೂಪದಲ್ಲಿ ಮನವನು ಏಕಾಗ್ರಗೊಳಿಸಿದರೆ ಅಲ್ಲಿ ನನ್ನ ಸ್ವಾಭಾವಿಕ ಗುಣವು ಪ್ರಕಟವಾಗುವುದು. ಆತನಿಗೆ ವಶಿತಾ ಎನ್ನುವ ಸಿದ್ಧಿಯು ಪ್ರಾಪ್ತವಾಗುವುದು.

ಜೀವ ಶಿವ ಆಣಿ ಪ್ರಕೃತೀ । ಯಾಹೂನಿ ಪರತೀ ಚೌಥೀ ಸ್ಥಿತೀ । ಜ್ಯಾತೇ ನಾರಾಯಣ ಮ್ಹಣತೀ । ಜಾಣ ನಿಶ್ಚಿತೀ ಸಜ್ಞಾನ ।।೯೩।। ಜಾಗೃತಿ ಸ್ವಪ್ನ ಸುಷುಪ್ತೀ । ಯಾವೇಗಳೀ ತುರೀಯ ಸ್ಥಿತೀ । ತ್ಯಾತೇ ನಾರಾಯಣ ಮ್ಹಣತೀ । ಯಥಾನಿಗುತೀ ಸಜ್ಞಾನ ।।೯೪।। ದೃಶ್ಯ ದ್ರಷ್ಟಾ ದರ್ಶನ । ಯಾ ಅತೀತ ಚೌಥಾ ಜಾಣ । ತ್ಯಾತೇ ಮ್ಹಣತೀ ನಾರಾಯಣ । ಜ್ಞಾನವಿಚಕ್ಷಣ ನಿಜಬೋಧೇ ।।೯೫।।

ಆ ನಿದಿ ಧ್ಯಾಸದಲ್ಲಿ ಆತನು ಕೋಟ್ಯಾವಧೀ ಬ್ರಹ್ಮಾಂಡಗಳನ್ನು ನಿರ್ಮಾಣ ಮಾಡುತ್ತಿರುವನು. ಇಷ್ಟೊಂದು ಈ ಯಾವ ಪ್ರಕಾಶಸಿದದ್ಧಿಯು ಉತ್ತಮವಾಗಿರುವುದು. ಆದರೆ ಇದು ನನ್ನ ಹೊರತಾಗಿ ಸಾಧಕರಿಗೆ ಪ್ರಾಪ್ತವಾಗುವುದಿಲ್ಲ ।।೮೬।।

ಮಾಯಾ ಮೊದಲು ಮಾಡಿ ಯಾವ ತ್ರಿಗುಣಗಳ ನಿಯಂತನು, ಯಾವನು ಕಲಿಕಾಲನನ್ನು ಕಟ್ಟಿಹಾಕುವವನು, ಉತ್ಪತ್ತೀ, ಸ್ಥಿತೀ, ಪ್ರಳಯಕರ್ತನು,ಮತ್ತು ನಿಜವಾಗಿಯೂ ಅಂತಃಕರಣದಲ್ಲಿ ವಾಸ ಮಾಡುವವನು ।।೮೭।। ಹೀಗಿರುವ ನನ್ನ ವಿಷ್ಣುವಿನನ್ನು ಯಾರು ನಿರಂತರವಾಗಿ ಧ್ಯಾನವನ್ನು ಮಾಡುತ್ತಿರುವನೋ, ಆತನಿಗೆ ಈಶತ್ವವು ಪ್ರಾಪ್ತವಾಗುವುದರಿಂದ ಅದೃಶ್ಯ ಪದಾರ್ಥಗಳನ್ನು ಕಾಣುವ ಸಾಮರ್ಥ್ಯವು ಪ್ರಾಪ್ತವಾಗುವುದು ।।೮೮।। ಮಿಥ್ಯೆಯಾಗಿರುವ ಬುದ್ಧಿಬಲದ ಚದುರಂಗ ಆಟವು ಕಾಲ್ಪನಿಕ ಸ್ವರೂಪದ್ದಾಗಿರುವುದು. ಆದರೂ ಆಡುವಾಗ್ಗೆ ಅದರಲ್ಲಿ ಚದುರಂಗಕಾಯೀಯ ಯೋಗ್ಯ ಗತಿಯನ್ನು ತಿಳಿಯಬೇಕಾಗುವುದು. ಅದರಂತೆ ಸಂಸಾರವು ಮಿಥ್ಯೆಯಾಗಿರುವ ಅನುಭವ ಮತ್ತು ಜೀವದ ಬರು ಹೋಗುವಿಕೆಯನ್ನು ಆತನು ತಿಳಿಯುವನು ।।೮೯।। ಆತನು ಜೀವದಿಂದ ಓಡಿದು ಶರೀರದವರೆಗೂ ಸ್ವತಃ ಪ್ರೇರಣೆಯನ್ನು ಮಾಡುವನು. ಅಂತರ್ಯಾಮಿಯ ಧ್ಯಾನವನ್ನು ಮಾಡುವುದರಿಂದ ಇಂತಹ ಸಿದ್ಧಿಯು ಪ್ರಾಪ್ತವಾಗುವುದು ।।೯೦।। ಆತನು ತನ್ನ ಪ್ರಭಾವಶಕ್ತಿಯಿಂದ ನೊಣದಕಡೆಯಿಂದ ಪರ್ವತವನ್ನು ಭೇದಿಸಬಲ್ಲನು. ಸಾಮಾನ್ಯ ಮನುಷ್ಯನಿಂದ ಸೃಷ್ಟಿಯ ನಾಶವನ್ನು ಮಾಡಿ ಪುನಃ ಅದನ್ನು ರಚಿಸಬಲ್ಲನು. ಆತನು ಇಲಿಯ ಕಡೆಯಿಂದ ಇಂದ್ರನನ್ನು ಕೊಲ್ಲಿಸಬಲ್ಲನು ।।೯೧।। ಈ ಪ್ರಕಾರವಾಗಿ ಆತನು ಒಬ್ಬನ ಪ್ರಾಣವನ್ನು ತೆಗೆಯುವನು, ಒಬ್ಬ ಸತ್ತವನನ್ನು ಜೀವಂತಗೊಳಿಸುವನು, ಜಡಕ್ಕೆ ಸಚೇತನಗೊಳಿಸುವನು. ಹೀಗೆ ಈಶತ್ವ ಪ್ರಾಪ್ತವಾಗುವಿಕೆಯು ಸಿದ್ಧಿಯು ಮಹಿಮೆಯಾಗಿದೆ ।।೯೨।।

ಜೀವ, ಶಿವ ಮತ್ತು ಪ್ರಕೃತಿ ಇವುಗಳಿಗಿಂತಲೂ ಭಿನ್ನವಾಗಿರುವ ನಾಲ್ಕನೆಯ ಸ್ಥಿತಿಗೆ ವಿದ್ವಾನ ಜನರು ''ನಾರಾಯಣ'' ಎನ್ನುವರು ।।೯೩।। ಈ ಪ್ರಕಾರವಾಗಿ ಜಾಗೃತೀ, ಸ್ವಪ್ನ ಮತ್ತು ಸುಷುಪ್ತೀ ಇವುಗಳಿಂದ ಭಿನ್ನವಾದ ತುರೀಯ ಅವಸ್ಥೆಗೆ ಜ್ಞಾನೀ ಜನರು ''ನಾರಾಯಣ'' ಎನ್ನುವರು ।।೯೪।। ದೃಶ್ಯಾ, ದ್ರಷ್ಟಾ ಮತ್ತು ದರ್ಶನ ಇವುಗಳ ಆಚೆ ಇರುವ ಯಾವ ನಾಲ್ಕನೆಯ ಸಾಕ್ಷಿಗೆ ಜ್ಞಾನಿ ಪುರುಷರು ಸ್ವಾನುಭವದಿಂದ ''ನಾರಾಯಣ'' ಎನ್ನುವರು ।।೯೫।।

ತ್ರಿಪುಟೀವೇಗಳೀ ಜೇ ಮಾತೂ । ಅಸೋನಿಯಾ ತ್ರಿಪುಟೀ ಆಂತೂ । ಜೋ ಕಾ ತ್ರಿಪುಟೀಸೀ ಅಲಿಪ್ತೂ । ತೋ ಮೀ ವಿಖ್ಯಾತೂ ನಾರಾಯಣ ॥೯೬॥ ಯಶ ಶ್ರೀ ವೈರಾಗ್ಯ ಜ್ಞಾನ । ಐಶ್ವರ್ಯ ಔದಾರ್ಯ ಹೇ ಷಡ್‌ಗುಣ । ನಿತ್ಯ ವಸತೀ ಪರಿಪೂರ್ಣ । ತೋ ಮೀ ನಾರಾಯಣ ಭಗವಂತ ॥೯೭॥ ತ್ಯಾ ಮಜ ನಾರಾಯಣಾತೇ ಧ್ಯಾತಾ । ಮಾಝೀ ವಶಿತಾ ಸಿದ್ಧಿ ಯೇ ಹಾತಾ । ಸರ್ವ ಕರ್ಮೀ ಅಲಿಪ್ತತಾ । ಭೋಗೂನ ಅಭೋಕ್ತಾ ಭೋಗಾತೇ ॥೯೮॥

ನಿರ್ಗುಣೇ ಬ್ರಹ್ಮಣಿ ಮಯಿ ಧಾರಯನ್ ವಿಶದಂ ಮನಃ । ಪರಮಾನಂದಮಾಪ್ನೋತಿ ಯತ್ರ ಕಾಮೋಽವಸೀಯತೇ ॥೧೭॥

ಅರ್ಥ:- ನಿರ್ಗುಣ ಬ್ರಹ್ಮವು ನಾನೇ ಇರುವೆನು. ಯಾರು ತಮ್ಮ ನಿರ್ಮಲ ಮನವನ್ನು ನನ್ನ ಈ ಬ್ರಹ್ಮಸ್ವರೂಪದಲ್ಲಿ ಸ್ಥಿರವನ್ನಾಗಿ ಮಾಡುವವರೋ, ಅವರಿಗೆ ಪರಮಾನಂದಸ್ವರೂಪಿಣೀ ''ಕಾಮಾವಸಾಯಿತಾ'' ನಾಮದ ಸಿದ್ಧಿಯು ಪ್ರಾಪ್ತವಾಗುವುದು. ಇದು ಪ್ರಾಪ್ತವಾಗಲು ಸರ್ವ ಕಾಮನೆಗಳು ಪೂರ್ಣವಾಗುವುವು.

ಚಿತ್ತದೇವತಾ ಸತ್ತ್ವಗುಣ । ಇಂದ್ರಿಯೇ ತೋ ರಜೋಗುಣ। ವಿಷಯ ಕೇವಳ ತಮೋಗುಣ। ಹೇಚಿ ಆವರಣ ಪರಮಾನಂದಾ ॥೯೯॥ ಪರಮಾನಂದಾಸೀ ಆವರಣ । ಆಡವೇ ಅಸತೀ ತಿನ್ಹೀ ಗುಣ। ತ್ಯಾಂತೇ ಸಾಂಡೂನಿ ನಿರ್ಗುಣ । ಬ್ರಹ್ಮ ಪರಿಪೂರ್ಣ ಮಜ ಜೋ ಧ್ಯಾಯೀ ॥೧೦೦॥ ತ್ಯಾಸೀ ಮಾಝಿಯೇ ಧ್ಯಾನಸ್ಥಿತೀ । ಹೋಯ ಪರಮಾನಂದ ಅವಾಪ್ತೀ । ಜ್ಯಾ ಆನಂದಾಮಾಜೀ ಉಪಶಾಂತೀ । ಹೋಯ ನಿಶ್ಚಿತೀ ಸಕಳ ಕಾಮಾ ॥೧೦೧॥ ಝಾಲಿಯಾ ಪರಮಾನಂದಪ್ರಾಪ್ತೀ । ಸಕಳ ಕಾಮ ನಿಮಗ್ನ ಹೋತೀ । ಜೇವೀ ಸೂರ್ಯೋದಯಾಪ್ರತೀ । ತಾರಾ ಹಾರಪತೀ ಸಚಂದ್ರ ॥೧೦೨॥ ತೇವೀ ಪರಮಾನಂದಾಚಾ ಪೋಟೀ । ಹಾರಪತೀ ಕಾಮಕೋಟೀ । ತೇಥ ಇಂದ್ರಿಯಸುಖಾಚ್ಯಾ ಗೋಠೀ । ಲಾಜೋನಿ ಉಠಾಉಠೀ ವಿರತಾತೀ ॥೧೦೩॥ ಉದ್ಧವಾ ಐಕ ಪಾ ನಿಶ್ಚಿತೀ । ನವ್ಹತಾ ಪರಮಾನಂದಪ್ರಾಪ್ತೀ । ಕದಾ ನವ್ಹೇ ಕಾಮನಿವೃತ್ತೀ । ನಾನಾ ಯುಕ್ತೀ ಕರಿತಾಂಹೀ ॥೧೦೪॥ ಯಾ ಅಷ್ಟ ಮಹಾಸಿದ್ಧೀಂಚ್ಯಾ ಧಾರಣಾ । ತುಜ ಮ್ಯಾ ಸಾಂಗೀತಲ್ಯಾ ಜಾಣಾ । ಯಾಂಸೀ ಸಾಧಾವಯಾ ಆಂಗವಣಾ । ಸುರನರಗಣಾ ಪೈ ನಾಹೀ ॥೧೦೫॥ ಯಾಪರೀ ಅಷ್ಟ ಮಹಾಸಿದ್ಧೀ । ತುಜ ಮ್ಯಾ ಸಾಂಗೀತಲೀ ಧಾರಣಾವಿಧೀ । ಆತಾ ಗುಣಹೇತುಕಾಚೀ ಪ್ರಬೋಧೀ । ಸಾವಧಬುದ್ಧೀ ಅವಧಾರೀ ॥೧೦೬॥

ಶ್ವೇತದ್ವೀಪಪತೌ ಚಿತ್ತಂ ಶುದ್ಧೇ ಧರ್ಮಮಯೇ ಮಯಿ । ಧಾರಯನ್ ಶ್ವೇತತಾ ಯಾತಿ ಷಡೂರ್ಮಿರಹಿತೋ ನರಃ ॥೧೮॥

ಅರ್ಥ:- ಪ್ರಿಯ ಉದ್ಧವಾ, ಶ್ವೇತದ್ವೀಪದ ಸ್ವಾಮೀ, ಅತ್ಯಂತ ಶುದ್ಧ ಮತ್ತು ಧರ್ಮಮಯವಾಗಿದೆ. ಆ ಯಾವ ನನ್ನ ರೂಪದ ಧಾರಣೆಯನ್ನು ಯಾರು ಮಾಡುವವರೋ, ಅವರು ಹಸಿವೆ, ನೀರಡಿಕೆ, ಜನ್ಮ-ಮೃತ್ಯೂ, ಶೋಕ, ಮೋಹ ಈ ಆರು ಊರ್ಮಿಯಿಂದ ಮುಕ್ತರಾಗುವರು. ಮತ್ತು ಅವರಿಗೆ ಶುದ್ಧ ಸ್ವರೂಪದ ಪ್ರಾಪ್ತಿಯಾಗುವುದು.

ತ್ರಿಪುಟಿಯಲ್ಲಿದ್ದೂ ಕೂಡ ತ್ರಿಪುಟಿಯಿಂದ ಭಿನ್ನವಾಗಿರುವ ಪ್ರಸಿದ್ಧನಾದ ''ನಾರಾಯಣ''ನು ನಾನೇ ಆಗಿರುವೆನು ॥೯೬॥ ಯಶ, ಶ್ರೀ, ವೈರಾಗ್ಯ, ಜ್ಞಾನ, ಐಶ್ವರ್ಯ ಮತ್ತು ಔದಾರ್ಯ ಈ ಆರು ಗುಣಗಳು ಪರಿಪೂರ್ಣವಾಗಿ ನಿತ್ಯವೂ ಎಲ್ಲಿ ವಾಸಮಾಡುವುವೋ, ಆ ಭಗವಾನ ನಾರಾಯಣನು ನಾನೇ ಇರುವೆನು ॥೯೭॥ ಇಂತಹ ನನ್ನ ನಾರಾಯಣನ ಧ್ಯಾನವನ್ನು ಮಾಡುವುದರಿಂದ ನನ್ನ ''ವಶಿತಾ'' ನಾಮದ ಸಿದ್ಧಿಯು ಪ್ರಾಪ್ತವಾಗುವುದು. ಆತನು ಸರ್ವ ಕರ್ಮಗಳನ್ನು ಮಾಡಿದರೂ ಕೂಡ ಅಲಿಪ್ತನಾಗಿರುವನು ಮತ್ತು ಭೋಗಗಳನ್ನು ಭೋಗಿಸಿದರೂ ಸಹ ಅಭೋಕ್ತನಾಗಿರುವನು ॥೯೮॥

ಸತ್ವಗುಣವು ಇದು ಚಿತ್ತದ ದೇವತೆಯಾಗಿರುವುದು. ಇಂದ್ರಿಯಗಳು ರಜೋಗುಣಿಯಾಗಿವೆ. ಮತ್ತು ವಿಷಯಗಳು ಇವು ಕೇವಲ ತಮೋಗುಣಗಳಾಗಿವೆ ಮತ್ತು ಇವೇ ಪರಮಾನಂದಕ್ಕೆ ಮುಚ್ಚಿಹಾಕುತ್ತಿರುತ್ತವೆ ॥೯೯॥ ಪರಮಾನಂದದ ಸುತ್ತುಮುತ್ತು ಆವರಣವನ್ನು ಹಾಕುವ ಈ ಮೂರೂ ಗುಣಗಳು ಅಡ್ಡಬರುವುವು. ನನ್ನ ಧ್ಯಾನವನ್ನು ಮಾಡುವವನು ಅವುಗಳಿಗೆ ಓಂದೆ ಸರಿಸಿ ನನ್ನ ಪರಿಪೂರ್ಣವಾದ ನಿರ್ಗುಣ ಬ್ರಹ್ಮವನ್ನು ಪಡೆದುಕೊಳ್ಳುವನು ॥೧೦೦॥ ಈತನಿಗೆ ನನ್ನ ಧ್ಯಾನದಲ್ಲಿ ಪರಮಾನಂದದ ಪ್ರಾಪ್ತಿಯಾಗುತ್ತಿರುವುದು. ಆ ದಿವ್ಯವಾದ ಆನಂದದಲ್ಲಿ ಸರ್ವ ತರಹದ ಇಚ್ಛೆಗಳು ಲಯವಾಗುವುವು. ಇಂತಹ ಪರಮಾನಂದದ ಪ್ರಾಪ್ತಿಯು ನನ್ನ ಧ್ಯಾನದ ಸ್ಥಿತಿಯಲ್ಲಿ ಆಗುವುದು ॥೧೦೧॥ ಪರಮಾನಂದದ ಪ್ರಾಪ್ತಿ ಆಯಿತೆಂದರೆ ಸರ್ವ ಕಾಮನೆಗಳು ಇಲ್ಲದಾಗಿಬಿಡುವುವು. ಸೂರ್ಯೋದಯವಾಗುತ್ತಲೇ ಯಾವ ಪ್ರಕಾರವಾಗಿ ಚಂದ್ರಸಹ ಸರ್ವ ನಕ್ಷತ್ರಗಳು ಲುಪ್ತವಾಗುವುವೋ ॥೧೦೨॥ ಆದರಂತೆ ಪರಮಾನಂದದಲ್ಲಿ ಕೋಟಿ ಕೋಟಿ ಕಾಮನೆಗಳು ಇಲ್ಲದಾಗುವುವು. ಆಗ ಇಂದ್ರಿಯ ಸುಖದ ಮಾತುಗಳು ಲಜ್ಜೆಯಿಂದ ಇದ್ದಲ್ಲಿಯೇ ಕರಗಿಹೋಗುವುವು ॥೧೦೩॥ ಹೇ ಉದ್ಧವಾ, ಈಗ ಕೇಳು. ಈ ಪರಮಾನಂದದ ಪ್ರಾಪ್ತಿಯಾಗದೇ ನಿಜವಾಗಿಯೂ ಅನೇಕ ಪ್ರಕಾರದ ಉಪಾಯಗಳನ್ನು ಮಾಡಿದರೂ ಕೂಡ ಕಾಮದ ನಿವೃತ್ತಿಯು ಎಂದಿಗೂ ಆಗಲಾರದು ॥೧೦೪॥ ಉದ್ಧವಾ, ಈ ಯಾವ ಅಷ್ಟಮಹಾಸಿದ್ಧಿಗಳ ಧಾರಣೆಯನ್ನು ನಾನು ನಿನಗೆ ಹೇಳಿದೆನು. ಇವುಗಳನ್ನು ಸಿದ್ಧಮಾಡುವ ಶಕ್ತಿಯು ದೇವಾದಿಕರಿಗೂ, ಮನುಷ್ಯರಿಗೂ ಇರುವುದಿಲ್ಲ ॥೧೦೫॥ ಈ ಪ್ರಕಾರವಾಗಿ ಈ ಎಂಟು ಪ್ರಕಾರಗಳ ಮಹಾಸಿದ್ಧಿಯ ಧಾರಣಾವಿಧಿಯನ್ನು ನಾನು ನಿನಗೆ ಹೇಳಿದೆನು. ಈಗ ಗುಣಹೇತುವಿನ ಸಿದ್ಧಿಗಳ ಸಾಧನೆಯನ್ನು ಲಕ್ಷಕೊಟ್ಟು ಕೇಳು ॥೧೦೬॥

ಸಾಂಡೂನಿ ಕಾರ್ಯೇಸೀ ರಜತಮೇ ದೂರೀ । ಜೋ ಮೀ ಸತ್ತ್ವಾಧಿಷ್ಠಾತಾ ಶ್ರೀಹರೀ । ತ್ಯಾ ಮಾಝೀ ಜೋ ಧಾರಣಾ ಧರೀ । ಅಖಂಡಾಕಾರೀ ಸರ್ವದಾ ॥೧೦೭॥ ತೋ ಮಾಝೇನಿ ಸತ್ತ್ವೇ ಸತ್ತ್ವವಂತೂ । ಹೋಯ ಷಡೂರ್ಮೀಸೀ ರಹಿತೂ । ಶೋಕ ಮೋಹ ಜರಾ ಮೃತ್ಯೂ । ಕ್ಷುಧಾ ತೃಷಾ ಹಾತೂ ಲಾವೂ ನ ಶಕೇ ॥೧೦೮॥

ಮಯ್ಯಾಕಾಶಾತ್ಮನಿ ಪ್ರಾಣ ಮನಸಾ ಘೋಷಮುದ್ವಹನ್ । ತತ್ರೋಪಲಬ್ಧಾ ಭೂತಾನಾಂ ಹಂಸೋ ವಾಚಃ ಶೃಣೋತ್ಯಸೌ ॥೧೯॥

ಅರ್ಥ:- ನಾನೇ ಸಮಷ್ಟೀ-ಪ್ರಾಣರೂಪ ಆಕಾಶಾತ್ಮಾನಾಗಿರುವೆನು. ಯಾರು ಈ ನನ್ನ ಸ್ವರೂಪದಲ್ಲಿ ಮನಸ್ಸಿನ ದ್ವಾರಾ ಅನಾಹತ ನಾದದ ಚಿಂತನೆಯನ್ನು ಮಾಡುವರೋ, ಅವರು ದೂರಶ್ರವಣ ನಾಮದ ಸಿದ್ಧಿಯ ಸಂಪನ್ನನಾಗುವರು. ಮತ್ತು ಆಕಾಶದಲ್ಲಿ ಉಪಲಬ್ಧವಾಗಿರುವ ವಿವಿಧ ಪ್ರಾಣಿಗಳ ಮಾತುಗಳನ್ನು ಕೇಳಬಲ್ಲವನಾಗುವನು, ತಿಳಿಯಬಲ್ಲನು.

ಸಘೋಷ ಪ್ರಾಣೇಸೀ ಶಬ್ದ ಮಹಿಮಾ । ಅವಶ್ಯ ವಿಶ್ರಾಂತೀಸ ಯೇ ವ್ಯೋಮಾ । ತ್ಯಾ ಆಕಾಶಾಚಾಹೀ ಮೀ ಆತ್ಮಾ । ಮಜಮಾಜೀ ವ್ಯೋಮಾ ರಹಿವಾಸೂ ॥೧೦೯॥ ತೋ ಮೀ ಸಘೋಷ ಪ್ರಾಣಾಂಚಾಹೀ ಪ್ರಾಣ। ಸಕಳ ವಾಚಾಂಚೀ ವಾಚಾ ಜಾಣ । ವಾಗ್ವೀಶ್ವರೀಚೇ ಜೀವನ। ಸತ್ಯ ಮೀ ಜಾಣ ಉದ್ಧವಾ ॥೧೧೦॥ ಐಸಿಯಾ ಮಾಝೀ ದೃಢ ಧ್ಯಾನ । ನಿಜಹೃದಯೀ ಜೋ ಕರೀ ಜಾಣ। ತೋ ವಿಚಿತ್ರಾ ವಾಚಾಂಚೇ ಶ್ರವಣ । ಜೀವಸ್ವರೂಪೇ ಜಾಣ ಸ್ವಯೇ ಐಕೇ॥೧೧೧॥ ಸನಾದ ಮಾಝೀ ಧಾರಣಾ ಪೋಟೀ । ಧರಿತಾ ಜಗಾಚ್ಯಾ ಗುಹ್ಯ ಗೋಷ್ಟೀ । ತ್ಯಾಚೇ ಪಡತೀ ಕರ್ಣಪುಟೀ । ತೇ ಕಾಳೀ ಉಠೀ ದೂರಶ್ರವಣಸಿದ್ಧೀ ॥೧೧೨॥

ಚಕ್ಷುಸ್ತ್ವಷ್ಟರಿ ಸಂಯೋಜ್ಯ ತ್ವಷ್ಟಾರಮಪಿ ಚಕ್ಷುಷಿ । ಮಾಂ ತತ್ರ ಮನಸಾ ಧ್ಯಾಯನ್ ವಿಶ್ವಂ ಪಶ್ಯತಿ ಸೂಕ್ಷ್ಮದೃಕ್ ॥೨೦॥

ಅರ್ಥ:- ಯಾವ ಯೋಗಿಯು ನೇತ್ರಗಳನ್ನು ಸೂರ್ಯನಲ್ಲಿ ಮತ್ತು ಸೂರ್ಯನನ್ನು ನೇತ್ರಗಳಲ್ಲಿ ಸಂಯುಕ್ತ ಮಾಡುವನೋ ಮತ್ತು ಎರಡರ ಸಂಯೋಗದಿಂದ ಮನದ ಮನಸ್ಸಿನಲ್ಲಿಯೇ ನನ್ನ ಧ್ಯಾನವನ್ನು ಮಾಡುವನೋ, ಆತನ ದೃಷ್ಟಿಯು ಸೂಕ್ಷ್ಮವಾಗುವುದು. ಮತ್ತು ಆತನಿಗೆ ದೂರದರ್ಶನ ಎಂಬ ಸಿದ್ಧಿಯು ಪ್ರಾಪ್ತವಾಗುವುದು ಮತ್ತು ಆತನು ಸಂಪೂರ್ಣ ವಿಶ್ವವನ್ನು ನೋಡಬಲ್ಲನು.

ಸವಿತಾ ತೋ ಮೀ ನಾರಾಯಣ । ಐಸೇ ಡೋಳ್ಯಾಮಾಜೀ ಕರೀ ಧ್ಯಾನ। ತೇವ್ಹಾ ಡೋಳಾಚಿ ಮದ್ರೂಪ ಜಾಣ । ಸವಿತಾ ಆಪಣ ಸ್ವಯೇ ಹೋಯ ॥೧೧೩॥ ಏವಂ ಡೋಳಾ ಸವಿತಾ ಹೇ ಮಾಝೇ ಧ್ಯಾನ । ತಿಹೀಸ ಏಕಾತ್ಮತಾ ಝಾಲ್ಯಾ ಜಾಣ । ತೇವ್ಹಾ ಸೂಕ್ಷ್ಮದ್ರಷ್ಟಾ ಹೋಯ ಆಪಣ । ಜಗಸಂಪೂರ್ಣ ತೋ ದೇಖೇ ॥೧೧೪॥ ಬೈಸಲೇಚಿ ಠಾಯೀ ಜಾಣ । ಚತುರ್ದಶಭುವನಾಂಚೇ ದರ್ಶನ । ಏಕೇ ಕಾಳೇ ದೇಖೇ ಆಪಣ । ದೂರದರ್ಶನ ಹೇ ಸಿದ್ಧೀ ॥೧೧೫॥

ಮನೋ ಮಯಿ ಸುಸಂಯೋಜ್ಯ ದೇಹಂ ತದನು ವಾಯುನಾ । ಮದ್ಧಾರಣಾನುಭಾವೇನ ತತ್ರಾತ್ಮಾ ಯತ್ರ ವೈ ಮನಃ ॥೨೧॥

ಅರ್ಥ:- ಮನ ಮತ್ತು ಶರೀರವನ್ನು ಪ್ರಾಣವಾಯು ಸಹಿತವಾಗಿ ನನ್ನಲ್ಲಿ ಸಂಯುಕ್ತ ಮಾಡಿದರೆ ಮನೋಜಯ ನಾಮದ ಸಿದ್ಧಿಯು ಪ್ರಾಪ್ತವಾಗುತ್ತದೆ. ಈ ಸಿದ್ಧಿಯ ಪ್ರಭಾವದಿಂದ ಆ ಯಾವ ಯೋಗಿಯು ಎಲ್ಲಿ ಹೋಗಬೇಕೆಂಬ ಸಂಕಲ್ಪ ಮಾಡುವನೋ, ತಕ್ಷಣ ಆ ಸ್ಥಳಕ್ಕೆ ಆತನ ಶರೀರವು ಮುಟ್ಟುತ್ತದೆ.

ಕಾರ್ಯಗಳ ಸಮೇತವಾಗಿ ರಜ, ತಮ ಇವುಗಳಿಗೆ ದೂರ ಮಾಡಿ, ಸತ್ವಗುಣದ ಅಭಿಮಾನಿಯಾಗಿರುವ ಶ್ರೀಹರಿಯಾದ ನನ್ನ ವಿಶ್ವವ್ಯಾಪಕತ್ವದ ಸರ್ವದಾ ಧಾರಣೆ ಯಾರು ಮಾಡುತ್ತಿರುವರೋ ॥೧೦೭॥ ಆತನು ನನ್ನ ಸತ್ವದಿಂದ ಸತ್ವಸಂಪನ್ನನಾಗಿ ಷಡ್ ಊರ್ಮಿರಹಿತನಾಗುವನು. ಆತನಿಗೆ ಶೋಕ,ಮೋಹ, ಜರಾ,ಮೃತ್ಯು, ಕ್ಷುಧಾ, ತೃಷಾ ಇವು ಎಂದಿಗೂ ಸ್ಪರ್ಶ ಮಾಡಲು ಶಕ್ಯವಿಲ್ಲ ॥೧೦೮॥

ನಾದಸಹ ಶಬ್ದದ ಸರ್ವ ಮಹಿಮೆಯು ಆಕಾಶದಲ್ಲಿ ವಿಶ್ರಾಂತಿಗಾಗಿ ಬರುತ್ತಿರುವುದು. ಆದರೆ ಆ ಆಕಾಶದ ಆತ್ಮವೂ ಕೂಡ ನಾನಾಗಿರುವೆನು. ನನ್ನಲ್ಲಿಯೇ ಆಕಾಶವು ಇರುವುದು ॥೧೦೯॥ ಆ ಯಾವ ನಾದಸಹ ಪ್ರಾಣದ ಪ್ರಾಣವು ನಾನೇ ಆಗಿರುವೆನು. ಸರ್ವ ವಾಣಿಗಳ ವಾಣಿಯು ನಾನೇ ಆಗಿರುವೆನು. ಸರಸ್ವತಿಯ ಜೀವನವೂ ಸಹ ನಿಜವಾಗಿಯೂ ನಾನೇ ಆಗಿರುವೆನು. ಹೇ ಉದ್ಧವಾ, ಇದು ಸತ್ಯವೆಂದು ತಿಳಿದುಕೋ ॥೧೧೦॥ ಹೀಗಿರುವ ನನ್ನನ್ನು ಯಾರು ತಮ್ಮ ಹೃದಯದಲ್ಲಿ ದೃಢವಾಗಿ ಧ್ಯಾನವನ್ನು ಮಾಡುವರೋ, ಆತನು ಆಕಾಶದಲ್ಲಿ ಕೇಳಿ ಬರುವ ದೂರ ದೂರದ ವಿವಿಧ ಶಬ್ದಗಳನ್ನು ಸ್ವತಃ ಜೀವರೂಪದಿಂದ ಕೇಳಬಲ್ಲನು ॥೧೧೧॥ ನನ್ನ ನಾದಯುಕ್ತ ಧ್ಯಾನವನ್ನು ಮಾಡಲು ಜಗತ್ತಿನಲ್ಲಿಯ ಗುಪ್ತ ಗೋಷ್ಟಿಗಳೂ ಕೂಡ ಕಿವಿಗಳಿಗೆ ಬಂದು ಮುಟ್ಟುವುವು. ಆಗ ದೂರಶ್ರವಣಸಿದ್ಧಿಯು ಪ್ರಾಪ್ತವಾಗಿರುವುದು ॥೧೧೨॥

ಸೂರ್ಯನೇ ನಾರಾಯಣನು ಎಂದು ಹೀಗೆ ಭಾವನೆಯನ್ನು ಮಾಡಿ ಯಾರು ಕಣ್ಣುಗಳಲ್ಲಿಯೇ ನನ್ನ ಧ್ಯಾನವನ್ನು ಮಾಡುವನೋ, ಆಗ ಆತನ ದೃಷ್ಟಿಯು ಮದ್ರೂಪವಾಗಿ ಆತನು ಸ್ವತಃ ಸೂರ್ಯರೂಪನಾಗುವನು ॥೧೧೩॥ ಈ ರೀತಿಯಲ್ಲಿ ನೇತ್ರಗಳೇ ಸೂರ್ಯನೆಂದು ನನ್ನ ಧ್ಯಾನವನ್ನು ಮಾಡಲು ಕಣ್ಣುಗಳು, ಸೂರ್ಯ ಮತ್ತು ನಾನು ಈ ಮೂರರ ಏಕಾತ್ಮತೆಯು ಉಂಟಾಗುವುದು. ಆಗ ಆತನು ಸೂಕ್ಷ್ಮದ್ರಷ್ಟನಾಗಿ ಸಂಪೂರ್ಣ ಜಗತ್ತನ್ನು ನೋಡಬಲ್ಲನು ॥೧೧೪॥ ಆತನು ಕುಳಿತಲ್ಲಿಯೇ ಹದಿನಾಲ್ಕು ಲೋಕಗಳನ್ನು ಒಂದೇವೇಳೆಯಲ್ಲಿ ನೋಡಬಲ್ಲನು. ಇದಕ್ಕೆ ದೂರದರ್ಶನಸಿದ್ಧಿ ಎನ್ನುವರು ॥೧೧೫॥

ಅತ್ಯಂತ ಸವೇಗ ತೇ ಮನ । ತ್ಯಾ ಮನಾಚೇಹೀ ಮೀ ಮನ ಜಾಣ। ತ್ಯಾ ಮನಾಸೀ ಮಜಸೀ ಅಭಿನ್ನ। ಪ್ರಾಣಧಾರಣಯುಕ್ತ ರಾಖೇ ।।೧೧೬।। ಐಸೇ ಪ್ರಾಣಧಾರಣಯುಕ್ತ ಮನ । ಮಜಸೀ ರಾಖಿತಾ ಅಭಿನ್ನ । ತ್ಯಾ ಧಾರಣಾಪ್ರಭಾವೇ ಜಾಣ । ಮನೋವೇಗೇ ಗಮನ ದೇಹಾಸೀ ಹೋಯ ।।೧೧೭।। ಜೇಥೇ ಸಂಕಲ್ಪೇ ಜಾಯ ಮನ । ತೇಥೇ ಹೋಯ ದೇಹಾಚೇಹೀ ಗಮನ । ಹೇ ಮನೋಜವಸಿದ್ಧಿ ಜಾಣ । ಧಾರಣಾಲಕ್ಷಣ ಯಾ ಹೇತೂ ।।೧೧೮।।

ಯದಾ ಮನ ಉಪಾದಾಯ ಉದ್ಯದ್ರೂಪಂ ಬುಭೂಷತಿ । ತತ್ತದ್ಭವೇನ್ಮನೋರೂಪಂ ಮದ್ಯೋಗಬಲಮಾಶ್ರಯಃ ।।೨೨।।

ಅರ್ಥ:- ಯಾವ ಯೋಗಿಯು ಮನಸ್ಸಿಗೆ ಉಪಾದನ ಮಾಡಿ ಯಾವ ಯಾವ ದೇವಾದಿರೂಪವನ್ನು ಸಂಪಾದಿಸುವ ಇಚ್ಛೆಯನ್ನು ಮಾಡುವನೋ, ಆತನು ಮನಸ್ಸಿನಿಂದ ಇಚ್ಛಿಸಿದ ಆಯಾ ಸ್ವರೂಪಕ್ಕೆ ಪ್ರಾಪ್ತನಾಗುವನು. ಇದರ ಕಾರಣವೇನೆಂದರೆ, ಆತನು ತನ್ನ ಚಿತ್ತವನ್ನು ನನ್ನಲ್ಲಿ ಕೂಡಿಸಿರುವನು.

ಪಹಿಲೀ ಮನೋಜವಧಾರಣಾ । ತ್ಯಾಹೀವರೀ ಮಾಝೀ ಭಾವನಾ । ಅಚಿಂತ್ಯ ಸಾಮರ್ಥ್ಯ ಮಾಝೇ ಜಾಣಾ । ಅನುಸಂಧಾನಾ ಜೋ ಆಣೀ ।।೧೧೯।। ಮೀ ನಾನಾ ರೂಪಾತೇ ಧರಿತಾ । ಸವೇಂಚಿ ರೂಪಾಂತರೇ ವಿಸರ್ಜಿತಾ । ಐಶೀ ಮಾಝೀ ಸಂಪೂರ್ಣ ಸತ್ತಾ । ತೇ ತ್ಯಾಚ್ಯಾ ಹಾತಾ ಪೈ ಲಾಭೇ ।।೧೨೦।। ಏವಂ ಮಾಝಿಯಾ ದೃಢ ಧಾರಣಾ । ಮಾಝೇ ಸಾಮರ್ಥ್ಯಯೇ ತ್ಯಾಚ್ಯಾ ಮನಾ । ಮಗ ಜ್ಯಾ ರೂಪಾಚೀ ಕರೀ ಭಾವನಾ । ತದ್ರೂಪ ಜಾಣಾ ಸ್ವಯೇ ಹೋಯ ।।೧೨೧।। ಸುರನರಪನ್ನಗಾಮಾಜೀ ಜೇ ಜೇ ರೂಪ ।ಧರಾವಯಾ ಕರೀ ಜೋ ಸಂಕಲ್ಪ । ತೋ ತತ್ಕಾಳ ಗಾ ಮದ್ರೂಪ । ಹೇ ಕಾಮರೂಪ ಸಿದ್ಧಿ ಮಾಝೀ ।।೧೨೨।।

ಪರಕಾಯಂ ವಿಶನ್ ಸಿದ್ಧ ಆತ್ಮಾನಾಂ ತತ್ರ ಭಾವಯತ್ । ಪಿಂಡಂ ಹಿತ್ವಾ ವಿಶೆತ್ಪ್ರಾಣೋ ವಾಯಭೂತಃ ಷಡಂಘ್ರಿವತ್ ।।೨೩।।

ಅರ್ಥ:- ಯಾವ ಯೋಗಿಯು ಬೇರೆ ಶರೀರದಲ್ಲಿ ಪ್ರವೇಶ ಮಾಡುವ ಇಚ್ಛೆಯನ್ನು ಮಾಡುವನೋ, ಆತನು ನಾನು ಆ ಶರೀರದಲ್ಲಿರುವೆ ಎಂದು ಭಾವನೆಯನ್ನು ಮಾಡಬೇಕು. ಇದರಿಂದ ಆತನ ದೇಹವು ಪ್ರಾಣವಾಯು ರೂಪವನ್ನು ಧರಿಸುವುದು. ಆತನು ಒಂದು ಹೂವಿನಿಂದ ಇನ್ನೊಂದು ಹೂವಿಗೆ ಹೋಗುವ ಭ್ರಮರದಂತೆ ತನ್ನ ಶರೀರವನ್ನು ಬಿಟ್ಟು ಬೇರೆ ಶರೀರದಲ್ಲಿ ಪ್ರವೇಶಿಸುವನು.

ಪರಕಾಯ ಪ್ರವೇಶೂ ಕರಿತಾ ಜಾಣಾ। ಆವರೂನಿ ಸ್ವದೇಹಿಚಾ ಸರ್ವ ಪ್ರಾಣಾ । ಜೇಥ ಪ್ರವೇಶ ಕರಿತಾ ಆಪಣಾ । ತೇಥ ಆಪುಲೀ ಭಾವನಾ ಕರಾವೀ ।।೧೨೩।। ತೇವ್ಹಾ ಲಿಂಗದೇಹಾಚೇ ಮಾಥಾ । ಜೀವಪ್ರಾಣಾಂಚೀ ಏಕಾತ್ಮತಾ । ಧರೋನಿ ದೇಹಾಂತರ ಅಹಂತಾ । ಬಾಹ್ಯ ವಾಯೂಚಾ ಪಂಥಾ ಮಿಳೋನಿ ಜಾಯ ।।೧೨೪।। ತೇಥ ಮಿಳತಾಂಚಿ ಮಿಳವಣೀ । ಯಾ ದೇಹಾಚಾ ಅಭಿಮಾನ ಸಾಂಡೂನಿ । ದೇಹಾಂತರೀ ಪ್ರವೇಶೋನೀ । ಮೀ ಮ್ಹಣೋನೀ ಉಠೇ ತೇಥೇ ।।೧೨೫।।

ಮನವು ಅತಿಶಯ ಗತಿಯುಳ್ಳದ್ದಾಗಿದೆ. ಆದರೂ ನಾನು ಆ ಮನದ ಮನವಾಗಿರುವೆನು. ಆ ಮನವನ್ನು ಪ್ರಾಣಾಯಾಮ ಸಹ ಧ್ಯಾನ ಧಾರಣಾಯೊಂದಿಗೆ ನನ್ನಲ್ಲಿ ಏಕರೂಪ ಮಾಡಬೇಕು ।।೧೧೬।। ಹೀಗೆ ಮಾಡಲು ಆ ಧ್ಯಾನ ಧಾರಣೆಯ ಪ್ರಭಾವದಿಂದ ದೇಹಕ್ಕೆ ಮನೋವೇಗದಿಂದ ಎಲ್ಲಿ ಬೇಕಾದಲ್ಲಿಗೆ ಗಮನ ಮಾಡುವ ಸಾಮರ್ಥ್ಯವು ಸಹಜವಾಗಿ ಪ್ರಾಪ್ತವಾಗುವುದು ।।೧೧೭।। ಎಲ್ಲಿ ಮನವು ಸಂಕಲ್ಪದಿಂದ ಹೋಗುವುದೋ, ಅಲ್ಲಿ ದೇಹವೂ ಕೂಡ ಪ್ರವೇಶಿಸುವುದು. ಇದೇ ಮನೋಜವಸಿದ್ಧಿಯಾಗಿರುವುದು. ಇದರ ಧ್ಯಾನ ಧಾರಣೆಯ ಪ್ರಕಾರವು ಹೀಗಿರುವುದು ।।೧೧೮।।

ಪ್ರಾರಂಭದಲ್ಲಿ ಮನೋಜವಸಿದ್ಧಿಯ ಧ್ಯಾನ ಮಾಡಿ ನಂತರ ಪುನಃ ನನ್ನ ಭಾವನೆಯನ್ನು ಧರಿಸಬೇಕು. ಆ ಭಾವನೆಯಲ್ಲಿ ನನ್ನ ಅತರ್ಕ್ಯ ಸಾಮರ್ಥ್ಯವಿದೆ. ಅದು ನನ್ನ ಅಂಗದಲ್ಲಿದೆ ಎಂದು ಕಲ್ಪನೆ ಮಾಡಬೇಕು ।।೧೧೯।। ನಾನು ಅನೇಕ ಪ್ರಕಾರದ ರೂಪಗಳನ್ನು ಧರಿಸುವವನು, ಹಾಗೂ ಆ ರೂಪಗಳನ್ನು ಇಲ್ಲದಾಗಿ ಮಾಡುವವನು. ಈ ನನ್ನ ಪೂರ್ಣಸತ್ತೆಯು ಆತನಿಗೆ ಪ್ರಾಪ್ತವಾಗುವುದು ।।೧೨೦।। ಈ ಪ್ರಕಾರವಾಗಿ ನನ್ನ ಧ್ಯಾನಧಾರಣೆಯಿಂದ ನನ್ನ ಸಾಮರ್ಥ್ಯವು ಆತನ ಮನಸ್ಸಿಗೆ ಪ್ರಾಪ್ತವಾಗುವುದು. ತದನಂತರ ಆತನು ಯಾವ ಸ್ವರೂಪದ ಕಲ್ಪನೆಯನ್ನು ಮಾಡುವನೋ, ತಾನು ಸ್ವತಃ ಅದರಂತಾಗುವನು ।।೧೨೧।। ದೇವ, ಮನುಷ್ಯ ಅಥವಾ ನಾಗ ಇವರಲ್ಲಿ ಯಾವ ಯಾವ ಸ್ವರೂಪವನ್ನು ಧರಿಸುವ ಸಂಕಲ್ಪವನ್ನು ಮಾಡುವನೋ, ಆ ರೂಪವು ಆತನಿಗೆ ತತ್ಕಾಲದಲ್ಲಿ ಪ್ರಾಪ್ತವಾಗುವುದು. ಇದು ನನ್ನ ಕಾಮರೂಪಸಿದ್ಧಿಯಾಗಿರುವುದು ।।೧೨೨।।

ಪರಕಾಯ ಪ್ರವೇಶ ಮಾಡಬೇಕೆಂದರೆ ಪ್ರಾರಂಭದಲ್ಲಿ ದೇಹದಲ್ಲಿನ ಸರ್ವ ಪ್ರಾಣಗಳನ್ನು ಆವರಿಸಿಕೊಳ್ಳಬೇಕು. ತನಗೆ ಯಾವ ಯಾವ ದೇಹದಲ್ಲಿ ಪ್ರವೇಶವನ್ನು ಮಾಡಬೇಕಾಗಿದೆಯೋ, ಆ ದೇಹದಲ್ಲಿ ತನ್ನ ಭಾವನೆಯನ್ನು ಧರಿಸಬೇಕು ।।೧೨೩।। ಆ ಸಮಯದಲ್ಲಿ ಅದರಲ್ಲಿನ ಲಿಂಗದೇಹದಲ್ಲಿ ಅದರ ಜೀವಪ್ರಾಣದ ಐಕ್ಯವಾಗಿ ಆ ದೇಹವೇ ನಾನಾಗಿರುವೆನೆಂಬ ಹೀಗೆ ಭಾವನೆಯನ್ನು ಧರಿಸುವುದರಿಂದ ಆತನು ಬಾಹ್ಯ ವಾಯುವಿನ ಮಾರ್ಗದಿಂದ ಅದರಲ್ಲಿ ಕೂಡಿಕೊಳ್ಳುವನು ।।೧೨೪।। ಆತನು ತನ್ನ ದೇಹದ ಅಭಿಮಾನವನ್ನು ಬಿಟ್ಟು ಅದರಲ್ಲಿ ಹೋಗಿ ಕೂಡಿಕೊಳ್ಳಲು, ಆಗ ಆ ದೇಹದಲ್ಲಿ ಪ್ರವೇಶವನ್ನು ಮಾಡಿ ಅಲ್ಲಿ "ನಾನು" ಎಂಬ ಅಭಿಮಾನವನ್ನು ಹಿಡಿದುಕೊಳ್ಳುವನು ।।೧೨೫।।

ಜೈಸೇ ಕಮಳೀಹೂನಿ ಕಮಳಾಂತರಾ । ವಾಯುಬಳೇ ಪ್ರವೇಶಣೇ ಭ್ರಮರಾ । ತೈಸೇ ಸಾಂಡೋನಿಯಾ ಸ್ವಶರೀರಾ । ದೇಹಾಂತರಾ ಜೀವು ಜಾಯೇ ॥೧೨೬॥ ಹೇ ಪರಕಾಯಪ್ರವೇಶನ । ವ್ಯಾ ಸಾಂಗೀತಲೇ ಸಂಪೂರ್ಣ । ಮಾಝಿಯಾ ಸ್ವರೂಪಾಚೇ ಧಾರಣ । ತೇ ನಿಜಲಕ್ಷಣ ಅವಧಾರೀ ॥೧೨೭॥ ದೃಢ ಧ್ಯಾತಾ ಮಾಝೀ ಸ್ವರೂಪಾಸೀ । ತೇ ಸರ್ವ ದೇಹೀ ತೂಚೀ ಆಹೇಸೀ । ನ ಸಾಂಡಿತಾ ನಿಜದೇಹಾಸೀ । ಹಾ ಪರಕಾಯೇಸೀ ಪ್ರವೇಶೂ ॥೧೨೮॥ ಸ್ವಸತ್ತಾ ಸ್ವದೇಹ ಸಾಂಡಣೇ । ತೇಚಿ ಅರ್ಥೀಚೇ ಲಕ್ಷಣೇ । ಪುಢಿಲೇ ಶ್ಲೋಕೀ ನಾರಾಯಣೇ । ವಿಶದ ನಿರೂಪಣೇ ನಿರೂಪಿಲೀ ॥೧೨೯॥

ಪಾರ್ಷ್ಣ್ಯಾ ಪೀಡ್ಯ ಗುದಂ ಪ್ರಾಣಂ ಹೃದುರಃಕಂಠಮೂರ್ಧಸು ।
ಆರೋಪ್ಯ ಬ್ರಹ್ಮರಂಧ್ರೇಣ ಬ್ರಹ್ಮ ನೀತ್ವೋತ್ಸೃಜೇತ್ತನುಮ್ ॥೨೪॥

ಅರ್ಥ:- ಹಿಮ್ಮಡದಿಂದ ಗುದದ್ವಾರವನ್ನು ಬಂದ ಮಾಡಿ ಪ್ರಾಣವಾಯುವಿಗೆ ಕ್ರಮಶಃ ಹೃದಯ, ವಕ್ಷಸ್ಥಳ, ಕಂಠ ಮತ್ತು ಮಸ್ತಕದಲ್ಲಿ ತೆಗೆದುಕೊಂಡು ಬರಬೇಕು. ಅಲ್ಲಿ ಬ್ರಹ್ಮರಂಧ್ರದ ಮುಖಾಂತರದಿಂದ ಅದಕ್ಕೆ ಬ್ರಹ್ಮತತ್ವದಲ್ಲಿ ಲೀನಮಾಡಬೇಕು ಹಾಗೂ ಶರೀರದ ತ್ಯಾಗವನ್ನು ಮಾಡಬೇಕು.

ದೇಹತ್ಯಾಗಾಚೇ ಪ್ರಾಣಧಾರಣ । ತೇಚ ಸ್ವಚ್ಛಂದಮೃತ್ಯೂಚೇ ಲಕ್ಷಣ । ತದರ್ಥೀ ಜೇ ಪ್ರಾಣೋತ್ಕ್ರಮಣ । ತೇ ಯೋಗಧಾರಣ ಅವಧಾರೀ ॥೧೩೦॥ ಮೂಳಾಧಾರೀ ವಾಮಚರಣ । ಟಾಂಚೇಚೇನಿ ನೇಟೇ ಜಾಣ । ಅಪಾನಾಚೇ ಅಧೋಗಮನ । ಗುದ ಪೀಡೂನ ರಾಖಾವೇ ॥೧೩೧॥ ಹೃದಯೀ ವಿಚರತಾ ಜೋ ಪ್ರಾಣ । ತ್ಯಾಚೇ ಸದಾ ಊರ್ಧ್ವ ಗಮನ । ತೋ ಪ್ರಾಣಾಯಾಮೇ ಆವರೂನ । ಅಧೋಮುಖ ಜಾಣ ಕರಾವಾ ॥೧೩೨॥ ಅಪಾನಾಚೇ ಊರ್ಧ್ವ ಗಮನ । ಸ್ವಾಧಿಷ್ಠಾನಪರ್ಯಂತ ಜಾಣ । ಪ್ರಾಣಾಚೇ ಅಧಃಸಂಚರಣ । ತೇಚಿ ಚಕ್ರೀ ಜಾಣ ಜೈ ಘಡೇ ॥೧೩೩॥ ತೇಥ ಪ್ರಾಣಾಪಾನಾಂಚೇ ಬುರಘಾವಣ । ತ್ಯಾ ಚಕ್ರಾಮಾಜೀ ಕರೀ ಸಮಾನ । ಐಕ್ಯೇ ಪಡಿಲೇ ಆಲಿಂಗನ । ಏಕಾತ್ಮತಾ ಜಾಣ ಚಾಲಿಲೇ ॥೧೩೪॥ ಸಾಂಡೋನಿ ಅಪಾನಾಚೀ ಅಧೋವಾಟ । ಪ್ರಾಣೇ ತ್ಯಾಜಿಲಾ ಹೃದಯಕಂಠ । ಫೋಡೂನಿ ಸುಷುಮ್ನೇಚೇ ಕಪಾಟ । ಊರ್ಧ್ವಮುಖೇ ನೀಟ ಚಾಲಿಲೇ ॥೧೩೫॥ ಜಿಣತಾ ಸುಷುಮ್ನೇಚೇ ಘರ । ಭೇದಿಲೇ ಸಾಹೀ ಚಕ್ರಾಂಚೇ ಪದರ । ಉಘಡೂನಿ ಕಾಕೀಮುಖಾಚೇ ದ್ವಾರ । ಬ್ರಹ್ಮರಂಧ್ರ ಠಾಕಿಲೇ ॥೧೩೬॥ ತೇಥೇ ಪಾವಲ್ಯಾ ಯಥಾನಿಗುತೀ । ಯಾ ದೇಹಾಚೀ ಸಾಂಡೂನಿ ಸ್ಥಿತೀ । ಜೋ ಕಾಮಭೋಗ ವಾಹೇ ಚಿತ್ತೀ । ತ್ಯಾ ದೇಹಾಚೀ ಪ್ರಾಪ್ತೀ ತೋ ಪಾವೇ ॥೧೩೭॥

ಯಾವ ಪ್ರಕಾರವಾಗಿ ವಾಯುಬಲದಿಂದ ಭ್ರಮರವು ಒಂದು ಕಮಲದಿಂದ ಹೊರಟು ಇನ್ನೊಂದು ಕಮಲದಲ್ಲಿ ಪ್ರವೇಶಿಸುವಂತೆ ಜೀವವು ತನ್ನ ದೇಹವನ್ನು ಬಿಟ್ಟು ಬೇರೆ ದೇಹದಲ್ಲಿ ಪ್ರವೇಶಿಸುವುದು ॥೧೨೬॥ ಈ ಪರಕಾಯ ಪ್ರವೇಶವನ್ನು ನಾನು ನಿನಗೆ ಸವಿಸ್ತಾರವಾಗಿ ತಿಳಿಸಿದೆನು. ಈಗ ನನ್ನ ಸ್ವರೂಪದ ಧ್ಯಾನಧಾರಣೆಯು ಹೇಗಿರುವುದೆಂಬ ಲಕ್ಷಣವನ್ನು ಹೇಳುವೆನು, ಕೇಳು ॥೧೨೭॥ ನನ್ನ ಸ್ವರೂಪದಲ್ಲಿ ದೃಢವಾಗಿ ಧ್ಯಾನವನ್ನು ಮಾಡುತ್ತ ಸರ್ವ ದೇಹಗಳಲ್ಲಿ ನಾನೇ ಇರುವೆ ಎಂಬ ಭಾವನೆಯನ್ನು ಧರಿಸಲು ಆಗ ತನ್ನ ಶರೀರವನ್ನು ಬಿಡದೇ ಪರಕಾಯ ಪ್ರವೇಶವನ್ನು ಮಾಡಲು ಸಾಧ್ಯವಾಗುವುದು ॥೧೨೮॥ ಈಗ ತನ್ನ ಇಚ್ಛೆಯಂತೆ ದೇಹದ ತ್ಯಾಗವನ್ನು ಹೇಗೆ ಮಾಡಬೇಕೆಂಬ ಅದರ ಲಕ್ಷಣಗಳನ್ನು ಮುಂದಿನ ಶ್ಲೋಕದಲ್ಲಿ ನಾರಾಯಣನು ಸ್ಪಷ್ಟ ಮಾಡಿ ಹೇಳುತ್ತಿರುವನು ॥೧೨೯॥

ದೇಹತ್ಯಾಗಕ್ಕಾಗಿ ಯೋಗ ಮಾರ್ಗದಿಂದ ಪ್ರಾಣಧಾರಣೆ ಮಾಡುವುದೇ ಸ್ವಚ್ಛಂದ ಮೃತ್ಯುವಿನ ಲಕ್ಷಣವಾಗಿದೆ. ಅದಕ್ಕಾಗಿ ಪ್ರಾಣವನ್ನು ಬ್ರಹ್ಮರಂಧ್ರದವರೆಗೆ ಹೇಗೆ ಒಯ್ಯಬೇಕೆಂಬ ಯೋಗಧಾರಣೆಯನ್ನು ಕೇಳು ॥೧೩೦॥ ಗುದದ್ವಾರದಲ್ಲಿ ಎಡ ಹಿಮ್ಮಡವನ್ನು ಜೋರಾಗಿ ಒತ್ತಿ ಹಿಡಿದು ಗುದದ್ವಾರವನ್ನು ಬಂದ ಮಾಡಬೇಕು. ಇದರಿಂದ ಅಪಾನವಾಯುವಿಗೆ ಕೆಳಗೆ ಹೋಗುವಿಕೆ ನಿಲ್ಲುವುದು ॥೧೩೧॥ ಹೃದಯದಲ್ಲಿನ ಪ್ರಾಣವಾಯುವು ಯಾವಾಗಲೂ ಮೇಲಕ್ಕೆ ಊರ್ಧ್ವಮುಖವಾಗಿರುವುದು. ಅದಕ್ಕೆ ಪ್ರಾಣಾಯಾಮದಿಂದ ಆವರಿಸಿ ಅಧೋಮುಖವನ್ನಾಗಿ ಮಾಡಬೇಕು ॥೧೩೨॥ ಹೀಗೆ ಅಪಾನವಾಯುವಿನ ಕೆಳಗೆ ಹೋಗುವುದು ನಿಂತುಕೊಳ್ಳಲು ಅದು ಮೇಲಕ್ಕೆ ಏರಿ ಸ್ವಾಧಿಷ್ಠಾನ ಚಕ್ರದವರೆಗೆ ಹೋಗಿ ಮುಟ್ಟಿಕೊಳ್ಳುತ್ತಿರಲು ಆಗ ಪ್ರಾಣವೂ ಕೂಡ ಅಧೋಮುಖವಾಗಿ ಕೆಳಗೆ ಬರುತ್ತ ಬರುತ್ತ ಅದೇ ಚಕ್ರದವರೆಗೆ ಬಂದು ಕೂಡುವುದು ॥೧೩೩॥ ಅಲ್ಲಿ ಪ್ರಾಣಾಪಾನಗಳ ಮಿಲನವಾಗಿ ಅವು ಸಮ ಸಮಾನವಾಗುವುವು. ಇವು ಎರಡೂ ಏಕರೂಪವಾಗಿ ಮುಂದಿನ ಮಾರ್ಗದ ಉಲ್ಲಂಘನೆ ಮಾಡುವುವು ॥೧೩೪॥ ಅಪಾನದ ಅಧೋಮಾರ್ಗವಿರುವುದು. ಅದೂ ಸಹ ಬಿಟ್ಟುಬಿಡುವುದು. ಪ್ರಾಣವು ತನ್ನ ಹೃದಯ ಮತ್ತು ಕಂಠದ ಮಾರ್ಗವನ್ನು ಬಿಟ್ಟುಕೊಟ್ಟು ಈ ಎರಡೂ ವಾಯುಗಳು ಸುಷುಮ್ನೆಯ ದ್ವಾರವನ್ನು ತೆರೆಯಿಸಿ ಅದರ ಗುಹೆಯಿಂದ ಸರಳವಾಗಿ ಮೇಲಕ್ಕೆ ಹೋಗುವುವು ॥೧೩೫॥ ಈ ಪ್ರಕಾರವಾಗಿ ಸುಷುಮ್ನೆಯ ಮನೆಯನ್ನು ಸ್ವಾಧೀನ ಮಾಡಿಕೊಂಡಿರುವುದರಿಂದ ಆರೂ ಚಕ್ರಗಳ ಪರದೆಗಳನ್ನು ಭೇದಿಸಿ, ಕಾಕೀಮುಖದ ದ್ವಾರವಾದ ಬ್ರಹ್ಮರಂಧ್ರದವರೆಗೆ ಹೋಗಿ ಮುಟ್ಟಿಕೊಳ್ಳುವರು ॥೧೩೬॥ ಅಲ್ಲಿಯವರೆಗೆ ವ್ಯವಸ್ಥಿತವಾಗಿ ಹೋಗಿ ಮುಟ್ಟಿಕೊಳ್ಳುತ್ತಲೇ ಇದ್ದ ದೇಹವನ್ನು ಬಿಟ್ಟು ಮನದಲ್ಲಿನ ಸಂಕಲ್ಪದಂತೆ ದೇಹವನ್ನು ಪ್ರಾಪ್ತಮಾಡಿಕೊಳ್ಳಲು ಬರುವುದು ॥೧೩೭॥

ವೈಕುಂಠ ಕೈಲಾಸ ಅಮರಾವತೀ । ಸಾರ್ವಭೌಮ ಚಕ್ರವರ್ತೀ । ಜೇ ಕಾಮನಾ ಕಾಮೀ ಚಿತ್ತೀ । ತೇ ಪಾವೇ ಗತೀ ತತ್ಕಾಳ ।।೧೩೮।। ಜರೀ ತೋ ಬ್ರಹ್ಮಸಾಯುಜ್ಯತಾ ವಾಹೇ । ತರೀ ಸಾಂಡೂನಿ ದೇಹಾಚೀ ಸೋಯೀ । ಶುದ್ಧ ಬ್ರಹ್ಮಧಾರಣಾ ಪಾಹೇ । ತೋ ಬ್ರಹ್ಮಚಿ ಹೋಯೇ ಸ್ವತಃಸಿದ್ಧ ।।೧೩೯।। ಯಾಪರೀ ಪ್ರಾಣಧಾರಣ । ಕರೂನಿ ನಿವರ್ತೇ ಜೋ ಜಾಣ । ತೇ ಸ್ವಚ್ಛಂದಮೃತ್ಯೂಚೇ ಲಕ್ಷಣ । ತ್ಯಾ ಆಧೀನ ಕಳಿಕಾಳ ।।೧೪೦।।

ವಿಹರಿಷ್ಯನ್ಸುರಾಕ್ರೀಡೇ ಮತ್‌ಸ್ಥಂ ಸತ್ತ್ವಂ ವಿಭಾವಯೇತ್ । ವಿಮಾನನೋಪತಿಷ್ಠಂತಿ ಸತ್ತ್ವವೃತ್ತೀಃ ಸುರಸ್ತ್ರಿಯಃ ।೨೫।।

ಅರ್ಥ:- ಒಂದುವೇಳೆ ಈತನಿಗೆ ದೇವತೆಗಳ ವಿಹಾರ ಸ್ಥಳಗಳಲ್ಲಿ ಕ್ರೀಡೆ ಮಾಡುವ ಇಚ್ಛೆವಿದ್ದರೆ, ನನ್ನ ಶುದ್ಧವಾದ ಸತ್ವಮಯ ರೂಪದ ಚಿಂತನೆಯನ್ನು ಮಾಡಬೇಕು. ಹೀಗೆ ಮಾಡುವುದರಿಂದ ಸತ್ವಗುಣದ ಅಂಶಸ್ವರೂಪ ಸುಂದರಿಯು ದೇವವಿಮಾನದಲ್ಲಿ ಕುಳಿತು ಈತನಲ್ಲಿಗೆ ಬರುವಳು.

ದೇವಾಂಚೇ ದಿವ್ಯಭೋಗೀ ಆಸಕ್ತ । ಯೋಗಿಯಾಚೇ ಝಾಲ್ಯಾ ಚಿತ್ತ । ತೇ ಪ್ರಾಪ್ತಿಲಾಗೀ ಯೇಥ । ಮಾಝೇ ಸತ್ವ ನಿಶ್ಚಿತ ಚಿಂತಾವೇ ।।೧೪೧।। ಜೇಣೇ ಸತ್ತ್ವೇ ಮ್ಯಾ ಜಾಣ । ಸ್ವರ್ಗೀ ಸ್ಥಾಪಿಲೇ ಸುರಗಣ । ತ್ಯಾ ಸತ್ತ್ವಗುಣಾಚೇ ಧಾರಣ । ನಿಜಹೃದಯೀ ಜಾಣ ಜೋ ರಾಖೇ ।।೧೪೨।। ಧ್ಯಾತಾ ಸುರಸ್ತ್ರೀಯಾಂಚೀ ಕಾಮನಿಷ್ಠಾ । ತೋ ಪಾವೇ ಸುರಸ್ವರ್ಗೀಚೀ ಪ್ರತಿಷ್ಠಾ । ವಿಮಾನಿ ಚಢೋನಿ ವರಿಷ್ಠಾ । ಕರೀ ಕಾಮಚೇಷ್ಟಾ ಅಪ್ಸರಾಂಸೀ ।।೧೪೩।।

ಯಥಾ ಸಂಕಲ್ಪಯೇದ್‌ಬುದ್ಧ್ಯಾ ಯದಾ ಮತ್ಪರಃ ಪುಮಾನ್ । ಮಯಿ ಸತ್ಯೇ ಮನೋ ಯುಂಜಸ್ತಥಾ ತತ್ಸಮುಪಾಶ್ನುತೇ ।೨೬।।

ಅರ್ಥ:- ಯಾವ ಪುರುಷನು ನನ್ನ ಸತ್ಯ ಸಂಕಲ್ಪ ಸ್ವರೂಪದಲ್ಲಿ ತನ್ನ ಚಿತ್ತವನ್ನು ಸ್ಥಿರಮಾಡಿ, ಆ ಧ್ಯಾನದಲ್ಲಿ ರಮಮಾಣನಾಗಲು, ಆತನು ಮನಸ್ಸಿನಿಂದ ಯಾವ ವೇಳೆಯಲ್ಲಿ ಯಾವ ಸಂಕಲ್ಪವನ್ನು ಮಾಡುವನೋ, ಆ ಆತನ ಸಂಕಲ್ಪಗಳು ಸಿದ್ಧವಾಗುವುವು.

ಸಂಕಲ್ಪಮಾತ್ರೇ ಕರೀ ಸಮಸ್ತ । ಜೋ ಮೀ ಸತ್ಯಸಂಕಲ್ಪ ಭಗವಂತ । ತ್ಯಾ ಮಾಝೇ ಠಾಯೀ ಚಿತ್ತ । ವಿಶ್ವಾಸಯುಕ್ತ ಜೋ ರಾಖೇ ।।೧೪೪।। ತೋ ಜೇ ಜೇ ಕಾಳೀ ಜೇ ಜೇ ದೇಶೀ । ಜೇ ಜೇ ಕರ್ಮೀ ಜೇ ಜೇ ಅವಸ್ಥೇಸೀ । ಜೇ ಜೇ ಕಾಂಹೀ ವಾಂಛೀ ಮಾನಸೀ । ತೇ ಸಂಕಲ್ಪ ತ್ಯಾಪಾಶೀ ಸದಾ ಸಫಳ ।।೧೪೫।। ಮೀ ಸತ್ಯಸಂಕಲ್ಪ ಭಗವಂತ । ಹೃದಯೀ ಧರಿಲ್ಯಾ ಧ್ಯಾನಯುಕ್ತ । ತ್ಯಾಂಚೇ ಜೇ ಜೇ ಕಾಮ ಕಾಮೀ ಚಿತ್ತ । ತೇ ಸಂಕಲ್ಪ ಪ್ರಾಪ್ತ ಹೋತೀ ತ್ಯಾಸೀ ।।೧೪೬।।

ಯೋ ವೈ ಮದ್ಭಾವಮಾಪನ್ನ ಈಶಿತುರ್ವಶಿತುಃ ಪುಮಾನ್ । ಕುತಶ್ಚಿನ್ನ ವಿಹನ್ಯೇತ ತಸ್ಯ ಚಾಜ್ಞಾ ಯಥಾ ಮಮ ।೨೭।।

ಅರ್ಥ:- ನಾನು ''ಈಶಿತ್ವ, ವಶಿತ್ವ'' ಸಿದ್ಧಿಗಳ ಸ್ವಾಮಿಯಾಗಿರುವೆನು. ಆದ್ದರಿಂದ ಯಾರೂ ಎಂದಿಗೂ ನನ್ನ ಆಜ್ಞೆಯನ್ನು ಮೀರಲು ಶಕ್ಯವಿಲ್ಲ. ಯಾರು ಈ ನನ್ನ ಸ್ವರೂಪದ ಚಿಂತನೆಯನ್ನು ಮಾಡುತ್ತ ಹಾಗೂ ಆ ಭಾವನೆಯಲ್ಲಿ ಏಕರೂಪರಾಗುವರೋ, ಆಗ ನನ್ನ ಸಮಾನ ಅವರ ಆಜ್ಞೆಯನ್ನೂ ಕೂಡ ಯಾರೂ ಮೀರಲು ಶಕ್ಯವಿಲ್ಲ.

ವೈಕುಂಠ, ಕೈಲಾಸ ಅಥವಾ ಅಮರಾವತೀ ಈ ಲೋಕಗಳಿಗೆ ಹೋಗಬೇಕೆನ್ನುವ ಅಥವಾ ಸಾರ್ವಭೌಮ ಚಕ್ರವರ್ತಿಯಾಗಬೇಕೆಂಬ ಬಯಕೆ ಪಡಲು, ಆತನಿಗೆ ಈ ಸ್ಥಿತಿಗಳು ಪ್ರಾಪ್ತವಾಗುವುವು ।।೧೩೮।। ಒಂದು ವೇಳೆ ಆತನು ಬ್ರಹ್ಮಸಾಯುಜ್ಯತೆಬೇಕೆಂದು ಇಚ್ಛೆಪಟ್ಟರೆ, ಆಗ ಪೂರ್ವದೇಹದ ಭಾನವನ್ನು ಬಿಟ್ಟು ಶುದ್ಧವಾದ ಬ್ರಹ್ಮಚಿಂತನೆಯಲ್ಲಿ ಮಗ್ನನಾಗಲು, ಆತನು ಸ್ವತಃ ಸಿದ್ಧ ಬ್ರಹ್ಮವೇ ಆಗುವನು ।।೧೩೯।। ಈ ಪ್ರಕಾರವಾಗಿ ಪ್ರಾಣಧಾರಣೆಯನ್ನುಮಾಡಿ ದೇಹತ್ಯಾಗ ಮಾಡುವಿಕೆ, ಇದುವೇ ಇಚ್ಛಾಮರಣದ ಲಕ್ಷಣವಾಗಿರುವುದು. ಕಾಲಿಕಾಲನೂ ಕೂಡ ಇವರ ಆಧೀನನಾಗುವನು ।।೧೪೦।।

ಒಂದುವೇಳೆ ಯೋಗಿಗಳವರು ತಮ್ಮ ಮನದಲ್ಲಿ ದೇವತೆಗಳ ದಿವ್ಯ ಉಪಭೋಗಗಳನ್ನು ಭೋಗಿಸುವ ಇಚ್ಛೆಯನ್ನು ಮಾಡಿದರೆ, ಅವರು ನನ್ನ ಶುದ್ಧ ಸತ್ವದ ಚಿಂತನೆಯನ್ನು ಮಾಡಬೇಕು ।।೧೪೧।। ಆ ಸತ್ವದ ಯೋಗದಿಂದ ನಾನು ಸ್ವರ್ಗದಲ್ಲಿ ದೇವತೆಗಳವರ ಸ್ಥಾಪನೆಯನ್ನು ಮಾಡಿರುವೆನು. ಆ ಯಾವ ಸತ್ವಗುಣದ ಧಾರಣೆಯನ್ನು ಯಾರು ತಮ್ಮ ಹೃದಯದಲ್ಲಿ ಧರಿಸುವರೋ ।।೧೪೨।। ಅವರು ದೇವತಾ ಸ್ತ್ರೀಯರ ಇಚ್ಛೆಯನ್ನು ಧರಿಸಿದರೆ, ಸ್ವರ್ಗದಲ್ಲಿನ ದೇವತೆಗಳ ಸನ್ಮಾನಕ್ಕೆ ಪ್ರಾಪ್ತರಾಗುವರು. ಇವರು ಶ್ರೇಷ್ಠವಾದ ವಿಮಾನದಲ್ಲಿ ಕುಳಿತುಕೊಂಡು ಅಪ್ಸರ ಸ್ತ್ರೀಯರಲ್ಲಿ ಕಾಮಚೇಷ್ಟೆ ಮಾಡುವರು ।।೧೪೩।।

ಕೇವಲ ಸಂಕಲ್ಪಮಾತ್ರದಿಂದ ಎಲ್ಲವನ್ನೂ ಮಾಡುವವ ನಾನು ಸತ್ಯಸಂಕಲ್ಪ ಭಗವಂತನಾಗಿರುವೆನು. ಈ ಯಾವ ನನ್ನಲ್ಲಿ ಯಾರು ವಿಶ್ವಾಸಪೂರ್ವಕವಾಗಿ ಚಿತ್ತವನ್ನು ಇಡುವನೋ ।।೧೪೪।। ಆತನು ಯಾವ ಯಾವ ಕಾಲದಲ್ಲಿ, ಯಾವ ಯಾವ ದೇಶದಲ್ಲಿ, ಯಾವ ಯಾವ ಅವಸ್ಥೆಯಲ್ಲಿ ಯಾವ ಯಾವ ಇಚ್ಛೆಗಳನ್ನು ಮನದಲ್ಲಿ ಮಾಡುವನೋ, ಅವುಗಳೆಲ್ಲವೂ ಪೂರ್ಣವಾಗುವುವು ।।೧೪೫।। ಸತ್ಯಸಂಕಲ್ಪನಾದ ನನ್ನ ಭಗವಂತನನ್ನು ಯಾರು ತಮ್ಮ ಹೃದಯದಲ್ಲಿ ಧ್ಯಾನ ಮಾಡುವರೋ, ಅವರ ಮನದಲ್ಲಿ ಯಾವ ಯಾವ ಇಚ್ಛೆಗಳಿರುವುವೋ, ಅವುಗಳೆಲ್ಲವೂ ಪೂರ್ಣವಾಗುವುವು ।।೧೪೬।।

ಜೋ ಕಾ ಮೀ ಸರ್ವಾಂಚಾ ನಿಯಂತಾ । ಸ್ವಯೇ ಸ್ವತಂತ್ರ ತತ್ತ್ವತಾ । ತ್ಯಾ ಮಾಝೇ ಧ್ಯಾನ ಕರಿತಾ । ಮದ್ಭಾವತಾ ಉಪತಿಷ್ಠೇ ।।೧೪೭।। ಮೀಚಿ ಭಗವಂತ ಸುನಿಶ್ಚಿತ । ಐಸೇ ಬೋಧಾ ಆಲೇ ಯಥಾಸ್ಥಿತ । ತ್ಯಾಚೀ ಆಜ್ಞಾ ಸುರವರ ವಂದಿತ । ಪಶುಪಕ್ಷೀ ನುಲ್ಲಂಘಿತ ತೇ ಆಜ್ಞಾ ।।೧೪೮।। ಜೈಶೀ ಮಾಝೀ ಆಜ್ಞಾ ಸರ್ವಾವರೀ । ತೈಶೀ ತ್ಯಾಚೀ ಆಜ್ಞಾ ಚರಾಚರೀ । ಕೋಣೇ ನುಲ್ಲಂಘಿತೀ ತಿಳಭರೀ । ತೇ ಅಜ್ಞಾನಸಿದ್ಧಿ ಖರೀ ತೋ ಲಾಹೇ ।।೧೪೯।। ಏವಂ ಯಾ ಗುಣಹೇತುಸಿದ್ಧಿ ದಹಾಹೀ । ಧಾರಣಾಯುಕ್ತ ಸಾಂಗೀತಲ್ಯಾ ಪಾಹೀ । ಆತಾ ಕ್ಷುದ್ರ ಪಂಚಸಿದ್ಧಿ ಜ್ಯಾಹೀ । ತುಜ ಮೀ ತ್ಯಾಹೀ ಸಾಂಗೇನ ।।೧೫೦।।

ಮದ್ಭಕ್ತ್ಯಾ ಶುದ್ಧಸತ್ತ್ವಸ್ಯ ಯೋಗಿನೋ ಧಾರಣಾವಿದಃ । ತಸ್ಯ ತ್ರೈಕಾಲಿಕೀ ಬುದ್ಧಿರ್ಜನ್ಮ ಮೃತ್ಯೂಪಬೃಂಹಿತಾ ।।೨೮।।

ಅರ್ಥ:- ಯಾವ ಯೋಗಿಯ ಚಿತ್ತವು ನನ್ನ ಧಾರಣೆಯನ್ನು ಮಾಡಿ ನನ್ನ ಭಕ್ತಿಯ ಪ್ರಭಾವದಿಂದ ಶುದ್ಧವಾಗುವುದೋ, ಆತನ ಬುದ್ಧಿಯು ಜನ್ಮ-ಮರಣ, ಇತ್ಯಾದಿ ಅದೃಷ್ಟ ವಿಷಯಗಳನ್ನು ತಿಳಿಯುತ್ತದೆ. ಮತ್ತು ಭೂತ, ಭವಿಷ್ಯ, ವರ್ತಮಾನಗಳ ಸರ್ವ ವಿಷಯಗಳು ಆತನಿಗೆ ತಿಳಿಯುತ್ತವೆ.

ಜಗಾಚೇ ಉತ್ಪತ್ತಿಸ್ಥಿತಿನಿದಾನ । ಸತ್ಯ ಅಸೇ ಮಜ ಅಧೀನ । ತ್ಯಾ ಮಾಝ್ಯಾ ಠಾಯೀ ಕರಿತಾ ಭಜನ । ಅಂತಃಕರಣ ಅತಿಶುದ್ಧ ।।೧೫೧।। ತೇ ಶುದ್ಧ ಅಂತಃಕರಣೀ ಜಾಣ । ಭೂತ ಭವಿಷ್ಯ ವರ್ತಮಾನ । ಜಗಾಚೇ ಜನ್ಮ ಭೋಗ ಮರಣ । ಹೇ ತ್ರಿಕಾಳಜ್ಞಾನ ಸಿದ್ಧಿ ಪ್ರಕಟೇ ।।೧೫೨।।

ಅಗ್ನ್ಯಾದಿಭಿರ್ನ ಹನ್ಯೇತ ಮುನೇರ್ಯೋಗಮಯಂ ವಪುಃ । ಮದ್ಯೋಗಶಾಂತಚಿತ್ತಸ್ಯ ಯಾದಸಾಮುದಕಂ ಯಥಾ ।।೨೯।।

ಅರ್ಥ:- ಜಲದಲ್ಲಿರುವ ಪ್ರಾಣಿಗಳು ಜಲದಿಂದ ನಾಶವಾಗುವುದಿಲ್ಲ. ಅದರಂತೆ ಯಾವ ಯೋಗಿಯು ತನ್ನ ಚಿತ್ತವನ್ನು ನನ್ನಲ್ಲಿ ಅರ್ಪಣೆಯನ್ನು ಮಾಡಿರುವನೋ, ಆತನ ಯೋಗಮಯ ಶರೀರಕ್ಕೆ ಅಗ್ನಿ, ಜಲ ಇತ್ಯಾದಿ ಯಾವುದೇ ಪದಾರ್ಥಗಳು ನಷ್ಟಮಾಡಲಾರವು.

ಅತಿಪ್ರಯಾಸ ಕರಿತಾ ಚಿತ್ತ । ಮಜಸೀ ಯೋಗಾತೇ ಝಾಲೇ ಪ್ರಾಪ್ತ । ತೇಣೇ ಯೋಗೇ ಶರೀರ ಯೋಗಯುಕ್ತ । ಅಬಾಧಿತ ಮಹಾದ್ವಂದ್ವೀ ।।೧೫೩।। ತ್ಯಾಸೀ ಬಾಧೀನಾ ಶೀತ ಉಷ್ಣ । ಮೃದು ಆಣಿಕ ಕಠಿಣ । ಅಗ್ನಿ ಲಾಗಲಿಯಾಹೀ ಜಾಣ । ದೇಹ ದಹನ ನವ್ಹೇ ತ್ಯಾಚಾ ।।೧೫೪।। ತೇ ಅಗ್ನಿಮಾಜೀ ವಿಶ್ರಾಂತಿ ತ್ಯಾಸೀ । ಜೇವೀ ಕಾ ಜಳೀ ಜಳಚರಾಂಸೀ । ಅದ್ವಂದ್ವತಾಸಿದ್ಧಿ ಐಸೀ । ಸಾಧಕಾಸೀ ಉಪತಿಷ್ಠೇ ।।೧೫೫।। ಯೇಚಿ ಸಿದ್ಧೀಂಚ್ಯಾ ಧಾರಣಾ । ಪ್ರತಿಷ್ಟಂಭಸಿದ್ಧೀ ಪ್ರಕಟೇ ಜಾಣಾ । ಐಕ ತಿಚ್ಯಾಹೀ ಲಕ್ಷಣಾ । ಜಿಚೇ ತೋಡರೀ ಜಾಣಾ ಸಕಳ ಬಾಧಾ ।।೧೫೬।। ತ್ಯಾಸೀ ಬಾಹ್ಯ ವಾಯೂಚೇನಿ ಝಡಾಡೇ । ಬಾಧಕತಾ ಕದಾ ನ ಘಡೇ । ಪ್ರಾಣ ಜಿಂತೋನಿ ಆಂತುಲೀಕಡೇ । ಕರೀ ರೋಕಡೇ ದಾಸೀ ತ್ಯಾಸೀ ।।೧೫೭।।

ನಾನು ಸರ್ವರನ್ನು ನಿಯಂತ್ರಿಸುವವನಾಗಿರುವೆನು. ನಾನು ಸ್ವಭಾವತಃ ಸ್ವತಂತ್ರನಾಗಿರುವೆನು. ಹೀಗಿರುವ ನನ್ನ ಧ್ಯಾನವನ್ನು ಮಾಡಲು ಯೋಗಿಗೆ ಆತ್ಮಸ್ವರೂಪವು ಪ್ರಾಪ್ತವಾಗುವುದು ।।೧೪೭।। ನಾನೇ ನಿಶ್ಚಯಪೂರ್ವಕವಾಗಿ ಭಗವಂತನು ಎಂದು ಯಾರಿಗೆ ದೃಢವಾಗಿ ಅನುಭವಕ್ಕೆ ಬರುವುದೋ, ಆತನ ಆಜ್ಞೆಯನ್ನು ದೇವತೆಗಳು ಶಿರಸಾ ವಂದಿಸಿ ಮಾನ್ಯ ಮಾಡುವರು. ಪಶುಪಕ್ಷಿಗಳೂ ಕೂಡ ಆತನ ಆಜ್ಞೆಯನ್ನು ಉಲ್ಲಂಘಿಸಲಾರವು ।।೧೪೮।। ವಿಶ್ವದಲ್ಲಿ ಎಲ್ಲರಲ್ಲಿಯೂ ನನ್ನ ಆಜ್ಞೆಯು ಹೇಗೆ ನಡೆಯುವುದೋ, ಆತನ ಆಜ್ಞೆಯೂ ಕೂಡ ಸರ್ವ ಚರಾಚರಗಳಲ್ಲಿ ನಡೆಯುವುದು. ಯಾರೂ ಕೂಡ ಆತನ ಆಜ್ಞೆಯನ್ನು ಎಳ್ಳಷ್ಟೂ ಮೀರುವುದಿಲ್ಲ. ಈ ಪ್ರಕಾರದ ಆಜ್ಞಾಸಿದ್ಧಿಯು ಆತನಿಗೆ ಪ್ರಾಪ್ತವಾಗುವುದು ।।೧೪೯।। ಈ ಪ್ರಕಾರವಾಗಿ ಈ ಹತ್ತು ಧಾರಣಾಯುಕ್ತ ಗುಣಹೇತುಸಿದ್ಧಿಗಳನ್ನು ಹೇಳಿದೆನು. ಈಗ ಯಾವ ಕ್ಷುದ್ರ ಐದು ಸಿದ್ಧಿಗಳನ್ನೂ ಸಹ ನಿನಗೆ ಹೇಳುವೆನು, ಕೇಳು ।।೧೫೦।।

ಜಗತ್ತಿನ ಉತ್ಪತ್ತೀ, ಸ್ಥಿತೀ, ಮತ್ತು ಲಯ ಇವು ನನ್ನ ಆಧೀನವಾಗಿವೆ. ಹೀಗಿರುವ ನನ್ನ ಭಜನೆಯನ್ನು ಮಾಡಲು ಅಂತಃಕರಣವು ಅತ್ಯಂತ ಶುದ್ಧವಾಗುವುದು ।।೧೫೧।। ಆ ಯಾವ ಶುದ್ಧವಾದ ಅಂತಃಕರಣದಲ್ಲಿ ಭೂತ, ಭವಿಷ್ಯ ಮತ್ತು ವರ್ತಮಾನ, ಜಗತ್ತಿನ ಭೋಗ ಹಾಗೂ ಜನ್ಮ-ಮರಣ ಇವುಗಳ ತ್ರಿಕಾಲ ಜ್ಞಾನವಾಗುವ ಸಿದ್ಧಿಯು ಪ್ರಾಪ್ತವಾಗುವುದು ।।೧೫೨।।

ಅತಿಪ್ರಯಾಸದಿಂದ ಅಭ್ಯಾಸವನ್ನು ಮಾಡಿದರೆ ಚಿತ್ತವು ನನ್ನ ಸ್ವರೂಪಕ್ಕೆ ಪ್ರಾಪ್ತವಾಗುವುದು. ಚಿತ್ತಕ್ಕೆ ನನ್ನ ಯೋಗವು ಆಯಿತೆಂದರೆ ಶರೀರವು ಯೋಗಯುಕ್ತವಾಗುವುದು. ಈ ಯಾವ ಶರೀರಕ್ಕೆ ಮಹಾ ಮಹಾ ದ್ವಂದ್ವಗಳ ಬಾಧೆಯಾಗುವುದಿಲ್ಲ ।।೧೫೩।। ಆತನಿಗೆ ಶೀತ- ಉಷ್ಣ, ಮೃದು-ಕಠಿಣ ಇವುಗಳ ಬಾಧೆಯಾಗುವುದಿಲ್ಲ. ಆತನ ಶರೀರಕ್ಕೆ ಅಗ್ನಿಯು ಹತ್ತಿದರೂ ಕೂಡ ಆತನು ಸುಡಲಾರನು ।।೧೫೪।। ಜಲದಲ್ಲಿ ಜಲಚರಗಳು ಶಾಂತವಾಗಿ ಇರುವಂತೆ ಆತನು ಪ್ರಜ್ವಲಿತ ಅಗ್ನಿಯಲ್ಲಿ ಸುಖವಾಗಿ ವಿಶ್ರಾಂತಿಯನ್ನು ಪಡೆಯುವನು. ಇಂತಹ ಈ ಅದ್ವಂದ್ವತಾಸಿದ್ಧಿಯು ಸಾಧಕನಿಗೆ ಪ್ರಾಪ್ತವಾಗುವುದು ।।೧೫೫।। ಇದೇ ಸಿದ್ಧಿಯ ಧಾರಣೆಯಿಂದ ''ಪ್ರತಿಷ್ಟಂಭ'' ಸಿದ್ಧಿಯು ಉತ್ಪನ್ನವಾಗುವುದು. ಸರ್ವ ಬಾಧೆಗಳನ್ನು ಜಯಿಸಿದ ತೋಡೆಗಳು ಯಾರ ಕಾಲುಗಳಲ್ಲಿ ಇರುವುವೋ, ಅದರ ಲಕ್ಷಣವನ್ನು ಈಗ ಕೇಳು ।।೧೫೬।। ಆತನಿಗೆ ಹೊರಗಿನ ಬಿರುಗಾಳಿಯಿಂದ ಯಾವ ಪೀಡೆಯು ಆಗುವುದಿಲ್ಲ. ಆತನು ಪ್ರಾಣವನ್ನೂ ಸಹ ಜಯಿಸಿ ತನ್ನ ದಾಸನನ್ನಾಗಿ ಮಾಡಿಕೊಳ್ಳುವನು ।।೧೫೭।।

ದೇಠ ಫೇಡೂನಿ ಸುಮನಸೇಜೇ । ಜೇವೀ ಕಾ ಸುಖೇ ನಿದ್ರಾ ಕೀಜೇ । ತೇವೀ ಇಂಗಳಾವರೀ ಹಾ ನಿಜೇ । ಬಾಧಾ ನುಪಜೇ ಅಗ್ನೀಚೀ ॥೧೫೮॥ ಶೀತಳ ಜಳೀ ಶೀತಕಾಳೀ । ಸಿದ್ಧ ಬುಡವಿಲ್ಯಾ ಕೌತುಕೇ ಜಳೀ । ತೋ ಬಾಹೇರೀ ನಿಘಾವಯಾ ನ ತಳಮಳೀ । ಜಳೀ ಮಾಸೋಳೀ ಜೇವೀ ಕ್ರೀಡೇ ॥೧೫೯॥ ಗ್ರೀಷ್ಮ ಕಾಳೀಚೇ ನಿದಾಘ ಉಷ್ಣ । ತ್ಯಾಮಾಜೇ ಸಿದ್ಧ ಘಾತಲ್ಯಾ ಜಾಣ । ರವಿಕರೀ ಪದ್ಮ ಉಲ್ಹಾಸೇ ಗಹನ । ತೈಸೇ ಲಾಗತಾ ಉಷ್ಣ ತೋ ಟವಟವೀ ॥೧೬೦॥ ಯಾಪರೀ ಅರ್ಕಬಾಧಕತಾ । ತ್ಯಾಸೀ ಬಾಧೀನಾ ಸರ್ವಥಾ । ತೈಶೀಚ ಸಿದ್ಧಾಸೀ ಶಸ್ತ್ರೇ ಲಾಗತಾ । ಶಸ್ತ್ರಘಾತಾ ನಾತುಡೇ ತೋ ॥೧೬೧॥ ಆಕಾಶ ಖೋಚೂ ಜಾತಾ ಪಾಹೇ । ಶಸ್ತ್ರೇಸೀ ಘಾವೋ ವಾಯಾ ಜಾಯೇ । ತೇವೀ ಸಿದ್ಧಾಸೀ ನ ಲಾಗತೀ ಘಾಯೇ । ಶಸ್ತ್ರ ಉಪಾಯೇ ಸುನಾಟ ॥೧೬೨॥ ಸಿದ್ಧಾಸೀ ದಿಧಲಿಯಾ ವಿಖ । ವಿಖಹೀ ನವ್ಹೇ ತ್ಯಾ ಬಾಧಕ । ಜೇವೀ ವಿಖಕೀಡೇ ವಿಖೀ ದೇಖ । ಯಥಾಸುಖ ಕ್ರೀಡತೀ ॥೧೬೩॥ ಛಾಯಾ ಪರ್ವತಾತಳೀ ದಡಪಿತಾ । ತೇ ದಾಟೇನಾ ಜೇವೀ ಪರ್ವತಾ । ತೇವೀ ಅಗ್ನಿ ಅರ್ಕ ವಿಷ ಅಂಬು ವಾತಾ । ಸಿದ್ಧಾಸೀ ಸರ್ವಥಾ ಬಾಧೇನಾ ॥೧೬೪॥ ಐಕೋನಿ ಸಿದ್ಧೀಂಚೀ ಕಥಾ । ಉಲ್ಹಾಸೂ ಜರೀ ಮಾನೇ ಚಿತ್ತಾ । ತರೀ ಮಾಝೇ ಪ್ರಾಪ್ತೀಸೀ ತತ್ತ್ವತಾ । ಸಿದ್ಧಿ ಸರ್ವಥಾ ಬಾಧಕ ॥೧೬೫॥ ಮಾಝೇ ಸ್ವರೂಪ ಶುದ್ಧ ಅದ್ವೈತ । ತೇಥ ಸಿದ್ಧೀಚೇ ಜೇ ಮನೋರಥ । ಲೋಕರಂಜನ ಸಮಸ್ತ । ನಾಹೀ ಪರಮಾರ್ಥ ಸಿದ್ಧೀಮಾಜೀ ॥೧೬೬॥ ಮಾಗಿಲೇಚಿ ಶ್ಲೋಕಸಂಧೀ । ಪರಚಿತ್ತಾಭಿಜ್ಞತೇಚಿ ಸಿದ್ಧೀ । ಧ್ವನಿತ ಸುಚವಲೀ ತ್ರಿಶುದ್ಧೀ । ತಿಚಾಹೀ ವಿಧೀ ಅವಧಾರೀ ॥೧೬೭॥ ತೇಚ ಶ್ಲೋಕೀ ವ್ಯಾಖ್ಯಾನ । ಕರಿತಾ ಭಗವಂತಾಚೇ ಧ್ಯಾನ । ಪ್ರಕೃತಿನಿಯಂತಾ ಆಪಣ । ಸಾಕ್ಷೀ ಜಾಣ ಸರ್ವಾಚಾ ॥೧೬೮॥ ಐಸೇ ಈಶ್ವರತ್ವ ದೃಢ ಧ್ಯಾತಾ । ಚಿತ್ತಚಾಲಕತಾ ಯೇ ತ್ಯಾಚ್ಯಾ ಹಾತಾ । ತೇವ್ಹಾ ಚಿತ್ತಾಚೀ ಅಭಿಜ್ಞತಾ । ಸ್ವಭಾವತಾ ಉಪತಿಷ್ಠೇ ॥೧೬೯॥ ತೇವ್ಹಾ ಜೀವಾಚೀ ಸ್ವಪ್ನಾವಸ್ಥಾ । ಹಾ ಸಾಕ್ಷಿತ್ವೇ ದೇಖತಾ । ಜೋ ತೋ ಸಂಕಲ್ಪ ತ್ಯಾಚ್ಯಾ ಚಿತ್ತಾ । ತೋ ಸ್ವಭಾವತಾ ಹಾ ಜಾಣೇ ॥೧೭೦॥ ಜಿವ್ಹಾರೀಚೀ ಜೇ ಆವಡೀ ಮೋಟೀ । ತೇ ಹಾ ಅವಲೀಲಾ ಸಾಂಗೇ ಗೋಷ್ಟಿ । ಏವಢೀ ಸಿದ್ಧೀಚೀ ಕಸವಟೀ । ಉಠಾಉಠೀ ತೋ ಲಾಭೇ ॥೧೭೧॥

ತುಂಬು ತೆಗೆದ ಹೂವುಗಳ ಹಾಸಿಗೆಯ ಮೇಲೆ ಹೇಗೆ ಸುಖವಾಗಿ ಮಲಗಬೇಕೋ, ಅದೇ ಪ್ರಕಾರವಾಗಿ ಆತನು ನಿಗಿನಿಗಿಯಾಗಿ ಪ್ರಜ್ವಲಿಸುವ ಬೆಂಕಿಕೆಂಡಗಳ ಮೇಲೆ ಸುಖವಾಗಿ ಮಲಗುವನು. ಆತನಿಗೆ ಆ ಯಾವ ಅಗ್ನಿಯ ಯಾವ ಪೀಡೆಯೂ ಆಗುವುದಿಲ್ಲ ॥೧೫೮॥ ಶೀತಲ ಕಾಲದ ಶೀತಲ ಜಲದಲ್ಲಿ ಸಿದ್ಧಪುರುಷನಿಗೆ ಕೌತುಕದಿಂದ ಮುಳುಗಿಸಲು ಆಗ ಆತನು ಅಲ್ಲಿಂದ ಹೊರಗೆ ಬರುವುದಕ್ಕಾಗಿ ಎಂದಿಗೂ ತಳಮಳಿಸುವುದಿಲ್ಲ ನೀರಿನಲ್ಲಿ ಮೀನವು ಹೇಗೆ ಸುಖವಾಗಿ ಕ್ರೀಡಿಸುತ್ತಿರುವುದೋ, ಅದೇ ಪ್ರಕಾರವಾಗಿ ಆತನು ಸುಖವಾಗಿ ನೀರಿನಲ್ಲಿ ಕ್ರೀಡಿಸುವನು ॥೧೫೯॥ ಅಥವಾ ಗ್ರೀಷ್ಮ ಋತು ಕಾಲದ ಅತ್ಯಂತ ಸುಡುಬಿಸಿಲಿನಲ್ಲಿ ಆ ಸಿದ್ಧನಿಗೆ ಇಡಲು, ಸೂರ್ಯ ಕಿರಣಗಳಿಂದ ಕಮಲವು ಪ್ರಫುಲ್ಲಿತವಾಗುವಂತೆ ಆತನಿಗೆ ಬಿಸಲು ಬಡಿದಂತೆ ಹೆಚ್ಚು ಹೆಚ್ಚಿಗೆ ಸುಖದಿಂದ ಚೆನ್ನಾಗಿ ತೋರುವನು ॥೧೬೦॥ ಈ ಪ್ರಕಾರವಾಗಿ ಸೂರ್ಯನ ಪ್ರಖರ ಕಿರಣಗಳೂ ಕೂಡ ಆತನಿಗೆ ಬಾಧಿಸಲಾರವು. ಸಿದ್ಧನಿಗೆ ಶಸ್ತ್ರದ ಹೊಡೆತ ಬೀಳಲು ಆತನು ಶಸ್ತ್ರದಿಂದ ಯಾವ ಪೀಡೆಯನ್ನೂ ಪಡೆಯಲಾರನು ॥೧೬೧॥ ಶಸ್ತ್ರದಿಂದ ಆಕಾಶಕ್ಕೆ ತಿವಿಯುವ ಪ್ರಯತ್ನ ಮಾಡಲು ಅದು ಪೂರ್ಣ ವಿಫಲವಾಗುವುದು. ಅದರಂತೆ ಸಿದ್ಧನಿಗೂ ಕೂಡ ಶಸ್ತ್ರದ ಹೊಡೆತವು ಬೀಳುವುದಿಲ್ಲ. ಶಸ್ತ್ರದ ಸರ್ವ ಪ್ರಕಾರದ ಉಪಾಯಗಳು ಕೇವಲ ನಿಷ್ಫಲವಾಗುವುವು ॥೧೬೨॥ ಸಿದ್ಧನಿಗೆ ವಿಷವನ್ನು ಕುಡಿಯಲು ಕೊಡಲು ಆ ವಿಷವು ಆತನಿಗೆ ಬಾಧಿಸಲು ಶಕ್ಯವಿಲ್ಲ. ವಿಷದಲ್ಲಿನ ಜಂತುಗಳು ಯಾವ ಪ್ರಕಾರವಾಗಿ ವಿಷದಲ್ಲಿ ಸುಖವಾಗಿ ಕ್ರೀಡಿಸುವಂತೆ ಆತನೂ ಕೂಡ ವಿಷವನ್ನು ಸುಖವಾಗಿ ದಕ್ಕಿಸಿಕೊಳ್ಳುವನು ॥೧೬೩॥ ನೆರಳನ್ನು ಒಂದುವೇಳೆ ಪರ್ವತದ ಅಡಿಯಲ್ಲಿ ಹತ್ತಿಕ್ಕಲು, ಅದು ಪರ್ವತದ ಸ್ಥಿತಿಯಲ್ಲಿ ಯಾವ ತೊಂದರೆಯನ್ನೂ ಕೊಡಲಾರದು. ಅದರಂತೆಯೇ ಅಗ್ನೀ, ಸೂರ್ಯ, ವಿಷ, ನೀರು, ಗಾಳೀ ಇವು ಯಾವುವೂ ಸಿದ್ಧನಿಗೆ ಎಂದಿಗೂ ಬಾಧೆಯನ್ನು ಮಾಡಲಾರವು ॥೧೬೪॥ ಈ ಯಾವ ಸಿದ್ಧಿಗಳ ವಾರ್ತೆಯನ್ನು ಕೇಳಿ ಮನಸ್ಸಿಗೆ ಉಲ್ಹಾಸವಾಗುವುದು ನಿಜ, ಆದರೆ ಈ ಯಾವ ಸರ್ವ ಪ್ರಕಾರಗಳ ಸಿದ್ಧಿಗಳು ನನ್ನ ಪ್ರಾಪ್ತಿಗೆ ಬಾಧಕವಾಗಿರುವುವು ॥೧೬೫॥ ನನ್ನ ಸ್ವರೂಪವು ಶುದ್ಧ, ಅದ್ವೈತವಾಗಿರುವುದು ಮತ್ತು ಸಿದ್ಧಿಗಳ ಸರ್ವ ಅಭಿಪ್ರಾಯಗಳು ಲೋಕರಂಜನೆಗಾಗಿ ಇರುವುವು. ಆ ಸಿದ್ಧಿಗಳಲ್ಲಿ ಪರಮಾರ್ಥವು ಇರುವುದಿಲ್ಲ ॥೧೬೬॥ ಹಿಂದಿನ ಶ್ಲೋಕದ ಕೊನೆಯಲ್ಲಿ ''ಪರಚಿತ್ತಾಭಿಜ್ಞತಾ'' ಈ ನಾಮದ ಒಂದು ಸಿದ್ಧಿಯನ್ನು ಧ್ವನಿತಾರ್ಥದಿಂದ ಹೇಳಲಾಗಿತ್ತು. ಈಗ ಅದರ ಲಕ್ಷಣವನ್ನು ಕೇಳು ॥೧೬೭॥ ಅದೇ ಶ್ಲೋಕದಲ್ಲಿ ಹೀಗೆಯೂ ಹೇಳಿದೆ. ಏನೆಂದರೆ ಪ್ರಕೃತಿಯನ್ನು ನಿಯಂತ್ರಣ ಮಾಡುವವನು ಸರ್ವರ ಸಾಕ್ಷಿಯು ನಾನಾಗಿರುವೆನು ॥೧೬೮॥ ಹೀಗಿರುವ ಈಶ್ವರನ ಧ್ಯಾನವನ್ನು ಮಾಡಲು ಚಿತ್ತದ ಚಾಲಕನೇ ಆತನಿಗೆ ಪ್ರಾಪ್ತನಾಗುವನು. ಆದ್ದರಿಂದ ಚಿತ್ತದ ತಿಳವಳಿಕೆಯು ಆತನಿಗೆ ಸಹಜವಾಗಿಯೇ ಪ್ರಾಪ್ತವಾಗುವುದು ॥೧೬೯॥ ಆ ಸಮಯದಲ್ಲಿ ಆತನು ಜೀವದ ಸ್ವಪ್ನಸ್ಥಿತಿಯನ್ನು ಸಾಕ್ಷಿತ್ವದಿಂದ ಕಾಣುತ್ತಿರುವನು. ಆತನ ಚಿತ್ತದಲ್ಲಿನ ಸಂಕಲ್ಪಗಳು ಈತನಿಗೆ ಸ್ವಾಭಾವಿಕವಾಗಿಯೇ ತಿಳಿಯುವುವು ॥೧೭೦॥ ಆತನ ಅಂತಃಕರಣದಲ್ಲಿನ ಯಾವ ಅತ್ಯಂತ ಗುಪ್ತವಾಗಿರುವ ಬೇಡಿಕೆ ಇರುವುದೋ, ಅದನ್ನು ಈತನು ಸಹಜವಾಗಿಯೇ ಹೇಳಬಲ್ಲನು, ಇಷ್ಟೊಂದು ಈ ಸಿದ್ಧಿಯ ಪರೀಕ್ಷಕ ಬುದ್ಧಿಯು ಆತನಿಗೆ ತತ್ಕಾಲದಲ್ಲಿ ಪ್ರಾಪ್ತವಾಗುವುದು ॥೧೭೧॥

ಮದ್ವಿಭೂತೀರಭಿಧ್ಯಾಯನ್ ಶ್ರೀವತ್ಸಾಸ್ತ್ರವಿಭೂಷಿತಾಃ । ಧ್ವಜಾತಪತ್ರವ್ಯಜನೈಃ ಸ ಭವೇದಪರಾಜಿತಃ ॥೧೦॥

ಅರ್ಥ:- ಶ್ರೀವತ್ಸ ಇತ್ಯಾದಿ ಚಿನ್ಹೆಗಳು ಮತ್ತು ಶಂಖ, ಚಕ್ರ, ಗದಾ, ಪದ್ಮ ಆಯುಧಗಳಿಂದ ಭೂಷಿತ ಹಾಗೆಯೇ ಧ್ವಜ, ಛತ್ರ, ಚಾಮರ ಇವುಗಳೊಂದಿಗೆ ನನ್ನ ಅವತಾರಗಳ ಪ್ರಾಧಾನ್ಯದಿಂದ ಧ್ಯಾನ ಮಾಡುವ ಯೋಗಿಯು ಅಪರಾಜಿತನಾಗುವನು. ಆತನ ಪರಾಜಯವನ್ನು ಯಾರೂ ಮಾಡಲು ಶಕ್ಯವಿಲ್ಲ.

ಅಪರಾಜಯಸಿದ್ಧೀಚೀ ಪ್ರಾಪ್ತೀ । ಧ್ಯಾನಾ ಆಣಾವೀ ಮಾಝೀ ಮೂರ್ತೀ । ಜಿಚೇನಿ ನಾಂವೇ ಜಯೋ ಪಾವತೀ । ಜಾಣ ನಿಶ್ಚಿತೀ ಸುರವರ ॥೧೭೨॥ ಚತುರ್ಭುಜ ಘನಶ್ಯಾಮ । ಶಂಖಚಕ್ರಗದಾಪದ್ಮ । ಛತ್ರಾತಪತ್ರ ಚಾಮರಯುಗ್ಮ । ಧ್ವಜೀ ಉತ್ತಮ ಗರುಡಲಾಂಛನ ॥೧೭೩॥ ರತ್ನದಂಡೇ ಝುಣತ್ಕಾರ । ವ್ಯಜನ ವೀಜಿತೀ ಸನಾಗರ । ಚರಣೀ ಗರ್ಜತೀ ತೋಡರ । ತೋಡರೀ ಅಪರ ಅರಿವರ್ಗ ॥೧೭೪॥ ಐಶಿಯೇ ಮಾಝೇ ಮೂರ್ತೀಚೇ ಧ್ಯಾನ । ಜೋ ಸರ್ವದಾ ಕರೀ ಸಾವಧಾನ । ತೋ ಸರ್ವತ್ರ ವಿಜಯೀ ಜಾಣ । ಅಭಂಗಪಣ ಮಾಝೇನೀ ॥೧೭೫॥ ತೋ ಮಾಝೇನಿ ಧ್ಯಾನೇ ಪಾಹೇ । ಕೋಣೇ ನ ಮೇಳವಿತಾ ಸಾಹ್ಯೇ । ಏಕಲಾ ಸರ್ವತ್ರ ವಿಜಯೀ ಹೋಯೇ । ಐಶೀ ಸಿದ್ಧಿ ಲಾಹೇ ಯಾ ನಿಷ್ಠಾ ॥೧೭೬॥ ಜೋ ಮೀ ಹೃದಯೀ ಧರೀ ಅಜಿತೂ । ತೋ ಸರ್ವತ್ರ ಹೋಯ ಅಪರಾಜಿತೂ । ಐಸೇ ಸಾಂಗೋನಿ ಭಗವಂತೂ । ಉಪಸಂಹಾರಿತೂ ಸಿದ್ಧೀತೇ ॥೧೭೭॥

ಉಪಾಸಕ್ಯ ಮಾಮೇವಂ ಯೋಗಧಾರಣಯಾ ಮುನೇಃ । ಸಿದ್ಧಯಃ ಪೂರ್ವಕಥಿತಾ ಉಪತಿಷ್ಠಂತ್ಯಶೇಷತಃ ॥೧೧॥

ಅರ್ಥ:- ಈ ಪ್ರಕಾರವಾಗಿ ಯಾವ ವಿಚಾರಶೀಲ ಪುರುಷನು ನನ್ನ ಉಪಾಸನೆಯನ್ನು ಮಾಡಲು ಮತ್ತು ಯೋಗಧಾರಣೆಯೊಂದಿಗೆ ನನ್ನ ಚಿಂತನೆಯನ್ನು ಮಾಡಲು ಆತನಿಗೆ ಆ ಯಾವ ಸರ್ವಸಿದ್ಧಿಗಳು ಪ್ರಾಪ್ತವಾಗುವುವು.

ಮ್ಯಾ ಸಾಂಗೀತಲ್ಯಾ ಜ್ಯಾ ಯೋಗಧಾರಣಾ । ಮಜ ಭಜತಾ ತ್ಯಾ ಭಾವನಾ । ತ್ಯಾ ತ್ಯಾ ಸಿದ್ಧೀ ತ್ಯಾಸೀ ಜಾಣಾ । ಪೂರ್ವೋಕ್ತಲಕ್ಷಣಾ ಉಪಜತೀ ॥೧೭೮॥ ಅನೇಕ ಭಾವನಾ ಧರಿತಾ ಚಿತ್ತೀ । ತ್ಯಾ ತ್ಯಾ ಧಾರಣೇಚ್ಯಾ ವ್ಯುತ್ಪತ್ತೀ । ಅನೇಕ ಸಿದ್ಧೀಂಚೀ ಹೋಯ ಪ್ರಾಪ್ತೀ । ಜಾಣ ನಿಶ್ಚಿತೀ ಉದ್ಧವಾ ॥೧೭೯॥ ನಾನಾ ಯೋಗಧಾರಣಾವ್ಯುತ್ಪತ್ತೀ । ನ ಕರಿತಾ ಸಕಳ ಸಿದ್ಧೀಂಚೀ ಪ್ರಾಪ್ತೀ । ಏಕೇ ಧಾರಣೇನೇ ಹೋಯ ನಿಶ್ಚಿತೀ । ತೇ ಮೀ ತುಜಪ್ರತೀ ಸಾಂಗೇನ ॥೧೮೦॥

ಜಿತೇಂದ್ರಿಯಸ್ಯ ದಾಂತಸ್ಯ ಜಿತಶ್ವಾಸಾತ್ಮನೋ ಮುನೇಃ । ಮದ್ಧಾರಣಾಂ ಧಾರಯತಃ ಕಾ ಸಾ ಸಿದ್ಧಿಃ ಸುದುರ್ಲಭಾ ॥೧೨॥

ಅರ್ಥ:- ಪ್ರಿಯ ಉದ್ಧವಾ, ಯಾರು ತಮ್ಮ ಪ್ರಾಣ, ಮನ ಮತ್ತು ಇಂದ್ರಿಯಗಳಲ್ಲಿ ವಿಜಯವನ್ನು ಸಂಪಾದಿಸಿರುವರೋ, ಯಾರು ಸಂಯಮೀಯಾಗಿರುವರೋ ಹಾಗೂ ನನ್ನ ಸ್ವರೂಪದ ಧಾರಣೆಯನ್ನು ಮಾಡುವರೋ, ಆವರಿಗೆ ಸರ್ವ ಸಿದ್ಧಿಗಳು ಪ್ರಾಪ್ತವಾಗುವುವು. ಯಾವ ಸಿದ್ಧಿಯೂ ಕೂಡ ಆತನಿಗೆ ದುರ್ಲಭವಲ್ಲ.

ಯಾವುದರ ಯೋಗದಿಂದ ದೇವಾದಿಕರಲ್ಲಿಯೂ ಜಯ ಸಾಧಿಸುವಿಕೆಯಾಗಿರುವುದೋ, ಅಂತಹ ''ಅಪರಾಜಯ'' ಸಿದ್ಧಿಯನ್ನು ಪ್ರಾಪ್ತಮಾಡಿಕೊಳ್ಳಬೇಕೆಂದರೆ, ನನ್ನ ಮೂರ್ತಿಯ ಧ್ಯಾನವನ್ನು ಮಾಡಬೇಕು ॥೧೭೨॥ ಚತುರ್ಭುಜ, ಘನಶ್ಯಾಮ, ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ, ಮಸ್ತಕದ ಮೇಲೆ ಛತ್ರ, ಚಾಮರ, ಆತಪತ್ರ, ಗರುಡಲಾಂಛನವಿರುವ ಉತ್ತಮ ಪ್ರಕಾರದ ಧ್ವಜ ॥೧೭೩॥ ರತ್ನಖಚಿತ ದಂಡಿಗೆಗಳ ಝಣತ್ಕಾರಗಳಿಂದ ಬೀಸಣಿಕೆಯು ತೂಗುತ್ತಿದೆ. ಕಾಲುಗಳಲ್ಲಿ ಪೈಂಜಣ ಆಭರಣಗಳು ಬಾರಿಸುತ್ತಿವೆ ಮತ್ತು ನಾನಾ ಪ್ರಕಾರಗಳ ಶತ್ರುಗಳು ಕಾಲುಗಳಲ್ಲಿನ ತೋಡೆಗಳಿಗೆ ಶರಣು ಬಂದಿರುವರು ॥೧೭೪॥ ಈ ಪ್ರಕಾರದ ನನ್ನ ಮೂರ್ತಿಯ ಧ್ಯಾನವನ್ನು ಯಾರು ಸರ್ವಕಾಲದಲ್ಲಿ ಅತ್ಯಂತ ಏಕಾಗ್ರಚಿತ್ತದಿಂದ ಮಾಡುತ್ತಿರುವನೋ, ಆತನು ಸರ್ವತ್ರ ವಿಜಯಿಯಾಗುವನು. ನನ್ನ ಪ್ರತಾಪದಿಂದ ಆತನು ಎಲ್ಲಿಯೂ ಪರಾಭವವನ್ನು ಹೊಂದುವಂತಿಲ್ಲ ॥೧೭೫॥ ಆತನು ಕೇವಲ ನನ್ನ ಧ್ಯಾನದ ಯೋಗದಿಂದ ಯಾರ ಸಹಾಯವನ್ನು ಸ್ವೀಕರಿಸದೇ ಒಬ್ಬನೇ ಸರ್ವ ಸ್ಥಳಗಳಲ್ಲಿ ಜಯವನ್ನು ಗಳಿಸುವನು. ನನ್ನ ಮೇಲೆ ಅತಿಶಯವಾಗಿ ನಿಷ್ಠೆಯನ್ನಿಟ್ಟಿರುವುದರಿಂದ ಆತನಿಗೆ ಈ ಸಿದ್ಧಿಯು ಪ್ರಾಪ್ತವಾಗುವುದು ॥೧೭೬॥ ಆತನು ನನ್ನ ಅಂಜಿಕ್ಯ ಭಗವಂತನನ್ನು ತನ್ನ ಹೃದಯದಲ್ಲಿ ಧಾರಣೆಯನ್ನು ಮಾಡುವನು. ಆದ್ದರಿಂದ ಆತನು ಸರ್ವತ್ರವೂ ಅಂಜಿಕ್ಯನಾಗುವನು. ಓಗೆ ಹೇಳಿ ಭಗವಂತನು ಸಿದ್ಧಿಗಳ ವರ್ಣನೆಯ ಉಪಸಂಹಾರವನ್ನು ಮಾಡುವನು ॥೧೭೭॥

ನಾನು ಯಾವ ಯಾವ ಯೋಗಧಾರಣೆಗಳನ್ನು ಹೇಳಿರುವೆನೋ, ಆ ಯಾವ ಭಾವನೆಯಿಂದ ಯಾರು ಯಾರು ನನ್ನ ಭಜನೆಯನ್ನು ಮಾಡುವರೋ, ಆ ಯಾವ ಪೂರ್ವೋಕ್ತ ಲಕ್ಷಣಗಳಂತೆ ಸಿದ್ಧಿಗಳು ಪ್ರಾಪ್ತವಾಗುವುವು ॥೧೭೮॥ ಹೇ ಉದ್ಧವಾ, ಚಿತ್ತದಲ್ಲಿ ಅನೇಕ ಪ್ರಕಾರಗಳ ಸ್ವರೂಪದ ಧ್ಯಾನವನ್ನು ಮಾಡಲು ಆ ಯಾವ ಧಾರಣೆಯ ಅನುರೋಧದಿಂದ ಆತನಿಗೆ ಅನೇಕ ಸಿದ್ಧಿಗಳು ಪ್ರಾಪ್ತವಾಗುವುವು ॥೧೭೯॥ ಇಂತಹ ಅನೇಕ ಯೋಗಧಾರಣೆಗಳ ಸಾಧನೆಗಳನ್ನು ಮಾಡದೇ ಸರ್ವಸಿದ್ಧಿಗಳ ಪ್ರಾಪ್ತಿಯು ಒಂದೇ ಧಾರಣೆಯಿಂದ ಆಗುವುದು. ಅದನ್ನು ನಾನೀಗ ನಿನಗೆ ಹೇಳುವೆನು ॥೧೮೦॥

ಪಾಂಚ ಪಾಂಚ ಇಂದ್ರಿಯಾಂಚೀ ಜೋಡೀ । ಜಿಣೋನಿ ಶಮದಮಪರವಡೀ। ಉಭವೂನಿ ವೈರಾಗ್ಯಾಚೀ ಗುಢೀ । ಪ್ರಾಣಾಪಾನವೋಢೀ ಜಿಂಕಿಲ್ಯಾ ।।೧೮೧।। ವಿವೇಕಾಚೇನಿ ಬಳೇ ಜಾಣ। ವೃತ್ತಿ ರಾಖೋನಿ ಸಾವಧಾನ । ಸದಾ ಕರಿತಾ ಮಾಝೇ ಮನನ । ಮನನೇ ಮನ ಜಿಂಕಿಲೇ ।।೧೮೨।। ಯಾಪರೀ ಗಾ ಸಾಧಕಾಸೀ । ಧಾರಣಾ ಧರೋನಿ ಮಾನಸೀ । ಮೀ ಏಕ ಧ್ಯಾತಾ ಅಹರ್ನಿಶೀ । ಸಕಳ ಸಿದ್ಧೀ ದಾಸೀ ತ್ಯಾಸೀ ಹೋತೀ ।।೧೮೩।। ಸಾಂಡೂನಿ ಸಕಳ ಉಪಾಯೇ । ಮೀ ಏಕ ಧ್ಯಾನೀ ಧರಿಲ್ಯಾ ಪಾಹೇ । ಸಾಧಕಾಸೀ ಕಾಯ ಉಣೇ ಆಹೇ । ದುರ್ಲಭ ಕಾಯೇ ಸಿದ್ಧೀಚೇ ।।೧೮೪।। ಮಾಝೇ ಭಜನೇ ಸಾವಕಾಶೀ । ಸಿದ್ಧೀ ಪ್ರಕಟತೀ ಸಾಧಕಾಸೀ । ತ್ಯಾ ಸೇವ್ಯ ನವ್ಹತೀ ತ್ಯಾಸೀ । ತೇಚಿ ಹೃಷೀಕೇಶೀ ಸಾಂಗತೂ ।।೧೮೫।।

ಅಂತರಾಯಾನ್ವದಂತ್ಯೇತಾ ಯುಂಜತೋ ಯೋಗ ಮುತ್ತಮಮ್ । ಮಯಾ ಸಂಪದ್ಯ ಮಾನಸ್ಯ ಕಾಲಕ್ಷಪಣ ಹೇತವಃ ।।೩।।

ಅರ್ಥ:- ಆದರೆ ಶ್ರೇಷ್ಠ ಪುರುಷರು ಹೀಗೆ ಹೇಳುವರು; ಯಾವ ಜನರು ಭಕ್ತಿಯೋಗ ಅಥವಾ ಜ್ಞಾನಯೋಗಾದಿ ಉತ್ತಮ ಯೋಗಗಳ ಅಭ್ಯಾಸವನ್ನು ಮಾಡಿ ನನ್ನಲ್ಲಿ ಐಕ್ಯರೂಪವಾಗುವರೋ, ಅವರಿಗೆ ಸಿದ್ಧಿಗಳು ಪ್ರಾಪ್ತವಾಗುವಿಕೆಯು ಒಂದು ಪ್ರಕಾರದ ವಿಘ್ನವೇ ಸರಿ. ಕಾರಣ ಇವು ಭಕ್ತರ ಸಮಯದ ದುರುಪಯೋಗ ಮಾಡುವುವು.

ಅಹೇತುಕ ಕರಿತಾ ಮಾಝೇ ಭಜನ । ತೇಣೇ ಶೀಘ್ರ ಮಾಝೀ ಪ್ರಾಪ್ತೀ ಜಾಣ । ತೇಥೇ ಸಿದ್ಧೀವರೀ ಘಾಲಿತಾ ಮನ । ಆಲೀ ನಾಗವಣ ಮತ್ಪ್ರಾಪ್ತೀಸೀ ।।೧೮೬।। ಜ್ಯಾಸೀ ವಿಷಯಭೋಗ ಲಾಗೇ ಗೋಡ । ತೋಚಿ ಸಿದ್ಧೀಂಚೀ ವಾಹೇ ಚಾಡ । ಜ್ಯಾಸೀ ಮಾಝೀ ಪ್ರಾಪ್ತೀಚೇ ಕೋಡ । ತೋ ವಾಂಛೀನಾ ಬಂಡ ಖುದ್ದಿ ಸಿದ್ಧೀಂಚೇ ।।೧೮೭।। ಜ್ಯಾಸೀ ಲೌಕಿಕೀ ಅತಿಪ್ರತಿಷ್ಠಾ । ತೋ ಸಿದ್ಧೀಂಚ್ಯಾ ಸೋಶೀ ಖಟಪಟಾ । ಜ್ಯಾಸೀ ಮತ್ಪ್ರಾಪ್ತೀಚೀ ನಿಷ್ಠಾ । ತೋ ವಚೇನಾ ವಾಟಾ ಸಿದ್ಧೀಂಚ್ಯಾ ।।೧೮೮।। ಪಾವತಪಾವತಾ ವಾರಾಣಾಸೀ । ಜೋ ವಸ್ತೀಸೀ ಗೇಲಾ ವೇಶ್ಯಾಗೃಹಾಸೀ। ತೇಥೇ ಭುಲೋನಿ ತಿಚ್ಯಾ ಭೋಗಾಸೀ । ಸರ್ವಸ್ವ ತಿಯೇಸೀ ಸಮರ್ಪೀ ।।೧೮೯।। ಇಯೇಪಾಸೂನಿ ಜೀವೇಪ್ರಾಣೇ । ಸರ್ವಥಾ ವೇಗಳೇ ನಾಹೀ ಜಾಣೇ । ಐಸಾ ಸಂಕಲ್ಪ ಕರೋನಿ ತೇಣೇ । ವಶ್ಯ ಹೋಣೇ ವೇಶ್ಯೇಸೀ ।।೧೯೦।। ಜಂವ ಅಸೇ ಗಾಂಠೀ ಗಾಂಠೋಡೀ । ತಂವ ತೇ ತ್ಯಾಪಾಶೀ ಲುಡಬುಡೀ । ನಿಃಶೇಷ ವೇಂಚಲಿಯಾ ಕವಡೀ । ಬಾಹೇರೀ ದವಡೀ ತತ್ಕಾಳ ।।೧೯೧।। ತೋ ದವಡಿತಾಂಹೀ ನ ಜಾಯೇ । ನಿರ್ಲಜ್ಜ ನಿಃಸಂಗು ಹೋ ಊನಿ ರಾಹೇ । ತರೀ ಆಪಣಚಿ ಸಾಂಡೋನಿ ಜಾಯೇ । ತೈಶಾಚಿ ಪಾಹೇ ಮಹಾಸಿದ್ಧೀ ।।೧೯೨।।

ಐದು ಐದು ಇಂದ್ರಿಯಗಳ ಇರುವ ಜೋಡಿಯನ್ನು ಶಮದಮದ ಸಾಮರ್ಥ್ಯದಿಂದ ಜಯಿಸಿ ವೈರಾಗ್ಯದ ಪತಾಕೆಯನ್ನು ಏರಿಸಿ, ಪ್ರಾಣ ಮತ್ತು ಅಪಾನವನ್ನು ಜಯಿಸಲು ।।೧೮೧।। ಮತ್ತು ವಿವೇಕದ ಬಲದಿಂದ ವೃತ್ತಿಯನ್ನು ಸಮಾಧಾನವಾಗಿಟ್ಟು ಸತತವಾಗಿ ನನ್ನ ಚಿಂತನೆಯನ್ನು ಮಾಡಿದರೆ ಆ ಚಿಂತನೆಯಿಂದ ಮನಸ್ಸನ್ನು ಜಯಿಸಲ್ಪಡುವುದು ।।೧೮೨।। ಈ ಪ್ರಕಾರವಾಗಿ ಸಾಧಕನು ತನ್ನ ಮನದಲ್ಲಿ ಧಾರಣೆಯನ್ನು ಧರಿಸಿ ಹಗಲು ರಾತ್ರಿ ನನ್ನ ಧ್ಯಾನವನ್ನು ಮಾಡುತ್ತಿರಲು ಸರ್ವ ಪ್ರಕಾರಗಳ ಸಿದ್ಧಿಗಳು ಆತನ ದಾಸಿಯಾಗುವುವು ।।೧೮೩।। ಅನ್ಯ ಸರ್ವ ಉಪಾಯಗಳನ್ನು ಬಿಟ್ಟುಕೊಟ್ಟು ಚಿತ್ತದಲ್ಲಿ ನನ್ನ ಒಬ್ಬನನ್ನೇ ಧ್ಯಾನವನ್ನು ಮಾಡುತ್ತಿರಲು ಸಾಧಕನಿಗೆ ಯಾವ ಕೊರತೆ ಬೀಳುವುದು? ಸಿದ್ಧಿಗಳ ದುರ್ಲಭತೆಯು ಅದು ಎಲ್ಲಿಯದು? ।।೧೮೪।। ಅಂತಃಕರಣಪೂರ್ವಕವಾಗಿ ನನ್ನ ಭಜನೆಯನ್ನು ಮಾಡುತ್ತಿರಲು ಸಾಧಕನಿಗೆ ಅವಶ್ಯವಾಗಿ ಸಿದ್ಧಿಗಳು ಪ್ರಾಪ್ತವಾಗುವುವು. ಆದರೆ ಆತನು ಅವುಗಳ ಉಪಭೋಗ ಪಡೆಯುವುದು ಯೋಗ್ಯವಾಗಲಾರದು. ಇದನ್ನೇ ಶ್ರೀಕೃಷ್ಣನು ಹೇಳುತ್ತಿರುವನು ।।೧೮೫।।

ನಿಃಸ್ವಾರ್ಥ ಭಾವನೆಯಿಂದ ನನ್ನ ಭಜನೆಯನ್ನು ಮಾಡಲು ತತ್ಕಾಲದಲ್ಲಿ ನನ್ನ ಪ್ರಾಪ್ತಿಯಾಗುವುದು. ಆದರೆ ಸಿದ್ಧಿಗಳತ್ತ ಲಕ್ಷ ಹೋದರೆ ನನ್ನ ಪ್ರಾಪ್ತಿಯಲ್ಲಿ ಸುಲಿಗೆಯಾಗುವುದು ।।೧೮೬।। ಯಾರಿಗೆ ವಿಷಯಭೋಗದಲ್ಲಿ ಸುಖವೆನಿಸುವುದೋ, ಆತನಿಗೆ ಸಿದ್ಧಿಗಳ ಅಪೇಕ್ಷೆ ಇರುವುದು. ಆದರೆ ಯಾರಿಗೆ ನನ್ನ ಪ್ರಾಪ್ತಿಯ ತೀವ್ರ ಅಪೇಕ್ಷೆ ಇರುವುದೋ ಆತನು ಖುದ್ದೀ-ಸಿದ್ಧಿಗಳ ಬೆನ್ನು ಎಂದಿಗೂ ಹತ್ತಲಾರನು ।।೧೮೭।। ಯಾರಿಗೆ ಲೌಕಿಕದಲ್ಲಿ ಪ್ರತಿಷ್ಠೆಯನ್ನು ಪಡೆಯಬೇಕೆಂದು ಮತ್ತು ಮಾನಸನ್ಮಾನಗಳನ್ನು ಬೇಕೆಂದು ಬಯಕೆಪಡುವನೋ, ಆತನೇ ಸಿದ್ಧಿಗಳ ಬೆನ್ನುಹತ್ತುವನು. ಯಾರಿಗೆ ನನ್ನದೇ ಪ್ರಾಪ್ತಿಯ ಇಚ್ಛೆಯಿರುವುದೋ, ಆತನು ಸಿದ್ಧಿಗಳ ಬೆನ್ನನ್ನು ಹತ್ತಲಾರನು ।।೧೮೮।। ದೇವ ದರ್ಶನಕ್ಕಾಗಿ ಕಾಶೀಕ್ಷೇತ್ರಕ್ಕೆ ಹೊರಟ ಒಬ್ಬ ಮನುಷ್ಯನು ಇನ್ನೇನು ಕಾಶೀ ಮುಟ್ಟುವ ಸಮೀಪದಲ್ಲಿ ಒಬ್ಬ ವೇಶ್ಯೆಯ ಮನೆಯಲ್ಲಿ ತಂಗಿದನು. ಆಕೆಯ ಮೋಹಕ್ಕೆ ಒಳಗಾಗಿ ತನ್ನ ಸರ್ವಸ್ವವನ್ನು ಆಕೆಗೆ ಕೊಟ್ಟನು ।।೧೮೯।। ಪ್ರಾಣವು ಹೋದರೂ ಸರಿಯೇ, ಆದರೆ ಆ ವೇಶ್ಯಾಸ್ತ್ರೀಯಳನ್ನು ಬಿಟ್ಟು ಎಂದಿಗೂ ದೂರ ಹೋಗಬಾರದೆಂಬ ಸಂಕಲ್ಪ ಮಾಡಿ ಆತನು ಆಕೆಗೆ ವಶನಾಗಿಬಿಟ್ಟನು ।।೧೯೦।। ಆದರೆ ಎಲ್ಲಿಯವರೆಗೆ ಆ ಪುರುಷನಲ್ಲಿ ಹಣವಿರುವುದೋ, ಅಲ್ಲಿಯವರೆಗೆ ಆ ಯಾವ ವೇಶ್ಯೆಯು ಆತನಲ್ಲಿ ಸಲಿಗೆ ಪ್ರೀತಿಯಿಂದ ನಟಿಸುತ್ತಿರುವಳು. ಕೊನೆಯಲ್ಲಿ ಆತನಲ್ಲಿಯ ಹಣವು ತೀರಿತೆಂದರೆ ಕೂಡಲೇ ಆಕೆಯು ಆತನನ್ನು ಬಾಗಿಲ ಹೊರಗೆ ದಬ್ಬಿಬಿಡುವಳು ।।೧೯೧।। ಆಗ ಆ ಮನುಷ್ಯನು ಹೊರಗೆ ದಬ್ಬುವ ಪ್ರಯತ್ನ ಮಾಡಿದಾಗಲೂ ಹೊರಟು ಹೋಗದಿದ್ದರೆ ಹಾಗೂ ಹಾಗೆಯೇ ನಿರ್ಲಜ್ಜತನದಿಂದ ನಾಚಿಕೆ ಇಲ್ಲದವನಂತೆ ಅಲ್ಲಿರಲು, ಆ ವೇಶ್ಯೆಯು ಅವನನ್ನು ಬಿಟ್ಟುಕೊಟ್ಟು ಹೊರಟು ಹೋಗುವಳು. ಅದರಂತೆಯೇ ಈ ಯಾವ ಮಹಾಸಿದ್ಧಿಗಳಾಗಿರುವುವು ।।೧೯೨।।

ಸಕಳ ಪಾಪಾಂತೇ ನಿರ್ದಳಣೇ । ಸಕಳ ಕುಳಾಂತೇ ಉದ್ಧರಣೇ । ತೇ ಕಾಶೀಚೇ ಖುಂಟಲೇ ಪಾವಣೇ । ವೇಶ್ಯಾನಾಗವಣೇ ಭೋಗಲಿಪ್ಸಾ ॥೧೯೩॥ ತೈಸೀಚ ಸಿದ್ಧೀಂಚೀ ಹೀ ಕಥಾ । ಮಾಝೀ ಪ್ರಾಪ್ತೀಸೀ ಪ್ರತಿಬಂಧಭೂತಾ । ಮಾಝೇ ಧ್ಯಾನ ಜ್ಞಾನ ವೈರಾಗ್ಯಾವಸ್ಥಾ । ನಾಗವೂನಿ ರಿತಾ ಸಾಂಡಿತೀ ॥೧೯೪॥ ಮಾಝೀ ಪ್ರಾಪ್ತೀ ನಿಕಟ ಜಾಣ । ಉತೇ ಸಿದ್ಧೀಂಚೀ ನಾಗವಣ । ಭೋಗೇ ಛಳಾವಯಾ ವ್ಯಾಮೋಹಕಪಣ । ವಿಲಂಬಕಾರಣ ಮತ್ಪ್ರಾಪ್ತೀ ॥೧೯೫॥ ಮಾಝೇ ಸ್ವರೂಪ ಅದ್ವೈತತಾ । ತೇಥೇ ಸಿದ್ಧೀಂಚ್ಯಾ ನಾನಾವಸ್ಥಾ । ತೇ ಮಾಯೇಚೀ ವ್ಯಾಮೋಹಕತಾ । ಜಾಣ ತತ್ತ್ವತಾ ಉದ್ಧವಾ ॥೧೯೬॥ ಮಾಝೀ ಪ್ರಾಪ್ತೀ ಆಡ ಸಿದ್ಧಿಂಚೇ ವಿಘ್ನ । ಹೇಚಿ ತುಜ ಕಳಾವಯಾ ಜಾಣ । ಮ್ಯಾ ಸರ್ವ ಸಿದ್ಧೀಂಚೇ ನಿರೂಪಣ । ಸಮೂಳ ಸಂಪೂರ್ಣ ಸಾಂಗೀತಲೇ॥೧೯೭॥ ಮಾಝ್ಯಾ ಠಾಯೀ ಧರಿತಾ ಧ್ಯಾನ । ಏಕಾಗ್ರತಾ ಹೋತಾ ಮನ । ತೇಥ ಭೋಗಲಿಪ್ಸಾ ಸಿದ್ಧೀ ಜಾಣ । ಕರಿತೀ ನಾಗವಣ ಸಾಧಕಾ ॥೧೯೮॥

ಜನ್ಮೌಷಧಿತಪೋಮಂತ್ರೈರ್ಯಾವತೀರಿಹ ಸಿದ್ಧಯಃ । ಯೋಗೇನಾಪ್ನೋತಿ ತಾಃ ಸರ್ವಾ ನ್ಯಾನ್ಯೈರ್ಯೋಗಗತಿ ವ್ರಜೇತ್ ॥೩೪॥

ಅರ್ಥ:- ಈ ಲೋಕದಲ್ಲಿ ಜನ್ಮ, ಔಷಧ, ತಪ ಮತ್ತು ಮಂತ್ರ ಇವುಗಳಿಂದ ಪ್ರಾಪ್ತವಾಗುವ ಸಿದ್ಧಿಗಳೆಲ್ಲವೂ ಮದ್ಧಾರಣರೂಪ ಯೋಗದಿಂದ ಪ್ರಾಪ್ತವಾಗುವುವು. ಆದರೆ ಯೋಗದ ಅಂತಿಮ ಸೀಮೆಯು ನನ್ನ ಸಾರುಪ್ಯ, ಸಾಲೋಕ್ಯ ಇತ್ಯಾದಿಗಳ ಪ್ರಾಪ್ತಿಯು ನನ್ನಲ್ಲಿ ಚಿತ್ತವನ್ನು ಏಕಾಗ್ರಮಾಡದೇ ಯಾವುದೇ ಸಾಧನೆಗಳಿಂದ ಪ್ರಾಪ್ತವಾಗುವುದಿಲ್ಲ.

ಸಿದ್ಧೀಂಚೇ ಪ್ರಾಪ್ತೀ ಚೇ ಕಾರಣ । ಜನ್ಮೌಷಧಿ ಮಂತ್ರ ತಪ ಜಾಣ । ಕಾ ಸಾಧಲ್ಯಾ ಪ್ರಾಣಾಪಾನ । ಸಕಳ ಸಿದ್ಧೀ ಜಾಣ ಯೋಗಾಭ್ಯಾಸೀ ॥೧೯೯॥ ಏಕೀ ಜನ್ಮಾಸ್ತವ ಸಹಜ ಸಿದ್ಧೀ । ಏಕೀ ತ್ಯಾ ಸಾಧಿತೀ ಔಷಧೀ । ಏಕೀ ತ್ಯಾ ತಪಾದಿ ಮಹಾವಿಧೀ । ಏಕೀ ತ್ಯಾ ತ್ರಿಶುದ್ಧೀ ಮಂತ್ರದ್ವಾರಾ ॥೨೦೦॥ ಸರ್ಪಾಸೀ ವಾಯುಧಾರಣ। ಮೀನಾಸೀ ಜಳತರಣ । ಪಕ್ಷ್ಯಾಸೀ ನಭೋಗಮನ । ಹೇ ಜನ್ಮಸಿದ್ಧಿ ಜಾಣ ಸ್ವಾಭಾವಿಕ ॥೨೦೧॥ ಹಂಸ ನಿವಡೀ ಕ್ಷೀರನೀರ । ಕೋಕಿಳೇಸೀ ಮಧುರ ಸ್ವರ । ಚಂದ್ರಾಮೃತ ಸೇವೀ ಚಕೋರ । ಹೇ ಸಿದ್ಧಿ ಸಾಚಾರ ಜನ್ಮಾಸ್ತವ ॥೨೦೨॥ ಜನ್ಮಾಸ್ತವ ಸಹಜ ಸಿದ್ಧೀ । ತ್ಯಾ ಮ್ಯಾ ಸಾಂಗೀತಲ್ಯಾ ಸುಬುದ್ಧೀ । ಆತಾ ಸಾಧಿಲಿಯಾ ಔಷಧೀ । ಲಾಭತೀ ಸಿದ್ಧೀ ತ್ಯಾ ಐಕ ॥೨೦೩॥ ಶ್ವೇತ ಮಾಂದಾರೀ ಗಜಾನನ । ಅಂಗಾರಕಚತುರ್ಥೀ ಸಾಧಿಲ್ಯಾ ಜಾಣ । ಸಕಳ ವಿದ್ಯಾಂಚೇ ಹೋಯ ಜ್ಞಾನ । ಧನಧಾನ್ಯಸಮೃದ್ಧೀ ॥೨೦೪॥ ಅಜಾನವೃಕ್ಷಾ ಚೇ ವೋಳಖಣ । ತ್ಯಾಚೀ ಫಳೇ ಶ್ವಾನಮುಖೇ ಜಾಣ । ತ್ಯಾಚೇ ಘಡಲ್ಯಾ ಕ್ಷೀರಪಾನ । ಹೋಯ ಆಪಣ ಅಜರಾಮರ ॥೨೦೫॥

ಸರ್ವಪಾಪಗಳ ನಾಶಮಾಡಿಕೊಳ್ಳಬೇಕು, ಕುಲದ ಉದ್ಧಾರವಾಗಬೇಕೆಂಬ ಬಯಕೆಯಿಂದ ಈತನು ಕಾಶೀಗೆ ಹೊರಟವನು, ಆದರೆ ಈತನ ಉದ್ದೇಶವು ದೂರಾಗಿ ವಿಷಯದ ಆಸಕ್ತಿಯಿಂದ ವೇಶ್ಯೆಯಿಂದ ಎಲ್ಲವನ್ನೂ ಕಳೆದುಕೊಳ್ಳುವನು ॥೧೯೩॥ ಸಿದ್ಧಿಗಳೂ ಹಾಗೆಯೇ ಇರುವುವು. ಸಿದ್ಧಿಗಳು ನನ್ನ ಪ್ರಾಪ್ತಿಗೆ ಅಡ್ಡಬರುವುವು. ನನ್ನ ಧ್ಯಾನ, ಜ್ಞಾನ, ವಿರಕ್ತಿ ಎಲ್ಲವನ್ನೂ ಲುಟಾಯಿಸಿ ಅವನನ್ನು ಬರೀಬತ್ತಲು ಮಾಡುವುವು ॥೧೯೪॥ ನನ್ನ ಪ್ರಾಪ್ತಿಯ ಅತಿ ಸಮೀಪವೇ ಸಾಧಕನಿಗೆ ಸಿದ್ಧಿಗಳು ಮೋಸಗೊಳಿಸಲು ಸಿದ್ಧವಾಗಿರುವುವು. ಭೋಗದ ಆಶೆ ತೋರಿಸುವುವು. ಅವು ಸತತವಾಗಿ ಪೀಡಿಸುವುವು. ಆದ್ದರಿಂದ ನನ್ನ ಪ್ರಾಪ್ತಿಯಾಗುವುದಿಲ್ಲ ॥೧೯೫॥ ಹೇ ಉದ್ಧವಾ, ನನ್ನ ಸ್ವರೂಪವು ಅದ್ವೈತವಾಗಿರುವುದು. ಅನೇಕ ಪ್ರಕಾರದ ಸಿದ್ಧಿಗಳು ಕೇವಲ ಮಾಯೆಯ ಆಟವಾಗಿರುವುದು. ಹೀಗೆ ನಿಶ್ಚಯವಾಗಿ ತಿಳಿ ॥೧೯೬॥ ನನ್ನ ಪ್ರಾಪ್ತಿಯ ಅಡ್ಡ ಸಿದ್ಧಿಗಳ ವಿಘ್ನಗಳು ಬರುತ್ತಿರುವುವು. ಇದು ನಿನಗೆ ತಿಳಿಯಲೆಂದು ನಾನು ಸರ್ವ ಸಿದ್ಧಿಗಳ ವರ್ಣನೆ ಮಾಡಿದೆನು ॥೧೯೭॥ ನನ್ನ ಧ್ಯಾನವನ್ನು ಮಾಡುತ್ತಿರಲು, ಮನಸ್ಸಿನ ಏಕಾಗ್ರತೆ ಆಗಲು, ಅಲ್ಲಿ ಸಾಧಕನಿಗೆ ಸುಖಭೋಗದ ನಾದವು ಹತ್ತಿದರೆ, ಆಗ ಸಿದ್ಧಿಗಳು ಮೋಸಗೊಳಿಸುವುವು ॥೧೯೮॥

ಜನ್ಮ, ದಿವ್ಯ ಔಷಧ, ಮಂತ್ರ, ತಪ ಈ ಸಾಧನೆಗಳಿಂದ ಸಿದ್ಧಿಗಳು ಪ್ರಾಪ್ತವಾಗುವುವು. ಹಾಗೂ ಯೋಗಾಭ್ಯಾಸದಿಂದ ಪ್ರಾಣವನ್ನು ಜಯಿಸಲು ಸಿದ್ಧಿಗಳು ಪ್ರಾಪ್ತವಾಗುವುವು ॥೧೯೯॥ ಕೆಲವರಿಗೆ ಜನ್ಮತಃ ಕೆಲವು ಸಿದ್ಧಿಗಳು ಪ್ರಾಪ್ತವಾಗಿರುವುವು. ಕೆಲವರು ದಿವ್ಯ ಔಷಧಗಳಿಂದ ಸಿದ್ಧಿಗಳನ್ನು ಪಡೆಯುವರು. ಕೆಲವರು ಮಹಾ ತಪಗಳನ್ನಾಚರಿಸಿ ಸಿದ್ಧಿಗಳನ್ನು ಸಾಧಿಸುವರು. ಕೆಲವರು ಮಂತ್ರಗಳ ಉಚ್ಚಾರದಿಂದ ಸಿದ್ಧಿಗಳನ್ನು ವಶಮಾಡಿಕೊಳ್ಳುವರು ॥೨೦೦॥ ಸರ್ಪಕ್ಕೆ ವಾಯುಭಕ್ಷಣೆ, ಮೀನಕ್ಕೆ ನೀರಿನಲ್ಲಿರುವಿಕೆ, ಪಕ್ಷಿಗಳಿಗೆ ಆಕಾಶದಲ್ಲಿ ಹಾರಾಡುವಿಕೆ, ಇವು ಸ್ವಾಭಾವಿಕವಾಗಿಯೇ ಜನ್ಮಸಿದ್ಧ ಸಿದ್ಧಿಗಳು ಪ್ರಾಪ್ತವಾಗಿರುವುವು ॥೨೦೧॥ ಹಂಸವು ಹಾಲು ನೀರನ್ನು ಬೇರ್ಪಡಿಸುವುದು, ಕೋಗಿಲೆಯು ಮಧುರ ಸ್ವರದಿಂದ ಹಾಡುತ್ತಿರುವುದು, ಚಕೋರವು ಚಂದ್ರಾಮೃತವನ್ನು ಸೇವಿಸುವುದು. ಈ ಸಿದ್ಧಿಗಳೂ ಕೂಡ ಇವುಗಳಿಗೆ ಜನ್ಮತಃ ಒದಗಿರುವುವು ॥೨೦೨॥ ಈ ಪ್ರಕಾರವಾಗಿ ಜನ್ಮದಿಂದ ಯಾವ ನೈಸರ್ಗಿಕ ಸಿದ್ಧಿಗಳು ಪ್ರಾಪ್ತವಾಗುವುದನ್ನು ನಾನು ನಿನಗೆ ಹೇಳಿದೆನು. ಈಗ ದಿವ್ಯ ಔಷಧಗಳಿಂದ ಪ್ರಾಪ್ತವಾಗುವ ಸಿದ್ಧಿಗಳನ್ನು ಹೇಳುವೆನು ॥೨೦೩॥ ಬಿಳಿ ಪಾರಿಜಾತ ವೃಕ್ಷದ ಕೆಳಗೆ ಗಣಪತಿಯ ಪೂಜೆಯನ್ನು ಮಾಡಿ ಅಂಗಾರಕಿ ಚತುರ್ಥಿಯ ವ್ರತವನ್ನು ಮಾಡಲು ಸರ್ವ ವಿಶ್ವದ ಜ್ಞಾನವು ಪ್ರಾಪ್ತವಾಗುವುದು. ಹಾಗೂ ಧನ ಧಾನ್ಯಗಳ ಸಮೃದ್ಧಿಯಾಗುವುದು ॥೨೦೪॥ ಅಜಾನವೃಕ್ಷವನ್ನು ತಿಳಿಯುವ ಚಿನ್ಹೆ ಎಂದರೆ, ಅದರ ಫಲಗಳು ನಾಯಿಯ ಮುಖದಂತಿರುವುವು. ಆ ವೃಕ್ಷದ ರಸವನ್ನು ಪ್ರಾಶನ ಮಾಡಿದರೆ ಮನುಷ್ಯನು ಅಜರಾಮರನಾಗಿರುವನು ॥೨೦೫॥

ಪಿಚುಮಂದ ನಿತ್ಯ ಸೇವಿಲ್ಯಾ ದೇಖ । ತ್ಯಾಸಿ ಬಾಧೀನಾ ಕೋಣೇ ವಿಖ । ಪಾತಾಳಗರುಡೀಚೇ ಪ್ರಾಶಿಲ್ಯಾ ಮುಖ। ತ್ಯಾಸೀ ದೇಹದುಃಖ ಬಾಧೀನಾ ॥೨೦೬॥ ಪೂತಿಕಾವೃಕ್ಷಾಚೇ ಮೂಳೀ । ಅಸೇ ಮಹಾಶಕ್ತೀಚೀ ಪುತಳೀ । ತೇ ಸಾಧಲ್ಯಾ ಅಪ್ಸರಾಂಚೇ ಮೇಳೀ । ಕ್ರೀಡೇ ತತ್ಕಾಳೀ ಸಾಧಕ ॥೨೦೭॥ ಅನಂತ ಔಷಧೀ ಅನಂತ ಸಿದ್ಧೀ । ತ್ಯಾಂಚೀ ಸಾಧನಾ ಕಠಿಣ ತ್ರಿಶುದ್ಧೀ । ತಪಾದಿ ಸಿದ್ಧೀಂಚೀ ವಿಧೀ । ಐಕ ಸುಬುದ್ಧೀ ಉದ್ಧವಾ ॥೨೦೮॥ ಕೃಚ್ಛ್ರ ಪರಾಕ ಚಾಂದ್ರಾಯಣ । ಆಸಾರ ಜಲಾಶಯ ಧೂಮ್ರಪಾನ । ತಪ ಕರೀ ಜೇ ಜೇ ಭಾವೂನ । ತೇ ತೇ ಸಿದ್ಧಿ ಜಾಣ ತೋ ಪಾವೇ ॥೨೦೯॥ ಐಕ ಮಂತ್ರ ಸಿದ್ಧೀಚೇ ಲಕ್ಷಣ। ಪ್ರೇತಾವರೀ ಬೈಸೋನಿ ಆಪಣ । ಏಕ ರಾತ್ರ ಕೇಲ್ಯಾ ಅನುಷ್ಠಾನ । ಪ್ರೇತದೇವತಾ ಸಂಪೂರ್ಣ ಪ್ರಸನ್ನ ಹೋಯ ॥೨೧೦॥ ತೇಣೇ ಭೂತ ಭವಿಷ್ಯ ವರ್ತಮಾನ । ತೇ ಸಿದ್ಧಿ ಪ್ರಾಪ್ತ ಹೋಯ ಜಾಣ । ಕರಿತಾ ಸೂರ್ಯಮಂತ್ರ ವಿಧಾನ । ದೂರದರ್ಶನ ಸಿದ್ಧಿ ಉಪಜೇ ॥೨೧೧॥ ಜೈಸಾ ಮಂತ್ರ ಜೈಸೀ ಬುದ್ಧೀ । ತೈಸೀ ತ್ಯಾಸ ಪ್ರಕಟೇ ಸಿದ್ಧೀ । ಯಾ ಸಕಳಸಿದ್ಧೀಂಚೀ ಸಮೃದ್ಧೀ । ಯೋಗಧಾರಣಾವಿಧೀಮಾಜೀ ಅಸತೀ ॥೨೧೨॥ ನೆಹಟೂನಿಯಾ ಆಸನಾ । ಐಕ್ಯ ಕರೋನಿ ಪ್ರಾಣಾಪಾನಾ । ಜೋ ಧರೀ ಯೋಗಧಾರಣಾ । ಸಕಳ ಸಿದ್ಧೀ ಜಾಣಾ ತೇ ಠಾಯೀ ॥೨೧೩॥ ಮ್ಯಾ ಸಾಂಗೀತಲೀ ಸಿದ್ಧೀಂಚೀ ಕಥಾ । ಝಾಲಿಯಾ ಪ್ರಾಣಾಪಾನಸಮತಾ । ಆಲಿಯಾ ಯೋಗಧಾರಣಾ ಹಾತಾ । ತೈ ಸಿದ್ಧೀ ಸಮಸ್ತಾ ಪ್ರಕಟತೀ॥೨೧೪॥ ಪ್ರಾಣಾಪಾನ ಸಮಾನ ನ ಕರಿತಾ । ಯೋಗಧಾರಣಾಹೀ ನ ಧರಿತಾ । ಮಜ ಏಕಾತೇ ಹೃದಯೀ ಧರಿತಾ । ಸಿದ್ಧೀ ಸಮಸ್ತಾ ದಾಸೀ ಹೋತೀ ॥೨೧೫॥ ಮಜ ಪಾವಾವಯಾ ತತ್ತ್ವತಾ । ಮಜ ಏಕಾತೇ ಸ್ಮರತಾ ಧ್ಯಾತಾ । ಪಾವೋ ದೇಊನ ಸಿದ್ಧೀಂಚೇ ಮಾಥಾ । ಚಾರೀ ಮುಕ್ತಿ ಸ್ವಭಾವತಾ ದಾಸೀ ಹೋತೀ ॥೨೧೬॥ ನಾನಾ ಸಿದ್ಧೀಂಚೀ ಧಾರಣಾಧರಿತಾ । ಮಾಝೀ ಸಲೋಕತಾ ಸಮೀಪತಾ । ಹಾತಾ ನ ಯೇ ಗಾ ಸರೂಪತಾ । ಮಗ ಸಾಯುಜ್ಯತಾ ತೇ ಕೈಚೀ ॥೨೧೭॥ ಮಾಝೇ ಅತಿಶಯೇ ಶುದ್ಧ ಭಕ್ತ ।ತೇ ಮುಕ್ತೀಸೀ ದೂರ ದವಡಿತ । ಮಾಝೇನಿ ಭಾವಾರ್ಥೇ ನಿತ್ಯತೃಪ್ತ । ತೇ ಪೂಜ್ಯ ಹೋತ ಮಜಲಾಗೀ ॥೨೧೮॥ ಜೋ ಸಕಳ ಸಿದ್ಧೀಂಚಾ ಈಶ್ವರೂ । ತೋ ಮೀ ಲಾಗೇ ತ್ಯಾಂಚೀ ಪೂಜಾ ಕರೂ । ತೇಥಿಲಾ ಜೋ ಸಿದ್ಧೀಂಚಾ ಸಂಭಾರೂ । ಘೇಊನಿ ನಿಜವೇವ್ಹಾರೂ ಪಳತಾತೀ ॥೨೧೯॥

ವಿಷಬೇವಿನ ರಸವನ್ನು ಪ್ರತಿನಿತ್ಯವೂ ಸೇವಿಸಲು ಆತನಿಗೆ ಯಾವುದೇ ಪ್ರಕಾರದ ವಿಷವು ಬಾಧಿಸಲಾರದು. ಪಾತಾಳಗರುಡದ ಪ್ರಾಶನವನ್ನು ಮಾಡಲು ಆ ಮನುಷ್ಯನಿಗೆ ದೇಹಸಂಬಂಧವಾದ ಯಾವ ಪೀಡೆಯೂ ಆಗುವುದಿಲ್ಲ ॥೨೦೬॥ ಪೂತಿಕಾ ವೃಕ್ಷದ ಬೇರು ಎಂದರೆ ಅದು ಒಂದು ಮಹಾಶಕ್ತಿಯ ಮೂರ್ತಿಯೇ ಆಗಿರುವುದು. ಅದು ಕೈಗೆ ಸಿಗಲು, ಆ ಸಾಧಕನು ಅಪ್ಸರೆ ಸ್ತ್ರೀಯರ ಮೇಳದಲ್ಲಿ ಹೋಗಿ ತತ್ಕಾಲದಲ್ಲಿ ಅವರ ಜೊತೆ ಕ್ರೀಡಿಸಬಲ್ಲನು ॥೨೦೭॥ ಹೀಗೆ ಅನೇಕ ಪ್ರಕಾರದ ಔಷಧಗಳು ಇರುವುವು ಮತ್ತು ಸಿದ್ಧಿಗಳೂ ಕೂಡ ಅನೇಕ ಪ್ರಕಾರಗಳಿರುವುವು. ಇವುಗಳನ್ನು ಸಾಧನೆಗಳಿಂದ ಸಾಧಿಸುವುದು ಅತಿಕಠಿಣವಾಗಿರುವುದು. ಹೇ ಉದ್ಧವಾ, ಈಗ ತಪದಿಂದ ಪ್ರಾಪ್ತವಾಗುವ ಸಿದ್ಧಿಗಳ ಪ್ರಕಾರವನ್ನು ಹೇಳುವೆನು, ಅದನ್ನು ಕೇಳು ॥೨೦೮॥ ಕೃಚ್ಛ್ರ, ಪರಾಕ, ಚಾಂದ್ರಾಯಣ ಇತ್ಯಾದಿ ವ್ರತಗಳನ್ನಾಚರಿಸುವುದು, ಮಳೆಯ ಧಾರೆಯಲ್ಲಿ ಕುಳಿತುಕೊಳ್ಳುವುದು, ನೀರಿನಲ್ಲಿ ನಿಂತುಕೊಳ್ಳುವುದು, ಧೂಮ್ರಪಾನಾದಿಗಳನ್ನು ಮಾಡುವುದು, ಈ ಎಲ್ಲ ಸಾಧನೆಗಳನ್ನು ಸಾಧಿಸಲು, ಮನದಲ್ಲಿ ಧರಿಸಿರುವ ಭಾವನೆಯಂತೆ ಸಿದ್ಧಿಗಳು ಪ್ರಾಪ್ತವಾಗುವುವು ॥೨೦೯॥ ಈಗ ಮಂತ್ರಸಿದ್ಧಿಯ ಲಕ್ಷಣವನ್ನು ಕೇಳು. ಪ್ರೇತದ ಮೇಲೆ ಕುಳಿತುಕೊಂಡು ಇಡೀ ಒಂದು ರಾತ್ರಿ ಅನುಷ್ಠಾನವನ್ನು ಮಾಡಲು ಪ್ರೇತ ದೇವತೆಯು ಪ್ರಸನ್ನವಾಗುವುದು ॥೨೧೦॥ ಇದರಿಂದ ಭೂತ, ಭವಿಷ್ಯ, ವರ್ತಮಾನಗಳ ಸರ್ವ ಜ್ಞಾನದ ಸಿದ್ಧಿಯು ಪ್ರಾಪ್ತವಾಗುವುದು. ಸೂರ್ಯಮಂತ್ರದ ಅನುಷ್ಠಾನವನ್ನು ಆಚರಿಸಲು ದೂರದರ್ಶನ ಸಿದ್ಧಿಯು ಪ್ರಾಪ್ತವಾಗುವುದು ॥೨೧೧॥ ಮಂತ್ರವು ಹೇಗಿರುವುದೋ ಮತ್ತು ಬುದ್ಧಿಯ ಬಯಕೆ ಹೇಗಿರುವುದೋ, ಅದರಂತೆಯೇ ಸಿದ್ಧಿಗಳು ಪ್ರಾಪ್ತವಾಗುತ್ತಿರುವುವು ॥೨೧೨॥ ದೃಢವಾದ ಆಸನವನ್ನು ಹಾಕಿ ಪ್ರಾಣಪಾನಗಳ ಐಕ್ಯ ಮಾಡಿ ಯೋಗ ಸಾಧನೆಯನ್ನು ಆಚರಿಸುವವನಿಗೆ ಅನೇಕ ಪ್ರಕಾರದ ಸಿದ್ಧಿಗಳು ಪ್ರಾಪ್ತವಾಗುವುವು ॥೨೧೩॥ ಈ ಯಾವ ಸಿದ್ಧಿಗಳ ಕಥೆಯನ್ನು ನಾನು ನಿನಗೆ ಹೇಳಿರುವೆನು. ಒಟ್ಟಿನಲ್ಲಿ ಪ್ರಾಣಾಯಾಮವು ಸಮವಾಗಿ ಮತ್ತು ಯೋಗಧಾರಣೆಯನ್ನು ಸಾಧಿಸಿದರೆ ಸರ್ವಸಿದ್ಧಿಗಳು ಪ್ರಕಟವಾಗುವುವು ॥೨೧೪॥ ಈಗ ಪ್ರಾಣಾಪಾನವನ್ನು ಸಹ ಸಮ ಮಾಡದೇ, ಯೋಗಧಾರಣವನ್ನೂ ಕೂಡ ಆಚರಿಸದೇ ಪರಮಾತ್ಮನನ್ನು ಹೃದಯದಲ್ಲಿ ಧಾರಣ ಮಾಡಲು ಸರ್ವ ಪ್ರಕಾರಗಳ ಸಿದ್ಧಿಗಳು ದಾಸೀಯಾಗಿ ಇರುವುವು ॥೨೧೫॥ ನನ್ನ ಸ್ವರೂಪವನ್ನು ಪ್ರಾಪ್ತವಾಗುವುದಕ್ಕಾಗಿ ನನ್ನ ಒಬ್ಬನನ್ನೇ ಸ್ಮರಣೆ ಮಾಡುವುದರಿಂದ, ಧ್ಯಾನವನ್ನು ಮಾಡುವುದರಿಂದ ಸರ್ವಸಿದ್ಧಿಗಳ ತಲೆಯಮೇಲೆ ಕಾಲು ಇಟ್ಟು ನಾಲ್ಕೂ ಮುಕ್ತಿಗಳು ಸಹಜವಾಗಿಯೇ ದಾಸೀಯಾಗಿರುವುವು ॥೨೧೬॥ ಅನೇಕ ಸಿದ್ಧಿಗಳ ಧಾರಣೆಯನ್ನು ಧರಿಸಿದರೂ ನನ್ನ ಸಲೋಕತಾ, ಸಮೀಪತಾ, ಸ್ವರೂಪತಾ ಇವು ಕೈಗೆ ಹತ್ತುವುದಿಲ್ಲ. ಅಂದ ಮೇಲೆ ಸಾಯುಜ್ಯತೆಯ ಮಾತು ಎಲ್ಲಿಯದು? ॥೨೧೭॥ ಯಾವ ನನ್ನ ಅತಿಶಯ ಶುದ್ಧ ಭಕ್ತನು ಮುಕ್ತಿಯನ್ನು ದೂರ ಮಾಡಿ ನನ್ನ ಭಕ್ತಿಯಲ್ಲಿಯೇ ನಿತ್ಯ ತೃಪ್ತನಾಗಿರುವನು. ಈತನು ನನಗೆ ಅತಿಶಯ ಪೂಜ್ಯನಾಗುವನು ॥೨೧೮॥ ಸರ್ವಸಿದ್ಧಿಗಳ ಸ್ವಾಮೀಯಾಗಿರುವ ನಾನು ಆ ಭಕ್ತನ ಸೇವೆಯನ್ನು ಮಾಡುತ್ತಿರುವೆನು. ಆಗ ಎಲ್ಲ ಸಿದ್ಧಿಗಳ ಮೇಳವು ತಮ್ಮ ತಮ್ಮ ಸಾಹಿತ್ಯದೊಂದಿಗೆ ಓಡುತ್ತ ಹೊರಟುಹೋಗುವುವು ॥೨೧೯॥

ಸಕಳ ಸಿದ್ಧಿಂಚ್ಯಾ ಸ್ವಾಮಿತ್ವೇಸೀ । ಮೀ ಭಗವಂತ ತಿಷ್ಠೇ ಭಕ್ತಾಪಾಶೀ । ತೇಚಿ ಶ್ಲೋಕಾರ್ಥೇ ಹೃಷೀಕೇಶೀ । ಉದ್ಧವಾಸೀ ಸಾಂಗತ ।೭೨೦॥

ಸರ್ವಾಸಾಮಪಿ ಸಿದ್ಧೀನಾಂ ಹೇತುಃ ಪತಿರಹಂ ಪ್ರಭುಃ । ಅಹಂ ಯೋಗಸ್ಯ ಸಾಂಖ್ಯಸ್ಯ ಧರ್ಮಸ್ಯ ಬ್ರಹ್ಮವಾದಿನಾಮ್ ।೩೫॥

ಅರ್ಥ:- ನಾನು ಸರ್ವ ಸಿದ್ಧಿಗಳ ಪ್ರಭುವಾಗಿರುವೆನು. ಕಾರಣ ಮತ್ತು ಪಾಲನಕರ್ತನಾಗಿರುವೆನು. ನಾನು ಮೋಕ್ಷದ, ಮೋಕ್ಷಸಾಧನಭೂತ ಜ್ಞಾನದ, ಧರ್ಮದ, ಧರ್ಮೋಪದೇಶಕ ವೇದವೇತ್ತೆಯವರ ಪ್ರಭುವಾಗಿರುವೆನು.

ಸಕಳ ಸಿದ್ಧಿಂಚೇ ಮೀ ಜನ್ಮಸ್ಥಾನ । ಮಾರ್ಝೇನಿ ಸಿದ್ಧಿಂಚೇ ಥೋರ ಮಹಿಮಾನ । ಸಿದ್ಧಿಂಸೀ ಮಜಮಾಜೀ ನಿದಾನ । ಯಾಪರೀ ಮೀ ಜಾಣ ಸ್ವಾಮೀ ತ್ಯಾಂಚಾ ।೭೨೧॥ ಜೇ ಜೀವಾತ್ಮ್ಯಾಚೇ ಐಕ್ಯತಾ । ತ್ಯಾ ಯೋಗಾಚಾ ಸ್ವಾಮೀ ಮೀ ತತ್ತ್ವತಾ । ತೇಥ ಜೀವತ್ವಾಚೇ ಮಿಥ್ಯಾ ವಾರ್ತಾ । ತ್ಯಾ ಜ್ಞಾನಾಚಾಹೀ ಸರ್ವಥಾ ಸ್ವಾಮೀ ಮೀಚಿ ।೭೨೨॥ ಜ್ಞಾನೋಪದೇಷ್ಟೇ ಜೇ ಸಾಧೂ । ತ್ಯಾಂಚಾಹೀ ಸ್ವಾಮೀ ಮೀ ಪ್ರಸಿದ್ಧೂ । ಮಾರ್ಝೇನಿ ಪ್ರಸಾದೇ ಜ್ಞಾನಬೋಧೂ । ಹೋತಸೇ ವಿಶದೂ ಸಜ್ಞಾನಾ ।೭೨೩॥ ಉಪದೇಶೀ ಉಪನಿಷದ್ಭಾಗೇ ವೇದೂ । ತ್ಯಾ ವೇದಾಚಾಹೀ ಸ್ವಾಮೀ ಮೀ ಗೋವಿಂದೂ । ಮಜವೇಗಳಾ ವೇದವಾದೂ । ಉಚ್ಚಾರೀ ಶಬ್ದೂ ನುಚ್ಚಾರೇ ।೭೨೪॥ ಧರ್ಮ ಮ್ಹಣಿಜೇ ಜ್ಞಾನಸಾಧನ । ತ್ಯಾಚಾಹೀ ಸ್ವಾಮೀ ಮೀಚಿ ಜಾಣ । ಮೀ ಸಬಾಹ್ಯ ಪರಿಪೂರ್ಣ । ಚೈತನ್ಯಘನ ಸರ್ವಾತ್ಮಾ ।೭೨೫॥ ಮೀ ಸರ್ವಾತ್ಮಾ ಸರ್ವವ್ಯಾಪ್ತ । ಸಬಾಹ್ಯ ಪರಿಪೂರ್ಣ ಸಮಸ್ತ । ಹೇ ಮಾರ್ಝ್ಯಾ ಠಾಯೀ ಸಹಜ ಸ್ಥಿತ । ಐಕ ಸುನಿಶ್ಚಿತ ಉದ್ಧವಾ ।೭೨೬॥

ಅಹಮಾತ್ಮಾಽಽಂತರೋ ಬಾಹ್ಯೋಽನಾವೃತಃ ಸರ್ವದೇಹಿನಾಮ್ । ಯಥಾ ಭೂತಾನಿ ಭೂತೇಷು ಬಹಿರಂತ ಸ್ವಯಂ ತಥಾ ।೩೬॥

ಅರ್ಥ:- ಯಾವ ಪ್ರಕಾರವಾಗಿ ಚತುರ್ವಿಧ ಪ್ರಾಣಿಗಳ ಶರೀರಗಳಲ್ಲಿ ಮಹಾಭೂತಗಳು ಒಳಹೊರಗೆ ವ್ಯಾಪಿಸಿಕೊಂಡಿರುವುವೋ, ಅದರಂತೆಯೇ ನಾನು ಸರ್ವ ಭೂತಗಳ ಆತ್ಮಾನಾಗಿರುವೆನು. ನಾನು ಅಂತರ್ಯಾಮಿ, ಸರ್ವವ್ಯಾಪಕನಾಗಿರುವೆನು. ನಾನು ಯಾವುದರಿಂದಲೂ ಆಚ್ಛಾದಿತನಾಗಿರುವುದಿಲ್ಲ. ನಾನು ಸ್ವತಃ ಪೂರ್ವೋಕ್ತ ಭೂತಗಳಲ್ಲಿನ ಮಹಾಭೂತಗಳಂತೆ ಸರ್ವರ ಒಳಹೊರಗೆ ವ್ಯಾಪಿಸಿಕೊಂಡಿರುವೆನು. ನನ್ನಲ್ಲಿ ಒಳಹೊರಗೆ ಎನ್ನುವ ಯಾವ ಭೇದವೂ ಇಲ್ಲ ನಾನು ಅದ್ವಿತೀಯ ಆತ್ಮನಾಗಿರುವೆನು.

ಜೀವಾಂಚ್ಯಾ ಜೀವಾಮಾಜೀ ಮಾರ್ಝಾ ವಾಸ । ಜೀವ ಮಜಮಾಜೀ ಸಾವಕಾಶ । ಮಾರ್ಝೇ ಸ್ವರೂಪ ಗಾ ಅಸಮಸಾಹಸ । ಗುಣಮಾಯೇಸ ಅನಾವೃತ ।೭೨೭॥ ಜೇವೀ ಘಟಾಚೇ ವಸ್ತೀ ಆಕಾಶೀ । ಆಕಾಶ ಸಬಾಹ್ಯ ತ್ಯಾ ಘಟಾಸೀ । ತೇವೀ ಮೀ ಜೀವಮಾತ್ರಾಂಸೀ । ಸಬಾಹ್ಯ ಹೃಷೀಕೇಶೀ ಪರಿಪೂರ್ಣ ।೭೨೮॥

ಸರ್ವಸಿದ್ಧಿಗಳ ಪ್ರಭುತ್ವದಿಂದ ಭಗವಂತನಾದ ನಾನು ಭಕ್ತನ ಹತ್ತಿರ ಎದ್ದು ನಿಂತುಕೊಂಡಿರುವೆನು. ಇದನ್ನೇ ಶ್ರೀಕೃಷ್ಣನು ಮುಂದಿನ ಶ್ಲೋಕದ ಅರ್ಥದಿಂದ ಉದ್ಧವನಿಗೆ ತಿಳಿಸಿ ಹೇಳುವನು ।೭೨೦॥

ಸರ್ವ ಪ್ರಕಾರದ ಸಿದ್ಧಿಗಳ ಜನ್ಮಸ್ಥಾನವು ನಾನಾಗಿರುವೆನು. ನನ್ನಿಂದಲೇ ಸಿದ್ಧಿಗಳ ಮಹಿಮೆಯು ಬೆಳೆದುಕೊಂಡಿರುವುದು ಮತ್ತು ಸಿದ್ಧಿಗಳ ಲಯವೂ ಕೂಡ ನನ್ನಲ್ಲಿಯೇ ಆಗುತ್ತಿರುವುದು. ಈ ಪ್ರಕಾರವಾಗಿ ನಾನು ಆ ಸಿದ್ಧಿಗಳ ಸ್ವಾಮಿಯಾಗಿರುವೆನು ।೭೨೧॥ ಜೀವಾತ್ಮದ ಐಕ್ಯ ಮಾಡುವ ಆ ಯಾವ ಯೋಗದ ಸ್ವಾಮಿಯು ನಾನೇ ಆಗಿರುವೆನು ಮತ್ತು ಜೀವತ್ವದ ಮಿಥ್ಯೆಯನ್ನಾಗಿ ನಿಶ್ಚಯಿಸುವ ಜ್ಞಾನದ ಸ್ವಾಮಿಯೂ ಕೂಡ ನಾನೇ ಆಗಿರುವೆನು ।೭೨೨॥ ಜ್ಞಾನದ ಉಪದೇಶವನ್ನು ಮಾಡುವ ಆ ಯಾವ ಸಾಧೂ ಮಹಾತ್ಮರ ಸ್ವಾಮಿಯು ನಾನೆಂದು ಹೀಗೆ ಪ್ರಸಿದ್ಧವಾಗಿರುವುದು. ನನ್ನದೇ ಆದ ಕೃಪಾಪ್ರಸಾದದಿಂದ ಜ್ಞಾನೀ ಜನರ ಜ್ಞಾನದ ಸ್ಪಷ್ಟ ಬೋಧವಾಗುತ್ತಿರುವುದು ।೭೨೩॥ ವೇದವು ಉಪನಿಷತ್‌ಗಳ ಉಪದೇಶವನ್ನು ಮಾಡುವುದು. ಆ ವೇದದ ಸ್ವಾಮೀ ಗೋವಿಂದನು ನಾನೇ ಆಗಿರುವೆನು. ನನ್ನ ಹೊರತಾಗಿ ವೇದಕ್ಕೆ ಒಂದು ಶಬ್ದವೂ ಕೂಡ ಉಚ್ಚರಿಸಲಿಕ್ಕೆ ಬರುವುದಿಲ್ಲ ।೭೨೪॥ ಧರ್ಮವೆಂದರೆ ಜ್ಞಾನದ ಸಾಧನೆಯಾಗಿರುವುದು. ಅದರ ಸ್ವಾಮಿಯೂ ಕೂಡ ನಾನೇ ಆಗಿರುವೆನು. ಇದನ್ನು ಮಾತ್ರ ನೀನು ಲಕ್ಷದಲ್ಲಿಡು. ನಾನೇ ಒಳಹೊರಗೆ ಪರಿಪೂರ್ಣವಾಗಿ ಚೈತನ್ಯರೂಪನಾಗಿರುವ ಸರ್ವಾತ್ಮಾನಾಗಿರುವೆನು ।೭೨೫॥ ನಾನು ಸರ್ವಾತ್ಮನಾಗಿದ್ದು ಸರ್ವತ್ರವೂ ವ್ಯಾಪಿಸಿರುವೆನು. ಹೇ ಉದ್ಧವನೇ, ಒಳಗೂ, ಹೊರಗೂ ಸರ್ವತ್ರವೂ ಪರಿಪೂರ್ಣ ರೂಪದಿಂದ ತುಂಬಿಕೊಂಡಿರುವವನು ನಾನಾಗಿರುವೆನು. ಇವು ಎಲ್ಲವೂ ನನ್ನಲ್ಲಿ ಸಹಜವಾಗಿ ಹೇಗೆ ಸ್ಥಿತವಾಗಿವೆ ಎಂಬುದನ್ನು ಈಗ ಏಕಾಗ್ರಚಿತ್ತದಿಂದ ಕೇಳು ।೭೨೬॥

ಎಲ್ಲ ಪ್ರಾಣಿಗಳ ಹೃದಯದಲ್ಲಿ ನಾನಿರುವೆನು. ಸರ್ವ ಜೀವಿಗಳು ನನ್ನಲ್ಲಿರುವುವು. ನನ್ನ ಸ್ವರೂಪವು ಮೂರು ಗುಣಕ್ಕಿಂತಲೂ ಮತ್ತು ಮಾಯೆಯಿಂದಲೂ ಪರಿಪೂರ್ಣವಾಗಿ ಭಿನ್ನವಾಗಿದ್ದು, ಅನಂತ, ಅಪಾರ, ಅಮರ್ಯಾದಿತವಾಗಿರುವುದು ।೭೨೭॥ ಯಾವ ಪ್ರಕಾರವಾಗಿ ಘಟವು ಆಕಾಶದಲ್ಲಿದ್ದು ಮತ್ತು ಅದರ ಒಳಹೊರಗೆ ಆಕಾಶವೇ ಇರುವುದೋ, ಅದರಂತೆ ಪ್ರತಿಯೊಂದು ಜೀವಿಯ ಒಳಗೆ ಮತ್ತು ಹೊರಗೆ ಪರಿಪೂರ್ಣವಾಗಿ ತುಂಬಿರುವ ಹೃಷೀಕೇಶಿಯು ನಾನಾಗಿರುವೆನು ।೭೨೮॥

ಜೈಶೀ ಮಹಾಭೂತೇ ಭೌತಿಕಾಂಸೀ । ಸಬಾಹ್ಯ ಅಸತೀ ಸರ್ವಾಸೀ । ತೇವೀ ಮೀ ಸಕಳ ಜಗಾಸೀ । ಸಬಾಹ್ಯ ಹೃಷೀಕೇಶೀ ಪೂರ್ಣತ್ವೇ ಪೂರ್ಣ ।೨೨೯॥ ಜೀವನ ಜೈಸೇ ತರಂಗಾಸೀ । ಕಾ ಗೋಡೀ ಜೈಸೀ ಗುಳಾಸೀ । ತೇವೀ ಅನಂತಕೋಟಿ ಬ್ರಹ್ಮಾಂಡಾಂಸೀ । ಮೀ ಪೂರ್ಣತ್ವೇಸೀ ಪರಿಪೂರ್ಣ ।೨೩೦॥ ಮಜ ಪೂರ್ಣಚೀ ಪೂರ್ಣ ಪ್ರಾಪ್ತೀ । ನಿಕಟ ಯೇತಯೇತಾ ಹಾತೀ। ತೇ ಸಂಧೀ ಸಿದ್ಧೀ ನಾಗವಿತೀ । ಭೋಗಸಂಪತ್ತೀ ಉಪಚಾರೇ ।೨೩೧॥ ಜ್ಯಾಚೇ ರಾಯಾಪಾಶೀ ಪೂರ್ಣ ಚಲನ । ತ್ಯಾಚೇ ಹಾತಾ ಯೇ ಲಾಚು ಸಂಪೂರ್ಣ । ತೇಣೇಚಿ ತೋ ಪಾವೇ ಮರಣ । ತೈಶಾ ಸಿದ್ಧೀ ಜಾಣ ಸಾಧಕಾ ।೨೩೨॥ ಯೇ ಅಧ್ಯಾಯೀಚೇ ನಿರೂಪಣ । ಸಾಂಗಾವಯಾ ಹೇಚಿ ಗಾ ಕಾರಣ । ಮಾಝೀ ಪ್ರಾಪ್ತೀಸ ಸಿದ್ಧೀ ವಿಘ್ನ । ಉದ್ಧವಾ ಜಾಣ ನಿಶ್ಚಿತೀ ।೨೩೩॥ ಏಕಾಗ್ರ ಭಜನೇ ಮಾಝೀ ಪ್ರಾಪ್ತೀ । ಹೋತಾ ತೇ ಸಂಧೀಸೀ ಸಿದ್ಧೀ ಯೇತೀ । ತ್ಯಾ ಭುಲವೋನಿಯಾ ಭೋಗಾಸಕ್ತೀ । ನಾಗವಿತೀ ಸಾಧಕಾ ।೨೩೪॥ ಜೇ ನೇಣತೀ ಮಾಝೀ ನಿಜಸುಖ । ಐಸೇ ಜೇ ಕಾ ಕೇವಳ ಮೂರ್ಖ । ತ್ಯಾಸೀಂಚ ಸಿದ್ಧೀಂಚೇ ಕೌತುಕ । ಅಲೋಕಿಕ ಭೋಗಲಿಪ್ಸ ।೨೩೫॥ ಜೈಸೇ ವೇಶ್ಯೇಚೆ ಹಾವಭಾವ । ತೈಸೇ ಸಿದ್ಧೀಚೇ ವೈಭವ । ಹೇ ತ್ಯಾಗಾವಯಾ ಗಾ ಸರ್ವ । ದೇವೇ ಹಾ ಅಧ್ಯಾವ ನಿರೂಪಿಲಾ ।೨೩೬॥ ಜ್ಯಾಸೀ ಪ್ರಾಪ್ತ ಮಾಝೀ ನಿಜಸುಖ । ತ್ಯಾಸೀ ಸಿದ್ಧೀ ತುಚ್ಛಪ್ರಾಯ ದೇಖ । ನ ದೇಖತೀ ಜನ್ಮ ಮರಣಾಂಚೇ ಮುಖ । ಮಾಝಾ ಪೂರ್ಣ ಹರಿಖ ಕೋಂದಾಟೇ ।೨೩೭॥ ಸೇವಿತಾ ಸದ್ಗುರುಚರಣ । ಕೋಂದಾಟೇ ಬ್ರಹ್ಮ ಪರಿಪೂರ್ಣ । ತೇಥ ಸಿದ್ಧೀಂಸೀ ಪುಸೇ ಕೋಣ । ಹೇ ಜಾಣತೀ ಖೂಣ ಹರಿಭಕ್ತ ।೨೩೮॥ ಹರಿಭಕ್ತೀಸೀ ವಿಕಿಲಾ ಭಾವೋ । ಭಜನೇ ಫಿಟಲಾ ಅಹಂಭಾವೋ । ತೇಥ ಸಿದ್ಧೀಂಚಾ ಭೋಗಸಂದೇಹೋ । ನಿಪಜೇ ಪಹಾ ಹೋ ಸರ್ವಥಾ ।೨೩೯॥ ಭುಕ್ತಿ ಮುಕ್ತೀ ಋದ್ಧಿ ಸಿದ್ಧೀ । ಸದ್ಗುರುಚರಣೀ ಗಾ ತ್ರಿಶುದ್ಧೀ । ಹೇ ನೇಣತೀ ಜೇ ಮಂದಬುದ್ಧೀ । ತೇ ನಾನಾ ಸಿದ್ಧೀ ವಾಂಛಿತೀ ।೨೪೦॥ ಸಕಳ ಸಿದ್ಧೀಂಚೇ ಸಾಧನ । ನಿರಪೇಕ್ಷತಾ ಸತ್ಯ ಜಾಣ । ನಿರಪೇಕ್ಷಾ ಚೇ ಅಂಗಣ । ಸಿದ್ಧೀ ಸಂಪೂರ್ಣ ಓಳಂಗತೀ ।೨೪೧॥

ಯಾವ ಪ್ರಕಾರವಾಗಿ ಪಂಚ ಮಹಾಭೂತಗಳು ಸರ್ವ ಭೂತಗಳಲ್ಲಿ ಒಳಹೊರಗೆ ವ್ಯಾಪಿಸಿಕೊಂಡಿರುವುವೋ, ಅದರಂತೆ ಪರಮಾತ್ಮನಾದ ನಾನು ಪರಿಪೂರ್ಣನಾಗಿ ಸರ್ವ ವಿಶ್ವಕ್ಕೆ ಒಳಗೂ, ಹೊರಗೂ ಪೂರ್ಣ ರೂಪದಿಂದ ವ್ಯಾಪಿಸಿರುವೆನು ।೨೨೯॥ ತೆರೆಗಳಿಗೆ ನೀರಿನಂತೆ ಅಂದರೆ ನೀರಿನಲ್ಲಿಯ ತರಂಗಗಳು ನೀರಿನ ಆಶ್ರಯದಿಂದ ಹೇಗೆ ಉದ್ಭವವಾಗುವುವೋ ಅಥವಾ ಸಿಹಿಯು ಬೆಲ್ಲದಲ್ಲಿ ಹೇಗೆ ತುಂಬಿಕೊಂಡಿರುವುದೋ, ಅದರಂತೆ ನಾನು ಅನಂತ ರೂಪದಿಂದ ಕೋಟಿ ಕೋಟಿ ಬ್ರಹ್ಮಾಂಡಗಳಲ್ಲಿ ಪೂರ್ಣರೂಪದಿಂದ ಪೂರ್ಣತ್ವದಿಂದ ವ್ಯಾಪಿಸಿಕೊಂಡಿರುವೆನು ।೨೩೦॥ ಹೀಗಿರುವ ನನ್ನ ಪೂರ್ಣ ಸ್ವರೂಪ ಪರಮಾತ್ಮನ ಪ್ರಾಪ್ತಿಯು ಅಗದೀ ಸಮೀಪವಾಗುತ್ತಿರುವ ಆ ಸಮಯದಲ್ಲಿ ಅನೇಕ ಸಿದ್ಧಿಗಳು ಮುಂದೆ ಬಂದು ಭೋಗ ಸಂಪತ್ತು ಇತ್ಯಾದಿಗಳ ಲೋಭವನ್ನು ತೋರಿಸಿ ಸಾಧಕನಿಗೆ ಭ್ರಮದ ಚಕ್ರದಲ್ಲಿ ತಿರುಗಿಸುವುವು ।೨೩೧॥ ರಾಜನಲ್ಲಿ ಅತ್ಯಂತ ಸಖ್ಯ ಇದ್ದವನಿಗೆ ಅನೇಕರಿಂದ ಆತನಿಗೆ ಅನೇಕ ಪ್ರಕಾರದ ಲಂಚವು ದೊರೆಯುತ್ತಿರುವುದು. ಇದರಿಂದ ಆತನ ಪಾಪವು ಬೆಳೆದು ಮರಣ ಸಂಭವಿಸುವುದು. ಅದರಂತೆಯೇ ಈ ಸಿದ್ಧಿಗಳು ಸಾಧಕನಿಗೆ ಘಾತ ಮಾಡುವುವು ।೨೩೨॥ ಈ ಅಧ್ಯಾಯದಲ್ಲಿ ವಿಷಯಗಳನ್ನು ಪ್ರತಿಪಾದನೆ ಮಾಡುವ ಮುಖ್ಯ ಉದ್ದೇಶವೇನೆಂದರೆ, ಹೇ ಉದ್ಧವಾ, ನನ್ನ ಪ್ರಾಪ್ತಿಗೆ ಸಿದ್ಧಿಗಳೇ ಬಹು ಭಯಂಕರ ವಿಘ್ನಗಳಾಗಿರುವುವು ।೨೩೩॥ ಪ್ರೇಮದಿಂದ, ಏಕಾಗ್ರ ಚಿತ್ತದಿಂದ ಭಜನೆಯನ್ನು ಮಾಡಲು, ನನ್ನ ಪ್ರಾಪ್ತಿಯ ಸಮಯವು ಒದಗುವುದು. ಇದೇ ಸಂಧಿಯಲ್ಲಿ ಸಿದ್ಧಿಗಳು ಬಂದು ಭೋಗದ ಲಾಲಸೆಯ ಅನೇಕ ಪ್ರಕಾರದ ಆಸಕ್ತಿಗಳಿಂದ ಸಾಧಕನಿಗೆ ಮೋಸಮಾಡಿ ಆತನನ್ನು ನಾಶಮಾಡುವುವು ।೨೩೪॥ ಯಾರು ನನ್ನ ಆತ್ಮಸುಖವನ್ನು ಅರಿಯಲಾರರೋ ಆ ಸಾಧಕರು ಕೇವಲ ಶುದ್ಧ ಮೂರ್ಖರಾಗಿರುವರು. ಅತ್ಯಂತಿಕ ವಿಷಯ ವಾಸನೆಯಿಂದ ಅವರಿಗೆ ಸಿದ್ಧಿಗಳ ಕೌತುಕವೆನಿಸುವುದು ।೨೩೫॥ ವೇಶ್ಯೆಯ ಹಾವಭಾವಗಳು ಹೇಗೆ ಇರುವುವೋ ಅದರಂತೆಯೇ ಸಿದ್ಧಿಗಳ ವೈಭವವು ಇರುವುದು. ಈ ಎಲ್ಲ ಸಿದ್ಧಿಗಳನ್ನು ತ್ಯಾಗ ಮಾಡಬೇಕೆನ್ನುವ ದೃಷ್ಟಿಯಿಂದ ದೇವನು ಈ ಅಧ್ಯಾಯವನ್ನು ಹೇಳಿರುವನು ।೨೩೬॥ ಯಾರಿಗೆ ನನ್ನ ಆತ್ಮಸುಖವು ಪ್ರಾಪ್ತವಾಗುವುದೋ, ಆತನು ಈ ಸಿದ್ಧಿಗಳನ್ನು ತುಚ್ಛವೆಂದು ತಿಳಿಯುವನು. ಆತನು ಜನ್ಮಮರಣಗಳ ಮುಖವನ್ನೂ ಕೂಡ ನೋಡಲಾರನು. ನನ್ನ ವಿಷಯದಲ್ಲಿ ಆತನ ಅಂತಃಕರಣದಲ್ಲಿ ಪರಿಪೂರ್ಣ ರೂಪದಿಂದ ಪ್ರೇಮಾನಂದವು ತುಂಬಿಕೊಂಡಿರುವುದು ।೨೩೭॥ ಸದ್ಗುರುವಿನ ಚರಣಕಮಲಗಳ ಸೇವೆಯನ್ನು ನಿಷ್ಕಾಮ ಭಾವದಿಂದ ಮಾಡಲು, ಸರ್ವತ್ರವೂ ತುಂಬಿರುವ ಸಚ್ಚಿದಾನಂದ ಸ್ವರೂಪದ ಅನುಭವವಾಗುವುದು. ಆ ಸಮಯದಲ್ಲಿ ಸಿದ್ಧಿಗಳಿಗೆ ಯಾರು ಕೇಳಬೇಕು ? ಈ ರಹಸ್ಯವನ್ನು ಹರಿಭಕ್ತನು ಬಲ್ಲವನಾಗಿರುವನು ।೨೩೮॥ ಒಂದು ಸಾರೆ ಹರಿಭಕ್ತಿಗಾಗಿ ತನ್ನ ಭಾವವನ್ನು ಅರ್ಪಣೆ ಮಾಡಲು ಆಗ ಪ್ರೇಮಮಯ ಭಜನೆಯಿಂದ ಅಹಂಭಾವವು ಅಂದರೆ ದೇಹದ ಸರ್ವ ಪ್ರಕಾರದ ಅಭಿಮಾನವು ಇಲ್ಲದಾಗುತ್ತಲೇ, ಆಗ ಸಿದ್ಧಿಗಳ ಭೋಗದ ಕಲ್ಪನೆಯೂ ಕೂಡ ಮನದಲ್ಲಿ ನಿರ್ಮಾಣವಾಗುವುದಿಲ್ಲ ।೨೩೯॥ ಭುಕ್ತೀ, ಮುಕ್ತೀ, ರಿದ್ಧೀ, ಸಿದ್ಧೀ, ಈ ಎಲ್ಲವೂ ನಿಜವಾಗಿಯೂ ಸದ್ಗುರುಗಳಲ್ಲಿರುವುವು. ಆದರೆ ಈ ಯಾವ ಮಂದ ಬುದ್ಧಿಯ ಜನರಿಗೆ ಇದು ತಿಳಿಯುವುದಿಲ್ಲ. ಅವರು ಅನೇಕ ಪ್ರಕಾರದ ಸಿದ್ಧಿಗಳ ಇಚ್ಛೆಯನ್ನು ಮಾಡುತ್ತಿರುವರು ।೨೪೦॥ ಸರ್ವಸಿದ್ಧಿಗಳ ಸಾಧನೆಯು ನಿರಪೇಕ್ಷತೆಯಾಗಿರುವುದು. ಇದು ಸತ್ಯವೆಂದು ತಿಳಿ. ಯಾರು ನಿರಪೇಕ್ಷತೆಯಿಂದ ಇರುವರೋ, ಅವರ ಅಂಗಳದಲ್ಲಿ ಸರ್ವ ಸಿದ್ಧಿಗಳು ದುಡಿಯುವುವು ।೨೪೧॥

ಸಿದ್ಧೀಂಚೀ ಅಪೇಕ್ಷಾ ಜ್ಯಾಂಚೇ ಚಿತ್ತೀ । ಸಿದ್ಧೀ ತ್ಯಾಕಡೇ ನ ಥುಂಕಿತೀ । ನಿರಪೇಕ್ಷಾಚೇ ಪಾಯೀಚೇ ಮಾತೀ । ಸಿದ್ಧೀ ವಂದಿತೀ ಸರ್ವದಾ ।೭೪೨॥ ಜ್ಞಾನವೈರಾಗ್ಯ ಭಕ್ತೀಚೇ ಮಾಥಾ । ಸತ್ಯ ಜಾಣ ಪಾ ನಿರಪೇಕ್ಷತಾ । ತೇ ನಿರಪೇಕ್ಷತಾ ಆಲಿಯಾ ಹಾತಾ । ಮುಕ್ತಿ ಸಾಯುಜ್ಯತಾ ಪಾಯಾ ಲಾಗೇ ।೭೪೩॥ ನಿರಪೇಕ್ಷತೇಪಾಶೀ ಸರ್ವ ಸಿದ್ಧೀ । ನಿರಪೇಕ್ಷತೇಪಾಶೀ ವಿಧೀ । ನಿರಪೇಕ್ಷತೇಪಾಶೀ ಸುಬುದ್ಧೀ । ಚರಣ ವಂದೀ ಅಹರ್ನಿಶೀ ।೭೪೪॥ ನಿರಪೇಕ್ಷತಾ ತೇಥ ನಿರ್ವಾಹೋ । ನಿರಪೇಕ್ಷತಾ ತೇಥ ಸದ್ಭಾವೋ । ನಿರಪೇಕ್ಷತೇಪಾಶೀ ಭಗವದ್ಭಾವೋ । ಯಥಾರ್ಥ ಪಹಾ ವೋ ತಿಷ್ಠತೂ ।೭೪೫॥ ನಿರಪೇಕ್ಷ ತೇಪಾಶೀ ಉಪನಿಷದ್ಭಾಗೂ । ನಿರಪೇಕ್ಷತೇಪಾಶೀ ಸಾಚಾರ ಯೋಗೂ । ನಿರಪೇಕ್ಷತಾ ಸ್ವಾನಂದಭೋಗೂ । ಸಾಂಪಡೇ ಶ್ರೀರಂಗೂ ನಿರಪೇಕ್ಷಾ ।೭೪೬॥ ಏಕಾ ಜನಾರ್ದನಾ ಶರಣ । ತ್ಯಾಚೇ ವಂದಿತಾ ಶ್ರೀಚರಣ । ಚಢತೀ ನಿರಪೇಕ್ಷತಾ ಜಾಣ । ಸದಾ ಸಂಪೂರ್ಣ ಸ್ವಾನಂದೇ ।೭೪೭॥ ಆಮ್ಹಾ ಸ್ವಾನಂದಾಚಾ ನಿಜಬೋಧೂ । ಹಾ ಸದ್ಗುರು ಚರಣೀಂಚಾ ಪ್ರಸಾದೂ । ಮಹಾಸುಖಾಚಾ ವಿನೋದೂ । ಆನಂದಕಂದೂ ಶ್ರೀಚರಣೀ ।೭೪೮॥ ಗುರುಚರಣೀ ಕರಿತಾ ಭಕ್ತೀ । ಅನಾಯಾಸೇ ಪ್ರಾಪ್ತ ಚಾರೀ ಮುಕ್ತೀ । ನಿಜಶಾಂತೀಸೀ ವಿರಕ್ತೀ । ಸೇವೋ ಲಾಗತೀ ಗುರುಭಕ್ತಾ ।೭೪೯॥ ಏಕಾ ಜನಾರ್ದನಾ ಶರಣ । ತ್ಯಾಚೇ ಕೃಪೇಸ್ತವ ಜಾಣ । ಶ್ರೀಭಾಗವತಾಚೇ ನಿರೂಪಣ । ಝಾಲಾ ಸಂಪೂರ್ಣ ಪಂಧರಾವಾ ।೭೫೦॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಏಕಾದಶಸ್ಕಂಧೇ ಶ್ರೀಕೃಷ್ಣೋದ್ಧವಸಂವಾದೇ
ಏಕಾಕಾರಟೀಕಾಯಾಂ ಸಿದ್ಧಿ ನಿರೂಪಣಯೋಗೋ ನಾಮ ಪಂಚದಶೋಽಧ್ಯಾಯಃ ।೧೫॥


॥ ಶ್ರೀಕೃಷ್ಣಾರ್ಪಣಮಸ್ತು ॥

ಯಾರ ಮನದಲ್ಲಿ ಸಿದ್ಧಿಗಳ ತೀವ್ರ ಅಪೇಕ್ಷೆ ಇರುವುದೋ, ಅವರತ್ತ ಸಿದ್ಧಿಗಳು ಉಗುಳುತ್ತ ಸಹ ನೋಡುವುದಿಲ್ಲ. ಯಾರು ನಿರಪೇಕ್ಷರಾಗಿರುವರೋ, ಅವರ ಪಾದ ಧೂಳಿಯನ್ನು ಸಿದ್ಧಿಗಳು ಯಾವಾಗಲೂ ಶಿರಸಾ ವಂದಿಸುವುವು ।೭೪೨॥ ಜ್ಞಾನ, ವೈರಾಗ್ಯ ಮತ್ತು ಭಕ್ತಿ ಇವುಗಳಿಗಿಂತಲೂ ನಿರಪೇಕ್ಷತೆಯು ಅತ್ಯಂತ ಶ್ರೇಷ್ಠವಾಗಿರುವುದು. ಈ ನಿರಪೇಕ್ಷತೆಯು ಒಮ್ಮೆ ಕೈಗೆ ಹತ್ತಲು ಸಾಯುಜ್ಯ ಮುಕ್ತಿಯೂ ಕೂಡ ಕಾಲಿಗೆ ಬೀಳುವುದು ।೭೪೩॥ ನಿರಪೇಕ್ಷತೆಯಲ್ಲಿಯೇ ಸರ್ವ ಪ್ರಕಾರದ ಸಿದ್ಧಿಗಳಿರುವುವು. ಸರ್ವ ಪ್ರಕಾರದ ವಿಧಿಗಳಿರುವುವು ಮತ್ತು ಸಮೃದ್ಧಿಯು ಹಗಲು ರಾತ್ರಿ ಚರಣಗಳನ್ನು ವಂದಿಸುವುದು ।೭೪೪॥ ನಿರಪೇಕ್ಷತೆಯು ಇದ್ದಲ್ಲಿಯೇ ಯೋಗಕ್ಷೇಮವಿರುವುದು. ಅಲ್ಲಿಯೇ ಸದ್‌ಭಾವನೆಯು ಇರುವುದು. ಅಲ್ಲಿಯೇ ಭಗವಂತನ ಸ್ವರೂಪವು ನಿಂತುಕೊಂಡಿರುವುದು ।೭೪೫॥ ನಿರಪೇಕ್ಷತೆಯಲ್ಲಿ ವೇದಾಂತವಿರುವುದು, ಯೋಗವಿರುವುದು, ಸ್ವಾನಂದ ಭೋಗವಿರುವುದು ಮತ್ತು ನಿರಪೇಕ್ಷ ಸಾಧಕನಿಗೆ ಮಾತ್ರ ಶ್ರೀಕೃಷ್ಣನು ಸಿಗುವನು ।೭೪೬॥ ಏಕನಾಥನು ಜನಾರ್ದನರಿಗೆ ಶರಣು ಹೋಗಿ ಅವರ ಪವಿತ್ರವಾದ ಚರಣ ಕಮಲಗಳಿಗೆ ವಂದಿಸುವುದರಿಂದ ಅವರ ನಿರಪೇಕ್ಷತೆಯು ಪ್ರಾಪ್ತವಾಯಿತು. ಸಂಪೂರ್ಣ ಸ್ವಾನಂದವು ಬೆಳೆದು ನಿಂತಿತು ।೭೪೭॥ ಇದುವೇ ನಮ್ಮ ಸ್ವಾನಂದಾನುಭವವಿರುವುದು. ಇದು ಕೇವಲ ಸದ್ಗುರುಚರಣಕಮಲಗಳ ಕೃಪಾಪ್ರಸಾದವಾಗಿರುವುದು. ಸದ್ಗುರುಗಳಲ್ಲಿ ಮಹಾಸುಖದ ಲೀಲಾವಿಲಾಸವು ಮತ್ತು ಆನಂದದ ಮೂಲಬೀಜವಿರುವುದು ।೭೪೮॥ ಸದ್ಗುರು ಚರಣಗಳ ಭಕ್ತಿಯನ್ನು ಮಾಡಲು ಅನಾಯಾಸವಾಗಿ ನಾಲ್ಕೂ ಮುಕ್ತಿಗಳು ಪ್ರಾಪ್ತವಾಗುವುವು. ಆದ್ದರಿಂದ ಶಾಂತಿಯೊಂದಿಗೆ ವಿರಕ್ತಿಯು ಗುರುಭಕ್ತಿಯ ಸೇವೆಯನ್ನು ಮಾಡಲು ಇಚ್ಛಿಸುವುದು ।೭೪೯॥ ಏಕನಾಥನು ಜನಾರ್ದನಸ್ವಾಮಿಯವರನ್ನು ಶರಣು ಹೋಗಿದ್ದಕ್ಕೆ, ಅವರ ಕೃಪಾ ಪ್ರಸಾದದಿಂದ ಶ್ರೀಭಾಗವತದ ಹದಿನೈದನೆಯ ಅಧ್ಯಾಯದ ನಿರೂಪಣೆಯು ಸಂಪೂರ್ಣವಾಯಿತು ।೭೫೦॥

ಇತಿ ಶ್ರೀಭಾಗವತದ ಮಹಾಪುರಾಣದಲ್ಲಿನ ಹನ್ನೊಂದನೆಯ ಸ್ಕಂಧದ ಶ್ರೀಕೃಷ್ಣ ಉದ್ಧವ ಸಂವಾದದ
ಏಕನಾಥ ಮಹಾರಾಜರ ಭಾಷ್ಯೆಯ ಸಿದ್ಧಿ ನಿರೂಪಣಯೋಗ ನಾಮದ ಹದಿನೈದನೆಯ ಅಧ್ಯಾಯವು ಮುಗಿದುದು

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಸಂತ ಏಕನಾಥ ಮಹಾರಾಜರ ಜಲಸಮಾಧಿ ದೃಶ್ಯ



ಶ್ರೀಸಂತ ವಾಙ್ಮಯ ಸೇವಾ ಸಮಿತಿ, ಕೊಪ್ಪಳ, ಸದಸ್ಯರು

ಶ್ರೀ ಪಾಂಡುರಂಗ ದೇವಸ್ಥಾನ, ಗವಿಮಠ ರಸ್ತೆ, ಕೊಪ್ಪಳ – 583 231.

1. ಹ.ಭ.ಪ. ಕೃಷ್ಣಾಜೀರಾವ ಡೋಂಗ್ರಪ್ಪ ಜ್ಞಾನಮೋಠೆ, ಕೊಪ್ಪಳ. ಮೊ : 9343300379 (ಅಧ್ಯಕ್ಷರು)
2. ಹ.ಭ.ಪ. ಪಾಂಡುರಂಗಸಾ ಲಕ್ಷ್ಮಣಸಾ ಮೇರವಾಡೆ, ಇಂಜಿನೀಯರ್, ಗದಗ – ಬೆಟಗೇರಿ. ಮೊ : 9986032896 (ಉಪಾಧ್ಯಕ್ಷರು)
3. ಹ.ಭ.ಪ. ಪಾಂಡುರಂಗರಾವ ದತ್ತೋಬರಾವ ಮಹೇಂದ್ರಕರ, ನಿವೃತ್ತಶಿಕ್ಷಕರು, ಗದಗ. ಪೋ: 08372–230275 ಪಿ.ಪಿ. (ಕಾರ್ಯದರ್ಶಿ)
4. ಶ್ರೀಯುತ ವಿರುಪಣ್ಣಾ ಅಂಬರಕರ ಚಾರ್ಟರ್ಡ ಅಕೌಂಟಂಟ್, ದಾವಣಗೆರೆ. ಮೊ : 9341357304 (ಕೋಶಾಧ್ಯಕ್ಷರು)
5. ಹ.ಭ.ಪ. ನರಸಪ್ಪ ಯಮನಪ್ಪ ಹಡಪದ, ಕೊಪ್ಪಳ. ಪೋ : 08539 – 221162 (ಸದಸ್ಯರು)
6. ಹ.ಭ.ಪ. ಎಸ್.ಎಲ್. ಅಶ್ವತ್ಥನಾರಾಯಣ, ಪ್ರೋ : ಶ್ರೀ ಹರಿಸಿಲ್ಕ್ಸ್, ಬೆಂಗಳೂರು. ಮೊ : 9845123122 (ಸದಸ್ಯರು)
7. ಶ್ರೀಯುತ ಜಿ. ಮಂಜುನಾಥರಾವ ನಿವೃತ್ತ ಎಕ್ಸರೇ ಇಂಜಿನೀಯರ್ ಡಿ.ಈ. ಎಲೆಕ್ಟ್ರೀಕಲ್ ಶಂಕರಪುರಂ ಗಾಂಧಿಬಜಾರ್ ಬೆಂಗಳೂರು. ಮೊ : 9900113956 (ಸದಸ್ಯರು)
8. ಹ.ಭ.ಪ. ಪುಂಡಲೀಕರಾವ ವಿಠೋಬರಾವ ಜ್ಞಾನಮೋಠೆ, ಹೊಸಪೇಟೆ, ಮೊ : 9448826874 (ಸದಸ್ಯರು)
9. ಹ.ಭ.ಪ. ರುಕ್ಮಾಜೀರಾವ ನಾರಾಯಣರಾವ ಹಲಾಲೇ, ಬಿ.ಕಾಂ., ಹಗರಿಬೊಮ್ಮನಹಳ್ಳಿ. ಮೊ : 9880630938 (ಸದಸ್ಯರು)
10. ಹ.ಭ.ಪ. ಆರ್. ತಿಮ್ಮಾರೆಡ್ಡಿ ಹನುಮಂತರೆಡ್ಡಿ, ಯರಂಗಳಿಗಿ. ಪೋ : 08393–269269 (ಸದಸ್ಯರು)
11. ಹ.ಭ.ಪ. ವೆಂಕಟರಾವ ತಿಪ್ಪುರಾವ ಮೋಹಿತೆ, ಆದೋನಿ. ಮೊ : 9247433179 (ಸದಸ್ಯರು)